REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—೧೯೧೫ ನೇ ಇಸವಿ ಜನವರಿ ತಾರೀಖು ೭ ನೇ ಗುರುವಾರ. ಸಂಚಿಕೆ ೩೨

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1¼ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ 11 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಶ್ರೀಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.
[13-48] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಜ್ವರದ ಮಾತ್ರೆ—ಮಲೇರಿಯ, ಚಳಿ, ವಿಷಮಶೀತ ಜ್ವರಗಳಿಗೆ ಅಮೃತ. ಡಬ್ಬಿ 8 ಆಣೆ. "ತಾವು ಕಳಿಸಿದ ಜ್ವರದ ಮಾತ್ರೆಗಳನ್ನು ನಾನು ನನ್ನ ಸ್ನೇಹಿತರಿಗೆ ಕೊಡಿಸಿ ಶ್ರೇಷ್ಠ ಗುಣಕಂಡೆವು. ಇದು ಅನೇಕ ಇಂಗ್ಲಿಷ್ ಔಷಧಿಗಳಿಗಿಂತ ಯಾವ ಭಾಗದಲ್ಲೂ ಕಮ್ಮಿಯಿಲ್ಲ"—ಎಂ. ಆರ್. ರಾಮಸ್ವಾಮಿಶಾಸ್ತ್ರಿ, ಅಮಲ್ದಾರ್, ಮಂಚನಹಳ್ಳಿ. [262-6]
ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು !!!
ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ 4 ಆಣೆ; ವಿ ಪಿ ಮೂಲಕ 6 ಆಣೆ.
ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು: ಇವರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ 3 ಆಣೆ; ವಿ. ಪಿ. ಯಲ್ಲಿ 4 ಆಣೆ.
[33-52] ನಮ್ಮ ವಿಳಾಸ.—ದಿ ಜನರಲ್ ಏಜೆನ್ಸಿ, ಮೈಸೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.
[143-26] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಐದನೆಯ ಮುದ್ರಣ. ದಿವ್ಯವಾದ ಕಾಗದ. ಗಟ್ಟಿ ಅಟ್ಟೆ.
ಕ್ರಯ ಒಂದು ರೂಪಾಯಿ ಪಳಾಣೆ ಮಾತ್ರ.
ಕ್ಷೇಮಸಮಾಚಾರ ಕಾಗದ, ಪತ್ರ, ದಾವೆ, ರಶೀದಿ, ನೋಟೀಸು, ಮುಂತಾದವುಗಳನ್ನು ಮರ್ಯಾದೆಯರಿತು ಬರೆವ ರೀತಿ, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಲಾ ಸಂಬಂಧವಾದ ಎಲ್ಲ ನಡೆಯ ತಿಳಿವಳಿಕೆಗಳು, ಎಲ್ಲ ಬಗೆಯ ವ್ಯವಹಾರಗಳನ್ನೂ ಪ್ರಶ್ನೋತ್ತರ ರೂಪವಾಗಿ ಬರೆದಿರುವದರಿಂದ ಎಲ್ಲರೂ ಬಹು ಸುಲಭವಾಗಿ ತಿಳಿದುಕೊಳ್ಳಬಹುದು. [282-4]
ಕೆಲವೆ ಪ್ರತಿಗಳೇ ಉಳಿದಿವೆ! ಬೇಗ ಬರೆಯಿರಿ !! ಬೇಗ ಬರೆಯಿರಿ !!!
ಕ್ರಯ ಒಂದು ರೂಪಾಯಿ ಪಳಾಣೆ ಮಾತ್ರ.
ವಿಳಾಸ—ಭಾರತಿ ಸಂಪಂಗಿರಾಮು,
ಸಂಪಾದಕ, "ಸವಿನುಡಿ," ಚಿಕ್ಕಪೇಟೆ, ಬೆಂಗಳೂರು ಸಿಟಿ.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಹಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.
ನಂ. 1 ಸಣ್ಣ ಸೈಜು ಸಾದಾ ... ... ಆಣೆ 4
" 2 " " ಪೆನ್ಸಲ್ ಮುಚ್ಚಳ ಉಳ್ಳದ್ದು ... " 6
ಹೆಚ್ಚಾಗಿ ತಂಗುವವರಿಗೆ ರೂಪಾಯಿ ಒಂದಕ್ಕೆ 2 ಆಣೆ ಕಮಿಷನ್ ದೊರೆಯುವುದು. [223-11]
ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.
ನಮ್ಮ ವಿಳಾಸ— ಬಿ. ನರಸಿಂಗರಾವ್,
[300-2] ಎಡಿಟರ್, ಲಾ ಗಜೆಟ್, ಬೆಂಗಳೂರು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸೌಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವ	0-8-0	ಸಂತಾಪಕ	0-4-0

[275-4] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!
ವಾರ್ಷಿಕ ಚಂದಾ ರೂ. 1-8-0 ಮಾತ್ರ.
ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-25]
ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಶ್ವತ್ಥಾಮ್ನ 1½ ಆ; ಅಜಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇಮ 1 ಆ; ಸನ್ಯಾಸಿನಿ 1½ ಆ; ಸಾಹಸಿಕ 2½ ಆ; ಸುಶೀಲೆ 6 ಆ; ಸಭಾ ಭಾಗ 1. 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪನಿ, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)
ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ಶುದ್ಧಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ 2-4-0. ಜಾಗ್ರತೆ ನೋಡಿ [239-5]
ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

(ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದುವುಗಳು).

ವ್ಯವಹಾರ ನಿರ್ಣಯ.

[279-4]
ಕನ್ನಡದ ಲಾ ಪುಸ್ತಕವು.
ತೃತೀಯ ಮುದ್ರಣ 616 ಪುಟಗಳುಳ್ಳದು.

ಕ್ರಯ ದಪ್ಪ ಕಾಗದದ ಪ್ರತಿಗೆ ರೂ. 1 8-0 ಪೋಸ್ಟೇಜು
" ಗ್ಲೇಜು ಕಾಗದದ ಪ್ರತಿಗೆ " 2 4-0 ಪ್ರತಿ 1 ಕ್ಕೆ 4 ಆ.
ಇದರಲ್ಲಿ ಹಿಂದೂ ಲಾ, ಮಹಮದೀಯ ಲಾ, ಪೀನಲ್ ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ಮೃತಸ್ವತ್ತಿನ ವಿಲೇವಾರಿ, ಅನಾಥರಕ್ಷಣೆ, ಸ್ತ್ರೀಸ್ವತ್ತ ವಾರಸು ಹಕ್ಕು ಈ ವಿಷಯಕವಾದ ಖಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 48 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ"

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ, ಸರ್ಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.
ನಮ್ಮ ವಿಳಾಸ—ಎಂ. ಎಂ. ಪಂಡಿತಾರಾಧ್ಯ, ಮೈಸೂರು.

Notice dated 26th December, 1914.

Four bullock coaches of the Government Stables, the property of the Mysore Government, will be sold by public auction at the Government House, Mysore, on 9th January 1915, at 8 A.M.

Terms, cash.
(Sd.) A. A. JONES, Lt.-Col.,
[299-2] *Military Secretary.*

NOTICE

MILITARY

Office of the Military Secretary to H. H. the Maharaja of Mysore

Notification Dated 26th December, 1914

10 ponies and 4 bullocks of the Mysore Imperial Service Transport Corps will be sold by public auction at the Queen's Statue, Cubbon Park, Bangalore, at 8-30 A.M., on Saturday, the 9th January, 1915.

Terms, Cash
(Sd.) A. A. JONES, Lt.-Col.,
[298-2] *Military Secretary.*

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.
ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-47]
ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.
ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

"Benefit yourself and Benefit others."

HINDUSTHAN CO-OPERATIVE INSURANCE SOCIETY, LIMITED.
HINDUSTHAN BUILDINGS, CALCUTTA.

Authorised Capital One Crore (1,00,00,000).
Subscribed Capital Rs. 87,50,000.
Paid-up Capital ... Rs. 12,50,000.
Policies effected over 2,30,00,000.

Some of the special features of the Hindusthan:
(1) It offers all that is best, latest, cheapest and most equitable in Life Assurance.
(2) It grants Loans on properties repayable on easy terms to Policy-holders at a moderate interest to the extent of the amount insured after the Policy has been in force for two full years.
(3) House and Land purchase system a speciality.
(4) It is governed by Maharajas and Zemindars.
(5) Funds invested in India on landed properties and with Policy-holders on unimpeachable security.

Wanted:—
Active and energetic Agents to represent the Society throughout the State on liberal terms of Commission and monthly Office Allowance.
For further particulars and Prospectus apply to
Messrs. VENKATACHALAM & SONS,
[292-2] *Chief Agents, 166, Doddapetta, Mysore.*

ಬಾಲಕೇಸರಿ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಟ್ಟುಹರಳಿನಿಂದಲೂ ತಯಾರಾದ ಈ ತೈಲವು ಮಕ್ಕಳಿಗೆ ಉಂಟಾಗುವ ಜ್ವರ, ಕೆಮ್ಮು, ನಾಯಿಕೆಮ್ಮು, ಕೆಳವು, ಗಂಟಲಲ್ಲಿ ಗುರುಗುಟ್ಟುವುದು, ಉಬ್ಬಸ,

ತುರಿ, ಕ್ಷಯ, ಮಾಂದ್ಯ, ಗರ್ಭವೆಟ್ಟಿ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ, ಮಕ್ಕಳನ್ನು ಸಶಕ್ತರನ್ನಾಗಿ ಮಾಡುವುದಲ್ಲದೆ ೨-೩ ಸಲ ಸುಖಭೇದಿಯಾಗುತ್ತದೆ. ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆ ವಿ. ಪಿ ಛಾರ್ಜು ಬೇರೆ.

ವಿಳಾಸ.—ಎಂ. ಗೋವಿಂದಶೆಟ್ಟಿ, ಆಯುರ್ವೇದಿಕ್ ಮೆಡಿಕಲ್ ಪ್ರಾಕ್ಟಿಷನರ್, ದೇವನಹಳ್ಳಿ ಟೌನ್.

[235-9]

" ......Preparations of M. Govinda Chetty seem to be greatly in demand by his constituents, many of whom are English-educated people in good positions.. ... "

(Sd.) P. S. ACHYUTA RAO,
Senior Surgeon and Sanitary Commr.

ಸ್ತ್ರೀಯರ ಖುಷ್ಖಾವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವರ್ಣದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾವ ಉಪಕರಣವಾದರೋ

ಕಾಮಿನಿಯಾ ತೈಲವೇ!
(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ಕೊಡದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾಗದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-50]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾಡಿಯಂ) ಸೀಸೆಗೆ 0-12-0 ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಡ ಮಾರ್ಟ್, ಮಂಗಳೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರ ಕಸ್ತೂರಿ ಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರನೆ ಜ್ವರ-ನಾಲ್ಕನೆ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಛಾತಿ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [231-10]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಊತದ ನೋವುಕಾಲು.

ದಿನದ ಪರಾಣದಲ್ಲಿ ನೀವು ಕಂಡುಕೊಳ್ಳುವ ಸೀಯೆನಂತೆಯೇ ಇದೂ ಸಾಧಾರಣವಾಗಿಯೂ ಅಸಹ್ಯಕರವಾಗಿಯೂ ಇರುತ್ತದೆ. ಮತ್ತು ಅದು ಹಾನಿಕಾರಕವು. ಊತದ ನೋವುಕಾಲು ನವೆ ಉಂಟುಮಾಡುತ್ತದೆ.

ಫಿಲಡೆಲ್ಫಿಯಾದ, ಎ. ಸಿ, ಲೀಮನ್ ಎಂಬವರು ಬರೆಯುವುದು:—"ಎರಡು ವರುಷಗಳಕಾಲ ನೋವುಕಾಲಿನ-ದೊಡ್ಡ ಊತದ ದೆಸೆಯಿಂದ ನರಳುವಿಕೆಗೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಮಾಡಲಿಲ್ಲ. ನಮ್ಮ ನಗರದ ಸಾಕ್ಷರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಲ್ಸ್ ಓರಿಯುಂಟಲ್ ಬಾಂ ಎಂಬವನ್ನು ಉಪಯೋಗಿಸಿ, ಕ್ಷಿಪ್ರದಲ್ಲಿ ಪೂರ್ಣ ಗುಣಹೊಂದಿದೆನು." ಲಿಟಲ್ಸ್ ಓರಿಯುಂಟಲ್ ಬಾಂ ಎಂಬುದನ್ನು ಲೇಪಿಸುವದರಿಂದ ಉಳುಕುಗಳೂ, ಘಾಯಗಳೂ, ಹರಿವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ಮಾರಲ್ಪಡುತ್ತೆ.

101-36

ಕುಂತಳಾನಂದ ತೈಲವು.

213-16

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ಕಪ್ಪಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ

ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟ್ಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಪಿ. ಎಮ್. ಸಾಥ ಮತ್ತು ಕಂಪನಿ,
ವೇಪೇರಿ, ಮದರಾಸ್

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲುದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ಪಾಲೆಸ್ ದೀದಿ,

[172-22] ಬೊಂಬಾಯಿ ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಛಾತಿ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-18]



(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಟ್ರೈನಿಂಗ್ ಪರ ಎಂ ಇ. ಸ್ಕೂಲ್, ಮಾಂಡು, ಪೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು —"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪತಿಕ್, ಹೋಮಿಯೋಪತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಬಾಧೆಯೆಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್ ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದಾರೆ"

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಸ್ವೆಟರುಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-18] GIRLS' INDUSTRIAL SCHOOL, HASSAN.

ಗೃಹಕೃತ್ಯದ ನೋಟೀಸು.

ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕು ಕಡಬದ ಸಮ್ಮತು ಗಂಗಸ್ಥಳದ ಪಟೇಲ ಚನ್ನೇಗೌಡನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ತಂದೆ ಲಿಂಗೇಗೌಡನ ವಯಸ್ಸು ಸುಮಾರು ೮೦ ವರ್ಷಕ್ಕಿಂತ ಜಾಸ್ತಿಯಾಗಿದೆ. ಈತನಿಗೆ ಕೆಲವು ದಿವಸಗಳಿಂದಲೂ ಜ್ಞಾನ ತಪ್ಪಿಹೋಗಿ ಕೆಡವು. ಅಜ್ಞಾನದ ದೆಸೆಯಿಂದ ಕೆಲವು ದಿನಗಳಿಂದಲೂ ನನ್ನಲ್ಲಿ ದ್ವೇಷಮಾಡುತ್ತಾನೆ. ಈತನ ಹೆಸರಿನಲ್ಲಿ ಸರ್ವೆ 29, 30, 61 ಈ ನಂಬರುಗಳ ಖಾತೆ ಇರುತ್ತೆ. ಈ ನಂಬರುಗಳ ಪೈಕಿ 29 ನೇ ನಂಬರಿನಲ್ಲಿ ಅರ್ಧ ಹಿಸ್ಸೆ ಇರುತ್ತೆ. 61 ನೇ ನಂಬರಿನಲ್ಲಿ ಎಕರೆ 2 ಗುಂಟೆ 30 ಮಾತ್ರ ಇರುತ್ತೆ. ನನ್ನ ಮೇಗಳ ದ್ವೇಷದಿಂದಲೂ, ಬುದ್ಧಿಸ್ವಾಧೀನವಿಲ್ಲದೆ ಇರುವುದರಿಂದಲೂ ಸದರಿ ಸರ್ವೆ ನಂಬರಿನ ಜಮೀನುಗಳನ್ನು ಈತನು ಯಾರಿಗಾದರೂ ನನ್ನ ಅನುಮತಿ ಇಲ್ಲದೆ ಕ್ರಯ ಭೋಗ್ಯ ಆಧಾರಗಳನ್ನು ಮಾಡಬಹುದು. ನನ್ನ ಅನುಮತಿ ಇಲ್ಲದೆ ಯಾರಾದರು ಈತನಿಂದ ಪಡೆದರೆ ಆದರೆ ಅದು ಊರ್ಜಿತವಾಗಲಾರದು. ಮತ್ತು ಮುಂದೆ ತಗಲುವ ಕೋರ್ಟು ಖರ್ಚು ವಗೈರೆಗಳಿಗೆ ಗುರಿಯಾಗುತ್ತೀರೆಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿದ್ದೇನೆ.

[1-1] ಪಟೇಲ ಚನ್ನೇಗೌಡ, ಗಂಗಸ್ಥಳ.

ಗೃಹಕೃತ್ಯದ ನೋಟೀಸು.

ಹೊಳೆನರಸೀಪುರದ ಅಲಂಕಾರ ರಾಜಾಚಾರ್ಯರ ಮಗಳಾದ ಕೀರುತಿ ರಾಮಾಚಾರ್ಯರ ಹೆಂಡತಿ ಸಾವಿತ್ರಿಬಾಯಿಯು ನನ್ನ ಪೋಷಣೆಯಲ್ಲಿದ್ದು 1913 ನೇ ಸೆಪ್ಟಂಬರ್ ತಿಂಗಳಲ್ಲಿ ಶ್ರೀರಂಗಪಟ್ಟಣದಲ್ಲಿ ಫೌತಿ ಆದರು. ಆಕೆಗೆ ಮಕ್ಕಳು ವಗೈರೆ ಇಲ್ಲದ್ದರಿಂದ ಆಕೆ ಇಷ್ಟದಂತೆ ತಂಗೀ ಮಗನಾದ ನಾನು ಉತ್ತರಕ್ರಿಯಾದಿಗಳನ್ನು ಮಾಡಿರುತ್ತೇನೆ. ಆಕೆ ಸಂಬಂಧವಾದ ಕಾಗದಪತ್ರಗಳೂ ಜಮೀನೂ ನನ್ನ ಸ್ವಾಧೀನಾನುಭವದಲ್ಲಿರುತ್ತೆ ಮತ್ತು ಆಕೆ ಹೆಸರಿನ ಖಾತೇ ತಬ್ದೀಲ್ ವಿಚಾರದಲ್ಲಿ ಅರ್ಜಿ ಕೊಟ್ಟಿದೇನೆ ಆಕೆಗೆ ನ್ಯಾಯವಾದ ವಾರಸ್ದಾರರಿದ್ದರೆ ಈ ಲಗಾಯತು ಮೂರು ತಿಂಗಳೊಳಗೆ ಕ್ರಮವಾರಸ್ ಸರ್ಟಿಫಿಕೇಟ್‌ನೊಡನೆ ನನ್ನಲ್ಲಿ ಮೊಕ್ತಾ ಮುಕ್ತಾಮಿ ವಿಚಾರದ ಮೊಬಲಗು ಪಾವತಿಯಿಂದ ನನ್ನಲ್ಲಿರುವ ಕಾಗದಗಳನ್ನು ಪಡೆಯಬಹುದು ಈ ಮಿಯಾದೇಲಿ ಯಾರೂ ಹಾಜರಾಗದಿದ್ದರೆ ಆಕೆ ಸ್ವತ್ತು ಮುಕ್ತಾ ಲೇವಾದೇವಿ ಮೇಲಿ ಯಾರಿಗೂ ಯಾವ ಹಕ್ಕೂ ಇರುವದಿಲ್ಲ. ಮತ್ತು ಕೋರ್ಟಿನಲ್ಲಿ ವ್ಯವಹರಿಸಿದಾಗ್ಯೂ ಆಕೆ ಸ್ವತ್ತಿಗೆ ಸಂಬಂಧಪಡದ ಜನರು ಸ್ವತಂತ್ರ ಪರಾಧೀನ ವಗೈರೆ ಮಾಡಿದಾಗ್ಯೂ ಒಂದೂ ಊರ್ಜಿತವಾಗತಕ್ಕದ್ದಲ್ಲ. ಹಾಗೆ ಪಡೆದವರೂ ಕೊಟ್ಟವರೂ ನಷ್ಟಕ್ಕೆ ಗುರಿಯಾಗುವರೆಂದು ಇದರಿಂದ ಎಚ್ಚರಿಸುತ್ತೇನೆ.

ಕುಮುಟಿ ವಿಠಲಾಚಾರ್ಯರ ಮಗ ರಾಮಾಚಾರ್ಯ,

[5-1] ತಾಲ್ಲೂಕ್ ಗುಮಾಸ್ತ, ಟಿ. ನರಸೀಪುರ.

ಗೃಹಕೃತ್ಯದ ನೋಟೀಸು.

ತುಮಕೂರು ತಾಲ್ಲೂಕು ಕೊತ್ತಗೆರೆ ಸಮ್ಮತು ಕೆಂಪಸಾಗರ ಗ್ರಾಮದ ದಾಸರೆ ಈರತಿಮ್ಮಯ್ಯನ ಪಾಳ್ಯದಲ್ಲಿರುವ ತಿಗಳರ ಜಾತಿ ತಿಮ್ಮಯ್ಯನ 1 ನೇ ಮಗ ರಂಗಯ್ಯ, 2 ನೇ ಗುರಯ್ಯನ ಮಗ ಚಿಕ್ಕರಂಗಯ್ಯ ಸಹ ಇವರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ಮಾವಾ ತಮ್ಮ ಪುಟ್ಟರಂಗನು ನಮ್ಮ ಸಮಷ್ಟಿಯನ್ನು ಬಿಟ್ಟು ಸುಮಾರು ಇಪ್ಪತ್ತು ವರುಷದಲ್ಲಿ ವಿಭಾಗವಾಗಿದ್ದು ಈಗ್ಗೆ ಒಂದೂವರೆ ವರುಷದಲ್ಲಿ ಫೌತಿಯಾದನು. ಈತನಿಗೆ ಪಾರ್ವತಿ, ದೊಡ್ಡಿ ಎಂಬ ಇಬ್ಬರು ಹೆಂಡತಿಯರು. ಇವರುಗಳಿಗೆ ಸಂತಾನವಿರುವದಿಲ್ಲ ಆದ್ದರಿಂದ ಇವರ ವಿಶಿಷ್ಟ ಸ್ವತ್ತುಗಳಿಗೂ ನಾವುಗಳೇ ಹಕ್ಕುದಾರರು. ಫೌತಿ ಪುಟ್ಟರಂಗನು ಮಾಡಿದ್ದ ಮನೆ ಅಂದರೆ ಕೈಸಾಲ ಮತ್ತು ಪತ್ರಗಳ ಸಾಲ ತಾ 9-8-1914 ರಲ್ಲಿ ನಾವುಗಳಿಬ್ಬರೇ ತೀರಿಸಿ ಪಡಾವನ್ನಿಸಿ ದಾಖಲೆ ಬಗ್ಗೆ ಪತ್ರಗಳನ್ನು ತೆಗೆದುಕೊಂಡು ಫೌತಿಯವನ ಹಿಸ್ಸೆ ಜಮೀನ್ ನಮ್ಮ ಸುಪರ್ದಿಗೆ ತೆಗೆದುಕೊಂಡು ಅನುಭವಿಸಿಕೊಂಡು ಬರುತ್ತಿದೇವೆ ಇನ್ನು ದಸ್ತಾವೇಜುಗಳ ಸಾಲವಾಗಲಿ, ಮೂಬಲ್ದಾ ಸಾಲವಾಗಲಿ ಇರುವದಿಲ್ಲವೆಂದು ಪಾಟೇಲ್ ನಂಜೇಗೌಡ, ಸೆಟ್ಟಿಗೆರೆ ಪಟೇಲ್ ನಂಜಪ್ಪ, ಕೆಂಪಯ್ಯ, ನಮ್ಮ ಕುಲದ ಯಜಮಾನ ಬಸಪ್ಪ ವಗೈರೇರ ರೂಬರೂಬು ಒಪ್ಪಿಕೊಂಡು ಪಾರ್ವತಿ, ದೊಡ್ಡಿಯು ಜೀವನಾಂಶಕ್ಕಾಗಿ ಎರಡುನೂರು ರೂಪಾಯಿ ಮಾತ್ರ ಕೊಡಬೇಕೆಂದೂ, ವಿಶಿಷ್ಟ ಹಕ್ಕು ಬಾಧ್ಯತೆ ನಿವೃತ್ತಿ ಮಾಡಿಕೊಂಡಿದ್ದೇವೆಂದೂ ತಾ. 28-8-1914 ರಲ್ಲಿ ಭಾಷಾ ಜೀವನಾಂಶದ ದಸ್ತಾವೇಜು ಬರೆದುಕೊಟ್ಟಿರುತ್ತಾರೆ 2 ನೇ ಹೆಂಡತಿ ದೊಡ್ಡಿಯು ಬದ್ಧಚಾಲ್ ನಡಿಸಿ ಗರ್ಭಿಣಿಯಾಗಿ ಮಗುವನ್ನು ನಾಶಮಾಡಿದ ವಿಷಯದಲ್ಲಿ ಪಾಟೇಲ್ ನಂಜೇಗೌಡರ ರಿಪೋರ್ಟಿನ ಮೇಲೆ ತಾ. 16-10-1914 ರಲ್ಲಿ ತಾಲ್ಲೂಕ್ ಹೆಡ್ ಪೋಲೀಸ್ ಕಸಬಾ ರೇಂಜು ಜಮೇದಾರ್ರು ತನಿಖೆ ಕ್ರಮ ಜರುಗಿಸಿ ಮಗುವನ್ನು ಮೆಡಿಕಲ್ ಆಫೀಸರವರ ಪರೀಕ್ಷೆಯಿಸಿಗೆ ತೆಗೆದುಕೊಂಡು ಹೋದನಂತರ ದಿಟೋ ಕೈಫಿಯತ್ತಿನಲ್ಲಿ ದೊಡ್ಡಿಯು ಗಂಡ ಫೌತಿ ಸಬಬು ನರಸನೆಂಬುವನನ್ನು ರಖಾಬ್ ಮಾಡಿಕೊಂಡಿದೇನೆಂದೂ, ಮುಂದೆ ಅವನಲ್ಲಿಯೇ ಇರುತ್ತೇನೆಂದೂ ಹೇಳಿ, ಹಾಲಿ ಮನೆಯಲ್ಲಿಯೇ ಕರತಂದು ಇಟ್ಟುಕೊಂಡಿದಾಳೆ. ಇಂಥಾ ದುಷ್ಟ ನಡವಳಿಕೆಯನ್ನು ನಡಿಸಿದ ದೊಡ್ಡಿ ಮತ್ತು ಪಾರ್ವತಿಯನ್ನು ನಮ್ಮ ಕುಲಾಚಾರದ ಪ್ರಕಾರ ಬಹಿಷ್ಕರಿಸಲ್ಪಟ್ಟಿದಾರೆ. ಈ ಕಾರಣಗಳಿಂದ ಸದರಿ ಜೀವನಾಂಶದ ಪತ್ರ ರೆಜಿಸ್ಟರಾಗಲಿಲ್ಲ. ಪಾರ್ವತಿಯೊಬ್ಬಳಿಗೆ ಮಾತ್ರ ದಸ್ತಾವೇಜು ಪ್ರಕಾರ ಒಂದು ನೂರು ರೂಪಾಯಿಯೇ ಆಗಲಿ, ನಮ್ಮ ಪೋಷಣೆಯಲ್ಲಿರಲಿ, ಅಥವಾ ಬೇರೆ ಇರಲಿ, ಜೀವಾವಧಿ ಭತ್ಯರೂಪವಾಗೇ ಆಗಲಿ ಕೊಡಲು ಸಿದ್ಧರಾಗಿರುತ್ತೇವೆ. ಇವರು ಅಪುತ್ರವತಿಯರಾದ್ದರಿಂದ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಲ್ಲಿ ಇವರಿಗೆ ಯಾವ ವಿಧವಾದ ಹಕ್ಕು ಬಾಧ್ಯತೆ ಇರುವದಿಲ್ಲ. ಜೀವನಾಂಶಕ್ಕೆ ಮಾತ್ರ ಬಾಧ್ಯರಾಗಿರುತ್ತಾರೆ. ದಿಟೋ ಯವರು ನಮಗೆ ಆಗದೇ ಇರತಕ್ಕ ದ್ವೇಷಿಗಳ ದುರ್ಬೋಧನೆಗೆ ಒಳಪಟ್ಟು ಆಸ್ತಿಯನ್ನು ಆಧಾರ ಕ್ರಯ ಭೋಗ್ಯ ವಗೈರೆ ಪರಾಧೀನ ಮಾಡುತ್ತಾರೆಂದು ಕೇಳುತ್ತೇವೆ. ಅವರುಗಳಿಗೆ ನಮ್ಮ ಅಧೀನದಲ್ಲಿರತಕ್ಕ ಸ್ಥಿರಸ್ವತ್ತುಗಳ ಮೇಲೆಯೂ, ಅವರ ಸುಪರ್ದಿನಲ್ಲಿರತಕ್ಕ ಚರಸ್ವತ್ತುಗಳ ಮೇಲೆಯೂ ಸಾಲಗಳನ್ನು ಯಾರೂ ಕೊಡಕೂಡದು. ನಮ್ಮಗಳನ್ನಾಗಲಿ ನಮ್ಮ ಆಸ್ತಿಯನ್ನಾಗಲಿ ಬಾಧಿಸುವದಕ್ಕಾಗಿ ಯಾವ ಹಕ್ಕೂ ಇಲ್ಲದ ಸದರಿ ಪಾರ್ವತಿ, ದೊಡ್ಡಿಯಿಂದ ಜಮೀನ್‌ಗಳನ್ನು ನಮ್ಮಗಳ ಅನುಮತಿ ರುಜುವಿಲ್ಲದೆ ಯಾರೇ ಆಗಲಿ ಯಾವ ವಿಧದಲ್ಲೇ ಆಗಲಿ ಕ್ರಯ ಭೋಗ್ಯ ಆಧಾರ ವಗೈರೆಗಳ ಮೂಲಕ ಪಡೆದುಕೊಂಡರೆ ಅವರ ಹಕ್ಕು ಸ್ಥಿರಪಡದೆ ನಮ್ಮ ಎಲ್ಲಾ ನಷ್ಟಗಳಿಗೂ ಗುರಿಯಾಗಬೇಕಾಗುವದೆಂದು ಈ ಮೂಲಕ ಎಚ್ಚರಿಸಿರುತ್ತೇವೆ.

[3-1] ರಂಗಯ್ಯ ಮತ್ತು ಚಿಕ್ಕರಂಗಯ್ಯ.

ಪಾಶ್ಚಾತ್ಯ ದೇಶಗಳ ನಮೂನೆಯುಳ್ಳ, ಬಹಳ ನೋಡಿಕೆಯಾಗಿಯೂ, ಬಹು ಶ್ರೇಷ್ಠವಾಗಿಯೂ, ಬೆಲೆ ಬಹಳ ಸುಲಭವಾಗಿಯೂ ಇರುವ ಉಕ್ಕಿನ ಪೆಟ್ಟಿಗೆಗಳು ಮಂಗಳೂರು ಬೇಸಲ್ ಮಿಷನ್ ಮೆಕ್ಯಾನಿಕಲ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ತಯಾರಾಗಿ ಗೌರ್ನಮೆಂಟುಗಳಲ್ಲಿ ಪದಕಗಳನ್ನು ಹೊಂದಿ ಬಿಕರಿಗೆ ಸಿದ್ಧವಾಗಿವೆ. ಇಷ್ಟಪಡುವ ಯಾವ ನಮೂನೆಯಲ್ಲಿ ಬೇಕಾದರೂ ಹೊಸದಾಗಿಯೂ ತಯಾರು ಮಾಡಿ ಕೊಡಲ್ಪಡುತ್ತೆ.

ಮೈಸೂರು ದೇಶದ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಏಜಂಟರುಗಳು ಬೇಕಾಗಿದೆ. ಎಲ್ಲಾ ವಿಷಯಕ್ಕೂ ಈ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಬಹುದು.

ಬಿ. ಜಿ. ಅಯ್ಯಂಗಾರ್, ಚೀಫ್ ಏಜಂಟರು,

[255-7] 290, ದೇವಾಂಬಾ ಅಗ್ರಹಾರ, ಮೈಸೂರು.

ಅರ್ಧ ಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!

ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-6] ಪಿ. ಓ. ಬಾಕ್ಸ್ 330, ಬೊಂಬಾಯಿ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ನೋಟೀಸ್.

ಪಟ್ಟಣದಲ್ಲಿ ಜನಗಳ ಉಪಯೋಗಕ್ಕಾಗಿ ಕೆಲವು ನಮೂನಾ ಬಂಗ್ಲೆ ಅಥವಾ ವಿಲ್ಲಾ (ಚಿಕ್ಕ ಚಿಕ್ಕ ಬಂಗ್ಲೆ) ಗಳನ್ನು ಕಟ್ಟಿಸಬೇಕೆಂದು ಮ್ಯುನಿಸಿಪಲ್ ಕೌನ್ಸಿಲ್‌ರವರು ಇಷ್ಟಪಡುತ್ತಾರಾಗಿ ಈ ವಿಷಯದಲ್ಲಿ ಕಟ್ಟಡದ ವ್ಯಾಪಾರಸ್ಥರು ಮತ್ತು ಸಿಪಾಯಿಗಳು ಸಹ ತಮಗೆ ಬೇಕಾದ ರಿಯಾಯತಿಗಳ ನಮೂದಿನಿಂದ ದರಖಾಸ್ತುಗಳನ್ನು ಕೊಡಬಹುದು. ಇದರಲ್ಲಿ ಉತ್ಸಾಹವುಳ್ಳ ಎಲ್ಲಾ ಜನರೂ 1915 ನೇ ಜನವರಿ 15 ನೇ ತಾರೀಖಿನೊಳಗೆ ಈ ಕೆಳಗೆ ನಮೂದಿಸುವ ಎಲ್ಲಾ ವಿಷಯಗಳಿಗೂ ತಪಸೀಲಾಗಿ ತಿಳಿಸಬೇಕು. ಇತರ ತಪಸೀಲುಗಳು ತಿಳಿಯಬೇಕಾಗಿದ್ದಲ್ಲಿ ಮ್ಯುನಿಸಿಪಲ್ ಆಫೀಸಿನಲ್ಲಿ ಪಡೆಯಬಹುದು.

ಅರ್ಜಿಯಲ್ಲಿ ಕಾಣಿಸಬೇಕಾದ ವಿವರಗಳು.

(1) ಮಾಡಲ್ ಬಂಗ್ಲಾ ಅಥವಾ ವಿಲ್ಲಾಗಳನ್ನು ಕಟ್ಟಲು ಇಚ್ಛಿಸುವವರ ಹೆಸರು.

(2) ಕಟ್ಟಿಸಲು ಇಷ್ಟಪಡುವ ಸ್ಥಳ

(3) ಸದರಿ ಕಟ್ಟಡದ ಅಂದಾಜು ವೆಚ್ಚಗಳು.

(4) ಬೇಕಾಗಿರುವ ರಿಯಾಯತಿ ವಗೈರೆ

ಮೈಸೂರು, ತಾ. 28-12-1914. [301-2] ಟಿ. ಲಕ್ಷ್ಮಣರಾವ್, ಪ್ರೆಸಿಡೆಂಟ್.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಏಜಂಟರು. ಮೆಸ್ಸರ್ಸ್ ಫಜಲ್‌ಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ಖರೀದಿಮಾಡತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ತಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ನೂಲಿನ ಮೇಲೆ ಶೇಕಡ 3 ರೂಪಾಯಿ ಛಾಗಾಯ್ತು 4½ ರೂಪಾಯಿ ವರಗೆ ಡಿಸ್ಕೌಂಟು ದೊರೆಯುತ್ತೆ. [87-38]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಬ್ಬರದ ಮಾರಾಟ.

ಬೂದಿ ಕೊಬ್ಬರ ಗಾಡಿ 1 ಕ್ಕೆ 10 ಆಣೆಯಂತೆ ಬಿಕರಿ ಮಾಡುತ್ತೇವೆ. ಬೇಕಾದವರು ಜಾಗ್ರತೆಯಾಗಿ ಬಂದು ತೆಗೆದುಕೊಳ್ಳಬೇಕು. ಕೊಬ್ಬರಿ ಸಿಕ್ಕುವ ಸ್ಥಳ:—ಪಿ. ಸಿದ್ದಯ್ಯ, ಸಿ. ಮುದಾರ್ ಸಾಹೇಬ್, ಮಂಡಿ, ಫ್ರೆಂಚ್‌ರಾಕ್ಸ್.

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಚೇಳಿಗೆ ಸರಿಯಾದ ಮದ್ದು.

ಚೇಳಿನ ಹೊಡತಕ್ಕೆ "ಸ್ಕಾರ್ಪಿಯಾನಿಯ" ಎನ್ನುವ ನಿರಪಾಯಕರವಾದ ಮತ್ತು ಸೇವನೆಗೆ ಅರ್ಹವಾದ ಔಷಧವು ಮತ್ತೊಂದಿಲ್ಲ. ಪೂನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡೆದಿರುತ್ತೆ

"ನಿಮ್ಮ ಚೇಳಿನ ಮದ್ದಿನಿಂದ ತಪ್ಪದೆ ಗುಣ ಬಂದಿದೆ" ಯೆಂದು ಭೀಮರಾವ್ ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ ಬಾಟ್ಲಿ ಒಂದಕ್ಕೆ ಕ್ರಯ ರೂ ೦-೮-೦. ನಾಲ್ಕು ಬಾಟ್ಲಿವರೆಗೆ ಪೋಸ್ಟ್ ಹಾಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

[295-2] ವಿಳಾಸ.—ಸ್ಕಾರ್ಪಿಯಾನಿಯೊ ಡಿಪೊ, ಹರಿಹರ.

The General Assurance Society Ltd., Ajmer.

(*A Popular Life Office.*)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's *Consulting Actuary*, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-26] Bangalore City.

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಹೀಮ್, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-14] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಸಿದ್ಧ ಔಷಧಗಳು.

"ಬಲವರ್ಧಕ ಸಂಜೀವನ."

ಅನುಭವಸಿದ್ಧ ಫಲಪ್ರದ ವನಸ್ಪತಿಗಳಿಂದ ತಯಾರಾದದ್ದು. ಈಗ ರೂಢಿಯೊಳಗೆ ಬಂದ ಕಾಫಿಯಂತೆ ಬೆಳಿಗ್ಗೆ ಸಾಯಂಕಾಲ ಸೇವಿಸುವದು. ಈ ಸೇವನೆಯಿಂದ ಆಬಾಲವೃದ್ಧರ, ಗರ್ಭಿಣಿ ಸ್ತ್ರೀಯರ, ಬಾಣಂತಿಯರ ಅಶಕ್ತ, ಮಂದಾಗ್ನಿ, ರಕ್ತದೋಷ, ನಿತ್ರಾಣ, ವಾಯುಶೂಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತಿ ಮುಂತಾದ ರೋಗಗಳನ್ನು ಹೋಗಲಾಡಿಸಿ ಶರೀರಕ್ಕೆ ಆರೋಗ್ಯಭಾಗ್ಯವನ್ನುಂಟುಮಾಡುತ್ತದೆ ಕ್ರಯ 24 ತೊಲೆ ಡಬ್ಬಿ 1 ಕ್ಕೆ 1 ರೂಪಾಯಿ; ಅಂಚೆ ಹಾಸಲು ಬೇರೆ. 1 ಡಜನ್‌ಗೆ ಒಂದು ಡಬ್ಬಿ ಬಹುಮಾನ. 1 ಡಜನ್ ಡಬ್ಬಿ ಕೇಳುವವರು ಅರ್ಧ ಛಾರ್ಜ್ ಮುಂಗಡ ರವಾನಿಸಬೇಕು

ಇದಲ್ಲದೆ ನಮ್ಮಲ್ಲಿ ದೊರೆಯುವ ಸಿದ್ಧ ಔಷಧಗಳು.

ಕಸ್ತೂರಿ ಮಾತ್ರೆ 25 ಇರುವ ಶೀಸೆಗೆ	ರೂ.	1-4-0
ಗೋರೋಚನ ಮಾತ್ರೆ 25 ಇರುವ ಶೀಸೆಗೆ	,,	1-0-0
ಸರ್ವ ವಿಷಾಪಹಾರಿ ಮಾತ್ರೆ 12 ಇರುವ ಶೀಸೆ 1 ಕ್ಕೆ	,,	1-0-0
ಕೂಷ್ಮಾಂಡಲೇಹ ಸೇರು 1 ಕ್ಕೆ	,,	2-0-0

ಈ ಔಷಧಗಳ ಅನುಪಾನಪತ್ರಿಕೆ ವಿ. ಪಿ. ಮೂಲಕ ರವಾನಿಸುತ್ತೇವೆ.

ನಮ್ಮ ವಿಳಾಸ:—ಬಿ. ಅಂಜನಪ್ಪ ಪಂಡಿತರು,

[1-1] ಕರ್ನಾಟಕ ವೈದ್ಯಶಾಲಾ, ಚಿತ್ರದುರ್ಗ.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಡಿಸ್ಟ್ರಿಕ್ಟ್ ಜಡ್ಜ್ ಆರ್. ಬಿ. ಪ್ಲಮರ್, ಎಸ್ಕ್ವೈರ್. ಬ್ಯಾರಿಸ್ಟರ್ ಅಟ್ ಲಾ ಯವರ ಸಮಕ್ಷಮ.

1911-12 ನೇ ಇಸವಿ ಕಂಪನಿ ಮಿಸ್ ಕೇಸ್ ನಂಬರು 23.

ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕು ಗಂಜಿಗುಂಟೆ ನರಸಿಂಹ ಅನುಗ್ರಹ ಧನಸಹಾಯದ ಕಂಪನಿ ಲಿಮಿಟೆಡ್ ವಿಚಾರದಲ್ಲಿ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ಹಾಲಿ ದಿವಾಳಿ ಎತ್ತಿರುವ ಮೇಲ್ಕಂಡ ಕಂಪನಿಯ ಷೇರುಹೋಲ್ಡರುಗಳ ಪೈಕಿ ಇದುವರೆಗೆ ತಮಗೆ ಸಲ್ಲತಕ್ಕ ಡಿವಿಡೆಂಡ್ ಮೊಬಲಗನ್ನು ತೆಗೆದುಕೊಳ್ಳದೆ ಇರತಕ್ಕಂಥಾವರು ಈ ಕೋರ್ಟು ರೂಬರೂಬು 1915 ನೇ ಇಸವಿ ಫೆಬ್ರವರಿ 1 ನೇ ತಾರೀಖು ಅಥವಾ ಆ ಒಳಗಾಗಿ ಯಾವದಾದರೂ ಕೋರ್ಟು ಇರುವ ದಿನ ಹಾಜರಾಗಿ ತಮಗೆ ಸಲ್ಲತಕ್ಕ ಮೊಬಲಗನ್ನು ತೆಗೆದುಕೊಳ್ಳತಕ್ಕದ್ದಿದೆ. ಇದಕ್ಕೆ ತಪ್ಪಿದಲ್ಲಿ ಆಯಾ ಷೇರುಹೋಲ್ಡರುಗಳ ಮೊಬಲಗನ್ನು ಸರಕಾರಿ ಜಮೆಗೆ ಸೇರಿಸಲ್ಪಡುತ್ತೆ.

1914 ನೇ ಇಸವಿ ಡಿಸೆಂಬರು ತಾ. 16 ರಲ್ಲು ಈ ಕೋರ್ಟು ಮೊಹರು ಮತ್ತು ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

(ಸೈನ್) ಆರ್. ಬಿ. ಪ್ಲಮರ್,

[300-3] ಡಿಸ್ಟ್ರಿಕ್ಟ್ ಜಡ್ಜ್.

ವೃತ್ತಾಂತ ಪತ್ರಿಕೆ.

——:o:——

೫೬ ೧೯೧೫ ನೇ ಇಸವಿ ಜನವರಿ ತಾ. ೭ ನೇ ಗುರುವಾರ.

ಹಿಂದೂ ಸಂಘ ಪರಿಷ್ಕರಣವು.

ಮೈಸೂರು ಸಂಸ್ಥಾನದಲ್ಲಿ ಸಂಘ ಪರಿಷ್ಕರಣಕಾರ್ಯಗಳು ವಿಶೇಷವಾಗಿ ನಡೆದಿರುವಂತೆ ಪಟಾಟೋಪ ಕೊಟ್ಟುಕೊಳ್ಳಲಾಗದೆ ಇದ್ದರೂ ಈ ರಾಷ್ಟ್ರದ ಇತರ ಭಾಗಗಳಲ್ಲಿ ಜನಗಳು ಈ ವಿಷಯದಲ್ಲಿ ಕುತೂಹಲಪಡುತ್ತಿರುವಂತೆಯೇ ನಮ್ಮ ಸೀಮೆಯವರೂ ಸಮಾಜ ಸುಧಾರಣೆಯಾಗಬೇಕೆಂಬ ಕುತೂಹಲವುಳ್ಳವರಾಗಿದಾರೆ. ಕೆಲವು ವಿಚಾರಗಳಲ್ಲಿ ಹಿಂದುಸ್ಥಾನದ ಇತರ ಕಡೆಗಳಿಗಿಂತ ನಮ್ಮ ಸೀಮೆಯೊಳಗೆ ಬದಲಾವಣೆಗಳು ಕಾರ್ಯತಃ ನಡೆದಿರುವವು. ಸಮಾಜದಲ್ಲಿ ಹೆಂಗಸರ ಸ್ಥಾನವನ್ನೂ ಸ್ವಾತಂತ್ರ್ಯಗಳನ್ನೂ, ಕೀಳುದರ್ಜೆಯಲ್ಲಿರುವ ಜನಗಳ ಸ್ಥಿತಿಗತಿಗಳನ್ನೂ ಉತ್ತಮಸ್ಥಿತಿಗೆ ತಂದಿಡಬೇಕೆಂದು ವಿದ್ಯಾವಂತರಾದ ಅನೇಕ ದೊಡ್ಡಮನುಷ್ಯರು ಹಲವು ಮಾರ್ಗಗಳಲ್ಲಿ ಪ್ರಯತ್ನಪಟ್ಟಿರುತ್ತಾರೆಂದೂ, ಬಹಳಮಟ್ಟಿಗೆ ಅಭಿವೃದ್ಧಿಯೂ ಕಂಡುಬಂದಿದೆ ಎಂದೂ ತಿಳಿಸಲು ಸಂತೋಷವಾಗುತ್ತದೆ.

ನಮ್ಮ ಶ್ರೀಮದ್ಯುವರಾಜರವರು ಸಮಾಜ ಸಂಸ್ಕರಣಕಾರ್ಯದಲ್ಲಿ ಬಹಳ ಪ್ರಾಮುಖ್ಯವಾದ ಅಭಿಮತವನ್ನಿಟ್ಟುಕೊಂಡಿರುವುದನ್ನು ನೋಡಿದರೆ ನಮಗೆ ಬಹಳ ಆನಂದವಾಗುವುದು. ಅವರು ತಮ್ಮಭಿಮತವನ್ನು ಕಾರ್ಯದಲ್ಲಿ ತೋರಿಸಿ ಸಮುದ್ರಯಾನಮಾಡಿ ಯೂರೋಪ್ಪಿನಲ್ಲೂ ಜಪಾನ್‍ನಲ್ಲೂ ಸಂಚಾರಮಾಡಿಕೊಂಡು ಒಂದು ಮೇಲ್ಪಂಕ್ತಿಯಾಕಿ ಕೊಟ್ಟಿರುತ್ತಾರೆ. ಇಂಥವರು ಮದರಾಸಿನಲ್ಲಿ ನಡೆದ ಸಂಘ ಪರಿಷ್ಕರಣಸಮಾಜದಲ್ಲಿ ಅಗ್ರಾಸನವನ್ನು ವಹಿಸಲು ಅರ್ಹರಾಗಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಅವರು ಆ ಪೀಠದಿಂದ ಅಪ್ಪಣೆಕೊಡಿಸಿರುವ ಮಾತುಗಳು ಸಹಜವಾದ ಅಭಿವೃದ್ಧಿಗೂ ಸುಲಭವಾಗಿ ರೂಪಿಸಲ್ಪಡುವುದಕ್ಕೂ ಎಷ್ಟೋ ಹಿತಕರವಾಗಿರುತ್ತವೆ. ಅವರು ಆ ಮಹಾಸಭೆಯಲ್ಲಿ ಮಾಡಿರುವ ಭಾಷಣದ ಕೆಲವು ಭಾಗಗಳನ್ನು ಎತ್ತಿ ಇನ್ನೊಂದು ಕಡೆ ಪ್ರಕಟಿಸಿರುವೆವು.

ಶ್ರೀಮದ್ಯುವರಾಜರವರು ಹಿಂದೂ ಪ್ರಜೆಗಳ ಪದ್ಧತಿ ಆಚಾರ ವ್ಯವಹಾರಗಳಲ್ಲಿರುವ ಕುಂದು ಕೊರತೆಗಳನ್ನೂ ಹುಳುಕುಗಳನ್ನೂ ಬಲ್ಲರು. ಆದದ್ದರಿಂದಲೇ ಅವರು ಜನಸಮುದಾಯಕ್ಕೆ ವಿದ್ಯೆ ವಿವೇಕಗಳನ್ನು ಕಲಿಸಬೇಕೆಂತಲೂ, ಹೆಂಗಸರ ವಿಷಯದಲ್ಲಿ ಹೆಚ್ಚಾದ ಸಹನವನ್ನೂ ಗೌರವವನ್ನೂ ಕಾರ್ಯದಲ್ಲಿ ತೋರಿಸುವವರಾಗಬೇಕೆಂತಲೂ, ಕೀಳುದರ್ಜೆಗಳಲ್ಲಿ ಬಿದ್ದುಕೊಂಡಿರುವ ಜನಗಳನ್ನು ಮೇಲಕ್ಕೆ ಎತ್ತಬೇಕೆಂತಲೂ ಬಹಳ ಸ್ಪಷ್ಟವಾಗಿ ತಿಳಿಸಿದರು. ಜಾತಿಯ ವಿಷಯದಲ್ಲಿ ಅವರು ಹೇಳಿದ ವಾಕ್ಯಗಳು ಕಠಿಣತರವಾಗಿರುತ್ತವೆ. ಜಾತಿಯಲ್ಲಿ ಹಿಂದೂ ಜನಗಳ ಪೈಕಿ ಕೆಲಕೆಲವರು ಒಂದೊಂದು ಪಂಗಡವಾಗಿ ಸೇರಿಕೊಂಡಿದಾರೆ. ಇದರಿಂದ ಕೆಲವು ವಿಚಾರಗಳಲ್ಲಿ ಪ್ರಯೋಜನವುಂಟಾಗಿದ್ದರೂ ಈಗಿನ ವಿದ್ಯಮಾನಗಳಿಗೆ ಅದು ಸೂಕ್ತವಾಗಿರುವುದಿಲ್ಲವೆಂದು ಹೇಳಿದರು. ಈ ಮಾತು ನಿಜವೆಂಬುದನ್ನು ಈಗಿನ ಹಿಂದೂ ಸಮಾಜದ ಸ್ಥಿತಿಗತಿಯನ್ನು ಬಲ್ಲವರೆಲ್ಲಾ ಒಪ್ಪಿಕೊಳ್ಳುತ್ತಾರೆ. ಜಾತಿಕಟ್ಟಿನ ಕಡಕುಗಳನ್ನು ಕೂಡಿದಮಟ್ಟಿಗೂ ಈಗ ಕಡಮೆಮಾಡಿದ್ದಾಗ್ಯೂ ಅದರ ದೆಸೆಯಿಂದ ಕೋಟ್ಯಾಂತರ ಹಿಂದುಗಳು ಅದರ ಸಂಕೋಲೆಗೆ ಸಿಕ್ಕಿ ಅದರ ಭಾರವನ್ನು ಹೊರಲಾರದೆ ಸಂಕಟಪಡುತ್ತಿದಾರೆ; ಇದರಿಂದ ಜನಗಳು ಅಭಿವೃದ್ಧಿ ಹೊಂದುವುದಕ್ಕೆ ಅವಕಾಶವಿಲ್ಲದೆಹೋಗಿದೆ. ನೂರಾರು ಪ್ರಜೆಗಳು ಜಾತಿಕಟ್ಟುಗಳನ್ನು ಕೈಲಾಗುವ ಮಟ್ಟಿಗೂ ಮೀರಿ ನಡೆಯುವರು; ಆದರೂ ಇದು ಸಾಲದೆಂದೂ, ಇನ್ನೂ ಮುಂದರಿಸಿ ಕಾರ್ಯಗಳನ್ನು ನಡಿಸಬೇಕಾಗಿದೆಯೆಂದೂ ದೇಶವತ್ಸಲರು ಅಭಿಪ್ರಾಯಪಡುವರು. ನಮ್ಮ ವಾಚಕರು ಶ್ರೀಮದ್ಯುವರಾಜರವರ ಅಭಿಮತವನ್ನು ಓದಿ ಚೆನ್ನಾಗಿ ಯೋಚಿಸಿ ಅವರು ಕೋರುವ ಇಷ್ಟಾರ್ಥಗಳು ಕೈಗೂಡುವ ಭಾಗದಲ್ಲಿ ಬಹು ವಿಶೇಷವಾದ ಮುತುವರ್ಜಿಯನ್ನೂ ಸಾಹಸವನ್ನೂ ಪ್ರಕಾಶಪಡಿಸುತ್ತಾರೆಂದು ನಿರೀಕ್ಷಿಸುತ್ತೇವೆ.

ಸಮಾಜದಲ್ಲಿ ಬಹು ಕಾಲದಿಂದ ಅನುಸರಿಸಿ ಬಂದಿರುವಂಥಾ ಪದ್ಧತಿಗಳನ್ನೂ ಆಚಾರ ವ್ಯವಹಾರಗಳನ್ನೂ ಕಾಲಾನುಗುಣ್ಯವಾಗಿ ತಿದ್ದಿ ಸರಿಪಡಿಸಿಕೊಳ್ಳುವುದೇನೋ ಸುಲಭವಾದ ಕಾರ್ಯವಲ್ಲ. ಅದಕ್ಕೆ ನಾನಾ ಮುಖದಿಂದ ಕಷ್ಟಗಳೂ ತೊಡಕುಗಳೂ ಅತಿಬಾಧೆಗಳೂ ಉಂಟಾಗುತ್ತವೆ. ಅದು ಇದ್ದಕ್ಕಿದ್ದ ಹಾಗೇ ಏಕಕಾಲದಲ್ಲಿ ನೆರವೇರತಕ್ಕ ವಿಚಾರ ಮೊದಲೇ ಅಲ್ಲ. ಯಾವ ದೇಶದಲ್ಲಾಗಲಿ ಯಾವ ಜನಗಳ ಪದ್ಧತಿ ಆಚಾರ ವ್ಯವಹಾರಗಳಾಗಲಿ ಕಳಂಕವಿಲ್ಲದೆ ಪರಿಪೂರ್ಣತೆಯನ್ನು ಹೊಂದಿವೆಯೆಂದು ಹೇಳುವ ಹಾಗಿಲ್ಲ. ಆಗಿಂದಾಗ್ಗೆ ನಡೆಯುವರನ್ನು ನೋಡುತ್ತಾ ಬದಲಾವಣೆ ಮಾಡಿಕೊಳ್ಳುತ್ತಾ ಬರಬೇಕಾದದ್ದೇ ಎಲ್ಲೆಲ್ಲೂ ಪ್ರಚಾರದಲ್ಲಿದೆ. ಅದೇ ರೀತಿ ಹಿಂದುಸ್ಥಾನದಲ್ಲೂ ಬದಲಾವಣೆಯು ಪ್ರಾರಂಭವಾಗಿರುವುದು. ಅದು ಕೆಲವು ವಿಚಾರಗಳಲ್ಲಿ ಬಹು ಬೇಗನೆ ಆಚರಣೆಗೆ ಬರುತ್ತಿದೆ. ಇನ್ನೂ ಅನೇಕ ಪ್ರಜೆಗಳಿಗೆ ಬದಲಾವಣೆಯ ನೆಲೆಯೇ ಸೋಕಿ ಇಲ್ಲವೆಂದು ಹೇಳಬೇಕು. ವಿದ್ಯಾವಂತರಾಗಿಯೂ ವಿಜ್ಞಾನಿಗಳಾಗಿಯೂ ಇರುವ ದೇಶವತ್ಸಲರು ಇಂಥಾ ಅವಶ್ಯವಾದ ಬದಲಾವಣೆಗಳನ್ನು ಕುರಿತು ಇನ್ನೂ ಹೆಚ್ಚಾಗಿ ಸಾರುತ್ತಲೂ, ತಾವುಗಳು ಅದೇ ರೀತಿ ನಡೆಯುತ್ತಲೂ ಬಂದ ಪಕ್ಷದಲ್ಲಿ ಸಾಮಾನ್ಯ ಪ್ರಜೆಗಳು ಅವರನ್ನು ಅನುಕರಿಸಿ ನಡೆಯುವುದಕ್ಕೆ ತುಂಬಾ ಪ್ರೋತ್ಸಾಹವಾಗುತ್ತದೆ.

ನಮ್ಮ ಶ್ರೀಮದ್ಯುವರಾಜರವರಿಗೆ ಚಕ್ರವರ್ತಿ ಸಾರ್ವಭೌಮರವರು ಈ ಸಲ ಹೊಸ ವರುಷದ ಸಂತೋಷದ ನಿಮಿತ್ತವಾಗಿ ಜಿ. ಸಿ. ಐ. ಇ. (ಗ್ರ್ಯಾಂಡ್ ಕಮ್ಯಾಂಡರ್ ಆಫ್ ದಿ ಇಂಡಿಯನ್ ಎಂಪೈರ್) ಎಂಬ ಘನತರವಾದ ಬಿರುದನ್ನು ದಯಪಾಲಿಸಿರುವುದನ್ನು ಕೇಳಿ ಈ ಸಂದರ್ಭದಲ್ಲೇ ನಮ್ಮ ಪರಮಾನಂದವನ್ನು ಸೂಚಿಸುತ್ತೇವೆ. ಈ ಶ್ಲಾಘ್ಯವಾದ ಬಿರುದನ್ನು ನಮ್ಮ ಯುವರಾಜರವರು ಚಿರಕಾಲ ಧರಿಸಿರಲೆಂದೂ, ತಮ್ಮ ನಡೆನುಡಿಗಳಿಂದ ನಮ್ಮ ಸಂಸ್ಥಾನಕ್ಕೆ ಈಗಿನಂತೆಯೇ ಸಹಾಯಮಾಡುತ್ತಾ ಬಂದು ಇತೋಪ್ಯತಿಶಯವಾದ ಬಿರುದನ್ನು ಸಂಪಾದಿಸುವವರಾಗಲೆಂದೂ ಹಾರೈಸುತ್ತೇವೆ.

ವರುಷದ ಆರಂಭವು.

ನಾವು ಯುಗಾದೀ ಹಬ್ಬವನ್ನು ಕೆಲವು ದಿನಗಳ ಕೆಳಗೆ ಆಚರಿಸಿದೆವು. ಆದರೆ ಇಷ್ಟು ಬೇಗ ಕಾಲಚಕ್ರವು ಉರುಳುತ್ತಾ ಉರುಳುತ್ತಾ ನಮ್ಮ ಜೀವನದಲ್ಲಿ ಇನ್ನೊಂದು ಮಜಲನ್ನು ಕೊನೆಗಾಣಿಸುವದೆಂದು ತಿಳಿಯಲಿಲ್ಲ. ಕಳೆದ ವರುಷವನ್ನು ಕುರಿತು ಯೋಚಿಸಿದರೆ—ಸಾಲುಮರಗಳೂ ತೋಪುಗಳೂ ಪಣ್ಣೆಲೆಗಳನ್ನು ಉದುರಿಸಿ ನಿರ್ಜೀವವಾದ ರೆಂಬೆಗಳನ್ನು ಹೊತ್ತುಕೊಂಡು ಕ್ಷಿಪ್ರದಲ್ಲಿ ಬೆಂಡಾಗಿ ಬಿಸಿಲಿಗೆ ಒಣಗಿಹೋಗುವವೋ? ಏನೋ? ಎಂಬಂತಿದ್ದವು. ಆದರೆ ವಸಂತಋತುವು ಆರಂಭವಾಗಲು ಅವೆಲ್ಲಾ ಫಳಫಳನೆ ಚಿಗುರಿ ಕೋಮಲವಾದ ಎಳೆಯ ತಳಿರುಗಳಿಂದ ನವಯೌವನವನ್ನು ಹೊಸತಾಗಿ ಧರಿಸಿಕೊಂಡಂತೆ ಕಂಗೊಳಿಸುತ್ತಿದವು. ಎಲ್ಲಿ ನೋಡಿದರೂ ಪರಿಮಳವನ್ನು ಬೀರುತ್ತಿರುವ ಪುಷ್ಪಗಳು ತುಂಬಿಗಳನ್ನು ತಮ್ಮಲ್ಲಿರುವ ಮಾಧುರ್ಯವನ್ನು ಸವಿಯುವದಕ್ಕೆ ಕರೆಯುತ್ತಿವೆಯೋ ಎಂಬ ಹಾಗಿತ್ತು. ಮತ್ತು ತ್ವರಿತದಲ್ಲಿಯೇ ಕಾಯಿ ಹೀಚುಗಳೂ ಬಲಿತ ಕಾಯಿಗಳೂ ಕಡೆಕಡೆಗೆ ಹಣ್ಣುಗಳೂ ಬಿಸಿಲಿನ ಧಗೆಯಿಂದ ತಪಿಸುತ್ತಿದ್ದ ನಮಗೆ ತಮ್ಮ ಸಮೀಚೀನವಾದ ರಸದಿಂದ ತೃಪ್ತಿಯನ್ನು ಕೊಡಲಾರಂಭಿಸಿದವು. ಬೇಸಗೆಯ ಬಿಸಿಲು ಕೊಳ, ಕೆರೆ, ಸರೋವರಗಳ ಮೇಲೆ ತನ್ನ ಕ್ರೂರವಾದ ಕಿರಣಗಳನ್ನು ಆಚ್ಛಾದಿಸಿ, ಮೇಘಗಳು ನೀರನ್ನು ಶೇಖರಿಸುವ ಕೆಲಸವನ್ನು ನಿವೃತ್ತಿ ಇಲ್ಲದೆ ಮಾಡಿಕೊಳ್ಳುವಂತೆ ನೆರವಾಯಿತು. ಬೇಸಗೆಯು ಹೀಗೆ ಸಕಲ ಜೀವಜಂತುಗಳಿಗೂ ಬೇಸರವನ್ನುಂಟುಮಾಡುತ್ತಿರುವದನ್ನು ನೋಡಿ ವರ್ಷಋತುವು ಸಹಿಸಲಾರದೆ ಮೇಘನಾದದಿಂದ ಬೇಸಗೆಯನ್ನು ಹಿಂದಟ್ಟಿ ಹೊಡೆಯುತ್ತಿದೆಯೋ ಎಂಬ ಹಾಗೆ ಆರಂಭವಾಗಿ ಕಾಲಮೇಘಗಳಿಂದ ಜೀವಾಧಾರವಾದ ಮಳೆಯನ್ನು ಸುರಿಸಿತು. ಅಷ್ಟರೊಳಗೆ ಬರೀದಾಗಿದ್ದ ನಮ್ಮ ಕೆರೆ, ಕುಂಟೆ, ನದಿ, ಸರೋವರಗಳು ತುಂಬಿ ತುಳುಕಲಾರಂಭಿಸಿದವು. ಮತ್ತು ಆ ವರೆಗೂ ಅತಿಕಾಂತಿಯಿಂದ ಉತ್ತುಬಿತ್ತುತ್ತಿದ್ದ ರೈತನೂ ಅವನಿಗೆ ಸಹಾಯವಾಗಿದ್ದ ಎತ್ತುಗಳೂ ಮಳೆಯೆಂಬ ಪೋಷಕನ ಕೈಗೆ ತಮ್ಮ ಬೆಳೆಯನ್ನು ಒಪ್ಪಿಸಿದವು. ಮತ್ತು ಹೀಗೆ ಕೆಲವು ದಿನಗಳಾಗುವದರೊಳಗಾಗಿ ಹಾಗಿಯ ಕಾಲವೂ ಅದರ ಹಿಂದೆ ಸುಗ್ಗಿಯೂ ಬಂದು, ಈಗ ಎಲ್ಲಿ ನೋಡಿದರೂ ಕೊಯ್ಯುವವರೂ ಕುಪ್ಪೆ ಹಾಕುವವರೂ ಮಹಾ ಸಂಭ್ರಮದಿಂದ ತಮ್ಮ ಕೆಲಸಗಳನ್ನು ನಡಿಸುತ್ತಿರುವರು.

ವರುಷಂಪ್ರತಿ ತಪ್ಪದೆ ಫಲ ಪುಷ್ಪ ಪತ್ರಗಳನ್ನು ಬಿಡುವ ಶಕ್ತಿಯನ್ನು ಮರಗಿಡ ಮುಂತಾದ ಸಸ್ಯಾದಿಗಳು ಎಲ್ಲಿಂದ ದೊರಕಿಸಿಕೊಳ್ಳುತ್ತವೆ? ಮಳೆಯೂ ಅವಕ್ಕೆ ಆಧಾರವಾದ ಬಿಸಿಲೂ ಹಾಗಿಯ ಕಾಲವೂ ತೃಣಮಾತ್ರವೂ ವ್ಯತ್ಯಾಸವಾಗದೆ ಋತುಧರ್ಮವನ್ನನುಸರಿಸಿ ಬರುತ್ತಿರುವದು ಹೇಗೆ? ಮತ್ತು ಹಿಂದಣ ವರುಷದ ದವಸಧಾನ್ಯಗಳು ಮುಗಿಯುವುದಕ್ಕಿಂತ ಮುಂಚೆ ಹೊಸ ದವಸಧಾನ್ಯಗಳು ರಾಶಿರಾಶಿಯಾಗಿ ಒದಗುವ ಹಾಗೆ ಮಾಡುವವನು ಯಾರು? ಆ ಮಹಾತ್ಮನ ಶಕ್ತಿಯೂ ಸಂಪತ್ತೂ ಇನ್ನೆಷ್ಟಿರುವದು? ನಮಗಾಗಿರುವ ಮೂವತ್ತು ನಲವತ್ತು ವರುಷಗಳಿಂದ ಹೀಗೆಯೇ ನಡೆಯುತ್ತಾ ಬಂದಿದೆ. ನಮಗಿಂತ ಮುಂಚೆ ಇದ್ದವರೂ ಈ ಸುಖಗಳನ್ನು ಕ್ರಮವಾಗಿ ಅನುಭವಿಸುತ್ತಾ ಬಂದಿದ್ದಾರೆ. ಇದನ್ನೆಲ್ಲಾ ಹಿಡಿದು ನಡಿಸುತ್ತಿರುವವನು ಯಾರು? ಏತಕ್ಕೆ ಇಷ್ಟೊಂದು ಕಾರುಬಾರುಗಳನ್ನು ನಡಿಸುತ್ತಿದ್ದಾನೆ? ಜೀವಜಂತುಗಳೂ ಪಶುಗಳೂ ಈ ವಿಧವಾಗಿ ಯೋಚಿಸಿ ಸಕಲ ಉಪಕಾರಗಳನ್ನೂ ನೆನಪಿಗೆ ತಂದುಕೊಂಡು ಆ ಮಹೋಪಕಾರಿಯನ್ನು ಆತನ ನಿರ್ವ್ಯಾಜ ಪ್ರೀತಿಗಳಿಗೋಸ್ಕರ ವಂದಿಸಲಾರವು. ಅವಕ್ಕೆ ಆ ಬುದ್ಧಿಯೂ ಜ್ಞಾಪಕವೂ ಶಕ್ತಿಯೂ ಇಲ್ಲ. ಆದರೆ ನಾವು ಅವಕ್ಕಿಲ್ಲದ ಆ ಬುದ್ಧಿ, ಜ್ಞಾನ, ಶಕ್ತಿಗಳನ್ನು ಪಡೆದಿದ್ದೇವೆ. ನಾವು ಈ ವರುಷಾರಂಭದ ಕಾಲದಲ್ಲಿ ಈ ಉಪಕಾರಪರಂಪರೆಗಳಿಂದ ಪ್ರೇರಿತರಾಗಿ ಆತನನ್ನು ಏಕಚಿತ್ತದಿಂದ ವಂದಿಸಿ ಆತನ ಸೇವೆಗೆ ನಮ್ಮನ್ನು ಪುನಃ ಪ್ರತಿಷ್ಠಮಾಡಿಕೊಳ್ಳುವುದು ಉಚಿತವಲ್ಲವೇ?

ಆದರೆ ನಮ್ಮ ಕಡೆಯ ಕರ್ತವ್ಯವನ್ನು ನಾವು ಹೇಗೆ ನಡಿಸುತ್ತಾ ಬಂದಿದ್ದೇವೆ? ಆತನು ಕೃಪೆಯಿಂದ ದಯಪಾಲಿಸಿದ್ದನ್ನು ಊಟಮಾಡಿ ಅನುಭವಿಸಿದ್ದೇವೆ. ತೃಪ್ತಿಪಟ್ಟಿದ್ದೇವೆ. ಸಂತೋಷಚಿತ್ತರಾಗಿ ಕಾಲಹರಣಮಾಡಿದ್ದೇವೆ. ಹೀಗೆ ನಮ್ಮ ಆಯುಷ್ಯದಲ್ಲಿ ಇನ್ನೊಂದು ವರುಷವು ಮುಗಿಯಿತು. ಉಳಿದ ವರುಷಗಳು ಪ್ರಾಯಶಃ ಹೀಗೆ ಕೊನೆಗಾಣುವವು. ಆದರೆ ಈ ಕಳೆದ ಕಾಲದಲ್ಲಿ ನಾವು ಸಂಪಾದಿಸಿದ್ದೇನು? ಇಷ್ಟೊಂದು ಸಲಕರಣೆಗಳನ್ನು ನಮ್ಮ ಹಿತಕ್ಕಾಗಿ ಒದಗಿಸಿ ಕೊಡುತ್ತಿರುವವನು ಸುಮ್ಮನೆ ಹಾಗೆ ಒದಗಿಸಿಕೊಡುತ್ತಾನೆಯೋ? ಅಥವಾ ಹೀಗೆ ಮಾಡುತ್ತ ಬರುವದರಲ್ಲಿ ಆತನಿಗೇನಾದರೂ ಉದ್ದೇಶವಿದೆಯೋ? ಉದ್ದೇಶವಿಲ್ಲದೆ ಪ್ರತಿಫಲವನ್ನು ನಿರೀಕ್ಷಿಸದೆ ಯಾರೂ ಭಾರೀ ಲಾಗುವಾಡನ್ನು ಖರ್ಚು ಮಾಡುವುದಿಲ್ಲವಷ್ಟೆ. ಸೃಷ್ಟಿಕರ್ತನು ನಮ್ಮನ್ನು ನಿರ್ಮಿಸಿ ಕಾಪಾಡುತ್ತಾ ಬರುವ ಉದ್ದೇಶವೇನು?

ನಮ್ಮನ್ನು ಆತನು ಈ ಪ್ರಪಂಚದಲ್ಲಿಟ್ಟು, ನಾವು ಆತನನ್ನು ಆತನ ಉಪಕಾರಗಳ ಮುಖೇನ ತಿಳಿದು ಆತನನ್ನು ಪ್ರೀತಿಮಾಡಿ ಸೇವಿಸುತ್ತಾ ಸುಖವಾಗಿರಬೇಕೆಂಬುವದೇ ಆತನ ಚಿತ್ತ. ಈ ಉಪಕಾರಗಳಲ್ಲಿ ಕೆಲಕೆಲವನ್ನು ನಾವು ವಾಚಕರ ಸ್ಮರಣೆಗೆ ತಂದಿದ್ದೇವೆ ಆದರೆ ಆತನ ಉಪಕಾರಗಳು ಅಸಂಖ್ಯಾತವಾಗಿವೆ. ಅವುಗಳನ್ನೆಲ್ಲಾ ನಾವು ಜ್ಞಾಪಿಸಿಕೊಂಡು ಆತನನ್ನು ಪ್ರೀತಿಮಾಡಬೇಕು. ಮತ್ತು ಈ ಲೋಕವು ನಮಗೆ ನಿರಂತರವಾದ ಸ್ಥಳವಲ್ಲ. ಇದಕ್ಕಿಂತ ಉತ್ತಮೋತ್ತಮವಾದ ಪರಲೋಕವು ನಮ್ಮ ಸ್ಥಳ. ಆ ಲೋಕದಲ್ಲಿ ಆತನ ಸಮೀಪದಲ್ಲಿದ್ದುಕೊಂಡು ಆತನ ಅನ್ಯೋನ್ಯವನ್ನು ಅನುಭವಿಸುತ್ತಾ ಇರುವದು ಆತನನ್ನು ಇಲ್ಲಿ ಪ್ರೀತಿಮಾಡಿ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವರ ಬಾಧ್ಯತೆಯಾಗಿದೆ. ಇಹಲೋಕದ ಬಾಳು ಒಂದು ಪರೀಕ್ಷೆಯ ಸ್ಥಿತಿ. ಇಲ್ಲಿ ನಾವು ಆತನನ್ನು ಪ್ರೀತಿಮಾಡಿ ಆತನ ಆಜ್ಞೆಗಳನ್ನು ಕೈಕೊಳ್ಳುವದು ನಮ್ಮ ಮುಂದಿನ ಸ್ಥಿತಿಯನ್ನು ಅಭಿಲಾಷೆಪಟ್ಟು ಅದನ್ನು ಪಡೆಯುವದಕ್ಕೆ ಕುತೂಹಲಪಡುವೆವೆಂದು ಒಪ್ಪಿಕೊಂಡಂತಾಗಿರುತ್ತದೆ.

ಯುದ್ಧದ ಸಮಾಚಾರಗಳು.

ಹೋದ ವಾರ ಶಾಂತವಾಗಿ ಕಳೆಯಿತು.

ವಿಮಾನ ಯಂತ್ರಗಳ ಕಾರುಬಾರುಗಳು.

ಈ ವಾರ ತಿಳಿಸಬಹುದಾದ ವಿಶೇಷ ವರ್ತಮಾನಗಳೇನೂ ಇರುವುದಿಲ್ಲ. ಕ್ರಿಸ್ಮಸ್ ವಾರದಲ್ಲಿ ನಡೆದ ಯುದ್ಧಕಾರ್ಯಗಳನ್ನೇ ಈಗ ಬಂದಿರುವ ತಂತಿ ವರ್ತಮಾನಗಳು ಸೂಚಿಸುವವು. ಆ ವಾರದೊಳಗೆ ಯುದ್ಧಕಾರ್ಯಗಳೇನೂ ವಿಶೇಷವಾಗಿ ನಡೆಯಲಿಲ್ಲ. ವಿಮಾನ ಯಂತ್ರಗಳು ನಡಿಸಿದ ಕಾರ್ಯಗಳೇ ಆ ವಾರದ ವಿಶೇಷ ಸಮಾಚಾರಗಳು.

ಪಶ್ಚಿಮ ಯುದ್ಧಭೂಮಿ.

ನಮ್ಮ ಸೈನ್ಯಗಳೂ ಶತ್ರು ಸೈನ್ಯಗಳೂ ಎದುರುಬದುರಾಗಿರುವ ಸಾಲಿನ ಉದ್ದಕ್ಕೂ ಯುದ್ಧಕಾರ್ಯಗಳು ಸಾಮಾನ್ಯವಾಗಿ ನಡೆದಿರುವವು; ಅದರಲ್ಲೂ ಫಿರಂಗೀ ಗುಂಡುಗಳ ಬಡಿದಾಟವೇ ಹೆಚ್ಚು. ಹವಾ ಬಹಳ ಶೈತ್ಯವಾಗಿದೆ, ಮಳೆಯೂ ಮಂಜೂ ಸುರಿಯುವವು. ಇದರ ಮಧ್ಯೆ ಇದ್ದುಕೊಂಡು ಕದನಗಳನ್ನು ನಡಿಸುವುದರಲ್ಲಿ ಸೈನ್ಯಗಳು ಬಹಳ ಕಷ್ಟಪಡುತ್ತಿವೆ. ಆದಕಾರಣ ಅವರು ಬಹಳ ಮಟ್ಟಿಗೆ ಮುಂದೆ ನುಗ್ಗಿ ಹೋಗುವುದು ಸಾಧ್ಯವಾಗಲಿಲ್ಲ.

ಬ್ರಿಟಿಷರು ಉತ್ತರ ಕಡಲಿನ ಕಡೆಯಿಂದ ಸಮುದ್ರತೀರದ ಮೇಲೆ ಜಹಜುಗಳಿಂದ ಗುಂಡುಗಳ ಮಳೆ ಸುರಿಸುತ್ತಿದ್ದ ವೇಳೆಯಲ್ಲಿ ಬೆಲ್ಜಿಯನ್ ಸೈನಿಕರು ಶತ್ರುಗಳ ಮೇಲೆ ನುಗ್ಗಿಹೋಗಿ ಬೆಲ್ಜಿಯಮ್‌ನೊಳಗೆ 2,000 ಜರ್ಮನಿಯವರನ್ನು ಕೈಸೆರೆ ಹಿಡಿದುಕೊಂಡುಬಂದರೆಂದು ಹೇಳಲಾಗಿದೆ. ಮೇಲ್ಕಂಡ ಸಾಲಿನ ದಕ್ಷಿಣ ಕೊನೆಯಲ್ಲಿ ಫ್ರೆಂಚರು ಮುಂದೆ ನುಗ್ಗಿಹೋಗಿ ಆಲ್ಸೇಸ್ಸಿನಲ್ಲಿರುವ ಜರ್ಮನಿಯವರ ಪ್ರದೇಶವನ್ನು ಆಕ್ರಮಿಸಿಕೊಂಡಿದಾರೆ.

ವಿಮಾನ ಯಂತ್ರಗಳಿಂದ ಸಿಡಿಮದ್ದಿನ ಗುಂಡುಗಳನ್ನು ಹೆಚ್ಚಾಗಿ ಹಾಕಿರುತ್ತಾರೆ. ಕ್ರಿಸ್ಮಸ್ ಹಬ್ಬದ ದಿನ ಬ್ರಿಟಿಷರ ಒಂದು ಯುದ್ಧದ ಜಹಜೂ, ಕೆಲವು ಸಣ್ಣ ಜಹಜುಗಳೂ, ಕೆಲವು ಸಬ್‌ಮೆರೀನ್ ಎಂಬ ಹಡಗುಗಳೂ, ನೀರಿನ ಮೇಲಾಗಲಿ ಅಂತರಿಕ್ಷದಲ್ಲಾಗಲಿ ಹೋಗುವಂಥಾ ಎಂಟು ಹಡಗುಗಳೂ ಜರ್ಮನಿಯ ಸಮುದ್ರತೀರದ ಬಳಿಗೆ ಹೋಗಿ ಕುಕ್ಸ್‌ಹಾವೆನ್ ಎಂಬ ತೀರಪಟ್ಟಣದಲ್ಲಿದ್ದ ಜರ್ಮನಿಯವರ ಹಡಗುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಬೇಕೆಂದು ಪ್ರಯತ್ನಪಟ್ಟವು. ಜಪ್ಪೆಲಿನ್ ಎಂಬ ಜರ್ಮನಿಯವರ ಬಹಳ ದೊಡ್ಡ ವಿಮಾನಯಂತ್ರಗಳೆರಡೂ, ನಾಲ್ಕು ಸಾಮಾನ್ಯವಾದ ವಿಮಾನ ಯಂತ್ರಗಳೂ, ಕೆಲವು ಸಬ್ ಮೆರೀನ್ ಎಂಬ ಜಹಜುಗಳೂ ಬ್ರಿಟಿಷರ ಮೇಲ್ಕಂಡ ಜಹಜುಗಳನ್ನು ಹಿಂದಕ್ಕೆ ಓಡಿಸಬೇಕೆಂದು ಬಂದವು. ಬ್ರಿಟಿಷ್ ಜಹಜುಗಳು ಮೂರು ಗಂಟೆಗಳ ಹೊತ್ತು ಅಲ್ಲೇ ಇದ್ದು ಮಾಡಬೇಕೆಂದಿದ್ದ ಕಾರ್ಯಗಳನ್ನು ಮಾಡಿಕೊಂಡೇ ಬಂದವು. ಬ್ರಿಟಿಷ್ ಫಿರಂಗಿಗಳು ಜರ್ಮನಿಯವರ ಜಪ್ಪೆಲಿನ್‌ಗಳನ್ನು ಬೇಗನೆ ಓಡಿಸಿಬಿಟ್ಟವು. ಬಹಳ ಚುರುಕಾಗಿ ಚಲನೆಮಾಡಿ ಜರ್ಮನಿಯವರ ಸಬ್‌ಮೆರೀನ್‌ಗಳಿಗೆ ಸಿಕ್ಕದೆ ತಪ್ಪಿಸಿಕೊಂಡವು ಬ್ರಿಟಿಷರ ಏಳು ವಿಮಾನ ಯಂತ್ರಗಳು ಅಂತರಿಕ್ಷದಿಂದ ಜರ್ಮನಿಯವರ ಯುದ್ಧದ ಜಹಜುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದಲ್ಲದೆ ಜರ್ಮನಿಯವರ ಕೆಲವು ವಿಮಾನ ಯಂತ್ರಗಳಿಗೂ ಗುಂಡುಗಳನ್ನು ಎಸೆದವು. ಬ್ರಿಟಿಷರ ವಿಮಾನಗಳಲ್ಲಿ ಆರು ವಾಪಸು ಬಂದವು. ಇನ್ನೊಂದು ಕೆಲವು ದಿನಗಳ ತನಕ ಸಿಕ್ಕಿರಲಿಲ್ಲ. ಇದರ ಅಧಿಪತಿಯನ್ನು ಹಾಲೆಂಡಿನ ಒಂದು ಜಹಜು ಕಂಡು ಬದುಕಿಸಿ ಕರೆದು ತಂದಿದೆ. ಈಗ ಆತನು ಸುರಕ್ಷಿತವಾಗಿದಾನೆ. ಬ್ರಿಟಿಷರ ಕಡೆ ಈ ವಿಮಾನ ಯುದ್ಧದಲ್ಲಿ ನಷ್ಟವೇನೂ ಆಗಲಿಲ್ಲ; ಜರ್ಮನಿಯವರ ವಿಮಾನ ಯಂತ್ರಗಳಿದ್ದ ಠಾಣ್ಯಗಳಿಗೆ ತುಂಬಾ ನಷ್ಟವಾಗಿ ಕೆಲವು ವಿಮಾನಗಳು ಒಡೆಯಲ್ಪಟ್ಟವೆಂದು ತಿಳಿಯಲಾಗಿದೆ.

ಬ್ರಿಟಿಷರ ಕೆಲವು ವಿಮಾನ ಯಂತ್ರಗಳು ಹೋಗಿ ಬ್ರುಸೆಲ್ಸಿನಲ್ಲಿ ಜರ್ಮನಿಯವರ ವಿಮಾನ ಯಂತ್ರಗಳ ತಬೇಲೆಗಳಿಗೆ ಎಂಟು ಸಿಡಿಮದ್ದಿನ ಗುಂಡುಗಳನ್ನು ಹಾಕಿ, ಕೆಲವು ಮಟ್ಟಿಗೆ ನಷ್ಟಪಡಿಸಿ ಬಂದವು

ಫ್ರೆಂಚರು ಕೆಲವು ವಿಮಾನ ಯಂತ್ರಗಳನ್ನು ಮೆಟ್ಸ್ ನಗರಕ್ಕೆ ಕಳುಹಿಸಿಕೊಟ್ಟರು ಇವು ಅಲ್ಲಿನ ರೈಲ್ ರಸ್ತೆಯ ಮೇಲೂ, ವಿಮಾನ ಯಂತ್ರಗಳ ತಬೇಲೆಯ ಮೇಲೂ ಸಿಡಿಮದ್ದಿನ ಗುಂಡುಗಳನ್ನು ಇಳಿಯಬಿಟ್ಟು ಬಂದಿರುತ್ತವೆ.

ಜರ್ಮನಿಯ ವಿಮಾನಕಾರರು ಅಂತರಿಕ್ಷದಲ್ಲಿ ಬಂದು ಫ್ರಾನ್ಸಿಗೆ ಸೇರಿದ ನಾನ್ಸಿ ನಗರದೊಳಕ್ಕೆ ಹತ್ತು ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಇದಲ್ಲದೆ ಅವರು ರಷ್ಯಾದಲ್ಲಿರುವ ಒಂದಾನೊಂದು ಪಟ್ಟಣದ ಮೇಲೆ ನಾಲ್ವತ್ತು ಗುಂಡುಗಳನ್ನು ಎಸೆದದ್ದರಿಂದ ಎಂಟು ಜನರು ಮೃತಪಟ್ಟರು; 26 ಜನರಿಗೆ ಗಾಯಗಳಾದವು ಇಷ್ಟೇ ಅಲ್ಲ. ಜರ್ಮನಿಯವರು ಫ್ರಾನ್ಸಿಗೆ ಸೇರಿದ ಡನ್‌ಕರ್ಕ್ ಎಂಬ ತೀರನಗರದೊಳಕ್ಕೂ ಸಿಡಿಮದ್ದಿನ ಗುಂಡುಗಳನ್ನು ಎಸೆದರು. ಅಲ್ಲಿ ಹಲವು ಕಟ್ಟಡಗಳು ಒಡೆದುಹೋದವು. 15 ಜನಗಳು ಕೊಲೆಯಾದರು, 30 ಮಂದಿಗೆ ಗಾಯಗಳಾಗಿವೆ

ಬೆಲ್ಜಿಯಮ್ ದೇಶದೊಳಗೆ ಪ್ರಜೆಗಳು ವಿಶೇಷ ಪರಿತಾಪಕರವಾದ ಸ್ಥಿತಿಯಲ್ಲಿದಾರೆ. ಜರ್ಮನಿಯವರು ಅವರಿಗೆ ಸಹಾಯಮಾಡುವಂತೆ ಕಾಣುವುದಿಲ್ಲ. ಪ್ರಜೆಗಳು ಹೊಟ್ಟೆಗಿಲ್ಲದೆ ಸಂಕಟಪಡುತ್ತಿರುವುದರಿಂದ ಕೆಲವು ಅಮೇರಿಕದ ಜನಗಳು ಅವರಿಗಾಗಿ ಆಹಾರ ಪದಾರ್ಥಗಳನ್ನು ಕಳುಹಿಸುತ್ತಲಿದಾರೆ.

ನಮ್ಮ ಚಕ್ರವರ್ತಿಯವರೂ ಮಹಾರಾಜ್ಞೀಯವರೂ ಬ್ರಿಟಿಷ್ ಮತ್ತು ಹಿಂದುಸ್ಥಾನದ ಭೂ ಸೈನಿಕರಿಗೂ, ಸಮುದ್ರ ಸೈನಿಕರಿಗೂ ಕ್ರಿಸ್‌ಮಸ್ ಹಬ್ಬದ ನಿಮಿತ್ತವಾದ ಶುಭವಾದನಗಳುಳ್ಳ ಬಹುಮಾನಗಳನ್ನು ಕಳುಹಿಸಿಕೊಟ್ಟಿರು. ಅವರೆಲ್ಲಾ ಅವುಗಳನ್ನು ಪರಮಾನಂದದಿಂದ ಸ್ವೀಕರಿಸಿ ಚಕ್ರವರ್ತಿ ದಂಪತಿಗಳಿಗೆ ತಮ್ಮ ಕೃತಜ್ಞತೆಯನ್ನು ಭಕ್ತಿಪೂರ್ವಕವಾಗಿ ಅರ್ಪಿಸಿರುತ್ತಾರೆ.

ಒಬ್ಬಾನೊಬ್ಬ ಸೈನಿಕನು ಬರೆದಿರುವ ಕಾಗದದಲ್ಲಿ ಕ್ರಿಸ್ಮಸ್ ಹಬ್ಬದ ದಿನ ಬ್ರಿಟನ್ ಮತ್ತು ಜರ್ಮನಿ ಸೈನಿಕರು ಒಂದು ಕಡೆ ಕಂದಕಗಳಲ್ಲಿ ಕಲೆತು ಪರಸ್ಪರ ಕೈಹಿಡಿದು ಶುಭವಾದವನ್ನು ಹೇಳಿದರೆಂದೂ, ಆ ಸಮಯದಲ್ಲಿ ಎರಡು ಪಕ್ಷಗಳ ಸೈನಿಕರೂ ಜಯಧ್ವನಿಗಳನ್ನು ಮಾಡಿದರೆಂದೂ ಹೇಳಿರುತ್ತಾನೆ.

ಕ್ರೈಸ್ತರ ಇನ್ನೊಂದು ಹಡಗು ಅಂದರೆ ಫಾರ್ಮಿಡೆಬಲ್ ಎಂಬ ಯುದ್ಧದ ಹಡಗು ಇಂಗ್ಲಿಷ್ ಕಾಲುವೆಯಲ್ಲಿ ಕ್ರಿಸ್ಮಸ್ ಹಬ್ಬದ ದಿನ ನಾಶವಾಗಿ ಮುಳುಗಿ ಹೋಯಿತು. ಅದಕ್ಕೆ ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡು ತಗಲಿತೋ, ಅಥವಾ ಸಬ್‌ಮೆರೀನ್ ಬಂದು ಹೊಡೆಯಿತೋ ತಿಳಿಯಲಿಲ್ಲ. ಅದರಲ್ಲಿದ್ದವರ ಪೈಕಿ 401 ಜನರು ಬದುಕಿಸಲ್ಪಟ್ಟರು. ಆಗ ಹವಾ ತುಂಬಾ ಕೆಟ್ಟು ಅಲೆಗಳು ವೇಗವಾಗಿ ಬಡಿಯುತ್ತಿದ್ದದ್ದರಿಂದ ಆ ಜನಗಳನ್ನು ಬಹಳ ಕಷ್ಟದಿಂದ ಬದುಕಿಸಿದರು. ಆ ಸಮಯದಲ್ಲಿ ಅಲೆಗಳು 30 ಅಡಿ ಪ್ರಮಾಣಕ್ಕೆ ಎದ್ದು ಬಡಿಯುತ್ತಿದ್ದುವೆಂದು ಹೇಳಲಾಗಿದೆ.

ಪೂರ್ವ ಯುದ್ಧಭೂಮಿ.

ಈ ಕಡೆಯು ಅನೇಕ ಸಂಕೀರ್ಣವರ್ತಮಾನಗಳು ಬಂದಿವೆ. ಆದರೆ ಅವುಗಳ ನಿಶ್ಚಿತವಾದ ಅರ್ಥವನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ. ಕೆಲವು ವಾರಗಳಿಂದ ಬಹು ಕಠಿಣವಾದ ಯುದ್ಧಗಳು ನಡೆದಿರುವವು. ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾದವರನ್ನು ಹಿಂದಕ್ಕೆ ಓಡಿಸಬೇಕೆಂದು ತಮ್ಮ ಪರಾಕ್ರಮವನ್ನು ಸಾಮರ್ಥ್ಯವನ್ನೂ ವಿನಿಯೋಗಿಸಿದರು. ಆದರೂ ಈಗ ನಮಗೆ ತಿಳಿದಿರುವ ಮಟ್ಟಿಗೂ ಅವರು ಯಾವ ಪ್ರಯತ್ನದಲ್ಲೂ ಜಯಶೀಲರಾಗಲಿಲ್ಲ. ಆದಾಗ್ಯೂ ಅವರು ರಷ್ಯಾದವರು ನುಗ್ಗಿ ಬಾರದಂತೆ ತಡೆಯನ್ನು ಕಲ್ಪಿಸಿದಾರೆ. ಇದು ಬಹಳ ಕಾಲ ನಿಲ್ಲಲಾರದೆಂದು ತೋರುವುದು. ಜರ್ಮನಿಯವರ ಕಡೆ ಬಹಳ ಅಪಾರವಾದಷ್ಟು ಸೈನಿಕರು ಕೊಲೆಯಾದರು, ಗಾಯಪಟ್ಟರು; ಹೀಗೆ ನಷ್ಟಪಟ್ಟವರು 1,00,000 ಸೈನಿಕರೆಂದೂ, ಈ ಸಂಖ್ಯೆಯಲ್ಲಿ ಕೈಸೆರೆ ಹಿಡಿಯಲ್ಪಟ್ಟವರನ್ನು ಸೇರಿಸಿಲ್ಲವೆಂದೂ ಹೇಳಲಾಗಿದೆ.

ಜರ್ಮನಿಯವರು ಪೋಲೆಂಡಿನಲ್ಲಿ ಮೂರು ವಾರಗಳೊಳಗೆ 8,00,000 ಸೈನ್ಯಗಳನ್ನು ಕಳೆದುಕೊಂಡರೆಂದು ಪ್ರಕಟವಾಗಿದೆ. ನಮ್ಮ ಪಕ್ಷದವರೆಲ್ಲಾ ಒಟ್ಟು 8,01,200 ಜರ್ಮನಿ ಸೈನಿಕರನ್ನು ಹಿಡಿದು ಕೈಸೆರೆ ಹಾಕಿಕೊಂಡಿದಾರೆಂದು ತಿಳಿಸಿರುತ್ತಾರೆ.

ಆಸ್ಟ್ರಿಯಾದವರು ಸೈನಿಕರನ್ನು ಜೊತೆಮಾಡಿಕೊಂಡು ರಷ್ಯಾದವರ ಹಿಂಭಾಗಕ್ಕೆ ಹೋಗಬೇಕೆಂದು ಪರ್ವತಗಳನ್ನು ದಾಟುತ್ತಿದ್ದಂತೆ ಕಾಣುತ್ತದೆ. ಅವರ ಪ್ರಯತ್ನವು ಸಾರ್ಥಕವಾಗಲಿಲ್ಲ. ರಷ್ಯಾದವರು ಅವರಲ್ಲಿದ್ದ ಅನೇಕರನ್ನು ಕ್ರಮವಾಗಿ ಬೆಟ್ಟಗಳ ಮೇಲಿನಿಂದ ಹಿಂದಕ್ಕೆ ಓಡಿಸುತ್ತಾರೆ. ರಷ್ಯಾದವರು ಡಿಸೆಂಬರ್ ತಾ 6 ರಲ್ಲಿ 5,000 ಆಸ್ಟ್ರಿಯಾದವರನ್ನು ಕೈಸೆರೆ ಹಿಡಿದಿರುವರು. ಆಸ್ಟ್ರಿಯಾ ಮತ್ತು ಜರ್ಮನಿ ಸೈನಿಕರಿಗಿಂತ ರಷ್ಯಾದವರು ಆ ಪ್ರಾಂತ್ಯದಲ್ಲಿ ತುಂಬಾ ಬಲಿಷ್ಠರಾಗಿರುತ್ತಾರೆಂದು ಜರ್ಮನಿಯವರು ಒಪ್ಪಿಕೊಂಡು ಹೇಳಿದಾರೆ. ಆದಕಾರಣ ರಷ್ಯಾದವರು ಇನ್ನು ಕೆಲವು ಕಾಲದಲ್ಲೇ ಮತ್ತೆ ಕ್ರಾಕೊ ನಗರಕ್ಕೆ ಮುತ್ತಿಗೆ ಹಾಕಿಕೊಳ್ಳುವುದಕ್ಕೆ ನುಗ್ಗಿ ಬರುತ್ತಾರೆಂದು ನಿರೀಕ್ಷಿಸಬಹುದು.

ಜರ್ಮನಿಯ ಎಲ್ಬಿಂಗ್ ಬಳಿ ಜರ್ಮನಿಯವರ ಎರಡು ರೈಲ್‌ಗಾಡಿಗಳು ಡಿಕ್ಕಿ ತಗಲಿ ಭಯಂಕರವಾದ ಅನಾಹುತ ಸಂಭವಿಸಿತು. ಆ ರೈಲ್‌ಗಾಡಿಗಳು ಸೈನಿಕರನ್ನೂ ಮದ್ದುಗುಂಡನ್ನೂ ಸಾಗಿಸಿಕೊಂಡು ಹೋಗುತ್ತಿದ್ದವು. ಆ ಬಡಿದಾಟದಲ್ಲಿ ಮದ್ದುಗುಂಡುಗಳು ಹತ್ತಿಕೊಂಡು ಬಹು ಭಯಂಕರವಾಗಿ ಹಾರಿದವು. ಇಪ್ಪತ್ತು ರೈಲ್ ಗಾಡಿಗಳು ನಾಶವಾದವೆಂದೂ, 4,000 ಸೈನಿಕರು ಮೃತಪಟ್ಟರೆಂದೂ, 500 ಸೈನಿಕರಿಗೆ ಗಾಯಗಳಾದವೆಂದೂ ಹೇಳಲಾಗಿದೆ.

ಟರ್ಕಿಯ ಮೇಲೆ ಯುದ್ಧ.

ಈಜಿಪ್ಟ್ ದೇಶದಲ್ಲಿ ಸಮಾಧಾನವು ನೆಲೆಗೊಂಡಿದೆ. ಈಜಿಪ್ಟಿನ ದಕ್ಷಿಣದಲ್ಲಿರುವ ಸೂಡಾನ್ ದೇಶದ ಅರಬ್ಬಿಯವರು ಟರ್ಕಿಯವರ ಮೇಲೆ ಯುದ್ಧಕಾರ್ಯಗಳನ್ನು ನಡಿಸುವುದಕ್ಕೆ ಬ್ರಿಟಿಷರಿಗೆ ಸೈನ್ಯವನ್ನೂ ದ್ರವ್ಯವನ್ನೂ ಒದಗಿಸುತ್ತೇವೆಂದು ಸಂತೋಷದಿಂದ ಒಪ್ಪಿಕೊಂಡಿದಾರೆ.

ಬ್ರಿಟಿಷರು ಒಂದು ಯುದ್ಧದ ಹಡಗನ್ನು ತೆಗೆದುಕೊಂಡು ಹೋಗಿ ಮೆಡಿಟರೇನಿಯನ್ ಕಡಲಿನ ತೀರದಲ್ಲಿರುವ ಎಲ್-ಆರಿಷ್ ಎಂಬ ನಗರಕ್ಕೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದರು. ಬಹುಶಃ ಈ ನಗರವನ್ನು ಟರ್ಕಿಯವರು ಆಕ್ರಮಿಸಿಕೊಂಡಿರುವಂತೆ ಕಾಣುತ್ತದೆ.

ಅರ್ಮೇನಿಯಾದಲ್ಲಿ ಟರ್ಕಿ ಸೈನಿಕರು ಒಂದೆರಡು ಕಡೆ ರಷ್ಯಾದವರ ದೇಶದೊಳಕ್ಕೆ ನುಗ್ಗಿ ಹೋಗಿರುವಂತೆ ತೋರುವುದು. ಅಲ್ಲಿ ಯುದ್ಧಗಳು ನಡೆದವು. ಒಂದು ಕಡೆ ಟರ್ಕಿಯವರಿಗೆ ಸೋಲಾಯಿತು. ಟರ್ಕಿಯ ಒಬ್ಬ ದಳಪತಿಯು ಕೊಲೆಯಾದನು; 1,320 ಸೈನಿಕರನ್ನು ರಷ್ಯಾದವರು ಕೈಸೆರೆ ಹಿಡಿದುಕೊಂಡಿದಾರೆ. ಇನ್ನೊಂದು ಕಡೆ ಇನ್ನೂ ಯುದ್ಧ ನಡೆಯುತ್ತಿದೆ.

ಅರ್ಮೇನಿಯಾದಲ್ಲಿ ರಷ್ಯಾದವರು ಟರ್ಕಿಯವರನ್ನು ಸೋಲಿಸಿರುತ್ತಾರೆ. ಟರ್ಕಿಯವರ ಕಡೆ 5೦ ನೇ ಕಾಲ್ಬಲದ ರೆಜಿಮೆಂಟು, ಸೇನಾಪತಿ, ದೊಡ್ಡ ದೊಡ್ಡ 15 ಹುದ್ದೇದಾರರು ಇದ್ದರು; ಇದಲ್ಲದೆ 6 ಪರ್ವತ ಫಿರಂಗಿಗಳೂ, 14 ಕ್ವಿಕ್ ಫೈರರ್‌ಗಳೆಂಬ ಫಿರಂಗಿಗಳೂ ಇದ್ದವು. ಇವೆಲ್ಲಾ ರಷ್ಯಾದವರಿಗೆ ಸಿಕ್ಕಿಹೋಗಿದೆ. ಇನ್ನು 15,000 ಟರ್ಕಿ ಸೈನಿಕರೂ, 40 ಹುದ್ದೇದಾರರೂ ಅನೇಕ ಫಿರಂಗಿಗಳ ಸಮೇತ ರಷ್ಯಾದವರ ಕೈಸೆರೆಯಾಗಿದಾರೆ. ಅಪಾರವಾದ ಹಿಮಗಡ್ಡೆಗಳ ಮಧ್ಯೆ ಈ ಯುದ್ಧವು ಬಹು ಭಯಂಕರವಾಗಿ ನಡೆದಂತೆ ತಿಳಿಯುವುದು.

ದಕ್ಷಿಣ ಆಫ್ರಿಕಾದಲ್ಲಿ

ದಂಗೆಯೆದ್ದಿದ್ದ ಬೋಅರರನ್ನೆಲ್ಲಾ ದಕ್ಷಿಣ ಆಫ್ರಿಕಾ ಗವರ್ನ್‌ಮೆಂಟಿನವರು ಇನ್ನೂ ಸಂಪೂರ್ಣವಾಗಿ ಅಡಗಿಸಿರುವಂತೆ ಕಾಣುವುದಿಲ್ಲ. 800 ಮಂದಿ ದಂಗೆಕೋರರು ಡಿಸೆಂಬರ್ ತಾ 22 ರಲ್ಲಿ 400 ಗವರ್ನ್‌ಮೆಂಟ್ ಸೈನ್ಯದವರ ಮೇಲೆ ನುಗ್ಗಿ ಮುತ್ತಿಗೆಹಾಕಿಕೊಂಡಂತೆಯೂ, ಇವರನ್ನು ಸೋಲಿಸಲಾಯಿತೆಂದೂ ಒಂದು ತಂತಿವರ್ತಮಾನ ಹೇಳುತ್ತದೆ. ದಂಗೆಕೋರರು ಸೋತು ಹಿಮ್ಮೆಟ್ಟಿದರು.

ಇತರ ವಿಷಯಗಳು.

ಪೆಸಿಫಿಕ್ ಸಾಗರದಲ್ಲಿ ಜರ್ಮನಿಯವರಿಗೆ ಸೇರಿದ ಸಾಲೊಮನ್ ಎಂಬ ದ್ವೀಪಸಮುದಾಯದ ಪೈಕಿ ಒಂದನ್ನು ಆಸ್ಟ್ರೇಲಿಯಾದವರು ಹೋಗಿ ಆಕ್ರಮಿಸಿಕೊಂಡರು.

ಜರ್ಮನಿಯ ಒಂದು ವರ್ತಮಾನ ಪತ್ರಿಕೆಯು ಹೇಳುವುದೇನೆಂದರೆ, ಜರ್ಮನಿಯಲ್ಲಿ ಪೆಟ್ರೋಲ್ ಎಂಬ ದ್ರವ್ಯಕ್ಕೆ ಅಭಾವವಾಗುತ್ತಾ ಬಂದಿದೆ. ನುಗ್ಗಿಯ ಬೆಲೆಗಳು ಮೊದಲು ಊಹಿಸಿದ್ದಷ್ಟು ಹೆಚ್ಚಾಗಿಲ್ಲ. ಆದಕಾರಣ ಜರ್ಮನಿಯವರು ತಮ್ಮ ಸೈನ್ಯಕ್ಕೆ ಆಹಾರವನ್ನೂ ಮದ್ದುಗುಂಡನ್ನೂ ಒದಗಿಸುವುದಕ್ಕೆ ತೃಪ್ತಿಕರವಿಲ್ಲದೆ ಯುದ್ಧವನ್ನು ಬೇಗನೆ ತ್ಯಜಿಸಬಹುದೆಂದು ಹೇಳಲಾಗಿದೆ. ಆದರೆ ಇಂಥಾ ಸಂಧರ್ಭವು ಬೇಗನೆ ಒದಗಲಾರದೆಂದು ಕಾಣುವುದು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಅರಮನೆಯ ರಾಣಿವಾಸದವರು ಕೆಲವು ದಿನಗಳ ಮಟ್ಟಿಗೆ ಮದರಾಸಿಗೆ ಹೋಗಿದ್ದು ಬರುತ್ತಾರೆಂದು ವರ್ತಮಾನವಿದೆ.

ಮುಂದಿನ ತಿಂಗಳಲ್ಲಿ ನಮ್ಮ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿ ಸಾಹೇಬರವರು ಕೆಲಸಬಿಟ್ಟು ಸೀಮೆಗೆ ದಯಮಾಡುವವರಾಗಿದಾರೆಂದು ಪ್ರಕಟವಾಗಿದೆ.

ನಮ್ಮ ಚೀಫ್ ಜಡ್ಜರಾದ ಸರ್ ಎಲ್. ಸಿ. ಮಿಲ್ಲರ್‌ರವರು ಸರ್ಕೀಟು ಹೊರಟು ಶಿವಮೊಗ್ಗಾ, ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಸಿವಿಲ್ ಕ್ರಿಮಿನಲ್ ಕೋರ್ಟುಗಳ ನಡವಳಿಕೆಗಳನ್ನು ಅಜಮಾಯಿಷಿ ಮಾಡುತ್ತಿದಾರೆ. ಅವರು ವಾಪಸು ಬೆಂಗಳೂರಿಗೆ ಬರಲು ಇನ್ನೂ ಒಂದು ವಾರ ಹಿಡಿಯುವುದೆಂದು ಕೇಳುತ್ತೇವೆ.

ಶ್ರೀಮನ್ ಮಹಾರಾಜರವರು ಅರಮನೆಯ ರಾಣಿವಾಸದವರ ಸಮೇತ ಬೆಂಗಳೂರಿನಿಂದ ಕಳೆದ ಬುಧವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿ, ಮರುದಿನ ಎರಡು ವೇಳೆ ನಂಜನಗೂಡಿಗೆ ಚಿತ್ತೈಸಿದ್ದು ವಾಪಸ್ಸು ಬಂದು, 3—4 ದಿನ ರಾಜಧಾನಿಯಲ್ಲಿದ್ದು ಕಳೆದ ಭಾನುವಾರ ಬೆಂಗಳೂರಿಗೆ ಮೋಟರುಗಳಲ್ಲಿ ದಯಮಾಡಿದರು.

ಒಬ್ಬ ಬಾತ್ಮೀದಾರರಿಂದ.—ಹೊಳಲ್ಕೆರೆ ತಾ॥ ಹೊರಕೇರೆದೇವಪುರದ ಹೋಬಳಿ ದಫೇದಾರ್ ಸೈಯದ್ ಹುಸೇನ್ ಸಾಹೇಬರು ಸುಮಾರು ಎರಡು ವರ್ಷಗಳ ಲಾಗಾಯ್ತು ಗ್ರಾಮಾಭಿವೃದ್ಧಿ ವಿಷಯದಲ್ಲಿ ಬಹಳ ಮಟ್ಟಿಗೂ ಸಾಹಸಪಟ್ಟು, ಇಲ್ಲಿನ ಜನಗಳ ವಿಶ್ವಾಸಕ್ಕೆ ಪಾತ್ರರಾಗಿ ಜನಗಳಿಗೆ ಯಾವ ವಿಧವಾದ ಬಾಧೆಯೂ ಇಲ್ಲದಂತೆ ರಾತ್ರಿ ವೇಳೆ ಖುದ್ದು ಗಸ್ತುಮಾಡುತ್ತಾ ನೋಡಿಕೊಳ್ಳುತ್ತಿದಾರೆ.

ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಆಫೀಸಿನಲ್ಲಿ ಶಿರಸ್ತೆದಾರರಾಗಿರುವ ಮ॥ ಬಿ. ಮುದ್ದುಕೃಷ್ಣಪ್ಪನವರನ್ನು ಸರ್ಕಾರದವರು ಮುಳಬಾಗಲ ತಾಲ್ಲೂಕ್ ಅಮಲ್ದಾರಿ ಕೆಲಸಕ್ಕೆ ನೇಮಕಮಾಡಿರುತ್ತಾರೆ. ಇದುವರೆಗೆ ಅಲ್ಲಿ ಅಮಲ್ದಾರರಾಗಿದ್ದ ಮ॥ ಎಂ. ರಾಮಚಂದ್ರರಾಯರು ಅಲ್ಲಿಂದ ಬೆಂಗಳೂರಿಗೆ ಬಂದು ಮ್ಯುನಿಸಿಪಾಲಿಟಿಯ ಕಲೆಕ್ಟರ್ ಕೆಲಸವನ್ನು ಮತ್ತೆ ವಹಿಸುವಂತೆ ಹುಕುಂ ಆಗಿದೆ.

ಶ್ರೀಮದ್ಯುವರಾಜರವರು ಪರಿವಾರ ಸಮೇತ ಕಳೆದ ಭಾನುವಾರ ಮದರಾಸಿನಿಂದ ಬೆಂಗಳೂರಿಗೆ ದಯಮಾಡಿದರು. ಇವರು ಈ ತಿಂಗಳು ಮೂರನೇ ವಾರದಲ್ಲಿ ದಿವಾನ್‌ರವರೊಡನೆ ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡಿ ಮಲೆನಾಡಿನ ವಿದ್ಯಮಾನಗಳನ್ನು ಪರಿಶ್ರಮಪಡಿಸಿಕೊಂಡು ಬರುವವರಾಗಿದಾರೆ. ಆ ಪ್ರಾಂತ್ಯದ ಪ್ರಜೆಗಳು ಅವರಿಗೆ ಸತ್ಕರಿಸುವುದಕ್ಕೋಸ್ಕರ ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡುತ್ತಿರುವರು.

ಗೌರಿಬಿದನೂರು ತಾಲ್ಲೂಕ್ ಕಚೇರಿಯಿಂದ.—ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗಾಗಿ ಕೆಳಗೆ ಕಂಡ ಹೋಬಳಿಗಳ ಪ್ರಜೆಗಳಿಂದ ತಾ. 29-12-1914 ರ ವರೆಗೆ ವಸೂಲಾದ ಸಹಾಯದ್ರವ್ಯವು ತಾಲ್ಲೂಕ್ ಟ್ರೆಜರಿಯಲ್ಲಿ ಇರಸಾಲ್ ಮಾಡಿಸಿದೆ. ಹೋಬಳಿಗಳು ಯಾವವೆಂದರೆ—ಗೌರಿಬಿದನೂರು ರೂ. 236, ಹೊಸೂರು ರೂ. 634-4-0, ನಗರಗೆರೆ ರೂ. 110-10-0, ಮಂಚೇನಹಳ್ಳಿ ರೂ. 165-7-0, ಡಾಂಡಿನಾಯಕನಹಳ್ಳಿ ರೂ. 20, ತೊಂಡೇಭಾವಿ ರೂ. 6-8-0 ; ಜುಮ್ಲಾ ರೂ 1,172 13-0.

ಒಬ್ಬ ಬಾತ್ಮೀದಾರರು ಬರೆಯುತ್ತಾರೆ.—ನಂಜನಗೂಡು ತಾಲ್ಲೂಕು ದೇವನೂರು ಗ್ರಾಮದಲ್ಲಿ ಸುಮಾರು ಮೂವತ್ತು ಮಂದಿ ಗುಂಪುಕೂಡಿ ಜೂಜಾಟವನ್ನು ಆಡುತ್ತಿರುವಲ್ಲಿ ಇಲ್ಲಿನ ಪೋಲೀಸ್ ಇನ್‌ಸ್ಪೆಕ್ಟರವರೂ ಜಮಾದಾರರೂ ಅಲ್ಲಿಗೆ ಹೋಗಿ ಸುಮಾರು ಇಪ್ಪತ್ತು ಮೂವತ್ತು ಮಂದಿಗಳನ್ನು ದಸ್ತಗಿರಿ ಮಾಡಿರುವರೆಂದೂ, ನಾಲ್ಕೈದು ನೂರು ರೂಪಾಯಿಗಳ ಮಾಲುಗಳು ಸಿಕ್ಕಿರುವವೆಂದೂ, ಇವೇ ಜಮಾದಾರರು ವೆಂಕಟರಾಯರೆಂಬುವರನ್ನು ಆರ್ಮ್ಸ್ ಆಕ್ಟಿನ ಮೇಲೆ ಬಂದೂಕವನ್ನು ತಡಮಾಡಿ ಡಿಪಾಜಿಟ್ ಇಡಿಸಿದರೆಂದು ದಸ್ತಗಿರಿಮಾಡಿ ಜಾಮೀನ್ ಮೇಲೆ ಬಿಟ್ಟಿರುವರೆಂದೂ ಕೇಳುತ್ತೇನೆ.

ಕಳೆದ ಡಿಸೆಂಬರ್ ಆಖೈರ್ ದಿನ ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯ ಷೇರ್‌ದಾರರ ಮೀಟಿಂಗ್ ನಡೆಯಿತು. 29 ಮಂದಿ ಹಾಜರಾಗಿದ್ದರು. ಡೈರೆಕ್ಟರುಗಳ ರಿಪೋರ್ಟೂ, 1913—14 ನೇ ಸಾಲಿನ ಜಮಾ ಖರ್ಚು ಲೆಕ್ಕಗಳೂ ಪಾಸ್ ಮಾಡಲ್ಪಟ್ಟವು. ಡೈರೆಕ್ಟರುಗಳ ಸಂಖ್ಯೆಯನ್ನು 16 ರಿಂದ 10 ಕ್ಕೆ ಇಳಿಸಿದರು. ಷೇರುದಾರರಿಗೆ ಶೇಕಡಾ 4 ರಂತೆ ಬಡ್ಡಿಯನ್ನೂ, ಆಡಿಟರಿಗೆ 150 ರೂಪಾಯಿ ರುಸುಮನ್ನೂ ಕೊಡಬಹುದೆಂದು ಒಪ್ಪಿದರು. ಬಹು ಕಾಲದಿಂದ ಮ॥ ಕೆ. ರಾಮಸ್ವಾಮಯ್ಯನವರು ಸೆಕ್ರೆಟರಿಯಾಗಿದ್ದು ಕಂಪನಿಯ ಕೆಲಸಗಳನ್ನು ಬಹಳ ಮುತುವರ್ಜಿಯಿಂದ ನಡಿಸಿ ಈಗ ಆ ಕೆಲಸದಿಂದ ಬಿಡುಗಡೆ ಹೊಂದೋಣದರಿಂದ ಷೇರ್ ಹೋಲ್ಡರುಗಳ ಪರವಾಗಿ ಅವರನ್ನು ತುಂಬಾ ವಂದನೆಮಾಡಿರುತ್ತಾರೆ.

ಬೊಂಬಾಯಿನ ಪ್ರಸಿದ್ಧ ಅಮೃತಾಂಜನ ಡಿಪೊ ಮ್ಯಾನೇಜರವರು ನಮ್ಮ ಚಕ್ರವರ್ತಿಯವರ ಚಿತ್ರ ಸಹಿತವಾದ ಒಂದು ಕ್ಯಾಲೆಂಡರನ್ನು ಕಳುಹಿಸಿದಾರೆ. ಬೆಂಗಳೂರು ಹೊಸ ಮಾರ್ಕೆಟ್ಟಿನ ಷಾಪ್ ಕೀಪರ್ ಮ॥ ವಿ. ಅಪ್ಪಾವುಚೆಟ್ಟಿ ಕಂಪನಿಯವರೂ, ಚಿಕ್ಕಮಗಳೂರು ಜನರಲ್ ಮರ್ಚೆಂಟ್ ಮ॥ ಬಿ. ಹನುಮಂತಪ್ಪನವರೂ ದಿವ್ಯವಾಗಿ ಅಚ್ಚಾದ ಕ್ಯಾಲೆಂಡರುಗಳನ್ನು ನಮಗೆ ಕಳುಹಿಸಿರುವರು. ರಾಜಧಾನಿಯ ಶ್ರೀ ಸೀತಾರಾಘವ ವೈದ್ಯಶಾಲಾ ಪ್ರೊಪ್ರೈಟರವರು ಡೈರಿಗಳನ್ನು ಕಳುಹಿಸಿರುವರು. ಈ ಡೈರಿಗಳಲ್ಲಿ ಹಿಂದುಗಳಿಗೆ ಅವಶ್ಯವಾದ ಪಂಚಾಂಗವೇ ಮೊದಲಾದ ವಿಚಾರಗಳೂ, ಸಾಮಾನ್ಯ ವೈದ್ಯ ವಿಚಾರಗಳೂ ರೂಲು ಹಾಕಿದ ಒಳ್ಳೇ ಕಾಗದದಲ್ಲಿ ಅಚ್ಚಾಗಿರುತ್ತವೆ. ಇವುಗಳನ್ನೆಲ್ಲಾ ಕೃತಜ್ಞತಾಪೂರ್ವಕವಾಗಿ ಅಂಗೀಕರಿಸಿ ಇವರುಗಳನ್ನು ವಂದಿಸುವೆವು.

ಕಳೆದ ಸೋಮವಾರ ಹಾಸನದಲ್ಲಿ ದನಗಳ ಪ್ರದರ್ಶನವು ಬಹು ಉತ್ಸಾಹದಿಂದಲೂ ವಿಜೃಂಭಣೆಯಾಗಿಯೂ ಜರುಗಿತು. ಡೆಪ್ಯುಟಿ ಕಮಿಷನರ್ ಮ॥ ವೆದರಾಲ್ ಸಾಹೇಬರವರು ಸಭೆಯ ಅಗ್ರಾಸನವನ್ನು ವಹಿಸಿ ಪ್ರದರ್ಶನವನ್ನು ಪ್ರಾರಂಭಿಸಿದರು. ಈ ಸಲ ಸುಮಾರು 11,000 ಗೋವಾಯಿಗಳು ಸೇರಿದ್ದುವೆಂದೂ, ಇದುವರೆಗೆ ಇಷ್ಟು ದನಗಳು ಅಲ್ಲಿ ಕೂಡಿರಲಿಲ್ಲವೆಂದೂ ತಿಳಿಯುತ್ತದೆ. ಅರೆಹಳ್ಳಿ ಶೇಟ್ ಮ॥ ಎಸ್. ವೆಂಕಟೇಶಯ್ಯನವರು ಒಳ್ಳೇ ಕರೆಯುವ ಹಸುವಿಗೆ ಒಂದು ಬಂಗಾರದ ಮೆಡಲನ್ನು ಕೊಟ್ಟರು. ಆ ದಿನ ಮಧ್ಯಾಹ್ನ ಮ॥ ಎಂ. ಎ. ನಾರಾಯಣಯ್ಯಂಗಾರ್ರವರು ಅಗ್ರಾಸನವನ್ನು ವಹಿಸಿ ಡಿಸ್ಟ್ರಿಕ್ಟ್ ಕೋಆಪರೆಟಿವ್ ಸಭೆಯನ್ನು ಪ್ರಾರಂಭಿಸಿ ನಡಿಸಿದರು.

ಬೆಂಗಳೂರು ಸಿಟಿ ಗವರ್ನ್‌ಮೆಂಟ್ ಹೈಸ್ಕೂಲ್ ಕಟ್ಟಡದಲ್ಲಿ ಕನ್ನಡದಲ್ಲಿ ವ್ಯಾಪಾರ ವಿಷಯಗಳನ್ನು ಕಲಿಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಿದಾರೆ. ವರ್ತಕರ ಬಾಲಕರು ಅಲ್ಲಿ ಸೇರಿ ತಮ್ಮ ತಮ್ಮ ಕಸಬುಗಳಿಗೆ ಅವಶ್ಯವಾದ ವಿದ್ಯೆಯನ್ನು ಕಲಿತುಕೊಂಡು ಅಭಿವೃದ್ಧಿಗೆ ಬಂದಾರೆಂದು ಹಾರೈಸಲ್ಪಟ್ಟಿದೆ. ಅಲ್ಲಿ ಅವರು ಕಲಿಯಬಹುದಾದ ಭಾಗಗಳ್ಯಾವವೆಂದರೆ—(1) ಜಮಾಖರ್ಚಿನ ದೇಶೀಯದ ಪದ್ಧತಿ ಮತ್ತು ಇದಕ್ಕೆ ಸಂಬಂಧಪಟ್ಟ ಗಣಿತ; (2) ಪತ್ರವ್ಯವಹಾರ, ಇದರೊಡನೆ ವಾಣಿಜ್ಯ ಸಂಬಂಧವಾದ ಕಾನೂನುಗಳೂ, ಕ್ರಮಗಳೂ; (3) ಬ್ಯಾಂಕಿನ ಉಪಯೋಗ ಮುಂತಾದ ವಿಷಯಗಳು; (4) ವ್ಯಾಪಾರಕ್ಕೆ ಸಂಬಂಧಪಡುವ ಭೂಗೋಳ; (5) ಇಂಗ್ಲಿಷ್, ಮರಾಟಿ, ತೆಲುಗು, ಹಿಂದುಸ್ಥಾನಿ ಭಾಷೆಗಳು.

ನಮ್ಮ ಸಂಸ್ಥಾನದ ಡೆಪ್ಯುಟಿ ಚೀಫ್ ಇಂಜನಿಯರಾದ ಮ॥ ಕೆ. ಕೃಷ್ಣಯ್ಯಂಗಾರ್ರವರು ಬಹಳ ಸತ್ಯವಂತಿಕೆಯಿಂದಲೂ ಖಂಡಿತವಾದಿಗಳಾಗಿಯೂ ನೌಕರಿಯನ್ನು ಮಾಡಿದ್ದರಿಂದ ಅವರಿಗೆ "ರಾವ್ ಬಹದೂರ್" ಎಂಬ ಗೌರವವುಳ್ಳ ಬಿರುದು ಬಂದಿರುತ್ತದೆಂಬು ತಿಳಿಸಲು ಸಂತೋಷಪಡುವೆವು. ಇದಲ್ಲದೆ ರಾಜಧಾನಿಯಲ್ಲಿ ಗಣ್ಯ ಪ್ರಜೆಯಾಗಿಯೂ, ಮ್ಯುನಿಸಿಪಾಲಿಟಿಯಲ್ಲೂ ಟ್ರಸ್ಟ್ ಬೋರ್ಡಿನಲ್ಲೂ ಪ್ರಜಾ ಪಕ್ಷದ ಮೆಂಬರಾಗಿಯೂ ಇದ್ದುಕೊಂಡು ಪ್ರಜೆಗಳಿಗೆ ಹಿತಕರವಾದ ಸಲಹೆಗಳನ್ನು ಕೊಟ್ಟು ಮಾಡಿಸುವುದರಲ್ಲಿ ಉತ್ಸಾಹಶಾಲಿಗಳಾಗಿರುವಂಥಾ ಅಡ್ವೊಕೇಟ್ ಮ॥ ಎಂ. ಸಿ. ರಂಗಯ್ಯಂಗಾರವರಿಗೆ "ರಾವ್ ಬಹದೂರ್" ಎಂಬ ಘನತರವಾದ ಬಿರುದು ದೊರಕಿದೆ ಎಂದು ತಿಳಿಸಲು ಸಂತೋಷವಾಗುವುದು. ಅವರುಗಳು ಈ ಬಿರುದನ್ನು ಚಿರಕಾಲ ಅನುಭೋಗಿಸುತ್ತಾ ಬರುವಂತಾಗಲೆಂದು ಹಾರೈಸುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಇಷ್ಟರಲ್ಲೇ ಬೊಂಬಾಯಿಗೆ ಕೆಲವು ದಿನ ಹೋಗಿದ್ದು ಬರುವವರಾಗಿದಾರೆ.

ಕಾಶ್ಮೀರ ಸಂಸ್ಥಾನದ ಯುವರಾಜರವರ ಪತ್ನಿಯು ಕಳೆದ ವಾರ ತೀರಿಹೋದರು. ಅವರಿಗೆ ಮದುವೆ ಆಗಿ ಇನ್ನೂ 3-4 ತಿಂಗಳು ಕೂಡ ಆಗಲಿಲ್ಲ.

ಯುದ್ಧದ ರಿಲೀಫ್ ಫಂಡಿಗೆ ಮದರಾಸ್ ಅಧಿಪತ್ಯದಲ್ಲಿ 21,78,740 ರೂಪಾಯಿಯೂ, ಇಂಪೀರಿಯಲ್ ಫಂಡಿಗೆ 65,06,000 ರೂಪಾಯಿಯೂ, ಬೊಂಬಾಯಿ ಅಧಿಪತ್ಯದಲ್ಲಿ 31,50,170 ರೂಪಾಯಿಯೂ ಚಂದಾ ಕೂಡಿರುತ್ತದೆ.

ಕಳೆದ ಶನಿವಾರ ಬೆಳಗ್ಗೆ ರಂಗೂನ್ ಪಟ್ಟಣದಲ್ಲಿ ಆಕಸ್ಮಾತ್ತಾಗಿ ಬೆಂಕಿಬಿದ್ದು ಎರಡು ಭಾರೀ ಮನೆಗಳು ಸುಟ್ಟು ಸಾವಿರಾರು ರೂಪಾಯಿ ನಷ್ಟವಾದದ್ದಲ್ಲದೆ ಇಬ್ಬರು ಹಿಂದುಗಳು ಉರಿಯಲ್ಲಿ ಸಿಕ್ಕಿ ಮೃತಪಟ್ಟರು.

ಪೂರ್ವ ಬಂಗಾಳಾ ರೈಲ್ವೆಯಲ್ಲಿ ಗಂಗಾ ನದಿಯ ಮೇಲೆ ಸಾರಾಘಾಟಿನಿಂದ ಭಮುದ್ದಿಯ ವರೆಗೆ ಮೂರು ವರುಷಗಳಿಂದ ಕಟ್ಟುತ್ತಿದ್ದ ರೈಲ್ವೆ ಸೇತುವೆಯು ತಕ್ಕಮಟ್ಟಿಗೆ ಪೂರೈಸಿ, ಕಳೆದ ವಾರದಿಂದ ಸಾಮಾನು ಗಾಡಿಗಳನ್ನು ಬಿಡಲಾರಂಭಿಸಿದಾರೆ.

ಕಳೆದ ವಾರ ಬೊಂಬಾಯಿ ಪಟ್ಟಣದ ಸಮುದ್ರ ತೀರದಲ್ಲಿ ತಂಗಿದ್ದ ಮೆಟಿಯಾರ್ ಎಂಬ ಒಂದು ರಷ್ಯಾ ಜಹಜಿನಲ್ಲಿ ಅಧಿಕಾರಿಯು ರಷ್ಯಾದವರಿಗೆ ಮದ್ಯವನ್ನು ಕೊಡದೆ ಹೋದದ್ದಕ್ಕೆ ಅವರು ದಂಗೆಮಾಡಿದರು. ಪೋಲೀಸಿನವರು 17 ಮಂದಿಯನ್ನು ಹಿಡಿದುತಂದು ಲಾಕಪ್ಪಿನಲ್ಲಿ ಹಾಕಿಕೊಂಡಿದಾರೆ.

ಕಳೆದ ತಿಂಗಳ ತಾ. 26 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 4,037 ಜನರಿಗೆ ಪ್ಲೇಗ್ ತಗಲಿತೆಂದೂ, 3,201 ಜನರು ಪ್ಲೇಗಿನಲ್ಲಿ ಕಾಲವಾದರೆಂದೂ ತಿಳಿಯುವುದು. ಈ ಮರಣ ಸಂಖ್ಯೆಗಳ ಹಂಚಿಕೆ ಹ್ಯಾಗಂದರೆ— ಬೊಂಬಾಯಿ ಅಧಿಪತ್ಯ ಮತ್ತು ಸಿಂಧು ದೇಶ 279 ಮರಣಗಳು, ಮದರಾಸ್ 72, ಬೀಹಾರ್ ಮತ್ತು ಒರಿಸ್ಸಾ 367, ಸಂಯುಕ್ತ ಅಧಿಪತ್ಯಗಳು 615, ಪಂಜಾಬ್ 1,370, ಬರ್ಮಾ 66, ಮಧ್ಯಪ್ರಾಂತ್ಯಗಳು 103, ಮೈಸೂರು ಸಂಸ್ಥಾನ 183, ಹೈದರಾಬಾದ್ 37, ವಾಯುವ್ಯ ಸರಹದ್ದು ಪ್ರಾಂತ 1, ಕಾಶ್ಮೀರ 8

ಕ್ರಿಸ್‌ಮಸ್ ಹಬ್ಬದ ದಿನ ಉತ್ತರ ದೇಶದ ಡಾರ್ಜಿಲಿಂಗ್ ಮೆಯಿಲ್ ಗಾಡಿಯಲ್ಲಿ ಒಂದು ದರೋಡೆ ನಡೆಯಿತು. ಒಬ್ಬ ಮಹಮದೀಯನು ತನ್ನ ಹೆಂಡತಿಯನ್ನು ಹೆಂಗಸರ ಗಾಡಿಯಲ್ಲಿ ಕೂಡಿಸಿ ತಾನು ಗಂಡಸರ ಗಾಡಿಯಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದನು. ದಾಮುಕುದಾ ಎಂಬ ಸ್ಟೇಷನ್ನಿನ ಬಳಿ ಯಾವನೋ ಒಬ್ಬನು ಗಾಡಿ ಹೋಗುತ್ತಿರುವಾಗಲೇ ಆ ಹೆಂಗಸು ಇದ್ದ ಗಾಡಿಯೊಳಕ್ಕೆ ನುಗ್ಗಿ ಅವಳ ಬಾಯಿಗೆ ಬಟ್ಟೆ ತುರುಕಿ ಕೆಡವಿಬಿಟ್ಟು, ಅವಳ ಪೆಟ್ಟಿಗೆಗಳನ್ನೆಲ್ಲಾ ಶೋಧಿಸಿ 600 ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು, ಗಾಡಿ ನಿಲ್ಲಿಸುವಂತೆ ಹಾಕಿರುವ ಸರಪಣಿಯನ್ನು ಎಳೆದನು. ಗಾಡಿಯು ನಿಂತಿತು. ತಕ್ಷಣವೇ ಗಾಡಿಯಿಂದಿಳಿದು ಎಲ್ಲೋ ತಪ್ಪಿಸಿಕೊಂಡು ಓಡಿಹೋದನು.

ಕಳೆದ ವಾರ ಬೆಳ್ಗಾವಿನ ಜೈಲ್ ಖಾನೆಯಲ್ಲಿ ಒಂದು ಮೊಕದ್ದಮೆಯಲ್ಲಿ ದಸ್ತಗಿರಿಮಾಡಲ್ಪಟ್ಟು ವಿಚಾರಣೆಯಲ್ಲಿದ್ದ 35 ಮಂದಿ ಅಪರಾಧಿಗಳನ್ನು ಇಟ್ಟಿದ್ದರು. ಇವರೆಲ್ಲಾ ಮಸಲತ್ತುಮಾಡಿ ಜೈಲಿನಿಂದ ತಪ್ಪಿಸಿಕೊಂಡು ಓಡಿಹೋಗಬೇಕೆಂದು ಪ್ರಯತ್ನಪಟ್ಟರು. ಅವರ ಮೇಲೆ ಪಹರೆ ಇದ್ದ ಪೋಲೀಸಿನವನನ್ನು ಹೊಡೆದು ಕೆಡವಿ, ಜೈಲಿನ ಗೋಡೆ ಹತ್ತಿ ಓಡಿಹೋದರು. ಅಷ್ಟರಲ್ಲೇ ಪೋಲೀಸ್ ಸಿಬ್ಬಂದಿಯವರು ಹೋಗಿ ಅವರ ಮೇಲೆ ಗುಂಡುಹಾಕಿದರು. ಅಪರಾಧಿಗಳಲ್ಲಿ 18 ಜನರು ಮೃತಪಟ್ಟರು; 6 ಮಂದಿಗೆ ಗಾಯಗಳಾದವು. ತಪ್ಪಿಸಿಕೊಂಡು ಹೋದ 12 ಜನರಲ್ಲಿ ಒಬ್ಬನೂ ಇನ್ನೂ ಸಿಕ್ಕಿ ಇಲ್ಲ. ಮೂರುನಾಲ್ಕು ಮಂದಿ ಪೋಲೀಸಿನವರಿಗೂ ಪೂರಾ ಪೆಟ್ಟುಗಳು ಬಿದ್ದು ಆಸ್ಪತ್ರೆಯಲ್ಲಿದ್ದಾರೆ. ಬೊಂಬಾಯಿ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರು ಹೋಗಿ ತನಿಖೆಮಾಡುತ್ತಿರುವರು.

ಸೆಂಟ್ ಜಾರ್ಜ್ ಆಂಬುಲೆನ್ಸ್ ಸಂಘ, ಮೈಸೂರು.

ಮೇಲ್ಕಂಡ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ತಮಗೆ ಎಂಟನೇ ಚಂದಾ ಪಟ್ಟಿಯ ಮೂಲಕ ಪಾವತಿ ಆಗಿರುವ ಹಣಗಳನ್ನು ತಿಳಿಸಿರುತ್ತಾರೆ. ಕೊಟ್ಟವರು ಯಾರೆಂದರೆ—

ತುಮಕೂರು ಡೆಪ್ಯುಟಿ ಕಮೀಷನರ್‌ರವರ ಮೂಲಕ ರೂ. 137-14-0, ಬೆಂಗಳೂರು ರೆವಿನ್ಯೂ ಸರ್ವೆ ಆಫೀಸ್ ನೌಕರಮಾನೇರುಗಳು ರೂ. 133-14-0, ಹರಿಹರ ತಾಲ್ಲೂಕಿಗೆ ಸೇರಿದ ನಾಲ್ಕು ಗ್ರಾಮಗಳ ಪ್ರಜೆಗಳು ಅಮಲ್ದಾರರ ಮೂಲಕ ರೂ. 69-6-0, ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರು ಮತ್ತು ನೌಕರಮಾನೇರುಗಳು ರೂ. 28-8-0, ಛಾಂಪಿಯನ್ ರೀಫ್ ಗಣಿಯ ಕಾವೇರಿ ಪವರ್ ನೌಕರಮಾನೇರುಗಳು ರೂ. 26, ಬೇಗೂರು ಫಾರೆಸ್ಟ್ ನೌಕರರು ರೂ. 24, ಶ್ರೀನಿವಾಸಪುರದ ಫಾರೆಸ್ಟ್ ನೌಕರಮಾನೇರು ರೂ. 31-4-0, ಬೇಲೂರ್ ತಾಲ್ಲೂಕ್ ಪ್ರಜೆಗಳು ಅಮಲ್ದಾರರ ಮೂಲಕ ರೂ. 15, ಕಡೂರು ಹೋಬಳಿ ಪ್ರಜೆಗಳು ಶೇಕ್ದಾರರ ಮೂಲಕ ರೂ. 8-8-0, ಅ॥ ಕಮಿಷನರ್ ಮ॥ ಭೀಮರಾಯರು ರೂ. 6, ಐದು ರೂಪಾಯಿಯೊಳಗೆ ವಸೂಲಾಗಿರುವುದು ರೂ. 7-8-0 ; ಇದುವರೆಗೆ ಪಾವತಿ ಆಗಿರುವುದು ರೂ. 6,203-4-1 ; ಜುಮ್ಲಾ ರೂಪಾಯಿ 6,789-2-1 ಪೈ

ಮೈಸೂರು ಮೂರನೇ ಮಹಾರಾಜಕುಮಾರ್ತಿಯವರು ಹಿಂದುಸ್ಥಾನದ ದೇಶೀಯ ಸೈನಿಕರಿಗೋಸ್ಕರ ಒಂದು ಪೆಟ್ಟಿಗೆಯ ತುಂಬಾ ಕಂಬಳಿ ಬಟ್ಟೆಗಳನ್ನು ದಯಪಾಲಿಸಿರುತ್ತಾರೆ. ಇದೂ ಸೇರಿ ಇದುವರೆಗೆ 30 ಪೆಟ್ಟಿಗೆಗಳ ಬಟ್ಟೆಬರೆಗಳು ಕೂಡಿಸಿ ಕಳುಹಿಸಲ್ಪಟ್ಟಿರುತ್ತವೆ.

ಘಾಟಿ ಸುಬ್ರಹ್ಮಣ್ಯ ಜಾತ್ರೆ.

ಈ ತಿಂಗಳು 22 ನೇ ತಾ. ನಿಂದ 31 ನೇ ತಾ. ವರೆಗೆ ನಡೆಯುತ್ತಿರುವ ಈ ಜಾತ್ರೆಗೆ ಸುಮಾರು 20 ಸಾವಿರ ಜನರೂ, 20 ಸಾವಿರ ದನಗಳೂ ಜಮಾಯಿಸಿ ಪರಿಷೆಯು ಕೂಡಿದ ಮಟ್ಟಿಗೂ ಚೆನ್ನಾಗಿ ನಡೆಯಿತು. ಮೂರು ದಿನ ಬ್ರಾಹ್ಮಣರಿಗೆ ವಿಶೇಷ ವಿತರಣೆಯಿಂದ ಸಂತರ್ಪಣೆ ನಡೆಯಿತು. ಸ್ಥಳಾಧಿಕಾರಿಗಳು ಬಹು ಚಟುವಟಿಕೆಯಿಂದ ಮೇಲ್ವಿಚಾರಣೆ ಮಾಡಿದ್ದರಿಂದ ಮೂರು ಸಾವಿರ ಮಂದಿ ಬ್ರಾಹ್ಮಣರು ಬಹು ಸಂತೋಷವಾಗಿ ಸುಖಭೋಜನ ಮಾಡಿದರು. ಮತ್ತೊಂದು ಕಡೆಯಲ್ಲಿ ವೈಶ್ಯ ಮಂಡಲಿಯವರೂ ಲಿಂಗಾಯತರೂ ನಗರ್ತರೂ ದೇವಾಂಗದವರೂ ಅನ್ನದಾನ ಮಾಡಿಸಿದರು. ನೀರಿಗೆ ತುಂಬಾ ಕಷ್ಟವಾಗಿ, ಕುಡಿಯುವ ಶುದ್ಧ ನೀರಿಗೆ ಅಭಾವವಾಗಿತ್ತು. ಸಾಧಾರಣವಾಗಿದ್ದ ಎರಡು ಕೊಳಗಳ ನೀರನ್ನೇ ಸಾವಿರಾರು ಮಂದಿ ಕುಡಿದರು. ದನಗಳಿಗೂ ಜಲವಸತಿ ತುಂಬಾ ಕಮ್ಮಿ. ಈ ಸಾರಿಯೂ ಭಾರೀ ಎತ್ತುಗಳಿಗೆ ಬಂಗಾರದ, ಬೆಳ್ಳಿಯ ಬಿರುದುಗಳನ್ನು ಭಾನುವಾರ 27 ನೇ ತಾ. ಅಧಿಕಾರಿಗಳು ಬಹುಮಾನವಾಗಿ ಕೊಟ್ಟರು. ಕೊಳ್ಳುವ ಜನರು ಬಹಳವಾಗಿ ಬಾರದ್ದರಿಂದ ದನಗಳಿಗೆ ಒಳ್ಳೆ ಕ್ರಯ ಬರಲಿಲ್ಲವೆಂತ ಹೇಳುತ್ತಾರೆ. ಈ ಜಾತ್ರೆಗೆ ವೆಸ್ಲಿಯನ್ ಮತ್ತು ಲಂಡನ್ ಮಿಷನ್‌ಗಳ ಬೋಧಕರುಗಳೂ, ಘನ ಓಕ್ಲಿಂಗ್ ದೊರೆಯವರೂ ಬಂದು, ಸುಮಾರು ಒಂದು ವಾರದ ತನಕ ಉಪನ್ಯಾಸಗಳಿಂದ ಅನೇಕ ಸಾವಿರಾರು ಜನರಿಗೆ ಸದ್ಬೋಧೆಯನ್ನು ಮಾಡಿದರು. ಕಳ್ಳಕಾಕರ ಅವಾಂತ್ರವೇನೂ ತೋರದಂತೆ ನಮ್ಮ ಪೊಲೀಸ್ ಇಲಾಖೆಯವರು ಒಳ್ಳೇ ಕ್ರಮವಾದ ಏರ್ಪಾಡನ್ನು ಮಾಡಿದ್ದರು. ಮುಖ್ಯವಾಗಿ ಈ ತಾಲ್ಲೋಕಿನ ಇನ್‌ಸ್ಪೆಕ್ಟರವರು ತುಂಬಾ ಜಾಗರೂಕತೆಯಿಂದ ಮೇಲ್ವಿಚಾರಣೆ ಮಾಡುತ್ತಿದ್ದರು. ಜೂಜಾಟವಾಡುವವರನ್ನು ಕಾಣಲಿಲ್ಲ. ಆದರೆ ಬೇರೆ ಬೇರೆ ವಿಧದ ಆಟಗಳನ್ನಾಡುವವರೂ, ಸರ್ಕಸ್ ಜನರೂ ಬಂದಿದ್ದು ರೈತರಿಂದ ದ್ರವ್ಯಾರ್ಜನೆ ಮಾಡುತ್ತಿದ್ದರು. ಸ್ಯಾನಿಟೇಷನ್ ವಿಚಾರದಿಗೋಸ್ಕರ ಒಬ್ಬ ಇನ್‌ಸ್ಪೆಕ್ಟರೂ, ರೋಗಿಗಳ ಇಲಾಜಿಗೋಸ್ಕರ ಒಬ್ಬ ಡಾಕ್ಟರೂ ಬಂದಿದ್ದರು. ಜನರಲ್ಲಿ ಹೆಚ್ಚು ಮಂದಿ ತುಂಬಾ ಆರೋಗ್ಯವಾಗಿಯೇ ಇದ್ದರು. ರೇಲ್ವೆ ಗಾಡಿಗಳಲ್ಲಿ ಪ್ರಯಾಣ ಮಾಡುವವರು ಗೊತ್ತುಗುರಿ ಇಲ್ಲದಂತೆ ವಾಗನ್ ಬಂಡಿಗಳಲ್ಲೂ, ಕಂಪಾರ್ಟ್‌ಮೆಂಟುಗಳಲ್ಲೂ ಭರ್ತಿ ಆಗುತ್ತಿದ್ದದ್ದು ಸಾಧಾರಣವಾಗಿತ್ತು. ಮುಖ್ಯವಾಗಿ ಈ ವರ್ಷದಲ್ಲಿ ನಡೆದ ಜಾತ್ರೆಯು ಯಾವ ವಿಧದ ಗಲಭೆಗೂ ಪ್ರಾಣಹಾನಿಗೂ ಅವಕಾಶವಾಗಲಿಲ್ಲ. ಭಿಕ್ಷುಕರ, ಅಂಗಹೀನರ ಸಂಖ್ಯೆ ಮಾತ್ರ ಅತಿ ವ್ಯಸನಕರವಾಗಿತ್ತು.

ಪ್ರತ್ಯಕ್ಷದರ್ಶಿ

ಈಗಿನ ಯುದ್ಧವೂ, ನಮ್ಮ ಕರ್ತವ್ಯವೂ.

ಅಯ್ಯಾ,—ಪ್ರಕೃತದಲ್ಲಿ ನಡೆಯುತ್ತಿರುವ ಘೋರ ಯುದ್ಧದ ವಾರ್ತೆಯು ಭರತಖಂಡದ ಪ್ರಜೆಗಳಾದ ನಮ್ಮೆಲ್ಲರಿಗೂ ವ್ಯಸನಕರವಾದ ಸಮಾಚಾರವಾಗಿದೆ. ಇಂಗ್ಲಿಷರು ಈ ದೇಶಕ್ಕೆ ಬಂದ ಮೇಲೆ ಸತ್ಯಸಂಧರಾದ ಇವರಿಂದ ನಮ್ಮ ದೇಶಕ್ಕೆ ಉಂಟಾದ ಪ್ರಯೋಜನವನ್ನು ಅಷ್ಟು ಇಷ್ಟು ಎಂದು ಹೇಳಲು ಅಸಾಧ್ಯ. ಸಾಹಸಿಗಳಾದ ಇವರು ಈ ದೇಶಕ್ಕೆ ಬಂದ ಮೇಲೆ ಎಲ್ಲೆಲ್ಲಿ ನೋಡಿದರೂ ರಸ್ತೆಗಳು, ರೈಲು ಮಾರ್ಗಗಳು, ತಂತಿಗಳು, ಟೆಲಿಫೋನ್‌ಗಳು ಮತ್ತು ಈ ದೇಶದ ಏಳಿಗೆಗೆ ಮುಖ್ಯ ಸಾಧನವಾದ ವಿದ್ಯೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಸ್ಕೂಲುಗಳು, ಬಹು ವೇಗವಾಗಿ ಸಂಚರಿಸಬಹುದಾದ ಬೈಸಿಕಲ್ ಬಂಡಿಗಳು, ಮೋಟರುಗಳು ಇವೆಲ್ಲವನ್ನೂ ಈ ದೇಶದಲ್ಲಿ ಹಂಚಿದರು ; ಇವೂ ಅಲ್ಲದೆ ಇವಕ್ಕಿಂತಲೂ ವೇಗವಾಗಿ ಸಂಚರಿಸಬಹುದಾದ ಆಕಾಶವಿಮಾನವನ್ನು ನಿರ್ಮಿಸಿ ಪಕ್ಷಿಗಳಿಂದ ಅಂತರಿಕ್ಷವನ್ನೇ ಕಸಿದುಕೊಂಡರು. ಪೂರ್ವ ಕಾಲದಲ್ಲಾದರೋ ಯಾವಾಗ ನೋಡಿದರೂ ಯುದ್ಧಗಳು ನಡೆಯುತ್ತಲೇ ಇದ್ದುವು. ಜನರು ಒಂದು ದಿವಸವೂ ನೆಮ್ಮದಿಯಾಗಿ ಇರುತ್ತಿರಲಿಲ್ಲ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಬೇಕಾದರೆ ಸರಿಯಾದ ರಸ್ತೆಗಳೇ ಇರಲಿಲ್ಲ. ಮತ್ತು ಒಂದೂರಿನಿಂದ ಇನ್ನೊಂದು ಊರಿಗೆ ವರ್ತಮಾನವನ್ನು ಆಳಿನ ಮೂಲಕ ಕಳಿಸಬೇಕಾಗಿತ್ತು. ಈಗಲಾದರೋ ಮೂರು ಕಾಸು ಖರ್ಚು ಮಾಡಿದರೆ ಎಲ್ಲಿಗೆ ಬೇಕಾದರೂ ವರ್ತಮಾನವನ್ನು ಕಳುಹಿಸಬಹುದು. ಇಷ್ಟು ಮಟ್ಟಿಗೆ ನಮ್ಮನ್ನು ಮುಂದಕ್ಕೆ ತಂದ ಸದ್ಧರ್ಮರಾದ ಇಂಗ್ಲಿಷರ ಮೇಲೆ ಈಗ ದುಷ್ಟ ರಾಕ್ಷಸನಾದ ರಾವಣನು ನಿಷ್ಕಾರಣವಾಗಿ ದಂಡೆತ್ತಿ ಬಂದು ಘೋರವಾದ ಯುದ್ಧ ಮಾಡುತ್ತಿರುವುದನ್ನು ನಾವೆಲ್ಲರೂ ಪ್ರತಿ ದಿವಸವೂ ಬರತಕ್ಕ ವರ್ತಮಾನ ಪತ್ರಿಕೆಗಳಿಂದ ಓದಿ ತಿಳಿಯುತ್ತಿರುವೆವು. ಆದರೆ ಇಂಥಾ ಸುಸಮಯದಲ್ಲಿ ಪ್ರಸಿದ್ಧನಾದ ಭರತಮಹಾರಾಯನಿಂದ ಆಳಲ್ಪಟ್ಟ ಈ ಭರತಖಂಡದ ಪ್ರಜೆಗಳಾದ ಭಾರತೀಯರಾದ ನಾವುಗಳು ನಮ್ಮ ಸಹೋದರರಾದ ಐರೋಪ್ಯರಿಗೆ ನಮ್ಮ ನಮ್ಮ ಕೈಯಲ್ಲಾದ ಮಟ್ಟಿಗೆ ಸಹಾಯ ಮಾಡುವುದು ಸಹಜವಾಗಿದೆ. ಮತ್ತು ಬಹು ಶಕ್ತಿವಂತರಾದ ನಮ್ಮ ದೇಶದ ಘೂರ್ಕ ಮತ್ತು ಸಿಖ್ ಸೈನಿಕರು ಅನ್ಯದೇಶವಾದ ಪಾಶ್ಚಾತ್ಯ ದೇಶಕ್ಕೆ ಪ್ರಯಾಣವನ್ನು ಬೆಳಸಿ ಅಲ್ಲಿ ರಾಕ್ಷಸರಾದ ಜರ್ಮನಿಯವರ ಮೇಲೆ ನಮ್ಮ ಸಹೋದರರೊಡನೆ ಕಲೆಗೊಟ್ಟು ಘೋರವಾದ ಯುದ್ಧ ಮಾಡುತ್ತಿರುವುದು ನಮ್ಮೆಲ್ಲರಿಗೂ ಸಂತೋಷವನ್ನೂ, ಗೌರವವನ್ನೂ ಸಂಪಾದಿಸಿದ ವಾರ್ತೆಯಾಗಿರುತ್ತದೆ. ಆದರೆ ಶಕ್ತಿವಂತರಾದ ಇಂಗ್ಲಿಷರೂ, ಧೈರ್ಯಶಾಲಿಗಳಾದ ಧೀರರಾದ ಫ್ರೆಂಚಿನವರೂ, ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದೆಂಬ ಹೇರಿಗೆ ಸರಿಸಮಾನರಾದ ಬೆಲ್ಜಿಯಮ್‌ನವರೂ, ಶೌರ್ಯವಂತರಾದ ರಷ್ಯಾದವರೂ, ಯುಕ್ತಿವಂತರಾದ ಜಪಾನ್ ದೇಶದವರೂ, ಶ್ರಮಸಹಿಷ್ಣುಗಳಾದ ಇಂಡಿಯನ್ ಸೈನಿಕರೂ ಪರಾಕ್ರಮದಿಂದ ಯುದ್ಧಮಾಡಿ ಎಷ್ಟು ಬೇಗ ನಮ್ಮ ಇಂಗ್ಲಿಷ್ ಬಾವುಟವನ್ನು ಬರ್ಲಿನ್ ಪಟ್ಟಣದ ಅರಮನೆಯ ಮೇಲೆ ಎತ್ತಿಕಟ್ಟಿದ್ದನ್ನು ಕೇಳಲು ನಾವುಗಳು ತುಂಬಾ ಸಂತೋಷಪಡುತ್ತೇವೆ. ಜರ್ಮನಿಯವರು ನಿಷ್ಕಾರಣವಾಗಿ ಪ್ರಜೆಗಳಿಗೆ ಹಿಂಸೆಯನ್ನು ಕೊಟ್ಟಿದ್ದರಿಂದಲೂ, ಸೃಷ್ಟಿಕರ್ತನಾದ ಭಗವಂತನ ಮನೋಹರವಾದ ಮತ್ತು ಸುಂದರವಾದ ಗುಡಿ ಗೋಪುರಗಳನ್ನು ಒಡೆದು ಹಾಳುಮಾಡಿದ್ದಕ್ಕಾಗಿಯೂ ದೇವರು ಅವರ ನಾಶಕ್ಕೆ ಕಣ್ಣಿಡದೆ ಇದ್ದಾನೆಯೇ ? ಶ್ರೀ ಭಗವಂತನು ನಮ್ಮ ಬ್ರಿಟಿಷ್ ಸಾಮ್ರಾಜ್ಯದ ರಾಜಧಾನಿಯಾದ ರಾಮನ ರಾಜಧಾನಿಯಾಗಿದ್ದ ಅಯೋಧ್ಯೆಗೆ ಸಮಾನವಾದ ಲಂಡನ್ ಪಟ್ಟಣದ ಅಸ್ತಿಭಾರವನ್ನು ಸೂರ್ಯಚಂದ್ರರು ಇರುವ ವರೆಗೂ ಸ್ಥಿರವಾಗಿ ನೆಲೆಗೊಳ್ಳುವಂತೆ ಮಾಡಬೆಂದೂ, ದಯಾಳುವಾದ ಜಾರ್ಜ್ ಸಾರ್ವಭೌಮರಿಗೂ, ನಮ್ಮನ್ನು ಆಳುವ ಮೈಸೂರು ಮಹಾರಾಜರವರಾದ ಶ್ರೀಕೃಷ್ಣರಾಜೇಂದ್ರ ಒಡೆಯರವರಿಗೂ, ಶ್ರೇಷ್ಠ ಮಂತ್ರಿವರ್ಯರಿಗೂ ದೇವರು ಆಯುರಾರೋಗ್ಯಾಭಿವೃದ್ಧಿಯನ್ನು ಕೊಟ್ಟು ಕಾಪಾಡಬೆಂದು ಪ್ರತಿ ಸಾಯಮ್ ಪ್ರಾತಃಕಾಲಗಳಲ್ಲೂ ಪ್ರಾರ್ಥಿಸುವುದು ನಮ್ಮಗಳ ಈಗಿನ ಮುಖ್ಯ ಕರ್ತವ್ಯವಾಗಿದೆ

ತೀರ್ಥಹಳ್ಳಿ ತಾಲ್ಲೂಕು. ಜಿ. ವಿ. ಪುಟ್ಟಪ್ಪ ಹೆಗ್ಗಡೆ.

ದೇವನಹಳ್ಳಿ ತಾಲ್ಲೂಕು ಹುಣಸಮಾರನಹಳ್ಳಿ ಮಠ.

ಈ ಮಠದ ಪಟ್ಟಾಧ್ಯಕ್ಷ ಶ್ರೀಮನ್ನಂಜರಾಜ ದೇಶಿಕೇಂದ್ರಸ್ವಾಮಿಗಳವರೂ ಇವರ ಏಜಂಟರಾಗಿರುವ ಮ॥ ಗುರುನಂಜವಡೆಯರವರೂ ಪ್ರಸಿದ್ಧವಾದ ಈ ಮಠದ ಕಾರ್ಯಭಾರಗಳನ್ನು ಬಹು ನೀತಿಯುಕ್ತವಾಗಿ ನಡಿಸಿಕೊಂಡು ಬರುತ್ತಿರುವರೆಂದು ಜನಜನಿತವಾಗಿದೆ. ಮೊದಲು ಈ ಮಠದ ಮುಖ್ಯ ಏಜಂಟರಾಗಿದ್ದ ಮ॥ ಚೆನ್ನಬಸವವಡೆಯರವರು ಒಂದೂವರೆ ವರ್ಷದ ಕೆಳಗೆ ಗತಿಸಿಹೋದದ್ದು ಮೊದಲ್ಗೊಂಡು ಶ್ರೀ ಸ್ವಾಮಿಗಳವರೂ ಏಜಂಟರೂ ಅವರ ಜ್ಞಾಪಕಾರ್ಥವಾಗಿ ಒಂದು ಸ್ಕೂಲನ್ನು ಕಟ್ಟಿಸಿದರು. ಇದರ ಪ್ರವೇಶೋತ್ಸವವು ಮೈಸೂರು ಸೀಮೆಯ ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರವರಾದ ರಾವ್ ಬಹದ್ದೂರ್ ಮ॥ ಎಂ. ರಾಮರಾವ್, ಎಂ.ಎ., ಯವರಿಂದ ನಡೆಯಬೇಕೆಂದು ಗೊತ್ತಾಗಿದ್ದ ಮೇರೆಗೆ ಕಳೆದ ತಿಂಗಳ 6 ನೇ ತಾ ಭಾನುವಾರ 10 ಗಂಟೆಗೆ ಸ್ಕೂಲಿನ ಮುಂಭಾಗದಲ್ಲಿ ಸುಂದರವಾದ ಚಪ್ಪರವು ಏರ್ಪಡಿಸಲ್ಪಟ್ಟು ಶ್ರೇಷ್ಠ ಪೀಠಗಳಿಂದ ಕಂಗೊಳಿಸುತ್ತಿದ್ದಿತು. ಈ ಸ್ಥಳದಲ್ಲಿ ಮೊದಲೇ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರವರೂ, ಡೆಪುಟಿ ಕಮಿಷನರೂ, ಪೊಲೀಸ್ ಸೂಪರಿಂಟೆಂಡೆಂಟರೂ, ಎಕನಾಮಿಕ್ ಕಾನ್‌ಫರೆನ್ಸ್ ಸೆಕ್ರೆಟರಿಯವರೂ, ಸರ್ಕಲ್ ಇನ್‌ಸ್ಪೆಕ್ಟರವರೂ, ಡೆಪ್ಯುಟಿ ಇನ್‌ಸ್ಪೆಕ್ಟರೂ, ಅ॥ ಡೆಪ್ಯುಟಿ ಇನ್‌ಸ್ಪೆಕ್ಟರೂ, ಮ॥ ಡಿ. ವೆಂಕಟರಾಮಯ್ಯನವರೂ, ಮ॥ ಲಿಂಗಯ್ಯಸೆಟ್ಟರೂ, ಅಮಲ್ದಾರರೂ ಹಲವು ಸ್ಥಳಗಳ ಹೆಡ್ ಮಾಸ್ಟರೂ ಅ॥ ಮಾಸ್ಟರೂ, ವಿದ್ಯಾರ್ಥಿಗಳೂ, ಹಲವು ಮಂದಿ ದೊಡ್ಡ ಮನುಷ್ಯರೂ ನೆರೆದು ಮ॥ ಎಂ. ರಾಮರಾಯರವರನ್ನು ಮಂಗಳವಾದ್ಯದೊಡನೆ ಎದುರುಗೊಂಡು ಸನ್ಮಾನಿಸಿ ಬಾಲಕಬಾಲಕಿಯರು ಹಾಡುತ್ತಿರುವ ಸುಸ್ವಾಗತದ ಸೂಚಕವಾದ ಪಾಡುಗಳನ್ನು ಆಲಿಸಿ ಚಪ್ಪರದೊಳಕ್ಕೆ ದಯಮಾಡಿಸಿ ಸರ್ವರ ಪ್ರಾರ್ಥನೆಯಂತೆ ಮ॥ ಎಂ. ರಾಮರಾಯರವರು ಸಭಾಧ್ಯಕ್ಷರಾದರು.

ಅನಂತರ ಸ್ಕೂಲಿನ ಬಾಲಕಬಾಲಕಿಯರು ದೇವರ ಸ್ತುತಿ, ಚಕ್ರವರ್ತಿಗಳ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆ, ಬಾಲಕರ ನೀತಿಬಂಧ, ದೃಷ್ಟಾಂತ ಪ್ರಯೋಗ, ಈ ವಿಷಯದ ಪ್ರಶ್ನೋತ್ತರಗಳನ್ನು ಹೇಳಿದರು. ಆ ಮೇಲೆ ಸದರಿ ಗ॥ ಸ್ಕೂಲ್ ಮಾಸ್ಟರ್ ಮ॥ ಸಿ. ಗುರುಪಾದಪ್ಪನವರು 1911 ರಿಂದ 1914 ನೇ ಇಸ್ವಿಯವರೆಗಿನ ಸ್ಕೂಲ್ ರಿಪೋರ್ಟನ್ನು ಓದಿದರು. ಅದು ತೃಪ್ತಿಕರವಾಗಿದ್ದಿತು. ಮತ್ತು ಶ್ರೀ ಸ್ವಾಮಿಗಳವರ, ಏಜಂಟರವರ ಉದ್ದೇಶವನ್ನೂ ತಿಳಿಸಿದರು. ಮಠದ ಏಜಂಟರ ಕುಮಾರ ರಾಜಶೇಖರವಡೆಯರವರು ಇಂಗ್ಲಿಷಿನಲ್ಲಿ ಉಪನ್ಯಾಸವನ್ನು ಓದಿದರು.

ಆ ಮೇಲೆ ರಾವ್ ಬಹದ್ದೂರ್ ಮ॥ ಎಂ. ರಾಮರಾಯರವರು—ಈ ಕಾಲದಲ್ಲಿ ಗವರ್ನ್‌ಮೆಂಟಿನವರು ವಿದ್ಯಾಪ್ರಚಾರಕ್ಕಾಗಿ ವಿಶೇಷ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಅನುಸಾರವಾಗಿ ಮಠದ ಪಟ್ಟಾಧ್ಯಕ್ಷ ಶ್ರೀಮನ್ನಂಜರಾಜ ದೇಶಿಕೇಂದ್ರ ಸ್ವಾಮಿಗಳವರೂ ಅವರ ಏಜಂಟರವರೂ ಇಂಥ ಶ್ರೇಷ್ಠವಾದ ಪಾಠಶಾಲೆಯನ್ನು ಗತಿಸಿದ ತಮ್ಮ ಮಠದ ಏಜಂಟರಾಗಿದ್ದ ಚೆನ್ನಬಸವವಡೆಯರ ಜ್ಞಾಪಕಾರ್ಥವಾಗಿ ಕಟ್ಟಿಸಿಕೊಟ್ಟಿದ್ದಾರೆ. ಇವರ ಔದಾರ್ಯಗುಣಕ್ಕಾಗಿ ತುಂಬಾ ಕೃತಜ್ಞರಾಗಿರುತ್ತೇವೆ. ಈ ಸ್ಕೂಲಿಗೆ ಇಂಗ್ಲಿಷ್ ಮಾಸ್ಟರನ್ನು ಕಳುಹಿಸಿಕೊಡುತ್ತೇವೆ. ನಮ್ಮನ್ನು ಈ ಸ್ಕೂಲಿನ ಪ್ರತಿಷ್ಠೆಗಾಗಿ ಕರೆಸಿಕೊಂಡುದಕ್ಕಾಗಿ ಶ್ರೀಸ್ವಾಮಿಗಳವರಿಗೂ, ಗುರುನಂಜವಡೆಯರವರಿಗೂ ವಿಶೇಷ ಕೃತಜ್ಞರಾಗಿರುತ್ತೇವೆ ಎಂದು ಅಪ್ಪಣೆಕೊಡಿಸಿ, ಶಾಸ್ತ್ರಿಗಳ ವೇದಘೋಷವಾಗುತ್ತಿರುವಲ್ಲಿ ಸ್ಕೂಲ್ ಬಾಗಿಲನ್ನು ತೆರೆದರು. ಅನಂತರ ಈ ಸ್ಕೂಲ್ ಲೈಬ್ರರಿಗಾಗಿ 30 ರೂಪಾಯಿ ಪುಸ್ತಕಗಳನ್ನು ಕೊಡುವುದಾಗಿ ವಾಗ್ದಾನಮಾಡಿದರು. ಗಂಧ ಪುಷ್ಪ ತಾಂಬೂಲವಾದ ನಂತರ ಸಭೆಯು ಮುಕ್ತಾಯವಾಗಿ, ಮೇಲೆ ಕಂಡ ಎಲ್ಲಾ ದೊಡ್ಡ ಮನುಷ್ಯರ ಸಮೇತ ಮಂಗಳವಾದ್ಯದೊಡನೆ ದಿವ್ಯವಾದ ಮಠದ ಮಹಡಿಯ ಮೇಲಕ್ಕೆ ದಯಮಾಡಿಸಿದಾಗ ಶ್ರೀಮನ್ ಸ್ವಾಮಿಗಳವರು ಈ ಅಧಿಕಾರಿಗಳಿಗೆಲ್ಲಾ ದರ್ಶನವಿತ್ತು ಸನ್ಮಾನದೊಡನೆ ಕುಶಲಪ್ರಶ್ನೆ ಮಾಡಿ ಭೋಜನಕ್ಕೆ ತೆರಳಲು ಸೂಚಿಸಿದರು. ಭೋಜನಾನಂತರ ಸಂಗೀತಾದಿ ವಿನೋದ ಗೋಷ್ಠಿಯಲ್ಲಿದ್ದು 4 ಗಂಟೆಗೆ ಉಪಾಹಾರವನ್ನು ತೆಗೆದುಕೊಂಡು ಸರ್ವರೂ ಶ್ರೀಸ್ವಾಮಿಗಳವರ ಅನುಮತಿಯಿಂದ ತೆರಳಿದರು. ಮತ್ತು ಕಳೆದ ತಿಂಗಳು 11 ನೇ ತಾ ಶುಕ್ರವಾರ ಮೈಸೂರು ಸೀಮೆಯ ದಿವಾನ್‌ರವರಾದ ಸುಪ್ರಸಿದ್ಧ ಮ॥ ಎಂ. ವಿಶ್ವೇಶ್ವರಯ್ಯನವರು ಶ್ರೀಸ್ವಾಮಿಗಳ ಕೋರಿಕೆಯಂತೆ ಈ ಊರಿಗೆ ದಯಮಾಡಿ ಸದರಿ ಸ್ಕೂಲನ್ನು ಪರಾಂಭರಿಸಿ ಅಲ್ಲಿಂದ ಮಠಕ್ಕೆ ದಯಮಾಡಿಸಿ ಶ್ರೀಸ್ವಾಮಿಗಳವರ ದರ್ಶನವನ್ನು ತೆಗೆದುಕೊಂಡು, 7 ಗಂಟೆಗೆ ವಾಪಸ್ ಚಿತ್ತೈಸಿದರು.

ಪ್ರೇಕ್ಷಕ

ಬೆಂಗಳೂರಿನಲ್ಲಿ ವಿದ್ಯಾಭಿವೃದ್ಧಿಗೆ ಬೇರೆಬೇರೆ ಕೋಮುಗಳವರು ಮಾಡಿರುವ ಏರ್ಪಾಡುಗಳು.

ನವೀನ ಜನಾಂಗಗಳಲ್ಲಿ ಅನೇಕ ದೇಶೀಯರು ಬಹಳ ರಾಷ್ಟ್ರಜ್ಞರಾಗಿಯೂ, ಕೋಟ್ಯಾಧೀಶ್ವರರಾಗಿಯೂ ಇರಲು ಅವರ ವಿದ್ಯಾಬಲವೇ ಮೂಲಕಾರಣವೆಂಬುದಾಗಿ ಸಿದ್ಧಾಂತಮಾಡಿದ್ದಾರೆ. ಈ ಕಾಲದಲ್ಲಿ ಮೈಸೂರು ಸೀಮೆಯು ಈ ಜನಾಂಗಗಳನ್ನನುಸರಿಸಿ ಮುಂದರಿಯಬೇಕೆಂದು ಕುತೂಹಲಯುಕ್ತವಾಗಿರುವುದು ಎಲ್ಲರಿಗೂ ಗೊತ್ತೇ ಇದೆ. ವಿದ್ಯಾ ಪಕ್ಷಪಾತಿಗಳಾದ ನಮ್ಮ ಶ್ರೀಮನ್ ಮಹಾರಾಜರವರು ತಮ್ಮ ಗಮನದ ಬಹುಭಾಗವನ್ನು ಇದಕ್ಕಾಗಿ ಉಪಯೋಗಿಸುತ್ತಿದ್ದಾರೆ. ವಿದ್ಯಾಭಿವೃದ್ಧಿಗೋಸ್ಕರ ವರ್ಷೇ ವರ್ಷೇ ಕೆಲವು ಲಕ್ಷ ರೂಪಾಯಿಗಳನ್ನು ಹೆಚ್ಚಿಸುತ್ತಿದ್ದಾರೆ. ಹಲವು ಸ್ಥಳಗಳಲ್ಲಿ ಬಲವಂತದ ವಿದ್ಯಾಭ್ಯಾಸವು ನಡೆಯುತ್ತಿದೆ. ಜನಗಳು ತಾವು ತಾವೇ ಪ್ರಯತ್ನಮಾಡಿ ತಮ್ಮ ಮಕ್ಕಳು ವಿದ್ಯಾವಂತರಾಗುವಂತೆ ಮಾಡುತ್ತಿದ್ದಾರೆ. ಈ ಸ್ವಪ್ರಯತ್ನವು ನಮ್ಮ ಮಹಾರಾಜರವರ ಮನಸ್ಸಿಗೆ ಆನಂದದಾಯಕವಾದದ್ದು. ಈ ನಮ್ಮ ಮೈಸೂರು ಸೀಮೆಯಲ್ಲಿ ವಿದ್ಯಾರ್ಜನೆಗೋಸ್ಕರ ಕೋಮುವಾರು ಅಂದರೆ ಅವರವರ ಮತದ ಜನಗಳಿಗೆ ಅನುಕೂಲಗೊಳಿಸುವಂತೆ ಈಗ ಪಾಲಿ ಬೆಂಗಳೂರಿನಲ್ಲಿ ವೈಶ್ಯರು, ಲಿಂಗಾಯತರು, ಒಕ್ಕಲಿಗರು, ಮರಾಟಾದವರು ಮತ್ತು ಮುಸಲ್ಮಾನರು, ಇನ್ನೂ ಅನೇಕ ಮತಸ್ಥರು ಬೇರೆ ಬೇರೆ ಅವರವರ ಶಕ್ತ್ಯನುಸಾರವಾಗಿ ಹಾಸ್ಟಲುಗಳನ್ನು ಕಲ್ಪಿಸಿಕೊಂಡು, ಪ್ರಜೆಗಳ ಪೋಷಣೆಯಿಂದ ನಡೆಸುತ್ತಲಿದ್ದಾರೆ. ಇವುಗಳ ಪೈಕಿ ಬೆಂಗಳೂರು ಮ॥ ಪೋತೀಪಲ್ಲಿ ಸುಬ್ಬಯ್ಯಶೆಟ್ಟರ ಛತ್ರದಲ್ಲಿ 20 ಮಂದಿ ಬ್ರಾಹ್ಮಣ ವಿದ್ಯಾರ್ಥಿಗಳಿಗೂ, 20 ಮಂದಿ ವೈಶ್ಯ ವಿದ್ಯಾರ್ಥಿಗಳಿಗೂ ಸಹ ಓದಲು ಸಾಕರ್ಯವನ್ನು ಕಲ್ಪಿಸಿದ್ದಾರೆ. ಇದೇ ಮೇಲ್ಪಂಕ್ತಿ ಅನುಸರಿಸಿ, ಮ॥ ಸಾಹುಕಾರ್ ಚಿಂತನಪಲ್ಲಿ ವೆಂಕಟಮುನಯ್ಯಶೆಟ್ಟರವರು ಬಹಳ ಹೀನಸ್ಥಿತಿಯಲ್ಲಿರುವ ವೈಶ್ಯಬಾಲಕರನ್ನು ವಿದ್ಯಾವಂತರನ್ನಾಗಿ ಮಾಡಲು ಮನಸ್ಸಿನಲ್ಲಿ ನಿಶ್ಚಯಿಸಿ ಒಂದು ಧರ್ಮಸತ್ರವನ್ನು ಸ್ಥಾಪನೆ ಮಾಡಿ ಅಲ್ಲಿ ಸುಮಾರು 20 ಮಂದಿ ವೈಶ್ಯ ವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಹಾಕುತ್ತಾ ಕಾಪಾಡುತ್ತಲಿದ್ದಾರೆ.

ಈ ವಿದ್ಯಾಸಾಧನೆಗೆ ಉಪಕರಣಗಳಾಗಿರತಕ್ಕ ದುಡ್ಡು, ಪುಸ್ತಕ, ಬಟ್ಟೆ ವಗೈರೆಗಳು ಅನುಕೂಲವಾಗಿ ಆ ಬಾಲಕನಿಗೆ ಇಲ್ಲವೆಂಬುದು ಸಾಮಾನ್ಯವಾಗಿ ಊಹಿಸಬಹುದು. ಇಂಥಾ ಕಷ್ಟಗಳನ್ನು ಸಹ ತಪ್ಪಿಸಲು ಅನೇಕ ವೈಶ್ಯ ಮಹನೀಯರು ಶ್ರಮ ತೆಗೆದುಕೊಳ್ಳುತ್ತ ಇದ್ದಾರೆ. ಮದ್ರಾಸು ಶ್ರೀ ಕನ್ನಿಕಾಪರಮೇಶ್ವರೀ ಗುಡಿಯ ಧರ್ಮದ ಫಂಡಿನಿಂದಲೂ, ಅದೇ ಸ್ಥಳದ ಮ॥ ಯತಿರಾಜುಲು ಶೆಟ್ಟಿಯವರ ಧರ್ಮ ಫಂಡಿನಿಂದಲೂ ಅನೇಕ ವೈಶ್ಯ ವಿದ್ಯಾರ್ಥಿಗಳಿಗೆ ವೇತನವನ್ನು ಕಳುಹಿಸುತ್ತಲಿದ್ದಾರೆ. ಈ ಮ॥ ವೆಂಕಟಮುನಯ್ಯಶೆಟ್ಟರ ಸತ್ರಕ್ಕೆ ಬೇರೆ ಬೇರೆ ಪ್ರದೇಶಗಳಿಂದ ಬಂದ ವಿದ್ಯಾರ್ಥಿಗಳು ಇರುತ್ತಾರೆ. ಇವರಲ್ಲಿ 6 ಮಂದಿ ವಿದ್ಯಾರ್ಥಿಗಳು ಅರಕಲಗೂಡಿನವರಾಗಿರುತ್ತಾರೆ. ಈ ಅರಕಲಗೂಡು ಬಾಲಕರಲ್ಲಿ ವಿದ್ಯೆಯನ್ನು ಅಭಿವೃದ್ಧಿಯಲ್ಲಿ ತರುವ ಉದ್ದೇಶವನ್ನಿಟ್ಟು ಅಲ್ಲಿ ಪೇಟೆಯ ಶ್ರೀ ಕನ್ನಿಕಾಪರಮೇಶ್ವರೀ ಗುಡಿಯಲ್ಲಿ ವೈಶ್ಯ ಮಹನೀಯರುಗಳೆಲ್ಲಾ ಸೇರಿ ಅವರಲ್ಲೇ ಅಲ್ಪಸಲ್ಪ ಚಂದಾ ಹಾಕಿಕೊಂಡು, ತಿಂಗಳು ಒಂದಕ್ಕೆ ಸುಮಾರು ಎಂಟು ರೂಪಾಯಿಗಳ ವರಿಗೂ ಜೊತೆಮಾಡಿ, ಅದರಲ್ಲಿ ಕೆಲವು ರೂಪಾಯಿಗಳನ್ನು ಬೆಂಗಳೂರಿನಲ್ಲಿರುವ ನಮ್ಮ ಬಾಲಕರಿಗೆ ಕೊಡುತ್ತಾ ಇರುತ್ತಾರೆಂಬುದನ್ನು ಕೇಳುವುದರಿಂದಲೂ, ಅದೇ ರೀತಿಯಾದ ಸಹಾಯವನ್ನು ಹೊಂದಿದ ಈ ವೈಶ್ಯ ಬಾಲಕರು ಬೆಂಗಳೂರಿಗೆ ಬಂದು ದಿನೇ ದಿನೇ ಅಭಿವೃದ್ಧಿಗೆ ಹೊಂದುತ್ತಾ ಇರುವುದನ್ನು ನೋಡಿದರೆ ಅವರುಗಳು ವಿದ್ಯಾವಂತರಾಗುವದರಲ್ಲಿ ಏನೂ ಸಂದೇಹವಿಲ್ಲವೆಂದು ತೋರುತ್ತೆ. ಹೀಗಿರುವ ಮಧ್ಯೆ ಈ ಬಾಲಕರಿಗೆ ಸರಿಯಾಗಿ ತಮ್ಮ ಸ್ಥಳದಿಂದ ಬರತಕ್ಕ ದುಡ್ಡು ಯಾವುದೋ ಕಾರಣದಿಂದ ನಿಲ್ಲುವ ಹಾಗೆ ಇದೆ ಎಂದು ಸಂದೇಹಪಡುತ್ತಿರುವ ಸಮಯಕ್ಕೆ ಸರಿಯಾಗಿ ಅರಕಲಗೂಡಿನ ನಿವಾಸಸ್ಥರಾಗಿಯೂ, ವಿದ್ಯಾ ಪ್ರೇಕ್ಷಕರಾಗಿಯೂ ಇರುವ ವೈಶ್ಯ ಮಹನೀಯರಾದ ಮ॥ ಚನ್ನರಾಯಪಟ್ಟಣದ ಸುಬ್ರಾಯಶೆಟ್ಟರು, ಮ॥ ಸೀಯಣ್ಣರ ನಂಜುಂಡಯ್ಯಶೆಟ್ಟರು, ಮ॥ ಸರ್ವಯ್ಯನ ರಾಮಶೆಟ್ಟರು ಬೆಂಗಳೂರಿಗೆ ದಯಮಾಡಿಸಿ, ಇಲ್ಲಿರುವ ನಡವಳಿಕೆಗಳನ್ನೂ, ಹುಡುಗರ ಯೋಗ್ಯತಾ ಪಕ್ಷಗಳನ್ನೂ, ಆ ಧರ್ಮಕರ್ತರ ದಯಾಳುವಾದ ಯಶಸ್ಸನ್ನೂ, ಅವರು ಮಾಡುತ್ತಿರುವ ಕಾರ್ಯಗಳನ್ನೂ ನೋಡಿ ವಿಸ್ಮಯರಾಗಿ ತಮ್ಮ ನಿರ್ಮಲವಾದ ಮತ್ತು ಕೃಪಾಕಟಾಕ್ಷದಿಂದ ಕೂಡಿದ ಮನಸ್ಸುಗಳಿಂದ ಮೇಲೆ ಹೇಳಿದ ವೈಶ್ಯ ಮಹನೀಯರು—ನಮಗೆ ಅರಕಲಗೂಡಿನ ದೇವಸ್ಥಾನದಿಂದ ಬರುವ ವೇತನವು ತಪ್ಪಿದರೆ ಅಥವಾ ನಿಲ್ಲುವ ಸಂಭವವಿದ್ದರೆ ಅಂಥಾ ಸಮಯದಲ್ಲಿ ನಾವುಗಳು ನಮ್ಮ ನಮ್ಮಲ್ಲಿ ಏರ್ಪಾಡು ಮಾಡಿ ಮೊದಲಿನಂತೆ ಕಳುಹಿಸಿಕೊಡುತ್ತೇವೆಂದು ವಾಗ್ದಾನ ಮಾಡಿದರು. ಹೀಗೆ ಬಂದಂಥಾ ಸದುತ್ತರವನ್ನು ಆ ಬಾಲಕರೂ ನಾನೂ ಸಹ ಕೇಳಿ ತುಂಬಾ ಆನಂದದಲ್ಲಿ ಮಗ್ನರಾಗಿರುತ್ತೇವೆ. ಭಗವಂತನು ಅವರಿಗೆ ಉದಾರ ಮನಸ್ಸು ಕೊಟ್ಟು ಅವರ ವಾಗ್ದಾನವನ್ನು ನೆರವೇರಿಸಲೆಂದು ಹಾರೈಸುತ್ತೇನೆ.

ಬೆಂಗಳೂರು ಸಿಟಿ. ಕೌರಾಭಿಮಾನಿ.

ಹಿಂದುಸ್ಥಾನದ ಸಂಘಪರಿಷ್ಕರಣ ಸಮಾಜ, ಮದರಾಸ್.

ಮೈಸೂರು ಶ್ರೀಮದ್ಯುವರಾಜರವರ ಭಾಷಣವು.

ಡಿಸೆಂಬರ್ ತಾ. 27 ನೇ ಶನಿವಾರ ಮದರಾಸ್ ಪಟ್ಟಣದಲ್ಲಿ ನಡೆದ ಹಿಂದುಸ್ಥಾನದ ಸಂಘಪರಿಷ್ಕರಣ ಸಮಾಜದಲ್ಲಿ ನಮ್ಮ ಶ್ರೀಮದ್ಯುವರಾಜರವರು ಅಗ್ರಪೀಠವನ್ನು ಅಲಂಕರಿಸಿ, ತಮಗೆ ಆ ಮಹಾಸಭಿಕರು ಆ ಪೀಠವನ್ನು ಕೊಟ್ಟದ್ದಕ್ಕಾಗಿ ತುಂಬಾ ಸಂತೋಷದಿಂದ ಸಭಿಕರನ್ನು ವಂದನೆಮಾಡಿ, ಅವರನ್ನು ಕುರಿತು ಬಹು ಸೂಕ್ತವೂ ಸ್ವಾರಸ್ಯವೂ ಹಿತಕರವೂ ಆದ ಭಾಷಣವನ್ನು ಮಾಡಿದರು. ಅದು ತುಂಬಾ ದೀರ್ಘವಾಗಿರೋಣದರಿಂದ ಅದರ ಮುಖ್ಯ ಭಾಗಗಳನ್ನು ಸಂಕ್ಷೇಪೀಕರಿಸಿ ನಮ್ಮ ವಾಚಕರಿಗೆ ಇಲ್ಲಿ ತಿಳಿಸುವೆವು.

ಹಿಂದುಗಳ ಈಗಿನ ಸ್ಥಿತಿ—ಹಿಂದುಗಳಲ್ಲಿ ಹಲವು ಜಾತಿಗಳು ಒಳಗೊಂಡಿವೆ. ಪರಸ್ಪರ ಸಹನೆಯಾಗಲಿ ಪ್ರೀತಿಯಾಗಲಿ ಇಲ್ಲ. ಇದರಿಂದ ಹಿಂದುಗಳು ಏಕೀಭವಿಸಿ ಪಾಶ್ಚಾತ್ಯ ಜನಾಂಗಗಳ ಮೇಲೆ ಪೈಪೋಟಿ ಮಾಡುವುದು ಸಾಧ್ಯವಲ್ಲ. ಹಿಂದುಗಳ ನಾನಾ ಬಗೆಯ ಆಚಾರ ವ್ಯವಹಾರಗಳು ಪ್ರತಿಬಂಧಕಗಳಾಗಿವೆ. ವಿದ್ಯೆಯು ಬಹಳ ಕಡಮೆ. ಸ್ತ್ರೀವಿದ್ಯಾಭ್ಯಾಸವು ಬಹಳ ನಿಧಾನವಾಗಿ ನಡೆಯುತ್ತಿರುವುದು. ಗೃಹಕೃತ್ಯದಲ್ಲೂ ಸಂಘದಲ್ಲೂ ಸ್ತ್ರೀಯರ ಕೆಲಸ ಕಾರ್ಯಗಳು ಅಲ್ಪ ಮಾತ್ರವಾಗಿವೆ. ಜಾತಿಯ ಕಟ್ಟುಪಾಡುಗಳಿಂದಲೂ ಹುಟ್ಟಿನಿಂದಲು ಜನಗಳು ಪೀಳಿಗೆಪೀಳಿಗೆಯಿಂದ ನಡೆದುಬಂದಿರುವ ಕೆಲಸಕಾರ್ಯಗಳನ್ನೇ ಮಾಡುವುದರಿಂದ ಕೈಗಾರಿಕೆಗಳಾಗಲಿ ಕಸಬುಗಳಾಗಲಿ ಅಭಿವೃದ್ಧಿಗೆ ಬರಲು ಮಾರ್ಗವಿಲ್ಲ. ಹಿಂದುಗಳಲ್ಲಿ ಮತಭಕ್ತಿಯ ಜೊತೆಗೆ ಸಂಘದ ಆಚಾರ ವ್ಯವಹಾರಗಳು ಸೇರಿಕೊಂಡಿರುವುದರಿಂದ ಬಹು ಪ್ರಜೆಯು ಶಾಖೋಪಶಾಖೆಗಳಾಗಿ ಒಡೆದು ಹೋಗಿದೆ. ಜಾತಿಯ ಮತ್ತು ಕುಲಾಚಾರಗಳ ಕಟ್ಟುಪಾಡು ತುಂಬಾ ಕಠಿಣವಾಗಿರೋಣದರಿಂದ ಜನರು ಸ್ವತಂತ್ರಿಸಿ ಕೆಲಸಮಾಡಲಾರರು, ಆತ್ಮಾವಲಂಬಿಗಳಾಗಲಾರರು, ಮತ್ತು ಸಂಘದ ಪುರೋಭಿವೃದ್ಧಿಗೆ ಬೆಂಬಲ ಕೊಡಲು ಒಗ್ಗಟ್ಟಾಗಲಾರರು.

ಪಾಶ್ಚಾತ್ಯ ಜನಗಳಿಗೂ ಹಿಂದುಗಳಿಗೂ ಇರುವ ತಾರತಮ್ಯ—ಹಿಂದೂ ಜನಾಂಗದ ಸ್ಥಿತಿಯನ್ನು ಪಾಶ್ಚಾತ್ಯ ಜನರುಗಳ ಸ್ಥಿತಿಗತಿಗೆ ಹೋಲಿಸಿ ನೋಡಿದರೆ ಹಿಂದುಗಳಲ್ಲಿರುವ ಕೊರತೆಗಳೂ, ಬದಲಾಯಿಸಿಕೊಳ್ಳಬೇಕಾಗಿರುವ ಅಂಶಗಳೂ ಗೊತ್ತಾಗುತ್ತವೆ. ಪಾಶ್ಚಾತ್ಯ ಜನಗಳ ಆಚಾರವ್ಯವಹಾರಗಳನ್ನು ನೋಡದೆ ಅವರಂತೆ ರಾಜಕೀಯವೇ ಮೊದಲಾದ ವಿಚಾರಗಳಲ್ಲಿ ಹಿಂದುಗಳು ವೃದ್ಧಿಗೆ ಬರಲಿಲ್ಲವೆಂದು ಚಿಂತೆಪಡುವುದರಿಂದ ಫಲವೇನು ? ಅವರಿಗೂ ಹಿಂದುಗಳಿಗೂ ಇರುವ ತಾರತಮ್ಯವೇನೆಂದು ಕೇಳಬಹುದು. ಯೂರೋಪಿನಲ್ಲಿ ಜನಗಳ ಆಚಾರ ವ್ಯವಹಾರಗಳು ಒಂದೇ ಆಗಿದ್ದು ಅವರೆಲ್ಲಾ ಒಂದೊಂದು ಸಂಸ್ಥಾನದ ಆಳಿಕೆಗೆ ಸೇರಿರುತ್ತಾರೆ. ಹಿಂದುಸ್ಥಾನದಲ್ಲಾದರೋ ಜನಗಳು ಜಾತಿ, ಕುಲ, ಗೋತ್ರಗಳನ್ನು ಮಾಡಿಕೊಂಡು ಸಣ್ಣ ಸಣ್ಣ ಗುಂಪುಗಳಾಗಿ ಒಡೆದುಹೋಗಿರುವರು. ಪಾಶ್ಚಾತ್ಯರಲ್ಲಿ ಮತಭಕ್ತಿಯೇ ಬೇರೆ, ಆಚಾರ ವ್ಯವಹಾರಗಳೇ ಬೇರೆ. ಹಿಂದುಗಳಲ್ಲಾದರೋ ಮತಭಕ್ತಿಯೂ, ನೀತಿಮಾರ್ಗಗಳೂ, ಸಂಘದ ಆಚಾರ ವ್ಯವಹಾರಗಳೂ ಎಲ್ಲಾ ಬೆರಕೆಯಾಗಿ, ಜನಗಳು ತಮ್ಮ ಶೀಲಸ್ವಭಾವಗಳನ್ನು ಕಾಲಾನುಗುಣ್ಯವಾಗಿ ಕ್ರಮಪಡಿಸಿಕೊಳ್ಳುವುದಕ್ಕೂ ಬುದ್ಧಿ ವಿವೇಕಗಳನ್ನು ಉಪಯೋಗಿಸುವುದಕ್ಕೂ ಅವಕಾಶವೇ ಕಾಣಬರುವುದಿಲ್ಲ. ಪಾಶ್ಚಾತ್ಯರು ಪ್ರಾಚೀನಪದ್ಧತಿ ಆಚಾರಗಳನ್ನು ಗ್ರಹಿಸದೇನೂ, ಮುಂದೆ ಕಾಲಾನುಗುಣ್ಯವಾಗಿ ಕಂಡುಬರುವವುಗಳನ್ನು ನೋಡದೇನೂ ಆಚರಿಸುವುದಿಲ್ಲ. ಹಿಂದುಗಳಾದರೋ ಪೂರ್ವಕಾಲದಿಂದ ಬಂದಿರುವ

ಅನೇಕರ ಎಷ್ಟೆಷ್ಟು ಬಿಡಲೊಲ್ಲದೆ ಇರುವರು ; ಇವರಿಗೆ ಈಗಿನ ಅಥವಾ ಮುಂದಿನ ವಿಷಯಗಳ ಮೇಲೆ ದೃಷ್ಟಿಯೇ ಬೀಳುವುದಿಲ್ಲ. ಪಾಶ್ಚಾತ್ಯರಲ್ಲಿ ಜ್ಞಾನವೂ, ಉಡುಪುಗಳೂ, ನಡೆನುಡಿಗಳೂ ಶಕ್ತ್ಯನುಸಾರಗೂ ಏಕಭಾವವನ್ನು ತೋರುತ್ತವೆ. ಹಿಂದುಗಳಲ್ಲಿ ಜಾತಿ ಜಾತಿಗಳಿಗೂ ಪಂಗಡ ಪಂಗಡಗಳಿಗೂ ವ್ಯತ್ಯಾಸವುಂಟು ; ಅಂದರೆ, ಹಿಂದುಗಳು ಏಕಜನಾಂಗವಾಗದಿರುವುದಕ್ಕೆ ಎಷ್ಟು ಕಾರಣ ಅಸ್ತಿಲ್ಲಾ ಇರುತ್ತದೆ. ಹಿಂದುಗಳ ಸತ್ಯವಂತಿಕೆಯಾಗಲಿ ನಯ ವಿನಯ ಗಳಾಗಲಿ ಪಾಶ್ಚಾತ್ಯರಿಗಿಂತ ಕಡಮೆಯಾದವುಗಳಲ್ಲ. ಬದಲಾವಣೆ ಹೊಂದುತ್ತಿರುವ ಈ ಪ್ರಪಂಚದಲ್ಲಿ ಬದಲಾವಣೆಯಾಗದೆ ಎಂದಿನಂತೆ ಇದ್ದುಕೊಂಡು ಬರುತ್ತಿರುವುದೇ ಹಿಂದುವಿನ ಮುಖ್ಯ ಉದ್ದೇಶವಾಗಿದೆ. ಪಾಶ್ಚಾತ್ಯನಾದರೋ ಇನ್ನ ನೆರೆಯವನಿಗಿಂತ ತಾನು ಎಷ್ಟು ಬೇಗನೆ ಬೇರಾಗಬಹುದೆಂದು ಕುತೂಹಲ ಪಡುತ್ತಾನೆ. ಆದಕಾರಣ ಪ್ರಪಂಚದಲ್ಲಿ ಹಿಂದುಗಳು ಇತರ ಜನಾಂಗಗಳ ಮಧ್ಯೆ ಹಂಚಿಯಿಟ್ಟುಕೊಂಡು ಬದುಕಿರಬೇಕಾದರೆ ಹಿಂದುಗಳು ತಮ್ಮಲ್ಲಿರುವ ಹಿಂದಿನ ಆಚಾರ ವ್ಯವಹಾರಗಳನ್ನೂ, ಸಂಘದ ಕಟ್ಟುಪಾಡುಗಳನ್ನೂ ಬಹಳ ಮಟ್ಟಿಗೆ ಸಂಪೂರ್ಣವಾಗಿ ಬದಲಾವಣೆ ಮಾಡಿಕೊಳ್ಳಬೇಕಾಗಿರುತ್ತದೆ ಎಂದು ಸಂಶಯವಿಲ್ಲದೆ ಹೇಳಬಹುದು.

ಸಾರ್ವಜನಿಕ ವಿದ್ಯಾಭ್ಯಾಸವು.—ಜನಾಂಗದ ಕೀರ್ತಿಯನ್ನು ಪಡೆಯ ಬೇಕಾದರೆ ಮಾಡಿಕೊಂಡು ಬರುವುದಕ್ಕೆ ಜನಗಳು ವಿದ್ಯಾವಂತರಾದಹೊರತು ಸಮರ್ಥರಿರುವುದಿಲ್ಲ. ರಾಜಕೀಯ ವಿಚಾರಗಳಲ್ಲಿ ಹಿಂದುಗಳು ಉಚ್ಚಸ್ಥಾನವನ್ನು ಪಡೆಯಬೇಕಾದರೆ (ಇದು ಈಗಿನ ಕಾಲದ ಮುಖ್ಯ ಆಸೆ ಎನ್ನುವುದಕ್ಕೆ ಸಂಶಯವಿಲ್ಲ) ಅದರ ಸಾಧ್ಯಾಸಾಧ್ಯತೆಗೆ ವಿಶೇಷ ಪ್ರತಿಬಂಧಕವಾಗಿರುವ ಸಮಾಜದೊಳಗಿನ ಕೆಡಕುಗಳನ್ನು ಮೂಲೋತ್ಪಾಟನೆ ಮಾಡಬೇಕು. ಸಮಾಜದ ಬಹುಭಾಗ ಜನರೆಲ್ಲಾ ವಿದ್ಯಾಶೂನ್ಯರಾಗಿರುವಲ್ಲಿ ಇಂಥವರು ಸಮಾಜಕ್ಕೆ ಹೇಗೆತಾನೇ ಶ್ರೇಯಸ್ಸು ತಂದಾರು ? ಸಕಲ ವಿಧವಾದ ಶ್ರೇಯಸ್ಸಿಗೂ ವಿದ್ಯೆಯೇ ಮೂಲಾಧಾರ. ಆದ್ದರಿಂದ ಸಮಾಜದಲ್ಲಿರುವ ಸಕಲ ಪ್ರಜೆಗಳೂ ವಿದ್ಯಾವಂತರಾಗಬೇಕಾದದ್ದು ಅವಶ್ಯವಾಯಿತು. ಅವರ ಹಿಂದೆಯೇ ಸ್ತ್ರೀಯರೂ ವಿದ್ಯಾವತಿಯರಾಗಬೇಕೆನ್ನುವುದು ತಾನಾಗಿ ತೋರುವುದು. ಸಮಸ್ತ ಬದಲಾವಣೆಗೂ ವಿದ್ಯೆಯೇ ಅಸ್ತಿಭಾರವಾಗಿದೆ. ಇದರಿಂದಲೇ ಎಲ್ಲಾ ಬದಲಾವಣೆಗಳೂ ಹಟ್ಟ ರೂಪಿಸಲ್ಪಡಬೇಕು ಇಲ್ಲದೆ ಸಂಸಾರವೆನ್ನುವುದು ಸಮಾಜದ ಮತ್ತು ರಾಜ್ಯದ ಒಂದು ಅಂಗವಾಗಿದೆ. ಸಂಸಾರದಲ್ಲೇ ನಾವೆಲ್ಲಾ ಮೊದಲು ಪ್ರೀತಿಯನ್ನು ತಿಳಿಯುತ್ತೇವೆ; ಒಂದು ಕೆಲಸ ಮಾಡುವುದಕ್ಕೆ ಒಗ್ಗಟ್ಟಾಗಬೇಕೆನ್ನುವುದನ್ನು ಕಲಿಯುವುದೂ ಸಂಸಾರದಲ್ಲಿ; ಪರರಿಗೋಸ್ಕರ ಸ್ವಾರ್ಥತ್ಯಾಗ ಮಾಡಬೇಕೆಂಬುವುದನ್ನೂ, ವೃದ್ಧರಿಗೂ ಹಿರಿಯರಿಗೂ ಮರ್ಯಾದೆ ಕೊಡುವುದನ್ನು ಸಂಸಾರದಲ್ಲೇ ಕಲಿಯುತ್ತೇವೆ. ಹೀಗಿರುವಾಗ ದೇಶದ ಪ್ರತಿ ಒಬ್ಬನೂ ಮನೆಯಲ್ಲೇ ತನ್ನ ನಡೆನುಡಿಗಳನ್ನು ಕಲಿಯಬೇಕಾಗಿದೆ. ಮನೆಯಲ್ಲಿ ತಾಯಿ, ಇಲ್ಲವೇ ಹೆಂಡತಿ ಯಜಮಾನಿಯಾಗಿರುವಳು. "ಗೃಹಿಣಿ ಗೃಹಮುಚ್ಯತೆ" ಎಂಬಂತೆ ಹೆಂಗಸೇ ಸಂಸಾರಕ್ಕೆ ಮುಖ್ಯ. ತಾಯಿಯಿಂದಲೇ ಗಂಡು ಹೆಣ್ಣು ಮಕ್ಕಳಿಗೆ ಗುಣ ನಡೆನುಡಿಗಳು ಕ್ರಮಪಡುವವೆಂಬುವುದನ್ನು ನಾಗರಿಕ ಜನಾಂಗಗಳೆಲ್ಲಾ ಒಪ್ಪಿಕೊಂಡಿರುವರು. ಹಾಗಾದ ಪಕ್ಷಕ್ಕೆ ನಮ್ಮ ಹಿಂದುಗಳಲ್ಲಿ ಹೆಂಗಸರು ವಿದ್ಯಾವತಿಯರಾಗಿಯೂ ನಾಗರಿಕರಾಗಿಯೂ ಇರಬೇಕಾದದ್ದು ಅವಶ್ಯವಲ್ಲವೇ ? ಅಂತಿರೆ ಮಕ್ಕಳನ್ನು ಬೆಳಸತಕ್ಕವರು; ಅವರಿಂದಲೇ ನಮ್ಮ ಮನೆ ಗಳು ಸ್ವರ್ಗವಾಗಬೇಕು ತಾಯಿಯಿಂದಲೇ ದೇಶದ ದೊಡ್ಡ ಆಸ್ತಿ ಎಂದು ಒಬ್ಬ ಪ್ರಸಿದ್ಧ ಪುರುಷನು ನುಡಿದಿರುತ್ತಾನೆ. ಈ ಆಸ್ತಿಯನ್ನು ಒಳ್ಳೆಯ ಬಡ್ಡಿ ಬರುವಂತೆ ವಿನಿಯೋಗಿಸಿಕೊಳ್ಳಬೇಕು. ಮುಂದೆ ಹೆಂಡಿರೂ, ತಾಯಂದಿರೂ ಆಗಬೇಕಾಗಿರುವಂಥಾ ನಮ್ಮ ಹೆಣ್ಣುಮಕ್ಕಳನ್ನು ವಿದ್ಯೆ ಕಲಿಸಿ ಬೆಳಸಬೇಕು. ತಿಳುವಳಿಕೆ ಇಲ್ಲದೇನೂ ನಿರ್ಲಕ್ಷ್ಯವಾಗಿಯೂ ಹೆಂಗಳನ್ನು ವ್ಯವಹರೋಣದರಿಂದ ಕ್ಷಯ, ಕ್ಷೀಣಮುಂತಾದ ರೋಗಗಳಿಂದ ದೊಡ್ಡ ಮಕ್ಕಳು ಹುಟ್ಟಿ ಜನಾಂಗದ ಬಲವೇ ಕುಂದಿಹೋಗುವುದೆಂದು ಈಗ ಸಿದ್ಧಾಂತವಾಗಿರುತ್ತದೆ. ಮಕ್ಕಳ ಸಾವು ಹೆಚ್ಚುತ್ತಿದೆ ಎಂದು ಎಲ್ಲಾ ಕಡೆಯವರೂ ಹೇಳುವರು. ಕ್ಷಯವು ವೃದ್ಧಿಯಾಗುತ್ತಿರುವುದೆಂದು ಮಾಗೆಲ್ಲಾ ತಿಳಿದಿಲ್ಲವೇ ? ನಮ್ಮ ಮನೆಗಳು ಚೊಕ್ಕಟವಾಗಿರಬೇಕು; ಮನೆಯ ಸುತ್ತುಮುತ್ತ ಆರೋಗ್ಯಕರವಾಗಿರಬೇಕು. ನಮ್ಮ ಹೆಂಗಸರು ಮಕ್ಕಳಿಗೆ ನಿರ್ಮಲವೂ ಬೆಲೆಯೂ ಆದ ಗಾಳಿಯು ವಿಶೇಷವಾಗಿ ದೊರಕುವಂತೆ ಬೇಕು. ಆದರೆ ನಮ್ಮಗಳ ಪುರೋಭಿವೃದ್ಧಿಗೂ ಕ್ಷೇಮಕ್ಕೂ ಸಾಧಕಗಳಾದ ಮೇಲ್ಕಂಡ ವಿಚಾರಗಳನ್ನು ನಮ್ಮ ಮನೆಗಳಲ್ಲಿ ನಡೆಸುವ ನಮ್ಮ ಹೆಂಗಸರು ತಿಳಿದು ಜಾರಿಗೆ ತರತಕ್ಕವರಾಗದಿದ್ದರೆ ಈ ಸೌಕರ್ಯಗಳು ಲಭ್ಯವಾಗುವ ಬಗೆ ಹೇಗೆ ? ಆದಕಾರಣ ನಮ್ಮ ಹೆಂಗಸರಿಗೆ ವಿದ್ಯೆ ನಾಗರಿಕತೆಗಳ ಪರಿಜ್ಞಾನವನ್ನುಂಟುಮಾಡಿ ಅವರನ್ನು ಗೌರವಿಸಬೇಕು. ಸಂಘದಲ್ಲಿ ಅವರ ಸ್ಥಾನ ಗಡೆಯೇ ಇದು ; ಇದೇ ಸಕಲ ಸಮಾಜ ಸಮೃದ್ಧಿಗೂ ಮೂಲಕಾರಣವಾಗಿರುತ್ತದೆ.

ಬಾಲ್ಯವಿವಾಹವನ್ನು ನಿಲ್ಲಿಸುವುದು.—ಮೇಲ್ಕಂಡ ವಿಚಾರಗಳನ್ನು ನೋಡುವಲ್ಲಿ ನಮ್ಮ ಹುಡುಗ ಮಕ್ಕಳಿಗೆ ಇನ್ನೂ ಹೆಚ್ಚು ವಯಸ್ಸಾದ ಮೇಲೆ ಮದುವೆ ಮಾಡಬೇಕೆಂಬುವುದು ಸಿದ್ಧಾಂತವಾಗುತ್ತದೆ. ಸಮಾಜವು ಶ್ರೇಯಸ್ಕರವಾಗಿರಬೇಕಾದರೆ ತಾಯಂದಿರು ತಮ್ಮ ಮಕ್ಕಳ ಗುಣ ನಡೆನುಡಿಗಳನ್ನು ತಿದ್ದುವುದಕ್ಕೂ, ಅವರನ್ನು ಸತ್ಪ್ರಜೆಗಳಾಗುವಂತೆ ಬೆಳಸುವುದಕ್ಕೂ ಕಲಿತಿದ್ದರೆ ಸಾಲದು; ತಾಯಂದಿರು ಆರೋಗ್ಯಕರವಾದ ಮಕ್ಕಳನ್ನು ಹೊತ್ತು ಹೆರುವಂಥವರಾಗಿರಬೇಕು. ಮಕ್ಕಳೇ ಮಕ್ಕಳನ್ನು ಹೆರುವುದಾದರೆ ಇವರಿಗೆ ಎಂಥಾ ಆರೋಗ್ಯವಿದ್ದೀತು ? ಇಂಥಾ ಕ್ಷೀಣಾಂಗಿಗಳಾದ ಮಕ್ಕಳಿಂದ ಸಮಾಜಕ್ಕಾಗುವ ಪ್ರಯೋಜನವೇನು ? ಇಂಥವರು ದುರ್ಬಲರಾಗಿಯೂ, ರೋಗಕ್ಕೆ ಆಕರರಾಗಿಯೂ, ತಮ್ಮ ತಾಯಂದಿರಿಗೂ ಸಮಾಜಕ್ಕೂ ಕೆಡುಕನ್ನುಂಟುಮಾಡುವವರಾಗಿಯೂ ಇರುವರಲ್ಲಾ ? ನಮ್ಮ ದೇಶಕ್ಕೆ ಅಪ್ರಯೋಜನವಾದಲ್ಲಿರುವಂಥಾ ನಮ್ಮ ಹೆಣ್ಣು ಮಕ್ಕಳಿಗೆ ಚಿಕ್ಕಂದಿನಲ್ಲೇ ಮಕ್ಕಳನ್ನು ಹೆತ್ತು ಅರೈಕೆಮಾಡುವಂಥಾ ಭಾರವನ್ನು ಹೇರುವುದು ಯಾವ ಧರ್ಮ ? ಅಂಥಾ ನಮ್ಮ ಆಸ್ತಿಯು ನಮಗೆ ಲಾಭಕಾರಿಯಾದೀತೇ ? ಆದರಿಂದ ತಾಯಿಯ ಮತ್ತು ಮಕ್ಕಳ ಆರೋಗ್ಯವು ಕೆಟ್ಟುಹೋಗುವುದಿಲ್ಲವೇ ? ಇಂಥಾ ಪ್ರಬಲವಾದ ಕಾರಣಗಳಿದ್ದರೂ ನಾವು ಇನ್ನೂ ಸಣ್ಣ ಹೆಣ್ಣು ಮಕ್ಕಳಿಗೆ ಮದುವೆಮಾಡುತ್ತಾ ಬರುವುದೇಕೆ ? ಇವರು ಬೇಗನೆ ವಿಧವೆಯರಾಗಿ ವಿಕಾರವಾದ ಸ್ವರೂಪ ಬರುವುದನ್ನು ನೋಡ ಬೇಕೆಂತಲೋ ? ಇತರರು ಅನುಭವಿಸುವ ಸಂತೋಷಗಳೂ ಸೌಕರ್ಯಗಳೂ ಇವರಿಗೆ ಲಭಿಸಬಾರದೆಂತಾಗಲೆಂತಲೋ, ಅಥವಾ ತಾತ್ಪರ್ಯಗಳ ವಯಸ್ಸು ವಿನಾದ ಮೇಲೆ ಮದುವೆಮಾಡುವುದನ್ನು ಒಪ್ಪುವುದಿಲ್ಲವೆಂತಲೋ. ವಿವಾಹಕ್ಕೆ ನಮ್ಮಲ್ಲಿ ವೇದಗಳೇ ಮುಖ್ಯಾಧಾರಗಳಾಗಿರುವವು. ಮದುವೆಯ ಕಾಲದಲ್ಲಿ ಹೆಣ್ಣು ಮಗಳು ನೀಳವಯಸ್ಸು ಬುದ್ಧಿ ಯುಳ್ಳು ಪರಿಪೂರ್ಣತೆಯನ್ನು ಹೊಂದಿದವಳಾಗಿ ಯೂ, ಮನುಷ್ಯನಾದವಳಾಗಿಯೂ ಸಂಸಾರ ನಡೆಸಲು ಅರ್ಹಳಾಗಿಯೂ ಇರಬೇಕೆಂದು ವೇದಗಳು ಸ್ಪಷ್ಟವಾಗಿ ಹೇಳುತ್ತಿರುವವು. ಬ್ರಾಹ್ಮಣರಲ್ಲಿ ದೇವಯಾನಿಯೂ, ಕ್ಷತ್ರಿಯರಲ್ಲಿ ಸಾವಿತ್ರಿ, ದಮಯಂತಿ ಮೊದಲಾದವರೂ ವೇದೋಕ್ತ ಪ್ರಕಾರ ವಿವಾಹ ಧರ್ಮವನ್ನು ನಡಸಿನ ಸ್ತ್ರೀಯರ ಚರಿತ್ರೆಯನ್ನು ನಾವು ಓದಿಲ್ಲವೇ ? ಪ್ರಾಚೀನ ಕಾಲದಲ್ಲಿ ಈಗ ನಮ್ಮಲ್ಲಿರುವಂಥಾ ಬಾಲ್ಯವಿವಾಹದ ಪದ್ಧತಿಯು ಇರಲೇ ಇಲ್ಲ. ಈಚೆಗೂ ಬಾಲ್ಯವಿವಾಹ ನಡೆಯಕೂಡದೆಂದು ಕೆಲವು ನ್ಯಾಯ ಮೂರ್ತಿಗಳು ಎದುರುವಾದಿಸಿರುವುದಿಲ್ಲವೇ ? ಈ ನ್ಯಾಯಮೂರ್ತಿಗಳ ವಿನ್ನಪವೆಯುವುದಕ್ಕೆ ಮುಂಚೆ ವಿದ್ಯೆ ಕಲಿಯದ ಅನಾಗರಿಕಳಾದ ಹೆಣ್ಣು ಮಗಳಿಗೆ ವಿವಾಹಮಾಡುವುದು ಆರ್ಯ ಧರ್ಮಕ್ಕೆ ವಿರೋಧವಾದದ್ದೆಂದು ಸ್ಪಷ್ಟವಾಗಿ ನುಡಿದಿರುವರಲ್ಲಾ ?

ಸಮಾಜವೂ, ಹೆಂಗಸರ ಸ್ವಾತಂತ್ರ್ಯವೂ.—ಹಿಂದುಸ್ಥಾನದಲ್ಲಿ ಸ್ತ್ರೀಯರಿಗೆ ಗೌರವದ ಪದವಿಯನ್ನು ಕೊಡದಿರುವುದನ್ನು ನೋಡಿದರೆ ಸಂತಾಪಕ್ಕೆ ಕಾರಣವಾಗಿದೆ. ಮುಂದಾಳುಗಳೆನಿಸಿಕೊಂಡಿರುವವರು ಕೂಡ "ಹೆಂಗಸರ ಪ್ರಪಂಚವೆಲ್ಲಾ ಮನೆಯೇ ಸರಿ. ಅವರಿಗೆ ವಿದ್ಯೆ ಕಲಿಸುತ್ತೇವೆ ಹೆಂಡತಿಯರಾಗಿಯೂ, ತಾಯಂದಿರಾಗಿಯೂ ಬದುಕುವುದಕ್ಕೆ ಅವಶ್ಯವಾದ ಶಿಕ್ಷಣವನ್ನು ಒದಗಿಸಿ ತರಬೇತು ಮಾಡುವೆವು. ಮನೆಯ ಹೊರಗಡೆ ನಡೆಯುವ ವಿದ್ಯಮಾನಗಳಲ್ಲಿ ಅವರು ಏನು ಮಾಡುವುದಕ್ಕೆ ಹೊರಡುವುದೂ ಯೋಗ್ಯವಲ್ಲ" ಎಂಬದಾಗಿ ಅಭಿಪ್ರಾಯಪಡುತ್ತಾರೆ. ಹೀಗೆಲ್ಲಾ ಹೇಳಿಕೊಂಡು ಹೆಣ್ಣುಮಕ್ಕಳಿಗೆ ಕಲಿಸುವುದೇನನ್ನು ಏನೋ ? ಅಲ್ಪಸ್ವಲ್ಪ ಅಚ್ಚಿನ ಸಣ್ಣಕತೆಗಳನ್ನು ಓದುವುದು, ಅಲ್ಪಮಾತ್ರವಾದ ಹೊಲಿಗೆ, ಮನಸ್ಸಿಗೆ ತೋರಿದಂತೆ ಅಡಿಗೆಮಾಡುವುದು, ಇಷ್ಟನ್ನು ಕಲಿತು ಮದುವೆ ಮಾಡಿಬಿಡುವರು. ಹೀಗೆ ಮನೆಯೇ ಸಮಸ್ತ ಪ್ರಪಂಚವಾಗುಳ್ಳ ಹೆಂಗಸರು ತಮ್ಮ ಮಕ್ಕಳನ್ನು ಪ್ರಪಂಚದ ವ್ಯವಹಾರವನ್ನು ತಿಳಿಯುವ ಸಮರ್ಥರನ್ನಾಗಿ ಮಾಡಿಕೊಳ್ಳವೇಕೆಂದು ತರಬೇತು ಮಾಡುವ ಬಗೆ ಹೇಗೆ ? ಜನಗಳು ಸಮಾಜ ಸುಧಾರಣೆಯನ್ನು ಮಾಡಿಕೊಳ್ಳುವುದಕ್ಕೆ ಧೈರ್ಯಸ್ಥೈರ್ಯಾದಿಗಳನ್ನು ಪಡೆಯದೆ ಹೇಡಿಗಳಾಗಿರುವುದಕ್ಕೆ ಸ್ತ್ರೀಯರ ಈಗಿನ ಸ್ಥಿತಿಯೇ ಮುಖ್ಯ ಕಾರಣವಾಗಿದೆ. ಪ್ರತಿ ಒಬ್ಬನೂ "ನಾನು ಸಂಘ ಪರಿಷ್ಕಾರಕನಾಗಬೇಕೆಂದು ಕುತೂಹಲ ಪಡುತ್ತೇನೆ; ಆದರೆ ನಾನು ಹಾಗೆ ನಂಬಿಬಿಟ್ಟ ಪಕ್ಷದಲ್ಲಿ ನನ್ನ ಮಗಳನ್ನು ಯಾರು ಮದುವೆ ಮಾಡಿಕೊಳ್ಳುವರು ?" ಎಂದು ಹೇಳುವನು. ಮದುವೆಯ ವಿಚಾರವೇ ಪ್ರಧಾನವಾದ ಪ್ರತಿಬಂಧಕವೆಂದು ಇಟ್ಟುಕೊಂಡಿದಾರೆ. ಇದನ್ನು ತ್ಯಜಿಸಬೇಕು. ಜೀವನದಲ್ಲಿ ಮದುವೆಯು ಅತ್ಯು ಪ್ರಮುಖ್ಯವಾದ ವಿಷಯವಲ್ಲವೆಂದು ನಾವೆಲ್ಲಾ ನಿಶ್ಚಯಮಾಡಿಕೊಳ್ಳಬೇಕು. ಇಂಥಾ ಬುದ್ಧಿಕವಾದ ಮನೋಧರ್ಮವನ್ನು ಪಡೆಸದೆ ಹೋದರೆ ಸಮಾಜ ಸುಧಾರಣೆಯ ಕಾರ್ಯಗಳು ಅಕ್ಕಿಲ್ಲವೂ ಮುರುಳಲ್ಲದವುಗಳು ಆಗುತ್ತವೆ.

ಜಾತಿಗಳ ಒಳಭೇದಗಳನ್ನು ಬಿಡುವುದು.—ಹಿಂದೂ ಜನಾಂಗದ ಶ್ರೇಯಸ್ಸಿಗೆ ಜಾತಿಯ ಕಟ್ಟುನಿಟ್ಟಾದುಗಳ ಮತ್ತು ಅವುಗಳ ಒಳಭೇದಗಳ ನಿರ್ಬಂಧಗಳೂ ಪರಸ್ಪರ ವಿರೋಧಗಳೂ ಬಹು ವಿಶೇಷವಾದ ಮತ್ತು ದುಃಖಕರವಾದ ಪ್ರತಿಬಂಧಕಗಳಾಗಿರುತ್ತವೆ. ಈಗಿನಂತೆ ಜಾತಿ ಎಂಬುವುದೇ ಪ್ರಧಾನವಾಗಿರುವ ತನಕ ಜನಾಂಗದ ಒಗ್ಗಟ್ಟಿಂಬು ಮಾತು ಅಸಾಧ್ಯ. ಇದರಿಂದ ರಾಜ್ಯಭಾರಕಾರ್ಯಗಳೂ ವಿಶೇಷ ಅಡಚಣೆಗಳುಂಟು ; ಸರ್ವಸಮತ್ವವಾಗಲಿ, ಧರ್ಮವಾದ ವ್ಯವಹರಣೆಯಾಗಲಿ ರೂಢಿಲ್ಲದಲು ಅವಕಾಶವಿಲ್ಲ. ನಾವುಗಳು ಅನ್ಯ ದೇಶಗಳಿಗೆ ಹೋದರೆ ಅಲ್ಲಿನ ಅಧಿಕಾರಿಗಳು ನಮ್ಮನ್ನು ಬ್ರಿಟಿಷ್ ರಾಜ್ಯದ ಪ್ರಜೆಗಳೆಂದು ಎಣಿಸಿ ನಮಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೂ ಸೌಕರ್ಯಗಳನ್ನೂ ಪಕ್ಷಪಾತವಾದದೆ ಕೊಡಬೇಕೆಂದು ಕೇಳುತ್ತೇವೆ. ಅಂಥಾ ನಾವುಗಳು ಹಿಂತಿರುಗಿ ಹಿಂದುಸ್ಥಾನಕ್ಕೆ ಬಂದವಕ್ಷದಲ್ಲಿ ಆ ಸರ್ವಸಮತ್ವವು ನಮ್ಮನ್ನು ಬಿಟ್ಟು ಹೋಗುವುದು ; ನಮ್ಮ ಬಾಳುವೆಯೂ, ನಮ್ಮ ಆಚಾರ ವ್ಯವಹಾರಗಳೂ ಪ್ರಧಾನವಾಗಿ, ಪರಸ್ಪರ ವಿರೋಧಿಗಳಾಗಿಯೂ, ಶಕ್ತಿ ಪ್ರತಿ ಶಕ್ತಿಗಳಾಗಿಯೂ ವರ್ತಿಸುವವು. ಹೊರಗಡೆ ಹೋದಾಗ್ಗೆ ಹಿಂದುಸ್ಥಾನದವರೆಲ್ಲಾ ಒಂದೇ ಎಂದು ಹೇಳುವುದೇನು ? ಹಿಂದುಸ್ಥಾನದೊಳಗಿರುವಾಗ ಮಾತ್ರ ನಾವುಗಳು ಬೇರೆ ಬೇರೆ ಯಾಗಿರುವುದೇನು ? ನಾವುಗಳು ನಮ್ಮ ಜನ್ಮಭೂಮಿಯಲ್ಲೇ ಪರಸ್ಪರ ದೂರದವರಾಗಿರುವೆವಲ್ಲಾ ? ಹೊರಗೆ ಹೋದಾಗ ನಾವೆಲ್ಲಾ ಏಕೀಭವಿಸಿ ಸ್ನೇಹಿತರಾಗಿರುತ್ತೇವೆ. ಇಂಥಾ ದುಸ್ಥಿತಿಗೆ ಕಾರಣವಾದ ಜಾತಿ ಭೇದಗಳನ್ನು ವರ್ಜಮಾಡಿ ಎಲ್ಲರೂ ಒಂದಾಗಬಾರದೇ ? ಸದ್ಯದಲ್ಲಿ ಇದು ಸಾಧ್ಯವಲ್ಲವೆಂದು ಹೇಳಬಹುದು. ಹಾಗಾದರೆ ಪ್ರತಿ ಒಂದು ಜಾತಿಯೊಳಗೂ ಇರುವ ಒಳಪಂಗಡಗಳ ನೆಲ್ಲಾ ಕಿತ್ತೊಗೆದು ಹಾಕಿ, ಆಯಾ ಜಾತಿಯವರೆಲ್ಲರೂ ಒಂದಾಗಿಯೂ ಸಂಘವಾಗಿಯೂ ಏಕೆ ? ಒಂದು ಜಾತಿಗೆ ಸೇರಿದವರೆಲ್ಲಾ ಒಟ್ಟಿಗೆ ಸೇರಿ ಭೋಜನವಮಾಡುವುದು, ಭಿನ್ನಭೇದಗಳನ್ನೆಣಿಸದೆ ಪರಸ್ಪರ ಕೊಟ್ಟು ತರುವುದು, ಪರಸ್ಪರ ಪ್ರೀತಿ ಸದ್ಭಾವಗಳನ್ನು ವೃದ್ಧಿಮಾಡುವುದು, ಇಷ್ಟನ್ನಾದರೂ ಸದ್ಯದಲ್ಲಿ ಮಾಡಿಕೊಂಡರೆ ಹಿಂದುಸ್ಥಾನದ ಸಮಾಜ ಸುಧಾರಣೆಯ ಕಾರ್ಯಗಳು ಎಷ್ಟೋ ಸುಕರವಾಗುತ್ತವೆ.

[ಸಶೇಷ.]

ಚಾತ್ಮಿದಾರರಿಗೆ ನೋಟೀಸ್.

ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರೆವ ಚಾತ್ಮಿಗಳಿಗೆ ನಾವು ಸ್ಥಾನ ಕೊಡಲಾರೆವು. ಆದಕಾರಣ ಚಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಪತ್ರ ಚಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಸ್ಥಾನ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಚಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಚಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಬರವಸೆ ಕಡಮೆ. ಚಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‍ಪಾಂಡೆನ್ಸ್.

ನಮ್ಮ ಮೈಸೂರು ಸರ್ಕಾರವೂ ಮತ್ತು ರಸ್ತೆಯೂ.

ಅಯ್ಯಾ,—ಕೊಪ್ಪದಿಂದ ತೀರ್ಥಹಳ್ಳಿಗೆ 16 ಮೈಲುಳ್ಳ ಒಂದು ಸರ್ಕಾರಿ ರಸ್ತೆಯು ಇದೆ. ಈ ಪೈಕಿ ಕೊಪ್ಪ ತಾಲ್ಲೂಕಿಗೆ ಸೇರಿದ್ದು 6 ಮೈಲಿ ಇರುತ್ತದೆ. ಇದರಲ್ಲಿ ಒಂದು ಮೈಲಿ ಅಮ್ಮಡಿ ಕಾಫೀ ಎಸ್ಟೇಟಿನಲ್ಲಿ ಬಂದಿರುವದರಿಂದ ಸದರಿ ಎಸ್ಟೇಟಿನ ದೊರೆಯವರಾದ ಮಿ|| ಜೆ. ರೋಸ್ ಪೋರ್ಟರ್ ಸಾಹೇಬರವರು ಕಂಟ್ರಾಕ್ಟು ವಹಿಸಿಕೊಂಡು ಪ್ರತಿ ವರುಷವೂ ರಿಪೇರಿಮಾಡಿ ಸುತ್ತಾ ಬರುತ್ತಾರೆ. ಬಾಕಿ ಉಳಿದಿರುವ ನಾಲ್ಕುವರೆ ಮೈಲು ರಸ್ತೆಯು ನಮ್ಮ ಶ್ರೀಮನ್ಮಹಾರಾಜರವರ ಸವಾರಿಯು ಮೊದಲನೇ ಸಾರಿ ಅಂದರೆ 10-18 ವರುಷಗಳ ಕೆಳಗೆ ಮಲ್ನಾಡು ಸರ್ಕೀಟು ಹೊರಟು, ತೀರ್ಥಹಳ್ಳಿಯ ಮುಖಾಂತರ ಈ ರಸ್ತೆಯಲ್ಲೇ ಕೊಪ್ಪಕ್ಕೆ ದಯಮಾಡಿಸಿದ್ದರು. ಆ ಕಾಲದಲ್ಲಿ ಸರಿಯಾಗಿ ದುರಸ್ತು ಆಗಿತ್ತು. ಅದರಿಂದೀಚೆಗೆ ಪ್ರತಿ ವರುಷವೂ ಸರಿಯಾದ ಸ್ಥಿತಿಯಲ್ಲಿ ದುರಸ್ತು ಮಾಡಿಸಿಕೊಳ್ಳುವ ಭಾಗ್ಯವನ್ನೇ ಕಳೆದುಕೊಂಡು, ಗುಂಡ ಸಣ್ಣ ವಿಧವಾದ ಕಲ್ಲುಗಳು ಎದ್ದು ನಿಂತುಕೊಂಡು ಹಳ್ಳಕೊಳ್ಳಗಳಾಗಿ, ಹೊರಗುತ್ತಾ, ಮುಗ್ಗರಿಸುತ್ತಾ, ಹೇಳಬಾರದಷ್ಟು ಸಂಕಟದಲ್ಲಿರುತ್ತದೆ. ಈ ಸಂಕಟವನ್ನು ಪರಿಹರಿಸಲು ನಮ್ಮ ಸರ್ಕಾರದವರು ಔಷಧೋಪಚಾರವಾಡದೆ ಹಟಹಿಡಿದಿರುವುದು ತುಂಬಾ ಪರಿತಾಪಕರವಾಗಿರುತ್ತದೆ. ಗ್ರಾಮನಿವಾಸಿಗಳಾದ ನಾವಾದರೋ ಪ್ರತಿ ವರುಷವೂ 500-600-800 ಈ ರೀತಿ ರೂಪಾಯನ್ನು ಈ ರಸ್ತೆಯ ರಿಪೇರಿ ಬಗ್ಗೆ ಸ್ಪಾಂಪ್ ಆಗುತ್ತದೆ ಎಂಬದಾಗಿ ವರ್ತಮಾನ ಕೇಳುವುದರ ಮಾತ್ರಕ್ಕೇನೇ ತೃಪ್ತಿಯನ್ನು ಹೊಂದಿ, ನಿರೀಕ್ಷಣೆಯಿಂದ ನಿರಾತಾಪರರಾಗುತ್ತಾ ಬಂದಿರುತ್ತೇವೆ. ಈ ರೋಡು ಕೇವಲ ನಿಕೃಷ್ಟವಾದ ಸ್ಥಿತಿಯಲ್ಲಿರುವದರಿಂದಲೇ ತಿರುಗಾಡುವ ಗಾಡಿಗಳು ಆಗಾಗ್ಗೆ ಮುರಿದು ಬಿದ್ದು ನಾನಾ ಅನಾಹುತಗಳಿಗೆ ಕಾರಣವಾಗುತ್ತಾ ಇದೆ. ಈಗ 15 ದಿವಸದ ಕೆಳಗೆ ತೀರ್ಥಹಳ್ಳಿಯ ತಾಲ್ಲೂಕಿನ ಒಬ್ಬ ಮನುಷ್ಯನು ಕೊಪ್ಪದ ಸಂತೆಗೆ ಗಾಡಿ ಹೊಡೆದುಕೊಂಡು ಹೋಗಿ ವಾಪಸ್ಸು ಬರುತ್ತಾ ದೋಣಗಲ್ಲು ಎಂಬಲ್ಲಿ ಹಗಲುಹೊತ್ತು ನಡುರಸ್ತೆಯಲ್ಲಿಯೇ ಗಾಡಿ ಮುರಿದು ಬಿದ್ದು ಗಾಡಿಯಲ್ಲಿ ಕೂತಿದ್ದ ಒಬ್ಬನಿಗೆ ಪೂರಾ ಏಟು ಆಗಿ ಜಖಂ ಆಯಿತು. ಇದನ್ನು ನಾನು ಕಣ್ಣಾರ ಕಂಡು ಇರುತ್ತೇನೆ. ಆ ಮನುಷ್ಯನು ಆ ದಿವಸವೇ ದಿನಸವೇ ಸತ್ತು ಹೋದನೆಂಬ ವರ್ತಮಾನ ತಿಳಿಯಿತು. ಗಾಡಿಯವನು ಅಪ್ರಜ್ಞೆಯಿಂದ ಗಾಡಿ ಹೊಡೆಯಲಿಲ್ಲ; ಚಟುವಟಿಕೆಯುಳ್ಳವನಾಗಿದ್ದನು. ನಮ್ಮ ಘನಸರ್ಕಾರದವರು ಈ ರಸ್ತೆಯನ್ನು ದುರುಸ್ತುಮಾಡಿಸದೆ ಬಿಟ್ಟಿರುವದನ್ನು ನೋಡಿದರೆ ಸರ್ಕಾರದ ಲೆಖ್ಖಕ್ಕೆ ಈ ರಸ್ತೆಯು ದಾಖಲಾಗಿರುವಂತೆ ಕಂಡುಬರುವದಿಲ್ಲ. ಯಾಕೆ ಮರೆತುಬಿಟ್ಟರೋ ಕಾಣೆ. ಇನ್ನು ಮೇಲೆ ಆದರೂ ನಮ್ಮ ಘನಸರ್ಕಾರದವರು ಗಮನಕ್ಕೆ ತಂದುಕೊಂಡು ಮೇಲ್ಕಂಡ ರಸ್ತೆಯ ವೈದ್ಯವನ್ನು ಆದಷ್ಟು ಬೇಗ ನಿವಾರಣೆಮಾಡಿಸುವರೆಂದು ನಂಬಿರುವ

ಸರ್ವರ ಹಿತೈಷಿಂಶಕ.

ಶ್ರೀವಿದ್ಯಾಭಿಮಾನಿ, ಮೂಲಹಳ್ಳಿ:—ಇಲಾಖೆಯ ಬೊಕ್ಕಸೇಸರದಲ್ಲಿ ವಿಚಾರಣೆಯಾಗುತ್ತಿದೆ ಎಂದು ಹೇಳುವುದನ್ನು ನಾವು ಪ್ರಕಟಿಸಿ ಫಲವಿಲ್ಲ.

ಬಿಡಿ ಹಿತೈಷಿ, ನ್ಯಾಸೂರು ಹಳೇ ಅಗ್ರಹಾರ.—ತೊಗಲು ಆದ ಆಕ್ಷೇಪಣೆಗಳುಳ್ಳ ನಿಮ್ಮ ಚಾತ್ಮಿ ಪ್ರಕಟಿಸಲಾರೆವು. ನಿಮಗೆ ಉಂಟಾಗಿರುವ ಕಷ್ಟ ನಷ್ಟಗಳನ್ನು ವಿವರವಾಗಿ ಮೇಲ್ಪಟ್ಟ ಅಧಿಕಾರಿಗೆ ತಿಳಿಸಿ ದೃಷ್ಟಾಂತಪಡಿಸಿಕೊಡದೆ ಹೋದರೆ ನಾವು ನಿಮ್ಮ ಚಾತ್ಮಿಯನ್ನು ಪ್ರಕಟಿಸಿ ಅದರ ಜವಾಬ್ದಾರಿಯನ್ನು ವಹಿಸಲಾರೆವು. —ಎಡಿ.]

ತಾಲ್ಲೂಕು ವರ್ತಮಾನಗಳು.

ಶಿಕಾರಿಪುರ.—ದಿನಗಳ ಕಾಡಿಲೆಯು ದಿನದಿನಕ್ಕೆ ನಿಧಾನವಾಗುತ್ತಲಿದೆ. ವೆಟರ್ನರಿ ಡಾಕ್ಟರವರು ಬಂದು ದನಗಳಿಗೆ ಇನ್ನಾಕುಲೇಷನ್ ಮಾಡಿಹೋದರು. ಮೆಣಸಿನ ಸೈರು ಬಹಳ ಸುಮಾರಾಗಿದೆ. ಅಕ್ಕಿಯ ಧಾರಣೆ ಯಥಾಸ್ಥಿತಿ ಇರುತ್ತದೆ. ಪ್ರತಿ ವರುಷಕ್ಕಿಂತಲೂ ಈ ವರುಷ ಮಾಗಿಯ ಚಳಿಯು ಕಡಮೆಯಾಗಿರುವದು ಬಹಳ ಸಂತೋಷಪ್ರದವಾಗಿದೆ.—ಈ ತಿಂಗಳು 1 ನೇ ತಾ. ಸಾಯಂಕಾಲ ಮೆ|| ವಿ|| ಬಾಲಿಕಾ ಪಾಠಶಾಲೆಯಲ್ಲಿ ನೂತನಸಂವತ್ಸರದ ಸಂತೋಷ ಸಮಾರಂಭವು ನೆರವೇರಿತು. ಆಗ ನಮ್ಮ ಪೋಲೀಸ್ ಇನ್‍ಸ್ಪೆಕ್ಟರವರು, ಡಾಕ್ಟರವರು, ಮುನ್ಸಿಫ್ ಮುಂತಾದವರುಗಳೇ ಮೊದಲಾಗಿ ಅನೇಕ ಮಹನೀಯರು ಸಭೆಯನ್ನು ಅಲಂಕರಿಸಿದ್ದರು. ವಿದ್ಯಾರ್ಥಿನಿಯರು ದೇವರ ಪ್ರಾರ್ಥನೆಯ ಪದ್ಯವನ್ನು ಹಾಡಿದ್ದೇ ತಡಿಯಂ, ಫಿಡಲ್‍ನೊಡನೆಗೆ ಬಹು ಇಂಪಾಗಿ ಹಾಡಿದರು. ತರುವಾಯ ಗ್ರಾಮೊಫೋನ್ ಸಂಗೀತವಾಯಿತು. ಆ ನಂತರ ನಮ್ಮ ಮೆ|| ಅಧ್ಯಕ್ಷ ಉಪದೇಶಿಗಳು ದೇವರು ಕಳೆದ ವರುಷ ನಮ್ಮನ್ನು ಅನೇಕ ಕಷ್ಟದುಃಖಗಳಿಂದ ಉದ್ಧರಿಸಿರುವರಂತೆಯೇ ಈ ವರುಷವೂ ಉದ್ಧರಿಸುವನೆಂದೂ, ಪ್ರಕೃತ ಯೂರೋಪಿನಲ್ಲಿ ಬಹು ಘೋರವಾಗಿ ನಡೆಯುತ್ತಲಿರುವ ಯುದ್ಧವು ಶಾಂತವಾಗಿ ಸರ್ವರಿಗೂ ನಮೃದ್ಧಿ, ಸುಖ ಸಂತೋಷಗಳನ್ನು ದಯಪಾಲಿಸುವನೆಂದು ಮೊದಲಾಗಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರಾಧಿಕಾರಿಗಳಾಗಿದ್ದ ನಮ್ಮ ಅಮಲ್ದಾರ್ ಮೆ|| ಬಿ. ವೊಡರೀಕ್ ಪಂಡಿತರವರು ಸಮಯೋಚಿತವಾದ ಭಾಷಣವನ್ನು ಮಾಡಿದನಂತರ ಬಾಲಕಿಯರು ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮಂಗಳವನ್ನೂ ಹಾಡಿದರು. ಉಪದೇಶಿಗಳು ತಮ್ಮ ಮಕ್ಕಳುಗಳೊಂದಿಗೆ ದೇವರ ಆಶೀರ್ವಾದ ಪ್ರಾರ್ಥನೆಯನ್ನು ಮಾಡಿದರು. ಸಭಿಕರಿಗೆ ಗಂಧ ತಾಂಬೂಲವನ್ನೂ, ವಿದ್ಯಾರ್ಥಿನಿಗಳಿಗೆ ಮಿಠಾಯಿಯನ್ನೂ ಹಂಚಿ ಸಭೆಯು ಮುಕ್ತಾಯವಾಯಿತು.

ಹೊಸಕೋಟೆ.—ಈಗ ಇಲ್ಲಿ ಎರಡು ವಾರಗಳಿಂದ ಪ್ಲೇಗ್ ಬಾಧೆಯಿಲ್ಲ ; ಸಂಪೂರ್ಣವಾಗಿ ನಿಂತ ಹಾಗೆ ಕಾಣುತ್ತದೆ. ಈ ವರ್ಷ ಇಲ್ಲಿ ಒಳ್ಳೇ ಮಳೆಗಳು ಬಾರದ್ದರಿಂದ ಉಪ್ಪು ನೀರಿನ ಭಾವಿಗಳೆಲ್ಲಾ ಒಣಗುತ್ತಾ ಬಂದಿವೆ. ಇದರಿಂದ ಊರಿನ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಕೆರೆಗಳಲ್ಲಿರುವ ಸ್ವಲ್ಪ ನೀರನ್ನು ತರೀ ಭಾಗಾಯತುಗಳಿಗೆ ಉಪಯೋಗಿಸಿದರೆ ಜನಗಳಿಗೂ, ಗೋವುಗಳಿಗೂ ಕಷ್ಟವಾಗುತ್ತದೆಂದು ತಿಳಿದು, ಮೊನ್ನೆ ದಿನ ನಮ್ಮ ಅಮಲ್ದಾರರು ಬಹಳ ಮುತುವರ್ಜಿ ವಹಿಸಿ ಕೆಲವು ಸಿಬ್ಬಂದಿಗಳೊಡನೆ ಚಿಕ್ಕ ಕೆರೆಯ ನೀರು ಎಷ್ಟು ದೂರಕ್ಕೆ ಹರಿಯುತ್ತದೋ ಅಷ್ಟು ದೂರದವರೆಗೆ ತನಿಖೆಮಾಡುವ ಉದ್ದೇಶ ಕೋಟೆಗಳನ್ನೂ ಗದ್ದೆಗಳನ್ನೂ ನೋಡಿದರು. ಪಾತ್ರನಲ್ಲದೆ ಅನುವ ಯೋಗವಾದವುಗಳಲ್ಲಾ ವ್ಯರ್ಥವಾಗಿ ನೀರು ಖರ್ಚು ಮಾಡದಂತೆ ಹುಕುಂ ಮಾಡಿದರು. ಮತ್ತು ಕೋಟೆಯಲ್ಲಿ ಹಾಳು ಬಿದ್ದಿರುವ ಸ್ಥಳಗಳಲ್ಲಿಯೂ, ಕಂದಕಗಳಲ್ಲಿಯೂ ಕೋಟೆ ಮಾಡಿಕೊಂಡಿರುವವರು ಬಹಳ ಕಾಲದಿಂದ ಸ್ಥಳ ಒತ್ತುವರಿ ಮಾಡಿಕೊಂಡಿರುವದನ್ನೂ, ಅಲ್ಲದೆ ಇಲ್ಲದೆ ಬುರುಜಿನ ಮಣ್ಣನ್ನು ಉಪಯೋಗಿಸಿಕೊಂಡಿರುವರೆಂದೂ, ಸರ್ಕಾರಕ್ಕೆ ಆದಾಯವಾಗುವ ಜಾಗ ಬುರುಜಿನ ಮಣ್ಣನ್ನು ಹರಾಜ್ ಮಾಡುವದಾಗಿಯೂ, ಒತ್ತುವರಿ ಸ್ಥಳಗಳಿಗೆ ಹೆಚ್ಚು ಕಂದಾಯ ಹಾಕುವ ಜಾಗೆಯೂ ತೀರ್ಮಾನಮಾಡುವದಕ್ಕೆ ಎಲ್ಲವನ್ನೂ ಸರಿಯಾಗಿ ನೋಡಿ ರಿಪೋರ್ಟು ಮಾಡುವ ಹಾಗೆ ಶೇಕ್ದಾರರಿಗೆ ಹುಕುಂ ಕೊಟ್ಟಿದ್ದಾರೆ.—ಡಿಸೆಂಬರ್ ತಾ. 12 ರಲ್ಲು ಡೆ|| ಕಮಿಷನರ್ ಮೆ|| ಚಾಂಡಿಕಾಹಿತವರರು ಇಲ್ಲಿಗೆ ಒಂದುವರೆ ಮೈಲಿ ದೂರದಲ್ಲಿರುವ ಉಪ್ಪಾರಹಳ್ಳಿ ಎತ್ತಿನ ಪರಿಷೆಯನ್ನು ಮೇಲ್ಪಿಚಾರಣೆ ಮಾಡಿಕೊಂಡು ಸಾಯಂಕಾಲ ಸುಮಾರು 5 ಘಂಟೆಯ ಸಮಯದಲ್ಲಿ ನೆಟ್ಟಗೆ ಬಹು ನೇತ್ರಾನಂದವಾಗಿ ಅಲಂಕರಿಸಲ್ಪಟ್ಟ ಎ ವಿ. ಸ್ಕೂಲಿಗೆ ದಯಮಾಡಿಸಿದರು. ಆಗ ಹೆ|| ಮಾ|| ಮ|| ಸ್ವಭಾವಕ ಯ್ಯರು ವಿದ್ಯಾರ್ಥಿಗಳನ್ನು ಸಿದ್ಧಪಡಿಸಿಕೊಂಡಿದ್ದು ಸೆಲ್ಯೂಟ್ ಎಂಬ ವಂದನೆಯಿಂದ ಮರ್ಯಾದೆಮಾಡಿದ್ದಲ್ಲದೆ ಡ್ರಿಲ್ ಎಂಬ ಕವಾಯತು ಮಾಡಿಸಿ ನಾನಾ ಆಟಗಳನ್ನು ಆಡಿಸಿ ನೆರೆದಿದ್ದ ಉದ್ಯೋಗಸ್ಥರೇ ಮುಂತಾದವರನ್ನು ಸಂತೋಷಪಡಿಸಿದ ತರುವಾಯ ಎಲ್ಲರನ್ನೂ ಅಲಂಕರಿಸಿದ್ದ ಕೊಠಡಿಯೊಳಗೆ ಬರಮಾಡಿಸಿ ಕೂಡಿಸಿದರು. ಕೇಳಿಕೊಂಡ ಪ್ರಕಾರ ಡೆ|| ಕಮಿಷನರವರು ಅಗ್ರಾಸನವನ್ನು ವಹಿಸಿದರು. ಅವರ ಪಕ್ಕದಲ್ಲಿ ವ್ಯವಸಾಯ ಡಿ|| ಡೈರೆಕ್ಟರ್ ಮ|| ಯಜ್ಞನಾರಾಯಣಯ್ಯರು ಕುಳಿತುಕೊಂಡರು. ಕೂಡಲೇ ಬಾಲಕ ಬಾಲಕಿಯರು ಹಾರ್ಮೋನಿಯಂ ಸಹಾಯದಿಂದ ಇಂಪಾದ ಗಾನವನ್ನು ಹಾಡಿದರು. ತರುವಾಯ ನಾನಾ ತರವಾದ ಡೈಲಾಗುಗಳನ್ನು ಇಂಗ್ಲೀಷಿನಲ್ಲಿಯೂ, ಕನ್ನಡದಲ್ಲಿಯೂ ನಡಿಸಿದರು. ಹಾರ್ಮೋನಿಯಂ ಸಹಾಯದಿಂದ ನ್ಯಾಷನಲ್ ಆಂಥೆಂ ಎಂಬ ಕೀರ್ತನೆಯನ್ನು ಹಾಡಿದ ತರುವಾಯ ಸ್ಲೋ ರೇಸ್ ಎಂಬ ಆಟದಲ್ಲಿ ಗೆದ್ದ ಹುಡುಗರಿಗೆ ಡೆ|| ಕಮಿಷನರು ಇನಾಂಗಳನ್ನು ಕೊಟ್ಟರು. ಮತ್ತು ಬಹು ಸ್ವಾರಸ್ಯವಾಗಿ ಕೊಡಿದ ಉಪದೇಶವನ್ನು ಕುರಿತು ಉಪನ್ಯಾಸಮಾಡಿದರು. ಬಾಲಕಿಯರು ಹಾರ್ಮೋನಿಯಂ ಸಹಾಯದಿಂದ ಮಂಗಳವನ್ನು ಹಾಡಿದ ತರುವಾಯ ಎಲ್ಲರನ್ನೂ ಪಾಠಿನ ಹಾರಾರಿಂದ ಸಂತೋಷಪಡಿಸಿ ಕಳುಹಿಸಲು ಮುಗಿಸಿದರು. ಹೆ|| ಮಾಸ್ಟರು ಸನ್ನಿಹಿತ ವಿಷಯದಲ್ಲಿ ವಹಿಸಿರುವ ಮುತುವರ್ಜಿಗೋಸ್ಕರವೂ, ಡೆ|| ಕಮಿಷನರವರು ಬಹಳ ಸಂತೋಷಪಟ್ಟು ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ.

ಅರ್ಥಸಾಧಕ ಪತ್ರಿಕೆ.

ಇದು ಮೈಸೂರು ಸಂಪದಭ್ಯುದಯ ಸಭೆಯಿಂದ ಪರಿಪೋಷಿತವಾದ ಸಚಿತ್ರ ಮಾಸಪತ್ರಿಕೆ; ಇಂಗ್ಲಿಷ್ ಕನ್ನಡ–ಈ ಎರಡು ಭಾಷೆಗಳಲ್ಲಿಯೂ ಬೇರೆಬೇರೆ ಮುದ್ರಿತವಾಗುವುದು. ಪ್ರತಿಯೊಂದರಲ್ಲಿಯೂ ಕ್ರೌನ್ ಕಾಲು ಗಜದ 40 ಪುಟಗಳಿರುವುವು. ಇದರ ಮೊದಲನೆಯ ಸಂಚಿಕೆಯು 1915ನೆಯ ಜನವರಿಯಲ್ಲಿ ಹೊರಡುತ್ತದೆ. ಪತ್ರಿಕೆಯಲ್ಲಿ ಸಂಪತ್ಸಾಧಕ ವಿಷಯಗಳೇ ಪ್ರಕಟವಾಗುವುವು. ಮುಖ್ಯವಾದ ಸಂಗತಿಗಳು ಯಾವುವೆಂದರೆ:—

(1) **ಸಂಪಾದಕೀಯ ಟಿಪ್ಪಣಿಗಳು.**—ಈ ಕಲಮಿನಲ್ಲಿ ಪತ್ರಿಕಾಕರ್ತರಿಂದ ವಿವಿಧ ವಿಷಯಗಳು ಚರ್ಚಿಸಲ್ಪಡುವುವು.

(2) **ಸ್ವತಂತ್ರ ಲೇಖನಗಳು.**—ಈ ಲೇಖನಗಳನ್ನು, ಆರ್ಥಿಕ (ಸಂಪದಭಿವರ್ಧಕ) ವಿಷಯಗಳಲ್ಲಿ ಪ್ರತ್ಯಕ್ಷವಾದ ಅನುಭವವುಳ್ಳ ಲೇಖಕರು, ನಮ್ಮ ದೇಶಕಾಲಸ್ಥಿತಿಗಳಿಗೆ ಅನುಗುಣವಾಗಿರುವಂತೆ ಬರೆಯುವರು.

(3) (i) **ಕೈಗಾರಿಕೆ ಮತ್ತು ವಾಣಿಜ್ಯ.**—ಇವುಗಳ ಈಗಿನ ಸ್ಥಿತಿ, ತಿದ್ದುಪಾಟಿನ ಕ್ರಮಗಳು, ವ್ಯಾಪಾರದ ಮಾರ್ಗಗಳು, ಮತ್ತೂ “ಜಾಯಿಂಟ್ ಸ್ಟಾಕ್” ಎಂಬ ಸಂಯುಕ್ತ ಮೂಲಧನ ಸಂಘದ ಆಡಳಿತ–ಇವೇ ಮೊದಲಾದ ವಿಷಯಗಳು. (ii) **ವ್ಯವಸಾಯ.**—ಇದಕ್ಕೆ ಅನ್ವಯಿಸುವ ನವೀನ ವಿಷಯಗಳು, ಮತ್ತೂ ಕೃಷಿವಿದ್ಯೆ ಮೊದಲಾದ ಸಂಗತಿಗಳು. (iii) **ವಿದ್ಯಾಭ್ಯಾಸ.**—ಇದರಲ್ಲಿ ವಿದ್ಯಾಭ್ಯಾಸಕ್ರಮ, ಪುರೋವೃದ್ಧಿ–ಇವೇ ಮುಂತಾದ ವಿಚಾರಗಳು. (iv) **ಪರಸ್ಪರ ಸಹಾಯ, ಮತ್ತು ಬ್ಯಾಂಕುಗಳಲ್ಲಿ ನಡೆಯುವ ಲೇವಾದೇವಿಗಳ ನಿರ್ವಾಹ.** (v) ಮೇಲ್ಕಂಡವುಗಳಿಗೆ ಸಂಬಂಧಪಟ್ಟ ಆಯಾ ಸ್ಥಿತಿ ವಿಶೇಷಗಳ ಮತ್ತು ಜನಸಾಮಗ್ರಿಗಳ ಮುಖ್ಯವಾದ ಸಂಖ್ಯಾ ವಿವರಣೆ.

ಇವಲ್ಲದೆ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಸಾಧಕವಾದ (1) **ಸಾಮಾಜಿಕ ವಿಚಾರ.**—ವಿತಂಡ ವಾದಕ್ಕೆ ಆಸ್ಪದವಿಲ್ಲದ ಲೋಕಾಚಾರ ವಿಷಯಗಳನ್ನು ಮಾತ್ರ ಇದರಲ್ಲಿ ಸೇರಿಸಲಾಗುವುದು. (2) **ನೈರ್ಮಲ್ಯ ಮತ್ತು ಆರೋಗ್ಯ.**—ಮುಖ್ಯವಾಗಿ ಗ್ರಾಮಾಂತರಗಳ ಸ್ಥಿತಿಗಳನ್ನೂ ಆರೋಗ್ಯಾಭಿವೃದ್ಧಿ ಮಾರ್ಗಗಳನ್ನೂ ಕುರಿತ ಲೇಖನಗಳು ಇದರಲ್ಲಿ ಸೇರುವುವು.

“ಡಿಸ್ಟ್ರಿಕ್ಟು ಮತ್ತು ತಾಲ್ಲೂಕು” ಎಂಬ ಪ್ರಕರಣದ ಕೆಳಗೆ ದೇಶದ ಸಂಪದಭಿವೃದ್ಧಿಗಾಗಿ ಮಾಡುವ ಪ್ರಯತ್ನಗಳು, ತತ್ಸಂಬಂಧ ವೃತ್ತಾಂತಗಳು, ಕಾಲಸ್ಥಿತಿಗಳು,— ಇವೇ ಮುಂತಾದ ವಿಷಯಗಳನ್ನು ಪ್ರಕಟಿಸಲಾಗುವುದು.

ಅರ್ಥ ವಿಚಾರಕ್ಕೆ ಸಂಬಂಧಪಡುವ ಗ್ರಂಥಗಳನ್ನು ಅಂಗೀಕರಿಸಿ, ಅವುಗಳ ಗುಣದೋಷ ವಿಮರ್ಶೆಯನ್ನು ಮಾಡಲಾಗುವುದು. ಇಂತಹ ವಿಮರ್ಶೆಯು ತಕ್ಕ ಪಂಡಿತರಿಂದ ಮಾಡಲ್ಪಡುವುದು. ಇದಲ್ಲದೆ ಈ ಪತ್ರಿಕೆಯ ಉದ್ದೇಶಕ್ಕೆ ತಕ್ಕಂತೆ, ಹಿಂದು ದೇಶದ ಮತ್ತು ಅನ್ಯದೇಶದ ವರ್ತಮಾನ ಪತ್ರಿಕೆಗಳಿಂದ ಸಮಯೋಚಿತವಾಗಿ ಆರಿಸಿ ತೆಗೆದ ಲೇಖನಗಳನ್ನು ಕೂಡ ಪ್ರಕಟಿಸಲಾಗುವುದು. ಕನ್ನಡದ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಕೆಲವು ಸ್ವಕಲ್ಪಿತ; ಕೆಲವು ಇಂಗ್ಲಿಷ್ ಪತ್ರಿಕೆಯನ್ನು ಅನುಸರಿಸಿ ಬರೆದ ಭಾಷಾಂತರ

ಪತ್ರಿಕೆಯಲ್ಲಿ ರಾಜಕೀಯ ವಿಷಯಗಳನ್ನು ಚರ್ಚಿಸುವುದಿಲ್ಲ. ಈ ಪತ್ರಿಕೆಯು ಉದ್ದೇಶಕ್ಕೊಳಪಟ್ಟ ವಿಷಯಗಳ ಮೇಲೆ ಬರೆದುಬರುವ ಸ್ವತಂತ್ರ ಲೇಖನಗಳು ಆದರಿಸಲ್ಪಡುವುವು. ಹಾಗೆ ಬಂದುವುಗಳಲ್ಲಿ ಅನುಮೋದಿತವಾದ ಲೇಖನಗಳಿಗೆ ಪ್ರಕಟನಾನಂತರ ತಕ್ಕ ದ್ರವ್ಯಬಹುಮಾನವು ದೊರೆಯುವುದು. ಸಂಪದಭ್ಯುದಯ ವಿಷಯಗಳ ಮೇಲೆ ವಿವಾದಾಸ್ಪದವಿಲ್ಲದ ಲೇಖನಗಳನ್ನು ಸರ್ಕಾರದ ಉದ್ಯೋಗಸ್ಥರು ಕೂಡ ಈ ಪತ್ರಿಕೆಗೆ ಬರೆದು ಕಳುಹಿಸಬಹುದೆಂದು ಗವರ್ನಮೆಂಟಿನವರ ಅಪ್ಪಣೆಯಾಗಿದೆ.

ಸಾಂಪತ್ತಿಕ ವಿಷಯಗಳನ್ನು ಕುರಿತ ಪತ್ರವ್ಯವಹಾರಗಳಿಗೆ ಅವಕಾಶವುಂಟು. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ಸರ್ಕಾರದವರು ಜವಾಬ್ದಾರರಲ್ಲ.

ಸಂಸ್ಥಾನದಲ್ಲಿರುವವರಿಗೆ ಇಂಗ್ಲಿಷ್ ಪತ್ರಿಕೆಯ ವಾರ್ಷಿಕ ಚಂದಾ	ರೂ. 3—0—0	ಅಂಚೆವೆಚ್ಚ
ಕನ್ನಡ ಪತ್ರಿಕೆಯ ವಾರ್ಷಿಕ ಚಂದಾ	,, 2—0—0	ಉಚಿತ
ಹೊರಗಿರುವವರಿಗೆ ಇಂಗ್ಲಿಷ್ ಪತ್ರಿಕೆಯ ಚಂದಾ	,, 4—0—0	ಅಂಚೆವೆಚ್ಚ
,, ಕನ್ನಡ ,, ,,	,, 3—0—0	ಸೇರಿ

ಅರ್ಥಸಾಧಕ ವಿಷಯಗಳಿಗೆ ಸಂಬಂಧಪಡುವ ವ್ಯಾಪಾರದ ಪ್ರಕಟನೆಗಳಿಗೆ ಪತ್ರಿಕೆಯಲ್ಲಿ ಸ್ಥಳ ದೊರೆಯುವುದು. ಅಂತಹ ಪ್ರಕಟನೆಯ ದರಗಳನ್ನು ಪತ್ರಿಕೆ ಸಂಪಾದಕರಿಗೆ ಬರೆದು ತಿಳಿದುಕೊಳ್ಳಬಹುದು. ಪತ್ರಿಕೆಗೆ ಚಂದಾದಾರರಾಗಲಿಷ್ಟವುಳ್ಳವರು ಜಾಗ್ರತೆಯಾಗಿ ಬರೆದು, ಚಂದಾ ಹಣವನ್ನು ಮುಂಗಡ ಸಲ್ಲಿಸಬೇಕೆಂದು ಕೋರಿದೆ. ಚಂದಾ ಕಟ್ಟಬೇಕಾದರಾಗಲಿ, ಪ್ರಕಟನೆಯ ಹಣವನ್ನು ಕಟ್ಟಬೇಕಾದರಾಗಲಿ, ಆಯಾ ಸ್ಥಳದಲ್ಲಿರುವ ಸರ್ಕಾರದ ಖಜಾನೆಗೆ ತಲುಪಿಸಬಹುದು; ಅಥವಾ ಈ ಪತ್ರಿಕಾ ಕಾರ್ಯಾಲಯಕ್ಕೆ ಅಂಚೆಯ ಮನಿಯಾರ್ಡರ್ ಮೂಲಕವಾಗಲಿ ಕೊಟ್ಟು ಕಳುಹಿಸಬಹುದು. ಇಲ್ಲವೆ, ಚಂದಾದಾರರು ಇಷ್ಟಪಟ್ಟರೆ, ಪತ್ರಿಕೆಯನ್ನು ವಿ. ಪಿ. ಮೂಲಕ ತರಿಸಿಕೊಳ್ಳುವಂತೆ ಏರ್ಪಾಡು ಮಾಡಿಕೊಳ್ಳಬಹುದು. ಪತ್ರಿಕೆಗೆ ಸಂಬಂಧಪಡುವ ಯಾವದ್ವಿಶಿಷ್ಟ ಪತ್ರವ್ಯವಹಾರಗಳನ್ನೂ ಬೆಂಗಳೂರು “ರಿಂಗ್‌ವುಡ್” ನಲ್ಲಿರುವ “ಅರ್ಥಸಾಧಕ ಪತ್ರಿಕೆ” ಯ ಸಂಪಾದಕರೊಡನೆ ನಡೆಯಿಸಬೇಕು.

ವಿಳಾಸ:—“ಮೈಸೂರು ಅರ್ಥಸಾಧಕ ಪತ್ರಿಕೆ” ಯ

[2–1] **ಸಂಪಾದಕರಿಗೆ, “ರಿಂಗ್‌ವುಡ್”, ಬೆಂಗಳೂರು.**

ಮೋಟರ್ ಟಪಾಲು.

ಗುಂಡ್ಲುಪೇಟೆಯಿಂದ ನಂಜನಗೂಡಿಗೆ.
ಚಾಮರಾಜನಗರದಿಂದ ನಂಜನಗೂಡಿಗೆ.

ಬೆಳಿಗ್ಗೆ.—(1) ಮೋಟರುಗಳು ಪ್ರತಿದಿನವೂ ಗುಂಡ್ಲುಪೇಟೆಯಿಂದಲೂ, ಚಾಮರಾಜನಗರದಿಂದಲೂ ಬೆಳಿಗ್ಗೆ 6–30 ಗಂಟೆಗೆ ಹೊರಟು 7–30 ಗಂಟೆಗೆ ನಂಜನಗೂಡು ತಲಪುತ್ತವೆ. (2) ಮೋಟರುಗಳು ಪ್ರತಿದಿನವೂ ಬೆಳಿಗ್ಗೆ 8–30 ಗಂಟೆಗೆ ನಂಜನಗೂಡಿನಿಂದ ಹೊರಟು 9–30 ಗಂಟೆಗೆ ಗುಂಡ್ಲುಪೇಟೆಯನ್ನೂ, ಚಾಮರಾಜನಗರವನ್ನೂ ತಲಪುತ್ತವೆ.

ಮಧ್ಯಾಹ್ನ.—(1) ಮೋಟರುಗಳು ಮಧ್ಯಾಹ್ನ ಗುಂಡ್ಲುಪೇಟೆಯಿಂದಲೂ, ಚಾಮರಾಜನಗರದಿಂದಲೂ 4 ಗಂಟೆಗೆ ಹೊರಟು 5 ಗಂಟೆಗೆ ನಂಜನಗೂಡು ತಲಪುತ್ತವೆ. (2) ಮೋಟರುಗಳು ಸಾಯಂಕಾಲ 6–30 ಗಂಟೆಗೆ ನಂಜನಗೂಡಿನಿಂದ ಹೊರಟು 7–30 ಗಂಟೆಗೆ ಗುಂಡ್ಲುಪೇಟೆಯನ್ನೂ, ಚಾಮರಾಜನಗರವನ್ನೂ ತಲಪುತ್ತವೆ.

ನಿಬಂಧನೆಗಳು.—(1) ಪ್ರಯಾಣಿಕರು 5 ಮಂದಿಗಿಂತ ಕಡಮೆಯಾದರೆ ಮೋಟರನ್ನು ಬಿಡುವುದಿಲ್ಲ. (2) ಛಾರ್ಜಿನ ದರ—1 ಸೀಟಿಗೆ ರೂ. 1–8–0.

ಪ್ರಾರಂಭ.—1915 ನೇ ಇಸವಿ ಜನವರಿ ತಾ. 17 ನೇ ಭಾನುವಾರದಿಂದ ಮೋಟರುಗಳು ಬಿಡಲ್ಪಡುವವು.

ಹೆಚ್ಚು ಸಂಗತಿಗಳನ್ನು ಕೆಳಗೆ ಕಂಡ ವಿಳಾಸದಾರರಲ್ಲಿ ತಿಳಿಯಬಹುದು:—

ದಿ ಮೈಸೂರು ಮೋಟರ್ ಸರ್ವಿಸ್ ಕಂಪನಿ,

[6–1] ಹಳೇ ಪೋಸ್ಟ್ ಆಫೀಸ್ ಬೀದಿ, ಮೈಸೂರು.

50 ರೂಪಾಯಿ ಬಹುಮಾನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ಈ ಕೆಳಗೆ ರುಜು ಮಾಡುವವರು ಇದೇ ಡಿಸೆಂಬರು 1 ನೇ ತಾರೀಖಿನಲ್ಲಿ ಮೈಸೂರು ಗರ್ಗೇಶ್ವರಿ ಗಾಡಿ ಬಿಡುವ ಚೌಕದಿಂದ ದೇವಾಂಬಾ ಅಗ್ರಹಾರಕ್ಕೆ ಬರುವ ಕಾಲದಲ್ಲಿ ತಮ್ಮಲ್ಲಿದ್ದ ಕಾಗದಪತ್ರಗಳು, ನಿರೂಪಗಳು ಮತ್ತು ಸನ್ನದುಗಳು ಕಟ್ಟಿದ್ದ ಒಂದು ದಫ್ತರದ ಗಂಟನ್ನು ಕಳೆದುಕೊಂಡದ್ದರಿಂದ ಅದನ್ನು ಪತ್ತೆ ಮಾಡಿಯಾಗಲಿ ಅಥವಾ ತೆಗೆದು ಮಡಗಿಯಾಗಲಿ ಇದ್ದಲ್ಲಿ ಅದನ್ನು ಈ ಕೆಳಗಿನ ವಿಳಾಸದಾರರ ವಶಕ್ಕೆ ತಂದುಕೊಟ್ಟರೆ ಅವರಿಗೆ 50 ರೂಪಾಯಿ ಬಹುಮಾನ ಕೊಡಲ್ಪಡುತ್ತದೆ.

ವಿಳಾಸ.—ಟಿ ಆರ್. ಶ್ರೀನಿವಾಸರಂಗಾಚಾರ್, ಕಸಬಾ ಟಿ. ನರಸೀಪುರ,

[294-2] ಅಥವಾ ಮ್ಯಾನೇಜರ್, “ವೃತ್ತಾಂತ ಪತ್ರಿಕೆ,” ಮೈಸೂರು.

“ವೃತ್ತಾಂತ ಪತ್ರಿಕೆ”ಯ ಕ್ಯಾಲೆಂಡರು.

1915 ನೇ ವರುಷದ ಕ್ಯಾಲೆಂಡರನ್ನು ತಯಾರ್ಮಾಡಿ ನಮ್ಮ ಖಾಯಂ ಚಂದಾದಾರರಿಗೆಲ್ಲಾ ಕಳುಹಿಸಿದೆವು. ಇದರಲ್ಲಿ ಅಡಗಿರುವ ನೇತ್ರಾನಂದಕರವಾದ ಚಿತ್ರಗಳ್ಯಾವವೆಂದರೆ—(1) ಬೆಂಗಳೂರಿನಲ್ಲಿ ಅಲಸೂರು ಪೇಟೆ ದೇವಾಲಯ, (2) ಗುಬ್ಬಿಯ ಪಕ್ಷಿಪಾಳ್ಯ, (3) ನಾಮಧಾರಿ ವಧುವರರು, (4) ಹೊಳೆನರಸೀಪುರ, (5) ಜರ್ಮನಿಯವರ ಸ್ವಾಧೀನದಲ್ಲಿರುವ ಬೆಲ್ಜಿಯಮ್ ದೇಶದ ಬ್ರಸೆಲ್ಸ್ ರಾಜಧಾನಿಯ ಟೌನ್ ಹಾಲ್. ಇದಲ್ಲದೆ ಇದರಲ್ಲಿ ಮೈಸೂರು ಸರ್ಕಾರಿ ರಜಾ ದಿನಗಳೂ, 1915 ನೇ ವರುಷದಲ್ಲಿ ಬರುವ ವಿಶೇಷ ದಿನಗಳೂ ಪ್ರಕಟವಾಗಿವೆ. ಜನವರಿಯಲ್ಲಿ ಹೊಸದಾಗಿ ಖಾಯಂ ಚಂದಾದಾರರಾಗತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುತ್ತೇವೆ. ಚಂದಾದಾರರಲ್ಲದವರಿಗೆ ಇದರ ಕ್ರಯ 6 ಕಾಸು.

ಕೆಲವು ಪ್ರತಿಗಳು ಮಾತ್ರ ಉಳಿದಿರುವುದರಿಂದ ವಾಚಕರು ಬೇಗನೆ ಚಂದಾ ಕಟ್ಟಿ ಈ ಬಹುಮಾನವನ್ನು ಪಡೆಯುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮ್ಯಾನೇಜರ್, “ವೃತ್ತಾಂತ ಪತ್ರಿಕೆ,” ಮೈಸೂರು.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 3,00,0,00.

NOTICE.

As it has come to the notice of the undersigned that some unprincipled rival agents are making adverse commentaries on the stability of the Company and also that the public are made to understand that the formation of the words "Mysore Government Security" in the name of the above Company, is not authorized by the Government, that they (the Government) do not supervise its business and that they (the Government) are not held responsible for the loss or gain of the Company and so on, the undersigned begs to invite the kind attention of the general public to the following few lines.

1. In the first place, the public will please note that its formation has been duly authorized by the Government as per Incorporation Certificate No. 143, dated 3rd July, 1913, granted by the then Registrar with the Government of Mysore and also the question regarding the use of the words "Mysore Government Security" had been raised and decided by him (the then Registrar) before the certificate was issued.

2. In the second place, it cannot be considered that the Company will never be supervised by the Government when they (the Government) have duly got the accounts, etc., of the Company inspected by the Sub-Registrar, Mr. Sreekanta Rao, B.A., in the month of December, 1913, and when the company will get its accounts audited by the Government Auditor as passed in the General Meeting of the shareholders on the 29th June, 1914. Moreover, the Company, being an incorporated one, is bound to submit all its reports every year to the Registrar with the Government of Mysore in accordance with the Mysore Companies' Regulation No. III of 1895, and also will have to abide by the Indian Life Assurance Companies' Act of 1912 as provided in the Article No. 9 of the Articles of Association of the Company by furnishing security to the India Government, etc., as required by the said Act, as its business is to be extended throughout India, Burma and Ceylon.

3. In the third place, it is not right to say that the solvency of the companies, which have not got the guarantee of the Government, is questionable, inasmuch as there is no Government on earth which has guaranteed the solvency of any insurance or banking company. For instance, the solvency of even the Oriental Life Assurance Company, limited, Bombay, which possesses the words "Government Security" and the Bank of Mysore, limited, Bangalore, which has the aid of the Government, is never guaranteed by the Bombay and the Mysore Governments, respectively. Their solvency not being guaranteed by the Government does never mean that their solvency is questionable. Moreover, no life assurance company seems to have failed up to date.

On the other hand, the words "Mysore Government Security" in the name of the Mysore Government Security Life and Marriage Assurance Company, limited, are not used without any meaning. The word "Mysore" denotes the place where the company is established; and the words "Government Security" denote that the "Mysore Government Security Life and Marriage Assurance company limited," unlike other companies without the words "Government Security" and like companies with the words "Government Security" such as Oriental, etc., companies is bound to invest a fixed percentage of its total provident and insurance premium collections every year in the Government securities (and other funds in buildings) as security to its constituents as provided in the Memorandum and Articles of Association of the Company and as also advertised in the Company's prospectuses. It is needless to say that the companies without the words "Government Security," are not bound to invest their funds in the Government Securities but invest the same according to the whims and fancies of their directors. In compliance with the above, the public will gladly note that the Company has already deposited the necessary amount to be invested in the Government Securities up to 31st December, 1913, in the Mysore Government Savings Bank, and the necessary security amount for the year 1914 will also be duly deposited soon after the accounts are audited for the said period.

So, it is needless to say that the security of the Company is unquestionable, and the Government shall necessarily stand as security for the amounts to be invested with them. As for the Objects, Schemes and Stability of the Company, a copy of Share Prospectus may be sent for on application to,— [7-1]

Dated, 6-1-1915,
Mysore.

M. L. NAGANNAH,
Managing Director.

ನಾಮಧಾರಿಗಳೂ, ಮದ್ಯಪಾನವೂ.

ಮೈಸೂರು ದೇಶದ ಪಶ್ಚಿಮಘಾಟಿ ಸರಹದ್ದಿನಲ್ಲಿ ವಾಸಿಸುವ ಜನಾಂಗದವರ ಪೈಕಿ ನಾಡವರು ಇಲ್ಲವೇ ನಾಮಧಾರಿಗಳು ಎಂಬ ಜನರುಗಳೇ ವಿಶೇಷವಾಗಿರುತ್ತಾರೆ. ಇವರಲ್ಲಿ ಶೇಕಡ 80 ರಷ್ಟು ಮಂದಿ ಸ್ವಂತ ಜಮೀನ್ದಾರ್ರುಗಳಾಗಿಯೂ, ಐಶ್ವರ್ಯವಂತರಾಗಿಯೂ, ಸರಕಾರಕ್ಕೆ ಹೆಚ್ಚು ಕಂದಾಯ ಕೊಡತಕ್ಕವರಾಗಿಯೂ, ಸಭ್ಯಪ್ರತಿಗಳಾಗಿಯೂ, ಗೌರವವುಳ್ಳವರಾಗಿಯೂ ಇದ್ದರೆಂದು ಹೇಳಬಹುದು. ಸುಮಾರು 20-25 ವರುಷಗಳ ಲಾಗಾಯಿತು ಈ ಜನಾಂಗದವರು ಹೀನಸ್ಥಿತಿಗೆ ಬರುತ್ತಾ, ಶೇಕಡ 80 ರಿಂದ 30 ಕ್ಕೆ ಕಮ್ಮಿಯಾಗಿ ಸ್ವಂತ ಜಮೀನ್ದಾರರುಗಳಾಗಿರಾರೆಂದು ಧಾರಾಳವಾಗಿ ಹೇಳಬಹುದು. ಹಾಗಾದರೆ ಇವರುಗಳ ಈ ಸಂಖ್ಯೆಯು ಈಗಿನ ನವನಾಗರಿಕ ಕಾಲಕ್ಕೆ ತಕ್ಕಂತೆ ಹೆಚ್ಚುವ ಬದಲಾಗಿ ಕಡಿಮೆಯಾಗುತ್ತಾ ಬಂದಿರುವುದೂ ಅಲ್ಲದೆ ಉಳಿದವರೆಲ್ಲರೂ ಬ್ರಾಹ್ಮಣರ ಇಲ್ಲವೇ ಬ್ರಾಹ್ಮಣೇತರರ ಗೇಣೀ ಒಕ್ಕಲುಗಳಾಗಿ ಪರಿಣಮಿಸಿರುವದಕ್ಕೆ ಕಾರಣವೇನು? ಈ ಹಿಂದಿನ ವರ್ಷಗಳಿಗಿಂತಲೂ ಜನರಿಗೆ ಈ ಸುಭಿಕ್ಷಕಾಲದಲ್ಲಿ ಉತ್ಪತ್ತಿ ಕಡಮೆಯಾಯಿತೇ ಎಂದು ಪ್ರಶ್ನಿಸಬಹುದು. ಹಾಗಲ್ಲ, ಹಿಂದಿನ ವರ್ಷಗಳಿಗಿಂತಲೂ ಉತ್ಪತ್ತಿಯು ಈ ಕಾಲಗಳಲ್ಲಿ ದಿನ ದಿನಕ್ಕೂ ಹೆಚ್ಚುತ್ತಾ ಬಂದಿರುವದಲ್ಲದೆ ಕಡಮೆ ಎಂದು ಹೇಳಲು ಯಾರೂ ಒಪ್ಪಲಾರರು. ಹಾಗಾದರೆ ಈ ಜನಾಂಗದವರು ತಮ್ಮ ತಮ್ಮ ಉತ್ಪತ್ತಿಯ ಸಂಪಾದನೆಯನ್ನು ಯಾವ ಬಗೆಯಲ್ಲಿ ದುರ್ವಿನಿಯೋಗ ಪಡಿಸಿಕೊಂಡು ಹೀನಸ್ಥಿತಿಗೆ ಬಂದರೆಂಬ ವಿಷಯದಲ್ಲಿ ನನಗೆ ತಿಳಿದ ಮಟ್ಟಿಗೂ ಉದಾಹರಿಸುವೆನು.

ಪೂರ್ವದಿಂದಲೂ ಈ ಜನಾಂಗದ ಪ್ರತಿ ಕುಟುಂಬದಲ್ಲಿಯೂ ಅವಿಭಕ್ತ ಕುಟುಂಬದ ಪದ್ಧತಿ ಏರ್ಪಡಿಸಿಕೊಂಡು ಈ ವರೆಗೂ ಬಂದಿರುತ್ತಾರೆ. ಈ ಪ್ರತಿ ಕುಟುಂಬಗಳಲ್ಲಿಯೂ ಒಬ್ಬೊಬ್ಬ ಯಜಮಾನನು ಇರುವನು. ಕುಟುಂಬದ ಸರ್ವ ವಿಷಯಗಳಲ್ಲಿಯೂ ಆತನಪ್ಪಣೆಯಂತೆ ನಡೆದುಕೊಂಡು ಬರಬೇಕು. ಆ ಯಜಮಾನನು ಪೂರ್ವಕಾಲ ನಡವಳಿಕೆಗೆ ಸ್ವಲ್ಪವೂ ವ್ಯತ್ಯಾಸ ಬಾರದ ರೀತಿಯಲ್ಲಿ ನಡೆಸಿಕೊಂಡುಹೋಗಬೇಕೆಂಬುದು ಆತನ ಮುಖ್ಯ ಕರ್ತವ್ಯವಾಗಿರುವದು. ಈ ಮಾತನ್ನು ಬರೀ ಮೇಲ್ಪಂಕ್ತಿಯಾಗಿಟ್ಟುಕೊಂಡಿರುವದೇ ವಿನಹ ಕಾರ್ಯಕ್ಕೆ ತೋರಿಸಲಾರನು. ತನ್ನ ಕುಟುಂಬದವರ ಮೇಲೆ ಅಧಿಕಾರ ನಡಿಸಬೇಕಾದರೆ, ತನ್ನ ಗೌರವವನ್ನು ಪ್ರಕಾಶಪಡಿಸಬೇಕಾದರೆ ಮದ್ಯಪಾನವೇ ಮುಖ್ಯ ಮಂತ್ರವೆಂದು ತಿಳಿದು ಪ್ರತಿ ದಿನ ಮಧ್ಯಾಹ್ನ ಸಂಜೆ ಮುನ್ನಾನೆ ಕುಡಿದು ಬಂದ ಸ್ನೇಹಿತರಿಗೂ, ಅತಿಥಿಅಭ್ಯಾಗತರಿಗೂ ಸಹ ಕುಡಿಸುವದರಿಂದಲೇ ತನ್ನನ್ನು ಜನರೆಲ್ಲರೂ ಬಹಳ ಉದಾರಿ ಎಂದು ಕೊಂಡಾಡುವದರ ಮೂಲಕವೇ ಗೌರವ ದೊರೆಯುವದೆಂದು ತಿಳಿದುಕೊಂಡಿರುವನು. ಅಲ್ಲದೆ ಮನೆಗೆ ಬಂದ ಅತಿಥಿಗಳಿಗೆ ಸಹ ಮದ್ಯವನ್ನು ತರಿಸಿ "ಕುಡಿಯಿರಿ, ಕುಡಿಯಿರಿ" ಎಂದು ಒತ್ತಾಸೆಯಿಂದ ಕುಡಿಸುವದೇ ತನ್ನ ಕುಶಲ ಪ್ರಶ್ನೆಗಳಲ್ಲಿ ಮೊದಲನೆಯದಾಗಿರುವದು. ಹೀಗೆ ಕುಡಿಯುವದರಿಂದುಂಟಾಗುವ ಕೇಡುಗಳು ಏನೆಂಬುದನ್ನು ವಿಚಾರಿಸುವದಿಲ್ಲ. ಹೀಗೆ ಮನೆಗೆ ಯಜಮಾನನಾಗಿರುವವನೇ ಈ ರೀತಿಯಲ್ಲಿ ರುವಾಗ ಮನೆಯ ಜನರ ವಿಷಯ ಏನೆಂದು ಹೇಳಲಿ? "ಯಜಮಾನನ ಬಾಳೆ ಮನೆ ಮಂದಿಗೆಲ್ಲಾ" ಎಂಬ ಗಾದೆಗೆ ಅನುಸಾರವಾಗಿ ಔಷಧಕ್ಕೆಂತಲೂ, ದೇಹಶಕ್ತಿ ಬಗ್ಗೆ ಎಂತಲೂ, ಅನಂತರ ಆರೋಗ್ಯಕ್ಕೆಂದೂ ನೆವ ಹೇಳುತ್ತಾ ಕಷ್ಟಪಟ್ಟು ಅಭ್ಯಾಸ ಕ್ರಮವಾಗಿ ರೂಢಿಗೆ ತಂದುಕೊಳ್ಳುತ್ತಿರುವರು. ಹೀಗೆಯೇ ಬೆಳೆಸುತ್ತಾ ಜಾತಿ ಸಾರಾಯಿಗಳಾದ ವಿಸ್ಕಿ, ಬ್ರಾಂದಿ, ಏಲ್ ಮೊದಲಾದ ಮದ್ಯಗಳನ್ನು ಗಂಗಾ, ಗೌತಮಿ ಮೊದಲಾದ ನದಿಯ ಜಲದಂತೆ ಸೀಸೆಗಟ್ಟಲೆ ಕುಡಿದು ಹೋಪ ಬೀದಿಗಳೊಳಗೆಲ್ಲಾ ಪವಿತ್ರಗೊಳಿಸುವಂತೆ ನಡೆಯುವ ಮಹಾನುಭಾವರು ಗೌರವತೆಯುಳ್ಳವರಾಗಿಯೇ ಎಣಿಸಲ್ಪಡುತ್ತಿದಾರೆ. ಹೀಗೆ ಜಾತಿ ಮತ ವಿವೇಚನೆಯಿಲ್ಲದೆ ದೇಹಗಳನ್ನು ಮರೆತು ಮಹಾನಂದರಸ ಮಗ್ನರಾಗಿ ಪ್ರತಿ ಒಬ್ಬರೂ ಸೇವಿಸುತ್ತಿರುವ ವಿವಿಧ ನಾಮ ವಿರಾಜಿತರಾಗಿನ ದೇವತೆಯಲ್ಲಿರುವ ಮಹತ್ವವನ್ನು ವಿಚಾರವಾಡೋಣ.

ಅದು ತನ್ನನ್ನು ಸೇವಿಸಿದಂಥಾವರಿಗೆಲ್ಲ ಜ್ಞಾನೇಂದ್ರಿಯಗಳೂ, ಕರ್ಮೇಂದ್ರಿಯಗಳೂ ನಾಶವಾಗುವಂತೆ ಮಾಡುವದು. ಕಾಲುಗಳಿಗೆ ಮಾರ್ಪು ಬಂದಂತೆ ಬೀಳುತ್ತಲೂ ಏಳುತ್ತಲೂ ನಡೆಯುವಂಥ ವಿಚಿತ್ರ ಗಮನವನ್ನು ಕಲಿಸುವದು. ಕಣ್ಣುಗಳಿಗೆ ಕೆಂಪಾದ ಕಾಂತಿಯನ್ನನುಗ್ರಹಿಸಿ ಅಸ್ವಾಭಾವಿಕವಾಗಿ ಬೆಟ್ಟು ಗುಡ್ಡಗಳನ್ನು ತಿರುಗಿಸುವಂತೆ ಮಾಡುವದು. ಘ್ರಾಣೇಂದ್ರಿಯಕ್ಕೆ ಕಂಪುಕೊಡೆಯುವಂಥಾ ಬಚ್ಚಲ ಕೊಟ್ಟೆಯಲ್ಲಿ ಬಿದ್ದಾಗ್ಯೂ ಸುವಾಸನೆಯು ತೋರಿದಂತೆ ಮಾಡುವದು. ಜಿಹ್ವೆಗೆ ಜ್ಞಾನೋಪದೇಶಮಾಡಿ ದುರ್ಭಾಷೆಗಳಾಡಿದಾಗ್ಯೂ ಎಗ್ಗಿಲ್ಲದಂತೆ ಮಾಡುವದು. ದೇಹವೆಲ್ಲವನ್ನೂ ತನ್ನಧೀನಮಾಡಿಕೊಂಡು ಜನಗಳೆಲ್ಲರನ್ನೂ ನಗಿಸುವಂಥಾ ಆಟಗಳನ್ನು ಆಡಿಸುವದು. ಅತ್ಯಕ್ಕೆ ವಿಪತ್ತಿಯುಂಟು ಮಾಡಿ ತನ್ನ ಮನೆಯಲ್ಲಿರುವ ಸೊತ್ತುಗಳೆಲ್ಲವನ್ನೂ, ಕಡೆಗೆ ಭಾರ್ಯಾ ಪುತ್ರರನ್ನೂ ಸಹ ಬಿಟ್ಟುಬಿಡುವಂತೆ ಮಾಡುವದು. ಪಾನಮಾಡುವಾಗ ಇಂಥಾ ಮೇಲುಗಳು ಎಷ್ಟಾದರೂ ಆಗಬಹುದು. ಮದ್ಯಪಾನ ಮಾಡುವದರಿಂದ ಉಂಟಾಗುವ ನಷ್ಟಗಳು ಹೇಳತೀರದಷ್ಟು ಇವೆ. ವಿಚಾರಗಿಲ್ಲದೆ ಆಸ್ತಿ ವಗೈರೆಗಳನ್ನು ಹಾಳುಮಾಡುವದೂ, ಜೀವನೋಪಾಯದ ಸಾಧನವನ್ನು ಕಳೆದುಕೊಳ್ಳುವದೇ ಈ ರೀತಿಯಿಂದಲೇ ಎಷ್ಟೋ ಮನೆತನಗಳು ನಮ್ಮ ಕಣ್ಣೆದುರಿಗೇ ಹಾಳಾಗಿ ಹೋದರೂ ಸಹ ನಮ್ಮ ನಾಮಧಾರಿ ಮಹಾಭವಾನಿಗಳು ಮದ್ಯಪಾನವನ್ನು ನಿಷೇಧಿಸದೆ ಮತ್ತು ಮುಂದಕ್ಕೆ ಪ್ರೋತ್ಸಾಹಿಸುತ್ತಾ ಬರುವದು ಅವರಿಗೆ ತುಂಬಾ ಭಂಗವನ್ನುಂಟುಮಾಡಿರುತ್ತದೆ. ಅಲ್ಲದೆ ದಿನದಿನಕ್ಕೂ ಕ್ಷಯಿಸುತ್ತಾ ಬರುವದಕ್ಕೂ ಕಾರಣವಾಗಿದೆ.

3-4 ವರ್ಷಗಳ ಕೆಳಗೆ ತೀರ್ಥಹಳ್ಳಿ ತಾಲ್ಲೂಕ್ ದೇವಂಗಿ ಮ|| ಸಾಹುಕಾರ್ ರಾಮಣ್ಣಗೌಡರವರು ನಾಮಧಾರಿಗಳ ಶೋಚನೀಯವಾದ ಪದ್ಧತಿಯನ್ನು ತ್ಯಾಗಮಾಡಿ ಯಾರೂ ವಿಸರ್ಜಿಸುವ ಏರ್ಪಾಡುಗಳನ್ನು ಮಾಡಬೇಕೆಂಬ ಒಂದೇ ಗುರಿಯಿಂದ ತೀರ್ಥಹಳ್ಳಿ ತಾಲ್ಲೂಕಿನ ಎಲ್ಲಾ ನಾಮಧಾರಿ ಮುಖಂಡರನ್ನು ತೀರ್ಥಹಳ್ಳಿಯಲ್ಲಿ ಸೇರುವಂತೆ ಏರ್ಪಾಡು ಮಾಡಿ ಒಂದು ಮೀಟಿಂಗು ನಡಿಸಲ್ಪಟ್ಟು ಕುಡಿತದಿಂದುಂಟಾಗುವ ಕೇಡುಗಳನ್ನೂ ಅವಮಾನಗಳನ್ನೂ ಕುರಿತು ಉಪನ್ಯಾಸಮಾಡಿ ಕುಡಿತವನ್ನು ಪಂಕ್ತಿವಾಗಿಯೂ ಬಿಟ್ಟುಬಿಡಬೇಕೆಂಬ ಬಗ್ಗೆ ಒಂದು ನಿಬಂಧನೆಯನ್ನು ಮಾಡಿ ಎಲ್ಲರಿಂದಲೂ ರುಜು ಹಾಕಿಸಲಾಯಿತು. ಆ ದಿವಸ ನಡಿಸಿರುವ ತಿದ್ದುಪಾಟಿಗನುಸಾರವಾಗಿ ಕುಡಿತವನ್ನು ಕಮ್ಮಿ ಮಾಡಿಯೂ, ಮಾಡುತ್ತಲೂ, ನಿರಾಕರಿಸುತ್ತಲೂ ಬಂದಿದಾರೆ. ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಎಲ್ಲಾ ನಾಮಧಾರಿಗಳು ಸಹ ವರ್ಷಕ್ಕೊಂದಾವರ್ತಿ ನಿಯಾಮಕವಾದ ಸ್ಥಳದಲ್ಲಿ ಒಂದು ಮಹಾಸಭೆ ಸೇರಿ ಹೆಚ್ಚು, ಕಡಮೆ, ಮೇಲು, ಕೇಡು ಈ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಿಕೊಳ್ಳುತ್ತಾ ದಿನ ದಿನಕ್ಕೂ ಅಭಿವೃದ್ಧಿಯನ್ನು ಹೊಂದುತ್ತಾ ಬಂದಿರುವದು ಸ್ತೋತ್ರಾರ್ಹವಾಗಿರುತ್ತದೆ.

ಕೊಪ್ಪ ತಾಲ್ಲೂಕಿನ ಎಲ್ಲಾ ನಾಮಧಾರಿಗಳು ನೆರೆಹೊರೆಯಲ್ಲಿರುವ ತೀರ್ಥಹಳ್ಳಿ ತಾಲ್ಲೂಕ್ ಕೆಲಸಕಾರ್ಯಗಳನ್ನಾದರೂ ಕಣ್ಣುತೆರೆದು ನೋಡಿ ಅದರಂತೆಯೇ ಏರ್ಪಡಿಸಿಕೊಂಡು ಸಮಸ್ತ ಪಾಪಕಾರ್ಯಗಳಿಗೂ ಮೂಲಾಧಾರವಾದ ಈ ದುರಾಚಾರವೆಂಬ ಮದ್ಯಪಾನವನ್ನು ವರ್ಜಿಸಿ, ಮತದ ಏಳಿಗೆಗೆ ಮುಖ್ಯವಾಗಿ ಕೆಂಬುಬರುವ ಏರ್ಪಾಡುಗಳನ್ನು ಮಾಡದೆ ಕಣ್ಣಿಲ್ಲದ ಕುರುಡರಂತೆ ಇರಲಾರದಾಗಿ ನಂಬುತ್ತೇನೆ.

ಎಂ. ಡಿ. ಶಿ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-6-0.

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ದಪ್ಪತಿಯಾಗಿಯೂ ನೋಟಕ್ಕೆ ನಯವಾಗಿಯೂ ಬಲು ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 16 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

[99-31] ಪಿ. ಕೃಷ್ಣಸ್ವಾಮಿ ಚೆಟ್ಟಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು!! ದೊಡ್ಡ ಕಂಪೆನಿ!

ಈ ನಮ್ಮ ಕಂಪೆನಿಯಲ್ಲಿ ನಯದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಪಟಿಟಿ, ಜಗನ್ನಾಥ ಕಾಗದಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ಪಿಕ್ಚರ್ ಪತ್ರಗಳನ್ನು ಇನಾಮಾಗಿ ಕಳುಹಿಸಲಾಗುವದು. [69-42]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಜಾಮನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭರಕ್ಷಕ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರದ ವ್ಯಾಧಿಗಳಿಗೂ ಅತ್ಯುತ್ತಮವಾದದ್ದು. ಒಂದು ಡಬ್ಬಿ ಕ್ರಯ ರೂ 2-0-0. ಬಾಲರಕ್ಷಕ ಗುಳಿಗೆ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ (40 ಮಾತ್ರೆಗಳ) ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಎಲ್ಲಾ ಕಠಿನವಾದ ಜ್ವರಗಳನ್ನು ಕಳೆದ ನಷ್ಟಶಕ್ತಿ ಯನ್ನು ಯೋಗ್ಯಲಾಭಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಗಳನ್ನೂ ಕಳೆವ ಇದು ಅತ್ಯುತ್ತಮವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವಿಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[217-8] 20, ಜೇನಾಬಜಾರು ರೋಡು, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವ.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [196-18]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೩. ೬. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

Messrs. Petrie-Hay & Son, Hunsur.

ನಮ್ಮಲ್ಲಿ ಕೇಗದ ತೊಲೆಗಳು 2 ಸಲೇ ಅಡಿ ಲಾಗಾಯಿತು 30-40 ಸಲೇ ಅಡಿ ರು ವರೆಗೂ ಇರುತ್ತವೆ. ಇಷ್ಟವುಳ್ಳವರು ತಪ್ಪೀಲನ್ನು ಹುಣಸೂರಲ್ಲಿರುವ ಮೆ|| ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೆಗಾಡಿ ತಯಾರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ. [239-10]

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆ ಗೊತ್ತಾಗುವುದು!

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಹಿ. ಡಿ. ರೇಪಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ಸಕ್ಕರೆಗೆ ಸವರಿಯೋ, ನೀರಿಗೆ ಹಾಕಿಯೋ ಬೆಳಿಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ, ಭೇದಿ, ಶೂಲೆ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಕುಳುಕ್ಕು, ವಾಯು ನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ. [268-3]

ನಮ್ಮ ವಿಳಾಸ—ಕೇಶವಜೀ ದೇವಚಂದ್,
ರಾಮ್‌ಭಾನ್ ಏಜನ್ಸಿ, ಸಾಹ್ಕಾರ್‌ಪೇಟೆ, ಮದರಾಸ್.
ನಮ್ಮ ಏಜಂಟರು—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ,
ದೊಡ್ಡಪೇಟೆ, ಮೈಸೂರು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!
ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ... ವಾದ
ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು!

ಆಟೋ ಮೋಹಿನಿ.

ಇದಕ್ಕೆ ಭಂಗಾರು ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಶುದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 3-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲಿನ್ನಿಗೆ ಹಾಕುವ ಬೇರೇ ಕೆರೋಸಿನ್ ಎಣ್ಣೆ ಕೊಟ್ಟಾರು,
ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೇ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುತ್ತಿದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.
3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೊನಿಲಾಲ್ ಕಂಪನಿ,
[268-2] 177, ಬೈನಾಬಜಾರ್ ರೋಡ್, ಮದರಾಸ್.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಧ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180-14] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನು ಉಲ್ಲಾಸವನ್ನು ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುತ್ತದೆ. (2) ಹಾಡುವವರಿಗೆ ವರಪ್ರಸಾದವಾದದ್ದು. (3) ಬಾಯಿ ದುರ್ಗಂಧ, ಗಂಟಲು ಗಾರಿನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದದನ್ನು ಹುಟ್ಟದಂತೆ ಅಡ್ಡಿ ಮಾಡುತ್ತದೆ. (4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ.

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ಖಚಿತ ನಿಶ್ಚಯಿಸುವಿರಿ. [73-43]

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ	2	ಆಣೆ.
,, 95 ,, ,, ,, ,,	4	,,
,, 200 ,, ,, ,, ,,	7	,,
,, 200 ,, ಸುಂದರವಾದ ಟಿನ್ ಡಬ್ಬಿ	9	,,
,, 60 ,, ,, ,, ,,	4	,,
,, 100 ,, ಬಾಟ್ಲಿಯಲ್ಲಿ	4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮೂನ್‌ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಜಿ. ಎಂ. ಕಾಡಪ್ಪ ಅಂಡ್ ಸನ್ಸ್,
ಜನರಲ್ ಮರ್ಚೆಂಟ್ಸ್, ಶಿವಮೊಗ್ಗ.



ಜನವರಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1-14-0

ಅದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಅರ್ಧಕ್ಕೆ ಕೊಡಲ್ಪಡುತ್ತೆ. [99-31]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಚಿನ್ನದ ಗಿಲ್ಟು ಬೆಲ್ಟು ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು ಬೆಲೆ ರೂ. 4-0-0} ಪೋಸ್ಟೇಜು
ಬೆಳ್ಳಿ ಗಿಲ್ಟು ಡಾಬು ,, ,, 3-0-0} ಬೇರೆ.

ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 150 ಗಟ್ಟಿ ಗೆಜ್ಜೆಗಳು ಸುತ್ತಲ್ಪಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಅಲ್ಪ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಾರೆ.

ಸಾದಾ ಬೆಲ್ಟು ಒಡ್ಯಾಣ ರೂ. 1-2-0; ಚಿನ್ನದ ಗಿಲ್ಟು ನಾಗಮುರಿಗೆ ರೂ. 3-8-0; ಸುಂದರವಾದ ಕಾಲುಕಡಗ ರೂ. 1-4-0, ಚಿಕ್ಕವರಿಗೆ ರೂ. 1-2-0, ಹುಡುಗರಿಗೆ 12 ಆಣೆ; ಅಂದವಾದ ಡಾಬು (ಒಡ್ಯಾಣ) ರೂ. 1-4-0, ಚಿಕ್ಕವರಿಗೆ ರೂ. 1-2-0, ಹುಡುಗಿಯರಿಗೆ 14 ಆಣೆ; ಅಂದವಾದ ಪುರುಷರ ಡಾಬು ರೂ. 1-12-0, ಚಿಕ್ಕವರಿಗೆ ರೂ. 1-9-0, ಹುಡುಗರಿಗೆ ರೂ. 1-6-0, ಮಕ್ಕಳಿಗೆ ರೂ. 1-3-0. [297-2]

ವಿಳಾಸ:—"ನಾಗರಾಜ," ತೇರುಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ಜನವರಿ ಬಹುಮತಿ ಗಡಿಯಾರ.

8 ಸಾಮಾನುಗಳ ಸಹಿತ ಕ್ರಯ ರೂ. 3-6-0.



ಜನವರಿ ಒಳಗಾಗಿ ತರಿಸಿಕೊಳ್ಳುವವರಿಗೆ ಈ 7 ರೂಪಾಯಿ ಕ್ರಯದ್ದು ರೂ. 3-6-0ಕ್ಕೆ ಸ್ಟಾಕ್ ಕ್ಲಿಯರಿಗಾಗಿ ಕಮ್ಮಿ ಬೆಲೆಗೆ ವಿಕ್ರಯಿಸುವೆವು. ಆಲ ಸ್ಟಮಾಡಬೇಡಿ. 5 ವರುಷ ಗ್ಯಾರಂಟಿ. (1) ವಾಚ್ ಸರಪಣಿ, (2) ಉತ್ತರ ಮುಖಿ, (3) ರೇಷ್ಮೆ ಧಾರ, (4) ವಾಚ್ ಪೆಟ್ಟಿಗೆ, (5) ಕರವಸ್ತ್ರ, (6) ಸರ್ಪದ ಉಂಗರ, (7) ಕೈಕಪ್ಪ ಮೈಸೂರು ದೇಶದ ನಮೂನೆ, (8) ಬ್ಲಾಟ್ಲಾಕು ಇಂಕಿಪ್ಪಡಿ. ಪೋಸ್ಟೇಜು ಬೇರೆ.

ವಿಳಾಸ:—"ನಾಗರಾಜ,"
ತೇರು ಬೀದಿ, ತಿರುವಲ್ಲಿಕ್ಕೇಣಿ ಮದರಾಸು.

ನೂಲು ವ್ಯಾಪಾರಿಗಳಿಗೆ

ಪ್ರಸಿದ್ಧವಾದ ಬೊಂಬಾಯಿ ತಾತಾ ಸನ್ಸ್ ಸ್ವದೇಶೀ ಮಿಲ್ಲಿನಲ್ಲಿ ತಯಾರಾಗುವ ನಂಬರು 4, 6, 8, 10, 12, 14, 16, 20, 30 ಮುತ್ತು ಇತರ ನಂಬರು ಬೀ ನೂಲು ನಮ್ಮಲ್ಲಿ ಸಿಕ್ಕುವದರಿಂದ ದರ ಮುಂತಾದ್ದಕ್ಕೆ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು. [277-4]

ಬೊಂಬಾಯಿ ತಾತಾ ಸನ್ಸ್ ಸ್ವದೇಶೀ ಮಿಲ್ಸ್ ಏಜೆಂಟ್,
ಕೊಲ್ಲಿಪಲ್ಲಯ್ಯನ ಬೀದಿ, ಶಿವಮೊಗ್ಗ,
ಅಥವಾ, 146, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ದರ್ಬಾರ್ ಕೂದಲ ಸೋಪ್.

ಗಾಯವಾಗದು! ಕಲೆ ನಿಲ್ಲದು! ಉರಿಯಾಗದು!

ಈ ಪ್ರಖ್ಯಾತಿಹೊಂದಿದ ಸಾಬೂನು ಉರಿ, ಬಾಧೆ, ಕಲೆ, ಒಂದೂ ಇಲ್ಲದೆ ಶರೀರದ ಯಾವ ಕಡೆ ಕೂದಲನ್ನಾದರೂ ತೆಗೆಯುವುದಕ್ಕೆ ಸರ್ವೋತ್ಕೃಷ್ಟವಾದದ್ದು. ಹಚ್ಚಿದ್ದು 5 ನಿಮಿಷ ಇದ್ದರೆ ಸಾಕು. ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಹಚ್ಚುವ ಕ್ರಮವನ್ನು 4 ಭಾಷೆಗಳಲ್ಲಿ ರಚಿಸಿ ಕಳುಹಿಸುತ್ತೇವೆ. ಕ್ರಮದಂತೆ ಹಚ್ಚಿದರೆ ತುಂಬಾ ಹರ್ಷದಿಂದ ಕೆಲಸಮಾಡುತ್ತೆ. ಇದಲ್ಲದೆ ಅಂಥಾ ಗುಣವಿಲ್ಲವೆಂದು ತೋರಿಸಿ ಕೊಟ್ಟವರಿಗೆ ಮರಿಟಪ್ಪಾಲಿಗೇ ಹಣವನ್ನು ವಾಪಸುಮಾಡುವೆವು. 3 ಬಿಲ್ಲೆ ಇರುವ ಪೆಟ್ಟಿಗೆಗೆ 14 ಆಣೆ; ಒಂದೇ ಸಲ 3 ಪೆಟ್ಟಿಗೆ ತರಿಸಿಕೊಂಡರೆ ರೂ. 1-10-0. ಪೋಸ್ಟೇಜ್ ಬೇರೆ.

ಹೆಚ್ಚಾಗಿ ತರಿಸಿಕೊಳ್ಳುವ ವ್ಯಾಪಾರಿಗಳಿಗೆ ಬೇರೇ ದರಗಳುಂಟು.

ನಮ್ಮ ವಿಳಾಸ:—ಪಿ. ಎ. ಎಸ್. ಪಾಣಿ,
[276-4] ನಂ. 3, ಇರುಳಪ್ಪನ್ ಬೀದಿ, ಮದರಾಸ್.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಿರಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒಟ್ಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಟ್ಟೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ಸಣ್ಣದಲ್ಲಿ ಕಂಡ ಲೀಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಟ್ ಬ್ಯಾಲೆನ್ಸು ಬಹು ಬಲಿಷ್ಠವಾದ 6 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಡಿಸೆಂಬರ್ ಅಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಸಂಟಿಗೆಂದಾವರ್ತಾ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ದರ್ಬಾರ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[109-32] ಸಾಹುಕಾರ್ ಪೇಟೆ, ಮದರಾಸು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುತ್ತವೆ. ಟಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ 1-10-0. ಇವು ಜನವರಿ ಅಖೈರು ವರೆಗೆ ಮಾತ್ರ ಸಿಗುವವು ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!



ಅಮೃತಾಂಜನ ರಿಜಿಸ್ಟರ್ಡ್

[52-44]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಯಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರೆಯಾದ ಮುದ್ರೆ ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಯಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಿಚ್ಚು ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0 ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಬೇರೇ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೀಲಿ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೆದಡನ್ನು ಪರಿಮಾಡುವದು. ಕ್ಷಣದಲ್ಲಿ ಮಂಪನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮುತ್ತು ಜಾಜಮಲ್ಲಿಗೆ, ಸಂಪಿಗೆ, ಇರುವಂತಿಗೆ, ಕ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಾವಾಸ್ಟಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡೆ ಗಿಣಿಗಳು 6, ಕಾರೊನೇಷನ್ ಬ್ರೂಚ್ 1, ಜನಾಬು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,
[250-7] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೇ ಹೇಮಂತಋತೌ ಪುಷ್ಯ ಬಹುಳ ಸಪ್ತಮಿ ಶುಕ್ರವಾರದಿಂದ ಪುಷ್ಯ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜನವರಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಧನಸ್ ಮಕರ ಶೇದಿ
8	ಶುಕ್ರ *	ಸಪ್ತಮಿ	16-58	ಹಸ್ತ	37-57	25
9	ಶನಿ	ಅಷ್ಟಮಿ	11-46	ಚಿತ್ತಾ	34-12	26
10	ಭಾನು ;;	ನವಮಿ	6-10	ಸ್ವಾತಿ	30-9	27
11	ಸೋಮ †	ದಶಮಿ	0-16	ಅನು೦	54-7	28
12	ಮಂಗಳ §	ದ್ವಾದಶಿ	48-33	ಅನೂರಾಧ	21-47	29
13	ಬುಧ ::	ತ್ರಯೋದಶಿ	43-11	ಜ್ಯೇಷ್ಠಾ	17-57	30
14	ಗುರು ‡	ಚತುರ್ದಶಿ	38-2	ಮೂಲ	14-38	1

* ಅಷ್ಟಮೀ ತಿಥಿ. ;; ಮಳೆ ನಕ್ಷತ್ರ—ಉತ್ತರಾಷಾಢ 1 ನೇ ಪಾದ. † ಸ್ಮಾರ್ತ ಏಕಾದಶಿ, ದಗ್ಧಯೋಗ. § ವೈಷ್ಣವ ಏಕಾದಶಿ, ಹರಿವಾಸರ. :: ಪಾತಾಭಾವ, ಪ್ರದೋಷ, ಮಾಸಶಿವರಾತ್ರಿ, ಭೋಗೀ ಹಬ್ಬ, ಮಳೆ ನಕ್ಷತ್ರ—ಉತ್ತರಾಷಾಢ 2 ನೇ ಪಾದ. ‡ ಉತ್ತರಾಯಣ ಪುಣ್ಯಕಾಲ, ಶಿವಗಂಗಾ ಗಂಗೋತ್ಪತ್ತಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 7/1/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. · ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೫ ನೇ ಇಸವಿ ಜನವರಿ ತಾರೀಖು ೧೪ ನೇ ಗುರುವಾರ. ಸಂಚಿಕೆ ೩೩

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ನಮ್ಮ ವಿಳಾಸ— ಪಿ. ನರಸಿಂಗರಾವ್,
[300-3] ಎಡಿಟರ್, ಲಾ ಗೆಜೆಟ್, ಬೆಂಗಳೂರು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸೌಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವ	0-8-0	ಸಂತಾನಕ	0-4-0

[375-5] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-26]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಶ್ವತ್ಥಮೃಗ 1½ ಆ; ಅವಿಮಾರಕ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ದಾಹಸಿಕೆ 2½ ಆ; ಸುಶೀಲೆ 6 ಆ; ನಥಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಹೊಸ ಪದ್ಧತಿ!! ಹೊಸ ಪುಸ್ತಕ!! ಹೊಸ ಭಾವನೆ!!

ಮಾರಿಗೆಗೆ ಸಿದ್ಧವಾಗಿದೆ **ಲಿಪಿಮಾಲಾನಿಧಿ.** ಕ್ರಯ ಅಂಚೆವೆಚ್ಚ ಸೇರಿ ರೂ. 1-12-0.

ಒಂಭತ್ತು ಭಾಷೆ—ಒಂಭತ್ತು ಲಿಪಿ.

ಒಂದಕ್ಕೆ ಒಂಭತ್ತು ಲಾಭ! ವರ್ಣಪರಿಜ್ಞಾನ!! ಮೊದಲನೆಯ ಪುಸ್ತಕ!!!

ಕನ್ನಡ, ತೆಲುಗು, ಅರವ, ಗ್ರಂಥ, ಮಲೆಯಾಳ, ಸಂಸ್ಕೃತ, ಮಹಾರಾಷ್ಟ್ರ, ಹಿಂದಿ, ಗುಜರಾತಿ, ಬೆಂಗಾಳಿ, ಈ ಭಾಷೆಗಳಲ್ಲಿ ಯಾವುದಾದರೊಂದನ್ನು ತಿಳಿದವರು ಇತರ ಭಾಷೆಗಳನ್ನೂ ಲಿಪಿಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಈ ಪುಸ್ತಕವು ತುಂಬಾ ಸಹಾಯವಾಗಿರುವುದು. [282-5]

ಕೆಲವು ಪುಸ್ತಕಗಳೇ ಅಚ್ಚಾಗಿವೆ! ಮುಗಿದ ನಂತರ ದೊರೆಯಲಾರದು!!

ಕ್ರಯ ಒಂದು ರೂಪಾಯಿ ಹನ್ನೆರಡಾಣೆ ಮಾತ್ರ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮ, ಸಂಪಾದಕ—ಸವಿನುಡಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

(ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದುವುಗಳು).

ವ್ಯವಹಾರ ನಿರ್ಣಯ.

[279-5]

ಕನ್ನಡದ **ಲಾ** ಪುಸ್ತಕವು.

ದ್ವಿತೀಯ ಮುದ್ರಣ — 616 ಪುಟಗಳುಳ್ಳದು.

ಕ್ರಯ ದಪ್ಪ ಕಾಗದದ ಪ್ರತಿಗೆ ರೂ. 1-8-0 ಪೋಸ್ಟೇಜು
,, ಗ್ಲೇಜ್ ಕಾಗದದ ಪ್ರತಿಗೆ ,, 2-4-0 ಪ್ರತಿ 1 ಕ್ಕೆ 4 ಆ.

ಇದರಲ್ಲಿ ಹಿಂದೂ ಲಾ, ಮಹಮದೀಯ ಲಾ, ಪೀನಲ್ ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ಮೃತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ, ಸ್ತ್ರೀಯರ ವಾರಸ್ಸು ಹಕ್ಕು ಈ ವಿಷಯಕವಾದ ಮಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ವ್ಯವಸಾಯ ಲಾ"

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ, ಸರ್ಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ—ಎಂ. ಎಂ. ಪಂಡಿತಾರಾಧ್ಯ, ಮೈಸೂರು.

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ 1 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಭಕ್ತವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.
[63-47] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೀನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ಶಿಸ್ತುನಾಮೆ 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ, ಸಾರಾಯಿ ರೂಲ್ಸ್ 8 ಆಣೆ.

[143—27] ವಿಳಾಸ:—ಪಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು!!!

ಯುದ್ಧಕ್ಕೆ ಸೇರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಸೈನಿಕರ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ 2 ಆಣೆ; ವಿ. ಪಿ. ಯಲ್ಲಿ 4 ಆಣೆ.

[8-1] ನಮ್ಮ ವಿಳಾಸ.—ದಿ ಜನರಲ್ ಏಜೆನ್ಸಿ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಟ್ಟ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-48]

ಇಂಗ್ಲೀಷಿಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮ್ಯಾಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ	....	ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು	......	,, 6

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ಒಂದಕ್ಕೆ 3 ಆಣೆ ಕಮೀಷನ್ ದೊರೆಯುವುದು. [229-12]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜ್ವರದ ಮಾತ್ರೆ—ಮಲೇರಿಯ, ಚಳಿ, ವಿಷಮಶೀತ ಜ್ವರಗಳಿಗೆ ಅಮೃತ. ಶೀಸೆಗೆ 8 ಆಣೆ. "ತಾವು ಕಳಿಸಿದ ಜ್ವರದ ಮಾತ್ರೆಗಳನ್ನು ನಾನು ನನ್ನ ಸ್ನೇಹಿತರು ಸೇವಿಸಿ ಶ್ರೇಷ್ಠ ಗುಣಕಂಡೆವು. ಇದು ಅನೇಕ ಇಂಗ್ಲೀಷು ಔಷಧಿಗಳಿಗಿಂತ ಯಾವ ಭಾಗದಲ್ಲೂ ಕಡಿಮೆಯಿಲ್ಲ"—ಎಂ. ಆರ್. ರಾಮಸ್ವಾಮಿಶಾಸ್ತ್ರಿ, ಜಮೀನ್ದಾರ್, ಮಂಚನಹಳ್ಳಿ. [262-7]

ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt. F.I.A. (one of the most eminent Actuaries in England)

First Valuation Result:—The total liabilities under all assurances issued up to 31st March 1918, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer. or Secretary,

Oppcsite to Minto Ophthalmic Hospital.
[131-27] Bangalore City.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ ನೋಟೀಸ್.

ಪಟ್ಟಣದಲ್ಲಿ ಜನಗಳ ಉಪಯೋಗಕ್ಕಾಗಿ ಕೆಲವು ನಮೂನಾ ಬಂಗ್ಲೆ ಅಥವಾ ವಿಲ್ಲಾ (ಚಿಕ್ಕ ಚಿಕ್ಕ ಬಂಗ್ಲೆ) ಗಳನ್ನು ಕಟ್ಟಿಸಬೇಕೆಂದು ಮ್ಯುನಿಸಿಪಲ್ ಕೌನ್ಸಿಲ್ಲರವರು ಇಷ್ಟಪಡುತ್ತಾರಾಗಿ ಈ ವಿಷಯದಲ್ಲಿ ಕಟ್ಟಡದ ವ್ಯಾಪಾರಸ್ಥರು ಮತ್ತು ನಿವಾಸಿಗಳು ಸಹ ತಮಗೆ ಬೇಕಾದ ರಿಯಾಯಿತಿಗಳ ನಮೂದಿನಿಂದ ದರಖಾಸ್ತುಗಳನ್ನು ಕೊಡಬಹುದು. ಇದರಲ್ಲಿ ಉತ್ಸಾಹವುಳ್ಳ ಎಲ್ಲಾ ಜನರೂ 1915 ನೇ ಜನವರಿ 15 ನೇ ತಾರೀಖಿನೊಳಗೆ ಈ ಕೆಳಗೆ ನಮೂದಿಸುವ ಎಲ್ಲಾ ವಿಷಯಗಳಿಗೂ ತಪಸೀಲಾಗಿ ತಿಳಿಸಬೇಕು. ಇತರ ತಪಸೀಲುಗಳು ತಿಳಿಯಬೇಕಾಗಿದ್ದಲ್ಲಿ ಮ್ಯುನಿಸಿಪಲ್ ಆಫೀಸಿನಲ್ಲಿ ಪಡೆಯಬಹುದು.

ಅರ್ಜಿಯಲ್ಲಿ ಕಾಣಿಸಬೇಕಾದ ವಿವರಗಳು.

(1) ಮಾಡಲ್ ಬಂಗ್ಲಾ ಅಥವಾ ವಿಲ್ಲಾಗಳನ್ನು ಕಟ್ಟಲು ಇಚ್ಛಿಸುವವರ ಹೆಸರು.
(2) ಕಟ್ಟಿಸಲು ಇಷ್ಟಪಡುವ ಸ್ಥಳ.
(3) ಸದರಿ ಕಟ್ಟಡದ ಅಂದಾಜು ವೆಚ್ಚಗಳು.
(4) ಬೇಕಾಗಿರುವ ರಿಯಾಯಿತಿ ವಗೈರೆ.

ಮೈಸೂರು, ಟಿ. ಲಕ್ಷ್ಮಣರಾವ್,
ತಾ. 28-12-1914. [301-3] ಪ್ರೆಸಿಡೆಂಟ್.

"BENEFIT YOURSELF AND BENEFIT OTHERS."

HINDUSTHAN CO-OPERATIVE INSURANCE SOCIETY, LIMITED.
HINDUSTHAN BUILDINGS, CALCUTTA.

Authorised Capital One Crore (1,00,00,000).
Subscribed Capital Rs. 87,50,000.
Paid-up Capital ... Rs. 12,50,000.
Policies effected over 2,30,00,000.

Some of the special features of the Hindusthan:

(1) It offers all that is best, latest, cheapest and most equitable in Life Assurance.
(2) It grants Loans on properties repayable on easy terms to Policy-holders at a moderate interest to the extent of the amount insured after the Policy has been in force for two full years.
(3) House and Land purchase system a speciality.
(4) It is governed by Maharajas and Zemindars.
(5) Funds invested in India on landed properties and with Policy-holders on unimpeachable security.

Wanted:—

Active and energetic Agents to represent the Society throughout the State on liberal terms of Commission and monthly Office Allowance.

For further particulars and Prospectus apply to

Messrs. VENKATACHALAM & SONS,
[292-3] *Chief Agents, 166, Doddapetta, Mysore.*

ತ್ವರೆಮಾಡಿರಿ: ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪಾಲು ಹಾಸಲು ಸಹ ಮಾಫ್. ಇತರರಿಗೆ ವಿ. ಪಿ ಛಾರ್ಜು ಸೇರಿ ಒಂದಕ್ಕೆ 3 ಆಣೆ. 6 ಕ್ಕೆ 13 ಆಣೆ; 12 ಕ್ಕೆ ರೂ 1-10-0. ಇವು ಜನವರಿ ಅಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ ರಿಜಿಸ್ಟರ್ಡ್

[52-45]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮ ವ್ಯಾಧಿ, ಹಲ್ಲು ನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕಾಗದಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕಾಗದಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ ಪ್ರತ್ಯೇಕ. ಗಜಕರ್ಣದ ಮುಲಾಮು 0-6-0 ದಂತಮಂಜನ 0-1-0. ತಲೆಯ ತೈಲ 0-12-0. ಬಿಜ್ಜ ಮುಲಾಮು 0-3-0, ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0 ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಬಹೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ಹೋ, ಫೋರ್ಟು. ಮುಂಬಯಿ, ಮತ್ತು ಜಹಂಗೀರ್ ಸ್ಟ್ರೀಟ್, ಮದ್ರಾಸು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಹರಿಸುವದು. ಕಣ್ಣಿನಲ್ಲಿ ಮಂಜನ್ನು ಕಳೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚ ಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲವಾಸ್ತೆ 22, ಕೋಂದೆ ಗಿಗಳು 6, ಕಾಮಿನೇಷನ್ ಬ್ರೂಚ್ 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎ. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. 44, ಸಂಬುಳೆಪ್ಪಯ್ಯರ ಬೀದಿ, ಮದರಾಸು.

[250-8]

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಬೇಳಿಗೆ ಸರಿಯಾದ ಮದ್ದು.

ಚೇಳಿನ ಕೊಡತಕ್ಕೆ "ಸ್ಕಾರ್ಪಿಯಾನಿಕ" ಎನಿಸಾ ನಿರಪಾಯಕವಾದ ಮತ್ತು ಸೇವನೆಗೆ ಅರ್ಹವಾದ ಔಷಧವು ಮತ್ತೊಂದಿಲ್ಲ. ಪುನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡೆದಿರುತ್ತೆ.

"ನಮ್ಮ ಚೇಳಿನ ಮದ್ದಿನಿಂದ ತಪ್ಪದೆ ಗುಣ ಬಂದಿದೆ" ಯೆಂದು ಭೀಮರಾವು ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ. ಬಾಟ್ಲಿ ಒಂದಕ್ಕೆ ಕ್ರಯ ರೂ ೦-೮-೦ ನಾಲ್ಕು ಬಾಟ್ಲಿವರೆಗೆ ಪೋಸ್ಟ್ ಹಾಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೂಡ್ಲೆ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

[296-3] ವಿಳಾಸ.— ಸ್ಕಾರ್ಪಿಯಾನಿಕ ಡಿಪೋ, ಹರಿಹರ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills,
BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಚೋಟುದಲ್ಲಾಳಿ, ಮೊಕಾದ್ದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕಂ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-39]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಪರ ಊರ ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ತೊಲೆಗಳು 2 ಸಲೀ ಅಡಿ ಲಾಗಾಯಿತು 30-40 ಸಲೀ ಅಡಿಯ ವರಿಗೂ ಇರುತ್ತವೆ. ಇಷ್ಟವುಳ್ಳವರು ತಪ್ಸೀಲನ್ನು ಹುಣಸೂರಿನಲ್ಲಿರುವ ಮೆ॥ ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೆ ಗಾಡಿ ತಯಾರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ. [232-11]

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[201-19] GIRLS' INDUSTRIAL SCHOOL, HASSAN

ರಾಸ್‌ಕೋಪ್ ಪಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಸಿಸ್ ಲಿವರ್ ಚಿಕ್ಕ ಸೈಜು ಕಂಪೆನ್ ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 6-0-0. ಇದನ್ನು ಡಿಸೆಂಬರ್ ಅಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಬವಾನ್ ಸಿಲ್ಕ್ ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[109-33] ಸಾಹುಕಾರ್ ಪೇಟೆ, ಮದರಾಸು.

ಬಾಲಕೇಸರಿ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಟ್ಟಿಹರಳಿನಿಂದಲೂ ತಯಾರಾದ ಈ ತೈಲವು ಮಕ್ಕಳಿಗೆ ಉಂಟಾಗುವ ಜ್ವರ, ಕೆಮ್ಮು, ನಾಯಿಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವದು, ಉಬ್ಬಸ, ಕ್ಷಯ, ಮಾಂದ್ಯ, ಗರ್ಭವೇರುಂ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ, ಮಕ್ಕಳನ್ನು ಸಶಕ್ತರನ್ನಾಗಿ ಮಾಡುವುದಲ್ಲದೆ 2-3 ಸಲ ಸುಖ ಭೇದಿಯಾಗುತ್ತದೆ. ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆ ವಿ. ಪಿ ಛಾರ್ಜು ಬೇರೆ.

ವಿಳಾಸ.—ಎಂ. ಗೋವಿಂದಶೆಟ್ಟಿ, ಆಯುರ್ವೇದಿಕ್ ಮೆಡಿಕಲ್
[236 10] ಪ್ರಾಕ್ಟೀಷನರ್, ದೇವನಹಳ್ಳಿ ಟೌನ್.

"......Preparations of M. Govinda Chetty seem to be greatly in demand by his constituents, many of whom are English-educated people in good positions.. ..."

(Sd.) P. S. ACHYUTA RAO,
Senior Surgeon and Sanitary Commr.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲ ಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉತ್ಸಾಹದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಕೋಮಳವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಪಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳು ವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾಗದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-51]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತೆ:—
ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜೆಂಟ್. ದಿ ಬಾಸೆಲ್ ಮಿಷನ್ ಡಿಪೋ, ಮಂಗಳೂರು.

ಸಾಗುವಾನಿ ಹರಾಜು.

ಹುಣಸೂರಲ್ಲಿರುವ ಮೆಸರ್ಸ್ ಪಿಟ್ರಿ ಹೆ ಅಂಡ್ ಸನ್ ಯವರ ಕಾರ್ಖಾನೆಯಲ್ಲಿ ಜನವರಿ 27 ನೇ ತಾರೀಖಿನ ದಿವಸ ತೇಗದ ತಲೆಕೊನೆಗಳು ಮತ್ತು ದೊಡ್ಡ ಮರಗಳು ಹರಾಜುವಾಗಲ್ಪಡುತ್ತೆ. ಇಷ್ಟವಿದ್ದವರು ಆ ದಿವಸ ಅಲ್ಲಿಗೆ ಬಂದು ಖರೀದ್ ಮಾಡಬಹುದಾಗಿ ತಿಳಿಸಿದೆ. [11-1]

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅದರ ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್ ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್

[221-16]

ಕುಂತಲಾನಂದ ತೈಲವು.

213-17

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಗೆಯ ಬೆಳ್ಳಿಯ ಪದಕಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರಿತವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸಿದ್ಧಾರ್ಥಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ, ಪೇಟೆರಿ, ಮದರಾಸ್.

ಪಾಶ್ಚಾತ್ಯ ದೇಶಗಳ ನಮೂನೆಯುಳ್ಳ ಬಹಳ ಸೊಗಸಾಗಿಯೂ, ಅತ್ಯುತ್ಕೃಷ್ಟವಾಗಿಯೂ, ಬೆಲೆ ಬಹಳ ಸುಲಭವಾಗಿಯೂ ಇರುವ ಉತ್ಕೃಷ್ಟ ಪೆಟ್ಟಿಗೆಗಳು ಮಂಗಳೂರು ಬೇಸಲ್ ಮಿಷನ್ ಮೆಕ್ಯಾನಿಕಲ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ತಯಾರಾಗಿ ಗೌರ್ನಮೆಂಟುಗಳಲ್ಲಿ ಮೊದಲುಗಳನ್ನು ಹೊಂದಿ ಬಿಕರಿಗೆ ಸಿದ್ಧವಾಗಿವೆ. ಇಷ್ಟಪಡುವ ಯಾವ ನಮೂನೆಯಲ್ಲಿ ಬೇಕಾದರೂ ಹೊಸದಾಗಿಯೂ ತಯಾರುಮಾಡಿ ಕೊಡಲ್ಪಡುತ್ತೆ.

ಮೈಸೂರು ದೇಶದ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಏಜಂಟರುಗಳು ಬೇಕಾಗಿದೆ. ಎಲ್ಲಾ ವಿಷಯಕ್ಕೂ ಈ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಬಹುದು.

ಬಿ. ಜಿ. ಅಯ್ಯಂಗಾರ್, ಚೀಫ್ ಏಜಂಟರು,

[256-8] 290, ದೇವಾಂಬಾ ಅಗ್ರಹಾರ, ಮೈಸೂರು.

ಮೋಟರ್ ಬಸ್ಸುಗಳು

ಗುಂಡ್ಲುಪೇಟೆಯಿಂದ ನಂಜನಗೂಡಿಗೆ.

ಚಾಮರಾಜನಗರದಿಂದ ನಂಜನಗೂಡಿಗೆ.

ಬೆಳಿಗ್ಗೆ.—(1) ಮೋಟರುಗಳು ಪ್ರತಿದಿನವೂ ಗುಂಡ್ಲುಪೇಟೆಯಿಂದಲೂ, ಚಾಮರಾಜನಗರದಿಂದಲೂ ಬೆಳಿಗ್ಗೆ 6–30 ಗಂಟೆಗೆ ಹೊರಟು 7–30 ಗಂಟೆಗೆ ನಂಜನಗೂಡು ತಲಪುತ್ತವೆ. (2) ಮೋಟರುಗಳು ಪ್ರತಿದಿನವೂ ಬೆಳಿಗ್ಗೆ 8–30 ಗಂಟೆಗೆ ನಂಜನಗೂಡಿನಿಂದ ಹೊರಟು 9–30 ಗಂಟೆಗೆ ಗುಂಡ್ಲುಪೇಟೆಯನ್ನೂ, ಚಾಮರಾಜನಗರವನ್ನೂ ತಲಪುತ್ತವೆ.

ಮಧ್ಯಾಹ್ನ.—(1) ಮೋಟರುಗಳು ಮಧ್ಯಾಹ್ನ ಗುಂಡ್ಲುಪೇಟೆಯಿಂದಲೂ, ಚಾಮರಾಜನಗರದಿಂದಲೂ 4 ಗಂಟೆಗೆ ಹೊರಟು 5 ಗಂಟೆಗೆ ನಂಜನಗೂಡು ತಲಪುತ್ತವೆ. (2) ಮೋಟರುಗಳು ಸಾಯಂಕಾಲ 6–30 ಗಂಟೆಗೆ ನಂಜನಗೂಡಿನಿಂದ ಹೊರಟು 7–30 ಗಂಟೆಗೆ ಗುಂಡ್ಲುಪೇಟೆಯನ್ನೂ, ಚಾಮರಾಜನಗರವನ್ನೂ ತಲಪುತ್ತವೆ.

ನಿಬಂಧನೆಗಳು.—(1) ಪ್ರಯಾಣಿಕರು 6 ಮಂದಿಗಿಂತ ಕಡಮೆಯಾದರೆ ಮೋಟರನ್ನು ಬಿಡುವುದಿಲ್ಲ. (2) ಛಾರ್ಜಿನ ದರ—1 ಸೀಟಿಗೆ ರೂ. 1–8–0.

ಪ್ರಾರಂಭ.—1915 ನೇ ಇಸವಿ ಜನವರಿ ತಾ. 17 ನೇ ಭಾನುವಾರದಿಂದ ಮೋಟರುಗಳು ಬಿಡಲ್ಪಡುವವು.

ಹೆಚ್ಚು ಸಂಗತಿಗಳನ್ನು ಕೆಳಗೆ ಕಂಡ ವಿಳಾಸದಾರರಲ್ಲಿ ತಿಳಿಯಬಹುದು:—

ದಿ ಮೈಸೂರು ಮೋಟರ್ ಸರ್ವಿಸ್ ಕಂಪನಿ,

[6–2] ಹಳೇ ಪೋಸ್ಟ್ ಆಫೀಸ್ ಬೀದಿ, ಮೈಸೂರು.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರುಮಾಡಿರುವದು. [9-1]

ಮೆಲಿನ್‌ರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರುಮಾಡಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಲವಲವಿಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪ್ರಪಂಚಯುದ್ಧ

ಘನ ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಛಾಯಾಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನು ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳುವ ಭೀಕರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಚಿಕ್ಕ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಹೋದ ಎಮ್‌ಡನ್ನನ್ನು ನೋಡಿರುವಿರಾ? ಅದರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿರೋಮಣಿಯನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಶಾಸನ ದುಷ್ಟರಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಷರಾ:—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಪೆಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[10-1]

ವೃತ್ತಾಂತ ಪತ್ರಿಕೆ.

—:o:—

ಶಕೆ ೧೯೧೫ ನೇ ಇಸವಿ ಜನವರಿ ತಾ ೧೪ ನೇ ಗುರುವಾರ

ಯುದ್ಧದ ಪ್ರಾಬಲ್ಯ.

ಕಳೆದ ಐದು ತಿಂಗಳ ಲಾಗಾಯಿತು ಯೂರೋಪ್ ಖಂಡದಲ್ಲಿ ಘೋರವಾದ ಯುದ್ಧವು ನಡೆಯುತ್ತಲೇ ಇದೆ. ಪ್ರಸ್ತುತದಲ್ಲಿ ಅಲ್ಲಿನ ವಿದ್ಯಮಾನಗಳು ಹೇಗಿರುತ್ತವೆಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದಾಗಿರುವುದು. ಕಳೆದ ಆಗಸ್ಟ್ ತಿಂಗಳಲ್ಲಿ ಜರ್ಮನಿಯು ಯುದ್ಧಮಾಡುವುದಕ್ಕೆ ಪೂರ್ಣವಾಗಿ ಸನ್ನದ್ಧವಾಗಿದ್ದಿತು. ಅದರಲ್ಲಿ ಯುದ್ಧಮಾಡುವುದಕ್ಕೆ ತರಪೇತಾದ ಸೈನಿಕರು ಅಪಾರವಾಗಿದ್ದರು. ಇವರಲ್ಲಿ ನವೀನವಾಗಿ ಕಂಡುಹಿಡಿದ ಫಿರಂಗಿಗಳೂ ಬಂದೂಕಗಳೂ ಇದ್ದುವು. ಇವುಗಳಲ್ಲಿ ಕೆಲವು ಬೇರೆ ದೇಶೀಯರುಗಳು ಇಟ್ಟುಕೊಂಡಿರುವವುಗಳಿಗಿಂತ ಹೆಚ್ಚು ಬಲವುಳ್ಳವುಗಳು. ಯುದ್ಧಮಾಡತಕ್ಕ ಕ್ರಮದ ನಕ್ಷೆಯನ್ನು ತುಂಬಾ ಜಾಗರೂಕತೆಯಿಂದ ಬರೆದಿಟ್ಟುಕೊಂಡಿದ್ದರು. ಯುದ್ಧಭಟರು ಬೆಲ್ಜಿಯಮ್‌ನಲ್ಲಿ ಯುದ್ಧವನ್ನು ಪ್ರಾರಂಭಿಸಬೇಕಾಗಿದ್ದಿತು. ತಾವು ಯಾವಾಗ ಪ್ಯಾರಿಸಿಗೆ ಹೋಗಿ ಮುಟ್ಟಬಹುದೆಂದು ತಾರೀಕನ್ನು ಸಹ ನಿಷ್ಕರ್ಷೆಮಾಡಿದ್ದರು. ತಾವು ಫ್ರೆಂಚರ ಬಲವನ್ನು ಅಣಗಿಸಿಬಿಟ್ಟ ಮೇಲೆ ಆಸ್ಟ್ರಿಯದವರ ಜೊತೆಯಲ್ಲಿ ಸೇರಿಕೊಂಡು ರಷ್ಯಾದವರನ್ನು ಸೋಲಿಸಬೇಕೆಂದು ಜರ್ಮನಿಯವರು ಸಂಕಲ್ಪಮಾಡಿಕೊಂಡಿದ್ದರು. ತಮ್ಮ ಏರ್ಪಾಡುಗಳೆಲ್ಲಾ ತಮ್ಮ ನಿರೀಕ್ಷೆಯಂತೆಯೇ ಸಿದ್ಧಿಗೆ ಬರುವುವೆಂಬುದರ ವಿಷಯದಲ್ಲಿ ಅವರಿಗೆ ತಿಲಾಂಶವಾದರೂ ಅನುಮಾನವಿರಲಿಲ್ಲ. ಏಕೆಂದರೆ ಫ್ರೆಂಚರು ಯುದ್ಧಸನ್ನದ್ಧರಾಗಿರುವುದಿಲ್ಲವೆಂದೂ ಬ್ರಿಟಿಷರು ಈ ಯುದ್ಧಕ್ಕೆ ಕೈಹಾಕಲಾರರೆಂದೂ ರಷ್ಯಾದವರು ತಮ್ಮ ಸೈನ್ಯವನ್ನು ಅಣಿಮಾಡಿಕೊಳ್ಳುವುದಕ್ಕೆ ಕಾಲವಿಳಂಬವಾಗುವುದೆಂದೂ ಅವರು ನಂಬಿಕೊಂಡಿದ್ದರು.

ಆದರೆ ಜರ್ಮನಿಯವರ ಏರ್ಪಾಡುಗಳೆಲ್ಲಾ ಸಂಪೂರ್ಣವಾಗಿ ತಲೆಕೆಳಗಾದುವು. ಪ್ರಥಮತಃ ಬೆಲ್ಜಿಯಮ್ ತುಂಬಾ ಸಾಹಸಪಟ್ಟು ಜರ್ಮನಿಯವರು ನುಗ್ಗಬಾರದಂತೆ ತಡೆದುಬಿಟ್ಟಿತು. ಇದರಿಂದ ಫ್ರೆಂಚರೂ ಬ್ರಿಟಿಷರೂ ಯುದ್ಧಸನ್ನದ್ಧರಾಗಲು ಅವರಿಗೆ ಅವಕಾಶವು ಸಿಕ್ಕಿತು. ಆದಕಾರಣ ಜರ್ಮನಿಯವರು ಫ್ರೆಂಚರ ಮೇಲೆಯೂ ಬ್ರಿಟಿಷರ ಮೇಲೆಯೂ ಬಹು ಕಠಿಣತರವಾದ ಯುದ್ಧವನ್ನು ನಡಿಸಬೇಕಾಗಿ ಬಂದಿತು. ಜರ್ಮನಿಯವರು ಪ್ಯಾರಿಸಿನ ಸಮೀಪಕ್ಕೆ ಬರುವ ವರೆಗೂ ಶತ್ರು ಸೈನ್ಯವನ್ನು ಹಿಂದಟ್ಟುತ್ತಾ ಮುಂದು ಮುಂದಕ್ಕೆ ನುಗ್ಗಿಬಂದರು. ಆಗ ಅವರನ್ನು ತಲ್ಲಣಪಡಿಸುವಂಥ ಮೊದಲನೆಯ ಪೆಟ್ಟು ಬಿದ್ದಿತು. ಆದಕಾರಣ ಜರ್ಮನಿಯವರು ಅರ್ಧದಾರಿಗಿಂತಲೂ ಹೆಚ್ಚಾಗಿ ಫ್ರಾನ್ಸಿನ ಎಲ್ಲೆಕಟ್ಟಿನ ವರೆಗೆ ಹಿಮ್ಮೆಟ್ಟಿ ಹೋದರು. ಬಹು ಘೋರವಾದ ಅನೇಕ ಯುದ್ಧಗಳು ನಡೆದ ತರುವಾಯ ಜರ್ಮನಿಯವರು ಬೆಲ್ಜಿಯಮ್‌ನ ಹೆಚ್ಚಿನ ಭಾಗವನ್ನು ಸ್ವಾಧೀನಪಡಿಸಿಕೊಂಡರು. ಆದರೂ ಅದು ಸಂಪೂರ್ಣವಾಗಿ ಅವರ ಕೈಗೆ ಸಿಕ್ಕಿರುವುದಿಲ್ಲ. ಕೆಲವು ತಿಂಗಳ ವರೆಗೂ ಜರ್ಮನಿಯವರು ತಾವಾಗಿ ಮುಂದುಬಿದ್ದು ಬಂದು ಮೇಲೆ ಬೀಳುತ್ತಿದ್ದರು. ಆದರೆ ಈಗ ಅದು ನಿಂತುಹೋಯಿತು. ನಮ್ಮ ಕಡೆಯ ಸೈನ್ಯಗಳು ಈಚೆಗೆ ಹೆಚ್ಚು ಬಲಗೊಂಡು ಈಗ ತಾವಾಗಿ ಮುಂದೆ ನುಗ್ಗಿ ಜರ್ಮನಿಯವರ ಮೇಲೆ ಬೀಳುತ್ತಿದ್ದಾರೆ. ತಮ್ಮನ್ನು ಬಹಳವಾಗಿ ಬಲಪಡಿಸಿಕೊಂಡಿದ್ದ ಜರ್ಮನಿಯವರು ಈಗ ನಿಧಾನವಾಗಿಯಾದರೂ ನಿಶ್ಚಯವಾಗಿ ಹಿಮ್ಮೆಟ್ಟಿ ಹೋಗುತ್ತಿದ್ದಾರೆ. ಅವರನ್ನು ಅವರ ಆಶ್ರಯಸ್ಥಾನಗಳಿಂದ ಹೊರಹೊರಡಿಸುವ ಕಾರ್ಯವು ಬಹು ನಿಧಾನವಾಗಿ ನಡೆಯುತ್ತಿದೆ. ಆದರೆ ತಾವಾಗಿ ಹೋಗಿ ಮೇಲೆ ಬೀಳುವುದನ್ನು ಬಿಟ್ಟಿರುವವರು ಜಯಪ್ರದರಾಗುವುದು ಸಾಧ್ಯವಾಗಿರಲಾರದು.

ಇದು ಮಾತ್ರವಲ್ಲದೆ ರಷ್ಯಾದವರೂ ಕೂಡ ಜರ್ಮನಿಯವರು ನಿರೀಕ್ಷಿಸಿದ್ದುದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿರುತ್ತಾರೆ. ಅವರು ಅಷ್ಟು ಬೇಗ ತಮ್ಮ ಸೈನ್ಯಗಳನ್ನು ಜೊತೆಮಾಡಿಕೊಳ್ಳುವರೆಂದು ಯಾರಾದರೂ ನಿರೀಕ್ಷಿಸಿರಲಿಲ್ಲ. ಅವರು ಮುಂದಕ್ಕೆ ಹೋಗುವಂತೆ ಬಲಾತ್ಕರಿಸಲ್ಪಟ್ಟಾಗ್ಗ್ಯೂ ಪೂರ್ವದ ಪ್ರುಷ್ಯವನ್ನು ನುಗ್ಗಿ ಹೋಗುವಷ್ಟು ಸಮರ್ಥರಾಗಿದ್ದರು. ಇದರಿಂದ ಬೇರೆ ಸೈನ್ಯವು ಅಲ್ಲಿ ಬರುವುದಕ್ಕೆ ಅವಕಾಶ ಸಿಕ್ಕಿತು. ಕೂಡಲೆ ರಷ್ಯಾದವರು ಆಸ್ಟ್ರಿಯದೊಳಗೆ ನುಗ್ಗಿ ಹೋಗಿ ಗಲೀಸಿಯದ ಬಹು ದೊಡ್ಡ ಭಾಗವನ್ನು ಸ್ವಾಧೀನಪಡಿಸಿಕೊಂಡರು. ಅನೇಕ ಪ್ರದೇಶಗಳಲ್ಲಿ ಕಠಿಣತರವಾದ ಕದನಗಳು ನಡೆದಿರುತ್ತವೆ. ಆದರೆ ಜರ್ಮನಿಯವರು ತಾವು ಹಿಂದೆ ಮಾಡಿಕೊಂಡಿದ್ದ ಏರ್ಪಾಡಿನ ಪ್ರಕಾರ ಮುಂದುಬಿದ್ದು ಹೋಗುವುದು ಅವರಿಗೆ ಅಸಾಧ್ಯವಾಯಿತು. ಈ ಭಾಗದಲ್ಲಿ ಅವರ ಸಂಕಲ್ಪವು ನಿರರ್ಥಕವಾಯಿತು. ಇಷ್ಟರಲ್ಲೇ ಜರ್ಮನಿಯವರು ಪೋಲೆಂಡಿನಲ್ಲಿ ತಾವಾಗಿ ಮುಂದರಿದು ಶತ್ರುಗಳ ಮೇಲೆ ಬೀಳುವುದನ್ನು ಬಿಟ್ಟು ತಮ್ಮನ್ನು ಸಂರಕ್ಷಿಸಿಕೊಳ್ಳುವವರಾಗುವರು. ಈ ಕಡೆಯಲ್ಲಿಯೂ ಅವರಿಗೆ ಜಯಪ್ರದವಾಗುವ ನಿರೀಕ್ಷೆಯು ಇರುವುದಿಲ್ಲ.

ಆಸ್ಟ್ರಿಯದವರು ರಷ್ಯಾ ಮತ್ತು ಸರ್ಬಿಯದವರ ಕೈಗೆ ಸಿಕ್ಕಿ ತುಂಬಾ ನಷ್ಟವನ್ನನುಭವಿಸಿರುತ್ತಾರೆ. ಆಸ್ಟ್ರಿಯದವರು ಬಹು ಬೇಗನೆ ಸರ್ಬಿಯದವರನ್ನು ಸೋಲಿಸಿಬಿಡಬೇಕೆಂದಿದ್ದರು. ಆದರೆ ಅವರು ಇದೇ ಉದ್ದೇಶದಿಂದ ಎರಡಾವೃತ್ತಿ ಸರ್ಬಿಯದೊಳಕ್ಕೆ ನುಗ್ಗಿ ಹೋದಾಗ್ಗ್ಯೂ ಎರಡಾವೃತ್ತಿಯೂ ತುಂಬಾ ನಷ್ಟಪಟ್ಟು ಹಿಂದಕ್ಕೆ ಓಡಿಸಲ್ಪಟ್ಟಿರುತ್ತಾರೆ.

ಟರ್ಕಿಯವರು ಜರ್ಮನಿ ಮತ್ತು ಆಸ್ಟ್ರಿಯದವರ ಪಕ್ಷವನ್ನು ಸೇರಿಕೊಂಡರಷ್ಟೆ. ಆದರೆ ಟರ್ಕಿಯು ಯಾವ ಯುದ್ಧದಲ್ಲಾದರೂ ಜಯವನ್ನು ಹೊಂದಲಿಲ್ಲ. ಅದಕ್ಕೆ ಬದಲಾಗಿ ಕೆಲವು ಕಡೆಗಳಲ್ಲಿ ಅದಕ್ಕೆ ತುಂಬಾ ಅಪಜಯವೂ ನಷ್ಟವೂ ಆಗಿಯುತ್ತವೆ. ಟರ್ಕಿ ತನ್ನನ್ನು ತಾನೇ ಸಂರಕ್ಷಣೆಮಾಡಿಕೊಳ್ಳುವ ಸಂಭವವು ತೋರುವುದಿಲ್ಲ. ಅದು ತನ್ನ ಮಿತ್ರರಿಗೆ ಸಹಾಯಮಾಡುತ್ತದೆಂಬ ನಿರೀಕ್ಷೆಯು ಮತ್ತೂ ಕಡಮೆ.

ಈಗ ಯುದ್ಧದ ಪ್ರಥಮಾಂಶವು ಪೂರೈಸಿತೆಂದು ನಾವು ಹೇಳಬಹುದು. ಜರ್ಮನಿಯವರು ತಾವಾಗಿ ನುಗ್ಗಿಬಂದು ಮೇಲೆ ಬೀಳುತ್ತಿದ್ದ ಕಾಲವು ಕಳೆದುಹೋಯಿತು. ಈಗ ಅವರು ಸ್ವಸಂರಕ್ಷಣೆ ಮಾಡಿಕೊಳ್ಳುವುದರಲ್ಲಿದ್ದಾರೆ. ದ್ವಿತೀಯಾಂಶವು ದೀರ್ಘವಾಗಿಯೂ ತುಂಬಾ ಬೇಸರಿಕೆಯನ್ನು ಹುಟ್ಟಿಸತಕ್ಕದಾಗಿಯೂ ಇರುವುದು. ದೊಡ್ಡ ದೊಡ್ಡ ಯುದ್ಧಗಳು ಪ್ರಾಯಶಃ ನಡೆಯಲಾರವು. ಆದರೆ ಶತ್ರುಗಳನ್ನು ಹಿಂದಕ್ಕೆ ಅಟ್ಟಿಬಿಡುವುದಕ್ಕಾಗಿ ಎಡೆಬಿಡದೆ ಸ್ಥಿರವಾಗಿ ನಿಂತು ಯುದ್ಧಮಾಡುತ್ತಿರಬೇಕಾಗುವುದು. ಈ ಮಾಗಿಕಾಲದ ಛಳಿಯು ಯುದ್ಧಮಾಡುವುದಕ್ಕೆ ಪ್ರತಿಕೂಲವಾಗಿರುತ್ತದೆ. ಗೊತ್ತಾದ ಯಾವುದಾದರೊಂದು ಪ್ರಯೋಜನವನ್ನು ಪಡೆಯಬೇಕಾದರೆ, ಎರಡು ಮೂರು ತಿಂಗಳನ್ನು ಕಳೆಯಬೇಕಾದೀತು. ಆದಕಾರಣ ನಾವು ಸಮನವನ್ನು ತಾಳಿ ದೇವರು ನಮಗೆ ಜಯವನ್ನು ಕೊಡಲೆಂದು ಪ್ರಾರ್ಥನೆಮಾಡುತ್ತಾ ಬರೋಣ.

ಸಂತುಷ್ಟಿ.

ಸದಾ ಸಂತುಷ್ಟನಾಗಿರುವದು ಸಾಧ್ಯವೇ? ಹಾಗಿರುವದಕ್ಕೆ ಏನು ಉಪಾಯವಿದೆ? ನಾವು ಸದಾ ಸಂತುಷ್ಟರಾಗಿರಬೇಕೆಂಬುವದೇ ನಿಮಾರ್ಣಕರ್ತನ ಅಭಿಲಾಷೆಯಾಗಿದೆಯು? ಹೊರತು ನಾವು ಅಸಂತುಷ್ಟರಾಗಿಯೂ ಅಸಂತೋಷಿಗಳಾಗಿಯೂ ಇರುವದು ಆತನಿಗೆ ಸಂತೋಷವನ್ನುಂಟುಮಾಡಲಾರದು. ಆದರೆ ಸದಾ ಸಂತುಷ್ಟರಾಗಿರುವದಕ್ಕೆ ನಮಗೆ ಶಕ್ತ್ಯಷ್ಟು ಐಶ್ವರ್ಯವೂ ಉತ್ತಮವಾದ ಪದವಿಯೂ ಸೇವಕಾಳುಗಳೂ ಇರಬೇಕು; ಇವಿಲ್ಲದಿದ್ದರೆ ನಾವು ಸಂತುಷ್ಟರಾಗಿರುವದು ಹೇಗೆ? ಸಂತೋಷವು ಎಲ್ಲಿಂದ ಲಭ್ಯವಾಗುವದು? ಎಂದು ಬಹು ಜನಗಳು ಅಂದುಕೊಳ್ಳುತ್ತಾರೆ. ಆದರೆ ಅನೇಕ ಮಂದಿ ಐಶ್ವರ್ಯವಂತರೂ ಉಚ್ಚಸ್ಥಾನವನ್ನು ಹೊಂದಿದ ಉದ್ಯೋಗಸ್ಥರೂ ಪುಷ್ಕಳ ಭೃತ್ಯರನ್ನುಳ್ಳವರೂ ಅಸಂತೋಷಿಗಳಾಗಿಯೂ ಅತೃಪ್ತರಾಗಿಯೂ ಇರುವದನ್ನು ನಾವು ಬಲ್ಲೆವು. ಯಾಕೆಂದರೆ ಐಶ್ವರ್ಯವು ಚಿಂತೆಯನ್ನೂ ಭಾರವನ್ನೂ ಒಂದೊಂದು ವೇಳೆ ವ್ಯಸನವನ್ನೂ ಹೆಚ್ಚಿಸುವವು. ಅಧಿಕಾರವು ಹೆಮ್ಮೆಯನ್ನೂ ಅಸೂಯೆಯನ್ನೂ ಹುಟ್ಟಿಸುವದಕ್ಕೆ ಹೇತುಗಳಾಗಿವೆ. ಇತ್ತಲಾಗಿ ಅನೇಕ ಬಡವರೂ ಕೀಳುತರದ ಸ್ಥಿತಿಯಲ್ಲಿರುವವರೂ ಸಂತುಷ್ಟರಾಗಿಯೂ ಉಲ್ಲಾಸವಾಗಿಯೂ ಬದುಕುವದು ಸಾಧಾರಣವಾಗಿದೆ. ಹೀಗಿರುವದರಿಂದ ಸದಾ ಸಂತುಷ್ಟರಾಗಿರುವದಕ್ಕೆ ಐಶ್ವರ್ಯವಾದರೂ ಬಡತನವಾದರೂ ಉತ್ತಮ ಪದವಿಯಾದರೂ ಕನಿಷ್ಠ ಸ್ಥಿತಿಯಾದರೂ ಮುಖ್ಯ ಕಾರಣಗಳೆಂತ ಹೇಳುವದಕ್ಕಾಗುವದಿಲ್ಲ. ಯಾಕೆಂದರೆ ಸಂತುಷ್ಟಿಯೂ ಸಂತೋಷವೂ ಪ್ರತಿಯೊಬ್ಬನ ಅಂತರಾತ್ಮನ ಮನೋಸ್ಥಿತಿಯೇ ಹೊರತು ಬಹಿರಂಗದಲ್ಲಿ ಸಿಕ್ಕುವ ಐಶ್ವರ್ಯ ಪದವಿ ಕೀರ್ತಿಗಳಿಂದ ಲಭ್ಯವಾಗುವ ಅಥವಾ ಕೊಂಡುಕೊಳ್ಳಬಹುದಾದ ವಸ್ತುವಲ್ಲ. ಆದ್ದರಿಂದ ಮನಸ್ಸನ್ನು ಕಲಕಿ ಕಳವಳಪಡಿಸಿ ಸಮಾಧಾನವನ್ನು ಕೆಡಿಸಿಬಿಡುವ ಸಕಲ ಯೋಚನೆ ಕಾರ್ಯಗಳನ್ನು ತೊರೆದು ಸಮಾಧಾನವನ್ನು ಕಾಪಾಡತಕ್ಕ ಯೋಚನೆ ಕಾರ್ಯಗಳಲ್ಲಿ ಸದಾ ನಿರತನಾಗಿರುವದೇ ಸದಾ ಸಂತುಷ್ಟರಾಗಿರುವದಕ್ಕೆ ಅನುಕೂಲವಾಗಿದೆ.

ಸ್ವಹಿತ ಸ್ವಪ್ರಯೋಜನ ಆತ್ಮಸ್ತುತಿಯನ್ನೇ ಯಾವಾಗಲು ಹುಡುಕಿ ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನವಾಡುವವರು ಸಂತುಷ್ಟರಾಗಿರುವದಕ್ಕೆ ಆಗುವದಿಲ್ಲ. ಆಸೆಗೆ ಅಳವಿಲ್ಲ. ಮತ್ತು ಸ್ವಾರ್ಥಪರರು ಎಷ್ಟು ಸಂಪಾದಿಸುತ್ತಾರೋ ಅಷ್ಟೂ ಪಡೆಯಬೇಕೆಂಬ ಅಪೇಕ್ಷೆಯು ಹೆಚ್ಚುತ್ತಾ ಹೋಗುವದೇ ಹೊರತು ತೃಪ್ತಿಯಾಗುವದಿಲ್ಲ. ಕೇವಲ ಅಸಂತುಷ್ಟನು ಯಾರು? ಯಾರು ಯಾವಾಗಲೂ ತನ್ನ ಸುಖವನ್ನೇ ಬಯಸಿ ಬದುಕುತ್ತಿರುತ್ತಾನೆಯೋ ಅವನೇ. ಯಾರಾದರೂ ತೀರಲಾರದ ಕಷ್ಟದಲ್ಲಿಯಾದರೂ ಬಡತನದಲ್ಲಾದರೂ ಸಿಕ್ಕಿಬಿದ್ದರೆ ಆ ಸಮಯದಲ್ಲಿ ಅಂಥವನು ಮನಸ್ಸನ್ನು ಹಗುರಮಾಡಿ ಚಿಂತೆಯನ್ನು ಪರಿಹರಿಸುವದಕ್ಕೆ ಒಂದು ಒಳ್ಳೇ ಉಪಾಯ ಉಂಟು. ಏನೆಂದರೆ ತನಗಿಂತ ಹೆಚ್ಚು ಕಷ್ಟಕ್ಕೂ ಬಡತನಕ್ಕೂ ಸಿಕ್ಕಿ ಅಂಗಲಾಚುತ್ತಿರುವವರ ಕಡೆಗೆ ತನ್ನ ಮನೋದೃಷ್ಟಿಯನ್ನು ತಿರುಗಿಸಿ ತನ್ನಿಂದಾದ ಮಟ್ಟಿಗೂ ಅವರ ಕಷ್ಟವನ್ನೂ ದಾರಿದ್ರ್ಯವನ್ನೂ ನಿವಾರಿಸುವ ಯೋಚನೆ ಮಾಡುವದೇ. ಸಂತುಷ್ಟಿಯು ಸ್ವಾರ್ಥದಿಂದ ನಾಶವಾಗುವದೆಂದು ಹೇಳಿದೆವಷ್ಟೆ. ಆದರೆ ಸ್ವಾರ್ಥವು ತುಂಬಿಸಲಾರದ ಗುಂಡಿಯಾಗಿದೆ. ಅದನ್ನು ತೃಪ್ತಿಪಡಿಸಿಕೊಳ್ಳುವ ಯೋಚನೆಯಿಂದ ಒಬ್ಬನು ಸುಖಾಪೇಕ್ಷಿಯಾಗಿ ಇಂದ್ರಿಯನಿಗ್ರಹವನ್ನು ಮರೆತನೆಂದರೆ ಆ ತುಂಬಿಸಲಾರದ ಸ್ವಾರ್ಥದ ಗುಂಡಿಯು ಅಧೋಪಾತಾಳವೇ ಆಗುವದು. ಮತ್ತೇರುವ ಪಾನಪದಾರ್ಥಗಳನ್ನು ಕುಡಿಯುವದು, ತಿನ್ನುವದು, ವಿಷಯಲಂಪಟತ್ವ, ಲೋಭ ಮುಂತಾದವುಗಳು ಮನಸ್ಸನ್ನು ಸಂಪೂರ್ಣವಾಗಿ ಕೆಡಿಸಿ ಆತ್ಮರಕ್ಷಣೆಯನ್ನು ಕೆಡಿಸುವ ರೋಗಗಳಾಗಿವೆ.

ಸದಾ ತೃಪ್ತನಾಗಿಯೂ ಸಂತೋಷ ಚಿತ್ತನಾಗಿಯೂ ಇರುವದಕ್ಕೆ ಪ್ರತಿ ಪುರುಷನು ಸ್ತ್ರೀಯೂ ಸದಾ ಉದ್ಯೋಗಿಗಳಾಗಿರಬೇಕು. ನಿರುದ್ಯೋಗಿಯ ಮನಸ್ಸು ಪಿಶಾಚನ ಕಾರಖಾನೆಯಾಗಿದೆ ಎಂಬ ನುಡಿಯನ್ನು ನೀತಿ ತಿಳಿದವರು ಹೇಳುವರು. ತಾತ್ಪರ್ಯವೇನು? ಏನೆಂದರೆ—ಯಾವಾತನು ಸಂತೋಷಚಿತ್ತನಾಗಿರಬೇಕೆಂದು ಅಪೇಕ್ಷಿಸುತ್ತಾನೋ? ಅವನು ಉದ್ಯೋಗಿಯಾಗಿರಲಿ ಅದರೊಳಗಾಗಿ ಪರರ ಹಿತವನ್ನು ಬಯಸಿ ಅವರ ಮೇಲಿಗಾಗಿ ಸದ್ಭಾವಗಳನ್ನು ಕಲ್ಪಿಸಿ ಅವುಗಳನ್ನು ಕಾರ್ಯತಃ ರೂಢಿಸುತ್ತಾ ಬರಲಿ. ಆಗ ಅವನ ಮನಸ್ಸು ಒಳ್ಳೇ ಆಲೋಚನೆಗಳಿಂದ ಭರಿತವಾಗಿ ಅವಯವಗಳಿಗೆ ಆ ಆಲೋಚನೆಗಳನ್ನು ಸಿದ್ಧಿಗೆ ತರುವ ಕೆಲಸವೇ ಸಾಕಷ್ಟು ಇರುವದರಿಂದ ಮನಸ್ಸಿನಲ್ಲಿ ದುರಾಲೋಚನೆಗೆ ಸ್ಥಳವೂ ಅವಯವಗಳಿಗೆ ಕೆಟ್ಟ ಕೆಲಸಕ್ಕೆ ಅವಕಾಶವೂ ಇರಲಾರದು. ಒಬ್ಬನು ನಿರುದ್ಯೋಗಿಯಾಗಿರುವ ಸಮಯವನ್ನು ಕಾದುಕೊಂಡಿದ್ದು ಶನಿ ಅಥವಾ ಕಲಿ ಪುರುಷನು ಅವನ ಬರಿದಾಗಿರುವ ಮನಸ್ಸನ್ನು ಹೊಕ್ಕು ಅವನಲ್ಲಿ ತನ್ನ ಕೆಲಸವನ್ನು ಆರಂಭಿಸುವನಂತೆ.

ಕಟ್ಟಕಡೆಗೆ ದೇವನಲ್ಲಿ ನಂಬಿಕೆಯಿರಲಿ. ಇದೇ ಸಕಲ ಸಮಾಧಾನಕ್ಕೆ ಮೂಲ. ನಮ್ಮ ಸ್ಥಿತಿಯು ಆತನಿಗೆ ಗೊತ್ತುಂಟು. ಆತನೇ ಅದನ್ನು ನೇಮಿಸಿದ್ದಾನೆ. ಆತನಿಲ್ಲದೆ ನಾವು ಯಾವ ಕೆಲಸವನ್ನೂ ಚನ್ನಾಗಿ ಮಾಡಲಾರೆವು. ಆತನು ನಮಗೆ ಯಾವ ಸ್ಥಿತಿಯನ್ನು ನೇಮಿಸಿದರೂ ಅದೇ ಸರಿ. ಒಬ್ಬ ಗಿಡ್ಡನು ಚಿಂತೆಮಾಡುವದರಿಂದ ತನ್ನ ದೇಹದ ನೀಳಕ್ಕೆ ಒಂದು ಅಂಗುಲವನ್ನು ಹೆಚ್ಚಿಸಿಕೊಳ್ಳಬಲ್ಲನೋ? ದೇವರ ಪರಾಮರಿಕೆಯಲ್ಲಿ ಅಪನಂಬಿಗೆಪಡುವವನು ತನ್ನನ್ನು ಪರಾಂಬರಿಸಿಕೊಳ್ಳಲಾರನು. ನಾವು ಆತನ ಮೇಲಣ ಪ್ರೀತಿಯಿಂದ ನಮ್ಮನ್ನು ಆತನ ಚಿತ್ತಕ್ಕೆ ಒಪ್ಪಿಸಿ ಈ ಅನಿತ್ಯವಾದ ಕಾಲವನ್ನು ದುಡಿಯುವದರಲ್ಲಿಯೂ ಭೋಗಪಡುವದರಲ್ಲಿಯೂ ಅಲ್ಲ, ಆತನ ಅಪ್ಪಣೆಯನ್ನು ಕೈಕೊಳ್ಳುವದರಲ್ಲಿ ವ್ಯಯಮಾಡಬೇಕು. ಯಾಕೆಂದರೆ ಆತನನ್ನು ಪ್ರೀತಿಮಾಡುವವರಿಗೆ ಎಲ್ಲವುಗಳು ಅವರ ಹಿತಕ್ಕಾಗಿ ಅನುಕೂಲಿಸುತ್ತವೆ.

ಯುದ್ಧದ ಸಮಾಚಾರಗಳು.

ಟರ್ಕಿಯವರಿಗೆ ಉಂಟಾದ ದೊಡ್ಡ ಅಪಜಯವು.

ನಮ್ಮ ಕಡೆಯ ಸೈನ್ಯದವರು ಮುಂದಕ್ಕೆ ನುಗ್ಗಿಹೋಗಿದ್ದಾರೆ.

ಟರ್ಕಿಯವರಿಗೆ ಆರ್ಮೀನಿಯದಲ್ಲಿ ದೊಡ್ಡ ಅಪಜಯವಾಯಿತು. ಪಶ್ಚಿಮ ದಿಕ್ಕಿನಲ್ಲಿ ಜರ್ಮನಿಯವರು ತಾವಾಗಿ ನುಗ್ಗಿಬಂದು ಮೇಲೆ ಬೀಳುವುದನ್ನು ನಿಲ್ಲಿಸಿಬಿಟ್ಟಿರುತ್ತಾರೆ ಎಂಬಿವೇ ಈ ವಾರದ ವಿಶೇಷ ಸಮಾಚಾರಗಳಾಗಿರುತ್ತವೆ.

ಪಶ್ಚಿಮ ಯುದ್ಧಭೂಮಿಯಲ್ಲಿ.

ಈಗ ಫ್ರೆಂಚರೂ ಬ್ರಿಟಿಷರೂ ಬೆಲ್ಜಿಯಮಿನಲ್ಲಿ ತಾವಾಗಿ ನುಗ್ಗಿಹೋಗಿ ಶತ್ರುಗಳ ಮೇಲೆ ಬೀಳುತ್ತಿದ್ದಾರೆ. ಜರ್ಮನಿಯವರಾದರೋ ತಾವು ಮಾಡಿಕೊಂಡಿರುವ ಕಂದಕಗಳ ಉದ್ದವಾದ ಸಾಲನ್ನು ಸಂರಕ್ಷಣೆಮಾಡಿಕೊಳ್ಳುವುದರಲ್ಲಿ ತೊಡಗಿರುತ್ತಾರೆ. ಜರ್ಮನಿಯವರು ಆ ಕಂದಕಗಳಲ್ಲಿಯೂ ಪ್ರತ್ಯೇಕವಾಗಿಯೂ ಅಪಾರವಾದ ಸೈನ್ಯವನ್ನು ಸಂಗ್ರಹಮಾಡಿಕೊಂಡಿರುತ್ತಾರೆ. ಅವರು ಮಣ್ಣಿನಿಂದ ವಾಸ್ತವವಾಗಿ ದೊಡ್ಡ ದೊಡ್ಡ ಕೋಟೆಗಳನ್ನು ಕಟ್ಟಿಕೊಂಡು ಅವುಗಳಲ್ಲಿ ಸೇರಿಕೊಂಡಿರುತ್ತಾರೆ. ನಮ್ಮ ಕಡೆಯ ಸೈನ್ಯದವರಿಗೆ ಅವರನ್ನು ಆ ಸ್ಥಳಗಳಿಂದ ಹೊರಡಿಸಿ ಹಿಂದಕ್ಕೆ ಅಟ್ಟುವುದು ಪ್ರಯಾಸವಾಗಿಯೂ ನಿಧಾನವಾಗಿ ನಡೆಯುವ ಕಾರ್ಯವಾಗಿಯೂ ಇರುತ್ತದೆ. ಈ ಕೆಲಸವು ಆಗಲೇ ಪ್ರಾರಂಭವಾಗಿ ತಕ್ಕಮಟ್ಟಿಗೆ ಮುಂದರಿಯುತ್ತಲಿದೆ. ಮುಖ್ಯವಾಗಿ ಸೈನ್ಯಗಳು ಎದುರುಬದುರಾಗಿ ಸಾಲುಕಟ್ಟಿ ನಿಂತಿರುವುದಕ್ಕೆ ದಕ್ಷಿಣದ ಕೊನೆಯು ಆಲ್ಸೆಸ್ ಎಂಬ ಸ್ಥಳದಲ್ಲಿ ಕೆಲವು ಗ್ರಾಮಗಳನ್ನೂ, ಗುಡ್ಡಗಳನ್ನೂ ಮುತ್ತಿಗೆಹಾಕಿರುತ್ತಾರೆ.

ಈ ಛಳಿಗಾಲದ ದೆಸೆಯಿಂದ ಮಹ ಬಹಳ ಕೆಟ್ಟಿರುತ್ತದೆ. ಕೆಲವು ಕಂದಕಗಳಲ್ಲಿ ಕೆಸರು ತುಂಬಿಕೊಂಡಿರುವುದರಿಂದ ಅವುಗಳನ್ನು ಬಿಡಬೇಕಾಗಿ ಬಂತು. ಸಿಪಾಯಿಗಳಿಗೆ ಕೆಸರು ಭುಜಗಳ ವರೆಗೂ ಅಂಟಿಕೊಂಡಿರುತ್ತದೆ. ಯುದ್ಧಗಳು ಅಷ್ಟು ಘೋರವಾಗಿ ನಡೆದಿರುವುದಿಲ್ಲ. ಯುದ್ಧಗಳಲ್ಲಿ ಕೊಲ್ಲಲ್ಪಟ್ಟವರ, ಮತ್ತು ಗಾಯಪಟ್ಟವರ ಹೆಸರುಗಳ ಪಟ್ಟಿಯಲ್ಲಿ ಸಾಧಾರಣವಾಗಿದ್ದುದಕ್ಕಿಂತಲೂ ಕಡಮೆ ಹೆಸರುಗಳಿರುತ್ತವೆ.

ಸೆರೆ ಸಿಕ್ಕಿರುವವರ ಪೈಕಿ ಯಾರ್ಯಾರು ತಿರಿಗಿ ಯುದ್ಧಮಾಡಲಾರದಷ್ಟರ ಮಟ್ಟಿಗೆ ಗಾಯಪಟ್ಟಿರುತ್ತಾರೋ ಅಂಥವರನ್ನು ಬದಲಾಯಿಸಿಕೊಳ್ಳುವುದಕ್ಕೆ ಏರ್ಪಾಡನ್ನು ಮಾಡುತ್ತಲಿದ್ದಾರೆ. ಪ್ರಾಯಶಃ ಅವರನ್ನು ಸ್ವಿಟ್ಜರ್‌ಲಾಂಡಿನಲ್ಲಿ ಬದಲಾಯಿಸಿಕೊಳ್ಳಬಹುದು.

ಫ್ರೆಂಚರ ಸೈನ್ಯದಲ್ಲಿ ಇಟಲಿ ದೇಶದ ಅನೇಕ ಮಂದಿ ವಾಲೆಂಟಿಯರುಗಳು ಯುದ್ಧಮಾಡುತ್ತಿದ್ದಾರೆ. ಇವರಲ್ಲಿ ಇಟಲಿಯನ್ನು ಬಿಡುಗಡೆಮಾಡಿದ ಕೀರ್ತಿವಿಶೇಷವಾದ ಗರಬಾಲ್ಡಿಯವರ ಮೊಮ್ಮಕ್ಕಳೂ ಸೇರಿರುತ್ತಾರೆ. ಕರ್ನಲ್ ಗರಬಾಲ್ಡಿಯವರು ತಮ್ಮ ಕಡೆಯ ಯುದ್ಧಭಟರೊಡನೆ ಹೋಗಿ ಜರ್ಮನಿಯವರ ಮೇಲೆ ಗುಂಡುಗಳನ್ನು ಹಾರಿಸಿ, ಅವರಲ್ಲಿ ೧೨೦ ಮಂದಿಯನ್ನು ಕೈಸೆರೆ ಹಿಡಿದುಕೊಂಡರು. ಕರ್ನಲ್ ಗರಬಾಲ್ಡಿಯವರ ಸಹೋದರರು ಯುದ್ಧದಲ್ಲಿ ಮಡಿದುಹೋದರು.

ಫ್ರೆಂಚರ ಮಂತ್ರಿಯವರ ಕುಮಾರರಲ್ಲಿ ಒಬ್ಬರು ಯುದ್ಧದಲ್ಲಿ ಮೃತಪಟ್ಟರು.

ರೋಮ್ ಸಭೆಯ ಅಧಿಕಾರಿಗಳಲ್ಲಿ ಒಬ್ಬರಾದ ಕಾರ್ಡಿಯಲ್ ಮೆರ್ಸಿಯರ್ ಎಂಬವರು ತಮ್ಮ ಕಡೆಯ ಪಾದ್ರಿಗಳಿಗೆ—ನೀವು ಜರ್ಮನಿಯವರಿಗೆ ವಿಧೇಯರಾಗಿರಬೇಕಾದ ಹಂಗಿನಲ್ಲಿರುವುದಿಲ್ಲ; ಅರಸನೊಬ್ಬನು ಮಾತ್ರ ನ್ಯಾಯವಾದ ಅಧಿಕಾರಿಯಾಗಿರುತ್ತಾನೆಂದು ಬರೆದುದಕ್ಕಾಗಿ ಜರ್ಮನಿಯವರು ಅವರನ್ನು ದಸ್ತಗಿರಿಮಾಡಿದರೆಂದು ಹೇಳಲಾಗಿದೆ. ಹೀಗೆ ದಸ್ತಗಿರಿಮಾಡಿದುದಕ್ಕೆ ವಿರೋಧವಾಗಿ ಅನೇಕರು ಪ್ರತಿಭಟಿಸಿದರು. ಕಾರ್ಡಿಯಲ್ ರವರು ತಮ್ಮ ಕಾಗದವನ್ನು ಜನಗಳಿಗೆ ಓದಿ ತಿಳಿಸುವಂತೆ ಪಾದ್ರಿಗಳನ್ನು ಬಲಾತ್ಕರಿಸುವುದಿಲ್ಲವೆಂದು ಒಪ್ಪಿಕೊಂಡುದರ ಮೇಲೆ ಜರ್ಮನಿಯವರು ಅವರನ್ನು ಬಿಡುಗಡೆ ಮಾಡಿದರು.

ಪೂರ್ವದ ಯುದ್ಧಭೂಮಿಯಲ್ಲಿ.

ಛಳಿಯು ಹೆಚ್ಚಾಗಿದ್ದಾಗ್ಗ್ಯೂ ಪೋಲೆಂಡಿನ ಅನೇಕ ಸ್ಥಳಗಳಲ್ಲಿ ಯುದ್ಧವು ಭಯಂಕರವಾಗಿ ನಡೆದಿರುತ್ತದೆ. ಅಲ್ಲಿಂದ ಬಂದಿರುವ ವರ್ತಮಾನಗಳು ನಡೆದ ಕಾರ್ಯಗಳನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಜರ್ಮನಿಯವರು ಮುಂದರಿದು ಬರುವುದು ನಿಂತುಹೋಗಿದೆ ಎಂಬುದೊಂದು ಮಾತ್ರ ಸ್ಪಷ್ಟವಾಗಿದೆ. ಉಭಯ ಪಕ್ಷಗಳವರಿಗೂ ತುಂಬಾ ನಷ್ಟವಾಗಿರುತ್ತದೆ. ಆದರೆ ಇದರ ವಿಷಯದಲ್ಲಿ ಹೆಚ್ಚು ಸಂಗತಿಗಳೇನೂ ತಿಳಿದಿರುವುದಿಲ್ಲ.

ಆಸ್ಟ್ರಿಯದ ಉತ್ತರ ಭಾಗವಾದ ಗಲೀಸಿಯದಲ್ಲಿ ಆಸ್ಟ್ರಿಯದವರು ಗಲೀಸಿಯಕ್ಕೂ ಹಂಗೇರಿಗೂ ಮಧ್ಯದಲ್ಲಿರುವ ಬೆಟ್ಟಗಳ ಮೇಲಿಂದ ಹಿಂದಕ್ಕೆ ಓಡಿಸಲ್ಪಟ್ಟರು. ಆಸ್ಟ್ರಿಯದವರಲ್ಲಿ ಅನೇಕ ಮಂದಿ ಸೆರೆ ಸಿಕ್ಕಿದರು. ಅವರು ಅನೇಕ ಬಂದೂಕಗಳನ್ನು ಸಹ ಕಳೆದುಕೊಂಡರು. ಕ್ರಾಕೋ ಮೇಲೆ ತಿರಿಗಿ ನುಗ್ಗಿಹೋಗುವುದಕ್ಕೆ ರಷ್ಯದವರಿಗೆ ಅನುಕೂಲವಾದಂತೆ ತೋರುತ್ತದೆ.

ಆಸ್ಟ್ರಿಯದ ಪೂರ್ವಭಾಗದಲ್ಲಿ ರಷ್ಯದವರು ಹಂಗೇರಿಯೊಳಕ್ಕೆ ನುಗ್ಗಿ ಸುಮಾರು ಎಂಭತ್ತು ಮೈಲಿಗಳ ದೂರಕ್ಕೆ ಮುಂದರಿದು ಹೋಗಿರುತ್ತಾರೆ. ಇವರನ್ನು ಎದುರಿಸುವುದಕ್ಕೆ ಸಾಕಾದಷ್ಟು ದೊಡ್ಡ ಸೈನ್ಯವು ಅವರಲ್ಲಿಲ್ಲವೆಂಬುದು ಸ್ಪಷ್ಟವಾಗಿದೆ. ರಷ್ಯದವರು ಅವರಲ್ಲಿ ಅನೇಕರನ್ನು ಸೆರೆ ಹಿಡಿದಿರುವುದಲ್ಲದೆ ಯುದ್ಧದ ಸಾಮಾಗ್ರಿಗಳನ್ನು ಸಹ ಕಿತ್ತುಕೊಂಡಿರುತ್ತಾರೆ. ಹಂಗೇರಿಯನ್ನು ಪೂರ್ವಭಾಗದಿಂದ ಒಳಹೊಕ್ಕಿರುವುದು ರಷ್ಯದವರು ಈಗ ಮಾಡಿರುವ ಒಂದು ಹೊಸ ಪ್ರಯತ್ನವಾಗಿರುತ್ತದೆ. ಇದರ ದೆಸೆಯಿಂದ ಯುದ್ಧದ ಏರ್ಪಾಡು ಬದಲಾಗುವುದು. ಆಸ್ಟ್ರಿಯದವರು ಕಾರ್‌ಪ್ಯಾಥಿಯನ್ ಬೆಟ್ಟಗಳ ಮಾರ್ಗವಾಗಿ ಗಲೀಸಿಯ ಒಳಕ್ಕೆ ಪ್ರವೇಶಮಾಡದಂತೆ ಅವರನ್ನು ತಡೆದುಬಿಡುವುದು ರಷ್ಯದವರಿಗೆ

...ತ್ತಾಗುವುದು. ಇವರು ಹೀಗೆ ನುಗ್ಗಿ ಬಂದಿರುವ ಸ್ಥಳವು ರೋಮೇನಿಯ ...ಕ್ಕೆ ಸಮೀಪದ್ದಾಗಿರುತ್ತದೆ. ಇದರಿಂದ ಈ ಗವರ್ನ್‌ಮೆಂಟಿನವರು ಈ ಯುದ್ಧದಲ್ಲಿ ಯಾರ ಪಕ್ಷವನ್ನು ವಹಿಸುತ್ತಾರೆಂಬುದು ವ್ಯಕ್ತವಾಗಬಹುದು.

ರಷ್ಯ ಮತ್ತು ಟರ್ಕಿ.

ಆರ್ಮೇನಿಯದಿಂದ ಬಂದಿರುವ ತಂತೀ ವರ್ತಮಾನಗಳು ಸಂಶಯಾಸ್ಪದವಾಗಿವೆ. ಹೀಗಿದ್ದಾಗ್ಯೂ ರಷ್ಯದವರು ಟರ್ಕಿಯವರ ಮೇಲೆ ಎರಡು ಸ್ಥಳಗಳಲ್ಲಿ ಜಯವನ್ನು ಪಡೆದರೆಂಬುದಕ್ಕೆ ಸಾಕ್ಷಿಯು ಇರುತ್ತದೆ. ಟರ್ಕಿಯವರು ...ಸ್ಥಳಗಳಲ್ಲಿ ರಷ್ಯದೇಶಕ್ಕೆ ನುಗ್ಗಿ ಉಭಯ ಪಕ್ಷಗಳಲ್ಲಿಯೂ ಮುಂದು ...ಕೊಂಡಿರುವ ಬೆಟ್ಟಗಳ ಮಧ್ಯದಲ್ಲಿರುವ ಎರಡು ಕಣಿವೆಗಳಲ್ಲಿ ಸ್ವಲ್ಪ ದೂರದ ವರೆಗೂ ಮುಂದಕ್ಕೆ ಬಂದಿದ್ದಂತೆ ಕಾಣುತ್ತದೆ. ಟರ್ಕಿಯವರು ಮುಂದು ಮುಂದಕ್ಕೆ ಬರುತ್ತಲೇ ಇದ್ದರು. ರಷ್ಯದವರು ಅವರು ಬರುವುದಕ್ಕೆ ಕಾದಿದ್ದು ಒಂದು ಸಂದರ್ಭದಲ್ಲಿ ಅವರನ್ನು ಆವರಿಸಿಕೊಂಡು ಸಲ್ಪ ಹೆಚ್ಚು ಕಡಿಮೆ ಅವರ ಸೈನ್ಯವನ್ನೆಲ್ಲಾ ಸೆರೆಯಾಗಿ ಹಿಡಿದುಕೊಂಡರು. ಟರ್ಕಿಯವರ ಒಂಭತ್ತನೆಯ ಸೈನ್ಯವು ಅದರ ಜನರಲ್ ಮತ್ತು ದುಷ್ಟಾದಾರರುಗಳಸಮೇತ ಸೋತುಹೋಯಿತು. ಅವರಲ್ಲಿ ಅನೇಕರು ಕೊಲ್ಲಲ್ಪಟ್ಟರು. ಉಳಿದವರನ್ನು ಸೆರೆಹಿಡಿದುಕೊಂಡರು. ಅವರ ಸಂಖ್ಯೆಯು ಸುಮಾರು 40,000 ಕ್ಕಿಂತಲೂ ಹೆಚ್ಚಾಗಿರಬಹುದು. ಆ ಮತ್ತೊಂದು ಕಣಿವೆಯಲ್ಲೂ ಟರ್ಕಿಯವರು ಸೋತುಹೋದರು. ಅವರ ದಳಪತಿಯೂ 15 ಮಂದಿ ಉದ್ಯೋಗದಾರರುಗಳೂ 40 ಮಂದಿ ಇತರ ಆಫೀಸರುಗಳೂ 5,000 ಸೈನಿಕರೂ ಸೆರೆಯಾಗಿ ಸಿಕ್ಕಿದರು. ಮತ್ತು ಅವರ ಆರು ಫಿರಂಗಿಗಳನ್ನು ಕಿತ್ತುಕೊಂಡರು. ಟರ್ಕಿಯವರಿಗುಂಟಾದ ಈ ಅಪಜಯಕ್ಕಾಗಿ ಬಾಲ್ಕನ್ ಸಂಸ್ಥಾನದವರೆಲ್ಲರೂ ವ್ಯಸನಪಡುತ್ತಿರುವರು. ಕಪ್ಪು ಕಡಲಿನಲ್ಲಿ ಕದನವು ನಡೆಯಿತು. ಟರ್ಕಿಯವರ ಒಂದು ಹಡಗು ಕಪ್ಪು ಕಡಲಿನಲ್ಲಿ ಮುಣಗಿಸಲ್ಪಟ್ಟಿತು. ಮತ್ತೊಂದು ಹಡಗು ಭಾಸ್ಪರಸ್ ಜಲಸಂಧಿಯ ಪ್ರವೇಶದಲ್ಲಿ ಮುಳುಗಿಸಲ್ಪಟ್ಟಿತು. ಟರ್ಕಿಯವರ ಒಂದು ಯುದ್ಧದ ಹಡಗಿಗೂ ಸಹ ಏಟುಬಿತ್ತು.

ಸಮುದ್ರದ ಮೇಲೆ

ದಕ್ಷಿಣ ಅಮೇರಿಕದ ಬಳಿಯಲ್ಲಿ ಜರ್ಮನಿಯವರ ಕ್ರೌನ್‌ಪ್ರಿನ್ಸ್ ವಿಲ್ಹೆಲ್ಮ್ ಎಂಬ ಒಂದು ಯುದ್ಧದ ಹಡಗು ಒಂದು ಇಂಗ್ಲಿಷರ ಮತ್ತು ಮೂರು ಫ್ರೆಂಚರ ವ್ಯಾಪಾರದ ಹಡಗುಗಳನ್ನು ಮುಳುಗಿಸಿ ಅವುಗಳಲ್ಲಿದ್ದ 93 ನಾವಿಕರನ್ನು ಒಂದು ...ಸದ ರೇವು ಪಟ್ಟಣಕ್ಕೆ ಕರೆದುಕೊಂಡುಹೋಗಿ ಇಳಿಸಿ ಬಿಟ್ಟಿತು

ಇಂಗ್ಲಿಷ್ ಕಾಲುವೆಯಲ್ಲಿ ಬ್ರಿಟಿಷರ ಫಾರ್ಮಿಡಬಲ್ ಎಂಬ ಒಂದು ಯುದ್ಧದ ಹಡಗು ಕೆಲವು ದಿನಗಳ ಹಿಂದೆ ಮುಳುಗಿಸಲ್ಪಟ್ಟಿತಷ್ಟೆ. ಅದು ಒಂದು ಸಬ್‌ಮೆರೀನ್ ಎಂಬ ಸಮುದ್ರದೊಳಗೆ ಹೋಗುವ ಒಂದು ಹಡಗಿನ ದೆಸೆಯಿಂದ ಮುಳುಗಿಸಲ್ಪಟ್ಟಿತೆಂದೂ ಅದರಲ್ಲಿದ್ದ 517 ಮಂದಿ ಸಮುದ್ರದ ಪಾಲಾದರೆಂದೂ ಆ ಹಡಗಿನ ಕ್ಯಾಪ್ಟನ್‌ರವರು ಅವರ ಸಹಾಯಕ್ಕೆ ಬರಬೇಕೆಂದಿದ್ದ ಬೇರೊಂದು ಹಡಗಿನವರಿಗೆ-ಇಲ್ಲಿ ಅಪಾಯವಿರುವುದರಿಂದ ನೀವು ನಮ್ಮಗಳ ಸಹಾಯಕ್ಕೆ ಬರಬಾರದೆಂದು ಕೇಳಿಕೊಂಡರೆಂದೂ ತಿಳಿದುಬಂದಿದೆ.

ಎರಡು ಸ್ಟೀಮರುಗಳೂ ಒಂದು ಚಿಕ್ಕ ಹಡಗವೂ ಉತ್ತರ ಸಮುದ್ರದಲ್ಲಿ ಮೈನ್ಸ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ತಗಲಿ ಮುಳುಗಿಹೋದವು. ಅವುಗಳಲ್ಲಿದ್ದ 25 ಮಂದಿ ನಾವಿಕರು ನೀರಿನ ಪಾಲಾದರು.

ಆಫ್ರಿಕಾದಲ್ಲಿ.

ಬ್ರಿಟಿಷರ ಎರಡು ಯುದ್ಧದ ಹಡಗುಗಳು ಜರ್ಮನಿಯವರಿಗೆ ಸೇರಿದ ಪೂರ್ವ ಆಫ್ರಿಕದ ದಾರೆಸ್‌ಸಲಾಂ ಎಂಬ ಒಂದು ರೇವುಪಟ್ಟಣಕ್ಕೆ ಹೋಗಿ ಅದರ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಎಸೆದು ಕೆಲವು ಹಡಗುಗಳನ್ನು ನಾಶಮಾಡಿ 14 ಮಂದಿ ಜರ್ಮನಿಯವರನ್ನೂ 20 ಮಂದಿ ಆಫ್ರಿಕದವರನ್ನೂ ಸೆರೆಯಾಗಿ ಹಿಡಿದುಕೊಂಡವು. ಬ್ರಿಟಿಷರ ಕಡೆ ಒಬ್ಬನು ಸತ್ತುಹೋದನು. 12 ಮಂದಿಗೆ ಗಾಯಗಳಾದವು.

ದಕ್ಷಿಣ ಆಫ್ರಿಕದಲ್ಲಿ ನಮ್ಮ ಕಡೆಯ ಸೈನ್ಯಗಳು ಜರ್ಮನಿಯವರಿಗೆ ಸೇರಿದ ನೈಋತ್ಯ ಆಫ್ರಿಕದೊಳಕ್ಕೆ ನುಗ್ಗಿಹೋಗುವುದಕ್ಕೆ ಪ್ರಾರಂಭಮಾಡಿ ಆರೆಂಜ್ ನದಿಯನ್ನು ದಾಟುವ ಸ್ಥಳವನ್ನು ಹಿಡುಕೊಂಡಿರುತ್ತವೆ. ಇದು ಎರಡು ದೇಶಗಳಿಗೂ ಮಧ್ಯೆ ಇರುವ ಗಡೀ ಪ್ರದೇಶವಾಗಿರುತ್ತದೆ.

ಲಾರ್ಡ್ ಕಿಚನರ್‌ ರವರು ಪುನರ್ವಿಮರ್ಶೆ ಮಾಡಿದ್ದು.

ಲಂಡನ್ ಪಟ್ಟಣದ ಹೌಸ್ ಆಫ್ ಲಾರ್ಡ್ಸ್ ಎಂಬ ಮಹಾ ಸಭೆಯಲ್ಲಿ ಲಾರ್ಡ್ ಕಿಚನರ್ ರವರು ಯುದ್ಧವು ಮುಂದರಿಯುವುದರ ವಿಷಯದಲ್ಲಿ ತಿಳಿಸಿರುವುದೇನೆಂದರೆ: ನಮ್ಮ ಕಡೆಯ ಸೈನ್ಯಗಳು ಮುಂದಕ್ಕೆ ನುಗ್ಗಿಹೋಗುತ್ತಲೂ ಹಿನ್ನಟ್ಟಿ ಬರುತ್ತಲೂ ಇರುತ್ತವೆ. ಆದರೆ ಒಟ್ಟಾಗಿ ಹೇಳಬೇಕಾದರೆ ಅನೇಕ ಕಡೆಗಳಲ್ಲಿ ಮುಖ್ಯವಾಗಿ ರೀಂ ಮತ್ತು ಆಲ್ಸೇಸ್‌ಗಳ ಬಳಿ ಅವರು ಮುಂದರಿದು ಹೋಗಿರುತ್ತಾರೆ. ಜರ್ಮನಿಯವರು ಕೆಲವು ಸೈನ್ಯವನ್ನು ಪೂರ್ವಭಾಗದಲ್ಲಿ ಯುದ್ಧವು ನಡೆಯುತ್ತಿರುವ ಕಡೆಗೆ ಕಳುಹಿಸಬಿಟ್ಟಿರುತ್ತಾರೆ. ಆದರೂ ಅವರು ತಮ್ಮ ಸಾಲನ್ನು ಭದ್ರವಾಗಿ ಕಾಪಾಡಿಕೊಳ್ಳುವುದಕ್ಕೆ ಬೇಕಾದಷ್ಟು ಸೈನ್ಯವನ್ನು ಇಟ್ಟುಕೊಂಡಿರುತ್ತಾರೆ. ಪೋಲಾಂಡಿನಲ್ಲಿ ರಷ್ಯದವರು ಜರ್ಮನಿಯವರನ್ನು ಅಣಗಿಸಿರುತ್ತಾರೆ. ಜರ್ಮನಿಯವರು ಮೊದಲೇ ಯುದ್ಧಕ್ಕೆ ಪೂರ್ವಸಿದ್ಧರಾಗಿ ಅಪಾರವಾದ ಸೈನ್ಯವನ್ನು ಕೂಡಿಸಿಟ್ಟುಕೊಂಡಿದ್ದ ಅನುಕೂಲತೆಗಳೆಲ್ಲಾ ಈಗ ಹಾಳಾಗಿ ಹೋಗಿರುತ್ತವೆ. ಯಾಕೆಂದರೆ ಅವರಲ್ಲಿ ಅತ್ಯುತ್ತಮ ತರದ ಸೈನ್ಯವೆಲ್ಲಾ ಲಯವಾಗಿ ಹೋಯಿತು. ಈಗ ಅವರಲ್ಲಿರುವ ಸೈನಿಕರು ಸಂಪೂರ್ಣವಾಗಿ ತರಫೇತಾದವರಲ್ಲ. ಬ್ರಿಟಿಷರ ಸೈನ್ಯಗಳಾದರೋ ನಮ್ಮ ಸಾಮ್ರಾಜ್ಯದ ನಾನಾ ಕಡೆಗಳಿಂದ ಬರುತ್ತಿರುವ ಸಹಾಯಗಳಿಂದ ಕ್ರಮೇಣ ಹೆಚ್ಚುತ್ತಲೇ ಬರುತ್ತವೆ. ಬ್ರಿಟನ್ನಿನಲ್ಲಿ ಯುದ್ಧಕ್ಕೆ ಹೋಗಲು ಹೊಸದಾಗಿ ಬಂದು ಸೇರಿಕೊಳ್ಳುತ್ತಿರುವವರ ಸಂಖ್ಯೆಯು ಪೂರ್ಣ ತೃಪ್ತಿಕರವಾಗಿರುತ್ತದೆ. 23,100 ಮಂದಿ ಉದ್ಯೋಗದಾರರುಗಳನ್ನು ನೇಮಕಮಾಡಲಾಗಿದೆ. ಯುದ್ಧದ ಸಾಮಗ್ರಿಗಳ ವಿಷಯದಲ್ಲಿ ನಮಗಿದ್ದ ಕಷ್ಟಗಳು ಈಗ ನಿವಾರಣೆಯಾಗುತ್ತವೆ. ರಷ್ಯದವರು ಆಸ್ಟ್ರಿಯಾದವರ ಮೇಲೆ ದೊಡ್ಡ ಜಯಪ್ರದವನ್ನು ಹೊಂದಿರುತ್ತಾರೆ. ಮತ್ತು ಈಜಿಪ್ಟಿನೊಳಕ್ಕೆ ನುಗ್ಗಿ ಹೋಗುವುದಕ್ಕೆ ಯಾವ ಪ್ರಯತ್ನವನ್ನಾದರೂ ಮಾಡಿರುವುದಿಲ್ಲ. ರಷ್ಯದವರು ಬಹು ಚೆನ್ನಾಗಿ ಕೆಲಸಮಾಡಿರುತ್ತಾರೆ. ಡಿಸೆಂಬರ್ 20 ರಲ್ಲಿ ಜರ್ಮನಿಯವರು ಒಂದು ದೇಶದ ಸೈನ್ಯದ ಮೇಲೆ ಬಹು ರಭಸವಾಗಿ ಬಂದು ಬಿದ್ದರು. ಆದರೆ ಇವರು ಕೆಲವು ಕಾಲದ ವರೆಗೂ ತಮ್ಮ ಕಂದಕಗಳನ್ನು ಬಿಟ್ಟುಬಿಡಬೇಕಾಗಿದ್ದರೂ ಬೇಗ ಅವುಗಳನ್ನು ತಿರಿಗಿ ಆಕ್ರಮಿಸಿಕೊಂಡರು. ಹಿಂದೂ ದೇಶದ ಸೈನಿಕರಿಗೆ ಈಗ ಸ್ವಲ್ಪ ವಿರಾಮವು ಸಿಕ್ಕಿರುತ್ತದೆ. ಕಾಪಾಡಲ್ಪಡದೆ ಇರುವಂಥ ಕೆಲವು ರೇವುಪಟ್ಟಣಗಳ ಮೇಲೆ ಜರ್ಮನಿಯವರು ಗುಂಡುಗಳನ್ನೆಸೆದು ಮುಖ್ಯವಾಗಿ ಹೆಂಗಸರು ಮಕ್ಕಳಿಗೆ ಬಾಧೆಯನ್ನುಂಟುಮಾಡಿರುವುದನ್ನು ಲಾರ್ಡ್ ಕಿಚನರ್ ರವರು ಕಡೆಯಲ್ಲಿ ಬಹಳವಾಗಿ ಹೀನಯಿಸಿದರು.

ಇತರ ವಿಷಯಗಳು.

ಸರ್ಬಿಯವರು ಆಸ್ಟ್ರಿಯದವರನ್ನು ಸೋಲಿಸಿದ ಕಾಲದಲ್ಲಿ ಆಸ್ಟ್ರಿಯದವರ ಕಡೆ ದಳಪತಿಗಳಾಗಿದ್ದ ಇಬ್ಬರು ಜನರಲ್‌ಗಳನ್ನು ಕೆಲಸದಿಂದ ವಜಾ ಮಾಡಿಬಿಟ್ಟರೆಂದು ಹೇಳಲಾಗಿದೆ.

ಮಹಾರಾಜರಾದ ರಣಜಿತ್ ಸಿಂಗ್ ರವರು ಯುದ್ಧಕ್ಕೆ ಹೋಗುವುದರ ನಿಮಿತ್ತ ಹಿಂದು ದೇಶವನ್ನು ಬಿಟ್ಟಿರುತ್ತಾರೆ.

ಕಳೆದ ಕ್ರಿಸ್‌ಮಸ್ ಕಾಲದಲ್ಲಿ 2,25,000 ಮಂದಿ ಬ್ರಿಟಿಷ್ ಸೈನ್ಯಕ್ಕೆ ಸೇರಿದರು.

ರೀವಾ ಮಹಾರಾಜರು ಹಿಂದು ದೇಶೀಯ ಸೈನ್ಯಗಳಿಗೋಸ್ಕರ ವ್ಯಾಸಲೀನ್ ಎಂಬ ಒಂದು ತರದ ಮುಲಾಮನ್ನು ಕೊಂಡುಕೊಳ್ಳುವುದಕ್ಕಾಗಿ 5,000 ರೂಪಾಯಿಗಳನ್ನು ಕೊಟ್ಟರು. ನಮ್ಮ ವೈಸ್‌ರಾಯವರು ಇದನ್ನು ಆದರಪೂರ್ವಕವಾಗಿ ಸ್ವೀಕಾರಮಾಡಿಕೊಂಡಿರುತ್ತಾರೆ.

ನೇಪಾಳದ ಮಹಾರಾಜರವರು ಹಿಂದು ದೇಶೀಯ ಸೈನಿಕರಿಗಾಗಿ 5,000 ಮಣ ಏಲಕ್ಕಿಯನ್ನೂ 43,200 ಪೌಂಡ್ ಟೀಯನ್ನೂ ಕಳುಹಿಸಿಕೊಟ್ಟಿರುತ್ತಾರೆ.

ಕಲ್ಕತ್ತ ಪಟ್ಟಣದಲ್ಲಿ ಇಂದ್ರಚಂದನೆಂಬವನು ನಮ್ಮ ಶತ್ರುಗಳಲ್ಲಿ ವ್ಯಾಪಾರವನ್ನು ನಡೆಸುತ್ತಿದ್ದನೆಂಬ ಅಪರಾಧವು ರುಜುವಾತಾದ್ದರಿಂದ ಅವನಿಗೆ 18 ತಿಂಗಳ ಸಜಾ ಶಿಕ್ಷೆಯೂ 1,000 ರೂಪಾಯಿಗಳ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಇಂಗ್ಲೆಂಡಿನಲ್ಲಿ ಒಬ್ಬ ಸ್ತ್ರೀಯು ಜರ್ಮನಿಯವರ ಕಪ್ಪಿರಕ್ತಿಗಳ ವಿಷಯದಲ್ಲಿ ಸುಳ್ಳು ಸುದ್ದಿಗಳನ್ನು ಹರಡುತ್ತಾಳೆಂದು ರುಜುವಾತಾದ್ದರಿಂದ ಅವಳನ್ನು ಮೂರು ತಿಂಗಳ ವರೆಗೂ ಸೆರೆಮನೆಯಲ್ಲಿಟ್ಟಿದ್ದು ಪೊಲೀಸ್ ನಿಗಾದ ಮೇಲೆ ಬಿಟ್ಟುಬಿಟ್ಟರು.

ಕೊಬರಿಯ ಧಾರಣೆಯು ಈಗ ಇಳಿತರವಾಗಿದೆ. ಆದರೆ ಅದು ಬೆಣ್ಣೆ ಮಾಡುವುದಕ್ಕೆ ಬೇಕಾಗುವುದರಿಂದ ಅದಕ್ಕೆ ಇಷ್ಟರಲ್ಲೇ ಗಿರಾಕಿಯು ಹೆಚ್ಚಿ ಅದರಿಂದ ಧಾರಣೆಯು ಬಹಳ ಮಟ್ಟಿಗೆ ಏರುವುದೆಂದು ಹೇಳಲಾಗಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಟಿ. ನರಸಿಪುರದ ತಾಲ್ಲೂಕು ಮುಡಕತೊರೆಯಲ್ಲಿ ಇದೇ ತಿಂಗಳು 26 ನೇ ತಾರೀಕಿಗೆ ಪ್ರಾರಂಭವಾಗುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ ರಥೋತ್ಸವದ ಕಾಲದಲ್ಲಿ ದನಗಳ ಪ್ರದರ್ಶನವು ನಡೆಯತಕ್ಕದೆಂದು ಪ್ರಕಟಿಸಲಾಗಿದೆ.

* * *

ಸಾಗರದ ತಾಲ್ಲೂಕು ಶ್ರೀ ಗುರುಸಮುಸ್ಥಾನ ಕೆಳದಿ ಮಠದ ಶ್ರೀ ಮಹಂತಸ್ವಾಮಿ ಅಧ್ಯಕ್ಷರವರಿಗೆ ನಮ್ಮ ಮೈಸೂರು ಸರ್ಕಾರದವರು ದಯವಿಟ್ಟು ಒಂದು ತುಬಾಕಿಯನ್ನೂ ಒಂದು ಕತ್ತಿಯನ್ನೂ ಇಟ್ಟುಕೊಳ್ಳುವುದಕ್ಕೆ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

* * *

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಆನರಬಲ್ ಕರ್ನಲ್ ಹ್ಯು ಡಾಲಿಯವರು ಕೆಲವು ತಿಂಗಳ ರಜಾಪಡೆದು ತರುವಾಯ ಕೆಲಸದಿಂದ ನಿವೃತ್ತರಾಗುವರೆಂದು ತಿಳಿದು ಬರುತ್ತದೆ. ಅವರು ತಮ್ಮ ವಿರಾಮಕಾಲವನ್ನು ಸಂತೋಷವಾಗಿ ದೀರ್ಘಕಾಲ ಅನುಭವಿಸುವವರಾಗಲೆಂದು ಹಾರೈಸುತ್ತೇವೆ.

* * *

ಮೈಸೂರಿನಲ್ಲಿ ಕೋಆಪರೆಟಿವ್ ಸೊಸೈಟಿಗಳ ರಿಜಿಸ್ಟ್ರಾರಾಗಿರುವ ಮ|| ಎಂ. ಎ. ನಾರಾಯಣೈಯಂಗಾರ್‌ರವರು ಹಾಸನದಲ್ಲಿ ಒಂದು ಡಿಸ್ಟ್ರಿಕ್ಟ್ ಕೋಆಪರೆಟಿವ್ ಕಾನ್ಫರೆನ್ಸನ್ನು ಏರ್ಪಡಿಸಿದ್ದರು. ಅಲ್ಲಿನ ಡೆಪ್ಯುಟಿ ಕಮಿಷನರ್ ಮ|| ವೆದರಾಲ್ ಸಾಹೇಬರವರು ಇದೇ ತಿಂಗಳು 4 ನೇ ತಾರೀಕಿನಲ್ಲಿ ಅದನ್ನು ಪ್ರಾರಂಭಿಸಿದರು.

* * *

ಎ. ಎನ್. ಲಿಂಗಪ್ಪನವರು ಬರೆಯುವದು—ಬೆಂಗಳೂರಲ್ಲಿ ಹೊರಡುವ “ಕುರುವಿಜಯ” ಪತ್ರಿಕೆ ಎಡಿಟರ್ ಮತ್ತು ಪ್ರೊಪ್ರೈಟರ್ ಆದ ನಾನು ಖಾಯಿಲೆಯಾಗಿಯಿದ್ದದ್ದರಿಂದಲೂ ಪ್ರಿಂಟಿಂಗ್ ಆಫೀಸಿನ ಅನಿವಾರ್ಯದಿಂದಲೂ “ಕುರುವಿಜಯ ಪತ್ರಿಕೆಯು ನಿಂತಿದೆ.” ಡಿಟೋ ಪತ್ರಿಕೆಯು ಮುಂದೆ ಫೆಬ್ರವರಿ ತಿಂಗಳ ಆಗಾಯ್ತು ಹೊರಡುತ್ತೆ. ಚಂದಾದಾರರು ಕ್ಷಮಿಸಬೇಕೆಂದು ಕೋರುತ್ತೇನೆ.

* * *

ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಣಿಯವರ ಕಾಲೇಜಿನಲ್ಲಿ ಪ್ರಥಮ ವಿದ್ಯಾಭ್ಯಾಸದ ತರಗತಿಗಳಲ್ಲಿ 300 ಮಂದಿ ವಿದ್ಯಾರ್ಥಿನಿಯರಿದ್ದರು. ಆದಕಾರಣ ವಿದ್ಯಾಭ್ಯಾಸದ ಇಲಾಖೆಯವರು ಈ ತರಗತಿಗಳನ್ನು ಎರಡು ಶಾಖೆಗಳಾಗಿ ವಿಂಗಡಿಸಿ, ಅವುಗಳಲ್ಲಿ ಒಂದನ್ನು ಕೃಷ್ಣರಾಜ ಮೊಹಲ್ಲಾಕ್ಕೂ ಚಾಮರಾಜ ಮೊಹಲ್ಲಾಕ್ಕೂ ಮಧ್ಯದಲ್ಲಿರುವ ಮ|| ವೆಂಕಟವರದಯ್ಯಂಗಾರ್ರವರ ಮನೆಯಲ್ಲಿಯೂ, ಮತ್ತೊಂದನ್ನು ಶ್ರೀರಾಮಪೇಟೆಯಲ್ಲಿರುವ ವಿಜಯೇಂದ್ರರಾವ್ ರವರ ಮನೆಯಲ್ಲಿಯೂ ಇಡುವಂತೆ ಅಪ್ಪಣೆ ಮಾಡಿರುತ್ತಾರೆ.

* * *

ಮ|| ಚಿಕ್ಕರಾಮರಾಯರು ಕೆಲವು ಕಾಲದಿಂದ ರಾಜಧಾನಿಯಲ್ಲಿರುವ ಸಂಗೀತ ವಿದ್ವಾಂಸರಲ್ಲಿ ಸಂಗೀತ ವಿದ್ಯೆಯನ್ನು ಕಲಿಯುತ್ತಾ ಅದರಲ್ಲಿ ತುಂಬಾ ಅಭಿವೃದ್ಧಿಯನ್ನು ಹೊಂದಿ ಮುಂದೆ ಒಳ್ಳೆಯ ವಿದ್ವಾಂಸರಾಗುವ ನಂಬಿಕೆಯನ್ನು ಎಲ್ಲರಿಗೂ ಉಂಟುಮಾಡಿದ್ದರಿಂದ ಈ ಭಾಗದಲ್ಲಿ ಇವರನ್ನು ಪ್ರೋತ್ಸಾಹಗೊಳಿಸುವುದಕ್ಕಾಗಿ ಇಲ್ಲಿನ ಕೆಲವು ಮಂದಿ ದೊಡ್ಡ ಮನುಷ್ಯರುಗಳು ಸೇರಿ ಸುಮಾರು 350 ರೂಪಾಯಿಗಳನ್ನು ಚಂದಾ ಎತ್ತಿ ಮ|| ಚಿಕ್ಕರಾಮರಾಯರಿಗೆ ಒಂದು ಭಂಗಾರದ ಪದಕವನ್ನು ಕೊಟ್ಟರು. ಇದೇ ಉದ್ದೇಶ ಕಳೆದ ಭಾನುವಾರ ಸಾಯಂಕಾಲ 6-30 ಗಂಟೆಗೆ ಇಲ್ಲಿನ ಟವನ್ ಹಾಲಿನಲ್ಲಿ ಒಂದು ಸಭೆಯು ಸೇರಿತು. ಎಲ್ಲಾ ಕೋಮುಗಳ ದೊಡ್ಡ ಮನುಷ್ಯರುಗಳು ಸುಮಾರು 500 ಮಂದಿಯ ವರೆಗೂ ಸೇರಿದ್ದರು. ಮ|| ವೆಂಕಟಕೃಷ್ಣಯ್ಯನವರು ಅಗ್ರಪೀಠವನ್ನಲಂಕರಿಸಿದ್ದರು. ಸಂಗೀತ ವಿದ್ವಾಂಸರುಗಳಾದ ಕರಿಗಿರಿರಾಯರೂ ಸುಬ್ಬಣ್ಣನವರೂ ಶೇಷಣ್ಣನವರೂ ಮ|| ಚಿಕ್ಕರಾಮರಾಯರು ಇಂಥ ಮರ್ಯಾದೆಯನ್ನು ಹೊಂದುವಷ್ಟು ಯೋಗ್ಯತೆಯುಳ್ಳವರಾಗಿದ್ದರೆಂದು ಅಭಿಪ್ರಾಯಪಟ್ಟಿದ್ದಲ್ಲದೆ ಆ ದಿನ ನಡೆದ ಸಭೆಯಲ್ಲಿ ರಾಜರಾಗಿದ್ದು ಈ ಕಾರ್ಯದಲ್ಲಿ ತಮಗುಂಟಾದ ಸಂತೋಷವನ್ನು ಪ್ರಕಾಶಪಡಿಸಿದರು. ಈ ವಿಷಯವನ್ನು ಕುರಿತು ನಮ್ಮ ಶ್ರೀಮನ್ ಮಹಾರಾಜರವರಿಗೆ ಅರಿಕೆಮಾಡಲು ಅವರೂ ಕೂಡ ಸಂತೋಷಪಟ್ಟು ತಮ್ಮ ಅನುಮತಿಯನ್ನು ದಯಪಾಲಿಸಿದ್ದರು. ಇಂಥ ಸಂತೋಷಕೂಟವು ನಡೆದು ಮ|| ರಾಮರಾಯರನ್ನು ಸಂಗೀತ ವಿದ್ಯೆಯಲ್ಲಿ ಪ್ರೋತ್ಸಾಹಗೊಳಿಸಿದ್ದಕ್ಕಾಗಿ ಸಂತೋಷಪಡುವುದಲ್ಲದೆ, ಅವರು ಮುಂದೆ ತುಂಬಾ ಪ್ರವೀಣತೆಯನ್ನೂ ಕೀರ್ತಿಯನ್ನೂ ಪಡೆಯಲೆಂದು ಹಾರೈಸುತ್ತೇವೆ.

* * *

ಒಬ್ಬ ಬಾತ್ಮೀದಾರರು ಬರೆಯುವದು—ಬೊಂಬಾಯಿ ಪಟ್ಟಣದ ಶೆರಿಫ್ ಮತ್ತು ಗಣ್ಯ ವ್ಯಕ್ತಿಗಳಲ್ಲಿ ಮುಖಂಡರಾದ ಸೇಟ್ ನರೋತ್ತಮ ಮೊರಾರ್ಜಿ ಗೋಕುಲ್‌ದಾಸ್ ಜೆ ಪಿ ಮತ್ತು ಆ ಪಟ್ಟಣದ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ರಾವ್ ಸಾಹೇಬ್ ಪುರುಷೋತ್ತಮ ಉದ್ಧವಜಿ. ಜೆ ಪಿ. ಎಂಬವರೂ ಪರಿವಾರ ಸಮೇತ ಮದ್ರಾಸಿನಿಂದ ಜನವರಿ 1 ನೇ ತಾರೀಖು ಪ್ರಾತಃಕಾಲ ಬೆಂಗಳೂರಿಗೆ ಬಂದರು. ನಮ್ಮ ಮಹಾರಾಜರವರ ಅಸಿಸ್ಟೆಂಟ್ ಪ್ರೈವೆಟ್ ಸೆಕ್ರೆಟರಿ ಮ|| ತಂಬುಚೆಟ್ಟಿರವರೂ ಮ|| ಬಾಲರಾಜೆ ಅರಸಿನವರೂ ಮುದ್ದುಕೃಷ್ಣಪ್ಪನವರೂ ದಂಡಿನ ರೈಲ್ವೆ ಸ್ಟೇಷನ್ನಲ್ಲಿ ಇವರನ್ನು ಎದುರುಗೊಂಡು ರಾಜಾಮಹಲಿಗೆ ಕರೆದುಕೊಂಡು ಹೋದರು. ಪ್ರೈವೆಟ್ ಸೆಕ್ರೆಟರಿಗಳಾದ ಮ|| ಕ್ಯಾಂಬೆಲ್ ಸಾಹೇಬರವರೊಡನೆ ದಂಡಿನಲ್ಲಿ ಸಂಚಾರಮಾಡಿ ಅರಮನೆಯಲ್ಲಿ ಆತಿಥ್ಯವಾದ ಮೇಲೆ ಪೇಟೆಯಲ್ಲಿ ಮ|| ಬಿ. ಪಿ. ಸುಬ್ಬರಾಯರ ಮನೆಯಲ್ಲಿ ಫಲಾಹಾರವನ್ನು ತೀರಿಸಿಕೊಂಡು ಅವರೊಡನೆ ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್, ಗೌರ್ನ್‌ಮೆಂಟಿನ ನೆಯಿಗೆ ಕಾರ್ಖಾನೆಯ ಮಳಿಗೆ ಇವುಗಳನ್ನು ನೋಡಿಕೊಂಡು ಮಾಜಿದಿವಾನ್ ಮ|| ಟಿ. ಆನಂದರಾಯರವರ ಭೇಟಿಯನ್ನು ತೆಗೆದುಕೊಂಡರು. ಸಾಯಂಕಾಲ ನಮ್ಮ ದಿವಾನ್ ವಿಶ್ವೇಶ್ವರೈಯನವರ ಆತಿಥ್ಯ ಸ್ವೀಕರಿಸಿ ಅದೇ ದಿನರಾತ್ರಿ ಪೂನಾಕ್ಕೆ ಹೊರಟುಹೋದರು. ಸಿಟಿ ಸ್ಟೇಷನ್ ಬಳಿ ಮ|| ತಂಬೂ ಚೆಟ್ಟಿರವರೂ ಬಾಲರಾಜೆ ಅರಸಿನವರೂ ಬಿ. ಪಿ. ಸುಬ್ಬರಾಯರೂ ಇವರಿಗೆ ಸುಖಪ್ರಯಾಣವನ್ನು ಬಯಸಿ ಕಳುಹಿಸಿದರು. ಪ್ರಾತಃಕಾಲದಿಂದ ದಂಡಿನಲ್ಲೂ ಪೇಟೆಯಲ್ಲೂ ಇವರ ಭೇಟಿಗಾಗಿ ನಿರೀಕ್ಷಿಸುತ್ತಿದ್ದ ಪರಿಚಯಸ್ಥರು ಫಲಪುಷ್ಪಗಳನ್ನೂ ಹಾರ ತುರಾಯಿಗಳನ್ನೂ ಹೊರಡುವಾಗ ಒಪ್ಪಿಸಿ ಮತ್ತೊಂದು ವೇಳೆ ಭೇಟಿಯನ್ನು ಕೇಳಿಕೊಂಡರು. ಮ|| ನರೋತ್ತಮ ದಾಸರವರು ಇಲ್ಲಿನವರ ಆದರ ವಿಶ್ವಾಸಗಳಿಗೆ ವಂದಿಸಿದರು. ಯಾವುದೋ ಒಂದು ಕಾರ್ಖಾನೆಯ ಉದ್ದೇಶದಿಂದ ಇವರು ಪುನಃ ಬರಬೇಕೆಂಬ ನಿರೀಕ್ಷಣೆ ಇರುವಂತೆ ತಿಳಿಯುವುದು.

ಮೈಸೂರು ಗೆಜೆಟ್ ಸಂಗ್ರಹ.

ಮುಜರಾಯಿ ಇಲಾಖಾ ಸೂಪ್ರೆಂಡರ್ ಮ|| ಎಚ್. ನರಸಿಂಹಯ್ಯಂಗಾರ್ರನ್ನೂ, ಕಾಫಿಪ್ಲಾಂಟರ್ ಮ|| ಟಿ ಬಿ. ಮಲ್ಲೇಗೌಡರನ್ನೂ ಚಿಕ್ಕಮಗಳೂರು ಮ್ಯುನಿಸಿಪಲ್ ಕೌನ್ಸಲರಾಗಿ ನೇಮಿಸಿದೆ.

ಸಿಕಾರಿಪುರದ ತಾಲ್ಲೂಕು ಗಾಮಹಳ್ಳಿಯ ತವರಿಕೆರೆ ಕಲಾವಿಗೂ, ಶ್ಯಾಂಸಿಪಟ್ ತಾಲ್ಲೂಕು ಮಂಡಘಟ್ಟದ ಹಸಕೆರೆ ಕಲಾವಿಗೂ ಸರ್ಕಾರದವರು ಎರಡು ಪಂಚಾಯತಿಗಳನ್ನು ನೇಮಿಸಿದಾರೆ

ಮೈಸೂರು ಡಿಸ್ಟ್ರಿಕ್ಟಿನ ಪೊಲೀಸ್ ಇಲಾಖಾ ಆಕ್ಟಿಂಗ್ ಸೂಪರಿಂಟೆಂಡೆಂಟ್ ಮ|| ಸಿ. ನಾರಾಯಣರಾಯರಿಗೆ ಜನವರಿ ತಾ. 2 ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ; ಇವರು ಕ್ರಿಸ್ಮಸ್ ರಜವನ್ನೂ ಉಪಯೋಗಿಕೊಳ್ಳಬಹುದು. ಮತ್ತೊಂದು ಹುಕುಂ ಕೊಡಲ್ಪಡುವ ತನಕ ಇನ್ಸ್‌ಪೆಕ್ಟರ್ ಮ|| ಆರ್. ರಾಮರಾಯರು ಅವರ ಕೆಲಸವನ್ನು ಬದಲಿ ನೋಡತಕ್ಕದ್ದೆಂದು ನೇಮಿಸಲ್ಪಟ್ಟಿದಾರೆ.

ಹಾಸನದ ಡೆಪ್ಯುಟಿ ಕಮಿಷನರ್ ಮಿ|| ಪಿ. ಆರ್. ಡಬ್ಲಿಯು ವೆದರಾಲ್ ರವರಿಗೆ ಜನವರಿ ತಾ. 7 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ; ರಜಾ ಪೂರೈಸಿದ ಬಳಿಕ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು.

ಸೀನಿಯರ್ ಅ|| ಕಮಿಷನರ್ ಮ|| ಜಿ. ಅರವಮುದಯ್ಯಂಗಾರ್ರವರನ್ನು 3 ನೇ ಕ್ಲಾಸ್ ಡೆಪ್ಯುಟಿ ಕಮಿಷನರಾಗಿ ನೇಮಿಸಿದೆ. ಇವರು ಮುಜರಾಯಿ ಸೂಪರಿಂಟೆಂಡೆಂಟರಾಗಿಯೇ ಕೆಲಸಮಾಡತಕ್ಕದ್ದು.

ಸೀನಿಯರ್ ಅ|| ಕಮಿಷನರ್ ಮತ್ತು ಕೋಲಾರದ ಚಿನ್ನದಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಬಿ. ರಾಮಸ್ವಾಮಯ್ಯನವರು ಮಿ|| ವೆದರಾಲ್‌ರವರಿಂದ ಜನವರಿ ತಾ 7 ರಲ್ಲಿ ಛಾರ್ಜನ್ನು ವಹಿಸಿ ಹಾಸನದ ಡೆಪ್ಯುಟಿ ಕಮಿಷನರಾಗಿ ಬದಲಿ ನೋಡತಕ್ಕದ್ದು.

ಸೀನಿಯರ್ ಅ|| ಕಮಿಷನರ್ ಮತ್ತು ಮೈಸೂರು ಸಬ್ ಡಿವಿಜನ್ ಆಫೀಸರ್ ಮ|| ಬಿ. ವೆಂಕೋಬರಾಯರು ಕೋಲಾರದ ಚಿನ್ನದಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ವರ್ಗಮಾಡಲ್ಪಟ್ಟಿದಾರೆ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮ|| ಸಿ. ಎಸ್. ಕುಪ್ಪುಸಾಮಿ ಅಯ್ಯಂಗಾರ್ರು ಮೈಸೂರು ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ರೆವಿನ್ಯೂ ಸರ್ವೆ ಅ|| ಸೂಪರಿಂಟೆಂಡೆಂಟ್ ಮ|| ವೈ. ನಂಜುಂಡಯ್ಯನವರಿಗೆ ಡಿಸೆಂಬರ್ ತಾ. 9 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ; ಬಳಿಕ ಇವರು ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದು.

ಕಂಟ್ರೋಲರವರಾದ ದಿವಾನ್ ಬಹದೂರ್ ಮ|| ಜೆ. ಎಸ್. ಚಕ್ರವರ್ತಿಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀಮನ್ ಮಹಾರಾಜರವರ ಪ್ರೈವೆಟ್‌ಸೆಕ್ರೆಟರಿಯವರ ಆಫೀಸ್ ಶಿರಸ್ತೆದಾರ್ ಮ|| ಬಿ. ಮುದ್ದುಕೃಷ್ಣಪ್ಪನವರನ್ನು ಮುಳಬಾಗಲ್ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಕಮಾಡಿದೆ. ಮ|| ಎಂ. ರಾಮಚಂದ್ರರಾಯರು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಕಲೆಕ್ಟರಾಗಿ ವಾಪಸ್ ಹೋಗತಕ್ಕದ್ದು.

ಬೌರಿಂಗ್‌ಪೇಟೆ ತಾಲ್ಲೂಕು ಶಿರಸ್ತೆದಾರ್ ಮ|| ಎಂ. ಎಸ್. ನಾರಾಯಣರಾಯರನ್ನು ಮಾಲೂರ್ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಕ ಮಾಡಿದೆ.

ನೆಲಮಂಗಲದ ತಾಲ್ಲೂಕ್ ಅಮಲ್ದಾರ್ ಮ|| ಸಿ. ಸೂರ್ಯನಾರಾಯಣ ಶಾಸ್ತ್ರಿಗಳನ್ನು ಸೀನಿಯರ್ ಕೌನ್ಸಲರವರ ಬಳಿ ಕೆಲಸಮಾಡುವಂತೆ ಹಂಗಾಮಿ ಕಳುಹಿಸಲಾಗಿದೆ.

ನಂಜನಗೂಡು ಮುನ್ಸಿಫ್ ಮ|| ಎಂ. ನರಸಪ್ಪಯ್ಯನವರನ್ನು ಕಳೆದ ಆಗಸ್ಟ್ ತಾ. 28 ರಿಂದ 3 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮಿಸ್ ಎ. ಜಿ. ಆಲ್ಫ್ರೆಡ್ ರವರನ್ನು ಕಳೆದ ನವಂಬರ್ ತಾ 1 ರಿಂದ 6 ನೇ ಕ್ಲಾಸ್ ಅ|| ಸರ್ಜನ್ರಾಗಿ ಖಾಯಂ ಮಾಡಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜ್ ಅ|| ಪಂಡಿತರಾದ ಮ|| ಬಿ. ವೆಂಕಟನಾರಣಪ್ಪನವರಿಗೆ ಅರ್ಧ ಸಂಬಳದ ಮೇಲೆ ಜನವರಿ ತಾ. 5 ರಿಂದ ಎರಡು ತಿಂಗಳು ಇಪ್ಪತ್ತೇಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಇವರಿಗೆ ಬದಲಿಯಾಗಿ ಮ|| ಬಿ. ವೆಂಕಟೇಶಾಚಾರ್ರು, ಇವರ ಬದಲಿ ಮ|| ವೆಂಕಟರಾವ್ ತೇಲಂಗರವರೂ ನೇಮಿಸಲ್ಪಟ್ಟಿದಾರೆ

ಸೀನಿಯರ್ ಅ|| ಎನ್‌ಟಮಾಲಜಿಸ್ಟ್ ಮ|| ಕುನ್ಹಿಕಣ್ಣನ್ ರವರಿಗೆ ಕ್ರಿಸ್ಮಸ್ ರಜಾ ಜೊತೆಗೆ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಡೆಪ್ಯುಟಿ ಚೀಫ್ ಇಂಜನಿಯರಾಗಿರುವ ರಾವ್ ಬಹದೂರ್ ಕೆ. ಕೃಷ್ಣಯ್ಯಂಗಾರ್ರನ್ನು ಜನವರಿ ತಾ. 1 ರಿಂದ ಮುಜರಾಯಿ ಇಲಾಖಾ ಜಾಯಿಂಟ್ ಸೆಕ್ರೆಟರಿಯವರಾಗಿಯೂ ನೇಮಕಮಾಡಿದೆ.

ಫಾರೆಸ್ಟ್ ಸರ್ವೆ ಕೆಲಸ ನೋಡುತ್ತಿದ್ದ ಅ|| ಇಂಜನಿಯರ್ ಮ|| ಕೆ. ನಾರಾಯಣಯ್ಯಂಗಾರ್ರನ್ನು ಕಾವೇರಿ ರಿಜರ್ವಾಯರ್ ಕಾಮಗಾರಿಯ 6 ನೇ ಯಡತೊರೆ ಡಿವಿಜನ್‌ಗೆ ವರ್ಗಮಾಡಿದೆ.

ನೀರಿನ ಸಪ್ಲೈ ಇಲಾಖೆಯ ಅ|| ಇಂಜನಿಯರ್ ಮ|| ಎಂ. ಎ. ಶ್ರೀನಿವಾಸಾಚಾರ್ಯರವರಿಗೆ ಜನವರಿ ತಾರೀಖು 2 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಾವೇರಿ ರಿಜರ್ವಾಯರ್ ಕಾಮಗಾರಿಯ ಅ|| ಇಂಜನಿಯರ್ ಮ|| ಎ. ಸುಬ್ಬರಾಯರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಯಡತೊರೆ ತಾಲ್ಲೂಕು ಅಮಲ್ದಾರ್ ಮ|| ಜಿ. ನಾರಾಯಣರಾಯರಿಗೆ ಜನವರಿ ತಾ. 2 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸ್ಪೆಷಲ್ ಡೆಪ್ಯುಟಿ ಅಮಲ್ದಾರ್ ಮ|| ಎನ್. ಶ್ರೀನಿವಾಸಮೂರ್ತಿಯವರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಒಪ್ಪ ದೇಶಹಿತ್ಯೈಷಿಯ ಕಾರ್ಯಗಳು.

ನೆಲಮಂಗಲ ತಾಲ್ಲೂಕಿನ ಹಳ್ಳಿ.

ಈ ಗ್ರಾಮದಲ್ಲಿ ಸಂಗಪ್ಪ, ಗಂಗಪ್ಪ ಎಂಬ ಇಬ್ಬರು ಠಕ್ಕು ಮಾಡಿಕೊಂಡು ರೈತರುಗಳಿಗೆ ಖರ್ಚು ಇಡಿಸಿ ಸಾವುಕಾರರಿಗೆ ಅಡವಿಟ್ಟಿದ್ದರಿಂದ ಅವರು ಆಸ್ತಿಗಳೆಲ್ಲಾ ಕಳೆದುಕೊಂಡು ತಿನ್ನುವದಕ್ಕೆ ಅನ್ನವಿಲ್ಲದಂತೆ ಆಗಿರುವ ಕಾಲಕ್ಕೆ ಈ ಗ್ರಾಮದ ಖಾಯಂ ಶ್ಯಾನುಭೋಗರಾದ ಅಮಲ್ದಾರ್ ಕೃಷ್ಣಪ್ಪನವರ ಮೊಮ್ಮಕ್ಕಳು ದೊಡ್ಡಬೆಲೆ ಕೃಷ್ಣರಾಯರು ಬಂದು ಈ ಗ್ರಾಮದ ಸ್ಥಿತಿ ನೋಡಿ ಮೊದಲು ಒಂದು ಕೋಆಪರೇಟಿವ್ ಸೊಸೈಟಿ ಸ್ಥಾಪನೆಮಾಡಿ, ತಾವೇ ಸೆಕ್ರೆಟರಿಯಾಗಿ 20 ಜನ ಹೆಂಗಸರು, 98 ಜನ ಗಂಡಸರನ್ನು ಮೆಂಬರಾಗಿ ಮಾಡಿ, ಸುಮಾರು 3,000 ರೂಪಾಯಿವರೆಗೆ ಷೇರುಮಾಡಿ, ಡಿಪಾಜಿಟ್ಟು 2,000 ರೂಪಾಯಿ, ಲೋನ್ 6,000 ರೂಪಾಯಿ ಒಟ್ಟು 9,000 ರೂಪಾಯಿ ಲೇವಾದೇವಿ ಮಾಡಿದ್ದರಲ್ಲಿ ರೈತರುಗಳ ದುಬಾರಿ ಬಡ್ಡಿ ಸಾಲವನ್ನು ಕಳೆದು ಸರಿಯಾದ ಸ್ಥಿತಿಗೆ ತಂದು ಇರುತ್ತಾರೆ.—ಬಾಲಕ ಬಾಲಕಿಯರಿಗೆ ವಿದ್ಯಾ ಶಾಲೆಕ್ಕೆ ಇಲ್ಲದ ರಿಂದ ಹೊಸದಾಗಿ ಒಂದು ಸ್ಕೂಲ್ ಕಟ್ಟಿಸಿ ಸರ್ಕಾರದವರಿಗೆ ಒಪ್ಪಿಸಿದ್ದರಿಂದ 40 ಜನ ಬಾಲಕ ಬಾಲಕಿಯರು ಓದುತ್ತಾ ಇದಾರೆ. ಇವರುಗಳಿಗೆಲ್ಲಾ ಸೊಸೈಟಿಯಲ್ಲಿ ಸೇವಿಂಗ್ಸು ಡಿಪಾಜಿಟ್ಟು ಏರ್ಪಾಡು ಮಾಡಿದಾರೆ.—ಈ ಗ್ರಾಮದಲ್ಲಿ ಜನಗಳಿಗೆ ಪಾನಕ್ಕೆ ಒಳ್ಳೇ ಸೀ ನೀರು ಇಲ್ಲದ್ದರಿಂದ 400 ರೂಪಾಯಿವರೆಗೆ ಖರ್ಚು ಇಟ್ಟು ಭಾವಿ ಮಾಡಿಸಿದ್ದರಿಂದ ಬಹಳ ಅನುಕೂಲವಾಗಿದೆ.—ದೇವಸ್ಥಾನ ಸರಿಯಾಗಿ ಇಲ್ಲದ್ದರಿಂದ ಇದನ್ನು ಸರಿಪಡಿಸಿ ಇದರಲ್ಲಿ ಶ್ರೀರಾಮದೇವರ ಪ್ರತಿಷ್ಠೆಮಾಡಿ ಆಯಾ ಕಾಲಮಾನ ಜನಗಳಿಗೆ ತಿಂಗಳಿಗೆ ಒಂದು ಉತ್ಸವ ಮಾಡಿಸುವ ಪ್ರಕಾರ ಏರ್ಪಾಡು ಮಾಡಿದಾರೆ. ಬಸವಣ್ಣದೇವರ ಮತ್ತು ಗ್ರಾಮ ದೇವತೆ ದೇವಸ್ಥಾನ ಮಾಡಿಸುವದರಲ್ಲಿ ಇದಾರೆ.—ರೈತರುಗಳ ಅನುಕೂಲಕ್ಕಾಗಿ ಒಂದು ಬೀಜದ ಹೋರಿ ತಂದು ಬಿಟ್ಟು ಇರುವದರಿಂದ ಒಳ್ಳೇ ಕರುಗಳು ಹುಟ್ಟುವದರಿಂದ ರೈತರಿಗೆ ಫಾಯಿದೆ ಆಗಲು ಅನುಕೂಲವಾಯಿತು.—ಇತರ ಕಡೆಗೆ ರೈತರುಗಳು ಹೋಗದಂತೆ ಜವಳಿ ಅಂಗಡಿಯೂ ಏರ್ಪಾಡು ಮಾಡಿ ತಿನ್ನುವುದಕ್ಕೆ ರಾಗಿ ಸಹ ಕೊಡುವ ಏರ್ಪಾಡು ಮಾಡಿರುತ್ತಾರೆ.—ವಿಲೇಜು ಇಂಪ್ರೂವ್‌ಮೆಂಟಿಗಾಗಿ ಗ್ರಾಮದಿಂದ ಸೀ ನೀರು ಭಾವಿ ಸರಿಯಾಗಿರ ರಸ್ತೆ, ಗ್ರಾಮದಿಂದ ಹೈರೋಡಿಗೆ ಹೋಗಲು 1½ ಮೈಲಿ ಫಂಡಿ ರಸ್ತೆ, ಊರೊಳಗೆಲ್ಲಾ ರಸ್ತೆ ಮಾಡಿಯುವದನ್ನು ಅಮಲ್ದಾರ್ರವರು ಪರಾಂಬರಿಸಿದ್ದರ ಮೇಲೆ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿ ನೋಡಿ ಬಹಳ ಸಂತೋಷಪಟ್ಟು ರೋಡಿಗೆ ಗ್ರಾವಲ್ ಹಾಕಿಸಬೇಕೆಂತಲೂ, ಒಂದು ಮೋರಿ ಮಾಡಿಸಬೇಕೆಂತಲೂ ಅಪ್ಪಣೆಮಾಡಿದಾರೆ.—ಈ ಗ್ರಾಮಕ್ಕೆ ದಿವಾನ್ ಸಾಹೇಬರವರ ಸವಾರಿ ದಯಮಾಡಿಸುವದಾಗಿ ವರ್ತಮಾನವಿದೆ. ಅದರೊಳಗಾಗಿ ಒಂದು ರೀಡಿಂಗ್ ರೂಮು, ಒಂದು ಚಿಕ್ಕ ಹೂವಿನ ತೋಟ ಏರ್ಪಾಡು ಮಾಡಿಸಬೇಕೆಂದು ಸಾಹಸಮಾಡುತ್ತಾ ಇದಾರೆ. ಈ ರೀತಿ ಮಾಡಿಸಿರತಕ್ಕ ಕೆಲಸಗಳನ್ನು ದಿವಾನ್ ಸಾಹೇಬರವರು ಪರಾಂಬರಿಸಿದ್ದೆ ಆದರೆ ಸರ್ಕಾರದವರು ಏರ್ಪಡಿಸಿ ಇರತಕ್ಕ ರೂಲುಗಳು ಜಾಗ್ರತೆಯಿಂದ ಜಾರಿಗೆ ಬಂದದ್ದಕ್ಕಾಗಿ ಸಂತೋಷಪಡಲು ಅಭ್ಯಂತರವಿಲ್ಲ.—ಈ ಗ್ರಾಮದ ಸೊಸೈಟಿಗೆ ಹೊಸ ಮಾದರಿ ನೇಗಲುಗಳೂ, ಬಿತ್ತನೆ ಬೀಜಗಳೂ ತರಿಸಿ ರೈತರುಗಳಿಗೆ ಅನುಕೂಲಮಾಡಿಕೊಡುತ್ತಾ ಇರುವ ನಮ್ಮ ಸೆಕ್ರೆಟರಿ ಮ॥ ಡಿ. ಎಸ್. ಕೃಷ್ಣರಾಯರಿಗೆ ಸರ್ವರೂ ಕೃತಜ್ಞರಾಗಿ ಇದೇವೆ.

ಚಂದಾದಾರ್.

ಹಾಸನದ ಎರಡನೇ ಪಶು ಪ್ರದರ್ಶನ.

ಈ ಪ್ರದರ್ಶನವು ಜನವರಿ 4–5 ನೇ ಸೋಮವಾರವೂ ಮಂಗಳವಾರವೂ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸ್ ಕಟ್ಟಡದ ಮೈದಾನದಲ್ಲಿ ನಡೆಯಿತು. ಇದು ವರೆಗೆ ನಡೆದ ಪ್ರದರ್ಶನಗಳಿಗಿಂತಲೂ ಇದು ವಿಶೇಷವಾದುದು. ವ್ಯವಸಾಯ, ಕೈಗಾರಿಕೆ, ಕುಶಲವಿದ್ಯೆಗಳಿಗೆ ಸಂಬಂಧಪಟ್ಟ ಕೆಲಕೆಲವು ವಸ್ತುಗಳೂ ಪ್ರದರ್ಶಿಸಲ್ಪಟ್ಟಿದ್ದುವು. ಆರು ದಿನಗಳ ತನಕ ಇಲ್ಲಿ ಒಂದು ದೊಡ್ಡ ಜಾತ್ರೆಯೋಪಾದಿ ಜನಸಂದಣಿಯು ಸೇರಿತ್ತು. ವಿಧವಿಧವಾದ ಜಾಬುಬೋರರೂ, ಆಟರಿಯವರೂ, ಅಪರಿಮಿತವಾಗಿ ಬಂದು ತುಂಬಿದ್ದರು. ಇವಲ್ಲದೆ ಬಯಾಸ್ಕೋಪ್, ನಾಟಕ, ಸರ್ಕಸ್, ಇತ್ಯಾದಿ ಸಾಧನಗಳೂ ತುಂಬಿದ್ದುವು. ದನಗಳು ಈ ವರ್ಷ 11,000 ಬಂದಿದ್ದುವು. ಬಹು ಒಳ್ಳೇ ಉಣ್ಣೆಯುಳ್ಳ ಕುರಿಯೂ, ಮತ್ತೊಂದು ಮೇಕೆಯೂ ನೋಟಕರಿಗೆ ಹರ್ಷವನ್ನುಂಟುಮಾಡುತ್ತಿದ್ದುವು. ಒಂದು ಹಸುವಿಗೆ ಕತ್ತಿನ ಹತ್ತಿರ ಒಂದು ಕೈಯು ಉತ್ಪನ್ನವಾಗಿದ್ದುದೊಂದಾಶ್ಚರ್ಯ. ಈ ಪ್ರದರ್ಶನವನ್ನು ನಮ್ಮ ಡೆಪ್ಯುಟಿ ಕಮಿಷನರ್ ಮಿ॥ ಮೆಕರಾಲ್ ಧೊರೆಯವರು ಆರಂಭಿಸಿದರು. ಸಭಾ ಮಂಟಪವು ಬಹು ಸುಂದರವಾಗಿ ಕಟ್ಟಲ್ಪಟ್ಟು ನಾನಾ ತರವಾಗಿ ಅಲಂಕೃತವಾಗಿದ್ದಿತು. ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ॥ ನಾರಾಯಣಯ್ಯಂಗಾರ್ರವರೂ ಬಂದಿದ್ದರು. ಈ ಡಿಸ್ಟ್ರಿಕ್ಟಿನ ಎಲ್ಲಾ ಸ್ಯಾನಿಟರಿ ಆಫೀಸರವರೂ, ಕಮಿಷನರ್‌ಗಳೂ, ಅಮಲ್ದಾರರುಗಳೂ ಸೇರಿದ್ದರು. ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೂ, ಕೋಆಪರೇಟಿವ್ ಸೊಸೈಟಿಗಳ ಪ್ರತಿನಿಧಿಗಳೂ, ಮ್ಯುನಿಸಿಪಲ್ ಕಮಿಷನರುಗಳೂ, ಇತರ ದೊಡ್ಡ ಮನುಷ್ಯರೂ ನೆರೆದಿದ್ದರು. ದೂರ ಪ್ರದೇಶಗಳಿಂದ ಪಶು ಪ್ರದರ್ಶಕರೂ, ವ್ಯವಸಾಯ, ಕೈಗಾರಿಕೆ, ಕುಶಲ ವಿದ್ಯೆಗಳನ್ನುಳ್ಳ ಲೈಕ, ಪರ್ತಕ ಪ್ರಬಂಗಳೂ, ಸಾಮಾನ್ಯ ಜನರೂ, ಸಾವಿರಾರು ಮಂದಿ ಸೇರಿ ಮಂಟಪದ ಹೊರ ಭಾಗವೆಲ್ಲಾ ಕಿಕ್ಕಿರಿದು ಮುತ್ತಿದ್ದಿತು. ಸಭಾ ಭವನದಲ್ಲಿ ಮೊದಲು ನಮ್ಮ ಡೆಪ್ಯುಟಿ ಕಮಿಷನರ್‌ರವರ ಪ್ರಾರಂಭೋಪನ್ಯಾಸವಾಯಿತು. ಅನಂತರ ಈ ಪ್ರದರ್ಶನದ ಕಮಿಟಿಯ ಸೆಕ್ರೆಟರಿ ಮ॥ ರಾಜಗೋಪಾಲಚಾರ್ರು ರಿಪೋರ್ಟನ್ನು ಓದಿದರು. ಪ್ರದರ್ಶನದ ಪಶುಗಳನ್ನೂ, ವಸ್ತುಗಳನ್ನೂ ಪರೀಕ್ಷಿಸುವುದಕ್ಕೆ ಜಡ್ಜಿಗಳು ನೇಮಕವಾದರು. ನಮ್ಮ ಶ್ರೀಮನ್ಮಹಾರಾಜರವರಿಗೆ ಘನತಮವಾದ ಜಿ. ಸಿ. ಐ. ಎಂಬ ಬಿರುದು ಬಂದದ್ದಕ್ಕೋಸ್ಕರ ಸಂತೋಷ ಸೂಚಕ ತಂತೀವರ್ತಮಾನವು ಕಳುಹಲ್ಪಟ್ಟಿತು. ಮ॥ ಅಪ್ಪಣ್ಣಯ್ಯಂಗಾರ್ರು ಈ ಸಂತೋಷಕಾಲದಲ್ಲಿ ಅತ್ಯುತ್ತಮವಾದ ಪಶುವಿಗೆ ಕೊಡಬೇಕೆಂದು ಹತ್ತು ರೂಪಾಯಿ ಬಹುಮಾನವನ್ನು ಕಳುಹಿಸಿದ್ದರು. ಮತ್ತು ಅತ್ಯುತ್ತಮವಾದ ಹಸುವಿಗೆ ಇಲ್ಲಿನ ಮ॥ ವೆಂಕಟೇಶಯ್ಯನವರು ಒಂದು ಭಂಗಾರದ ಪದಕವನ್ನು ಬಹುಮಾನಮಾಡಿದರು. ಸಭಾ ಕಾರ್ಯವು ಮುಗಿದ ಮೇಲೆ ಸಕಲರೂ ಪಶುಗಳನ್ನೂ, ಇತರ ವಸ್ತುಗಳನ್ನೂ ನೋಡಿ ಸಂತೋಷಪಟ್ಟರು. ಪ್ರದರ್ಶನ ವಸ್ತುಗಳಲ್ಲಿ ಹೊಳೇನರಸೀಪುರದ ಮರದ ಸಾಮಾನು ಮತ್ತು ಬಟ್ಟೆಗಳೂ, ಮಲೆನಾಡು ಪ್ರಾಂತ್ಯದ ಕಾಫಿಬೀಜ ಮತ್ತು ಭತ್ತ ಧಾನ್ಯಗಳೂ, ಇತರ ಆಕಾರದ ಸೌತೆಕಾಯಿ, ಮೆಣಸಿನಕಾಯಿ ಮೊದಲಾದ ತರಕಾರಿಗಳೂ ಬಹು ಅಂದವಾಗಿದ್ದುವು. ಕುಶಲ ವಿದ್ಯೆಯಲ್ಲಿ ಇಲ್ಲಿನ ನೇಯ್ಗೆಯವರು ಶಾಲಿನ ಮೇಲೆ ಮಾಡಿದ್ದ ಕಸೂತಿ ಕೆಲಸವೂ, ಶ್ರವಣಬೆಳಗೊಳದ ಮ॥ ವಿಜಯ ಚಂದ್ರಯ್ಯನವರು ಹುಣಸೇಬೀಜದ ಬೇಳೆಯಗಲದ ಬೆಳ್ಳೀ ತಗಡಿನ ಮೇಲೆ ನಮ್ಮ ಶ್ರೀಮನ್ಮಹಾರಾಜರವರ ದಿವ್ಯನಾಮವನ್ನು ಇಂಗ್ಲಿಷಿನಲ್ಲಿ ಪೂರ್ತಿಯಾಗಿ ಕೆತ್ತಿ ಬರೆದಿದ್ದುದೂ, ಅದೇ ನಾಮವು ಅಕ್ಕೀಕಾಳಿನ ಮೇಲೆ ಅಂಕಿತವಾಗಿದ್ದುದೂ ನೋಟಕರಿಗೆ ಅತ್ಯಾಶ್ಚರ್ಯವನ್ನುಂಟುಮಾಡಿದುವು. ಮಾರನೇ ದಿನ ಅದೇ ಮೈದಾನದಲ್ಲಿ ಪೂರ್ವೋಕ್ತವಾದ ಜನರೆಲ್ಲರೊಂದಿಗೆ ನಮ್ಮ ಡೆಪ್ಯುಟಿ ಕಮಿಷನರ್‌ರವರು ಡೇರೆಗಳಲ್ಲಿ ಸೇರಿ ನಾನಾತರವಾದ ಆಟಗಳು, ವಾದ್ಯಗಳು, ವಿದ್ಯಾರ್ಥಿ, ವಿದ್ಯಾರ್ಥಿನೀಯರ ಸ್ಪರ್ಧೆಯ ಓಟಗಳು, ಬೈಸಿಕಲ್ ಸವಾರಿ ಮುಂತಾದ ವಿನೋದಗಳನ್ನು ನೋಡಿ ಹರ್ಷಿತರಾಗಿ ಗೆದ್ದವರಿಗೆ ಬಹುಮಾನಗಳನ್ನು ದಯಪಾಲಿಸಿದರು. ಮಹಾ ಜನರೆಲ್ಲರೂ ಮಿ॥ ಮೆಕರಾಲ್‌ರವರು ಚಿರಕಾಲ ಆರೋಗ್ಯದಿಂದ ವಿಶ್ರಾಂತಿ ಸುಖವನ್ನನುಭವಿಸುತ್ತಿರಲೆಂದು ಶುಭವಾದನವನ್ನು ಮಾಡಿದರು.

ಪ್ರತ್ಯಕ್ಷದರ್ಶೀ.

ಹಿಂದುಸ್ಥಾನದ ಸಂಘಪರಿಷ್ಕರಣ ಸಮಾಜ, ಮದರಾಸ್.

ಮೈಸೂರು ಶ್ರೀಮದ್ಯುವರಾಜರವರ ಭಾಷಣವು.

(ಕಳೆದ ವಾರದಿಂದ ಮುಂದೆ ಸಾಗಿದ್ದು.)

ಸಮುದ್ರಯಾನ ಮಾಡುವುದು.—ಜನಗಳು ಈಗೀಗ ದೇಶಾಟನೆ ಮಾಡುವುದರಿಂದುಂಟಾಗುವ ಪ್ರಯೋಜನಗಳನ್ನು ತಿಳಿದುಕೊಂಡಿರುವುದರಿಂದ ಈ ಭಾಗದಲ್ಲಿ ಆಕ್ಷೇಪಣೆ ಮಾಡುವುದು ಬಹಳ ಮಟ್ಟಿಗೆ ಕಡಮೆಯಾಗಿರುತ್ತವೆ. ಇದಕ್ಕಾಗಿ ನಾವು ಸಂತೋಷಪಡಬೇಕು. ಮೈಸೂರು ಸೀಮೆಯಲ್ಲಿಯೂ ಮಧ್ಯ ಹಿಂದುಸ್ಥಾನದಲ್ಲಿಯೂ ವಿದೇಶಸಂಚಾರ ಮಾಡಬಾರದೆಂಬ ಪಕ್ಷವನ್ನು ಹಿಡಿದಿದ್ದವರು ಈಗ ವಿದೇಶಗಳಿಗೆ ಹೋಗಿ ಬಂದವರನ್ನು ತಮ್ಮ ಸವ್ಯವಹಾರಕ್ಕೆ ಸೇರಿಸಿಕೊಳ್ಳಲುಪಕ್ರಮಿಸಿದ್ದಾರೆ. ಇಂಗ್ಲೆಂಡ್ ಅಮೆರಿಕ ಮುಂತಾದ ದೇಶಗಳಿಗೆ ಹೋಗಿ ವಿದ್ಯಾರ್ಜನೆಯನ್ನು ಮಾಡಿಕೊಂಡು ಬಂದಿರುವವರು ಭಾರಿ ಭಾರಿ ಉದ್ಯೋಗಗಳನ್ನು ಪಡೆದಿರುವುದರಿಂದ ಈ ವಿಷಯದಲ್ಲಿ ಮತದ ನಿರ್ಬಂಧಗಳು ಹಿಂದೆ ಇದ್ದಷ್ಟು ಬಿಗಿಯಾಗಿರುವುದಿಲ್ಲ. ಮೈಸೂರು ಅರಮನೆಯಲ್ಲಿರುವ ಪಂಡಿತರುಗಳು ಕೂಡ ತಮ್ಮ ಗಂಡು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಯೂರೋಪಿಗೆ ಕಳುಹಿಸಿಕೊಡಲು ಉಪಕ್ರಮಿಸಿರುತ್ತಾರೆ. ಕೆಲವು ದಿನಗಳ ಹಿಂದೆ ನಮ್ಮ ಹಿಂದು ದೇಶದ ಯುದ್ಧಭಟರು ನಮ್ಮನ್ನಾಳುವ ಬ್ರಿಟಿಷರ ಬೆಂಬಲವಾಗಿ ಯುದ್ಧ ಮಾಡಲು ಯೂರೋಪ್ ಖಂಡಕ್ಕೆ ಪ್ರಯಾಣಮಾಡಿದರಷ್ಟೆ. ಇವರ ವಿಷಯದಲ್ಲಿ ನಮಗೆ ತಿಳಿದಿರುವ ಮಟ್ಟಿಗೆ ನಮ್ಮ ದೇಶೀಯರಲ್ಲಿ ಯಾರಾದರೂ, ಕೇವಲ ವೃದ್ಧಾಚಾರ ಬದ್ಧರಾಗಿರುವವರೂ ಕೂಡ, ಯಾವ ಆಕ್ಷೇಪಣೆಯನ್ನಾದರೂ ಮಾಡಿರುವುದಿಲ್ಲ. ವಿದೇಶಸಂಚಾರ ಮಾಡುವುದರ ವಿಷಯದಲ್ಲಿರುವ ಜಾತಿಯ ನಿರ್ಬಂಧಗಳು ಮುಂದೆ ಇನ್ನೂ ಬಹು ಮಟ್ಟಿಗೆ ಕಡಮೆಯಾಗುವವೆಂದು ನಾವು ನಿರೀಕ್ಷಿಸೋಣ.

ಕೀಳು ಜಾತಿಗಳವರು.—ಹಿಂದುಗಳಲ್ಲಿ ಸುಮಾರು ಆರು ಕೋಟಿ ಜನರು ಶೂದ್ರರಾಗಿ ಸೇವಕವೃತ್ತಿಯಲ್ಲೇ ಬಿದ್ದಿರುತ್ತಾರೆ. ಇವರ ಸ್ಪರ್ಶಮಾತ್ರದಿಂದ ತಮಗೆ ಮೈಲಿಗೆಯಾಗುವುದೆಂದು ಉತ್ತಮರೆನ್ನಿಸಿಕೊಳ್ಳುವವರು ಭಾವಿಸಿರುವರು. ಇವರು ತಮ್ಮ ಪೂರ್ವಿಕರ ಮತವನ್ನು ಬಿಟ್ಟರೆ ಹೊರತು ಉತ್ತಮ ಸ್ಥಿತಿಗೆ ಬರುವುದಕ್ಕೆ ಬೇರೆ ಯಾವ ಮಾರ್ಗವಾದರೂ ಇರುವುದಿಲ್ಲ. ನಮ್ಮ ದೇಶವು ನಾಗರಿಕತೆಯ ಸ್ಥಿತಿಗೆ ಬರುವುದಕ್ಕೆ ಇದು ಒಂದು ನೋಟ್ಟ ಅಭ್ಯಂತರವಾಗಿರುತ್ತದೆ ಎಂಬುವುದರಲ್ಲಿ ಯಾವ ಸಂಶಯವಾದರೂ ಇರುವುದಿಲ್ಲ. ಇಂಗ್ಲೆಂಡ್ ಅಮೆರಿಕಾ ಮುಂತಾದ ದೇಶಗಳಲ್ಲಿ ಇಂಥ ನಿರ್ಬಂಧಗಳೇನೂ ಇರುವುದಿಲ್ಲ. ಎಲ್ಲರೂ ಸ್ವತಂತ್ರರಾಗಿರುತ್ತಾರೆ. ಕಷ್ಟಪಟ್ಟ ಯಾವನಾದರೂ ಅತ್ಯುನ್ನತ ಸ್ಥಾನವನ್ನು ಪಡೆಯಬಹುದು. ಹಿಂದುಗಳಲ್ಲಿರುವ ಇಂಥ ಒಳಭೇದಗಳೆಲ್ಲಾ ಅಳಿದುಹೋಗಿ ಸರ್ವರೂ ಸಮ್ಮಿಳಿತವಾಗಬೇಕಾದುದು ಆವಶ್ಯಕ. ಆದರೆ ಒಂದು ಮಾತ್ರ ನಿಶ್ಚಯ. ಅದೇನೆಂದರೆ—ವಿದ್ಯೆಯು ಹೆಚ್ಚಿದ ಹಾಗೆಲ್ಲಾ ಹಿಂದೆ ಬಿದ್ದಿರುವ ಈ ಕೋಟ್ಯಂತರ ಜನರು ಗಣನೆಗೆ ಬರುವರು. ಅವರ ಹವಾಲುಗಳನ್ನ ಕೇಳಲೇ ಬೇಕಾಗುವುದು. ಅಂಥ ಕಾಲವು ಕ್ರಮೇಣ ಬಂದೇ ಬರಬೇಕು.

ವಿಧವೆಗಳ ಪುನರ್ವಿವಾಹ.—ಹಿಂದು ವಿಧವೆಗಳು ಉತ್ತಮ ವರ್ಣಾಶ್ರಮಗಳಲ್ಲಿ ಜನಿಸಿದವರೇ ಆಗಿದ್ದರೂ ಹೀನ ಜಾತಿಯವರಾಗಿರುತ್ತಾರೆ; ಮಾನವರಿಗೆ ಸಲ್ಲತಕ್ಕ ಸೌಲಭ್ಯಗಳಿಗೆ ಅವರು ಬಾಹಿರರಾಗಿರುತ್ತಾರೆ; ಅವರು ಇಂಥ ಹೀನ ಸ್ಥಿತಿಯಲ್ಲಿ ಬಿದ್ದಿರುವುದರಿಂದ ಅವರನ್ನೂ ಸಹ ಮೇಲಕ್ಕೆ ಎತ್ತಬೇಕಾದದ್ದು ಆವಶ್ಯಕವೆಂದು ಮಿ॥ ರಾನಡೆಯವರು ಅಭಿಪ್ರಾಯ ಪಟ್ಟಿರುತ್ತಾರೆ. ಮದುವೆಯಾಗುವುದಕ್ಕೆ ಇಷ್ಟವಿದ್ದರೂ ಮದುವೆಯಾಗಬಾರದೆಂದು ನಿರ್ಬಂಧಿಸಲ್ಪಟ್ಟಿರುವವರು ಒಂದು ಸಮಾಜದಲ್ಲಿರುವುದು ತುಂಬಾ ಅನರ್ಥಕ್ಕೆ ಕಾರಣವು. ಇದರಿಂದ ಶಿಶುಹತ್ಯೆ ಮುಂತಾದ ಕ್ರೂರಕೃತ್ಯಗಳು ನಡೆಯುತ್ತವೆ. ವಿಕಾರಿಗಳಾಗಿರಲಾರದಂಥ ವಿಧವೆಯು ಪುನರ್ವಿವಾಹ ಮಾಡಿಕೊಳ್ಳುವುದಕ್ಕೆ ಸಮ್ಮತಿಸುವುದು ಮಾನವರ ಧರ್ಮವಾಗಿರುತ್ತದೆ. ಇವರಿಂದಾಗುವ ಅನರ್ಥಗಳನ್ನು ನೋಡಿ ಜತೆಯಿಲ್ಲದ ಗಂಡು ಹೆಣ್ಣುಗಳಿಗೆ ಈಗ ಆಗುವಂಥ ಕೆಲವು ಮದುವೆಗಳನ್ನು ನಿಲ್ಲಿಸುವುದಕ್ಕೆ ಪ್ರಯತ್ನಿಸುವುದು ನ್ಯಾಯವಾಗಿರುತ್ತದೆ.

ಬದಲಾವಣೆಯೂ ಅದರಿಂದಾಗುವ ಪ್ರಯೋಜನವೂ.—ಸಂಘಪರಿಷ್ಕರಣ ಮಾಡುವವರು ಈ ವರೆಗೂ ಮಾಡಿರುವ ಮತ್ತು ಮಾಡಬೇಕೆಂದಿರುವ ಕಾರ್ಯಗಳ ವಿಷಯದಲ್ಲಿ ಅವರು ಹಿಂದುಗಳನ್ನು ಪಾಶ್ಚಿಮಾತ್ಯರಂತೆ ಮಾಡುವುದಕ್ಕೆ ಪ್ರಯತ್ನಪಡುತ್ತಾರೆಂದೂ ಕೇವಲ ದುಡಿಕಿನಿಂದ ಸಂಘವನ್ನೇ ಸಂಪೂರ್ಣವಾಗಿ ಬದಲಾಯಿಸುತ್ತಿದ್ದಾರೆಂದೂ ಆಕ್ಷೇಪಿಸುವುದುಂಟು. ಕೆಲವು ಭಾಗಗಳಲ್ಲಿ ನಾವು ಪಾಶ್ಚಿಮಾತ್ಯರನ್ನು ಅನುಸರಿಸುವಂತೆ ತೋರಿದರೆ ಅದಕ್ಕೆ ಒಂದು ಕಾರಣವಿರುವುದು. ನಾವು ಯಾವ ಯಾವ ಭಾಗಗಳಲ್ಲಿ ಅವರನ್ನು ಅನುಸರಿಸುತ್ತೇವೋ ಆಯಾ ಭಾಗಗಳಲ್ಲಿ ಅವರು ನಮ್ಮ ಮುಂದೆ ಒಳ್ಳೇದಾರಿಗಳಲ್ಲೇ ಹೋಗಿರುತ್ತಾರೆ. ನಾವೂ ಆ ದಾರಿಗಳಲ್ಲೇ ನಡೆಯುವಲ್ಲಿ ಮುಂದೆ ಹೋದವರನ್ನು ಅನುಸರಿಸುವಂತೆ ಕಾಣುವುದು. ನಾವು ಏಳಿಗೆಗೆ ಬರುವುದು ಬಹುಕಾಲದ ಹಿಂದೆ ನಿಂತುಹೋಯಿತು. ಈಗ ಇದ್ದ ಸ್ಥಿತಿಯಲ್ಲೇ ಇರುವುದಲ್ಲದೆ ಹೀನಸ್ಥಿತಿಗೂ ಬಿದ್ದಿರುತ್ತೇವೆ. ಪ್ರಕೃತಿಯಲ್ಲಿ ಯಾವುದಾದರೂ ಇದ್ದ ಸ್ಥಿತಿಯಲ್ಲೇ ಇರುವುದಿಲ್ಲ. ಅದು ವೃದ್ಧಿಯಾಗಬೇಕಾದರೂ ಇರಬೇಕಾದರೂ ತನ್ನನ್ನು ಆವರಿಸಿಕೊಂಡಿರುವುದರೊಂದಿಗೆ ಹೊಂದಿಕೆಯಾಗಬೇಕು. ಬದಲಾಗುತ್ತಿರುವ ವಿದ್ಯಮಾನಗಳೊಂದಿಗೆ ನಾವು ಹೊಂದಿಕೆಯಾಗದಿದ್ದರೆ ನಾವು ವೃದ್ಧಿಯಾಗುವುದಕ್ಕೆ ಬದಲಾಗಿ ಕ್ಷೀಣಗತಿಗೆ ಬಂದು ನಶಿಸಿಹೋಗುವೆವು. ಒಂದು ಕಾಲದಲ್ಲಿ ಉತ್ತಮವಾಗಿದ್ದಿರಬಹುದಾದಂಥಾ ಪದ್ಧತಿಗಳನ್ನೇ ಅನುಸರಿಸುತ್ತಾ ಬರುವುದರಿಂದ ನಾವು ಬೀಳುವುದಕ್ಕೆ ಪ್ರಾರಂಭಿಸಿದೆವು. ಅಷ್ಟರಲ್ಲಿ ವಿದ್ಯೆಯು ಬಂದು ನಾವು ಬೀಳದಂತೆ ನಮ್ಮನ್ನು ತಡೆಯಿತು. ನಾವು ಸುತ್ತಲೂ ನೋಡಿ ಇದಕ್ಕಿಂತ ಮುಂಚೆ ನಾವೇ ಹೋಗಬೇಕಾಗಿದ್ದ ದಾರಿಯಲ್ಲಿ ಅವರು ಹ್ಯಾಗೋ ನಮ್ಮ ಮುಂದಾಗಿ ಹೋಗುತ್ತಿರುವುದನ್ನು ಕಂಡೆವು. ಒಂದು ವೇಳೆ ನಾವು ಅವರನ್ನು ಅನುಸರಿಸಿ ನಡೆಯುವ ಪಕ್ಷದಲ್ಲಿ, ಮತ್ತು ಹಾಗೆ ಅನುಸರಿಸಿ ನಡೆಯುವುದರಿಂದ ನಾವು ಪ್ರವರ್ಧಮಾನಕ್ಕೆ ಬರುವ ಪಕ್ಷದಲ್ಲಿ ನಾವು ನಾಚಿಕೆಪಡಬೇಕೋ? ಒಂದು ಮಾರ್ಗವನ್ನನುಸರಿಸುವುದರಿಂದ ಒಳ್ಳೆಯ ಫಲ ಬರುತ್ತದೆಂದು ತಿಳಿದ ಮೇಲೆ ತಿರಿಗಿ ಬೇಸರಿಕೆಯನ್ನುಂಟುಮಾಡುವ ಮಧ್ಯಮದಾರಿಯಲ್ಲೇ ನಾವು ಹೋಗಬೇಕೋ? ಹಿಂದೆ ಇದ್ದವರ ಅನುಭವವನ್ನೂ ಅವರು ನಡಿಸಿದ ಸಾಹಸ ಕಾರ್ಯಗಳನ್ನೂ ಬೇಡವೆಂದು ನಿರಾಕರಿಸಿ ಬಿಟ್ಟರೆ ಲೋಕವು ಅಭಿವೃದ್ಧಿಗೆ ಬರಲಾರದು. ಆದರೆ ಪ್ರತಿಯೊಬ್ಬನೂ ಹಿಂದೆ ನಡೆದಿರುವುದನ್ನೆಲ್ಲಾ ತನ್ನಲ್ಲೇ ಅನುಭವಿಸುವುದಕ್ಕೆ ಪ್ರಯತ್ನಿಸುವನು.

ಸಾಧನೆಗೆ ತಕ್ಕ ಕೆಲವು ಸಲಹೆಗಳು.—ನಮ್ಮ ಮತದಲ್ಲಾಗಲಿ ನಮ್ಮ ಶಾಸ್ತ್ರದಲ್ಲಾಗಲಿ ಯಾವ ತಪ್ಪಾದರೂ ಇಲ್ಲವೆಂದು ನಾವು ನಂಬುತ್ತೇವೆ. ಆದರೆ ಅವುಗಳನ್ನು ವಿವರಿಸುವ ವಿಧಾನದ ದೆಸೆಯಿಂದ ಅವುಗಳಲ್ಲಿ ಹೇಳಿರುವ ಯಾವ ಸುಧಾರಿಸುವಿಕೆಯನ್ನು ಕುರಿತಾದರೂ ಪ್ರಸಂಗಿಸುವುದು ಕೇವಲ ನಾನಾಂದ ಬೋಧನೆಯನ್ನಿಸಿಕೊಳ್ಳುತ್ತದೆ. ಆದಕಾರಣ ನಮ್ಮ ಶಾಸ್ತ್ರಗಳಲ್ಲಿ ಯಾವ ಬದಲಾವಣೆಯನ್ನಾದರೂ ಮಾಡಬೇಕಾಗಿರುವುದಿಲ್ಲ. ಆದರೆ ಅವುಗಳನ್ನು ತಕ್ಕ ರೀತಿಯಲ್ಲಿ ವಿವರಣೆಮಾಡುವುದು ಆವಶ್ಯಕವಾಗಿದೆ. ಸಾಧಾರಣವಾಗಿ ಬ್ರಾಹ್ಮಣರು ಅವರಲ್ಲೂ ಮುಖ್ಯವಾಗಿ ಪುರೋಹಿತರು ನಮ್ಮ ದೇಶೀಯರಿಗೆ ಆತ್ಮಾಹಾರವನ್ನು ಕೊಡುವ ಹಕ್ಕನ್ನು ಪಾರಂಪರ್ಯವಾಗಿ ಪಡೆದುಕೊಂಡು ಬಂದಿರುತ್ತಾರೆ. ಜನರು ಮತವಿಷಯದಲ್ಲಿ ಅವರು ಹೇಳುವುದನ್ನು ದೃಢವಾಗಿ ನಂಬಿ ಅವರಿಗೆ ಮಾನಮರ್ಯಾದೆಗಳನ್ನು ತೋರಿಸುತ್ತಾರೆ. ನಮ್ಮ ಜನರ ಪದ್ಧತಿಗಳಿಗೂ ನಿಯಮಗಳಿಗೂ ಆಚಾರಗಳಿಗೂ ನಮ್ಮ ಮತವೇ ಆಧಾರವಾಗಿರುವುದರಿಂದ ಈ ವ್ಯಾವಹಾರಿಕ ವಿಷಯಗಳಲ್ಲಿಯೂ ಕೂಡ ಜನರ ಮನೋಭಾವಗಳನ್ನು ಸ್ವಾಭಾವಿಕವಾಗಿ ಅವರೇ ನಡಿಸುತ್ತಾರೆ. ಆದಕಾರಣ ಇಂಥ ವಿಷಯಗಳಲ್ಲಿ ಇವರುಗಳ ಕಡೆಯಿಂದ ಬರತಕ್ಕ ಸಹಾಯವು ಈ ಸಂಘಕ್ಕೆ ತುಂಬ ಪ್ರಯೋಜನಕರವಾದುದು. ಆದರೆ ಈಗ ಏಕಪಕ್ಷದ್ದಾಗಿಯೂ ವಿಪ್ರಮುಖ್ಯವಾಗಿಯೂ ಆತ್ಮೀಯವಾಗಿಯೂ ಇರುವ ಅವರ ವಿದ್ಯೆಯು ಹೆಚ್ಚಿನ ವರೆಗೂ ಈ ಸಂಘಕ್ಕೆ ಕೇವಲ ವಿರೋಧಿಗಳಾಗಿರುವ ಅವರ ಸಹಾಯವನ್ನು ನಾವು ನಿರೀಕ್ಷಿಸಬಾರದು. ಇದರಿಂದ ಅವರ ಬುದ್ಧಿಯೂ ಯೋಚನೆಗಳೂ ವಿಶಾಲವಾಗುವವೆಂದು ನಾವು ನಿಶ್ಚಯವಾಗಿ ನಂಬುತ್ತೇವೆ. ನಮ್ಮ ದೇಶದಲ್ಲಿ ಅನೇಕ ಸಂಸ್ಕೃತ ಪಾಠಶಾಲೆಗಳಿರುತ್ತವೆ. ಅವುಗಳಿಂದ ಅನೇಕರು ವಿಧ್ವಾಂಸರಾಗಿ ಹೊರಗೆ ಬರುತ್ತಿರುವರು. ಆದರೆ ಅಲ್ಲಿ ಅವರಿಗೆ ನಿಯಮಿತವಾಗಿರುವ ಪಾಠಗಳ ಜೊತೆಗೆ ಪಾಶ್ಚಿಮಾತ್ಯ ವಿದ್ಯೆಯನ್ನು ಕನಿಷ್ಠಪಕ್ಷ ಮೆಟ್ರಿಕ್ಯುಲೇಷನ್ ದರ್ಜೆಯ ವರೆಗಾದರೂ ಇಡುವುದಾದರೆ ಈ ಉದ್ದೇಶವು ಸಿದ್ಧಿಗೆ ಬರುವುದೆಂದು ನಾವು ನಂಬುತ್ತೇವೆ. ಇದು ಸುಮ್ಮನೆ ನಾವು ನಿಮಗೆ ಸಲಹೆ ಕೊಡುವ ಒಂದು ವಿಷಯವಾಗಿದೆ. ಇದು ಸಿದ್ಧಿಗೆ ಬಂದಲ್ಲಿ ಸಂಘ ಪರಿಷ್ಕರಣಕ್ಕೆ ತುಂಬಾ ಸಹಕಾರಿಯಾಗಿರುವುದೆಂಬುದರಲ್ಲಿ ಸಂದೇಹವಿರಲಾರದು. ಇಂಥ ವಿದ್ಯಾಭ್ಯಾಸದ ಕ್ರಮವು ಬೊಂಬಾಯಿ ಮುಂತಾದ ಸ್ಥಳಗಳಲ್ಲಿ ಇರುತ್ತದೆಂದು ನಾವು ನಂಬುತ್ತೇವೆ. ಇಂಥ ಒಂದು ಪಾಠಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದಿರುತ್ತಾರೆ.

ಕೆಲವು ಕಾಲಕ್ಕೆ ಹಿಂದೆ ನಮ್ಮಲ್ಲಿದ್ದಂಥ ಪಂಡಿತ ಪರಿಷತ್ತುಗಳೂ ಕೂಡ ಈ ಸಂಘ ಪರಿಷ್ಕರಣಕ್ಕೆ ಅನುಕೂಲವಾದವುಗಳು. ನಾವು ಸಲಹೆ ಕೊಡುವ ಬೇರೆ ವಿಷಯಗಳು ಯಾವವೆಂದರೆ ಜನರು ಸಾಮಾನ್ಯವಾಗಿ ತಮ್ಮ ಮತ ಗ್ರಂಥಗಳಲ್ಲಿ ಏನಿದೆ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳುವಂತೆ ಎಲ್ಲಾ ವರ್ಣಗಳವರಿಗೂ ಸಂಸ್ಕೃತ ವಿದ್ಯೆಯನ್ನು ಹರಡುವುದು, ಮತ್ತು ನಮ್ಮಲ್ಲಿರುವ ಸಂಸ್ಕೃತ ಗ್ರಂಥಗಳನ್ನು ಈಗಿನ ನಮ್ಮ ದೇಶೀಯ ಭಾಷೆಗಳಿಗೆ ಪರಿವರ್ತಿಸುವುದು ಇವುಗಳೇ. ನಮಗೆ ತೋರುವ ಬೇರೆ ವಿಷಯಗಳು ಯಾವುವೆಂದರೆ—ಲೋಕದ ಎಲ್ಲಾ ಕಡೆಗಳಲ್ಲಿಯೂ ಇರುವ ನವನಾಗರಿಕತೆಯನ್ನು ಪಡೆದಿರುವವರ ಅನುಭವದ ಪ್ರಕಾರ ಜನಗಳಲ್ಲಿ ಕಂಡುಬರುವ ಯಾವ ಯಾವ ಕೊರತೆಗಳನ್ನು ನಿವಾರಣೆ ಮಾಡಬಹುದು ಯಾವ ಯಾವ ಸುಧಾರಣೆಯ ಕೆಲಸಗಳನ್ನು ನಡಿಸಬಹುದು ಎಂದು ಒಂದು ಪಟ್ಟಿಯನ್ನು ಸಿದ್ಧಮಾಡುವುದು ಸಾಧ್ಯವಾಗಿರುತ್ತದೆ. ಕಲುಷಾಯ ಇವುಗಳನ್ನು ಮೂರು ದರ್ಜೆಗಳಾಗಿ ವಿಂಗಡಿಸಬಹುದು. ಅತ್ಯಂತ ಸುಲಭವಾದವುಗಳು ಮೊದಲನೆಯ ದರ್ಜೆ ಸೇರಿದವುಗಳು. ಇದರಲ್ಲಿ ಉತ್ತಮ ವರ್ಣಗಳವರು ಒಬ್ಬರ ಮನೆಯಲ್ಲೊಬ್ಬರು ಸಹಭೋಜನ ಮಾಡುವುದು, ಬಾಲ್ಯವಿವಾಹಗಳನ್ನು ನಿಲ್ಲಿಸುವುದು, ವಿದೇಶ ಸಂಚಾರಮಾಡುವುದು, ಜಾತಿಯ ಉಪಜಾತಿಗಳವರು ಹೆಣ್ಣು ಕೊಟ್ಟು ತರುವುದು, ಶುಭಾಶುಭ ಕಾಲದಲ್ಲಿ ಆಗುವ ಖರ್ಚನ್ನು ಕಡಮೆಮಾಡುವುದು ಇವೇ ಮುಂತಾದ ಅಂಶಗಳನ್ನು ಈ ಮೊದಲನೆಯ ವರ್ಗಕ್ಕೆ ಸೇರಿಸಬಹುದು.

ಎರಡನೆಯ ಮೂರನೆಯ ದರ್ಜೆಗೆ ವಿಧವೆಗಳ ಪುನರ್ವಿವಾಹ, ಜಾತಿ ಬಂಧನಗಳನ್ನು ಛೇದಿಸುವುದು, ಹಿಂದೆ ಬಿದ್ದಿರುವವರನ್ನು ಮೇಲಕ್ಕೆ ಎತ್ತುವುದು ಇವೇ ಮುಂತಾದ ಕಠಿಣತರವಾದವುಗಳನ್ನು ಸೇರಿಸಬಹುದು. ಈ ಮೂರು ದರ್ಜೆಗಳಲ್ಲಿ ಪ್ರತಿಯೊಂದರಲ್ಲಿಯೂ ಸುಧಾರಣೆಗೆ ತಕ್ಕ ವಿಷಯಗಳನ್ನು ಈ ಸಮಾಜದ ಕಮಿಟಿಯವರು ಗೊತ್ತುಮಾಡಿ ಅವುಗಳನ್ನು ಬೇರೆಬೇರೆ ಸ್ಥಳಗಳಲ್ಲಿ ಪ್ರಚುರಪಡಿಸಿದರೆ ಇದು ಸಾಧ್ಯವಾಗಬಹುದು. ಹಿಂದು ವಿವಾಹ ಪರಿಷ್ಕರಣ ಸಂಘದಂಥ ಬೇರೆಬೇರೆ ಸಂಘಗಳನ್ನು ದೇಶದ ಪ್ರಾಮುಖ್ಯವಾದ ಸ್ಥಳಗಳಲ್ಲಿ ಏರ್ಪಡಿಸಿಕೊಂಡು ಈ ಮೂರು ದರ್ಜೆಗೆ ಸೇರಿದವುಗಳಲ್ಲಿ ಯಾವುದಾದರೂ ಒಂದರ ಎಲ್ಲಾ ಸುಧಾರಣೆಯ ಕಾರ್ಯಗಳನ್ನು ಎಲ್ಲರೂ ಒಪ್ಪಿ ಜಾರಿಗೆ ತರುವುದು. ಈ ಮೂರು ಸಂಘಗಳಲ್ಲಿ ಪ್ರತಿಯೊಂದಕ್ಕೆ ಸೇರಿರುವವರು ತಮ್ಮ ತಮ್ಮಲ್ಲಿ ಪ್ರಮುಖರಾದ ಆರೇಳು ಮಂದಿಯನ್ನು ಚುನಾಯಿಸಿ ಒಂದು ಕಮಿಟಿಯನ್ನು ಮಾಡಿಕೊಂಡು ಆ ಸಂಘಕ್ಕೆ ಸೇರಿರುವ ಎಲ್ಲಾ ಕುಟುಂಬಗಳವರಿಂದ ವಾಗ್ದಾನಗಳನ್ನು ತೆಗೆದುಕೊಂಡು ಅವರುಗಳು ತಾವು ಮಾಡಿದ ವಾಗ್ದಾನದಂತೆ ನಡೆದುಕೊಳ್ಳುತ್ತಾರೆಯೋ ಇಲ್ಲವೋ ಎಂದು ನೋಡಿಕೊಳ್ಳುವುದು. ಇಂಥ ಸಂಘಗಳು ಎಷ್ಟು ಹೆಚ್ಚಾಗಿರುತ್ತವೆಯೋ ಅಷ್ಟು ಬೇಗ ನಾವು ಕೈಕೊಂಡಿರುವ ಸುಧಾರಣೆಯ ಕೆಲಸವು ಮುಂದೆ ಸಾಗುವುದು. ವರುಷಕ್ಕೊಂದು ಸಾರಿ ನಡೆಯುವ ಸಮಾಜದಲ್ಲಿ ನಾವು ಎಷ್ಟರ ಮಟ್ಟಿಗೆ ಮುಂದಕ್ಕೆ ಬಂದಿರುತ್ತೇವೆ; ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಎಷ್ಟೆಷ್ಟು ಕುಟುಂಬಗಳು ಸೇರಿ ಕೆಲಸ ಮಾಡುತ್ತವೆ ಎಂದು ಗೊತ್ತುಮಾಡುವುದು ಸಾಧ್ಯವಾಗಿರುತ್ತದೆ. ಸಮಾಜವು ನಡೆಯುವಲ್ಲಿ ಕೂಟಗಳ ಮಧ್ಯೆ ಸಿಕ್ಕುವ ಸ್ವಲ್ಪ ವಿರಾಮ ಕಾಲದಲ್ಲಿ ತುಂಬಾ ವೈರಾಗ್ಯಶಾಲಿಗಳಾಗಿರುವವರು ಈ ದರ್ಜೆಗಳಲ್ಲಿ ಪ್ರತಿಯೊಂದಕ್ಕೂ ಹೊಸಬರನ್ನು ಸೇರಿಸಲು ಪ್ರಯತ್ನಿಸಬಹುದು. ಈ ಏರ್ಪಾಡು ಸಿದ್ಧಿಗೆ ಬಂದು ಸುಮಾರು 10 ಲಕ್ಷ ಕುಟುಂಬಗಳು ಸೇರಿದರೆ ನಮ್ಮ ಬಲವು ಹೆಚ್ಚಾಗುವುದರಿಂದ ಎಲ್ಲಾ ಜನರನ್ನು ಒಟ್ಟಾಗಿ ಸೇರಿಸುವ ಕೆಲಸವು ಬರಬರ ಸುಲಭವಾಗುವುದು.

ಇದೇ ಕ್ರಮವನ್ನನುಸರಿಸಿ ಕಾರ್ಯಗಳು ನಡೆಯಬೇಕೆಂದು ನಾವು ಹೇಳುವುದಿಲ್ಲ. ನಾವು ಪ್ರತಿ ವರುಷವೂ ನಮ್ಮ ಕೆಲಸವನ್ನು ಅವಶ್ಯ ಮಾಡಿ ನೋಡಬಹುದಾದ ಯಾವುದಾದರೊಂದು ಏರ್ಪಾಡನ್ನು ಕಲ್ಪಿಸಿಕೊಂಡು ಒಂದು ಸಮಾಜಕ್ಕೂ ಮತ್ತೊಂದು ಸಮಾಜಕ್ಕೂ ಮಧ್ಯದಲ್ಲಿರುವ ಕಾಲದಲ್ಲಿ ಕೆಲಸಗಾರರು ಸ್ಪಷ್ಟವಾದ ತಿಳುವಳಿಕೆಯಿಂದ ಜನಗಳ ಮಧ್ಯೆ ಹೋಗಿ ಈ ಪ್ರಾಮುಖ್ಯವಾದ ಸುಧಾರಣೆಯ ಕೆಲಸವನ್ನು ಮಾಡುತ್ತಾ ಬರಬೇಕು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮೀಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮೀಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮೀಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಹಿಂದುಮುಂದಿನ ಆಲೋಚನೆ ಬೇಕು.

ಅಯ್ಯಾ,—ಮೈಸೂರು ಸಿಟಿ ಟ್ರಸ್ಟು ಬೋರ್ಡಿನಲ್ಲಿ ಮನೆ ಕಟ್ಟುವುದಕ್ಕಾಗಿ ನಾನು 300 ರೂಪಾಯಿ ಸಾಲ ಕೇಳಿದೆನು. ಕೆಲಸಕ್ಕೆ ಪ್ರಾರಂಭಮಾಡಿ

ಕ್ಷನ್ ಮಟ್ಟದ ವರಿಗೆ ಪೂರ್ತಿಸಿ ಪುನಃ ಅರ್ಜಿ ಬರೆದುಕೊಂಡಲ್ಲಿ ಸಾಲದ ಹಣ ಕೊಡುವದಾಗಿ ಪ್ರೆಸಿಡೆಂಟರು ಅವರು ಕೊಟ್ಟಿದ್ದರು. ಇದರಂತೆ ಕೆಲಸಕ್ಕೆ ಪ್ರಾರಂಭವಾದ ನಂತರ ಅರ್ಜಿ ಮೂಲಕ ಸಾಲದ ಹಣ ಕೇಳಿದ್ದರ ಮೇಲೆ ಟ್ರಸ್ಟ್ ಬೋರ್ಡಿಗೆ ಸಂಬಂಧಪಟ್ಟ ಆಫೀಸರುಗಳೆಲ್ಲಾ ಬಂದು ಕೆಲಸವನ್ನು ನೋಡಿದರು. ಹಣಕ್ಕಾಗಿ ಬಿಲ್ ಮಾಡುವ ದಿವಸ ಗವರ್ನಮೆಂಟ್ ನೌಕರರಿಗೆ ಟ್ರಸ್ಟ್ ಬೋರ್ಡಿನಿಂದ ಸಾಲ ಕೊಡಕೂಡದೆಂಬ ಸರ್ಕಲರ್ ಜ್ಞಾಪಕಕ್ಕೆ ಬಂದಿತು. ಸಾಲ ಕೊಡುತ್ತಾರೆಂಬ ಭರವಸೆಯಿಂದ 300 ರೂಪಾಯಿಗಳ ಕೆಲಸ ಮಾಡಲ್ಪಟ್ಟಿತು. ಮನೆಯಂತೂ ಆಗಲಿಲ್ಲ. ಸುಮಾರು 6 ತಿಂಗಳಿಂದ ಅರ್ಧ ಸಾಕಿ ಮನೆಗೂ ತಿರುಗಿದ್ದಾಯಿತು. ಈ ಸರ್ಕಲರಿನ ವಿಷಯ ಮೊದಲೇ ತಿಳಿಸಿದ್ದರೆ ನನಗೆ ಇಷ್ಟು ನಷ್ಟಕ್ಕೆ ಅವಕಾಶವಾಗುತ್ತಿರಲಿಲ್ಲ.

ದೇಶಿಕ.

ವೃತ್ತಾಂತ ಪತ್ರಿಕೆ ಕ್ಯಾಲೆಂಡರ್.

ಅಯ್ಯಾ, ತಾವು ಈ ವರುಷ ಛಾಪಿಸಿರುವ ತಮ್ಮ ವೃತ್ತಾಂತ ಪತ್ರಿಕೆಯ ಕ್ಯಾಲೆಂಡರಿನಲ್ಲಿ ನಾಮಧಾರಿ ವಧುವರರು ಎಂಬ ಹೆಸರಿನಿಂದ ಒಂದು ಚಿತ್ರ ವನ್ನು ಪ್ರಕಟಿಸಿರುತ್ತೀರಷ್ಟೆ. ಅದು ನಾಮಧಾರಿಗಳದಲ್ಲವೆಂದೂ ಇದರ ದೆಸೆ ಯಿಂದ ಅವರುಗಳಿಗೆ ತುಂಬಾ ಮನೋವ್ಯಥೆಯುಂಟಾಗಿದೆಯೆಂದೂ ನನಗೆ ತಿಳಿದು ಬಂದಿದೆ. ಆದ್ದರಿಂದ ಹೀಗೆ ತಪ್ಪು ಬಿದ್ದಿರುವುದಕ್ಕಾಗಿ ತಾವು ವಿಷಾದ ಪಡುತ್ತೀರೆಂಬುವುದನ್ನು ಪ್ರಕಟಿಸಬಹುದಾದರೆ ನನಗೆ ಸಂತೋಷ. ಮತ್ತು ಒಂದು ತುಂಡು ಕಾಗದದ ಮೇಲೆ ಬೇರೆ ಜಾತಿ ವಧುವರರ ಚಿತ್ರವನ್ನು ಛಾಪಿಸಿ ತಮ್ಮ ಮುಂದಿನ ಸಂಚಿಕೆಯ ಜೊತೆಯಲ್ಲಿ ಕಳುಹಿಸಿಕೊಟ್ಟರೆ ಉತ್ತಮ ವೆಂದು ಸಲಹೆ ಕೊಡುತ್ತೇನೆ. ಈ ಚಿತ್ರವು ಹಿಂದಿನದರಷ್ಟೇ ಪ್ರಮಾಣವುಳ್ಳದ್ದಾದರೆ ಅದಕ್ಕೆ ಬದಲಾಗಿ ಇದನ್ನು ಕ್ಯಾಲೆಂಡರಿನಲ್ಲಿ ಅಂಟಿಸಿಕೊಳ್ಳುವುದಕ್ಕೆ ಅನುಕೂಲವಾಗುವುದು.

ವಿ. ಇ. ನೈಟಿಂಗೇಲ್.

[ಈ ಚಿತ್ರಕ್ಕೆ ತಪ್ಪಾಗಿ ಬೇರೆ ಹೆಸರನ್ನು ಕೊಟ್ಟದ್ದಕ್ಕಾಗಿ ನಾವು ತುಂಬಾ ವಿಷಾದಪಡುತ್ತೇವೆ. ಯಾರಾದರೂ ಈ ಹೆಸರಿನ ಚಿತ್ರವನ್ನೇ ಪಡೆಯಲಪೇಕ್ಷಿಸಿದರೆ ನಾವು ಸಂತೋಷವಾಗಿ ಅದನ್ನು ಕಳುಹಿಸುವೆವು.—ಎಡಿ]

ದೊಡ್ಡಬಳ್ಳಾಪುರದ ವಿಷಯಗಳು.

ಅಯ್ಯಾ, ಯಾವ ಕಾರಣದಿಂದಲೋ ಮ್ಯುನಿಸಿಪಲ್ ಇನ್‌ಸ್ಪೆಕ್ಟರವರ ಅವರ ಕಾರ್ಯನಿರ್ವಾಹಕಶಕ್ತಿಯಿಂದ ಈಗೀಗ ಮ್ಯುನಿಸಿಪಾಲಿಟಿ ಚುರುಕಾಗು ತ್ತಿರುತ್ತೆ.—ಅಲ್ಲಲ್ಲಿ ಇಲಿಗಳು ಬೀಳುತ್ತಿವೆ. ಇಲಿ ಬಿದ್ದ ಮನೆಯವರು ಮನೆಗಳು ಬಿಡುತ್ತಾ, ಈಗಲೇ ಇನಾಕ್ಯುಲೇಷನ್ ಸರ್ವರೂ ಮಾಡಿಸಿಕೊಂಡರೆ ಪ್ಲೇಗ್ ರೋಗ ಹರಡದಂತೆ ಗ್ರಾಮವು ಸುಭಿಕ್ಷವಾಗಿರುತ್ತೆ. ಸುತ್ತಮುತ್ತ ಇರುವ ಪ್ಲೇಗ್ ಜಾಗಾದಿಂದ ಬರತಕ್ಕ ಜನರು ಊರೊಳಕ್ಕೆ ಬಂದ ಕೂಡಲೆ ಕೆಲವು ದಿನಗಳು ಡಾಕ್ಟರ ಪರೀಕ್ಷೆಗೆ ಒಳಪಡುವಂತೆ ಸ್ಥಳಾಧಿಕಾರಿಗಳು ಮಾಡಿದರೆ ಉತ್ತಮ. ಈ ರೀತಿ ಮಾಡುವದರಿಂದ ರೋಗ ಕಂಡೊಡನೆ ಕ್ಯಾಂಪಿಗೆ ಕಳುಹಿಸಿದರೆ ರೋಗ ಹರಡುವುದಿಲ್ಲ.—ಈ ಊರಿನ ಕಾರೊನೇಷನ್ ಹಾಲು ಅನುಪಯೋಗವಾಗಿ ಇರುತ್ತೆ. ಆ ಮೊಬಲಗು ಎಲ್ಲಿ ಬಿದ್ದುಕೊಂಡಿದೆಯೋ ಗೊತ್ತೇ ಇಲ್ಲ.—ಈ ನಾರಾಯಣರವರ ಕನಿಷ್ಠ, ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಗೆ ಹೋಗಿರುವ ವಿದ್ಯಾರ್ಥಿಗಳು ಪ್ಯಾಸ್ ಆಗುವಂತೆ ಮಾಸ್ಟರುಗಳು ಮುತುವರ್ಜಿ ವಹಿಸಬೇಕಾಗಿರುತ್ತೆ.—ಘಾಟಿಯಲ್ಲಿ ಸಮಾರಾಧನೆ ವಗೈರೆ ಕೆಲಸಗಳು ತೃಪ್ತಿಕರವಾಗಿ ನಡೆಸಿದಕ್ಕೆ ಅಮಲ್ದಾರ್, ಪಿಂಚಣಿದಾರರವರ ಮುತುವರ್ಜಿ ಸ್ತೋತ್ರಾರ್ಹವಾಗಿರುತ್ತೆ.—ಮ್ಯುನಿಸಿಪಲ್ ಲಾಂದ್ರಗಳು ಮಾತ್ರ ಮೌನವ್ರತವನ್ನೇ ತಾಳಿರುತ್ತೆ; ಎಂದಿಗೆ ಅವು ಕಣ್ಣು ತೆರೆಯುತ್ತವೋ ತಿಳಿಯದು.—ಟೌನ್ ಶ್ರೀಪ್ರಸನ್ನವೆಂಕಟರಮಣಸ್ವಾಮಿ ರಥೋತ್ಸವಕ್ಕೆ ಎತ್ತಿನ ಪರಿಷೆ ಆಗಲು ಪ್ರಯತ್ನಪಟ್ಟು ರಿಕಾರ್ಡು ನಡೆದಿರುತ್ತೆ. ಘನವುಳ್ಳ ಸರ್ಕಾರದವರು ಈ ಜಾತ್ರೆ ನಡೆಯುವಂತೆ ಅವರು ದಯಪಾಲಿಸ್ಯಾರೆಂದು ಜನರು ನಿರೀಕ್ಷಿಸಿಕೊಂಡಿದಾರೆ.

ಹಿತಚಿಂತಕ

ಮೈಸೂರು ಸಿಟಿ ಇಲವಾಲ್ ಟೋಲ್‌ಗೇಟು.

ಅಯ್ಯಾ, ನಮ್ಮ ಮೈಸೂರು ಸಿಟಿ ಇಲವಾಲದ ರೋಡಿನ ಟೋಲ್‌ಗೇಟಿನ ಕಂಟ್ರಾಕ್ಟರೇ ಮೊದಲಾದವರು ಜನರಿಗೆ ತುಂಬಾ ತೊಂದರೆಕೊಡುತ್ತಿರುವರು. ಇವರು ಪಟ್ಟಣದಿಂದ ಬರುವ ಗಾಡಿ, ಸೈಕಲ್ ಮುಂತಾದವುಗಳಿಂದ ಸುಂಕವನ್ನು ವಸೂಲ್ಮಾಡಬೇಕಾದದ್ದೇನೋ ಸಹಜ. ಇಲ್ಲಿರತಕ್ಕ ಜನಗಳಾದರೋ ಈ ಊರಿನ ಒಂದು ಬೀದಿಯಿಂದ ಇನ್ನೊಂದು ಬೀದಿಗೆ ತಿರುಗಾಡುವವರಿಂದಲೂ ಸುಂಕವನ್ನು ತರಿಸಬೇಕೆಂದು ಇಚ್ಛಿಸುವಂತೆ ತೋರುತ್ತದೆ. ಇಲ್ಲಿಯ ಟೋಲ್‌ಗೇಟಿಗೂ ಸುಂಕ ವಸೂಲ್ಮಾಡುವ ಮನೆಗೂ ಸುಮಾರು ಅರ್ಧ ಫರ್ಲಾಂಗಿನಷ್ಟು ದೂರವಿರುವುದು. ಈ ಸ್ಥಳದಲ್ಲಿಯೇ ಎಡದ ಟೋಲ್‌ಗೇಟಿನ ಒಳ ಪಾರ್ಶ್ವದಲ್ಲಿ ಸಿಟಿಯ ಜಮಲಕ್ಷ್ಮೀ ವಿಲಾಸ ರೋಡು ಈ ಇಲವಾಲದ ರಸ್ತೆಗೆ ಬಂದು ಸೇರುವುದು. ಈ ರೋಡಿನಲ್ಲಿ ಜನರು ಗಾಳಿಯ ಸೇವನೆಗಾಗಿ ಹಗಲೂ ಸಂಜೆ ಗಾಡಿಗಳ ಮೇಲೆಯೂ, ಸೈಕಲ್‌ಗಳ ಮೇಲೆಯೂ ತಿರುಗಾಡುವರು. ಈ ರೋಡು ಗೇಟಿನ ಒಳಗಡೆ ಇದ್ದರೂ ಅಲ್ಲಿಂದ ಬರತಕ್ಕ ವಾಹನಗಳಿಂದ ಕಂಟ್ರಾಕ್ಟರು ಅನ್ಯಾಯವಾಗಿ ಸುಂಕ ವಸೂಲ್ಮಾಡುವರು. ಭಾರಿ ಮನುಷ್ಯರುಗಳು ಬಂದರೆ ಸುಮ್ಮನೆ ಬಿಟ್ಟುಬಿಡುವರು. ವಿದ್ಯಾರ್ಥಿಗಳಾಗಲೀ ಇತರ ಸಾಧಾರಣ ಮನುಷ್ಯರಾಗಲಿ ಬಂದರೆ ಜುಲುಮಿನಿಂದ ತೆರಿಗೆ ತೆರಿಸುವರು. ಕೆಲವು ಸಮಯದಲ್ಲಿ ಇಲ್ಲಿನ ಕಂಟ್ರಾಕ್ಟುದಾರನು ತನ್ನ ಕೆಲಸಕ್ಕೆ ಅಕ್ಷರ ತಿಳಿಯದ ತನ್ನ ಸೇವಕರನ್ನು ನೇಮಿಸಿಬಿಡುವನು. ಆಗಲಂತು ಜನರ ಕಷ್ಟ ಹೇಳತೀರದು. ವಾಹನಗಳಿಗೆ ಹಾಕಿರುವ ಮ್ಯುನಿಸಿಪಾಲಿಟಿ ನಂಬರುಗಳನ್ನು ತೋರಿಸಿದರೆ ಅದು ಹೋದ ವರುಷದ್ದೆನ್ನುವರು. ಎಷ್ಟು ಉಪಾಯವಾದ ಮಾತು ಹೇಳಿದರೂ ಕೇಳದೆ ತಡೆಹಾಕಿ ಸತಾಯಿಸುವರು. ಹೀಗೆ ಬಹು ಜನರು ತೊಂದರೆಪಡುತ್ತಿರುವರು. ಇನ್ನೂ ಅನೇಕ ಅಕೃತ್ಯಗಳು ಇಲ್ಲಿ ಆಗಿಂದಾಗ್ಗೆ ನಡೆಸಲ್ಪಡುತ್ತಿರುವವು. ನಿತ್ಯದಲ್ಲಿ ಈ ಜಯಲಕ್ಷ್ಮೀ ವಿಲಾಸ ರೋಡಿಗೆ ವಿಹಾರಾರ್ಥವಾಗಿ ಬರುವ ವಾಹಕರೆಲ್ಲಾ ಸುಂಕ ಕೊಟ್ಟೇ ತೀರಬೇಕೇ? ಕೆಲವರು ಮಾತ್ರ ಕೊಟ್ಟು ಉಳಿದವರು ಕೊಡದಿರಬಹುದೋ? ಅಥವಾ, ಎಲ್ಲರೂ ಕೊಡಕೂಡದೋ? ಎಂಬೀ ವಿಚಾರಗಳನ್ನು ಮ್ಯುನಿಸಿಪಾಲಿಟಿಯವರು ಪರ್ಯಾಲೋಚಿಸಿ ಸದರಿ ಟೋಲ್‌ಗೇಟ್ ಕಾವಲಿನವರಿಗೆ ಸರಿಯಾಗಿ ತಾಕೀತುಮಾಡುತ್ತಾರೆಂದು ನಂಬಿದೇನೆ.

ತೊಂದರೆಪಟ್ಟವನೊಬ್ಬ.

[ಮ್ಯುನಿಸಿಪಲ್ ಅಧಿಕಾರಿಗಳು ಇದರ ನಿಜಸ್ಥಿತಿಯನ್ನು ವಿಚಾರಣೆಯಿಂದ ಕ್ರಮಪಡಿಸಬೇಕು. ಬಾಕ್ಯದಾರರು ಪಟ್ಟ ತೊಂದರೆಯನ್ನು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಿಗೆ ಖುದ್ದಾಗಿಯೋ, ಕಾಗದದ ಮೂಲಕವೋ ತಿಳಿಸಿದ್ದರೆ ಅವರು ತನಿಖೆಮಾಡಲು ಅನುಕೂಲವಾಗುತ್ತಿತ್ತು. ಈಗಲೂ ಅವರು ಆ ರೀತಿ ಮಾಡಬೇಕಾಗಿ ಸೂಚಿಸುತ್ತೇವೆ.—ಎಡಿ]

ಆನೇಕಲ್ ತಾಲ್ಲೂಕು ಸರ್ಜಾಪುರ.—ಈ ವಿಷಯ ಬಹಳ ಹಳೇದಾದ್ದರಿಂದ ಪ್ರಕಟಿಸಲಾರೆವು.

ಕೆ. ವಿ., ದೊಡ್ಡಬಳ್ಳಾಪುರ.—ಆ ವಿಷಯವನ್ನು ಕುರಿತು ವಿದ್ಯಾ ಇಲಾಖೆಯ ಮೇಲ್ದರ್ಜೆ ಅಧಿಕಾರಿಗಳಿಗೆ ಮೊದಲು ತಿಳಿಸುವುದು ಒಳ್ಳೆಯದು.

ಬ್ರಾಹ್ಮಣ ಹಿತೈಷಿ, ಹೊರಕೇರಿ, ದೇವರಪುರ.—ನೀವು ಕೇಳುವ ಪ್ರಶ್ನೆಯು ಪತ್ರಿಕಾ ಪ್ರಸಂಗದಲ್ಲಿ ಇತ್ಯರ್ಥವಾಗತಕ್ಕದ್ದಲ್ಲ; ಆಯಾ ಪಂಗಡದ ಮಠಾಧಿಪತಿಗಳಿಂದ ವ್ಯವಸ್ಥೆಯಾಗತಕ್ಕದೆಂದು ತಾಳುವುದು. —ಎಡಿ]

ತಾಲ್ಲೂಕು ವರ್ತಮಾನಗಳು.

ಸಿಕಾರಿಪುರ ತಾ|| ಶಿರಾಳಕೊಪ್ಪ.—ಈ ಗ್ರಾಮದಲ್ಲಿ ಪ್ಲೇಗ್ ಪ್ರಾರಂಭವಾಗಿ 1 ತಿಂಗಳಾಗುತ್ತಾ ಬಂತು. ಡಿಸೆಂಬರ್ ತಾ. 10 ರಲ್ಲಿ ಇಲ್ಲಿಗೆ ದಯಮಾಡಿಸಿದ್ದ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರವರಾದ ಮಿ|| ಕರ್ನಿ ಸಾಹೇಬರವರು ಇಲ್ಲಿಯ ಬಹಳ ಜನಗಳಿಗೆ ಎಂದರೆ, ಗಂಡಸರು ಹೆಂಗಸರು ಹುಡುಗರಿಗೆ ಸಹಾ ಇನಾಕ್ಯುಲೇಷನ್ ಮಾಡಿದ್ದರಿಂದ ಪ್ಲೇಗ್ ಸೋಂಕು ಬಹಳ ಕಡಮೆಯಾಗಿ ಜನಗಳು ಸೌಖ್ಯವಾಗಿರುತ್ತಾರೆ. ಈ ಹೆಲ್ತ್ ಆಫೀಸರವರು ಅದೇ ತಾ. 12 ರಲ್ಲಿ ಇಲ್ಲಿನ ಸ್ಕೂಲಿನಲ್ಲಿ ನಡೆದ ಸಭೆಯಲ್ಲಿ ಗ್ರಾಮದ ಮುಖಂಡರು ಸೇರಿದ್ದಾಗ ಫಾರೆಸ್ಟ್ ಸಬ್ ಡಿವಿಷನ್ ಸಾಹೇಬರವರು ಅಪೇಕ್ಷಿಸಿದಂತೆ ಅಗ್ರಾಸನಾಧಿಪತ್ಯವನ್ನು ವಹಿಸಿ, ಬ್ರಿಟಿಷ್ ಚಕ್ರಾಧಿಪತ್ಯದಿಂದುಂಟಾದ ಫಲಗಳ ವಿಷಯದಲ್ಲಿ ಸರಸವಾಗಿ ಎಂ. ಹನುಮಂತಾಚಾರ್ಯರು ಮಾಡಿದ ಭಾಷಣ ಮತ್ತು ವ್ಯಾಯಾಮದ ಆವಶ್ಯಕತೆಯ ವಿಷಯದಲ್ಲಿ ಮಾಡಿದ ಉಪನ್ಯಾಸ ಮುಂತಾದುದನ್ನು ಕೇಳಿ ಈ ಪುರಪ್ರಮುಖರು ಈ ಉತ್ಸವಕ್ಕೆ ಚಂದಾ ಕೊಟ್ಟು ನಡೆಯಲು ಏರ್ಪಡಿಸಿದ್ದಕ್ಕಾಗಿ ಬಹಳ ಸಂತೋಷಪಟ್ಟು, ಸ್ಕೂಲಿನಲ್ಲಿ ತೋಟದ ಕೆಲಸವನ್ನು ಮಾಡಿದ ಬಾಲಕರಿಗೂ, ಸಂಗೀತವನ್ನು ಚೆನ್ನಾಗಿ ಕಲಿತ ಬಾಲಕಿಯರಿಗೂ ಇನಾಮು ಹಂಚುವುದಕ್ಕೆ ತಾವೂ ದ್ರವ್ಯಸಹಾಯಮಾಡಿದರು.

ಫ್ರೆಂಚ್‌ರಾಕ್ಸ್.—ಪ್ಲೇಗ್ ವ್ಯಾಧಿಯು ಮುಂಚಿನಷ್ಟು ಪ್ರಬಲವಾಗಿಲ್ಲ. ಆದರೂ ಆಗಾಗ್ಗೆ ಒಂದೊಂದು ಪ್ಲೇಗ್ ಖಾಯಿಲೆಯೂ ಮರಣವೂ ಆಗುತ್ತಿವೆ. ಅಲ್ಪಸ್ವಲ್ಪ ಜನಗಳು ಇನ್ನೂ ಊರಿನಲ್ಲಿ ವಾಸಿಸುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಇಲ್ಲಿಗೆ ಒಂದು ಮೈಲು ದೂರದಲ್ಲಿರುವ ಹಾರವಳ್ಳಿಯಲ್ಲಿಯೂ ಸಹ ಇಲಿಗಳು ಸಾಯುತ್ತಿವೆ. ಅಲ್ಲಿನ ಜನಗಳು ಇಷ್ಟರಲ್ಲೇ ಜೋಪಡಿಗಳನ್ನು ಕಟ್ಟಿಕೊಂಡು ಹೋಗಬಹುದು. ಜೋಪಡಿಗಳಲ್ಲಾದರೋ ಜನರಿಗೆ ಸಾಧಾರಣ ಜ್ವರ, ಕೆಮ್ಮಲು, ನೆಗಡಿ, ಮೊದಲಾದ ರೋಗಗಳು ಇದ್ದೇ ಇವೆ.—ಶ್ರೀರಂಗಪಟ್ಟಣದ ತಾಲ್ಲೂಕ್ ಗಂಜಾಂ ಗವರ್ನಮೆಂಟ್ ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರ್ ಮ|| ಅಪ್ರಮೇಯಶಾಸ್ತ್ರಿಗಳು ದನಗಳ ರೋಗಗಳಿಗೆ ಉಚಿತವಾಗಿ ಚಿಕಿತ್ಸೆಮಾಡುತ್ತಿದಾರೆ. ಅನೇಕ ಜನಗಳು ರೋಗಪೀಡಿತವಾಗಿದ್ದ ತಮ್ಮ ದನಕರುಗಳನ್ನು ಮೇಲ್ಕಂಡ ಶಾಸ್ತ್ರಿಗಳಿಂದ ಉಚಿತವಾಗಿ ಚಿಕಿತ್ಸೆ ಮಾಡಿಸಿಕೊಂಡು ಹೋಗಿದಾರೆ. ಇವರು ಈ ರೀತಿಯಲ್ಲಿ ಮೂಕಪ್ರಾಣಿಗಳಿಗೆ ಚಿಕಿತ್ಸೆಮಾಡುತ್ತಿರುವದು ಧರ್ಮಕಾರ್ಯವೇ ಸರಿ. ಶಾಸ್ತ್ರಿಗಳು ಇಲ್ಲಿಗೆ ಬಂದ ಲಾಗಾಯ್ತಿನಿಂದ ಸ್ಕೂಲ್ ಉತ್ತಮ ಸ್ಥಿತಿಯಲ್ಲಿದೆ.—ಗಂಜಾಂನಲ್ಲಿಯೂ ಪ್ಲೇಗ್ ವ್ಯಾಧಿಯು ಪ್ರಾರಂಭವಾಗಿದೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಇಲ್ಲಿಗೆ ಬಂದು ಕೆಲವರಿಗೆ ಇನಾಕ್ಯುಲೇಷನ್ ಮಾಡಿದರು. ಎಲ್ಲರೂ ಇದೇ ರೀತಿ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರೆ ಚೆನ್ನಾಗಿತ್ತು. ಫ್ರೆಂಚ್‌ರಾಕ್ಸಿನಲ್ಲಿಯೂ ಸಹ ಜನಗಳು ಇನಾಕ್ಯುಲೇಷನ್ ವಿಷಯ ಉದಾಸೀನರಾಗಿದ್ದದ್ದೇ ಪ್ಲೇಗ್ ಇಷ್ಟರ ಮಟ್ಟಿಗೆ ವೃದ್ಧಿಯಾಗುವದಕ್ಕೆ ಕಾರಣವಾಯಿತು.

ಕುಲೀಸ್‌ಪೇಟೆ.—ಈ ತಾಲ್ಲೂಕಿನ ಸುತ್ತುಮುತ್ತಲೂ ರಾಗಿ ಬೆಳೆ ಬಹಳ ಚೆನ್ನಾಗಿ ಆಗಿದೆಯೋ ಹೊರತು ಸಾಲು ಬೆಳೆ ಸುತರಾಂ ಆಗಲಿಲ್ಲ. ಈ ಗ್ರಾಮಕ್ಕೆ ನೀರಿಗೆ ಆಧಾರವಾಗಿರುವ ಅರ್ಕಾವತಿನದಿಯಲ್ಲಿ ಸುಮಾರು 20 ದಿನಗಳಿಂದ ಹರಿಯುತ್ತಾ ಇದ್ದ ನೀರು ಸುತರಾಂ ನಿಂತುಹೋಗಿದೆ. ಜನಗಳಿಗೆ ಕುಡಿಯುವುದಕ್ಕೆ ನೀರು ಬೇಕಾದರೆ ಮರಳನ್ನು ತೋಡಿ ಚಿಲುಮೆ ತೆಗೆದು ನೀರು ತರಬೇಕು. ಹೆಂಗಸರಿಗೆ ಬಹಳ ತೊಂದರೆ; ಇಂಥಾ ತೊಂದರೆಗೆ ಅವಕಾಶವಿಲ್ಲದಂತೆ ಈ ಊರಿನ ಸಾಹುಕಾರ್ ಕರೇನಲ್ಲಯ್ಯಸೆಟ್ಟರು 20-25 ವರ್ಷಗಳಿಂದಲೂ ಈ ಊರಿನ ಜನಗಳಿಗೆಲ್ಲರಿಗೂ ರುಚಿಯಾದ ನೀರು ದೊರಕುವ ಹಾಗೆ ಕೂಲಿ ಆಳುಗಳಿಂದ ದೊಡ್ಡ ಜಲಮೆಯನ್ನು ತೆಗಸುತ್ತಲೂ, ನೀರು ಕೆಡದಂತೆ ಬೇಲಿ ಹಾಕಿಸಿ ಶುದ್ಧವಾದ ನೀರು ಯಥೇಷ್ಟವಾಗಿ ದೊರಕುವ ಹಾಗೆ ಕಾವಲುಗಾರರನ್ನಿಟ್ಟು ಮಾಡಿಸುತ್ತಲೂ ಬಂದ ಪ್ರಕಾರ ಈ ಸಲವೂ ಮಾಡಿಸಿರುವುದು ಜನಗಳಿಗೆ ಸಂತೋಷಪ್ರದವಾಗಿದೆ. ಈ ರೀತಿಯಾಗಿ 4-5 ತಿಂಗಳು ಪ್ರತಿ ವರ್ಷವೂ ಮಾಡಿಸೋಣವಾಗಿದೆ.—ಧರ್ಮಿಷ್ಠರು ಪ್ರತಿ ದಿನವೂ ಎಷ್ಟು ಜನ ಬೈರಾಗಿಗಳು ಬಂದಾಗ್ಗೂ ಸದಾವರ್ತ ಅಂದರೆ ಅಕ್ಕಿ ಬೇಳೆ ಸಹ ಕೊಡುತ್ತಾ ಬಂದಿದಾರೆ. ಸುಮಾರು 25 ವರ್ಷದಿಂದಲೂ ಕೊಡುತ್ತಾರೆ. ಮತ್ತು ಯಾವಾಗಲೂ ಸತ್ಕಾರ್ಯದಲ್ಲೇ ನಿರತರಾಗಿದಾರೆ. ಇವರ ಭಾವಮೈದರಾದ ಘೂಟಾಳಂ ಆದಿನಾರಾಯಣಸೆಟ್ಟರು ಕಾಯಿಲೆ ದೆಸೆಯಿಂದ 25 ದಿನಗಳ ಹಿಂದೆ ಕಾಲವಾದರು. ಇವರ ಉತ್ತರಕ್ರಿಯಾದಿಗಳು ಕ್ರಮವಾಗಿ ನಡಸಿ ಸುಮಾರು 1,500-1,700 ಜನ ಬಡಬಗ್ಗರಿಗೆ ಅಕ್ಕಿ ಬೇಳೆ ಸಹ ಮೇಲ್ಕಂಡ ನಲ್ಲಯ್ಯಸೆಟ್ಟರು ಧರ್ಮಮಾಡಿದರು. ಗ್ರಾಮ ಶಾನಭೋಗ ತಕ್ಕಮಟ್ಟಿಗೆ ಚೆನ್ನಾಗಿಯೇ ಇದೆ.—ಈ ಊರಿನಲ್ಲಿ ಹೆಣ್ಣು ಮಕ್ಕಳಿಗೆ ಸ್ಕೂಲ್ ಹೊಸದಾಗಿ ಕಟ್ಟಿಸದೆ ಇರುವುದು ಬಹಳ ತೊಂದರೆಯಾಗಿದೆ. ಈ ವಿಷಯಕ್ಕೆ ವಿದ್ಯಾ ಇಲಾಖೆಯವರುಗಳು ಮನಸ್ಸಿಗೆ ತಂದುಕೊಂಡು ಕಟ್ಟಿಸಿಕೊಟ್ಟರೆ ಬಹಳ ಅನುಕೂಲ.

ಮಂಡ್ಯ.—ಮಳೆ ಅನುಕೂಲವಾದ್ದರಿಂದ ರೈತರಿಗೆ ಒಳ್ಳೇ ಸುಗ್ಗಿಯಾಯಿತು. ಆದರೆ ಸಂತೆಯಲ್ಲಿ ದವಸ ಧಾನ್ಯಗಳ ಧಾರಣೆ ಮಾತ್ರ ಬದಲಾಗಲಿಲ್ಲ.—ಸರ್ಕಾರದವರು ಈಗ ಹೊಸದಾಗಿ ನಗದಿ ಅಳತೆ ಸೇರು, ಬಟ್ಟು ತೂಕ ಮೊದಲಾದವುಗಳನ್ನು ಜಾರಿಯಲ್ಲಿ ತಂದಿದ್ದರೂ ಅವುಗಳಲ್ಲೇ ಒಂದಕ್ಕೊಂದು ವ್ಯತ್ಯಾಸವುಂಟು. ಹಿಂದೆ ಸರ್ಕಾರದವರು ಅಳತೆ ತೂಕ ಮೊದಲಾದವುಗಳಲ್ಲಿರುವ ಹೆಚ್ಚು ಕಡಿಮೆಗಳನ್ನು ಕೇಳಲು ಮಾರ್ಗವಿತ್ತು. ಈಗಿರುವ ವ್ಯತ್ಯಾಸಗಳನ್ನು ಯಾರು ಕೇಳಬೇಕು?—ಊರಿನ ಮುನಿಸಿಪಾಲಿಟಿ ತಕ್ಕಮಟ್ಟಿಗೂ ಚೆನ್ನಾಗಿದೆ. ಆದರೆ ಸಂದುಗೊಂದುಗಳಲ್ಲಿ ಆಗುವ ಹೇಸಿಕೆಗಳನ್ನು ತಪ್ಪಿಸಲು ಬಲವಾದ ಕಾನೂನಾಗಬೇಕಾದದ್ದು ಒಳ್ಳೇದು. ಈ ಸ್ಥಳಕ್ಕೆ ಹೊಸ ಅಮಲ್ದಾರ್, ಮೆ|| ಬಸವರಾಜೇ ಅರಸ್‌ಯವರೂ ಪೋ|| ಇನ್‌ಸ್ಪೆಕ್ಟರ್ ದಿವಾಕರ ನಾಯಕ್‌ರವರೂ, ಬಂದಿರುವದರಿಂದ ಎಲ್ಲಾ ಭಾಗಗಳಲ್ಲೂ ಅನುಕೂಲವೂ ನೆಮ್ಮದಿಯೂ ಉಂಟಾಗಿದೆ. ಅಮಲ್ದಾರರು ಈಗಾಗಲೇ 2-3 ಕಡೆಗೆ ಸರ್ಕೀಟ್ ದಯಮಾಡಿಸಿ ಅಲ್ಲಲ್ಲಿನ ರೈತರ ಅಹವಾಲ್‌ಗಳನ್ನು ಚಿತ್ತಕ್ಕೆ ತಂದುಕೊಂಡು ಶೀಘ್ರದಲ್ಲೇ ಇಂತಿಜಾಮ್ ಕೊಡುವದೂ, ಕಚೇರಿಯಲ್ಲಿ ಅನೇಕ ಅರ್ಜಿಗಳು ದಾಖಲೆಯಾಗಿ ಬೇಗಬೇಗನೆ ಫೈಸಲ್ ಆಗುವದೂ ತುಂಬಾ ಸಂತೋಷವಾದ ಸಂಗತಿಯಾಗಿರುತ್ತದೆ.—ವೆ. ಎ. ವಿ. ಸ್ಕೂಲ್ ಹೆ ಮಾಸ್ಟರ್ ಜಿ. ವಿ. ನಂಜಪ್ಪಸೆಟ್ಟರು ತಾಲ್ಲೂಕ್ ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟದ್ದು ಅನೇಕರಿಗೆ ಸಮ್ಮತವಾಗಿಯೂ ಸಂತೋಷವಾಗಿಯೂ ತೋರಿತು.—ತಾ. 10 ನೇ ಭಾನುವಾರ ದಿನ ಸಾ ಸಂಗಪ್ಪನವರ ಛತ್ರದಲ್ಲಿ ಅಮಲ್ದಾರರೇ ಆದಿಯಾಗಿ ಮುನಿಸಿಪಲ್ ಮೆಂಬರುಗಳೂ ಊರಿನ ಪ್ರಮುಖರೂ, ನೌಕರಮಾನ್ಯರುಗಳೂ ಸೇರಿ ನಮ್ಮ ಶ್ರೀಮದ್ಯುವರಾಜರಿಗೆ ಚಕ್ರವರ್ತಿಗಳಿಂದ ದಯಪಾಲಿಸಲ್ಪಟ್ಟ ಜಿ. ಸಿ. ಐ. ಇ. ಎಂಬ ಬಿರುದುಗಾಗಿ ಕೂಟವನ್ನು ನೆರೆಯಿಸಿ ಎಲ್ಲರ ಅಭಿಮತದಂತೆ ಅವರಿಗೆ ತಂತಿಸಮಾಚಾರವನ್ನು ಕೊಡಲಾಯಿತು. ಸ್ಕೂಲ್‌ಗಳು ಇನ್‌ಸ್ಪೆಕ್ಟರವರನ್ನು ಪರೀಕ್ಷೆಗಾಗಿ ಎದುರು ನೋಡುತ್ತಾ ಇವೆ. ಶ್ರೀ ಜನಾರ್ದನಸ್ವಾಮಿಯ ಕೋಟಾರದೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು.

ಹಾಸನ.—ಇಲ್ಲಿನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಾದ ಮ|| ಶ್ರೀನಿವಾಸರಾಯರು ಅಧಿಕಾರದಿಂದ ರಿಟೈರಾದರು. ಇವರಿಗೆ ಬದಲಾಗಿ ನಾರಾಯಣರಾಯರು ಬಂದಿದಾರೆ. 4, 5 ಮತ್ತು 6 ರಲ್ಲಿ ಈ ಡಿಸ್ಟ್ರಿಕ್ಟಿನ ಪರಸ್ಪರ ಸಹಾಯಕ ಸಂಘಗಳ ಪ್ರತಿನಿಧಿಗಳ ಸಮ್ಮೇಳನವು ಜರುಗಿತು. ಸೊಸೈಟಿಗಳ ರಿಪೋರ್ಟುಗಳೂ, ಚರ್ಚೆಗಳೂ, ತೀರ್ಮಾನಗಳೂ ನಡೆದುವು. ಈ ಡಿಸ್ಟ್ರಿಕ್ಟಿನಲ್ಲಿ ಇತರ ಡಿಸ್ಟ್ರಿಕ್ಟುಗಳಿಗಿಂತ ಹೆಚ್ಚಾಗಿ ಸೊಸೈಟಿಗಳು ಏರ್ಪಾಟಾಗಿರುವುದು ಮಾತ್ರವಲ್ಲದೆ ಚೆನ್ನಾಗಿ ನಡೆಯುತ್ತಲೂ ಇವೆ ಎಂದು ಗೊತ್ತಾಯಿತು. ಈ ಊರಿನಲ್ಲಿ ನಾಲ್ಕು ಸೊಸೈಟಿಗಳು ಏರ್ಪಾಡಾಗಿವೆ. ಇವುಗಳನ್ನೆಲ್ಲಾ ಸೇರಿಸಿ ಒಂದೇ ಸೊಸೈಟಿ ಮಾಡಬೇಕೆಂದು ನಮ್ಮ ರಿಜಿಸ್ಟ್ರಾರವರು ಸೂಚಿಸಿದರು. ಕಳೆದ ಗುರುವಾರ ಬೆಳಗ್ಗೆ ಮ|| ಬಿ. ರಾಮಸ್ವಾಮಯ್ಯನವರು ಬಂದು ಮುಖ್ಯ ಮಿ|| ವೆದರಾಲ್‌ರವರಿಂದ ಈ ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸಿಕೊಂಡರು. ಸಾಯಂಕಾಲ ಇಲ್ಲಿನ ವಾಣೀವಿಲಾಸ ಬಾಲಿಕಾ ಪಾಠಶಾಲೆಯಲ್ಲಿ ಅಧಿಕಾರಿಗಳು ಪುರಜನಗಳು, ಸ್ಥಳ ಪರಸ್ಥಳದ ಮಹಾಜನರೆಲ್ಲರೂ ಸೇರಿ ಮಿ|| ವೆದರಾಲ್‌ರವರನ್ನು ಮ|| ಬಿ. ರಾಮಸ್ವಾಮಯ್ಯನವರೊಡನೆ ಅತ್ಯಂತ ವಿಜೃಂಭಣೆಯಿಂದ ಬರಮಾಡಿಕೊಂಡು, ಟೀಪಾರ್ಟಿ ನಡಿಸಿ, ಆರಮನೇ ವಿದ್ವಾಂಸರು ವೇ|| ವಾಸುದೇವಾಚಾರ್ಯ, ಸಂಗೀತ, ನಾಟಕದ ಹಾಸ್ಯಪ್ರದರ್ಶನ ಮುಂತಾದ ವಿನೋದಗಳಿಂದ ಸಂತೋಷಪಡಿಸಿದರು. ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಮಿ|| ವೆದರಾಲ್ ದೊರೆಯವರ ದೀರ್ಘಕಾಲದ ಅಧಿಕಾರದ ಗುಣಕಥನವನ್ನು ಮಾಡಿದರು. ಮಿ|| ವೆದರಾಲ್ ದೊರೆಯವರು ತಮ್ಮನ್ನು ಮಹಾಜನರು ಇಷ್ಟರಮಟ್ಟಿಗೆ ಸತ್ಕರಿಸಿದ್ದಕ್ಕಾಗಿ ಪ್ರೀತಿಯನ್ನೂ ವಂದನೆಯನ್ನೂ ಅರ್ಪಿಸಿದರು. ಹಾಗೆಯೇ ಮ|| ಬಿ. ರಾಮಸ್ವಾಮಯ್ಯನವರು ಕೂಡ ಯಾರೇ ಆಗಲಿ ಕೊನೆಯಲ್ಲಿ ಮಹಾಜನಗಳ ಮನಃಪೂರ್ವಕವಾದ ಪ್ರೀತ್ಯಾತಿಶಯವನ್ನೂ, ಇಂತಹ ಆತಿಥ್ಯವನ್ನೂ ಅಂಗೀಕರಿಸುವ ಮಟ್ಟಿಗೆ ಹಿತಕಾರಿಗಳಾಗಿ ಅಧಿಕಾರ ನಡೆಸಬೇಕೆಂಬ ಅರ್ಥಗರ್ಭಿತವಾದ ಮಾತುಗಳನ್ನು ಅಪ್ಪಣೆ ಕೊಡಿಸಿದರು. ಸಭಾಕಾರ್ಯವು ರಾತ್ರಿ 8-30 ಗೆ ಮುಕ್ತಾಯವಾಗಿ ಉಭಯ ಪ್ರಭುಗಳೂ ಮಂಗಳವಾದ್ಯನಿನಾದದೊಡನೆ ಸ್ವಸ್ಥಾನಗಳಿಗೆ ಮಹಾಜನ ಪ್ರತಿನಿಧಿಗಳಿಂದ ಸನ್ಮಾನಿತರಾಗಿ ಕಳುಹಿಸಲ್ಪಟ್ಟರು.

ಹೆಗ್ಗಡದೇವನಕೋಟೆ ತಾ|| ಮಗ್ಗೆ.—ಈ ಗ್ರಾಮದಲ್ಲಿ ಕಳೆದ ಮೂರು ತಿಂಗಳಲ್ಲಿ ನಮ್ಮ ಅಮಲ್ದಾರ್ ಮ|| ಮಲ್ಲಿಕಾರ್ಜುನಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ನಡೆದು ಒಂದು ಪಾಠಶಾಲೆಯನ್ನು ನಡಿಸಬೇಕೆಂದು ತೀರ್ಮಾನವಾಯಿತು. ಗ್ರಾಮದ ಮುಖ್ಯ ಮೆಂಬರುಗಳೂ, ರೈತಾಪಿ ಜನಗಳೂ ಹಾಜರಾಗಿದ್ದು ಕೆಲವರು ತಮ್ಮ ಕೈಲಾದ ಸಹಾಯವನ್ನು ಅಕ್ಷಣವೇ ಮಾಡಿದರು. ಮತ್ತೆ ಕೆಲವರು ಸಹಾಯಮಾಡುವದಾಗಿ ಒಪ್ಪಿದರು. ತಕ್ಕ ಮಟ್ಟಿಗೆ ಚಂದಾ ವಸೂಲಾಗಿ ಕೆಲವು ವರ್ತಮಾನ ಪತ್ರಿಕೆಗಳನ್ನು ತರಿಸಲಾಯಿತು. ಸೆಕ್ರೆಟರಿ ಮ|| ಎಂ. ಕೆ. ಸುಬ್ಬರಾಯರು ಬಹಳ ಮುತುವರ್ಜಿ ವಹಿಸಿ ಚಂದಾ ವಸೂಲುಮಾಡಿ ಈ ಸಂಘವನ್ನು ನಡಿಸುತ್ತಿದಾರೆ.—ಈ ಊರಿನಲ್ಲಿ ಪ್ಲೇಗು ಶುರುವಾಗಿ ಆಗಲೇ 8-10 ಜನಗಳು ಕಾಲವಾದರು. ಕೆಲವರು ಊರು ಹೊರಗೂ, ಮತ್ತೆ ಕೆಲವರು ಊರಿನಲ್ಲಿಯೂ ವಾಸಿಸುತ್ತಿದಾರೆ. ಹೀಗೆ ಇರುವದರಿಂದ ಪ್ರಯೋಜನಕಾಣುವದಿಲ್ಲ. ಈ ಸಮಯದಲ್ಲಿ ಹೆಲ್ತಾಫೀಸರು ದಯಮಾಡಿಸಿ ಪ್ರಜೆಗಳಿಗೆ ಇನಾಕ್ಯುಲೇಷನ್ ಮಾಡಿಯಾರೆಂತ ನಂಬಿದೇನೆ.—ಗ್ರಾಮ ಶಾನಭೋಗ ವಿಷಯದಲ್ಲಿ ಗ್ರಾಮಾಭಿವೃದ್ಧಿ ಸಮಾಜದವರು ತೋರಿಸುವ ಅಶ್ರದ್ಧೆಯೇ ಇಂಥಾ ಸಾಂಕ್ರಾಮಿಕ ಜಾಡ್ಯಕ್ಕೆ ಕಾರಣವಾಗಿರುತ್ತೆ.—ಇಲ್ಲಿಯ ವಿ. ಇ. ಸ್ಕೂಲು ಉಪಾಧ್ಯಾಯರು ಸ್ಕೂಲಿಗೋಸ್ಕರ ಊರು ಹೊರಗೆ ಷೆಡ್ಡು ಹಾಕಿ ಕೊಡಬೇಕೆಂದು ಪ್ರಜೆಗಳನ್ನು ಕೇಳಿಕೊಂಡರೂ ಯಾವ ರೀತಿಯಾದ ಏರ್ಪಾಡೂ ಮಾಡದ ಕಾರಣ ಬಾಲಕರಿಗೆ ಊರೊಳಗೇ ಮಾರೀ ಚಾವಡಿಯಲ್ಲೇ ಪಾಠ ಹೇಳುತ್ತಿದಾರೆ, ಹೀಗೆ ಊರೊಳಗೆ ಬಾಲಕರನ್ನು ಸೇರಿಸುವದು ಅಪಾಯಕರವಲ್ಲವೇ? ಈ ವಿಷಯದಲ್ಲಿ ಕಮಿಟಿ ಮೆಂಬರುಗಳು ಯೋಚನೆಮಾಡಬೇಕು.—ಈ ಗ್ರಾಮಕ್ಕೆ ಅತಿ ಸಮೀಪದಲ್ಲಿರುವ ಮಂಚೇಗೌಡನಹಳ್ಳಿ ತೇಗದ ಪ್ಲಾಂಟೇಷನ್‌ನಲ್ಲಿ ಹುಲಿಯ ಹಾವಳಿ ತುಂಬಾ ಜೋರಾಗಿದೆ. ಈ ಬಾಧಾ ಪರಿಹಾರಕರನ್ನು ಎದುರುನೋಡುತ್ತಿದೇವೆ.—ಮ|| ಕಂಟ್ರಾಕ್ಟರ್ ಎಂ. ಸುಬ್ಬರಾಯರು ನಮ್ಮ ಇಂಗ್ಲಿಷ್ ಪ್ರಭುಗಳಿಗೆ ಒದಗಿರುವ ಯುದ್ಧದ ವಿಷಯದಲ್ಲಿ ಅವರ ಪರವಾಗಿ ನಿಂತು ಯುದ್ಧ ಮಾಡುತ್ತಿರುವ ನಮ್ಮ ಹಿಂದೂದೇಶದ ಸೈನಿಕರಿಗೋಸ್ಕರ ಕೂಡಿದ ಮಟ್ಟಿಗೆ ಸಹಾಯಮಾಡಬೇಕೆಂದು ಪ್ರಜೆಗಳಿಗೆ ಬೋಧಿಸಿ ಹಣ ಕೊಡಿಸುತ್ತಿರುವರು. ಇಂಥಾ ಪರೋಪಕಾರವಾದ ಕೆಲಸಕ್ಕೆ ಗ್ರಾಮಸ್ಥರೆಲ್ಲರೂ ಕೂಡಿದ ಮಟ್ಟಿಗೆ ಸಹಾಯಮಾಡಬೇಕಾಗಿದೆ.

ಹುಣಸೂರು.—ಕೆಲವು ತಿಂಗಳಿಂದ ಹುಣಸೂರು, ಮೈಸೂರು, ಪಿರಿಯಾಪಟ್ಟಣಗಳಿಗೆ ಒಂದೇ ಮೋಟರ್ ಬರುತ್ತಿದ್ದರು. ಆದರೆ ಇದು ಅನೇಕ ವೇಳೆ ರಿಪೇರಿ ವಗೈರೆಗಳಿಂದಲೂ, ಎರಡು ವಾರಗಳಿಗೆ ಮುಂಚೆ ಡ್ರೈವರ್ ಅಜಾಗ್ರತೆಯಿಂದಲೋ ಹ್ಯಾಗೋ ದಾರಿಯಲ್ಲಿ ಮೋಟರ್ ಮುರಿದು ಇಬ್ಬರಿಗೆ ಪೂರಾ ಜಖಂ ಆಗಿ ಬಿದ್ದು ತುಂಬಾ ಅವಸ್ಥೆ ಪಡುತ್ತಿರುವಲ್ಲಿ ಇಲ್ಲಿಯ ಮಿ|| ಪೀಟ್ರಿ ಸಾಹೇಬರು ಆ ಮಾರ್ಗವಾಗಿ ಹೋಗುತ್ತಾ ಇದನ್ನು ಕಂಡು ತುಂಬಾ ಪರಿತಾಪಪಟ್ಟು ಅವರಿಬ್ಬರನ್ನೂ ತಮ್ಮ ಗಾಡಿಯಲ್ಲಿ ಕೂರಿಸಿಕೊಂಡು ಹೋಗಿ ಮೈಸೂರು ಆಸ್ಪತ್ರೆಯಲ್ಲಿ ಬಿಟ್ಟು ಬಂದರು. ಈಗ ಇಲ್ಲಿಯ ಕೆಲವು ಸಾಹುಕಾರರಾದ ದೊಡ್ಡ ಮನುಷ್ಯರು ಸೇರಿ ಪ್ರಯಾಣಿಕರ ಅನುಕೂಲತೆಗೆ ಇನ್ನೊಂದು ಮೋಟರನ್ನೂ, ಮತ್ತು ಬುದ್ಧಿವಂತನಾದ ಡ್ರೈವರನ್ನೂ ಇಡುವವರಾಗಿದಾರೆ. ಇಲ್ಲಿನ ಮಿಷನ್ ಗರಲ್ಸ್ ಸ್ಕೂಲ್ ವಾರ್ಷಿಕ ಸಂತೋಷಕೂಟವು ಪ್ರತಿವರ್ಷವೂ ಕ್ರಿಸ್ಮಸ್ ಮತ್ತು ಜನವರಿ ಹಬ್ಬಗಳ ಸಂತೋಷಕ್ಕಾಗಿ ನಡಿಸಲ್ಪಡುತ್ತಿತ್ತು. ಆದರೆ ಈ ವರ್ಷ ಈ ಕೂಟವು ಈಗ ನಡೆಯುತ್ತಿರುವ ಘೋರವಾದ ಯುದ್ಧಗಳಲ್ಲಿ ನಮ್ಮ ಬ್ರಿಟಿಷ್ ಸಾಮ್ರಾಜ್ಯಕ್ಕೆ ಪೂರ್ಣಜಯವಾಗಲೆಂಬ ಮುಖ್ಯೋದ್ದೇಶವನ್ನು ಇಟ್ಟುಕೊಂಡು ಬಹು ವಿಜೃಂಭಣೆಯಿಂದ ಕಳೆದ ವಾರ ನಡಿಸಲ್ಪಟ್ಟಿತು. ಸ್ಕೂಲ್ ಒಳ ಹೊರಭಾಗಗಳು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದವು. ಬಾಲಕಿಯರು ಹಾಜರಾಗಿದ್ದರು. ಸರ್ಕಾರಿ ಹುದ್ದೇದಾರರೂ ಬಾಲಕಿಯರ ಪೋಷಕರೇ ಮುಂತಾದವರೂ ನೆರೆದಿದ್ದರು. ನಮ್ಮ ಅಮಲ್ದಾರ್ ಮ|| ಟಿ. ಟಿ. ರಾಮಚಂದ್ರರಾಯರು ಅಗ್ರಾಸನವನ್ನು ವಹಿಸಿ ಕಾರ್ಯಗಳನ್ನು ನೆರವೇರಿಸಿದರು. ಭಗವತ್ಪ್ರಾರ್ಥನೆ ನಡೆದ ಬಳಿಕ ರೇಂಜರ್ ಮ|| ಚಿನಂಬರರಾಯರು ಬ್ರಿಟಿಷ್ ಸಾಮ್ರಾಜ್ಯಕ್ಕೆ ಜಯಪ್ರದವಾಗಲೆಂದು ಬಹು ಸೊಗಸಾಗಿ ತಯಾರಿಸಿದ್ದ ಒಂದು ಪದ್ಯವನ್ನು ಸ್ಕೂಲ್ ಬಾಲಕಿಯರು ಬಹು ಇಂಪಾಗಿ ಹಾಡಿದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ರಾಮಯ್ಯಂಗಾರ್ರು ಇಂಗ್ಲಿಷಿನಲ್ಲಿ ಸ್ತ್ರೀವಿದ್ಯಾಭ್ಯಾಸದ ವಿಷಯವಾದ ಒಂದು ಉಪನ್ಯಾಸವನ್ನು ಮಾಡಿದರು. ಮೇಲ್ಕಂಡ ರೇಂಜರವರು ಕನ್ನಡದಲ್ಲಿ ಸ್ತ್ರೀವಿದ್ಯಾಭ್ಯಾಸ, ಇದಕ್ಕಾಗಿ ಮಿಷನರಿ ಲೇಡಿಗಳ ಪ್ರಯಾಸ, ಹೆಣ್ಣು ಮಕ್ಕಳಿಗೆ ಬುದ್ಧಿವಾದ ಮುಂತಾದುವುಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ತರುವಾಯ ಒಬ್ಬ ಹೆಣ್ಣು ಮಗಳೂ ಇಬ್ಬರು ಗಂಡು ಮಕ್ಕಳೂ ಒಂದು ಇಂಗ್ಲಿಷ್ ಹಾಡನ್ನು ಹೇಳಿದರು. ಕಡೆಯಲ್ಲಿ ನಮ್ಮ ಅಮಲ್ದಾರ್ರು ಇವೆಲ್ಲವನ್ನೂ ಸೇರಿಸಿ ಇಂಗ್ಲಿಷಿನಲ್ಲಿ ವಿಸ್ತಾರವಾದ ಭಾಷಣವನ್ನು ಮಾಡಿದರು. ಬ್ರಿಟಿಷ್ ಮತ್ತು ಮೈಸೂರು ಸಲಾಂಬಾಣಿಗಳನ್ನು ಬಾಲಕಿಯರು ಹಾಡಿದರು. ಸಭಿಕರಿಗೆ ಗಂಧ ಪುಷ್ಪಾದಿಗಳೂ ಬಾಲಕಿಯರಿಗೆ ಹಣ್ಣು, ಸಕ್ಕರೆ ಮುಂತಾದ ತಿಂಡಿಪದಾರ್ಥಗಳೂ ಹಂಚಲ್ಪಟ್ಟವು. ಮಂಗಳ ಹಾಡಿದ ಮೇಲೆ ಸರ್ವರೂ ಸಂತೋಷದಿಂದ ತೆರಳಿದರು.

ಚಿಕ್ಕನಾಯ್ಕನಹಳ್ಳಿ, ತಾ॥ ಬರಗೆಹಳ್ಳಿ.—ಈ ಗ್ರಾಮದಲ್ಲಿ ಎ.ಇ. ಸ್ಕೂಲ್ ಮತ್ತು ಹಿಂದೂಸ್ತಾನಿ ಸ್ಕೂಲ್ ಸಹ ಇರುತ್ತೆ. ಹೊಸ ಕಟ್ಟಡದ ವಿಚಾರವಾಗಿ ಗ್ರಾಮಸ್ಥರು ಸರ್ಕಾರಕ್ಕೆ 300 ರೂಪಾಯಿಗಳನ್ನು ಕಟ್ಟಿಸಿಕೊಟ್ಟು ಒಂದು ವರ್ಷವಾಯಿತು. ಈ ವಿಷಯದಲ್ಲಿ ಪರೀಕ್ಷೆಗೆ ಬಂದಿದ್ದ ಅ॥ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ॥ ರಾಮಯ್ಯನವರನ್ನು ಸ್ಕೂಲ್ ಮೆಂಬರುಗಳಾದ ನಾಗಪ್ಪಾಚಾರಿ ವಗೈರೆಯವರು ಕೇಳುವಲ್ಲಿ ಈ ಸಾಲಿನಲ್ಲಿ ಕಟ್ಟಡ ಆಗುತ್ತೆಂದು ಹೇಳಿರುತ್ತಾರೆ. ಕಟ್ಟಡ ಯಾವಾಗ ಆಗುತ್ತೋ ಗೊತ್ತಿಲ್ಲ.—ಈ ಗ್ರಾಮಕ್ಕೆ 4 ಫರ್ಲಾಂಗ್‌ನಲ್ಲಿರುವ ಸಾಲಾಪುರ ಎಂಬ ಗ್ರಾಮದಲ್ಲಿ ಡಿಸೆಂಬರ್ ತಾ. 28 ರಲ್ಲಿ ನಿಂಗನ್ನ ನೆಂಬುವನ ಮನೆಯಲ್ಲಿ ಯಾರೋ ಬೀಗ ಮುರಿದು 200 ರೂಪಾಯಿನವರಿಗೆ ಮಾಲು ತೆಗೆದುಕೊಂಡು ಹೋಗಿರುತ್ತಾರೆ. ಈತ ಪೋಲೀಸಿಗೆ ರಿಪೋರ್ಟು ಕೊಟ್ಟದ್ದರ ಮೇಲೆ ಜಮಾದಾರರು, ದಫೇದಾರರು ಸಹ ಬಂದು ತನಿಖೆಮಾಡುತ್ತಾ ಇದ್ದಾರೆ. ಮತ್ತು ಅದೇ ಗ್ರಾಮದ ಕರಿಸಿದ್ಧ, ಬರಗೆಹಳ್ಳಿ ಗವೇಗೌಡ ಇವರ ಮನೆ ಇಟ್ಟಿ ಸಹ ಮಾಡಿರುತ್ತಾರೆ.

ಚಿಂತಾಮಣಿ.—ಪ್ಲೇಗು ಗಲಾಟೆಯಿಂದ ಜನಗಳು ದಿಕ್ಕಾಪಾಲಾಗಿ ಓಡಿ ಹೋಗಿ ಸುತ್ತುಮುತ್ತು ಹಳ್ಳಿಗಳಿಗೂ, ತಾಲ್ಲೂಕುಗಳಿಗೂ ಸೇರಿರುತ್ತಾರೆ. ಟೌನ್‌ನಲ್ಲಿ ಮನೆಗಳ ಮತ್ತು ಅಂಗಡಿಗಳ ಮೇಲೆ ಉಸ್ತುವಾರಿಯು ಬಹಳ ಚೆನ್ನಾಗಿದೆ. ಹಾಲಿ ಇರತಕ್ಕ ಪೋಲೀಸ್ ಇನ್‌ಸ್ಪೆಕ್ಟರ್ ಮೆ॥ ಸಿರಾಜುದ್ದೀನ್ ರವರು ಮಾಡಿರತಕ್ಕ ಶ್ಲಾಘ್ಯವಾದ ಪೋಲೀಸು ಏರ್ಪಾಡುಗಳಿಂದ ಜನಗಳಿಗೆ ಉಂಟಾಗಿರತಕ್ಕ ಸೌಖ್ಯವನ್ನು ಬರೆಯಲು ಅಸಾಧ್ಯವಾಗಿರುತ್ತೆ.—ತಾಲ್ಲೂಕು ಅಮಲ್ದಾರ್ ಮ॥ ಶಾಂತವೀರಪ್ಪನವರು ಸ್ಯಾನಿಟೇಷನ್ ವಿಚಾರಗಳಲ್ಲಿ ಶ್ರದ್ಧೆಯಿಂದ ಪಟೇಲ್ ಶ್ಯಾನುಭೋಗರ ಮೇಲೆ ತನಿಖೆ ಮತ್ತು ತಿರುವಳಿಗಳನ್ನು ಇಟ್ಟುಕೊಂಡಿದ್ದಾರೆ. ಈ ಕಷ್ಟಕಾಲದಲ್ಲಿ ಇಂಥ ಮಹನೀಯರನ್ನು ನಮ್ಮ ತಾಲ್ಲೂಕಿಗೆ ಕೊಟ್ಟು ಉದ್ಧಾರಮಾಡಿದ್ದಕ್ಕಾಗಿ ನಮ್ಮ ಘನ ಮೈಸೂರು ಸರ್ಕಾರದವರನ್ನು ಎಷ್ಟು ಕೊಂಡಾಡಿದರೂ ಸಾಲದು. ಈಚೆಗೆ ಪ್ಲೇಗು ತಿಡುಬನ್ನು ಹಾಕಿಸಿಕೊಳ್ಳಲು ಡಾಕ್ಟರ್ ಎಂ. ನಾರಾಯಣರಾಯರು ಮಾಡಿದ ಪ್ರಯತ್ನವು ಸಾರ್ಥಕವಾಗಿ ಉತ್ತಮವಾದ ಗುಣವನ್ನು ಕೊಟ್ಟಿರುತ್ತವೆ.—ಬೆಳೆಗಳು ಸಾಧಾರಣವಾಗಿವೆ.

ಕೊರಟಗೆರೆ.—ಈ ಕೊರಟಗೆರೆ ಸಬ್ ತಾಲ್ಲೂಕಿನಲ್ಲಿ ಡೆಪ್ಯುಟಿ ಅಮಲ್ದಾರರಾಗಿದ್ದು ಹಾಲಿ ಗುಬ್ಬಿ ತಾಲ್ಲೂಕಿಗೆ ಅಮಲ್ದಾರಿಗೆ ವರ್ಗವಾಗಿ ಹೋಗಿರುವ ಮೆ॥ ಎಸ್. ಸುಬ್ಬರಾಯರವರು ಈ ಸಬ್ ತಾಲ್ಲೂಕಿಗೆ ದಯಮಾಡಿಸಿ 1½ ವರ್ಷ ಈ ತಾಲ್ಲೂಕಿನಲ್ಲಿ ಕೆಲಸ ಮಾಡಿ ದೇವಬ್ರಾಹ್ಮಣರ ವಿಚಾರದಲ್ಲೂ, ದುಷ್ಟಶಿಕ್ಷಣ ಶಿಷ್ಟಪರಿಪಾಲನವನ್ನು ಚೆನ್ನಾಗಿ ಮಾಡಿ ಬಹಳ ಶ್ರದ್ಧೆಯಿಂದ ಕೆಲಸ ಮಾಡಿದರು. ಮುನಿಸಿಪಲ್‌ಟೌನಿಗೆ ಗ್ರಾಮದ ಫಂಡನ್ನು ಇವರ ಕಾಲದಲ್ಲಿ ಅಡಗಿಸಲ್ಪಟ್ಟಿತು. ಇವರು ವರ್ಗವಾಗಿ ಹೊರಟುಹೋಗುವ ಕಾಲದಲ್ಲಿ ಎಂದರೆ ತಾರೀಖು 10-1-15 ನೇ ಭಾನುವಾರ ಕೊರಟಗೆರೆಯಲ್ಲಿ ಬಹಳ ವಿಜೃಂಭಣೆಯಿಂದ ಔತಣವೂ ಮತ್ತು ಮಧ್ಯಾಹ್ನ 3 ರಿಂದ ಸಾಯಂಕಾಲ 4 ರವರೆಗೂ ಕೊರಟಗೆರೆ ಸುವರ್ಣಮುಖಿ ನದಿಯ ದಡದಲ್ಲಿರುವ ಅಮಲ್ದಾರ್ ಲಿಂಗೇಗೌಡರ ಛತ್ರದಲ್ಲಿ ಟೀಪಾರ್ಟಿಯೂ ನಂತರ 5 ರ ಲಾಗಾಯ್ತು ರಾತ್ರಿ 8 ಘಂಟೆಯವರೆಗೂ ಮೆ॥ ಶಂಕರಪ್ಪನವರ ಅಂಗಡಿ ಮುಂದೆ ಹಾಕಲ್ಪಟ್ಟ ಚಪ್ಪರದಲ್ಲಿ ಸಂಗೀತವೂ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಹಾಲಿ ಈ ಚಪ್ಪರದಲ್ಲಿ ಮೆ॥ ಎಸ್. ಸುಬ್ಬರಾಯರು ಹಾಲಿ ಈ ತಾಲ್ಲೂಕಿಗೆ ವರ್ಗವಾಗಿ ಬಂದಿರುವ ಮೆ॥ ಸಂತಾನವೆಯ್ಯಂಗಾರ್ ರವರೂ ಮ॥ ಪೋ॥ ಸಬ್ ಇನ್‌ಸ್ಪೆಕ್ಟರ್ ಗರುಡಾಚಾರ್ಯರವರೂ ಇವರೇ ಮುಂತಾದ ಆಫೀಸರುಗಳೂ ಜೋಳವನಹಳ್ಳಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಮ॥ ಅಬೀದಲ್ಲಿ ಸಾಹೇಬರು ಇನ್ನೂ ಮುಂತಾದ ಮೆಂಬರುಗಳು ಅನೇಕ ನೌಕರರೂ, ದೊಡ್ಡ ಮನುಷ್ಯರೂ ಸಹಾ ಸಭೆ ಸೇರಿದ್ದರು. ಕೊರಟಗೆರೆ ಕೋಆಪರೇಟಿವ್ ಸೊಸೈಟಿ ಸೆಕ್ರಟರಿಯವರಾದ ಮೆ॥ ವೀರಣ್ಣದೇವರವರು ಸೊಸೈಟಿಯ ಸ್ಪೀಚನ್ನು ಓದಿ ಹೇಳಿದರು. ಹಾಲಿ ವರ್ಗವಾಗಿ ಹೋದ ಮೆ॥ ಸುಬ್ರಾಯರವರು ಸೊಸೈಟಿಯ ವಿಷಯದಲ್ಲಿ ತುಂಬಾ ಶ್ರದ್ಧೆವಹಿಸಿದ್ದಂತೆಯೂ ಉಪನ್ಯಾಸ ಮಾಡಿದರು. ಮೆ॥ ಅಬೀದಲ್ಲಿ ಸಾಹೇಬರೂ ಇದೇ ವಿಷಯದಲ್ಲಿಯೇ ಉಪನ್ಯಾಸ ಮಾಡಿದರು. ಹಾಲಿ ಈ ತಾಲ್ಲೂಕಿಗೆ ವರ್ಗವಾಗಿ ಬಂದಿರುವ ಮೆ॥ ಸಂತಾನವೆಯ್ಯಂಗಾರ್ರವರೂ ಕೂಡ ಇದೇರೀತಿಯಲ್ಲಿ, ಅಂದರೆ ಮೆ॥ ಸುಬ್ಬರಾಯರವರು ಆದರಿಸುತ್ತಿದ್ದಂತೆ ನಮ್ಮಗಳನ್ನೆಲ್ಲಾ ಕಾಪಾಡುತ್ತಾರೆಂದು ನಂಬಿರುತ್ತೇವೆಂಬ ವಿಷಯದಲ್ಲಿ ಮೆ॥ ಅಬೀದಲ್ಲಿ ಸಾಹೇಬರು ಟಿಕ್ಕರ್ ಕೊಟ್ಟರು. ನಂತರ ಪುಷ್ಪ ತಾಂಬೂಲಾದಿಗಳು ಸಭೆ ಸೇರಿದ ಜನಗಳಿಗೆ ಹಂಚಲ್ಪಟ್ಟು ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು

ಅಟೋ ಮೋಹಿನಿ.

ಇದಕ್ಕೆ ಭಂಗಾರದ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಡಿನ್ನ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೀ ಕೆರೋಸೀನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ದಾಖಗುಣಗಳುಳ್ಳ

ಪುಷ್ಪಕೇರ ಕೂದಲೆಣ್ಣೆ

ಯಲ್ಲಿ ಬೇ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[296-3] 177, ಚೈನಾಬಜಾರ್ ರೋಡ್, ಮದರಾಸ್.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳಿಟ್ಟದ್ದರೂ ಹುಳಿ ವಾಸನೆಯಾಗದು. ಬೇಕಾದವರು ವಿ. ಪಿ. ಯಲ್ಲಿ ತರಿಸಬಹುದು. ಕ್ರಯ: ಸೇರಿಗೆ 1 ರೂಪಾಯಿ. ವಿಳಾಸ.—ಎ ಎನ್. ನಂಜುಂಡಯ್ಯ,

[14-1] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ದಿ ಮೈಸೂರು ದಸರಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಯಗ್ಸಿಭಿಷನ್.

ಬೆಂಗಳೂರು ಹೆಂಕೀಸ್ ಟೈಲು ವರ್ಕ್ಸ್ ಷಾಪಿನಲ್ಲಿ ತಯಾರಾದ ಹದಿನೆಂಟು ಮಣ್ಣಿನ ಚಿತ್ರಕೆಲಸವುಳ್ಳ ಹೂವಿನ ಕುಂಡಾಗಳು ಕಮ್ಮಿ ಬೆಲೆಗೆ ಅಂದರೆ 1 ಕ್ಕೆ 6 ರೂಪಾಯಿ ಮೇರೆ ಮೈಸೂರು ದಸರಾ ಯಗ್ಸಿಭಿಷನ್ ಕಟ್ಟಡದಲ್ಲಿ ದೊರೆಯುತ್ತವೆ. ಮೊದಲು ಇವುಗಳಿಗೆ 1 ಕ್ಕೆ 6 ರೂಪಾಯಿನಿಂದ 11 ರೂಪಾಯಿ ವರೆಗೆ ಬೆಲೆ ದಾಖಲಾಗಿತ್ತು. ಇಷ್ಟವುಳ್ಳವರು ಎಗ್ಸಿಭಿಷನ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು.

ಮೈಸೂರು, 6-1-1915. [13-1] ಟಿ. ಹನುಮಂತರಾವ್, ಫಾರ್ ಸೆಕ್ರೆಟರಿ.

ಮಧುರೆ ಚುನ್ನಡಿ ಅಂಚಿನ ಸೀರೆ ಅಪ್ಸಲ್ ರಮಿಂ ರೂ. 2-6-0.

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ದಢೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು. [93-32]

ನೋಟೀಸ್.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್, ಬೆಂಗಳೂರು.

ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಕೌನ್ಸಿಲ್ ಹೇಂಬರಿನ ಉಪಯೋಗಕ್ಕೋಸ್ಕರ ಸ್ವದೇಶದಲ್ಲಿ ತಯಾರಾದ ಅಪ್ಸಲ್ ತರಹೆಯ ಮತ್ತು ಹಸನು ಕೆಲಸಮಾಡಿದ ಜಂಖಾನೆಗಳಿಗಾಗಿ ಮೊಹರುಮಾಡಿದ ಲಕೋಟೆಯಲ್ಲಿ ಟೆಂಡರುಗಳನ್ನು ಕಳುಹಿಸಬಹುದೆಂದು ಸಮಸ್ತ ಜನರಿಗೂ ಈ ಮೂಲಕ ತಿಳಿಸಲಾಗಿದೆ. ಈ ಟೆಂಡರುಗಳನ್ನು 1915 ನೆಯ ಜನವರಿ ಅಖೈರ್ ವರೆಗೆ ತೆಗೆದುಕೊಳ್ಳಲಾಗುವದು. ಹೆಚ್ಚು ತಪಶೀಲುಗಳಿಗೆ 1915 ನೆಯ ಜನವರಿ 7, 14 ಮತ್ತು 21 ನೆಯ ತಾರೀಖುಗಳಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಸಾದ ನೋಟೀಸನ್ನು ನೋಡತಕ್ಕದ್ದು.

ಬೇಕಾದ ಜಂಖಾನೆಗಳ ಅಳತೆ.

(1) ಒಂದು ಜಂಖಾನೆಯ ಉದ್ದ 28 ಅಡಿ; ಅಗಲ 21 ಅಡಿ 3 ಅಂಗುಲ.
(2) ಎರಡನೆಯ ಜಂಖಾನೆಯ ಉದ್ದ 16 ಅಡಿ 7 ಅಂಗುಲ ; ಅಗಲ 21 ಅಡಿ 3 ಅಂಗುಲ.

ಮುಕಾಂ ಬಮೋಜಿಬ್

B. NARAINSWAMIENGAR,

[12-1] ಫಾರ್ ಅಫಿಷಿಯೇಟಿಂಗ್ ಸೆಕ್ರೆಟರಿ,

ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟುಗಳು.

The Mysore Government Security Life and Marriage Assurance Co., Ltd.

HEAD OFFICE: MYSORE.

Capital Rs. 500,000.

(Incorporated under the Mysore Companies' Regulation No. III of 1895.)

Absolute Security. Attractive Schemes. Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

Active and honest agents to canvass insurance and provident businesses and influential local directors to canvass Two-in-one (share policy) and property investment businesses in each and every unrepresented taluk and district of the Mysore province on liberal commission and office allowance. For terms and prospectuses, please apply with your experience in the line to

Mr. M. L. NAGANNAH,

[15-1] MANAGING DIRECTOR,

Life & Marriage Assurance Building,

MYSORE.

"ವೃತ್ತಾಂತ ಪತ್ರಿಕೆ"ಯ ಕ್ಯಾಲೆಂಡರು.

1915 ನೇ ವರುಷದ ಕ್ಯಾಲೆಂಡರನ್ನು ತಯಾರ್ಮಾಡಿ ನಮ್ಮ ಖಾಯಂ ಚಂದಾದಾರರಿಗೆಲ್ಲಾ ಕಳುಹಿಸಿದೆವು. ಇದರಲ್ಲಿ ಅಡಗಿರುವ ನೇತ್ರಾನಂದಕರವಾದ ಚಿತ್ರಗಳ್ಯಾವವೆಂದರೆ—(1) ಬೆಂಗಳೂರಿನಲ್ಲಿ ಅಲಸೂರುಪೇಟೆ ದೇವಾಲಯ, (2) ಗುಬ್ಬಿಯ ಹರ್ಡ್ಸ್ ಪಾಳ್ಯ, (3) ನಾಮಧಾರಿ ವಧುವರರು, (4) ಹೊಳೆನರಸಿಪುರ, (5) ಜರ್ಮನಿಯವರ ಸ್ವಾಧೀನದಲ್ಲಿರುವ ಬೆಲ್ಜಿಯಮ್ ದೇಶದ ಬ್ರಸೆಲ್ಸ್ ರಾಜಧಾನಿಯ ಟೌನ್ ಹಾಲ್. ಇದಲ್ಲದೆ ಇದರಲ್ಲಿ ಮೈಸೂರು ಸರ್ಕಾರಿ ರಜಾ ದಿನಗಳೂ, 1915 ನೇ ವರುಷದಲ್ಲಿ ಬರುವ ವಿಶೇಷ ದಿನಗಳೂ ಪ್ರಕಟವಾಗಿವೆ. ಜನವರಿಯಲ್ಲಿ ಹೊಸದಾಗಿ ಖಾಯಂ ಚಂದಾದಾರರಾಗತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುತ್ತೇವೆ. ಚಂದಾದಾರರಲ್ಲದವರಿಗೆ ಇದರ ಕ್ರಯ 6 ಕಾಸು.

ಕೆಲವು ಪ್ರತಿಗಳು ಮಾತ್ರ ಉಳಿದಿರುವುದರಿಂದ ವಾಚಕರು ಬೇಗನೆ ಚಂದಾ ಕಟ್ಟಿ ಈ ಬಹುಮಾನವನ್ನು ಪಡೆಯುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 3-0-0. ಬಾಲಪುಷ್ಟಿ ಕರಣಗುಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೇಳಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-9] 20, ಚೀನಾಬಜಾರು ರೋಡು, ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೇಸ್ ಬೀದಿ,

[172-23] ಬೊಂಬಾಯಿ ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಹೊಸ ಕಟ್ಟಡಗಳ ಪ್ರವೇಶೋತ್ಸವಗಳು.

ಮಂಗಳೂರು ಜಿಲ್ಲಾ ಟೋಕೂರು ಸ್ಕೂಲಿನ ಪ್ರವೇಶೋತ್ಸವ.

ಮಂಗಳೂರು ಜಿಲ್ಲಾ ಟೋಕೂರು ಗ್ರಾಮದಲ್ಲಿ ಬೋರ್ಡಿನಿಂದ ಕಟ್ಟಲ್ಪಟ್ಟಿರುವ ಹೊಸ ಹಿಂದುಸ್ಥಾನಿ ಶಾಲೆ ಕಟ್ಟೋಣದಲ್ಲಿ ಇದೇ ಕಳೆದ ಶುಕ್ರವಾರ ತಾ. 1ನೇ ಅಪರಾಹ್ನ ಗಂಟೆ 3ರ ಸಮಯಕ್ಕೆ ಬಹಳ ವಿಜೃಂಭಣೆಯಿಂದ ಮಂಗಳೂರು ತಾಲ್ಲೂಕು ಬೋರ್ಡು ಪ್ರೆಸಿಡೆಂಟ್ ಮ|| ಎಸ್. ರಘುನಾಥಯ್ಯ ಅವರ್ಗಳವರು ಮತ್ತು ದಕ್ಷಿಣ ಕನ್ನಡಾ ಜಿಲ್ಲಾ ಶಾಲೆಗಳ ಅ|| ಇನ್ಸ್ಪೆಕ್ಟರವರಾದ ರಾಯಬಹದೂರ್ ಎಂ. ರಘುನಾಥರಾವು ಅವರ್ಗಳು, ಮಹಮ್ಮದಿ ಶಾಲೆಗಳ ಸೂಪರ್‌ವೈಜರ್ ಹ|| ಹಾಜಿ ಕಾಲಿಬ್ ಅಲಿ ಸಾಹೇಬರವರು ಕೂಡ ಹಾಜರು ಇದ್ದು ಪ್ರವಿಷ್ಟನೆಮಾಯಿತು. ಜನರ ಸಮೂಹ ಸುಮಾರು 600ರ ವರೆಗೆ ಇರುವದು. ವಾಲಗ, ಗರ್ನಾಲ್‌ಕದಿನೆ ವಗೈರೆಯ ಗೌಜಿಯು ಹೆಚ್ಚಿನ ಉಲ್ಲಾಸವ ಚಂದಪಡಿಸಿತು. ಪ್ರೆಸಿಡೆಂಟ್ ಮತ್ತು ಅ|| ಇನ್ಸ್ಪೆಕ್ಟರವರಿಗೆ ಊರ ಗೃಹಸ್ಥರು ಶಾಲೆ ಮಾಸ್ತರು ಶಾಲೆ ಮಕ್ಕಳು ವಗೈರೆ ಜನರು ವಾಲಗ ಸನೋತ ಗರ್ನಾಲ್ ಇತ್ಯಾದಿ ಹಾರಿಸುತ್ತಾ ಹಳೆ ಅಂಗಡಿ ಬೋರ್ಡು ಹಿಂದುಸ್ಥಾನಿ ಶಾಲೆಯ ಬಳಿಯಿಂದ ಎದುರುಗೊಂಡು ಮೆರವಣಿಗೆಯಿಂದ ಸದರಿ ಹೊಸ ಕಟ್ಟೋಣದ ವರೆಗೆ ಅಪರಾಹ್ನ 2½ ಗಂಟೆ ಸಮಯಕ್ಕೆ ಕರೆತಂದರು. ಆಗ್ಗೆ ಕದಿನೆಗಳು ಬಿಡಿಸಿ ಶಾಲಾ ಮಕ್ಕಳಿಂದ ಶುಭಗೀತ ಹಾಡಿಸಿ, ಅ|| ಇನ್ಸ್ಪೆಕ್ಟರವರಿಗೆ ಪ್ರೆಸಿಡೆಂಟರವರ ಅಪ್ಪಣೆ ಮತ್ತು ಸೂಪರ್‌ವೈಜರ್ ವ ಹೆಡ್ಮಾಸ್ಟರ್ ಮ|| ಅಬ್ದುಲ್ ಲತೀಫ್ ಅಸದಿ ಸಾಹೇಬರವರ ಕೋರಿಕೆಯ ಪ್ರಕಾರ ಸಭಾಧ್ಯಕ್ಷದ ಸ್ಥಾನದ ಮೇಲೆ ಅಲಂಕರಿಸಿದರು. ನಂತರ ಸೂಪರ್‌ವೈಜರವರು ಹೆಡ್ಮಾಸ್ಟರು ಮತ್ತು ಪಾವಂಜೆ ಪಟೇಲ್ ಮೆ|| ಜಯಾವೃದ್ಧಿ ಶೆಟ್ಟಿ ಶಾಹಿಬ್ ಅಸದಿಯವರು ಅಧ್ಯಕ್ಷರ ವಿಷಯದಲ್ಲಿ ಮನಃಸಂತೋಷದ ಕೆಲವು ವಾಕ್ಯಗಳನ್ನು ಹಿಂದುಸ್ಥಾನಿ ಭಾಷೆಯಲ್ಲಿ ಹೇಳುವವರಾದರು. ಬಳಿಕ ಶಾಲೆ ಮಕ್ಕಳು ನಮ್ಮ ಮಹಾರಾಜ ವ ರಾಣಿಯವರ ಕುರಿತು ಸುಸ್ವರದಿಂದ ಗೀತಗಳನ್ನು ಹಿಂದುಸ್ಥಾನಿ ಭಾಷೆಯಲ್ಲಿ ಚಲೋ ರೀತಿಯಿಂದ ಹಾಡಿ ಸಭಿಕರಿಗೆ ಆನಂದಗೊಳಿಸಿದರು. ಇದರ ನಂತರ ಪ್ರೆಸಿಡೆಂಟರವರು ಶಾಲೆ ಕಟ್ಟೋಣದ ಬೀಗವನ್ನು ಸ್ವಹಸ್ತದಿಂದ ಹೆಡ್ಮಾಸ್ಟರಿಗೆ ಒಪ್ಪಿಸಿ ಶಾಲೆಯ ಬಾಗಿಲನ್ನು ತೆರೆಸಿ ಸಭಿಕರೊಡನೆ ಒಳಗೆ ಪ್ರವೇಶಿಸಿದರು. ಅ|| ಇನ್ಸ್ಪೆಕ್ಟರವರು ಕಟ್ಟೋಣದ ಎದುರು ಹಾಕಿದ ಚಪ್ಪರದಲ್ಲಿ ವಿದ್ಯಮಾನದ ಕುರಿತು ಹಿಂದುಸ್ಥಾನಿ ಜಬಾನಿ ಮತ್ತು ಪ್ರೆಸಿಡೆಂಟರವರು ಕಟ್ಟೋಣದೊಳಗೆ ಇಂಗ್ಲಿಷು ಭಾಷೆಯಲ್ಲಿ ಹಲವು ಸುಬೋಧನೆಗಳು ಹೇಳಿ ಕೂಡಿದ ಜನರಿಗೆಲ್ಲಾ ಸಂತೋಷಪಡಿಸಿದರು. ಇಂಗ್ಲಿಷಿನ ತರ್ಜುಮೆ ಸೂಪರ್‌ವೈಜರವರು ಚೆನ್ನಾಗಿ ವಿವರಿಸಿ ಹೇಳಿದರು. ಆಗ್ಗೆ ಕದಿನೆಗಳು ಬಿಡಲಾದವು. ಕೂಡಿದ ಮಹನೀಯರು ಸಂತೋಷಗೊಂಡು ಸದರಿ ಅಧಿಕಾರಿಗಳಿಗೆ ವಂದಿಸುವವರಾದರು. ನಂತರ ಬಾಳೆಹಣ್ಣು, ಸಕ್ಕರೆ, ಶಿಯಾಳಿ, ಅವಲಕ್ಕಿ ಬೆಲ್ಲ, ಹೂವು, ಲವಂಡರ್, ಅತ್ತರು, ಪಾನ್ ಸುಪಾರಿ ವಗೈರೆಯಿಂದ ಹೆಡ್ಮಾಸ್ಟರು ಜಮೆಯಾಗಿದ್ದ ಜನರೆಲ್ಲರಿಗೆ ಹಂಚಿಸಿ ಬಹಳ ಆನಂದದಿಂದ ಈ ಪ್ರಸ್ತವನ್ನು ಅಚ್ಚುಗಾಣಿಸಿದರು. ಪ್ರೆಸಿಡೆಂಟರ ವ ಇನ್ಸ್ಪೆಕ್ಟರ್ ಮತ್ತು ಸೂಪರ್‌ವೈಜರವರಿಗೆ ಹೆಡ್ಮಾಸ್ಟರು ಏಲಕ್ಕಿ ಹಾರು ವ ಹೂವಿನ ಸರಗಳು ತನ್ನ ಕೈಯಿಂದ ಕೊತ್ತಿಗೆಗೆ ಹಾಕಿ ಅಮಿತ ಖುಷಿ ಪಡಿಸಿದರು. ಸ್ಕೂಲ್ ಕಮಿಟಿ ಮೆಂಬರ್ ಮ|| ಮುಲ್ಕಿ ಮುಕುಂದರಾಯರವರು ಸಹ ಆಚ್ಕೆರು ಸಮಯಕ್ಕೆ ದಯಮಾಡಿ ಹೆಡ್ಮಾಸ್ಟರಿಂದ ಸತ್ಕಾರವನ್ನು ಹೊಂದುವವರಾದರು. ಬೋರ್ಡಿನವರು ಪ್ರಜೆಗಳ ಮೇಲೆ ದಯದೃಷ್ಟಿ ಇಟ್ಟು ಹಳೆ ಅಂಗಡಿ ಮಾರ್ಕೆಟ್ಟಿನ ಎದುರಿನಿಂದ ಒಂದು ರಾಜಮಾರ್ಗವನ್ನು ಸದರಿ ಟೋಕೂರು ಗ್ರಾಮದ ಶಾಲೆ ವಗೈರೆಗೆ ಕೊಂಡುಹೋದರೆ ಸರಕಾರಿ ಉದ್ಯೋಗಸ್ಥರಿಗೂ, ಶಾಲೆ ಮಕ್ಕಳಿಗೂ, ಅಲ್ಲಿರುವ ಸುಬ್ರಾಯ ದೇವಸ್ಥಾನಕ್ಕೆ ವ ಜುಮ್ಮಾಮಸೀದಿಗೆ ಕೂಡಾ ಜನರಿಗೆ ಆಗಾಗ್ಗೆ ಹೋಗುವರೆ ಬಹಳ ಸುಲಭವಾಗುವದಲ್ಲದೆ ಈ ಸತ್ಕಾರ್ಯದ ನಮ್ಮ ಇಂಗ್ಲಿಷು ಗವರ್ನಮೆಂಟಿನವರ ಮಹೋಪಕಾರವನ್ನು ಸ್ಮರಿಸುತ್ತಾ ಇರುವ ಸಂಗತಿಯಾಗುವದು.

ಒಬ್ಬ ಬಾತ್ಮೀದಾರ.

ತುರುವೇಕೆರೆ ವಾಚಕಶಾಲಾ ಪ್ರವೇಶೋತ್ಸವ.

ಈ ತುರುವೇಕೆರೆಯಲ್ಲಿ ಒಂದು ವಾಚಕಶಾಲೆಯನ್ನು ಸ್ಥಾಪಿಸಬೇಕೆಂಬ ಕುತೂಹಲವು ಬಹುಕಾಲದಿಂದಲೂ ಈ ಪುರವಾಸಿಗಳಿಗಿದ್ದು ತಕ್ಕ ಕಟ್ಟಡವನ್ನು ಸಂಪಾದಿಸುವ ವಿಷಯದಲ್ಲಿ ಮಾಡಿದ ನಾನಾ ಪ್ರಯತ್ನಗಳು ಸಫಲವಾಗದೆ, ಹೊಸದಾಗಿಯೇ ಒಂದು ಕಟ್ಟಡವನ್ನು ಕಟ್ಟಿಸಿ ಆ ಕಟ್ಟಡವನ್ನು ವಾಚಕಶಾಲೆ ಸಲ್ಲದೆ ಕೋಆಪರೇಟಿವ್ ಸೊಸೈಟಿ ಮೀಟಿಂಗ್, ತಾಲ್ಲೂಕು ಪ್ರೋಗ್ರೆಸ್ ಕಮಿಟಿ, ಉಪನ್ಯಾಸಕೂಟ ವಗೈರೆಗಳಿಗಾಗಿ ಉಪಯೋಗಿಸಿಕೊಳ್ಳಬೇಕೆಂದು ಸ್ಥಳ ಹುಡುಕಾವಣೆ ಮಾಡುತ್ತಿರುವಾಗ ಪೇಟೆಗೂ ಊರಿಗೂ ಮಧ್ಯೆ ಗೌರ್ನಮೆಂಟು ಕಟ್ಟಡಗಳ ಸಮೀಪದಲ್ಲಿ ಅತ್ಯುತ್ತಮವಾದ ಸ್ಥಳವು ಸಿಕ್ಕಿತು. ಆ ಸ್ಥಳದಲ್ಲಿ ಪುರಪ್ರಮುಖರ ಮತ್ತು ಈ ತಾಲ್ಲೂಕು ಗ್ರಾಮಸ್ಥರಿಂದ ಆದ ದ್ರವ್ಯ ಮತ್ತು ಸಾಮಾನಿನ ರೂಪವಾದ ಸಹಾಯವನ್ನು ಹೊಂದಿ, ಕಳೆದ ಏಪ್ರಿಲ್ ಆರಂಭದಲ್ಲಿ ಪ್ರಾರಂಭಿಸಿ ಆರು ತಿಂಗಳೊಳಗಾಗಿ ಕಟ್ಟಡವು ಪೂರೈಸಲ್ಪಟ್ಟಿತು. ಈ ಮನೋಹರವಾದ ಕಟ್ಟಡವನ್ನು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಪ್ರತಿಷ್ಠಿಸಬೇಕೆಂಬುದಾಗಿ ಉಂಟಾದ ಅಭಿಪ್ರಾಯಾನುಸಾರ ಅವರನ್ನು ಪ್ರಾರ್ಥಿಸಿಕೊಳ್ಳಲು ಅವರು ಈ ಪುರವಾಸಿಗಳ ಪ್ರಾರ್ಥನೆಯನ್ನಂಗೀಕರಿಸಿ ತಾ. 2ನೇ ಶನಿವಾರ 11 ಘಂಟೆಗೆ ಈ ಊರಿಗೆ ದಯಮಾಡಿಸಿದರು. ರಿಸೆಪ್ಷನ್ ಕಮಿಟಿ ಸೆಕ್ರೆಟರಿ ಮ|| ಬಿ. ತಿಮ್ಮಣ್ಣನವರಿಂದ ಕಳುಹಿಸಲ್ಪಟ್ಟಿದ್ದ ಆಹ್ವಾನ ಪತ್ರಿಕೆಯಂತೆ ತಿಪಟೂರಿನ ಸಾಹುಕಾರ್ ಮ|| ಕೊಟ್ಟೂರಪ್ಪನವರೂ, ಮ|| ಬಸವಪ್ಪನವರೂ, ತುಮಕೂರು ರಾಯರುಗಳೂ, ಈ ತಾಲ್ಲೂಕಿನ ಮತ್ತು ಪುರ ಪ್ರಮುಖರೂ, ಸ್ಕೂಲು ಬಾಲಕಬಾಲಕಿಯರೂ, ಕಟ್ಟಡದ ಮುಂದುಗಡೆ ಹಾಕಿದ್ದ ಚಪ್ಪರದಲ್ಲಿ ಸೇರಿದ್ದರು. ಪುರಪ್ರಮುಖರೇ ಮೊದಲಾದವರು ಬಾಜಾ ಬಜಂತ್ರಿಯೊಡನೆ ನಮ್ಮ ಡೆಪ್ಯುಟಿ ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರನ್ನು ಗುಬ್ಬಿ ಸಬ್ ಡಿವಿಷನ್ ಆಫೀಸರವರು, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು, ಎಕ್ಸೈಜ್ ಸೂಪರಿಂಟೆಂಡೆಂಟರವರೂ ಮತ್ತು ಕೋಆಪರೇಟಿವ್ ಸೊಸೈಟಿ ಆಫೀಸರವರು ಇವರುಗಳೊಂದಿಗೆ ಸಭೆಗೆ ಕರೆತರಲು ಪ್ರಮುಖರ ಇಷ್ಟಾನುಸಾರ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಬಾಲಕಿಯರು ದೇವರ ಸ್ತೋತ್ರ ಮಾಡಿದ ನಂತರ, ಭಕ್ತಿದ ವಿಷಯವಾಗಿ ಮೂವರು ಬಾಲಕಿಯರು ಸ್ವಾರಸ್ಯವಾದ ಸಂಭಾಷಣೆಯನ್ನು ಮಾಡಿದರು. ಎ. ವಿ. ಸ್ಕೂಲು ಮೊದಲಿನ ಮತ್ತು ಈಗಿನ ವಿದ್ಯಾರ್ಥಿಗಳು ಷೇಕ್ಸ್ಪಿಯರ್ ಕವಿಯಿಂದ ರಚಿಸಲ್ಪಟ್ಟ "ಕಿಂಗ್ ಜಾನ್" ನಾಟಕದ ಒಂದು ಭಾಗವನ್ನು ಅಭಿನಯಿಸಿದರು. ವಾಚಕಶಾಲಾ ರಿಪೋರ್ಟು ಇಂಗ್ಲಿಷ್, ಕನ್ನಡ ಮತ್ತು ಹಿಂದುಸ್ತಾನಿಯಲ್ಲಿ ಮ|| ವಿ. ರಾಮಚಂದ್ರರಾಯರವರೂ, ಡಿ. ಸೀತಾರಾಮಯ್ಯನವರೂ ಮತ್ತು ಅಬ್ದುಲ್ ರಸೀದ್ ಖಾನ್‌ರವರು ಇವರುಗಳಿಂದ ಓದಲ್ಪಟ್ಟಿತು. ಸಭಾಧ್ಯಕ್ಷರು ಈ ವಾಚಕಶಾಲಾ ವಿಷಯದಲ್ಲಿ ಈ ಪುರವಾಸಿಗಳು ಇಷ್ಟು ಶ್ರಮವನ್ನು ವಹಿಸಿ ಅಲ್ಪಕಾಲದಲ್ಲಿ ಮನೋಹರವಾದ ಕಟ್ಟಡ ಪೂರೈಸಿದ್ದು, ನಮ್ಮ ಡೆಪ್ಯುಟಿ ಅಮಲ್ದಾರ್ರ ಕಾಲದಲ್ಲಿ ಈ ಶ್ರೇಷ್ಠವಾದ ಕೆಲಸವು ನಡೆದು ಅವರ ಹೆಸರು ಈ ಊರಿನಲ್ಲಿ ಚಿರಸ್ಮರಣೀಯವಾಗುವಂತೆ ಮಾಡಿದ್ದೂ ಬಹಳ ಸಂತೋಷ ಮತ್ತು ಸ್ತುತ್ಯರ್ಹವಾಗಿರುವೆಂಬುದೇ ಮೊದಲಾದ ತಮ್ಮ ಭಾಷಣದೊಂದಿಗೆ ಕಟ್ಟಡ ಪ್ರವೇಶವನ್ನು ಮಾಡಿದರು. ಗರ್ಲ್ಸ್ ಸ್ಕೂಲ್ ಸಂಗೀತ ವಿದ್ವಾಂಸರಿಂದ ಮನೋಹರವಾದ ಸಂಗೀತವು ನಡೆಯಿಸಲ್ಪಟ್ಟಿತು. ಸಭಾಧ್ಯಕ್ಷರಿಗೂ, ಸಭಿಕರಿಗೂ ಹಾರ ತುರಾಯಿಗಳು ಒಪ್ಪಿಸಿದ ನಂತರ ಎ. ವಿ. ಸ್ಕೂಲ್ ಕಟ್ಟಡದಲ್ಲೂ ಇತರೇ ಸ್ಥಳಗಳಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿ ಫಲಾಹಾರಾದಿಗಳು ನಡೆಯಿತು. ಇಂಥ ಮಹೋತ್ಸವಕಾಲಗಳಲ್ಲಿ ಬಾಲಕಬಾಲಕಿಯರಿಗೆ ಸಂತೋಷವನ್ನುಂಟುಮಾಡುವ ಮ|| ಸಾಹುಕಾರ್ ಭದ್ರಶೆಟ್ಟರವರು ಮಾಮೂಲು ಪ್ರಕಾರ ಸ್ವಂತ ಖರ್ಚಿನಿಂದ ಮಿಠಾಯಿಯನ್ನು ಹಂಚಿದರು. ಈ ಕಟ್ಟಡಕ್ಕೆ ಹೆಚ್ಚು ದ್ರವ್ಯ ಸಹಾಯವನ್ನಿತ್ತ ಹ|| ಮಂಡಿ ಉಸ್ಮಾನ್ ಸಾಹೇಬರವರು, ಮರಗೆಲಸದಲ್ಲಿ ಸಹಾಯ ಮಾಡಿದ ಪಟೇಲ್ ಮ|| ನಾಗಪ್ಪಯ್ಯನವರು ಮತ್ತು ಕಟ್ಟಡ ಪ್ರಾರಂಭದಿಂದ ಪೂರೈಸುವವರೆಗೂ ತಮ್ಮ ನಾನಾ ಕೆಲಸಗಳೊಂದಿಗೆ ತಮ್ಮ ಬೆಲೆಯುಳ್ಳ ಕಾಲವನ್ನು ವಿನಿಯೋಗಿಸಿದ ಮ|| ಕ್ಯಾಪ್ಟನ್ ಭೋಗ್ ರಂಗಣ್ಣನವರು. ಇವರುಗಳ ವಿಷಯದಲ್ಲಿ ಕೃತಜ್ಞತೆಯನ್ನು ತೋರಿಸಬೇಕಾಗಿರುವುದು. ಈ ಎಲ್ಲಾ ಕೆಲಸಕ್ಕೂ ಮುಂದಾಳುಗಳಾಗಿ ಕೇವಲ ಸಹಾಯಮಾಡಿದ ನಮ್ಮ ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸೀತಾರಾಮಯ್ಯನವರಿಗೆ ಅತ್ಯಂತ ವಿನಯದಿಂದ ವಂದನೆಯು ಸಮರ್ಪಿಸಲ್ಪಡುತ್ತದೆ.

ಪುರವಾಸಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿರುಬಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ಕಳುಹುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-10]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೩. ೬. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಸುಖಕರ, ಆನಂದ, ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.



(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು. (2) ಹಾಡುವವರಿಗೆ ವರಪ್ರಸಾದವಾದದ್ದು. (3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿ ಮಾಡುತ್ತದೆ. (4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ.

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇಟ್ಟಿರಬೇಕೆಂದು ನೀವೇ ನಿಶ್ಚಯಿಸುವಿರಿ. [73-44]

ಮುತ್ತಿನಂತಿರುವ	45	ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ	2 ಆಣೆ.
,,	95	,, ,, ,, ,,	4 ,,
,,	200	,, ,, ,, ,,	7 ,,
,,	200	,, ಸುಂದರವಾದ ಟಿನ್ ಡಬ್ಬಾ	9 ,,
,,	80	,, ,, ,, ,,	4 ,,
,,	100	,, ಬಾಟ್ಲಿಯಲ್ಲಿ	4½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಜಿ. ಎಂ. ಕಾಡಪ್ಪ ಅಂಡ್ ಸನ್ಸ್,
ಜನರಲ್ ಮರ್ಚೆಂಟ್ಸ್, ಶಿವಮೊಗ್ಗೆ.

ಅರ್ಥಸಾಧಕ ಪತ್ರಿಕೆ.

ಇದು ಮೈಸೂರು ಸಂಪದಭ್ಯುದಯ ಸಭೆಯಿಂದ ಪರಿಪೋಷಿತವಾದ ಸಚಿತ್ರ ಮಾಸಪತ್ರಿಕೆ; ಇಂಗ್ಲಿಷ್ ಕನ್ನಡ—ಈ ಎರಡು ಭಾಷೆಗಳಲ್ಲಿಯೂ ಬೇರೆಬೇರೆ ಮುದ್ರಿತವಾಗುವುದು. ಪ್ರತಿಯೊಂದರಲ್ಲಿಯೂ ಕ್ರೌನ್ ಕಾಲು ಗಜದ 40 ಪುಟಗಳಿರುವುವು. ಇದರ ಮೊದಲನೆಯ ಸಂಚಿಕೆಯು 1916ನೆಯ ಜನವರಿಯಲ್ಲಿ ಹೊರಡುತ್ತದೆ. ಪತ್ರಿಕೆಯಲ್ಲಿ ಸಂಪತ್ಸಾಧಕ ವಿಷಯಗಳೇ ಪ್ರಕಟವಾಗುವುವು. ಮುಖ್ಯವಾದ ಸಂಗತಿಗಳು ಯಾವುವೆಂದರೆ:—

(1) ಸಂಪಾದಕೀಯ ಟಿಪ್ಪಣಗಳು.—ಈ ಕಲಮಿನಲ್ಲಿ ಪತ್ರಿಕಾಕರ್ತರಿಂದ ವಿವಿಧ ವಿಷಯಗಳು ಚರ್ಚಿಸಲ್ಪಡುವುವು.

(2) ಸ್ವತಂತ್ರ ಲೇಖನಗಳು.—ಈ ಲೇಖನಗಳನ್ನು, ಆರ್ಥಿಕ (ಸಂಪದಭಿವರ್ಧಕ) ವಿಷಯಗಳಲ್ಲಿ ಪ್ರತ್ಯಕ್ಷವಾದ ಅನುಭವವುಳ್ಳ ಲೇಖಕರು, ನಮ್ಮ ದೇಶಕಾಲಸ್ಥಿತಿಗಳಿಗೆ ಅನುಗುಣವಾಗಿರುವಂತೆ ಬರೆಯುವರು.

(3) (i) ಕೈಗಾರಿಕೆ ಮತ್ತು ವಾಣಿಜ್ಯ.—ಇವುಗಳ ಈಗಿನ ಸ್ಥಿತಿ, ತಿದ್ದುಪಾಟಿನ ಕ್ರಮಗಳು, ವ್ಯಾಪಾರದ ಮಾರ್ಗಗಳು, ಮತ್ತು "ಜಾಯಿಂಟ್ ಸ್ಟಾಕ್" ಎಂಬ ಸಂಯುಕ್ತ ಮೂಲಧನ ಸಂಘದ ಆಡಳಿತ—ಇವೇ ಮೊದಲಾದ ವಿಷಯಗಳು. (ii) ವ್ಯವಸಾಯ.—ಇದಕ್ಕೆ ಅನ್ವಯಿಸುವ ನವೀನ ವಿಷಯಗಳು, ಮತ್ತೂ ಕೃಷಿವಿದ್ಯೆ ಮೊದಲಾದ ಸಂಗತಿಗಳು. (iii) ವಿದ್ಯಾಭ್ಯಾಸ.—ಇದರಲ್ಲಿ ವಿದ್ಯಾಭ್ಯಾಸಕ್ರಮ, ಪುರೋವೃದ್ಧಿ—ಇವೇ ಮುಂತಾದ ವಿಚಾರಗಳು. (iv) ಪರಸ್ಪರ ಸಹಾಯ, ಮತ್ತು ಬ್ಯಾಂಕುಗಳಲ್ಲಿ ನಡೆಯುವ ಲೇವಾದೇವಿಗಳ ನಿರ್ವಾಹ. (v) ಮ್ಯೂನಿಸಿಪಲ್ ಬೋರ್ಡುಗಳಿಗೆ ಸಂಬಂಧಪಟ್ಟ ಆಯಾ ಸ್ಥಿತಿ ವಿಶೇಷಗಳು ಮತ್ತು ಜನಸಾಮಗ್ರಿಗಳ ಮುಖ್ಯವಾದ ಸಂಖ್ಯಾ ವಿವರಣೆ.

ಇವಲ್ಲದೆ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಸಾಧಕವಾದ (1) ಸಾಮಾಜಿಕ ವಿಚಾರ.—ವಿತಂಡ ವಾದಕ್ಕೆ ಆಸ್ಪದವಿಲ್ಲದ ಲೋಕಾಚಾರ ವಿಷಯಗಳನ್ನು ಮಾತ್ರ ಇದರಲ್ಲಿ ಸೇರಿಸಲಾಗುವುದು. (2) ನೈರ್ಮಲ್ಯ ಮತ್ತು ಆರೋಗ್ಯ.—ಮುಖ್ಯವಾಗಿ ಗ್ರಾಮಾಂತರಗಳ ಸ್ಥಿತಿಗಳನ್ನೂ ಆರೋಗ್ಯಾಭಿವೃದ್ಧಿ ಮಾರ್ಗಗಳನ್ನೂ ಕುರಿತ ಲೇಖನಗಳು ಇದರಲ್ಲಿ ಸೇರುವುವು.

"ಡಿಸ್ಟ್ರಿಕ್ಟು ಮತ್ತು ತಾಲ್ಲೂಕು" ಎಂಬ ಪ್ರಕರಣದ ಕೆಳಗೆ ದೇಶದ ಸಂಪದಭಿವೃದ್ಧಿಗಾಗಿ ಮಾಡುವ ಪ್ರಯತ್ನಗಳು, ತತ್ಸಂಬಂಧ ವೃತ್ತಾಂತಗಳು, ಕಾಲಸ್ಥಿತಿಗಳು,— ಇವೇ ಮುಂತಾದ ವಿಷಯಗಳನ್ನು ಪ್ರಕಟಿಸಲಾಗುವುದು.

ಅರ್ಥ ವಿಚಾರಕ್ಕೆ ಸಂಬಂಧಪಡುವ ಗ್ರಂಥಗಳನ್ನು ಅಂಗೀಕರಿಸಿ, ಅವುಗಳ ಗುಣದೋಷ ವಿಮರ್ಶೆಯನ್ನು ಮಾಡಲಾಗುವುದು. ಇಂತಹ ವಿಮರ್ಶೆಯು ತಕ್ಕ ಪಂಡಿತರಿಂದ ಮಾಡಲ್ಪಡುವುದು. ಇದಲ್ಲದೆ ಈ ಪತ್ರಿಕೆಯ ಉದ್ದೇಶಕ್ಕೆ ತಕ್ಕಂತೆ, ಹಿಂದು ದೇಶದ ಮತ್ತು ಅನ್ಯದೇಶದ ವರ್ತಮಾನ ಪತ್ರಿಕೆಗಳಿಂದ ಸಮಯೋಚಿತವಾಗಿ ಆರಿಸಿ ತೆಗೆದ ಲೇಖನಗಳನ್ನು ಕೂಡ ಪ್ರಕಟಿಸಲಾಗುವುದು. ಕನ್ನಡದ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಕೆಲವು ಸ್ವಕಲ್ಪಿತ; ಕೆಲವು ಇಂಗ್ಲಿಷ್ ಪತ್ರಿಕೆಯನ್ನು ಅನುಸರಿಸಿ ಬರೆದ ಭಾಷಾಂತರ.

ಪತ್ರಿಕೆಯಲ್ಲಿ ರಾಜಕೀಯ ವಿಷಯಗಳನ್ನು ಚರ್ಚಿಸುವುದಿಲ್ಲ. ಈ ಪತ್ರಿಕೆಯ ಉದ್ದೇಶಕ್ಕೊಳಪಟ್ಟ ವಿಷಯಗಳ ಮೇಲೆ ಬರೆದುಬರುವ ಸ್ವತಂತ್ರ ಲೇಖನಗಳು ಆದರಿಸಲ್ಪಡುವುವು. ಹಾಗೆ ಬಂದುವುಗಳಲ್ಲಿ ಅನುಮೋದಿತವಾದ ಲೇಖನಗಳಿಗೆ ಪ್ರಕಟನಾನಂತರ ತಕ್ಕ ದ್ರವ್ಯಬಹುಮಾನವು ದೊರೆಯುವುದು. ಸಂಪದಭ್ಯುದಯ ವಿಷಯಗಳ ಮೇಲೆ ವಿವಾದಾಸ್ಪದವಿಲ್ಲದ ಲೇಖನಗಳನ್ನು ಸರ್ಕಾರದ ಉದ್ಯೋಗಸ್ಥರು ಕೂಡ ಈ ಪತ್ರಿಕೆಗೆ ಬರೆದು ಕಳುಹಿಸಬಹುದೆಂದು ಗವರ್ನಮೆಂಟಿನವರ ಅಪ್ಪಣೆಯಾಗಿದೆ.

ಸಾಂಪತ್ತಿಕ ವಿಷಯಗಳನ್ನು ಕುರಿತ ಪತ್ರವ್ಯವಹಾರಗಳಿಗೆ ಅವಕಾಶವುಂಟು. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ಸರ್ಕಾರದವರು ಜವಾಬ್ದಾರರಲ್ಲ.

ಸಂಸ್ಥಾನದಲ್ಲಿರುವವರಿಗೆ ಇಂಗ್ಲಿಷ್ ಪತ್ರಿಕೆಯ

ವಾರ್ಷಿಕ ಚಂದಾ	ರೂ. 3—0—0	ಅಂಚೆವೆಚ್ಚ ಉಚಿತ
ಕನ್ನಡ ಪತ್ರಿಕೆಯ ವಾರ್ಷಿಕ ಚಂದಾ	,, 2—0—0	
ಹೊರಗಿರುವವರಿಗೆ ಇಂಗ್ಲಿಷ್ ಪತ್ರಿಕೆಯ ಚಂದಾ ,,	4—0—0	ಅಂಚೆವೆಚ್ಚ ಸೇರಿ
,, ಕನ್ನಡ ,, ,, ,,	3—0—0	

ಅರ್ಥಸಾಧಕ ವಿಷಯಗಳಿಗೆ ಸಂಬಂಧಪಡುವ ವ್ಯಾಪಾರದ ಪ್ರಕಟನೆಗಳಿಗೆ ಪತ್ರಿಕೆಯಲ್ಲಿ ಸ್ಥಳ ದೊರೆಯುವುದು. ಅಂತಹ ಪ್ರಕಟನೆಯ ದರಗಳನ್ನು ಪತ್ರಿಕೆ ಸಂಪಾದಕರಿಗೆ ಬರೆದು ತಿಳಿದುಕೊಳ್ಳಬಹುದು. ಪತ್ರಿಕೆಗೆ ಚಂದಾದಾರರಾಗಲಿಷ್ಟವುಳ್ಳವರು ಜಾಗ್ರತೆಯಾಗಿ ಬರೆದು, ಚಂದಾ ಹಣವನ್ನು ಮುಂಗಡ ಸಲ್ಲಿಸಬೇಕೆಂದು ಕೋರಿದೆ. ಚಂದಾ ಕಟ್ಟಬೇಕಾದ್ದರಾಗಲಿ, ಪ್ರಕಟನೆಯ ಹಣವನ್ನು ಕಟ್ಟಬೇಕಾದರಾಗಲಿ, ಆಯಾ ಸ್ಥಳದಲ್ಲಿರುವ ಸರ್ಕಾರದ ಖಜಾನೆಗೆ ತಲಪಿಸಬಹುದು; ಅಥವಾ ಈ ಪತ್ರಿಕಾ ಕಾರ್ಯಾಲಯಕ್ಕೆ ಅಂಚೆಯ ಮನಿಯಾರ್ಡರ್ ಮೂಲಕವಾಗಲಿ ಕೊಟ್ಟು ಕಳುಹಿಸಬಹುದು. ಇಲ್ಲವೆ, ಚಂದಾದಾರರು ಇಷ್ಟಪಟ್ಟರೆ, ಪತ್ರಿಕೆಯನ್ನು ವಿ. ಪಿ. ಮೂಲಕ ತರಿಸಿಕೊಳ್ಳುವಂತೆ ಏರ್ಪಾಡು ಮಾಡಿಕೊಳ್ಳಬಹುದು. ಪತ್ರಿಕೆಗೆ ಸಂಬಂಧಪಡುವ ಯಾವದ್ವಿಶಿಷ್ಟ ಪತ್ರವ್ಯವಹಾರಗಳನ್ನೂ ಬೆಂಗಳೂರು "ರಿಂಗ್‌ವುಡ್" ನಲ್ಲಿರುವ "ಅರ್ಥಸಾಧಕ ಪತ್ರಿಕೆ" ಯ ಸಂಪಾದಕರೊಡನೆ ನಡೆಯಿಸಬೇಕು.

ವಿಳಾಸ:—"ಮೈಸೂರು ಅರ್ಥಸಾಧಕ ಪತ್ರಿಕೆ" ಯ [2-2] ಸಂಪಾದಕರಿಗೆ, "ರಿಂಗ್‌ವುಡ್", ಬೆಂಗಳೂರು.

ಕೊಂಡಿನೋವನ್ನು "ಸ್ನೇಹಿತರಿಂದ ಹಿಂಸಿಸಲ್ಪಟ್ಟವ" ನನಾನವಾಗಿ ಒಬ್ಬ ಪ್ರಖ್ಯಾತ ಚಿತ್ರಕಾರನು ವಿವರಿಸಿ ಬರೆದಿದ್ದಾನೆ. ವಿಲ್ಲಿಯಮ್ಸ್ ಪಿಂಕ್ ಪಿಲ್ಸ್ ಬಾಂ ಎಂಬುದು ಹಠಾತವನ್ನು ಅದ್ಭುತರೀತಿಯಲ್ಲಿ ವಾಸಿ ಮಾಡುತ್ತೆ.

ಲಕ್ಷಾಂತರ ಜನಗಳ ಪೈಕಿ ಕೆಲವರು ನಂಬಿಕೆಯಿಂದಲೂ, ಕೆಲವರು ಬೇರೆಸಾಧನದಲೂ, ಕೆಲವರು ಅವಿಶ್ವಾಸದಿಂದಲೂ ಉಪಯೋಗಿಸಿದ್ದಾರೆ. ಅವರ ನೋವಿನ ಬಿಡುಗಡೆಯಾದಾಗ, ನಿಮ್ಮಂತೆಯೇ ಎಲ್ಲರೂ "ಕೊಂಡಿನೋವಿಗೆ ಇದೊಂದೇ ಖಂಡಿತ ಔಷಧವೆಂದು" ಹೇಳುವರು.

ಬಾತ್ ನಗರದ ಟ್ರೂಮಂಟ್ ಬೀದಿಯಲ್ಲಿರುವ ಮಿ॥ ಡಬ್ಲ್ಯೂ. ನೌಲ್ಸ್ ಬರೆಯುತ್ತಾನೆ:—"5 ವರುಷಗಳ ಹಿಂದೆ ನಾನು ಕೊಂಡಿನೋವಿನಿಂದ ಬೋಲ್ಪಾಯಿದ್ದೆ. ನನ್ನ ಬಲ ತೊಡೆಯಿಂದ ಅಂಗಾಲಿನವರೆಗೆ ಹಾಯುವ ಯಾತನೆಯಿಂದ ರಾತ್ರೀ ಹಗಲು ಕಷ್ಟಪಟ್ಟೆನು. ರಾತ್ರಿಯಲ್ಲಿ ನೋವಿನ ಬೇನೆಯಿಂದ ಎಚ್ಚರವಾಗಿ, ನಿದ್ರೆಯೇ ಬರುತ್ತಿರಲಿಲ್ಲ. "ಲಿಟ್ಲ್ ಪಿಂಕ್ ಪಿಲ್ಸ್ ಬಾಂ" ಎಂಬುದನ್ನು ಒಂದು ಸಿಸೆ ಉಪಯೋಗಿಸಿ ಪೂರ್ಣ ಸೌಖ್ಯ ಹೊಂದಿದೆನು."

ಸೀಸೆ 1ಕ್ಕೆ 1 ರೂಪಾಯಿಯಂತೆ ಎಲ್ಲಾ ಔಷಧಗಾರರಿಂದಲೂ ಮಾರಲ್ಪಡುತ್ತೆ. 101 37



ಜನವರಿ ಮಹೋತ್ಸವದ ಕೈಗಡಿಯಾರ
ಅರ್ಧ ಕ್ರಯ ರೂ. 1–14–6

ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-6 ಆಣೆಗೆ ಕೊಡಲ್ಪಡುವುದು. [10-32]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಸಿದ್ಧ ಔಷಧಗಳು.

"ಬಲವರ್ಧಕ ಸಂಜೀವನ."

ಅನುಭವಸಿದ್ಧ, ಶಕ್ತಾ ವನಸ್ಪತಿಗಳಿಂದ ತಯಾರಾದದ್ದು. ಈಗ ರೂಢಿಯೊಳಗೆ ಬಂದ ಕಾಫಿಯಂತೆ ಬೆಳಿಗ್ಗೆ ಸಾಯಂಕಾಲ ಸೇವಿಸುವುದು. ಈ ಸೇವನೆಯಿಂದ ಆಬಾಲವೃದ್ಧರ, ಗರ್ಭಿಣಿ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ನಿಶ್ಶಕ್ತಿ, ವಾಯುಶೂಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತಿ ಮುಂತಾದ ರೋಗಗಳನ್ನು ಹೋಗಲಾಡಿಸಿ ಶರೀರಕ್ಕೆ ಆರೋಗ್ಯಭಾಗ್ಯವನ್ನುಂಟುಮಾಡುತ್ತದೆ. ಕ್ರಯ 24 ತೊಲಾ ಡಬ್ಬಿ 1 ಕ್ಕೆ 1 ರೂಪಾಯಿ; ಅಂಚೆ ಹಾಸಲು ಬೇರೆ. 1 ಡಜನ್‌ಗೆ ಒಂದು ಡಬ್ಬಿ ಬಹುಮಾನ. 1 ಡಜನ್ ಡಬ್ಬಿ ಕೇಳುವವರು ಅರ್ಧ ಛಾರ್ಜ್ ಮುಂಗಡ ರವಾನಿಸಬೇಕು.

ಇದಲ್ಲದೆ ನಮ್ಮಲ್ಲಿ ದೊರೆಯುವ ಸಿದ್ಧ ಔಷಧಗಳು.

ಕಸ್ತೂರಿ ಮಾತ್ರೆ 26 ಇರುವ ಸೀಸೆಗೆ	ರೂ. 1-4-0
ಗೋರೋಚನ ಮಾತ್ರೆ 26 ಇರುವ ಸೀಸೆಗೆ ...	,, 1-0-0
ಸರ್ವ ವಿಷಾಪಹಾರಿ ಮಾತ್ರೆ 12 ಇರುವ ಸೀಸೆ 1 ಕ್ಕೆ	,, 1-0-0
ಕೂಷ್ಮಾಂಡಲೇಹ ಸೇರು 1 ಕ್ಕೆ ...	,, 2-0-0

ಈ ಔಷಧಿಗಳ ಅನುಪಾನಪತ್ರಿಕೆ ವಿ. ಪಿ. ಮೂಲಕ ರವಾನಿಸುತ್ತೇವೆ.

ನಮ್ಮ ವಿಳಾಸ.—ವಿ. ಅಂಬಣಪ್ಪ ಪಂಡಿತರು,
[1–2] ಕರ್ನಾಟಕ ವೈದ್ಯಶಾಲಾ, ಚಿತ್ರದುರ್ಗ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180–16] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು!!
ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಚಾಪೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಫೋಟೋಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಉಚಿತವಾಗಿ ಕಳುಹಿಸಲಾಗುವುದು. [69-43]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.
ಅಸಲ್ ಕ್ರಯ ರೂ. 16; ಈಗ ವಿ.ಪಿ. ಖರ್ಚು ಸೇರಿ
ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!



ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,
[266–7] ಪಿ. ಓ. ಬಾಕ್ಸ್ 330, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—12—1914 ರಿಂದ 1—1—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	16	11	0	0
ಮೈಸೂರು ,,	2	2	0	0
ಬೆಂಗಳೂರು ಡಿಸ್ಟ್ರಿಕ್ಟು	28	31	0	0
ಮೈಸೂರು ,,	34	40	0	0
ಕೋಲಾರ್ ,,	25	18	0	0
ಕೋಲಾರ್ ಚಿನ್ನದ ಗಣಿಗಳು	11	10	1	2
ತುಂಕೂರು ಡಿಸ್ಟ್ರಿಕ್ಟು	3	2	0	0
ಹಾಸನ ,,	9	5	0	0
ಚಿತ್ರದುರ್ಗ ,,	26	18	0	0
ಕಡೂರ್ ,,	2	2	0	0
ಶಿವಮೊಗ್ಗ ,,	24	19	16	4
ಜುಮ್ಲಾ	179	158	17	6

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಹೇಮಂತ ಋತೌ ಪುಷ್ಯ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಮಾಘ ಶುದ್ಧ ಷಷ್ಠಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜನವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ ತೇದಿ
15	ಶುಕ್ರ *	ಅಮಾವಾಸ್ಯೆ	34-27	ಪೂರ್ವಾಷಾಢ	12-0	2
16	ಶನಿ ,,	ಪಾಡ್ಯಮಿ	31-25	ಉತ್ತರಾಷಾಢ	10-10	3
17	ಭಾನು ;;	ಬಿದಿಗೆ	29-26	ಶ್ರವಣ	9-22	4
18	ಸೋಮ †	ತದಿಗೆ	28-40	ಧನಿಷ್ಠ	9-41	5
19	ಮಂಗಳ §	ಚೌತಿ	29-11	ಶತಭಿಷ	11-13	6
20	ಬುಧ ::	ಪಂಚಮಿ	30-51	ಪೂರ್ವಾಭಾದ್ರ	14-10	7
21	ಗುರು ‡	ಷಷ್ಠಿ	34-1	ಉತ್ತರಾಭಾದ್ರ	18-2	8

* ಸರ್ವತ್ರ ತ್ರೈಯ್ಯಮಾವಾಸ್ಯಾ, ಗರುಡೋದಯಂ, ಕನೂ ಹಬ್ಬ, ಚಾಮುಂಡಿಬೆಟ್ಟ ರಾಮಸ್ವಾಮಿ ರಥ. ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿ ರಥ. ,, ಮಾಘಗೌರಿವ್ರತ. ;; ಚಂದ್ರೋದಯ, ಕೈಲಾಸಗೌರಿವ್ರತ, ರಥ್ಸಲವಲ್ ಚಂದ್ ಗ, ಮಳೆ ನಕ್ಷತ್ರ—ಉತ್ತರಾಷಾಢ 3 ನೇ ಪಾದ. † ಮೌನಗೌರಿವ್ರತ. § ಮೃತ್ಯುಯೋಗ. :: ಶರಳಪಂಚಮಿ, ಮಳೆ ನಕ್ಷತ್ರ—ಉತ್ತರಾಷಾಢ 4 ನೇ ಪಾದ. ‡ ಕುಮಾರಷಷ್ಠಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಶಕ್ತಿಗಳ ಕಳಕ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇವನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 260 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜ್ ಪ್ರತ್ಯೇಕ. [231-11]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಛಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸುತುಶೂಲೆ, ಮಕ್ಕಳ ಎಳಪು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [109-19]

(1) ಮ॥ ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಪರ ಎಂ ಇ. ಸ್ಕೂಲ್, ನಾಂಚು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ॥ ಸರ್ಕಾರರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ॥ ಎಸ್ ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ನಡೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. Gulliford, Proprietor and Manager, Wesleyan Mission Press, Mysore. 14/1/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—೧೯೧೫ ನೇ ಇಸವಿ ಜನವರಿ ತಾರೀಖು ೨೧ ನೇ ಗುರುವಾರ. ಸಂಚಿಕೆ ೩೪

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಲಿನ 11 ಆ., ಚಿತ್ರವಿಚಿತ್ರಾವಳಿ 1 [8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಛತ್ರವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ [63-48] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯು (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯುತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೀನಲ್ ಕೋಡು ರೂ. 2 ; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.

[143-28] ವಿಳಾಸ :—ಪಿ. ನರಸಿಂಗರಾವ್, ಎಡಿಟರ್, ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು !!!

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತವೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು : ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ 2 ಆಣೆ ; ವಿ. ಪಿ. ಯಲ್ಲಿ 4 ಆಣೆ.

[8-2] ನಮ್ಮ ವಿಳಾಸ.—ದಿ ಜನರಲ್ ಏಜನ್ಸಿ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ಅತ್ಯಂತ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-49]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಎಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ವಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ	ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು	,, 6

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ಒಂದಕ್ಕೆ 2 ಆಣೆ ಕಮಿಷನ್ ದೊರೆಯುವುದು. [229-13]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಶೃಂಗಾರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-27]

ಅತ್ಯುತ್ತಮ ಕಾದಂಬರಿಗಳು :—ಜಯ ! ವಾಲ್ಮೀಕಿ 12 ಆ ; ಅಶ್ವತ್ಥಮೃಗ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ಸಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ :—ಹನುಮಾನ್ ಕಂಪೆನಿ, ಮೈಸೂರು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸಿಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವ	0-8-0	ಸಂತಾಪಕ	0-4-0

[275-6] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [230-6]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಐದನೆಯ ಮುದ್ರಣ. ದಪ್ಪವಾದ ಕಾಗದ. ಗಟ್ಟಿ ಅಟ್ಟೆ.

ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ.

ಕ್ರಯ ಮುಚ್ಚಳಿಕಾಪತ್ರ, ಖಾಗದ, ಪತ್ರ, ಸಾಲ, ರಸೀದಿ, ನೋಟೀಸು, ಮುಂತಾದವುಗಳನ್ನು ಬರೆಯುವ ರೀತಿ, ಸಿವಿಲ್, ರೆವಿನ್ಯು, ಕ್ರಿಮಿನಲ್, ಲಾ ಸಂಬಂಧವಾದ ಎಲ್ಲಾ ನಡೆಯು ತೀರ್ಮಾನಗಳು, ಎಲ್ಲಾ ಬಗೆಯ ವ್ಯವಹಾರಗಳನ್ನೂ ಪ್ರಶ್ನೋತ್ತರ ರೂಪವಾಗಿ ಬರೆದಿರುವದರಿಂದ ಎಲ್ಲರೂ ಬಹು ಸುಲಭವಾಗಿ ತಿಳಿದುಕೊಳ್ಳಬಹುದು. [282-6]

ಕೆಲವು ಪ್ರತಿಗಳು ಉಳಿದಿವೆ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ.

ವಿಳಾಸ ಭಾರತಿ ಸಂಪಂಗಿರಾಮು, ಸಂಪಾದಕ, "ಸಮಾಜ," ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೋಟೀಸ್.

ಜನರಲ್ ಮತ್ತು ರೆವಿನ್ಯು ಸೆಕ್ರೆಟೇರಿಯಟ್, ಬೆಂಗಳೂರು.

ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಕೌನ್ಸಿಲ್ ಚೇಂಬರಿನ ಉಪಯೋಗಕ್ಕೋಸ್ಕರ ಸ್ಥಳದಲ್ಲಿ ತಯಾರಾದ ಅಪ್ಪಲ್ ತರಹೆಯ ಮತ್ತು ಹಸನು ಕೆಲಸಮಾಡಿದ ಜಮಖಾನೆಗಳಿಗಾಗಿ ಮೊಹರುಮಾಡಿದ ಲಕೋಟೆಯಲ್ಲಿ ಟೆಂಡರುಗಳನ್ನು ಕಳುಹಿಸಬಹುದೆಂದು ಸಮಸ್ತ ಜನರಿಗೂ ಈ ಮೂಲಕ ತಿಳಿಸಲಾಗಿದೆ. ಈ ಟೆಂಡರುಗಳನ್ನು 1915 ನೆಯ ಜನವರಿ ಆಖೈರ್ ವರಿಗೆ ತೆಗೆದುಕೊಳ್ಳಲಾಗುವದು. ಹೆಚ್ಚು ತಪಶೀಲುಗಳಿಗೆ 1915 ನೆಯ ಜನವರಿ 7, 14 ಮತ್ತು 21 ನೆಯ ತಾರೀಖುಗಳಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಛಾಯವಾದ ನೋಟೀಸನ್ನು ನೋಡತಕ್ಕದ್ದು.

ಬೇಕಾದ ಜಮಖಾನೆಗಳ ಅಳತೆ.

(1) ಒಂದು ಜಮಖಾನೆಯು ಉದ್ದ 28 ಅಡಿ; ಅಗಲ 21 ಅಡಿ 3 ಅಂಗುಲ.
(2) ಎರಡನೆಯ ಜಮಖಾನೆಯು ಉದ್ದ 16 ಅಡಿ 7 ಅಂಗುಲ ; ಅಗಲ 21 ಅಡಿ 3 ಅಂಗುಲ

ಹುಕುಂ ಬಮೋಜಿಬ್

B. NARAINSWAMIENGAR,

[12-2] ಫಾರ್ ಅಫಿಷಿಯೇಟಿಂಗ್ ಸೆಕ್ರೆಟರಿ,

ಜನರಲ್ ಮತ್ತು ರೆವಿನ್ಯು ಡಿಪಾರ್ಟ್‌ಮೆಂಟುಗಳು.

(ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದುವುಗಳು).

ವ್ಯವಹಾರ ನಿರ್ಣಯ.

[279-6]

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ 616 ಪುಟಗಳುಳ್ಳದು.

ಕ್ರಯ ದಪ್ಪ ಕಾಗದದ ಪ್ರತಿಗೆ ರೂ. 1-8-0 ಪೋಸ್ಟೇಜು
,, ಗ್ಲೇಜ್ ಕಾಗದದ ಪ್ರತಿಗೆ ,, 2-4-0 ಪ್ರತಿ 1 ಕ್ಕೆ 4 ಆ.

ಇದರಲ್ಲಿ ಹಿಂದೂ ಲಾ, ಮಹಮದೀಯ ಲಾ, ಪೀನಲ್ ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ವ್ಯಕ್ತಿಸ್ವತ್ವನ ವಿಲೇವಾರಿ, ಅನಾಥ ರಕ್ಷಣೆ, ಸ್ತ್ರೀಸ್ವತ್ತರ ವಾರಸ್ತು ಹಕ್ಕು ಈ ವಿಷಯಕವಾದ ಶಾಸನಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಆ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತುರ್ತಾವಿ ಲಾ"

ಇದು ಕ್ಷೇಮದ ಅಭಿವೃದ್ಧಿಗಾಗಿಯೂ, ಪ್ರಜಾ ಸಹಾಯಾರ್ಥವಾಗಿಯೂ, ಸರ್ಕಾರದವರು ಹೊರಡಿಸಿದ ಶಾಲ ಮೊದಲಾದ ಸಂಬಂಧ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ—ಎಂ. ಎಂ. ಪಂಡಿತಾರಾಧ್ಯ, ಮೈಸೂರು.

ಮೆಲಿನ್ಸ್ ಆಹಾರವು

[92]

ಕೈಸೋಕದೆ ಮಾಡಿದೆ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ಪಥ್ಯಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿ ಪ್ರಾಯದವರ ವರೆಗೆ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.

ವಿಳಾಸ—ಮೆಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-20] GIRLS' INDUSTRIAL SCHOOL, HASSAN.

"ಪ್ರಯೋಜನಹೊಂದಿರಿ" ಮತ್ತು "ಇತರರಿಗೂ ಪ್ರಯೋಜನ ಉಂಟುಮಾಡಿರಿ."

ಹಿಂದೂಸ್ಥಾನ ಕೋಆಪರೇಟಿವ್ ಜೀವವಿಮೆ ಸಂಘ ಲಿಮಿಟೆಡ್.

ಹಿಂದೂಸ್ಥಾನ ಕಟ್ಟಡಗಳು ಕಲಕತ್ತಾ.

ಮೂಲಧನ ಒಂದು ಕೋಟಿ ರೂಪಾಯಿ		(1,00,00,000).
ವಸೂಲಾದ ಮೊಬಲಗು	,,	87,00,000
ಪಾವತಿಯಾದ ಧನ	,,	12,50,000

ಹಿಂದೂಸ್ಥಾನ ಸಂಘದ ಕೆಲವು ಮುಖ್ಯ ಅನುಕೂಲತೆಗಳು.

(1) ಜನಗಳಿಗೆ ಬಹಳ ಸುಲಭಕರವಾದ ವಿಮೇಪಾಲಿಸಿ ಕೊಟ್ಟು, ವೃದ್ಧಾಪ್ಯಕಾಲದಲ್ಲೂ, ಅಕಾಲ ಮರಣ ಉಂಟಾದಲ್ಲಿ ಕುಟುಂಬ ಸಂರಕ್ಷಣೆಗೂ ಯಾವ ವಿಧವಾದ ಕಷ್ಟವಿಲ್ಲದಂತೆ ವಿಮೇ ಮೊಬಲಗಿನಿಂದ ಸುಖ ಜೀವನಮಾಡಬಹುದು.

(2) ವಿಮೇ ಮೊಬಲಗನ್ನು ಯಾವ ವಿಧವಾದ ತಕರಾರು ಇಲ್ಲದೆ ಬೇಗನೆ ಪಾಲಿಸಿದಾರರ ಮನೆಯಲ್ಲೇ ಪಾವತಿಮಾಡಲ್ಪಡುತ್ತೆ.

(3) ಸಂಘದ ಪಾಲಿಸಿಯನ್ನು ಎರಡು ವರ್ಷದವರಿಗೂ ಜಾರಿಲಿ ಇಟ್ಟುಕೊಂಡು ತದನಂತರ ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತುಗಳ ಆಧಾರದ ಮೇಲೂ ಅಥವಾ ಮತ್ತೊಬ್ಬ ಪಾಲಿಸಿದಾರರ ಜಂಟಿಮೇಲೂ ಬಹಳ ಸುಲಭ ಬಡ್ಡಿಯಿಂದ ಅವರು ವಿಮೇ ಮಾಡಿರತಕ್ಕ ಮೊಬಲಗಿನಷ್ಟು ಸಾಲಾ ಸಂಘದವರು ಕೊಡುತ್ತಾರೆ ಮತ್ತು ಸುಲಭ ಕಂತಿನಿಂದ ಸಂಘದವರು ವಾಪಸ್ಸು ಪಡೆಯುತ್ತಾರೆ.

(4) ಯಾವ ವಿಧವಾದ ಆಧಾರವಿಲ್ಲದೆ ಮನೆ ಅಥವಾ ಜಮೀನು ತೆಗೆದುಕೊಟ್ಟು ಅದರ ಮೊಬಲಗು ಸುಲಭ ಕಂತಿನಿಂದ ವಾಪಸ್ಸು ಪಡೆಯುತ್ತಾರೆ. ಇದು ಬಡವರಿಗೂ ಮತ್ತು ರೈತರಿಗೂ ಮುಖ್ಯ ಅನುಕೂಲವಾಗಿರುತ್ತೆ.

(5) ಸಂಘದ ಆಡಳಿತ ಮತ್ತು ಮೇಲ್ವಿಚಾರಣೆ ಮಹಾರಾಜರಿಂದಲೂ, ದೊಡ್ಡ ಜಮೀನುದಾರರಿಂದಲೂ ನಡಿಸಲ್ಪಡುತ್ತೆ.

(6) ಸಂಘದ ಹಣವೆಲ್ಲಾ ಇಂಡಿಯಾದಲ್ಲಿಯೇ ಭೂಸ್ವತ್ತುಗಳ ಮೇಲೂ ಪಾಲಿಸಿದಾರರ ಮೇಲೂ ತಕ್ಕ ಭರವಸೆ ಮೇಲೆ ವಿನಿಯೋಗಿಸಲ್ಪಡುತ್ತೆ.

ಬೇಕಾಗಿದೆ. ನಂಬಿಕೆ ಮತ್ತು ಒಳ್ಳೆ ಚಟುವಟಿಕೆಯುಳ್ಳ ಏಜಂಟ್ರುಗಳು ಪ್ರತಿಯೊಂದು ತಾಲೂಕಿನಲ್ಲಿಯೂ ಮತ್ತು ಮುಖ್ಯ ಸ್ಥಳಗಳಲ್ಲಿಯೂ. ಅವರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಆಫೀಸು ಅಲೋಯನ್ಸ್ ಸಹಾ ಕೊಡಲಾಗುತ್ತೆ. ಹೆಚ್ಚು ವಿಷಯಗಳಿಗೆ ಮತ್ತು ಪ್ರಸಿದ್ಧಪತ್ರಿಕೆಗೆ ಕೆಳಗಿನ ವಿಳಾಸದಾರ್ರಿಗೆ ಬರಿಯಿರಿ.

ಮೆಸರ್ಸ್ ವೆಂಕಟಾಚಲಂ ಅಂಡ್ ಸನ್ಸ್,

[292-4] ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಚೇಳಿಗೆ ಸರಿಯಾದ ಮದ್ದು.

ಚೇಳಿನ ಹೊಡತಕ್ಕೆ "ಸ್ಕಾರ್ಪಿಯಾನಿಯೊ" ಎನಹಾ ನಿರಪಾಯಕರವಾದ ಮತ್ತು ಸೇವನೆಗೆ ಅರ್ಹವಾದ ಔಷಧವು ಮತ್ತೊಂದಿಲ್ಲ. ಪುನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡದಿರುತ್ತೆ.

"ನಮ್ಮ ಚೇಳಿನ ಮದ್ದಿನಿಂದ ತಪ್ಪದೆ ಗುಣ ಬಂದಿದೆ" ಯೆಂದು ಭೀಮರಾವು ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ. ಬಾಟ್ಲಿ ಒಂದಕ್ಕೆ ಕ್ರಯ ರೂ. ೦-೮-೦. ನಾಲ್ಕು ಬಾಟ್ಲಿವರಿಗೆ ಪೋಸ್ಟ್ ಹಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೂಡ್ಲೆ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಿರಿ.

[295-4] ವಿಳಾಸ.—ಸ್ಕಾರ್ಪಿಯಾನಿಯೊ ಡಿಪೊ, ಹರಿಹರ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಬಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಚೋಟಾದಲ್ಲಾಳಿ, ಮೊಕ್ಕಾದಮ್ಮು, ಗಂಟುಗಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ನೂಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಗೆ ಡಿಸ್ಕೌಂಟು ದೊರೆಯುತ್ತೆ. [97-46]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ವರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ತಾಂಡವು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

BOOKS FOR III & IV FORMS.

(1) **General English Papers** As. 8; (2) **English Essays and Letters** As. 6; (3) **Spelling Book** As. 4. (Postage Extra). Apply to

[61-1] M. N. SITA RAMA RAO, Krishnaraja Mohalle, Mysore.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳು ಕಟ್ಟದ್ದರೂ ಹುಳಿ ವಾಸನೆಯಾಗದು. ಬೇಕಾದವರು ವಿ. ಪಿ. ಯಲ್ಲಿ ತರಿಸಬಹುದು. ಕ್ರಯ ಸೇರಿಗೆ 1 ರೂಪಾಯಿ. ವಿಳಾಸ.—ಎ. ಎನ್. ಸಂಜುಂಡಯ್ಯ,

[14-2] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ಮೋಟರ್ ಟಪಾಲು.

ಗುಂಡ್ಲುಪೇಟೆಯಿಂದ ನಂಜನಗೂಡಿಗೆ.

ಚಾಮರಾಜನಗರದಿಂದ ನಂಜನಗೂಡಿಗೆ.

ಬೆಳಿಗ್ಗೆ.—(1) ಮೋಟರುಗಳು ಪ್ರತಿದಿನವೂ ಗುಂಡ್ಲುಪೇಟೆಯಿಂದಲೂ, ಚಾಮರಾಜನಗರದಿಂದಲೂ ಬೆಳಿಗ್ಗೆ 6-30 ಗಂಟೆಗೆ ಹೊರಟು 7-30 ಗಂಟೆಗೆ ನಂಜನಗೂಡು ತಲಪುತ್ತವೆ. (2) ಮೋಟರುಗಳು ಪ್ರತಿದಿನವೂ ಬೆಳಿಗ್ಗೆ 8-30 ಗಂಟೆಗೆ ನಂಜನಗೂಡಿನಿಂದ ಹೊರಟು 9-30 ಗಂಟೆಗೆ ಗುಂಡ್ಲುಪೇಟೆಯನ್ನೂ, ಚಾಮರಾಜನಗರವನ್ನೂ ತಲಪುತ್ತವೆ.

ಮಧ್ಯಾಹ್ನ.—(1) ಮೋಟರುಗಳು ಮಧ್ಯಾಹ್ನ ಗುಂಡ್ಲುಪೇಟೆಯಿಂದಲೂ, ಚಾಮರಾಜನಗರದಿಂದಲೂ 4 ಗಂಟೆಗೆ ಹೊರಟು 5 ಗಂಟೆಗೆ ನಂಜನಗೂಡು ತಲಪುತ್ತವೆ. (2) ಮೋಟರುಗಳು ಸಾಯಂಕಾಲ 6-30 ಗಂಟೆಗೆ ನಂಜನಗೂಡಿನಿಂದ ಹೊರಟು 7-30 ಗಂಟೆಗೆ ಗುಂಡ್ಲುಪೇಟೆಯನ್ನೂ, ಚಾಮರಾಜನಗರವನ್ನೂ ತಲಪುತ್ತವೆ.

ನಿಬಂಧನೆಗಳು.—(1) ಪ್ರಯಾಣಿಕರು 5 ಮಂದಿಗಿಂತ ಕಡಮೆಯಾದರೆ ಮೋಟರನ್ನು ಬಿಡುವುದಿಲ್ಲ. (2) ಛಾರ್ಜಿನ ದರ—1 ಸೀಟಿಗೆ ರೂ. 1-8-0.

ಪ್ರಾರಂಭ.—1915 ನೇ ಇಸವಿ ಜನವರಿ ತಾ. 17 ನೇ ಭಾನುವಾರದಿಂದ ಮೋಟರುಗಳು ಬಿಡಲ್ಪಡುವವು.

ಹೆಚ್ಚು ಸಂಗತಿಗಳನ್ನು ಕೆಳಗೆ ಕಂಡ ವಿಳಾಸದಾರರಲ್ಲಿ ತಿಳಿಯಬಹುದು:—

ದಿ ಮೈಸೂರು ಮೋಟರ್ ಸರ್ವಿಸ್ ಕಂಪನಿ,

[6-3] ಹಳೇ ಪೋಸ್ಟ್ ಆಫೀಸ್ ಬೀದಿ, ಮೈಸೂರು.

ಪ್ರಪಂಚಯುದ್ಧ

ಘನ ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಛಾಯಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕಾಳಗವಿರುವ ಭೀಕರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದವಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಪಾತವಾದ ಎಮ್‌ಡನ್ನನ್ನು ನೋಡಿರುವಿರಾ ? ಅದರ ನಾಯಕನನ್ನು ಬಲ್ಲಿರಾ ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿಖಾಮಣಿಯನ್ನೂ ನೋಡಿರುವಿರಾ ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಶಾಸನ ದುಷ್ಟರಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ, ವಾಯುವಿಮಾನ ನಾಯಕರನ್ನೂ ನೋಡಿರುವಿರಾ ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಷರಾ :—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚುಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

[10-3] ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

"ವೃತ್ತಾಂತ ಪತ್ರಿಕೆ"ಯ ಕ್ಯಾಲೆಂಡರು.

1915 ನೇ ವರುಷದ ಕ್ಯಾಲೆಂಡರನ್ನು ತಯಾರುಮಾಡಿ ನಮ್ಮ ಖಾಯಂ ಚಂದಾದಾರರಿಗೆಲ್ಲಾ ಕಳುಹಿಸಿದೆವು. ಇದರಲ್ಲಿ ಅಡಗಿರುವ ನೇತ್ರಾನಂದಕರವಾದ ಚಿತ್ರಗಳ್ಯಾವೆಂದರೆ—(1) ಬೆಂಗಳೂರಿನಲ್ಲಿ ಆಲಸೂರುಪೇಟೆ ದೇವಾಲಯ, (2) ಗುಟ್ಟೆಯ ಹರ್ಡ್ಲೆ ಪಾರ್ಕ್, (3) ನಾಮಧಾರಿ ವಧೂವರರು, (4) ಜರ್ಮನರ ಕೈಸರ, (5) ಜರ್ಮನಿಯವರ ಸ್ವಾಧೀನದಲ್ಲಿರುವ ಬೆಲ್ಜಿಯಮ್ ದೇಶದ ಬ್ರುಸೆಲ್ಸ್ ರಾಜಧಾನಿಯ ಟೌನ್ ಹಾಲ್. ಇದಲ್ಲದೆ ಇದರಲ್ಲಿ ಮೈಸೂರು ಸರ್ಕಾರಿ ರಜಾ ದಿನಗಳೂ, 1915 ನೇ ವರುಷದಲ್ಲಿ ಬರುವ ವಿಶೇಷ ದಿನಗಳೂ ಪ್ರಕಟವಾಗಿವೆ. ಜನವರಿಯಲ್ಲಿ ಹೊಸದಾಗಿ ಖಾಯಂ ಚಂದಾದಾರರಾಗತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುತ್ತೇವೆ. ಚಂದಾದಾರರಲ್ಲದವರಿಗೆ ಇದರ ಕ್ರಯ 6 ಕಾಸು.

ಕೆಲವು ಪ್ರತಿಗಳು ಮಾತ್ರ ಉಳಿದಿರುವುದರಿಂದ ವಾಚಕರು ಬೇಗನೆ ಚಂದಾ ಕಳುಹಿಸಿ ಈ ಬಹುಮಾನವನ್ನು ಪಡೆಯುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಸ್ತ್ರೀಯರ ತೋಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನೀಳವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಬೇಗ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಾಪಟಗಲ್ಲಿ, ಬೆಳಗಾಂವ.— ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೆಂದು ಸಾಧನವಾಗಿರುತ್ತದೆ. ಅದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅಷ್ಟಲ್ಲ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುವರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದ ಅವಶ್ಯಕತೆಯಿಲ್ಲದೆ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ನೀವೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-52]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ದ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತೆ:—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[52-46]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಬಿಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಬೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ಪೋ, ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 5,00,000.

(INCORPORATED UNDER THE MYSORE COMPANIES' REGULATION No. III OF 1895.)

Absolute Security. **Attractive Schemes.** **Soundest Principles.**

Free Insurance and Provident (Marriage and Upanayana) Policies are a speciality. Two-in-one (Share Policy Scheme and property investment (Land and house purchase and investment) Schemes are a novelty

WANTED

Active and honest agents to canvass insurance and provident businesses and influential local directors to canvass Two-in-one (share policy) and property investment businesses in each and every unrepresented taluk and district of the Mysore province on liberal commission and office allowance. For terms and prospectuses, please apply with your experience in the line to

Mr. M. L. NAGANNH,

15-2 Managing Director, Life & Marriage Assurence Buildings, MYSORE

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಊದಿಕ (ಭಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸಿಕ್ಕತ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಜಾಗ್ರತೆಯಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಎಡೆಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಪುಷ್ಟಿ ಮತ್ತು ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಏಳವು, ಜ್ವರ, ಸಣ್ಣ ಜ್ವರ, ಕ್ಷಯ ಕೆಮ್ಮುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಬಾಧಕವಾಗಿಯೂ ಕ್ಷೀಣದ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-20]



(1) ಮ ಎ ಸಿ ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು:—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸಜ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಬಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು" (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕೆಂಚ ಡಿಸ್ಟ್ರಿಕ್ಟ್, ಇವರು ಬರೆಯುವದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಳೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನನ್ನ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ 1-0-0.



ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆವು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚ ಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಸ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ಚವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯುಳ್ಳಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು.—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂತೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪಾತ್ರೆ 22, ಕೊಂಡೆ ಗೆಣೆಗಳು 6, ಕಾರ್ನೇಷನ್ ಟ್ಯೂಬ್ 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪನಿ,
ನಂ. 44, ನಂಬುಳಯ್ಯರ ಬೀದಿ, ಮದರಾಸು.

[250-9]

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ ; ವಿ. ಪಿ. ಮೂಲಕ 6 ಆಣೆ ಮಾತ್ರ.

ನಮ್ಮ ವಿಳಾಸ— ಬಿ. ನರಸಿಂಗರಾವ್,
[300-4] ಎಡಿಟರ್, ಲಾ ಗೆಜೆಟ್, ಬೆಂಗಳೂರು.

ವೃತ್ತಾಂತ ಪತ್ರಿಕೆ.

——:o:——

ಸನ್ ೧೯೧೫ ನೇ ಇಸವಿ ಜನವರಿ ತಾ. ೨೧ ನೇ ಗುರುವಾರ

ನಮ್ಮ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆ.

ಇದೇ ತಿಂಗಳು 12 ನೆಯ ತಾರೀಕಿನಲ್ಲಿ ದೆಹಲಿ ಪಟ್ಟಣದಲ್ಲಿ ನಡೆದ ಮಂತ್ರಾಲೋಚನಾ ಸಭೆಯಲ್ಲಿ ನಮ್ಮ ವೈಸ್‌ರಾಯಿಯವರಾದ ಲಾರ್ಡ್ ಹಾರ್ಡಿಂಜ್ ರವರು ಅಗ್ರಾಸನವನ್ನಲಂಕರಿಸಿದ್ದರು. ಆ ಮಹಾ ಸಭೆಯನ್ನು ಕುರಿತು ವೈಸ್‌ರಾಯಿಯವರು ಮಾಡಿದ ಭಾಷಣದಲ್ಲಿ ಈಗ ನಡೆಯುತ್ತಿರುವ ಯುದ್ಧದಲ್ಲಿ ಟರ್ಕಿಯು ಭಾಗಿಯಾಗಿರುವುದನ್ನು ಸೂಚಿಸಿ ಹೇಳಿದುದೇನೆಂದರೆ:—ಗ್ರೇಟ್ ಬ್ರಿಟನ್ ಟರ್ಕಿಗೆ ವಿರೋಧವಾಗಿ ಯುದ್ಧ ಮಾಡಿದುದು ಲೋಕಚರಿತ್ರೆಯಲ್ಲಿ ಇದೇ ಪ್ರಥಮ. ಕ್ರಿಮಿಯಾ ಯುದ್ಧದಲ್ಲಿ ಅದು ಟರ್ಕಿಯ ಪಕ್ಷವನ್ನು ವಹಿಸಿ ಯುದ್ಧ ಮಾಡಿತು. ಇಪ್ಪತ್ತೈದು ವರುಷಗಳ ತರುವಾಯ ನಡೆದ ಸಾನ್ ಸ್ಟೆಫನೊ ಕೌಲು ಟರ್ಕಿಯನ್ನು ನಾಶನಮಾಡುವುದಕ್ಕಿದ್ದಿತು. ಅಷ್ಟರಲ್ಲೇ ಗ್ರೇಟ್ ಬ್ರಿಟನ್ ಟರ್ಕಿಯ ಸಹಾಯಕ್ಕೆ ಬಂದು ಆ ಕೌಲನ್ನು ಬದಲಾಯಿಸುವಂತೆ ಮಾಡಿತು. ಗ್ರೇಟ್ ಬ್ರಿಟನ್ ಮಿತ್ರಭಾವದಿಂದ ಟರ್ಕಿಗೆ—ನೀನು ರಾಜ್ಯಾಡಳಿತಗಳನ್ನು ಉತ್ತಮ ಸ್ಥಿತಿಗೆ ತಂದುಕೊ ; ಜರ್ಮನಿಯ ಸಂಗಡ ಸ್ನೇಹವನ್ನು ಬೆಳೆಸಬೇಡ ಎಂದು ಒತ್ತಿ ಹೇಳಿದ್ದರೂ ಈ ಬುದ್ಧಿವಾದವು ನಿಷ್ಫಲವಾಯಿತು. ಟರ್ಕಿಯು ತಾನು ಮಾಡಿದ ಕಾರ್ಯಗಳ ಫಲವನ್ನು ಅನುಭವಿಸಲೇ ಬೇಕು. ಮಹಮ್ಮದೀಯರು ಟರ್ಕಿಯ ಸಂಗಡ ಅನುತಾಪ ಪಡಬೇಕಾದುದು ಸ್ವಾಭಾವಿಕವಾಗಿರುತ್ತದೆ. ಆದರೆ ಟರ್ಕಿಯು ವಿವೇಕಶಾಲಿಗಳಾದ ಮಹಮ್ಮದೀಯರು ತನಗೆ ಸಹಾಯಮಾಡುವುದರಲ್ಲಿ ಯಾವ ಕಾರ್ಯಭಾಗವನ್ನಾದರೂ ವಹಿಸಿಕೊಳ್ಳುವುದು ಅಸಾಧ್ಯವಾಗುವಷ್ಟರ ಮಟ್ಟಿನ ದೊಡ್ಡ ತಪ್ಪಿನಲ್ಲಿ ಬಿದ್ದು ಹೋಗಿರುತ್ತದೆ. ಟರ್ಕಿಯ ಸರಕಾರದವರೆಲ್ಲರೂ ಯುದ್ಧದ ಪಕ್ಷದವರಾಗಿರಲಿಲ್ಲ. ಆದರೆ ಟರ್ಕಿಯನ್ನು ಯುದ್ಧಕ್ಕೆ ಎಳೆಯಬೇಕೆಂದು ಜರ್ಮನಿಯವರು ನಡಿಸಿದ ಒಳಸಂಚು ಸಫಲವಾಯಿತು. ಬ್ರಿಟಿಷರ ಸೈನ್ಯದಲ್ಲಿಯೂ ಫ್ರೆಂಚರ ಸೈನ್ಯದಲ್ಲಿಯೂ ರಷ್ಯಾದವರ ಸೈನ್ಯದಲ್ಲಿಯೂ ಮಹಮ್ಮದೀಯರು ಸೇರಿ ಯುದ್ಧಮಾಡುತ್ತಾ ಇರುವಲ್ಲಿ ಜರ್ಮನಿಯವರ ಸೈನ್ಯದಲ್ಲಿ ಒಬ್ಬ ಮಹಮ್ಮದೀಯನಾದರೂ ಸಿಕ್ಕದಿರುವುದು ಆಶ್ಚರ್ಯಕರವಾಗಿದೆ. ಆದರೂ ಇದು ವಾಸ್ತವವಾದುದು.

ವೈಸ್‌ರಾಯ್ ಪ್ರಭುಗಳು ಹಿಂದು ದೇಶೀಯರಲ್ಲಿರುವ ರಾಜಭಕ್ತಿಯನ್ನು ಬಹಳವಾಗಿ ಸ್ತೋತ್ರಮಾಡಿ, ಇಂಡಿಯಾದಿಂದ 2,00,000 ಸೈನ್ಯಗಳು ಬೇಗ ಕಳುಹಿಸಲ್ಪಡುವವೆಂದು ಅಪ್ಪಣೆ ಕೊಡಿಸಿದರು. ಕೆಲವು ಸೈನ್ಯಗಳು ಗ್ರೇಟ್ ಬ್ರಿಟನ್ನಿಂದ ಬರುತ್ತವೆ. ಆದರೆ ಇಷ್ಟು ಮಂದಿ ತರಫೇತಾದ ಸಿಪಾಯಿಗಳನ್ನು ಕಳುಹಿಸುವುದು ಜನಗಳಲ್ಲಿರುವ ರಾಜಭಕ್ತಿಯ ವಿಷಯದಲ್ಲಿ ನಮ್ಮ ವೈಸ್‌ರಾಯಿಯವರಿಗೆ ಎಷ್ಟು ನಂಬಿಕೆ ಇದೆ ಎಂಬುದನ್ನು ವ್ಯಕ್ತಪಡಿಸುತ್ತದೆ. ಯುದ್ಧವು ಒಂದು ವೇಳೆ ದೀರ್ಘಕಾಲ ನಡೆಯಬಹುದು. ಮತ್ತು ಹೀನಸ್ಥಿತಿಗೆ ಬರುವಂಥ ಕಾಲಗಳು ಪ್ರಾಪ್ತವಾಗಬಹುದು. ಆದರೆ ಅನುಮಾನವಿಲ್ಲದೆ ದೇವರು ನಮಗೆ ನ್ಯಾಯವೆಂದು ತೋರಿಸಿಕೊಡುವ ಪ್ರಕಾರ ನೀತಿಯುಳ್ಳ ಮತ್ತು ಶಾಶ್ವತವಾದ ಸಮಾಧಾನವನ್ನು ಹೊಂದಿಕೊಳ್ಳಲು ನ್ಯಾಯಕ್ಕಾಗಿ ಹೋರಾಡುವದಕ್ಕೆ ನಿರ್ಧರಿಸಿಕೊಂಡಿದ್ದಾರೆ.

ವೈಸ್‌ರಾಯಿಯವರು ಗೋಧಿಯ ಧಾರಣೆಯು ಏರಿರುವುದನ್ನು ಕುರಿತು ಪ್ರಸ್ತಾಪಿಸಿ, ಇದನ್ನು ಕಡಿಮೆಮಾಡುವುದಕ್ಕಾಗಿ ತಾವು ಪ್ರಯತ್ನಪಡುತ್ತಿದ್ದೇವೆಂದೂ ಈಗ ಆಗಿರುವ ಒಳ್ಳೆಯ ಬೆಳೆಯು ಬೇಗ ಮಾರಾಟಕ್ಕೆ ಬರುವುದರಿಂದ ಧಾರಣೆಗಳು ಇಳಿದು ಕಡಿಮೆಮಾಡುವುದು ಸಾಧ್ಯವಾಗುವುದೆಂದು ತಾವು ನಿರೀಕ್ಷಿಸುತ್ತೇವೆಂದೂ ತಿಳಿಸಿದರು.

ಈ ಯುದ್ಧಕಾಲದಲ್ಲಿ, ಈ ಯುದ್ಧವನ್ನು ತೃಪ್ತಿಕರವಾಗಿ ಕೊನೆಗಾಣಿಸುವುದಕ್ಕೆ ಮಾಡಬಹುದಾದ ಎಲ್ಲಾ ಪ್ರಯತ್ನಗಳನ್ನೂ ಒಟ್ಟುಗೂಡಿಸಬೇಕಾಗಿರುವ ಕಾರಣ ಯುದ್ಧವು ಕೊನೆಗಾಣುವ ವರೆಗೂ ಮತ್ತು ಆ ಮೇಲೆ ಆರು ತಿಂಗಳುಗಳ ವರೆಗೂ ಜಾರಿಯಲ್ಲಿಡಬೇಕೆಂದು ತಮ್ಮನ್ನು ಬಂಧಿಸುವ ಕೆಲವು ಹುಕುಂಗಳಿಗೆ ಅವಕಾಶಕೊಡುವಂಥ ಒಂದು ಮಸೂದೆಯನ್ನು ಜಾರಿಗೆ ತರುವುದು ಹೊರತು ಉಳಿದ ಎಲ್ಲಾ ನ್ಯಾಯವಿಧಿಗಳನ್ನು ಈಗಿನಿಂದ ನಿಲ್ಲಿಸಿ ಬಿಡಬೇಕೆಂದು ವೈಸ್‌ರಾಯಿಯವರು ಸಲಹೆ ಕೊಟ್ಟರು. ಇದಕ್ಕೆ ಎಲ್ಲರೂ ಒಪ್ಪಿದರು. ಸಭೆಯು ಫೆಬ್ರವರಿ 23ಕ್ಕೆ ತಿರುಗಿ ಕೂಡಿ ಬರುವಂತೆ ಗೊತ್ತುಮಾಡಲಾಯಿತು.

ಇಟಲಿ ದೇಶದಲ್ಲಿ ಭಯಂಕರವಾದ ಭೂಕಂಪ.

ಸಾವಿರಾರು ಜನರು ಮಡಿದುಹೋದರು

ಇಟಲಿ ದೇಶದ ದಕ್ಷಿಣ ಭಾಗದಲ್ಲಿ ಕಳೆದ ವಾರ ಒಂದು ದೊಡ್ಡ ಭೂಕಂಪವಾಯಿತು. ಅದರ ದೆಸೆಯಿಂದ ಅನೇಕ ಊರು ಗ್ರಾಮಗಳು ಹಾಳಾದುವು. ಆ ದೇಶದ ರಾಜಧಾನಿಯಾದ ರೋಮ್ ಪಟ್ಟಣಕ್ಕೂ ಸ್ವಲ್ಪ ಅಪಾಯವು ಸಂಭವಿಸಿದೆ. ಅದರಲ್ಲಿದ್ದ ದೊಡ್ಡ ದೊಡ್ಡ ಕಟ್ಟಡಗಳು ಜಖಂ ಆಗಿವೆ. ಆದರೆ ಒಂದು ಪ್ರಾಣವಾದರೂ ನಷ್ಟವಾಗಿರುವುದಿಲ್ಲ. ಅವೆಜ್ಜಾನೋ ಎಂಬ ಊರಿನಲ್ಲಿ 9,000 ಪ್ರಜಾ ಸಂಖ್ಯೆ ಇದ್ದಿತೆಂದೂ ಈಗ 800 ಮಂದಿ ಮಾತ್ರ ಉಳಿದಿದ್ದಾರೆಂದೂ ಹೇಳಲಾಗಿದೆ. ಈ ಭಯಂಕರವಾದ ಅನಾಹುತದಿಂದ ಪ್ರಾಣ ನಷ್ಟಪಟ್ಟವರು 12,000 ವೆಂದೂ ಇದಲ್ಲದೆ 20,000 ಜನಗಳಿಗೆ ಗಾಯಗಳಾಗಿವೆಯೆಂದೂ ತಿಳಿದು ಬರುತ್ತದೆ. ಇಟಲಿ ದೇಶದ ದೊರೆಗಳು ಹೋಗಿ ಈ ಅನಾಹುತಕ್ಕೆ ಸಿಕ್ಕಿದ ಸ್ಥಳಗಳನ್ನು ನೋಡಿಕೊಂಡು ಬಂದರು. ಬಿದ್ದ ಮನೆಗಳ ಅಡಿಯಲ್ಲಿ ಸಿಕ್ಕಿಕೊಂಡಿರುವ ಸಾವಿರಾರು ಮಂದಿಗೆ ಸಹಾಯಮಾಡುವುದು ಅಸಾಧ್ಯವಾಗಿದೆ

ದೇವರನ್ನು ಹುಡುಕುವುದು.

ಮನುಷ್ಯನು ಯಾವಾಗಲೂ ದೇವರನ್ನು ಹುಡುಕುತ್ತಾ ಇರುತ್ತಾನೆ. ಮನುಷ್ಯರು ಬಹು ಪುರಾತನ ಕಾಲದಿಂದಲೂ ದೇವರ ವಿಷಯವಾಗಿ— ನಾನು ಆತನನ್ನು ತಿಳಿದುಕೊಂಡು, ಆತನನ್ನು ಕಂಡುಕೊಂಡರೆ, ಎಷ್ಟೋ ಒಳ್ಳೆಯದು ಎಂದು ಹೇಳಿಕೊಳ್ಳುತ್ತಾ ಬಂದಿರುತ್ತಾರೆ. ಅವರು ಆತನನ್ನು ಕುರಿತು ಧ್ಯಾನ ಮಾಡುತ್ತಾ ವಿಚಾರಮಾಡುತ್ತಾ ಚರ್ಚಿಸುತ್ತಾ, ಪ್ರಾರ್ಥಿಸುತ್ತಾ ಇದ್ದುದರಿಂದ ದೇವರು ಸ್ವಲ್ಪ ಮಟ್ಟಿಗೆ ತನ್ನನ್ನು ಅವರಿಗೆ ತಿಳಿಯಪಡಿಸಿಕೊಂಡನು. ಅವರು ದೇವರನ್ನು ಕಂಡುಕೊಂಡರು; ಆದರೆ ಸಂಪೂರ್ಣವಾಗಿ ಅಲ್ಲ ; ಅದು ಅಸಂಪೂರ್ಣವಾಗಿ ಮಾತ್ರ ಇದ್ದಿತು.

ನಾವು ಆರ್ಷೇಯಗ್ರಂಥಗಳನ್ನು ಓದುತ್ತಾ ಬರುವಲ್ಲಿ ಮನುಷ್ಯರು ದೇವರು ವಿಷಯ ಎಂತಹ ಅಭಿಪ್ರಾಯಗಳನ್ನು ಮಾಡಿಕೊಂಡರೆಂಬುದು. ನಮಗೆ ಕಂಡುಬರುವುದು. ಅವುಗಳಲ್ಲಿ ಕೆಲವು ಕೇವಲ ತಪ್ಪಾದವುಗಳಾಗಿಯೂ ಅಸಂಪೂರ್ಣವಾದವುಗಳಾಗಿಯೂ ಸಂಪೂರ್ಣವಾಗಿ ಸತ್ಯವಲ್ಲದವುಗಳಾಗಿಯೂ ಇದ್ದವು. ಅವರು ದೇವರು ತಮ್ಮ ಹಾಗೆ ಅಸಂಪೂರ್ಣನಾಗಿಯೂ ಅಸ್ಥಿರನಾಗಿಯೂ ಇರುತ್ತಾನೆ ; ರಾಜರಾಕ್ಷಸನ ಹಾಗೆ ನಿರಂಕುಶಶಕ್ತಿಯುಳ್ಳವನು ; ಆತನನ್ನು ಮುಖಸ್ತುತಿ ಮಾಡಬಹುದು ; ಈತನಿಗೆ ಲಂಚಕಟ್ಟಬಹುದು ; ಮೊರೆಯಿಡುವುದರಿಂದಲೂ ಕಣ್ಣೀರನ್ನು ಸುರಿಸುವುದರಿಂದಲೂ ಜಪತಪಗಳನ್ನು ಮಾಡುವುದರಿಂದಲೂ ಆತನಲ್ಲಿ ಅಂತಃಕರಣವನ್ನು ಹುಟ್ಟಿಸಬಹುದು ಎಂದು ಅಭಿಪ್ರಾಯ ಮಾಡಿಕೊಂಡಿದ್ದರು. ಆದಕಾರಣ ಮನುಷ್ಯರು ದೇವರನ್ನು ತಿಳಿಯುವುದಕ್ಕೂ ಆತನ ದಯವನ್ನು ಸಂಪಾದಿಸಿಕೊಳ್ಳುವುದಕ್ಕೂ ತಮಗೆ ತೋರಿದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾ ಬಂದರು

ಆದರೆ ದೇವರು ಮಹಾ ದೊಡ್ಡವನಾಗಿಯೂ ಸರ್ವಶಕ್ತನಾಗಿಯೂ ಇದ್ದಾಗ್ಯೂ ಆತನು ಪವಿತ್ರನಾಗಿರುತ್ತಾನೆ. ಎಂಬೀ ತಿಳುವಳಿಕೆಯು ಕೆಲವು ಮಂದಿಗೆ ಮಾತ್ರ ಬಂದಿತ್ತು. ಇವರು ಆತನು ಒಬ್ಬ ರಾಜರಾಕ್ಷಸನಂತೆ ಇರುತ್ತಾನೆ ; ಆತನು ಒಳ್ಳೆಯದನ್ನು ಹೇಳಿದಾಗ್ಯೂ ಕೆಟ್ಟದನ್ನು ಹೇಳಿದಾಗ್ಯೂ ಆತನ ಮಾತಿಗೆ ನಾವು ವಿಧೇಯರಾಗಲೇ ಬೇಕು ಎಂದು ಎಂದಿಗಾದರೂ ಭಾವಿಸದೆ, ಆತನು ಸಂಪೂರ್ಣವಾಗಿ ಪರಿಶುದ್ಧನಾಗಿಯೂ ನೀತಿವಂತನಾಗಿಯೂ ಪವಿತ್ರನಾಗಿಯೂ ಇರುತ್ತಾನೆ ; ಆದಕಾರಣ ಆತನನ್ನು ಮುಖಸ್ತುತಿಮಾಡುವುದಕ್ಕಾಗುವುದಿಲ್ಲ ; ಆತನಿಗೆ ಲಂಚ ಕೊಡುವುದಕ್ಕಾಗುವುದಿಲ್ಲ ; ಯಜ್ಞ, ಜಪತಪ, ಕಾಣಿಕೆ ಮುಂತಾದವುಗಳಿಂದ ಆತನ ದಯವನ್ನು ಸಂಪಾದಿಸಿಕೊಳ್ಳುವುದಕ್ಕಾಗುವುದಿಲ್ಲ ಎಂದು ತಿಳಿದುಕೊಂಡಿದ್ದರು. ದೇವರನ್ನು ತಿಳಿದುಕೊಳ್ಳಬೇಕಾದರೆ, ಆತನಂತೆ ಪವಿತ್ರರೂ ನೀತಿವಂತರೂ ಪರಿಶುದ್ಧರೂ ಆಗುವುದೊಂದೇ ಮಾರ್ಗವಾಗಿರುತ್ತದೆ.

ಮನುಷ್ಯನು ತನ್ನ ಬುದ್ಧಿಶಕ್ತಿಯನ್ನು ಯಾವುದಾದರೊಂದು ರೀತಿಯಲ್ಲಿ ಪ್ರಯೋಗಿಸಿ. ದೇವರನ್ನು ಕಂಡುಕೊಳ್ಳುವುದು ಸಾಧ್ಯವಾಗಿದೆ ಎಂದು ಭಾವಿಸುವುದು ನಿಷ್ಪ್ರಯೋಜನವಾಗಿರುತ್ತದೆ. ನಮಗೆ ಬುದ್ಧಿಯನ್ನು ಕೊಟ್ಟವನು ಆತನೇ. ಆದರೆ ಅದರಿಂದ ನಾವು ಆತನನ್ನು ಕಂಡುಕೊಳ್ಳುವುದಕ್ಕಾಗುವುದಿಲ್ಲ ಏಕೆಂದರೆ ಚರ್ಚೆಮಾಡುವುದರಿಂದಲೂ ನ್ಯಾಯಗಳನ್ನು ಎತ್ತಿ ತೋರಿಸುವುದರಿಂದಲೂ ಅನೇಕ ಸಮಯಗಳಲ್ಲಿ ನಮ್ಮ ಮನಸ್ಸಿಗೆ ತುಂಬಾ ಗಲಿಬಿಲಿಯುಂಟಾಗುವುದು. ಇವು ಪ್ರಯೋಜನಕರವಾದುವುಗಳೇ ಹೌದು. ಆದರೆ ಇವು ದೇವರನ್ನು ಕಂಡುಕೊಳ್ಳುವ ಪ್ರಾಮುಖ್ಯವಾದ ವಿಧಾನಗಳಲ್ಲ. ಶಾಸ್ತ್ರಜ್ಞರು ಉಪಯೋಗಿಸುವ ಸೂಕ್ಷ್ಮದರ್ಶಕಯಂತ್ರ ದೂರದರ್ಶಕಯಂತ್ರ ಮುಂತಾದ ಆಯುಧಗಳನ್ನು ಪ್ರಯೋಗಿಸಿ, ನಾವು ಆತನನ್ನು ಹುಡುಕಿದಾಗ್ಯೂ ಆತನು ನಮಗೆ ಸಿಕ್ಕದೇ ಇರಬಹುದು. ಆತನು ಹೇಗಾದರೂ ನಮ್ಮ ಮನಸ್ಸಾಕ್ಷಿಗೂ ನಮ್ಮ ಮನಸ್ಸಿಗೂ ಗೋಚರನಾದರೆ, ನಾವು ಆತನ ಕಾರ್ಯಗಳಲ್ಲೆಲ್ಲಾ ಆತನನ್ನು ನೋಡುವೆವು.

ದೇವರು ನಮಗೆ ಸಿಕ್ಕಬೇಕಾದರೆ, ನಾವು ಕೆಟ್ಟದನ್ನು ವಿಸರ್ಜಿಸುವುದಕ್ಕೂ ಒಳ್ಳೆಯದನ್ನು ಮಾಡುವುದಕ್ಕೂ ಕಲಿತುಕೊಳ್ಳಬೇಕು. ಸೂಕ್ಷ್ಮಬುದ್ಧಿಯಿಂದಲ್ಲ, ಆದರೆ ದೀನಮನಸ್ಸಿನಿಂದ ನಾವು ಆತನನ್ನು ಕಂಡುಕೊಳ್ಳುತ್ತೇವೆ. ನಾವು ಸತ್ಯತೆ, ನೀತಿ, ಶುದ್ಧತೆ, ಒಳ್ಳೇತನ ಇವುಗಳನ್ನು ಪ್ರೀತಿಸಬೇಕು. ಮತ್ತು ನಾವು ಸತ್ಯವಂತರಾಗಿಯೂ ನೀತಿವಂತರಾಗಿಯೂ ಶುದ್ಧರಾಗಿಯೂ ಒಳ್ಳೆಯವರಾಗಿಯೂ ಇರಬೇಕೆಂಬ ಚಿಂತೆಯು ನಮ್ಮಲ್ಲಿರಬೇಕು. ಆಗ ದೇವರು ನಮಗೆ ಸಿಕ್ಕುವನು. ಆತನು ಹೇಗಿದ್ದಾನೆಂಬುದು ನಮಗೆ ತಿಳಿದುಬರುವುದು.

ದೇವರನ್ನು ಹುಡುಕುವ ಕಾರ್ಯದಲ್ಲಿ ನಮಗೆ ಸಿಕ್ಕುವ ಅತ್ಯಂತ ದೊಡ್ಡ ಸಹಾಯವು ಯಾವುದೆಂದರೆ ಯೇಸು ಕ್ರಿಸ್ತನೇ. ಸತ್ಯತೆ, ನೀತಿ, ಶುದ್ಧತೆ, ಒಳ್ಳೇತನ ಇವುಗಳು ಪರಿಪೂರ್ಣವಾಗಿ ಪ್ರಕಟಿಸಲ್ಪಟ್ಟಿರುವುದನ್ನು ಯೇಸು ಕ್ರಿಸ್ತನಲ್ಲಿ ನಾವು ನೋಡುತ್ತೇವೆ. ದೇವರು ಎಂಥವನಾಗಿರುತ್ತಾನೆಂಬುದನ್ನು ಆತನು ನಮಗೆ ತೋರಿಸಿಕೊಟ್ಟಿರುತ್ತಾನೆ. ದೇವರು ಪವಿತ್ರನಾಗಿ ಮಾತ್ರವೇ ಅಲ್ಲ, ಒಳ್ಳೆಯವನಾಗಿಯೂ ಇರುತ್ತಾನೆ ; ಆತನು ನಮ್ಮ ತಂದೆ ; ಆದಕಾರಣ ನಾವು ಆತನ ಮಕ್ಕಳಾಗಬಹುದು ಎಂಬೀ ವಿಷಯಗಳನ್ನು ಆತನು ನಮಗೆ ಹೊರಪಡಿಸಿರುತ್ತಾನೆ ಸತ್ಯವೇದದಲ್ಲಿರುವ ಸುವಾರ್ತೆಗಳೆಂಬ ಪುಸ್ತಕಗಳಲ್ಲಿ ಬರೆಯಲ್ಪಟ್ಟಿರುವ ಆತನ ಜೀವಚರಿತ್ರೆಯು ದೇವರು ಎಂಥವನಾಗಿರುತ್ತಾನೆಂಬುದನ್ನು ನಮಗೆ ತೋರಿಸುತ್ತದೆ. ಲೋಕದವರಿಗೆ ತಿಳಿದು ಬಂದಿರುವಷ್ಟರ ಮಟ್ಟಿಗೆ ದೇವರು ತನ್ನನ್ನು ಪ್ರಕಟಗಡಿಸಿಕೊಂಡಿರುವ ಎಲ್ಲಾ ವಿಧಾನಗಳಲ್ಲಿ ಇದೇ ಅತ್ಯುತ್ತಮವಾದುದು. ಯಾರು ಯೇಸು ಕ್ರಿಸ್ತನನ್ನು ಕಂಡುಕೊಂಡು, ಆತನನ್ನು ತಿಳಿದಿರುತ್ತಾರೋ ಅವರು ದೇವರು ಎಂಥವನಾಗಿರುತ್ತಾನೆಂಬುದನ್ನು ತಿಳಿದು ಆತನನ್ನು ಕಂಡುಕೊಂಡಿರುತ್ತಾರೆ. ಎಲ್ಲಾ ಜಾತಿಗಳಲ್ಲಿಯೂ ವಂಶಗಳಲ್ಲಿಯೂ ಇರುವ ಎಲ್ಲಾ ಮನುಷ್ಯರು ಈ ರೀತಿಯಲ್ಲಿ ದೇವರನ್ನು ಕಂಡುಕೊಳ್ಳುವವರಾಗಲಿ.

ಯುದ್ಧದ ಸಮಾಚಾರಗಳು.

ಫ್ರಾನ್ಸಿನಲ್ಲಿ ಘೋರವಾದ ಯುದ್ಧ.

ಟರ್ಕಿಯವರು ತಿರಿಗಿ ಸೋತುಹೋದದ್ದು.

ಯುದ್ಧವು ಅನೇಕ ಕಡೆಗಳಲ್ಲಿ ನಡೆಯುತ್ತಾ ಇದೆ. ಕೆಲವು ಸ್ಥಳಗಳಲ್ಲಿ ಬಹು ಘೋರವಾಗಿಯೂ ನಡೆಯುತ್ತಾ ಇದೆ. ಆದರೆ ಮುಖ್ಯವಾಗಿ ಹವ ಕೆಟ್ಟಿರುವುದರ ದೆಸೆಯಿಂದ ಯಾವ ಕಡೆಯಲ್ಲಾದರೂ ಹೆಚ್ಚು ವೃದ್ಧಿಯು ಉಂಟಾಗಿರುವುದಿಲ್ಲ.

ಪಶ್ಚಿಮದ ಯುದ್ಧಭೂಮಿಯಲ್ಲಿ.

ಸೊಯಿಸಜ್ ಬಳಿಯಲ್ಲಿ ಫ್ರೆಂಚರ ಸೈನ್ಯವನ್ನು ಭೇದಿಸಿಕೊಂಡು ಮುಂದೆ ನುಗ್ಗಬೇಕೆಂದು ಜರ್ಮನಿಯವರು ತುಂಬಾ ಸಾಹಸಪಟ್ಟಿರುತ್ತಾರೆ. ಆ ನದಿಯಲ್ಲಿ ತುಂಬಾ ಪ್ರವಾಹವು ಬಂದಿತ್ತು. ಫ್ರೆಂಚರು ತಮ್ಮ ಮೇಲೆ ಬಂದು ಬಿದ್ದ ಜರ್ಮನಿಯವರ ಅಪಾರವಾದ ಸೈನ್ಯವನ್ನು ಹಿಂದಕ್ಕೆ ಓಡಿಸಲಾರದೆ ತಾವೇ ಸ್ವಲ್ಪ ದೂರದ ವರೆಗೆ ಹಿಮ್ಮೆಟ್ಟಿ ಹೋಗಬೇಕಾಯಿತು. ಈ ಯುದ್ಧದಲ್ಲಿ ಫ್ರೆಂಚರು ಸುಮಾರು 1,000 ಮಂದಿಯನ್ನು ಕಳೆದುಕೊಂಡರು. ಇವರಲ್ಲಿ ಅನೇಕರು ಗಾಯಪಟ್ಟವರಾದ್ದರಿಂದ ಹಿಂದಕ್ಕೆ ಓಡಿಹೋಗಲಾರದೆ ಇದ್ದರು. ಮತ್ತು ಕೆಲಸಕ್ಕೆ ಬಾರದ ನಾಲ್ಕು ಫಿರಂಗಿಗಳು ಜರ್ಮನಿಯವರ ವಶವಾದವು. ಜರ್ಮನಿಯವರು ಫ್ರೆಂಚರ ಸಾಲನ್ನು ಭೇದಿಸಿರುವುದೇ ಇಲ್ಲ. ಆ ಸಾಲು ಈಗಲೂ ಸಂಪೂರ್ಣವಾಗಿಯೇ ಇರುತ್ತದೆ. ಅವರು ಸ್ವಲ್ಪ ದೂರ ಹಿಮ್ಮೆಟ್ಟಿ ಹೋದರು ಅಷ್ಟೆ. ಈ ಯುದ್ಧದಲ್ಲಿ ಜರ್ಮನಿಯ ಚಕ್ರವರ್ತಿಯವರು ಹಾಜರಾಗಿದ್ದರೆಂದು ಹೇಳಿಕೊಳ್ಳುತ್ತಾರೆ.

ಮತ್ತೊಂದು ಸ್ಥಳದಲ್ಲಿ ಫ್ರೆಂಚರು ಜರ್ಮನಿಯವರನ್ನು ಹಿಂದಕ್ಕೆ ಓಡಿಸಿಬಿಟ್ಟು ಅವರಲ್ಲಿ ಕೆಲವರನ್ನು ಸೆರೆಯಾಗಿ ಹಿಡುಕೊಂಡಿರುತ್ತಾರೆ. ಹೀಗೆ ಈ ಯುದ್ಧವು ಹಿಂದಕ್ಕೂ ಮುಂದಕ್ಕೂ ತೂಗಾಡುತ್ತಾ ಇರುತ್ತದೆ. ಒಟ್ಟಾಗಿ ಹೇಳಬೇಕಾದರೆ ನಮ್ಮ ಕಡೆಯ ಸೈನ್ಯಗಳೇ ಸ್ವಲ್ಪ ಮಟ್ಟಿಗೆ ಮುಂದರಿದು ಹೋಗಿರುತ್ತವೆ.

ಮಳೆಯ ದೆಸೆಯಿಂದ ಯುದ್ಧಕ್ಕೆ ತುಂಬಾ ಅಡಚಣೆಯಾಗಿರುತ್ತದೆ. ಕಂದಕಗಳಲ್ಲಿ ತುಂಬಿಕೊಂಡಿರುವ ನೀರನ್ನು ಸೇದಿ ಹೊರಗೆ ಸುರಿಯುವದು ಮಹಾ ಪ್ರಯಾಸವಾಗಿದೆ. ಕೆಲವು ಸ್ಥಳಗಳಲ್ಲಿ ಸಿಪಾಯಿಗಳು ಕಂದಕಗಳಿಂದ ಹೊರಗೆ ಬಂದು ಬಿಸಿಲು ಕಾಯಿಸಿಕೊಳ್ಳುತ್ತಿರುವಾಗ ಯುದ್ಧಮಾಡಬಾರದೆಂದು ಉಭಯ ಪಕ್ಷಗಳವರೂ ಒಪ್ಪಿಕೊಂಡಿರುತ್ತಾರೆ.

ಗಾಳಿ ಮಳೆಗಳು ವಿಶೇಷವಾಗಿದ್ದಾಗ್ಯೂ ಉಭಯಪಕ್ಷಗಳವರಲ್ಲಿಯೂ ವಿಮಾನಕಾರರು ಕಳೆದ ವಾರ ತಮ್ಮ ತಮ್ಮ ಕೆಲಸಗಳನ್ನು ನಡಿಸುತ್ತಲೇ ಇದ್ದರು. ಜರ್ಮನಿಯ ಕೆಲವು ವಿಮಾನಕಾರರು ಫ್ರಾನ್ಸಿನ ಉತ್ತರದಲ್ಲಿರುವ ಡನ್‌ಕರ್ಕ್ ಎಂಬ ಪಟ್ಟಣದ ಮೇಲೆ ಬಂದು ಅನೇಕ ಸಿಡಿಮದ್ದಿನ ಗುಂಡುಗಳನ್ನು ಇಳೀಬಿಟ್ಟರು ಇದರಿಂದ ಐದು ಜನರು ಸತ್ತು ಹೋದರು ಮತ್ತೊಂದು ಸ್ಥಳದಲ್ಲಿ ಫ್ರೆಂಚರ ಒಬ್ಬ ವಿಮಾನಕಾರರು ಜರ್ಮನಿಯವರ ಒಂದು ಆಕಾಶ ವಿಮಾನವನ್ನು ಹಿಂದಟ್ಟಿಹೋಗಿ ಅದನ್ನು ಭೂಮಿಗೆ ಇಳಿಯುವಂತೆ ಮಾಡಿದ್ದಲ್ಲದೆ ಅದರಲ್ಲಿದ್ದ ಒಬ್ಬ ಅಧಿಕಾರಿಯನ್ನು ಕೊಂದು, ಮತ್ತೊಬ್ಬನಿಗೆ ಗಾಯಮಾಡಿರುತ್ತಾನೆ. ಫ್ರೆಂಚರ ಮತ್ತೊಬ್ಬ ವಿಮಾನಕಾರನು ಜರ್ಮನಿಯವರ ಒಂದು ಆಕಾಶ ವಿಮಾನವನ್ನು ಮುತ್ತಿಗೆ ಹಾಕಿ ಅದಕ್ಕೆ ನಾಲ್ಕು ಗುಂಡುಗಳನ್ನು ಹೊಡೆದು ಅದರಲ್ಲಿದ್ದ ಜರ್ಮನ ಸೇನಾಪತಿಯ ಕುಮಾರರಾದ ಲೆಫ್ಟನೆಂಟ್ ವಾನ್ ಫಾಲ್ಕೆನ್‌ಹಾಯನ್ ರವರನ್ನು ಕೊಂದು ಬೇರೆ ಮೂವರಿಗೆ ಗಾಯಗಳನ್ನು ಮಾಡಿದನು. ಬ್ರಿಟಿಷರ ವಿಮಾನಕಾರರು ಆಂಟ್‌ವರ್ಪ್ ಪಟ್ಟಣದಲ್ಲಿದ್ದ ಜರ್ಮನಿಯವರ ಠಾಣ್ಯಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಇಳೀ ಬಿಟ್ಟಿರುತ್ತಾರೆ. ಜರ್ಮನಿಯವರ ಕೆಲವು ಆಕಾಶ ವಿಮಾನಗಳು ಒಟ್ಟಾಗಿ ಸೇರಿ, ಇಂಗ್ಲೆಂಡಿಗೆ ಹೋಗಬೇಕೆಂಬ ಉದ್ದೇಶದಿಂದ ಇಂಗ್ಲಿಷ್ ಕಡಲು ಮಾರ್ಗವಾಗಿ ಹೊರಟು ಸ್ವಲ್ಪ ದೂರದ ವರೆಗೂ ಹೋಗಿ ಹಿಂದಿರುಗಿ ಬಂದುಬಿಟ್ಟವು

ಪೂರ್ವದ ಯುದ್ಧಭೂಮಿಯಲ್ಲಿ.

ವಾರ್ಸಾಕ್ಕೆ ಪಶ್ಚಿಮದಲ್ಲಿ ಸುಮಾರು ಇಪ್ಪತ್ತು ಮೈಲುಗಳ ದೂರದಲ್ಲಿ ಮುಖ್ಯವಾದ ಯುದ್ಧವು ನಡೆಯುತ್ತಾ ಇರುವಂತೆ ತೋರುತ್ತದೆ. ಈ ಸ್ಥಳದಲ್ಲಿ ಜರ್ಮನಿಯವರು ಮುಂದಕ್ಕೆ ನುಗ್ಗಿಹೋಗಬೇಕೆಂದು ತುಂಬಾ ಸಾಹಸಪಟ್ಟರೂ ಅವರ ಪ್ರಯತ್ನಗಳೆಲ್ಲಾ ನಿರರ್ಥಕವಾಗಿರುತ್ತವೆ. ರಷ್ಯಾದವರು ಪ್ರತಿ ಸಲವೂ ಅವರನ್ನು ಹಿಂದಕ್ಕೆ ಓಡಿಸಿಬಿಟ್ಟಿರುತ್ತಾರೆ. ಒಂದು ದಿನ ರಾತ್ರಿ ಜರ್ಮನಿಯವರು ಹದಿಮೂರು ಸಾರಿ ನುಗ್ಗಿ ಬಂದರು. ಆದರೂ ಅವರು ಹಿಮ್ಮೆಟ್ಟಿಹೋಗಬೇಕಾಯಿತು. ಅವರ ಕಡೆ ಅನೇಕರು ಹತರಾದರು. ಯುದ್ಧವು ಬಹು ವಿಸ್ತಾರವಾದ ಪ್ರದೇಶವನ್ನು ಆವರಿಸಿಕೊಂಡಿರುವುದರಿಂದ ಅಲ್ಲಿ ನಡೆಯತಕ್ಕ ವಿಧಾನಗಳನ್ನು ಖಚಿತವಾಗಿ ಹೇಳುವುದು ಸುಲಭಸಾಧ್ಯವಲ್ಲ. ನಮಗೆ ತಿಳಿದಿರುವಷ್ಟರ ಮಟ್ಟಿಗೆ ಹೇಳಬೇಕಾದರೆ, ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾದವರನ್ನು ಹಿಂದಕ್ಕೆ ಓಡಿಸಬೇಕೆಂದು ಸಾಹಸಪಡುತ್ತಿದ್ದಾರೆ ಆದರೆ ಎಲ್ಲಾ ಕಡೆಗಳಲ್ಲೂ ಅವರ ಪ್ರಯತ್ನಗಳು ನಿರರ್ಥಕವಾಗುತ್ತಲಿವೆ. ರಷ್ಯಾದವರೂ ಕೂಡ ಮುಂದಕ್ಕೆ ನುಗ್ಗಿಹೋಗಿರುವುದಿಲ್ಲ ಆದರೆ ಅವರ ಕಡೆಗೆ 8,00,000 ಸಂಖ್ಯೆಯುಳ್ಳ ಒಂದು ಹೊಸ ಸೈನ್ಯವು ಬಂದಿದೆಯೆಂದೂ ಅವರಿಗೆ ಅನುಕೂಲವಾದ ಒಂದು ಪ್ರಯತ್ನವು ಇಷ್ಟರಲ್ಲೇ ನಡೆಯುವುದಕ್ಕಿದೆಯೆಂದೂ ಹೇಳಲಾಗಿದೆ.

ರಷ್ಯಾ ಮತ್ತು ಟರ್ಕಿ.

ಈಚೆಗೆ ಬಂದಿರುವ ಸಮಾಚಾರಗಳಿಂದ ಟರ್ಕಿಯವರಿಗೆ ಆರ್ಮೀನಿಯಾದಲ್ಲಿ ಉಂಟಾದ ಅಪಜಯವು ಬಹು ಘೋರವಾದುದೆಂದು ತಿಳಿದು ಬರುತ್ತದೆ. ಟರ್ಕಿಯವರ ಕಡೆ ಸತ್ತವರ, ಗಾಯಪಟ್ಟವರ, ಸೆರೆಸಿಕ್ಕಿದವರ ಸಂಖ್ಯೆಯು 80,000 ವೆಂದೂ ಅವರಲ್ಲಿ ಮುಖ್ಯ ಹುದ್ದೆದಾರರುಗಳ ಪೈಕಿ ಮೂರನೇ ಎರಡು ಭಾಗವು ನಷ್ಟವಾಯಿತೆಂದೂ ಹೇಳಲಾಗಿದೆ ರಷ್ಯಾದವರು ಟರ್ಕಿಯವರ 100 ತುಪಾಕಿಗಳನ್ನೂ ಎಲ್ಲಾ ಯುದ್ಧದ ಸಾಮಗ್ರಿಗಳನ್ನೂ ಭಂಡಾರಗಳನ್ನೂ ಸಕ್ಷಗಳನ್ನೂ ಅನೇಕ ಪಿಸ್ತೋಲುಗಳನ್ನು ತಮ್ಮ ಸ್ವಾಧೀನಮಾಡಿಕೊಂಡರು. ತಮ್ಮ ಸೈನ್ಯದಲ್ಲಿ ಉಳಿದವರು ಹಿಂದಕ್ಕೆ ಬರುವಂತೆ ಅವರ ಸಹಾಯಕ್ಕಾಗಿ ಟರ್ಕಿಯವರು ಹೊಸ ಸೈನ್ಯಗಳನ್ನು ಕಳುಹಿಸಿಕೊಟ್ಟರು ಆದರೆ ರಷ್ಯಾದವರು ಇವರನ್ನೂ ಸಹ ಹಿಂದಕ್ಕೆ ಅಟ್ಟಿ ಅವರಲ್ಲೂ ಇನ್ನೂ ಅನೇಕರನ್ನು ಸೆರೆಯಾಗಿ ಹಿಡಿದುಕೊಂಡರು ಚಿಕ್ಕ ಆಸ್ಯದಲ್ಲಿದ್ದ ಟರ್ಕಿಯವರ ಕಡೆಯಿಂದ 80,000 ಮಂದಿ ಆರ್ಮೀನಿಯಾದವರು ರಷ್ಯಾ ದೇಶಕ್ಕೆ ಓಡಿಹೋಗಿರುತ್ತಾರೆ.

ಟರ್ಕಿ ಸೈನಿಕರಲ್ಲಿ ಕೆಲವರು ಪರ್ಷ್ಯದೊಳಕ್ಕೆ ನುಗ್ಗಿಹೋದರು. ಪರ್ಷ್ಯ ಗವರ್ನ್‌ಮೆಂಟಿನವರು ತಟಸ್ಥರಾಗಿರುವ ಕಾರಣ ತಮ್ಮ ದೇಶದೊಳಗೆ ಬರಬಾರದೆಂದು ಅವರಿಗೆ ಅಡ್ಡಿಮಾಡಿದರು. ಈ ಯುದ್ಧವನ್ನು ಮತಸಂಬಂಧವಾದ ಯುದ್ಧವನ್ನಾಗಮಾಡಬೇಕೆಂಬ ಟರ್ಕಿಯವರ ಪ್ರಯತ್ನಗಳು ನಿರರ್ಥಕವಾಗಿರುತ್ತವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮಹಮ್ಮದೀಯರೇ ಮಹಮ್ಮದೀಯರಿಗೆ ವಿರೋಧವಾಗಿ ಯುದ್ಧಮಾಡುತ್ತಿದ್ದಾರೆ. ಇದಲ್ಲದೆ ಟರ್ಕಿಯವರ ಕಡೆಯಲ್ಲಿ ಮಹಮ್ಮದೀಯರಲ್ಲದ ಎರಡು ರಾಜ್ಯಗಳವರು ಸೇರಿಕೊಂಡಿರುತ್ತಾರೆ. ಹೀಗಿರುವಲ್ಲಿ ಈ ಯುದ್ಧವನ್ನು ಮತಸಂಬಂಧವಾದ ಯುದ್ಧವೆಂದು ಕರೆಯುವುದು ಅಸಾಧ್ಯ.

ರಷ್ಯಾದವರು ಆಪ್ಪುಕಡಲನ್ನು ತಮ್ಮ ಸ್ವಾಧೀನಮಾಡಿಕೊಂಡಿದಾರೆಂಬುದು ಸ್ಪಷ್ಟವಾಗಿದೆ. ಆದಕಾರಣ ಟರ್ಕಿಯವರ ಹಡಗುಗಳು ಹೆಚ್ಚು ಹಾವಳಿಯನ್ನು ಮಾಡುವುದಕ್ಕೆ ಅವಕಾಶವಿಲ್ಲ. ಇದಲ್ಲದೆ ರಷ್ಯಾದವರ ಹಡಗುಗಳು ಟರ್ಕಿಯ ಕೆಲವು ಪಟ್ಟಣಗಳಿಗೆ ಹೋಗಿ ಅವರ ವ್ಯಾಪಾರದ ಹಡಗುಗಳಲ್ಲಿ ಅನೇಕ ಹಡಗುಗಳನ್ನು ನಾಶನಪಡಿಸಿರುತ್ತವೆ.

ಮಸ್ಕಟ್ ಬಳಿ ಪಾರ್ಷಿಯ ಕೊಲ್ಲಿಯಲ್ಲಿ ಅರಾಬ್ಯರು ದಂಗೆ ಎದ್ದಿರುತ್ತಾರೆ. ಇವರು 5,000 ಜನರು ಒಂದಾಗಿ ಸೇರಿ ಬ್ರಿಟಿಷರ ಸೈನ್ಯಗಳ ಮೇಲೆ ಬಂದು ಬಿದ್ದರು ಆದರೆ ಕಡೆಗೆ ಅರಾಬ್ಯರು ಸೋತುಹೋಗಿ ಅವರ ಕಡೆ 600 ಮಂದಿ ಕೊಲ್ಲಲ್ಪಟ್ಟರು. ಈ ಯುದ್ಧದ ವಿವರವು ಈ ವರೆಗೂ ತಿಳಿದುಬಂದಿಲ್ಲ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರ ಸೈನ್ಯಗಳು ಬ್ರಿಟಿಷ್ ಮತ್ತು ಜರ್ಮನಿ ದೇಶಗಳ ಎಲ್ಲೆಕಟ್ಟುಗಳಿಗೆ ಮಧ್ಯದಲ್ಲಿರುವ ಆರೆಂಜ್ ನದಿಯನ್ನು ದಾಟಿ ವಿಶೇಷ ಅಭ್ಯಂತರಗಳೇನೂ ಇಲ್ಲದೆ ಸ್ವಲ್ಪ ದೂರ ಮುಂದಕ್ಕೆ ಹೋಗಿರುತ್ತಾರೆ.

ಪಶ್ಚಿಮ ಆಫ್ರಿಕಾದಲ್ಲಿ ಜರ್ಮನಿಯವರು ಕ್ಯಾಮೆರೂನ್ ಸ್ವಾಸ್ಥ್ಯಗಳ ಲ್ಲಿದ್ದ ಫ್ರೆಂಚರ ಮೇಲೆ ಬಂದು ಬಿದ್ದರು. ಫ್ರೆಂಚರು ಅವರನ್ನು ಹಿಂದಕ್ಕೆ ಅಟ್ಟಿಬಿಟ್ಟರು ಜರ್ಮನಿಯವರ ಕಡೆ 30 ಯೂರೋಪಿಯನರೂ, 40 ಸ್ವದೇಶಿಯರೂ ಕೊಲ್ಲಲ್ಪಟ್ಟರು

ದಕ್ಷಿಣ ಆಫ್ರಿಕಾದ ದಂಗೆಯು ಸಂಪೂರ್ಣವಾಗಿ ಅಡಗಿಹೋದಂತೆ ತೋರುತ್ತದೆ. ಮತ್ತು ಜರ್ಮನಿಯವರ ದೇಶದೊಳಗೆ ನುಗ್ಗಿಹೋಗುವುದು ಪ್ರಾರಂಭವಾಗಿದೆ.

ಇತರ ವಿಷಯಗಳು.

ನಮ್ಮ ಜಾರ್ಜ್ ಚಕ್ರವರ್ತಿಗಳವರು ಇಂಗ್ಲೆಂಡಿನಲ್ಲಿರುವ ಬ್ರೈಟನ್ ಪಟ್ಟಣಕ್ಕೆ ಹೋಗಿ ಅಲ್ಲಿದ್ದ ಗಾಯಪಟ್ಟ ಹಿಂದು ದೇಶದ ಸಿಪಾಯಿಗಳನ್ನು ಕಂಡು ಅವರ ಸಂಗಡ ಮಾತಾಡಿದರು ಅವರು ಗಂಗ ಸಿಂಗ್ ಎಂಬವನ ಸಂಗಡ ಸಂಭಾಷಣೆ ಮಾಡಿದರು. ಇವನು ವಿಕ್ಟೋರಿಯಾ ಕ್ರಾಸ್ ಎಂಬ ಬಿರುದನ್ನು ಗಿದ್ದವನಾಗಿಯೂ ತುಂಬಾ ಗಾಯಪಟ್ಟವನಾಗಿಯೂ ಇದ್ದನು. ಒಬ್ಬ ಹಿಂದು ಸಿಪಾಯಿಯು ಇಂಡಿಯಾದಲ್ಲಿರುವ ತನ್ನ ಭೂಮಿಯ ವಿಷಯದಲ್ಲಿ ಚಕ್ರವರ್ತಿಯವರನ್ನು ಕೇಳಿದನು ಅದಕ್ಕೆ ಜಾರ್ಜ್ ಧೊರೆಗಳು ಅವನು ತನ್ನ ವಿಜ್ಞಾಪನೆಯನ್ನು ಬರೆದುಕೊಳ್ಳಬೇಕೆಂದು ಅಪ್ಪಣೆಕೊಡಿಸಿದರು.

ನಮ್ಮ ಕಡೆಯ ಸೈನ್ಯಗಳಿಗೆಲ್ಲಾ ಮುಖ್ಯ ಸೇನಾಪತಿಯಾಗಿರುವ ಸರ್ ಜಾನ್ ಫ್ರೆಂಚ್ ರವರು ಫ್ರಾನ್ಸಿನಲ್ಲಿರುವ ಹಿಂದು ದೇಶದ ಕೆಲವು ಸೈನ್ಯಗಳನ್ನು ಪರೀಕ್ಷೆಮಾಡಿ ಅವರುಗಳಿಗೆ ಹೇಳಿದ್ದೇನೆಂದರೆ—ನಾನು ನಿಮ್ಮನ್ನು ನೋಡಿದ್ದಕ್ಕಾಗಿ ತುಂಬಾ ಸಂತೋಷಪಡುತ್ತೇನೆ. ನೀವು ನಿಮ್ಮ ನಿಮ್ಮ ಕರ್ತವ್ಯಗಳನ್ನು ಘನತರವಾಗಿ ಮಾಡಿರುತ್ತೀರೆಂದು ನಿಮಗೆ ತಿಳಿಸಬೇಕೆನ್ನುತ್ತೇನೆ. ಈಗಿನ ಕೆಟ್ಟ ಹವಾದ ದೆಸೆಯಿಂದ ನೀವು ಬಹಳ ಕಷ್ಟವನ್ನನುಭವಿಸಿರುತ್ತೀರಿ ನೀವು ಯುದ್ಧದಲ್ಲಿ ಚೆನ್ನಾಗಿ ಕಾದಾಡಿ ಹಿಂದು ದೇಶದ ಸೈನ್ಯದ ಘನತೆಯನ್ನು ಕಾಪಾಡಿರುತ್ತೀರಿ. ನಿಮ್ಮ ಶ್ರಮ ಮತ್ತು ನಡತೆಗಾಗಿ ನಿಮ್ಮಲ್ಲಿ ಪ್ರತಿಯೊಬ್ಬರನ್ನೂ ನಾನು ವಂದಿಸುತ್ತೇನೆ. ಇಂಥ ಉತ್ತಮವಾದ ನಿಮ್ಮ ಗುಣ ನಡತೆಗಳನ್ನು ಮುಂದೆಯೂ ಕಾಪಾಡಿಕೊಳ್ಳುವಿರೆಂದು ನಾನು ದೃಢವಾಗಿ ನಂಬಿರುತ್ತೇನೆ ಎಂಬುವದೇ

ಆಸ್ಪತ್ರೆ ಹಡಗುಗಳು ಇಂಗ್ಲೆಂಡಿನಿಂದ 325 ಮಂದಿ ಗಾಯಪಟ್ಟ ಹಿಂದು ದೇಶದ ಸಿಪಾಯಿಗಳನ್ನೂ, ಪಾರ್ಷಿಯ ಕೊಲ್ಲಿಯಿಂದ 200 ಮಂದಿಯನ್ನೂ ಕರೆದುಕೊಂಡು ಬಂದು ಬೊಂಬಾಯಿ ಪಟ್ಟಣದಲ್ಲಿ ಇಳಿಸಿರುತ್ತವೆ. ಅವರಲ್ಲಿ ಕೆಲವರನ್ನು ಆ ಪಟ್ಟಣದಲ್ಲಿಯೇ ಇಟ್ಟುಕೊಂಡು ಉಳಿದವರನ್ನು ಅವರವರ ಊರುಗಳಿಗೆ ಕಳುಹಿಸಿಬಿಟ್ಟರು.

ಪೂನಾ ಪಟ್ಟಣದಲ್ಲಿ 21 ಮಂದಿ ಪಾರ್ಸಿ ವಾಲಂಟಿಯರುಗಳು ಯುದ್ಧಕ್ಕೆ ಹೋಗಿದಾರೆಂದು ಹೇಳಲಾಗಿದೆ.

ಬಿಕನೇರ್ ಮಹಾರಾಜರವರು ಲಂಡನ್ ಪಟ್ಟಣದಲ್ಲಿ ಚಕ್ರವರ್ತಿಯವರ ಕಂಡಲೂ ಮಹಾರಾಜ್ಞಿಯವರ ಸಂಗಡಲೂ ಫಲಾಹಾರ ತೆಗೆದುಕೊಂಡರು. ಮತ್ತು ಚಕ್ರವರ್ತಿಯವರು ನವನಗರದ ಜಾಂರವರ ಸಂಗಡ ಸಂಭಾಷಣೆ ಮಾಡಿದರು.

ಯುದ್ಧದ ಖರ್ಚು ದಿನ 1 ಕ್ಕೆ 9,00,000 ಪೌಂಡ್ ಅಂದರೆ 13,50,00,000 ರೂಪಾಯಿ ಆಗುತ್ತದೆಂದು ಹೇಳಲಾಗಿದೆ.

ಫ್ರೆಂಚ್ ಪಾರ್ಲಿಮೆಂಟ್ ಸಭೆಯು ಸೇರಿ, ಯುದ್ಧದ ಖರ್ಚಿಗಾಗಿ ಬೇಕಾಗುವ ಹಣವನ್ನು ಕೊಡುವುದಾಗಿ ಒಪ್ಪಿಕೊಂಡರು ಜರ್ಮನಿಯವರಿಗೆ ಸಂಪೂರ್ಣವಾಗಿ ಸೋಲಾಗುವ ವರೆಗೂ ಯುದ್ಧವನ್ನು ಮುಂದರಿಸಬೇಕೆಂದು ಫ್ರೆಂಚರು ನಿರ್ಧರಮಾಡಿಕೊಂಡಿದಾರೆ.

ಆಸ್ಟ್ರಿಯದ ರಾಜಧಾನಿಯಾದ ವಿಯೆನ್ನದ ವಿದ್ಯಮಾನಗಳು ಕೇವಲ ನಿಕೃಷ್ಟವಾದ ಸ್ಥಿತಿಯಲ್ಲಿವೆಯೆಂದು ಹೇಳಲಾಗಿದೆ. ಜನಗಳು ರೋಗಗಳು, ಕಾಲರ, ವಿಷಮಶೀತಜ್ವರ ಮುಂತಾದವುಗಳಿಂದ ಕಷ್ಟಪಡುತ್ತಲಿದಾರೆ. ದವಸ ಧಾನ್ಯಗಳು ಬಹು ಕ್ರಯವಾಗಿರುವುದರಿಂದ ಆಹಾರ ಸಿಕ್ಕುವುದೇ ಪ್ರಯಾಸವಾಗಿದೆ.

ಜರ್ಮನಿಯವರಿಗೆ ಯುದ್ಧದ ಆಯುಧಗಳನ್ನು ತಯಾರುಮಾಡುವದಕ್ಕಾಗಿ ತಾಂಬ್ರವು ಬೇಕಾಗಿರುತ್ತದೆ ಯುದ್ಧದಲ್ಲಿ ಭಾಗಿಗಳಾಗದೆ ತಟಸ್ಥವಾಗಿರುವ ರಾಜ್ಯಗಳ ಹಡಗುಗಳು ತಾಂಬ್ರವನ್ನು ತೆಗೆದುಕೊಂಡು ಹೋಗುವುದನ್ನು ಕುರಿತ ವಿಷಯದಲ್ಲಿ ಇಂಗ್ಲೆಂಡಿನ ಅಮೇರಿಕದ ಕಾಗದಪತ್ರಗಳು ನಡೆಯುತ್ತಲಿವೆ ಹಡಗುಗಳನ್ನು ಶೋಧನೆಮಾಡಿ, ಜರ್ಮನಿಗೆ ಹೋಗತಕ್ಕ ತಾಂಬ್ರವನ್ನೆಲ್ಲಾ ತೆಗೆದುಬಿಡುವ ಹಕ್ಕು ತನಗಿದೆಯೆಂದು ಇಂಗ್ಲೆಂಡ್ ಹೇಳುತ್ತಾ ಇದೆ. ಈ ಪತ್ರವ್ಯವಹಾರವು ಪೂರ್ಣ ಮೈತ್ರೀಭಾವದಿಂದ ಕೂಡಿದ್ದಾಗಿದೆ. ಇದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವರೆಂದು ನಂಬಬಹುದಾಗಿದೆ. ತಾಂಬ್ರದ ಕ್ರಯ ಟನ್ 1 ಕ್ಕೆ ಇಂಗ್ಲೆಂಡಿನಲ್ಲಿ 60 ಪೌಂಡ್ ಜರ್ಮನಿಯಲ್ಲಿ 160 ಪೌಂಡ್.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಶ್ರೀರಂಗಪಟ್ಟಣದಲ್ಲಿರುವ ಶ್ರೀ ಬಾಮರಾಜೇಂದ್ರ ಛತ್ರದ ಕಟ್ಟಡದಲ್ಲಿ ಇಲಿಗಳು ಸತ್ತದ್ದರಿಂದ ಹದಿನೈದನೇ ತಾ. ನಿಂದ ಒಂದು ತಿಂಗಳು ಮುಚ್ಚಲ್ಪಟ್ಟಿರುವುದು.

ಮ॥ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಪ್ರೊಫೆಸರ್ ಗೆಡ್ಡೆಯವರ ಉಪನ್ಯಾಸ ಕೇಳುವುದಕ್ಕೂ ಮತ್ತು ಪಟ್ಟಣಾಭಿವೃದ್ಧಿಯ ಪ್ರದರ್ಶನವನ್ನು ನೋಡುವುದಕ್ಕೂ ಮದ್ರಾಸಿಗೆ ಹೋಗಿರುವರು.

ಶಿವಮೊಗ್ಗ ಸಬ್ ಜಡ್ಜರಾದ ಮ॥ ಬಿ. ನಾಗಪ್ಪನವರ ಕುಮಾರರಾದ ಮ॥ ಬಿ. ಎನ್. ವಿಜಯದೇವ, ಎಂ. ಎ. ರವರು ಸೀಮೆಯಲ್ಲಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆಂದು ತಿಳಿದು ಸಂತೋಷಪಡುತ್ತೇವೆ.

ನಮ್ಮ ಶ್ರೀಮನ್ ಮಹಾರಾಜರವರೂ ಅರಮನೆಯ ರಾಣೀವಾಸದವರೂ ಕಳೆದ ಶನಿವಾರ ಬೆಂಗಳೂರಿನಿಂದ ಮದರಾಸಿಗೆ ದಯಮಾಡಿದರು. ಅವರೆಲ್ಲಾ ಅಲ್ಲಿ ಸುಮಾರು ನಾಲ್ಕುವಾರಗಳ ತನಕ ಇದ್ದು ವಾಪಸು ಚಿತ್ತೈಸುವರೆಂದು ಕೇಳುತ್ತೇವೆ.

ನಮ್ಮ ಗವರ್ನ್ಮೆಂಟಿನವರು ಪ್ರಕಟಿಸಬೇಕೆಂದಿರುವ ಅರ್ಥಸಾಧನಾ ಪತ್ರಿಕೆಯ ಪ್ರಾಸಪೆಕ್ಟಸ್ ನಮಗೆ ತಲಪಿರುವುದು ಅದರಂಗವು ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವ ಪ್ರಕಟನೆಯನ್ನು ನೋಡಿದರೆ ವಿಶದವಾಗಿ ಗೊತ್ತಾಗುವುದು.

ಕಳೆದ 14 ನೇ ತಾ. ಸಾಯಂಕಾಲ ಚಿತ್ರದುರ್ಗದಲ್ಲಿ ಮ॥ ರಾ॥ ಕೆ. ಸುಬ್ಬರಾಯರವರು ಪರಮ ಭಕ್ತನಾದ ಪ್ರಹ್ಲಾದನ ಚರಿತ್ರೆಯನ್ನು ಬಹು ಸ್ವಾರಸ್ಯವಾಗಿ ಹರಿಕಥೆ ಮಾಡಿ ಅಲ್ಲಿ ನೆರೆದು ಬಂದಿದ್ದ ಸುಮಾರು 400 ಜನರನ್ನು ಬಹಳವಾಗಿ ಸಂತೋಷಪಡಿಸಿದರೆಂದು ತಿಳಿದುಬರುತ್ತೆ.

ರಾಜಧಾನಿಯ ವಕೀಲರುಗಳಲ್ಲಿ ಗಣ್ಯತೆಯನ್ನೂ ಪ್ರಜೆಗಳಲ್ಲಿ ಪ್ರೀತಿಯನ್ನೂ, ವಿದ್ಯಾರ್ಥಿಗಳಲ್ಲಿ ಗೌರವವನ್ನೂ ಸಂಪಾದಿಸಿಕೊಂಡಿರುವ ಅಡ್ವೊಕೇಟ್ ಮ॥ ಬಿ. ಆರ್. ಕೃಷ್ಣಮಾಚಾರ್ರನ್ನು ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಕಮಾಡಿದಾರೆಂದು ಕೇಳಿ ಸಂತೋಷಿಸುತ್ತೇವೆ.

ರಾಜಧಾನಿಯಲ್ಲಿ ಕಳೆದ ವಾರ 2-3 ದಿನ ಮೋಡಹಾಕಿಕೊಂಡಿತ್ತು; ಕಳೆದ ಸೋಮವಾರ ರಾತ್ರಿ ಸ್ವಲ್ಪ ಮಳೆಯೂ ಸುರಿಯಿತು. ಮಾಗೀಕಾಲದ ಛಳಿಯು ಕಾಣುವುದಿಲ್ಲ. ಬಿಸಿಲು ಬಹು ತೀಕ್ಷ್ಣವಾಗಿ ಕಾಯುವುದು. ಈಗ ಮಳೆ ಬಂದ ಪಕ್ಷದಲ್ಲಿ ಒಕ್ಕಣೆಯ ಧಾನ್ಯಗಳು ಕೆಟ್ಟು ಹಾಳಾಗುವವೆಂದು ಅನೇಕರು ಚಿಂತೆ ಪಡುತ್ತಾರೆ.

ಮೈಸೂರು ಬ್ರಿಟಿಷ್ ರೆಸಿಡೆಂಟರಾಗಿದ್ದ ಸರ್. ಹ್ಯೂ ಡಾಲಿ ರವರ ಸ್ಥಾನಕ್ಕೆ ಮ॥ ಎ. ಎಲ್. ಪಿ. ಟಕ್ಕರ್ ರವರು ಉತ್ತರಾಧಿಕಾರಿಗಳಾಗುವರು. ಮ॥ ಟಕ್ಕರ್ ರವರು 1904 ರಲ್ಲಿ ರೆಸಿಡೆಂಟರಾಗಿ ಬದಲಿ ನೋಡುತ್ತಿದ್ದು ಬೆಲೂಚಿಸ್ಥಾನಕ್ಕೆ ದಯಮಾಡಿಸಿದರು. ಇವರು ತುಂಬಾ ಅನುಭವಶಾಲಿಗಳಾಗಿಯೂ ಜನರಂಜಕರಾಗಿಯೂ ಇರುತ್ತಾರೆ.

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಹಿಂದಿನ ವಾರ ಕ್ಲಬ್ ಬಂಗಲೆಯಲ್ಲಿ ಸಭೆ ಸೇರಿ, ಸೆಕ್ರೆಟರಿಯವರಾದ ಡಾಕ್ಟರ್ ಸಿ. ರಾಜಾರಾಮರಾಯರವರು ವಿಶೇಷ ಉತ್ಸಾಹವನ್ನೂ ಸಾಹಸ ಪ್ರಯತ್ನವನ್ನೂ ಮಾಡಿ ಮುತುವರ್ಜಿ ವಹಿಸಿ ಕಾರ್ಯಮಾಡಿದ್ದರಿಂದ ಕ್ಲಬ್ಬಿಗೆ ಸ್ವಂತವಾದ ಹೊಸ ಕಟ್ಟಡವು ದೊರಕಿತೆಂಬ ವಿಷಯವನ್ನು ಚರ್ಚಿಸಿ, ಅವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಅವರ ಛಾಯಾ ಚಿತ್ರವನ್ನು ಬರಸಿ ಕ್ಲಬ್ಬಿನೊಳಗೆ ಕಟ್ಟಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ.

ರಾಜಧಾನಿಯಲ್ಲಿದ್ದು ಕಾಲವಾದ ಜೆ. ಕೆ. ಸಾಹುಕಾರ್ ನರಸಿಂಹಯ್ಯನವರ ಪತ್ನೀಯವರು ಅವರ ಹೆಸರಿನಲ್ಲಿ ಸುಮಾರು 35,000 ರೂಪಾಯಿ ಮುಟ್ಟಿಸಿ ಒಂದು ಧರ್ಮಛತ್ರವನ್ನೂ, ಕುಂಚಿಟಿಗ ಬಾಲಕರಿಗೋಸ್ಕರ ಸುಮಾರು 10,000 ರೂಪಾಯಿ ಖರ್ಚುಮಾಡಿ ಒಂದು ವಿದ್ಯಾರ್ಥಿನಿಲಯವನ್ನೂ ಕಟ್ಟಿಸುವವರಾಗಿದಾರೆಂದು ಕೇಳುತ್ತೇವೆ. ಪರಹಿತಾರ್ಥವಾಗಿ ಆಕೆ ಇಷ್ಟು ಮೇಲಾದ ಧರ್ಮಗಳನ್ನು ಮಾಡುವುದು ರಾಜಧಾನಿಯಲ್ಲಿ ಆಕೆಯ ಶಾಶ್ವತವಾದ ಯಶಸ್ಸಿಗೂ, ಪ್ರೋತ್ಸಾಹಕ್ಕೂ ಸಾಧಕವಾಗುತ್ತದೆ

ಹೇಮಗಿರಿ ಶ್ರೀ ವೆಂಕಟರಮಣಸ್ವಾಮಿಯವರ ಕಲ್ಯಾಣೋತ್ಸವ, ಮಹಾರಥೋತ್ಸವ, ತೆಪ್ಪೋತ್ಸವ ಮುಂತಾದವುಗಳು ಇದೇ ತಿಂಗಳು ತಾ. 21 ರಿಂದ 25 ರ ವರೆಗೆ ನಡೆಯುವವೆಂದೂ, ನಾಗಮಂಗಲದ ಸಮೀಪದಲ್ಲಿರುವ ಕೋಟೆ ಬೆಟ್ಟದ ಶ್ರೀ ವೆಂಕಟರಮಣಸ್ವಾಮಿಯ ರಥೋತ್ಸವವೂ ದನಗಳ ಪ್ರದರ್ಶನವೂ ಇದೇ ತಿಂಗಳು 31 ಕ್ಕೆ ಪ್ರಾರಂಭವಾಗುವವೆಂದೂ, ಅರಕಲಗೂಡು ತಾ॥ ಹುಲಿಕಲ್ಲು ಗ್ರಾಮದ ಪ್ರಸನ್ನ ವೆಂಕಟರಮಣಸ್ವಾಮಿಯ ರಥೋತ್ಸವವು ಫೆಬ್ರವರಿ ತಾ. 7 ರಲ್ಲಿ ನಡೆಯುವದೆಂದೂ ತಿಳಿದುಬರುತ್ತದೆ.

ಕಳೆದ ವಾರ ರಾಜಧಾನಿಯಲ್ಲಿ ಅಮೃತಮಹಲ್ ಸೂಪರಿಂಟೆಂಡೆಂಟರಾದ ಮ॥ ಎಚ್. ನಂಜುಂಡರಾಜೆ ಅರಸಿನವರು ತಮ್ಮ ಕುಮಾರನಿಗೆ ಅ॥ ಕಲಾಪದ ನರಾ ಮ॥ ಸಿ. ದೇವರಾಜೆ ಅರಸಿನವರ ಕುಮಾರ್ತೆಯನ್ನು ತಂದುಕೊಂಡು ವಿವಾಹ ಮಹೋತ್ಸವವನ್ನು ನಡಿಸಿದರು ಮ್ಯುನಿಸಿಪಲ್ ಪ್ರೆಸಿಡೆಂಟ್ ಮ॥ ಟಿ ಲಕ್ಷ್ಮಣರಾಯರು ತಮ್ಮ ಕುವರಿಗೆ ವಿವಾಹ ಮಾಡಿದರು. ಈ ವಿವಾಹಗಳಿಗೆ ರಾಜಧಾನಿಯ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಕರೆಸಲ್ಪಟ್ಟಿದ್ದು, ನೂತನ ದಂಪತಿಗಳಿಗೆ ಚಿರಾಯುರಾರೋಗ್ಯಾದಿಗಳನ್ನು ಬಯಸಿದರು

ಜಗಳೂರು ತಾ. ನಾಯ್ಕನ ಹಟ್ಟಿ ಹೋಬಳಿ ಮಡವೆಂಪುರದ ಬಸಪ್ಪನ ಎರಡು ಎತ್ತುಗಳು ಶನಿವಾರ ಸಂತೆಯಲ್ಲಿ ಕಳುವಾಗಿರುತ್ತವೆಂದೂ ಅದನ್ನು ಪತ್ತೇಮಾಡಿಕೊಟ್ಟವರಿಗೆ 25 ರೂ. ಬಹುಮಾನ ಕೊಡುತ್ತೇನೆಂದೂ ತಿಮ್ಮಪ್ಪಯ್ಯನ ಹಳ್ಳಿ ಸಾಹುಕಾರ್ ಓಬಯ್ಯಪ್ಪನವರು ತಿಳಿಸುತ್ತಾರೆ. ಎತ್ತುಗಳ ಚಹರಪಟ್ಟಿ—ಒಂದು ಅಚ್ಚ ಬಿಳಿದು. ಸುಮಾರು 90 ರೂ. ಬಾಳತಕ್ಕದ್ದು. ನಾಲ್ಕು ಹಲ್ಲಿನಲ್ಲಿರುತ್ತೆ ಮುಂದಿನ ಎರಡು ಚಪ್ಪೆಗಳ ಮೇಲೆ ಎರಡು ಬರೆಹಾಕಿದೆ. ಮತ್ತೊಂದು ಹಾಲಮಿಸಗು. ಕ್ರಯ ಸುಮಾರು 30 ರೂ. 7-8 ವಯಸ್ಸು.

ವ್ಯವಸಾಯದ ಇಲಾಖೆಯವರು ತಿಳಿಸುವದು —ಕಬ್ಬಿನ ಸಾಗುವಳಿ ಮತ್ತು ಬೆಲ್ಲಮಾಡಿ ತೋರಿಸುವ ವಿಧಾನದ ವ್ಯವಸಾಯ ಸಂಬಂಧ ಸುಲಭ ಪಾಠವು ಹೆಬ್ಬಾಳ ಫಾರಂನಲ್ಲಿ 25-1-1915 ನೆ ತಾರೀಖು ಮೊದಲು ಮಾಡಿಕೊಂಡ ವಾರದಲ್ಲಿ ನಡಿಯುವುದು. ಈ ಪಾಠಗಳನ್ನು ಕೇಳಬೇಕೆನ್ನುವವರು ಸಂಸ್ಥಾನದ ಮಳೆ ಇರತಕ್ಕ ಜಮೀನುದಾರರು ಮತ್ತು ರೈತರುಗಳು ಸಹಾ ಸದ್ರಿ ಪಾಠಗಳನ್ನು ಕೇಳಲು ಬರಲು ಅವರ ಊಟ ಮತ್ತು ಇಳಿಯಲು ಸ್ಥಳ ವಗೈರೆಗೆ ತಕ್ಕ ಏರ್ಪಾಡು ಮಾಡತಕ್ಕ ಬಗ್ಗೆ ಒಂದು ವಾರ ಮುಂಚಿತವಾಗಿ ನನಗೆ ತಿಳಿಸತಕ್ಕದ್ದು. ಸದರಿ ಪಾಠಗಳನ್ನು ಕೇಳಲು ಬರತಕ್ಕ ಜನಗಳಿಗೆ ಇಳಿಯಲು ಸ್ಥಳ ಮುಫತ್ತಾಗಿ ಕೊಡಲ್ಪಡುತ್ತೆ. ಊಟಕ್ಕೆ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲ್ ಮಾಡಲಾಗುತ್ತೆ.

ಪಟ್ಟಣಗಳಲ್ಲಿ ಮನೆಗಳನ್ನು ಅಲಂಕಾರವಾಗಿಯೂ ಆರೋಗ್ಯಜನಕವಾಗಿಯೂ ಕಟ್ಟುವ ವಿಷಯದಲ್ಲೂ, ಬಡಾವಣೆಗಳನ್ನು ಮಾಡುವ ವಿಷಯದಲ್ಲೂ ಪರಿಶ್ರಮವುಳ್ಳ ಪ್ರೊಫೆಸರ್ ಗೆಡ್ಡೆಸ್ ಎಂಬವರು ಮದರಾಸಿನಲ್ಲಿ ಕೆಲವು ದಿನಗಳ ತನಕ ಉಪನ್ಯಾಸಗಳನ್ನು ಮಾಡುತ್ತಾರೆ ಇವರು ಸೀಮೆಯಿಂದ ಬಂದು ದಕ್ಷಿಣ ದೇಶದ ಮುಖ್ಯ ಪಟ್ಟಣಗಳನ್ನು ನೋಡಿಕೊಂಡು ಹೋದದ್ದಲ್ಲದೆ ಕಳೆದ ವಾರ ಬೆಂಗಳೂರಿಗೂ ಬಂದಿದ್ದು, ಪುರಾಧ್ಯಕ್ಷರ ಕೂಡ ಸಿಟಿ ಬಸವನಗುಡಿ ಮಲ್ಲೇಶ್ವರ, ದಂಡು ಮೊದಲಾದ ಭಾಗಗಳನ್ನೆಲ್ಲಾ ನೋಡಿದರು. ಮೇಲ್ಕಂಡ ಉಪನ್ಯಾಸಗಳನ್ನು ಕೇಳುವುದಕ್ಕಾಗಿ ನಮ್ಮ ಸರ್ಕಾರದವರು ಮೈಸೂರು ಬೆಂಗಳೂರು ಷಹರುಗಳ ಪುರಾಧ್ಯಕ್ಷರನ್ನೂ ಕೆಲವು ಮ್ಯುನಿಸಿಪಲ್ ಕೌನ್ಸಲರುಗಳನ್ನೂ, ಸರ್ಕಾರದ ಕೆಲವು ಅಧಿಕಾರಿಗಳನ್ನೂ ಕಳುಹಿಸಿರುತ್ತಾರೆ.

ಫಲಪುಷ್ಪಗಳ ಪ್ರದರ್ಶನವು ಬೆಂಗಳೂರು ಲಾಲ್ ಬಾಗಿನಲ್ಲಿ ಮುಂದಿನ ತಿಂಗಳು 6 ನೇ ತಾ. ಮಧ್ಯಾಹ್ನ ಪ್ರಾರಂಭಿಸಿ, ಪುಷ್ಪಗಳ ಪ್ರದರ್ಶನವು ಸಾಯಂಕಾಲ ನಡೆಯುವುದು. ಈ ವರ್ಷ ಫಲಪುಷ್ಪಗಳ ವ್ಯವಸಾಯಕ್ಕೆ ಉಪಯೋಗಿಸುವ ದೊಡ್ಡ ವ್ಯವಸಾಯ ಮುಟ್ಟುಗಳೂ, ತೋಟದ ಚಿಲ್ಲರೆ ಸಾಮಾನುಗಳೂ, ಹುವ್ವಿನ ಕುಟ್ಟಿಗಳೂ, ಗೊಬ್ಬರಗಳೂ ಪ್ರದರ್ಶಿಸಲ್ಪಡುವವು. ಇವುಗಳನ್ನು ಉಪಯೋಗಿಸುವ ವಿಧಾನಕ್ಕೆ ಗ್ಲಾಸ್ ಹೌಸಿನ ಬಳಿ ಒಂದು ನೆಲವನ್ನು ಪ್ರತ್ಯೇಕಿಸಿರುವರು. ನಮ್ಮ ಶ್ರೀಮನ್ಮಹಾರಾಜರವರು ಈ ಪೋಟಾಪೋಟಿಗೆ ಮೂರು ಬಟ್ಟಲುಗಳನ್ನು ಬಹುಮಾನಿಸಿರುವರು. ಒಂದು ಫಲಗಳಿಗೆ, ಒಂದು ಪುಷ್ಪಗಳಿಗೆ, ಒಂದು ಅವುಗಳ ವ್ಯವಸಾಯೋಪಕರಣಕ್ಕೆ. ಸ್ಕೂಲು ಹುಡುಗರನ್ನು ಎರಡನೇ ಭಾನುವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12 ರ ವರಿಗೂ ಉಚಿತವಾಗಿ ಬಿಡುವರು.

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಲಾಯರ್ ಸಂಘದವರು ಸಿವಿಲ್ ಕೋರ್ಟ ಕಟ್ಟಡದಲ್ಲಿ ಅಡ್ವೊಕೇಟ್ ಮ॥ ಎಂ. ಸಿ. ರಂಗಯ್ಯಂಗಾರ್ರವರಿಗೆ ರಾವ್ ಬಹದೂರ್ ಎಂಬ ಬಿರುದು ಬಂದದ್ದಕ್ಕಾಗಿ ಒಂದು ಸಂತೋಷಕೂಟವನ್ನು ನಡಿಸಿ, ಮ॥ ರಂಗಯ್ಯಂಗಾರ್ರಿಗೆ ಈ ಬಿರುದು ದೊರಕಿದ್ದರಿಂದ ತಮಗೆಲ್ಲಾ ಉಂಟಾದ ಗೌರವವನ್ನೂ ಆನಂದವನ್ನೂ ಪ್ರಕಾಶಪಡಿಸಿ, ಮ॥ ರಂಗಯ್ಯಂಗಾರ್ರವರ ಗುಣಕಥನವನ್ನು ಮಾಡಿದರು. ಫಲಾಹಾರವೂ, ದಿವ್ಯವಾದ ಸಂಗೀತವೂ ಆಗಿ ಎಲ್ಲರೂ ಬಹು ಸಂತೋಷದಿಂದಲೂ ಉತ್ಸಾಹದಿಂದಲೂ ಕೆಲವು ಕಾಲ ವಿಹರಿಸಿದರು. ರಾವ್ ಬಹದೂರ್ ಮ॥ ರಂಗಯ್ಯಂಗಾರ್ರು ಲಾಯರ್ ಸಂಘದವರು ನಡಿಸಿದ ಸಂತೋಷಕೂಟಕ್ಕಾಗಿ ಅವರನ್ನೆಲ್ಲಾ ಕೃತಜ್ಞತಾಪೂರ್ವಕವಾಗಿ ವಂದನೆಮಾಡಿದರು. ಸೆಕ್ರೆಟರಿಗಳಾದ ಮ॥ ಎ. ಕೃಷ್ಣರಾಯರೂ, ಮ॥ ಎಂ. ಡಿ. ತಿರುಮಲಾಚಾರ್ಯರವರೂ ಈ ಸಂತೋಷಕೂಟದ ಏರ್ಪಾಡುಗಳನ್ನೆಲ್ಲಾ ತೃಪ್ತಿಕರವಾಗಿ ಮಾಡಿದ್ದರು.

ಕಳೆದ ಶನಿವಾರ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಸಭೆ ಸೇರಿ ತಿಂಗಳುಗಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿ ತೀರ್ಮಾನ ಮಾಡಿದ ಮುಖ್ಯವಿಷಯಗಳೇನೆಂದರೆ—ಹಾರ್ಡಿಂಗ್ ಚೌಕವನ್ನು ನಿರ್ಮಾಣ ಮಾಡಿದ್ದಕ್ಕೆ ಖರ್ಚಾದ 1,500 ಚಿಲ್ಲರೆ ರೂಪಾಯನ್ನು ಮ್ಯುನಿಸಿಪಾಲಿಟಿಗೆ ಹೊಂಸಬಾರದೆಂದು ಅಭಿಪ್ರಾಯಪಟ್ಟರು ಕುಕ್ಕರಹಳ್ಳಿ ಕೆರೆ ಕೆಳಗೆ ರಸ್ತೆಯ ಉದ್ದಕ್ಕೂ ಸಾಲು ಗಿಡಗಳನ್ನು ಹಾಕಿ, ಗಿಡಗಳ ಸಂರಕ್ಷಣೆಗಾಗಿ 720 ರೂಪಾಯಿ ಮುಟ್ಟಿಸಿ ಪಂಜರಗಳನ್ನು ಇಡಿಸಬಹುದೆಂದು ಒಪ್ಪಿದರು. ಸುಬ್ಬರಾಯನ ಕೆರೆ ಪೂರ್ವದಿಕ್ಕಿನ ಮೈದಾನದಲ್ಲಿ ಅನಾಥಾಲಯವನ್ನು ಕಟ್ಟುವುದಕ್ಕೆ ನಿವೇಶನವನ್ನು ಕೊಡಬೇಕೆಂದು ಇತ್ಯರ್ಥವಾಗಿತ್ತು. ಆ ನಿವೇಶನವು ಅನಾರೋಗ್ಯಕರವಾದದ್ದೆಂದು ಡೆಪ್ಟಿ ಕಮಿಷನರವರೂ ಹೆಲ್ತ್ಆಫೀಸರುಗಳೂ ಅಭಿಪ್ರಾಯಪಟ್ಟದ್ದರಿಂದ ಸ್ಯಾನಿಟರಿ ಕಮಿಷನರವರನ್ನು ಕೇಳಬೇಕೆಂದು ತೀರ್ಮಾನವಾಡಿದರು. ರಾಜಧಾನಿಯಲ್ಲಿ ಬೀಳುವ ಗೊಬ್ಬರವನ್ನು ಸಾಗಿಸಿಕೊಂಡು ಹೋಗುವ ಸುತ್ತುಮುತ್ತಿನ ರೈತರಿಂದ ಗೊಬ್ಬರಕ್ಕಾಗಿ ತೆರಿಗೆ ಹಾಕುವುದು ಕಾನೂನಿಗೆ ವಿರುದ್ಧವಾದದ್ದೆಂದು ಇತ್ಯರ್ಥಮಾಡಿದರು. ಅನೇಕ ಜನಗಳು ನಿವೇಶನಗಳನ್ನು ತೆಗೆದು ಮನೆ ಕಟ್ಟದೆ ಖಾಲಿ ಬಿಟ್ಟುಕೊಂಡಿದಾರೆ. ಪ್ರೆಸಿಡೆಂಟರು ಅಂಥವರನ್ನೆಲ್ಲಾ ಬಲಾತ್ಕಾರಮಾಡಿ ಜಾಯದೆ ಕೊಟ್ಟು ಮನೆ ಕಟ್ಟಿಸಬೇಕೆಂತಲೂ, ತಪ್ಪಿದರೆ ನಿವೇಶನಗಳನ್ನು ಕಿತ್ತುಕೊಳ್ಳಬೇಕೆಂತಲೂ ಮೆಂಬರುಗಳು ತೀರ್ಮಾನ ಮಾಡಿದರು. ರಾಜಧಾನಿಯಲ್ಲಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಮ್ಯುನಿಸಿಪಾಲಿಟಿಯವರು ಈಗ ಎಷ್ಟು ಖರ್ಚುಮಾಡುತ್ತಿದಾರೆಯೋ ಅಷ್ಟನ್ನು ಮಾಡಬಹುದೆಂದೂ, ಹೆಚ್ಚು ಹಣವನ್ನು ಸರಕಾರದವರು ಕೊಡುತ್ತಾರೆಂದೂ ಇನ್ಸ್‌ಪೆಕ್ಟರ್ ಜನರಲ್ ರವರು ಬರೆದು ತಿಳಿಸಿದಾರೆ.

ತಾಲ್ಲೂಕು ವರ್ತಮಾನಗಳು.

ಅರಕಲಗೂಡು.—ಅರಕಲಗೂಡು ತಾಲ್ಲೂಕು ಕಛೇರಿಯಲ್ಲಿ ಬಹುದಿವಸಗಳಿಂದಲೂ ಸ್ಥಳವಂದಿಗರಂತೆ ಇದ್ದ ನೌಕರರನೇಕರು ವರ್ಗಾಯಿಸಲ್ಪಟ್ಟದ್ದರಿಂದ ಪ್ರಜೆಗಳಿಗೆ ಅನುಕೂಲವಾಗಿರುವಂತೆ ತೋರುತ್ತೆ ಬಾಕಿ ಇಲಾಖೆಗಳು ಮುಖ್ಯವಾಗಿ ಸ್ಕೂಲ್ ಇಲಾಖೆಯ ನೌಕರರಲ್ಲಿ ಮೇಲ್ಕಂಡ ಮೇರೆ ಇರುವ ಕೆಲವರನ್ನು ವರ್ಗಾಯಿಸಿದಲ್ಲಿ ಸ್ಕೂಲ್ ಸ್ಥಿತಿ ಹಾಲಿ ಇರುವದಕ್ಕಿಂತಲೂ ಅಭಿವೃದ್ಧಿಗೆ ಬರಲು ಸಂದೇಹವಿಲ್ಲವಾಗಿ ತೋರುತ್ತೆ. ಇಲ್ಲಿನ ಡಾಕ್ಟರ್ ವಾಸುದೇವರಾಯರವರು ಅನೇಕಾನೇಕ ಬಡರೋಗಿಗಳಿಗೆ ಸಂಭವಿಸಿದ ಮಹತ್ತಾದ ವ್ಯಾಧಿಗಳನ್ನು ಬಹಳ ಮೆಹನತ್ತಿನಿಂದ ಇಲಾಜ್ ಮಾಡಿ ಗುಣಪಡಿಸಿರುತ್ತಾರೆ. ರೋಗಿಗಳ ವಿಷಯದಲ್ಲಿ ಇವರು ತೋರಿಸತಕ್ಕ ದಯಾರಸವು ಇಷ್ಟೆಂದು ವರ್ಣಿಸತೀರದು

ಗುಬ್ಬೀ ತಾಲ್ಲೂಕು ನಿಟ್ಟೂರು.—ಇಲ್ಲಿನ ವಿ ಇ. ಕನ್ನಡ ಗರ್ಲ್ಸ್ ಸ್ಕೂಲಿನ ನೂತನ ಗೃಹೋತ್ಸವವು ತಾ. 8-1-15 ರಲ್ಲಿ ನಡೆಯಿತು. ಆ ದಿನ ಈ ಹೊಸ ಕಟ್ಟಡವು ಕದಳೀ ಸ್ತಂಭಗಳಿಂದಲೂ ತಳಿರು ತೋರಣಗಳಿಂದಲೂ, ಧ್ವಜ ಪತಾಕೆಗಳಿಂದಲೂ, ಮನೋಹರವಾಗಿ ಅಲಂಕರಿಸಲ್ಪಟ್ಟು ನೋಟಕರ ಮನಸ್ಸನ್ನು ಆಕರ್ಷಿಸುತ್ತಿತ್ತು ಇಲ್ಲಿನ ಹೆಡ್ಮಾಸ್ಟರಾದ ಮ॥ ರಾ॥ ಎಚ್ ಆರ್ ನರಸಿಂಹಯ್ಯನವರು ಕಳುಹಿಸಿಕೊಟ್ಟಿದ್ದ ಆಹ್ವಾನ ಪತ್ರಿಕೆಯಂತೆ ಆ ದಿನ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಅನೇಕ ಮಂದಿ ಪ್ರಮುಖ ಸ್ಥಳೀಯ ದೊಡ್ಡ ಮನುಷ್ಯರುಗಳೂ ವಿ. ಇ ಬಾಯ್ಸ್ ಸ್ಕೂಲ್ ಉಪಾಧ್ಯಾಯರುಗಳೂ ಸ್ಕೂಲ್ ಬಾಲಿಕಿಯರೂ ಸಹ ಸನ್ನಿಹಿತರಾಗಿದ್ದರು. ಸಭಿಕರ ಕೋರಿಕೆಯಂತೆ ಇಲ್ಲಿಯ ಹೋಬಳಿ ಶೇಕದಾರ್ ಮ॥ ವೆಂಕಟಪ್ಪನವರು ಅಗ್ರಾಸನವನ್ನು ವಹಿಸಿದರು. ಶಾ.ದಾಯ ಶಾರದಾ ಪೂಜೆಯು ನಡೆಯಿತು ಆ ಮೇಲೆ ಈ ಸ್ಕೂಲಿನ ಸಂಗೀತೋಪಾಧ್ಯಾಯರಿಂದ ಕೊಂಚ ಹೊತ್ತು ಸಂಗೀತವು ನಡೆಯಿತು ನಂತರ ಬಾಲಕಿಯರಿಂದ ದೇವ ಪ್ರಾರ್ಥನೆಗಳೂ ಚಕ್ರವರ್ತಿ ಸಾರ್ವಭೌಮರವರ, ಮತ್ತು ನಮ್ಮ ಶ್ರೀಮನ್ಮಹಾರಾಜರವರ, ಶ್ರೇಯಃ ಪ್ರಾರ್ಥನೆಗಳೂ ನಡೆದ ಮೇಲೆ ಮಂಗಳವು ಹಾಡಲ್ಪಟ್ಟಿತು. ಅನಂತರ ಇಲ್ಲಿ ಸಭೆ ಸೇರಲು ಈ ಗರ್ಲ್ಸ್ ಸ್ಕೂಲನ್ನು ಇದುವರಿವಿಗೂ ನಡೆಸುತ್ತಿದ್ದ ಕಟ್ಟಡದ ಸ್ಥಳ ಸಂಕೋಚದಿಂದ ಹಾಲಿ ನಾವುಗಳು ಈಗ ಇಲ್ಲಿ ಕೂಡಿರತಕ್ಕ ಕಟ್ಟಡದಲ್ಲಿದ್ದ ಬಾಯ್ಸ್ ಸ್ಕೂಲನ್ನು ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರ ವಶದಲ್ಲಿದ್ದ ಪೋಸ್ಟಾಫೀಸಿಗೆ ಆಡಿಗೆ ಬದಲಾಯಿಸಿ ಸದರಿ ಕಟ್ಟಡವನ್ನು ಗರ್ಲ್ಸ್ ಸ್ಕೂಲಿಗೆ ಕೊಟ್ಟಿರುತ್ತಾರೆಂಬ ಸಂತೋಷಕ್ಕಾಗಿ ಸಭೆಯು ಸೇರಿಸಲ್ಪಟ್ಟಿತೆಂಬ ವಿಷಯವನ್ನು ಮ॥ ರಾ॥ ಹೆಡ್ ಮಾಸ್ಟರವರು ತಿಳಿಸಿ ಸ್ಕೂಲಿನ ರಿಪೋರ್ಟನ್ನು ಓದಿದರು. ಅನಂತರ ಸ್ತ್ರೀ ವಿದ್ಯಾಭ್ಯಾಸವು ಅವಶ್ಯಕವೆಂಬ ವಿಷಯವನ್ನು ಕುರಿತು ನೇರ್ಲಕೆರೆ ತಾ॥ ಮ॥ ತಮ್ಮಯ್ಯನವರು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನೂ ಬಾಲಕಿಯರಿಗೆ ಅಲ್ಪಾಹಾರವನ್ನೂ ವಿನಿಯೋಗಿಸಿ ಸಭೆಯು ಉಪಸಂಹರಿಸಲ್ಪಟ್ಟಿತು.

ಸೆಂಟ್ ಜಾರ್ಜ್ ಅಂಬುಲೆನ್ಸ್ ಸಂಘ, ಮೈಸೂರು.

ಮೇಲ್ಕಂಡ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ತಮಗೆ ಒಂಭತ್ತನೇ ಚಂದಾ ಪಟ್ಟಿಯ ಮೂಲಕ ಪಾವತಿ ಆಗಿರುವ ಹಣಗಳನ್ನು ತಿಳಿಸಿರುತ್ತಾರೆ. ಕೊಟ್ಟವರು ಯಾರೆಂದರೆ—

ನೆಲಮಂಗಲದ ಪ್ರಜೆಗಳ 2 ನೇ ಪಟ್ಟಿ ರೂ. 400-0-0, ತುಮುಕೂರು ಡೆಪ್ಯುಟಿ ಕಮಿಷನರವರ 3 ಮತ್ತು 4 ನೇ ಪಟ್ಟಿಗಳು ರೂ. 290-7-7, ಬೆಂಗಳೂರು ಗೌರ್ನಮೆಂಟ್ ಗಾರ್ಡನ್ಸ್ ಮತ್ತು ಮ್ಯೂಸಿಯಂ ಸೂಪರಿಂಟೆಂಡೆಂಟರು ಮತ್ತು ನೌಕರಮಾನೇರುಗಳು ರೂ. 164-2-6, ಶಿವಮೊಗ್ಗ ಡಿಸ್ಟ್ರಿಕ್ಟ್ ಹಳೆಯಕೆರೆ ಪ್ರಜೆಗಳು ರೂ. 59-6-0, ಮಾಗಡಿ ಪ್ರಜೆಗಳ ಮತ್ತೊಂದು ಪಟ್ಟಿ ರೂ. 19-2-0, ಕೃಷ್ಣರಾಜಪೇಟೆ ಸಬ್ ತಾಲ್ಲೂಕ್ ಪ್ರಜೆಗಳು ರೂ. 16-0-0, ಮಿಸೆಸ್ ಬೌರಿಂಗ್ ಮಿಸೆಸ್ ಡೆನ್ಹಾಂ ಯವರ ಮೂಲಕ ರೂ. 16-0-0, ಜೋಡಿ ಚಿಕ್ಕರಣಿ ರೈತರು ರೂ. 9-0-0, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ನೌಕರಮಾನೇರುಗಳ ಮತ್ತೊಂದು ಪಟ್ಟಿ ರೂ. 6-0-0, ಕೋಲಾರದ ಮಾಲೂರ್ ಫಾರೆಸ್ಟ್ ರೇಂಜರ್ ಮತ್ತು ನೌಕರಮಾನೇರುಗಳು ರೂ. 5-0-0, ಸೊರಬದ ಸಬ್ ಅ|| ಸರ್ಜನ್ ತಿರುಮಲರಾವ್ ರೂ. 5-0-0. ಒಂಭತ್ತನೇ ಚಂದಾಪಟ್ಟಿಯ ಜುಮ್ಲಾ ರೂ. 994-2-1 ; ಹಿಂದೆ ಪಾವತಿಯಾದದ್ದು ರೂ. 6,769-2-1 ; ಇದುವರೆಗೆ ಪಾವತಿ ಆಗಿರುವದು ಜುಮ್ಲಾ ರೂ. 7,763-4-2.

ಹೊಸಕೋಟೆ ತಾ|| ಕಲ್ಕುಂಟೆ ಉಪಾಧ್ಯಾಯರ ಪ್ರಥಮ ಸಂಘ.

ಇಲ್ಲಿಗೆ ದೂರ ಫಾಸಲೆಯಲ್ಲಿರುವ ಸರ್ಜಾಪುರ, ಅನೆಕಲ್ಲು, ಹೊಸಕೋಟೆ ಮುಂತಾದ ಸ್ಥಳಗಳಲ್ಲಿ ನಡೆಯುವ ಉಪಾಧ್ಯಾಯರ ಸಂಘಕ್ಕೆ ಹೋಗಿ ಅದರ ಪ್ರಯೋಜನಗಳನ್ನು ಹೊಂದಲು ಅನಾನುಕೂಲವಾದ ಕಾರಣ ಅಂಥ ಸಂಘದ ಪ್ರಯೋಜನಗಳನ್ನು ಇದ್ದಲ್ಲಿಯೇ ಪಡೆಯಬೇಕೆಂದು ಅಪೇಕ್ಷಿಸಿ ಸುತ್ತುಮುತ್ತಲಿರುವ ಸ್ಕೂಲ್ ಉಪಾಧ್ಯಾಯರುಗಳ ಸಹಾಯದಿಂದ ಇಲ್ಲಿನ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರವರು ಅ|| ಮಾಸ್ಟರುಗಳ ಸಹಾಯದಿಂದ ಒಂದು ಉಪಾಧ್ಯಾಯರ ಸಂಘವನ್ನು ಸ್ಥಾಪಿಸಿದರು. ಇಂಥ ಪ್ರಥಮ ಸಂಘವು ತಾ. 3-1-15 ನೇ ಭಾನುವಾರ ಮಧ್ಯಾಹ್ನ 2½ ಗಂಟೆಗೆ ಸರಿಯಾಗಿ ತಳಿರು ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕೃತವಾದ ಬಾಯ್ಸ್ ಸ್ಕೂಲ್ ಹಾಲಿನಲ್ಲಿ ಸೇರಿತು. ಸ್ಕೂಲ್ ಕಮಿಟಿ ಮೆಂಬರುಗಳೂ ಸ್ಥಳದ ಮತ್ತು ಸುತ್ತುಮುತ್ತಲಿರುವ ಗ್ರಾಮಗಳ ಮುಖಂಡರುಗಳೂ ಉಪಾಧ್ಯಾಯರುಗಳೂ ಸಭೆಯನ್ನು ಅಲಂಕರಿಸಿದ್ದರು. ಆ ದಿವಸದ ಸಭೆಯಲ್ಲಿ ಈ ಡಿಸ್ಟ್ರಿಕ್ಟಿನಲ್ಲಿ ಸದರಿ ಸಂಘ ಸ್ಥಾಪಕರಾದ ಸ್ಕೂಲುಗಳ ಅ|| ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಸಿ. ಅನಂತಸುಬ್ಬರಾಯರವರು ದಯವಿಟ್ಟು ಅಗ್ರಾಸನಾಧಿಪತ್ಯವನ್ನು ವಹಿಸಿ ಜನರಿಗೆ ಪ್ರೋತ್ಸಾಹವನ್ನುಂಟುಮಾಡಿದುದಕ್ಕಾಗಿ ಎಲ್ಲರೂ ಬಹಳ ಆನಂದಪಡುತ್ತಾರೆ. ಈ ಸಭೆಯಲ್ಲಿ ಚಿಕ್ಕಬಳ್ಳಾಪುರದ ಸುಬ್ರಾಯನಪೇಟೆ ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರ್ ಮ|| ಕೆ. ನಾರಾಯಣಯ್ಯಂಗಾರ್ರವರು ಸದರಿ ಸಂಘದಿಂದಾಗುವ ಪ್ರಯೋಜನಗಳನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಮತ್ತು ಇಲ್ಲಿನ ಬಾಯ್ಸ್ ಸ್ಕೂಲಿನ ಸಹಾಯೋಪಾಧ್ಯಾಯರಾದ ಮ|| ಎಮ್. ಸುಬ್ಬಯ್ಯನವರು ಮೂರ್ತದ್ರವ್ಯಗಳ ಸಹಾಯದಿಂದ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವ ಕ್ರಮವನ್ನು ಬಹು ಚೆನ್ನಾಗಿ ಮಾಡಿ ತೋರಿಸಿದರು. ಅನಂತರ ಸಭಾಧ್ಯಕ್ಷರು ಮೇಲ್ಕಂಡ ವಿಷಯಗಳನ್ನೇ ಪುಷ್ಟೀಕರಿಸಿ ಭಾಷಣವನ್ನು ಕೊಟ್ಟದ್ದಲ್ಲದೆ ಈ ಗ್ರಾಮದಲ್ಲಿ ಹೊಸದಾಗಿ ಸ್ಕೂಲ್ ಕಟ್ಟಡವನ್ನು ಕಟ್ಟಿಸುವ ವಿಚಾರದಲ್ಲಿ ಕಮಿಟಿ ಮೆಂಬರುಗಳಿಗೂ ಮತ್ತು ಗ್ರಾಮ ಮುಖಂಡರಿಗೂ ಕೆಲವು ವಿಷಯಗಳನ್ನು ತಿಳಿಸಿದರು. ಈ ಕೆಲಸವನ್ನು ಕ್ಷಿಪ್ರದಲ್ಲಿಯೇ ನೆರವೇರಿಸಬೇಕೆಂದು ಕಮಿಟಿ ಮೆಂಬರುಗಳೂ, ಗ್ರಾಮ ಮುಖಂಡರುಗಳೂ ಬಹಳ ಶ್ರದ್ಧೆಯಿಂದ ಗ್ರಾಮದಲ್ಲಿ ಚಂದಾ ವಸೂಲ್ಮಾಡುತ್ತಾ ಇದಾರೆ. ಅನಂತರ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದವು. ಗಂಧ ಪುಷ್ಪ ತಾಂಬೂಲಾದಿಗಳ ವಿನಿಯೋಗವು ಬಹಳ ವಿಜೃಂಭಣೆಯಿಂದ ಜರುಗಿದ ಮೇಲೆ ಸಭೆಯು ಮುಕ್ತಾಯವಾಯಿತು. ಇಲ್ಲಿನ ಮುಖ್ಯೋಪಾಧ್ಯಾಯರು ಇಲ್ಲಿಗೆ ಬಂದ ಮೇಲೆ ಸ್ಕೂಲು ಅನೇಕ ವಿಷಯಗಳಲ್ಲಿ ಅಭಿವೃದ್ಧಿ ಸ್ಥಿತಿಗೆ ಬರುತ್ತಾ ಇದೆ. ಗ್ರಾಮದಲ್ಲಿ ಮುಖಂಡರಾಗಿಯೂ ಸ್ಕೂಲ್ ಕೆಲಸದಲ್ಲಿ ಶ್ರದ್ಧೆಯುಳ್ಳವರಾಗಿಯೂ ಇರುವ ಪಿ. ರಂಗಾಚಾರ್ಯರವರಿಗೆ ಭಗವಂತನು ಪುನಃ ಪತ್ನಿವಿಯೋಗವನ್ನುಂಟುಮಾಡಿದುದಕ್ಕಾಗಿ ಬಹಳ ವಿಷಾದಪಡುತ್ತಾರೆ.

ಪ್ರೇಕ್ಷಕ.

ಒಬ್ಬ ಅಮಲ್ದಾರರಿಗೆ ನಡೆದ ಸನ್ಮಾನಗಳು.

ತುಮ್ಕೂರು ಡಿಸ್ಟ್ರಿಕ್ಟ್ ಕೊರಟಿಗೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸುಬ್ಬರಾಯರವರು ಅಮಲ್ದಾರರಾಗಿ ವರ್ಗಪಟ್ಟು ಗುಬ್ಬಿ ತಾಲ್ಲೂಕಿಗೆ ದಯಮಾಡಿಸಿದರು. ಇವರು ನಿಸ್ಪೃಹರು, ನಿರ್ವಾಹಿಗಳು, ಯಶೋವಂತರು, ಯೋಗ್ಯರೆಂದು ಜಬಾನಿ ಹೇಳುವ ವಾಕ್ಯವು ಸಾಕ್ಷಿಭೂತವಾಗಿ ಇವರಿಗೆ ತಾ. 10 ನೇ ಭಾನುವಾರ ಕೊರಟಿಗೆರೆ ಟವನ್ನಿನಲ್ಲಿ ಮಧ್ಯಾಹ್ನ ಸರಕಾರಿ ನೌಕರರೆಲ್ಲರೂ ಸೇರಿ ತಮ್ಮ ಪ್ರೀತಿ ವಿಧೇಯತೆಗಳನ್ನು ತಿಳಿಸಲೋಸುಗ ಒಂದು ದಿವ್ಯ ಭೋಜನ ಕೂಟವನ್ನೇರ್ಪಡಿಸಿ ಆ ಸ್ಥಾನಕ್ಕೆ ಹಾಜರಿದ್ದ ಈರ್ವರು ಅಮಲ್ದಾರರುಗಳನ್ನೂ ಬರಮಾಡಿಕೊಂಡು ಸತ್ಕರಿಸಿಯೂ ಪುನಃ ಪೇಟೆವರ್ತಕರೆಲ್ಲರೂ ಸೇರಿ ಮಧ್ಯಾಹ್ನ 3 ಘಂಟೆಗೆ ಮುನಸಿಫ್ ಮ|| ಶ್ರೀಕಂಠೇಶ ಗೌಡರವರ ಸತ್ರದಲ್ಲಿ ಒಂದು ಟೀಪಾರ್ಟಿ ನಡಿಸಿದರು. ಇಲ್ಲಿ ಮ|| ಸುಬ್ಬರಾಯರು ಮತ್ತು ಮ|| ಸಂತಾನಂ ಅಯ್ಯಂಗಾರ್ರವರು ಮುಂತಾದ ಅಧಿಕಾರಿಗಳೂ, ದರ್ಶನಾರ್ಥಿಗಳಾಗಿ ಬಂದಿದ್ದ ಎಲ್ಲಾ ಜನಾಂಗದವರೂ ದಯಮಾಡಿಸಿದ್ದರು. ಆಯಾ ಮತಕ್ಕನುಗುಣವಾಗಿ ಪ್ರತ್ಯೇಕ ಪ್ರತ್ಯೇಕವಾದ ಫಲಾಹಾರ ಏರ್ಪಾಡು ನಡಿಸಿ ಅಲ್ಲಿಂದ ವರ್ತಕಮಂಡಲಿಯವರ ಪ್ರಾರ್ಥನೆಯಂತೆ ಮೇಲ್ಕಂಡ ಅಧಿಕಾರಿಗಳೆಲ್ಲರೂ ಪೇಟೆಗೆ ದಯಮಾಡಿಸಿ ಚೌಕದಲ್ಲಿ ಇದಕ್ಕಾಗಿ ನಿಯಮಿಸಿದ್ದ ದಿವ್ಯಭವನದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು, ತಾಲ್ಲೂಕ್ ಮೆಂಬರುಗಳು, ಇತರ ಅಧಿಕಾರಿಗಳು, ಮುನಿಸಿಪಲ್ ಮೆಂಬರುಗಳು, ದೊಡ್ಡ ಮನುಷ್ಯರುಗಳು ಮುಂತಾದ ವರ್ತಕ ಮಂಡಲಿಯವರೊಂದಿಗೆ ಪೀಠಗಳನ್ನಲಂಕರಿಸಿದರು. ಸಂಗೀತವೂ, ಬ್ಯಾಂಡ್, ವಗೈರೆ ವಾದ್ಯಘೋಷಗಳೂ ನಡೆದವು. ಇದಾದ ಮೇಲೆ ಅಲ್ಲಿನ ಕೋಆಪರೆಟಿವ್ ಸೊಸೈಟಿ ಸೆಕ್ರೆಟರಿಯವರಾದ ಮ|| ವೀರಣ್ಣದೇವರು ಸೊಸೈಟಿಯ ಆದಾಯಗಳನ್ನು ಓದಿ ಇದರ ವಿಷವಾಗಿ ಮ|| ಸುಬ್ಬರಾಯರವರು ಅಭಿಮಾನವಿಟ್ಟು ಪ್ರಜೆಗಳನ್ನು ಪ್ರೋತ್ಸಾಹಗೊಳಿಸಿ ನಡಿಸಿಕೊಟ್ಟ ಪ್ರಭಾವ ತೋಳ್ಕವೂ, ಈ ಸಣ್ಣ ತಾಲ್ಲೂಕಿನಲ್ಲಿ ಇದು ಇಷ್ಟರಮಟ್ಟಿಗೆ ಅಭಿವೃದ್ಧಿಗೊಂಡಿರುವದಕ್ಕೆ ಅವರಭಿಮಾನವೇ ಕಾರಣವೆಂಬುದನ್ನೂ ಅವರು ಇತರ ವಿಷಯಗಳಲ್ಲೂ ಪ್ರಮಾಣಿಕರಾಗಿದ್ದರೆಂಬುವದನ್ನೂ ಉದಾಹರಿಸಿಯೂ, ಮುಂದಿನವರು ಇದೇ ಮೇರೆ ರಕ್ಷಿಸಬೇಕೆಂಬ ಪ್ರಾರ್ಥನೆಯನ್ನು ಕುರಿತು ಕನ್ನಡದಲ್ಲಿ ಸಧ್ಯರಚಲವಾಗಿ ಒಂದು ಉಪನ್ಯಾಸವನ್ನು ಮಾಡಿದರು. ಅನಂತರ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಮ|| ಹೊಳವನಹಳ್ಳಿ ಅಬೇದಲ್ಲಿ ಸಾಹೇಬರವರು ಹಿಂದುಸ್ತಾನಿಯಲಿ ಇವರ ಸದ್ಗುಣಕಥನವನ್ನು ವಿಷದವಾಗಿ ಉಪನ್ಯಾಸಮಾಡಿದರು.

ಆಗ ಮ|| ಸುಬ್ಬರಾಯರವರು ಎದ್ದು ನಿಂತು ಕನ್ನಡದಲ್ಲಿ ಸರ್ವರಿಗೂ ಆಚ್ಛಾದಿಸುವಂತೆ ಹಲವು ಹಿತವಾಕ್ಯಗಳನ್ನು ಅಪ್ಪಣೆಕೊಡಿಸಿ ಸಭಿಕರ ಕೃತಜ್ಞತಾವಲಂಬನೆಗಾಗಿ ಪ್ರತ್ಯಭಿಮಾನವನ್ನು ವಂದನಾರೂಪಕವಾಗಿ ತೋರ್ಪಡಿಸಿದರು. ಕೊಡ್ಲಿ ಡಾಕ್ಟರ್ ಸಾಹೇಬರವರು ಎದ್ದು ಇಂಗ್ಲಿಷಿನಲ್ಲಿ ಒಂದು ಚಿಕ್ಕ ಉಪನ್ಯಾಸ ಮಾಡಿ ಇಂಗ್ಲಿಷಿನಲ್ಲಿಯೇ ನಮ್ಮ ಇಂಡಿಯಾ ಚಕ್ರವರ್ತಿಯವರ, ಚಕ್ರವರ್ತಿನಿಯವರ ಶ್ರೇಯಃಪ್ರಾರ್ಥನೆಗಳನ್ನೂ ಮತ್ತು ಶ್ರೀಮನ್ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃ ಪ್ರಾರ್ಥನೆಗಳನ್ನೂ ನಡಿಸಿದರು. ಇದಾದ ಮೇಲೆ ಹಾರ ತಾಂಬೂಲಾದಿಗಳು ಹಂಚಲ್ಪಟ್ಟವು. ರಾತ್ರಿ 9 ಘಂಟೆಗೆ ಸಭೆಯು ಮುಕ್ತಾಯವಾಗಿ ಅಲ್ಲಿಂದ ಪ್ರಜೆಗಳೊಂದಿಗೆ ಈರ್ವರೂ ಹೊರಟು ಮಧ್ಯ ಕಾದಿದ್ದ ದೊಡ್ಡ ಮನುಷ್ಯರುಗಳ ಕೋರಿಕೆಯಂತೆ ಅವರುಗಳ ಮನೆಗಳಿಗೆ ದಯಮಾಡಿ ಹಾರ ತಾಂಬೂಲಾದಿಗಳನ್ನು ಸ್ವೀಕರಿಸಿ, ರಾತ್ರಿ 10 ಘಂಟೆಗೆ ಮನೆಯನ್ನು ತಲಪಿದರು. ಅನಂತರ ವರ್ತಕಮಂಡಲಿಯವರೆಲ್ಲರೂ ಅಲ್ಲಿಂದ ಮ|| ಸಂತಾನಂ ಅಯ್ಯಂಗಾರ್ರವರನ್ನು ಅವರ ಬಿಡದಿಗೆ ಗೌರವದಿಂದ ಬಿಟ್ಟರು. ಇದಲ್ಲವೂ ಆಗಿ ಮರುದಿನ ಸೋಮವಾರ ಬೆಳಿಗ್ಗೆ 7 ಘಂಟೆಗೆ ಪ್ರಯಾಣವಾಗಿ ಬರುತ್ತಿರುವಾಗ್ಗೆ ಮಾರ್ಗದಲ್ಲಿ ಬಟ್ಟಿ ಅಗ್ರಹಾರದ ಮುಖಂಡರೆಲ್ಲರೂ ಸೇರಿ ಕಾದಿದ್ದು ತಮ್ಮ ಕೃತಜ್ಞತಾಸೂಚನಾರ್ಥವಾಗಿ ಬಲವಂತವಾಗಿ ಕೇಳಿಕೊಂಡದ್ದರ ಮೇಲೆ ಮ|| ಸುಬ್ಬರಾಯರು ಸನ್ಮಾನದಿಂದ ಗ್ರಾಮಪ್ರವೇಶ ಮಾಡಿದರು. ಔತನ ವಗೈರೆ ನಡೆದನಂತರ ಸರ್ವರೂ ಪಟೇಲ್ ಈಶ್ವರಯ್ಯನವರ ಮಹಡಿ ಮೇಲೆ ಮಧ್ಯಾಹ್ನ 1 ಘಂಟೆಗೆ ಸಭೆ ಸೇರಿ ಸಂಗೀತ ಮುಂತಾದ ವಿಜೃಂಭಣೆಯಿಂದ ಹಾರ ತಾಂಬೂಲಾದಿಗಳು ಹಂಚಲ್ಪಟ್ಟು ನಂತರ ಅಲ್ಲಿನ ವೀರಭದ್ರದೇವರು, ಬೇವಿನಹಳ್ಳಿಯಮ್ಮನ ದೇವಾಲಯಗಳಿಗೆ ದಯಮಾಡಿ ದೇವರ ಪ್ರಸಾದಗಳನ್ನಂಗೀಕರಿಸಿ 3 ಘಂಟೆಗೆ ಮುಂದಕ್ಕೆ ತೆರಳಿದರು. ಇಂಥಾ ಪ್ರಜಾರಂಜಕರಾದ ಈ ಸಹೃದಯರಿಗೆ ಭಗವಂತನು ಆಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಕೋರುತ್ತೇನೆ.

ಸನ್ಯಾಸಿಯು ಯಾರು ?

ಈ ಪ್ರಶ್ನೆಯು ಅನೇಕರಿಗೆ ತಮಾಷೆಯಂತೆ ಕಂಡುಬಂದೀತು. ನಮ್ಮ ಕನ್ನಡ ದೇಶದಲ್ಲಿ ಅನೇಕ ಸ್ವಾಮಿಗಳು ಇದಾರೆ. ಇವರಿಗೆ ಯಾವ ಆಶ್ರಮ ? ಮನುಷ್ಯನಿಗೆ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಂಬೀ ನಾಲ್ಕು ಆಶ್ರಮಗಳು ಇವೆ. ಇವುಗಳಲ್ಲಿ ಇವರು ಸನ್ಯಾಸಿ ಆಶ್ರಮವನ್ನು ಅವಲಂಬಿಸುತ್ತೇವೆಂತ ಹೇಳಿಕೊಳ್ಳುತ್ತಾರೆ. ಪ್ರಥಮತಃ ಸನ್ಯಾಸಿ ಎಂದರೇನು ? "ಸ" ಅಂದರೆ "ಸಕಲ," "ನ್ಯಾಸ" ಅಂದರೆ "ತ್ಯಾಗ" ಮಾಡಿಬಿಟ್ಟವನು. ಸನ್ಯಾಸಿ ಅಂದರೆ ಸಕಲವನ್ನೂ ತ್ಯಜಿಸಿದವನು. ಇವರೇನು ತ್ಯಜಿಸಿದ್ದಾರೆ ? ಪ್ರತಿ ಒಬ್ಬನಿಗೂ ನಡಿಸುವವನು ಬೇಕು. ಮಕ್ಕಳಿಗೆ ತನ್ನ ತಂದೆ ತಾಯಿಗಳೇ ಮುಖ್ಯ ಉದಾಹರಣೆ. ತನ್ನ ಮಾಡಿದ ಕೊಡಲೆ ಅವನು ತಿದ್ದುತ್ತಾರೆ. ಹೀಗೆ ಮಗುವು ದೊಡ್ಡದಾಗುತ್ತಾ ಬರುವಾಗ ತಾನು ಏನೇನು ಮಾಡಬೇಕು ? ತನ್ನ ಕೆಲಸವೇನು ? ಎಂಬುದೆಲ್ಲಾ ಗೊತ್ತಾಗುತ್ತದೆ. ಹೀಗೆಯೇ ಈ ಸ್ವಾಮಿಗಳಿಗೆ ನಡಿಸುವವರು ಬೇಕಿತ್ತು. ಸನ್ಯಾಸಿಯ ಕರ್ತವ್ಯ ಏನೆಂಬುದು ಇವರಿಗೆ ಗೊತ್ತಿಲ್ಲ. ಹಿಂದೆ ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದವರು ಬಂದು ಸನ್ಯಾಸಿಯು ಈ ರೀತಿಯಲ್ಲೇ ನಡೆಯಬೇಕೆಂದು ಸೂಚಿಸಿ ಹೋಗಿದ್ದರು. ನಮ್ಮ ಕಣ್ಣಿಂದ ನಾವು ಒಂದು ಸಾರಿ ನೋಡುವದು ಹತ್ತು ಸಾರಿ ಪುಸ್ತಕಗಳಲ್ಲಿ ಓದುವದಕ್ಕಿಂತಲೂ ಮೇಲು. ಹೀಗಿರುತ್ತಾ ಈ ಸನ್ಯಾಸಿಗಳಿಗೆ ಹಿಂದೆ ಅನೇಕ ಪುಣ್ಯಾತ್ಮರಾದ ಸನ್ಯಾಸಿಗಳು ಬಂದು ತೋರಿಸಿದ ಸಂಗತಿಗಳನ್ನು ಕೇಳುವದಕ್ಕಿಂತ ಈಗ ಒಬ್ಬ ಸನ್ಯಾಸಿಯು ಬಂದು ಅವನು ಮಾಡುವ ಕೃತ್ಯಗಳನ್ನು ಇವರು ಒಂದು ಸಾರಿ ಕಣ್ಣಿನಿಂದ ನೋಡಿದರೆ ಅದು ಬಹಳ ಪ್ರಯೋಜನಕರವಾಗುವದು. ನಮ್ಮ ಸ್ವಾಮಿಗಳು ವರ್ತಮಾನ ಪತ್ರಿಕೆಗಳನ್ನಾಗಲೀ, ಈಗ ರಚಿಸಿದ ಅನೇಕ ಪುಸ್ತಕಗಳನ್ನಾಗಲೀ ಓದುವದಕ್ಕೆ ಬಲ್ಲವರಾಗಿರುತ್ತಿದ್ದರೆ, ಉತ್ತರ ಹಿಂದುಸ್ಥಾನದಲ್ಲಿ ಅನೇಕ ಸನ್ಯಾಸಿಗಳು ಹಿಂದೆ ಮಾಡಿದ ಸಂಗತಿಗಳನ್ನೂ ಈಗ ಮಾಡುವ ಕೃತ್ಯಗಳನ್ನೂ ಕೇಳಿ ಇವರು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಬರಬಹುದಿತ್ತು. ಸ್ವಾಮಿ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಸ್ವಾಮಿ ಪ್ರೇಮಾನಂದ ಭಾರತಿ, ಸ್ವಾಮಿ ರಾಮತೀರ್ಥ ಇವರ ಚರಿತ್ರೆಗಳನ್ನು ಕೇಳಿ ನೋಡಿದರೂ ತಮ್ಮ ಆತ್ಮಶುದ್ಧಿ ಮಾಡಿಕೊಳ್ಳುವದು ಇವರ ಕರ್ತವ್ಯವಲ್ಲವೇ ? ರಾಮಕೃಷ್ಣ ಪರಮಹಂಸರು ದೇವರ ಅವತಾರವೆಂತಲೇ ಭೂಲೋಕದ ಎಲ್ಲಾ ಪಾರ್ಶ್ವದ ಜನರು ಹೇಳುತ್ತಾರೆ ಮತ್ತು ಅದು ನಿಜವೆಂದು ಭಾವಿಸುವದಕ್ಕೆ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ಅವರ ವಿಷಯ ಹಾಗಿರಲಿ. ಅವರ ವಿಷಯ ಈ ಸ್ವಾಮಿಗಳಿಗೆ ತಿಳಿಸಿ ಪ್ರಯೋಜನವಿಲ್ಲ. ಸ್ವಾಮಿ ವಿವೇಕಾನಂದ, ಭಾರತಿ, ತೀರ್ಥರ ವಿಷಯ ಇಲ್ಲಿ ಸ್ವಲ್ಪ ಪ್ರಸ್ತಾಪಿಸುವ. ವಿವೇಕಾನಂದ ಸ್ವಾಮಿಯು ಅಮೆರಿಕಾವನ್ನು ಸೇರಿದಾಗ ಅವರ ಕೈಯಲ್ಲಿ ಒಂದು ಚಿಕ್ಕಾಸೂ ಇರಲಿಲ್ಲ. ಹೊದಿಯುವದಕ್ಕೆ ಒಂದು ಕಂಬಳಿಯೂ, ಕೈಯಲ್ಲಿ ಒಂದು ದಂಡವೂ ಇತ್ತು. ಅವರು ಹಿಂದೂ ಮತವನ್ನು ಪ್ರಚಾರಪಡಿಸಿದರು. ಅಮೆರಿಕಾದ ಜನರು ಇವರು ಹೇಳಿದ ತತ್ವಗಳನ್ನೆಲ್ಲಾ ಕೇಳಿ ಆಶ್ಚರ್ಯಭರಿತರಾದರು. ಅವರ ಮುಖದಲ್ಲಿ ಬ್ರಹ್ಮಜ್ಞಾನವು ಪ್ರಜ್ವಲಿಸುತ್ತಿತ್ತು. ಅವರು ಹೋದಲ್ಲಿ ಜನರು ಕೂಡುತ್ತಿದ್ದರು. ಅವರು ನಮ್ಮ ಭರತಖಂಡದಲ್ಲಾಗಲೀ, ಇತರ ದೇಶದಲ್ಲಾಗಲೀ ಸಂಚರಿಸುತ್ತಿದ್ದಾಗ ಅವರ ಹಿಂದೆ ಪರಿವಾರ ಏನೂ ಇರಲಿಲ್ಲ. ಅವರು ಪಾಲಗ, ಬ್ಯಾಂಡ್ ಮಾಡಿಸಿಕೊಂಡು ಎಲ್ಲಿಯೂ ಹೊರಡಲಿಲ್ಲ. ಊಟಕ್ಕೆ ನಿತ್ಯವೂ ಪಂಚಭಕ್ಷ್ಯ ಪರಮಾನ್ನವಿರಲಿಲ್ಲ. ಅಮೆರಿಕಾದಲ್ಲಿ ಇದ್ದಾಗ ಕೆಲವು ಸಾರಿ ಬರೀ ನೆಲದಲ್ಲಿ ಮಲಗಿ ಕಂಬಳಿ ಹೊದ್ದುಕೊಂಡು ನಿದ್ದೆಗೈಯುತ್ತಿದ್ದರು. ಅವರ ವಿದ್ಯೆ ಬುದ್ಧಿಯನ್ನು ವರ್ಣಿಸಲು ಅಸಾಧ್ಯ. ಅವರು ಯೌವನದಲ್ಲಿಯೇ ತೀರಿಹೋದ್ದರಿಂದ ಭರತಖಂಡದ ನಷ್ಟವನ್ನು ಹೇಳತೀರದು. ರಾಮತೀರ್ಥ ಸ್ವಾಮಿಗಳು ಕೂಡ ಇದೇ ರೀತಿ. ಅವರೂ ಅಮೆರಿಕಾ, ವಿಲಾಯತಿ, ಜಪಾನ್ ದೇಶಗಳಿಗೆ ಹೋಗಿ ವೇದಾಂತವನ್ನು ಪ್ರಚಾರಿಸುತ್ತಿದ್ದರು. ಅವರೂ ತಮ್ಮ 33 ನೇ ವರ್ಷದಲ್ಲಿ ಕಾಲವಾದರು. ಬಾಬಾ ಭಾರತಿಗಳು ಸ್ವಲ್ಪ ಕಾಲದ ಹಿಂದೆ ಅಮೆರಿಕಾದಲ್ಲಿ ಪ್ರಸಂಗಿಸುತ್ತಾ ಇದ್ದರು. ಸಾವಿರಾರು ಜನರು ಸ್ವಾಮಿಗಳು ಹೇಳಿದಂತೆ ನಡೆಯುವುದಕ್ಕೆ ಸಿದ್ಧವಾಗಿದ್ದರು. ಇವರೇ ಈಗ ಸನ್ಯಾಸಿಗಳು. ಹೆಚ್ಚು ಐಶ್ವರ್ಯವಂತರಾಗಿದ್ದವರು ಎಲ್ಲವನ್ನೂ ಬಿಟ್ಟು, ಈ ಸ್ವಾಮಿಗಳವರು ಆಶ್ರಮವನ್ನು ಧರಿಸಿ, ದೇಶ ದೇಶಗಳನ್ನು ಕಾಲುನಡೆಯಲ್ಲಿಯೇ ಸಂಚರಿಸಿ, ವೇದವ್ಯಾಖ್ಯಾನವನ್ನು ಪ್ರಚುರಪಡಿಸುತ್ತಾ ಇದ್ದರು. ನಮ್ಮ ಜನರು ನಮ್ಮ ಸಂಸ್ಥಾನದಲ್ಲಿ ಹೆಚ್ಚಿದ್ದರೂ ಉತ್ತರ ಹಿಂದುಸ್ಥಾನದಲ್ಲಿ ಆಗಾಗ್ಗೆ ಬರಗಾಲ ಬರುತ್ತಾ ಇರುವಾಗ ಅನೇಕರು ಹೊಟ್ಟೆಗಿಲ್ಲದೆ ಸಾಯುತ್ತಾ ಇರುವಾಗ ನಮ್ಮ ಸ್ವಾಮಿಗಳು ಪ್ರತಿ ನಿತ್ಯವೂ ಪಂಚಭಕ್ಷ್ಯಪರಮಾನ್ನಗಳನ್ನು ತಿಂದು ಕೊಬ್ಬಿದ ಮೈಯನ್ನು ಬೆಳಸಿಕೊಂಡು ಮೆತ್ತಗಾದ ಹಾಸಿಗೆಯ ಮೇಲೆ ಮಲಗುತ್ತಾರೆ. ಎಲ್ಲಿಗಾದರೂ ಹೋಗಬೇಕಾದರೆ ಪಾಲಕಿಯಲ್ಲಿ ಕೂತುಕೊಂಡು ಹೋಗಬೇಕು. ವಾಚಕರೇ, ಇವರು ಮಾಡುವ ದುರ್ಗುಣಗಳನ್ನು ನಿಮಗೆ ಹೆಚ್ಚಾಗಿ ತಿಳಿಯಪಡಿಸಬೇಕೆಂದಿಲ್ಲ. ಚೋಳಾರು ಬಾಬುರಾಯರು ರಚಿಸಿದ "ವಾಗ್ದೇವಿ" ಎಂಬ ಪುಸ್ತಕವನ್ನು ನೀವು ಸ್ವಲ್ಪ ದೃಷ್ಟಿಸಿ ನೋಡಿದರೆ ಸಾಕು. ಇವರು ಘಳಿಸಿದ ಹಣದಿಂದ ಎಷ್ಟೋ ಜನರಿಗೆ ವೇತನ ಕೊಟ್ಟು ವಿಲಾಯತಿಗೆ ಕಳುಹಿಸಬಹುದು ? ಎಷ್ಟು ಕಾಲೇಜುಗಳನ್ನು ಕಟ್ಟಿಸಬಹುದು ? ಶಿವಗಂಗಾ ಸ್ವಾಮಿಗಳವರಂತೆ ಎಲ್ಲಾ ಸ್ವಾಮಿಗಳೂ ನಡದರೆ ಈ ಭರತಖಂಡಕ್ಕೆ ಕೊರತೆಯೇನು ?

ಬಿ. ವಿ. ರಾವ್.

ಸಂಪದಭ್ಯುದಯ.

ಸಂಪತ್ತು ಸಕಲ ಸುಖಕ್ಕೂ ಸಾಧನವಾದುದು. ಆದುದರಿಂದ ಅದನ್ನು ಎಲ್ಲರೂ ಅಪೇಕ್ಷಿಸುತ್ತಾರೆ. ಅಪೇಕ್ಷಿಸುವವರು ತಮ್ಮ ಅಪೇಕ್ಷೆಯನ್ನು ತಾವೇ ನೆರವೇರಿಸಿಕೊಳ್ಳಬೇಕು. ಅದಕ್ಕಾಗಿ ನಾವು ಪ್ರಯತ್ನಗಳನ್ನು ಮಾಡಲೇಬೇಕು. ಹೀಗೆ ಮಾಡದಿದ್ದರೆ ಅಪೇಕ್ಷೆಯಂತೆ ನೆರವೇರುವದಿಲ್ಲ. ಯಾವ ದೇಶವು ಸಂಪದ್ಯುಕ್ತವಾಗಿರುತ್ತದೆಯೋ ಆ ದೇಶವೇ ಸುಖಸಾಮ್ರಾಜ್ಯವಾಗಿರುತ್ತದೆ. ಇದಕ್ಕಾಗಿಯೇ ನಮ್ಮ ಸರಕಾರವು ಸಂಪದಭಿವೃದ್ಧಿ ಸಮಾಜವೆಂಬ ಸಮಾಜವನ್ನು ಸಹ ಹೊಂದಿರುತ್ತದೆ. ಆ ಸಮಾಜವು ಸಂಪತ್ಸಾಧನವಾದ ಕಾರ್ಯಗಳನ್ನು ಕುರಿತು ಆಲೋಚಿಸಿ ರೂಢಿಗೆ ತರತಕ್ಕದಾಗಿದೆ. ಸಂಪತ್ತನ್ನು ಪಡೆಯುವವರು ಪ್ರಜೆಗಳು. ಆದುದರಿಂದ ಪ್ರಜೆಗಳೂ ಮೇಲೆ ಕಂಡ ಸಂಪತ್ಸಾಧನ ಕಾರ್ಯಗಳಿಗೆ ಸಹಾಯಕರಾಗಿರಬೇಕು. ಶರೀರದ ಎರಡು ಕೈಗಳೂ ಸೇರಿ ಹೇಗೆ ಶರೀರ ಕಾರ್ಯಗಳನ್ನು ನಿರ್ವಹಿಸುವವೋ ಹಾಗೆಯೇ ಸರ್ಕಾರವೂ ಪ್ರಜೆಗಳೂ ಏಕೀಭವಿಸಿ ರಾಜ್ಯೈಶ್ವರ್ಯಕಾರ್ಯವನ್ನು ಸಾಧಿಸಬೇಕಾಗಿದೆ. ಅಲ್ಲದೆ ಯಾವ ಕಾರ್ಯವಾದರೂ ಬರೀ ವಾಗಾಡಂಬರವಾಗಿರದೆ ಕಾರ್ಯತಃ ನೆರವೇರತಕ್ಕದ್ದಾಗಿರಬೇಕು. ಸಾಧ್ಯಾಸಾಧ್ಯ ವಿಮರ್ಶೆಯಿಂದ ಕಾರ್ಯಕ್ಕೆ ತೊಡಗಬೇಕು. ಕಾರ್ಯಸಾಧನೆಗೆ ತಕ್ಕಂತೆ ಕಾರ್ಯವು ನೆರವೇರತಕ್ಕದ್ದಾಗಿದೆ. ಆದುದರಿಂದ ಈಗ ನಮ್ಮ ಉದ್ದೇಶವು ನೆರವೇರಲು ಮಾಡಬೇಕಾದ ತಿದ್ದುಪಾಡುಗಳೇನು ? ತಿದ್ದುಪಾಡಾಗಬೇಕಾದ ಭಾಗಗಳಾವವು ? ಎಂಬುದನ್ನು ವಿಂಗಡಿಸಿಕೊಳ್ಳುವುದು ಮೊದಲನೆಯ ಕಾರ್ಯವಾಗಿದೆ.

(1) ಸಂಪಾದನೆಯ ಕ್ರಮದಲ್ಲಿ —ವ್ಯವಸಾಯ, ಕಲಾ ಕೌಶಲ್ಯ, ಕೈಗಾರಿಕೆ, ವ್ಯಾಪಾರ, ಉದ್ಯೋಗ, ಪ್ರಪಂಚಾನುಭವ ಶಿಕ್ಷಣ.

(2) ವಿನಿಯೋಗ ಬಾಬಿನಲ್ಲಿ.—ದುವ್ರ್ಯಯ, ಸಾಲ, ನಿರುದ್ಯೋಗ, ದೌರ್ಬಲ್ಯ.

(3) ನಡತೆಯ ವಿಷಯದಲ್ಲಿ.—ರೋಗ, ಅನ್ಯಾಯ, ಅಸತ್ಯ, ಅಕೃತ್ಯ, ಪಾಪಭೀತಿಯಿಲ್ಲದಿರೋಣ, ಇವುಗಳನ್ನು ದೂರೀಕರಿಸುವುದು.

(4) ಸಂಘ ಶಕ್ತಿಯಲ್ಲಿ.—ಜಾತಿ ಮಾತ್ಸರ್ಯ, ಕಾಪಟ್ಯ, ಅಪನಂಬಿಕೆ, ಒಬ್ಬರ ಕೆಲಸವನ್ನು ಒಬ್ಬರು ಅವಲಂಬಿಸೋಣ, ಇವುಗಳಿಂದುಂಟಾಗುವ ಬಾಧಕಗಳನ್ನು ಹೋಗಲಾಡಿಸುವುದು.

ಈ ಮೇರೆಗೆ ವಿಂಗಡಿಸಿ ಪ್ರತಿಯೊಂದರ ಈಗಿನ ನಡಾವಳಿಯ ಕ್ರಮವನ್ನೂ, ಅವುಗಳ ಸಾಧಕ ಬಾಧಕಗಳನ್ನೂ ಸಾಧ್ಯವಾದಷ್ಟು ವಿಮರ್ಶೆಮಾಡಬೇಕು. ಈ ರೀತಿ ವಿಮರ್ಶೆಮಾಡಲು ದೇಶವಿದೇಶಗಳ ಅನುಭವವು ಚೆನ್ನಾಗಿರಬೇಕು. ಮತ್ತು ನಮ್ಮ ದೇಶದ ನಡಾವಳಿಯ ಸ್ಥಿತಿಗತಿಗಳನ್ನೆಲ್ಲಾ ತಿಳಿದವರಾಗಿರಬೇಕು. ಹೀಗಿರುವವರು ಅಪರೂಪ. ಆದರೂ ಗಣ್ಯರಾದವರು ತಮ್ಮ ತಮ್ಮ ಅನುಭವವನ್ನು, ಕ್ರಮಕ್ಕೆ ತರಬಹುದಾದ ಮಾರ್ಗವನ್ನೂ ಸೂಚಿಸುತ್ತಾ ಬರಬೇಕು. ಮೇಲೆ ಕಂಡ ವಿಷಯಗಳನ್ನು ಹಿಂದೆ ಚರ್ಚಿಸಿರುವುದಾಗಿಯೂ, ಪುನಃಪ್ರಸಂಗವು ಅನವಶ್ಯವೆಂಬುದಾಗಿಯೂ ಯೋಚಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸದೆ ಬಿಡಲಾಗದು. ಕಾರ್ಯಸಾಧನೆಯಾಗುವ ವರೆಗೂ ಹಿಡಿದ ಹಟವನ್ನು ಬಿಡದೆ ಸಾಧಿಸಬೇಕು. ಅನೇಕ ಅಭಿಪ್ರಾಯಗಳು ಸೇರಿ ಒಂದು ನಿಜತ್ವವನ್ನು ತೋರಪಡಿಸುತ್ತದೆ. ಈಗಿನ ನಡಾವಳಿಗಳು ಒಂದೇ ತರವಾಗಿರುವುದಿಲ್ಲ. ಆದುದರಿಂದ ಅವುಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅನೇಕರ ಅಭಿಪ್ರಾಯವು ಅಗತ್ಯವಾಗಿದೆ.

ದ್ರವ್ಯ ಸಂಪಾದನೆಯನ್ನು ನಾನಾವಿಧದಲ್ಲಿ ಮಾಡಬೇಕಾಗಿರುವುದು. ಸಂಪಾದನೆಯ ಕ್ರಮವು ನ್ಯಾಯವಾದ ಮಾರ್ಗದಲ್ಲಿರಬೇಕು. ಒಬ್ಬನ ಸಂಪಾದನೆಯಿಂದ ಮತ್ತೊಬ್ಬನಿಗೆ ನಷ್ಟವುಂಟಾಗಬಾರದು. ತನ್ನ ಶಕ್ತಿಯನ್ನು ತಿಳಿದು ಕೆಲಸವನ್ನು ಕೈಕೊಳ್ಳಬೇಕು ; ಇಲ್ಲದಿದ್ದರೆ ತನಗೆ ನಷ್ಟವನ್ನುಂಟುಮಾಡಿಕೊಳ್ಳುವುದಲ್ಲದೆ ಆ ಕೆಲಸದಲ್ಲಿ ಆಸಕ್ತರಾದ ಮತ್ತೊಬ್ಬರಿಗೆ ಅಧೈರ್ಯವನ್ನುಂಟುಮಾಡಿ ಕಾರ್ಯಸಿದ್ಧಿಯನ್ನು ಹೋಗಲಾಡಿಸಿದಂತಾಗುತ್ತದೆ. ಎಷ್ಟು ತೊಂದರೆಯುಂಟಾದರೂ ಹಿಡಿದ ಕಾರ್ಯವನ್ನು ಮಾಡೇ ತೀರಬೇಕು. ಒಂದು ಕೆಲಸವನ್ನು ಅರ್ಧಮಾಡಿ, ಅದರಲ್ಲಿ ಫಲವಿಲ್ಲವೆಂದು ಬಿಟ್ಟು ಮತ್ತೊಂದು ಕೆಲಸವನ್ನು ತೊಡಗಬಾರದು. ಒಂದೇ ಕಾಲದಲ್ಲಿ ನಾನಾಕಾರ್ಯಗಳಿಗೆ ಕೈಹಾಕಬಾರದು. ಅಧೈರ್ಯದಿಂದ, ಕೆಲಸಮಾಡುವುದನ್ನೇ ಬಿಡಬಾರದು. ಕಷ್ಟಕ್ಕೆ ಹೆದರಬಾರದು. ಯಾವ ಕೆಲಸವನ್ನಾದರೂ ಮನಃಪೂರ್ವಕವಾಗಿಯೇ ಮಾಡಬೇಕು. ಕುಟುಂಬದ ಎಲ್ಲಾ ಜನಗಳೂ ದುಡಿಯಲು ಬದ್ಧರಾಗಿರಬೇಕು. ನಂಬಿಕೆಯನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು. ಪರಾಶ್ರಯದ ಜೀವನವನ್ನು ತ್ಯಜಿಸಿ ಸ್ವಾತಂತ್ರ್ಯ ಜೀವನೋಪಾಯವುಳ್ಳವರಾಗಿರಬೇಕು. ಇವುಗಳನ್ನೆಲ್ಲಾ ಪ್ರಜೆಗಳು ತಮ್ಮಲ್ಲಿ ತಾವೇ ತಿದ್ದುಪಡಿಮಾಡಿಕೊಳ್ಳಬೇಕು.

ದ್ರವ್ಯವನ್ನು ಖರ್ಚುಮಾಡುವಲ್ಲಿ ಕೂಡ ಪ್ರಜೆಗಳು ತಿದ್ದುಪಡಿಮಾಡಿಕೊಳ್ಳಬೇಕು ; ಇಲ್ಲದಿದ್ದರೆ ಎಷ್ಟು ಕಷ್ಟಪಟ್ಟು ಸಂಪಾದನೆಮಾಡಿದರೂ ಅನರ್ಥಕ್ಕೆ ಗುರಿಯಾಗಬೇಕಾಗುತ್ತದೆ. ಹಣವನ್ನು ವಿನಿಯೋಗಮಾಡುವಾಗ ಸುಖವಾಗಿ ತೋರುತ್ತದೆ ; ಕೊನೆಗೆ ಬಹಳ ಅನರ್ಥವನ್ನು ಉಂಟುಮಾಡುತ್ತವೆ. ಆದಾಯವನ್ನು ಅರಿತು ಖರ್ಚುಮಾಡಬೇಕು. ಖರ್ಚುಮಾಡುವಲ್ಲಿ ಯುಕ್ತಾಯುಕ್ತವನ್ನು ಯೋಚಿಸಬೇಕು. ಮುಂದು ವೆಚ್ಚಗಳನ್ನು ಬಿಡಬೇಕು. ದುಷ್ಟಟಕ್ಕಾಗಿ ಹಣ ವ್ಯಯವನ್ನು ತಪ್ಪಿಸಲು ದುಷ್ಟಟಗಳನ್ನು ಹೊಂದಬಾರದು. ಆಡಂಬರಕ್ಕಾಗಿ ವೆಚ್ಚಮಾಡಬಾರದು. ತಿರಿಗಿ ಸಂಪಾದನೆಮಾಡಿಕೊಳ್ಳುತ್ತೇವೆಂಬ ನಂಬಿಕೆಯಿಲ್ಲದ ಕಾರ್ಯಗಳಿಗೆ ಹಣವನ್ನು ಹಾಕಬಾರದು. ಹಾಕಿದ ಹಣವನ್ನು ಸಂಪಾದಿಸಿಕೊಳ್ಳುವ ಶಕ್ತಿಯನ್ನು ಅರಿಯದೆ ಹಣವ್ಯಯಮಾಡಬಾರದು. ಬಳಸಿದ ಹಣವನ್ನು ತಿರಿಗಿ ಸಂಪಾದಿಸಲೇ ಬೇಕು. ಆದಾಯದ ನಂಬಿಕೆಯಿಲ್ಲದ ಕೆಲಸಗಳಿಗೂ, ಡಂಭಾಚಾರದ ಕೆಲಸಗಳಿಗೂ ಸಾಲಮಾಡಬಾರದು. ತಿಂಡಿ, ಬಟ್ಟೆ ಮುಂತಾದ ಕಾರ್ಯಗಳಿಗೆ ವಿಪರೀತ ಖರ್ಚುಮಾಡಬಾರದು.

ಎಸ್. ಹುಚ್ಚರಾವ್, ಶಿಕಾರಿಪುರ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲ್ಲೂಕಿನಲ್ಲಿರುವ ಬಿನಕೊನಹಳ್ಳಿ, ಕಮ್ಮಾರಘಟ್ಟ, ಚಿಕ್ಕಬಸೂರು ಎಂಬೀ ಗ್ರಾಮಗಳು 1915 ನೇ ಇಸವಿ ಜೂಲೈ 1 ನೇ ತಾರೀಕಿನ ಲಾಗಾಯಿತು ಯೂನಿಯನ್ನು ಸೇರಿಸಲ್ಪಡುವವು.

ಕೃಷ್ಣರಾಜಪೇಟೆ ಅಮಲ್ದಾರ್ ಮ|| ಟಿ. ವೆಂಕಟರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಕಿನ ಲಾಗಾಯಿತು ಒಂದು ತಿಂಗಳು ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ.

ಮೈಸೂರು ಸಬ್ ರೆಜಿಸ್ಟ್ರಾರ್ ಮ|| ಜಿ. ಶ್ರೀಕಂಠರಾವ್ ರವರು ಮೇಲೆ ಕಂಡ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೂ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರರಾಗಿಯೂ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲೀ ಕೆಲಸ ನೋಡಿಕೊಳ್ಳುವಂತೆ ನೇಮಿಸಲ್ಪಟ್ಟಿದಾರೆ.

ಈ ಕೆಳಗೆ ಹೇಳಿರುವ ಡೆಪ್ಯುಟಿ ಅಮಲ್ದಾರರುಗಳು ವರ್ಗಮಾಡಲ್ಪಟ್ಟಿರುತ್ತಾರೆ.

ಮ|| ಸಿ. ಬಿ. ಶಾಮರಾವ್ ರವರು ಕಾವೇರಿ ಪಲಾನಿನ ಕೆಲಸದಿಂದ ಕೃಷ್ಣರಾಜಪೇಟೆಗೆ ಹೋಗತಕ್ಕದ್ದು.

ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ರಾದ ಮ|| ಎ. ರಾಮರಾವ್ ರವರು ಕೃಷ್ಣರಾಜಪೇಟೆಯಿಂದ ಕಾವೇರಿ ಪಲಾನ್ ಕೆಲಸಕ್ಕೆ ಕೂಡಲೆ ಹೋಗತಕ್ಕದ್ದು.

ಕೋಲಾರ್ ಪೇಟೆಗೆ ವರ್ಗವಾಗಿರುವ ಡೆಪ್ಯುಟಿ ಅಮಲ್ದಾರರಾದ ಮ|| ಸಿ. ಬಿ. ರಾಮರಾವ್ ರವರು, ಮ|| ಸಿ. ಸೂರ್ಯನಾರಾಯಣ ಶಾಸ್ತ್ರಿಯವರು ಬೇರೊಂದು ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೂ ನೆಲಮಂಗಲದ ಅಮಲ್ದಾರ್ರಾಗಿ ಬದಲಿ ನೋಡತಕ್ಕದ್ದು.

ಮೈಸೂರು ಸಬ್ ರೆಜಿಸ್ಟ್ರಾರ್ ಮ|| ಜಿ. ಶ್ರೀಕಂಠರಾವ್ ರವರು ಕೋಲಾರ್ ಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ರಾಗಿಯೂ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೋಡತಕ್ಕದ್ದು.

ಮ|| ಜಿ. ಶ್ರೀಕಂಠರಾವ್ ರವರು ಬಿಡುಗಡೆಮಾಡುವ ವರೆಗೂ ಚನ್ನಪಟ್ಟಣದ ಅಮಲ್ದಾರ್ರವರು ತಮ್ಮ ಸ್ವಂತ ಕೆಲಸದ ಜೊತೆಯಲ್ಲಿ ಕೋಲಾರ್ ಪೇಟೆ ಸಬ್ ತಾಲ್ಲೂಕು ಚಾರ್ಜನ್ನು ವಹಿಸುವರು.

ಹಾಸನದ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಕೆ. ವಿ. ಅನಂತರಾಮನ್ ಬಿ. ಎ. ರವರಿಗೆ ಜನವರಿ 13 ರ ಲಾಗಾಯತು 15 ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ.

ಅವರ ಗೈರ್ ಹಾಜರಿ ಕಾಲದಲ್ಲಿ ಪ್ರೊಬೇಷನರಿ ಅ|| ಕಮಿಷನರ್ ಮ|| ಸಿ. ಗೋಪಾಲರಾಜೇ ಅರಸ್ ಬಿ ಎ. ಬಿ ಎಲ್. ರವರು ಹಾಸನದ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರ ಕೆಲಸ ಬದಲಿ ನೋಡತಕ್ಕದ್ದು.

ರೆಜಿಸ್ಟ್ರಾರಾಗಿ ಬದಲಿ ನೋಡುತ್ತಿದ್ದ ಬೆಂಗಳೂರು ಫಸ್ಟ್ ಮುನ್ಸೀಫರಾಗಿ ವರ್ಗಮಾಡಲ್ಪಟ್ಟಿರುವ ಮ|| ಟಿ. ವೆಂಕೋಬರಾವ್ ಬಿ.ಎ. ಬಿ.ಎಲ್. ರವರಿಗೆ ಬದಲಾಗಿ ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟ್ ಶಿರಸ್ತೆದಾರ್ ಮ|| ಎಸ್. ಎ. ವೈದೀಶ್ವರೈಯರ್ ಬಿ.ಎ. ಬಿ.ಎಲ್. ರವರು ಕಳೆದ ಸೆಪ್ಟಂಬರ್ 1 ರ ಲಾಗಾಯಿತು ತಂಗಾಮಿಯಾಗಿ ಚೀಫ್ ಕೋರ್ಟಿನ ಡೆಪ್ಯುಟಿ ರೆಜಿಸ್ಟ್ರಾರ್ ಕೆಲಸಕ್ಕೆ ನೇಮಕಮಾಡಲ್ಪಟ್ಟಿದ್ದರು.

ಶ್ರೀಮನ್ ಮಹಾರಾಜರವರ ಪರ್ಸನಲ್ ಅ|| ಸೆಕ್ರಿಟರಿ ಮ|| ಟಿ. ತಂಬುಚೆಟ್ಟಿ ಬಿ. ಎ. ರವರನ್ನು ಕಳೆದ ನೊವೆಂಬರ್ 16 ರ ಲಾಗಾಯಿತು 3 ರಿಂದ 2 ನೇ ಕ್ಲಾಸ್ ಅ|| ಕಮಿಷನರುಗಳ ದರ್ಜೆಗೆ ಬಡ್ತಿಮಾಡಿದೆ.

ಮ|| ಕೆ. ಎಸ್. ಚಂದ್ರಶೇಖರೈಯ್ಯರ್ ಬಿ.ಎ. ಬಿ.ಎಲ್. ರವರಿಗೆ ಕಳೆದ ನೊವೆಂಬರ್ 18 ರ ಲಾಗಾಯಿತು ಕೊಡಲ್ಪಟ್ಟಿದ್ದ ರಜಾ ಪೂರಯಿಸಿದ್ದರಿಂದ ಇದೇ ಜನವರಿ 2 ನೇ ತಾರೀಖು ಮಧ್ಯಾಹ್ನ ಮೈಸೂರು ಚೀಫ್ ಕೋರ್ಟಿನ ಜಡ್ಜಿ ರವರ ಚಾರ್ಜನ್ನು ಪುನಃ ವಹಿಸಿಕೊಂಡರು.

ಶಿವಮೊಗ್ಗ ಡಿಸ್ಟ್ರಿಕ್ಟಿನ ಪೂರ್ವದ ಕವಲೇ ದುರ್ಗ ತಾಲ್ಲೂಕಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ 234 ಗ್ರಾಮಗಳಲ್ಲಿಯೂ ನಗರದ ತಾಲ್ಲೂಕಿನ 6 ಗ್ರಾಮಗಳಲ್ಲಿಯೂ ವಸೂಲಾಗಬೇಕಾದ ಪುನರ್ವಿಮರ್ಶೆ ಮಾಡಿದ ಕಂದಾಯದ ದರಗಳು ಗವರ್ನ್ ಮೆಂಟಿನಿಂದ ಸ್ಯಾಂಕ್ಷನ್ ಮಾಡಲ್ಪಟ್ಟು ಇದೇ ತಿಂಗಳು ಸುಮಾರು 25 ನೇ ಸೋಮವಾರ ತೀರ್ಥಹಳ್ಳಿ ಕಸಬಾದಲ್ಲಿ ಪ್ರಕಟಿಸಲು ಪ್ರಾರಂಭವಾಗುವದೆಂದು ಇದರಿಂದ ಸರ್ವರಿಗೂ ತಿಳಿಸಲಾಗಿದೆ.

ತರೀಕೆರೆ, ಎಡೇಹಳ್ಳಿ ಟ್ರಾಮ್ ವೆ ಲೈನಿನಲ್ಲಿರುವ ತರೀಕೆರೆ ರಂಗನಹಳ್ಳಿ, ಲಕ್ಕವಳ್ಳಿ ಎಂಬೀ ಸ್ಟೇಷನುಗಳು ಇದೇ ಜನವರಿ 16 ನೇ ಶುಕ್ರವಾರದ ಲಾಗಾಯಿತು ಪ್ರಾಣಿಗಳು, ಅಪಾಯಕರವಾದ ಸಾಮಾನುಗಳು, ಸಿಡಿಯುವ ಪದಾರ್ಥಗಳು ಇವುಗಳ ಹೊರತು ಬೇರೆ ಎಲ್ಲಾ ತರದ ವ್ಯಾಪಾರದ ಧಿನಸಿಗಳನ್ನು ತೆಗೆದುಕೊಂಡು ಸಾಗಿಸುವದಕ್ಕೆ ತೆರೆಯಲ್ಪಡುವವು.

ಚನ್ನಗಿರಿಯಲ್ಲಿ ಬರುವ ಫೆಬ್ರವರಿ 1-2 ನೇ ತಾರೀಖುಗಳಲ್ಲಿ ಶ್ರೀ ರಂಗನಾಥಸ್ವಾಮಿಯವರ ರಥೋತ್ಸವ ಕಾಲದಲ್ಲಿ ಮೂರನೇ ತಾಲ್ಲೂಕು ಕೋಆಪರೆಟಿವ್ ಕಾನ್ ಫರೆನ್ಸ್ ನಡೆಯುವದು. ಡೆ|| ಕಮಿಷನರ್ ಮ|| ಕೆ. ಮಥಾನ್ ರವರು ಪ್ರೆಸಿಡೆಂಟರಾಗಿರುವರು. ತಾಲ್ಲೂಕುಗಳಲ್ಲಿರುವ ಸೊಸೈಟಿಗಳು ತಮ್ಮ ಪ್ರತಿನಿಧಿಗಳನ್ನು ಆ ಕಾನ್ ಫರೆನ್ಸಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳಲಾಗಿದೆ.

ಮೈಸೂರು ಇಂಜನೀರಿಂಗ್ ಇಲಾಖೆಯಲ್ಲಿ ಈ ಕೆಳಗೆ ಹೇಳಿರುವವರಿಗೆ ಪ್ರೊಮೋಷನ್ ಗಳು ಕೊಡಲ್ಪಟ್ಟಿರುತ್ತವೆ:—

ಮ|| ವಿ. ಕೃಷ್ಣಸ್ವಾಮಿಐಯ್ಯರ್ರವರಿಗೆ ಸೂಪರ್ ವೈಜರ್ 2 ನೇ ಕ್ಲಾಸಿನಿಂದ 1 ನೇ ಕ್ಲಾಸಿಗೂ, ಮ|| ಟಿ. ಎಸ್. ಲಕ್ಷ್ಮಣರಾವ್ ರವರಿಗೆ ಸೂಪರ್ ವೈಜರ್ 3 ನೇ ಕ್ಲಾಸಿನಿಂದ 2 ನೇ ಕ್ಲಾಸಿಗೂ, ಮ|| ಎಮ್. ಎಲ್. ನರಸಿಂಹಯ್ಯಂಗಾರ್ ರವರಿಗೆ ಓವರ್ಸಿಯರ್ 1 ನೇ ಕ್ಲಾಸಿನಿಂದ ಸೂಪರ್ ವೈಜರ್ 3 ನೇ ಕ್ಲಾಸಿಗೂ, ಮ|| ಇ. ರಾಬರ್ಟ್ ರವರಿಗೆ ಸೂಪರ್ ವೈಜರ್ 3 ನೇ ಕ್ಲಾಸಿನಿಂದ 2 ನೇ ಕ್ಲಾಸಿಗೂ, ಮ|| ಎ. ಚನ್ನಸ್ವಾಮಿ ಮುದಲಿಯಾರ್ರವರಿಗೆ ಓವರ್ಸಿಯರ್ 1 ನೇ ಕ್ಲಾಸಿನಿಂದ ಸೂಪರ್ ವೈಜರ್ 3 ನೇ ಕ್ಲಾಸಿಗೂ, ಮ|| ಇ. ರಾಮಸ್ವಾಮಯ್ಯರವರಿಗೆ ಓವರ್ಸಿಯರ್ 2 ನೇ ಕ್ಲಾಸಿನಿಂದ 1 ನೇ ಕ್ಲಾಸಿಗೂ, ಮ|| ಆರ್. ಕೃಷ್ಣರಾವ್ ರವರಿಗೆ ಓವರ್ಸಿಯರ್ 2 ನೇ ಕ್ಲಾಸಿನಿಂದ 1 ನೇ ಕ್ಲಾಸಿಗೂ, ಮ|| ವಿ. ಮುನಿಸ್ವಾಮಿ ಮುದಲಿಯಾರ್ರವರಿಗೆ ಓವರ್ಸಿಯರ್ 2 ನೇ ಕ್ಲಾಸಿನಿಂದ 1 ನೇ ಕ್ಲಾಸಿಗೂ ಪ್ರೊಮೋಷನ್ ಕೊಡಲಾಗಿದೆ.

ಶಿವಮೊಗ್ಗ ಮಕಿನ್ ಟಾಷ್ ಕಂಪನಿಯವರು ಬೆನಗೆರೆಯಿಂದ ಪಂಕರಗುಡ್ಡದಲ್ಲಿರುವ ಮ್ಯಾಂಗನೀಸ್ ಗಣಿಗಳಿಗೆ ಟ್ರಾಂವೆ ಹಾಕುವುದಕ್ಕೆ ತಮಗೆ ಅಪ್ಪಣೆ ಕೊಡಬೇಕೆಂದು ಕೇಳಿಕೊಂಡಿರುವದರ ಮೇಲೆ ಮೈಸೂರು ಸರಕಾರದವರು ಅವರು ಕೇಳಿರುವ ಷರತ್ತುಗಳಿಗೆ ಒಪ್ಪಿ ಕೆಲಸ ಪ್ರಾರಂಭಿಸುವದಕ್ಕೆ ಅವರಿಗೆ ಹುಕುಂ ಕೊಡುವದಕ್ಕಿದ್ದಾರೆಂದು ಈ ಮೂಲಕವಾಗಿ ಸರ್ವರಿಗೂ ಪ್ರಕಟಿಸಲಾಗಿದೆ. ಈ ಹುಕುಮ್ಮಿನ ಪರವಾಗಿಯಾಗಲಿ ಅಥವಾ ಅದಕ್ಕೆ ವಿರೋಧವಾಗಿಯಾಗಲಿ ಯಾರಾದರು ಏನಾದರು ಆಕ್ಷೇಪಣೆ ಮಾಡಬಯಸುವದಾದರೆ ಅಂಥವರು ಬರುವ ಫೆಬ್ರವರಿ 7 ನೇ ತಾರೀಖಿನೊಳಗಾಗಿ ತಮ್ಮ ಅಭಿಪ್ರಾಯಗಳನ್ನು ಮೈಸೂರು ಸರಕಾರದವರಿಗೆ ತಿಳಿಯಪಡಿಸಿದಲ್ಲಿ ಅವರು ಅವುಗಳಿಗೆ ನಿಗಾ ಕೊಡುವರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ದೊಡ್ಡಬಳ್ಳಾಪುರ—ಜವಾಬು.

ಅಯ್ಯಾ,—ಕಳೆದ ವಾರ ತಮ್ಮ ಪತ್ರಿಕೆಯಲ್ಲಿ ಈ ಗ್ರಾಮದ ವಿಚಾರವಾಗಿ ಬರೆದಿದ್ದದ್ದನ್ನು ನೋಡಿ ಕೇವಲ ಆಶ್ಚರ್ಯವುಂಟಾಗಿರುತ್ತೆ. ಇಲ್ಲಿ ಇಲಿಗಳು ಸಾಯುತ್ತಿರುವ ವಿಷಯವು ಶುದ್ಧ ಸುಳ್ಳಾದದ್ದು. ಹೀಗಿರುವಲ್ಲಿ ಏನು ಕಾರಣದಿಂದ ನಿಮ್ಮ ಬಾತ್ಮಿದಾರರು ಇಂಥಾ ವರ್ತಮಾನವನ್ನು ಕೊಟ್ಟು ಗ್ರಾಮಸ್ಥರಿಗೆ ಅಸಮಾಧಾನ ಉಂಟುಮಾಡಿರುತ್ತಾರೋ ತಿಳಿಯದು.—ಈ ಊರಿನಲ್ಲಿ ಕಾರೋನೇಷನ್ ಹಾಲನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಇಲ್ಲಿನ ವರ್ತಕರೇ ಮುಂತಾದ ಪುರಪ್ರಮುಖರು ಚಂದಾ ಕೂಡಿಸಿ ತಾಲ್ಲೋಕು ಟ್ರೆಜರಿಯಲ್ಲಿ ಇಟ್ಟಿರುವದಲ್ಲದೆ, ಇದುವರಿವಿಗೂ ಈ ಮೊಬಲಗಿಗೆ ಬಡ್ಡಿಯೂ ಸಹ ಬಂದಿರುತ್ತೆ. ಇನ್ನೂ ಹೆಚ್ಚು ಪ್ರಯತ್ನಪಟ್ಟು ಮೊಬಲಗು ಒದಗಿಸಿದ ನಂತರ ಮುಂದೆ ಕೆಲಸವನ್ನು ಉಪಕ್ರಮಿಸಬೇಕೆಂತ ಕಮಿಟಿ ಮೆಂಬರುಗಳು ತೀರ್ಮಾನಿಸಿರುತ್ತಾರೆ. ಆದಪ್ರಯುಕ್ತ ಮೊಬಲಗು ಸಿಕ್ಕಿದವರ ಪಾಲಾಗದಂತೆ ಖಜಾನೆಯಲ್ಲಿ ಬಂದೋಬಸ್ತಾಗಿರುವದನ್ನು ನಿಮ್ಮ "ಹಿತಚಿಂತಕರು" ತಿಳಿಯದೇ ಹೋದದ್ದಕ್ಕಾಗಿ ವಿಷಾದಪಡುತ್ತೇನೆ.—ಈ ಸಲ ಘಾಟಿಯಲ್ಲಿ ಸಮಾರಾಧನೆ ಮುಂತಾದ ಕೆಲಸ ಕಾರ್ಯಗಳಿಗೆಲ್ಲಾ ಇಲ್ಲಿನ ಕೆಲವು ಸಾಹುಕಾರರು ಮತ್ತು ಊರಿಯರು ಮಹನೀಯರುಗಳಲ್ಲದೆ, ಮುನ್ಸಿಫ್ ಕೋರ್ಟು ಮುಂತಾದ ಇತರ ಇಲಾಖೆ ನೌಕರ ಮಾನೇರುಗಳು ವಿಶ್ವಾಸ ಪೂರ್ವಕ ನಿಂತು ಸಹಾಯಮಾಡಿದ್ದರಿಂದ ಎಲ್ಲಾ ಕೆಲಸ ಕಾರ್ಯಗಳು ಬಹಳ ಭಲಾರು ನಡಿಯಲಾಯಿತು. ಸ್ವಲ್ಪ ಕಾಲದಲ್ಲೇ ಘಾಟಿ ಜಾತ್ರೆಯು ನಡೆದಿರುವ ಕಾರಣ ಪುನಃ ಈ ಟವನ್ನಲ್ಲಿ ಹೊಸದಾಗಿ ಎತ್ತಿನ ಪರಿಷೆಯನ್ನು ಏರ್ಪಾಡು ಮಾಡುವದರಿಂದ ಏನು ಪ್ರಯೋಜನವಾಗುತ್ತೋ ತಿಳಿಯದು.

ಚಂದಾದಾರ್.

ಹುಣಸೂರು ತಾಲ್ಲೂಕು ಚಿಟ್ಟೆದಪುರಗ್ರಾಮದ ಕನ್ನಡ ಸ್ಕೂಲ್ ನಲ್ಲಿ ಮಕ್ಕಳ ವಿದ್ಯಾಭ್ಯಾಸವು ಕ್ರಮವಾಗಿಯೂ ತೃಪ್ತಿಕರವಾಗಿಯೂ ನಡೆಯುತ್ತಾ ಇಲ್ಲವೆಂದು ಮುಂತಾಗಿ ವಿದ್ಯಾಭಿಮಾನಿ ಎಂಬ ಬಾತ್ಮಿದಾರರು ಆಕ್ಷೇಪಣೆಯುಳ್ಳ ಬಾತ್ಮಿಯನ್ನು ಬರೆದಿದಾರೆ. ಗ್ರಾಮದ ಮುಖಂಡರು ಇಂಥಾ ವಿಷಯಗಳನ್ನು ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಅವರು ವಿಚಾರಣೆಯಿಂದ ಕ್ರಮಪಡಿಸುತ್ತಾರೆ.

ಹುಳಿಯಾರ ತಾಲ್ಲೂಕು ಗಾಣದಹಳ್ಳಿಯಲ್ಲಿ ಎರಡು ಪಾರ್ಟಿಗಳಿರೋಣದರಿಂದ ಗ್ರಾಂಟ್ ಸ್ಕೂಲಿನ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುವುದಿಲ್ಲವೆಂದೂ ಮಾಸ್ತರುಗಳು ಪಾರ್ಟಿಗಳನ್ನು ವಹಿಸಿ ಕೆಲಸಮಾಡುತ್ತಾರೆಂದೂ ಪ್ರತ್ಯಕ್ಷದರ್ಶಿ ಎಂಬ ಬಾತ್ಮಿದಾರರು ಬರೆಯುತ್ತಾರೆ. ಗ್ರಾಮಗಳಲ್ಲಿ ಪಾರ್ಟಿಗಳಿದ್ದರೆ ಯಾವ ಗ್ರಾಮಾಭಿವೃದ್ಧಿ ಕೆಲಸವೂ ಗ್ರಾಮಸ್ಥರಿಗೆ ಹಿತಕರವಾಗುವಂತೆ ನಡೆಯುವುದಿಲ್ಲ. ಸರ್ಕಾರದವರು ಪಡುವ ಸಾಹಸ ಪ್ರಯತ್ನಗಳೆಲ್ಲಾ ನಿರರ್ಥಕವಾಗುತ್ತವೆ.

ಒಬ್ಬ ಯಥಾರ್ಥವಾದಿ, ಕೋಲಾರ್ ಪೇಟೆ.—ಈ ಬಾತ್ಮಿಯನ್ನು ಪ್ರಕಟಿಸಲಾರೆವು. —ಎಡಿ]

ತಾಲ್ಲೂಕು ವರ್ತಮಾನಗಳು.

ಹುಣಸೂರು.—ಹುಣಸೂರು, ಮೈಸೂರು, ಪಿರ್ಯಾಪಟ್ನಗಳ ಕಡೆ ಬಿಡುತ್ತಿದ್ದ ಮೋಟರು ಕಳೆದ 7-8. ದಿನಗಳಿಂದಲೂ ಪುನಃ ಪಿರ್ಯಾಪಟ್ಟದ ದಾರಿಯಲ್ಲಿ ಮುರಿದು ಬಿದ್ದು ರಿಪೇರಿ ಆಗುತ್ತಾ ಇದೇ. ಮುಂಚೆ ತಿಳಿಸಿದಂತೆ ಇಲ್ಲಿಯ ಸಾಹುಕಾರರುಗಳಿಂದ ತರಿಸಿರುವ ಎರಡನೇ ಮೋಟರೇ ಕಳೆದ ವಾರದಿಂದಲೂ ಪ್ರಯಾಣಸ್ಥರಿಗೆ ತುಂಬಾ ಅನುಕೂಲವಾಗಿಯೂ ಸಂತೋಷಕರವಾಗಿಯೂ ನಡೆಯುತ್ತಾ ಇದೆ. ಹುಣಸೂರಲ್ಲಿ ಪ್ಲೇಗ್ ಶುರುವಾಗಿ 3-4 ತಿಂಗಳುಗಳು ಆದಾಗ್ಯೂ ಜನಗಳಿಗೆ ಅಷ್ಟೇನು ನಷ್ಟವೂ ಭಯವೂ ಇರುತ್ತಿರಲಿಲ್ಲ. ಕಳೆದ 15 ದಿವಸಗಳಿಂದಲೂ ಜೋರಾಗಿ 8-10 ಮರಣಗಳಾದವು, ಕೆಲವರಿಗೆ ತಗಲಿದೆ ಎಲ್ಲರ ಮನೆಗಳಲ್ಲಿಯೂ ಇಲಿಗಳು ಸಾಯುತ್ತಾ ಇದೆ. ನಮ್ಮ ಅಮಲ್ದಾರರೂ ಇಲ್ಲಿಯ ಡಾಕ್ಟರವರೂ ಬಹಳ ಮಹನತ್ತಿನಿಂದ ಪ್ರತಿ ಬೀದಿಗೂ ಮನೆಗೂ ಹೋಗಿ ಕಾಯಿಲೆಯವರನ್ನು ಉಪಚರಿಸುತ್ತಲೂ ಎಲ್ಲರ ಮನೆಗಳನ್ನು ಬಿಡಿಸುತ್ತಲೂ, ಷೆಡ್ಡುಗಳು ಹಾಕಲು ತಕ್ಕ ಸಲಕರಣೆಗಳನ್ನು ಮಾಡುತ್ತಲೂ ಇದಾರೆ. ಕಳೆದ ಶನಿವಾರ ರಾತ್ರಿ ಸ್ವಲ್ಪ ಮಳೆಯೂ ಆಯಿತು. ಇದರಿಂದ ಜನಗಳು ಇನ್ನೂ ಗಾಬರಿಯಾಗುತ್ತಾ ಇದಾರೆ.

ಚಿತ್ರದುರ್ಗ.—ನೀರಿಗೆ ಬಹಳ ತೊಂದರೆಯಾಗಿದೆ. ನಲ್ಲಿಗಳಲ್ಲಿ ಕ್ಲಿಪ್ತಕಾಲಗಳಲ್ಲಿ ಸ್ವಲ್ಪ ಹೊತ್ತು ನೀರು ಬಿಡುತ್ತಾರೆ. ಆಗ ನೀರಿಗಾಗಿ ಜಗಳಗಳು ಆಗುತ್ತವೆ. ಜಾಸ್ತಿ ಹೊತ್ತು ನೀರು ಬಿಡುವ ಭಾಗದಲ್ಲಿ ಇಂಥಾ ಕಲಹಗಳು ನಡೆಯಲು ಅವಕಾಶವಿಲ್ಲ. ಭಾವಗಳೆಲ್ಲಾ ಕ್ಷಾಮಕಾಲವನ್ನು ಸೂಚಿಸುತ್ತವೆ. ಅಕ್ಕಪಕ್ಕ ಗ್ರಾಮಗಳ ಜನಗಳು ಕುಡಿಯುವ ನೀರಿಗೂ, ದನಕರುಗಳ ಮೇವಿಗೂ ತೊಂದರೆಪಡುತ್ತಾರೆ ರಾತ್ರಿಯ ಹೊತ್ತು ಪೋಲೀಸ್ ಉಸ್ತುವಾರಿ ಬಹಳ ತೃಪ್ತಿಕರವಾಗಿದೆ ವೈಸ್ ಪ್ರೆಸಿಡೆಂಟರವರು ಟೌನ್ ಸಾಫೀಜಾ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿರುತ್ತಾರೆ ಸ್ಕೂಲುಗಳ ಡೆಪ್ಟಿ ಇನ್ಸ್ಪೆಕ್ಟರವರ ಆಫೀಸಿನ ವಿಷಯ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದೂ, ಪಕ್ಷಪಾತ ನಡೆಯುತ್ತದೆಂದೂ ಹೇಳುತ್ತಾರೆ. ಆಕ್ಟಿಂಗಾಗಿ ಬಂದಿರುವ ಕೆ. ಸುಬ್ಬರಾಯರು ಕೇವಲ ಅಪರಿಚಯಸ್ಥರಾಗಿದಾರೆ. ಇವರು ತಾ. 14 ರಲ್ಲಿ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಜನರಂಜನವಾಗಿ ಪ್ರಹ್ಲಾದ ಚರಿತ್ರೆಯೆಂಬ ಕಥೆಯನ್ನು ಬಹಳ ಸ್ವಾರಸ್ಯವಾಗಿ ಮಾಡಿದರು. ಸರ್ಕಾರದವರು ಎ. ವಿ. ಸ್ಕೂಲ್ ಮಾಸ್ತರ ಗ್ರೇಡ್ ವಿಂಗಡಿಸಿ ಬಡ್ತಿ ಕೊಟ್ಟಿರುವುದು ಬಹಳ ಸ್ತೋತ್ರಾರ್ಹವಾಗಿರುವುದು ಮತ್ತು ಮಾಸ್ತರುಗಳ ಗೋಳು ತಪ್ಪಿಸಿದಂತಾಯಿತು. ಆದರೇನು. ಈ ಡಿಸ್ಟ್ರಿಕ್ಟಿನ ವಿದ್ಯಾ ಇಲಾಖೆಯ ವಿತರಣೆಯು ಅವ್ಯವಸ್ಥೆಯಾಗಿ ವಿಚಾರಿಸತಕ್ಕವರೇ ಇಲ್ಲವಾಗಿದೆ. ಬಡ್ತಿಗೆ ಅರ್ಹರು, ಶಿಫಾರಸಿಗೆ ಯೋಗ್ಯರೂ ಯಾರೆಂದರೆ ಕೈ ಬಿಚ್ಚಿಗೆ ಮಾಡಿದವರೆಂದು ಹೇಳಬೇಕಾಗಿದೆ. ಉಳಿದವರು ಎಷ್ಟು ಯೋಗ್ಯರಾದರೂ ಬಡ್ತಿಗೆ ಅನರ್ಹರಾಗಿಲ್ಲವಾಗಿದೆ ಮೇಲ್ಪಟ್ಟ ಅಧಿಕಾರಿಗಳಾದ ಮ|| ರಾಮರಾಯರವರು, ಸರ್ಕಲ್ ಇನ್ಸ್ಪೆಕ್ಟರ್ ಸಹ ಈ ಡಿಸ್ಟ್ರಿಕ್ಟಿನ ಶಿಫಾರಸು ಮೇರೆ ಬಡ್ತಿ ಕೊಡದೆ ತಾವೇ ಖುದ್ದು ಪ್ರತಿ ಮಾಸ್ತರ ಸರ್ವಿಸ್, ಪ್ಯಾಸ್ ವಗೈರೆ ವಿಷಯ ಲೆಕ್ಕಗಳಿಂದ ತಿಳಿದು ಬಡ್ತಿ ಕೊಡುವರೆಂದು ಹಾರೈಸುತ್ತೇನೆ.—ಚೀಫ್ ಜಡ್ಜರವರು ಬಂದು ಕೋರ್ಟುಗಳನ್ನು ಪರಾಂಬರಿಸಿ ಹೊರಟುಹೋದರು.

ಚನ್ನರಾಯಪಟ್ಟಣ.—ಈ ಊರಿನ ಹವ ಸುಮಾರಾಗಿ ಚನ್ನಾಗಿರುತ್ತೆ. ಕೆರೆಯಲ್ಲಿ ಜನಗಳಿಗೂ, ಜಾನ್ವಾರುಗಳಿಗೂ ಕುಡಿಯುವುದಕ್ಕೆ ಸ್ವಲ್ಪ ನೀರಿರುತ್ತೆ. ಮುಂಗಾರು ಮಳೆಯಲ್ಲಿ ಮಳೆಯಾಗದೆ ಹೋದರೆ ಜನರ ಬಳಕೆಗೆ ನೀರಿಗೆ ಅಭಾವವಾಗಿ ಬಹು ತೊಂದರೆಗೆ ಗುರಿಯಾಗಬೇಕಾಗುತ್ತೆ. ಭಗವಂತನು ಕರುಣಿಸಿ ವೃಷ್ಟಿಯನ್ನ ಕೊಟ್ಟು ಕಾಪಾಡುತ್ತಾನೆಂತ ನಂಬಿದೇವೆ. ಅಲ್ಲದೆ ಈ ಟವನ್ನಲ್ಲಿ ಮ್ಯುನಿಸಿಪಲ್ ಜಾಡಮಾಲಿಗಳು ಇಲ್ಲದೆ 3,000 ಸಾವಿರ ಪ್ರಜೆಗಳುಳ್ಳ ಈ ಗ್ರಾಮದಲ್ಲಿ ಜನರು ತಿರುಗಾಡುವ ರಸ್ತೆಗಳಲ್ಲೂ ಓಣಿಗಳಲ್ಲೂ ಬೂದಿ, ಎಂಜಲಹಾಳೆಗಳ ಅವಾಂತ್ರ ಹೇಳತೀರದ್ದಾಗಿದೆ. ಈ ವಿಷಯದಲ್ಲಿ ತಾಲ್ಲೋಕು ಅಧಿಕಾರಿಗಳಾಗಲಿ, ಮ್ಯುನಿಸಿಪಲ್ ಮೆಂಬರುಗಳಾಗಲಿ, ಯಾತಕ್ಕೆ ಗಮನಕೊಟ್ಟಿಲ್ಲವೋ ತಿಳಿಯದು. ಸಂತೆಯಲ್ಲಿ ದಿವಸೀ ಧಾರಣೆಗಳು ದಿನದಿನಕ್ಕೆ ಹೆಚ್ಚಿ ಬಡಜನರನ್ನ ಸುಲುಗೆಮಾಡುತ್ತಾ ಇವೆ. ಆದ್ದರಿಂದ ದಯಾಳು ಸರ್ಕಾರದವರು ಹಾಲಿ ಇರುವ ಕೆರೆ ನೀರು ವಿಕ್ರಯವಾಗುವಂತೆಯೂ ಮ್ಯುನಿಸಿಪಾಲಿಟಿ ವಿಷಯದಲ್ಲೂ ಪೂರ್ಣ ನಿಗಾಕೊಟ್ಟು ಜನಾನುರಾಗಕ್ಕೆ ಪಾತ್ರರಾಗುತ್ತಾರೆಂತ ನಂಬಿದೇವೆ. ಇಲ್ಲಿನ ತಾಲ್ಲೋಕು ನೌಕರರಲ್ಲಿ ಕೆಲವರಿಗೆ ವರ್ಗವಾಗಿರುತ್ತೆ ಆ ಪೈಕಿ ಸರಾಫ್ ಶ್ರೀಕಂಠಯ್ಯನವರು ಈ ಸ್ಥಳದಲ್ಲಿ ನೌಕರಿ ಮಾಡಿದವರು. ಇವರು ಸರ್ಕಾರಿ ಕೆಲಸದಲ್ಲಿ ತುಂಬಾ ಮುತುವರ್ಜಿ ವಹಿಸುತ್ತಾಯಿದ್ದದ್ದಲ್ಲದೆ ಸ್ಥಳವಂದಿಗರಾಗಿ ಗ್ರಾಮ ಕೆಲಸಗಳಲ್ಲಿ ಗಮನಕೊಡುತ್ತಾ ಇದ್ದರು. ಈಗ 7-8 ವರ್ಷಗಳ ಹಿಂದೆ ಈ ಗ್ರಾಮದ ದೇವರುಗಳಿಗೆ ರಥ ತಯಾರುಮಾಡಿಸಬೇಕೆಂದು ಚಂದಾವಟ್ಟಿ ವಗೈರೆ ಬಾಕಿ ಮುಂದಿನ ಕರ್ತವ್ಯಕ್ಕೆ ವಸೂಲಾದ ಕೆಲವು ಮೊಬಲಗು ಸಹ ಮ|| ವೆಂಕಟರಾಮಯ್ಯನವರಲ್ಲಿ ಕೊಟ್ಟಿತ್ತು. ಸದರಿ ಶ್ರೀಕಂಠಯ್ಯನವರು ಈ ಕಾರ್ಯಕ್ಕೆ ಗಮನಕೊಟ್ಟು ಹಣ ವಸೂಲಿಗೆ ಏರ್ಪಾಡುಮಾಡಿ ನಡಿಸುತ್ತಿದ್ದರು. ಪೂರೈಸುವುದರೊಳಗೆ ಇವರಿಗೆ ಸ್ಥಳ ಬದಲಾವಣೆಯಾದ್ದರಿಂದ ಜನಗಳಿಗೆ ತೊಂದರೆ ಕೊರತೆಗೆ ಕಾರಣವಾಗಿರುವುದು ಹಾಲಿ ನಿಂತು ಕೆಲಸಮಾಡುತ್ತಿರುವ 10-12 ಜನರು ಏಕೀಭವಿಸಿ ಕಾರ್ಯ ನೆರವೇರಿಸುತ್ತಾರೆಂತ ನಂಬಿದೇವೆ.

ದೊಡ್ಡಬಳ್ಳಾಪುರ.—ಈ ಊರಿನ ಕೆರೆಯು ಬತ್ತಿಹೋಯಿತು. ಈ ಸಾರಿ ಸುಬ್ರಹ್ಮಣ್ಯಘಾಟಿ ಜಾತ್ರೆಯಲ್ಲಿ ಈ ತಾಲ್ಲೋಕಿಗೆ ಸೇರಿದ ತಿಪ್ಪಾಪುರದ ಪಟೇಲ್ ತಿಮ್ಮೇಗೌಡನ ಒಂದು ಜತೆ ಹೋರಿಗಳಿಗೆ ಮಾತ್ರ ಭಂಗಾರದ ಪದಕ ಬಹುಮಾನರೂಪವಾಗಿ ಕೊಡಲ್ಪಟ್ಟಿತು. ಈಗಲೇ ಅನೇಕ ಭಾವಿಗಳಲ್ಲಿ ನೀರು ಬತ್ತಿಹೋಯಿತು. ಊರೊಳಗೆ ಕೆಲವು ಕಡೆ ಬಹಳ ದುರ್ವಾಸನೆ ಕೊಡುವ ಬಚ್ಚಲು ನೀರು ಅಲ್ಲಲ್ಲೇ ನಿಂತು ಕೊಳತು ಸೊಳ್ಳೆಗಳುತ್ಪತ್ತಿಯಾಗುವದನ್ನು ನಮ್ಮ ಸ್ಯಾನಿಟರಿ ಇನ್ಸ್ಪೆಕ್ಟರವರು ದಯವಿಟ್ಟು ಗಮನಿಸುವರೆಂತ ನಂಬಬೇಕಾಗಿದೆ.—ಇಲ್ಲಿಗೆ 10-12 ಮೈಲು ದೂರದಲ್ಲಿ ಗೋರಿಬಿದನೂರು ಸರಹದ್ದಿನಲ್ಲಿ ಒಬ್ಬ ತಿಮ್ಮಯ್ಯನೆಂತ ಕರೆಯಲ್ಪಟ್ಟವನನ್ನು ವಿರೋಧಿಗಳ್ಯಾರೋ ಕೊಂದುಬಿಟ್ಟಿರುತ್ತಾರೆ.—ಇಲ್ಲಿಗೆ 1 ಮೈಲು ದೂರವಾಗಿರುವ ರೋಜಿಪುರದ ಆಚೆ ಸೋಮನಾಥ ದೇವಸ್ಥಾನದ ಆಚೆ ಹೊಲದಲ್ಲಿದ್ದ ರಾಗಿ ಬಣವೆಗೆ ರಾತ್ರಿ ಎಂಟುಗಂಟೆ ನಂತ್ರ ಯಾರೋ ದುಷ್ಟರು ಬೆಂಕಿ ಹೊತ್ತಿಸಿಬಿಟ್ಟಿದ್ದರಿಂದ ಸುಮಾರು 15 ಖಂಡಗ ರಾಗಿ ಮೆದೆ ಸುಟ್ಟು ಆ ರೈತನಿಗೆ ತುಂಬಾ ಲುಕ್ಸಾನಾಗಿ ಆತನ ವ್ಯಸನ ಸಂಕಟ ಹೇಳತೀರದು. ಇದು ನಡೆದದ್ದು ಗ್ರಾಮದ ವಿರೋಧದಿಂದಲೋ ಮತ್ಯಾವದರಿಂದಲೋ ಈವರಿಗೂ ತಿಳಿದುಬಂದಿಲ್ಲ. ಯೋಗ್ಯರ್ಯಾರು ಇಂಥ ಕೆಟ್ಟಕೆಲಸವನ್ನು ಮಾಡುವದಿಲ್ಲ.—ಈ ಊರಲ್ಲಿ ಪೋಲಿನಾಯಿಗಳ ಅವಾಂತ್ರ ಅಧಿಕವಾಗಿದೆ. ಅವುಗಳಿಗೆ ಸರಿಯಾಗಿ ಆಹಾರವಿಲ್ಲದೆ ಕೆಲವು ನಾಯಿಗಳು ಮನುಷ್ಯರ ಮೇಲೆ ಬೀಳುತ್ತವೆ. ಪಾಲಕರಿಲ್ಲದ ನಾಯಿಗಳನ್ನು ಹುಚ್ಚು ಹಿಡಿಯದಂತೆ ಮ್ಯುನಿಸಿಪಾಲಿಟಿಯವರು ನೋಡಿಕೊಂಡರೆ ವಾಸಿ. ಅಂದರೆ ತಕ್ಕ ರೀತಿಯಲ್ಲಿ ಅವುಗಳನ್ನು ಕೊಲ್ಲಿಸುವದು ಉತ್ತಮ.—ಈ ಊರಿನ ಕೋಆಪರೆಟಿವ್ ಸೊಸೈಟಿಗೆ ಸೇರಿದ ಅನೇಕ ಮೆಂಬರುಗಳಲ್ಲಿ ದೇವಾಂಗದವರಿಗೂ ಇತರರಿಗೂ ಈ ಯುದ್ಧಕಾಲದಲ್ಲಿ ಬಿನ್ನಿ ಮುಂತಾದ ಸಪ್ಲೈ ಸಾಲದೆ ಜೀವನಕ್ಕೆ ಕಷ್ಟವಾಗಿ ಕೆಲವರು ತಮ್ಮ ಷೇರ್ ಹಂತುಗಳನ್ನು ಈ ವರೆಗೂ ಸಲ್ಲಿಸದೆ ಇರುತ್ತಾರೆ.—ಕೊಗರಿಬೇಳೆ ಕ್ಷಾಮಬಂದಿದೆ. 1 ರೂಪಾಯಿಗೆ ಒಳ್ಳೇ ಬೇಳೆ 4 ಸೇರು ಸಹ ಸಿಕ್ಕುವದು ದುರ್ಲಭವಾಗಿದೆ. ಜವಳಿ ಅಂಗಡಿ ನಾರಪ್ಪಶೆಟ್ಟರ ಅಂಗಡಿಯಲ್ಲಿ ಆದ ಕಳವಿನ ಮಾಲುಗಳು ಈವರಿಗೂ ಸಂಪೂರ್ಣವಾಗಿ ಪತ್ತೆ ಆಗಿರುವದಿಲ್ಲ.

ಗೋರೀಬಿದನೂರು ತಾ|| ಹೊಸೂರು.—ಈ ಸಂವತ್ಸರಾದಿಯಿಂದಲೂ ಮುಂಗಾರು ಹಿಂಗಾರು ಮಳೆಗಳು ಸುತರಾಂ ಇಲ್ಲ. ತಿಂದಿಯ ಕಾಳು ಇದೆ ಎಂಬ ಮಾತು ಯಾರಲ್ಲೂ ಬರುವುದಿಲ್ಲವಾದ್ದರಿಂದ ಪ್ರತಿದಿನವೂ ಹೊಟ್ಟೆತುಂಬ ಊಟಮಾಡಿದೇವೆಂದು ಹೇಳುವವರು ಅಪರೂಪ ದನಗಳು ಹುಲ್ಲನ್ನು ಕಾಣದೆ ಕಷ್ಟಪಡುತ್ತಿವೆ. ಧಾರಣೆಯಾದರೋ ದಿನಂಪ್ರತಿ ಏರುತ್ತಲೇ ಇದೆ. ವರ್ತಕರು ಸಿಕ್ಕಾರ್ಜಿತವಾದ ಹಳೇ ತೂಕದ ಕಲ್ಲುಗಳನ್ನೇ ಉಪಯೋಗಿಸುತ್ತಾರೆ.—ರೀಸರ್ವೆಗಾಗಿ ಈ ತಾಲ್ಲೋಕಿನಲ್ಲಿ ಸುಮಾರು 30 ಜನ ಮೋಜಣಿದಾರರೂ, ಅ|| ಕಮಿಷನರ್ ಮ|| ಟಿ. ಗೋವಿಂದರಾಯರೂ ಬಂದು ನಿಂತು ಎರಡು ತಿಂಗಳಾಯಿತು. ಈ ತಿಂಗಳು 7 ನೇ ತಾ. ಸಾಯಂಕಾಲ ಮ|| ಗೋವಿಂದರಾಯರು ಗ್ರಾಮಸ್ಥರ ಪ್ರಾರ್ಥನೆಯಂತೆ ರೀಡಿಂಗ್ ರೂಮಿನ ಬಳಿಗೆ ದಯಮಾಡಿಸಿ ಅಗ್ರಾಸನವನ್ನು ವಹಿಸಿದ್ದರು. ಶೇಕದಾರ್ ಮ|| ರಾಘವೇಂದ್ರರಾಯರೂ ಎಕ್ಸೈಸ್ ಅ|| ಇನ್ಸ್ಪೆಕ್ಟರ್ ಮ|| ರಾಮರಾಯರೂ, ಹೆಡ್ ಮಾಸ್ಟರ್ ಮ|| ಚಿ. ಸಿದ್ಧಪ್ಪನವರೂ ಉಚಿತೋಕ್ತಿಗಳಿಂದ ಎಲ್ಲಾ ಸಂಗತಿಗಳನ್ನೂ ತಿಳಿಸಿದರು. ಇಲ್ಲಿನ ಏಕಮತ್ಯವನ್ನೂ, ಕಾರ್ಯನಿರ್ವಾಹತೆಯನ್ನೂ ಕೇಳಿ ಬಹಳ ಸಂತೋಷದಿಂದ ಇಲ್ಲಿಯೇ ಒಂದು ಲೈಬ್ರರಿಯನ್ನು ಸ್ಥಾಪಿಸಬೇಕೆಂದು ಹೇಳಿ 10 ರೂಪಾಯಿ ಕೊಟ್ಟರು. ಫಲಹಾರ, ಕಾಫಿ, ಸುಗಂಧಗಳಿಂದ ಸಭಿಕರೆಲ್ಲರೂ ತೃಪ್ತಿಪಟ್ಟರು. ಆ ಸಭೆಯಲ್ಲಿ ಸ್ತ್ರೀವಿದ್ಯಾಭ್ಯಾಸವನ್ನು ಕುರಿತ ಬಹುಸ್ವಾರಸ್ಯವಾದ ಉಪನ್ಯಾಸವೂ ನಡೆಯಿತು. ತಾ. 13 ರಲ್ಲಿ ಮ|| ಗೋವಿಂದರಾಯರು ದೊಡ್ಡ ಕುರುಗೋಡಿಗೆ ಕ್ಯಾಂಪ್ ಸಮೇತ ಪ್ರಯಾಣಮಾಡುವಾಗ ಸ್ಕೂಲ್ ಉಪಾಧ್ಯಾಯರನ್ನು ಬರಮಾಡಿಕೊಂಡು ಹುಡುಗರಿಗೆ 5 ರೂ. ಹುಡುಗಿಯರಿಗೆ 1 ರೂ. ಕೊಟ್ಟು ತಿಂಡಿ ಹಂಚಬೇಕೆಂದು ಹೇಳಿ ಬಾಯ್ಸ್ ಸ್ಕೂಲಿಗೆ ದಯಮಾಡಿಸಿದರು. ಅಲ್ಲಿ ಹೆಡ್ ಮಾಸ್ಟರ್ ಮ|| ಚಿ. ಸಿದ್ಧಪ್ಪನವರು ಸಣ್ಣ ಹುಡುಗರಿಂದ ಕಿಂಡರ್ ಗಾರ್ಟನ್ ರೀತಿಯಾಗಿ ಅಕ್ಷರಗಳನ್ನು ರಚಿಸಿದ್ದು ಮತ್ತು ವಸ್ತುಪಾಠವನ್ನು ಹೇಳಿಸಿದ್ದು ನೋಡಿ ಬಹಳ ಸಂತೋಷಪಟ್ಟು ದೊಡ್ಡ ಕುರುಗೋಡಿಗೆ ಪ್ರಯಾಣಮಾಡಿದರು. ಇವರ ಸರಳ ಹೃದಯವನ್ನೂ ಔದಾರ್ಯಗುಣವನ್ನೂ ಊರಿನವರೆಲ್ಲರೂ ಕೊಂಡಾಡುವರು.

ಮುಳಬಾಗಲು.—ಈ ತಿಂಗಳು 9 ನೇ ತಾ. ಬೆಳಗ್ಗೆ 11 ಗಂಟೆಗೆ 2 ನೇ ಕೌನ್ಸಲರ್ ಮ|| ಕಾಂತರಾಜೆ ಅರಸಿನವರು ಕೋಲಾರದಿಂದ ಮುಳುಬಾಗಲಿಗೆ ಮೋಟರಿನಲ್ಲಿ ದಯಮಾಡಿದರು. ಇವರನ್ನು ಟವನ್ ಮ್ಯುನಿಸಿಪಲ್ ಕೌನ್ಸಲರುಗಳು, ತಾಲ್ಲೂಕು ಅಧಿಕಾರಿಗಳು, ಸಬ್ ರೆಜಿಸ್ಟ್ರಾರ್ರವರು, ಪೋಲೀಸ್ ಇನ್ಸ್ಪೆಕ್ಟರು ವಗೈರೆ ಜನಗಳು ಇಸ್ತಕಬಾಲ್ ಕಾದಿದ್ದು ಟ್ರಾವೆಲರ್ಸ್ ಬಂಗಲೆಗೆ ಕರೆದುತಂದು ಇಳಿಸಿದರು. ಬಂಗಲೇ ಮುಂದೆ ನೇತ್ರಾನಂದಕರವಾದ ಚಪ್ಪರಗಳೂ ಟವನ್ ಸರಹದ್ದಿನಿಂದ ಬಂಗಲೆ ಮತ್ತು ಪೇಟೆಗಳಲ್ಲಿ ಬಾವುಟಗಳೂ, ಎಲ್ಲಾ ಸ್ಕೂಲುಗಳನ್ನೂ ಬಹಳ ಚೆನ್ನಾಗಿ ಕದೇ ಮಾವುಗಳಿಂದ ಅಲಂಕರಿಸಿದ್ದರು. ಆ ದಿನ ಸಾಯಂಕಾಲ ಕೌನ್ಸಲರವರು ಅಂಗಡಿಬೀದಿ ಮಾರ್ಗವಾಗಿ ದಯಮಾಡಿಸಿ ಎಲ್ಲಾ ಸ್ಕೂಲುಗಳನ್ನೂ ಪರಾಂಬರಿಸಿಕೊಂಡು ವಿರಲಕುಂಟೆ ಮಧ್ವಸಾಗರಕೆರೆ, ಕೋಆಪರೇಟಿವ್ ಸೊಸೈಟಿ ಸಹ ಪರಾಂಬರಿಸಿದರು. ಆ ರಾತ್ರಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ದಯಮಾಡಿಸಿ ಅರ್ಚಕರು ಮಾಡಿದ್ದ ಅಲಂಕಾರವನ್ನು ನೋಡಿ ಬಹಳ ಸಂತೋಷಪಟ್ಟರು. 10 ನೇ ತಾ. ಬೆಳಗ್ಗೆ ಮೋಟರಿನಲ್ಲಿ ಕಪ್ಪಲಮಡುಗು, ನಂಗ್ಲಿ ವಗೈರೆ ಗ್ರಾಮಗಳನ್ನು ನೋಡಿಕೊಂಡು ಮಧ್ಯಾಹ್ನ ದಯಮಾಡಿದರು ಅದೇ ದಿನ ಸಾಯಂಕಾಲ ಈ ಗ್ರಾಮದ ನೀರಿನ ಕಷ್ಟವನ್ನು ಕೇಳಿ ಮಧ್ವಸಾಗರದ ಕೆರೆಗೆ ನೀರು ಬರತಕ್ಕ ಪ್ರದೇಶವನ್ನು ಪರಾಂಬರಿಸಿ ತಕ್ಕ ಅನುಕೂಲ ಮಾಡಿಕೊಡುವದಾಗಿ ಅಪ್ಪಣೆ ಕೊಡಿಸಿದರು. ರಾತ್ರಿ ಶ್ರೀ ಪಾದರಾಜರ ಮಠಕ್ಕೆ ದಯಮಾಡಿ ಅಲ್ಲಿ ಮಂಗಳಾರತಿ ತೀರಿಸಿಕೊಂಡು ಶ್ರೀ ಸ್ವಾಮಿಗಳವರ ಕೂಡ ಸಂಭಾಷಣೆ ಮಾಡಿ ಬಂಗಲೆಗೆ ದಯಮಾಡಿದರು.—ಈ ತಾಲ್ಲೂಕಿಗೆ ಹೊಸದಾಗಿ ಅಮಲ್ದಾರ್ ಮ|| ಮುದ್ದುಕೃಷ್ಣಪ್ಪನವರು 12 ನೇ ತಾ. ಸಾಯಂಕಾಲ ದಯಮಾಡಿಸಿ ಮರುದಿನ ಛಾರ್ಜ ತೆಗೆದುಕೊಂಡರು. ಇವರು ಬಹಳ ಗುಣವಂತರಾಗಿಯೂ, ಕೆಲಸಕಾರ್ಯಗಳನ್ನು ಬಹು ಜಾಗರೂಕತೆಯಿಂದ ನಡಿಸುವವರಾಗಿಯೂ, ಜನಗಳಲ್ಲಿ ಅನುರಾಗವುಳ್ಳವರಾಗಿಯೂ ಇರುತ್ತಾರೆಂತ ಕಂಡುಬರುತ್ತದೆ. ಇವರು ಬಂದ ಸ್ವಲ್ಪ ದಿವಸದಲ್ಲಿಯೇ ಅಂದರೆ 17 ನೇ ತಾ. ರಾಜಗುಂಡಹಳ್ಳಿ ಪ್ರಾಂತ್ಯ ಸರ್ಕೀಟ್ ದಯಮಾಡಿಸಿದರು. ಇವರು ಕಸಬೆಯಲ್ಲಿ ಇರುವಾಗ ದಿನಂಪ್ರತಿ ಟವನ್ ಗಸ್ತು ಮಾಡುತ್ತಾದ್ದರಿಂದ ಟವನ್ ಸಾಫೀಜಾ ಸರಿಯಾಗಿರುತ್ತದೆ. ಈ ಊರಲ್ಲಿ ನೀರಿನ ಕಷ್ಟ ಹೇಳಲು ಸಾಧ್ಯವಲ್ಲ. ಸರ್ಕಾರದವರು ಗಮನಕೊಟ್ಟು ನೀರಿನ ತೊಂದರೆ ಪರಿಹಾರ ಮಾಡುವರೆಂದು ನಂಬಿಕೊಳ್ಳುತ್ತೇನೆ.

ನಂಜನಗೂಡು ತಾ|| ಹಗಡೂರು.—ಈ ಗ್ರಾಮವು ಸುಮಾರು 3,500 ಪ್ರಜೆಗಳನ್ನು ಒಳಗೊಂಡು ಈ ತಾಲ್ಲೂಕಿನಲ್ಲೆಲ್ಲಾ ಭಾರೀ ಗ್ರಾಮವಾಗಿರುತ್ತೆ. ಇಂಥಾ ಗ್ರಾಮದಲ್ಲಿ ಯೂನಿಯನ್ ಏರ್ಪಾಡುಗಳು ಸರಿಯಾಗಿಲ್ಲ. ಸರ್ಕಾರದವರು ಕೂಡಲೆ ಕ್ರಮಪಡಿಸುತ್ತಾರೆಂದು ನಂಬಿದೇನೆ. ಈ ಗ್ರಾಮದಲ್ಲಿರುವ ಭಾರೀ ಜಮೀನ್‌ದಾರ್ ಮೆ|| ಗೋವಿಂದಸ್ವಾಮಯ್ಯನವರು ಡಿ|| ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿರುವುದು, ಈ ತಾಲ್ಲೂಕಿನ ಪ್ರಜೆಗಳೆಲ್ಲರಿಗೂ ಸಂತೋಷವನ್ನುಂಟುಮಾಡಿದೆ, ಇವರು ಪರೋಪಕಾರಿಗಳಾಗಿಯೂ, ವಿದ್ಯಾವಿಶಾರದರಾಗಿಯೂ, ಪ್ರಜಾಹಿತೈಷಿಗಳಾಗಿಯೂ ಇರುವುದರಿಂದ ಪ್ರಜಾಪ್ರತಿನಿಧಿ ಸಭೆಯ ಮೆಂಬರನ್ನಾಗಿ ಸರ್ಕಾರದವರು ಚುನಾಯಿಸಿಕೊಂಡರೆ ಪ್ರಜೆಗಳ ಕೆಲವು ತೊಂದರೆಗಳು ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ. ಈ ಗ್ರಾಮದ ಸ್ಕೂಲಿನಲ್ಲಿ ಬಾಲಕರ ಸಂಖ್ಯೆಯು ಹೆಚ್ಚುತ್ತಾ ವಿದ್ಯಾಭಿವೃದ್ಧಿಯು ವೃದ್ಧಿಯಾಗುತ್ತಿದೆ. ಹೆ|| ಮಾ|| ನಂಜುಂಡಶಾಸ್ತ್ರಿಗಳು ಬಹಳ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದಾರೆ, ಇವರ ದಿವಸದಲ್ಲಿ ಸ್ಕೂಲ್ ಬಹಳ ಅಭಿವೃದ್ಧಿಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ.

ನಗರ ತಾ|| ಕಳೂರು ಕಟ್ಟೆ.—ಮೈಸೂರ್ ಶ್ರೀಮನ್ ಯುವರಾಜರವರ ಸವಾರಿಯು ಸಾಗರದಿಂದ ತಾ. 12 ನೇ ಮಂಗಳವಾರ ಸಾಯಂಕಾಲ ಕಳೂರು ಕಟ್ಟೆಗೆ ದಯಮಾಡಿಸಿತು. ಆ ಕಾಲದಲ್ಲಿ ತಾಲ್ಲೂಕ್ ಅಮಲ್ದಾರ್ರವರು ದೊಡ್ಡ ಮನುಷ್ಯರಿಗೆಲ್ಲಾ ಪರಿಚಯವನ್ನು ಮಾಡಿಸಿದರು. ತಾ. 13 ನೇ ಬುಧವಾರ ಯುವರಾಜರವರಿಗೆ ದೇಹದಲ್ಲಿ ಸ್ವಲ್ಪ ಆಲಸ್ಯ ಉಂಟಾದದ್ದರಿಂದ ದಿವಾನ್ ಸಾಹೇಬರವರ ಸವಾರಿಯು ತಾಲ್ಲೂಕ್ ಇನ್‌ಸ್ಪೆಕ್ಷನ್ ಮಾಡಿದ ನಂತರ ಪ್ರಜೆಗಳ ಅಹವಾಲ್‌ಗಳನ್ನು ಕೇಳಿ ಮುಖ್ಯವಾದ ವಿಷಯಗಳನ್ನು ನೋಟ್ ಮಾಡಿಕೊಂಡರು. ತಾ. 14 ನೇ ಗುರುವಾರ ಯುವರಾಜರು ಸಹ ನಗರಕ್ಕೆ ಹೋಗಿ ಅಲ್ಲಿನ ಜನಗಳಿಗೆ ದರುಶನಕೊಟ್ಟು ಪೂರ್ವಕಾಲದ ಕೋಟೆ ವಗೈರೆ ನೋಡಿಕೊಂಡು ಹುಲಿಕಲ್ ಘಾಟ ವರೆಗೆ ಹೋಗಿ ವಾಪಸ್ 2 ಘಂಟೆಗೆ ಕಳೂರು ಕಟ್ಟೆ ಮೊಕ್ಕಾಮಿಗೆ ದಯಮಾಡಿಸಿದರು. ಸಾಯಂಕಾಲ ಅಮಲ್ದಾರ್ರವರು ಟೀ ಪಾರ್ಟಿ, ಜಿಮ್ನಾಸ್ಟಿಕ್, ಬಾಲಕರ ವಿನೋದ, ಕುಸ್ತಿ, ಸಂಗೀತ, ಈ ರೀತಿ ಏರ್ಪಾಟುಗಳನ್ನು ನಡಿಸಿದರು. ತಕ್ಕ ಸತ್ಕಾರಗಳು ನಡೆದವು. ರಾತ್ರಿ 7 ಘಂಟೆ ಸಮಯದಲ್ಲಿ ಟವನ್ನಿನಲ್ಲಿ ದೀಪೋತ್ಸವ ನಡೆದು ಬಂಗ್ಲೆಗೆ ದಯಮಾಡಿಸಿದರು. 9 ಘಂಟೆ ಸಮಯದಲ್ಲಿ ಬಾಣಬಿರುಸು ಮುಂತಾದ ವಿನೋದಗಳು ನಡೆದವು. ತಾ. 15 ನೇ ಶುಕ್ರವಾರ ಬೆಳಿಗ್ಗೆ ಕೊಡಚಾದ್ರಿಗೆ ದಯಮಾಡಿಸಿ ಸಾಯಂಕಾಲ ವಾಪಸ್ ಬಂದರು. ತಾ. 16 ನೇ ಶನಿವಾರ ದಿವಾನ್‌ರವರ ಸವಾರಿ ರೈಲ್ ರಸ್ತೆ ಹಾಕುವ ಬಗ್ಗೆ ಬಿಟ್ಟಿದ ಕೆಳಕ್ಕೆ ದಯಮಾಡಿಸಿ ಸಾಯಂಕಾಲ ವಾಪಸ್ ಬಂದು, ತಾ. 17 ನೇ ಭಾನುವಾರ ಬೆಳಿಗ್ಗೆ 8 ಘಂಟೆ ಸಮಯಕ್ಕೆ ತೀರ್ಥಹಳ್ಳಿಗೆ ದಯಮಾಡಿಸಿತು. ತಾ. 12 ರ ಲಾಗಾಯತು 17 ರ ವರಿಗೆ ನಗರ ತಾಲ್ಲೂಕ್ ಜಡಪ್ರಜೆಗಳು ತಮ್ಮ ತಮ್ಮ ಚಪ್ಪರಗಳಲ್ಲಿ ಹೇಳಿಕೊಂಡ ಹವಾಲುಗಳನ್ನು ಮತ್ತು ಅರ್ಜಿಗಳನ್ನು ಬಹು ಸಂತೋಷದಿಂದ ಸ್ವೀಕರಿಸಿದರು. ಯುವರಾಜರು ಮತ್ತು ದಿವಾನ್‌ರು ಸಹ ನಗರ ತಾಲ್ಲೂಕು ಪ್ರಜೆಗಳ ಕಷ್ಟಗಳನ್ನು ಜಾಗ್ರತೆ ನಿವಾರಣೆ ಮಾಡ್ತಾರು ಎಂದು ನಂಬಿ ಹಾರೈಸುವೆವಲ್ಲದೆ ನಮ್ಮನ್ನಾಳುವ ಮಹರಾಜರಿಗೂ ಯುವರಾಜರಿಗೂ, ದಿವಾನ ಸಾಹೇಬರಿಗೂ ಸುಖವನ್ನು ಬಯಸುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡ್ ಈಗ ಒಟ್ಟು 68½ ಲಕ್ಷ ರೂಪಾಯಿಗಳಾಗಿದೆ.

∴

ಮುಂದಿನ ಶನಿವಾರ ಬೊಂಬಾಯಿನ ಲೇಡಿ ಹಾರ್ಡಿಂಜ್ ಆಸ್ಪತ್ರೆಯನ್ನು ಪರಾಂಬರಿಸಲು ವೈಸರಾಯಿ ಪ್ರಭುಗಳು ಪ್ರಯಾಣಮಾಡುವರು. ಅಲ್ಲಿಂದ ಸಮುದ್ರ ಪ್ರಯಾಣಮಾಡಿ ಕರಾಚಿಯನ್ನು ಸೇರುವರು.

∴

ಬಂಗಾಳದಲ್ಲಿ ಬಾಬು ಸರೋಜಚರಣ್ ಮಿತ್ರ ಎಂಬುವನು ತಾರ್‌ಪುರ್ ಸಕ್ಕರೆ ಕೆಲಸದ ಕಂಪನಿಯ ಷೇರುದಾರರ ಲೆಕ್ಕದ ಪಟ್ಟಿಗಳನ್ನು ಫೈಲಿಗೆ ಹಾಕದೆ ಇದ್ದ ಅಪರಾಧಕ್ಕಾಗಿ ಅವನಿಗೆ 20 ರೂ. ಜುಲ್ಮಾನೆಯೂ ಆ ಕಂಪನಿಯ ಬ್ಯಾಲೆನ್ಸ್ ಶೀಟನ್ನು ಫೈಲ್ ಮಾಡದೆ ಇದ್ದದ್ದಕ್ಕಾಗಿ 110 ರೂ. ಜುಲ್ಮಾನೆಯೂ ವಿಧಿಸಲ್ಪಟ್ಟಿತು

∴

ಬೊಂಬಾಯಿ ಪಟ್ಟಣದಲ್ಲಿ ಸಾಮುವೇಲ್ ಡಾನಿಯೆಲ್ಸ್ ಎಂಬ ಪೋಲೀಸ್ ಕಾನ್‌ಸ್ಟೆಬಲ್ ಕಳೆದ ತಿಂಗಳು 26 ನೇ ತಾರೀಕಿನ ರಾತ್ರಿ ಪೂರಾ ಕುಡಿದು ವಿಠ್ಠಲ್ ಬಾಬಾಜಿ ಗವಡೆ ಎಂಬೊಬ್ಬ ಕೂಲಿ ಆಳನ್ನು ಒದ್ದು ಕೊಂದನೆಂಬದಾಗಿ ಅವನನ್ನು ಅರೆಸ್ಟ್ ಮಾಡಿರುತ್ತಾರೆ. ಡಾಕ್ಟರು ಶವವನ್ನು ಪರೀಕ್ಷೆ ಮಾಡಿದಾಗ ಎಲ್ಲಾ ಪಕ್ಕೆಲುಬುಗಳು ಮುರಿದು ಶ್ವಾಸಕೋಶಕ್ಕೆ ಪೆಟ್ಟು ಬಿದ್ದಿರುವದಾಗಿ ಗೊತ್ತಾಯಿತು. ಈ ಕೇಸಿನ ವಿಚಾರಣೆಯು ನಡೆಯುತ್ತಾ ಇದೆ.

∴

ಸಾಗರ ದ್ವೀಪದಲ್ಲಿ ಸೇರುವ ಗಂಗಾಸಾಗರ ಮೇಳದ ಸ್ನಾನಕ್ಕೋಸ್ಕರ ಜನವರಿ ತಿಂಗಳು ಪ್ರತಿವರ್ಷದಲ್ಲಿಯೂ ಇಂಡಿಯಾ, ಬರ್ಮಾ ಮತ್ತು ಸಿಂಹಳ ದ್ವೀಪಗಳಿಂದ ನಾಲ್ವತ್ತು ಸಹಸ್ರದಿಂದ ಐವತ್ತು ಸಹಸ್ರದವರೆಗೂ ಭಕ್ತಾದಿಗಳು ಗುಂಪು ಕೂಡುತ್ತಿದ್ದರು. ಈ ವರ್ಷದ ಸಂಖ್ಯೆಯು ಬಹಳ ಕಮ್ಮಿ, ಇಪ್ಪತ್ತೈದು ಸಹಸ್ರವಾಗಿದ್ದಿತು. ಇದಕ್ಕೆ ಕಾರಣವೇನೆಂದು ತನಿಖೆ ಮಾಡುವಲ್ಲಿ ಜರ್ಮನಿಯವರ ಎಮ್‌ಡನ್ ಈಗಲೂ ಬಂಗಾಳ ಕೊಲ್ಲಿಯಲ್ಲಿ ತಿರುಗುತ್ತಿದೆಯೆಂಬ ಜನಗಳ ಭೀತಿಯೇ ಇದಕ್ಕೆ ಕಾರಣವೆಂದು ತಿಳಿದು ಬಂದಿದೆ.

∴

ಕಲ್ಕತ್ತಾ ಪಟ್ಟಣ ಕೆಲವು ನಿವಾಸಿಗಳು ತಮ್ಮ ನಗನಾಣ್ಯಗಳೂ ಬೈಸಿಕಲ್‌ಗಳೂ ಮನೆಯ ಸಾಮಾನುಗಳೂ 18 ತಿಂಗಳಿಂದ ಕಳುವಾಗುತ್ತಾ ಇವೆಯೆಂದು ಆಗಾಗ್ಗೆ ಪೋಲೀಸಿಗೆ ರಿಪೋರ್ಟ್ ಮಾಡುತ್ತಾ ಇದ್ದರು. ಪೋಲೀಸಿನವರು ಪತ್ತೆ ಹರಡೂಮು ನಡಿಸಿ ನಗ್ಗು ಸರ್ಕೆ ಎಂಬ ಒಬ್ಬ ಮರಾಟಿಯವನನ್ನು ಹಿಡಿದದ್ದರ ಮೇಲೆ ಕಳುವಿನ ಮಾಲುಗಳನ್ನು ಪೂನಾಪಟ್ಟಣ ಕಾಶೀನಾಥ್ ಮಹಾದೇವ್ ಓಕ್ ಎಂಬೊಬ್ಬ ವಕೀಲರು ತೆಗೆದುಕೊಂಡಿರುವದಾಗಿ ಗೊತ್ತಾಯಿತು. ವಿಚಾರಣೆಯು ನಡೆದದ್ದರಲ್ಲಿ ಕೇಸ್ ರುಜುವಾತಾದ್ದರಿಂದ ಜಡ್ಜರು ಪ್ರತಿಯೊಬ್ಬನಿಗೂ 6 ತಿಂಗಳ ಕಠಿಣ ಸಜಾ 3 ರೂಪಾಯಿ ಜುಲ್ಮಾನೆ ವಿಧಿಸಿದರು

ಬೊಂಬಾಯಿ ಗವರ್ನರುವರ ಪತ್ನಿಯಾದ ಲೇಡಿ ವೆಲಿಂಗ್‌ಟನ್ ರವರು ಅಲ್ಲಿನ ಗವರ್ನಮೆಂಟ್ ಹೌಸಿನಲ್ಲಿ ನೆರೆದಿದ್ದ ಸಭಿಕರ ಮುಂದೆ ಬೊಂಬಾಯಿ ಸ್ಯಾನಟರಿ ಅಸೋಸಿಯೇಷನ್ ಯವರು ಮಾಡತಕ್ಕ ಕೆಲಸದಲ್ಲಿ ಶಿಶುಗಳ ಮರಣ ಸಂಖ್ಯೆಯನ್ನು ಕಡಮೆ ಮಾಡುವುದೂ, ಜನಗಳಿಂದ ಕರೆಸಿಕೊಳ್ಳುವ ಹಿಂದೂ ಸೂಲಗಿತ್ತಿಯರ ಮೌಢ್ಯದಿಂದಲೂ ಅವಿವೇಕದಿಂದಲೂ ಬಾಣಂತಿಯರಿಗೆ ಆಗತಕ್ಕ ಅಪಾಯವನ್ನು ಕಡಿಮೆ ಮಾಡುವುದೂ, ಇಂಥಾ ಸೂಲಗಿತ್ತಿಯರನ್ನು ತರಬೇತಾದವರ ಅಧೀನಕ್ಕೊಳಪಡಿಸಿ ತಾಯಿಗೂ ಮಗುವಿಗೂ ಅಪಾಯಕ್ಕೊಳಗಾಗದಂತೆ ಮಾಡುವುದೂ, ಹೀಗೆ ಕಾಲದಲ್ಲಿ ಜನಗಳು ತರಬೇತಾದ ಸೂಲಗಿತ್ತಿಯನ್ನು ಕೇಳುವಂತೆ ಮಾಡುವುದೂ ಮುಂತಾದವುಗಳಲ್ಲಿ ಜಾಗರೂಕತೆಯನ್ನುಂಟುಮಾಡಬೇಕಾದ ಅವಶ್ಯಕತೆಯುಂಟೆಂದು ಹೇಳಿದರು.

∴

ಸಂಯುಕ್ತ ಸಂಸ್ಥಾನದ ಅಪ್ಪರ್ ಇಂಡಿಯಾ ಬ್ಯಾಂಕಿನಲ್ಲಿ ನಡೆದ 50,000 ರೂಪಾಯಿ ಕರೆನ್ಸಿ ನೋಟುಗಳ ಕಳುವಿನ ವಿಚಾರಣೆಯು ನಡೆದದ್ದರಲ್ಲಿ ಅಪರಾಧಿಗಳಾಗಿ ಸಿಕ್ಕಿದ್ದ ಐದು ಮಂದಿಯ ಪೈಕಿ ಬಾಲ್ ಸಿಂಗನನ್ನು ಖುಲಾಸ್ ಮಾಡಿಬಿಟ್ಟರು. ಉಳಿದ ನಾಲ್ವರಲ್ಲಿ 1 ನೇ ವಾಲಿ ಮಹಮ್ಮದನಿಗೆ ನಾಲ್ಕು ವರುಷ ಕಠಿಣ ಸಜ ಮತ್ತು 1,000 ರೂ. ಜುಲ್ಮಾನೆ ಅಥವಾ ಇನ್ನು ಆರು ತಿಂಗಳು ಹೆಚ್ಚು ಕಠಿಣ ಸಜವೂ 2 ನೇ ಅಲಿ ಮಹಮ್ಮದನಿಗೆ ಎರಡು ವರುಷ ಕಠಿಣ ಸಜ ಮತ್ತು 500 ರೂ. ಜುಲ್ಮಾನೆ ಅಥವಾ ಇನ್ನು ಆರು ತಿಂಗಳು ಹೆಚ್ಚು ಕಠಿಣ ಸಜವೂ 3 ನೇ ತ್ರೀಕಾಬುದ್ದೀನನಿಗೆ ಮೂರು ವರುಷ ಒಂಭತ್ತು ತಿಂಗಳ ಕಠಿಣ ಸಜವೂ 4 ನೇ ಸಿರಿರಾಮ್ ಅಹಿರ್‌ಗೆ ಎರಡು ವರುಷ ಕಠಿಣ ಸಜ ಮತ್ತು 500 ರೂ. ಜುಲ್ಮಾನೆ ಅಥವಾ ಇನ್ನೂ ಆರು ತಿಂಗಳ ಹೆಚ್ಚು ಕಠಿಣ ಸಜವೂ ವಿಧಿಸಲ್ಪಟ್ಟಿದೆ.

∴

ಬಂಗಾಳಕ್ಕೆ ಸೇರಿದ ಮನ್‌ಭೂಮ್ ಡಿಸ್ಟ್ರಿಕ್ಟಿನಲ್ಲಿ ಇಬ್ಬರನ್ನು ಕೊಲೆ ಮಾಡಿದ ಖೂನಿ ಕೇಸಿನಲ್ಲಿ ಅಪರಾಧಿಗಳಾಗಿ ಸಿಕ್ಕಿದ್ದ ಕ್ರಿಸ್ಟೊ ಮಹತೊ ಎಂಬುವನಿಗೂ ಬೇರೆ ಇಬ್ಬರಿಗೂ ಸೆಷನ್ಸ್ ಜಡ್ಜಿಯವರು ಫಾಸಿ ಸಜವನ್ನು ವಿಧಿಸಿದ್ದರು. ವಿಚಾರಣೆಯ ಕಾಲದಲ್ಲಿ ಕ್ರಿಸ್ಟೊ ಮಹತೊ ಎಂಬುವನು ಖೂನಿ ನಡೆದ ದಿನದಲ್ಲಿ ತಾನು ಆ ಸ್ಥಳಕ್ಕೆ ಎಂಟು ಮೈಲಿ ದೂರದಲ್ಲಿದ್ದೆನೆಂದು ಹೇಳಿಕೊಂಡರೂ ಅವನ ಮಾತು ನಂಬಿಕೆಗೆ ಬರಲಿಲ್ಲ. ಕಡೆಗೆ ಅಪರಾಧಿಗಳು ಚೀಫ್ ಕೋರ್ಟಿಗೆ ಅಪೀಲ್ ಮಾಡಿಕೊಂಡರೂ ಅವರೂ ಸಹ ಕೆಳಕೋರ್ಟಿನವರು ವಿಧಿಸಿದ್ದ ಶಿಕ್ಷೆಯನ್ನೇ ಖಾಯಂಮಾಡಿಬಿಟ್ಟರು. ಅವರನ್ನು ಗಲ್ಲಿಗೆ ಹಾಕುವದಕ್ಕಾಗಿ ಒಂದು ದಿನವೂ ಸಹ ನೇಮಿಸಲ್ಪಟ್ಟಿತ್ತು. ಅವರ ಅಪ್ಪರಲ್ಲಿ ಅಪರಾಧಿಗಳ ಕಡೆಯ ವಕೀಲರಿಗೆ ಕೆಲವು ನಿಜಾಂಶಗಳು ತಿಳಿದುಬಂದು ಅವುಗಳನ್ನು ಕೂಡಲೆ ಸ್ಥಳಾಧಿಕಾರಿಗಳಿಗೆ ತಿಳಿಸಿದ್ದರ ಮೇಲೆ ಅವರು ಗಲ್ಲಿಗೆ ಹಾಕುವದನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ಅಪ್ಪಣೆಯನ್ನು ಕೊಟ್ಟರು. ತರುವಾಯ ಪುನರ್ವಿಚಾರಣೆಯು ನಡೆದದ್ದರಲ್ಲಿ ಬೀಹಾರಿನ ಲೆಫ್ಟಿನೆಂಟ್ ಗೌನರ್‌ರವರು ಕ್ರಿಸ್ಟೊ ಮಹತೊ ಎಂಬವನನ್ನು ಖುಲಾಸ್ ಮಾಡಿಸಿ ಉಳಿದ ಇಬ್ಬರನ್ನು ಗಡೀಪಾರ್ ಮಾಡಿಸಿದರು.

∴

ಬೊಂಬಾಯಿ ಪಟ್ಟಣದಲ್ಲಿ ಕೆಲವು ಮಂದಿ ಮುತ್ತಿನ ವ್ಯಾಪಾರಿಗಳು ಮುತ್ತುಗಳನ್ನು ಹಸನುಮಾಡಿಸಿ ಮಾರುವದಕ್ಕೆ ಒಂದು ಸಂಘವನ್ನು ಮಾಡಿಕೊಂಡು ಸಯನ್ಸ್ ಶಾಸ್ತ್ರಜ್ಞರಾದ ಪ್ರೊಫೆಸರ್ ಟಿ. ಗಜ್ಜಾರ್ರವರನ್ನು ಮುತ್ತುಗಳನ್ನು ಹಸನುಮಾಡಿಕೊಡುವಂತೆ ಕೇಳಿಕೊಂಡರು ಅದಕ್ಕೆ ಅವರು ನಮಗೆ ಬರುವ ಹೆಚ್ಚಿನ ಲಾಭದಲ್ಲಿ ನನಗೆ ರೂ. 1 ಕ್ಕೆ 4 ಆ ಮೇರೆ ಕೊಡಬೇಕೆಂದು ಕೇಳಲು ಆ ಸಂಘದವರು ಹಾಗೆಯೇ ಆಗಲೆಂದು ಒಪ್ಪಿಕೊಂಡು, ತಮ್ಮ ಮಾತಿನ ಪ್ರಕಾರ ಮೊದಲನೇ ವರುಷದಲ್ಲಿ ರೂ. 13,180 ನ್ನೂ ಎರಡನೇ ವರುಷದಲ್ಲಿ ರೂ. 51,000 ನ್ನೂ ಗಜ್ಜಾರ್ರವರಿಗೆ ಕೊಟ್ಟುಬಿಟ್ಟರು. ತರುವಾಯ ಮುತ್ತುಗಳ ಧಾರಣೆಯು ಇಳಿದು ಹೋದ್ದರಿಂದ ಈ ಸಂಘದವರಿಗೆ ತುಂಬಾ ನಷ್ಟವಾಗಿ ಸಂಘವು ಒಡೆದುಹೋಯಿತು. ನಂತರ ಷೇರುದಾರರು ತಮ್ಮ ಲೆಖ್ಖಾಚಾರಗಳನ್ನು ನೋಡಿ, ತಾವು ತಪ್ಪು ತಿಳುವಳಿಕೆಯಿಂದ ಗಜ್ಜಾರ್ರವರಿಗೆ ಹಣ ಕೊಟ್ಟಿರುತ್ತೇವೆಂದೂ ಸಂಘದವರಾಗಿದ್ದ ತಮಗೆ ನಷ್ಟವಾಗಿದೆಯೇ ಹೊರತು ಲಾಭ ಬಂದಿರುವದಿಲ್ಲವೆಂದೂ ಹೇಳಿಕೊಂಡು ದಿವಾನ್ ಬಹದ್ದೂರ್ ಕಸ್ತೂರ್ ಚಂದ್ ಅಬೀರ್‌ಚಂದ್‌ರವರಲ್ಲಿ ಒಂದು ಪಂಚಾಯತಿಯನ್ನಿಡಿಸಿದರು. ಅಬೀರ್ ಚಂದ್‌ರವರು ಹಣವನ್ನು ವಾಪಸು ಕೊಟ್ಟುಬಿಡಬೇಕೆಂದು ಹೇಳಲು ಗಜ್ಜಾರ್ರವರು ಪಂಚಾಯತರ ತೀರ್ಮಾನಕ್ಕೆ ತಾವು ಒಪ್ಪುವದಿಲ್ಲವೆಂದು ಹೇಳಿಬಿಟ್ಟರು. ಆದ್ದರಿಂದ ಅಬೀರ್‌ಚಂದ್‌ರವರು ಇವರ ಮೇಲೆ ದಾವಾ ಮಾಡಿದರು. ಮಿ| ಜಸ್ಟಿಸ್ ದೇವರ್‌ರವರು ಈ ಕೇಸನ್ನು ವಿಚಾರಣೆಮಾಡಿ ಡಿಸ್‌ಮಿಸ್ ಮಾಡಿಬಿಟ್ಟರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಕಸ್ತೂರಿ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹ ಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸುವಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರಿಗೆ ಬಾಯಿ ಘಮಘಮಿಸುವಂತೆ ಮಾಡುವುವು ಶೀತವಾಯು-ಕೆಮ್ಮು-ನೆಗಡಿ ದಿನಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 260 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [231-12]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!

ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ, ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266–R] ಪಿ. ಒ. ಬಾಕ್ಸ್ 330, ಬೊಂಬಾಯಿ.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2–4–0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಓಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ ಕೀಲೆಸ್ ಲಿವರ್ ಜೆಕ್ಕ ಸ್ಕ್ರೂ ಕಂಪೆನ್‌ಸೇಷನ್ ಬ್ಯಾಲೆನ್ಸು ಇದು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6-0-0 ಇದನ್ನು ಡಿಸೆಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಜವಾನ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,

[109-34] ಸಾಹುಕಾರ್ ಪೇಟೆ, ಮದರಾಸು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಖ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3 8 0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ಸಾಖ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ ಗೌನರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಪಾಕೆಟುಗಳಿಂದಲೇನು ? ಪರಿಪರಿ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:- (1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ರಾತ್ರಿಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ತೈಲ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180–16] ಮೊದಲಿ ಬೀದಿ, ತಿರುಪಲ್ಲಕೇಣಿ, ಮದರಾಸು.

ಚಿಕ್ಕಮಗಳೂರು ಆರ್ಯ ಮಹಿಳಾ ಸಮಾಜ.

ಪ್ರಿಯ ಸಹೋದರಿಗಳಿರಾ, ನಾನು ವೃತ್ತಾಂತ ಪತ್ರಿಕೆಯ ವಿಚಾರವಾಗಿ ಒಂದು ಚಿಕ್ಕ ಉಪನ್ಯಾಸವನ್ನು ಓದುತ್ತೇನೆ. ತಾವುಗಳೆಲ್ಲರೂ ದಯವಿಟ್ಟು ಕೇಳಬೇಕಾಗಿ ಪ್ರಾರ್ಥಿಸುತ್ತೇನೆ. ಪತ್ರಿಕೆಗಳು ಈಗ ಸ್ವಲ್ಪ ದಿವಸಗಳಿಂದ ಅಂದರೆ ಹಲವು ವರ್ಷಗಳಿಂದ ಮಾತ್ರ ಇಂಡಿಯಾ ದೇಶದಲ್ಲಿ ಪ್ರಚಾರಕ್ಕೆ ಬಂದಿವೆ. ಸುಮಾರು ಮೂವತ್ತು ವರ್ಷಗಳಿಗೆ ಮುಂಚೆ ಈ ವಿಧವಾದ ಸಮಾಚಾರ ಪತ್ರಿಕೆಯೇ ಇರಲಿಲ್ಲ. ಯಾವ ದೇಶಗಳಲ್ಲಿ ಏನು ವಿಶೇಷ ನಡೆಯುವುದೋ? ಅದೊಂದೂ ತಿಳಿಯುತ್ತಿರಲಿಲ್ಲ. ಒಂದು ಊರಿನಲ್ಲಿರುವ ಜನಂಗೆ ಯಾವುದಾದರೂ ಕಷ್ಟ ಸಂಭವಿಸಿದರೆ ಆ ವರ್ತಮಾನ ಹರಡದೆ ಅವರ ಕಷ್ಟನಿವಾರಣೆಗೆ ಯಾರು ಬರಲೂ ಅವಕಾಶವಿರಲಿಲ್ಲ. ಯಾವುದಾದರೂ ಒಂದು ದೇಶದಲ್ಲಿ ಚೆನ್ನಾಗಿ ಅಭಿವೃದ್ಧಿಗೆ ಬರುವ ಅನುಕೂಲಗಳೂ ಕೆಲಸಗಳೂ ಇದ್ದರೂ ಆ ಸಮಾಚಾರ ಒಬ್ಬರಿಗೂ ಗೊತ್ತಾಗುತ್ತಿರಲಿಲ್ಲ. ಹೀಗೆ ಇಂಡಿಯಾ ದೇಶದಲ್ಲಿ ಬಹಳ ಕಷ್ಟಕ್ಕೆ ಕಾರಣಗಳಿದ್ದುವು. ದೇವರ ದಯದಿಂದ ರೈಲ್ ಗಾಡಿ, ಟೆಲಿಗ್ರಾಫ್ ಮೊದಲಾದ ಸೌಲಭ್ಯಗಳುಂಟಾದವು. ಇದರ ದೆಸೆಯಲ್ಲಿಯೇ ವೃತ್ತಾಂತ ಪತ್ರಿಕೆಯೂ ಹುಟ್ಟಿತು. ಮೊದಲು ಮೊದಲು ಎಲ್ಲೋ ಒಂದೆರಡು ಪತ್ರಿಕೆಗಳು ಮಾತ್ರ ಪ್ರಚಾರದಲ್ಲಿದ್ದುವು. ಬರಬರುತ ಜನರು ವಿದ್ಯಾವಂತರಾದ ಹಾಗೆಲ್ಲಾ ಈ ಪತ್ರಿಕೆಗಳು ಸಂಖ್ಯೆಯಲ್ಲೂ ಸಮಾಚಾರದಲ್ಲೂ ಹೆಚ್ಚಿದವು. ಆದಿಯಲ್ಲಿ ಇಂಗ್ಲಿಷನ್ನು ಅಭ್ಯಾಸ ಮಾಡಿದವರಿಗೆ ಮಾತ್ರ ವೃತ್ತಾಂತ ಪತ್ರಿಕೆಯನ್ನು ಓದುವುದಕ್ಕೆ ಅನುಕೂಲಗಳಿದ್ದುವು. ಏಕೆಂದರೆ ಆಗ ಇಂಗ್ಲಿಷು ಭಾಷೆಯಲ್ಲಿ ಮಾತ್ರ ಪತ್ರಿಕೆಗಳನ್ನು ಅಚ್ಚುಹಾಕುತ್ತಿದ್ದರು. ಈಚೆಗೆ ಆ ಪತ್ರಿಕೆಗಳನ್ನು ನೋಡಿಕೊಂಡು ನಮ್ಮ ದೇಶಭಾಷೆಯಲ್ಲಿಯೂ, ಅವುಗಳನ್ನು ಪ್ರಚಾರಕ್ಕೆ ತರುತ್ತಿದಾರೆ. ವೃತ್ತಾಂತ ಪತ್ರಿಕೆಗಳು ಹೊರಪಡುವುದಕ್ಕೆ ಮುಂಚೆ ಇದ್ದ ಸ್ಥಿತಿಯನ್ನು ತಿಳಿಯುವುದು ಕಷ್ಟವಾಗಿತ್ತು. ಮೇಲೆ ಹೇಳಿದಂತೆ ಜನರು ಒಬ್ಬರಿಗೊಬ್ಬರು ಸಹಾಯಕ್ಕೆ ಆಗಬೇಕಾದರೆ ಆದರಲ್ಲಿಯೂ ದೂರ ದೇಶದವರು ಸಹಾಯಕ್ಕೆ ಕೈಕೊಟ್ಟು ಕಾಪಾಡಬೇಕಾದರೆ ಅವರಿಗೆ ಬೇಗ ಸಮಾಚಾರ ತಿಳಿಯುತ್ತಿರಬೇಕು. ಉದಾಹರಣೆಗಾಗಿ ಉತ್ತರ ದೇಶದಲ್ಲಿ ಕ್ಷಾಮವೆಂದು ತಿಳಿಯೋಣ. ಮೈಸೂರು ದೇಶವು ಸುಭಿಕ್ಷವೆಂದು ಯೋಚಿಸೋಣ. ಈಗ ನಮ್ಮ ಸೀಮೆಯಲ್ಲಿ ದವಸ ಧಾನ್ಯಗಳು ಹೆಚ್ಚಾಗಿವೆಯೆಂದು ಅಲ್ಲಿಗೆ ತಿಳಿಯುವ ಬಗೆ ಹೇಗೆ? ತಿಳಿದರೆ ರೈಲ್ ಗಾಡಿಗಳೇನೋ ಉಂಟು. ಆದರೆ ಅದರಿಂದ ಉಪಕಾರವಾಗಬೇಕಾದರೆ ಇಲ್ಲಿಂದ ಯಾರಾದರೂ ಸಮಾಚಾರವನ್ನು ಅಲ್ಲಿಗೆ ಕಳುಹಿಸಬೇಕು. ಈ ಸಮಾಚಾರ ತಿಳಿಯುವ ಬಗೆ ಹೇಗೆ? ಪತ್ರಿಕೆಗಳಿಂದಲ್ಲವೇ. ಇನ್ನೂ ಹಲವು ಬಗೆಯ ಕಷ್ಟಗಳನ್ನು ಪತ್ರಿಕೆಗಳಿಂದ ತಪ್ಪಿಸಿಕೊಳ್ಳಬಹುದು. ಕರ್ಪೂರ ಕಾಟ ಹೆಚ್ಚಾದಾಗ ಆ ಊರಿನವರು ಸರ್ಕಾರಕ್ಕೆ ತಮಗೆ ಬಂದಿರುವ ಅಪಾಯವನ್ನು ತಿಳಿಸಿ ಉಪಾಯಗಳನ್ನು ಕರಿಸಿಕೊಳ್ಳಬಹುದು. ಇವು ಸಾಧಾರಣ ವಿಷಯಗಳು. ಕಾಗದ ಬರೆಯುವುದರ ಮೂಲಕ ನಡಿಸಿಕೊಳ್ಳಬಹುದು. ಆದರೆ ಎಲ್ಲೆಲ್ಲಿಗೂ ತಿಳಿಯುವಂತೆ ಮಾಡಬೇಕಾದರೆ ವೃತ್ತಾಂತ ಪತ್ರಿಕೆಯಿಂದಲೇ ಸಾಧ್ಯ. ಅಲ್ಲದೆ ಜನರ ಕೈಗಾರಿಕೆ, ವಿದ್ಯಾಭ್ಯಾಸ, ನಾಗರಿಕತೆ ಮುಂತಾದ ಅಂಶಗಳನ್ನು ಎಲ್ಲರಿಗೂ ತಿಳಿಯಪಡಿಸುವುದರಿಂದ ದೇಶವು ಬೇಗ ಉನ್ನತ ಸ್ಥಿತಿಗೆ ಬರುತ್ತದೆ. ಈ ಅಂಶಗಳನ್ನು ಬಿಡಿಬಿಡಿಸಿ ಚೆನ್ನಾಗಿ ಮನವಟ್ಟಾಗುವಂತೆ ಹೇಳಬೇಕಾದರೆ ಇಲ್ಲಿನ ಜನರು ಆಗಾಗ್ಗೆ ಒಟ್ಟುಗೂಡಿ ಮಾತನಾಡಬೇಕು. ಇಲ್ಲವೇ ಪತ್ರಿಕೆಗಳಿಂದ ಚೆನ್ನಾಗಿ ತಿಳಿದುಕೊಳ್ಳಬೇಕು. ಇದರಲ್ಲಿ ಎರಡನೆಯದು ಸುಲಭವೆಂದು ತೋರುತ್ತದೆ. ಮತವಿಚಾರವೂ ಹೀಗೆಯೇ. ಬಹಳ ತಿಳಿದ ಪಂಡಿತನು ತನ್ನ ದೇಶಕ್ಕೆ ಉಪಕಾರ ಮಾಡುವುದಕ್ಕೆ ಎಳಸಿದರೆ ಪತ್ರಿಕೆಗಳ ಮೂಲಕ ತನ್ನ ಆಲೋಚನೆಗಳನ್ನು ವ್ಯಕ್ತಪಡಿಸಬಹುದು. ಹೀಗೆ ಜ್ಞಾನ ಹರಡುವುದಕ್ಕೂ ಪತ್ರಿಕೆಯೇ ಸಹಕಾರಿ. ಮೂರರೊಳುಮೊದಲು ಪಾಲು ಪತ್ರಿಕೆಯ ಉಪಕಾರವೇ ಜನರಿಗೆ ಹೆಚ್ಚಾಗಿರುವುದು.

ಆದರೆ ಪತ್ರಿಕೆಗಳನ್ನು ಪ್ರಚುರಪಡಿಸುವುದರಲ್ಲಿ ಬಹಳ ಬುದ್ಧಿವಂತರು ಸೇರಬೇಕು. ಇಲ್ಲದಿದ್ದರೆ ಬಹಳ ಕೆಡಕು ಉಂಟಾಗುವವು. ಸಾಧಾರಣವಾಗಿ ತಿಳಿದಿರುವುದೇನೆಂದರೆ—ವೃತ್ತಾಂತ ಪತ್ರಿಕೆಯಲ್ಲಿ ಹೇಳಿರುವ ಅಂಶಗಳೆಲ್ಲಾ ಬಹಳ ಹೊತ್ತು ಆಲೋಚನೆಮಾಡಿ ಜನರ ಉಪಕಾರಕ್ಕಾಗಿಯೇ ತಿಳಿಯಪಡಿಸಿರುವವು ಎಂದಲ್ಲದೆ ಯಾವುದು ತಪ್ಪು? ಯಾವುದು ಸರಿ? ಯಾವುದು ಒಳ್ಳೆಯದು? ಯಾವುದು ನಿಜವೆಂದು ಕಂಡಾ ತಿಳಿಯರು. ಆದುದರಿಂದ ಅಂತಹ ಜನರಿಗೂ ಉಪಕಾರವಾಗುವಂತೆ ಬರೆಯುವ ಉದ್ದೇಶವಿದ್ದರೆ, ಅವರ ಮನಸ್ಸು ಕೆಡಿಸಿ ದುಡುಕಿಹೋಗುವಂತೆ ಮಾಡಬಾರದು. ಆದುದರಿಂದ ವಿವೇಕವಿರುವವರೇ ಪತ್ರಿಕೆಗಳನ್ನು ಹೊರಪಡಿಸಬೇಕು. ಅವರು ರಾಜ್ಯಕ್ಕೆ ಹಾನಿ ಬಾರದಂತೆಯೂ, ಜನರು ದಂಗೆ ಏಳದಂತೆಯೂ ನೋಡಿಕೊಳ್ಳಬೇಕು. ಒಂದು ಪಂಗಡವನ್ನು ಇನ್ನೊಂದು ಪಂಗಡದೊಡನೆ ದ್ವೇಷಿಸುವಂತೆ ಮಾಡಬಾರದು.

ಪತ್ರಿಕೆಗಳಿಗೂ ಪುಸ್ತಕಗಳಿಗೂ ಇರುವ ವ್ಯತ್ಯಾಸವೇನೆಂದರೆ—ಪುಸ್ತಕಗಳಲ್ಲಿ ಹೇಳಿರುವ ವಿಷಯಗಳು ಬಹಳ ಆಲೋಚನೆಮಾಡಿ ಬರೆದವುಗಳು. ಪತ್ರಿಕೆಗಳ ವಿಚಾರವಾದರೋ ಈಗ ನಡೆದವುಗಳನ್ನು ಈಗಲೇ ತಿಳಿಯಪಡಿಸುವವು. ಹಾಗೆ ಮಾಡುವುದರಿಂದ ಆಲೋಚನೆಗೆ ಅವಕಾಶವಿರುವುದಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಬೇರೊಂದು ವಿಧವಾಗಿ ತಿಳಿಯಬಹುದು. ಆದುದರಿಂದ ಪತ್ರಿಕೆ ಬರೆಯುವುದು ಎಲ್ಲರಿಗೂ ಸುಲಭವಲ್ಲ. ಹಾಗಾದರೆ ಪತ್ರಿಕೆಗಳು ಏಕೆ? ಪುಸ್ತಕಗಳೇ ಸಾಲವೇ ಎಂದು ಕೇಳಬಹುದು. ಈ ವಿಷಯ ಹಾಗಲ್ಲ. ಪತ್ರಿಕೆಗಳಿಂದ ಬಹಳ ಬೇಗ ತಿಳಿಯಪಡಿಸಬೇಕಾದ ವಿಷಯಗಳು ಅಗತ್ಯವಾಗಿರುವವು. ಅಲ್ಲದೆ ಎಲ್ಲರೂ ಪುಸ್ತಕಗಳನ್ನು ಪ್ರಚಾರಪಡಿಸುವುದಕ್ಕೆ ಶಕ್ತರಾಗಿಲ್ಲ. ಇಲ್ಲವೇ ಒಂದು ಪುಸ್ತಕ ತುಂಬುವಷ್ಟು ವಿಷಯವೇ ಅವರಿಗಿಲ್ಲ. ಇಂಥಹ ಸಮಯದಲ್ಲಿ ಪತ್ರಿಕೆಯೇ ಅನುಕೂಲವಾದ ಆಯುಧ. ಅದರ ಸಹಾಯದಿಂದ ಏನು ಬೇಕಾದರೂ ಜಾಗ್ರತೆಯಾಗಿ ತಿಳಿಯಬಹುದು. ಪತ್ರಿಕೆಗಾರನು ಒಳ್ಳೆಯವನಾಗಿಯೂ, ಜನರಿಗೆ ಇಷ್ಟನಾಗಿಯೂ, ರಾಜ್ಯಕ್ಕೆ ದ್ರೋಹಿಯಲ್ಲದೆಯೂ ಇರಬೇಕು. ಹೀಗಿಲ್ಲದಿದ್ದರೆ ಬಹಳ ಹಾನಿ ಸಂಭವಿಸುತ್ತದೆ. ವರ್ತಮಾನವನ್ನು ಪ್ರಕಟಿಸುವುದಕ್ಕೆ ಬದಲಾಗಿ ವಿಷವನ್ನು ಚೆಲ್ಲಿದಂತಾಗುತ್ತದೆ. ಜನರ ಮನಸ್ಸು ಕೆಟ್ಟುಹೋಗಬಹುದು. ಬುದ್ಧಿವಂತನಾಗಿ ತಾನು ಓದಿ ಹೆಚ್ಚಾಗಿ ತಿಳಿದುಕೊಂಡು ಅದನ್ನು ಯಾವ ವಿಧದಲ್ಲಿಯಾದರೂ ಜನರಿಗೆ ತಿಳಿಸಿ ಉಪಕಾರಮಾಡಬೇಕೆಂದು ಬರೆದರೆ ಅವನೀಗ ಜನೋಪಕಾರಿ. ಇನ್ನು ವೃತ್ತಾಂತ ಪತ್ರಿಕೆಯನ್ನು ಎಷ್ಟೆಂದು ಹೇಳೋಣ. ಜನರಿಗೆ ರಾಜ್ಯಭಾರ ವಿಷಯವನ್ನು ತಿಳಿಯಪಡಿಸಿ ಅವರ ಸಮ್ಮತಿಯನ್ನು ಪಡೆದುಕೊಳ್ಳಬಹುದು. ಅವರಿಗೂ ಆ ವಿಚಾರದಲ್ಲಿ ಆಲೋಚನೆಯನ್ನುಂಟುಮಾಡಿ ವಿವೇಚನಾ ಶಕ್ತಿಯನ್ನು ಕೊಟ್ಟು ಉತ್ತಮ ಸ್ಥಿತಿಗೆ ತರಬಹುದು. ಇದೇ ರೀತಿ ಬೇರೆ ಬೇರೆ ದೇಶದ ಜನರ ನಡವಳಿಕೆಯನ್ನು ಚೆನ್ನಾಗಿ ನೋಡಿ ಅದರಲ್ಲಿ ಯಾವುದು ಉಪಯೋಗಕ್ಕೆ ಬರುತ್ತದೋ ಅದನ್ನು ಕೈಕೊಂಡು ತಮ್ಮಲ್ಲಿಯೂ ಬಳಕೆಗೆ ತರುವುದು ಒಳ್ಳೆಯದು. ಆಗಾಗ ತಮ್ಮ ದೇಶದ ಸ್ಥಿತಿಯನ್ನೂ ಇತರ ದೇಶದ ಸ್ಥಿತಿಯನ್ನೂ ಹೋಲಿಸಿ ನೋಡಿದರೆ, ತಮ್ಮಲ್ಲಿರುವ ನ್ಯೂನತೆಗಳನ್ನು ತಿದ್ದಿಕೊಳ್ಳಬಹುದು. ಹಾಗೆಯೇ ಜ್ಞಾನದಲ್ಲಿಯೂ ಸಂಯಾದದ್ದು ಯಾವುದೆಂದು ಗೊತ್ತಾಗುತ್ತದೆ. ಇಂಗ್ಲೆಂಡಿನಲ್ಲಿ ಯಾವುದೋ ಒಂದು ಯಂತ್ರದಿಂದ ಬಹಳ ಬೇಗ ಹೆಚ್ಚು ಬಟ್ಟೆಗಳನ್ನು ತಯಾರುಮಾಡುತ್ತಾರೆಂದು ತಿಳಿದರೆ ನಾವು ಅವರನ್ನೇ ಹಿಂಬಾಲಿಸಿ ಹಾಗೆಯೇ ಬಟ್ಟೆಯನ್ನು ತಯಾರುಮಾಡಬಹುದಲ್ಲವೇ? ರಷ್ಯಾದಿಂದ ಅಫ್ಘಾನಿಸ್ಥಾನಕ್ಕೆ ರೈಲು ಹಾಕಿದರೆ ಭೂಮಿಯ ಮೇಲೆ ಇಂಗ್ಲೆಂಡಿಗೆ ಹೋಗುವುದಕ್ಕೆ ಅವಕಾಶವಾಗುತ್ತದಲ್ಲವೇ? ಇದೆಲ್ಲವನ್ನೂ ಪತ್ರಿಕೆಗಾರನು ನಮಗೆ ತಿಳಿಸುತ್ತಾನೆ. ಹೇಗೆ ಹೇಗೆ ಪ್ರತಿ ದಿವಸವೂ ಈ ಪ್ರಪಂಚದಲ್ಲಿ ಹೊಸ ವಿಷಯಗಳು ಉಂಟಾಗುವವೋ ಅವೆಲ್ಲವನ್ನೂ ಪತ್ರಿಕೆಗಾರನು ನಮಗೆ ತಿಳಿಸಬೇಕು.

ವೃತ್ತಾಂತ ಪತ್ರಿಕೆಯನ್ನು ಓದುವುದರಲ್ಲಿ ಕೆಲವು ವಿಷಯಗಳನ್ನು ಮನಸ್ಸಿನಲ್ಲಿಟ್ಟಿರುವುದು ಒಳ್ಳೇದು. ಈಗ ನಾವು ನೋಡುವಂತೆ ಅನೇಕ ಪತ್ರಿಕೆಗಳು ಪ್ರಕಟವಾಗುತ್ತವೆ. ಅವೆಲ್ಲವನ್ನೂ ಸಮಗ್ರವಾಗಿ ಓದುವುದಕ್ಕೆ ನಮಗೆ ಹೊತ್ತಿಲ್ಲ. ಅದಕ್ಕಾಗಿ ಆಯಾಯ ಪತ್ರಿಕೆಗಳಲ್ಲಿ ಯಾವ್ಯಾವುದು ಅವರವರಿಗೆ ಇಷ್ಟವಾದದ್ದೋ ಅದನ್ನು ನಿತ್ಯ ಓದಿಕೊಳ್ಳಬೇಕು. ಇದರ ವಿಚಾರ ಕೆಲವರಿಗೆ ಬಹಳ ಬೇಕು. ಕೆಲವರಿಗೆ ಕೈಗಾರಿಕೆ ವಿಷಯದಲ್ಲಿ ಬಹಳ ಗಮನ ಉಂಟು. ಹೀಗೆಯೇ ಎಲ್ಲರಿಗೂ ಒಂದೇ ವಿಷಯ ಅವಶ್ಯಕವಿಲ್ಲ. ಆದರೆ ಕೆಲವು ಸಂಗತಿಗಳೇನೋ ಎಲ್ಲರಿಗೂ ಬೇಕಾದವುಗಳೇ. ಆದುದರಿಂದ ಸ್ವಲ್ಪ ಮಟ್ಟಿಗೆ ಬುದ್ಧಿವಂತಿಕೆಯಿಂದ ಪತ್ರಿಕೆಯನ್ನು ಓದುವುದರಿಂದ ಉಪಯೋಗವುಂಟು. ಓದಿದ ಸಂಗತಿಗಳನ್ನು ಕೊಂಚ ಹೊತ್ತು ಯೋಚನೆ ಮಾಡಿ ಪರಿಗ್ರಹಿಸುವುದು ಒಳ್ಳೇದು. ಇಲ್ಲದಿದ್ದರೆ ಬಹಳ ಪ್ರಮಾದಕ್ಕೆ ಇಟ್ಟೀತು. ಇಲ್ಲಿಗೆ ವೃತ್ತಾಂತ ಪತ್ರಿಕೆಯ ಉಪನ್ಯಾಸವನ್ನು ಸಂಪೂರ್ಣ ಮಾಡಿರುತ್ತೇನೆ.

ಜಯಲಕ್ಷ್ಮಮ್ಮ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲನೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಕರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-20]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಸುಖಕರ, ಆನಂದ,
ಬಹಳ ಅವಶ್ಯ.
ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೇಶಿಂತ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.



(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು. (2) ಹಾಡುವವರಿಗೆ ವರಪ್ರಸಾದವಾದದ್ದು. (3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ. (4) ತಾಂಬೂಲದೊಡನೆ ಸೇರಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ. [73-45]

ಮುತ್ತಿನಂತಿರುವ	46 ಮಾತ್ರೆ,	ಉಳ್ಳ ಪೊಟ್ಟಣಕ್ಕೆ ಕ್ರಯ	2 ಆಣೆ.
,,	95 ,,	,, ,, ,,	4 ,,
,,	200 ,,	,, ,, ,,	7 ,,
,,	200 ,,	ಸುಂದರವಾದ ಟಿನ್ ಡಬ್ಬಾ	9 ,,
,,	80 ,,	,, ,, ,,	4 ,,
,,	100 ,,	ಬಾಟ್ಲಿಯಲ್ಲಿ	4½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಟಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೇಶಿಂತ್ರಾನ ಡಿಪೋ,
ಮೈಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಜಿ. ಎಂ. ಕಾಡಪ್ಪ ಅಂಡ್ ಸನ್ಸ್,
ಜನರಲ್ ಮರ್ಚೆಂಟ್ಸ್, ಶಿವಮೊಗ್ಗ.

ಒಂದು ಬುದ್ಧಿಮಾತು.

ನಿನ್ನ ಸದಾ ವಾಯುವಿನಿಂದ ಕಷ್ಟಪಟ್ಟು ಹಾಸಿಗೆಯ ಮೇಲೆಯೇ ಇದ್ದು, ವಾತರೋಗದಿಂದ ಹಿಡಿತರಾಗಿ ಔಷಧಗಳಿಂದಲೂ ಆಸ್ಪತ್ರೆಗಳ ಸೇವನೆಗಳಿಂದಲೂ ಗುಣ ಹೊಂದದೆ ಇದ್ದರೆ, ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸುವುದರಿಂದ ನಿಜವಾಗಿ ಗುಣ ಹೊಂದುವಿರಿ.

ಕೆರ್ರಿ ಪಟ್ಟಣದ ರತಿಸ್ಟರ್ ಕಂಪನಿಯಲ್ಲಿ 16 ವರುಷದಿಂದ ಹಾಸಿಗೆಯ ಮೇಲೆ ಬಿದ್ದಿದ್ದ ಒಬ್ಬ ಅಂಗಡಿಯವನಿಗೆ ವಾಸಿಮಾಡಿತು. ಯೋರ್ಕ್ ನಗರದ ಪಿಷ್ಲಿಯಲ್ಲಿ 20 ವರುಷಗಳಿಂದ ಕಷ್ಟಪಡುತ್ತಿದ್ದವನು ವಾಸಿಯಾದನು. ಬ್ರಿಸ್ಟಲ್ ಪಟ್ಟಣದಲ್ಲಿ 40 ವರುಷಗಳಿಂದ ಕಷ್ಟಪಟ್ಟವನೊಬ್ಬನು ಸ್ವಸ್ಥ ಹೊಂದಿದನು. ಚೆಸ್ಟರ್ ನಗರದಲ್ಲಿ 80 ವಯಸ್ಸಿನ ಎ. ಬೂತ್ ಎಂಬಾತನು ಹೇಳುವದು:—

"ವಾಯುವಿನಿಂದ ಅಂಗಹೀನನಾಗಿ ಭಯಂಕರವಾದ ಸ್ಥಿತಿಯಲ್ಲಿದ್ದೆ. ಎಲ್ಲಾ ವಿಧವಾದ ಔಷಧಗಳನ್ನೂ ವೈದ್ಯರನ್ನೂ ಪರೀಕ್ಷಿಸಿ, ಉತ್ತಮ ಆಸ್ಪತ್ರೆಗೂ ಹೋದೆನು. ಆದರೆ ಅವುಗಳಿಂದ ಏನೂ ಮೇಲಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬುದರಲ್ಲಿ 2 ಸೀಸೆಗಳನ್ನು ಉಪಯೋಗಿಸಿದ್ದರಿಂದ ಪೂರ್ಣ ಸ್ವಸ್ಥವಾಯಿತು. ವಾಯುನೋವಿಗೆ ಕೈಕಂಡ ಔಷಧಿಯಾದ ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿರಿ."

ಸೀಸೆ 1ಕ್ಕೆ 1 ರೂ. ಮೇರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. 101-38

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ವಿಕ್ರಿಯಾಗುವ ಸ್ಥಳಗಳು.

1. ಥಾಂಪ್ಸನ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;

2. ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-24] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಜ್ವರದ ಮಾತ್ರೆ—ಮಲೇರಿಯ, ವಿಷಮಶೀತ ಜ್ವರಗಳಿಗೆ ಅಮೃತ. ಸೀಸೆಗೆ 6 ಆಣೆ. "ತಾವು ಕಳಿಸಿದ ಜ್ವರದ ಮಾತ್ರೆಗಳನ್ನು ನಾನು ನನ್ನ ಸ್ನೇಹಿತರು ಸೇವಿಸಿ ಶ್ರೇಷ್ಠ ಗುಣಕಂಡೆವು. ಇದು ಅನೇಕ ಇಂಗ್ಲಿಷ್ ಔಷಧಿಗಳಿಗಿಂತ ಯಾವ ಭಾಗದಲ್ಲೂ ಕಮ್ಮಿಯಲ್ಲ"—ಎಂ. ಆರ್. ರಾಮಸ್ವಾಮಿಶಾಸ್ತ್ರಿ, ಇನಾಮ್‌ದಾರ್, ಮಂಚನಹಳ್ಳಿ. [262-8]

ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಜನವರಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1-14-0

ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-33]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಸಿದ್ಧ ಔಷಧಗಳು.

"ಬಲವರ್ಧಕ ಸಂಜೀವನ."

ಅನುಭವಸಿದ್ಧ. ಧಾತು ವನಸ್ಪತಿಗಳಿಂದ ತಯಾರಾದದ್ದು ಈಗ ರೂಢಿಯೊಳಗೆ ಬಂದ ಕಾಫಿಯಂತೆ ಬೆಳಿಗ್ಗೆ ಸಾಯಂಕಾಲ ಸೇವಿಸುವುದು. ಈ ಸೇವನೆಯಿಂದ ಆಬಾಲವೃದ್ಧರ, ಗರ್ಭಿಣಿ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ನಿಶ್ಶಕ್ತಿ, ವಾಯುಕಟಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತಿ ಮುಂತಾದ ರೋಗಗಳನ್ನು ಹೋಗಲಾಡಿಸಿ ಶರೀರಕ್ಕೆ ಆರೋಗ್ಯಭಾಗ್ಯವನ್ನುಂಟುಮಾಡುತ್ತದೆ. ಕ್ರಯ 24 ತೋಲಾ ಡಬ್ಬಿ 1 ಕ್ಕೆ 1 ರೂಪಾಯಿ; ಅಂಚೆ ಹಾಸಲು ಬೇರೆ. 1 ಡಜನ್‌ಗೆ ಒಂದು ಡಬ್ಬಿ ಬಹುಮಾನ. 1 ಡಜನ್ ಡಬ್ಬಿ ಕೇಳುವವರು ಅರ್ಧ ಛಾರ್ಜು ಮುಂಗಡ ರವಾನಿಸಬೇಕು. [1-3]

ಇದಲ್ಲದೆ ನಮ್ಮಲ್ಲಿ ದೊರೆಯುವ ಸಿದ್ಧ ಔಷಧಗಳು.

ಕಸ್ತೂರಿ ಮಾತ್ರೆ 25 ಇರುವ ಸೀಸೆಗೆ	ರೂ. 1-4-0
ಗೋರೋಚನ ಮಾತ್ರೆ 25 ಇರುವ ಸೀಸೆಗೆ	,, 1-0-0
ಸರ್ವ ವಿಷಾಪಹಾರಿ ಮಾತ್ರೆ 12 ಇರುವ ಸೀಸೆ 1 ಕ್ಕೆ	,, 1-0-0
ಚ್ಯವನಪ್ರಾಶಲೇಹ ಸೇರು 1 ಕ್ಕೆ	,, 2-0-0

ಈ ಔಷಧಿಗಳ ಅನುಪಾನಪತ್ರಿಕೆ ವಿ. ಪಿ. ಮೂಲಕ ರವಾನಿಸುತ್ತೇವೆ.

ವಿಳಾಸ.—ಚಿತ್ರದುರ್ಗದ ಪಂಡಿತ್ ವೆಂಕಟರಮಣಪ್ಪನವರ ಅಳಿಯಂದಿರು ಪಂಡಿತ ಬಿ. ಅಂಜನಪ್ಪ, ಹಿಂದೂ ಕರ್ನಾಟಕ ವೈದ್ಯಶಾಲೆ, ಚಿತ್ರದುರ್ಗ.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧಾರಣೆಯನ್ನುಂಟು ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೊಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೊಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-10] 20, ಚೀನಾಬಜಾರು ರೋಡು, ಮದರಾಸು.

ನಕ್ಕಲ್‌ಗಳಿಂದ ಮೋಸಹೋಗೀರಿ, ಜೋಕೆ!

ಈಗಿನ ಕಾಲದಲ್ಲಿ ಸಿಲ್ಪುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರತಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುತ್ತದೆ. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ. 2-0-0; 1 ಡ್ರಾಂ ಶೀಸೆಗೆ 0-10-0; ½ ಡ್ರಾಂ ಶೀಸೆಗೆ 0-8-0; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0. ಕಾಡಿಗೆನ್ನೆಗೆ ಹಾಕುವ ಚೀಲ ಕರ್ಚೀಫ್ ಎಲ್ಲ ಕೊಟ್ಟಾರು, ಜೋಕೆ! ನಮ್ಮ ರಾಜಗುಣಸಗಳು.

ಪುಷ್ಪಾಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೇಶವಾಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ಏಕೆಪದಾರ್ಥಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ನಾ ಭಗವಾನ್‌ದಾಸ್ ಚೂನಿಲಾಲ್ ಕಂಪೆನಿ,

[206-4] 177, ಚೈನಾಬಜಾರ್ ರೋಡ್, ಮದರಾಸ್.

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ತೊಲೆಗಳು 3 ಸಲೀ ಅಡಿ ಉದ್ದವಾಯಿತು 30-40 ಸಲೀ ಅಡಿಯು ವರೆಗೂ ಇರುತ್ತವೆ. ಇಷ್ಟವುಳ್ಳವರು ಪತ್ರಿಗಳನ್ನು ಹುಣಸೂರಲ್ಲಿರುವ ಮೆ|| ಪೆಟ್ರಿಹೆ ಅಂಡ್ ಸಂಸ್‌ರಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೆ ಗಾಡಿ ತುಂಬಾಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-12]

The General Assurance Society Ltd., Ajmer.

(*A Popular Life Office.*)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-28] Bangalore City.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಟಿರಿಮ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-16] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಮಧುರೆ ಜುನ್ನರಿ ಅಂಚಿನ ಸೀರೆ ಅಪ್ಸಲ್ ರಬಿಂ ೧೫. 2-6-0.

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡತ್ತೇವೆ.



ಇದು ಉಡುವುದಕ್ಕೆ ದೃಢವಾಯೂ ಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದ

[99-33] ಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

S. U. N. & Co.,

BENARES CITY, U. P.



ಸೊಗಸಾದ ಸರಕುಗಳು !!

ದೊಡ್ಡ ಕಂಪನಿ !

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕೇಟ, ಪೇಟಾ, ಶಾಲ್, ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುವದು. [69-44]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ

ಕುಂತಳಾನಂದ ತೈಲವು.

213-18

ಹಿಂದುಸ್ಥಾನದ ಬೇರೆ ಬೇರೆ ಪ್ರದೇಶಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಮಂದಿ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ತಣ್ಣಗಿಯೂ ಸ್ವರೆಯಾಗಿಯೂ ಬೆಳಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸಪ್ಪಾಳಣವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀಘ್ರವಾಗಿ ಸುವಾಸನೆಯುಳ್ಳದ್ದು, ಮೂಲಸರಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿ ಹೊಂದಿಸುವ ಈ ತೈಲದ ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟ್ಲಿಗೆ 3 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

ದಿಲ್‌ರಾಜ ಸೋಪ್.

ಈ ಸೋಪು ಯಾವ ಸ್ಥಳದಲ್ಲಿ ಕೂದಲನ್ನು ತೆಗೆಯಬೇಕೆಂದು ಅಪೇಕ್ಷಿಸುವಿರೋ ಸದರಿ ಸ್ಥಳದಲ್ಲಿ ತಣ್ಣೀರಿನಿಂದ ಈ ಸೋಪನ್ನು ತಿಕ್ಕಿ 5 ನಿಮಿಷದ ನಂತರ ಬಟ್ಟೆಯಿಂದ ಒರಸಿದರೆ ಸಂಪೂರ್ಣವಾಗಿ ಯಾವದೊಂದು ಕಲೆಯೂ ಇಲ್ಲದೆ ಹೊರಟುಹೋಗುತ್ತೆ. ಇದರ ಬೆಲೆ ಸೋಪು 1 ಕ್ಕೆ 5 ಆಣೆ. ಪೆಟ್ಟಿ 1 ಕ್ಕೆ 12 ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ. [17-1]

ವಿಳಾಸ:—ಪಾಂಡಿಯ ಅಂಡ್ ಬ್ರದರ್ಸ್, ನಂ. 9, ಏಕಾಂಬರೆ ಅಗ್ರಹಾರ, ಪಾರ್ಕ್‌ಟೌನ್, ಮದರಾಸ್.

ಶ್ರೀ ತಾಂಬೂಲ.

ಅನೇಕರು ತಾಂಬೂಲದ ಮಾತ್ರೆಗಳನ್ನು ತಯಾರಿಸಿರುವರು. ಆದರೆ ಇದನ್ನು ಸ್ವಲ್ಪ ಪರೀಕ್ಷಿಸಿನೋಡಿ ತಾಂಬೂಲದೊಂದಿಗೆ 1-2 ಮಾತ್ರೆಗಳನ್ನು ಸೇವಿಸುತ್ತ ಬಂದಲ್ಲಿ ಮುಖದ ಬೆವರಿನ ದುರ್ಗಂಧವನ್ನು ಹೋಗಲಾಡಿಸಿ ಚೇತನ್ಯವನ್ನುಂಟುಮಾಡುತ್ತದೆ. ಮತ್ತನಾನಂತ ಕಟ್ಟಿರಿನ ವಾತ, ಶೀತಜ್ವರ ಸಂಬಂಧ ದೋಷಗಳನ್ನು ನಾಶಮಾಡುವುದು. ವಿದ್ಯಾರ್ಥಿಗಳು ಪ್ರಾತಃಕಾಲ 1-2 ಬರೀ ಮಾತ್ರೆಗಳನ್ನು ಸೇವಿಸುತ್ತ ಬಂದಲ್ಲಿ ಅವರ ಸ್ಮರಣಶಕ್ತಿ ಮೇಧಾಶಕ್ತಿಯುಂಟಾಗಿ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿಗಳು ಹೆಚ್ಚುತ್ತವೆ. ಛಳಿ, ಜ್ವರ, ಕೆಮ್ಮು, ನೆಗಡಿ ಮುಂತಾದ್ದಕ್ಕೆ 1-2 ಮಾತ್ರೆಗಳು ಕೊಟ್ಟರೆ ಕೂಡ್ಲೆ ಗುಣಕಾಣುವುದಲ್ಲದೆ ಪ್ಲೇಗ್ ವ್ಯಾಧಿಯನ್ನು ಕೂಡ ಹತ್ತರ ಬರಗೊಡಿಸುವದಿಲ್ಲ. ಸಾವಿರಾರು ಜನಗಳಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯಕ ಇದನ್ನು ಇಡಬೇಕು ಬಾಟ್ಲಿ 1 ಕ್ಕೆ 4 ಆಣೆ. ಆರಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಬೇರೆ.

[235-11] ಎಂ. ಗೋವಿಂದಶೆಟ್ಟಿ,

ಆಯುರ್ವೇದಿಕ್ ಮೆಡಿಕಲ್ ಪ್ರಾಕ್ಟಿಷನರ್, ದೇವನಹಳ್ಳಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

1—1—1915 ರಿಂದ 8—1—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	6	3	0	0
ಮೈಸೂರು ,,	5	5	0	0
ಬೆಂಗಳೂರು ಡಿಸ್ಟ್ರಿಕ್ಟು	31	20	0	0
ಮೈಸೂರು ,,	21	6	0	0
ಕೋಲಾರ್ ,,	8	13	0	0
ಕೋಲಾರ್ ಚಿನ್ನದ ಗಣಿಗಳು	14	14	0	0
ತುಂಕೂರು ಡಿಸ್ಟ್ರಿಕ್ಟು	1	0	0	0
ಹಾಸನ ,,	6	4	0	0
ಚಿತ್ರದುರ್ಗ ,,	5	5	0	0
ಕಡೂರ್ ,,	0	0	0	0
ಶಿವಮೊಗ್ಗ ,,	1	1	3	2
ಒಟ್ಟು...	98	71	3	2

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೇ ಶಿಶಿರಋತೌ ಮಾಘ ಶುದ್ಧ ಸಪ್ತಮಿ ಶುಕ್ರವಾರದಿಂದ ಮಾಘ ಶುದ್ಧ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜನವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಸಂಕ್ರಾಂತಿ ತೇದಿ
22	ಶುಕ್ರ *	ಸಪ್ತಮಿ	38-7	ರೇವತಿ	23 6	9
23	ಶನಿ †	ಅಷ್ಟಮಿ	43-3	ಅಶ್ವಿನಿ	29-0	10
24	ಭಾನು ;;	ನವಮಿ	48-28	ಭರಣಿ	35-30	11
25	ಸೋಮ	ದಶಮಿ	54-4	ಕೃತ್ತಿಕೆ	42-0	12
26	ಮಂಗಳ §	ಏಕಾದಶಿ	59-8	ರೋಹಿಣಿ	48-23	13
27	ಬುಧ ::	ದ್ವಾದಶಿ	60-0	ಮೃಗಶಿರ	54-4	14
28	ಗುರು ‡	ದ್ವಾದಶಿ	3-12	ಆರಿದ್ರಾ	58-49	15

* ರಥಸಪ್ತಮಿ, ಹೇಮಗಿರಿ ರಂಗಸ್ವಾಮಿ ರಥ, ಶ್ರೀರಂಗಪಟ್ಟಣದಲ್ಲಿ ರಂಗನಾಥ ರಥ, ಅಮೃತಸಿದ್ಧಿ ಯೋಗ. † ಭೀಷ್ಮಾಷ್ಟಮಿ, ಮಳೆ ನಕ್ಷತ್ರ—ಶ್ರವಣ 1 ನೇ ಪಾದ. ;; ಮಧ್ವನವಮಿ. § ಸ್ಮಾರ್ತ ಭೀಷ್ಮ ಏಕಾದಶಿ, ಮುಡುಕತೊರೆ ಮಲ್ಲಿಕಾರ್ಜುನಸ್ವಾಮಿ ರಥ, ಮಳೆ ನಕ್ಷತ್ರ—ಶ್ರವಣ 2 ನೇ ಪಾದ. :: ವೈಷ್ಣವ ಏಕಾದಶಿ, ಹರಿವಾಸರ. ‡ ಪ್ರದೋಷ.

Printed and Published by the Rev. H. Gulliford, Proprietor and Manager, Wesleyan Mission Press, Mysore. 21/1/1915.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು.

ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—೧೯೧೫ ನೇ ಇಸವಿ ಜನವರಿ ತಾರೀಖು ೨೮ ನೇ ಗುರುವಾರ. ಸಂಚಿಕೆ ೩೫

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ ; ವಿ. ಪಿ. ಮೂಲಕ 6 ಆಣೆ ಮಾತ್ರ.

ನಮ್ಮ ವಿಳಾಸ.—ಪಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಬೆಂಗಳೂರು.
[300-5]

ಹೊಸ ಪದ್ಧತಿ !! ಹೊಸ ಪುಸ್ತಕ !! ಹೊಸ ಭಾವನೆ !!
ವಾರಿಗೆಗೆ ಸಿದ್ಧವಾಗಿದೆ

ಭಾಷಾನಿಧಿ.

ಕ್ರಯ ಅಂಚೆವೆಚ್ಚ ಸೇರಿ ರೂ. 1-12-0.

ಒಂಭತ್ತು ಭಾಷೆ—ಒಂಭತ್ತು ಲಿಪಿ.

ಒಂದಕ್ಕೆ ಒಂಭತ್ತು ಲಾಭ ! ವರ್ಣಪರಿಜ್ಞಾನ !! ಮೊದಲನೆಯ ಪುಸ್ತಕ !!!
ಕನ್ನಡ, ತೆನುಗು, ಅರವ, ಗ್ರಂಥ, ಮಲೆಯಾಳ, ಸಂಸ್ಕೃತ, ಮಹಾರಾಷ್ಟ್ರ, ಹಿಂದಿ, ಗುಜರಾತಿ, ಬೆಂಗಾಲಿ, ಈ ಭಾಷೆಗಳಲ್ಲಿ ಯಾವುದಾದರೊಂದನ್ನು ತಿಳಿದವರು ಇತರ ಭಾಷೆಗಳನ್ನೂ ಲಿಪಿಗಳನ್ನೂ ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಈ ಪುಸ್ತಕವು ತುಂಬಾ ಸಹಾಯವಾಗಿರುವುದು. [282-7]
ಕೆಲವು ಪುಸ್ತಕಗಳೇ ಅಚ್ಚಾಗಿವೆ ! ಮುಗಿದ ನಂತರ ದೊರೆಯಲಾರದು !!

ಕ್ರಯ ಒಂದು ರೂಪಾಯಿ ಹನ್ನೆರಡಾಣೆ ಮಾತ್ರ.

ಬೇಗ ಬರೆಯಿರಿ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಭಾರತಿ ನರಸಿಂಗರಾವ್, ಸಂಪಾದಕರು ಸಹನುಡಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1¼ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ II 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಭಕ್ತವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ
[53-49] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ ! ಬೆಲೆ ಸುಲಭ. ವಿಭಾಗ್ಯ ಚಾಣಿಕ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವ	0-8-0	ಸಂತಾಪಕ	0-4-0

[276-7] ವಿಳಾಸ. ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ !
ವಾರ್ಷಿಕ ಚಂದಾ ರೂ 1-8-0 ಮಾತ್ರ.
ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು ಮಾದರಿ ಸಂಚಿಕೆಗೂ, ಕಾಟಲಾಗಿಗೂ ಬೆಲೆಯಿಲ್ಲ. [160-28]
ಅತ್ಯುತ್ತಮ ಕಾದಂಬರಿಗಳು :—ಜಯ ! ವಾಲ್ಮೀಕಿ 12 ಆ ; ಅಶ್ವತ್ಥಮೃಗ 1½ ಆ; ಅಪವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅಂಧಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕ 3 ಆ; ಸುಶೀಲೆ 6 ಆ; ನಭಾ ಭಾಗ 1 . 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ.—ಹನುಮಾನ್ ಕಂಪೆನಿ, ಮೈಸೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2 ; ಹಳನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ, ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.

[143-29] ವಿಳಾಸ :—ಪಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು !!!

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತವೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ
ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು ! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ 2 ಆಣೆ ; ವಿ. ಪಿ. ಯಲ್ಲಿ 4 ಆಣೆ.

[8-3] ನಮ್ಮ ವಿಳಾಸ.—ದಿ ಜನರಲ್ ಏಜನ್ಸಿ, ಮೈಸೂರು.

ಪ್ರಪಂಚಯುದ್ಧ

ಘನ
ಘೋರ ಸಂಗ್ರಾಮ !!



ಚಿತ್ರರೂಪ !!

ಯೋಧಾಗ್ರಣಿಗಳ ಛಾಯಾಚಿತ್ರ !!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನು ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಚೆಲ್ಲ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ ! ಸ್ವಲ್ಪವೇ ಪ್ರತಿಗಳಿವೆ !!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಹೋದಂಥ ಎಮ್‌ಡನ್ನನ್ನು ನೋಡಿರುವಿರಾ ? ಅದರ ನಾಯಕನನ್ನು ಬಲ್ಲಿರಾ ? ಆಮೇಲೆ ಮದರಾಸನ್ನು ಮುತ್ತಿ ನಾಟಿದ ಅನಾಹುತಗಳನ್ನು ನೋಡಿರುವಿರಾ ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿರೋಮಣಿಯನ್ನೂ ನೋಡಿರುವಿರಾ ?
ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ ದುರ್ಯೋಧನ, ದುಶ್ಯಾಸನ ದುಷ್ಟರುಗಳಂತೆ ಕಾಲುಗ್ಗಿ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ, ವಾಯುವಿಮಾನ ನಾಯಕರನ್ನೂ ನೋಡಿರುವಿರಾ ?
ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಪಠಾ :—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚುಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ !

ನಮ್ಮ ವಿಳಾಸ :—ಗುರುಬಸವ ಕಂಪೆನಿ, ಮದರಾಸು.

[10-3]

"ವೃತ್ತಾಂತ ಪತ್ರಿಕೆ"ಯ ಕ್ಯಾಲೆಂಡರು.

1915 ನೇ ವರುಷದ ಕ್ಯಾಲೆಂಡರನ್ನು ತಯಾರುಮಾಡಿ ನಮ್ಮ ಬಾಯಂ ಚಂದಾದಾರರಿಗೆಲ್ಲಾ ಕಳುಹಿಸಿದೆವು. ಇದರಲ್ಲಿ ಅಡಗಿರುವ ನೇತ್ರಾನಂದಕರವಾದ ಚಿತ್ರಗಳ್ಯಾವವೆಂದರೆ—(1) ಬೆಂಗಳೂರಿನಲ್ಲಿ ಅಲಸೂರುಪೇಟೆ ದೇವಾಲಯ, (2) ಗುಬ್ಬಿಯ ಹರ್ಷೆ ಫಾಲ್ಸ್, (3) ನಾಮಧಾರಿ ವಧುವರರು, (4) ಹುಳಿನರಸಿಪುರ, (5) ಜರ್ಮನಿಯವರ ಸ್ವಾಧೀನದಲ್ಲಿರುವ ಬೆಲ್ಜಿಯಮ್ ದೇಶದ ಬ್ರುಸೆಲ್ಸ್ ರಾಜಧಾನಿಯ ಟೌನ್ ಹಾಲ್. ಇವಲ್ಲದೆ ಇದರಲ್ಲಿ ಮೈಸೂರು ಸರ್ಕಾರಿ ರಜಾ ದಿನಗಳೂ, 1915 ನೇ ವರುಷದಲ್ಲಿ ಬರುವ ವಿಶೇಷ ದಿನಗಳೂ ಪ್ರಕಟವಾಗಿವೆ. ಜನವರಿಯಲ್ಲಿ ಹೊಸದಾಗಿ ಬಾಯಂ ಚಂದಾದಾರರಾಗತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುತ್ತೇವೆ. ಚಂದಾದಾರರಲ್ಲದವರಿಗೆ ಇದರ ಕ್ರಯ 6 ಕಾಸು

ಕೆಲವು ಪ್ರತಿಗಳು ಮಾತ್ರ ಉಳಿದಿರುವುದರಿಂದ ವಾಚಕರು ಬೇಗನೆ ಚಂದಾ ಕಟ್ಟಿ ಈ ಬಹುಮಾನವನ್ನು ಪಡೆಯುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾವ ಉಪಕರಣವಾದರೋ?

ಕಾಮಿನಿಯಾ ತೈಲವೇ!

(ರಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೀಮನ್ಮಹಾರಾಜರವರ ಕೃಪೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಸುನಸಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ... ನೇಗಿನಹಾಳಕರ ಬಂಧುಗಳು, ಬಸವನಗರಿ, ಬೆಳಗಾಂವ — ತಾವು ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅಂಚೆಯಿಂದ ಇಷ್ಟೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಮಾರ್ಗಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಕೆಯಿಂದ ತಮಗೆ ಅತ್ಯಲ್ಪ ಸಹಾಯ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜೆಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಆವಿರ್ಭಂತವಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಆವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-1]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿಶಾಲಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು: ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಫ್ ಮಾರ್ಟ್, ಮಂಗಳೂರು.

BOOKS FOR III & IV FORMS.

(1) **General English Papers** As. 8; (2) **English Essays and Letters** As. 6; (3) **Spelling Book** As. 4. (Postage Extra). Apply to

M. N. SITA RAMA RAO,
10-2] Krishnaraja Mohalla, Mysore.

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ಕೊಂಬೆಗಳು 2 ಸಲೇ ಅವಿ ಘಾಗೇಯುತು 30-40 ಸಲೇ ಅಡಿಯ ವರೆಗೂ ಇರುತ್ತವೆ. ಇಷ್ಟವುಳ್ಳವರು ತಮ್ಮ ಕೆಲಸವನ್ನು ಹುಣಸೂರಿನಲ್ಲಿರುವ ಮೆ|| ಪೆಟ್ರಿಹೆ ಅಂಡ್ ಸಂನವರಿಗೆ ಬರೆದು ತಿಳಿದುಕೊಳ್ಳಬಹುದು. ಈ ಕೊಲೆಗಾರಿ ತಯಾರಿಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-13]



ಜನವರಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1–14–0

ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಾಗುತ್ತದೆ. [90-34]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ದಿಲ್‌ರಾಜ ಸೋಪ್.

ಈ ಸೋಪು ಯಾವ ಸ್ಥಳದಲ್ಲಿ ಕೂದಲನ್ನು ತೆಗೆಯಬೇಕೆಂದು ಅಪೇಕ್ಷಿಸುವಿರೋ ಆ ಸ್ಥಳದಲ್ಲಿ ತಣ್ಣೀರಿನಿಂದ ಈ ಸೋಪನ್ನು ತಿಕ್ಕಿ 5 ನಿಮಿಷದ ನಂತರ ಬಟ್ಟೆಯಿಂದ ಒರಸಿದರೆ ಸಂಪೂರ್ಣವಾಗಿ ಯಾವದೊಂದು ಕಲೆಯೂ ಇಲ್ಲದೆ ಹೊರಟುಹೋಗುತ್ತೆ. ಇದರ ಬೆಲೆ ಸೋಪು 1 ಕ್ಕೆ 5 ಆಣೆ. ಪೆಟ್ಟಿ 1 ಕ್ಕೆ 12 ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ. [17-2]

ವಿಳಾಸ:—ಪಾಂಡಿಯ ಅಂಡ್ ಬ್ರದರ್ಸ್,
ನಂ. 9, ಏಕಾಂಬರ ಅಗ್ರಹಾರ, ಸಾಹುಕಾರ್‌ಪೇಟೆ, ಮದರಾಸ್.

ಸಿದ್ಧ ಔಷಧಗಳು.

"ಬಲವರ್ಧಕ ಸಂಜೀವನ."

ಅನುಭವಸಿದ್ಧ. ಶುದ್ಧ ವನಸ್ಪತಿಗಳಿಂದ ತಯಾರಾದದು. ಈಗ ರೂಢಿಯೊಳಗೆ ಬಂದ ಕಾಳಿಯಂತೆ ಬೆಳಿಗ್ಗೆ ಸಾಯಂಕಾಲ ಸೇವಿಸುವುದು. ಈ ಸೇವನೆಯಿಂದ ಆಬಾಲವೃದ್ಧರ, ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ಪಿತ್ತಾಜೀರ್ಣ, ವಾಯುವಿಕಾರಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವ, ಯೌವನಸ್ಥರ ನಿಶ್ಶಕ್ತಿ ಮುಂತಾದ ರೋಗಗಳನ್ನು ಹೋಗಲಾಡಿಸಿ ಶರೀರಕ್ಕೆ ಆರೋಗ್ಯಭಾಗ್ಯವನ್ನುಂಟುಮಾಡುತ್ತದೆ. ಕ್ರಯ 24 ತೊಲೆಯ ಡಬ್ಬಿ 1 ಕ್ಕೆ 1 ರೂಪಾಯಿ; ಅಂಚೆ ಹಾಸಲು ಬೇರೆ. 1 ಡಜನ್‌ಗೆ ಒಂದು ಡಬ್ಬಿ ಬಹುಮಾನ. 1 ಡಜನ್ ಡಬ್ಬಿ ಕೇಳುವವರು ಅರ್ಧ ಭಾಗ ಮುಂಗಡ ರವಾನಿಸಬೇಕು. [1-4]

ಇವಲ್ಲದೆ ನಮ್ಮಲ್ಲಿ ದೊರೆಯುವ ಸಿದ್ಧ ಔಷಧಗಳು.

ಕಸ್ತೂರಿ ಮಾತ್ರೆ 25 ಇರುವ ಸೀಸೆಗೆ	ರೂ. 1-4-0
ಗೋರೋಚನ ಮಾತ್ರೆ 25 ಇರುವ ಸೀಸೆ	,, 1-0-0
ಸರ್ವ ವಿಷಾಪಹಾರಿ ಮಾತ್ರೆ 12 ಇರುವ ಸೀಸೆ 1 ಕ್ಕೆ	,, 1-0-0
ಕೇಶವರ್ಧಕ ತೈಲ ಸೇರು 1 ಕ್ಕೆ	,, 2-0-0

ಈ ಔಷಧಗಳ ಅನುಪಾನಪತ್ರಿಕೆ ವಿ. ಪಿ. ಮೂಲಕ ರವಾನಿಸುತ್ತೇವೆ.

ವಿಳಾಸ.—ಚಿತ್ರದುರ್ಗದ ಪಂಡಿತ್ ವೆಂಕಟರಮಣಪ್ಪನವರ ಅಳಿಯಂದಿರು
ಪಂಡಿತ ಬಿ. ಅಂದಾನಪ್ಪ, ಹಿಂದೂ ಕರ್ನಾಟಕ ವೈದ್ಯಶಾಲ, ಚಿತ್ರದುರ್ಗ.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!
ಈಗಿನ ಕಾಲದಲ್ಲಿ ಸಲ್ಲುವ ಸುವಾಸನೆಯುಳ್ಳ, ಮನೋಹರವಾದ
ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು

ಅಟೋ ಮೋಹಿನಿ.

ಇದಕ್ಕೆ ಭಂಗಾರದ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುತ್ತದೆ. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0

ಕೂದಲಿಗೆ ಹಾಕುವ ಬೇರೆ ಕೆರೋಸಿನ್ ಎಣ್ಣೆ ಕೊಟ್ಟಾರು,
ಜೋಕೆ! ನಮ್ಮ ದಾಖಲೆಗಳುಳ್ಳ

ಪುಷ್ಪಾಕರ ಕೂದಲೆಣ್ಣೆ

ಯಾವ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.
3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಸಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,
[200-5] 177, ಬೈನಾಬಜಾರ್ ರೋಡ್, ಮದರಾಸ್.

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಚೇಳಿಗೆ ಸರಿಯಾದ ಮದ್ದು.

ಚೇಳಿನ ಕಡಿತಕ್ಕೆ "ಸ್ನಾಹಿರ್ಯಾಸಿಯೂ" ವಿನಹಾ ನಿರಪಾಯಕರವೂ ಮತ್ತು ಶೀಘ್ರಕ್ಕೆ ಗುಣವಾಗುವ ಔಷಧವು ಮತ್ತೊಂದಿಲ್ಲ. ಘನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡೆದಿದ್ದುತ್ತೆ.

"ನಿಮ್ಮ ಚೇಳಿನ ಮದ್ದಿನಿಂದ ತಕ್ಷಣ ಗುಣ ಬಂದಿದೆ" ಯೆಂದು ಧಾರವಾಡ ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ. ಬಾಟ್ಲಿ ಒಂದಕ್ಕೆ ಕ್ರಯ ರೂ ೦–೮–೦ ನಾಲ್ಕು ಬಾಟ್ಲಿವರೆಗೆ ಪೋಸ್ಟ್ ಹಾಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೂಡಲೆ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

[295-6] ವಿಳಾಸ.— ಸ್ನಾಹಿರ್ಯಾಸಿಯೂ ಡಿಪೊ, ಹರಿಹರ.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports, to the Manager, Ajmer, or Secretary.

Opposite to Minto Ophthalmic Hospital,
[131-30] Bangalore City.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸರ್ಸ್ ಫಜಲ್ಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರಿಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜೆಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈ ಮಿಲ್ಲು ಬಟ್ಟೆಗಳ ಮೇಲೆ ವಿಶೇಷವಾಗಿ ದಲ್ಲಾಳಿ, ಟೋಟಾವಳ್ಳಾಳಿ, ಮೋಸಾಮುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ಇಲ್ಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚು ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಕೇಳಿದ 3 ರೂಪಾಯಿ ದಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-42]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಪ್ರತಿ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳು ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಪ್ರಯೋಜನಹೊಂದಿರಿ" ಮತ್ತು "ಇತರರಿಗೂ ಪ್ರಯೋಜನ ಉಂಟುಮಾಡಿರಿ."

ಹಿಂದೂಸ್ಥಾನ ಕೋಆಪರೇಟಿವ್ ಜೀವವಿಮೆ ಸಂಘ ಲಿಮಿಟೆಡ್.

ಹಿಂದೂಸ್ಥಾನ ಕಟ್ಟಡಗಳು ಕಲಕತ್ತಾ.

ಮೂಲಧನ ಒಂದು ಕೋಟಿ ರೂಪಾಯಿ		(1,00,00,000).
ವಸೂಲಾದ ಮೊಬಲಗು	,,	87,00,000
ಸಾಮಾನ್ಯವಾದ ಧನ	,,	12,50,000

ಹಿಂದೂಸ್ಥಾನ ಸಂಘದ ಕೆಲವು ಮುಖ್ಯ ಅನುಕೂಲತೆಗಳು.

(1) ಜನಗಳಿಗೆ ಬಹಳ ಸುಲಭಕರವಾದ ವಿಮೆಯ ಪಾಲಿಸಿ ಕೊಟ್ಟು, ವೃದ್ಧಾಪ್ಯಕಾಲದಲ್ಲೂ, ಅಕಾಲ ಮರಣ ಉಂಟಾದಲ್ಲಿ ಕುಟುಂಬ ಸಂರಕ್ಷಣೆಗೂ ಯಾವ ವಿಧವಾದ ಕಷ್ಟವಿಲ್ಲದಂತೆ ವಿಮೆ ಮೊಬಲಗಿನಿಂದ ಸುಖ ಜೀವನಮಾಡಬಹುದು.

(2) ವಿಮೆ ಮೊಬಲಗನ್ನು ಯಾವ ವಿಧವಾದ ತಕರಾರು ಇಲ್ಲದೆ ಬೇಗನೆ ಪಾಲಿಸಿದಾರರ ಮನೆಯಲ್ಲಿ ಪಾವತಿಮಾಡಲ್ಪಡುತ್ತೆ.

(3) ಸಂಘದ ಪಾಲಿಸಿಯನ್ನು ಎರಡು ವರ್ಷದವರೆಗೂ ಜಾರಿಲಿ ಇಟ್ಟುಕೊಂಡು ತರುವಾಯ ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತುಗಳ ಆಧಾರದ ಮೇಲೂ ಅಥವಾ ಮತ್ತೊಬ್ಬ ಪಾಲಿಸಿದಾರರ ಜಾಮೀನಿನ ಮೇಲೂ ಬಹಳ ಸುಲಭ ಬಡ್ಡಿಯಿಂದ ಅವರು ವಿಮೆ ಮಾಡಿರತಕ್ಕ ಮೊಬಲಗಿನಷ್ಟು ಸಾಲಾ ಸಂಘದವರು ಕೊಡುತ್ತಾರೆ ಮತ್ತು ಸುಲಭ ಕಂತಿನಿಂದ ಸಂಘದವರು ವಾಪಸ್ಸು ಪಡೆಯುತ್ತಾರೆ.

(4) ಯಾವ ವಿಧವಾದ ಆಧಾರವಿಲ್ಲದೆ ಮನೆ ಅಥವಾ ಜಮೀನು ಕಟ್ಟಿಸಲು ಕೊಟ್ಟು ಅದರ ಮೊಬಲಗು ಸುಲಭ ಕಂತಿನಿಂದ ವಾಪಸ್ಸು ಪಡೆಯುತ್ತಾರೆ. ಇದು ಬಡವರಿಗೂ ಮತ್ತು ರೈತರಿಗೂ ಮುಖ್ಯ ಅನುಕೂಲವಾಗಿರುತ್ತೆ.

(5) ಸಂಘದ ಆಡಳಿತ ಮತ್ತು ಮೇಲ್ವಿಚಾರಣೆ ಮಹಾರಾಜರಿಂದಲೂ, ದೊಡ್ಡ ಜಮೀನುದಾರರಿಂದಲೂ ನಡೆಸಲ್ಪಡುತ್ತೆ.

(6) ಸಂಘದ ಹಣವೆಲ್ಲಾ ಇಂಡಿಯಾದಲ್ಲಿಯೇ ಭದ್ರಸ್ವತ್ತುಗಳ ಮೇಲೂ ಪಾಲಿಸಿದಾರರ ಮೇಲೂ ತಕ್ಕ ಭರವಸೆ ಮೇಲೆ ವಿನಿಯೋಗಿಸಲ್ಪಡುತ್ತೆ.

ಬೇಕಾಗಿದೆ. ನಂಬಿಕೆ ಮತ್ತು ಪಳ್ಳಿ ಚಟುವಟಿಕೆಯುಳ್ಳ ಏಜೆಂಟ್ರುಗಳು ಪ್ರತಿಯೊಂದು ತಾಲ್ಲೋಕಿನಲ್ಲಿಯೂ ಮತ್ತು ಮುಖ್ಯ ಸ್ಥಳಗಳಲ್ಲಿಯೂ, ಅವರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಅಫೀಸು ಅಲೋಯನ್ಸ್ ಸಹಾ ಕೊಡಲಾಗುತ್ತೆ. ಹೆಚ್ಚು ವಿಷಯಗಳಿಗೆ ಮತ್ತು ಪ್ರಾಸ್ಪೆಕ್ಟಸ್‌ಗೆ ಕೆಳಗಿನ ವಿಳಾಸದಾರರಿಗೆ ಬರೆಯಿರಿ.

ಮೆಸರ್ಸ್ ವೆಂಕಟಾಚಲಂ ಅಂಡ್ ಸನ್ಸ್,
[293-6] ಚೀಫ್ ಏಜೆಂಟ್ರು, 108 ದೊಡ್ಡಪೇಟೆ, ಮೈಸೂರು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಸ್ಮೃ ತರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 32 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಟ್ಟುದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿ ಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ಪೂರ್ತ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ- ರಾಜವೈದ್ಯ ನಾರಾಯಣಜೀ ಕೇಶವಜೀ,
[347-11] 20, ಚೀನಾಬಜಾರು ರೋಡು, ಮದರಾಸು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಓಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

6 ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ಪಕ್ಕದಲ್ಲಿ ಕಂಡ ಲೇಡಿ ವಾಚು ಕೀಲೆಸ್ ಲಿವರ್ ...ಕ್ಕ ಸ್ಪ್ರಿಂಗು ಕಂಪೆಕ್ ಸೇಷಕ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-... ಇದನ್ನು ಡಿಸೆಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ... ಓದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಡರ್ಬಿ ವಾಚ್ ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[109-35] ಸಾಹುಕಾರ್ ಪೇಟೆ, ಮದರಾಸು

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ಕೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[190-17] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 60 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-50]

ಅರೇಬಿಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಎನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ವಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ .... ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು ..... ,, 6

ಜೆಟ್ಟಾಗಿ ತರಿಸುವವರಿಗೆ ರೂಪಾಯಿ ಒಂದಕ್ಕೆ 3 ಆಣೆ ಕಮಿಷನ್ ದೊರೆಯುವುದು. [229-14]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಂತೋಷಕರವಾದ ಪ್ರಕಟನೆ.

ವೈಲ್ಸ್ ರೆಗ್ಯುಲೇಟರ್ ವಾಚ್.



ಇದರ ಕ್ರಯ 6 ಬಹುಮಾನಗಳ ಸಮೇತ ರೂ. 3-8-0 ಮಾತ್ರ. 5 ವರುಷಗಳ ಗ್ಯಾರಂಟಿ. ಘನವಂತರೇ, ಪುನಃ ಇಂಜನ್ ಮಾರ್ಕ ಅಂದರೆ ಗುರುತುಳ್ಳ ಪ್ರಖ್ಯಾತಿಯಾದ ಲೀವರ್ ಕೆಲಸದಿಂದ ತಯಾರಾದ ಈ ವಾಚ್ ಈಗತಾನೆ ಬಂದಿರುತ್ತೆ. ಬಲಿಷ್ಟವಾದದ್ದು. ಹೆಚ್ಚು ಮಾತುಗಳಿಂದೇನು ? ದೀರ್ಘಕಾಲ ಬಾಳಿಕೆ ಬರುವ ವಾಚ್. ಸುಂದರವಾದದ್ದು. ಇದರ 6 ಬಹುಮಾನಗಳ ತಪ್ಸೀಲು : (1) ಸುಂದರವಾದ ವಾಚ್ ಸರಪಣಿ, (2) ನಾಜೂಕುಳ್ಳ ಉತ್ತರಮುಖಿ, (3) ತವಾಸೆಯಾದ ಜೋಂಬಿ, (4) ನಾಜೂಕುಳ್ಳ ಕರವಸ್ತ್ರ, (5) ಪರಿಮಳವುಳ್ಳ ಸೆಂಟ್ ಶೀಸೆ, (6) ಪಟೋ ಗುಂಡಿಗಳ ಸೆಟ್ಟು.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ :—

[20-1] ಜಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ್ 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮಿ|| ಎಂ. ಎಸ್. ನಂಜಪ್ಪನವರು ಅಥವಾ ಮಿ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-17] ಬ್ರಾಂಚ್ ಸೆಕ್ರೆಟರಿ, ಮದರಾಸ್

ದೀಪಾವಳಿ ಬಹುಮತಿ ಗಡಿಯಾರ.

19 ಸಾಮಾನು ಬಹುಮತಿ ಸಹಿತ ಕ್ರಯ ರೂ. 3-14-0.



ಇದರಲ್ಲಿ ತೋರುವ 10 ರೂಪಾಯಿ ಬೆಲೆಯುಳ್ಳ ಗಡಿಯಾರವನ್ನು ದೀಪಾವಳಿ ಉತ್ಸವಕ್ಕಾಗಿ ರೂ. 3-14-0 ಕ್ಕೆ 19 ಬಹುಮಾನಗಳ ಸಮೇತ ಉಚಿತವಾಗಿ ಕೊಡುತ್ತೇವೆ. 1 ಗಡಿಯಾರ ಸರಪಣಿ, 2 ಪೆನ್ನು, 3 ಉತ್ತರಮುಖಿ, 4 ಹಣದ ಚೀಲ, 5 ಬ್ಲೂಬ್ಲಾಕು ಶಾಯಿ ಪೊಟ್ಟ, 6 ಎಲೆಕ್ಟ್ರಿಕ್ ಬಂಗಾರದ ತಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಷರಟುಗುಂಡಿ, 8 ಜರ್ಮನ್ ಬೆಳ್ಳಿಯ ಕುಂಕುಮಭರಣಿ, 9 ಡಿಟೋ ಸಾದಿನ ಚಿಪ್ಪು, 10 ಡಿಟೋ ಕಣ್ಣುಕಪ್ಪಿನ ಭರಣಿ, 11 ಡಿಟೋ ನಸ್ಯದ ಡಬ್ಬಿ, 12 ಇಮಿಟೇಷನ್ ಡೈಮಂಡ್ ಮೂಗುಬಟ್ಟು, 13 ಕತ್ರಿ, 14 ಎಲೆಕ್ಟ್ರೀ ಸೀಲು ಉಂಗುರ, 15 ರೇಷ್ಮೆ ಧಾರ, 16 ಸ್ಟೀಲು ಸೂಜಿ, 17 ಕಂಪು ಶಾಯಿ ಪೊಟ್ಟ, 18 ಕೈ ಗುಡ್ಡೆ, 19 ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ.

ಮಧುರೆ ಚುನ್ನಡಿ ಸೀರೆ ರೂ. 2-6-0 ; ತಂಜಾವೂರು ಗೆಜ್ಜೆ ಅಡ್ಡಿಗೆ 6 ಆಣೆ ; ಕೈ ಗಡಿಯಾರ ರೂ. 1-14-0.

ಚಿನ್ನದ ಗಿಲ್ಟು ಬೆಲ್ಟು ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು ಬೆಲೆ ರೂ. 4-0-0 } ಪೋಸ್ಟೇಜು
ಬೆಳ್ಳಿ ಗಿಲ್ಟು ಡಾಬು ,, ,, 3-0-0 } ಬೇರೆ.

ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 160 ಗಟ್ಟಿ ಗೆಜ್ಜೆಗಳು ಸುತ್ತಲ್ಪಟ್ಟಿರುತ್ತೆ. ನಾವು ಕೊಡುವ ಗಿಲ್ಟು ಅಲ್ಪ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಿದಾರೆ. ಚಿನ್ನದ ಗಿಲ್ಟು ನಾಗಮುರಿಗೆ ರೂ. 3-8-0.

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಬೆಳ್ಳಿ ಕಂಚಿಯಿಂದ ತಯಾರಾಗಿ ಇವೆ. ಇವು ಎಂದಿಗೂ ಕೆಡುವದಿಲ್ಲ. ಇವು ಎಲ್ಲರೂ ಧರಿಸಿಕೊಳ್ಳಬಹುದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-4-0	1-2-0	0-12-0	0-8-0

ಅಂದವಾದ ಡಾಬು (ಒಡ್ಯಾಣ).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-4-0	1-2-0	0-14-0

ಅಂದವಾದ ಪ್ರದುಚೇರಿ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-12-0	1-9-0	1-6-0	1-3-0

ಪೋಸ್ಟೇಜ್ ಬೇರೆ

ವಿಳಾಸ.—ದಯಾನಿಧಿ, ರಾಜಾವಿಲಾಸ,
[19 1] ವಿಲ್ಲಿವಾಕಂ, ಮದ್ರಾಸು.

Mellin's Food

ಮೆಲ್ಲಿನ್ಸ್ ಆಹಾರವು

ಕೈಸೋಕದ ಮಾಡಿದೆ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರದ ಬೆಸ್ತುಗಳು [8-3]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ, ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs. OAKES & Company, Mount Road, Madras.

ವಿಳಾಸ-ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles,

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-21] GIRLS' INDUSTRIAL SCHOOL, HASSAN.

ವೃತ್ತಾಂತ ಪತ್ರಿಕೆ.

—:o:—

೫೯ ೧೯೧೫ ನೇ ಇಸವಿ ಜನವರಿ ತಾ. ೨೮ ನೇ ಗುರುವಾರ.

ಮೈಸೂರು ರಾಜವರ್ಗದವರ ಸರ್ಕೀಟು.

ಮೈಸೂರು ಸಂಸ್ಥಾನದ ಮೂಲೆತಾಲೂಕುಗಳಲ್ಲಿ ಪ್ರಜೆಗಳು ತಮ್ಮ ತಮ್ಮ ಕೆಲಸಕಾರ್ಯಗಳನ್ನು ಮಾಡಿಕೊಳ್ಳುತ್ತಾ ಜೀವಿಸಿಕೊಂಡು ಬರುತ್ತಾರೆ. ಅವರನ್ನು ಉತ್ಸಾಹಶಾಲಿಗಳನ್ನಾಗಿ ಮಾಡುವ ಕಾರ್ಯಾದಿಗಳು ನಡೆಯುವುದು ಅಪರೂಪ. ಸರ್ಕಾರದ ಅಧಿಕಾರಿಯೇನಾದರೂ ಹೋದ ಪಕ್ಷದಲ್ಲಿ ಪ್ರಜೆಗಳು ಅಲ್ಪಸ್ವಲ್ಪ ಸಡಗರಪಡುತ್ತಾರೆ. ಆದರೆ ನಮ್ಮ ಸೀಮೆಯನ್ನಾಳುವ ರಾಜವರ್ಗದವರಲ್ಲಿ ಯಾರಾದರೂ ಆ ಪ್ರಾಂತ್ಯಗಳಿಗೆ ದಯಮಾಡಿದರೆ ಸಮಸ್ತ ಪ್ರಜೆಗಳೂ ತಮ್ಮಲ್ಲಿರುವ ನೈಜವಾದ ರಾಜಭಕ್ತಿ ಪ್ರೀತಿಗಳನ್ನು ಹೇರಳವಾಗಿ ಪ್ರಕಾಶಪಡಿಸಬೇಕೆಂದು ಉತ್ಸಾಹಶಾಲಿಗಳಾಗುವರು. ಈಚೆಗೆ ನಮ್ಮ ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರವರೂ ಚಿತ್ರದುರ್ಗ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಕೆಲವು ಪ್ರದೇಶಗಳಿಗೆ ದಯಮಾಡಿದ್ದದ್ದನ್ನು ನೋಡಿ ಆನಂದಪಡುತ್ತೇವೆ.

ಮೈಸೂರಿನ ಪ್ರಜೆಗಳಿಗೆ ರಾಜಭಕ್ತಿಯೂ ಪ್ರೀತಿಯೂ ಅಪರಿಮಿತವಾಗಿದೆ ಎಂದು ಖಚಿತವಾಗಿ ಹೇಳುತ್ತೇವೆ. ಇದರಿಂದ ಸಹೋದರ ಪ್ರಭುಗಳು ದಯಮಾಡಿದ್ದ ಕಡೆಯಲ್ಲಿ ಪ್ರಜೆಗಳು ಅತ್ಯಂತ ಉತ್ಸಾಹ ಶಾಲಿಗಳಾಗಿಯೂ ಪರಮ ಪ್ರೀತಿಯಿಂದಲೂ ಅವರನ್ನು ಆದರಿಸಿ ಸತ್ಕರಿಸಿದರೆಂದು ಹೇಳುವುದೇನೂ ಅತಿಶಯವಾದದ್ದಲ್ಲ. ರಾಜಸಹೋದರರನ್ನು ಕಣ್ಣಾರ ನೋಡಿ ಆನಂದಪಡುವುದಕ್ಕಾಗಿ ಸಾವಿರಾರು ಪ್ರಜೆಗಳು ತವಕಪಟ್ಟು ದೂರಸ್ಥಲಗಳಿಂದ ಹೋಗಿದ್ದು ನಡೆನುಡಿಗಳಿಂದ ತಮ್ಮ ಪ್ರಭುಗಳ ವಿಷಯದಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿ ಒಂದರು.

ಪ್ರಜೆಗಳು ಅವರವರ ಊರು ಕೇರಿಗಳಲ್ಲಿ ನಿತ್ಯಗಟ್ಟಲೆ ಮಾಡುವಂಥಾ ಕಾರ್ಯಗಳನ್ನು ಸಾಕ್ಷಾತ್ತಾಗಿ ನೋಡಿ ತಿಳಿಯುವುದು ಪ್ರಭುಗಳಿಗೆ ಸಾಧ್ಯವಲ್ಲ. ಯಾಕೆಂದರೆ ಅಂಥಾ ಸಮಯಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ಉತ್ಸಾಹಭರಿತನಾಗಿ ಮೇಲಾದ ಉಡುಪುಗಳನ್ನು ಧರಿಸಿಕೊಳ್ಳುವುದೂ, ಪಟ್ಟಣ ಊರು ಗ್ರಾಮಗಳನ್ನು ನೇತ್ರಾನಂದಕರವಾಗಿ ಅಲಂಕರಿಸುವುದೂ, ಚಪ್ಪರ ತೋರಣಾದಿಗಳನ್ನು ಕಟ್ಟುವುದೂ ವಾಡಿಕೆ. ಇದು ಪ್ರಜೆಗಳಿಗೆ ಸಮ್ಮತವಾಗಿಯೂ ಸಂತೋಷಪ್ರದವಾಗಿಯೂ ಇರೋಣದರಿಂದ ಸಂದರ್ಭೋಚಿತವಾಗಿರುತ್ತದೆ.

ಇಷ್ಟೆಲ್ಲಾ ಆದಾಗ್ಯೂ ಪ್ರಭುಗಳಿಗೆ ಪ್ರಜೆಗಳ ಯಥಾರ್ಥವಾದ ಸ್ಥಿತಿಗತಿ ಕಷ್ಟ ಕೊರತೆಗಳನ್ನು ವಿಚಾರಿಸಿ ತಿಳಿದುಕೊಳ್ಳುವುದಕ್ಕೆ ತುಂಬಾ ಅವಕಾಶವುಂಟೆಂದು ಧಾರಾಳವಾಗಿ ಹೇಳುತ್ತೇವೆ. ರೈತನ ಸ್ಥಿತಿ ಹೇಗಿದೆ? ಅವನ ಮಕ್ಕಳು ಅಕ್ಷರಸ್ಥರಾಗಿದಾರೆಯೇ? ಊರು ಗ್ರಾಮಗಳ ಆರೋಗ್ಯ ಸ್ಥಿತಿ ಹೇಗಿದೆ? ಆರೋಗ್ಯಕರವಾದ ನೀರು ಸಕಲ ಪ್ರಜೆಗಳಿಗೂ ಸಿಕ್ಕುತ್ತದೆಯೇ? ಸ್ಥಳಾಧಿಕಾರಿಗಳು ಎಷ್ಟು ಮಟ್ಟಿಗೆ ತಮ್ಮ ಕರ್ತವ್ಯಗಳನ್ನು ಮಾಡುತ್ತಿದಾರೆ? ಎಂಬಿವೇ ಮೊದಲಾದ ಸಾಮಾನ್ಯವಾದರೂ ಪ್ರಾಮುಖ್ಯವಾದ ವಿದ್ಯಮಾನಗಳನ್ನು ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ತಮ್ಮ ಇಂಥಾ ಸಂಚಾರ ಕಾಲಗಳಲ್ಲಿ ತನಿಖೆಮಾಡಿ ಅರಿತುಕೊಳ್ಳಬಹುದಾಗಿದೆ. ಇಂಥಾ ಸಮಯಗಳಲ್ಲಿ ಪ್ರಜೆಗಳು ಮಹಾಸ್ವಾಮಿಗಳನ್ನು ವಿಶೇಷವಾಗಿ ಸಂತೋಷಪಡಿಸುವಂಥಾ ಕಾರ್ಯಗಳನ್ನು ಮಾಡುವುದರಲ್ಲಿ ಉತ್ಸಾಹಶೀಲರಾಗಿರುತ್ತಾರಲ್ಲದೆ ತಮಗಿರುವ ಕಷ್ಟಗಳನ್ನೂ ಅನನುಕೂಲಗಳನ್ನೂ ಸರ್ಕಾರದ ಕಾರ್ಯಗಳ ಲೋಪ ದೋಷಗಳನ್ನೂ ನೌಕರಮಾನೇರುಗಳಿಂದ ಅನುಭವಿಸುವ ಈತಿಬಾಧೆಗಳನ್ನೂ ಮಹಾಸ್ವಾಮಿಯವರ ಸಮ್ಮುಖದಲ್ಲಿ ಅರಿಕೆಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದಾಗ್ಯೂ ಮಹಾಸ್ವಾಮಿಗಳು ಪ್ರಜೆಗಳ ಯಥಾರ್ಥವಾದ ಸ್ಥಿತಿಗತಿ ಮುಂತಾದವುಗಳನ್ನು ಅವರಲ್ಲಿ ಗಣ್ಯತೆಯನ್ನು ಪಡೆದಿರುವ ದೊಡ್ಡಮನುಷ್ಯರ ಮೂಲಕವೂ, ಸರ್ಕಾರಿ ಅಧಿಕಾರಿಗಳಿಂದಲೂ ಪ್ರೀತಿಪೂರ್ವಕವಾಗಿಯೂ, ಸಾವಧಾನದಿಂದಲೂ ವಿಚಾರಿಸಿ ಮುಂದಟ್ಟುಮಾಡಿಕೊಳ್ಳಬೇಕಾಗಿರುತ್ತದೆ.

ಆಳುವವರು ಭೇಟಿ ದಯಪಾಲಿಸೋಣದರಿಂದ ಪ್ರಜಾಹಿತರಕರವಾದ ಕಾರ್ಯಗಳಿಗೆ ಉತ್ತೇಜನವೂ ಪ್ರೋತ್ಸಾಹವೂ ಉಂಟಾಗಿ ಅಭಿವೃದ್ಧಿ ಹೊಂದಲು ತುಂಬಾ ಸಹಾಯವಾಗುತ್ತದೆ. ಮತ್ತು ಅನೇಕ ನವೀನ ಏರ್ಪಾಟುಗಳು ರೂಢಿಸಲ್ಪಡಲು ಅವಕಾಶವುಂಟು. ಇಂಥಾ ಭೇಟಿಗಳಿಂದ ಆಳುವವರಿಗೂ ಪ್ರಜೆಗಳಿಗೂ ಪರಸ್ಪರವಾದ ಪ್ರಯೋಜನವಿದೆಯೆಂದು ಧಾರಾಳವಾಗಿ ಹೇಳಬಹುದು. ಪರಸ್ಪರ ಕಲೆತು ಸಂಭಾಷಿಸುವುದರಲ್ಲಿ ಪ್ರಜೆಗಳ ಇಂಗಿತಗಳು ಪ್ರಭುಗಳಿಗೆ ವೇದ್ಯವಾಗುತ್ತವೆ; ಅವರ ಸ್ಥಿತಿಗತಿಯನ್ನೂ ಸ್ಥಳ ವಿದ್ಯಮಾನಗಳನ್ನೂ ಪ್ರಭುಗಳು ಕಣ್ಣಾರ ಪರಾಂಬರಿಸಲು ಅವಕಾಶವಾಗುತ್ತದೆ.

ನಮ್ಮ ಗವರ್ನಮೆಂಟಿನವರು ಮಲೆನಾಡು ಪ್ರಾಂತ್ಯಗಳನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಟ್ಟು ತುಂಬಾ ಸಾಹಸಪಡುತ್ತಿರೋಣದರಿಂದ ಈಗ ಶ್ರೀಮದ್ಯುವರಾಜರವರು ಆ ಪ್ರಾಂತ್ಯ ಚಿತ್ತೈಸಿದ್ದು ಅದಕ್ಕೆ ಸಹಕಾರಿಯಾಗಿ ಆ ಉದ್ದೇಶವು ಕೈಗೂಡಲೆಂದು ಹಾರೈಸುತ್ತೇವೆ. ಇದಕ್ಕಾಗಿಯೇ ಸರ್ಕಾರದಿಂದ ನೇಮಕವಾಗಿರುವ ಸ್ಪೆಷಲ್ ಅಧಿಕಾರಿಗಳು ಪ್ರಜಾಹಿತವನ್ನು ಬಯಸಿ ಕೆಲಸಮಾಡುತ್ತಿದಾರೆ. ಶ್ರೀಮದ್ಯುವರಾಜರವರು ಪ್ರಜೆಗಳ ಸ್ಥಿತಿಗತಿಯನ್ನು ಪ್ರೀತಿಪೂರ್ವಕವಾಗಿ ವಿಚಾರಮಾಡಿದರೆಂದೂ, ಅದಕ್ಕಾಗಿ ನೇಮಕವಾಗಿರುವ ಸ್ಪೆಷಲ್ ಅಧಿಕಾರಿಗಳನ್ನು ಪ್ರೋತ್ಸಾಹಪಡಿಸಿದರೆಂದೂ ನಂಬಿದೇವೆ. ಇದಕ್ಕಾಗಿ ನೇಮಿಸಲ್ಪಟ್ಟ ಕಮಿಟಿಗಳ ರಿಪೋರ್ಟು ಬೇಗನೆ ಪ್ರಕಟವಾದರೆ ನೋಡಬೇಕೆಂದು ಕುತೂಹಲಪಡುವೆವು. ಯಾಕೆಂದರೆ ಮಲೆನಾಡು ಪ್ರಾಂತ್ಯಗಳೆಲ್ಲಾ ಬೇಗನೆ ಅಭಿವೃದ್ಧಿಗೆ ಬಂದರಾಯಿತೆಂದು ಎಲ್ಲರೂ ಕುತೂಹಲಪಟ್ಟು ನಿರೀಕ್ಷಿಸಿಕೊಂಡಿದಾರೆ.

ನಮ್ಮ ಶ್ರೀಮದ್ಯುವರಾಜರವರು ಈ ಸಂಸ್ಥಾನದ ಪ್ರಜೆಗಳು ಯಥಾರ್ಥವಾಗಿಯೂ ಅಭಿವೃದ್ಧಿ ಹೊಂದುತ್ತಾ ಬರಬೇಕೆಂದು ಉತ್ಸಾಹಪಡುತ್ತಿರುವ ಕಾರಣ ಅವರು ಆಗಿಂದಾಗ್ಗೆ ಸಂಸ್ಥಾನದ ಮೂಲೆತಾಲೂಕುಗಳಲ್ಲಿ ಪದೇ ಪದೆ ಸಂಚಾರಮಾಡುತ್ತಾ, ಸರ್ಕಾರದ ಕಾರ್ಯಗಳನ್ನೂ ಪ್ರಜೆಗಳ ಇಂಗಿತಗಳನ್ನೂ ಹೆಚ್ಚುಹೆಚ್ಚಾಗಿ ಕಣ್ಣಾರ ಪರಾಂಬರಿಸಿ ತಿಳಿದುಕೊಳ್ಳುತ್ತಾ ಬಂದಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಕ್ರೈಸ್ತ ಯೋಗ.

ಲೌಕಿಕ ವ್ಯವಹಾರದಲ್ಲಿದ್ದುಕೊಂಡು ಪಾರಮಾರ್ಥಿಗಳಾಗಿ ಜೀವಿಸುವುದು ಅಸಾಧ್ಯವೆಂದೂ ತಾವು ಪಾರಮಾರ್ಥಿಗಳಾಗಬೇಕಾದರೆ, ತಮ್ಮ ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಬಂಧುಮಿತ್ರಕಳತ್ರಾದಿಗಳನ್ನೂ ವಿಸರ್ಜಿಸಿ ಬಿಟ್ಟು ಸನ್ಯಾಸಿಯಾಗಿ ಕಾಡಿಗೆ ಹೋಗಿ ತಮ್ಮ ದೇಹಕ್ಕೂ ಕೂಡ ಕಾಲಕಾಲಕ್ಕೆ ಬೇಕಾದ ಆಹಾರಪಾನಗಳನ್ನೂ ನಿದ್ರೆಯನ್ನೂ ಕ್ರಮವಾಗಿ ಕೊಡದೆ ಹಲವು ವಿಧಗಳಲ್ಲಿ ಅದನ್ನು ದಂಡಿಸಿ ಕ್ಷೀಣಗತಿಗೆ ತರುವುದು ಆವಶ್ಯಕವೆಂದು ಅನೇಕರು ಅಭಿಪ್ರಾಯಪಡುವರು. ಮತ್ತು ಕಾರ್ಯತಃ ಹೀಗೆ ಮಾಡಿರುವವರು ಎಷ್ಟೋ ಮಂದಿ ಇರುತ್ತಾರೆ. ಈ ಲೋಕದ ಸುಖಸಂತೋಷಗಳು ಮನುಷ್ಯನಿಗೆ ಶಾಶ್ವತವಾದ ಸುಖವನ್ನು ಕೊಡಲಾರವು; ಇವುಗಳಿಗಿಂತಲೂ ಹೆಚ್ಚಿನ ಯಾವುದೋ ಒಂದು ಸುಖವನ್ನು ಅವನ ಆತ್ಮವು ಬಯಸುತ್ತದೆ ಎಂಬುದೇನೋ ವಾಸ್ತವ. ಆ ಶಾಶ್ವತವಾದ ಸುಖವನ್ನು ಹುಡುಕಿ ಕಂಡುಕೊಳ್ಳುವುದು ಮನುಷ್ಯನ ಪರಮಧರ್ಮವಾಗಿರುತ್ತದೆಂಬುದರಲ್ಲಿ ಸಂಶಯವಿರಲಾರದು. ಆದರೆ ಆ ಶಾಶ್ವತವಾದ ಸುಖವನ್ನು ಪಡೆಯುವುದಕ್ಕೆ ನಿರಕ್ತರಾಗಿ ದೇಹದಂಡನೆಯನ್ನನುಭವಿಸುವುದೊಂದೇ ಮಾರ್ಗವೋ? ಲೌಕಿಕ ವ್ಯವಹಾರದಲ್ಲಿದ್ದುಕೊಂಡು ಮೋಕ್ಷಸಾಧನೆಯನ್ನು ಮಾಡುವುದು ಅಸಾಧ್ಯವಾಗಿರುತ್ತದೆಯೋ? ಈ ವಿಷಯದಲ್ಲಿ ಯೇಸು ಕ್ರಿಸ್ತನು ಏನು ಬೋಧನೆ ಮಾಡಿರುತ್ತಾನೆಂದೂ ಆತನು ತಾನೇ ಹೇಗೆ ನಡೆಕೊಂಡನೆಂದೂ ನೋಡೋಣ.

ಯೇಸು ಕ್ರಿಸ್ತನು ತಾನು ಕೇವಲ ಬಡವನಾಗಿ ಹುಟ್ಟಿದನು. ಆತನಿಗೆ ಮನೆಮಠಗಳಾದರೂ ಆಸ್ತಿಪಾಸ್ತಿಗಳಾದರೂ ಇರಲಿಲ್ಲ. "ನರಿಗಳಿಗೆ ಗುಡ ಗಳವೆ, ಆಕಾಶದಲ್ಲಿ ಹಾರಾಡುವ ಪಕ್ಷಿಗಳಿಗೆ ಗೂಡುಗಳವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ" ಎಂದು ಆತನು ತನ್ನ ವಿಷಯದಲ್ಲಿ ಹೇಳಿಕೊಂಡ ಈ ಮಾತುಗಳು ವಾಸ್ತವವಾಗಿಯೇ ಇದ್ದುವು. ಮತ್ತು ಒಂದು ದಿನ ಐಶ್ವರ್ಯವಂತನಾದ ಒಬ್ಬ ಮನುಷ್ಯನು ಯೇಸು ಕ್ರಿಸ್ತನ ಬಳಿಗೆ ಬಂದು ಗುರುವೇ, ನಾನು ಮುಕ್ತಿಯನ್ನು ಪಡೆಯಬೇಕಾದರೆ ಯಾವ ಒಳ್ಳೇ ಕಾರ್ಯವನ್ನು ಮಾಡಬೇಕೆಂದು ಕೇಳಲು, ಆತನು ಅವನಿಗೆ—"ನೀನು ಹೋಗಿ ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತು ಇರುವದು" ಎಂದು ಹೇಳಿದನು. ಇದನ್ನು ನೋಡಿದರೆ ಆಸ್ತಿಪಾಸ್ತಿಯನ್ನೆಲ್ಲಾ ಬಿಟ್ಟುಬಿಡುವುದು ಮೋಕ್ಷಸಾಧನೆಯಾಗಿದೆಯೆಂದು ಯೇಸು ಕ್ರಿಸ್ತನು ಬೋಧಿಸಿದಂತೆ ತೋರುವುದು. ಆದರೆ ಆತನು ಹೇಳಿದ ಈ ಮಾತುಗಳು ಆ ಮನುಷ್ಯನ ಸ್ಥಿತಿಗೆ ಆವಶ್ಯಕವಾಗಿದ್ದವೇ ಹೊರತು, ಆತನು ಎಲ್ಲರಿಗೂ ಇಂಥ ಮಾತುಗಳನ್ನು ಹೇಳಿರುವುದೇ ಇಲ್ಲ. ದೃಷ್ಟಾಂತವಾಗಿ ಜಕ್ಕಾಯನೆಂಬ ಒಬ್ಬ ಐಶ್ವರ್ಯವಂತನು ಯೇಸು ಕ್ರಿಸ್ತನ ಶಿಷ್ಯನಾದಾಗ ಅವನಿಗೆ ನಿನ್ನ ಆಸ್ತಿಯನ್ನೆಲ್ಲಾ ದಾನಮಾಡಿಬಿಡು ಎಂದು ಹೇಳಲೇ ಇಲ್ಲ. ಮನುಷ್ಯರು ದೇವರ ಉಗ್ರಾಣಿಕರಾಗಿರುತ್ತಾರೆಂದು ಆತನು ಸಾಮ್ಯರೂಪವಾಗಿ ತಿಳಿಸಿರುತ್ತಾನೆ. ಉಗ್ರಾಣಿಕನ ವಶದಲ್ಲಿ ದಣಿಯ ಸೊತ್ತೆಲ್ಲಾ ಇದ್ದಾಗ್ಯೂ ಅದೆಲ್ಲವನ್ನು ಆ ದಣಿಯ ಚಿತ್ತಾನುಸಾರವಾಗಿ ವಿನಿಯೋಗಿಸಬೇಕೇ ಹೊರತು ತನ್ನ ಇಷ್ಟಾನುಸಾರವಾಗಿ ಯಾವುದನ್ನಾದರೂ ಉಪಯೋಗಿಸುವ ಹಕ್ಕು ಆ ಉಗ್ರಾಣಿಕನಿಗೆ ಇರುವುದೇ ಇಲ್ಲವಷ್ಟೆ. ಇದರಂತೆಯೇ ಈ ಪ್ರಪಂಚಕ್ಕೆಲ್ಲಾ ದೇವರೇ ಒಡೆಯನಾಗಿರುತ್ತಾನೆ. ಇದರಲ್ಲಿರುವ ಸಮಸ್ತವೂ ಆತನ ಸೊತ್ತೇ ಆಗಿರುತ್ತವೆ. ಮನುಷ್ಯರು ಉಗ್ರಾಣಿಕರಂತೆ ದೇವರು ತಮ್ಮ ಕೈಗೆ ಒಪ್ಪಿಸಿರುವ ಆಸ್ತಿಯನ್ನು ತಮ್ಮ ಮನಸ್ಸು ಬಂದ ಹಾಗೆ ಅಲ್ಲ, ದೇವರು ಮೆಚ್ಚುವ ರೀತಿಯಲ್ಲಿ ವಿನಿಯೋಗಿಸಲು ಬದ್ಧರಾಗಿರುತ್ತಾರೆ. ಆಸ್ತಿಯು ತಾನೇ ಕೆಟ್ಟುದಲ್ಲ. ಆದರೆ ದೇವರಿಗಿಂತ ಹೆಚ್ಚಾಗಿ ಅದನ್ನು ಪ್ರೀತಿಸುವುದು ಕೆಟ್ಟದ್ದು. ದೇವರು ನಮಗೆ ಕೊಟ್ಟಿರುವವುಗಳನ್ನು ಬಿಸಾಟುಬಿಡುವುದಕ್ಕಿಂತಲೂ ನಂಬಿಗಸ್ಥರಾದ ಉಗ್ರಾಣಿಕರಂತೆ ಅವುಗಳನ್ನು ವಿನಿಯೋಗಿಸುತ್ತಾ ಬರುವುದು ನಮಗೂ ಇತರರಿಗೂ ಎಷ್ಟೋ ಪ್ರಯೋಜನಕರವಾಗಿರುವುದಿಲ್ಲವೇ?

ಯೇಸು ಕ್ರಿಸ್ತನು ಒಂದು ಸಂದರ್ಭದಲ್ಲಿ ತನ್ನ ಶಿಷ್ಯರಿಗೆ—"ಯಾವನಾದರೂ ತನ್ನ ತಂದೆ, ತಾಯಿ, ಹೆಂಡತಿ, ಮಕ್ಕಳು ಅಣ್ಣತಮ್ಮಂದಿರು, ಅಕ್ಕತಂಗಿಯರು ಇವರನ್ನು ಹಗೆಮಾಡದಿದ್ದರೆ, ಅವನು ನನ್ನ ಶಿಷ್ಯನಾಗಲಾರನು" ಎಂದು ಹೇಳಿದುಮುಂಟು. ಇದನ್ನು ನೋಡಿದರೆ ಬಂಧುಮಿತ್ರಾದಿಗಳನ್ನು ಬಿಟ್ಟಗಲುವುದು ಮೋಕ್ಷಸಾಧನೆಗೆ ಆವಶ್ಯಕವೆಂದು ಯೇಸು ಕ್ರಿಸ್ತನು ಬೋಧಿಸಿದಂತೆ ತೋರುವುದು. ಆದರೆ ಇದು ಆತನ ಅಭಿಪ್ರಾಯವಲ್ಲ. ಏಕೆಂದರೆ ಆತನು ತಾನೇ ತಂದೆ ತಾಯಿಗಳನ್ನು ಪ್ರೀತಿಸಿ ಅವರಿಗೆ ವಿಧೇಯನಾಗಿದ್ದನು. ಆತನು ದಾಂಪತ್ಯ ಧರ್ಮವನ್ನು ಕೈಕೊಂಡವನಲ್ಲದಿದ್ದರೂ ಕಾನಾ ಊರಲ್ಲಿ ನಡೆದ ಲಗ್ನಕ್ಕೆ ಹೋಗಿ ಅದನ್ನು ಮಂಗಳಮಾಡಿದನು. ಪತ್ನಿಪರಿತ್ಯಾಗವನ್ನು ಆತನು ನಿಷೇಧಿಸಿದನು. ಮಕ್ಕಳನ್ನು ಆತನು ಪ್ರೀತಿಸುವವನಾಗಿದ್ದನು. ಅವಸಾನ ಕಾಲದಲ್ಲಿಯೂ ಕೂಡ ಆತನು ತನ್ನ ತಾಯಿಯನ್ನು ಕುರಿತು ಚಿಂತಿಸಿ ನಂಬಿಗಸ್ಥನಾದ ತನ ಶಿಷ್ಯನ ಕೈಗೆ ಆಕೆಯನ್ನು ಒಪ್ಪಿಸಿಕೊಟ್ಟನು. ಪ್ರಾರ್ಥನೆಮಾಡುವುದಕ್ಕಾಗಿ ಆತನು ಆಗಾಗ್ಗೆ ಏಕಾಂತ ಸ್ಥಳಕ್ಕೆ ಹೋಗುತ್ತಿದ್ದನೇ ಹೊರತು ಉಳಿದ ಕಾಲವನ್ನೆಲ್ಲಾ ಜನಗಳ ಮಧ್ಯದಲ್ಲಿಯೇ ಕಳೆಯುತ್ತಿದ್ದನು. ಹೀಗಿದ್ದಾಗ್ಯೂ ಆತನು ಇವರೆಲ್ಲರಿಗಿಂತಲೂ ಹೆಚ್ಚಾಗಿ ಪರಮತಂದೆಯಾದ ದೇವರನ್ನು ಪ್ರೀತಿಸುವವನಾಗಿದ್ದನು. ಆತನ 12 ನೇ ಪ್ರಾಯದಲ್ಲಿ ಆತನ ತಂದೆತಾಯಿಗಳು ಯೆರೂಸಲೇಮಿನ ಜಾತ್ರೆಗೆ ಕರೆದುಕೊಂಡು ಹೋಗಿದ್ದರು. ಜಾತ್ರೆ ತೀರಿದನಂತರ ಬಾಲಕನಾದ ಯೇಸುವು ಅಲ್ಲಿನ ದೇವಸ್ಥಾನದಲ್ಲೇ ಉಳುಕೊಂಡನು. ತಂದೆತಾಯಿಗಳು ತಿರುಗಿ ಬಂದು ಕಂಡು, ಯಾಕೆ ಹೀಗೆ ಮಾಡಿದೆ ಎಂದು ಕೇಳಲು "ನಾನು ನನ್ನ ತಂದೆಯ ಮನೆಯಲ್ಲಿರಬೇಕಾದದ್ದು ನಿಮಗೆ ತಿಳಿಯದೋ" ಎಂದು ಉತ್ತರ ಕೊಟ್ಟನು. ಮತ್ತೊಂದು ಸಂದರ್ಭದಲ್ಲಿ ಆತನು ಕೈಕೊಂಡಿದ್ದ ಬೋಧಕೋದ್ಯೋಗದ ದೆಸೆಯಿಂದ ಆತನಿಗೆ ವಿರೋಧಿಗಳು ಹೆಚ್ಚುತ್ತಿರುವುದನ್ನು ಕಂಡ ಆತನ ತಾಯಿಯೂ ಬಂಧುಗಳೂ ಬಲವಂತದಿಂದ ಆತನನ್ನು ಮನೆಗೆ ಕರೆದುಕೊಂಡು ಹೋಗುವುದಕ್ಕಾಗಿ ಬಂದರು. ಈ ಸಮಾಚಾರವು ಆತನಿಗೆ ತಿಳಿದು—"ಯಾರು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುತ್ತಾರೋ ಅವರೇ ನನಗೆ ತಾಯಿಯೂ ಅಣ್ಣತಮ್ಮಂದಿರೂ ಆಗಬೇಕು" ಎಂದು ಉತ್ತರ ಕೊಟ್ಟನು. ಇನ್ನೊಂದು ಸಂದರ್ಭದಲ್ಲಿ ತಾನು ಶ್ರಮೆಮರಣಗಳನ್ನನುಭವಿಸಬೇಕಾದುದು ಅವಶ್ಯಕವೆಂದು ಆತನು ತಿಳಿಸಿದಾಗ ಆತನ ಶಿಷ್ಯರಲ್ಲೊಬ್ಬನು ಆತನ ಕೈ ಹಿಡಿದು ಗುರುವೇ, ಇಂಥ ಕಷ್ಟಗಳು ನಿನಗೆಂದಿಗೂ ಬಾರದಿರಲೆಂದು ಹಾರೈಸಿದನು. ಅದಕ್ಕೆ ಆತನು—"ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ," ಎಂದು ಅವನನ್ನು ಗದರಿಸಿದನು. ಆತನು ಯಾವಾಗಲೂ ಜನಗಳ ಮಧ್ಯದಲ್ಲೇ ವಾಸಮಾಡುತ್ತಾ ಅವರ ಸುಖದುಃಖಗಳಲ್ಲಿ ಸಂತಾಪಿಯಾಗಿಯೂ ಸಮಭಾಗಿಯಾಗಿಯೂ ಇರುತ್ತಾ ಪರಹಿತಚಿಂತನೆಯಲ್ಲೇ ತನ್ನ ಜೀವಮಾನವನ್ನೆಲ್ಲಾ ಕಳೆದನು. ಆದರೆ ತಾನು ದೇವರಿಗೆ ಸಲ್ಲಿಸಬೇಕಾಗಿದ್ದ ಧರ್ಮಕ್ಕೆ ಯಾರಾದರೂ, ತನ್ನ ಸ್ವಜನರಾದರೂ ಕೂಡ, ಅಭ್ಯಂತರಪಡಿಸುವುದಕ್ಕೆ ಬಂದಾಗ ಅಂಥವರನ್ನು ಯಾವಾಗಲೂ ದೂರೀಕರಿಸುತ್ತಿದ್ದನು. ಈ ರೀತಿಯಲ್ಲಿ ನಡಕೊಳ್ಳುವುದು ಉತ್ತಮವಾದ ಮೋಕ್ಷಸಾಧನೆಯಲ್ಲವೇ.

ಇದು ಮಾತ್ರವಲ್ಲದೆ ಯೇಸು ಕ್ರಿಸ್ತನು—"ನಾಳಿನ ವಿಷಯವಾಗಿ ಚಿಂತಿಸಬೇಡಿರಿ" ಎಂದೂ "ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಟುಬಿಡು, ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು" ಎಂದೂ "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಜೀವದಾಶೆಯನ್ನು ಬಿಟ್ಟು ನನ್ನ ಹಿಂದೆ ಬರಲಿ; ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದರ ನಷ್ಟಪಡುವನು" ಎಂದೂ ಬೇರೆ ಬೇರೆ ಸಂದರ್ಭಗಳಲ್ಲಿ ಬೋಧನೆಮಾಡಿರುತ್ತಾನೆ. ಇದನ್ನು ನೋಡಿದರೆ ದೇಹದಂಡನೆಯು ಮೋಕ್ಷಸಾಧನೆಗೆ ಆವಶ್ಯಕವಾಗಿದೆಯೆಂದು ಹೇಳಿದಂತೆ ತೋರುವುದು. ಆದರೆ ಈ ಅರ್ಥದಲ್ಲಿ ಈ ಮಾತುಗಳನ್ನು ಆತನು ಹೇಳಿರುವುದೇ ಇಲ್ಲ. ಆತನು ತಾನೇ ಉಪವಾಸಿಯಾಗಿ ಜೀವಿಸುತ್ತಿರಲಿಲ್ಲ. ಇದಕ್ಕೆ ಬದಲಾಗಿ ಆತನು ಅನೇಕ ಸಂದರ್ಭಗಳಲ್ಲಿ ಜನರ ಆತಿಥ್ಯವನ್ನು ಸಂತೋಷವಾಗಿ ಸ್ವೀಕರಿಸುತ್ತಿದ್ದನು. ಹೀಗಿದ್ದರೂ ಆತನು ಭೋಗಪುರುಷನಾಗಿರದೆ ಜಿತೇಂದ್ರಿಯನಾಗಿ ತನ್ನ ದೇಹವನ್ನೂ ಕೂಡ ದೇವರ ಚಿತ್ತಕ್ಕೆ ಅಧೀನಮಾಡಿಕೊಂಡು ಜೀವಿಸುತ್ತಿದ್ದನು. ಆತನು ಅನೇಕ ಅದ್ಭುತ ಕಾರ್ಯಗಳನ್ನು ನಡಿಸಿದನು. ಆದರೆ ಅವೆಲ್ಲವುಗಳನ್ನು ಇತರರ ಪ್ರಯೋಜನಾರ್ಥವಾಗಿ ನಡಿಸಿದನೇ ಹೊರತು ತನ್ನ ಸ್ವಂತ ಸುಖಕ್ಕಾಗಲಿ ಕೀರ್ತಿಯನ್ನು ಸಂಪಾದಿಸುವುದಕ್ಕಾಗಲಿ ಯಾವುದನ್ನಾದರೂ ನಡಿಸಿರುವುದಿಲ್ಲ. ಆತನು ಆಡಿದ ಮಾತುಗಳೂ ಮಾಡಿದ ಕ್ರಿಯೆಗಳೂ ತನ್ನ ಸ್ವಂತವಾದವುಗಳಲ್ಲವೆಂದೂ ದೇವರ ಚಿತ್ತವನ್ನು ನೆರವೇರಿಸುವುದೇ ತನಗೆ ಆಹಾರವೂ ಪಾನವೂ ಆಗಿದೆಯೆಂದೂ ಆತನು ತಿಳಿಸಿದನು. ತನ್ನ ಕರ್ತವ್ಯವನ್ನು ನೆರವೇರಿಸುವುದರಲ್ಲಿ ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕೆಂದು ಆತನು ಖಚಿತವಾಗಿ ಮುಂದಟ್ಟುಮಾಡಿಕೊಂಡಿದ್ದರೂ ಕೂಡ ಅದೇ ದಾರಿಯನ್ನು ಹಿಡಿದು ಮುಂದರಿದು ಹೋಗುತ್ತಿದ್ದನು. ಧರ್ಮವನ್ನು ಬಿಟ್ಟು ತೊಲಗುವುದಕ್ಕಿಂತ ಪ್ರಾಣವನ್ನೇ ಬಿಡುವುದು ಲೇಸೆಂಬುದನ್ನು ತನ್ನ ಸ್ವಂತ ನಡತೆಯಿಂದ ದೃಷ್ಟಾಂತಪಡಿಸಿದನು. ಇಂಥ ಯೋಗಸಾಧನೆಯು ಅತ್ಯುತ್ತಮವಾದುದಾಗಿಯೂ ಸರ್ವರೂ ಅಭ್ಯಾಸಿಸತಕ್ಕದಾಗಿಯೂ ಇರುವುದಿಲ್ಲವೇ?

ಯುದ್ಧದ ಸಮಾಚಾರಗಳು.

ಇಂಗ್ಲೆಂಡಿನ ಮೇಲೆ ವಿಮಾನಗಳು ನುಗ್ಗಿದವು.

ಯುದ್ಧಭೂಮಿಯ ಎಲ್ಲಾ ಪ್ರದೇಶಗಳಲ್ಲೂ ಯುದ್ಧಕಾರ್ಯಗಳು ಅಷ್ಟೇನೂ ವಿಶೇಷವಾಗಿ ನಡೆದಿಲ್ಲ. ಯಾಕೆಂದರೆ ಆ ಪ್ರಾಂತ್ಯಗಳಲ್ಲಿ ಮಳೆ ಸುರಿಯುವುದು, ಹಿಮ ಬೀಳುವುದು, ಕೆಸರು ಹೆಚ್ಚು, ಸಾಮಾನ್ಯವಾಗಿ ಶೀತಹವಾ ಪ್ರಾಪ್ತವಾಗಿದೆ. ಆದಾಗ್ಯೂ ಕಾದಾಟಗಳು ನಿಂತುಹೋಗಿವೆ ಎಂದು ನೆನೆಸಬಾರದು. ಕದನಗಳು ನಡೆಯುತ್ತಿದ್ದರೂ ಯುದ್ಧಕಾರ್ಯಗಳಿಗೆ ಅನುಕೂಲವಾಗುವಂತೆ ಹವಾ ಬದಲಾವಣೆಯಾದಲ್ಲದೆ ವಿಶೇಷ ಯುದ್ಧಗಳು ನಡೆಯುವುದಾಗಲಿ, ಶತ್ರುವನ್ನು ಬಹಳವಾಗಿ ಓಡಿಸುವುದಾಗಲಿ ಕಾಣಬರುವುದಿಲ್ಲ.

ಇಂಗ್ಲೆಂಡಿನಲ್ಲಿ.

ಜರ್ಮನಿಯವರ ವಿಮಾನಯಂತ್ರಗಳು ಇಂಗ್ಲೆಂಡಿಗೆ ಬಂದಿದ್ದದ್ದೇ ಈ ವಾರದ ವಿಶೇಷ ವರ್ತಮಾನ. ಜನವರಿ ತಾ. 19 ನೇ ಮಂಗಳವಾರ ಮಧ್ಯಾಹ್ನ ಜರ್ಮನಿಯ ಹಲವು ವಿಮಾನಯಂತ್ರಗಳು ಅಂತರಿಕ್ಷದಲ್ಲಿ ಹೋಗುತ್ತಿದ್ದದ್ದನ್ನು ಹಾಲೆಂಡಿನ ತೀರದಲ್ಲಿ ಕಂಡರು. ಅವು ಉತ್ತರ ಕಡಲನ್ನು ದಾಟಿಕೊಂಡು ಇಂಗ್ಲೆಂಡಿನ ಪೂರ್ವ ಸಮುದ್ರ ತೀರಕ್ಕೆ ಬಂದವು. ನಾರ್‌ಫಕ್ ನಗರದ ಪೂರ್ವ ತೀರದಲ್ಲಿ ರಾತ್ರಿ ಸುಮಾರು 8 ಗಂಟೆ ಅವುಗಳನ್ನು ನೋಡಿದರು. ಆ ರಾತ್ರಿಯು ಕಗ್ಗತ್ತಲು ಕವಿದಿತ್ತು. ಅದರಿಂದ ಬಂದಿದ್ದ ವಿಮಾನಯಂತ್ರಗಳು ಎಂಥವೋ ಗೊತ್ತುಮಾಡಲಾಗದೆ ಹೋಯಿತು. ಬಂದಿದ್ದ ವಿಮಾನಗಳು ಆರಿರಬಹುದೆಂದು ಊಹಿಸಲ್ಪಟ್ಟಿದೆ. ಆ ಪೈಕಿ ಒಂದು ಜೆಪ್ಪಲಿನ್ ಎಂಬ ಜಾತಿಯದು; ಅಂದರೆ, ದೊಡ್ಡ ವಿಮಾನಯಂತ್ರ. ಈ ವಿಮಾನಗಳು ಯಾರ್‌ಮತ್ ನಗರದ ಮೇಲೆ ಹಾದು ಹೋಗುತ್ತಾ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಅಲ್ಲಿಂದ ಒಳದೇಶದ ಮೇಲೆಯೂ ಸ್ವಲ್ಪ ದೂರ ನುಗ್ಗಿಹೋದವು. ಸ್ಯಾಂಡ್ರಿಂಗ್ಹಾಂ ಅರಮನೆಯಿಂದ ಸುಮಾರು ಅರ್ಧ ಮೈಲಿ ಆಚೆ ತನಕ ಬಂದಿದ್ದವು. ಅದರ ಹಿಂದಿನ ದಿನ ನಮ್ಮ ಚಕ್ರವರ್ತಿ ದಂಪತಿಗಳು ಆ ಅರಮನೆಯಲ್ಲಿದ್ದು ಹೋಗಿದ್ದರು. ವಿಮಾನಯಂತ್ರಗಳು ಹಲವು ಸ್ಥಳಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಕೆಡವಿದವು. ಇವುಗಳಿಂದ ಆಸ್ತಿಪಾಸ್ತಿಗಳಿಗೆ ವಿಶೇಷ ನಷ್ಟವುಂಟಾಯಿತಲ್ಲದೆ ಪ್ರಾಣನಷ್ಟವೇನೂ ತುಂಬಾ ಆಗಲಿಲ್ಲ. 72 ವರುಷದ ಒಬ್ಬ ಮುದುಕಿ, ಒಬ್ಬ ಹುಡುಗ, ಒಬ್ಬ ಸೋಚಿಯವನು, ಯುದ್ಧದಲ್ಲಿ ಮೃತಪಟ್ಟ ಸಿಪಾಯಿಯ ಹೆಂಡತಿ, ಈ ನಾಲ್ವರು ಮಾತ್ರ ಪ್ರಾಣ ಕಳೆದುಕೊಂಡರು. ಗ್ರಾಮಾಂತರಗಳಲ್ಲಿ ಕೆಲವು ಮನೆಗಳೂ ದೇವಾಲಯಗಳೂ ನಷ್ಟ ಹೊಂದಿದವು.

ಅಂತರಿಕ್ಷದಲ್ಲಿ ದರೋಡೆಕೋರರಂತೆ ಬಂದುಹೋಗುವ ಈ ಜರ್ಮನಿಯ ವಿಮಾನಯಂತ್ರಗಳಿಂದ ಯುದ್ಧದ ಪರಿಣಾಮವೇನೂ ವ್ಯತ್ಯಾಸವಾಗುವುದಿಲ್ಲ. ನಿರಪರಾಧಿಗಳಾದ ಗಂಡಸರು, ಹೆಂಗಸರು, ಮಕ್ಕಳು ಮೃತಪಡುತ್ತಾರೆ, ಇಲ್ಲವೇ ಗಾಯಪಡುತ್ತಾರೆ. ಯುದ್ಧಕಾರ್ಯಗಳಲ್ಲಿ ತೊಡಗಿರುವ ಸೈನಿಕರನ್ನು ಬಡಿಸುವುದಿಲ್ಲ. ಇಂಥಾ ಕಾರ್ಯಗಳಿಂದ ಶತ್ರುವಿನ ಆಕ್ರೋಶವು ಹುಟ್ಟಿ ಕಟ್ಟೊರಡುವವು. ಇದನ್ನು ಯುದ್ಧಕಾರ್ಯವೆಂದು ಎಂದಿಗೂ ಹೇಳಲಾಗುವುದಿಲ್ಲ. ತಟಸ್ಥರಾಗಿರುವ ಜನಾಂಗಗಳ ಪ್ರೀತಿಯನ್ನೂ ಸ್ನೇಹವನ್ನೂ ಸಂಪಾದಿಸಿಕೊಳ್ಳಬೇಕೆಂದು ಜರ್ಮನಿಯವರು ಕುತೂಹಲಪಡುತ್ತಾರೆ. ಆದರೆ ಅವರು ನಡಿಸುವ ಇಂಥಾ ತುಚ್ಛವಾದ ಕೃತ್ಯಗಳಿಂದ ಇತರ ಜನಾಂಗಗಳ ವಿರೋಧವನ್ನು ಕಟ್ಟಿಕೊಳ್ಳುವರಲ್ಲದೆ ಮತ್ತೆ ಬೇರೆ ಅಲ್ಲ. ಅಮೇರಿಕದ ವರ್ತಮಾನ ಪತ್ರಿಕೆ

ಈ ಜರ್ಮನಿಯವರ ಇಂಥಾ ಕೃತ್ಯಗಳನ್ನು ನೋಡಿ ಅತ್ಯಂತ ವಿಶೇಷವಾಗಿ ಆಶ್ಚರ್ಯಪಡುತ್ತವೆ. ಆ ಪೈಕಿ ಒಂದು ಪತ್ರಿಕೆಯು ಬರೆಯುವುದೇನೆಂದರೆ—"ಸ್ವಾರ್ಥಕ್ಕೆ ಕೆಟ್ಟು ನಿರಾಸೆಹುಟ್ಟಿ ಹುಚ್ಚುಹಿಡಿದು ನಡಿಸುವ ಕಾರ್ಯವೋ, ಅಥವಾ ಖಂಡಿತವಾಗಿ ಹುಚ್ಚುಹಿಡಿದ ಕಾರ್ಯವೋ? ಇಂಥಾ ಅಧರ್ಮವಾದ ಕೃತ್ಯದಿಂದ ಜರ್ಮನಿಯವರ ಉದ್ದೇಶವೇನಿರಬಹುದು? ಅವರಿಗೆ ಗೆಲುವಾದೀತೆಂದು ನಿರೀಕ್ಷಿಸುವರೇ? ಸಾಮಾನ್ಯವಾದ ಜನರಿರುವ ಸ್ಥಳಗಳ ಮೇಲೆ ನುಗ್ಗಿ ನಿರಪರಾಧಿಗಳನ್ನು ಕೊಲ್ಲುವುದೂ ಯಾವ ಧರ್ಮ? ಇಂಥಾ ಕೃತ್ಯಗಳನ್ನು ನೋಡಿದರೆ ತಟಸ್ಥರಾಗಿರುವ ಯಾವ ರಾಜ್ಯದವರೂ ಜರ್ಮನಿಯವರನ್ನು ಪ್ರೀತಿಸಲಾರರು; ಅವರ ವಿಷಯದಲ್ಲಿ ಯಾರಿಗೂ ಒಳ್ಳೆಯ ಅಭಿಪ್ರಾಯ ಉಂಟಾಗುವುದಿಲ್ಲ" ಎಂಬೀ ರೀತಿ ಬರೆಯುವುದು.

ಪಶ್ಚಿಮ ಯುದ್ಧಭೂಮಿಯಲ್ಲಿ.

ಜರ್ಮನಿಯವರು ಮುಂದರಿಸಿ ನುಗ್ಗಿ ಬಂದಿರುತ್ತಾರೆಂದು ಕಳೆದ ವಾರ ಹೇಳಿದೆವಷ್ಟೆ. ಅವರು ಈಚೆಗೆ ಅದರಿಂದ ಯಾವ ಪ್ರಯೋಜನವನ್ನೂ ಮಾಡಿಕೊಳ್ಳಲಾರದೆ ಹೋದರು. ಅವರು ಫ್ರೆಂಚ್ ಸೈನಿಕರ ಸಾಲುಗಳನ್ನು ಭೇದಿಸುವುದು ಸಮರ್ಥರಾಗಲಿಲ್ಲ; ಈ ಸೈನಿಕರ ಸಾಲುಗಳು ಎಂದಿಗಿಂತಲೂ ಬಲವಾಗಿಯೇ ಇರುತ್ತವೆ. ಕದನಗಳೇನೋ ವಿಶೇಷವಾಗಿ ನಡೆದಿರುವವು. ಆದರೆ ಹವಾಸ್ಥಿತಿಯು ತುಂಬಾ ಪ್ರತಿಕೂಲವಾಗಿರೋಣದರಿಂದ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಮುಂದಕ್ಕೆ ನುಗ್ಗಿ ಹೋಗಲು ಅಡಚಣೆಯಾಗಿರುವುದು. ಶತ್ರುಗಳು ಒಬ್ಬರಮೇಲೊಬ್ಬರು ನುಗ್ಗಿ ಕಡಿದಾಡುವುದೇನೋ ನಡೆಯುತ್ತಲೇ ಇದೆ. ಕೆಲವು ಸಂದರ್ಭಗಳಲ್ಲಿ ಸೈನಿಕರು ಕೈಸೆರೆ ಆಗಿರುವುದೂ ಉಂಟು. ಆದರೂ ಗಣನೆಗೆ ಬರುವ ಮಟ್ಟಿಗೆ ಮುಂದರಿಸಿ ನುಗ್ಗಿ ಹೋಗಿಲ್ಲ.

ಒಂದು ರಾಜ್ಯದಲ್ಲಿ ಫ್ರೆಂಚ್ ಸೈನಿಕರು ಜರ್ಮನಿಯವರಿದ್ದ ಕಂದಕಗಳ ಮೇಲೆ ನುಗ್ಗಿ ಹೋದರು. ಕೆಸರು ಅಪಾರವಾಗಿದ್ದಿತು. ಅರವತ್ತು ಮಂದಿಯ ಮೋಟಾರುಗಳು ಅದರಲ್ಲಿ ಸಿಕ್ಕಿಕೊಂಡು, ಅವರು ಬಿಡಿಸಿಕೊಳ್ಳಲಾರದೆ ಹೋದರು. ರಣಾಂಗಣದ ಸ್ಥಿತಿಯು ಹೀಗಿದ್ದರೆ ಯುದ್ಧಕಾರ್ಯಗಳನ್ನು ನಡಿಸುವುದು ಬಹು ಕಷ್ಟ.

ಬ್ರಿಟಿಷರೂ ಫ್ರೆಂಚರೂ ಬೆಲ್ಜಿಯಮ್ ಎಲ್ಲೆಕಟ್ಟು ದಾಟಿ ನುಗ್ಗಿ ಹೋಗಬೇಕೆಂದು ಒಂದಾವರ್ತಿ ಪ್ರಯತ್ನಪಟ್ಟರು. ಬ್ರಿಟಿಷ್ ಜಹಜುಗಳಿಂದ ಜರ್ಮನಿಯವರ ಕಂದಕಗಳಿಗೆ ಫಿರಂಗಿಗಳನ್ನು ಸುರಿಸಿದರು. ಜರ್ಮನಿಯವರು ಕಂದಕಗಳನ್ನು ತ್ಯಜಿಸಿ ಓಡಿಹೋದರು; ಆದರೂ ನಮ್ಮವರು ಅಲ್ಲಿಂದ ಮುಂದರಿಸಿ ನುಗ್ಗಿಹೋಗಲು ಸಾಧ್ಯವಾಗಲಿಲ್ಲ.

ಕಳೆದ ವಾರ ವಿಮಾನಯಂತ್ರಗಳ ಕಾರುಬಾರುಗಳು ವಿಶೇಷವಾಗಿ ನಡೆದವು. ಫ್ರೆಂಚರು ಜರ್ಮನಿಯ ಎರಡು ವಿಮಾನಯಂತ್ರಗಳನ್ನು ಕೆಡವಿ ತಂದರು. ಬ್ರಿಟಿಷರ ವಿಮಾನಗಳು ಒಟ್ಟಿಂದಿಗೆ ಮುತ್ತಿಗೆ ಹಾಕಿದವು. ಸಿಡಿಮದ್ದುಗಳನ್ನು ಹಾಕಿದ್ದರಿಂದ ಎರಡು ರೈಲ್ವೆ ಸ್ಟೇಷನ್‌ಗಳು ಹಾಳಾದವಲ್ಲದೆ ಕೆಲವು ಸೈನಿಕರೂ ಕೊಲ್ಲಲ್ಪಟ್ಟರು. ಸಭ್ಯ ಪ್ರಜೆಗಳ್ಯಾರೂ ಅದಕ್ಕೆ ಸಿಕ್ಕಲಿಲ್ಲ. ಬ್ರಿಟಿಷರ ಮೂರು ವಿಮಾನಯಂತ್ರಗಳು ತ್ರಿಬ್ರುಗ್ಗೆ ಎಂಬ ನಗರಕ್ಕೆ ಮುತ್ತಿಗೆ ಹಾಕಿದವು. ಆ ಪೈಕಿ ಒಂದು ವಿಮಾನವು ಭೂಮಿಗೆ ಇಳಿದಾಗ ಶತ್ರುಗಳು ಅದನ್ನು ಹಿಡಿದಿಟ್ಟುಕೊಂಡರು.

ಇಪ್ರೆಯ ಸುತ್ತಲೂ ನಮ್ಮ ಕಡೆಯವರು ಮುಂದಕ್ಕೆ ನುಗ್ಗಿಹೋಗಿರುವಂತೆ ಕಾಣುತ್ತದೆ; ಯಾಕೆಂದರೆ ಬೆಲ್ಜಿಯನ್ನರು ಗುಂಪುಗುಂಪಾಗಿ ಆ ನಗರಕ್ಕೆ ಹಿಂತಿರುಗಿ ಹೋಗಿ ಸೇರಿಕೊಳ್ಳುತ್ತಿರುವರು.

ಪೂರ್ವ ಯುದ್ಧಭೂಮಿಯಲ್ಲಿ.

ಪೂರ್ವ ಯುದ್ಧಭೂಮಿಯು ಬಹು ವಿಸ್ತಾರವಾದದ್ದು; ಸೈನ್ಯಗಳು ಬೇರೆ ಬೇರೆ ಕಡೆಗಳಲ್ಲಿ ಚದರಿದಂತೆ ಸೇರಿಕೊಂಡಿರುತ್ತವೆ. ಆದರಿಂದ ಅಲ್ಲಿ ನಡೆಯುವ ಯುದ್ಧಕಾರ್ಯಗಳನ್ನು ಗೊತ್ತುಮಾಡಿ ತಿಳಿಸುವುದು ಬಹಳ ಪ್ರಯಾಸ. ರಷ್ಯಾದವರು ಪೂರ್ವಪ್ರಷ್ಯಾದ ಕೆಲವು ಭಾಗವನ್ನು ಸ್ವಾಧೀನಪಡಿಸಿಕೊಂಡಿರುವಂತೆ ಕಾಣುತ್ತದೆ. ಪೋಲೆಂಡಿನ ಉತ್ತರ ಭಾಗದಲ್ಲಿ ಅವರು ಜರ್ಮನಿಯವರನ್ನು ಅಲ್ಲಿಂದ ಹಿಂದಕ್ಕೆ ತೊರ್ನ್ ಕಡೆಗೆ ಓಡಿಸುತ್ತಿರುವರು. ಮಧ್ಯ ಪ್ರದೇಶದಲ್ಲಿ ರಷ್ಯಾದವರೂ ಜರ್ಮನಿಯವರೂ ಎದುರು ಬದುರಾಗಿ ಕಂದಕಗಳನ್ನು ತೋಡಿಕೊಂಡು ಯುದ್ಧಕ್ಕೆ ಹೊರಡಲು ಸಮಯವನ್ನು ನಿರೀಕ್ಷಿಸುತ್ತಿದಾರೆ. ಇವರಾಗಲಿ ಅವರಾಗಲಿ ಮುಂದರಿಸಿ ನುಗ್ಗಲು ಸಾಧ್ಯವಾಗದೆಹೋಗಿದೆ. ಪೋಲೆಂಡಿನ ದಕ್ಷಿಣಭಾಗದಲ್ಲೂ ಇದೇ ರೀತಿಯಾಗಿರುವುದು. ಆಸ್ಟ್ರಿಯಾದವರು ಅನೇಕ ಹೊಸ ಸೈನ್ಯಗಳನ್ನು ಯುದ್ಧಭೂಮಿಗೆ ತಂದಂತೆ ಕಾಣುವುದು. ರಷ್ಯಾದವರು ಕೂಡ ಅವರನ್ನು ಸೋಲಿಸಿ ಹಿಂದಕ್ಕೆ ಓಡಿಸಬೇಕೆಂದು ಅಪಾರವಾದ ಸೈನ್ಯಗಳನ್ನು ಕೂಡಿಸಿದಾರೆ. ಹವಾಸ್ಥಿತಿಯು ಈ ಪ್ರಾಂತ್ಯದಲ್ಲೂ ಯುದ್ಧಕಾರ್ಯಗಳಿಗೆ ಅಡಚಣೆಯನ್ನು ಕಲ್ಪಿಸಿರುತ್ತದೆ.

ರಷ್ಯಾದವರು ಆಸ್ಟ್ರಿಯಾದ ಪೂರ್ವದಿಗ್ಭಾಗದೊಳಕ್ಕೆ ನುಗ್ಗಿ ಹೋಗುತ್ತಲೇ ಇದಾರೆ. ಈಗ ಅವರು ಹಂಗೆರಿ ಆಧಿಪತ್ಯದೊಳಕ್ಕೆ ನುಗ್ಗಿ ಬಂದಿರುವರು.

ಸೆರ್ಬಿಯಾದಲ್ಲಿ.

ಸೆರ್ಬಿಯಾದಲ್ಲಿ ಆಸ್ಟ್ರಿಯಾದವರು ಕದನಗಳನ್ನು ನಡಿಸಿದ್ದೇನೂ ವರ್ತಮಾನವಿಲ್ಲ. ಆದರೆ ಆಸ್ಟ್ರಿಯಾದವರು ಹೊಸದಾಗಿ 4,00,000 ಸೈನ್ಯವನ್ನು ಜೊತೆಮಾಡುತ್ತಿದಾರೆಂದೂ, ಆ ಪೈಕಿ 80,000 ದಷ್ಟು ಜರ್ಮನಿಯವರೆಂದೂ, ಇವರೆಲ್ಲಾ ಒಟ್ಟಿಗೆ ನುಗ್ಗಿ ಹೋಗಿ ಸೆರ್ಬಿಯಾವನ್ನು ಆಕ್ರಮಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿದಾರೆಂದೂ ಸಮಾಚಾರವಿದೆ. ಈ ಸಣ್ಣ ರಾಜ್ಯವು ಅತ್ಯಂತ ಪರಾಕ್ರಮದಿಂದ ಯುದ್ಧಮಾಡಿರುವುದು ಈಗ ಸೆರ್ಬಿಯಾದವರಿಗೆ ಶತ್ರುವನ್ನು ಸೋಲಿಸಿ ಓಡಿಸುವುದು ಸ್ವಲ್ಪ ಕಷ್ಟಕರವಾಗಿರುವಂತೆ ಕಂಡುಬಂದರೂ ಅವರು ಕಡೆಯ ತನಕ ಆಸ್ಟ್ರಿಯಾದವರಿಗೆ ಸಗ್ಗದೆ ಅವರನ್ನು ಹಿಮ್ಮೆಟ್ಟಿಸ್ಯಾರೆಂದು ನಿರೀಕ್ಷಿಸಲ್ಪಟ್ಟಿದೆ.

ಟರ್ಕಿ.

ಟರ್ಕಿಯವರು ಅರ್ಮೇನಿಯಾದಲ್ಲಿ ರಷ್ಯಾದವರ ಕೈಲಿ ಸೋತುಹೋದದ್ದರಲ್ಲಿ ಅವರಿಗೆ ತುಂಬಾ ನಷ್ಟವಾಗಿರಬೇಕು. ಈಚೆಗೆ ಟರ್ಕಿಯವರ 11 ನೇ ಸೈನ್ಯವೂ ಕೂಡ ರಷ್ಯಾದವರಿಂದ ಸಂಪೂರ್ಣವಾಗಿ ಸೋಲಿಸಲ್ಪಟ್ಟಿತೆಂದು ತಿಳಿಯಲಾಗಿದೆ. ಅಲ್ಲಿಯೂ ಹವಾಸ್ಥಿತಿಯು ಯುದ್ಧಕಾರ್ಯಗಳಿಗೆ ಅಡ್ಡಿಯಾಗಿದೆ. ಯುದ್ಧನಡಿಯುತ್ತಿರುವಾಗಲೇ ಮೂರು ದಿನಗಳ ತನಕ ಹಿಮಗಡ್ಡೆಗಳು ಮಳೆಯೋಪಾದಿಯಲ್ಲಿ ಸುರಿಯುತ್ತಿದ್ದವು.

ಟರ್ಕಿಯವರು ಪರ್ಷಿಯಾದೊಳಕ್ಕೆ ನುಗ್ಗಿಬಂದು ಟೇಬ್ರಿಸ್ ನಗರವನ್ನು ಸ್ವಾಧೀನಪಡಿಸಿಕೊಂಡಿದಾರೆ. ಅವರು ಅಲ್ಲಿದ್ದ ಪರ್ಷಿಯಾದ ಇಬ್ಬರು ಗವರ್ನರುಗಳನ್ನು ಕೊಂದುಬಿಟ್ಟರೆಂದು ಹೇಳಲಾಗಿದೆ. ಮುಸಲ್ಮಾನರೇ ಮುಸಲ್ಮಾನರ ರಾಜ್ಯದ ಮೇಲೆ ನುಗ್ಗಿ ಒಬ್ಬರನ್ನೊಬ್ಬರು ಕೊಂದುಹಾಕಿದರೆ ಇದನ್ನು ಜೆಹಾದ್ ಎಂದು ಹೇಳಲಾದೀತೇ? ರಷ್ಯಾದವರು ಹೋಗಿ ಪರ್ಷಿಯಾದವರಿಗೆ ಬೆಂಬಲವಾಗಿ ನಿಲ್ಲುವರು; ಮತ್ತು ಅವರೇ ಟರ್ಕಿಯವರನ್ನು ಅಲ್ಲಿಂದ ಓಡಿಸುವರು.

ಸಿರಿಯಾದಲ್ಲಿ ಅಲೆಕ್ಸಾಂಡ್ರೆಟ್ಟಾ ನಗರದ ಬಳಿ ನಮ್ಮ ಕಡೆಯವರ ಒಂದು ಯುದ್ಧದ ಜಹಜು ಹೋಗಿ ರೈಲ್ವೆಯ ಮೇಲೆ ಗುಂಡುಗಳನ್ನು ಹಾಕಿ ಹಾಳುಮಾಡಿತೆಂದು ಕೆಲವು ವರ್ತಮಾನ ಪತ್ರಿಕೆಗಳು ಹೇಳುತ್ತವೆ. ಆ ಜಹಜಿನವರು ನಮ್ಮವರ ಸೈನಿಕರ ಪೈಕಿ ಕೈಸೆರೆ ಹಿಡಿಯಲ್ಪಟ್ಟಿದ್ದವರನ್ನು ಬಂಧನದಿಂದ ಬಿಡಿಸಿಕೊಂಡದ್ದಲ್ಲದೆ ಯುದ್ಧದ ಸಾಮಗ್ರಿಗಳನ್ನೆಲ್ಲಾ ಹಾಳುಮಾಡಿಬಿಟ್ಟರು.

ಪಾಲಸ್ತೀನ್ ದಕ್ಷಿಣ ಪ್ರಾಂತ್ಯದಲ್ಲಿ ಟರ್ಕಿಯವರು ಒಂದು ದೊಡ್ಡ ಸೈನ್ಯವನ್ನು ಕೂಡಿಸಿಕೊಳ್ಳುತ್ತಿದಾರೆಂದೂ, ಈ ಸೈನ್ಯದಿಂದ ಅವರು ಈಜಿಪ್ಟಿಗೆ ಮುತ್ತಿಗೆ ಹಾಕುತ್ತಾರೆಂದೂ ಹೇಳಲಾಗಿದೆ. ಆದರೆ ಅವರ ಹುದ್ದೇದಾರರಿಗೆ ತಮ್ಮ ಸೈನಿಕರು ತಮ್ಮ ಮೇಲೆಯೇ ತಿರುಗಿ ಬೀಳುತ್ತಾರೆಂಬ ಭೀತಿಯುಂಟಾಗಿದೆ. ಅಲ್ಲಿರುವ ಮರಳುಕಾಡನ್ನು ದಾಟಿಕೊಂಡು ಟರ್ಕಿ ಸೈನಿಕರು ಈಜಿಪ್ಟಿಗೆ ಬರುವುದೇ ಪ್ರಯಾಸ; ಒಂದು ವೇಳೆ ಬಂದರೂ ಅವರನ್ನು ಎದುರಿಸಿ ನಾಶಪಡಿಸುವುದಕ್ಕೆ ಇಂಗ್ಲಿಷರು ಈಜಿಪ್ಟಿನಲ್ಲಿ ಬಹು ಬಲವಾದ ದಂಡನ್ನು ಇಟ್ಟುಕೊಂಡಿದಾರೆ. ಈ ವಿಷಯದಲ್ಲಿ ನಡೆಯುವ ಕಾರ್ಯಗಳೊಂದೂ ಇನ್ನು ಕೆಲವು ವಾರಗಳ ತನಕ ನಮಗೆ ತಿಳಿದುಬರಲಾರದೆಂದು ಊಹಿಸುತ್ತೇವೆ.

ಸಿರಿಯಾಕ್ಕೆ ಸೇರಿದ ಅದಾನಾ ಎಂಬಲ್ಲಿ ಟರ್ಕಿಯವರು ಬ್ರಿಟಿಷ್ ಇಂಡಿಯಾ ಪ್ರಜೆಗಳಾದ ಹದಿನೆಂಟು ಮಂದಿ ಮಹಮದೀಯರನ್ನು ಕೈಸೆರೆ ಹಿಡಿದಿಟ್ಟುಕೊಂಡಿದಾರೆಂದು ಹೇಳಲಾಗಿದೆ. ಅವರನ್ನು ಟರ್ಕಿ ಸೈನ್ಯಕ್ಕೆ ಸೇರಿಕೊಂಡರೆ ಆಗಬಹುದೆಂದು ಪುಸಲಾಯಿಸಿದ ಹಾಗೂ, ಆದರೆ ಅವರು ಅದಕ್ಕೆ ಒಪ್ಪದೆ ಹೋದರೆಂದೂ ತಿಳಿದುಬರುತ್ತದೆ.

ರಷ್ಯಾದವರ ಯುದ್ಧದ ಜಹಜುಗಳು ಕಪ್ಪುಕಡಲಿನಲ್ಲಿ ಸಂಚರಿಸುವ ಹಲವು ಟರ್ಕಿ ಹಡಗುಗಳನ್ನು ಮುಳುಗಿಸಿರುತ್ತವೆ. ಒಂದು ತಂತೀವರ್ತಮಾನವು ಈ ಹಡಗುಗಳು 80 ಎಂದು ಹೇಳುವುದು. ಅವು ಅನ್ನೂರಿಂದನ್ನು ಮುಳುಗಿಸಿರುವುದು ಅನುಮಾನವೆಂದು ಊಹಿಸುತ್ತೇವೆ. ಮುಳುಗಿಹೋದ ಹಡಗುಗಳಲ್ಲಿ ಟರ್ಕಿ ಸೈನಿಕರು ಇದ್ದರೆಂದು ಹೇಳಲಾಗಿದೆ. ಇದಲ್ಲದೆ ಕಪ್ಪುಕಡಲಿನಲ್ಲಿರುವ ರೀಸೆ ಎಂಬ ತೀರಪಟ್ಟಣದೊಳಗೆ ಟರ್ಕಿ ನಾವಿಕರಿಗೆ ಸಹಾಯಕವಾದ ಒಂದು ದೊಡ್ಡ ಕಟ್ಟಡವನ್ನು (ಲೈಟ್‌ಹೌಸ್) ರಷ್ಯಾದವರ ಹಡಗುಗಳು ಗುಂಡು ಹೊಡೆದು ಹಾಳುಮಾಡಿರುತ್ತವೆ.

ಆಫ್ರಿಕಾದಲ್ಲಿ.

ಆಫ್ರಿಕಾದಲ್ಲಿ ಯುದ್ಧಕಾರ್ಯಗಳು ವಿಶೇಷವಾಗಿ ನಡೆದಿಲ್ಲ. ದಕ್ಷಿಣ ಆಫ್ರಿಕದಲ್ಲಿ ನಡೆದ ದಂಗೆಯ ವಿಚಾರವಾದ ಸುದ್ದಿಯೇನೂ ಬಂದಿಲ್ಲ. ದಂಗೆಯೆಲ್ಲಾ ಸಂಪೂರ್ಣವಾಗಿ ಅಣಗಿಸಲ್ಪಟ್ಟಿರಬೇಕೆಂದು ನಿರೀಕ್ಷಿಸುತ್ತೇವೆ.

ಜರ್ಮನಿಯವರಿಗೆ ಸೇರಿದ ದಕ್ಷಿಣ-ಪಶ್ಚಿಮ ಆಫ್ರಿಕದ ಪಶ್ಚಿಮಸಮುದ್ರತೀರದಲ್ಲಿ ವಾಲ್‌ಫಿಷ್ ಕೊಲ್ಲಿಯಿಂದ ಇಂಗ್ಲಿಷರು ಮುಂದೆ ನುಗ್ಗಿಹೋಗಿ ಸ್ವಾಕೋಪ್‌ಮುಂಡ್ ಎಂಬುವದನ್ನು ಸ್ವಾಧೀನಪಡಿಸಿಕೊಂಡಿದಾರೆ.

ಇತರ ವಿಷಯಗಳು.

ಜರ್ಮನಿಯವರು ಅವರ ಕಡೆ ನಷ್ಟವಾದ ಸೈನಿಕರ ಸಂಖ್ಯೆಯನ್ನು ತಿಳಿಸುವ 136 ನೇ ಪಟ್ಟಿಯನ್ನು ಪ್ರಕಟಿಸಿದಾರೆ. ಈ ಪಟ್ಟಿಯಿಂದ ಪ್ರಷ್ಯಾ ಸೈನಿಕರಲ್ಲಿ ಕೊಲೆಯಾದವರೂ, ಗಾಯಪಟ್ಟವರೂ, ಕೈಸೆರೆ ಹಿಡಿಯಲ್ಪಟ್ಟವರೂ ಒಟ್ಟು 8,77,107 ಮಂದಿ ಎಂದು ತಿಳಿದುಬಂದಿದೆ. ಈ ಸಂಖ್ಯೆಗೆ ಜರ್ಮನಿಯ ಇತರ ಅಧಿಪತ್ಯಗಳ ಸೈನ್ಯದ ನಷ್ಟವನ್ನೂ ಕೂಡಿಸಿದರೆ ಇದು ವರೆಗೆ ಅವರ ಕಡೆಯಲ್ಲಿ ಒಟ್ಟು 22,50,000 ಸೈನ್ಯಗಳು ನಷ್ಟವಾಗಿರುತ್ತವೆ.

ಬ್ಯಾರನ್ ವಾನ್ ಓಪನ್ಹೈಮ್ ಎಂಬೊಬ್ಬ ಜರ್ಮನಿ ದಳಪತಿಯು ಯುದ್ಧಭೂಮಿಯಲ್ಲಿ ಕೊಲೆಯಾದನೆಂದು ಹೇಳಲಾಗಿದೆ.

ಜರ್ಮನಿ ಚಕ್ರವರ್ತಿಯವರ ಕುಮಾರನಾದ ಪ್ರಿನ್ಸ್ ಜೋಚಿಮ್ ಎಂಬಾತನಿಗೆ ಸೆಪ್ಟಂಬರ್ ತಿಂಗಳಲ್ಲಿ ಯುದ್ಧಭೂಮಿಯಲ್ಲಿ ಗಾಯವಾಗಿತ್ತು. ಈಚೆಗೆ ಆತನಿಗೆ ಆಮಶಂಕೆಯೂ, ಇನ್ಫ್ಲುಯೆಂಜಾ ಜ್ವರವೂ ಪ್ರತ್ಯೇಕವಾಗಿ ವ್ಯಾಪಿಸಿ, ಈಗೀಗ ವಾಸಿಯಾಗುತ್ತಿದೆಯೆಂದೂ ತಿಳಿದು ಬಂದಿದೆ.

ಜರ್ಮನಿಯ ಜನರಲ್ ವಾನ್ ಫಾಲ್ಕೆನ್‌ಹೈನ್ ಎಂಬ ದಳಪತಿಯ ಕುಮಾರನನ್ನು ನಾವು ಕಳೆದ ವಾರ ಹೇಳಿದಂತೆ ವಿಮಾನಕಾರನು ಕೊಂದುಹಾಕಲಿಲ್ಲ. ಆದರೆ ಲೆಫ್ಟಿನೆಂಟ್ ಫಾರ್ಕ್ ಸ್ಟೀನ್ ಎಂಬ ಹುದ್ದೇದಾರನು ಕೊಲೆಯಾದನೆಂದು ವರ್ತಮಾನ ಬಂದಿದೆ.

187 ಮಂದಿ ಬ್ರಿಟಿಷ್ ಸಿಪಾಯಿಗಳು ಯುದ್ಧಭೂಮಿಯಲ್ಲಿ ಪರಾಕ್ರಮವನ್ನು ತೋರಿಸಿದ್ದಕ್ಕಾಗಿ ಅವರಿಗೆಲ್ಲಾ ಬಿರುದುಗಳು ಕೊಡಲ್ಪಟ್ಟವು. ಮತ್ತು ಅವರ ಪ್ರಖ್ಯಾತವಾದ ಕಾರ್ಯಗಳಿಗಾಗಿ ಅವರಿಗೆ ಮೆಡಲುಗಳು ದೊರಕಿದವು.

ಬ್ರಿಟಿಷರಲ್ಲಿ ಬಹಳ ಪ್ರಖ್ಯಾತವಾದ ವಂಶಗಳಿಗೆ ಸೇರಿದ 180 ಮಂದಿ ಪಿಯರುಗಳೆಂಬ ದೊಡ್ಡ ಮನುಷ್ಯರು ತಮ್ಮ ದೇಶದ ಸಂರಕ್ಷಣೆಗಾಗಿ ಯುದ್ಧಭೂಮಿಗೆ ಹೋಗಿ ಶತ್ರುವಿನ ಮೇಲೆ ಕಡಿದಾಡುತ್ತಿದಾರೆ.

ಬ್ರಿಟಿಷ್ ಹಡಗುಗಳಿಗೆ ಇಂಗ್ಲೆಂಡಿನ ತೀರಗಳಲ್ಲಿ ಅಪಾರವಾದ ಬಿರುಗಾಳಿಗಳು ಬಡಿದು ವಿಶೇಷ ನಷ್ಟಸಂಭವಿಸಿರುತ್ತದೆ. ಒಂದು ಸಣ್ಣ ಯುದ್ಧದ ಜಹಜು ಮುಳುಗಿ ಹೋಗಿ 12 ಮಂದಿ ಮೃತಪಟ್ಟರು. ಇಂಗ್ಲಿಷರ ಎರಡು ವ್ಯಾಪಾರದ ಹಡಗುಗಳು ಪೂರ್ವ ಸಮುದ್ರ ತೀರದಲ್ಲಿ ಒಡೆದು ಹೋದವು. ಅವೆರಡರಲ್ಲೂ ಇದ್ದ 41 ಜನರು ಸಮುದ್ರದ ಪಾಲಾದರು.

ಜರ್ಮನಿಯವರ ಐದು ವ್ಯಾಪಾರದ ಹಡಗುಗಳು ಬಾಲ್ಟಿಕ್ ಕಡಲಿನಲ್ಲಿ ಜರ್ಮನಿಯವರೇ ಹಾಕಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಬಡಿದು ಮುಳುಗಿಹೋದವು.

ಫ್ರೆಂಚರ ಸಬ್‌ಮೆರೀನ್ ಎಂಬೊಂದು ಹಡಗು ಟರ್ಕಿಗೆ ಸೇರಿದ ಡಾರ್ಡನೆಲ್ಸ್ ಪಟ್ಟಣದ ಬಳಿ ಮುಳುಗಿಹೋಯಿತು. ಅದರೊಳಗಿದ್ದವರ ಪೈಕಿ 10 ಮಂದಿ ಬದುಕಿ ಬಂದರು.

ಅಂತ್ವರ್ಪಿನ ಬಳಿ ಷೆಲ್ಟ್ ನದಿಯೊಳಗೆ ಡಚ್ಚರ ಒಂದು ಹಡಗು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಹಾಳಾಯಿತು.

ಇಟಲಿಯವರೂ ರೊಮ್ಯಾನಿಯಾದವರೂ ನಮ್ಮ ಪಕ್ಷವನ್ನು ವಹಿಸಿ ಜರ್ಮನಿಯವರ ಮೇಲೆ ಯುದ್ಧಕ್ಕೆ ಹೊರಡುವವರಾಗಿದಾರೆಂಬ ಸುದ್ದಿ ಹುಟ್ಟಿದೆ. ಆದರೆ ಇದು ಎಷ್ಟು ಮಟ್ಟಿಗೆ ನಿಜವೋ ಹೇಳಲಾಗದು.

ಬಾಲ್ಕನ್ ಸಂಸ್ಥಾನಗಳಲ್ಲಿ ಪರಸ್ಪರವಾದ ಸ್ನೇಹಭಾವವು ಉಂಟಾಗಿರುವಂತೆ ಕಾಣುತ್ತದೆ. ಆದರೆ ಆ ಸಂಸ್ಥಾನಗಳೆಲ್ಲಾ ಏಕವಾಗಿ ಕಾರ್ಯನಡಿಸುವವೆಂದು ಹೇಳುವುದು ಸಂಶಯಾಸ್ಪದವಾಗಿದೆ. ಆ ಸಂಸ್ಥಾನಗಳು ಒಂದಾಗಿ ಟರ್ಕಿಯ ಮೇಲೆ ಯುದ್ಧಕ್ಕೆ ಹೊರಟ ಪಕ್ಷದಲ್ಲಿ ಯೂರೋಪಿನಲ್ಲಿರುವ ಟರ್ಕಿಗೆ ಜಯದ ಮುಖವೇ ಉಂಟಾಗದು. ಈಗಲೇ ಟರ್ಕಿಯವರು ಆಡ್ರಿಯಾನೋಪಲ್‌ನಿಂದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರಸಿಕೊಂಡುಬಿಟ್ಟರೆಂದು ಸಮಾಚಾರ ಬಂದಿದೆ.

ಯುದ್ಧವು ಪ್ರಾರಂಭವಾದಲಾಗಾಯಿತು ರಷ್ಯಾದವರು ಶತ್ರುಕಡೆಯವರನ್ನು ಕೀಫ್ ನಗರಕ್ಕೆ ಹಿಡಿದುಕೊಂಡು ಹೋಗಿರುವುದು ಎಷ್ಟೆಂದರೆ—ಫಿರಂಗಿಗಳು 54, ಮೆಷೀನ್ ಫಿರಂಗಿಗಳು 120, ಮದ್ದುಗುಂಡಿನ ವಾಗನ್ ಬಂಡಿಗಳು 950, ಬಂದೂಕುಗಳು 1,32,000, ವಿಮಾನ ಯಂತ್ರಗಳು 9; ದಳಪತಿಗಳು 19 ಮಂದಿ, ಹುದ್ದೇದಾರರು 5,300, ಸಿಪಾಯಿಗಳು 1,94,681 ಮಂದಿ.

ಫ್ರಾನ್ಸಿನಲ್ಲಿರುವ ಬ್ರಿಟಿಷ್ ಸೈನಿಕರಲ್ಲಿ 212 ಮಂದಿಗೆ ಮಾತ್ರ ಇದುವರೆಗೆ ವಿಷಮಶೀತಜ್ವರ ಪ್ರಾಪ್ತವಾಯಿತು. ಈ ಜ್ವರವು ಹರಡದಂತೆ ವೈದ್ಯರು ಸೈನಿಕರಿಗೆ ಒಂದು ತರಹ ಹಾಲನ್ನು ತಯಾರುಮಾಡಿ ಇನಾಕ್ಯುಲೇಷನ್ ಮಾಡುತ್ತಿದಾರೆ. ಇದರ ಫಲಿತಾಂಶವು ಮಹದಾಶ್ಚರ್ಯಕರವಾಗಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಶ್ರೀಮನ್ ಮಹಾರಾಜರವರು ಕಳೆದ ವಾರ ರಾಜಧಾನಿಗೆ ದಯಮಾಡಿ ಒಂದು ದಿನ ಇದ್ದು ನೀಲಗಿರಿಗೆ ಚಿತ್ತೈಸಿದರು.

ಶಿವಮೊಗ್ಗೆಯಲ್ಲಿರುವ ರೆವ್. ಎ. ಇ. ಪೈಟಂಗೇಲ್ ಸಾಹೇಬರು ಸೀಮೆಗೆ ಹೋಗುವರು. ಅವರ ಸ್ಥಾನಕ್ಕೆ ರೆವ್. ಆರ್. ಡಬ್ಲ್ಯು. ಬೂಟ್ ರವರು ಹೋಗುತ್ತಾರೆ. ಸೀಮೆಯಿಂದ ಬರುವ ರೆವ್. ಎಚ್. ಸ್ಪೆನ್ಸರ್ ಸಾಹೇಬರು ಮೈಸೂರು ವೆಸ್ಲಿಯನ್ ಹೈ ಸ್ಕೂಲ್ ಪ್ರಿನ್ಸಿಪಲ್‌ರಾಗುವರು.

ದೊಡ್ಡಬಳ್ಳಾಪುರದ ಕೋಆಪರೆಟಿವ್ ಸೊಸೈಟಿಯ ಜನರಲ್ ಮೀಟಿಂಗು ನಾಳೆ ಶನಿವಾರ ಮಧ್ಯಾಹ್ನ ಅಲ್ಲಿನ ಹಳೇ ತಾಲ್ಲೂಕ್ ಕಛೇರಿಯಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಉತ್ತರಾದಿ ಮಠದ ಶ್ರೀ ಸ್ವಾಮಿಗಳವರು ಕಳೆದ ಶನಿವಾರ ಬೆಂಗಳೂರಿಗೆ ದಯಮಾಡಿ ಪೂರ್ಣಪ್ರಜ್ಞಸಾದದಲ್ಲಿ ಬಿಡಾರಮಾಡಿದಾರೆ. ಬೆಂಗಳೂರಲ್ಲಿರುವ ಮಾಧ್ವಶಿರೋಮಣಿಗಳು ಸ್ವಾಮಿಗಳನ್ನು ಸತ್ಕಾರಮಾಡುತ್ತಿರುವರು.

ಬೆಂಗಳೂರು ಏರಿಷ್ ಪ್ರೆಸ್ಸಿನ ಪ್ರೊಪ್ರೈಟರವರು ಎರಡು ತರಹಾ ರಾಯಿನಲ್ಲಿ ಮೂರು ಚಿತ್ರಗಳುಳ್ಳ ಮುದ್ದಾದ ಕ್ಯಾಲೆಂಡರನ್ನು ಮುದ್ರಿಸಿ ನಮಗೊಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಬೊಂಬಾಯಿನ ಬಾಟ್ಲಿವಾಲಾ ಕಂಪನಿಯ ಕ್ಯಾಲೆಂಡರೂ ನಮಗೆ ತಲಪಿದೆ. ಇವುಗಳನ್ನು ವಂದನಾ ಪೂರ್ವಕವಾಗಿ ಸ್ವೀಕರಿಸುವೆವು.

ಕಳೆದ ತಾ. 16 ನೇ ಶನಿವಾರ ಕೋಲಾರ್ ಚಿನ್ನದ ಗಣಿಗಳ ಕಂಪನಿಯವರು ಕಿಂಗ್ ಜಾರ್ಜ್ ಹಾಲ್ ಎಂಬ ಕಟ್ಟಡವನ್ನು ನೇತ್ರಾನಂದಕರವಾಗಿ ಕಟ್ಟಿಸಿ ಅದನ್ನು ಪ್ರತಿಷ್ಠೆಮಾಡಿಸಿದರು. ಇದು 1911 ನೇ ಡಿಸೆಂಬರ್ ತಾ. 12 ರಲ್ಲಿ ದೆಹಲಿಯಲ್ಲಿ ನಡೆದ ಕಿರೀಟಧಾರಣೆ ಮಹೋತ್ಸವದ ಜ್ಞಾಪಕಾರ್ಥವಾದ ಕಟ್ಟಡವಾಗಿದೆ.

ಮದ್ದಗಿರಿ ತಾಲ್ಲೂಕು ಬಡವನಹಳ್ಳಿಯಲ್ಲಿ ಮಿ|| ಖಾಸಿಂ ಖಾನ್ ಸಾಹೇಬರು ತಮಗೆ ಪುತ್ರೋತ್ಸವವಾದ ಸಂತೋಷಕ್ಕಾಗಿ ಆ ಗ್ರಾಮಸ್ಥರನ್ನೂ ಸುತ್ತುಮುತ್ತಿನ ಗ್ರಾಮಸ್ಥರನ್ನೂ ಕರಿಸಿಕೊಂಡು ಮಂಟಪವನ್ನು ಕಟ್ಟಿ ಸಂಗೀತ ಮೊದಲಾದ್ದನ್ನು ಮಾಡಿಸಿ ಸಕ್ಕರೆ ಹೂ ಗಂಧಗಳನ್ನು ಹಂಚಿ ಸಂತೋಷಪಡಿಸಿದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಒಬ್ಬ ಬಾತ್ಮಿದಾರರಿಂದ.—ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಗುಂಬೆ ಜಾತ್ರೆಯಲ್ಲಿ ಮಾರಾಮಾರಿ ನಡೆಯಿತು. ಜಾತ್ರೆ ಮೂರನೇ ದಿವಸ ತಾ 23 ರಲ್ಲಿ ಕನ್ನಡಾ ಜಿಲ್ಲಾದಿಂದ ಬಂದ ಕರಾಜಿ ಹೊರೇರಿಗೂ 3 ಎಲೆ ಆಟದವರಿಗೂ ಜಗಳವಾಗಿ ಕಡೆಗೆ ಪೋಲೀಸ್ ಸಿಬ್ಬಂದಿಯವರು ಬಂದು ಬಹಳ ಏಟುಗಳು ಆಗಿ 2-3 ಜನಗಳಿಗೆ ಘೋರಾ ಗಾಯಗಳಾಗಿದೆ. ಇದರಲ್ಲಿ 3 ಕರಾಜಿಗಳಿಗೂ, ಒಬ್ಬ ಪೋಲೀಸಿನವರಿಗೂ ಮಾತ್ರ ಏಟು ಜಾಸ್ತಿ ಆಗಿದೆ. ಅಷ್ಟರಲ್ಲಿ ದೂರದಲ್ಲಿದ್ದ ದಫೇದಾರರು ಬರುವಲ್ಲಿ ಜಗಳವು ದಿಕ್ಕಾಪಾಲಾಗಿ ಓಡಿಹೋಗಿರುವದು. ತನಿಖೆಯು ನಡೆಯುತ್ತಾ ಇದೆ.

ಒಬ್ಬ ಬಾತ್ಮಿದಾರರು ಬರೆಯುವುದು.—ಹುಣಸೂರು ತಾಲ್ಲೂಕು ಬಿಳಿಕೆರೆಯಿಂದ ಬೆಂಕಿಪುರ, ನದ್ರಗುಡಿ, ಕೆರೆಮುದ್ದನಹಳ್ಳಿ ಪ್ರಾಂತ್ಯ ಹಳ್ಳಿಗಳಿಗೆ ಹೋಗತಕ್ಕ ದಾರಿಯಲ್ಲಿ ಹಳ್ಳಿಕೆರೆ ಹತ್ತಿರ ಬಸವನಕಟ್ಟೆನ ದಾರಿಯಲ್ಲಿ ತಾ. 16 ನೇ ಶನಿವಾರ ಬಿಳಿಕೆರೆ ಸಂತೆಗೆ ಹೋಗಿ ಬರತಕ್ಕ ದಾರಿಗರಶೆಟ್ಟನನ್ನು ಯಾರೋ ದುರಾತ್ಮರು ಚೆನ್ನಾಗಿ ಹೊಡೆದು ಅವನಲ್ಲಿದ್ದ 20 ರೂಪಾಯಿನ ರೇಷ್ಮೆ ವಸ್ತ್ರ, 10 ರೂಪಾಯಿನ ಪೇಟಾ, ಅವನ ಕತ್ತಿನಲ್ಲಿದ್ದ ಲಿಂಗದ ಕಾಯಿ, 20 ರೂಪಾಯಿನ ನೋಟು, ಇವುಗಳನ್ನು ಅಪಹರಿಸಿಕೊಂಡು ಹೋದರು. ಆದರೆ ದೇವರ ದಯದಿಂದ ಪ್ರಾಣಹಾನಿಯೇನೂ ಆಗಲಿಲ್ಲ. ಈ ದಾರಿಯಲ್ಲಿ ತಿರುಗಾಡತಕ್ಕವರೆಲ್ಲರೂ ಎಚ್ಚರಿಕೆಯಿಂದರಬೇಕಾಗಿ ಕೋರಿಕೆ.

ರಾಜಧಾನಿಯ ಗವರ್ನ್‌ಮೆಂಟ್ ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿಗಳೂ ಉಪಾಧ್ಯಾಯರುಗಳೂ ಪ್ರಿನ್ಸಿಪಲ್‌ರಾಗಿದ್ದು ವರ್ಗವಾದ ಮ|| ಡಿ ವೆಂಕಟರಾಮಯ್ಯನವರಿಗಾಗಿ ಕಳೆದ ಶನಿವಾರ ಒಂದು ಸಂತೋಷ ಕೂಟವನ್ನು ನಡಿಸಿ ನಾನಾ ಬಗೆಯ ವಿನೋದಗಳನ್ನು ಕಲ್ಪಿಸಿ ಅಡ್ರೆಸ್ಸನ್ನು ಒಪ್ಪಿಸಿ ಅವರಲ್ಲಿ ತಮಗಿರುವ ಭಕ್ತಿಪ್ರೀತಿಗಳನ್ನು ಪ್ರಕಾಶಪಡಿಸಿದರು. ಮ|| ಡಿ. ವೆಂಕಟರಾಮಯ್ಯನವರು ಸಂತೋಷಪಟ್ಟು ಅವರನ್ನು ಕೃತಜ್ಞತಾ ಪೂರ್ವಕವಾಗಿ ವಂದನೆಮಾಡಿದ್ದಲ್ಲದೆ ವಿದ್ಯಾರ್ಥಿಗಳಿಗೆ ಕೆಲವು ಹಿತೋಕ್ತಿಗಳನ್ನು ಹೇಳಿದರು. ಮ|| ವೆಂಕಟರಾಮಯ್ಯನವರು ಟ್ರೈನಿಂಗ್ ಕಾಲೇಜನ್ನು ದಕ್ಷವಿಟ್ಟು ಕಟ್ಟುನಿಟ್ಟಾಗಿಯೂ ಪ್ರೀತಿಯಿಂದಲೂ ನಡಿಸಿದ್ದರಿಂದ ಅದು ತುಂಬಾ ಉತ್ತಮ ಸ್ಥಿತಿಗೆ ಬಂದಿತು. ಈಗ ಇವರು ಮಹಾರಾಜಾ ಕಾಲೇಜಿನಲ್ಲಿ ಹೈ ಸ್ಕೂಲ್ ಹೆಡ್ ಮಾಸ್ಟರಾಗಿ ವರ್ಗವಾಗಿರುತ್ತಾರೆ

ಮೈಸೂರು ಗೆಜೆಟ್ ಸಂಗ್ರಹ.

ಜನರಲ್ ಮರ್ಚಂಟ್ ಮ|| ಜನಕೊಂಡ ಎಸ್. ರಾಮರಾಯರು ಚಿತ್ರದುರ್ಗದ ಟವನ್ ಮ್ಯುನಿಸಿಪಲ್ ಕೌನ್ಸಿಲರಾಗಿ ಚುನಾಯಿಸಲ್ಪಟ್ಟಿದಾರೆ.

ಚನ್ನಗಿರಿ ತಾಲ್ಲೂಕು ನಲ್ಲೂರು ಗ್ರಾಮಕ್ಕೆ ದೊಡ್ಡಕೆರೆ, ಅವಿನಮಡು, ಸುಬ್ರಾಯನಕಟ್ಟೆ ಎಂಬೀ ಕೆರೆಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಮುಂದೆ ಹೇಳುವವರನ್ನು ಪಂಚಾಯಿತರನ್ನಾಗಿ ನೇಮಕಮಾಡಿದೆ:—ಮ|| ಗಳಾದ ಹಾಲಪ್ಪನವರು (ಪ್ರೆಸಿಡೆಂಟ್), ಕೃಷ್ಣಾಚಾರ್ರು, ಗೌಡ ಹಾಲಪ್ಪನವರು, ನಾಡಿಗ ಅಜ್ಜಕ್ಕಲು ಒಸಪ್ಪನವರು, ಮೂಡ್ಲಿಗಿರಿಯಪ್ಪನವರು.

ರೆವಿನ್ಯೂ ಕಮಿಷನರ್ ಮ|| ಕೆ. ಎಸ್. ದೊರೆಸಾಮಿ ಅಯ್ಯರವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೆರಡು ವಾರ ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಅ|| ಸರ್ಜನ್ ಮ|| ಎಸ್. ಕೆ. ಹನುಮಂತರಾಯರಿಗೆ ಹದಿನೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಶ್ರೀಮನ್ ಮಹಾರಾಜರವರು ಹಂಗಾಮಿಯಾಗಿ ಡಿವಿಜನ್ ಕಮ್ಯಾಂಡರ್ ಫರ್‌ಜುಲ್ಲಾ ಖಾನ್ ರವರನ್ನು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಕಾಮಂಡಾಂಟರಾಗಿ ನೇಮಕಮಾಡಿರುತ್ತಾರೆ.

ಯಡತೊರೆ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಕಾಲದಲ್ಲಿ ಮ|| ಎಸ್. ಶ್ರೀನಿವಾಸಮೂರ್ತಿಯವರು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಮ|| ಬಿ. ರಾಮಸ್ವಾಮಯ್ಯನವರು ಜನವರಿ ತಾ. 7 ರಲ್ಲಿ ಹಾಸನದ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ಮಿ|| ಪಿ. ಆರ್. ವೆದರಾಲ್ ರವರಿಂದ ವಹಿಸಿಕೊಂಡಿರುತ್ತಾರೆ

ಮೈಸೂರು ಮಹಾರಾಜಾ ಕಾಲೇಜಿನ ಪ್ರೊಫೆಸರ್ ಮ|| ಎನ್. ಎಸ್. ಸುಬ್ಬರಾಯರಿಗೆ ಅರ್ಧ ಸಂಬಳದ ಮೇಲೆ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ತುರುವೆಕೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸೀತಾರಾಮಯ್ಯನವರಿಗೆ ಫೆಬ್ರವರಿ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಿಪ್ಟೂರು ತಾಲ್ಲೂಕು ಅಮಲ್ದಾರರವರು ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸಿರತಕ್ಕದ್ದು.

ಟಿ. ನರಸೀಪುರದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮ|| ಟಿ. ಎ. ಎ. ಈಶ್ವರನ್‌ರವರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘವು.

ಜನವರಿ ತಿಂಗಳ ಮೀಟಿಂಗು.

ಈ ತಿಂಗಳು 10 ನೇ ತಾ. ಭಾನುವಾರ ತಿಂಗಳುಗಟ್ಲೆ ಮೀಟಿಂಗು ನಡೆಯಿತು. ಬಹು ಸ್ವಲ್ಪ ಜನ ಉಪಾಧ್ಯಾಯರುಗಳು ಹಾಜರಿದ್ದರು. ಅನೇಕರು ತಾವು ಹಾಜರಾಗಲು ಅನಾನುಕೂಲವೆಂದು ತಿಳಿಸದೆ ಸುಮ್ಮನೆ ನಿಂತುಬಿಟ್ಟರು. ಇದರಿಂದ ಹಾಜರಾದ ಮೆಂಬರುಗಳಿಗೂ ತೊಂದರೆಯಾದದ್ದಲ್ಲದೆ ಸಂಘದ ಉದ್ದೇಶವು ಸಂಪೂರ್ಣವಾಗಿ ನೆರವೇರುವುದಿಲ್ಲ. ಆದ್ದರಿಂದ ಸಂಘದ ಎಲ್ಲಾ ಮೆಂಬರುಗಳೂ ಗೊತ್ತಾದ ಕಾಲಗಳಲ್ಲಿ ಹಾಜರಾಗಿ ಸಂಘದ ಕಾರ್ಯಗಳನ್ನು ಅತ್ಯಂತ ಉತ್ಸಾಹದಿಂದ ನೆರವೇರಿಸಬೇಕೆಂದು ಕೇಳಿಕೊಂಡಿದೆ.

ಈಗ ಪನ್ನ ಘನತೆಯಿಂದಿದ ಸರ್ಕಾರದವರು ಹೋಬಳಿ ಸ್ಕೂಲ್ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಿ, ಈ ಕ್ಷಾಮಗಾಲದಲ್ಲಿ ಸಹಾಯಮಾಡಿದ್ದರಿಂದ ಸರ್ವರೂ ಬಹಳ ಕೃತಜ್ಞರಾಗಿದಾರೆ. ಉಪಾಧ್ಯಾಯರುಗಳಿಗೆ ಅನ್ನ ವಸ್ತ್ರಗಳಿಗೆ ನೆಮ್ಮದಿಯೂ, ವಾಸಕ್ಕೆ ಒಳ್ಳೇ ಮನೆಯೂ ದೊರೆಯುವುದಾದರೆ ಕೆಲಸಕಾರ್ಯಗಳಿಗೆ ತೊಂದರೆವಾಗಲಾರದು. ಈ ಬಡ ಮಾಸ್ಟರುಗಳ ಕಷ್ಟಗಳನ್ನು ನೋಡಿ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಬಹಳ ಕನಿಕರಪಟ್ಟು ಎಲ್ಲರಿಗೂ ಪ್ರಮೋಷನ್ ದೊರೆಯುವಂತೆ ಶಿಫಾರಸು ಮಾಡಿದ್ದರಿಂದ ವಿದ್ಯಾಭ್ಯಾಸದ ಇಲಾಖೆಯ ಸಮಸ್ತ ನೌಕರರೂ ಮನಃಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸಿರುತ್ತಾರೆ. ಮುಂದಿನ ತಿಂಗಳ ಮೀಟಿಂಗು ಫೆಬ್ರವರಿ 14 ನೇ ತಾ. ಭಾನುವಾರ ನಡೆಯತಕ್ಕದ್ದೆಂದು ನಿಷ್ಕರ್ಷಿಸಿ ಮುಕ್ತಾಯಮಾಡಿದರು.

ವೀರಾ ಬಿಷ್ಟಪ್ಪ, ಜಾಯಿಂಟ್ ಸೆಕ್ರೆಟರಿ.

ಸ್ಕೂಲುಗಳ ವಿಚಾರಗಳು.

ಚಾಮರಾಜನಗರ ತಾಲ್ಲೂಕು ಹರದನಹಳ್ಳಿ.

ಇದು 2,000 ಪ್ರಜೆಗಳುಳ್ಳ ಯೂನಿಯನ್ ಗ್ರಾಮ. ಸ್ಕೂಲಿಗೆ ಹೊಸ ಕಟ್ಟಡ ಆಗಿರುವುದರಿಂದ ಗ್ರಾಮಸ್ಥರು ವಿದ್ಯಾಭಿಮಾನಿಗಳೆನ್ನುವುದಕ್ಕೆ ಸಂಶಯವಿಲ್ಲ. ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಜಿ. ಸುಬ್ಬಣ್ಣನವರು ಇಲ್ಲಿಗೆ ಬಂದಾಗ 30 ಹುಡುಗರಿದ್ದರು. ಈಗ 90 ಮಂದಿ ಇದಾರೆ. ಮ॥ ಲಕ್ಷ್ಮೀಸರಸಿಂಹಾಚಾರ್ರು ಸ್ಕೂಲಿಗೆ ಹೆಚ್ಚು ನಿಗಾಕೊಟ್ಟು ನೋಡಿಕೊಳ್ಳುವದಲ್ಲದೆ ಹೊಸ ಹುಡುಗರನ್ನು ಸೇರಿಸುತ್ತಲಿದಾರೆ. ಹಾಲಿ ಇರುವ ಕಟ್ಟಡವು ಸ್ಕೂಲಿಗೆ ಸಾಲದು. ಇದಕ್ಕಾಗಿ ಸರ್ಕಾರದವರು ಕೊಡಾರದ ಮಾಳದಲ್ಲಿ 3,800 ರೂಪಾಯಿಗೆ ಒಂದು ಹೊಸ ಕಟ್ಟಡ ಕಟ್ಟುತ್ತಾರೆಂಬ ವದಂತಿ ಇದೆ. ಈ ಕಟ್ಟಡವನ್ನು ಬೇಗನೆ ಕಟ್ಟಿಸಿ ಈ ಕೊರತೆಯನ್ನು ಹೋಗಲಾಡಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ. ಮ॥ ಜಿ. ಸುಬ್ಬಣ್ಣನವರು ಸ್ಕೂಲಿನಲ್ಲಿ ಇಂಗ್ಲಿಷ್ ಕ್ಲಾಸನ್ನು ಇಡುವುದಾಗಿ ಹೇಳುವರು. ಇದಕ್ಕೆ ಗ್ರಾಮಸ್ಥರೆಲ್ಲರೂ ಒಟ್ಟಾಗಿ ಶೀಘ್ರದಲ್ಲೇ ತಕ್ಕ ಏರ್ಪಾಡು ಮಾಡುತ್ತಾರೆಂದು ನಂಬಿದೇನೆ. ಇಲ್ಲಿ ಹಿಂದೆ ಗುರ್ರೀ ತಾ ನಿಂದ ಸ್ಥಾಪಿತವಾದ ರೀಡಿಂಗ್ ರೂಂ ಚೆನ್ನಾಗಿ ನಡೆಯುತ್ತದೆ.

ಗ್ರಾಮ ಹಿತೈಷಿ.

ಮಂಜರಾಬಾದು ತಾಲ್ಲೂಕು ಎಸಳೂರುಪೇಟೆ.

ತಾ. 18 ನೇ ಸೋಮವಾರ ಮಧ್ಯಾಹ್ನ 4 ಘಂಟೆಯಲ್ಲಿ ಬಾಯಿಸ್ ಯೂನಿಯನ್ ಫುಟ್‌ಬಾಲ್ ಸಂಘವನ್ನು ಪ್ರಾರಂಭಿಸುವದಕ್ಕೋಸ್ಕರ ಸ್ಕೂಲ್ ಕಟ್ಟಡದಲ್ಲಿ ಮ॥ ಹೆಡ್ ಮಾಸ್ಟರ್ ಕೆ. ಕೇಶವಯ್ಯನವರಿಂದ ಸಭೆಯು ಏರ್ಪಡಿಸಲ್ಪಟ್ಟಿತು. ಡಾಕ್ಟರ್ ದೊರೆಸಾಮಿಪಿಳ್ಳೆಯವರು, ಪೊಲೀಸ್ ಇನ್ಸ್‌ಪೆಕ್ಟರು ಮ॥ ನರಸಿಂಹಾಚಾರ್ಯರು ಮೊದಲಾದ ಆಫೀಸರೂ, ಕೂಬಹಳ್ಳಿ ಮಲ್ಲಶೆಟ್ಟರು, ವೀರಪ್ಪಶೆಟ್ಟರು, ಬಸಪ್ಪಶೆಟ್ಟರು ಮೊದಲಾದ ಪುರಪ್ರಮುಖರನೇಕರೂ ಸಭೆಗೆ ದಯಮಾಡಿದ್ದರು. ಹೆಡ್ ಮಾಸ್ಟರ ಮತ್ತು ಸಭಿಕರ ಪ್ರಾರ್ಥನೆಯಂತೆ ಡಾಕ್ಟರವರು ಅಗ್ರಾಸನವನ್ನು ಅಲಂಕರಿಸಿದರು. ಹೆಡ್ ಮಾಸ್ಟರು ವ್ಯಾಯಾಮ ವಿಚಾರವಾಗಿಯೂ, ಅಗ್ರಾಸನಾಧಿಪತಿಗಳು ಆರೋಗ್ಯ ವಿಚಾರವಾಗಿಯೂ ಉಪನ್ಯಾಸ ಮಾಡಿದರು. ಬಾಲಕ, ಬಾಲಕಿಯರುಗಳಿಂದ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಗಳು ಮಾಡಲ್ಪಟ್ಟವು. ಸರ್ವರಿಗೂ ಅಲ್ಪಾಹಾರ ತಾಂಬೂಲಾದಿಗಳು ವಿನಿಯೋಗವಾದ ನಂತರ ಸರ್ವರೂ ಮೈದಾನಕ್ಕೆ ದಯಮಾಡಿ ಸಭಾಧ್ಯಕ್ಷರಿಂದಲೇ ಫುಟ್‌ಬಾಲ್ ಆಟವು ಪ್ರಾರಂಭಿಸಲ್ಪಟ್ಟಿತು. ಅನಂತರ ಸರ್ವರೂ ಸಂತೋಷ ಮನಸ್ಕರಾಗಿ ಜಯಜಯ ಪುರಸ್ಸರವಾಗಿ ತೆರಳಿದರು. ಈ ಹೆಡ್ ಮಾಸ್ಟರು ಈ ಸ್ಕೂಲಿಗೆ ಬಂದ ಸ್ವಲ್ಪ ದಿವಸಗಳಲ್ಲಾದಾಗ್ಯೂ ಸ್ಕೂಲನ್ನು ಅಭಿವೃದ್ಧಿಗೆ ತಂದು ನಮ್ಮ ಬಾಲಕರಿಗೆ ಪ್ರೋತ್ಸಾಹಪಡಿಸುವುದರ ಮೂಲಕ ವಿದ್ಯಾಭ್ಯಾಸ ಮಾಡಿಸುತ್ತಿರುವುದು ಅತ್ಯಂತ ಸಂತೋಷಪ್ರದವಾಗಿರುತ್ತೆ.

ಪ್ರತ್ಯಕ್ಷದರ್ಶಿ.

ಆನೇಕಲ್ಲು ತಾಲ್ಲೂಕು ಹಾರೋಹಳ್ಳಿ.

ತಾ. 17 ನೇ ಭಾನುವಾರ ಈ ಊರು ಗರ್ಲ್ಸ್ ಸ್ಕೂಲನ್ನು ಬಗೆಬಗೆಯಾಗಿ ಅಲಂಕರಿಸಿದ್ದರು. ಬಹುಮಾನ ವಿನಿಯೋಗದ ಉತ್ಸವಕ್ಕೆ ಬೆಂಗಳೂರು ಡಿಸ್ಟ್ರಿಕ್ಟ್ ಸ್ಕೂಲುಗಳ ಅ॥ ಡೆಪ್ಯುಟಿ ಇನ್ಸ್‌ಪೆಕ್ಟರು ಪ್ರೆಸಿಡೆಂಟರಾಗಿ ದಯಮಾಡಿಸಿದರು. ಪರಸ್ಥಳದಿಂದ ಬಂದಿದ್ದ ದೊಡ್ಡ ಮನುಷ್ಯರುಗಳಿಗೂ ಸಭೆಯ ಪ್ರೆಸಿಡೆಂಟರವರಿಗೂ ವಿಶೇಷ ನಡೆದ ಮೇಲೆ ಮಧ್ಯಾಹ್ನ 2 ಘಂಟೆಗೆ ಸಭೆಯು ಪ್ರಾರಂಭವಾಯಿತು. ಮೊದಲು ಉಪಾಧ್ಯಾಯಸಂಘದ 7 ನೇ ಮೀಟಿಂಗು ನಡೆಸಲ್ಪಟ್ಟಿತು. ಅನಂತರ ಬಾಲಿಕೆಯರು ದೇವರ ಪ್ರಾರ್ಥನಾದಿಗಳನ್ನು ಹಾಡಿದ ಮೇಲೆ ಬಾಲಿಕೆಯರು ಸ್ತ್ರೀ ವಿದ್ಯಾಭ್ಯಾಸ, ನೀತಿ ವಿಷಯಗಳನ್ನು ಕುರಿತು ಸಂಭಾಷಣೆ ಮಾಡಿದರು. ಸಣ್ಣವರು ಕಿಂಡರ್‌ಗಾರ್ಟನ್ ಆಟಗಳನ್ನು ಆಡಿ ತೋರಿಸಿದರು. ಬಳೇ ಚೂರುಗಳಿಂದ ಅಕ್ಷರಗಳನ್ನು ಜೋಡಿಸುವ ಕ್ರಮವನ್ನು ಪ್ರದರ್ಶಿಸಿದರು. ಇವು ನಡೆದ ಮೇಲೆ ಸ್ಕೂಲ್ ರಿಪೋರ್ಟು ಓದಲಾಯಿತು. ಬಳಿಕ ಪ್ರೆಸಿಡೆಂಟರು ಎಲ್ಲಾ ಬಾಲಿಕೆಯರಿಗೂ ಬಹುಮಾನಗಳನ್ನು ಹಂಚಿದ ಮೇಲೆ ಕೊಲ್ಲೇನ್ ಪೇಟೆ ಗೌರ್ನಮೆಂಟ್ ಕನ್ನಡ ಸ್ಕೂಲು ಅ॥ ಮಾಸ್ಟರ್ ಡಿ. ಸುಬ್ಬರಾಯರು ವಿದ್ಯಾವಿಷಯವಾದ ಉಪನ್ಯಾಸವನ್ನು ಬಹಳ ಸ್ವಾರಸ್ಯವಾಗಿ ಮಾಡಿದರು. ಅನಂತರ ಪ್ರೆಸಿಡೆಂಟರವರು ಈ ಸ್ಕೂಲು ಇಷ್ಟು ಶೀಘ್ರದಲ್ಲಿ ಇಷ್ಟರ ಮಟ್ಟಿಗೆ ಅಭಿವೃದ್ಧಿಗೆ ಬಂದದ್ದಕ್ಕೆ ಗ್ರಾಮಸ್ಥರ ಸಹಾಯವೂ ಉಪಾಧ್ಯಾಯರ ಶ್ರಮವೂ ಕಾರಣವೆಂಬದಾಗಿಯೂ, ಉಪಾಧ್ಯಾಯರುಗಳು ಪಟ್ಟ ಕಷ್ಟಕ್ಕೆ ತಕ್ಕ ಫಲವನ್ನು ಇಲಾಖೆಯವರು ಮಾಡದೇ ಇರಲಾರರೆಂಬುವದೇ ಮೊದಲಾಗಿ ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ಚಕ್ರವರ್ತಿಯವರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆ, ಮಂಗಳ, ಇವು ಬಾಲಿಕೆಯರು ಹಾಡಿದ ಮೇಲೆ ಸಭೆಯು ಬರಖಾಸ್ತಾಯಿತು.

ಪುರವಾಸಿ.

ಹಿಂದೂ ದೇಶದ ಏಳಿಗೆಗೆ ಸ್ತ್ರೀವಿದ್ಯಾಭ್ಯಾಸವು ಅವಶ್ಯಕವು.

ದೇಶದ ಏಳಿಗೆಗೆ ಅವಶ್ಯಕವಾದ ಆರೋಗ್ಯ, ವಿದ್ಯಾಭ್ಯಾಸ, ಆಯುಷ್ಯ, ಸತ್ಸಂತಾನ ವೃದ್ಧಿ, ಸಂಸಾರ ಸೌಖ್ಯ, ದಾಂಪತ್ಯಾನುಕೂಲ ಮೊದಲಾದವುಗಳೆಲ್ಲಕ್ಕೂ ಸರಿಯಾದ ವಿವಾಹವು ಕಳವಳಿಯು. ಅಕಾಲ ಮತ್ತು ಅಕಾಲ ವಿವಾಹಗಳಿಂದ ತಂದೆ ತಾಯಿಗಳಿಗೂ ಮಕ್ಕಳಿಗೂ ದೇಹಾರೋಗ್ಯ, ಆಯುಷ್ಯಗಳು ಕಡಮೆಯಾಗಿ ಅಶಕ್ತತೆಯೂ ರೋಗಗಳೂ ಇಂದ್ರಿಯ ಚಾಪಲ್ಯವೂ ಹೆಚ್ಚುವವು. ಬಾಲ್ಯ ವಿವಾಹದಿಂದ ವಿದ್ಯಾಭಿವೃದ್ಧಿಗೆ ಹಾನಿ; ದಾರಿದ್ರ್ಯ ಮತ್ತು ಸಂಸಾರ ಕಷ್ಟಗಳು ಹೆಚ್ಚುವವು. ಗಂಡನು ಎಷ್ಟೇ ವಿದ್ಯಾ ವಿವೇಕ ಗುಣ ಸಂಪನ್ನನೂ, ಧೈರ್ಯಶಾಲಿಯೂ ಆದ ದೇಶ ಹಿತೈಷಿಯಾಗಿದ್ದರೂ ಹೆಂಡತಿಯು ಅನುಕೂಲಳಾಗದಿದ್ದರೆ ಅತಿ ಕಷ್ಟ; ವಿವಾಹ ವಿಚಾರಗಳಲ್ಲಂತೂ "ಎತ್ತು ತಿಪ್ಪೆಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು" ಎಂಬಂತೆ ಕೂಡದೇ ಒಂದು ದಾರಿ, ಆಕೆಯದು ಮತ್ತೊಂದು ದಾರಿಯಾಗುವುದು. ದೇಶಬಾಂಧವರನೇಕರು ಬಾಲ್ಯವಿವಾಹದ ಕೇಡುಗಳನ್ನು ನೋಡಿ, ಈ ದುಷ್ಟ ಪದ್ಧತಿಯನ್ನು ಹೇಗಾದರೂ ತಪ್ಪಿಸಬೇಕೆಂದು ನಿಶ್ಚಯಿಸಿ ಉಪನ್ಯಾಸ, ಪತ್ರಿಕಾ ಲೇಖನ ಮೊದಲಾದವುಗಳ ದ್ವಾರಾ ಬಾಲ್ಯ ವಿವಾಹದ ಅನರ್ಥಗಳನ್ನು ಮನಕರಗುವಂತೆ ಇತರರಿಗೆ ಬೋಧಿಸುವರು. ಆದರೆ ಮನೆಗೆ ಬಂದರೆ ಹೊರಗೆ ಹೇಳಿದ್ದೊಂದೂ ಸಾಗದು. ಹೆಂಗಸರು ಒಪ್ಪರು. 7-8 ವರ್ಷದ ಹುಡುಗಿ, 13-14 ವರ್ಷದ ಹುಡುಗ. ಇವರಿಗೆ ಮದುವೆ. ಏಕೆ? ಹೆಂಗಸರು ಸರಿಯಾದ ವಿದ್ಯಾವತಿಯರಲ್ಲ. ತಾವು ದೇಶದಲ್ಲಿ ಒಂದಂಶವೆಂದೂ, ತಮ್ಮ ಮನೆಯಲ್ಲಿ ತಾವು ಮಾಡುವ ಕೆಲಸದಿಂದ ದೇಶಕ್ಕೇ ಮೇಲು ಕೇಡುಗಳಾಗುತ್ತವೆ ಎಂದೂ, ದೇಶ ಹಿತಕ್ಕಾಗಿ ಕೆಲಸಮಾಡುವುದು ತಮ್ಮ ಕರ್ತವ್ಯವೆಂದೂ ಗೊತ್ತಿಲ್ಲ. ಏನು ಮಾಡಿದರೆ ಏನಾಗುತ್ತೆಂಬ ಕಾರ್ಯಕಾರಣಗಳನ್ನು ಯೋಚಿಸಿಲ್ಲ. ಅಲ್ಲದೆ ಮಕ್ಕಳು ಯಾರು? ಭಗವದಂಶರಾದ ಶಾಶ್ವತ ಜೀವರಾದ ಅವರು ತಮ್ಮ ಮನೆಗಳಲ್ಲಿ ಏಕೆ ಹುಟ್ಟುವರು? ಅವರೊಳಗೆ ಅಡಗಿರುವ ಭಗವಂತನ ಗುಣಗಳನ್ನು ಸರಿಯಾದ ವಿವಾಹದ ದ್ವಾರಾ ಹೇಗೆ ವ್ಯಕ್ತಗೊಳಿಸಬಹುದು? ಎಂಬ ಇವೇ ಮೊದಲಾದ ಅನೇಕ ಸಂಗತಿಗಳು ಮರೆತು ಹೋಗಿವೆ. ಹೆಂಗಸು ಇವೆಲ್ಲವನ್ನೂ ತಕ್ಕ ಮಟ್ಟಿಗೆ ತಿಳಿದು ಕೆಲಸ ಮಾಡದೆ ಹೋದರೆ ದೇಶವು ಉತ್ತಮ ಸ್ಥಿತಿಗೆ ಬಾರದು. ಇವೆಲ್ಲವನ್ನೂ ತಿಳಿದು ನಡೆಸಬೇಕಾದರೆ ಹೆಂಗಸರು ಒಳ್ಳೆಯ ವಿದ್ಯಾವತಿಯರಾಗಬೇಕು. ಇಲ್ಲದಿದ್ದರೆ ಮುಂದೆ ಗತಿಯೇ ಇಲ್ಲವು.

ಪೂರ್ವದಲ್ಲಿದ್ದ ಮನು, ವ್ಯಾಸ, ನಾರದ, ಮಾರ್ಕಂಡೇಯಾದಿ ಮಹರ್ಷಿಗಳೂ ದೇವತೆಗಳೂ ಭಗವಂತನೂ ಈಗ ಇಲ್ಲವೇ? ಅನೇಕ ಮಹರ್ಷಿಗಳೂ ದೇವತೆಗಳೂ ಪೂರ್ವ ಕಾಲದಲ್ಲಿ ನಮ್ಮ ಮನೆಗಳಲ್ಲಿ ಹುಟ್ಟಿ ತಂದೆ ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಬಂಧುವರ್ಗ, ಸ್ನೇಹಿತರು, ರಾಜರೇ ಮೊದಲಾದವರಾಗಿದ್ದುಕೊಂಡು ನಮ್ಮನ್ನು ತಿದ್ದಿ ನಮಗೆ ತಿಳುವಳಿಕೆಯನ್ನು ಕೊಟ್ಟು, ನಮ್ಮನ್ನು ವೃದ್ಧಿ ಸ್ಥಿತಿಗೆ ತರಲಿಲ್ಲವೇ? ಈಗ ಅವರೆಲ್ಲಿ? ಆಗಿನಂತೆ ಈಗ ಏಕೆ ನಮ್ಮ ಮಧ್ಯೆ ಬಂದು ಹುಟ್ಟುತ್ತಿಲ್ಲ? ಅವರು ಬರುವುದಕ್ಕೆ ಅನುಕೂಲಿಸುವಂತಹ ದೇಹ ಮತ್ತು ಸಂದರ್ಭಗಳನ್ನು ಒದಗಿಸಿ ಕೊಡಬೇಕಾದರೆ ನಾವು ಎಂತಹ ದೇಹದಾರ್ಢ್ಯ ಮತ್ತು ಗುಣ ಶೀಲ ಸಂಪನ್ನರಾಗಿರಬೇಕು? ಸುತ್ತಲೂ ಇರುವ ಜನರ ವಿದ್ಯಾಭ್ಯಾಸ, ನಡೆ ನುಡಿ, ಶುಚಿತ್ವ, ಪಾರಮಾರ್ಥಿಕತೆ, ಪ್ರೀತಿ, ಪರೋಪಕಾರ ಬುದ್ಧಿ, ಭೂತದಯಾ ಪಶ್ಚಾತ್ತಾಪ ಮೊದಲಾದುವು ಹೇಗಿರಬೇಕು? ಇವೆಲ್ಲವನ್ನೂ ತಿಳಿದು ತಕ್ಕಂತೆ ನಡೆದುಕೊಳ್ಳಲು ಹೆಂಗಸು ಎಷ್ಟು ವಿದ್ಯಾವಂತಳಾಗಬೇಕು?

ದೇವಸ್ಥಾನಗಳು, ಪುರಾಣಗಳು, ಮಠಗಳು, ಸತ್ಸಂಪ್ರದಾಯಗಳು, ಇವುಗಳಲ್ಲಿ ವೇಷ ಮಾತ್ರ ನಿಂತು ಒಳಗಿನ ಸಾರವು ನಶಿಸಿಹೋಗುತ್ತಿದೆಯಲ್ಲ! ಇವೆಲ್ಲವೂ ಇನ್ನೂ ಕೊಂಚ ಮಟ್ಟಿಗೆ ಹೆಂಗಸರಿಂದ ನಿಂತಿವೆ. ಆದರೆ ತಿಳುವಳಿಕೆ ಇಲ್ಲದೆ ಹೀಗೆಯೇ ಅಂಧಪರಂಪರೆಯಾಗಿ ಕುರುಡು ಭಕ್ತಿಯಲ್ಲಿಯೇ ಇರುವುದಾದರೆ ಈ ಕೊಂಚವೂ ಕೂಡ ಬಹು ದಿನ ನಿಲ್ಲುವಂತಿಲ್ಲ. ಈಗಿನ ವಿದ್ಯಾಭ್ಯಾಸವು ಕುರುಡು ಪಾರವಾಗಿಲ್ಲ. ವಿಚಾರಪರತೆಯನ್ನು ಹೆಚ್ಚಿಸುತ್ತಿರುವುದು. ಏನು ಮಾಡಿದರೂ ತಿಳಿದು ಮಾಡಬೇಕೆಂಬ ಆಶೆಯು ಹೆಚ್ಚುತ್ತಿರುವುದು. ಪ್ರತಿಯೊಂದಕ್ಕೂ ಕಾರಣವನ್ನೂ ಸದುತ್ತರವನ್ನೂ ಹುಡುಕುತ್ತಿರುವರು. ಅಂತಹವರಿಗೆ ಕಣ್ಣು ಮುಚ್ಚಿಕೊಂಡು ನಂಬಿರೆಂದರೆ ಅವರು ನಂಬುವುದಿಲ್ಲ. ಯಾವುದೊಂದು ಸಂಗತಿಯನ್ನು ತೆಗೆದುಕೊಂಡರೂ ಅದರ ಉದ್ದೇಶ, ಸಿದ್ಧಾಂತ, ಪ್ರಯೋಜನ, ಏತಕ್ಕಾಗಿ ಏರ್ಪಡಿಸಲ್ಪಟ್ಟಿತು ಎಂಬೀ ಸಂಗತಿಗಳನ್ನು ತಿಳಿಯಬೇಕು. ಕಾಲಕ್ರಮದಲ್ಲಿ ವಿಚಾರಶೂನ್ಯತೆಯಿಂದ ಸೇರಿರುವ ಅನೇಕ ಅನುಪಯುಕ್ತವಾದ—ಕೆಲವು ವೇಳೆ ಅನರ್ಥಹೇತುಗಳಾದ ವಿಷಯಗಳನ್ನು ಬಿಟ್ಟು, ಸಾರವಾದ ಸಂಗತಿಗಳನ್ನು ಅರಿತು ಅವುಗಳನ್ನು ತಾವು ಆಚರಿಸುತ್ತ ಬರಬೇಕು; ಅಲ್ಲದೆ ಇತರರಿಗೆ ಬೋಧಿಸಲೂ ಬೇಕು. ಇದರಿಂದ ಹಿಂದೂ ಮತದಲ್ಲಿರುವ ಅನೇಕ ಅಮೂಲ್ಯವಾದ ಸಂಗತಿಗಳು ಉಳಿಯುವವು. ಇಲ್ಲವಾದರೆ ಇಂತಹ ಶ್ರೇಷ್ಠವಾದ ರತ್ನಗಳು ಹಿಂದೆ ಇದ್ದವೆಂದು ಹೇಳಬೇಕಾಗುವುದು. ಇದೊಂದನ್ನು ನೋಡಿದರೂ ಹೆಂಗಸಿನ ವಿದ್ಯಾಭ್ಯಾಸದ ಪ್ರಯೋಜನವು ಕೊಂಚ ಮಟ್ಟಿಗಾದರೂ ಗೊತ್ತಾಗದೆ ಇರದು.

ಮತ ವಿಚಾರ, ಮಕ್ಕಳ ಏಳಿಗೆ, ಆರೋಗ್ಯ ವಿಚಾರ, ವಿದ್ಯಾಭ್ಯಾಸ, ವಿವಾಹ, ದೇಶಾಂತರ ಸಂಚಾರ, ಕೈಗಾರಿಕೆಗಳ ಸ್ಥಿತಿ, ದೇಶದ ಬಡತನ, ಬಡವರ ಸ್ಥಿತಿ, ಪಂಚಮರೇ ಮೊದಲಾದ ಕೀಳು ಜಾತಿಯವರ ಸ್ಥಿತಿ, ವರ್ಣಾಶ್ರಮಧರ್ಮಗಳ ಈಗಿನ ಸ್ಥಿತಿ ಮತ್ತು ಅವುಗಳಿಂದ ಆಗುತ್ತಿರುವ ಪ್ರಯೋಜನ ಮತ್ತು ಅನರ್ಥಗಳು, ಜಾತಿ ದೇಶ ಕುಲಭಾಷೆಗಳಿಗಿರುವ ಪರಸ್ಪರ ಸಂಬಂಧ, ಈ ಮೊದಲಾದ ಸಂಗತಿಗಳು ಸಕಾರಣವಾಗಿ ಹೆಂಗಸರಿಗೆ ತಿಳಿಯದಿದ್ದರೆ ಜನಾಂಗದಲ್ಲಿ ಅರ್ಧ ಜನವೇ ನಮ್ಮ ಭಾಗಕ್ಕೆ ಇಲ್ಲದಂತಾಗುವುದು. ಇಷ್ಟೇ ಅಲ್ಲ. ಉಳಿದ ಅರ್ಧಜನರು ಮಾಡುವ ಕೆಲಸಕ್ಕೆ ಅಡಿಗಡಿಗೂ ಅಡ್ಡವಾಗುವರು. ಆದ್ದರಿಂದ ಇವನ್ನೆಲ್ಲಾ ನೋಡಿದರೆ ನಮ್ಮ ದೇಶದ ಏಳಿಗೆಯು ಬಹು ಮಟ್ಟಿಗೆ ಹೆಂಗಸರ ವಿದ್ಯಾಭ್ಯಾಸದ ಮೇಲೆ ನಿಂತಿರುವಂತಿದೆ. ಅದರಲ್ಲೂ ಈಗಿನ ಕಾಲಸ್ಥಿತಿಯನ್ನು ಅನುಸರಿಸಿ ಇಂಗ್ಲೀಷು ವಿದ್ಯಾಭ್ಯಾಸ ಕೂಡ ತಕ್ಕ ಮಟ್ಟಿಗೆ ಅವಶ್ಯಕವೆಂದು ಗೊತ್ತಾಗುವುದು.

ವಿಚಾರಪರರಾದ ಸಹೋದರ ಸಹೋದರಿಯರು ಈ ಮೊದಲಾದ ವಿಚಾರಗಳನ್ನೆಲ್ಲಾ ಚೆನ್ನಾಗಿ ಮನನಮಾಡಿ ಪರಿಶೀಲಿಸಿ, ಯುಕ್ತವೆಂದು ತೋರಿದಲ್ಲಿ ಈಗಲೇ ಹೆಂಗಸರ ಏಳಿಗೆಗಾಗಿ ಅವರ ವಿದ್ಯಾಭ್ಯಾಸವನ್ನು ಪ್ರಾರಂಭಿಸೋಣ. ಪ್ರಾರಂಭಿಸಿದ್ದರೆ ಹೆಚ್ಚು ಮುತುವರ್ಜಿಯಿಂದ ಜಾಗ್ರತೆಯಲ್ಲಿ ಅಭಿವೃದ್ಧಿಗೊಳಿಸೋಣ.

ಕೆ. ನರಹರಿಶಾಸ್ತ್ರೀ, ಅಡಯಾರು, ಮದ್ರಾಸು.

ಮೈಸೂರು ಸರ್ಕಾರಿ ಹುಕುಮು.

ಅಡವಿಯ ವಿಷಯಕವಾದ ಗ್ರಾಮಪಂಚಾಯತಿ.

1. ಯಾವ ಗ್ರಾಮದ ಪ್ರಯೋಜನಕ್ಕಾಗಿ ಗ್ರಾಮ ಫಾರೆಸ್ಟನ್ನು ಏರ್ಪಡಿಸಲಾಗುತ್ತದೆಯೋ ಆ ಗ್ರಾಮದ ಪಟೇಲ್ ಮತ್ತು ಶ್ಯಾನುಭೋಗರು ಸೇರಿರುವ ಒಂದು ಪಂಚಾಯತಿಗೆ ಗ್ರಾಮ ಫಾರೆಸ್ಟಿನ ಆಡಳಿತವನ್ನು ವಹಿಸತಕ್ಕದ್ದು. ಅಂತಹ ಪಂಚಾಯತಿಯಲ್ಲಿ ಮೂವರಿಗೆ ಕಡಮೆ ಇಲ್ಲದೆಯೂ ಏಳು ಮಂದಿಗೆ ಮೀರದೆಯೂ ಇರುವಂತೆ ಪ್ರತಿ ಸಂದರ್ಭದಲ್ಲಿಯೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಂದ ಗೊತ್ತುಮಾಡಲ್ಪಡಬಹುದಾದಷ್ಟು ಜನ ಇತರ ಮೆಂಬರುಗಳಿರತಕ್ಕದ್ದು. ಸಂಬಂಧಪಟ್ಟ ಗ್ರಾಮದಲ್ಲಿ ಖಾಯಮಾಗಿ ವಾಸಮಾಡದೆಯೂ, ಯಾ ಸದರಿ ಗ್ರಾಮದಲ್ಲಿ ಜಮೀನುಗಳನ್ನು ಹೊಂದದೆಯೂ ಇರತಕ್ಕ ಯಾವನೊಬ್ಬನೂ ಮೆಂಬರಾಗಲು ಅರ್ಹನಾಗಲಾರನು.

2. ಪಟೇಲ್ ಶ್ಯಾನುಭೋಗರುಗಳಲ್ಲದ ಇತರ ಮೆಂಬರುಗಳನ್ನು ಸದರಿ ಗ್ರಾಮ ಸೇರಿರತಕ್ಕ ತಾಲ್ಲೂಕಿನ ಅಮಲ್‌ದಾರರಾದರೂ ಚುನಾಯಿಸಿ ನಿಯಮಿಸತಕ್ಕದ್ದು. ಅಥವಾ ಸಮ್ಮತಿಯನ್ನು ಕೊಡುವುದಕ್ಕೆ ನ್ಯಾಯವಾದ ಅರ್ಹತೆಯನ್ನು ಪಡೆದಿರುವ ಗ್ರಾಮಸ್ಥರು ಚುನಾಯಿಸತಕ್ಕದ್ದು. ಅಥವಾ ಪ್ರತಿ ಸಂದರ್ಭದಲ್ಲಿಯೂ ಡೆಪ್ಯುಟಿ ಕಮಿಷನರು ನಿರ್ಧರಿಸಬಹುದಾದಂಥಾ ಕೆಲವರನ್ನು ನಿಯಮಿಸತಕ್ಕದ್ದು; ಮತ್ತೂ ಕೆಲವರನ್ನು ಚುನಾಯಿಸತಕ್ಕದ್ದು. ಆದರೆ ಮೊದಲನೆಯ ಪಂಚಾಯತಿಯ ಮೆಂಬರುಗಳನ್ನು ಡೆಪ್ಯುಟಿ ಕಮಿಷನರ ಅಂಗೀಕಾರಕ್ಕೆ ಒಳಪಟ್ಟಿರುವಂತೆ ಅಮಲ್‌ದಾರರೇ ನಿಯಮಿಸತಕ್ಕದ್ದು.

3. ಪಂಚಾಯತಿಗೆ ಮೆಂಬರುಗಳನ್ನು ಚುನಾಯಿಸತಕ್ಕ ಬಗ್ಗೆ ಜಮೀನ್ ಕಂದಾಯವನ್ನಾಗಲೀ ಮೊಹತರ್ಫಾ ತೆರಿಗೆಯನ್ನಾಗಲೀ ಕೊಡತಕ್ಕ ವಯಸ್ಕರಾದ ಎಲ್ಲಾ ಗಂಡಸರೂ, ಹೆಂಗಸರೂ ಸಮ್ಮತಿಕೊಡುವ ಅಧಿಕಾರವನ್ನು ಪಡೆದಿರತಕ್ಕದ್ದು. ಮತ್ತೂ ಚುನಾವಣೆಯ ಮೂಲಕ ಭರ್ತಿ ಮಾಡಲು ಎಷ್ಟು ಸ್ಥಾನಗಳು ಖಾಲಿಯಾಗಿರುತ್ತವೆಯೋ ಅಷ್ಟು ಸಮ್ಮತಿಗಳನ್ನು ಕೊಡತಕ್ಕದ್ದು.

4. ಚುನಾವಣೆಯ ವಿಷಯವಾಗಿ ಉಂಟಾಗತಕ್ಕ ವ್ಯಾಜ್ಯಗಳನ್ನು ಅಮಲ್‌ದಾರರು ಒಡನೆಯೇ ಫೈಸಲ್ ಮಾಡತಕ್ಕದ್ದು. ಅವರು ಮಾಡುವ ಫೈಸಲಾತಿಯ ಮೇಲೆ ಡೆಪ್ಯುಟಿ ಕಮಿಷನರಿಗೆ ಅಪೀಲ್ ಮಾಡಲು ಅವಕಾಶವಿರತಕ್ಕದ್ದು. ಸದರಿ ಡೆಪ್ಯುಟಿ ಕಮಿಷನರ ತೀರ್ಮಾನವೇ ಅಖೈರಾಗಿರತಕ್ಕದ್ದು.

5. ಪ್ರತಿಯೊಂದು ಪಂಚಾಯತಿಯೂ ಮೂರು ವರ್ಷದ ಕಾಲದವರೆಗೆ ಕೆಲಸದಲ್ಲಿರತಕ್ಕದ್ದು. ಆ ಕಾಲದ ಕೊನೆಯಲ್ಲಿ ಅದಕ್ಕೆ ಸೇರಿದ ಮೆಂಬರುಗಳು ಪುನಃ ನಿಯಮಿಸಲ್ಪಡಲು ಅರ್ಹರಾಗಿರುವರು. ಕಾರಣಾಂತರದಿಂದ ಉಂಟಾಗುವ ಖಾಲಿ ಸ್ಥಾನಗಳನ್ನು ಭರ್ತಿಮಾಡಲು ಅಮಲ್‌ದಾರರಿಗೆ ಅಧಿಕಾರವಿರತಕ್ಕದ್ದು.

6. ಪ್ರತಿ ವರ್ಷಕ್ಕೂ, ಪಂಚಾಯತಿಯು ಅದಕ್ಕೆ ಸೇರಿದ ಮೆಂಬರುಗಳ ಪೈಕಿಯೇ ಒಬ್ಬ ಛೇರ್‌ಮನನನ್ನು ಚುನಾಯಿಸಿಕೊಳ್ಳತಕ್ಕದ್ದು.

7. ಪಂಚಾಯತಿಯು ಕಾರ್ಯಗಳನ್ನು ನಡಿಸತಕ್ಕ ಬಗ್ಗೆ ಕನಿಷ್ಠ ಪಕ್ಷ ತಿಂಗಳಿಗೆ ಒಂದು ಸಲ ಸೇರತಕ್ಕದ್ದು. ಮೀಟಿಂಗಿನ ನಡವಳಿಕೆಗಳನ್ನು ಆ ಕೆಲಸಕ್ಕಾಗಿ ಇಟ್ಟಿರುವ ಬುಕ್ಕಿನಲ್ಲಿ ದಾಖಲ್ ಮಾಡತಕ್ಕದ್ದು. ಮತ್ತೂ ಅದಕ್ಕೆ ಛೇರ್‌ಮನರು ರುಜು ಮಾಡತಕ್ಕದ್ದು.

8. ಪ್ರತಿಯೊಂದು ಪಂಚಾಯತಿಯೂ ಡೆಪ್ಯುಟಿ ಕಮಿಷನರಿಂದ ವಿಧಿಸಲ್ಪಟ್ಟಂಥ ಲೆಕ್ಕಗಳನ್ನೂ, ಬುಕ್ಕುಗಳನ್ನೂ ಅವರಿಂದ ವಿಧಿಸಲ್ಪಟ್ಟ ನಮೂನೆಯಲ್ಲಿ, ಕ್ರಮವಾಗಿ ಇಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರು ಹುಕುಂ ಮಾಡುವ ಲೆಕ್ಕ ಪತ್ರಗಳನ್ನು ವಿಧಾಯಕವಾಗುವ ಕಾಲದಲ್ಲಿ ಅಮಲ್‌ದಾರರ ಬಳಿಗೆ ಕಳುಹಿಸಿಕೊಡತಕ್ಕದ್ದು. ಸದರಿ ಲೆಕ್ಕಗಳನ್ನು ಅಮಲ್‌ದಾರರು ಹುಕುಮಿನ ಮೇಲೆ ವರ್ಷಕ್ಕೆ ಒಂದು ಸಲ ತನಿಖೆ ಮಾಡತಕ್ಕದ್ದು.

9. ಪಂಚಾಯತಿಯು ಕೊಡತಕ್ಕ ಆಮದಾನಿಯ ಮೇಲೆಯೇ ವಿಲೇಜ್ ಫಾರೆಸ್ಟಿನಿಂದ ಮರ ವಗೈರೆ ಜಂಗಲ್ ಉತ್ಪತ್ತಿಯನ್ನು ಸಾಗಿಸಿಕೊಂಡು ಹೋಗಲು ನ್ಯಾಯವಾದ ಕ್ರಮವನ್ನು ಏರ್ಪಡಿಸತಕ್ಕದ್ದು. ಅಂಥ ರಹದಾರಿಯನ್ನು ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ, ಸರ್ಕಾರದ ವಿಲೇವಾರಿಗೆ ಒಳಪಟ್ಟ ಜಮೀನುಗಳಲ್ಲಿಯೂ ಇರುವ ಜಂಗಲಿನ ಉತ್ಪತ್ತಿಯ ಉಪಯೋಗವನ್ನು ಕ್ರಮಪಡಿಸಿ ಆಯಾ ಕಾಲದಲ್ಲಿ ಜಾರಿಗೆ ತರುತ್ತಲಿರುವ ನಿಬಂಧನೆಗಳಿಗನುಸಾರವಾಗಿ ಜಂಗಲ್ ಉತ್ಪತ್ತಿಯನ್ನು ಮುಫತ್ತಾಗಿ ತೆಗೆದುಕೊಂಡುಹೋಗಲು ದರಖಾಸ್ತುದಾರರಿಗೆ ಹಕ್ಕು ಇದ್ದಲ್ಲಿ ಮುಫತ್ತಾಗಿಯೂ, ಇಲ್ಲದೇ ಇದ್ದಲ್ಲಿ ಒಂದು ಅಲ್ಪವಾದ ಫೀಜನ್ನು ತೆಗೆದುಕೊಂಡೂ ಕೊಡತಕ್ಕದ್ದು.

10. ವಿಲೇಜ್ ಫಾರೆಸ್ಟಿನಲ್ಲಿ ಸೇರತಕ್ಕ ಎಲ್ಲಾ ಗೋಮಾಳದ ಜಮೀನುಗಳಲ್ಲಿಯೂ ದನಗಳನ್ನು ಮುಫತ್ತಾಗಿ ಮೇಯಿಸಿಕೊಳ್ಳತಕ್ಕದ್ದು. ಆದರೆ ಪಂಚಾಯತಿಯವರು ಡೆಪ್ಯುಟಿ ಕಮಿಷನರವರ ಅಂಗೀಕಾರದ ಮೇಲೆ ಗೊತ್ತು ಮಾಡುವ ಫೀಜನ್ನು ಕೊಟ್ಟಲ್ಲದೆ ಫಾರೆಸ್ಟಿನ ಉಳಿದ ಪ್ರದೇಶದಲ್ಲಿ ದನಗಳನ್ನು ಮೇಯಿಸಿಕೊಳ್ಳುವುದಕ್ಕೆ ಅವಕಾಶ ಕೊಡಲಾಗದು.

11. ವಿಲೇಜ್ ಫಾರೆಸ್ಟಿಗೆ ಸೇರಿರುವ ಜಮೀನುಗಳನ್ನು ಪಂಚಾಯತರ ಅನುಮತಿ ಇಲ್ಲದೆ ಸಾಗುವಳಿಗೇ ಆಗಲೀ, ಮತ್ತಾವ ಇತರ ಕಾರ್ಯಗಳಿಗೇ ಆಗಲಿ ಸಾಧಾರಣವಾಗಿ ಕೊಡತಕ್ಕದ್ದಲ್ಲ.

12. ಫಾರೆಸ್ಟನ್ನು ಬ್ಲಾಕು (ಖಂಡ)ಗಳಾಗಿ ವಿಂಗಡಿಸುವುದಕ್ಕೂ, ಮತ್ತು ಡೆಪ್ಯುಟಿ ಕಮಿಷನರು ಕಳುಹಿಸಿಕೊಡುವ ವರ್ಕಿಂಗ್ ಪ್ಲಾನಿನಂತೆ ಅವುಗಳ ಪೈಕಿ ಪ್ರತಿಯೊಂದರಲ್ಲಿಯೂ ಸರದಿವಾರ್ ಕ್ರಮವಾಗಿ ಕೆಲಸ ನಡೆಸುವುದಕ್ಕೂ ಪಂಚಾಯತರಿಗೆ ಅಧಿಕಾರವಿರುತ್ತದೆ.

13. ಗ್ರಾಮಸ್ಥರು ಪಂಚಾಯತಿಗೆ ಕೊಡಬೇಕಾದ ಮೊಬಲಗನ್ನು ಪಾವತಿ ಮಾಡದೆ ಇದ್ದಲ್ಲಿ, ಅಥವಾ ಪಂಚಾಯತದಾರರು ಏರ್ಪಡಿಸುವ ನಿಯಮಗಳಲ್ಲಿ ಯಾವ ನಿಯಮದಂತೆಯಾದರೂ ನಡೆಯದೇ ಇದ್ದಲ್ಲಿ ಅವರು ಫಾರೆಸ್ಟಿನಲ್ಲಿ ಹಕ್ಕುಗಳ ಸ್ವತಃ ಅನುಭವಿಸ್ಸದರೂ ಚಲಾಯಿಸದಂತೆ ತಡೆಯುವುದಕ್ಕೆ ಪಂಚಾಯತಿಗೆ ಅಧಿಕಾರವಿರುತ್ತದೆ. ಅಂತಹ ಜನಗಳ ದನಗಳನ್ನು ಫಾರೆಸ್ಟಿನಿಂದ ಆಚೆ ಓಡಿಸುವುದಕ್ಕೂ, ಪಂಚಾಯತರು ಏರ್ಪಡಿಸುವ ನಿಯಮಗಳಿಗೆ ವಿರುದ್ಧವಾಗಿ ಫಾರೆಸ್ಟಿನೊಳಕ್ಕೆ ಬಿಡುವ ದನಗಳನ್ನು ದೊಡ್ಡಿವಾಡಿಗೆ ಕಳುಹಿಸುವುದಕ್ಕೂ ಅವರಿಗೆ ಅಧಿಕಾರವಿರುತ್ತದೆ.

14. ಅವರ ಕಡೆಯಿಂದ ಹೊಂದುಬರುವ ಅನುಮತಿಯಿಲ್ಲದೆ ಫಾರೆಸ್ಟಿನ ಯಾವ ಭಾಗದಲ್ಲಿಯಾದರೂ ಯಾವ ತರಹ ದನಗಳನ್ನಾದರೂ ಮೇಯಿಸಿಕೊಳ್ಳುವುದನ್ನಾಗಲೀ, ಅಥವಾ ಇತರ ಯಾವುದಾದರೂ ಹಕ್ಕುಗಳನ್ನು ಚಲಾಯಿಸುವುದನ್ನಾಗಲೀ ತಡೆಯಲು ಪಂಚಾಯತಿಗೆ ಅಧಿಕಾರವಿರುತ್ತದೆ.

15. ಮಲೆನಾಡಿನಲ್ಲಿಯಾಗಲೀ, ಮೈದಾನದಲ್ಲಿಯಾಗಲೀ ಇರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಿಗೂ ಮತ್ತು ಸರ್ಕಾರದವರು ವಿಲೆ ಮಾಡತಕ್ಕ ಜಮೀನುಗಳಿಗೂ ಆಯಾ ಕಾಲದಲ್ಲಿ ಸಂಬಂಧಪಟ್ಟು ಜಾರಿಯಲ್ಲಿರುವ ನಿಯಮಗಳಿಗನುಸಾರವಾಗಿ ತಂಗಡಿಯನ್ನೂ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳಬಹುದಾದಂಥ ಮರಗಳನ್ನೂ ಗಿಡಗಳನ್ನೂ ಬಿಟ್ಟು, ಬಾಕಿ ಎಲ್ಲಾ ಮರಗಳನ್ನೂ, ಹುಲ್ಲನ್ನೂ ಇತರ ಜಂಗಲ್ ಉತ್ಪತ್ತಿಯನ್ನೂ ವಿಲೇ ಮಾಡುವದಕ್ಕೆ ಪಂಚಾಯತಿಗೆ ಅಧಿಕಾರವಿರತಕ್ಕದ್ದು. ಆದರೆ ಈ ವಿಧಾನವು ದನಗಳನ್ನು ಮುಫತ್ತಾಗಿ ಮೇಯಿಸಿಕೊಳ್ಳುವುದಕ್ಕೇ ಆಗಲೀ, ಯಾವುದಾದರೂ ಜಂಗಲ್ ಉತ್ಪತ್ತಿಯನ್ನು ಮುಫತ್ತಾಗಿ ಸಾಗಿಸಿಕೊಳ್ಳುವುದಕ್ಕೇ ಆಗಲೀ ರೈತರಿಗೆ ಇರುವ ಹಕ್ಕುಗಳಿಗೆ ಒಳಪಟ್ಟಿರತಕ್ಕದ್ದು.

16. ಫಾರೆಸ್ಟನ್ನು ಯಥೋಚಿತವಾಗಿ ಹದ್ದುಬಸ್ತುಮಾಡಿ ಸದರಿ ಹದ್ದುಬಸ್ತುಗಳನ್ನು ಸರಿಯಾದ ಸ್ಥಿತಿಯಲ್ಲಿರುವಂತೆ ಕಾಪಾಡಿಕೊಳ್ಳುವುದು ಪಂಚಾಯತರ ಕರ್ತವ್ಯವಾಗಿರುತ್ತದೆ.

17. ಬೆಳೆಯತಕ್ಕ ಪದಾರ್ಥದ ಸ್ಥಿತಿಯನ್ನು ಉತ್ತಮಗೊಳಿಸುವುದೂ, ಫಾರೆಸ್ಟಿನಲ್ಲಿ ಸೌದೆ, ಮರ, ಗೊಬ್ಬರದ ಸೊಪ್ಪಿಗೆ ಉಪಯೋಗವಾಗುವ ಗಿಡಗಳು ಇನ್ನೂ ಇತರ ಗಿಡಗಳು ಇವುಗಳನ್ನು ನೆಡುವುದೂ ಪಂಚಾಯತರ ಕೆಲಸವಾಗಿರತಕ್ಕದ್ದು. ಈ ಭಾಗದಲ್ಲಿ ಅವರು ಫಾರೆಸ್ಟು ಆಫೀಸರುಗಳು ಕೊಡುವ ತಿಳುವಳಿಕೆಯಂತೆ ನಡೆಯತಕ್ಕದ್ದು.

18. ಹುಲ್ಲು ಬೆಳೆಯುವುದನ್ನು ಉತ್ತಮ ರೀತಿಯಲ್ಲಿ ವೃದ್ಧಿಗೊಳಿಸುವುದಕ್ಕೆ ಬೇಕಾದ ಏರ್ಪಾಟುಗಳನ್ನು ಜರುಗಿಸುವುದೂ, ಫಾರೆಸ್ಟಿನ ಸ್ವಲ್ಪಭಾಗವೇ ಗ್ರಾಮಕ್ಕೆ ಬೇಕಾದುದನ್ನೆಲ್ಲಾ ಒದಗಿಸುವುದಕ್ಕೆ ಸಾಕಾಗುವಂಥ ವಿಶೇಷ ಮಳೆಯಾಗುವ ಸ್ಥಳಗಳಲ್ಲಿ ಮೇವನ್ನೂ, ಕ್ಷಿಪ್ರವಾಗಿ ಬೆಳೆಯುವ ಸಸ್ಯಗಳನ್ನೂ ಬೆಳೆಯಿಸುವುದಕ್ಕೆ ತಕ್ಕ ಏರ್ಪಾಟು ಮಾಡುವುದೂ ಸಹ ಪಂಚಾಯತರ ಕರ್ತವ್ಯವಾಗಿರುತ್ತದೆ.

19. (ರಹದಾರಿ ಕ್ರಮದ ಮೇರೆಯಾಗಲೀ, ಅಥವಾ ಇತರ ವಿಧವಾಗಿಯಾಗಲೀ ಜರುಗಿಸುವ) ಹುಲ್ಲು ಮತ್ತು ಇತರ ಜಂಗಲ್ ಉತ್ಪತ್ತಿಯ ಹರಾಜ

...ಂದ ಕೊಡುವ ಮೊಬಲಗನ್ನು ವಿಲೇಜ್ ಫಾರೆಸ್ಟು ಫಂಡನ್ನಾಗಿ ಏರ್ಪಡಿಸಿ, ಅದನ್ನು ಪಂಚಾಯತಿಯ ಹೆಸರಿನಲ್ಲಿ ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿ ಇಡತಕ್ಕದ್ದು. ಛೇರ್ಮನರು ಮತ್ತು ಈ ಕೆಲಸಕ್ಕಾಗಿ ನಿಯಮಿಸಲ್ಪಡುವ ಪಂಚಾಯತಿಯ ಮತ್ತೊಬ್ಬ ಮೆಂಬರು ಆವಶ್ಯಕವಾದಾಗ ಈ ಬಗೆ ಹಣವನ್ನು ತೆಗೆದುಕೊಂಡು ಜಮಾ ಖರ್ಚನ್ನು ನಡಿಸಲು ಅಧಿಕಾರವನ್ನು ಪಡೆದಿರುವರು. ಈ ಫಂಡಿನ ಮೊಬಲಗನ್ನು ವಿಲೇಜ್ ಫಾರೆಸ್ಟಿನ ರಕ್ಷಣೆಗೂ ಅಭಿವೃದ್ಧಿಗೂ ಸಂಬಂಧಪಟ್ಟ ಕಾರ್ಯಗಳಿಗೆ ಮಾತ್ರವೇ ಉಪಯೋಗಿಸತಕ್ಕದ್ದು.

20. ಪಂಚಾಯತಿಯ ಮೇಲೆ ಮೇಲ್ತನಿಖೆ ಅಧಿಕಾರವು ಡೆಪ್ಯುಟಿ ಕಮಿಷನರಿಗೆ ಸೇರತಕ್ಕದ್ದು. ಅವರು ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಅಧಿಕಾರವನ್ನು ವಹಿಸಲು ಅಧಿಕಾರವುಳ್ಳವರಾಗಿರುವರು.

21. ಸಾಕಾದ ಕಾರಣದ ಮೇಲೆ ಯಾವುದಾದರೂ ಪಂಚಾಯತಿಯನ್ನಾಗಲೀ, ಅದಕ್ಕೆ ಸೇರಿದ ಯಾರಾದರೂ ಮೆಂಬರನ್ನಾಗಲೀ ತೆಗೆದುಹಾಕುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಅಧಿಕಾರವಿರುತ್ತದೆ. ಒಂದು ಪಂಚಾಯತಿಯು ವಜಾ ಆದ ಮೇಲೆ ಫಾರೆಸ್ಟುಗಳ ಆಡಳಿತವೂ ಅದಕ್ಕೆ ಸಂಬಂಧಪಟ್ಟ ಹಣದ ಮೇಲಿನ ಅಧಿಕಾರವೂ ಡೆಪ್ಯುಟಿ ಕಮಿಷನರಿಗೆ ಸೇರುತ್ತದೆ.

22. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲೀ, ಅಥವಾ ರೇಂಜರ ಅಂತಸ್ತಿಗೆ ಕಡಮೆ ಇಲ್ಲದ ಅವರ ಹಾಟೇದಾರರ ವ್ಯಕ್ತಿ ಯಾರೇ ಆಗಲಿ ಕನಿಷ್ಠ ಪಕ್ಷ ವರ್ಷಕ್ಕೆ ಒಂದು ಸಲವಾದರೂ ವಿಲೇಜ್ ಫಾರೆಸ್ಟನ್ನೂ ಅದರ ಸಂಬಂಧವಾದ ಲೆಕ್ಕಗಳನ್ನೂ ಅಜಮಾಯಿಸಿ ಮಾಡತಕ್ಕದ್ದು ಟ್ಟಿದೆ ಅಂಥ ಅಜಮಾಯಿಸಿಯ ಫಲಿತಾಂಶವನ್ನು ಕುರಿತು ಮೇಲ್ಪಟ್ಟ ಆಫೀಸರ ಮೂಲಕ ಡೆಪ್ಯುಟಿ ಕಮಿಷನರಿಗೆ ರಿಪೋರ್ಟ್ ಮಾಡತಕ್ಕದ್ದು.

23. ರೆವಿನ್ಯು ಸಬ್ ಡಿವಿಜನ್ ಆಫೀಸರುಗಳೂ, ಅಮಲ್‌ದಾರರುಗಳೂ ತಮ್ಮ ಸಂಚಾರ ಕಾಲದಲ್ಲಿ ವಿಲೇಜ್ ಫಾರೆಸ್ಟುಗಳನ್ನೂ ಪಂಚಾಯತಿಯಲ್ಲಿಟ್ಟಿರುವ ಲೆಕ್ಕ ಪತ್ರಗಳನ್ನೂ ರಿಜಿಸ್ಟರುಗಳನ್ನೂ ಅಜಮಾಯಿಸಿ ಮಾಡಬಹುದು.

24. ಫಾರೆಸ್ಟ್ ರೆಗ್ಯುಲೇಷನಿನ 11 ನೆಯ ಅಧ್ಯಾಯದ 34 a, b; 35 b, c, d, e ಮತ್ತು f; ಮತ್ತು 36 ನೆಯ ಪ್ರಕರಣಗಳು ವಿಲೇಜ್ ಫಾರೆಸ್ಟುಗಳಿಗೂ ಕೂಡ ಅನ್ವಯಿಸಲ್ಪಡತಕ್ಕವುಗಳು.

25. ವಿಲೇಜ್ ಫಾರೆಸ್ಟಿಗೆ ಸಂಬಂಧಪಟ್ಟ ಅತಿಕ್ರಮ ಪ್ರವೇಶ ವಗೈರೆ ತಪ್ಪುಗಳ ವಿಷಯಕವಾದ ಎಲ್ಲಾ ಮೊಕದ್ದಮೆಗಳಲ್ಲಿಯೂ 10 ರೂಪಾಯಿಗೆ ಮೀರದಂತೆ ಪರಿಹಾರ ದ್ರವ್ಯವನ್ನು ಪಾವತಿ ಮಾಡಿದಲ್ಲಿ ತಪ್ಪಿತವನ್ನು ಮನ್ನಿಸತಕ್ಕ ಅಧಿಕಾರವು ಪಂಚಾಯತಿಗೆ ಇರತಕ್ಕದ್ದು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಆಶೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಮೂರಾವರ್ತಿ ನಡೆದ ಕಳುವು ಪತ್ತೆ ಆಗಲಿಲ್ಲ.

ಅಯ್ಯಾ,—ನಾನು ಕಳೆದ 1904 ನೇ ಆಗಸ್ಟ್ ತಿಂಗಳಾರಭ್ಯ ಈ ಟವನ್ನಿನಲ್ಲಿ ಪ್ಲೇಗಿನ ಬಾಧೆಗಾಗಿ ಅಧಿಕಾರಿಗಳ ಆಜ್ಞೆಯನ್ನು ಪಡೆದು ಗುಡಿಸಲಿನಲ್ಲಿಯೇ ಸ್ಥಿರವಾಗಿ ನಿಂತಿದೇನೆ. ನಾನಿರುವ ಸ್ಥಳವು ಈ ಟವನ್ನಿನ ಉತ್ತರಾಭಿಮುಖವಾಗಿ ಸೇರಿಕೊಂಡೇ ಇದೆ. ಇಲ್ಲಿಗೆ ಇನ್ನೂ ಕೆಲವರು ನನ್ನ ಸುತ್ತ ಮುತ್ತಲೂ ಬಂದು ಗುಡಿಸಲುಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ಹೀಗಿರುತ್ತ ಕಳೆದ 1906 ನೇ ಜುಲೈ ತಾ. 27 ರಲ್ಲಿಯೂ, 1907 ನೇ ಜೂನ್ ತಾ. 3 ರಲ್ಲಿಯೂ, ಪುನಃ ಈಗ ಕಳೆದ ಆಗಸ್ಟ್ ತಾ. 22 ರಲ್ಲಿಯೂ ನನ್ನ ಗುಡಿಸಿಗೆ ಕಳ್ಳರು ರಾತ್ರಿ ಪ್ರವೇಶಿಸಿ ಬಟ್ಟೆ, ಪಾತ್ರೆ, ಅಕ್ಕಿ ಬೇಳೆ ಮುಂತಾಗಿ ಸಕಲವನ್ನೂ ದೋಚಿಕೊಂಡು ಹೋಗಿರುತ್ತಾರೆ. ಮೊದಲನೇ ಮತ್ತು ಕಡೇ ಬಾರಿಗಳ ನಷ್ಟವು ಪ್ರಬಲವಾದುದು. ಇವೆರಡನ್ನು ಆಗಾಗಲೇ ಪೋಲೀಸಿಗೆ ತಿಳಿಸಿ, ಮೇಲಿನ ಅಧಿಕಾರಿಗಳಿಗೂ ಅರ್ಜಿ ಬರೆದುಕೊಂಡು ನಿರೀಕ್ಷಿಸಿ ಸಾಕಾಯಿತು. ಏನೂ ಪತ್ತೆಯಾಗಲಿಲ್ಲ. ಈ ಮೂರು ಸಾರಿಯ ಕಳ್ಳತನಗಳಿಂದ ನನಗೆ ಒಟ್ಟು ನೂರು ರೂಪಾಯಿ ತನಕ ನಷ್ಟವಾಯಿತು.

ಬಿ. ಕೆ. ವೆಂಕಟಾಚಾರ್ಯ, ಹಾಸನ.

ಬೆಟ್ಟದಪುರದ ಸ್ಕೂಲ್ ವಿಚಾರ.

ಅಯ್ಯಾ,—ಹುಣಸೂರು ತಾಲ್ಲೋಕು ಬೆಟ್ಟದಪುರದ ಕನ್ನಡ ಬಾಯ್ಸ್ ಸ್ಕೂಲ್ ವಿಚಾರವಾಗಿ ಕಳೆದ ವಾರ ತಮ್ಮ ಘನವಾದ ಪತ್ರಿಕೆಯಲ್ಲಿ ಪ್ರಕಟನೆ ಮಾಡಿ ಸರ್ಕಾರದವರ ನೋಟೀಸಿಗೆ ತರುತ್ತಾರೆಂತ ನಂಬಿ ಬರೆದಿದ್ದೆ. ಅದಕ್ಕೆ ತಾವು ಇಲಾಖಾ ಮೇಲ್ಪಟ್ಟ ಅಧಿಕಾರಿಗಳಿಗೆ ಗ್ರಾಮದ ಮುಖಂಡರು ಸೇರಿ ಬರೆದುಕೊಂಡರೆ ವಿಚಾರಣೆಯಿಂದ ಸರಿಪಡಿಸುತ್ತಾರೆಂತ ಇಷ್ಟನ್ನೇ ಪ್ರಕಟಿಸಿರುತ್ತೀರಿ. ಇಲಾಖಾ ಮೆಜಿಸ್ಟ್ರೇಟರು ಅಂದರೆ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರವರು ಮೊದಲುಗೊಂಡು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರ ವರಿಗೂ ಮತ್ತು ದಿವಾನ್ ಸಾಹೇಬರಿಗೂ ಗ್ರಾಮದ ಮುಖಂಡರು ಅನೇಕ ವೇಳೆ ರಿಜಿಸ್ಟರ್ ಅರ್ಜಿಗಳನ್ನು ಬರೆದುಕೊಂಡಾಗ್ಯೂ ಒಂದಕ್ಕೂ ಇಂದಿನವರೆಗೂ ಮತ್ತು ವಿಚಾರಣೆಯಿಂದ ಸರಿಪಡಿಸಿರುವುದು ಯಾವುದೂ ಇಲ್ಲ. ನಾನು ಹಿಂದಲ ವಾರ ಕೊಟ್ಟಿರುವ ಸ್ಕೂಲ್ ಮಾಸ್ಟರ ದಿನಚರಿ ವ್ಯಾಸಂಗವನ್ನು ತಮ್ಮ ಪತ್ರಿಕೆ ಮೂಲಕ ಈಗಲಾದರೂ ಪ್ರಕಟಿಸುತ್ತಾರೆಂತ ನಂಬಿದ್ದೇನೆ. ಇಲಾಖೆ ಮುಖ್ಯ ಅಧಿಕಾರಿಗೆ ರಿಜಿಸ್ಟರ್ ಅರ್ಜಿ ಬರೆದುಕೊಂಡು ಅನೇಕ ದುಡ್ಡುಗಳನ್ನು ಕಳೆದುಕೊಂಡದ್ದು ಅಲ್ಲದೇ ಹೊರ್ತು ಪತ್ತೆ ಏನೂ ಆಗಲಿಲ್ಲ. ತಾವು ದಯಪಟ್ಟು ಪ್ರಕಟಿಸಿ ನಮ್ಮ ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತೀರೆಂತ ನಂಬಿರುತ್ತೇನೆ.

ಬಿ. ವೆಂಕಟಕೃಷ್ಣಯ್ಯ, ಹರದನಹಳ್ಳಿ ರ್‍ಯಾನುಭೋಗ್, ಬೆಟ್ಟದಪುರ.

ವಿಲ್ಲೇಜ್ ಮಾಸ್ಟರುಗಳ ಗೋಳಾಟ.

ಅಯ್ಯಾ,—ಈಗಿನ ಹೊಸ ಸ್ಕೇಲಿನ ಪ್ರಕಾರ 30, 25, 20, 15, 12 ರೂಪಾಯಿ ಮೇರೆಗೆ ವಿದ್ಯಾಯೋಗ್ಯತೆಗೆ ತಕ್ಕಂತೆ ಸಂಬಳ ನಿಗದಿ ಮಾಡಿರುವ ವಿಚಾರದಲ್ಲಿ ಅನೇಕರಿಗೆ ದೊರೆಯುವುದಿಲ್ಲ. ಕೆಲವರಿಗೆ ಅಲ್ಪ ಬಡ್ತಿ ದೊರೆಯಬಹುದು. ಕೆಲವರು ತಮ್ಮನ್ನು ಅಪ್ಪರ್ ಸೆಕೆಂಡರಿ ಟ್ರೈನಿಂಗ್ ಮೊದಲಾದ ಪರೀಕ್ಷೆಗಳಿಗೆ ಚುನಾಯಿಸಿದ್ದ ಪಕ್ಷದಲ್ಲಿ ಈ ಬಡ್ತಿ ದೊರೆಯುತ್ತಿತ್ತೆಂತಲೂ. ಕೆಲವರು ಸದರೀ ಪರೀಕ್ಷೆಗೆ ಚುನಾಯಿಸಬೇಕೆಂತ ಅನೇಕ ರಿಪೋರ್ಟುಗಳನ್ನು ಬರೆದುಕೊಂಡಿದ್ದ ಚುನಾಯಿಸದೇ ಇದ್ದದ್ದರಿಂದ ಬಡ್ತಿಗೆ ಅವಕಾಶ ದೊರೆಯದೆ ನಷ್ಟ

ವಾಯಿತೆಂತಲೂ, ಕಲಬಿಗೆ ತಕ್ಕ ಕೆಲಸ ಮಾಡಬೇಕೆಂತಲೂ ಹೀಗೆ ನಾನಾ ಪ್ರಕಾರವಾಗಿ ಗೋಳಾಡುತ್ತಿರುವರು. ಹಳ್ಳದ ಪ್ರದೇಶಗಳನ್ನು ಎತ್ತರಿಸುವುದೂ, ಎತ್ತರ ಪ್ರದೇಶವನ್ನು ತಗ್ಗಿಸುವುದೂ ಪಕ್ಷಪಾತವಿಲ್ಲದ ಸರ್ಕಾರ ಕಾರ್ಯಗಳಲ್ಲಿ ಒಂದಾಗಿರುತ್ತೆ. ಹೀನ ಸ್ಥಿತಿಯಲ್ಲಿರುವ ಬಡಮಾಸ್ಟರುಗಳನ್ನು ಹ್ಯಾಗಾದರೂ ಪ್ರೋತ್ಸಾಹಿಸಬೇಕು. ತಾನಾಗಿ ವಿದ್ಯಾಭಿವೃದ್ಧಿಯಾಗುತ್ತಿರುವ ಟೌನುಗಳಲ್ಲಿ ಸರಕಾರದವರ ಪ್ರೋತ್ಸಾಹವು ಅನಾವಶ್ಯಕ. ಸುತ್ತಲೂ ಇರತಕ್ಕ ಪ್ರದೇಶವು ನಾಗರಿಕತೆಗೆ ಬಂದಹೊರತು ದೇಶೋನ್ನತಿಗೆ ಅವಕಾಶವಾಗಲಾರದು. ಆದರೆ ಮಾಸ್ಟರುಗಳು ಮಾತ್ರ ದಯಪಟ್ಟು ಧರ್ಮದೃಷ್ಟಿಯಿಂದ ಕೇವಲ ಸ್ವಾರ್ಥದಾಸೆ ಬಿಡದೆ ಹಿಂದೂ ಶಾಸ್ತ್ರಪ್ರಕಾರ ವಿದ್ಯಾದಾನ ಮಾಡಬೇಕಾಗಿ ಪ್ರಾರ್ಥಿಸುವ

ದೇಶಿಕ

ಸೆಂಟ್ರಲ್ ಮೊಹಮ್ಮಡನ್ ಅಸೋಸಿಯೇಷನ್ ಹಾಸ್ಟಲ್, ಬೆಂಗಳೂರು.

ಅಯ್ಯಾ,—ಈ ಹಾಸ್ಟಲ್ ಏರ್ಪಾಡು ಮಾಡಿದ್ದು ಸಂಘದವರ ಬಹಳ ಉಪಕಾರವೇ ಸರಿ. ಆದರೆ ಅದರ ಮೇಲ್ವಿಚಾರಣೆ ಸರಿಯಾಗಿಲ್ಲದೆ ಅಲ್ಲಿರುವ ವಿದ್ಯಾರ್ಥಿಗಳ ಪೈಕಿ ದೇಹದಾರ್ಢ್ಯ ಇರತಕ್ಕವರಿಗೇನೇ ಎಲ್ಲ ಪ್ರಿವಿಲೇಜುಗಳು ಉಂಟಾಗಿ ಚಿಕ್ಕವಯಸ್ಸು ಮತ್ತು ಬಲಹೀನರಿಗೆ ಬಹಳ ತೊಂದರೆಗಳು ಉಂಟಾಗಿವೆ. ಹಾಸ್ಟಲ್ ಸೆಕ್ರೆಟರಿ ಸಾಹೇಬರನ್ನು ಬಲವುಳ್ಳವರ ಕೋರಿಕೆ ಮಾಮೂಲೀನಿಂದ ಸ್ವಾಧೀನದಲ್ಲಿಟ್ಟುಕೊಂಡಿದ್ದ ಬಲಹೀನರ ರೂಮುಗಳನ್ನು ಬಿಡಿಸಿ ಬಲಶಾಲಿಗಳಿಗೆ ಕೊಡೋದೂ, ಬಲಶಾಲಿಗಳು ಬಿಟ್ಟ ರೂಮುಗಳಿಗೆ ಬಲಹೀನರಿಗೆ ಕಳಿಸುವುದೂ ಪ್ರತಿಯೊಂದು ಕೋರಿಕೆಯು ಈ ರೀತಿಯಿಂದ ಬಲಿಷ್ಠರೇ ನೆರವೇರಿಸುವುದೂ ಅನ್ಯಾಯಗಳು ನಡೆಯುತ್ತಿವೆ. ಸೆಕ್ರೆಟರಿ ಸಾಹೇಬರು ಇವರ ಸಿವಾಯಿ ಬಾಕಿ ಯಾವ ಮ್ಯಾನೇಜ್‌ಮೆಂಟಿಗೂ ಜಾಗಕೊಡುವುದು ಕಡಮೆ. ಚಿಕ್ಕವಯಸ್ಸು ಮತ್ತು ಬಲಹೀನರ ಫಿರ್ಯಾದಿ ಕೇಳುವರೇ ಕಾಣೆ. ಅನೇಕ ವಿದ್ಯಾರ್ಥಿಗಳು ಕೆಲವು ಕೆಲವು ದಿನ ಇದ್ದು ಹಾಸ್ಟಲ್ ಬಿಟ್ಟು ಹೋಗಿಬಿಡುತ್ತಾರೆ. ಇದರಿಂದ ಹಾಸ್ಟಲಿನ ಉದ್ದೇಶವು ಏನೂ ನೆರವೇರುವಂತೆ ಕಾಣುವುದಿಲ್ಲ. ದೂರದೂರದಿಂದ ಈ ಹಾಸ್ಟಲಿಗೆ ನಂಬಿಕೊಂಡು ಬಂದು ಇಲ್ಲಿನ ತೊಂದರೆಗಳು ಸಹಿಸದೆ ಹೊರಡಬೇಕಾಗಿ ಬಂದರೆ ಅಂಥಾ ವಿದ್ಯಾರ್ಥಿಗಳ ಗತಿಯೇನು? ಹಾಸ್ಟಲ್ ಮ್ಯಾನೇಜ್‌ಮೆಂಟ್ ಮತ್ತು ಉಸ್ತುವಾರಿ ಇನ್ನೂ ಚೆನ್ನಾಗದೆ ಹೋದರೆ ಅದು ಇರುವದಕ್ಕಿಂತಲೂ ಇಲ್ಲದೆ ಇರುವುದು ವಾಸಿ. ಅಸೋಸಿಯೇಷನ್ ಪ್ರಸಿಡೆಂಟರೂ ಮತ್ತು ಸೆಕ್ರೆಟರಿಯವರೂ ಇದರ ನೋಟೀಸ್ ತೆಗೆದುಕೊಂಡು ಹಾಸ್ಟಲ್ ಸ್ಥಿತಿಗತಿ ವಿಚಾರಿಸಿ, ಬಿಟ್ಟುಹೋದವರ ಕಷ್ಟಸುಖ ಕಾರಣಗಳು ವಿಚಾರಿಸಿ ಸರಿಪಡಿಸ್ಯಾರೆಂದು ನಂಬಿದೇನೆ.

ಟೌಳೂರು. ವಿದ್ಯಾರ್ಥಿಗಳ ಹಿತಚಿಂತಕ.

ಹೊಳೆನರಸೀಪುರದ ಪಂಚಮಾ ಸ್ಕೂಲುಗಳು.

ಅಯ್ಯಾ,—ಇಲ್ಲಿನ ಪಂಚಮರಿಗಾಗಿ ಒಂದು ಸ್ಕೂಲ್, ಕೋಟೆಯಲ್ಲಿ ಮತ್ತೊಂದು ಸ್ಕೂಲ್ ಏರ್ಪಡಿಸಬೇಕೆಂದು ಯಾರೋ ಸಲಹೆ ಕೊಟ್ಟಂತೆ ಕೇಳುತ್ತೇನೆ. ಗೌರ್ನಮೆಂಟಿನಿಂದ ಹೆಚ್ಚು ಹಣ ಖರ್ಚುಮಾಡಿಸುವದರಿಂದ ಆತನು ತನ್ನ ಪ್ರೌಢಿಮೆಯನ್ನು ತೋರ್ಪಡಿಸಿಕೊಳ್ಳಲೋಸುಗ ಕೊಟ್ಟ ಸಲಹೆ ಆಗಿದೆ. ಹೇಗೆಂದರೆ ಈ ಊರಿನ ಪಂಚಮರಿಗೋಸ್ಕರ ಒಂದು ಸ್ಕೂಲ್ ಕೋಟೆ ಮತ್ತು ಪೇಟೆಯ ಹಿಂದು ಎಲ್ಲಾ ಮಕ್ಕಳಿಗೆ ಅಂದರೆ ಹೆಣ್ಣುಮಕ್ಕಳಿಗೆ ಎರಡು ಸ್ಕೂಲ್‌ಗಳೂ ಸಹ ಈಗ್ಗೆ 20 ವರ್ಷಗಳ ಲಾಗಾಯ್ತು ವೆಸ್ಲಿಯನ್ ಮಿಷನ್ ಸಂಘದವರು ಇಟ್ಟು ಪ್ರಜೆಗಳಿಂದ ಯಾವುದೊಂದು ಪ್ರಯೋಜನವೂ ಇಲ್ಲದೆ ವರ್ಷ ಒಂದಕ್ಕೆ ಸಾವಿರಾರು ರೂಪಾಯಿ ವೆಚ್ಚಮಾಡುತ್ತ ಬಹು ಉತ್ಸಾಹದಿಂದ ವಿದ್ಯಾಭ್ಯಾಸ ಮಾಡಿಸುತ್ತಿರುವರು. ಹೀಗಿರುತ್ತಾ ನಮ್ಮಗಳ ಮಕ್ಕಳಿಗೆ ಇಂಗ್ಲಿಷ್ ಭಾಷಾ ಪರಿಚಯವು ಬಹು ಆಗತ್ಯವೆಂದು ಕೇಳಿಕೊಂಡುದಕ್ಕೆ ಇಲ್ಲಿನ ಕೋಟೆಗರ್ಲ್ಸ್ ಸ್ಕೂಲಿನಲ್ಲಿ ಇಂಗ್ಲಿಷ್ ಹೇಳಲು ಒಬ್ಬ ಉಪಾಧ್ಯಾಯರನ್ನು ನೇಮಿಸಿ ಕೊಟ್ಟಿರುತ್ತಾರೆ. ಇಂಗ್ಲಿಷ್ ಹೇಳಿಸಬೇಕೆಂಬುವ ಸಲಹೆಯೂ ಓದಲೇ ಬೇಕೆಂಬ ಪ್ರೋತ್ಸಾಹವನ್ನು ಮಕ್ಕಳಿಗೂ ಉಂಟುಮಾಡಿ ಪ್ರತಿ ಶನಿವಾರವೂ ಸ್ಕೂಲಿಗೆ ದಯಮಾಡಿ ಒಂದು ವಾರದಿಂದ ಮಕ್ಕಳು ಅಭ್ಯಾಸಿಸಿರುವ ಇಂಗ್ಲಿಷ್ ಪಾಠ ಪರೀಕ್ಷೆ ಮಾಡುತ್ತಲೂ ಮಕ್ಕಳಿಗೂ, ಮಾಸ್ಟರಿಗೂ ಒಳ್ಳೆಯ ತಿಳುವಳಿಕೆ ಹೇಳುತ್ತಲೂ ಇರುವ ಮ॥ ಸ್ಲೇಟರ್ ಕೆ ರಾಮಣ್ಣನವರನ್ನು ತುಂಬಾ ವಂದಿಸುತ್ತೇನೆ. ಮತ್ತು ಕೋಟೆ, ಪೇಟೆ ಗಂಡುಮಕ್ಕಳಿಗಾಗಿ ಸರ್ಕಾರದವರು 3 ಪಾಠಶಾಲೆಗಳನ್ನು ಧರ್ಮಾರ್ಥವಾಗಿ ಸ್ಥಾಪಿಸಿರುವರು. ಹೀಗೆ ಸ್ಕೂಲುಗಳು ಸಮಗ್ರವಾಗಿರುವ ಸಂಗತಿ ತಿಳುವಳಿಕೆ ಇರಬಹುದು. ಹಾಲೀ ಇರುವ ಸ್ಕೂಲಿಗೇನೇ ಮಕ್ಕಳನ್ನು ಕಳುಹಿಸಲು ಸರ್ವರೂ ಪ್ರಯತ್ನ ಪಡಬೇಕೆಂದು ಕೇಳಿಕೊಳ್ಳುವುದಲ್ಲದೆ ಬೇರೆ ಸ್ಕೂಲನ್ನೇ ಇಡದೆ ಸ್ಕೂಲಿನಲ್ಲಿ ಹಾಲಿ ಇರುವ ಮಕ್ಕಳ ಜೊತೆಗೆ ಇದಕ್ಕೆ ಎರಡು ಮೂರರಷ್ಟು ಮಕ್ಕಳುಗಳನ್ನು ಮೇಲ್ಕಂಡ ಕಮಿಟಿಯ ಮೆಂಬರುಗಳು ಪ್ರೋತ್ಸಾಹಿಸಿ ಸೇರಿಸಕೊಟ್ಟರೂ ವಿದ್ಯಾ ಹೇಳಲು ಶಕ್ತರಾದವರು ಹಾಲಿ ಮಾಸ್ಟರಾಗಿರುತ್ತಾರೆ. ಹೀಗಿರುತ್ತಾ ಬೇರೆ ಸ್ಕೂಲುಗಳೇಕೆ? ಗೌರ್ನಮೆಂಟಿಗೆ ಹೆಚ್ಚು ಖರ್ಚೇಕೆ? ಸರ್ಕಾರದಿಂದ ಗ್ರ್ಯಾಂಟ್ ಕೊಟ್ಟರೂ ಮಾಹೆಯಾನಾ 3 ರೂಪಾಯಿ ಸಹ ಕೊಡಲಾರದಷ್ಟು ದರಿದ್ರರಾಗಿ ವಿದ್ಯದ ಗಂಧವೇ ತಿಳಿಯದ ವಿದ್ಯೆ ಕಲಿಯಬೇಕೆಂದು ಅಪೇಕ್ಷೆ ಪಡುವ ಹಳ್ಳಿಯ ಬಡ ರೈತರ ಕಡೆಗೆ ಈ ದೃಷ್ಟಿ ಹರಿದರೆ ದೇಶವು ನಾಗರಿಕತೆಗೆ ಆವಾಸಸ್ಥಾನವಾದೀತೆನ್ನುವುದರಲ್ಲಿ ಸಂಶಯವಿಲ್ಲ.

ಪುರವಾಸಿ

ಹುಣಸೂರು ಮೋಟರುಗಳ ವಿಚಾರ.—ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಹಗ್ಗದದೇವನಕೋಟೆ ಆಸ್ಪತ್ರೆ ಅನಾಚಾರಗಳ ವಿಷಯದಲ್ಲಿ ಅಲ್ಲಿನ ಪ್ರಜೆಗಳು ಅರ್ಜಿಗಳನ್ನು ಬರೆದುಕೊಂಡಂತೆಯೂ, ಸಿವಿಲ್ ಸರ್ಜನ್ ರವರು ಹೋಗಿದ್ದಾಗ ಮೌಖಿಕ ಅಹವಾಲು ಹೇಳಿಕೊಂಡುಕೆಯೂ, ಇಲಾಖೆಯವರು ಇದುವರೆಗೆ ಏನೂ ಮಾಡದೆ ಇರುವಂತೆಯೂ ನಮ್ಮಲ್ಲಿಗೆ ಒಂದು ಬಾತ್ಮಿ ಬಂದಿದೆ. ಮುಖಂಡರಾದ ಪ್ರಜೆಗಳು ಸೀನಿಯರ್ ಸರ್ಜನ್ ರವರಿಗೂ ದಿವಾನ್ ರವರಿಗೂ ಬರೆದುಕೊಂಡರೆ ಅವರು ತನಿಖೆಯಿಂದ ಸರಿಪಡಿಸುತ್ತಾರೆಂದು ನಂಬುತ್ತೇವೆ. ಈಗಲೇ ಈ ಬಾತ್ಮಿಯನ್ನು ಪ್ರಕಟಿಸಲು ನಮಗೆ ಇಷ್ಟವಿಲ್ಲ. —ಎಡಿ.]

ತಾಲ್ಲೋಕು ವರ್ತಮಾನಗಳು.

ಹುಣಸೂರು.—ಈಚೆಗೆ 7-8 ದಿನಗಳ ಕೆಳಗೆ 2-3 ದಿನ ಮೋಡ ಕವಿದು ಮಳೆಯೂ ಬಂತು. ಇದು ಅಪರೂಪವೆಂದು ಹೇಳುವರು. ಇನ್ನೂ ಸುಮಾರಾಗಿ ಮೋಡವಾಡುತ್ತಲೇ ಇದೆ. ಬಿಸಿಲೂ ತೀಕ್ಷ್ಣವಾಗಿ ಕಾಯುತ್ತಿರುವುದು — ಪ್ಲೇಗ್ ಗಲಾಟೆ ಇನ್ನೂ ಕೊಂಚ ಇದ್ದೇ ಇದೆ. 8-10 ಜನ ತೀರಿಹೋದರು. ಹಲವರು ಆಗಲೇ ಊರು ಬಿಟ್ಟು ಹೋದರು. ಬಿಡುವುದಕ್ಕೆ ಮನಸ್ಸಿಲ್ಲದೆ ಇಲ್ಲವೇ ಬಿಡಲು ಅನುಕೂಲವಿಲ್ಲದೆ ಕೆಲವರು ಇನ್ನೂ ಕಾದುಕೊಂಡೇ ಇದ್ದಾರೆ. ಇನ್ನೂ ಅಲ್ಲಲ್ಲಿ ಇಲಿಗಳು ಸಾಯುತ್ತಿರುವುದಾಗಿ ವರ್ತಮಾನವಿದೆ. ಇಂಥಾ ಕಷ್ಟಕಾಲದಲ್ಲಿ ಮೆಂಬರುಗಳು ತಮ್ಮ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಇದು ತಕ್ಕ ಸಮಯವಾಗಿದೆ. ಮುನಿಸಿಪಲ್ ಮೆಂಬರುಗಳು ದೊಡ್ಡ ಬೀದಿ ರಸ್ತೆಗಳನ್ನು ಮಾತ್ರವಲ್ಲದೆ ಊರಿನ ಸಣ್ಣಪುಟ್ಟ ಗಲ್ಲಿಗಳನ್ನೆಲ್ಲಾ ಸಂಚರಿಸಿ ಊರಿನ ಒಟ್ಟು ರೊಚ್ಚು, ಕಸ್ಸು ಮುಂತಾದುದೆಲ್ಲಾ ಹೊರಗೆ ಸಾಗಿಹೋಗುವ ಹಾಗೆ ಜವಾನರಿಗೆ ಸಲಹೆ ಸಹಾಯಗಳನ್ನು ಕೊಟ್ಟರೆ ತುಂಬಾ ಅನುಕೂಲವಾಗಿರುವುದು.

ಶ್ಯಾಮಗೊಂಡ್ಲು.—ಕೆಲವು ದಿನಗಳಿಂದ ಮೋಡವಾಡುತ್ತಾ, ಗಾಳಿ ಬೀಸುತ್ತಾ ಇದೆ. ಅಲ್ಲಲ್ಲಿ ಮರರ್ನ್ ಎಂಬ ರೋಗವು ತಲೆದೋರಿದೆ. ಇದು ಸುಗ್ಗಿ ಕಾಲವಾದರೂ, ಧಾರಣೆವಾಸಿಗಳು ಶ್ಯಾಮಕ್ಕಿಂತ ಭಯವಾಗಿರುತ್ತವೆ.—ತುಂಕೂರಿಂದ ಬೆಳಿಗ್ಗೆ ಬಿಡತಕ್ಕದ್ದ ಬೋಳ್ಲ ಟ್ರೈನ್ ನಿಲ್ಲಿಸಿದ್ದರಿಂದ ಬೆಂಗಳೂರಿಗೆ ಕೋರ್ಟ್ ಕೆಲಸಕ್ಕೆ ಹೋಗತಕ್ಕವರು ರಾತ್ರಿ ಕಳೆಯಲು ಅನುಕೂಲವಿಲ್ಲದವರು ರಾತ್ರಿ ಮೇಲ್‌ನಲ್ಲಿ ಬರಬೇಕಾಗಿದೆ. ಮೇಲ್ ಗಾಡಿಯು ದೊಡ್ಡಬೆಲೆಯಲ್ಲಿ ನಿಂತರೂ, ಅಲ್ಲಿಂದ ಈ ಊರಿಗೆ ರಸ್ತೆ ಇಲ್ಲವಾದ್ದರಿಂದ ನಡುವಂದಕ್ಕೆ ಬರಲು ಮೇಲ್ ನಿಲ್ಲುವದಿಲ್ಲ. ಪ್ರಯಾಣಿಕರು ದೊಡ್ಡಬೆಲೆಗಿಂತಲೂ, ನಡುವಂದದಲ್ಲಿ ಹತ್ತುವದು ಹೆಚ್ಚಾದ್ದರಿಂದ ರೈಲ್ವೆ ಕಂಪನಿಯವರು ರಾತ್ರಿ ಮೇಲ್ ನಡುವಂದರಲ್ಲಿ 5 ನಿಮಿಷ ನಿಲ್ಲುವಂತೆ ಏರ್ಪಡಿಸಿದರೆ ತುಂಬಾ ಉಪಕಾರವಾಗಿರುತ್ತೆ. ಇತರ ಗಾಡಿಗಳಲ್ಲಿ ಸ್ಥಳವಿಲ್ಲದೆ ಪ್ರಯಾಣಿಕರಿಗೆ ತುಂಬಾ ತೊಂದರೆ — ಕೆಲವು ದಿನಗಳ ಹಿಂದೆ ಬೆಂಗಳೂರಿಂದ 7 ಘಂಟೆಗೆ ಹೊರಡುವ ಪ್ಯಾಸೆಂಜರ್ ಗಾಡಿಗೆ ಗೊಲ್ಲಹಳ್ಳಿಯ ಹತ್ತಿರ 5 ಭಾರಿ ಎತ್ತುಗಳು ಏಕಕಾಲದಲ್ಲಿ ಸಿಕ್ಕಿ ಹೋದವು. ದೈವಕೃಪೆಯಿಂದ ಗಾಡಿಗೆ ಏನೂ ಅಪಾಯವಾಗಲಿಲ್ಲ.—ನೆಲಮಂಗಲ ತಾಲ್ಲೋಕು ಅಮಲ್ದಾರ್ ರವರು ವರ್ಗವಾದ್ದರಿಂದ ಈ ಊರಿನ ಪ್ರಜೆಗಳಿಗೆ ಬಹು ಸಂತಾಪವಾಗಿದೆ. ಇವರ ಹಿಂದೆ ಬರತಕ್ಕವರು ಒಳ್ಳೇ ಹೆಸರನ್ನು ಹೊಂದಬೇಕೆಂದು ನಿರೀಕ್ಷಿಸಲ್ಪಟ್ಟಿದೆ.

ಹೊಸಕೋಟೆ ತಾ॥ ಕಲ್ಕುಂಟೆ ಅಗ್ರಹಾರ.—ಸುಗ್ಗಿ ಕಾಲವು ಪ್ರಾಪ್ತವಾದರೂ ಈ ಪ್ರಾಂತ್ಯದಲ್ಲಿ ಧಾರಣೆವಾಸಿಗಳು ಮಾತ್ರ ಕ್ಷಾಮಕಾಲವನ್ನು ಸೂಚಿಸುತ್ತವೆ. ಈ ಕಾಲದಲ್ಲಿಯೂ ಕೂಡ ಬಡಬಗ್ಗರಿಗೆ ಜೀವನ ನಡೆಯುವದು ದುಸ್ತರವಾಗಿದೆ. ದಯಾಳುಗಳಾದ ಸರ್ಕಾರದವರು ಅಳತೆ ಸೇರು, ತೂಕದ ಬೊಟ್ಟು ಮುಂತಾದವುಗಳನ್ನು ನಗದಿಮಾಡಿ ಬಹಳ ದಿವಸಗಳು ಕಳೆದಾಗ್ಯೂ ಈ ಪ್ರಾಂತ್ಯದಲ್ಲಿ ನಡೆಯುವ ಸಂತೆಗಳಲ್ಲಿ ಮಾತ್ರ ಪೂರ್ವದಂತೆ ಪಿಟ್ಟೆ ಸೇರು, ಪಿಟ್ಟೆ ಬೊಟ್ಟು ಮುಂತಾದವುಗಳನ್ನೇ ಉಪಯೋಗಿಸಿ ಜನಗಳಿಗೆ ಮೋಸಮಾಡುತ್ತಾರೆ. ಈ ವಿಷಯದಲ್ಲಿ ಸರ್ಕಾರದವರ ಗಮನವು ಶೀಘ್ರದಲ್ಲಿ ಕೊಡಲ್ಪಡುವದೆಂದು ನಂಬಿರುತ್ತೇವೆ.—ಕಳೆದ 10 ದಿವಸಗಳಿಂದ ಈ ಪ್ರಾಂತ್ಯದಲ್ಲಿ ಬಹಳವಾಗಿ ಮೋಡವಾಡುತ್ತಾ ಇದೆ. ಶೀತವಾದ ಗಾಳಿ, ಶಂಕರು ಮುಂತಾದವುಗಳಿಂದ ರೈತರ ಕೆಲಸ ಕಾರ್ಯಗಳಿಗೆಲ್ಲಾ ತುಂಬಾ ಅನನುಕೂಲವಾಗಿದೆ. ಬಿಸಿಲಿಲ್ಲದೆ ಜನಗಳಿಗೆ ಯಾವ ಕೆಲಸ ಮಾಡುವದಕ್ಕೂ ಜುಗುಪ್ಸೆಯುಂಟಾಗಿದೆ.—ಈಗಿನ ಬಾಯ್ಸ್ ಸ್ಕೂಲು ಹೆಡ್ ಮಾಸ್ಟರವರು ಇಲ್ಲಿಗೆ ಬಂದ ಮೇಲೆ ಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಮಟ್ಟಿಗೆ ಹೆಚ್ಚಿರುವದಲ್ಲದೆ ಈ ಸ್ಕೂಲು ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಸ್ಥಿತಿಯನ್ನೈದುತ್ತಾ ಇದೆ. ಇಲ್ಲಿ ಅವರು ಅ॥ ಮಾಸ್ಟರುಗಳ ಸಹಾಯದಿಂದ ಉಪಾಧ್ಯಾಯರ ಸಂಘವೊಂದನ್ನು ಸ್ಥಾಪಿಸಿದರು; ಚಿಕ್ಕಬಳ್ಳಾಪುರದ ಸುಬ್ರಾನಪೇಟೆ ಪ್ರೈಮರಿ ಸ್ಕೂಲ್ ಮುಖ್ಯೋಪಾಧ್ಯಾಯರ ಸಲಹೆಯಂತೆ ಇಲ್ಲಿ ಒಂದು ಪರಸ್ಪರ ಸಹಾಯಕ ಸಂಘವನ್ನು ಮಾಡಬೇಕೆಂದು ಅದರ ಪ್ರಯೋಜನಗಳನ್ನು ರೈತಾಪಿಜನಗಳಿಗೂ ಮತ್ತು ಇತರರಿಗೂ ವಿವರಿಸುತ್ತಲೇ ಇದಾರೆ; ಮತ್ತು ಇಲ್ಲಿ ಹೊಸದಾಗಿ ಒಂದು ಸ್ಕೂಲು ಕಟ್ಟಡವನ್ನು ಕಟ್ಟಿಸಬೇಕೆಂದು ಸ್ಕೂಲು ಕಮಿಟಿ ಮೆಂಬರುಗಳಿಗೂ ಮತ್ತು ಗ್ರಾಮ ಮುಖಂಡರಿಗೂ ಆಗಾಗ್ಗೆ ಬಹಳವಾಗಿ ಪ್ರೋತ್ಸಾಹವನ್ನು ಕೊಡುತ್ತಾ ಇದಾರೆ. ಈ ಮಧ್ಯೆ ಇದಕ್ಕನುಸಾರವಾಗಿ ಇಲ್ಲಿ ನಡೆದ ಉಪಾಧ್ಯಾಯರ ಸಂಘಕ್ಕೆ ಅಗ್ರಾಸನಾಧಿಪತಿಗಳಾಗಿ ದಯಮಾಡಿಸಿದ ಈ ಡಿಸ್ಟ್ರಿಕ್ಟಿನ ಸ್ಕೂಲುಗಳ ಅ॥ ಡೆ॥ ಇನ್॥ ಮ॥ ಎ. ಅನಂತಸುಬ್ಬರಾವ್‌ಯವರು ಮೇಲ್ಕಂಡ ಸ್ಕೂಲು ಕಟ್ಟಡದ ವಿಚಾರವಾಗಿ ಸದರಿ ಸ್ಕೂಲು ಕಮಿಟಿ ಮೆಂಬರುಗಳಿಗೂ ಮತ್ತು ಗ್ರಾಮ ಮುಖಂಡರಿಗೂ ಕೆಲವು ಸಂಗತಿಗಳನ್ನು ಅಪ್ಪಣೆಕೊಡಿಸಿದ್ದರ ಮೇಲೆ ಎಲ್ಲರೂ ಒಂದೇ ಮನಸ್ಸಿನಿಂದ ಈ ಕಾರ್ಯವನ್ನು ಕ್ಷಿಪ್ರದಲ್ಲಿಯೇ ನೆರವೇರಿಸಬೇಕೆಂದು ಕಂಟ್ರಿಬ್ಯೂಷನ್ ಹಣಕ್ಕಾಗಿ ತುಂಬಾ ಏರ್ಪಾಡುಗಳನ್ನು ಮಾಡುತ್ತಾ ಇದಾರೆ.—ಈಗ ಪ್ರಾಪ್ತವಾಗಿರುವ ಮಹಾ ಯುದ್ಧದಲ್ಲಿ ನಮ್ಮ ಸಾರ್ವಭೌಮ ಸರ್ಕಾರಕ್ಕೆ ಜಯಪ್ರದ ಉಂಟಾಗಬೇಕೆಂದು ಆಗಾಗ್ಗೆ ಅಲ್ಲಿನ ಶ್ರೀ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಪ್ರಾರ್ಥನೆಗಳು ನಡೆಯುತ್ತಲೇ ಇವೆ. ಶ್ರೀ ರಂಗನಾಥಸ್ವಾಮಿಯು ಈ ಘೋರ ಯುದ್ಧವನ್ನು ಕ್ಷಿಪ್ರದಲ್ಲಿಯೇ ಕೊನೆಗಾಣಿಸಿ ನಮ್ಮ ಬ್ರಿಟಿಷ್ ರಾಜ್ಯಭಾರಕ್ಕೆ ಎಂದಿಗೂ ಚ್ಯುತಿಯಿಲ್ಲದೆ ಮಾಡಲೆಂದು ಸದಾ ಪ್ರಾರ್ಥಿಸುತ್ತೇವೆ.

ಕೊಪ್ಪ ತಾ॥ ಹೊಸಕೊಪ್ಪ ಗ್ರಾಮ.—ನಮ್ಮ ಯುವರಾಜ ಕಂಠೀರವನರಸರಾಜ ಒಡೆಯರ್, ಜಿ. ಸಿ. ಐ. ಇ ಯವರು ದಿವಾನ್ ಸಾಹೇಬರು ಮ॥ ವಿಶ್ವೇಶ್ವರಯ್ಯನವರೊಡನೆ ತಾ. 20 ನೇ ಬುಧವಾರ ಮಧ್ಯಾಹ್ನ 12½ ಗಂಟೆಗೆ ಸರಿಯಾಗಿ ಕೊಪ್ಪದಿಂದ ಮೋಟರಿನಲ್ಲಿ ದಯಮಾಡಿಸಿದರು. ಇವರ ಭೇಟಿಗೆ ಶೃಂಗೇರಿಯಿಂದಲೂ, ಹಳ್ಳಿಗಳಿಂದಲೂ ಜನಗಳು ನೆರದಿತ್ತು. ಶೃಂಗೇರಿ ಡೆಪ್ಯುಟಿ ಅಮಲ್ದಾರ್ ಮ॥ ಗರುಡಯ್ಯಂಗಾರ್ರು, ಮ॥ ಕೊಪ್ಪದ ಕೃಷ್ಣರಾಯರು ಶ್ರೀಯುವರನ್ನು ಎದುರುಗೊಂಡು ಜನಗಳು ತುಂಬಿದ್ದ ಎಗ್ಜಿಬಿಷನ್ ಹಾಲ್ ಚಪ್ಪರಕ್ಕೆ ಕರಕೊಂಡು ಬಂದರು. ಈ ಗ್ರಾಮದ ವಿ. ಇ. ಸ್ಕೂಲ್ ಬಾಲಕರು ಮ॥ ಕೃಷ್ಣರಾಯರು ಮಾಡಿದ ಹಾಡನ್ನು ಹೇಳಿದರು. ಶೃಂಗೇರಿ ಎ. ವಿ. ಸ್ಕೂಲ್ ಬಾಲಕರು ಟೀಟ್ ಶ್ರಿಂಗೇರಿ ಶ್ರೀಜಗದ್ಗುರು ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿಗಳು ಮಾಡಿದ್ದ ರಾಜಾಶೀರ್ವಾದವನ್ನು ಹೇಳಿ ಸ್ವಾಗತವನ್ನು ಬಯಸಿದರು. ತರುವಾಯ ಮ॥ ಕೃಷ್ಣರಾಯರು—ಯುವರಾಜರವರು ಮಲೆನಾಡಿನ ಪ್ರಜೆಗಳ ಅಭಿವೃದ್ಧಿಗೆ ದಯಮಾಡಿಸಿದ ಸಂತೋಷವನ್ನು ತಿಳಿಸಿ, ಎಗ್ಜಿಬಿಷನನ್ನು ತೆರೆಯಬೇಕೆಂದು ಪ್ರಾರ್ಥಿಸಿದರು. ಯುವರಾಜರವರು—ಮ॥ ಕೃಷ್ಣರಾಯರು ಮಲೆನಾಡಿನಲ್ಲಿ ಪ್ರದರ್ಶನ ನಡೆಯುವ ಏರ್ಪಾಡು ಮಾಡಿದ್ದಕ್ಕೆ ಸಂತೋಷವನ್ನು ಹೇಳಿ ಪ್ರದರ್ಶನ ಶಾಲೆಯನ್ನು ಪ್ರವೇಶಿಸಿ, ವಸ್ತುಗಳನ್ನು ನೋಡಿದರು. ಇಲ್ಲಿ ಚಿಕ್ಕಮಗಳೂರು ಬಾಲಕಿಯರು ಹೆಣೆದ ಬಟ್ಟೆಗಳೂ, ಸೊರಬದ ಗಂಧದ ಮರದ ಸಾಮಾನುಗಳೂ, ಶೀರೆಗಳೂ, ಸೂಲಿಕೆಗಳೂ, ಅಡಿಕೆ, ಯಾಲಕ್ಕಿ, ಧಾನ್ಯಗಳ ಪದಿನಮೂನಾತುಗಳೂ, ಎಲ್ಲಾ ಜಾತಿಯ ಮರಗಳೂ, ಮ॥ ಶ್ರೀನಿವಾಸರಾಯರ ಮಂಗಳೂರು ಹಂಚುಗಳೂ, ಸಾಹುಕಾರ್ ಚೆನ್ನಕೇಶವರಾಯರು ಕಳುಹಿಸಿದ ಸಾಮಾನುಗಳೂ, ಶೃಂಗೇರಿ ಮಠದ ಮ. ಕೆ. ವೈದ್ಯಶಾಸ್ತ್ರಿಗಳ ಔಷಧಗಳೂ, ಮಂಗಳೂರು ಉಡುಪಿ ಆಯುರ್ವೇದ ಔಷಧಗಳೂ, ಕುರಿ ಮಡಿಕೆಗಳೂ, ಮಲೆನಾಡು ತರಕಾರಿಗಳೂ, ಗೆಡ್ಡೆ ಗೆಣಸುಗಳೂ ಅನೇ ಮಾಡಿಟ್ಟಿದ್ದವು. ಕಾಫಿ ಪ್ಲಾಂಟರ್ ಮ॥ ಶ್ರೀನಿವಾಸರಾಯರು, ಕಡೂರು ಡೆ॥ ಡೆಪ್ಯುಟಿ ಕಮಿಷನರ್ ಸಾಹೇಬರೂ ಶೃಂಗೇರಿ ಡೆಪ್ಯುಟಿ ಅಮಲ್ದಾರರೂ ವಿವರವಾಗಿ ಎಲ್ಲವನ್ನು ತೋರಿಸಿದರು. ಯುವರಾಜರವರು ಮಲೆನಾಡಿನಲ್ಲಿ ನಡೆದ ಈ ಎಗ್ಜಿಬಿಷನ್ ಮೊದಲನೆಯದಾದ್ದರಿಂದ ಬಹಳಸಂತೋಷಪಟ್ಟು ನೋಡಿಕೊಂಡು ಕೊಪ್ಪಕ್ಕೆ ಹೊರಟುಹೋದರು. ಈ ಎಗ್ಜಿಬಿಷನ್‌ಗೆ ಶೃಂಗೇರಿ ಡೆಪ್ಯುಟಿ ಅಮಲ್ದಾರ್ರು, ಕೃಷ್ಣರಾಯರೂ ಸಕ್ರೆಟರಿಗಳಾಗಿದ್ದು ಈ ಪ್ರದರ್ಶನವನ್ನು ಬಹಳ ಮುತುವರ್ಜಿಯಿಂದ ನಡಿಸಿದರು. ಹತ್ತು ದಿನಗಳವರೆಗೂ ಜನರು ನೋಡಿಕೊಂಡು ಹೋಗಲು ಅನುಕೂಲವಾಗುವಂತೆ ಏರ್ಪಾಡು ಮಾಡಿದಾರೆ.—ಈ ಗ್ರಾಮಕ್ಕೆ ಪೋಸ್ಟಲ್ ಸೂಪರಿಂಟೆಂಡೆಂಟವರು ಸದ್ಯದಲ್ಲಿ ಪೋಸ್ಟ್ ಆಫೀಸು ಇಡಿಸಿಕೊಡುವದಾಗಿ ಹೇಳಿದಾರೆ — ಸ್ಕೂಲ್ ಮಾಸ್ಟರು ಮ॥ ಪರಮೇಶ್ವರಭಟ್ಟರು ಸ್ಕೂಲನ್ನು ಅಭಿವೃದ್ಧಿಗೆ ತಂದಿದಾರೆ. ಇಂಗ್ಲಿಷ್ ಸ್ಕೂಲಿಗೆ ತಾವೂ ಓದು ಆಗುತ್ತಿದೆ. ಮ॥ ಕೃಷ್ಣರಾಯರು ಈ ಮಲೆನಾಡನ್ನು ಅಭಿವೃದ್ಧಿಗೆ ತರಬೇಕೆಂದು ಇಷ್ಟು ಕೆಲಸವನ್ನು ಮಾಡುತ್ತಿರುವದಕ್ಕೆ ಈ ಪ್ರಾಂತ್ಯದ ರೈತರು ಅವರನ್ನು ಕೊಂಡಾಡುತ್ತಾರೆ. ಮಲೆನಾಡಿನಲ್ಲಿ ಇದು ಬೈಲ್‌ಸೀಮೆಯ ಆರೋಗ್ಯ ಸ್ಥಿತಿಯಲ್ಲಿದೆ. ಹಳ್ಳಿಗಳ ಬಾಲಕರು ಒಂದು ನಾಟಕವಾಡಿ ಓದುವುದಕ್ಕೆ ಏರ್ಪಾಡುಗಳು ನಡೆಯುತ್ತವೆ.

ಹೊಳೆನರಸೀಪುರ.—ಈ ಸಂವತ್ಸರವೆಲ್ಲಾ ಮಳೆ ಕಡಮೆಯಾದುದರಿಂದ ಊರೊಳಗಿನ ಕೆಲವು ಭಾವಿಗಳಿಗೆ ನೀರೇ ಬರಲಿಲ್ಲ. ನೀರು ಇದ್ದ ಕೆಲವು ಭಾವಿಗಳು ಬತ್ತುತ್ತಲಿವೆ. ಸುಗ್ಗಿಯ ಕಾಲವಾದರೂ ದವಸ ಧಾನ್ಯಗಳ ಧಾರಣೆ ಇಳಿಯಲೇ ಇಲ್ಲ.—ಟವರ್ ಪಾಕೇಜಾ ವಿಷಯ ಹಾಲಿ ಸ್ವಲ್ಪವೂ ತೃಪ್ತಿಕರವಾಗಿಲ್ಲ. ಕೆಲವು ಸಣ್ಣಸಣ್ಣ ಬೀದಿಗಳನ್ನು ಗುಡಿಸುವುದೇ ಇಲ್ಲ. ನೀಲಕಂಠೇಶ್ವರಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಚರಂಡಿಯ ನಾತವು ಬಹು ದೂರದವರೆಗೂ ವ್ಯಾಪಿಸುತ್ತದೆ. ಇವೆಲ್ಲವೂ ಮುನಿಸಿಪಲ್ ಆಫೀಸರ ದರ್ಶನಕ್ಕೆ ಯಾವಾಗ ಬರುವುದೋ! ಮ್ಯುನಿಸಿಪಲ್ ಕೆಲಸವು ಬಹು ಮಂದಿ ಮೆಂಬರುಗಳ ಮಧ್ಯದಲ್ಲಿ ನಿಂತುದೇ ಇದಕ್ಕೆ ಕಾರಣವೆಂದು ನೆನಸುತ್ತೇನೆ. ಹೇಗೆಂದರೆ ಒಬ್ಬ ಆಫೀಸರ ಆಡಳಿತದಲ್ಲಿದ್ದುದೇ ತೃಪ್ತಿಕರವಾಗಿತ್ತು. ಈ ಮಾತುಗಳು ಚಿಟ್ಟನಹಳ್ಳಿ ಬೀದಿಗೂ, ಪೇಟೆಯ ಪೂರ್ವಭಾಗದ ಬೀದಿಗೂ, ಅಗಸರ ಬೀದಿಗೂ ಅನ್ವಯಿಸುವವು.—ನಮ್ಮ ಅಮಲ್ದಾರ್ರವರು ಈ ಊರಿನಲ್ಲಿ ಪ್ರತಿ ಸೋಮವಾರ ಸಂತೆಗೆ ದವಸದ ಕಳ್ಳತನದ ವ್ಯಾಪಾರಕ್ಕೆ ಅವಕಾಶವಿಲ್ಲದಂತೆಯೂ, ಈಗಿನ ರೂಲ್ಸ್ ಮೇರೆ ಹೊಸ ಕೊಳ, ಅಳತೆಗಳ ನಿಬಂಧನೆಯನ್ನು ವ್ಯಾಪಾರಿಗಳಿಗೆ ತಿಳುವಳಿಕೆ ಕೊಟ್ಟು ಜಾರಿಗೆ ತರುತ್ತಲೂ ಇರುವುದಲ್ಲದೆ ಅವರ ಸಹಜವಾದ ಪ್ರಜಾ ವಾತ್ಸಲ್ಯವು ಸ್ತೋತ್ರಾರ್ಹವೇ ಆಗಿರುತ್ತದೆ.—ಈಗ್ಗೆ 5-6 ದಿವಸಗಳ ಹಿಂದೆ ಕಂಪಲ್ಸರಿ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿ ಮ|| ಕೆ. ಕೃಷ್ಣರಾಯರು ದಯಮಾಡಿಸಿದ್ದರು. ವಿದ್ಯಾಭ್ಯಾಸವನ್ನು ಮಕ್ಕಳಿಗೆ ಮಾಡಿಸಿಯೇ ತೀರಬೇಕೆಂಬ ಬುದ್ಧಿವಾದವನ್ನು ಜನಗಳಿಗೆ ತಿಳುವಳಿಕೆ ಕೊಡುವುದಕ್ಕಾಗಿ ಹತ್ತು ಜನ ಮೆಂಬರುಗಳನ್ನು ಚುನಾಯಿಸಿರುವುದಾಗಿ ತಿಳಿಯುತ್ತದೆ.

ಹಾಸನ.—ಕಳೆದ ತಿಂಗಳು ಈ ನಗರದಲ್ಲಿ ಇಲಿಗಳು ಮಾತ್ರ ಸಾಯುತ್ತಲಿವೆ ಎಂಬ ಸುದ್ದಿಯಿತ್ತು. ವಿಶೇಷ ಭಯಾವಕಾಶವೇನೂ ಇರಲಿಲ್ಲವಾದುದರಿಂದ ಪಶು ಪ್ರದರ್ಶನ, ಪರಸ್ಪರ ಸಹಾಯ ಸಂಘಗಳ ಪರಿಷತ್ತು, ಇವುಗಳು ತೃಪ್ತಿಕರವಾಗಿಯೂ ಸಂತೋಷದಿಂದಲೂ ನೆರವೇರಿದುವು. ಈಚೆಗೆ ಪ್ಲೇಗು ರೋಗವು ವಿಶೇಷವಾಗಿ ಹರಡಿಕೊಳ್ಳುತ್ತಾ ಬರುತ್ತಲಿದೆ. ಮೊದಲು ಮಾರವಾಡಿಯವರಲ್ಲಿ ಮರಣವು ಪ್ರಾರಂಭವಾಗಿ, ಜೈನರು ಬ್ರಾಹ್ಮಣರು ಇವರಲ್ಲೆಲ್ಲಾ ವ್ಯಾಪಿಸಿಕೊಂಡು, ಆಯಾ ಜನರಲ್ಲಿ ಕೆಲ ಕೆಲವರನ್ನು ಕೊಂದಿತು. ಪ್ರತಿ ದಿನವೂ ಹೊಸದಾಗಿ ರೋಗ ತಗಲುವುದೂ, ಮರಣವಾಗುವುದೂ ಹೆಚ್ಚುತ್ತಲೇ ಇರುವಂತೆ ಕಾಣುತ್ತದೆ. ಜನರೆಲ್ಲರೂ ಗಾಬರಿಯಾಗಿ ಗುಡಿಸಲುಗಳನ್ನು ಕಟ್ಟುತ್ತಲೂ, ಹಳೇ ಗುಡಿಸಲುಗಳಿಗೆ ಹೋಗುತ್ತಲೂ ಇದಾರೆ.—ನಮ್ಮ ಹೊಸ ಡೆಪ್ಯುಟಿ ಕಮೀಷನರವರು ಬಹು ಮಟ್ಟಿಗೆ ಪ್ರಜಾ ಹಿತಚಿಂತಕರು. ಪ್ರತಿ ದಿನವೂ ಟವರ್‌ನಲ್ಲಿ ಡಾಕ್ಟರವರೊಡನೆ ಸಂಚರಿಸುತ್ತಾ ಜನರಿಗೆ ಆಗತ್ಯವಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಾ ಇದಾರೆ. ಈಗ ಅವರು ಸಕಲೇಶಪುರ ಪ್ರಾಂತ್ಯದಲ್ಲಿ ಜಮಾಬಂದಿಗೋಸ್ಕರ ದಯಮಾಡಿರುತ್ತಾರೆ. ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮ|| ಗೋಪಾಲಾಚಾರ್ಯರು ಬಹು ಆಸಕ್ತಿಯಿಂದ ಕೆಲಸಗಳನ್ನು ನಡಿಸುತ್ತಾ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದಾರೆ.—ಈ ಪ್ರಾಂತ್ಯ ಕಳೆದ ವಾರದಿಂದ ಮೋಡ ಮುಚ್ಚಿಕೊಂಡು ಗಾಳಿ ಅಧಿಕವಾಗಿ ಬೀಸುತ್ತಿದೆ. ಕಳೆದ ಭಾನುವಾರ ಬೆಳಗ್ಗೆ ಬಹು ಬಲವಾದ ಮಳೆಯೂ ಬಂದಿತು. ಈಚೆಗೆ ಮಳೆಯಿಲ್ಲ. ಈ ಶೀತಗಾಳಿಯು ಪ್ಲೇಗ್ ರೋಗ ಹರಡುವದಕ್ಕೆ ಸಹಾಯ ಮಾಡುವುದು. ಈಗ ಒಳ್ಳೇ ಸುಗ್ಗೀಕಾಲವಾಗಿದ್ದರೂ ಅಕ್ಕಿ, ರಾಗಿ ತೊಗರೀಬೇಳೆ ಇವ್ವಾದಿ ಆಹಾರ ಧಾನ್ಯಗಳ ಧಾರಣೆ ಎಂದಿನಂತೆ ಕ್ಷಾಮಸೂಚಕಗಳಾಗಿವೆ.

ಇಂಡಿಯಾ ದೇಶದ ವೃತ್ತಾಂತಗಳು.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು ಈಗ ಒಟ್ಟು 70$\frac{3}{4}$ ಲಕ್ಷ ರೂಪಾಯಿಗಳಾಗಿರುತ್ತದೆ.

ಬರ್ಮಾ ದೇಶದ ತೇಟೊ ಡಿಸ್ಟ್ರಿಕ್ಟಿನ ಒಂದು ಗ್ರಾಮಸ್ಥರ ಪುಂಡನ್ನು ಅಡಗಿಸುವದಕ್ಕಾಗಿ ಶಿಕ್ಷಾರ್ಥವಾದ ಪೊಲೀಸ್ ಸಿಬ್ಬಂದಿಯನ್ನು ಕಳುಹಿಸಿಕೊಡಲು ಅಲ್ಲಿನ ಸರ್ಕಾರದವರು 3,270 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಬೊಂಬಾಯಿ ಗವರ್ನರವರು ತಮ್ಮ ಪತ್ನಿಯವರ ಸಮೇತ ಕೊಲಬದ ಆಫ್ಘಾನ್ ಮೆಮೋರಿಯಲ್ ದೇವಸ್ಥಾನದಲ್ಲಿ ಸೈನಿಕರಿಗಾಗಿ ನಡೆದ ದೇವಾರಾಧನೆಗೆ ದಯಮಾಡಿಸಿ, ತರುವಾಯ ಕೊಲಬದ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ಗಾಯಪಟ್ಟ ಆಫೀಸರುಗಳನ್ನು ನೋಡಿಕೊಂಡು ಬಂದರು.

ಸಿಲೋನ್ ಬೋಟ್ ಮೇಲ್ ಎಂಬ ರೈಲ್ ಗಾಡಿಯು ಕಳೆದ 17 ನೇ ತಾರೀಖಿನ ಸಾಯಂಕಾಲ 7 ಗಂಟೆಗೆ ಗಿಂಡಿ ಸ್ಟೇಷನ್ನಿಗೆ ಬಂದಾಗ ಎಂಜಿನ್ ಗಾಡಿಯೂ ಅದರ ಹಿಂದೆ ಇದ್ದ ನಾಲ್ಕು ಗಾಡಿಗಳ ಹೊರತು ಉಳಿದ ಗಾಡಿಗಳೆಲ್ಲಾ ರೈಲ್ ಕಂಬಿಯಿಂದ ಕೆಳಗೆ ಬಿದ್ದುಹೋದವು. ಆದ್ದರಿಂದ ಅದರಲ್ಲಿದ್ದ ಅಂಚೆಬಸ್ತುಗಳನ್ನೂ, ಪ್ರಯಾಣಿಕರಲ್ಲಿ ಸಾಧ್ಯವಾದಷ್ಟು ಮಂದಿಯನ್ನೂ ಮುಂದಿನ ಗಾಡಿಗಳಿಗೆ ಸಾಗಿಸಿಕೊಂಡು 10 ಗಂಟೆಗೆ ಮುಂದೆ ಪ್ರಯಾಣವನ್ನು ಬೆಳಸಿತು.

ಜಡ್ರಾನ್, ಟಾನಿಸ್, ಗುರ್‌ಬಾಸ್ ಮುಂತಾದ ಅಫ್ಘಾನ್ ವಂಶೀಯರು ಇದೇ ತಿಂಗಳು 7 ನೇ ತಾರೀಖಿನಲ್ಲಿ ಟೊಚಿ ಕಣಿವೆಯ ಸ್ಪಿನ್‌ವಾಮ್ ಎಂಬ ಸ್ಥಳದಲ್ಲಿ ವಜೀರಿಸ್ಥಾನ್, ಮಿಲಿಷಿಯ ಎಂಬ ಜನಗಳ ಮೇಲೆ ಬಿದ್ದರು. ಮಿಲಿಷಿಯ ಕಡೆಯ ಹೊಸ ಸೈನ್ಯವು ಬಂದು ಶತ್ರುಗಳಲ್ಲಿ 80 ಮಂದಿಯನ್ನು ಕೊಂದು ಉಳಿದವರನ್ನು ಹಿಂದಕ್ಕೆ ಓಡಿಸಿಬಿಟ್ಟರು. ಇವರ ಕಡೆ ಕ್ಯಾಪ್ಟನ್ ಇ ಜೋಫಾವ್ ಯವರೂ ಇನ್ನು ಆರು ಮಂದಿಯೂ ಮೃತಪಟ್ಟರು. ಒಬ್ಬನಿಗೆ ಗಾಯವಾಗಿರುತ್ತದೆ.

ಢಕ್ಕಾ ಪಟ್ಟಣದ ಆನರಬಲ್ ನವಾಬ್ ಬಹದೂರ್ ಸರ್ ಖಾಜಾ ಸಾಲಿಮುಲ್ಲಾ ರವರು ಬಹಳ ದಿನಗಳಿಂದಲೂ ಕಾಯಿಲೆಯಾಗಿದ್ದು ಕಳೆದ 16 ನೇ ತಾರೀಖಿನ ಮಧ್ಯಾಹ್ನ ಕಲ್ಕತ್ತ ಪಟ್ಟಣದಲ್ಲಿ ಸ್ವರ್ಗಸ್ಥರಾದರು. ಉತ್ತರ ಕ್ರಿಯೆ ನಡಿಸುವದಕ್ಕಾಗಿ ಕಳೇಬರವನ್ನು ರೈಲ್ ಮೇಲೆ ಢಕ್ಕಾ ಪಟ್ಟಣಕ್ಕೆ ಸಾಗಿಸಿದರು. ಈ ಮೆರವಣಿಗೆಯನ್ನು ಸಂಧಿಸುವುದಕ್ಕಾಗಿ ಬಂಗಾಳ ಗವರ್ನರವರು ಸೀಲ್ಡಾ ಸ್ಟೇಷನಿಗೆ ದಯಮಾಡಿಸಿದ್ದರು. ಈಗ ಢಕ್ಕದಲ್ಲಿರುವ ಇವರ ಜ್ಯೇಷ್ಠ ಕುಮಾರರಾದ ನವಾಬ್‌ಜಾದಾ ಖ್ವಾಜ ಹಬಿಬುಲ್ಲರವರು ಇವರ ಉತ್ತರಾಧಿಕಾರಿಗಳಾಗಿರುವರು.

ಇದೇ ತಿಂಗಳ 20 ನೇ ತಾರೀಖಿನಲ್ಲಿ ಮದ್ರಾಸ್ ಪಟ್ಟಣದಲ್ಲಿ ಒಂದು ಅಪೂರ್ವವಾದ ವಿವಾಹವು ನಡೆಯಿತು. ವರನು ತಮಿಳು ಸ್ಮಾರ್ತರ ಶಾಖೆಗೂ ವಧುವು ಕನ್ನಡ ಮಾಧ್ವರ ಶಾಖೆಗೂ ಸೇರಿದವರು. ದಕ್ಷಿಣ ಇಂಡಿಯದ ಬ್ರಾಹ್ಮಣರಲ್ಲಿ ಇಂಥ ವಿವಾಹದ ಸಂಬಂಧವು ಈ ವರೆಗೂ ಬೆಳೆದಿರುವದಿಲ್ಲ. ವರನು ಮ|| ಜಸ್ಟಿಸ್ ಸದಾಶಿವಯ್ಯರ್ ರವರ ಕುಮಾರರಾಗಿಯೂ, ವಧುವು ಮದ್ರಾಸ್ ಹೈಕೋರ್ಟ್ ಬ್ಯಾರಿಸ್ಟರಾದ ಮ|| ಜಿ. ಕೃಷ್ಣರಾವ್ ರವರ ಕುಮಾರ್ತೆಯಾಗಿಯೂ ಇರುತ್ತಾಳೆ. ವಧೂವರರ ತಂದೆಗಳು ಸಂಘ ಪರಿಷ್ಕರಣ ಕಾರ್ಯದಲ್ಲಿ ತುಂಬಾ ವೈರಾಗ್ಯ ಶಾಲಿಗಳು. ವರನು ಇಂಗ್ಲಿಷ್ ಪ್ರೌಢವಿದ್ಯಾಭ್ಯಾಸ ಮಾಡಿದವರಾಗಿಯೂ, ಈಗ ಮದ್ರಾಸಿನಲ್ಲಿ ಸ್ಕೂಲುಗಳ ಅ|| ಇನ್‌ಸ್ಪೆಕ್ಟರಾಗಿಯೂ ಇರುತ್ತಾರೆ.

ಕಳೆದ 17 ನೇ ತಾರೀಖಿನಲ್ಲಿ ಬೊಂಬಾಯಿ ಪಟ್ಟಣದ ಒಬ್ಬ ಸರಾಫನು 14 ಬಂಗಾರದ ಗಟ್ಟಿಗಳನ್ನುಳ್ಳ ಒಂದು ಚೀಲವನ್ನು ಟಂಕಸಾಲೆಗೆ ತೆಗೆದುಕೊಂಡು ಹೋಗುತ್ತಿರುವಾಗ ಒಬ್ಬನು ಅವನನ್ನು ತಡೆದು, ನಾನು ಪೊಲೀಸ್ ಆಫೀಸರಾಗಿದ್ದೇನೆ ; ಈ ಚೀಲದಲ್ಲಿರುವದೇನೆಂದು ನಾನು ನೋಡಬೇಕು ಎಂದು ಕೇಳಿದನು. ಕೂಡಲೆ ಸರಾಫನು ಚೀಲವನ್ನು ಬಿಚ್ಚಿ ಗಟ್ಟಿಗಳನ್ನು ಎತ್ತಿ ತೋರಿಸಿದನು. ತರುವಾಯ ಆ ಪೊಲೀಸಿನವನು ಒಂದು ಚೀಟಿಯನ್ನು ಬರೆದು ಸರಾಫನ ಕೈಗೆ ಕೊಟ್ಟು ಮುಂದೆ ಪೊಲೀಸಿನವರು ನಿನ್ನನ್ನು ತಡೆದರೆ ಈ ಚೀಟಿಯನ್ನು ತೋರಿಸು, ಅವರು ಸುಮ್ಮನೆ ನಿನ್ನನ್ನು ಬಿಟ್ಟುಬಿಡುವರೆಂದು ಹೇಳಿ ಹೊರಟುಹೋದನು. ಹೀಗೆ ಆ ಸರಾಫನು ಟಂಕಸಾಲೆಗೆ ಬಂದು ಚೀಲವನ್ನು ಬಿಚ್ಚಿ ನೋಡುವಾಗ್ಗೆ ಸುಮಾರು 2,000 ರೂ. ಬೆಲೆಯುಳ್ಳ ಚಿನ್ನದ ಗಟ್ಟಿಯು ಮಾಯವಾಗಿತ್ತು. ಆ ಕಳ್ಳನು ಈ ವರೆಗೂ ಸಿಕ್ಕಿಲ್ಲ.

ವಿದೇಶ ವರ್ತಮಾನಗಳು.

ಬಿಕಾನಿಯರ್ ಸಂಸ್ಥಾನದ ಮಹಾರಾಜರವರಿಗೆ ಕಳೆದ ಬುಧವಾರ ಲಂಡನ್ ಪಟ್ಟಣದಲ್ಲಿ ಚಕ್ರವರ್ತಿ ಸಾರ್ವಭೌಮರವರು ಭೇಟಿ ದಯಪಾಲಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಿದರು.

ಪಿ. ಅಂಡ್ ಒ. ಕಂಪನಿಯಲ್ಲಿ ಒಂದು ಸ್ಟೀಮರು ಬಂಡೆಗೆ ಬಡಿದು ಎರಡು ಗಂಟೆಯಲ್ಲಿ ಮುಳುಗಿಹೋಯಿತು. ಅದರಲ್ಲಿದ್ದವರನ್ನೆಲ್ಲಾ ಜಪಾನಿನವರ ಒಂದು ಹಡಗು ಕರೆದುಕೊಂಡು ಬಂದು ಕೋಬೆ ಎಂಬ ಸ್ಥಳಕ್ಕೆ ಸೇರಿಸಿರುತ್ತದೆ.

ಕೀರ್ತಿ ಶೇಷವಾದ ಅರಲ್ ರಾಬರ್ಟ್ಸ್ ರವರು 77,300 ಪೌಂಡು ಆಸ್ತಿಯನ್ನು ಇಚ್ಛಾರ್ಥವನಾಡದೆ ಬಿಟ್ಟುಹೋಗಿರುತ್ತಾರೆ. ಈ ಮೊಬಲಗೂ ದಕ್ಷಿಣ ಆಫ್ರಿಕಾದಲ್ಲಿ ಅವರು ನಡಿಸಿದ ಘನತರವಾದ ಕೆಲಸಕ್ಕೆ ಬಹುಮಾನವಾಗಿ ಕೊಡಲ್ಪಟ್ಟ 1,00,000 ಪೌಂಡುಗಳೂ ನ್ಯಾಯವಾಗಿ ಅವರ ಪತ್ನಿಯವರಿಗೂ, ಹೆಣ್ಣು ಮಕ್ಕಳಿಗೂ ಸೇರಬೇಕಾಗಿದೆ.

ಈಗ ಯುದ್ಧಮಾಡುತ್ತಿರುವ ಎಲ್ಲಾ ಸೈನ್ಯಗಳ ಒಟ್ಟು ಖರ್ಚು ದಿನ 1 ಕೋ 90 ಲಕ್ಷ ಪೌಂಡ್ ಎಂಬದಾಗಿಯೂ, ಯುದ್ಧ ಪ್ರಾರಂಭವಾದ ಲಾಗಾಯ್ತು ಈ ವರೆಗೂ ಆಗಿರುವ ಒಟ್ಟು ನಷ್ಟ ಕೈಗಾರಿಕೆಗಳು ನಿಂತುಹೋಗಿರುವದೂ ಸೇರಿ ಸುಮಾರು 300 ಕೋಟಿ ಪೌಂಡಿಗಿಂತಲೂ ಹೆಚ್ಚೆಂಬದಾಗಿಯೂ ಜರ್ಮನಿಯ ಒಂದು ವರ್ತಮಾನ ಪತ್ರಿಕೆಯು ತಿಳಿಸುತ್ತದೆ.

ಕಳೆದ ಶುಕ್ರವಾರ ಲಂಡನ್ ಪಟ್ಟಣದಲ್ಲಿ ಅಪಾರವಾದ ಹಿಮಗಡ್ಡೆಗಳ ಮಳೆ ಸುರಿಯಿತು. ಇಂಥಾ ಮಳೆಯನ್ನು ನೋಡಿ ಅನೇಕ ವರುಷಗಳಾದವಂತೆ. ಕೆಲವು ಪ್ರದೇಶಗಳಲ್ಲಿ 18 ಅಂಗುಲ ಪ್ರಮಾಣ ಹಿಮಗಡ್ಡೆಗಳು ಬಿದ್ದಿದ್ದವು. ಬಿರುಗಾಳಿಯೂ ಹಿಮಗಡ್ಡೆಗಳ ಮಳೆಯೂ ಇತರ ಕಡೆಗಳಲ್ಲೂ ಪ್ರಾಪ್ತವಾಗಿ ಎರಡು ಜಹಜುಗಳು ಒಡೆದುಹೋದವು. ಇವುಗಳಲ್ಲಿದ್ದ ಜನಗಳ ಪೈಕಿ 41 ಜನರು ಸತ್ತುಹೋದರು.

ಫ್ರೆಂಚ್ ಡಾಕ್ಟರುಗಳಲ್ಲಿ ಮೂರು ಮಂದಿ ಬಹು ಅಪರೂಪವಾದ ಚಿಕಿತ್ಸೆಗಳನ್ನು ಮಾಡುತ್ತಿದಾರೆ. ಯುದ್ಧದಲ್ಲಿ ಗಾಯಪಟ್ಟು ಮುಖವನ್ನು ವಿಕಾರ ಮಾಡಿಕೊಂಡು ಬಂದಿರುವ ಫ್ರೆಂಚ್ ಸೈನಿಕರಿಗೆ ಅವರು ಚಿಕಿತ್ಸೆಮಾಡುವ ಭಾಗಗಳ್ಯಾವವೆಂದರೆ—ಮೂಗು ಕಿವಿ ಹರಿದುಹೋಗಿದ್ದರೆ ಹೊಸ ಅಂಗಗಳನ್ನು ಜೋಡಿಸುವುದು ; ಗಾಯವಾಗಿ ಮುಖ ವಿಕಾರವಾಗಿದ್ದರೆ ಹೊಸ ಚರ್ಮವನ್ನು ಹಾಕಿ ವಿಕಾರವನ್ನು ತಪ್ಪಿಸುವುದು, ಇತ್ಯಾದಿ ಚಿಕಿತ್ಸೆಗಳನ್ನು ಮಾಡುತ್ತಿದಾರೆ. ಇವೆಲ್ಲಾ ಹೊಸದಾಗಿ ವೈದ್ಯರಿಂದ ಕಂಡುಹಿಡಿಯಲ್ಪಟ್ಟ ಚಿಕಿತ್ಸೆಗಳು.

ಅಮೇರಿಕಕ್ಕೆ ಸೇರಿದ ನ್ಯೂಆರ್ಲೀನ್ಸ್ ಡಿಸ್ಟ್ರಿಕ್ಟಿನಲ್ಲಿ ಪೊಲೀಸಿನವರು ಮೂರು ಮಂದಿ ಜರ್ಮನರನ್ನು ಹಿಡಿದಿರುತ್ತಾರೆ. ಇವರು ಸಾಮಾನು ಭರ್ತಿಯಾಗಿ ಇಂಗ್ಲೆಂಡಿಗೋಸ್ಕರಲೂ ಫ್ರಾನ್ಸಿಗೋಸ್ಕರಲೂ ಯೂರೋಪಿಗೆ ಸಾಗಿ ಹೋಗುವ ಜಹಜುಗಳಲ್ಲಿ ಸಿಡಿಮದ್ದಿನ ಗುಂಡುಗಳನ್ನು ಇಡುತ್ತಲೂ, ತೀರವನ್ನು ಬಿಟ್ಟು ನಾಲ್ಕಾರು ಗಂಟೆಗಳ ಹೊತ್ತು ಸಮುದ್ರದ ಮೇಲೆ ಹೋಗುವಾಗ್ಗೆ ಆ ಜಹಜುಗಳು ಸಿಡಿಮದ್ದಿನ ಗುಂಡುಗಳು ಒಡೆದು ಹಾಳಾಗುವಂತೆ ಮಾಡುತ್ತಲೂ ಇದ್ದರು. ಇಂಗ್ಲೆಂಡಿಗೂ ಫ್ರಾನ್ಸಿಗೂ ಅಮೇರಿಕದಿಂದ ಆಹಾರ ಮೊದಲಾದ ಸಾಮಗ್ರಿಗಳು ಬಂದು ಒದಗದಂತೆ ಮಾಡಬೇಕೆಂಬುವುದೇ ಆ ಜರ್ಮನರ ಉದ್ದೇಶವಾಗಿತ್ತು. ಅಂಥಾ ಸಿಡಿಮದ್ದಿನ ಗುಂಡುಗಳು ಕೂಡ ಕೆಲವು ಸಿಕ್ಕಿರುತ್ತವೆ. ಪೊಲೀಸಿನವರು ಅವರನ್ನು ಸೆರೆಯಲ್ಲಿಟ್ಟು ತನಿಖೆಮಾಡುತ್ತಿದಾರೆ.

ಕಳೆದ ಸೆಪ್ಟಂಬರ್ ತಾ 15 ರಿಂದ ನೊವೆಂಬರ್ ಆಖೈರು ವರೆಗೆ ಫ್ರಾನ್ಸ್ ರಾಜ್ಯದಲ್ಲಿ ಯುದ್ಧಭೂಮಿಯಿಂದ ಗಾಯಪಟ್ಟು ಬಂದ ಫ್ರೆಂಚ್ ಸೈನಿಕರಿಗೆ ಚಿಕಿತ್ಸೆಮಾಡುವುದಕ್ಕೆ 3,068 ಆಸ್ಪತ್ರೆಗಳೂ, ಅವುಗಳಲ್ಲಿ ಏಕಕಾಲದಲ್ಲಿ 3,66,000 ಸೈನಿಕರಿಗೆ ಚಿಕಿತ್ಸೆಯಾಗುವ ಹಾಸಿಗೆಗಳ ಏರ್ಪಾಡೂ ಇದ್ದವು. ಆ ಅವಧಿಯಲ್ಲಿ ಒಟ್ಟು 4,89,733 ಮಂದಿ ಗಾಯಪಟ್ಟ ಫ್ರೆಂಚ್ ಸೈನಿಕರು ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದಿದ್ದರ ಪೈಕಿ 2,50,000 ಮಂದಿ ಗುಣಹೊಂದಿ ಮತ್ತೆ ಯುದ್ಧಭೂಮಿಗೆ ಹೋದರು. 1 20,000 ಸೈನಿಕರು ವಾಸಿಯಾಗಿ ಚೇತರಿಸಿಕೊಳ್ಳುತ್ತಿದಾರೆ. ಇನ್ನೂ 60,000 ಸೈನಿಕರು ಚಿಕಿತ್ಸೆ ಹೊಂದುತ್ತಿರುವರು. ಡಾಕ್ಟರುಗಳು ಮಾಡುವ ಚಿಕಿತ್ಸೆಯೂ, ಆಸ್ಪತ್ರೆಗಳಲ್ಲಿ ನಡೆಯುವ ಆರೈಕೆಯೂ ಬಹಳ ಸ್ತೋತ್ರಾರ್ಹವಾಗಿರೋಣವರಿಂದ ಗಾಯಪಟ್ಟು ಬರುವ ಸೈನಿಕರಲ್ಲಿ ಶೇಕಡಾ 97 ಮಂದಿ ಗುಣಹೊಂದುತ್ತಾರೆ.

ಮಾರಿಷಸ್ ದ್ವೀಪದ ಸಕ್ಕರೆ ಕಾರ್ಖಾನೆಯವರು 1914 ರಲ್ಲಿ 2,65 080 ಟನ್ ಸಕ್ಕರೆಯನ್ನು ತಯಾರುಮಾಡಿರುತ್ತಾರೆ. ಕಳೆದ ಏಪ್ರಿಲ್ ತಿಂಗಳಲ್ಲಿ 2,71,000 ಟನ್ ಸಕ್ಕರೆಯಾಗಬಹುದೆಂದು ಅಂದಾಜು ಮಾಡಿದ್ದರು. ಕಳೆದ 5 ವರುಷಗಳಿಂದಲೂ ಇದಕ್ಕಿಂತ ಹೆಚ್ಚಾಗಿ ಯಾವ ವರುಷವಾದರೂ ಉತ್ಪತ್ತಿಯಾಗಿರುವದಿಲ್ಲ. ಇದರಲ್ಲಿ ಅರ್ಧ ಭಾಗವಾದ ಉತ್ತಮ ತರದ ಬಿಳೀ ಸಕ್ಕರೆಯನ್ನು ಬ್ರಿಟಿಷ್ ಗವರ್ನ್‌ಮೆಂಟಿನವರು ಯುದ್ಧವು ಪ್ರಾರಂಭವಾದ ಕಾಲದಲ್ಲಿ ಕೊಂಡುಕೊಂಡರು. ಹಡಗುಗಳು ಸಕ್ಕರೆಯನ್ನು ರಫ್ತು ಮಾಡಬಾರದೆಂಬ ವಿಧಿಯು ಕಳೆದ ಅಕ್ಟೋಬರ್ ತಿಂಗಳ ಅಂತ್ಯದ ವರೆಗೆ ಇನ್ನೂ ಜಾರಿಯಲ್ಲಿತ್ತು. ಕಡಮೆ ಕ್ರಯದ ಸಕ್ಕರೆಯನ್ನು ಹಡಗುಗಳಲ್ಲಿ ಸಾಗಿಸುವದಕ್ಕೆ ಅಪ್ಪಣೆಯು ಕೊಡಲ್ಪಡುವದೆಂದು ನಿರೀಕ್ಷಿಸುತ್ತಿದ್ದರು. ಪ್ಲಾಂಟರುಗಳು ಫಸಲಿನ ಉಳಿದ ಅರ್ಧ ಭಾಗವನ್ನು ಗವರ್ನ್‌ಮೆಂಟಿನವರಿಗೆ ಮಾರಲು ಸಿದ್ಧರಾಗಿದ್ದರೆಂದು ಹೇಳಲಾಗಿದೆ.

ತುಂಕೂರು ಮುನ್ಸಿಫ್ ಕೋರ್ಟಿನಲ್ಲಿ.

ಸನ್ 1913-14 ನೇ ಇಸವಿ O. S. ನಂ. 1303.

ವಾದಿ.—(1) ಗುಬ್ಬಿ ತಾ|| ಕಡಬದಲ್ಲಿರುವ ಶಿವಾಚಾರದ ಕರೇಗೌಡನ ಮಗ ಗೊಲ್ಲಹಳ್ಳಿ ನಂಜುಂಡಯ್ಯ, ವಗೈರೆ 10 ಜನ.

ಪ್ರತಿವಾದಿಗಳು.—(1) ಡಿಟೋ ಕಡಬದಲ್ಲಿರುವ ಗಂಗಡಿಕಾರ್ ಒಕ್ಕಲಿಗರ ಜಾತಿ ವೀರೇಗೌಡನ ಮಕ್ಕಳು ಪಾಟೀಲ್ ಹುಚ್ಚವೀರೇಗೌಡ, (2) ಭದ್ರೇಗೌಡ, (3) ದೊಡ್ಡೇಗೌಡ

ಗುಬ್ಬಿ ತಾಲ್ಲೂಕು ಕಡಬದ ಕಸಬಾ ಮತ್ತು ಇತರ ಗ್ರಾಮಸ್ಥರಿಗೂ ತಿಳಿಯಪಡಿಸುವದೇನಂದರೆ—

ಗುಬ್ಬಿ ತಾಲ್ಲೂಕು ಕಡಬದ ಕಸಬಾ ಗ್ರಾಮಕ್ಕೆ ಸೇರಿದ ಸರ್ವೆ 214 ನೇ ನಂಬರು ಜಮೀನಿನಲ್ಲಿ ಪೂರ್ವ ಪಶ್ಚಿಮ ಗಜ 90, ಉತ್ತರ ದಕ್ಷಿಣ ಗಜ 60 ಉಳ್ಳ ಪ್ರದೇಶದಲ್ಲಿ ಅದೇ ಕಡಬದಲ್ಲಿ ವಾಸಮಾಡುವ ಶಿವಾಚಾರದ ಜಾತಿಯವರಿಗೆ ತಮ್ಮ ಜಾತಿ ಶ್ರವಗಳನ್ನು ದಫನ್ ಮಾಡಲು ಹಕ್ಕಿದೆ ಎಂದು ವಾದಿಗಳು ಪ್ರತಿವಾದಿಗಳ ಮೇಲೆ ದಾವಾ ತಂದಿರುತ್ತಾರಾಗಿ ಮೇಲ್ಕಂಡ ದಾವಾಕ್ಕೆ ಪಾರ್ಟಿಗಳಾಗಲು ಇಷ್ಟವುಳ್ಳವರೆಲ್ಲಾ ತಾರೀಖು 8 ನೇ ಫೆಬ್ರವರಿ, 1915 ನೇ ದಿವ 11 ಗಂಟೆಗೆ ಈ ಕೋರ್ಟಿನ ರೂಬರೂಬು ಹಾಜರಾಗತಕ್ಕದ್ದು.

ತುಮಕೂರು, ಪಿ. ರಂಗಯ್ಯಂಗಾರ್, ಬಿ.ಎ., ಬಿ.ಎಲ್.,
ತಾ. 18-12-1914. [23-1] ಮುನ್ಸಿಫ್.

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆ ಗೊತ್ತಾಗುವುದು!

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ ಒಂದಾವರ್ತಿ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ವಿಳ್ಳೇದೆಲೆಗೆ ಸವರಿಯೋ, ಬಿಸಿನೀರಿಗೆ ಹಾಕಿಯೋ ಬೆಳಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ ಭೇದಿ, ಪೋಟಕಂಕೆ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗೆಡ್ಡೆ, ತಲೆನೋವು, ಹುಳುಕಡ್ಡಿ, ವಾಯುನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ [285-4]

ನಮ್ಮ ವಿಳಾಸ—ಕೇಶವಜೀ ದೇವಚಂದ್,
ರಾಮ್‌ಭಾನ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್,
ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ, ದೊಡ್ಡಪೇಟೆ, ಮೈಸೂರು.

ಗೃಹಕೃತ್ಯದ ನೋಟೀಸು.

ಚನ್ನರಾಯಪಟ್ಟದ ತಾಲ್ಲೋಕು ಕಸಬಾ ಹೋಬಳಿ ಬಂಡಿಹಳ್ಳಿ ಗ್ರಾಮದಲ್ಲಿರುವ ಗಂಗಡಿಕಾರ ಒಕ್ಕಲಿಗರ ಶಿವಲಿಂಗೇಗೌಡನ ಮಗ ಸಿಂಗೇಗೌಡ, ಗಾರ್ಡಿಯನ್ ತಾಯಿ ಬೋರಮ್ಮನು ತಿಳಿಯಪಡಿಸುವದೇನೆಂದರೆ... ನನ್ನ ವಾಸಾಮ್ಯದ ಹಾಲಿ ಪಟೇಲಿ ಕೆಲಸವನ್ನು ಗುಮಾಸ್ತೆಯಾಗಿ ನೋಡುತ್ತಿದ್ದ ಸಿಂಗೇಗೌಡ ಉರುಫ್ ಪುಟ್ಟಯ್ಯ ಎಂಬುವನು ಈಗ್ಗೆ 8-9 ತಿಂಗಳ ಕೆಳಗೆ ಫೌತ ಆದನು. ಇವನಿಗೆ ಗಂಡುಮಕ್ಕಳಿಲ್ಲ. ಒಂದು ಹೆಣ್ಣು ಮಗು ಮತ್ತು ಮೃತನ ಹೆಂಡತಿ ಕೆಂಪಮ್ಮನೆಂಬುವಳು ಸಹಾ ಇರುತ್ತಾರೆ. ನನ್ನ ಗಂಡ ಸತ್ತು 10-12 ವರ್ಷವಾಯಿತು. ಆ ಲಾಗಾಯಿತು ನನ್ನ ಮೈದುನನೇ ಈ ಮನೆಗೆ ಯಜಮಾನನಾಗಿ ಲೇವಾದೇವಿ, ಚರಸ್ಥಿರ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದನು. ಹಾಲಿ ಇವನ ಹೆಸರಿಗೆ ಇದ್ದ ಲೇವಾದೇವಿ ದಸ್ತಾವೇಜು ಮೊದಲಾದ ಸಕಲ ಆಸ್ತಿಗಳೂ ನನ್ನ ಸುಪರ್ದಿನಲ್ಲೇ ಇರುತ್ತೆ. ಮೃತನ ಹೆಂಡತಿ ಕೆಂಪಮ್ಮನು ಜನಗಳ ದುರ್ಬೋಧನೆ ಮೇಲೆ ಚರ ಸ್ಥಿರ ಆಸ್ತಿಗಳನ್ನು ಪರಾಧೀನಮಾಡುವುದಾಗಿ ತಿಳಿಯಬರುತ್ತೆ. ಈ ಸ್ವತ್ತುಗಳೂ, ಲೇವಾದೇವಿ ಸಹಾ ನಮ್ಮಗಳ ಅವಿಭಕ್ತ ಕುಟುಂಬಕ್ಕೆ ಸೇರಿದ್ದಾಗಿ ಪರಭಾರೆಮಾಡಲು ಇವಳಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವುದಿಲ್ಲ. ನನ್ನ ಅನುಮತಿ ವಿನಾಯಿ ಈಕೆಯಿಂದ ಕ್ರಯ, ಭೋಗ್ಯ, ಆಧಾರ, ಇತ್ಯಾದಿಗಳನ್ನು ಮಾಡಿಕೊಂಡರೆ ಅಂಥಾವರಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಉಂಟಾಗದು. ಮತ್ತು ಅಂಥವರು ನಷ್ಟ ವಿಚಾರಕ್ಕೂ ಗುರಿಯಾಗಬೇಕಾಗುತ್ತೆಂತ ಈ ಮೂಲಕ ಎಚ್ಚರಿಸುತ್ತೇನೆ.

[22-1] ಬಂಡಿಹಳ್ಳಿ ಶಿವಲಿಂಗೇಗೌಡನ ಹೆಂಡತಿ ಬೋರಮ್ಮ.

ನೋಟೀಸ್.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್.

ಬೆಂಗಳೂರು.

ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಕೌನ್ಸಿಲ್ ಛೇಂಬರಿನ ಉಪಯೋಗಕ್ಕೋಸ್ಕರ ಸ್ಥಳದಲ್ಲಿ ತಯಾರಾದ ಅಪ್ಸಲ್ ತರಹೆಯ ಮತ್ತು ಕಸಬು ಕೆಲಸಮಾಡಿದ ಜಂಖಾನೆಗಳಿಗಾಗಿ ಮೊಹರುಮಾಡಿದ ಲಕೋಟೆಯಲ್ಲಿ ಟೆಂಡರುಗಳನ್ನು ಕಳುಹಿಸಬಹುದೆಂದು ಸಮಸ್ತ ಜನರಿಗೂ ಈ ಮೂಲಕ ತಿಳಿಸಲಾಗಿದೆ. ಈ ಟೆಂಡರುಗಳನ್ನು 1915 ನೆಯ ಜನವರಿ ಆಖೈರ್ ವರಿಗೆ ತೆಗೆದುಕೊಳ್ಳಲಾಗುವದು. ಹೆಚ್ಚು ತಪಶೀಲುಗಳಿಗೆ 1915 ನೆಯ ಜನವರಿ 7, 14 ಮತ್ತು 21 ನೆಯ ತಾರೀಖುಗಳಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಸಾದ ನೋಟೀಸನ್ನು ನೋಡತಕ್ಕದ್ದು.

ಬೇಕಾದ ಜಂಖಾನೆಗಳ ಅಳತೆ.

(1) ಒಂದು ಜಂಖಾನೆಯು ಉದ್ದ 28 ಅಡಿ ; ಅಗಲ 21 ಅಡಿ 3 ಅಂಗುಲ.
(2) ಎರಡನೆಯ ಜಂಖಾನೆಯು ಉದ್ದ 16 ಅಡಿ 7 ಅಂಗುಲ ; ಅಗಲ 21 ಅಡಿ 3 ಅಂಗುಲ

ಹುಕುಂ ಬಮೋಜಬ್

B. NARAINSWAMIENGAR,
[12-3] ಫಾರ್ ಅಫಿಷಿಯೇಟಿಂಗ್ ಸೆಕ್ರೆಟರಿ,
ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟುಗಳು

ಪರಸ್ಪರ ಸಹಾಯಸಂಘಗಳು.

ಮುಳಬಾಗಿಲಿನಲ್ಲಿ ನಡೆದ ಕಾರ್ಯಗಳು.

ಹುಜೂರ್ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಎಂ. ಎ. ನಾರಾಯಣಯ್ಯಂಗಾರ್ಯರವರು ಈ ತಿಂಗಳು 18 ನೇ ತಾ. ಸಾಯಂಕಾಲ ಮುಳಬಾಗಿಲಿಗೆ ದಯಮಾಡಿಸಿದರು.

19 ನೇ ತಾ. ಬೆಳಿಗ್ಗೆ ಅವರು ಎಲ್ಲಾ ಸ್ಕೂಲುಗಳಿಗೂ ದಯಮಾಡಿಸಿ ಹುಡುಗರಿಗೆ ಪ್ರತಿ ಕ್ಷಣವಲ್ಲೂ ವಿದ್ಯವನ್ನೂ ದ್ರವ್ಯವನ್ನೂ ಸಂಪಾದಿಸಬೇಕೆಂಬ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಮನೆಯಲ್ಲಿ ವಿದ್ಯಾರ್ಥಿಗಳ ತಂದೆತಾಯಿಗಳು ಕೊಡತಕ್ಕ ದುಡ್ಡುಗಳನ್ನು ವಿದ್ಯಾರ್ಥಿಗಳು ಪೋಲುಮಾಡದೆ ಶೇಖರಿಸಬೇಕೆಂತಲೂ, ಹಾಗೆ ಮಾಡಿದರೆ ಹಣವಾಗುತ್ತೆಂತಲೂ, ಶೇಖರವಾದ ದ್ರವ್ಯಕ್ಕೆ ಲೋಪಬಾರದಂತೆ ಈ ಊರಲ್ಲಿ ಸ್ಥಾಪಿತವಾಗಿರುವ ಕೋಆಪರೇಟಿವ್ ಸೊಸೈಟಿಯಲ್ಲಿ ಮೈನರ್ ಡಿಪಾಜಿಟ್ ಮೂಲಕ ಮೊದಲು ಅವರವರ ಯೋಗ್ಯತಾನುಸಾರ ಇಡಬೇಕೆಂತಲೂ ಹೇಳಿದ್ದರ ಮೇಲೆ ಅನೇಕ ಹುಡುಗರು ಅದೇ ರೀತಿ ಒಪ್ಪಿಕೊಂಡು ಅವರ ಎದುರಿಗೇನೇ ತಮ್ಮಲ್ಲಿ ಇದ್ದ ದುಡ್ಡುಗಳನ್ನು ತಂದುಕೊಟ್ಟು ಪ್ಯಾಸ್ ಬುಕ್ಕುಗಳನ್ನು ತೆಗೆದುಕೊಂಡರು. ಇದರಿಂದ ವಿದ್ಯಾರ್ಥಿಗಳು ದಿನಂಪ್ರತಿ ಹೋಟೆಲು ಅಂಗಡಿಗಳಲ್ಲಿ ತಿರತಿಂಡಿ ತಿನ್ನುವದನ್ನು ತಪ್ಪಿಸಿದ ಹಾಗಾಯಿತು. ಈ ವಿಷಯದಲ್ಲಿ ವಿದ್ಯಾರ್ಥಿಗಳ ತಂದೆತಾಯಿಗಳು ಮೇಹರ್‌ಬಾನ್ ರಿಜಿಸ್ಟ್ರಾರ್ ಸಾಹೇಬರವರ ವಿಷಯದಲ್ಲಿ ತುಂಬಾ ಕೃತಜ್ಞರಾಗಿರುತ್ತಾರೆ.

ಅದೇ 20 ನೇ ತಾ ಮಧ್ಯಾಹ್ನ 3 ಗಂಟೆಗೆ ಅವರು ಈ ಊರು ಮುಸಾಫರಖಾನೆಗೆ ದಯಮಾಡಿಸಿದರು. ಅವರ ಜೊತೆಯಲ್ಲಿ ಅಮಲ್ದಾರರು, ಇರ್‌ಜಿಸ್ಟ್ರೇಷನ್ ಸಬ್ ಡಿವಿಜನ್ ಆಫೀಸರು, ಪೋಲೀಸು ಇನ್‌ಸ್ಪೆಕ್ಟರು, ಸಬ್ ರಿಜಿಸ್ಟ್ರಾರವರು ಮತ್ತು ಎಕ್ಸೈಜು ಸೂಪರ್‌ವೈಜರುಗಳು ಬಂದು ಇದ್ದರು. ಅನೇಕ ಜನ ಮೆಂಬರುಗಳೂ ಪೇಟೆ ವರ್ತಕರೂ ಸಹ ಸೇರಿದ್ದರು. ರಿಜಿಸ್ಟ್ರಾರ್ ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಈ ಊರು ಸೊಸೈಟಿಯ ರಿಪೋರ್ಟನ್ನು ಸ್ಕೂಲ್ ಮಾಸ್ಟರು ಮ|| ಶ್ರೀನಿವಾಸರಾಯರು ಓದಿದರು. ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಹುಜೂರ್ ರಿಜಿಸ್ಟ್ರಾರ್ ಸಾಹೇಬರವರು ಸೊಸೈಟಿಯ ಸೆಕ್ರಟರಿಗಳು ಮತ್ತು ಮೆಂಬರುಗಳು ಮಾಡಿದ ಮೆಹನತ್ತನ್ನು ನೋಡಿ ಸೊಸೈಟಿಯ ಅಭಿವೃದ್ಧಿ ವಿಷಯದಲ್ಲಿ ತುಂಬಾ ಸಂತೋಷಪಟ್ಟರು. ಇನ್ನೂ ಈ ತಾಲ್ಲೂಕಿನಲ್ಲಿ ಮೂರು ಸೊಸೈಟಿಗಳು ಆಗುತ್ತವೆ. ಇವರು ಮಾಡಿದ ಉಪನ್ಯಾಸದಿಂದ ಕ್ಷೇತ್ರದಲ್ಲಿಯೇ ಇನ್ನೂ ಮೂರು ಸೊಸೈಟಿಗಳು ಆಗುತ್ತವೆ. ಈ ಸೊಸೈಟಿಗಳಿಂದ ಜನಗಳಿಗೆ ಆಗತಕ್ಕ ಉಪಯೋಗಗಳನ್ನು ಕುರಿತೂ, ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೂ ಯುವರಾಜರವರಿಗೂ ಸೊಸೈಟಿಗಳ ವಿಷಯದಲ್ಲಿ ಇರತಕ್ಕ ಅಭಿಪ್ರಾಯವನ್ನು ಕುರಿತೂ, ಸರಕಾರದವರ ಭರವಸೆಯೂ ಎಷ್ಟರ ಮಟ್ಟಿಗೆ ಇರುತ್ತದೆ ಎಂಬ ವಿಷಯವನ್ನು ಕುರಿತೂ, ಇತರ ವೇಳೆಗಳಲ್ಲಿ ಈ ಸೊಸೈಟಿಗಳಿಂದ ಜನಗಳು ಹೊಂದಿ ಇರತಕ್ಕ ಪ್ರಯೋಜನಾಂಶಗಳನ್ನು ಕುರಿತೂ ಜನಗಳಿಗೆ ಅತ್ಯಂತ ಮನೋಹರವಾದ ಉಪನ್ಯಾಸವನ್ನು ಮಾಡಿದರು. ಇದರಿಂದ ಅಲ್ಲಿ ಸೇರಿ ಇದ್ದ ಮೆಂಬರುಗಳೂ ಮತ್ತು ಇತರ ಜನಗಳೂ ಸಹ ನಮ್ಮ ಮಹಾರಾಜರವರಿಗೆ ಬಡಸ್ಥಿತಿಯವರ ಮೇಲೆ ಎಷ್ಟರಮಟ್ಟಿಗೆ ವಿಶ್ವಾಸವಿರುವದೆಂಬ ಅಂಶವನ್ನು ಚೆನ್ನಾಗಿ ತಿಳಿದುಕೊಂಡು, ಶ್ರೀಮನ್ ಮಹಾರಾಜರವರಿಗೂ, ಅವರ ಪರಿವಾರಗಳಿಗೂ ಮತ್ತು ಹುಜೂರ್ ರಿಜಿಸ್ಟ್ರಾರ್ ಸಾಹೇಬರವರಿಗೂ ಯಶಸ್ಸು ಅತಿಶಯವಾಗಿ ಉಂಟಾಗಲಿ ಎಂದು ದೇವರನ್ನು ಪ್ರಾರ್ಥಿಸಿದರು. ಹುಜೂರ್ ರಿಜಿಸ್ಟ್ರಾರ್ ಸಾಹೇಬರವರು ಸೊಸೈಟಿಗೆ ಮಹಾರಾಜರವರ ಜ್ಞಾಪಕಾರ್ಥವಾಗಿ ಕಾರ್ಡ್‌ಬೋರ್ಡಿನಲ್ಲಿ ತೆಗೆದ ಒಂದು ಫೋಟೋವನ್ನು ಬಹುಮಾನವಾಗಿ ಕೊಟ್ಟರು. ಅನಂತರ ಸಂಗೀತ ಗ್ರಾಮೋಫೋನ್ ಸ್ವಲ್ಪ ಹೊತ್ತು ನಡೆದು ಜನಗಳಿಗೆಲ್ಲಾ ಹೂವು ಗಂಧ ತಾಂಬೂಲಾದಿಗಳು ಹಂಚಲ್ಪಟ್ಟವು. ಅಲ್ಲಿಗೆ ಮೊದಲನೇ ವರ್ಷದ ಕೋಆಪರೇಟಿವ್ ಸೊಸೈಟಿ ಜನರಲ್ ಮೀಟಿಂಗು ಬರಖಾಸ್ತಾಯಿತು.

ಎಸ್. ಜಿ ಎಚ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಣ್ಣವಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ಕಟಿನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಪ್ರಮೇಹ, ವಾಯು, ಮೈಬಾವು, ಉದುರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಲಾಗುವಂಥ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ಕಳುಹಿಸಿ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [193-21]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ವಿಷಧ ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಶ್ರೀ ತಾಂಬೂಲ.

ಅನೇಕರು ತಾಂಬೂಲದ ಪದಾರ್ಥಗಳನ್ನು ತಯಾರಿಸಿರುವರು. ಆದರೆ ಇದನ್ನು ಸ್ವಲ್ಪ ಪರೀಕ್ಷಿಸಿನೋಡಿ. ತಾಂಬೂಲದೊಂದಿಗೆ 1-2 ಮಾತ್ರೆಗಳನ್ನು ಸೇವಿಸುತ್ತ

ಬಂದಲ್ಲಿ ಮುಖದ ಬಿವರಿನ ದುರ್ಗಂಧವನ್ನು ಹೋಗಲಾಡಿಸಿ ತೇಜಸ್ಸನ್ನುಂಟುಮಾಡುತ್ತದೆ. ಮಲೆನಾಡಿನಂಥ ಕೆಟ್ಟನೀರಿನ ವಾತ, ಶೀತಜ್ವರ ಸಂಬಂಧ ದೋಷಗಳನ್ನು ನಾಶಮಾಡುವುದು. ವಿದ್ಯಾರ್ಥಿಗಳು ಪ್ರಾತಃಕಾಲ 1-2 ಬರೇ ಮಾತ್ರೆಗಳನ್ನು ಸೇವಿಸುತ್ತ ಬಂದಲ್ಲಿ ಆಲಸ್ಯವಿಲ್ಲದಂತೆ ಸ್ಮರಣಶಕ್ತಿಯುಂಟಾಗಿ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿಗಳು ಹೆಚ್ಚುತ್ತವೆ. ಛಳಿ, ಜ್ವರ, ಕೆಮ್ಮು, ನೆಗಡಿ ಮುಂತಾದ್ದಕ್ಕೆ 1-2 ಮಾತ್ರೆಗಳು ಕೊಟ್ಟರೆ ಕೂಡಲೆ ಗುಣಕಾಣುವದಲ್ಲದೆ ಪ್ಲೇಗ್ ವ್ಯಾಧಿಯನ್ನು ಕೂಡ ಹತ್ತಿರ ಬರಗೊಡಿಸುವದಿಲ್ಲ. ಸಾವಿರಾರು ಜನಗಳಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯಕ ಇದನ್ನು ಇಡಬೇಕು. ಬಾಟ್ಲು 1 ಕ್ಕೆ 4 ಆಣೆ, ಆರಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಬೇರೆ.

[236-12] ಎಂ. ಗೋವಿಂದಶೆಟ್ಟಿ,

ಆಯುರ್ವೇದಿಕ್ ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜನರಲ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು. (2) ಹಾಡುವವರಿಗೆ ಪರತ್ರಸಾದವಾದದ್ದು. (3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ತೊಂದರೆಗಳನ್ನು ಹುಟ್ಟದಂತೆ ಆಡ್ಡಿ ಮಾಡುತ್ತದೆ. (4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಲ ಇದ್ದೇ ತೀರಬೇಕೆಂದು ನೀವೇ ಬಯಸುವಿರಿ. [73-46]

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಲಕ್ಕೆ ಕ್ರಯ 2 ಆಣೆ.

,,	95	,, ,, ,, ,,	4 ,,
,,	200	,, ,, ,, ,,	7 ,,
,,	200	,, ಸುಂದರವಾದ ಟಿನ್ ಡಬ್ಬಿ	9 ,,
,,	80	,, ,, ,, ,,	4 ,,
,,	100	,, ಬಾಟ್ಲಿಯಲ್ಲಿ	4½ ,,

ಈ ಕ್ರಯದನ್ನು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಜಿ. ಎಂ. ಕಾಡಪ್ಪ ಅಂಡ್ ಸನ್ಸ್,
ಜನರಲ್ ಮರ್ಚೆಂಟ್ಸ್, ಶಿವಮೊಗ್ಗೆ.

S. U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪೆನಿಯಲ್ಲಿ ನೆಯುವ ಜನರ ನಿಪುಣ ಉತ್ತಮವಾದ ಬನಾರಸ್ ರೇಷ್ಮೆ ಜರಿ ಶಿಲೆಗಳು, ಶಾಲು, ಕೋಟು, ಕಾಶ್ಮೀರಿ ಶಾಲು, ಮಗ್ಗಪಟ್ಟಿ, ಮಗುಟ, ಜಗನ್ನಾಥ ಜಾಸಟಿಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಇನಾಮಾಗಿ ಕಳುಹಿಸಲಾಗುವುದು. [89-45]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕಸ್ತೂರೀಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ಛಳಿಜ್ವರ-ಮಾರಿಜ್ವರ-ಸನ್ನಿಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಛರ್ದಿ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಜಂತುಗಳ ತೊಳಿ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ಸಂಬಳೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 200 ಮಾತ್ರೆ, 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [231-13]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲು ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!



ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಗಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೇಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-9] ಪಿ. ಓ. ಬಾಕ್ಸ್ 330, ಬೊಂಬಾಯಿ.

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠ ವಸ್ತುಗಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಗಂಡುಗಳ ನೋವು, ಸ್ತ್ರೀ ಕಾಲು ಬೊಡತ (ಬಾವು), ಮೈ ನಡುಕ, ಶೀತ ಸಂಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಪಕ್ಕಶೂಲೆ, ಅಪಸ್ಮಾರ, ಇನ್ನು ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಮನಸ ಕಾಯುವಿಕೆ ಹಾರಿಹೋದದೆ, ನರಗಳ ಹಸಿ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟಿನ ಹೊಟ್ಟೆ, ಮಕ್ಕಳ ಎಳವು, ಜ್ವರ, ನಡುಕ್ಕಜ್ವರ, ಕೈಪತ್ತನೆಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಚಿತ್ರವರ್ಣವಾಗಿದೆ 200 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 13 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [190-21]



(1) ಮ|| ಎ. ಸಿ ಮಿತ್ತರ್, ಹೆಡ್ ಮಾಸ್ಟರ್, ದಿ ಟ್ರಾನಿಂಗ್ ಪರ ಎಂ. ಇ. ಸ್ಕೂಲ್, ಪೋಂಡು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು —"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪಥಿಕ್, ಹೋಮಿಯೋಪಥಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಡಾ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಖಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧರೋಗಗಳುಳ್ಳ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್ ಅನಂತಪದ್ಮನಾಭಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್, ಇವರು ಬರೆಯುವುದು —"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗುಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೆ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನನ್ನ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಸಾಕು. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ 1-10-0. ಇವು ಜನವರಿ ಅಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿ!

[52-47]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ಸಾತ ಸಂಧಿವಾತ ತಲೆ ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಕೀಲು, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕಳಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರಾದ ಮತ್ತು ಪಲವು ಭಾಷೆಗಳಲ್ಲಿ ಮುದ್ರಿಸಿದ ಕವರಿನಲ್ಲಿ ಪ್ಯಾಕ್ ಮಾಡಿರುತ್ತೇವೆ. ಕವರಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಪೋಮಿಡ್ ತೈಲ 0-12-0. ಖುಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0 ಕ್ಯಾಟಲಾಗಿಗೆ ಬರೆಯಿರಿ ವ್ಯಾಪಾರಸ್ಥರಿಗೆ ಚೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು. ಮುಂಬಯಿ. ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

THE MYSORE GOVERNMENT SECURITY
Life and Marriage Assurance Co., Ltd.
Head Office: Mysore.
CAPITAL Rs. 5,00,000.

(INCORPORATED UNDER THE MYSORE COMPANIES' REGULATION No. III OF 1895.)

Absolute Security, Attractive Schemes, Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

Active and honest agents to canvass insurance and provident businesses and influential local directors to canvass Two-in-one (share policy) and property investment businesses in each and every unrepresented taluk and district of the Mysore province on liberal commission and office allowance. For terms and prospectuses, please apply with your experience in the line to

Mr. M. L. NAGANNH,

[15-3] Managing Director. Life & Marriage Assurance Buildings. MYSORE.

ಮಧುರೆ ಜುನ್ನರಿ ಅಂಚಿನ ಸೀರೆ ಜವ್ವಲ್ ರವಿಂ ರೂ. 2-6-0. ಜನವರಿ ತಿಂಗಳ ಒಳಗಾಗಿ ಕರಿಸಿಕೊಳ್ಳುವರಿಗೆ ಒಂದು ರಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡತ್ತೇವೆ.

ಇದು ಉಡುವುದಕ್ಕೆ ದೊಡ್ಡದಾಗಿಯೂ ಹೆಚ್ಚು ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

[99-34]

ಕುಂತಳಾನಂದ ತೈಲವು.

213-19

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳನ್ನು ವರ್ಣಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ.

ನಿದ್ರಾಭಂಗವನ್ನು ಪರಿಹರಿಸುವದಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಸ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

8—1—1915 ರಿಂದ 15—1—1915 ರ ವರೆಗೆ

ಸ್ಥಳ		ಪ್ಲೇಗ್ ಕಂಡಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಕಂಡಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	13	14	0	0
ಮೈಸೂರು	,,	6	3	1	1
ಬೆಂಗಳೂರು ಡಿಸ್ಟ್ರಿಕ್ಟು		38	20	5	0
ಮೈಸೂರು	,,	42	35	0	0
ಕೋಲಾರ್	,,	17	11	0	0
ಕೋಲಾರ್ ಚಿನ್ನದ ಗಣಿಗಳು		10	11	0	0
ತುಮಕೂರು ಡಿಸ್ಟ್ರಿಕ್ಟು		3	3	0	0
ಹಾಸನ	,,	12	7	3	2
ಚಿತ್ರದುರ್ಗ	,,	4	3	0	0
ಕಡೂರ್	,,	0	0	0	0
ಶಿವಮೊಗ್ಗ	,,	0	0	4	2
	ಜುಮ್ಲ—	154	107	13	6

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಶಿಶಿರ ಋತೌ ಮಾಘ ಶುದ್ಧ ತ್ರಯೋದಶಿ ಶುಕ್ರವಾರದಿಂದ ಮಾಘ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಸಂಚಾರ

1915 ನೇ ಜನವರಿ ಮತ್ತು ಫೆಬ್ರವರಿ.

ತಾ.	ವಾರ.		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಕರ ಕುಂಭ ತೇದಿ
29	ಶುಕ್ರ	*	ತ್ರಯೋದಶಿ	6-23	ಪುನರ್ವಸು	60-0	16
30	ಶನಿ	†	ಚತುರ್ದಶಿ	8-17	ಪುನರ್ವಸು	1-46	17
31	ಭಾನು	::	ಪೌರ್ಣಮಿ	8-56	ಪುಷ್ಯ	4-0	18
1	ಸೋಮ		ಪಾಡ್ಯಮಿ	8-15	ಆಶ್ಲೇಷ	4-57	19
2	ಮಂಗಳ	§	ಬಿದಿಗೆ	6-30	ಮಖಾ	4-43	20
3	ಬುಧ	‡	ತದಿಗೆ	3-31	ಪುಬ್ಬ	55-41	21
4	ಗುರು		ಪಂಚಮಿ	55-18	ಉತ್ತರಾ	1-12	22

* ಮೇಲುಕೋಟೆಯಲ್ಲಿ ಪುನರ್ವಸು ಉತ್ಸವ, ಶ್ರೀರಂಗದಲ್ಲಿ ರಂಗನಾಥ ಸ್ವಾಮಿಾ ರಥ. † ತ್ರಿನಯನೇಶ್ವರ ಸ್ವಾಮಿಾ ರಥ, ಬೇಲೂರು ಲಕ್ಷ್ಮೀನೃಸಿಂಹ ಸ್ವಾಮಿಾ ರಥ, ಮಳೆ ನಕ್ಷತ್ರ—ಶ್ರವಣ 3 ನೇ ಪಾದ. :: ವ್ಯಾಸಪೂರ್ಣಿಮಾ. § ಮಳೆ ನಕ್ಷತ್ರ—ಶ್ರವಣ 4 ನೇ ಪಾದ. ‡ ಸಂಕಟಹರ ಚತುರ್ಥಿ, ದಗ್ಧ ಯೋಗ.

ಜ್ವರದ ಮಾತ್ರೆ—ಮಲೇರಿಯ, ಚಳಿ, ವಿಷಮಶೀತ ಜ್ವರಗಳಿಗೆ ಅಮೃತ. ಶೀಷೆಗೆ 8 ಆಣೆ. "ತಾವು ಕಳಿಸಿದ ಜ್ವರದ ಮಾತ್ರೆಗಳನ್ನು ನಾನು ನನ್ನ ಸ್ನೇಹಿತರು ಸೇವಿಸಿ ಶ್ರೇಷ್ಠ ಗುಣಕಂಡೆವು. ಇದು ಅನೇಕ ಇಂಗ್ಲಿಷ್ ಔಷಧಿಗಳಿಗಿಂತ ಯಾವ ಭಾಗದಲ್ಲೂ ಕಮ್ಮಿಯಿಲ್ಲ"—ಎಂ. ಆರ್. ರಾಮಸ್ವಾಮಿಶಾಸ್ತ್ರಿ, ಅಮಲ್ದಾರ್, ಮಂಚನಹಳ್ಳಿ. [269-0]

ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯುಳ್ಳದ್ದು, ತಿಂಗಳು ಬಿದ್ದರೂ ಹುಳಿ ವಾಸನೆಯಾಗದು. ಬೇಕಾದವರು ವಿ. ಪಿ. ಯಲ್ಲಿ ತರಿಸಬಹುದು. ಕ್ರಯ ಸೇರಿಗೆ 1 ರೂಪಾಯಿ. ವಿಳಾಸ—ಎ. ಎನ್. ನಂಜುಂಡಯ್ಯ, ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

[14-3]

ಆ ಕೆಮ್ಮಿನ ಹಿಂದೆ ಮರಣವು ಅಡಗಿಕೊಂಡಿದೆ.

ಉತ್ತಮ ವೈದ್ಯರಿಂದಲೂ ಚಿಕಿತ್ಸೆಯಿಂದಲೂ ವಾಸಿಯಾಗದೆ ನಿಮ್ಮ ಪ್ರಾಣವನ್ನು ಹಿಂಡುತ್ತಿರುವ ಕೆಮ್ಮು ನಿಮಗಿದೆಯೋ? ಹಾಗಿದ್ದರೆ ಒಂದು ವೇಳೆ ನಿಮಗೆ ಕ್ಷಯವಿದ್ದರೂ ಇರಬಹುದು. ಅಂಥವರೆಲ್ಲಾ ಲಿಟಲ್ಸ್ ಓರಿಯೆಂಟಲ್ ಬಾಮ್ ಎಂಬುದನ್ನು ಉಪಯೋಗಿಸಬೇಕೆಂದು ಹೇಳುತ್ತೇನೆ.

ಉರಿಸ್ಟರ್‌ಷೈರಿನ ಆಲ್ವೆಸ್ಟನ್ ಸ್ಥಳದ ಮಿ॥ ಎಚ್. ಬ್ರಿಸ್ಟೊಲ್ ಎಂಬುವರು ಹೇಳುವದು:—"2 ವರುಷಗಳ ಕಾಲ ನನಗೆ ಸದಾ ಬಾಧಿಸುವ ಕೆಮ್ಮೂ ಅದರೊಂದಿಗೆ ರಾತ್ರಿಗಳಲ್ಲಿ ಕಟ್ಟುಸಿರುಬಿಡುವಿಕೆಯೂ ಉಂಟಾಗಿ ರಾತ್ರಿಯೆಲ್ಲಾ ಎಚ್ಚರ ಇರುತ್ತಿದ್ದೆನಲ್ಲದೆ, ಮನೆಯವರೆಲ್ಲರಿಗೂ ತೊಂದರೆಯನ್ನುಂಟುಮಾಡುತ್ತಿತ್ತು. ಕೆಮ್ಮಿನ ಔಷಧಿಗಳನೇಕ ಉಪಯೋಗಿಸಲು, ತತ್ಕಾಲದ ಪ್ರಯೋಜನವೇ ಹೊರತು ಬೇರೆ ಪ್ರಯೋಜನವಾಗಲಿಲ್ಲ. ಕಡೆಗೆ ಲಿಟಲ್ಸ್ ಓರಿಯೆಂಟಲ್ ಬಾಮ್ ಎಂಬುದನ್ನು ಉಪಯೋಗಿಸಲು ಮನಸ್ಸು ಮಾಡಿದೆನು, ಅರ್ಧ ಸೀಸೆ ಉಪಯೋಗಿಸುವದರಲ್ಲಿಯೋ, ಮೊದಲನೇ ಇಡೀ ರಾತ್ರಿಯ ನಿದ್ರೆಯಾಯಿತು. ಹಾಗೆಯೇ ಪೂರ್ಣ ವಾಸಿಯಾಯಿತು."

ಸೀಸೆ 1 ಕ್ಕೆ 1 ರೂ, ಮೇರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

101-39

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೋಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೋಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ವಿಕ್ರಯಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಡಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ;

[173-25]

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

Printed and Published by the Rev. H. Gulliford, Proprietor and Manager, Wesleyan Mission Press, Mysore. 28/1/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ ನೇ ಇಸವಿ ಫೆಬ್ರುವರಿ ತಾರೀಖು ೩ ನೇ ಗುರುವಾರ. ಸಂಚಿಕೆ ೩೬

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ತೊಲೆಗಳು 2 ಸಲೀ ಅಡಿ ಲಾಗಾಯತು 30-40 ಸಲೀ ಅಡಿಯ ವರೆಗೂ ಇರುತ್ತವೆ. ಇಷ್ಟಪಡುವವರು ತಪ್ಸೀಲನ್ನು ಹುಣಸೂರಲ್ಲಿರುವ ಮೆ|| ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೇ ಗಳು ಶಿಬೂರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ. [232-14]

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸಿಘ್ರಾರ್ಗ್ಯ ಟಪಾಲಿಕ್ಕೆ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ಕಾದಾಸುಂದರಿ	0-8-0	ಕುಮುದಿನಿ	0-6-0
ಬಾಧಾವಾಧನಿ	0-8-0	ಸಂತಾಪಕ	0-4-0

[275-8] ವಿಳಾಸ —ಇಂದ್ರಿರಾ ಬುಕ್ ಸ್ಟಾಲ್, ಮೈಸೂರು.

ಮಧುರವಾಣಿ. —ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕೈಟಲಾಗಿಗೂ ಬೆಲೆಯಿಲ್ಲ. [160-29]

ಅಚ್ಚುಕಟ್ಟಾದ ಕಾದಂಬರಿಗಳು :—ಜಯ ! ವಾಲ್ಮೀಕಿ 12 ಆ ; ಅಶ್ವತ್ಥಮೃಗ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ಸಭಾ ಭಾಗ I, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ :—ಹನುಮಾನ್ ಕಂಪೆನಿ, ಮೈಸೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೀನಲ್ ಕೋಡು ರೂ. 2 ; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.

[143-30] ವಿಳಾಸ :—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು !!!

ಯುದ್ಧಕ್ಕೆ ಸೇರಿದತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕವನಗಳ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತವೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲದ ಸುಂದರವಾದ ಪಟಗಳು. ಕ್ರಯ 2 ಆಣೆ ; ವಿ. ಪಿ. ಯಲ್ಲಿ 4 ಆಣೆ.

[8-1] ನಮ್ಮ ವಿಳಾಸ.—ದಿ ಜನರಲ್ ಏಜೆನ್ಸಿ, ಮೈಸೂರು.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳು ಕಟ್ಟಿದ್ದರೂ ಹುಳಿ ವಾಸನೆಯಾಗದು. ಬೇಕಾದವರು ವಿ. ಪಿ. ಯಲ್ಲಿ ತರಿಸಬಹುದು. ಕ್ರಯ ಸೇರಿಗೆ 1 ರೂಪಾಯಿ ವಿಳಾಸ.—ಎ. ಎನ್. ನಂಜುಂಡಯ್ಯ.
[14-4] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ಸಿದ್ಧವಾಗಿದೆ.

1916 ನೆಯ ವರ್ಷದ ಲೋವರ್ ಸೆಕಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.
ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-51]

ಇಂಗ್ಲೀಷಿನ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಪ್ರಪಂಚಯುದ್ಧ

ಘನ

ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಛಾಯಾಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ತೋಳುವ ಭೀಕರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ ! ಸ್ವಲ್ಪವೇ ಪ್ರತಿಗಳಿವೆ !!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಪತನವಾದ ಎಮ್ಡನ್ನನ್ನು ನೋಡಿರುವಿರಾ ? ಅದರ ನಾಯಕನನ್ನು ಬಲ್ಲಿರಾ ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿಖಾಮಣಿಯನ್ನೂ ನೋಡಿರುವಿರಾ ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಶಾಸನ ದುಷ್ಟರುಗಳಂತೆ ಕಾಲಾಗ್ನಿಗೆ ಪುತ್ಥಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಸೂಚನೆ :—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚುಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ !

[10-4] ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 9 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಅವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[52-48]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಛಾಪೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 6-4-0 ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಮಿಟ್ಟಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ ವ್ಯಾಪಾರಸ್ಥರಿಗೆ ಚಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ಪೋ, ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

Mellin's Food

ಮೆಲಿನ್ಸ್ ಆಹಾರವು

ಕೈ ಸೋಕದೆ ಮಾಡಿದೆ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿ ಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ. [9-4]

ಮೆಲಿನ್ಸ್ ಆಹಾರವೆಂಬ ಬೇರೆ ಬೇರೆ ತಿಂಡಿ ಪದಾರ್ಥಗಳನ್ನು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ದ್ವೀಪಗಳಲ್ಲಿ ಎಲ್ಲಾ ವ್ಯಾಪಾರಗಾರರೂ ವಿಕರಿಮಾಡುತ್ತಾರೆ. **Messrs. OAKES & Company, Mount Road, Madras.**

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂಧುಗಳ ನೋವು, ಮೈ ಕಾಲು ಹೊಡೆತ (ಛಾವು), ಮೈ ನಡುಕ, ಶೀತದ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಶೀಘ್ರವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಕುಸುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಕತ್ತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [189-32]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಮಿನ್ ಪರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟು, ಇವರು ಬರೆಯುವುದು—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಖಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್ ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು, ಇವರು ಬರೆಯುವುದು—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 5,00,000.

(INCORPORATED UNDER THE MYSORE COMPANIES' REGULATION No. III OF 1895.)

Absolute Security, Attractive Schemes, Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

Active and honest agents to canvass insurance and provident businesses and influential local directors to canvass Two-in-one (share policy) and property investment businesses in each and every unrepresented taluk and district of the Mysore province on liberal commission and office allowance. For terms and prospectuses, please apply with your experience in the line to

Mr. M. L. NAGANNAH,

Managing Director, Life & Marriage Assurance Buildings, MYSORE.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧನಿವಾರಿಣಿ	4 ,,

[262-10] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.



ಅನಾಹುತಗಳು ಸಂಭವಿಸುವವು!

ಕೆಲಸಮಾಡುವ ಯಾವ ಮನುಷ್ಯನಾದರೂ, ಕೆಲಸಮಾಡದ ಅನೇಕ ಮನುಷ್ಯರಲ್ಲಾದರೂ ಅನಾಹುತಗಳು ಆಗುತ್ತವೆ. ಪ್ರತಿದಿನವೂ ಯಾರಿಗಾದರೂ ಸಂಭವಿಸುತ್ತೆ. ಎಂದಾದರೂ ಒಂದು ದಿನ ಅದು ನಿಮಗೂ ಆದೀತು.

ಇಲಿನಾಯ್ಸಿನ ಕಿಪ್ಪಡಿಯಲ್ಲಿರುವ ಮಿ|| ಓ. ಎಫ್. ಸ್ಮಿತ್ ಹೇಳುವದು—"ಮಹಡಿಯಿಂದ ಇಳಿಯುತ್ತಿದ್ದಾಗ ನನ್ನ ಹೆಂಡತಿಯು ನಿಂತುಕೊಳ್ಳಲಾರದಷ್ಟು ಕಠಿಣವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೀಲು ಪೆಡಸಾಗಿ ಬಹಳ ಊದಿಕೊಂಡು, ಮುಟ್ಟಿದರೆ ನೋವು ಸಹಿಸಕೂಡದಷ್ಟು ಮಟ್ಟಿಗೆ ಇತ್ತು. ಆಕೆ ಅನೇಕವಾದ ಔಷಧಗಳನ್ನೆಲ್ಲಾ ಉಪಯೋಗಿಸಿ, ಆ ತತ್ಕಾಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂಡಳು.

ಚೆಂಬರ್ಲೇನ್ಸ್ ಓರಿಯಂಟಲ್ ಬಾಂ ಎಂಬುದನ್ನು ಕುರಿತು ಕೇಳಿ, ಅದನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿಕೊಂಡಳು. ಅದನ್ನು 3 ದಿನಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು."

ಸೀಸೆ 1ಕ್ಕೆ 1 ರೂ. ಮೈಸೂರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. 101-40

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ವಿಕರಿಯಾಗುವ ಸ್ಥಳಗಳು.

1. ಥಾಂಪ್ಸನ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-26] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಸಂತೋಷಕರವಾದ ಪ್ರಕಟನೆ.

ರೈಲ್ವೆ ರೆಗ್ಯುಲೇಟರ್ ವಾಚ್.



ಇದರ ಕ್ರಯ 6 ಬಹುಮಾನಗಳ ಸಮೇತ ರೂ. 3-8-0 ಮಾತ್ರ. 5 ವರುಷದ ಗ್ಯಾರಂಟಿ. ಘನವಂತರೇ, ಪುನಹ ಇಂಡಿಯ ಮಾರ್ಕ ಅಂದರೆ ಗುರುತುಳ್ಳ ಶ್ರೇಷ್ಠ ಕೃತ್ಯಾಕಿಯಾದ ಲೀವರ್ ಕೆಲಸದಿಂದ ತಯಾರಾದ ಈ ವಾಚ್ ಈಗತಾನೆ ಬಂದಿರುತ್ತೆ. ಬಲಿಷ್ಟವಾದದ್ದು. ಹೆಚ್ಚು ಮಾತುಗಳಿಂದೇನು ? ದೀರ್ಘಕಾಲ ಬಾಳಿಕೆ ಬರುವ ವಾಚ್. ಸುಂದರವಾದದ್ದು. ಇದರ 6 ಬಹುಮಾನಗಳ ಪಟ್ಟೀಲು : (1) ಸುಂದರವಾದ ವಾಚ್ ಸರಪಣಿ, (2) ನಾಜೂಕ್ಯವುಳ್ಳ ಉತ್ತರಮುಖಿ, (3) ಕನ್ನಡಿಯುಳ್ಳ ಡಬ್ಬಿ, (4) ನಾಜೂಕ್ಯವುಳ್ಳ ಕರವಸ್ತ್ರ, (5) ಪರಿಮಳವುಳ್ಳ ಸೆಂಟ್ ಬಾಟಲ್, (6) ಪಟ್ಟರ್ ಗುಂಡಿಗಳ ಸೆಟ್ಟು.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ :—

[30-2] ಪಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂಬರ್ 7, ಕೋಸ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಹೊಸ ಪುಸ್ತಕಗಳು.—ವಿಧವಾವಿವಾಹ 4 ಆ., ಸನ್ಯಾಸಿನಿ 1½ ಆ., ಸಂಶೀಲೆ 8 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ 1 | 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಛತ್ರವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ [53-60] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಅನುಭವಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-7]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಐದನೆಯ ಮುದ್ರಣ. ದಿವ್ಯವಾದ ಕಾಗದ. ಗಟ್ಟಿ ಅಟ್ಟೆ.

ಕ್ರಯ ಒಂದು ರೂಪಾಯಿ ಎಳಾಣೆ ಮಾತ್ರ.

ಶ್ರೀಮಾನವರ ಕಾಗದ, ಪತ್ರ, ದಾವೆ, ರಶೀದಿ, ನೋಟೀಸು, ಮುಂತಾದವುಗಳನ್ನು ಮರ್ಯಾದೆಯರಿತು ಬರೆವ ರೀತಿ, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಈ ಸಂಬಂಧವಾದ ಎಲ್ಲ ನಡೆಯು ತಿಳುವಳಿಕೆಗಳು, ಎಲ್ಲ ಬಗೆಯ ವ್ಯವಹಾರಗಳನ್ನೂ ಪ್ರಶ್ನೋತ್ತರ ರೂಪವಾಗಿ ಬರೆದಿರುವದರಿಂದ ಎಲ್ಲರೂ ಬಹು ಸುಲಭವಾಗಿ ತಿಳಿದುಕೊಳ್ಳಬಹುದು. [282-8]

ಕೆಲವು ಪ್ರತಿಗಳೇ ಉಳಿದಿವೆ ! ಬೇಗ ಬರೆಯಿರಿ !! ಬೇಗ ಬರೆಯಿರಿ !!!

ಕ್ರಯ ಒಂದು ರೂಪಾಯಿ ಎಳಾಣೆ ಮಾತ್ರ.

ವಿಳಾಸ—ಭಾರತಿ ಸಂಪಂಗಿರಾಮು,
ಸಂಪಾದಕ, "ಸವಿನುಡಿ," ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ತ್ರೀಯರ ಖುಷ್‌ಖಾವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯುಳ್ಳ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ! ಇಂಥಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಡೆಯು ಕೂದಲಿನ ಬಳಿಕ ಎಂದಿಗೂ ಉದುರಿ ಬಿದ್ದುಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಸೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳಕಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಆಕರ್ಷಕವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಚೀಲದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿಬಂತೆನಿಸುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-2]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ ರೂ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ವಿ ಅಲೆಕ್ ಮಾರ್ಟ್, ಮಂಗಳೂರು.

ಅನ್ನು ಓದಿದ ಮಾತ್ರಕ್ಕೆ ನಿಮಗೆ ಲಾಭವುಂಟು ! ಮಿಂಚಿಹೋದ ಮೇಲೆ ಚಿಂತಿಸಬೇಡಿ !!

Practical English Self-Instructor (Vols. 1, 2 & 3).

ಸಚಿತ್ರ ಆಂಗ್ಲಭಾಷಾ ಪ್ರಕಾಶಕ

(ಸ್ವತಃ ಇಂಗ್ಲಿಷ್ ಕಲಿಯುವದಕ್ಕೆ ವಿದ್ವಾಂಸರಿಂದ ತಯಾರಾದ ಅತ್ಯಂತ ನೂತನ ಪುಸ್ತಕ)

ಉತ್ತಮ ಕ್ರಮಗಳನ್ನು ಅನುಸರಿಸಿ ಇಂಗ್ಲಿಷ್ ಭಾಷೆಯನ್ನು ಕಲಿಯಲಿಚ್ಛಿಸುವವರಿಗೆ ಇದು ಸಾಕ್ಷಿತವಾದ ರಾಜಭಾಷಾ ಕೈಪಿಡಿ. ಸ್ಥಳ ಸಂಕೋಚದಿಂದ ಈ ಪುಸ್ತಕದ ವಿಷಯಗಳನ್ನು ಇಲ್ಲಿ ವಿವರಿಸಲಿಲ್ಲ. ಇಂಥ ಪುಸ್ತಕ ಇದುವರೆವಿಗೆ ಇದ್ದೇ ಇರಲಿಲ್ಲ. ಸರ್ವವಿಷಯಗಳೂ ಇದೊಂದರಲ್ಲೇ ಅಡಕವಾಗಿವೆ. ದೇಶಬಾಂಧವರ ಪ್ರಯೋಜನಾರ್ಥವಾಗಿ ಇದನ್ನು ಪ್ರಕಟಿಸಿದೆ. ನಿಮ್ಮ ಪರೀಕ್ಷೆಗಾಗಿ ಮೊದಲು ಒಂದನ್ನು ತರಿಸಿಕೊಂಡು ಇದರ ಯಥಾರ್ಥವನ್ನು ಗ್ರಹಿಸಿ ನಿಮ್ಮ ಇಷ್ಟಮಿತ್ರರಲ್ಲಿ ಪ್ರಕಟಿಸಿದರೆ ದೊಡ್ಡ ಉಪಕಾರವಾಗುವದು. ಸಾವಕಾಶಮಾಡದೆ ಖಂಡಿತ ಪರೀಕ್ಷಿಸಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಕ (3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ)	ಕ್ರಯ ರೂ. 2- 0-0 ತಪಾಲು ಖರ್ಚು 0-4-0.
ನಿಮ್ಮ ಪರೀಕ್ಷೆಗಾಗಿ ತರಿಸಿಕೊಂಡರೆ	,, ,, 1-12-0 ತಪಾಲು ಖರ್ಚು ಮಾಫಿ.
ಸಚಿತ್ರ ಆಂಗ್ಲಭಾಷಾ ಪ್ರಕಾಶಕ 1ನೇ ಪುಸ್ತಕ	,, ,, 1- 0-0 ತಪಾಲು ಖರ್ಚು 0-2-0
ನಿಮ್ಮ ಪರೀಕ್ಷೆಗಾಗಿ ತರಿಸಿಕೊಂಡರೆ	,, ,, 0-14-0 ತಪಾಲು ಖರ್ಚು ಮಾಫಿ.

ಪರೀಕ್ಷೆಗಾಗಿ ತರಿಸಿಕೊಳ್ಳುವವರು ಈ ತಿಂಗಳು ಆಖೈರೊಳಗಾಗಿ ಬರೆಯಬೇಕು.

[31-1]
ವಿಳಾಸ—ಮ್ಯಾನೇಜರ್, ಹಿತೋದಯ ಆಫೀಸ್, 2/80, ಕಿಲಾರಿರೋಡ್, ಬೆಂಗಳೂರು ಸಿಟಿ.

ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪನಿ, ಲಿಮಿಟೆಡ್,

ಹೆಡ್ ಆಫೀಸ್ : ಮೈಸೂರು

ಮೂಲಧನ : ರೂ. 5,00,000

ನೋಟೀಸ್

ಕೆಲವು ಅಯೋಗ್ಯರಾದ ಇತರ ಕಂಪನಿಗಳ ಏಜಂಟರುಗಳು ಕಂಪನಿಯ ಇರುವಿಕೆಯ ವಿಷಯದಲ್ಲಿ ಪ್ರತಿಕೂಲವಾದ ವ್ಯಾಖ್ಯಾನಗಳನ್ನು ಮಾಡುತ್ತಾ ಇದಾಗಲು ವಿರುದ್ಧವಾಗಿಯೂ ಮತ್ತು ಮೇಲ್ಕಂಡ ಕಂಪನಿಯ ಹೆಸರಿನಲ್ಲಿರುವ "ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ" ಎಂಬ ಪದಗಳನ್ನು ಉಪಯೋಗಿಸುವದಕ್ಕೆ ಗೌರ್ನಮೆಂಟಿನವರು ಅಧಿಕಾರ ಕೊಟ್ಟಿಲ್ಲವೆಂತಲೂ, ಅವರು (ಗೌರ್ನಮೆಂಟಿನವರು) ಕಂಪನಿಯ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವದಿಲ್ಲವೆಂತಲೂ ಮತ್ತು ಅವರು (ಗೌರ್ನಮೆಂಟಿನವರು) ಕಂಪನಿಯ ಆದಾಯ ನಷ್ಟಕ್ಕೆ ಜವಾಬ್ದಾರರಲ್ಲವೆಂತಲೂ ಮುಂತಾಗಿ ಮಹಾಜನಗಳು ತಿಳುಹಿಸಲ್ಪಟ್ಟಿದಾರೆಂಬದಾಗಿ ಈ ಕೆಳಗೆ ರುಜು ಮಾಡಿರುವವರ ಗಮನಕ್ಕೆ ಬಂದಿರುವದರಿಂದ ಈ ಕೆಳಗೆ ಬರೆದಿರುವ ವಿಷಯಗಳನ್ನು ಮಹಾಜನಗಳು ದಯವಿಟ್ಟು ಗಮನಿಸತಕ್ಕದ್ದು.

1. ಮೊದಲನೇ ವಿಷಯ :—ಮೈಸೂರು ಗವರ್ನಮೆಂಟು ಸೆಕ್ಯೂರಿಟಿ ಎಂಬ ಪದಗಳನ್ನು ಉಪಯೋಗಿಸುವುದಕ್ಕೆ ಮೈಸೂರು ಗವರ್ನಮೆಂಟು ರಿಜಿಸ್ಟ್ರಾರವರಿಂದ ಕೊಡಲ್ಪಟ್ಟ 1913 ನೇ ಇಸವಿ ಜುಲೈ 3 ನೇ ತಾರೀಖು 143 ನಂ. ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಪ್ರಕಾರ, ಗವರ್ನಮೆಂಟಿನವರಿಂದ ಅಧಿಕಾರವು ಹೊಂದಲ್ಪಟ್ಟಿರತಕ್ಕ ವಿಷಯವನ್ನೂ ಮತ್ತು ಈ ಪದಗಳನ್ನು ಉಪಯೋಗಿಸತಕ್ಕ ವಿಷಯದಲ್ಲಿ ಸರ್ಟಿಫಿಕೇಟ್ ಕೊಡುವುದಕ್ಕಿಂತ ಮುಂಚಿತವಾಗಿಯೇ, ಆಗಿನ ರಿಜಿಸ್ಟ್ರಾರವರಿಂದಲೇ ಚರ್ಚೆಯಿಂದ ತೀರ್ಮಾನಿಸಲ್ಪಟ್ಟಿರುತ್ತೆಂಬ ವಿಷಯವನ್ನೂ ಸಹ ಮಹಾಜನಗಳು ತಿಳಿಯತಕ್ಕದ್ದು.

2. ಎರಡನೇ ವಿಷಯ :—1913 ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಸಬ್ ರಿಜಿಸ್ಟ್ರಾರ್ ಮಿ|| ಶ್ರೀಕಂಠರಾವ್, ಬಿ. ಎ ಯವರಿಂದ ಗವರ್ನಮೆಂಟಿನವರೇ ಕಂಪನಿಯ ಲೆಖ್ಖ ವಗೈರೆಗಳನ್ನು ಅಜಮಾಯಿಷಿ ಮಾಡಿಸುವುದರಿಂದಲೂ, ಮತ್ತು 1914 ನೇ ಇಸವಿ ಮಾರ್ಚ್ ತಾ. 29 ರಲ್ಲಿ ನಡೆದ ಷೇರುದಾರರ ಮೀಟಿಂಗಿನಲ್ಲಿ ಕಂಪನಿಯ ಯಾವಾಗ್ಯೂ ಗವರ್ನಮೆಂಟಿನವ ಮೇಲ್ವಿಚಾರಣೆಯಾಗಿರುವಂತೆ, ಕಂಪೆನಿಯ ಲೆಕ್ಕಗಳು, ಗವರ್ನಮೆಂಟಿನ ಆಡಿಟರಿಂದ ಆಡಿಟ್ ಮಾಡಲ್ಪಡುವುದರಿಂದಲೂ, ಕಂಪೆನಿಯು ಯಾವಾಗ್ಯೂ ಗವರ್ನಮೆಂಟಿನವರಿಂದ ಮೇಲ್ವಿಚಾರಣೆ ಮಾಡಲ್ಪಡುವುದಿಲ್ಲವೆಂಬದಾಗಿ ತಿಳಿಯಲ್ಪಡಕೂಡದು. ಇದೂ ಅಲ್ಲದೆ ಕಂಪೆನಿಯು ಗವರ್ನಮೆಂಟಿನಲ್ಲಿ ರಿಜಿಸ್ಟರು ಮಾಡಲ್ಪಟ್ಟಿರುವದರಿಂದ, 1895 ನೇ ಇಸವಿ 3 ನೇ ನಂ. ಮೈಸೂರು ಕಂಪೆನಿಗಳ ಕಾನೂನು ಪ್ರಕಾರ, ಮೈಸೂರು ಗವರ್ನಮೆಂಟು ರಿಜಿಸ್ಟ್ರಾರವರಿಗೆ ಪ್ರತಿವರ್ಷವೂ ಇದರ ರಿಪೋರ್ಟುಗಳನ್ನು ಒಪ್ಪಿಸಲಿಕ್ಕೆ ಬದ್ಧರಾಗಿರುವುದಲ್ಲದೆ, ಇದರ (ಕಂಪೆನಿಯ) ಕೆಲಸಗಳು ಇಂಡಿಯ, ಬರ್ಮ, ಮತ್ತು ಸಿಲೋನ್ ಗಳಲ್ಲೆಲ್ಲಾ ನಡೆಯಿಸಲ್ಪಡಬೇಕಾಗಿರುವದರಿಂದ, ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ 9 ನೇ ನಂ ಆರ್ಟಿಕಲ್ಲಿನಲ್ಲಿ ಉದಹರಿಸಿರುವ ಮೇರೆಗೆ, 1912 ನೇ ಇಸವಿ ಇಂಡಿಯಾ ದೇಶದ ಜೀವವಿಮೆ ಕಂಪೆನಿಗಳ ಕಾನೂನುಪ್ರಕಾರ, ಇಂಡಿಯಾ ಗವರ್ನಮೆಂಟಿಗೆ ಸೆಕ್ಯೂರಿಟಿ ಕೊಡುವುದು ಮೊದಲಾದವುಗಳು ಆಚರಿಸಲ್ಪಡುತ್ತವೆ.

3. ಮೂರನೇ ವಿಷಯ :—ಗೌರ್ನಮೆಂಟಿನವರ ಖಾತರಿ ಇಲ್ಲದೆ ಇರತಕ್ಕ ಕಂಪೆನಿಗಳ ದಿವಾಳಿಯಾಗದೇ ಇರುವಿಕೆಯು ಅನುಮಾನಾಸ್ಪದವಾಗಿರುತ್ತೆಂಬುದಾಗಿ ಹೇಳುವುದು ಸರಿಯಲ್ಲ. ಯಾತಕ್ಕೆಂದರೆ,—ಈ ಭೂಮಿಯಮೇಲಿರತಕ್ಕ ಯಾವ ಗೌರ್ನಮೆಂಟೇ ಆಗಲಿ ಯಾವ ಜೀವವಿಮೆ ಅಥವಾ ದೇವಾದೇವಿ ನಡೆಯಿಸುವ ಕಂಪೆನಿಯ ದಿವಾಳಿಯಾಗದೇ ಇರುವಿಕೆಯನ್ನು ಖಾತರಿ ಮಾಡಿಲ್ಲ. ಈಗ "ಗೌರ್ನಮೆಂಟ್ ಸೆಕ್ಯೂರಿಟಿ" ಎಂಬ ಪದಗಳನ್ನು ಹೊಂದಿರತಕ್ಕ ಬೊಂಬಾಯಿ ಕಂಪೆನಿಯು ದಿವಾಳಿಯಾಗದೇ ಇರುವಿಕೆಯನ್ನು ಖಾತರಿ ಮಾಡಿಲ್ಲ. ಗೌರ್ನಮೆಂಟಿನ ಸಹಾಯವುಳ್ಳ, ಬೆಂಗಳೂರಿನಲ್ಲಿರುವ ಮೈಸೂರ್ ಬ್ಯಾಂಕೂ, ಇವುಗಳ ದಿವಾಳಿಯಾಗದೇ ಇರುವಿಕೆಯೂ ಓರಿಯಂಟಲ್ ಜೀವವಿಮೆ ಕಂಪೆನಿಯು ಮತ್ತು ಗೌರ್ನಮೆಂಟಿನ ಸಹಾಯವುಳ್ಳ ಕೂಡ ಕ್ರಮವಾಗಿ, ಬೊಂಬಾಯಿ ಮತ್ತು ಮೈಸೂರು ಗೌರ್ನಮೆಂಟುಗಳಿಂದ ಖಾತರಿ ಮಾಡಲ್ಪಟ್ಟಿಲ್ಲ. ಆದರೆ, ಗೌರ್ನಮೆಂಟಿನವರು ಖಾತರಿಮಾಡದೇ ಇದ್ದ ಮಾತ್ರಕ್ಕೆ, ಈ ಕಂಪೆನಿಗಳ ದಿವಾಳಿಯಾಗದೇ ಇರುವಿಕೆಯು, ಅನುಮಾನಾಸ್ಪದವಾದದ್ದೆಂದು, ಎಂದಿಗೂ ಅರ್ಥವನ್ನು ಮಾಡಕೂಡದು ಮತ್ತು, ಯಾವ ಜೀವವಿಮೆ ಕಂಪೆನಿಯೂ ಇದುವರಿಗೆ ದಿವಾಳಿಯಾಗಿರುವ ಹಾಗೆ ಕಾಣಬಂದಿರುವುದಿಲ್ಲ.

ಇದೂ ಅಲ್ಲದೆ, ಮೈಸೂರು ಗೌರ್ನಮೆಂಟು ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪೆನಿ ಹೆಸರಿನಲ್ಲಿ "ಮೈಸೂರು ಗೌರ್ನಮೆಂಟು ಸೆಕ್ಯೂರಿಟಿ" ಎಂಬ ಪದಗಳು ಅರ್ಥವಿಲ್ಲದೆ ಉಪಯೋಗಿಸಲ್ಪಟ್ಟಿಲ್ಲ. ಹೇಗೆಂದರೆ :—"ಮೈಸೂರು" ಎಂಬ ಪದವು ಕಂಪೆನಿಯು ಸ್ಥಾಪಿಸಲ್ಪಟ್ಟಿರತಕ್ಕ ಸ್ಥಳವನ್ನು ಸೂಚಿಸುತ್ತೆ. ಮತ್ತು "ಗೌರ್ನಮೆಂಟು ಸೆಕ್ಯೂರಿಟಿ" ಎಂಬ ಪದಗಳು, "ಮೈಸೂರು ಗೌರ್ನಮೆಂಟು ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪೆನಿಯು, "ಗೌರ್ನಮೆಂಟು ಸೆಕ್ಯೂರಿಟಿ" ಎಂಬ ಪದಗಳಿಲ್ಲದೇ ಇರತಕ್ಕ ಕಂಪೆನಿಗಳ ಹಾಗಲ್ಲದೆ, ಮತ್ತು "ಗೌರ್ನಮೆಂಟು ಸೆಕ್ಯೂರಿಟಿ" ಎಂಬ ಪದಗಳು ಕಂಪೆನಿಯ ಮೆಮೊರ್ಯಾಂಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ಗಳಲ್ಲಿ ಅವಕಾಶ ಕೊಟ್ಟಿರುವಂತೆ, ಓರಿಯಂಟಲ್ ಮೊದಲಾದ ಕಂಪೆನಿಗಳ ಹಾಗೆ, ಕಂಪೆನಿಯ ಪಾಲಿಸಿದಾರರ ಖಾತರಿಗಾಗಿ, ಪ್ರತಿ ವರ್ಷವೂ ಮಹಾಜನಗಳಿಗೆ ಪ್ರಕಟಿಸುವ ಮತ್ತು ಕಂಪೆನಿಯ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಿಸಿರುವ ಹಾಗೆ, ಕಂಪೆನಿಯ ಪಾಲಿಸಿದಾರರ ಖಾತರಿಗಾಗಿ, ಪ್ರತಿ ವರ್ಷವೂ ಮತ್ತು ಜೀವವಿಮೆ ಚಂದಾ ಮೊಬಲಗಿನಲ್ಲಿ ಗೊತ್ತಾದ ಸೇಕಡ ಇಷ್ಟೇ ಮೊಬಲಗನ್ನು ಗೌರ್ನಮೆಂಟು ಸೆಕ್ಯೂರಿಟಿಗಳಲ್ಲಿಯೂ, (ಇತರ ಹಣಗಳನ್ನು ಸ್ವತ್ತುಗಳಲ್ಲಿಯೂ) ಇಡುವುದಕ್ಕೆ ಬದ್ಧವಾಗಿರುತ್ತದೆಂಬ ವಿಷಯವನ್ನು ಸೂಚಿಸುತ್ತದೆ "ಗೌರ್ನಮೆಂಟು ಸೆಕ್ಯೂರಿಟಿ" ಎಂಬ ಪದಗಳಿಲ್ಲದೇ ಇರತಕ್ಕ ಕಂಪೆನಿಗಳು ತಮ್ಮ ಹಣವನ್ನು ಗೌರ್ನಮೆಂಟು ಸೆಕ್ಯೂರಿಟಿಗಳಲ್ಲೇ ಇಡುವುದಕ್ಕೆ ಬದ್ಧಗಳಾಗಿರುವುದಿಲ್ಲವೆಂತಲೂ ಮತ್ತು ತಮ್ಮ ಡೈರೆಕ್ಟರುಗಳ ಇಷ್ಟಾನುಸಾರ ಹಣಗಳನ್ನು ಹೇಗೆ ಬೇಕಾದರೂ ಇಡುತ್ತವೆ ಎಂಬದಾಗಿಯೂ ಹೇಳಬೇಕಾದುದಿಲ್ಲ. ಮೇಲ್ಕಂಡಂತೆ, ಈ ಕಂಪೆನಿಯು 1913 ನೇ ಇಸವಿ ಡಿಸೆಂಬರ್ 31 ರ ವರಿವಿಗೆ ಗೌರ್ನಮೆಂಟು ಸೆಕ್ಯೂರಿಟಿಗಳಲ್ಲಿ ಇಡಲ್ಪಡಬೇಕಾದ ಅವಶ್ಯಕವಾದ ಮೊಬಲಗನ್ನು ಮೈಸೂರು ಗೌರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಆವಾಗಲೇ ಇಡಲ್ಪಟ್ಟಿದೆ ಎಂಬ ವಿಷಯವನ್ನು 1914 ನೇ ಇಸವಿಗೋಸ್ಕರ, ಅವಶ್ಯಕವಾಗಿಡತಕ್ಕ ಹಣವು ಆ ವರ್ಷದ ಲೆಖ್ಖಗಳು ಆಡಿಟ್ಟಾದ ಕ್ಷಣವೇ ಡಿಪಾಸಿಟ್ ಮಾಡಲ್ಪಡುತ್ತೆಂಬ ವಿಷಯವನ್ನೂ ಸಹಾ ಮಹಾಜನಗಳು ತಿಳಿಯತಕ್ಕದ್ದು.

ಆದಕಾರಣ, ಕಂಪೆನಿಯ ಭರವಸೆಯು ನಿರ್ವಿವಾದವಾದದ್ದೆಂದು ಹೇಳಬೇಕಾದುದಿಲ್ಲ. ಅಲ್ಲದೆ ಗೌರ್ನಮೆಂಟಿನವರೂ ಕೂಡ, ಅವರಲ್ಲಿಡತಕ್ಕ ಹಣಗಳಿಗೆ ಖಾತರಿಯಾಗಿ ಅವಶ್ಯಕವಾಗಿ ನಿಂತೇ ತೀರಬೇಕು. ಕಂಪೆನಿಯ ಉದ್ದೇಶಗಳು, ನಿರ್ಬಂಧಗಳೂ ಮತ್ತು ಸ್ಥಿತಿ ವಿಷಯದಲ್ಲಿ ಕಂಪೆನಿಯ ಷೇರು ಪ್ರಾಸ್ಪೆಕ್ಟಸ್ಸನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಂಡು ನೋಡತಕ್ಕದ್ದು.

6-1-1915
Mysore.

M. L. NAGANNAH,
Managing Director.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಫೆಬ್ರವರಿ ತಾ ೪ ನೇ ಗುರುವಾರ.

ಮೈಸೂರು ಸಂಸ್ಥಾನದ ಆಳ್ವಿಕೆಯ ರಿಪೋರ್ಟು.

ಮೈಸೂರು ಗವರ್ನಮೆಂಟಿನವರು ಸಂಸ್ಥಾನದ 1913-14ನೇ ಸಾಲಿನ ಆಳ್ವಿಕೆಯ ರಿಪೋರ್ಟನ್ನು ಈ ಸಲ ಕೂಡಿದ ಮಟ್ಟಿಗೂ ಜಾಗ್ರತೆಯಲ್ಲೇ ರಚಿಸಿ ಪ್ರಕಟಮಾಡಿರುತ್ತಾರೆ. ಈ ರಿಪೋರ್ಟನ್ನು ಹೊಸಬರ್ಯಾರಾದರೂ ಓದಿದ ಪಕ್ಷದಲ್ಲಿ ಕಳೆದ ಸಾಲಿನೊಳಗೆ ನಡೆದ ಮುಖ್ಯ ವಿಷಯಗಳು ಸುಲಭವಾಗಿ ತಿಳಿದುಬರುವಂತೆ ವಿಷಯಗಳನ್ನೆಲ್ಲಾ ಸಂಕ್ಷೇಪವಾಗಿ ವಿವರಿಸಿ ಬರೆದಿರುತ್ತಾರೆ.

ಕಳೆದ ಸಾಲಿನಲ್ಲಿ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಮೆಂಬರುಗಳ ಸಂಖ್ಯೆಯನ್ನು 25 ಕ್ಕೆ ಹೆಚ್ಚಿಸಿದರು. ಈ ಪೈಕಿ 13 ಮಂದಿ ಸರ್ಕಾರಿ ನೌಕರಿಯಲ್ಲಿಲ್ಲದವರು. ಈ 13 ಮೆಂಬರುಗಳಲ್ಲಿ ಪ್ರಜೆಗಳು 8 ಜನರನ್ನು ಚುನಾಯಿಸುವರು ; ಸರ್ಕಾರದವರು ಐದು ಮಂದಿಯನ್ನು ನೇಮಕಮಾಡುತ್ತಾರೆ. "ಎಫಿಷೆನ್ಸಿ ಆಡಿಟ್" ಎಂಬ ಒಂದು ಬಾಬು ಹೊಸದಾಗಿ ಕಲ್ಪಿಸೆಯಾಯಿತು. ಆಳ್ವಿಕೆಯ ಕೆಲಸಕಾರ್ಯಗಳು ಕ್ರಮಪ್ರಕಾರ ಕಟ್ಟುನಿಟ್ಟಾಗಿ ನಡೆಯುವವೇ ಎಂದು ತನಿಖೆ ಮಾಡಿ ನೋಡಿಕೊಳ್ಳುತ್ತಾ ಬರುವುದೇ ಈ ಹೊಸ ಬಾಬಿನ ಉದ್ದೇಶ. ಆದರೆ ಈ ಬಾಬಿನ ಕಾರುಬಾರುಗಳೇನೋ ಅದರ ರಿಪೋರ್ಟನ್ನು ತಿಳಿಸಿಲ್ಲ. ಗ್ರಾಮಾಭಿವೃದ್ಧಿಯ ಏರ್ಪಾಡೂ, ಮಲೆನಾಡು ಅಭಿವೃದ್ಧಿಯ ಏರ್ಪಾಡೂ ಕಳೆದ ಸಾಲಿನಲ್ಲೇ ಪ್ರಾರಂಭಿಸಲ್ಪಟ್ಟವು. ಇವುಗಳ ವಿಷಯದಲ್ಲಿ ರಿಪೋರ್ಟು ಬರೆದು ಬರಲು ಸಮಯ ಸಾಲಲಿಲ್ಲ. ಈಗ ಈ ರಿಪೋರ್ಟುಗಳು ಬರಬೇಕಾಗಿರೋಣದರಿಂದ ಅವುಗಳ ಆಗಮನವನ್ನು ಉತ್ಸಾಹದಿಂದ ಎದುರುನೋಡುತ್ತೇವೆ.

ಸಂಪದಭ್ಯುದಯ ಸಮಾಜದ ವ್ಯವಸಾಯಶಾಖೆಗೆ ಸಂಬಂಧಪಟ್ಟಂತೆ ಸರ್ಕಾರದವರು ಚನ್ನಪಟ್ಟಣದಲ್ಲಿ ರೇಷ್ಮೆ ತಯಾರಿಗಾಗಿ ಒಂದು ಫಾರಮನ್ನು ಪ್ರಾರಂಭಿಸಿರುತ್ತಾರೆ. ಮತ್ತು ಚಿಕ್ಕಬಳ್ಳಾಪುರದಲ್ಲಿಯೂ ಪ್ರಾರಂಭಿಸಬೇಕೆಂದು ತರದೂದು ಮಾಡುತ್ತಿರುವರು. ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ವಿದ್ಯಾರ್ಥಿಗಳನ್ನಿಟ್ಟುಕೊಂಡು ಫಲಪುಷ್ಪಾದಿಗಳ ಬೆಳುವಳಿಗೆಯಲ್ಲಿ ಅವರನ್ನು ತರಬೇತು ಮಾಡಿದರು. 24 ಮಂದಿ ವಿದ್ಯಾರ್ಥಿಗಳು ತರಬೇತಾದದ್ದರ ಪೈಕಿ ಒಬ್ಬನ ಹೊರತು ಉಳಿದವರೆಲ್ಲಾ ತೇರ್ಗಡೆಹೊಂದಿರುತ್ತಾರೆ. ಶ್ರೇಷ್ಠವಾದ ಹಾಲನ್ನು ಒದಗಿಸುವಂಥಾ ಒಳ್ಳೆಯ ಕರೋಪಟ್ಟಿಯನ್ನು ಇಟ್ಟು ನಡಿಸುವುದಕ್ಕೆ ಸರ್ಕಾರದವರು ಬೊಂಬಾಯಿನ ಒಬ್ಬ ವಿದ್ಯಾವಂತನಿಗೆ ಕೆಲವು ದ್ರವ್ಯವನ್ನು ಸಾಲವಾಗಿ ಕೊಟ್ಟಿದ್ದಾರೆ. ಅನೇಕ ಹೊಸ ಬಾಬುಗಳೂ ಏರ್ಪಾಡುಗಳೂ ರೂಪಿಸಲ್ಪಟ್ಟವು ; ಆದರೆ ಯಾವುದೊಂದನ್ನೂ ಕಾರ್ಯತಃ ಜಾರಿಗೆ ತರಲಿಲ್ಲ. ವಿದ್ಯಾ ಶಾಖೆಯವರು ಶಿಫಾರಸು ಮಾಡಿದ್ದರ ಮೇಲೆ ಸರ್ಕಾರದವರು 158 ಹೊಸ ಪಾಠಶಾಲೆಗಳನ್ನು ಪ್ರಾರಂಭಮಾಡಿದರು. ಇದಲ್ಲದೆ ಹಿಂದುಳಿದ ಜನಾಂಗಗಳಿಗೋಸ್ಕರ ರಾಜಧಾನಿಯಲ್ಲಿ ಒಂದು ಸೆಂಟ್ರಲ್ ಸ್ಕೂಲನ್ನು ಏರ್ಪಾಡು ಮಾಡಿರುತ್ತಾರೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಅನೇಕ ಏರ್ಪಾಡುಗಳು ಪರ್ಯಾಲೋಚನೆಯಲ್ಲಿರುವವು. ಕಸಬುಗಳ ವಿಷಯದಲ್ಲಾದರೋ ಹಲವು ಏರ್ಪಾಡುಗಳು ಪಕ್ವವಾಗುವುದರಲ್ಲೇ ಇವೆ ; ಈ ಪೈಕಿ ಯಾವುದೊಂದೂ ಕಾರ್ಯತಃ ರೂಪಿಸಲ್ಪಡಲಿಲ್ಲ. ತನಿಖೆಗಳೂ, ವಿಚಾರಗಳೂ ನಡೆಯುತ್ತಲೇ ಇರುವವು. ಹಣವೇನೋ ಅಪಾರವಾಗಿ ತಡೆಬಡೆಯಿಲ್ಲದೆ ಹರಿದುಹೋಗುತ್ತಿದೆ ; ಈ ಸಂಪದಭ್ಯುದಯ ಸಮಾಜದ ಫಲಪರಿಣಾಮಗಳನ್ನು ನೋಡಬೇಕೆಂದು ಸಕಲ ಪ್ರಜೆಗಳೂ ಕಾಯುತ್ತಿರುವರು.

ಗವರ್ನಮೆಂಟಿನ ಪ್ರತಿ ಒಂದು ಇಲಾಖೆಯ ಕಾರುಬಾರುಗಳನ್ನೂ ರಿಪೋರ್ಟಿನಲ್ಲಿ ಸಂಕ್ಷೇಪವಾಗಿ ಬರೆದಿರುತ್ತಾರೆ. ಮಳೆಯು ಕಡಮೆಯಾದರೂ, ಇದರಿಂದ ಕಾಲಸ್ಥಿತಿಯು ಕೆಟ್ಟುಹೋಗಿದ್ದರೂ ನಮ್ಮ ಸಂಸ್ಥಾನಕ್ಕೆ ವಿಶೇಷವಾದ ದುರ್ದೆಸೆಯೇನೂ ಸಂಭವಿಸಲಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆಹಾರ ಧಾನ್ಯಗಳ ಧಾರಣೆಗಳು ಬಹಳ ಹೆಚ್ಚಾಗಿದ್ದವು. ಇದರಿಂದ ಕಂದಾಯ ಕೌಲಿಗೆಗಳನ್ನು ರೈತರು ಪಾವತಿಮಾಡಲು ಬಹಳ ಸುಲಭವಾಯಿತು. ಮತ್ತು ಅವರು ಇತರ ಕೆಲಸಕಾರ್ಯಗಳಿಗೂ ಹಣವನ್ನು ಧಾರಾಳವಾಗಿ ವಿನಿಯೋಗಿಸಿದರು. ತಿಂಗಳಿಗೆ 5 ರಿಂದ 15 ರೂಪಾಯಿನೊಳಗೆ ವರಮಾನವುಳ್ಳ ಪ್ರಜೆಗಳು ಮಾತ್ರ ಬಹಳ ಕಷ್ಟನಷ್ಟಗಳನ್ನು ಅನುಭವಿಸಿದರು. ಧಾರಣೆವಾಸಿಗಳು ಹೆಚ್ಚಿದ್ದೇ ಅವರು ಕಷ್ಟಪಡಲು ಕಾರಣ.

ನಮ್ಮ ಗವರ್ನಮೆಂಟು ಬಹಳ ಅದೃಷ್ಟಶಾಲಿಯಾದದ್ದು. ಯಾಕೆಂದರೆ ಸಾಲೇಸಾಲ್ ಅದರ ಆದಾಯವು ಹೆಚ್ಚುತ್ತಿರುವುದು. ಆಳುವವರು ಅದನ್ನು ನಾನಾ ಮುಖಗಳಲ್ಲಿ ಖರ್ಚು ಮಾಡುವುದಕ್ಕೆ ಸಹಾಯವಾಗಿದೆ. ಈ ಪೈಕಿ ಕೆಲವೇನೋ ನಿರರ್ಥಕವಾದವುಗಳೆಂದೂ, ಫಲಕಾರಿಗಳಲ್ಲವೆಂದೂ ಹೇಳಬೇಕಾಗಿರುವುದು. ಕಳೆದ ಸಾಲಿನಲ್ಲಿ ಸಂಸ್ಥಾನದ ಒಟ್ಟು ರಾಜಾದಾಯವು 4,28,80,348 ರೂಪಾಯಿ ; 1912-13 ನೇ ಸಾಲಿನಲ್ಲಿ 3,75,38,491 ರೂಪಾಯಿ ಹುಟ್ಟುವಳಿ ಆಗಿತ್ತು. ಗತಸಾಲಿನ ಒಟ್ಟು ಖರ್ಚು 4,39,88,097 ರೂಪಾಯಿ ; 1912-13 ನೇ ಸಾಲಿನ ಖರ್ಚು 3,80,17,252 ರೂಪಾಯಿ. ಇದರಿಂದ ಸಂಸ್ಥಾನದಲ್ಲಿ ಉಳಿದಿದ್ದ ಒಟ್ಟು ಆಸ್ತಿಯು 1,12,15,806 ರೂಪಾಯಿ ಇದ್ದದ್ದು 1913-14 ನೇ ಸಾಲ್ ಕೊನೆಯಲ್ಲಿ 1,01,08,057 ರೂಪಾಯಿಗೆ ಇಳಿದುಹೋಯಿತು. ಮೈಸೂರು ಸಂಸ್ಥಾನದ ಖಜಾನೆಗೆ ಹಣ ಬಂದು ಸುರಿಯುತ್ತಿರುವ ತನಕ ಗವರ್ನಮೆಂಟಿನವರು ಪ್ರತಿ ಒಂದು ಇಲಾಖೆಯ ಕಾರುಬಾರುಗಳೂ ಪ್ರಜಾರಂಜಕವಾಗಿಯೂ, ಚಟುವಟಿಕೆಯಿಂದಲೂ ನಡೆಯುವಂತೆ ಮಾಡಿಡಬೇಕು. ಮೈಸೂರು ಗವರ್ನಮೆಂಟಿನವರು ನವೀನವಾದ ಏರ್ಪಾಡುಗಳಿಗೇ ಬಹಳ ಹಣವನ್ನು ವಿನಿಯೋಗಿಸುತ್ತಾರೆಂದೂ, ಎಂದೂ ಇರತಕ್ಕ ಇಲಾಖೆಗಳನ್ನು ಕ್ರಮಪಡಿಸುವುದಕ್ಕೆ ಗಮನಕೊಡುವುದು ಸಾಲದೆಂದೂ ನಮಗೆ ಶಂಕೆಯುಂಟಾಗಿದೆ. ಎಲ್ಲಾ ವಿಧವಾದ ಹೆಚ್ಚು ಖರ್ಚುಗಳನ್ನು ಮಾಡುವಾಗಲೂ ಈ ಇಲಾಖೆಗಳ ಮೇಲೆ ಸರ್ಕಾರದವರ ದೃಷ್ಟಿಯು ಪ್ರಾಮುಖ್ಯವಾಗಿರಬೇಕಾದದ್ದೇ ಅವಶ್ಯಕವೆಂದು ನಮಗೆ ತೋರುವುದು.

ಕ್ರಿಸ್ತನು ಪಾಪಿಗಳನ್ನು ರಕ್ಷಿಸುತ್ತಾನೆ.

ಪಾಪಿಗಳನ್ನು ಪಾಪದ ವಶದಿಂದ ಬಿಡಿಸಿ ರಕ್ಷಿಸುವದು ಕ್ರಿಸ್ತನ ಮತದ ಮುಖ್ಯವಾದ ಲಕ್ಷಣವಾಗಿದೆ. ಪಾಪವೆಂಬ ಕ್ರೂರರಾಕ್ಷಸನ ಅಧಿಕಾರವನ್ನೂ ಕ್ರೌರ್ಯವನ್ನೂ ಧೈರ್ಯವಾಗಿ ತಿರಸ್ಕರಿಸಿ ಸ್ವತಂತ್ರನಾಗಿ ನಡೆಯುವದಕ್ಕೆ ಪಾಪಿಷ್ಠನಿಗೆ ಶಕ್ತಿಯಿಲ್ಲ. ಕ್ರಿಸ್ತನ ಹೊರತು ಇತರ ಗುರುಗಳು ಪಾಪಿಗಳನ್ನು ಧಿಕ್ಕರಿಸಿ ಮುಂದೆ ಅವರಿಗೆ ಭಯಂಕರವಾದ ದಂಡನೆ ಪ್ರಾಪ್ತಿಸುವದೆಂದು ಹೆದರಿಸುತ್ತಾರೆ. ಆದರೆ ಕ್ರಿಸ್ತನೊಬ್ಬನು ಅಂತಹ ಪಾಪಿಗಳನ್ನು ನೋಡಿ ಕರುಣೆ ಮರುಗಿ ಸಹಾಯ ಮಾಡುತ್ತಾನೆ ಈ ಕೆಲಸವನ್ನು ಕೈಕೊಂಡು ಇದೇ ಉದ್ದೇಶವನ್ನು ನೆರವೇರಿಸುವದಕ್ಕೆ ಈ ಲೋಕದಲ್ಲಿ ಆತನು ಅವತಾರವೆತ್ತಿ ಬಂದನು. ಕೀಳು ಜಾತಿಯ ಸುಂಕದವರನ್ನೂ ಸೂಳೆಯರನ್ನೂ ನೋಡಿ ಅವರ ಹೀನಸ್ಥಿತಿಯನ್ನು ಪರಿಹರಿಸುವದಕ್ಕಾಗಿ ತನ್ನ ಶಕ್ತಿಯನ್ನು ಪ್ರಯೋಗಿಸಿದನು. ಒಂದು ಪಟ್ಟಣವನ್ನು ಹೊಕ್ಕಾಗ ಅದರಲ್ಲಿ ಶ್ರೀಮಂತರು ಯಾರು ? ಶ್ರೇಷ್ಠಕುಲದವರು ಯಾರು ? ಎಂದು ವಿಚಾರಿಸದೆ ಪಾಪದಲ್ಲಿಯೂ ಹೀನಸ್ಥಿತಿಯಲ್ಲಿಯೂ ಬಿದ್ದು ಕೆಟ್ಟುಹೋಗಿದ್ದವರನ್ನು ವಿಚಾರಿಸಿ ಅವರನ್ನು ತಾನೇ ಹುಡುಕಿಕೊಂಡು ಹೋಗಿ ಅವರಿಗೆ ಮಿತ್ರನಾದನು. ಆತನು ದೇಹಧಾರಿಯಾಗಿ ಈ ಲೋಕದಲ್ಲಿ ಈಗ ಯಾರಿಗೂ ಕಾಣಿಸಿಕೊಳ್ಳುವದಿಲ್ಲ. ಆದರೂ ಆತನನ್ನು ಆಶ್ರಯಿಸಿ ನಂಬುವವರಿಗೆ ಸಹಾಯಕನಾಗಿ ನಿಂತು ಈಗಲೂ ಪಾಪಬಂಧನದಿಂದ ಆಶ್ಚರ್ಯಕರವಾಗಿ ಬಿಡಿಸಿ ರಕ್ಷಿಸುವದು ಪದೇ ಪದೇ ಲೋಕದ ಚರಿತ್ರೆಯಲ್ಲಿ ಪ್ರತ್ಯಕ್ಷವಾಗಿದೆ ಕೆಲವು ವರುಷಗಳಿಗೆ ಮುಂಚೆ ನಮ್ಮ ದೇಶದಲ್ಲಿ ನಡೆದ ಕೆಲವು ವಿಷಯಗಳನ್ನು ಇದಕ್ಕೆ ದೃಷ್ಟಾಂತರವಾಗಿ ಎತ್ತಿ ತೋರಿಸಬೇಕೆಂದಿದ್ದೇವೆ. ಅಂಥಾದೊಂದು ವಿಷಯವನ್ನು ಈಗ ವಾಚಕರ ಲಕ್ಷ್ಯಕ್ಕೆ ತರಬೇಕೆಂದು ಅಪೇಕ್ಷಿಸುತ್ತೇವೆ.

ಡಾಕ್ಟರ್ ಜೇಕೊಬ್ ಚೇಂಬರ್ಲೇನ್ ಎಂಬ ಕ್ರೈಸ್ತಮತ ಬೋಧಕನು ಇಂಡಿಯಾ ದೇಶಕ್ಕೆ ಅಮೆರಿಕಾ ಖಂಡದಿಂದ ಕೆಲವು ವರುಷಗಳಿಗೆ ಮುಂಚೆ ಬಂದು ಹೈದರಾಬಾದ್ ಪಟ್ಟಣದಲ್ಲಿರುವಾಗ ಮಹಾ ಅಪಾಯಕರವಾದ ಬಿಕ್ಕಟ್ಟಿಗೆ ಅಲ್ಲಿ ಸಿಕ್ಕಿದನು. ಹೇಗೆಂದರೆ—ಆತನು ಅಲ್ಲಿನ ಸಭಾಂಗಣಗಳಿಗೆ ಕ್ರಿಸ್ತನ ಮತವನ್ನು ಕುರಿತು ಹೇಳಿದದರಿಂದ ಅವರು ಅವನ ಮೇಲೆ ತಿರುಗಿಬಿದ್ದು—ನೀನು ಈಗಲೇ ನಮ್ಮ ಪಟ್ಟಣವನ್ನು ಬಿಟ್ಟು ಆಚೆಗೆ ಹೊರಟುಹೋಗು ಎಂದು ಆಜ್ಞಾಪಿಸಿದರು. ಅವನು ಅದಕ್ಕೆ—ನಾನು ನಿಮಗೆ ಒಂದು ವೃತ್ತಾಂತವನ್ನು ಹೇಳುವದಕ್ಕೆ ಬಂದಿದ್ದೇನೆ. ಅದನ್ನು ಹೇಳುವದಕ್ಕೆ ದಯಮಾಡಿ ಅವಕಾಶವನ್ನು ಕೊಟ್ಟು ಕೇಳಿರಿ. ಆ ಮೇಲೆ ನಾನು ಹೋಗಬೇಕೆಂದು ನೀವು ವಿಧಿಸಿದರೆ ಹೋಗುವೆನು ಎಂದು ಬೇಡಿದನು. ಅದಕ್ಕೆ ಅವರು ಅತ್ಯುಗ್ರರಾಗಿ—ನೀನು ಸುಮ್ಮನೆ ಮೌನವಾಗಿ ಈ ಸ್ಥಳವನ್ನು ಬಿಟ್ಟು ಹೋಗು. ತಪ್ಪಿದರೆ ಈ ಕ್ಷಣವೇ ನಿನ್ನನ್ನು ಸಂಹರಿಸುತ್ತೇವೆಂದು ಪ್ರತಿಜ್ಞೆಗಳನ್ನು ನುಡಿದರು. ಮತ್ತು ಶಸ್ತ್ರಮರಸ್ತ್ರ ಮಾಡುವದಕ್ಕೆ ಸಮೀಪದಲ್ಲಿ ರಾಶಿಯಾಗಿ ಸುರಿದಿದ್ದ ಕಲ್ಲುಗಳನ್ನು ಕೈಗಳಲ್ಲಿ ತೆಗೆದುಕೊಂಡು—ನಡಿಯು? ಈ ಪರದೇಶಿಯನ್ನು ಸಂಹರಿಸೋಣವೆಂದು ಉದ್ಯುಕ್ತರಾದರು. ಆದರೆ ಆ ಬೋಧಕನು ತನಗೆ ಸಹಾಯಮಾಡಬೇಕೆಂದು ಕ್ರಿಸ್ತನಿಗೆ ಹೃದಯದಲ್ಲಿ ಪ್ರಾರ್ಥನೆ ಮಾಡಿ ಧೈರ್ಯದಿಂದ ಶಾಂತಚಿತ್ತನಾಗಿ ಅವರಿಗೆ—ನಾನು ನಿಮಗೊಂದು ಸಣ್ಣ ಕಥೆಯನ್ನು ಹೇಳುತ್ತೇನೆ. ಆಮೇಲೆ ನಿಮಗೆ ಇಷ್ಟವಿದ್ದರೆ ನನ್ನನ್ನು ಕೊಲ್ಲಬಹುದು ಎಂದು ಅವರಿಗೆ ಯೇಸು ಕ್ರಿಸ್ತನ ಚರಿತ್ರೆಯನ್ನು ಹೇಳಿದನು. ಕ್ರಿಸ್ತನು ದೇವರಲ್ಲಿ ಭಕ್ತಿಯುಳ್ಳವನಾಗಿ ಮನುಷ್ಯರಲ್ಲಿ ಪ್ರೀತಿಯುಳ್ಳವನಾಗಿ ಸರ್ವರಲ್ಲಿಯೂ ತನ್ನ ಸದ್ಗುಣದಿಂದ ಪ್ರೀತಿಪಾತ್ರನಾಗಿ ಇದ್ದದನ್ನು ಅವರಿಗೆ ತಿಳಿಸಿದನು. ಮತ್ತು ಬಡವರನ್ನೂ ರೋಗಿಗಳನ್ನೂ ಅಂಗಹೀನರನ್ನೂ ನೋಡಿ ಅವರಿಗೆ ಸಹಾಯಮಾಡುತ್ತಾ ಅಜ್ಞಾನಿಗಳಿಗೆ ಜ್ಞಾನಮಾರ್ಗವನ್ನು ಬೋಧಿಸುತ್ತಾ ತನ್ನ ಕಾಲ ಬುದ್ಧಿ ಶಕ್ತಿಗಳನ್ನು ಪರೋಪಕಾರದಲ್ಲಿ ಪ್ರಯೋಗಮಾಡುತ್ತಿದ್ದುದನ್ನು ನೋಡಿ ಅವರೆಲ್ಲರೂ ಅತ್ಯುತ್ಸಾಹವಾಗಿ ಆತನನ್ನು ತಮ್ಮ ಮನೆಗಳಿಗೆ ಸೇರಿಸಿಕೊಳ್ಳುವದಕ್ಕೂ ಆತನ ಮಾತುಗಳನ್ನು ಕೇಳುವದಕ್ಕೂ ಕಡೆಗೆ ಆತನ ನಿಷ್ಕಳಂಕವಾದ ನಡತೆಯನ್ನು ನೋಡಿ ಆತನ ಶಿಷ್ಯರಾಗುವದಕ್ಕೂ ತಾವಾಗಿ ಒಪ್ಪಿಕೊಂಡದನ್ನು ತಿಳಿಸಿದನು. ಮತ್ತು ಪಾಪಿಗಳು ಆತನ ಸನ್ನಡತೆಯನ್ನು ನೋಡಿ ಸಹಿಸಲಾರದೆ ಅಸೂಯೆಯಿಂದ ಆತನಿಗೆ ವಿರೋಧವಾಗಿ ಒಳಸಂಚುಮಾಡಿ ಆತನನ್ನು ಸೆರೆಯಾಗಿ ಹಿಡಿದು ಆತನು ಕೇವಲ ನಿರಪರಾಧಿಯಾಗಿದ್ದರೂ ಅಪರಾಧಿಯೆಂದು ನಿರ್ಣಯಿಸಿ ಕ್ರೂರವಾಗಿ ಹೊಡೆದು ಅಪಮಾನಮಾಡಿ ಹ್ನಿಡು ಕಟ್ಟ ಕಡೆಗೆ ಶಿಲುಬೆಯ ಮೇಲೆ ಆತನನ್ನು ಮೊಳೆಗಳಿಂದ ಜಡಿದು ಕೊಂದುಹಾಕಿದನ್ನು ವಿವರಿಸಿದನು ಕ್ರಿಸ್ತನು ಇವನ್ನೆಲ್ಲಾ ನಿಷ್ಕಾರಣವಾಗಿ ಸಹಿಸಬೇಕಾಗಿ ಬಂದರೂ ಸ್ವಲ್ಪವಾದರೂ ಗುಣಗುಟ್ಟದೆ ತನಗೆ ಅನ್ಯಾಯವಾಗಿ ಪ್ರಾಪ್ತಿಸಿದ ಈ ವಿಪತ್ತುಗಳಿಗೆ ದೇವರನ್ನು ದೂಷಿಸದೆ ತನ್ನನ್ನು ಕೊಂದವರನ್ನು ದ್ವೇಷಿಸದೆ ಅವಸಾನ ಕಾಲದಲ್ಲಿಯೂ ತನ್ನ ಶತ್ರುಗಳಿಗೆ ಆಶೀರ್ವಾದವಾಗಲೆಂದು—ತಂದೆಯೇ, ಈ ಜನಗಳು ನನಗೆ ವಿರೋಧವಾಗಿ ಕೈಕೊಂಡಿರುವ ಈ ಅಪರಾಧವನ್ನು ಕ್ಷಮಿಸು ಎಂದು ಪ್ರಾರ್ಥಿಸಿದ್ದನ್ನು ವಿವರಿಸಿದ ನಂತರ ಆ ಬೋಧಕನು ಕಲ್ಲುಗಳನ್ನು ಕೈಗಳಿಂದ ಬಿಸಾಡಿ ಅಳುತ್ತಾ ತನ್ನ ಮಾತುಗಳನ್ನು ಕೇಳುತ್ತಿದ್ದ ಜನಗಳಿಗೆ—ಇಷ್ಟನ್ನೆಲ್ಲಾ ಕ್ರಿಸ್ತನು ಸಹಿಸಿದ್ದು ಪಾಪಿಗಳ ಮೇಲೆ ಆತನಿಗಿದ್ದ ಪ್ರೀತಿಯು ಎಷ್ಟೋ ನಿಮ್ಮನ್ನು ಪಾಪದಿಂದ ಬಿಡಿಸಿ ರಕ್ಷಿಸುವದಕ್ಕೆ ಆತನಿಗೆ ಮನಸ್ಸುಂಟು. ಆತನನ್ನು ಆಶ್ರಯಿಸಿ ಧನ್ಯರಾಗಿರಿ. ಆತನು ಸಾಕ್ಷಾತ್ ದೇವರೇ. ಆದರೂ ನಿಮ್ಮನ್ನು ಪಾಪದಿಂದ ರಕ್ಷಿಸುವದಕ್ಕೆ ಅವತಾರವೆತ್ತಿ ಬಂದನು ಎಂದು ಹೇಳಿದನಂತರ ಅವರನ್ನು ಕುರಿತು—ಈಗ ನಾನು ಹೇಳಬೇಕೆಂದಿದ್ದದ್ದು ಮುಗಿಯಿತು. ನಿಮಗಿಷ್ಟವಿದ್ದರೆ ಈಗ ನನ್ನನ್ನು ಕೊಲ್ಲಬಹುದು ಅಂದನು. ಅವರು ಆತನ ಮೇಲೆ ಕೈಮಾಡಿದ ದ್ರೋಹಕ್ಕೆ ಪಶ್ಚಾತ್ತಾಪಪಟ್ಟು ಆತನಿಂದ ಉಪದೇಶವನ್ನು ಪಡೆದು ಕ್ರಿಸ್ತನ ಶಿಷ್ಯರಾದರು.

ರಾಜಧಾನಿಯ ಮಹಾರಾಜಾ ಕಾಲೇಜಿನ ಹೈಸ್ಕೂಲ್ ವಿದ್ಯಾರ್ಥಿಗಳು ತಮ್ಮ ಹೆಡ್ ಮಾಸ್ಟರಾಗಿದ್ದು ಬೆಂಗಳೂರು ಹೈಸ್ಕೂಲ್ ಹೆಡ್ ಮಾಸ್ಟರಾಗಿ ವರ್ಗವಾಗಿರುವ ಮ|| ಎಚ್. ಆರ್. ಕೃಷ್ಣಮೂರ್ತಿಯವರನ್ನು ಬೆಂಗಳೂರಿಗೆ ನಿಂದ ಕರಸಿಕೊಂಡು ಕಳೆದ ಶನಿವಾರ ಅವರಿಗೋಸ್ಕರ ಒಂದು ಸಂತೋಷಕೂಟವನ್ನು ನಡಿಸಿ ಅವರಲ್ಲಿ ತಮಗಿದ್ದ ಭಕ್ತಿಪ್ರೀತಿಗಳನ್ನು ಪ್ರಕಾಶಪಡಿಸಿದರು. ಮ|| ಡೆನ್ ಹಾಂರವರೇ ಮೊದಲಾದವರು ಮ|| ಕೃಷ್ಣಮೂರ್ತಿಯವರ ಗುಣಕಥನವನ್ನು ಮಾಡಿ, ಅವರು ವರ್ಗವಾದ ವಿಚಾರದಲ್ಲಿ ತಮ್ಮ ಮತ್ತು ವಿದ್ಯಾರ್ಥಿಗಳ ವ್ಯಸನವನ್ನು ಪ್ರಕಾಶಪಡಿಸಿದರು.

ಯುದ್ಧದ ಸಮಾಚಾರಗಳು.

ಸಮುದ್ರದ ಮೇಲೆ ದೊಡ್ಡ ಯುದ್ಧ.

ಫ್ರಾನ್ಸಿನಲ್ಲಿ ಕಠಿಣವಾದ ಕದನಗಳು.

ಜರ್ಮನಿ ಚಕ್ರವರ್ತಿಯವರಾದ ವಿಲ್ಹೆಲ್ಮ್‌ರವರ ವರ್ಷದ ವರ್ಧಂತಿಯು ಜನವರಿ ತಾ 27ರಲ್ಲಿ ನಡೆಯಿತು ಆ ದಿನ ಯುದ್ಧದಲ್ಲಿ ಶತ್ರುಗಳ ಮೇಲೆ ಜಯಪ್ರದವನ್ನು ಹೊಂದಿ ವರ್ಧಂತಿ ಉತ್ಸವವನ್ನು ಶಾಶ್ವತ ಪಡಿಸಬೇಕೆಂದು ಜರ್ಮನಿ ಸೈನ್ಯಗಳು ಪ್ರಯತ್ನಪಟ್ಟವು. ಅದಕ್ಕಾಗಿ ಆ ಸೈನಿಕರು ಬಹು ಪರಾಕ್ರಮವಾಗಿ ನುಗ್ಗಿಬಂದು ಕಡಿದಾಡಿದರು ; ಆದರೆ ಅವರ ಸಾಹಸವೆಲ್ಲಾ ವ್ಯರ್ಥವಾಯಿತು ಜರ್ಮನಿಯವರು ಅಪಾರವಾಗಿ ನಷ್ಟಪಟ್ಟರು. ಉತ್ತರ ಕಡಲಿನ ಲ್ಲಿ ಹಡಗುಗಳ ದೊಡ್ಡ ಯುದ್ಧವಾಯಿತು. ಅದರಲ್ಲೂ ಜರ್ಮನಿಯವರು ಸೋತು ಓಡಿಹೋದರು. ಯುದ್ಧ ಭೂಮಿಯ ಎಲ್ಲಾ ಕಡೆಗಳಲ್ಲೂ ಕದನಗಳು ನಡೆದಿರುತ್ತವೆ

ಸಮುದ್ರದ ಮೇಲೆ ಜಹಜುಗಳ ಯುದ್ಧ.

ಜನವರಿ ತಾ. 23ನೇ ಶನಿವಾರ ಸಾಯಂಕಾಲ ಜರ್ಮನಿಯವರ ನಾಲ್ಕು ಭಾರಿ ಯುದ್ಧದ ಜಹಜುಗಳೂ, ಆರು ಕ್ರೂಸರುಗಳೆಂಬ ಜಹಜುಗಳೂ ಅನೇಕ ಸಣ್ಣ ಸಣ್ಣ ಹಡಗುಗಳ ಸಮೇತ ಜರ್ಮನಿಯ ತೀರಪಟ್ಟಣದಿಂದ ಹೊರಟು ಇಂಗ್ಲೆಂಡಿನ ಪೂರ್ವತೀರವನ್ನು ಕುರಿತು ನುಗ್ಗಿ ಬಂದವು. ನ್ಯೂಕ್ಯಾಸಲ್ ಎಂಬ ಇಂಗ್ಲಿಷ್ ತೀರಪಟ್ಟಣಕ್ಕೆ ಮುತ್ತಿಗೆ ಹಾಕಬೇಕೆಂಬುವುದೇ ಅವರ ಉದ್ದೇಶವಾಗಿತ್ತೆಂದು ಕಾಣುತ್ತದೆ. 24 ನೇ ತಾ. ಭಾನುವಾರ ಬೆಳಕು ಹರಿಯುವುದಕ್ಕೆ ಮುಂಚೆಯೇ ಜರ್ಮನಿಯವರ ಆ ಜಹಜುಗಳನ್ನು ಬ್ರಿಟಿಷ್ ತೀರಪಟ್ಟಣಗಳ ಕಾವಲಿಗೆ ನೇಮಕವಾಗಿರುವ ಇಂಗ್ಲಿಷ್ ಜಹಜುಗಳು ಕಂಡವು. ಶತ್ರುವಿನ ಜಹಜುಗಳು ತೀರದಿಂದ ಕೆಲವು ಮೈಲಿಗಳ ಸಮೀಪಕ್ಕೆ ಬಂದಿದ್ದವು. ಸಮೀಪದಲ್ಲೇ ಇದ್ದ ಬ್ರಿಟಿಷ್ ಜಹಜುಗಳು ಕಂಡು ಶತ್ರು ಜಹಜುಗಳನ್ನು ಸಂಧಿಸುವುದಕ್ಕೆ ನುಗ್ಗಿ ಹೋದವು. ಜರ್ಮನಿ ಜಹಜುಗಳಿಗೆ ಬ್ರಿಟಿಷ್ ಜಹಜುಗಳು ಬರುತ್ತಿರುವುದು ಕಂಡ ಒಡನೆಯೇ ಗಾಬರಿ ಹುಟ್ಟಿ ಅವು ಹಿಂತಿರುಗಿ ಅತ್ಯಂತ ವೇಗವಾಗಿ ಜರ್ಮನಿಯ ಕಡೆಗೆ ಓಡಿದವು. ಬ್ರಿಟಿಷ್ ಜಹಜುಗಳು ಸುಮ್ಮನಾಗದೆ ಅವುಗಳನ್ನು ಅಟ್ಟಿಸಿಕೊಂಡು ಅವುಗಳಿಗಿಂತ ವೇಗವಾಗಿ ಗಂಟೆಗೆ ಮೂವತ್ತು ಮೈಲಿ ಪ್ರಕಾರ ಬೆನ್ನಟ್ಟಿ ಹೋದವು. ಒಂದೆರಡು ಗಂಟೆ ಹೊತ್ತಿನೊಳಗೇ ಇವು ಜರ್ಮನಿ ಜಹಜುಗಳನ್ನು ಸಮೀಪಿಸಿದವು. ಬ್ರಿಟಿಷ್ ಜಹಜುಗಳು 10-11 ಮೈಲಿ ದೂರದಲ್ಲಿರುವಾಗಲೇ ಫಿರಂಗಿಗಳನ್ನು ಎತ್ತಿಕಟ್ಟಿ ಜರ್ಮನಿ ಜಹಜುಗಳಿಗೆ ಗುಂಡುಗಳನ್ನು ಹೊಡೆಯಲಾರಂಭಿಸಿದವು. ಬ್ರಿಟಿಷ್ ಜಹಜುಗಳು ಬಳಿಕ ಇನ್ನೂ ಸಮೀಪಕ್ಕೆ ಹೋಗಿ ಗುಂಡುಗಳನ್ನು ಹಿಂದಿನಿಂದ ಹೊಡೆಯುತ್ತಾ ಬಂದಾಗ ಜರ್ಮನಿ ಜಹಜುಗಳಲ್ಲಿ ನಷ್ಟವು ಕಾಣಿಸಿಕೊಂಡಿತು ಶತ್ರುವಿನ ಜಹಜುಗಳ ಪೈಕಿ ಹಿಂದೆ ಇದ್ದ ಬ್ಲೂಚರ್ ಎಂಬ ಜಹಜು ನಷ್ಟಪಟ್ಟಿತು ಬ್ರಿಟಿಷ್ ಜಹಜುಗಳಲ್ಲಿ ಲಯನ್ (ಸಿಂಹ) ಎಂಬುವುದೇ ಮುಂದಾಳಾಗಿತ್ತು. ಬ್ರಿಟಿಷ್ ಫಿರಂಗಿಗುಂಡುಗಳು ಬಿದ್ದು ಬ್ಲೂಚರ್ ಎಂಬ ಜರ್ಮನಿ ಜಹಜಿನಲ್ಲಿದ್ದ ಫಿರಂಗಿಗಳನ್ನು ಅವುಗಳ ಸ್ಥಾನಗಳಿಂದ ಪಲ್ಲಟನಾಡಿಬಿಟ್ಟದ್ದಲ್ಲದೆ ಆ ಫಿರಂಗಿಗಳ ಸೈನಿಕರನ್ನು ಕೊಂದುಹಾಕಿದವು. ಆ ಜರ್ಮನಿ ಜಹಜಿನ ಮೇಲೆ ರಕ್ತ ಪ್ರವಾಹವು ಹರಿಯುತ್ತಿತ್ತು. ಬ್ರಿಟಿಷರ "ಸಿಂಹ"ವು ಮುಂದೆ ನುಗ್ಗಿಹೋಗಿ ಜರ್ಮನಿಯ ಇತರ ಜಹಜುಗಳನ್ನು ಸಂಧಿಸಿ ಅವುಗಳಿಗೂ ಗುಂಡುಗಳನ್ನು ಹಾಕಿದ್ದರಿಂದ ಜರ್ಮನಿಯ ಎರಡು ಭಾರೀ ಜಹಜುಗಳು ಬಹಳ ನಷ್ಟಪಟ್ಟವು ; ಅವುಗಳಲ್ಲಿ ಬೆಂಕಿಹುಟ್ಟಿ ಉರಿಯಲಾರಂಭಿಸಿತು.

ಅಷ್ಟುಹೊತ್ತಿಗೆ ಜರ್ಮನಿಯವರ ಸಹಾಯಕ್ಕಾಗಿ ಜರ್ಮನಿಯ ದೊಡ್ಡ ವಿಮಾನ ಯಂತ್ರಗಳು ಬಂದವು. ಬ್ರಿಟಿಷ್ ಜಹಜುಗಳಿಂದ ಅಂತರಿಕ್ಷಕ್ಕೆ ಗುಂಡುಗಳನ್ನು ಹೊಡೆದದ್ದರಿಂದ ಆ ವಿಮಾನ ಯಂತ್ರಗಳು ವಿಶೇಷ ನಷ್ಟವನ್ನುಂಟುಮಾಡಲಾರದೆ ಹಿಂದಕ್ಕೆ ಓಡಿಸಲ್ಪಟ್ಟವು. ಶತ್ರುಗಳು ಸಬ್‌ಮೆರೀನ್‌ಗಳೆಂಬ ಜಹಜುಗಳನ್ನು ತಂದು ಅವುಗಳಿಂದ ಟಾರ್ಪೆಡೋಗಳನ್ನು ಬ್ರಿಟಿಷ್ ಜಹಜುಗಳ ಮೇಲೆ ಬಿಟ್ಟು ನುಗ್ಗಿಸಬೇಕೆಂದು ಸಾಹಸಪಟ್ಟರು ಆದರೆ ಬ್ರಿಟಿಷ್ ಜಹಜುಗಳು ಬಹಳ ಚಾತುರ್ಯದಿಂದಲೂ ಚಟುವಟಿಕೆಯಾಗಿಯೂ ಚಲಿಸಿ ಶತ್ರುವಿನ ಕೈಗೆ ಸಿಕ್ಕದೇನೂ, ಯಾವ ಅಪಾಯಕ್ಕೂ ಒಳಗಾಗದೇನೂ ತಪ್ಪಿಸಿಕೊಂಡು ಬಂದವು.

ಈ ಸಮುದ್ರದ ಮೇಲಣ ಜಹಜುಗಳ ಯುದ್ಧವು ಸುಮಾರು ಮೂರು ಗಂಟೆಗಳ ಹೊತ್ತು ನಡೆಯಿತು ಇಷ್ಟುಹೊತ್ತು ಜಹಜುಗಳು ನಿಂತಲ್ಲಿ ನಿಲ್ಲದೆ ಬಹಳ ವೇಗವಾಗಿ ಚಲಿಸುತ್ತಲೇ ಇದ್ದವು ಅಷ್ಟುಹೊತ್ತಿಗೆ ಜರ್ಮನಿಯ ಜಹಜುಗಳು ಮೈನ್‌ಗಳೆಂಬ ಸಿಡಿಮದ್ದಿನ ಗುಂಡುಗಳಿದ್ದ ಸಮುದ್ರಭಾಗಕ್ಕೆ ಹೋಗಿ ಸೇರಿಕೊಂಡವು ಆಗ ಬ್ರಿಟಿಷ್ ಜಹಜುಗಳು ಅಲ್ಲಿಗೂ ಬೆನ್ನಟ್ಟಿ ಹೋಗುವುದು ಕ್ಷೇಮವಲ್ಲವೆಂದು ಸುಮ್ಮನಾದವು. ಅಷ್ಟುಹೊತ್ತಿಗೆ ಬ್ಲೂಚರ್ ಎಂಬ ಜರ್ಮನಿಯ ಜಹಜು ಸಂಪೂರ್ಣವಾಗಿ ಕೆಟ್ಟುಹೋಗಿ ಸಮುದ್ರದೊಳಗೆ ಮುಳುಗಿಕೊಂಡಿತು. ಅದರೊಳಗಿದ್ದ ಜರ್ಮನಿ ಸೈನಿಕರೇ ಮುಂತಾದವರು ಸಮುದ್ರದ ಪಾಲಾಗದಂತೆ ಸಂರಕ್ಷಣೆಮಾಡಬೇಕೆಂದು ಬ್ರಿಟಿಷ್ ಜಹಜುಗಳಿಂದ ಅವರ ಬಳಿಗೆ ದೋಣಿಗಳು ಕಳುಹಿಸಲ್ಪಟ್ಟವು ಅದರಲ್ಲಿದ್ದ 885 ಮಂದಿಯ ಪೈಕಿ ಸುಮಾರು 200 ಜನರನ್ನು ಬದುಕಿಸುವುದು ಸಾಧ್ಯವಾಯಿತು ಇಂಥಾ ಪರೋಪಕಾರ ಕಾರ್ಯವನ್ನು ಮಾಡುತ್ತಿರುವಲ್ಲಿ ಜರ್ಮನಿಯ ವಿಮಾನ ಯಂತ್ರಗಳು ಬ್ರಿಟಿಷ್ ಜಹಜುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಇಲ್ಲವಾದರೆ ಇನ್ನೂ ಹೆಚ್ಚು ಜನರನ್ನು ಬದುಕಿಸಬಹುದಾಗಿತ್ತು. ಅತ್ತಲಾಗಿ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದ ಜರ್ಮನಿಯವರ ಎರಡು ಜಹಜುಗಳ ಪಾಡೇನಾಯಿತೋ ಇನ್ನೂ ತಿಳಿಯಲಿಲ್ಲ. ಅವು ಬಹುಶಾ ತುಂಬಾ ಕೆಟ್ಟುಹೋಗಿ ವಾಪಸು ಜರ್ಮನಿಯ ತೀರಪಟ್ಟಣವನ್ನು ತಲಪಿರಬಹುದು. ಅವುಗಳಲ್ಲಿದ್ದ ಫಿರಂಗಿಗಳು ಸಂಪೂರ್ಣವಾಗಿ ಕೆಡಿಸಲ್ಪಟ್ಟದ್ದರಿಂದ ಅವು ಗುಂಡುಗಳನ್ನು ಹೊಡೆಯಲಾರದೆ ಹೋಗಿದ್ದವು ಇಷ್ಟೇ ಅಲ್ಲದೆ ಜರ್ಮನಿಯವರ ಇನ್ನೆರಡು ಸಣ್ಣ ಹಡಗುಗಳು ಮುಳುಗಿಸಲ್ಪಟ್ಟವೆಂದೂ ಹೇಳಲಾಗಿದೆ

ಈ ಸಮುದ್ರ ಯುದ್ಧದಲ್ಲಿ ಬ್ರಿಟಿಷರ ಕಡೆ ನಷ್ಟವಾದದ್ದು ಬಹಳ ಸ್ವಲ್ಪ. ಈ ಯುದ್ಧದ ಭಾರವನ್ನೆಲ್ಲಾ "ಸಿಂಹ" ವೆಂಬ ಒಂದೇ ಜಹಜು ನಿರ್ವಹಿಸಿತು. ಶತ್ರುವಿನ ಗುಂಡು ಬಿದ್ದು ಮೊದಲು ಅದರ ಒಂದು ಇಂಜಿನ್ (ಯಂತ್ರ) ಕೆಟ್ಟುಹೋಯಿತು ; ಬಳಿಕ ಅದರ ಎರಡನೆಯ ಯಂತ್ರವೂ ಕೆಟ್ಟು ನಡೆಯದಂತಾಯಿತು. ಆದಕಾರಣ ಅದನ್ನು ಇನ್ನೊಂದು ಜಹಜು ಹಿಂದಕ್ಕೆ ಎಳೆದು ಸಾಗಿಸಿಕೊಂಡು ಹೋಗಬೇಕಾಯಿತು. ಅದರಲ್ಲಿ ಕೆಟ್ಟುಹೋಗಿರುವ ಭಾಗಗಳನ್ನು ಬೇಗನೆ ದುರಸ್ತು ಮಾಡಿಕೊಳ್ಳಬಹುದಾಗಿದೆ. ಬ್ರಿಟಿಷ್ ನಾವಿಕರು ಯುದ್ಧ ಮಾಡಬೇಕೆಂದು ತುಂಬಾ ಕಾತುರಪಡುತ್ತಿದ್ದರು. ಅವರು ದೊಡ್ಡ ದೊಡ್ಡ ಫಿರಂಗಿಗಳಿಗೆ ಮದ್ದು ಗುಂಡುಗಳನ್ನು ಹಾಕಿ ಜಡಿಯುತ್ತಾ ಗುಂಡುಹೊಡೆಯುತ್ತಾ "ನೀವು ಸ್ಕಾರ್ಬರೋವಿಗೆ ಗುಂಡುಹೊಡೆದದ್ದಕ್ಕೆ ಇದು ಪ್ರತೀಕಾರ" ವೆಂದೂ, "ಮಕ್ಕಳ ಕೊಲೆಗಡುಕರಿಗೆ ಇದೇ ಪ್ರತಿಯಾದದ್ದು" ಎಂದೂ ಕೂಗುತ್ತಿದ್ದರು. "ಸಿಂಹ" ಎಂಬ ಜಹಜಿನಲ್ಲಿ 17 ಮಂದಿಗೆ ಗಾಯಗಳಾದವು ; "ಹುಲಿ" ಎಂಬ ಜಹಜಿನಲ್ಲಿ ಒಬ್ಬ ಹುದ್ದೇದಾರನೂ, ಒಂಭತ್ತು ಸಿಪಾಯಿಗಳೂ ಕೊಲೆಯಾದರು ; ಮೂರು ಮಂದಿ ಹುದ್ದೇದಾರರಿಗೂ ಎಂಟು ಮಂದಿ ಸಿಪಾಯಿಗಳಿಗೂ ಗಾಯಗಳಾಗಿವೆ ; ಮಿಟಿಯಾರ್ (ಉಲ್ಕಾ ನಕ್ಷತ್ರ) ಎಂಬ ಮೂರನೇ ಜಹಜಿನಲ್ಲಿ ನಾಲ್ವರು ಕೊಲೆಯಾದರು, ಒಬ್ಬ ಗಾಯಪಟ್ಟಿರುತ್ತಾನೆ. ಈ ಜಹಜಿಗೆ ಗುಂಡಿನೇಟು

...ಕೆಟ್ಟುಹೋದದ್ದರಿಂದ ಇದನ್ನು ಇನ್ನೊಂದು ಜಹಜು ಎಳೆದುಕೊಂಡು ಹೋಯಿತು. ಬ್ರಿಟಿಷರ ಕಡೆ ಒಂದು ಹಡಗೂ ಮುಳುಗಿ ನಷ್ಟವಾಗಲಿಲ್ಲ. ಕೆಟ್ಟು ಹೋಗಿರುವ ಜಹಜುಗಳನ್ನು ಬೇಗನೆ ಸರಿಮಾಡಿಕೊಳ್ಳಬಹುದಾಗಿದೆ.

...ಯಿಟ್ಟುಕೊಂಡಿರುವ ಜರ್ಮನೀ ಜಹಜುಗಳು ಹೊರಕ್ಕೆ ಬಂದು ಕಾಣಿಸಿಕೊಂಡರೆ ಅವುಗಳ ಪಾಡೇನೆಂಬುವುದು ಈಗ ವಿದಿತವಾಯಿತು. ಇದುವರೆಗೆ ಜರ್ಮನಿಯ ಸರ್ವಶ್ರೇಷ್ಠವಾದ ಜಹಜುಗಳನ್ನು ಬ್ರಿಟಿಷರು ಸಮುದ್ರದಲ್ಲಿ ಮುಳುಗಿಸಿದರು; ಇಲ್ಲವೇ ಗುಂಡುಗಳನ್ನು ಹೊಡೆದು ಕೆಡಿಸಿ ಹಾಳುಮಾಡಿದರು. ...ಅವರ ಜಹಜುಗಳು ಹೊರಗೆ ಬರಬೇಕಾದರೆ ಬಹಳ ಕಾಲವಾದೀತೆಂದು ತೋರುತ್ತದೆ.

ಫ್ರಾನ್ಸಿನಲ್ಲಿ ಕದನಗಳು.

ಕಳೆದ ವಾರ ಜರ್ಮನಿ ಚಕ್ರವರ್ತಿಯವರು ಫ್ರಾನ್ಸಿನ ಯುದ್ಧಭೂಮಿಗೆ ಬಂದಿದ್ದರು. ಆಗ ಅವರು ತಮ್ಮ ಸೈನಿಕರಿಗೆ ನುಗ್ಗಿ ಯುದ್ಧಮಾಡುವಂತೆ ಉತ್ತೇಜನ ಕೊಟ್ಟಿರಬೇಕೆಂದು ಕಾಣುತ್ತದೆ. ಹಲವು ಸ್ಥಳಗಳಲ್ಲಿ ಬಹು ಘೋರವಾದ ಕದನಗಳು ನಡೆದಿರುವವು; ಅದರಲ್ಲೂ ಬೆಲ್ಜಿಯಮ್ ಎಲ್ಲೆಕಟ್ಟಿನಲ್ಲಿ ನಡೆದ ಕದನಗಳು ಬಹು ಘೋರವಾಗಿದ್ದವು. ಅನೇಕಾನೇಕ ಜರ್ಮನಿ ಸೈನ್ಯಗಳು ಒಟ್ಟು ಸೇರಿ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳ ಸಾಲುಗಳ ಮೇಲೆ ನುಗ್ಗಿ ಬಂದು ಆ ಸಾಲುಗಳನ್ನು ಭೇದಿಸಿ ಮುಂದಕ್ಕೆ ಬರಬೇಕೆಂದು ಬಹಳವಾಗಿ ಸಾಹಸಪಟ್ಟವು. ಜರ್ಮನಿಯವರು ನಮ್ಮವರ ಕೆಲವು ಕಂದಕಗಳನ್ನು ಆಕ್ರಮದಿಂದ ಗೆದ್ದುಕೊಂಡು ನಮ್ಮವರ ಸೈನ್ಯಗಳನ್ನು ಹಿಂದಕ್ಕೂ ಸ್ವಲ್ಪ ದೂರ ಓಡಿಸಿದರು. ಆಗ ನಮ್ಮವರು ಅದಕ್ಕೆ ಪ್ರತಿಯಾಗಿ ಜರ್ಮನಿಯವರ ಮೇಲೆ ನುಗ್ಗಿ ಕದನಮಾಡಿದರು. ಇದರಲ್ಲಿ ಜರ್ಮನಿಯವರ ಕಡೆ ಬಹಳ ವಿಶೇಷವಾಗಿ ನಷ್ಟವಾಗಿರುತ್ತದೆ. ಒಂದು ಕಾಲ್ವೆದಲ್ಲಿ 300 ಜನ ಸತ್ತು ಬಿದ್ದದ್ದನ್ನು ಲೆಕ್ಕಮಾಡಿದರು; ಇನ್ನೊಂದು ಕಡೆ 1,800 ಮಂದಿ ಕೊಲೆಯಾದರು. ಎರಡು ಮೂರು ದಿನಗಳೊಳಗಾಗಿ ಜರ್ಮನಿಯವರ ಕಡೆ ಕೊಲೆಯಾದವರೂ, ಗಾಯಪಟ್ಟವರೂ, ಕೈಸೆರೆಯಾದವರೂ ಒಟ್ಟು 20,000 ಮಂದಿ ಎಂದೂ, ನಮ್ಮವರ ಕಡೆ ಸುಮಾರು 800 ಮಂದಿ ಮಾತ್ರ ನಷ್ಟವಾದರೆಂದೂ ತಿಳಿದುಬಂದಿದೆ. ಜರ್ಮನಿಯ ಸೈನಿಕರು ತಮ್ಮ ಚಕ್ರವರ್ತಿಯ ಹುಟ್ಟಿದ ಹಬ್ಬವನ್ನು ಈ ರೀತಿಯಾಗಿ ಸೋತು ಆಚರಿಸಿದ್ದನ್ನು ಜರ್ಮನಿಯವರು ನೋಡಿ ಆನಂದಪಡಲಾರರು. ಜರ್ಮನಿಯವರು ಗೆದ್ದುಕೊಂಡಿದ್ದ ಠಾಣ್ಯವನ್ನೆಲ್ಲಾ ಮತ್ತೆ ನಮ್ಮ ಕಡೆಯವರು ಅವರಿಂದ ಗೆದ್ದು ಸ್ವಾಧೀನಪಡಿಸಿಕೊಂಡಿರುತ್ತಾರೆ; ಇಷ್ಟೇ ಅಲ್ಲ, ನಮ್ಮವರು ಕೆಲವೆಡೆಗಳಲ್ಲಿ ಇನ್ನೂ ಸ್ವಲ್ಪ ಮುಂದರಿಸಿಯೂ ನುಗ್ಗಿಹೋಗಿರುವರು. ಮಳೆಯ ಕಾಟದಿಂದ ಯುದ್ಧಕಾರ್ಯಗಳನ್ನು ನಡಿಸುವುದು ಬಹಳ ಕಷ್ಟವಾಯಿತು. ಕೆಸರು ಬಹಳವಾಗಿದ್ದದ್ದರಿಂದ ಸೈನಿಕರು ಬೇಗನೆ ಮುಂದಕ್ಕೆ ನುಗ್ಗಿ ಹೋಗಲು ತುಂಬಾ ಶ್ರಮಪಟ್ಟರು. ಅವರ ಕಾಲುಗಳು ಕೆಸರಿನಲ್ಲಿ ಸಿಕ್ಕಿಕೊಂಡುಬಿಟ್ಟಾಗ ಇತರ ಸೈನಿಕರು ಬಂದು ಅವರನ್ನು ಕೆಸರಿನಿಂದೆಳೆದು ಬಿಡಬೇಕಾಯಿತು.

ಫ್ರಾನ್ಸಿಗೆ ಸೇರಿದ ಆರ್ಗೋನ್ ಎಂಬ ಪ್ರಾಂತ್ಯದಲ್ಲಿ ಅಂದರೆ ಸೈನಿಕರ ಸಾಲುಗಳ ಮಧ್ಯಭಂಗದಲ್ಲಿಯೂ ಕೂಡ ಘೋರವಾದ ಕದನಗಳು ನಡೆದಿರುತ್ತವೆ. ಇವುಗಳ ವಿವರವೇನೂ ಇನ್ನೂ ತಿಳಿದು ಬಂದಿಲ್ಲ. ಆದರೆ ಫ್ರೆಂಚರು ಹೇಳಿರುವ ಮೇರೆಗೆ—ಜರ್ಮನಿಯವರ ಕಡೆ ಬಹಳ ಹೆಚ್ಚಾಗಿ ನಷ್ಟವಾಗಿರುತ್ತದೆ; ಫ್ರೆಂಚರ ಕಡೆಯಲ್ಲಾದ ನಷ್ಟವು ಹೆಚ್ಚಾಗಿರುವುದು. ಜರ್ಮನಿಯವರು ಮುಂದರಿಯಬೇಕೆಂದು ಎಷ್ಟೋ ಪರಾಕ್ರಮದಿಂದ ಸಾಹಸಪಟ್ಟರೂ ಪ್ರತಿ ಒಂದು ಸಂದರ್ಭದಲ್ಲೂ ಅವರಿಗೆ ಸೋಲಾಗಿ ಅವರ ಉದ್ದೇಶವು ನಿರರ್ಥಕವಾಯಿತು.

ಆಕಾಶದಲ್ಲೂ ತಕ್ಕಮಟ್ಟಿಗೆ ಹೆಚ್ಚಾಗಿಯೇ ಯುದ್ಧಕಾರ್ಯಗಳು ನಡೆಯುವವು. ಜರ್ಮನಿಯವರ ಕೆಲವು ವಿಮಾನಯಂತ್ರಗಳನ್ನು ನಮ್ಮ ಕಡೆಯವರು ಕಿತ್ತುಕೊಂಡರು. ಒಂದು ಸ್ಥಳದಲ್ಲಿ ಬ್ರಿಟಿಷರ ಮೂರು ವಿಮಾನಯಂತ್ರಗಳು ಹೊರಟು ಜರ್ಮನಿಯವರ ಹತ್ತು ವಿಮಾನಯಂತ್ರಗಳಿಗೆ ಮುತ್ತಿಗೆ ಹಾಕಿ ಆ ಪೈಕಿ ಒಂದನ್ನು ಕಿತ್ತುಕೊಂಡು ಉಳಿದವುಗಳನ್ನು ಸೋಲಿಸಿ ಓಡಿಸಿಬಿಟ್ಟವು. ಸ್ವಾಧೀನಪಡಿಸಿಕೊಂಡಿರುವ ವಿಮಾನಯಂತ್ರದಲ್ಲಿ ಅನೇಕ ಸಿಡಿಮದ್ದಿನ ಗುಂಡುಗಳಿದ್ದವು. ಜರ್ಮನಿಯ ವಿಮಾನಕಾರರು ಫ್ರಾನ್ಸಿನ ಉತ್ತರಪಾರ್ಶ್ವದಲ್ಲಿರುವ ಡನ್‌ಕರ್ಕ್ ಎಂಬ ತೀರಪಟ್ಟಣಕ್ಕೆ ಹಲವು ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಇದರಿಂದ ಏಳು ಜನರು ಕೊಲೆಯಾದರು; ಹನ್ನೆರಡು ಮಂದಿಗೆ ಗಾಯಗಳಾಗಿವೆ. ಫ್ರೆಂಚರ ವಿಮಾನಕಾರರೂ ಜರ್ಮನಿಯವರ ಠಾಣ್ಯಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಎಸೆದು ನಷ್ಟವನ್ನುಂಟುಮಾಡಿದಾರೆ.

ರಷ್ಯಾ ಮತ್ತು ಆಸ್ಟ್ರಿಯಾ.

ಈ ಪ್ರದೇಶದಿಂದ ಬಂದಿರುವ ಶಂತಿವರ್ತಮಾನಗಳು ಸ್ಪಷ್ಟವಾಗಿಲ್ಲ. ಆದಾಗ್ಯೂ ಪೂರ್ವ ಪ್ರಷ್ಯಾದೊಳಗೆ ಉತ್ತರ ಭಾಗದಲ್ಲೂ, ದಕ್ಷಿಣಕ್ಕೆ ಕಾರ್ಪೇಥಿಯನ್ ಪರ್ವತ ಪ್ರಾಂತ್ಯದಲ್ಲೂ ವಿಶೇಷವಾದ ಕದನಗಳು ನಡೆಯುತ್ತಾ ಬಂದಿರುವವು. ರಷ್ಯಾದವರು ಪೂರ್ವ ಪ್ರಷ್ಯಾದೊಳಗಡೆ ನುಗ್ಗಿ ಮುಂದು ಮುಂದಕ್ಕೆ ಬರುತ್ತಿದಾರೆ. ಮಧ್ಯ ಭಾಗದಲ್ಲಿ ಎರಡು ಕಡೆಗಳ ಸೈನ್ಯಗಳೂ ಎದುರುಬದುರಾಗಿ ಕಂದಕಗಳನ್ನು ತೋಡಿಕೊಂಡು ನುಗ್ಗುವುದಕ್ಕೆ ಪರಸ್ಪರ ಸಮಯವನ್ನು ಕಾಯುತ್ತಿರುವವು. ಇದರಿಂದ ಉಭಯ ಪಕ್ಷದವರೂ ಮುಂದರಿದು ಹೋಗದಂತಾಗಿದೆ. ದಕ್ಷಿಣ ಭಾಗದಲ್ಲಿ ರಷ್ಯಾದವರು ಕಾರ್ಪೇಥಿಯನ್ ಪರ್ವತ ಪ್ರಾಂತ್ಯದ ಕಣಿವೆಗಳನ್ನು ಗೆದ್ದು ಆಕ್ರಮಿಸಿಕೊಂಡಿರೋಣವರಿಂದ ಅಲ್ಲಿಂದ ರಷ್ಯಾದವರನ್ನು ಸೋಲಿಸಿ ಹೊರಡಿಸಿಬಿಡಬೇಕೆಂಬ ಉದ್ದೇಶದಿಂದ ಜರ್ಮನಿಯವರೂ ಆಸ್ಟ್ರಿಯಾದವರೂ ಸೈನ್ಯಗಳನ್ನು ಕೂಡಿಸಿಕೊಳ್ಳುತ್ತಿರುವಂತೆ ಕಂಡುಬರುವುವು. ಎರಡು ಸ್ಥಳಗಳಲ್ಲಿ ರಷ್ಯಾದವರು ಆಸ್ಟ್ರಿಯಾದವರನ್ನು ಸೋಲಿಸಿದರು. 3,000 ಆಸ್ಟ್ರಿಯಾದವರನ್ನು ಹಲವು ಫಿರಂಗಿಗಳ ಸಮೇತ ರಷ್ಯಾದವರು ಕೈಸೆರೆಹಿಡಿದುಕೊಂಡಿದಾರೆ. ಇನ್ನೊಂದು ಕಡೆ ನಡೆದ ಕದನದಲ್ಲಿ ರಷ್ಯಾದವರು ನಿಲ್ಲಲಿಕ್ಕಾಗದೆ ಹಿಮ್ಮೆಟ್ಟಿ ತಾವೇ ಬಲಪಡಿಸಿಕೊಂಡಿದ್ದ ಒಂದು ಠಾಣ್ಯಕ್ಕೆ ಹೋಗಿ ಸೇರಿಕೊಳ್ಳಬೇಕಾಯಿತು. ಇಷ್ಟರೊಳಗೇ ಅಲ್ಲಿ ಒಂದು ದೊಡ್ಡ ಯುದ್ಧ ನಡೆಯುವಂತೆ ಕಾಣುತ್ತದೆ. ಇದರಲ್ಲಿ ಬಹುಶಾ ಆಸ್ಟ್ರಿಯಾದವರಿಗೆ ಸೋಲಾದೀತು. ಅವರು ಅಲ್ಲಿ ಸೋತ ಪಕ್ಷದಲ್ಲಿ ರೊಮೇನಿಯದವರು ನಮ್ಮ ಪಕ್ಷವನ್ನು ಸೇರುವಂತೆ ತೋರುವುದು. ಯಾಕೆಂದರೆ ಈ ರಾಜ್ಯವು ಇಂಗ್ಲೆಂಡಿನ ಬ್ಯಾಂಕಿನಿಂದ 50,00,000 ಪೌಂಡನ್ನು ಸಾಲವಾಗಿ ತರಿಸಿಕೊಂಡಿದೆ.

ಆಸ್ಟ್ರಿಯಾದವರು ಹೊಸದಾಗಿ ಎರಡು ದೊಡ್ಡ ಸೈನ್ಯಗಳನ್ನು ಕೂಡಿಸುತ್ತಿದಾರಂತೆ. ಒಂದು ಸೈನ್ಯದಲ್ಲಿ 4,00,000 ಫೌಜನ್ನು ಕೂಡಿಸಿ ಪೂರ್ವ ಹಂಗೇರಿಯಲ್ಲಿ ರಷ್ಯಾದವರ ಮೇಲೆ ಯುದ್ಧಕ್ಕೆ ಕಳುಹಿಸುವರೆಂದೂ, ಇನ್ನೊಂದು ಸೈನ್ಯದಲ್ಲಿ 3,00,000 ಸೈನಿಕರನ್ನು ಜಮಾವಣೆ ಮಾಡಿ ಮತ್ತೆ ಸರ್ವಿಯಾದೊಳಕ್ಕೆ ಕಳುಹಿಸುವರೆಂದೂ ಹೇಳಲಾಗಿದೆ.

ಜರ್ಮನಿಯವರ ಜಪ್ಪೆಲಿನ್ ಎಂಬ ಬಹಳ ದೊಡ್ಡ ವಿಮಾನ ಯಂತ್ರವು ಬಾಲ್ಟಿಕ್ ಕಡಲಿನಲ್ಲಿ ಲಿಬಾ ಎಂಬ ತೀರಪಟ್ಟಣದ ಬಳಿ ಬಿದ್ದುಬಿಟ್ಟಿತು. ಅದರೊಳಗಿದ್ದ ಜರ್ಮನಿಯವರನ್ನು ರಷ್ಯಾದವರು ಕೈಸೆರೆಹಿಡಿದುಕೊಂಡು, ಆ ವಿಮಾನ ಯಂತ್ರವನ್ನು ನಾಶಪಡಿಸಿರುತ್ತಾರೆ.

ಟರ್ಕಿ.

ಅರ್ಮೀನಿಯಾದಲ್ಲಿ ಯುದ್ಧಗಳು ನಡೆಯುತ್ತಾಬಂದಿವೆ. ಟರ್ಕಿಯವರು ಹೊಸದಾಗಿ ಸೈನ್ಯಗಳನ್ನು ಕೂಡಿಸಿ ಕಳುಹಿಸಿದರು. ಹನ್ನೊಂದನೇ ಆರ್ಮಿ ಕೋರಿನ ಎರಡು ಡಿವಿಷನ್ ಸೈನ್ಯಗಳ ಮೇಲೆ ರಷ್ಯಾದವರು ಯುದ್ಧಮಾಡಿ ಸೋಲಿಸಿದರು. ಈಚೆಗೆ ಟರ್ಕಿ ಸೈನ್ಯದಲ್ಲಿ ದಂಗೆಯುಂಟಾಗಿದೆ ಎಂದು ಹೇಳುವರು.

ಟರ್ಕಿಯವರು ಒಂದು ಜಲಜನೊಳಗೆ ಹದಿನಾರು ವಿಮಾನ ಯಂತ್ರಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ರಷ್ಯಾದವರು ಕಪ್ಪುಕಡಲಿನಲ್ಲಿ ಆ ಜಹಜನ್ನು ವಿಮಾನಯಂತ್ರಗಳ ಸಮೇತ ಮುಳುಗಿಸಿಬಿಟ್ಟರು.

ಬ್ರಿಟಿಷ್ ಸೈನ್ಯಗಳು ಸಿರಿಯಾದಲ್ಲಿರುವ ಅಲೆಕ್ಸಾಂಡ್ರೆಟ್ಟಾದಲ್ಲಿಯೂ ಸ್ಮಿರ್ನಾದಲ್ಲಿಯೂ ಇಳಿದುಹೋಗಿ ಟೆಲಿಗ್ರಾಫ್ ತಂತಿಗಳನ್ನು ಹಾಳುಮಾಡಿದವು. ಇದರಲ್ಲಿ ಅವರಿಗೆ ವಿಶೇಷ ಅಡಚಣೆಯೇನೂ ಆಗಲಿಲ್ಲ.

ಅನೇಕ ಪ್ರಜೆಗಳು ಅಂದರೆ ಸುಮಾರು 45 000 ಜನರು ಟರ್ಕಿ ದೇಶವನ್ನೇ ತ್ಯಜಿಸಿ ಓಡಿಹೋಗಿ ರಷ್ಯಾದೊಳಗೆ ಸೇರಿಕೊಂಡಿದಾರೆ. ಸುಮಾರು 8,500 ಸಿರಿಯಾ ಪ್ರಜೆಗಳು ಈಜಿಪ್ಟಿಗೆ ಬಂದಿದ್ದರು. ಇವರು ಕೂಡ ಟರ್ಕಿ ದೇಶವನ್ನು ಬಿಟ್ಟುಬಂದ ಪ್ರಜೆಗಳೇ ಆಗಿದಾರೆ.

ಈಜಿಪ್ಟಿನ ಪೂರ್ವಪ್ರದೇಶದಲ್ಲಿ ಒಂದು ಸಣ್ಣ ಕದನ ನಡೆಯಿತು. ಇದರಲ್ಲಿ ಬ್ರಿಟಿಷರ ಸೈನ್ಯದಲ್ಲಿ ಐದು ಮಂದಿಗೆ ಸ್ವಲ್ಪ ಗಾಯವಾಗಿದೆ. ಟರ್ಕಿಯವರಲ್ಲಿ ಹಲವರು ಕೊಲೆಯಾದರು. ಸೂಯಸ್ಸಿನಿಂದ ಉತ್ತರ-ಪೂರ್ವಕ್ಕೆ 25 ಮೈಲಿ ದೂರದಲ್ಲೂ, ಬಿಟ್ಟರ್ ಸರೋವರಗಳಿಂದ 25 ಮೈಲಿ ದೂರದಲ್ಲೂ, ಸೂಯಸ್ಸಿನ ಪೂರ್ವಕ್ಕೆ 10 ಮೈಲಿ ದೂರದಲ್ಲೂ ಟರ್ಕಿ ಸೈನ್ಯಗಳು ಬಂದು ಠಾಣ್ಯಗಳನ್ನು ಹಾಕಿಕೊಂಡಿರುವಂತೆ ವರ್ತಮಾನವಿದೆ. ಇಷ್ಟರೊಳಗೇ ಈ ಪ್ರಾಂತ್ಯಗಳಲ್ಲಿ ಕದನಗಳು ನಡೆಯಬಹುದಾಗಿ ತೋರುವುದು.

ತಿಗ್ರಿಸ್ ಖಂಡದಲ್ಲಿ ಯೂಫ್ರೆಟೀಸ್ ಕಣಿವೆಯೊಳಗೆ ಬ್ರಿಟಿಷ್ ಸೈನ್ಯಗಳು ಬಾಗ್ದಾದ್ ನಗರವನ್ನು ಕುರಿತು ನುಗ್ಗಿಹೋಗುತ್ತಾ ಟರ್ಕಿಯ ಹಲವು ಸೈನಿಕರನ್ನು ಸಂಧಿಸಿದವು. ಅಲ್ಲಿ ಕದನವಾದದ್ದರಲ್ಲಿ ಟರ್ಕಿಯವರು ಸೋತು ಅನೇಕರನ್ನು ಕಳೆದುಕೊಂಡು ಹಿಂದಕ್ಕೆ ಓಡಿಹೋದರು. ಬ್ರಿಟಿಷ್ ಸೈನ್ಯದಲ್ಲಿ 60 ಮಂದಿ ನಷ್ಟಪಟ್ಟರು. ಈ ಕದನದ ವಿವರವೇನೂ ಪ್ರಕಟವಾಗಿಲ್ಲ.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪ. ಅಲ್ಲಿ ಎದ್ದಿದ್ದ ದಂಗೆಯು ಸಂಪೂರ್ಣವಾಗಿ ಇನ್ನೂ ಅಡಗಿಸಲ್ಪಡಲಿಲ್ಲವೆಂದು ಕಾಣುತ್ತದೆ. ಸುಮಾರು 1,200 ಜನ ದಂಗೆಕೋರರು ಉಪಿಂಗ್‌ಟನ್ ಎಂಬ ಊರಿಗೆ ಮುತ್ತಿಗೆ ಹಾಕಿದರು. ಆದರೆ ಸರ್ಕಾರದ ಸೈನ್ಯಗಳು ಅವರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿ ಓಡಿಸಿರುತ್ತವೆ. ದಂಗೆಕೋರರಲ್ಲಿ 12 ಮಂದಿ ಸತ್ತು ಬಿದ್ದರು, 23 ಮಂದಿಗೆ ಗಾಯಗಳಾದವು, 96 ಜನರು ಕೈಸೆರೆ ಸಿಕ್ಕಿದರು. ಸರ್ಕಾರದ ಸೈನ್ಯದಲ್ಲಿ 3 ಜನ ಕೊಲೆಯಾದರು; 22 ಮಂದಿಗೆ ಗಾಯಗಳಾಗಿವೆ.

ಇತರ ವಿಷಯಗಳು.

ಬ್ರಿಟಿಷರ ಒಂದು ವ್ಯಾಪಾರದ ಹಡಗು ಎಂಬ ಕ್ರಿಸರ್ ಐರ್ಲೆಂಡಿನ ಉತ್ತರ ಭಾಗದಲ್ಲಿ ಸಮುದ್ರದೊಳಗಿದ್ದ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು. ಅದರೊಳಗಿದ್ದ 273 ಜನರು ಸಮುದ್ರಪಾಲಾದರು.

ಬ್ರಿಟಿಷರ ಒಂದು ಜಹಜು ಐರಿಷ್ ಕಡಲಿನಲ್ಲಿ ಸಬ್‌ಮೆರೀನಿನಿಂದ ಬಡಿಯಲ್ಪಟ್ಟು ಒಡೆದುಹೋಯಿತು. ಆದರೆ ಅದರಲ್ಲಿದ್ದವರೆಲ್ಲಾ ಬದುಕಿಸಲ್ಪಟ್ಟರು.

ಬಾಲ್ಟಿಕ್ ಕಡಲಿನಲ್ಲಿ ರಷ್ಯಾದವರು ಜರ್ಮನಿಯವರ ಒಂದು ಚಿಕ್ಕ ಯುದ್ಧದ ಜಹಜಿಗೆ ಸಿಡಿಮದ್ದಿನ ಗುಂಡನ್ನು ಬಡಿಸಿ ಕೆಡಿಸಿಬಿಟ್ಟರು.

ಸಬ್‌ಮೆರೀನ್ ಎಂಬೊಂದು ಹಡಗು ಜರ್ಮನಿಗೂ ಸ್ವೀಡನ್‌ಗೂ ನಡುವೆ ಕಾಣಿಸಿಕೊಂಡು, ವ್ಯಾಪಾರದ ಹಡಗುಗಳ ಸಂಚಾರಕ್ಕೆ ಅಡಚಣೆಯುಂಟಾಗಿದೆ ಎಂದು ಹೇಳಲಾಗಿದೆ.

ಉತ್ತರ ಕಡಲಿನಲ್ಲಿ ಜಹಜುಗಳ ಯುದ್ಧದಲ್ಲಿ ಈಗಲೂ ಕೈಸೆರೆ ಹಿಡಿಯಲ್ಪಟ್ಟ ಜರ್ಮನಿ ಸೈನಿಕರು ಹೇಳುವುದೇನೆಂದರೆ, ಜನವರಿ ತಾ. 1 ರಲ್ಲಿ ಜರ್ಮನಿ ತೀರಪಟ್ಟಣದ ಮೇಲೆ ಹೋದ ಬ್ರಿಟಿಷ್ ವಿಮಾನಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರಿಂದ ತೀರದಲ್ಲಿದ್ದ ಜರ್ಮನಿಯ ಎರಡು ಹಡಗುಗಳಿಗೆ ತುಂಬಾ ನಷ್ಟವಾಯಿತು. ಮತ್ತು ಬ್ರಿಟಿಷರ ಫಿರಂಗಿ ಗುಂಡುಗಳು ಬಡಿದು ಜಪ್ಪೆಲಿನ್ ಎಂಬ ಒಂದು ದೊಡ್ಡ ವಿಮಾನ ಯಂತ್ರಕ್ಕೆ 27 ಕಡೆ ಕೆಡುಕು ಮಾಡಿದವು ಎಂದು ಹೇಳಿದಾರೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರೇ ಖುದ್ದಾಗಿ ಮುರಾದಾಬಾದ್ ಖಾನ್ ಎಂಬ ಹಿಂದುಸ್ಥಾನದ ಸಿಪಾಯಿಗೆ ವಿಕ್ಟೋರಿಯಾ ಕ್ರಾಸ್ ಎಂಬ ಬಿರುದಿನ ಬಿಲ್ಲೆಯನ್ನು ಸ್ವಹಸ್ತ ದಯಪಾಲಿಸಿದರು.

ಹಿಂದುಸ್ಥಾನದ ಸೈನಿಕರ ಚಿಕಿತ್ಸೆಗೋಸ್ಕರ ಇಂಗ್ಲೆಂಡಿನಲ್ಲಿ ಒಂದು ಆಸ್ಪತ್ರೆ ಸ್ಥಾಪಿಸಲ್ಪಟ್ಟಿದೆ. ಅದರ ಹೆಸರು ಲೇಡಿ ಹಾರ್ಡಿಂಗ್ ಆಸ್ಪತ್ರೆ. ಅದರಲ್ಲಿ 500 ಮಂದಿಗೆ ಏಕಕಾಲದಲ್ಲಿ ಚಿಕಿತ್ಸೆಗಳು ನಡೆಯುವುದಕ್ಕೆ ಏರ್ಪಾಡುಗಳನ್ನು ಮಾಡಿರುತ್ತಾರೆ. ಹಿಂದುಸ್ಥಾನದ ಸಿಪಾಯರ ಹೆಸರಿನಲ್ಲಿ ಕೂಡಿಸಲ್ಪಡುತ್ತಿರುವ ಫಂಡಿನಿಂದ ಹಿಂದುಸ್ಥಾನದ ಸಿಪಾಯಿಗಳಿಗೆ 25,000 ಜೋಡಿ ಉಡುಪುಗಳನ್ನೂ, ಅಪಾರವಾದ ಹೊಗೆಸೊಪ್ಪನ್ನೂ, ಹಾಲು ಮಿಠಾಯಿ ಕೊಬರಿಯೆಣ್ಣೆ ಮೊದಲಾದವುಗಳನ್ನೂ ಸರಬರಾಯಿ ಮಾಡಿಸಿರುತ್ತಾರೆ. ಇದಲ್ಲದೆ ಯುದ್ಧಭೂಮಿಯಲ್ಲಿ ರಮಜಾನ ಹಿಂದುಸ್ಥಾನದ ಸಿಪಾಯಿಗಳಿಗೆ 1,000 ಕ್ವಿಂಟಲೂ ಹೆಚ್ಚಾಗಿ ಯೋಗ್ಯವಾದ ತಿಂಡಿ ಪದಾರ್ಥಗಳನ್ನು ಕಳುಹಿಸಿಕೊಟ್ಟಿರುವರು.

ಇಂಗ್ಲಿಷ್ ವೈದ್ಯರು ರೋಗಿಗಳಿಗೆ ಚಿಕಿತ್ಸೆಮಾಡುವಾಗ್ಗೆ ಯೂರೋಪಿನಲ್ಲಿರುವ ಜಿಗಣೆಗಳನ್ನೇ ಉಪಯೋಗಿಸುತ್ತಿದ್ದರು. ಈಗ ಯುದ್ಧದ ದೆಸೆಯಿಂದ ರಫ್ತಾಗಿ ಹೋಗುವುದು ನಿಂತುಹೋದ ಕಾರಣ ಹಿಂದುಸ್ಥಾನದಿಂದ ಇಲ್ಲಿನ ಜಿಗಣೆಗಳನ್ನು ಹಿಡಿದು ಇಂಗ್ಲೆಂಡಿಗೆ ಕಳುಹಿಸಿಕೊಡುತ್ತಿರುವರು. ಇಂಗ್ಲಿಷ್ ಡಾಕ್ಟರುಗಳು ಇವುಗಳನ್ನೇ ಉಪಯೋಗಿಸುತ್ತಿದಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಮೈಸೂರು ನ್ಯಾಯವಿಧಾಯಕ ಸಭೆಯ ಮೀಟಿಂಗು ಬರುವ ಬುಧವಾರ ಮಧ್ಯಾಹ್ನ ಬೆಂಗಳೂರಿನಲ್ಲಿ ನಡೆಯುವಂತೆ ಪ್ರಕಟವಾಗಿದೆ.

ಟಿ. ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಶ್ರೀ ಉತ್ತರಾದಿಮಠದ ಶ್ರೀ ಸ್ವಾಮಿಗಳಿಗೆ ಅವಸಾನಕಾಲವು ಸನ್ನಿಹಿತವಾಗಿದೆ ಎಂದು ತಿಳಿದು ಉತ್ತರಾಧಿಕಾರಿಗಳ ಏರ್ಪಾಡು ಮುಂತಾದವುಗಳನ್ನು ಖುದ್ದಾಗಿ ನೋಡಿಕೊಳ್ಳುವುದಕ್ಕೋಸ್ಕರ ನಮ್ಮ ಡೆಪ್ಯುಟಿ ಕಮಿಷನರವರು ಅಲ್ಲಿಗೆ ಪ್ರಯಾಣಮಾಡಿರುತ್ತಾರೆ.

ಸ್ಟ್ಯಾಂಡರ್ಡ್ ಲೈಫ್ ಅಷ್ಯೂರೆನ್ಸ್ ಕಂಪನಿಯವರೂ, ಬೆಂಗಳೂರು ಚಿಕ್ಕಪೇಟೆ ವರ್ತಕರಾದ ಓರಿಯಂಟಲ್ ವೇರ್‌ಹೌಸ್ ಕಂಪನಿಯವರೂ ಹೊಸ ವರುಷದ ಕ್ಯಾಲೆಂಡರುಗಳನ್ನು ಬಹು ಸುಂದರವಾಗಿ ಅಚ್ಚುಮಾಡಿಸಿ ನಮಗೊಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಇವನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುವೆವು.

ರಾಜಧಾನಿಯ ಪುರವಾಸಿಗಳಲ್ಲಿ ಅಗ್ರಗಣ್ಯರಾಗಿ "ರಾವ್ ಬಹದೂರ್" ಎಂಬ ಬಿರುದನ್ನು ಪಡೆದಿರುವ ಅಡ್ವೊಕೇಟ್ ಮ|| ಎಂ. ಸಿ. ರಂಗಯ್ಯಂಗಾರ್ಯರವರಿಗೆ ಪ್ರಜೆಗಳು ಸೇರಿ ಮುಂದಿನ ವಾರ ತಾ. 13 ನೇ ಶನಿವಾರ ಟೌನ್ ಹಾಲಿನಲ್ಲಿ ಒಂದು ಸಂತೋಷಕೂಟವನ್ನು ನಡಿಸಿ ಅವರಿಗೆ ಬಿರುದು ಬಂದದ್ದರಿಂದ ತಮಗುಂಟಾಗಿರುವ ಆನಂದವನ್ನು ಪ್ರಕಾಶಪಡಿಸುವವರಾಗಿದಾರೆ.

ರಾಜಧಾನಿಯ ಮಹಾರಾಜಾ ಕಾಲೇಜಿಗೆ ಮಿ|| ಇ. ಮಕ್ಕಿಂಟೋಷ್ ಎಂಬೊಬ್ಬರು ಹೊಸದಾಗಿ ನೇಮಕವಾಗಿ ಬಂದು ಇಂಗ್ಲಿಷ್ ಪ್ರೊಫೆಸರ್ ಕೆಲಸದ ಛಾರ್ಜನ್ನು ಕಳೆದ ಬುಧವಾರ ವಹಿಸಿಕೊಂಡಿರುತ್ತಾರೆ. ಇದಲ್ಲದೆ ಇದುವರೆಗೆ ಸ್ಪೆಷಲ್ ಡ್ಯೂಟಿಯ ಮೇಲಿದ್ದ ಮ|| ಸಿ. ರಾಮಲಿಂಗರೆಡ್ಡಿಯವರನ್ನು ಸರ್ಕಾರದವರು ಮತ್ತೆ ಇದೇ ಕಾಲೇಜಿನಲ್ಲಿ ಪ್ರೊಫೆಸರಾಗಿ ಕೆಲಸಮಾಡುವಂತೆ ಕಳುಹಿಸಿಕೊಟ್ಟಿರುವರು.

ಮೈಸೂರು ಸಂಸ್ಥಾನದ ಕೌನ್ಸಿಲರಾಗಿದ್ದು ರಿಟೈರಾಗಿರುವ ದಿವಾನ್ ಬಹದೂರ್ ಮ|| ಸಿ. ಶ್ರೀನಿವಾಸಯ್ಯಂಗಾರ್ಯರವರಿಗೆ ಪಾರ್ಶ್ವವಾಯು ಪ್ರಾಪ್ತವಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಎರಡು ವಾರಗಳಿಂದ ಚಿಕಿತ್ಸೆ ಹೊಂದುತ್ತಿದಾರೆ. ಈಚೆಗೆ ಇವರಿಗೆ ಕಾಯಿಲೆ ವಾಸಿಯಾಗುತ್ತಿದೆ ಎಂದೂ, ಇಷ್ಟರಲ್ಲೇ ಅವರು ಆಸ್ಪತ್ರೆಯಿಂದ ತಮ್ಮ ಬಂಗಲೆಗೆ ಬರುವವರಾಗಿದಾರೆಂದೂ ತಿಳಿಸಲು ಸಂತೋಷಪಡುತ್ತೇವೆ.

ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಸ್ಕೂಲಿನಲ್ಲಿ ಈ ತಿಂಗಳ ಮೊದಲಿನಿಂದ ವರ್ತಕರ ಮತ್ತು ವ್ಯಾಪಾರಗಾರರ ಮಕ್ಕಳಿಗೆ ಗುಜರಾತಿ, ವ್ಯಾಪಾರದ ಭೂಗೋಳ, ಇಂಗ್ಲೀಷು, ಕನ್ನಡದಲ್ಲಿ ಲೆಕ್ಕಗಳನ್ನಿಡುವ ಕ್ರಮ ಮುಂತಾದವುಗಳನ್ನು ಕಲಿಸಲು ಪ್ರಾರಂಭವಾಗಿದೆ. ಗುಜರಾತಿಯನ್ನು ಕಲಿಸುವುದಕ್ಕೆ ಬೊಂಬಾಯಿನಲ್ಲಿ ಸುಮಾರು 15 ವರುಷಗಳಿದ್ದು ಅದರಲ್ಲಿ ವಿಶೇಷ ಪರಿಶ್ರಮವನ್ನು ಹೊಂದಿರುವಂಥಾ ಮ|| ಎಸ್. ನಂಜುಂಡಶಾಸ್ತ್ರಿಯವರನ್ನು ಸರ್ಕಾರದವರು ಕಳೆದ ವಾರ ನೇಮಕಮಾಡಿರುತ್ತಾರೆ.

ಒಬ್ಬ ಬಾತ್ಮಿದಾರರು ಬರೆಯುವುದು.—ಮಾಗಡಿ ತಾಲ್ಲೂಕು ಚಿಕ್ಕನಹಳ್ಳಿಗೆ ತಾವರೆಕೆರೆ ಹೋಬಳಿ ಶೇಕ್‌ದಾರ್ ಮ|| ಅಪ್ಪಾಜಿರಾಯರು ಬಂದು ಗ್ರಾಮಸ್ಥರನ್ನೆಲ್ಲಾ ಮಾರಿ ಗುಡಿಯಲ್ಲಿ ಸೇರಿಸಿ ಒಂದು ಸಭೆಮಾಡಿ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಘೋರವಾದ ಯುದ್ಧದ ವಿಚಾರವನ್ನು ವಿವರಿಸಿ ನಮ್ಮ ಬ್ರಿಟಿಷ್ ಚಕ್ರವರ್ತಿಯವರಿಗೆ ಜಾಗ್ರತೆ ಜಯವುಂಟಾಗಬೇಕೆಂದು ಪ್ರಾರ್ಥನೆಮಾಡಿದ್ದಲ್ಲದೆ ಯುದ್ಧದ ರಿಲೀಫ್ ಫಂಡಿಗೋಸ್ಕರ ರೂ 9–9–0 ಚಂದಾ ಕೂಡಿಸಿ ಅಮಲ್ದಾರರಿಗೆ ಕಳುಹಿಸಿಕೊಟ್ಟರು.

ಒಬ್ಬ ಬಾತ್ಮಿದಾರರಿಂದ.—ಮೈಸೂರು ಕೃಷ್ಣರಾಜ ಮೊಹಲ್ಲಾ ಹಸುವಿನ ಕರೆಹಟ್ಟಿ ಬಳಿ ಚೌಕದಲ್ಲಿ ಶ್ರೀ ಭಾರತೀಯ ಸೊಸೈಟಿ ಎಂಬ ಸಂಘದವರು ಕಳೆದ ವಾರದಿಂದ 7 ದಿವಸ ಕಥೆ ಮಾಡಿಸಿ ತಾ. 29 ರಲ್ಲಿ ಹರಿಕಥಾ ಮಾಡಿದ ಮ|| ಎನ್. ಸುಬ್ಬಯ್ಯ ಭಾಗವತರಿಗೆ ಭಂಗಾರದ ಮೆಡಲ್ ಮುಂತಾದ ಬಹುಮಾನಗಳನ್ನು ಕೊಟ್ಟರು. ಆ ಸಭೆಯಲ್ಲೇ ವೇ|| ವೆಂಕಟರಮಣದಾಸರು ಸತ್ಕಾಲಕ್ಷೇಪ ವಿಷಯ ಸಂಬಂಧವಾದ ಉಪನ್ಯಾಸವನ್ನು ಮಾಡಿದ ಮೇಲೆ ಸಭಾಸದರು ಜಯಘೋಷದೊಡನೆ ಮಂಗಳಾಚರಣೆ ನಡಿಸಿದರು.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ಬಿ. ನರಸಿಂಗರಾಯರು ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಯುದ್ಧದ ಚರಿತ್ರೆಯನ್ನು ಆರಂಭದಿಂದ ಡಿಸೆಂಬರ್ ತಾ. 10 ರ ವರೆಗೆ ಸುಲಭವಾದ ಕನ್ನಡದಲ್ಲಿ ರಚಿಸಿ ನಮಗೊಂದು ಪ್ರತಿಯನ್ನು ಕಳುಹಿಸಿದಾರೆ. ಇದರಲ್ಲಿ ಯುದ್ಧಕ್ಕೆ ಕಾರಣವನ್ನೂ, ತಾರೀಖುವಾರು ಯುದ್ಧಕಾರ್ಯಗಳನ್ನೂ ಬರೆದಿರುತ್ತಾರಲ್ಲದೆ ಯುದ್ಧರಂಗದ ನಕ್ಷೆ ಮೊದಲಾದ ನಾಲ್ಕಾರು ಚಿತ್ರಗಳನ್ನೂ ರಚಿಸಿ ಸೇರಿಸಿರುತ್ತಾರೆ. ಇದರ ಕ್ರಯ 4 ಆಣೆ.—ಮದರಾಸ್ ಪಟ್ಟಣದಲ್ಲಿ ವರ್ತಕರಾಗಿರುವ ಮ|| ಗುರುಬಸವ ಅಂಡ್ ಕಂಪನಿಯವರು ಈ ಘೋರವಾದ ಯುದ್ಧಕ್ಕೆ ಸಂಬಂಧಪಟ್ಟ ದೊರೆಗಳ, ಅವರ ದಳಪತಿಗಳ ಮತ್ತು ಯುದ್ಧಸಾಧನಗಳ ಚಿತ್ರಗಳನ್ನು ದೊಡ್ಡ ಆಕೃತಿಯಲ್ಲಿ ನೇತ್ರಾನಂದಕರವಾಗಿ ಅಚ್ಚುಮಾಡಿಸಿ ನಮಗೊಂದು ಪ್ರತಿಯನ್ನು ಕಳುಹಿಸಿದಾರೆ. ಇದರ ವಿವರವೆಯೂ ಕ್ರಯವೂ ಆ ಕಂಪನಿಯವರು ನಮ್ಮ ಪತ್ರಿಕೆಯ ಮುಖಪತ್ರದಲ್ಲಿ ಹಾಕಿಸಿರುವ ಪ್ರಕಟನೆಯಿಂದ ಗೊತ್ತಾಗುತ್ತದೆ.

ಶ್ರೀ ಉತ್ತರಾದಿ ಮಠದ ಶ್ರೀಸ್ವಾಮಿಗಳವರು ಬೆಂಗಳೂರು ಸಿಟಿ ಪೂರ್ಣಪ್ರಸಾದವೆಂಬ ಬಂಗಲೆಯಲ್ಲಿ ಆಸ್ಥಾನವನ್ನು ಮಾಡಿಕೊಂಡು ಎರಡು ವಾರಗಳಿಂದ ಬಹು ಧಾರಾಳವಾಗಿ ಅನ್ನದಾನಮಾಡುತ್ತಿದಾರೆ. ದಿನ ಒಂದಕ್ಕೆ ಮೂರು ಸಾವಿರ ಪ್ರಜೆಗಳು ಮಠದಲ್ಲಿ ಭಕ್ಷ್ಯಭೋಜ್ಯಗಳನ್ನು ಸೇವಿಸಿ ಬರುತ್ತಿರುವರು. ಒಂದು ದಿನ ಸ್ವಾಮಿಗಳವರು ಸುಮಾರು 18,000 ಪ್ರಜೆಗಳಿಗೆ ಪಂಚಭಕ್ಷ್ಯಗಳ ಸಮಾರಾಧನೆಯನ್ನು ಮಾಡಿಸಿ ಸ್ವತಃ ಒಬ್ಬೊಬ್ಬಂದು ಜನರಿಗೂ ತಲಾ ಒಂದು ರೂಪಾಯಿನಂತೆ ದಕ್ಷಿಣೆಯನ್ನು ದಯಪಾಲಿಸಿದರು. ಇದಲ್ಲದೆ ಪಂಡಿತರ ಪರಿಷತ್ತನ್ನು ನಡಿಸಿ ನೂರಾರು ಮಂದಿ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಉದಾರವಾಗಿ ಬಹುಮಾನವನ್ನೂ ಶಾಲು ಧೋತ್ರಾದಿಗಳನ್ನೂ ಕೊಟ್ಟರು. ರಾಜಧಾನಿಯಿಂದಲೂ ಅನೇಕ ಪಂಡಿತರು ಹೋಗಿದ್ದು ಪ್ರಯೋಜನಹೊಂದಿ ಬಂದಿರುತ್ತಾರೆ. ಈ ಸ್ವಾಮಿಗಳು ವರ್ಣಭೇದವನ್ನು ಕಾಣರೆಂದೂ, ಬೆಂಗಳೂರಿನಲ್ಲಿ ಮಧ್ವಸಿದ್ಧಾಂತ ಪಾಠಶಾಲೆಯನ್ನು ಕಲ್ಪಿಸಿ ಶಾಶ್ವತವಾಗಿ ನಡೆಯುವಂತೆ ಮಾಡಬೇಕೆಂದಿರುವುದಾಗಿಯೂ ವರ್ತಮಾನವಿದೆ. ಶ್ರೀಸ್ವಾಮಿಗಳು ಚೈತ್ರ ಮಾಸದಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡುವವರಾಗಿದಾರೆ.

ಕಳೆದ ಭಾನುವಾರ ಸಾಯಂಕಾಲ ಮದರಾಸ್ ಪಟ್ಟಣದಲ್ಲಿರುವ ಮೈಸೂರು ಪ್ರಜೆಗಳು ಸೇರಿ ಒಂದು ಸಂತೋಷಕೂಟವನ್ನು ನಡಿಸಿದರು. ಮೈಸೂರು ಅಡ್ವೊಕೇಟ್ ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ಯ ಕುಮಾರರಾದ ಬ್ಯಾರಿಸ್ಟರ್ ಮ|| ಆರ್. ಎನ್. ಅಯ್ಯಂಗಾರ್ಯರವರೇ ಮುಂದಾಳಾಗಿ ನಿಂತು ಆ ಸಂತೋಷಕೂಟವನ್ನು ಆರಂಭಮಾಡಿದರು. ಆಗ್ಗೆ ಕೂಟದಲ್ಲಿ ಆಗಂತುಕರಾಗಿ ದಯಮಾಡಿದ್ದವರ್‍ಯಾರೆಂದರೆ—ಶ್ರೀಮದ್ಯುವರಾಜರವರು, ಸರ್ದಾರ್ ಎಂ. ಕಾಂತರಾಜೆ ಅರಸಿನವರು, ಮ|| ಗಳಾದ ಬಾಳರಾಜೆ ಅರಸಿನವರು, ಸುಬ್ರಹ್ಮಣ್ಯರಾಜೆ ಅರಸಿನವರು, ರಾವ್ ಬಹದೂರ್ ರಂಗಯ್ಯಂಗಾರ್ಯ, ಡಾ|| ರಂಗಣ್ಣನವರು, ಇವರಲ್ಲದೆ ಮದರಾಸಿನಲ್ಲಿರುವ ಮೈಸೂರು ವಿದ್ಯಾವಂತರೂ ಹಾಜರಾಗಿದ್ದರು. ಫಲಾಹಾರ ಸಂಗೀತ ಮೊದಲಾದವು ನಡೆದ ಬಳಿಕ ಸಭೆಯವರು ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿದರು. ಡಾ|| ನಂಜುಂಡರಾಯರು ನಮ್ಮ ಯುವರಾಜರವರಿಗೆ ಜಿ. ಸಿ. ಐ. ಇ. ಎಂಬ ಬಿರುದು ಬಂದ ವಿಷಯದಲ್ಲಿ ಸಭೆಯ ಆನಂದವನ್ನು ಪ್ರಕಾಶಮಾಡಿದರು. ಶ್ರೀಮದ್ಯುವರಾಜರವರು ಸಭೆಯನ್ನು ವಂದಿಸಿ ಆ ಸಂಘವನ್ನು ಏರ್ಪಡಿಸಿದ್ದಕ್ಕಾಗಿ ಸಂತೋಷಪಟ್ಟು, ಪರದೇಶದಲ್ಲಿ ಮೈಸೂರಿನವರನ್ನು ಸಂಧಿಸಲು ತಮಗೆ ಸರ್ವದಾ ಆನಂದವಾಗುವುದೆಂದೂ, ತಮ್ಮ ದೇಶದವರು ಇತರ ಕಡೆಗಳಲ್ಲಿ ಹೋಗಿ ನಿಂತು ಯಶೋವಂತರಾಗಿ ಬರುತ್ತಿರುವುದು ಎಷ್ಟೋ ತೃಪ್ತಿಕರವಾಗಿದೆಯೆಂದೂ ಅಪ್ಪಣೆಕೊಡಿಸಿದರು. ಬಳಿಕ "ಮೈಸೂರು ಸಂಘ" ವೆಂಬುವುದನ್ನು ಸ್ಥಾಪನೆಮಾಡಿದ್ದಾಯಿತು. ಅದಕ್ಕೆ ಮ|| ಗಳಾದ ಎನ್. ಟಿ. ರಾಮಣ್ಣನವರೂ, ಆರ್. ಎನ್. ಅಯ್ಯಂಗಾರ್ಯರೂ, ಡಾ|| ಭುಜಂಗರಾಯರೂ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಡಿಸೆಂಬರ್ 7 ನೇ, 12 ನೇ, ಮತ್ತು 21 ನೇ ತಾರೀಖುಗಳಿಗೆ ಅಖೈರಾದ ವಾರಗಳ ಬ್ಯಾಂಕಿನ ಲೇಣೆ ಮತ್ತು ದೇಣೆಗಳ ಲೆಖ್ಖಗಳು.

ಲೇಣೆಗಳು :		ಜನವರಿ ತಾ. 7.	ಜನವರಿ ತಾ. 12.	ಜನವರಿ ತಾ. 21.
(1) ಷೇರ್ ಹಣ	ರೂ.	9,96,695	9,96,695	9,96,695
(2) ಡಿಪಾಜಿಟ್ಟುಗಳು	,,	22,78,564	23,13,857	23,56,619
(3) ಇತರೆ	,,	50,612	51,746	53,066
ಜುಮ್ಲಾ	ರೂ.	33,25,771	33,62,198	34,06,179

(ಅಣೆ, ಕಾಸು ಬಿಟ್ಟಿರುತ್ತೆ.)

ದೇಣೆಗಳು :		ಜನವರಿ ತಾ. 7.	ಜನವರಿ ತಾ. 12.	ಜನವರಿ ತಾ. 21.
(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	7,13,632	7,06,118	6,99,705
(2) ಸಾಕೆ ಮತ್ತು ಇತರ ಸಾಲಗಳು	,,	17,64,939	17,92,981	18,16,611
(3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	3,00,169	3,22,744	3,28,034
(4) ಇನ್‌ವೆಸ್ಟ್‌ಮೆಂಟುಗಳು	,,	2,67,277	2,67,277	3,67,277
(5) ಏಜನ್ಸಿಗಳಲ್ಲಿರುವ ಮೊಬಲಗು	,,	2,72,559	2,55,708	1,79,956
(6) ಬ್ಯಾಂಕಿನಲ್ಲಿರುವ ಸಾಮಾನು	,,	13,218	13,322	14,615
(7) ಇತರೆ	,,	4,077	4,168	4,979
ಜುಮ್ಲಾ	ರೂ.	33,25,771	33,62,198	34,06,179

(ಅಣೆ, ಕಾಸು ಬಿಟ್ಟಿರುತ್ತೆ.)

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ವಾಚಕಶಾಲಾ ಪ್ರವೇಶೋತ್ಸವ.

ತುಮಕೂರು ತಾಲ್ಲೂಕು ಹೆತ್ತೇನಹಳ್ಳಿ.

ಈ ಊರಿನಲ್ಲಿ ರೀಡಿಂಗ್ ರೂಂ ಮಾಡಬೇಕೆಂಬ ಪ್ರಯತ್ನವು ಈಗ ಹೊಸದಾಗಿ ಬಂದಿರುವ ಸ್ಕೂಲ್ ಮಾಸ್ಟರವರಿಂದ ಈ ದಿನ ನೆರವೇರುವಂತಾಯಿತು. ಜನವರಿ 24 ನೇ ತಾ. ಮಧ್ಯಾಹ್ನ 3 ಘಂಟೆಗೆ ನಮ್ಮ ಅಮಲ್ದಾರ್ರವರಾದ ಮ॥ ಎಸ್. ಶ್ರೀನಿವಾಸಯ್ಯಂಗಾರ್ರವರು ದಯಮಾಡಿಸಿದ್ದರು. ಗ್ರಾಮ ಪ್ರಮುಖರು ಅಮಲ್ದಾರ್ರವರನ್ನು ಬಾಜಾಭಜಂತ್ರಿ ಮುಂತಾದ ವಾದ್ಯಗಳಿಂದ ಎದುರುಗೊಂಡು ಕರೆತಂದರು. ರೀಡಿಂಗ್ ರೂಂ ಮುಂಭಾಗದ ವಿಶಾಲವಾದ ಮೈದಾನದಲ್ಲಿ ಕದಳೀಸ್ತಂಭಗಳಿಂದಲೂ, ಹಸುರುತೋರಣಗಳಿಂದಲೂ ಚಪ್ಪರವು ಅಲಂಕರಿಸಲ್ಪಟ್ಟಿದ್ದಿತು. ಸಭಿಕರ ಕೋರಿಕೆಯಂತೆ ಅಮಲ್ದಾರ್ರವರು ಅಗ್ರಾಸನವನ್ನು ವಹಿಸಿದರು. ಸಭೆಯು ಶೇಕದಾರ್ರವರು, ಬ್ಯಾಂಕ್ ಇನ್‌ಸ್ಪೆಕ್ಟರವರು, ಗ್ರಾಮ ಪ್ರಮುಖರು ಮತ್ತು ಅಕ್ಕಪಕ್ಕದ ಗ್ರಾಮಗಳ ದೊಡ್ಡ ಮನುಷ್ಯರುಗಳಿಂದಲೂ ತುಂಬಿತ್ತು. ಆ ಸಮಯದಲ್ಲಿ ಈ ರೀಡಿಂಗ್ ರೂಂ ಪ್ರಯತ್ನಕ್ಕೆ ಮೂಲಕಾರಣರಾದ ಮ॥ ಕೆ. ವೆಂಕಟರಾಯರು ಈ ರೀಡಿಂಗ್ ರೂಮಿನಿಂದ ಆಗುವ ಪ್ರಯೋಜನಗಳನ್ನೂ, ಇದುವರೆಗಿನ ಜಮಾಖರ್ಚನ್ನೂ ಕುರಿತು ಉಪನ್ಯಾಸಮಾಡಿದರು. ಅಗ್ರಾಸನಾಧಿಪತಿಗಳು ಸದರಿ ಉಪನ್ಯಾಸವು ಬಹಳ ಶ್ಲಾಘ್ಯವಾಗಿದೆ ಎಂದು ಹೇಳಿದ್ದಲ್ಲದೆ, ಸಭಿಕರಿಗೂ ಗ್ರಾಮಸ್ಥರಿಗೂ ಸಮಯೋಚಿತವಾದ ಬುದ್ಧಿವಾದಗಳನ್ನು ಅಪ್ಪಣೆ ಕೊಡಿಸಿ ತಮ್ಮ ಸ್ವಹಸ್ತದಿಂದಲೇ ಪತ್ರಿಕೆಗಳನ್ನು ಒಡೆದು ಓದಿಸಿದರು. ಇದು 120 ಮನೆಗಳುಳ್ಳ ಗ್ರಾಮವಾಗಿದ್ದಾಗ್ಯೂ ಇಲ್ಲಿ ರೀಡಿಂಗ್ ರೂಂ ಪ್ರಾರಂಭ ಮಾಡಿಕೊಂಡು ಇದರ ಸ್ಥಾಪನೆಯ ಕೆಲಸಕ್ಕೆ ತಮ್ಮನ್ನು ಇಲ್ಲಿಗೆ ಬರಮಾಡಿಕೊಂಡದ್ದು ಬಹಳ ಸಂತೋಷಕರವೆಂದು ಅಪ್ಪಣೆ ಕೊಡಿಸಿದರು. ನಂತರ ಮೀಟಿಂಗ್ ನಡಿಸಲ್ಪಟ್ಟು ಶೇಕದಾರ್ ಮ॥ ಮೂರ್ತಿರಾಯರನ್ನು ಪ್ರೆಸಿಡೆಂಟರನ್ನಾಗಿಯೂ, ಮ॥ ಕೆ. ವೆಂಕಟರಾಯರನ್ನು ಸೆಕ್ರಿಟರಿಯಾಗಿಯೂ, ಎಂಟು ಮಂದಿ ಮುಖಂಡರನ್ನು ಕಮಿಟಿ ಮೆಂಬರುಗಳನ್ನಾಗಿಯೂ ಏರ್ಪಡಿಸಿ ಪ್ರೊಸೀಡಿಂಗ್ಸ್ ಮಾಡಿದರು. ಅನಂತರ ಅಗ್ರಾಸನಾಧಿಪತಿಗಳಿಗೆ ಹಾರತುರಾಯಿಗಳು ಒಪ್ಪಿಸಲ್ಪಟ್ಟವು. ಸಭಿಕರಿಗೆಲ್ಲಾ ಗಂಧಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು. ಕಡೆಯಲ್ಲಿ ಶ್ರೀಮನ್ಮಹಾರಾಜರವರಿಗೂ, ಯುವರಾಜರವರಿಗೂ, ನಮ್ಮ ಚಕ್ರವರ್ತಿಸಾರ್ವಭೌಮರಿಗೂ ಸುಮಂಗಳಗಳುಂಟಾಗಲೆಂಬ ಜಯಧ್ವನಿಯಿಂದ ಸಭೆಯು ಬರಖಾಸ್ತಾಯಿತು.

ಅಲ್ಲದೆ ಅಮಲ್ದಾರ್ರವರು ಈ ಊರಿನಲ್ಲಿ ಹೊಸದಾಗಿ ಸ್ಕೂಲ್ ಕಟ್ಟಿಸಲು ಚಂದಾ ಏರ್ಪಡಿಸಲು ಆಗ ಹಾಜರಾಗಿದ್ದ ದೊಡ್ಡಮನುಷ್ಯರುಗಳಿಂದ 110 ರೂಪಾಯಿಗಳ ಪಟ್ಟಿ ತಯಾರಾಯಿತು. ಇನ್ನೂ ನೂರು ರೂಪಾಯಿಗಳ ಮೇಲೆ ಪಟ್ಟಿ ತಯಾರಾಗುವ ಅಂದಾಜು ಇದೆ. ನಮ್ಮ ಅಮಲ್ದಾರ್ರವರು ಒಂದು ದಿನ ಈ ಊರಿನಲ್ಲಿ ಮೊಕ್ಕಾಂ ಮಾಡಿದರೆ ಈ ಚಂದಾ ಮೊಬಲಗೆಲ್ಲಾ ವಸೂಲಾಗುತ್ತಂತ ನಂಬುತ್ತೇನೆ.

ಸ್ಥಳನಿವಾಸಿ.

ಒಂದು ಪರಸ್ಪರ ಸಹಾಯಸಂಘ.

ಅರಸೀಕೆರೆ ತಾಲ್ಲೂಕು ಜಾವಗಲ್ಲು.

ಈ ಗ್ರಾಮದಲ್ಲಿ ಕೊಆಪರೇಟಿವ್ ಸೊಸೈಟಿ ಸ್ಥಾಪನೆಯಾಗಿ ಸುಮಾರು ಒಂದು ವರ್ಷವಾಯಿತು. ಇದುವರೆಗೆ 148 ಮೆಂಬರುಗಳೂ, ಸುಮಾರು 450 ಷೇರುಗಳೂ ಭರ್ತಿಯಾಗಿ, ಮೆಂಬರುಗಳಿಗೆ ಬೇಕಾದಾಗ ಹಣ ಒದಗಿಸಿಕೊಡಲು ಅಸಾಧ್ಯವಾಗಿದ್ದದ್ದರಿಂದಲೂ, ಇದುವರಿಗೆ ಅನೇಕ ಮೆಂಬರುಗಳು ಮನಸ್ಸಿನಲ್ಲಿ ಏನೋ ಅನುಮಾನ ಉಂಟಾಗಿ ಸಾಲತೆಗೆದುಕೊಂಡ ಹಣವನ್ನು ವಾಪಸು ಕೊಡದೆಲೂ, ಭರ್ತಿಯಾಗಬೇಕಾದ ಷೇರು ಕಿಸ್ತುಗಳನ್ನು ಕ್ರಮವಾಗಿ ಕೊಡದೇಲೂ ಉದಾಸೀನಮಾಡುತ್ತಿದ್ದರು. ಇಂಥಾ ಸಮಯದಲ್ಲಿ ನಮ್ಮ ಸೂಪ್ರವೈಸರ್ ಮ॥ ಎಚ್. ಶ್ರೀರಾಮಶಾಸ್ತ್ರಿಗಳವರು ಸುಮಾರು ಈ ತಿಂಗಳಲ್ಲಿ ಎರಡಾವರ್ತಿ ದಯಮಾಡಿಸಿ ಸಂಘದ ಮೆಂಬರುಗಳನ್ನು ಸೇರಿಸುವದಕ್ಕಾಗಿ, ಮ॥ ಶೇಕದಾರ್ ಕೃಷ್ಣಯ್ಯಂಗಾರ್ರು, ಪಟೇಲ್ ಕೇಶವಮೂರ್ತಿರಾಯರ ಮತ್ತು ನ್ಯಾ॥ ಹಿರಣ್ಯಯ್ಯನವರ ಪ್ರೋತ್ಸಾಹದಿಂದ ಜನಗಳನ್ನು ಬರಮಾಡಿಕೊಂಡು ಜನರಲ್ ಮೀಟಿಂಗ್ ನಡಿಸಿ, ಮೆಂಬರುಗಳಿಗೆ ಇದ್ದ ಅನುಮಾನಗಳನ್ನೆಲ್ಲಾ ಪರಿಹಾರಮಾಡಿದರು. ಎರಡನೇ ಸಲ ಸೇರಿದ್ದ ಮೀಟಿಂಗಿಗೆ ಮ॥ ಗಳಾದ ಪಟ್ಲಗಿರಿ ರಂಗಪ್ಪನವರು, ಅಗ್ಗುಂದದ ನ್ಯಾ. ದಾನಪ್ಪನವರು, ಹೊನ್ನವಳ್ಳಿ ಸೊಸೈಟಿ ಪ್ರೆಸಿಡೆಂಟ್ ಮ॥ ತಿಪ್ಪಯ್ಯನವರು ಮೊದಲಾದ ದೊಡ್ಡ ಮನುಷ್ಯರನ್ನು ಬರಮಾಡಿಕೊಂಡಿದ್ದರು. ಮ॥ ಎಂ. ವೆಂಕಟಪತಯ್ಯನವರು ಜಮಾಖರ್ಚುಪಟ್ಟಿ ಓದಿದನಂತರ ಮ॥ ಟಿ. ತಿಪ್ಪಯನವರು ಪರಸ್ಪರ ಸಹಾಯ ಸಂಘದಿಂದ ಇತರ ದೇಶದವರಿಗೆ ಅನುಕೂಲ ಉಂಟಾಗಿದೆಯೆಂದೂ, ನಮ್ಮ ದೇಶೀಯರೂ ಆ ರೀತಿ ಪರಸ್ಪರ ಸಹಾಯ ಸಂಘಗಳಿಂದ ನಮ್ಮ ಪುರೋಭಿವೃದ್ಧಿಗೆ ಬೇಕಾದದ್ದನ್ನೆಲ್ಲಾ ಅನುಕೂಲಮಾಡಿಕೊಳ್ಳಬಹುದೆಂದೂ ತಮ್ಮ ಅನುಭವ ಸಿದ್ಧವಾದ ವಿಷಯವನ್ನು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದನಂತರ ಮ॥ ಎಚ್. ಶ್ರೀರಾಮಶಾಸ್ತ್ರಿಗಳವರು ಈ ಸಂಘದಲ್ಲಿ ಮೆಂಬರುಗಳ ಸಂಖ್ಯೆ ಬಹಳ ಜಾಸ್ತಿಯಾಗಿಯೂ, ಷೇರುಗಳ ಸಂಖ್ಯೆ ಬಹಳ ಕಡಮೆಯಾಗಿಯೂ ಇರುವದರಿಂದ ಮೆಂಬರುಗಳ ಮನಸ್ಸಿನಲ್ಲಿ ದುರಭಿಪ್ರಾಯ ಉಂಟಾಗಲು ಕಾರಣವಾಯಿತಾದ್ದರಿಂದ ಇಲ್ಲಿಂದೀಚೆ ಮೆಂಬರುಗಳು ತಮ್ಮ ತಮ್ಮ ಷೇರ್ ಬಂಡವಾಳವನ್ನೂ, ಡಿಪಾಜಿಟ್‌ಗಳನ್ನೂ ಹೆಚ್ಚಿಸುವದು, ಮತ್ತು ಫೆಡರಲ್ ಯೂನಿಯನ್‌ಗಳಲ್ಲೂ, ಸೆಂಟ್ರಲ್ ಬ್ಯಾಂಕುಗಳಲ್ಲೂ ಸಾಲ ತರಿಸಿ ಬಂಡವಾಳ ಹೆಚ್ಚಿಸಿಕೊಳ್ಳಬೇಕೆಂಬದಾಗಿಯೂ ಸಕಾರಣವಾಗಿ ಉಪನ್ಯಾಸಮಾಡಿದ್ದಲ್ಲದೆ ಈ ಸೊಸೈಟಿಯಲ್ಲಿ ಜನಾನಾ ಷೇರುಗಳನ್ನೂ ಮೈನರ್ ಡಿಪಾಜಿಟ್‌ಗಳನ್ನೂ ಆಕರ್ಷಣೆ ಮಾಡುವದು ಒಳ್ಳೇದೆಂದು ತಿಳಿಸಿದರು. ಒಂದೆರಡು ದಿವಸಗಳಲ್ಲೇ ಕೆಲವು ಜನಾನಾ ಷೇರೂ, ಮೈನರ್ ಡಿಪಾಜಿಟ್ಟೂ ವಸೂಲಾಗಿರುವದು ಅತ್ಯಂತ ಹರ್ಷಾಸ್ಪದವಾಗಿದೆ. ಈ ಸೂಪ್ರವೈಜರು ಈ ಪ್ರಾಂತ್ಯದ ಸೊಸೈಟಿಗಳ ಬಾಕಿಗಳನ್ನೆಲ್ಲಾ ಬಹಳವಾಗಿ ವಸೂಲ್ಮಾಡುವ ತರದೂದು ನಡಿಸುತ್ತಾ ಇದಾರೆ. ಈ ಸೊಸೈಟಿಗಳಿಗೆ ಆಗಿಂದಾಗ್ಗೆ ಇನ್‌ಸ್ಪೆಕ್ಷನ್‌ಗಾಗಿ ಆಫೀಸರುಗಳು ಬರುತ್ತಿದ್ದರೆ ಪ್ರೋತ್ಸಾಹವುಂಟಾಗಿ ಸಂಘವು ಏಳಿಗೆಗೆ ಬರುತ್ತದೆ. ಪರಸ್ಪರ ಸಹಾಯ ಸಂಘದ ವಿಷಯದಲ್ಲಿ ಈ ಹೋಬಳಿ ಶೇಕದಾರ್ ಮ॥ ಕೆ. ಟಿ. ಕೃಷ್ಣಯ್ಯಂಗಾರ್ರು ಅತ್ಯಂತ ಮುತುವರ್ಜಿವಹಿಸಿರುವದು ಸಂತೋಷಕರವಾಗಿದೆ. ತಾ. 25 ನೇ ಸೋಮವಾರ ಈ ಗ್ರಾಮದ ಶ್ರೀಲಕ್ಷ್ಮೀನರಸಿಂಹಸ್ವಾಮಿಗೆ ಅತ್ಯಂತ ವಿಜೃಂಭಣೆಯಿಂದ ಉತ್ಸವ ನಡಿಸಿ, ಗ್ರಾಮದ ಬ್ರಾಹ್ಮಣರೇ ಮೊದಲಾದ ಸಕಲರೂ ನಮ್ಮ ಬ್ರಿಟಿಷ್ ಮಹಾಪ್ರಭುಗಳಿಗೂ, ಮಹಾರಾಜರಿಗೂ, ಯುವರಾಜರಿಗೂ, ನಮ್ಮ ರಾಜ್ಯಕ್ಕೂ ಶ್ರೇಯಃಪ್ರಾರ್ಥನೆಮಾಡಿ ಸಭಾ ಮುಕ್ತಾಯಮಾಡಲ್ಪಟ್ಟಿತು.

ಜ. ಸ.

ಮೈಸೂರು ಡಿಸ್ಟ್ರಿಕ್ಟಿನ ಮೊದಲನೇ ತಾಲ್ಲೂಕ್ ಪ್ರೋಗ್ರೆಸ್ ಕಾನ್‌ಫರೆನ್ಸು.

ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ನಡೆದದ್ದು.

ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಪ್ರೋಗ್ರೆಸ್ ಕಾನ್‌ಫರೆನ್ಸ್ ಮೀಟಿಂಗು ಕಳೆದ ಜನವರಿ ತಾ. 23 ನೇ ಶನಿವಾರ ದಿವ 2 ಘಂಟೆಗೆ ಹೇಮಗಿರಿ ಕಾನ್‌ಫರೆನ್ಸ್ ಪೆಂಡಾಲ್‌ನಲ್ಲಿ ಈ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮ॥ ಎ. ಸುಬ್ರಹ್ಮಣ್ಯಯ್ಯನವರ ಅಧ್ಯಕ್ಷತೆಯಿಂದ ನೆರವೇರಿತು. ಈ ಸಭೆಗೆ ನಮ್ಮ ಡೆಪ್ಯುಟಿ ಕಮಿಷನರ್ ಮ॥ ಎ. ಸುಬ್ರಹ್ಮಣ್ಯಯ್ಯನವರು, ಫ್ರಂಟ್‌ರೀಜ್ ಸಬ್ ಡಿವಿಜನ್ ಆಫೀಸರ್ ಮ॥ ಎ. ಕೃಷ್ಣಸ್ವಾಮಯ್ಯಂಗಾರ್ರವರು, ಪೋಲೀಸ್ ಸೂ॥ ಮ॥ ಎ. ವೇದಾಂತ ದೇಶಿಗಂ ಅಯ್ಯಂಗಾರ್ರವರು, ಮೈಸೂರು ಡಿ॥ ಎಕನಾಮಿಕ್ ಸೂಪರಿಂಟೆಂಡೆಂಟ್ ಮ॥ ಶ್ರೀನರಸಿಂಹ ಶಾಸ್ತ್ರಿಗಳವರು, ಡಿ॥ ಸ್ಯಾನಿಟರಿ ಆಫೀಸರ್ ಮ॥ ಬಿ. ಕೃಷ್ಣರಾಯರು, ಸಂಸ್ಥಾನದ ವೆಟರ್ನರಿ ಸೂಪರಿಂಟೆಂಡೆಂಟ್ ಮ॥ ಎನ್. ನರಸಿಂಹಯ್ಯಂಗಾರ್ರವರು, ತಾಲ್ಲೂಕ್ ಅಮಲ್ದಾರ್ ಮ॥ ಬಿ. ವೆಂಕಟರಾಮಯ್ಯನವರು, ಅಗ್ರಿಕಲ್‌ಚರ್ ಮತ್ತು ಕೊಆಪರೇಟಿವ್ ಇನ್‌ಸ್ಪೆಕ್ಟರುಗಳು, ವೇ॥ ಪಂಡಿತ್ ಶ್ರೀನಿವಾಸರಾಘವಾಚಾರ್ರವರು ಮುಂತಾದ ದೊಡ್ಡ ದೊಡ್ಡ ಮನುಷ್ಯರುಗಳೂ, ಈ ತಾಲ್ಲೂಕಿನ ಗ್ರಾಮಾಭಿವೃದ್ಧಿ ಕಮಿಟಿಗಳ ಪರವಾಗಿ ಸುಮಾರು 200 ಮಂದಿ ಡೆಲಿಗೇಟುಗಳೂ, ಸುಮಾರು 2-3 ಸಾವಿರ ಮಂದಿ ಪ್ರೇಕ್ಷಕರೂ ಸಭೆಯಲ್ಲಿ ಸೇರಿದ್ದರು. ಕ್ಲುಪ್ತಕಾಲಕ್ಕೆ ಸರಿಯಾಗಿ ಸಭೆಯು ಮಂಗಳವಾದ್ಯ, ಭಗವತ್‌ಪ್ರಾರ್ಥನೆ ಇವುಗಳ ಪೂರ್ವಕ ಪ್ರಾರಂಭವಾಯಿತು. ಮ॥ ಎಚ್. ಕೃಷ್ಣಶಾಸ್ತ್ರಿಗಳು ಸಭಿಕರಿಗೆಲ್ಲಾ ಸುಸ್ವಾಗತವನ್ನು ಬಯಸಿ ಈ ಸಭೆಗೆ ಮ॥ ಡೆಪ್ಯುಟಿ ಕಮಿಷನರ್ ಎ. ಸುಬ್ರಹ್ಮಣ್ಯಯ್ಯನವರು ಅಗ್ರಾಸನವನ್ನು ವಹಿಸಬೇಕೆಂದು ಕೇಳಿಕೊಂಡದ್ದನ್ನು ಮ॥ ಭೈರಪ್ಪನವರು ಅನುಮೋದಿಸಿದರು. ಅದೇ ಮೇರೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಗ್ರಾಸನವನ್ನು ವಹಿಸಿ ಕಾನ್‌ಫರೆನ್ಸನ್ನು ಆರಂಭಮಾಡಿದರು.

ಅನಂತರ ತಾಲ್ಲೂಕ್ ಅಮಲ್ದಾರ್ರವರು ಕಾನ್‌ಫರೆನ್ಸಿನ ವಿಚಾರವನ್ನೂ, ಇದನ್ನು ಈ ಜಾತ್ರೆ ಕಾಲದಲ್ಲಿ ನಡಿಸುವದರಿಂದ ಹೊಂದಬಹುದಾದ ಸೌಕರ್ಯವನ್ನೂ ಕುರಿತು ಉಪನ್ಯಾಸಮಾಡಿ ಈ ತಾಲ್ಲೂಕಿನ ಪ್ರೋಗ್ರೆಸ್ ವಿಚಾರವಾಗಿ ಉತ್ಸಾಹಶೀಲರಾಗಿರುವ ಮುಖಂಡ ಪ್ರಜೆಗಳನ್ನೂ, ವಿಲೇಜ್ ಇಂಪ್ರೂವ್‌ಮೆಂಟ್ ಕಮಿಟಿಯ ಪರವಾಗಿ ಸಭೆಗೆ ಬಂದಿರುವ ಅನೇಕ ಪ್ರತಿನಿಧಿಗಳನ್ನೂ ಸಭಾಧ್ಯಕ್ಷರಲ್ಲಿ ಭೇಟಿಮಾಡಿಸಿದರು. ಅನಂತರ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರವರು ಮೈಸೂರು ಸಂಸ್ಥಾನದ ಎಕನಾಮಿಕ್ ಕಾನ್‌ಫರೆನ್ಸ್, ಡಿಸ್ಟ್ರಿಕ್ಟ್ ಕಮಿಟಿ, ಇಂಪ್ರೂವ್‌ಮೆಂಟ್ ಕಮಿಟಿ, ಇವುಗಳ ಪ್ರಯೋಜನವನ್ನು ಕುರಿತು ದೊಡ್ಡದಾಗಿ ಉಪನ್ಯಾಸಮಾಡಿದರು. ಇದಾದ ಒಡನೆ ಮ॥ ಎಚ್. ಕೃಷ್ಣಶಾಸ್ತ್ರಿಗಳವರು ಹಳ್ಳಿಗಾಡಿಗೂ ಪಟ್ಟಣಗಳಿಗೂ ಇರುವ ಅನ್ಯೋನ್ಯ ಸಂಬಂಧ, ವರ್ತಮಾನ ಪತ್ರಿಕೆಗಳನ್ನು ಗ್ರಾಮದಲ್ಲಿ ತರಿಸಿ ಓದುವದರಿಂದ ಹೊಂದಬಹುದಾದ ಪ್ರಯೋಜನ, ಗ್ರಾಮಸಮುದಾಯದ ಕೆಲಸಗಳನ್ನು ಸಾರಕ್ಕೊಂಬಾವತಿ ಸಾಧ್ಯವಾದ ಮಟ್ಟಿಗೆ ಗ್ರಾಮಸ್ಥರೇ ಮಾಡಿಕೊಳ್ಳುವದರಿಂದ ಆಗುವ ಅನುಕೂಲತೆ, ಸ್ಕೂಲ್ ಸ್ಥಾಪನೆಯ ಆವಶ್ಯಕತೆ, ಮ್ಯಾಜಿಕ್‌ಲಾನ್‌ಟ್ರಿನ್ ಮೊದಲಾದ ಪ್ರದರ್ಶನಗಳಿಂದ ಪಡೆಯಬಹುದಾದ ಹೆಚ್ಚು ನಾಗರಿಕತೆ, ಇವುಗಳನ್ನು ಕುರಿತು ಉಪನ್ಯಾಸಮಾಡಿದನಂತರ ಈ ತಾಲ್ಲೂಕ್ ಪ್ರೋಗ್ರೆಸ್ಸಿಗೆ ಆವಶ್ಯಕವಾದ ಕೆಲಸಗಳ ಪಟ್ಟಿಯೊಂದನ್ನು ಸಭೆಯಲ್ಲಿ ಓದಿಹೇಳಿದರು.

ಅನಂತರ ಗ್ರಾಮಾಭಿವೃದ್ಧಿ ಕಮಿಟಿಗಳ ಪ್ರತಿನಿಧಿಗಳು ತಮ್ಮ ಗ್ರಾಮಗಳಲ್ಲಿ ತಾವು ನಡಿಸಬೇಕೆಂದಿರುವ ಅಭಿವೃದ್ಧಿ ಕೆಲಸಗಳನ್ನು ಕುರಿತು ಸಭೆಯಲ್ಲಿ ಚರ್ಚಿಸಿದ್ದರ ಮೇಲೆ ಅವುಗಳನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರು ಪರಿಶೀಲಿಸಿ ಅವುಗಳನ್ನೆಲ್ಲಾ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರವರ ಮುಖಾಂತರ ಪಟ್ಟಿ ತಯಾರ್ಮಾಡಿಸಿ ರಿಕಾರ್ಡು ಮಾಡಿಸಿ ಇವುಗಳಿಗೆಲ್ಲಾ ತಕ್ಕ ಪ್ರೋತ್ಸಾಹಗಳು ಕಲ್ಪಿಸಲ್ಪಡುವುವೆಂದು ಹೇಳಿದರು. ಅನಂತರ ಈ ತಾಲ್ಲೂಕಿನ ಆರು ಹೋಬಳಿಗಳಲ್ಲಿಯೂ ಆರು ಸಬ್ ಕಮಿಟಿಗಳು ಸ್ಥಾಪಿಸಲ್ಪಟ್ಟು ಅದಕ್ಕೆಲ್ಲಾ ಲಾಯಖಾದ ಮೆಂಬರುಗಳು ಮೊಕರರ್ ಮಾಡಲ್ಪಟ್ಟರು.

ಇವುಗಳೆಲ್ಲವೂ ನಡೆದ ಮೇಲೆ ಛೇರ್‌ಮನ್‌ರವರು ಅಪ್ಪಣೆಕೊಡಿಸಿದ್ದೇನೆಂದರೆ, ಈ ಡಿಸ್ಟ್ರಿಕ್ಟಿಗೆ ಇದೇ ಮೊದಲನೇ ತಾಲ್ಲೂಕ್ ಪ್ರೋಗ್ರೆಸ್ ಕಾನ್‌ಫರೆನ್ಸಾಗಿದೆ. ಇಂಥ ಕಾನ್‌ಫರೆನ್ಸನ್ನು ಗೌರ್ನಮೆಂಟಿನವರ ಉದ್ದೇಶಕ್ಕೆ ಅನುಗುಣವಾಗಿ ಇಷ್ಟು ಜಾಗ್ರತೆಯಲ್ಲಿ ಈ ಜಾತ್ರೆಯಲ್ಲಿ ಈ ರೀತಿ ವಿಜೃಂಭಣೆಯಿಂದ ಏರ್ಪಡಿಸಿ ಇದಕ್ಕೆ ತಾಲ್ಲೂಕಿನ ಭಾಗೋಪಭಾಗದ ಪ್ರತಿನಿಧಿಗಳೂ, ಅನೇಕ ಸಾವಿರ ಮಂದಿ ಪ್ರೇಕ್ಷಕರೂ ಬಂದಿರುವದು ಬಹಳ ತೃಪ್ತಿಕರವಾಗಿದೆ. ತಾಲ್ಲೂಕಿನ ಅಭಿವೃದ್ಧಿ ಕೆಲಸಗಳನ್ನು ನೆರವೇರಿಸುವದರಲ್ಲಿ ಅನೇಕ ಮುಖಂಡ ಜನಗಳು ಒಪ್ಪಿಕೊಂಡಿರುವದು ಸಂತೋಷಕರವಾದದ್ದು. ಈ ವಿಧವಾದ ಏರ್ಪಾಡುಗಳಿಗೆಲ್ಲಾ ಹೆಚ್ಚು ಮುತುವರ್ಜಿಯನ್ನು ವಹಿಸಿರುವ ತಾಲ್ಲೂಕು ಅಮಲ್ದಾರ್ರವರ ವಿಷಯದಲ್ಲಿಯೂ, ಇದಕ್ಕೆ ಸಹಾಯಕರಾಗಿ ಕೆಲಸಮಾಡಿರುವ ಪ್ರಜೆಗಳ ವಿಷಯ ವಿಷಯವಾಗಿಯೂ ಅವರು ತಮ್ಮ ಮೆಚ್ಚಿಗೆಯನ್ನು ಸಂತೋಷದಿಂದ ಪ್ರಕಟಪಡಿಸಿದರು. ಕಡೆಯಲ್ಲಿ ಮ॥ ಎಚ್. ಕೃಷ್ಣಶಾಸ್ತ್ರಿಗಳು ಸಭಾಧ್ಯಕ್ಷರಿಗೂ, ಶ್ರೀಮದ್ಯುವರಾಜರವರಿಗೂ ಶ್ರೇಯಃಪ್ರಾರ್ಥನೆ ನೆರವೇರಿದ ನಂತರ ಸಭೆಯು ಬರಖಾಸ್ತಾಯ್ತು.

ಪ್ರತ್ಯಕ್ಷದರ್ಶಿ.

ಸಂಪದಭ್ಯುದಯ ಸಾಧನಗಳು.

ಸಂಪಾದನೆಯ ಕ್ರಮ.

ವ್ಯವಸಾಯ—ನಮ್ಮ ದೇಶದ ಸಂಪತ್ಸಾಧನವಾದ ಕಾರ್ಯಗಳಲ್ಲೆಲ್ಲಾ ವ್ಯವಸಾಯವೇ ಪ್ರಾಮುಖ್ಯವಾದುದು. ಆದುದರಿಂದ ಈ ಕಾರ್ಯದ ಏಳಿಗೆಗೆ ಮೊದಲು ಆಶ್ರಯವನ್ನು ಕೊಡಬೇಕು. ಇಲ್ಲಿಯ ನೆಲವು ಸರ್ವೋತ್ಕೃಷ್ಟವಾಗಿದೆ. ಈ ನೆಲದಲ್ಲಿ ಯಾವ ಬೆಳೆಯನ್ನಾದರೂ ಸುಲಭವಾಗಿ ಬೆಳೆಯಬಹುದು. ಕಬ್ಬು, ಹುಚ್ಚೆಳ್ಳು, ಬಾಗಾಯಿತು ಪೈರುಗಳೂ, ಫಲವೃಕ್ಷಗಳೂ ಸಹ ಬೆಳೆಯುತ್ತವೆ. ನೀರಿನಾಶ್ರಯಗಳು ಬೇಕಾದ ಹಾಗಿವೆ. ಅಣೆಗಳನ್ನು ಕಟ್ಟಿ ನೀರನ್ನು ಒದಗಿಸಿಕೊಳ್ಳಬಹುದಾದ ಅನೇಕ ಹೊಳೆಗಳಿರುವವು. ಇಲ್ಲಿಯ ಹವಾ ಬಹು ಅನುಕೂಲವಾದ ಸ್ಥಿತಿಯಲ್ಲಿರುವುದು. ದನಕರುಗಳ ಮೇವಿಗೂ, ಮರಮುಟ್ಟುಗಳಿಗೂ ಯೋಗ್ಯವಾದ ಅಡವಿಗಳಿರುವವು. ಮಳೆಗಾಲವು ಅನುಕೂಲವಾಗಿ ನಡೆಯುವುದು. ಈ ಸೀಮೆಯ ಮುಕ್ಕಾಲುಪಾಲು ಜನಗಳು ವ್ಯವಸಾಯದಿಂದಲೇ ಜೀವಿಸುವರು. ಆದರೆ ಐಶ್ವರ್ಯವಂತರ ಸಂಖ್ಯೆಯು ಬಹಳ ಕಡಮೆಯಾಗಿರುವುದು. ಇನ್ನೂ ಅನೇಕ ಜಮೀನುಗಳು ಕೃಷಿಯಿಲ್ಲದೆ ಪಾಳುಬಿದ್ದಿರುವವು. ಪ್ರಯತ್ನಮಾಡಿದರೆ ವ್ಯವಸಾಯಕಾರ್ಯವು ಕ್ರಮಪಟ್ಟು ರೈತರು ಐಶ್ವರ್ಯವಂತರಾಗಿ ದೇಶೋನ್ನತಿಯುಂಟಾಗಲು ಸಂದೇಹವಿಲ್ಲ. ಹೀಗಾಗಲು ಕೆಲವು ಕಾಲಬೇಕು.

ಇಲ್ಲಿಯ ಸಾಗುವಳಿ ಕ್ರಮವು ಎರಡು ವಿಧವಾಗಿರುವುದು. ಜಮೀನು ಹಿಡುವಳಿದಾರರು ಬೇರೆ ಇದ್ದು, ರೈತರಿಂದ ಕೋರು ಸಾಗುವಳಿ ಮಾಡಿಸುವುದು; ಇಲ್ಲವೇ ಗುತ್ತಿಗೆಗೆ ಕೊಡುವುದು ಒಂದನೆಯದು. ಹಿಡುವಳಿದಾರರು ಖುದ್ದು ಸಾಗುವಳಿ ಮಾಡುವುದು; ಇಲ್ಲವೇ ಕಮತವಿಟ್ಟು ಮಾಡಿಸುವುದು ಎರಡನೆಯದು. ಕೋರು ಸಾಗುವಳಿ ಮಾಡಿಸುವವರ ಸಂಖ್ಯೆಯೇ ಹೆಚ್ಚು. ಒಬ್ಬ ಜಮೀನುದಾರನ ಜಮೀನುಗಳೆಲ್ಲಾ ಒತ್ತಟ್ಟಿಗಿರದೆ ಅಲ್ಲಿ ಸ್ವಲ್ಪ, ಇಲ್ಲಿ ಸ್ವಲ್ಪ, ಹೀಗೆ ಛಿದ್ರ ಛಿದ್ರವಾಗಿರುತ್ತವೆ. ಹೀಗಿರುವುದರಿಂದ ತನ್ನ ಜಮೀನುಗಳಿಗೆ ಏಕಕಾಲದಲ್ಲಿ ನಡೆಯಬೇಕಾದ ಕೆಲಸಗಳು ನಡೆಯುತ್ತವೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವುದಕ್ಕಾಗದೆ ರೈತರ ವಶಕ್ಕೇ ಬಿಟ್ಟುಬಿಡಬೇಕಾಗಿದೆ. ರೈತರು ತಮ್ಮ ಮೇಲೆ ಕಂದಾಯ ಮುಂತಾದವುಗಳ ಜವಾಬ್ದಾರಿ ಇಲ್ಲದಿರುವುದರಿಂದ ಸರಿಯಾಗಿ ಗೊಬ್ಬರ ಹಾಕದೇಲೂ ವಿಶೇಷ ಆಸಕ್ತಿಯಿಲ್ಲದೇಲೂ ಕೆಲಸಮಾಡುತ್ತಾರೆ. ಹೀಗೆ ನಿಕೃಷ್ಟಸ್ಥಿತಿಯಲ್ಲಿ ಸಾಗುಮಾಡಿ ಬೆಳೆದುಬಂದ ನಾಲ್ಕು ಕಾಳುಗಳಲ್ಲಿ ಕಟ್ಟು ಉಳಿದ ಎರಡು ಕಾಳುಗಳನ್ನು ಹಂಚಿಕೊಳ್ಳಬೇಕಾಗಿದೆ. ಜಮೀನುದಾರರು ಬೆಳೆ ಕಡಮೆಯಾದುದಕ್ಕೆ ಕಾರಣವನ್ನು ಕೇಳಿದಾಗ—ಮಳೆ ಕಡಮೆಯಾಯಿತು; ಜವುಳು ಹತ್ತಿತು ಎಂದು ಮುಂತಾಗಿ ಯಾವುದಾದರೊಂದು ಕಾರಣವನ್ನು ಹೇಳಿಬಿಡುತ್ತಾರೆ. ಅಂತಹ ಜಮೀನುಗಳಲ್ಲಿ ವರುಷಕ್ಕೊಂದು ಬೆಳೆ ಮಾಡುವುದೇ ಪ್ರಯಾಸವಾಗಿದೆ. ಹೀಗೆ ನಾಲ್ಕೆಂಟು ವರುಷ ಕಳೆಯುವುದರೊಳಗಾಗಿಯೇ ಜಮೀನಿನ ಸಾರವೆಲ್ಲಾ ಹೋಗಿ ಅಧ್ವಾನವಾಗುತ್ತದೆ. ತರುವಾಯ ರೈತನು ಆ ಜಮೀನನ್ನು ಬಿಟ್ಟು ಮತ್ತೊಬ್ಬ ಜಮೀನುದಾರನ ಜಮೀನನ್ನು ಹಿಡಿಯುತ್ತಾನೆ. ಈ ರೀತಿ ಅಧ್ವಾನಪಡಿಸಿದ ಜಮೀನನ್ನು ಮತ್ತೊಬ್ಬ ರೈತನು ಸಾಗುವಳಿ ಮಾಡುವುದಕ್ಕೆ ಒಪ್ಪುವದಿಲ್ಲ. ಹೀಗಾಗಿ ಅಂತಹ ಜಮೀನುಗಳು ಬೀಳು ಬೀಳುತ್ತವೆ. ಈ ರೀತಿ ಅನೇಕ ಜಮೀನುದಾರರುಗಳ ಅರವಾಸಿ ಜಮೀನುಗಳು ಬಂಜರಾಗಿವೆ. ಹೀಗಾಗುವುದರಿಂದ ವ್ಯವಸಾಯದಲ್ಲಿ ಫಲವಿಲ್ಲವೆಂದು ಜಮೀನು ಮೇಲಿನ ಅಭಿಲಾಷೆಯನ್ನೇ ಬಿಟ್ಟುಬಿಡುತ್ತಾರೆ. ಸ್ವಾಭಾವಿಕವಾಗಿ ಜಮೀನುದಾರರುಗಳು ಮುಸ್ಸಾಫಿಷ್ ಜನಗಳಾಗಿಯೋ, ಇಲ್ಲವೇ ನೌಕರರಾಗಿಯೋ ಅಥವಾ ಬೇರೆಬೇರೆ ಉದ್ಯೋಗಿಗಳಾಗಿಯೋ ಇರುವುದರಿಂದ ಹೇಗಾದರೂ ರೈತರು ಬೆಳೆ ಬೆಳೆದು ಮನೆಗೆ ತಂದುಹಾಕುತ್ತಾರೆಂದು ನಂಬಿ ವ್ಯವಸಾಯ ಕಾರ್ಯಕ್ಕೆ ಗಮನಕೊಡದೆ ತಮ್ಮ ತಮ್ಮ ಕಾರ್ಯಗಳಲ್ಲೇ ನಿರತರಾಗಿರುತ್ತಾರೆ. ರೈತರಿಗೆ ಹಣವನ್ನು ಸಾಲ ಕೊಡದಿದ್ದರೆ ಜಮೀನುದಾರರ ಜಮೀನುಗಳನ್ನು ಸಾಗುಮಾಡುವುದಿಲ್ಲ. ಸಾಲ ತೆಗೆದುಕೊಂಡ ರೈತರು ಕೊನೆಗೆ ತೀರಿಸಲಿಕ್ಕಾಗದೆ ಕೋರ್ಟು ಮುಖಾಂತರ ಒಂದಕ್ಕೆರಡಾಗಿ ತೆತ್ತು ಇದ್ದಬದ್ದ ಚರಾಸ್ತಿಗಳನ್ನು ಕಳೆದುಕೊಳ್ಳಬೇಕಾಗಿದೆ. ಜಮೀನುದಾರನು ತನ್ನ ಕೆಲಸ ಕಾರ್ಯಗಳನ್ನು ಕೆಡಿಸಿಕೊಂಡು ಕೋರ್ಟಿಗೆ ಓಡಾಡಬೇಕಾಗಿದೆ. ಹೀಗೆ ಉಭಯತ್ರರಿಗೂ ಅನರ್ಥ ಉಂಟಾಗಿರುತ್ತದೆ. ಜಮೀನುದಾರರಿಗೆ ವ್ಯವಸಾಯ ಶಾಸ್ತ್ರ ತಿಳಿಯದೆಯೂ, ನೂತನ ಮಾರ್ಗಾವಲೋಕನವಿಲ್ಲದೆಯೂ ಇರುವುದರಿಂದ ಸ್ವಂತ ಜಮೀನುಗಳನ್ನು ಮಾಡಲು ಚೈತನ್ಯಶೂನ್ಯರಾಗಿರುತ್ತಾರೆ; ಅಲ್ಲದೆ ಕಷ್ಟಕ್ಕೆ ಹೆದರಿ ಅದು ತಮ್ಮ ವೃತ್ತಿಯಲ್ಲವೆಂದು ಕೈಕಟ್ಟಿಕೊಂಡು ಕೂತುಬಿಡುತ್ತಲಿದಾರೆ.

ಜಮೀನುದಾರರ ಸ್ಥಿತಿಯು ಹೀಗಿರುವಾಗ ರೈತರ ಸ್ಥಿತಿಯು ಹೇಗಿರುವುದೆಂಬುದನ್ನು ವಿಚಾರಿಸೋಣ. ಇಲ್ಲಿಯ ಮುಕ್ಕಾಲು ಪಾಲು ರೈತರು ಅಶನವಸನಕ್ಕೆ ಸಹ ಅಭಾವವಾಗಿ ಕೇವಲ ದರಿದ್ರಾವಸ್ಥೆಯಿಂದ ಮುರುಕು ಗುಡಿಸಲುಗಳಲ್ಲಿ ವಾಸಮಾಡುತ್ತಲಿದಾರೆ. ಇದು ಇವರ ಸೋಮಾರಿತನದ ಫಲವಾಗಿದೆ. ಅಲ್ಲದೆ

...ನ, ಧಿಕ್ಕಾರತನ, ಜೂಜು, ಕುಡಿಕುಡಿತನ ಮತ್ತು ನ್ಯಾಯಗಂಟತನ ಮೊದಲಾದ ಅನೇಕ ದುರ್ಗುಣಗಳು ಅವರಲ್ಲಿ ಆವಿರ್ಭವಿಸಿರುವವು. ಇದಕ್ಕಾಗಿಯೇ ಅನೇಕರು ವಿಶೇಷ ಗೃಹಕೃತ್ಯ ತೊಂದರೆಗಳಿಂದ ಪೀಡಿತರಾಗಿರುತ್ತಾರೆ. ಸಾಲವಿಲ್ಲದ ರೈತರುಗಳೇ ಕಡಮೆ. ವಿದ್ಯೆ ಬರುವುದಿಲ್ಲ; ವಿದ್ಯಾಭಿಲಾಷೆಗಳೂ ಇಲ್ಲ. ಆದುದರಿಂದಲೇ ಅವರು ತಮ್ಮ ಮಕ್ಕಳಿಗೂ ಸಹ ವಿದ್ಯಾಭಾವವನ್ನು ಉಂಟು ಮಾಡುತ್ತಾರೆ. ಹಿಂದಿನ ನಡಾವಳಿ ಕ್ರಮಗಳನ್ನೇ ಅನುಕರಿಸಿ ವ್ಯವಸಾಯವೂ ಮಾಡುತ್ತಾರೆ. ಹೀಗೆ ಮಾಡುವ ವ್ಯವಸಾಯದಲ್ಲಿ ಕಾಲಗತಿಯಿಂದ ಏನಾದರೂ ಅತಿವೃಷ್ಟಿಯುಂಟಾದರೆ ಅದನ್ನು ಪರಿಹರಿಸಿಕೊಳ್ಳುವ ಶಕ್ತಿಯಿಲ್ಲದೆ ನಷ್ಟವನ್ನನುಭವಿಸುತ್ತಾರೆ. ಹುಟ್ಟಿದ ಊರನ್ನು ಬಿಟ್ಟು ಮತ್ತೊಂದು ಊರನ್ನು ಸಹ ಅರಿಯದವರು ಅವರಲ್ಲಿ ಅನೇಕರಿರುತ್ತಾರೆ. ಇಂಥಾದ್ದರಲ್ಲಿಯೂ ವ್ಯವಸಾಯ ಕಾರ್ಯದಲ್ಲಿ ತಾವೇ ಅಗ್ರಗಣ್ಯರೆಂದೂ, ತಮ್ಮ ವ್ಯವಸಾಯ ಕ್ರಮವೇ ಸರ್ವಶ್ರೇಷ್ಠವೆಂದೂ ತಿಳಿದು, ಬೇರೆಯ ಕ್ರಮಗಳಲ್ಲಿ ಪ್ರವರ್ತಿಸಲು ನಂಬಿಕೆಯಿಲ್ಲದವರಾಗಿರುತ್ತಾರೆ. ಪುಗಸಟ್ಟೆಯಾಗಿ ಜಮೀನುದಾರರ ಜಮೀನುಗಳು ಯಥೇಚ್ಛವಾಗಿ ಸಿಕ್ಕುತ್ತವೆಯೆಂದು ತಮ್ಮ ಶಕ್ತಿಗೆ ಮೀರಿ ಜಮೀನುಗಳನ್ನು ಹಿಡಿದುಕೊಳ್ಳುತ್ತಾರೆ. ಅದನ್ನು ಸರಿಯಾಗಿ ರೂಢಿಸುವುದಕ್ಕಾಗದೆ ಕಂದಾಯ ಹುಟ್ಟುವಷ್ಟು ಬೆಳೆಯನ್ನು ಬೆಳೆಯುವದೇ ಕಷ್ಟವಾಗಿರುತ್ತದೆ. ಸರಿಯಾದ ಮುಟ್ಟುಗಳನ್ನೂ, ದನಕರುಗಳನ್ನೂ ಸಹ ಇಟ್ಟುಕೊಂಡಿರುವುದಿಲ್ಲ. ಶ್ರೇಷ್ಠವಾದ ರೀತಿಯಲ್ಲಿ ದನಗಳನ್ನು ಸಾಕುವುದಿಲ್ಲ. ಉತ್ತಮ ಜಾತಿ ದನಗಳ ವಂಶವನ್ನು ಹೆಚ್ಚಿಸಿಕೊಳ್ಳುವುದಿಲ್ಲ. ಕೊಟ್ಟಿಗೆಯ ಕಸವೇ ಗೊಬ್ಬರವೆಂದು ತಿಳಿದಿರುವರು. ಇವರಿಗೆ ಇತರ ಗೊಬ್ಬರಗಳ ಅನುಭವವು ಲೇಶವೂ ಇರುವುದಿಲ್ಲ.

ಹಿಡುವಳಿದಾರರು ಸ್ವಂತ ಸಾಗುವಳಿಮಾಡುವ ಜಮೀನುಗಳು ತಕ್ಕಮಟ್ಟಿಗೆ ಚೆನ್ನಾಗಿರುತ್ತವೆ ಇವರಿಗೆ ಜಮೀನಿನ ಜವಾಬ್ದಾರಿ ಇರುವುದರಿಂದ ಕಷ್ಟಪಟ್ಟು ಕೆಲಸಮಾಡುತ್ತಾರೆ. ಗೊಬ್ಬರಗೋಡುಗಳನ್ನು ಹಾಕಿ ಜಮೀನುಗಳನ್ನು ಆಬಾದು ಮಾಡಿಕೊಳ್ಳುತ್ತಲಿದ್ದಾರೆ. ಇದರಿಂದ ತಕ್ಕ ಫಲವನ್ನೂ ಪಡೆಯುತ್ತಲಿದ್ದಾರೆ. ವರುಷಕ್ಕಿಂತ ವರುಷಕ್ಕೆ ಆದಾಯ ಹೆಚ್ಚಿ ಪುನಹ ಹೊಸ ಜಮೀನುಗಳನ್ನು ಕ್ರಯಕ್ಕೊಂಡೂ, ಆಸಕ್ತಿಯಿಂದ ಕೆಲಸಮಾಡಲು ಕುತೂಹಲ ಪಡುತ್ತಲೂ ಇದ್ದಾರೆ. ಆದರೆ ಇವರೂ ತಕ್ಕಷ್ಟು ವಿದ್ಯಾವಂತರಾಗಿ ಇತರ ಸ್ಥಳಗಳ ವ್ಯವಸಾಯ ಕ್ರಮಗಳನ್ನು ನೋಡಿನೋಡಿ ಹೊಸ ತರಹ ಬೆಳೆಗಳನ್ನೂ, ವಿಧಾನಗಳನ್ನೂ ತಿಳಿದು ರೂಢಿಗೆ ತಂದುಕೊಳ್ಳುತ್ತಲೂ, ವಿಶೇಷ ಫಲಕಾರಿಗಳಾದ ಯಾನಗಳನ್ನು ತಿಳಿದು ಉಪಯೋಗಿಸುತ್ತಲೂ ಬಂದರೆ ಇನ್ನೂ ಹೆಚ್ಚು ಆದಾಯವನ್ನು ಹೊಂದುವರು ಸಂದೇಹವಿಲ್ಲ. ಆದರೆ ಹೀಗೆ ಹಿಡುವಳಿದಾರರು ಸ್ವಂತ ಸಾಗುವಳಿ ಮಾಡಿಕೊಳ್ಳುವವರ ಸಂಖ್ಯೆಯು ಬಹಳ ಕಡಮೆಯಾಗಿರುತ್ತದೆ.

ಯಸ್. ಸುಬ್ರಾವ್, ಶಿಕಾರಿಪುರ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಬೆಂಗಳೂರು ಅಕ್ಕಿಪೇಟೆಯಲ್ಲಿ ನಡೆದ ಕಳುವುಗಳು.

ಅಯ್ಯಾ,—ಕಳೆದ ಜನವರಿ 24 ನೇ ತಾ. ಭಾನುವಾರ ರಾತ್ರಿ ಬೆಂಗಳೂರು ಸಿಟಿ ಅಕ್ಕಿಪೇಟೆಯಲ್ಲಿ ಜಯರಾಮಶೆಟ್ಟಿರ ಚಿಲ್ಲರೆ ಅಂಗಡಿಯ ನಾಗವಾಸ, ಚಿಲಕ, ಬೀಗ, ಸಹ ಯಾರೋ ಕಳ್ಳರು ಮುರಿದು ಮತ್ತೊಂದು ಬೀಗ ಮುರಿಯಲು ಆಗದೆ ಇದ್ದುದರಿಂದ ಮುರಿದಂಥಾ ಬೀಗ ವಗ್ಗೈರೆ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದರು. 25 ನೇ ತಾ ಸೋಮವಾರ ರಾತ್ರಿ ವರ್ಜೀಯವರ ಅಂಗಡಿ ಬೀಗ ಮುರಿದು ಒಳಕ್ಕೆ ಪ್ರವೇಶಮಾಡಿ ಬಟ್ಟೆ ವಗ್ಗೈರೆ ತೆಗೆದುಕೊಂಡು ಹೋಗಿದ್ದರು. 26 ನೇ ತಾ. ರಾತ್ರಿ ಮೇಲ್ಕಂಡ ಪೇಟೆಯಲ್ಲಿ ಅಡಿಕೆ ಅಂಗಡಿ ಅಪ್ಪಾಜಪ್ಪನವರ ಅಂಗಡಿಯ ಬೀಗಗಳನ್ನು ಮುರಿಯಲು ಆಗದೆ ಇದ್ದುದರಿಂದ ಅಂಗಡಿಗೆ ಹಾಕಿದ್ದ ಹಲಗೆಗಳ ಪೈಕಿ ಒಂದನ್ನು ಮೂರು ಭಾಗವಾಗಿ ಸೀಳಿ ಒಳಹೊಕ್ಕು ಗಲ್ಲಾ ಪೆಟ್ಟಿಗೆಯಲ್ಲಿ ಇಟ್ಟಿದ್ದ ನಗದು 68 ರೂಪಾಯಿ, ಸುಮಾರು ಅರ್ಧ ಮೂಟೆಯಷ್ಟು ಅಡಿಕೆ, ಒಂದು ಗಡಿಯಾರ ಮತ್ತು ಕೆಲವು ಚಿಲ್ಲರೆ ಸಾಮಾನುಗಳು ಸಹ ಕಳುವಾಗಿರುತ್ತವೆ. ಇದಕ್ಕೆ ಮುಂಚೆ ಅಂದರೆ 5-6 ತಿಂಗಳ ಕೆಳಗೆ ಅದೇ ಅಕ್ಕಿಪೇಟೆಯಲ್ಲಿ ಅನೇಕರ ಅಂಗಡಿಗಳಲ್ಲಿ ಅನೇಕ ಸಾಮಾನುಗಳು ಕಳುವಾಗಿರುತ್ತವೆ. ಇಷ್ಟು ಅನರ್ಥಗಳಾದಾಗ್ಯೂ ಪೋಲೀಸು ಇಲಾಖೆಯವರು ಗಮನ ಕೊಡದೆ ಇರುವುದು ನೋಡಿದರೆ ಏನು ಕಾರಣವೋ ಗೊತ್ತಿಲ್ಲ. ಇನ್ನು ಮೇಲಾದರೂ ಪರಿಹರಿಸಿಯಾರೆಂದು ನಂಬಿರುತ್ತೇನೆ.

ಒಬ್ಬ ವಾಚಕ.

ಒಂದು ಸ್ಕೂಲ್ ಕಟ್ಟಡದ ವಿಚಾರ.

ಅಯ್ಯಾ,—ಕೃಷ್ಣರಾಜಪೇಟೆ ತಾಲ್ಲೂಕು ಬೂಕನಕೆರೆ ಗ್ರಾಮದಲ್ಲಿ ಸರ್ಕಾರದವರು ಸ್ಥಾಪಿಸಿ ಇರುವ ಕನ್ನಡ ಬಾಯ್ಸ್ ಸ್ಕೂಲೆಂಬ ವಿದ್ಯಾನಿಲಯವು ದಿನೇ ದಿನೇ ಅಭಿವೃದ್ಧಿಯಲ್ಲಿ ಬಂದು ಬಾಲಕರ ಸಂಖ್ಯೆಯು ಹೆಚ್ಚುತ್ತಿದೆ. ಇದಕ್ಕಾಗಿ ಗ್ರಾಮಸ್ಥರಿಂದ ಸರ್ಕಾರಕ್ಕೆ ವಹಿಸಲ್ಪಟ್ಟಿರುವ ಕಟ್ಟಡವು ಕೇವಲ ಚಿಕ್ಕದಾಗಿರುವದರಿಂದ ಈ ವಿಷಯದಲ್ಲಿ ಗ್ರಾಮಸ್ಥರ ಪ್ರಾರ್ಥನೆಯಂತೆ ಹೊಸ ಕಟ್ಟಡ ಮಂಜೂರಾಗಿರುವದರಲ್ಲಿ ಇರತಕ್ಕ ಲೋಪಗಳನ್ನು ಸರ್ಕಾರದವರು ಪುನರಾವಲೋಕನಕ್ಕೆ ತೆಗೆದುಕೊಂಡು ಹೊಸಕಟ್ಟಡದಲ್ಲಿ ಬಾಲಕರಿಗೆ ಆರೋಗ್ಯಕರವಾಗಿರುವಂತೆಯೂ, ವಿಸ್ತಾರವಾಗಿರುವಂತೆಯೂ ಮಾಡಿ ಕೊಡಬೇಕೆಂದು ಕೋರುತ್ತಾರೆ. ಈ ಹೊಸಕಟ್ಟಡಕ್ಕೆ ಸರ್ಕಾರದವರು ಸುಮಾರು 3,000-3,500 ರೂಪಾಯಿ ಖರ್ಚುಮಾಡುತ್ತಾರೆಂದು ತಿಳಿದದ್ದರಿಂದ ಗ್ರಾಮಸ್ಥರು ಕಟ್ಟಡವು ವಿಸ್ತಾರವಾಗುವುದೆಂದೂಹಿಸಿ ಬಾಲಕರ ಕಷ್ಟನಿವಾರಣೆಯಾಯಿತೆಂದು ಉತ್ಸಾಹ ಪಡುತ್ತಿದ್ದರು. ಈಗ ಸ್ಕೂಲಿನ ವಿಸ್ತಾರವು ಕಮ್ಮಿಯಾಗಿರುತ್ತದೆ. ಅಂದಾಜು ಮೊಬಲಗು ಮೊದಲಿಗಿಂತಲೂ ಕಮ್ಮಿಯಾದದ್ದೇ ಕಾರಣವೆಂದು ತಿಳಿದು ತುಂಬಾ ವಿಷಾದ ಉಂಟಾಗಿರುತ್ತೆ. ಆದಾಗ್ಯೂ ಈ ಸ್ಕೂಲಿಗಾಗಿ ಗ್ರಾಮಸ್ಥರು ಸ್ವಂತ ಫಂಡಿನಿಂದ ಜಮೀನು ತೆಗೆದು ಸರ್ಕಾರಕ್ಕೆ ಒಪ್ಪಿಸಿದ್ದಲ್ಲದೆ ಇದಕ್ಕೆ ಮೊದಲು 500 ರೂಪಾಯಿವರೆಗಿನ ಸ್ವಂತ ಫಂಡಿನಿಂದ ಒಂದು ಕಟ್ಟಡವನ್ನು ಕ್ರಯಕ್ಕೆ ತೆಗೆದುಕೊಂಡು ಸರ್ಕಾರಕ್ಕೆ ವಹಿಸಿದರು. ಇದರಿಂದ ಗ್ರಾಮಸ್ಥರ ಉತ್ಸಾಹವು ದಿನೇದಿನೇ ಹೆಚ್ಚದೆ ಹೋಗಲು ಕಾರಣವಾಗ ಬಹುದೆಂದು ಯೋಚನೆ ಬೇಕಾಗಿದೆ. ಈಗಲಾದರೂ ಸರ್ಕಾರದವರು ಹಾಲಿ ಕಟ್ಟಿಸುತ್ತಿರುವ ಹೊಸ ಸ್ಕೂಲನ್ನು ಕೊಂಚಮಟ್ಟಿಗೆ ವಿಸ್ತರಿಸಿ ಕೊಡಲು ಅವಕಾಶವಿರುತ್ತೆಂಬುದನ್ನು ಚಿತ್ತಕ್ಕೆ ತಂದುಕೊಂಡು ನೆರವೇರಿಸಿ ಕೊಡುವರೆಂದು ನಂಬುತ್ತಾರೆ. ಈ ವಿಚಾರವನ್ನು ಗ್ರಾಮಸ್ಥರು ಮೊದಲನೇ ಕೌನ್ಸಿಲರ್ ಸಾಹೇಬರವರಿಗೂ ತಿಳಿಸಿ ಫಲಿತಾಂಶವನ್ನು ಬಹಳ ಕಾತುರವಾಗಿ ಎದುರು ನೋಡುತ್ತಾರೆ.

ಎಚ್. ನೀಲಕಂಠಯ್ಯ.

ಪ್ರೋತ್ಸಾಹ ಬೇಕು.

ಅಯ್ಯಾ,—ನಮ್ಮ ಈ ಕೊಪ್ಪ ತಾಲ್ಲೋಕಿನ ಹಜೂರು ಜಮಾಬಂದಿಯು ಕಳೆದ 24 ನೇ ತಾ. ಭಾನುವಾರ ಬಾಲಗಡಿ ಮೊಕ್ಕಾಮಿನಲ್ಲಿ ಕಡೂರು ಡಿ|| ಜನರಲ್ ಅಸಿಸ್ಟೆಂಟ್ ಸಾಹೇಬರವರ ಮತ್ತು ಅಮಲ್ದಾರ್ರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಹೋಬಳೀ ಶೇಕದಾರರೂ, ಶಾನುಭೋಗರೂ, ಗ್ರಾಮ ಪಟೇಲಿ ಮುಖಂಡರೂ ಆದಿಯಾಗಿ ಸೇರಿದ್ದರು. ಮೊಕ್ಕಾಮಿನ ಉದ್ದೇಶದ ಆ ದಿವಸದ ಸರ್ಕಾರಿ ಕೆಲಸವು ತೀರಿದ ಬಳಿಕ ಅಧ್ಯಕ್ಷರು ಗ್ರಾಮದ ಪಟೇಲ ಮುಖಂಡರೊಂದಿಗೆ ಕೇಳಿರುವ ಕೆಲವು ಸಂಭಾಷಣೆಗಳ ಪೈಕಿ ಒಂದು ವಿಚಾರವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ತುಂಬಾ ಸಂತೋಷಪಡುತ್ತೇವೆ. ಕೇವಲ ಮಲೆನಾಡು ಅನ್ನಿಸಿಕೊಂಡಿರುವ ಈ ನಮ್ಮ ಕೊಪ್ಪ ತಾಲ್ಲೂಕಿಗೆ ಸೇರಿದ ಪ್ರತಿ ಒಂದು ಗ್ರಾಮಕ್ಕೂ ಒಬ್ಬೊಬ್ಬ ಪಟೇಲರು ಇರುವುದು ಸರಿಯಷ್ಟೆ. ಆದರೆ ಈ ಪಟೇಲರು ತಂತಮ್ಮ ಗ್ರಾಮದ ಪುರೋಭಿವೃದ್ಧಿಗಾಗಿ ಮಾಡಿರುವ ಹೊಸ ಏರ್ಪಾಡುಗಳು ಏನೆಂಬುದು ನನಗರಿಯದು. ಅಂಥ ಹೊಸ ಏರ್ಪಾಡುಗಳೇನಾದರೂ ಇದ್ದರೆ ಈ ದಿವಸ ಸಮಕ್ಷಮ ಹೇಳಬೇಕೆಂದು ಕೇಳಿದರು. ಈ ಸಂತೋಷವಾದ ಹುಕುಂ ಸಾಹೇಬರವರು ದಯಪಾಲಿಸಿದ ತರುವಾಯ ಒಬ್ಬ ಪಟೇಲರು ಎದ್ದು ನಿಂತು—ಮಹಾಸ್ವಾಮಿ, ನಾನು ನನ್ನ ಗ್ರಾಮದಲ್ಲಿ ಇರುವ ಮುಖಂಡರಿಗೆ ಪ್ರೋತ್ಸಾಹಕೊಟ್ಟು ಒಂದು ರೀಡಿಂಗ್ ರೂಂ ಸ್ಥಾಪಿಸಬೇಕೆಂದು ಅಸ್ತಿಭಾರವನ್ನು ಹಾಕಿಸಿದೇನೆ. ಇನ್ನೆರಡು ತಿಂಗಳಲ್ಲಿ ಕಟ್ಟಡವು ಪೂರೈಸಬಹುದು ಎಂದರು. ಇನ್ನೊಬ್ಬರು—ನಾನು ಕೊಪ್ಪದಿಂದ ನನ್ನ ಗ್ರಾಮ ಗುಣವಂತೆ ವರೆಗೆ ಸರ್ಕಾರಿ ರೋಡಿನಂತಿರುವ ರಸ್ತೆಯನ್ನು ನನ್ನ ಸ್ವಂತ ಖಾಗವಡಿನಿಂದ ಮಾಡಿಸುತ್ತೇನೆ ಎಂದು ಹೇಳಿದರು. ಮತ್ತೊಬ್ಬರು—ನಾನೂ ನನ್ನ ಗ್ರಾಮಸ್ಥರೂ ಬಾಡು ಕುಂಬಾರಕೊಪ್ಪದ ಪಟೇಲರೂ ಸೇರಿ ಹೊಸದಾಗಿ ಒಂದು ರೀಡಿಂಗ್ ರೂಂ ಕಟ್ಟಿಸಬೇಕೆಂದು ನಿರ್ಣಯಿಸಿರುತ್ತೇವೆ. ಸದ್ಯದಲ್ಲಿ ಈ ಕೆಲಸವನ್ನು ಕೈಕೊಳ್ಳುತ್ತೇನೆ ಅಂದರು. ಈ ರೀತಿ ನಡೆಯುತ್ತಿರುವ ಗ್ರಾಮಾಭಿವೃದ್ಧಿಯ ಕೆಲಸ ಕಾರ್ಯಗಳನ್ನು ಸಾಹೇಬರು ಕೇಳಿ ತುಂಬಾ ಸಂತೋಷಪಟ್ಟರು. ತಾ. 25ನೇ ಸೋಮವಾರ ಹಿರಿಕೊಡಿಗೆ ಗ್ರಾಮಕ್ಕೆ ಸಾಹೇಬರೊಂದಿಗೆ ಅಮಲ್ದಾರ್ರವರ ಸವಾರಿಯು ಚಿತ್ತೈಸಿ ಕೊಪ್ಪದಿಂದ ತೀರ್ಥಹಳ್ಳಿಗೆ ಹೋಗುವ ಸರಕಾರಿ ರಸ್ತೆಯ ದುರವಸ್ಥೆಯನ್ನು ಪರಾಂಬರಿಸಿ ಹಿಂತಿರುಗಿ ಪಯಣಬೆಳಸೋಣವಾಯಿತು. ಮೇಲ್ಕಂಡ ಮೂರನೇ ಗ್ರಾಮದ ಪಟೇಲರು ಸಾಹೇಬರವರ ರೂಬರೂಬು ಹೇಳಿದಂತೆ ರೀಡಿಂಗ್ ರೂಮಿನ ಕೆಲಸ ಕಾರ್ಯಗಳು ಕೈಕೊಳ್ಳದೆಯೂ, ಗ್ರಾಮದ ಮುಖಂಡರೊಂದಿಗೆ ಪ್ರಸ್ತಾಪಿಸಿ ಪ್ರೋತ್ಸಾಹ ಕೊಡದೆಯೂ ಇರುವುದು ಯಾಕೋ ತಿಳಿಯದು. ಈ ಸೌಕರ್ಯವನ್ನು ಒದಗಿಸುವ ಭಾರವು ನಮ್ಮ ಶೇಕದಾರ್ರವರೂ, ಶಾನುಭೋಗರವರೂ, ಮ|| ವೆಂಕಟಗಿರಿಯಪ್ಪನವರೂ ವಹಿಸಿಕೊಂಡು ಗ್ರಾಮಸ್ಥರಿಗೆ ಸ್ವಲ್ಪ ಪ್ರೋತ್ಸಾಹಕೊಟ್ಟರೆ ಈ ಕಾರ್ಯವು ಸಾಂಗವಾಗಿ ನೆರವೇರುವುದಲ್ಲದೆ ಇವರ ಹೆಸರು ಶಾಶ್ವತವಾಗುವುದೆಂದು ನಂಬುತ್ತೇನೆ

ಬಾತ್ಮಿದಾರ.

ಗಂಗಯ್ಯ, ಕೋಟಿನಹಳ್ಳಿ.—ನೀವು ಆ ಸಂಗತಿಯನ್ನು ಡೆಪ್ಟಿ ಕಮಿಷನರ್ರಿಗೆ ಬರೆದು ಕೇಳಬೇಕು. ಪತ್ರಿಕೆಯಲ್ಲಿ ಪ್ರಕಟಿಸಿ ಫಲವಿಲ್ಲ.

ವಿದ್ಯಾಭಿಮಾನಿ, ಚಿಟ್ಟಿದಪುರ.—ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ. —ಎಡಿ]

ತಾಲ್ಲೂಕು ವರ್ತಮಾನಗಳು.

ಮದ್ದಗಿರಿ.—ಈಚೆಗೆ 7-8 ದಿನಗಳ ಹಿಂದೆ ಬಹು ಅಪರೂಪವಾಗಿ ಒಳ್ಳೇ ಮಳೆ ಬಂದದ್ದನ್ನು ನೋಡಿ ಅನೇಕರು ಬಹಳ ಆಶ್ಚರ್ಯಪಟ್ಟರು. ಇನ್ನೂ ಸುಮಾರಾಗಿ ಮೋಡವಾಗುತ್ತಲೇ ಇದೆ. ಬಿಸಿಲು ಈಗಾಗಲೇ ಬಲು ತೀಕ್ಷ್ಣವಾಗಿದೆ. ಕ್ರಮದಂತೆ ಸುಗ್ಗಿಕಾಲ ಕಳೆಯಿತಾರ ಕೇಳುತ್ತೇವೆಯೋ ಶಿವಾಯ ಧಾರಣೆ ವಾಸಿಗಳು ಕ್ಷಾಮಡಂಬರವನ್ನೇ ಸೂಚಿಸುತ್ತವೆ. ಯೂರೋಪ್ ಖಂಡದ ಯುದ್ಧದ ಗಲಾಟೆಯಿಂದಲೂ, ಮುಂಗಾರು ಹಿಂಗಾರು ಮಳೆಗಳು ಹಿಂತೆಗೆದದ್ದರಿಂದಲೂ ವರ್ತಕರಿಗೆ ಒಳ್ಳೇ ಅನುಕೂಲವೂ, ಕೊಂಡು ತಿನ್ನುವ ಬಡವರಿಗೆ ಕೇವಲ ದುರ್ಭಿಕ್ಷವೂ ಪ್ರಾಪ್ತವಾಯಿತೆಂದು ಹೇಳುವುದರಲ್ಲಿ ಸಂಶಯವೇ ಇಲ್ಲ.—ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ತರು ಬೆಂಗಳೂರು ಗ|| ಗರಲ್ಸ್ ಸ್ಕೂಲಿಗೆ ವರ್ಗವಾಗಿ ಹೋದರು. ಚಿಕ್ಕನಾಯಕನ ಹಳ್ಳಿಯಿಂದ ಹೊಸದಾಗಿ ಬಂದ ಹೆಡ್ ಮಾಸ್ತರು ಭಾರ್ಜವಹಿಸಿದರು. ಹಿಂದೆ ಇದ್ದ ನ್ಯೂನತೆಗಳನ್ನೆಲ್ಲಾ ಹೋಗಲಾಡಿಸಿ ಇವರು ಮಕ್ಕಳಿಗೆ ಎಲ್ಲಾ ವಿಷಯಗಳಲ್ಲೂ ಅನುಕೂಲವನ್ನು ಕೋರಿಸ್ಯಾರೆಂದು ನಿರೀಕ್ಷಿಸುತ್ತೇವೆ. ಸ್ಕೂಲ್‌ಗಳ ಡಿ|| ಇನ್ಸ್‌ಪೆಕ್ಟರವರು ಹೋದವಾರ ದಯಮಾಡಿಸಿ, ಮಿಷನ್ ಸ್ಕೂಲ್ ಹೊರ್ತಾಗಿ ಉಳಿದ ಸ್ಕೂಲುಗಳನ್ನು ಪರೀಕ್ಷಿಸಿಕೊಂಡು ಹೋದರು.—ಮದ್ದಗಿರಿಗೆ ಬರತಕ್ಕ ವೃತ್ತಾಂತ ಪತ್ರಿಕೆಗಳು ಅನೇಕ ದಫಾ ಮೂಡಿಗೆರೆಗೆ ಹೋಗಿ ಬರುತ್ತಲಿದ್ದವು. ನಮ್ಮ ಪೋಸ್ಟ್ ಮಾಸ್ತರವರು ಪ್ರಜೆಗಳಿಗೆ ಉಂಟಾಗತಕ್ಕ ತೊಂದರೆಯನ್ನು ತಪ್ಪಿಸಿ ಕಾಗದ ಪತ್ರಗಳೂ, ವರ್ತಮಾನ ಪತ್ರಿಕೆಗಳೂ ಕಾಲಕ್ಕೆ ಸರಿಯಾಗಿ ಸಿಕ್ಕುವಂತೆ ಮದ್ದಗಿರಿ ತುಮಕೂರು ಎಂದು ಜನವರಿ ಗುರ್ತಿಯಿಂದ ಬದಲಾಯಿಸಿರುತ್ತಾರೆ. ಮತ್ತು ಇವರು ತಮ್ಮ ಕೆಲಸಕಾರ್ಯಗಳಲ್ಲಿ ತುಂಬಾ ಚಟುವಟಿಕೆಯುಳ್ಳವರಾಗಿಯೂ, ಪೋಸ್ಟಾಫೀಸಿಗೆ ಬರತಕ್ಕವರನ್ನು ಒಂದು ಕ್ಷಣ ನಿಲ್ಲಿಸಿಕೊಳ್ಳದೆ ಅವರ ಕೆಲಸವನ್ನ ಜಾರಿಮಾಡಿ ಕಳುಹಿಸುತ್ತಿರುವದರಿಂದಲೂ ತುಂಬಾ ಸಂತೋಷಪಡಬೇಕಾಗಿದೆ.—ಮ್ಯುನಿಸಿಪಲ್ ಮೆಂಬರುಗಳು ಸ್ಯಾ|| ಇನ್ಸ್‌ಪೆಕ್ಟರವರು ಊರಲ್ಲಿ ನಿವೇಶನಗಳನ್ನು ಹಂಚಿಕೊಡುವುದಕ್ಕೆ ಮುಂಚೆ ಅಮಲ್ದಾರ್ರವರಿಗೆ ತಿಳಿಸಿ ಒಬ್ಬಗ್ಗರಿಗೆ ಅನುಕೂಲವಾಗುವಂತೆ ತರಾಜು ಮಾಡಿಸಬೇಕಾಗಿದೆ. ಹಣಕ್ಕರು ಹರಾಜ್ ಮಾಡಿ ಕಡೆಯಲ್ಲಿ ಆ ನಿವೇಶನವನ್ನು ಇತರರಿಗೆ ಒಂದಕ್ಕೆರಡಾಗಿ ಮಾರಿಕೊಳ್ಳುತ್ತಾರೆಂದು ಅನೇಕರು ಆಕ್ಷೇಪಿಸುತ್ತಾರೆ.

ಹೊಸಕೋಟೆ.—ಜನವರಿ ತಾ. 24 ರಲ್ಲಿ ಸುಮಾರು 3 ಘಂಟೆಯ ಸಮಯದಲ್ಲಿ ಇಲ್ಲಿನ ತಾಲ್ಲೋಕು ಕಛೇರಿಯಲ್ಲಿ ವ್ಯವಸಾಯ ಸಂಬಂಧವಾದ ದೊಡ್ಡ ಕೂಟವು ಜರುಗಿತು. ಇದಕ್ಕೆ ನಮ್ಮ ಅಮಲ್ದಾರ್ ಸಾಹೇಬರು ಬಹಳ ಮುತುವರ್ಜಿ ವಹಿಸಿ ಎಲ್ಲಾ ಹೋಬಳಿಗಳಲ್ಲಿರುವ ಪಟೇಲ್ ಶ್ಯಾನುಭೋಗರನ್ನೂ ಮುಖ್ಯವಾದ ರೈತರನ್ನೂ ಕರೇಕಳುಹಿಸಿದರು. ಸುಮಾರು 200 ಜನಕ್ಕೆ ಕಮ್ಮಿಯಿಲ್ಲದೆ ಸಭೆಯು ಸೇರಿತ್ತು. ಆಗ ಡೆಪ್ಟಿ ಡೈರೆಕ್ಟರಾದ ಮ|| ಯಜ್ಞನಾರಾಯಣಯ್ಯರವರು ಬಹು ದೀರ್ಘವಾಗಿಯೂ ಸ್ವಾರಸ್ಯವಾಗಿಯೂ ವ್ಯವಸಾಯ ಸಂಬಂಧವಾದ ಕಾರ್ಯಗಳನ್ನು ಕುರಿತು ಬಹು ಸ್ಪಷ್ಟವಾಗಿ ವಿವರಿಸಿದರು. ಮತ್ತು ಅವರು ಹೇಳಿದ್ದೇನಂದರೆ—"ನೀವು ನೇಗಿಲುಗಳನ್ನು ಉಪಯೋಗಿಸುವದರಿಂದ ಕೆಲಸವು ಕಮ್ಮಿಯಾಗುವದು ಮಾತ್ರವಲ್ಲದೆ ಉಳುಮೆಯನ್ನು ಆಳವಾಗಿಯೂ ಅಗಲವಾಗಿಯೂ ಮಾಡುತ್ತದೆ. ಮತ್ತು ನೇಗಲಿಗೆ ಸಂಬಂಧಪಟ್ಟ ಇತರ ಸಾಮಾನುಗಳನ್ನು ಕೊಂಡು ಉಪಯೋಗಿಸಿ ನೋಡಿರಿ; ತರೀ ಜಮೀನು ಬಿತ್ತನೆ ಮಾಡುವದನ್ನೂ, ಪೈರುಗಳನ್ನು ನೆಡುವ ವಿಧಾನಗಳನ್ನೂ ನಾವು ಹೇಳುವ ಹಾಗೆ ಮಾಡಿರಿ ಮತ್ತು ಬೇಕಾದರೆ ಅಜಮಾಯಿಷಿಗೋಸ್ಕರ ಎಲ್ಲಾ ವಿಷಯಗಳನ್ನೂ ಕುರಿತ. ನಿಮಗೆ ಬಂದು ತೋರಿಸುತ್ತೇವೆ. ಕಲಿತುಕೊಂಡು ಮಾಡಿರಿ. ಬೆಳೆ ಹೆಚ್ಚಾಗುವ ದಾರಿಯನ್ನು ತಿಳಿದುಕೊಳ್ಳಿರಿ. ಸರ್ಕಾರದವರು ಯಾತಕ್ಕೆ ನನಗೂ ನನ್ನ ಕೂಡ ಇಲ್ಲಿಗೆ ಬಂದಿರುವ ಡಿಪಾರ್ಟ್ಮೆಂಟಿನ ಇನ್ಸ್‌ಪೆಕ್ಟರುಗಳಿಗೂ ಸಂಬಳಗಳನ್ನು ಕೊಟ್ಟು ನಿಮಗೆಲ್ಲಾ ಈ ಪ್ರಕಾರವಾಗಿ ಹೇಳುವ ಹಾಗೆ ಯಾತಕ್ಕೆ ಇಟ್ಟಿದಾರೆ? ಯೋಚನೆಮಾಡಿರಿ. ನಾವು ಹೇಳುವ ವಿಷಯಗಳನ್ನು ಕುರಿತು ಪರೀಕ್ಷೆಮಾಡಿರಿ. ಮತ್ತು ನಾವು ಅಜಮಾಷಿಗೋಸ್ಕರ ಮಾಡಿರುವ ಸ್ಥಳದಲ್ಲಿ ಬಂದು ನೋಡಿರಿ. ಎಲ್ಲಾ ನಿಮಗೆ ತಿಳಿಯಬರುತ್ತದೆ" ಎಂದು ದೃಷ್ಟಾಂತಗಳ ಮುಖಾಂತ್ರ ವಿವರಿಸಿದರು. ತರುವಾಯ ನಮ್ಮ ಅಮಲ್ದಾರರು ಸಭೆಯಲ್ಲಿಯೂ, ಪ್ರತಿಯೊಂದು ಹೋಬಳಿಯಲ್ಲಿಯೂ ಸೆಕ್ರೆಟರಿ ಮತ್ತು ಮೆಂಬರುಗಳಾಗಿರುವದಕ್ಕೆ ಹೆಸರುಗಳನ್ನು ಬರೆದುಕೊಂಡು, ಕೂಟಕ್ಕೆ ಬಂದವರ ಪೈಕಿ ಕೆಲವರನ್ನು ಚುನಾಯಿಸಿದರು. ಡೈರೆಕ್ಟರವರು, ಭಾಷಣವು ಮುಗಿದ ತರುವಾಯ ಹೇಳಿದ್ದೇನಂದರೆ,—ಈಗ ನಿಮಗೆ ಸಂದೇಹವಾದ ಕಾರ್ಯಗಳು ಏನಾದರೂ ಇದ್ದರೆ ನನಗೆ ತಿಳಿಸಬಹುದು. ಮತ್ತು ಅದರ ವಿಷಯ ಚರ್ಚೆಮಾಡಬಹುದು ಎಂದು ಹೇಳಿದಾಗ ಕೆಲವರು ನಾನಾ ವಿಷಯಗಳನ್ನು ಕುರಿತು ಕೇಳಿದರು. ಅದಕ್ಕೆ ಅವರು ತಕ್ಕ ಸಮಾಧಾನಗಳನ್ನು ಹೇಳಿ ತೃಪ್ತಿಪಡಿಸಿದರು. ಇನ್ನು ಕೆಲವರು ಉರುಳುಗದ್ದೆಯು ಕೆಟ್ಟುಹೋಗುವದೂ, ಹುಳ ಹಿಡಿಯುವದೂ ಮತ್ತು ಬೇರೆಬೇರೆ ವಿಷಯಗಳನ್ನು ಕುರಿತು ಕೇಳಿದರು. ತರುವಾಯ ಕೂಟವು ಮುಕ್ತಾಯವಾಗಿ ಡೈರೆಕ್ಟರು ಮತ್ತು ಇತರರು ಬೆಂಗಳೂರಿಗೆ ಹೊರಟುಹೋದರು.

ದೊಡ್ಡಬಳ್ಳಾಪುರ.—ಕಳೆದ ವಾರ ಸ್ಯಾ|| ಇಂಜನಿಯರ್ ಸಾಹೇಬರು ಈ ಊರಿಗೆ ದಯಮಾಡಿಸಿ ಇಲ್ಲಿಗೆ 2 ಮೈಲು ದೂರವಾಗಿರುವ ಸೀಪುರದ ಕೆರೆಯಿಂದ ದೊಡ್ಡಬಳ್ಳಾಪುರಕ್ಕೆ ನಲ್ಲಿ ಮೂಲಕ ನೀರು ಒದಗಿಸುವದಕ್ಕೆ 40 ಸಾವಿರ ರೂಪಾಯಿ ಆದೀತೆಂದು ಅಂದಾಜುಮಾಡಿದರು ಈ ಊರಿಗೆ ನಲ್ಲಿ ನೀರು ಬರುವದೇನೋ ಖಂಡಿತವಾಯಿತು. ಆದರೆ ಈ ಅಂದಾಜು ಗೌರ್ನಮೆಂಟಿನಲ್ಲಿ ಮಂಜೂರಾಗಲಿಕ್ಕೂ, ಕೆಲಸ ಪ್ರಾರಂಭವಾಗಲಿಕ್ಕೂ, ನೀರು ಗ್ರಾಮಸ್ಥರಿಗೆ ಒದಗುವದಕ್ಕೂ ಕನಿಷ್ಠಪಕ್ಷ ಎರಡು ವರ್ಷಗಳಾದರೂ ಬೇಕೇಬೇಕಾಗುವದು. ಅವರೆಗೂ ನೀರಿನ ಕಷ್ಟ ಎಷ್ಟೆಂತ ಹೇಳಲಾಗದು. ಈಗಲೇ ಅನೇಕ ಭಾವಿಗಳಲ್ಲಿ ನೀರು ಬತ್ತಿಹೋಗಿದೆ. ಕೆರೆ ಸಂಪೂರ್ಣವಾಗಿ ಬತ್ತುತ್ತಾ ಬಂತು.—ಪೋಲಿ ನಾಯಿಗಳ ವಿಷಯದಲ್ಲಿ ಈ ವರೆಗೂ ಮ್ಯುನಿಸಿಪಾಲಿಟಿಯವರು ಗಮನ ಕೊಡಲಿಲ್ಲ. ಇವು ಆಗಾಗ್ಗೆ ಮನುಷ್ಯರ ಮೇಲೆ ಬೀಳುತ್ತವೆ. ಪ್ರಜಾ ಸಂರಕ್ಷಣೆಗೋಸ್ಕರ ಮ್ಯುನಿಸಿಪಾಲಿಟಿಯವರು ಕೂಡಲೆ ಈ ವಿಷಯಕ್ಕೆ ಗಮನ ಕೊಡುವದು ವಾಸಿ. ಈ ಊರಲ್ಲಿ ಸಾಹುಕಾರ್ ಆಲಂಪಲ್ಲಿ ವೆಂಕಟನಾರಣಶೆಟ್ಟರಿಗೆ ಬೆನ್ನಿನ ಮೇಲೆ ಒಂದು ಗಾಯವಾಗಿ ತಿಂಗಳಿಂದಲೂ ಬಾಧೆಪಡುತ್ತಿದ್ದಾರೆ. ಇವರು ಪ್ರಜಾಪಕ್ಷದ ಮೆಂಬರಾಗಿಯೂ ಮುಖಂಡರಾಗಿಯೂ ಧರ್ಮಾರ್ಥವಾಗಿ ನೀರಿಗೆ 6 ಸಾವಿರ ರೂಪಾಯಿ ಕೊಟ್ಟವರಾಗಿಯೂ ಇರುತ್ತಾರೆ. ದೇವರು ಇವರಿಗೆ ಸಂಪೂರ್ಣ ಆರೋಗ್ಯವನ್ನು ದಯಪಾಲಿಸುವಂತೆ ಅವರ ಮಿತ್ರರು ಪ್ರಾರ್ಥಿಸುತ್ತಾರೆ.—ಮೇರಿಬಾಯಿ ಮಿಸ್ ಫಾಕ್ಸ್‌ಯವರ ವಿಡೋ ಹೋಂ ಈಚೆಗೆ ಅಭಿವೃದ್ಧಿಯಾಗುತ್ತಿದೆ. ಅಲ್ಲಿಗೆ ಬಂದು ಸೇರುತ್ತಿರುವ ವಿಧವೆಯರ ಮತ್ತು ಹುಡುಗರ ಮತ್ತು ಸದ್ಗುಡಿಕೆಗಾಗಿ ಬಂದು ಸೇರುತ್ತಿರುವವರ ಸಂಖ್ಯೆ ಅಧಿಕವಾಗಿ ಅವರಿಗೆಲ್ಲಾ ಕ್ರಮವಾದ ವಿದ್ಯಾಭ್ಯಾಸ, ಕೈಗಾರಿಕೆ, ಕೃಷಿ, ತಿದ್ದುಪಾಟುಗಳು, ದೈವಭಕ್ತಿಯೂ ಬಹು ಚೆನ್ನಾಗಿ ನಡಿಸಲ್ಪಡುತ್ತವೆ. ಆದ್ದರಿಂದ ಈ ಹೋಂ ಬರಬರ ತುಂಬ ಅಭಿವೃದ್ಧಿ ಆಗುವದರಲ್ಲಿ ಸಂಶಯವಿಲ್ಲವು.—ವಿದ್ಯಾಶಾಲಾ ಇಲಾಖೆಯವರು ಈ ಊರಲ್ಲಿ ಹೊಸದಾಗಿ ಎ. ವಿ. ಸ್ಕೂಲ್, ಗರ್ಲ್ಸ್ ಸ್ಕೂಲ್ ಮುಂತಾದ ಕಟ್ಟಡಗಳಿಗೆ ಭಾರಿ ಮೊಬಲಗನ್ನು ಅಂದಾಜು ಮಾಡಿ ಹೊರಟುಹೋದರು. ಈಚೆಗೆ ಅದರ ವಿಚಾರವೇ ತಿಳಿದುಬಂದಿಲ್ಲ. ಪೂರ್ವದ ಹಳೆ ಕಛೇರಿಯನ್ನು ರಿಪೇರಿಮಾಡಿಸಿ ಕೊಟ್ಟಿದ್ದರೆ ಭಾರಿ ಕಟ್ಟಡಗಳು ತಯಾರುವವರೆಗೂ ಸಾಕಾಗಿತ್ತು. ಅದನ್ನು ಮುಚ್ಚಿಬಿಟ್ಟು ಬೇರೆ ಬೇರೆ ಕಡೆ ಕೆಲವು ಸಾಧಾರಣವಾದ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡು ಸ್ಕೂಲ್ ನಡಿಸುತ್ತಿರುವದು ಸಣ್ಣ ಪುಟ್ಟ ಮಕ್ಕಳಿಗೆ ತುಂಬಾ ಅನನುಕೂಲವಾಗಿದೆ. ದಾರಿಯಲ್ಲಿ ಮಕ್ಕಳಿಗೆ ಗಾಯಗಳ ಕಾಟ. ಅಲ್ಲದೆ ಈ ಮಧ್ಯೆ ಕೆಲವು ಉಪಾಧ್ಯಾಯರು ಅತ್ಯಂತ ಕ್ರೂರವಾಗಿ ರಕ್ತಬಾಸುಂಡೆಗಳು ಬರುವಂತೆ ಹುಡುಗ ಹುಡುಗಿಯರನ್ನು ಹೊಡೆದಿದ್ದಾರೆಂತ ತಿಳಿದು ಬಹಳ ವ್ಯಸನಪಡಬೇಕಾಗಿದೆ. ಆಯಾ ಸ್ಕೂಲಿನ ಹೆಡ್ ಮಾಸ್ಟರ್ ಮತ್ತು ಮಿಸ್ಟ್ರೆಸ್‌ಗಳು ಈ ಕ್ರೂರ ಶಿಕ್ಷೆಯನ್ನು ಕೂಡಲೆ ನಿಲ್ಲಿಸದೆಹೋದರೆ ತುಂಬಾ ನಷ್ಟವಾಗುವದರಲ್ಲಿ ಸಂಶಯವಿಲ್ಲ.—ಈ ಊರಲ್ಲಿ ಬೀದಿ ಗುಡಿಸುವವರಿಗೆ ಕ್ಷಾಮಕಾಲದ ತಿಂಗಳಿಗೆ 1 ರೂಪಾಯಿ ಜಾಸ್ತಿ ಸಂಬಳ ಈ ವರಿಗೂ ಸಿಕ್ಕಿಲ್ಲ. ಬೆಂಗಳೂರು ಯಲಹಂಕ ಮುಂತಾದ ಕಡೆ ಝಾಡಮಾಲಿಗಳಿಗೆ 4 ತಿಂಗಳಿಗೆ 4 ರೂಪಾಯಿ ಸಿಕ್ಕಿದೆ ಈ ಊರಿನ ಝಾಡಮಾಲಿಗಳಿಗೆ ಅದು ಸಿಕ್ಕದೆ ಇರಲಿಕ್ಕೆ ಕಾರಣ ತಿಳಿಯದು. (ಇನ್ನೊಬ್ಬ ಬಾತ್ಮೀದಾರರಿಂದ)—ಈ ಊರಲ್ಲಿ ಧಾರಣೆವಾಸಿಗಳು ಜಡಾವಾಗಿ ನೇಯಿಗೆ ಕೆಲಸಗಳ ವ್ಯಾಪಾರಾದಿಗಳು ನಡೆಯದೆ ಬಡವರಿಗೆ ಜೀವನೋಪಾಯಕ್ಕೆ ತೊಂದರೆಯಾಗಿರುತ್ತೆ.—30 ನೇ ತಾ. ನಲ್ಲಿ ಕೋಆಪರೆಟಿವ್ ಸೊಸೈಟಿ ಜನರಲ್ ಮೀಟಿಂಗು ಇಟ್ಟು ಎಲ್ಲಾ ಮೆಂಬರುಗಳಿಗೂ ಇಂಟಿಮೇಷನ್ ಕೊಟ್ಟಿದ್ದಾಗ್ಯೂ ಸೇರದೆ ಇರುವದು ವಿಷಾದವಾದ್ದಾಗಿರುತ್ತೆ. ಇದರಿಂದ ಐಕಮತ್ಯವಿಲ್ಲವೆಂಬದಾಗಿ ವ್ಯಕ್ತವಾಯ್ತು. ಐಕಮತ್ಯವಿದ್ದ ಹೊರತು ನಮ್ಮ ದೇಶ ಉನ್ನತಸ್ಥಿತಿಗೆ ಬರುವದಿಲ್ಲವೆಂತಲೂ, ನಮ್ಮ ಕಷ್ಟನಿವಾರಣೆ ಆಗುವದಿಲ್ಲವೆಂತಲೂ ಖಂಡಿತ ತಿಳಿಯಬೇಕು.— ಈ ಟವನ್ ಶ್ರೀಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಳೆದ ಜನವರಿ 30 ನೇ ತಾ. ಶನಿವಾರ ಕಲ್ಯಾಣೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ಉತ್ಸವ ಕಾಲದಲ್ಲಿ ಯಲಹಂಕದ ಬ್ರಂ ವೆಂಕಟ್ಟದಾಸರು ಹರಿಕಥೆಯನ್ನು ಮಾಡಿ ಅಲ್ಲಿ ನೆರೆದಿದ್ದ ಮ್ಯುನಿಸಿಪಲರವರು, ಅಮಲ್ದಾರ್ರವರು, ರಾಯರು ಮಹನೀಯರು, ಇತರ ವರ್ತಕರೇ ಆದಿಯಾದ ಸಮಸ್ತ ಪುರನಿವಾಸಿಗಳಿಗೂ ಬಹಳ ಆನಂದವನ್ನುಂಟುಮಾಡಿದರು. ಕಥಾನಂತರ ಕೋಆಪರೆಟಿವ್ ಸೊಸೈಟಿ ಇನ್ಸ್‌ಪೆಕ್ಟರವರು ಮೃದುಮಧುರವಾಕ್ಯಗಳಿಂದ ಐಕಮತ್ಯ ವಿಷಯದಲ್ಲಿಯೂ, ಭಗವದ್ಭಕ್ತಿ ವಿಷಯದಲ್ಲಿಯೂ ಉಪನ್ಯಾಸ ಕೊಟ್ಟರು. ನಂತರ ಮಂಗಳಾರತಿಯೂ ರಾಜಾಶೀರ್ವಾದವೂ ನಡೆದು ಪಾನ್‌ಸುಪಾರಿ ಹಂಚಲ್ಪಟ್ಟು ಉತ್ಸವ ಸಮಾಪ್ತಿಯಾಯ್ತು.

ಮಂಡ್ಯ.—ಸಿಡುಬಿನ ಉಪದ್ರವು ಬಹು ಜೋರಾಗಿ ಈವಾಗಲೇ 4–5 ಮಕ್ಕಳು ಬಲಿಯಾದರು. ಮತ್ತು ಅದು ಮಂಡ್ಯ ತಾಲ್ಲೋಕಿನ ಅನೇಕ ಗ್ರಾಮಗಳಲ್ಲಿ ಬಹಳವಾಗಿ ಹರಡಿಕೊಂಡಿದೆ.—ಕಳೆದ ವಾರದ ಪ್ರಾರಂಭದಲ್ಲಿ ಪಾವಲಿಗೆ ಸಮಾನವಾದ ಕೆಲವು ಖೋಟಾ ನಾಣ್ಯಗಳು ಇಬ್ಬರಲ್ಲಿ ಸಿಕ್ಕಿದವು. ತಕ್ಷಣವೇ ಪೋಲೀಸ್ ತನಿಖೆಯೂ ಆಗಿ ಅದರ ಮೂಲ ಯಂತ್ರವನ್ನು ಕಂಡುಹಿಡಿಯಲು ಪ್ರಯತ್ನ ನಡೆಯುತ್ತಾ ಇದೆ. ಮತ್ತು ಅವನ್ನು ಮಾಡುವದಕ್ಕೆ ಅನುಕೂಲವಾಗಿದ್ದ ಸಣ್ಣ ಆಯುಧವೂ ಸಹ ಸಿಕ್ಕಿತು.—ಕಳೆದ 24 ನೇ ತಾ. ಮಧ್ಯಾಹ್ನ ಪೋಸ್ಟ್ ಮಾಸ್ಟರ ಪತ್ನಿಯವರು ಬಂದೋಬಸ್ತು ಕಟ್ಟೆಯಿಲ್ಲದ ಭಾವಿಯಲ್ಲಿ ನೀರು ಸೇದುತ್ತಿರುವಾಗ ಆಕಸ್ಮಾತ್ ಕಾಲುಜಾರಿ ಬಿದ್ದು 6-7 ಆಳುದ್ದದ ಭಾವಿಯೊಳಗೆ ಬಿದ್ದು ಪ್ರಾಣಾಪಾಯಕ್ಕೆ ಗುರಿಯಾಗಿದ್ದರು. ತಕ್ಷಣವೇ ಡಾಕ್ಟರ್ ಗುಂಡಪ್ಪನವರೂ ಕಾಂಪೌಂಡರ್ ಕರೆಸಿಂಗ್ಯವರೂ ತುಂಬಾ ಮೊಹನತ್ತುಮಾಡಿ ಔಷಧೋಪಚಾರಗಳನ್ನು ನಡಿಸಿ ಆಕೆಯನ್ನು ಪ್ರಾಣಾಪಾಯದಿಂದ ತಪ್ಪಿಸಿದ್ದು ಈ ಊರಿನವರಿಗೆಲ್ಲಾ ಅತ್ಯಂತ ಸಂತೋಷವನ್ನುಂಟುಮಾಡಿತು. ಈ ಊರಲ್ಲಿ ಕಟ್ಟೆಗಳಿಲ್ಲದೆ ಇರುವ ಭಾವಿಗಳು ಸರ್ವಸಾಧಾರಣವಾಗಿವೆ. ಮ್ಯುನಿಸಿಪಾಲಿಟಿಯವರು ಈ ವಿಷಯಕ್ಕೆ ಗಮನಕೊಟ್ಟರಾದೀತು.—ಹೈರೋಡುಗಳ ಪಕ್ಕಗಳಲ್ಲಿ ಗಾಡಿಗಳನ್ನು ಬಿಡುವದರಿಂದ ಉಂಟಾಗುವ ತೊಂದರೆಗಳನ್ನು ತಪ್ಪಿಸಿದರೆ ಪ್ರಯಾಣಿಕರಿಗೆ ಕ್ಷೇಮ ಉಂಟು.—ದವಸಧಾನ್ಯಗಳ ಧಾರಣೆಯು ಈ ಸುಗ್ಗಿಯ ಕಾಲದಲ್ಲಿ ಅಗ್ಗವಾಗಿರುವದಕ್ಕೆ ಬದಲಾಗಿ ತಗ್ಗಾಗಿದೆ. ಅದರಲ್ಲೂ ಸರ್ಕಾರದವರೇ ನಿಯಾಮಕವಾಡಿರುವ ಅಳತೆ, ತೂಕ ಮುಂತಾದವುಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳುಂಟು.—ತೊಳೆಸನಹಿಪ್ಪರ, ಯಡತೊರೆ ಮಠಗಳ ಸ್ವಾಮಿ ಗುರುಗಳು ತಾ. 30 ರಲ್ಲಿ ದಯಮಾಡಿಸಿ ಶಿಷ್ಯಾದಿಗಳಿಂದ ತಕ್ಕ ಸನ್ಮಾನ ಸತ್ಕಾರಗಳನ್ನು ಹೊಂದಿ ಮುಂದಕ್ಕೆ ಬಿಜಮಾಡಿದರು.

ಮುಳಬಾಗಲು.—ಈ ಗ್ರಾಮದಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಜನಗಳು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ದಯಾಳುಗಳಾಗಿ ಘನತೆಯನ್ನು ಹೊಂದಿರುವ ಸರಕಾರದವರು ಈ ಪ್ರಜೆಗಳ ಕಷ್ಟನಿವಾರಣೆ ಮಾಡಲು ಗಮನಿಸುವರೆಂದು ಹಾರೈಸುತ್ತೇವೆ.—ಈ ಟವನ್‌ನಲ್ಲಿ ರಸ್ತೆಗಳು ತುಂಬಾ ಸಿಥಿಲವಾಗಿ ಜನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿದ್ದವು. ಹಾಲಿ ದಯಮಾಡಿಸಿರುವ ನಮ್ಮ ಅಮಲ್ದಾರ್ರವರು ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಶ್ರದ್ಧೆಯನ್ನು ವಹಿಸಿರುವುದರಿಂದ ಇವುಗಳು ಈಗ ದುರಸ್ತಾಗುತ್ತಲಿವೆ. ಇವರು ಸರ್ಕೀಟು ಇಲ್ಲದ ದಿನಗಳಲ್ಲಿ ಪ್ರತಿದಿನವೂ ಟವನ್‌ನಲ್ಲಿ ಸಂಚಾರಮಾಡುತ್ತಿರುವುದರಿಂದ ಟವನ್ ವಾಸಿಗಳು ಅನುಕೂಲವುಂಟಾಗಿವೆ ಮತ್ತು ರಾತ್ರಿ ಕಾಲಗಳಲ್ಲಿ ದಾರಿ ಕಾಣದಂತೆ ಮಂಕಾಗಿದ್ದ ಲಾಂದ್ರಗಳು ಸಹ ಇವರ ಕಾಲದಲ್ಲಿ ಕಾಂತಿಯನ್ನು ಹೊಂದಿರುತ್ತವೆ.—ಈ ಟವನ್ ಪೋಲೀಸ್ ಇನ್ಸ್‌ಪೆಕ್ಟರ್ ಮ|| ರಾಜಾರಾಯರು ಇಲ್ಲಿಗೆ ದಯಮಾಡಿದ ಲಾಗಾಯತು ರಾತ್ರಿ ವೇಳೆ ಖುದ್ದು ಅವರೇ ಗಸ್ತುಮಾಡಿ ನೋಡಿಕೊಳ್ಳುತ್ತಿರುವುದರಿಂದ ತುಂಟರಿಗೆ ಆಸ್ಪದವಿಲ್ಲದೆ ಕಳ್ಳತನಗಳು ಸುತರಾಂ ನಿಂತಿರುತ್ತವೆ.—ಈ ತಾಲ್ಲೂಕಿಗೆ 8 ತಿಂಗಳ ಕೆಳಗೆ ವರ್ಗವಾಗಿ ಬಂದಿದ್ದ ಎಕ್ಸೈಜ್ ಅ|| ಇನ್ಸ್‌ಪೆಕ್ಟರ್ ಮ|| ಸುಂದರರಾಯರು ಪ್ರಜೆಗಳ ಅನುರಾಗಕ್ಕೆ ಪಾತ್ರರಾಗಿದ್ದುದರಿಂದ ಅವರ ಮಿತ್ರಮಂಡಲಿಯವರು ಅವರಿಗೆ ಬೌರಿಂಗ್‌ಪೇಟೆಗೆ ವರ್ಗವಾದುದಕ್ಕೆ ವಿಷಾದಿಸಿ ತಮ್ಮ ವಿಶ್ವಾಸ ಪ್ರದರ್ಶನ ಮಾಡಲು ಜನವರಿ ತಾ 30 ನೇ ಶನಿವಾರ ಸಾಯಂಕಾಲ ಅವರನ್ನು ಮರ್ಯಾದೆಯಿಂದ ಮ|| ನಾವುದೇವ್ ಗೋವಿಂದರಾಯರ ಮನೆಗೆ ಕರೆತಂದು ನೃತ್ಯ, ಗೀತ, ವಾದ್ಯಗಳಗೋಷ್ಠಿ ಮುಂತಾದ 10 ಗಂಟೆಯ ವರೆಗೆ ಸಂತೋಷ ಪಡಿಸಿ ಗಂಧಪುಷ್ಪಾದಿಗಳನ್ನು ಕೊಟ್ಟು ಮರ್ಯಾದೆಯಿಂದ ಕರೆದುಕೊಂಡು ಹೋಗಿ ಬಿಟ್ಟು ಬಂದರು. ಈ ಸಂತೋಷಕೂಟಕ್ಕೆ ಸಬ್ ರೆಜಿಸ್ಟ್ರಾರವರು, ಡಾಕ್ಟರವರು, ಅ|| ಇಂಜನಿಯರವರು, ಶಿರಸ್ತೇದಾರರು, ಪೋಲೀಸ್ ಇನ್ಸ್‌ಪೆಕ್ಟರವರು, ಹೆಡ್ ಮಾಸ್ಟರವರು, ಸಬ್ ಓವರ್ಸೀಯರವರೇ ಮುಂತಾಗಿ ಅನೇಕ ಜನ ದೊಡ್ಡಮನುಷ್ಯರು ದಯಮಾಡಿಸಿದ್ದರು.

ಕನ್ನಂಬಾಡಿ.—ಕಾವೇರಿ ರಿಜರ್ವಾಯರಿನಲ್ಲಿ ಎರಡು ಸಂತೋಷಕೂಟಗಳು ನಡೆದವು. ಇಲ್ಲಿಂದ ವರ್ಗಪಟ್ಟ ಜಮಾದಾರ್ ಮ|| ಎಂ. ಜಿ. ರಾಮರಾಯರನ್ನು ಸಂತೋಷಪಡಿಸುವ ಉದ್ದೇಶವಾಗಿ ಅವರ ನೌಕರರೆಲ್ಲಾ ಸೇರಿ ತಾ. 30 ನೇ ಶನಿವಾರದ ದಿವಸ ಇಲ್ಲಿಯ ಪೋಲೀಸ್ ಆಫೀಸ್ ಕಟ್ಟಡವನ್ನು ಕದಳಿ ತೋರಣಗಳಿಂದ ಬಹು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಸಾಯಂಕಾಲ 5 ಘಂಟೆಗೆ ಜಮಾದಾರರನ್ನು ಅವರ ಮನೆಯಿಂದ ಬ್ಯಾಂಡು ಸಮೇತ ಕರೆತಂದು ಸುಖಾಗಮನವನ್ನು ಬಯಸಿದನಂತರ ಮ|| ಇನ್ಸ್‌ಪೆಕ್ಟರವರ ಇಷ್ಟಪ್ರಕಾರ ಮ್ಯಾನೇಜರ್ ಮ|| ಹನುಮಂತರಾಯರವರು ಅಗ್ರಾಸನವನ್ನು ವಹಿಸಿದರು. ಅನಂತರ ಮ|| ರಾಮರಾಯರು ಇಲ್ಲಿಗೆ ದಯಮಾಡಿದ 7-8 ತಿಂಗಳಲ್ಲೇ ಬೆಂಗಳೂರಿಗೆ ವರ್ಗವಾದದ್ದಕ್ಕೆ ನಾವುಗಳೆಲ್ಲಾ ವ್ಯಸನಪಡುತ್ತೇವೆಂತಲೂ, ಆದರೂ ಅವರು ದೊಡ್ಡ ಶಹರವಾದ ಬೆಂಗಳೂರಿಗೆ ದಯಮಾಡಿಸುತ್ತಾರಾಗಿ ದೇವರು ಅವರನ್ನು ಉತ್ತಮ ಸ್ಥಿತಿಗೆ ಕ್ಷಿಪ್ರದಲ್ಲೇ ತರಲೆಂತಲೂ ಮತ್ತು ಜಮಾದಾರ್ರವರು ಇಲ್ಲಿಗೆ ದಯಮಾಡಿದ ಲಾಗಾಯ್ತು ತಮ್ಮ ಆಫೀಸರವರಲ್ಲೂ ಮತ್ತು ತಮ್ಮ ನೌಕರರಲ್ಲೂ ಇಟ್ಟುಕೊಂಡಿದ್ದ ಪ್ರೀತಿ ವಿಶ್ವಾಸಗಳೇ ಅವರ ಉತ್ತಮ ನಡತೆಯನ್ನು ತೋರಿಸುತ್ತದ್ದಾಗಿದೆ ಎಂತಲೂ ಸಹಾ ಮ|| ಮ್ಯಾನೇಜರವರು ಉಪನ್ಯಾಸಮಾಡಿದನಂತರ ಫೋಟೋ ತೆಗೆಯಲ್ಪಟ್ಟು, ಸೇರಿದ್ದ ಸಭಿಕರುಗಳಿಗೆ ಫಲಾಹಾರ ತಾಂಬೂಲಾದಿಗಳು ಹಂಚಲ್ಪಟ್ಟವು.—ಮತ್ತು 6-8 ತಿಂಗಳಿಂದ ಇಲ್ಲಿ ಪೋಸ್ಟು ಮಾಸ್ಟರಾಗಿದ್ದ ಮ|| ಆನಂದತೀರ್ಥರಾಯರಿಗೆ ಶ್ರೀರಂಗಪಟ್ಟಣಕ್ಕೆ ವರ್ಗವಾದದ್ದು ಸರ್ವರಿಗೂ ತುಂಬಾ ವ್ಯಸನವನ್ನುಂಟುಮಾಡಿರುತ್ತದೆ. ಆದಾಗ್ಯೂ, ಇವರ ಸ್ಥಾನಕ್ಕೆ ಬಂದಿರುವ ಮ|| ಶ್ರೀನಿವಾಸಯ್ಯಂಗಾರ್ರವರು ಕೂಡ ಸದರಿಯವರಂತೆ ಇರುತ್ತಾರಾಗಿ ಈ ಭಾಗದಲ್ಲಿ ಸಂತೋಷಿಸುತ್ತೇವೆ. ಮತ್ತು ಮೇಲ್ಕಂಡ ಪೋಸ್ಟು ಮಾಸ್ಟರವರನ್ನು ಸಂತೋಷಪಡಿಸುವದಕ್ಕಾಗಿ ಪೋಸ್ಟ್ ಆಫೀಸ್ ಕಟ್ಟಡದಲ್ಲಿ ಒಂದು ಟೀ ಪಾರ್ಟಿಯನ್ನು ಮಾಡಿ ಸತ್ಕರಿಸಿದರು.

ತಿಪ್ಟೂರು.—ಇಲ್ಲಿನ ಪ್ರಜೆಗಳು ಪ್ಲೇಗಿನ ದೆಸೆಯಿಂದ ಜೋಪಡಿಗಳಲ್ಲಿದ್ದು ಈಗ 3-4 ಜನಗಳು ಊರಿಗೆ ಬಂದಿದ್ದಾರೆ. ಕಳೆದ ವರುಷ ಮಳೆ ಸರಿಯಾಗಿಲ್ಲದೆ ಸುತ್ತುಮುತ್ತ ಅರ್ಧ ಬೆಳೆಯಾಗಿದೆ. ಇಲ್ಲಿನ ಕೆರೆಯಲ್ಲಿ ನೀರು ಕಡಿಮೆಯಾಗುತ್ತಾ ಬಂದಿದೆ. ಸುತ್ತುಮುತ್ತ ಗ್ರಾಮಗಳಲ್ಲಿ ದನಕರುಗಳಿಗೂ ಜನಗಳಿಗೂ ನೀರಿನ ತೊಂದರೆಯು ಜಾಸ್ತಿಯಾಗಿದೆ. ಕೆಲವು ಗ್ರಾಮಗಳಲ್ಲಿ ಸರ್ಕಾರದವರು ತೆಗಿಸಿದ ಭಾವಿಗಳಿಂದ ತಕ್ಕಮಟ್ಟಿಗೂ ನೀರು ಸಿಕ್ಕುತ್ತದೆ. ಆದರೆ ಕೆಲವು ಗ್ರಾಮಗಳಲ್ಲಿ ಸರ್ಕಾರಿ ಭಾವಿಗಳೇ ಇಲ್ಲ. ಮುಖ್ಯವಾಗಿ ಇಲ್ಲಿಗೆ ಎರಡು ಮೈಲಿ ದೂರದಲ್ಲಿರುವ ಹುಚ್ಚುಗೊಂಡನಹಳ್ಳಿ ಗ್ರಾಮದವರಿಗೆ ಕುಡಿಯುವದಕ್ಕೆ ಒಳ್ಳೇ ನೀರಿಲ್ಲ. ಈ ಗ್ರಾಮ ಹೈ ರೋಡ್ ಪಕ್ಕದಲ್ಲಿದೆ. ಇವರಿಗೂ ಒಂದು ಸರ್ಕಾರಿ ಭಾವಿ ಅಗತ್ಯವಾಗಿ ಬೇಕಾಗಿದೆ.—ತಿಪ್ಟೂರಿನಲ್ಲಿ ಮನೆಗಳಲ್ಲಿಯೂ ರಸ್ತೆಗಳಲ್ಲಿಯೂ ಇಸ್ಪೀಟು ಜೂಜಾಟ ಧಾರಾಳವಾಗಿ ನಡೆಯುತ್ತದೆ. ಸರ್ಕಾರದವರ ಭಯವು ಅಷ್ಟಿಲ್ಲವೆಂದು ತೋರುತ್ತದೆ. ಸಂತೆ ದಿವಸ ಹಳ್ಳಿಜನರು ರಸ್ತೆಯ ಪಕ್ಕದಲ್ಲಿ ಇಂಥಾ ಮೋಸಗಾರರ ಉಪಾಯಕ್ಕೆ ಒಳಪಟ್ಟು ಹಣ ಕಳಕೊಂಡಿದ್ದಾರೆ. ಈ ಸಂಗತಿಯು ನಮ್ಮ ಅಮಲ್ದಾರ್ರವರಿಗೆ ಗೊತ್ತಾಗಿದೆ. ಮುಂದಕ್ಕೆ ಇಂಥಾವರನ್ನು ಹಿಡಿಸಿ ತಕ್ಕ ಶಿಕ್ಷೆ ಕೊಡುತ್ತಾರೆಂದು ನಿರೀಕ್ಷೆ ಇದೆ.—ಇಲ್ಲಿ ಕೆಲವು ಭಾವಿಗಳಲ್ಲಿ ರಾತ್ರಿ ಹಗಲೂ ಜನರು ನೀರು ಸೇದುತ್ತಿದ್ದಾರೆ. ಅಂತು ನೀರಿನ ತೊಂದರೆಯು ಅಷ್ಟಿಷ್ಟಲ್ಲ. ಸರ್ಕಾರದವರು ಇಲ್ಲಿಗೆ ನಲ್ಲಿ ನೀರು ತರಿಸಿಕೊಡುವ ಉದ್ದೇಶ್ಯ ಪ್ರಜೆಗಳಿಂದ ಕೆಲವು ಹಣ ವಸೂಲ್ಮಾಡಿದಾರಂತೆ. ಆದರೆ ಇನ್ನೂ ಯಾವ ಕಾಮಗಾರಿಯೂ ಪ್ರಾರಂಭವಾಗಿಲ್ಲ.—ಇಲ್ಲಿನ ಸಂತೆಯು ಯಾವಾಗಲೂ ಊರೊಳಗೆ ನಡೆಯುತ್ತಿತ್ತು. ಆದರೆ ಜನಗಳು ಊರು ಬಿಟ್ಟಾಗ ಮುಸಾಫರಿ ಬಂಗಲೆಯ ಹತ್ತಿರ ನಡೆಯುತ್ತಿತ್ತು. ಈಗ ಜನಗಳು ಊರೊಳಗೆ ಬಂದಿದ್ದಾರೆ. ಆದರೆ ಈಗ ಸಂತೆ ಮಾಮೂಲಾಗಿ ನಡೆಯುತ್ತಿದ್ದ ಸ್ಥಳವನ್ನು ತಪ್ಪಿಸಿ ಉರವುಕುಂಟೆಯವರ ಬಂಗಲೆಯ ಪಕ್ಕದಲ್ಲಿ ಮಾಡುವ ಏರ್ಪಾಡು ಮಾಡಿದ್ದಾರೆ. ಈ ಸ್ಥಳವು ಊರಿಗೆ ದೂರವಾಗಿಯೂ, ಪಾಕೀಜಾಗಿಯೂ ಇದೆ. ಆದರೆ ಈ ಸ್ಥಳದಲ್ಲಿ ಸ್ವಲ್ಪವೂ ನೆರಳಿಲ್ಲ. ಮುಂದಕ್ಕೆ ಬಿಸಿಲು ಇನ್ನೂ ಜಾಸ್ತಿಯಾಗುವುದು. ಅಲ್ಲಿ ವ್ಯಾಪಾರ ಮಾಡುವವರಿಗೂ ಕೊಳ್ಳುವವರಿಗೂ ತುಂಬಾ ಆಯಾಸವಾಗಿದೆ. ಹೊತ್ತಾರೆಯಿಂದ ಸಾಯಂಕಾಲದ ವರೆಗೂ ಬಿಸಿಲಿನಲ್ಲಿ ಕೂತುಕೊಂಡು ಮಾರುವ ವರ್ತಕರ ಗೋಳು ಎಷ್ಟಿರಬಹುದು! ಪ್ರಜೆಗಳ ಕ್ಷೇಮವನ್ನೇ ಸರ್ಕಾರದವರು ಮುಖ್ಯವಾಗಿ ನೋಡಬೇಕಾಗಿದೆ. ಇದಕ್ಕಾಗಿ ತಕ್ಕ ಏರ್ಪಾಡು ಮಾಡಬೇಕು. ಆದರೆ ಈ ಸ್ಥಳವನ್ನು ಸರ್ಕಾರದವರು ಏರ್ಪಾಡುಮಾಡಿದರೋ? ಅಥವಾ ದೊಡ್ಡ ಮನುಷ್ಯರುಗಳ ಯೋಚನೆಯೋ? ಗೊತ್ತಿಲ್ಲ. ಹ್ಯಾಗಾದರೂ ಇರಲಿ. ಈ ಸ್ಥಳದಿಂದ ಪ್ರಜೆಗೆ ಕಷ್ಟವೇ ಹೊರ್ತು ಕ್ಷೇಮವಿಲ್ಲ.—ಇಲ್ಲಿನ ತರಕಾರಿ ಮಾರುವ ಚಿಕ್ಕ ಮಾರ್ಕೆಟ್ ಕಟ್ಟಡವು ಊರಿನ ಕೊನೇ ಭಾಗವಾದ ಪೋಲೀಸ್ ಲೈನಿಗೆ ಎದುರಿನಲ್ಲಿದೆ. ಇದೇ ಸ್ಥಳದಲ್ಲಿ ಮಾರಬೇಕೆಂದು ಸರ್ಕಾರದವರು ಅಪ್ಪಣೆಕೊಟ್ಟಿದ್ದಾರೆ. ಮತ್ತು ಬೇರೆ ಸ್ಥಳದಲ್ಲಿ ಮಾರುವದಕ್ಕೆ ಬಿಡುವದಿಲ್ಲ. ಮಾರ್ಕೆಟ್ಟಿನಲ್ಲಿ ಮಾರಿದರೆ ಖರ್ಚಾಗದೆ ತರಕಾರಿ ನಿಂತುಹೋಗುತ್ತದೆ. ಇದರಿಂದ ಮಾರುವವರಿಗೆ ತುಂಬಾ ನಷ್ಟ. ಹಾಗಾದರೆ ಅವರು ಅದರಿಂದ ಜೀವನಮಾಡಿ ಸರ್ಕಾರಿ ಕಂದಾಯ ಕಟ್ಟುವದು ಹ್ಯಾಗೆ? ಈ ಮಾರ್ಕೆಟನ್ನು ಅಲ್ಲಿ ತಪ್ಪಿಸಿ ಊರಿನ ಮಧ್ಯದಲ್ಲಿ ಕಟ್ಟಿದರೆ ವಾಸಿ.

ಒಂದು ಸಣ್ಣ ಪ್ರದರ್ಶನ.

ಹೆಗ್ಗಡದೇವನಕೋಟೆ ತಾ|| ಸರಗೂರು ಸ|| ಕೊಂಗಟಗೇರಿ.

ಜನವರಿ ತಾ. 24 ನೇ ಭಾನುವಾರ ಇಲ್ಲಿನ ಶ್ರೀ ಚೌಡೇಶ್ವರಿ ನೇಯಿಗೆ ಪರಸ್ಪರ ಸಹಾಯ ಸಂಘದ ಮೂರನೇ ವಾರ್ಷಿಕೋತ್ಸವವು ನಡೆಯಿತು. ಆ ಕಾಲದಲ್ಲಿ ತರಹಾವರಿ ಜವಳಿ, ನೂಲು, ರೇಷ್ಮೆ ಮತ್ತು ಮಗ್ಗಗಳ ಒಂದು ಚಿಕ್ಕ ಪ್ರದರ್ಶನವು ನಡಿಸಲ್ಪಟ್ಟಿತು. ಆಗ್ಗೆ ಸರ್ಕಾರಿ ನೌಕರರೇ ಮೊದಲಾದ ಸ್ಥಳೀಯ ಮತ್ತು ಆಸುಪಾಸು ಗ್ರಾಮಗಳಲ್ಲಿನ ಅನೇಕ ದೊಡ್ಡ ಮನುಷ್ಯರುಗಳು ದಯಮಾಡಿಸಿದ್ದರು. ಸೊಸೈಟಿಯ ಮುಂಭಾಗದಲ್ಲಿ ತಳಿರು ತೋರಣಗಳಿಂದ ವಿನ್ಯಾಸವಾಗಿ ಅಲಂಕರಿಸಲ್ಪಟ್ಟಿದ್ದ ಚಪ್ಪರವು ಮೇಲ್ಕಂಡ ದೊಡ್ಡ ಮನುಷ್ಯರುಗಳಿಂದಲೂ ಮತ್ತು ಸೊಸೈಟಿಯ ಮೆಂಬರುದಾರರುಗಳಿಂದಲೂ ಕಿಕ್ಕಿರಿಯುವಂತೆ ತುಂಬಿಹೋಗಿತ್ತು. ನಮ್ಮ ತಾಲ್ಲೂಕು ಅಮಲ್ದಾರ್ರಾದ ಮ|| ಬಿ. ಮಲ್ಲಿಕಾರ್ಜುನಯ್ಯನವರ ಆಗಮನವನ್ನು ಎಲ್ಲರೂ ನಿರೀಕ್ಷಿಸಿಕೊಂಡಿದ್ದ ಮೇರೆಗೆ ಅಮಲ್ದಾರ್ರವರು ಕಾಲಕ್ಕೆ ಸರಿಯಾಗಿ ಕೆಲವರು ದೊಡ್ಡ ಮನುಷ್ಯರೊಡನೆ ಚಪ್ಪರದ ಬಳಿ ದಯಮಾಡಿಸಿದರು. ನಮ್ಮ ಸಂಘದ ಮೆಂಬರುಗಳು ಅವರನ್ನು ಮರ್ಯಾದೆಯಿಂದ ಎದುರುಗೊಂಡರು. ಆಗ ನಮ್ಮ ಸಂಘದ ಆನರರಿ ಸೆಕ್ರೆಟರಿ ಮ|| ಕೆ. ವೆಂಕಟನರಸಿಂಹಶೆಟ್ಟರು ಸಂಘದ ಕಮಿಟಿ ಮೆಂಬರುಗಳನ್ನು ಅಮಲ್ದಾರ್ರವರಿಗೆ ಭೇಟಿ ಮಾಡಿಸಿದರು. ಅಮಲ್ದಾರ್ರವರು ಚಪ್ಪರದೊಳಕ್ಕೆ ದಯಮಾಡಿಸಿ ಕುಳಿತುಕೊಂಡ ಬಳಿಕ ಆನರರಿ ಸೆಕ್ರೆಟರಿಯವರು ಅಮಲ್ದಾರರನ್ನು ಸಭಾಧ್ಯಕ್ಷತೆಯನ್ನು ವಹಿಸಿ ಸಭಾ ಕಾರ್ಯವನ್ನು ನೆರವೇರಿಸಿಕೊಡಬೇಕೆಂಬದಾಗಿ ಮೆಂಬರುಗಳ ಪರವಾಗಿ ಪ್ರಾರ್ಥಿಸಿಕೊಂಡರು. ಅದರಂತೆ ನಮ್ಮ ಅಮಲ್ದಾರರು ಸಭಾಧ್ಯಕ್ಷತೆಯನ್ನು ವಹಿಸಿದರು. ಅನಂತರ ಸಭಾಧ್ಯಕ್ಷರಿಗೆ ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅಡ್ರೆಸ್ಸುಗಳು ಒಪ್ಪಿಸಲ್ಪಟ್ಟವು. ತರುವಾಯ ಬ್ಯಾಂಡು ಮೊದಲಾದ ಮಂಗಳ ವಾದ್ಯಗಳೊಡನೆ ಅಮಲ್ದಾರರು ಪ್ರದರ್ಶನವನ್ನು ತೆರೆದು ಪ್ರಾರಂಭಮಾಡಿದರು. ನಾಲ್ಕು ಸಾವಿರ ರೂಪಾಯಿಗಳವರೆಗಿನ ತರಹಾವರಿ ಜವಳಿ, ನೂಲು ಮತ್ತು ರೇಷ್ಮೆಗಳು ಪ್ರದರ್ಶಿಸಲ್ಪಟ್ಟಿದ್ದವು. ಪ್ರದರ್ಶನ ಶಾಲೆಯಲ್ಲಿ ಎಲ್ಲಾ ವಸ್ತುಗಳೂ ಕ್ರಮವಾಗಿ ಇರಿಸಲ್ಪಟ್ಟು ನೇತ್ರಾನಂದವನ್ನುಂಟುಮಾಡುತ್ತಿದ್ದವು. ಆನರರಿ ಸೆಕ್ರೆಟರಿಯವರು ಅಲ್ಲಿ ಇಟ್ಟಿದ್ದ ವಸ್ತುಗಳನ್ನೆಲ್ಲಾ ಅಮಲ್ದಾರರೇ ಆದಿಯಾಗಿ ಎಲ್ಲರಿಗೂ ತೋರಿಸಿ ವಿವರಿಸಿ ಹೇಳಿದರು. ಅನಂತರ ಎಲ್ಲರೂ ಅಮಲ್ದಾರ್ರವರೊಡನೆ ಮಗ್ಗಗಳ ಪ್ರದರ್ಶನವನ್ನು ಪರಾಂಬರಿಸಿ ಪುನಃ ಚಪ್ಪರಕ್ಕೆ ದಯಮಾಡಿಸಿ ಕುಳಿತುಕೊಂಡರು. ಆಗ ನಮ್ಮ ಸಂಘದ ಪ್ರೆಸಿಡೆಂಟರವರೂ ಸಂಸ್ಕೃತ ಪಂಡಿತರೂ ಆದ ವೇ|| ಪ್ರ. ಶ್ರೀನಿವಾಸಯ್ಯಂಗಾರ್ರವರಿಂದ ಸಂಘವನ್ನು ಅಭಿವೃದ್ಧಿ ಪಡಿಸುವ ವಿಷಯದಲ್ಲಿ ಒಂದು ಸ್ವಾರಸ್ಯವಾದ ಉಪನ್ಯಾಸವು ಮಾಡಲ್ಪಟ್ಟಿತು. ಅನಂತರ ಆನರರಿ ಸೆಕ್ರೆಟರಿಯವರಿಂದ ನಮ್ಮ ಸೊಸೈಟಿಯ 1914 ನೇ ಜುಲೈ 1 ರ ಲಾಗಾಯತು ಡಿಸೆಂಬರ್ 31 ರ ವರೆಗಿನ ಛಮಾಹಿ ರಿಪೋರ್ಟು ಓದಲ್ಪಟ್ಟಿತು. ಮತ್ತು ಸೊಸೈಟಿಯು ಪ್ರಾರಂಭವಾದ ಲಾಗಾಯತು ಮೂರು ವರ್ಷಗಳ ಅಭಿವೃದ್ಧಿಯು ಸಂಕ್ಷೇಪವಾಗಿ ವಿವರಿಸಲ್ಪಟ್ಟಿತು. ಬಳಿಕ ಆನರರಿ ಸೆಕ್ರೆಟರಿಯವರು ಪ್ರದರ್ಶನದ ಉದ್ದೇಶವನ್ನು ತಿಳಿಯಪಡಿಸಿ, ಎಲ್ಲರೂ ಸ್ಥಳದ ಜವಳಿಯನ್ನು ಕೊಂಡು ನಮ್ಮ ದೇಶದ ಬಡ ಕಸಬುದಾರರಿಗೆ ಪ್ರೋತ್ಸಾಹವನ್ನುಂಟುಮಾಡುವುವರ ಮೂಲಕ ಅವರ ಜೀವನಕ್ಕೆ ಅನುಕೂಲಪಡಿಸಿಕೊಡಬೇಕೆಂತು ಭಾಷಣಮಾಡಿದರು. ಅನಂತರ ಸಭಾಧ್ಯಕ್ಷರವರು ಈ ಸೊಸೈಟಿಯು ಅಲ್ಪ ಕಾಲದಲ್ಲಿ ಇಷ್ಟು ಅಭಿವೃದ್ಧಿಗೆ ಬಂದದ್ದಕ್ಕೆ ಮೆಂಬರುಗಳ ಶ್ರದ್ಧೆ ಮತ್ತು ಶ್ರಮಗಳೇ ಕಾರಣವೆಂದೂ, ಮುಂದೆಯೂ ಅವರು ಇದೇ ರೀತಿಯಾಗಿ ಶ್ರಮವನ್ನು ವಹಿಸಿ ಇನ್ನೂ ಹೆಚ್ಚು ಅಭಿವೃದ್ಧಿಸ್ಥಿತಿಗೆ ತರಬೇಕೆಂದೂ ಅಪ್ಪಣೆಕೊಡಿಸಿದರು. ಬಳಿಕ ನಮ್ಮ ಅಮಲ್ದಾರ್ರವರೂ ಮತ್ತು ಇತರ ದೊಡ್ಡ ಮನುಷ್ಯರೂ ದಯಮಾಡಿ ಸಭೆಯನ್ನು ಅಲಂಕರಿಸಿ ಪ್ರೋತ್ಸಾಹಕೊಟ್ಟದ್ದಕ್ಕೋಸ್ಕರ ಎಲ್ಲರನ್ನೂ ಸಂಘದ ಮೆಂಬರುಗಳ ಪರವಾಗಿ ಆನರರಿ ಸೆಕ್ರೆಟರಿಯವರು ವಂದಿಸಿದರು. ಬಳಿಕ ಶ್ರೀಮನ್ಮಹಾರಾಜರವರಿಗೂ ಸಭಾಧ್ಯಕ್ಷರವರಿಗೂ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟು ಪುಷ್ಪ ಗಂಧ ತಾಂಬೂಲಾದಿಗಳಿಂದ ಎಲ್ಲರೂ ಉಪಚರಿಸಲ್ಪಟ್ಟು ಮಂಗಳವಾದ್ಯಗಳೊಡನೆ ಸಭೆಯು ಉಪಸಂಹಾರ ಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.

ಕ್ರಯ 4 ಆಣೆ ; ವಿ. ಪಿ. ಮೂಲಕ 6 ಆಣೆ ಮಾತ್ರ.

ನಮ್ಮ ವಿಳಾಸ— ಪಿ. ನರಸಿಂಗರಾವ್,
[300-6] ಎಡಿಟರ್, ಲಾ ಗೆಜೆಟ್, ಬೆಂಗಳೂರು.

APPLICATIONS

Are invited from Candidates for the post of Assistant Secretary in the Bangalore City Co-operative Society, Ltd., on a salary of Rs. 40-4-60.

The applications should be addressed to the Honorary Secretary with copies of testimonials if any, before the 15th February, 15. Candidates with a knowledge of Book-keeping will be given preference.

Bangalore, **R. RAGHUNATHA RAO,**
28-1-15. 27-1 **Hon. Secretary.**

ಗೃಹಕ್ಷೇತ್ರದ ನೋಟೀಸ್.

ತುಮಕೂರು ಟವನ್ ಚಿಕ್ಕಪೇಟೆಯಲ್ಲಿರುವ ಸ್ಕೂಲ್ ಮಾಸ್ಟರ್ ಟಿ. ಯಜ್. ನಂಜಪ್ಪನು ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ — ನನ್ನ ಅವಿಭಕ್ತ ಅಣ್ಣ ಮಿಠಾಯಿ ಯಲ್ಲಪ್ಪನು ಈಗ್ಗೆ ಎರಡುವರೆ ತಿಂಗಳ ಕೆಳಗೆ ಮೃತ ಆದನು. ಈತನಿಗೆ ಯಾವ ಸಂತಾನವೂ ಇರುವದಿಲ್ಲ. ಹೆಂಡತಿ ಬಸಮ್ಮನೆಂಬುವಳು ಮಾತ್ರ ಇರುತ್ತಾಳೆ. ಆಕೆ ಜನಗಳ ದುರ್ಬೋಧನೆಯಿಂದ ಆಸ್ತಿಗಳನ್ನು ಪರಾಧೀನ ಮಾಡುವದಾಗಿ ತಿಳಿದುಬರುತ್ತೆ. ಈ ಸ್ವತ್ತುಗಳು ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ್ದಾಗಿ ಪರಭಾರೆ ಮಾಡಲು ಆಕೆಗೆ ಯಾವ ಹಕ್ಕೂ ಇರುವದಿಲ್ಲ. ನನ್ನ ಅನುಮತಿ ವಿನಾಯಿ ಆಕೆಯಿಂದ ಯಾವ ಸ್ವತ್ತನ್ನೂ ಕ್ರಯ, ಭೋಗ್ಯ, ಆಧಾರ ಇತ್ಯಾದಿಗಳನ್ನು ಮಾಡಿಕೊಂಡವರು ಅಂಥವರು ನನ್ನ ಮತ್ತು ಉತ್ತರ ವಾರಸುದಾರರ ಪರಿಷ್ಕ ನಷ್ಟಕ್ಕೂ ಖರ್ಚಿಗೂ ಗುರಿಯಾಗಬೇಕಾಗುತ್ತೆಂತ ಈ ಮೂಲಕ ಎಚ್ಚರಿಸಿರುತ್ತೇನೆ.

[24-1] ಸ್ಕೂಲ್ ಮಾಸ್ಟರ್ ಟಿ. ಯಜ್. ನಂಜಪ್ಪ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವದಲ್ಲದೆ ತಲೆಯನೋವು, ತಲೆತಿರುಗುವದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	560 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177,
[25–1] ಬೀಣಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಮೈಸೂರು ಸೀಮೆಯ ರೇಷ್ಮೆ ವ್ಯವಸಾಯ.

ಮೈಸೂರು ರೇಷ್ಮೆ ವ್ಯವಸಾಯದ ನಿಪುಣರಾದ ಮಿ|| ಮಟ್ಸು. ನಾರಿ ಟಾಕೆಯರವರು ಆ ವ್ಯವಸಾಯಕ್ಕೆ ಸಂಬಂಧಪಟ್ಟ ವಿಧಾನಗಳನ್ನು ಚಿತ್ರ ಮತ್ತು ನಕ್ಷೆಗಳ ಮೂಲಕ ಪ್ರಕಟಮಾಡಿರುತ್ತಾರೆ. ಈ ಚಿತ್ರಗಳೂ ನಕ್ಷೆಗಳೂ ಬಹಳ ಸ್ಪಷ್ಟನಂದಕರವಾಗಿಯೂ, ಬಹಳ ಸುಲಭವಾಗಿ ತಿಳಿದುಕೊಳ್ಳುವುದಕ್ಕೆ ಅನುಕೂಲಿಸುವಂತೆಯೂ ರಚಿಸಲ್ಪಟ್ಟು ಅಚ್ಚಾಗಿರುತ್ತವೆ. ಚಿತ್ರಗಳಿರುವ ರಿಪೋರ್ಟಿನಲ್ಲಿ ಮಿ|| ಮಾರಿಯವರು ಬರೆಯುವುದೇನೆಂದರೆ—

1. ಇಲ್ಲಿ ಸ್ವಲ್ಪವಾಗಿ ಸೇರಿಸಿರುವ ತಸಬೀರುಗಳಲ್ಲಿ ಕೆಲವು ಮೈಸೂರು ಸಂಸ್ಥಾನದಲ್ಲಿ ಪ್ರಕೃತ ಪ್ರಚಾರದಲ್ಲಿರುವ ರೇಷ್ಮೆ ವ್ಯವಸಾಯ ವಿಧಾನಗಳನ್ನು ತೋರಿಸುತ್ತವೆ; ಮತ್ತು ಕೆಲವು ಚನ್ನಪಟ್ಟಣದಲ್ಲಿರುವ ಸರ್ಕಾರೀ ರೇಷ್ಮೆ ವ್ಯವಸಾಯ ಕ್ಷೇತ್ರದಲ್ಲಿ ಕಳೆದ ಆರು ತಿಂಗಳುಗಳಲ್ಲಿ ಆಚರಣೆಗೆ ತರಲ್ಪಟ್ಟಿರುವ ಅಭಿವೃದ್ಧಿಗಳನ್ನು ತೋರಿಸುವುವು.

2. ಹುಳು ಸಾಕುವ ಕೆಲಸವು ಈ ಉದ್ದೇಶಕ್ಕಾಗಿ ಬಾಡಿಗ್ಗೆ ತೆಗೆದುಕೊಂಡಿರುವ ಒಂದು ಸಣ್ಣ ಖಾಸಗೀ ಮನೆಯಲ್ಲಿ ನಡೆಯುತ್ತಿರುವುದರಿಂದಲೂ, ಬಹಳ ಅವಸರದಲ್ಲಿ ಏರ್ಪಾಡುಗಳನ್ನು ಮಾಡಿಕೊಂಡದ್ದರಿಂದಲೂ ಕ್ಷೇತ್ರದಲ್ಲಿ ಆರೀತಿ ತಂದಿರುವ ಅಭಿವೃದ್ಧಿಗಳು ಇನ್ನೂ ಪಕ್ಕಾ ಆಗಿರುವುದಿಲ್ಲ.

3. ಮೈಸೂರಿನಲ್ಲಿ ರೇಷ್ಮೆ ವ್ಯವಸಾಯವನ್ನು ಎಷ್ಟರಮಟ್ಟಿಗೆ ಅಭಿವೃದ್ಧಿಪಡಿಸಬಹುದೆಂಬುದನ್ನು ಕೂಡಿದ ಮಟ್ಟಿಗೂ ಜಾಗ್ರತೆಯಾಗಿ ಗೊತ್ತುಮಾಡಿಕೊಳ್ಳುವುದೇ ಈ ಪರೀಕ್ಷೆಯನ್ನು ಪಕ್ರಮಿಸುವುದರಲ್ಲಿ ನನ್ನ ಮುಖ್ಯ ಗುರಿಯಾಗಿತ್ತು. 1914 ನೇ ಇಸವಿಯ ಮಾರ್ಚಿ ತಿಂಗಳು ಮೊದಲನೆಯ ತಾರೀಖು ಮೊದಲುಗೊಂಡು ಆಗಸ್ಟ್ ಆಖೈರಿನ ವರೆಗಾಗುವ ಕಳೆದ ಆರು ತಿಂಗಳುಗಳಲ್ಲಿ ಮೈಸೂರು, ಬಂಗಾಳ ಮತ್ತು ಇಟಲೀ ದೇಶದ ಅನೇಕ ಜಾತಿಯ ಹುಳಗಳನ್ನಿಟ್ಟುಕೊಂಡು ಅಜಮಾಯಿಷಿಗಳನ್ನು ನಡಿಸಿ ಸಾಫಲ್ಯವಾದ ಫಲಿತಾಂಶಗಳನ್ನು ಪಡೆಯಲಾಯಿತು. ಮತ್ತು ಇಟಲಿ ಮತ್ತು ಮೈಸೂರು ಸೀಮೆಗಳ ಹುಳುಗಳಿಂದ ಕೆಲವು ಅರ್ಧ ಜಾತಿಯ ಹುಳುಗಳನ್ನು ಸಾಕಿ ಅವುಗಳಿಂದ ಶುದ್ಧಜಾತಿಗಿಂತಲೂ ಒಂದು ವಾರ ಮುಂದಾಗಿಯೇ ಬೆಳೆಯನ್ನು ತೆಗೆಯಲಾಗಿರುತ್ತೆ. ಈ ಅಜಮಾಯಿಷಿಗಳೆಲ್ಲಾ ಬಹಳ ತೀರ್ಮಾನವಾಗಿದ್ದವಾದಕಾರಣ ಮೈಸೂರಿನಲ್ಲಿ ರೇಷ್ಮೆ ವ್ಯವಸಾಯವನ್ನು ಬಹಳಮಟ್ಟಿಗೆ ಅಭಿವೃದ್ಧಿಪಡಿಸಲಾಗುವುದು.

ನಕ್ಷೆಗಳಿರುವ ಪುಸ್ತಕದಲ್ಲಿ ಮಿ|| ಮಾರಿಯವರು ಬರೆಯುವುದೇನೆಂದರೆ—

“ಮೈಸೂರಿನಲ್ಲಿ ರೇಷ್ಮೆಹುಳು ಸಾಕುವುದನ್ನು ಮೇಲು ಪಡಿಸುವುದಕ್ಕೆ ಹೊಸಮಾದರಿಯ ಸಾಕುವ ಮನೆಗಳನ್ನು ಕಟ್ಟಿ ಆರೋಗ್ಯಶಾಸ್ತ್ರಕ್ಕೂ, ಸಕಾರಣವಾದ ಸಲಹೆಗಳಿಗೂ ಅನುಸಾರವಾದ ನವೀನ ರೀತಿಯ ಸಾಕುವ ಕ್ರಮವನ್ನು ಬಳಕೆಗೆ ತರುವುದು ಅತ್ಯಂತ ಮುಖ್ಯ ವಿಷಯವಾಗಿರುವುದರಿಂದ ಈ ಮುಂದಿನ ಏರ್ಪಾಡನ್ನು ಸೂಚಿಸುತ್ತೇನೆ.

(1) ಹುಳು ಸಾಕುವುದನ್ನು ಕಲಿಸುವುದಕ್ಕಾಗಿ ಒಂದು ಪಾಠಶಾಲೆಯನ್ನು ಕಟ್ಟಿಸಿ, ಅಲ್ಲಿ ವಿದ್ಯಾರ್ಥಿಗಳನ್ನು ವಿವೇಕವಾದ ಹುಳು ಸಾಕುವ ಕ್ರಮದಲ್ಲಿ ತರಬೇತುಮಾಡಿ, ತರುವಾಯ ರೈತರಲ್ಲಿ ಹೊಸ ಪದ್ಧತಿಯನ್ನು ಪ್ರಚಾರಕ್ಕೆ ತರುವುದಕ್ಕೋಸ್ಕರ ಅವರನ್ನು ರೇಷ್ಮೆ ವ್ಯವಸಾಯದ ಇನ್‌ಸ್ಪೆಕ್ಟರುಗಳಾಗಿ ನೇಮಿಸಿ ತಾಲ್ಲೂಕುಗಳ ಮೇಲೆ ಕಳುಹಿಸಬೇಕು.

(2) ತಾಲ್ಲೂಕುಗಳಲ್ಲಿ ಮಾದರಿಯಾದ ಹುಳು ಸಾಕುವ ಮನೆಗಳನ್ನು ಕಟ್ಟಿಸಿ, ಪ್ರತಿಯೊಂದನ್ನೂ ಒಬ್ಬೊಬ್ಬ ಇನ್‌ಸ್ಪೆಕ್ಟರಿನ ನಿರ್ವಹದಲ್ಲಿಡಬೇಕು.

ನಾನು ಸರ್ಕಾರದವರಿಗೆ ಹುಳು ಸಾಕುವದನ್ನು ಕಲಿಸುವ ಪಾಠಶಾಲೆಗಳ ಮತ್ತು ಸಾಕುವ ಮನೆಗಳ ಕೆಲವು ಪ್ಲಾನ್‌ಗಳನ್ನು ಹಾಜರ್ಪಡಿಸಿಕೊಂಡಿರುತ್ತೇನೆ.”

ಈ ರಿಪೋರ್ಟು, ಪ್ಲಾನುಗಳ ಸಂಕ್ಷೇಪವಾದ ವಿವರಣೆಗಳನ್ನು ಓದಿ ಪ್ರಯೋಜನ ಹೊಂದಲಪೇಕ್ಷಿಸುವ ರೇಷ್ಮೆ ವ್ಯವಸಾಯಗಾರರು ಮೈಸೂರು ಸಂಪದಭ್ಯುದಯ ಸಮಾಜದ ವ್ಯವಸಾಯದ ಕಮಿಟಿ ಸೆಕ್ರೆಟರಿಯವರಿಗೆ ಬರೆದುಕೊಂಡರೆ ಅವರು ಕನ್ನಡದಲ್ಲಿ ರಚಿಸಲ್ಪಟ್ಟಿರುವ ಪ್ರತಿಗಳನ್ನು ಮುಫತ್ತಾಗಿ ಕಳುಹಿಸುವರು.

ಕುಂತಳಾನಂದ ತೈಲವು.

213-20

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೊದಲು ಬಹುಮಾನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾಗಿ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

ಬಹಳ ಶೀತಲವೂ ಸುವಾಸಿತವೂ ಆಗಿದ್ದು ವಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲ್ 1 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ಸಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

೧೯೧೫ನೆಯ ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ .... ಆಣೆ 4

„ 2 „ „ ಪೆನ್‌ಸಲ್ ಮುಚ್ಚಳ ಉಳ್ಳದ್ದು ..... „ 6

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ಒಂದಕ್ಕೆ 2 ಆಣೆ ಕಮಿಷನ್ ದೊರೆಯುವುದು. [228-16]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1912, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-31] Bangalore City.

ಮಧುರೆ ಉನ್ನಿ ಅಂಚಿನ ಸೀರೆ ಅಪ್ಪಲ್ ರಕಂ ರೂ. 2-6-0.

ಜನರ ಹಿಂಗು ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ರಿಂಗಪೂರು ಪಾಕೆಟ್ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡತಕ್ಕದು.

ಇದು ಉಡುವುದಕ್ಕೆ ದಪ್ಪವಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ನಂಗು ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೃಷ್ಣಸ್ವಾಮಿ ನಾಯುಡು,

[89-35] ರಿಯಾರ್, ನಂ. 27, ಬಂದರ್ ಬೀದಿ, ಜ. ಟ., ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವನ್ನು ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸುವುದಕ್ಕೆ ಶಕ್ಯವಾಗಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ನಡಿಸದಿರುವ ಪಕ್ಷದಲ್ಲಿ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ನಿರರ್ಗಳವಾಗಿಯೋ ಬಿಳುಪಾಗಿಯೋ ಇರುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಜ್ವರ; ಕಣ್ಣು ಮಂಜು; ತಲೆ ತಿರುಗುವಿಕೆ; ನರನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು ಲಕ್ಷ್ಯಮಾಡದಿದ್ದರೆ ಮೂತ್ರಕೃಚ್ಛ್ರರೋಗ, ವಾಯು, ಮೈಬಾತು, ಉರುಮೂತ್ರ ಮೂತ್ರಕೋಶದ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [198-22]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ಬೆಲೆ 3—0—0; ಅಥವಾ 6 ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

“ಪ್ರಯೋಜನಹೊಂದಿರಿ” ಮತ್ತು “ಇತರರಿಗೂ ಪ್ರಯೋಜನ ಉಂಟುಮಾಡಿರಿ.”

ಹಿಂದೂಸ್ಥಾನ ಕೋಆಪರೆಟಿವ್ ಜೀವವಿಮಾ ಸಂಘ ಲಿಮಿಟೆಡ್.

ಹಿಂದೂಸ್ಥಾನ ಕಟ್ಟಡಗಳು ಕಲಕತ್ತಾ.

ಮೂಲಧನ ಒಂದು ಕೋಟಿ ರೂಪಾಯಿ	(1,00,00,000).
ವಸೂಲಾದ ಮೊಬಲಗು „	87,00,000
ಶಾಶ್ವತಿಯಾದ ಧನ „	12,50,000

ಹಿಂದೂಸ್ಥಾನ ಸಂಘದ ಕೆಲವು ಮುಖ್ಯ ಅನುಕೂಲತೆಗಳು.

(1) ಜನಗಳಿಗೆ ಬಹಳ ಸುಲಭಕರವಾದ ವಿಮೆಪಾಲಿಸಿ ಕೊಟ್ಟು, ವೃದ್ಧಾಪ್ಯಕಾಲದಲ್ಲಿ, ಅಕಾಲ ಮರಣ ಉಂಟಾದರೆ ಕುಟುಂಬ ಸಂರಕ್ಷಣೆಗೂ ಯಾವ ವಿಧವಾದ ಕಷ್ಟವಿಲ್ಲದಂತೆ ವಿಮೆ ಮೊಬಲಗಿನಿಂದ ಸುಖ ಜೀವನವಾಗಲುವುದು.

(2) ಸಂಘದ ಪಾಲಿಸಿಯನ್ನು ಎರಡು ವರ್ಷದವರೆಗೂ ಚಾಲಿ ಇಟ್ಟುಕೊಂಡು ತದನಂತರ ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತುಗಳ ಆಧಾರದ ಮೇಲೂ ಅಥವಾ ಮತ್ತೊಬ್ಬ ಪಾಲಿಸಿದಾರರ ಜಾಮೀನಿನ ಮೇಲೂ ಬಹಳ ಸುಲಭ ಬಡ್ಡಿಯಿಂದ ಅವರು ವಿಮೆ ಮಾಡಿರತಕ್ಕ ಮೊಬಲಗಿನಷ್ಟು ಸಾಲಾ ಸಂಘದವರು ಕೊಡುತ್ತಾರೆ ಮತ್ತು ಸುಲಭ ಕಂತಿನಿಂದ ಸಂಘದವರು ವಾಪಸ್ಸು ಪಡೆಯುತ್ತಾರೆ.

(3) ಯಾವ ವಿಧವಾದ ಆಧಾರವಿಲ್ಲದೆ ವಿಮೆ ಅಥವಾ ಜಾಮೀನು ತೆಗೆದುಕೊಳ್ಳದೆ ಅವರ ಮೊಬಲಗು ಸುಲಭ ಕಂತಿನಿಂದ ವಾಪಸ್ಸು ಪಡೆಯುತ್ತಾರೆ. ಇದು ಬಡವರಿಗೂ ಮತ್ತು ರೈತರಿಗೂ ಮುಖ್ಯ ಅನುಕೂಲವಾಗಿರುತ್ತೆ.

(4) ಸಂಘದ ಆಡಳಿತ ಮತ್ತು ಮೇಲ್ವಿಚಾರಣೆ ಮಹಾರಾಜರಿಂದಲೂ, ದೊಡ್ಡ ಜಮೀನುದಾರರಿಂದಲೂ ನಡಿಸಲ್ಪಡುತ್ತೆ.

Wanted Immediately.—Active & energetic Travelling Inspector in every District of the State on a salary of Rs 30/ per mensem excluding travelling expenses and commissions. No guaranteed business required. The post is permanent and well paying.

For further particulars apply sharp to

Messrs. VENKATACHALAM & SONS,
Chief Agents, Hindustan Co-operative Assurance,
[292-7] 166, Dodpet, Mysore.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹದ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. (20 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ— ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಗಳಿಗೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವೂ ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು

ವಿಳಾಸ— ರಾಜವೈದ್ಯ ನಾರಾಯಣಜೀ ಕೇಶವಜೀ,

[247-12] 20, ಚೀನಾಬಜಾರು ರೋಡು, ಮದರಾಸು

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು, ನೋಡುವುದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒಟ್ಟು ಕೆಲಸಮಾಡುವವರಿಗೆ ಅನುಕೂಲವಾದುದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು, ಖಾತ್ರಿಯಾದ ಗಡಿಯಾರ ಕೂಡಲೆ ಒರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೀಡಿ ವಾಚು ಕೀಲೆಸ್ ಲಿವರ್ ಪಕ್ಕ ಸೈಜು ಕಂಪೆನ್‌ಸೇಟಡ್ ಬ್ಯಾಲೆನ್ಸು ಬಹು ಬಲಿಷ್ಠವಾದ 6 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಡಿಸೆಂಬರ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಕೀ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಬನಾರ್ಸ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,

[109-36] ಸಾಹುಕಾರ್ ಪೇಟೆ, ಮದರಾಸು

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚು

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಭಾಗವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರಕ್ಯಕವಾಗಿ ತರಿಸುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು, ಖಾತ್ರಿಯಾದದ್ದು. ನಂಟಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥದ್ದು. ಬಹು ರಮಣೀಯವಾದ ವಾಚ್ ಬೇರೆ ಎಲ್ಲಿ ದೊರೆಯುತ್ತೆ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ಚಿತ್ರಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಕರವಸ್ತ್ರ ಸುವಾಸನೆ ತೈಲ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180-18] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮುಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಇನಾಮಾಗಿ ಕಳುಹಿಸಲಾಗುವುದು. [69-46]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಶ್ರೀ ತಾಂಬೂಲ.

ಅನೇಕರು ತಾಂಬೂಲದ ಮಾತ್ರೆಗಳನ್ನು ತಯಾರಿಸಿರುವರು ಆದರೆ ಇದನ್ನು ಸ್ವಲ್ಪ ಪರೀಕ್ಷಿಸಿನೋಡಿ ತಾಂಬೂಲದೊಂದಿಗೆ 1-2 ಮಾತ್ರೆಗಳನ್ನು ಸೇವಿಸುತ್ತ

ಬಂದಲ್ಲಿ ಮುಖದ ಬಿವರಿನ ದುರ್ಗಂಧವನ್ನು ಹೋಗಲಾಡಿಸಿ ತೇಜಸ್ಸನ್ನುಂಟುಮಾಡುತ್ತದೆ. ಮಳೆನಾಡಿನಂಥ ಕೆಟ್ಟನೀರಿನ ವಾತ, ಶೀತಜ್ವರ ಸಂಬಂಧ ದೋಷಗಳನ್ನು ನಾಶಮಾಡುವುದು. ವಿದ್ಯಾರ್ಥಿಗಳು ಪ್ರಾತಃಕಾಲ 1-2 ಬರೀ ಮಾತ್ರೆಗಳನ್ನು ಸೇವಿಸುತ್ತ ಬಂದಲ್ಲಿ ಆಲಸ್ಯವಿಲ್ಲದಂತೆ ಸ್ಮರಣಶಕ್ತಿಯುಂಟಾಗಿ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿಗಳು ಹೆಚ್ಚುತ್ತವೆ ಛಳಿ, ಜ್ವರ, ಕೆಮ್ಮು, ನೆಗಡಿ ಮುಂತಾದ್ದಕ್ಕೆ 1-2 ಮಾತ್ರೆಗಳು ಕೊಟ್ಟರೆ ಕೂಡ್ಲೆ ಗುಣವಾಗುವುದಲ್ಲದೆ ಪ್ಲೇಗ್ ವ್ಯಾಧಿಯನ್ನು ಕೂಡ ಹತ್ತಿರ ಬರಗೊಡಿಸುವುದಿಲ್ಲ. ಸಾವಿರಾರು ಜನಗಳಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯಕ ಇದನ್ನು ಇಡಬೇಕು. ಬಾಟ್ಲಿ 1 ಕ್ಕೆ 4 ಆಣೆ. ಆರಕ್ಕೆ ಒಂದು ಇನಾಮು. ವಿ. ಪಿ. ಖರ್ಚು ಬೇರೆ.

[236–13] ಎಂ. ಗೋವಿಂದಶೆಟ್ಟಿ,

ಆಯುರ್ವೇದಿಕ್ ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹ ಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರಂ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶಳತ-ಹೊಟ್ಟೆಯುಬ್ಬರ-ಮುಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 260 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಖರ್ಚು ಪ್ರತ್ಯೇಕ. [231-14]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ

ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!

ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[236–10] ಪಿ. ಬಿ. ಬಾಕ್ಸ್ 330, ಬೊಂಬಾಯಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾತದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-22] GIRLS' INDUSTRIAL SCHOOL, HASSAN.



ಜನವರಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1–14–6

ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಾಗುತ್ತದೆ. [99-36]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-16] ಬ್ರಾಂಚ್ ಸೆಕ್ರೆಟರಿ, ಮದರಾಸ್

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆಗೊತ್ತಾಗುವುದು!

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ ಲೇಪಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ವೀಳ್ಯದೆಲೆಗೆ ಸವರಿಯೋ, ಬಿಸಿನೀರಿಗೆ ಹಾಕಿಯೋ ಬೆಳಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ ಭೇದಿ, ಪೋಳಂಕೆ ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ವಾಯುನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ [285-6]

ನಮ್ಮ ವಿಳಾಸ—ಕೇಶವಜೀ ದೇವಚಂದ್,

ರಾಮ್‌ಭಾನ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ, ದೊಡ್ಡಪೇಟೆ, ಮೈಸೂರು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬಯಿ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬಯಿ, ದಿ ಕ್ರಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬಯಿ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬಯಿ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬಯಿ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬಯಿಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾದುಮ್ಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬಯಿಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬಯಿಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-43]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ತಯಾರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಜೀಳಿಗೆ ಸರಿಯಾದ ಮದ್ದು.

ಜೀಳಿನ ಹೊಡತಕ್ಕೆ "ಸ್ವಾಮಿನಿಯಾನಿಯೊ" ವಿನಹಾ ನಿರಪಾಯಕರವಾದ ಮತ್ತು ಸೇವನೆಗೆ ಅರ್ಹವಾದ ಔಷಧವು ಮತ್ತೊಂದಿಲ್ಲ. ಪುನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡೆದಿರುತ್ತೆ.

"ನಮ್ಮ ಜೀಳಿನ ಮದ್ದಿನಿಂದ ತಪ್ಪದೆ ಗುಣ ಬಂದಿದೆ" ಯೆಂದು ಶ್ರೀಮಾನ್ ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ. ಬಾಟ್ಲಿ ಒಂದಕ್ಕೆ ಕ್ರಯ ರೂ ೦–೮–೦ ನಾಲ್ಕು ಬಾಟ್ಲವರಿಗೆ ಪೋಸ್ಟ್ ಹಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೂಡಲೆ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

[296-7] ವಿಳಾಸ.—ಸ್ವಾಮಿನಿಯಾನಿಯೊ ಡಿಪೋ, ಹರಿಹರ.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ⅓ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೇ ಕೆರೋಸೀನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಡ್ತೇವೆ. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ಪದಾರ್ಥಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,

[296-6] 177, ಮಿಂಟ್ ಬಜಾರ್ ರೋಡ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

15—1—1915 ರಿಂದ 22—1—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	11	5	0	0
ಮೈಸೂರು ,,	6	4	0	0
ಬೆಂಗಳೂರು ಡಿಸ್ಟ್ರಿಕ್ಟು	12	17	0	0
ಮೈಸೂರು ,,	55	44	0	0
ಕೋಲಾರ್ ,,	18	21	0	0
ಕೋಲಾರ್ ಚಿನ್ನದ ಗಣಿಗಳು	8	10	0	0
ತುಂಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	8	6	0	0
ಚಿತ್ರದುರ್ಗ ..	28	12	0	0
ಕಡೂರ್ ..	8	3	0	0
ಶಿವಮೊಗ್ಗ ..	4	3	4	2
ಜುಮ್ಲಾ	154	124	4	2

ಶಾಲಿವಾಹನ ಶಕ ವರ್ಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಮಾಘ ಬಹುಳ ಷಷ್ಠಿ ಶುಕ್ರವಾರದಿಂದ ಮಾಘ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಫೆಬ್ರವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಇಂಗ್ಲಿಷ್ ಮಾಸ ತೇದಿ
5	ಶುಕ್ರ *	ಷಷ್ಠಿ	49-51	ಚಿತ್ತ	54-46	23
6	ಶನಿ	ಸಪ್ತಮಿ	44-6	ಸ್ವಾತಿ	50-45	24
7	ಭಾನು ::	ಅಷ್ಟಮಿ	38-11	ವಿಶಾಖ	46-32	25
8	ಸೋಮ	ನವಮಿ	32-10	ಅನುರಾಧ	43-15	26
9	ಮಂಗಳ §	ದಶಮಿ	26-24	ಜ್ಯೇಷ್ಠ	40-46	27
10	ಬುಧ †	ಏಕಾದಶಿ	21-9	ಮೂಲ	34-53	28
11	ಗುರು ‡	ದ್ವಾದಶಿ	16-24	ಪೂಷಾ	32-0	29

* ಮಳೆ ನಕ್ಷತ್ರ—ಧನಿಷ್ಠ 1 ನೇ ಪಾದ. :: ಪಾಪಾಭಾವ, ತಿಸ್ರೋಷ್ಟಕಾ, ಆಲುವಾಜಮ್ಮಣ್ಣೀಯವರ 1 ನೇ ಶ್ರೀಮೂರ್ತಿ ವರ್ಧಂತಿ. § ದಶಮಿ ತಿಥಿ, ಮಳೆ ನಕ್ಷತ್ರ—ಧನಿಷ್ಠ 2 ನೇ ಪಾದ. † ತಿಥಿದ್ವಯಂ, ಸರ್ವತ್ರ, ಏಕಾದಶಿ. ‡ ತ್ರಯೋದಶೀ ತಿಥಿ, ಪ್ರದೋಷ.

Printed and Published by the Rev. H. Gulliford, Proprietor and Manager, Wesleyan Mission Press, Mysore. 4/2/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸರ್ ೧೯೧೫ ನೇ ಇಸವಿ ಫೆಬ್ರವರಿ ತಾರೀಖು ೧೧ ನೇ ಗುರುವಾರ. ಸಂಚಿಕೆ ೩೭

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ ½ ಆ., ವಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1¼ ರೂ., ಅಮೃತಪುಳಿನ 1½ ಆ., ಚಿತ್ರವಿಚಿತ್ರಾವಳಿ 1¼ ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಶ್ರೀವಿಜಯ 3 ಆ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ
[63-51] ಎಂ. ಸುಬ್ಬರಾವ್, ಬುಕ್ ಸೆಲರ್, ಬಳೇಪೇಟೆ, ಬೆಂಗಳೂರು ಸಿಟಿ.

ಅತ್ಯುತ್ತಮವಾದ ಮೈಸೂರು ಪಂಚಾಂಗವು.

ಇದು ಸಿದ್ಧಾಂತ ಮತ್ತು ವಾಕ್ಯವನ್ನನುಸರಿಸುವವರಿಬ್ಬರಿಗೂ ಅನುಕೂಲಿಸುವಂತೆ ಅನೇಕ ವಿಷಯಗಳಿಂದೊಡಗೂಡಿ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಕ್ರಯ 1 ಆಣೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್. [29-1]
ವಿಳಾಸ—ಮಹಾರಾಜ ಸಂಸ್ಕೃತ ಕಾಲೇಜು, ಜ್ಯೋತಿಷ ವಿದ್ವಾನ್, ಮೈಸೂರು.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳುಗಟ್ಟಲೆ ಹುಳಿವಾಸನೆಯಾಗದು. ವಿ. ಪಿ. ಯಲ್ಲೂ ತರಿಸಬಹುದು. ಕ್ರಯ ಸೇರಿಗೆ 1 ರೂಪಾಯಿ, ವಿ. ಪಿ. ಛಾರ್ಜು ಬೇರೆ. ವಿಳಾಸ.—ವಿ. ಎಸ್. ನಂಜುಂಡಯ್ಯ,
[14-5] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಗಳೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.
ನಮ್ಮ ವಿಳಾಸ— ಬಿ. ನರಸಿಂಗರಾವ್,
[300-7] ಎಡಿಟರ್, ಲಾ ಗೆಜೆಟ್, ಬೆಂಗಳೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲೀ) ವ್ಯವಹಾರಗಳ ಅರ್ಜಿಗಳನ್ನು ಬರೆಯುವುದಕ್ಕೆ ಪ್ರಸಿದ್ಧವಾದ ಲೀಗಲ್ ಫಾರ್ಮ್ಸ್ ರೂ. 1-8-0. ಇಂಡಿಯನ್ ಪೀನಲ್ ಕೋಡು ರೂ. 2; ಅದರ ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ಕಂದಾಯ ಕಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.
[143-31] ವಿಳಾಸ:— ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು !!!

ಯುದ್ಧಕ್ಕೆ ಸೇರಿದವಕ್ಕೆ ಪ್ರಮುಖ ದೊರೆಗಳ ಪಟಗಳೂ, ವಿವಿಧ ಕದನಗಳ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿದಂತೆ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ 3 ಆಣೆ; ವಿ. ಪಿ. ಯಲ್ಲಿ 4 ಆಣೆ.
[8-5] ನಮ್ಮ ವಿಳಾಸ,—ದಿ ಜನರಲ್ ಏಜೆನ್ಸಿ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.
ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-52]

ಅರಾಬಿಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ಕ್ಲಾಸಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.
ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

Messrs. Petrie-Hay & Son, Hunsur.

ನಮ್ಮಲ್ಲಿ ಬೆಳದ ತೆಂಗಿನ ಸಸಿಗಳು 2 ವರ್ಷದ ಹಳೇ ಅಧಿ ರೂಪಾಯಿಕೆ 30-40 ಸಸಿಗಳು ಮಾರಾಟಕ್ಕೆ ಇರುತ್ತವೆ. ಇಷ್ಟವುಳ್ಳವರು ಶಪ್ಪೀಲನ್ನು ಹುಣಸೂರಿನಲ್ಲಿರುವ ಪೆಟ್ರಿ ಹೇ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೋಟೇ ಗಾಡಿ ತರುವರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ. [232-15]

ROOFING TILES

For sale at the Mysore Tile Factory, Mysore. Strong and durable.

1st Class	... ... Rs. 40/	per 1,000
2nd "	... ... " 25/	" "
3rd "	... ... " 10/	" "

Apply:
[28-1] MANAGER, Mysore Tile Factory, Mysore.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸಿಪಾಯಿ ಛಾರ್ಜು 6 ಆಣೆ.

ಆನಂದಸುಂದರಿ ...	0-8-0	ರಜನೀಬಾಲೆ ...	0-8-0
ಶಾರದಾಸುಂದರಿ ...	0-8-0	ಕುಮುದಿನಿ ...	0-6-0
ರಾಧಾಮಾಧವಿ ...	0-4-0	ಸಂತಾಪಕ ...	0-4-0

[275-9] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಪಾಪದ ಸಂಚಿಕೆಗೂ, ಉಚಿತವಾಗಿಯೂ ಬೆಲೆಯಿಲ್ಲ. [100-30]
ಅತ್ಯುತ್ತಮ ಕಾದಂಬರಿಗಳು:— ಹಾ! ವಾಲ್ಮೀಕಿ 12 ಆ; ಅಸ್ತಮಯ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ಬಂಗಾರ ಮದುವೆ 1 ಆ; ವಿಷವಿವಾಹ 1 ಆ; ಆನಂದಮಠ 1 ಆ; ಸನ್ಯಾಸಿನಿ 1½ ಆ; ಸಂಸಾರಿ 2½ ಆ; ಸುಶೀಲೆ 6 ಆ; ಸಭಾ ಭಾಗ 1 ೩ ಆ; ರಂಕನ ಪ್ರತಿಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ.—ಜನರಲ್ ಏಜೆನ್ಸಿ, ಮೈಸೂರು.

ಹೊಸ ಪದ್ಧತಿ!! ಹೊಸ ಪುಸ್ತಕ!! ಹೊಸ ಭಾವನೆ!!
ಮಾರಾಟಕ್ಕೆ ಸಿದ್ಧವಾಗಿದೆ

ಭಾಷಾನಿಧಿ.

ಕ್ರಯ ಅಂಚೆ ವೆಚ್ಚ ಸೇರಿ ರೂ. 1-12-0.

ಒಂಭತ್ತು ಭಾಷೆ—ಒಂಭತ್ತು ಲಿಪಿ.

ಒಂದಕ್ಕೆ ಒಂಭತ್ತು ಲಾಭ! ವರ್ಣಸಂಖ್ಯಾನ!! ಮೊದಲನೆಯ ಪುಸ್ತಕ!!!

ಕನ್ನಡ, ತೆನುಗು, ಅರವ, ಗ್ರಂಥ, ಮಲೆಯಾಳ, ಸಂಸ್ಕೃತ, ಮಹಾರಾಷ್ಟ್ರ, ಹಿಂದಿ, ಗುಜರಾತಿ, ಬೆಂಗಾಳಿ, ಈ ಭಾಷೆಗಳಲ್ಲಿ ಯಾವುದಾದರೊಂದನ್ನು ತಿಳಿದವರು ಇತರ ಭಾಷೆಗಳನ್ನೂ ಲಿಪಿಗಳನ್ನೂ ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಈ ಪುಸ್ತಕವು ತುಂಬಾ ಸಹಾಯವಾಗಿರುವುದು. [282-9]
ಕೆಲವು ಪುಸ್ತಕಗಳೇ ಅಚ್ಚಾಗಿವೆ! ಮುಗಿದ ನಂತರ ದೊರೆಯಲಾರದು!!

ಕ್ರಯ ಒಂದು ರೂಪಾಯಿ ಹನ್ನೆರಡಾಣೆ ಮಾತ್ರ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮು, ಸಂಪಾದಕ—ಸವಿನುಡಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ



ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ	....	ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು	......	,, 6

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ಒಂದಕ್ಕೆ 2 ಆಣೆ ಕಮಿಷನ್ ದೊರೆಯುವುದು. [229-16]
ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸ್ತ್ರೀಯರ ಖುಷ್‌ಖಬರು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲವರ್ಣದ ಸಮೃದ್ಧ ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿದ ಬಳಿಕ ಎಂದಿಗೂ ಉದುರಿ ಬಿದ್ದುಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವಿಕೆಗಿಂತ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಎಂಬ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ದಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕಳಿಸಬೇಕು ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ಸ್ವಲ್ಪ ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-3]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—
ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜಂಟ್, ಬಿ ಆಲ್ಬರ್ ಮಾರ್ಟ್, ಮಂಗಳೂರು.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-32] Bangalore City.

"ಪ್ರಯೋಜನಹೊಂದಿರಿ" ಮತ್ತು "ಇತರರಿಗೂ ಪ್ರಯೋಜನ ಉಂಟುಮಾಡಿರಿ."

ಹಿಂದೂಸ್ಥಾನ ಕೋಆಪರೇಟಿವ್ ಜೀವವಿಮೆ ಸಂಘ ಲಿಮಿಟೆಡ್.

ಹಿಂದೂಸ್ಥಾನ ಕಟ್ಟಡಗಳು ಕಲಕತ್ತಾ.

ಮೂಲಧನ ಒಂದು ಕೋಟಿ ರೂಪಾಯಿ		(1,00,00,000).
ವಸೂಲಾದ ಮೊಬಲಗು	,,	87,00,000
ಪಾವತಿಯಾದ ಧನ	,,	12,50,000

ಹಿಂದೂಸ್ಥಾನ ಸಂಘದ ಕೆಲವು ಮುಖ್ಯ ಅನುಕೂಲತೆಗಳು.

(1) ಜನಗಳಿಗೆ ಬಹಳ ಸುಲಭಕರವಾದ ವಿಮೇಪಾಲಿಸಿ ಕೊಟ್ಟು, ವೃದ್ಧಾಪ್ಯಕಾಲದಲ್ಲೂ, ಅಕಾಲ ಮರಣ ಉಂಟಾದಲ್ಲಿ ಕುಟುಂಬ ಸಂರಕ್ಷಣೆಗೂ ಯಾವ ವಿಧವಾದ ಕಷ್ಟವಿಲ್ಲದಂತೆ ವಿಮೇ ಮೊಬಲಗಿನಿಂದ ಸುಖ ಜೀವನಮಾಡಬಹುದು.

(2) ಸಂಘದ ಪಾಲಿಸಿಯನ್ನು ಎರಡು ವರ್ಷದವರೆಗೂ ಜಾರಿಲಿ ಇಟ್ಟುಕೊಂಡು ತದನಂತರ ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತುಗಳ ಆಧಾರದ ಮೇಲೂ ಅಥವಾ ಮತ್ತೊಬ್ಬ ಪಾಲಿಸಿದಾರರ ಜಾಮೀನಿನ ಮೇಲೂ ಬಹಳ ಸುಲಭ ಬಡ್ಡಿಯಿಂದ ಅವರು ವಿಮೇ ಮಾಡಿರತಕ್ಕ ಮೊಬಲಗಿನಷ್ಟು ಸಾಲಾ ಸಂಘದವರು ಕೊಡುತ್ತಾರೆ ಮತ್ತು ಸುಲಭ ಕಂತಿನಿಂದ ಸಂಘದವರು ವಾಪಸ್ಸು ಪಡೆಯುತ್ತಾರೆ.

(3) ಯಾವ ವಿಧವಾದ ಆಧಾರವಿಲ್ಲದೆ ಮನೆ ಅಥವಾ ಜಮೀನು ಕೊಂಡುಕೊಟ್ಟು ಅದರ ಮೊಬಲಗು ಸುಲಭ ಕಂತಿನಿಂದ ವಾಪಸ್ಸು ಪಡೆಯುತ್ತಾರೆ. ಇದು ಬಡವರಿಗೂ ಮತ್ತು ರೈತರಿಗೂ ಮುಖ್ಯ ಅನುಕೂಲವಾಗಿರುತ್ತೆ.

(4) ಸಂಘದ ಆಡಳಿತ ಮತ್ತು ಮೇಲ್ವಿಚಾರಣೆ ಮಹಾರಾಜರಿಂದಲೂ, ದೊಡ್ಡ ಜಮೀನುದಾರರಿಂದಲೂ ನಡಿಸಲ್ಪಡುತ್ತೆ.

Wanted Immediately.—Active & energetic Travelling Inspector in every District of the State on a salary of Rs. 30/ per mensem excluding travelling expenses and commissions. No guaranteed business required. The post is permanent and well paying.

For further particulars apply sharp to

Messrs. VENKATACHALAM & SONS,
Chief Agents, Hindustan Co-operative Assurance,
[292-8] **166, Dodpet, Mysore.**

ಇದನ್ನು ಓದಿದ ಮಾತ್ರಕ್ಕೆ ನಿಮಗೆ ಲಾಭವುಂಟು! ಮುಂಚಿಹೋದ ಮೇಲೆ ಚಿಂತಿಸಬೇಡಿ!!

Practical English Self-Instructor (Vols. 1, 2 & 3).

ಸಚಿತ್ರ ಆಂಗ್ಲಭಾಷಾ ಪ್ರಕಾಶಕ

(ಸ್ವತಃ ಇಂಗ್ಲಿಷ್ ಕಲಿಯುವದಕ್ಕೆ ವಿದ್ವಾಂಸರಿಂದ ತಯಾದ ಅತ್ಯಂತ ನೂತನ ಪುಸ್ತಕ)

ಉತ್ತಮ ಕ್ರಮಗಳನ್ನು ಅನುಸರಿಸಿ ಇಂಗ್ಲಿಷ್ ಭಾಷೆಯನ್ನು ಕಲಿಯಲಿಚ್ಛೆವುಳ್ಳವರಿಗೆ ಇದು ಶಾಶ್ವತವಾದ ರಾಜಭಾಷಾ ಕೈಪಿಡಿ. ಸ್ಥಳ ಸಂಕೋಚದಿಂದ ಈ ಪುಸ್ತಕದ ವಿಷಯಗಳನ್ನು ಇಲ್ಲಿ ವಿವರಿಸಲಿಲ್ಲ. ಇಂಥ ಪುಸ್ತಕ ಇದುವರಿವಿಗೆ ಇದ್ದೇ ಇರಲಿಲ್ಲ. ಸರ್ವವಿಷಯಗಳೂ ಇದೊಂದರಲ್ಲೇ ಅಡಕವಾಗಿವೆ. ದೇಶಬಾಂಧವರ ಪ್ರಯೋಜನಾರ್ಥವಾಗಿ ಇದನ್ನು ಪ್ರಕಟಿಸಿದೆ. ನಿಮ್ಮ ಪರೀಕ್ಷೆಗಾಗಿ ಮೊದಲು ಒಂದನ್ನು ತರಿಸಿಕೊಂಡು ಇದರ ಯಥಾರ್ಥವನ್ನು ಗ್ರಹಿಸಿ ನಿಮ್ಮ ಇಷ್ಟಮಿತ್ರರಲ್ಲಿ ಪ್ರಕಟಿಸಿದರೆ ದೊಡ್ಡ ಉಪಕಾರವಾಗುವದು. ಸಾವಕಾಶಮಾಡದೆ ಖಂಡಿತ ಪರೀಕ್ಷಿಸಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಕ (3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ) ಕ್ರಯ	ರೂ. 2- 0-0	ಟಪಾಲು ಖರ್ಚು 0-4-0.
ನಿಮ್ಮ ಪರೀಕ್ಷೆಗಾಗಿ ತರಿಸಿಕೊಂಡರೆ	,, ,, 1-12-0	ಟಪಾಲು ಖರ್ಚು ಮಾಫಿ.
ಸಚಿತ್ರ ಆಂಗ್ಲಭಾಷಾ ಪ್ರಕಾಶಕ 1ನೇ ಪುಸ್ತಕ	,, ,, 1- 0-0	ಟಪಾಲು ಖರ್ಚು 0-2-0
ನಿಮ್ಮ ಪರೀಕ್ಷೆಗಾಗಿ ತರಿಸಿಕೊಂಡರೆ	,, ,, 0-14-0	ಟಪಾಲು ಖರ್ಚು ಮಾಫಿ.

[21-2] ಪರೀಕ್ಷೆಗಾಗಿ ತರಿಸಿಕೊಳ್ಳುವವರು ಈ ತಿಂಗಳು ಆಖೈರೊಳಗಾಗಿ ಬರೆಯಬೇಕು.

ವಿಳಾಸ—ಮ್ಯಾನೇಜರ್, ಹಿತೋದಯ ಆಫೀಸ್, 2/80, ಕಿಲಾರಿರೋಡ್, ಬೆಂಗಳೂರು ಸಿಟಿ.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರ್ಮಾಡಿರುವದು.

[9-5]

ಮೆಲಿನ್‌ರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರ್ಮಾಡಿಕೊಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಬಲಪಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪ್ರಪಂಚಯುದ್ಧ

ಘನ ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಭಾವಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳರುವ ಭೀಕರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಪಲಾತವಾದ ಎಮ್‌ಡನ್ನನ್ನು ನೋಡಿರುವಿರಾ? ಅದರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿಖಾಮಣಿಯನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಯಾಸನ ಮುಕ್ಕಳಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಷರಾ:—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[10-5]

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ನಾಶಪಡಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0 ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ನಾಶಪಡಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 32 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಟ್ಟುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-13] 20, ಚೀನಾಬಜಾರು ರೋಡು, ಮದರಾಸು.

ಸಂತೋಷಕರವಾದ ಪ್ರಕಟನೆ.

ರೈಲ್ವೆ ರೆಗ್ಯುಲೇಟರ್ ವಾಚ್.



ಇದರ ಕ್ರಯ 6 ಬಹುಮಾನಗಳ ಸಮೇತ ರೂ. 3-8-0 ಮಾತ್ರ. 6 ವರುಷಗಳ ಗ್ಯಾರಂಟಿ. ಧನವಂತರೇ, ಧನಹ ಇಂಚ್ ಮಾರ್ಕ್ ಅಂದರೆ ಗುರುತುಳ್ಳ ಪ್ರಖ್ಯಾತಿಯಾದ ಲೀವರ್ ಕೆಲಸದಿಂದ ತಯಾರಾದ ಈ ವಾಚ್ ಈಗತಾನೆ ಬಂದಿರುತ್ತೆ. ಬಲಿಷ್ಠವಾದದ್ದು. ಹೆಚ್ಚು ವರ್ಣನೆಗಳಿಂದೇನು? ದೀರ್ಘಕಾಲ ಬಾಳಿಕೆ ಬರುವ ವಾಚ್. ಸುಂದರವಾದದ್ದು. ಇದರ 6 ಬಹುಮಾನಗಳ ತಪ್ಸೀಲು: (1) ಸುಂದರವಾದ ವಾಚ್ ಸರಪಣಿ, (2) ನಾಜೂಕುಳ್ಳ ಉತ್ತರಮುಖಿ, (3) ತಮಾಷೆಯಾದ ಬೊಂಬೆ, (4) ನಾಜೂಕುಳ್ಳ ಕರವಸ್ತ್ರ, (5) ಪರಿಮಳವುಳ್ಳ ಸೆಂಟ್ ಶೀಷೆ, (6) ಪಟೂಕ ಗುಂಡಿಗಳ ಸೆಟ್ಟು.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

[20-3] ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂಬರ್ 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು

ಶ್ರೀ ತಾಂಬೂಲ.

ಅನೇಕರು ತಾಂಬೂಲದ ಮಾತ್ರೆಗಳನ್ನು ತಯಾರಿಸಿರುವರು. ಆದರೆ ಇದನ್ನು ಸ್ವಲ್ಪ ಪರೀಕ್ಷಿಸಿನೋಡಿ. ತಾಂಬೂಲದೊಂದಿಗೆ 1-2 ಮಾತ್ರೆಗಳನ್ನು ಸೇವಿಸುತ್ತ

ಬಂದಲ್ಲಿ ಮುಖದ ಬೆವರಿನ ದುರ್ಗಂಧವನ್ನು ಹೋಗಲಾಡಿಸಿ ತೇಜಸ್ಸನ್ನುಂಟುಮಾಡುತ್ತದೆ. ಮಲಿನಾದಿನಂಥ ಕೆಟ್ಟಸೇರಿನ ವಾತ, ಶೀತಜ್ವರ ಸಂಬಂಧ ದೋಷಗಳನ್ನು ನಾಶಮಾಡುವುದು. ವಿದ್ಯಾರ್ಥಿಗಳು ಪ್ರಾತಃಕಾಲ 1-2 ಬತೀ ಮಾತ್ರೆಗಳನ್ನು ಸೇವಿಸುತ್ತ ಬಂದಲ್ಲಿ ಆಲಸ್ಯವಿಲ್ಲದಂತೆ ಸ್ಮರಣಶಕ್ತಿಯುಂಟಾಗಿ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿಗಳು ಹೆಚ್ಚುತ್ತವೆ. ಛಳಿ, ಜ್ವರ, ಕೆಮ್ಮು, ನೆಗಡಿ ಮುಂತಾದ್ದಕ್ಕೆ 1-2 ಮಾತ್ರೆಗಳು ಕೊಟ್ಟರೆ ಕೂಡ್ಲೆ ಗುಣವಾಗುವುದಲ್ಲದೆ ಪ್ಲೇಗ್ ವ್ಯಾಧಿಯನ್ನು ಕೂಡ ಹತ್ತರ ಬರಗೊಡಿಸುವುದಿಲ್ಲ. ಸಾವಿರಾರು ಜನಗಳಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯಕ ಇದನ್ನು ಇಡಬೇಕು. ಬಾಟ್ಲಿ 1 ಕ್ಕೆ 4 ಆಣೆ. ಆರಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಬೇರೆ.

[235-14] ಎಂ. ಗೋವಿಂದಶೆಟ್ಟಿ,

ಆಯುರ್ವೇದಿಕ್ ಮೆಡಿಕಲ್ ಪ್ರಾಕ್ಟಿಷನರ್, ದೇವನಹಳ್ಳಿ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ಸಂಖ್ಯೆ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!



[52-49]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0 ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಪೋಟಿನ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಬೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು. ಮುಂಬಯಿ, ಮತ್ತು ಜಹಂಗೀರ್ ಸ್ಟ್ರೀಟ್, ಮದರಾಸು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒಟ್ಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಟೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಡಿಸೆಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಜನಾಕ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,

[109-37] ಸಾಹುಕಾರ್ ಪೇಟೆ, ಮದರಾಸು.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 5,00,000.

(1895 ನೇ ಇಸವಿ III ನೇ ನಂಬರು ಮೈಸೂರು ಕಂಪನಿಗಳ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರಾಗಿದೆ).

ನಿರ್ವಿವಾದವಾದ ಭದ್ರತೆ! ಆಕರ್ಷಣೀಯವುಳ್ಳ ಏರ್ಪಾಡುಗಳು!! ಅಪಾಯವಿಲ್ಲದ ನಡವಳಿಕೆಗಳು!!

ನನಾಫ಼ಿ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನದ) ಪತ್ರಗಳನ್ನು ಕೊಡುವದೇ ವಿಶೇಷ ವಿಷಯವಾಗಿದೆ. ಒಂದರಲ್ಲಿ—ಎರಡು (ಸೇರು ಮತ್ತು ಜೀವವಿಮೆ ಈ ಎರಡು ಪ್ರಯೋಜನಗಳು ಸೇರಿರುವ) ಏರ್ಪಾಡು ಮತ್ತು ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ (ಜಮೀನು ಮತ್ತು ಮನೆ ಕೊಂಡು ಕೊಡುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ) ಏರ್ಪಾಡುಗಳು ನೂತನ ವಿಷಯವಾಗಿದೆ.

ಬೇಕಾಗಿದೆ.

ಮೈಸೂರು ದೇಶದ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಒಂದರಲ್ಲಿ ಎರಡು ಮತ್ತು ಸ್ಥಿರಸ್ವತ್ತುಗಳ ಮೇಲೆ ಸಾಲಾ ಕೊಡುವ ಏರ್ಪಾಡುಗಳ ಕಾರ್ಯವನ್ನು ನಡೆಸುವುದಕ್ಕೆ ನಂಬಿಕಸ್ಥರು ಮತ್ತು ಮಾತುಗಾರಿಯಾಗಿರತಕ್ಕ ಲೋಕಲ್ ಡೈರೆಕ್ಟರುಗಳು ಮತ್ತು ಜೀವವಿಮೆ ಮತ್ತು ಪ್ರಾವಿಡೆಂಟ್ ಏರ್ಪಾಡುಗಳ ಕಾರ್ಯವನ್ನು ಜರುಗಿಸುವುದಕ್ಕೆ ಚಟುವಟಿಕೆ ಮತ್ತು ಪ್ರಾಮಾಣಿಕರಾದ ಏಜಂಟರುಗಳು ಭಾರೀದಾದ ಕಮಿಷನ್ ಮತ್ತು ಆಫೀಸ್ ಅಲೋಯನ್ಸಿನ ಮೇಲೆ ಬೇಕಾಗಿದೆ

ಪ್ರಕಟನ ಪತ್ರಿಕೆಗಳಿಗೂ ಮತ್ತು ಸಂಬಂಧಪಟ್ಟವರಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

[15-5] M. L. NAGANNAH,

ಮ್ಯಾನೇಜಿಂಗ್ ಡೈರೆಕ್ಟರ್, ಲೈಫ್ ಮತ್ತು ಮ್ಯಾರಿಯೇಜ್ ಕಟ್ಟಡಗಳು, ಮೈಸೂರು

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180-19] ಮೊದಲಿ ಬೀದಿ, ತಿರುವಲ್ಲಕೇಣಿ, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತಸಂಬಂಧ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಕುಸುಶೂಲೆ, ಮಕ್ಕಳ ಎಳವು, ಜ್ವರ, ಸಣ್ಣಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-23]



(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಮಿನ್ ಪರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಆ|| ಸರ್ಕಾರರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಬಾಧೆಯೆಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳುಳ್ಳ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್ ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್, ಇವರು ಬರೆಯುವುದು—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವೃತ್ತಾಂತ ಪತ್ರಿಕೆ.

ಸ್ ೧೯೧೫ ನೇ ಇಸವಿ ಫೆಬ್ರವರಿ ತಾ. ೧೧ ನೇ ಗುರುವಾರ.

ಗ್ರಾಮಾಂತರಗಳಲ್ಲಿ ಭಾವಿಗಳನ್ನು ಕಟ್ಟಿಸುವುದು.

ನಮ್ಮ ಮೈಸೂರು ಗವರ್ನ್‌ಮೆಂಟಿನವರು ಅನುಕೂಲವಾದ ನೀರು ಒದಗುವುದು ಸಧ್ಯಕಷ್ಟವಾಗಿರುವಂಥಾ ಗ್ರಾಮಾಂತರಗಳಲ್ಲಿ ಭಾವಿಗಳನ್ನು ತೋಡಿಸಿಕೊಡುವ ವಿಷಯದಲ್ಲಿ ದಯಪಾಲಿಸಿರುವ ಹುಕುಮು ಬಹುವಿಶೇಷವೂ ಪ್ರಾಮುಖ್ಯವೂ ಆಗಿರುತ್ತದೆ. ಈ ಹುಕುಮಿನಂತೆ ಕಾರ್ಯಗಳು ಜಾಗ್ರತೆಯಿಂದಲೂ ಸಾಫಲ್ಯಕವಾಗಿಯೂ ನಡೆಯುವುದಾದರೆ ಗ್ರಾಮಾಂತರಗಳಲ್ಲಿ ಪ್ರಜೆಗಳಿಗೂ ಗೋಕುಲಗಳಿಗೂ ಒಳ್ಳೆಯ ನೀರು ಬೇಗನೆ ಒದಗುವುದಕ್ಕೆ ಸಂಶಯವಿಲ್ಲ.

ಗವರ್ನ್‌ಮೆಂಟಿನವರು ಈ ಹುಕುಮಿನಲ್ಲಿ ಅಪ್ಪಣೆಕೊಡಿಸಿರುವ ಪ್ರಕಾರ ನಮ್ಮ ಸೀಮೆಯ ಪ್ರಜೆಗಳನ್ನೆಲ್ಲಾ ಹತ್ತು ಭಾಗಗಳಾಗಿ ಮಾಡಿದರೆ ಆ ಪೈಕಿ ಒಂಭತ್ತು ಭಾಗಗಳಷ್ಟು ಪ್ರಜೆಗಳು ಗ್ರಾಮಾಂತರಗಳೊಳಗೆ ವಾಸಮಾಡತಕ್ಕವರಾಗಿದಾರೆ. ಆದಕಾರಣ ಇಷ್ಟೊಂದು ಪ್ರಜೆಗಳು ವರುಷದಲ್ಲಿ ಹನ್ನೆರಡು ತಿಂಗಳೂ ಯೋಗ್ಯವೂ ಆರೋಗ್ಯಜನಕವೂ ಆದ ನೀರನ್ನು ಪಡೆಯಬೇಕಾದದ್ದು ಪರಮಾವಶ್ಯಕವಾಗಿರುತ್ತದೆ. ಕೆಲವು ಸ್ಥಳಗಳಲ್ಲಿ ಪ್ರಜೆಗಳು ತುಂಬಾ ದರಿದ್ರಾವಸ್ಥೆಯಲ್ಲಿರೋಣದರಿಂದ ಅವರೇ ಭಾವಿಗಳನ್ನು ತೋಡಿ ಕಾಮಗಾರಿ ಮಾಡಿಕೊಳ್ಳುವುದು ಸಾಧ್ಯವಲ್ಲ. ಇಂಥಾ ಸ್ಥಳಗಳ ಪ್ರಜೆಗಳು ಪ್ರತಿ ವರುಷವೂ ಬೇಸಗೆ ಕಾಲದಲ್ಲಿ ನೀರಿಗೋಸ್ಕರ ಬಹಳ ಸಂಕಟ ಪಡುತ್ತಾರೆ. ಇದಕ್ಕೋಸ್ಕರ ನಮ್ಮ ಗವರ್ನ್‌ಮೆಂಟಿನವರು ಈಗ ಮಾಡಿರುವ ಹುಕುಮೂ, ನಿಬಂಧನೆಗಳೂ ಇಂಥಾ ಕಷ್ಟಗಳನ್ನು ಬೇಗನೆ ನಿವಾರಣೆ ಮಾಡತಕ್ಕವುಗಳಾಗಿವೆ. ಸರ್ಕಾರದವರು ಈ ಭಾಗದಲ್ಲಿ ಪ್ರಜೆಗಳಿಗೆ ಸಹಾಯಮಾಡುತ್ತೇವೆಂದು ಅಪ್ಪಣೆಕೊಡಿಸಿದಾರೆ; ಪ್ರಜೆಗಳು ಇಂಥಾ ಸಮಯದಲ್ಲಿ ಸುಮ್ಮನಿರದೆ ತಮ್ಮ ಸೌಕರ್ಯವನ್ನು ಒದಗಿಸಿ ಕೊಳ್ಳುವುದಕ್ಕೆ ಮುಂದರಿಸಿ ಬರಬೇಕಾಗಿದೆ. ಭಾವಿ ತೋಡುವುದಕ್ಕೆ ಎಲ್ಲರಿಗೂ ಅನುಕೂಲವಾಗಿರುವಂಥಾ ಸ್ಥಳವನ್ನು ಗೊತ್ತುಮಾಡಿಕೊಳ್ಳಬೇಕು. ಅವರು ಮಟ್ಟಿ ಕಾಮಗಾರಿಯನ್ನು ಮಾಡಿಕೊಳ್ಳುವುದಕ್ಕೆ ಒಪ್ಪಬೇಕು. ಸರ್ಕಾರದವರಿಗೆ ತಮ್ಮಿಂದಾಗುವ ಇತರ ಸಹಾಯಗಳನ್ನೂ ಮಾಡಲು ಸಿದ್ಧರಾಗಬೇಕು. ಭಾವಿ ತೋಡುವಲ್ಲಿ ಬಂಡೆ ಕಲ್ಲು ಸಿಕ್ಕಿದರೆ ಅದನ್ನು ಒಡಿಸುವುದಕ್ಕೆ ಸರ್ಕಾರದವರು ಸಹಾಯಮಾಡುತ್ತಾರಲ್ಲದೆ ಭಾವಿಗಳಿಗೆ ಗೋಡೆಗಳನ್ನೂ ಅವರೇ ಕಟ್ಟಿಸಿಕೊಡುವರು. ಲೋಕಲ್ ಬೋರ್ಡುಗಳಿಂದ ಪ್ರತಿ ವರುಷವೂ ಹಣ ಖರ್ಚುಮಾಡಿ ಭಾವಿಗಳನ್ನು ತೆಗಿಸುತ್ತಾರೆ. ಆದರೆ ನಮ್ಮ ಗವರ್ನ್‌ಮೆಂಟಿನವರು ಒಳ್ಳೆಯ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗಳಿಗೋಸ್ಕರ ಈ ಆಗಾಮಿ ಮೂರು ವರುಷಗಳ ತನಕ ವರುಷ ಒಂದಕ್ಕೆ ಇನ್ನೂ ಒಂದು ಲಕ್ಷ ರೂಪಾಯಿನಂತೆ ಕೊಡುತ್ತಾ ಬರುವುದಾಗಿ ಅಪ್ಪಣೆ ಕೊಡಿಸಿರುವರು. ಭಾವಿ ತೆಗೆಯುವುದಕ್ಕೆ ಖರ್ಚಾಗುವ ಹಣದಲ್ಲಿ ಆಯಾ ಗ್ರಾಮಸ್ಥರು ಕೆಲಸಮಾಡಿಯೋ, ಹಣಾ ಕೊಡಿಸಿಯೋ ಅರ್ಧ ಭಾಗವನ್ನು ವಹಿಸಿಕೊಳ್ಳಬೇಕಾಗುತ್ತದೆ. ಆದರೆ ಪಂಚಮರೇ ಮೊದಲಾದವರಂತೆ ಬಡವರು ಇರತಕ್ಕ ಗ್ರಾಮಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಪಾಲುಗಳನ್ನು ಗವರ್ನ್‌ಮೆಂಟಿನವರೇ ವಹಿಸಿಕೊಂಡು ಕೊಡುವರು.

ಗ್ರಾಮಗಳಲ್ಲಿ ಒಳ್ಳೆಯ ನೀರು ದೊರಕದೆ ಹೋದರೆ ಅಂಥಾ ಕಡೆ ಭಾವಿಗಳನ್ನು ಮಾಡಿಕೊಳ್ಳುವುದಕ್ಕೆ ಈಗ ಒಳ್ಳೇ ಸಮಯ ಒದಗಿರುವುದು. ಗ್ರಾಮಸ್ಥರು ತಮ್ಮ ಗ್ರಾಮದ ಕೊರತೆಗಳನ್ನು ವಿವರಿಸಿ ಅರ್ಜಿ ಬರೆದು ಅದಕ್ಕೆ ಎಲ್ಲರಿಂದಲೂ ರುಜುಮಾಡಿಸಬೇಕು. ಬಳಿಕ ಅವರು ಅಂಥಾ ಅರ್ಜಿಯನ್ನು ತಾಲ್ಲೂಕ್ ಅಮಲ್ದಾರರಿಗೆ ಕಳುಹಿಸಿಕೊಟ್ಟರೆ ಅವರು ಅದನ್ನು ಡೆಪ್ಯುಟಿ ಕಮಿಷನರವರಿಗೆ ಅಂಕಿತ ಮಾಡಿ ಲೋಕಲ್ ಬೋರ್ಡ್ ಮೀಟಿಂಗಿನಲ್ಲಿ ಚರ್ಚೆಗೆ ಇಡುತ್ತಾರೆ. ಈ ಬೋರ್ಡಿನವರು ಪರ್ಯಾಲೋಚನೆ ಮಾಡಿ ಕಾಮಗಾರಿ ನಡಿಸುವುದಕ್ಕೆ ಅಪ್ಪಣೆ ಕೊಡುವರು. ಇಂಥಾ ಕಾಮಗಾರಿಯನ್ನು ಆಯಾ ಸ್ಥಳವಂದಿಗರಿಗೇ ವಹಿಸಿ ಮಾಡಿಸಬೇಕೆಂದು ವಿಧಾಯಕವಾಗಿರುವುದು.

ನಮ್ಮ ಗವರ್ನ್‌ಮೆಂಟಿನವರು ಇಂಥಾ ಪ್ರಜಾ ಹಿತಕರವಾದ ಹುಕುಮನ್ನು ದಯಪಾಲಿಸಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ. ಸರ್ಕಾರದವರು ಈ ಉದ್ದೇಶವು ಕೂಡಿದ ಮಟ್ಟಿಗೂ ಬೇಗನೆ ಜಾರಿಗೆ ತರಲ್ಪಟ್ಟು ಸಾಫಲ್ಯಕವಾದೀತೆಂದು ನಂಬಿ ನಿರೀಕ್ಷಿಸುವೆವು. ಆದರೂ ಸರ್ಕಾರವೆಂಬ ರಥದ ಚಕ್ರಗಳು ನಡೆಯುವುದೇನೋ ಬಹಳ ತಾಮಸವೆಂದು ಬಲ್ಲೆವು. ಆದರೂ ಈಗ ವಿಧಾಯಕಮಾಡಿರುವ ಅವಧಿಯು ತಕ್ಕಮಟ್ಟಿಗೂ ದೀರ್ಘವಾಗಿರೋಣದರಿಂದ ಇನ್ನು ಮೂರು ವರುಷಗಳೊಳಗಾಗಿ ನಮ್ಮ ಸೀಮೆಯ ಪ್ರತಿ ಒಂದು ಗ್ರಾಮಕ್ಕೂ ಒಳ್ಳೆಯ ಜಲಾಶಯವನ್ನು ಒದಗಿಸಿಕೊಡುವುದೇನೋ ಕಷ್ಟವಲ್ಲವೆಂದು ಹೇಳಬಲ್ಲೆವು. ಈಗ ಇದರ ಜವಾಬ್ದಾರಿಯು ಗ್ರಾಮಸ್ಥರದಾಗಿರುತ್ತದೆ. ಅವರೇ ಮೊದಲು ಏರ್ಪಾಡುಮಾಡಿಕೊಂಡು ತಮ್ಮ ಗ್ರಾಮಕ್ಕೆ ಯೋಗ್ಯವಾದ ಭಾವಿಯನ್ನು ಮಾಡಿಸಿಕೊಡುವ ತನಕ ಸುಮ್ಮನಾಗದೆ ಅಮಲ್ದಾರರನ್ನೂ ಡೆಪ್ಯುಟಿ ಕಮಿಷನರವರನ್ನೂ ಕಾಡಿಸುತ್ತಾ ಬರಬೇಕು. ಗ್ರಾಮಸ್ಥರು ಪ್ರಾರಂಭದಲ್ಲಿ ಭಾವಿಗಳಿಗೆ ಅನುಕೂಲವಾಗಿರುವಂಥಾ ಸ್ಥಳವನ್ನು ನಿರ್ದೇಶಮಾಡಿಕೊಳ್ಳಬೇಕಾಗಿದೆ. ಭಾವಿಗಳಲ್ಲಿ ನೀರು ಬಾರದೆಹೋದರೆ ಗ್ರಾಮಗಳನ್ನು ಬೇರೇ ಕಡೆ ಕಟ್ಟಿಕೊಳ್ಳುವಂತೆ ಏರ್ಪಾಡಾಗಬೇಕು. ಒಳ್ಳೆಯ ನೀರು ಒದಗುವ ಪಕ್ಷದಲ್ಲಿ ಗ್ರಾಮಸ್ಥರೆಲ್ಲಾ ಸೇರಿ ಗವರ್ನ್‌ಮೆಂಟಿಗೆ ಅರ್ಜಿಗಳನ್ನು ಕೊಟ್ಟು, ಅವರು ಕಾಮಗಾರಿ ಮಾಡಿಸಿಕೊಡುವ ತರಹ ಒತ್ತಾಯಮಾಡುತ್ತೇ ಬರಬೇಕು. ಗ್ರಾಮಸ್ಥರು ಕಾಮಗಾರಿಯಲ್ಲಿ ತಮ್ಮ ಪಾಲಿನ ಕೆಲಸಗಳನ್ನು ವಹಿಸಿಕೊಂಡು ಮಾಡಬೇಕಾದದ್ದು ಸಹಜವೂ ನ್ಯಾಯವೂ ಆಗಿರುತ್ತದೆ.

ಗ್ರಾಮಾಂತರಗಳಲ್ಲಿ ಪುಣ್ಯವಂತರಾಗಿಯೂ ಪರಹಿತಚಿಂತಕರಾಗಿಯೂ ಇರುವಂಥಾ ದೊಡ್ಡ ಮನುಷ್ಯರಿಗೆ ಪುಣ್ಯಸಂಪಾದನೆಮಾಡಿಕೊಳ್ಳುವುದಕ್ಕೆ ಈಗ ಒಳ್ಳೇ ಅನುಕೂಲವಾದ ಸಮಯ ಒದಗಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ. ಅಂಥವರು ಸ್ವಂತ ಖರ್ಚಿಟ್ಟು ಒಳ್ಳೆಯ ನೀರನ್ನು ಒದಗಿಸುವುದಕ್ಕೆ ಭಾವಿಗಳನ್ನು ಕಲ್ಪಿಸಿಕೊಡಬಹುದು. ಗ್ರಾಮದಲ್ಲಿ ಐಶ್ವರ್ಯವಂತನಾದ ಗೌಡನು ಭಾವಿ ತೆಗೆಯುವುದಕ್ಕೆ ಆಗುವ ಖರ್ಚಿನಲ್ಲಿ ಅರ್ಧ ಭಾಗವನ್ನು ವಹಿಸಿಕೊಂಡು ಕೊಟ್ಟರೆ ಉಳಿದ ಅರ್ಧ ಪಾಲುಗನ್ನು ಸರ್ಕಾರದವರು ವಹಿಸಿಕೊಂಡು ಕಾಮಗಾರಿ ಮಾಡಿಸುತ್ತಾರೆ. ಅಂಥಾ ಗೌಡನ ಹೆಸರು ಆ ಗ್ರಾಮದಲ್ಲಿ ಶಾಶ್ವತವಾಗಿ ನಿಲ್ಲುವುದು; ಗ್ರಾಮಸ್ಥರು ಒಳ್ಳೇ ನೀರು ಒದಗಿಸಿಕೊಟ್ಟ ಗೌಡನನ್ನು ತಲೆತಲಾಂತರದ ವರೆಗೂ ಸ್ತುತಿಸುತ್ತಾ ಬರುವಂತಾದೀತು. ಈ ವಿಷಯದಲ್ಲಿ ಸರ್ಕಾರದವರೂ ಗ್ರಾಮಸ್ಥರೂ ಪಂಚಮರನ್ನು ಮರೆತು ಬಿಡಲಾರರೆಂದೂ, ಅನೇಕ ಸ್ಥಳಗಳಲ್ಲಿ ಆ ಜನರಿಗಿರುವ ನೀರಿನ ಸಂಕಟವು ಪರಿಹಾರವಾದೀತೆಂದೂ ನಂಬಿ ನಿರೀಕ್ಷಿಸುತ್ತೇವೆ.

ಖಾಸಿಯದಲ್ಲಿ ನಡೆದಿರುವ ತಿದ್ದುಪಾಟುಗಳು.

ಖಾಸಿಯಾ ಎಂಬ ಮಲೆನಾಡು ಪ್ರಾಂತ್ಯವು ಬಂಗಾಳಕ್ಕೆ ಈಶಾನ್ಯದಿಕ್ಕಿನಲ್ಲಿದೆ. ಇಲ್ಲಿ ಪ್ರತಿ ವರುಷದಲ್ಲೂ ಸುಮಾರು ನೂರಾರು ಅಥವಾ ನಾನೂರೈವತ್ತು ಅಂಗುಲ ಮಳೆ ಬೀಳುವದು. ಲೋಕದ ಇನ್ನಾವ ಪ್ರದೇಶದಲ್ಲಿಯೂ ಇಷ್ಟೊಂದು ಮಳೆ ಸುರಿಯುವದಿಲ್ಲ. ಇದರಿಂದ ವಿಪರೀತವಾದ ಕಾಡು ಅಲ್ಲಿ ಬೆಳೆದಿರುವದು. ಮತ್ತು ಅಲ್ಲಿ ಬೆಟ್ಟಗುಡ್ಡಗಳು ಬಹಳ ವಿಶೇಷ ಅಲ್ಲಿ ಮೊದಲಿನಿಂದಲೂ ಕಿರಾತರಾದ ಕಾಡು ಜನಗಳು ವಾಸವಾಗಿರುವರು, ಇವರೇ ಅಲ್ಲಿನ ಮೂಲನಿವಾಸಿಗಳು. ಇವರು ಕೆಲವು ವರುಷಗಳಿಗೆ ಮುಂಚೆ ಭೂತ, ದೇವ ಪಿಶಾಚಗಳನ್ನು ಆರಾಧಿಸುತ್ತಿದ್ದರು. ಮತ್ತು ಈ ಭೂತಗಳಿಗೆ ಅವರು ಆಗಾಗ್ಗೆ ನರಬಲಿಗಳನ್ನು ಅರ್ಪಿಸುತ್ತಿದ್ದರು.

ಇಂತಹ ಅನಾಗರಿಕರಾದ ಜನಗಳ ಬಳಿಗೆ ಕ್ರಿಸ್ತನ ಮತವನ್ನು ಬೋಧಿಸುವ ಪಾದ್ರಿಗಳು ಹೋಗಿ ಹೇಳಿದ ಉಪದೇಶವನ್ನು ಅವರು ಕೇಳಿ ತಮ್ಮ ಮೂಢಭಕ್ತಿಯನ್ನೂ, ದೆವ್ವಗಳ ಪೂಜೆ, ನರಬಲಿ ಮುಂತಾದ ಕೆಟ್ಟ ಪದ್ಧತಿಗಳನ್ನೂ ತ್ಯಜಿಸಿ ಅವರಲ್ಲಿ ಅನೇಕ ಸಾವಿರ ಜನಗಳು ಈಗ ಕ್ರಿಸ್ತನ ಶಿಷ್ಯರಾಗಿದ್ದಾರೆ. ಅವರು ದೆವ್ವಗಳ ಕಾಟಕ್ಕೆ ಈಗ ಭಯಪಡುವದಿಲ್ಲ. ಯಾಕೆಂದರೆ ದೇವರ ಕುಮಾರನಾದ ಯೇಸು ಕ್ರಿಸ್ತನು ದೆವ್ವಗಳ ಕಾಟದಿಂದ ತಮ್ಮನ್ನು ಬಿಡಿಸಲು ಶಕ್ತನಾಗಿದ್ದಾನೆಂದು ನಂಬಿ ಅನುಭವದಿಂದ ತಿಳಿದಿದ್ದಾರೆ. ಒಬ್ಬನೇ ನಿಜವಾದ ದೇವರನ್ನು ತಿಳಿದು ಆತನನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸುತ್ತಾರೆ.

ಮತ್ತು ಈಚೆಗೆ ಕೆಲವು ವರುಷಗಳ ಕೆಳಗೆ ಅವರಲ್ಲಿ ಭಕ್ತಿಯ ಉತ್ತೇಜನವು ಪುನರಾರಂಭವಾಯಿತು. ದೇವರ ಪವಿತ್ರಾತ್ಮನು ಅವರಲ್ಲಿ ಬಂದು ಅವರಿಗೆ ಸತ್ಯೋಪದೇಶವನ್ನು ದಯಪಾಲಿಸಿದನು. ಹೊಸದಾಗಿ ಕ್ರಿಸ್ತಮತವನ್ನು ಅವಲಂಬಿಸಿದ ಆ ಕಾಡು ಜನಗಳೂ ಅವರ ಮಕ್ಕಳೂ—ತಮ್ಮನ್ನು ಕೆಡಿಸುವವು ಭೂತಪ್ರೇತಗಳಲ್ಲ; ತಮ್ಮ ಮನೋವಾಕ್ಕಾಯಗಳಿಂದ ಹೊರಡೋಡುವ ಪಾಪವೇ ತಮ್ಮ ಶರೀರ ಆತ್ಮ ಮನಸ್ಸುಗಳನ್ನು ನಾಶನಕ್ಕೆ ಎಳೆಯುತ್ತಲಿವೆಯೆಂದು ತಿಳಿದು, ತಮ್ಮ ನಡೆನುಡಿ ಆಚಾರ ವ್ಯವಹಾರಗಳನ್ನೂ ಮನೋಭಾವನವನ್ನೂ ಪರಿಶೋಧಿಸಿ ಸಕಲ ಪಾಪಕೃತ್ಯಗಳನ್ನೂ ತ್ಯಜಿಸಿ ಪರಿಶುದ್ಧವಾದ ಸಂಭಾಷಣೆ ನಡತೆಗಳಿಂದ ತಮ್ಮ ಬಾಳ್ವೆಯನ್ನು ಅಲಂಕರಿಸಿಕೊಳ್ಳಲಾರಂಭಿಸಿದರು. ದೇವಾಲಯಗಳು ದೇವರನ್ನು ಆರಾಧಿಸಿ ಆತನ ಉಪದೇಶವನ್ನು ಕೇಳುವದಕ್ಕೆ ಬಂದ ಜನಗಳಿಂದ ತುಂಬಿ ಸ್ಥಳಸಂಕೋಚವಾಯಿತು. ಅಲ್ಲದೆ ಬ್ರಾಹ್ಮಣರೂ ಈ ಹೊಸ ಕ್ರೈಸ್ತರ ನಿಷ್ಕಲಂಕವಾದ ಭಕ್ತಿಯನ್ನೂ ದೃಢವಾದ ವಿಶ್ವಾಸವನ್ನೂ ತ್ರಿಕರಣಶುದ್ಧವಾದ ನಡವಳಿಯನ್ನೂ ನೋಡಿ ಆಶ್ಚರ್ಯಪಟ್ಟರು. ಮತ್ತು ಇವರ ನಿಷ್ಕೃತಿಯನ್ನು ಪರೀಕ್ಷಿಸಬೇಕೆಂದು ಅರಸನು ಅನೇಕ ಬ್ರಾಹ್ಮಣರನ್ನೂ ಪಗೂಡಿ ಈ ಹೊಸ ಕ್ರೈಸ್ತಭಕ್ತರು ಆರಾಧನೆಮಾಡುವ ಪ್ರಾರ್ಥನಾಮಂದಿರಗಳಿಗೆ ಬರಹತ್ತಿದನು. ಈ ಸಂದರ್ಭದಲ್ಲಿ ಇನ್ನೂ ಅನೇಕರು ದೆವ್ವಗಳ ಪೂಜೆಯನ್ನು ಬಿಟ್ಟು ಕ್ರಿಸ್ತನೇ ತಮ್ಮ ಗುರುವೆಂದು ಬಹಿರಂಗವಾಗಿ ಅರಿಕೆಮಾಡಿ ಆತನನ್ನು ನಂಬಿದರು.

ವಾಚಕರು ಈ ವಿವರವನ್ನು ಓದಿ—ಓಹೋ! ಇದೆಲ್ಲಾ ನಿಜವಿರಬಹುದು! ಒಂದು ವಿಧವಾದ ಮತಭ್ರಾಂತಿಯು ಅವರನ್ನು ಹಿಡಿಯಿತು! ಇಂತಹ ವೈರಾಗ್ಯವು ಆಗಿಂದಾಗ್ಗೆ ಅಲ್ಲಲ್ಲಿ ತಲೆದೋರುವದುಂಟು! ಇಂತಹ ಪ್ರೇರಣೆಯಿಂದ ಆಸಕ್ತರಾದವರು ಆದರ ಆವೇಶವನ್ನು ಬೇಗ ಕಳೆದುಕೊಂಡು ಯಥಾಪ್ರಕಾರ ತಮ್ಮ ಪೂರ್ವಪದ್ಧತಿಗಳನ್ನು ಅನುಸರಿಸುವರು! ಇಂಥಾ ಮತವೈರಾಗ್ಯವನ್ನು ಬಿಟ್ಟು ಅವರಲ್ಲಿ ನೀತಿಯಾಗಿರುವ ತಿದ್ದುಪಾಟುಗಳು ಆರಂಭವಾಗಿ ನೆಲಗೊಂಡಿವೆಯೋ! ಎಂದು ಕೇಳಬಹುದು. ಸ್ಥಳಸಂಕೋಚವಾಗಿರುವದರಿಂದ ಈ ಕಾಡು ಜನಗಳಲ್ಲಿ ನಡೆದ ಕೆಲವು ತಿದ್ದುಪಾಟುಗಳನ್ನು ಮಾತ್ರ ಸಂಕ್ಷೇಪಿಸಿ ಕೆಳಗೆ ಬರೆಯುತ್ತೇವೆ.

ಈ ಭಕ್ತಿಯ ಉಜ್ಜೀವನದಿಂದ ಪ್ರೇರಿತಳಾದ ಒಬ್ಬ ಸ್ತ್ರೀಯು ಇದ್ದಳು. ಇವಳು ಕೆಲವು ವರುಷಗಳಿಗೆ ಮುಂಚೆ ಒಬ್ಬ ವರ್ತಕನಲ್ಲಿ ಸಾಲಮಾಡಿ ಅನಂತರ ತಾನು ಅಂತಹ ಸಾಲವನ್ನು ಆ ವರ್ತಕನಲ್ಲಿ ಮಾಡಿದ್ದಿಲ್ಲವೆಂತ ಸಾಧಿಸುತ್ತಿದ್ದಳು. ಇವಳು ಪ್ರಾರ್ಥನಾಮಂದಿರದಲ್ಲಿ ತನ್ನ ಪಾಪವನ್ನು ನೆನಪಿಗೆ ತಂದು ಆ ವರ್ತಕನ ಬಳಿಗೆ ಹೋಗಿ ತಾನು ಕೊಡಬೇಕಾಗಿದ್ದ ಸಾಲವನ್ನು ಒಪ್ಪಿಕೊಂಡು ತೀರಿಸಿ, ಸುಳ್ಳುಹೇಳಿದ್ದಕ್ಕಾಗಿ ಆ ವರ್ತಕನ ಕ್ಷಮೆಯನ್ನು ಬೇಡಿದಳು.

ಒಬ್ಬನು ಕಳವುಮಾಡಿ ತೆಗೆದುಕೊಂಡು ಹೋಗಿದ್ದ ಒಡವೆಗಳನ್ನು ಮಾಲೀಕನಿಗೆ ತಂದೊಪ್ಪಿಸಿದನು.

ಪರಸ್ಪರ ವಿರೋಧಭಾವದಿಂದ ವೈರಿಗಳಾಗಿದ್ದು ಹಗೆಯನ್ನು ಸಾಧಿಸುತ್ತಿದ್ದ ವರನೇಕರು ಕ್ರಿಸ್ತನ ಪ್ರೀತಿಯನ್ನು ಕುರಿತು ಕೇಳಿ ಹಗೆಮಾತ್ಸರ್ಯಗಳನ್ನು ಬಿಟ್ಟು ಒಬ್ಬರನ್ನೊಬ್ಬರು ಮನ್ನಿಸಿ ಪರಸ್ಪರ ಪ್ರೀತಿಯುಕ್ತರಾದ ಸ್ನೇಹಿತರಾದರು.

ಕೆಲವರು ಇನ್ನೂ ಭಕ್ತಿಹೀನರಾಗಿಯೇ ಇದ್ದರು. ಇಂಥವರು ತಮ್ಮ ನಿರ್ಲಕ್ಷ್ಯವನ್ನೂ ಹಾಸ್ಯವನ್ನೂ ಬಿಟ್ಟು ಆತ್ಮರಕ್ಷಣೆಯನ್ನು ಹೊಂದಿ ದೇವರ ಸ್ತೋತ್ರಗಳನ್ನೂ ಆತನ ಕೀರ್ತನೆಗಳನ್ನೂ ಉತ್ಸಾಹದಿಂದ ಹಾಡುವದರಲ್ಲಿಯೂ ದೇವರ ಪ್ರಾರ್ಥನೆಮಾಡುವದರಲ್ಲಿಯೂ ಆಸಕ್ತರಾದರು.

ಮತ್ತೆ ಅನೇಕರು ತಮ್ಮನ್ನು ಇಷ್ಟುಮಟ್ಟಿಗೆ ತಿದ್ದಿದ ಯೇಸು ಕ್ರಿಸ್ತನ ಸುವಾರ್ತೆಯ ಉಪದೇಶವನ್ನು ತಮ್ಮ ಸ್ವಜನರಿಗೂ ಬಂಧು ಬಳಗಗಳಿಗೂ ದೇಶೀಯರಿಗೂ ಬೋಧಿಸಿ ಅವರು ಈ ಸತ್ಯವನ್ನು ಸ್ವೀಕರಿಸುವಂತೆ ಪ್ರೇರಿಸುವವರಾದರು.

ನಮ್ಮ ಸೀಮೆಯಲ್ಲಿಯೂ ಮುಖ್ಯವಾಗಿ ಕೀಳುಜನಗಳು ಅನ್ನಿಸಿಕೊಳ್ಳುವ ಶೂದ್ರರಲ್ಲಿಯೂ ಪಂಚಮರಲ್ಲಿಯೂ ಅನೇಕರು ಕ್ರಿಸ್ತನ ಸುವಾರ್ತೆಯನ್ನು ಕೇಳಿ ಸ್ವೀಕರಿಸಿ ಆತನ ಶಿಷ್ಯರಾಗಿದ್ದಾರೆ. ಖಾಸಿಯಾದ ಕಾಡು ಜನಗಳಲ್ಲಿ ಆಗಿರುವ ಸುಧಾರಣೆಯು ನಮ್ಮ ಸೀಮೆಯಲ್ಲಿ ನಡೆದರೆ ಅದು ನಮಗೆ ಬೇಡವೆಂದು ಯಾರು ಹೇಳ್ಯಾರು. ಇಲ್ಲಿಯ ಕಳ್ಳರು ಕಳ್ಳತನವನ್ನೂ, ವಂಚಕರು ವಂಚಿಸುವದನ್ನೂ ಬಿಟ್ಟು ಹಗೆಮಾತ್ಸರ್ಯಾದಿಗಳನ್ನು ಸಾಧಿಸುವವರು ಪರಸ್ಪರ ಪ್ರೀತಿಯುಕ್ತರೂ ಆಗಿ ಬದುಕಲಿ ಎಂದು ಹಾರೈಸುತ್ತೇವೆ. ಮತ್ತು ಭಕ್ತಿಹೀನರು ಯೇಸು ಕ್ರಿಸ್ತನನ್ನು ಆಶ್ರಯಿಸಿ, ಆತನಿಂದ ಪಾರಮಾರ್ಥಿಕ ಜೀವವನ್ನು ಪಡೆಯಲಿ! ಆತನೇ ಪಾಪಪರಿಹಾರಕನು.

ಯುದ್ಧದ ಸಮಾಚಾರಗಳು.

ರಷ್ಯಾದಲ್ಲಿ ಘೋರವಾದ ಕದನಗಳು.

ವೈಸ್‌ರಾಯರು ಫಾರ್ಮ್ ಖಾರಿಗೆ ದಯಮಾಡಿದ್ದು.

ಸೂಯೆಸ್ ಕಾಲುವೆ ಬಳಿ ಕದನಗಳು.

ಈ ವಾರದಲ್ಲಿ ಹಲವು ವಿಶೇಷ ಸಂಗತಿಗಳು ನಡೆದಿರುತ್ತವೆ. ಅವುಗಳನ್ನೆಲ್ಲಾ ಕೂಡಿದ ಮಟ್ಟಿಗೂ ಸಂಗ್ರಹಿಸಿ ಕ್ರಮವಾಗಿ ತಿಳಿಸುವೆವು.

ಫ್ರಾನ್ಸ್ ಮತ್ತು ಬೆಲ್ಜಿಯಮ್.

ಬೆಲ್ಜಿಯಮ್‌ನೊಳಗೂ ಫ್ರಾನ್ಸಿನಲ್ಲೂ ಘೋರವಾದ ಕದನಗಳು ನಡೆದವೆಂದು ಕಳೆದ ವಾರ ತಿಳಿಸಿದ್ದೇವೆ. ಈ ಕದನಗಳು ನಿಲ್ಲದೆ ಈ ವಾರದಲ್ಲೂ ನಡೆದಿರುವವು. ಜರ್ಮನಿಯವರ ಕಡೆಯಲ್ಲಿ ಅಪಾರವಾದ ನಷ್ಟ ಸಂಭವಿಸಿತು. ಮೊದಲಿನಂತೆಯೇ ಅವರು ಒಟ್ಟೊಟ್ಟಾಗಿ ನಮ್ಮ ಕಡೆಯವರ ಮೇಲೆ ನುಗ್ಗಿಬಂದು ನಮ್ಮವರ ಸಾಲುಗಳನ್ನು ಭೇದಿಸಿ ನುಗ್ಗಬೇಕೆಂದು ಸಾಹಸಪಟ್ಟರು. ಗಾಯಪಟ್ಟವರೂ, ಕೊಲೆಯಾದವರೂ ಸಾವಿರಗಟ್ಟಲೆ ರಣರಂಗದಲ್ಲಿ ಉರುಳಿಬಿದ್ದದ್ದೇ ಅವರ ಸಾಹಸದ ಫಲವಾಯಿತು. ಜರ್ಮನಿಯವರು ತಮ್ಮ ಕಡೆ ಗಾಯಪಟ್ಟ ಸಿಪಾಯಿಗಳನ್ನು ಇಪ್ಪತ್ತೊಂದು ಟ್ರೈನುಗಳಲ್ಲಿ ಭರ್ತಿಮಾಡಿ ಜರ್ಮನಿಗೆ ಸಾಗಿಸಿಕೊಂಡು ಹೋದರೆಂದೂ, ಗಾಯಪಟ್ಟ ಹಲವು ಸಹಸ್ರ ಯುದ್ಧಭಟರನ್ನು ಬೆಲ್ಜಿಯಮ್‌ನೊಳಗೆ ಇಟ್ಟುಕೊಂಡಿದಾರೆಂದೂ ಹೇಳಲಾಗಿದೆ.

ಹಲವು ಠಾಣ್ಯಗಳಲ್ಲಿ ಜರ್ಮನಿಯವರು ನುಗ್ಗಿ ಬಂದು ನಮ್ಮ ಕಡೆಯವರ ಮೇಲೆ ಮುತ್ತಿಗೆ ಹಾಕಿದರು. ಬೆಲ್ಜಿಯಮ್‌ನೊಳಗೆ ಸಮುದ್ರ ತೀರದಿಂದ ಬ್ರಿಟಿಷ್ ಜಹಜುಗಳು ದಿನವೆಲ್ಲಾ ನಿಲುಗಡೆಯಿಲ್ಲದೆ ಗುಂಡುಗಳ ಮಳೆಯನ್ನು ಸುರಿಸುತ್ತಾ ಬಂದವು. ಜರ್ಮನಿಯವರು ನಿಲ್ಲಲಾರದೆ ಸೋತು ಹಿಮ್ಮೆಟ್ಟಿ ಹೋದರು. ಅವರ ಕಡೆ ಅನೇಕರು ಕೊಲೆಯಾಗಿಯೂ, ಗಾಯಪಟ್ಟೂ ಯುದ್ಧಭೂಮಿಯಲ್ಲಿ ಬಿದ್ದುಕೊಂಡರು. ಜನರಲ್ ವಾನ್ ಕ್ಲುಕ್ ಎಂಬ ಜರ್ಮನಿ ದಳಪತಿಯ ಕುಮಾರನು ಮಡಿದು ಹೋದನು. ಜರ್ಮನಿಯವರು ಒಟ್ಟೊಟ್ಟಾಗಿ ನುಗ್ಗಿಬಂದು ಒಂದೆರಡು ಕಡೆ ಸ್ವಲ್ಪ ಹೊತ್ತು ನಮ್ಮ ಕಡೆಯವರನ್ನು ಹಿಮ್ಮೆಟ್ಟಿಸಿದಾಗ್ಯೂ ಪ್ರತಿ ಒಂದು ಸ್ಥಳದಲ್ಲೂ ನಮ್ಮ ಕಡೆಯವರು ಮತ್ತೆ ಅವರನ್ನು ಹಿಂದಕ್ಕೆ ಓಡಿಸಿ ತಮ್ಮ ಮೊದಲಿನ ಠಾಣ್ಯಗಳನ್ನು ಗೆದ್ದುಕೊಂಡರು; ಇಷ್ಟೇ ಅಲ್ಲದೆ ಕೆಲವು ಸಂದರ್ಭಗಳಲ್ಲಿ ಜರ್ಮನಿಯವರನ್ನು ಮೊದಲಿದ್ದ ಸ್ಥಾನಗಳಿಂದ ಇನ್ನೂ ಹಿಂದಕ್ಕೆ ಓಡಿಸಿರುತ್ತಾರೆ. ಜರ್ಮನಿಯವರು ಅಲ್ಲಿಗೆ ತಂದಿದ್ದ ಸೈನಿಕರೆಲ್ಲಾ ಹೊಸಬರೆಂದೂ, ಈ ಮೊದಲು ಅವರು ಯುದ್ಧದ ಸಾಲುಗಳಲ್ಲಿ ಬಂದಿರಲಿಲ್ಲವೆಂದೂ ಹೇಳಲ್ಪಟ್ಟಿದೆ.

ಬೆಲ್ಜಿಯಮ್ ಎಲ್ಲೆಕಟ್ಟಿನ ಬಳಿ ಇರುವ ಡನ್‌ಕರ್ಕ್ ಎಂಬ ಫ್ರೆಂಚರ ಹಿಡಿಪಟ್ಟಣದೊಳಕ್ಕೆ ಜರ್ಮನಿಯ ವಿಮಾನಯಂತ್ರಗಳು ಬಂದು ಸಿಡಿಮದ್ದಿನ ಗುಂಡುಗಳನ್ನು ಆಗಿಂದಾಗ್ಗೆ ಇಳಿಬಿಡುತ್ತಲೇ ಇವೆ. ಇದರಿಂದ ವಿಶೇಷ ನಷ್ಟವೇನೂ ಆಗಿಲ್ಲ. ನಮ್ಮ ಕಡೆಯವರು ಆ ವಿಮಾನಯಂತ್ರಗಳನ್ನು ಗುಂಡು ಹೊಡೆದು ಹಿಂದಕ್ಕೆ ಅಟ್ಟುತ್ತಿರುವರು.

ಫ್ರೆಂಚರು ಹೊಡೆದ ಫಿರಂಗಿ ಗುಂಡುಗಳಿಂದ ನೊಯಿಯೆ ಎಂಬ ಠಾಣ್ಯದಲ್ಲಿದ್ದ ಜರ್ಮನಿಯವರ ಮದ್ದುಗುಂಡು ನಾಶವಾಗಿ, ಆ ಸ್ಥಳದಲ್ಲಿ ಬೆಂಕಿ ಹಚ್ಚಿಕೊಂಡು ಕೆಲವು ಗಂಟೆಗಳ ತನಕ ಉರಿಯುತ್ತಿತ್ತು.

ಜರ್ಮನಿಯವರು ಒಂದು ಸಣ್ಣ ದೋಣಿಗೆ ಸಿಡಿಮದ್ದು ಮುಂತಾದ್ದನ್ನು ಭರ್ತಿಮಾಡಿ ನಮ್ಮ ಕಡೆಯವರ ಠಾಣ್ಯಗಳ ಬಳಿಗೆ ಹೋಗಿ ಒಡೆದು ನಷ್ಟಪಡಿಸುವಂತೆ ಒಂದು ನದಿಯ ಮೇಲೆ ಕಳುಹಿಸಿಕೊಟ್ಟರು. ಆದರೆ ಆ ದೋಣಿಯನ್ನು ಪತ್ತೆಕೊಂಡು ನಷ್ಟಪಡಿಸುವುದಕ್ಕೆ ಮೊದಲೇ ನಮ್ಮ ಕಡೆಯವರು ಆ ದೋಣಿಯನ್ನು ತಡೆದು ನಿಲ್ಲಿಸಿಬಿಟ್ಟರು. ಇದರ ದೆಸೆಯಿಂದ ನಮ್ಮ ಕಡೆ ಕೇಡುಕೇನೂ ಆಗಲಿಲ್ಲ.

ಜರ್ಮನಿಯವರು ಫ್ರಾನ್ಸಿನೊಳಗೆ ಬಂದು ಆಕ್ರಮಿಸಿಕೊಂಡಿರುವ ಭಾಗದಲ್ಲಿ ಅವರು ಪ್ರಜೆಗಳ ಬಳಿ ಸಿಕ್ಕುವ ಹಣವನ್ನೆಲ್ಲಾ ಸುಲಿಗೆಮಾಡಿಕೊಂಡು ಅದಕ್ಕೆ ಪ್ರತಿಯಾಗಿ ಅವರಿಗೆ ಜರ್ಮನಿಯ ಕರೆನ್ಸಿ ನೋಟುಗಳನ್ನು ಕೊಡುತ್ತಿರುವರು. ಇದಲ್ಲದೆ ಜರ್ಮನಿಯವರು ಬಂದೂಕುಗಳನ್ನು ಮಾಡಿಕೊಳ್ಳುವುದಕ್ಕೆ ಸಿಕ್ಕಿದಷ್ಟು ಹಿತ್ತಾಳೆಯನ್ನೂ, ತಾಮ್ರವನ್ನೂ ಕೂಡಿಹಾಕುತ್ತಿರುವರು.

ಆಸ್ಟ್ರಿಯಾದವರು ಬೆಲ್ಜಿಯಮ್‌ನಲ್ಲೂ ಫ್ರಾನ್ಸಿನಲ್ಲೂ ಜರ್ಮನಿಯವರಿಗೆ ಸಹಾಯಮಾಡುತ್ತಿರುವಂತೆ ಕಾಣುವುದು. ಕಳೆದ ಜನವರಿ ತಾ. 18 ರಿಂದ ಈಚೆಗೆ ಆಸ್ಟ್ರಿಯಾ ಫಿರಂಗಿ ಸಿಪಾಯಿಗಳು 1,150 ಮಂದಿ ಫ್ರಾನ್ಸಿನಲ್ಲಿ ಕೊಲೆಯಾದರೆಂದೂ, ಬೆಲ್ಜಿಯಮ್‌ನೊಳಗೆ ಹಂಗೆರಿ ಸವಾರರ ಪೈಕಿ 4,830 ಮಂದಿಯೂ ಅವರ ಕಾಲ್ಬಲದಲ್ಲಿ 7,100 ಜನರೂ ನಷ್ಟಪಟ್ಟಿರುತ್ತಾರೆಂದೂ ಪ್ರಕಟಿಸಲಾಗಿದೆ.

ಆಲ್ಸೇಸ್ಸಿನಲ್ಲಿ ಫ್ರೆಂಚರು ಮುಂದರಿಸಿ ನುಗ್ಗಿಹೋಗುತ್ತಿದಾರೆ. ಅವರು ಜರ್ಮನಿಯವರನ್ನು ಸರ್ನೆ ಎಂಬ ಗ್ರಾಮವನ್ನು ತ್ಯಜಿಸಿ ಹೋಗುವಂತೆ ಮಾಡಿಬಿಟ್ಟರು.

ನಮ್ಮ ಕಡೆಯವರು ಕ್ರಮೇಣ ತಮ್ಮ ಸೈನ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿರುವರು. ಈ ಸೈನ್ಯಗಳೆಲ್ಲಾ ಸಿದ್ಧವಾದ ಮೇಲೆ ಹವಾ ಸ್ಥಿತಿಯು ಅನುಕೂಲವಾದದ್ದನ್ನು ನೋಡಿಕೊಂಡು ಅಪಾರವಾದಷ್ಟು ಸೈನ್ಯವನ್ನು ಕಟ್ಟಿಕೊಂಡು ಜರ್ಮನಿಯವರ ಮೇಲೆ ನುಗ್ಗಿ ಯುದ್ಧ ನಡಿಸುತ್ತಾರೆ. ಈಗಾಗಲೇ ಜರ್ಮನಿಯವರು ಸೈನಿಕರನ್ನೂ, ಮದ್ದುಗುಂಡನ್ನೂ, ಆಹಾರ ಸಾಮಗ್ರಿಗಳನ್ನೂ ಕಳೆದುಕೊಳ್ಳುತ್ತಿರುವರು. ಇದನ್ನೆಲ್ಲಾ ಒಟ್ಟುಗೂಡಿಸಿ ನೋಡಿದರೆ ನಮ್ಮ ಕಡೆಯವರಿಗೆ ಜಯಪ್ರದವಾಗಲು ಅನುಮಾನ ಕಾಣುವುದಿಲ್ಲ

ಪೂರ್ವದಿಕ್ಕಿನ ರಣರಂಗ.

ಪೂರ್ವ ಪ್ರದೇಶದ ಯುದ್ಧರಂಗದಲ್ಲಿ ಶತ್ರುಗಳ ಸ್ಥಾನವೂ ಸ್ಥಿತಿಯೂ ಈಗೀಗ ಗೋಚರವಾಗುವವು. ಅಲ್ಲಿ ನಡೆಯುವ ವಿದ್ಯಮಾನಗಳೆಲ್ಲಾ ಅಲ್ಲದಿದ್ದರೂ ಕೆಲಕೆಲವು ಮಟ್ಟಿಗಾದರೂ ತಿಳಿದು ಹೇಳುವಂತಾಗಿದೆ. ಸುಮಾರು ಮೂರು ನಾಲ್ಕು ಠಾಣ್ಯಗಳಲ್ಲಿ ಕಠಿಣವಾದ ಕದನಗಳು ನಡೆಯುತ್ತಿರುವವು. ಅವುಗಳನ್ನು ಕೂಡಿದ ಮಟ್ಟಿಗೂ ಸುಲಭವಾಗಿ ವಿವರಿಸುವೆವು.

ರಷ್ಯಾದವರು ಪೂರ್ವ ಪ್ರಷ್ಯಾದೊಳಗೆ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಿದಾರೆ. ಅವರು ಜರ್ಮನಿಯ ಗಡಿಯನ್ನು ದಾಟಿ ಒಳಕ್ಕೆ ನುಗ್ಗಿ ಹೋಗಿ ಬಹು ಕಾಲವಾಯಿತು. ಈಗ ಅವರು ಮುಂದರಿದು ನುಗ್ಗುತ್ತಾ

ಜರ್ಮನಿಯವರನ್ನು ಹಿಂದು ಹಿಂದಕ್ಕೆ ಓಡಿಸುತ್ತಾ ಬಂದಿದ್ದಾರೆ. ಯುದ್ಧಾರಂಭದಲ್ಲಿ ಅವರು ನಡಿಸಿದ ಕಾರ್ಯವನ್ನೇ ಈಗಲೂ ಮಾಡುತ್ತಿರುವರು. ಯಾಕೆಂದರೆ ಈ ಭಾಗಗಳಲ್ಲಿ ಜರ್ಮನಿಯವರು ಬಲಪಡಿಸಿಕೊಂಡು ಸೈನ್ಯಗಳನ್ನಿಟ್ಟು ಕಾಪಾಡುತ್ತಾ ಇಲ್ಲ. ಇಲ್ಲಿ ರಷ್ಯಾದವರು ನುಗ್ಗಿ ಬಂದಿರೋಣದರಿಂದ ಅವರನ್ನು ತಪ್ಪಿಸುವುದಕ್ಕಾಗಿ ಜರ್ಮನಿಯವರು ಇತರ ಕಡೆಗಳಲ್ಲಿರುವ ತಮ್ಮ ಸೈನ್ಯವನ್ನು ಕರಸಿಕೊಳ್ಳಬೇಕಾಗಿ ಬಂದಿದೆ.

ಅಲ್ಲಿಂದ ಪಶ್ಚಿಮಕ್ಕೆ ವಿಸ್ಚುಲಾ ನದಿಯ ದಡಗಳ ಮೇಲೆ ಅಂದರೆ ಜರ್ಮನಿಯ ಎಲ್ಲೆಕಟ್ಟಿನಲ್ಲಿ ಕಠಿಣವಾಗಿ ಯುದ್ಧಗಳು ನಡೆಯುತ್ತಿರುವವು. ಅಲ್ಲಿಯೂ ಜರ್ಮನಿಯವರು ರಷ್ಯಾದವರಿಗೆ ನಿಂತು ಯುದ್ಧ ಕೊಡಲಾರದೆ ಕ್ರಮೇಣ ಹಿಮ್ಮೆಟ್ಟಿ ಹೋಗುತ್ತಿರುವರು. ಜರ್ಮನಿಯವರ ಕಡೆ ಈ ಪ್ರಾಂತ್ಯದಲ್ಲಿ ಅನೇಕ ಸೈನ್ಯಗಳು ನಷ್ಟಹೊಂದಿದವು. ಜರ್ಮನಿಯ ಹಲವು ಹುದ್ದೇದಾರರನ್ನೂ ಸೈನಿಕರನ್ನೂ ರಷ್ಯಾದವರು ಕೈಸೆರೆ ಹಿಡಿದುಕೊಂಡರು.

ಅಲ್ಲಿಂದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿ ಅಂದರೆ ವಾರ್ಸಾ ನಗರದ ಪಶ್ಚಿಮಕ್ಕೆ ಅತ್ಯಂತ ಘೋರವಾದ ಯುದ್ಧಗಳು ನಡೆದಿರುವವು. ಭಾರಿಯಾದ ಆ ನಗರವನ್ನು ಗೆದ್ದು ಸ್ವಾಧೀನ ಪಡಿಸಿಕೊಳ್ಳುವುದಕ್ಕಾಗಿ ಜರ್ಮನಿಯವರು ಮಹತ್ತರವಾದ ಸಾಹಸ ಪಡುತ್ತಿದ್ದಾರೆ ಆದರೆ ಇದುವರೆಗೆ ಅದು ಅವರಿಂದ ಸಾಧ್ಯವಾಗಲಿಲ್ಲ. ಜರ್ಮನಿಯವರು ಏಳು ಡಿವಿಜನ್ ಅಂದರೆ ಸುಮಾರು 1,20,000 ಸೈನ್ಯವನ್ನೂ 600 ಪಿರಂಗಿಗಳನ್ನೂ ತಂದು ಸುಮಾರು ಆರು ಮೈಲಿ ವಿಸ್ತಾರವುಳ್ಳ ಪ್ರದೇಶದಲ್ಲಿ ಜಮಾವಣೆಮಾಡಿಕೊಂಡು ರಷ್ಯಾ ಸೈನ್ಯಗಳ ಸಾಲನ್ನು ನುಗ್ಗಿ ಒಡೆದು ಬರಬೇಕೆಂದು ಸಾಹಸ ಪಟ್ಟರು. ಈ ಸೈನ್ಯಕ್ಕೆ ಮರಣದ ಡಿವಿಜನ್‌ಗಳೆಂದು ಹೆಸರು. ಯಾಕೆಂದರೆ ಅವರಲ್ಲಿ ಅನೇಕ ಮಂದಿ ಕೊಲೆಯಾಗುವರೆಂಬುದು ಮೊದಲು ಖಂಡಿತವಾಗಿತ್ತು. ಜರ್ಮನಿಯ ಸೈನಿಕರು ನಿಲುಗಡೆಯಿಲ್ಲದೆ ರಾತ್ರಿ ಹಗಲೂ ಯುದ್ಧ ಮಾಡಿದರು. ಅವರು ತಮ್ಮ ಪಿರಂಗಿಗಳಿಂದ ಕ್ಷಣವೂ ವಿರಾಮ ಕೊಡದಂತೆ ಗುಂಡುಗಳ ಮಳೆಯನ್ನು ಸುರಿಸಿದರು. ರಷ್ಯಾ ಸೈನ್ಯಗಳು ಕಂದಕಗಳನ್ನು ತೋಡಿಕೊಂಡು ಅವುಗಳೊಳಗೆ ಸೇರಿಕೊಂಡಿದ್ದದ್ದರಿಂದ ಅವರಲ್ಲಿ ವಿಶೇಷ ನಷ್ಟವಾಗಲಿಲ್ಲ. ಆದರೂ ಜರ್ಮನಿಯವರು ಗುಂಡುಗಳಲ್ಲಿ ವಿಷಗಾಳಿಗಳನ್ನು ತುಂಬಿ ಹೊಡೆದದ್ದರಿಂದ ಅವು ಹೋಗಿ ಕಂದಕಗಳಲ್ಲಿ ಒಡೆದು ರಷ್ಯಾ ಸೈನಿಕರನ್ನು ಮಂಕುಮಾಡಿಬಿಟ್ಟವು. ಜರ್ಮನಿಯವರು ಒಟ್ಟೊಟ್ಟಾಗಿ ನುಗ್ಗಿ ರಷ್ಯಾದವರ ಮೇಲೆ ಮುತ್ತಿಗೆ ಹಾಕಿದಾಗ ರಷ್ಯಾದವರು ತಮ್ಮ ಪಿರಂಗಿಗಳಿಂದ ಗುಂಡುಗಳ ಮಳೆಗರೆದರು. ಜರ್ಮನಿಯವರ ಕಡೆ ಸೈನಿಕರು ಕೊಲೆಯಾಗಿ ಬಿದ್ದ ಕ್ರಮವು ಮಹಾ ಭಯಂಕರವಾಗಿತ್ತು. ಎಲ್ಲಿ ನೋಡಿದರೂ ಹೆಣಗಳ ರಾಶಿಗಳೇ ಕಾಣುತ್ತಿದ್ದವು. ಆಗ ಸರಿಯಾದ ಸಮಯವನ್ನು ನಿರೀಕ್ಷಿಸಿಕೊಂಡಿದ್ದ ರಷ್ಯಾದವರು ತಮ್ಮ ಕಂದಕಗಳಿಂದ ಹೊರಕ್ಕೆ ಬಂದು ಜರ್ಮನಿಯವರ ಮೇಲೆ ನುಗ್ಗಿ ಹೊಡೆದರು. ಅವರು ಮಹಾ ಪರಾಕ್ರಮದಿಂದಲೂ ಬಹು ಕ್ಷಿಪ್ರವಾಗಿಯೂ ನುಗ್ಗಿ ಬಂದದರಿಂದ ಜರ್ಮನಿಯವರು ಅವರನ್ನು ಎದುರಿಸಿ ನಿಲ್ಲಲಾರದೆ ತಮ್ಮ ಕಂದಕಗಳನ್ನು ತ್ಯಜಿಸಿ ಹಿಮ್ಮೆಟ್ಟಿಹೋದರು. ಈ ಯುದ್ಧದಲ್ಲಿ ಜರ್ಮನಿಯವರು ರಷ್ಯಾ ಸೈನಿಕರ ಸಂಗೀನುಗಳ ಏಟನ್ನು ತಡೆಯಲಾರದೆ ಹೋದರು. ಜರ್ಮನಿಯವರ ಕಡೆ ಕಂಪನಿ ಕಂಪನಿ ಸೈನ್ಯಗಳೇ ಕಂದಕಗಳಲ್ಲಿ ಕೊಲೆಯಾಗಿದ್ದವು. 3,000 ಸೈನಿಕರನ್ನು 10 ಕ್ವಿಕ್‌ಫೈರರ್‌ಗಳೆಂಬ ಪಿರಂಗಿಗಳ ಸಮೇತ ರಷ್ಯಾದವರು ಕೈಸೆರೆ ಹಿಡಿದುಕೊಂಡರು. ಜನವರಿ ತಾ. 23 ರಿಂದ ತಾ. 30 ರೊಳಗಾಗಿ 6,000 ಜರ್ಮನಿ ಸೈನಿಕರು ಕೊಲೆಯಾದರೆಂದು ಪ್ರಕಟವಾಗಿದೆ. ರಷ್ಯಾದವರ ವಿಮಾನ ಯಂತ್ರಗಳು ಜರ್ಮನಿ ಸೈನಿಕರು ಭರ್ತಿಯಾಗಿ ಹೋಗುತ್ತಿದ್ದ ರೈಲ್‌ಗಾಡಿಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಅನೇಕರನ್ನು ಕೊಂದುಹಾಕಿದವು.

ಅಲ್ಲಿಂದ ದಕ್ಷಿಣಕ್ಕೆ ಗೆಲಿಷಿಯಾದಲ್ಲಿ ಅಂದರೆ ರಷ್ಯಾದವರ ಸೈನಿಕರ ಸಾಲುಗಳ ಕೊನೆಯಲ್ಲಿ ಬಹಳ ಕ್ಷಿಪ್ರವಾದ ಕದನಗಳು ನಡೆದವು. ಇದುವರೆಗೆ ಇಲ್ಲಿ ಆಸ್ಟ್ರಿಯಾದವರೂ ಹಂಗೆರಿಯವರೂ ರಷ್ಯಾದವರಿಗೆ ಯುದ್ಧ ಕೊಡುತ್ತಿದ್ದರು. ಇವರುಗಳ ಸಹಾಯಕ್ಕೆ ಈಗ ಜರ್ಮನಿಯವರು ಬಂದು ನಿಂತುಕೊಂಡು ರಷ್ಯಾದವರನ್ನು ಕಾರ್ಪೇಥಿಯನ್ ಪರ್ವತವನ್ನು ದಾಟಿಸಿ ಹಂಗೆರಿಯಿಂದ ಆಚೆಗೆ ಹೊರಡಿಸಬೇಕೆಂದು ಸಾಹಸಪಡುತ್ತಿದ್ದಾರೆ. ಬಹುಶಃ ಹಂಗೆರಿಯವರು ಕರಾರು ಮಾಡಿಕೊಳ್ಳುವಂತೆ ಇದ್ದಾರೆ ಆದರೆ ಜರ್ಮನಿಯವರು ಅವರನ್ನು ಅಷ್ಟಕ್ಕೆ ಬಿಡಲೊಲ್ಲರು. ಆದಕಾರಣ ಜರ್ಮನಿಯವರೇ ಈ ಪ್ರದೇಶದಲ್ಲಿ ಯುದ್ಧಕಾರ್ಯಗಳನ್ನು ನಡಿಸುವರು. ಇಲ್ಲಿಯೂ ಕದನಗಳು ರಾತ್ರಿ ಹಗಲೂ ವಿರಾಮವಿಲ್ಲದೆ ನಡೆಯುತ್ತಿವೆ. ಹಲವು ಕಡೆಗಳಲ್ಲಿ ಜರ್ಮನಿಯವರೂ ಆಸ್ಟ್ರಿಯಾದವರೂ ಅನೇಕರನ್ನು ಕಳೆದುಕೊಂಡು ಹಿಮ್ಮೆಟ್ಟಿ ಬರಬೇಕಾಯಿತು. ಅಲ್ಲಿ ಅವರಿಗೆ ತುಂಬಾ ನಷ್ಟ ಸಂಭವಿಸಿದೆ. ಜನವರಿ ತಾ. 26 ರಿಂದ ತಾ. 29 ರ ವರೆಗೆ ರಷ್ಯಾದವರು 78 ಮಂದಿ ಹುದ್ದೇದಾರರನ್ನೂ, 4,065 ಮಂದಿ ಸೈನಿಕರನ್ನೂ ಕೈಸೆರೆಹಿಡಿದುಕೊಂಡರು. ಇದಲ್ಲದೆ ರಷ್ಯಾದವರು ಶತ್ರುವನ್ನು ಸೋಲಿಸಿ ದುಕ್ಲಾ ಕಣಿವೆಯಿಂದ ಹಿಂದಕ್ಕೆ ಓಡಿಸಿರುತ್ತಾರೆ. ಮತ್ತು ಇಲ್ಲಿ ಅವರಿಗೆ ಶತ್ರುವಿನ ಸೈನಿಕರೂ, ಪಿರಂಗಿಗಳೂ, ಹೌಟ್ಜರುಗಳೆಂಬ ಪಿರಂಗಿಗಳೂ ಸಿಕ್ಕಿದವು. ಕೈಸೆರೆಹಿಡಿಯಲ್ಪಟ್ಟವರಲ್ಲಿ ಜರ್ಮನಿಯ ಸೈನಿಕರೂ ಸೇರಿಕೊಂಡಿದ್ದಾರೆ. ಉಜಾಕ್ ಎಂಬ ಘಾಟ್ಯದೊಳಗೆ ರಷ್ಯಾದವರು 3,000 ಸಿಪಾಯಿಗಳನ್ನು ಕೈಸೆರೆಹಿಡಿದರು. ಒಂದಾನೊಂದು ಕಣಿವೇ ಮಾರ್ಗದಲ್ಲಿ ರಷ್ಯಾದವರು ಮುಂದರಿಸಲಾರದೆ ಹಿಮ್ಮೆಟ್ಟಿ ಹೋಗಿ ತಮ್ಮ ಒಂದು ಬಲವಾದ ಠಾಣ್ಯವನ್ನು ಸೇರಿಕೊಳ್ಳಬೇಕಾಯಿತು. ಇಲ್ಲಿಗೆ ಶತ್ರುವು ನುಗ್ಗಿ ಬರದಂತೆ ಅವರು ಪರಾಕ್ರಮದಿಂದ ತಮ್ಮ ಠಾಣ್ಯವನ್ನು ಕಾಪಾಡಿಕೊಳ್ಳುತ್ತಿರುವರು.

ಇದುವರೆಗೆ ನಡೆದಿರುವ ಯುದ್ಧಕಾರ್ಯಗಳನ್ನು ನೋಡುತ್ತಾ ಬರುವಲ್ಲಿ ರಷ್ಯಾದವರು ತಮ್ಮಮೇಲೆ ನುಗ್ಗಿಬಂದ ಶತ್ರು ಸೈನ್ಯಗಳನ್ನೆಲ್ಲಾ ಸಂಧಿಸಿ ಯುದ್ಧಕೊಟ್ಟು ಸೋಲಿಸುತ್ತೆಂದು ಗೊತ್ತಾಗುವುದು. ಜರ್ಮನಿಯವರು ವಾರ್ಸಾ ನಗರವನ್ನು ಗೆದ್ದುಕೊಳ್ಳಬೇಕೆಂದು ಸಂಕಲ್ಪ ಮಾಡಿಕೊಂಡಿದ್ದರು. ಅವರ ಈ ಉದ್ದೇಶವು ನಿರರ್ಥಕವಾಯಿತು. ಇದಲ್ಲದೆ ಪೂರ್ವ ಪ್ರಸ್ಯಾದೊಳಗೂ ಗೆಲಿಷಿಯಾದಲ್ಲಿಯೂ ರಷ್ಯಾದವರು ಮುಂದು ಮುಂದಕ್ಕೆ ನುಗ್ಗಿ ಬರುತ್ತಿರುವುದನ್ನು ಜರ್ಮನಿಯವರು ತಡೆದು ನಿಲ್ಲಿಸಲಾರದೆ ಹೋಗಿರುತ್ತಾರೆ.

ಈಜಿಪ್ಟು ಮತ್ತು ಟರ್ಕಿ.

ಜರ್ಮನಿಯ ಹುದ್ದೇದಾರರು ಕೆಲವು ಟರ್ಕಿ ಸೈನಿಕರನ್ನು ಕಟ್ಟಿಕೊಂಡು ಮರಳುಕಾಡನ್ನು ದಾಟಿ ಬಂದಿರುತ್ತಾರೆ. ಇವರು ಅಲ್ಲಿಂದ ಮೂರು ಸ್ಥಳಗಳಲ್ಲಿ ಸೂಯೆಸ್ ಕಾಲಿವೆಯನ್ನು ದಾಟಬೇಕೆಂದು ಸಾಹಸಪಟ್ಟರು. ಈ ಉದ್ದೇಶವು ಸಾಗಲಿಲ್ಲ. ಅವರಲ್ಲಿ ಅನೇಕರು ನಷ್ಟಪಟ್ಟರು.

ಫೆಬ್ರವರಿ ತಾ. 2 ನೇ ಮಂಗಳವಾರ ಸೂಯೆಸ್ ಕಾಲಿವೆಯ ಬಳಿಗೆ ಅಂದರೆ ತಿಂಸ ಎಂಬ ಕೆರೆಯ ಕಡೆಗೆ ಟರ್ಕಿ ಸೈನಿಕರು ಬರುವಂತೆ ಅವರಿಗೆ ಅವಕಾಶ ಕೊಡಲಾಯಿತು, ಅಲ್ಲಿ ಬ್ರಿಟಿಷರು ಅವರನ್ನು ತಡೆದು ಕದನಮಾಡಿದರು. ಟರ್ಕಿಯವರಿಗೆ ಸೋಲಾಯಿತು. ಅವರ ಕಡೆ 400 ಮಂದಿ ಕೊಲೆಯಾದರು ; 600 ಜನರು ಬ್ರಿಟಿಷರಿಗೆ ಸೆರೆಸಿಕ್ಕಿದರು. ಈ ಕದನದಲ್ಲಿ ಟರ್ಕಿಯವರು ಕೈಸೆರೆಯಾದವರಲ್ಲದೆ 2,400 ಸೈನ್ಯವನ್ನು ಕಳಕೊಂಡರು. ಮತ್ತು ಅವರ ಮೆಷೀನ್ ಪಿರಂಗಿಗಳೂ, ದಿನಸಿ ಮದ್ದು ಗುಂಡುಗಳ ಸಮೇತ ಕೆಲವು ಒಂಟೆಗಳೂ ಬ್ರಿಟಿಷರ ಪಾಲಾದವು. ಒಬ್ಬ ಜರ್ಮನಿ ಹುದ್ದೇದಾರನು ಕೊಲೆಯಾದನು.

ಬಳಿಕ ಆ ಮಾರನೇ ದಿನ ಟರ್ಕಿಯವರು ಮತ್ತೆ ನುಗ್ಗಿ ಬಂದು ತಡಿಕೆಗಳ ಮೇಲೆ ಕಾಲಿವೆಯನ್ನು ದಾಟಬೇಕೆಂದು ಪ್ರಯತ್ನಪಟ್ಟಹಾಗೆ ಕಾಣುತ್ತದೆ. ಬ್ರಿಟಿಷರು ಅವರನ್ನು ಸೋಲಿಸಿ ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟರು. ಇದರಲ್ಲಿ ಟರ್ಕಿಯವರ ಕಡೆ 8 ಮಂದಿ ಹುದ್ದೇದಾರರೂ 282 ಮಂದಿ ಸೈನಿಕರೂ ಕೈಸೆರೆ ಹಿಡಿಯಲ್ಪಟ್ಟರು. ಅನೇಕರು ಕೊಲೆಯಾದರು. ಬ್ರಿಟಿಷರ ಕಡೆ ಇಬ್ಬರು ಹುದ್ದೇದಾರರೂ 13 ಸಿಪಾಯಿಗಳೂ ಕೊಲೆಯಾದರು ; 58 ಮಂದಿಗೆ ಗಾಯಗಳಾಗಿವೆ.

ಅದೇ ಕಾಲಿವೆಯಲ್ಲಿ ಇನ್ನೊಂದು ಕಡೆ ಟರ್ಕಿಯವರು ನುಗ್ಗಿ ಬಂದು ಬ್ರಿಟಿಷರ ಮೇಲೆ ಯುದ್ಧಮಾಡಿದ್ದರಲ್ಲಿ ಬ್ರಿಟಿಷರು ಅವರನ್ನು ಸೋಲಿಸಿ ಹಿಂದಕ್ಕೆ ಓಡಿಸಿರುತ್ತಾರೆ. ಟರ್ಕಿಯವರಲ್ಲಿ 21 ಮಂದಿ ಕೊಲೆಯಾದರು, 25 ಮಂದಿ ಗಾಯಪಟ್ಟರು, 26 ಮಂದಿಯನ್ನು ಬ್ರಿಟಿಷರು ಕೈಸೆರೆ ಹಿಡಿದುಕೊಂಡರು. ಬ್ರಿಟಿಷರ ಕಡೆ 3 ಮಂದಿ ನಷ್ಟಪಟ್ಟರು. ಟರ್ಕಿಯವರು 12,000 ಸೈನಿಕರನ್ನೂ 36 ಪಿರಂಗಿಗಳನ್ನೂ ತಂದಿದ್ದರು. ಹಡಗುಗಳ ಸಂಚಾರಕ್ಕೆ ಆ ಕಾಲಿವೆಯಲ್ಲಿ ಯಾವ ಅಡಚಣೆಯೂ ಇರುವುದಿಲ್ಲ. ಒಂದು ಹಡಗಿನೊಳಗಿದ್ದ ಪೈಲಟ್ ಎಂಬ ನೌಕರನಿಗೆ ಗಾಯವಾಗಿದೆ. ಒಂಟೆಗಳು ವಿಶೇಷವಾಗಿ ಸಾಯುವುದರಿಂದ ಟರ್ಕಿಯವರು ಆ ಮರಳು ಕಾಡನ್ನು ದಾಟಬರುವುದೇ ಮಹಾ ಪ್ರಯಾಸವಾಗಿರುತ್ತದೆ.

ರಷ್ಯಾದವರು ಟರ್ಕಿಯವರನ್ನು ಸಂಧಿಸಿ ಎರಡು ಮೂರು ಸ್ಥಳಗಳಲ್ಲಿ ಸೋಲಿಸಿಬಿಟ್ಟರು. ಟರ್ಕಿಯವರು ಪರ್ಷಿಯಾದೊಳಕ್ಕೆ ನುಗ್ಗಿಹೋಗಿ ಟೇಬ್ರಿಜ್ ಎಂಬ ನಗರವನ್ನು ಸ್ವಾಧೀನಪಡಿಸಿಕೊಂಡಿದ್ದರು. ರಷ್ಯಾದವರು ಹೋಗಿ ಟೇಬ್ರಿಜಿನ ಬಳಿ ಟರ್ಕಿಯವರ ಮೇಲೆ ಕದನಮಾಡಿ ಅವರನ್ನು ಸೋಲಿಸಿ ಆ ನಗರವನ್ನು ಅವರಿಂದ ಕಿತ್ತುಕೊಂಡುಬಿಟ್ಟಿದ್ದಾರೆ. ಟರ್ಕಿಯವರು ಇಟ್ಟುಕೊಂಡಿದ್ದ ಪಿರಂಗಿಗಳೆಲ್ಲಾ ರಷ್ಯಾದವರ ಪಾಲಾದವು. ಮತ್ತು ಅವರು 200 ಮಂದಿ ಟರ್ಕಿ ಸೈನಿಕರನ್ನು ಕೈಸೆರೆ ಹಿಡಿದಿರುವರು. ಟರ್ಕಿಯವರಲ್ಲಿ 1,000 ಮಂದಿ ಕೊಲೆಯಾದರು ; ಅನೇಕರು ಗಾಯಪಟ್ಟರು. ಟರ್ಕಿಯವರು ಆ ನಗರದೊಳಗಿದ್ದ ಒಂದು ಅಂಗಡಿಸಾಲನ್ನೆಲ್ಲಾ ಸುಟ್ಟುಬಿಟ್ಟು, ಬಹು ಜನ ಪರ್ಷಿಯಾದವರನ್ನು ಗಲ್ಲಿಗೆ ಹಾಕಿ ಕೊಂದುಬಿಟ್ಟಿದ್ದರು.

ಕಾಕಸಸ್ ಪ್ರಾಂತ್ಯದಲ್ಲಿ ರಷ್ಯಾದವರು ಹಿಮದ ಮಳೆ ಸುರಿಯುತ್ತಿದ್ದರೂ ಲಕ್ಷ್ಯಮಾಡದೆ ಒಂದು ಪರ್ವತವನ್ನು ಹತ್ತಿ ಇಳಿದು ಸಂಗೀನುಗಳನ್ನು ತೋರಿಸುತ್ತಾ ನುಗ್ಗಿ ಹೋಗಿ ಒಂದು ಗ್ರಾಮಕ್ಕೆ ಮುತ್ತಿಗೆಹಾಕಿದರು. ಅಲ್ಲಿ ಟರ್ಕಿಯವರ 13 ನೇ ಡಿವಿಜನ್ ಸೈನ್ಯದ ಸೇನಾಪತಿಯಾದ ಮಹಮದ್ ಫಕಿ ಬೇ ಎಂಬ ಹುದ್ದೇದಾರರನ್ನೂ, ಆತನ ಕೈಕೆಳಗಿದ್ದ ಸಮಸ್ತ ಮುಖ್ಯ ಹುದ್ದೇದಾರರನ್ನೂ, 350 ಸೈನಿಕರನ್ನೂ ರಷ್ಯಾದವರು ಕೈಸೆರೆ ಹಿಡಿದುಕೊಂಡಿದ್ದಾರೆ.

ಕಪ್ಪು ಕಡಲಿನೊಳಗೆ ರಷ್ಯಾದವರು ಟರ್ಕಿಯವರ ಎರಡು ಯುದ್ಧದ ಹಡಗುಗಳನ್ನು ಸೋಲಿಸಿ ಓಡಿಸಿಬಿಟ್ಟದ್ದಲ್ಲದೆ ಟ್ರೆಬಿಜೊಂಡ್ ಎಂಬ ನಗರವನ್ನು ಮುತ್ತಿಗೆ ಹಾಕಿದರು. ಇವರು ಹಡಗುಗಳಿಂದ ಪಿರಂಗಿಗಳನ್ನು ಹೊಡೆದು ಆ ನಗರದಲ್ಲಿ ಸೈನಿಕರ ಸಾಲು ಮನೆಗಳನ್ನೂ ಯುದ್ಧಸಾಮಗ್ರಿಗಳ ಉಗ್ರಾಣಗಳನ್ನೂ ನಾಶಮಾಡಿರುತ್ತಾರೆ. ಟರ್ಕಿ ಸೈನಿಕರು ಓಡಿಹೋದರು.

ಟರ್ಕಿಯವರಿಗೆ ಯಾವ ಕಡೆಯಲ್ಲೂ ಇದುವರೆಗೂ ಜಯಪ್ರದವೇನೂ ಆಗಿರುವುದಿಲ್ಲ. ಎಲ್ಲಾ ಕಡೆಗಳಲ್ಲೂ ಮಹಮದೀಯರು ಅವರ ವಿಷಯದಲ್ಲಿ ಪ್ರೀತಿ ಸಂತೋಷಗಳೇನೂ ಪಡೆದಿರುವುದಿಲ್ಲ.

ಟೈಗ್ರಿಸ್ ಕಣಿವೆಯೊಳಗೆ ಜನವರಿ ತಾ. 30 ರಲ್ಲಿ ಟರ್ಕಿಯವರು ಮುಂದೆ ನುಗ್ಗಿ ಹೋಗಿದ್ದ ಬ್ರಿಟಿಷ್ ಸೈನ್ಯದ ಮೇಲೆ ಬಿದ್ದು ಕದನ ಮಾಡಿದರು. ಬ್ರಿಟಿಷರು ಅವರನ್ನು ಬೇಗ ಸೋಲಿಸಿ ಓಡಿಸಿಬಿಟ್ಟರು. ಟರ್ಕಿಯವರ ಕಡೆ 7 ಮಂದಿ ಕೊಲೆಯಾದರು ; 46 ಮಂದಿ ಕೈಸೆರೆ ಸಿಕ್ಕಿದರು. ಟರ್ಕಿಯವರು ಬೆಳಸಿಕೊಂಡಿದ್ದ ಠಾಣ್ಯಗಳನ್ನೆಲ್ಲಾ ಬ್ರಿಟಿಷರು ಒಡೆದು ನಾಶಮಾಡಿದರು.

ವೈಸ್‌ರಾಯರವರು ಫಾರ್ಷಿಯಾರಿಗೆ ದಯಮಾಡಿದ್ದು.

ಕೆಲವು ದಿನಗಳ ಹಿಂದೆ ನಮ್ಮ ವೈಸ್‌ರಾಯರವರು ಬೊಂಬಾಯಿಗೆ ದಯಮಾಡಿದರು. ಸೀಮೆಯಿಂದ ಬಂದ ತಮ್ಮ ಕುಮಾರನನ್ನು ನೋಡುವುದಕ್ಕಾಗಿ ಹೋದರೆಂದು ಊಹಿಸಲಾಯಿತು. ಅವರ ಆಗಮನವನ್ನು ಮಾತ್ರ ಅಲ್ಲಿನ ವರ್ತಮಾನ ಪತ್ರಿಕೆಗಳು ವಿವರಿಸಿ, ಬಳಿಕ ಸುಮ್ಮನಾದವು. ಕಳೆದ ಶನಿವಾರದ ಪತ್ರಿಕೆಗಳು ಅವರು ಬೊಂಬಾಯಿನಲ್ಲಿ ಜಹಜು ಹತ್ತಿ ಫಾರಸ್ ಕೊಲ್ಲಿಗೆ ಪ್ರಯಾಣ ಬೆಳಸಿ ಅಲ್ಲಿ ನಡಿಸಿದ ವಿದ್ಯಮಾನಗಳನ್ನೆಲ್ಲಾ ವಿವರವಾಗಿ ತಿಳಿಸಿರುತ್ತವೆ. ವೈಸ್‌ರಾಯರವರು ಜನವರಿ ತಾ. 30 ರಲ್ಲಿ ಕೊವೇಟ್ ಎಂಬ ಕೇರಪಟ್ಟಣವನ್ನು ತಲಪಿದರು. ಅಲ್ಲಿ ಬ್ರಿಟಿಷ್ ರೆಸಿಡೆಂಟರಾಗಿರುವ ಸರ್ ಪರ್ಸಿ ಕಾಕ್ಸ್‌ರವರು ಬಂದು ಜಹಜಿನಲ್ಲಿ ವೈಸ್‌ರಾಯರವರ ಭೇಟಿ ಮಾಡಿದರು. ಕೊವೇಟಿನ ಷೇಕ್‌ರವರ ಪರವಾಗಿ ಅವರ ಕುಮಾರರಾದ ಷೇಕ್ ಜಾಬ್ರಿಯವರೂ ಬಂದು ತನ್ನ ತಂದೆಯ ಪರವಾಗಿ ವೈಸ್‌ರಾಯರವರ ದರ್ಶನವನ್ನು ಪಡೆದರು. ಫೆಬ್ರವರಿ ತಾ. 1 ರಲ್ಲಿ ಕೊವೇಟ್ ಸಂಸ್ಥಾನದ ಅರಸಾದ ಷೇಕ್ ಸರ್ ಮುಬಾರಕ್ ಬಿನ್ ಸುಭಾಹರವರೂ, ಬಹರೇನ್ ಸಂಸ್ಥಾನದ ಷೇಕ್‌ರವರ ಕುಮಾರರಾದ ಷೇಕ್ ಅಬ್ದುಲ್ಲಾ ಬಿನ್ ಈಸಾರವರೂ ಸಲ್ತನ್ ಮರ್ಯಾದೆಗಳೊಡನೆ ಬಂದು ವೈಸ್‌ರಾಯರವರ ಭೇಟಿ ತೆಗೆದುಕೊಂಡರು. ಆ ಸಮಯದಲ್ಲಿ ವೈಸ್‌ರಾಯರವರು ಮೊದಲನೆಯವರಿಗೆ ಕೆ.ಸಿ.ಎಸ್.ಐ. ಎಂಬ ಬಿರುದನ್ನೂ, ಎರಡನೆಯವರಿಗೆ ಸಿ.ಐ.ಇ. ಎಂಬ ಬಿರುದನ್ನೂ ಸ್ವಹಸ್ತ ದಯಪಾಲಿಸಿದರು. ಮಧ್ಯಾಹ್ನದ ಮೇಲೆ ವೈಸ್‌ರಾಯರವರು ಜಹಜಿನಿಂದ ಇಳಿದು ಹೋಗಿ ಕೊವೇಟ್ ಷೇಕರವರಿಗೆ ಮರುಭೇಟಿ ದಯಪಾಲಿಸಿ ಬಂದರು. ಮಾರನೇದಿನ ವೈಸ್‌ರಾಯರವರು ಅಮೇರಿಕನ್ ಮಿಷನ್ ಆಸ್ಪತ್ರೆಗೆ ದಯಮಾಡಿದ್ದು ಬಂದು, ಮಧ್ಯಾಹ್ನ ಷಟಲ್ ಅರೆಬ್ ನದೀ ಮುಖವನ್ನು ತಲಪುವಾಗ್ಗೆ ರಾತ್ರಿಯಾಯಿತು. ಮರುದಿನ ಇಂಡೋ ಟೆಲಿಗ್ರಾಫ್ ಇಲಾಖೆಯ ಅಧಿಕಾರಿಯಾದ ಮಿ|| ಥಾಮ್ಸನವರು ಜಹಜು ಹತ್ತಿ ಹೋಗಿ ಭೇಟಿ ಮಾಡಿದಾಗ ವೈಸ್‌ರಾಯರವರು ಆ ಅಧಿಕಾರಿಗೆ ಕೈಸರಿಹಿಂದ್ ಎಂಬ ಬಿರುದಿನ ಬಿಲ್ಲೆಯನ್ನು ದಯಪಾಲಿಸಿದರು. ಈತನು ಬ್ರಿಟಿಷ್ ನೌಕರಿಯನ್ನು ತುಂಬಾ ಮನಸ್ಸಿನಿಂದ ಮಾಡಿರುತ್ತಾನೆ. ಈತನನ್ನು ಟರ್ಕಿಯವರು ಕೈಸೆರೆ ಹಿಡಿದಿಟ್ಟುಕೊಂಡಿದ್ದರು ; ಬ್ರಿಟಿಷರು ಹೋಗಿ ಬಿಡಿಸಿಕೊಂಡು ಬಂದರು. ಅಲ್ಲಿ ವೈಸ್‌ರಾಯರವರು ಜಹಜಿನಿಂದ ಇಳಿದು ಊರಿನೊಳಕ್ಕೆ ಹೋಗಿ ಆಂಗ್ಲೊ ಪರ್ಷಿಯನ್ ಎಣ್ಣೆ ಕಂಪೆನಿಯನ್ನು ಪರಾಂಬರಿಸಿದ್ದಲ್ಲದೆ ಮಿ|| ಸಿ. ಎ. ವಾಲ್ಪೋಲ್ ಎಂಬ ಮ್ಯಾನೇಜರು ಬಹಳ ಮೆಹನತ್ತಿನ ಸರ್ವೀಸ್ ಮಾಡಿರುವುದಕ್ಕಾಗಿ ಆತನಿಗೆ ಬಹು ಬೆಲೆಯುಳ್ಳ ಬಹುಮಾನವನ್ನು ದಯಪಾಲಿಸಿದರು.

ಮಾರನೇ ದಿನ ವೈಸ್‌ರಾಯರವರು ಹಾಗೇ ನದಿಯ ಮೇಲೆ ಹೋಗುವಲ್ಲಿ ಮೊಹಮ್ಮಾರಾ ಸಂಸ್ಥಾನದ ಷೇಕರವರು ಮುಂದೆ ಬಂದು ಜಹಜಿನಲ್ಲಿ ವೈಸ್‌ರಾಯರವರ ಭೇಟಿ ಮಾಡಿದರು. ಇವರು ಆ ಷೇಕರಿಗೆ ಕೆ.ಸಿ.ಎಸ್.ಐ. ಎಂಬ ಬಿರುದನ್ನೂ, ಅವರ ಕೂಡ ಬಂದಿದ್ದ ಅವರ ವಜೀರರಿಗೆ ಸಿ.ಐ.ಇ. ಎಂಬ ಬಿರುದನ್ನೂ ದಯಪಾಲಿಸಿದರು.

ವೈಸ್‌ರಾಯರವರು ಅಲ್ಲಿಂದ ಬಾಸ್ರಾದಿಗೆ ಚಿತ್ತೈಸಿದರು. ಅಲ್ಲಿರುವ ಬ್ರಿಟಿಷ್ ಪ್ರಜೆಗಳು ಸೇರಿಬಂದು ಅವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ವೈಸ್‌ರಾಯರವರು ಅಲ್ಲಿ ಸಮಯೋಚಿತವಾದ ಉತ್ತರವನ್ನು ದಯಪಾಲಿಸಿ ಅಪ್ಪಣೆಕೊಡಿಸಿದ ಸಂಗತಿಗಳೇನೆಂದರೆ—ಈಗ ಈ ಸೀಮೆಯು ಬ್ರಿಟಿಷರಿಗೆ ಸೇರಿರುವುದರಿಂದ ಇದರ ಆಳ್ವಿಕೆಗೆ ತಕ್ಕ ಏರ್ಪಾಡುಗಳನ್ನು ಮಾಡಿಡುವುದಕ್ಕಾಗಿ ನಾವು ಮೊದಲ್ತು ಬಂದಿರುತ್ತೇವೆ. ಈ ಸೀಮೆಯ ಪರಿಣಾಮವೇನೋ ಈಗಲೇ ಹೇಳಲಾಗದು. ಇದರ ವಿಷಯದಲ್ಲಿ ನಮ್ಮ ಪಕ್ಷದವರೆಲ್ಲರ ಅಭಿಮತವನ್ನೂ ಕೇಳಿ ತಿಳಿದು ವ್ಯವಸ್ಥೆ ಮಾಡಬೇಕಾಗುವುದು. ಇನ್ನು ಮುಂದೆ ಈ ಸೀಮೆಯು ಹೊಸ ಪರಿಯ ಏರ್ಪಾಡಿಗೆ ಒಳಪಟ್ಟು ಅಭಿವೃದ್ಧಿಗೆ ಬಂದೀತೆನ್ನುವುದಕ್ಕೆ ಸಂಶಯವಿರಲಾರದು, ಇತ್ಯಾದಿ.

ವೈಸ್‌ರಾಯರವರು ಅಲ್ಲಿಂದ ಆಸ್ಪತ್ರೆಗಳಿಗೆ ಚಿತ್ತೈಸಿ ಅಲ್ಲಿ ಬ್ರಿಟಿಷ್ ಮತ್ತು ಹಿಂದುಸ್ಥಾನದ ಸೈನಿಕರು ಗಾಯಪಟ್ಟೂ ಕಾಯಿಲೆಬಿದ್ದೂ ಬಂದು ಚಿಕಿತ್ಸೆಹೊಂದುತ್ತಿರುವುದನ್ನು ಪರಾಂಬರಿಸಿಕೊಂಡು ದಯಮಾಡಿದರು. ವೈಸ್‌ರಾಯರವರು ಅಲ್ಲಿಂದ ಹಿಂತಿರುಗಿ ಯಾವಾಗ ಹಿಂದುಸ್ಥಾನಕ್ಕೆ ದಯಮಾಡುವರೋ ತಂತೀ ವರ್ತಮಾನಗಳು ತಿಳಿಸಿರುವುದಿಲ್ಲ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ದಂಗೆಯೆದ್ದಿದ್ದ ಬ್ರಿಟಿಷ್ ಪ್ರಜೆಗಳು ಜರ್ಮನಿ ಸ್ವಾಸ್ಥ್ಯದ ಬಳಿ ಬಂದು ಬ್ರಿಟಿಷರಿಗೆ ಶರಣಾಗತರಾಗುತ್ತಿದ್ದಾರೆ. ಜನರಲ್ ಮರಿಟ್ಸ್ ಎಂಬ ದಳಪತಿಯ ಕೈಕೆಳಗಿದ್ದ ನಾಲ್ವರು ಹುದ್ದೇದಾರರೂ 100 ಮಂದಿ ಸಿಪಾಯಿಗಳೂ, ಜನರಲ್ ಕೆಂಪ್ ಎಂಬ ದಳಪತಿಯ ಕೈಕೆಳಗಿದ್ದ 43 ಮಂದಿ ಹುದ್ದೇದಾರರೂ 486 ಸಿಪಾಯಿಗಳೂ ಬ್ರಿಟಿಷರಿಗೆ ಶರಣಾಗತರಾದರು. ಇತರರೂ ಹೀಗೆಯೇ ಬಂದು ಇಷ್ಟರಲ್ಲೇ ಶರಣಾಗತರಾಗುತ್ತಾರೆಂಬ ನಿರೀಕ್ಷೆಯುಂಟು.

ಮಧ್ಯ ಆಫ್ರಿಕಾದೊಳಗೆ ದೇಶೀಯ ಜನರು ದಂಗೆಯೆದ್ದಿದ್ದಾರೆ. ಆದರೆ ಬ್ರಿಟಿಷರು ಅವರನ್ನೆಲ್ಲಾ ಚದರಿಸಿಬಿಟ್ಟರು ; ಅವರ ಮುಖಂಡನು ತಲೆತಪ್ಪಿಸಿಕೊಂಡು ಓಡಿಹೋಗಿರುತ್ತಾನೆ.

ಇತರ ವಿಷಯಗಳು.

ಉತ್ತರ ಕಡಲಿನಲ್ಲಿ ನಡೆದ ಸಮುದ್ರ ಯುದ್ಧದ ವಿಷಯದಲ್ಲಿ ವರ್ತಮಾನ ಪತ್ರಿಕೆಗಳು ಇನ್ನೂ ಕೆಲವು ಸಂಗತಿಗಳನ್ನು ಪ್ರಕಟಮಾಡಿರುತ್ತವೆ. ಬ್ರಿಟಿಷರು ಬ್ಲೂಚರ್ ಎಂಬ ಜರ್ಮನಿಯವರ ಯುದ್ಧದ ಜಹಜನ್ನು ಮುಳುಗಿಸಿ, ಅದರಲ್ಲಿದ್ದ ಜರ್ಮನಿಯವರನ್ನು ಕೈಸೆರೆ ಹಿಡಿದುಕೊಂಡು ಬಂದರಷ್ಟೆ. ಕೈಸೆರೆಯಾದ ಈ ಜರ್ಮನಿಯವರು ಹೇಳಿರುವುದೇನೆಂದರೆ—ಬ್ರಿಟಿಷರ ಜಹಜುಗಳಿಂದ ಹೊಡೆದ ಗುಂಡುಗಳು ಬ್ಲೂಚರ್ ಎಂಬ ಜಹಜಿಗೆ ಮೊದಲು ಸ್ವಲ್ಪ ದೂರದಲ್ಲಿ ಬಿದ್ದವು. ಬಳಿಕ ಅವು ಸಮೀಪಕ್ಕೆ ಬಂದು ಬಿದ್ದವು. ಕಡೆಗೆ ಒಂದು ಗುಂಡು ಬಹಳ ಹತ್ತರ ಬಿದ್ದಾಗ ಅದರ ರಭಸದಿಂದ ಸಮುದ್ರದ ನೀರು ಸುಮಾರು 200 ಅಡಿಯಷ್ಟು ಮೇಲಕ್ಕೆ ಹಾರಿ ಬ್ಲೂಚರ್ ಜಹಜಿನ ಮೇಲೆ ಬಿದ್ದಿತು. ತರುವಾಯ ಗುಂಡುಗಳು ಗುಂಪು ಗುಂಪಾಗಿಯೂ ಮಹಾ ವೇಗದಿಂದಲೂ ಆ ಜಹಜಿನ ಮೇಲೆ ಬಿದ್ದವು. ಅಲ್ಲಿಗೆ ಶತ್ರುವಿನ ಜಹಜು ಬ್ರಿಟಿಷ್ ಗುಂಡುಗಳು ಬೀಳುವಷ್ಟು ಸಮೀಪವಾಯಿತೆಂದು ಗೊತ್ತಾಯಿತು. ಆ ಜಹಜಿನಲ್ಲಿ ಬಹು ಭಯಂಕರವಾದ ನಷ್ಟ ಸಂಭವಿಸಿತು. ಅದರಲ್ಲಿದ್ದ ವಿದ್ಯುಚ್ಛಕ್ತಿಯ ದೀಪಗಳು ನಾಶಹೊಂದಿದವು. ಜಹಜಿನೊಳಗೆಲ್ಲಾ ಕಗ್ಗತ್ತಲು ಕವಿದುಕೊಂಡಿತು. ಗಲಿಬಿಲಿಯು ಹೆಚ್ಚಿತು. ಗಾಯಪಟ್ಟವರ ನರಳಾಟ ಬಲವಾಯಿತು. ಬ್ರಿಟಿಷರ ಗುಂಡುಗಳು ಆ ಜಹಜಿನೊಳಗಿದ್ದ ಕಲ್ಲಿದ್ದಲ ಮೇಲೆ ಬಿದ್ದು ಒಡೆದದ್ದರಿಂದ ಜಹಜು ಹತ್ತಿಕೊಂಡು ಉರಿಯಲಾರಂಭಿಸಿತು. ಇನ್ನೂ ಗುಂಡುಗಳು ಬಿದ್ದು ಒಡೆಯುತ್ತಾ ಬಂದಾಗ ಅದರಲ್ಲಿದ್ದ ಜನಗಳು ಜಹಜಿನ ಗೋಡೆಗಳಿಗೆ ಬಲು ಬಿರುಸಾಗಿ ಬಡಿಯಲ್ಪಟ್ಟರು. ಬ್ರಿಟಿಷ್ ಜಹಜುಗಳು ಅದರ ಸಮೀಪಕ್ಕೆ ಬರುತ್ತಾ ಗುಂಡುಗಳನ್ನು ಸುರಿಸುತ್ತಾ ಬಂದಾಗ ಅವು ಹಡಗನ್ನು ಕೊರೆದು ಭೇದಿಸಿಕೊಂಡು ಹೋದವು. ಅಷ್ಟು ಹೊತ್ತಿಗೆ ಅದರೊಳಗಿದ್ದ ಪಿರಂಗಿಗಳ ಪೈಕಿ ಒಂದು ಹೊರತು ಉಳಿದವುಗಳೆಲ್ಲಾ ಮುರಿದು ಕೆಟ್ಟು ಹೋದವು. ಇಬ್ಬರು ನಿಂತು ಒಂದರಲ್ಲಿ ಮಾತ್ರ ಗುಂಡುಗಳನ್ನು ಹೊಡೆಯುತ್ತಿದ್ದರು. ಬ್ರಿಟಿಷರ ಜಹಜುಗಳಿಂದ ಹಾರುತ್ತಿದ್ದ ಗುಂಡುಗಳು ಬಿದ್ದು ಅತ್ಯಂತ ಭಯಂಕರವಾದ ಶಬ್ದದಿಂದ ಹಾರಿದವು. ಆ ಜಹಜು ಮುಳುಗಿಹೋಗುವಲ್ಲಿ ಅದರೊಳಗಿದ್ದ ಜನಗಳು ತಮ್ಮ ಚಕ್ರವರ್ತಿಯ ಹೆಸರು ಹೇಳಿ ಜಯಧ್ವನಿ ಮಾಡುತ್ತಲೂ, ಸ್ವದೇಶ ವಾತ್ಸಲ್ಯ ಸೂಚಕವಾದ ಪದಗಳನ್ನು ಹಾಡುತ್ತಲೂ ಇದ್ದರು.

ಜರ್ಮನಿಯವರ ಕೆಲವು ಸಬ್‌ಮೆರೀನ್ ಎಂಬ ಹಡಗುಗಳು ಇಂಗ್ಲಿಷ್ ಕಾಲಿವೆಯಲ್ಲೂ, ಐರಿಷ್ ಕಡಲಿನಲ್ಲೂ ಹಲವು ಬ್ರಿಟಿಷ್ ವ್ಯಾಪಾರದ ಹಡಗುಗಳನ್ನು ಮುಳುಗಿಸಿರುತ್ತವೆ. ಒಂದು ಸಂದರ್ಭದಲ್ಲಿ ಶತ್ರುವಿನ ಸಬ್‌ಮೆರೀನ್ ಎಂಬ ಹಡಗು ಎಚ್ಚರಿಕೆಯನ್ನೇ ಕೊಡದೆ ಎರಡು ಟಾರ್ಪಿಡೋಗಳನ್ನು ಬಿಟ್ಟು ಬ್ರಿಟಿಷ್ ಹಡಗಿಗೆ ಬಡಿಸಿತು. ದೇವರ ದಯದಿಂದ ಆ ಹಡಗು ಮುಳುಗಲಿಲ್ಲ. ಅದನ್ನು ಅಲ್ಲಿಂದ ಫ್ರೆಂಚ್ ಪಟ್ಟಣಕ್ಕೆ ಸಾಗಿಸಿಕೊಂಡು ಹೋಗಿದ್ದಾರೆ. ಬ್ರಿಟಿಷರ ಐದು ಹಡಗುಗಳನ್ನು ತಡೆದು, ಅವುಗಳಲ್ಲಿದ್ದ ಜನರೆಲ್ಲಾ ದೋಣಿಗಳಿಗೆ ಹೋದ ಮೇಲೆ, ಶತ್ರುವಿನ ಸಬ್‌ಮೆರೀನ್ ಹಡಗು ಆ ಹಡಗುಗಳನ್ನು ಮುಳುಗಿಸಿಬಿಟ್ಟಿತು. ಪ್ರತಿ ಒಂದನ್ನು ಮುಳುಗಿಸಿದಾಗಲೂ ಅದರಲ್ಲಿದ್ದವರೆಲ್ಲಾ ಬದುಕಿಸಲ್ಪಟ್ಟರು. ಪ್ರಾಣನಷ್ಟವೇನೂ ಆಗಲಿಲ್ಲ. ಶತ್ರುವಿನ ಸಬ್‌ಮೆರೀನ್ ಹಡಗು ಬ್ರಿಟಿಷರ ಒಂದು ಆಸ್ಪತ್ರೆ ಜಹಜನ್ನು ನಾಶಪಡಿಸಬೇಕೆಂದು ಪ್ರಯತ್ನಪಟ್ಟಿತು. ಈ ವಿಚಾರವು ಉಗ್ರವಾದ ಕೋಪವನ್ನು ಉಂಟುಮಾಡಿರುತ್ತದೆ. ಅದರೇನು, ಜರ್ಮನಿಯು ಬ್ರಿಟಿಷರಿಗೆ ಕೇಡು ಸಂಭವಿಸಿದರೆ ಸಾಕು ಎಂದು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧವಾಗಿದೆ.

ಹಂಗೆರಿ ರಾಜ್ಯದ ಮಂತ್ರಿಯು ಜರ್ಮನಿಗೆ ಹೋಗಿದ್ದನೆಂದೂ, ಕರಾರು ಮಾಡಿಕೊಳ್ಳೋಣವೆಂದು ಜರ್ಮನಿಗೆ ತನ್ನ ಕುತೂಹಲವನ್ನು ತಿಳಿಸಿದನೆಂದೂ, ಜರ್ಮನಿಯ ರಾಜತಂತ್ರಜ್ಞರು ಅದಕ್ಕೆ ಒಪ್ಪದೆಹೋದರೆಂದೂ, ಇದರಿಂದಲೇ ಜರ್ಮನಿಯ ಸೈನಿಕರು ಹಂಗೆರಿಯ ಸಂರಕ್ಷಣೆಗೆ ಹೋಗುವುದರಲ್ಲಿದ್ದಾರೆಂದೂ, ಜರ್ಮನಿಯವರು ಫ್ರೆಂಚರನ್ನೂ ಬ್ರಿಟನ್ನರನ್ನೂ ಸಂಪೂರ್ಣವಾಗಿ ಸೋಲಿಸುವುದಕ್ಕೆ ಬಹಳ ಖಂಡಿತವಾದ ದೊಡ್ಡ ಪ್ರಯತ್ನವನ್ನು ಮಾಡುತ್ತಾರೆಂದೂ ಹೇಳಲಾಗಿದೆ.

ಜರ್ಮನಿ ರಾಜ್ಯದೊಳಗೆ ಗವರ್ನ್‌ಮೆಂಟಿನವರು ಪ್ರಜೆಗಳಿಗೆ ಮುಖ್ಯವಾಗಿರುವಂಥಾ ಆಹಾರ ಪದಾರ್ಥಗಳನ್ನು ಅಂದರೆ ಗೋಧಿಯನ್ನೂ ಹಿಟ್ಟನ್ನೂ ಕೂಡಿಸಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಪ್ರತಿ ಒಬ್ಬ ಪ್ರಜೆಗೂ ಇಷ್ಟು ಗೋಧಿ, ಇಷ್ಟು ಹಿಟ್ಟು ಎಂದು ನಿಯಮಿಸಿ ಆ ಪ್ರಕಾರ ಆಹಾರವನ್ನು ಬಟವಾಡೆಮಾಡುವರು. ರಾಜಧಾನಿಯಾದ ಬೆರ್ಲಿನ್ ಪಟ್ಟಣದಲ್ಲಿ ಜನರು ನುಗ್ಗಿ ಲೂಟಿ ಮಾಡಿಯಾರೆಂದು ಹೆದರಿ ಸರ್ಕಾರದವರು ಎಲ್ಲಾ ರೊಟ್ಟೀ ಗಡಂಗುಗಳಿಗೂ 1,200 ಮಂದಿ ಪೋಲೀಸಿನವರನ್ನು ಹೊಸದಾಗಿ ಪಹರೆ ನೇಮಿಸಿರುತ್ತಾರೆ. 100 ರೊಟ್ಟೀ ಗಡಂಗುಗಳು ಮುಚ್ಚಿ ಹೋದವೆಂದು ಹೇಳುತ್ತಾರೆ.

ಜರ್ಮನಿ ಗವರ್ನ್‌ಮೆಂಟಿನವರು ತಮ್ಮ ರಾಜ್ಯದಲ್ಲಿರುವ ಭಂಗಾರದ ನಾಣ್ಯಗಳನ್ನೆಲ್ಲಾ ತರಿಸಿ ಕೂಡಿಸಿಟ್ಟುಕೊಳ್ಳಬೇಕೆಂದು ಬ್ಯಾಂಕು ಮುಂತಾದ ಕಡೆಗಳಲ್ಲಿರುವ ನಾಣ್ಯಗಳಿಗೆ ಒಂದು ತರಹಾ ಗುರುತುಮಾಡಿ, ಆ ಗುರುತು ಇಲ್ಲದಿರುವಂಥಾ ಚಿನ್ನದ ನಾಣ್ಯಗಳ ಬೆಲೆಯನ್ನು ತುಂಬಾ ಕಡಮೆಮಾಡಿರುತ್ತಾರೆ. ಇದರಿಂದ ಪ್ರಜೆಗಳು ತಮ್ಮ ಬಳಿ ಇರುವ ನಾಣ್ಯಗಳನ್ನು ಬೇಗನೆ ಬ್ಯಾಂಕುಗಳಿಗೆ ತಂದುಕೊಡುವಂತೆ ಬಲಾತ್ಕಾರವಾದಂತಾಯಿತು.

ಜರ್ಮನಿಯೊಳಗೆ ಯುದ್ಧವನ್ನು ನಿಲ್ಲಿಸಿ ಕರಾರುಮಾಡಿಕೊಂಡು ನೆಮ್ಮದಿಯಾಗಿರೋಣವೆಂದು ಒಂದು ಪಕ್ಷದವರು ಹೋರಾಡುತ್ತಾರೆ. ಈ ಪಕ್ಷದವರು ಸೇರಿ ಒಂದು ಕಡೆ ಸಭೆಮಾಡುತ್ತಿದ್ದಾಗ ಸರ್ಕಾರದವರು ಹೋಗಿ ಅವರಲ್ಲಿ ಅನೇಕರನ್ನು ದಸ್ತಗಿರಿಮಾಡಿದರೆಂದೂ, ಇಬ್ಬರನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರೆಂದೂ ಪ್ರಕಟವಾಗಿದೆ. ಜರ್ಮನಿಯೊಳಗೆ ಭಿಕ್ಷುಗಾರರ ಸಂಖ್ಯೆ ದಿನಕ್ರಮೇಣ ಹೆಚ್ಚಿ ಹರಡುತ್ತಿರುವುದು.

ವಾನ್ ಹಾರಕ್ ಎಂಬೊಬ್ಬ ಜರ್ಮನಿ ಹುದ್ದೇದಾರನು ಅಮೇರಿಕದಲ್ಲಿ ಕೆನಡಾದಿಗೂ ಸಂಯುಕ್ತ ಸಂಸ್ಥಾನಗಳಿಗೂ ನಡುವೆ ಇರುವ ಒಂದು ಸೇತುವೆಯನ್ನು ಸಿಡಿಮದ್ದಿನಿಂದ ಒಡೆದುಹಾಕಬೇಕೆಂದು ಪ್ರಯತ್ನಪಟ್ಟನು. ಅಮೇರಿಕದವರು ಅವನನ್ನು ದಸ್ತಗಿರಿಮಾಡಿ ಅವನಿಗೆ ಒಂದು ತಿಂಗಳ ಸಜಾ ವಿಧಿಸಿದರು. ಇವನನ್ನು ದಯಾರ್ಕ್ಷಿಗಾಗಿ ಕೆನಡಾದಿಗೆ ಕಳುಹಿಸಿಕೊಡಬೇಕೆಂದು ಬ್ರಿಟಿಷರು ಅಮೇರಿಕದವರಿಗೆ ಹೇಳಿ ಕಳುಹಿಸಿದರು. ಅವನು ತಾನು ಮಾಡಿದ ಕೃತ್ಯವು ಯುದ್ಧಕ್ಕೆ ಸಂಬಂಧಪಟ್ಟಿದ್ದೆಂದು ಹೇಳುತ್ತಾನೆ.

[8 ನೇ ಪುಟವನ್ನು ನೋಡಿ.]

ಒಂದು ಪರಸ್ಪರ ಸಹಾಯ ಸಂಘ.

ತುಮಕೂರು ತಾಲ್ಲೂಕು ವಕ್ಕೋಡಿ ಗ್ರಾಮ.

ಈ ವಕ್ಕೋಡಿ ಗ್ರಾಮದಲ್ಲಿ 1914 ನೇ ಇಸವಿ ಜೂನ್ ತಿಂಗಳಲ್ಲಿ ಒಂದು ಕೋಆಪರೇಟಿವ್ ಸೊಸೈಟಿಯು ಸ್ಥಾಪಿಸಲ್ಪಟ್ಟು, ಇದುವರಿಗೆ ಈ ಸೊಸೈಟಿಯಲ್ಲಿ ಸುಮಾರು 2,700 ರೂಪಾಯಿಗಳಿಗೆ ಮೇಲ್ಪಟ್ಟು ಜಮಾ ಖರ್ಚು ನಡದಿರುತ್ತೆ. ಈ ಸೊಸೈಟಿಯು ಪ್ರಾರಂಭವಾದ ಲಾಗಾಯ್ತು ಈ ಗ್ರಾಮದ ಶ್ಯಾ. ಮ॥ ತಿರುಮಲಯ್ಯನವರು ಜನಗಳ ಉಪಯೋಗವನ್ನು ಬಯಸುವದು ಮುಖ್ಯ ಕರ್ತವ್ಯವೆಂದು ಭಾವಿಸಿ ತಾವೇ ಈ ಸೊಸೈಟಿಗೆ ಪ್ರೆಸಿಡೆಂಟರಾಗಿ ನಿಂತು ಅಭಿವೃದ್ಧಿಪಡಿಸುತ್ತಿರುವದರಿಂದಲೂ ಮತ್ತು ಇವರಿಗೆ ಸಹಾಯವಾಗಿ ಮ॥ ಎಚ್. ಶ್ರೀಕಂಠಯ್ಯನವರು ಸೊಸೈಟಿಯ ಆಡಿಟರಾಗಿ ಸೊಸೈಟಿಯ ಉಪಯೋಗವನ್ನು ಎಲ್ಲರಿಗೂ ಬೋಧನೆ ಮಾಡುತ್ತಿರುವದರಿಂದಲೂ ಇಷ್ಟು ಜಾಗ್ರತೆ ಅಭಿವೃದ್ಧಿಗೆ ಬರಲು ಕಾರಣವಾಗಿರುತ್ತೆ. ಸೊಸೈಟಿಗಳ ಇನ್‌ಸ್ಪೆಕ್ಟರ್ ಮ॥ ಎನ್. ಆರ್. ನಗರ್ಕರವರೂ ಆನರರಿ ಸೂಪ್ರವೈಜರ್ ಮ॥ ರಾಮಚಂದ್ರಯ್ಯನವರೂ ತಾ. 23 ನೇ ಶನಿವಾರ ಬೆಳಗ್ಗೆ ಬಂದು 11 ಘಂಟೆಯವರಿಗೂ ಸೊಸೈಟಿಯ ಲೆಕ್ಕ ಪತ್ರಗಳನ್ನೆಲ್ಲಾ ತನಿಖೆಮಾಡಿದರು. ಮಧ್ಯಾಹ್ನ 2 ಘಂಟೆಯ ಮೇಲೆ ಈ ಗ್ರಾಮದ ಮತ್ತು ಅಜೂಬಾಜು ಗ್ರಾಮಗಳ ರೈತರುಗಳೂ, ಸೊಸೈಟಿಯ ಮೆಂಬರುಗಳೂ ಸೇರಿದ್ದರು. ಈ ಸೊಸೈಟಿಯ ವಿಷಯವಾಗಿ ಉಪನ್ಯಾಸವನ್ನು ನಡಿಸಬೇಕೆಂದು ಏರ್ಪಾಡುಮಾಡಿದ್ದ ಮ॥ ಪುಟ್ಟಣ್ಣಯ್ಯನವರ ಕೋರಿಕೆಯಂತೆ ಈ ಸೊಸೈಟಿಯ ಮುಂಭಾಗದಲ್ಲಿ ಜನರೆಲ್ಲಾ ಸೇರಿದ್ದರು. ಮ॥ ತಿರುಮಲಯ್ಯನವರ ಕೋರಿಕೆಯಂತೆ ಮ॥ ನಗರ್ಕರವರು ಅಗ್ರಾಸನಾಧಿಪತ್ಯವನ್ನು ವಹಿಸಿ ಸೊಸೈಟಿಯ ಮುಖ್ಯೋದ್ದೇಶ ಮತ್ತು ಬಿತವಿಲ್ಲದ ಪವಾಟ್ದಾರಿಗಳ ವಿಷಯವಾಗಿ ಎಲ್ಲರಿಗೂ ವಿಶದವಾಗಿ ತಿಳಿಯಪಡಿಸಿದರು. ತರುವಾಯ ಸೊಸೈಟಿಯ ಆಡಳಿತದ ವಿಚಾರವನ್ನು ಕುರಿತು ಸಂಕ್ಷೇಪವಾದ ರಿಪೋರ್ಟನ್ನು ಮ॥ ಎಚ್. ಶ್ರೀಕಂಠಯ್ಯನವರು ಓದಿದರು. ಅಗ್ರಾಸನಾಧಿಪತಿಗಳ ಕೋರಿಕೆಯಂತೆ ಆ॥ ಸೂಪ್ರವೈಜರ್ ಮ॥ ಎಚ್. ರಾಮಚಂದ್ರಯ್ಯನವರು ಪರಸ್ಪರ ಸಹಾಯಕಸಂಘಗಳಿಂದ ಉಂಟಾಗುವ ಪ್ರಯೋಜನವನ್ನು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಅಗ್ರಾಸನಾಧಿಪತಿಗಳಿಗೆ ವಂದನೆಗಳು ಅರ್ಪಿಸಿ ನೆರೆದಿದ್ದ ಸಭೆಯವರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳನ್ನು ಕೊಟ್ಟ ಬಳಿಕ ವಿಸರ್ಜನೆ ಮಾಡಲ್ಪಟ್ಟಿತು.

ಈ ಗ್ರಾಮದ ಮ॥ ಟಿ. ಪುಟ್ಟಣ್ಣಯ್ಯನವರು ರೀಡಿಂಗ್ ರೂಮ್ ವಿಷಯವಾಗಿ ತುಂಬಾ ಮುತುವರ್ಜಿ ವಹಿಸಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿ ಪತ್ರಿಕೆಗಳನ್ನು ತರಿಸುತ್ತಾ ಅಭಿವೃದ್ಧಿಪಡಿಸುತ್ತಲಿದಾರೆ

ವಿಸರ್ಜನೆಗೆ ಮೊದಲು ಮ॥ ಶ್ಯಾ. ಗುಂಡಪ್ಪನವರು ಕಬ್ಬಿಣದ ನೇಗಿಲಿನಿಂದ ಉಂಟಾಗುವ ಸೌಕರ್ಯಗಳನ್ನು ರೈತರಿಗೆ ವಿಶದವಾಗಿ ತಿಳಿಯಪಡಿಸಿ, ಸೊಸೈಟಿಯ ಮುಖಾಂತರವಾಗಿ 3 ಜನ ರೈತರು ಕಬ್ಬಿಣದ ನೇಗಲುಗಳನ್ನು ತರಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು.

ಗ್ರಾಮವಾಸಿ.

ಒಂದು ಹೊಸ ಕಟ್ಟಡದ ಪ್ರವೇಶೋತ್ಸವ.

ಆನೇಕಲ್ ತಾಲ್ಲೂಕು ರಾಜಾಪುರಗ್ರಾಮ.

ಕಳೆದ ಜನವರಿ ತಾ. 29 ನೇ ಶುಕ್ರವಾರ ಮಧ್ಯಾಹ್ನ ಆನೇಕಲ್ ತಾಲ್ಲೂಕು ರಾಜಾಪುರದಲ್ಲಿ ಹೊಸದಾಗಿ ಕಟ್ಟಿರುವ ಸ್ಕೂಲ್ ಮನೆಯು ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿತ್ತು. ಇದರ ಪಕ್ಕದಲ್ಲಿ ದಿವ್ಯವಾದ ಚಪ್ಪರಗಳು ಕದಳೀಸ್ತಂಭ ತೋರಣಗಳಿಂದ ಅಲಂಕೃತವಾಗಿತ್ತು. ಮುಂದುಗಡೆ ಮಂಗಳವಾದ್ಯಧ್ವನಿಗಳು ಘೋಷಿಸುತ್ತಿತ್ತು. ಸ್ಕೂಲ್‌ಗಳ ಅ॥ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ॥ ಪಿ. ಅನಂತಸುಬ್ಬರಾಯರವರು, ಪೇಷ್ಕಾರ್ ಜಮಾದಾರ್ ಮ॥ ವೆಂಕಟಪ್ಪನವರು, ಕಾಟನಾಯಕನಹಳ್ಳಿ ಕೋ॥ ಸೊಸೈಟಿ ಸೆಕ್ರೆಟರಿ ಮ॥ ರಾಮಯ್ಯನವರು, ಬಾಜೂ ಅನೇಕ ಗ್ರಾಮಗಳ ಪಟೇಲ್ ಶ್ಯಾನುಭೋಗರುಗಳು, ಬಹುಮಂದಿ ತಾಲಾಧ್ಯಾಪಕರು, ಮುಖಂಡ ಪ್ರಜೆಗಳು ಅಲ್ಲದೆ ಸುತ್ತುಮುತ್ತಲಿರುವ ರೈತರುಗಳಿಂದಲೂ ಸಭೆಯು ತುಂಬಿ ತುಳುಕುತ್ತಿತ್ತು. ಇಷ್ಟು ಸಂತೋಷಪ್ರದವಾಗಿ ಸೇರಿದ್ದ ಅನೇಕ ಪ್ರಜೆಗಳ ಸಡಗರವು ಒಬ್ಬ ಧರ್ಮಾತ್ಮನಿಂದ ಕಟ್ಟಲ್ಪಟ್ಟ ಆ ಹೊಸ ಸ್ಕೂಲ್ ಕಟ್ಟಡದ ಪ್ರವೇಶೋತ್ಸವವಾಗಿತ್ತು. ಅಷ್ಟರಲ್ಲಿ ಪರಿವಾರಸಮೇತ ದಯಮಾಡಿಸಿದ ಅಮಲ್ದಾರ್ ಮ॥ ಗೋಪಾಲಕೃಷ್ಣ ಅಯ್ಯಂಗಾರ್ರವರನ್ನು ಸಭೆಯವರು ಬ್ಯಾಂಡ್ ವಾದ್ಯದೊಡನೆ ಆಸ್ಥಾನಕ್ಕೆ ಕರೆದುತಂದರು. ಅವರು ಅಗ್ರಾಸನವನ್ನಲಂಕರಿಸಿದ ಬಳಿಕ ಸಭೆಯ ಕಾರ್ಯಗಳು ಬಹು ಉತ್ಸಾಹದಿಂದ ಪ್ರಾರಂಭವಾದವು. ಬಾಲಕರಿಂದ ದೇವರ ಸ್ತೋತ್ರ ಮಾಡಲ್ಪಟ್ಟಿತು. ಸ್ಕೂಲ್ ಮಾಸ್ಟರ್ ಮ॥ ತಾಮಣ್ಣನವರು ಸ್ಕೂಲ್ ರಿಪೋರ್ಟನ್ನು ಓದಿದರು. ಈ ಗ್ರಾಮದಲ್ಲಿ ಸುಮಾರು 20 ವರ್ಷಗಳ ಹಿಂದೆ ಸರ್ಕಾರದವರು ಒಂದು ಸ್ಕೂಲನ್ನು ಸ್ಥಾಪಿಸಿದರು. ಆ ಲಾಗಾಯ್ತು ತಕ್ಕ ಕಟ್ಟಡವಿಲ್ಲದೆ ದೇವಸ್ಥಾನದ ಕೈಸಾಲೆಯಲ್ಲಿ ಸ್ಕೂಲನ್ನು ಮಾಡುತ್ತಿದ್ದರು. ಈ ತಾಲ್ಲೂಕಿನಲ್ಲಿ ಹಿಂದೆ ಅಮಲ್ದಾರರಾಗಿದ್ದ ಮ॥ ಗೋಪಾಲರಾಜೆ ಅರಸಿನವರ ಪ್ರೇರಣೆಯಿಂದ ಬಾಜೂ ಗ್ರಾಮದ ಚಿನ್ನಕ್ಕ ಮ॥ ಪುಟ್ಟಪ್ಪನವರು ಸ್ವಂತ ಖರ್ಚಿನಿಂದ ಸ್ಕೂಲಿಗೆ ಅನುಕೂಲವಾದ ಕಟ್ಟಡವನ್ನು ಕಟ್ಟಿಸಿಕೊಡುವುದಾಗಿಯೂ, ತಕ್ಕ ನಿವೇಶವಾಗಬೇಕೆಂತಲೂ ಯೋಚಿಸುತ್ತಿರುವಲ್ಲಿ ಈ ಗ್ರಾಮದ ವೀರಶೈವ ಧರ್ಮ ಪ್ರವರ್ತಕರಾದ ಪಟ್ಟದ ಶ್ರೀಚೆನ್ನಬಸವ ದೇಶಿಕೇಂದ್ರ ಸ್ವಾಮಿಗಳವರು ತಾವಾಗಿ ಸ್ಕೂಲಿಗೆ ಬೇಕಾದಷ್ಟು ಸ್ಥಳವನ್ನು ಕೊಡುತ್ತೇವೆಂದು ವಾಗ್ದಾನ ಮಾಡಲು ತಕ್ಷಣವೇ ಕಾಮಗಾರಿಯನ್ನು ಪ್ರಾರಂಭಿಸಿ ದಿವ್ಯವಾದ ಈ ಭವನವನ್ನು ಸುಮಾರು 1,000 ರೂಪಾಯಿವರೆಗೆ ಖರ್ಚಿಟ್ಟು ತಯಾರ್ಮಾಡಿಸಿ ಸಿದ್ಧವಾಗಿದೆ ಎಂದು ರಿಪೋರ್ಟಿನಲ್ಲಿ ಓದಿದರು. ಬಳಿಕ ಚಿಕ್ಕನಾಗಾನಹಳ್ಳಿ ಸ್ಕೂಲ್ ಮಾಸ್ಟರ್ ಮ॥ ಎನ್. ಅಚ್ಚಯ್ಯನವರು ವಿದ್ಯೆಯು ಇಹಪರಗಳಿಗೆ ಸಾಧಕವಾದದ್ದು ಎಂಬ ಉಪನ್ಯಾಸವನ್ನು ಮಾಡಿದರು. ಅಗ್ರಾಸನಾಧಿಪತಿಗಳು ಮ॥ ಪುಟ್ಟಪ್ಪನವರ ಧರ್ಮಗುಣವನ್ನು ಪ್ರಶಂಸಿಸಿ ಬಹು ಮನೋಹರವಾಗಿ ರಾಜಭಕ್ತಿ, ಪರೋಪಕಾರಗಳನ್ನು ವಿವರಿಸಿ ಈಗೊದಗಿರುವ ಯುದ್ಧದ ಸಂಗತಿಯನ್ನೂ ತಿಳಿಸಿ ಧರ್ಮಮಾರ್ಗೈಕ ಪರರಾದ ನಮ್ಮ ಬ್ರಿಟಿಷ್ ಸಾರ್ವಭೌಮರವರಿಗೆ ಜಯವಾಗಲೆಂದು ಸಭೆಯವರೊಂದಿಗೆ ಪ್ರಾರ್ಥನೆ ಮಾಡಿದರು. ತರುವಾಯ ಇನ್‌ಸ್ಪೆಕ್ಟರ್ ಮ॥ ಪಿ. ಅನಂತಸುಬ್ಬರಾಯರು ಧರ್ಮ ತತ್ವವನ್ನು “ಧರ್ಮದಾಧಾರದಲಿಹುದುಜಗ| ಧರ್ಮವುಳ್ಳನ ಶಾತ್ರುಯಿಸುವುದು| ಧರ್ಮವೇ ಸೂಕರುವದು ಜನ್ಮಾಂತರದ ಪಾತಕವಾ|| ಧರ್ಮವೇ ಸರ್ವಪ್ರತಿಷ್ಠಿತ| ಧರ್ಮವೆಂಬುದು ಪರಮಪದವಾ| ಧರ್ಮವನು ಬಿಟ್ಟಿಹುದು ಬದುಕಲ್ಲ” ಈ ರೀತಿ ಆಬಾಲವೃದ್ಧರಿಗೂ ತಿಳಿಯುವಂತೆ ಮಾಡಿದ ಉಪನ್ಯಾಸವು ಪರಮಾನಂದಕರವಾಗಿತ್ತು. ಮ॥ ಪುಟ್ಟಪ್ಪನವರ ಕೋರಿಕೆಯಂತೆ ಅಮಲ್ದಾರ್ರವರು ಬೆಳ್ಳಿಯ ಬೀಗದ ಕೈಯಿಂದ ಸ್ಕೂಲನ್ನು ಓಪನ್ ಮಾಡಲು ಮ॥ ರಾಮಯ್ಯನವರು ತಮ್ಮ ಸಂಘದ ಪರವಾಗಿ ಈ ಸ್ಕೂಲ್ ಉಪಯೋಗಕ್ಕೆ ಶ್ರೀಮನ್ ಮಹಾರಾಜರವರ ಪಟವನ್ನು ತರಿಸಲಿಕ್ಕಾಗಿ 15 ರೂಪಾಯಿ ಉಚಿತವಾಗಿ ಕೊಟ್ಟರು. ಬಳಿಕ ಬಾಲಕಿಯರಿಂದ ಚಕ್ರವರ್ತಿಗಳ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮುಂತಾದದ್ದು ನಡೆದು ಗಂಧ ಪುಷ್ಪ ವಿನಿಯೋಗಗಳಿಂದ ಸಭೆಯು ಮುಕ್ತಾಯವಾಯಿತು. ಸಭಿಕರು ಮ॥ ಪುಟ್ಟಪ್ಪನವರ ಧರ್ಮಗುಣವನ್ನು ಹೊಗಳುತ್ತಾ ಆನಂದ ಭರಿತರಾಗಿ ತೆರಳಿದರು.

ಒಬ್ಬ ನೋಟಕ.

ಮಹಮದಿಯರೂ ಟರ್ಕಿ ರಾಜ್ಯವೂ.

ಈಗ ಯೂರೋಪ್ಪಿನಲ್ಲಿ ನಡೆಯುತ್ತಿರುವ ಯುದ್ಧವನ್ನು ಮತಾಭಿವೃದ್ಧಿಗೋಸ್ಕರವಾದ ಯುದ್ಧವಾಗಿ ಮಾಡಬೇಕೆಂದು ಮಹಮದಿಯರಿಗೆ ನಂಬಿಕೆ ಹುಟ್ಟಿಸಿ ಅವರೆಲ್ಲಾ ಏಕವಾಗಿ ಯುದ್ಧಕ್ಕೆ ನಿಲ್ಲುವಂತೆ ಜರ್ಮನಿಯವರು ನಾನಾ ಮಾರ್ಗಗಳಲ್ಲಿ ಸಾಹಸ ಪ್ರಯತ್ನಗಳನ್ನು ನಡಿಸುತ್ತಾ ಬಂದಿದಾರೆ. ಅವರು ಮೊದಲು ಟರ್ಕಿ ಗವರ್ನ್‌ಮೆಂಟಿನವರಿಗೆ ಚಿತಾವಣೆ ಮಾಡಿ ಅವರನ್ನು ತಮ್ಮ ಪಕ್ಷವನ್ನು ವಹಿಸುವಂತೆ ಮಾಡಿಕೊಂಡರು. ಬಳಿಕ ಜರ್ಮನಿಯವರು ಮಹಮದಿಯರೆಲ್ಲಾ ತಮ್ಮ ಮತೋದ್ಧಾರಕ್ಕೋಸ್ಕರ ಜೇಹಾದನ್ನು ಹೊರಡಬೇಕೆಂದು ಎಲ್ಲೆಲ್ಲೂ ಪ್ರಚಾರ ಮಾಡಿ, ಮಹಮದಿಯರನ್ನು ಎತ್ತಿಕಟ್ಟುವುದಕ್ಕೆ ಪ್ರಯತ್ನಪಟ್ಟರು. ಆದರೆ ಟರ್ಕಿಯು ಜರ್ಮನಿಯ ಕೂಡ ಸೇರಿಕೊಳ್ಳುವುದಕ್ಕೆ ಮನಸ್ಸಿಲ್ಲದಿದ್ದರೂ ಸೇರಿಕೊಳ್ಳಬೇಕಾಯಿತೆಂದು ಮುಸಲ್ಮಾನರಲ್ಲಿ ವಿವೇಕಿಗಳಾದವರಿಗೆಲ್ಲಾ ಪರಿಷ್ಕಾರವಾಗಿ ತಿಳಿದೇ ಇದೆ. ಜರ್ಮನಿಯವರೇನೋ ಮುಸಲ್ಮಾನರಲ್ಲವೆಂದು ಯಾರಿಗೂ ತಿಳಿಯದೆ ಇಲ್ಲ. ಅದಕಾರಣ ಮಹಮದಿಯರಲ್ಲದವರ ಕೂಡ ಸೇರಿಕೊಂಡಿರುವ ಮಹಮದಿಯರು ಈ ಯುದ್ಧವನ್ನು ಜೇಹಾದ್ ಎಂದು ಎಣಿಸಿ ಇತರ ಮಹಮದಿಯರನ್ನು ಚಿತಾವಣೆ ಮಾಡಿ ಯುದ್ಧಕ್ಕೆ ಹೊರಡಿಸುವುದು ಅಸಾಧ್ಯ.

ಮಹಮದಿಯರು ಈ ಯುದ್ಧಕ್ಕೆ ಸೇರಿ ಇದು ಜೇಹಾದ್ ಎಂದು ಹೊರಡುವುದು ನ್ಯಾಯವೇ, ಅದು ಧರ್ಮವಾದದ್ದೇ ಎಂಬದನ್ನು ಚೆನ್ನಾಗಿ ಪರ್ಯಾಲೋಚಿಸಬೇಕಾದದ್ದು ಪರಮಾವಶ್ಯವಾಗಿದೆ.

ಮುಸಲ್ಮಾನರಿಂದ ಆಳಲ್ಪಡುತ್ತಿರುವ ಪ್ರತಿ ಒಂದು ರಾಜ್ಯದವರೂ ಈ ಭಾಗವನ್ನು ಕುರಿತು ಆಲೋಚನೆ ಮಾಡಿರುತ್ತಾರೆ. ಜರ್ಮನಿಯವರು ಸಿರಿಯಾ ರಾಜ್ಯದಲ್ಲಿ ಮುಸಲ್ಮಾನರನ್ನು ಚಿತಾವಣೆ ಮಾಡಿ, ಇದು ಮತಾಭಿವೃದ್ಧಿಗೋಸ್ಕರವಾದ ಯುದ್ಧವೆಂದು ಸಲಹೆ ಕೊಟ್ಟು ಅವರನ್ನು ಎತ್ತಿಕಟ್ಟಬೇಕೆಂದು ಪ್ರಯತ್ನಪಟ್ಟರು. ಇತ್ತಲಾಗಿ ಆಫ್ರಿಕಾದೊಳಗೂ ಮಹಮದಿಯರನ್ನು ಟರ್ಕಿಯವರ ಪಕ್ಷಕ್ಕೆ ಬಂದು ನಿಲ್ಲುವಂತೆ ಮಾಡಿಕೊಳ್ಳಬೇಕೆಂದು ನಾನಾ ಪ್ರಯತ್ನಗಳನ್ನು ಮಾಡಿದರು. ಆದರೆ ಇದುವರೆಗೆ ಅವರ ಈ ಪ್ರಯತ್ನಗಳಲ್ಲೊಂದೂ ನೆರವೇರದೆ ಹೋಯಿತು.

ರಷ್ಯಾರಾಜ್ಯದಲ್ಲಿ ಅನೇಕ ಮಹಮದಿಯರು ನೆಲೆಗೊಂಡು ರಷ್ಯಾ ಪ್ರಜೆಗಳಾಗಿರುತ್ತಾರೆ. ಆ ಮಹಮದಿಯರೆಲ್ಲಾ ರಾಜಧಾನಿಯಾದ ಪೆಟ್ರೊಗ್ರಾಡಿನಲ್ಲಿ ಸೇರಿ ಒಂದು ಸಭೆಯನ್ನು ನಡಿಸಿ ರಷ್ಯಾದವರು ಜರ್ಮನಿ ಮತ್ತು ಆಸ್ಟ್ರಿಯಾದವರ ಮೇಲೆ ಯುದ್ಧಮಾಡುತ್ತಿರುವುದರ ಉದ್ದೇಶ ಮೊದಲಾದವುಗಳನ್ನು ಕುರಿತು ಚರ್ಚೆಮಾಡಿದರು. ಕಡೆಗೆ ಅವರೆಲ್ಲಾ ರಷ್ಯಾ ಚಕ್ರಾಧಿಪತ್ಯದ ಪ್ರಜೆಗಳೆಂದೂ, ಅದರ ಪಕ್ಷವನ್ನು ವಹಿಸಿ ಜರ್ಮನಿಯ ಸೈನಿಕರ ಮೇಲೆ ಯುದ್ಧಮಾಡುವುದೇ ತಮಗೆ ಧರ್ಮವೆಂದೂ ಇತ್ಯರ್ಥಮಾಡಿಕೊಂಡುಬಿಟ್ಟರು. ಇದಲ್ಲದೆ ಕಾಯಿಲೆ ಬಿದ್ದೂ, ಗಾಯಪಟ್ಟೂ ಬರುವಂಥಾ ರಷ್ಯಾ ಸೈನಿಕರನ್ನು ಉಪಚರಿಸುವುದಕ್ಕೋಸ್ಕರ ದೊಡ್ಡ ಆಸ್ಪತ್ರೆಗಳನ್ನು ಕಲ್ಪಿಸಿ, ಬೇಕಾಗುವ ಎಲ್ಲಾ ಸೌಕರ್ಯಗಳನ್ನೂ ಒದಗಿಸಬೇಕೆಂದು ತೀರ್ಮಾನಮಾಡಿಕೊಂಡಿದಾರೆ. ಸಾವಿರಾರು ಮಹಮದೀಯ ಪ್ರಜೆಗಳು ರಷ್ಯಾದವರ ಸೈನ್ಯದಲ್ಲಿ ಸೇರಿಕೊಂಡು ಶತ್ರುವಿನ ಮೇಲೆ ಯುದ್ಧಮಾಡುತ್ತಲೂ ಇದಾರೆ. ಟರ್ಕಿಯವರು ಜರ್ಮನಿಯ ಪಕ್ಷವನ್ನು ವಹಿಸಿದರೆಂದು ಕೇಳಿದ ಮೇಲೆ ಆ ಮಹಮ್ಮದಿಯರಿಗೆ ತಮ್ಮ ರಷ್ಯಾ ಪ್ರಭುವಿನ ಮೇಲೂ ತಮ್ಮ ರಷ್ಯಾ ರಾಜ್ಯದ ಮೇಲೂ ಭಕ್ತಿ ಪ್ರೀತಿಗಳು ವಿಶೇಷವಾಗಿ ಹೆಚ್ಚಿದವು. ಅನೇಕ ಮಹಮದಿಯರು ಜರ್ಮನಿಯವರ ಮೇಲೆ ಯುದ್ಧಕ್ಕೆ ಹೊರಡಬೇಕೆಂದು ಕುತೂಹಲಪಟ್ಟು ತಾವಾಗಿಯೇ ರಷ್ಯಾ ಸೈನ್ಯಕ್ಕೆ ಸೇರಿಕೊಂಡರು.

ರಷ್ಯಾದೊಳಗಿರುವ ಅನೇಕ ಮುಸಲ್ಮಾನ್ ಪ್ರಜೆಗಳಿಗೆ ಆ ರಾಜ್ಯದ ಯುದ್ಧದ ಇಲಾಖೆಯ ನಿಬಂಧನೆಗಳು ಸಾಮಾನ್ಯವಾಗಿ ಅನ್ವಯಿಸುವುದಿಲ್ಲ. ಇಂಥವರು ಈಗ ತಾವಾಗಿಯೇ ರಷ್ಯಾ ಸೈನ್ಯದಲ್ಲಿ ಸೇರುವುದಕ್ಕೂ ಜರ್ಮನಿ ಮತ್ತು ಟರ್ಕಿ ಸೈನ್ಯಗಳ ಮೇಲೆ ಯುದ್ಧಮಾಡುವುದಕ್ಕೂ ಕುತೂಹಲಪಡುತ್ತಿದಾರೆ.

ಇತ್ತಲಾಗಿ ಹಿಂದುಸ್ಥಾನದಲ್ಲಿರುವ ಬ್ರಿಟಿಷ್ ಸೈನ್ಯಗಳಲ್ಲಿ ಅನೇಕ ಮಹಮದಿಯರು ರಾಜಭಕ್ತಿಪರಾಯಣರಾಗಿ ಜರ್ಮನಿಯವರ ಮೇಲೆ ನುಗ್ಗಿ ಕಾದಾಡುತ್ತಿದಾರೆ. ಹಿಂದುಸ್ಥಾನದಲ್ಲಿರುವ ಮಹಮದಿಯ ಪ್ರಜೆಗಳಿಗೆಲ್ಲಾ ಈ ಯುದ್ಧಕ್ಕೂ ಮುಸಲ್ಮಾನ್ ಮತಕ್ಕೂ ಯಾವ ಸಂಬಂಧವೂ ಇಲ್ಲವೆಂದು ಚೆನ್ನಾಗಿ ಬಲ್ಲರು. ಯುದ್ಧ ಪ್ರಾರಂಭವಾದದ್ದು ಮಹಮ್ಮದಿಯರಲ್ಲದ ರಾಜ್ಯದವರಿಗೆ. ಟರ್ಕಿಯವರು ವಿವೇಕಶಾಲಿಗಳಾಗಿದ್ದರೆ ಜರ್ಮನಿಯ ಪಕ್ಷವನ್ನು ವಹಿಸುವದಿಲ್ಲವೆಂದು ತಿರಸ್ಕರಿಸಿಬಿಡುತ್ತಿದ್ದರು. ಈಗ ವಿವೇಕವಿಲ್ಲದೆ ಸೇರಿಕೊಂಡದ್ದರಿಂದ ಟರ್ಕಿಗೆ ಪ್ರಾಪ್ತವಾಗುವ ಕಷ್ಟನಷ್ಟಗಳನ್ನೆಲ್ಲಾ ಅದು ಅನುಭವಿಸಿಯೇ ತೀರಬೇಕು. ಅನೇಕಾನೇಕ ಮಹಮದಿಯರು ಈಗ ಟರ್ಕಿಯ ಕಷ್ಟವನ್ನೂ ಮುಂದೆ ಅದಕ್ಕೆ ಸಂಭವಿಸುವ ನಷ್ಟವನ್ನೂ ನೋಡಿ ದುಃಖಿಸಪಡುತ್ತಾರೆ. ಆದರೆ ಅವರು ಟರ್ಕಿಯ ಪಕ್ಷವನ್ನು ವಹಿಸಿ ಕತ್ತಿ ಹಿಡಿದು ಹೊರಡುವವರಾಗಿಲ್ಲ. ಯಾಕೆಂದರೆ ಟರ್ಕಿಯು ಯುದ್ಧಕ್ಕೆ ಹೊರಟದ್ದು ಅನ್ಯಾಯವೆಂದು ಅವರಿಗೆಲ್ಲಾ ಚೆನ್ನಾಗಿ ತಿಳಿದಿದೆ. ರಷ್ಯಾ ಮತ್ತು ಬ್ರಿಟಿಷ್ ರಾಜ್ಯಗಳಲ್ಲಿರುವ ಮಹಮದಿಯ ಪ್ರಜೆಗಳು ಸಾಮಾನ್ಯವಾಗಿ ತಮ್ಮ ತಮ್ಮ ರಾಜರಲ್ಲಿ ಭಕ್ತಿ ಪ್ರೀತಿಗಳನ್ನು ಇಟ್ಟುಕೊಂಡಿರುವರು. ಇದಕ್ಕೆ ಇನ್ನು ಮುಂದೆಯೂ ಚ್ಯುತಿಯುಂಟಾಗುವುದಿಲ್ಲ. ಅವರೆಲ್ಲಾ ರಷ್ಯಾ ಮತ್ತು ಬ್ರಿಟಿಷ್ ರಾಜ್ಯಗಳಿಗೆ ಜಯಪ್ರದ ಉಂಟಾಗಬೇಕೆಂದು ಭಕ್ತಿಯಾಗಿಯೂ ಪ್ರೀತಿಯಿಂದಲೂ ಪ್ರಾರ್ಥನೆ ಮಾಡುತ್ತಾರಲ್ಲದೆ ಅವರ ಶತ್ರುಗಳನ್ನು ಅಡಗಿಸುವುದಕ್ಕೆ ಯುದ್ಧಕ್ಕೆ ಹೊರಡುವುದಕ್ಕೂ ಸಿದ್ಧರಾಗಿಯೂ ಇರುತ್ತಾರೆ. ಹಿಂದುಸ್ಥಾನದಲ್ಲಿರುವ ಮಹಮದಿಯ ಪ್ರಜೆಗಳು ಈ ಮಹಾಭಯಂಕರವಾದ ಯುದ್ಧದಲ್ಲಿ ಬ್ರಿಟಿಷ್ ಪ್ರಭುತ್ವದ ಪಕ್ಷವನ್ನೇ ವಹಿಸುವುದನ್ನು ನೋಡಿದರೆ ಅವರು ತುಂಬಾ ವಿವೇಕಶಾಲಿಗಳೆಂದು ಹೇಳಬೇಕು. ಟರ್ಕಿಯನ್ನು ಬಿಟ್ಟರೆ ಇನ್ಯಾವ ಮಹಮದಿಯ ರಾಜ್ಯದವರೂ ಜರ್ಮನಿಯ ಪಕ್ಷವನ್ನು ವಹಿಸಿಲ್ಲ. ಇಂಥಾದ್ದರಲ್ಲಿ ಜರ್ಮನಿಯವರಿಗೆ ಎಂದಿಗೂ ಜಯವು ಉಂಟಾಗುವುದಿಲ್ಲವೆಂದೂ ಬೇಗನೆ ಸೋತುಹೋಗುತ್ತಾರೆಂದೂ ತಿಳಿಯಬೇಕು.

ಸಂಪದಭ್ಯುದಯ.

ಸಂಪಾದನೆಯ ಕ್ರಮ

ವ್ಯವಸಾಯ.—ನಮ್ಮ ಸರ್ಕಾರದವು ವ್ಯವಸಾಯಾಭಿವೃದ್ಧಿಗಾಗಿ ಮಾಡಬೇಕಾದ ಏರ್ಪಾಡುಗಳಲ್ಲಿ ಯಾವುದನ್ನೂ ಕಡಮೆ ಮಾಡಿರುವುದಿಲ್ಲ. ಅನೇಕ ಸೌಕರ್ಯಗಳನ್ನು ಕಲ್ಪಿಸಿರುತ್ತಲೂ, ಕಲ್ಪಿಸುತ್ತಲೂ ಇದೆ. ಇದರಿಂದ ಈಗೀಗ ಪ್ರಯೋಜನಾಂಶವು ತಿಳಿದು ಬರುತ್ತಲಿದೆ. ಆದರೆ ಅದರಲ್ಲಿ ಕೆಲವು ಏರ್ಪಾಡುಗಳು ಸಂಪೂರ್ಣವಾಗಿ ಫಲಕಾರಿಯಾಗಬೇಕಾದರೆ ಸ್ವಲ್ಪ ಬದಲಾವಣೆಗಳನ್ನು ಮಾಡಬೇಕಾದುದು ಆವಶ್ಯಕವಾಗಿ ಕಂಡುಬರುತ್ತದೆ. ಅವು ಯಾವುವೆಂದರೆ—

(1) ವ್ಯವಸಾಯ ಪ್ರದರ್ಶನ.—ಇದನ್ನು ಕೆಲವು ಕಡೆ ಮಾತ್ರ ನಡೆಯಿಸುವುದರಿಂದ ದೂರ ಪ್ರದೇಶದ ರೈತರು ಅಲ್ಲಿಗೆ ಹೋಗಿ ನೋಡಿ ತಿಳಿದುಕೊಂಡು ಬಂದು ಅನುಷ್ಠಾನದಲ್ಲಿ ತಂದುಕೊಳ್ಳಲು ಶಕ್ತಿಯಿಲ್ಲದವರಾಗಿರುತ್ತಾರೆ. ಅಲ್ಲದೆ ತಿಳುವಳಿಕೆ, ಪ್ರೋತ್ಸಾಹ ಇವುಗಳೂ ಕಡಮೆಯಾಗಿರುತ್ತವೆ. ಇದಕ್ಕಾಗಿ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ವರುಷಕ್ಕೊಂದಾವರ್ತಿ ಪ್ರದರ್ಶನ ಕಾರ್ಯವನ್ನು ನಡೆಯಿಸಬೇಕಾಗಿರುತ್ತದೆ. ಹೀಗೆ ನಡೆಯಿಸಲು ವಿಶೇಷ ಹಣ ವ್ಯಯವಾಗಬಹುದು. ಆದುದರಿಂದ ಪ್ರತಿ ತಾಲ್ಲೂಕ್ ಆಫೀಸರರೂ ತಮ್ಮ ತಮ್ಮ ತಾಲ್ಲೂಕಿನ ಪ್ರತಿಯೊಂದು ಗ್ರಾಮದಲ್ಲಿಯೂ ಒಬ್ಬೊಬ್ಬರು ಗಣ್ಯರಾದ ರೈತರನ್ನು ಆರಿಸಿ ಪ್ರದರ್ಶನಕ್ಕೆ ಕಳುಹಿಸಬೇಕು. ಮಾರನೇ ವರುಷ ಬೇರೆಯವರನ್ನು ಆರಿಸಿ ಕಳುಹಿಸಬೇಕು. ಹಾಗೆ ಕಳುಹಿಸಲ್ಪಡುವವರ ಪ್ರಯಾಣದ ವೆಚ್ಚವನ್ನು ಕಡಮೆ ಬೀಳುವಂತೆ ಮಾಡಬೇಕು. ಅಲ್ಲದೆ ಸ್ವಂತ ಖರ್ಚು ಮಾಡಲು ಇಷ್ಟವಿಲ್ಲದವರಿಗೆ ಆಯಾ ಗ್ರಾಮಸ್ಥರಿಂದ ಚಂದಾ ಮೂಲಕವೋ, ಅಥವಾ ತೀರ್ವೆ ಹಣದ ಮೇಲೆ ಹಂಚಿಹಾಕಿಯೋ ವಸೂಲುಮಾಡಬಹುದು. ಈ ರೀತಿ 4-6 ವರುಷಗಳ ಪರಿಮಿತಿಗಾದರೂ ಮಾಡಿ ರೈತರಲ್ಲಿ ತಿಳುವಳಿಕೆಯನ್ನು ಉಂಟುಮಾಡಬೇಕು.

(2) ವ್ಯವಸಾಯಕ್ಷೇತ್ರ.—ಉತ್ತಮವಾದ ಬೆಳೆಗಳನ್ನು ಬೆಳೆಯಲು ಮಾಡಬೇಕಾದ ಸಾಗುವಳಿ ಕ್ರಮವನ್ನು ಸರ್ಕಾರದವರು ಸ್ವತಃ ಮಾಡಿಸಿ ಅನುಭವವನ್ನು ಪಡೆದು ಅದನ್ನು ರೈತರಿಗೂ ತಿಳಿಯಪಡಿಸುತ್ತಾ ಇರುವುದು ಸರಿಯಷ್ಟೆ. ಆದರೆ ಅದರಿಂದ ಕಂಡುಬರುವ ಗುಣಾಂಶವನ್ನೂ ಅನುಭವವನ್ನೂ ಸಹ ರೈತರು ಹೋಗಿ ನೋಡಿ ತಿಳಿದುಕೊಂಡು ಬರುವುದಿಲ್ಲ. ಮತ್ತು ಅಲ್ಪಕಾಲದಲ್ಲಿ ಪೂರ್ಣ ಅನುಭವ ಉಂಟಾಗುವುದೂ ಇಲ್ಲ. ಮತ್ತು ಸದರಿ ಕ್ಷೇತ್ರದಲ್ಲಿ ಕಂಡುಬರುವ ಫಲಿತಾಂಶವನ್ನು ಪತ್ರಿಕೆಗಳ ಮುಖಾಂತರ ಪ್ರಕಟಿಸುತ್ತಾ ಬರುತ್ತಲಿರುವುದು ಓದುಬರಹ ತಿಳಿದ ಪತ್ರಿಕಾಪ್ರಸಂಗಿಗಳಿಗೆ ಮಾತ್ರ ತಿಳಿಯಬರುವುದು. ಇಂಥಾ ರೈತರು ನಮ್ಮ ಸೀಮೆಯಲ್ಲಿರುವುದು ಅಪರೂಪ. ಆದುದರಿಂದ ಸರ್ಕಾರದ ಶ್ರಮಕ್ಕೆ ತಕ್ಕ ಫಲವಿಲ್ಲವಾಗಿದೆ. ಇದರ ಉದ್ದೇಶವು ಸಾರ್ಥಕವಾಗಬೇಕಾದರೆ ರೈತರು ಇರುವ ಸ್ಥಳದಲ್ಲಿಯೇ ತಿಳುವಳಿಕೆಯನ್ನು ಉಂಟುಮಾಡಿ ಅನುಭವಪಡಿಸಬೇಕಾಗಿದೆ. ಹೀಗೆ ಅನುಭವಪಡಿಸಲು ಸದರಿ ಕ್ಷೇತ್ರದಲ್ಲಿ ತರಬಿಯತ್ತಾದ ಒಬ್ಬ ನೌಕರನನ್ನು ಪ್ರತಿ ತಾಲ್ಲೂಕಿನಲ್ಲಿಯೂ ನಿಯಾಮಕಮಾಡಿ ಆತನ ಮೂಲಕ ರೈತರು ಹೊಂದಬೇಕಾಗಿರುವ ತಿಳುವಳಿಕೆ, ಅನುಭವ, ಸಹಾಯ, ಇವುಗಳನ್ನು ಹೊಂದುವಂತೆ ಮಾಡಬೇಕು. ವರುಷಾಂತ್ಯದಲ್ಲಿ ಸದರಿ ನೌಕರನು ಉಂಟುಮಾಡಿರುವ ಅಭಿವೃದ್ಧಿಕಾರ್ಯಗಳು ಸರ್ಕಾರಕ್ಕೆ ರಿಪೋರ್ಟಾಗಬೇಕು. ಇಂಥಾ ನೌಕರರ ಶಕ್ತ್ಯನುಸಾರ ಪ್ರತಿಫಲವನ್ನು ಕಲ್ಪಿಸಬೇಕು. ಹೀಗೆ ಸೀಮೆಯ ಎಲ್ಲಾ ಭಾಗದಲ್ಲಿಯೂ ಒಂದೇ ಬಾರಿ ನೌಕರರನ್ನು ತಯಾರಿಸಿ ನೇಮಿಸಿಕೊಳ್ಳುವುದು ಅಸಾಧ್ಯ. ಆದುದರಿಂದ ಪ್ರಥಮತಃ ಅಗತ್ಯ ಕಂಡುಬರುವ ತಾಲ್ಲೂಕುಗಳಲ್ಲಿ ಮಾತ್ರ ಈ ರೀತಿ ಏರ್ಪಡಿಸಿ ಪ್ರಯೋಜನಾಂಶವು ತಿಳಿದ ಮೇಲೆ ಕ್ರಮೇಣ ಎಲ್ಲಾ ಕಡೆಗೂ ಜಾರಿಗೆ ತರಬೇಕು. ರೈತರು ತಕ್ಕಷ್ಟು ತಿಳುವಳಿಕೆಯುಳ್ಳವರಾಗುವವರಿವಿಗೂ ಈ ಏರ್ಪಾಡು ನಡೆಯತಕ್ಕದಾಗಿದೆ

(3) ಕೆರೆ ಪಂಚಾಯತಿ, ಗ್ರಾಮ ಪಂಚಾಯತಿ.—ಸದರಿ ಸಂಘಗಳು ತಮ್ಮ ಗ್ರಾಮದ ಕೆರೆಯನ್ನೂ ಮತ್ತು ರೈತರ ಸ್ಥಿತಿಯನ್ನೂ ಉತ್ತಮಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕಾಗಿ ಏರ್ಪಾಡಾಗಿರುತ್ತವೆ. ಈ ಸಂಘಗಳ ಕಾರ್ಯ ನಿರ್ವಾಹಕನು ಪಟೇಲನಾಗಿರುತ್ತಾನೆ. ಆದುದರಿಂದ ಗ್ರಾಮಾಭಿವೃದ್ಧಿಕಾರ್ಯಗಳೂ ಕೆರೆಯ ಕೆಲಸಗಳೂ ಸಹ ಪಟೇಲನಿಂದಲೇ ವ್ಯವಸ್ಥೆಯಾಗಬೇಕು; ಅಂದ ಮೇಲೆ ಗ್ರಾಮದ ರೈತರೆಲ್ಲಾ ಪಟೇಲನ ಆಜ್ಞೆಗೆ ಒಳಪಟ್ಟಿರಬೇಕು. ಪ್ರಾಯಶಃ ನಮ್ಮ ಸೀಮೆಯಲ್ಲಿ ಒಗ್ಗಟ್ಟು ಇಲ್ಲದುದರಿಂದ ಗ್ರಾಮಗಳಲ್ಲಿ ಪಂಗಡಗಳು ಹೆಚ್ಚು. ಇಂಥಾ ಪಂಗಡಗಳಲ್ಲಿ ಗ್ರಾಮಾಧಿಕಾರಿಯಾದ ಪಟೇಲನೂ ಯಾವುದಾದರೊಂದು ಪಂಗಡಕ್ಕೆ ಸೇರಲೇ ಬೇಕಾಗುತ್ತದೆ; ಇಲ್ಲದಿದ್ದರೆ ಪಂಗಡದ ಉಭಯಪಕ್ಷದವರಿಗೂ ಹೊರಗಾಗಬೇಕಾಗಿರುತ್ತದೆ. ಆಗ ಯಾವ ಪಂಗಡದವರೂ ಆತನ ಆಜ್ಞೆಯನ್ನು ಪುರಸ್ಕರಿಸುವುದಿಲ್ಲ. ತನ್ನ ಆಜ್ಞೆಯಂತೆ ನಡೆಯಿಸಿಕೊಳ್ಳಲೂ, ಒಗ್ಗಟ್ಟನ್ನು ಉಂಟುಮಾಡಿಕೊಳ್ಳಲೂ, ನೆಮ್ಮದಿಯನ್ನು ಕಾಪಾಡಿಕೊಳ್ಳಲೂ ಪಟೇಲನು ಸ್ವಾಧೀನನಾಗಿರುತ್ತಾನೆ. ಆದುದರಿಂದಲೇ ಬ್ರಿಟಿಷ್ ಆಧಿಪತ್ಯದಲ್ಲಿ ಪಟೇಲರಿಗೆ ತಕ್ಕಷ್ಟು ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾರೆ. ಅದರಂತೆಯೇ ನಮ್ಮ ಸೀಮೆಯಲ್ಲಿಯೂ ತಮ್ಮ ತಮ್ಮ ಗ್ರಾಮಗಳನ್ನು ಉತ್ತಮಸ್ಥಿತಿಯಲ್ಲಿ ಇಟ್ಟುಕೊಂಡಿರುವ ಯೋಗ್ಯರಾದ ಪಟೇಲರಿಗೆ ಕ್ರಮವಾದ ವಿಚಾರಣೆಯಿಂದ 5—6 ರೂಪಾಯಿಗಳ ಪರಿಮಿತಿವರೆಗೂ ದಂಡ ವಿಧಿಸುವ ಅಧಿಕಾರವನ್ನು ಕೊಡುವುದರ ಮೂಲಕ ಗ್ರಾಮಗಳ ನೆಮ್ಮದಿಯನ್ನು ಕಾಪಾಡಬೇಕು. ಇದರಿಂದ ಪಟೇಲರು ಪ್ರೋತ್ಸಾಹಿತರಾಗಿ ಹೆಚ್ಚಾದ ಆಸಕ್ತಿಯಿಂದ ಕೆಲಸಮಾಡಲು ಅವಕಾಶವಾಗುತ್ತದೆ

(4) ಅರ್ಥಸಾಧನ ಪತ್ರಿಕೆ.—ಈ ಪತ್ರಿಕೆಯನ್ನು ಹೊಸದಾಗಿ ಏರ್ಪಡಿಸುತ್ತಾರೆ. ಇದರಲ್ಲಿ ವ್ಯವಸಾಯ, ಕೈಗಾರಿಕೆ ಮುಂತಾದ ಸಂಪತ್ಸಾಧನೋಪಾಯವು ಸೂಚಿಸಲ್ಪಡುತ್ತದೆ. ಓದು ಬರಹ ಬಾರದ ರೈತರೇ ವಿಶೇಷವಾಗಿರುತ್ತಾರೆ. ಆದುದರಿಂದ ಪ್ರತಿ ಗ್ರಾಮ ಪಾಠಶಾಲಾ ಉಪಾಧ್ಯಾಯರೂ ಒಂದೊಂದು ಪತ್ರಿಕೆಯನ್ನು ತರಿಸಿಕೊಂಡು, ವಾರಕ್ಕೊಂದಾವರ್ತಿ ರೈತರನ್ನು ಪಾಠಶಾಲೆಗೆ ಬರಮಾಡಿಕೊಂಡು, ಸದರಿ ಪತ್ರಿಕೆಯಲ್ಲಿನ ವಿಷಯಗಳನ್ನು ಓದಿ ವಿವರಿಸಿ ತಿಳಿಸಬೇಕು. ಮತ್ತು ಓದು ಬರಹ ಬರುವ ರೈತರಿಗೆ ಸದರಿ ಪತ್ರಿಕೆಯನ್ನು ತರಿಸಿಕೊಂಡು ಓದುವಂತೆ ಪ್ರೋತ್ಸಾಹಿಸಬೇಕು. ಹೀಗೆ ಪ್ರತಿ ವಾರದಲ್ಲೂ ನಡೆಯಿಸಿದ ವಿಷಯವನ್ನು ಒಂದು ಪುಸ್ತಕದಲ್ಲಿ ಬರೆಯುತ್ತಾ ಬಂದು ಹಾಜರಿರುವವರ ರುಜುವನ್ನು ಪಡೆದಿರಬೇಕು. ಇಂಥ ಪುಸ್ತಕವನ್ನು ಮೇಲ್ಪಟ್ಟ ಅಧಿಕಾರಿಗಳು ಆಗಾಗ್ಗೆ ಪರೀಕ್ಷಿಸಬೇಕು. ಸದರಿ ಪತ್ರಿಕೆಯ ಬೆಲೆಯನ್ನು ಗ್ರಾಮಸ್ಥರಿಂದ ವಸೂಲು ಮಾಡಿಕೊಳ್ಳಬೇಕು. ಈ ರೀತಿ ಏರ್ಪಡಿಸಿದರೆ ತಕ್ಕಮಟ್ಟಿಗೆ ಪತ್ರಿಕಾಪ್ರಚಾರವಾದಂತಾಗುವುದು.

ವ್ಯವಸಾಯಾಭಿವೃದ್ಧಿಯ ಫಲವು ಪೂರ್ಣ ದೊರೆಯಬೇಕಾದರೆ ಹಿಡುವಳಿದಾರರು ಖುದ್ದು ವ್ಯವಸಾಯ ಮಾಡಬೇಕು; ಇಲ್ಲವೇ ಕಮತವಿಟ್ಟು ಮಾಡಿಸಬೇಕು. ಕೋರು ಸಾಗುವಳಿ ಪದ್ಧತಿ ತಪ್ಪಬೇಕು. ಜಮಾಸುದಾರರ ಜಮೀನುಗಳು ಒತ್ತಟ್ಟಿಗಿರುವಂತೆ ಮಾಡಬೇಕು. ರೈತರು ಮತ್ತು ಜಮೀನುದಾರರು ವಿದ್ಯಾವಂತರಾಗಿ ದೇಶಸಂಚಾರಾನುಭವವನ್ನು ಪಡೆಯಬೇಕಾದದ್ದು ಅವಶ್ಯ. ವಿದ್ಯಾವಂತರಾದ ರೈತರು ನೌಕರಿಗಳನ್ನಪೇಕ್ಷಿಸದೆ ತಮ್ಮ ಪ್ರೌಢತೆಯನ್ನು ವ್ಯವಸಾಯ ಕಾರ್ಯದಲ್ಲಿಯೇ ಉಪಯೋಗಿಸಬೇಕು. ಆದಾಯಕರವೆಂದು ತಿಳಿದುಬರುವ ಪ್ರತಿಯೊಂದು ಕಾರ್ಯವನ್ನೂ ಪರೀಕ್ಷೆಯಿಂದ ಜಾರಿಗೆ ತಂದುಕೊಳ್ಳಬೇಕು. ಪರಸ್ಪರ ಸಹಾಯಕ ಸಂಘಗಳನ್ನು ಹೆಚ್ಚಿಸಿಕೊಂಡು ತನ್ಮೂಲಕ ದ್ರವ್ಯಾಭಾವವನ್ನು ಹೋಗಲಾಡಿಸಿಕೊಳ್ಳಬೇಕು. ಸಾಹುಕಾರರ ಬಡ್ಡಿ ದರವು ಕಡಮೆಯಾಗಿ ಸಿರಪಾಗಬೇಕು. ಒಂದರಿಗೆ ಹೆದರದೆ ವ್ಯವಸಾಯ ಕಾರ್ಯವನ್ನು ಕೈಕೊಳ್ಳಬೇಕು. ಎಲ್ಲಾ ಕಡೆಗೂ ಒಳ್ಳೇ ಬೀಜದ ಹೋರಿಗಳಿಂದ ಉತ್ತಮವಾದ ದನಗಳನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕು. ಬಗೆಬಗೆಯ ಗೊಬ್ಬರಗಳ ಅನುಭವವನ್ನು ಉಂಟುಮಾಡಿಕೊಳ್ಳಬೇಕು. ಸತ್ಯತೆಯಿಂದ ನಂಬಿಕೆಯನ್ನು ಕಾಪಾಡಿಕೊಳ್ಳಬೇಕು.

ಸರ್ಕಾರದವರು ಮುಖ್ಯವಾಗಿ ನೀರಾವರಿಯನ್ನು ಹೆಚ್ಚಿಸಬೇಕು. ಹೊಳೆಗಳಿಗೆ ಅಣೆಗಳನ್ನು ಹಾಕಿಸಬೇಕು. ಬಂಜರು ಜಮೀನುಗಳು ಪ್ರಯುಕ್ತ ಬರಲು ಒತ್ತಟ್ಟಿಗೇ 10 ಎಕರೆಗಳಿಗೆ ಕಡಮೆಯಿಲ್ಲದೆ, ಅಪೇಕ್ಷಿಸುವವರಿಗೆ ಬೆರೆಯಿಲ್ಲದೆ ಕೊಟ್ಟುಬಿಡಬೇಕು. ಸಾಗುವಳಿ ಮಾಡಿಕೊಳ್ಳಲಾರದೆ 2-3 ವರುಷಗಳಿಗಿಂತಲೂ ಜಾಸ್ತಿಯಾಗಿ ಬಂಜರು ಬಿಟ್ಟುಕೊಂಡಿರುವ ಜಮೀನುಗಳನ್ನು ರಾಜೀನಾಮಾ ಇಲ್ಲದೆಯೇ ಸರ್ಕಾರಕ್ಕೆ ಸೇರಿಸಿಕೊಂಡು ತನ್ಮೂಲಕ ಜಮೀನು ಬಂಜರು ಬೀಳುವುದಕ್ಕೆ ಆಸ್ಪದವಿಲ್ಲದಂತೆ ಮಾಡಿಕೊಳ್ಳಬೇಕು. ಜಮೀನುಗಳನ್ನು ಅಡವಿಕ್ರಯ ಮುಂತಾದವುಗಳನ್ನು ಮಾಡದ ಹಾಗೆ ತಡೆಯಬೇಕು. ಹತ್ತಿ, ಕಬ್ಬು, ಕಾಫಿ, ರೇಷ್ಮೆ, ಇವುಗಳ ವ್ಯವಸಾಯವನ್ನು ಎಲ್ಲಾ ಕಡೆಗೂ ಹರಡಿ, ಉತ್ತಮಸ್ಥಿತಿಗೆ ತರುವ ಪ್ರಯತ್ನಪಡಬೇಕು. ಕೈಗಾರಿಕೆಗೆ ಆಗತ್ಯವಾದ ರಬ್ಬರ್, ಓಕ್ ಮುಂತಾದ ಮರಗಳನ್ನು ಅಡವಿಗಳಲ್ಲಿ ಬೆಳೆಯಿಸುವ ಪ್ರಯತ್ನಮಾಡಬೇಕು. ವ್ಯವಸಾಯ ಕ್ಷೇತ್ರದಲ್ಲಿ ತರಬಿಯತ್ತಾದ ನೌಕರರನ್ನು ನಿಯಮಿಸಿ ರೈತರನ್ನು ತರಬಿಯತ್ ಮಾಡಬೇಕು.

ಎಸ್. ಹುಚ್ಚಾರ್, ಹಿರಿಸಾವೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ವಿಲ್ಲೇಜ್ ಸ್ಕೂಲ್ ಮೆಂಬರುಗಳು.

ಅಯ್ಯಾ,—ನಮ್ಮ ಸೀಮೆಯಲ್ಲಿ ಪ್ರತಿ ವಿಲ್ಲೇಜ್ ಸ್ಕೂಲಿಗೂ ಮೆಂಬರುಗಳನ್ನು ಏರ್ಪಡಿಸಿರುತ್ತಾರೆ. ಸುಮಾರು ಇವರುಗಳಲ್ಲಿ ಶೇಕಡ 75 ಜನ ವಿದ್ಯಾವಂತರಾಗಿರುವುದಿಲ್ಲ; ಅಥವಾ ಕೆಲವರು ಅಲ್ಪ ವಿದ್ಯಾವಂತರಾಗಿ ಮಾಸ್ಟರುಗಳ ಮೇಲೆ ದೋಷಾರೋಪಣೆಗಳನ್ನು ಮಾತ್ರ ಬರೆಯುವಷ್ಟು ಶಕ್ತರಾಗಿರಬಹುದು. ಇವರಲ್ಲನೇಕರು ಹಣಗಾರರಾಗಿರುವುದರಿಂದ ಪರಸ್ಪರ ವೈಷಮ್ಯ ಇದ್ದೇ ಇರುವದು. ಅಲ್ಪತಿಳುವಳಿಕೆಯ ಅನೇಕರು ತಮಗೆ ಮೆಂಬರ್ ಪದವಿಯನ್ನು ಕೊಟ್ಟಿರುವುದರಿಂದ ತಿಳುವಳಿಕೆಯಿಲ್ಲದೆ ಮಾಸ್ಟರುಗಳನ್ನು ತಮ್ಮ ಆಳುಗಳೆಂದು ಭಾವಿಸುವರು. ತಮ್ಮನ್ನು ಸರಕಾರದವರು ಮಾಸ್ಟರುಗಳ ಸಹಾಯಕ್ಕೋಸ್ಕರ ನೇಮಿಸಿದಾರೆಂದು ತಿಳಿಯದೆ ವಿದ್ಯಾಭಿವೃದ್ಧಿಗೆ ಅನೇಕರು ಪ್ರತಿಕೂಲಗಳನ್ನೇ ಮಾಡುತ್ತಾ ಬಂದರೆ ಸರಕಾರದವರ ಉದ್ದೇಶವು ಯಾವ ರೀತಿ ನೆರವೇರುವುದು? ಸ್ಕೂಲಿಗೆ ಹುಡುಗರನ್ನು ಕಳುಹಿಸಿಕೊಡುವ ಮೆಂಬರುಗಳ ಕೆಲಸವನ್ನು ಮಾಸ್ಟರುಗಳೇ ಮಾಡಿಕೊಳ್ಳಬೇಕಾದರೆ 4-5 ತರಗತಿಗಳ ಪಾಠ ನಡಿಸಬೇಕಾದ ಒಬ್ಬನೇ ಮಾಸ್ಟರಿರುವ ಸ್ಕೂಲುಗಳಲ್ಲಿ ಯಾವ ರೀತಿ ಪಾಠ ನಡೆಯಬೇಕು? ಈ ಅಂಶಗಳು ಸರಕಾರದವರ ನೋಟೀಸಿಗೆ ಯಾವಾಗ ಬರುವುದೆಂದು ನಿರೀಕ್ಷಿಸುತ್ತಿರುವ

ದೇಶಿಕ.

ರಾಕ್ಷಸ ಸಂವತ್ಸರದ ಅಧಿಕಮಾಸ ನಿರ್ಣಯ

ಅಯ್ಯಾ,—ಮುಂದೆ ಬರುವ ರಾಕ್ಷಸ ಸಂವತ್ಸರದಲ್ಲಿ ಚೈತ್ರ ಬಹುಳ 14 ಮಂಗಳವಾರ ರವಿ ಮೇಷರಾಶಿ ಪ್ರವೇಶ ಮಾಡಿದ ಮೊದಲ್ಗೊಂಡು ವೃಷಭ ರಾಶಿ ಪ್ರವೇಶಮಾಡುವ ವರೆಗೂ "ದರ್ಶಾದ ಸಂಥವಶ್ಚಾತ್ ದರ್ಶದ್ವಯ ಮಧ್ಯೇ ಸಂಕ್ರಮಣಾಭಾವಾತ್" ಅಧಿಕ ಮಾಸವು ವೈಶಾಖವೇ ಆಗಿರುತ್ತದೆ. ದರ್ಶಾಂತಕ್ಕೂ, ಸಂಕ್ರಮಣ ಕಾಲಕ್ಕೂ 24 ಘಳಿಗೆ ತಾರತಮ್ಯವಿರುತ್ತದೆ. ಹಿಂದೆ ಪ್ಲವ ಸಂವತ್ಸರದಲ್ಲಿ ಕರ್ಕಾಟಕ ಸಂಕ್ರಮಣಕ್ಕೆ 30 ಲಿಪ್ತಿ ತಾರತಮ್ಯವಿದ್ದುದರಿಂದ ವಿದ್ವಾಂಸರು ಆಷಾಢ ಮಾಸವನ್ನೇ ಅಧಿಕ ಮಾಸವಾಗಿ ಮಾಡಿದಾರೆ. ಇದೇ ವಿಷಯದಲ್ಲಿ ಕಳೆದ ಜನವರಿ ತಾ. 29 ರಲ್ಲಿ ಅರಮನೆಯಲ್ಲಿ ಧರ್ಮಾಧಿಕಾರಿಗಳಾದ ವೇ॥ ರಾಮಾನುಜಯ್ಯಂಗಾರ್ರು, ವೇ॥ ನರಹರಿಜೋಯ್ಸರು, ವೇ॥ ಶ್ರೀನಿವಾಸಜೋಯ್ಸರು, ವೇ॥ ನರಹರಿಶಾಸ್ತ್ರಿಗಳು, ವೇ॥ ಅನಂತಜೋಯ್ಸರು, ಈ ಮೊದಲಾದ ವಿದ್ವಾಂಸರು ಸೇರಿ ಅಧಿಕ ಮಾಸವು ವೈಶಾಖವೆಂದೇ ತೀರ್ಮಾನ ಮಾಡಿದಾರೆ. ಆದ್ದರಿಂದ ಗ್ರಂಥಗಳ ಆಧಾರ ಮೂಲಕವೂ, ಹಿಂದೆ ವಿದ್ವಾಂಸರುಗಳು ಪ್ರಕಟಿಸಿರುವ ಆಧಾರ ಮೂಲಕವೂ, ಈಗ ವಿದ್ವಾಂಸರುಗಳು ಸೇರಿ ತೀರ್ಮಾನ ಮಾಡಿರುವ ಆಧಾರ ಮೂಲಕವೂ ರಾಕ್ಷಸ ಸಂವತ್ಸರದಲ್ಲಿ ವೈಶಾಖ ಮಾಸವೇ ಅಧಿಕವೆಂದು ನಿರ್ಧರಿಸಿ ಹೇಳಬಹುದಾಗಿದೆ.

ಕೆ ನರಸಿಂಹಜೋಯಿಸ

ಸಾರಾಯಿ ಅಂಗಡಿಗಳ ಅವ್ಯವಸ್ಥೆ.

ಅಯ್ಯಾ,—ಉಡುಪಿಯಲ್ಲಿ ಕಳೆದ ಜನವರಿ ತಾ. 30ಲ್ಲು ನಮ್ಮ ಗ್ರಾಮದ ಸಾಂತೂರು ಮುದರಂಗಡಿಯೆಂಬಲ್ಲಿ ಕಟೀಲುದುರ್ಗಾ ಪರಮೇಶ್ವರ ದೇವಸ್ಥಾನದ ದಶಾವತಾರದ ಮೇಳದ ಮ॥ ಸಾಂತೂರು ಪಟೇಲರಾದ ರಾಮಯ್ಯ ಸೆಟ್ಟರವರು ಆಟ ಆಡಿಸಿದರು. ಆ ದಿನ ಯೋಗಿನ ಕಲ್ಯಾಣ ಪ್ರಸಂಗವಾಡಿದ್ದರು. ಆ ಸಭೆಗೆ ನೆರದುಬಂದ ಜನರು ಸುಮಾರು 6,000 ಅಂದಾಜು ಮಾಡಲ್ಪಟ್ಟಿದೆ. ದಶಾವತಾರ ಮೇಳದ ಆಟ ಆಡಿಸಿದಲ್ಲಿ ಇಂಥಾ ಸಭೆ ಯಾವ ಪಟ್ಟಣದಲ್ಲಿಯೂ ಕೂಡಿರಲಿಲ್ಲವೆಂದು ಅನೇಕ ಮಹನೀಯರುಗಳು ಹೇಳಿರುತ್ತಾರೆ. ಆದರೂ ದುರಾಚಾರವುಳ್ಳವರು ಯಥೇಷ್ಟ ಸಾರಾಯಿ ಕುಡಿದುಕೊಂಡು ಆ ಸ್ಥಳಕ್ಕೆ ಬಂದು ಅಲ್ಲಿ ಕೂತದ್ದು ಸಮನಲ್ಲ. ಇದು ಮಾಡಿದ್ದು ಸರಿಯಲ್ಲವೆಂತ ಬಹಳ ಹೊತ್ತು ಬೊಬ್ಬೆಹಾಕುತ್ತಾ ಇದ್ದರಲ್ಲದೆ ಯಾಕೆ ಬೊಬ್ಬೆಹೊಡೆಯುತ್ತೀರಿ? ಕೂತುಕೊಂಡು ಸರಿಯಾಗಿ ಆಟ ನೋಡಬಾರದೋ? ಎಂತ ಕೇಳುವ ಗೃಹಸ್ಥರಿಗೆ ಅವರು ಹಲ್ಕ ಮಾತುಗಳು ಆಡುತ್ತಾರೆ. ಈ ಹಲ್ಕ ಮಾತುಗಳು ಸಾರಾಯಿ ಅಂಗಡಿಗಾರನಿಂದ ಬರುವದಾದ್ದರಿಂದ ಅಮಲುಜೋರರಿಗೆ ಸಾರಾಯಿ ಕೊಡಲಿಕ್ಕೆ ಕೊಡಡು ಎಂತ ಲೈಸನ್ಸು ಷರ್ತದಲ್ಲಿ ಇರುವದನ್ನು ಅಂಗಡಿಗಾರನು ಪೂರ್ಣವಾಗಿ ತಿಳಿದುಕೊಂಡು ದುಡ್ಡಿನ ಮೇಲೆ ಆಸೆಪಟ್ಟು ಅವನು ಹೇಳಿದ ಹಾಗೆ ಸಾರಾಯಿ ಕೊಟ್ಟು ಅವನ ಮತಿಗೆಡಿಸಿ ಮರ್ಯಾದೆಯಸ್ಥರ ಮರ್ಯಾದೆಯನ್ನು ತೆಗಿಸುವದೂ ಮತ್ತು ಅವನ ದೇಹಕ್ಕೆ ಸಂಕಟಪಡಿಸುವದೂ ಈ ಎಲ್ಲಾ ದುಷ್ಕಾರ್ಯಗಳು ಸಾರಾಯಿ ಅಂಗಡಿಗಾರನದಾಗಿರುತ್ತದೆ. ಆದ್ದರಿಂದ ಪುಣ್ಯವುಳ್ಳ ಇಂಡಿಯಾ ಗವರ್ನಮೆಂಟಿನವರು ಸಾರಾಯಿ ಅಂಗಡಿಗಾರನು ಲೈಸನ್ಸು ಷರ್ತಗಳನ್ನು ಉಲ್ಲಂಘಿಸಿನಡೆಯುವ ತಪ್ಪಿತಗಳಿಗೆ ನಿಗಾಕೊಡಬೇಕಾಗಿ ಪ್ರಜೆಗಳಾದ ಯಾವತ್ತು ಜನರು ಪ್ರಾರ್ಥಿಸುತ್ತೇವೆ.

ಗುಡ್ಡ ಪೂಜಾರಿ, ಸಾಂತೂರು ಮುದರಂಗಡಿ

ಮುದ್ದಗಿರಿ ಬಾಲಿಕಾ ಪಾಠಶಾಲೆಗೆ ಪ್ರೋತ್ಸಾಹ ಬೇಕು.

ಅಯ್ಯಾ,—ನಮ್ಮ ತಾಲೂಕಿನಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಯಾವುದೊಂದು ಬಾಲಿಕಾ ಪಾಠಶಾಲೆ ಇಲ್ಲದಿದ್ದುದನ್ನು ವೆಸ್ಲಿಯನ್ ಮಿಷನ್ ಇಲಾಖಾ ಅಧಿಕಾರಿಗಳು ನೋಡಿ ಸ್ಥಳವಂದಿಗರಾಗಿದ್ದ ಗತಿಸಿದ ಮ॥ ವೆಂಕಟಗಿರಿಯಪ್ಪನವರ ಸಹಾಯದಿಂದ 1886 ನೇ ಆಗಸ್ಟ್ ತಿಂಗಳಲ್ಲಿ ಒಂದು ಮಿಷನ್ ಸ್ಕೂಲನ್ನು ಸ್ಥಾಪನೆ ಮಾಡಿ ಅವರನ್ನೇ ಹೆಡ್ ಮಾಸ್ಟರನ್ನಾಗಿ ನೇಮಕ ಮಾಡಿದರು. ಹೊಸದಾಗಿ ಸ್ಥಾಪನೆಯಾದ ಸ್ಕೂಲನ್ನು ತುಂಬಾ ಉನ್ನತಸ್ಥಿತಿಗೆ ತರಬೇಕೆಂದು ಇವರು ಮತ್ತು ಅ॥ ಮಾಸ್ಟರ್ ವೇದಾಂತ ದೇಶಿಕಾಚಾರ್ಯರು ಬಹು ಶ್ರದ್ಧೆಯಿಂದ ಕೆಲಸ ಮಾಡುತ್ತಾ ತಮ್ಮಿಂದಾದ ಮಟ್ಟಿಗೂ ಅಧಿಕಾರಿಗಳ ಸಹಾಯವನ್ನು ಪಡೆದು ಸ್ಕೂಲನ್ನು ಪ್ರವರ್ಧಮಾನಕ್ಕೆ ತಂದರು. ಇದರ ಏಳಿಗೆಯನ್ನು ನೋಡಿ ಪ್ರೋತ್ಸಾಹಕ್ಕೆ ಬದಲಾಗಿ ಪ್ರತಿಕೂಲವನ್ನು ಮಾಡಬೇಕೆಂದು ಹಿಂದೆ ಇದ್ದ ಕೆಲವು ದೊಡ್ಡ ಮನುಷ್ಯರು ಚಂದಾ ಕೂಡಿಸಿ ಪ್ರಾಟೆಸ್ಟ ಸ್ಕೂಲನ್ನು ಸ್ಥಾಪಿಸಿ ಕೆಲವು ಕಾಲದ ತನಕ ನಡಿಸಿ ಕೈಲಾಗದೆ ಉಪಾಯಾಂತರದಿಂದ ಅದನ್ನು ಸರ್ಕಾರದವರ ವಶಕ್ಕೆ ತ್ಯಾಗಮಾಡಿಬಿಟ್ಟರು. ನಮ್ಮ ಸರ್ಕಾರದವರು ಅದನ್ನು ವಹಿಸಲು ಉಚಿತವಾದ ಕಾರಣವು ಇರಲಿಲ್ಲ. 1912 ನೇ ನವಂಬರ್ ಗುರ್ರ್ರ್ತಾರೀಖಿನಲ್ಲಿ ಹೆಡ್ ಮಾಸ್ಟರು ಕಾಲವಾದರು. ಆಗ್ಗೆ ಸ್ಕೂಲ್ ಉತ್ತಮಸ್ಥಿತಿಯಲ್ಲೇ ಇತ್ತು. ಇವರಿಗೆ ಬದಲಾಗಿ ತುಮಕೂರಿನಿಂದ ಹೊಸ ಹೆಡ್ ಮಾಸ್ಟರು ಬಂದು ಛಾರ್ಜು ವಹಿಸಿ ಸ್ಕೂಲನ್ನು ಇನ್ನೂ ಉತ್ತಮಸ್ಥಿತಿಗೆ ತರಬೇಕೆಂದು ಪ್ರಯತ್ನಪಟ್ಟು ಒಂದೆರಡು ವರ್ಷ ಅದೇ ಪ್ರಕಾರ ನಡಿದಿ ಅಧಿಕಾರಿಗಳಿಂದಲೂ, ಡೆಪ್ಟಿ ಇನ್ಸ್ಪೆಕ್ಟರವರಿಂದಲೂ ತಕ್ಕ ಮಟ್ಟಿಗೂ ಒಳ್ಳೇ ಹೆಸರನ್ನೇ ಪಡೆದರು. ಈ ಮಧ್ಯೆ ಸರ್ಕಾರದವರು 12 ವರ್ಷಗಳಾದರೂ ಗ್ರ್ಯಾಂಟನ್ನು ಜಾಸ್ತಿಮಾಡದೆ ಇರೋಣದರಿಂದ ಸ್ಕೂಲ್ ಹೀನಸ್ಥಿತಿಗೆ ಬರುತ್ತಾ ಇದೆ. ನಮ್ಮ ಸ್ಕೂಲಿಗೆ ಬಹುಮಾನ ಕೊಟ್ಟು ಇಲ್ಲಿಗೆ 4 ವರ್ಷಗಳಾದವು; ಅಲ್ಲದೆ 1913 ರಲ್ಲಿ ಪುಸ್ತಕ ಮುಂತಾದವುಗಳನ್ನು ಉಚಿತವಾಗಿ ಕೊಡಲಾಗುವುದಿಲ್ಲವೆಂದು ನಿಲ್ಲಿಸಿಬಿಟ್ಟರು. ಸರ್ಕಾರದವರು ಸ್ಕೂಲಿನ ನ್ಯೂನತೆಗಳನ್ನು ಚಿತ್ತಕ್ಕೆ ತಂದುಕೊಂಡು ಇದರ ಅಭಿವೃದ್ಧಿಗಾಗಿ ಬೇಕಾಗಿರುವ ಸಲಕರಣೆಗಳ ವಿಷಯದಲ್ಲಿ ತಕ್ಕ ಏರ್ಪಾಟುಗಳನ್ನು ಮಾಡಿ ಬಾಲಕಿಯರನ್ನೂ ಉಪಾಧ್ಯಾಯರುಗಳನ್ನೂ ತಕ್ಕ ರೀತಿಯಲ್ಲಿ ಪ್ರೋತ್ಸಾಹಿಸುವರೆಂದು ನಿರೀಕ್ಷಿಸುತ್ತೇನೆ.

ಪುರವಾಸಿ.

ಬಲಾತ್ಕಾರದ ವೃತ್ತಿಯು.

ಅಯ್ಯಾ,—ಸೋಲಾಪುರದ ಸಮೀಪದಲ್ಲಿರುವ ಅಂಕಲಕೋಟೆಯೆಂಬ ಗ್ರಾಮದ ಚೆನ್ನಬಸವಯ್ಯನೆಂಬ ಒಬ್ಬ ಜಂಗಮಯ್ಯನು ತನ್ನ ಊರಿನಲ್ಲಿಯೇ ಊಟವಿಲ್ಲದೆ 7-8 ದಿನಗಳು ಇರುವದು, 7-8 ದಿನಗಳು ಊಟಮಾಡುವದು, ಹೀಗೆಯೇ 2-3 ವರುಷಗಳು ಅಭ್ಯಾಸಮಾಡಿಕೊಂಡು, ಆ ಮೇಲೆ ಈಗ್ಗೆ 16 ವರುಷಗಳಿಂದ ವ್ರತ ಹಿಡಿದು, ಕಲ್ಯಾಣವೆಂಬ ಊರಿನಲ್ಲಿ ವೀರಶೈವಮತದ ಒಂದು ದೇವಾಲಯವನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಊರು ಊರುಗಳಿಗೂ, ಗ್ರಾಮ ಗ್ರಾಮಗಳಿಗೂ ಸಂಚರಿಸಿ, ಇಷ್ಟೇ ಹಣ ಕೊಡಬೇಕೆಂದು ನಿರ್ಭಂಧಿಸಿ, ಜನಗಳಿಂದ ಹಣವನ್ನು ವಸೂಲ್ಮಾಡುತ್ತಾ ಇರುವನು. ಆತನು ಹೇಳುವ ಪ್ರಕಾರ ಈಗ 2,000 ರೂಪಾಯಿ ವಸೂಲಾಗಿರುತ್ತದೆ. ಚೆನ್ನಬಸವಯ್ಯನು ನಮ್ಮ ಯಾದಗಿರಿ ತಾಲೂಕಿಗೆ ಸೇರಿದ ಎಲ್ಲೇರಿಯೆಂಬ ಗ್ರಾಮದಲ್ಲಿ ಬಂದು ವೀರಶೈವ ಮತದವರೆಲ್ಲರೂ ಸೇರಿ 100 ರೂಪಾಯಿಗಳನ್ನೂ, ಇನ್ನು ಬೇರೆ ಮತಸ್ಥರು 50 ರೂಪಾಯಿಗಳನ್ನೂ ಕೊಡುವ ತನಕ ಊಟಮಾಡುವದಿಲ್ಲವೆಂದು ಕಳೆದ ಜನವರಿ ತಿಂಗಳು ತಾ. 27 ನೇ ಬುಧವಾರದಿಂದ ತಾ. 31 ನೇ ಭಾನುವಾರ ಮಧ್ಯಾಹ್ನದ ವರಿವಿಗೂ ಕೂತಿದ್ದನು. ತಾ. 29 ನೇ ಶುಕ್ರವಾರದಿಂದ ತಾ. 30 ನೇ ಶನಿವಾರದ ವರಿವಿಗೂ ಈ ಊರು ಮ॥ ಮಾಲಿಗೌಡ ಶಿವರಾಮರೆಡ್ಡಿಯವರೂ, ಇನ್ನು ವೀರಶೈವ ಮತದ ನಾಗರಡ್ಡಿ ಅಯ್ಯಪ್ಪ ಮುಂತಾದವರೂ ಬಂದು "ಸ್ವಾಮಿಗಳೇ 50 ರೂಪಾಯಿ ಕೊಡುತ್ತೇವೆ" ಎಂದು ಹೇಳಿದರೂ ಒಪ್ಪಲಿಲ್ಲ. 100 ರೂಪಾಯಿಗಳಲ್ಲಿ ಒಂದು ದುಡ್ಡು ಕಡಮೆಯಾದರೂ ಮುಟ್ಟುವದಿಲ್ಲವೆಂದು ಹಟಹಿಡಿದು ಕೂತಿದ್ದನು. ತರುವಾಯ ಗೌಡ್ರುಗಳು ಎದ್ದು ತಮ್ಮ ಮನೆಗಳಿಗೆ "ಇವನು ಗುರುವಲ್ಲ, ನಾವು ಶಿಷ್ಯರಲ್ಲ" ವೆಂದು ಹೊರಟುಹೋದರು. ತಾ. 31 ನೇ ಭಾನುವಾರ 50 ರೂಪಾಯಿ ಕೊಡಿರೆಂದು ಕೇಳಿದರೂ, ಯಾರೂ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ. ಸದರಿ ಜಂಗಮಯ್ಯನು ಬಟ್ಟೆಗಳನ್ನು ಸುಡುತ್ತಾ, ಶಂಭೋ; ಬಾಡ್ಯೆಮಗನೇ; ಸಿದ್ಧೇಶ್ವರಾ! ಈ ಊರಿಗೆ ಬೆಂಕಿಹಾಕೋ! ಎಂದು ಊರು ಅಗಸೆಯಲ್ಲಿ ಆರ್ಭಟಿಸುತ್ತಾ, ಬೈಯುತ್ತಾ ಇದ್ದ ಸಮಯದಲ್ಲಿ ಯಾದಗಿರಿ ಟೌನ್ ರೆವ್॥ ಜಿ. ಕರೋಡಿ ಬೋಧಕರೂ, ಇನ್ನೊಬ್ಬರೂ ಹೋಗಿ ಮೇಲ್ಕಂಡ ಚೆನ್ನಬಸವಯ್ಯನಿಗೆ—ಏನ್ರಿ ಚೆನ್ನಬಸವಯ್ಯನವರೇ, ನೀವು ಇಲ್ಲಿ ಕೂಡಬೇಡಿರಿ ನಿಮ್ಮ ಭಕ್ತರ ಮನೆಗಳಿಗೆ ಹೋಗಿ ಅವರಿಗೆಲ್ಲಾ ಬೋಧಿಸಿ ಅವರು ಕೊಟ್ಟದ್ದು ತೆಗೆದುಕೊಂಡು ಹೋಗಿರೆಂದು ಹೇಳಿದರು. ಅದಕ್ಕೆ ಜಂಗಮಯ್ಯನು—ನಿಮ್ಮನ್ನು ದೇವರು ಕಳುಹಿಸಿದ್ದಾನೆ. ನಿಮ್ಮ ಮಾತುಗಳು ಕೇಳದೆ ಹೋದರೆ, ಮಕ್ಕಳು ಸುಟ್ಟು ಹೋಗುವರೆಂದು ಹೇಳಿ, ಈ ಊರಿನಲ್ಲಿರುವಂಥಾ ಲಿಂಗಾಂಗಿಗಳೆಲ್ಲರನ್ನೂ ಬೈಯುತ್ತಾ ಹೋದನು.

ಪ್ರಜಾ ಹಿತಚಿಂತಕ.

ಒಬ್ಬ ಸ್ಕೂಲ್ ಮಾಸ್ಟರಿಗೆ ಸಂಬಳ ಪಾವತಿ ಆಗಿಲ್ಲವಂತೆ.

ಅಯ್ಯಾ,—ನಾಗಮಂಗಲದ ತಾಲೂಕು ದೇವಲಾಪುರದ ಸ್ಕೂಲ್ ಅ॥ ಮಾಸ್ಟರ್ ನಂಜಪ್ಪನ ವಿನಯಗಳು:—ನನಗೆ ಈ ತಾಲ್ಲೋಕಿನಲ್ಲಿ 1914 ನೇ ಮೇ ಮಾಹೆಯಲ್ಲಿ 7 ದಿನಗಳ ಪೂರಾ ತಲಬು, ಆಗಸ್ಟು ಮಾಹೆಯಲ್ಲಿ 23 ದಿನಗಳ ಪೂರಾ ತಲಬು, ಬಾಕಿ ದಿನಗಳ ಅರ್ಧ ತಲಬು, ಸೆಪ್ಟಂಬರ್ ಮಾಹೆಯಲ್ಲಿ 24 ದಿನಗಳ ಅರ್ಧ ತಲಬು ಬರಬೇಕು. ಈ ತಲಬಿನ ವಿಚಾರದಲ್ಲಿ ನಮ್ಮ ಇಲಾಖೆಯಿಂದ ಅಕ್ಟೋಬರ್ 22 ನೇ ತಾರೀಖಿನಲ್ಲಿ ತಾಲ್ಲೋಕಿಗೆ ಯಾದಿಯನ್ನೂ, ನಮಗೆ ಆರ್ಡರನ್ನೂ ಕೊಟ್ಟಿರುತ್ತಾರೆ. ಇದರ ಮೇರೆ ನಾನು ನವಂಬರ್ 27 ನೇ ತಾರೀಖಿನ ದಿನ ಹೋಗಿ ಕೇಳಲು ಶಿರಸ್ತೇದಾರರು ಡಿಸೆಂಬರ್ 11 ನೇ ತಾರೀಖಿಗೆ ಬಾ, ಸಪ್ಲಿಮೆಂಟ್ ಮಾಡಿ ಕೊಡುತ್ತೇವೆಂದು ಹೇಳಿದರು. 11 ನೇ ತಾರೀಖಿನಲ್ಲಿ ಹೋಗಿ ಕೇಳಲು—ಇನ್ನೂ ಸಪ್ಲಿಮೆಂಟ್ ಮಾಡಿಲ್ಲ, 18 ನೇ ತಾರೀಖಿಗೆ ಬಾರೆಂದು ಹೇಳಿದರು. 18 ನೇ ತಾರೀಖಿನಲ್ಲಿ ಹೋಗಿ ಕೇಳಲು ಶಿರಸ್ತೇದಾರರು ನಗದಿ ಗುಮಾಸ್ತರನ್ನು ಕೇಳೆಂತಲೂ, ನಗದಿ ಗುಮಾಸ್ತರು ಶಿರಸ್ತೇದಾರರನ್ನು ಕೇಳೆಂತಲೂ ಹೇಳಿ, ಕೊನೆಗೆ ಶಿರಸ್ತೇದಾರರು 22 ನೇ ತಾರೀಖಿಗೆ ಬಾರೆಂದು ಹೇಳಿದರು. 22 ನೇ ತಾರೀಖಿನಲ್ಲಿ ಹೋಗಿ ಕೇಳಲು—ನಿಮ್ಮ ಇಲಾಖೆಯಿಂದ ಯಾದಿಯೇ ಬಂದಿಲ್ಲವೆಂದು ಹೇಳಿದರು. ಜನವರಿ 8 ನೇ ತಾರೀಖಿನಲ್ಲಿ ಹೋಗಿ ಕೇಳಲು 15 ನೇ ತಾರೀಖಿಗೆ ಬಾರೆಂದು ಶಿರಸ್ತೇದಾರರು ಹೇಳಿದರು. 15 ನೇ ತಾರೀಖಿನಲ್ಲಿ ಹೋಗಿ ಕೇಳಲು—ನಮ್ಮ ಮನಸ್ಸು ಬಂದಾಗ ಸಪ್ಲಿಮೆಂಟ್ ಮಾಡಿ ಕೊಡುತ್ತೇವೆ; ನೀವು ಪದೇ ಪದೇ ಬರಬೇಡಿ ಎಂದು ಶಿರಸ್ತೇದಾರರು ಹೇಳಿದರು.

ಈ ರೀತಿ ಅನೇಕ ವೇಳೆ ಹೋಗಿದ್ದಾಗ್ಯೂ ಸಂಬಳವನ್ನು ಕೊಡದೆ ನಮ್ಮ ಇಲಾಖೆಯಿಂದ ಯಾದಿಯನ್ನು ಕಳುಹಿಸಿ ಮೂರು ತಿಂಗಳಾದರೂ ಸಪ್ಲಿಮೆಂಟ್ ಮಾಡದೇ ಇರುತ್ತಾರೆ. ನಮಗೆ ಬರತಕ್ಕದ್ದು ಹತ್ತು ರೂಪಾಯಿ ಸಂಬಳ. ಅದರಲ್ಲಿ ರೂಪಾಯಿಗೆ 6 ಸೇರು ಅಕ್ಕಿ ಕೊಂಡು ಜೀವಿಸುವುದೇ ಎಷ್ಟೋ ಕಷ್ಟ. ಇದರಲ್ಲಿ ಈ ತಾಲ್ಲೋಕಿನವರು ಸಂಬಳ ಕೊಡದೆ ಬಹಳ ಕಷ್ಟವನ್ನು ಕೊಡುತ್ತಾರೆ. ನನ್ನದು ಅಲ್ಲದೆ ಇದೇ ಸ್ಕೂಲಿನಲ್ಲಿ ಇನ್ನೂ ಇತರ ಮಾಸ್ಟರುಗಳ ಸಂಬಳವು ಇದೇ ಅವ್ಯವಸ್ಥೆಯಲ್ಲಿದೆ. ಇದರಿಂದಲಾದರೂ ಬರುತ್ತೋ ಇಲ್ಲವೋ ಗೊತ್ತಿಲ್ಲ. ಇದನ್ನು ಓದುವ ಮೇಲ್ಪಟ್ಟ ಅಧಿಕಾರಿಗಳಾದರೂ ಇದನ್ನು ಸರಿಪಡಿಸುವರೆಂದು ನಂಬಿರುತ್ತೇನೆ.

ನಂಜಪ್ಪ, ದೇವಲಾಪುರ.

[ಇಲಾಖಾ ಅಧಿಕಾರಿಗಳು ಇಂಥಾ ಸಂದರ್ಭಗಳಲ್ಲಿ ತನಿಖೆಮಾಡಿ ಬಡಸ್ಥಿತಿಯಲ್ಲಿರುವ ಅಲ್ಪ ಸಂಬಳಗಾರರಿಗೆ ಅವರ ತಲಬುಗಳನ್ನು ಸಕಾಲದಲ್ಲಿ ಪಾವತಿ ಮಾಡಿಸಬೇಕಾದದ್ದು ಅವಶ್ಯವಾಗಿದೆ.—ಎಡಿ.]

ಅರಕಲಗೂಡು ತಾಲೂಕು ಕೊಣನೂರಿನಲ್ಲಿ ಶೇಕದಾರ್ ಮ॥ ಜಿ ಲಿಂಗಯ್ಯನವರೂ, ಶ್ಯಾನುಭೋಗ್ ಮ॥ ಸುಬ್ಬರಾಯರೂ ಸಾಹಸಪಟ್ಟು ಚಂದಾ ಕೂಡಿಸಿ 3,000 ರೂಪಾಯಿಗೆ ದೇವಸ್ಥಾನವನ್ನು ಕಟ್ಟಿಸಿ ಪ್ರತಿಷ್ಠೆ ಮುಂತಾದ್ದನ್ನು ಮಾಡಿಸಿದರೆಂದೂ, ಕಳೆದ ವಾರ ಆ ದೇವಸ್ಥಾನದಲ್ಲಿ ದೊಡ್ಡ ಸಭೆಯನ್ನು ಸೇರಿಸಿ ನಮ್ಮ ಚಕ್ರವರ್ತಿಯವರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ನಡಿಸಿದರೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಮಾಗಡಿ ತಾಲ್ಲೋಕು ಸಾವನದುರ್ಗದಲ್ಲಿ ಕಳೆದ ತಿಂಗಳ ಆಖೈರಿನಲ್ಲಿ ರಥೋತ್ಸವವು ವಿಜೃಂಭಣೆಯಿಂದ ನಡೆಯಿತೆಂದೂ, ಆಗ ಸೇರಿದ್ದ ಪ್ರಜೆಗಳಿಗೆ ವೀರೇಗೌಡನ ದೊಡ್ಡಿಯ ಮ॥ ಅ. ರಾಜಾರಾಧ್ಯರು ಭಗವದ್ಭಕ್ತಿಯನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರೆಂದೂ, ಜಾತ್ರೆ ಜನಗಳಿಗೆಲ್ಲಾ ಕುಣಿಗಲ್ ತಾಲೂಕು ಮೂಗನಪುರದಲ್ಲಿರುವ ಮ॥ ಗಳಾದ ಪ. ಸಾಮಂದಪ್ಪಗೌಡರೂ ಚಿಕ್ಕಸಾಮಂದಪ್ಪನವರೂ ದೊಡ್ಡಮನೆ ವೀರಪ್ಪನವರೂ ಚನ್ನಪ್ಪನವರೂ ಭದ್ರಪ್ಪನವರೂ ಉದಾರವಾಗಿ 3–4 ಮುಡುಗ ದವಸವನ್ನು ಒದಗಿಸಿ ಅನ್ನಪಾನಾದ್ಯುಪಚಾರಗಳನ್ನು ನಡಿಸಿದರೆಂದೂ "ಪ್ರತ್ಯಕ್ಷದರ್ಶಿ" ಎಂಬ ಬಾತ್ಮಿದಾರರು ಬರೆದಿರುತ್ತಾರೆ.

ಎಡಿ.]

ತಾಲ್ಲೂಕು ವರ್ತಮಾನಗಳು.

ತರೀಕೆರೆ.—ಜನರು ಛಳಿಜ್ವರದಿಂದ ಹೆಚ್ಚಾಗಿ ಕಷ್ಟಪಡುತ್ತಾರೆ. ಇದರಿಂದ ಕಷ್ಟಪಡುವವರನ್ನು ಹೆಚ್ಚುಕಡಮೆ ಎಲ್ಲಾ ಕಡೆಯಲ್ಲೂ ನೋಡಬಹುದು. ಕಳೆದ ತಿಂಗಳು ನಮ್ಮ ಶ್ರೀಮನ್ ಯುವರಾಜರವರು ದಯಮಾಡಿಸಿದಾಗ ಎ. ವಿ. ಸ್ಕೂಲಿಗೆ 40 ರೂಪಾಯನ್ನೂ, ವೆ. ಮಿಷನ್ ಸ್ಕೂಲಿಗೆ 20 ರೂಪಾಯನ್ನೂ, ಹಿಂದೂಸ್ಥಾನಿ ಸ್ಕೂಲಿಗೆ 15 ರೂಪಾಯನ್ನೂ, ಸ್ಕೂಲುಗಳಿಗೆ ಸ್ವತಃ ದಯಮಾಡಿಸಿ ನೋಡಿ ಸಂತೋಷಪಟ್ಟು ಆಯಾ ಸ್ಕೂಲಿನ ಮಕ್ಕಳು ಸಂತೋಷಪಡುವದಕ್ಕಾಗಿ ಅವರ ತಿಂಡಿಗಾಗಿ ಕೊಟ್ಟಿದ್ದರು. ಕಳೆದ ವಾರ ನಮ್ಮ ಅಮಲ್ದಾರ್ ಸಾಹೇಬರು ಶಾವೇ ಸಿಂಹು ಮಕ್ಕಳಿಗೆ ತಿಂಡಿ ಪದಾರ್ಥಗಳನ್ನು ಕೊಡಿಸಿದರು. ಆ ದಿನ ಮಕ್ಕಳ ಸಂತೋಷ ಅತಿಶಯವಾಗಿತ್ತು.—ತರೀಕೆರೆಯಿಂದ 12 ಮೈಲಿ ದೂರದಲ್ಲಿರುವ ಲಕ್ಕವಳ್ಳಿಗೆ ಹೋಗುವ ಲೈಟ್ ರೈಲ್ವೆಯಲ್ಲಿ ಜನಕ ಸಾಮಾನುಗಳನ್ನು ರೈಲ್ವೆ ಮಣಕ್ಕೆ 1½ ಆಣೆಯಂತೆ ಸಾಗಿಸುವದು ತುಂಬಾ ಅನುಕೂಲವಾಗಿದೆ.—ಶಾದಿಕೆರೆ ಜಂಗಲಿನಲ್ಲಿ ಗಂಧದ ಕಂಟ್ರಾಕ್ಟರೋ ಅಥವಾ ಬೇರೆಯಾರೋ ಹಸೀ ಗಂಧದ ಮರಗಳನ್ನು ಕಡಿದಿರುವದನ್ನು ಅಲ್ಲಲ್ಲಿ ನೋಡಬಹುದು. ಫಾರೆಸ್ಟಿನವರ ನಿಗಾ ಸ್ವಲ್ಪ ಕಡಮೆಯಾಗಿದೆ ಎಂದು ಇದರಿಂದ ತಿಳಿಯಬಹುದು. ಲಕ್ಷ್ಮೀಸಾಗರವೆಂಬ ಗ್ರಾಮದಲ್ಲಿ ಲಿಂಗಾಯಿತರು 5 ಜನ ಸೇರಿ ಅದೇ ಜಾತಿಯವನನ್ನು ಹೊಡೆದಿದ್ದಾರೆ. ಅವನು ಆಸ್ಪತ್ರೆಯಲ್ಲಿದಾನೆ. ಇಲ್ಲಿನ ಆಸ್ಪತ್ರೆಗೆ ಜನರು ನಾನಾ ಕಡೆಗಳಿಂದ ಬರುವದು ಹೆಚ್ಚು. ಆದರೆ ಬೇರೆ ಗ್ರಾಮದವರು ಅಲ್ಲಿದ್ದುಕೊಂಡು ಚಿಕಿತ್ಸೆಮಾಡಿಸಿಕೊಳ್ಳಲು ಅಲಾಯಿದಾ ವಾರ್ಡುಗಳೂ, ರೋಗಿಗಳ ಸಂಬಂಧಿಗಳು ಇರಲು ಅನುಕೂಲವಾದ ಸ್ಥಳವೂ ಇದ್ದರೆ ಬಹಳ ಒಳ್ಳೇದು.

ಹುಣಸೂರು ತಾ॥ ಚಿಟ್ಟೆದಪುರ.—ಶ್ರೀಮಲ್ಲಿಕಾರ್ಜುನಸ್ವಾಮಿ ಮತ್ತು ಬೆಟ್ಟಗಳಿಂದ ಕೂಡಿದ ಕ್ಷೇತ್ರವಾದ್ದಾಗಿಯೂ, 1,000 ಪ್ರಜೆಗಳಿಂದ ಕೂಡಿರುವ ಗ್ರಾಮವಾಗಿಯೂ ಇರುತ್ತೆ. ಈ ಗ್ರಾಮದಲ್ಲಿ ಇದೇ ಫೆಬ್ರವರಿ 2 ನೇ ತಾ. ಮಂಗಳವಾರ ರಥೋತ್ಸವವು ನೆರವೇರಿಸಲ್ಪಟ್ಟಿತು. ಇದೇ ತಾಲೂಕು ಅಮಲ್ದಾರ್ರು, ಡಾಕ್ಟರವರು, ಇನ್ನೂ ಕೆಲವರು ಸರ್ಕಾರಿ ಅಧಿಕಾರಿಗಳು ದಯಮಾಡಿಸಿ ಮೇಲ್ಕಂಡ ಉತ್ಸವವನ್ನು ಬಹಳ ವಿಜೃಂಭಣೆಯಿಂದ ನಡಿಸಿದರು. ಅಲ್ಲದೆ 1,000-2,000 ದನಗಳು ಮಾರಾಟಕ್ಕೆ ಬಂದಿದ್ದವು. ಮಾರಾಟವು ಬಹಳ ಚೆನ್ನಾಗಿ ನಡೆಯಿತು. ಆದರೆ ಈ ವರುಷದಲ್ಲಿ ಪ್ರದರ್ಶನದ ಏರ್ಪಾಟು ಇಟ್ಟು ರೈತರುಗಳಿಗೆ ಪ್ರೋತ್ಸಾಹ ಕೊಟ್ಟಿದ್ದರೆ ಮುಂದೆ ಈ ಜಾತ್ರೆಯು ಬಹಳ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿರಲಿಲ್ಲ.—ಈ ಗ್ರಾಮದ ಆರೋಗ್ಯಭಾಗ್ಯ ಸ್ವಲ್ಪವೂ ಚೆನ್ನಾಗಿಲ್ಲ. ರಸ್ತೆಗಳಲ್ಲೂ, ಬೀದಿ, ಗಲ್ಲಿ ಮತ್ತು ಮನೆ ಹಿತ್ತಲು ಪ್ರದೇಶಗಳಲ್ಲೂ ಲಾಂಟಾನಾ ಪ್ರಬಲವಾಗಿ ಬೆಳೆದು ಜನಗಳಿಗೆ ಬಹಳ ತೊಂದರೆಯನ್ನುಂಟುಮಾಡಿದೆ. ಕೂಡಲೆ ನಮ್ಮ ಸರ್ಕಾರದವರು ಈ ವಿಷಯದಲ್ಲಿ ನಿಗಾ ಕೊಟ್ಟು ಪ್ರಜೆಗಳಿಗೆ ಅನುಕೂಲ ಮಾಡಿಸುವರೆಂದು ನಂಬಿದೇನೆ.—ಊರಿನಲ್ಲಿರ ತಕ್ಕ ಸ್ಕೂಲ್ ಮನೆಯು ಸ್ವಲ್ಪವೂ ಚೆನ್ನಾಗಿಲ್ಲ. ಕೂಡಲೆ ಹೊಸ ಕಟ್ಟಡವು ತಯಾರಾಗುವುದಕ್ಕೆ ಸರ್ಕಾರದವರು ಸರಿಯಾದ ಏರ್ಪಾಡು ಮಾಡುವರೆಂದು ನಂಬಿರುತ್ತೇನೆ. ಈಗ ಹಾಲೀ ಸ್ಕೂಲಿನಲ್ಲಿ ಹೆಡ್ ಮಾಸ್ಟರ್ ಆಗಿರುವ ಮ॥ ಬಿ. ಶ್ರೀನಿವಾಸಯ್ಯಂಗಾರ್ರು ಬಹಳ ಶ್ರದ್ಧೆಯಿಂದಲೂ, ಕೇವಲ ಭಕ್ತಿಪುರಸ್ಸರವಾಗಿಯೂ ಕೆಲಸಮಾಡುತ್ತಾರೆ. ಪ್ರಜೆಗಳಿಗೆಲ್ಲಾ ತುಂಬಾ ಪ್ರೋತ್ಸಾಹ ಕೊಡುತ್ತಲೂ, ಬಾಲಕರನ್ನು ದಿನೇ ದಿನೇ ಹೆಚ್ಚಿಸುತ್ತಲೂ ಇದಾರೆ.—ಈ ಗ್ರಾಮದಲ್ಲಿ ಎರಡು ಕೋಆಪರೆಟಿವ್ ಸೊಸೈಟಿಗಳು ಏರ್ಪಡಾಗಿವೆ. ಈ ಸೊಸೈಟಿ ಆಗುವುದರ ಮೊದಲೂ ಮತ್ತು ಇತರ ಅಂತರಂಗ ದುಗ್ಧಗಳಿಂದಲೂ ಈ ಗ್ರಾಮದಲ್ಲಿ ಪರಸ್ಪರ ಕ್ಲೇಶಗಳು ಉಂಟಾಗಿರುವ ಮೂಲಕ ನಮ್ಮ ಪತ್ರಿಕೆಗಳಲ್ಲಿ ಮೇಲ್ಕಂಡ ಸ್ಕೂಲ್ ಸ್ಥಿತಿಯನ್ನು ಕುರಿತು ಇಲ್ಲದ ದೋಷಾರೋಪಣೆ ಕೊಟ್ಟಿರುವುದನ್ನು ನೋಡಿದರೆ ತುಂಬಾ ಶೋಚನೀಯವಾಗಿದೆ. ಇಲ್ಲಿಂದ ಮುಂದಾದರೂ ಗ್ರಾಮಸ್ಥರುಗಳೆಲ್ಲರೂ ಏಕೀಭವಿಸಿ ಗ್ರಾಮಕ್ಕೆ ಉಪಯೋಗವಾಗುವ ಕೆಲಸಗಳಿಗೆ ನಿಗಾಕೊಟ್ಟು ಸುಳ್ಳು ಬಾತ್ಮಿಗಳನ್ನು ಕೊಡದೆ ಮಿತ್ರಭಾವದಿಂದ ನಡೆದುಕೊಳ್ಳುತ್ತಾರೆಂದು ನಂಬಿರುತ್ತೇನೆ.

ದೊಡ್ಡಬಳ್ಳಾಪುರ.—ಈ ಮಾಹೆ 1 ನೇ ತಾ. ಈ ಊರಿನಲ್ಲಿ ರಥೋತ್ಸವವು ಬಹು ಉತ್ಸಾಹದಿಂದ ನೆರವೇರಿತು. ಆ ದಿನ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರೂ, ಡೆಪ್ಯುಟಿ ಕಮಿಷನರ್ ಸಾಹೇಬರವರೂ, ಡಿಸ್ಟ್ರಿಕ್ಟ್ ಪೋಲೀಸ್ ಸೂಪ್ರೆಂಟರವರೂ ದಯಮಾಡಿ ಎಲ್ಲವನ್ನೂ ಸಾಂಗವಾಗಿ ನಡಿಸಿ ದಯಮಾಡಿಸಿದರು. ಆ ದಿನ 600-700 ಜನಕ್ಕೆ ಸಮಾರಾಧನೆ ನಡೆಯಿತು. ಮುಂದಣ ಸಂವತ್ಸರಕ್ಕಾದರೂ ಎತ್ತಿನ ಜಾತ್ರೆ ಆದೀತೆಂದು ಪ್ರಜೆಗಳು ನಿರೀಕ್ಷಿಸುತ್ತಾರೆ. ದೇವಸ್ಥಾನದ ಧರ್ಮದರ್ಶಿಗಳು ಒಗ್ಗಟ್ಟಿನಿಂದ ಕೆಲಸಮಾಡುತ್ತಿರುವದು ಮೇಲ್ಕಂಡ ಕಾರ್ಯಗಳಿಂದ ವ್ಯಕ್ತಪಡುತ್ತೆ.—ನೀರಿಗೆ ಬಹು ಶ್ರಮವಾಗಿರುತ್ತೆ. ಎಂದಿಗೆ ಕೊಳಾಯಿಗಳಾದೀತೋ ಎಂದು ಜನರು ನಿರೀಕ್ಷಿಸುತ್ತಿರುವರು.—ಮ್ಯುನಿಸಿಪಲ್ ಲಾಂದ್ರಾಗಳು ಮಾತ್ರ ಯಥಾಸ್ಥಿತಿಯಲ್ಲಿ ಮೌನವಾಗಿರುತ್ತೆ. ವೀರಭದ್ರಪೇಟೆ ಕೆಲವು ರಸ್ತೆಗಳಲ್ಲಿರುವ ಕೊರಕಲು ಬಂಡೆಗಳಿಂದ ತಿರುಗಾಡುವವರಿಗೆ ತೊಂದರೆಯಾಗಿದೆ. ದಿನಕ್ಕೆ 2–3 ಜನರು ಬಿದ್ದು ಜಖಂಗಳು ಆದಾಗ್ಯೂ ಮ್ಯುನಿಸಿಪಾಲಿಟಿಯವರ ಮನಕ್ಕೆ ಬಾರದಿರುವದು ಆಶ್ಚರ್ಯ. ಸ್ಟೋರ್ ಮ॥ ರಾಮಯ್ಯನವರ ಗಲ್ಲಿ ಸಂಪಡಿಸಿದರೆ ನೂರಾರು ಜನರಿಗೆ ಕ್ಷೇಮವಾದೀತು. ಇಲ್ಲಿ ಪೋಲೀ ನಾಯಿಗಳ ಅವಾಂತ್ರ ಜಾಸ್ತಿ. ಕತ್ತೆಗಳು ದಿನವೆಲ್ಲಾ ಬೀದಿಗಳಲ್ಲೇ ವಾಸವಾಗಿರುತ್ತೆ. (ಇನ್ನೊಬ್ಬ ಬಾತ್ಮಿದಾರರಿಂದ)—ಈ ಊರಲ್ಲಿ ರೈತರು ಗುಂಡುಕಲ್ಲಿನ ರೋಲ್‌ನಿಂದ ರಾಗಿ ಬಡಿಯತಕ್ಕ ವಿಧಾನವನ್ನು ಸುಲಭವಾಗಿಯೂ, ನಾಜೋಕಾಗಿಯೂ ಮಾಡುವರು. ಅಲ್ಲದೆ ಇದು ಲೆಟ ಬಹಳ ಮಟ್ಟಿಗೆ ಕಡಮೆಯಾಗಿರುವುದರಿಂದ ಸರ್ವ ರೈತರೂ ಒಂದೊಂದನ್ನು ಇಟ್ಟುಕೊಂಡು ಕ್ಷಿಪ್ರಕಾಲಗಳಲ್ಲಿ ಕೆಲಸಗಳನ್ನು ಮುಗಿಸಿಕೊಳ್ಳಲು ತುಂಬಾ ಅನುಕೂಲವಾಗಿದೆ.—ಗಾಣಿಗರಪೇಟೆ ಸರ್ಕಾರಿ ರೋಡ್ ಮಧ್ಯಭಾಗದಲ್ಲಿ ಸುಮಾರು ಅನೇಕ ಜನಗಳಿಗೆ ತೊಂದರೆಯಾಗಿದ್ದ ಕಲ್ಲುಗಾಣಗಳು ಎರಡನ್ನು ಸರ್ಕಾರದವರು ನಿಲ್ಲಿಸಿದ್ದರಿಂದ ನಿರ್ಭಯವಾಗಿ ಈ ಮಾರ್ಗದಲ್ಲಿ ತಿರುಗಾಡುವಂತಾಯಿತು. ಆದಾಗ್ಯೂ ಈ ಕಲ್ಲುಗಾಣ ಯಾವ ಉಪಯೋಗಕ್ಕೂ ಬಾರದೆ ಸೈ ರೋಡ್ ಮಧ್ಯಭಾಗದಲ್ಲಿರುವುದನ್ನು ತಪ್ಪಿಸಿ ಪ್ರತ್ಯೇಕವಾಗಿ ಇರಿಸುವುದಕ್ಕೆ ಸರ್ಕಾರದವರು ಮನಕೊಟ್ಟಲ್ಲಿ ಈ ಊರಿಗೆ ತುಂಬಾ ಕ್ಷೇಮವಾಗುವುದು.—ಬೂಸ್ನದ ಶೇಖರಪ್ಪಾಜಿ ಅಕ್ಕಯ್ಯಮ್ಮನೆಂಬುವಳು ಆತ್ಮಹತ್ಯ ಮಾಡಲು ಉದ್ಯುಕ್ತಳಾದ ಹಾಗೂ, ಅದನ್ನು ಯವು ನೆರೆದಿದ್ದ ಪ್ರಜೆಗಳ ಸಮಕ್ಷಮ ಆಫೀಸ್ ಸಂಬಂಧಪಟ್ಟವರು ವಹಿಸಿಕೊಂಡಿರುವ ಹಾಗೂ ಕೇಳುತ್ತೇನೆ.

ಯುದ್ಧದ ಸಮಾಚಾರಗಳು.

[೬ ನೇ ಪುಟದಿಂದ ಮುಂದಕ್ಕೆ.]

ದಕ್ಷಿಣ ಅಮೇರಿಕದ ಸಮುದ್ರ ತೀರದಿಂದ ಆಚೆ ಆಸ್ಟ್ರೇಲಿಯಾ ಎಂಬ ಬ್ರಿಟಿಷ್ ಯುದ್ಧದ ಜಹಜು ಹೋಗಿ ಜರ್ಮನಿಯವರ ಎಲೀನೋರ್ ಎಂಬ ಯುದ್ಧದ ಜಹಜನ್ನು ಮುಳುಗಿಸಿಬಿಟ್ಟಿತು. ಬ್ರಿಟಿಷರಿಗೆ ಸಿಕ್ಕದೆ ತಪ್ಪಿಸಿಕೊಂಡಿರುವ ಜರ್ಮನಿಯವರ ಜಹಜುಗಳು ಇನ್ನು ಒಂದೆರಡು ಮಾತ್ರ ಇರಬಹುದೆಂದು ಕಾಣುವುದು.

ರಷ್ಯಾದವರ ಸಬ್‌ಮೆರೀನ್ ಎಂಬ ಹಡಗು ಡೆನ್‌ಮಾರ್ಕಿನ ಆಚೆ ಸಮುದ್ರದಲ್ಲಿ ಜರ್ಮನಿಯವರ ಒಂದು ಸಣ್ಣ ಯುದ್ಧದ ಜಹಜನ್ನು ಮುಳುಗಿಸಿರುತ್ತದೆ.

ಆಸ್ಟ್ರಿಯಾ ರಾಜ್ಯದ ಯುವರಾಜನನ್ನು ಕೊಂದುಹಾಕಿದ ಮೊಕದ್ದಮೆಯಲ್ಲಿ ದಸ್ತಗಿರಿಮಾಡಲ್ಪಟ್ಟ ಅಪರಾಧಿಗಳ ಪೈಕಿ ಮೂರು ಮಂದಿಯನ್ನು ಬಾಸ್ನಿಯಾ ರಾಜಧಾನಿಯಾದ ಸೆರಜೆವೊ ನಗರದಲ್ಲಿ ಗಲ್ಲಿಗೆ ಹಾಕಿದರು. ಯುವರಾಜನನ್ನು ಕೊಂದುಹಾಕಿದವನು ಇನ್ನೂ ಸಣ್ಣ ಪ್ರಾಯದವನಾದದ್ದರಿಂದ ಅವನನ್ನು ಗಲ್ಲಿಗೆ ಏರ್ತದೆ ಅವನಿಗೆ 20 ವರುಷಗಳ ಸಜಾ ವಿಧಿಸಿರುತ್ತಾರೆ.

ಆಫ್ರಿಕಾಕ್ಕೆ ಸೇರಿದ ನೈಗೇರಿಯಾ ಸೀಮೆಯ ಮಹಮದೀಯರು ಟರ್ಕಿ ಸುಲ್ತಾನರವರಿಗೆ ತಂತೀವರ್ತಮಾನ ಕೊಟ್ಟು ಇನ್ನು ಮುಂದೆ ಜರ್ಮನಿಯವರಿಗೆ ಸಹಾಯಮಾಡುವುದನ್ನು ನಿಲ್ಲಿಸಿಬಿಡಬೇಕೆಂದು ಕೇಳಿಕೊಂಡಿದ್ದಾರೆ. ಇದರಿಂದ ಈಗ ಏನೂ ಪ್ರಯೋಜನವಾಗುವುದಿಲ್ಲ. ಆದರೆ ಟರ್ಕಿಯವರ ಕಾರ್ಯವನ್ನು ಮೆಚ್ಚಿಕೊಳ್ಳುವ ಮಹಮದೀಯರು ಬಹು ಸ್ವಲ್ಪ ಮಂದಿ ಎನ್ನುವುದು ವೇದ್ಯವಾಗುತ್ತದೆ.

ಆಸ್ಟ್ರೇಲಿಯಾದಿಂದ ಇನ್ನೊಂದು ಬ್ರಿಟಿಷ್ ಸೈನ್ಯವು ಈಜಿಪ್ಟಿಗೆ ಬಂದಿಳಿಯಿತು. ಇನ್ನು ಬೇರೆ ಹೊಸ ಸೈನ್ಯವೂ ಬರುವುದರಲ್ಲಿದೆ.

ಜರ್ಮನಿಯ ಕೈಸರ್ ಚಕ್ರವರ್ತಿಯವರಿಗೆ ಯುದ್ಧಭೂಮಿಯಲ್ಲಿ ಗಂಟಲ ರೋಗವೇನೋ ಕಾಣಿಸಿಕೊಂಡದ್ದರಿಂದ ಅವರು ರಾಜಧಾನಿಯಾದ ಬರ್ಲಿನ್ ನಗರಕ್ಕೆ ವಾಪಸು ಹೋದರೆಂದು ಹೇಳಲಾಗಿದೆ.

ಒಂದಾನೊಂದು ಪತ್ರಿಕೆಯು ಈ ಯುದ್ಧದ ವಿಚಾರವನ್ನು ಕುರಿತು ಬರೆಯುತ್ತಾ ಕಡೆಯಲ್ಲಿ ತಿಳಿಸುವುದೇನೆಂದರೆ—ಯುದ್ಧ ನಡೆದ ಈ ಆರು ತಿಂಗಳಲ್ಲಿ ರಷ್ಯಾದವರು ಆಸ್ಟ್ರಿಯಾದಲ್ಲಿ 30,000 ಚದರಮೈಲಿ ಸೀಮೆಯನ್ನೂ, ಜರ್ಮನಿಯಲ್ಲಿ 3,000 ಚದರಮೈಲಿ ಸೀಮೆಯನ್ನೂ ಗೆದ್ದು ತಮ್ಮ ಸ್ವಾಧೀನಮಾಡಿಕೊಂಡಿದ್ದಾರೆ. ಜರ್ಮನಿಯವರಾದರೋ ಫ್ರಾನ್ಸ್, ಬೆಲ್ಜಿಯಮ್, ಲಕ್ಸಂಬರ್ಗ್ ಸೀಮೆಗಳಲ್ಲಿ 17,000 ಚದರಮೈಲಿ ಪ್ರದೇಶವನ್ನೂ, ಪೋಲೆಂಡಿನಲ್ಲಿ 10,000 ಚದರಮೈಲಿ ಪ್ರದೇಶವನ್ನೂ ಆಕ್ರಮಿಸಿಕೊಂಡಿರುವರು. ಫ್ರೆಂಚರು ಆಲ್ಸೇಸಿನೊಳಗೆ ಜರ್ಮನಿಯವರಿಂದ 200 ಚದರಮೈಲಿ ಸೀಮೆಯನ್ನು ಕಿತ್ತು ಸ್ವಾಧೀನಪಡಿಸಿಕೊಂಡಿದ್ದಾರೆ.

ಇದೇ ಫೆಬ್ರವರಿ ತಾ. 4 ರ ವರೆಗೆ ಬ್ರಿಟಿಷರ ಕಡೆಯಲ್ಲಿ ಒಟ್ಟಾಗಿ 1,04,000 ಸೈನ್ಯಗಳು ನಷ್ಟವಾಗಿರುತ್ತವೆ. ಈ ಸಂಖ್ಯೆಯಲ್ಲಿ ಕೊಲೆಯಾದವರೂ, ಗಾಯಪಟ್ಟವರೂ, ಸಿಕ್ಕದೆ ಇರುವವರೂ ಸೇರಿಹೋಗಿರುವರು.

ಹಣ ಒದಗಿಸುವ ಏರ್ಪಾಡು.

ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ರಾಜ್ಯಗಳ ಖಜಾನಾ ಛೇರ್ಮನ್‌ಗಳು ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಸೇರಿ ಒಪ್ಪಂದ ಮಾಡಿಕೊಂಡಿರುವ ಸಂಗತಿಯೇನೆಂದರೆ—ಈಗ ನಮ್ಮ ಪಕ್ಷವನ್ನು ವಹಿಸಿ ಯುದ್ಧ ಕಾರ್ಯಗಳನ್ನು ನಡೆಸುತ್ತಿರುವ ಪರರಾಜ್ಯಗಳಿಗೂ, ಇನ್ನು ಮುಂದೆ ನಮ್ಮ ಪಕ್ಷವನ್ನು ವಹಿಸತಕ್ಕಂಥಾ ರಾಜ್ಯಗಳಿಗೂ ಮೇಲ್ಕಂಡ ಮೂರು ರಾಜ್ಯಗಳವರೂ ಮೂರು ಪಾಲಾಗಿ ಹಂಚಿಕೊಂಡು ಅವಶ್ಯವಾದಷ್ಟು ಧನ ಸಹಾಯವನ್ನು ಸಾಲವಾಗಿ ಕೊಡತಕ್ಕದ್ದು. ಈ ದ್ರವ್ಯವನ್ನು ಆ ಮೂರು ರಾಜ್ಯಗಳ ಹಣದಿಂದಲೂ, ಮೂರು ರಾಜ್ಯಗಳವರೂ ಏಕವಾಗಿ ಸೇರಿ ಸಾಲಮಾಡುವ ಹಣದಿಂದಲೂ ಒದಗಿಸತಕ್ಕದ್ದು. ಪರರಾಜ್ಯಗಳವರ ಖರ್ಚುಗಳನ್ನೆಲ್ಲಾ ಆ ಮೂರು ರಾಜ್ಯಗಳವರೂ ಒಟ್ಟಾಗಿ ಸೇರಿ ಇತ್ಯರ್ಥಮಾಡತಕ್ಕದ್ದು. ಮತ್ತು ಅವರು ಒಗ್ಗಟ್ಟಾಗಿ ರಷ್ಯಾ ರಾಜ್ಯದ ಉತ್ಪನ್ನಗಳ ರಫ್ತಿಗೆ ಸಹಾಯ ಮಾಡಬೇಕು. ಇದು ಬಹು ವಿಶೇಷವಾದ ಏರ್ಪಾಡು. ಇದರಿಂದ ಪರರಾಜ್ಯಗಳು ನಮ್ಮವರಿಗೆ ಸಹಾಯ ಮಾಡುವುದಕ್ಕೆ ಬರಲು ತುಂಬಾ ಪ್ರೋತ್ಸಾಹವಾಗುವುದಲ್ಲದೆ ಈ ಮೂರು ರಾಜ್ಯಗಳಿಗೂ ಪರಸ್ಪರವಾದ ಸ್ನೇಹ ಪ್ರೀತಿವಾತ್ಸಲ್ಯಗಳು ಚೆನ್ನಾಗಿ ವೃದ್ಧಿಪಡಲು ಎಷ್ಟೋ ಅನುಕೂಲವಾಯಿತು.

ಜರ್ಮನಿಯೂ, ವ್ಯಾಪಾರದ ಹಡಗುಗಳೂ.

ಈಗಿನ ಯುದ್ಧದ ಬೇಸಿಯಿಂದ ಜರ್ಮನಿಗೆ ತುಂಬಾ ಕಷ್ಟನಷ್ಟಗಳುಂಟಾಗಿರುತ್ತವೆ; ಆದಕಾರಣ ವ್ಯಾಪಾರವನ್ನು ಹಾಳುಮಾಡುವುದಕ್ಕೆ ತನ್ನ ಕೈಲಾಗುವುದನ್ನೆಲ್ಲಾ ಮಾಡಬೇಕೆಂದು ಅದು ಸಂಕಲ್ಪ ಮಾಡಿಕೊಂಡಿದೆ. ಜರ್ಮನಿಯವರು ಒಂದು ಇಸ್ತಿಹಾರನ್ನು ಪ್ರಕಟಿಸಿ, ಫೆಬ್ರವರಿ ತಾ. 18 ರಿಂದ ಆಚೆಗೆ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡುಗಳ ಸುತ್ತಲೂ ಇರುವ ಸಮುದ್ರವೂ, ಇಂಗ್ಲಿಷ್ ಕಾಲುವೆಯೂ ಯುದ್ಧಭೂಮಿಗೆ ಸೇರಿದ ಪ್ರದೇಶಗಳೆಂದು ಬಾವಿಸತಕ್ಕದ್ದೆಂದೂ, ಶತ್ರುಪಕ್ಷದವರ ವ್ಯಾಪಾರದ ಹಡಗುಗಳನ್ನು ಮುಳುಗಿಸಿಬಿಡುತ್ತೇವೆಂದೂ, ಅವುಗಳಲ್ಲಿರುವ ಜನರ ಪ್ರಾಣಗಳನ್ನು ಕಾಪಾಡಲು ತಾವು ಜವಾಬ್ದಾರರಾಗುವುದಿಲ್ಲವೆಂದೂ, ತಟಸ್ಥವಾಗಿರುವ ರಾಜ್ಯಗಳ ಹಡಗುಗಳಿಗೆ ಆ ಪ್ರದೇಶಗಳಲ್ಲಿ ಅಪಾಯವುಂಟೆಂದೂ, ಅವುಗಳಿಗೆ ಆಕಸ್ಮಿಕವಾದ ಕಷ್ಟನಷ್ಟಗಳು ಸಂಭವಿಸಬಹುದೆಂದೂ, ಷೆಟ್ಲೆಂಡ್ ದ್ವೀಪಗಳಿಗೆ ಉತ್ತರದಲ್ಲೂ ಹಾಲೆಂಡಿನ ಸಮುದ್ರತೀರದಲ್ಲಿ ಸುಮಾರು ಮೂವತ್ತು ಮೈಲಿ ದೂರದ ವರೆಗೂ ಹಡಗುಗಳ ಸಂಚಾರಕ್ಕೆ ನಿರ್ಬಂಧವೇನೂ ಇರುವುದಿಲ್ಲವೆಂದೂ ತಿಳಿಸಿದ್ದಾರೆ. ಜರ್ಮನಿಯವರ ಈ ರೀತಿಯಾದ ಇಸ್ತಿಹಾರಿನಿಂದ ಪರರಾಜ್ಯಗಳಲ್ಲಿ ಅವರ ಮೇಲಣ ವಿರೋಧ ಹೆಚ್ಚಲು ಕಾರಣವಾದೀತಲ್ಲದೆ ಈಗ ವ್ಯಾಪಾರದ ಹಡಗುಗಳ ಸಂಚಾರಕ್ಕಿರುವ ಯಾವುದೊಂದು ಸೌಲಭ್ಯಕ್ಕೂ ಕುಂದಕವುಂಟಾಗುವುದಿಲ್ಲ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಶ್ರೀಮದ್ಯುವರಾಜರವರು ಕಳೆದ ವಾರ ಕೆಲವು ದಿನಗಳ ಮಟ್ಟಿಗೆ ಬೆಂಗಳೂರಿನಿಂದ ಬೊಂಬಾಯಿಗೆ ದಯಮಾಡಿರುತ್ತಾರೆ.

ಬೆಂಗಳೂರಿನಲ್ಲಿ ಕಳೆದ ವಾರ ಉತ್ತರಾದಿ ಮಠದ ಶಿಷ್ಯರುಗಳು ಒಂದು ಸಭೆಯನ್ನು ನಡಿಸಿ, ತಮ್ಮ ವರಮಾನದಲ್ಲಿ ಕಾಲು ಪಾಲನ್ನು ಸ್ವಾಮಿಗಳಿಗೆ ಕಾಣಿಕೆ ಒಪ್ಪಿಸಬೇಕೆಂದು ಇತ್ಯರ್ಥಮಾಡಿಕೊಂಡಿದ್ದಾರೆ.

ಈ ತಿಂಗಳು ತಾ. 23 ನೇ ಮಂಗಳವಾರದಿಂದ ಮಧ್ಯಗಿರಿ ಟವನ್ ದೇವಸ್ಥಾನದ ಬಳಿ ಗೋಕಾಯಿಗಳ ಪ್ರದರ್ಶನ ನಡೆಯುವುದೆಂದೂ, ಉತ್ತಮವಾದ ದನಗಳಿಗೆ ಬಹುಮಾನಗಳು ಕೊಡಲ್ಪಡುವುವೆಂದೂ ಪ್ರಕಟವಾಗಿದೆ.

ಬೆಂಗಳೂರು ಮಾಗಡಿ ರಸ್ತೆಯಲ್ಲಿ ಕಾವರೆಕೆರೆಗೂ ಮಾರನಹಳ್ಳಿಗೂ ಮಧ್ಯೆ ಒಂದು ಚಿರತೆಯು ಸೇರಿಕೊಂಡು ಹೋಗಿಬರುವ ಜನರನ್ನು ಅಟ್ಟಿಸಿಕೊಂಡು ಬರುತ್ತಿದೆ. ಶಿಕಾರಿದಾರರು ಅದನ್ನು ಕೊಂದುಹಾಕಿದರೆ ಕ್ಷೇಮವಾದೀತು.

ಕೊಲೀಸ್‌ಪೇಟೆ ತಾಲ್ಲೂಕು ಜೀವರ ದೊಡ್ಡಿ ಗ್ರಾಮದಲ್ಲಿ ಮುದ್ದನ ಮಗ ರಂಗನೆಂಬುವನು ತನ್ನ 8 ವರುಷದ ಸಹೋದರನನ್ನು ಕಡುಕತ್ತಿಯಿಂದ ಹೊಡೆದು ಕೊಂದುಹಾಕಿದನೆಂದೂ, ಪೋಲೀಸಿನವರು ತನಿಖೆಮಾಡುತ್ತಿದ್ದಾರೆಂದೂ ಪ್ರಕಟವಾಗಿದೆ.

ಮಾಗಡಿ ತಾಲ್ಲೂಕು ಕಛೇರಿಯಿಂದ—ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೋಸ್ಕರ ತಾಲ್ಲೂಕು ಮಜಕೂರಿನ ಗ್ರಾಮಾಂತರಗಳ ಪಟೇಲ ಶ್ಯಾನುಭೋಗರಿಂದ ವಸೂಲಾದ ರೂ. 39-8-0 ನ್ನು ಇದೇ ಫೆಬ್ರವರಿ ತಾ. 3 ರಲ್ಲಿ ಟ್ರಿಜರಿಗೆ ಜಮಾ ಮಾಡಿಸಿರುತ್ತೆ.

ಶಿವಸಮುದ್ರದಲ್ಲಿ ಬ್ಲಫ್ಫಿನ ಹತ್ತಿರ ಕರಡಿಗಳ ಶಿಕಾರಿಗೆ ಹೋಗಿದ್ದ ಒಬ್ಬ ಕೂಲಿಯವನನ್ನು ಒಂದು ಕರಡಿ ಹಿಡಿದು ಗಾಯಮಾಡಿತು. ಇಂಜನಿಯರು ಕೂಡಲೆ ಹೋಗಿ ಆ ಕರಡಿಯನ್ನು ಕೊಂದು, ಗಾಯಪಟ್ಟವನನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದರು.

ಹಾಸನದ ಡೆಪ್ಯುಟಿ ಕಮಿಷನರಾಗಿದ್ದ ಮಿ|| ವೆದರಾಲ್ ಸಾಹೇಬರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಒಂದು ಫಂಡನ್ನು ಕೂಡಿಸಿ, ಅವರ ಹೆಸರಿನಲ್ಲಿ ಆ ಡಿಸ್ಟ್ರಿಕ್ಟಿನ ವಿದ್ಯಾರ್ಥಿಗಳಿಗೆ ವರುಷ ವರುಷ ಬಹುಮಾನಗಳನ್ನು ಕೊಡಬೇಕೆಂದು ಆ ಪ್ರಾಂತ್ಯದ ದೊಡ್ಡ ಮನುಷ್ಯರು ಪ್ರಯತ್ನಪಟ್ಟಿದ್ದಾರೆ.

ರಾಜಧಾನಿಯ ಆಕ್ಟ್ರಾಯಿ ಇಲಾಖಾ ದರೋಗ ರಾಮಚಂದ್ರಶೆಟ್ಟರು ಕೆಲವು ಕೋಟೆಗಳಿಗೆ ಬಾರಾವಾಗಿಲ್ದ ಚೀಟಿಕೊಟ್ಟರೆಂದೂ, ಅವೆಲ್ಲಾ ರಾಜಧಾನಿಯಲ್ಲೇ ಸಿಕ್ಕಿದವೆಂದು ಗೊತ್ತಾದದ್ದರ ಮೇಲೆ ಮ್ಯುನಿಸಿಪಲ್ ಪ್ರೆಸಿಡೆಂಟರು ಅವರನ್ನು ಸಸ್ಪೆಂಡ್ ಮಾಡಿ ತನಿಖೆ ನಡಿಸುತ್ತಿದ್ದಾರೆಂದೂ ತಿಳಿದು ಬಂದಿದೆ.

ಕಳೆದ ಶನಿವಾರ ಮಧ್ಯಾಹ್ನ ಶ್ರೀಮನ್ ಮಹಾರಾಜರವರು ಬೆಂಗಳೂರು ಲಾಲ್‌ಬಾಗ್ ಉದ್ಯಾನವನದಲ್ಲಿ ನಡೆದ ಫಲಪುಷ್ಪಾದಿಗಳ ಪ್ರದರ್ಶನಕ್ಕೆ ದಯಮಾಡಿ ಪರಾಂಬರಿಸಿ ತುಂಬಾ ಸಂತೋಷಪಟ್ಟರು. ಮತ್ತು ಬ್ರಿಟಿಷ್ ರೆಸಿಡೆಂಟರವರೂ, ಚೀಫ್ ಜಡ್ಜರವರೂ, ದಿವಾನ್‌ರವರೂ ಪ್ರದರ್ಶನಕ್ಕೆ ದಯಮಾಡಿದ್ದರು.

ಒಬ್ಬ ಬಾತ್ಮೀದಾರರಿಂದ.—ಚಿಕ್ಕಬಳ್ಳಾಪುರ ತಾಲ್ಲೋಕು ಜಂಗಮಕೋಟೆ ಹೋಬಳಿ ಗಂಗನಹಳ್ಳಿ ಗೋಪಾಲಯ್ಯನ ಮನೆಯಲ್ಲಿ ಒಂದು ಆಕಳು ತಾ. 4 ನೇ ಗುರುವಾರ 6 ಪಾದಗಳು 2 ತಲೆಗಳು 2 ಬಾಲಗಳಾಗಿಯೂ, ಶರೀರವು ಒಂದೇ ಆಗಿರತಕ್ಕ ಕರುವನ್ನು ಹಾಕಿರುತ್ತೆ. ಕರುವು ಚೆನ್ನಾಗಿದೆ. ಇದು ಪರಮಾಶ್ಚರ್ಯವಾಗಿದೆ.

ಶ್ರೀರಂಗಪಟ್ಟಣದ ಅಮಲ್ದಾರ್ ಮ|| ಎಸ್. ವೆಂಕಟ್ರಮಣಾಚಾರಿಯವರು ಎರಡು ತಿಂಗಳೂ ಇಪ್ಪತ್ತೆರಡು ದಿನಗಳ ಪ್ರಿವಿಲೆಜ್ ರಜಾ ಪಡೆದುಕೊಂಡಿದ್ದಾರೆ. ಮ|| ಕೆ. ಮಲ್ಲರಾಜೇಅರಸಿನವರು ಶ್ರೀರಂಗಪಟ್ಟಣದ ಅಮಲ್ದಾರರಾಗಿಯೂ, ಮ|| ಎ. ನಾಗಲಿಂಗಪ್ಪನವರು ಫ್ರೆಂಚ್ ರಾಕ್ಸ್ ಡೆಪ್ಯುಟಿ ಅಮಲ್ದಾರರಾಗಿಯೂ ಬದಲಿ ನೇಮಕವಾಗಿರುವರು.

ರಾಜಧಾನಿಯಲ್ಲಿ ಸಿವಿಲ್ ಆಸ್ಪತ್ರೆಯ ಎದುರಿಗಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಮಹಡಿಯ ಮೇಲೆ ಸರ್ಕಾರದವರು ಈ ದಿನ ಫ್ರೀ ರೀಡಿಂಗ್ ರೂಮನ್ನು ಪ್ರಾರಂಭಿಸಿರುತ್ತಾರೆ. ಓದುಬರಹ ಬಲ್ಲವರೆಲ್ಲಾ ದಿನವೂ ಹೋಗಿ ಪ್ರಪಂಚದ ವರ್ತಮಾನಗಳನ್ನು ಬಿಟ್ಟಿಯಾಗಿ ಓದಿಕೊಂಡು ಬರಬಹುದು.

ಬೆಂಗಳೂರು ದಂಡಿನಲ್ಲಿ ಉಳ್ಳದ್ದ ದೊಡ್ಡ ಸಾಹುಕಾರರ ಬಾಲಚಂದ್ರನೆಂಬುವನು ಸುಂಕ ತೀರ್ವೆ ... ಒಟ್ಟು 71 ಆಳೆ ತೆಗೆದುಕೊಂಡು ... ವಿಚಾರಣೆಯಲ್ಲಿ 2 ವ ಮಾತ್ರ ಮ್ಯುನಿಸಿಪಾಲಿಟಿಗೆ ... ಮಾಡಿದನೆಂದು ತೋರಿದ ಮೇಲೆ ಅವನಿಗೆ ಮೂರು ತಿಂಗಳು ಕಠಿಣ ಸಜಾ ವಿಧಿಸಲ್ಪಟ್ಟಿದೆ.

ಮಧುಗಿರಿ ಬಾತ್ಮೀದಾರರಿಂದ —ಪೋಸ್ಟ್ ಆಫೀಸ್ ಇಲಾಖೆಯಲ್ಲಿ ಕೆಲವು ತಪ್ಪುಗಳಿಂದ ಆರೋಪಿಸಲ್ಪಟ್ಟು ಕೆಲಸದಿಂದ ಬಿಡುಗಡೆಯಾಗಿದ್ದ ಮ|| ಎಸ್. ಜೆ. ರಾಮಸುಬ್ಬಯ್ಯಂಗಾರ್ರನ್ನು ಕಲ್ಕತ್ತಾ ಡೈರೆಕ್ಟರ್ ಜನರಲ್ ಸಾಹೇಬರವರು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹುಕುಂ ಮಾಡಿರುವುದು ನ್ಯಾಯಾಭಿಮಾನಿಗಳಿಗೆ ಸಂತೋಷವನ್ನುಂಟುಮಾಡಿದೆ.

ಕಳೆದ ವಾರ ಬೆಂಗಳೂರು ಕಲಾಸಿಪಾಳ್ಯದಲ್ಲಿ ತಾಯಮ್ಮನೆಂಬುವಳ ಮನೆಗೆ ಕಳ್ಳರುಬಿದ್ದು ಸುಮಾರು 250 ರೂಪಾಯಿನ ಮಾಲುಗಳನ್ನು ಹೊತ್ತುಕೊಂಡು ಹೋದರು. ಈಚೆಗೆ ಪೋಲೀಸಿನವರು ಅಮ್ಮಕಮ್ಮ, ಮುನಿಯಮ್ಮ ಎಂಬ ಇಬ್ಬರನ್ನು ಹಿಡಿದು ತನಿಖೆಮಾಡಿದ್ದರಲ್ಲಿ ಅವರ ಬಳಿ ಕಳುವು ಮಾಲುಗಳೆಲ್ಲಾ ಸಿಕ್ಕಿದವು. ಇವರಿಬ್ಬರಿಗೂ ತಲಾ ಮೂರು ತಿಂಗಳ ಸಜಾ ವಿಧಿಸಲ್ಪಟ್ಟಿತು.

ಕಾಸೀಹನಹಳ್ಳಿ ತಾಲ್ಲೂಕು ಕಬ್ಬಾಳ ಗ್ರಾಮದಲ್ಲಿ ನಾಳೆ ಶನಿವಾರದಿಂದ ಗೋಕಾಯಿಗಳ ಪ್ರದರ್ಶನವನ್ನೂ, ವ್ಯವಸಾಯ ಮತ್ತು ಕಸಬುಗಳ ವಸ್ತು ಪ್ರದರ್ಶನವನ್ನೂ ನಡಿಸುವರು. ಅಮಲ್ದಾರ್ ಮಿ|| ಎ. ಜಿ. ಡಾರ್ಕರವರು ಇದರ ಮೇಲ್ವಿಚಾರಣೆಗಾಗಿ ಒಂದು ಕಮಿಟಿಯನ್ನು ಮಾಡಿ, ಆ ಪ್ರಾಂತ್ಯದ ಪ್ರಜೆಗಳಿಗೆ ಅಭಿವೃದ್ಧಿಹೊಂದುವ ಮಾರ್ಗಗಳನ್ನು ಸಾಕ್ಷಾತ್ತಾಗಿ ತೋರಿಸಿಕೊಡಬೇಕೆಂದು ಸಾಹಸಪಡುತ್ತಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

ತಾಳ್ಯದ ಮ|| ಸಿದ್ದರಾಮಪ್ಪನವರನ್ನು ಹೊಳಲ್ಕೆರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ.

ಶ್ರೀಮನ್ ಮಹಾರಾಜರವರು ಕೌನ್ಸಿಲರ್ ಮ|| ಎಂ. ಕಾಂತರಾಜೆಅರಸ್, ಸಿ. ಎಸ್. ಐ. ರವರಿಗೆ ಫೆಬ್ರವರಿ ತಾ. 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಕೋಲಾರ್ ಡಿ|| ಟ್ರೆಜರಿ ಛಾರ್ಜು ವಹಿಸಿರುವ ಅ|| ಕಮಿಷನರ್ ಮ|| ಎ. ಮೃತ್ಯುಂಜಯ ಅಯ್ಯರವರಿಗೆ ಜನವರಿ ತಾ. 26 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮಾಲೂರು ಸಬ್ ಡಿವಿಷನ್ ಆಫೀಸರವರು ಟ್ರೆಜರಿ ಛಾರ್ಜನ್ನು ವಹಿಸತಕ್ಕದ್ದು.

ಪಬ್ಲಿಕ್ ವರ್ಕ್ಸ್ ಇಲಾಖಾ ಅ|| ಎಗ್ಸಾಮಿನರ್ ಮ|| ಎ. ಅಪ್ಪಾಜಿಮೊದಲಿಯಾರ್ರಿಗೆ ಇಪ್ಪತ್ತೆಂಟು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹಾಸನದ ಡಿವಿಷನ್ ಸಬ್ ಅ|| ಇಂಜನಿಯರ್ ಮ|| ಪಿ. ರಾಜಗೋಪಾಲನ್‌ರವರಿಗೆ ಒಂಭತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಜನವರಿ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	ರೂ.	9,86,595
,, (2) ಡಿಪಾಜಿಟ್ಟುಗಳು	,,	24,62,997
,, (3) ಇತರೆ	,,	65,089
(ಆಣೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	35,14,681

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	8,05,400
,, (2) ಖಾತೆ ಮತ್ತು ಇತರ ಸಾಲಗಳು	,,	19,00,726
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,07,722
,, (4) ಇನ್‌ವೆಸ್ಟ್‌ಮೆಂಟುಗಳು	,,	3,07,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	1,11,736
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	14,830
,, (7) ಇತರೆ	,,	6,985
(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	35,14,681

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ತಾಲ್ಲೂಕು ವರ್ತಮಾನ.

ಹೊಸಕೋಟೆ.—ಜನವರಿ ತಾ. 28 ರಲ್ಲಿ ಸ್ಕೂಲ್‌ಗಳ ಡೆ|| ಇನ್‌ಸ್ಪೆಕ್ಟರಾದ ಮ|| ವೆಂಕಟರಮಣಯ್ಯನವರು ಇಲ್ಲಿಗೆ ಬಂದು ಎಲ್ಲಾ ಸ್ಕೂಲುಗಳನ್ನೂ ಪೂರ್ಣ ಇನ್‌ಸ್ಪೆಕ್ಷನ್ ಮಾಡಿದ ತರುವಾಯ ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಸಭಾಪತಯ್ಯರು ಮಾಡಿರುವ ಕ್ರಮಗಳನ್ನೂ, ಏರ್ಪಾಡುಗಳನ್ನೂ ಮತ್ತು ಆಯಾ ಉಪಾಧ್ಯಾಯರುಗಳು ತಮ್ಮ ವರ್ಗಗಳಲ್ಲಿರುವ ವಿದ್ಯಾರ್ಥಿಗಳಿಗೆ ಪಾಠಗಳು ಕಲಿಸುವ ವಿಧಾನವನ್ನೂ ನೋಡಿ ಬಹಳ ಆನಂದಪಟ್ಟರು. ಅತ್ಯಂತ ಹೀನಸ್ಥಿತಿಗೆ ಬಂದಿದ್ದ ಪಂಚಮ ಸ್ಕೂಲಿನ ವಿಷಯ ಇನ್‌ಸ್ಪೆಕ್ಟರು ಬಹಳ ಮುತುವರ್ಜಿ ವಹಿಸಿ ಅಮಲ್ದಾರ್ ಸಾಹೇಬರ ಸಹಾಯದಿಂದ ಪಂಚಾಯಿತಿ ಮಾಡಿಸಿ ಪಂಚಮರನ್ನೆಲ್ಲಾ ಸೇರಿಸಿ ಬಹಳ ಬುದ್ಧಿವಾದಗಳನ್ನು ಹೇಳಿ, ಹುಡುಗರು ಮುಂದಕ್ಕೆ ಕ್ರಮವಾಗಿ ಬರುವ ಹಾಗೆಯೂ, ಪಂಚಮರಿಂದ ಪಿರ್ಯಾದ್ ಬಾರದ್ದು ತೆಗೆದುಕೊಂಡದ್ದಲ್ಲದೆ ಆಗಿಂದಾಗ್ಗೆ ತನಿಖೆ ಮಾಡುವುದಕ್ಕೆ ಮೆಂಬರುಗಳನ್ನು ನೇಮಿಸಿದರು. ಆ ಲಾಗಾಯಿತು ಹುಡುಗರು ಕ್ರಮವಾಗಿ ಬರುತ್ತಾ ಇದ್ದಾರೆ. ಅದೇ ಪ್ರಕಾರ ಗರಲ್ಸ್ ಸ್ಕೂಲ್ ಮತ್ತು ತಿಗಳರ ಪೇಟೆ ಸ್ಕೂಲುಗಳು ಉತ್ತಮಸ್ಥಿತಿಗೆ ಬರುವ ಏರ್ಪಾಡುಗಳನ್ನು ಮಾಡಿದರು.—ಟವನ್ ಕನ್ಸರ್ವೆನ್ಸಿ ಕೆಲಸದ ವಿಷಯ ನಮ್ಮ ಅಮಲ್ದಾರ್ ಮ|| ಶ್ರೀನಿವಾಸಯ್ಯಂಗಾರ್ರು ಮ್ಯುನಿಸಿಪಲ್ ಮೆಂಬರುಗಳಾದ ಮ|| ಶೀನಪ್ಪನವರು, ಬಸಪ್ಪನವರು, ರುದ್ರಪ್ಪನವರು, ವೀರಭದ್ರಯ್ಯನವರು, ಮುನಿಸ್ವಾಮಪ್ಪನವರು, ಕೃಷ್ಣಪ್ಪನವರು ಎಂಬ ಇವರುಗಳ ಜೊತೆಗೆ ಪ್ರತಿ ಒಂದು ಮನೆಗೂ ಹೋಗಿ ಇವರುಗಳ ಅನುಮತಿಯಿಂದ ಮನೆಯ ಸ್ಥಿತಿಯನ್ನು ನೋಡಿ ಇಷ್ಟು ಅಂಕಣ, ಇಷ್ಟು ಬೆಲೆ ಬಾಳುವ ಮನೆಗೆ ಇಷ್ಟು ಕಂದಾಯ ಹಾಕಬಹುದೆಂದು ತೀರ್ಮಾನಮಾಡುವ ಕೆಲಸವನ್ನು ನಡಿಸುತ್ತಾ ಇದ್ದಾರೆ. ಇವರು ಸರ್ಕಾರದ ಕೆಲಸದಲ್ಲಿ ಬಹಳ ಮುತುವರ್ಜಿ ವಹಿಸುವವರು ಮಾತ್ರವಲ್ಲದೆ, ಜನಗಳ ಅಹವಾಲ್‌ಗಳನ್ನು ಬಹು ಸಾವಧಾನದಿಂದ ಕೇಳುವವರಾಗಿಯೂ, ಒಳ್ಳೇ ಗುಣವಂತರಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ ಇರುವುದರಿಂದ ಊರಿನವರು ಇವರ ವಿಷಯ ಬಹಳ ಸಂತೋಷಪಡುತ್ತಾರೆ. ... ಳಗಿರುವ ಉಪ್ಪುನೀರಿನ ಬಾವಿಗಳೆಲ್ಲಾ ಒಣಗುತ್ತಾ ಬಂದವು. ಕೆಲವು ... ಸಂತರ್ ... ಒಣಗಿಹೋದವು. ಈಗ ಕೆರೆಗಳಲ್ಲಿರುವ ನೀರು ಸುಮಾರು ಒಂದುವರೆ ತಿಂಗಳು ಇದ್ದರೆ ಹೆಚ್ಚು ಮತ್ತು ಸಿರುವಾಯ ... ಜನಗಳಿಗೂ ಕುಡಿಯುವುದಕ್ಕೆ ನೀರಿಲ್ಲದೆ ಬಹಳ ಕಷ್ಟವಾಗುತ್ತದೆ. ... ತಾಪ ಹೆಚ್ಚಾಗುತ್ತಿದೆ. ... ದಿನ ... ಬರುತ್ತಾ ಇದೆ. ... ಬನ ನೌಕರರ ಮತ್ತು ಬಡವರ ... ಈ ವರ್ಷ ಸಂದೇಹವಿಲ್ಲದೆ. ದಯಾಳುಗಳಾದ ಸರ್ಕಾರದವರು ಈ ಸಲ ಅರ್ಧ ರಿಮಿಷನ್ ಮಾಡುವಪಕ್ಷದಲ್ಲಿ ಬಡ ರೈತರಿಗೆ ಬಹಳ ... ಉಂಟಾಗುವುದು.—ಪೋಲೀಸ್ ಇನ್‌ಸ್ಪೆಕ್ಟರಾದ ಮ|| ... ಇಲ್ಲಿಗೆ ಬಂದು 7 ತಿಂಗಳಾಗುತ್ತದೆ. ಆ ಲಾಗಾಯಿತು ಇಲ್ಲಿ ಕಳವು, ದರೋಡೆ ಯಾವುದೂ ಇಲ್ಲದೆ ಜನಗಳು ನೆಮ್ಮದಿಯಾಗಿದ್ದಾರೆ. ಇವರು ತಮ್ಮ ಕೆಲಸದಲ್ಲಿ ಮನಸ್ಸು ಕೊಡುವಂಥವರಾಗಿಯೂ, ಪಂಡಿತವಾದಿಗಳಾಗಿಯೂ ಇರುವುದರಿಂದ ಊರಿನವರು ಇವರನ್ನು ಬಹಳವಾಗಿ ಹೊಗಳುತ್ತಾರೆ.

ಗ್ರಹಪತ್ರದ ನೋಟೀಸ್.

ಶ್ರೀರಂಗಪಟ್ಟಣದ ತಾಲ್ಲೂಕು ಪಿರೋಪೆಯಲ್ಲಿ ಮೃತಪಟ್ಟ ಶಿವಟ ಲಕ್ಷ್ಮಮ್ಮನ ಮಗಳು ವೆಂಕಟಮ್ಮನಿಗೆ ಸಂಬಂಧಪಟ್ಟ ಎರಡು ಮನೆಗಳು ಮತ್ತು ಗದ್ದೆ ಮುಂತಾದ ಸ್ಥಿರಸ್ವತ್ತನ್ನು ಕ್ರಯಕ್ಕೇ ಆಗಲಿ, ಗಿರ್ವಿ ಆಧಾರಕ್ಕೇ ಆಗಲಿ ಯಾರೂ ತೆಗೆದುಕೊಳ್ಳಕೂಡದು. ಅವುಗಳಲ್ಲಿ ನನ್ನ ಹಕ್ಕು ಮತ್ತು ತಕರಾರು ಇರುವುದರಿಂದ ಹಾಗೆ ತೆಗೆದುಕೊಳ್ಳತಕ್ಕವರು ನನಗೆ ಉಂಟಾಗತಕ್ಕ ನಷ್ಟಕ್ಕೆ ಗುರಿಯಾಗಬೇಕಾಗುತ್ತೆ. ತಿಳಿಯುವುದು.

[30-1] ಎಂ. ಸಯ್ಯದ್ ಮೊಹಿದೀನ್, ಸ್ಟೋರ್ ಕೀಪರ್, ಅಕ್ಕಿಹೆಬ್ಬಾಳ್.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-23] GIRLS' INDUSTRIAL SCHOOL, HASSAN.

ಜನವರಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1–14–0

ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-36]

ವಿಳಾಸ—ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಎರಡು ಕಾನೂನುಗಳ ತಿದ್ದುಪಾಟು.

(1) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದಬೇಕಾದ ಉದ್ದೇಶ ಮತ್ತು ಕಾರಣಗಳು.

ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 181 ಮತ್ತು 182 ನೆಯ ಪ್ರಕರಣಗಳಲ್ಲಿ ನಮೂದಾದ ಸ್ಥಿರ ಸ್ವತ್ತಿನ ಹರಾಜಿಗೆ ಸಂಬಂಧಪಟ್ಟ ನಿಯಮಗಳನ್ನು ತಿದ್ದುಪಡಿ ಮಾಡಬೇಕೆಂದು ಸಲಹೆ ಕೊಡಲಾಗಿದೆ. ಮೊದಲನೆಯ ಪ್ರಕರಣದ ಮೇರೆ ವಿಕ್ರಯದಾರನು ಹರಾಜಿನ ಪೂರಾ ಮೊಬಲಗನ್ನು ಒಂದು ಗೊತ್ತಾದ ವಾಯಿದೆಯೊಳಗೆ ಪಾವತಿ ಮಾಡದೇ ತಪ್ಪಿದಲ್ಲಿ ಹರಾಜು ಬಗ್ಗೆ ತಗಲುವ ಖರ್ಚನ್ನು ವಜಾ ಮಾಡಿ ಉಳಿದ ಕೇವಣಿ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವ ವಿಧಾನ ಒಂದೇ ಅಲ್ಲದೆ ಬೇರೆ ಯಾವುದೂ ಇಲ್ಲ. ಸಿವಿಲ್ ಪ್ರೊಸೀಜರ್ ಕೋಡಿನಲ್ಲಿ ಹಾಗಿಲ್ಲದೆ ಕೇವಣಿ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವುದು ಐಚ್ಛಿಕವಾಗಿರುತ್ತದೆ. ಮೊಬಲಗನ್ನು ಬಲಾತ್ಕಾರದಿಂದ ಸರ್ಕಾರಕ್ಕೆ ಸೇರಿಸಿಕೊಳ್ಳುವುದರಿಂದ ಕಷ್ಟವಾಗುತ್ತದೆಯಾಗಿ, ಪ್ರತಿ ಸಂದರ್ಭದಲ್ಲಿಯೂ ವಿದ್ಯಮಾನಗಳಿಗನುಸಾರವಾಗಿ ಕೇವಣಿಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವ ಅಥವಾ ಸೇರಿಸಿಕೊಳ್ಳದಿರುವ ವಿವೇಚನಾಧಿಕಾರವನ್ನು ಡೆಪ್ಯುಟಿ ಕಮೀಷನರಿಗೆ ಕೊಡಬೇಕೆಂದು ಸಲಹೆ ಮಾಡಲಾಗಿದೆ. ಮತ್ತು ದುಸರ ಹರಾಜಿನಲ್ಲಿ ಉತ್ಪತ್ತಿಯು ಕಡಮೆಯಾದಲ್ಲಿ ಅದನ್ನು ಸರಿಪಡಿಸುವ ಜವಾಬ್ದಾರಿಯು 179 ನೆಯ ಪ್ರಕರಣದ ಮೇರೆಗೆ ಕೇವಣಿ ಮೊಬಲಗು ಕೊಡದೆ ಇರುವ ಸಂದರ್ಭಕ್ಕೂ, 181 ನೆಯ ಪ್ರಕರಣದ ಮೇರೆಗೆ ಪೂರಾ ಹರಾಜು ಮೊಬಲಗನ್ನು ಕ್ಲುಪ್ತವಾದ ವಾಯಿದೆಯೊಳಗೆ ಕೊಡದೆ ತಪ್ಪುವ ಸಂದರ್ಭಕ್ಕೂ, ಈ ಉಭಯ ಸಂದರ್ಭಗಳಿಗೂ ಅನ್ವಯಿಸುತ್ತದೆಯೇ ಎಂಬ ಅಂಶವು ಕೋಡಿನ 182 ನೆಯ ಪ್ರಕರಣದಿಂದ ಸ್ಪಷ್ಟವಾಗಿ ಸೂಚಿತವಾಗುವುದಿಲ್ಲ. ಸಿವಿಲ್ ಪ್ರೊಸೀಜರ್ ಕೋಡಿನ ಮೇರೆಗಾದರೋ ಹರಾಜು ಮೊಬಲಗಿನಲ್ಲಿ ಕೆಳಗಿನ 25 ರಷ್ಟು ಕೇವಣಿ ಮೊಬಲಗನ್ನು ಕೊಡದೇ ತಪ್ಪುವ ವಿಕ್ರಯದಾರರಿಗೂ ಕೇವಣಿ ಮೊಬಲಗನ್ನು ಕಟ್ಟಿ ಬಾಕಿ ಮೊಬಲಗನ್ನು ಕೊಡದೇ ತಪ್ಪುವ ವಿಕ್ರಯದಾರರಿಗೂ ವ್ಯತ್ಯಾಸವನ್ನು ಕಾಣಿಸಿರುವುದಿಲ್ಲ. ರೆವಿನ್ಯೂ ಹರಾಜುಗಳಲ್ಲಿಯೂ ಕೂಡ ಅಂಥ ಉದ್ದೇಶವನ್ನೇ ಸ್ಪಷ್ಟವಾಗಿ ವಿಧಿಸುವುದು ಆವಶ್ಯಕವಾಗಿರುತ್ತದೆ ಎಂದು ಭಾವಿಸಲಾಗಿದೆ. ಈ ರೀತಿಯಾಗಿ ಅದಕ್ಕೆ ಸಂಬಂಧಪಟ್ಟ ನಿಯಮಗಳು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿ ನಮೂದಾದ ಸಿವಿಲ್ ಕೋರ್ಟು ಹರಾಜುಗಳ ವಿಷಯಕವಾದ ನಿಯಮಗಳಿಗೆ ಅನುಸಾರವಾಗಿರುವಂತೆ ಮಾಡಲಾಗುವುದು.—ಅನಂತರದ ತಿದ್ದುಪಾಟು ಇನಾಂ ಗ್ರಾಮಗಳಲ್ಲಿ ಸರ್ವೆ ಸೆಟಲ್‌ಮೆಂಟನ್ನು ಏರ್ಪಡಿಸುವ ವಿಷಯಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಇನಾಂದಾರನು ತನ್ನ ಇನಾಂ ಗ್ರಾಮದಲ್ಲಿ ಸರ್ವೆ ಸೆಟಲ್‌ಮೆಂಟನ್ನು ಮಾಡಿಸಿ ಕೊಡಬೇಕೆಂದು ಕೇಳಿಕೊಂಡಾಗ ಹಾಗೆ ನಡಿಸಲು 236 ನೆಯ ಪ್ರಕರಣದ 3 ನೆಯ ಪ್ಯಾರಾದ ಮೇರೆಗೆ ಸರ್ಕಾರಕ್ಕೆ ಅಧಿಕಾರವಿರುತ್ತದೆ. ಗ್ರಾಮಕ್ಕೆ ಒಬ್ಬನಿಗಿಂತ ಹೆಚ್ಚು ಜನ ಇನಾಂದಾರರಿದ್ದಲ್ಲಿ ಸದರಿ ಗ್ರಾಮದಲ್ಲಿ ಸರ್ವೆ ಸೆಟಲ್‌ಮೆಂಟನ್ನು ಏರ್ಪಡಿಸಲು ಬೇಕಾದ ಪ್ರಯತ್ನಗಳನ್ನು ನಡಿಸುವುದಕ್ಕೆ ಮುಂಚಿತವಾಗಿ ಅವರೆಲ್ಲರ ಸಮ್ಮತಿಯನ್ನು ಪಡೆಯತಕ್ಕದ್ದು ಆವಶ್ಯಕವಾಗಿರುತ್ತದೆ. ಅಂಥಾ ಗ್ರಾಮಗಳ ಹಿಡುವಳೀದಾರರ ಪೈಕಿ ನೆ 1⁄2 ಜನಗಳು ಒಟ್ಟಾಗಿ ಕೇಳಿಕೊಂಡಲ್ಲಿ ಇನಾಂ ಗ್ರಾಮಗಳಲ್ಲಿ ಸರ್ವೆ ಸೆಟಲ್‌ಮೆಂಟನ್ನು ಏರ್ಪಡಿಸಲು ಸರ್ಕಾರದವರಿಗೆ ಸಾಧ್ಯವಾಗುವ ರೀತಿಯಲ್ಲಿ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸರ್ಕಾರಕ್ಕೆ ಅನೇಕ ವೇಳೆ ವಿಜ್ಞಾಪನೆಗಳನ್ನು ಮಾಡಲಾಗಿದೆ. ಆದುದರಿಂದ ಇನಾಂ ಗ್ರಾಮದ ಭಾಗಗಳ ಪೈಕಿ ಒಟ್ಟಿನ ಮೇಲೆ ಮುಕ್ಕಾಲು ಪಾಲು ಭಾಗಕ್ಕೆ ಕಡಮೆ ಇಲ್ಲದಷ್ಟು ಭಾಗದ ಭಾಗಸ್ಥರು ಸೇರಿ ಅಪ್ಲಿಕೇಷನ್ ಮಾಡಿಕೊಂಡಲ್ಲಿ ಆ ರೀತಿ ನಡಿಸಲು ಅಧಿಕಾರವನ್ನು ಪಡೆಯುವುದಕ್ಕಾಗಿ 236 ನೆಯ ಪ್ರಕರಣವನ್ನು ತಿದ್ದುಪಾಟು ಮಾಡಬೇಕೆಂದು ಸೂಚಿಸಲಾಗಿದೆ.

---

(2) ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದಬೇಕಾದ ಉದ್ದೇಶ ಮತ್ತು ಕಾರಣಗಳು.

ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 16 ನೆಯ ಪ್ರಕರಣದ ಪ್ರಕಾರ ಮುನ್‌ಸಿಫರಿಗೆ ಸರ್ಕಾರದವರು 50 ರೂಪಾಯಿ ಪರಿಮಿತಿಯ ವರೆಗೆ ಸ್ಮಾಲ್ ಕಾಜ್ ಅಧಿಕಾರವನ್ನು ಕೊಡಬಹುದಾಗಿದೆ.—ಕೋಲಾರದ ಚಿನ್ನದ ಗಣಿಯಲ್ಲಿರುವ ಮುನ್‌ಸಿಫ್ ಕೋರ್ಟಿನ ವಿಷಯದಲ್ಲಿ ಸ್ಮಾಲ್ ಕಾಜ್ ಅಧಿಕಾರವನ್ನು 100 ರೂಪಾಯಿ ಪರಿಮಿತಿಗೆ ಹೆಚ್ಚಿಸಿದರೆ ಕಕ್ಷಿಗಾರರಿಗೆ ತೊಂದರೆ ಇಲ್ಲದ ಹಾಗೆ ಸದರಿ ಕೋರ್ಟಿನ ಕೆಲಸವು ಬಹಳ ಮಟ್ಟಿಗೆ ಕಡಮೆಯಾಗುವುದರಿಂದ ಆ ರೀತಿ ಮಾಡುವುದು ಆವಶ್ಯಕವೆಂದು ಚೀಫ್ ಕೋರ್ಟಿನವರು ಅಭಿಪ್ರಾಯ ಪಟ್ಟಿರುತ್ತಾರೆ.—ಮದ್ರಾಸು ಆಧಿಪತ್ಯದಲ್ಲಿ ಸಾಮಾನ್ಯವಾಗಿ ಮುನ್‌ಸಿಫ್ ಕೋರ್ಟಿಗೆ ಸ್ಮಾಲ್ ಕಾಜ್ ಅಧಿಕಾರವು 200 ರೂಪಾಯಿ ವರೆಗೆ ಇರುತ್ತದೆ. ಆದರೆ ಸದರಿ ಪರಿಮಿತಿಯನ್ನು ಅಷ್ಟರ ವರೆಗೆ ಹೆಚ್ಚಿಸುವ ಅಭಿಪ್ರಾಯವು ಈ ಸಂಸ್ಥಾನದ ಜನರಿಗೆ ಇಲ್ಲವೆಂಬ ಅಂಶವನ್ನು ಆಲೋಚನೆಮಾಡಿ ಮುನ್‌ಸಿಫರ ಅಧಿಕಾರವನ್ನು 100 ರೂಪಾಯಿಗೆ ಹೆಚ್ಚಿಸಬೇಕೆಂದು ಸಲಹೆ ಕೊಟ್ಟಿರುತ್ತದೆ.—ಇದೂ ಅಲ್ಲದೆ ಸಿವಿಲ್ ಕೋರ್ಟುಗಳಲ್ಲಿ ತಾಬೇದಾರಿ ನೌಕರರಿಗೆ ಮೊಕದ್ದಮೆಗಳು 1883 ನೇ ಇಸವಿಯ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 21 ನೆಯ ಪ್ರಕರಣದ ಪ್ರಕಾರ ಆಗಬೇಕಾಗಿದೆ. ಇದರ ಪ್ರಕಾರ ಡಿಸ್ಟ್ರಿಕ್ಟ್ ಜಡ್ಜಿಗೆ ಅಧೀನವಾಗಿರುವ ಯಾವುದಾದರೂ ಕೆಳ ಕೋರ್ಟಿನ ತಾಬೇದಾರಿ ನೌಕರರಿಗಳ ನೇಮಕ ವಗೈರೆಗಳಿಗೆ ಸಂಬಂಧಪಟ್ಟ ಪ್ರತಿ ಒಂದು ಹುಕುಂ; ಡಿಸ್ಟ್ರಿಕ್ಟ್ ಜಡ್ಜಿಯವರ ಒಪ್ಪಿಗೆಗೆ ಒಳಪಟ್ಟು ಸದರಿ ಕೋರ್ಟಿನ ಜಡ್ಜಿಯವರಿಂದ ಮಾಡಲ್ಪಡಬೇಕಾಗಿರುತ್ತದೆ. ಆದರೆ ಕೆಳ ಕೋರ್ಟಿನ ಜಡ್ಜಿಯವರು ನೇಮಕ ವಗೈರೆಗಳಿಗೆ ಹುಕುಂ ಮಾಡಿದಾಗ ಡಿಸ್ಟ್ರಿಕ್ಟ್ ಜಡ್ಜಿಯವರು ಅವನ್ನು ಅಂಗೀಕರಿಸದೆಹೋಗುವ ಸಂದರ್ಭದಲ್ಲಿ ಏನು ಮಾಡಬೇಕೆಂಬುದನ್ನು ರೆಗ್ಯುಲೇಷನಿನಲ್ಲಿ ಸ್ಪಷ್ಟವಾಗಿ ವಿಧಿಸಿರುವುದಿಲ್ಲ. ಸಾಮಾನ್ಯವಾಗಿ ಎಲ್ಲಾ ಸಿವಿಲ್ ಕೋರ್ಟುಗಳ ತಾಬೇದಾರಿ ನೌಕರರ ನೇಮಕಗಳಿಗೆ ಅನ್ವಯಿಸತಕ್ಕ ಬಗ್ಗೆ ನಿಬಂಧನೆಗಳನ್ನು ಜಾರಿಮಾಡುವುದು ಆವಶ್ಯಕವೆಂದು ಸರ್ಕಾರದವರು ಭಾವಿಸುತ್ತಾರೆ. ಆದುದರಿಂದ ರೆಗ್ಯುಲೇಷನಿನಲ್ಲಿ ಸರ್ವಸಾಮಾನ್ಯವಾದ ನಿಯಮಗಳುಳ್ಳ ಪ್ರಕರಣವನ್ನು ಸೇರಿಸಿ ನಿಬಂಧನೆಗಳಲ್ಲಿ ವಿವರವಾದ ನಿಯಮಗಳನ್ನು ಮಾಡಬೇಕೆಂದು ಸಲಹೆ ಕೊಟ್ಟಿರುತ್ತದೆ. ಇದಕ್ಕಾಗಿ ಸೇರಿಸಬೇಕಾಗಿರುವ ಹೊಸ ಪ್ರಕರಣವೇನೆಂದರೆ.—"21. ಈ ಬಗ್ಗೆ ಮೈಸೂರು ಸರ್ಕಾರದವರು ವಿಧಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು ಪ್ರತಿ ಕೋರ್ಟಿನ ಜಡ್ಜಿಯವರು ತಮ್ಮ ಕೋರ್ಟಿನ ತಾಬೇದಾರಿ ನೌಕರರನ್ನು ನೇಮಿಸಿಕೊಳ್ಳತಕ್ಕದ್ದು; ಮತ್ತು ಅವರು ಸದರಿ ನೌಕರರಿಗೆ ಜುಲ್ಮಾನೆ ಹಾಕಬಹುದು, ಅವರನ್ನು ಸಸ್ಪೆಂಡ್ ಮಾಡಬಹುದು, ಅಥವಾ ಕೆಲಸದಿಂದ ವಜಾ ಮಾಡಬಹುದು."

ರಾಮ್‌ಭಾಣ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆ ಗೊತ್ತಾಗುವುದು!

ನಮ್ಮ ರಾಮ್‌ಭಾಣ್ ಎಂಬ ಔಷಧವು ಎಲ್ಲಾ ರೋಗಗಳನ್ನೂ ಗುಣ ಮಾಡುವುದು ಖಂಡಿತ. ಲೇಪನಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾಣನನ್ನು ವಿಳ್ಯೇದೆಲೆ ಸವರಿಯೋ, ಬಿಸಿನೀರಿಗೆ ಹಾಕಿಯೋ ಬೆಳಿಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ ಭೇದಿ, ಪೂಜಂತೆ ಕೆಮ್ಮು, ಜ್ವರ, ಹೊಟ್ಟೆನೋವು ಮೊದಲಾದ ಎಲ್ಲ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ನಾಯಿನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾಣನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ [285-6]

ನಮ್ಮ ವಿಳಾಸ—ಕೇಶವಜೀ ದೇವಚಂದ್,
ರಾಮ್‌ಭಾಣ್ ಏಜನ್ಸಿ, ಸಾವ್ಕಾರ್‌ಪೇಟೆ, ಮದರಾಸ್.
ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ, ದೊಡ್ಡಪೇಟೆ, ಮೈಸೂರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ?" ಎಂದು ನನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಖಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-23]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜಲ್ಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಚೋಟಾದಲ್ಲಾಳಿ, ಮೋಕ್ಷಾಮುಮ್ಮು, ಗಂಟುಕಟ್ಟುವಕೂ, ಸ್ಟೇಷನ್ನಿಗೆ ಕಳುಹಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವುದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಕೆಳಗಡ 3 ರೂಪಾಯಿ ಬಾಗಾಯ್ತು 4⅓ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-43]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಪರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಬೇಳಿಗೆ ಸರಿಯಾದ ಮದ್ದು.

ಬೇಳಿನ ಹೊಡತಕ್ಕೆ "ಸ್ಕಾರ್ಪಿಯಾನಿಯೊ" ವಿನಹಾ ಸರದಾಯಕವಾದ ಮತ್ತು ಸೇವನೆಗೆ ಅರ್ಹವಾದ ಔಷಧವು ಮತ್ತೊಂದಿಲ್ಲ. ಪುನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡೆದಿರುತ್ತೆ.

"ನಮ್ಮ ಚೇಳಿನ ಮದ್ದಿನಿಂದ ತಪ್ಪದೆ ಗುಣ ಬಂದಿದೆ" ಯೆಂದು ಶ್ರೀಮಾನ್ ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ. ಬಾಟ್ಲಿ ಒಂದಕ್ಕೆ ಕ್ರಯ ರೂ. ೦–೮–೦. ನಾಲ್ಕು ಬಾಟ್ಲಿವರಿಗೆ ಪೋಸ್ಟ್ ಹಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೂಡ್ಲೆ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

[206-8] ವಿಳಾಸ.—ಸ್ಕಾರ್ಪಿಯಾನಿಯೊ ಡಿಪೊ, ಹರಿಹರ.

ಅರ್ಧ ಕ್ರಯ ಮಾತ್ರ! ಈ ತಿಂಗಳು ಮಾತ್ರ

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ

ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!



ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266–11] ಪಿ. ಓ. ಬಾಕ್ಸ್ 330, ಬೊಂಬಾಯಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ಶಾಂಭೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರಿ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಹಲ್ಲುಗಳ ಕಳಕ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 260 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಖರ್ಚು ಪ್ರತ್ಯೇಕ. [231-15]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0

ಕೂದಲೆಣ್ಣೆಗೆ ಹಾಕುವ ಬೀಳೀ ಕೆರೋಸೀನ್ ಎಣ್ಣೆ ಕೊಟ್ಟಾರು,

"ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೀಳೀ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ. 3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ದಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚುನ್ನೀಲಾಲ್ ಕಂಪನಿ,

[296-7] 177, ಮೈನಾಬಜಾರ್ ರೋಡ್, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ೧ಕ್ಕೆ 2-6-0.
ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ೧ಂಗಳೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಪ್ಪವಾಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—
ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.
[99-56]

ಓರಿಯಂಟಿಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂತಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ॥ ಎಂ. ಎಸ್. ರಂಗರಾಜಯ್ಯ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ ಬ್ರಾಂಚ್ ಸೆಕ್ರಟರಿ, ಮದರಾಸ್.
[231-10]

S U. N. & Co.,

BENARES CITY, U. P.

ಸೊಗಸಾದ ಸರಕುಗಳು!! ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು ದುಪ್ಪಟ್ಟ, ಮಗುಟ, ಜಗನ್ನಾಥ ಚಾಪೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ I ನ್ನು ಇನಾಮಾಗಿ ಕಳುಹಿಸಲಾದೀತು. [69-47]
ಎಸ್. ಯು. ಎನ್. ಮತ್ತು ಕಂಪನಿ, ಕಾಶಿ.

ಹರಿವಾತದಿಂದ ಹಿಂಸೆ ಪಡಬೇಡಿ.

ನೀವು ಹಿಂಸೆಪಡಬೇಕಾದದ್ದು ಇಲ್ಲವೇ ಇಲ್ಲ. ಹಿಂದುವೇಳೆ ಅನೇಕ ಔಷಧಗಳನ್ನು ಉಪಯೋಗಿಸಿದ್ದೀರಿ, ಆದರೂ ಶಾಶ್ವತಸೋವನ್ನಾದರೂ ಗುಣಪಡಿಸುವ ಔಷಧಿಯುಂಟು.

ಸೆರ್ಬಿಯ ಸಂಸ್ಥಾನದ ಸ್ಟೇಟ್ ಹೀಲಿಯಸೀನ ಮಿ॥ ಸಾಮುವೆಲ್ ಹಾಲ್ಟ್ ಹೇಳುವದೇನಂದರೆ:—ನಾನು ಹರಿವಾತದಿಂದ ಅಧಿಕ ಕಷ್ಟಪಟ್ಟೆನು. ನನ್ನ ಗೋಳನ್ನು ಯಾರೂ ನೋಡಲಾಗದಿತ್ತು. ಕಣ್ಣು ತೆರೆದು ನೋಡಲಾರದಷ್ಟು ಕಷ್ಟವಾಗಿತ್ತು. ನನ್ನ ಹಣೆ ತಲೆಯಮೇಲೆಯೂ ತಲೆಯ ಪಕ್ಕಗಳಲ್ಲಿಯೂ ಸ್ವಲ್ಪ ತೈಲವನ್ನು ತಿಕ್ಕಿದ್ದರಮೇಲೆ 7 ನಿಮಿಷಗಳಲ್ಲಿ ನೋವಿನಿಂದ ಬಿಡುಗಡೆ ಹೊಂದಿದೆನು. ಮೂರು ವಾರಗಳ ತರುವಾಯ ಆ ನೋವು ತಿರಿಗಿ ಕಾಣಿಸಲೇ ಇಲ್ಲ. ಟೈಗರ್ಸ್ ಓರಿಯಂಟಲ್ ಬಾಂ ಎಂಬದನ್ನು ಅರ್ಧ ಸೀಸೆ ಉಪಯೋಗಿಸಿ, ಪೂರ್ಣ ಕ್ಷೇಮ ಹೊಂದಿದೆನು.

ಸೀಸೆ 1ಕ್ಕೆ 1 ರೂ. ಮೇರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

101-41

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;

2. ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-27] ಬೊಂಬಾಯಿ :

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಕುಂತಳಾನಂದ ತೈಲವು.

213-21

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರಿತವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 3 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

22—1—1915 ರಿಂದ 29—1—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	14	10	0	0
ಮೈಸೂರು ,,	7	4	0	0
ಬೆಂಗಳೂರು ಡಿಸ್ಟ್ರಿಕ್ಟು	22	11	0	0
ಮೈಸೂರು ,,	40	31	0	0
ಕೋಲಾರ್ ,,	14	9	0	0
ಕೋಲಾರ್ ಚಿನ್ನದ ಗಣಿಗಳು	12	10	0	0
ತುಂಕೂರು ಡಿಸ್ಟ್ರಿಕ್ಟು	5	3	0	0
ಹಾಸನ	6	6	0	0
ಚಿತ್ರದುರ್ಗ ,,	11	9	0	0
ಕಡೂರ್ ,,	6	0	0	0
ಶಿವಮೊಗ್ಗ ,,	15	6	1	1
ಜುಮ್ಲಾ	161	99	1	1

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರದ ಉತ್ತರಾಯಣ ಶಿಶಿರಋತು ಮಾಘ ಬಹುಳ ತ್ರಯೋದಶಿ ಶುಕ್ರವಾರದಿಂದ ಫಾಲ್ಗುಣ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಫೆಬ್ರವರಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕುಂಭ ಮಾಸ ತೇದಿ
12	ಶುಕ್ರ *	ತ್ರಯೋದಶಿ	12-29	ಉತ್ತರಾಷಾಢ	29.58	1
13	ಶನಿ ‡	ಚತುರ್ದಶಿ	9-30	ಶ್ರವಣ	28-58	2
14	ಭಾನು	ಅಮಾವಾಸ್ಯೆ	7-36	ಧನಿಷ್ಠ	28-58	3
15	ಸೋಮ †	ಪಾಡ್ಯಮಿ	6-52	ಶತಭಿಷ	30-15	4
16	ಮಂಗಳ	ಬಿದಿಗೆ	7-26	ಪೂರ್ವಭಾದ್ರ	32-44	5
17	ಬುಧ §	ತದಿಗೆ	9-17	ಉತ್ತರಭಾದ್ರ	36-30	6
18	ಗುರು ;;	ಚೌತಿ	12-20	ರೇವತಿ	41-20	7

* ಮಹಾಶಿವರಾತ್ರಿ, ಮಳೆ ನಕ್ಷತ್ರ—ಧನಿಷ್ಠ 3 ನೇ ಪಾದ. ‡ ಸರ್ವತ್ರ ಅಮಾವಾಸ್ಯೆ. † ಚಂದ್ರೋದಯ, ರಬ್ಬಿಸಾನಿ ಚಂದ್ 1, ಮಳೆ ನಕ್ಷತ್ರ—ಧನಿಷ್ಠ 4 ನೇ ಪಾದ. § ಶ್ರೀರಂಗದಲ್ಲಿ ತೆಪ್ಪೋತ್ಸವಾರಂಭ, ದಗ್ಧಯೋಗ. ;; ಮಳೆ ನಕ್ಷತ್ರ—ಶತಭಿಷ 1 ನೇ ಪಾದ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177, ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.
[25-8]

Printed and Published by the Rev. H. Gulliford, Proprietor and Manager, Wesleyan Mission Press, Mysore. 11/2/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸರ್ ೧೯೧೬ ನೇ ಇಸವಿ ಫೆಬ್ರವರಿ ತಾರೀಖು ೧೭ ನೇ ಗುರುವಾರ. ಸಂಚಿಕೆ ೩೭

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯುಳ್ಳ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ?

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ನೀಗಿ ಕೊಡು. ತ್ತದೆಯೋ, ಹಾಗೆಯೇ ಮಾನಸಿಕ ಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯವೂ ಸಹಕಾರಿಯೂ ಆಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂದುಗಳು ಬಸವನಗಲ್ಲಿ, ಬೆಳಗಾವಿ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0. ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಜನರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುವರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟೊ-ದಿಲ್ ಬಹಾರ್!

ಈ ಸುಗಂಧದ ದ್ರವವು ಮಧುರ-ಕೋಮಲ-ಬಹುಕಾಲ ಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲ. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಚಿತ್ತವು ಸ್ವರ್ಗೀಯವಾದದೊಂದು ಪ್ರಸನ್ನತೆಯು ಅನುಭವಕ್ಕೆ ಬರುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟೊ-ದಿಲ್ ಬಹಾರಿನ ಗಂಧವು ಅಸಾಧಾರಣವಾಗಿ ನಿಮ್ಮ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುವದು. ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-4]

ಸಣ್ಣ ಸೀಸೆಯ ಬೆಲೆ ರೂ 0-8-0. ಒಂದು ಮೀಡಿಯಮ್ (ಮಾಧ್ಯಮ) ಸೀಸೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟೊ-ದಿಲ್ ಬಹಾರ್ ಪರಿಮಳದ ಪೌಡರ್ ಟಿನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಲನ್ ಮರ್ಟ್, ಮಂಗಳೂರು

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ 1|8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಭಕ್ತವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ [63-52] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಅತ್ಯುತ್ತಮವಾದ ಮೈಸೂರು ಪಂಚಾಂಗವು.

ಇದು ಸಿದ್ಧಾಂತ ಮತ್ತು ವಾಕ್ಯ ಪಕ್ಷಾನುಸಾರಿಗಳಿಬ್ಬರಿಗೂ ಅನುಕೂಲಿಸುವಂತೆ ಅನೇಕ ವಿಷಯಗಳಿಂದೊಡಗೂಡಿ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಕ್ರಯ 1 ಆಣೆ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟ್ ಕೊಡುತ್ತೆ. [29-2] ವಿಳಾಸ ಮಂಚಿನ್ ಸಂಪತ್ಕುಮಾರ ಜೋಯಿಸ್, ಜ್ಯೋತಿಷ ವಿದ್ವಾನ್, ಮೈಸೂರು.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳು ಇಟ್ಟರೂ ಹುಳಿವಾಸನೆಬಾಗದು. ವಿ. ಪಿ. ಮೂಲಕ ತರಿಸಬಹುದು. ಕ್ರಯ ಸೇರಿಗೆ 1 ರೂಪಾಯಿ. ವಿ.ಪಿ. ಛಾರ್ಜು ಬೇರೆ. ವಿಳಾಸ.—ಎ. ಎನ್. ನಂಜುಂಡಯ್ಯ. [14-6] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.

ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ

ನಮ್ಮ ವಿಳಾಸ— ಪಿ. ನರಸಿಂಗರಾವ್,

[300-8] ಎಡಿಟರ್, ಲಾ ಗೆಜೆಟ್, ಬೆಂಗಳೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯು (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೀಗಲ್ ಬೋಧಿನಿ ರೂ 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹೊಸ ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0 ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸು 12 ಆಣೆ. ಸ್ಟಾಂಪು ರೂಲ್ಸು 8 ಆಣೆ.

[143—32] ವಿಳಾಸ:— ಪಿ. ನರಸಿಂಗರಾವ್,

ಎಡಿಟರ್, ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು!!!

ಯುದ್ಧಕ್ಕೆ ಸೇರಿದ ಪ್ರಧಾನ ದೇಶಗಳ ಪಟಗಳೂ, ವಿವಿಧ ಜನಗಳ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಚಿಟ್ಟಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರುವ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವು. ಇದರಲ್ಲಿ ಸಂದೇಹವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಅಚ್ಚುಹಾಕಿರುವ ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದವರ ಸುಂದರವಾದ ಪಟಗಳು. ಕ್ರಯ 2 ಆಣೆ; ವಿ. ಪಿ. ಯಲ್ಲಿ 4 ಆಣೆ

[8-6] ನಮ್ಮ ವಿಳಾಸ.—ದಿ ಜನರಲ್ ಏಜೆನ್ಸಿ, ಮೈಸೂರು.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ. 2. ಭೂಪಟ ಬರೆಯುವದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ|| ನೋಟ್ಸು.

ಸ್ವಲ್ಪ ದಿನಗಳಲ್ಲೇ ಸಿದ್ಧವಾಗುವುದು.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಬೀಜ್ಮತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ — ಎನ್. ಆರ್. ವೆಂಕಟಸುಬ್ಬಾಚಾರ್ಯ,

[31-1] ಸುಬೋಧ ಗ್ರಂಥಾಲಯ, ಮೈಸೂರು.

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ತೊಲೆಗಳು 2 ಸಲೀ ಅಡಿ ಉದ್ದವಾಗಿಯೂ 30-40 ಸಲೀ ಅಡಿಯ ವರೆಗೂ ಇರುತ್ತವೆ. ಇಷ್ಟಪಡುವವರು ತಪ್ಸೀಲನ್ನು ಹುಣಸೂರಿನಲ್ಲಿರುವ ಮೆ|| ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೇ ಗಾಡಿ ತಯಾರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ [232-16]

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ 25, 3 ನೇ ದರ್ಜೆ ರೂ. 10.

[28-2] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸೌಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವಿ	0-8-0	ಸಂತಾಪಕ	0-4-0

[275-10] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕಾರ್ಟುಲಾಗಿಗೂ ಬೆಲೆಯಿಲ್ಲ [160-31]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಶ್ವತ್ಥಾಮ್ನ 1½ ಆ; ಅಪರಿಮಿತ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇಮ 1 ಆ; ಸನ್ಯಾಸಿನಿ 1½ ಆ; ಸಾಹಸಿಕ 2½ ಆ; ಸುಶೀಲೆ 6 ಆ; ಸಭಾ ಭಾಗ 1 . 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಪ್ರಶಸ್ತವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ 2-4-0. ಜಾಗ್ರತೆ ನೋಡಿ. [339-8]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

೧೯೧೬ ನೆಯ ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ



ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ	...	ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು		,, 6

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ಒಂದಕ್ಕೆ 2 ಆಣೆ ಕಮಿಷನ್ ದೊರೆಯುವುದು. [220-17]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀ ತಾಂಬೂಲ.

ಅನೇಕರು ತಾಂಬೂಲದ ಮಾತ್ರೆಗಳನ್ನು ತಯಾರಿಸಿರುವರು. ಆದರೆ ಇದನ್ನು ಸ್ವಲ್ಪ ಪರೀಕ್ಷಿಸಿನೋಡಿ. ತಾಂಬೂಲದೊಂದಿಗೆ 1-2 ಮಾತ್ರೆಗಳನ್ನು ಸೇವಿಸುತ್ತ

ಬಂದಲ್ಲಿ ಮುಖದ ಬಾಯಿನ ದುರ್ಗಂಧವನ್ನು ಹೋಗಲಾಡಿಸಿ ತೇಜಸ್ಸನ್ನುಂಟುಮಾಡುತ್ತದೆ. ಮರೆನಾಡಿನಂಥ ಕೆಟ್ಟನೀರಿನ ವಾತ, ಶೀತಜ್ವರ ಸಂಬಂಧ ದೋಷಗಳನ್ನು ನಾಶಮಾಡುವುದು. ವಿದ್ಯಾರ್ಥಿಗಳು ಪ್ರಾತಃಕಾಲ 1-2 ಬರೀ ಮಾತ್ರೆಗಳನ್ನು ಸೇವಿಸುತ್ತ ಬಂದಲ್ಲಿ ಆಲಸ್ಯವಿಲ್ಲದಂತೆ ಸ್ಮರಣಶಕ್ತಿಯುಂಟಾಗಿ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿಗಳು ಹೆಚ್ಚುತ್ತವೆ. ಭೇಧಿ, ಜ್ವರ, ಕೆಮ್ಮು, ನೆಗಡಿ ಮುಂತಾದ್ದಕ್ಕೆ 1-2 ಮಾತ್ರೆಗಳು ಕೊಟ್ಟರೆ ಕೂಡ್ಲೆ ಗುಣಕಾಣುವುದಲ್ಲದೆ ಪ್ಲೇಗ್ ವ್ಯಾಧಿಯನ್ನು ಕೂಡ ಹತ್ತರ ಬರಗೊಡಿಸುವುದಿಲ್ಲ. ಸಾವಿರಾರು ಜನಗಳಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯಕ ಇದನ್ನು ಇಡಬೇಕು. ಬಾಟ್ಲಿ 1 ಕ್ಕೆ 4 ಆಣೆ. ಆರಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಬೇರೆ.

[235-15] ಎಂ. ಗೋವಿಂದಶೆಟ್ಟಿ,
ಆಯುರ್ವೇದಿಕ್ ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills.

BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ, ಕ್ರಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ಕರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಟೋಪಾದಳ್ಳಾಳಿ, ಮೊಕ್ಕಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕಾಂ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವುದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-44]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಧ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು! ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಶುಕ್ತಿಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180-20] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ರಾಸ್‌ಕೋಫ್ ಪಿಸ್ಟನ್ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒಂಟಿ ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ವಿಕ್ರಯವಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಶೇಡಿ ವಾಚ್ ಕೀಲೆಸ್ ಲಿವರ್ ಚಕ್ಕ ಸ್ಕೈಡು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 6-0-0. ಇದನ್ನು ಫೆಬ್ರವರಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಇಂಡಿಯನ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[109-98] ಸಾಹುಕಾರ್ ಪೇಟೆ, ಮದರಾಸು.

ವಿಕಟಪ್ರತಾಪವೆಂಬ ಮಾಸಪತ್ರಿಕೆ.

ನಗಬೇಕೆನ್ನುವವರೆಲ್ಲರೂ ಹಾಸ್ಯರಸದಿಂದ ಕೂಡಿದ ನಮ್ಮ ವಿಕಟಪ್ರತಾಪವನ್ನು ತರಿಸಿ ಓದಿರಿ! ಮುಂಗಡ ವಾರ್ಷಿಕ ಚಂದಾ ವಿ.ಪಿ. ಮೂಲಕ ಒಂದೇ ರೂಪಾಯಿ!! ನವೀನ ಚಂದಾದಾರರಿಗೆ ಕ್ಯಾಲೆಂಡರ್ ಬಹುಮಾನ!!!

[33-1] ನಮ್ಮ ವಿಳಾಸ—ವಿ. ಪ್ರತಾಪ ಆಫೀಸ್, ಕೋಲಾರ್.

ಅರ್ಧ ಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀ ಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!



ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-12] ಪಿ. ಒ. ಬಾಕ್ಸ್ 330, ಬೊಂಬಾಯಿ.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲಾ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.



ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಹರಿಸುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ಸಿರಿಸಂಪಿಗೆ, ಪಚ್ಚೆ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಎಷ್ಟು ದಿವಸಗಳ ವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಮುದುಕರು, ಮಕ್ಕಳು ಪ್ರತಿಯೊಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೇದಿಗೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಾಟ್ಲಿ 1, ವಾಸನೆಯುಳ್ಳ ಸೋಪು 1, ತಾಂಬೂಲವಸ್ತ್ರ 22, ಕೆಂಪು ಗಿಣಿಗಳು 6, ಕಾರ್ಪೊರೇಷನ್ ಬ್ರೂಚ್ 1, ಜವಾಜು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಚ್. ಎಮ್. ಸ್ವಾಮಿ ಅಂಡ್ ಕಂಪೆನಿ,
[250-10] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 3 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177,
[25-3] ಬೀಚಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
Bangalore City.

[31-33]

"ಪ್ರಯೋಜನಹೊಂದಿರಿ" ಮತ್ತು "ಇತರರಿಗೂ ಪ್ರಯೋಜನ ಉಂಟುಮಾಡಿರಿ."

ಹಿಂದೂಸ್ಥಾನ ಕೋಆಪರೇಟಿವ್ ಜೀವವಿಮೆ ಸಂಘ ಲಿಮಿಟೆಡ್.

ಹಿಂದೂಸ್ಥಾನ ಕಟ್ಟಡಗಳು ಕಲಕತ್ತಾ.

ಮೂಲಧನ ಒಂದು ಕೋಟಿ ರೂಪಾಯಿ		(1,00,00,000).
ವಸೂಲಾದ ವೊಬಲಗು	,,	87,00,000
ಖಾಯಮಾದ ಧನ	,,	12,60,000

ಹಿಂದೂಸ್ಥಾನ ಸಂಘದ ಕೆಲವು ಮುಖ್ಯ ಅನುಕೂಲತೆಗಳು.

(1) ಜನಗಳಿಗೆ ಬಹಳ ಸುಲಭಕರವಾದ ವಿಮೆ ಪಾಲಿಸಿ ಕೊಟ್ಟು, ವೃದ್ಧಾಪ್ಯಕಾಲದಲ್ಲಿ, ಅಕಾಲ ಮರಣ ಉಂಟಾದಲ್ಲಿ ಕುಟುಂಬ ಸಂರಕ್ಷಣೆಗೂ ಯಾವ ಬಾಧಕ ಕಷ್ಟವಿಲ್ಲದಂತೆ ವಿಮೆ ಮೊಬಲಗಿನಿಂದ ಸುಖ ಜೀವನಮಾಡಬಹುದು.

(2) ಸಂಘದ ಪಾಲಿಸಿಯನ್ನು ಎರಡು ವರ್ಷವಾದರೂ ಜಾರಿ ಇಟ್ಟು ಕೊಂಡು ತದನಂತರ ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತಿನ ಆಧಾರದ ಮೇಲೂ ಅಥವಾ ಮತ್ತೊಬ್ಬ ಪಾಲಿಸಿದಾರರ ಜಾಮೀನಿನ ಮೇಲೂ ಬಹಳ ಸುಲಭ ಬಡ್ಡಿಯಿಂದ ಅವರು ವಿಮೆ ಮಾಡಿರುವಷ್ಟು ಮೊಬಲಗಿನಷ್ಟು ಸಾಲವ ಸಂಘದವರು ಕೊಡುತ್ತಾರೆ ಮತ್ತು ಸುಲಭ ಕಂತಿನಿಂದ ಸಂಘದವರು ವಾಪಸ್ಸು ಪಡೆಯುತ್ತಾರೆ.

(3) ಯಾವ ವಿಧವಾದ ಆಧಾರವಿಲ್ಲದೆ ಮನೆ ಅಥವಾ ಜಮೀನು ತೆಗೆದು ಕೊಟ್ಟು ಅದರ ಮೊಬಲಗು ಸುಲಭ ಕಂತಿನಿಂದ ವಾಪಸ್ಸು ಪಡೆಯುತ್ತಾರೆ. ಇದು ಬಡವರಿಗೂ ಮತ್ತು ರೈತರಿಗೂ ಮುಖ್ಯ ಅನುಕೂಲವಾಗಿರುತ್ತೆ.

(4) ಸಂಘದ ಆಡಳಿತ ಮತ್ತು ಮೇಲ್ವಿಚಾರಣೆ ಮಹಾರಾಜರಿಂದಲೂ, ದೊಡ್ಡ ಜಮೀನುದಾರರಿಂದಲೂ ನಡೆಸಲ್ಪಡುತ್ತೆ.

Wanted Immediately. Active & energetic Travelling Inspector in every District of the State on a salary of Rs. 80/ per mensem excluding travelling expenses and commissions. No guaranteed business required. The post is permanent and well paying.

For further particulars apply sharp to

Messrs. VENKATACHALAM & SONS,
Chief Agents, Hindustan Co-operative Assurance,
[22-9] 160, Dodpet, Mysore.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 5,00,000.

(INCORPORATED UNDER THE MYSORE COMPANIES' REGULATION No. III OF 1895.)

Absolute Security, Attractive Schemes, Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and *property investment (Land and house purchase and investment) Schemes* are a novelty.

WANTED

Active and honest agents to convass insurance and Provident businesses and influential local directors to canvass Two-in-one (Share policy) and property investment businesses in each and every unrepresented taluk and district of the Mysore province on liberal commission and office allowance. For terms and prospectuses, please apply with your experience in the line to

Mr. M. L. NAGANNAH,
Managing Director, Life & Marriage Assurance Buildings, MYSORE

[15-6]

MELLIN'S FOOD

ಮೆಲಿನ್ಸ್ ಆಹಾರವು

[9-6]

ಕೈಸೋಕದೆ ಮಾಡದ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿ ಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದ್ರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras,

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪೆನಿ, ಮೌಂಟ್ ರೋಡ್, ಮದರಾಸ್.

ಪ್ರಪಂಚಯುದ್ಧ

"ಘನ ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಭಾವಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಘೋರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಪಾತಾಳವಾದ ಎಮ್‌ಡನ್ನನ್ನು ನೋಡಿರುವಿರಾ? ಅವರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅವರ ನಾಯಕಶಿರೋಮಣಿಯನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಯಾಸನ ದುಷ್ಟಳಿಗಳಂತೆ ಕಾಲಾಗ್ನಿಗೆ ತುತ್ತಾಗುವದರಲ್ಲಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಸೂಚನೆ:—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚುಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನು ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[10-6]

FOR SALE.

A new upstairs Bungalow in one of best situations in Mysore City, also a good building site measuring about an acre.—Apply to

[35-1] Rev. GEORGE W. SAWDAY, Mysore City.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............... ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಿಟ್ಟಿ, ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ನಂಜಪ್ಪನವರು ಅಥವಾ ಮಿ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[231-90] ಬ್ರಾಂಚ್ ಸೆಕ್ರೆಟರಿ, ಮದರಾಸ್.

ವೃತ್ತಾಂತ ಪತ್ರಿಕೆ.

—:0:—

೫೯ ೧೯೧೫ ನೇ ಇಸವಿ ಫೆಬ್ರವರಿ ತಾ. ೧೮ ನೇ ಗುರುವಾರ.

ಮೈಸೂರು ಸೀಮೆಯ ಫಾರೆಸ್ಟುಗಳು.

ಮೈಸೂರು ಸಂಸ್ಥಾನದ ಫಾರೆಸ್ಟುಗಳಿಂದ ವರುಷೇ ವರುಷ ನಮ್ಮ ಗೌರ್ನಮೆಂಟಿಗೆ ಬಹಳ ದ್ರವ್ಯ ಉತ್ಪತ್ತಿಯಾಗುತ್ತಿದೆ. ಅವುಗಳನ್ನು ಶಾಸ್ತ್ರವತ್ತಾಗಿಯೂ ಸಂಪೂರ್ಣವಾಗಿಯೂ ರೂಢಿಸಿದ ಪಕ್ಷದಲ್ಲಿ ಅದರಿಂದ ರಾಜಾದಾಯವು ಇನ್ನೂ ವಿಶೇಷವಾಗಿ ಹೆಚ್ಚುವುದಲ್ಲದೆ ಪ್ರಜೆಗಳಿಗೂ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ನಮಗೆ ತಲುಪಿರುವ 1913-14 ನೇ ಸಾಲಿನ ಫಾರೆಸ್ಟ್ ರಿಪೋರ್ಟಿನಲ್ಲಿ ಈ ಸೀಮೆಯ ಕಾಡುಗಳೆಲ್ಲಾ ಒಟ್ಟು 2,760 ಚದರ ಮೈಲಿಯಷ್ಟು ವಿಸ್ತಾರವಾಗಿವೆಯೆಂದೂ, ಅವುಗಳಿಂದ 33,91,057 ರೂಪಾಯಿ ಹುಟ್ಟುವಳಿಯಾಗಿದೆಯೆಂದೂ, ಆ ಇಲಾಖೆಯ ಖರ್ಚು 8,97,021 ರೂಪಾಯಿ ಆಯಿತೆಂದೂ ತಿಳಿದು ಬರುತ್ತದೆ. ಹಿಂದೆ ಯಾವ ಸಾಲಿನಲ್ಲೂ ಇಷ್ಟು ಹಣ ಹುಟ್ಟುವಳಿ ಆಗಿರುವುದಿಲ್ಲ. ಸಾಗುವಾನಿ ಮರಗಳನ್ನೂ, ಗಂಧದ ಮರಗಳನ್ನೂ, ಮೈಸೂರ್ ರಾಯರವರು ದಯಮಾಡಿದ್ದ ಕಾಲದಲ್ಲಿ ಹಿಡಿದ ಆನೆಗಳನ್ನು ವಿಕ್ರಯಮಾಡಿದ್ದರಿಂದಲೂ, ಅವುಗಳಿಗೆ ಒಳ್ಳೆಯ ಧಾರಣೆ ದೊರಕಿದ್ದರಿಂದಲೂ ಹುಟ್ಟುವಳಿಯು ಇಷ್ಟು ಮಟ್ಟಿಗೆ ಹೆಚ್ಚುವುದಕ್ಕೆ ಕಾರಣವಾಯಿತು. 109 ಆನೆಗಳನ್ನು ಹಿಡಿದರು; ಕೆಡ್ಡಾ ಏರ್ಪಾಡುಗಳಿಂದ ನಮ್ಮ ಸರ್ಕಾರಕ್ಕೆ ಖರ್ಚು ಕಳೆದು 52,233 ರೂಪಾಯಿ ಆದಾಯವಾಗಿರುತ್ತದೆ.

ಕಾಡುಗಳನ್ನು ಇಷ್ಟು ಹಾನಿ ಮಾಡಿ ಚೆನ್ನಾಗಿ ಕಾಪಾಡಿಕೊಂಡು ಬರುವುದು ಬಹಳ ಅವಶ್ಯವಾದದ್ದು. ಅವುಗಳ ಸಂರಕ್ಷಣೆಯ ಕ್ರಮಗಳನ್ನೂ, ವೃದ್ಧಿಪಡಿಸುವ ವಿಧಾನಗಳನ್ನೂ ಚೆನ್ನಾಗಿ ಕಲಿತು ಬಂದವರೇ ರೂಢಿಸಬೇಕಾಗಿರುತ್ತದೆ. ಅಂಥವರೇ ಈ ರಿಪೋರ್ಟಿನ ಗುಣದೋಷಗಳನ್ನು ಕಂಡು ಹಿಡಿಯುವುದಕ್ಕೂ, ಗುಣವನ್ನು ತೋರಿಸಿ ದೋಷಗಳನ್ನು ಎತ್ತಿಹಾಕುವುದಕ್ಕೂ ಸಮರ್ಥರಾಗಿರುವರು. ಆದರೆ ಫಾರೆಸ್ಟ್ ಇಲಾಖೆಯವರೇ ಕೆಲವು ಕೊರತೆಗಳನ್ನು ಈ ರಿಪೋರ್ಟಿನಲ್ಲಿ ಕಾಣಿಸಿರುವುದರಿಂದ ಅಂಥವುಗಳನ್ನು ಸರಿಪಡಿಸುತ್ತಾರೆಂದು ನಿರೀಕ್ಷಿಸುವೆವು. ಅನೇಕ ಕಡೆಗಳಲ್ಲಿ ಮರಗಳನ್ನು ಕಾಡುಗಳಿಂದ ಸಾಗಿಸಿ ಹೊರಕ್ಕೆ ತರುವುದು ಪ್ರಯಾಸವಾದ ಕಾರಣ ಅಂಥಾ ಮರಗಳು ಅಲ್ಲೇ ಬಿದ್ದು ನಷ್ಟವಾಗುತ್ತವೆ. ಇದಕ್ಕೆ ಕಾಡುಗಳಲ್ಲಿ ಸರಿಯಾದ ಮಾರ್ಗಗಳನ್ನು ಬಿಡಿಸದೆ ಇರುವುದೇ ಕಾರಣ. ಮತ್ತು ಮರಗಳನ್ನು ಸಾಗಿಸುವುದಕ್ಕೆ ಯಂತ್ರಗಳನ್ನು ಕೆಲವು ಕಡೆ ಇಟ್ಟಿದ್ದಾರೆ. ಈ ಯಂತ್ರಗಳು ಹೋಗಿಬರುವ ರಸ್ತೆಗಳು ಕೆಟ್ಟುಹೋಗಿರೋಣದರಿಂದ ಯಂತ್ರಗಳು ಹೋಗಿ ಬರಲಾರವು. ಸರ್ಕಾರದ ಇಲಾಖೆಗಳು ಒಂದನ್ನೊಂದು ಹೊಂದಿಕೊಂಡಿರುತ್ತವೆ. ಫಾರೆಸ್ಟ್ ಇಲಾಖೆಗೆ ಇಂಜನಿಯರ್ ಇಲಾಖೆಯ ಸಹಾಯ ಬೇಕು. ಆದರೆ ನಮ್ಮ ಗವರ್ನಮೆಂಟಿನಲ್ಲಿ ಬೇರೆ ಬೇರೆ ಇಲಾಖೆಗಳು ಪರಸ್ಪರ ಹೊಂದಿಕೊಂಡು ಕೆಲಸಗಳನ್ನು ನಡಿಸುವುದಕ್ಕೆ ತಕ್ಕ ಏರ್ಪಾಡೇನೂ ಇರುವಂತೆ ಕಾಣುವುದಿಲ್ಲ. ಫಾರೆಸ್ಟ್ ಇಲಾಖೆಯವರು ಮರಗಳನ್ನು ಸಾಗಿಸುವುದಕ್ಕೆ ಯಂತ್ರಗಳು ಬೇಕೆಂದು ಕೇಳುತ್ತಾರೆ; ಗವರ್ನಮೆಂಟಿನವರು ತರಿಸಬಹುದೆಂದು ಸ್ಯಾಂಕ್ಷನ್ ಮಾಡುವರು. ಆದರೆ ಅಂಥಾ ಯಂತ್ರಗಳ ಸಂಚಾರಕ್ಕೆ ಅನುಕೂಲವಾಗುವಂಥಾ ರಸ್ತೆಗಳು ಕಾಡುಗಳಲ್ಲಿ ಇರುವವೋ ಇಲ್ಲವೋ ಮೊದಲೇ ಕೇಳಿ ತಿಳಿಯುವುದಿಲ್ಲ. ಇದು ಇಂಜನಿಯರ್ ಇಲಾಖೆಯಿಂದ ಗೊತ್ತಾಗಬೇಕಾದ ವಿಷಯ. ಹಣ ಖರ್ಚಾಗಿ ಯಂತ್ರಗಳು ಬರುವವು; ಅವುಗಳಿಂದ ಕೆಲಸ ನಡೆಯದೆ ಒಂದು ಕಡೆ ಬಿದ್ದು ಕೆಟ್ಟುಹೋಗುವುದಕ್ಕೂ, ಅವುಗಳನ್ನು ತರಿಸಿದ ಉದ್ದೇಶವು ನೆರವೇರದೆ ನಷ್ಟವಾಗುವುದಕ್ಕೂ ಅವಕಾಶವಾಗುವುದು.

ಗ್ರಾಮಾಂತರಗಳ ಬಳಿ ಇರುವಂಥಾ ಕಾಡುಗಳನ್ನು ಸರಿಯಾಗಿ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವ ಭಾಗದಲ್ಲಿ ನಮ್ಮ ಗವರ್ನಮೆಂಟಿನವರು ಈಚೆಗೆ ಒಂದು ಹುಕುಮನ್ನು ದಯಪಾಲಿಸಿರುತ್ತಾರೆ. ಇದರಲ್ಲಿ ಗವರ್ನಮೆಂಟಿನವರ ಅಭಿಮತವೂ ಉದ್ದೇಶವೂ ಶ್ರೇಷ್ಠವಾಗಿರುತ್ತವೆ. ಗ್ರಾಮಸ್ಥರಿಗೆ ಗ್ರಾಮ ಕಾಡುಗಳಲ್ಲಿ ದೊರಕುವಂಥಾ ಸೌಲಭ್ಯಗಳೆಲ್ಲಾ ಸುಲಭವಾಗಿಯೂ, ಸಂಪೂರ್ಣವಾಗಿಯೂ ಲಭಿಸಬೇಕೆಂಬುವುದೇ ಸರ್ಕಾರದವರ ಮುಖ್ಯ ಉದ್ದೇಶವಾಗಿದೆ. ಈ ಗ್ರಾಮ ಕಾಡುಗಳನ್ನು ಗ್ರಾಮಸ್ಥರು ಸೇರಿರುವ ಪಂಚಾಯತಿಗಳಿಗೆ ವಹಿಸುವರು. ಈ ಪಂಚಾಯತಿಗಳನ್ನು ಅಮಲ್ದಾರರ ಮತ್ತು ಡೆಪ್ಯುಟಿ ಕಮಿಷನರುಗಳ ಆಡಳಿತಕ್ಕೆ ಒಳಪಡಿಸಿರೋಣದರಿಂದ ಈ ಅಧಿಕಾರಿಗಳಿಗಿರುವ ನಾನಾ ಬಾಬುಗಳ ಕೆಲಸಕಾರ್ಯಗಳಿಗೆ ಇದೊಂದು ಜವಾಬ್ದಾರಿಯನ್ನೂ ಸೇರಿಸಿದಂತಾಯಿತು. ಈ ಕೆಲಸವು ಅವರಿಂದ ನಿರ್ವಾಹವಾಗುವುದು ಸಾಧ್ಯವೇ ಎಂದು ಆಶ್ಚರ್ಯಪಡಬೇಕಾಗುವುದು. ಫಾರೆಸ್ಟ್ ಇಲಾಖೆಯು ಪ್ರತ್ಯೇಕವಾಗಿ ಇದ್ದೇ ಇದೆ; ಅದರ ಸಿಬ್ಬಂದಿಯವರು ಆ ಇಲಾಖೆಯ ಕೆಲಸಕಾರ್ಯಗಳಲ್ಲಿ ಪರಿಶ್ರಮವುಳ್ಳವರಾಗಿದ್ದಾರೆ. ಕಾಡುಗಳ ಸಂರಕ್ಷಣೆ ಮುಂತಾದ ವಿಚಾರಗಳು ಅವರಿಗೆ ತಿಳಿಯುವಂತೆ ಇತರರಿಗೆ ತಿಳಿಯದು. ಇಂಥವರ ಮೇಲ್ವಿಚಾರಣೆಯು ಮೇಲ್ಕಂಡ ಪಂಚಾಯತಿಗಳಿಗೆ ಇರಬೇಕಾದದ್ದೇ ಸಹಜ; ಇದು ಬಿಟ್ಟು ಈಗಲೇ ಹೊರಲಾರದಷ್ಟು ಹೊರೆಯನ್ನು ಹೊಣೆಸಲ್ಪಟ್ಟಿರುವ ರೆವಿನ್ಯೂ ಇಲಾಖೆಯವರಿಗೆ ಈ ಜವಾಬ್ದಾರಿಯನ್ನೂ ವಹಿಸಿರುವುದು ಸರ್ಕಾರದವರ ಉದ್ದೇಶ ಸಾರ್ಥಕವಾಗದೆಹೋಗುವುದಕ್ಕೆ ಅವಕಾಶವಾಗಿದೆ.

ಈಚೆಗೆ ನಮ್ಮ ಗವರ್ನಮೆಂಟಿನಲ್ಲಿ ತೋರಿದ ವಿಷಯಗಳಿಗೆಲ್ಲಾ ಕಮಿಟಿಗಳನ್ನೂ ಪಂಚಾಯತಿಗಳನ್ನೂ ಮಾಡಿಡುವುದು ರೂಢಿಗೆ ಬಂದಿರುತ್ತದೆ; ಆದರೆ ಇವುಗಳ ಕಾರ್ಯಭಾಗಗಳನ್ನು ಸರಿಯಾಗಿ ತನಿಖೆಮಾಡಿ ನೋಡಿಕೊಳ್ಳುತ್ತಾ ಬರುವುದಕ್ಕೆ ಅವರು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿದ್ದೇನೂ ನೋಡಿ ಕಾಣೆವು. ಪ್ರಜೆಗಳು ಸ್ವಸಹಾಯಿಗಳಾಗುವಂತೆ ಮಾಡಬೇಕೆಂದೂ, ಪ್ರತಿ ಒಂದು ವಿಚಾರಕ್ಕೂ ಅವರು ಗವರ್ನಮೆಂಟಿನವರ ಕೈಯನ್ನೇ ಕಾಯುವುದನ್ನು ತಪ್ಪಿಸಬೇಕೆಂದೂ ನಮ್ಮ ಸರ್ಕಾರದವರು ಸಾಹಸಪಡುತ್ತಿರುವುದೂ, ಈ ಉದ್ದೇಶದಿಂದ ಅವರು ಪ್ರಜೆಗಳನ್ನು ನಾನಾ ಮುಖಗಳಲ್ಲಿ ವಿವೇಕ ಮೇಳೆ ಪ್ರೋತ್ಸಾಹಪಡಿಸುತ್ತಿರುವುದೂ ಸ್ತೋತ್ರಾರ್ಹಗಳಾಗಿರುತ್ತವೆ. ಪ್ರಜೆಗಳು ಈ ಭಾಗದಲ್ಲಿ ಉತ್ಸಾಹಶೀಲರಾಗಬೇಕೆಂದು ಒಪ್ಪಿಕೊಳ್ಳುತ್ತೇವೆ. ಆದರೆ ಸರ್ಕಾರಿ ಕಾರುಬಾರುಗಳ ಬಾಹುಳ್ಯದಿಂದ ಪ್ರಜೆಗಳಿಗೆ ಅಡಚಣೆಯಾಗಲಿ, ಜುಗುಪ್ಸೆಯಾಗಲಿ ಉಂಟಾಗಬಾರದು. ಪ್ರಜೆಗಳೇ ಸ್ವತಂತ್ರಿಸಿ ಕೆಲಸಕಾರ್ಯಗಳನ್ನು ಮಾಡಿಕೊಳ್ಳುವಂತಾಗುವುದು ನಿದಾನ ಮತ್ತು ಅವರಲ್ಲಿ ಕಷ್ಟವಿದೆ ಅವರಿಗೆ ಬಗ್ಗೆ ವಿವೇಕ ಹೇಳುವುದಕ್ಕೂ, ಅವರನ್ನು ಕ್ರಮಕ್ರಮವಾಗಿ ಮುಂದಕ್ಕೆ ತರುವುದಕ್ಕೂ, ಯೋಗ್ಯರೂ ಸಮರ್ಥರೂ ಆದ ದೇಶವತ್ಸಲರು ಬೇಕಾಗಿರುತ್ತದೆ. ಬರಿಯ ಸರ್ಕಾರಿ ಹುಕುಮುಗಳಿಂದಲೇ ಎಲ್ಲಾ ನೆರವೇರುವುದು ಪ್ರಯಾಸವೆಂದು ಹೇಳಬೇಕಾಗಿದೆ.

ಯುದ್ಧದಲ್ಲಿ ಗಾಯಪಟ್ಟ ಸಿಪಾಯಿಗಳಲ್ಲಿ ಪರಸ್ಪರ ಪ್ರೀತಿ.

ಯುದ್ಧವು ಅತ್ಯಂತ ಘೋರವಾದ ಕೃತ್ಯವೆಂದು ಹೇಳಬೇಕಾದ ಅಗತ್ಯವಿಲ್ಲ. ಮತ್ತು ಈಗ ನಡೆಯುತ್ತಿರುವ ಯುದ್ಧವು ಪ್ರಪಂಚದಲ್ಲಿ ಈ ವರೆಗೂ ನಡೆದ ಯುದ್ಧಗಳಲ್ಲಿ ಮಹಾ ಭಯಂಕರವಾದುದು. ನಮ್ಮಂಥಾ ಸಾಧಾರಣ ಬುದ್ಧಿಯುಳ್ಳ ಜನಗಳು ವಿದ್ಯೆ, ನಾಗರಿಕತೆ, ಸತ್ಯಸಂಪದ ತಿಳುವಿಕೆ, ವೈಜ್ಞಾನಿಕ ಮುಂತಾದ ಸುಗುಣಗಳಲ್ಲಿ ಅಗ್ರಗಣ್ಯರಾಗಿ ಇತರ ಜನಾಂಗಗಳನ್ನು ನಡೆಸುತ್ತಿರುವ ಯುರೋಪು ಯಾಕೆ ಯುದ್ಧಾಸಕ್ತರಾಗಿ ಪ್ರಾಣವನ್ನು, ದ್ರವ್ಯವನ್ನು ಸಾವಿರಾರು ಮನೆಗಳಲ್ಲಿ ಅಸಾಧ್ಯವಾದ ಶೋಕಗಳನ್ನು ಉಂಟುಮಾಡುತ್ತಿದ್ದಾರೋ ತಿಳಿಯುವದು ಕಷ್ಟ. ಈಗ ಯುದ್ಧದಲ್ಲಿ ಜರೆತು ಇಂಗ್ಲಿಷರನ್ನೂ ಫ್ರೆಂಚರನ್ನೂ ಬಂದುನಾಶವಾಗ ಸೈನಿಕರನ್ನೂ ಕೊಲ್ಲಬೇಕೆಂದು ಜರ್ಮನಿ ಸೈನಿಕರು, ಜರ್ಮನರನ್ನು ಸಂಹರಿಸಬೇಕೆಂದು ಇಂಗ್ಲಿಷ್ ಫ್ರೆಂಚ್ ಸೈನಿಕರು ಆತುರರಾಗಿರುವದು ಸರಿಯಷ್ಟೆ. ಯುದ್ಧದಲ್ಲಿ ಜಗಳಿತುವ ಈ ಸೈನಿಕರಲ್ಲಿ ಅನೇಕರಿಗೆ ತಾವು ಯುದ್ಧಮಾಡುತ್ತಿರುವದೇತಕ್ಕೋ ಚೆನ್ನಾಗಿ ಗೊತ್ತಿಲ್ಲ. ಎದುರುಬದರಾಗಿ ನಿಂತು ಕಾದಾಡುತ್ತಿರುವವರಿಗೆ ಪರಸ್ಪರ ವೀರ್ಯವೈರವಿಲ್ಲ. ಅವರು ಸ್ವಾಯುಸಃ ಈ ವರೆಗೂ ಒಬ್ಬರನ್ನೊಬ್ಬರು ನೋಡಿದ್ದೇ ಇಲ್ಲ. ಅವರು ಒಬ್ಬರನ್ನೊಬ್ಬರು ಹಗೆಮಾಡುವದಿಲ್ಲ. ಒಂದು ವೇಳೆ ಈ ಯುದ್ಧದ ಕಾರಣದಿಂದಲ್ಲದೆ ಬೇರೆ ಯಾವದೋ ಒಂದು ಕಾರಣದಿಂದ ಅವರು ಕಲೆತಿದ್ದರೆ ಅವರಲ್ಲಿ ಪರಸ್ಪರ ಪ್ರೀತಿಯೇ ಹೆಚ್ಚಿ ಪರಸ್ಪರ ಸಹಾಯಕರಾಗಿರುವರು. ಪ್ರಯಾಣದಲ್ಲಿ ಅಥವಾ ವ್ಯಾಪಾರದಲ್ಲಿ ಅಥವಾ ಯಾವದೋ ಒಂದು ಕಾರ್ಯ ಸಾಧನೆಯಲ್ಲಿ ಬೇರೆ ಬೇರೆ ದೇಶಗಳಲ್ಲಿ ವಾಸಮಾಡುವ ಬೇರೆ ಬೇರೆ ಜನಾಂಗಗಳು ಕೂಡಿ ಬರುವಾಗ ಆಯಾ ಜನಾಂಗಗಳಲ್ಲಿ ಮುಂಚೆ ಇಲ್ಲದಿದ್ದ ಸ್ನೇಹವೂ ಮರ್ಯಾದೆಯೂ ಸಹಾಯಮಾಡಬೇಕೆಂಬ ಗುಣವೂ ಹೆಚ್ಚುವವು. ಈ ಯುದ್ಧದಲ್ಲಿ ಕಾದಾಡುವ ಸಿಪಾಯಿಗಳು ಒಬ್ಬರ ಸೊತ್ತನ್ನು ಅಪಹರಿಸಿಲ್ಲ. ಒಬ್ಬರನ್ನೊಬ್ಬರು ಬೈದು ದ್ವೇಷಿಸಿಲ್ಲ. ಇವರು ತಮ್ಮನ್ನು ಕಳುಹಿಸಿ ಕೊಟ್ಟಿರುವವರ ಅಭಿಪ್ರಾಯವನ್ನು ಹಿಡಿದು ಅವರ ಪಕ್ಷವಾಗಿ ಯುದ್ಧಮಾಡುತ್ತಾರೆಯೇ ಹೊರತು ಪರಸ್ಪರ ಮಾತ್ಸರ್ಯದಿಂದ ಕಾದಾಡುವದಿಲ್ಲ.

ವೃತ್ತಾಂತವಾಗಿ ನಡೆಯುತ್ತಿರುವ ಯುದ್ಧದಲ್ಲಿ ಮೃತಪಟ್ಟ ಒಬ್ಬಾನೊಬ್ಬ ಫ್ರೆಂಚ ಸೈನ್ಯದ ಉದ್ಯೋಗಸ್ಥನಲ್ಲಿ ಒಂದು ಕಾಗದವು ಸಿಕ್ಕಿತು. ಅದರಲ್ಲಿ ಅವನು ಬರೆದಿದ್ದುದೇನಂದರೆ—ನನ್ನ ಸಮೀಪದಲ್ಲಿ ಇನ್ನಿಬ್ಬರು ಘೋರವಾಗಿ ಪೆಟ್ಟುತಿಂದು ಬಿದ್ದಿದ್ದಾರೆ. ಅವರು ಬದುಕುವರೆಂಬ ನಿರೀಕ್ಷೆ ಏನು ಇಲ್ಲ. ಇವರ ಪೈಕಿ ಒಬ್ಬನು ಸ್ಕಾಟ್ಲ್ಯಾಂಡ್ ದೇಶದ ಸೈನ್ಯದಲ್ಲಿ ಒಬ್ಬ ಹುದ್ದೇದಾರನು. ಇನ್ನೊಬ್ಬನು ಜರ್ಮನಿ ಸೈನಿಕನು. ನಾನು ಪೆಟ್ಟುತಿಂದು ಬಿದ್ದ ನಂತರ ಇವರಿಬ್ಬರಿಗೂ ಏಟು ತಗಲಿರಬೇಕು. ನಾನು ಪೆಟ್ಟು ಸಹಿಸಲಾರದೆ ಮೂರ್ಛೆಹೋದೆ. ನನಗೆ ಸ್ಮರಣೆ ಬಂದಾಗ ನನ್ನ ಪಕ್ಕದಲ್ಲಿ ಇವರಿಬ್ಬರೂ ಬಗ್ಗಿಕೊಂಡು ನನಗೆ ಸಹಾಯಮಾಡುತ್ತಿದ್ದುದನ್ನು ಕಂಡೆನು. ಸ್ಕಾಟ್ ಸಿಪಾಯಿಯು ತನ್ನ ಬಳಿಯಲ್ಲಿದ್ದ ಸೀಸೆಯಿಂದ ನನಗೆ ನೀರು ಕುಡಿಸುತ್ತಿದ್ದನು. ಜರ್ಮನ್ ಸಿಪಾಯಿಯು ನನ್ನ ಮೈಯಲ್ಲಿ ಹೊಕ್ಕಿದ್ದ ಕಬ್ಬಿಣದ ತುಂಡುಗಳನ್ನು ಉಪಾಯದಿಂದ ತೆಗೆಯುತ್ತಿದ್ದನು. ಅವರು ತಾವೇ ಕಷ್ಟವನ್ನು ಮರಣಕರವಾದ ಕಷ್ಟವನ್ನು ಸಹಿಸುತ್ತಿದ್ದರೂ ನನಗೆ ಸಹಾಯಕರಾಗಿ ನಿಂತಿರುವದನ್ನು ನೋಡಿ ನನ್ನ ಮನಸ್ಸು ಕರಗಿತು. ಜರ್ಮನ್ ಸಿಪಾಯಿಯಲ್ಲಿ ನೋವನ್ನು ನಿಲ್ಲಿಸುವ ಅಥವಾ ಕಡಮೆ ಮಾಡುವ ಮಾರ್ಫಿಯಾ ಎಂಬ ಔಷಧಿ ಇದ್ದಿತು. ಅದರಲ್ಲಿ ಸ್ವಲ್ಪವನ್ನು ನನ್ನ ದೇಹದೊಳಕ್ಕೆ ಪಿಚಕಾರಿಯಿಂದ ಸೇರಿಸಿ ತನ್ನ ದೇಹದೊಳಕ್ಕೂ ಸ್ವಲ್ಪ ತೆಗೆದುಕೊಂಡನು. ಈ ಮದ್ದಿನ ಸಹಾಯದಿಂದ ನನ್ನ ಪ್ರಾಣವು ಆಶ್ಚರ್ಯವಿಧವಾಗಿ ಹೆಚ್ಚಿ ನೋವು ಕಡಿಮೆಯಾಯಿತು. ನನಗೆ ಸಂಪೂರ್ಣವಾಗಿ ಸ್ಮರಣೆ ಬಂದಿತು. ಅನಂತರ ಯುದ್ಧಕ್ಕೆ ಮುಂಚೆ ನಾವು ಎಲ್ಲಿದ್ದೆವು? ಏನು ಮಾಡುತ್ತಿದ್ದೆವು? ಎಂಬ ವಿಷಯದಲ್ಲಿ ಸಲ್ಲಾಪಮಾಡಿದೆವು. ಜರ್ಮನನಿಗೆ ಇಂಗ್ಲಿಷ್ ಭಾಷೆ ಅಭ್ಯಾಸವಿದ್ದಿತು. ಮತ್ತು ನಮ್ಮ ನಮ್ಮ ಸ್ವದೇಶಗಳಲ್ಲಿ ನಾವು ಬಿಟ್ಟು ಬಂದಿದ್ದ ಪ್ರಿಯರ ವಿಷಯದಲ್ಲಿ ಪ್ರಸ್ತಾಪಮಾಡಿದೆವು. ಜರ್ಮನನೂ ಸ್ಕಾಟ್ ಸಿಪಾಯಿಯೂ ವಿವಾಹವಾಗಿ ಇನ್ನೂ ಒಂದು ವರುಷವಾಗಿಲ್ಲವೆಂತ ತಿಳಿಯಿತು. ನಾವು ಯಾತಕ್ಕೆ ಒಬ್ಬರ ಮೇಲೊಬ್ಬರು ಯುದ್ಧಮಾಡುತ್ತಿದ್ದೇವೆ? ಎಂದು ಯೋಚಿಸಿ ಏನೂ ಕಾರಣ ಹೇಳಲಾರದವರಾದೆವು. ಕೊನೆಗೆ ಸ್ಕಾಟ್ ಸಿಪಾಯಿಯು ಬಳಲಿಕೆಯಿಂದ ಸ್ಮರಣೆತಪ್ಪುತ್ತಿರುವದು ಕಾಣಿಸಿತು. ಅದೇ ಸಮಯಕ್ಕೆ ಸರಿಯಾಗಿ ಜರ್ಮನನು ಮಾತಾಡುವದನ್ನು ನಿಲ್ಲಿಸಿ ಮೌನಿಯಾದನು. ಅವನು ತನ್ನ ಚೀಲದಿಂದ ಪ್ರಾರ್ಥನೆಯ ಪುಸ್ತಕವನ್ನು ತೆಗೆದುಕೊಂಡು ಯುದ್ಧದಲ್ಲಿ ಗಾಯಪಟ್ಟವರಿಗೋಸ್ಕರ ಬರೆಯಲ್ಪಟ್ಟ ಪ್ರಾರ್ಥನೆಯನ್ನು ಪಿಸುಗುಟ್ಟುತ್ತಿದ್ದನು.

ಇದೇ ವಿಧವಾದ ಕೆಲವು ನಡತೆಗಳನ್ನು ಕುರಿತು ನಾವು ಆಗಿಂದಾಗ ಪತ್ರಿಕೆಗಳಲ್ಲಿ ಓದುತ್ತೇವೆ. ಇದನ್ನು ಓದಿದರೆ ಯಾರ ಮನಸ್ಸು ತಾನೇ ಕರಗುವದಿಲ್ಲ. ಎಲ್ಲೆಲ್ಲಿಯೂ ಯುದ್ಧವೆಂಬ ಕಾರ್ಮುಗಿಲು ಭಯಂಕರವಾಗಿ ಕವಿದುಕೊಂಡು ಭಯಂಕರವಾದ ಸಿಡಿಲು, ಗಾಳಿ, ಮಳೆಗಳಿಂದ ಲೋಕವನ್ನು ನಡುಗಿಸುತ್ತಿದ್ದರೂ ಅದರ ಮಧ್ಯದಲ್ಲಿ ಮಳೆಬಿಲ್ಲಿನೋಪಾದಿ ಪರಸ್ಪರ ಪ್ರೀತಿಯ ಕೃತ್ಯಗಳು ಲೋಕದಲ್ಲಿ ಪ್ರೀತಿಯೂ, ಸಹಾಯವೂ, ಅನ್ಯೋನ್ಯವೂ, ಕಷ್ಟ ಸಹಿಸಿಕೊಂಡು ಅದೇ ತರದ ಕಷ್ಟಕ್ಕೆ ಸಿಕ್ಕಿರುವ ಇತರರಿಗೆ ಸಹಾಯಮಾಡುವೆನೆಂಬ ಪರೋಪಕಾರ ಬುದ್ಧಿಯೂ ನಮಗೆ ಆನಂದ ನಿರೀಕ್ಷೆಯನ್ನೂ ಸಂತೋಷವನ್ನುಂಟುಮಾಡುತ್ತವೆ. ಯುದ್ಧವು ಕೆಟ್ಟದೇ ಸರಿ. ಆದರೆ ಅದು ಮಾನವರಲ್ಲಿ ಈ ವಿಧವಾಗಿ ಗರ್ಭಿತವಾಗಿರುವ ಕರುಣೆಯನ್ನೂ ದಯಾರಸವನ್ನೂ ಪ್ರಕಟಿಸುವದಕ್ಕೆ ಅವಕಾಶವಾಯಿತು. ಈ ಯುದ್ಧವು ಅಪ್ರತಿಮವಾದುದೇ ಸರಿ. ಆದರೆ ಯುದ್ಧದಲ್ಲಿ ಅಲ್ಲಲ್ಲಿ ತೋರಬರುವ ಸದ್ಗುಣಗಳು ತಲೆದೂಗಿಸುವ ಸ್ತೋತ್ರಕ್ಕೆ ಪಾತ್ರವಾಗಿವೆ. ಹಿಂದಣ ಯಾವ ಯುದ್ಧದಲ್ಲಿಯೂ ಈ ವಿಧವಾದ ಪರೋಪಕಾರವನ್ನು ಕುರಿತು ನಾವು ಓದಿಯಾದರೂ ಕೇಳಿಯಾದರೂ ಇಲ್ಲ. ಈ ವಿಧವಾದ ಸನ್ನಡತೆಯು ಸಕಲ ಮನುಷ್ಯರ ಹೃದಯಗಳಲ್ಲಿ ವಿಸ್ತರಿಸಿ ಬೆಳೆಯಲಿ. ಇಂಥಾ ಪರೋಪಕಾರ ಬುದ್ಧಿಯು ಯುದ್ಧವನ್ನು ತಲೆ ಎತ್ತದಂತೆ ಅಡಗಿಸುವದಕ್ಕೆ ಹೇತುವಾಗಿರುವದು. ಈ ಗುಣವು ಎಲ್ಲಿಯೋ ಒಂದೊಂದು ಕಡೆ ಅಪರೂಪವಾಗಿರುವದು ಸಾಲದು. ಸೈನ್ಯಾಧಿಪತಿಗಳೂ ಮಂತ್ರಿಶ್ರೇಷ್ಠರೂ ಅರಸುಗಳೂ ಅಧಿಕಾರಿಗಳೂ ಇದರಿಂದ ಭೂಷಿತರಾಗಲಿ.

ಯುದ್ಧದ ಸಮಾಚಾರಗಳು.

ಬ್ರಿಟಿಷ್ ವಿಮಾನಯಂತ್ರಗಳ ಕಾರ್ಯ.

ರಷ್ಯಾದವರ ಘೋರವಾದ ಕದನಗಳು.

ಈಜಿಪ್ಟಿನ ಮೇಲೆ ಕಾರ್ಯಭಾಗವೆಲ್ಲಾ ತಣ್ಣಗಾಯಿತು.

ಕಳೆದ ವಾರ ವಿಶೇಷವಾದ ಯುದ್ಧಕಾರ್ಯಗಳೇನೂ ನಡೆಯಲಿಲ್ಲ. ಆದರೂ ರಣರಂಗದ ಹಲವು ಭಾಗ್ಯಗಳೊಳಗೆ ಕದಿವಾಟಗಳು ನಡೆಯುತ್ತಲೇ ಬಂದವು.

ಫ್ರಾನ್ಸ್ ಮತ್ತು ಬೆಲ್ಜಿಯಮ್.

ಬ್ರಿಟಿಷರು ತಮ್ಮ ವಿಮಾನಗಳಲ್ಲಿ 34 ಅಂತರಿಕ್ಷ ವಿಮಾನಗಳನ್ನು ಸಮುದ್ರ ವಿಮಾನಗಳನ್ನೂ ಬೆಲ್ಜಿಯಮ್ ದೇಶದೊಳಕ್ಕೆ ಕಳುಹಿಸಿ ಜರ್ಮನಿಯವರ ಠಾಣ್ಯಗಳಿಗೆ ಮುತ್ತಿಗೆಹಾಕಿದ್ದೇ ಕಳೆದ ವಾರದ ವಿಶೇಷ ವರ್ತಮಾನ (ಸಮುದ್ರ ವಿಮಾನಗಳು ನವ ಚಿತ್ರ ಮೇಲೂ ಆಕಾಶದಲ್ಲೂ ಸಂಚಾರಮಾಡಬಲ್ಲವು.) ಅಷ್ಟೊಂದು ವಿಮಾನ ಯಂತ್ರಗಳೂ ಬೆಲ್ಜಿಯಮ್‌ನೊಳಗೆ ನಾಲ್ಕು ದಿಕ್ಕುಗಳ ಮೇಲೆ ಸಂಚಾರಮಾಡಿ ಜರ್ಮನಿಯ ಸೈನಿಕರು ಜಮಾಯಿಸಿಕೊಂಡಿದ್ದ ಸ್ಥಳಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಎಸೆಯಬಿಟ್ಟವು. ಓಸ್ಟೆಂಡ್ ತೀರಪಟ್ಟಣದ ರೈಲ್ವೇ ಸ್ಟೇಷನು ಸುಟ್ಟುಹೋಯಿತು. ಬ್ಲ್ಯಾಂಕೆನ್‌ಬರ್ಗ್‌ನಲ್ಲಿ ರೈಲ್ವೆ ಸ್ಟೇಷನೂ, ರೈಲ್ ರಸ್ತೆಯೂ ಕಿತ್ತುಹೋದವು. ಮಿದಲ್‌ಕರ್ಕ್ ಮತ್ತು ಜೀಬ್ರುಗ್ಗೆ ಎಂಬ ಠಾಣ್ಯಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು; ಆದರೆ ಎಷ್ಟುಮಟ್ಟಿಗೆ ನಷ್ಟವಾಯಿತೋ ತಿಳಿಯಲಿಲ್ಲ. ವಿಮಾನ ಯಂತ್ರಗಳಲ್ಲಿ ಹೋಗಿದ್ದವರೆಲ್ಲಾ ಕ್ಷೇಮದಿಂದ ವಾಪಸು ಬಂದರು; ಎರಡು ಯಂತ್ರಗಳು ಮಾತ್ರ ನಷ್ಟವಾಗಿರುತ್ತವೆ. ಏಕಕಾಲದಲ್ಲಿ ಇಷ್ಟೊಂದು ವಿಮಾನ ಯಂತ್ರಗಳು ಹೊರಟದ್ದು ಇದೇ ಮೊದಲು.

ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ ಕದನಗಳು ನಡೆದಿದ್ದಾಗ್ಯೂ, ಯಾವ ಪಕ್ಷದವರಿಗೂ ವಿಶೇಷವಾದ ಅನುಕೂಲವಾಗಲಿ, ನಷ್ಟವಾಗಲಿ ಆಗಿದೆಯೆಂದು ಹೇಳುವಂತಿಲ್ಲ. ಲಾ ಬಸ್ಸೆ ಎಂಬ ಠಾಣ್ಯದ ಬಳಿ ಜರ್ಮನಿಯವರು ಬ್ರಿಟಿಷರ ಮೇಲೆ ನುಗ್ಗಿಬಂದು ಕದನಮಾಡಿದ್ದರಲ್ಲಿ ಜರ್ಮನಿಯವರ ಕಡೆ 1,000 ಸೈನಿಕರು ಕೊಲೆಯಾದರು, ಇಲ್ಲವೇ ಗಾಯಪಟ್ಟರು, ಬ್ರಿಟಿಷರ ಕಡೆಯಲ್ಲಿ ನಷ್ಟವಾದದ್ದು ನೂರಕ್ಕಿಂತ ಕಡಮೆ. ಇನ್ನೊಂದು ಠಾಣ್ಯದಲ್ಲಿ ಜರ್ಮನಿಯವರು 200 ಹೆಣಗಳನ್ನು ಬಿಟ್ಟುಹೋದರು. ಮೂರನೇ ಸ್ಥಳದಲ್ಲಿ 500 ಮಂದಿ ಜರ್ಮನೀ ಸೈನಿಕರು ಕೈಸೆರೆ ಸಿಕ್ಕಿರುತ್ತಾರೆ. ಇವರೆಲ್ಲಾ ಪಡ್ಡೆ ಹುಡುಗರು, ಹೊಸ ದಿರಸುಗಳಲ್ಲಿ ಬಂದಿದ್ದರು. ಅನೇಕ ಮಂದಿ ಸೈನ್ಯಕ್ಕೆ ಸೇರಿ ಎಂಟು ವಾರಗಳು ಮಾತ್ರ ಆಗಿದ್ದು, ಇನ್ನೂ ಸರಿಯಾದ ತರಪೇತು ಕೂಡ ಆಗಿರಲಿಲ್ಲ.

ನಮ್ಮ ಕಡೆಯವರ ವಿಮಾನಗಳಿಂದ ಗುಂಡುಗಳು ಹೋಗಿ ಲೀಲ್ ಎಂಬ ಠಾಣ್ಯದಲ್ಲಿ ಬಿದ್ದು ಜರ್ಮನಿಯವರ ವಿಮಾನಯಂತ್ರಗಳ ಕಛೇರಿಗಳಲ್ಲಿ ನಷ್ಟವನ್ನುಂಟುಮಾಡಿದವು.

ಜರ್ಮನಿಯವರು ರೀಂ ಎಂಬ ನಗರಕ್ಕೆ ಪಿರಂಗಿ ಗುಂಡುಗಳನ್ನು ಹೊಡೆದು ಒಬ್ಬ ಹೆಂಗಸನ್ನೂ ಒಬ್ಬ ಹುಡುಗನನ್ನೂ ಕೊಲೆಮಾಡಿದರು. ಸಾಯಿಸನ್ ಎಂಬ ನಗರವನ್ನು ಸುಟ್ಟುಬಿಡಬೇಕೆಂದು ಅವರು ಆ ಪಟ್ಟಣದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹೊಡೆದರು.

ಅಂಕ್ವಾಪೀನೊಳಗಿರುವ ಜರ್ಮನಿ ಸಿಪಾಯಿಗಳಲ್ಲಿ 200 ಮಂದಿ ಸೈನ್ಯವನ್ನು ಬಿಟ್ಟು ತಪ್ಪಿಸಿಕೊಂಡು ಹೋದರೆಂದು ಹೇಳಲಾಗಿದೆ.

ರಷ್ಯಾ, ಜರ್ಮನಿ ಮತ್ತು ಆಸ್ಟ್ರಿಯಾ.

ಜರ್ಮನಿಯವರು ನಾಲ್ಕು ಹೊಸ ಸೈನ್ಯಗಳನ್ನು ಕೂಡಿಸಿ ಪೂರ್ವ ಪ್ರಷ್ಯಾಕ್ಕೆ ಕಳುಹಿಸಿದರು. ಈ ಸೈನಿಕರು ಸಾಹಸ ಕಾರ್ಯಗಳನ್ನು ನಡಿಸಿ ರಷ್ಯಾದವರನ್ನು ಅವರ ಎಲ್ಲೆಕಟ್ಟಿನ ಒಳಕ್ಕೆ ಹಿಮ್ಮೆಟ್ಟಿ ಹೋಗುವಂತೆ ಮಾಡಿದಾರೆ. ಯುದ್ಧದ ಪ್ರಾರಂಭದಲ್ಲಿ ಆದ ಕಾರ್ಯಗಳೇ ಮತ್ತೆ ನಡೆಯುತ್ತಿರುವವು. ಮೊದಲು ರಷ್ಯಾದವರು ಪೂರ್ವ ಪ್ರಷ್ಯಾದೊಳಕ್ಕೆ ನುಗ್ಗಿ ಬಂದಿದ್ದರು; ಆಗ ಜರ್ಮನಿಯವರು ಅವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟರು. ಅದರ ಮೇಲೆ ಜರ್ಮನಿಯವರು ರಷ್ಯಾದೊಳಕ್ಕೆ ನುಗ್ಗಿ ಹೋಗಬೇಕೆಂದು ಸಾಹಸಪಟ್ಟರು. ಇದು ಸಾಧ್ಯವಾಗಲಿಲ್ಲ; ಅನೇಕರನ್ನು ಕಳೆದುಕೊಂಡು ತುಂಬಾ ನಷ್ಟಪಟ್ಟು ಹಿಂದಕ್ಕೆ ಬರಬೇಕಾಯಿತು. ಅದೇ ಕಾರ್ಯಗಳು ಈಗ ಮತ್ತೆ ನಡೆಯುವವೆಂದು ತೋರುತ್ತದೆ.

ಮಧ್ಯಪ್ರದೇಶದಲ್ಲಿ ಅಂದರೆ ವಾರ್ಸಾ ನಗರದ ಬಳಿ ಜರ್ಮನಿಯವರು ರಷ್ಯಾದವರ ಮೇಲೆ ನುಗ್ಗಿ ಹೋಗುವುದನ್ನು ನಿಲ್ಲಿಸಿಬಿಟ್ಟು ಸುಮ್ಮನಾದರು. ರಷ್ಯಾದವರ ಬಲವಾದ ಸೈನ್ಯದ ಸಾಲುಗಳನ್ನು ಒಡೆದು ನುಗ್ಗುವದು ಅವರಿಗೆ

...ವಾಗದೆಹೋಯಿತು. ಅಲ್ಲಿ ನಡೆದ ಘೋರವಾದ ಕದನಗಳಲ್ಲಿ ಜರ್ಮನಿ ಯವರ ನಷ್ಟವು ಅಪಾರವಾಯಿತು. ಅಲ್ಲಿ ಸುಮಾರು 40,000 ಜರ್ಮನಿ ಸೈನಿಕರು ಕೊಲೆಯಾದರೆಂದು ಊಹಿಸಲ್ಪಟ್ಟಿದೆ.

ಕಾರ್ಪೇಥಿಯನ್ ಪರ್ವತ ಪ್ರಾಂತ್ಯದಲ್ಲಿ ಆಸ್ಟ್ರಿಯಾದವರೂ ಜರ್ಮನಿ ಯವರೂ ಮುಂದರಿಸಿ ನುಗ್ಗಿ ಹೋಗುತ್ತಿದ್ದರು. ರಷ್ಯಾದವರು ಅಲ್ಲಿಗೆ ಬಂದು ಅಡ್ಡಗಟ್ಟಿ ತಡೆದಿರುತ್ತಾರೆ. ಇನ್ನು ಮುಂದರಿಸಿ ಹೋಗಲಾರೆವೆಂದು ಆಸ್ಟ್ರಿಯಾದವರೇ ಹೇಳಿ ಒಪ್ಪಿಕೊಂಡಿದ್ದಾರೆ. ಒಂದುದಿನ ರಷ್ಯಾದವರು 11 ಮೆಷೀನ್ ಗನ್ನುಗಳ ಸಮೇತ 3,600 ಸೈನಿಕರನ್ನೂ, ಇನ್ನೊಂದು ದಿನ 18 ಮೆಷೀನ್ ಗನ್ನುಗಳ ಸಹಿತ 5,269 ಸೈನಿಕರನ್ನೂ, ಮತ್ತೊಂದು ದಿನ ಹಲವು ಮೆಷೀನ್ ಗನ್ನುಗಳು ಮತ್ತು ಒಂದು ಮೋರ್ಟರೆಂಬ ದೊಡ್ಡ ಫಿರಂಗಿ ಸಮೇತ 1,622 ಸೈನಿಕರನ್ನೂ ಸೆರೆಹಿಡಿದುಕೊಂಡಿರುತ್ತಾರೆ.

ರಷ್ಯಾದವರ ಲೈನಿನ ಪಶ್ಚಿಮ ಭಾಗದ ಕೊನೆಯಲ್ಲಿ ರಷ್ಯಾದವರು ಹಿಮ್ಮೆಟ್ಟಿ ಕೊಂಡುಹೋಗಿದ್ದಾರೆ.

ಜರ್ಮನಿಯವರೂ ಆಸ್ಟ್ರಿಯಾದವರೂ ತಮ್ಮ ಸೈನ್ಯಗಳನ್ನು ಕೂಡಿಸಿ ಕೊಂಡು ಮೊದಲು ಪೂರ್ವ ದಿಕ್ಕಿನಲ್ಲಿರುವ ರಷ್ಯಾದವರನ್ನು ಸಂಪೂರ್ಣವಾಗಿ ಸೋಲಿಸಬೇಕೆಂದೂ, ಆ ಬಳಿಕ ಹೊಸ ಸೈನ್ಯಗಳನ್ನು ಕೂಡಿಸಿ ಪಶ್ಚಿಮ ದಿಕ್ಕಿಗೆ ಅಂದರೆ ಫ್ರಾನ್ಸ್ ಮತ್ತು ಬೆಲ್ಜಿಯಮ್‌ಗೆ ಕಳುಹಿಸಬೇಕೆಂದೂ ಸಂಕಲ್ಪ ಮಾಡಿಕೊಂಡಿರುವಂತೆ ಕಾಣುತ್ತದೆ. ಆದರೆ ರಷ್ಯಾದವರ ಸೈನಿಕರು ದಿನೇ ದಿನೇ ಬೆಳೆಯುತ್ತಿರುವರು; ಜರ್ಮನಿಯವರಾದರೋ ಇನ್ನೂ ತರಪೇತಾಗದೆ ಇರು ವಂಥಾ ಸೈನಿಕರನ್ನು ಯುದ್ಧಕ್ಕೆ ಕಳುಹಿಸಬೇಕಾಗಿದೆ. ರಷ್ಯಾದವರು ಇನ್ನೂ ಅನೇಕ ಕಾಲ ಬಹಳ ಕಠಿಣವಾದ ಕದನಗಳನ್ನು ಮಾಡುತ್ತಾ ಬರಬೇಕಾಗಿದೆ ಯಾದರೂ ಜರ್ಮನಿ ಮತ್ತು ಆಸ್ಟ್ರಿಯಾದವರಿಗೆ ಗೆಲುವಾದೀತೆನ್ನುವುದಕ್ಕೆ ಯಾವ ಸೂಚನೆಯೂ ಕಾಣಬರುವುದಿಲ್ಲ.

ಈಜಿಪ್ಟ್.

ಸೂಯೆಸ್ ಕಾಲುವೆ ಬಳಿ ಇನ್ನೇನೂ ಯುದ್ಧಗಳು ನಡೆಯಲಿಲ್ಲ. ಅರಬ್ಬಿ ಯವರೂ ಟರ್ಕಿಯವರೂ ತಮ್ಮ ಸೈನ್ಯಗಳಿಂದ ಓಡಿಬಂದು ಬ್ರಿಟಿಷರಿಗೆ ಶರಣಾ ಗತರಾಗುತ್ತಿದ್ದಾರೆ. ನಮ್ಮ ಕಡೆಯವರು ಸೇರಿಕೊಂಡು ಟರ್ಕಿ ಸೈನಿಕರ 500 ಜನಗಳನ್ನು ಮಣ್ಣುಮಾಡಿದರು. ಇದುವರೆಗೆ ಅಲ್ಲಿ 652 ಮಂದಿ ಟರ್ಕಿ ಸೈನಿಕ ರು ಕೈಸೆರೆ ಸಿಕ್ಕಿದ್ದಾರೆ; ಇವರಲ್ಲಿ 100 ಮಂದಿ ಗಾಯಪಟ್ಟವರು. ಬ್ರಿಟಿಷರಿಗೆ ಅಲ್ಲಿ ಸಿಕ್ಕಿರುವ ಪದಾರ್ಥಗಳಲ್ಲಿ ಕೆಲವು ಉಕ್ಕಿನ ದೋಣಿಗಳಿವೆ. ಇವುಗಳಲ್ಲಿ 40 ಜನರು ಕೂಡಬಹುದು. ಟರ್ಕಿಯವರು ಈ ದೋಣಿಗಳಲ್ಲಿ ಆ ಕಾಲುವೆ ಯನ್ನು ದಾಟಿ ಬರಬೇಕೆಂದು ಉದ್ದೇಶಪಟ್ಟಿದ್ದರು. ಈ ದೋಣಿಗಳಲ್ಲಿ ಅವರು ತಮಗೆ ಕಾಡಿನೊಳಗೆ ಬೇಕಾಗುವ ನೀರನ್ನೂ ಸಾಗಿಸಿಕೊಂಡು ಬಂದಿದ್ದರು. ಈಗ ಯಾವರೋ ಟರ್ಕಿಯವರೆಲ್ಲಾ ಆ ಕಾಲುವೆಯಿಂದ 20 ಮೈಲಿ ಆಚೆಗೆ ಓಡಿಸ ಲ್ಪಟ್ಟಿದ್ದಾರೆ. ಅವರು ತಿರುಗಿ ಈ ಕಡೆಗೆ ಬರುವುದಿಲ್ಲವೆಂದು ಹೇಳುತ್ತಾರೆ.

ಅಲ್ಲಿ ನಡೆದ ಕದನಗಳಲ್ಲಿ ಬಿಕ್ಯಾನೀರ್ ಸಂಸ್ಥಾನದ ಮಹಾರಾಜರವರು ಸೇರಿದ್ದರು. ಈಗ ಇವರು ಕಿಶನ್‌ಘಡದ ಮಹಾರಾಜರವರ ಕೂಡ ಅಲ್ಲಿಂದ ಬೊಂಬಾಯಿಗೆ ಬರುತ್ತಿದ್ದಾರೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಿಂದ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪ. ಅವು ಗಳಲ್ಲಿ ಮುಖ್ಯವಾದವಾವುದೆಂದರೆ, ಬ್ರಿಟಿಷರ ಮೇಲೆ ದಂಗೆಯೆದ್ದು ಜರ್ಮನಿ ಯವರ ಕಡೆಗೆ ಹೋಗಿ ಸೇರಿಕೊಂಡಿದ್ದಂಥಾ ಮರಿಟ್ಸ್ ಎಂಬ ದ್ರೋಹಿಯು ಅಲ್ಲಿ ದ್ರೋಹಮಾಡಿದನೆಂದು ಜರ್ಮನಿಯವರು ಅವನನ್ನು ಜಲ್ಲಿಗೆ ಹಾಕಿ ಕೊಂಡುಬಿಟ್ಟರು. ಅವನು ಮಾಡಿದ ಪಶ್ಚಾತ್ತಾಪವೇನೆಂದರೆ, ಇವನು ಜರ್ಮನಿ ಯವರ ಫಿರಂಗಿ ಸೈನ್ಯವನ್ನು ಒಂದು ಕಡೆಗೆ ನಡೆಸಿಕೊಂಡು ಹೋದನು. ಅವರು ಅಲ್ಲಿ ಸಿಕ್ಕಿಬಿದ್ದು ತಪ್ಪಿಸಿಕೊಂಡು ಹೋಗುವುದೇ ಮಹಾ ಪ್ರಯಾಸವಾಯಿತು.

ಇವರಿಂದ ಜರ್ಮನಿಯವರಿಗೆ ಬೋಯರರಲ್ಲಿ ನಂಬಿಕೆ ಸಾಲದೆಂಬುವುದು ಖಚಿತವಾಯಿತು; ಬೋಯರರಿಗೂ ಅವರಲ್ಲಿ ನಂಬಿಕೆಯಿಲ್ಲ. ಜರ್ಮನಿಯವರು ದಕ್ಷಿಣ ಆಫ್ರಿಕದಲ್ಲಿ ದಂಗೆಯನ್ನೆಬ್ಬಿಸಬೇಕೆಂದು ಪ್ರಯತ್ನಪಟ್ಟಿದ್ದು ವ್ಯರ್ಥವಾ ಯಿತು. ಇನ್ನು ದಕ್ಷಿಣ ಆಫ್ರಿಕಾ ಸೈನಿಕರು ನುಗ್ಗಿ ಹೋಗಿ ಜರ್ಮನಿಯವರ ದಕ್ಷಿಣ ಪಶ್ಚಿಮ ಆಫ್ರಿಕಾವನ್ನು ಸ್ವಾಧೀನಪಡಿಸಿಕೊಳ್ಳುವುದೇ ಅವರ ಕೆಲಸ

ಸಮುದ್ರದ ಮೇಲೆ.

ಜರ್ಮನಿಯವರು ತಮ್ಮ ಕಡೆ ಸಮುದ್ರದ ಮೇಲೆ ನಷ್ಟವಾದಷ್ಟೆಂಬು ದನ್ನು ಪ್ರಕಟಿಸಿದ್ದಾರೆ. ಮೊನ್ನೆ ಬ್ಲೂಚರ್ ಎಂಬ ಹಡಗಿನಲ್ಲಿ ಮುಳುಗಿಹೋ ದವರಲ್ಲದೆ 15,000 ಸೈನ್ಯಗಳು ನಷ್ಟವಾಗಿರುತ್ತವೆ. ಡಿಸ್ಟ್ರಾಯರುಗಳೆಂಬ ಎಂಟು ಯುದ್ಧದ ಹಡಗುಗಳೂ, ಎರಡು ಸಬ್‌ಮೆರೀನುಗಳೂ, ಒಂದು ಯುದ್ಧದ ಹಡಗೂ ಕಳೆದ ನೊವೆಂಬರ್ ತಿಂಗಳಲ್ಲಿ ನಾಶವಾದವೆಂದೂ ಹೇಳಿ ದ್ದಾರೆ. ಜರ್ಮನಿಯವರಿಗೆ ಸಮುದ್ರದ ಮೇಲೆ ಇಷ್ಟೊಂದು ನಷ್ಟವಾಗಿರುವು ದೆಂದು ಬ್ರಿಟಿಷರು ಮೊದಲು ತಿಳಿದಿರಲಿಲ್ಲ.

ಬ್ರಿಟಿಷ್ ಸಮುದ್ರ ಸೈನ್ಯಕ್ಕೆ 32,000 ಹುದ್ದೇದಾರರೂ ಸೈನಿಕರೂ ಹೊಸದಾಗಿ ಸೇರಿಕೊಂಡಿದ್ದಾರೆ. ಈಗ ಬ್ರಿಟಿಷರ ಸಮುದ್ರ ಸೈನ್ಯದಲ್ಲಿ ಒಟ್ಟು 2,50,000 ಮಂದಿ ಯುದ್ಧಭಟರಿರುತ್ತಾರೆ.

ಇಂಗ್ಲಿಷ್ ಕಾಲುವೆಯಲ್ಲಿ ಜರ್ಮನಿಯವರ ಸಬ್‌ಮೆರೀನ್ ಹಡಗು ಬಡಿದು ಇನ್ನೊಂದು ಇಂಗ್ಲಿಷ್ ಹಡಗು ಮುಳುಗಿಹೋಗಿರುವಂತೆಯೂ, ಅದರಲ್ಲಿದ್ದ 21 ಜನಗಳೂ ಸಮುದ್ರದ ಪಾಲಾದಂತೆಯೂ ತೋರಿಬರುತ್ತದೆ.

ಕಪ್ಪು ಕಡಲಿನಲ್ಲಿ ಜರ್ಮನಿಯವರ ಬ್ರೆಸ್ಲಾ ಎಂಬ ಹಡಗು ಹೋಗಿ ರಷ್ಯಾದವರಿಗೆ ಸೇರಿದ ಯಾಲ್ಟಾ ಎಂಬ ತೀರಪಟ್ಟಣದೊಳಕ್ಕೆ ಫಿರಂಗಿ ಗುಂಡುಗ ಳನ್ನು ಹೊಡೆಯಿತು. ಇದರಿಂದ ಆ ನಗರದಲ್ಲಿ ನಾಲ್ಕು ಅಂಗಡಿಗಳಿಗೆ ಸ್ವಲ್ಪ ನಷ್ಟವಾಯಿತಲ್ಲದೆ ಇನ್ನಾವ ಕೆಡಕೂ ಆಗಲಿಲ್ಲ. ರಷ್ಯಾದವರ ಯುದ್ಧದ ಹಡ ಗುಗಳು ಟ್ರೆಬಿಜಾಂಡ್ ನಗರಕ್ಕೆ ಫಿರಂಗಿ ಗುಂಡುಗಳನ್ನು ಹೊಡೆದವು. ಇದ ರಿಂದ ಮೂರು ಸೇತುವೆಗಳು ಮುರಿದು ಹಾಳಾದವಲ್ಲದೆ ಕೆಲವು ವ್ಯಾಪಾರದ ಹಡಗುಗಳೂ ಮುಳುಗಿಹೋದವು.

ನಮ್ಮ ಕಡೆಯವರು ನಾಲ್ಕು ಡಿಸ್ಟ್ರಾಯರುಗಳೆಂಬ ಹಡಗುಗಳನ್ನು ತೆಗೆದುಕೊಂಡು ಹೋಗಿ ಡಾರ್ಡನೆಲ್ಸ್ ಎಂಬ ತೀರಪಟ್ಟಣಕ್ಕೆ ಗುಂಡುಗಳನ್ನು ಹೊಡೆದು ಅದರೊಳಗಿದ್ದ ಕೆಲವು ಉಗ್ರಾಣದ ಮನೆಗಳನ್ನು ಹಾಳುಮಾಡಿದರು.

ಇತರ ವಿಷಯಗಳು.

ಕೆನಡಾ ಎಂಬ ಬ್ರಿಟಿಷ್ ಸ್ವಾಸ್ಥ್ಯದವರು ಸೈನ್ಯಗಳನ್ನು ಕೂಡಿಸಿ 30,000 ವನ್ನು ಯೂರೋಪಿಗೂ, 1,000 ವನ್ನು ಬರ್ಮುಡಾಕ್ಕೂ ರವಾನೆಮಾಡಿದರು. ಇನ್ನು ತರಪೇತಾದ 10,000 ಸೈನ್ಯಗಳು ಹಡಗು ಹತ್ತುವುದಕ್ಕೆ ಸಿದ್ಧವಾಗಿವೆ. ಇದಲ್ಲದೆ 50,000 ಪ್ರಜೆಗಳು ಸೈನ್ಯಕ್ಕೆ ಸೇರಿಕೊಂಡು ತರಪೇತಾಗುತ್ತಿದ್ದಾರೆ.

ಸಂಯುಕ್ತ ಸಂಸ್ಥಾನಗಳ ಪ್ರಜೆಗಳು ಕೆನಡಾದಲ್ಲಿ ನಾನಾ ಉದ್ಯೋಗಗ ಳನ್ನು ಮಾಡುತ್ತಿದ್ದಾರೆ. ಇವರಲ್ಲಿ ಅನೇಕರು ನಮ್ಮ ಕಡೆಯವರಿಗೆ ಸಹಾಯಕ ರಾಗಿ ನಿಲ್ಲಬೇಕೆಂದು ಸೈನ್ಯಕ್ಕೆ ಸೇರಿ ತರಪೇತಾಗುತ್ತಿರುವರು.

ಬ್ರಿಟಿಷ್ ಪಾರ್ಲಿಮೆಂಟಿನವರು 30,00,000 ಸೈನ್ಯಗಳನ್ನು ಸಿದ್ಧಪಡಿಸುವು ದಕ್ಕೆ ಹಣವನ್ನು ಖರ್ಚು ಮಾಡಬೇಕೆಂದು ಒಪ್ಪಿ ಸಮ್ಮತಿ ಕೊಟ್ಟಿದ್ದಾರೆ.

ಯುದ್ಧಭೂಮಿಯಿಂದ ಗಾಯಪಟ್ಟು ಬಂದ ಬ್ರಿಟಿಷ್ ಸೈನಿಕರಲ್ಲಿ ಶೇಕಡ 60 ಮಂದಿಯಷ್ಟು ಚಿಕಿತ್ಸೆಯಿಂದ ವಾಸಿಯಾಗಿ ಮತ್ತೆ ಯುದ್ಧಭೂಮಿಗೆ ಹೋಗಿ ನಿಲ್ಲಲು ಸಿದ್ಧರಾಗಿರುತ್ತಾರೆ.

ರಷ್ಯಾ ಚಕ್ರಾಧಿಪತ್ಯದ ಪಾರ್ಲಿಮೆಂಟ್ ಸಭೆಗೆ ಡ್ಯೂಮಾ ಎಂದು ಹೆಸರು. ಈ ಸಭೆ ಮನೆಯಲ್ಲಿ ಪ್ರತಿನಿಧಿಗಳು ಸೇರಿ ಯುದ್ಧವನ್ನು ಮುಂದರಿಸಿ ನಡೆಸು ತ್ತಲೇ ಬರಬೇಕೆಂದು ಅತ್ಯಂತ ಉತ್ಸಾಹದಿಂದ ಒಪ್ಪಿಕೊಂಡಿದ್ದಾರೆ. ರಷ್ಯಾದ ವರು ಬ್ರಿಟನ್ ಮತ್ತು ಫ್ರಾನ್ಸ್ ರಾಜ್ಯಗಳ ಅಭಿಮತವನ್ನು ಅನುಸರಿಸಿ ಅನ್ಯೋನ್ಯವಾಗಿ ಯುದ್ಧ ಕಾರ್ಯಗಳನ್ನು ನಡೆಸುತ್ತಾ ಬಂದಿರುತ್ತಾರೆ. ಈ ಯುದ್ಧ ಕಾರ್ಯಗಳಿಗೋಸ್ಕರ ರಷ್ಯಾದವರು ದಿನ ಒಂದಕ್ಕೆ 2 ಕೋಟಿಯೂ, 10 ಲಕ್ಷ ರೂಪಾಯಿಯಂತೆ ಖರ್ಚುಮಾಡುತ್ತಿರುವರು. ನಮ್ಮ ಲೇಟ್ ಚಕ್ರ ವರ್ತಿ ಸಾರ್ವಭೌಮರಾದ ಎಡ್ವರ್ಡ್ ಪ್ರಭುಗಳು ಪ್ರಪಂಚದಲ್ಲಿ ನೆಮ್ಮದಿಯೂ, ಸಮಾಧಾನವೂ ನೆಲೆಗೊಳ್ಳುವಂತೆ ಮಾಡಬೇಕೆಂದು ತುಂಬಾ ಸಾಹಸಪಡುತ್ತಿದ್ದ ರೆಂದು ಡ್ಯೂಮಾ ಸಭೆಯಲ್ಲಿ ಪ್ರೆಸಿಡೆಂಟರು ಪ್ರಶಂಸೆಮಾಡಿದರು. ಬೇರೆಬೇರೆ ರಾಜ್ಯಗಳನ್ನು ಕರಾರುಗಳ ಮೂಲಕ ಒಂದಾಗುವಂತೆ ಮಾಡಿದ್ದರಲ್ಲಿ ಅಂಥಾ ರಾಜ್ಯಗಳೆಲ್ಲಾ ಏಕವಾಗಿ ಇತರರು ಮೇಲೆ ಬಿದ್ದು ಯುದ್ಧಕ್ಕೆ ಬರುವಾಗ ಅವ ರನ್ನು ನಿಗ್ರಹಮಾಡುವಂತಿರಬೇಕೆಂಬುವದೇ ಗತಿಸಿದ ಎಡ್ವರ್ಡ್ ಪ್ರಭುವಿನ ಮುಖ್ಯ ಉದ್ದೇಶವಾಗಿತ್ತು. ಜರ್ಮನಿಯವರ ದೃಷ್ಟಿಯಲ್ಲಿ ಈ ಪ್ರಭುವು ಶತ್ರುವಾಗಿ ಪರಿಣಮಿಸಿದನು; ಆದರೆ ಎಲ್ಲರೂ ನೆಮ್ಮದಿಯಾಗಿ ಬದುಕೋಣ ವೆಂಬುವದೇ ಎಡ್ವರ್ಡ್ ಪ್ರಭುವಿನ ಮುಖ್ಯ ಆಶಯವಾಗಿತ್ತು.

ನೊರ್ವೇ ರಾಜ್ಯದ ಒಂದು ಹಡಗು ಮೆಕ್ಸಿಕೋದಿಂದ ಜರ್ಮನಿಯ ರಾಯ ಭಾರಿಯನ್ನು ಚೀನಾ ರಾಜ್ಯಕ್ಕೆ ಗುಟ್ಟಾಗಿ ಕರೆದುಕೊಂಡು ಬಂದಿತೆಂದು ಜಪಾನ್ ನವರು ಆಕ್ಷೇಪಣೆಮಾಡಿ ಆ ಹಡಗನ್ನು ಹಿಡಿದಿಟ್ಟುಕೊಂಡಿದ್ದಾರೆ.

ರೊಮೇನಿಯಾದವರಿಗೂ ಬಲ್ಗೇರಿಯಾದವರಿಗೂ ಇದ್ದ ಪರಸ್ಪರ ವೀರ ವೈಷಮ್ಯಗಳು ಕಡಿಮೆಯಾಗಿ ಅವರವರಿಗೆ ಸ್ನೇಹಭಾವವು ಉಂಟಾಗುತ್ತಿದೆ ಎಂದು ಹೇಳಲಾಗಿದೆ. ಇತ್ತಲಾಗಿ ರಷ್ಯಾ, ಗ್ರೀಸ್, ರೊಮೇನಿಯಾ ರಾಜ್ಯಗಳಲ್ಲಿ ಅನ್ಯೋನ್ಯಭಾವವು ಬಹಳ ತೃಪ್ತಿಕರವಾಗಿರುತ್ತದೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಎರಡನೇ ಕುಮಾರರಾದ ಪ್ರಿನ್ಸ್ ಆಲ್ಬರ್ಟ್ ರವರು ಬ್ರಿಟಿಷ್ ಯುದ್ಧದ ಹಡಗಿನಲ್ಲಿ ನೌಕರಿಮಾಡಲು ವಾಪಸು ಹೋದರು.

ಕಪ್ಪು ಕಡಲಿನಲ್ಲಿ 900 ಟನ್‌ಗಳಷ್ಟು ಆಹಾರಸಾಮಗ್ರಿಗಳನ್ನು ಸಾಗಿಸಿ ಕೊಂಡುಹೋಗುತ್ತಿದ್ದ ಟರ್ಕಿಯವರ ಒಂದು ಭಾರೀ ಹಡಗನ್ನು ರಷ್ಯಾದವರು ತಡೆದು ಅನಾಮತ್ತು ಮುಳುಗಿಸಿರುತ್ತಾರೆ.

ಜರ್ಮನಿ, ಆಸ್ಟ್ರಿಯಾ ಮತ್ತು ಟರ್ಕಿ ಸೈನ್ಯಗಳಲ್ಲಿ ಇದುವರೆಗೆ ಒಟ್ಟು 32,50,000 ಮಂದಿ ನಷ್ಟವಾದರೆಂದೂ, ಈ ಪೈಕಿ ಅನೇಕರು ಕೊಲೆಯಾದ ರೆಂದೂ ಹೇಳಲಾಗಿದೆ. ಈ ಸೈನಿಕರು ಒಟ್ಟೊಟ್ಟಾಗಿ ನುಗ್ಗಿ ಕಡಿದಾಡಿದ್ದೇ ಇಷ್ಟು ನಷ್ಟವಾಗುವುದಕ್ಕೆ ಕಾರಣ. ನಮ್ಮ ಪಕ್ಷದ ಸೈನಿಕರಲ್ಲಿ ಗಾಯಪಟ್ಟ ಸೈನಿಕರು 100 ಕ್ಕೆ 68 ಮಂದಿಯಂತೆ ಗುಣಹೊಂದಿ ಮತ್ತೆ ಯುದ್ಧಭೂಮಿಗೆ ಹೋಗಿರು ವಂತೆ ತಿಳಿಯುವುದು.

ಜರ್ಮನಿ, ಆಸ್ಟ್ರಿಯಾಗಳ ಸ್ಥಿತಿಯು.

ಕಳೆದ ವಾರ ನಾವು ತಿಳಿಸಿರುವಂತೆ ಜರ್ಮನಿಯವರು ಪರರಾಜ್ಯಗಳಿಗೆ ಒಂದು ಇಸ್ತಿಹಾರಿನ ಮೂಲಕ ಈಗಿನ ಯುದ್ಧದಲ್ಲಿ ಸೇರದೆ ಇರುವಂಥಾ ರಾಜ್ಯಗಳ ಹಡಗುಗಳು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಮುದ್ರತೀರ ಗಳಿಗೆ ಬರಕೂಡದೆಂದೂ, ಅವುಗಳಿಗೆ ಉಂಟಾಗಬಹುದಾದ ಕಷ್ಟನಷ್ಟಗಳಿಗೆ ಜರ್ಮನಿಯವರು ಜವಾಬ್ದಾರರಲ್ಲವೆಂದೂ ಪ್ರಕಟಮಾಡಿದರು.

ಈ ಇಸ್ತಿಹಾರು ಅಂಥಾ ಪರರಾಜ್ಯಗಳಲ್ಲಿ ಜರ್ಮನಿಯವರ ಮೇಲೆ ಆಗ್ರ ಹವನ್ನುಂಟುಮಾಡಿದೆ. ಅದಕ್ಕೆ ಪ್ರತಿಯಾಗಿ ಅಮೇರಿಕದ ಸಂಯುಕ್ತ ಸಂಸ್ಥಾನ ಗಳವರು ತಮ್ಮ ಹಡಗುಗಳೇನಾದರೂ ಮುಳುಗಿಸಲ್ಪಟ್ಟರೆ ಜರ್ಮನಿಗೂ ಅಮೇ ರಿಕಾಕ್ಕೂ ಇರುವ ಅನ್ಯೋನ್ಯ ಭಾವಕ್ಕೆ ಕುಂದಕವುಂಟಾದೀತೆಂದು ಜರ್ಮನಿಗೆ ತಿಳಿಸಿರುತ್ತಾರೆ. ಅಮೇರಿಕದ ವರ್ತಮಾನ ಪತ್ರಿಕೆಗಳಾದರೋ ಜರ್ಮನಿಯವರು ಬ್ರಿಟಿಷ್ ಹಡಗುಗಳ ಮೇಲೆ ಯುದ್ಧನಡೆಸಬೇಕಲ್ಲದೆ ಪರರಾಜ್ಯಗಳವರನ್ನು ಗಾಬ ರಿಪಡಿಸಕೂಡದು ಎಂದು ಎಚ್ಚರಿಕೆ ಹೇಳುತ್ತಿರುವುವು.

ಹಾಲೆಂಡಿನ ಪತ್ರಿಕೆಗಳು ಜರ್ಮನಿಯವರ ಇಸ್ತಿಹಾರಿನಿಂದ ಹಾಲೆಂಡ್ ರಾಜ್ಯವನ್ನು ಯುದ್ಧಕ್ಕೆ ಎಳೆದುಕೊಳ್ಳುವುದೆಂದೂ, ಇಟಲಿಯ ಪತ್ರಿಕೆಗಳು ಜರ್ಮನಿಯ ಇಸ್ತಿಹಾರನ್ನು ಇಟಲಿ ರಾಜ್ಯವು ಒಪ್ಪಿಕೊಳ್ಳುವುದಿಲ್ಲವೆಂದೂ ಹೇಳುತ್ತವೆ.

ಇದಕ್ಕೆ ಪ್ರತಿಯಾಗಿ ಜರ್ಮನಿಯ ಮಿಲಿಟರಿ ಪಕ್ಷವು ಹೇಳುವ ಸಮಾ ಧಾನವೇನೆಂದರೆ, ಗ್ರೇಟ್ ಬ್ರಿಟನ್‌ನವರು ಜರ್ಮನಿಯನ್ನು ಮುತ್ತಿಗೆ ಹಾಕಿ ಕೊಂಡಿರುವಂಥಾ ಕೋಟೆಯೋಪಾದಿಯಲ್ಲಿ ಮಾಡಿಟ್ಟಿದ್ದಾರೆ; ಇದರಿಂದ ಜರ್ಮ ನಿಯೊಳಗಿರುವ ಏಳು ಕೋಟಿ ಗಂಡಸರು ಹೆಂಗಸರು ಮಕ್ಕಳುಗಳ ಜೀವನ ನಡೆ ಯುವುದು ಪ್ರಯಾಸವಾಗಿರುವುದು. ಈ ಯುದ್ಧವು ಕಿರಾತಕರ ಯುದ್ಧವೇ ಹೊರತು ನಾಗರಿಕರಿಗೆ ಸಲ್ಲುವಂಥಾದ್ದಲ್ಲ ಎಂಬದಾಗಿ ಹೇಳಿರುತ್ತಾರೆ. ಹಾಗಾ ದರೆ ಜರ್ಮನಿಯವರು ತಮ್ಮ ಹಡಗುಗಳನ್ನು ಕಳುಹಿಸಿ ಬ್ರಿಟಿಷರ ಹಡಗುಗಳ ನ್ನೆಲ್ಲಾ ಓಡಿಸಿಬಿಟ್ಟು ಜರ್ಮನಿಗೆ ಆಹಾರ ಸಾಮಗ್ರಿಗಳು ಸರಾಗವಾಗಿ ಬರುವಂತೆ ಯಾಕೆ ಮಾಡಿಕೊಳ್ಳಬಾರದು?

ಇವನ್ನೆಲ್ಲಾ ನೋಡಲಾಗಿ ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳಲ್ಲಿ ಮುಂದಿನ ಸುಗ್ಗಿಕಾಲದ ತನಕ ಪ್ರಜೆಗಳಿಗೆ ಸಾಲುವಷ್ಟು ಆಹಾರ ಧಾನ್ಯಗಳು ಇಲ್ಲವೆಂದು ಸ್ಪಷ್ಟವಾಗುವುದು. ಜರ್ಮನಿಯೊಳಗೆ ಗೋಧಿಯನ್ನೂ ಹಿಟ್ಟನ್ನೂ ಗವ ರ್ನ್‌ಮೆಂಟಿನವರೇ ಕೊಂಡಿಟ್ಟುಕೊಂಡು ಪ್ರಜೆಗಳಿಗೆ ಹಂಚಿಕೊಡುತ್ತಿದ್ದಾರೆ. ರಾಜಧಾನಿಯಾದ ಬರ್ಲಿನ್ ನಗರದೊಳಗೆ ಪ್ರತಿ ಒಂದು ಮನೆಯ ಯಜಮಾನನೂ ತನ್ನ ಸಂಸಾರದಲ್ಲಿರುವ ಜನರ ಸಂಖ್ಯೆಯನ್ನು ತಿಳಿಸಿ ಸರ್ಕಾರದಿಂದ ಅಷ್ಟು ಚೀಟಿಗಳನ್ನು ಪಡೆದು ಸರ್ಕಾರಿ ಉಗ್ರಾಣದ ಅಧಿಕಾರಿಗಳಿಗೆ ತೋರಿಸಿ ಅವರು ಕೊಡುವಷ್ಟು ದವಸವನ್ನು ತಂದು ಊಟಮಾಡಬೇಕಾಗಿದೆ. ಮಕ್ಕಳಿಗೆ ಮೊದಸೇ ಳುವದಲ್ಲಿ ಸ್ವಲ್ಪ ಕಡಿಮೆಯಾಗಿ ಬಡಿಸಬೇಕೆಂದು ಅಪ್ಪಣೆಯಾಗಿದೆ. ಹಂಗೇ ರಿಯ ಕೆಲವು ಸ್ಥಳಗಳಲ್ಲಿ ಪ್ರಜೆಗಳು ಹೊಟ್ಟೆಗಿಲ್ಲದೆ ಸಂಕಟ ಪಡುತ್ತಿರೋಣದ ರಿಂದ ಅಲ್ಲಿ ರಾಜ್ಯಕ್ರಾಂತಿ ಹುಟ್ಟುವುದೆಂದು ಕಾಣುತ್ತದೆ.

ಪ್ರಷ್ಯದ ಪಾರ್ಲಿಮೆಂಟ್ ಸಭೆ ಮನೆಯೊಳಗೆ ಪ್ರೆಸಿಡೆಂಟರು ಮೆಂಬರುಗಳನ್ನು ಕುರಿತು "ನಮ್ಮ ಉದ್ದೇಶ ಕೈಗೂಡುವುದು ಇನ್ನೂ ಬಹುಕಾಲವಾಗಬೇಕು; ಆದಕಾರಣ ಎಲ್ಲರೂ ಒಗ್ಗಟ್ಟಾಗಿರಬೇಕು" ಎಂಬದಾಗಿ ಹೇಳಿದರು. ಆದರೆ ಸೋಷಲಿಸ್ಟ್ ಎಂಬ ಪಂಗಡಕ್ಕೆ ಸೇರಿದ ಮೆಂಬರುಗಳು ಅದನ್ನು ಒಪ್ಪದೆ "ನಾವು ಇನ್ನು ಗವರ್ನ್‌ಮೆಂಟಿಗೆ ಬೆಂಬಲವಾಗಿ ನಿಲ್ಲಲಾರೆವು" ಎಂದು ಹೇಳಿದರು. ಆದಾಗ್ಯೂ ಈ ಪಂಗಡದವರ ಸಂಕಲ್ಪವು ನೆರವೇರುವ ಹಾಗೆ ಕಾಣುವುದಿಲ್ಲ; ಯಾಕೆಂದರೆ ಅವರು ಅಷ್ಟೇನೂ ಪ್ರಬಲರಾಗಿಲ್ಲ. ಜರ್ಮನಿಯಲ್ಲಿ ಅನೇಕಾ ನೇಕ ಪ್ರಜೆಗಳು ಕೆಲಸ ತಪ್ಪಿಹೋಗಿ ಅಲೆಯುತ್ತಿದ್ದಾರೆ; ಇಷ್ಟರಲ್ಲೇ ಆ ದೇಶ ದೊಳಗೆ ಬರಗಾಲದ ಕಷ್ಟಗಳು ಪ್ರಾಪ್ತವಾಗುವಂತಿವೆ.

ಜರ್ಮನಿಯೊಳಗೆ ಈಗ ಕೊರತೆಯುಂಟಾಗಿರುವುದು ಆಹಾರ ಧಾನ್ಯಗಳೇ ಅಲ್ಲ; ಮದ್ದು ಗುಂಡು ಯುದ್ಧ ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದಕ್ಕೆ ಜರ್ಮನಿಗೆ ತಾಂಬ್ರ, ಸೀಸ ಮೊದಲಾದ ಇತರ ವಸ್ತುಗಳೂ ಬೇಕಾಗಿರುವವು. ನಮ್ಮ ಕಡೆಯವರು ಈಗಿನಂತೆಯೂ ಇನ್ನೂ ವಿಶೇಷವಾಗಿಯೂ ಜರ್ಮನಿಯ ವರನ್ನು ಕಷ್ಟಪಡಿಸುತ್ತಾ ಬಂದ ಪಕ್ಷದಲ್ಲಿ ಇನ್ನು ಕೆಲವು ದಿನಗಳೊಳಗಾಗಿ ಜರ್ಮನಿ ಮತ್ತು ಆಸ್ಟ್ರಿಯಾದವರ ಸ್ಥಿತಿಯು ತುಂಬಾ ಪ್ರಯಾಸವೂ ಸಂಕಟ ಕರವೂ ಆಗುತ್ತದೆ.

ನಮ್ಮ ವೈಸ್‌ರಾಯರವರು.

ನಮ್ಮ ವೈಸ್‌ರಾಯರವರು ನಾರ್ತ್‌ಬ್ರೂಕ್ ಎಂಬ ಹಡಗು ಹತ್ತಿ ಫರ್ಷಿಯ ಖಾರಿಯಿಂದ ಹಿಂತಿರುಗಿ ಹಿಂದುಸ್ಥಾನವನ್ನು ಕುರಿತು ಪ್ರಯಾಣಮಾಡಿದರು. ಹೀಗೆ ವಾಪಸು ಬರುವಲ್ಲಿ ಅವರು ಫರ್ಷಿಯ ಖಾರಿಯ ಮುಖದಲ್ಲಿ ಅರಬ್ಬಿಯ ಕಡೆ ಇರುವ ಮಸ್ಕತ್ ಸಂಸ್ಥಾನದಲ್ಲಿ ತಂಗಿದರು. ಮಸ್ಕತ್ ಸುಲ್ತಾನರು ವೈಸ್ ರಾಯರವರನ್ನು ಎದುರುಗೊಂಡು ಸತ್ಕಾರಮಾಡಿದ ಮೇಲೆ ಸುಲ್ತಾನರ ಮತ್ತು ಅವರ ಸಂಸ್ಥಾನದಲ್ಲಿರುವ ಬ್ರಿಟಿಷ್ ಪ್ರಜೆಗಳ ಅರ್ಜಿಪತ್ರಗಳನ್ನು ಅಂಗೀಕರಿಸಿ ವೈಸ್‌ರಾಯರವರು ಪ್ರತ್ಯುತ್ತರಗಳನ್ನು ದಯಪಾಲಿಸಿದರು. ಮಸ್ಕತ್ ಸುಲ್ತಾ ನರು ತಮಗೆ ಬ್ರಿಟಿಷ್ ಗವರ್ನ್‌ಮೆಂಟಿನಲ್ಲಿರುವ ಭಕ್ತಿಪ್ರೀತಿಗಳನ್ನು ಅರಿಕೆಮಾ ಡಿದರು. ನಮ್ಮ ವೈಸ್‌ರಾಯರವರು ಆ ಪ್ರಾಂತ್ಯ ದಯಮಾಡಿಸಿದ್ದರಿಂದ ಮಸ್ಕತ್ ಮತ್ತು ಹಿಂದುಸ್ಥಾನಗಳ ಅನ್ಯೋನ್ಯವೂ ಐಕಮತ್ಯವೂ ದೃಢಪಡಲು ತುಂಬಾ ಅನುಕೂಲವಾಯಿತು.

ಅರ್ಥಸಾಧಕ ಪತ್ರಿಕೆಯ ಕನ್ನಡ ಮತ್ತೂ ಇಂಗ್ಲಿಷ್ ಮೊದಲನೇ ಸಂಚಿಕೆ ಗಳು ನಮಗೆ ತಲುಪಿರುತ್ತವೆ. ಕನ್ನಡ ಸಂಚಿಕೆಯಲ್ಲಿರುವ ಬಹು ಭಾಗವೆಲ್ಲಾ "ಅರ್ಥಸಾಧಕ ಪತ್ರಿಕೆ" ಇಂಗ್ಲಿಷ್ ಸಂಚಿಕೆಯ ಭಾಷಾಂತರವಾಗಿದೆ. ಪ್ರಜೆಗ ಳಲ್ಲಿ ಯಾವ ಯಾವ ಪಂಗಡದವರಿಗೋಸ್ಕರ ಈ ಮಾಸ ಪತ್ರಿಕೆಯನ್ನು ರಚಿಸಿ ಹೊರಡಿಸಿರುತ್ತಾರೆಯೋ ತಿಳಿದು ಹೇಳುವುದು ಕಷ್ಟ. ಇದು ಕಸಬುದಾರರಿಗೋಸ್ಕರವೆಂದು ಹೇಳೋಣವೆಂದರೆ ನಮ್ಮ ಸೀಮೆಯಲ್ಲಿ ಕಸಬುದಾರರ ಸಂಖ್ಯೆಯೇ ಬಹಳ ಸ್ವಲ್ಪ; ಅಥವಾ ಈ ಹೊಸ ಪತ್ರಿಕೆಯು ವ್ಯವ ಸಾಯಗಾರರಿಗೋಸ್ಕರ ಪ್ರಕಟವಾಗಿದೆಯೆಂದು ಹೇಳೋಣವೆಂದರೆ ಮೈಸೂರು ಸಂಸ್ಥಾನದೊಳಗೆ ಅನೇಕಾನೇಕ ರೈತಪ್ರಜೆಗಳು ಅಕ್ಷರವನ್ನೇ ಕಾಣರು. ಕನ್ನಡ ಸಂಚಿಕೆಯಲ್ಲಿ ಬರೆಯುವ ಮಾತುಗಳು ಅತ್ಯಂತ ಸುಲಭವಾಗಿದ್ದ ಪಕ್ಷದಲ್ಲಿ ಓದು ಬಲ್ಲಂಥಾ ರೈತನು ಅದರಲ್ಲಿರುವ ವಿಷಯಗಳನ್ನು ಗ್ರಹಿಸಿಕೊಳ್ಳುವನು. ಕೆಲವು ವೇಳೆ ಸ್ವಲ್ಪ ಕಷ್ಟಕರವಾದ ಸಂಗತಿಗಳನ್ನು ರೈತನಿಗೆ ತಿಳಿಸಬೇಕು. ವ್ಯವ ಸಾಯವನ್ನು ಅಭಿವೃದ್ಧಿ ಮಾಡುವುದಕ್ಕೆ ಅವಶ್ಯವಾದ ಶಾಸ್ತ್ರವಿಚಾರಗಳು ಬರೆ ಯಲ್ಪಡಬೇಕು. ಪ್ರಾರಂಭದಲ್ಲಿ ಇಂಥಾ ಕಠಿಣ ವಿಷಯಗಳು ಎಷ್ಟು ಸ್ವಲ್ಪವಾ ಗಿದ್ದರೆ ಅಷ್ಟು ಒಳ್ಳೆಯದು. ಕಾರ್ಯತಃ ಸಾರ್ಥಕವಾಗತಕ್ಕ ವಿಚಾರಗಳನ್ನೇ ಬರೆಯುತ್ತಾ ಬರಬೇಕಾದದ್ದು ಪರಮಾವಶ್ಯಕ. ಶಾಸ್ತ್ರವಶ್ಯಾದ ಸಂಗತಿಗಳನ್ನು ಯಾರಾದರೂ ತಿಳಿಯಬೇಕೆಂದು ಕೇಳುವಾಗ ಪ್ರತ್ಯುತ್ತರವಾಗಿ ಬರೆದು ತಿಳಿಸು ವುದು ಹಿತಕರವಾಗುವುದು. ಈ ಪತ್ರಿಕೆಯಲ್ಲಿ ಪ್ರಶ್ನೋತ್ತರಗಳಿಗೋಸ್ಕರ ಒಂದು ಭಾಗವನ್ನು ವಿನಿಯೋಗಿಸಿ, ನಮ್ಮ ಸಂಸ್ಥಾನದೊಳಗೆ ಕಸಬುದಾರರಾಗಲಿ, ವ್ಯವ ಸಾಯಗಾರರಾಗಲಿ ತಿಳಿಯಬೇಕೆಂದು ಕುತೂಹಲಪಟ್ಟು ಕೇಳುವ ವಿಷಯಗಳನ್ನು ಖಂಡಿತವಾಗಿಯೂ ಸ್ಪಷ್ಟವಾಗಿಯೂ ಸುಲಭರೀತಿಯಲ್ಲೂ ವಿವರಿಸಿ ತಿಳಿಸುವುದಕ್ಕೆ ಅವಕಾಶಮಾಡಿಕೊಡಬೇಕೆಂದು ನಮಗೆ ತೋರುತ್ತದೆ.

ಇಂಗ್ಲಿಷ್ ಸಂಚಿಕೆಯು ಚೆನ್ನಾಗಿ ಅಚ್ಚು ಮಾಡಿದೆ; ಆದರೆ ತಪ್ಪುಗಳಿಲ್ಲ ದಂತೆ ಸರಿಯಾಗಿ ತಿದ್ದಿ ಇಲ್ಲ. ಕನ್ನಡ ಸಂಚಿಕೆಯ ಮುದ್ರಣವು ಅಷ್ಟೇನೂ ತೃಪ್ತಿಕರವಾಗಿಲ್ಲ. ನಮ್ಮ ಸೀಮೆಯಲ್ಲಿ ಅದಕ್ಕಿಂತ ಎಷ್ಟೋ ಸುಂದರವಾಗಿ ಮುದ್ರಣ ಕೆಲಸಗಳು ನಡೆಯುವ ಕಾರ್ಖಾನೆಗಳುಂಟೆಂದು ಹೇಳಬಲ್ಲೆವು.

ಈ ಹೊಸಪತ್ರಿಕೆಗಳಿಗೆ ಚಂದಾದಾರರು ಅಷ್ಟೇನೂ ವಿಶೇಷವಾಗಿ ದೊರಕ ಲಾರರೆಂದು ನೆನಸುತ್ತೇವೆ. ಆದರೂ ಅವುಗಳಲ್ಲಿ ತಿಳಿಸಲ್ಪಡುವ ವಿಷಯಗಳು ಬರೀ ಸರಸ್ವತೀ ಪ್ರಸನ್ನಗಳೆನಿಸಿಕೊಳ್ಳದೆ ನಮ್ಮ ಸೀಮೆಯ ಕಸಬುಗಳನ್ನು ವಿಶೇ ಷವಾಗಿ ವ್ಯವಸಾಯವನ್ನೂ ಕಾರ್ಯತಃ ಅಭಿವೃದ್ಧಿಗೆ ತರುವುದಕ್ಕೆ ಸಹಕಾರಿಗಳಾ ಗಿಯೂ, ಸಾಕ್ಷಾತ್ತಾದ ವಿಷಯ ಪರಿಜ್ಞಾನವನ್ನುಂಟುಮಾಡತಕ್ಕವುಗಳಾಗಿಯೂ, ಕಸಬುದಾರರಿಗೆ ಉತ್ಸಾಹಪಡಿಸತಕ್ಕವುಗಳಾಗಿಯೂ ಇರುವವೆಂದು ನಂಬಿ ನಿರೀ ಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ನಮ್ಮ ಸರ್ಕಾರದವರು ಬರುವ ಜೂಲೈನಿಂದ ಕೊಪ್ಪದಲ್ಲಿ ಒಂದು ಮುನ್ಸಿಫ್ ಕೋರ್ಟನ್ನು ಇಡಿಸುವರೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ಅರಮನೆಯ ಮರಾಮತ್ ಛಫ್ತಿ ಮ॥ ಎಚ್. ಲಿಂಗರಾಜಅರಸಿನವರನ್ನು ಚಾಮುಂಡಿ ತೊಟ್ಟಿಯ ಛಫ್ತಿ ಕೆಲಸಕ್ಕೆ ವರ್ಗ ಮಾಡಿರುತ್ತಾರೆ.

ಪಟ್ಟಣವನ್ನು ಅಲಂಕಾರವಾಗಿ ಮಾಡುವುದು ಹ್ಯಾಗೆ ಎಂಬ ವಿಷಯವನ್ನು ಕುರಿತು ಪ್ರೊಫೆಸರ್ ಗೆಡ್ಡಿಸ್ ರವರು ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲಿನಲ್ಲಿ ಉಪನ್ಯಾಸ ಮಾಡಿದರು.

ಮೈಸೂರು ಸಂಸ್ಥಾನದಲ್ಲಿ ಸಾಬೂನು ತಯಾರಾಗುವಂಥಾ ಕಾರ್ಖಾನೆಯ ನ್ನಿಡಲು ಅನುಕೂಲಗಳುಂಟೇ ಎಂಬದನ್ನು ವಿಚಾರಮಾಡುವುದಕ್ಕಾಗಿ ನಮ್ಮ ಸರ್ಕಾರದವರು ಬಂಗಾಳದಿಂದ ಮ॥ ಜೆ. ಚಕ್ರವರ್ತಿ ಎಂಬಾತನನ್ನು ಕರಸಿ ನೇಮಕಮಾಡಿದ್ದಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಸರ್ ಹ್ಯೂ ಡೇಲಿಯವರ ಅಧಿ ಕಾರದ ಅವಧಿಯು ಏಪ್ರಲ್ ತಿಂಗಳಿಗೆ ಮುಗಿಯುತ್ತಿತ್ತು. ವೈಸ್‌ರಾಯರವರು ಇನ್ನೊಂದು ವರುಷದ ತನಕ ಅವರು ಇಲ್ಲೇ ಇರುವಂತೆ ಸ್ಯಾಂಕ್ಷನ್ ಮಾಡಿ ದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ.

ನಮ್ಮ ದಿವಾನ್‌ರವರು ಮುಂದಿನ ಸೋಮವಾರ ಬೆಂಗಳೂರಿಂದ ಹೊರಟು ಬೆಂಗಳೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ. ಮ॥ ಎಚ್. ವಿ. ನಂಜುಂಡಯ್ಯನವರು ಕಳೆದ ಶನಿವಾರ ಚಿತ್ರದುರ್ಗದ ಡಿಸ್ಟ್ರಿಕ್ಟನ್ನು ಕುರಿತು ಪ್ರಯಾಣಮಾಡಿದರು. ಮ॥ ಕಾಂತರಾಜೆ ಅರಸಿನವರು ಕಳೆದ ಸೋಮವಾರ ಮದರಾಸಿನಿಂದ ಬೆಂಗಳೂರಿಗೆ ವಾಪಸು ಬಂದರು.

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ವೆಸ್ಲಿಯನ್ ಮಿಷನ್ ಹೈ ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನಗಳು ವಿನಿಯೋಗಿಸಲ್ಪಟ್ಟವು. ರೆವ॥ ಎಚ್. ಗಲ್ಲಿಫೋರ್ಡ್ ಸಾಹೇಬರವರು ಅಗ್ರಾಸನವನ್ನು ವಹಿಸಿ ಆ ಸ್ಕೂಲಿನ ಪೂರ್ವೋತ್ತರಗಳನ್ನು ಕುರಿತು ಭಾಷಣಮಾಡಿದ್ದಲ್ಲದೆ ವಿದ್ಯಾರ್ಥಿಗಳಿಗೆ ಉತ್ತಮೋತ್ತಮವಾದ ಹಲವು ಬುದ್ಧಿವಾದಗಳನ್ನು ಹೇಳಿದರು. ಬಳಿಕ ಈ ಸ್ಕೂ ಲಿಗೆ ಹೊಸದಾಗಿ ಒಂದು ಭಾಗವನ್ನು ಕಟ್ಟಿಸಿ ವಿಸ್ತಾರಮಾಡಿರುವುದನ್ನು ಮಿಸೆಸ್ ಗಲ್ಲಿಫೋರ್ಡ್‌ರವರು ಶ್ರೇಷ್ಠವಾದ ಬೀಗದಕೈ ತಿರುಗಿಸಿ ಪ್ರತಿಷ್ಠೆಮಾಡಿದರು.

ರಾಜಧಾನಿಯ ಅಡ್ವೊಕೇಟ್ ಮ॥ ಎಂ. ಸಿ. ರಂಗಯ್ಯಂಗಾರ್ರಿಗೆ ಇಂಡಿ ಯಾ ಗವರ್ನ್‌ಮೆಂಟಿನವರು "ರಾವ್ ಬಹದೂರ್" ಎಂಬ ಬಿರುದನ್ನು ದಯ ಪಾಲಿಸಿದ್ದಕ್ಕಾಗಿ ಪುರವಾಸಿಗಳು ಆನಂದಪಟ್ಟು ಕಳೆದ ಶನಿವಾರ ಟೌನ್ ಹಾಲ್ ಮಂದಿರದಲ್ಲಿ ಒಂದು ಸಂತೋಷಕೂಟವನ್ನು ನಡಿಸಿದರು. ಮ॥ ಎಂ. ವೆಂಕಟ ಕೃಷ್ಣಯ್ಯನವರೂ, ಮ॥ ಬಂಟಳ ಅಣ್ಣಾಯ್ಯಪಂಡಿತರೂ, ರೆವ॥ ಎಚ್. ಗಲ್ಲಿ ಫೋರ್ಡ್‌ಸಾಹೇಬರೂ ಮ॥ ರಂಗಯ್ಯಂಗಾರ್ರ ಗುಣಕಥನವನ್ನು ಮಾಡಿದರು. ಮರುದಿನ ಸಾಯಂಕಾಲ ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ಒಂದು ದಿವ್ಯವಾದ ಸಂತೋಷಕೂಟವು ನಡೆದು ರಾಯಬಹದೂರ್ ಮ॥ ಎ. ನರಸಿಂಹಯ್ಯಂಗಾರ್ರೂ ಮ॥ ಡಿ. ವೆಂಕಟರಾಮಯ್ಯನವರೂ ಮ॥ ರಂಗಯ್ಯಂಗಾರ್ರಿಗೆ ಬಿರುದು ದೊರ ಕಿದ ವಿಷಯದಲ್ಲಿ ಮೆಂಬರುಗಳ ಪರಮಸಂತೋಷವನ್ನು ಸೂಚಿಸಿ ಮ॥ ಅಯ್ಯಂ ಗಾರ್ರವರ ಸಚ್ಚರಿತ್ರೆಯನ್ನು ವಿವರಿಸಿ ಕೊಂಡಾಡಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಫೆಬ್ರವರಿ 4 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	....	ರೂ. 9,96,596
,, (2) ಡಿಪಾಜಿಟ್ಟುಗಳು	....	,, 24,23,718
,, (3) ಇತರೆ	....	,, 55,990
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 34,76,303
ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 6,77,488
,, (2) ಖಾತೆ ಮತ್ತು ಇತರ ಸಾಲಗಳು	.....	,, 19,47,881
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 3,02,857
,, (4) ಇನ್‌ವೆಸ್ಟ್‌ಮೆಂಟುಗಳು	....	,, 3,67,277
,, (5) ಏಜನ್ಸಿಗಳಲ್ಲಿರುವ ಮೊಬಲಗು	.....	,, 1,68,184
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	.....	,, 14,864
,, (7) ಇತರೆ	....	,, 7,452
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 34,76,303

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ದನಗಳ ಪ್ರದರ್ಶನ.

ನಾಗಮಂಗಲ ತಾಲ್ಲೂಕು ಕೋಟೆಬೆಟ್ಟ.

ಕಳೆದ ತಿಂಗಳು 31 ನೇ ತಾ. ನಾಗಮಂಗಲ ತಾಲ್ಲೂಕು ಅಮಲ್ದಾರ್ ಮ॥ ಎನ್. ಶ್ರೀನಿವಾಸಯ್ಯಂಗಾರ್ರವರಿಂದ ಪ್ರದರ್ಶನವು ಪ್ರಾರಂಭಮಾಡಲ್ಪಟ್ಟಿತು. ಈ ಪ್ರದರ್ಶನಕ್ಕೆ ನಾನಾ ಕಡೆಗಳಿಂದಲೂ ರಾಸುಗಳು ಬಂದಿದ್ದವು. ಉತ್ತಮ ಜಾತಿ ದನಗಳ ಗುಂಪನ್ನು ನೋಡುವುದಕ್ಕಾಗಿಯೇ ಅನೇಕ ಜನಗಳು ಬಂದಿದ್ದರು. ತಕ್ಕಮಟ್ಟಿಗೆ ಕ್ರಯ ವಿಕ್ರಯಗಳಿಗಳೂ ನಡೆದವು. ಈ ಪ್ರದರ್ಶನದ ಸಂದರ್ಭದಲ್ಲಿ ನೆರೆದಿದ್ದ ರಾಸುಗಳ ಪೈಕಿ 18 ಉತ್ತಮ ರಾಸುಗಳಿಗೆ ಬಹುಮಾನಗಳು ಹಂಚಲ್ಪಟ್ಟವು. ಅಮಲ್ದಾರ್ರವರು ಎರಡು ದಿವಸಗಳ ವರೆಗೆ ರೈತರ ಪುರೋಭಿವೃದ್ಧಿಗಾಗಿ ಅನೇಕ ಜನಗಳಿಂದ ಉಪನ್ಯಾಸ ಮಾಡಿಸಿದರು. ಈ ಪೈಕಿ ಎಗ್ರಿಕಲ್ಚರಲ್ ಸುಬ್ರಮಣ್ಯಂಗಾರ್ರು ಗೋ ಸಂರಕ್ಷಣೆ ವಿಚಾರದಲ್ಲಿಯೂ, ಕೋಆಪರೇಟಿವ್ ಸೊಸೈಟಿಗಳ ಅ॥ ಸೂಪರ್‌ವೈಜರಾದ ಮ॥ ಉಪಾಧ್ಯ ಶ್ರೀನಿವಾಸಯ್ಯಂಗಾರ್ರು ಸೊಸೈಟಿಗಳ ಪ್ರಯೋಜನದ ವಿಚಾರವಾಗಿಯೂ ಉಪನ್ಯಾಸ ಮಾಡಿದರು. ಈ ಪ್ರದರ್ಶನಕ್ಕಾಗಿ ಸ್ವಂತ ಲಾಭವನ್ನು ಹಾಕಿಕೊಂಡು ದೇಶಸೇವೆಗಾಗಿ ವರ್ಷೆವರ್ಷೆ ಬಹು ವಿಧವಾದ ಕೆಲಸಗಳನ್ನು ಮಾಡುತ್ತಿರುವ ನಾಗಮಂಗಲದ ಮ॥ ಪಿ. ಎನ್. ಶಂಕರಯ್ಯನವರಿಗೂ, ಇಂಥಾ ಪುರೋಭಿವೃದ್ಧಿ ವಿಚಾರಕ್ಕಾಗಿಯೇ ನಿಂತು ಕೆಲಸಮಾಡುತ್ತಿರುವ ಅಮಲ್ದಾರ್ ಮ॥ ಎನ್. ಶ್ರೀನಿವಾಸಯ್ಯಂಗಾರ್ರವರಿಗೂ ಶ್ರೇಯಸ್ಸುಂಟಾಗಲೆಂದು ಹಾರೈಸುತ್ತೇನೆ

ಶ್ಯಾ॥ ಎ. ಕೆ. ಗುಂಡಯ್ಯ.

ಸಂಪದಭ್ಯುದಯ.

ಸಂಪಾದನೆಯ ಕ್ರಯ—ಕೈಗಾರಿಕೆ.

ಈ ಸೀಮೆಯ ಕೈಗಾರಿಕೆಯು ವೃತ್ತಿರೂಪವಾಗಿ ಜಾತಿಯನ್ನು ಅನುಸರಿಸಿಕೊಂಡು ನಡೆದುಬಂದಿರತಕ್ಕದಾಗಿದೆ. ಆದುದರಿಂದ ಒಂದು ಜಾತಿಯವರು ಪೂರ್ವದಿಂದಲೂ ನಡೆದುಬರುತ್ತಲಿರುವ ತಮ್ಮ ಕಸಬುಗಳನ್ನು ಬಿಟ್ಟು ಬೇರೆ ಕಸಬುಗಳನ್ನು ಕೈಕೊಳ್ಳಲು ಒಪ್ಪದವರಾಗಿರುತ್ತಾರೆ. ಕೆಲವರು ತಮ್ಮ ಕಸಬನ್ನು ಬಿಟ್ಟು ಅಭ್ಯಾಸವಿಲ್ಲದ ಬೇರೊಂದು ಕಸಬನ್ನು ಹೊಸತಾಗಿ ಅವಲಂಬಿಸಲು ಪ್ರಾರಂಭಿಸಿ ಹೊಸ ಕಸಬಿನಲ್ಲಿ ಅನುಭವ ಸಾಲದೆ ನಷ್ಟಪಡುತ್ತಲೂ, ಪೂರ್ವ ಕಸಬಿನ ರೂಢಿಯನ್ನೂ ಹೋಗಲಾಡಿಸಿಕೊಳ್ಳುತ್ತಲೂ ಇದಾರೆ. ಇಲ್ಲಿಯ ಜನಸಂಖ್ಯೆಯಲ್ಲಿ ಗ್ರಾಮವಾಸಿಗಳೇ ಹೆಚ್ಚಾಗಿರುವುದರಿಂದ ವ್ಯವಸಾಯಾಪೇಕ್ಷೆಯಂತೆ ಕೈಕೆಲಸಗಳನ್ನು ಅಪೇಕ್ಷಿಸುವವರು ಕಡಮೆ. ಹಿಟ್ಟಾದ ಜನಗಳು ಪ್ರಾಪಂಚಿಕ ಜ್ಞಾನವನ್ನು ಹೊಂದಿರುವುದಿಲ್ಲ ಕೌಶಲವಿದ್ಯೆ, ವಿಜ್ಞಾನಶಾಸ್ತ್ರ, ಇವುಗಳನ್ನು ಅಭ್ಯಾಸಿಸದೆಯೂ, ದೇಶಸಂಚಾರಾನುಭವವನ್ನು ಪಡೆಯದೆಯೂ ಇರುವುದರಿಂದ ನವೀನ ಪದಾರ್ಥ ರಚನೆಯ ಮಾರ್ಗ ತಿಳಿಯದವರಾಗಿರುತ್ತಾರೆ. ಕಷ್ಟಪಟ್ಟು ಕೈಯಿಂದ ಕೆಲಸಮಾಡುವವರಿಗೆ ಶ್ರಮಕ್ಕೆ ತಕ್ಕ ಫಲ ದೊರೆಯದಿರುವುದರಿಂದ ಕೈಕೆಲಸದಲ್ಲಿ ಆಸಕ್ತಿ ಕಡಮೆಯಾಗಿರುತ್ತದೆ. ಒಬ್ಬ ಕೈಕೆಲಸಗಾರನು ಒಂದು ದಿನವೆಲ್ಲಾ ಕೆಲಸಮಾಡಿದರೂ ಸರಾಸರಿ ದಿನ ಒಂದಕ್ಕೆ ಎಂಟು ಆಣೆಗಳಿಗಿಂತಲೂ ಹೆಚ್ಚು ಸಂಪಾದಿಸಲಾರನು. ಹೀಗಿರುವುದರಿಂದ ಇಲ್ಲಿಯ ಕಸಬುದಾರರು ತಮ್ಮ ತಮ್ಮ ಜನಾಂಗದಲ್ಲಿ ತಮ್ಮ ತಮ್ಮ ಕಸಬುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುವುದಿಲ್ಲ. ಹೀಗಾಗಿ ಹಿಂದಿನಿಂದ ನಡೆದುಬರುತ್ತಲಿರುವ ಕೆಲವು ಕೈಗಾರಿಕೆಗಳೂ ಬಿಲವಾಗುತ್ತಲಿವೆ. ಇತ್ತಲಾಗಿ ಯಂತ್ರೋಪಕರಣಗಳಿಂದ ಮಾಡಲ್ಪಟ್ಟ ನವೀನವಾದ ಪದಾರ್ಥಗಳು ಹೇರಳವಾಗಿ ಬಂದು ಸುಲಭ ಬೆಲೆಗೆ ಮಾರಾಟವಾಗುವುದರಿಂದ ಕೈಕೆಲಸಕ್ಕೆ ಪ್ರಾಶಸ್ತ್ಯ ಕಡಮೆಯಾಗಿರುತ್ತದೆ. ನಮ್ಮ ದೇಶದ ಸಾಮಗ್ರಿಗಳು ಪದಾರ್ಥರೂಪವಾಗಿ ಪರದೇಶಕ್ಕೆ ಸಾಗುವಂಥಾ ಕಾರ್ಖಾನೆಗಳು ಇರುವುದಿಲ್ಲ. ಹಣ ಸಹಾಯವೂ ಕಡಮೆಯಾಗಿರುತ್ತದೆ ಪಟ್ಟಣಗಳಲ್ಲಿ ಹಣವನ್ನು ಯೋಗ್ಯರೀತಿಯಲ್ಲಿ ಬಳಸಿ ವೃದ್ಧಿಪಡಿಸಿಕೊಳ್ಳುವ ಪ್ರಯತ್ನಮಾಡುವವರು ಬಹಳ ಕಡಮೆ. ಕಾರ್ಖಾನೆಗಳನ್ನು ಮಾಡಿಕೊಂಡು ಯಂತ್ರೋಪಕರಣಗಳನ್ನು ಇಟ್ಟು ರೂಢಿಸಿಕೊಳ್ಳುವ ಧೈರ್ಯವಿಲ್ಲದವರಾಗಿರುತ್ತಾರೆ. ಬುದ್ಧಿಯನ್ನು ಪ್ರಬಲಪಡಿಸುವ ಸಕಲ ಕಲಾಶಾಲೆಯು ಈ ದೇಶದಲ್ಲಿ ಒಂದಾದರೂ ಇರುವುದಿಲ್ಲ. ಸರಾಸರಿ 10 ಕ್ಕೆ ಒಬ್ಬನಂತೆ ಕೈಕೆಲಸದವನು ಸಿಕ್ಕುವುದು ದುರ್ಲಭ ಜನಗಳು ಕುಶಲವಿದ್ಯಾಪಾರಂಗತರಾಗಿ ದೇಶವಿದೇಶ ಸಂಚಾರಾನುಭವವನ್ನು ಪಡೆಯುತ್ತಾ ಪ್ರಕೃತ ಕೈಗಾರಿಕೆಯನ್ನು ವೃದ್ಧಿಪಡಿಸಿಕೊಂಡು ನವೀನವಾದ ಹೊಸವಸ್ತು ರಚನೆಯನ್ನು ಕಂಡು ಹಿಡಿಯುಕೊಳ್ಳುವ ಶಕ್ತಿಯನ್ನು ಉಂಟುಮಾಡಿಕೊಳ್ಳಬೇಕಾಗಿದೆ ಮತ್ತು ಜನರು ಸಾಹಸಿಗಳೂ, ಧೈರ್ಯಶಾಲಿಗಳೂ ಆಗಬೇಕಾಗಿದೆ

ಕೈಕಷ್ಟದಿಂದ ಮಾಡುವ ಕೈಗಾರಿಕೆಗಿಂತಲೂ ಬುದ್ಧಿಸಾಮರ್ಥ್ಯದಿಂದ ಮಾಡುವ ಕೆಲಸವು ವಿಶೇಷ ಆದಾಯಕರವಾದುದು. ಆದರೆ ವಿಶೇಷ ಹಣವನ್ನು ಕೊಟ್ಟು ಅನ್ಯದೇಶದ ಯಂತ್ರೋಪಕರಣಗಳನ್ನು ತರಿಸಿ ಅದನ್ನು ನಡೆಯಿಸುವುದಕ್ಕೂ, ಕೆಟ್ಟಾಗ ಸರಿಪಡಿಸಿಕೊಳ್ಳುವುದಕ್ಕೂ, ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದಕ್ಕೂ ಬಹು ದ್ರವ್ಯ ವೆಚ್ಚವಾಗಿ ಅದರಿಂದ ತಯಾರಾಗುವ ಸಾಮಾನುಗಳಿಗೆ ಅನ್ಯದೇಶದಿಂದ ತಯಾರಾಗಿ ಬಂದ ಪದಾರ್ಥಗಳಿಗಿಂತಲೂ ಹೆಚ್ಚು ಬೆಲೆ ಬೀಳುವುದು. ಆದುದರಿಂದಲೇ ಇಲ್ಲಿಯ ಅನೇಕ ಕಾರ್ಖಾನೆಗಳು ಹೆಚ್ಚು ಫಲವನ್ನು ಹೊಂದದೆ ಇರುತ್ತವೆ. ಕೆಲವು ಕಾರ್ಖಾನೆಗಳು ನಿಂತುಹೋಗಿರುವುದೂ ಉಂಟು. ಇದಕ್ಕಾಗಿ ನಾವು ಹೆಚ್ಚು ಫಲವನ್ನು ಪಡೆಯಬೇಕಾದರೆ ಸ್ವಂತ ಯಂತ್ರ ಸಾಮಗ್ರಿಗಳನ್ನೂ ರಚಿಸಿಕೊಂಡು ಅಪೇಕ್ಷಣೀಯವಾದ ಹೊಸ ಹೊಸ ವಸ್ತುರಚನಾ ಸಾಮರ್ಥ್ಯವನ್ನು ಪಡೆಯಬೇಕು. ಮತ್ತು ಅನೇಕರ ಕೈಕೆಲಸಗಳಿಗೆ ಅಟಂಕಪಡಿಸುವಂಥಾ ಒಂದು ಕಾರ್ಖಾನೆಯಿಂದ ದೇಶಕ್ಕೆ ನಷ್ಟವೇ ಹೊರತು ಲಾಭವಾಗುವುದಿಲ್ಲ. ಆದುದರಿಂದ ಸದ್ಯಕ್ಕೆ ನಮ್ಮ ದೇಶದಿಂದ ಅನ್ಯದೇಶಗಳಿಗೆ ಸಾಗಿ ಪದಾರ್ಥರೂಪವಾಗಿ ತಿರುಗಿ ಬಂದು ವಿಕ್ರಯವಾಗುವ ರೇಷ್ಮೆ, ಗಂಧ, ತೊಗಲು, ಲೋಹಗಳು, ಹತ್ತಿ ಮತ್ತು ನಾರು, ಇವುಗಳನ್ನು ಪದಾರ್ಥರೂಪವಾಗಿಯೇ ಸಾಗಿಸುವ ಪ್ರಯತ್ನಮಾಡುವುದು ಫಲಕಾರಿಯಾಗಿದೆ.

ಇಲ್ಲಿಗೆ ಸಕಲ ವಿದ್ಯಾನಿಲಯವು ಅತ್ಯಾವಶ್ಯಕವಾಗಿದೆ. ಕೈಗಾರಿಕೆ ಪಾಠಶಾಲೆಗಳಂತೆಯೇ ಆಯಾ ಸ್ಥಳದಲ್ಲಿ ವಿಶೇಷವಾಗಿ ನಡೆಯುವ ಆಯಾ ಕೈಗಾರಿಕೆಯಲ್ಲಿ ನಿಪುಣನಾದ ಒಬ್ಬನನ್ನು ಆಯಾ ಕೈಗಾರಿಕೆಯನ್ನು ಕಲಿಸುವಂತೆ ನಿಯಾಮಕಮಾಡಬೇಕು. ಅಂಥಾ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳು ರಚಿಸಿದ ಪದಾರ್ಥಗಳ ಮಾರಾಟದಿಂದ ಸಂಬಳ ವಗ್ಗೈರೆ ಖರ್ಚು ನಡೆಯುವಂತೆ ಮಾಡಬೇಕು. ಸದ್ಯಕ್ಕೆ ಕಾಗದ, ಸಕ್ಕರೆ, ಎಣ್ಣೆ, ಇವುಗಳ ಕಾರ್ಖಾನೆಯನ್ನು ಏರ್ಪಡಿಸಬಹುದು.

ಯಸ್. ಹುಚ್ಚಪ್ಪನ್, ಸಿಕಾರಿಪುರ

ಕಾರೊನೇಷನ್ ಸ್ಕೂಲ್ ಕಟ್ಟಡದ ಸಮಾರಂಭ.

ಸಕಲೇಶಪುರದ ತಾಲ್ಲೂಕು ದೇವಾಲದಕೆರೆ.

ಮಂಜರಾಬಾದು ತಾಲ್ಲೂಕು ಹಾನ್‌ಬಾಳು ಹೋಬಳಿ ದೇವಾಲದ ಕೆರೆ ಗ್ರಾಮದಲ್ಲಿ ಕಾರೊನೇಷನ್ ಮಹೋತ್ಸವದ ಜ್ಞಾಪಕಾರ್ಥವಾಗಿ ಗೌರ್ನಮೆಂಟ್ ಪಾಠಶಾಲೆಗೋಸ್ಕರ ಕಟ್ಟಿಸಿರುವ ಕಟ್ಟಡದ ಸಮಾರಂಭವು ಸಕಲೇಶಪುರದ ಸಬ್ ಡಿವಿಜನ್ ಆಫೀಸರಾದ ಮ॥ ಎಂ. ಸದಾಶಿವರಾಯರವರ ಅಧ್ಯಕ್ಷತೆಯಲ್ಲಿ ಫೆಬ್ರವರಿ 3 ನೇ ತಾ. ಬುಧವಾರ ಶುಭಮುಹೂರ್ತದಲ್ಲಿ ನೆರವೇರಿತು. ಮಲೆನಾಡಿನ ಈ ಸಭೆಗೆ ಅಮಲ್ದಾರ್ರವರು, ಮಲೆನಾಡು ಸ್ಪೆಷಲ್ ಸ್ಯಾನಿಟರಿ ಆಫೀಸರವರು, ಸಕಲೇಶಪುರದ ಅ॥ ಇನ್ ಜಿನಿಯರವರು, ಫಾರೆಸ್ಟು ರೇಂಜರವರು, ಡಾಕ್ಟರವರು, ಎಕ್ಸೈಸ್ ಸೂಪರ್‌ವೈಜರವರು, ಬಾಚ್ನಳ್ಳಿ ಎಸ್ಟೇಟ್ ಕಾಫಿ ಪ್ಲಾಂಟರ್ ಮ॥ ಎಂ. ಆರ್ ಪಾರ್ಕರ್ ಸಾಹೇಬರವರು, ಮಲೆನಾಡು ಮ॥ ನಾಡು ಪ॥ ದ್ಯಾವಪ್ಪಗೌಡರು, ಮುಂದೆ ಪ॥ ವಸಂತಗೌಡರು ಆದಿಯಾಗಿ ಮುಂದೆ ಪಟೇಲರುಗಳು, ಚಿನ್ನಗದ ಮುಂದೆ ಪ॥ ಸಣ್ಣಗೌಡರು, ಅನೇಕ ಗ್ರಾಮಗಳ ಪಟೇಲರುಗಳು ನೇಟಿವ್ ಪ್ಲಾಂಟರುಗಳು, ದೊಡ್ಡ ಮನುಷ್ಯರುಗಳೂ ಆದಿಯಾಗಿ ಸುಮಾರು ಒಂದೂವರೆ ಸಾವಿರಕ್ಕಿಂತಲೂ ಜಾಸ್ತಿಯಾಗಿ ಈ ಸಭೆಗೆ ದಯಮಾಡಿಸಿದ್ದರು ಬೆಳಗ್ಗೆ 7 ಗಂಟೆಯಿಂದ 8 ಗಂಟೆ ವರಗೆ ಮಂಟಪವನ್ನು ಮಂಗಳ ವಾದ್ಯದೊಡನೆ ಎದುರುಗೊಂಡು ಕರೆತಂದರು 8 ರಿಂದ 9 ಗಂಟೆ ವರೆಗೆ ನಾಡು ಮತ್ತು ಸೀಮೆಯವರನ್ನು ಮರ್ಯಾದೆಯಿಂದ ಎದುರುಗೊಂಡು ಕರೆತರಲಾಯಿತು ಇವರಲ್ಲಿ ಮ॥ ಚಿನ್ನಗದ ಮುಂದೆ ಪ॥ ಸಣ್ಣಗೌಡರು, ನಾಡು ಪ॥ ದ್ಯಾವಪ್ಪಗೌಡರು ಪ್ರಭೃತಿಗಳಿಂದ ದಯಪಾಲಿಸಲ್ಪಟ್ಟಿರುವ ಬಿರುದು ಚಾವಲಿ ಸ್ವೇತಛತ್ರಿ ಮೊದಲಾದ ಬಿರುದುಗಳೊಡನೆ ದಯಮಾಡಿಸಿದ್ದರು. ಈ ಮೇಲ್ಕಂಡ ಎಲ್ಲಾ ಜನಗಳೂ ಸೇರಿ ಮಂಗಳ ವಾದ್ಯದೊಡನೆ ಸಕಲೇಶಪುರದ ಸಬ್ ಡಿವಿಜನ್ ಆಫೀಸರಾದ ಮ॥ ಎಂ. ಸದಾಶಿವರಾಯರವರನ್ನು ಮರ್ಯಾದೆಯಿಂದ ಎದುರುಗೊಂಡು ಸಭಾ ಮಂಟಪಕ್ಕೆ ಕರೆತಂದರು. ಮ॥ ಪುಟ್ಟೇಗೌಡರ ಪ್ರಾರ್ಥನೆಯಂತೆ ಮ॥ ಸದಾಶಿವರಾಯರು ಅಗ್ರಾಸನಾಧಿಪತ್ಯವನ್ನು ವಹಿಸಿದರು. ಶಿಕ್ಷಾವಾಕ್ಯ ಪರಿಪಾಲನೆಗಾಗಿ ಈ ಕಟ್ಟಡವನ್ನು ಕಟ್ಟಿ ಪೂರೈಸಿರುವುದಾಗಿಯೂ, ಇದರ ಪ್ರಾರಂಭೋತ್ಸವವನ್ನು ತಾವು ದಯಮಾಡಿ ನೆರವೇರಿಸಿಕೊಡಬೇಕೆಂತಲೂ ಕೇಳಿಕೊಂಡ ಮ॥ ಪುಟ್ಟೆಗೌಡರ ಪ್ರಾರ್ಥನೆಯನ್ನು ಮ॥ ಗುಂಡೂರಾಮಯ್ಯನವರು ಸೂಚಿಸಿದರು. ಮ॥ ಟಿ ವೆಂಕಟರಾಮಯ್ಯನವರು ಸ್ಕೂಲ್ ಪ್ರೋಗ್ರೆಸ್ ರಿಪೋರ್ಟನ್ನು ಓದಿದ್ದಲ್ಲದೆ ವಿದ್ಯಾಭ್ಯಾಸದ ವಿಷಯದಲ್ಲಿ ಮಕ್ಕಳ ಪೋಷಕರು ಉಪಾಧ್ಯಾಯರಿಗೆ ಸಹಾಯಕರಾಗಿರುವುದರಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತ ಒಂದು ಭಾಷಣವನ್ನು ಓದಿದರು ಸಭಾಧ್ಯಕ್ಷರು ವಿದ್ಯಾಭ್ಯಾಸದ ವಿಚಾರವಾಗಿಯೂ, ಕೈಗಾರಿಕೆ ವಿದ್ಯಾಭ್ಯಾಸದ ವಿಚಾರವಾಗಿಯೂ ಪ್ರಾಸ್ತವ್ಯವಾದ ಒಂದು ಉಪನ್ಯಾಸವನ್ನು ಅಪ್ಪಣೆಕೊಡಿಸಿದ್ದಲ್ಲದೆ ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರ್ ರವರು ಈ ಮಹೋತ್ಸವಕ್ಕೆ ದಯಮಾಡಲು ಶರೀರಾಲಸ್ಯದಿಂದ ಅವಕಾಶವಾಗಲಿಲ್ಲವೆಂತ ಅಪ್ಪಣೆ ಕೊಡಿಸಿದರು. ಅಲ್ಲದೆ ಮ॥ ಹಾನ್‌ಬಾಳು ಜನರಲ್ ಅಂಗಡಿ ಬಾರಿಮಲ್ ಉರುಫ್ ಹೀರೋಜಿ ಸಾಹುಕಾರರು ಈ ಸ್ಕೂಲಿಗೆ ಒಂದು ಗಡಿಯಾರವನ್ನು ಕೊಡುವುದಾಗಿ ಅಪ್ಪಣೆಕೊಡಿಸಿದರು. ಮ॥ ಪುಟ್ಟೆಗೌಡರ ಪ್ರಾರ್ಥನೆಯಂತೆ ವೇದಮೂರ್ತಿಗಳ ವೇದಘೋಷದಿಂದಲೂ, ಮಂಗಳ ವಾದ್ಯದಿಂದಲೂ ಕೂಡಿದ ಶುಭಮುಹೂರ್ತದಲ್ಲಿ ಸಭಾಧ್ಯಕ್ಷರ ಸುಹಸ್ತದಿಂದ ಬೆಳ್ಳಿಯ ಬೀಗದ ಕೈಯಿಂದ ಬಾಗಿಲು ತೆರೆಯಲ್ಪಟ್ಟು ನಂತರ ಸ್ಕೂಲಿನೊಳಕ್ಕೆ ಸರ್ವರೂ ದಯಮಾಡಿಸಿದರು ಬಾಲಕಿಯರಿಂದ ಶಾರದಾ ಸ್ತೋತ್ರರೂಪವಾದ ಹಾಡುಗಳೂ ಆರತಿಯೂ ನಡೆದವು.

ಮಹೋತ್ಸವದ ಜ್ಞಾಪಕಾರ್ಥವಾಗಿಯೂ ಪ್ರೋತ್ಸಾಹದ ಬಗ್ಗೆ, ಮೊದಲನೆಯ ತ್ರಿಗೋಸ್ಕರಲೂ ಮ॥ ಸ್ಕೂಲ್ ಸಬ್ಬರ್ ಟಿ. ವೆಂಕಟರಾಮಯ್ಯನವರಿಗೆ ಮ॥ ಬಿಳಿಸಾಲೆ ಅಣ್ಣೇಗೌಡರ ಮಕ್ಕಳು ಪುಟ್ಟೇಗೌಡರೂ ಪ. ಶಿವೇಗೌಡರ ಮಕ್ಕಳು ಪುಟ್ಟೇಗೌಡರೂ ಬಿ.ಎ ಪಿ. ಎಂಬ ಇಂಗ್ಲೀಷ್ ಅಕ್ಷರಗಳನ್ನು ಕೆತ್ತಿಸಿರುವ ಒಂದು ಭಂಗಾರದ ಉಂಗುರವನ್ನು ಸಭಾಧ್ಯಕ್ಷರ ಸುಹಸ್ತದಿಂದ ದಯಪಾಲಿಸಿದರು ಬ್ರಿಟಿಷ್ ಚಕ್ರಾಧಿಪತ್ಯದಿಂದ ನಮಗೆ ಉಂಟಾಗಿರುವ ಮಹದುಪಕಾರವನ್ನು ಕುರಿತು ಹಾನ್‌ಬಾಳ್ ಸ್ಕೂಲ್ ಮಾಸ್ಟರ್ ಮ॥ ಎಚ್. ರಾಮಯ್ಯನವರು ಸೂಚಿಸಿದರು. ಬಾಲಕ ಬಾಲಿಕೆಯರು ಇಂಡಿಯಾ ಶ್ರೀಮನ್ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಳು ಹಾಡಿದ್ದು ಸಭಿಕರಿಗೆ ಆಹ್ಲಾದವನ್ನುಂಟುಮಾಡಿತು. ಸರ್ವರಿಗೂ ಹಾರ ತುರಾಯಿ ಗಂಧ ಪುಷ್ಪ ತಾಂಬೂಲ ಸಕ್ಕರೆ ಹಂಚಲ್ಪಟ್ಟು ಬೆಳಗಿನ ಸಭೆಯು ಬರಖಾಸ್ತಾಯಿತು ಎಲ್ಲಾ ಸಂಗತದ ಜನಗಳಿಗೂ ಪ್ರತ್ಯೇಕ ಪ್ರತ್ಯೇಕವಾದ ಸುಭೋಜನವೂ, 3 ಗಂಟೆಗೆ ಟಿಫನ್ ಪಾರ್ಟಿಯೂ ಸಹ ನಡೆದು, ಎಲ್ಲಾ ಜನಗಳಿಗೂ ಆನಂದವನ್ನು ಉಂಟುಮಾಡಿತು.

ಮಧ್ಯಾಹ್ನ 4 ಗಂಟೆ ಸಭೆಗೆ ಎಲ್ಲಾ ಆಫೀಸರುಗಳೂ, ದೊಡ್ಡ ಮನುಷ್ಯರುಗಳೂ ದಯಮಾಡಿಸಿದ್ದರು. ಬಾಲಕರಿಂದ ಹೈಜಂಪ್, ಲಾಂಗ್‌ಜಂಪ್ ಮೊದಲಾದ ಆಟಗಳು ಆಡಿಸಲ್ಪಟ್ಟು ಗೆದ್ದವರಿಗೆ ಬಹುಮಾನಗಳನ್ನು ಛೇರ್‌ಮೆನ್ ರವರು ದಯಪಾಲಿಸಿದರು ಈ ಸಂತೋಷ ಮತ್ತು ವೈಭವದಿಂದ ಕೂಡಿದ ಈ ಸಭೆಗೆ ವಿದ್ಯಾ ಇಲಾಖಾ ಡೆಪ್ಯುಟಿ ಇನ್‌ಸ್ಪೆಕ್ಟರ್ ಸಾಹೇಬರವರು ದಯಮಾಡಿಸಲು ಉಂಟಾದ ಅನನುಕೂಲವನ್ನು ಸೂಚಿಸಿ ಇಲಾಖಾ ಆಫೀಸಿನಿಂದ ಸಾದರಾದ ಬಹುಮಾನ ಪುಸ್ತಕಗಳನ್ನು ಬಾಲಕ ಬಾಲಿಕೆಯರಿಗೆ ಉತ್ಸಾಹ ಪೂರಿತವಾದ ಮಾತುಗಳಿಂದ ಛೇರ್‌ಮೆನ್‌ರವರೇ ದಯಪಾಲಿಸಿದರು. ಸುಗ್ಗಿ ಕುಣಿತ, ಬಾಣಬಿರುಸು, ದೀಪೋತ್ಸವ ಮೊದಲಾದ ವಿನೋದಗಳು ನಡೆದು ರಾತ್ರಿ 8½ ಗಂಟೆಗೆ ಜಯಘೋಷದಿಂದಲೂ, ಮಂಗಳ ವಾದ್ಯದಿಂದಲೂ, ಯೂರೋಪ್ ಖಂಡದಲ್ಲಿ ನಮ್ಮ ಸಾರ್ವಭೌಮರವರಿಗೆ ಒದಗಿರುವ ಯುದ್ಧದಲ್ಲಿ ಜಯ ಉಂಟಾಗಲೆಂದು ಪ್ರಾರ್ಥಿಸಿ ಸಭೆಯು ಬರಖಾಸ್ತಾಯಿತು

ಒಬ್ಬ ಪ್ರೇಕ್ಷಕ.

ತಾಲ್ಲೂಕ್ ಪ್ರೋಗ್ರೆಸ್ ಕಮಿಟಿಗಳ ಸಭೆಯು.

ಟಿ. ನರಸಿಪುರದ ತಾಲ್ಲೂಕು ಮುಡುಕುತೊರೆಯಲ್ಲಿ ನಡೆದದ್ದು.

ಕಳೆದ ಜನವರಿ ತಾ. 30 ನೇ ಶನಿವಾರ ಮುಡುಕುತೊರೆಯ ಶ್ರೀ ಮಲ್ಲಿಕಾರ್ಜುನಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ತಾಲ್ಲೂಕ್ ಪ್ರೋಗ್ರೆಸ್ ಕಮಿಟಿ ಛೇರ್‌ಮೆನ್ ರವರಾದ ಮ॥ ಟಿ.ಪಿ.ಎ. ಅಯ್ಯಂಗಾರ್ ರವರು ಮೇಲ್ಕಂಡ ಕಾನ್‌ಫರೆನ್ಸನ್ನು ನಡಿಸಲು ತಕ್ಕ ಏರ್ಪಾಡುಗಳನ್ನು ಮಾಡಿದ್ದರು. ನಮ್ಮ ಡಿ॥ ಸಂಪದಭ್ಯುದಯ ಸಮಾಜದ ಸೂಪರಿಂಟೆಂಡೆಂಟರವರು, ತಾ॥ ಪ್ರೋ॥ ಕಮಿಟಿಗಳ ಮೆಂಬರುಗಳಾದ ಸಬ್ ಅ॥ ಸರ್ಜನ್ ಮ॥ ಸಿ. ನರಸಿಂಹಯ್ಯನವರು, ಸ್ಕೂಲ್ ಹೆಡ್ ಮಾಸ್ಟರ್ ಮ॥ ಅಪ್ರಮೇಯ ಅಯ್ಯಂಗಾರ್ರು, ಡಿ॥ ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ್ ಮ॥ ಕೃಷ್ಣರಾಯರು, ಸಿರಿಕಲ್ಚರಲ್ ಇನ್‌ಸ್ಪೆಕ್ಟರ್ ಮ॥ ಕೃಷ್ಣಯ್ಯನವರು, ಸಾಹುಕಾರ್ ಮ॥ ಜಿ ರಾಮಯ್ಯಂಗಾರ್ರು, ಲಾಯರ್ ಮ॥ ವರದಾಚಾರ್ರು, ಯಳಂದೂರ್ ಲಾಯರ್ ಮ॥ ಶ್ರೀನಿವಾಸಯ್ಯಂಗಾರ್ರು ಮುಷ್ತಿಕ್ತಿ ಏಜಂಟ್ ಮ॥ ವೆಂಕಟಸುಬ್ಬಯ್ಯನವರು, ಸಾಹುಕಾರ್ ಮ॥ ವೆಂಕಟಸುಬ್ಬಯ್ಯನವರು, ಸಾಹುಕಾರ್ ಮ॥ ಗಾಂಜಾಂ ವೆಂಕಟರಮಣಶೆಟ್ಟರು, ನಿಲಸೋಗೆ ಪಟೇಲ್ ಮ॥ ದಾಸರಾಜೆ ಅರಸಿನವರು, ಈ ಮುಂತಾದ ಅನೇಕ ದೊಡ್ಡಮನುಷ್ಯರೂ, ಗ್ರಾಮಾಭ್ಯುದ್ಧಿ ಸಂಘಕ್ಕೆ ಸೇರಿದ ಮುಖಂಡ ರೈತರು ಕ್ಷೇತ್ರಕಾಲಕ್ಕೆ ಮುಂಚಿತವಾಗಿ 11 ಘಂಟೆಗೆ ಸಭಾಮಂದಿರಕ್ಕೆ ದಯಮಾಡಿದರು. ಸಭಿಕರು ಸುಮಾರು 300 ಕ್ಕಿಂತ ಹೆಚ್ಚಾಗಿದ್ದದ್ದರಿಂದ ಕೇವಲ ಸ್ಥಳ ಸಂಕೋಚವಾಗಿಯೇ ಇತ್ತು. 12 ಘಂಟೆಗೆ ಸಭೆಯು ಮಂಗಳವಾದ್ಯ, ದೇವತಾ ಪ್ರಾರ್ಥನೆಗಳೊಡನೆ ಉಪಕ್ರಮವಾಯಿತು. ಕಮಿಟಿಗೆ ಛೇರ್‌ಮನ್ ರವರು ಈ ಕಾನ್‌ಫರೆನ್ಸಿನ ಉದ್ದೇಶವನ್ನು ಸಭಿಕರಿಗೆ ಸಂಕ್ಷೇಪವಾಗಿ ಸೂಚಿಸಿದ ಕೂಡಲೆ ಸಾಹುಕಾರ್ ಮ॥ ಜಿ. ರಾಮಯ್ಯಂಗಾರ್ರು ಸಭೆಯ ಪರವಾಗಿ ಡಿ॥ ಸಂಪದಭ್ಯುದಯ ಸಮಾಜದ ಸೂಪರಿಂಟೆಂಡೆಂಟ್ ಮ॥ ಶ್ರೀನರಸಿಂಹಶಾಸ್ತ್ರಿಗಳು ಸಭಾಧ್ಯಕ್ಷರಾಗಬೇಕೆಂದು ಕೋರಿದ್ದನ್ನು ಸಭೆಯವರು ಅನುಮೋದಿಸಿದ ಬಳಿಕ ಅವರು ಅಗ್ರಾಸನವನ್ನು ವಹಿಸಿ—ಗ್ರಾಮಾಭಿವೃದ್ಧಿ, ತಾಲ್ಲೂಕ್ ಅಭಿವೃದ್ಧಿ, ಡಿಸ್ಟ್ರಿಕ್ಟ್ ಅಭಿವೃದ್ಧಿ ಮತ್ತು ಸಂಸ್ಥಾನದ ಸಂಪದಭ್ಯುದಯ ಸಮಾಜಗಳ ವಿಚಾರವಾಗಿಯೂ, ಅವುಗಳಿಗಿರುವ ಪರಸ್ಪರ ಸಂಬಂಧಗಳ ವಿಚಾರವಾಗಿಯೂ ದೀರ್ಘವಾದ ಉಪನ್ಯಾಸವನ್ನು ಮಾಡಿದರು.

ಅನಂತರ ಯಳಂದೂರು ಲಾಯರ್ ಮ॥ ಶ್ರೀನಿವಾಸಯ್ಯಂಗಾರ್ರು "ಗ್ರಾಮಗಳಲ್ಲಿ ಕುಡಿಯುವದಕ್ಕೆ ನಿರ್ಮಲವಾದ ನೀರಿನ ಆವಶ್ಯಕತೆ" ಎಂಬ ವಿಷಯದಲ್ಲೂ, ಎ.ವಿ ಸ್ಕೂಲ್ ಹೆಡ್ ಮಾಸ್ಟರು "ಮೈಸೂರು ದೇಶದ ದನಕರುಗಳನ್ನು ಅಭಿವೃದ್ಧಿಪಡಿಸಲು ತಕ್ಕ ಸಲಹೆಗಳು" ಎಂಬ ವಿಷಯದಲ್ಲೂ, ಮುತ್ತಿಕ್ತಿ ಏಜಂಟ್ ಮ॥ ವೆಂಕಟಸುಬ್ಬಯ್ಯನವರು "ಗ್ರಾಮಾಭಿವೃದ್ಧಿಯಾಗಲು ಬಡವರಿಗೆ ಸಹಕಾರಗಳು ಬೇಕು" ಎಂಬ ವಿಷಯದಲ್ಲೂ, ಡಿ॥ ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ್ ಮ॥ ಕೃಷ್ಣರಾಯರು "ಮಾಗಿ ತಿಂಗಳ ಭತ್ತದ ವ್ಯವಸಾಯ" ಎಂಬ ವಿಷಯದಲ್ಲೂ, ಕೃಷ್ಣಪುರದ ನೇಟಿವ್ ಡಾಕ್ಟರ್ ಮ॥ ತಿರುಮಲಾಚಾರ್ಯರು "ಗ್ರಾಮಾರೋಗ್ಯರಕ್ಷಣೆ" ಎಂಬ ವಿಷಯದಲ್ಲೂ, ಸಿರಿಕಲ್ಚರಲ್ ಇನ್‌ಸ್ಪೆಕ್ಟರ್ ಮ॥ ಕೃಷ್ಣರಾಯರು "ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿಪಡಿಸುವ ರೀತಿ" ಎಂಬ ವಿಷಯದಲ್ಲೂ, ಕೊಳ್ಳೇಗಾಲದ ಸಾಹುಕಾರ್ ಮ॥ ಮಲ್ಲಪ್ಪನವರು "ರೇಷ್ಮೆ ವ್ಯಾಪಾರ" ಎಂಬ ವಿಷಯದಲ್ಲೂ ಬಹು ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿದರು.

ಸಭಿಕರೆಲ್ಲರೂ ಅರ್ಧ ಘಂಟೆವರೆಗೆ ಫಲಾಹಾರಕ್ಕೆ ವಿಶ್ರಾಂತಿಯನ್ನು ಪಡೆದ ನಂತರ ಪುನಃ ಸಭೆಯು ನೆರೆಯಲು ಸಭಾಧ್ಯಕ್ಷರು ಗ್ರಾಮಾಭಿವೃದ್ಧಿ ಸಂಘದ ಪ್ರತಿನಿಧಿಗಳಲ್ಲಿ ಒಬ್ಬೊಬ್ಬರನ್ನಾಗಿ ತಂತಮ್ಮ ಗ್ರಾಮಗಳಲ್ಲಿ ಈಗಿರುವ ಅನನುಕೂಲಗಳನ್ನೆಲ್ಲಾ ಸಾವಧಾನದಿಂದ ವಿಚಾರಿಸಿ ಅತ್ಯವಶ್ಯಕವಾಗಿ ಆಗಬೇಕಾಗಿರುವ ರಸ್ತೆ, ತೋಪು, ಬಾವಿ, ಛತ್ರ ಅಥವಾ ಮುಸಾಫರಖಾನೆ, ಪಾಠಶಾಲೆ, ವಾಚಕ ಶಾಲೆ ಮುಂತಾದವುಗಳನ್ನು ಗ್ರಾಮಸ್ಥರು ಏರ್ಪಾಡು ಮಾಡಿಕೊಳ್ಳುವುದಕ್ಕಾಗಿ ಸರ್ಕಾರದವರು ಸಹಾಯಮಾಡುವ ವಿಷಯದಲ್ಲಿ ದಯಪಾಲಿಸುತ್ತಿರುವ ಭರವಸೆಗಳನ್ನೂ, ಸೂಕ್ತವಾದ ಸಲಹೆಗಳನ್ನೂ ಸ್ಪಷ್ಟವಾಗಿ ಅಪ್ಪಣೆಕೊಡಿಸಿದರು. ಅನಂತರ ಸಂಪದಭ್ಯುದಯ ಸಮಾಜದಿಂದ ಪೋಷಿತವಾಗಿ ಪ್ರಕಟವಾಗುತ್ತಿರುವ "ಅರ್ಥಸಾಧಕ ಪತ್ರಿಕೆ" ಯನ್ನು ಪ್ರತಿಯೊಬ್ಬರೂ ತರಿಸಿಕೊಂಡು ಓದಬೇಕಾದ್ದರ ಆವಶ್ಯಕತೆಯನ್ನು ತೋರ್ಪಡಿಸಲು ಸುಮಾರು 20 ಜನ ಸಭಿಕರು ತಕ್ಷಣವೇ ಚಂದಾ ಮೊಬಲಗನ್ನು ಕೊಟ್ಟದ್ದಲ್ಲದೆ ಸುಮಾರು 50 ಜನರು ತಮಗೆ ಪತ್ರಿಕೆಗಳನ್ನು ಟಪಾಲ್ ಮೂಲಕ ತರಿಸಿಕೊಡಬೇಕೆಂದು ಫಾರಂಗಳಲ್ಲಿ ಬರೆದುಕೊಟ್ಟರು ಸಭಾಧ್ಯಕ್ಷರಿಗೆ ಹಾರ ತುರಾಯಿಗಳನ್ನು ಕೊಟ್ಟ ಮೇಲೆ ಸಭಿಕರೆಲ್ಲರಿಗೂ ಗಂಧ ಪುಷ್ಪ ಫಲತಾಂಬೂಲಗಳು ಹಂಚಲ್ಪಟ್ಟವು. ನಮ್ಮ ಶ್ರೀಮನ್ ಮಹಾರಾಜರವರಿಗೂ, ಶ್ರೀಮನ್ ಯುವರಾಜರಿಗೂ, ದಿವಾನ್ ಸಾಹೇಬರವರಿಗೂ ಆಯುರಾರೋಗ್ಯಾದಿಗಳನ್ನು ಮ॥ ಅಪ್ರಮೇಯ ಅಯ್ಯಂಗಾರ್ರು ಬಯಸಿದ್ದನ್ನು ಸರ್ವರೂ ಅನುಮೋದಿಸಿ ಜಯಧ್ವನಿ ಮಾಡಲು ಮಂಗಳವಾದ್ಯಗಳೊಡನೆ ಸಭೆಯು 6 ಗಂಟೆಗೆ ಪರಿಸಮಾಪ್ತಿಯಾಯಿತು.

ಗೋಶಾಯಿಗಳ ಪ್ರದರ್ಶನ.

ತಾ 31 ನೇ ಭಾನುವಾರ ಬೆಳಗ್ಗೆ ಪ್ರದರ್ಶನಕ್ಕೆ ದನಕರುಗಳನ್ನು ಚುನಾಯಿಸುವುದಕ್ಕೆ ಇವರಡಿ ಕಂಡ ದೊಡ್ಡ ಮನುಷ್ಯರು ಕಮಿಟಿಮೆಂಬರುಗಳಾಗಿ ನಿಯಮಿಸಲ್ಪಟ್ಟರು ಮ॥ ಗಳಾದ ಅಮಲ್ದಾರ್ ಅಯ್ಯಂಗಾರ್ ರವರು, ಹೆಡ್ ಮಾಸ್ಟರ್ ಅಪ್ರಮೇಯ ಅಯ್ಯಂಗಾರ್ರು, ಮುಷ್ತಿಕ್ತಿ ಏಜೆಂಟ್ ವೆಂಕಟಸುಬ್ಬಯ್ಯನವರು, ನಿಲಸೋಗೆ ಪಟೇಲ್ ದಾಸರಾಜೆ ಅರಸಿನವರು, ಕುರುಬೂರು ಪಟೇಲ್ ಮಲ್ಲಿಕಾರ್ಜುನಪ್ಪನವರು, ಸಾಹುಕಾರ್ ಪುಟ್ಟಣ್ಣನವರು, ಸೋಸಲೆ ಪಟೇಲ್ ದಾಸೆಗೌಡರು, ಹಿರಿಯೂರ್ ಪಟೇಲ್ ಪುಟ್ಟಮಾದಪ್ಪನವರು, ಇವರೆಲ್ಲಾ ಸೇರಿ ಪ್ರದರ್ಶನಕ್ಕೆ ಯೋಗ್ಯಗಳಾದ ದನಕರುಗಳನ್ನು ಸುಮಾರು 11 ಘಂಟೆಗೆ ಚುನಾಯಿಸಿ ಯೋಗ್ಯತಾನುಸಾರ ಅವುಗಳನ್ನೆಲ್ಲಾ ವಿಂಗಡಿಸಿದರು. ಈ ಪ್ರದರ್ಶನ ಸಭೆಯಲ್ಲಿ ನಮ್ಮ ಅಮಲ್ದಾರ್ರು ಸಭಾಧ್ಯಕ್ಷರಾಗಿದ್ದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ಅಪ್ರಮೇಯ ಅಯ್ಯಂಗಾರ್ರು "ದನ ಕರುಗಳ ಅಂಟುರೋಗಗಳೂ, ಅವುಗಳ ಸುಲಭ ಚಿಕಿತ್ಸೆಗಳೂ ಎಂಬ ಉಪನ್ಯಾಸವನ್ನು ಕೇವಲ ಮೂಢರಿಗೂ ತಿಳಿಯುವ ರೀತಿಯಲ್ಲಿ ಓದಿದರು. ಮೇಲ್ಕಂಡ ದೊಡ್ಡ ಮನುಷ್ಯರೂ, ಗ್ರಾಮಾಂತರಗಳಿಂದ ಬಂದಿದ್ದ ಬಹು ಜನ ಪಶುಪಾಲಕರೂ ಕೇಳಿ ತುಂಬಾ ಸಂತೋಷಪಟ್ಟು, ತಂತಮ್ಮ ದನ ಕರುಗಳ ರೋಗನಿವಾರಣೆಯ ವಿಷಯದಲ್ಲಿ ಆಸಕ್ತರಾಗಿದ್ದ ಕೆಲವರು ತಮಗೆ ಬೇಕಾದ ವಿಷಯಗಳನ್ನು ಸಂಕ್ಷೇಪವಾಗಿ ಗುರ್ತುಹಾಕಿಸಿಕೊಂಡದ್ದಲ್ಲದೆ ಆ ಉಪನ್ಯಾಸವನ್ನೇ ಪ್ರಿಂಟುಮಾಡಿಸಿ ತಮಗೆಲ್ಲರಿಗೂ ಕೊಡಬೇಕೆಂದು ಸಭಾಧ್ಯಕ್ಷರನ್ನು ಪ್ರಾರ್ಥಿಸಿಕೊಂಡ ಮೇರೆ ಅವರು ಲೋಕೋಪಕಾರ ಮನಸ್ಸಿನಿಂದ ಇವರ ಕೋರಿಕೆಯನ್ನು ನೆರವೇರಿಸುವ ವಿಷಯದಲ್ಲಿ ತಕ್ಕ ಏರ್ಪಾಡು ಮಾಡುತ್ತೇವೆಂದು ಅಪ್ಪಣೆಕೊಟ್ಟರು. ಸಭಾಧ್ಯಕ್ಷರ ಉದಾರ ಮನಸ್ಸನ್ನು ನೋಡಿ ಎಲ್ಲರೂ ತುಂಬಾ ಸ್ತೋತ್ರಮಾಡಲು ಪ್ರದರ್ಶನವು 12 ಗಂಟೆಗೆ ಮುಗಿಯಿತು

ಮಧ್ಯಾಹ್ನ 5 ಘಂಟೆಗೆ ಬಹುಮಾನಗಳನ್ನು ಹಂಚುವದಕ್ಕೆ ಸಭೆಯು ಪುನಃ ಪ್ರಾರಂಭವಾಯಿತು. ನಂಜನಗೂಡು ಸಬ್ ಡಿವಿಜನ್ ಸಾಹೇಬರು ಮ॥ ಎನ್ ಸುಬ್ಬರಾಯರೂ, ಡಿ॥ ಸಂಪದಭ್ಯುದಯ ಸಮಾಜದ ಸೂಪರಿಂಟೆಂಡೆಂಟ್ ಮ॥ ಶ್ರೀನರಸಿಂಹಶಾಸ್ತ್ರಿಗಳೂ ಅಗ್ರಾಸನವನ್ನು ವಹಿಸಿದರು. ಸಭಾಧ್ಯಕ್ಷರು ನಮ್ಮ ದೇಶದ ಕರುಗಳನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಮುಖಂಡರಾದ ಪಶುಪಾಲಕರೊಡನೆ ಸಂಭಾಷಣೆಮಾಡುತ್ತಿರುವ ವೇಳೆಯಲ್ಲಿ ಸಭಾಧ್ಯಕ್ಷರ ಅಪ್ಪಣೆಯ ಮೇರೆ ಎ. ವಿ. ಸ್ಕೂಲು ಹೆಡ್ ಮಾಸ್ಟರ್ ಮ॥ ಅಪ್ರಮೇಯ ಅಯ್ಯಂಗಾರ್ರು ನಮ್ಮ ದೇಶದ ರಾಸುಗಳನ್ನು ಅಭಿವೃದ್ಧಿಪಡಿಸಲು ಈಗಿರುವ ಅನನುಕೂಲಗಳನ್ನೂ, ಅವುಗಳ ಪರಿಹಾರಗಳನ್ನೂ, ಪಶುಪಾಲಕರು ಮುಖ್ಯವಾಗಿ ಗಮನಿಸಬೇಕಾದ ಅನೇಕ ಸಲಹೆಗಳನ್ನೂ ಒಳಗೊಂಡಿರುವ ಒಂದು ಚಿಕ್ಕ ಉಪನ್ಯಾಸವನ್ನು ಮಾಡಿ ಸಭಿಕರ ಮನಸ್ಸಂತೋಷಪಡಿಸಿದ ನಂತರ ಯೋಗ್ಯತಾ ಪತ್ರಿಕೆಗಳೂ ಬಹುಮಾನಗಳೂ ಇದರಡಿ ಕಂಡಂತೆ ಹಂಚಿಯಾದವು. ಅಂಥಾ ರಾಸುಗಳ ಮಾಲೀಕರುಗಳ್ಯಾರೆಂದರೆ:—

ಎಳೆಯುವ ಎತ್ತುಗಳು:—ಚಾಮರಾಜನಗರದ ತಾ॥ ಹಳ್ಳಿಕೆರೆಮುಂಡಿ ಪುಟ್ಟಬಸಪ್ಪ, ಟಿ. ನರಸಿಪುರದ ತಾ॥ ಬಿದರವಳಿ ನಂಜುಂಡಯ್ಯ, ಕೆಂಪಯ್ಯನ

[illegible] ಜವರೇಗೌಡ, ಕೊಳ್ಳೇಗಾಲದ ತಾ|| ಚಿಲಕವಾಡಿ ಚನ್ನಬಸವದೇವರು. [illegible]—ಟಿ. ನರಸೀಪುರದ ತಾ|| ಕೇರುಹಟ್ಟಿ ಮಲ್ಲಪ್ಪ, ಮಳವಳ್ಳಿ ತಾ|| [illegible] ತಿಂಪೇಗೌಡ, ಕೊಳ್ಳೇಗಾಲದ ತಾ|| ಮಧುವನಹಳ್ಳಿ ಕಾಳಪ್ಪ, ಟಿ. [illegible] ತಾ|| ವಾಟಾಳು ಬಸವಶೆಟ್ಟಿ. ಬೀಜದ ಹೋರಿಗಳು.—ಟಿ. ನರಸಿ[illegible] ತಾ|| ಕೋಣಗಹಳ್ಳಿ ಚಿಕ್ಕಸಂಬಪ್ಪ, ಮಳವಳ್ಳಿ ತಾ|| ಚಿಕ್ಕಮಳುವ[illegible] ಕುನ್ನೇಗೌಡ ಕರುಗಳು.—ಕೊಳ್ಳೇಗಾಲದ ತಾ|| ಹೊಂಡರಬಾಳು [illegible]ರಾಧ್ಯ, ಟಿ ನರಸೀಪುರದ ತಾ|| ವಿಜಯಾಪುರದ ಹುಸೇನ್ ಸಾಬ್, [illegible] ತಾ|| ಕೊಳ್ಳೇಗಾಲದ ಚಿಕ್ಕಣ್ಣ, ನಂಜನಗೂಡು ತಾ|| ಬಿಳಿಗಲಿ [illegible].

ಸಭಾಧ್ಯಕ್ಷರುಗಳಿಗೆ ಹಾರ ತುರಾಯಿಗಳನ್ನು ಕೊಟ್ಟ ಮೇಲೆ ಸಭಿಕರೆಲ್ಲ [illegible] ಫಲಪುಷ್ಪ ತಾಂಬೂಲಗಳು ಹಂಚಿಕೆಯಾದವು. ಅನಂತರ ನಮ್ಮ ಶ್ರೀಮನ್ [illegible]ರವರ, ಶ್ರೀಮದ್ಯುವರಾಜರವರ, ಮತ್ತು ಧಿಪೇಜ್ ಸಾಹೇಬರವರ [illegible] ಪ್ರಾರ್ಥನೆಗಳು ನಡೆದು ಸಭೆಯು ಮಂಗಳವಾದ್ಯಗಳೊಡನೆ 6 ಗಂಟೆಗೆ [illegible]ಪ್ತಿಯಾಯಿತು.

ಮೇಲ್ಕಂಡ 2 ದಿವಸಗಳ ಸಭೆಗಳನ್ನೂ ಸಾಂಗವಾಗಿಯೂ, ಬಹು ತೃಪ್ತಿ[illegible]ಯೂ ನಡಿಸಲು ತಕ್ಕ ಏರ್ಪಾಡುಗಳನ್ನು ಬಹು ಮುತುವರ್ಜಿಯಿಂದ [illegible] ನಮ್ಮ ಅಮಲ್ದಾರ್ ಮ|| ಈಶ್ವರ್‌ಗವರ ಮೆಯನಕ್ತು ತುಂಬಾ [illegible]ಪ್ರಶಂಸಾರ್ಹವಾದದ್ದೆಂಬ ವಿಷಯದಲ್ಲಿ ಏನೂ ಸಂದೇಹವಿಲ್ಲ.

ಪ್ರತ್ಯಕ್ಷದರ್ಶಿ.

ಮೈಸೂರು ನ್ಯಾಯವಿಧಾಯಕ ಸಭೆಯ ಮೀಟಿಂಗು.

ಮೆಂಬರುಗಳ ಪ್ರಶ್ನೆಗಳೂ, ಸರ್ಕಾರದವರ ಪ್ರತ್ಯುತ್ತರಗಳೂ.

ಕಳೆದ 10 ನೇ ತಾ. ಬುಧವಾರ ಮೈಸೂರು ನ್ಯಾಯವಿಧಾಯಕ ಸಭೆಯ [illegible] ಬೆಂಗಳೂರು ಪಬ್ಲಿಕ್ ಆಫೀಸ್ ಕೌನ್ಸಿಲ್ ರೂಮ್‌ನಲ್ಲಿ ನಡೆಯಿತು. ಮೀಟಿಂಗಿನಲ್ಲಿ ಮೆಂಬರುಗಳು ಕೇಳಿದ ಪ್ರಶ್ನೆಗಳಿಗೆ ಅಧಿಕಾರಿಗಳು [illegible] ಸಮಾಧಾನಗಳನ್ನು ಸಂಗ್ರಹಿಸಿ ಪ್ರಕಟಮಾಡಿದೇವೆ.

ವಿದ್ಯಾಭ್ಯಾಸ.

ಮ|| ಎಂ. ವೆಂಕಟಕೃಷ್ಣಯ್ಯನವರು ಪ್ರಶ್ನೆ ಮಾಡಿದ್ದು —ವಿದ್ಯಾಭ್ಯಾಸದ [illegible]ದಲ್ಲಿ ಸರ್ಕಾರದವರ ಕಾರ್ಯಕ್ರಮವೇನು? ಪ್ರಥಮ ಶಿಕ್ಷಣವು ಪ್ರೌಢ [illegible]ವ್ಯಾಭ್ಯಾಸಕ್ಕೆ ಹೊಂದುವಂತೆ ರೂಪಿಸಲ್ಪಟ್ಟಿದೆಯೋ? ಪಾಠಶಾಲೆಗಳನ್ನು ಕಟ್ಟು[illegible] ಉಪಕರಣಗಳನ್ನು ಒದಗಿಸುವುದಕ್ಕೂ ಯಾವ ಏರ್ಪಾಡು ಮಾಡಿದೆ? [illegible] ಸಾಲಿನಲ್ಲಿ ಅದು ಎಷ್ಟು ಮಟ್ಟಿಗೆ ನಡೆದಿದೆ? ಪಾಠಶಾಲೆಗಳಿಗೆ ತರಬೇತಿ[illegible] ಉಪಾಧ್ಯಾಯರನ್ನು ಒದಗಿಸುವುದಕ್ಕೆ ಯಾವ ಏರ್ಪಾಡು ಮಾಡಿದಾರೆ? ಗ್ರ್ಯಾಂಟ್ ಕೊಡುವ ರೂಲಕು ಮೊದಲಿದ್ದ ರೂಲಿಗಿಂತ ಸಂಕೋಚವಾಗಿಲ್ಲವೇ? [illegible] ಸ್ಕೂಲ್ ಮತ್ತು ಕಾಲೇಜ್ ಉಪಾಧ್ಯಾಯರುಗಳ ದರ್ಜೆ ಮತ್ತು ತಲಬು[illegible] ಬದಲಾವಣೆ ಮಾಡಿರುವುದರಲ್ಲಿ ಹಲವರಿಗೆ ಅತೃಪ್ತಿಯುಂಟಾಗಿಲ್ಲವೇ?

ಮ|| ಎಚ್. ವಿ ನಂಜುಂಡಯ್ಯನವರು ಕೊಟ್ಟ ಸಮಾಧಾನ —ಸರ್ಕಾರದವರ ಕಾರ್ಯಕ್ರಮಗಳೆಲ್ಲಾ ಹುಕುಮುಗಳಲ್ಲೂ ರಿಪೋರ್ಟುಗಳಲ್ಲೂ ಕಂಡು[illegible]—ಶಿಕ್ಷಣ ಕ್ರಮಗಳು ಒಂದಕ್ಕೊಂದು ಹೊಂದಿಕೆಯಾಗಿರುವಂತೆ [illegible]ಸಲ್ಪಟ್ಟಿವೆ.—ಸಾಮಾನ್ಯವಾಗಿ ಕಟ್ಟಡವನ್ನು ತಾವಾಗಿಯೇ ಒದಗಿಸುವ [illegible]ಮಗಳಲ್ಲಿ ಮಾತ್ರ ಹೊಸ ಸ್ಕೂಲುಗಳನ್ನು ಇಡುತ್ತೇವೆ. ಜನರು ಮನಸ್ಸಿಗಿಂತ [illegible]ಗಿ ಪಾಠಶಾಲೆ ಇರುವ ಕಡೆ ಸರ್ಕಾರದವರು ಕಟ್ಟಡಗಳನ್ನು ಕಟ್ಟುವರು. [illegible] ಆಗಿ ಹತ್ತು ವರುಷವಾಗಿದ್ದರೆ ಅಂಥಾ ಕಡೆ ಅರ್ಧ ಖರ್ಚನ್ನು [illegible]ಮಸ್ಥರು ಕೊಡಿಸಿ ಕೊಟ್ಟಲ್ಲಿ ಸರ್ಕಾರದವರು ಇನ್ನರ್ಧ ಹಣ ಹಾಕಿ ಕಟ್ಟಿಸು[illegible]. ಇದಕ್ಕಾಗಿ ಚಾಲ್ತಿ ಸಾಲಿನಲ್ಲಿ ಒಂದೂವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.—ಪಾಠಶಾಲೆಗಳಿಗೆ ಬೇಕಾಗುವ ಉಪಕರಣಗಳನ್ನು ಸರ್ಕಾರದವರು [illegible]ಗಳವರಸಲ್ಲಿ ಕೊಡಿಸಿಟ್ಟುಕೊಂಡು ಅವಶ್ಯವಾದವುಗಳನ್ನು ಒದಗಿಸುತ್ತಾರೆ— 1912 ನೇ ಜನವರಿಯಿಂದ 1,180 ಪಾಠಶಾಲೆಗಳನ್ನು ಹೊಸದಾಗಿ ಇಟ್ಟಿದೆ. ಈ [illegible] 1,026 ಕಡೆ ಗ್ರಾಮಸ್ಥರೇ ಕಟ್ಟಡಗಳನ್ನು ಒದಗಿಸಿದರು. ಸರ್ಕಾರದ [illegible]ದಿಂದ 77 ಕಟ್ಟಡಗಳು ಕಟ್ಟಲ್ಪಟ್ಟವು 52 ಕಟ್ಟಡಗಳ ಕಾಮಗಾರಿ ಆಗುತ್ತಿವೆ. ಇಷ್ಟಲ್ಲದೇ ಇನ್ನೂ 19 ಕಟ್ಟಡಗಳನ್ನು ಪ್ರಾರಂಭಿಸುವೆವು ಕೆಲವು [illegible]ಗಳು ಕೆಲವು ಕಟ್ಟಡಗಳನ್ನು ಒದಗಿಸಿವರು; ಇನ್ನು ಕೆಲವಕ್ಕೆ ಸರ್ಕಾರದ ಗ್ರಾಂಟು ದೊರತು, ಖಾಸಗಿ ಜನರಿಂದಲೇ ಕಾಮಗಾರಿ ನಡೆಯುತ್ತಿದೆ.—ಉಪಾಧ್ಯಾಯರನ್ನು ಒದಗಿಸುವುದಕ್ಕೆ ಟ್ರೈಯಿನಿಂಗ್ ಕಾಲೇಜನ್ನೂ ನಾರ್ಮಲ್ ಸ್ಕೂಲುಗಳನ್ನೂ ಇಟ್ಟು ಸಿಬ್ಬಂದಿ ಮೊದಲಾದದ್ದನ್ನು ಹೆಚ್ಚಿಸಲಾಗಿದೆ. ಮೊದಲು [illegible] ಮಂದಿ ಉಪಾಧ್ಯಾಯರು ತರಬೇತಾಗುತ್ತಿದ್ದರು; ಈಗ 319 ಮಂದಿ [illegible]ಹೊಂದುವಂತೆ ಏರ್ಪಾಡು ಮಾಡಿದೆ. ಮುಂದೆ 410 ಮಂದಿ ತರಬೇತಾಗುವಂತೆ ಮಾಡಲಾಗುವುದು ಇದಲ್ಲದೆ ಮೈಸೂರು ಟ್ರೈಯಿನಿಂಗ್ ಕಾಲೇಜಿನಲ್ಲಿ [illegible] ಕ್ಲಾಸ್ ಎಂಬುವುದನ್ನಿಟ್ಟು ಒಂದೊಂದು ಸಲಕ್ಕೆ 40 ಮಂದಿಯಂತೆ ತರಬೇತಿಗಳು ಏರ್ಪಾಡು ಮಾಡಿದೆ.—ಈಗಿನ ಗ್ರ್ಯಾಂಟ್ ರೂಲಿನ[illegible] ಕೊರತೆಯೇನೂ ಇರುವಂತೆ ಸದ್ಯ ಕಾಣುವುದಿಲ್ಲ ಆದರೂ ಅದರ [illegible] ಬಾಧಕಗಳನ್ನು ಸರ್ಕಾರದವರು ಜಾಗರೂಕತೆಯಿಂದ ನೋಡುತ್ತಾ[illegible]. ಉಪಾಧ್ಯಾಯರುಗಳಲ್ಲಿ ಯಥಾರ್ಥವಾದ ಅಸಮಾಧಾನವಿರುವಂತೆ [illegible]ಬರುವುದಿಲ್ಲ. ಹೊಸ ರೀತಿ ಮಾಡಿದಾಗ ಕೆಲವರಿಗೆ ಅಸಮಾಧಾನ [illegible]ಗುವುದು ಸಹಜ; ಅಂಥವರ ವಿಷಯದಲ್ಲಿ ಸರ್ಕಾರದವರು ಸರಿಯಾದ ಏರ್ಪಾಡು ಮಾಡುತ್ತಿರುವರು.

ಕಣ್ಣಾಗಾಲದ ದಂಗೆ.

ಮ|| ವೆಂಕಟಕೃಷ್ಣಯ್ಯನವರ ಪ್ರಶ್ನೆಗಳು —ಕಣ್ಣಾಗಾಲದ ದಂಗೆ ಮೊಕದ್ದಮೆಯಲ್ಲಿ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಯಿತು? ಪೋಲೀಸಿನವರು ಎಷ್ಟು ಮಂದಿಯನ್ನು ದಸ್ತಗಿರಿ ಮಾಡಿದರು? ಮ್ಯಾಜಿಸ್ಟ್ರೇಟರಲ್ಲಿ ಹಾಜರು ಮಾಡಲ್ಪಟ್ಟವರು ಎಷ್ಟು ಮಂದಿ? ಮ್ಯಾಜಿಸ್ಟ್ರೇಟರೂ, ಸೆಷನ್ಸ್ ಜಡ್ಜರೂ ಎಷ್ಟೆಷ್ಟು ಮಂದಿಗೆ ಶಿಕ್ಷೆ ವಿಧಿಸಿದರು? ಪತ್ತೆ ನಡೆಯುವಾಗ್ಗೆ ಹುದ್ದೇದಾರರು ನಡಿಸಿದ [illegible]ಕಾರ್ಯಗಳಿಗಾಗಿ ಅವರಿಗೆ ಶಿಕ್ಷೆ ದಿಕ್ಷೆಗಳೇನಾದರೂ ಮಾಡಲ್ಪಟ್ಟವೇ? [illegible] ನಿಗೇವಾನಿ ಇದ್ದಿದ್ದರೆ ಈ ದಂಗೆ ಆಗುತ್ತಿತ್ತೇ?

ಮ|| ಎಚ್. ವಿ. ನಂಜುಂಡಯ್ಯನವರ ಉತ್ತರ.—ಒಟ್ಟು ಖರ್ಚು ರೂ. 31,990-4-6 ಪೈ.—1912 ನೇ ನೊವೆಂಬರ್ ತಾ 12 ರಿಂದ ತಾ. 26 ರ ವರೆಗೆ ಒಟ್ಟು 203 ಮಂದಿಯನ್ನು ದಸ್ತಗಿರಿಮಾಡಿದರು.—199 ಮಂದಿಯ ಮೇಲೆ ಮೊಕದ್ದಮೆ ಹರಿಲಾಯಿತು.—ಮ್ಯಾಜಿಸ್ಟ್ರೇಟರು ಯಾರಿಗೂ ಶಿಕ್ಷೆ ವಿಧಿಸಲಿಲ್ಲ. [illegible] ಸೆಷನ್ಸ್ ಜಡ್ಜರು 73 ಮಂದಿಗೂ, ಅಸಿಸ್ಟೆಂಟ್ ಸೆಷನ್ಸ್ ಜಡ್ಜರು 6 ಮಂದಿಗೂ ಶಿಕ್ಷೆ ವಿಧಿಸಿದರು.—ಒಬ್ಬ ಹುದ್ದೇದಾರನ ಬಗ್ಗೆ ಸಲ್ಲಿಸಿದ [illegible]ಮೆಂಟುಗಳಲ್ಲಿ ಆಕ್ಷೇಪಣೆ ಮಾಡಲ್ಪಟ್ಟಿರುವ ಹುದ್ದೇದಾರರ ವಿಷಯವನ್ನು [illegible]ದವರು ಗಮನಕ್ಕೆ ತಂದುಕೊಂಡಿದಾರೆ. ಹುದ್ದೇದಾರರ್ಯಾರಿಗೂ ಸ್ಪೆಷಲ್ [illegible]ನವನ್ನೂ ಕೊಟ್ಟಿಲ್ಲ.—ಸುಮಾರಾಗಿ ಈ ದಂಗೆಯು ಅನಿರೀಕ್ಷಿತ[illegible]ವೆಂದು ಹೇಳಬಹುದು.

ರೈಲ್ವೆಗಳು.

ಮ|| ಎಂ. ವೆಂಕಟಕೃಷ್ಣಯ್ಯನವರ ಪ್ರಶ್ನೆಗಳು.—ಸರ್ಕಾರದವರು ಕಾಮ[illegible] ಕೈಗೊಂಡಿರುವ ರೈಲ್ವೆಗಳ ಉದ್ದ, ಖರ್ಚು, ಉತ್ಪತ್ತಿ ಮುಂತಾದವುಗಳೆಷ್ಟು? ಮೈಸೂರಿಗೂ ಈರೋಡಿಗೂ ರೈಲ್ ಹಾಕುವ ವಿಚಾರವೇನಾಗಿದೆ?

ಮ|| ಡಿ. ಎಂ. ನರಸಿಂಗರಾಯರ ಉತ್ತರ.—

	ಮೈಲಿ		ಖರ್ಚು ರೂ.
(1) ಮೈಸೂರು ಅರಸೀಕೆರೆ ರೈಲ್ವೆ	106	......	66,27,764
(2) ತರೀಕೆರೆ ಯಡೆಹಳ್ಳಿ ಟ್ರಾಂವೆ	30	......	3,17,465
(3) ಬೆಂಗಳೂರು ಚಿಕ್ಕಬಳ್ಳಾಪುರ	39	......	10,82,908
(4) ಬೌರಿಂಗ್‌ಪೇಟೆ ಕೋಲಾರ	11	......	4,07,523
(5) ಕೋಲಾರ್ ಚಿಕ್ಕಬಳ್ಳಾಪುರ	53	......	14,90,384

ರೈಲ್ ರಸ್ತೆಗಳ ಉತ್ಪತ್ತಿಯು ಬರಬರ ಹೆಚ್ಚುವುದು; ಮುಂದಾಗ ಬಹುದಾದ ಉತ್ಪತ್ತಿಯನ್ನು ಈಗ ಊಹಿಸಿ ಹೇಳುವುದು ಸಾಧ್ಯವಲ್ಲ. ಮುಂದಕ್ಕೆ ಮೂಲ ಧನದ ಬಡ್ಡಿಯಲ್ಲದೆ ಗವರ್ನ್‌ಮೆಂಟಿಗೂ ಆದಾಯವಾಗುತ್ತದೆ.—ನಂಜನಗೂಡು ಈರೋಡ್ ರೈಲ್ವೆ ಲೈನಿನ ವಿಚಾರವಾಗಿ ಇಂಡಿಯಾ ಗವರ್ನ್‌ಮೆಂಟಿನ ಕೂಡ ಕಾಗದ ಪತ್ರಗಳು ನಡೆಯುತ್ತಿವೆ.

ರೆವಿನ್ಯೂ ಅಧಿಕಾರಿಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರ ತಪ್ಪಿಸುವುದು.

ಮ|| ಬಿ ನರಸಿಂಗರಾಯರ ಪ್ರಶ್ನೆ.—ರೆವಿನ್ಯೂ ಅಧಿಕಾರಿಗಳಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ತಪ್ಪಿಸಿ ಪ್ರತ್ಯೇಕಮಾಡುವ ವಿಷಯದಲ್ಲಿ ಸರ್ಕಾರದವರು ಆಲೋಚನೆಮಾಡಿದಾರೆಯೇ? ಇದನ್ನು ಬೇಗನೆ ಜಾರಿಗೆ ತಂದರೆ ಪ್ರಜೆಗಳ ಕಷ್ಟನಷ್ಟಗಳು ನಿವಾರಣೆಯಾಗುವವು.

ಮ|| ಎಚ್. ವಿ. ನಂಜುಡಯ್ಯನವರ ಜವಾಬು —ಮುಖ್ಯವಾದ ಮೊಕದ್ದಮೆಗಳನ್ನು ನ್ಯಾಯಸ್ಥಾನದ ಜಡ್ಜಿಗಳೇ ವಿಚಾರಣೆಮಾಡುವರು. ಹಣ ಒದಗುವದೇ ಮೊದಲಾದ ಸಂಗತಿಗಳು ಅನುಕೂಲಿಸಿದಾಗ ಅಂಥಾ ಬದಲಾವಣೆ ಮಾಡಬಹುದು ಸದ್ಯದಲ್ಲಿ ಇದು ಅವಶ್ಯವೆಂದು ಗವರ್ನ್‌ಮೆಂಟಿಗೆ ತೋರುವುದಿಲ್ಲ.

ಸಬ್ ರೆಜಿಸ್ಟ್ರಾರುಗಳು.

ಮ|| ಬಿ. ನರಸಿಂಗರಾಯರ ಪ್ರಶ್ನೆ.—ಸಬ್ ರೆಜಿಸ್ಟ್ರಾರುಗಳಲ್ಲಿ ಅನೇಕ ಮಂದಿ ಬಿ ಎ. ಪ್ಯಾಸ್ ಮಾಡಿದವರು. ಬಾಲಿಬಿದ್ದ ಹೊರತು ಅವರಿಗೆ ಬಡ್ತಿ ದೊರಕುವುದಿಲ್ಲ ಅವರ ದರ್ಜೆಗಳನ್ನು ಪುನರ್ವಿಮರ್ಶೆಮಾಡಿ, ಸರ್ವಿಸಿಗೆ ತಕ್ಕಂತೆ ಬಡ್ತಿ ದೊರಕುವಂತೆ ಮಾಡಬಾರದೇ? ಮತ್ತು ಸರ್ವಿಸ್‌ದಾರರನ್ನು ಇತರ ಇಲಾಖೆಗಳಿಗೆ ತೆಗೆದು ಕೊಳ್ಳಬಾರದೇ?

ಮ|| ಎಚ್. ವಿ. ನಂಜುಂಡಯ್ಯನವರ ಉತ್ತರ.—ಈಗ 3 ನೇ, 4 ನೇ ದರ್ಜೆಯ ಸಬ್ ರೆಜಿಸ್ಟ್ರಾರುಗಳನ್ನು ಸಮಯ ಬಿದ್ದಾಗ ತಾಲ್ಲೂಕ್ ಶಿರಸ್ತೆಗೂ, 2 ನೇ ದರ್ಜೆಯವರನ್ನು ಡೆಪ್ಟಿ ಅಮಲ್ದಾರಿಗೂ ಸೇರಿಸಿಕೊಳ್ಳುತ್ತಿದೇವೆ. ಅವರಿಗೆ ಇನ್ನೂ ಹೆಚ್ಚು ಕೆಲಸ ಕೊಟ್ಟು ಸಂಬಳ ಬಡ್ತಿ ಮಾಡುವ ವಿಚಾರವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ

ನೌಕರ ಮಾನೇಜರುಗಳ ವಿಚಾರ.

ಮ|| ಕರಣಿಕ ಕೃಷ್ಣಮೂರ್ತಿರಾಯರ ಪ್ರಶ್ನೆ —ನೌಕರರ ಮೇಲೆ ಕ್ರಿಮಿನಲ್ ಮೊಕದ್ದಮೆ ಬಂದು ವಿಚಾರಣೆ ಆಗಿ ರುಜುವಾತಾಗದೆ ವಜಾ ಮಾಡಲ್ಪಟ್ಟರೆ ಅಂಥವರಿಗೆ ಮತ್ತೆ ಕೆಲಸ ಕೊಡಬೇಕು. ಬೆಂಗಳೂರು ಸೆಂಟ್ರಲ್ ನಾಜರ್ ನಾರಾಯಣಶಾಸ್ತ್ರಿಯವರಿಗೆ ಇನ್ನೂ ಕೆಲಸಕೊಟ್ಟಿಲ್ಲ. ಮಾಗಡಿ ತಾಲ್ಲೂಕ್ ಶಿರಸ್ತೆದಾರ್ ರಘುನಾಥಾಚಾರ್ರಿಗೂ, ಚಿಕ್ಕಬಳ್ಳಾಪುರದ ಪೋಲೀಸ್ ಇನ್ಸ್‌ಪೆಕ್ಟರಿಗೂ ಮೊಕದ್ದಮೆ ವಜಾ ಆದ ಬಳಿಕವೇ ಕೆಲಸ ಕೊಡಲ್ಪಟ್ಟಿದೆ.

ಮ|| ಎಚ್. ವಿ. ನಂಜುಂಡಯ್ಯನವರ ಉತ್ತರ.—ಬಲವತ್ತರವಾದ ಇನ್ನಾವ ಕಾರಣವೂ ಇಲ್ಲದಿದ್ದರೆ ಸಾಮಾನ್ಯವಾಗಿ ಅಂಥವರಿಗೆ ಮತ್ತೆ ಕೆಲಸ ಕೊಡುತ್ತೇವೆ.—ಸೆಂಟ್ರಲ್ ನಾಜರ ವಿಚಾರವು ಇನ್ನೂ ಇತ್ಯರ್ಥವಾಗಿಲ್ಲ; ಅದಿನ್ನೂ ವಿಚಾರಣೆಯಲ್ಲಿದೆ.—ರಾಘುನಾಚಾರ್ರಿಗೆ ಮತ್ತೆ ಕೆಲಸ ಕೊಟ್ಟಿದೆ ಇತರ ಕಾರಣಗಳಿಂದ ಇನ್ಸ್‌ಪೆಕ್ಟರನ್ನು ರಿಡಕ್ಷನ್ ಮಾಡಿದೆ.

ಕೆರೆಗಳೂ, ಬೆಳೆಯೂ.

ಮ|| ಕರಣಿಕ ಕೃಷ್ಣಮೂರ್ತಿರಾಯರ ಪ್ರಶ್ನೆ.—ಕಳೆದ ಸಾಲಿನಲ್ಲಿ ಸಂಸ್ಥಾನದೊಳಗೆ ಎಷ್ಟು ಕೆರೆಗಳಿಗೆ ನೀರು ಬಂದು ಎಷ್ಟು ಮಟ್ಟಿಗೆ ಬೆಳೆಯಾಗಿದೆ? ಅನೇಕ ಕೆರೆಗಳಿಗೆ ನೀರು ಬಾರದಿದ್ದರೆ ಅವುಗಳ ಕೆಳಗಣ ಹಿಡುವಳಿದಾರರಿಗೆ ರಿಮಿಷನ್ ಕೊಡಬಾರದೇ? ಕ್ಷಾಮಕಾಲದ ಸ್ಥಿತಿ ಪ್ರಾಪ್ತವಾಗಿರೋಣದರಿಂದ ಸರ್ಕಾರದವರು ಇದನ್ನು ಗೊತ್ತುಮಾಡಿ ಹುಕುಂ ಕೊಡಬಾರದೇ?

ಮ|| ಡಿ. ಎಂ ನರಸಿಂಗರಾಯರ ಉತ್ತರ —ಸೀಮೆಯಲ್ಲಿ 1,700 ದೊಡ್ಡ ಕೆರೆಗಳೂ, ಸುಮಾರು 20,000 ಸಣ್ಣ ಕೆರೆಗಳೂ ಇರೋಣದರಿಂದ ಇವುಗಳೆಲ್ಲ ಮೆಂಬರು ಕೇಳುವಂಥಾ ಸಂಗತಿಗಳನ್ನು ಗೊತ್ತುಮಾಡಿ ಹೇಳುವುದು ಸಾಧ್ಯವಲ್ಲ. ನೀರು ಬಾರದೆ ಇದ್ದ ಕೆರೆಗಳ ಸಂಖ್ಯೆ ಎಷ್ಟೆಂದೂ, ರಿಮಿಷನ್ ಮಾಡತಕ್ಕ ಸಂದರ್ಭಗಳೇನಾದರೂ ಉಂಟೇ ಎಂದೂ ವಿಚಾರಿಸುತ್ತಿದೇವೆ.

ಅಧಿಕಾರಿಗಳೂ, ಮೋಟಾರುಗಳೂ

ಮ|| ಎಸ್. ಆರ್ ಬಾಲಕೃಷ್ಣರಾಯರ ಪ್ರಶ್ನೆ —ಮೋಟರ್ ಕಾರ್ ಮತ್ತು ಮೋಟರ್ ಸೈಕಲ್‌ಗಳನ್ನು ಕೊಂಡು ಕೊಳ್ಳುವುದಕ್ಕೆ ಸರ್ಕಾರದವರು ಕಳೆದ ಎರಡು ವರುಷಗಳಲ್ಲಿ ಸಾಲ ಕೊಟ್ಟಿರುವುದೆಷ್ಟು? ಈ ಸಾಲಕ್ಕೆ ಬಡ್ಡಿ ಎಷ್ಟು? ಡಿಸ್ಟ್ರಿಕ್ಟ್ ಮತ್ತು ಡಿವಿಜನ್ ಆಫೀಸರುಗಳು ರಸ್ತೆಗಳ ಬಾಜೂ ಗ್ರಾಮಗಳ ವಿನಾ ಒಳ ಪ್ರದೇಶಗಳಲ್ಲಿ ಸಂಚರಿಸುವುದು ಪ್ರಯಾಸವಾಗಿಲ್ಲವೇ? ಅವರು ಇನ್ಸ್‌ಪೆಕ್ಟ್ ಮಾಡಿರುವ ಗ್ರಾಮಗಳ ತಪಸೀಲು ತಿಳಿಸುತ್ತೀರಾ?

ಮ|| ಡಿ. ಎಂ ನರಸಿಂಗರಾಯರ ಉತ್ತರ —ಕಳೆದ ಎರಡು ವರುಷಗಳಲ್ಲಿ 1,08,152 ರೂಪಾಯಿ ಸಾಲ ಕೊಟ್ಟಿದೆ. ಇದಕ್ಕೆ ಬಡ್ಡಿ ಇಲ್ಲ.—ರಸ್ತೆ ಪಕ್ಕದ ಸ್ಥಳವನ್ನು ಮಾತ್ರ ಇನ್ಸ್‌ಪೆಕ್ಟ್ ಮಾಡುತ್ತಾರೆಂದು ಸರ್ಕಾರದವರು ಊಹಿಸಲು ಕಾರಣವಿಲ್ಲ. ಅಂಥಾ ತಪಸೀಲನ್ನು ತಯಾರುಮಾಡಿಸುವುದರಲ್ಲಿ ಫಲವೇನೂ ಕಾಣುವುದಿಲ್ಲ. ಗವರ್ನ್‌ಮೆಂಟಿನವರು ರಿಪೋರ್ಟು ಮತ್ತು ತಪಸೀಲುಗಳನ್ನು ತರಿಸಿ ತನಿಖೆಮಾಡಿ ನೋಡಿಕೊಳ್ಳುತ್ತಾರೆ

ತುಮಕೂರು ನೀರಿನ ಸಪ್ಲೈದು

ಮ|| ಬಿ ವೆಂಕಟರಾಮಯ್ಯನವರ ಪ್ರಶ್ನೆ.—ತುಮಕೂರು ಟವನ್‌ಗೆ ನೀರನ್ನು ಒದಗಿಸುವುದಕ್ಕೆ ಯಾವ ಏರ್ಪಾಡು ಮಾಡಲಾಗಿದೆ?

ಮ|| ಡಿ. ಎಂ. ನರಸಿಂಗರಾಯರ ಉತ್ತರ.—ಇಂಜನಿಯರ್ ಇಲಾಖೆಯವರು ಮೈದಾಳದ ಕೆರೆಯಿಂದ ನೀರನ್ನು ಒದಗಿಸುವುದಕ್ಕೆ 1 67,000 ರೂಪಾಯಿ ಖರ್ಚಾಗುವುದೆಂದೂ, ನೀರಿನ ಸರಬರಾಯಿಗೆ ಸಾಲೀಯಾನಾ 1,000 ರೂಪಾಯಿ ಬೇಕಾದೀತೆಂದೂ ಅಂದಾಜುಮಾಡಿದಾರೆ ಸರ್ಕಾರದವರೂ ಇದನ್ನು ಒಪ್ಪಿರುವರು. ಮ್ಯುನಿಸಿಪಾಲಿಟಿಯವರು ಸಾಲೀಯಾನಾ ಖರ್ಚನ್ನೂ, ಮೇಲ್ಕಂಡ ಅಂದಾಜಿನಲ್ಲಿ ಅರ್ಧ ಹಣವನ್ನೂ ವಹಿಸಿಕೊಂಡು ಕೊಡಲು ಒಪ್ಪಿದರೆ ಸರ್ಕಾರದವರು ಕಾಮಗಾರಿಯನ್ನು ಪ್ರಾರಂಭಿಸಿ ನಡಿಸಬಹುದು.

ಶಿವಮೊಗ್ಗಾ ರೈಲ್ ಗಾಡಿ

ಮ|| ಕೆ. ವೆಂಕಟನಾರಾಯಣರಾಯರ ಪ್ರಶ್ನೆ.—ಬೆಂಗಳೂರಿನಿಂದ ಸೀದಾ ಶಿವಮೊಗ್ಗೆಗೆ ರೈಲ್‌ಗಾಡಿಯಲ್ಲಿ ಹೋಗುವಂಥಾ ದೊಡ್ಡ ಭಂಡಿಯನ್ನು ತಗಲಿಸದೆ ಇರೋಣದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ

ಮ|| ಡಿ. ಎಂ ನರಸಿಂಗರಾಯರ ಉತ್ತರ.—ಇದು ಪ್ರತಿನಿಧಿಸಭೆಯಲ್ಲಿ ಚರ್ಚೆಯಾದ ವಿಷಯ. ಬೇರೆ ಗಾಡಿ ಹಾಕುವುದಕ್ಕೆ ತಕ್ಕಷ್ಟು ಉತ್ಪತ್ತಿಯಾಗುವುದಿಲ್ಲ. ವಿಚಾರಿಸಿ, ಅದುದು ಲಾಭ ತೃಪ್ತಿಕರವಾಗಿ ಕಂಡುಬಂದರೆ ಮಾಡಬಹುದು.

ಮಲೆನಾಡಿನ ಅಭಿವೃದ್ಧಿ.

ಮ|| ಕೆ. ವೆಂಕಟನಾರಾಯಣರಾಯರ ಪ್ರಶ್ನೆ.—ಮಲೆನಾಡಿನ ಅಭಿವೃದ್ಧಿಯ ಬಾಬಿನಲ್ಲಿ ಸಿಬ್ಬಂದಿಗೂ ಪ್ರಯಾಣ ಮುಂತಾದ ಭತ್ಯಕ್ಕೂ 1916 ನೇ ಇಸವಿ ಪ್ರಾರಂಭದಿಂದ ಇದುವರೆಗೆ ಖರ್ಚಾಗಿರುವ ಹಣವೆಷ್ಟು? ಅಭಿವೃದ್ಧಿ ಕಾರ್ಯಗಳು ಏನೇನು ನಡೆದಿವೆ? ಅವುಗಳ ಖರ್ಚು ಎಷ್ಟು? ಈಗ ನಡೆದಿರುವ ಅಭಿವೃದ್ಧಿ ಕಾರ್ಯಗಳನ್ನೂ ಆಗಿರುವ ಖರ್ಚನ್ನೂ ನೋಡಿದರೆ ಸರ್ಕಾರಕ್ಕೆ ತೃಪ್ತಿಯುಂಟಾಗಿದೆಯೇ? ಈಗಿನ ಏರ್ಪಾಡನ್ನು ನಿಲ್ಲಿಸಿ ಸರ್ಕಾರದವರು ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ವಹಿಸಿ ಅವರಿಂದ ಅಭಿವೃದ್ಧಿ ಕೆಲಸಗಳನ್ನು ಮಾಡಿಸುವುದು ಒಳ್ಳೇದಲ್ಲವೇ?

ಮ|| ಡಿ. ಎಂ ನರಸಿಂಗರಾಯರ ಉತ್ತರ.—ಅದಕ್ಕೆ 18,358 ರೂಪಾಯಿ ಖರ್ಚಾಗಿದೆ. ಅಭಿವೃದ್ಧಿ ಕಮಿಟಿಯವರು 38,735 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿವೆ ಎಂದು ರಿಪೋರ್ಟು ಬಂದಿದೆ. ಈಗ ನಡೆದಿರುವ ಕಾರ್ಯಗಳನ್ನು ನೋಡಲಾಗಿ ಈ ಖರ್ಚು ಹೆಚ್ಚಲ್ಲವೆಂದು ಹೇಳಬಹುದು. ಸ್ಥಳೀಯ ಪ್ರಜೆಗಳಲ್ಲಿ ಇಂಥಾ ಕಾರ್ಯಗಳನ್ನು ತಾವೇ ಮಾಡಿಕೊಳ್ಳಬೇಕೆಂಬ ಉತ್ಸಾಹವನ್ನುಂಟುಮಾಡುವುದಕ್ಕೋಸ್ಕರ ಈ ಖರ್ಚು ಅವಶ್ಯವೆಂದು ತಾಯುತ್ತದೆ.—ಮಲೆನಾಡಿನ ಅಭಿವೃದ್ಧಿಯು ಅವಶ್ಯವಾಗಿರೋಣದರಿಂದ ಅದಕ್ಕಾಗಿ ವಿಶೇಷವಾದ ಏರ್ಪಾಡುಗಳು ಮಾಡಲಾಗಿದೆ.

ರೆವಿನ್ಯೂ ಪ್ರೊಬೇಷನರುಗಳೂ, ಪ್ರೊ|| ಅ|| ಕಮಿಷನರುಗಳೂ.

ಮ|| ಕೆ. ವೆಂಕಟನಾರಾಯಣರಾಯರ ಪ್ರಶ್ನೆ.—ಮ್ಯಾಜಿಸ್ಟ್ರೇಟರಾಗಿ ಕೆಲಸಮಾಡುವುದಕ್ಕೆ ರೆವಿನ್ಯೂ ಪ್ರೊಬೇಷನರುಗಳನ್ನೂ, ಪ್ರೊಬೇಷನರಿ ಅ|| ಕಮಿಷನರುಗಳನ್ನೂ ಯಾವ ರೀತಿ ತರಪೇತುಮಾಡುವರು? ಅವರನ್ನು ಕ್ರಿಮಿನಲ್ ಮೊಕದ್ದಮೆಗಳು ದರ್ಯಾಪ್ತಿಯಾಗುವಾಗ್ಗೆ ಎದುರಿದ್ದು ನೋಡಿ ಕಲಿತುಕೊಳ್ಳುವಂತೆ ಮಾಡುವುದು ಒಳ್ಳೇದಲ್ಲವೇ?

ಮ|| ಡಿ. ಎಂ. ನರಸಿಂಗರಾಯರ ಉತ್ತರ.—ಅವರನ್ನು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳಲ್ಲಿ ನೇಮಿಸಿ ಎಲ್ಲಾ ಬಾಬುಗಳ ಕೆಲಸಗಳನ್ನೂ ಕಲಿತುಕೊಳ್ಳುವಂತೆ ಮಾಡುತ್ತಿದೇವೆ. ಕ್ರಿಮಿನಲ್ ಮೊಕದ್ದಮೆಗಳ ದರ್ಯಾಪ್ತಿಯನ್ನೂ ಅವರು ಆಗಲೇ ಕಲಿಯಲು ಅವಕಾಶವಿದೆ. ಈ ವಿಚಾರವನ್ನು ಮತ್ತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಗೆ ತಿಳಿಸುವೆವು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಕರೆಸ್‌ಪಾಂಡೆನ್ಸ್.

ತಿಳಿಯಬೇಕು.

ಅಯ್ಯಾ.—ನಾನು ಅಪೇಕ್ಷಿಮಾಡಿದ ಕಾಲದಲ್ಲಿ ಹಣ ಒದಗುತ್ತೆಂಬ ಧೈರ್ಯದಿಂದ ಸಾಹುಕಾರಿ ಬ್ಯಾಂಕಿಗೆ ಕೆಲವು ಮೊಬಲಗನ್ನು ಷೇರುಕೊಟ್ಟಿರುತ್ತೇನೆ. ಷೇರು ಮೊಬಲಗು ಕೊಟ್ಟು ಸುಮಾರು 14—15 ವರುಷಗಳಾಗಿಯತ್ತೆ. ಅಸಲ್ ಮೊಬಲಗು ವಾಪಸು ಕೊಡಬೇಕೆಂತ ಏಜಂಟರನ್ನು ಕೇಳಿದರೆ ಷೇರು ಮೊಬಲಗು ವಾಪಸು ಕೊಡಲು ರೂಲಸು ಇಲ್ಲವೆಂದೂ, ಮಕ್ತೂತ್ತಲ್ಬರಲ್ಲಿ ಮೊಬಲಗು ತಗೆದುಕೊಂಡು ಷೇರನ್ನು ವರ್ಗಮಾಡಬಹುದೆಂತ ಕೋರ್ಟ್ ಫೈಸಲ್, ಸರ್ಕಾರಿ ಹುಕುಂ ಸಹ ಆಗಿರುವದಾಗಿಯೂ ಹೇಳುತ್ತಾರೆ. ಷೇರು ಮೊಬಲಗು ವಾಪಸು ಕೊಡಲು ಬ್ಯಾಂಕು ರೂಲಸು ಪ್ರಕಾರ ಎಷ್ಟು ದಿವಸ ಅವಧಿ? ಈ ವಿಚಾರದಲ್ಲಿ ಇರುವ ರೂಲಸು ತಪಸೀಲಾಗಿ ತಾವಾಗಲಿ, ವಾಚಕ ಮಹಾಶಯರುಗಳ್ಯಾರೇ ಆಗಲಿ ದಯವಿಟ್ಟು ತಿಳಿಸಬೇಕೆಂತ ಕೋರುತ್ತೇನೆ.

ಒಬ್ಬ ಷೇರುದಾರ.

[ನೀವು ಹಣ ಹಾಕಿರುವ ಬ್ಯಾಂಕಿನ ರೂಲಸನ್ನು ನೋಡಿ ಅದರಲ್ಲಿ ಕಂಡ ಷರತ್ತುಗಳಂತೆ ನಡೆದುಕೊಳ್ಳಬೇಕು.—ಎಡಿ.]

ಹಾಸನದ ವಿದ್ಯಮಾನಗಳು.

ಅಯ್ಯಾ,—ಈ ತಾಲ್ಲೂಕು ಅಗಿಲೆ ಎಂಬ ಗ್ರಾಮದಲ್ಲಿ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ಸಿಪಾಯಿಗಳನ್ನಾಗಿ ಆರಿಸಿ ಕಳುಹಿಸಲು ತನ್ನನ್ನು ಸರ್ಕಾರದವರು ನೇಮಿಸಿ ಕಳುಹಿಸಿದಾರೆಂಬದಾಗಿ ರೈತಾಬಿ ಜನರನ್ನು ಹೆದರಿಸಿ ಹಣ ವಸೂಲ್ ಮಾಡಿಕೊಳ್ಳುತ್ತಿದ್ದ ವೆಂಕಟರಾಮಯ್ಯನೆಂಬವನಿಗೆ ಸಕಲೇಶಪುರದ ಸಬ್ ಡಿವಿಜನ್ ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆದು ಆರು ತಿಂಗಳು ಕಠಿಣಶಿಕ್ಷೆ ವಿಧಿಸಲ್ಪಟ್ಟಿದಾಗಿ ವರ್ತಮಾನ ಬಂದಿದೆ.

ಈ ಪ್ರಾಂತ್ಯ ಪೋಲೀಸಿನವರ ಗಸ್ತು ಕಳ್ಳರನ್ನು ಎಚ್ಚರ ಪಡಿಸಿ ಅವರು ತಲೆತಪ್ಪಿಸಿಕೊಂಡು ಓಡಿಹೋಗುವುದಕ್ಕೆ ಸಹಕಾರಿಯಾಗಿದೆಯೇ ಹೊರತು ಆ ಕಳ್ಳರನ್ನು ಹಿಡಿಯಲು ಸಹಕಾರಿಯಾಗಿ ಕಾಣುವುದಿಲ್ಲ. ರಾತ್ರಿ ಪೋಲೀಸಿನವರು ಬೀದಿಯ ಮೇಲೆ ಸಂಚಾರಮಾಡುತ್ತಾ, ನಿಶ್ಶಬ್ದವಾಗಿ ತಿರುಗುವುದಕ್ಕೆ ಬದಲಾಗಿ ಸಿಳ್ಳು ಹಾಕುತ್ತಲೂ, ಒಂದೊಂದು ಮನೆಯವರನ್ನು ಕೂಗಿ ಕೂಗಿ ಎಬ್ಬಿಸುತ್ತಲೂ ಹೋಗುವುದರಿಂದ ಗುಮಾನಿಗಾಸ್ಪದರಾದವರು ಮರೆಯಾಗುವುದಕ್ಕೂ, ತಸ್ಕರದ ಕೆಲಸದಲ್ಲಿರುವವರು ಇವರ ಧ್ವನಿಯು ದೂರಕ್ಕೆ ಹೋಗುವ ತನಕ ಸುಮ್ಮನಿದ್ದು ಅನಂತರ ತಮ್ಮ ಕೆಲಸಮಾಡಲಿಕ್ಕೂ ಅನುಕೂಲವೂ ಸಹಾಯವೂ ಆಗುವುದಲ್ಲವೇ? ಈ ವಿಷಯವನ್ನು ಮೇಲ್ಪಟ್ಟ ಅಧಿಕಾರಿಗಳು ಗಮನಿಸಬೇಕು.

ಈ ಕಾಲದಲ್ಲಿ ಹೋಟೆಲುಗಳಿಗೂ, ಮದ್ಯದ ಅಂಗಡಿಗಳಿಗೂ ಗಿರಾಕಿ ಬಹಳ. ಹೋಟೆಲ್‌ಗಳ ಸ್ಥಿತಿಯು ಅವ್ಯವಸ್ಥೆಗೆ ಬಂದರೆ ಅನೇಕರ ಆರೋಗ್ಯವು ಕೆಟ್ಟುಹೋಗುವುದರಲ್ಲಿ ಸಂದೇಹವಿಲ್ಲ. ಮನೆಗಳಲ್ಲಿ ಅನ್ನವೂ, ಊಟದವರು, ಕಾಫಿಕುಡಿಯುವವರು ಹೆಚ್ಚಿ ಬಂದಹಾಗೆಲ್ಲಾ ನೀರು ಮಿಶ್ರವಾದ ಸಾರು ಮತ್ತು ಕಾಫಿಗಳೂ, ವ್ಯಂಜನಾದಿಗಳೆಲ್ಲದಿರುವಿಕೆಯೂ ಇದ್ದರೂ ಶಕ್ತವಾಗದಿರುವಿಕೆಯೂ ಆ ಅನುಭವದಾರರಿಂದ ಮರೆಯಲಸಲ್ಲದಷ್ಟು ಪರಿತಾಪಕರವಾಗಿದೆ. ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರವರು ಈ ಹೋಟೆಲ್‌ಗಳ ಸ್ಥಿತಿಗತಿ ಆಗಾಗ್ಗೆ ವರ್ತಮಾನ ಕೊಡದೆ ವಿಚಾರಣೆ ಮಾಡುತ್ತಾ ಬಂದರೆ ಪರಿಸ್ಥಿತಿಗೆ ಮುಹೋಪಕಾರವಾಗುವುದು.

ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಉಮ್ಮೇದವಾರರಿಗೆ ಪ್ರತಿ ತಿಂಗಳಲ್ಲಿಯೂ ಕಾಲಕ್ಕೆ ಸರಿಯಾಗಿ ಸಂಬಳಗಳು ಸಿಕ್ಕದೆ ತುಂಬಾ ಕಷ್ಟಪಡುತ್ತಿದಾರೆ. ಈ ಸ್ಕೂಲ್ ಇಲ್ಲಿನ ಸೆಂಟ್ರಲ್ ಕೋಆಪರೇಟಿವ್ ಸೊಸೈಟಿಯ ಅಧೀನದಲ್ಲಿರುತ್ತದೆ ಸ್ಕೂಲಿನ ಉಮ್ಮೇದವಾರರು ಸಂಬಳವನ್ನು ಕೇಳಿದರೆ ಪ್ರೆಸಿಡೆಂಟರವರು ಗೌರ್ನಮೆಂಟಿನಿಂದ ಇನ್ನೂ ಚೆಕ್ಕು ಬಂದಿಲ್ಲವೆಂದು ಹೇಳುತ್ತಾರಂತೆ. ಸೊಸೈಟಿಯಿಂದ ಸಂಬಳಗಳನ್ನು ಕೊಟ್ಟು, ಚೆಕ್ಕು ಬಂದ ಮೇಲೆ ಏತಕ್ಕೆ ಅದನ್ನು ಸೊಸೈಟಿ ಲೆಕ್ಕಕ್ಕೆ ಜಮಾ ಕಟ್ಟಿಕೊಳ್ಳಬಾರದೋ ತಿಳಿಯದು. ಅಂತು ಬಡ ಉಮ್ಮೇದುಗಳಿಗೆ ಪ್ರತಿ ತಿಂಗಳಲ್ಲಿಯೂ ತಾ. 5 ರೊಳಗಾಗಿ ಸಂಬಳ ಪಾವತಿಯಾಗುವುದು ಉತ್ತಮ.

ಒಂದು ವಾರದಿಂದೀಚೆಗೆ ಪ್ಲೇಗು ಸ್ವಲ್ಪ ಕಡಮೆಯಾಗಿರುವಂತೆ ಕಾಣುತ್ತದೆ ಮುಕ್ಕಾಲುಪಾಲು ನಿವಾಸಿಗಳು ಗುಡಿಸಲುಗಳಿಗೆ ಹೋಗಿರುತ್ತಾರೆ. ಮ್ಯುನಿಸಿಪಾಲಿಟಿಯ ಏರ್ಪಾಡುಗಳೂ, ಚಟುವಟಿಕೆಯೂ ಇನ್ನೂ ತೃಪ್ತಿಕರವಾಗಿ ನಡೆದರೆ ಈ ರೋಗವು ಬೇಗನೆ ನಿವೃತ್ತಿಯಾದೀತು. ನಮ್ಮ ಡಿಸ್ಟ್ರಿಕ್ಟ್ ಕಮಿಷನರವರು ಬಹು ಮಟ್ಟಿಗೆ ಪ್ರಜಾಭಿಮಾನಿಗಳು. ಆಗಾಗ್ಗೆ ಕೆಡಂಚಿನ್ನಾಗಿ ಯಾವುದಾ

ದರೊಂದು ಬೀದಿಯಲ್ಲಿ ಹೊರಟು ಪರೀಕ್ಷಿಸುವರು. ಪೋಲೀಸು ಅಧಿಕಾರಿಗಳು ಈ ಬಾಬತ್ತಾಗಿ ಒಂದೊಂದು ರಾತ್ರಿ ಹೀಗೆಯೇ ಮಾಡಿದರೆ ಎಷ್ಟೋ ಉತ್ತಮವಾದೀತು. ಇಲ್ಲಿನ ಹೈಸ್ಕೂಲ್ ಕಟ್ಟಡಗಳಲ್ಲಿ ಈಗ್ಗೆ ಒಂದು ತಿಂಗಳಿನಿಂದಲೂ ಆಗಾಗ್ಗೆ ಇಲಿಗಳು ಸಾಯುತ್ತಲೇ ಇವೆ. ಊರೊಳಗಿದ್ದ ಕನ್ನಡ ಸ್ಕೂಲೂ, ಹಿಂದೂಸ್ಥಾನೀ ಸ್ಕೂಲೂ ಸಹ ಇಲ್ಲಿಯೇ ನಡೆಯುತ್ತಿದ್ದವು. ಇಲಿಗಳು ಸತ್ತ ಮೇಲೆ ವಾಣೀವಿಲಾಸ ಬಾಲಿಕಾಶಾಲೆಯ ಕಟ್ಟಡದಲ್ಲಿ ಕೆಲಸ ಪ್ರಾರಂಭಿಸಿದರು. ಅಲ್ಲಿಯೂ ಮೊನ್ನೆ ಇಲಿ ಸತ್ತುದರಿಂದ ಸ್ಥಳವೇ ಇಲ್ಲದೆ ಕೆಲಸ ನಿಲ್ಲಿಸಬೇಕಾಗಿ ಬಂದಿದೆ.

ರೈಲ್ವೆ ಇಲಾಖೆಯವರು ತಮ್ಮ ಹೊಸ ಲೈನಿಗೆಲ್ಲಾ ತಂತಿಗಳನ್ನು ಹಾಕಿ ಆಯಿತು. ವಸಗರದ ಕೆಲಸವೂ, ಸ್ಟೇಷನ್ ಮುಂತಾದ ಕಟ್ಟಡಗಳ ಕೆಲಸಗಳೂ ಚಟುವಟಿಕೆಯಾಗಿ ನಡೆಯುತ್ತಲಿವೆ. ಮುಂದಿನ ಜನವರಿ ಅಥವಾ ಫೆಬ್ರವರಿ ತಿಂಗಳೊಳಗಾಗಿ ಗಾಡಿಗಳು ಸಂಚರಿಸುವಂತಾಗುವುದೆಂದು ಈ ಪ್ರಾಂತ್ಯದವರೆಲ್ಲಾ ಆಕಾಂಕ್ಷೆಯಿಂದ ನಿರೀಕ್ಷಿಸುತ್ತಿದ್ದಾರೆ.

ಇಲ್ಲಿನ ಮ್ಯುನಿಸಿಪಾಲಿಟಿಯವರು ಈ ಟವರ್ನಲ್ಲೆಲ್ಲಾ ದೇವೀ ಸಿಡುಬು ಹಾಕಿಸುವುದನ್ನು ಇನ್ನು ಮೇಲೆ ಸಕಲರಿಗೂ ಬಲಾತ್ಕಾರಿಸುವಂತೆ ತೀರ್ಮಾನ ಮಾಡಿ, ಗೌರ್ನಮೆಂಟಿಗೆ ಶಿಫಾರಸು ಮಾಡಿರುವುದಾಗಿ ಕೇಳುತ್ತೇನೆ. ಇದು ಶ್ಲಾಘನೀಯವಾದ ಏರ್ಪಾಡೇ ಸರಿ.

ಪುರವಾಸಿ.

ಪ್ರಜಾಹಿತಚಿಂತಕ, ಹೆಗ್ಗಡದೇವನಕೋಟೆ ; ಪ್ರಕೃಷ್ಣ ವಿಚಾರಪರ, ಸಾಲಿಗ್ರಾಮ :—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಡಿ. ಇ., ಕಡೂರು :—ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ.

—ಎಡಿ.]

ತಾಲ್ಲೂಕು ವರ್ತಮಾನ.

ದೊಡ್ಡಬಳ್ಳಾಪುರ—ಈ ಟವನಿನಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಅತ್ಯಂತ ವಿಜೃಂಭಣೆಯಿಂದ ಜನವರಿ ತಾ. 26 ರ ಲಾಗಾಯತು ಫೆಬ್ರವರಿ ತಾ. 8 ರ ವರೆಗೆ ರಥೋತ್ಸವವೂ, ಅದಕ್ಕೆ ಸಂಬಂಧಪಟ್ಟ ಉತ್ಸವಗಳೂ ಜರುಗಿದವು. ಜನವರಿ 30 ನೇ ತಾ. ಶನಿವಾರ ಕಲ್ಯಾಣೋತ್ಸವವೂ, ಬುಲಹುಕದಿಂದ ದಯಮಾಡಿಸಿದ್ದ ವೇ|| ವೆಂಕಣ್ಣದಾಸರವರಿಂದ ಪ್ರಜೆಗಳ ಮನಸ್ಸೆಲ್ಲಾ ಆಕರ್ಷಿಸುವಂಥಾ ಹರಿಕಥೆಯೂ ಜರುಗಿದವು. ಆ ದಿನ ಸ್ಥಳ, ಪರಸ್ಥಳಗಳ ವರ್ತಕರು, ಸರ್ಕಾರಿ ಉದ್ಯೋಗಸ್ಥರು, ವೈದಿಕ, ಲೌಕಿಕ ಮಹನೀಯರು, ರೈತಜನರು ಮೊದಲಾದ ಸಾವಿರಾರು ಜನಗಳು ತುಂಬಿ ತುಳುಕುತ್ತಿದ್ದರು. ಹರಿಕಥೆಯು ಪೂರೈಸಿದ ನಂತರ ದೇವಸ್ಥಾನದ ಧರ್ಮದರ್ಶಿಗಳಾದ ಮ|| ವೆಂಕಟಕೃಷ್ಣಯ್ಯನವರು ಪ್ರಾರ್ಥಿಸಿದ ಮೇರೆಗೆ ಬೆಂಗಳೂರು ಡಿ|| ಕೋಆಪರೇಟಿವ್ ಸೊಸೈಟಿಗಳ ಸೀನಿಯರ್ ಇನ್ಸ್‌ಪೆಕ್ಟರ್ ಮ|| ವೆಂಕಟರಮಯ್ಯನವರಿಂದ ದೈವಭಕ್ತಿ ಮತ್ತು ಏಕಮತ್ಯ ಇವುಗಳ ವಿಷಯವಾಗಿ ಅತ್ಯಂತ ಸ್ವಾರಸ್ಯವಾದ ಉಪನ್ಯಾಸವು ನಡೆಸಲ್ಪಟ್ಟಿತು. ಸಭಾಸದರಾಗಿದ್ದ ಸಮಸ್ತರೂ ಅತ್ಯಂತ ಸಂತೋಷಭರಿತರಾದರು. ಫೆಬ್ರವರಿ 1 ನೇ ತಾ. ನಡೆದ ಬ್ರಹ್ಮೋತ್ಸವಕ್ಕೆ ಮೈಸೂರು ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರಾದ ದಿವಾನ್ ಬಹದ್ದೂರ್ ಮ|| ಸಿ. ಶ್ರೀಕಂಠೇಶ್ವ ಅರಯ್ಯರವರೂ, ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಕೆ. ಚಾಂಡಿಸಾಹೇಬರವರೂ, ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಬಿ. ರಾಮಸ್ವಾಮಯ್ಯನವರೂ, ಇನ್ನೂ ಅನೇಕರು ಬೆಂಗಳೂರಿನಿಂದ ಅನೇಕ ಮಹನೀಯರೂ ದಯಮಾಡಿಸಿದ್ದರು. ಆ ದಿನ ಸುಮಾರು ಒಂದು ಸಾವಿರ ಜನಗಳವರಿಗೂ ಬ್ರಾಹ್ಮಣಸಂತರ್ಪಣೆಯೂ, ಮಾರನೇ ದಿನ 2-3 ಸಹಸ್ರ ಜನಗಳವರಿಗೂ ಬಡಬಗ್ಗರು ಮೊದಲಾದ ಅನಾಥರಿಗೆ ಅನ್ನದಾನವೂ ನಡೆಯಿತು. ಮುಂದಿನ ವರ್ಷದಿಂದ ಈ ರಥೋತ್ಸವ ಕಾಲದಲ್ಲಿ 8 ದಿನಗಳ ವರೆಗೆ ದನದ ಪರಿಷೆಯೂ ಮತ್ತು ಎತ್ತುಗಳ ಪ್ರದರ್ಶನವೂ ಜರುಗುವ ಸಂಭವ ಜನಲ್ಲಿರುತ್ತೆ. ಕೊನೆಯ ದಿನ ಈ ತಾಲ್ಲೂಕ್ ಪೋಲೀಸ್ ಇಲಾಖೆಯವರಿಂದ ಮಾಮೂಲ್ ಪ್ರಕಾರ ಚಿತ್ರವಿಚಿತ್ರವಾಗಿ ಅಲಂಕರಿಸಲ್ಪಟ್ಟ ಪುಷ್ಪಿನ ಚಿತ್ರಗೋಪುರೋತ್ಸವ ಸೇವೆಯು ನಡೆಸಲ್ಪಟ್ಟಿತು. ಮುಂದಿನ ವರ್ಷದಿಂದ ಜರುಗುವ ಎತ್ತಿನ ಪರಿಷೆಗೆ ಗೌರ್ನಮೆಂಟಿನವರ ಅಪ್ಪಣೆ ಮೇರೆಗೆ ಸ್ಯಾನಿಟರಿ ಏರ್ಪಾಡಿಗಾಗಿ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾದ ಮ|| ಮುತ್ತುಸ್ವಾಮಿದಾಸರವರು ದಯಮಾಡಿಸಿ ಸ್ಥಳ ಅಜಮಾಯಿಷಿಯಿಂದ ಸಂತೋಷಪಟ್ಟು ಒಪ್ಪಿರುತ್ತಾರೆ.—ಈ ಟವನಿನಲ್ಲಿರುವ ಗೌರ್ನಮೆಂಟ್ ಕನ್ನಡ ಗರಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್ ರವರಾದ ಶ್ರೀಮತಿ ಅಮ್ಮಣ್ಣಮ್ಮನವರು ಸುಮಾರು 13 ವರ್ಷಗಳಿಂದ ಬಹಳ ಸಾಹಸಪಟ್ಟು ಕಳೆದ ಡಿಸೆಂಬರ್ 13 ನೇ ತಾ. ಗರಲ್ಸ್ ಸ್ಕೂಲ್ ಕಟ್ಟಡದಲ್ಲಿ ಈ ಗ್ರಾಮದಲ್ಲಿರುವ ಮುನ್ಸಿಫರವರ ಕುಟುಂಬ ಶ್ರೀಮತಿ ರಾಧಾಬಾಯಮ್ಮನವರ ಅಧ್ಯಕ್ಷತೆಯಿಂದ ಆರ್ಯ ಮಹಿಳಾ ಸಮಾಜವೆಂಬ ಸ್ತ್ರೀಸಭೆಯೊಂದನ್ನು ಏರ್ಪಡಿಸಿ ಆ ಲಾಗಾಯತು ಪ್ರತಿ ಭಾನುವಾರವೂ ಮಧ್ಯಾಹ್ನಕ್ಕೆ ಮಹಿಳೆಯರೆಲ್ಲಾ ಸಭೆ ಸೇರಿದ ನಂತರ ಪಾತಿವ್ರತ್ಯ, ಏಕಮತ್ಯ, ಗೃಹಧರ್ಮ ಮುಂತಾದ ಮಹಿಳೆಯರಿಗೆ ಅತ್ಯವಶ್ಯಕವಾದ ವಿಷಯಗಳನ್ನು ಉಪನ್ಯಾಸ ನಡಿಸಿ ಅವರ ಮನಸ್ಸು ಸಂತೋಷಪಡಿಸುತ್ತಲಿರುವರು. ಈ ಸಭೆಯು ಎರಡು ತಿಂಗಳಿಂದ ನಡೆಯುತ್ತಲೂ, ಮಹಿಳೆಯರ ಹಾಜರಾತಿಯು ದಿನೇ ದಿನೇ ಹೆಚ್ಚುತ್ತಲೂ ಇದೆ. ಈಗೀಗ ಮಹಿಳೆಯರಿಗೆಲ್ಲಾ ಸ್ತ್ರೀವಿದ್ಯಾಭ್ಯಾಸವು ಬಹಳ ಅಗತ್ಯವಾದದ್ದೆಂತಲೂ, ತಾವು ವೃಥಾ ಕಾಲಕ್ಷೇಪ ಮಾಡುವುದು ಸರಿಯಲ್ಲವೆಂತಲೂ, ತಮ್ಮ ಮಕ್ಕಳಿಗಾದರೂ ವಿದ್ಯಾಭ್ಯಾಸವು ಅತ್ಯವಶ್ಯಕವಾಗಿ ಮಾಡಿಸಬೇಕೆಂಬ ಕುತೂಹಲಪೂರ್ವಕರಾಗಿದಾರೆಂತಲೂ ತಿಳಿದು ಹರ್ಷಪಡಬೇಕಾಗಿದೆ. ನಮ್ಮ ಹೆಡ್ ಮಿಸ್ಟ್ರೆಸ್ ರವರ ಸತ್ಪ್ರಯತ್ನವು ಅನೇಕ ಮಹಿಳೆಯರಲ್ಲಿ ಫಲಕಾರಿಯಾಗಿ ಈ ಸಭೆಯು ಉತ್ತರೋತ್ತರವಾಗಿ ಅಭಿವೃದ್ಧಿಗೆ ಬರಬೇಕೆಂದು ಹಾರೈಸುತ್ತೇವೆ (ಇನ್ನೊಬ್ಬ ಬಾತ್ಮಿದಾರರಿಂದ)—ಹಿಂದಿನ ವಾರ ಪತ್ರಿಕೆ ವರ್ತಮಾನಗಳಲ್ಲಿ ಕೆಲವರು ಇಲ್ಲಿ ಬಾಲಕ ಬಾಲಿಕೆಯರನ್ನು ಅತ್ಯಂತ ಕ್ರೂರವಾಗಿ ಶಿಕ್ಷಿಸುತ್ತಾರೆಂತ ಪ್ರಕಟಿಸಲಾಗಿದೆ. ಆ ವಿಧವಾದ ಶಿಕ್ಷೆ ಗರ್ಲ್ಸ್ ಸ್ಕೂಲಲ್ಲಿ ಇಲ್ಲವೆಂತಲೂ, ಒಬ್ಬ ಹೊಸ ಉಪಾಧ್ಯಾಯನು ಬದ್ಲಿ ಕೆಲಸ ನೋಡುವಾತನು ಒಬ್ಬ ವಿದ್ಯಾರ್ಥಿನಿಯನ್ನು ಕೊಂಚ ಮಾತ್ರ ಶಿಕ್ಷಿಸಿದನೆಂತಲೂ ತಿಳಿದುಬಂದಿದೆ. ಆದ್ದರಿಂದ ಗರ್ಲ್ಸ್ ಸ್ಕೂಲಲ್ಲಿಯಾಗಲಿ, ಮತ್ಯಾವ ಸ್ಕೂಲಲ್ಲಿಯಾಗಲಿ ಮುಂದೆ ಶಿಕ್ಷೆ ಪ್ರಕರಣವು ಬಹಳ ಮಟ್ಟಿಗೆ ವಿಚಾರಣೆಯಿಂದ ನಡೆಯುವವೆಂತ ನಿರೀಕ್ಷಿಸಬೇಕಾಗಿದೆ. ಅನುಭವವೂ ವಿದ್ವತ್ತೂ ಇಲ್ಲದೆ ಟರ್ಮ್ ಪ್ಯಾಸ್ ಮಾಡಿರುವ ಪ್ರಾಯದ ಹುಡುಗರನ್ನು ಉಪಾಧ್ಯಾಯರನ್ನಾಗಿ ನೇಮಿಸುವದರಿಂದ ಅನಾಗರಿಕವಾದ ಕಾರ್ಯಗಳೂ, ಕ್ರೂರತ್ವವೂ ಕಾಣುವವು.—ರಿಟೈರ್ಡ್ ಸಬ್ ಜಡ್ಜರಾದ ಮ|| ರಾಮಚಂದ್ರರಾಯರು ಕುಟುಂಬ ಸಮೇತ ಥಿಯೊಸಾಫಿಕಲ್ ಹಾಲಿನಲ್ಲಿ ಎರಡು ಮೂರು ದಿವಸಗಳು ಜನರಿಗೆ ತುಂಬಾ ಪ್ರಯೋಜನಕರವಾಗಿರುವ ಯೋಗ ಇವನ್ನು ಕುರಿತು ಭಾಷಣಮಾಡಿದರು. ಅನೇಕ ವಿದ್ಯಾವಂತರು ಕೂಡಿ ಕೇಳಿ ಸಂತೋಷಪಟ್ಟರು. ಅವರ ಸಂಗಡ ಬಂದಿರುವ ಮ|| ನಂಜರಾಜ್ಯರವರೂ ಹಳೇ ಕಛೇರಿಯಲ್ಲಿ ಸಾವಿತ್ರಿ ಕಥೆಯನ್ನು ಬಹು ಸ್ವಾರಸ್ಯವಾಗಿ ಮಾಡಿ ನೂರಾರು ಮಂದಿ ಸ್ತ್ರೀಯರಿಗೆ ಪಾತಿವ್ರತ್ಯದ ಮಹಿಮೆಯನ್ನು ಪ್ರಕಾಶಗೊಳಿಸಿದರು.—ಈ ಊರು ವೀರಭದ್ರಪೇಟೆಯಲ್ಲಿ ಶ್ರೀಕಂಠೇಶ್ವರ ಗುಡಿ ಬಳಿ ಕೆಲವು ಪಟಿಂಗ ಹುಡುಗರು ಕೂತುಕೊಂಡು ಶೀನಾರಿಗೆ ಹೋಗತಕ್ಕ ಹೆಂಗಸರು ಎದುರಿಗೆ ಭಂಡವಾತುಗಳನ್ನು ಆಡುತ್ತಾ ಕಾಲಕಳೆಯುತ್ತಾರೆ. ಪೋಲೀಸಿನವರು ಈ ಕಡೆ ಸ್ವಲ್ಪ ಇಟ್ಟು ನಿಮ್ಮದಿಗೆ ಭಂಗಬಾರದಂತೆ ಮಾಡಬೇಕು

ದೇಶಬಾಂಧವರೇ, ಇದನ್ನು ಗಮನಿಸಿ. ಲಕ್ಷಾಂತರ ಜನರಿಗೆ ಪ್ರಯೋಜನವುಂಟು.

ಪರಸ್ಪರ ಸಹಾಯವೇ ಹೊರತು ವ್ಯಾಪಾರ ತಂತ್ರವಲ್ಲ. ಕಣ್ಣಿಂದ ನೋಡಿ ಯಥಾರ್ಥವನ್ನು ಗ್ರಹಿಸಿರಿ.

ಯಥಾರ್ಥಕ್ಕೆ ಸಂಶಯವೇನು? ಪರೀಕ್ಷೆಗಾಗಿ ಮೊದಲು ಒಂದನ್ನು ತರಿಸಿಕೊಂಡು ಉತ್ತಮವಾಗಿದ್ದರೆ ಎಲ್ಲರೂ ತರಿಸಿಕೊಳ್ಳಿ.

ಈ ತಿಂಗಳಲ್ಲಿ ಪರೀಕ್ಷೆಗಾಗಿ ತರಿಸಿಕೊಳ್ಳುವವರಿಗೆ ಬೆಲೆ ಕಡಮೆ. ಟಪಾಲು ಖರ್ಚು ಮಾಫಿ. ಬಹುಮಾನದ ಟಿಕೆಟ್ಟು ಉಚಿತ.

ಪ್ರತಿಯೊಂದು ಪುಸ್ತಕದೊಡನೆ ರವಾನಿಸಲ್ಪಡುವ ಬಹುಮಾನ ಟಿಕೆಟ್ಟಿನಲ್ಲಿ ನಿಮ್ಮ ಹೆಸರು, ವಿಳಾಸವನ್ನು ಬರೆದು ಕಳುಹಿಸಿದ ತಕ್ಷಣ ಟಿಕೆಟ್ಟಿನಲ್ಲಿ ಹೇಳಿದ ಬಹುಮಾನವನ್ನು ಕಳುಹಿಸುತ್ತೇವೆ.

Practical English Self-Instructor (Vols. 1, 2 & 3).

Useful to one & all. Try & Convince. Specimen Copy Rs. 1-12-0; Postage free

ಎಲ್ಲರಿಗೂ ಬೇಕಾದದ್ದು! ಉತ್ತಮ ಕ್ರಮ. ಉತ್ತಮ ವಿಷಯ. {ಸಚಿತ್ರ ಆಂಗ್ಲಭಾಷಾ ಪ್ರಕಾಶಕ} ನಿಮ್ಮ ಕಷ್ಟಾರ್ಜಿತಕ್ಕೆ ಉತ್ತಮ ಸಂಪಾದನೆ

(ಸ್ವತಃ ಇಂಗ್ಲಿಷ್ ಕಲಿಯುವದಕ್ಕೆ ವಿದ್ವಾಂಸರಿಂದ ತಯಾರಾದ ಅತ್ಯಂತ ನೂತನ ಪುಸ್ತಕ



ಮೂರು ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ ಕ್ರಯ ರೂ. 2-0-0 ಟಪಾಲು ಖರ್ಚು 4 ಆಣೆ
1 ನೆ ಪುಸ್ತಕ 5 (ಭಾಗಗಳುಳ್ಳದ್ದು) ... " " 1-0-0 " " 2 "
ಪರೀಕ್ಷೆಗಾಗಿ ತರಿಸಿಕೊಳ್ಳುವವರಿಗೆ ದೊಡ್ಡ ಪುಸ್ತಕ ಕ್ರಯ ರೂ. 1-12-0 ; 1 ನೆ ಪುಸ್ತಕ ಕ್ರಯ 14 ಆಣೆ

ಉತ್ತಮ ಕ್ರಮಗಳನ್ನು ಅನುಸರಿಸಿ ಇಂಗ್ಲಿಷ್ ಭಾಷೆಯನ್ನು ಸ್ವತಃ ಕಲಿಯಲಿಷ್ಟಪಡುವವರಿಗೆ ಸೂರಾರು ವಿಷಯಗಳಿರುವ ಇಷ್ಟು ಪ್ರಯೋಜನವುಳ್ಳ ಪುಸ್ತಕ ಇದುವರೆವಿಗೆ ಇದ್ದೇ ಇರಲಿಲ್ಲ. ಮೊದಲನೆಯ ಮುದ್ರಣ ಶೀಘ್ರದಲ್ಲಿಯೇ ಮುಗಿದುಹೋಯಿತು. ಈ ಮುದ್ರಣಕ್ಕೆ ಮೊದಲಿಗಿಂತಲೂ ಎರಡರಷ್ಟು ವಿಷಯಗಳ ಹೆಚ್ಚಾಗಿ ಸೇರಿಸಿರುವದಲ್ಲದೆ ಪ್ರತಿಯೊಂದು ಭಾಗವೂ ನೂತನ ಕ್ರಮಗಳನ್ನು ಅನುಸರಿಸಿ ಬರೆದು ಇದೆ. ಇದನ್ನು ಹೆಚ್ಚು ಹೊಗಳಬೇಕಾದುದಿಲ್ಲ. ಇದನ್ನು ಪರಿಶೀಲಿಸಿದ ವಿದ್ವಾಂಸರ ಅಭಿಪ್ರಾಯಗಳೇ ಸಾಕಾಗಿವೆ. ಅವಕಾಶ ಮಾಡಿದರೆ ಬೆಲೆ ಹೆಚ್ಚಾಗುವದು ಜಾಗ್ರತೆ ಬರೆಯಿರಿ.

Apply to:—A. V. RAYALU, Hitodya Office,
2/80, Kilary Road, Bangalore City

ವಿಳಾಸ:—ಮ್ಯಾನೇಜರ್, ಹಿತೋದಯ ಆಫೀಸ್,
2/80, ಕಿಲಾರಿ ರೋಡ್, ಬೆಂಗಳೂರು ಸಿಟಿ

[82-1]

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮಘಮಿಸುತ್ತಿರುವದು. ಇದರ ಸುವಾಸನೆಯು ಮೂರು ದಿನಗಳಲ್ಲಿ ಹೋದರೆ 10 ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ

ಕಡಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನು ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇವಲ್ಲದೆ ತುರುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಅದರ ಅವು ದಟ್ಟವಾಗಿ ಬೆಳೆದ ಸಮೃದ್ಧವಾಗುವವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೆ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಸದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟುಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ಚಂದ್ರಪ್ರಭಾವತಿ ತೈಲವು ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ತೈಲದ ಸೀಸೆಯು ಬಹು ದಿನಗಳ ವರಿವಿಗೂ ಬರುವದು.

ಕ್ರಯ ಸೀಸೆ 1 ಕ್ಕೆ 1 ರೂಪಾಯಿ. ಟಪಾಲು ಖರ್ಚು 4 ಆಣೆ.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದಬಾರ್ ರಂಗು.

ಒಂದು ಸಲ ಹಚ್ಚಿದರೆ 25 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪ ತರದ ಕೂದಲು ರಂಗುಗಳು ತುಂಬಾ ಕೀಳಾದವುಗಳು. ಹಚ್ಚಿದ ಕೂಡಲೆ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ ದಬಾರ್ ರಂಗು ಆ ಥರದ್ದಲ್ಲ, ಬಹು ಮೇಲಾದದ್ದು, ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯ ಹಾಗೆ ಕಂಗೊಳಿಸುವುದು.

ಕ್ರಯ ಬಾಟಲು ಸಮೇತ ರೂ 1—4—0

ಉಪಯೋಗಿಸುವ ವಿಧಾನ ಬಾಟ್ಲಿಯ ಜೊತೆಯಲ್ಲಿರುತ್ತೆ.

ಖೂಬ್-ಸೂರತ್.

ಮುಖಕಾಂತಿ.

ಇದು ಒಂದೇ 1,00,000 ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರೆದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು ಎಂಜಲು ಗುಳ್ಳೆಗಳು, ಬೊಬ್ಬೆ, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದವುಗಳಿಗೆ ಈ ಔಷಧವನ್ನು 25 ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಹಸನ್ಮುಖಿಗಳಾಗಿ ಮಾಡುವುದು.

ಕ್ರಯ ಡಬ್ಬಿ 1 ಕ್ಕೆ 8 ಆಣೆ

ವಜ್ರಾಂಗಚೂರ್ಣ—ಧಾತುವು ಸೋರಿಹೋಗಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ. ಸೊಂಟದನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಬ್ಬಸ ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು 10 ರೂಪಾಯಿಗಳು ಇಟ್ಟರೂ ಬಹಳ ಸುಲಭವೆಂದರಿಯಬೇಕು. ಈ ಬೆಲೆಯನ್ನು ಇಡುವುದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ 1 ಕ್ಕೆ 10 ಆಣೆ ಇಟ್ಟಿರುತ್ತೆ.

ಸ ಡಿಕ್ ಡಿ ಎಂ ರವರ ಭಸ್ಮವು—ಉಷ್ಣದಿಂದ ಮೂತ್ರದಲ್ಲಿ ಉರಿ, ಮುಂತಾದವುಗಳು ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ 24 ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ

ಕ್ರಯ ಡಬ್ಬಿ 1 ಕ್ಕೆ 12 ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು—ಉಷ್ಣಕಾರಕದಿಂದ ಶರೀರದಲ್ಲಿ ಪಡಿಗದ್ದರೂ, ಗಾಯಗಳಿದ್ದರೂ, ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾ ರೋಗವಾದರೂ ಸಹ ಈ ಔಷಧವನ್ನು ಸೇವಿಸುವದರಿಂದ ಖಂಡಿತವಾಗಿಯೂ ಗುಣವಾಗುವದು, ಕ್ರಯ ಡಬ್ಬಿ 1 ಕ್ಕೆ 1 ರೂಪಾಯಿ

ದಿಲ್ ಖುಷ್ ತೈಲವು.—ಅನೇಕರಿಗೆ ಕೂದಲನ್ನು ಬೆಳಸುವ ಇಚ್ಛೆಯಿರುವದು. ಈ ತೈಲವನ್ನು 10-15 ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವದು. ಕ್ರಯ ಸೀಸೆ 1 ಕ್ಕೆ 12 ಆಣೆ.

ಆಶ್ಚರ್ಯಕರವಾದ ದ್ರಾವಕ.—ಇದನ್ನು ಸ್ವಲ್ಪ ಮೂಸಿ ನೋಡುವದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೆ ಇರುವದು. ಚೇಳು, ಹಾವು, ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದ್ದು ಗುಣಪಡಿಸುತ್ತೆ. ಕ್ರಯ ಸೀಸೆ 1 ಕ್ಕೆ 8 ಆಣೆ

ರೋಮನಾಶಕ, ವೃಶ್ಚಿಕ ದಂಷ್ಟ್ರ.—ಈ ಔಷಧವು ಬೇಡದ ಕೂದಲು ತೆಗೆಯುವದಕ್ಕೂ ಬಹಳ ಅನುಕೂಲವಾಗಿರುವದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು. ಕ್ರಯ ಸೀಸೆ 1 ಕ್ಕೆ 4 ಆಣೆ.

ವಾತನಿವಾರಣ ತೈಲವು.—ಎದೆಯಲ್ಲಿಯೂ ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವದರಿಂದ ತಕ್ಷಣ ಗುಣವಾಗುವದು. ಕ್ರಯ ಸೀಸೆ 1 ಕ್ಕೆ 0-4-0

ಮೂಲವ್ಯಾಧಿಗೆ ಔಷಧ	... ...	ಸೀಸೆ 1 ಕ್ಕೆ	12 ಆಣೆ
ಕಣ್ಣಿಗೆ ಸುರುಮ	... ...	" "	4 "
ದಂತ ಚೂರ್ಣ	... ...	ಡಬ್ಬಿ "	4 "
ಕಜ್ಜಿ, ಹುಳುಕಡ್ಡಿ ಔಷಧ	... ...	" "	4 "
ಹೊಟ್ಟೇನೋವಿಗೆ ಔಷಧ	... ...	ಸೀಸೆ "	4 "
ತಲೆನೋವಿಗೆ ತೈಲವು	... ...	" "	4 "
ಕೆಮ್ಮಲು ರೋಗಕ್ಕೆ ಔಷಧವು	...	ಡಬ್ಬಿ "	4 "

ವ್ರಣಕ್ಕೆ ಔಷಧ.—ಇದನ್ನು ದಿನಕ್ಕೆರಡಾವರ್ತಿಯಂತೆ 8-10 ದಿನಗಳು ಹಚ್ಚುವದರಿಂದ ಹಳೇ ಮತ್ತು ಹೊಸ ವ್ರಣಗಳು, ವ್ರಣದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವದು. ಕ್ರಯ ಡಬ್ಬಿ 1 ಕ್ಕೆ 8 ಆಣೆ.

ಅನುಪಾನ ಪತ್ರಿಕೆಯು ಔಷಧದ ಜೊತೆಯಲ್ಲಿರುವದು.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ

[84-1]

ಮೈಸೂರು ಸರ್ಕಾರೀ ಹುಕುಮು.

ಮೈಸೂರು ಲ್ಯಾಂಡ್ ರೆವಿನ್ಯೂ ಕೋಡು.

1888 ನೆಯ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಡಿ ಮಾಡುವುದು ಅನುಕೂಲವಾಗಿರುವುದರಿಂದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹಾದುರವರು ಈ ಕೆಳಗೆ ಕಂಡಂತೆ ಕಾನೂನನ್ನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—ಕೋಡಿನ 185 ನೆಯ ಪ್ರಕರಣದ 2 ನೆಯ ವ್ಯಾಸದಲ್ಲಿ ಬರುವ “ ತಮ್ಮ ಕಾರಣಗಳನ್ನು ಬರವಣಿಗೆಯಲ್ಲಿ ರೆಕಾರ್ಡು ಮಾಡಿ ತರುವಾಯ ” ಎಂಬ ಮಾತುಗಳ ಅನಂತರ “ ಕೇವಲ ಮೊಬಲಗಿನ ಮೇಲೆ ಬಡ್ಡಿಯನ್ನಿ, ಯಾ ಇತರ ಪರಿಹಾರ ದ್ರವ್ಯವನ್ನೂ ಕೊಡುವ ವಿಷಯ ದಲ್ಲಿ ತಮಗೆ ಯುಕ್ತವೆಂದು ತೋರುವಂಥಾ ಷರತ್ತುಗಳನ್ನು ಸಹ ” ಎಂಬ ಮಾತುಗಳನ್ನು ಸೇರಿಸತಕ್ಕದ್ದು. ಹೀಗೆ ತಿದ್ದುಪಡಿ ಮಾಡುವುದರಲ್ಲಿ ಸರ್ಕಾರದ ಉದ್ದೇಶವೇನೆಂದರೆ—

ಒಂದು ರೆವಿನ್ಯೂ ಹರಾಜನ್ನು ರದ್ದು ಮಾಡಬೇಕೆಂದು ಡೆಪ್ಯುಟಿ ಕಮಿಷನರಿಗೆ ಕಾರಣವು ತೋರಿಬಂದರೆ ಕಕ್ಷಿಗಾರರು ಅರ್ಜಿ ಹಾಕಿಕೊಳ್ಳದಿದ್ದರೂ ಅಥವಾ ಅಂಥಾ ಅರ್ಜಿಗಳಲ್ಲಿ ನಮೂದು ಮಾಡದೆ ಇರುವ ಕಾರಣಗಳ ಮೇಲೆ ಯಾದರೂ ಅಂಥಾ ಹರಾಜನ್ನು ರದ್ದು ಮಾಡಲು 1888 ನೇ ಇಸವಿಯ ಲ್ಯಾಂಡ್ ರೆವಿನ್ಯೂ 185 ನೆಯ ಪ್ರಕರಣದ ಮೇರೆ ಜಾರಿಯಲ್ಲಿರುವ ಕಾನೂನು ಅನುಸರಿಸಿ ಅವರಿಗೆ ಅಧಿಕಾರವಿರುತ್ತದೆ. ಅಂತಹ ಕೆಲವು ಸಂದರ್ಭಗಳಲ್ಲಿ ಹರಾಜು ರದ್ದಾದುದರಿಂದ ಉಂಟಾಗುವ ನಷ್ಟವನ್ನು ಬದಲಾಗಿ ಕೊಡುವುದಕ್ಕಾಗಿ ಹರಾಜ್ ಖರೀದಿದಾರನಿಗೆ ಬಡ್ಡಿ ಕೊಡುವಂತೆ ಹುಕುಂ ಮಾಡಲಾಗುತ್ತದೆ. ಅಂಥಾ ಷರತ್ತುಗಳನ್ನು ಕಲ್ಪಿಸುವುದಕ್ಕೆ ಅವಕಾಶಕೊಡುವಂತೆ ಕಾನೂನಿನಲ್ಲಿ ಕಂಠೋಕ್ತವಾದ ನಿಯಮಗಳಿರುವುದಿಲ್ಲವಾಗಿ ಈ ನಡವಳಿಕೆಯು ನ್ಯಾಯವಾದುದೇ ಎಂದು ಸಂಶಯ ಉಂಟಾಗಿರುತ್ತದೆ. ಆದುದರಿಂದ ಸದರಿ ಕೋಡಿನ ನಿಯಮಗಳನ್ನು ಯುಕ್ತವಾದ ರೀತಿಯಲ್ಲಿ ತಿದ್ದುಪಡಿ ಮಾಡುವುದರ ಮೂಲಕ ಸದರಿ ನಡವಳಿಕೆಯನ್ನು ಕಂಠೋಕ್ತವಾಗಿ ಅಂಗೀಕರಿಸತಕ್ಕದ್ದು ಯುಕ್ತವೆಂದು ಭಾವಿಸಲಾಗಿದೆ.

ರೈತರಿಗೆ ಒಣ ಹುಲ್ಲನ್ನು ಒದಗಿಸುವುದು.

(1) ಫಾರೆಸ್ಟ್ ಕನ್ಸರ್ವೇಟರವರು ಡೆಪ್ಯುಟಿ ಕಮಿಷನರೊಡನೆ ಕಾಗದ ಪತ್ರಗಳನ್ನು ನಡಿಸಿ ಸಂಗತಿಗಳನ್ನು ತಿಳಿದುಕೊಳ್ಳುತ್ತಿರಬೇಕೆಂತಲೂ, ದನಗಳ ಮೇವಿಗೆ ದುರ್ಭಿಕ್ಷ ಸಂಭವಿಸುವ ಕಾರಣದಿಂದ ಒಣಹುಲ್ಲು ಬೇಕೆಂದು ಬರುವ ವಿಜ್ಞಾಪನೆಗಳನ್ನು ನಡಿಸಿಕೊಡುವುದಕ್ಕೆ ಸಿದ್ಧರಾಗಿರಬೇಕೆಂತಲೂ ಕನ್ಸರ್ವೇಟರಿಗೆ ಹಿಂದೆ ಆದ ಸರ್ಕಾರಿ ಹುಕುಂ ; ಮತ್ತು (2) ಬೇಸಗೆಯಲ್ಲಿ ದನದ ಮೇವಿಗೆ ಗೊಟ್ಟುಂಟಾಗಬಹುದೆಂಬ ಭಯದ ದೆಸೆಯಿಂದ ಒಣಹುಲ್ಲನ್ನು ಸಿದ್ಧಪಡಿಸಿ ಇಟ್ಟುಕೊಂಡಿರುವುದಕ್ಕಾಗಿ ಸ್ಟೇಟ್ ಫಾರೆಸ್ಟುಗಳಲ್ಲಿ ಹುಲ್ಲನ್ನು ಕೊಯ್ಯಲು ಏರ್ಪಾಡು ಮಾಡಬೇಕೆಂದು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ತಮ್ಮನ್ನು ಕೇಳಿದ್ದಾರೆ ಎಂತ ನಮೂದು ಮಾಡಿಯೂ, ಅಂಥಾ ಮೇವಿನ ಗೊಟ್ಟು ಸಂಭವಿಸುವುದಕ್ಕೆ ಮೊದಲೇ ನಿವಾರಕೋಪಾಯವಾಗಿ ಹುಲ್ಲನ್ನು ಕೊಯಿದುಕೊಂಡು ಒಣಹುಲ್ಲನ್ನು ದಾಸ್ತಾನ್ ಇಟ್ಟುಕೊಂಡಿರಲು ಸ್ಟೇಟ್ ಫಾರೆಸ್ಟುಗಳಿಗೆ ದೂರದಲ್ಲಿಯೂ ಸಮೀಪದಲ್ಲಿಯೂ ಇರುವ ರೈತರುಗಳಿಗೆ ಪ್ರೋತ್ಸಾಹ ಕೊಡುವುದು ಅವಶ್ಯಕವೆಂದು ಸಲಹೆ ಕೊಟ್ಟು ಯಾವ ಕಾಲದಲ್ಲಿಯಾದರೂ ಅಂಥಾ ಸ್ಥಿತಿಯಿಂದ ನಿಜವಾಗಿಯೂ ಅವಶ್ಯಕವಾದಲ್ಲಿ ಅಂಥಾ ಆಪತ್ಸಮಯಗಳಿಗೆ ಒದಗುವಂತೆ ಉಪಯೋಗಿಸತಕ್ಕ ಒಣಹುಲ್ಲನ್ನು ಅಮುಕಿ ಹೊರೆ ಮಾಡತಕ್ಕ ಬಗ್ಗೆ ಮೂರು ಒತ್ತುವ ಯಂತ್ರಗಳು ಇರುತ್ತವೆಯೆಂತ ತಿಳಿಸಿಯೂ ಕನ್ಸರ್ವೇಟರು ಬರೆದಿರುವ ಲೇಖನ ; ಇವೆರಡನ್ನೂ ಪರಾಂಬರಿಸಿ ಸರ್ಕಾರದವರು ಅಪ್ಪಣೆಕೊಡಿಸಿರುವದೇನೆಂದರೆ—

ಫಾರೆಸ್ಟ್ ಕನ್ಸರ್ವೇಟರ ಸಲಹೆಗಳನ್ನು ಅಂಗೀಕರಿಸಲಾಗಿರುತ್ತದೆ. ದನದ ಮೇವಿಗೆ ಎಲ್ಲೆಲ್ಲಿ ಗೊಟ್ಟು ಸಂಭವಿಸೀತೆಂಬ ಭಯ ಉಂಟಾಗುತ್ತದೆಯೋ ಅಂಥಾ ಪ್ರದೇಶಗಳಲ್ಲೆಲ್ಲಾ ಇರುವ ಸ್ಟೇಟ್ ಫಾರೆಸ್ಟುಗಳೆಂಬ ಮಾಫಿಯಾಗಿ ಹುಲ್ಲನ್ನು ಕೊಯಿದುಕೊಂಡು ದಸ್ತಾನ್ ಇಟ್ಟುಕೊಳ್ಳಲು ರೈತರಿಗೆ ಅವಕಾಶ ಕೊಡಲಾಗುವುದೆಂಬ ಸಂಗತಿಯನ್ನು ಜನರಿಗೆಲ್ಲಾ ಚೆನ್ನಾಗಿ ಪ್ರಸಿದ್ಧಪಡಿಸಬೇಕೆಂದು ಡೆಪ್ಯುಟಿ ಕಮಿಷನರುಗಳಿಗೆ ತಿಳಿಸಲಾಗಿದೆ. ಈ ರಿಯಾಯಿತಿಯನ್ನು ಉಪಯೋಗಿಸಿಕೊಳ್ಳಲು ರೈತರನ್ನು ಪ್ರೇರಿಸುವುದಕ್ಕಾಗಿ ತಮ್ಮ ಕೈಲಾದಮಟ್ಟಿಗೂ ಪ್ರಯತ್ನಪಡಬೇಕೆಂದು ಸ್ಥಳೀಯಾಧಿಕಾರಿಗಳಿಗೆ ತಿಳುವಳಿಕೆ ಕೊಡಬೇಕು. ಅವರೆ ಸಂಕಟಕರವಾದ ಸಂದರ್ಭಗಳಲ್ಲಿ ಯಂತ್ರದಲ್ಲಿ ಒತ್ತಿದ ಒಣಹುಲ್ಲನ್ನು ಸರಬರಾಯಿ ಮಾಡಲು ಫಾರೆಸ್ಟ್ ಇಲಾಖೆಯವರು ಸಿದ್ಧರಾಗಿರಬೇಕು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಜರ್ಮನಿಯವರ ಇಂಥಾ ಕೃತ್ಯವನ್ನು ನೋಡಿ ಈ ಯುದ್ಧಕ್ಕೆ ಸೇರದೆ ತಟಸ್ಥರಾಗಿರುವ ಅಮೇರಿಕದವರೂ ಇತರ ರಾಜ್ಯಗಳವರೂ ಅವರ ಮೇಲೆ ಆಗ್ರಹಪಟ್ಟಿದ್ದಾರೆ. ಜರ್ಮನಿಯಲ್ಲಿರುವ 7 ಕೋಟಿ ಪ್ರಜೆಗಳಿಗೆ ಆಹಾರಸಾಮಗ್ರಿಗಳು ಹೊರಗಿನಿಂದ ಬಾರದಂತೆ ಬ್ರಿಟಿಷರು ಜರ್ಮನಿಗೆ ಬರುವ ವ್ಯಾಪಾರದ ಹಡಗುಗಳನ್ನೆಲ್ಲಾ ತಡೆದಿರುತ್ತಾರೆಂದು ಆಕ್ಷೇಪಣೆಮಾಡಿ, ಅದಕ್ಕೋಸ್ಕರ ಅವರು ಬ್ರಿಟನ್‌ಗೆ ಯಾವ ಆಹಾರಸಾಮಗ್ರಿಗಳೂ ಹೊರಗಿನಿಂದ ಹಡಗುಗಳಲ್ಲಿ ಹೋಗದಂತೆ ತಡೆಯಬೇಕಾಗಿದೆ ಎಂದೂ, ಇದಕ್ಕೋಸ್ಕರಲೇ ಆ ಸುತ್ತುಮುತ್ತಿನಲ್ಲಿ ಸಿಕ್ಕುವ ಎಲ್ಲಾ ಹಡಗುಗಳನ್ನೂ ಅವು ಬ್ರಿಟಿಷರದೇ ಆಗಿರಲಿ ಇತರರದೇ ಆಗಿರಲಿ ಒಡೆದುಬಿಡುತ್ತೇವೆಂದೂ ಜರ್ಮನಿಯವರು ಹೇಳುತ್ತಾರೆ. ಈ ವಿಷಯದಲ್ಲಿ ಜರ್ಮನಿಗೂ ಇತರರಾಜ್ಯಗಳವರಿಗೂ ಕಾಗದಪತ್ರಗಳು ನಡೆಯುತ್ತಿರುವವು. ಆದರೆ ಪರರಾಜ್ಯಗಳವರೆಲ್ಲಾ ಜರ್ಮನಿಯವರಿಗೆ ವಿರೋಧವಾಗಿರುವರು. ಜರ್ಮನಿಯ ಸಬ್‌ಮೆರೀನುಗಳು ಪರರಾಜ್ಯಗಳವರ ಹಡಗುಗಳನ್ನು ನಾಶಪಡಿಸುವುದಾದರೆ ಯುದ್ಧ ಹೆಚ್ಚುವುದೇ ಅದರ ಪರಿಣಾಮ. ಇನ್ನು ಕೆಲವು ರಾಜ್ಯಗಳೂ ಜರ್ಮನಿಯವರ ಶತ್ರುಪಕ್ಷಕ್ಕೆ ಸೇರಿಕೊಳ್ಳುತ್ತವೆ. ಜರ್ಮನಿಯವರು ಬಹುಶಾ ತಮ್ಮ ಪ್ರಜೆಗಳ ಕಷ್ಟವನ್ನು ಉತ್ಪ್ರೇಕ್ಷೆ ಮಾಡಿ ಈ ರೀತಿ ಆಕ್ಷೇಪಣೆ ಮಾಡುತ್ತಿರಬಹುದು. ಹ್ಯಾಗೂ ಜರ್ಮನಿಯವರು ತಮ್ಮ ವ್ಯಾಪಾರದ ಹಡಗುಗಳು ನಾಶವಾದ ಭಾಗದಲ್ಲಿ ಬಹಳ ಚಿಂತಿಸುತ್ತಿದ್ದಾರೆ ಎನ್ನುವುದಕ್ಕೆ ಸಂಶಯವಿಲ್ಲ. ಅವರು ಯುದ್ಧದ ಜಹಜುಗಳು ವ್ಯಾಪಾರದ ಹಡಗುಗಳನ್ನು ಸಂರಕ್ಷಣೆ ಮಾಡಲಾರದೆ ಹೋದವು.

ಅಟ್ಲಾಂಟಿಕ್ ಮಹಾ ಸಾಗರದಲ್ಲಿ ಜರ್ಮನಿಯವರ ಒಂದು ಯುದ್ಧದ ಜಹಜು ಪರ ಹಡಗುಗಳನ್ನು ಮುಳುಗಿಸಿಬಿಟ್ಟಿದೆ. ಅವುಗಳಲ್ಲಿದ್ದ 192 ಮಂದಿಯನ್ನು ಬದುಕಿಸಿ ಬ್ರೆಜಿಲ್ ಸೀಮೆಗೆ ಸೇರಿದ ಬೋನಾಸ್ ಐರಿಸ್ ಎಂಬ ತೀರಪಟ್ಟಣಕ್ಕೆ ಕರೆದುಕೊಂಡು ಹೋಯಿತು. ಅವರನ್ನು ಕರೆತಂದು ಬಿಟ್ಟ ಜರ್ಮನಿ ಜಹಜನ್ನು ಬ್ರೆಜಿಲ್ ಸರಕಾರದವರು ಹಿಂದಕ್ಕೆ ಬಿಡದೆ ತಡೆದಿಟ್ಟುಕೊಂಡಿದ್ದಾರೆ.

ಜರ್ಮನಿಯ ಸಮುದ್ರತೀರದ ಬಳಿ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಅಮೇರಿಕದ ಒಂದು ಜಹಜು ಮುಳುಗಿಹೋಯಿತು. ಅದರಲ್ಲಿದ್ದ ಜನರನ್ನು ಜರ್ಮನಿಯ ಒಂದು ಜಹಜು ಬದುಕಿಸಿದೆ.

ಜರ್ಮನಿಯ ಒಂದು ಸಬ್‌ಮೆರೀನ್ ಹಡಗು ಐರಿಷ್ ಕಡಲಿನಲ್ಲಿ ಟಾರ್ಪೆಡೋವನ್ನು ಬಿಟ್ಟು ಒಂದು ಬ್ರಿಟಿಷ್ ಹಡಗನ್ನು ಮುಳುಗಿಸಿದೆ. ಅದರಲ್ಲಿದ್ದವರ ಪೈಕಿ ನಾಲ್ವರು ಕೊಲ್ಲಲ್ಪಟ್ಟರು; ಉಳಿದವರನ್ನು ಬದುಕಿಸಿದ್ದಾರೆ. ಅದೇ ಕಡಲಿನಲ್ಲಿ ಇನ್ನೊಂದು ಬ್ರಿಟಿಷ್ ಹಡಗನ್ನು ಮುಳುಗಿಸಿದರು. ಅದರಲ್ಲಿದ್ದವರು ಬದುಕಿ ಬಂದರು.

ಮಿ॥ ವಿನ್‌ಸ್ಟನ್ ಚರ್ಚಿಲ್‌ರವರ ಭಾಷಣ.

ಮಿ॥ ವಿನ್‌ಸ್ಟನ್ ಚರ್ಚಿಲ್‌ರವರು ಬ್ರಿಟಿಷ್ ನಾವೆಗಳ ಇಲಾಖೆಯ ಅಧಿಪತಿಯಾಗಿದ್ದಾರೆ. ಇವರು ಕಳೆದ ವಾರ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಅಪ್ಪಣೆಕೊಡಿಸಿದ ಸಂಗತಿಗಳೇನೆಂದರೆ—ಇದುವರೆಗೆ ಎಷ್ಟೋ ನಷ್ಟವಾಗಿದ್ದರೂ ಬ್ರಿಟಿಷ್ ನಾವೆಯು ಮೊದಲಿಗಿಂತಲೂ ಇನ್ನೂ ಬಲವಾಗಿಯೇ ಇರುತ್ತದೆ. ಮುದ್ದೇದಾರರಿಗೂ, ಸೈನಿಕರಿಗೂ, ಮದ್ದುಗುಂಡಿಗೂ ಯಾವುದಕ್ಕೂ ಸ್ವಲ್ಪವೂ ಕೊರತೆಯಿಲ್ಲ. ಜಹಜುಗಳಲ್ಲಿ ನಮ್ಮ ಅಂದಾಜಿಗಿಂತಲೂ ಹೆಚ್ಚಾಗಿ ಎಷ್ಟು ಖರ್ಚಾಗಿದೆಯಾದರೂ ಇನ್ನೂ ಬೇಕಾದಷ್ಟು ಎಷ್ಟು ಇದ್ದೇ ಇವೆ. ರೇವು ಸ್ಥಳಗಳನ್ನು ಬಿಟ್ಟು ಬಂದಂಥಾ ಜರ್ಮನಿಯ ಯುದ್ಧದ ಜಹಜುಗಳನ್ನೆಲ್ಲಾ ನಾಶಪಡಿಸಿದೆವು, ಇಲ್ಲವೇ ಅಲ್ಲಲ್ಲಿ ಹಿಡಿದಿಡಲ್ಪಟ್ಟಿವೆ. ಇನ್ನೆರಡು ಸಣ್ಣ ಯುದ್ಧದ ಹಡಗುಗಳೂ, ಎರಡು ವ್ಯಾಪಾರದ ಹಡಗುಗಳೂ ಉಳಿದಿರುವವು. ಈಗ ಪ್ರಪಂಚದ ಸಮುದ್ರಗಳ ಮೇಲೆ 8,000 ಬ್ರಿಟಿಷ್ ಜಹಜುಗಳು ಸಂಚರಿಸುತ್ತಲಿವೆ. ಬಾಲ್ಟಿಕ್ ಕಡಲು ಬಿಟ್ಟರೆ ಇನ್ನೆಲ್ಲೂ ಜರ್ಮನಿಯ ಜಹಜು ಒಂದಾದರೂ ಇರುವುದಿಲ್ಲ. ಇದುವರೆಗೆ ಬ್ರಿಟಿಷರ ಜಹಜುಗಳಲ್ಲಿ 63 ಹಾಳಾದವು. ಈ ಪೈಕಿ ಜರ್ಮನಿಯವರು ನಾಶಪಡಿಸಿದ್ದು 19. ಉಳಿದವುಗಳಿಗೆ ಸಬ್‌ಮೆರೀನುಗಳೋ, ಮೈನ್ ಎಂಬ ಗುಂಡುಗಳೋ ಬಡಿದವು. ಯುದ್ಧವು ಪ್ರಾರಂಭವಾದಾರಭ್ಯ ಬ್ರಿಟಿಷರು ತಮ್ಮ ಸೈನ್ಯಗಳನ್ನು ಅಂದರೆ ಸುಮಾರು 10,00,000 ದಂಡನ್ನು ಜಹಜುಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಿಕೊಂಡು ಹೋಗಿದ್ದಾರೆ. ಶತ್ರುವಿನ ದೆಸೆಯಿಂದ ಒಬ್ಬ ಸೈನಿಕನಾದರೂ ಸಾಯಲಿಲ್ಲ. ಕೆಲವು ವೇಳೆ ಲಾರ್ಡ್ ಕಿಚ್ನರವರ ಅಪ್ಪಣೆಯ ಪ್ರಕಾರ ಬಹಳ ಆತುರದಿಂದ 20,000 ಅಥವಾ 40,000 ಸೈನ್ಯವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಜಹಜುಗಳಲ್ಲಿ ಸಾಗಿಸಬೇಕಾಯಿತು. ಬ್ರಿಟಿಷ್ ಜಹಜುಗಳಲ್ಲಿ ಐದನೇ ಒಂದು ಪಾಲನ್ನು ಈ ಕೆಲಸಕ್ಕೆ ವಿನಿಯೋಗಿಸಿರುತ್ತಾರೆ. ನಮ್ಮ ನಾವೆಯ ಫಿರಂಗಿಗಳು ಶತ್ರುವಿನ ಫಿರಂಗಿಗಳಿಗಿಂತ ಎಷ್ಟೋ ಮೇಲಾದವು. ನಮ್ಮ ಸೈನಿಕರು ಗುರಿಯಿಟ್ಟು ಗುಂಡು ಹೊಡೆಯುವುದರಲ್ಲಿ ಜರ್ಮನಿಯವರಿಗೆ ಸರಿಸಮಾನರಾಗಿದ್ದಾರೆ. ನಮ್ಮ ಹಡಗುಗಳು ಅತಿ ವೇಗವಾಗಿ ಸಂಚರಿಸುತ್ತವೆ. ಜರ್ಮನಿಯವರ ನಾಲ್ಕು ಹಡಗುಗಳಿದ್ದರೆ ನಾವು ಐದು ಜಹಜುಗಳನ್ನು ತೆಗೆದುಕೊಂಡುಹೋದರೆ ಶತ್ರುವಿನ ಜಹಜುಗಳು ನಿಲ್ಲಲಾರದೆ ಹಿಂತಿರುಗಿ ಓಡಿಹೋಗುತ್ತವೆ. ನಮ್ಮ ಕಡೆ 6,500 ಮಂದಿ ಕೊಲೆಯಾದರು. ಒಬ್ಬನಾದರೂ ಜರ್ಮನಿಯವರಿಗೆ ಕೈಸೆರೆ ಸಿಕ್ಕಿ ಇಲ್ಲ. ಜರ್ಮನಿಯವರ ಕಡೆ ಅಪಾರವಾದ ನಷ್ಟ ಸಂಭವಿಸಿದೆ. ಅದಲ್ಲದೆ ನಾವು ಅವರ ಯುದ್ಧಭಟರಲ್ಲಿ 82 ಮಂದಿ ಮುದ್ದೇದಾರರನ್ನೂ, 934 ಮಂದಿ ಸೈನಿಕರನ್ನೂ ಕೈಸೆರೆಹಿಡಿದು ತಂದಿರುತ್ತೇವೆ.

ಪಾರ್ಲಿಮೆಂಟಿನ ಮೆಂಬರುಗಳು ಈ ರೀತಿಯಾದ ಭಾಷಣವನ್ನು ಕೇಳಿ ತುಂಬಾ ಸಂತೋಷಪಟ್ಟರು. ಇದರಿಂದ ನಮ್ಮ ನಾವೆಯ ಸೈನ್ಯವು ಬಹಳ ಬಲವಾಗಿದೆ ಎಂದೂ, ಸಂತೋಷಪ್ರದವಾಗಿ ಯುದ್ಧಕಾರ್ಯಗಳನ್ನು ನಡಿಸುತ್ತಿದೆ ಎಂದೂ ದೃಢಪಟ್ಟಿತು.

ಮಿ॥ ಲ್ಲಾಯಡ್ ಜಾರ್ಜ್‌ರವರ ಭಾಷಣ.

ಬ್ರಿಟಿಷ್ ಗವರ್ನ್‌ಮೆಂಟಿನ ಖಜಾನೆಯ ಛಕ್ಷಿಯವರಾದ ಮಿ॥ ಲ್ಲಾಯಡ್ ಜಾರ್ಜ್‌ರವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ತಿಳಿಸಿದ ಮುಖ್ಯವಿಷಯಗಳೇನೆಂದರೆ—ನಮ್ಮ ಪಕ್ಷದವರ ಯುದ್ಧದ ಖರ್ಚು 1915 ನೇ ವರುಷಕ್ಕೆ 20 ಕೋಟಿ ಪೌಂಡು (ಅಂದರೆ 3,000 ಕೋಟಿ ರೂಪಾಯಿ) ಗಳಾಗಬಹುದೆಂದು ಮೊದಲು ಅಂದಾಜು ಕಟ್ಟಿದ್ದೆವು. ಬ್ರಿಟನ್‌ನವರಿಗೆ ಫ್ರೆಂಚರಿಗಿಂತಲೂ ರಷ್ಯಾದವರಿಗಿಂತಲೂ 10 ಅಥವಾ 15 ಕೋಟಿ ಪೌಂಡು ಹೆಚ್ಚಾಗಿ ಖರ್ಚಾಗಬಹುದೆಂದು ಕಾಣುತ್ತದೆ. ಯಾಕೆಂದರೆ ಬ್ರಿಟನ್‌ನವರು ಅಪಾರವಾದ ನಾವೆಯ ಸೈನ್ಯವನ್ನು ಇಟ್ಟು ನಡಿಸಿಕೊಂಡು ಬರಬೇಕಾಗಿದೆ; ಇದಲ್ಲದೆ ಬ್ರಿಟನ್‌ನವರು ಫ್ರಾನ್ಸ್, ಈಜಿಪ್ಟ್, ಫಾರಸಿ ಖಾರಿ, ಪೂರ್ವ ಆಫ್ರಿಕಾ, ದಕ್ಷಿಣ ಆಫ್ರಿಕಾ ಈ ಭಾಗಗಳಲ್ಲೆಲ್ಲಾ ಯುದ್ಧಕಾರ್ಯಗಳನ್ನು ನಡಿಸಬೇಕಾಗಿರುವುದು. ನಮ್ಮ ಕಡೆಯವರ ಯುದ್ಧಭಟರಲ್ಲಿ ಮೂರನೇ ಒಂದು ಭಾಗದವರು ಮಾತ್ರ ಯುದ್ಧಭೂಮಿಗೆ ಹೋಗಿರುತ್ತಾರೆ: ಜರ್ಮನಿಯಲ್ಲಾದರೋ ಸಮಸ್ತ ಸೈನ್ಯಗಳೂ ರಣರಂಗದಲ್ಲಿರುತ್ತವೆ. ನಮ್ಮಲ್ಲಿ ಉಳಿಸಿಕೊಂಡಿರುವ ಮೂರನೇ ಎರಡು ಪಾಲು ಸೈನ್ಯಗಳನ್ನು ಯುದ್ಧಭೂಮಿಗೆ ಸಾಗಿಸಬೇಕಾಗಿರೋಣದರಿಂದ ಇದಕ್ಕೆ ಒಂದು ಹಣ ಖರ್ಚಾಗುವುದು. ಗ್ರೇಟ್ ಬ್ರಿಟನ್‌ಗೂ, ಫ್ರಾನ್ಸಿಗೂ ಹಣ ಒದಗುವುದು ಅದ್ಭುತವಿಲ್ಲ. ಆದರೆ ಅವರು ಸೆರ್ವಿಯಾ, ಬೆಲ್ಜಿಯಮ್ ಮೊದಲಾದ ಕೆಲ ರಾಜ್ಯಗಳಿಗೂ ದ್ರವ್ಯ ಸಹಾಯಮಾಡಬೇಕಾಗಿರುವುದು. ರಷ್ಯಾದವರು ಎಷ್ಟು ಹಣ ಬೇಕಾದರೂ ಹುಟ್ಟಿಸಿಕೊಳ್ಳುವಷ್ಟು ಸಮರ್ಥರಾಗಿದ್ದಾರೆ; ಆದರೆ ಅವರು ಹೊರಗಡೆಯಿಂದ ಸರಕುಗಳನ್ನು ಕೊಂಡು ತರುವುದಕ್ಕೆ ಅವರಿಗೆ ಹಣ ಅವಶ್ಯವಾಗಿದೆ. ಈಗ ರಷ್ಯಾದವರಿಗೂ ಹಣ ಒದಗಿಸುವುದಕ್ಕೆ ಏರ್ಪಾಡು ಮಾಡಿರುತ್ತೇವೆ. ನಮ್ಮ ಪಕ್ಷದವರಿಗೆ ಯಾವ ಸರಕಾಗಲಿ ಸಾಮಗ್ರಿಯಾಗಲಿ ಬೇಕಾಗಿದ್ದರೂ ತರಿಸಿಕೊಳ್ಳುವುದಕ್ಕೋಸ್ಕರ ದ್ರವ್ಯಸಹಾಯ ಮಾಡುವೆವು. ನಮ್ಮ ಪಕ್ಷದವರೆಲ್ಲಾ ಏಕೀಭವಿಸಿ ಅನ್ಯೋನ್ಯವಾಗಿ ಯುದ್ಧವನ್ನು ನಡಿಸುತ್ತಿರುವರು.

ಪ್ರಪಂಚದಲ್ಲಿ ಹಿಂದೆ ನಡೆದ ಯಾವ ಮಹಾ ಯುದ್ಧದಲ್ಲೂ ಇಷ್ಟು ಖರ್ಚಾಗಲಿಲ್ಲ. ಈಗಿನ ಯುದ್ಧದ ಖರ್ಚು ಅಪರಿಮಿತವಾಗುವುದು. ಆದರೆ ನಮ್ಮ ಪಕ್ಷದವರು ಪರಸ್ಪರ ಅನ್ಯೋನ್ಯವಾಗಿ ಕಾರ್ಯಗಳನ್ನು ನಡಿಸುತ್ತಿರೋಣದರಿಂದ ಈ ಯುದ್ಧಕ್ಕೆ ಎಷ್ಟು ದ್ರವ್ಯವನ್ನಾದರೂ ಒದಗಿಸಿಕೊಳ್ಳಬಲ್ಲವರಾಗಿರುತ್ತಾರೆ.

ಇತರ ವಿಷಯಗಳು.

ಮತ್ತೆ ಜರ್ಮನಿಯ ವಿಮಾನ ಯಂತ್ರಗಳು ಇಂಗ್ಲೆಂಡಿನ ಮೇಲೆ ಕಾಣಿಸಿಕೊಂಡು ಎಸ್ಸೆಕ್ಸ್ ಡಿಸ್ಟ್ರಿಕ್ಟಿಗೆ ಸೇರಿದ ಕೊಲ್‌ಚೆಸ್ಟರ್, ಬ್ರೆಯಿನ್‌ಟ್ರಿ ಎಂಬ ಊರುಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಇದರಿಂದ ವಿಶೇಷ ನಷ್ಟವೇನೂ ಆಗಲಿಲ್ಲ.

ಪುನಃ ಯುದ್ಧಕ್ಕೆ ಹೋಗಲಾರದಷ್ಟು ಮಟ್ಟಿಗೆ ಪೂರಾ ಗಾಯಪಟ್ಟು ಕೈಸೆರೆಯಾಗಿದ್ದಂಥಾ 3 ಮಂದಿ ಮುದ್ದೇದಾರರನ್ನೂ 104 ಮಂದಿ ಸೈನಿಕರನ್ನೂ ಬ್ರಿಟಿಷರೂ ಜರ್ಮನಿಯವರೂ ಅದಲಿಬದಲಿ ಮಾಡಿ ಕರಸಿಕೊಂಡಿದ್ದಾರೆ.

ಜರ್ಮನಿಯವರ ಒಂದು ವಿಮಾನಯಂತ್ರವು ಸ್ವಿಟ್ಸರ್‌ಲೆಂಡ್ ದೇಶದ ಮೇಲೆ ಹಾರುಹೋಯಿತು. ಆ ದೇಶದವರು ಆಕ್ಷೇಪಣೆ ಮಾಡಿದರು. ಜರ್ಮನಿಯವರು ಕ್ಷಮಾಪಣೆ ಕೇಳಿಕೊಂಡಿದ್ದಾರೆ.

ಇಟಲಿ ಗವರ್ನ್‌ಮೆಂಟಿನವರು ತಟಸ್ಥರಾಗಿರುವುದನ್ನು ಬಿಟ್ಟು ಯುದ್ಧಕ್ಕೆ ಹೊರಡಬೇಕೆಂದು ರಾಜಧಾನಿಯಾದ ರೋಮ್ ನಗರದ ಪ್ರಜೆಗಳು ಸಭೆಮಾಡುತ್ತಿದ್ದಾರೆ.

ಜರ್ಮನಿಯ ಪ್ರಜೆಗಳು ಇಂಗ್ಲೆಂಡಿನಲ್ಲೂ, ಇಂಗ್ಲಿಷ್ ಪ್ರಜೆಗಳು ಜರ್ಮನಿಯೊಳಗೂ ಅನೇಕವಾಗಿರುತ್ತಾರಷ್ಟೆ. ಅಂಥವರಲ್ಲಿ 51 ವಯಸ್ಸಾಗಿರತಕ್ಕವರನ್ನು ಅವರವರ ರಾಜ್ಯಕ್ಕೆ ಪರಸ್ಪರ ಕಳುಹಿಸಿ ಕರಸಿಕೊಳ್ಳಬಹುದೆಂದು ಅವಕಾಶವನ್ನು ಕಲ್ಪಿಸಲಾಗಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಫೆಬ್ರವರಿ 11 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	ರೂ.	9,96,595
,, (2) ಡಿಪಾಜಿಟ್ಟುಗಳು	,,	24,36,094
,, (3) ಇತರೆ	,,	57,412
(ಆಣೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	34,90,101

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	6,46,283
,, (2) ಖಾತೆ ಮತ್ತು ಇತರ ಸಾಲಗಳು	,,	19,80,258
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,31,247
,, (4) ಇನ್‌ವೆಸ್ಟ್‌ಮೆಂಟುಗಳು	,,	3,67,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	1,34,628
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	14,000
,, (7) ಇತರೆ	,,	7,499
(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	34,90,101

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಯುದ್ಧದ ರಿಲೀಫ್ ಫಂಡು.

ಗೌರಿಬಿದನೂರು ತಾಲ್ಲೂಕ್ ಕಛೇರಿಯಿಂದ.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗಾಗಿ ಪ್ರಜೆಗಳಿಂದ ವಸೂಲಾದ ಮೊಬಲಗು 29-12-1914 ನೇ ತಾರೀಖು ವರಿವಿಗೆ ತಾಲ್ಲೂಕು ಟ್ರೆಜರಿಗೆ ಇರಸಾಲು ಮಾಡಿಸಿರುವದರ ತಪಶೀಲು ಹೋಬಳಿವಾರು ನಮೂದಿನಿಂದ ಮೊದಲೇ ಪ್ರಕಟವಾಗಿರುತ್ತಷ್ಟೆ. ಈಚೆಗೆ ಅಂದರೆ 30-1-1915 ನೇ ತಾರೀಖು ವರಿವಿಗೆ ವಸೂಲಾಗಿ ಇರಸಾಲು ಮಾಡಿರುವ ಮೊಬಲಗಿನ ತಪಶೀಲು ಹೋಬಳಿವಾರು ಕಯಾವರ್ಯಾರಿ ರವಾನಿಸಿರುತ್ತೆ. ದಯವಿಟ್ಟು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸೋಣ ವಾಗಬೇಕಾದ ಅಂತ ಕೃತಪಡಿಸಿದೆ. 30-1-14 ರ ಆರಂಭ್ಯ 30-1-15 ನೇ ತಾರೀಖುವರಿಗೆ ವಸೂಲಾಗಿ ಟ್ರೆಜರಿಗೆ ಇರಸಾಲಾದ ಮೊಬಲಗು

ಗೌರಿಬಿದನೂರು ಹೋಬಳಿ		ರೂ.	30-14-0
ಹೊಸೂರು	,,	,,	69-12-0
ಮಂಚೇನಹಳ್ಳಿ	,,	,,	30- 8-0
ದಾರಿನಾಯ್ಕನಪಾಳ್ಯ	,,	,,	18-11-0
ತೊಂಡೇಭಾವಿ	,,	,,	22- 6-0
		ಜುಮ್ಲಾ ರೂ.	272- 3-0

ಚಿತ್ರದುರ್ಗ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿ ಸಂಘವು.

ಫೆಬ್ರವರಿ ಮಾಹೆಯ ಮೀಟಿಂಗು.

ಮೇಲ್ಕಂಡ ಸಂಘದ ಮೆಂಬರುಗಳು ಎಂದಿನಂತೆ ಎ. ವಿ. ಸ್ಕೂಲು ಹಾಲಿನಲ್ಲಿ ತಾ. 14 ನೇ ಭಾನುವಾರ ಸೇರಿ ತಿಂಗಳ ಮೀಟಿಂಗನ್ನು ನಡಿಸಿದರು. ಸುಮಾರು 22 ಜನ ಮೆಂಬರುಗಳೂ, ಕೆಲವು ಜನ ದೊಡ್ಡಮನುಷ್ಯರುಗಳೂ, ವಿದ್ಯಾರ್ಥಿಗಳೂ ಹಾಜರಿದ್ದರು. ಹೈಸ್ಕೂಲ್ ಹೆಡ್ ಮಾಸ್ಟರು ಮ॥ ಕೆ ನಾರಾಯಣಯ್ಯಂಗಾರ‍್ರವರ ಅಗ್ರಾಸನಾಧಿಪತ್ಯದಲ್ಲಿ ಮೀಟಿಂಗಿನ ಕಾರ್ಯ ಪ್ರಾರಂಭವಾಯಿತು. ಕಳೆದ ತಿಂಗಳ ಅಂಶಗಳು ರಿಕಾರ್ಡುಮಾಡಲ್ಪಟ್ಟವು. ಮೈಸೂರು ಅಕ್ಷರಾಲಯ ಎಂಬ ನಾಟಕಶಾಲೆಯ ಮ್ಯಾನೇಜರಾದ ಮ॥ ಶ್ರೀಕಂಠಯ್ಯನವರ ಅಮೋಘವಾದ ಉಪನ್ಯಾಸವು ದೊರೆತದ್ದಕ್ಕಾಗಿ ಅನೇಕರು ಸಂತೋಷಪಟ್ಟರು. ಅವರು ಕೇವಲ ವಿಶ್ವಾಸದಿಂದ ಅಕ್ಷರಾಭ್ಯಾಸವನ್ನು ಕುರಿತು ಉಪನ್ಯಾಸ ಕೊಟ್ಟರು. ಅದರ ಮುಖ್ಯ ಭಾಗಗಳು ಯಾವುವೆಂದರೆ—ಮನುಷ್ಯರಿಗೂ ಪಶು ಪಕ್ಷಿಗಳಿಗೂ ಇರುವ ವ್ಯತ್ಯಾಸ, ಮನುಷ್ಯರಿಗೆ ದೇವರ ವರಪ್ರದಾನ, ಮನುಷ್ಯರಿಗೆ ಸ್ವಭಾವವಾಗಿ ಪಟ್ಟೋಟ್ಟಾರಣೆಯ ದಾರಿಗಳು, ಅಕ್ಷರಾಭ್ಯಾಸಮಾಡಿಸಲು ಪೂರ್ವ ಕಾಲಕ್ಕೂ ಈಗಿನ ಕಾಲಕ್ಕೂ ಇರುವ ವ್ಯತ್ಯಾಸಕ್ರಮಗಳು, ಪೂರ್ವದಲ್ಲಿ ಇನ್ಸ್ಪೆಕ್ಟರ್ ಜನರಲ್‌ರವರಾಗಿದ್ದ ಮಿ॥ ಭಾಭಾಸಾಹೇಬರವರು, ಅಕ್ಷರಾಭ್ಯಾಸಕ್ಕಾಗಿ ಅನ್ಯದೇಶದಿಂದ ತಂದು ಹಬ್ಬಿಸಿದ ಕ್ರಮಗಳು, ರೇಖೆಗಳಿಂದ ಅಕ್ಷರಗಳನ್ನು ಕಟ್ಟುವ ರೀತಿ, ಓಂಕಾರದ ಮಹಿಮೆ, ಗೋಳಾಕಾರದಿಂದ ಸಮಸ್ತ ಆಕಾರಗಳೂ ಉಂಟಾಗುವವೆಂಬ ಪ್ರಮಾಣ, ಇವಕ್ಕೆ ತಕ್ಕ ಉದಾಹರಣೆಗಳು, ಮ್ಯಾಪ್ ಡ್ರಾಯಿಂಗ್‌ನಿಂದ ಕನ್ನಡ ಅಕ್ಷರಗಳನ್ನು ಮಾಡಿಸಿ ಕಲಿಸುವ ರೀತಿ, ಆರ್ಯರು ಸಂಸ್ಕೃತದಲ್ಲಿಯೂ, ಜೈನರು ಲಿಂಗಾಯತರು ಬ್ರಾಹ್ಮಣರು ಕನ್ನಡದಲ್ಲಿಯೂ ವಸ್ತುಗಳನ್ನು ನೋಡಿ ಅಕ್ಷರ ಮಾಲಿಕೆಯನ್ನು ಹೊಂದಿಸಿದಷ್ಟು, ಅದರಂತೆ ಇಂಗ್ಲಿಷ್ ಒಂದುಸ್ಥಾನಿ ಮೊದಲಾದ ಅಕ್ಷರಗಳು ಸಾಮಾನ್ಯವಾಗಿ ಯಾವ ಪದಾರ್ಥವನ್ನು ಹೋಲುತ್ತವೆ ಎಂಬುದು ಕಥೆ ಗಾನ ಆಟ ಇವುಗಳ ಮುಖಾಂತ್ರ ಬೇಸರವಿಲ್ಲದಂತೆ ಕಲಿಸುವ ಕ್ರಮ, ವರ್ಣಮಾಲೆ ವಿಚಾರ, ಅವರು ರಚಿಸಿರುವ ಮೂರು ಪುಸ್ತಕಗಳು,—ಈ ರೀತಿ ಬಹು ಸ್ವಾರಸ್ಯವಾದ ಉಪನ್ಯಾಸಕೊಟ್ಟರು. ಅಕ್ಷರಾಭ್ಯಾಸಕ್ಕೆ ಬಹು ಸುಲಭವೂ ಹರ್ಷವೂ ಆಗಿರತಕ್ಕ ಇವರ ದಾರಿಗಳನ್ನು ಅನೇಕ ಜನ ಉಪಾಧ್ಯಾಯರು ಶ್ಲಾಘಿಸಿದರು. ಅಕ್ಷರಾಭ್ಯಾಸವು ವಿದ್ಯಾಭ್ಯಾಸಕ್ಕೆ ಅಸ್ತಿಭಾರವಿದ್ದಂತೆ ಇದನ್ನು ಕಲಿಸುವದರಲ್ಲಿ ಅನೇಕ ಜನ ಉಪಾಧ್ಯಾಯರು ಕೆಲವು ದಿವಸ ಬಾಲಕರನ್ನು ತಿಂದರೆಗೆ ಸಿಕ್ಕಿಸಿ ತಾವೂ ಸಂಕಟವನ್ನು ಅನುಭವಿಸುತ್ತಿರುವರು. ಆದರೆ ಬಾಲಕರು ದೊಡ್ಡವರಾಗುತ್ತ ಅದು ಹೇಗೋ ಬಂದು ಹೋಗುತ್ತದೆ. ಅದನ್ನು ಪರಿಹರಿಸಿ ಸುಲಭವಾದ ಮತ್ತು ಹರ್ಷಕರವಾಗಿರುವ 4-5 ದಾರಿಗಳನ್ನು ತೋರಿಸಿಕೊಟ್ಟದ್ದಕ್ಕಾಗಿ ಸರ್ವರೂ ಕೃತಜ್ಞರಾಗಿರುತ್ತಾರೆ. ಈ ವಿಷಯಗಳಲ್ಲಿ ಇವರು ಬಹು ದಿನಗಳಿಂದಲೂ ಕಷ್ಟಪಟ್ಟು ಯೋಚನೆ ಮಾಡಿದಾರೆ. ಈ ರೀತಿ ಶ್ರಮವನ್ನು ವಹಿಸುವವರು ಅತಿ ವಿರಳ. ಮುಂದಕ್ಕೆ ಇವರ ಉದ್ದೇಶವು ನೆರವೇರಲೆಂದು ಕೋರುತ್ತೇವೆ. ಇದಾದ ನಂತರ ಸಭಾಧ್ಯಕ್ಷರ ಭಾಷಣವಾಯಿತು. ಮುಂದಿನ ತಿಂಗಳ ಮೀಟಿಂಗು ಮಾರ್ಚಿ ತಾ 14 ನೇ ಭಾನುವಾರ ನಡೆಯತಕ್ಕದ್ದೆಂದು ನಿಶ್ಚಯಿಸಿ, ಸಭಾಧ್ಯಕ್ಷರಿಗೆ ವಂದನೆಗಳನ್ನು ಹೇಳಿ ಮೀಟಿಂಗನ್ನು ಮುಕ್ತಾಯಮಾಡಿ ಸರ್ವರೂ ತೆರಳಿದರು.

ವೀರಭದ್ರಪ್ಪ, ಜಾಯಿಂಟ್ ಸೆಕ್ರೆಟರಿ.

ಶ್ರೀಮದ್ಯುವರಾಜರವರ ಸಂಚಾರ.

ಅವರು ನಗರ ತಾಲ್ಲೋಕಿಗೆ ದಯಮಾಡಿಸಿದ್ದು.

ಕಳೆದ ಜನವರಿ ತಾ 13 ನೇ ಮಧ್ಯಾಹ್ನ 5 ಘಂಟೆಗೆ ಮೋಟರಿನಲ್ಲಿ ದಿವಾನ್ ಸಾಹೇಬರವರು, ಡೆಪ್ಯುಟಿ ಕಮಿಷನರ್ ಸಾಹೇಬರವರನ್ನು ಒಡಗೊಂಡು ಶ್ರೀಯವರ ಸವಾರಿ ಸಾಗರದಿಂದ ಕಳಸ್ಯಗೆ ದಯಮಾಡಿಸೋಣವಾಯಿತು. ಬ್ಯಾಂಡ್ ವಾದ್ಯಗಳು ನಡೆದವು. ತಾಲ್ಲೋಕಿನ ಪ್ರಮುಖರಾದವರು ಬಂಗ್ಲೆ ಮುಂದಿನ ಚಪ್ಪರದಲ್ಲಿ ಕಾದಿದ್ದು ನಜರುಗಳನ್ನೊಪ್ಪಿಸಿದರು. ಶ್ರೀಯವರು ಪ್ರತಿ ಒಬ್ಬರನ್ನೂ ವಿಚಾರಿಸಿದರು. ಪೂರ್ವಭಾವಿಯಾಗಿ ತಯಾರಿಸಲ್ಪಟ್ಟದ್ದ ಅಡ್ರಸ್ಸು ತಾಲ್ಲೋಕು ಪ್ರಜೆಗಳ ಪರವಾಗಿ ಮ॥ ಸಿ. ವಾಮನರಾಯರು ಓದಿದರು. ಮ॥ ಸಿ. ನರಸಿಂಹಯ್ಯನವರು ಅಂತಹ ಪೆಟ್ಟಿಗೆಯಲ್ಲಿಟ್ಟು ಶ್ರೀಯವರಲ್ಲಿ ಅರ್ಪಿಸಿದರು. ಶ್ರೀಯವರು ಗಂಭೀರವಾದ ಮಾತಿನಿಂದ ಪ್ರತ್ಯುತ್ತರ ದಯಪಾಲಿಸಿದರು. ತಾ. 13 ನೇ ದಿವಸ ಶ್ರೀಯವರಿಗೆ ಶೀತವಾಗಿದ್ದ ಪ್ರಯುಕ್ತ ಹೊರಗಡೆ ದಯಮಾಡಿಸಲಿಲ್ಲ. ದಿವಾನ್ ಸಾಹೇಬರವರು ಕಛೇರಿ ಇನ್ಸ್ಪೆಕ್ಷನ್ ಪೂರೈಸಿ ಪ್ರಜೆಗಳಿಗಿರುವ ಕಷ್ಟ ಸುಖಗಳನ್ನು ವಿಚಾರಿಸಿದರು. ಶ್ರೀಮನ್ ಯುವರಾಜರವರು ಸಟಿವ ಶಿರೋಮಣಿಗಳು ಮುಂತಾದವರ ಸಮೇತ ತಾ. 14 ನೇ ಬೆಳಗ್ಗೆ 9 ಘಂಟೆಗೆ ಕಳಸ್ಯರಿಂದ ಹುಂಚಕಲ್ಲಿಗೆ ದಯಮಾಡಿಸಿ ಪಾಳಕು 1 ಘಂಟೆಗೆ ಕ್ಯಾಂಪಿಗೆ ದಯಮಾಡಿಸಿದರು. ಮಾರ್ಗದಲ್ಲಿ ಮಾಡಲ್ ವಿಲೇಜು, ಇಂದ್ರವಾಡಿ, ಉದ್ಯಾನವನವಾದ ದೇವಗಂಗೆ, ನಗರದ ಕೋಟೆ, ನಗರದ ಗರಲ್ಸ್ ಸ್ಕೂಲು, ಇವುಗಳನ್ನು ಪರಾಂಬರಿಸಿ ಬಾಲಕಿಯರ ಹಾಡು ಕೇಳಿ ತುಂಬಾ ಸಂತೋಷಪಟ್ಟರು. ತಾ. 14 ನೇ ಮಧ್ಯಾಹ್ನ 6½ ಗಂಟೆಗೆ ಶ್ರೀಯವರ ಸವಾರಿ ಬಂಗ್ಲೆಯಿಂದ ದಯಮಾಡಿಸಿ ಕ್ರಿಶ್ಚಿಯನ್ ಗರಲ್ಸ್ ಸ್ಕೂಲನ್ನು ಪರಾಂಬರಿಸಿದ ನಂತರ ಹುಡುಗರ ಆಟಗಳು, ಜಟ್ಟಿಗಳ ಕಾಳಗ ಕೂಡ ಪರಾಂಬರಿಸಿದರು. ಮಲೆನಾಡಿನ ಜನರು ಕಾಯಿಲೆಯಾದ ಒಡನೆ ಔಷಧೋಪಚಾರಗಳಿಗೆ ಪ್ರಯತ್ನಿಸದೆ ಗ್ರಹಚಾರ ನಿವೃತ್ತಿಗೂ, ಭೂತಬಾಧಾ ಪರಿಹಾರಕ್ಕೂ ಪ್ರಯತ್ನಿಸಿ ಅಕಾಲ ಮರಣಕ್ಕೆ ಗುರಿಯಾಗುವದನ್ನು ಜಮಾದಾರ್ ಗಣಪತಿರಾಯರು ಪ್ರತ್ಯಕ್ಷವಾಗಿ ಮಾಡಿ ತೋರಿಸಿದರು. ರೀಡಿಂಗ್ ರೂಮ್ ಬಳಿ ಡೇರಾದಲ್ಲಿ ಫಲಾಹಾರವಾದ ನಂತರ ನಗರದವರ ಜಾದುಗಾರಿಕೆ ಆಯಿತು. ರಾತ್ರಿ 8 ಘಂಟೆಗೆ ಬಂಗ್ಲೆ ಮುಂದುಗಡೆ ಬಾಣ ಬಿರುಸು ನಡೆಯಿತು.

ತಾ. 15 ನೇ ಪ್ರಾತಃಕಾಲ 9 ಘಂಟೆಗೆ ಸವಾರಿ ಕೊಡಚಾದ್ರಿಗೆ ದಯಮಾಡಿಸಿ ಸಾಯಂಕಾಲ ಕ್ಯಾಂಪಿಗೆ ದಯಮಾಡಿಸೋಣವಾಯಿತು. ದಿವಾನ್ ಸಾಹೇಬರವರು ಡೆಪ್ಯುಟಿ ಕಮಿಷನರ್ ಸಾಹೇಬರ ಸಮೇತ ತಾ. 16 ಕ್ಕೆ ಭಟ್ಕಳ ಬಂದರವನ್ನು ಪರಾಂಬರಿಸಿಕೊಂಡು ರಾತ್ರಿ 8 ಘಂಟೆಗೆ ಕ್ಯಾಂಪಿಗೆ ದಯಮಾಡಿಸಿದರು. ದಾರಿಯಲ್ಲಿ ದಕ್ಷಿಣ ಕನಡಾ ಜಿಲ್ಲಾ ಬೈಂದೂರಲ್ಲಿಯೂ, ಉತ್ತರ ಕನಡಾ ಜಿಲ್ಲೆಯಾದ ಭಟ್ಕಳದಲ್ಲಿಯೂ ತಕ್ಕ ಮರ್ಯಾದೆಗಳಿಂದ ಜನಗಳು ದಿವಾನ್ ಸಾಹೇಬರವರನ್ನು ಸತ್ಕರಿಸಿದರು. ತಾ. 17 ನೇ ಪ್ರಾತಃಕಾಲ 8½ ಘಂಟೆಗೆ ಕಳಸ್ಯರಿಂದ ಸವಾರಿ ಹುಮಚ ಮಾರ್ಗವಾಗಿ ತೀರ್ಥಹಳ್ಳಿಗೆ ದಯಮಾಡಿಸೋಣವಾಯಿತು. ಹುಮಚದಲ್ಲಿ ಹುಮಚ ಮಠದ ಸ್ವಾಮಿಗಳು ಶ್ರೀಯವರನ್ನು ಬಹಳ ವೈಭವದಿಂದ ಬರಮಾಡಿಕೊಂಡು ಸತ್ಕರಿಸಿದರು. ಯುವರಾಜರವರಿಂದ ಹುಮಚದಲ್ಲಿ ಕೋಆಪರೇಟಿವ್ ಸೊಸೈಟಿಯ ಸಮಾರಂಭ ಜರುಗಿಸೋಣವಾಯಿತು. ನಗರದಲ್ಲಿ ಇಂಗ್ಲಿಷ್ ಮಾಸ್ಟರನ್ನು ಕೊಡಿಸಬೇಕಾಗಿ ಪ್ರಾರ್ಥಿಸಿದ ಮೇರೆಗೆ ಜಾಗ್ರತೆ ಕೊಡಿಸುವದಾಗಿ ಅಪ್ಪಣೆ ಕೊಡಿಸಿದರು. ಶ್ರೀಯವರ ಮತ್ತು ದಿವಾನ್ ಸಾಹೇಬರವರ ಸವಾರಿ ಜೊತೆಯಲ್ಲಿ ಕಳಸ್ಯದಲ್ಲಿಯೂ, ನಗರದಲ್ಲಿಯೂ ಮಿ॥ ಸಿ. ನರಸಿಂಹಯ್ಯನವರು ಇದ್ದು ಶ್ರೀಯವರು ವಿಚಾರಿಸಿದ ಪ್ರತಿ ಒಂದು ವಿಷಯಕ್ಕೂ ಸಮರ್ಪಕವಾಗಿ ವಿವರಿಸಿ ಹೇಳಿದರು. ಮಿ॥ ಅಬ್ದುಲ್ ರಹಮಾನ್‌ರವರು ದಿವಾನ್ ಸಾಹೇಬರವರ ಸವಾರಿ ಭಟ್ಕಳಕ್ಕೆ ದಯಮಾಡಿಸುವ ಪೂರ್ವ ದಿವಸವೇ ಭಟ್ಕಳಕ್ಕೆ ಹೋಗಿ ಸರಿಯಾದ ಏರ್ಪಾಡುಗಳನ್ನು ಮಾಡಿದ್ದರು.

ಸೂಕ್ಷ್ಮದರ್ಶಿ.

ಪ್ರದರ್ಶನಗಳು.

ಚನ್ನರಾಯಪಟ್ಟಣ ಹೋಬಳಿ ಕಬ್ಬಾಳು ಗ್ರಾಮ. ಕಾನ್‌ಕಾನ್‌ಹಳ್ಳಿ ತಾಲ್ಲೂಕು ಕಬ್ಬಾಳು ಗ್ರಾಮ.

ಈ ತಿಂಗಳು ತಾ 15 ಮತ್ತು 16 ನೇ ಸೋಮವಾರವೂ ಮಂಗಳವಾರವೂ ಕಬ್ಬಾಳಿನಲ್ಲಿ ನಡೆದ ಜಾತ್ರೆ ಕಾಲದಲ್ಲಿ ದನಗಳ ಪ್ರದರ್ಶನವೂ ವಸ್ತು ಪ್ರದರ್ಶನವೂ ನಡೆಯಿತು. ತಾ. 15 ರಲ್ಲಿ ಮಧ್ಯಾಹ್ನ ಸುಮಾರು 4 ಘಂಟೆಯಲ್ಲಿ ಬೆಂಗಳೂರು ಡೆಪ್ಯುಟಿ ಕಮಿಷನರ್ ಮಿ॥ ಚಾಂಡಿಯವರು ನೇತ್ರಾನಂದಕರವಾಗಿ ಶೃಂಗಾರಮಾಡಿದ್ದ ಎಗ್ಸಿಭಿಷನ್ ಹಾಲಿಗೆ ದಯಮಾಡಿಸುವ ಕಾಲದಲ್ಲಿ ಅವು ಲ್ದಾರರೇ ಮೊದಲಾಗಿ ಸರ್ಕಾರಿ ನೌಕರರು ಎದುರುಗೊಂಡು ಹಾಲಿಗೆ ಕರೆದುಕೊಂಡು ಬಂದರು. ಅಮಲ್ದಾರ್‍ರವರು ಅಡ್ರೆಸ್ ಓದಿ ಒಪ್ಪಿಸಿದ ನಂತರ ಮಿ॥ ಚಾಂಡಿಯವರು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಇದನ್ನು ಹಿಂದೆ ಅಮಲ್ದಾರರಾಗಿದ್ದ ಮ॥ ಚಕ್ರಪಾಣಿ ಅಯ್ಯಂಗಾರ್‍ರವರು ಭಾಷಾಂತರ ಮಾಡಿದರು. ಈ ವರ್ಷವೂ ಸಹ ಕಾನ್‌ಕಾನಹಳ್ಳಿ ಅಮಲ್ದಾರ್‍ರವರು ಬಹು ಮುತುವರ್ಜಿಯಿಂದ ಏರ್ಪಾಡು ಮಾಡಿ ವಸ್ತು ಪ್ರದರ್ಶನವನ್ನು ಹೊಸದಾಗಿ ನೆರವೇರಿಸಿರುತ್ತಾರೆ. ಆನಂತರ ಮ॥ ವೆಂಕಣ್ಣಯ್ಯನವರು ಒಂದು ಉಪನ್ಯಾಸವನ್ನು ಮಾಡಿ ನಮ್ಮನ್ನಾಳುವ ಮಹಾರಾಜರವರಿಗೂ, ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಪಾನ್ ಸುಪಾರಿ ಹಂಚಿದ ನಂತರ ಸಭೆಯವರು ಮೊದಲೇ ಹಾಜರುಮಾಡಿಸಿದ್ದ ವಸ್ತುಗಳನ್ನು ಪರಾಂಬರಿಸಿ ನಂತರ ದನಗಳನ್ನು ನೋಡಿಕೊಂಡು ಸಾಯಂಕಾಲ 6 ಗಂಟೆಗೆ ಬಿಡಾರಗಳಿಗೆ ದಯಮಾಡಿಸಿದರು. ಈ ಸಭೆಯಲ್ಲಿ ಲೇಡಿಗಳು ಸಹ ಹಾಜರಾಗಿದ್ದರು. ಸ್ಥಳಸಂಕೋಚದಿಂದ ಅನೇಕ ದೊಡ್ಡ ಮನುಷ್ಯರುಗಳು ನಿಂತಿದ್ದು ನೇತ್ರಾನಂದವನ್ನು ಹೊಂದಿದರು.

ತಾ. 16 ರಲ್ಲಿ ಪುನಃ ಸಭೆ ಸೇರಿ ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಮ॥ ವಿ ಮುತ್ತುಸ್ವಾಮಿಡಾಸ್‌ರವರು ಆರೋಗ್ಯದ ವಿಷಯವಾಗಿಯೂ, ದೇವಿಹಾಕಿಸಿಕೊಳ್ಳುವುದರಿಂದ ಆಗುವ ಪ್ರಯೋಜನವನ್ನು ಕುರಿತೂ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಮಧ್ಯಾಹ್ನ ಸಬ್ ಡಿವಿಜನ್ ಸಾಹೇಬರವರು, ಅಮಲ್ದಾರ್‍ರು, ಮೆಂಬರುಗಳೂ ಸೇರಿ ವಸ್ತುಗಳಿಗೂ ಬಹುಮಾನವನ್ನೂ ಸರ್ಟಿಫಿಕೇಟನ್ನೂ ದಯಪಾಲಿಸಿದರು. ಮ॥ ಮುತ್ತುಸ್ವಾಮಿಡಾಸ್‌ರವರು ನೀರು ಶೋಧಿಸುವುದನ್ನೂ ಸಹ ತೋರಿಸಿದರು. ನಂತರ ಸಭೆಯು ಬರಖಾಸ್ತು ಆಯಿತು.

ಈ ಕಾಲದಲ್ಲಿ ಜನರು ತಮ್ಮ ದನಗಳನ್ನು ಪ್ರೀತಿಯಿಂದ ಸಾಕುವುದಕ್ಕೂ, ವ್ಯವಸಾಯ ಅಭಿವೃದ್ಧಿಯಾಗುವುದಕ್ಕೂ ನಮ್ಮ ಸರ್ಕಾರದವರು ಬಹು ಮುತುವರ್ಜಿ ಮಾಡಿ ನಾಗರಿಕತೆಯಿಲ್ಲದವರನ್ನು ಅಭಿವೃದ್ಧಿಗೆ ತರಬೇಕೆಂದು ಅನೇಕ ಏರ್ಪಾಡುಗಳನ್ನು ಮಾಡುತ್ತಲಿದಾರೆ.

ಈ ಜಾತ್ರೆಕಾಲದಲ್ಲಿ ಪರಸ್ಥಳದಿಂದ ಬಂದಿದ್ದ ಬ್ರಾಹ್ಮಣರಿಗೆ ಮ॥ ಕಬ್ಬಾಳು ಕೃಷ್ಣಪ್ಪನವರು ಉದಾರಮನಸ್ಸಿನಿಂದ ಅನ್ನದಾನವನ್ನು ಮಾಡಿದರು. ಸರ್ಕಾರಿ ನೌಕರರುಗಳಿಗೂ ಸಹ ಬೇರೆ ಏರ್ಪಾಡು ಮಾಡಿದ್ದರು.

ಎ. ಕೆ.

ಇನ್ನೊಬ್ಬ ಬಾತ್ಮೀದಾರರು ಬರೆಯುವುದು—ಈ ಸಲ ನಡೆದ ಕಬ್ಬಾಳ ಜಾತ್ರೆಗೆ ಹೋಗಿದ್ದೆನು. ಇದು ಕಾನ್‌ಕಾನಹಳ್ಳಿ ತಾಲ್ಲೂಕು ಸಾತನೂರು ಹೋಬಳಿಗೆ ಸೇರಿದ್ದು. ಇಲ್ಲಿ ಐದು ದಿವಸಗಳ ವರಿಗೆ ತುಂಬಾ ಪರಿಷೆಯು ನಡೆಯಿತು. ಸುಮಾರು 20 ರಿಂದ 30 ಸಾವಿರದ ವರಿಗೆ ಜನರು ಸೇರಿದ್ದರು. ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನವೂ ನಡೆಯಿತು. ಉತ್ತಮವಾದ ಪಶುಗಳಿಗೆ ಮತ್ತು ಪದಾರ್ಥಗಳಿಗೆ ಬಹುಮಾನಗಳು ಕೊಡಲ್ಪಟ್ಟವು. ಸದರಿ ಜಾತ್ರೆಯಲ್ಲಿ ಜನರ ಸೌಕರ್ಯಗಳಿಗೂ ಮತ್ತು ಭಕ್ತಾದಿಗಳಿಗೂ ನೇತ್ರಾನಂದಕರವಾದ ಟಪ್ಪರಗಳು ಎಗ್ಗರ ಅಲಂಕರಿಸಲ್ಪಟ್ಟು ಇದ್ದವು. ಇವೆಲ್ಲಾ ಇಷ್ಟು ವಿಜೃಂಭಣೆಯಿಂದ ನಡೆಯಬೇಕಾದರೆ ಸದರಿ ತಾಲ್ಲೂಕು ಅಮಲ್ದಾರ್ ಮಿ॥ ರಾವ್ ಸಾಹೇಬರವರು ಮತ್ತೂ ಟ್ಯಾಂಕು ಇನ್ಸ್ಪೆಕ್ಟರ್ ಮ॥ ಶ್ರೀರಾಮುಲು ನಾಯ್ಡುರವರ ಮುತುವರ್ಜಿಯೇ ಕಾರಣವಾಯಿತು. ಡೆಪ್ಯುಟಿ ಕಮಿಷನರು ಮಿ॥ ಚಾಂಡಿಸಾಹೇಬರವರು ಸದರಿ ಜಾತ್ರೆ ಪರಾಂಬರಿಸಿ ಬಹಳ ಸಂತೋಷಪಟ್ಟು ತಮ್ಮ ಅಭಿಪ್ರಾಯವನ್ನು ಅಲ್ಲಿ ಸೇರಿದ್ದ ಜನರ ಮುಂದೆ ಸದರಿ ಟ್ಯಾಂಕು ಇನ್ಸ್ಪೆಕ್ಟರವರು ತಮ್ಮ ಬುದ್ಧಿ ಕುಶಲತೆಯಿಂದ ಕುತ್ತ ಮುತ್ತು ಹಳ್ಳಿಗಳ ಜನಗಳಿಂದ ಅಷ್ಟೊಂದು ಏರ್ಪಾಡು ಮಾಡಿದ್ದಕ್ಕೂ ಇದರಿಂದ ರೈತರಿಗೆ ಆಗತಕ್ಕ ಪ್ರಯೋಜನವನ್ನೂ ಎಲ್ಲಾ ಇಲಾಖೆಗಳವರಿಂತ ಉಪನ್ಯಾಸಗಳಿಗೆ ಅವಕಾಶಕೊಟ್ಟು ತಮ್ಮ ಸಂತೋಷವನ್ನು ಒಂದು ಉಪನ್ಯಾಸದ ರೀತಿ ಹೇಳಿ ಪೂರೈಸಿದರು.

ಸಂಪದಭ್ಯುದಯ.

ಸಂಪಾದನೆಯ ಕ್ರಮ.

ವ್ಯಾಪಾರ.—ನಮ್ಮ ಸೀಮೆಯಲ್ಲಿ ವ್ಯಾಪಾರಗಾರರ ಸಂಖ್ಯೆಯು ವಿಶೇಷವಾಗಿದೆ. ಆದರೆ ಚಿಲ್ಲರೆ ಅಂಗಡಿಗಳ ವ್ಯಾಪಾರವೂ, ಗಾಡಿ ಎತ್ತುಗಳನ್ನಿಟ್ಟುಕೊಂಡು ಮಾಡುವ ಸಾರಿಗೆ ವ್ಯಾಪಾರವೂ ಹೆಚ್ಚಾಗಿರುವುದರಿಂದ ಐಶ್ವರ್ಯಶಾಲಿಗಳು ಕಡಮೆ. ಈಚೆಗೆ ರೈಲು ಬಂದ ಮೇಲೆ ಕೆಲವು ಸ್ಥಳಗಳಲ್ಲಿ ವ್ಯಾಪಾರವು ಹೆಚ್ಚು ಅಭಿವೃದ್ಧಿಯುಂಟಾಗುತ್ತಲಿರುವುದು. ಇತರ ದೇಶಗಳಿಗೆ ಹೋಗಿ ಹೊರದೇಶದ ವ್ಯಾಪಾರವನ್ನು ಮಾಡುವವರು ಕಡಮೆ. ಮಾರ್ವಾಡಿಗಳೂ, ಲಬ್ಬೆಯವರೂ, ಕಾಟಿವಾಡಿಗಳೂ, ಪಾರ್ಸಿಗಳೂ ಇಲ್ಲಿಗೆ ಬಂದು ದೊಡ್ಡ ದೊಡ್ಡ ಅಂಗಡಿಗಳನ್ನಿಟ್ಟು ಸಾಮಾನುಗಳನ್ನು ಆಮದು ರಫ್ತು ಮಾಡುತ್ತಾ ನಮ್ಮ ಮೇಲುವಜ್ಜೆಯಾಗಿದಾರೆ. ವ್ಯಾಪಾರಗಾರರು ಒಬ್ಬರ ಮೇಲೊಬ್ಬರು ಮೇಲುಯಾಗಿ ವ್ಯಾಪಾರವನ್ನು ಕೆಡಿಸಿಕೊಳ್ಳುವುದೂ ಹೆಚ್ಚು. ಅನೇಕ ವ್ಯಾಪಾರಸ್ಥರ ನಂಬಿಕೆಯನ್ನು ಕೆಡಿಸಿಕೊಂಡು ಬಂದವಾದ ಅಭಾವವನ್ನು ಹೊಂದಿರುತ್ತಾರೆ. ಒಬ್ಬ ವ್ಯಾಪಾರಗಾರನು ಕೈಸೋತರೆ ಮತ್ತೊಬ್ಬ ವ್ಯಾಪಾರಗಾರನು ಸಹಾಯ ಮಾಡಿ ಅವನನ್ನು ಮುಂದಕ್ಕೆ ತರುವ ಪ್ರಯತ್ನ ಮಾಡುವುದಿಲ್ಲ. ಒಳದೇಶ ವ್ಯಾಪಾರವು ಹೆಚ್ಚುವುದಕ್ಕೆ ವಿಶೇಷ ರೈಲು ಮಾರ್ಗಗಳೂ, ರಸ್ತೆಗಳೂ ಹೆಚ್ಚಾಗಬೇಕಾಗಿವೆ. ರಸ್ತೆಗಳನ್ನು ಉತ್ತಮ ಸ್ಥಿತಿಯಲ್ಲಿ ಇಡಬೇಕು. ನಮ್ಮ ದೇಶವು ಸಮುದ್ರ ತೀರವಿಲ್ಲದ ಪ್ರದೇಶವಾಗಿರುವುದರಿಂದ ಪರದೇಶದ ಹಡಗಿನ ವ್ಯಾಪಾರ ಮಾಡುವುದಕ್ಕಾಗದೆ ತೀರಪಟ್ಟಣದವರು ಮಾಡುವ ವ್ಯಾಪಾರಕ್ಕೆ ಲಾಭವನ್ನು ಕೊಟ್ಟು ವ್ಯಾಪಾರ ಮಾಡಬೇಕಾಗಿದೆ. ಆದುದರಿಂದ ನಮ್ಮ ಸೀಮೆಯವರು ತೀರಪಟ್ಟಣಗಳಿಗೆ ಹೋಗಿ ವ್ಯಾಪಾರದ ಕೋಠಿಗಳನ್ನು ಮಾಡಿಕೊಂಡು ಆ ದೇಶದ ಸಾಮಗ್ರಿಗಳ ಆಮದು ರಫ್ತು ಮಾಡುವ ವ್ಯಾಪಾರವನ್ನು ಕೈಕೊಳ್ಳಬೇಕಾದದ್ದು ಅಗತ್ಯವಾಗಿದೆ. ಸಾಧ್ಯವಾದಷ್ಟು ವ್ಯಾಪಾರವನ್ನು ನ್ಯಾಯವಾದ ಮಾರ್ಗದಲ್ಲಿಯೇ ನಡೆಯಿಸಬೇಕು. ವ್ಯಾಪಾರ ಸ್ಥಿತಿಯ ಮೇಲೆ ಇದರ ಅಭಿವೃದ್ಧಿ ಮಾರ್ಗವು ತಿಳಿಯಬಂತಕ್ಕದ್ದಾದುದರಿಂದ ಹೆಚ್ಚು ಪ್ರಶಂಸೆಯು ಅನಾವಶ್ಯವಾಗಿದೆ.

ಉದ್ಯೋಗ.—ಯಾವುದಾದರೂ ಒಂದು ನ್ಯಾಯವಾದ ಅರ್ಥಸಾಧನೆಯ ಕಾರ್ಯವು ಉದ್ಯೋಗವೆನಿಸುವುದು. ಅಧಿಕಾರಗಳೂ, ನೌಕರಿಗಳೂ, ಕೂಲಿ ಕೆಲಸಗಳೂ ಸಹ ಉದ್ಯೋಗಗಳಾಗಿಯೇ ಇವೆ. ಇಲ್ಲಿಯ ಅನೇಕ ಪ್ರಜೆಗಳು ಯಾವ ಉದ್ಯೋಗವೂ ಇಲ್ಲದೆ ಹಿರಿಯರು ಸಂಪಾದಿಸಿಟ್ಟ ಆಸ್ತಿಗಳಿಂದಲೂ ಮಾನ್ಯಕತ್ತಿಗಳಿಂದಲೂ, ಭಿಕ್ಷಾಟನೆಯಿಂದಲೂ ಕಾಲಕ್ಷೇಪ ಮಾಡುತ್ತಲಿರುವರು. ಇದಕ್ಕೆ ಕಾರಣವೇನೆಂದರೆ, ಕಸಬುಗಳೂ ವ್ಯವಸಾಯವೂ ವ್ಯಾಪಾರವೂ ಸಹ ಜಾತಿಯನ್ನನುಸರಿಸಿಕೊಂಡು ಬಂದಿರುವಂತೆಯೇ ಬರಹದ ಕಸಬೂ ಒಂದಾಗಿ ಎಣಿಸಲ್ಪಟ್ಟು ಪೂರ್ವದಿಂದಲೂ ಕೆಲವರು ಸದರಿ ಕಸಬಿನಿಂದಲೇ ಜೀವಿಸುತ್ತಿದ್ದರು. ಈಚೆಗೆ ಬರಹವು ಸರ್ವರಿಗೂ ಅವಶ್ಯವಾಗಿ ಕಂಡುಬಂದುದರಿಂದ ಎಲ್ಲರೂ ಬರಹಗಾರರಾಗಬೇಕಾಗಿರುವುದು. ಇದರಿಂದ ಸದರಿ ಕಸಬನ್ನು ಅವಲಂಬಿಸಿರುವವರು ಬೇರೆ ಉದ್ಯೋಗಾನುಭವವಿಲ್ಲದೆ ನೌಕರಿಯನ್ನು ಅವಲಂಬಿಸಿಕೊಳ್ಳಬೇಕಾಗಿ ಬಂದಿರುವುದು. ನೌಕರಿಗೆ ಇಂಥಾ ಜಾತಿಯವರೇ ಆಗಬೇಕೆಂಬ ನಿಯಮವಿಲ್ಲದುದರಿಂದ ಹಲವರು ವಿದ್ಯಾವಂತರಾಗಿದ್ದರೂ ನೌಕರಿ ದೊರೆಯದ್ದರೆ ಮನೆಯಲ್ಲಿ ಸುಮ್ಮನೆ ಕುಳಿತುಕೊಂಡಿರಬೇಕಾಗಿರುವುದು. ನೌಕರಿಯನ್ನು ಅಪೇಕ್ಷಿಸುವವರೇ ಹೆಚ್ಚಾಗಿ ವಿದ್ಯಾಸಕ್ತರಾಗಿರುವರು. ಇತರ ದೇಶಗಳಿಗಿಂತಲೂ ನಮ್ಮ ದೇಶದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ವಿನಿಯೋಗವಿದ್ದರೂ ಈಗ ವಿದ್ಯಾರ್ಥಿಗಳಾಗಿರುವವರು ಖರ್ಚನ್ನೇ ಸಹಿಸಿಕೊಳ್ಳಲು ಅಶಕ್ತರಾಗಿರುತ್ತಾರೆ. ಆದುದರಿಂದ ವಿದ್ಯಾವಂತರು ಬೇರೆ ಬೇರೆ ಉದ್ಯೋಗಗಳನ್ನು ಕೈಕೊಳ್ಳಲು ಬಂಡವಾಳವಿಲ್ಲದವರಾಗಿರುತ್ತಾರೆ. ಅಲ್ಲದೆ ಗೃಹಕೃತ್ಯದ ಜವಾಬ್ದಾರಿಯು ಪ್ರಾಯಶಃ ಮನೆಯ ಯಜಮಾನನೊಬ್ಬನದಾಗಿದ್ದು ಎಲ್ಲಾ ಭಾರವೂ ಆ ಯಜಮಾನನ ಮೇಲೆಯೇ ಬಿದ್ದಿರುವುದರಿಂದಲೂ, ಆ ಯಜಮಾನನು ತನ್ನ ಜೀವಮಾನ ಪರ್ಯಂತವೂ ಮಕ್ಕಳು ಮುಂತಾದವರಿಗೆ ಗೃಹಕೃತ್ಯದ ಭಾರವನ್ನು ವಹಿಸದೆ ತಾನೇ ಜವಾಬ್ದಾರನಾಗಿರುವುದರಿಂದಲೂ ಪ್ರಾಯಸ್ಥರಾದ ಮಕ್ಕಳಿಗೆ ಜವಾಬ್ದಾರಿ ಕಡಮೆಯಾಗಿ ಉದ್ಯೋಗಾಪೇಕ್ಷೆಯಿಲ್ಲದೆ ತಟಸ್ಥರಾಗಿರುತ್ತಾರೆ. ಪ್ರಜೆಗಳು ಉದ್ಯೋಗಿಗಳಾಗಿರಲು ಚಟುವಟಿಕೆ, ಕಾರ್ಯಶಕ್ತಿ, ಯಶಸ್ಸು, ಇವುಗಳನ್ನು ಪಡೆಯಬೇಕಾಗಿವೆ. ಒಬ್ಬ ಮನುಷ್ಯನು ಸದುದ್ಯೋಗಿಯಾಗಿ ತನ್ನ ಸಮಾನರ್ಕೆ ಅನೇಕರನ್ನು ಎಳೆದುಕೊಂಡು ಅವರ ಉದ್ಯೋಗಭಂಗವನ್ನುಂಟುಮಾಡುವ ದೃಢಾಂಗಗಳ ಉಪೇಕ್ಷೆಯನ್ನು ವಿಧಿಃ ಸದುದ್ಯೋಗವನ್ನು ಹೋಗಲಾಡಿಸುವ ಪ್ರಯತ್ನಮಾಡಬೇಕಿದೆ? ಅಭಿವೃದ್ಧಿ ಸ್ಥಿತಿಯಲ್ಲಿರುವ ಕೆಲವು ರಾಜ್ಯಗಳಲ್ಲಿ ಈ ನಿಯಮ ವಿಧಿಯು ಆಚರಣೆಯಲ್ಲಿರುವುದಾಗಿ ತಿಳಿದುಬರುತ್ತದೆ. ಉದ್ಯೋಗಗಳಲ್ಲಿ ಸರ್ಕಾರದ ಉದ್ಯೋಗವನ್ನು ಅಪೇಕ್ಷಿಸುವವರೇ ಹೆಚ್ಚು. ಸರ್ಕಾರದವರು ಸಶಕ್ತರಾದವರಿಗೇ ಉದ್ಯೋಗವನ್ನು ಕೊಡುವುದಾಗಿ ವಿಧಿಯನ್ನು ನಿಯಮಕಮಾಡಿರುತ್ತಾರೆ. ಹೀಗಿದ್ದೂ ಕೆಲವು ಸಂದರ್ಭಗಳಲ್ಲಿ ಶಕ್ತಿಹೀನರಾದವರಿಗೂ ಜನಾಂಗವನ್ನು ಮುಂದಕ್ಕೆ ತರುತ್ತೇವೆಂಬ ಕಾರಣದಿಂದ ಉದ್ಯೋಗವನ್ನು ಕೊಡುವುದು ನ್ಯಾಯವಾಗಿರುವುದಿಲ್ಲ. ಮತ್ತು ಯಾವನಾದರೂ ಒಬ್ಬನಿಗೆ ಒಂದು ಉದ್ಯೋಗವನ್ನು ಕೊಟ್ಟಮಾತ್ರದಿಂದ ಆ ಜನಾಂಗವೆಲ್ಲಾ ಮುಂದಕ್ಕೆ ಬಂದಹಾಗಾಗುವುದಿಲ್ಲ. ಶಕ್ತಿಯನ್ನು ಪಡೆಯುವ ಜವಾಬ್ದಾರಿಯು ಅಧಿಕಾರಾಪೇಕ್ಷಿಗಳನ್ನೇ ಹೊಂದಿರಬೇಕು. ಈಚೆಗೆ ಸರ್ಕಾರದ ಪ್ರಕಟನ ಪತ್ರಿಕೆಯಲ್ಲಿಯೂ ಸಹ ಇಂಥಾ ಜಾತಿಯವನು ಇಂಥಾ ಕೆಲಸಕ್ಕೆ ಇಂಥಾ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು; ಇಂಥಾ ಜಾತಿಯವನು ಅದೇ ಕೆಲಸಕ್ಕೆ ಇಂಥಾ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗಿದ್ದರೆ ಸಾಕು ಎಂದು ಪ್ರಕಟವಾಗುತ್ತಲಿದೆ. ಇದರಿಂದ ಸರ್ಕಾರದವರೇ ಜಾತಿಭೇದವನ್ನು ಕಲ್ಪಿಸಿಕೊಟ್ಟು, ಹೆಚ್ಚು ವಿದ್ಯಾಭ್ಯಾಸಿಗಳಿಗೆ ಜುಗುಪ್ಸೆಯನ್ನು ಉಂಟುಮಾಡಿದಂತಾಗುತ್ತದೆ. ಮತ್ತು ಸರ್ಕಾರದ ವಿಧಿಗಳಲ್ಲಿ ಭಾವನೆ ಇಲ್ಲವಾಗುತ್ತದೆ. ಅಲ್ಪ ಶಕ್ತಿಗೆ ಹೆಚ್ಚು ಉದ್ಯೋಗವನ್ನು ಪಡೆಯುವವರು ಹೆಚ್ಚಾದ ಶಕ್ತಿಯನ್ನು ಪಡೆಯಲು ಕುಂದಕವನ್ನುಂಟುಮಾಡಿದಂತಾಗುತ್ತದೆ. ಆದುದರಿಂದ ಸರ್ಕಾರದವರು ಪಕ್ಷಪಾತಕ್ಕೆ ಅಸ್ಪದಕೊಡಬಾರದು.

ಯಸ್. ಸುಬ್ರಾವ್, ಸಿರಾರಿಪುರ.

ಬಾತ್ಮೀದಾರರಿಗೆ ನೋಟೀಸು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಮೈಸೂರು ಅರ್ಥಸಾಧಕ ಪತ್ರಿಕೆ.

ಅಯ್ಯಾ,—ಮೈಸೂರು ಸರ್ಕಾರದವರು ಅರ್ಥಸಾಧಕ ಪತ್ರಿಕೆಯ ಇಂಗ್ಲಿಷ್ ಕಾಪಿಗೆ ವಾರ್ಷಿಕ ಚಂದಾ ಮೂರು ರೂಪಾಯಿಯನ್ನೂ, ಕನ್ನಡ ಕಾಪಿಗೆ ವಾರ್ಷಿಕ ಚಂದಾ ಎರಡು ರೂಪಾಯಿಯನ್ನೂ ಗೊತ್ತು ಮಾಡಿದಾರೆ. ಇದು ಪ್ರಜೆಗಳ ಅನುಕೂಲಕ್ಕೆ ತಪ್ಪೆಂದು ಹೇಳಬಹುದು. ಮದರಾಸಿನ ಇಂಡಿಯನ್ ರಿವ್ಯೂ ಮೊದಲಾದ ದೊಡ್ಡ ದೊಡ್ಡ ಮಾಸ ಪತ್ರಿಕೆಗಳಿಗೆ ಪ್ರಜೆಗಳ ಅನುಕೂಲಕ್ಕೆ ತಕ್ಕ ಹಾಗೆ ಚಂದಾವನ್ನು ನಿರ್ಣಯಿಸಿರುತ್ತಾರೆ. ಅರ್ಥಸಾಧಕ ಪತ್ರಿಕೆಯ

ಇಂಗ್ಲೀಷ್ ಶಾಪಿಗೆ ಎರಡು ರೂಪಾಯಿ ಪ್ರಕಾರವೂ, ಕನ್ನಡ ಶಾಪಿಗೆ ಒಂದು ರೂಪಾಯಿ ಪ್ರಕಾರವೂ ವಾರ್ಷಿಕ ಚಂದಾ ಗೊತ್ತು ಮಾಡಿದರೆ ಬಹು ಜನರು ಚಂದಾದಾರರಾಗಲು ಅನುಕೂಲವಾಗುವುದು.

ರೈತಾಭಿಮಾನಿ.

ಕೊರೊಮ್ಯಾಂಡಲ್ ಕಂಪೆನಿ.—ಆಕ್ಷೇಪಣೆ

ಅಯ್ಯಾ,—ನಾನು ಕೊರೊಮ್ಯಾಂಡಲ್ ಲೈಫ್ ಇನ್ ಷೂರೆನ್ಸ್ ಕಂಪೆನಿ, ಮೈಲಾಪೂರ್‌ನಲ್ಲಿರುವ ಮದುವೆ ಫಂಡಿನ ಕಂಪೆನಿಯಲ್ಲಿ ನನ್ನ ಸೋದರ ಸೊಸೆ ಜಾನಕಮ್ಮನೆಂಬ ಹುಡುಗಿಯ ಹೆಸರಿನಲ್ಲಿ ಮದುವೆಗಾಗಿ ಫಂಡಿಗೆ ಹಣವನ್ನು ಸುಮಾರು ಮೂರು ವರುಷಗಳಿಂದಲೂ ಕಟ್ಟುತ್ತಾ ಬಂದು 1914 ನೇ ಜೂನ್ 3 ನೇ ತಾ. ಮದುವೆಯು ನೆರವೇರಿ ಕಂಪೆನಿಯವರಿಗೆ ಮದುವೆ ಕ್ಲೈಮಿಗಾಗಿ ಕಳುಹಿಸತಕ್ಕ ಫಾರಂಗಳನ್ನೆಲ್ಲಾ ಮದುವೆಯಾದ ಒಂದು ತಿಂಗಳೊಳಗಾಗಿ ಕಂಪೆನಿಯ ರೂಲ್ಸು ಪ್ರಕಾರ ಕಳುಹಿಸಿದ್ದಾಯಿತು. ಒಂದು ತಿಂಗಳೊಳಗಾಗಿ ಕ್ಲೈಮು ಮಾಡಬಹುದಾಗಿದ್ದ ಫಂಡನ್ನು ಈ ಕಂಪೆನಿಯವರು ಮದುವೆಯಾಗಿ ಸುಮಾರು ಎಂಟು ತಿಂಗಳಾದರೂ ಕ್ಲೈಮು ಮಾಡದೆ ಬರೆದ ಕಾಗದಗಳಿಗೆ ಯಾವತಕ್ಕ ಸರಿಯಾದ ಜವಾಬನ್ನೂ ಕೊಡದೆ ಇರುವದನ್ನು ನೋಡಿದರೆ ಜನರಿಗೆ ಮೋಸಪಡಿಸುವ ಉದ್ದಿಶ್ಯವಾಗಿ ಈ ಕಂಪೆನಿಯು ಸ್ಥಾಪಿತವಾಗಿರುವಂತೆ ತೋರುತ್ತದೆ. ಇದೇ ರೀತಿ ಚನ್ನಪಟ್ಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳಲ್ಲಿ ಅನೇಕರು ಮೋಸ ಹೋಗಿರುತ್ತಾರೆಂಬ ವರ್ತಮಾನವೂ ತಿಳಿದುಬರುತ್ತದೆ. ಈ ಕಂಪೆನಿಗೆ ಇನ್ನೂ ಅನೇಕರು ಹಣವನ್ನು ಕಟ್ಟುತ್ತಲೇ ಇರುತ್ತಾರೆ. ಆದುದರಿಂದ ಇನ್ನುಮುಂದೆಯಾದರೂ ಮೋಸಹೋಗದೆ ಜಾಗರೂಕರಾಗಿ ಇರಬೇಕೆಂಬುದೇ ನನ್ನ ಪ್ರಾರ್ಥನೆ. ಈ ಕಂಪೆನಿಯ ಒಂದು ಬ್ರಾಂಚು ಮೈಸೂರಿನಲ್ಲಿ ಇರುತ್ತೆ. ಇದಕ್ಕೆ ಮ|| ವೆಂಕಟಾಚಲಂ ಅಂಡ್ ಸನ್ಸ್ ಎಂಬವರು ಚೀಫ್ ಏಜೆಂಟರಾಗಿ ಹಣವನ್ನು ವಸೂಲುಮಾಡುತ್ತಾರೆಂದು ತಿಳಿಯಬರುತ್ತೆ. ಕಂಪೆನಿಯ ಸ್ಥಿತಿಯು ಮೇಲೆ ಕಂಡಂತೆ ಇರುವಾಗ ಇವರು ವಸೂಲು ಮಾಡುವ ಹಣವನ್ನು ಕಂಪೆನಿಗೆ ಕಳುಹಿಸುತ್ತಾರೆಯೋ ಅಥವಾ ತಮ್ಮಲ್ಲಿಯೇ ಇಟ್ಟುಕೊಳ್ಳುತ್ತಾರೆಯೋ ಸಂದೇಹವಾಗಿದೆ. ಮೇಲೆ ನಮೂದಿಸಲ್ಪಟ್ಟಿರುವ 25906 ನೇ ನಂಬರಿನ ಪಾಲಿಸಿ ವಿಚಾರವಾಗಿ ಇವರಿಗೆ ಬರೆದಿದ್ದರೂ ಇವರು ಕೂಡ ಇದಕ್ಕೆ ಗಮನಕೊಡದೆ ಇರುತ್ತಾರೆ. ಆದುದರಿಂದ ಈ ಕಂಪೆನಿಗೆ ಹಣ ಕಟ್ಟುವವರೆಲ್ಲರೂ ಕಂಪೆನಿಯ ನಿಜಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಇನ್ನು ಮುಂದೆಯಾದರೂ ಜಾಗರೂಕರಾಗಿರುತ್ತಾರೆಂದು ನಂಬಿರುತ್ತೇನೆ.

ಎನ್. ಕಾಶೀಪತಯ್ಯರ್,
18-2-1916 ಚಾಮರಾಜಪುರಂ, ಮೈಸೂರು.

ಹೊಸದಾಗಿ ಸರ್ಕಾರದವರಿಂದ ಕಾನೂನು ಆಗಬೇಕು.

ಅಯ್ಯಾ,—ವಿವಾಹವೆಂಬುವದು ಪ್ರಪಂಚದಲ್ಲೆಲ್ಲಾ ಎಲ್ಲರಿಗೂ ಬೇಕಾದದ್ದಾಗಿರುತ್ತದೆ. ಆದರೆ ಕೆಲವು ಸಂಗಡದವರಲ್ಲಿ ಕನ್ಯೆ ಋತುವಾಗುವದಕ್ಕೆ ಮುಂಚೆ ಮದುವೆ ಮಾಡುವದು ವಾಡಿಕೆಯಾಗಿದೆ. ಇದು ಬಹಳ ಅಸಂಗತವಾದದ್ದು. ಋತುವಾಗುವದಕ್ಕೆ ಮುಂಚೆ ಮದುವೆ ಮಾಡುವದು ಹೆಣ್ಣಿನ ತಂದೆ ತಾಯಿಗಳ ಕರ್ತವ್ಯವಾಗಿರುತ್ತದೆ. ಆದರೆ ಮದುವೆಯಾಗತಕ್ಕ ಗಂಡಿನವರಿಗೆ ಅಂಥಾ ನಿರ್ಬಂಧವೇನೂ ಇಲ್ಲ. ಹೆಣ್ಣಿನವರು ಮಗಳು ಮದುವೆ ಆಗುವದಕ್ಕೆ ಮೊದಲು ಎಲ್ಲಿ ಋತುವಾಗುತ್ತಾಳೋ, ಲೋಕಾಪವಾದವಾಗುತ್ತೋ ಎಂಬದಾಗಿ ಕನ್ಯೆಗೆ ತಕ್ಕ ವರನನ್ನು ಹುಡುಕುವದಕ್ಕೆ ಪ್ರಾರಂಭಿಸಿ ಎಲ್ಲಾ ದೇಶವೂ ಕಂಗೆಟ್ಟು ತಿರುಗಿ, ವಿವಾಹವನ್ನು ಆಗಲೆಂದು ಎಷ್ಟೋ ಎಲ್ಲಾದರೊಂದು ವರನನ್ನು ನಿಷ್ಕರ್ಷಿಸಿ ತಮ್ಮ ಆಸ್ತಿಪಾಸ್ತಿಗಳೆಲ್ಲಾ ಅವರಿಗೆ ಈಡುಮಾಡಿ ಕಡೆಗೆ ಮಗಳಿಗೆ ಹೊಟ್ಟೆಯಲ್ಲಿ ಹುಟ್ಟಿದ್ದಕ್ಕಾಗಿ ಲಗ್ನಮಾಡಿ ಕೊಡುತ್ತಾರೆ. ಇದಕ್ಕಾಗಿ ಹೆಣ್ಣು ತಂದು ಕೊಳ್ಳತಕ್ಕವರು ಅವರವರ ಶಕ್ತ್ಯಾನುಸಾರ ಒಂದು ನೂರು ರೂಪಾಯಿ ಮೊದಲು ಎರಡು ಸಾವಿರ ರೂಪಾಯಿಗಳ ಮೇಲ್ಪಟ್ಟು ಒಡವೆಯನ್ನು ಹೆಣ್ಣಿಗೆ ಇಟ್ಟುಕೊಳ್ಳುವದಕ್ಕೆ ಮಾಡಿಸಿ ಕೊಟ್ಟು ಹೆಣ್ಣಿನವರ ಕಡೆಯಿಂದ 100 ರೂಪಾಯಿ ಮೊದಲು 1,000—1,500 ವರೆವಿಗೂ ವರದಕ್ಷಿಣೆ ಎಂದು ಕನ್ಯೆಯ ತಂದೆ ತಾಯಿಗಳನ್ನು ಪೀಡಿಸಿ ಹಿಂಡಿಹಿಂಡಿ ಪಡೆಯುತ್ತಾರೆ.

ಇದು ಯಾವ ನ್ಯಾಯವೋ ಯೋಚಿಸತಕ್ಕದ್ದು. 10-16 ವರುಷ ಹೆಣ್ಣನ್ನು ಸಾಕಿ ವಿವಾಹಮಾಡಿ ಕೊಟ್ಟದ್ದಲ್ಲದೆ ಆಸ್ತಿಪಾಸ್ತಿಗಳೆಲ್ಲಾ ಅವರಿಗೆ ಈಡುಮಾಡಿ ವರನಿಗೆ ಕೊಟ್ಟು ಸ್ಥಿತಿಗಳನ್ನು ಕಳಕೊಂಡು ಕೊನೆಗೆ ಭ್ರಷ್ಟತ್ವಹೊಂದಿ ಕೆಟ್ಟುಹೋಗುತ್ತಾರೆ. ಗಂಡಿನವರು ಹಾಗೆಯೇ ವರದಕ್ಷಿಣೆ ಜಾಸ್ತಿ ತೆಗೆದುಕೊಳ್ಳಬೇಕೆಂತ ಯೋಚಿಸಿ ಬೆಟ್ಟಿಗೆ ಹೆಣ್ಣಿನ ಒಡವೆಗಳಿಗೋಸ್ಕರ ಆಸ್ತಿಪಾಸ್ತಿಗಳೆಲ್ಲಾ ಅನ್ಯರಿಗೆ ಬರೆದು ಕೊಟ್ಟು ಸಾಲಮಾಡಿ ಒಡವೆಗಳು ಮಾಡಿಸಿ ಹೆಣ್ಣಿಗೆ ಕೊಟ್ಟು ಸಾಕ್ರಮಣವನ್ನು ಮಾಡಿಕೊಳ್ಳುತ್ತಾರೆ. ಇದರಿಂದ ಉಭಯ ಕಡೆಯವರು ಕೂಡ ಒಂದೇ ರೀತಿಯಾಗಿ ಕೆಟ್ಟುಹೋಗುತ್ತಾರೆ. ಒಂದು ಪಕ್ಷ ಹೆಣ್ಣಿನವರೂ ಗಂಡಿನವರೂ ಸ್ಥಿತಿವಂತರಾಗಿದ್ದರೆ ಪರಿಣಾಮವಾಗಿ ಗತಿಹೊಂದುತ್ತಾರೆ. ಮದುವೆ ಆದ ನಂತರ ಹೆಣ್ಣು ಮನೆಗೆ ಬರುವದಕ್ಕೆ ಮುಂಚೆ ವೈಧವ್ಯವಾದರೆ ಇಟ್ಟ ಒಡವೆಗಳೆಲ್ಲಾ ಹೆಣ್ಣಿನ ತಂದೆ ತಾಯಿಗಳ ಪಾಲಾಗುತ್ತದೆ. ಆಗ್ಗೆ ಗಂಡಿನವರ ಗತಿ ಏನು? ಅಥವಾ ಹೆಣ್ಣಿನವರ ಗತಿ ಏನು? ಗಂಡಿನವರಿಗೆ ಮಗ ಹೋದನೆಂಬ ಅಪಾರವಾದ ದುಃಖವುಂಟಾಗಿ ಅದರಲ್ಲೂ ಮತ್ತಷ್ಟು ಒಡವೆ ಹೋದ ವ್ಯಸನ ಸಾವಿಲ್ಲದಾಗಿರುತ್ತದೆ. ಹೆಣ್ಣಿನವರೋ ತನ್ನನ್ನು ಪಾಣಿಗ್ರಹಣ ಮಾಡಿಕೊಂಡ ಪತಿಯು ವೈಕುಂಠವಾಸನಾದ ಅಪಾರವಾದ ದುಃಖ ತನ್ನ ಪ್ರಾಣಾವಧಿ ತಪ್ಪುವದಿಲ್ಲ. ಆ ಹೆಣ್ಣಿನ ಗತಿ ಏನು? ಒಂದು ಪಕ್ಷ ಮದುವೆಯಾದ ಹೆಣ್ಣು ಸತ್ತು ಹೋದರೆ ಹೆಣ್ಣಿನ ತಂದೆ ತಾಯಿಗಳಿಗೆ ತುಂಬಾ ವ್ಯಸನ ಪ್ರಾಪ್ತಿಯಾಗುತ್ತದೆ. ಗಂಡಿನವರಿಗೆ ಹೆಣ್ಣು ಹೋಯಿತೆಂಬ ವ್ಯಸನ ಮಾತ್ರವು ಮದುವೆ ಆಗುವ ತನಕವಿರುತ್ತೆ. ಒಡವೆಗೆ ಏನೂ ಲೋಪವಿಲ್ಲದೆ ಹೆಣ್ಣಿನವರು ವಾಪಸು ಗಂಡಿನವರಿಗೆ ಕೊಟ್ಟು ಬಿಡುತ್ತಾರೆ. ಗಂಡಿನವರು ಎಷ್ಟು ಲಗ್ನಗಳಾದರೂ ಒಂದು ಹೆಣ್ಣಿಗೆಂದು ಲಕ್ಷ್ಯವಿಲ್ಲದೆ ಮಾಡಿಕೊಳ್ಳುತ್ತಾರೆ. ಇದು ಯಾವ ನ್ಯಾಯ?

ಜಗತ್ತಿನಲ್ಲಿ ಗಂಡಸಿಗೆ ಎಷ್ಟು ಸ್ವಾತಂತ್ರ್ಯ ಉಂಟೋ ಅಷ್ಟು ಹೆಂಗಸಿಗೆ ಸಹ ಉಂಟು. ಗಂಡಸಿಗೆ ಎಷ್ಟು ಇಂದ್ರಿಯಾದಿಗಳು ಉಂಟೋ ಹೆಂಗಸಿಗೂ ಸಹ ಅಷ್ಟೇ ಇರುತ್ತವೆ. ಇಂಥಾದ್ದರಲ್ಲಿ ಗಂಡಸು ಎಷ್ಟಾದರೂ ಲಗ್ನವಾಗಬಹುದು; ಹೆಣ್ಣು ಆಗಬಾರದೆಂದು ಅವರನ್ನು ನಿರಾಕರಿಸಿ ಪುನಃ ಲಗ್ನ ಮಾಡದೆ ತಾವನ್ನು ದೂರ ಮಾಡಿರುವದು ಯಾವ ನ್ಯಾಯ? ಗಂಡಸಿಗೆ ಪತ್ನಿ ಹೋದ ಮೇಲೆ ಹೆಣ್ಣಿನ ಹಾಗೆ ಅವನಿಗೂ ಪತ್ನಿವಿಹೀನನೆಂಬದಾಗಿ ಹೆಣ್ಣನ್ನು ದೂರಮಾಡಿದ ಹಾಗೆ ಗಂಡಸನ್ನು ಯಾಕೆ ದೂರೀಕರಿಸಬಾರದು? ಗಂಡಸಿಗೆ ವೈಧವ್ಯ ಪ್ರಾಪ್ತಿಯಾಗಲಿಲ್ಲವೇ? ಆ ರೀತಿ ಪುನಃ ಅವನಿಗೆ ಲಗ್ನವಾಗುವದಿಲ್ಲವೇ? ಅದರಂತೆ ಹೆಣ್ಣಿಗೆ ಯಾಕೆ ಲಗ್ನವಾಗಬಾರದು? ಹೆಣ್ಣಿಗೆ ಗಂಡ ಸತ್ತುಹೋದರೆ ಅವರ ಪತ್ನಿ ತಾವೊಂದು ಕೇಳುತ್ತಾರೆ; ಗಂಡಸಿಗಾದರೆ ಕೇಳಬಾರದೇ? ಗಂಡಸಿಗೆ ಹೆಣ್ಣು ಹೋದ ಮೇಲೆ ಪುನರ್ವಿವಾಹ ಮಾಡುವಂತೆ ಹೆಣ್ಣಿಗೆ ಲಗ್ನವಾಗದೇ ಇದ್ದಲ್ಲಿ ಗಂಡಸಿಗೆ ಇಂದ್ರಿಯಾದಿಗಳಿಲ್ಲವೋ? ಹಾಗೆ ಹೆಣ್ಣಿಗೆ ಲಗ್ನವಾಗದೆ ಇದ್ದಲ್ಲಿ ಅನೇಕ ವಿಘಾತಗಳು ನಡೆಯುವದಿಲ್ಲವೋ? ಆಗ್ಗೆ ಎಲ್ಲರೂ ಸಂಕಟಪಡುವದಿಲ್ಲವೋ? ಅದರಿಂದ ಶಿಶುಹತ್ಯ, ಭ್ರೂಣಹತ್ಯಾದಿಗಳು ನಡೆಯುವದಿಲ್ಲವೋ? ಇಂಥ ಲಗ್ನವಾಗದೆ ಹೋದ ದೆಸೆಯಿಂದ ಇಷ್ಟು ಅನಾಹುತಗಳಲ್ಲವೇ? ಗಂಡಸು ಪುನಃ ಲಗ್ನವಾದಂತೆ ಹೆಂಗಸಿಗೆ ಯಾಕೆ ಮಾಡಬಾರದು?

ಈಗ ಪ್ರಪಂಚದಲ್ಲಿ ಗಂಡಸು ಎಷ್ಟು ಬಹಿರ್ವ್ಯಾಪಾರಾದಿಗಳು ಮಾಡುವದಿಲ್ಲ! ಅದನ್ನು ಯಾಕೆ ಈ ರೀತಿ ಮಾಡಬಾರದು? ಗಂಡ ಸತ್ತ ಮೇಲೆ ಹೆಣ್ಣಿಗೆ ಯಾವ ರೀತಿ ಪುನರ್ವಿವಾಹ ಮಾಡುವದಿಲ್ಲವೋ, ಗಂಡಸಿಗೂ ಹಾಗೆಯೇ ವಿವಾಹವನ್ನು ಯಾಕೆ ನಿಷೇಧಿಸಬಾರದು? ಪೂರ್ವದಲ್ಲಿ ಗಂಡು ಸಾಯಲಿ, ಹೆಣ್ಣು ಸಾಯಲಿ ಜೀವಂತರಾಗಿದ್ದವರನ್ನೂ ಕೂಡ ಸಹಗಮನ ಮಾಡುತ್ತಿದ್ದರಂತೆ. ಆಗ್ಗೆ ಇಂಥಾ ದೋಷಗಳು ಯಾವವೂ ಇರುತ್ತಿರಲಿಲ್ಲ. ಈಗ ಆ ರೀತಿ ಸಹಗಮನವಿಲ್ಲದ್ದರಿಂದ ಇಷ್ಟು ಅನಾಹುತಗಳು ಉಂಟಾಗುತ್ತವೆ. ಶಿಶುಹತ್ಯ, ಭ್ರೂಣಹತ್ಯ, ಸ್ತ್ರೀಹತ್ಯಾದಿ ದೋಷಗಳಿಂದಲ್ಲವೇ ರಾಜ್ಯಕ್ಷೋಭೆಯೂ, ಅನಾಹುತಗಳೂ ಉಂಟಾಗತಕ್ಕದ್ದು? ವಿವಾಹವಾಗತಕ್ಕದ್ದು ಹೆಣ್ಣಾಗಲಿ, ಗಂಡಾಗಲಿ ಪುತ್ರಾಭಿಲಾಷೆಗಲ್ಲವೇ? ತನ್ನ ವಂಶೋದ್ಧಾರಕ್ಕಲ್ಲವೇ? ಪ್ರಪಂಚೋದ್ಧಾರವೆಲ್ಲಾ ಆ ಸ್ತ್ರೀರತ್ನಗಳಿಂದಲ್ಲವೇ? ಇಂಥಾದ್ದರಲ್ಲಿ ಅವರನ್ನು ದೂರೀಕರಿಸುವದು ಯಾವ ನ್ಯಾಯ?

ಸರ್ಕಾರದವರು ಯೋಚಿಸಿ ಇದು ಕೆಟ್ಟದ್ದು, ಒಳ್ಳೇದೆಂದು ತಿಳಿದು ಶಿಶುಹತ್ಯ ಭ್ರೂಣಹತ್ಯಗಳು ಇದರಿಂದ ನಡೆಯುವುದು ನಿಜವೆಂದು ಯೋಚಿಸಿ ಇದಕ್ಕಾಗಿ ಸಭೆ ಏರ್ಪಡಿಸಿ ಒಂದು ಕಾನೂನು ಜಾರೀಲಿ ತಂದಾರೆಂದು ಹಾರೈಸುತ್ತೇನೆ. ವಿವಾಹ ಮಾಡತಕ್ಕವರು ಪ್ರಥಮವಿವಾಹ, ದ್ವಿತೀಯವಿವಾಹ ಮೊದಲಾದವುಗಳನ್ನು ನಿರ್ಧರಿಸಬೇಕು. ಮೊದಲನೇ ವಿವಾಹವೆಂದರೆ ಬಾಲ್ಯಾವಸ್ಥೆಯಲ್ಲಿ ರಜಸ್ವಲೆಯಾಗುವದಕ್ಕೆ ಮೊದಲೇ ಆಗತಕ್ಕದ್ದು. ಇದು ಗಂಡಿಗೂ ಮೊದಲನೇದಾಗಿರಬೇಕು. ಎರಡನೇ ವಿವಾಹಕ್ಕೆ ರಜಸ್ವಲೆಯಾಗದ ಹುಡುಗಿಯನ್ನು ಯಾರೂ ಕೊಟ್ಟು ವಿವಾಹಮಾಡಕೂಡದು. ಎರಡನೇ ವಿವಾಹಕ್ಕೆ ಪುನರ್ವಿವಾಹದ ಎರಡನೇ ವಿವಾಹ ಆಗತಕ್ಕ ಹೆಣ್ಣಿಗೆ ಕೊಟ್ಟು ವಿವಾಹಬೇಕು. ಮತ್ತು ಹೀಗೆಯೇ ಅವರವರ ದರ್ಜೆಯನ್ನನುಸರಿಸಿ ವಿವಾಹಗಳನ್ನು ಮಾಡತಕ್ಕದ್ದು. ಇದಕ್ಕೆ ಮತಪಂಗಡದವರ್‍ಯಾರೂ ದೂರೀಕರಿಸಬಾರದು. ಇದರಂತೆ ಘನವನ್ನು ಹೊಂದಿದ ಸರ್ಕಾರದವರು ಯೋಚಿಸಿ ಅವರವರ ಮತಾನುಸಾರ ಈ ರೀತಿ ಅನುಸರಿಸಬೇಕೆಂದು ನಿರ್ಬಂಧವಾದ ಕಾನೂನು ಮಾಡಿ ಜಾರೀಲಿ ತಂದಾರೆಂದು ಹಾರೈಸುತ್ತೇನೆ.

ನನ್ನ ಈ ಬಾತ್ಮಿಯಿಂದ ಕೆಲವರಿಗೆ ಬೇರೆ ಅಭಿಪ್ರಾಯವಾಗಬಹುದು. ಆದರೆ ಪುನರ್ವಿವಾಹವಾಗುವ ಗಂಡಾಗಲಿ, ಹೆಣ್ಣಾಗಲಿ ನಮ್ಮಲ್ಲಿಲ್ಲ. ನಮ್ಮ ವಂಶದವರಲ್ಲೂ ಇಲ್ಲ. ಆದರೆ ನಾನು ಅನೇಕ ಕಡೆ ನನ್ನ ವ್ಯಾಪಾರಾದಿಗಳ ಉದ್ದಿಶ್ಯ ಹೋಗಿದ್ದೆ. ಈ ವಿಚಾರವಾದ ಬಾಲಕಿಯರನ್ನು ನೋಡಿ ನನಗೆ ಬಹಳ ದುಃಖ ಉಂಟಾಯಿತು. ಆದ್ದರಿಂದ ತಮ್ಮ ಪತ್ರಿಕೆಗೆ ಇದನ್ನು ಕುರಿತು ಬರೆಯಬೇಕಾಗಿ ನನ್ನ ಮನಸ್ಸು ಸೆಳೆದದ್ದರಿಂದಲೂ, ಸರ್ಕಾರದವರು ಇದನ್ನು ಯೋಚಿಸಿ ಜಾರಿಗೆ ತಂದಾರೆಂತ ನಂಬಿಯೂ ತಮ್ಮಲ್ಲಿಗೆ ಬರೆದು ಕಳುಹಿಸಿರುತ್ತೇನೆ.

ಎಂ. ಸುಬ್ಬರಾಯಶೆಟ್ಟಿ, ಬುಕ್ಕಾಪಟ್ಟಣ.

ತಾಲ್ಲೂಕು ವರ್ತಮಾನಗಳು.

ನಂಜನಗೂಡು ತಾ|| ತಗಡೂರು.—ಈ ಗ್ರಾಮಕ್ಕೆ ತಾಲ್ಲೂಕು ಅಮಲ್ದಾರ್ರವರು ದಯಮಾಡಿದ್ದ ಕಾಲದಲ್ಲಿ ಇಲ್ಲಿನ ಸ್ಕೂಲನ್ನು ಪರೀಕ್ಷಿಸಿದರು. ಕೆಲವು ಹುಡುಗರು ಇಂಡಿಯಾ ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಗಳನ್ನೂ, ಒಬ್ಬ ವಿದ್ಯಾರ್ಥಿಯು ಈಗ ನಡೆಯುವ ಯುದ್ಧದ ವಿಚಾರವಾಗಿ ಉಪನ್ಯಾಸವನ್ನೂ ಮಾಡಿದರು. ಅಮಲ್ದಾರರು ತುಂಬಾ ಸಂತೋಷಪಟ್ಟರು.—ಈ ಗ್ರಾಮದ ಯೂನಿಯನ್ ವಿಚಾರದಲ್ಲಿ ಇಲ್ಲಿನ ಪಟೇಲರು ಮತ್ತು ಗ್ರಾಮಸ್ಥರು ಬಹಳ ಮುತುವರ್ಜಿ ವಹಿಸಿ ಯೂನಿಯನ್ ಕೆಲಸಗಳನ್ನು ಸರಿಯಾಗಿ ಮಾಡಿಸುತ್ತಾರೆ. ಮುಂದೆಯೂ ಹೀಗೆ ನಡಿಸುತ್ತಾರೆಂದು ನಂಬಿದೇವೆ.

ಬೆಂಗಳೂರು ತಾ|| ಕೆಂಗೇರಿ.—ಈ ಗ್ರಾಮದಲ್ಲಿ ಅನಾದಿ ಪ್ರಸಿದ್ಧವಾದ ಪೇಟೆ ಆಂಜನೇಯಸ್ವಾಮಿ ದೇವಸ್ಥಾನವನ್ನು ಮ|| ಪಟೇಲ್ ವೀರಣ್ಣನವರು ಅಮಲ್ದಾರ್ರವರ ಸಹಾಯದಿಂದ ನೂತನವಾಗಿ ಮಾಡಿಸಿ ತಾ 29 ರಲ್ಲಿ ಪ್ರತಿಷ್ಠೆ ಕಾರ್ಯವನ್ನು ನಡಿಸಿ ಅನ್ನದಾನ, ಉತ್ಸವ, ಹರಿಕಥೆ ವಗೈರೆ ಕಾರ್ಯಗಳು ಅತ್ಯಂತ ವಿಜೃಂಭಣೆಯಿಂದ ನಡೆದವು. ನಮ್ಮ ಸರ್ಕಾರದವರು ಪ್ರಜೆಗಳಲ್ಲಿ ಭಕ್ತಿ ವಿಶ್ವಾಸಾದಿಗಳನ್ನು ನೆಲೆಗೊಳಿಸಿರುವುದಕ್ಕಾಗಿ ನಮ್ಮ ಶ್ರೀಮನ್ ಮಹಾರಾಜರವರಿಗೂ, ಶ್ರೀಮದಿಂಡಿಯಾ ಚಕ್ರವರ್ತಿಗಳಾದ ಜಾರ್ಜ್ ಸಾರ್ವಭೌಮರವರಿಗೆ ಈಗಿನ ಯುದ್ಧದಲ್ಲಿ ಭಗವಂತನು ಜಯಪ್ರದನಾಗಲಿ, ಚಿರಾಯುರಾರೋಗ್ಯಾದಿಗಳನ್ನು ದಯಪಾಲಿಸಲೆಂಬ ಪ್ರಾರ್ಥನಾರೂಪವಾದ ವಂದನೆಗಳೂ, ಮಂಗಳಾರತಿಯೂ ನಡೆದು ಸರ್ವರೂ ಜಯಧ್ವನಿಯನ್ನು ಮಾಡಿದರು.

ಮಾಗಡಿ.—ಇಲ್ಲಿ 2-3 ವಾರಗಳಿಂದ ಪ್ಲೇಗು ಕಾಣಿಸಿಕೊಂಡದ್ದರಿಂದ ಜನರೆಲ್ಲರೂ ಊರುಬಿಟ್ಟು ಷೆಡ್ಡುಗಳಲ್ಲಿ ವಾಸವಾಗಿದ್ದಾರೆ. ಊರಲ್ಲಿ 10—12 ಕೇಸುಗಳಾದವು. ಬಿಸಿಲು ಹೆಚ್ಚುತ್ತಾ ಬಂದದ್ದರಿಂದಲೂ ನೂರಾರು ಮಂದಿಯು ತನಗೆ ಇನಾಕ್ಯುಲೇಷನ್ ಮಾಡಿಸಿಕೊಂಡಿರುವುದರಿಂದಲೂ ರೋಗದ ಸೋಂಕು ಹೆಚ್ಚಾಗಿ ಹರಡಲು ಅವಕಾಶವಿಲ್ಲ.—ಎ. ವಿ. ಸ್ಕೂಲಲ್ಲಿಯೂ ಕ್ಯಾಂಪುಗಳಲ್ಲಿಯೂ ಪಾಠಗಳು ನಡೆಯುತ್ತಿರುವುದರಿಂದ ಹುಡುಗರಿಗೆ ವ್ಯಾಸಂಗ ತಪ್ಪುವದೆಂಬ ಭಯವಿಲ್ಲ. ದಿವಾನ್ ಸಾಹೇಬರವರು ಇಷ್ಟರಲ್ಲಿಯೇ ಇಲ್ಲಿಗೆ ದಯಮಾಡಿಸುವ ವರ್ತಮಾನವಿದೆ. ಎಲ್ಲಾ ಕಡೆಗಳಲ್ಲಿರುವಂತೆ ಇಲ್ಲಿಯೂ ನೀರಿನ ತೊಂದರೆ ಹೆಚ್ಚಾಗಿದೆ.—ಶಾಸನ ಇಲಾಖಾಧಿಕಾರಿಗಳು ಈ ತಿಂಗಳ ಆದಿಭಾಗದಲ್ಲಿ ಈ ತಾಲ್ಲೂಕಿಗೆ ದಯಮಾಡಿಸಿದ್ದು ಹಲವು ಹಳೇ ಶಾಸನಗಳನ್ನು ಸಂಗ್ರಹಿಸಿಕೊಂಡು ಹೋದರು.

ಕುಲೀಸ್‌ಪೇಟೆ.—ಈ ಊರಿನಲ್ಲಿ ನೀರಿನ ಕಷ್ಟವಂತೂ ಹೇಳಲು ಬಹಳ ಅಸಾಧ್ಯ. ಹೊಸ ಅರಳೆ ಸೇರು ಬಟ್ಟು ಸಹಾ ಬಂದಾಗ್ಯೂ ಇನ್ನೂ ಹಳೇ ಸೇರೂ ಬಟ್ಟುಗಳೂ ಎಲ್ಲಾ ಅಂಗಡಿಗಳಲ್ಲಿಯೂ ಹಾಗೇ ಇರುತ್ತೆ.—ನಮ್ಮ ದಿವಾನ್ ಸಾಹೇಬರವರ ಸವಾರಿಯನ್ನೇ ಎಲ್ಲರೂ ನಿರೀಕ್ಷಣೆ ಮಾಡಿಕೊಂಡಿರುತ್ತಾರೆ. ಕಳೆದ 19 ನೇ ತಾ. ಶನಿವಾರ ಇಲ್ಲಿನ ಸ್ಕೂಲ್ ಕಟ್ಟಡದಲ್ಲಿ ಮ್ಯಾಜಿಕ್ ಪ್ರೊಫೆಸರ್ ಎಂ. ಸಿ. ಅಳಸಿಂಗ್ರಾಚಾರ್ಯರು ತಮ್ಮ ಯುಕ್ತಿಯೇ ಮುಂತಾದ ಚಮತ್ಕೃತಿಗಳನ್ನು ಸ್ಕೂಲ್ ಬಾಲಕ ಬಾಲಕಿಯರಿಗೂ ಮತ್ತು ಇಲ್ಲಿನ ಸಬ್ ಡಿವೀಜನ್ ಆಫೀಸರೇ ಮುಂತಾದ ಇತರ ಅಧಿಕಾರಿಗಳಿಗೂ ಪ್ರದರ್ಶಿಸಿ ಪ್ರೇಕ್ಷಕರನ್ನು ತುಂಬಾ ಆನಂದಪಡಿಸಿದರು. ಇನ್ನೂ ಇವರು ಇತರ ಅನೇಕ ಮಹನೀಯರುಗಳ ಮುಂದೆ ಪ್ರದರ್ಶಿಸಿ ಅನೇಕ ಬಹುಮಾನಗಳನ್ನೂ ಹೊಂದಿರುತ್ತಾರೆ.—ಸುಗ್ಗಿಕಾಲವಾದರೂ ದಾರಣೆಧಾರೆಗಳು ಇನ್ನೂ ಇಳಿತಕ್ಕೆ ಬಂದಿಲ್ಲ.

ಟಿ. ನರಸೀಪುರ.—ಟಿ. ನರಸೀಪುರದ ವಾಚಕಶಾಲೆಯನ್ನು ವೈಶ್ಯ ವರ್ತಕ ಮಂಡಲಿಯಲ್ಲಿ ಅಗ್ರಗಣ್ಯರಾದ ಸಾಹುಕಾರ್ ಮ|| ಗಂಜಾಂ ವೆಂಕಟರಮಣಶೆಟ್ಟರವರು ತಾ 15 ನೇ ಸೋಮವಾರ ಸಾಯಂಕಾಲ ಪೇಟೆಯ ಬೀದಿಯಲ್ಲಿರುವ ತಮ್ಮ ಮನೆಯ ಒಂದು ಭಾಗದಲ್ಲಿ ಸ್ಥಾಪಿಸಬೇಕೆಂಬ ಉದ್ದೇಶದಿಂದ ತಾಲ್ಲೋಕ್ ಅಮಲ್ದಾರ್ರೇ ಮುಂತಾದ ದೊಡ್ಡ ಮನುಷ್ಯರನ್ನೂ ವರ್ತಕ ಮಂಡಲಿಯವರನ್ನೂ ಬರಮಾಡಿಕೊಂಡರು. ಅಮಲ್ದಾರ್ ಮ|| ಅಸ್ಗರ್ ಯವರು ಸಭಿಕರ ಕೋರಿಕೆಯಂತೆ ಅಗ್ರಾಸನವನ್ನು ವಹಿಸಿದರು. ಮ|| ಅಪ್ಪಯ್ಯಶೆಟ್ಟರ ನಂಜುಂಡಶೆಟ್ಟಿಯವರು ಸದ್ಯ ಈ ಊರಲ್ಲಿರುವ ಎರಡು ವಾಚಕಶಾಲೆಗಳ ಜೊತೆಗೆ ಮತ್ತೊಂದನ್ನು ಸ್ಥಾಪಿಸಬೇಕಾದದ್ದರ ಆವಶ್ಯಕತೆಯ ವಿಷಯದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ವೈಶ್ಯ ವರ್ತಕಮಂಡಲಿಯವರ ಏಳಿಗೆಯ ವಿಚಾರದಲ್ಲಿ ಬಹು ಮಟ್ಟಿಗೆ ಪ್ರೋತ್ಸಾಹಿಸುತ್ತಿರುವ ಮ|| ವೆಂಕಟರಮಣಶೆಟ್ಟಿಯವರ ಉದಾರ ಮನಸ್ಸು ತುಂಬಾ ಸ್ತೋತ್ರಾರ್ಹವಾದದ್ದೆಂದೂ, ಈ ವಾಚಕಶಾಲೆಯು ಸಾರ್ಥಕೋದ್ಧಾರವಾಗಿ ನಡೆಯಬೇಕೆಂದೂ ಸಭಾಧ್ಯಕ್ಷರು ಅಪ್ಪಣೆಕೊಟ್ಟ ಮೇಲೆ ಸಭಾಧ್ಯಕ್ಷರಿಗೂ ಸಭಿಕರಿಗೂ ಗಂಧ ತಾಂಬೂಲಗಳನ್ನು ಕೊಡಲು ಸಭೆಯು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಮಾಪ್ತವಾಯಿತು.—ಇಲ್ಲಿನ ವೀರಶೈವ ವರ್ತಕಮಂಡಲಿಗೆ ಮುಖಂಡರಾದ ಮ|| ಸಾಹುಕಾರ್ ಪುಟ್ಟಣ್ಣಶೆಟ್ಟಿ.ರವರು ಮೇಲ್ಕಂಡ ಉದಾಹರಣೆಯನ್ನು ಅನುಸರಿಸಿ ತಮ್ಮ ಮಂಡಲಿಯವರ ಪುರೋಭಿವೃದ್ಧಿಗಾಗಿ ಒಂದು ವಾಚಕಶಾಲೆಯನ್ನು ಬಹು ಶೀಘ್ರಕಾಲದಲ್ಲಿಯೇ ಸ್ಥಾಪಿಸುವುದರಲ್ಲಿದ್ದಾರೆ.—ಸಾಹುಕಾರ್ ಮ|| ಗಂಜಾಂ ವೆಂಕಟರಮಣಶೆಟ್ಟಿಯವರು ತಮ್ಮ ಮೊಮ್ಮಗಳ ಕಲ್ಯಾಣ ಮಹೋತ್ಸವದ ಸಂದರ್ಭದಲ್ಲಿ ಅಮಲ್ದಾರರೇ ಮುಂತಾದ ಸ್ಥಳಿಕ ಉದ್ಯೋಗಸ್ಥರನ್ನೂ ದೊಡ್ಡ ಮನುಷ್ಯರನ್ನೂ ನೆನ್ನೆ ದಿವಸ ಸಾಯಂಕಾಲ ತಮ್ಮ ಮನೆಗೆ ಬರಮಾಡಿಕೊಂಡು ಫಲಾಹಾರಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಸಿ ಅನಂತರ ಸಂಗೀತವಿದ್ಯಾ ನಿಪುಣರಾದ ಮಳವಳ್ಳಿ ಮ|| ಸುಬ್ಬಣ್ಣನವರ ಮಗಳು ಸುಂದರರಾಜಮ್ಮನವರ ಸಂಗೀತ ಕಛೇರಿಯನ್ನು ಬಹು ವಿಜೃಂಭಣೆಯಿಂದ ಮಾಡಿಸಿದರು. ಸಭಿಕರೆಲ್ಲರೂ ಸಂಗೀತವನ್ನು ಕೇಳಿ ಸಂತೋಷ ಭರಿತರಾಗಿ ಗಂಧ ಪುಷ್ಪ ತಾಂಬೂಲಗಳನ್ನು ಸ್ವೀಕರಿಸಿ ಹರ್ಷಚಿತ್ತರಾಗಿ ದಯಮಾಡಿಸಿದರು.

ಮದ್ದಗಿರಿ.—ಬಿಸಿಲಿನ ತಾಪವು ಅಧಿಕವಾಗಿದೆ. ಈ ಟವುನ್ ಪ್ರಜೆಗಳು ನೀರಿಗಾಗಿ ಎಷ್ಟು ಶ್ರಮಪಡುತ್ತಾರೆಂದು ಹೇಳತೀರದು. ಮ್ಯುನಿಸಿಪಾಲಿಟಿಯವರು ಈ ವಿಷಯಕ್ಕೆ ನಿಗಾ ಕೊಟ್ಟಂತೆ ತೋರುವುದಿಲ್ಲ. ಈ ಸಾಲ್‌ನಲ್ಲಿ ಸುತರಾಂ ಫಸಲೇ ಇಲ್ಲವೆಂದು ಎಲ್ಲಾ ಆಫೀಸರುಗಳಿಗೆ ಗೊತ್ತೇ ಇದೆ. ಪ್ರಜೆಗಳು ಈ ಕ್ಷಾಮಕಾಲದಲ್ಲಿ ಜೀವನ ಮಾಡುವುದೇ ಪ್ರಯಾಸವಾಗಿರುತ್ತೆ. ದಯಾಳು ನಮ್ಮ ಗವರ್ನ್‌ಮೆಂಟಿನವರು ಪ್ರಜೆಗಳ ಕಂದಾಯಕ್ಕೆ ರಿಮಿಷನ್ ಮುಸ್ತರಿಯಾಯಿತು ತೋರಿಸಬೇಕೆಂದು ಹಾರೈಸುತ್ತಾರೆ.—ನಾಳೆ ತಾ. 23 ರ ಲಾಗಾಯಿತು ಇಲ್ಲಿ ಮಾರಿ ಪರಿಷೆ ಪ್ರಾರಂಭವಾಗುತ್ತೆ. ಈ ಕಾಲದಲ್ಲಿ ಬರತಕ್ಕ ಪ್ರಜೆಗಳಿಗೆ ಅನ್ನದಾನ ಮಾಡಲು ಮ|| ರಾಮೇಗೌಡರು ಮತ್ತು ಮ|| ಪಣ್ಣೆ ಬಸಪ್ಪನವರು ಕೊಪ್ಪಲುಗಳನ್ನಿಟ್ಟು ತಕ್ಕ ಏರ್ಪಾಡು ಮಾಡುತ್ತಲಿರುವರು. ಮ|| ಪಣ್ಣೆ ಚೌಡಪ್ಪ ಮತ್ತು ಮ|| ಚನ್ನಬಸಪ್ಪ ಇವರು ಹಾಸಲಾಗೋಡಿನಿಂದ ಬರತಕ್ಕ ಪ್ರಜೆಗಳ ಉಪಯೋಗಕ್ಕಾಗಿ 2 ಭಾವಿಗಳನ್ನು ತೆಗಿಸಿರುತ್ತಾರಲ್ಲದೆ ನೀರಿಗೆ ಇನ್ನೂ ಇತರ ಏರ್ಪಾಟನ್ನೂ ಮಾಡುವುದೂ, ಈ ಕಾಲದಲ್ಲಿ ಆಹಾರಕ್ಕೆ ತಕ್ಕ ಪದಾರ್ಥಗಳನ್ನು ಒದಗಿಸಿ ಇಂಥಾ ಕಾರ್ಯಗಳನ್ನು ಮಾಡಲು ಮುಂದಾಳುಗಳಾಗಿ ನಿಂತಿರುವದೂ ಸ್ತೋತ್ರಾರ್ಹವಾಗಿದೆ. ಜಾತ್ರೆ ಕಾಲದಲ್ಲಿ ಜಾನುವಾರುಗಳ ಪ್ರದರ್ಶನವು ನಡೆಯುವುದು. ಇದಕ್ಕೆ ತಕ್ಕ ಅನುಕೂಲತೆಗಳನ್ನು ನಮ್ಮ ಸಬ್ ಡಿವೀಜನ್ ಆಫೀಸರು ಮತ್ತು ಅಮಲ್ದಾರರು ಸಹ ಶ್ರದ್ಧೆ ವಹಿಸಿ ಮಾಡುತ್ತಿರುವರು.—ತಾ 8 ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರವರು ದಯಮಾಡಿಸಿ ಇಲ್ಲಿನ ಮಿಡ್ಲ್ ಸ್ಕೂಲನ್ನು ಪರೀಕ್ಷಿಸಿಕೊಂಡು ಹೋದರು.—ಈ ಮಾಹೆ ತಾ. 19 ರಲ್ಲಿ ಸ್ಯಾನಿಟರಿ ಕಮಿಷನರವರು ಚಿಕಿತ್ಸಾ ಆಸ್ಪತ್ರೆ ಇನ್ಸ್‌ಪೆಕ್ಷನ್ ಮಾಡಿದ್ದರಲ್ಲಿ ಬಹಳ ಮಟ್ಟಿಗೆ ತೃಪ್ತಿಪಟ್ಟು ಶಸ್ತ್ರ ಚಿಕಿತ್ಸೆಯು ಈ ತಾಲ್ಲೂಕಿನಲ್ಲಿ ಜಾಸ್ತಿ ನಡೆದಿದೆಯೆಂತಲೂ, ದಿನಕ್ಕೆ ನೂರರ ಮೇಲ್ಪಟ್ಟು ಬರುವ ರೋಗಿಗಳಿಗೆ ಉತ್ತಮವಾದ ಔಷಧ ದೊರಕಿರುತ್ತೆಂತಲೂ, ಆಸ್ಪತ್ರೆಯೂ ಮತ್ತು ಅದರಲ್ಲಿನ ತಕ್ಕ ಸಾಧನಗಳೂ ಬಹು ಚೆನ್ನಾಗಿವೆಯೆಂತಲೂ ಹೇಳಿ, ಅಲ್ಲಿಂದ ಪೊಲೀಸ್ ಲಾಕಪ್ಪನ್ನು ಪರಾಂಬರಿಸಿ ಅದು ಕೇವಲ ಕಿಷ್ಕಿಂಧವಾಗಿದೆಯೆಂದೂ, ವಿಸ್ತಾರವಾಗಿಯೂ ಮತ್ತು ಎತ್ತರವಾಗಿಯೂ ಕಟ್ಟಿಸಬೇಕೆಂದೂ ಅಮಲ್ದಾರ್ರವರಿಗೆ ತಿಳಿಸಿ, ಸೀರಾ ಮಾರ್ಗವಾಗಿ ತೆರಳಿದರು.—ತಾ 16 ರಲ್ಲಿ ಶಿಡ್ಲಘಟ್ಟದಿಂದ ಬಂದಿದ್ದ ರಾಮದಾಸರನ್ನು ಮ|| ಜಿ. ಶಿವರಾಮಯ್ಯನವರು ಬರಮಾಡಿಕೊಂಡು ತಮ್ಮ ಬಂಗ್ಲೆಯಲ್ಲಿ ಹರಿಕಥೆ ಮಾಡಿಸಿದರು. ಈ ದಾಸರು ಬಹು ಸ್ವಾರಸ್ಯವಾಗಿ ಎಲ್ಲರಿಗೂ ಆಹ್ಲಾದವಾಗುವಂತೆ ತಮ್ಮ ವಿದ್ಯೆಯನ್ನು ಪ್ರಕಾಶಪಡಿಸಿದರು. ಎಲ್ಲಾ ಆಫೀಸರುಗಳೂ, ದೊಡ್ಡ ಮನುಷ್ಯರೂ, ಸ್ಕೂಲ್ ಮಾಸ್ಟರುಗಳೂ, ಇತರರೂ ಸಭೆಯನ್ನಲಂಕರಿಸಿದ್ದರು.—ಈ ಊರಲ್ಲಿ ಕಾಯಿಸೊಪ್ಪು ಮಾರುವವರಿಗೂ, ಕಸಾಬ್ ದುಕಾನಿಗೂ ಅನುಕೂಲವಾದ ಸ್ಥಳವಿಲ್ಲದೆ ತುಂಬಾ ತೊಂದರೆಯಾಗಿದೆ. ನಮ್ಮ ಅಮಲ್ದಾರ್ರವರು ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು, ತಮ್ಮ ಕಾಲದಲ್ಲಿ ಅನುಕೂಲವಾದ ಎರಡು ಮಾರ್ಕೆಟ್ಟುಗಳನ್ನು ಕಟ್ಟಿಸಿ ಕೀರ್ತಿ ಪಡೆಯುವಂತೆ ಪ್ರಜೆಗಳು ಬಹಳವಾಗಿ ಕೋರುತ್ತಿರುವರು.

ಮಂಡ್ಯ.—ಬಿಸಿಲು ಬಹು ತೀಕ್ಷ್ಣವಾಗಿದೆ. ಸಿಡುಬಿನಲ್ಲಿ ಇದುವರೆಗೆ 40—50 ಮಕ್ಕಳು ತೀರಿಹೋದರು. ಸೇಕಡಾ 98 ರಂತೆ ಬೇವು ಹಾಕಿಸಿಕೊಳ್ಳದೇ ಇರತಕ್ಕ ಮಕ್ಕಳೇ ಸತ್ತರೆಂದು ಹೇಳಬಹುದು. ನಮ್ಮೂರಿನ ಡಾಕ್ಟರ್ ಗುಂಡಪ್ಪನವರು ತುಂಬಾ ಮೆಹನತ್ತಿನಿಂದ ಪ್ರತಿಯೊಂದು ಬೀದಿಯ ಒಂದೊಂದು ಮನೆಗೂ ಹೋಗಿ ಅನೇಕ ಮಕ್ಕಳಿಗೆ ಸಿಡುಬು ಹಾಕಿದರು. 4—5 ದಿನಗಳಾದ ಮೇಲೆ ಹೆಲ್ತ್ ಆಫೀಸರ್ ಮ|| ಕೃಷ್ಣರಾಯರು ದಯಮಾಡಿಸಿ ನಮ್ಮ ಡಾಕ್ಟರ ಕೂಡ ಇನ್ನೂ ಅನೇಕ ಮಕ್ಕಳಿಗೆ ಸಿಡಬನ್ನು ಹಾಕಿಸಿದ್ದು ಸ್ತೋತ್ರಾರ್ಹವಾಗಿದೆ. ಈ ರೋಗ ಈಗ ಸ್ವಲ್ಪ ಶಮನವಾಗಿದೆ.—ತಾ 18 ರಲ್ಲಿ 1 ನೇ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರು ದಯಮಾಡಿಸಿದ ವೇಳೆಯಲ್ಲಿ ಚೌಕದಲ್ಲಿ ಹಾಕಿಸಿದ್ದ ಮಂಟಪದಲ್ಲಿ ಪುರಾಧ್ಯಕ್ಷರೂ, ಮ್ಯುನಿಸಿಪಲ್ ಮೆಂಬರುಗಳೂ, ಅಧಿಕಾರಿಗಳೂ, ನೌಕರಮಾನೇರುಗಳೂ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿ ಸನ್ಮಾನಮಾಡಿ ಟ್ರಾವೆಲರ್ಸ್ ಬಂಗ್ಲೆಗೆ ಕಳುಹಿಸಿದರು. ಮಾರನೆದಿನ ಅವರು ಆಸ್ಪತ್ರೆ ಮತ್ತು ತಾಲ್ಲೂಕ್ ಕಛೇರಿಯ ಪ್ರತಿಯೊಂದು ಬಾಬನ್ನೂ ತನಿಖೆ ಮಾಡಿ, ಅಲ್ಲಿಂದ ಗೌ. ಕ. ಸ್ಕೂಲಿಗೆ ಹೋಗಿ ವಿದ್ಯಾರ್ಥಿಗಳನ್ನೂ ಮ್ಯಾನೇಜ್‌ಮೆಂಟನ್ನೂ ನೋಡಿ ಸಂತೋಷಪಟ್ಟು ಅಲ್ಲಿಂದ ಗೌ. ಹಿಂದೂಸ್ಥಾನಿ ಗರಲ್ಸ್ ಸ್ಕೂಲಿಗೆ ದಯಮಾಡಿಸಿ ಅಲ್ಲಿಯೂ ಅದರ ಏಳಿಗೆಯನ್ನು ಕುರಿತು ಕೇಳಿ ಸಂತೋಷಪಟ್ಟು, ಅಲ್ಲಿಂದ ಶ್ರೀನಿವಾಸರಾಯರ ಛತ್ರ, ದೇವಸ್ಥಾನಕ್ಕೆ ದಯಮಾಡಿಸಿ ತೀರ್ಥಪ್ರಸಾದವನ್ನು ಪಡೆದು ದಿವಾನ್ ಪೂರ್ಣಯ್ಯನವರ ಛತ್ರಕ್ಕೆ ದಯಮಾಡಿದರು. ಆ ಕಟ್ಟಡದ ಸ್ಥಿತಿಯನ್ನೂ ರಿಪೇರಿ ವಗೈರೆಗಳನ್ನೂ ನೋಡಿ ಜನಾರ್ದನಸ್ವಾಮಿ ದೇವಸ್ಥಾನಕ್ಕೂ ಹೋಗಿ ಅಲ್ಲಿನ ಎಲ್ಲಾ ಸಂಗತಿಗಳನ್ನೂ ವಿಚಾರಿಸಿಕೊಂಡು ಅಲ್ಲಿಯೂ ತೀರ್ಥಪ್ರಸಾದವನ್ನು ಸ್ವೀಕರಿಸಿ ಅಲ್ಲಿಂದ ಗೌ. ಗರಲ್ಸ್ ಸ್ಕೂಲಿಗೆ ದಯಮಾಡಿಸಿದರು. ಅಲ್ಲಿ ನಡೆದ ಆಟಪಾಟಗಳನ್ನು ಪರಾಂಬರಿಸಿ ಅಲ್ಲಿಂದ ಈಶ್ವರ ದೇವಸ್ಥಾನಕ್ಕೆ ದಯಮಾಡಿಸಿ ಅಲ್ಲಿಯೂ ತೀರ್ಥಪ್ರಸಾದವನ್ನು ಹೊಂದಿ ವೆಸ್ಲಿಯನ್ ಮಿಷನ್ ಎ. ವಿ. ಸ್ಕೂಲಿಗೆ ದಯಮಾಡಿಸಿ ಪ್ರತಿಯೊಂದು ತರಗತಿಯನ್ನೂ ನೋಡಿ ಈಗಿನ ಏಳಿಗೆಯನ್ನು ಕುರಿತು ಸಂತೋಷಪಟ್ಟು ಅಲ್ಲಿಂದ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿಗೂ ದಯಮಾಡಿಸಿ ಕಟ್ಟಡದ ತುಂಬಾ ಸೇರಿದ್ದ ಮಕ್ಕಳನ್ನೂ ಮತ್ತು ವಿದ್ಯಾರ್ಥಿನಿಯರು ಮಾಡಿದ್ದ ಪೇಪರ್ ಫ್ಲೌಲಿಂಗ್, ಕಿಂಡರ್‌ಗಾರ್ಟನ್, ಹೊಲಿಗೆ, ಕಾಗದಗಳಲ್ಲಿ ಮಾಡಿದ್ದ ಹೂವುಗಳನ್ನೂ, ಸಾದಾ ಕಾರ್ಡುಗಳಲ್ಲಿ ಉಲನ್ ಹೊಲಿಗೆಯಿಂದ ಬಿಡಿಸಿದ್ದ ಚಿತ್ರಗಳನ್ನೂ, ಮಣ್ಣುಗಳಲ್ಲಿ ಮಾಡಿದ್ದ ಬೇರೆ ಬೇರೆ ವಿಧದ ವಸ್ತುಗಳನ್ನೂ, ವಿದ್ಯಾಭ್ಯಾಸ ಕ್ರಮಗಳನ್ನೂ, ಮ್ಯಾನೇಜ್‌ಮೆಂಟನ್ನೂ ನೋಡಿ ಸಂತೋಷಪಟ್ಟರು. ಅಲ್ಲಿಂದ ಹಿಂದೂಸ್ಥಾನಿ ಬಾಯ್ಸ್ ಸ್ಕೂಲಿಗೆ ದಯಮಾಡಿಸಿ ಅಲ್ಲಿನ ತೋಟವನ್ನು ನೋಡಿ ತುಂಬಾ ಸಂತೋಷಪಟ್ಟು ಅಲ್ಲಿನ ವಿದ್ಯಾಭ್ಯಾಸ ಕ್ರಮಗಳನ್ನು ನೋಡಿಕೊಂಡು ವೆ. ಮಿಷನ್ ಪಂಚಮ ಸ್ಕೂಲಿಗೆ ದಯಮಾಡಿದರು. ಅಲ್ಲಿನ ವಿದ್ಯಾರ್ಥಿಗಳು ಅವರ ಮೇಲೆ ಕಟ್ಟಿದ್ದ ಹಾಡನ್ನು ಹೇಳಿದರು. ನ್ಯಾಷನಲ್ ಆನ್ಥೆಮ್ ನಡೆಯಿತು. ಮಹಾರಾಜರ ಮೇಲೂ, ಕೌನ್ಸಿಲರ ಮೇಲೂ, ಚಕ್ರವರ್ತಿಗಳ ಮೇಲೂ ಜಯಧ್ವನಿಗಳು ನಡೆದವು. ಅವರು ಮಿಷನ್ ಸ್ಕೂಲುಗಳ ಮ್ಯಾನೇಜ್‌ಮೆಂಟಿನ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬರೆದು, ಆಯಾ ಸ್ಕೂಲಿನ ಉಪಾಧ್ಯಾಯರುಗಳಿಗೆ ತುಂಬಾ ಪ್ರೋತ್ಸಾಹವನ್ನು ಕೊಟ್ಟು, ಈ ಊರಿನ ಹೆಣ್ಣು ಮಕ್ಕಳ ಪಾಠಶಾಲೆಗಳಿಗೆಲ್ಲಾ ತಿಂಡಿ ಹಂಚಿಸಿದರು. ಅಂತೂ ಈ ಮಂಡ್ಯಕ್ಕೆ ಅವರು ದಯಮಾಡಿದ್ದರಲ್ಲಿ ಎಲ್ಲಾ ಇಲಾಖೆಗಳಲ್ಲೂ ತನಿಖೆಯೂ, ಪ್ರೋತ್ಸಾಹವೂ ಉಂಟಾಯಿತು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ನಮ್ಮ ಮಹಾರಾಜರವರು ಕಳೆದ ವಾರ ಮದರಾಸಿನಿಂದ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು. ಅವರು ಈ ವಾರ ರಾಜಧಾನಿಗೆ ಚಿತ್ತೈಸುವ ರೆಂದು ಕೇಳುತ್ತೇವೆ.

ದೇವನಹಳ್ಳಿ ತಾಲ್ಲೂಕು ಕೊಯಿರದ ಬೆಟ್ಟದಲ್ಲಿ ಒಂದು ಚಿರತೆಯು ಸೇರಿಕೊಂಡು ಜನಗಳಿಗೂ ಗೋವುಗಳಿಗೂ ಕಳವಳಪಡಿಸುತ್ತಿದೆ ಎಂದು ಸುದ್ದಿ ಬಂದಿರುವುದು.

ಚಿಕ್ಕಬಳ್ಳಾಪುರದಲ್ಲಿ ನಮ್ಮ ದಿವಾನ್‌ರವರ ಭಾವಪ್ರತಿಮೆಯನ್ನು ಮಾಡಿಸಿ ಇಡಬೇಕೆಂದು ಅಲ್ಲಿನ ವೈಸ್ ಪ್ರೆಸಿಡೆಂಟರಾದ ಮ|| ಸಿ. ನಾರಾಯಣಸ್ವಾಮಿ ಶೆಟ್ಟರವರು ಸಾಹಸಪಡುತ್ತಿರುವರು.

ಕೆಲವು ವಾರಗಳ ಹಿಂದೆ ಕೋಲಾರಗೋಲ್ಡ್‌ಫೀಲ್ಡ್ಸ್‌ಗೂ ಬಂಗಾರಪೇಟೆಗೂ ನಡುವೆ ರೈಲ್ ಗಾಡಿಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಯೂ, ಅದರಲ್ಲಿದ್ದ 6,000 ಚಿಲ್ಲರೆ ರೂಪಾಯಿ ಕಳುವಾಗಿತ್ತಷ್ಟೆ. ಕಳೆದ ಗುರುವಾರ ಸಾಯಂಕಾಲ ಈ ಕಳುವು ಪತ್ತೆ ಆಯಿತು. ಪೋಲೀಸಿನವರು ಬಂಡಿಯಲ್ಲಿ ಪೋರ್ಟರಾಗಿದ್ದ ಸುಬ್ಬ ಎಂಬವನನ್ನು ಹಿಡಿದಾಗ ಅವನ ಬಳಿ 3,000 ರೂಪಾಯಿ ಸಿಕ್ಕಿತು. ತನಿಖೆ ನಡೆಯುತ್ತಾ ಇದೆ.

ಸಂಗೀತ ಪ್ರವೀಣರು ಎಂಬ ಬಿರುದನ್ನು ಪಡೆದಿರುವ ವೆ|| ವರದಾಚಾರ್ಯರೆಂಬ ದಕ್ಷಿಣ ದೇಶದ ವಿದ್ವಾಂಸರಿಂದ ರಾಜಧಾನಿಯ ಗಾಯನ ಸಮಾಜದ ಮೆಂಬರುಗಳು ಕಳೆದ ಭಾನುವಾರ ಸಾಯಂಕಾಲ ಟೌನ್ ಹಾಲಿನಲ್ಲಿ ಹಾಡುಗಾರಿಕೆಯನ್ನು ಮಾಡಿಸಿ, ಮ|| ವೆಂಕಟಕೃಷ್ಣಯ್ಯನವರ ಹಸ್ತದಿಂದ ಒಂದು ಬಂಗಾರದ ಪದಕವನ್ನು ಕೊಡಿಸಿದರು. ಆ ದಿನ ಸಂಗೀತ ವಿದ್ವಾಂಸರೂ, ಅರಸುಗಳೂ, ದೊಡ್ಡ ಮನುಷ್ಯರೂ ಅನೇಕ ಮಂದಿ ಸೇರಿ ಅವರ ಹಾಡಿಕೆಯನ್ನು ಕೇಳಿ ಬಹಳವಾಗಿ ಮೆಚ್ಚಿಕೊಂಡರು.

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಸೆಕ್ರೆಟರಿಯಾಗಿದ್ದ ಡಾ|| ಸಿ. ರಾಜಾರಾಮರಾಯರಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಕೆಲಸಕ್ಕೆ ವರ್ಗವಾದದ್ದರಿಂದ ಕ್ಲಬ್ಬಿನ ಮೆಂಬರುಗಳು ಕಳೆದ ಗುರುವಾರ ದಿವ್ಯವಾದ ಔತಣವನ್ನು ಮಾಡಿ, ಕ್ಲಬ್ಬಿನ ಆದೇಶಗಳಲ್ಲಿ ಅವರು ನಡೆಸಿದ ಅಸಾಧಾರಣವಾದ ಸಾಹಸ ಕಾರ್ಯಗಳನ್ನು ವಿವರಿಸಿ ಅವರನ್ನು ಕೊಂಡಾಡಿ, ಹೀಗೆಯೇ ಅವರು ಚಿತ್ರದುರ್ಗದಲ್ಲೂ ಪ್ರಜೆಗಳ ಪ್ರೀತಿ ಸನ್ಮಾನಗಳನ್ನು ಪಡೆಯುವಂತಾಗಲೆಂದು ಹಾರೈಸಿದರು.

ರಾಜಧಾನಿಯ ಹಳೇ ಪೋಸ್ಟ್ ಆಫೀಸ್ ಬೀದಿಯಲ್ಲಿರುವ ಒಂದು ದೊಡ್ಡ ಕಟ್ಟಡದೊಳಗೆ ಕಳೆದ ವಾರ ಲಿಂಗಾಯಿತ ವಿದ್ಯಾರ್ಥಿಗಳ ಬೋರ್ಡಿಂಗ್ ಹೋಮನ್ನು ಪ್ರಾರಂಭಿಸಿರುತ್ತಾರೆ. ಇದರ ಮೇಲ್ವಿಚಾರಣೆಗೆ ಒಂದು ಕಮಿಟಿ ಏರ್ಪಾಟಾಗಿದೆ. ಚಿಕ್ಕನಾಯಕನಹಳ್ಳಿ ಎ. ಸಿ. ಸ್ಕೂಲ್ ಹೆಡ್ ಮಾಸ್ಟರಾದ ಮ|| ಎಂ. ಸಿ. ಲಿಂಗಪ್ಪಯ್ಯನವರು ವ್ಯವಸ್ಥಾಪಕರಾಗಿರುವರು. ಹೊರಗಿನಿಂದ ಬರುವ ಲಿಂಗಾಯಿತ ವಿದ್ಯಾರ್ಥಿಗಳಿಗೆ ಈ ನಿಲಯದಲ್ಲಿ ಎಲ್ಲಾ ಸೌಕರ್ಯಗಳೂ ಕಲ್ಪಿಸಲ್ಪಟ್ಟಿರುವವು.

ಒಬ್ಬ ಚಾತುರ್ಯಶಾಲಿ.—ಮೈಸೂರು ದೇಶಾಂತರ್ಗತ ಚಿತ್ರದುರ್ಗದ ಬ್ರಹ್ಮಶ್ರೀ ಅಗ್ನಿಹೋತ್ರಿ ವೆಂಕಣ್ಣ ದೀಕ್ಷಿತರ ಮಕ್ಕಳು ಕಾಶೀನಾಥಶಾಸ್ತ್ರಿಗಳು ಕೆಲವು ದಿವಸಗಳಿಂದ ಕಾಶಿಯಲ್ಲಿ ವಿದ್ಯಾಭ್ಯಾಸಮಾಡುತ್ತಲಿರಲಾಗಿ ಕಳೆದ ಜನವರಿ 21 ನೇ ತಾ. ಬಂಗಾಳಕ್ಕೆ ಸೇರಿದ ಹತುವಾ ರಾಜಧಾನಿಯಲ್ಲಿ ಮಹಾರಾಜ ಬಹದೂರ್‌ಯವರಿಗೆ ರಾಜ್ಯ ಪಟ್ಟಾಭಿಷೇಕ ಮಹೋತ್ಸವವು ನಡೆಯಿತು. ಆ ಕಾಲದಲ್ಲಿ ಅನೇಕ ಪಂಡಿತರುಗಳು ಬಂದು ಸೇರಿದ್ದರು. ಆಗ್ಗೆ ಇವರೂ ಅಲ್ಲಿಗೆ ಹೋಗಿ ಮಹಾರಾಜ ಬಹದೂರ್‌ಯವರ ಸನ್ನಿಧಿಯಲ್ಲಿ ಕವಿತಾ ಶ್ಲೋಕಗಳನ್ನು ಮಾಡಿ ಸಂತೋಷಪಡಿಸಿದ್ದಲ್ಲದೆ ಪಂಡಿತರುಗಳ ಸಂಗಡಲೂ ಸಂಭಾಷಣೆಯನ್ನು ಮಾಡಿ ಮಹಾರಾಜ ಬಹದೂರ್‌ಯವರಿಂದ ಉತ್ಕೃಷ್ಟವಾದ ಮರ್ಯಾದೆಯನ್ನು ಪಡೆದು ಬಂದಿರುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಈ ನಮ್ಮ ದೇಶೀಯರು ದೇಶಾಂತರಕ್ಕೆ ಬಂದು ವಿದ್ಯಾಕೀರ್ತಿಯನ್ನು ಸಂಪಾದಿಸಿರುವುದಕ್ಕಾಗಿ ನಾವುಗಳೆಲ್ಲರೂ ಪರಮಸಂತೋಷಪಡುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನೊಳಗೆ 1915 ನೇ ಜುಲೈ ತಾ. 1 ರಿಂದ ಇನ್ನೈದು ವರುಷಗಳ ವರೆಗೆ ಬಲಾತ್ಕಾರದಿಂದ ದೇವೀ ಸಿಡುಬು ಹಾಕುವ ಕಾನೂನು ಜಾರಿಯಲ್ಲಿರತಕ್ಕದ್ದು.

ಷಾಫ್‌ಕೀಪರ್ ಮ|| ತ್ಯಾಗಮಲ್ಲಪ್ಪನವರು ಹಿರಿಯೂರು ಮ್ಯುನಿಸಿಪಾಲಿಟಿಗೂ, ಮ|| ಬಿ. ಬಸವಾರಾಧ್ಯರವರು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೂ, ಚಿಲ್ಲರೆ ಅಂಗಡಿ ಮ|| ಎನ್. ಪುಟ್ಟಣ್ಣನವರು ಟಿ. ನರಸೀಪುರದ ತಾಲ್ಲೂಕ್ ಬೋರ್ಡಿಗೂ ಮೆಂಬರಾಗಿ ನೇಮಿಸಲ್ಪಟ್ಟಿರಾರೆ.

ಶ್ರೀಮನ್ ಮಹಾರಾಜರ ಸರ್ಕಾರದವರು ನಗರದ ತಾಲ್ಲೂಕು ಹಮಚ ದಲ್ಲಿರುವ ಜೈನ ಮಠದ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳಿಗೆ ಅನೇಕ ಬಾರಿನ ಪಿಸ್ತೂಲುಗಳು (ರಿವಾಲ್ವರ್) 2 ನ್ನೂ, ಕತ್ತಿಗಳು 11 ನ್ನೂ, ತುಪಾಕಿಗಳು 6 ನ್ನೂ, ಗುಪ್ತಿ 1 ನ್ನೂ ಇಟ್ಟುಕೊಳ್ಳುವ ವಿಷಯದಲ್ಲಿ ವಿನಾಯಿತಿಯನ್ನು ದಯಪಾಲಿಸಿರುತ್ತಾರೆ.

ಮ|| ವೆಂಕಟರಾಯರು ರಜದ ಮೇಲಿರುವಾಗ್ಗೆ ಮುಂದೆ ಹೇಳುವ ಬದಲಿ ಏರ್ಪಾಡುಗಳನ್ನು ಹುಕುಂ ಮಾಡಿದೆ:—(1) ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮ|| ಬಿ. ಬಸವಾರಾಧ್ಯರವರು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿನ ಸೀನಿಯರ್ ವೈಸ್ ಪ್ರೆಸಿಡೆಂಟರಾಗಿಯೂ, (2) ಅ|| ಕಮಿಷನರ್ ಮ|| ವೈ. ಬಿ. ಕೃಷ್ಣಮೂರ್ತಿಯವರು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿಯೂ, (3) ಮಿ|| ಗುಲಾಮ್ ಮೊಹದೀನ್ ಮೇಸ್ತ್ರಿಯವರು ಮೈಸೂರು ಡಿಸ್ಟ್ರಿಕ್ಟ್ ಖಜಾನಾ ಆಫೀಸರಾಗಿಯೂ ಇರತಕ್ಕದ್ದು.

ಚಳ್ಳಕೆರೆ ತಾಲ್ಲೂಕು ಶಿರಸ್ತೇದಾರ್ ಮ|| ಟಿ. ನರಸಿಂಗರಾಯರನ್ನು ಹಿರಿಯೂರು ತಾಲ್ಲೂಕಿಗೆ ಸ್ಪೆಷಲ್ ಡೆಪ್ಯುಟಿ ಡೆಪ್ಯುಟಿ ಅಮಲ್ದಾರರನ್ನಾಗಿ ನೇಮಕ ಮಾಡಿದೆ. ಇವರು ವಾಣಿವಿಲಾಸ ತಲಾವಿನ ಕೆಳಗೆ ಬ್ಲಾಕ್ ವ್ಯವಸಾಯದ ಏರ್ಪಾಟನ್ನು ನೋಡಿಕೊಳ್ಳತಕ್ಕದ್ದು.

ಹಾಸನದ ಅ|| ಕಮಿಷನರ್ ಮ|| ಸಿ. ಗೋಪಾಲಾಚಾರ್‍ರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ, ಕೃಷ್ಣರಾಜನಗರ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮ|| ಎ. ಜಿ. ಡಾನ್ ರವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ ಕೊಡಲಾಗಿದೆ.

ಅ|| ಕಮಿಷನ್‌ರುಗಳ ದರ್ಜೆಯಲ್ಲಿ ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮ|| ಎ. ಬಿ. ರಾಮನಾಥನ್ ಯವರನ್ನೂ, ರೆವಿನ್ಯೂ ಸರ್ವೆ ಇಲಾಖಾ ಮ|| ಟಿ. ಧರ್ಮರಾಜ ಚೆಟ್ಟಿಯವರನ್ನೂ, ಮ|| ಕೆ. ವಿ. ಅನಂತರಾಮನ್ ರವರನ್ನೂ 4 ರಿಂದ 3 ನೇ ಕ್ಲಾಸಿಗೂ, ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮ|| ಎಸ್. ವಿ. ರಾಜಗೋಪಾಲಾಚಾರಿಯವರನ್ನು 3 ರಿಂದ 2 ನೇ ಕ್ಲಾಸಿಗೂ, ಅ|| ಕಂಟ್ರೋಲರ್ ಮ|| ಎಲ್. ಭಸ್ಮೋಹಂತ್ ಬಾದಾಮಿಯವರನ್ನೂ ಮತ್ತು ಅ|| ಕಂಟ್ರೋಲರ್ ಮ|| ಟಿ. ಸತ್ಯರಾಜ ಚೆಟ್ಟಿಯವರನ್ನೂ 2 ರಿಂದ 1 ನೇ ಕ್ಲಾಸಿಗೂ ಬಡ್ತಿ ಮಾಡಿದೆ.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—(1) ಮ|| ಬಿ. ಹೀರಾಸಿಂಗ್ ರವರು ಮೈಸೂರಿನಿಂದ ಹಾಸನಕ್ಕೆ; (2) ಮ|| ಪಿ. ಎಸ್. ಗೋವಿಂದರಾಯರು ತುಮಕೂರಿನಿಂದ ಮೈಸೂರಿಗೆ; (3) ಮ|| ಎಂ. ಎ. ವರದಾಚಾರ್‍ರು ಕೆಲಸ ಮರಳಿಯವರ ಕಾರ್ಯಾಲಯದಿಂದ ತುಮಕೂರಿಗೆ. (4) ಬೇರೆ ಏರ್ಪಾಡು ಮಾಡುವ ತನಕ ಕೆಲಸದ ಮರಳಿಯವರ ಕಾರ್ಯಾಲಯ ಛಾರ್ಜನ್ನು ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರೇ ವಹಿಸತಕ್ಕದ್ದು.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳನ್ನು ಅ|| ಕನ್‌ಸರ್ವೇಟರಾಗಿ ಬಡ್ತಿಮಾಡಿದೆ:—ಮ|| ಗಳಾದ ಬಿ. ರಾಜಾರಾಯರು, ಬಿ. ಯತಿರಾಜುಲು ನಾಯುಡುರವರು, ಎಂ. ಎ. ವರದಾಚಾರ್‍ರು, ಎಲ್. ಎ. ಮಾಸ್ಕರೆನ್‌ಹಾಸ್, ಎಂ. ವೆಂಕಟನಾರಣಪ್ಪನವರು.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳನ್ನು ಸಬ್ ಅ|| ಕನ್‌ಸರ್ವೇಟರುಗಳಾಗಿ ಬಡ್ತಿ ಮಾಡಿದೆ:—ಮ|| ಗಳಾದ ಉತ್ತಯ್ಯನವರು, ಚಿಣ್ಣಯ್ಯ ಶೆಟ್ಟರವರು, ಎಂ. ವಿ. ನರಸಿಂಹಯ್ಯನವರು, ಬಿ. ನರಸಿಂಹಯ್ಯಂಗಾರ್‍ರು.

ಮುಂದೆ ಹೇಳುವ ತಾಲ್ಲೂಕ್ ಅಮಲ್ದಾರರುಗಳಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿಗೆ ಸಂಬಂಧಪಡುವ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತು ಮಾಡುವ ಅಧಿಕಾರ ವಹಿಸಿದೆ:—(1) ಅರಸೀಕೆರೆಯ ಮ|| ಗುಲಾಮ್ ಮಹಮದ್ ಮೆಕ್ರಿಯವರು, (2) ಬೇಲೂರಿನ ಮ|| ಪಿ. ಎಸ್. ರಾಜಗೋಪಾಲಾಚಾರ್‍ರು, (3) ಹೊಳೆನರಸೀಪುರದ ಮ|| ಜಿ. ವೆಂಕಟರಾಯರು

ಡೆಪ್ಯುಟಿ ಚೀಫ್ ಇಂಜಿನಿಯರ್ ಮತ್ತು ಗವರ್ನ್‌ಮೆಂಟ್ ಸೆಕ್ರೆಟರಿ ರಾವ್ ಬಹದೂರ್ ಮ|| ಕೆ. ಕೃಷ್ಣಯ್ಯಂಗಾರ್‍ರಿಗೆ ಫೆಬ್ರವರಿ ತಾ. 2 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು—ಅರಸೀಕೆರೆ ರೈಲ್ವೆ 1 ನೇ ಡಿವಿಷನ್ ಎಗ್ಜಿಕ್ಯುಟಿವ್ ಇಂಜಿನಿಯರ್ ಮ|| ಎಚ್. ಡಿ. ರೈಸ್‌ಯವರಿಗೆ ಮಾರ್ಚಿ ತಾ. 10 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ|| ಇಂಜಿನಿಯರ್ ಮ|| ಆರ್. ಎನ್. ವಿಚಾರ್ಡರವರೂ, ಸೂಪರ್‌ವೈಸರ್ ಮಿ|| ಜೆ. ಟಿ. ಕಿಂಗ್‌ರವರೂ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಗುಬ್ಬಿ ಸಬ್ ಡಿವಿಜನ್ ಆಫೀಸರ್ ಮ|| ಎಚ್. ವಿ. ರಾಮಸ್ವಾಮಿಯವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ಸಿ. ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	13 ,,
ಸರ್ವಭೇದಿ ಮಾತ್ರೆ	8 ,,	ಬಾಧಕನಾಶಿನಿ	4 ,,

[262-12] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

1916 ನೇ ಇಸವಿ ಕ|| ಲೋ|| ಸೆ|| ಟೆ|| ನೋಟ್ಸ್.

ಶೀಘ್ರದಲ್ಲೇ ಬಿಕರಿಗೆ ಸಿದ್ಧವಾಗುವುದು.

ಪರೀಕ್ಷೆಗೆ ಆವಶ್ಯಕವಾದ ವಿಷಯಗಳನ್ನೆಲ್ಲಾ ಒಳಗೊಂಡಿದೆ. ನಮ್ಮ ದೇಶೀಯ ವಿದ್ಯಾರ್ಥಿಗಳೆಲ್ಲರೂ ಇದರ ಪ್ರಯೋಜನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಬೆಲೆಯನ್ನು ಕಮ್ಮಿ ಮಾಡಿದೆ. ಪುಸ್ತಕ ಕೈಗೆ ಬಂದ ಮೇಲೆ ಅದರ ಯೋಗ್ಯತೆ ತಿಳಿಯುವುದು. ಅಲ್ಲದೆ ನಮ್ಮಲ್ಲಿ ಸರ್ಕಾರದ, ಮಿಷನ್‌ನಿನ ಮತ್ತು ಇತರ ಎಲ್ಲಾ ಪುಸ್ತಕಗಳೂ ಬಿಕರಿಗೆ ದೊರೆಯುವವು.

ವಿಳಾಸ:—ಎಸ್. ಕಪರ್ದಿಪತಯ್ಯ, ಹೆಡ್ ಮಾಸ್ಟರ್,

[37-1] ಆಕ್ಸರ್‌ಶಾಲಾ, ಮೈಸೂರು.

ನೋಟೀಸ್

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿ ಷೇರು ಹೋಲ್ಡರುಗಳಿಗೆ ಇದರಿಂದ ಜ್ಞಾಪಕಪಡಿಸುವದೇನಂದರೆ:—

ಕಾಲ್ಸ್ ಮೊಬಲಗಿನ ಬಾಕಿಗಾಗಿ ಕಂಪೆನಿಯಿಂದ ಪದೇ ಪದೇ ಸಾದರಾದ ತಗಾದೆ ನೋಟೀಸ್‌ನಂತೆ ಬಾಕಿಯಾಗುವ ಮೊಬಲಗು ಇದೇ ಮಾಹೆ ಅಂದರೆ 28-2-1915 ರ ಒಳಗಾಗಿ ಪಾವತಿಮಾಡದೇ ಹೋದರೆ ಸದರಿ ಷೇರುಗಳನ್ನು ಖಂಡಿತವಾಗಿ ವಜಾ ಮಾಡುವಂತೆ ಡೈರೆಕ್ಟರವರುಗಳು ತೀರ್ಮಾನಿಸಿರುತ್ತಾರೆ.

19-2-1915, ಕೆ. ರಾಮಸ್ವಾಮಯ್ಯ,

ಬೆಂಗಳೂರು. [38-1] ಸೆಕ್ರೆಟರಿ.

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ

ಒಂದಾವರ್ತಿ ಪರೀಕ್ಷಿಸಿದರೆ ಗೊತ್ತಾಗುವುದು

ನಮ್ಮ ರಾಮ್‌ಭಾನ್ ಎಂಬ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ. ಲೇಪನಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ಬೆಳಿಗ್ಗೆ ಸಕ್ಕರೆಯೊಡನೆ, ಬಿಸಿನೀರಿಗೆ ಹಾಕಿಯೋ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ ಭೇದಿ, ಪೋಳಿಗೆ, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ಮೈನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕೊಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ. [288-8]

ನಮ್ಮ ವಿಳಾಸ—ಕೇಶವಜೀ ದೇವಚಂದ್,

ರಾಮ್‌ಭಾನ್ ಏಜನ್ಸಿ, ಸಾಹ್ಕಾರ್‌ಪೇಟೆ, ಮದರಾಸ್

ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ ದೊಡ್ಡಪೇಟೆ, ಮೈಸೂರು.

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹಂಸಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಸುರಿ, ಉಬ್ಬಸ, ಕ್ಷಯ, ಭೇದಿ ಪಟ್ಟಿ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ನಲ ಪುಷ್ಟಿದಾಯಕವಾಗಿರುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ, ಅಂಚೆ ವೆಚ್ಚ ಬೇರೆ. [235-16]

ಮಹಾ ಸೌಭಾಗ್ಯ ಜುಂಡಿ:—ಬಾಲಾಂತಿಯರಿಗೆ ಉಪಯೋಗಿಸಿ ಸೂತಿಕಾವಾಯು, ಸೂತಿಕಾಜ್ವರ, ಗ್ರಹಣಿ ವೈಕ್ಕ, ಬಾಲಗ್ರಹ, ಬಾಣಂತಿತನ ಸೂತಿಕಾರೋಗ ಮುಂತಾದ ವ್ಯಾಧಿಗಳು ಸುಲಭವಾಗಿ ಗುಣವಾಗುವ ಪಕ್ಷವಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0 ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಜಿಬಿಷನ್‌ಗಳಲ್ಲಿ ಸುಮಾರು 9 ಸರ್ಟಿಫಿಕೇಟುಗಳನ್ನೂ 32 ಮೆಡಲುಗಳನ್ನೂ ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕವಾಗುವುದಲ್ಲಿಯೂ ರಸಿಕ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ತಮಗೆ ಬೇಕಾಗಿರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವುದಲ್ಲದೆ ಸ್ವದೇಶ ವ್ಯಾಪಾರವನ್ನು ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರಕಮ್. ತೂಕದ ಸೇರು 1 ಕ್ಕೆ ರೂ. 12, 5, 3, 2-8-0, 1-4-0, 1.

ಅರಗಜ ಮತ್ತು ಬತ್ತಿಗಳು ತೊಲಾ 1 ಕ್ಕೆ ರೂ. 2, 1, ಆ. 12, 8.

ಸುವಾಸನೆ ಸುಣ್ಣ ಶೀಶೆ 1 ಕ್ಕೆ 2 ಆಣೆ.

ಸುವಾಸನೆ ಸಾದು ಶೀಶೆ 1 ಕ್ಕೆ 2 ಆಣೆ.

ವಿಳಾಸ.—ಶ್ರೀ. ಎಲ್. ಉಪಾಧ್ಯಾಯ,

[39-2] ಸುಗಂಧಕಾರಿ, ಮೈಸೂರು.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 5,00,000.

(1895 ನೇ ಇಸವಿ III ನೇ ನಂಬರು ಮೈಸೂರು ಕಂಪನಿಗಳ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರಾಗಿದೆ).

ನಿರ್ವಿವಾದವಾದ ಭದ್ರತೆ ! ಆಕರ್ಷಣೀಯವಾದ ಏರ್ಪಾಡುಗಳು !! ಅಪಾಯವಿಲ್ಲದ ಸವಲತ್ತುಗಳು !!!

ಮಾಫಿ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನದ) ಪತ್ರಗಳನ್ನು ಕೊಡುವದೇ ವಿಶೇಷ ವಿಷಯವಾಗಿದೆ. ಒಂದರಲ್ಲಿ—ಎರಡು (ಷೇರು ಮತ್ತು ಜೀವವಿಮೆ ಈ ಎರಡು ಪ್ರಯೋಜನಗಳು ಸೇರಿರುವ) ಏರ್ಪಾಡು ಮತ್ತು ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ (ಜಮೀನು ಮತ್ತು ಮನೆ ಕೊಂಡು ಕೊಡುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ) ಏರ್ಪಾಡುಗಳು ನೂತನ ವಿಷಯವಾಗಿದೆ.

ಬೇಕಾಗಿದೆ.

ಮೈಸೂರು ದೇಶದ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಒಂದರಲ್ಲಿ ಎರಡು ಮತ್ತು ಸ್ಥಿರಸ್ವತ್ತುಗಳ ಮೇಲೆ ಸಾಲಾ ಕೊಡುವ ಏರ್ಪಾಡುಗಳ ಕಾರ್ಯವನ್ನು ಜರುಗಿಸುವುದಕ್ಕೆ ಸಂಬಳಸ್ಥರು ಮತ್ತು ಜವಾಬ್ದಾರಿಯಾಗಿರತಕ್ಕ ಲೋಕಲ್ ಡೈರೆಕ್ಟರುಗಳು ಮತ್ತು ಜೀವವಿಮೆ ಮತ್ತು ಪ್ರಾವಿಡೆಂಟ್ ಏರ್ಪಾಡುಗಳ ಕಾರ್ಯವನ್ನು ಜರುಗಿಸುವುದಕ್ಕೆ ಚಟುವಟಿಕೆ ಮತ್ತು ಪ್ರಾಮಾಣಿಕರಾದ ಏಜಂಟರುಗಳು ಧಾರಾಳವಾದ ಕಮಿಷನ್ ಮತ್ತು ಆಫೀಸ್ ಅಲೋಯನ್ಸಿನ ಮೇಲೆ ಬೇಕಾಗಿದೆ.

ಪ್ರಕಟನ ಪತ್ರಿಕೆಗಳಿಗೂ ಮತ್ತು ನಿಬಂಧನೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

[15-7] M. L. NAGANNAH,

ಮ್ಯಾನೇಜಿಂಗ್ ಡೈರೆಕ್ಟರ್, ಲೈಫ್ ಮತ್ತು ಮ್ಯಾರಿಯೇಜ್ ಅಷ್ಯೂರೆನ್ಸ್, ಮೈಸೂರು.

ಜೈನ ಕವಿಗಳು ಮತ್ತು ಅವರ ಗ್ರಂಥಗಳು.

ನಮ್ಮ ಭರತಖಂಡದಲ್ಲಿ ಅನೇಕ ದೊಡ್ಡ ಕವಿಗಳು ಗ್ರಂಥ ಸಮೃದ್ಧಿಯನ್ನು ಬೆಳಯಿಸಿ ತಮ್ಮ ಅಗಾಧ ಜ್ಞಾನರಾಶಿಯ ಬೆಳಕನ್ನು ಎಲ್ಲಾ ಕಡೆಗಳಲ್ಲೂ ಹಬ್ಬಿಸಿರುವರು. ಇವೆಲ್ಲಾ ಗ್ರಂಥಗಳೂ ನಮ್ಮ ಮಾತೃಭಾಷೆಯಾದ ಸಂಸ್ಕೃತ ನುಡಿಯಲ್ಲೇ ಬರೆಯಲ್ಪಟ್ಟುವು. ಜೈನ ಪಂಡಿತರೂ ಸಂಸ್ಕೃತ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ಬರೆದು ಪ್ರಸಿದ್ಧಿಗೊಂಡರು. ಇದಲ್ಲದೆ ಅವರು ಸಂಸ್ಕೃತದ ಅಪಭ್ರಂಶವಾದ ಪಾಳಿ, ಮಾಗಧಿ, ಶೂರಸೇನಿ, ಪೈಶಾಚಿ, ಪ್ರಾಕೃತವೆಂಬೀ ಪದಿತರ ಭಾಷೆಗಳಲ್ಲಿ ಬಹಳ ಗ್ರಂಥಗಳನ್ನು ಬರೆದು ಭಾಷಾ ವಿಸ್ತಾರವನ್ನು ಭೂಷಣವಾಗಿ ಮಾಡಿದರು. ಜೈನರ ಕಾವ್ಯರಚನಾ ಸಾಮರ್ಥ್ಯವು ಪುರಾಣ ವಿಶ್ವಾಮಿತ್ರನ ಪ್ರತಿ ಸೃಷ್ಟಿಯ ಚಮತ್ಕಾರವನ್ನು ಹೋಲುವುದೆಂದರೆ ಅತಿಶಯೋಕ್ತಿಯಲ್ಲ. ಜೈನರು ತಮ್ಮ ಗ್ರಂಥಗಳು ಹೇರಳವಾದ ಭಂಡಾರಗಳಾಳನ್ನೂ, ಪುರಾಣಗಳನ್ನೂ, ಕಾವ್ಯೇತಿಹಾಸಗಳನ್ನೂ, ಚರಿತ್ರೆಗಳನ್ನೂ ಭಾಷಾ ರೂಪವಾಗಿ ಪರಿವರ್ತಿಸಿ ಬರೆದಿಟ್ಟಿರುವರು. ಈ ಕವಿಗಳಿಂದ ವಿರಚಿತವಾದ ಗ್ರಂಥಗಳು ಹೇರಳವಾದ ಭಂಡಾರಗಳಾಗಿವೆ. ಜೈಸಲಮೀರ, ಬಿಕಾನೇರ, ಕಂಟಾಯಿತ, ಪಾಟಿಣ, ಕೊಲ್ಹಾಪೂರ, ಹೊಸೂರ (ಬೆಳಗಾಂವ) ಮುಂತಾದ ಸ್ಥಳಗಳಲ್ಲಿ ಇಂತಹ ಹಲವು ಭಂಡಾರಗಳು ದೃಗ್ಗೋಚರವಾಗುವವು. ಈ ಗ್ರಂಥ ಭಂಡಾರಗಳ ಸಂಶೋಧನವನ್ನು ಮಾಡಿ ಡಾಕ್ಟರ್ ಬ್ಯುಲ್ಲರ್, ಡಾಕ್ಟರ್ ಪೀಟರ್‌ಸನ್, ಡಾಕ್ಟರ್ ಭಾಂಡಾರಕರ, ಡಾಕ್ಟರ್ ರಾಜೇಂದ್ರಲಾಲ ಮೊದಲಾದ ಪಂಡಿತರು ಗೊತ್ತಿಲ್ಲದ ಬಹಳ ಗ್ರಂಥಗಳನ್ನು ಜನರ ಕಣ್ಣೆದುರಿಗೆ ತಂದರು. ಜೈನ ಗ್ರಂಥಗಳು ಕನ್ನಡ ನುಡಿಯಲ್ಲಿಯೂ ಬಹಳವಾಗಿ ಕಂಡುಬರುವವು. ಜೈನರೇ ಪ್ರಾಚೀನ ಕಾಲದ ಪಂಡಿತರಾಗಿದ್ದರು.

ಜೈನರು ಸ್ವಭಾವತಃ ನಿರುದ್ಯೋಗಿಗಳಾಗಿರಲಿಲ್ಲ. ಸ್ವಂತ ವೇದವೇದಾಂಗಗಳಲ್ಲಿ ಪ್ರವೇಶಿಸಿ ಪಾರಂಗತರಾಗಿದ್ದರು. ನ್ಯಾಯ, ಜ್ಯೋತಿಷ, ಛಂದೋಲಂಕಾರ, ವೈದ್ಯಕ, ನೀತಿಶಾಸ್ತ್ರ ಮುಂತಾದ ಶಾಸ್ತ್ರೀಯ ವಿಷಯಗಳನ್ನು ವಿಮರ್ಶಿಸಿ ವರ್ಣನಾ ಗ್ರಂಥಗಳನ್ನು ಬರೆದಿಟ್ಟರು. ಇದಲ್ಲದೆ ಸ್ವತಂತ್ರವಾಗಿ ಅನೇಕ ಪ್ರಬಂಧಗಳನ್ನೂ, ಚರಿತ್ರೆಗಳನ್ನೂ, ರಾಸಗಳನ್ನೂ, ಪುರಾಣಗಳನ್ನೂ ಬಂಧುರವಾಗಿ ಬರೆದು ಪ್ರಸಿದ್ಧಿಯಾದರು. ಇವುಗಳಲ್ಲಿ ಹಲವು ಗ್ರಂಥಗಳು ಬಹಳ ಉತ್ತಮವೆಂದು ಹೆಸರುಗೊಂಡು ಬಹು ಜನ ಪಂಡಿತರ ಸ್ತುತಿಗೆ ಪಾತ್ರಗಳಾಗಿವೆ.

ಜೈನರಲ್ಲಿ ಬಹಳ ಜನ ಗ್ರಂಥಕರ್ತರು ಆಗಿಹೋದರು. ಅವರಲ್ಲಿ ಹೇಮಚಂದ್ರನೆಂಬುವನು ಪ್ರಮುಖನಾಗಿದ್ದನು. ಇವನು ಅನೇಕ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆದು ಬರೆದು ಪ್ರಸಿದ್ಧನಾದನು. ಬೇರೆ ಯಾವ ಕವಿಯೂ ಗ್ರಂಥಕರ್ತೃತ್ವದಲ್ಲಿ ಇವನಷ್ಟು ಪ್ರಸಿದ್ಧಿಯನ್ನು ಪಡೆಯಲಿಲ್ಲ.

ಜೈನರಲ್ಲಿ ಶ್ರೀಭಿಲ್ಲಮಾಲಾ ಎಂಬುವೊಂದು ಪ್ರಸಿದ್ಧ ವಂಶವಿದ್ದಿತು. ಅನೇಕ ಮಂದಿ ಪ್ರಸಿದ್ಧ ಕವೀಶ್ವರರು ಈ ವಂಶದಲ್ಲಿ ಜನ್ಮಿಸಿದರು. ಪ್ರಸಿದ್ಧ ಪಂಡಿತನಾದ ಕಟುಕರಾಜನೆಂಬ ಕವಿಶ್ರೇಷ್ಠನ ಅವತಾರವಾದುದು ಈ ವಂಶದಲ್ಲಿಯೇ. ಇವನಿಗೆ ಆಸಡ, ಚಾಸಡ ಎಂಬಿಬ್ಬರು ಪುತ್ರರು. ಆಸಡನೆಂಬುವನು ಶ್ರೇಷ್ಠ ಕವಿಯಾದನು. ಶೃಂಗಾರಾದಿ ನವರಸ ಗರ್ಭಿತಗಳಾಗಿ ಶ್ರೇಷ್ಠ ಕವಿತಾ ಮಾರ್ಗದರ್ಶಿಗಳಾಗಿದ್ದ ಈ ಕವಿಯ ಉತ್ಕೃಷ್ಟ ಕವಿತ್ವಗಳು ಗುರ್ಜರ ದೇಶದ ರಾಜ ಸಭೆಯಲ್ಲಿ ಶ್ಲಾಘನೆಯನ್ನು ಹೊಂದಿದವು. ಆಸಡನ ಕವಿತ್ವಕ್ಕೆ ಮೆಚ್ಚಿ ಗುರ್ಜರಾಧಿಪನು ಅವನಿಗೆ "ಕವಿ ಸಭಾಶೃಂಗಾರ"ನೆಂಬ ಬಿರುದನ್ನು ಕೊಟ್ಟಿದ್ದಲ್ಲದೆ ವಿಶೇಷವಾಗಿ ಸಂಭಾವನೆಯನ್ನೂ ಮಾಡಿದನು. ಇವನು ಗದ್ಯಪದ್ಯ ಮಯವಾದ ಜಿನಸ್ತೋತ್ರಗಳನ್ನು ಬಹಳವಾಗಿ ರಚಿಸಿರುವನು; ವಿವೇಕಮಂಜರಿ ಎಂಬುದೊಂದು ಸರಸವಾದ ಗ್ರಂಥವನ್ನು ಬರೆದಿರುವನು; ಉಪದೇಶಕಂದಲಿ, ಆಖ್ಯಾನ ಪ್ರಕರಣ ಎಂಬ ಎರಡು ಉತ್ಕೃಷ್ಟ ಕಾವ್ಯಗಳನ್ನು ಜೈನರಿಗೆ ಮೋಕ್ಷಮಾರ್ಗವನ್ನು ಬೋಧಿಸುವಂತೆ ಬರೆದಿಟ್ಟಿರುವನು. ಆಸಡನಿಗೆ ರಾಜಡ, ಜೈತ್ರಸಿಂಹ, ಅರಿಸಿಂಹ ಎಂದು ಹೇಳಲಾದ ಮೂವರು ಪುತ್ರರಿದ್ದರು. ಈ ಮೂವರೂ ಉತ್ತಮ ಕವಿಗಳಾಗಿ ವಿಖ್ಯಾತ ಕೀರ್ತಿಗಳಾಗಿದ್ದರು. ಇವರ ಮನೆತನವು ಘನ ವಿದ್ವತ್ತು, ಅಖಂಡೈಶ್ವರ್ಯ ಇವುಗಳಿಂದ ನಿಬಿಡವಾಗಿತ್ತು. ಅರಿಸಿಂಹನಿಂದ ವಿರಚಿತವಾದ ಛಂದಶ್ಶಾಸ್ತ್ರದ ಮೇಲಿರುವ ಗ್ರಂಥವು ಸುಪ್ರಸಿದ್ಧವಿರುತ್ತದೆ. ಅಮರಚಂದ್ರನೆಂಬೊಬ್ಬ ಜೈನ ಕವಿಯು ಈ ಅರಿಸಿಂಹನ ಛಂದಶ್ಶಾಸ್ತ್ರದ ಆಧಾರದಿಂದ ಸಂಸ್ಕೃತದಲ್ಲಿ ಕಾವ್ಯಕಲ್ಪಲತಾ ಎನ್ನುವ ಉತ್ಕೃಷ್ಟವಾದ ಕವಿತ್ವ ಶಾಸ್ತ್ರವನ್ನು ರಚಿಸಿದನು. ಈ ಉದ್ಗ್ರಂಥವು ಸಾಧಾರಣವಾಗಿ ಕವಿತ್ವದ ಮರ್ಮಗಳನ್ನು ತಿಳಿದುಕೊಳ್ಳಬಿಚ್ಛಿಸುವವರಿಗೆ ವಿಶೇಷ ಉಪಯುಕ್ತವಾಗಿದೆ. ಇದರಲ್ಲಿ ಛಂದಸ್ಸಿದ್ಧಿ, ಶಬ್ದಸಿದ್ಧಿ, ಶ್ಲೇಷಸಿದ್ಧಿ, ಅರ್ಥಸಿದ್ಧಿ ಎಂಬೀ ನಾಲ್ಕು ಪ್ರಕರಣ ವಿಭಾಗಗಳಿವೆ. ಈ ಅಮರಚಂದ್ರನೆಂಬುವನು ಶ್ವೇತಾಂಬರ ಪಂಥದವನಿದ್ದು ಜನದತ್ತಸೂರಿಯ ಶಿಷ್ಯನಾಗಿದ್ದನು. ಇವನು ಸಂಸ್ಕೃತದಲ್ಲಿಯೂ, ಪ್ರಾಕೃತದಲ್ಲಿಯೂ ಪೂರ್ಣ ಪಂಡಿತನು. ಪದ್ಮಾನಂದ ಕಾವ್ಯವೆಂಬ ಪ್ರಚಂಡ ಗ್ರಂಥವು ಜಿನೇಂದ್ರ ಚರಿತ್ರಾತ್ಮಕವಾಗಿ ಎಂಟು ಸಾವಿರ ಶ್ಲೋಕಗಳನ್ನುಳ್ಳದಾಗಿದೆ. ಇದಂ ವಿನಾ ದ್ರೌಪದೀ ಸ್ವಯಂವರ, ಛಂದೋರತ್ನಾವಳಿ, ಅಲಂಕಾರ ಪ್ರಬೋಧ, ಕಾವ್ಯಕಲ್ಪಲತಾ ಪರಿಮಳ ಎಂಬೀ ಸಂಸ್ಕೃತ ಗ್ರಂಥಗಳೂ, ಕವಿಶಿಕ್ಷಾ ಕಾವ್ಯ ಕಲ್ಪಲತಾ ವೃತ್ತಿ ಎಂಬೀ ಉತ್ತಮ ಪ್ರಾಕೃತ ಗ್ರಂಥಗಳು ಈ ಕವಿಯ ಕೀರ್ತಿ ಪದಕಗಳಾಗಿವೆ. ಈ ಕವಿಯು 15 ನೆಯ ಶತಕದಲ್ಲಿ ಆಗಿಹೋದನೆಂದು ವಿದ್ವಾಂಸ ಜನರ ಅಭಿಪ್ರಾಯವಿದೆ.

ಜೈನರಲ್ಲಿ ಜಯಮಂಗಲಾಚಾರ್ಯನೆಂಬ ಇನ್ನೊಬ್ಬ ದೊಡ್ಡ ಪಂಡಿತನಾಗಿ ಹೋದನು. ಅವನು ಕವಿಶಿಕ್ಷಾ ಎಂಬುದೊಂದು ಉತ್ಕೃಷ್ಟವಾದ ಉದ್ಗ್ರಂಥವನ್ನು ರಚಿಸಿರುವನು. ಈ ಮೇಲೆ ಹೇಳಿದ ಕವಿಗಳಲ್ಲದೆ ಜೈನರಲ್ಲಿ ಅನೇಕ ಮಂದಿ ವಿದ್ವಾಂಸರು ವಿಶ್ರುತಕೀರ್ತಿಗಳಾಗಿಹೋದರು. ಅವರ ವಿಷಯವನ್ನು ಮುಂದೆ ಪ್ರಸಂಗಾನುಸಾರವಾಗಿ ವರ್ಣಿಸುವೆವು.

"ಕಬ್ಬಿಗರ ಕಾವಂ"

ಈ ಗ್ರಂಥಕರ್ತನಿಗೆ ಆಂಡಯ್ಯನೆಂದು ಹೆಸರು. ಈತನು ಜೈನ ಮತದವನು. ಈತನು ಸುಮಾರು 13 ನೆಯ ಶತಮಾನದಲ್ಲಿ ಜೀವಂತನಾಗಿದ್ದಿರಬಹುದೆಂದೂ, ಕರ್ಣಾಟಕ ದೇಶ ವರ್ಣನೆಯನ್ನು ಗ್ರಂಥದಲ್ಲಿ ಮಾಡಿರುವದರಿಂದ ಈ ದೇಶದವನೆಂದೂ ಹೇಳುವರು. ಸಂಸ್ಕೃತದ ಸಹಾಯವಿಲ್ಲದೆ ಕನ್ನಡದಲ್ಲಿ ಹೃದ್ಯವಾದ ಕಾವ್ಯಗಳನ್ನು ಬರೆಯಲಾಗದು; ಆದುಕಾರಣ ಪಂಪ, ನಾಗವರ್ಮ ಮುಂತಾದ ಕವಿಗಳು ಮಿಶ್ರಭಾಷೆಯಲ್ಲಿ ಬರೆದಿದ್ದಾರೆ ಎಂದು ಹೇಳುವ ಅಪವಾದವನ್ನು ಹೋಗಲಾಡಿಸುವುದಕ್ಕೋಸ್ಕರ ಈ ಕವಿಯನ್ನು ತಕ್ಕುದಾದ ಒಳ್ಳೆಯ ಗ್ರಂಥವನ್ನು ರಚಿಸುವಂತೆ ವಿದ್ವಾಂಸರೂ ಹಿರಿಯರೂ ಕೇಳಿಕೊಂಡ ಮೇರೆಗೆ ಈ ಆಂಡಯ್ಯನು ಸಂಸ್ಕೃತ ಪದಗಳ ಸಹಾಯವಿಲ್ಲದೆಯೇ ಕಬ್ಬಿಗರ ಕಾವವನ್ನು ಬರೆದನಂತೆ. ಈ ಗ್ರಂಥವನ್ನು ಮದನ ವಿಜಯ, ಸೊಬಗಿನ ಸುಗ್ಗಿ, ಈ ಹೆಸರುಗಳಿಂದಲೂ ಕರೆಯುವುದುಂಟು. ಇದರಲಿ ಕಥಾ ನಾಯಕನಾದ ಮನ್ಮಥನ ಜೈತ್ರಯಾತ್ರೆಯನ್ನು ಹೇಳುವುದರಿಂದ ಇದನ್ನು "ಮದನ ವಿಜಯ"ವೆಂದು ಕನ್ನಡ ಕವಿಗಳ ಮೇಲಣ ಅಪವಾದವು ರಸಭಂಗವಾಗಿ ಕಿವಿಗಿಂಪಾಗಿ ಸಂಸ್ಕೃತ ಪದದ ಗಂಧವಿಲ್ಲದೆಯೇ ರಚಿಸಲ್ಪಟ್ಟಿರುವ ಈ ಗ್ರಂಥದಿಂದ ಹೋದ ಕಾರಣ ಇದಕ್ಕೆ ಕಬ್ಬಿಗರ ಕಾವ ಎಂದರೆ ಕವಿಗಳ ರಕ್ಷಕವೆಂದೂ, ಇದು ಕವಿಗಳಲ್ಲಿ ಹೊಸಗೊರ್ಂದು ಬಹು ರಮ್ಯವಾಗಿಯೂ, ಹೃದ್ಯವಾಗಿಯೂ ಇರುವ ಕಾರಣ ಸೊಬಗಿನ ಸುಗ್ಗಿ ಎಂದೂ ಕರೆಯುವುದು ನ್ಯಾಯವೇ ಸರಿ.

ಹೆಚ್. ಪಿ. ನಾಗಪ್ಪ, ಚಾಮರಾಜನಗರ.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿ ಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247–16] 20, ಚೀನಾಬಜಾರು ರೋಡು, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ನಡಿಸಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಹುವಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮಂದ; ನಿಸ್ತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಊರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು, ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-26]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨-೦-೦, ಅಥವಾ ೬ ಬುಡ್ಡಿಗಳಿಗೆ ರೂ. ೧೦-೮-೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್ ಪಿ. ಓ. ಬಾಕ್ಸ್ ೨೦, ಬೊಂಬಾಯಿ. ಇವರಲ್ಲಿ ದೊರೆಯುವುದು.



ಸ್ವೀಡನ್‌ಗೆ ಸೇರಿದ ಒಂದು ಜಹಜು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ತಗಲಿಯೋ ಅಥವಾ ಟಾರ್ಪೀಡೋ ಬಡಿದೋ ಕೆಟ್ಟುಹೋಗಿ ಹಾಲೆಂಡಿಗೆ ಬಂದಿರುತ್ತದೆ.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ವಿಶೇಷ ವರ್ತಮಾನವೇನೂ ಬಂದಿಲ್ಲ. ಒಂದು ತಂತೀ ವರ್ತಮಾನವು ಬ್ರಿಟಿಷರು ಜರ್ಮನಿಯವರ ದಕ್ಷಿಣ ಪಶ್ಚಿಮ ಆಫ್ರಿಕಾದೊಳಕ್ಕೆ ದಂಡು ತೆಗೆದುಕೊಂಡು ನುಗ್ಗಿಹೋಗಿ ನೀರು ಇರುವಂಥಾ ಒಂದು ಠಾಣ್ಯವನ್ನು ಆಕ್ರಮಿಸಿಕೊಂಡರೆಂದು ಹೇಳುವುದು. ಮರಿಟ್ಸ್ ಎಂಬ ದಂಗೇ ಕೋರರ ಮುಖಂಡನನ್ನು ಜರ್ಮನರು ಹಿಡಿದು ಜೈಲಿನಲ್ಲಿ ಹಾಕಿರುತ್ತಾರೆಂದು ಇನ್ನೊಂದು ವರ್ತಮಾನದಿಂದ ತಿಳಿಯುತ್ತದೆ. ರಿವೆಟ್ಸನ ದಯಾರ್ಥಿ ಯನ್ನು ಮುಂದಕ್ಕೆ ಹೀರಿಂಗು ಹಾಕಿದರು.

ಇತರ ವಿಷಯಗಳು.

ಬ್ರಿಟಿಷರ ಹೊಸ ಸೈನ್ಯಗಳು ಯುದ್ಧಕಾರ್ಯಗಳಲ್ಲಿ ಶಿಕ್ಷಣವನ್ನು ಹೊಂದಿ ಚೆನ್ನಾಗಿ ತರಪೇತಾಗುತ್ತಿರುವವು. ಇದಲ್ಲದೆ ಯೋಗ್ಯತೆಯುಳ್ಳ ಪ್ರಜೆಗಳು ಬಂದು ಸೈನ್ಯಕ್ಕೆ ಸೇರಿಕೊಳ್ಳುತ್ತಿರುವುದು ತೃಪ್ತಿಕರವಾಗಿದೆ.

ಕೆಲವು ಜರ್ಮನಿಯ ವಿಮಾನಯಂತ್ರಗಳು ಇಂಗ್ಲೆಂಡಿನಲ್ಲಿ ಅಲ್ಲಲ್ಲಿ ಕಾಣಿಸಿಕೊಂಡವು; ಇವುಗಳಿಂದ ಅಷ್ಟೇನೂ ಕೆಡಕು ಸಂಭವಿಸಿದಂತೆ ಕಾಣುವುದಿಲ್ಲ.

ಇಟಲಿಯಲ್ಲಿ ಅನೇಕರು ತಮ್ಮ ಗವರ್ನ್‌ಮೆಂಟಿನವರನ್ನು ಯುದ್ಧಕ್ಕೆ ಹೊರಡಬೇಕೆಂದೂ, ನಮ್ಮ ಪಕ್ಷದವರಿಗೆ ಸಹಾಯಮಾಡಬೇಕೆಂದೂ ಹೋರಾಡುತ್ತಿದ್ದಾರೆ. ಜರ್ಮನಿಯವರು ಕೋಟೂ ಮುಂತಾದವುಗಳನ್ನು ತಯಾರುಮಾಡಿಕೊಳ್ಳುವುದಕ್ಕೆ ಇಟಲಿ ದೇಶದಿಂದ ಸಿಕ್ಕಿದಷ್ಟು ಕಾಂಬ್ರಿದ ಸಾಮಾನುಗಳನ್ನು ಕೊಂಡು ಸಾಗಿಸುತ್ತಿರುವರು.

ಅಮೇರಿಕದಲ್ಲಿ ಕೆಲವರು ಒಂದು ಜರ್ಮನಿ ಜಹಜನ್ನು ಕೊಂಡುಕೊಂಡು ಹತ್ತಿಯನ್ನು ಭರ್ತಿಮಾಡಿ ಜರ್ಮನಿಗೆ ರವಾನೆಮಾಡಿದರು. ಯುದ್ಧಕಾಲದಲ್ಲಿ ಹೀಗೆ ಜಹಜನ್ನು ಕೊಂಡುಕೊಳ್ಳಕೂಡದು. ಆದಕಾರಣ ಫ್ರೆಂಚರು ಆ ಜಹಜನ್ನು ಹಿಡಿದು ತಮ್ಮ ತೀರಪಟ್ಟಣದೊಳಗೆ ತಡೆದಿಟ್ಟುಕೊಂಡಿದ್ದಾರೆ.

ಜರ್ಮನಿಯ ಒಂದು ಜಲ ವಿಮಾನಯಂತ್ರವು ಉತ್ತರಕಡಲಿನಲ್ಲಿ ಒಡೆದು ಹಾಳಾಯಿತು. ಅದರಲ್ಲಿದ್ದ ಇಬ್ಬರು ಜರ್ಮನಿಯವರನ್ನು ಕೈಸೆರೆ ಹಿಡಿದು ಇಂಗ್ಲೆಂಡಿಗೆ ಕರೆತಂದರು. ಫ್ರೆಂಚರು ಜರ್ಮನಿಯ ಎರಡು ವಿಮಾನ ಯಂತ್ರಗಳನ್ನು ಹಾಳುಮಾಡಿದರು. ಆಡ್ರಿಯಾಟಿಕ್ ಕಡಲಿನಲ್ಲಿ ಜರ್ಮನಿಯ ಜೆಪ್ಪೆಲಿನ್ ಎಂಬ ಭಾರೀ ವಿಮಾನ ಯಂತ್ರವು ಬಿರುಗಾಳಿ ಮಳೆಗೆ ಸಿಕ್ಕಿ ನಾಶವಾಯಿತು.

ಮಿ|| ಲ್ಲಾಯಡ್ ಜಾರ್ಜ್‌ರವರ ಭಾಷಣ.

ಬ್ರಿಟಿಷ್ ಸರ್ಕಾರದ ಖಜಾನಾ ಛಕ್ಷಿಯವರಾದ ಮಿ|| ಲ್ಲಾಯಡ್ ಜಾರ್ಜ್‌ರವರು ವೇಲ್ಸ್ ದೇಶಕ್ಕೆ ಸೇರಿದ ಬಾಂಗಾರ್ ಎಂಬ ಸ್ಥಳದಲ್ಲಿ ಒಂದು ಭಾಷಣವನ್ನು ಮಾಡುವಾಗ್ಗೆ ಹೇಳಿದ್ದೇನೆಂದರೆ—ಯುದ್ಧವು ದೀರ್ಘವಾಗಿ ನಡೆದಲ್ಲದೆ ಜಯಪ್ರವರ್ತಂಟಾಗತಕ್ಕದ್ದಲ್ಲ. ಗ್ರೇಟ್ ಬ್ರಿಟನ್‌ನವರು ಬಲಾತ್ಕಾರವೇನೂ ಇಲ್ಲದೇನೇ ಈಗ ಕೂಡಿಸಿರುವಷ್ಟು ಸೈನ್ಯವನ್ನು ಇನ್ಯಾವ ರಾಜ್ಯದವರೂ ಕೂಡಿಸಿಲ್ಲ. ನಮ್ಮ ಪಕ್ಷದಲ್ಲಿ 2,00,00,000 ಸೈನ್ಯಗಳನ್ನು ಜೊತೆಮಾಡಬಲ್ಲೆವು; ನಮ್ಮ ಶತ್ರುಪಕ್ಷದವರಾದರೋ 1,00,00,000 ಸೈನ್ಯವನ್ನು ಕೂಡಿಸುವುದೇ ಪ್ರಯಾಸ. ನಮ್ಮ ಸೈನ್ಯಗಳಿಗೆ ಆಯುಧಗಳೂ, ಮದ್ದುಗುಂಡೂ, ಉಡುಪು ಮೊದಲಾದವುಗಳೂ ಬಹಳವಾಗಿ ಬೇಕಾಗುತ್ತವೆ. ಆದ್ದರಿಂದ ಕಾರ್ಖಾನೆಗಳಲ್ಲಿ ಕೆಲಸಮಾಡುವಂಥವರೆಲ್ಲಾ ಗವರ್ನ್‌ಮೆಂಟಿನವರಿಗೆ ಸಹಾಯಮಾಡಬೇಕಾಗಿದೆ. ನಮಗೆ ಕೂಲಿ ಸಾಲದೆಂದೂ, ಹೆಚ್ಚಾಗಿ ಕೊಡಿ ಎಂದೂ ಹಟಹಿಡಿಯುವುದು ತರವಲ್ಲ. ಮದ್ಯಗಳ ಬಳಕೆಯನ್ನು ಕೂಡ ಸರ್ಕಾರದವರು ಕಡಮೆ ಮಾಡಬೇಕಾಗಿ ಬಂದೀತು. ಪ್ರಜೆಗಳು ಸರ್ಕಾರದವರಲ್ಲಿ ಏಕಮತ್ಯ ಭಕ್ತಿಭರವಸೆಗಳನ್ನು ಇಟ್ಟುಕೊಂಡಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಗಾಬರಿಗೂ ಗಲಭೆಗೂ ಹೋರಾಟಕ್ಕೂ ಅವಕಾಶಕೊಡಬಾರದು. ಎಲ್ಲರೂ ಏಕೀಭವಿಸಿ ಸಾಧಿಸಿದರೆ ಈ ಯುದ್ಧದಲ್ಲಿ ನಮಗೆ ಜಯವಾದೀತೆನ್ನುವುದಕ್ಕೆ ಸಂಶಯವಿಲ್ಲ ಎಂಬೀ ರೀತಿ ಹೇಳಿದರು.

ಒಳದೇಶದ ವೃತ್ತಾಂತಗಳು.

ನಮ್ಮ ಬ್ರಿಟಿಷ್ ರೆಸಿಡೆಂಟರವರು ಕಳೆದ ವಾರ ರಾಜಧಾನಿಗೆ ದಯಮಾಡಿ ಮೂರು ದಿನ ಇಲ್ಲೇ ಇದ್ದು ಮಡಿಕೇರಿಯ ಕಡೆ ಸರ್ಕೀಟು ಹೋಗಿರುತ್ತಾರೆ. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

* * *

ಕಳೆದ ಬುಧವಾರದಿಂದ ರಾಜಧಾನಿಯಲ್ಲಿ ಮೋಡಹಾಕಿಕೊಂಡು ಅಲ್ಪಸ್ವಲ್ಪ ಮಳೆ ಆಯಿತು. ಮಂಗಳವಾರ ಸಾಯಂಕಾಲ ಒಂದು ಹದ ಒಳ್ಳೇ ಮಳೆ ಆಗಿದೆ. ಇದರಿಂದ ಬಿಸಿಲಿನ ತಾಪ ಕಡಮೆಯಾಯಿತು.

* * *

ಶ್ರೀಮನ್ ಮಹಾರಾಜರವರು ಕಳೆದ ಶನಿವಾರ ರಾಜಧಾನಿಗೆ ದಯಮಾಡಿದರು. ಅವರು ನೆನ್ನೆ ನೀಲಗಿರಿಗೆ ಚಿತ್ತೈಸುವವರಾಗಿದ್ದರು. ಮಹಾಮಾತೃಶ್ರೀಯವರು ಪರಿವಾರ ಸಮೇತ ಕಳೆದ ವಾರ ಮದರಾಸಿನಿಂದ ನೀಲಗಿರಿಗೆ ದಯಮಾಡಿದರು.

* * *

ಕಳೆದ ತಿಂಗಳ 11 ನೇ ತಾರೀಖಿನ ದಿನ ನಮ್ಮ ಪತ್ರಿಕೆಯ ದೊಡ್ಡಬಳ್ಳಾಪುರದ ತಾಲ್ಲೂಕ್ ವರ್ತಮಾನದಲ್ಲಿ ಕನ್ನದ ಕೇರಿ ರಂಗೋಜಿ ಅಕ್ಕಯ್ಯಮ್ಮನೆಂಬಾಕೆಯು ಆತ್ಮಹತ್ಯಮಾಡಲು ಉಪಕ್ರಮಿಸಿದಂತೆ ಪ್ರಕಟವಾಗಿತ್ತು. ಅದು ನಿಜವಲ್ಲವೆಂದು ತಿಳಿಸಲು ಸಂತೋಷಪಡುತ್ತೇವೆ.

* * *

ರಾಜಧಾನಿಯಲ್ಲಿರುವ ಅರಸುಗಳ ಬೋರ್ಡಿಂಗ್ ಸ್ಕೂಲಿನ ವಿದ್ಯಾರ್ಥಿಗಳು ಇದುವರೆಗೆ ಆ ಸ್ಕೂಲಿನ ಮ್ಯಾನೇಜರೂ ಹೆಡ್ ಮಾಸ್ಟರೂ ಆಗಿದ್ದು ಅಲ್ಲಿಂದ ವರ್ಗಮಾಡಲ್ಪಟ್ಟ ಮ|| ಎಸ್. ಕೃಷ್ಣಮಾಚಾರ್ಯರಿಗೋಸ್ಕರ ಕಳೆದ ಸೋಮವಾರ ಸಾಯಂಕಾಲ ಒಂದು ಸಂತೋಷ ಕೂಟವನ್ನು ನಡಿಸಿ ಅವರ ಗುಣಕಥನವನ್ನು ಮಾಡಿ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಅರಮನೆಯ ಕಂಟ್ರೋಲರ್ ಮ|| ಬಿ. ರಾಮಕೃಷ್ಣರಾಯರು ಅಗ್ರಾಸನವನ್ನು ವಹಿಸಿದ್ದರು. ಮ|| ಕೃಷ್ಣಮಾಚಾರ್ಯರು ವಿದ್ಯಾರ್ಥಿಗಳನ್ನೂ ಸಭಿಕರನ್ನೂ ತಕ್ಕ ಹಾಗೆ ವಂದನೆಮಾಡಿದರು.

* * *

ರಾಜಧಾನಿಯ ದೇವರಾಜ ಮೊಹಲ್ಲಾ ವಿಜಯೇಂದ್ರರಾಯರ ಬಂಗ್ಲೆಯಲ್ಲಿ ಮೂರು ವಾರಗಳ ಹಿಂದೆ ಮ|| ಮಾಧವರಾಯರ ಮಗನ ಮುಂಜಿಯಾಗುವಾಗ್ಗೆ ಸುಮಾರು 1,000 ರೂಪಾಯಿನ ಒಂದು ಜವಾಹಿರಿ ಪದಕವು ಕಳುವಾಗಿತ್ತು. ಅದನ್ನು ದೇವರಾಜ ಪೋಲೀಸ್ ಸ್ಟೇಷನ್ ಹೆ|| ಎಂ. ಪಿ. ರಾಮರಾಯರು, ಸಾ|| [illegible], ರೈ|| ವೆಂಕಟರಾಮಯ್ಯ ಇವರುಗಳು ಸಾಹಸಪಟ್ಟು ಮಂಡಿ ಮೊಹಲ್ಲಾ ನರಸಮ್ಮನೆಂಬವಳು ಕಳಗನಡಿಮಾಡಿಸಿದ್ದನ್ನು ಪತ್ತೆಮಾಡಿರುತ್ತಾರೆ. ಈ ಪದಕ ಪತ್ತೆ ಆದದ್ದಕ್ಕೆ ಮಾಲೀಕರು ಬಹಳ ಸಂತೋಷಪಟ್ಟರು.

* * *

ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಮಹಾಜನ ಸಭೆ ನಡೆಯಿತು. ಪ್ರಜೆಗಳೂ ವಿದ್ಯಾರ್ಥಿಗಳೂ ಕಿಕ್ಕಿರಿಯುವಂತೆ ಸೇರಿದ್ದರು. ರಾಯಬಹದ್ದೂರ್ ಮ|| ಎ. ನರಸಿಂಹಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಮ|| ಸಿ. ರಾಮಲಿಂಗ ರೆಡ್ಡಿಯವರೂ, ರೆವ್. ಎಚ್. ಗಲ್ಲಿಫೋರ್ಡ್ ಸಾಹೇಬರೂ, ಮ|| ಗಳಾಡೆ ಎ. ಅಣ್ಣಯ್ಯಪಂಡಿತರೂ, ಎ. ಗೋವಿಂದಾಚಾರ್ಯರೂ, ಎಚ್. ರಂಗಸ್ವಾಮಯ್ಯಂಗಾರ್ಯರೂ, ಎಂ. ವೆಂಕಟಕೃಷ್ಣಯ್ಯನವರೂ ಪೂನಾ ಪಟ್ಟಣದಲ್ಲಿ ಕಾಲವಶ್ಯರಾದ ಮ|| ಗೋಪಾಲಕೃಷ್ಣ ಗೋಖಲೆಯವರ ಜೀವನ ಚರಿತ್ರೆಯನ್ನೂ ಆ ದೇಶವತ್ಸಲರ ಸಾಮರ್ಥ್ಯಕಾರ್ಯಗಳನ್ನೂ ವಿವರಿಸಿ ಕೊಂಡಾಡಿ, ಅಂಥಾ ಲೋಕಪ್ರಖ್ಯಾತಿ ಪಡೆದವರಿಗೆ ಅಕಾಲ ಮರಣ ಪ್ರಾಪ್ತವಾದದ್ದರಿಂದ ಈ ರಾಷ್ಟ್ರಕ್ಕೆ ಉಂಟಾದ ಮಹತ್ತರವಾದ ನಷ್ಟವನ್ನು ಕುರಿತು ಭಾಷಣಮಾಡಿದರು. ಸಭೆಯೆಲ್ಲಾ ದುಃಖಪಟ್ಟು ಅನುತಾಪವನ್ನು ತಂತಿಯ ಮೂಲಕ ತಿಳಿಸಬೇಕೆಂದು ಒಪ್ಪಿಕೊಂಡರು.

ಈ ಚಿತ್ರದಲ್ಲಿ ಕಾಣುವುದು ಜರ್ಮನಿಯವರ ಒಂದು ದೊಡ್ಡ ಫಿರಂಗಿ. ಇದರಲ್ಲಿ ಹಾಕಿ ಹೊಡೆಯುವ ಗುಂಡು 250 ಪೌಂಡು ತೂಗುತ್ತವೆ. ಈ ಗುಂಡು ಹತ್ತು ಮೈಲಿ ದೂರಕ್ಕೆ ಹೋಗಿ ಬಡಿಯಬಲ್ಲದು. ಅದು ನೆಲದಮೇಲೆ ಬಿದ್ದರೆ ಒಡೆಯುತ್ತದೆ. ಇದರಿಂದ ಭೂಮಿಯಲ್ಲಿ 3-4 ಅಡಿ ಆಳವಾಗಿಯೂ, 10-12 ಅಡಿ ಅಗಲವಾಗಿಯೂ ಹಳ್ಳವಾದೀತು. ಈ ಗುಂಡು ಮನೆಗೆ ಬಡಿದರೆ ಮನೆಯು ಸಂಪೂರ್ಣವಾಗಿ ನಾಶಹೊಂದುತ್ತದೆ. ಬ್ರಿಟಿಷ್ ಸಿಪಾಯಿಗಳು ಈ ಗುಂಡಿಗೆ "ಜಾಕ್ ಜಾನ್ಸನ್" ಎಂಬ ಹೆಸರಿಟ್ಟಿದ್ದಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಫೆಬ್ರವರಿ 18 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	......	ರೂ. 9,07,196
,, (2) ಡಿಪಾಜಿಟ್ಟುಗಳು	......	,, 24,87,064
,, (3) ಇತರೆ	......	,, 13,220
(ಆಣೆ ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 34,07,472

ದೇಣಿ:—(1) ಕೈಯುಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	6,42,613
,, (2) ಖಾತೆ ಮತ್ತು ಇತರ ಸಾಲಗಳು	,,	20,40,413
,, (3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು	,,	3,24,857
,, (4) ಇನ್ವೆಸ್ಟ್ಮೆಂಟುಗಳು	,,	3,67,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	99,183
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	14,918
,, (7) ಇತರೆ	,,	8,218
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	34,07,479

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಸಂಸ್ಥಾನಕ್ಕೆ ಬಂದರಿನ ಏರ್ಪಾಟು.

"ಸುಗಾಧನ" ಎಂಬ ಬಾತ್ಮಿದಾರರು ಬರೆಯುವುದು — "ಒಕ್ಕಲಿಗರ ಪತ್ರಿಕೆ"ಯಲ್ಲಿ ಮೈಸೂರು ಸಂಸ್ಥಾನಕ್ಕೆ ಬಂದರುಗಳ ಏರ್ಪಾಡಿನ ಕುರಿತು "ಪ್ರಜಾಬಂಧು"ವಿನ ಸೂಚನೆಯನ್ನು ಪುಷ್ಟೀಕರಿಸಿ ಪ್ರಕಟವಾದ ಲೇಖನವು ಮಂಗಳೂರಿನ "ಸ್ವದೇಶಾಭಿಮಾನಿ"ಯ ತಾ. 5-2-15 ನೇ ಸಂಚಿಕೆಯಲ್ಲಿ ನೋಡಿದೆವು. ಪ್ರಜಾಬಂಧುವಿನ ಸೂಚನೆಯು ಅಧಿಕಾಂಶವು ರಾಜಕೀಯ ಅಂತರ್ಗತ ವ್ಯವಹಾರಕ್ಕೆ ಸಂಬಂಧಪಟ್ಟುದು. ಹೇಗೂ ಮೈಸೂರು ಸಂಸ್ಥಾನದ ಸರಹದ್ದಿಗೆ ಅತೀ ಸಮೀಪವಾಗಿ ಸಂಸ್ಥಾನದ ಆದಾಯಕ್ಕೆ ಅಂಶತಃ ಸಂಬಂಧಪಟ್ಟು ಸ್ಥಿತಿಯುಗಳ ಮುಖಾಂತರ ಆಮದು ನಿರ್ಗಮಗಳಿಗೆ ಅನುಕೂಲವಾದದಾಗಿ ಉತ್ತಮವಾದ ಬಂದರು ಸ್ಥಳವು ಆವಶ್ಯಕವಾಗಿ ಬೇಕಾಗಿರುವುದು ನಿಸ್ಸಂದೇಹವು. ಇಂಥ ಬಂದರು ಸ್ಥಳಗಳು ಸೂಲದೃಷ್ಟಿಯಿಂದ 3-4 ಕಂಡುಬರುವವು. ಮೈಸೂರು ಸಂಸ್ಥಾನದ ಸರಹದ್ದಿಗೆ ಹತ್ತಿರ ಹನ್ನೆರಡು ಮೈಲು ಫಾಸಲೆಯೊಳಗಾಗಿ ಅಲ್ಲಿಂದ ವಿಶೇಷ ಸೌಕರ್ಯಗಳು ಕಲ್ಪಿಸಲು ಸಾಧ್ಯವಿರುವ ಬಂದರು ಸ್ಥಳವೆಂದರೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಬಂದರವೇ ಎಲ್ಲಾ ವಿಷಯಗಳಲ್ಲಿಯೂ ಸರ್ವಶ್ರೇಷ್ಠವಾದದ್ದು. ಸ್ಟೇಟ್ ರೈಲ್ವೆಯು ಶಿವಮೊಗ್ಗದಿಂದ ಸಾಗರಕ್ಕೆ ಬರುವದು ನಿಶ್ಚಯವಾಗಿರುವುದಷ್ಟೆ. ಅದೇ ರೈಲ್ವೆಯು ಆವಿನಹಳ್ಳಿ ತಡೂರು ಮಾರ್ಗವಾಗಿ ಭಟ್ಕಳಕ್ಕೆ ಅತೀ ತ್ವರೆಯ ಮುಂದರಿಸುವಂತೆ ಏರ್ಪಾಟು ಮಾಡುವುದಾಗಲೀ ಯಾ ಶಿವಮೊಗ್ಗದಿಂದ ಕಳೂರುಕಟ್ಟೆಯನ್ನು ಹಾದು ತೀರ್ಥಹಳ್ಳಿ, ಬಿದ್ದರೋಡು, ಕೊಪ್ಪ, ಕೆಂಪೇಗನಲ್ ಮುಂತಾದ ಸ್ಥಳಗಳಂತೆ ಆರೋಗ್ಯ ಮತ್ತಿತರೆ ಅನುಕೂಲವಾಗಿರುವ ಕೊಡಚಾದ್ರಿಯ ಬುಡದಿಂದ ಸದಾ ಕಾಲ ಯಾತ್ರಿಕರು ಬರುವ ಸುಪ್ರಸಿದ್ಧ ಕೊಲ್ಲೂರು ಮೂಕಾಂಬಿಕಾಕ್ಷೇತ್ರದಿಂದ ಬೈಂದೂರು ಮಾರ್ಗವಾಗಿ ಭಟ್ಕಳಕ್ಕೆ ಮುಂದರಿಸುವಂತೆ ಮಾಡುವದಾಗಲೀ ಈ ಎರಡರ ಲ್ಲೊಂದು ರೈಲ್ವೆ ಮಾರ್ಗವನ್ನು ಹಾಕಿಸುವದಕ್ಕೆ ಮೈಸೂರು ಸರಕಾರದವರು ಪ್ರೋತ್ಸಾಹವನ್ನು ಕೊಟ್ಟರೆ ಇದರಿಂದ ಸಂಸ್ಥಾನಕ್ಕೆ ಶೀಘ್ರ ಲಾಭವೂ ಪ್ರಜಾ ಸೌಕರ್ಯವೂ ಇತ್ಯಾದಿಗಳಿಂದಲೂ ಉಂಟಾಗಲಾರದು. ಇದೇ ಸಮಯ ಈ ರೈಲ್ವೆಗೆ ಸಾಗರದಲ್ಲಿ ಒಟ್ಟುಗೂಡುವಂತೆ ದಕ್ಷಿಣಕ್ಕೆ ತೀರ್ಥಹಳ್ಳಿಗೂ ಉತ್ತರಕ್ಕೆ ಗೇರುಸೊಪ್ಪೆಗೂ ವಿಸ್ತರಿಸುವ ಶಾಖೆಗಳಿರುವದು ಉತ್ತಮ. ಜಗದ್ವಿಖ್ಯಾತವಾದ ಗೇರುಸೊಪ್ಪೆಯ ಜಲಪ್ರಪಾತಕ್ಕೂ ವಿಶೇಷ ಮಹತ್ವವು ಬರುವುದು. ಮಲೆನಾಡು ಪ್ರಾಂತ್ಯಗಳನ್ನು ಎಲ್ಲಾ ರೀತಿಗಳಲ್ಲಿ ಅಭಿವೃದ್ಧಿಗೆ ತರಲಿಕ್ಕೆ ಇದರಷ್ಟು ಸುಗಮವಾದ ಉಪಾಯವೇ ಇಲ್ಲ. ಆ ಪ್ರಾಂತ್ಯದ ಲಕ್ಷೋಪ ಎಕರೆ ಜಮೀನುಗಳು ಸಾಗುವಳಿಗೆ ಬಂದು ಎಲ್ಲಾ ವಿಧದ ವ್ಯಾಪಾರ, ಕೈಗಾರಿಕೆಗಳಿಗೂ, ಪ್ರಜೆಗಳ ಆಮದು ರಫ್ತಿಗೂ ಅತ್ಯಂತ ಅನುಕೂಲವುಂಟಾಗುವದು. ಭಟ್ಕಳ ಬಂದರವನ್ನೂ ಅಭಿವೃದ್ಧಿಗೆ ತರುವುದರಿಂದ ಮುಂಬೈ ಮರ್ಮಗೋವೆಗೆ ಸಮಾನವಾಗುವುದು. ಇದೇ ಸಂಬಂಧ ಈ ಲೇಖಕನು ತನ್ನ ಅಭಿಪ್ರಾಯವನ್ನು ಈ ಪತ್ರಿಕೆಯ ಮುಖಾಂತರ ಹನ್ನೊಂದು ವರುಷಗಳಿಂದಲೂ ಆಗಾಗ ಪ್ರಕಟಪಡಿಸುತ್ತಿರುವನು. ಅರ್ಥಶಾಸ್ತ್ರದಲ್ಲಿಯೂ ಸಂಪದಭಿವೃದ್ಧಿಯ ವಿಷಯಗಳಲ್ಲಿಯೂ ಅತ್ಯುತ್ಕೃಷ್ಟ ಪ್ರಾವೀಣ್ಯವನ್ನಾರ್ಜಿಸಿರುವ ಈಗಿನ ಮೈಸೂರು ಸಂಸ್ಥಾನದ ದಿವಾನರವರು ಈ ರೈಲ್ವೆಯ ವಿಷಯವನ್ನು ಮುಂಬಾಯಿ ಸರಕಾರದವರ ಒಪ್ಪಿಗೆ ತರಿಸಿ ಶೀಘ್ರದಲ್ಲಿ ಕಾರ್ಯಗೊಳಿಸುವರೆಂದು ಹಾರೈಸುತ್ತಿರುವೆವು.

ರಾಜಧಾನಿಯ ಟ್ರಸ್ಟ್ ಬೋರ್ಡಿನ ಮೀಟಿಂಗು.

ಕಳೆದ ಫೆಬ್ರವರಿ 22 ನೇ ತಾ ಸೋಮವಾರ ಬೆಳಗ್ಗೆ ರಾಜಧಾನಿಯ ಪುರಾಭಿವೃದ್ಧಿ ಸಂಘದ ಬೋರ್ಡ್ ಮೀಟಿಂಗು ನಡೆಯಿತು. ಆಗ ಮೆಂಬರುಗಳು ತೀರ್ಮಾನಮಾಡಿದ ವಿಷಯಗಳಾವುವೆಂದರೆ:— ಇಟ್ಟಿಗೆಗೂಡಿನಲ್ಲಿರುವ ಮ್ಯಾಗಿಯಮ ಮುಂಭಾಗದಲ್ಲಿ ಕೆಲವು ಮನೆಗಳನ್ನು ಕೊಂಡುಕೊಂಡು ಕೆಡವಿ ಮೈದಾನವಾಗಿ ಮಾಡಿ ನೇತ್ರಾನಂದಕರವಾಗಿ ಮಾಡಿಸುವುದಕ್ಕೆ ಫೇರ್‌ಮೆನ್‌ರವರು ತಯಾರುಮಾಡಿದ 19,000 ರೂಪಾಯಿನ ಅಂದಾಜು ಪಟ್ಟಿಯನ್ನು ಮೆಂಬರುಗಳು ಒಪ್ಪಿಕೊಂಡರು. ಈ ಅಂದಾಜು ಪಟ್ಟಿಯೊಳಗೆ ಅಲ್ಲಿ ಒಂದು ಅಂಗಡಿಸಾಲನ್ನು ಕಟ್ಟುವುದಕ್ಕೆ 9,000 ರೂಪಾಯಿ ಆಗುವುದೆಂದು ತೋರಿಸಿದೆ. ಅಂಗಡಿಸಾಲು ಕಟ್ಟುವುದೋ, ಇಲ್ಲವೇ ಒಂದು ಗೋಡೆಯನ್ನೇ ಹಾಕುವುದೋ ಮುಂದೆ ಇತ್ಯರ್ಥವಾಗಬೇಕಾಗಿದೆ.

ಮುಂದಿನ ವರುಷದಲ್ಲಿ ಟ್ರಸ್ಟ್ ಬೋರ್ಡಿನ ಜಮಾಖರ್ಚುಗಳ ಅಂದಾಜು ಪಟ್ಟಿಯನ್ನು ಮೆಂಬರುಗಳು ಒಪ್ಪಿಕೊಂಡರು. ಅದರಲ್ಲಿ ಕಂಡುಬರುವ ಮುಖ್ಯ ಸಂಗತಿಯೇನೆಂದರೆ:—ಜಮಾ ಬಾಬಿನಲ್ಲಿ ಸರ್ಕಾರದವರು 2,70,000 ರೂಪಾಯಿ ಕೊಡುವುದು; ಸಾಮಾನು ಮುಂತಾದವುಗಳ ಬಿಕರಿಯಿಂದ 24,000 ರೂಪಾಯಿ ಹುಟ್ಟುವದಾಗುತ್ತೆ. ಈ 3 ಲಕ್ಷ ರೂಪಾಯಿಗೆ ಖರ್ಚು ಹ್ಯಾಗಂದರೆ—ಕೋಟೆ ಯೊಳಗೆ ಮನೆ ಒಡೆಯುವುದನ್ನು ಬಿಟ್ಟು ಉಳಿದ ಮೊಹಲ್ಲಗಳಲ್ಲಿ ಒಡೆಯುವ ಮನೆಗಳ ಪ್ರತಿಫಲ (ಕಾಂಪೆನ್ಸೇಷನ್) 80,000 ರೂಪಾಯಿ, ಬಚ್ಚಲು ನೀರು ಹೋಗುವಂತೆ ನಲ್ಲಿಗಳನ್ನು ಹಾಕುವುದಕ್ಕೆ 1,84,000 ರೂಪಾಯಿ, ಮನೆಕಟ್ಟುವವರಿಗೆ ಸಾಲಕೊಡುವುದಕ್ಕೆ 10,000 ರೂಪಾಯಿ, ಸಿಬ್ಬಂದಿ ಖರ್ಚು 24,200 ರೂಪಾಯಿ, ಕೋಟೆಯ ದಕ್ಷಿಣ ಪಾರ್ಶ್ವದ ಮೈದಾನದಲ್ಲಿ ಅಲಂಕಾರವಾಗಿ ಮಾಡಿರುವ ಕಾಮಗಾರಿಗಳಿಗೆ 30,000 ರೂಪಾಯಿ, ಬಚ್ಚಲುಗಳಿಗೆ 30,000 ರೂಪಾಯಿ. ಕೋಟೆಯ ಪೂರ್ವ ಭಾಗದ ಗೋಡೆಯನ್ನು ಕೆಡವಿ ಕಂದಕವನ್ನು ಮುಚ್ಚಿ ಕೋಟೆಯೊಳಗಣ ನೀರನ್ನು ಸಾಗಿಸುವ ಕಾಮಗಾರಿಗೆ 10,000 ರೂಪಾಯಿ, ದೊಡ್ಡಕೆರೆಯ ಉತ್ತರ ಭಾಗವನ್ನು ಮುಚ್ಚುವುದಕ್ಕೆ 10,000 ರೂಪಾಯಿ, ಈ ರೀತಿ ಖರ್ಚುಮಾಡತಕ್ಕದ್ದೆಂದು ಬಜೆಟ್ಟು ತಯಾರಾಗಿರುತ್ತದೆ. ಪಟ್ಟಣದ ಎಲ್ಲಾ ಮೊಹಲ್ಲಗಳಿಗೂ ನಲ್ಲಿಗಳನ್ನು ಹಾಕಿಸಿ ಮನೆಗಳ ರೊಚ್ಚನ್ನು ಸಾಗಿಸುವುದಕ್ಕೆ ಸ್ಯಾಂಕ್ಷನ್ ಆಗಿರುವ 3 ಲಕ್ಷ ರೂಪಾಯಿ ಕಾಮಗಾರಿಯಲ್ಲಿ ಇದುವರೆಗೆ ಒಂದು ಲಕ್ಷ ರೂಪಾಯಿನಷ್ಟು ಕೆಲಸ ನಡೆದಿದೆ ಎಂದು ತಿಳಿಯಿತು.

ಚೆನ್ನೇಹಂಡನಹಳ್ಳಿ ಕೆರೆಯಿಂದ ಊರೊಳಗೆ ಬರುವ ನಾಲೆಯನ್ನು ಒಡೆದು ಭರ್ತಿಮಾಡಿ ನೀರು ಬಾರದಂತೆ ಮಾಡುವುದಕ್ಕೆ ತಯಾರಾಗಿದ್ದ ಸುಮಾರು 16,600 ರೂಪಾಯಿನ ಅಂದಾಜು ಪಟ್ಟಿಯನ್ನು ಮೆಂಬರುಗಳು ಒಪ್ಪಿದರು.— ಲಷ್ಕರ್ ಮೊಹಲ್ಲಾ ಗಾಣಿಗ್ಗೇರಿ ಲಕ್ಷ್ಮಣ ಮರ್ಕೆಟ್ ಗಲ್ಲಿಯಲ್ಲಿ ನೀರು ನಿಂತು ಅನಾರೋಗ್ಯವಾಗುತ್ತಿರುವುದನ್ನು ಕೂಡಲೇ ತಪ್ಪಿಸಬೇಕೆಂದು ಹೆಲ್ತ್ ಆಫೀಸರವರು ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿಕೊಂಡರು.—ಸಯ್ಯಾಜಿ ರಾವ್ ರಸ್ತೆ 70 ಅಡಿ ಅಗಲವಾಗಿದೆ. ಈಚೆ ಆಚೆ ಅಂಚಿನಲ್ಲಿ ಜನರ ಸಂಚಾರಕ್ಕೆಂದು ಬಿಟ್ಟಿರುವ ಭಾಗ 16 ಅಡಿ ಇದೆ. 70 ಅಡಿ ರಸ್ತೆಯನ್ನು 50 ಅಡಿಗೆ ಕಡಿಮೆ ಮಾಡಿ, ಅಂಚಿನ ಭಾಗಗಳಿಗೆ ಹತ್ತು ಹತ್ತು ಅಡಿ ಹುಂಬಿಹಾಕಿ 26 ಅಡಿ ಅಗಲವಾಗುವಂತೆ ಮಾಡಬೇಕೆಂದೂ, ಇದಕ್ಕೆ 1,600 ರೂಪಾಯಿ ಖರ್ಚಾಗುವುದೆಂದೂ ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿದರು. ಡಾ॥ ಶ್ರೀನಿವಾಸರಾಯರು ಎಲ್ಲೂ ಜನ ಸಂಚಾರದ ಫುಟ್ ಪ್ಯಾತ್‌ಗಳು 25 ಅಡಿ ಇರುವುದನ್ನು ನೋಡಿಯೂ ಕೇಳಿಯೂ ಇಲ್ಲವೆಂದು ಅಭಿಪ್ರಾಯಪಟ್ಟರು.—ಚಿಟ್ಟಿಹಳ್ಳಿ ಬಡಾವಣೆಯಲ್ಲಿ ಮನೆ ನಿವೇಶನಗಳನ್ನು ವಿಂಗಡಿಸಿ ರಸ್ತೆ ಮೊದಲಾದ ಸೌಕರ್ಯಗಳನ್ನು ಒದಗಿಸುವುದಕ್ಕೆ ಪ್ಲಾನನ್ನೂ 19,273 ರೂಪಾಯಿನ ಕಾಮಗಾರಿ ಅಂದಾಜು ಪಟ್ಟಿಯನ್ನೂ ಫೇರ್‌ಮೆನ್ ರವರು ತಯಾರುಮಾಡಿಸಿರುತ್ತಾರೆ. ಇದರಲ್ಲಿ 40 × 60 ಅಡಿ ಉಳ್ಳ ನಿವೇಶನಗಳನ್ನು ಸಾಧಾರಣ ಮನೆಗಳಿಗೂ, 100 × 150 ಅಡಿ ಉಳ್ಳ ನಿವೇಶನಗಳನ್ನು ಸಣ್ಣ ಬಂಗಲೆಗಳಿಗೂ ವಿಂಗಡಿಸಿ, ಅಲ್ಲಲ್ಲಿ ಮೈದಾನಗಳನ್ನೂ ಕಲ್ಪಿಸಿದಾರೆ. ಹೆಲ್ತ್ ಆಫೀಸರು ಸಾಧಾರಣ ಮನೆಗಳಿಗೆ 40 × 60 ಅಡಿ ಉಳ್ಳ ನಿವೇಶನ ಬಿಟ್ಟಿರುವುದು ಸಾಲದಾದ್ದರಿಂದ 45 × 60 ಅಡಿ ಉಳ್ಳ ನಿವೇಶನಗಳನ್ನು ಬಿಡಿಸಿದರೆ ಕ್ಷೇಮವೆಂತಲೂ, ಮ॥ ಎಂ. ವೆಂಕಟಕೃಷ್ಣಯ್ಯನವರು 50 × 75 ಅಡಿ ಉಳ್ಳ ನಿವೇಶನಗಳನ್ನು ಬಿಡುವುದು ಒಳ್ಳೇದೆಂದೂ ಅಭಿಪ್ರಾಯಪಟ್ಟರು. ಇವೆರಡು ಅಭಿಪ್ರಾಯಗಳಿಗೂ ಇತರ ಮೆಂಬರುಗಳು ಸಮ್ಮತಿ ಹಾಕದೆ ಫೇರ್‌ಮೆನ್ ರವರು ಮಾಡಿಸಿದ್ದ ನಕ್ಷೆಯನ್ನೇ ಸಾಮಾನ್ಯವಾಗಿ ಒಪ್ಪಿಕೊಂಡರು.

ಹಾರ್ಡಿಂಗ್ ಸರ್ಕಲಿನ ನಡುವೆ ನೀರು ತೆಗೆದುಕೊಳ್ಳುವುದಕ್ಕೆ ಒಂದು ಹೈಡ್ರೆಂಟನ್ನು ಇಡಿಸಬಹುದೆಂದೂ, ಮಿ॥ ನೈಜಾಮುದ್ದೀನ್ ಸಾಹೇಬರ ಬಂಗಲೆ ಹಿಂದೆಯೂ, ಹೊಸ ಮೋತಿಖಾನೆ ಕಟ್ಟಡದ ಹಿಂದೆಯೂ ಕನ್ಸರ್ವೆನ್ಸಿ ಗಲ್ಲಿ ಹಾಕುವುದಕ್ಕೆ ನಿವೇಶನವನ್ನು ಕೊಂಡುಕೊಳ್ಳಬಹುದೆಂದೂ ಒಪ್ಪಲಾಯಿತು. ಮೆಯಿಲ್ ಕಂಟ್ರಾಕ್ಟರ್ ಮಿ॥ ಪಾಲಜಯವರ ಮನೆ ಮುಂಭಾಗದಲ್ಲಿರುವ ಚೌಕದಲ್ಲಿ ಕಾಮಗಾರಿಮಾಡಿ ಗಿಡಗಳನ್ನು ಹಾಕಿ ಅಲಂಕಾರವಾಗಿ ಮಾಡುವುದಕ್ಕೆ 5,800 ರೂಪಾಯಿನ ಅಂದಾಜುಪಟ್ಟಿ ಒಪ್ಪಲಾಯಿತು. ಈ ಸಂದರ್ಭದಲ್ಲಿ ಫೇರ್‌ಮೆನ್ ರವರು ನಾನು ಬಹಳ ಹಣವನ್ನು ವೃಥಾ ಖರ್ಚುಮಾಡಿಸುತ್ತೇನೆಂದೂ, ಅಭಿವೃದ್ಧಿಯ ಕಾರ್ಯಗಳನ್ನು ಸುಲಭದರಲ್ಲಿ ಮಾಡಿಸತಕ್ಕವನಲ್ಲವೆಂದೂ ಆಕ್ಷೇಪಣೆಯುಂಟಾಗಿದೆ. ಅಂದಮಾಗಿಯೂ ಚೆನ್ನಾಗಿಯೂ ಶಾಶ್ವತವಾಗಿಯೂ ಇರಬೇಕಾದರೆ ಹೆಚ್ಚು ಹಣ ಖರ್ಚಾಗುತ್ತದೆ ಎಂದು ಹೇಳಿದ್ದಕ್ಕೆ ಮೆಂಬರುಗಳೆಲ್ಲಾ—ಹೆಚ್ಚು ಹಣ ಖರ್ಚಾದರೂ ಶಾಶ್ವತವಾದ ಅಭಿವೃದ್ಧಿ ಕಾರ್ಯಗಳೇ ನಮಗೆ ಬೇಕಾದದ್ದು ಎಂದು ತಿಳಿಸಿದರು.—ಗವರ್ನ್‌ಮೆಂಟ್ ಹೌಸಿಗೂ ಟ್ರೈನಿಂಗ್ ಕಾಲೇಜಿಗೂ ನಡುವೆ ಇರುವ ದೊಡ್ಡಬಚ್ಚಲು ಕಾಮಗಾರಿಗೆ 41,000 ರೂಪಾಯಿ ಅಂದಾಜು ಆಗಿತ್ತು; ಈಚೆಗೆ ಇನ್ನೂ 6,200 ರೂಪಾಯಿ ಖರ್ಚಾಗಿದೆ ಎಂದು ಫೇರ್‌ಮೆನ್ ರವರು ಸೂಚಿಸಿದರು. ಇದನ್ನು ಮೆಂಬರುಗಳು ಒಪ್ಪಿಕೊಂಡರು.

ಪಟ್ಟಣದ ಎಲ್ಲಾ ಮೊಹಲ್ಲಗಳಲ್ಲೂ ಅಲ್ಲಲ್ಲಿ ಖಾಲಿ ನಿವೇಶನಗಳಿರುತ್ತವೆ. ಅಂಥಾ ನಿವೇಶನಗಳ ಪೈಕಿ ಶಕ್ಯವುಳ್ಳಗೆ ಮನೆ ಕಟ್ಟುವಷ್ಟು ಸ್ಥಳಗಳು ದೊರಕುವವು. ಈ ಸ್ಥಳಗಳಲ್ಲಿ ಸುಮಾರು 60 ಮನೆಗಳನ್ನು ಮಾದರಿ ರೂಪವಾಗಿ ಟ್ರಸ್ಟ್ ಬೋರ್ಡಿನಿಂದ ಕಟ್ಟಿಸಬಹುದೆಂದೂ, ಇದಕ್ಕೆ ಸದ್ಯ 30,000 ರೂಪಾಯಿ ಬೇಕಾಗುವುದೆಂದೂ ಫೇರ್‌ಮೆನ್ ರವರು ಸೂಚಿಸಿ, ಮಾದರಿ ಮನೆಗಳ ಪ್ಲಾನ್ ಮುಂತಾದದ್ದನ್ನು ತೋರಿಸಿದರು. ಈ ಮನೆಗಳು 600 ರಿಂದ 1,300 ರೂಪಾಯಿ ವರೆಗೆ ಬೆಲೆಯುಳ್ಳವಾಗಿ ಆರೋಗ್ಯಕರವಾಗಿಯೂ, ಸುತ್ತುಮುತ್ತಿನ ಜನಗಳು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮಾದರಿಯಾಗಿಯೂ, ಇಲಿಗೆ ಜಾಗಳ ಕಾಟವಿಲ್ಲದಂತೆಯೂ, ಅಲಂಕಾರವಾಗಿಯೂ ಇರುವವೆಂದು ತಿಳಿಸಿದರು. ಈ ಮನೆಗಳಿಗೆ ಸಾಗುವಳಿ ಹಾಕಿ ಇಟ್ಟಿಗೆಯಿಂದ ಕಟ್ಟಿಸುತ್ತಾರೆಂದು ತಿಳಿಯಿತು. ಮೆಂಬರುಗಳು ಈ ಏರ್ಪಾಡನ್ನು ಒಪ್ಪಿಕೊಂಡರು.—ಚೆನ್ನೇಹಂಡನಹಳ್ಳಿ ನಾಲೆಯನ್ನು ಕಟಿಗೆಂಡುಗಳಿಂದ ಕಟ್ಟುವಲ್ಲಿ ನಾರೀಹಾಕಿ ಸಂದು ಕೊಡಿಸಬೇಕೆಂದು ಚೀಫ್ ಇಂಜನಿಯರವರು ಸೂಚಿಸಿದ್ದರಿಂದ ಇದಕ್ಕೆ 2,000 ಚಿಲ್ಲರೆ ರೂಪಾಯಿ ಖರ್ಚು ಮಾಡಬೇಕೆಂದು ಮೆಂಬರುಗಳು ಸಮ್ಮತಿಸಿದರು. ಚಾಮರಾಜಮೊಹಲ್ಲಾದಲ್ಲಿ ಮನೆಗಳ ಬಚ್ಚಲುರೊಚ್ಚನ್ನು ನಲ್ಲಿ ಹಾಕಿ ಸಾಗಿಸುವುದಕ್ಕೆ ತಯಾರಾಗಿದ್ದ 1,25,774 ರೂಪಾಯಿನ ಅಂದಾಜು ಪಟ್ಟಿಯು ಒಪ್ಪಲಾಯಿತು.

ಪಟ್ಟಣವನ್ನು ಅಲಂಕಾರ ಮಾಡುವುದು.

ಪ್ರೊಫೆಸರ್ ಗೆಡ್ಡಿಸ್ ರವರ ಅಭಿಪ್ರಾಯಗಳು.

ಪಟ್ಟಣಗಳನ್ನು ರಚಿಸಿ ಅಲಂಕಾರ ಮಾಡುವ ಶಾಸ್ತ್ರದಲ್ಲಿ ಪ್ರವೀಣರೆನಿಸಿಕೊಂಡಿರುವ ಪ್ರೊಫೆಸರ್ ಗೆಡ್ಡಿಸ್ ಎಂಬ ಪಂಡಿತರು ಬ್ರಿಟನ್ನಿಂದ ಹಿಂದುಸ್ಥಾನಕ್ಕೆ ಬಂದು, ಉತ್ತರ ದೇಶದಲ್ಲೂ ದಕ್ಷಿಣ ದೇಶದಲ್ಲೂ ಇರುವಂಥಾ ಮುಖ್ಯ ಮುಖ್ಯ ಪಟ್ಟಣಗಳನ್ನೆಲ್ಲಾ ನೋಡಿ ಅಲ್ಲಲ್ಲಿ ತಮಗೆ ಕಂಡುಬಂದ ಲೋಪದೋಷಗಳನ್ನು ಉಪನ್ಯಾಸಗಳ ಮೂಲಕವೂ ಸಲಹೆಗಳ ಮೂಲಕವೂ ಅಧಿಕಾರಿಗಳಿಗೂ ಪ್ರಜೆಗಳಿಗೂ ತಿಳಿಯಪಡಿಸಿರುತ್ತಾರೆ. ಹಿಂದುಸ್ಥಾನದ ರಾಜಧಾನಿಯಾಗಿ ನಿರ್ಮಾಣವಾಗಲಿರುವ ದೆಹಲಿ ನಗರದ ಹೊಸ ಪ್ಲಾನು ಮುಂತಾದವುಗಳನ್ನು ಹೋಗಿ ನೋಡಿ ಸಲಹೆಗಳನ್ನು ಕೊಟ್ಟರು. ಪ್ರೊಫೆಸರ್ ಗೆಡ್ಡಿಸ್ ರವರು ಕಳೆದ ಜನವರಿ ತಿಂಗಳಲ್ಲಿ ಮದರಾಸ್ ಪಟ್ಟಣದಲ್ಲಿ ಅನೇಕ ಸಭೆಗಳನ್ನು ನಡಿಸಿ, ಪಟ್ಟಣ ಊರು ಗ್ರಾಮಗಳ ರಚನೆಯನ್ನು ಕುರಿತು ಉಪನ್ಯಾಸಗಳನ್ನು ಮಾಡಿದರು. ಈ ಉಪನ್ಯಾಸಗಳನ್ನು ಕೇಳಿ ವಿಷಯಗಳನ್ನು ಗ್ರಹಿಸಿಕೊಂಡು ಬರುವುದಕ್ಕಾಗಿ ನಮ್ಮ ಮೈಸೂರು ಸರ್ಕಾರದವರು ಇಲ್ಲಿನ ಹಲವು ಇಂಜನಿಯರುಗಳನ್ನೂ, ಮೈಸೂರು ಬೆಂಗಳೂರು ಪಟ್ಟಣಗಳ ಪುರಾಧ್ಯಕ್ಷರುಗಳನ್ನೂ, ಪ್ರಜಾ ಪಕ್ಷದ ಮೆಂಬರುಗಳನ್ನೂ ಮದರಾಸಿಗೆ ಕಳುಹಿಸಿದ್ದರು.

ನಮ್ಮ ಶ್ರೀಮನ್ಮಹಾರಾಜರವರು ರಾಜಧಾನಿಯನ್ನು ನವೀನ ನಗರವಾಗಿ ರಚಿಸಬೇಕೆಂಬ ವಿಷಯದಲ್ಲಿ ಕುತೂಹಲವುಳ್ಳವರಾಗಿ ಪುರಾಭಿವೃದ್ಧಿ ಸಂಘವನ್ನು ಕಲ್ಪಿಸಿ ಈ ಸಂಘದ ಮೂಲಕವೂ, ತಾವೇ ಸ್ವತಂತ್ರಿಸಿಯೂ ಹಲವು ಅಭಿವೃದ್ಧಿ ಕಾರ್ಯಗಳನ್ನು ನಡಿಸಿಯೂ ನಡಿಸುತ್ತಲೂ ಬಂದಿರುತ್ತಾರೆ. ತಮ್ಮ ಪ್ರಭುಗಳು ಈ ಕಾರ್ಯಗಳನ್ನು ತೋರಿಸಿ ಅವುಗಳಲ್ಲಿ ಕಂಡುಬರುವ ಗುಣದೋಷಗಳನ್ನೂ, ಹೊಸ ಏರ್ಪಾಡುಗಳ ವಿಷಯದಲ್ಲಿ ಸಲಹೆಗಳನ್ನೂ ತಿಳಿಯಬೇಕೆಂದು ಪ್ರೊಫೆಸರ್ ಗೆಡ್ಡಿಸ್ ಎಂಬ ಪಂಡಿತರನ್ನು ಹುಜೂರು ಸೆಕ್ರಟರಿ ಮಿ॥ ಮಿರ್ಜಾ ಎಂ. ಇಸ್ಮೈಲ್‌ರವರ ಕೂಡ ಕಳೆದ ವಾರ ರಾಜಧಾನಿಗೆ ವೇಟಿಂಗಿನಲ್ಲಿ ಕಳುಹಿಸಿಕೊಟ್ಟರು. ಈ ಪಂಡಿತರನ್ನು ಮೈಸೂರಿನ ಮುನಿಸಿಪಲ ಪ್ರೆಸಿಡೆಂಟ್ ಮ॥ ಟಿ. ಜಿ. ಲಕ್ಷ್ಮಣರಾಯರೂ ಮಿ॥ ವಿಜಾರ್ಗರವರೂ ಸಂಗಡ ಕರೆದುಕೊಂಡು ಪಟ್ಟಣವೆಲ್ಲೆಲ್ಲಾ ಸಂಚಾರಮಾಡಿ ಅವರಿಗೆ ಇಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳನ್ನೆಲ್ಲಾ ತೋರಿಸಿದರು.

ಪ್ರೊಫೆಸರ್ ಗೆಡ್ಡಿಸ್‌ರವರು ಕಳೆದ ತಾ. 16ನೇ ಮಂಗಳವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಪಟ್ಟಣವನ್ನು ಅಭಿವೃದ್ಧಿ ಮಾಡಿ ಅಲಂಕರಿಸುವ ವಿಚಾರಗಳನ್ನು ಕುರಿತು ಉಪನ್ಯಾಸಮಾಡಿದರು. ಆ ಸಭೆಯಲ್ಲಿ ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರಾದ ಮಿ॥ ಟಿ. ಡೆನ್‌ಹಂ ರವರು ಅಗ್ರಾಸನವನ್ನು ವಹಿಸಿದ್ದರು. ರಾಜಧಾನಿಯಲ್ಲಿರುವ ಯೂರೋಪಿಯನ್ ಸರದಾರರೂ, ಎಲ್ಲಾ ಇಲಾಖೆಗಳ ಮುಖ್ಯಾಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಮುಖ್ಯ ಮುಖ್ಯರಾದ ವಿದ್ಯಾವಂತರೂ ಹಾಜರಾಗಿದ್ದರು. ಪ್ರೊಫೆಸರ್ ಗೆಡ್ಡಿಸ್ ರವರು ತಮ್ಮ ಉಪನ್ಯಾಸದಲ್ಲಿ ತಿಳಿಸಿದ ಮುಖ್ಯಾಂಶಗಳೇನೆಂದರೆ:—

ರಾಜಧಾನಿಯೊಳಕ್ಕೆ ಪ್ರವೇಶಮಾಡುವಾಗ ಒಂದು ಕಡೆ ಬಂದೀಖಾನೆಯೂ, ಇನ್ನೊಂದು ಕಡೆ ಪ್ಲೇಗ್ ಗುಡಿಸಲುಗಳೂ ಇರುವುದು ಹೊಸದಾಗಿ ಬರತಕ್ಕವರ ಕಣ್ಣಿಗೂ ಮನಸ್ಸಿಗೂ ಆಹ್ಲಾದಕರವಾಗಿಲ್ಲ; ಅಸಹ್ಯವಾಗುತ್ತದೆ. ಇದು ಇಂಜನಿಯರುಗಳ ತಪ್ಪೆಂದು ಹೇಳಬಹುದು. ಪಟ್ಟಣದ ಬಾಗಿಲಿಗೆ ಬರುವಾಗ ನೇತ್ರಾನಂದಕರವಾದ ಸಾಲು ಗಿಡಗಳೂ, ವನಗಳೂ ಇದ್ದು ಎಲ್ಲಾ ಕಡೆಯೂ ಕಸ ಮುಂತಾದ್ದಿಲ್ಲದೆ ಚೊಕ್ಕಟವಾಗಿರಬೇಕು. ಇದಕ್ಕೆ ಬಹಳ ಹಣ ಖರ್ಚುಮಾಡಬೇಕಾದ ಆಗತ್ಯವಿಲ್ಲ. ಅನೇಕ ಮನೆಗಳನ್ನು ಒಟ್ಟೊಟ್ಟಾಗಿ ಒಡೆಯಬಾರದು, ಹೊಸ ರಸ್ತೆಗಳಿಗೋಸ್ಕರ ಮನೆಗಳನ್ನು ಒಡೆದುಹಾಕುವುದಕ್ಕಿಂತ ಮನೆಗಳ ಹಿಂದಿನ ಕಡೆಗೆ ರಸ್ತೆಗಳನ್ನು ಹಾಕಬೇಕು. ಈಗ ರಸ್ತೆಗಳು ನೆಟ್ಟಗಿರಬೇಕೆಂದು ಹೇಳಿ ಮನೆಗಳನ್ನು ಒಡೆದುಹಾಕುತ್ತಿರುವುದು ಸಮನಲ್ಲ. ಚಾಮುಂಡಿ ಬೆಟ್ಟದ ಮೇಲಿನಿಂದ ನೋಡಿದರೆ ರಾಜಧಾನಿಯು ಬಹು ನೇತ್ರಾನಂದಕರವಾಗಿ ಕಾಣುವುದು. ಅಭಿವೃದ್ಧಿ ಕಾರ್ಯಗಳೂ, ಬಡಾವಣೆಗಳೂ ಬಹಳ ಸ್ಪಷ್ಟವಾಗಿ ಕಂಡುಬರುತ್ತವೆ. ಪಟ್ಟಣದೊಳಗಿರುವ ದೇವರಾಜ ಮಾರ್ಕೆಟ್ಟೂ ಚೌಕವೂ ಅಂಗಡಿಮುಂಗಟ್ಟುಗಳಿಂದ ಬಹಳ ಒತ್ತೊತ್ತಾಗಿ ಮುಚ್ಚಿಕೊಂಡಿವೆ. ಇದು ಅಂಗಡಿಯವರ ತಪ್ಪಲ್ಲ. ಆ ಚೌಕವನ್ನು ಬಹಳ ಖರ್ಚಿಲ್ಲದೆ ಅಲಂಕಾರವಾಗಿ ಮಾಡಬಹುದು. ಇದಕ್ಕೋಸ್ಕರ ಮ್ಯುನಿಸಿಪಲ್ ಪ್ರೆಸಿಡೆಂಟರವರು ಮಾಡಿರುವ ಪ್ಲಾನನ್ನು ನೋಡಿದೆನು. ಅದು ದಿವ್ಯವಾಗಿದೆ. ಆದರೆ ಮಾರ್ಕೆಟ್ಟಿನ ಉತ್ತರಪಾರ್ಶ್ವದ ಮೈದಾನದಲ್ಲಿ ಮ್ಯುನಿಸಿಪಲ್ ಆಫೀಸನ್ನು ಕಟ್ಟಬೇಕೆಂದು ಯೋಚಿಸಿರುವುದು ಚೆನ್ನಾಗಿಲ್ಲ. ಮುಂದಕ್ಕೆ ಪಟ್ಟಣವು ಇನ್ನೂ ಅಭಿವೃದ್ಧಿಯಾಗುವಾಗ್ಗ ಮಾರ್ಕೆಟ್ಟನ್ನು ಆ ಕಡೆ ಬಡಾವಣೆ ಮಾಡಬೇಕಾಗುವುದು. ಮ್ಯುನಿಸಿಪಲ್ ಆಫೀಸನ್ನು ಅಲ್ಲಿ ಕಟ್ಟದೆ ಬೇರೆ ಇನ್ಯಾವ ನಿವೇಶನದಲ್ಲಾದರೂ ಕಟ್ಟುವದು ಒಳ್ಳೇದು.

ಪಾಶ್ಚಾತ್ಯ ದೇಶಗಳಲ್ಲಿ ಕಾರ್ಖಾನೆಗಳೂ ಕಸಬುಗಳೂ ಹೆಚ್ಚಿ ಕೂಲಿಮಾಡತಕ್ಕ ಪ್ರಜೆಗಳು ಅನೇಕ ಸಂಕಟಗಳಿಗೆ ಗುರಿಯಾದರು. ಈಗ ಅದರ ಪರಿಹಾರಕ್ಕೆ ಅಂಥಾ ಪ್ರಜೆಗಳ ಕ್ಷೇಮಚಿಂತನೆ ಹುಟ್ಟಿದೆ. ಅವರ ವಾಸಕ್ಕೂ ಜೀವನಕ್ಕೂ ವಿಹಾರಕ್ಕೂ ಒಳ್ಳೊಳ್ಳೇ ಏರ್ಪಾಡುಗಳು ನಡೆದಿರುವವು. ಕೊಳಕಾದ ಭಾಗಗಳಲ್ಲಿ ವಾಸಮಾಡುವವರ ಆರೋಗ್ಯವನ್ನು ವೃದ್ಧಿಮಾಡಿ ಚೆನ್ನಾಗಿ ಬದುಕುವಂತೆ ಮಾಡುತ್ತಿದಾರೆ. ಕೊಳಕು ಜನಗಳು ವಾಸಮಾಡುವುದಕ್ಕೆಂದು ಬೇರೆ ಪ್ರದೇಶವನ್ನು ನಿಗಡಿಸುವುದೂ, ಕೂಲಿಯವರಿಗೂ ಪೋಲೀಸಿನವರಿಗೂ ಪ್ರತ್ಯೇಕ ಮನೆಗಳನ್ನು ಕಟ್ಟಿಸುವುದೂ ಯೋಗ್ಯವಾಗಿ ಕಾಣುವುದಿಲ್ಲ. ಚೌಕವಾಗಿಯೂ, ನೆಟ್ಟಗೂ ವಿಸ್ತಾರವಾಗಿಯೂ ಇರುವಂತೆ ರಸ್ತೆಗಳನ್ನು ಹಾಕುವುದೂ, ಇದಕ್ಕೋಸ್ಕರ ಮನೆಗಳನ್ನು ಒಡೆದುಹಾಕುವುದೂ ಸರಿಯಲ್ಲ. ಪಟ್ಟಣದಲ್ಲಿ ಆರೋಗ್ಯಜನಕವಾದ ಮನೆಗಳು ಇರಬೇಕಾದದ್ದೇ ಪ್ರಥಮಕರ್ತವ್ಯವಾಗಿದೆ. ಅರಮನೆ ಮೊದಲುಗೊಂಡು ಆಳಿನ ಮನೆಯ ತನಕ ಪ್ರತಿ ಒಂದು ವಾಸದ ಮನೆಯೂ ವಾಸಮಾಡತಕ್ಕವರಿಗೆ ಆರೋಗ್ಯವನ್ನೂ ಸಂತೋಷವನ್ನೂ ಉಂಟುಮಾಡುವಂಥಾದ್ದಾಗಿರಬೇಕು. ಭವಿಷ್ಯತ್ಕಾಲದಲ್ಲಿ ಪಟ್ಟಣವು ಹೀಗೆ ಹೀಗೆ ಇರಬೇಕೆಂದು ಈಗ ಪ್ಲಾನು ಹಾಕಿಕೊಂಡು ಕಾರ್ಯಗಳನ್ನು ನಡಿಸುತ್ತಾ ಬರುವುದು ಸರಿಯಲ್ಲ. ಈಗಿನ ಕಾಲಕ್ಕೆ ತಕ್ಕಂತೆ ಪ್ರಜೆಗಳಿಗೆ ಆರೋಗ್ಯವಾಗಿರುವಂಥಾ ಮನೆಗಳನ್ನು ಕಲ್ಪಿಸಬೇಕು. ಸರ್ಕಾರದಿಂದ ಮನೆಗಳನ್ನು ಕಟ್ಟಿಸಬಹುದು. ಮನೆ ಕಟ್ಟುವುದಕ್ಕೆ ಸುಲಭವಾದ ಬಡ್ಡಿಯಲ್ಲಿ ಸಾಲಗಳನ್ನು ಕೊಡಬಹುದು. ಬಾಡಿಗೆ ಮನೆಗಳು ಹೆಚ್ಚದಂತೆ ನೋಡಿಕೊಳ್ಳಬೇಕು. ಇದರಿಂದ ಜನರ ಆರೋಗ್ಯಭಾಗ್ಯವಾಗಲಿ ಐಶ್ವರ್ಯವಾಗಲಿ ಹೆಚ್ಚುವುದಿಲ್ಲ. ಸ್ವಲ್ಪ ಬದಲಾವಣೆ ಮಾಡಿ ಸರಿಪಡಿಸಿಕೊಳ್ಳಬಹುದಾದ ಮನೆಗಳನ್ನು ಕೂಡ ಒಡೆದು ಹಾಳುಕೆಡುವ ಬಾರದು. ಅಂಥಾ ಭಾಗಗಳಲ್ಲಿ ಒಂದೆರಡು ಮನೆಗಳನ್ನು ಒಡೆದು ಬಯಲುಮಾಡಿ ಅಲಂಕಾರವೂ ಆರೋಗ್ಯಜನಕವೂ ಆದ ಗಿಡಗಳನ್ನು ಹಾಕಿಸಬೇಕು. ಮನೆಗಳನ್ನು ಒಡೆದುಹಾಕಿದ ಹಾಗೆ ಹೊಸ ಮನೆಗಳು ನಿರ್ಮಾಣವಾಗದಿದ್ದರೆ ನಾನಾ ಸಂಕಟಗಳಿಗೆ ಕಾರಣವಾಗುತ್ತದೆ. ಈಗ ದಕ್ಷಿಣದೇಶದಲ್ಲಿ ಪ್ರಜೆಗಳ ಯೋಗಕ್ಷೇಮವನ್ನು ನೋಡದೆ ಒಟ್ಟೊಟ್ಟಾಗಿ ಮನೆಗಳನ್ನು ಒಡೆದುಹಾಕುವುದು ರೂಢಿಗೆ ಬಂದಿದೆ. ಇದರಿಂದ ಮನೆಗಳಿಗಿಂತ ಪ್ರಜೆಗಳ ಸಂಖ್ಯೆ ಹೆಚ್ಚಿರುವುದು. ಪ್ರಜೆಗಳಿಗಿಂತ ಮನೆಗಳ ಸಂಖ್ಯೆಯೇ ಹೆಚ್ಚಾಗಿರುವಂತೆ ನೋಡಿಕೊಳ್ಳಬೇಕು. ಇದನ್ನು ಕಲ್ಪಿಸುವುದು ಹೇಗೆನ್ನಬಹುದು. ಪ್ರಜೆಗಳಿಗೇ ಬಿಟ್ಟರೆ ಇದು ಸಾಧ್ಯವಲ್ಲ. ಸರ್ಕಾರದವರು ಕಟ್ಟಿ 10-15-20 ವರುಷಗಳಲ್ಲಿ ಅವುಗಳ ಕ್ರಯವನ್ನು ಉತ್ಪತ್ತಿ ಮಾಡಿಕೊಳ್ಳುವುದು ಕ್ಷೇಮ. ಇಲ್ಲವೇ ಮನೆಗಳನ್ನು ಕಟ್ಟುವುದಕ್ಕಾಗಿ ಸಂಘಗಳನ್ನು ಕಲ್ಪಿಸಿ ಅವುಗಳ ಮೂಲಕ ಪ್ರಜೆಗಳು ಮನೆಕಟ್ಟಿಕೊಳ್ಳುವಂತೆ ಮಾಡಬೇಕು. ಈ ಕಾರ್ಯವನ್ನು ಲಾಭಸಂಪಾದನೆಯ ಮೇಲೆ ದೃಷ್ಟಿಯುಳ್ಳ ಕಂಟ್ರಾಕ್ಟುಗಾರರಿಗೆ ವಹಿಸಬಾರದು.

ಅಗಾಧವಾದ ಏರ್ಪಾಟುಗಳೂ ಪ್ಲಾನುಗಳೂ ಕೆಲವೇನೋ ಇರಬೇಕು. ಅವು ಚಿಕ್ಕದರಿಂದ ಬೆಳೆದು ದೊಡ್ಡದಾಗಬೇಕಾಗಿದೆ. ಈ ಸೀಮೆಗಳು ಒಡತನದಲ್ಲಿವೆ; ಜನರಿಗೆ ತಿಳುವಳಿಕೆ ಸಾಲದೆ ಒಳ್ಳೊಳ್ಳೆ ಗೊಬ್ಬರಗಳನ್ನು ಒಚಿನೆ ಹಾಕಿ ಉರಿಸುತ್ತಾರೆ. ಜಮೀನು ಒಳ್ಳೆಯದಾಗಿದ್ದರೂ ಅದನ್ನು ಕೆಡಿಸಿಕೊಳ್ಳುವರು. ಮೊದಲು ಆರೋಗ್ಯಕರವಾದ ಸಣ್ಣ ಮನೆಗಳು ಬೆಳೆಯಬೇಕು. ಆರೋಗ್ಯ ವಿಚಾರಕ್ಕೆ ಮೊದಲು ಗಮನಕೊಡಬೇಕು, ತರುವಾಯ ಅಲಂಕಾರವನ್ನು ನೋಡಿಕೊಳ್ಳಬಹುದು. ಪ್ರತಿ ಮನೆಯೊಳ್ಳೂ ಸಂಸಾರ ಮಾಡತಕ್ಕವರು ಅಭಿವೃದ್ಧಿಹೊಂದುವುದಕ್ಕೆ ತಕ್ಕ ಸಲಕರಣೆಗಳು ಇರಬೇಕು. ತರಕಾರಿ ಫಲಪುಷ್ಪಗಳನ್ನು ಅವರವರೇ ಬೆಳೆಯುಕೊಳ್ಳುವುದಕ್ಕೆ ಮನೆಗಳಲ್ಲಿ ಹಿತ್ತಲುಗಳೂ, ಸುತ್ತಲೂ ವಿಶಾಲವಾದ ಆವರಣಗಳೂ ಇರಬೇಕು. ಮನೆಗಳೆಲ್ಲಾ ಒಂದೇ ಆಕೃತಿಯಲ್ಲಿರುವುದು ಅಲಂಕಾರವೆನಿಸಲಾರದು. ಪ್ರಾಚೀನ ಕಾಲದಿಂದಲೂ ಮನೆಗಳು ಯಾವ ಯಾವ ಆಕೃತಿಗಳಲ್ಲಿದ್ದವೋ ಅಂಥಾ ಜಾತಿಗಳ ಮನೆಗಳೆಲ್ಲಾ ಒಂದು ನಗರದಲ್ಲಿ ಇರುವಂತೆ ಏರ್ಪಾಡಾಗಬೇಕು. ಮುಖ್ಯವಾಗಿ ಬಡವರು ವಾಸಮಾಡುವಂಥಾ ಮನೆಗಳು ವಿಸ್ತಾರವಾಗಿಯೂ ಅನುಕೂಲವಾಗಿಯೂ ಆರೋಗ್ಯಕರವಾಗಿಯೂ ಇರಬೇಕೆಂಬ ಭಾಗವನ್ನು ಪುರಾಧ್ಯಕ್ಷರೂ ಪಾಲಕರೂ ವಿಶೇಷವಾಗಿ ಗಮನಕೊಟ್ಟು ನೋಡಿಕೊಳ್ಳಬೇಕಾಗಿದೆ.

ಮಕ್ಕಳ ದೃಷ್ಟಿಶಕ್ತಿಯೂ ಅವರ ಮನೋವೃತ್ತಿಯೂ ಬುದ್ಧಿಶಕ್ತಿಯೂ ವಿಕಸನಹೊಂದಿ ಅವರು ಅಭಿವೃದ್ಧಿಗೆ ಬರುವುದಕ್ಕೆ ಪಾಠಶಾಲೆಗಳಲ್ಲಿ ಸಣ್ಣ ಸಣ್ಣ ತೋಟಗಳಿರಬೇಕು. ಇದರಲ್ಲಿ ಮಕ್ಕಳಿಗೆ ಸಂತೋಷ ಹೆಚ್ಚು. ಅವರು ಗಿಡವನ್ನು ಹಾಕಿ ಬೆಳಸಿ ಅದರ ಬೆಳವಣಿಗೆಯನ್ನು ನೋಡಿಕೊಳ್ಳುತ್ತಾ ಬರುವುದರಲ್ಲಿ ಅವರ ಮನೋಧರ್ಮವು ರೂಪಕ್ಕೆ ಬರುವುದು. ಪಟ್ಟಣದ ಎಲ್ಲಾ ಕಡೆಗಳಲ್ಲೂ ಒಳ್ಳೊಳ್ಳೆಯ ದಿವ್ಯವಾದ ಫಲವೃಕ್ಷಗಳನ್ನು ಬೆಳಸಿದರೆ ಪ್ರಜೆಗಳು ನಾನಾ ಬಗೆಯ ಹಣ್ಣುಗಳನ್ನು ತಿನ್ನುವುದಕ್ಕೆ ಸಹಾಯವಾದೀತು. ಇದರಿಂದ ಪ್ರಜೆಗಳ ಆರೋಗ್ಯವೂ ಅವರ ಮನೋವೃತ್ತಿಯೂ ಬಹಳ ಚೆನ್ನಾಗುತ್ತವೆ. ಎರಡನೆಯದಾಗಿ ರೇಷ್ಮೆ ವ್ಯವಸಾಯವನ್ನು ಇನ್ನೂ ಹೆಚ್ಚಾಗಿ ವರ್ಧಿಸಬೇಕು. ಈಗ ಆ ಕಸಬನ್ನು ಅಭಿವೃದ್ಧಿಗೆ ತರಬೇಕೆಂದು ಸರ್ಕಾರದವರು ಮಾಡಿರುವ ಕಾರ್ಯಗಳು ಸಂತೋಷಪ್ರದವಾಗಿವೆ. ಈ ಸೀಮೆಯ ರೇಷ್ಮೆಯು ಬಹಳ ಶ್ರೇಷ್ಠವಾದದ್ದು, ತುಂಬಾ ಬಾಳಿಕೆಯಾದದ್ದು, ಪ್ರಪಂಚದಲ್ಲಿ ಹೆಸರುವಾಸಿಗೆ ಬಂದಿರುವಂಥಾದ್ದು. ಈಗ ಈ ಕಸಬನ್ನು ಯಾವುದೋ ಒಂದು ತಂಗಡದ ಜನರು ಮಾಡು

ಈ ಕಸಬಿನಿಂದ ಜನರಲ್ಲಿ ಸ್ವಾವಲಂಬನವೂ, ದೃಷ್ಟಿಶಕ್ತಿಯೂ, ಬುದ್ಧಿಶಕ್ತಿಯೂ ವೃದ್ಧಿಯಾಗುವವು. ಉತ್ತಮಜಾತಿಯವರು ಕೂಡ ಈ ಕಸಬನ್ನು ಮಾಡಿದ ಪಕ್ಷದಲ್ಲಿ ಶ್ರೇಯಸ್ಸುಂಟಾಗುತ್ತದೆ. ಹೆಂಗಸರು ಮಕ್ಕಳು ಮನೆಯಲ್ಲಿ ನೇಯುವುದನ್ನೂ ಜರತಾರಿ ಕಟ್ಟುವುದನ್ನೂ ಸುಲಭವಾಗಿ ಕಲಿತು ಕೊಳ್ಳಬಹುದು.

ಈ ಸೀಮೆಯಲ್ಲಿ ಪ್ರಜೆಗಳು ಸುಲಭವಾಗಿ ಜೀವನ ಮಾಡಿಕೊಳ್ಳುವರು; ಕುಶಲತೆಯು ಚೆನ್ನಾಗಿದೆ. ಇಲ್ಲಿಗೆ ಪ್ರತ್ಯೇಕವಾದ ಯೂನಿವರ್ಸಿಟಿಯನ್ನು ಮಾಡಿಕೊಳ್ಳುವುದೇ ಕ್ಷೇಮ. ಇಲ್ಲಿನ ವಿದ್ಯಾಶಾಲೆಗಳನ್ನು ಹೊರಗಿನ ಯೂನಿವರ್ಸಿಟಿಗೆ ಅಂಟಿಸುವುದರಲ್ಲಿ ನಾನಾ ಕಷ್ಟನಷ್ಟಗಳುಂಟು. ಅದರಿಂದ ಪ್ರಯೋಜನವಿಲ್ಲ. ಬೋಧನಾಕ್ರಮಗಳನ್ನೂ ಕಲೆಗಳನ್ನೂ ಸ್ವತಂತ್ರವಾಗಿ ರೂಪಿಸಿ ನಡಿಸಿಕೊಳ್ಳುವದೇ ಉತ್ತಮ. ಪಾಶ್ಚಿಮಾತ್ಯರಾಜ್ಯಗಳಲ್ಲೂ ಈಗೀಗ ಇದೇ ರೂಢಿಗೆ ಬಂದಿದೆ.

ಮೈಸೂರಿನಲ್ಲಿರುವ ಮೃಗಾಲಯವನ್ನು ನೋಡಿ ತುಂಬಾ ಸಂತೋಷಪಟ್ಟೆನು. ಆಯಾ ಮೃಗಪ್ರಾಣಿಗಳಿಗೆ ಸಹಜವಾದ ಏರ್ಪಾಡುಗಳನ್ನು ಬಹು ಸಮರ್ಪಕವಾಗಿ ಮಾಡಿಟ್ಟಿದ್ದಾರೆ. ಮನುಷ್ಯರಿಗೂ, ಮೃಗಗಳಿಗೂ, ಪ್ರಾಣಿಗಳಿಗೂ ಸ್ವಭಾವಜನ್ಯವಾಗಿರುವಂಥಾ ಅನುಕೂಲಗಳನ್ನೂ ಸೌಲಭ್ಯಗಳನ್ನೂ ಒದಗಿಸಬೇಕೆಂಬುವುದೇ ನನ್ನ ಮುಖ್ಯ ಅಭಿಪ್ರಾಯವಾಗಿದೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಕೊಪ್ಪಕ್ಕೆ ಮುನ್ಸಿಫ್ ಕೋರ್ಟು.

ಅಯ್ಯಾ,—ತಮ್ಮ ಕಳೆದ 18 ನೇ ತಾ. ಪತ್ರಿಕೆಯಲ್ಲಿ ನಮ್ಮ ಸರ್ಕಾರದವರು ಕೊಪ್ಪದಲ್ಲಿ ಬರುವ ಜುಲೈನಿಂದ ಒಂದು ಮುನ್ಸಿಫ್ ಕೋರ್ಟನ್ನು ಇಡುವರೆಂದು ಕೇಳುತ್ತೇವೆಂದು ಪ್ರಕಟಿಸಲಾಗಿದೆ. ಇದು ನಿಜವಾದ ವರ್ತಮಾನವೇ? ಅಷ್ಟರಲ್ಲಿ ಇದಕ್ಕೆ ಬೇಕಾಗುವ ಕಟ್ಟಡಗಳನ್ನು ನಿರ್ಮಿಸಬಹುದೇ? ಈ ಕೊಪ್ಪವೆನ್ನುವಂಥಾದ್ದು ಯಾವದರಲ್ಲಿ ಮುಂದೆ ಹೋದಿದೆ? ಅಲ್ಲದೆ ಅಲ್ಲಿಗೆ ಹೋದ ಕಕ್ಷಿಗಾರರಿಗೆ ಉಳಿದುಕೊಳ್ಳಲು ವಸತಿ ಮತ್ತು ನೀರು ಸಹಾ ಇಲ್ಲ. ಅನುಕೂಲವಾದದ್ದು ಇದೇನೇ ಎಂಬುದನ್ನು ಅಲ್ಲಿಯ ಸ್ಥಳವಂದಿಗರನ್ನೇ ವಿಚಾರಿಸಿದಲ್ಲಿ ಗಮನಕ್ಕೆ ಬರಬಹುದು. ಮುಂಚೆಯೇ ಇಲ್ಲಿ ರೂಢಿಯಲ್ಲಿರುವ ಮಾತು ಒಂದು ನಾಣ್ಣುಡಿಯಾಗಿದೆ. ಏನೆಂದರೆ - ತಪ್ಪುಮಾಡಿದವರನ್ನು ಕೊಪ್ಪಕ್ಕೆ ಹಾಕಿ ಎನ್ನುವರು. ಇಂಥಾ ಉತ್ತಮ ಸ್ಥಳದ ಹೆಸರು ಅಲ್ಲಿರತಕ್ಕ ಸೌಲಭ್ಯದಿಂದಲ್ಲವೇ ಬಂದಿರಬಹುದು? ಈ ವಿಷಯವನ್ನು ಪುನರಾಲೋಚನೆ ಮಾಡಿದಲ್ಲಿ ಉಪಯುಕ್ತವಾಗಿ ಕಾಣಿಸುತ್ತೆ. ಇದಕ್ಕಿಂತ ಮಲೆನಾಡು ಪ್ರಾಂತ್ಯಕ್ಕೆಲ್ಲಾ ಆರೋಗ್ಯಕರವೂ ಮಧ್ಯಸ್ಥವೂ ಆಗಿರುವ [illegible]ಯಲ್ಲಿ ಕೋರ್ಟನ್ನು ಸ್ಥಾಪಿಸುವದರಿಂದ ಇದಕ್ಕೆ ಲಗತ್ ಮಾಡುವ ತಾಲ್ಲೂಕುಗಳಿಗೆಲ್ಲಾ ಸಮೀಪವಾಗಿ ಪರಿಣಮಿಸಬಹುದಾಗಿ ಎಣಿಸುತ್ತೇನೆ.

ಕ್ಷೇಮಾಭಿಲಾಷಿ.

ಕೊರೊಮ್ಯಾಂಡಲ್ ಕಂಪನಿ—ಆಕ್ಷೇಪಣೆಗೆ ಜವಾಬು.

ಅಯ್ಯಾ,—ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಮ. ಎಸ್. ಕಾಶೀಪತಯ್ಯ, ಚಾಮರಾಜಪುರಂ, ಮೈಸೂರು. ಇವರಿಗೆ ಮೇಲ್ಕಂಡ ಕಂಪನಿಯಿಂದ ತಮ್ಮ ಸೋದರಸೊಸೆಯ ಮದುವೆ ಆದ ಕ್ಕೆ ಇನ್ನೂ ವಾಗ್ದತ್ತ ಹಣ ಎಂಟು ತಿಂಗಳಾದರೂ ಪಾವತಿ ಮಾಡಲಿಲ್ಲವೆಂದು ಮುಂತಾಗಿ ಆಕ್ಷೇಪಣೆ ಮಾಡಿ, ನಮ್ಮ ಹೆಸರನ್ನು ಈ ಸಂದರ್ಭದಲ್ಲಿ ಸೂಚಿಸುತ್ತಾರೆ. ಮ. ಎಸ್. ಕಾಶೀಪತಯ್ಯನವರು ಯಾರೆಂದೇ ನಮಗೆ ತಿಳಿಯದು. ಅವರು ನಮ್ಮ ಮೂಲಕವಾಗಲೀ, ನಮ್ಮ ಸಬ್ ಏಜಂಟರ ಮೂಲಕವಾಗಲೀ ಮೇಲ್ಕಂಡ ಕಂಪನಿಯಲ್ಲಿ ಪಾಲಿಸಿಯನ್ನು ಪಡೆಯಲಿಲ್ಲ. ಅವರು ನಮಗೆ ಚಂದಾ ಹಣವನ್ನೂ ಕೊಡುತ್ತಿರಲಿಲ್ಲ. ಈ ಯಾವ ವಿಧವಾದ ಸಂಬಂಧವೂ ಇಲ್ಲದೇನೇ ಅನ್ಯಾಯವಾಗಿ ನಮ್ಮ ಹೆಸರನ್ನು ಪ್ರಕಟ ಮಾಡಿರುತ್ತಾರೆ. ನಮ್ಮ ಏಜನ್ಸಿಯಲ್ಲಿ ಪಾಲಿಸಿದಾರರಾಗಿದ್ದು ನಮ್ಮಲ್ಲಿ ಚಂದಾ ಪಾವತಿ ಮಾಡುತ್ತಾ ಬಂದವರಿಗೆಲ್ಲಾ ಅವರ ಇಂಟರೆಸ್ಟ್ ಪ್ರಕಾರ ಮದುವೆಯಾದ ಕೂಡಲೆ ಸಂಪೂರ್ಣವಾದ ಹಣ ಸರಿಯಾದ ಕಾಲಕ್ಕೆ ಸರಿಯಾಗಿ ಬೋನಸ್ ಹಣವನ್ನು ಪಾವತಿ ಮಾಡುತ್ತಾ ಬಂದಿದ್ದೇವೆ. ಇದುವರೆಗೆ ನಮ್ಮ ಮೂಲಕ ಈ ಕಂಪನಿಗೆ ಸಂಬಂಧಪಟ್ಟವರು ಇಂಥಾ ವಿಚಾರದಲ್ಲಿ ಯಾರೂ ಆಕ್ಷೇಪಣೆ ಮಾಡಿರುವುದಿಲ್ಲ. ಮ. ಕಾಶೀಪತಯ್ಯನವರು ಅನ್ಯಾಯವಾಗಿ ನಮ್ಮ ಹೆಸರನ್ನು ಪ್ರಕಟಿಸಿ ನಮಗೆ ಕೆಡಕು ಮಾಡಬೇಕೆಂದು ಪ್ರಯತ್ನ ಪಟ್ಟದ್ದಕ್ಕಾಗಿ ನಮಗೆ ಆಶ್ಚರ್ಯವುಂಟು.

ಮೈಸೂರು, 1-3-1915.
ಮೆಸರ್ಸ್ ವೆಂಕಟಾಚಲಂ ಅಂಡ್ ಸನ್ಸ್,
ಜನರಲ್ ಏಜಂಟ್ಸ್.

ದೇಶಸೇವೆಯಲ್ಲಿ ಅಗ್ರಗಣ್ಯರಾದ ಶ್ರೀಯುತ ಗೋಖಲೆಯವರು.

ಅಯ್ಯಾ,— ಗೋಪಾಲಕೃಷ್ಣ ಗೋಖಲೆಯವರು ಮಾತೃಭೂಮಿಯ ಸೇವೆಗೋಸ್ಕರ ಪ್ರಾಪಂಚಿಕ ಸುಖವನ್ನು ದೂರೀಕರಿಸಿ ತಮ್ಮ ದೇಹವನ್ನೇ ಅರ್ಪಿಸಿ ಘನವಯಸ್ಸಿನಲ್ಲಿಯೇ ಇಹಲೋಕದ ವ್ಯಾಪಾರವನ್ನು ತ್ಯಜಿಸಿದುದಕ್ಕಾಗಿ ಆಸೇತು ಹಿಮಾಚಲ ಪರ್ಯಂತರವೂ ಎಲ್ಲರೂ ವ್ಯಸನದಲ್ಲಿ ಮುಳುಗಿರುವರು. ನಮ್ಮ ಸಾರ್ವಭೌಮ ಚಕ್ರವರ್ತಿಗಳಾದ 5 ನೇ ಜಾರ್ಜರವರೂ ತಮ್ಮ ಪರಿತಾಪವನ್ನು ಸೂಚಿಸಿರುವರು. ಇದರಿಂದ ನಮ್ಮ ಭರತಖಂಡಕ್ಕೆ ದೊಡ್ಡ ನಷ್ಟ ಸಂಭವಿಸಿದ ಹಾಗಾಯಿತು. ಈ ಮಹನೀಯರ ಕೀರ್ತಿಯು ವಿದೇಶಗಳಲ್ಲಿಯೂ ಹರಡಿಕೊಂಡಿದೆ. ಇಂತಹ ಮಹಾ ಪುರುಷರ ಚಿರಸ್ಮರಣಾರ್ಥವಾಗಿ ಒಂದು ಶಾಶ್ವತವಾದ ಕೆಲಸವನ್ನು ನೆರವೇರಿಸಬೇಕೆಂದು ಅನೇಕ ಮಂದಿ ಪ್ರಯತ್ನಪಡುತ್ತಿರುವರು. ನಮ್ಮ ಮಹಾಜನರಾದ ಬೆಂಗಳೂರಿನಲ್ಲಿಯೂ ಹಲವರು ಈ ಕಾರ್ಯದಲ್ಲಿಯೇ ಉದ್ಯುಕ್ತರಾಗಿರುವರು. ಮೃತರಾದ ಗೋಖಲೆಯವರು ರಾಜಭಕ್ತಿಯುಳ್ಳವರೂ, ದೇಶವಾತ್ಸಲ್ಯವುಳ್ಳವರೂ ಆಗಿದ್ದರು. ಈ ಮಹನೀಯರ ಜೀವನ ಚರಿತ್ರೆಯನ್ನು ಭಾರತಭೂಮಿಯ ಪ್ರತಿಯೊಬ್ಬ ಶಾಲಾ ಬಾಲಕನೂ ಓದಿ, ಅವರ ಜೀವನ ಯಾತ್ರೆಯಂತೆ ತಾನು ಪ್ರಯಾಣಮಾಡಲು ಉತ್ತೇಜನವನ್ನು ಪಡೆಯಬಹುದು. ಬಾಲ್ಯದಲ್ಲಿಯೇ ಇಂತಹವುಗಳಲ್ಲಿ ಅಸ್ತಿಭಾರವನ್ನು ಹಾಕಿದರೆ ಬಾಲಕರು ನಾಗರಿಕರಾದ ಮೇಲೆ ಆ ದೇಶಾಭಿಮಾನಿಯಂತೆ ರಾಜಭಕ್ತಿಗೂ, ದೇಶವಾತ್ಸಲ್ಯಕ್ಕೂ ಅಡ್ಡಿಯಿಲ್ಲವೆಂಬುದನ್ನು ಕಲಿತು ಕೀರ್ತಿ ಪಡೆಯಬಹುದು. ಅವರ ಜೀವನ ಚರಿತ್ರೆಯನ್ನು ಆಮೂಲಾಗ್ರವಾಗಿ ತಿಳಿದವರು ಕನ್ನಡದಲ್ಲಿ ಭಾವಚಿತ್ರ ಸಹಿತ ಬರೆದು ಮುದ್ರಿಸಿ ಅದನ್ನು ನಮ್ಮ ಮೈಸೂರು ದೇಶೀಯ ಪ್ರಾಥಮಿಕ ಪಾಠಶಾಲೆಗಳಿಗೆ ಗೊತ್ತಾದ ಒಂದು ಪುಸ್ತಕವಾಗಿಟ್ಟರೆ ಈ ರೀತಿಯಲ್ಲೂ ಅವರ ಹೆಸರನ್ನು ಶಾಶ್ವತಗೊಳಿಸಿದಂತಾಗುವುದು. ಇದಕ್ಕೆ ದೇಶೀಯ ವಿದ್ಯಾಭ್ಯಾಸದ ಇಲಾಖೆಯವರು ಗಮನಿಸಿ ಈ ಸದುದ್ದೇಶವನ್ನು ನೆರವೇರಿಸುತ್ತಾರೆಂದು ನಂಬಿರುತ್ತೇನೆ.

ಬೆಂಗಳೂರು ಸಿಟಿ.
ಪಿ. ಸುಬ್ಬರಾವ್.

ತಾಲ್ಲೂಕು ವರ್ತಮಾನಗಳು.

ನಂಜನಗೂಡು.—ಇಲ್ಲಿಗೆ ಬಂದಿರುವ ಪೋಲೀಸ್ ಇನ್ಸ್‌ಪೆಕ್ಟರು ಈ ತಾಲ್ಲೂಕಿನಲ್ಲಿ ಬಹಳ ದಿವಸಗಳಿಂದಲೂ ಜೂಜು ನಡಿಸುತ್ತಾ ಇದ್ದ ಜೂಜುಗಾರರನ್ನೆಲ್ಲಾ ಹಿಡಿದು ಅವರ ಮೇಲೆ ಅಮಲ್ದಾರ್ರ ಕೋರ್ಟಿನಲ್ಲಿ ಮೊಕದ್ದಮೆ ತಂದಿದ್ದಾರೆ. ವಿಚಾರಣೆಯಲ್ಲಿ ಏನಾದೀತೋ ಗೊತ್ತಿಲ್ಲ.—ಗುಂಡ್ಲು ಸೇತುವೆಯ ದಕ್ಷಿಣಭಾಗದಲ್ಲಿ ಸೇತುವೆಯು ಕೈಸಿಡಿ ಗೋಡೆಯಿಂದ ಕೆಳಗಿನ ವರೆಗೂ ಬಿರುಕು ಬಿದ್ದು ಇರುತ್ತೆ. ಇದನ್ನು ಅಮಲ್ದಾರ್ರೂ, ಸಬ್ ಡಿವಿಜನ್ ಆಫೀಸರು ಮುಂತಾಗಿ ಎಲ್ಲರೂ ನೋಡತಕ್ಕದ್ದಾಗಿದೆ. ಯಾರೂ ಇದರ ವಿಚಾರಣೆಮಾಡಿಲ್ಲ.—ಇಲ್ಲಿನ ರೀಡಿಂಗ್ ರೂಮನ್ನು ಫ್ರೀ ರೀಡಿಂಗ್ ರೂಮಾಗಿ ಮಾಡಿರುತ್ತಾರೆ. ಇಲ್ಲಿಗೆ ಇಂಗ್ಲೀಷು ಪೇಪರುಗಳು ಮುಂಚೆ ಬರುತ್ತಾ ಇದ್ದವುಗಳು ಕಮ್ಮಿ ಆಗಿದೆ.

ಹೆಗ್ಗಡದೇವನಕೋಟೆ.—ಪ್ರಜೆಗಳು ಪ್ಲೇಗ್ ಬೇನೆಯಿಂದ ಊರನ್ನು ಬಿಟ್ಟು ಸುಮಾರು ಮೂರು ತಿಂಗಳಿಂದ ಹೊರಗೆ ಷೆಡ್ಡುಗಳಲ್ಲಿ ವಾಸಿಸುತ್ತಿರುವರು. ಸುಮಾರು 15-20 ಜನರ ವರೆಗೂ ಕಾಲವಾದರು. ಇಲ್ಲಿನ ಅಮಲ್ದಾರ್ರು ಕಾರ್ಯಾರ್ಥವಾಗಿ ಮೈಸೂರಿಗೆ ಹೋಗಿರುವರು.—ವೆಸ್ಲಿಯನ್ ಮಿಷನ್ ಇಲಾಖಾ ಸೂಪರಿಂಟೆಂಡೆಂಟರಾದ ರೆವ್ ಸಾಡೇಸಾಹೇಬರು 20 ನೇ ತಾ. ಶನಿವಾರ ಬೆಳಿಗ್ಗೆ ಇಲ್ಲಿಗೆ ಮೋಟರಿನಲ್ಲಿ ದಯಮಾಡಿ ಟವನನ್ನೂ, ಇಲ್ಲಿನ ಆಸ್ಪತ್ರೆಯ ಕಾರುಬಾರುಗಳನ್ನೂ ಪರಾಂಬರಿಸಿ ಟವನ್ ಆಬಾದಿನ ಬಗ್ಗೆ ಕೆಲವು ಸಲಹೆಗಳನ್ನು ಬರೆದಿಟ್ಟರು. ಆಸ್ಪತ್ರೆಗೆ ಬರತಕ್ಕ ರೋಗಿಗಳ ಸಂಖ್ಯೆ 50 ರಿಂದ 55 ಆಗುತ್ತೆ. ಡಾಕ್ಟರವರ ಮೆಹನತ್ತು ವಿಶೇಷವಾದದ್ದೆಂದು ಕಾಣುವುದು. ಗೌರ್ನಮೆಂಟಿನವರು ಈ ಊರು ಆಬಾದಿನ ವಿಷಯ ಲಕ್ಷ್ಯವಿಡಬೇಕು.

ಅರಸೀಕೆರೆ ತಾ|| ಬೆಂಡೆಕೆರೆ.—ಈ ಗ್ರಾಮಕ್ಕೆ ಯಲಹಂಕದ ಶ್ರೀಮಠದ ಸ್ವಾಮಿಗಳವರ ಸವಾರಿಯು ದಯಮಾಡಿಸಿದಾಗ್ಗೆ ಗ್ರಾಮಸ್ಥರು ಬಾಜಾ ಬಜಂತ್ರಿಯೊಡನೆ ಮೆರವಣಿಗೆಯಲ್ಲಿ ಅತ್ಯಂತ ಉತ್ಸಾಹದಿಂದ ಬರಮಾಡಿಕೊಂಡರು.—ಇಲ್ಲಿ ಗ್ರ್ಯಾಂಟ್ ಸ್ಕೂಲು ಸ್ಥಾಪನೆಯಾಗಿ 2-3 ತಿಂಗಳಾಯಿತು. ಈ ಸ್ಕೂಲಿಗೆ 20-25 ಬಾಲಕರು ಸೇರಿರುತ್ತಾರೆ. ಈ ಸ್ಕೂಲಿನ ಮಾಸ್ಟರಾದ ಶ್ರೀರಂಗಪ್ಪನವರು ಮುತುವರ್ಜಿಯಿಂದ ಕೆಲಸಮಾಡುವರು.—ಗ್ರಾಮದಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿದಾಗ್ಗೆ ಮ|| ಅಹೋಬಲ ಶಾಸ್ತ್ರಿಗಳವರು ಅಗ್ರಾಸನವನ್ನು ವಹಿಸಿ ಸೇರಿದ್ದ ಮಹಾಜನಗಳಿಗೆ ಈ ಗ್ರಾಮದಲ್ಲಿ ಒಂದು ರೀಡಿಂಗ್ ರೂಮ್ ಇರುವುದು ಅವಶ್ಯಕವೆಂದು ಹೇಳಿ ಅದರ ಪ್ರಯೋಜನವನ್ನು ವಿವರಿಸಿ ಉಪನ್ಯಾಸಮಾಡಲಾಗಿ ಗ್ರಾಮಸ್ಥರು ಅದರಂತೆ ಒಪ್ಪಿಕೊಂಡರು. ರೀಡಿಂಗ್ ರೂಮ್ ಪ್ರಾರಂಭವಾಗಿದೆ. ಪ್ರತಿ ಸೋಮವಾರವೂ ಗ್ರಾಮಸ್ಥರಿಗೆ ಶ್ರೀರಂಗಪ್ಪನವರು ಪತ್ರಿಕೆಗಳನ್ನು ಓದಿ ವಿವರಿಸುತ್ತಾ ಬರುವುದು ಸಂತೋಷವಾಗಿದೆ.—ಈ ಗ್ರಾಮದ ಪಕ್ಕದಲ್ಲಿರುವ ಬಾವಿಯ ನೀರನ್ನು ಬಿಟ್ಟರೆ ಕುಡಿಯುವುದಕ್ಕೆ ಬೇರೆ ಬಾವಿಗಳೇ ಇಲ್ಲ. ಅಲ್ಲದೆ ಈ ಬಾವಿಯ ಬಳಿಯಲ್ಲಿ ಸಾವಿರಾರು ಪ್ರಯಾಣಿಕರು ತಂಗುವ ಸ್ಥಳವಾಗಿದೆ. ಇಂಥಾ ಬಾವಿಯಲ್ಲಿ ಗ್ರಾಮಸ್ಥರು ಬಟ್ಟೆ ಒಗೆಯುವುದು, ದನಕರುಗಳನ್ನು ಕುಡಿಸುವುದು, ಇದರಿಂದ ಸಗಣಿ ಗಂಜಲ ಬೀಳುವುದು. ಈ ನೀರನ್ನೇ ಜನಗಳು ಕುಡಿದು ರೋಗಾದಿಗಳಿಗೆ ಆಸ್ಪದವಾಗುವುದರಿಂದ ಸರ್ಕಾರದವರು ಬಾವಿಯ ನೀರನ್ನು ಕೆಡಿಸದಂತೆ ಏರ್ಪಾಡು ಮಾಡಬೇಕಾಗಿದೆ.

ಹುಳಿಯಾರು.—ಕಳೆದ ಮಾಹೆ ತಾ. 30 ರಲ್ಲಿ ಇಲ್ಲಿಗೆ ಸೀನಿಯರ್ ಸರ್ಜನ್ ಸಾಹೇಬರವರು ಸೀರೀ ಮಾರ್ಗವಾಗಿ ದಯಮಾಡಿಸಿ ಇಲ್ಲಿನ ಆಸ್ಪತ್ರೆಯನ್ನು ನೋಡಿ ಸಂತುಷ್ಟರಾಗಿ ಸಾಯಂಕಾಲ ಚಿಕ್ಕನಾಯಕನಹಳ್ಳಿಗೆ ಹೊರಟುಹೋದರು. ಇಲ್ಲಿನ ಡಾಕ್ಟರ್ ಅಪ್ಪರಾಯರು ರೋಗಿಗಳನ್ನು ಚೆನ್ನಾಗಿ ಆದರಿಸುವುದರಿಂದ ವಾರ್ಡಿನಲ್ಲಿ ಯಾವಾಗಲೂ ರೋಗಿಗಳಿದ್ದೇ ಇರುವರು. ಈಗ 10-12 ದಿವಸಗಳ ಹಿಂದೆ ಒಬ್ಬ ಹುಡುಗನು ಮರದಿಂದ ಬಿದ್ದು ತಲೆಯೆಲ್ಲಾ ಒಡೆದು ಮುಖವೆಲ್ಲಾ ಕೆತ್ತಿಹೋಗಿ ಬಹಳ ಅಪಾಯಸ್ಥಿತಿಯಲ್ಲಿದ್ದನು. ಸೀನಿಯರ್ ಸರ್ಜನ್‌ರವರು ದಯಮಾಡಿಸಿದ ವೇಳೆಯಲ್ಲಿ ಈ ರೋಗಿಯ ಸ್ಥಿತಿಯನ್ನು ಪರಾಮರಿಸಿದರು. ಈಗ ಗುಣವಾಗಿದೆ.—ಇಲ್ಲಿನ ನೀರಿನ ತೊಂದರೆಯು ಎಲ್ಲಾ ಅಧಿಕಾರವರ್ಗದವರಿಗೂ ಗೊತ್ತಿದೆ. ಈಗ ಇಲ್ಲಿನ ವರ್ತಕರಲ್ಲಿ ಕೆಲವರು ಕೆರೆಯೊಳಗೆ 1-2 ಬಾವಿಗಳನ್ನು ತೋಡಿಸುತ್ತಿರುವರು. ಇವುಗಳಲ್ಲಿ ಸುಮಾರಾಗಿ ನೀರು ಬಂದಿದೆ. ಇದುವರೆವಿಗೆ ಅನುಭವಿಸಿದ ನೀರಿನ ತೊಂದರೆಯಿಂದ ಈಗ ಸ್ವಲ್ಪ ದೂರದಲ್ಲಾದರೂ ನೀರು ಸಿಕ್ಕುವುದೆಂದು ಜನಗಳು ಅಷ್ಟಕ್ಕೇ ಸಂತೋಷಪಡುತ್ತಿದ್ದಾರೆ. ಊರೊಳಗಂತೂ ಯಾವ ಬಾವಿಯಲ್ಲೂ ನೀರೇ ಇಲ್ಲ.—ಇಲ್ಲಿಗೆ 2 ಮೈಲಿಯಲ್ಲಿ ಪ್ರೋಬುಗಟ್ಟ ಎಂಬ ಗ್ರಾಮವು ತಮಗೆ ಏಳಿಗೆ ಇಲ್ಲವೆಂದು ಈಗ 2-3 ವರ್ಷಗಳಿಂದ ಬೇರೆ ಸ್ಥಳಗಳಲ್ಲಿ ಗರಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದರು. ಮೊನ್ನೆ 25 ನೇ ತಾ. ಸಾಯಂಕಾಲ 5 ಗಂಟೆ ವೇಳೆಯಲ್ಲಿ ಬೆಂಕಿಬಿದ್ದು ಗ್ರಾಮವೆಲ್ಲಾ ಪೂರ್ತಿಯಾಗಿ ಸುಟ್ಟುಹೋಯಿತು. ಜನ ಮತ್ತು ದನಕರುಗಳು ಹೊರಗೆ ಹೋಗಿದ್ದುದರಿಂದ ಯಾವ ಪ್ರಾಣಿಗೂ ಅಪಾಯವಾಗಿಲ್ಲ. ಆದರೆ ಪದಾರ್ಥಗಳು ನಾಶವಾದವು. ಇಲ್ಲಿನವರು ಕ್ರಮವನ್ನು ಕಲಿತಿರರು. ಹೀಗೆ ಗುಡಿಸಲುಗಳನ್ನು ಒಟ್ಟಾಗಿ ಕಟ್ಟಿಕೊಳ್ಳುವುದು ಬೇಸಗೆಯಲ್ಲಿ ತುಂಬಾ ಅಪಾಯಕರ.

ಹಾಸನ.—ಪ್ಲೇಗ್ ರೋಗ ಶಮನವಾಗಿದೆ. ಬಿಸಿಲಿನ ತಾಪ ಹೆಚ್ಚು. ತಾ. 27 ನೇ ಶನಿವಾರ ಮೋಡಗಳು ಹಾಕಿಕೊಂಡು ಅಪರಾಹ್ನದಲ್ಲೂ ರಾತ್ರಿಯೂ ಬಹು ಒಳ್ಳೇ ಮಳೆ ಬಂದಿತು. ಈಗ ಮಳೆ ಬಂದುದು ಸರಿಯಲ್ಲವೆಂದೂ, ಕುಂಭಮಾಸದಲ್ಲಿ ಮೇಘವು ಕಳಚಬಾರದೆಂದೂ ಹೇಳುತ್ತಾರೆ. ಧಾರಣೆಯಂತೂ ಸ್ವಲ್ಪವಾದರೂ ಅನುಕೂಲವಾಗಿಲ್ಲ.—ಕಳೆದ ತಾ. 23 ನೇ ಮಂಗಳವಾರ ಸಾಯಂಕಾಲ ಇಲ್ಲಿನ ಜೂಬಲಿ ಹಾಲ್ ಎಂಬ ಭವನವು ದಿವ್ಯವಾಗಿ ತಳಿರು ತೋರಣಗಳಿಂದ ಶೃಂಗಾರವಾಗಿ ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕಿನ ಪ್ರತಿನಿಧಿಗಳಿಂದಲೂ ತುಂಬಿ ವಿಜೃಂಭಿಸುತ್ತಿದ್ದಿತು. ಪಟ್ಟಣದ ಪ್ರಮುಖರೂ ಅಧಿಕಾರಿಗಳೂ ಸೇರಿ ನಮ್ಮ ಪ್ರಜಾಪ್ರತಿನಿಧಿಗಳಾದ ರಿಟೈರ್ಡ್ ಡೆಪ್ಯುಟಿ ಕಮಿಷನರ್ ಮಿ|| ವೆದರಾಲ್ ಸಾಹೇಬರನ್ನು ವಾದ್ಯಘೋಷದೊಡನೆ ಕರೆದುತಂದು ಶ್ರೇಷ್ಠಾಸನದಲ್ಲಿ ಕೂಡಿಸಿ ಅವರ ಗುಣಕಥನಗಳನ್ನು ಇಂಗ್ಲಿಷ್, ಕನ್ನಡ, ಹಿಂದೂಸ್ಥಾನಿ, ಸಂಸ್ಕೃತ ಭಾಷೆಗಳಲ್ಲಿ ಸಮಸ್ತರು ಮುದ್ರಿಸಿ ಕೊಡಿಸಿದ್ದ ಮೇಲೆ ಈ ಮಹನೀಯರಿಗಾಗಿಯೇ ತಯಾರ್ಮಾಡಿಸಿದ್ದ ಬೆಳ್ಳಿ ತಗಡಿನ ಮೇಲೆ ಕೆತ್ತಲ್ಪಟ್ಟ ಈ ಹಾಸನದ ಡಿಸ್ಟ್ರಿಕ್ಟಿನ ನಕ್ಷೆಯನ್ನು ಬಹುಮಾನವಾಗಿ ಅರ್ಪಿಸಿದರು. ಇದು ಒಂದು ಉತ್ಕೃಷ್ಟ ರೀತಿಯಲ್ಲಿ ತಯಾರ್ಮಾಡಲ್ಪಟ್ಟಿದೆ. ಬೆಟ್ಟಗುಡ್ಡಗಳೂ, ನದಿಗಳೂ, ಮಾರ್ಗಗಳೂ ಬಹು ಅಂದವಾಗಿ ಇದರಲ್ಲಿ ನಿರ್ಮಿತವಾಗಿರುತ್ತವೆ. ಸಭಾಸದರು ಅತ್ಯಂತ ವೈಭವ ಉತ್ಸಾಹಗಳಿಂದ ಈ ಸತ್ಕಾರವನ್ನು ನಡಿಸಿದರು. ಲಂಬಾಣಿಗರ ಕೋಲಾಟವೂ, ಪಟ್ಟೆಕತ್ತಿ ತಿರುಗಿಸುವಿಕೆಯೂ, ರಾತ್ರಿಯಲ್ಲಿ ಬಾಣಬಿರುಸುಗಳೂ ಪರಮಾನಂದವನ್ನುಂಟುಮಾಡಿದವು. ಇದೆಲ್ಲಾ ರಾತ್ರಿ ಸುಮಾರು 8½ ಘಂಟೆ ವರೆಗೂ ನಡೆಯಿತು. ಈ ಕಾಲದಲ್ಲಿ ನಮ್ಮ ಈಗಿನ ಡೆಪ್ಯುಟಿ ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರೂ ದಯಮಾಡಿಸಿದ್ದು ಸದಸ್ಯರ ಮನಸ್ಸಂತೋಷಪಡಿಸಿದರು. ಕಡೆಯಲ್ಲಿ ಮಿ|| ವೆದರಾಲ್ ಸಾಹೇಬರವರು ತಾಲ್ಲೂಕಿನ ಪ್ರತಿನಿಧಿಗಳನ್ನೆಲ್ಲಾ ಆದರ ಪುರಸ್ಸರವಾಗಿ ವಂದಿಸಿ ತಮ್ಮ ಸಹಜವಾದ ಕೃತಜ್ಞತೆಯನ್ನು ಅಪಾರವಾಗಿ ಪ್ರಕಾಶಪಡಿಸಿದರು. ಇಲ್ಲಿಗೆ ಸಭಾಕಾರ್ಯವು ಮುಕ್ತಾಯವಾಗಿ, ನಮ್ಮ ಶ್ರೀಮನ್ಮಹಾರಾಜರವರಿಗೂ, ಶ್ರೀಮಚ್ಚಕ್ರವರ್ತಿ ಸಾರ್ವಭೌಮರವರಿಗೂ, ಉಭಯರಾಜ್ಯ ಪ್ರಜಾನೀಕರಿಗೂ ನೆಮ್ಮದಿ ಆಯುರಾರೋಗ್ಯಾದಿಗಳನ್ನು ಹಾರೈಸಿದರು.

ಅರಕಲಗೂಡು.—ಈ ಊರಿನಲ್ಲಿ ಹವಾ ಸ್ವಲ್ಪಮಟ್ಟಿಗೆ ಆರೋಗ್ಯಕರವಾಗಿದೆ. ಬಿಸಿಲು ಜಾಸ್ತಿ. ಸುಗ್ಗಿಯ ಕಾಲವಾದರೂ ಧಾನ್ಯದ ಮಾರಾಟ ಯಥಾಸ್ಥಿತಿಯಲ್ಲಿದೆ. ರಾಗಿ ರೂಪಾಯಿಗೆ 14 ಸೇರು, ಅಕ್ಕಿ 8–9 ಸೇರು ಸಿಕ್ಕುತ್ತದೆ. ಸಂಸಾರವುಳ್ಳ ಅಲ್ಪ ಸಂಬಳದ ನೌಕರರು ಜೀವನಮಾಡುವುದು ಕಷ್ಟ.—ಈ ಊರಿನ ಮ್ಯುನಿಸಿಪಾಲಿಟಿ ಕೆಲಸಗಳು ಅತೃಪ್ತಿಕರವಾಗಿವೆ. ಝಾಡಮಾಲಿಗಳು ಎಲ್ಲಾ ಬೀದಿಗಳನ್ನೂ ಸರಿಯಾಗಿ ಗುಡಿಸುವುದಿಲ್ಲ. ಚರಂಡಿಗಳಲ್ಲಿ ಹುಲ್ಲು ಮೊದಲಾದ ಕಸ ನಿಂತು ಬಚ್ಚಲ ನೀರನ್ನು ತಡೆದು ದುರ್ವಾಸನೆಯನ್ನುಂಟುಮಾಡುತ್ತಾ ಇದೆ. ಈ ಕೆಟ್ಟ ವಾಸನೆ ಪೇಟೆಯ ಪೂರ್ವದಿಕ್ಕಿನಲ್ಲಿ ಹೆಚ್ಚಾಗಿದೆ. ಕುರುಬರ ಬೀದಿಗಳಲ್ಲಿರುವ ತೊಂದರೆ ಹೆಚ್ಚು. ದಕ್ಷಿಣದಿಕ್ಕಿನ ಬೀದಿಯಲ್ಲಿ ಈ ಬೇಸಗೆಕಾಲದಲ್ಲಿ ಮುದುಕರೂ ಮಕ್ಕಳೂ ಸಂಚರಿಸುವುದು ಕಷ್ಟ. ದಯಾಳು ಸರ್ಕಾರದವರು ಈ ಕಾಲದಲ್ಲಿ ಮಟ್ಟಿ ಕಾಮಗಾರಿ ಮಾಡಿಸಿ ಚರಂಡಿ ಕಟ್ಟಿಸಿದರೆ ಮುಂದಿನ ಮಳೆಗಾಲಕ್ಕೆ ಅನುಕೂಲವಾಗುತ್ತೆ. ಈ ಬೀದಿಯನ್ನು ಒತ್ತರಿಸಿಕೊಂಡು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಸಂಚಾರಕ್ಕೆ ಇದರಿಂದ ತುಂಬಾ ಅಡಚಣೆಯಾಗಿದೆ. ಈ ಸಂಗತಿಯನ್ನು ಮ್ಯುನಿಸಿಪಾಲಿಟಿಯವರಿಗೆ ಅರಿಕೆಮಾಡಿಕೊಂಡಾಗ್ಯೂ ಗಮನಿಸದೆ ಇರುವುದು ಯಾಕೋ ತಿಳಿಯದು. ರಾತ್ರಿಕಾಲದಲ್ಲಿ ದೀಪಗಳ ಪ್ರಕಾಶವೇ ಕಾಣಿಸುವುದಿಲ್ಲ. ಮ್ಯುನಿಸಿಪಾಲಿಟಿಯವರೂ, ಅಮಲ್ದಾರ್ರವರೂ ಗಮನಕೊಟ್ಟು ಈ ಕೊರತೆಗಳನ್ನೆಲ್ಲಾ ಹೋಗಲಾಡಿಸಿಕೊಡುತ್ತಾರೆಂತ ನಂಬುತ್ತೇನೆ.—(ಇನ್ನೊಬ್ಬ ಬಾತ್ಮಿದಾರರಿಂದ) ಫೆಬ್ರವರಿ ತಾ. 22 ನೇ ಸೋಮವಾರ ಬೆಳಿಗ್ಗೆ ಮೈಸೂರು ಸೀಮೆಯ ವ್ಯವಸಾಯದ ಡಿರೆಕ್ಟರ್ ಕೋಲ್ಮನ್ ಸಾಹೇಬರವರೂ, ಮ|| ಟಿ. ರಾಮಚಂದ್ರರಾಯರೂ ಈ ಊರಿಗೆ ದಯಮಾಡಿಸಿದರು. ನಮ್ಮ ಅಮಲ್ದಾರ್ ಮ|| ಜಿ. ಎಸ್. ರಾಮಸ್ವಾಮಯ್ಯಂಗಾರ್ರು ತಾಲ್ಲೂಕಿನ ನಾನಾ ಹೋಬಳಿಗಳಿಂದ ಬಂದ ಪ್ರಮುಖರಾದ ರೈತರು, ಊರಿನ ಪ್ರಮುಖರು ಸೇರಿದರು. ಡಾ|| ಕೋಲ್ಮನ್ ಸಾಹೇಬರವರು ಅವರ ಕಡೆಯವರು ಸಹ ಮ|| ಸಾಹುಕಾರ್ ಎ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಬ್ರದರ್ಸ್‌ರವರ ಸ್ಪೆಷಲ್ ಗಾರ್ಡನ್‌ಗೆ ಎಲ್ಲಾ ಪ್ರಮುಖರೊಂದಿಗೆ ದಯಮಾಡಿಸಿ ಅಲ್ಲಿ ಅಡಕೆ, ತೆಂಗು ಮತ್ತು ಮರಗಳಿಗೆ ಮಾತ್ರ ಬರುವ ಅಣಬೆ ರೋಗದ ವಿಚಾರವಾಗಿ ತಿಳಿಯಹೇಳಿ, ರೋಗ ಹಿಡಿದ ಮರಗಳನ್ನು ತೋರಿಸಿ, ಅಣಬೆಯನ್ನು ಕಿತ್ತು ಮೈಕ್ರೊಸ್ಕೋಪ್ ಎಂಬ ಭೂತಕನ್ನಡಿಯಿಂದ ಎಲ್ಲರಿಗೂ ತೋರಿಸಿ, ಆ ರೋಗದ ವಿಚಾರವಾಗಿ ಅನೇಕ ಸಂಗತಿಗಳನ್ನು ಹೇಳಿದರು. ಈ ಸಂಪಗೆ ಮರದ ಒಂದು ಕೊಂಬೆಯು ಕತ್ತರಿಸಲ್ಪಟ್ಟ ಭಾಗದಿಂದ ದ್ರವವನ್ನು ಸುರಿಸುತ್ತಿದ್ದದ್ದನ್ನು ಅಜಮಾಯಿಷಿ ಮಾಡಿದರು. ಕಸಿಮಾವಿನ ಮರಗಳು ರೆಂಬೆಗಳ ಮೋಟುಗಳು ಉಳಿಯುವಂತೆ ಕತ್ತರಿಸಲ್ಪಟ್ಟಿದ್ದವು. ರೆಂಬೆಗಳು ಕತ್ತರಿಸಲ್ಪಡಬೇಕಾದರೆ ಮೋಟುಗಳು ಉಳಿಯದಂತೆ ಗರಗಸದಿಂದ ರೆಂಬೆಯು ಮಟ್ಟಕ್ಕೆ ಸರಿಯಾಗಿ ಕೊಯ್ದು ಆ ಭಾಗಕ್ಕೆ ಟಾರನ್ನು ಬಳಿಯಬೇಕೆಂತ ಹೇಳಿದರು. ಇಲ್ಲದಿದ್ದರೆ ಗಿಡಕ್ಕೆ ಕಾಣೆ ನಂಜೇರುವುದಂತೆ. ರೋಗ ತಗಲಿದ ತೆಂಗಿನ ಮರವನ್ನು ಪರೀಕ್ಷಿಸಿ ಬಹು ವಿಷಯಗಳನ್ನು ತಿಳುಹಿಸಿದರು. ಈ ಕೆಲಸಗಳೆಲ್ಲಾ ಉರಿಬಿಸಿಲಿನಲ್ಲಿ ಸಂಚಾರಮಾಡುತ್ತಾ ಮಾಡಬೇಕಾಯಿತು. ಆ ಕಾಲಕ್ಕೆ ಸರಿಯಾಗಿ ಆಪ್ಯಾಯನವಾಗುವಂತೆ ಮೆಸರ್ಸ್ ಎ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಬ್ರದರ್ಸ್ ತಮ್ಮ ಬಂಗ್ಲೆಗೆ ಸಾಹೇಬರಾದಿಯಾಗಿ ಎಲ್ಲಾ ಪ್ರಮುಖರನ್ನೂ ಕರೆದುಕೊಂಡುಹೋಗಿ ದಾಹಶಮನಕ್ಕೆ ಎಳನೀರು, ಪಾನಕಗಳನ್ನು ಸ್ವೀಕರಿಸುವಂತೆ ಕೇಳಿಕೊಂಡರು. ಬಳಿಕ ಅಲ್ಲಿಂದ ಹೊರಟು ಚಲುಮೆ ಮಠದ ತೋಟದ ಮರಗಳನ್ನು ಪರೀಕ್ಷಿಸಿ, ಪ್ರಮುಖರೆಲ್ಲರೂ ಭೋಜನಕ್ಕೆ ಹೋಗಲು ಅನುಜ್ಞೆಯನ್ನಿತ್ತು, ಪುನಹ ಮಧ್ಯಾಹ್ನ 1½ ಗಂಟೆಗೆ ಸಭೆಗೆ ಬರುವಂತೆ ತಿಳಿಸಿ, ತಾವು ಟ್ರ್ಯಾವಲರ್ಸ್ ಬಂಗ್ಲೆಗೆ ದಯಮಾಡಿದರು. ಆ ಕಾಲಕ್ಕೆ ತಾಲ್ಲೂಕ್ ಕಚೇರಿ ಹಾಲಿನಲ್ಲಿ ಕಿಕ್ಕಿರಿದು ತುಂಬಿದ್ದ ಜನಗಳ ಮಧ್ಯೆ ಸಾಹೇಬರವರ ಅಭಿಪ್ರಾಯಗಳನ್ನು ಮ|| ಟಿ. ರಾಮಚಂದ್ರರಾಯರು ತಿಳಿಗನ್ನಡದಲ್ಲಿ ರೈತಾಪಿ ಜನರ ಮನಸ್ಸಿಗೆ ಮುಟ್ಟುವಂತೆ ಹೇಳಿದರು. ಊರಿನವರೂ ಹಳ್ಳಿಯವರೂ ಇಷ್ಟು ಉತ್ಸಾಹದಿಂದ ಸೇರಿ ಗಲಭೆ ಇಲ್ಲದೆ ವಿಷಯಗಳನ್ನೆಲ್ಲಾ ಸಾವಧಾನಚಿತ್ತದಿಂದ ಕೇಳಿದ್ದು ಬಹಳ ಸಂತೋಷಕರವಾಗಿತ್ತು. ನಮ್ಮ ಶ್ರೀಮನ್ಮಹಾರಾಜರವರು ಇಲಾಖೆಯನ್ನೇರ್ಪಡಿಸಿದ ಉದ್ದೇಶವು ನೂರು ಪಾಲು ಸಾವಿರ ಪಾಲು ಫಲಕಾರಿಯಾಗುತ್ತಾ ಬರುತ್ತಿದೆ. ಜೀವನೋಪಾಯಗಳಲ್ಲೆಲ್ಲಾ ಗಂಭೀರವಾದ ವ್ಯವಸಾಯ ವೃತ್ತಿಯು ದೇಶದ ಉನ್ನತಿಗೆ ಮೂಲಸ್ವರೂಪವಾದದ್ದು. [illegible] ಉತ್ತೇಜನಗಳನ್ನು ಕೊಡುತ್ತಾ, ವಾಸ್ತವ್ಯವಾಗಿಯೂ ಈ ವೃತ್ತಿಯು ವೃದ್ಧಿಯಾಗುವಂತೆ ಜನಗಳ ಮನಸ್ಸಿಗೆ ನಾಟುವ ಹಾಗೆ ಮಾಡುತ್ತಾ ಬಂದರೆ ದೇಶವು ಏಳಿಗೆ ಬರುವುದು ಖಂಡಿತ. ಉರಿಬಿಸಿಲಿನಲ್ಲಿ ಬಟ್ಟಬಯಲ ಕಣಗಳಲ್ಲಿ ಬಟ್ಟೆಯಿಂದಲೂ ಸಹ ಮುಚ್ಚದಿರುವ ಹೊಟ್ಟೆ ರೆಟ್ಟೆ ಬೆನ್ನುಗಳನ್ನು ಬಿಟ್ಟುಕೊಂಡು ರಾಗಿಯನ್ನು ಬಡಿಯುವ ರೈತರ ವಿಚಾರದಲ್ಲಿ ಬಹಳ ಕನಿಕರಪಟ್ಟರು. ಸ್ವಲ್ಪ ಬೆಲೆಗೆ ಸಿಕ್ಕುವ ಅಥವಾ ಮಾಡಿಸಿಕೊಳ್ಳಬಹುದಾದ ರೋಲರ್‌ಗಳನ್ನು ಉಪಯೋಗಿಸುವಂತೆ ಬೋಧಿಸಿದರು. (ರಸ್ತೆಗಳಲ್ಲಿ ಕಂಟ್ರಾಕ್ಟುದಾರರು ಉಪಯೋಗಿಸುತ್ತಿರುವ ದುಂಡಾದ ಕಲ್ಲುಗಳನ್ನು ರೈತರು ನೋಡಿರುವರು. "ರೋಣಗಲ್ಲು" ಎಂತ ಹೇಳುವರು. ಇದಕ್ಕೇನೇ ರೋಲರ್ ಎಂತ ಹೆಸರು. ಸಾಹೇಬರವರು ಹೇಳಿದ್ದೂ ಇಂತಹದೇನೇ), ಇವುಗಳನ್ನು ಉಪಯೋಗಿಸುವುದರಿಂದ ರಾಗಿಯು ಒಕ್ಕಣೆಯಾಗುವುದು ಸುಗಮವೂ ಹೇಗೆ ಎಂಬುದಾಗಿ ಬೋಧಿಸಬಹುದು. ಇದರ ಉಪಯೋಗವನ್ನು ಬಹು ಜನ ರೈತರು ಸಾಕ್ಷಾತ್ತಾಗಿ ನೋಡಲು ಹಲವು ಸ್ಥಳಗಳಲ್ಲಿ ಉಪಯೋಗಪಡಿಸಿ ಕೊಡಬೇಕು. ರೈತರಿನ್ನೂ ತಾವಾಗಿಯೇ ಮುಂದರಿದು ಬರುವಷ್ಟು ಯೋಗ್ಯತೆಯನ್ನು ಸಂಪಾದಿಸಿಲ್ಲ. ಬಾಯಿಮಾತಿನಲ್ಲಿ ಎಷ್ಟೇ ಬೋಧಿಸಿದಾಗ್ಯೂ ಅವರಲ್ಲಿ ಆಚರಣೆಗೆ ಬರುವಂತೆ ಮಾಡುವುದು ಕಷ್ಟಸಾಧ್ಯ. ಇದನ್ನು ಮಾಡಿ ತೋರಿಸಿಕೊಡುವಂತೆ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರಿಗೆ ವಹಿಸಬಹುದು. ಬಳಿಕ ಬೀಜದ [illegible] ಭತ್ತದ ಸಸಿಗಳನ್ನು 8-10 ಗಣಗಳನ್ನು ನೆಡುವುದಕ್ಕೆ ಬದಲಾಗಿ 2-3 ಸಸಿಗಳನ್ನು ಹಾಕುವುದು, ಅಲೂಗಡ್ಡೆ (ಉರುಳಗಡ್ಡೆ) ಯನ್ನು ಹಾಕುವವರಿಗೆ ಈ ದೇಶದನ್ನು ಹಾಳದ ಇಟಲಿಯಿಂದ ಬೀಜವನ್ನು ತಾವು ಒದಗಿಸಿಕೊಡುತ್ತೇವೆ ಎಂಬ ವಿಚಾರ, ಹೊಸ ತರಹಾ ನೇಗಿಲುಗಳನ್ನು ಉಪಯೋಗಿಸುವುದು, ಕೋಆಪರೇಟಿವ್ ಸೊಸೈಟಿಗಳ ಮೂಲಕ ನೇಗಿಲು ವಿಕ್ರಯಿಸುವಿಕೆ, ಪ್ರಕೃತ ಹತ್ತಿಯು ವ್ಯವಸಾಯದಲ್ಲಿ ಲಾಭವಿಲ್ಲದೆ ಇರುವ ವಿಚಾರ, ಅಣಬೆ ರೋಗವನ್ನು ನಿವಾರಿಸುವ ಬಗೆ, ಈ ಮೊದಲಾದ ವಿಷಯಗಳನ್ನು ಕುರಿತು ಮಾತನಾಡಿ, ಮ. ಎ. ವಿ. ಸೂರ್ಯನಾರಾಯಣಶೆಟ್ಟಿ ಮೂಲಕ ಅನೇಕರಿಗೆ ನಾನಾ ಬಗೆಯ ಬೀಜಗಳನ್ನು ಕಳುಹಿಸುವುದಾಗಿ ವಾಗ್ದಾನ ಮಾಡಿ, ಹಾಗೆ ಅಪೇಕ್ಷಿಸುವವರ ಮೇಲ್ವಿಳಾಸಗಳನ್ನು ಬರೆಸಿಕೊಂಡರು. 3 ಗಂಟೆಗೆ ಸರಿಯಾಗಿ ಜಯಘೋಷದೊಡನೆ ಸಭೆಯು ಪೂರೈಸಿತು. ನಮ್ಮ ಅಮಲ್ದಾರ್ರವರು ಊರಲ್ಲಿಲ್ಲದಿದ್ದಾಗ್ಯೂ ಶಿರಸ್ತೇದಾರರು ತಮ್ಮ ಇಲಾಖೆಯವರ ಸಹಾಯದಿಂದ ದೊಡ್ಡ ಸಭೆ ಸೇರಿಸಿ ಕೆಲಸಗಳನ್ನೆಲ್ಲಾ ತೃಪ್ತಿಕರವಾಗಿ ನಿರ್ವಹಿಸಿದರು.—ಇಲ್ಲಿಂದ ಹಾಸನಕ್ಕೆ ಹೋಗುವ ಮಾರ್ಗದಲ್ಲಿರುವ ಹೇಮಾವತಿ ನದಿಗೆ ಸೇತುವೆಯಾದಲ್ಲಿ ಈ ತಾಲ್ಲೂಕಿಗೆ ಪರದೇಶದ ದೊಡ್ಡ ದೊಡ್ಡ ಉದ್ಯೋಗದಾರರನ್ನು ಬರಮಾಡಿಕೊಳ್ಳಲು ಅವಕಾಶ ತೆರೆದುಕೊಳ್ಳುವುದು.

ಶಿವಮೊಗ್ಗೆ.—ಫೆಬ್ರವರಿ ತಾ. 22 ರಲ್ಲಿ ಬೀರೂರಿನಿಂದ ಬಂದ ರೈಲ್ ಗಾಡಿಯೊಳಗೆ ಒಂದು ಬೇವಾರಸ್ ಪೆಟ್ಟಿಗೆ ಇತ್ತು. ಅದನ್ನು ಪೊಲೀಸಿನವರು ಒಡಸಿ ಮಹಜರು ಮಾಡಿ ಸ್ಟೇಷನ್‌ನಲ್ಲಿ ಇಟ್ಟಿದ್ದಾರೆ. ಅದರಲ್ಲಿ ಮುಹಮ್ಮದಿಯರು ಹಾಕಿಕೊಳ್ಳುವ ಕೆಲವು ಬಟ್ಟೆಗಳಿದ್ದುವು. ಮಾಲೀಕರು ಇನ್ನೂ ಪತ್ತೆ ಇಲ್ಲ.—ಅಡ್ವೊಕೇಟ್ ಮ|| ಬಾಲಕೃಷ್ಣರಾಯರ ಮನೆಯಲ್ಲಿ ಸುಮಾರು ನೂರು ಪಾವಿನ ಒಂದು ಸರಿಗೆ ಕಳುವಾಯಿತೆಂದು ಕೇಳುತ್ತೇನೆ.—ಇಲ್ಲಿ ಅ|| ಕಮಿಷನರಾಗಿದ್ದ ಮ|| ಜ. ಹನುಮಂತರಾಯರು ಭಾನುವಾರದ ದಿನ ಕಾಲವಾದರೆಂದು ತಿಳಿಸಲು ವಿಷಾದವಾಗುತ್ತದೆ.—ಇಲ್ಲಿನ ಭೀಮೇಶ್ವರ ದೇವಸ್ಥಾನದ ಬಳಿ ಸಂಚರಿಸುತ್ತಾ ಹಾವಳಿಮಾಡುತ್ತಿದ್ದ ಚಿರತೆಯನ್ನು ಶನಿವಾರ ರಾತ್ರಿ ಕೊಂದುಹಾಕಿದರು. ಆ ದೇವಸ್ಥಾನದ ಬಳಿ ಇರುವ ಕುರುಚಲು ಗಿಡವನ್ನು ಕಡಿಸಿ ಬಯಲುಮಾಡಿದರೆ ಗೋಕಾಯಿಗಳ ಮತ್ತು ಜನಗಳ ಸಂಚಾರಕ್ಕೆ ಕುಂಬಾ ಸಹಾಯವಾದೀತು.



ಫೆಬ್ರವರಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1–14–0

ಅದೇ ಫೆಬ್ರವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆನೆಗೆ ಕೊಡಲ್ಪಡುತ್ತೆ. [93-39]

ವಿಳಾಸ—ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3–8–0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು. [180–20]

ಗೃಹಕೃತ್ಯದ ನೋಟೀಸ್.

ಶ್ರೀರಂಗಪಟ್ಟಣದ ತಾಲ್ಲೂಕು ಹಿರೋಡೆಯಲ್ಲಿ ಮೃತಪಟ್ಟ ಶಿವಡಿ ಲಕ್ಷ್ಮಮ್ಮನ ಮಗಳು ವೆಂಕಟಮ್ಮನಿಗೆ ಸಂಬಂಧಪಟ್ಟ ಎರಡು ಮನೆಗಳು ಮತ್ತು ಗದ್ದೆ ಮುಂತಾದ ಸ್ಥಿರಸ್ವತ್ತನ್ನು ಕ್ರಯಕ್ಕೇ ಆಗಲಿ, ಗಿರ್ವಿ ಆಧಾರಕ್ಕೇ ಆಗಲಿ ಯಾರೂ ತೆಗೆದುಕೊಳ್ಳಕೂಡದು. ಇವುಗಳಲ್ಲಿ ನನ್ನ ಹಕ್ಕು ಮತ್ತು ತಕರಾರು ಇರುವದರಿಂದ ಹಾಗೆ ತೆಗೆದುಕೊಳ್ಳತಕ್ಕವರು ನನಗೆ ಉಂಟಾಗತಕ್ಕ ನಷ್ಟಕ್ಕೆ ಗುರಿಯಾಗಬೇಕಾಗುತ್ತೆ. ತಿಳಿಯುವದು.

[39-4] ಎಂ. ಸಯ್ಯದ್ ಮೊಯದೀನ್, ಸ್ಟೋರ್ ಕೀಪರ್, ಅಕ್ಕಿಹೆಬ್ಬಾಳ್.

ಗೃಹಕೃತ್ಯದ ನೋಟೀಸ್.

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೋಕು ಪಳೇಬೀದಿನಲ್ಲಿದ್ದು ಹಾಲಿ ಹುಣಸೂರಲ್ಲಿರುವ ಫವತಿ ಆಫೀಸ್ ಶ್ಯಾಮರಾಯರ ಮಕ್ಕಳು ಕೃಷ್ಣರಾಯರ ಕುಟುಂಬ ರುಕ್ಮಿಣಿಬಾಯಿ ಉರುಫ್ ರಂಗೂಬಾಯಿ ಇದರಿಂದ ತಿಳಿಯಪಡಿಸುವದೇನೆಂದರೆ,—ಆಫೀಸ್ ಶ್ಯಾಮರಾಯರ ಮಗ ಪೆನ್‌ಷನ್ ರಿಕಾರ್ಡು ಕೀಪರ್ ರಾಮರಾಯರು ಹುಣಸೂರಲ್ಲಿ ಸುಮಾರು ಒಂದು ತಿಂಗಳಲ್ಲಿ ಕಾಲವಾದರು. ಇವರ ಬಾಬ್ತು ಚರಸ್ಥಿರ ಆಸ್ತಿಗಳಿಗೆಲ್ಲಾ ನಾನೇ ವಾರಸ್ದಾರಳಾಗಿಯೂ, ಹಕ್ಕುದಾರಳಾಗಿಯೂ ಇರುತ್ತೇನೆ. ಈಚೆಗೆ ಆಫೀಸ್ ಹನುಮಂತರಾಯರ ಮಕ್ಕಳು ಶ್ಯಾಮರಾವ್ ಉರುಫ್ ಅಪ್ಪಾಸಾಮಿರಾಯರು ಸದರಿ ಫವತಿ ರಾಮರಾಯರ ಬಾಬ್ತು ಚರಸ್ಥಿರ ಆಸ್ತಿಗಳನ್ನು ತಾವೇ ಸ್ವತಂತ್ರಿಸಿ ಪರಭಾರೆಮಾಡುವ ಪ್ರಯತ್ನದಲ್ಲಿದ್ದಾರೆಂದು ಕೇಳುತ್ತೇನೆ. ಹಾಗೆ ನನ್ನ ಅನುಮತಿಯಿಲ್ಲದೆ ಸದರಿಯವರಿಂದ ಯಾರಾದರು ಫವತಿ ರಾಮರಾಯರ ಬಾಬ್ತು ಚರಸ್ಥಿರ ಆಸ್ತಿಗಳನ್ನು ಕ್ರಯಭೋಗ್ಯ ಯಾ ಆಧಾರ ಮೂಲಕ ಹೊಂದಿದಲ್ಲಿ ಅಂಥಾ ಪರಾಧೀನವು ಊರ್ಜಿತವಾಗತಕ್ಕದ್ದಲ್ಲವೆಂದು ಈ ಮೂಲಕ ತಿಳಿಸುತ್ತೇನೆ. ತಾ. 1–3 1915. [13-1]

ಹುಣಸೂರು. ರುಕ್ಮಿಣಿಬಾಯಿ ಉರುಫ್ ರಂಗೂಬಾಯಿ.

ನೋಟೀಸ್.

ಮೈಸೂರು 1 ನೇ ಮುನ್ಸೀಫ್‌ರವರ ಕೋರ್ಟಿನಲ್ಲಿ

1914 15 ನೇ ಇಸವಿ ಸಿವಿಲ್ ನಂಬರು 364.

ವಾದಿಗಳು:—ಮೈಸೂರು ತಾಲ್ಲೂಕು ಕಡಕೊಳದ ಹೋಬಳಿ ಆಯರಹಳ್ಳಿ ಗ್ರಾಮದಲ್ಲಿರುವ—1 ನೇ ಪರಿವಾರದ ಜಾತಿ ದೊಡ್ಡನಾಗನಾಯಕನ ಮಗ ಚನ್ನನಂಜನಾಯಕ, 2 ನೇ ಡಿಟೋ ಊರಲ್ಲಿರುವ ಸದರಿ ಜಾತಿ ಲಿಂಗನಾಯಕ, 3 ನೇ ಡಿಟೋ ಊರಲ್ಲಿರುವ ಶಿವಾಚಾರದ ಮರಿಮಾದಯ್ಯ, 4 ನೇ ಸದರಿ ಜಾತಿ ಪುಟ್ಟಮಾದಯ್ಯ, 5 ನೇ ಡಿಟೋ ಜಾತಿ ಮಾದಪ್ಪ.

ಪ್ರತಿವಾದಿಗಳು:—ಮೈಸೂರು ತಾಲ್ಲೂಕು ಕಡಕೊಳದ ಹೋಬಳಿ ಆಯರಹಳ್ಳಿ ಗ್ರಾಮದಲ್ಲಿರುವವರು—1 ನೇ ಶಿವಾಚಾರದ ಜಾತಿ ವೀರಯ್ಯನ ಮಗ ದೊಡ್ಡಯ್ಯ, 2 ನೇ ಪರಿವಾರದ ಜಾತಿ ಮಾದನಾಯಕನ ಮಗ ದ್ಯಾವ, 3 ನೇ ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ಮೂಡಹಳ್ಳಿಯಲ್ಲಿರುವ ಮಲ್ಲರಾಜಯ್ಯನವರ ಮಕ್ಕಳು ಮೂಡಹಳ್ಳಿ ಗುರುದೇವರಾಜೆ ಅರಸು ಉರುಫ್ ಸ್ವಾಮಿ.

ಇದರಿಂದ ಮೈಸೂರು ತಾಲ್ಲೂಕು ಆಯರಹಳ್ಳಿಯಲ್ಲಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ

ಆಯರಹಳ್ಳಿ ಗ್ರಾಮಸ್ಥರೆಲ್ಲರೂ ಉಪಯೋಗಿಸುತ್ತಿದ್ದ ಸರ್ವೆ 147 ನೇ ನಂಬರು ಜಮೀನನ್ನು ಸರ್ಕಾರದ ಪರವಾನಗಿಯಲ್ಲಿ ಗ್ರಾಮದವರೆಲ್ಲರ ಉಪಯೋಗಕ್ಕೋಸ್ಕರ ನಾಡು ಪಟೇಲನಾದ 1 ನೇ ಪ್ರತಿವಾದಿಯ ಹೆಸರಿಗೆ ಸರ್ವಾತ್ರಕ್ಕೆ ಪರವಾನಗಿಯಲ್ಲಿ ನಿಲ್ಲಿಸಿ ಎಲ್ಲರೂ ಉಪಯೋಗಿಸುತ್ತಾ ಇರುವಲ್ಲಿ ಈಚೆಗೆ 1 ನೇ ಪ್ರತಿವಾದಿಯು ಮೋಸದ ಇರಾದೆಯಿಂದ ಸದರೀ ಜಮೀನನ್ನು 3 ನೇ ಪ್ರತಿವಾದಿಗೆ ಕೊಟ್ಟಿರುತ್ತಾನೆಂತ ವಗೈರೆ ತಿಳಿಯಬಂದದ್ದರಿಂದ ಮೇಲ್ಕಂಡ ವಾದೀರು ಈ ಮೊಕದ್ದಮೆಯನ್ನು ಸಿವಿಲ್ ಪ್ರೊಸಿಡ್ಯೂರ್ ಕೋಡಿನ (O. I. R. VIII) ನೇ ರೀತಿ ತಮಗೋಸ್ಕರಲೂ ಮತ್ತು ಆಯರಹಳ್ಳಿ ಗ್ರಾಮಸ್ಥರಿಗೋಸ್ಕರಲೂ ಸಹಾ ಡಿಟೊ ಜಮೀನು ಸದರಿ ಗ್ರಾಮಸ್ಥರೆಲ್ಲರಿಗೂ ಸೇರಿರುತ್ತೆಂತ ಡಿಕ್ಲೇರ್ ಮಾಡಬೇಕೆಂತಲೂ ಗ್ರಾಮಸ್ಥರ ಹಕ್ಕಿಗೆ ವಿರೋಧವಾಗಿ 1 ನೇ ಪ್ರತಿವಾದಿ ಜಮೀನನ್ನು ಉಪಯೋಗಿಸದಂತೆ ಶಾಶ್ವತವಾದ ಇನ್‌ಜಂಕ್ಷನ್ ಕೊಡಬೇಕೆಂದು ವಗೈರೆ ಕೇಳಿಕೊಂಡು ದಾವಾ ಮಾಡಿರುವದರಿಂದ ಸದರಿ ಆಯರಹಳ್ಳಿ ಗ್ರಾಮದಲ್ಲಿ ವಾಸವಾಗಿ ಈ ಮೊಕದ್ದಮೆಗೆ ವಾದಿಯಾಗಿ ಸೇರಬೇಕೆಂದು ಇಷ್ಟಪಡುವವರು 1915 ನೇ ಇಸವಿ ಮಾರ್ಚಿ ತಿಂಗಳು 22 ನೇ ತಾ. ದಿವ 11 ಘಂಟೆಗೆ ಈ ಕೋರ್ಟಿನ ರೂಬರೂಬ್ ಹಾಜರಾಗಿ ತಿಳಿಯಪಡಿಸಿಕೊಳ್ಳಬೇಕೆಂದು ಸೂಚಿಸಿದೆ.

ತಾರೀಖು 26 ನೇ ಫೆಬ್ರವರಿ 1915 ನೇ ಇಸವಿ.

D. H. RAMA RAO, B.A., B.L.,
First Munsiff, Mysore.

40-1

ಮನೆ ಕ್ರಯ.

ಮೈಸೂರು ಕೃಷ್ಣರಾಜ ರೋಡಿನಲ್ಲಿ (ಬಿಡ್ಡಣ್ಣನ ಲೈನ್ ರೋಡು) ಅಡ್ವೊಕೇಟ್ ಮ|| ಎಂ ಡಿ ನಾರಣಯ್ಯಂಗಾರ್ರವರಿಗೆ ಸೇರಿದ ದಿವ್ಯವಾದ ಬಂಗಲೆ ಕ್ರಯಕ್ಕೆ ಸಿಕ್ಕುತ್ತೆ. ಹೆಚ್ಚು ವಿಷಯ ಮಾಲೀಕರಿಂದ ತಿಳಿಯಬಹುದು.



ಮಾರ್ಚಿ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1–14–0.

ಇಷ್ಟು ಭಾರಿ ಕ್ರಯವುಳ್ಳ ಕೈಗಡಿಯಾರವನ್ನು ಮಾರ್ಚಿ ತಿಂಗಳು ಆಖೈರೊಳಗೆ ತರಿಸಿಕೊಳ್ಳುವವರಿಗೆ ಅರ್ಧ ಕ್ರಯ ರೂ. 1-14-0 ಕ್ಕೆ ಕಳುಹಿಸುತ್ತೇವೆ. ವಿಳಾಸ:—

ಟಿ. ರಾಮಚಂದ್ರರಾವ್, ನಂ. 16, ತಿರುಪಳ್ಳಿ ಬೀದಿ, ಮದರಾಸು [36–2]

ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಜಿಬಿಷನ್‌ಗಳಲ್ಲಿ ಸುಮಾರು 85 ಸರ್ಟಿಫಿಕೇಟುಗಳನ್ನೂ 32 ಮೆಡಲುಗಳನ್ನೂ ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕವಾದುದರಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರವನ್ನು ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಸುವಾಸನೆ ಸುಣ್ಣ ಸೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಮೊದಲಾದವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಆಣೆ.

ವಿಳಾಸ. ಶಿಕಿ. ಎಲ್. ಉಪಾಧ್ಯಾಯ, ಸುಗಂಧಕಾರ, ಮೈಸೂರು [39-2]

ಬೆಲೆ ತಗ್ಗಿಸಿದೆ! ಬೇಗ ನೋಡಿ!

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಪಾಕೆಟ್ ಡೈರಿ



ಕೆಲವೇ ಪ್ರತಿಗಳು ಮಾತ್ರ ಉಳಿದಿವೆ. ಬೇಗ ತರಿಸಿಕೊಳ್ಳಿರಿ. ಉತ್ತಮವಾದ ಕಾಗದ, ಮುದ್ದಾದ ಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿರುತ್ತವೆ. ಐದು (5) ಡೈರಿಗಳನ್ನು ಒಂದೇ ವಿಳಾಸಕ್ಕೆ ತರಿಸಿಕೊಂಡರೆ 1 ಡೈರಿ ಇನಾಂ. [220-19]

ನಂಬರ್ 1 0–2–6 ಪೋಸ್ಟೇಜು ಬೇರೆ.
" 2 0–4–0 "

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಗುವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕಡಿಮೆ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ, 20, ಚೀನಾಬಜಾರು ರೋಡು, ಮದರಾಸು. [247–16]

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರೆಜಿಸ್ಟರ್ಡು) ಶಕುಂತಲ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1–0–0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಅತಿಶಯ ಉಷ್ಣವನ್ನು ತಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಏನಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1–0–0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪತ್ರ 22, ಕೊಂಡೆ ಗಿಣಿಗಳು 6, ಕಾರ್ನೇಷನ್ ಬ್ರೂಚ್ 1, ಜವಾದು ಡಬ್ಬಿ 1, ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪನಿ, ನಂ. 44, ನಂಬುಳಯ್ಯರ ಬೀದಿ, ಮದರಾಸು. [260–12]

ತಾಲ್ಲೂಕು ವರ್ತಮಾನಗಳು.

ಶಿವಪುರ.—ಕ್ಯಾಂಪಿನಿಂದ ಊರಿಗೆ ಜನಗಳು ಬಂದು 15-20 ದಿವಸ ಗಳಾಗುತ್ತಾ ಬಂತು. ಈಗಾಗಲೇ ನೀರಿಗೆ ತೊಂದರೆ ಆಗಿದೆ. ನಲ್ಲಿಗಳಿಗಾಗಿ ಹಣ ವಸೂಲು ಮಾಡಿದ್ದರು. ಈಗ ಅದರ ವಿಚಾರವೇ ಗಮನಕ್ಕೆ ಬಂದಿಲ್ಲ. ಬೇಸಿಗೆಕಾಲದಲ್ಲಿ ಜಾನುವಾರುಗಳಿಗೂ ಪರಸ್ಥಳದ ಜನರಿಗೂ ಗ್ರಾಮಸ್ಥರ ಸಹಾಯದಿಂದ ನೀರನ್ನು ಹಾಕಿಸುತ್ತಿದ್ದ ತಿಂಗಳ ಕೆಳಗೆ ಕಾಲವಾದ ಸೋಲೂರು ವೆಂಕಟರಾಮಯ್ಯನವರನ್ನು ಎಲ್ಲರೂ ಸ್ಮರಿಸಿಕೊಳ್ಳುತ್ತಾರೆ. ಈಗ ಜಾನುವಾರು ಗಳಿಗೂ ಜನರಿಗೂ ನೀರನ್ನು ಸರಬರಾಯಿ ಮಾಡತಕ್ಕವರು ಯಾರೂ ಇಲ್ಲದಂತಾಗಿದೆ. ಲಾಗಾಯ್ತಿನಿಂದಲೂ ಊರಿನಲ್ಲಿ ಸಂತೆ ನಡೆಯುತ್ತಿದ್ದದ್ದನ್ನು ಈಗ ಊರ ಹೊರಗೆ 1½ ಮೈಲಿ ದೂರದಲ್ಲಿ ನಡೆಯುವಂತೆ ಮಾಡಿರುವದು ಜನರಿಗೂ ಜಾನುವಾರುಗಳಿಗೂ ತುಂಬಾ ತೊಂದರೆಯಾಗಿದೆ. ಅಲ್ಲಿ ನೀರೂ ನೆರಳೂ ಇಲ್ಲದೆಯೂ, ಜನಗಳಿಗೆ ದೂರವಾಗಿಯೂ, ಕಳ್ಳತನ ಮಾಡತಕ್ಕವರಿಗೆ ಅನುಕೂಲವಾಗಿಯೂ, ಹತ್ತಿರ ಹೊಲ ತೋಟಗಳಿರತಕ್ಕವರಿಗೆ ಗೊಬ್ಬರಕ್ಕೆ ಅನುಕೂಲವಾಗಿಯೂ ಇದೆ. ಪ್ರಜಾ ಕ್ಷೇಮವನ್ನೂ ಗ್ರಾಮಕ್ಕೆ ಅನುಕೂಲಗಳನ್ನೂ ಕಲ್ಪಿಸುವದಕ್ಕಾಗಿ ಇರತಕ್ಕ ಮೆಂಬರುಗಳು ಚಿತ್ತಕ್ಕೆ ತಂದುಕೊಂಡು ಊರಿಗೆ ಹತ್ತಿರ ನೀರು ಇರತಕ್ಕ ಕೆರೆಯ ಬಳಿಯಲ್ಲಿ ಮಾಡಿಯಾರೆಂದು ನಂಬಿರುತ್ತೇನೆ.

ಮದ್ದೂರು.—ನಮ್ಮ ಊರು ಅಂದರೆ ಮದ್ದೂರಿನಲ್ಲಿ ಸುಮಾರು ಒಂದು ಸಾವಿರ ಮನೆಗಳು ಇರುತ್ತೆ. ಅಲ್ಲದೆ 10–11 ಸಾವಿರ ರೂಪಾಯಿಗಳ ಜಮಾಬಂದಿ ಇದೆ. 2–4 ಸಾವಿರ ಪ್ರಜೆಗಳು ಇರತಕ್ಕ ಸ್ಥಳವಾಗಿ ಮ್ಯುನಿಸಿಪಲ್ ಟವರ್ ಆಗಿ ಇದೆ. ಇದು ಪೂರ್ವದಲ್ಲಿ ತಾಲ್ಲೂಕ್ ಇದ್ದ ಸ್ಥಳ. ತಾಲ್ಲೂಕ್ ಹೋಗಿ ಸುಮಾರು 30 ವರುಷಗಳಾಯ್ತು. ಆ ಲಾಗಾಯ್ತು ಸರ್ಕಾರಕ್ಕೆ ಅನೇಕ ಅರ್ಜಿಗಳನ್ನು ಗುಜರಾಯಿಸಿಕೊಂಡದ್ದಾಯಿತು. ಈ ನಮ್ಮ ಅಹವಾಲ್ ಘನವಾದ ನಮ್ಮ ಸರ್ಕಾರದ ಮನಸ್ಸಿಗೆ ಬಂದಂತೆ ತೋರಲಿಲ್ಲ. ಈ ಊರಿನಲ್ಲಿ ಒಂದು ಸಬ್ ತಾಲ್ಲೂಕ್ ಆದರೂ ಸರ್ಕಾರದವರು ದಯವಿಟ್ಟು ಇಡಿಸಿಕೊಟ್ಟು ಕಷ್ಟ ನಿವಾರಣೆಮಾಡುತ್ತಾರೆಂದು ನಂಬುತ್ತೇನೆ.—ಈ ಊರಿನಲ್ಲಿ 2 ವರುಷಗಳ ಲಾಗಾಯ್ತು ಮ್ಯುನಿಸಿಪಲ್ ಲಾಂದ್ರಗಳು ಎಲ್ಲಾ ಶುದ್ಧ ಅಮಾವಾಸ್ಯೆಯಂತೆ ಮೌನವನ್ನು ತಾಳಿಕೊಂಡಿವೆ. ಗಲ್ಲಿಗಳಲ್ಲಿ ರಸ್ತೆಗಳು ಚೆನ್ನಾಗಿಲ್ಲ. ಚರಂಡಿಗಳೂ ಇಲ್ಲ. ಈ ವಿಷಯಗಳನ್ನು ಇಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳು ಮನಸ್ಸಿಗೆ ತಂದುಕೊಂಡು ಸಂಪಡಿಸಬೇಕಾಗಿದೆ. ಟವರ್‌ನಲ್ಲಿ ಆಗತಕ್ಕ ಸೌಕರ್ಯಗಳು ಒಂದೂ ಇಲ್ಲದಿದ್ದರೂ ಮುನಿಸಿಪಲ್ ಕಂದಾಯಕ್ಕೆ ಮಾತ್ರ ಶಾನುಭೋಗರೂ ಪಟೇಲರೂ ಜನಗಳಿಗಿಲ್ಲಿಗಾವಕೊಟ್ಟು ನೋಟೀಸು ಜಪ್ತಿ ತರುತ್ತಾರೆ.—ಈ ಊರಿನಲ್ಲಿ ಜೂಜಿನಾಟ ಹೆಚ್ಚಾಗಿ ಕಳ್ಳತನವೂ ಅಭಿವೃದ್ಧಿಯಲ್ಲಿ ಇದೆ. ಇದನ್ನು ಪೋಲೀಸಿನವರು ನಿಗಾಕ್ಕೆ ತಂದು ಸರಿಯಾದ ತರದೂದಿನಿಂದ ಜೂಜು ನಿಲ್ಲಿಸಿದರೆ ಕಳ್ಳತನ ಕಡಮೆಯಾದೀತು.—ಇಲ್ಲಿ ಕನ್ನಡ ಸ್ಕೂಲೂ, ಹಿಂದೂಸ್ತಾನಿ ಸ್ಕೂಲೂ ಒಂದೇ ಕಟ್ಟಡದಲ್ಲಿ ಇರೋಣದರಿಂದ ಸ್ಥಳಸಂಕೋಚವಾಗಿದೆ. ಇಂಗ್ಲಿಷ್ ಗ್ರ್ಯಾಂಟ್ ಸ್ಕೂಲು ಆಗಿ ಈಗ್ಗೆ 9 ತಿಂಗಳಾಯ್ತು. ತಕ್ಕ ಮಟ್ಟಿಗೆ ಅಭಿವೃದ್ಧಿಯಲ್ಲಿ ಇದೆ. ಇದನ್ನು ಸರ್ಕಾರದವರು ಎ. ವಿ. ಸ್ಕೂಲಾಗಿ ಮಾಡಿಕೊಟ್ಟರೆ ಜನಗಳಿಗೆ ತುಂಬಾ ಸುಖವಾದೀತು.—ಇಲ್ಲಿ ಒಂದು ಸಬ್ ರಿಜಿಸ್ಟ್ರಾರ್ ಆಫೀಸು ಇಲ್ಲದೆ ಇರುವದು ಈ ತಾಲ್ಲೂಕ್ ಅಂದರೆ ಮದ್ದೂರಿಗೆ ಸೇರಿದ ಗ್ರಾಮಗಳ ಜನಗಳಿಗೆ ತುಂಬಾ ತೊಂದರೆಯಾಗಿದೆ. ಒಂದು ರಿಜಿಸ್ಟ್ರು ಮಾಡಿಸಬೇಕಾದರೆ ಮಂಡ್ಯಕ್ಕೆ ಹೋಗಬೇಕು. ಅಲ್ಲಿ ಸಾಕ್ಷಿ ಹೇಳತಕ್ಕವರು ಇಲ್ಲ; ಅಥವಾ ಸಾಕ್ಷಿ ಒಂದಕ್ಕೆ 8 ಆಣೆ, 12 ಆಣೆ ಕೊಟ್ಟರೇ ಹೇಳುತ್ತಾರೆ. ಆಗ್ಗೆ ಒಂದು ರಿಜಿಸ್ಟ್ರಿಗೆ 3–4 ರೂಪಾಯಿ ಖರ್ಚಾದರೆ ಬಡವರ ಗತಿ ಏನಾಗುತ್ತೆ ಎಂಬುವದನ್ನು ಯೋಚಿಸತಕ್ಕದ್ದಾಗಿದೆ. ಮಂಡ್ಯಕ್ಕೆ ಸುಮಾರು 20–24 ಮೈಲಿಯಿಂದ ರಿಜಿಸ್ಟ್ರಿಗೆ ಬರತಕ್ಕ ಅಂಶವೂ ಬಹಳ ತೊಂದರೆಯಾದದ್ದು. ಆದ್ದರಿಂದ ಸರ್ಕಾರದವರು ಈ ಊರಿಗೆ ಒಂದು ಸಬ್ ತಾಲ್ಲೂಕೂ, ಒಂದು ರಿಜಿಸ್ಟ್ರಾರ್ ಆಫೀಸೂ ಇಡಿಸಿಕೊಟ್ಟು ಜನಗಳ ತೊಂದರೆ ತಪ್ಪಿಸಿದಲ್ಲಿ ಬಹಳ ಅನುಕೂಲವಾದೀತೆಂದು ಪ್ರಾರ್ಥಿಸುತ್ತೇನೆ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—“ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?” ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ನಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗುದದ್ವಾರಗಳಾಗಲಿ ಹೊಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [103-27]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುವಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಓ. ಬಾಕ್ಸ್ ೫೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2–6–0.

ಫೆಬ್ರವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಶಂಗಹೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದರ್ಥೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು. [99-39]

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ !

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪಥ್ಯವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ. 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆ 0-8-0 ; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೇರೆ ಕೆರೋಸಿನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಮೈನಾಬಜಾರ್ ರೋಡ್, ಮದರಾಸ್. [296-10]

ಪ್ರಪಂಚಯುದ್ಧ

ಘನ

ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಛಾಯಾಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ತೋರುವ ಭೀಕರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ ! ಸ್ವಲ್ಪವೇ ಪ್ರತಿಗಳಿವೆ !!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಪಾತವಾದ ಎಮ್ಡೆನನ್ನು ನೋಡಿರುವಿರಾ ? ಅದರ ನಾಯಕನನ್ನು ಬಲ್ಲಿರಾ ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿರೋಮಣಿಯನ್ನೂ ನೋಡಿರುವಿರಾ ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಶಾಸನ ಮುಖ್ಯರುಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಸೂಚನೆ :—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚುಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[10-8]

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.
ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-26] GIRLS' INDUSTRIAL SCHOOL, HASSAN.

ಓರಿಯಂಟಲ್ ಗಾ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಂಗಶಾಸ್ತ್ರಿ, ಚೀಫ್ ಏಜೆಂಟ್, ಬೆಂಗಳೂರು; ಮಿ|| ಎಂ. ಎಸ್. ನಂಜಪ್ಪನವರು ಅಥವಾ ಮಿ|| ವೆಂಕಟರಮಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ
[221-21] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!



ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೇಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-14] ಪಿ. ಒ. ಬಾಕ್ಸ್ 330, ಬೊಂಬಾಯಿ.

ಕುಂತಳಾನಂದ ತೈಲವು.

213-24

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಪದಕಗಳನ್ನೂ, ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ತರಹ

ಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯುವಂತೆ ಮಾಡಿ, ತಲೆಯ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸದ್ವಾಸನೆಯನ್ನು ಕೊಡುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟ್ಲಿ 2 ರೂಪಾಯಿ, 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಪಟ್ಟಿಯನ್ನು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.



ಪಾರ್ಶ್ವವಾಯುವಿನವರೂ ಸ್ವಸ್ಥರಾಗುತ್ತಾರೆ

ಬದುಕಿದ್ದರೂ ಅರ್ಧ ಸತ್ತಿರುವ ಪಾರ್ಶ್ವವಾಯುವಿನವರನ್ನು ಕಂಡರೆ ವ್ಯಸನವಾಗುತ್ತೆ. ಈ ಭಯಂಕರವಾದ ರೋಗದಿಂದ ಕಷ್ಟಪಡುತ್ತಿರುವ ಮಗನಾದರೂ ವ ಗಳಾದರೂ ನಿಮಗಿದ್ದಾರೋ? ಇಂಥಾ ಕಷ್ಟದಿಂದಲೂ ಯಾತ್ನೆಯಿಂದಿರುವಿಕೆಯಿಂದಲೂ ಬಿಡುಗಡೆಯಾಗಲು ಮರಣವನ್ನು ಅಪೇಕ್ಷಿಸುವ ಸ್ನೇಹಿತರ್ಯಾರಾದರೂ ನಿಮಗಿದ್ದಾರೋ?

ಲಂಡನ್ ನಗರದ ಹಾರ್ನ್ಸೆಯ್ ಬೀದಿಯಲ್ಲಿರುವ ಮಿ|| ಇ. ಜೆ. ಓರ್ಟನ್‌ರವರು ಬರೆಯುವುದು:—"ನನ್ನ ಮಗಳ ಪಾರ್ಶ್ವವಾಯುವನ್ನು, ಗಟ್ಟಿಗರಾದ ಅನೇಕ ವೈದ್ಯರು ನೋಡಿ ಔಷಧಿಕೊಟ್ಟರು. ಆದರೆ ಅದರಿಂದ ಯಾವ ಪ್ರಯೋಜನವಾಗಲಿಲ್ಲ. ಡಾಕ್ಟರ್ ವಿಲಿಯಮ್ಸ್ ಪಿಂಕ್ ಪಿಲ್ ಎಂಬುದನ್ನು ಉಪಯೋಗಿಸಿದ್ದರಿಂದ ತುಂಬಾ ಬದಲಾವಣೆಯಾಯಿತು. ಆಕೆಯು ಇದಕ್ಕೆ ಮುಂಚೆ ಅನುಭವಿಸದಂಥಾ ಹೊಸ ಜೀವವೂ ಹೊಸ ಬಲವೂ ತನಗೆ ಬಂದಂತೆ ವರ್ಣಿಸುತ್ತಾಳೆ. ಬೇಗ ಆಕೆಯು ಪೂರ್ಣ ಸ್ವಸ್ಥಳಾಗುವಳೆಂದು ನಿಸ್ಸಂದೇಹವಾಗಿ ತಿಳಿದಿದ್ದೇನೆ."

ಸೀಸೆ 1ಕ್ಕೆ 1 ರೂ. ಮಾರುವ ಔಷಧಗಾರರೆಲ್ಲರಲ್ಲೂ ಸಿಗುತ್ತೆ. 101-44

ಮಲೇರಿಯಾ

ಮತ್ತು ಹವಾ ಬೇಸಿಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವೈನೈನ್ ಜ್ವರವನ್ನು ಅಡಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಥಾಸ್ಪರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-30] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ

ಒಂದಾವರ್ತಿ ಪರೀಕ್ಷಿಸಿದರೆ ಗೊತ್ತಾಗುವುದು

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ. ಲೇಪಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ಬೆಳಿಗ್ಗೆ ಸಕ್ಕರೆಯೊಡನೆ ಮಧ್ಯಾಹ್ನ ನೀರಿನಲ್ಲಿ ಹಾಕಿಯೋ ಬೆಳಿಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ, ಭೇದಿ, ಕ್ಷಯ, ಕಾಲರಾ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಪಡಿಸುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ವಾತನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ [265-8]

ನಮ್ಮ ವಿಳಾಸ—ಕೇಶವಜೀ ದೇವಚಂದ್,
ರಾಮ್‌ಭಾನ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.
ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ, ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—2—1915 ರಿಂದ 19—2—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	16	11	0	0
ಮೈಸೂರು ,,	1	2	0	0
ಬೆಂಗಳೂರು ಡಿಸ್ಟ್ರಿಕ್ಟ್	47	33	0	0
ಮೈಸೂರು ,,	46	41	0	0
ಕೋಲಾರ್ ,,	38	22	0	0
ಕೋಲಾರ್ ಚಿನ್ನದ ಗಣಿಗಳು	24	22	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	1	1	0	0
ಚಿತ್ರದುರ್ಗ ,,	4	3	0	0
ಕಡೂರ್ ,,	1	1	0	0
ಶಿವಮೊಗ್ಗ ,,	5	3	0	0
ಜುಮ್ಲಾ.....	176	139	0	0

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಫಾಲ್ಗುಣ ಬಹುಳ ಚೌತಿ ಶುಕ್ರವಾರದಿಂದ ಫಾಲ್ಗುಣ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸಾಂಖ್ಯ ಮಾಸ ತೇದಿ
5	ಶುಕ್ರ *	ಚೌತಿ	26-30	ಚಿತ್ತ	15-8	22
6	ಶನಿ ‡	ಪಂಚಮಿ	20-40	ಸ್ವಾತಿ	11-15	23
7	ಭಾನು §	ಷಷ್ಠಿ	14-44	ವಿಶಾಖ	7-3	24
8	ಸೋಮ	ಸಪ್ತಮಿ	9-41	ಅನುರಾಧ	3-9	25
9	ಮಂಗಳ	ಅಷ್ಟಮಿ	3-0	ಜ್ಯೇಷ್ಠ	54-26	26
10	ಬುಧ †	ದಶಮಿ	52-40	ಮೂಲಾ	51-49	27
11	ಗುರು ;;	ಏಕಾದಶಿ	48-43	ಉತ್ತರಾಷಾಢಾ	50-1	28

* ಚತುರ್ಥಿ ತಿಥಿ, ವ್ಯಾಸರಾಯಸ್ವಾಮಿಗಳ ಪುಣ್ಯದಿನ. ‡ ತಿಥಿದ್ವಯ, ಬೆಟ್ಟದಲ್ಲಿ ಮಹಾಬಲೇಶ್ವರಸ್ವಾಮಿ ರಥ. § ಮಳೆ ನಕ್ಷತ್ರ—ಪೂರ್ವಾಭಾದ್ರ 2 ನೇ ಪಾದ, ಸಪ್ತಮೀ ತಿಥಿ. † ಮಳೆ ನಕ್ಷತ್ರ—ಪೂರ್ವಾಭಾದ್ರ 3 ನೇ ಪಾದ. ;; ಸರ್ವತ್ರ ಏಕಾದಶಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾವು), ಮೈ ನಡುಕ, ಶೀತ



ಕಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೆಟ್ಟರ ಖಂಡಿತವಾಗಿ ಗುಣಪಡಿಸುತ್ತದೆ. ಕಾಂಬಳಿಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-26]

(1) ಮಿ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಶರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮಿ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್ ಇವರು ಬರೆಯುವುದು—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗುಲ್ಮ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸದವರಿಲ್ಲದೇ ಹೋಗುತ್ತಿದೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. Gulliford, *Proprietor and Manager, Wesleyan Mission Press,* Mysore. 4/3/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ ನೇ ಇಸವಿ ಮಾರ್ಚಿ ತಾರೀಖು ೧೧ ನೇ ಗುರುವಾರ. ಸಂಚಿಕೆ ೪೧

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಕ್ರಯಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-27] GIRLS' INDUSTRIAL SCHOOL, HASSAN.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ
[221-22] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಬೆಲೆ ತಗ್ಗಿಸಿದೆ! ಬೇಗ ನೋಡಿ!

೧೯೧೬ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಪಾಕೆಟ್ ಡೈರಿ

ಕೆಲವೇ ಪ್ರತಿಗಳು ಮಾತ್ರ ಉಳಿದಿವೆ. ಬೇಗ ತರಿಸಿಕೊಳ್ಳಿರಿ. ಉತ್ತಮವಾದ ಕಾಗದ, ಮುದ್ದಾದ ಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿರುತ್ತವೆ. ಐದು (5) ಡೈರಿಗಳನ್ನು ಒಂದೇ ವಿಳಾಸಕ್ಕೆ ತರಿಸಿಕೊಂಡರೆ 1 ಡೈರಿ ಇನಾಂ. [229-20]

ನಂಬರ್ 1 ... 0—2—6 ಪೋಸ್ಟೇಜು ಬೇರೆ.
,, 2 0—4—0 ,,

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಭೂವಿವರಣೆ.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಸ್ವಲ್ಪ ದಿನಗಳಲ್ಲೇ ಸಿದ್ಧವಾಗುವುದು.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[31-6] ಸುಬೋಧ ಗ್ರಂಥಾಲಯ, ಮೈಸೂರು.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳುಗಟ್ಟಲೆ ಇದ್ದರೂ ಹುಳಿವಾಸನೆಯಾಗದು. ವಿ ಪಿ.ಯಲ್ಲೂ ತರಿಸಬಹುದು. ಕ್ರಯ ಸೇರಿಗೆ 1 ರೂಪಾಯಿ. ವಿ.ಪಿ. ಛಾರ್ಜು ಬೇರೆ ವಿಳಾಸ.—ಎ. ಎನ್. ನಂಜುಂಡಯ್ಯ.
[14-9] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ನಮ್ಮ ವಿಳಾಸ— ಬಿ. ನರಸಿಂಗರಾವ್,
[300-11] ಎಡಿಟರ್, ಲಾ ಗೆಜೆಟ್, ಬೆಂಗಳೂರು.

1916 ನೆಯ ಕ॥ ಲೋ॥ ಸೆ॥ ಟೆ॥ ನೋಟ್ಸ್.

ಶೀಘ್ರದಲ್ಲೇ ವಿಕರಿಗೆ ಸಿದ್ಧವಾಗುವುದು.

ಪರೀಕ್ಷೆಗೆ ಆವಶ್ಯಕವಾದ ವಿಷಯಗಳನ್ನೆಲ್ಲಾ ಒಳಗೊಂಡಿದೆ. ನಮ್ಮ ದೇಶೀಯ ವಿದ್ಯಾರ್ಥಿಗಳೆಲ್ಲರೂ ಇದರ ಪ್ರಯೋಜನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಬೆಲೆಯನ್ನು ಕಮ್ಮಿ ಮಾಡಿದೆ. ಪುಸ್ತಕ ಕೈಗೆ ಬಂದ ಮೇಲೆ ಅದರ ಯೋಗ್ಯತೆ ತಿಳಿಯುವುದು. ಅಲ್ಲದೆ ನಮ್ಮಲ್ಲಿ ಸರ್ಕಾರದ, ಮಿಷನ್ನಿನ ಮತ್ತು ಇತರ ಎಲ್ಲಾ ಪುಸ್ತಕಗಳೂ ವಿಕರಿಗೆ ದೊರೆಯುವವು.

ವಿಳಾಸ:—ಎಸ್ ಕೇಶವಯ್ಯ, ಹೆಡ್ ಮಾಸ್ಟರ್,
[37-3] ಅಕ್ಷರಶಾಲಾ, ಮೈಸೂರು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸೌಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ ...	0-6-0
ರಾಧಾಮಾಧವ	0-8-0	ಸಂಕಾಪಳ ...	0-4-0

[275—13] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 3; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.

[143—35] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-34]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಶ್ವತ್ಥಾಮ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ಸಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು !!!

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದೇಶಗಳ ಪಟಗಳೂ, ವಿವಿಧ ಸೈನಿಕರ ಪಟಗಳೂ, ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ 2 ಆಣೆ; ವಿ. ಪಿ. ಯಲ್ಲಿ 4 ಆಣೆ.

[8-9] ನಮ್ಮ ವಿಳಾಸ.—ದಿ ಜನರಲ್ ಏಜೆನ್ಸಿ, ಮೈಸೂರು.

BOOKS FOR III & IV FORMS

(1) **General English Papers** As. 8; (2) **English Essays and Letters** As. 6; (3) **Spelling Book** As. 4. (Postage Extra). Apply to

M. N. SITA RAMA RAO,
[16-6] Krishnaraja Mohalla, Mysore.

Messrs. Petrie-Hay & Son, Hunsur.

ನಮ್ಮಲ್ಲಿ ಕೆಗದ ಕೋಲೆಗಳು 2 ಸಲೀ ಅಡಿ ರೂಪಾಯಿಗೆ 30-40 ಸಲೀ ಅಡಿಯ ವರೆಗೂ ಇರುತ್ತವೆ. ಇಷ್ಟವುಳ್ಳವರು ತಪ್ಸೀಲನ್ನು ಹುಣಸೂರಿನಲ್ಲಿರುವ ಮೆ॥ ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ಕೋಲೇಗಾಡಿ ತಯಾರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ. [232-19]

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ವಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-5] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆಗೊತ್ತಾಗುವುದು!

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ. ಲೇಪಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ವೀಳ್ಯದೆಲೆಗೆ ಸವರಿಯೋ, ಬಿಸಿನೀರಿಗೆ ಹಾಕಿಯೋ ಬೆಳಿಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ, ಭೇದಿ, ಪೋಟರಿಕೆ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ವಾಯು ನೋವು, ಕೀಲುನೋವು, ಗಾಯಗಳಿಗೆ ೨ ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ [285-10]

ನಮ್ಮ ವಿಳಾಸ—ಕೇಶವಜೀ ದೇವಚಂದ್,
ರಾಮ್‌ಭಾನ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.
ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ,
ದೊಡ್ಡಪೇಟೆ, ಮೈಸೂರು.

"ಪ್ರಯೋಜನಹೊಂದಿರಿ" ಮತ್ತು "ಇತರರಿಗೂ ಪ್ರಯೋಜನ ಉಂಟುಮಾಡಿರಿ."

ಹಿಂದೂಸ್ಥಾನ ಕೋಆಪರೇಟಿವ್ ಜೀವವಿಮೆ ಸಂಘ ಲಿಮಿಟೆಡ್.

ಹಿಂದೂಸ್ಥಾನ ಕಟ್ಟಡಗಳು ಕಲಕತ್ತಾ.

ಮೂಲಧನ ಒಂದು ಕೋಟಿ ರೂಪಾಯಿ		(1,00,00,000)
ವಸೂಲಾದ ಮೊಬಲಗು	,,	87,00,000
ಪಾವತಿಯಾದ ಧನ	,,	12,50,000

ಹಿಂದೂಸ್ಥಾನ ಸಂಘದ ಕೆಲವು ಮುಖ್ಯ ಅನುಕೂಲತೆಗಳು.

(1) ಜನಗಳಿಗೆ ಬಹಳ ಸುಲಭಕರವಾದ ವಿಮೇಪಾಲಿಸಿ ಕೊಟ್ಟು, ವೃದ್ಧಾಪ್ಯಕಾಲದಲ್ಲೂ, ಅಕಾಲ ಮರಣ ಉಂಟಾದಲ್ಲಿ ಕುಟುಂಬ ಸಂರಕ್ಷಣೆಗೂ ಯಾವ ವಿಧವಾದ ಕಷ್ಟವಿಲ್ಲದಂತೆ ವಿಮೇ ಮೊಬಲಗಿನಿಂದ ಸುಖ ಜೀವನಮಾಡಬಹುದು.

(2) ಸಂಘದ ಪಾಲಿಸಿಯನ್ನು ಎರಡು ವರ್ಷದವರೆಗೂ ಜಾರಿಯಲ್ಲಿಟ್ಟುಕೊಂಡು ತದನಂತರ ಪಾಲಿಸಿದಾರರಿಗೆ ಅವರ ಸ್ಥಿರಸ್ವತ್ತುಗಳ ಆಧಾರದ ಮೇಲೂ ಅಥವಾ ಮತ್ತೊಬ್ಬ ಪಾಲಿಸಿದಾರರ ಜಾಮೀನಿನ ಮೇಲೂ ಬಹಳ ಸುಲಭ ಬಡ್ಡಿಯಿಂದ ಅವರು ವಿಮೇ ಮಾಡಿರತಕ್ಕ ಮೊಬಲಗಿನಷ್ಟು ಸಾಲಾ ಸಂಘದವರು ಕೊಡುತ್ತಾರೆ ಮತ್ತು ಸುಲಭ ಕಂತಿನಿಂದ ಸಂಘದವರು ವಾಪಸ್ಸು ಪಡೆಯುತ್ತಾರೆ.

(3) ಯಾವ ವಿಧವಾದ ಆಧಾರವಿಲ್ಲದೆ ಮನೆ ಅಥವಾ ಜಮೀನು ಕೆಗೆದುಕೊಟ್ಟು ಅದರ ಮೊಬಲಗು ಸುಲಭ ಕಂತಿನಿಂದ ವಾಪಸ್ಸು ಪಡೆಯುತ್ತಾರೆ. ಇದು ಬಡವರಿಗೂ ಮತ್ತು ರೈತರಿಗೂ ಮುಖ್ಯ ಅನುಕೂಲವಾಗಿರುತ್ತೆ.

(4) ಸಂಘದ ಆಡಳಿತ ಮತ್ತು ಮೇಲ್ವಿಚಾರಣೆ ಮಹಾರಾಜರಿಂದಲೂ, ದೊಡ್ಡ ಜಮೀನುದಾರರಿಂದಲೂ ನಡಿಸಲ್ಪಡುತ್ತೆ.

Wanted Immediately.—Active & energetic Travelling Inspector in every District of the State on a salary of Rs. 30/ per mensem excluding travelling expenses and commissions. No guaranteed business required. The post is permanent and well paying.

For further particulars apply sharp to

Messrs. VENKATACHALAM & SONS,
Chief Agents, Hindustan Co-operative Assurance,
[292-12] **166, Doddpet, Mysore.**

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ. ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!

ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೀಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,

[266–15] ಪಿ. ಒ. ಬಾಕ್ಸ್ 330, ಬೊಂಬಾಯಿ.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ 2-0-0 ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 34 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗ್ ಕೇಳಿದವರಿಗೆ ಕ್ರಯವೂ ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247–17] 20, ಚೀನಾಬಜಾರು ರೋಡು, ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಯ್ನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ನಿಮಿಷದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಪದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

ಪಾಸ್ಕರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;

ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

ಬೊಂಬಾಯಿ;

ಇದಲ್ಲದೆ

ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧಾನಿವಾರಿಣಿ	4 ,,

[262-14] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-30] Bangalore City.

ಲೆಕ್ಕವಿಲ್ಲದಷ್ಟು ಮಂದಿ ಗುಣಹೊಂದಿರುತ್ತಾರೆ.

ಕೀಲುಗಳು ಪದೆಯುವಂತೆ ಆಯಿತು. ವಾಯುವಿನಿಂದ ಹಾಸಿಗೆಯಲ್ಲಿ ಬಿದ್ದು, ಹಾಸಿಗೆಗೆ ಗುರಿಯಾದವರನೇಕರು ಸ್ವಸ್ಥಹೊಂದಿದ್ದಾರೆ. ವೈದ್ಯರಿಂದಲೂ ಆಸ್ಪತ್ರೆಗಳವರಿಂದಲೂ ಇನ್ನು ವಾಸಿಮಾಡಲಾಗುವದಿಲ್ಲವೆಂದು ಹೇಳಲ್ಪಟ್ಟವರು ಟಿಟಿಲೆಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿ, ತಕ್ಷಣ ಕ್ಷೇಮ ಹೊಂದಿದ್ದಾರೆ. ಬರ್ಮಿಂಗ್ಹ್ಯಾಂ ನಗರದ ನ್ಯೂಹಾಲ್ ಬೀದಿಯಲ್ಲಿರುವ ಮಿ ಸಾಮಸ್ ಎಂಬುವರು ಬರೆಯುವುದು:—“ಸುಮಾರು 3 ವರುಷಗಳ ಹಿಂದೆ ನನ್ನ ಕೆಲಸಕ್ಕೆ ಹೋಗಲಾರದಷ್ಟು ಕೀಲುವಾಯು ನನ್ನ ಎಡ ಮೊಣಕಾಲಿನಲ್ಲಿ ಉಂಟಾಯಿತು. ವೈದ್ಯರಿಗೂ ಬೇರೆ ಖರ್ಚುಗಳಿಗೂ ಬಹಳ ವೆಚ್ಚವಾಯಿತು. ಆದರೂ ಏನೂ ಪ್ರಯೋಜನವಾಗಲಿಲ್ಲ. ಟಿಟಿಲೆಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸೆಂದು ಒಬ್ಬ ಸ್ನೇಹಿತರು ಹೇಳಿದ್ದನ್ನು ಕೇಳಿ, 1 ಸೀಸೆಯ ತೈಲವನ್ನು ಕೊಂಡುಕೊಂಡೆನು. ಅದನ್ನು ಉಪಯೋಗಿಸಿದ 3 ದಿನಗಳಲ್ಲಿ ನೋವು ಪೂರ್ಣ ಬಿಟ್ಟಿತು. ಇದರಿಂದ ನನ್ನಲ್ಲಿ ಆಶ್ಚರ್ಯವೂ ಕೃತಜ್ಞತೆಯೂ ಉಂಟಾದವು. ಅಂದಿನಿಂದ ಅದು ತಿರಿಗಿ ಕಾಣಿಸಲಿಲ್ಲ.”

ಸೀಸೆ 1ಕ್ಕೆ 1 ರೂ. ಮೇಲಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

101-45

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬುಡ್ಡಿ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0

ಕೂದಲೆಣ್ಣೆಗೆ ಹಾಕುವ ಬೇರೆ ಕೆರೋಸೀನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ. 3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ನಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[296-11] 177, ಟೈನಾಬಜಾರ್ ರೋಡ್, ಮದರಾಸ್

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3–8–0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬೇರೆ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ತಗಲ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180–21] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲಾ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1–0–0.



ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಗಂಟಾಗಿರುವ ಕೂದಲು ಮೃದುವಾಗುವದು. ನೀಳವಾಗಿ ನುಣ್ಣನೆ ಕನ್ನಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕೆಲ್ಲನ್ನು ಮೂಲವನ್ನು ತೆಗೆದು, ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನು, ಮನಸ್ಸಿಗೆ ಸಂತೋಷವನ್ನು, ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜ, ಪುನುಗು, ಅಂಬರ್, ಕೇಸರ್, ಪಚ್ಚೆಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ಪಚ್ಚೆ ಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿನಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರೂ, ಹುಡುಗರು, ಮಕ್ಕಳು ಪ್ರತಿಯೊಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1–0–0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬುಡ್ಡಿ 1, ವಾಸನೆಯುಳ್ಳ ಸೋಪು 1, ತಾಂಬೂಲಪಾತ್ರೆ 22, ಕೊಂಡೆ ಗಿಣಗಳು 6, ಡಾಮೊನೀಷನ್ ಬ್ರೂಚ್ 1, ಜವಾಜು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪನಿ,

[250–13] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಗೃಹಕೃತ್ಯದ ನೋಟೀಸ್.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ತೀರ್ಥಹಳ್ಳಿ ತಾಲ್ಲೂಕು ಹೋಬಳಿ ನಂಟೂರು ಗ್ರಾಮದ ಹೊನ್ನಗುಂಡಿಯಲ್ಲಿರುವ ಬೇಲೂರು ಮಂಜಪ್ಪಗೌಡರ ಮಗ ಲಿಂಗಪ್ಪಗೌಡರು ಮತ್ತು ಇವರ ದಾಯಾದಿ ಇದೇ ಊರು ಗೋವಿಂದಗೌಡರ ಮಗ ತಿಮ್ಮಪ್ಪ ಎಂಬುವರು ಸಹಾ ಅವಿಭಕ್ತ ಕುಟುಂಬರು. ಒಟ್ಟು ಕುಟುಂಬದ ಪಿತರಾರ್ಜಿತ ಸ್ಥಿರ ಚರಾಸ್ತಿಗಳನ್ನು ಒಂದನೇ ಲಿಂಗಪ್ಪಗೌಡರೇ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಇರುವದಲ್ಲದೆ ಮೈನರ್ ತಿಮ್ಮಪ್ಪಗೌಡ, ಮೈನರ್ ಗಾರ್ಡಿಯನ್ ತಾಯಿ ಗಿಡ್ಡಮ್ಮ ದುಗ್ಗಮ್ಮ ಇವರು ಸಹ ಲಿಂಗಪ್ಪಗೌಡರಲ್ಲಿ ವಾಸವಾಗಿರದೆ ಮೈನರ್‌ನೊಂದಿಗೆ ಮೊದಲೇ ಬೇರೆ ವಾಸವಾಗಿರುವವರಿಂದ ಸದರಿ ಮೈನರ್ ತಿಮ್ಮಪ್ಪಗೌಡನಿಗೆ ಮೋಸಮಾಡಬೇಕೆಂಬ ಬದ್ಧ ಬುದ್ಧಿಯಿಂದ ಒಟ್ಟು ಕುಟುಂಬದ ಹಾಗೂ ಮೈನರ ಒಸ್ಸಿಗೆ ಸಂಬಂಧಪಟ್ಟ ಸ್ಥಿರ ಚರ ಆಸ್ತಿಗಳನ್ನು ಪರಾಧೀನಮಾಡಲು ಸದರಿ ಲಿಂಗಪ್ಪಗೌಡರು ಸಿದ್ಧರಾಗಿರುತ್ತಾರೆ. ಮೈನರನ ವಿನಹಾ ಯಾರಾದರೂ ಈ ಆಸ್ತಿಗಳನ್ನು ಪಡೆದುಕೊಂಡರೆ ಈ ಆಸ್ತಿಗಳ ಮೇಲೆ ಯಾವ ತರಹದಿಂದಲಾದರೂ ಪರಾಧೀನಹೊಂದಿದವರಿಗೆ ಹಕ್ಕು ಊರ್ಜಿತವಾಗಿ ನಿಲ್ಲುವದಿಲ್ಲವಾಗಿ ಮುಂಡಿತ ಇದರಿಂದ ತಿಳಿಯಪಡಿಸಿರುತ್ತೆ.

ತಾ. 24-2-1916. ಮೈನರ್ ತಿಮ್ಮಪ್ಪಗೌಡನ ಬಗ್ಗೆ ಗಾರ್ಡಿಯನ್
[45-1] ತಾಯಿ ಗಿಡ್ಡಮ್ಮ ದುಗ್ಗಮ್ಮ.

ಗೃಹಕೃತ್ಯದ ನೋಟೀಸ್.

ಬೆಂಗಳೂರು ದಂಡು ಹಲಸೂರು ಪೇಟೆಯಲ್ಲಿರುವ ಚನ್ನಕೇಶವದ ಅಂಕಸ್ವಾಮಿಯರ ಮಗ ತ್ರಿಮೂರ್ತಾಚಾರ್ಯನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—ನನ್ನ ಮಗಳಾದ ಸೀತಮ್ಮನೆಂಬ ಕನ್ನೆಯನ್ನು ಹಾಸನ ಜಿಲ್ಲೆಗೆ ಕಸಬಾ ಹೋಬಳಿ ಬೋಳಿ ತಟ್ಟೆಕೆರೆ ದಾಖಲೆ ಮಾರಿಗುಡಿ ಕೊಪ್ಪಲು ಗ್ರಾಮದಲ್ಲಿರುವ ಮ|| ಮಲ್ಲಯ್ಯಾಚಾರ್ಯರ ೨ ನೇ ಕುಮಾರ ಶ್ರೀಕಂಠಯ್ಯಾಚಾರಿ ಎಂಬುವನಿಗೆ ಕೊಡುವುದಾಗಿಯೂ, ಕಳೆದ ಮಾಘಮಾಸದಲ್ಲಿ ಲಗ್ನಬೆಳಸಿಕೊಡುವುದಾಗಿಯೂ ನಾನು ಸದರಿ ಮಲ್ಲಯ್ಯಾಚಾರ್ರಿಗೆ ವಾಗ್ದಾನಮಾಡಿದ ಮೇಲೆ ನನ್ನ ವಾಗ್ದಾನದಂತೆ ಸದರಿ ಮಲ್ಲಯ್ಯಾಚಾರ್ರು ಲಗ್ನಕ್ಕೆ ಸಂಬಂಧಪಟ್ಟ ಸಾಮಾನುಗಳು ಸುಮಾರು ಐದನೂರು ರೂಪಾಯಿಗಳ ವರಿಪಿಗೂ ಸಿದ್ಧಪಡಿಸಿಕೊಂಡರು. ಈ ವಿಚಾರ ಮೈಸೂರು ನಜರಬಾದಿನಲ್ಲಿರುವ ನನ್ನ ಸಹೋದರನಾದ ವೆಂಕಟ ಶಾಮಾಚಾರಿ ಎಂಬುವನೂ, ಇವನ ಹೆಂಡತಿ ಗುಜ್ಜಮ್ಮನೂ ಸಹ ತಿಳಿದವರಾಗಿ ಅವರಿಬ್ಬರೂ ನನ್ನ ಮನೆಗೆ ಬಂದು ನಾಲ್ಕುದಿವಸವಿದ್ದು ಲಗ್ನದ ವಿಚಾರವೆಲ್ಲವನ್ನೂ ತಿಳಿದುಕೊಂಡು ಅನಂತರ ತಮ್ಮ ಸ್ಥಳಕ್ಕೆ ಹೋಗಲು ಪ್ರಯತ್ನಪಟ್ಟು ಹೊರಡುವಾಗ್ಯೆ ನನ್ನ ಮಕ್ಕಳಾದ ಸೀತಮ್ಮನನ್ನು, ಇವಳ ತಂಗಿ ಲಕ್ಷ್ಮಮ್ಮನನ್ನೂ ಸಹ ತಮ್ಮ ಜೊತೆಯಲ್ಲಿ ಕಳುಹಿಸಿಕೊಡಬೇಕೆಂದೂ, ಲಗ್ನಕ್ಕೆ ತಾವು ಹೊರಟುಬರುವಾಗಲೇ ಇವರುಗಳನ್ನು ಜೊತೆಯಲ್ಲಿ ಕರೆದುಕೊಂಡು ಬರುವುದಾಗಿಯೂ, ಮಕ್ಕಳನ್ನು ತಮ್ಮ ಜೊತೆಯಲ್ಲಿ ಕೆಲವು ದಿನಗಳು ಇಟ್ಟುಕೊಂಡಿರಬೇಕೆಂಬ ಅಪೇಕ್ಷೆಯು ತಮಗೆ ಬಹಳವಾಗಿವೆಯೆಂದು ಮುಂತಾಗಿ ನನ್ನನ್ನು ಕೇಳಿಕೊಂಡದ್ದರ ಮೇಲೆ ಇವರಿಷ್ಟಕ್ಕೆ ತಡೆಮಾಡಲು ನನಗೂ ಮನಸ್ಸು ಬಾರದೆ ಹಾಗೇ ಮಾಡಬಹುದೆಂದು ನನ್ನ ಇಬ್ಬರು ಮಕ್ಕಳನ್ನೂ ಇವರ ಜೊತೆಯಲ್ಲಿ ಕಳುಹಿಸಿಕೊಟ್ಟೆನು. ಮೊದಲಿನಂತೆ ಮಾಘ ಮಾಸದಲ್ಲಿ ಲಗ್ನಬೆಳಸಲು ಕೆಲವು ಅನಿವಾರ್ಯದಿಂದ ನಿಲ್ಲಿಸಿ, ಬರುವ ಚೈತ್ರ ಶುದ್ಧದಲ್ಲಿ ಲಗ್ನ ನೆರವೇರಿಸಲು ನಿಶ್ಚಯಿಸಿಕೊಂಡು ತಾ. 3-2-15 ರಲ್ಲಿ ಮೈಸೂರಿಗೆ ಹೋಗಿ ನನ್ನ ತಮ್ಮನನ್ನು ನೋಡಿ ಮೇಲ್ಕಂಡಂತೆ ಮಾಘ ಮಾಸದಲ್ಲಿ ಅನಿವಾರ್ಯದಿಂದ ಲಗ್ನ ನಡೆಯಲಿಲ್ಲ. ಚೈತ್ರ ಮಾಸದಲ್ಲಿ ನೆರವೇರಿಸಬೇಕು ಎಂದು ಮುಂತಾಗಿ ಹೇಳಿ ನಾನು ಹೊರಡುವ ವೇಳೆ ಮಕ್ಕಳನ್ನು ಕಳುಹಿಸಿಕೊಡಿ ಎಂದು ಕೇಳಿದೆನು. ಅದಕ್ಕೆ ನನ್ನ ತಮ್ಮನೂ ಆತನ ಹೆಂಡತಿಯೂ ಸಹ ಕಳುಹಿಸಿಕೊಡದೆ ಮಕ್ಕಳನ್ನು ಎಲ್ಲಿಯೋ ನನ್ನ ಕಣ್ಣಿಗೆ ಬೀಳದಂತೆ ಮುಚ್ಚಿಟ್ಟು ಕಳುಹಿಸಿಕೊಡುವದಿಲ್ಲವೆಂದು ಮುಂತಾಗಿ ಹೇಳಿ ಮೋಸಪಡಿಸಿದರು. ಇವರ ಮೋಸಕೃತ್ಯದ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲೂ, ಸದರಿ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ರವರಿಗೂ ಅರ್ಜಿ ಕೊಟ್ಟು ಮೊಕದ್ದಮೆ ನಡೆಯುತ್ತಿದೆ. ನಾನು ಜೀವಂತನಾಗಿರುವವರೆಗೆ ಈ ಮಕ್ಕಳಿಗೆ ನನ್ನ ವಿನಾ ಬೇರೆ ಯಾರೂ ಸ್ವತಂತ್ರರಲ್ಲ. ನನ್ನ ಅಪ್ಪಣೆ ವಿನಾಯಿ ನನ್ನ ತಮ್ಮನ ಮತ್ತು ಆತನ ಹೆಂಡತಿ ಗುಜ್ಜಮ್ಮನ ಮಾತಿಗೆ ಮರುಳಾಗಿ ಯಾರಾದರೂ ಸದರಿ ನನ್ನ ಮಗಳು ಸೌ|| ಸೀತಮ್ಮ, ಲಕ್ಷ್ಮಮ್ಮ ಇವರನ್ನು ಮದುವೆಮಾಡಿಕೊಂಡಲ್ಲಿ ಆ ಲಗ್ನವು ಊರ್ಜಿತವಾದತಕ್ಕದ್ದಲ್ಲವೆಂದೂ ಮತ್ತು ಈ ವಿಷಯದಲ್ಲಿ ನನಗೆ ಉಂಟಾಗುವ ಎಲ್ಲಾ ಕಷ್ಟ ನಷ್ಟಗಳಿಗೂ ಅವರೇ ಜವಾಬ್ದಾರರಾಗಬೇಕಾಗುತ್ತೆಂದೂ ಈ ವಿಷಯವೆಲ್ಲವನ್ನೂ ಮೈಸೂರಲ್ಲಿರುವ ನಮ್ಮ ಮಠದ ಪುರೋಹಿತರೆಲ್ಲರಿಗೂ ಇತರ ನಮ್ಮ ಎಲ್ಲಾ ಜನಾಂಗದವರಿಗೂ ಈ ಮೂಲಕ ತಿಳಿಸಿ ಎಚ್ಚರಿಸಿದೆ.

ತಾ. 27-2-16. [44-1] ತ್ರಿಮೂರ್ತಾಚಾರ್ಯನ ರುಜು.

ಯುಗಾದಿಯ ಬಹುಮತಿ ಗಡಿಯಾರ.

19 ಸಾಮಾನು ಬಹುಮತಿ ಸಹಿತ ಕ್ರಯ ರೂ. 3-14-0.



ಇದರಲ್ಲಿ ತೋರುವ 10 ರೂಪಾಯಿ ಬೆಲೆಯುಳ್ಳ ಗಡಿಯಾರವನ್ನು ಯುಗಾದಿಯ ಉತ್ಸವಕ್ಕಾಗಿ ರೂ. 3-14-0 ಕ್ಕೆ 19 ಬಹುಮಾನಗಳ ಸಮೇತ ಉಚಿತವಾಗಿ ಕೊಡುತ್ತೇವೆ. 1 ಗಡಿಯಾರ ಸರಪಣಿ, 2 ಪೇನಾ, 3 ಉತ್ತರಮುಖಿ, 4 ಹಣದ ಚೀಲ, 6 ಬ್ಲೂಬ್ಲಾಕು ಶಾಯಿ ಪೊಟ್ಟ, 6 ಎಲೆಕ್ಟ್ರಿಕ್ ಥಂಗಾರದ ಶಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಸರಟುಗುಂಡಿ, 8 ಜರ್ಮನ್ ಬೆಳ್ಳಿಯ ಕುಂಕುಮಭರಣಿ, 9 ಡಿಟೋ ಸಾದಿನ ಚಿಪ್ಪು, 10 ಡಿಟೋ ಕಣ್ಣುಕಪ್ಪಿನ ಭರಣಿ, 11 ಡಿಟೋ ನಸ್ಯದ ಡಬ್ಬಿ, 12 ಇಮಿಟೇಷನ್ ಡೈಮಂಡ್ ಮೂಗುಬಟ್ಟು, 13 ಕತ್ತಿ, 14 ಎಲೆಕ್ಟ್ರೀ ಸೀಲು ಉಂಗುರ, 15 ರೇಷ್ಮೆ ಧಾರ, 16 ಸ್ಟೀಲು ಸಬ್ಬು, 17 ಕೆಂಪು ಶಾಯಿ ಪೊಟ್ಟ, 18 ಕೈ ಗುಡ್ಡೆ, 19 ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಕೆ.

ಮಧುರೆ ಚುನ್ನಡಿ ಸೀರೆ ರೂ. 2-6-0 ; ತಂಜಾವೂರು ಗೆಜ್ಜೆ ಅಡ್ಡಿಕೆ 6 ಆಣೆ ; ಕೈ ಗಡಿಯಾರ ರೂ. 1-14-0.

ಚಿನ್ನದ ಗಿಲ್ಟು ಬೆಲ್ಟು ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು ಬೆಲೆ ರೂ. 4-0-0 } ಪೋಸ್ಟೇಜು
ಬೆಳ್ಳಿ ಗಿಲ್ಟು ಡಾಬು ,, ,, 3-0-0 } ಬೇರೆ.

ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 150 ಗಟ್ಟಿ ಗೆಜ್ಜೆಗಳು ಸುತ್ತಲ್ಪಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಇಲ್ಲ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಾರೆ. ಚಿನ್ನದ ಗಿಲ್ಟು ನಾಗಮುರಿಗೆ ರೂ. 3-8-0.

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಬೆಳ್ಳಿ ಕಂಬಿಯಿಂದ ತಯಾರಾಗಿ ಇವೆ. ಇವು ಎಂದಿಗೂ ಕೆಡುವದಿಲ್ಲ. ಇವು ಎಲ್ಲರು ಧರಿಸಿಕೊಳ್ಳಬಹುದು.



ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-4-0	1-2-0	0-12-0	0-8-0

ಅಂದವಾದ ಡಾಬು (ಒಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-4-0	1-2-0	0-14-0

ಅಂದವಾದ ವೃದು ಹೇಲಿ ರುಳಿ (ಕಾಲುಗೊಲಸು).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-12-0	1-9-0	1-5-0	1-3-0

ಪೋಸ್ಟೇಜ್ ಬೇರೆ.

ವಿಳಾಸ.—ದಯಾನಿಧಿ, ರಾಜಾವಿಲಾಸ,
[19-2] ಎಲ್ಲಿವಾಕಂ, ಮದ್ರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಫೆಬ್ರವರಿ 28 ನೇ ತಾ. ವರೆಗಿನ ಬ್ಯಾಂಕಿನ, ಲೆಕ್ಕ.

ಲೇಣೆ:—	(1) ಷೇರು ಮೊಬಲಗು	ರೂ.	10,00,000
,,	(2) ರಿಜರ್ವ್ ಫಂಡು	,,	25,000
,,	(3) ಡಿಪಾಜಿಟ್ಟುಗಳು	,,	25,11,036
,,	(4) ಇತರೆ	,,	15,163
	(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	35,51,198

ದೇಣೆ:—	(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	5,18,816
,,	(2) ಖಾತೆ ಮತ್ತು ಇತರ ಸಾಲಗಳು	,,	21,41,286
,,	(3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,28,893
,,	(4) ಇನ್ವೆಸ್ಟ್ಮೆಂಟುಗಳು	,,	3,67,277
,,	(5) ಏಜನ್ಸಿಗಳಲ್ಲಿರುವ ಮೊಬಲಗು	,,	1,69,863
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	14,940
,,	(7) ಇತರೆ	,,	10,043
	(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	35,51,198

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ಕಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ “ಕಾಮಿನಿಯಾ ತೈಲ” ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವು. ಅಲ್ಲಹಾಬಾದಿನ ಪ್ರದರ್ಶನದಲ್ಲಿ “ಸರ್ಟಿಫಿಕೇಟ್ ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ “ಕಾಮಿನಿಯಾ” ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬುದ್ಧಿಯ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು “ಕಾಮಿನಿಯಾ ತೈಲ” ವನ್ನು ಕೇಳಿದರೆ, “ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ” ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ “ಕಾಮಿನಿಯಾ ಓಯಿಲ್” ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದು ಮೇಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-7]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ದ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಬಿ ... ಮರ್ಚ, ಮಂಗಳೂರು

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇತಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇತಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಗುಣಪಡಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3. ಊಟವಾದನಂತರ ಅಥವಾ ತಾಂಬೂಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ಪಷ್ಟಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇತಿಂತಾನದ ಒಂದು ಪೊಟ್ಟವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

48 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1ಕ್ಕೆ 4 ಆಣೆ	650 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
96 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇತಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177,
[25-6] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಹೆಸರು ಬದಲಾವಣೆ.

ನನ್ನ ತಂದೆತಾಯಿಗಳು ನನಗೆ ಸುನ್ನಿ ಸಾಹೇಬ್ ಎಂದೂ, ಅಬ್ದುಲ್ ಹಮೀದ್ ಖಾನ್ ಎಂದೂ ನಾಮಕರಣಮಾಡಿದಾರೆ. ಇನ್ನು ಮೇಲೆ ಸಕಲರೂ ನನ್ನ ಮೊದಲನೇ ಹೆಸರು ಬಿಟ್ಟು ನನ್ನನ್ನು ಎರಡನೇ ಹೆಸರಿನಿಂದಲೇ ಕರೆಯಬೇಕೆಂದು ಬೇಡುತ್ತೇನೆ. ಅಬ್ದುಲ್ ಹಮೀದ್ ಖಾನ್, ಟಿಂಬರ್ ಮರ್ಚೆಂಟ್, ಹುಣಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಮಾರ್ಚಿ ತಾ. ೧೧ ನೇ ಗುರುವಾರ.

ಮೈಸೂರು ಪುರಾತನ ಲಿಪ್ಯನ್ವೇಷಣ ಇಲಾಖೆಯು.

ನಮ್ಮ ಸಂಸ್ಥಾನದ ಪ್ರಾಚೀನ ಲಿಪ್ಯನ್ವೇಷಣ ಇಲಾಖೆಯ ಕಳೆದ ಸಾಲಿನ ರಿಪೋರ್ಟು ನಮಗೆ ತಲಪಿ ಕೆಲವು ವಾರಗಳಾದವು. ಮೈಸೂರು ಗವರ್ನ್‌ಮೆಂಟಿನವರು ಪ್ರಕಟಮಾಡುವ ರಿಪೋರ್ಟುಗಳಲ್ಲಿ ಇದು ತುಂಬಾ ಸ್ವಾರಸ್ಯವಾಗಿಯೂ, ಆಹ್ಲಾದಕರವಾಗಿಯೂ ಇರುತ್ತದೆ. ಮ|| ಆರ್. ನರಸಿಂಹಾಚಾರ್ಯರು ತುಂಬಾ ಸಮರ್ಥರಾದದ್ದರಿಂದ ಅವರಿಗೆ ವಹಿಸಲ್ಪಟ್ಟಿರುವ ಈ ಇಲಾಖೆಯ ಕಾರ್ಯಗಳು ಸ್ತೋತ್ರಾರ್ಹವಾಗಿ ನಡೆದಿರುವವು. ಅವರ ಸಾಹಸ ಕೆಲಸಗಳು ಇನ್ನೂ ವಿಶೇಷವಾದ ಗೌರವವನ್ನೂ ಸನ್ಮಾನವನ್ನೂ ಪಡೆಯತಕ್ಕವುಗಳಾಗಿವೆ. ನಮಗೆ ಅನುಕೂಲವಾದವುಗಳೆಂದು ಕಂಡುಬರುವಂಥಾ ನಮ್ಮ ಪುರಾತನ ಕಾಲದ ಕೆಲಸಕಾರ್ಯಗಳನ್ನೂ ವಿಷಯಗಳನ್ನೂ ನಮ್ಮ ತಿಳುವಳಿಕೆಗೆ ತಂದಾಗ ನಾವು ಪರಮಾನಂದದಿಂದ ಅಹಂಕಾರಪಟ್ಟುಕೊಳ್ಳುವೆವು; ಅಂಥವುಗಳನ್ನು ಜೀರ್ಣೋದ್ಧಾರ ಮಾಡಿ ಚಿರಕಾಲ ಕಾಪಾಡಿಕೊಂಡು ಬರುವುದಕ್ಕೆ ದೇಹಶ್ರಮವೂ ದ್ರವ್ಯವ್ಯಯವೂ ಮಾಡಬೇಕೆಂದಾಗ ಮಾತ್ರ ಅಲಕ್ಷ್ಯವೂ ಜುಗುಪ್ಸೆಯೂ ಹುಟ್ಟುವವು. ಅಂಥಾ ಪುರಾತನ ಕಾರ್ಯಗಳು ಜೀರ್ಣವಾಗಿ ನಿರ್ನಾಮವಾದರೂ ನೋಡುತ್ತಾ ಸುಮ್ಮನಿರುವೆವು.

ಮ|| ನರಸಿಂಹಾಚಾರ್ಯರು ಸೋಮನಾಥಪುರದಲ್ಲಿರುವ ದಿವ್ಯವಾದ ದೇವಸ್ಥಾನದ ರಚನೆಯನ್ನೂ ನಂದಿಯಲ್ಲಿರುವ ಪುರಾತನ ದೇವಾಲಯದ ರಚನೆಯನ್ನೂ ಚೆನ್ನಾಗಿ ನೋಡಿ ಪರಿಶ್ರಮ ಮಾಡಿಕೊಳ್ಳುವುದಕ್ಕೆ ಕೆಲವು ಕಾಲ ಶ್ರಮಪಟ್ಟಿರುತ್ತಾರೆ. ಅವುಗಳ ಅನೇಕ ಚಿತ್ರಗಳು ತಯಾರುಮಾಡಿಸಿ ಈ ರಿಪೋರ್ಟಿಗೆ ಸೇರಿಸಿರುವರು. ಇವನ್ನು ನೋಡಲು ಎಷ್ಟೋ ಸಂತೋಷವಾಗುತ್ತದೆ. ವಿಗ್ರಹಗಳೇ ಮೊದಲಾದವುಗಳನ್ನು ರಚಿಸಿದ ಕಾರೇಗಾರರ ಹೆಸರುಗಳೂ ತಿಳಿಸಲ್ಪಟ್ಟಿರುವುದನ್ನು ಓದುವಾಗ್ಗೆ ಅಂಥಾ ಶಿಲ್ಪಿಗಳ ಕೂಡ ನಾವೂ ಇರುವಂತೆ ಉತ್ಸಾಹ ಹುಟ್ಟುವುದು. ಅಂಥಾ ವಿಗ್ರಹಗಳನ್ನೂ ಚಿತ್ರಕೆಲಸಗಳನ್ನೂ ಹೋಲಿಸಿ ಅವುಗಳೆಲ್ಲಾ ಒಂದೇ ಜಾತಿಯವುಗಳೇ ಅಥವಾ ಯಥಾರ್ಥವಾಗಿಯೂ ಬದುಕಿದ್ದವರ ರೂಪಲಾವಣ್ಯಗಳೇ ಎಂದು ಪರೀಕ್ಷಿಸಿ ತಿಳಿಯಲು ಅನುಕೂಲವುಂಟಾಗುವುದು. ವಿಗ್ರಹಗಳೇ ಮುಂತಾದವುಗಳಿಗೆ ಮಾಡಿಟ್ಟಿರುವ ಒಡವೆಗಳ ಅಲಂಕಾರಗಳು ವಿಶೇಷ ಕಲಾಕೌಶಲ್ಯ ಸಹಿತವಾಗಿರೋಣದರಿಂದ ಅವೆಲ್ಲಾ ಚೆನ್ನಾಗಿ ನೋಡಿ ಗ್ರಹಿಸತಕ್ಕವುಗಳಾಗಿರುತ್ತವೆ. ಚಿತ್ರಗಳ ನಕ್ಷೆಗಳನ್ನು ವಿಸ್ತಾರವಾಗಿ ರಚಿಸಿ ಕೊಡದ ಮಟ್ಟಿಗೂ ಅವುಗಳ ಕಾಲಕ್ರಮವಂತು ಒಂದರ ಪಕ್ಕದಲ್ಲೊಂದರಂತೆ ಜೋಡಿಸಿಟ್ಟು ನೋಡುತ್ತಾ ಬರುವಲ್ಲಿ ಪ್ರಾಚೀನ ವಿಷಯಗಳು ಮನಸ್ಸಿಗೆ ಹೊಳೆದು ಹರ್ಷವನ್ನೂ ಉತ್ಸಾಹವನ್ನೂ ಉಂಟುಮಾಡುವವು.

ಪೂರ್ವ ಚರಿತ್ರೆಗೆ ಸಂಬಂಧಪಡುವಂಥಾ ಕೆಲವು ಸಂಗತಿಗಳನ್ನು ಕಳೆದ ಸಾಲಿನಲ್ಲಿ ಕಂಡುಹಿಡಿದಿರುತ್ತಾರೆ. ಚಿಕ್ಕಬಳ್ಳಾಪುರದಲ್ಲಿ ಕೆಲವು ತಾಮ್ರ ಶಾಸನಗಳನ್ನು ಮ|| ನರಸಿಂಹಾಚಾರ್ಯರಿಗೆ ಕಳುಹಿಸಿಕೊಟ್ಟರು. ಒಬ್ಬ ಮಹಮದೀಯನಿಗೆ ಅವನು ಸಂದಿಯ ಒಳಗೆ ತನ್ನ ಜಮೀನಿನಲ್ಲಿ ಭಾವಿ ತೋಡುವಾಗ್ಗೆ ಈ ಶಾಸನಗಳು ಆಕಸ್ಮಾತ್ತಾಗಿ ದೊರಕಿದವು. ಮೂರು ಶಾಸನಗಳ ಪೈಕಿ ಎರಡು ಗಂಗರಾಜರ ವಿಚಾರವನ್ನೂ ಒಂದು ರಾಷ್ಟ್ರಕೂಟದವರ ವಿಚಾರವನ್ನೂ ತಿಳಿಸತಕ್ಕವುಗಳಾಗಿವೆ. ಈ ಎರಡನೆಯದು ಕ್ರಿಸ್ತಶಕೆಯ ೮೦೦ ನೆಯ ಇಸವಿಯದು; ಅಂದರೆ ಅದು ಇಲ್ಲಿಗೆ ಒಂದು ಸಾವಿರ ವರುಷಕ್ಕಿಂತ ಹಿಂದಿನ ಚರಿತ್ರೆಗೆ ಸಂಬಂಧಪಟ್ಟದ್ದಾಯಿತು. ಅತ್ತಲಾಗಿ ದೊಡ್ಡಬಳ್ಳಾಪುರದ ತಾಲ್ಲೂಕಿಗೆ ಸೇರಿದ ಮಾಚಿಗೊಂಡನಹಳ್ಳಿಯೊಳಗೆ ಒಬ್ಬ ಮಹಮದೀಯ ಹೆಂಗಸಿನ ಬಳಿಯಲ್ಲಿ ಇನ್ನೂ ಕೆಲವು ಶಾಸನಗಳು ಸಿಕ್ಕಿದವು. ಆ ಹೆಂಗಸು ಅವುಗಳನ್ನು ಒಂದು ಕೋಟೆಯಲ್ಲಿ ಕಂಡು ತಂದು ಹತ್ತುವರುಷಗಳಾದವಂತೆ. ಈ ಪುಣ್ಯಾತಗಿತ್ತಿಯು ಆ ಸುತ್ತುಮುತ್ತಿನಲ್ಲಿ ಮಕ್ಕಳಿಗೆ ರೋಗಗಳನ್ನು ವಾಸಿಮಾಡುವುದಕ್ಕೆ ಯಂತ್ರಗಳಿಗೆ ಉಪಯೋಗಿಸುತ್ತಿದ್ದಳು. ಮಕ್ಕಳಿಗೆ ಕಾಯಿಲೆ ಬಂದರೆ ತಂದೆತಾಯಿಗಳು ಹಣ್ಣು ಎಲೆ ಅಡಿಕೆ ದಕ್ಷಿಣೆ ಸಮೇತ ಅಂಥಾ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದರೆಂದೂ, ಆ ಹೆಂಗಸು ಆ ಶಾಸನಗಳಿಗೆ ಪೂಜೆ ನೈವೇದ್ಯಗಳನ್ನು ಮಾಡಿ ಅವನ್ನು ಕಾಯಿಲೆಯಾದ ಮಕ್ಕಳ ತಲೆಯ ಸುತ್ತಾ ಸುತ್ತಿಸುತ್ತಿದ್ದಳೆಂದೂ, ಕೆಲವು ದಿನಗಳೊಳಗಾಗಿ ಮಕ್ಕಳು ರೋಗವಾಸಿಯಾಗಿ ಸುಖವಾಗುತ್ತಿದ್ದರೆಂದೂ ತಿಳಿಸಲ್ಪಟ್ಟಿದೆ. ಈ ಶಾಸನಗಳು ಬಹಳ ಪುರಾತನವಾದವು; ಅವುಗಳಲ್ಲಿ ವಿವರಿಸಲ್ಪಟ್ಟಿರುವ ಸಂಗತಿಗಳು ಒಂಭತ್ತನೆಯ ಶತಮಾನದ ಪ್ರಾರಂಭದಲ್ಲಿ ಜರುಗಿದಂತೆ ಗೊತ್ತಾಗುವುದು. ಅದರಲ್ಲಿ ಗಂಗರಾಜರುಗಳ ವಂಶಾವಳಿಯು ಬಹಳ ಚೆನ್ನಾಗಿ ವಿವರಿಸಲ್ಪಟ್ಟಿದೆ. ಅವರ ಸಂಪೂರ್ಣವಾದ ವಂಶಾವಳಿಯು ಇದುವರೆಗೆ ಗೋಚರವಾಗಿರಲಿಲ್ಲ.

ಮ|| ನರಸಿಂಹಾಚಾರ್ಯರು ಸುಮಾರಾಗಿ ಒಂದು ನೂರು ಪುರಾತನ ನಾಣ್ಯಗಳನ್ನು ಪರೀಕ್ಷೆ ಮಾಡಿದರಲ್ಲದೆ ಇನ್ನೂ ಅನೇಕ ಕಾರ್ಯಗಳಿಗೆ ಗಮನಕೊಟ್ಟಿದಾರೆ. ಕೆಲವು ಚರಿತ್ರಾರ್ಹವಾದ ಪುರಾತನ ಕಟ್ಟಡ ಮುಂತಾದವುಗಳು ಜೀರ್ಣವಾಗಿ ಹಾಳಾಗುತ್ತಿರುವವೆಂದು ರಿಪೋರ್ಟಿನಲ್ಲಿ ಕಾಣಿಸಿದಾರೆ. ಕೆಲವು ಕಡೆ ಶಾಸನಗಳನ್ನು ಪಡೆದಿರುವ ಭಂಡೆಗಳನ್ನು ಸುಟ್ಟು, ಕಲ್ಲುಗಳನ್ನು ತೆಗೆದುಕೊಂಡು ಹೋಗುತ್ತಿರೋಣದರಿಂದ ಅಂಥಾ ಶಾಸನಗಳು ತೊಡೆದುಹೋಗುತ್ತವೆ. ಇನ್ನು ಕೆಲವು ಕಡೆ ಸುಂದರವಾದ ಪ್ರಾಚೀನ ಕಟ್ಟಡಗಳಲ್ಲಿ ಅರಳಿಯ ಗಿಡಗಳು ಬೆಳೆದು ಕಟ್ಟಡಗಳನ್ನೇ ಹಾಳುಮಾಡುತ್ತಿರುವವು. ನಮ್ಮ ಗವರ್ನ್‌ಮೆಂಟಿನವರು ಇಂಥಾ ವಿಚಾರಗಳಿಗೆ ಶೀಘ್ರವಾಗಿ ಗಮನಕೊಟ್ಟು, ಅವುಗಳನ್ನೆಲ್ಲಾ ಸರಿಯಾಗಿ ಕಾಪಾಡಿಕೊಂಡು ಬರುವಂಥಾ ಏರ್ಪಾಡು ಮಾಡಬೇಕಾಗಿದೆ. ಇಂಥಾ ಚರಿತ್ರಾರ್ಹವಾದ ಪುರಾತನ ಕಟ್ಟಡ, ಶಾಸನ ಮೊದಲಾದವುಗಳನ್ನು ಉಸ್ತುವಾರಿ ಇಟ್ಟು ನೋಡಿಕೊಳ್ಳುವುದಕ್ಕೆ ಸಮರ್ಥನಾದ ಒಬ್ಬ ಅಧಿಕಾರಿಯನ್ನು ಪ್ರತ್ಯೇಕವಾಗಿಯೇ ನೇಮಿಸಬೇಕಾದದ್ದು ಅವಶ್ಯವೆಂದು ಸೂಚಿಸುತ್ತೇವೆ.

ಹಿಂದೂ ಮತದಲ್ಲಿ ತಿದ್ದುಪಾಟು.

ಸರ್ ಸುಬ್ರಮಣ್ಯ ಅಯ್ಯರ್ ಎಂಬ ದೊಡ್ಡ ಮನುಷ್ಯರು ಹಿಂದೂ ಮತವನ್ನು ಈಗಿನ ನಡವಳಿಕೆಗೆ ಸರಿಯಾಗಿ ತಿದ್ದಬೇಕೆಂದು ಅಪೇಕ್ಷಿಸಿ ಆ ತಿದ್ದುಪಾಟಿಗೆ ಅವಶ್ಯವಾದ ಕೆಲವು ಅಭಿಪ್ರಾಯಗಳನ್ನು ತೋರಪಡಿಸಿದ್ದಾರೆ. ಯಾಕೆಂದರೆ ಹಿಂದೂ ಮತವು ಜೀರ್ಣಾವಸ್ಥೆಯಲ್ಲಿದೆಯೆಂದು ಅವರು ಅಭಿಪ್ರಾಯಪಡುತ್ತಾರೆ. ಅದರಲ್ಲಿ ವಿಷಕರವಾದ ಕಳೆಗಳೂ ಮುಳ್ಳು ಗಿಡಗಳೂ ದಟ್ಟವಾಗಿ ಬೆಳೆದಿರುವದರಿಂದ ಅದು ಪ್ರಯೋಜನಕಾರಿಯಾಗಿರುವದಕ್ಕೆ ಬದಲಾಗಿ ಹಾನಿಕಾರಿಯಾಗಿದೆ. ಈ ಪಂಡಿತರು ಹಿಂದೂ ಮತವನ್ನು ನಾಲ್ಕು ಬಗೆಯಾಗಿ ತಿದ್ದಬೇಕೆಂದು ಸಲಹೆಕೊಟ್ಟಿದ್ದಾರೆ. ಇವರಂತೆ ಇನ್ನೂ ಅನೇಕ ಮಂದಿ ವಿದ್ಯಾವಂತರಾದ ಹಿಂದೂ ದೊಡ್ಡ ಮನುಷ್ಯರು ಈ ಅಭಿಪ್ರಾಯವನ್ನು ಅನುಮೋದಿಸುತ್ತಾರೆ.

ಈ ಮಹನೀಯರು ಮಾಡಬೇಕೆಂದಿರುವ ನಾಲ್ಕು ಬಗೆಯ ತಿದ್ದುಪಾಟುಗಳನ್ನು ಮೊದಲು ಸಂಕ್ಷೇಪವಾಗಿ ವಿವರಿಸುತ್ತೇವೆ.

ಮೊದಲನೇದು—ಮತಗ್ರಂಥಗಳು. ಈಗ ಮತಗ್ರಂಥಗಳೆಂದು ಭಾವಿಸಲ್ಪಡುವವುಗಳಲ್ಲಿ ಹೊಟ್ಟೂ ಗಟ್ಟಿಕಾಳೂ ಮಿಶ್ರವಾಗಿವೆ. ಗಟ್ಟಿಕಾಳನ್ನು ಕೆಲಸಕ್ಕೆ ಬಾರದ ಹೊಟ್ಟಿನಿಂದ ಕೇರಿ ಪ್ರತ್ಯೇಕಿಸಿಕೊಳ್ಳುವದು ಮೊದಲನೇ ಕೆಲಸ. ಹೀಗೆ ಸಂಪ್ರಹವಾದ ಬೋಧೆಯ ರಾಶಿಯನ್ನು ಸಂಸ್ಕೃತದಲ್ಲಿ ಕ್ರಮಪಡಿಸಿ ಬರೆದು ಸಕಲರಿಗೂ ಸುಲಭಸಾಧ್ಯವಾಗಿ ಸಿಕ್ಕುವಂತೆ ಮಾಡುವದು. ಮತ್ತು ಇದರಲ್ಲಿ ಸಾಧ್ಯವಾದಷ್ಟನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದು ಅಚ್ಚುಹಾಕಿಸುವದು. ಈಗೀಗ ಇಂಗ್ಲಿಷ್ ಭಾಷೆ ಎಲ್ಲಾ ಕಡೆಯೂ ವಿಸ್ತರಿಸುತ್ತಾ ಬರುತ್ತದೆ. ಮತ್ತು ಆಯಾ ಪ್ರದೇಶಗಳ ಜನಗಳಿಗೆ ತಕ್ಕ ಹಾಗೆ ಅದನ್ನು ಅವರವರ ಭಾಷೆಗಳಲ್ಲಿ ಬರೆದು ಛಾಪಿಸಿಕೊಡುವದು.

ಎರಡನೇದು—ಕುಟುಂಬ ಮತ್ತು ಅದರ ಏರ್ಪಾಡಿಗೆ ತಕ್ಕ ನಿಯಮಗಳು. ಕುಟುಂಬವು ಏಕಪತ್ನೀವ್ರತವನ್ನು ಅನುಸರಿಸಿ ನಡೆಯುವವರನ್ನು ಮಾತ್ರ ಒಳಗೊಂಡುದಾಗಿರಬೇಕು. ಅಪ್ರಾಪ್ತವಯಸ್ಕರಿಗೆ ವಿವಾಹ ಮಾಡಬಾರದು. ಒಂದು ಕುಟುಂಬದಲ್ಲಿರುವ ಬೇರೆ ಬೇರೆ ವ್ಯಕ್ತಿ ಪುರುಷಸ್ತ್ರೀಯರು ಆಯಾ ಕುಟುಂಬದಲ್ಲಿ ಹಿಡಿದಿರುವ ಸಂಬಂಧ ಮತ್ತು ಕರ್ತವ್ಯಗಳು ಮತ್ತು ಅವರಿಗೆ ನ್ಯಾಯವಾಗಿ ಆ ಕುಟುಂಬದಲ್ಲಿ ಸಲ್ಲತಕ್ಕ ಹಕ್ಕು ಬಾಧ್ಯತೆಗಳು ಸರಿಯಾಗಿ ನಿಷ್ಕರ್ಷಿಸಲ್ಪಡಬೇಕು. ಮತ್ತು ಇಂಥಿಂಥವರೇ ಒಂದು ಕುಟುಂಬದ ಆಸ್ತಿಗೆ ಹಕ್ಕುದಾರರೆಂದು ನಿರ್ಣಯಿಸಿ ಬಾಕಿ ದೂರದ ಸಂಬಂಧಿಗಳು ಹಕ್ಕುದಾರರಲ್ಲವೆಂದು ರದ್ದುಮಾಡಬೇಕು. ತಂದೆತಾಯಿಗಳು ತಮ್ಮ ಗಂಡು ಹೆಣ್ಣು ಮಕ್ಕಳಿಗೆ ಸಹ ಮನೆಯಲ್ಲಿ ಸುಲಭವಾದ ರೀತಿಯಲ್ಲಿ ಮತಬೋಧನೆಯನ್ನು ಕಲಿಸುವದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಹೀಗೆ ಮಾಡುವದರಿಂದ ಮಕ್ಕಳು ಚಿಕ್ಕವರಾಗಿರುವಾಗಲೆ ಅವರು ತಮ್ಮ ಮತದ ಸಂಪ್ರದಾಯಗಳನ್ನು ಕಲಿತು ಮುಂದೆ ಪ್ರಾಪ್ತವಯಸ್ಕರಾದ ಮೇಲೆ ಚೆನ್ನಾಗಿ ಕಲಿಯುವದಕ್ಕೆ ಬುದ್ಧಿಯು ಕುದುರಿ ಪರಿಪಾಕವಾಗಿರುವದು.

ಮೂರನೇದು—ಆಶ್ರಮಧರ್ಮ. ಈ ವಿಧವಾಗಿ ಸುಧಾರಿಸಲ್ಪಟ್ಟ ಕುಟುಂಬಗಳು ತಮ್ಮ ತಮ್ಮ ವರ್ಣಾಶ್ರಮವನ್ನು ಅನುಸರಿಸಬೇಕೊಡದು. ಜಾತಿಭೇದಗಳಿಂದ ಒಳ್ಳೇದಾಗಬೇಕೆಂಬ ಉದ್ದೇಶವು ಫಲಕಾರಿಯಾಗದೆ ಭೇದಗಳೂ ಪರಸ್ಪರ ವಿರೋಧಗಳೂ ಹುಟ್ಟಿ ಬೆಳೆಯುತ್ತವೆ. ಸ್ನೇಹವೂ ಸೋದರಭಾವವೂ ಹೋಗಿ ಕ್ರೌರ್ಯವೂ ಪರಸ್ಪರ ದ್ವೇಷವೂ ಹೆಚ್ಚಲಿಕ್ಕೆ ಕಾರಣವಾಯಿತು. ಆದ್ದರಿಂದ ಈ ಭೇದಕ್ಕೆ ಕಾರಣವಾದ ಜಾತಿಯನ್ನು ಸಂಪೂರ್ಣವಾಗಿ ವರ್ಜಾಮಾಡಬೇಕು.

ನಾಲ್ಕನೇದು.—ದೇವಾರಾಧನೆ. ದೇವರು ಸರ್ವಸಂಪೂರ್ಣನಾದ ನಿರ್ಗುಣ ಬ್ರಹ್ಮನಾಗಿದ್ದಾನೆ; ಸಗುಣಬ್ರಹ್ಮನನ್ನು ಪರಮಾತ್ಮ, ಸತ್, ಚಿತ್, ಆನಂದ ಅಥವಾ ಪರಮೇಶ್ವರನೆಂದು ಕರೆಯುತ್ತೇವೆ. ಈ ನಿರ್ಗುಣ ಸಗುಣ ಬ್ರಹ್ಮಗಳೇ ಸನಾತನಧರ್ಮದ ಅಸ್ತಿಭಾರದ ಬಂಡೆಯಾಗಿವೆ. ಈಗಲೂ ನಮಗೆ ಇದೇ ಆಧಾರವಾಗಿರಬೇಕು. ಆದರೆ ಅಪರಿಮಿತವಾದ ನಿರ್ಗುಣ ಬ್ರಹ್ಮವು ಮನುಷ್ಯರ ಮಿತವಾದ ಬುದ್ಧಿಗೆ ನಿಲುಕದಿರುವದರಿಂದ ಸಗುಣ ಬ್ರಹ್ಮನಿಗೂ ಈಶ್ವರನಿಗೂ ನಮ್ಮ ಆರಾಧನೆಯನ್ನು ಸಲ್ಲಿಸಬೇಕು. ದೇವತ್ವದ ಅಥವಾ ನಿರ್ಗುಣ ಬ್ರಹ್ಮದ ಪ್ರತಿನಿಧಿಯು ಈತನೊಬ್ಬನೇ. ಭಗವದ್ಗೀತೆಯಲ್ಲಿ—ನಾನೇ ಮರಣರಹಿತನು; ಲಯರಹಿತನು; ಸನಾತನಧರ್ಮಕ್ಕೂ ಸರ್ವಸುಖಕ್ಕೂ ನಿವಾಸವಾಗಿದ್ದೇನೆ. ಅನಿತ್ಯವಾದ ಲೋಕದಲ್ಲಿ ನನ್ನನ್ನು ಆರಾಧಿಸುಯೆಂದು ಹೇಳಿದೆ. ಮೇಲೆ ಹೇಳಿರುವ ಮಹಾವಾಕ್ಯವನ್ನನುಸರಿಸಿ ಪರಮೇಶ್ವರನನ್ನೂ ಈಶ್ವರನನ್ನೂ ಮಾತ್ರ ಸುಧಾರಣೆ ಹೊಂದಿದ ಕುಟುಂಬದವರೂ ಸಭೆಯವರೂ ಆರಾಧಿಸಬೇಕು. ಇತರ ದೇವತೆಗಳೂ ಶಕ್ತಿಗಳೂ ಹೊಂದುವ ಆರಾಧನೆಯು ಒಬ್ಬನೇ ನಿಜದೇವರಿಗೆ ಸಲ್ಲುತ್ತದೆ ಯಾದರೂ ಇಂತಹ ದೇವತೆಗಳ ಮತ್ತು ಶಕ್ತಿಗಳ ಪೂಜೆಗಳು ಕಾಲಕ್ರಮದಲ್ಲಿ ದುರಭ್ಯಾಸಗಳಿಗೂ ಮೂಢಭಕ್ತಿಗೂ ಕಾರಣಗಳಾಗುತ್ತವೆ. ಸಾಮಾನ್ಯ ಜನಸಮುದಾಯವು ಇವುಗಳಿಗೂ ಒಬ್ಬನೇ ನಿಜದೇವರಿಗೂ ಇರುವ ಸಂಬಂಧವನ್ನು ಭೇದಿಸಿ ತಿಳಿಯಲಾರರು. ಆದ್ದರಿಂದ ಈ ದೇವತೆಗಳನ್ನೂ ಶಕ್ತಿಗಳನ್ನೂ ತಿದ್ದುಪಾಟನ್ನು ಹೊಂದಿದವರು ಕುಟುಂಬಗಳಲ್ಲಿಯಾಗಲಿ ಬಹಿರಂಗವಾದ ಸಭೆಗಳಲ್ಲಿಯಾಗಲಿ ಪೂಜಿಸಕೂಡದು ಎಂಬುವದೇ.

ನಾವು ಈ ತಿದ್ದುಪಾಟಿನ ಕ್ರಮಗಳನ್ನು ಓದಿ ಸಂತೋಷಪಡುತ್ತೇವೆ. ಯಾಕೆಂದರೆ ಹಿಂದೂ ಮತವು ಈಗಿನ ನಡವಳಿಕೆಗೆ ತಕ್ಕದ್ದಲ್ಲವೆಂದು ನಾವು ಈ ದೊಡ್ಡ ಮನುಷ್ಯರ ಸಂಗಡ ಒಪ್ಪುತ್ತೇವೆ. ದೇವರನ್ನು ಕುರಿತು ಇವರು ಹೇಳುವುದನ್ನು ನಾವು ಸಂಪೂರ್ಣವಾಗಿ ಒಪ್ಪದಿದ್ದರೂ ಈ ತಿದ್ದುಪಾಟಿನಲ್ಲಿ ಜಾತಿಭೇದಗಳನ್ನು ಕೆಡಕಿಗೆ ಕಾರಣಗಳೆಂದು ಹೇಳಿ ಅದನ್ನು ರದ್ದುಮಾಡಬೇಕೆಂದು ತೀರ್ಮಾನಿಸಿರುವುದನ್ನು ಆದರಪೂರ್ವಕವಾಗಿ ಒಪ್ಪುತ್ತೇವೆ. ಕೀಳು ದೇವತೆಗಳ ಪೂಜೆ ಮತ್ತು ಶಕ್ತಿಪೂಜೆಗಳು ಕೆಟ್ಟ ಪದ್ಧತಿಗಳಿಗೂ ಮೂಢಭಕ್ತಿಗೂ ಕಾರಣಗಳೆಂದು ವರ್ಜಾಮಾಡಿರುವದು ನಮಗೆ ಸಮ್ಮತವಾಗಿದೆ ಮತ್ತು ಈ ಕ್ರಮಗಳಲ್ಲಿ ವಿಗ್ರಹಾರಾಧನೆ ಮಾಡಬೇಕೋ ಅಥವಾ ವಿಸರ್ಜಿಸಬೇಕೋ ಯಾವದೂ ನಿರೂಪಿಸಿಲ್ಲ. ಆದರೂ ಒಟ್ಟುಗೂಡಿಸಿ ನೋಡಿದರೆ ವಿಗ್ರಹಾರಾಧನೆಯನ್ನು ವರ್ಜಾಮಾಡಬೇಕೆಂಬುವದೇ ಇವರ ಅಭಿಮತವಾಗಿದೆಯೆಂದು ನಾವು ನಂಬಿ ಸಂತೋಷಪಡುತ್ತೇವೆ. ಈ ಕ್ರಮಗಳಂತೆ ಹಿಂದೂ ಮತವನ್ನು ತಿದ್ದಿದರೆ ಈಗ ಅದರಲ್ಲಿ ಬಿಡಿದಾಗ ಬೆಳೆದಿರುವ ಅನೇಕ ಕಳೆಗಳು ನಾಶಹೊಂದುವವೆಂದು ನಾವು ನಂಬುತ್ತೇವೆ.

ಆದರೆ ಹಿಂದೂ ಮತವನ್ನು ಜೀರ್ಣೋದ್ಧಾರಮಾಡಲಿಕ್ಕೆ ಇದೇ ಮೊದಲನೇ ಪ್ರಯತ್ನವಲ್ಲ. ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಸಮಾಜ ಸಾಧಾರಣಸಮಾಜಗಳು ಹಿಂದೂ ಮತವನ್ನು ತಿದ್ದುವದಕ್ಕೆ ಅದರ ಸ್ಥಿತಿಯನ್ನು ನೋಡಿ ಬೇಸರಪಟ್ಟವರು ಮಾಡಿದ ಪ್ರಯತ್ನಗಳಾಗಿವೆ. ದೇವರಿಂದ ಸ್ಥಾಪನೆಯಾಗದೆ ಮನುಷ್ಯರಿಗೆ ಬಂದ ಮತವೂ ಗ್ರಂಥವೂ ಮನುಷ್ಯರ ಬುದ್ಧಿಗೆ ವಿರೋಧವಾಗಿರಲಾರವೆಂದು ನಾವು ನಿಸ್ಸಂದೇಹವಾಗಿ ನಂಬುತ್ತೇವೆ. ಆದರೆ ಮನುಷ್ಯರಿಂದ ತಿದ್ದುಪಾಟನ್ನು ಹೊಂದುವ ಮತವೂ ಮತಗ್ರಂಥಗಳೂ ಸನಾತನಧರ್ಮಕ್ಕೆ ಆಧಾರವಾಗಿವೆಯೆಂದಾದರೂ ಅವು ದೇವರಿಂದ ಸ್ಥಾಪಿತವಾದವುಗಳೆಂದಾದರೂ ನಂಬುವದಕ್ಕಾಗದು. ದೇವರು ಪ್ರಕಟಮಾಡಿದ ಮತವು ತ್ರಿಕಾಲಗಳಲ್ಲಿಯೂ ಮನುಷ್ಯರನ್ನು ತಿದ್ದುವದೇ ಹೊರತು ಅವರಿಂದ ತಿದ್ದಿಸಿಕೊಳ್ಳದು.

ಯುದ್ಧದ ಸಮಾಚಾರಗಳು.

ಡಾರ್ಡನೆಲ್ಸ್‌ನಲ್ಲಿ ಕೋಟೆಗಳನ್ನು ಒಡೆಯುವುದು.

ರಷ್ಯಾದವರ ಜಯಪ್ರದಗಳು.

ಡಾರ್ಡನೆಲ್ಸ್ ಜಲಸಂಧಿಯಲ್ಲಿ ಉದಕ್ಕೂ ಇರುವ ಟರ್ಕಿಯವರ ನಾಲ್ಕು ಕೋಟೆಗಳನ್ನು ಗುಂಡುಗಳಿಂದ ಒಡೆದುಹಾಕಿ ಒಳಕ್ಕೆ ನುಗ್ಗಿಹೋಗಬೇಕೆಂಬ ಉದ್ದೇಶದಿಂದ ನಮ್ಮ ಕಡೆಯವರು ಅಲ್ಲಿ ಸಾಹಸಕಾರ್ಯಗಳನ್ನು ನಡಿಸುತ್ತಿರುವದೇ ಈ ವಾರದ ಯುದ್ಧ ಸಮಾಚಾರಗಳಲ್ಲಿ ಪ್ರಾಮುಖ್ಯವಾಗಿರುತ್ತದೆ. ಇದಲ್ಲದೆ ರಣರಂಗದ ಪೂರ್ವಭಾಗದಲ್ಲಿ ರಷ್ಯಾದವರು ಜರ್ಮನಿ ಮತ್ತು ಆಸ್ಟ್ರಿಯಾದವರ ಮೇಲೂ, ಪಶ್ಚಿಮ ಭಾಗದಲ್ಲಿ ಫ್ರೆಂಚರೂ ಬ್ರಿಟಿಷರೂ ಜರ್ಮನಿಯವರ ಮೇಲೂ ಕಠಿಣವಾದ ಕದನಗಳನ್ನು ನಡಿಸಿರುತ್ತಾರೆ.

ಪಶ್ಚಿಮ ಭಾಗದ ರಣರಂಗದಲ್ಲಿ.

ಬ್ರಿಟಿಷರೂ ಫ್ರೆಂಚರೂ ಕ್ರಮವಾಗಿ ಸ್ವಲ್ಪ ಸ್ವಲ್ಪ ಮುಂದರಿಸಿ ನುಗ್ಗಿಹೋಗುತ್ತಾರೆ. ಹೀಗೆ ನಮ್ಮ ಕಡೆಯವರು ಜರ್ಮನಿಯವರನ್ನು ಹಿಮ್ಮೆಟ್ಟಿ ನುಗ್ಗಿಹೋಗಿರುವುದು ಕೆಲವು ನೂರು ಗಜಗಳ ದೂರವಾಗಬಹುದು. ಒಂದು ಠಾಣ್ಯದಲ್ಲಿ ಫ್ರೆಂಚರು ನುಗ್ಗಿಹೋಗಿ ಜರ್ಮನಿಯವರ ಸುಮಾರು ನಾಲ್ಕು ಮೈಲಿ ಉದ್ದದಷ್ಟು ಕಂದಕಗಳನ್ನು ಸ್ವಾಧೀನಪಡಿಸಿಕೊಂಡು, ಜರ್ಮನಿಯವರನ್ನು ಸುಮಾರು ಅರ್ಧ ಮೈಲಿಯಷ್ಟು ಹಿಂದಕ್ಕೆ ಓಡಿಸಿರುತ್ತಾರೆ.

ಜರ್ಮನಿಯವರು ಒಂದು ಕಡೆ ಫ್ರೆಂಚರನ್ನು ಅವರಿದ್ದ ಕಂದಕಗಳಿಂದ ಹಿಂದಕ್ಕೆ ಓಡಿಸುವುದಕ್ಕೋಸ್ಕರ ಅತ್ಯಂತ ಕ್ರೂರತರವಾದ ಪ್ರಯೋಗವನ್ನು ಮಾಡಿದರು. ಅವರು ಪಿಚಕಾರಿಗಳಿಂದ ಪೆಟ್ರೋಲ್ ಎಣ್ಣೆಯನ್ನು ಕಂದಕಗಳೊಳಗಿದ್ದ ಫ್ರೆಂಚ್ ಸೈನಿಕರ ಮೇಲೆ ಸುರಿಯುವಂತೆ ಹಾಕಿ ಹೊಡೆದರು. ಅದು ಸಾಲದೆಂದು ಆ ಎಣ್ಣೆ ಅವರ ಮೈಮೇಲೆ ಬಿದ್ದು ಹತ್ತಿಕೊಂಡು ಉರಿಯುವಂತೆ ಬೆಂಕಿ ಹತ್ತಿಕೊಳ್ಳುವ ಪದಾರ್ಥಗಳನ್ನು ಎಸೆದರು. ಇದರಿಂದ ಫ್ರೆಂಚ್ ಸೈನಿಕರಲ್ಲಿ ಹಲವರಿಗೆ ಮೈಸುಟ್ಟುಹೋದದ್ದರಿಂದ ಅವರು ತಾವಿದ್ದ ಕಂದಕಗಳನ್ನು ತ್ಯಜಿಸಿ ಹಿಂದಕ್ಕೆ ಬರಬೇಕಾಯಿತು. ಆ ಕಂದಕಗಳನ್ನು ಜರ್ಮನಿಯವರು ಬಂದು ಆಕ್ರಮಿಸಿಕೊಂಡರು. ಆದರೂ ಅವರು ಅಲ್ಲಿ ವಿಶೇಷಕಾಲ ಇರಲು ಆಗದೆಹೋಯಿತು. ಹಿಂದಿನಿಂದ ಕೂಡಲೇ ಫ್ರೆಂಚರು ನುಗ್ಗಿ ಬಂದು ಜರ್ಮನಿಯವರಲ್ಲಿ 300 ಜನರನ್ನು ಕೊಂದು 60 ಮಂದಿಯನ್ನು ಕೈಸೆರೆ ಹಿಡಿದುಕೊಂಡು ಆ ಕಂದಕಗಳನ್ನು ಕಿತ್ತು ಸ್ವಾಧೀನಪಡಿಸಿಕೊಂಡಿದಾರೆ.

ಬ್ರಿಟಿಷ್ ಸೈನಿಕರು ಇರುವ ಕಂದಕಗಳಲ್ಲೂ ಕೆಲವು ಕದನಗಳು ಆಗಿರುತ್ತವೆ. ಜರ್ಮನಿಯವರು ಮುಂದೆ ನುಗ್ಗಿ ಬಂದು ಬ್ರಿಟಿಷರ ಒಂದು ಕಂದಕದೊಳಕ್ಕೆ ಪ್ರವೇಶಿಸಲು ಪ್ರಯತ್ನಪಟ್ಟರು. ಬ್ರಿಟಿಷ್ ಸೋಜರುಗಳ ಪೈಕಿ ಇಬ್ಬರು—ಅಂದರೆ ಒಬ್ಬ ಸಾರ್ಜಂಟನೂ, ಒಬ್ಬ ಪ್ರೈವೇಟನೂ—ಕಂದಕದ ಒಂದು ತಿರುವಿನ ಮೂಲೆಯಲ್ಲಿ ಸಂಕುಚಿಕೊಂಡು ನುಗ್ಗಿ ಬರುವ ಪ್ರತಿ ಒಬ್ಬ ಜರ್ಮನಿ ಸೈನಿಕನಿಗೂ ಗುಂಡು ಹೊಡೆಯುತ್ತಲೂ, ಸನೀನುಗಳಿಂದ ತಿವಿದು ಗಾಯಪಡಿಸುತ್ತಲೂ ಬಂದದ್ದರಿಂದ ಅವರು ಕಂದಕವನ್ನು ಸ್ವಾಧೀನಪಡಿಸಿಕೊಳ್ಳುವುದು ಅಸಾಧ್ಯವಾಯಿತು.

ಬ್ರಿಟಿಷರ ಕಂದಕಗಳಿಗೂ ಜರ್ಮನಿಯವರ ಕಂದಕಗಳಿಗೂ ಮಧ್ಯೆ ಇರುವ ಭೂಪ್ರದೇಶವನ್ನು ನೋಡಿ ಬಂದ ಪುರುಷನು ಅದರ ಸ್ಥಿತಿಯನ್ನು ವಿವರಿಸುತ್ತಾ ಹೇಳುವುದೇನೆಂದರೆ—ಆ ಮೈದಾನವು ಗಿಡಗಳ ಕಾಡಾಗಿದೆ. ಅನೇಕಾನೇಕ ಗಿಡಗಳು ಕಡಿಯಲ್ಪಟ್ಟು ರೆಂಬೆಗಳ ಮೇಲೆ ಬೀಳುತ್ತಿರುವವು. ಭೂಮಿಯು ತುಂಬಾ ಮೆತುವಾಗಿಯೂ, ಕೆಸರಾಗಿಯೂ ಇದೆ. ಸ್ವಲ್ಪ ಸ್ವಲ್ಪ ದೂರಕ್ಕೂ ನೆಲವೆಲ್ಲಾ ಹಳ್ಳಕೊಳ್ಳಗಳಾಗಿರುವವು. ಈ ಹಳ್ಳಗಳೊಳಗೂ ಗಿಡಗಳ ನಡುವೆಯೂ ಅನೇಕ ಜರ್ಮನಿ ಸಿಪಾಯಿಗಳ ಹೆಣಗಳು ಕಳೆದ ನೊವೆಂಬರ್ ತಿಂಗಳಿಂದಲೂ ಬಿದ್ದು ಕೊಳೆಯುತ್ತಿರುವವು. ಆ ಪ್ರದೇಶಕ್ಕೆ ಯಾರು ಹೋಗುವುದೂ ಅಸಾಧ್ಯ; ತಲೆ ಹಾಕಿದ ಒಡನೆ ಗುಂಡಿನೇಟು ಬೀಳುವುದು ಖಂಡಿತ.

ಜರ್ಮನಿಯವರು ಕೆಲವು ದಿನಗಳ ತರುವಾಯ ರೀಂಸ್ ನಗರಕ್ಕೆ ಫಿರಂಗಿಗಳನ್ನು ಎತ್ತಿ ಕಟ್ಟಿ ಗುಂಡುಗಳನ್ನು ಹಾಕಿದರು. ಆ ಪಟ್ಟಣದೊಳಗಿರುವ ಸಭ್ಯಸ್ತ್ರೀಗಳನ್ನು ಕಷ್ಟನಷ್ಟ ಗಾಬರಿಪಡಿಸಿದ್ದಷ್ಟೋ ಅಷ್ಟೇ; ಅದರಿಂದ ಜರ್ಮನಿಯವರಿಗೆ ಇನ್ಯಾವ ಪ್ರಯೋಜನವೂ ಆಗಲಿಲ್ಲ.

ವಿಮಾನ ಯಂತ್ರಗಳ ಕಾರುಬಾರುಗಳು ಇದ್ದೇ ಇರುವವು. ಫ್ರೆಂಚರು ವೆರ್ಡೂನ್ ನಗರದ ಬಳಿ ಜರ್ಮನಿಯವರ ಒಂದು ವಿಮಾನ ಯಂತ್ರವನ್ನು ಸ್ವಾಧೀನಪಡಿಸಿಕೊಂಡರು. ಅವರು ಇನ್ನೊಂದು ವಿಮಾನ ಯಂತ್ರದಿಂದ ರೊಶ್ವೆಲ್ ಎಂಬ ಊರಿನಲ್ಲಿ ಜರ್ಮನಿಯವರ ಮದ್ದಿನ ಕಾರ್ಖಾನೆಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ದೈವವಶದಿಂದ ಒಂದು ಭಾರೀ ಪೀಪಾಯಿಗೆ ಒಂದು ಗುಂಡು ಬಿದ್ದದ್ದರಿಂದ ದ್ರಾವಕವು ಹತ್ತಿಕೊಂಡು ಉರಿಯಿತು. ಅದರಿಂದ ಹೊಗೆಯು 6,000 ಅಡಿ ತನಕ ಆಕಾಶಕ್ಕೆ ಏರಿತು. ಬೇರೆಕಡೆಗಳಲ್ಲಿ ಬಿದ್ದ ಗುಂಡುಗಳಿಂದ ಆ ಕಾರ್ಖಾನೆಯ ಇತರ ಭಾಗಗಳು ಹತ್ತಿಕೊಂಡವು.

ಪೂರ್ವ ದಿಕ್ಕಿನ ರಣರಂಗದಲ್ಲಿ.

ಒಂದು ಠಾಣ್ಯ ಹೊರತು ಉಳಿದ ಎಲ್ಲಾ ಭಾಗಗಳಲ್ಲೂ ರಷ್ಯಾದವರು ಜರ್ಮನಿಯವರನ್ನೂ ಆಸ್ಟ್ರಿಯಾದವರನ್ನೂ ಮುಂದರಿಸಿ ಬಾರದಂತೆ ತಡೆದುಬಿಟ್ಟಿದಾರೆ. ಆ ಒಂದು ಠಾಣ್ಯದಲ್ಲೂ ಜರ್ಮನಿಯವರಿಗೇನೂ ಅನುಕೂಲವಾಗುತ್ತಾ ಇಲ್ಲ.

ಪೂರ್ವ ಪ್ರಷ್ಯಾದಲ್ಲಿ ಜರ್ಮನಿಯವರು ತಮ್ಮ ಸ್ಥಾನಗಳನ್ನು ಕಾಪಾಡಿಕೊಳ್ಳುವುದರಲ್ಲೇ ಅವರಿಗೆ ಸಾಕಾಗಿದೆ. ಜರ್ಮನಿಯವರು ಮುಂದೆ ನುಗ್ಗಿಹೋದಾಗ ಅಲ್ಲಿದ್ದ ರೈತ ಪ್ರಜೆಗಳು ರೈಲ್ ರಸ್ತೆಗಳನ್ನು ಕಾಪಾಡಿಕೊಂಡದ್ದಲ್ಲದೆ ಶತ್ರುವಿನ ಆಗಮನವನ್ನು ಕೂಡಲೇ ರಷ್ಯಾದವರಿಗೆ ತಿಳಿಸಿ ತುಂಬಾ ಸಹಾಯಮಾಡಿದರು.

ಪೂರ್ವ ಪ್ರಷ್ಯಾದ ದಕ್ಷಿಣ ಭಾಗದಲ್ಲಿ ಜರ್ಮನಿಯವರಿಗೆ ಪೂರಾ ಸೋಲಾಗಿ ಅವರು ಅಲ್ಲಿಂದ ತಮ್ಮ ಎಲ್ಲೆಕಟ್ಟನ್ನು ಕುರಿತು ಹನ್ನೆರಡು ಮೈಲಿ ದೂರ ಹಿಮ್ಮೆಟ್ಟಿ ಓಡಿ ಬರಬೇಕಾಯಿತು. ಅಲ್ಲಿ ಜರ್ಮನಿಯವರು ಅನೇಕ ಸೈನ್ಯಗಳನ್ನೂ ಸಾಮಗ್ರಿಗಳನ್ನೂ ಕಳೆದುಕೊಂಡರು. ರಷ್ಯಾದವರಿಗೆ 10,000 ಕ್ಕಿಂತಲೂ ಹೆಚ್ಚಾಗಿಯೇ ಕೈಸೆರೆ ಸಿಕ್ಕಿರುತ್ತಾರೆ. ಈ ಯುದ್ಧವು ಫೆಬ್ರವರಿ ತಾ. 16 ರಿಂದ 27 ರ ತನಕ ಬಹಳ ಕ್ರೂರವಾಗಿ ನಡೆಯಿತು. ಕಡೆಗೆ ರಷ್ಯಾದವರು ಬಲಾತ್ಕಾರಮಾಡಿ ಜರ್ಮನಿಯವರನ್ನು ಓಡಿಹೋಗುವಂತೆ ಮಾಡಿಬಿಟ್ಟರು.

... ಗ್ರಾಮಗಳು ರಷ್ಯಾದವರ ಪಾಲಾದವು. ಅವರು 500 ರಿಂದ 800 ಜನ ... ಗ್ರಾಮದಲ್ಲೂ ಕೈಸೆರೆ ಹಿಡಿದುಕೊಂಡಿದಾರೆ.

ವಾರ್ಸಾಪಟ್ಟಣದ ಸಮೀಪದಲ್ಲಿ ವಿಶೇಷ ಕದನಗಳೇನೂ ಆದಂತೆ ಕಾಣು ... ಉಭಯಪಕ್ಷಗಳವರೂ ತಮ್ಮ ತಮ್ಮ ಸೈನ್ಯಗಳನ್ನು ಕಂದಕಗಳಲ್ಲಿ ... ಕೊಂಡು ಸಮಯ ನಿರೀಕ್ಷಣೆಮಾಡುತ್ತಿರಬಹುದಾಗಿ ತೋರುತ್ತದೆ.

ಅಲ್ಲಿಂದ ದಕ್ಷಿಣಕ್ಕೆ ಕಾರ್ಪೇಥಿಯನ್ ಪರ್ವತಗಳ ಪ್ರಾಂತ್ಯದಲ್ಲಿ ಆಸ್ಟ್ರಿಯಾದವರು ರಷ್ಯಾದವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಿಬಿಡಬೇಕೆಂದು ಬಹಳ ... ದಿಂದ ನುಗ್ಗಿ ಸಾಹಸಪಟ್ಟರು. ಆದರಿಂದ ಅದು ಸಾಧ್ಯವಾಗದೆಹೋ ... ಈ ಘೋರವಾದ ಕದನದಲ್ಲಿ ಆಸ್ಟ್ರಿಯಾದವರು ಅಪಾರವಾದಷ್ಟು ... ವನ್ನು ಅನುಭವಿಸಿ ಬಂದರು. ಪರ್ವತಗಳ ಇಳಿಜಾರುಗಳಲ್ಲಿ ಆಳವಾದ ... ಗಳಲ್ಲೂ ಆಸ್ಟ್ರಿಯಾ ಸೈನಿಕರ ಹೆಣಗಳೇ ತುಂಬಿಹೋಗಿರುವವು. ಈಚೆಗೆ ಆಸ್ಟ್ರಿಯಾದವರು ಮೇಲೆ ಬಿದ್ದು ಕದನಮಾಡುವುದು ಅಷ್ಟೇನೂ ಬಲವಾಗಿಲ್ಲ.

ಯುದ್ಧಸಾಲಿನ ದಕ್ಷಿಣ ಕೊನೆಯಲ್ಲಿ ರಷ್ಯಾದವರೇ ಮೇಲೆ ಬಿದ್ದು ಕದನ ಮಾಡಲಾರಂಭಿಸಿದಾರೆ. ಅಲ್ಲಿ ಆಸ್ಟ್ರಿಯಾದವರು ಬಹಳ ತ್ವರಿತವಾಗಿ ಕಡಿದಾ ಡುತ್ತಾ ರಷ್ಯಾದವರಿಗೆ ಸ್ಥಳವನ್ನು ಬಿಟ್ಟುಕೊಡುತ್ತಾ ಹಿಮ್ಮೆಟ್ಟಿ ಹೋಗುತ್ತಿರು ವರು. ಈ ಪ್ರದೇಶದಲ್ಲಿ ರಷ್ಯಾದವರು ಕೆಲವು ದಿನಗಳೊಳಗೇ 18,676 ಮಂದಿ ಆಸ್ಟ್ರಿಯಾದವರನ್ನು ಕೈಸೆರೆ ಹಿಡಿದುಕೊಂಡಿದಾರೆ ; ಇದಲ್ಲದೆ 5 ಪಿರಂಗಿಗಳೂ, ... ಮೆಷೀನ್ ಪಿರಂಗಿಗಳೂ, ಹಲವು ರೈಲ್ವೆ ಟ್ರೈಯಿನುಗಳೂ ರಷ್ಯಾದವರ ಪಾಲಾದವು.

ರಷ್ಯಾದವರು ಶತ್ರುಗಳನ್ನು ಕೈಸೆರೆ ಹಿಡಿದುಕೊಳ್ಳುತ್ತಲೇ ಬಂದಿದಾರೆ. ತಮ್ಮ ಮೇಲೆ ಅವರು ಹಿಮ್ಮೆಟ್ಟಿ ಹೋಗುವುದು ತಪ್ಪಿ ನಿದಾನವಾಗಿ ಮುಂದು ಮುಂದಕ್ಕೆ ನುಗ್ಗಿಯೋಗುತ್ತಾ ಬಂದಾರೆಂದು ನಿರೀಕ್ಷಿಸ ಬಹುದಾಗಿದೆ. ರಷ್ಯಾದವರು ತಮ್ಮ ಸೈನ್ಯಗಳನ್ನು ದಿನಕ್ರಮೇಣ ಬಲಪಡಿಸಿಕೊಳ್ಳುತ್ತಾ ಬಂದಿರೋಣ ದರಿಂದ ಇನ್ನು ಮುಂದೆ ಅವರು ಶತ್ರುವನ್ನು ಉದಕ್ಕೂ ಸೋಲಿಸಿ ಓಡಿಸುತ್ತಾ ಬರುವರೆಂದು ಹೇಳಬೇಕು.

ಟರ್ಕಿ.

ಡಾರ್ಡನೆಲ್ಸ್ ಎಂಬ ಜಲಮಾರ್ಗದಲ್ಲಿ ನಡೆಯುವ ಯುದ್ಧಕಾರ್ಯಗಳೇ ಬಹಳ ಸ್ವಾರಸ್ಯವಾದವು. ಈ ಜಲಮಾರ್ಗವು ಒಂದು ಮೈಲಿ ಹಿಡಿದು ಐದು ಮೈಲಿಯಷ್ಟು ಅಗಲವಾಗಿಯೂ, ಐವತ್ತು ಮೈಲಿಗಳಷ್ಟು ಉದ್ದವಾಗಿಯೂ ಇದೆ. ಈ ಮಾರ್ಗದ ಉದ್ದಕ್ಕೂ ಶತ್ರುಗಳು ಪ್ರವೇಶಿಸದಂತೆ ಕೋಟೆಕೊತ್ತಲ ಗಳನ್ನು ಕಟ್ಟಿ ಜಲಮಾರ್ಗದಲ್ಲಿ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಅಲ್ಲಲ್ಲಿ ಹಾಕಿ, ಜಹಜುಗಳು ಪ್ರವೇಶಿಸದಂತೆ ಮಾಡಿಕೊಂಡಿದಾರೆ. ಹಲವು ದಿನಗಳಿಂದಲೂ ಬ್ರಿಟಿಷ್, ಫ್ರೆಂಚ್ ಮತ್ತು ರಷ್ಯನ್ ಯುದ್ಧದ ಜಹಜುಗಳು ಒಂದಾಗಿ ಆ ಜಲಮಾರ್ಗದಲ್ಲಿರುವ ಕೋಟೆಗಳನ್ನು ಗುಂಡುಗಳನು ಹಾಕಿ ಒಡೆ ಯುತ್ತಿರುವವು. ಕೋಟೆಗಳಲ್ಲಿ ಹಲವನ್ನು ಒಡೆದದ್ದಾಯಿತು ; ನೀರನ್ನೆಲ್ಲಾ ಶೋಧಿಸಿ ಸಿಡಿಮದ್ದಿನ ಗುಂಡುಗಳನ್ನು ತೆಗೆದುಹಾಕಿದರು. ಜಹಜುಗಳು ಆ ಮಾರ್ಗ ದಲ್ಲಿ ಸುಮಾರು ಹನ್ನೆರಡು ಮೈಲಿಗಳ ದೂರ ಹೋಗಿರುವವು. ಅಲ್ಲಿ ಇಕ್ಕಟ್ಟಾದ ಮಾರ್ಗದ ಹತ್ತಿರ ಇರುವ ಕೋಟೆಗಳಿಗೆ ಈಗ ಗುಂಡುಗಳನ್ನು ಹೊಡೆಯುತ್ತಿ ದಾರೆ. ಪ್ರಪಂಚದಲ್ಲೆಲ್ಲಾ ಅತ್ಯಂತ ಭಾರಿಯಾದ ಮತ್ತು ಬಲವಾದ ಕ್ವೀನ್ ಎಲಿಜಬೆತ್ ಎಂಬ ಬ್ರಿಟಿಷರ ಜಹಜು ಈ ಹೋರಾಟದಲ್ಲಿ ಸೇರಿರುವುದು. ಅದರ ಪಿರಂಗಿಗಳಿಗೆ ಹಾಕಿ ಹೊಡೆಯತಕ್ಕ ಗುಂಡುಗಳು ಸುಮಾರಾಗಿ ಒಂದೊಂದು ಟನ್‌ನಷ್ಟು ಭಾರವಾಗಿರುತ್ತವೆ. ಈ ಗುಂಡುಗಳು ಹನ್ನೆರಡು ಮೈಲಿ ದೂರಕ್ಕೆ ಹೋಗಿ ಬಿದ್ದು ಅನಾಹುತ ಮಾಡಬಲ್ಲವು. ಇಂಥಾ ಗುಂಡುಗಳಿಗೆ ಯಾವ ಕೋಟೆಗಳೂ ತಡೆಯಾಗಲಾರವು. ಅವು ರಭಸವಾಗಿ ಬಂದು ಬಡಿದು ಒಡೆಯು ವಾಗ ಕಟ್ಟಡಗಳು ಎಷ್ಟೇ ಬಲವಾದವುಗಳಾಗಿದ್ದರೂ ನಾಶಹೊಂದುವವು. ಈ ಜಹಜುಗಳು ಆ ಜಲಮಾರ್ಗವನ್ನು ಬಿಡಿಸಿಕೊಂಡು ಹೋಗುವುದಕ್ಕೆ ಇನ್ನೂ ಕೆಲವು ದಿನಗಳು ಹಿಡಿಯುತ್ತವೆ. ಆದರೆ ಹ್ಯಾಗೂ ಈ ಮಾರ್ಗವನ್ನು ಹಿಡಿದು ಹೋಗಿ ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ನುಗ್ಗಬೇ ಕೆಂದು ನಮ್ಮ ಕಡೆಯವರು ನಿಶ್ಚಯಿಸಿಕೊಂಡಿದಾರೆ. ಈ ಜಲಮಾರ್ಗದ ಬಾಗಿಲೇ ಮರ್ಮೋರಾ ಕಡಲು ; ಈ ಕಡಲಿನಲ್ಲಿ ಟರ್ಕಿಯವರ ಕೆಲವು ಸಣ್ಣ ಜಹಜು ಗಳವೆ ಎಂದು ಹೇಳುತ್ತಾರೆ. ಅಷ್ಟು ಸ್ವಲ್ಪ ಇರುವ ಟರ್ಕಿ ಜಹಜುಗಳು ನಮ್ಮ ಕಡೆಯವರ ಜಹಜುಗಳನ್ನು ಎಷ್ಟು ಮಾತ್ರಕ್ಕೂ ಎದುರಿಸಿ ತಡೆಯನ್ನು ಕಲ್ಪಿಸಲಾರವು.

ಇದುವರೆಗೆ ನಮ್ಮ ಕಡೆಯವರ ಜಹಜುಗಳಿಂದ ಹೊಡೆಯಲ್ಪಟ್ಟ ಪಿರಂಗಿ ಗಳು ಕೋಟೆಗಳಲ್ಲಿರುವ ಟರ್ಕಿಯವರ ಬಲವಾದ 40 ಪಿರಂಗಿಗಳನ್ನೂ, ಮದ್ದಿನ ಮನೆಗಳನ್ನೂ ಹಾಳುಮಾಡಿ ನಿಷ್ಪ್ರಯೋಜನವಾಗಿ ಮಾಡಿಬಿಟ್ಟಿರುತ್ತವೆ. ಇದು ವರೆಗೆ ಈ ಜಲಮಾರ್ಗದ ಕದನದಲ್ಲಿ ನಮ್ಮವರ ಕಡೆ 15 ಮಂದಿಗೆ ಮಾತ್ರ ಗಾಯಗಳಾದವು. ಟರ್ಕಿಯವರು ತಮ್ಮ ಕಡೆ ಗಾಯಪಟ್ಟ 600 ಸೈನಿಕರನ್ನು ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಸಾಗಿಸಿರುತ್ತಾರೆಂದು ಪ್ರಕಟವಾಗಿದೆ.

ನಮ್ಮ ಕಡೆಯವರು ಸೈನ್ಯಗಳನ್ನು ಜಹಜುಗಳ ಮೇಲೆ ತೆಗೆದುಕೊಂಡು ಹೋಗಿರುವರು. ಸರಿಯಾದ ಸಮಯವೂ ಸ್ಥಳವೂ ಒದಗಿದ ಕೂಡಲೇ ಅವರ ನ್ನೆಲ್ಲಾ ಜಹಜಿನಿಂದ ತೀರದಲ್ಲಿ ಇಳಿಸಿ ಒಳದೇಶಕ್ಕೆ ಕರೆದುಕೊಂಡು ಹೋಗು ತ್ತಾರೆ. ತೀರದಲ್ಲಿ ಟರ್ಕಿಯವರು 1,00,000 ಸೈನಿಕರನ್ನು ಇಟ್ಟುಕೊಂಡಿರು ವಂತೆ ಹೇಳಲಾಗಿದೆ.

ಯುದ್ಧದ ಜಹಜುಗಳಿಂದ ಹೊಡೆಯಲ್ಪಡುವ ಪಿರಂಗಿ ಗುಂಡುಗಳು ತೀರ ದಲ್ಲಿ ಹತ್ತು ಮೈಲಿ ದೂರಕ್ಕೆ ಹೋಗಿ ಅಲ್ಲಿರುವ ಕೋಟೆಗಳನ್ನು ಒಡೆಯ ಬೇಕಾಗಿ ಬಂದಿದೆ. ಮುಖ್ಯವಾದ ಕೋಟೆಯೊಳಗಿದ್ದ ಮದ್ದಿನ ಮನೆಯು ನಾಶ ಮಾಡಲ್ಪಟ್ಟಿತು.

ಬ್ರಿಟಿಷ್ ಸೈನಿಕರು ಜಹಜಿನಿಂದ ತೀರದ ಮೇಲೆ ಇಳಿದರು. ಅವರಿಗೂ ಅಲ್ಲಿದ್ದ ಟರ್ಕಿ ಸೈನಿಕರಿಗೂ ಸಣ್ಣ ಕಾದಾಟಗಳಾದವು. ಬ್ರಿಟಿಷರ ಕಡೆ 19 ಮಂದಿ ಕೊಲೆಯಾದರು, 25 ಜನರು ಗಾಯಪಟ್ಟರು, 3 ಮಂದಿ ಸಿಕ್ಕಿಲ್ಲ.

ರಷ್ಯಾದವರು ಕಪ್ಪುಕಡಲಿನಲ್ಲಿರುವ ತಮ್ಮ ಜಹಜುಗಳನ್ನು ಬೋಸ್ಫರಸ್ ಜಲಸಂಧಿಯ ಬಳಿಗೆ ಕಳುಹಿಸಿದರೆಂದು ವರ್ತಮಾನವಿದೆ. ಈ ಜಲಮಾರ್ಗವೇ ಕಪ್ಪುಕಡಲಿನಿಂದ ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ಹೋಗುವ ಮಾರ್ಗ. ಟರ್ಕಿಯವರು ಸ್ಕ್ಯಾಂಟರಿಯಲ್ ಎಂಬ ತೀರಪಟ್ಟಣದಲ್ಲಿ ಪಿರಂಗಿಗಳನ್ನು ತಂದಿ ಟ್ಟುಕೊಂಡಿದಾರೆಂದೂ, ಸುಲ್ತಾನನನ್ನೂ ಅವನ ಪರಿವಾರದವರನ್ನೂ ರಾಜಧಾನಿ ಯಿಂದ ಸಾಗಿಸುವುದಕ್ಕೆ ರೈಲ್ ಗಾಡಿಗಳನ್ನು ಸಿದ್ಧಪಡಿಸಿಟ್ಟುಕೊಂಡಿದಾರೆಂದೂ ತಿಳಿಯುತ್ತದೆ.

ಟರ್ಕಿಯವರು ತಮ್ಮ ಸೈನ್ಯಕ್ಕೋಸ್ಕರ ಯುದ್ಧಸಾಮಗ್ರಿಗಳನ್ನು ಕೂಡಿಸಿ ಟ್ಟುಕೊಂಡಿದ್ದ ಬೋಟಂ ಎಂಬ ಟರ್ಕಿ ನಗರವನ್ನು ರಷ್ಯಾದವರು ನುಗ್ಗಿ ಹೋಗಿ ಸ್ವಾಧೀನಪಡಿಸಿಕೊಂಡರು. ಡಾರ್ಡನೆಲ್ಸ್ ಜಲಮಾರ್ಗವನ್ನು ಬಿಡಿಸುತ್ತಿರುವುದ ರಿಂದ ರಷ್ಯಾದಿಂದ ಧಾನ್ಯವು ಗ್ರೇಟ್ ಬ್ರಿಟನ್‌ಗೆ ಸಾಗಿಹೋಗಲು ಸರಾಗವಾಗು ತ್ತದೆ. ಇದರಿಂದ ಗ್ರೇಟ್ ಬ್ರಿಟನ್‌ನಲ್ಲಿ ಗೋಧಿಯ ಧಾರಣೆಯು ಇಳಿಯುವುದಕ್ಕೆ ಸಹಾಯವಾಗಿದೆ.

ಟರ್ಕಿ ಸೈನ್ಯಗಳು ಮತ್ತೆ ಈಜಿಪ್ಟಿಗೆ ನುಗ್ಗಿ ಕದನಮಾಡುವ ಸೂಚನೆ ಯೇನೂ ಕಾಣುವುದಿಲ್ಲ. ಆದಕಾರಣ ಈಜಿಪ್ಟಿನಲ್ಲಿರುವ ಬ್ರಿಟಿಷ್ ಸೈನ್ಯಗಳನ್ನು ಅಲ್ಲಿಂದ ಟರ್ಕಿಗೆ ರವಾನೆಮಾಡಲು ಅನುಕೂಲವಾಯಿತು.

ಏಷ್ಯಾ ಮೈನರ್ ಎಂಬ ಟರ್ಕಿ ಅಧಿಪತ್ಯದಲ್ಲಿ ಸ್ಮರ್ನಾ ಎಂಬ ಪ್ರಮುಖ ವಾದ ತೀರಪಟ್ಟಣವನ್ನು ಬ್ರಿಟಿಷ್ ಯುದ್ಧದ ಜಹಜುಗಳು ಗುಂಡುಹಾಕಿ ಕೆಲವು ಮಟ್ಟಿಗೆ ನಷ್ಟಪಡಿಸಿರುತ್ತವೆ.

ಅರೇಬಿಯಾದಲ್ಲಿ ಕದನ.

ಏಡೆನ್ ಎಂಬ ತೀರಪಟ್ಟಣದಿಂದ ಪೂರ್ವಕ್ಕೆ ಸುಮಾರು 150 ಮೈಲಿ ದೂರದಲ್ಲಿರುವ ಅಹವಾಜ್ ಎಂಬ ಠಾಣ್ಯದಲ್ಲಿ ಕೆಲವು ಟರ್ಕಿ ಸೈನಿಕರ ಬೆಂಬಲ ಸಿಕ್ಕಿದ್ದರಿಂದ ಬಹು ಮಂದಿ ಅರಬ್ಬಿಯವರು ಯುದ್ಧಸನ್ನದ್ಧರಾಗಿ ನಿಂತರು. ಬ್ರಿಟಿಷ್ ಸೈನ್ಯಗಳು ಆ ಠಾಣ್ಯಕ್ಕೆ ನುಗ್ಗಿ ಮುತ್ತಿಗೆಹಾಕಿಕೊಂಡಾಗ ಮಾರ್ಚಿ ತಾ. 3 ರಲ್ಲಿ ಘೋರವಾದ ಯುದ್ಧ ಸಂಭವಿಸಿತು. ಅರಬ್ಬಿಯವರಲ್ಲಿ 300 ಮಂದಿ ಕೊಲೆಯಾದರು ; 500 ಜನರಿಗೆ ಗಾಯಗಳಾದವು. ಬ್ರಿಟಿಷರ ಕಡೆ 62 ಮಂದಿ ಕೊಲೆಯಾದರು ; 123 ಜನರು ಗಾಯಪಟ್ಟಿದಾರೆ. ಶ್ರೀಕರುಗಳೇ ಬಹು ಮಂದಿ ಕೊಲೆಯಾದರು, ಹಲವರು ಗಾಯಪಟ್ಟರು. ಮಾರನೇ ದಿನ ಬ್ರಿಟಿಷ್ ಸವಾರರು ಮುಂದೆ ಹೋಗಿ ಅಜಮಾಯಿಷಿಮಾಡಿ ನೋಡಿದಾಗ ಅರಬ್ಬಿಯವರು ಕಣ್ಮರೆಯಾಗಿದ್ದರು. ಅವರ್‍ಯಾರೂ ಯುದ್ಧಸನ್ನದ್ಧರಾಗಿರಲಿಲ್ಲ.

ಸಮುದ್ರದ ಮೇಲೆ.

ಕಳೆದ ವಾರ ಜರ್ಮನಿಯವರ ಸಬ್‌ಮೇರಿನುಗಳ ದೆಸೆಯಿಂದ ಹಡಗುಗ ಳ್ಯಾವೂ ಮುಳುಗಲಿಲ್ಲವೆಂದು ತಂತೀವರ್ತಮಾನಗಳಿಂದ ಗೋಚರಿಸುತ್ತದೆ. ಆದರೆ ಅವರ ಕೆಲವು ಸಬ್‌ಮೇರೀನುಗಳು ನಾಶವಾದವು. ಬ್ರಿಟಿಷರ ಒಂದು ವ್ಯಾಪಾರದ ಜಹಜಿಗೆ ಶತ್ರುವಿನ ಟಾರ್ಪೀಡೋ ಎಂಬ ಹಡಗನ್ನು ಬಿಟ್ಟು ಒಡೆದು ಹಾಕಬೇಕೆಂದು ಪ್ರಯತ್ನಪಟ್ಟರು ; ಆದರೆ ಅದು ತಪ್ಪಿಸಿಕೊಂಡಿತು. ಬಳಿಕ ಅದೇ ಜಹಜು ಆ ಸಬ್‌ಮೇರೀನನ್ನು ಒತ್ತಿ ಮುಳುಗಿಸಿತು. ಆ ಜಹಜಿನ ತಳಭಾ ಗವು ಸ್ವಲ್ಪ ಕೆಟ್ಟುಹೋಯಿತಾದರೂ ತೀರವನ್ನು ಬಂದು ಸೇರಿಕೊಂಡಿದೆ. ಬ್ರಿಟಿ ಷರ ಇನ್ನೊಂದು ವ್ಯಾಪಾರದ ಜಹಜು ಇಂಗ್ಲಿಷ್ ಕಾಲುವೆಯಲ್ಲಿ ಜರ್ಮನಿಯ ಇನ್ನೊಂದು ಸಬ್‌ಮೇರೀನನ್ನು ಮುಳುಗಿಸಿದೆ. ಮತ್ತು ವೇಲ್ಸಿಗೂ ಐರ್ಲೆಂಡಿಗೂ ಮಧ್ಯೆ ಮೂರನೇ ಸಬ್‌ಮೇರೀನಿಗೆ ಅದನ್ನು ಮುಳುಗಿಸಬೇಕೆಂದು ಬ್ರಿಟಿಷರು ಹೊಡಿಸಿದರು ; ಅದು ತಪ್ಪಿಸಿಕೊಂಡುಹೋಯಿತೋ ಏನೋ ತಿಳಿಯಲಿಲ್ಲ. ಬ್ರಿಟಿಷರ ಡಿಸ್ಕವರಿ ಎಂಬ ಹಡಗು ಜರ್ಮನಿ ಸಬ್‌ಮೇರೀನನ್ನು ಮುಳುಗಿಸಿ ಅದರಲ್ಲಿದ್ದ 29 ಮಂದಿ ಹುದ್ದೇದಾರರೇ ಮುಂತಾದವರನ್ನು ಬದುಕಿಸಿ ಡೋವರಿಗೆ ಕರೆತಂದಿತು. ಫ್ರೆಂಚರು ತಮ್ಮ ಡಿಸ್ಕವರಿಯಿಂದ ಜರ್ಮನಿ ಸಬ್‌ಮೇರೀ ನಿಗೆ ಮೂರು ಗುಂಡುಗಳನ್ನು ಹೊಡೆದರು. ಸಬ್‌ಮೇರೀನು ಮುಳುಗಿ ಅದೃಶ್ಯ ವಾಯಿತು. ನೋರ್ವೆಯ ದಕ್ಷಿಣದಲ್ಲಿ ಕೆಲವು ಮುರುಕುಗಳು ತೇಲಿಕೊಂಡು ಬಂದಿರುವುದರಿಂದ ಆ ಜರ್ಮನಿ ಸಬ್‌ಮೇರೀನು ಅಲ್ಲಿ ಒಡೆದು ನಾಶವಾಗಿರಬೇ ಕೆಂದು ಗೊತ್ತಾಗುತ್ತದೆ. ಮುಖ್ಯವಾಗಿ ಕಳೆದ ವಾರ ಜರ್ಮನಿಯ ಸಬ್‌ಮೇರೀ ನುಗಳಿಗೆ ದುರ್ದೆಸೆ ಪ್ರಾಪ್ತವಾಯಿತು. ಜರ್ಮನಿಯ ಸಬ್‌ಮೇರೀನನ್ನು ಮುಳು ಗಿಸುವಂಥಾ ವ್ಯಾಪಾರದ ಜಹಜಿಗೆ 1,160 ಪೌಂಡು ಇನಾಮು ಕೊಡುವುದಾಗಿ ಸಾರಿರುತ್ತಾರೆ.

ಜರ್ಮನಿಯ ವಿಮಾನ ಯಂತ್ರಗಳು ಇಂಗ್ಲೆಂಡಿನ ಪೂರ್ವ ತೀರದಲ್ಲಿರುವ ವ್ಯಾಪಾರ ಜಹಜುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಆದರೆ ಆ ಜಹಜುಗಳು ಚಮತ್ಕಾರವಾಗಿ ಅತ್ತಿತ್ತ ಚಲಿಸಿದ್ದರಿಂದ ಗುಂಡುಗಳು ಏನೂ ಮಾಡಲಾರದೆ ಸಮುದ್ರದಲ್ಲಿ ಬಿದ್ದವು.

ಚಾರ್ಜ್ ಸಾರ್ವಭೌಮರವರು ಬ್ರಿಟಿಷ್ ಸಮುದ್ರ ಸೈನ್ಯಕ್ಕೆ ಸೇರಿದ ಕೆಲವು ಹಡಗುಗಳನ್ನು ದಯಮಾಡಿ ಪರಾಂಬರಿಸಿ, ಅಧಿಕಾರಿಗಳಿಗೂ ಸಿಪಾಯಿಗ ಳಿಗೂ ತಮ್ಮ ಮೆಚ್ಚಿಕೆ ಸಂತೋಷಗಳನ್ನು ತಿಳಿಸಿ, ಈ ಸಮುದ್ರ ಸೈನ್ಯವು ತುಂಬಾ ಚಟುವಟಿಕೆಯಾಗಿಯೂ ಪರಾಕ್ರಮದಿಂದಲೂ ತನ್ನ ಕರ್ತವ್ಯಕಾರ್ಯಗಳನ್ನು ನೆರವೇರಿಸಬಲ್ಲದೆಂದು ತಮಗೆ ಭರವಸೆಯುಂಟೆಂದು ಅಪ್ಪಣೆ ಕೊಡಿಸಿರುತ್ತಾರೆ.

ಇತರ ವಿಷಯಗಳು.

ಆಸ್ಟ್ರಿಯಾದವರ ಯುದ್ಧದ ಜಹಜುಗಳು ಆಡ್ರಿಯಾಟಿಕ್ ಕಡಲಿನಲ್ಲಿ ಅಂಟಿವಾರಿ ಎಂಬ ತೀರಪಟ್ಟಣಕ್ಕೆ ಗುಂಡುಗಳನ್ನು ಹೊಡೆದವೆಂದೂ, ಒಂದು ಹಡಗನ್ನು ಮುಳುಗಿಸಿ ಕೆಲವು ಸಾಮಗ್ರಿಗಳನ್ನು ಹಾಳುಮಾಡಿದವೆಂದೂ ಹೇಳ ಲಾಗಿದೆ. ಆ ಪಟ್ಟಣದೊಳಗೆ ಒಬ್ಬ ಪ್ರಜೆಯು ಕೊಲೆಯಾದನು ; ಹಲವರಿಗೆ ಗಾಯಗಳಾದವು.

ಬೆಲ್ಜಿಯಮ್‌ನಲ್ಲಿ ಜರ್ಮನಿಯವರ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನ ಯಂತ್ರವು ಕೆಟ್ಟು ನಿಷ್ಪ್ರಯೋಜನವಾದಲ್ಪಟ್ಟಿತು.

ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುವ 6,000 ಬ್ರಿಟಿಷ್ ಪ್ರಜೆಗಳು ಸೈನ್ಯಕ್ಕೆ ಸೇರಿಕೊಂಡರು. ಈ ಪೈಕಿ ಮೂರನೇ ಎರಡು ಪಾಲಿನ ವಿದ್ಯಾರ್ಥಿಗಳು ಕಾವಾಗಿಯೇ ಸೈನಿಕರಾಗಿರುತ್ತಾರೆ.

ಯುದ್ಧ ವಿಚಾರದಲ್ಲಿ ನಿಪುಣತೆಯನ್ನು ಪಡೆದವರು—ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳ 50 ಸೈನ್ಯಗಳು ಅಂದರೆ ಸುಮಾರು 25,00,000 ಸೈನ್ಯ ಪೂರ್ವ ರಣರಂಗದಲ್ಲಿ ನಿಂತು ರಷ್ಯಾದವರ ಮೇಲೆ ಯುದ್ಧಕಾರ್ಯಗಳನ್ನು ನಡಿಸುತ್ತಿದೆಯೆಂದೂ, ಪಶ್ಚಿಮ ರಣರಂಗದಲ್ಲಿ ಅವರ 47 ಸೈನ್ಯಗಳು ಅಂದರೆ ಸುಮಾರು 23,50,000 ಸೈನ್ಯ ಫ್ರೆಂಚ್, ಬೆಲ್ಜಿಯನ್ ಮತ್ತು ಬ್ರಿಟಿಷ್ ಸೈನ್ಯ ಗಳ ಮೇಲೆ ಯುದ್ಧಕಾರ್ಯಗಳನ್ನು ನಡಿಸುತ್ತಿದೆಯೆಂದೂ ಹೇಳುತ್ತಾರೆ.

ಮಿ|| ಆಸ್ಕಿತ್‌ರವರ ಭಾಷಣವು.

ಬ್ರಿಟಿಷ್ ಗವರ್ನ್‌ಮೆಂಟಿನ ಪ್ರಧಾನ ಮಂತ್ರಿಯಾದ ಮಿ|| ಆಸ್ಕಿತ್‌ರವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಈಗಿನ ಯುದ್ಧದ ಖರ್ಚಿಗೆ ಹಿಂದೆ ಸ್ಯಾಂಕ್ಷನ್ ಆಗಿರುವ ದ್ರವ್ಯದ ಜೊತೆಗೆ ಇನ್ನೂ 28,70,00,000 ಪೌಂಡುಗಳನ್ನು ಸ್ಯಾಂಕ್ಷನ್ ಮಾಡಬೇಕೆಂದು ಸೂಚಿಸಿ ಕೇಳು ವಾಗ್ಗ ಅವರು ಮೆಂಬರುಗಳಿಗೆ ತಿಳಿಸಿದ್ದೇನೆಂದರೆ—ಬ್ರಿಟಿಷ್ ಗವರ್ನ್‌ಮೆಂಟಿನ ವರು ಬ್ರಿಟಿಷ್ ಸ್ವಾಸ್ಥ್ಯಗಳಿಗೆ 380 ಲಕ್ಷ ಪೌಂಡನ್ನೂ, ಬೆಲ್ಜಿಯಮ್‌ಗೆ 1 ಕೋಟಿ ಪೌಂಡನ್ನೂ, ಸರ್ಬಿಯಾಕ್ಕೆ 8 ಲಕ್ಷ ಪೌಂಡನ್ನೂ ಸಾಲಕೊಟ್ಟಿ ದಾರೆ. ಈಗ ಕೊಟ್ಟಿರುವುದು ಸಾಲದು; ಇನ್ನೂ ಕೆಲವು ದ್ರವ್ಯಕೊಡಬೇಕಾಗಿದೆ. ಮಾರ್ಚಿ ಆಖೈರಿಗೆ ಯುದ್ಧ ಪ್ರಾರಂಭವಾಗಿ 230 ದಿನ ಆದೀತು. ಯುದ್ಧದ ಖರ್ಚು ದಿನಕ್ಕೆ 15 ಲಕ್ಷ ಪೌಂಡಿನಂತೆ ಆಗುತ್ತದೆ. ಈಗ ಸ್ಯಾಂಕ್ಷನ್ ಆಗಬೇ ಕೆಂದು ಕೇಳುವ ಹಣ ಜೂಲೈ ಎರಡನೇ ವಾರದ ತನಕ ಸಾಕಾದೀತೆಂದು ಊಹಿ ಸಲ್ಪಟ್ಟಿದೆ. ಏಪ್ರಿಲ್ ತಿಂಗಳಿನಿಂದ ದಿನ 1 ಕ್ಕೆ ಭೂಸೈನ್ಯಕ್ಕೆ 15 ಲಕ್ಷ ಪೌಂ ಡೂ, ಸಮುದ್ರ ಸೈನ್ಯಕ್ಕೆ 4 ಲಕ್ಷ ಪೌಂಡೂ ಅಂದರೆ ಸುಮಾರು 20 ಲಕ್ಷ ಪೌಂ ಡು ಖರ್ಚಾಗುವುದೆಂದು ಅಂದಾಜುಹಾಕಿರುತ್ತೇವೆ. ಇಷ್ಟು ಹಣ ಹಿಂದೆ ಯಾವಾಗಲೂ ಕೇಳಿರುವುದಿಲ್ಲ. ಆದಾಗ್ಯೂ ನಾವು ಸತ್ಯಧರ್ಮಗಳನ್ನು ಕಾಪಾ ಡುವುದಕ್ಕಾಗಿ ಯುದ್ಧ ಮಾಡುತ್ತಿರುವುದರಿಂದ ಇದರಲ್ಲಿ ನಾವು ಜಯಶೀಲರಾ ಗುತ್ತೇವೆಂದು ನಮಗೆ ನಿಜವಾಗಿದೆ. ಏಳು ತಿಂಗಳಿಂದ ನಾವು ಯುದ್ಧ ಮಾ ಡುತ್ತಾ ಬಂದಿದ್ದಾಗ್ಯೂ ನಮ್ಮ ಸಂಕಲ್ಪವು ವ್ಯತ್ಯಾಸವಾಗಿಲ್ಲ. ಬೆಲ್ಜಿಯಮ್ ಮತ್ತು ಸರ್ಬಿಯಾದವರ ದೇಶವಾತ್ಸಲ್ಯವೂ ಅವರ ಪರಾಕ್ರಮವೂ ಅವರ ಎದೆ ಗುಂದದ ಸಾಹಸಕಾರ್ಯಗಳೂ ನಮಗೆಲ್ಲಾ ಎಷ್ಟೋ ಧೈರ್ಯವನ್ನೂ ಉತ್ತೇ ಜನವನ್ನೂ ಕೊಡತಕ್ಕವುಗಳಾಗಿವೆ. ನಮ್ಮ ಪಕ್ಷದವರಿಗೇ ಜಯವಾದೀತೆಂಬ ನಿಶ್ಚಯವು ಎಂದಿಗಿಂತಲೂ ಈಗ ಇನ್ನೂ ಬಲಪಟ್ಟಿರುವುದು. ನಮ್ಮ ಪಕ್ಷದವ ರೆಲ್ಲಾ ಸೇರಿ ಈಗ ಡಾರ್ಡನೆಲ್ಸನ್ನು ಮುತ್ತಿಗೆಹಾಕಿರುತ್ತೇವಾದರೂ ಇತರ ಭಾಗ ಗಳಲ್ಲಿ ನಾವು ನಡಿಸುತ್ತಿರುವ ಯುದ್ಧಕಾರ್ಯಗಳನ್ನು ಎಷ್ಟು ಮಾತ್ರಕ್ಕೂ ಕೊರತೆ ಮಾಡಿರುವುದಿಲ್ಲ. ಫ್ರೆಂಚರ ನಾವೆಯ ಸಹಾಯವು ಸ್ತೋತ್ರಾರ್ಹವಾ ಗಿದೆ. ಬ್ರಿಟಿಷರು ಪ್ರಪಂಚದ ಯುದ್ಧದ ಜಹಜುಗಳಲ್ಲೆಲ್ಲಾ ಅತ್ಯಂತ ಬಲವಾದ ಕ್ವೀನ್ ಎಲಿಜಬೆತ್ ಎಂಬ ಹೊಸ ಜಹಜನ್ನು ಯುದ್ಧಕ್ಕೆ ಕಳುಹಿಸಿದಾರೆ.

ಜರ್ಮನಿಯವರು ಸಮುದ್ರದ ಮೇಲೆ ಕಾವಲಿಟ್ಟಿದೇವೆಂದು ಹೇಳುವ ಮಾತು ಬರೀ ಬೆದರಿಕೆಯಾಗಿದೆ. ಅವರು ಕಳ್ಳರಂತೆ ದರೋಡೆ ಕೃತ್ಯಗಳನ್ನು ನಡಿಸುತ್ತಿರುವರಲ್ಲದೆ ಇನ್ನೇನೂ ಮಾಡಲಾರರು. ಇದುವರೆಗೆ ಅವರ ಯುದ್ಧದ ಜಹಜುಗಳು ಎರಡೇ ಆವರ್ತಿ ಹೊರಗೆ ಬಂದು ಓಡಿಹೋದವು. ಅವರು ಯುದ್ಧದಲ್ಲಿ ಬೆರೆಯದೆ ಇರುವವರ ಹಡಗುಗಳನ್ನು ಹಿಡಿಯಲಾರಂಭಿಸಿದಾರೆ. ಬ್ರಿಟಿಷರು ಅದಕ್ಕೆ ಪ್ರತಿಯಾಗಿ ಜರ್ಮನಿಗೆ ಹೋಗತಕ್ಕ ಸಮಸ್ತ ವ್ಯಾಪಾರದ ಹಡಗುಗಳನ್ನೂ ಹಿಡಿಯುತ್ತೇವೆಂದು ತಿಳಿಸಿದೇವೆ. ಅಂಥವುಗಳಲ್ಲಿರತಕ್ಕುದಾದ ಜನರನ್ನೇನೋ ಬದುಕಿಸಿ ಅವರವರ ಸ್ಥಳಗಳಿಗೆ ಕಳುಹಿಸುವೆವು. ಜಹಜುಗಳಲ್ಲಿ ರುವ ಸರಕುಗಳನ್ನು ನಾವೇನೂ ಕಿತ್ತಿಟ್ಟುಕೊಳ್ಳುವುದಿಲ್ಲ ; ಅವು ಜರ್ಮನಿಗೆ ತಲಪದಂತೆ ನೋಡಿಕೊಳ್ಳುವೆವು.

ಕರಾರುಮಾಡಿಕೊಳ್ಳುವ ಸಮಯ ಇನ್ನೂ ಒದಗಿಲ್ಲ ; ಆ ವಿಚಾರವನ್ನು ಕುರಿತು ಪ್ರಸ್ತಾಪಮಾಡುವುದಕ್ಕೆ ತಿರುವಳಿ ಸಾಲದು. ಈ ಯುದ್ಧದ ಉದ್ದೇ ಶವು ಮೊದಲು ಕೈಗೂಡಬೇಕು. ಇದಕ್ಕೋಸ್ಕರವೇ ನಾವೀಗ ಹಣವನ್ನು ಕೇಳು ವುದು. ಇಷ್ಟೇ ಅಲ್ಲ. ನಮ್ಮ ಪ್ರಜೆಗಳು ನಮ್ಮ ಜನಾಂಗಕ್ಕೆ ಬಂದಿರುವ ಶ್ರೇಷ್ಠ ವಾದ ಗುಣ ನಡತೆಗಳನ್ನು ಈಗ ಇನ್ನೂ ಚೆನ್ನಾಗಿ ಪ್ರಕಾಶಮಾಡಬೇಕು ; ಅಂದರೆ ಕಷ್ಟ ನಷ್ಟಗಳನ್ನು ತಾಳ್ಮೆಯಿಂದಲೂ, ಪರಾಕ್ರಮದಿಂದಲೂ ಸೈರಿಸಿಕೊಂಡು, ಪರರ ಕಷ್ಟಗಳಲ್ಲಿ ಭಾಗಿಗಳಾಗಿ, ಅಚಂಚಲವಾದ ದೇಶವಾತ್ಸಲ್ಯವನ್ನೂ ದೃಢ ಸಂಕಲ್ಪವನ್ನೂ ಪಡೆದವರಾಗಿರಬೇಕು ಎಂಬೀ ರೀತಿ ಅಪ್ಪಣೆಕೊಡಿಸಿದರು.

ಪಾರ್ಲಿಮೆಂಟಿನಲ್ಲಿ ಏಕವಾಕ್ಯತೆಯಿಂದ ಹಣವು ಒದಗಿಸಲ್ಪಟ್ಟಿತು.

ಒಳದೇಶದ ವೃತ್ತಾಂತಗಳು.

ನೆನ್ನೆ ಮಧ್ಯಾಹ್ನ ನಮ್ಮ ಬ್ರಿಟಿಷ್ ರೆಸಿಡೆಂಟರವರು ಮಡಿಕೇರಿಯಿಂದ ರಾಜ ಧಾನಿಗೆ ದಯಮಾಡಿದರು. ಅವರು ಈ ದಿನ ಬೆಂಗಳೂರಿಗೆ ಹೋಗಿ ಒಂದು ವಾರದ ತನಕ ಅಲ್ಲಿದ್ದು ಬಳಿಕ ನೀಲಗಿರಿಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ.

ನಮ್ಮ ಸರ್ಕಾರದವರು ದಿನಕ್ಕೆ 500 ರೂಪಾಯಿನಂತೆ ರುಸುಮನ್ನು ಕೊಟ್ಟು ಒಬ್ಬ ನಿಪುಣನನ್ನು ಕರಸಿಕೊಂಡು ನಮ್ಮ ಸೀಮೆಯಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಇಡುವುದರಲ್ಲಿ ಲಾಭವುಂಟೇ ಎಂಬ ಸಂಗತಿಯನ್ನು ತನಿಖೆ ಮಾಡಿಸುತ್ತಿದಾರೆ.

ಬೆಂಗಳೂರಿನಲ್ಲಿರುವ ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಯುಗಾದಿ ಹಬ್ಬ ಕಳೆದ 3–4 ದಿನಗಳಲ್ಲಿ ರಾಜಧಾನಿಗೆ ದಯಮಾಡುವರು. ರೈಲ್ವೆ ಸ್ಟೇಷನ್ ಬಳಿ ಇರುವ ನಂಜರಾಜ ಬಹದ್ದೂರ ಸತ್ರವನ್ನು ಅವರ ಮಠಕ್ಕಾಗಿ ಬಿಟ್ಟು ಕೊಡುವಂತೆ ಏರ್ಪಾಡಾಗಿದೆ.

ರಾಜಧಾನಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರಾಗಿರುವ ಮ|| ಅಂಬಳೆ ಅಣ್ಣಯ್ಯ ಪಂಡಿತರವರು 10,000 ರೂಪಾಯಿ ಮುಟ್ಟಿಸಿ ಒಂದು ವಿದ್ಯಾರ್ಥಿ ನಿಲಯವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುವಂತೆ ಒಪ್ಪಿಕೊಂಡಿರುವರು. ಅದಕ್ಕೆ ಅನುಕೂಲವಾದ ನಿವೇಶನವನ್ನು ಟ್ರಸ್ಟ್ ಬೋರ್ಡಿನವರು ಒದಗಿಸುವು ದರಲ್ಲಿದಾರೆ.

ರಾಜಧಾನಿಯ ಇಲವಾಲದ ರಸ್ತೆಯಲ್ಲಿರುವ ತಮ್ಮ ಬಂಗಲೆಯನ್ನು ಮಾಜಿ ದಿವಾನ್ ಮ|| ಟಿ. ಆನಂದರಾಯರವರು ಲೇಟ್ ಜೆ. ಕೆ. ನರಸಿಂಹಯ್ಯ ನವರ ಪತ್ನಿಯವರಿಗೆ 20,000 ರೂಪಾಯಿಗೆ ವಿಕ್ರಯಮಾಡಿದರು. ಅಕೆ ಆ ಬಂಗಲೆಯಲ್ಲಿ ಕೆಲವು ಬದಲಾವಣೆ ಮಾಡಿಸಿ ಧರ್ಮ ಸತ್ರವನ್ನೂ ವಿದ್ಯಾರ್ಥಿನಿಲ ಯವನ್ನೂ ಮಾಡುವರೆಂದು ಕೇಳುತ್ತೇವೆ.

ಸುಮಾರು ಎರಡು ತಿಂಗಳ ಕೆಳಗೆ ರಾಜಧಾನಿಯಲ್ಲಿ ಮೋಟರ್ ಸೈಕಲಿಗೆ ಸಿಕ್ಕಿ ಗಾಯಪಟ್ಟು ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಮಿ|| ಡಬ್ಲ್ಯು ಹರ್ಸ್ಟ್ ಎಂಬ ವೃದ್ಧರು ಕಳೆದ ಶನಿವಾರ ಆಸ್ಪತ್ರೆಯಲ್ಲೇ ಕಾಲ ವಾದರು. ಅವರ ಶವವನ್ನು ಮಿಲ್ಟೇರಿ ಸನ್ಮಾನದಿಂದ ಸಾಗಿಸಿ ದಫನ್ ಮಾಡಿ ದರು. ಬಹು ಕಾಲದಿಂದ ರಾಜಧಾನಿಯಲ್ಲಿದ್ದ ಈ ಸಭ್ಯ ಪ್ರಜೆಯು ಕಾಲವಾದ ದ್ದಕ್ಕಾಗಿ ವಿಷಾದಪಡುತ್ತೇವೆ.

ಕಳೆದ ನವಂಬರ್ ತಿಂಗಳಿನಲ್ಲಿ ನಡೆದ ಮದ್ರಾಸ್ ಗೌರ್ನಮೆಂಟ್ ಡ್ರಾ ಯಿಂಗ್ ಪರೀಕ್ಷೆಗಳಿಗೆ ಅಪಿಯರ್ ಆಗಿದ್ದ ಮೈಸೂರು ಟ್ರೈನಿಂಗ್ ಕಾಲೇಜ್ ಆರ್ಟ್ ಸೆಕ್ಷನ್ ವಿದ್ಯಾರ್ಥಿಗಳು 38 ಮಂದಿಯಲ್ಲಿ 20 ಜನರು ತೇರ್ಗಡೆ ಹೊಂದಿರುವುದು ಪ್ರಕಟವಾಗಿದೆ. ಅದರಲ್ಲಿಯೂ ಡಿಸೈನ್ ಎಲಿಮೆಂಟರಿಗೆ ಈ ಸೆಂಟರಿನಲ್ಲಿ ಅಪಿಯರಾಗಿದ್ದ 19 ಮಂದಿಯಲ್ಲಿ ಆರ್ಟ್ ಸೆಕ್ಷನ್ನಿನವರಿಬ್ಬರು ಪ್ಯಾಸಾಗಿರುವರು ಎಂದು ತಿಳಿಯುತ್ತದೆ.

ವಿದ್ಯಾ ಇಲಾಖೆಯ ಇನ್. ಜ. ಮ|| ಎಂ. ಶಾಮರಾಯರವರು ಪರಿವಾರ ಸಮೇತ ಕಳೆದ ಶನಿವಾರ ರಾತ್ರಿ ರಾಜಧಾನಿಗೆ ಬಂದು, ಸೋಮವಾರ ಸಂಜನ ಗೂಡಿಗೂ, ನೆನ್ನೆ ಗುಂಡ್ಲುಪೇಟೆ ಚಾಮರಾಜನಗರಗಳಿಗೂ ಹೋಗಿದ್ದು ಬಲಾ ತ್ಕಾರದ ವಿದ್ಯಾಭ್ಯಾಸದ ಏರ್ಪಾಡುಗಳನ್ನು ತನಿಖೆಮಾಡಿಕೊಂಡು ಬಂದರು. ಈ ದಿನ ರಾಜಧಾನಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ಕೂಡ ಕಲೆತು ಇಲ್ಲಿನ ಪ್ರಥಮ ವಿದ್ಯಾಶಾಲೆಗಳ ವಿಷಯವನ್ನು ಚರ್ಚಿಸುವವರಾಗಿದಾರೆಂದು ಕೇಳುತ್ತೇವೆ.

ರಾಜಧಾನಿಯ ಹಳ್ಳದಕೇರಿಯಲ್ಲಿರುವ ಜ್ಯೋತಿಷವಿದ್ವಾನ್ ವೇ|| ಅನಂತ ಜೋಯಿಸರವರು ರಾಕ್ಷಸ ಸಂವತ್ಸರದ ಪಂಚಾಂಗವನ್ನು ಚೆನ್ನಾಗಿ ಅಚ್ಚುಹಾಕಿಸಿ ನಮಗೊಂದು ಪ್ರತಿಯನ್ನು ಕಳುಹಿಸಿಕೊಟ್ಟಿದಾರೆ. ಇದಲ್ಲದೆ ತೀರ್ಥಹಳ್ಳಿಯ ಪೀಪಲ್ಸ್ ಬ್ಯಾಂಕಿನ ಮ್ಯಾನೇಜರವರು 1915 ನೇ ಇಸವಿಯ ಕ್ಯಾಲೆಂಡರನ್ನು ಅಚ್ಚುಮಾಡಿಸಿ ಅದರಲ್ಲಿ ಆ ಬ್ಯಾಂಕಿನ ವಿಚಾರಗಳನ್ನೆಲ್ಲಾ ತಿಳಿಸಿ ಒಂದು ಪ್ರತಿ ಯನ್ನು ನಮಗೆ ಕಳುಹಿಸಿರುತ್ತಾರೆ. ಇವೆರಡನ್ನೂ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿರುವೆವು.

ಸಂಸ್ಥಾನದಲ್ಲಿ ಗೋಕಾಯಿಗಳ ಗ್ರಾಸಕ್ಕೆ ಕೊರತೆಯುಂಟಾದ ಕಡೆ ಗಳಲ್ಲಿ ರೈತರು ತಮ್ಮ ತಮ್ಮ ಗ್ರಾಮಗಳ ಬಳಿ ಇರುವಂಥಾ ಸ್ಟೇಟ್ ಫಾರೆಸ್ಟು ಗಳಿಂದ ಮುಫತ್ತಾಗಿ ಹುಲ್ಲನ್ನು ಕೊಯ್ದುಕೊಂಡು ಹೋಗಿ ಕೂಡಿಸಿಟ್ಟು ಕೊಳ್ಳಬಹುದೆಂದು ಡೆಪ್ಯುಟಿ ಕಮಿಷನರುಗಳು ಸಮಸ್ತ ರೈತಪ್ರಜೆಗಳಿಗೂ ಚೆನ್ನಾಗಿ ಸಾರಿಸಿ ತಿಳಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆ. ಈ ರಿಯಾ ಯಿತಿಯನ್ನು ರೈತರು ಅನುಭೋಗಿಸುವ ವಿಷಯದಲ್ಲಿ ಸ್ಥಳಾಧಿಕಾರಿಗಳು ತಮ್ಮ ಕೈಲಾಗುವ ಮಟ್ಟಿಗೂ ಪ್ರೋತ್ಸಾಹಪಡಿಸಬೇಕೆಂದು ಕೋರಲ್ಪಟ್ಟಿದೆ.

ಶ್ರೀಮನ್ಮಹಾರಾಜರವರು ಅರಮನೆಯ ನಾಟಕದ ಕಂಪನಿಯನ್ನು ತೆಗೆ ದುಹಾಕಿ, ಅವರನ್ನೆಲ್ಲಾ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡತಕ್ಕದ್ದೆಂದು ಹುಕುಂ ಕೊಟ್ಟಿದ್ದು ಈಚೆಗೆ ಅದನ್ನು ರದ್ದುಮಾಡಿರುತ್ತಾರೆ. ಪ್ರಜೆಗಳ ಸಂತೋ ಷಕ್ಕೂ, ಅವರ ಗುಣ ಶೀಲಸ್ವಭಾವಗಳ ರಚನೆಗೂ ಸಹಕಾರಿಯಾದ ಈ ಕಂಪ ನಿಯು ಆ ಉದ್ದೇಶಗಳನ್ನು ಸಾರ್ಥಕ ಪಡಿಸುವಂತೆ ವರ್ತಿಸಬೆಂದು ಹಾರೈಸಲ್ಪ ಟ್ಟಿದೆ. ಕಳೆದ ಶನಿವಾರ ಈ ಕಂಪನಿಯವರು ಟೌನ್ ಹಾಲಿನಲ್ಲಿ ರುಕ್ಮಾಂಗದ ಚರಿತ್ರೆಯನ್ನು ಅಭಿನಯಿಸಿ ಎಲ್ಲಾ ಭಾಗಗಳಲ್ಲೂ ನೋಟಕರನ್ನು ಆನಂದ ಪಡಿಸಿದರು.

ಒಬ್ಬ ಬಾತ್ಮೀದಾರರಿಂದ—ರಾಜಧಾನಿಯ ಚಾಮರಾಜಪೇಟೆ ಗೊಲ್ಲಗೇರಿ ಯಲ್ಲಿ ಮಹಾಜನರ ಸಹಾಯದಿಂದ ಮ|| ಎನ್. ಸುಬ್ಬಯ್ಯ ಭಾಗವತರಿಂದ ಹರಿಕಥಾಸಪ್ತ ಮಾಡಿಸಿ ತಾ 27 ನೇ ರಾತ್ರಿ ಭಾಗವತರಿಗೆ ಸಭಾ ಅಗ್ರಾಸನ ವನ್ನು ವಹಿಸಿದ್ದ ಮ್ಯುನಿಸಿಪಲ್ ಕೌನ್ಸಿಲರ್ ಮ|| ಎನ್. ಶ್ರೀಕಂಠಯ್ಯನವರ ಹಸ್ತದಿಂದ ಬಂಗಾರದ ಮೆಡಲ್ ಮುಂತಾದ ಬಹುಮಾನಗಳನ್ನು ಮಾಡಿಸಿದರು. ವೇ|| ರಾಮಾಭಟ್ಟರವರು ಸತ್ಯಾಲಕ್ಷ್ಮೀ ಸಂಬಂಧವಾದ ಉಪನ್ಯಾಸವನ್ನು ನಡಿ ಸಿದ ನಂತರ ಜಯಘೋಷದೊಡನೆ ಮಂಗಳವನ್ನು ನಡಿಸಿ ಸಭೆಯನ್ನು ಮುಕ್ತಾ ಯಮಾಡಿದರು.

ನಮ್ಮ ದಿವಾನರವರ ಸಕೀಟು.

ನಮ್ಮ ಮೈಸೂರು ಮಂತ್ರಿಶ್ರೇಷ್ಠರಾದ ಶ್ರೀಮತ್ ಎಂ. ವಿಶ್ವೇಶ್ವರಯ್ಯನವರು, ಡೆಪ್ಯುಟಿ ಕಮಿಷನರ್ ಮಿ॥ ಚಾಂತಿಸಾಹೇಬರು ಮತ್ತು ಡಿಸ್ಟ್ರಿಕ್ಟ್ ಆಫೀಸರೊಡನೆ ದೊಡ್ಡಬಳ್ಳಾಪುರಕ್ಕೆ ಕಳೆದ ಬುಧವಾರ ಬೆಳಿಗ್ಗೆ ದಯಮಾಡಿದಾಗ್ಗ ಬೆಂಗಳೂರು ಬಾಗಿಲ ಚಪ್ಪರದ ಬಳಿ ಈ ಊರಿನ ಮ್ಯುನಿಸಿಪಲ್ ಮೆಂಬರುಗಳೂ, ಇತರ ದೊಡ್ಡಮನುಷ್ಯರೂ ಅಲ್ಲದೆ ಅಮಲ್ದಾರರೂ, ಮುನ್ಸಿಫರವರೂ, ರಾಯರುಗಳೂ ಹಾಜರಾಗಿದ್ದು ಶ್ರೀಮತ್ ವಿಶ್ವೇಶ್ವರಯ್ಯನವರಿಗೆ ವಂದನೆಗಳನ್ನು ಮಾಡಿ ಹಾರಾ ತುರಾಯಿಗಳನ್ನು ಕೊಟ್ಟರು. ದಿವಾನರವರು ಅವುಗಳನ್ನು ಆದರಾತಿಶಯದಿಂದ ಅಂಗೀಕರಿಸಿ ಅಲ್ಲಿಂದ ವೆಂಕಟರಮಣ ದೇವಸ್ಥಾನ, ಮೂರು ಗರ್ಲ್ಸ್ ಸ್ಕೂಲುಗಳೂ, ಇಂಡಸ್ಟ್ರಿಯಲ್ ಸ್ಕೂಲೂ, ಮಾದಿಗರು ಬೇಡಿಕೊಂಡ ದಾರಿ ವಿಷಯ ವಿಜ್ಞಾಪನೆ, ದೇವಾಂಗದವರ ನೀಲಿಬಣ್ಣದ ಕಷ್ಟ, ಇವುಗಳನ್ನು ಅಜಮಾಯಿಷಿಮಾಡಿ ಮ್ಯುನಿಸಿಪಲ್ ಸ್ಥಿತಿ, ಗ್ರಾಮದ ಅಲಂಕಾರ ಮಾವಿನ ತೋರಣ ಮುಂತಾದವುಗಳನ್ನು ಈಕ್ಷಿಸಿ ಮ॥ ರುಮಾಲೆರುದ್ರಪ್ಪನವರ ಧರ್ಮಸತ್ರವನ್ನು ಪರಾಂಬರಿಸಿ ಆ ಮೇಲೆ ಎ. ವಿ. ಸ್ಕೂಲು, ತಾಲ್ಲೂಕ್ ಕಛೇರಿ, ಸಬ್ ರಿಜಿಸ್ಟ್ರಾರ್ ಆಫೀಸು ಮುಂತಾದವುಗಳನ್ನು ಅಜಮಾಯಿಷಿಮಾಡಿ, ಕಡೆಯಲ್ಲಿ ಎ. ವಿ. ಸ್ಕೂಲ್ ಕಟ್ಟಡದಲ್ಲಿ ದರ್ಬಾರು ಮಾಡಿದರು. ಅಗ್ಗ ಮಹಸೀಯರು ಅವರಿಗೆ ವಿಜ್ಞಾಪನಾ ಪತ್ರಿಕೆ ಕೊಟ್ಟರು. ಅಡ್ವೊಕೇಟ್ ಮ॥ ರಾಜಗೋಪಾಲಯ್ಯಂಗಾರ್ರು ಅದನ್ನು ಓದಿದರು. ನೀರಿನ ವಿಷಯದಲ್ಲಿ ಮ್ಯುನಿಸಿಪಾಲಿಟಿಯಿಂದಲೂ ಗ್ರಾಮಸ್ಥರಿಂದಲೂ ಅರ್ಧ ಮೊಬಲಗು ಕೊಟ್ಟರೆ ತಾವು ಸರ್ಕಾರದಿಂದಲೂ ಅರ್ಧ ಕೊಡಿಸುವಂತೆಯೂ, ಅದರ ನಲ್ಲಿಗಳ ಇಲಾಖೆ ಖರ್ಚನ್ನು ಮ್ಯುನಿಸಿಪಾಲಿಟಿಯವರೇ ವಹಿಸಬೇಕೆಂತಲೂ ಉಚಿತವಾದ ಅಪ್ಪಣೆಕೊಟ್ಟರು. ಹೈ ಸ್ಕೂಲು ವಿಷಯವೂ ಗ್ರಾಮಸ್ಥರ ಸಹಾಯ ಸಂಪತ್ತು ಇಲ್ಲದೆ ಆಗಲಾರದೆಂತ ತಿಳಿಸಿದರು. ಈ ಊರಿಗೆ ಸಬ್ ಡಿವಿಜನ್ ಆಫೀಸು ಬೆಂಗಳೂರಿಂದ ಬಂದು ಕೆಲಸಮಾಡಬೇಕೆಂಬುವದು ಪರಿಷ್ಕಾರವಾಗಿಲ್ಲ. ಅಂತು ನಮ್ಮ ದಿವಾನರವರು ಅತ್ಯಂತ ಪ್ರೀತಿಸಹನಗಳಿಂದ ಸಾಕ್ಷಾತ್ತಾಗಿ ದಯಮಾಡಿಸಿ ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸುವದು ಅತ್ಯಂತ ಸ್ತೋತ್ರಾರ್ಹವಾಗಿದೆ. ತರುವಾದ 3 ಘಂಟೆಗೆ ದಿವಾನ್‌ರವರು ಅಧಿಕಾರಿಗಳ ಸಮೇತ ಮುಸಾಫರ್ ಬಂಗ್ಲೆಯಿಂದ 4 ಮೈಲು ದೂರದಲ್ಲಿರುವ ಕ್ರೈಸ್ತರ ವಿಧವೆಗಳ ಆಸಾಥಾಶ್ರಮಕ್ಕೆ ದಯಮಾಡಿಸಿ ಅರ್ಧಘಂಟೆ ತನಕ ಅಲ್ಲಿರುವ ವಿಧವೆಗಳನ್ನೂ ಅನಾಥ ಮಕ್ಕಳನ್ನೂ ನೋಡಿ ಅವರಿಗಾಗಿ ಮಿಸ್ ಫಾಕ್ಸ್‌ಯವರೂ, ಮೇರಿಬಾಯಿಯವರೂ ಮಾಡುತ್ತಿರುವ ಪುಣ್ಯಕೆಲಸಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು, ಇಲ್ಲಿನ ವೆಸ್ಲಿಯನ್ ಮಿಷನ್ ಕಾರ್ಯಗಳ ವಿಷಯವಾಗಿಯೂ ಕ್ರೈಸ್ತರ ವಿಷಯವಾಗಿಯೂ ಸ್ಥಳಿಕ ಪ್ರಸಂಗಿಗಳೊಡನೆ ಸಂಭಾಷಿಸಿ, ಕಡೆಯಲ್ಲಿ ಬೆಳವಂಗಲ ಮುಂತಾದ ಕಡೆ ಸಂಚರಿಸಿ ಮುನ್ಸಿಫ್ ಕೋರ್ಟು ವಗೈರೆ ಪರೀಕ್ಷಿಸಿ ಸರ್ಕಾರದ ಅಧಿಕಾರಿಗಳಿಂದ ಪ್ರಜೆಗಳಿಗೆ ಉಂಟಾಗಬಹುದೆಂತ ತೋರಿರುವ ತೊಂದರೆಗಳಿಗೆ ಗಮನಕೊಟ್ಟು ಕಡೆಯಲ್ಲಿ ವಾಪಸು ಬೆಂಗಳೂರಿಗೆ ತೆರಳಿದರು.

ಪ್ರತ್ಯಕ್ಷವಾದಿ.

ಸಂಪದಭ್ಯುದಯ.

ವಿದ್ಯಾಭ್ಯಾಸ —ನಾವು ಯಾವ ಕೆಲಸದಲ್ಲಾದರೂ ಸಂಪೂರ್ಣವಾಗಿ ಅರ್ಥಸಾಧನೆಯನ್ನು ಮಾಡಿಕೊಳ್ಳಬೇಕಾದರೆ ವಿದ್ಯಾವಂತರಾಗದ ವಿನಹ ಸಾಧ್ಯವಾಗಲಾರದೆಂಬುದು ಈ ಹಿಂದೆನಿಂದಲೂ ವಿವರಿಸಿಕೊಂಡು ಬಂದಿರುವ ಸಂಪಾದನೆಯ ಕ್ರಮಗಳಲ್ಲಿ ಚೆನ್ನಾಗಿ ವ್ಯಕ್ತಗೊಳ್ಳುತ್ತಲಿದೆ. ವಿದ್ಯಾವಂತರು ತಮ್ಮ ಸಂಪಾದನೆಯ ಕ್ರಮಗಳಲ್ಲಿ ಉಂಟಾಗಬಹುದಾದ ತೊಂದರೆಗಳನ್ನು ಸುಲಭೋಪಾಯಗಳಿಂದ ಬಗೆಹರಿಸಿಕೊಳ್ಳಲು ಸಶಕ್ತರಾಗಿರುತ್ತಾರೆ; ಮತ್ತು ನೂತನ ಕ್ರಮಗಳನ್ನು ಕಂಡುಹಿಡಿದುಕೊಳ್ಳಲು ಚೈತನ್ಯವುಳ್ಳವರಾಗಿರುತ್ತಾರೆ. ವಿದ್ಯಾವಂತನಾದ ಮನುಷ್ಯನು ಮನುಷ್ಯರಿಗೆ ಇರಬೇಕಾದ ಸರ್ವ ಸ್ವಾತಂತ್ರ್ಯಗಳನ್ನೂ ಪಡೆದವನಾಗಿರುತ್ತಾನೆ.

ಈಗೀಗ ವಿದ್ಯಾವಂತರ ಸಂಖ್ಯೆಯು ಹೆಚ್ಚಾಗುತ್ತಲಿದೆ. ಆದರೂ ಪ್ರೌಢ ವಿದ್ಯಾಭ್ಯಾಸಗಳು ಕಡಮೆ. ಸ್ವಂತ ಕಾರ್ಯೋದ್ಯೋಗಕ್ಕಾಗಿ ಹೆಚ್ಚು ವಿದ್ಯೆಯನ್ನು ಉಪಯೋಗಿಸಿಕೊಳ್ಳುವುದಿಲ್ಲ. ದೇಶಭಾಷೆಯ 1-2 ನೆಯ ತರಗತಿಗಳಲ್ಲಿಯೇ ವಿದ್ಯಾವಿಸರ್ಜನೆಯನ್ನು ಮಾಡುವವರು ಹೆಚ್ಚು. ಅನೇಕರು ಗರ್ವಿಗಳೂ ನಿಲರ್ಕ್ಷಿಗಳೂ ಆಗಿ, ಅಲ್ಪವಿದ್ಯಾ ಪರಿಣಾಮವನ್ನು ಪಡೆದಿರುವರು; ಕಾಯ ಕಷ್ಟ ಮಾಡುವ ವಿದ್ಯಾವಂತರು ಕಡಮೆ. ವಿದ್ಯೆಯ ಬಳಕೆಯನ್ನು ಅರಿಯದವರು ಹೆಚ್ಚು. ಅನೇಕರು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನೇ ಇಟ್ಟುಕೊಂಡಿರುವುದಿಲ್ಲ. ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ಕಲಿಯಿಸುವವರು ಬಹು ಕಡಮೆ.

ರಾಜಭಾಷಾಭ್ಯಾಸಿಗಳಿಗೆ ಅನೇಕ ಸೌಕರ್ಯಗಳು ಕಲ್ಪಿಸಲ್ಪಟ್ಟಿರುವವು. ಆದರೂ ಪರಸ್ಥಳಗಳಿಗೆ ಹೋಗಿ ಅಭ್ಯಾಸಮಾಡುವವರಿಗೆ ಊಟ ಮುಂತಾದುದರ ಖರ್ಚು ಸೇರಿ ಸರಾಸರಿ ಪ್ರತಿ ತಿಂಗಳಲ್ಲಿಯೂ 20 ರೂಪಾಯಿಗಳಿಗೆ ಕಡಮೆಯಿಲ್ಲದಂತೆ ಒಬ್ಬ ವಿದ್ಯಾರ್ಥಿಯು ಖರ್ಚುಮಾಡಬೇಕಾಗಿರುವುದು. ಹೀಗೆ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ಸ್ವಲ್ಪ ಹೆಚ್ಚು ಕಡಮೆ 2,000 ರೂಪಾಯಿ ತನಕ ಖರ್ಚು ತಗಲುವುದು. ಮಧ್ಯದ ಪರೀಕ್ಷೆಗಳಲ್ಲಿ ತೇರ್ಗಡೆಯಾಗದೆ ಪುನಹ ಓದಬೇಕಾದರೆ ಇನ್ನೂ ಹೆಚ್ಚು ಖರ್ಚು ತಗಲುವುದು. ಈಗ ಇಂಟರ್ ಮೀಡಿಯೆಟ್ ಪರೀಕ್ಷೆಯಾಗದ ವಿನಹ ಯೂನಿವರ್ಸಿಟಿಯ ಯೋಗ್ಯತಾ ಪತ್ರಿಕೆಯು ದೊರೆಯುವುದಿಲ್ಲ. ಈಗ ಒಬ್ಬ ಗ್ರಾಜುಯೇಟು ಪ್ರಥಮತಹ ತಿಂಗಳಿಗೆ 30 ರೂಪಾಯಿನಂತೆ ಮಾತ್ರ ಸಂಬಳವನ್ನು ಪಡೆಯಬೇಕಾಗಿದೆ. ಹೀಗೆ ವಿದ್ಯೆಗಾಗಿ ಹಾಕಿದ ಹಣವನ್ನೇ ತಿರುಗಿ ಪಡೆಯುವುದಕ್ಕೆ ಕನಿಷ್ಟ 7-8 ವರುಷಗಳು ಹಿಡಿಯುವವು. ಸಂಸಾರದ ಖರ್ಚನ್ನು ಕಳೆದುಕೊಂಡು ಹಣವನ್ನು ಮಿಗಿಸಿಕೊಳ್ಳುವಂಥಾ ನೌಕರಿಗಳು ಕಡಮೆ.

(1) ಬಾಲ್ಯ ವಿದ್ಯಾಭ್ಯಾಸದ ಜವಾಬುದಾರಿಯು ಪ್ರಜೆಗಳನ್ನೇ ಹೊಂದಿರಬೇಕು; ಎಂದರೆ, ಪ್ರತಿಯೊಬ್ಬನೂ ವಿದ್ಯಾವಂತನಾಗೇ ತೀರಬೇಕೆಂಬ ನಿರ್ಬಂಧವು ಕಲ್ಪಿಸಲ್ಪಟ್ಟರೆ ಆಗ ಪ್ರಜೆಗಳು ತಮ್ಮ ತಮ್ಮ ಊರು ಕೇರಿಗಳಲ್ಲಿ ಉಪಾಧ್ಯಾಯರನ್ನು ನಿಯಾಮಕಮಾಡಿಕೊಳ್ಳುತ್ತಾರೆ. ಹೀಗೆ ಪ್ರಜಾನುರಾಗಿಗಳಾದ ಉಪಾಧ್ಯಾಯರ ಯೋಗ್ಯತೆ ಕೆಲಸಗಳನ್ನು ನೋಡಿ ಸರ್ಕಾರದವರು ದ್ರವ್ಯಸಹಾಯ ಮಾಡಬೇಕು. (2) ಎ. ವಿ. ಸ್ಕೂಲುಗಳಲ್ಲದ ದೊಡ್ಡ ದೊಡ್ಡ ದೇಶಭಾಷಾ ಪಾಠಶಾಲೆಗಳಲ್ಲಿ 3 ನೆಯ ತರಗತಿಯಿಂದ ಪದಾರ್ಥ ವಿಜ್ಞಾನಶಾಸ್ತ್ರಗಳ ಸುಲಭ ಪಾಠದ ಪುಸ್ತಕಗಳನ್ನು ರಚಿಸಿ, ಅಂಥಾ ಪುಸ್ತಕಗಳನ್ನೂ ಅವಕ್ಕೆ ಸಂಬಂಧಪಟ್ಟ ಪದಾರ್ಥಗಳನ್ನೂ ಇಟ್ಟು, ಪಾಠ ನಡೆಯುವಂತೆ ಮಾಡಬೇಕು. (3) ದೇಶಭಾಷಾ ತರಗತಿಗಳನ್ನು ಹೆಚ್ಚಿಸಿ ಪರಭಾಷೆಯಿಂದ ಮನುಷ್ಯರು ಪಡೆಯಬೇಕಾಗಿರುವ ಬುದ್ಧಿಶಕ್ತಿಯನ್ನು ದೇಶಭಾಷೆಯಲ್ಲಿಯೂ ಪಡೆಯುವಂತೆ ಮಾಡಬೇಕು. (4) ರಾಜಭಾಷೆಯಲ್ಲಿ ಸ್ಕೂಲ್ ಫೈನಲ್ ಮುಂತಾದ ಪರೀಕ್ಷೆಗಳಿಗೆ ಯೋಗ್ಯತಾ ಪತ್ರಿಕೆಗಳು (ಸರ್ಟಿಫಿಕೇಟು) ದೊರೆಯುವಂತೆ ಏರ್ಪಡಿಸಬೇಕು. (5) ನಮ್ಮ ಸೀಮೆಗಾಗಿಯೇ ಒಂದು ಯೂನಿವರ್ಸಿಟಿಯು ಸ್ಥಾಪಿತವಾಗಬೇಕು. (6) ಹೈ ಸ್ಕೂಲುಗಳಲ್ಲಿ ಹಸ್ತಕೌಶಲ್ಯಗಳೂ ಕಲಿಸಲ್ಪಡಬೇಕು. (7) ವಿದ್ಯಾಭ್ಯಾಸಕ್ಕೂ, ದೇಶಸಂಚಾರಾನುಭವವನ್ನು ಪಡೆಯುವುದಕ್ಕೂ ಆತಂಕಪಡಿಸುವ ಬಾಲ್ಯವಿವಾಹ, ಸಮುದ್ರಯಾನ, ಇವುಗಳ ನಿರ್ಬಂಧವನ್ನು ಹೋಗಲಾಡಿಸುವ ಏರ್ಪಾಟು ಮಾಡಬೇಕು. (8) ರಾಜ ಭಾಷಾಭ್ಯಾಸಿಗಳೆಲ್ಲರೂ ತಕ್ಕ ಪ್ರತಿಫಲವನ್ನು ಪಡೆಯುವಂತೆ ಮಾಡಬೇಕು. (9) ಪರದೇಶಗಳಿಗೆ ಹೋಗಿ ವಿದ್ಯಾಭ್ಯಾಸಮಾಡುವವರಿಗೆ ವೇತನಗಳು ಕಲ್ಪಿಸಲ್ಪಡಬೇಕು.

ಅರ್ಥಸಾಧನೆ.—ಚತುರತೆ, ಬುದ್ಧಿ ಶಕ್ತಿ, ದೇಹಶಕ್ತಿಗಳಿಂದ ಕಷ್ಟಪಟ್ಟು ವ್ಯವಸಾಯಮಾಡಿ ತಾವು ಬೆಳೆದ ಬೆಳೆಗಳನ್ನು ಅನೇಕ ದೇಶಗಳಿಗೆ ಕಳುಹಿಸಿ ಅದರ ಮೌಲ್ಯದಿಂದ ರೈತರು ಐಶ್ವರ್ಯಶಾಲಿಗಳಾಗಬೇಕು. ದೇಶ ದೇಶಾಂತರಗಳ ವ್ಯಾಪಾರವನ್ನು ಕೈಕೊಂಡು ವರ್ತಕರು ಭಾಗ್ಯಶಾಲಿಗಳಾಗಬೇಕು. ಅತಿ ಚಮತ್ಕಾರವಾದ ಪದಾರ್ಥರಚನೆಗಳನ್ನು ಮಾಡಿ ಇತರರ ಮನಸ್ಸಾಕರ್ಷಣೆಯಿಂದ ಪದಾರ್ಥಗಳು ವಿಕ್ರಯವಾಗಿ ಕೈಗಾರಿಕೆಯವರು ನಿಧಿಯನ್ನು ಹೊಂದಬೇಕು. ಹೇರಳವಾದ ವ್ಯಾಪಾರವಸ್ತುಗಳನ್ನು ಪಡೆದು ನೌಕರರುಗಳು ದ್ರವ್ಯಸಂಪಾದನೆ ಮಾಡಬೇಕು. ಸಂಪಾದಿಸುವುದಕ್ಕೆ ಮಾರ್ಗವಿಲ್ಲದ ಅಂಗಹೀನರೂ ಅನಾಥರೂ ವೃದ್ಧರೂ ಮುಂತಾದವರು ಭಿಕ್ಷಾಟನೆಯಿಂದ ಜೀವಿಸಬೇಕು, ಇಲ್ಲವೇ ಸರ್ಕಾರದ ಸಂರಕ್ಷಣೆಯನ್ನು ಪಡೆಯಬೇಕು.

ಯಸ್. ಹುಚ್ಚಾರಾವ್, ಸಿಕಾರಿಪುರ.

ತಾ. ಕ:—ಕಳೆದ ಸಂಚಿಕೆಯಲ್ಲಿ ಈಚೆಗೆ ಸರ್ಕಾರದ ಪ್ರಕಟನ ಪತ್ರಿಕೆಯಲ್ಲಿಯೂ ಸಹ ಇಂಥಾ ಜಾತಿಯವನು ಇಂಥಾ ಕೆಲಸಕ್ಕೆ ಇಂಥಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು; ಇಂಥಾ ಜಾತಿಯವನು ಅದೇ ಕೆಲಸಕ್ಕೆ ಇಂಥಾ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗಿದ್ದರೆ ಸಾಕು ಎಂದು ಪ್ರಕಟವಾಗುತ್ತ ಅವೆ ಎಂದು ಇರುವುದನ್ನು ಪ್ರಕಟವಾದರೆ ಎಂದು ತಿದ್ದಿಕೊಳ್ಳಬೇಕು.

ಎಸ್. ಎಚ್.

ಮೈಸೂರು ಸಿಟಿ ಮ್ಯುನಿಸಿಪಲ್ ಮೀಟಿಂಗು.

ಕಳೆದ ಫೆಬ್ರವರಿ ತಾ. 25—26 ನೇ ಗುರುವಾರವೂ ಶುಕ್ರವಾರವೂ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಮಂದಿರದಲ್ಲಿ ಸಭೆ ಸೇರಿ ತಿಂಗಳುಕಟ್ಟಳೆಯ ಮೀಟಿಂಗನ್ನು ನಡಿಸಿದರು. ಆಗ ತೀರ್ಮಾನವಾದ ಮುಖ್ಯವಿಷಯಗಳ್ಯಾವವೆಂದರೆ—ಬೀದಿಗಳಲ್ಲಿ ಅಲೆಯುವ ಗೋಕಾಯಿಗಳನ್ನು ಹಿಡಿದು ದೊಡ್ಡಿಗಳಿಗೆ ಕೊಡುವುದಕ್ಕೆ 7 ರೂಪಾಯಿ ಸಂಬಳದ ಮೇಲೆ ಆರು ಮಂದಿ ಜವಾನರನ್ನು ನೇಮಕಮಾಡಬೇಕೆಂದು ಮೆಂಬರುಗಳು ಹಿಂದೆ ಒಪ್ಪಿ ಪಾಸ್ ಮಾಡಿದ್ದದ್ದನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡದೆ ಅಂಥಾ ಗೋಕಾಯಿಗಳನ್ನೂ ಕತ್ತೆಗಳನ್ನೂ ಹಿಡಿದು ತರುವವರಿಗೆ ಬೆಂಗಳೂರು ಸಿಟಿಯಲ್ಲಿರುವಂತೆ ಮ್ಯುನಿಸಿಪಾಲಿಟಿಯಿಂದ ಬಹುಮಾನವನ್ನು ಕೊಡಬಹುದೆಂದು ಸೂಚಿಸಿದ್ದರು. ಮೆಂಬರುಗಳು ಇದನ್ನು ಒಪ್ಪಿಕೊಳ್ಳದೆ ಖಾಯಂ ಸಿಬ್ಬಂದಿಯನ್ನೇ ನೇಮಿಸಿಕೊಳ್ಳುವುದಕ್ಕೆ ಅವಕಾಶಕೊಡಬೇಕೆಂದು ಮತ್ತೆ ಸರ್ಕಾರದವರನ್ನು ಕೇಳಿಕೊಂಡಿದಾರೆ.—ಬೆಳ್ಳಾವಿದ ಮ॥ ಶೀನುರಾವ್ ಶ್ರೀನಿವಾಸ್ ಎಂಬ ಪಂಡಿತರು ಕೆಲವು ಕಾಲದಿಂದ ಸಂತೇಪೇಟೆಯಲ್ಲಿದ್ದುಕೊಂಡು ರೋಗಿಗಳಿಗೆ ಒಳ್ಳೆಯ ಚಿಕಿತ್ಸೆಯನ್ನು ಮಾಡುತ್ತಿರೋದರಿಂದ ಅವರಿಗೆ ಮ್ಯುನಿಸಿಪಾಲಿಟಿಯಿಂದ ಗ್ರಾಂಟು ಕೊಡಬಹುದೆಂದು ಡಿ॥ ಮೆಡಿಕಲ್ ಆಫೀಸರವರು ಶಿಫಾರಸುಮಾಡಿದ್ದರು. ಕೆಲವು ಮೆಂಬರುಗಳು ಕೊಡ ಕೂಡಬಹುದೆಂದು ಕೇಳಿದರು. ಈ ವಿಚಾರದಲ್ಲಿ ಮೆಂಬರುಗಳ ಸಮ್ಮತಿಯನ್ನು ಕೇಳಿದ್ದರಲ್ಲಿ 5 ಮಂದಿ ಕೊಡಬಹುದೆಂದೂ, 5 ಮಂದಿ ಕೊಡಬೇಕಾದದ್ದಿಲ್ಲವೆಂದೂ ಹೇಳಿದ್ದರಿಂದ ಪ್ರೆಸಿಡೆಂಟರು ಕೊಡಬೇಕಾದದ್ದಿಲ್ಲನೆಂಬವರ ಕೂಡ ಸೇರಿ ಅವಶ್ಯವಿಲ್ಲವೆಂದು ಇತ್ಯರ್ಥಮಾಡಿದರು.—ದೇವರಾಜಮಾರ್ಕೆಟ್ಟಿನ ಪೂರ್ವಭಾಗದ ಮೊಗಸಾಲಿನ ಅಂಗಡಿಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸುವುದಕ್ಕೆ ತಯಾರಾಗಿದ್ದ 1,131 ರೂಪಾಯಿನ ಖರ್ಚಿನ ಪಟ್ಟಿಯು ಒಪ್ಪಲಾಯಿತು.

ಚಾಮುಂಡಿ ಬೆಟ್ಟದ ಮೇಲೆ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಬೇಕೆಂದೂ, ಅದಕ್ಕೆಲ್ಲಾ ಖರ್ಚಿನ ಅಂದಾಜು ಪಟ್ಟಿ ಪ್ಲಾನ್ ಮುಂತಾದ್ದನ್ನು ತಯಾರುಮಾಡಬೇಕೆಂದೂ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದಾರೆ. ಆ ಅಭಿವೃದ್ಧಿ ಕಾರ್ಯಗಳ್ಯಾವವೆಂದರೆ—ಬೆಟ್ಟದ ಮೇಲೆ ಆರೋಗ್ಯಕರವಾದ ನೀರನ್ನು ಒದಗಿಸುವುದು, ರಸ್ತೆಯನ್ನು ಸರಿಮಾಡುವುದು, ಪ್ರಯಾಣಿಕರು ತಂಗುವುದಕ್ಕೆ ಒಂದು ಬಂಗಲೆ, ಮುಸಾಫರಖಾನೆ, ದೊಡ್ಡ ಮಂಟಪಗಳನ್ನು ಕಲ್ಪಿಸುವುದು, ಮನೆಗಳ ಬಚ್ಚಲ ನೀರನ್ನು ಸಾಗಿಸಿ ಆರೋಗ್ಯವನ್ನು ವೃದ್ಧಿಮಾಡುವುದು, ನೀರು ಅಲ್ಲಲ್ಲಿ ನಿಲ್ಲುವುದಕ್ಕೆ ಕಟ್ಟೆಗಳನ್ನು ಕಟ್ಟಿಸಿ ಹುಲ್ಲು ಹಸಿರು ಗಿಡಗಳು ಬೆಳೆಯುವಂತೆ ಮಾಡುವುದು, ಅಲ್ಲಲ್ಲಿ ತೋಟಗಳನ್ನೂ ನೇತ್ರಾನಂದಕರವಾದ ಕಾಲುಹಾದಿಗಳನ್ನೂ ಮಾಡುವುದು, ದೊಡ್ಡ ಬಸವನ ಹತ್ತಿರ ಮನೋಹರವಾಗಿರುವಂತೆ ಅಭಿವೃದ್ಧಿ ಕಾರ್ಯಗಳನ್ನು ನಡಿಸುವುದು, ಬಂಗಲೆಗೂ ದೇವಸ್ಥಾನಕ್ಕೂ ವಿದ್ಯುಚ್ಛಕ್ತಿಯ ದೀಪಗಳನ್ನು ಇಡುವುದು, ಮನೆಗಳನ್ನು ಆರೋಗ್ಯಕರವಾಗಿ ಕಟ್ಟುವುದಕ್ಕೆ ಯೋಗ್ಯವಾದ ರೂಲುಗಳನ್ನು ಮಾಡಿಡುವುದು—ಇವೆಲ್ಲಾ ಸಾಮಾನ್ಯವಾಗಿ ಜಾಗ್ರತೆ ನಡೆಯಬೇಕಾದ ಕಾಮಗಾರಿಗಳು; ಬೆಟ್ಟದ ಮೇಲೆ ಶ್ರೀಮನ್ ಮಹಾರಾಜರವರಿಗೆ ಒಂದು ಸಣ್ಣ ಬಂಗಲೆಯನ್ನು ಕಟ್ಟುವುದು, ಕೆಳಗಿನಿಂದ ಮೇಲಕ್ಕೆ ವಿದ್ಯುಚ್ಛಕ್ತಿಯಿಂದ ಹೋಗಿ ಬರುವ ಟ್ರಾಂ ಗಾಡಿಗಳನ್ನು ಇಡುವುದೇ ಮುಂತಾದವುಗಳನ್ನು ಮುಂದಕ್ಕೆ ಹಣ ಒದಗಿದ ಹಾಗೆ ನಡಿಸಬೇಕು. ಮೆಂಬರುಗಳು ಸರ್ಕಾರದ ಈ ಹುಕುಮನ್ನು ಓದಿಸಿ ಸಂತೋಷಪಟ್ಟು ರೆಕಾರ್ಡುಮಾಡಿಕೊಂಡರು.

ಎಗ್ಗಿ ಭೂಪನ್ ಕಟ್ಟಡಗಳ ಬಳಿ ಒಂದು ಛತ್ರ ಮೊದಲಾದ ಕಟ್ಟಡಗಳನ್ನು ಧರ್ಮಾರ್ಥವಾಗಿ ಕಟ್ಟಿಸುವುದಕ್ಕೆ ನಿವೇಶನವನ್ನು ಮುಫತ್ತಾಗಿ ಕೊಪ್ಪಲ ಮಾದೇಗೌಡರಿಗೆ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—12 ರೂಪಾಯಿ ಸಂಬಳದ ಮೇಲೆ ಇಬ್ಬರು ಗುಮಾಸ್ತರನ್ನು ಹಂಗಾಮಿಯಾಗಿ ಒಂದು ವರುಷ ನೇಮಿಸಿಕೊಂಡು, ರಿಕಾರ್ಡುಗಳನ್ನು ಏಲೆ ಮಾಡಿಸಬೇಕೆಂದು ಇತ್ಯರ್ಥವಾಯಿತು.—ಟೌನ್ ಹಾಲ್ ಬಂಗಲೆಯ ಆಳುಗಳಿಗೆ ಒಂದೊಂದು ರೂಪಾಯಿ ಬಡ್ತಿ ಕೊಡಬಹುದೆಂದು ಒಪ್ಪಿಕೊಂಡರು.—ಖಬರಸ್ತಾನಗಳ ಕಾವಲುಗಾರನಿಗೆ ಬಡ್ತಿ ಕೊಡಬಹುದೆಂದೂ, ಬೇರೆ ಮೂವರನ್ನು ಹೊಸದಾಗಿ ನೇಮಕಮಾಡಬಹುದೆಂದೂ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ — ಪಟ್ಟಣದಲ್ಲಿ ಸೊಳ್ಳೆಗಳ ಹುಟ್ಟು ಅಡಗಿಸುವಂಥಾ ಕಾರ್ಯಸಾಧನೆಗೆ 15 ರೂಪಾಯಿ ಸಂಬಳವುಳ್ಳ ಒಬ್ಬ ಓವರ್ಸಿಯರನ್ನೂ, 7 ರೂಪಾಯಿ ಸಂಬಳದ ಮೇಲೆ ಆರು ಮಂದಿ ಆಳುಗಳನ್ನೂ ನೇಮಿಸಿಕೊಳ್ಳಬಹುದೆಂದು ಸರ್ಕಾರದ ಸ್ಯಾಂಕ್ಷನ್ ಆಯಿತು. ಹೆಲ್ತ್ ಆಫೀಸರವರು ಈ ಸಿಬ್ಬಂದಿಯಿಂದ ಮಾಡಿಸುವಂಥಾ ಕಾರ್ಯಗಳ ಪಟ್ಟಿಯನ್ನು ಮೊದಲೇ ತಯಾರುಮಾಡಿಸಿ ಪ್ರತಿ ತಿಂಗಳಲ್ಲೂ ಅವರು ಮಾಡಿದ ಕೆಲಸಗಳನ್ನು ಕೌನ್ಸಿಲ್ ಮೀಟಿಂಗಿಗೆ ಕಳುಹಿಸಬೇಕೆಂದು ಮೆಂಬರುಗಳು ತಿಳಿಸಿದರು — ಮ॥ ಅಕ್ಕಿ ಅಂಗಡಿ ದೊಡ್ಡಣ್ಣನವರಿಗೆ ಅವರ ಮನೆ ಬಳಿ ತೋಟದಲ್ಲಿ ಛತ್ರದ ಯಂತ್ರವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಡಕೂಡದೆಂದು ಸರ್ಕಾರದವರು ಹುಕುಂ ಮಾಡಿದಾರೆ.—ಬೇರೆ ಬೇರೆ ಮೊಹಲ್ಲಾ ಆಸ್ಪತ್ರೆಗಳಲ್ಲಿ ಡಾಕ್ಟರಾಗಿರುವವರು ಒಂದೊಂದು ಬೈಸಿಕಲ್ ಇಟ್ಟುಕೊಂಡಿದ್ದರೆ ಅಂಥವುಗಳಿಗೆ ಮ್ಯುನಿಸಿಪಲ್ ತೆರಿಗೆ ವಸೂಲ್ಮಾಡಬೇಕಾದದ್ದಿಲ್ಲವೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ —50 ಕಿಟಕಿಗಳನ್ನು ಮಾಡಿಸಿ ದೊಡ್ಡ ಹೊಲಗೇರಿಯಲ್ಲಿ ಬಡವರ ಮನೆಗಳಿಗೆ ಇಡಿಸಿ ಅದರ ಕ್ರಯವನ್ನು ಸ್ವಲ್ಪ ಸ್ವಲ್ಪವಾಗಿ ವಸೂಲ್ಮಾಡಿಕೊಳ್ಳಬೇಕೆಂದು ಮೆಂಬರುಗಳು ಒಪ್ಪಿಕೊಂಡರು.—ಪಡೆವಾರರುಗಳಿಗೆ ಪ್ರತ್ಯೇಕವಾಗಿ ಇಬ್ಬರು ಝಾಡಮಾಲಿಗಳನ್ನು ನೇಮಿಸಬಹುದೆಂದೂ, ವ್ಯಾಕ್ಸಿನೇಟರ್ ಪಾಪಯ್ಯಶೆಟ್ಟಿಗೆ ಸಂಬಳವನ್ನು 12 ರಿಂದ 15 ರೂಪಾಯಿಗೆ ಬಡ್ತಿಮಾಡಬಹುದೆಂದೂ ಮೆಂಬರುಗಳು ಒಪ್ಪಿದರು.—ಕೃಷ್ಣರಾಜ ಮೊಹಲ್ಲಾ ಆಸ್ಪತ್ರೆಗೆ ಇನ್ನೊಬ್ಬ ಕಂಪೌಂಡರನ್ನು ನೇಮಿಸಿಕೊಳ್ಳುವಂತೆ ಸರ್ಕಾರದ ಸ್ಯಾಂಕ್ಷನ್ ಆಗಿದೆ.—ಪ್ರಥಮ ವಿದ್ಯಾಭ್ಯಾಸದ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ ಸಾಲಿಯಾನಾ 15,000 ರೂಪಾಯಿ ವಿನಿಯೋಗಿಸಲ್ಪಡಬೇಕೆಂದೂ, 1915-16 ನೇ ಸಾಲಿನಲ್ಲಿ ಹೊಸ ಸ್ಕೂಲುಗಳನ್ನು ಕಟ್ಟುವುದಕ್ಕೆ 4,000 ರೂಪಾಯಿ ಕೊಡಬೇಕೆಂದೂ ಮೆಂಬರುಗಳು ತೀರ್ಮಾನ ಮಾಡಿದರು.—ಧರ್ಮಕಾರ್ಯಾರ್ಥಿಗಳಿಗೆ ಈರನಗೆರೆ ಕ್ಯಾಂಪುಗಳ ಉತ್ತರದಲ್ಲೂ, ಹೊಲಗೇರಿ ಆಚೆಯಲ್ಲೂ ನಿವೇಶನಗಳನ್ನು ಕೊಡತಕ್ಕದ್ದೆಂದು ಇತ್ಯರ್ಥವಾಯಿತು.—ಸುಬ್ಬರಾಯನ ಕೆರೆ ಬಳಿ ಮೈದಾನದಲ್ಲಿ ಅನಾಥಾಲಯವನ್ನು ಕಟ್ಟುವುದಕ್ಕೆ ನಿವೇಶನವನ್ನು ಕೊಡಬಹುದೆಂದು ಗೊತ್ತಾಗಿತ್ತು. ಸರ್ಕಾರದವರು ಆ ಸ್ಥಳದಲ್ಲಿ ಆಯುರ್ವೇದ ವಿದ್ಯಾಶಾಲೆಗಾಗಿ ಗಿಡಮೂಲಿಕೆಗಳನ್ನು ಬೆಳೆಯುವ ತೋಟವನ್ನು ಮಾಡಬೇಕೆಂದು ತೀರ್ಮಾನಮಾಡಿದಾರೆ. ಇವೆರಡು ಸಂಗತಿಗಳನ್ನೂ ಸರ್ಕಾರಕ್ಕೆ ಅರಿಕೆ ಮಾಡತಕ್ಕದ್ದೆಂದು ಇತ್ಯರ್ಥವಾಯಿತು.—ಕಟ್ಟಡಗಳಿಗೆ ಲೈಸೆನ್ಸ್ ಕೊಡುವಾಗಲೂ, ಪ್ರಾಸಿಕ್ಯೂಷನ್ ಮಾಡಬೇಕಾದಾಗಲೂ ಮೆಂಬರುಗಳ ಅಭಿಪ್ರಾಯವನ್ನು ಕೇಳಬೇಕೇ ಎಂಬ ವಿಚಾರದಲ್ಲಿ ಕೌನ್ಸಿಲರುಗಳು ರೆಜಲ್ಯೂಷನ್ ಪಾಸ್ ಮಾಡಿದಂತೆ ಅಧಿಕಾರಿಗಳು ಜಾರಿಮಾಡತಕ್ಕದ್ದೆಂದು ಇತ್ಯರ್ಥವಾಯಿತು.—ಅಂಗಡಿಗಳಿಗೆ ಬಾಡಿಗೆ ದರದ ಮೇಲೆ ಶೇಕಡಾ 1 ರೂಪಾಯಿನಂತೆ ನೀರಿನ ತೆರಿಗೆ ಹಾಕಿಯೇ ತೀರಬೇಕೆಂದು ಸರ್ಕಾರದಿಂದ ಕೊಡಲ್ಪಟ್ಟ ಹುಕುಮನ್ನು ಒಪ್ಪಿಕೊಂಡರು.

ವಾತ್ತಿದಾರರಿಗೆ ನೋಟೀಸ್.

ವಾತ್ತಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಸ್ಕೂಲಿನಲ್ಲಿ ಹೆಣ್ಣುಮಕ್ಕಳ ಸಂಗೀತಪಾಠ.

ಅಯ್ಯಾ,—ಈಗಿನ ಹೊಸ ಏರ್ಪಾಡಿನಲ್ಲಿ ಅನೇಕ ಗರಲ್ಸ್ ಸ್ಕೂಲುಗಳಿಗೆ ಕರಪೇಕಾದ ಸಂಗೀತ ಮಾಸ್ಟರುಗಳು ದೊರೆಯುವುದು ದುರ್ಲಭ. ಅಥವಾ ಇದ್ದರೂ ಹೆಣ್ಣುಮಕ್ಕಳಿಗೆ ಅವಶ್ಯಕವಾಗಿ ಮದುವೆ ಮೊದಲಾದ ಕಾಲಗಳಲ್ಲಿ ಬೇಕಾದ ಹಾಡುಗಳನ್ನು ಹೇಳಿಕೊಡತಕ್ಕವರು ಇಲ್ಲ. ಈ ಸಂದರ್ಭಕ್ಕೆಲ್ಲಾ ಮುಖ್ಯವಾಗಿ ಹಾರ್ಮೋನಿಯಂ ಸಹಾಯದಿಂದಲಾಗಲಿ, ಅಥವಾ ಅವರ ಶ್ರುತಿ ಮೇಲೆ ಹಾಡುವುದಾಗಲಿ ಕಲಿಸಿದ್ದರೆ (ಹಾಡು ಹಸೆ ಮೊದಲಾದ್ದು) ಸಾರ್ಥಕವುಂಟು. ಅದಿಲ್ಲದೆ ಈಗಿನ ಸರ್ಕಾರದವರು ವೀಣೆಯಲ್ಲಿ ಬಾಲ್ಯಪಾಠವಾಗಿರುವವರನ್ನೇ ಮಾಸ್ಟರಾಗಿ ಚುನಾಯಿಸುತ್ತಿರುವರು. ಹೆಣ್ಣುಮಕ್ಕಳು ಕಷ್ಟವಾದ ವೀಣೆಯನ್ನು 10-12ವರ್ಷಗಳು ಅಭ್ಯಾಸಮಾಡಿ ಕರಪೇಕಾಗುವುದು ಸಾಧ್ಯವೇ? ಅಥವಾ ಅಭ್ಯಾಸಮಾಡಿದರೂ ಮೇಲ್ಕಂಡ ಹಾಡುಗಳನ್ನು ಸಭೆಯಲ್ಲಿ ಹೇಳುವುದಕ್ಕೆ ಆದೀತೇ? ಹೇಳಿದರೂ ರಂಜಿಸುವುದೇ? ಏನೂ ಪ್ರಯೋಜನವಾಗಲಾರದು. ಸರ್ಕಾರದವರು ಈ ವಿಷಯಗಳನ್ನು ಚಿತ್ತಕ್ಕೆ ತಂದು ಸರಕಾರದ ಪೋಷಣೆಯಲ್ಲಿರುವ ವಿದ್ವಾಂಸರ ಸಹಾಯದಿಂದ ಸಂಗೀತದ ಸ್ಕೂಲನ್ನು ಏರ್ಪಡಿಸಿ ಮಾಸ್ಟರುಗಳನ್ನು ಮೇಲ್ಕಂಡಂತೆ ತರಪೇತು ಮಾಡಿಸುವರೆಂದು ನಿರೀಕ್ಷಿಸುವ

ದೇಶಿಕ.

ಗ್ರಾಮದ ಏಕಮತ್ಯ.

ಅಯ್ಯಾ,—ಕೊಪ್ಪ ಹೋಬಳಿ ಶೇಕದಾರರವರೂ ಮತ್ತು ಕುಂಬಾರಕೊಪ್ಪ, ಹಿರಿಕೊಡಗಿ, ಗುಣವಂತೆ, ಈ ಮೂರು ಗ್ರಾಮಗಳ ಪ್ರಾನುಭೋಗರುಗಳೂ ಕುಂಬಾರಕೊಪ್ಪ ಗ್ರಾಮದ ಸೂರ್ಯದೇವಸ್ಥಾನದ ಪ್ರಾಕಾರದಲ್ಲಿ ಆ ಮೂರು ಗ್ರಾಮಗಳವರನ್ನೂ ಮೀಟಿಂಗು ಸೇರಿಸಿ ತೀರ್ಮಾನಿಸಿರುವದೇನೆಂದರೆ—ಗ್ರಾಮದ ಪ್ರತಿ ಒಂದು ಮನೆಯವರೂ ಗ್ರಾಮಾಭಿವೃದ್ಧಿಯ ವಿಷಯದಲ್ಲಿ ವಾರಕ್ಕೆ ಅರ್ಧ ದಿವಸ ಕೆಲಸಮಾಡುವಂತೆಯೂ, ಈ ಮೂರು ಗ್ರಾಮಗಳಿಗೂ ಮಧ್ಯಸ್ಥವಾದ ಹಿರಿಕೊಡಗಿ ಗ್ರಾಮದ ಮಾದಲುಕೊಪ್ಪ ಎಂಬಲ್ಲಿ ಒಂದು ರೀಡಿಂಗ್ ರೂಂ ಕಟ್ಟಡವನ್ನು ಸರ್ಕಾರದವರ ಸಹಾಯದಿಂದ ಕಟ್ಟಿಸತಕ್ಕದ್ದೆಂತಲೂ, ಈ ರೀಡಿಂಗ್ ರೂಂಗೆ ಮ॥ ಗಳಾದ ಅಲಿಗೆ ವೆಂಕಪ್ಪನಾಯ್ಕರು, ಆಲೆಮನೆ ಸಾ॥ ಸುಬ್ಬನಾಯ್ಕರು, ಅಮ್ಮತಿ ನಾಗಯ್ಯನಾಯ್ಕರು, ಹೊಸಮನೆ ವೀರಪ್ಪನಾಯ್ಕರು, ಹೊಸಗೇರಿ ಕುಮಾರಯ್ಯಗೌಡರು ಮುಫತ್ತಾಗಿ ಒಂದೊಂದು ವರ್ತಮಾನ ಪತ್ರಿಕೆಯನ್ನು ತರಿಸಿಕೊಡಲು ಒಪ್ಪಿರುತ್ತಾರೆ. ರೀಡಿಂಗ್ ರೂಂ ತಯಾರಾಗುವ ವರಿಗೆ ದೇವಸ್ಥಾನದಲ್ಲಿ ಪ್ರತಿ ದಿನವೂ ಎಲ್ಲರೂ ಸೇರಿ ವರ್ತಮಾನ ಪತ್ರಿಕೆಗಳನ್ನು ಓದತಕ್ಕದ್ದೆಂತಲೂ, ಈ ರೀಡಿಂಗ್ ರೂಂ ಬಾಜೂದಲ್ಲೇ ಹಾಲಿ ಜಾರಿಯಲ್ಲಿರುವ ಅಲಿಗೆ ಮಿಷನ್ ಸ್ಕೂಲನ್ನು ಇಡುವಂತೆಯೂ, ಈ ಬಗ್ಗೆ ಸ್ಕೂಲ್ ಕಟ್ಟಡವನ್ನು ಗ್ರಾಮಸ್ಥರೇ ವಹಿಸಿಕೊಂಡು ಕಟ್ಟತಕ್ಕದ್ದೆಂತಲೂ ತೀರ್ಮಾನಿಸಿರುತ್ತಾರೆ. ಅಲ್ಲದೆ ರೀಡಿಂಗ್ ರೂಂಗೂ, ಸ್ಕೂಲ್ ಕಟ್ಟಡಕ್ಕೂ ಎಳು ನೂರು ರೂಪಾಯಿ ಗ್ರಾಮಸ್ಥರು ಚಂದಾ ಹಣ ಜಮಾಯಿಸಲು ಚಂದಾ ಪಟ್ಟಿ ಮಾಡಿದರು. ಗ್ರಾಮದ ಮುಖಂಡರಲ್ಲಿ ಮ॥ ಗಳಾದ ಅಲಿಗೆ ವೆಂಕಪ್ಪನಾಯ್ಕರು, ಆಲೆಮನೆ ಸುಬ್ಬಯ್ಯನಾಯ್ಕರು, ಗುಬ್ಬಿಗದ್ದೆ ವೆಂಕಪ್ಪಗೌಡರು, ಲಕ್ಕವಳ್ಳಿ ಸಿದ್ದಪ್ಪನಾಯ್ಕರು, ಮಾದಲು ಮಂಜಪ್ಪನಾಯ್ಕರು ತಲಾ 50 ರೂಪಾಯಿ, ಉಳಿದವರು ತಮ್ಮ ತಮ್ಮ ಯೋಗ್ಯತಾನುಸಾರ ಉದಾರವಾದ ಚಂದಾ ಮೊಬಲಗನ್ನು ಕೊಡಲು ಒಪ್ಪಿ ಪಟ್ಟಿಗೆ ರುಜು ಮಾಡಿದರು. ಮೀಟಿಂಗಿಗೆ ಹಾಜರಾಗದೆ ಇರುವವರೂ ಧಾರಾಳವಾದ ಚಂದಾ ಹಾಕುತ್ತಾರೆಂಬು ನಂಬಿ ನಿರೀಕ್ಷಿಸಲ್ಪಟ್ಟಿದೆ. ಆದರೆ ಕೆ ಪರ್ಮಾದುಗಳು ಗ್ರಾಮದಲ್ಲಿ ಕೆಲವು ಮಂದಿ ಗೌರವಸ್ಥರಿಗೆ ಅಸೂಯೆಯನ್ನುಂಟುಮಾಡಿವೆ ಎಂದು ಕಾಣುತ್ತೆ. ಇದು ಈಗಿನ ನಾಗರಿಕತೆಗೂ, ಗ್ರಾಮದ ಏಳಿಗೆಗೂ ತುಂಬಾ ಕುಂದಕವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳುವರು. ಮುಂದೆಯಾದರೂ ಈ ಸಂಘದ ಉದ್ದೇಶಕ್ಕನುಸಾರವಾಗಿ ದ್ವೇಷಾಸೂಯೆಗಳನ್ನು ಬಿಟ್ಟು ಅನ್ಯೋನ್ಯ ಏಕಮತ್ಯಗಳಿಂದ ಒಬ್ಬರಿಗೊಬ್ಬರು ಸಹಾಯಕರಾಗಿ ಬದುಕುವವರಾಗಲೆಂದು ಧ್ಯಾನಿಸುವೆನು.

ಪ್ರತ್ಯಕ್ಷದರ್ಶಿ.

ಮೈಸೂರ್ ದೇಶದ ಗೌ॥ ಎ. ಇ. ಸ್ಕೂಲ್ ಮತ್ತು ತಾಲ್ಲೂಕ್ ಕನ್ನಡ ಸ್ಕೂಲ ಮಾಸ್ಟರುಗಳ ಸಂಬಳದ ಬಡ್ತಿಯ ವಿಚಾರ.—I.

ಅಯ್ಯಾ,—ಈ ಇಲಾಖೆಯಲ್ಲಿ ಬಹಳ ಜುಜುಬಿ ಸಂಬಳದಿಂದ ಜೀವಿಸುತ್ತಿದ್ದ ಬಡ ಮಾಸ್ಟರುಗಳ ಗೋಳಾಟವನ್ನು ಸರ್ಕಾರದವರು ಈಗ ಗಮನಿಸಿ ಅವರಿಗೆ ತಕ್ಕ ಗ್ರೇಡುಗಳನ್ನು ನಿರ್ಮಿಸಿ ಅದನ್ನು ಹಂಚುವ ಅಧಿಕಾರವನ್ನು ಮ॥ ರಾಮರಾವ್, ಎಂ.ಎ. ಯವರಿಗೆ ವಹಿಸಿರುತ್ತಾರೆ. ಇಂಥಾ ಸುಸಮಯವು ಈ ಇಲಾಖೆಯಲ್ಲಿ ಈ ವರಿವಿಗೂ ಉಂಟಾಗಿರಲಿಲ್ಲ. ಈ ಇಲಾಖೆಯಲ್ಲಿ ಮೊದಲಿನಿಂದ ಕೆಲಸಮಾಡಿ ಜುಜುಬಿ ಸಂಬಳ ಪಡೆಯುತ್ತಾ ಹೆಚ್ಚು ಪರೀಕ್ಷೆಗಳಲ್ಲೂ ತೇರ್ಗಡೆಯಾಗಿ ಸರ್ವಿಸ್‌ದಾರರಾಗಿಯೂ ಇರುವ ಅನೇಕ ಉಪಾಧ್ಯಾಯರು ಇರುತ್ತಾರೆ. ಈಗ್ಗೆ 8 ತಿಂಗಳಲ್ಲಿ ನಡೆದ ಎ. ವಿ. ಸ್ಕೂಲಿನ ಗ್ರೇಡ್ ಏರ್ಪಾಡಿನ ಸಂದರ್ಭದಲ್ಲಿ ಇಂಗ್ಲಿಷ್ ಉಪಾಧ್ಯಾಯರುಗಳ ಅಭಿವೃದ್ಧಿಯನ್ನು ಮಾತ್ರವೇ ಪರಿಶೀಲನೆ ಮಾಡಲಾಯಿತು. ಅನೇಕ ಸರ್ವಿಸ್‌ದಾರರಾದ ಕನ್ನಡ ಉಪಾಧ್ಯಾಯರಿಗೆ ಸರಿಯಾದ ಗ್ರೇಡು ದೊರಕದೆ ಇರುತ್ತದೆ. ಆದ್ದರಿಂದ ಯಶೋವಂತರಾದ ರಾಮರಾಯರವರು ಒಟ್ಟು ಪ್ರಾವಿನ್ಸ್‌ನಲ್ಲಿರುವ ಕನ್ನಡ ಮಾಸ್ಟರ್ ಲಿಸ್ಟನ್ನು ತಯಾರುಮಾಡಿಸಿ ಅವರವರ ಕ್ವಾಲಿಫಿಕೇಷನ್, ಸರ್ವಿಸ್, ನಂತರ ಅವರು ಇಲಾಖೆಯಲ್ಲಿ ಮಾಡಿರುವ ಮಹನಿಯ್ಯ ಇವುಗಳನ್ನು ಪರಿಶೀಲಿಸಿ ಕೇವಲ ಸಿಫಾರಸ್, ಸ್ವಜನಾಭಿಮಾನ ಮೊದಲಾದವುಗಳಿಗೆ ಆಸ್ಪದ ಕೊಡದೆ ನ್ಯಾಯಾನುಸಾರ ಪ್ರಮೋಷ

ಪಡುವದರ ಮೂಲಕ ತಮ್ಮ ಯಶಸ್ಸನ್ನು ಕಾಪಾಡಿಕೊಳ್ಳುತ್ತಾರೆಂದು ಈ ಗ ವಿಶ್ವಾಸಿಸಿರುತ್ತೇವೆ.

ಬಡ ಮಾಸ್ತರುಗಳು.

II.

ಅಯ್ಯಾ,—ಮೇಲಿ ಕಂಡ ಮಾಸ್ತರುಗಳ ಸಂಬಳವನ್ನು ಹೆಚ್ಚಿಸಬೇಕೆಂದು ಸರಕಾರದವರು ಹಣವನ್ನು ಸ್ಯಾಂಕ್ಷನ್ ಮಾಡಿ ಅನೇಕ ದಿನಗಳಾದವು. ಈ ಹಣ ಇದುವರೆಗೆ ಬಂದಿಲ್ಲ. ಸರಕಾರದವರು ಇದರ ತಾಮಸಕ್ಕೆ ಕಾರಣ ವೇನು? ಇದು ಬಡ ಉಪಾಧ್ಯಾಯರ ಸಂಬಳವನ್ನು ಬೇಗ ಬಡ್ತಿಮಾಡಿಸಿಕೊಡ ಬೇಕು. ಎ. ವಿ. ಸ್ಕೂಲ್ ಮಾಸ್ತರುಗಳ ಸಂಬಳವು ಬಡ್ತಿಯಾಗಿ ಸುಮಾರು ಎರಡು ವರ್ಷದ ಲಾಗಾಯ್ತು ಅವರು ತಮ್ಮ ಬಡ್ತೀ ಸಂಬಳವನ್ನು ಪಡೆಯುತ ಲಿದ್ದಾರೆ. ಪ್ರಮೋಷನ್ ಆದ ಎ. ವಿ. ಸ್ಕೂಲ್ ಮಾಸ್ತರರ ಕೆಲಸಕ್ಕೆ ಇತರ ಕನ್ನಡ ಸ್ಕೂಲ್ ಮಾಸ್ತರುಗಳಲ್ಲೊಬ್ಬರನ್ನೂ ತೆಗೆದುಕೊಳ್ಳಲಿಲ್ಲ. ಈಗಲೂ ಟೌನ್ ಕನ್ನಡ ವರ್ನಾಕ್ಯುಲರ್ ಸ್ಕೂಲಿನಿಂದ ಅನೇಕ ಮಾಸ್ತರುಗಳನ್ನು 20 ರೂಪಾ ಯಿಂದ 30 ರೂಪಾಯಿನ ವರೆಗೆ ಬಡ್ತಿಯಾಗಿರುವ ಹಳ್ಳಿಯ ಮತ್ತು ಇತರ ಕನ್ನಡ ಸ್ಕೂಲ್ ಮಾಸ್ತರುಗಳ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಪ್ರವಾದವಿದೆ. ಈ ರೀತಿ ಮೈಸೂರ್ ಸರ್ಕಲ್ ಇನ್ಸ್ಪೆಕ್ಟರವರು ಸಲಹೆ ಕೊಟ್ಟಿರುವುದಾಗಿ ಕೇಳುತ್ತೇವೆ. ಸರ್ಕಲ್ ಇನ್ಸ್ಪೆಕ್ಟರವರಿಗೆ ತಮಗೆ ಸೇರಿರುವ ಎ. ವಿ. ಸ್ಕೂಲು ಗಳ ಮಾಸ್ತರುಗಳಲ್ಲಿ ಪ್ರೀತಿಯೂ, ತಮಗೆ ಸೇರದಿರುವ ಇತರ ಸ್ಕೂಲ್ ಮಾಸ್ತರು ಗಳಲ್ಲಿ ಅಪ್ರೀತಿಯೂ ಇರುವುದೆಂದು ನಾವು ಹೇಳಲಾರೆವು. ಈ ಸಂದರ್ಭದಲ್ಲಿ ಹಳ್ಳಿಯ ಮಾಸ್ತರುಗಳಿಗೆ ಕೊಡುವ ಪ್ರಮೋಷನ್ ಎ. ವಿ. ಸ್ಕೂಲ್ ಮಾಸ್ತರು ಗಳಿಗೆ ದೊರೆತರೆ ಪುನಃ ಎ. ವಿ. ಸ್ಕೂಲಿಗೆ ಪ್ರಮೋಷನ್ ಕೊಟ್ಟ ಹಾಗಾಗುವು ದೂ ಅಲ್ಲದೆ ಇತರ ಸ್ಕೂಲ್ ಗಳಲ್ಲಿ ಸಮರ್ಥತೆಯಿಂದ ಕೆಲಸ ಮಾಡುವ ಸರ್ವಿಸ್ ದಾರರೂ ಪಾಸ್ ಮಾಡಿದವರೂ ಆದ ಮಾಸ್ತರುಗಳಿಗೆ ಅಸಮಾಧಾನವೂ ಉಂಟಾಗುವದು. ಈ ಸಂಗತಿಗಳನ್ನು ಮೇಲಿನ ಅಧಿಕಾರಿಗಳು ಚಿತ್ತಕ್ಕೆ ತಂದುಕೊಂಡು ಕನ್ನಡ ಸ್ಕೂಲುಗಳಿಗೆ ಅಧಿಕಾರಿಗಳಾದ ಡೆಪ್ಯುಟಿ ಇನ್ಸ್ಪೆಕ್ಟರುಗಳ ಮತ್ತು ಅ|| ಡೆಪ್ಯುಟಿ ಇನ್ಸ್ಪೆಕ್ಟರುಗಳ ಸಲಹೆಯಂತೆ ಕನ್ನಡ ಸ್ಕೂಲ್ ಮಾಸ್ತರುಗಳ ಸಂಬಳವನ್ನು ಹೆಚ್ಚಿಸಬೇಕಾಗಿ ಪ್ರಾರ್ಥನೆ. ಹಳ್ಳಿಯ ಮಾಸ್ತರುಗಳಿಗೆ ಮಂಜೂರಾಗಿರುವ ಸಂಬಳವನ್ನು ಇದುವರೆವಿಗೂ ಬಡ್ತೀ ಮಾಡದೆ ತಾಮಸಮಾಡುತಲಿರುವುದಕ್ಕೂ ಕಾರಣವನ್ನು ಮೇಲಿನ ಅಧಿಕಾರಿಗಳು ವಿಚಾರಿಸಿ ಬಡ ಮಾಸ್ತರುಗಳಿಗೆ ಜಾಗ್ರತೆ ಬಡ್ತಿಯನ್ನು ಮಾಡಿಸಿಕೊಡಬೇಕಾಗಿ ಕೋರಿಕೆ.

ಹಲವು ಉಪಾಧ್ಯಾಯರು

[ವಿದ್ಯಾಭ್ಯಾಸದ ಇಲಾಖೆಯಲ್ಲಿ ಹಲವು ಉಪಾಧ್ಯಾಯರುಗಳಿಗೆ ಬಡ್ತಿ ಮುಂತಾದ ವಿಚಾರಗಳಲ್ಲಿ ಮನೋವ್ಯಥೆಯುಂಟಾಗಿರುವಂತೆ ಈ ಬಾತ್ಮಿಗಳಿಂದ ವ್ಯಕ್ತವಾಗುತ್ತದೆ. ಇಲಾಖೆಯ ಮುಖ್ಯಾಧಿಕಾರಿಗಳು ಸಣ್ಣ ಪಲಟುಳ್ಳ ಮಾಸ್ತರುಗಳ ಯೋಗ್ಯತೆ ಸರ್ವೀಸು ಮುಂತಾದ ಭಾಗಗಳನ್ನು ಚೆನ್ನಾಗಿ ವಿಮರ್ಶೆ ಮಾಡಿ ಜಾಗ್ರತೆಯಾಗಿ ಈಗ ಸ್ಯಾಂಕ್ಷನ್ ಆಗಿರುವ ಹೊಸ ಲಿಸ್ಟನ್ನು ಜಾರಿಗೆ ತರಬೇಕಾಗಿದೆ. ಕಾರುಬಾರುಗಳಲ್ಲಿ ಅಲಕ್ಷ್ಯವಲ್ಲದೆ ಚಟುವಟಿಕೆಯು ಕಾಣುವು ದಿಲ್ಲ.—ಎಡಿ.]

ವಿಚಾರವಿಟ್ಟು ಮಾಡಬೇಕು.

ಅಯ್ಯಾ,—ಮೂರು ನಾಲ್ಕು ವರ್ಷಗಳಿಂದಲೂ ಒಂದು ಸರಿಯಾದ ಫಸಲು ಆಗದ ಈ ಕಾಲದಲ್ಲಿ ಹಲವರು ಕೃಷಿಕರು ತಮಗೂ ತಮ್ಮ ದನಕರುಗಳಿಗೂ ಆಹಾರವನ್ನು ಒದಗಿಸಿಕೊಳ್ಳುವುದು ತುಂಬಾ ಪ್ರಯಾಸವಾಗಿದೆ. ಅದರಲ್ಲೂ ಅಲ್ಪಸಂಬಳದ ನೌಕರರು ಹೊಟ್ಟೆಹೊರೆದುಕೊಳ್ಳುವುದು ತುಂಬಾ ಪ್ರಯಾಸ. ಈ ಎರಡು ವರ್ಗದವರೂ ವಿಚಾರವಿಲ್ಲದೆ ಹೋದರೆ ಬಹಳ ಅನರ್ಥಗಳಿಗೆ ಕಾರಣ ರಾಗಿ, ವಿಪಾಕ ಹೊಂದುವರು. ತಮ್ಮ ಆದಾಯಕ್ಕಿಂತಲೂ ಕಡಿಮೆಯಾದ ವೆಚ್ಚ ಮಾಡಿ, ಸದ್ವೃತ್ತಿಯಿಂದ ಜೀವಿಸುವುದು ಉತ್ತಮರ ಲಕ್ಷಣ. ತರತರದ ಕಳವು ಸುಲಿಗೆಗಳಿ (ಕೈಗಾರಿಕೆಯಿಂದ), ವಿವಿಧ ಬೆಳಸಿನಿಂದಾಗಲಿ ಸಂಪಾದನೆಮಾಡಿ ಜೀವಿ ಸಲು ಅರಿಯದ ರೈತರು ಅದೇ ಹಳ್ಳಿಯಲ್ಲಿ ಯಾವನಾದರೂ ಒಬ್ಬ ಸಾಧಾರಣ ವಿದ್ಯಾವಂತನಾದವನಿಗೆ ಒಂದು ಸುಮಾರಾದ ವರಮಾನವುಳ್ಳ ಸರಕಾರಿ ನೌಕರಿ ಇದ್ದರೆ ಅವನನ್ನೇ ಪ್ರಾಧಾನ್ಯ ಮನುಷ್ಯನನ್ನಾಗಿ ಮಾಡಿಕೊಂಡು ಆತನ ನಡವಳಿ ಕೆಗಳನ್ನು ಅನುಸರಿಸಿ ಕೆಟ್ಟುಹೋಗುವರು. ಹಳ್ಳಿಯವರೆಲ್ಲಾ ನಾನು ಹೇಳಿದ ಹಾಗೆ ಕೇಳುವಂತೆ ಮಾಡಿಕೊಳ್ಳಬೇಕಾದರೆ ನಾನು ತುಂಬಾ ಭೂಷಣವಾಗಿರ ಬೇಕು ಎಂದು ಆಲೋಚಿಸುವನು. ಆಗ ತರತರದ ಉಡುಪುಗಳನ್ನು ಧರಿಸಲು ಪ್ರಯತ್ನಪಡುವನು. ಕೈಯಲ್ಲಿ ದುಡ್ಡಿಲ್ಲದೆ ಸಾಲಮಾಡಬೇಕಾಗಿ ಬರುವುದು. ಅವನ ಅಂಗಡಿಯಲ್ಲಿ ಭೂಷಣವಾದ ಬಟ್ಟೆಗಳನ್ನು ಕೊಳ್ಳುವನು. ಕೊಂಚಕಾಲ ಭೂಷಣವಾಗಿ ತಿರುಗುತ್ತಾ, ಆ ಬಟ್ಟೆಯಿಂದಲೇ ತನಗೆ ಗೌರವವೆಂದು ಭಾವಿಸು ವನು. ಕೊಂಚಕಾಲದ ಮೇಲೆ ಅವು ಮಾಸಿ ಹರಿದುಹೋಗುವವು. ಆ ಸಾಲ ತನ್ನೂ ತೀರಲಿಲ್ಲ. ಆಗ ಬೇರೆ ಅಂಗಡಿಯಲ್ಲಿ ಸಾಲಮಾಡುವನು. ಅಲ್ಲೂ ಹಾಗೆಯೇ ಆಗುವನು. ಬಟ್ಟೆಗಳು ಬೇಕಾದ ಹಾಗೆಲ್ಲಾ ಸಾಲವೂ, ವೆಚ್ಚವೂ ಹೆಚ್ಚಾಗುತ್ತವೆ. ಇವನನ್ನು ನೋಡಿ ಇವನ ಹಳ್ಳಿಯ ಕೆಲವರು ಹುಡುಗರಾಗಲಿ ದೊಡ್ಡವರಾಗಲಿ ಬೆಲೆಯುಳ್ಳ ಬಟ್ಟೆಬರೆ ತೊಡಿಯಲು ಪ್ರಯತ್ನಪಡುವರು. ಕೈಯಲ್ಲಿ ರೊಕ್ಕವಿಲ್ಲ. ಸಾಲಕೊಡಲು ಯಾರೂ ಕೊಡುವದಿಲ್ಲ. ಆಗ ಕಳ್ಳ ತನವಾಗಲಿ, ಜೂಜಾಟವಾಗಲಿ ಕಲಿಯಲು ಪ್ರಯತ್ನಮಾಡುವರು. ಇದು ಸೀರ ವಾಗಿ ಕೊಂಚಕಾಲ ಸಾಗಿದರೆ ಹಲವರು ಈ ಸಂಗಡವನ್ನೇ ಹಿಂಬಾಲಿಸುವರು. ದೊಡ್ಡವರು ಪುಟ್ಟವರು ಸಹಾ ದುರ್ಮಾರ್ಗಕ್ಕೂ ದುಂದುವೆಚ್ಚಕ್ಕೂ ಮನಸ್ಸು ಕೊಡುವರು. ಕೊಂಚಕಾಲದೊಳಗಾಗಿ ಸರಕಾರಕ್ಕೆ ಸಿಕ್ಕಿಬಿದ್ದು ಹಾಳಾಗುವರು. ತಂದೆ ತಾಯಿಗಳಿದ್ದರೆ ಅವರು ತಮ್ಮ ಮಗ ಬುದ್ಧಿವಂತನೆಂದು ತಿಳಿದು ಯಜ ಮಾನಿಕೆಯನ್ನು ಕೊಟ್ಟರೆ ಕಡೆಗೆ ಅವರಿಗೆ ಹೊಟ್ಟೆಗೇ ಅಭಾವವಾಗುವುದು. ಮಗನ ಅಲಂಕಾರವೇ ಸಾಕೆಂದು ತೃಪ್ತಿಯಿಂದ ಇರುವರು. ಸಾಲ ಮೇಲೆ ಬಂದಾಗ ನನ್ನ ಮಗ ಕೆಟ್ಟುಹೋಗುತ್ತಾನೆಂದು ಆಸ್ತಿಪಾಸ್ತಿಗಳನ್ನು ಈಡುಮಾಡಿ ಕೊಟ್ಟು ಕಡೆಗೆ ನಿರ್ಗತಿಕರಾಗುವರು. ಆದುದರಿಂದ ದುಂದುವೆಚ್ಚ ಮಾಡಬಾ ರದು ಎಂಬುದನ್ನು ಜ್ಞಾಪಕದಲ್ಲಿಡಬೇಕು. ಮನುಷ್ಯನಿಗೆ ಅಲಂಕಾರದಿಂದಾಗಲಿ, ಬಟ್ಟೆಗಳ ಭೂಷಣದಿಂದಲಾಗಲಿ ಗೌರವ ಬರುವುದಿಲ್ಲ. ತನ್ನ ಉತ್ತಮ ನಡ ತೆಯೂ, ವಿನಯವೂ, ವಿದ್ಯಾಸಂಪಾದನೆಯೂ ತಾಯಿತಂದೆಗಳ ಪೋಷಣೆಯೂ, ಕಾರ್ಯದಲ್ಲಿ ಚಟುವಟಿಕೆಯೂ, ಪರೋಪಕಾರವೂ ಗೌರವವನ್ನು ಕೊಡುವವು. ಕೈಲಾದಮಟ್ಟಿಗೂ ಹಿಡಿತದಿಂದ ಬಾಳುವುದು ಮೇಲು. ಜನಗಳನ್ನು ಕೋರ್ಟು ಗಳಿಗೆ ಹತ್ತಿಸುವುದು ನೆಚ್ಚದ ಕೆಲಸ. ಇಸ್ಪೀಟು ಗಾಂಜಾ ಮೊದಲಾದವು ಜೂಜಿನ ಕೆಲಸ ಪರನಿಂದೆ ಮಾಡದ ಕೆಲಸ. ಆದುದರಿಂದ ಉತ್ತಮ ವರ್ಗದವರು ಒಬ್ಬ ರನ್ನು ಹೀಯಾಳಿಸುವುದೇ ಆಗಲಿ, ಕಾಲಕಳೆಯುವುದೇ ಆಗಲಿ ಮಾಡರು. ಹಳ್ಳಿಯ ಜನಗಳ ಏಳಿಗೆಗಾಗಿ ಪ್ರಯಾಸಪಡುತ್ತಿರುವ ನಮ್ಮ ಸಂಸ್ಥಾನದ ಘನ ಹೊಂದಿದ ದಿವಾನ್ ಸಾಹೇಬ್ ಬಹದ್ದೂರ್ರವರು ಗ್ರಾಮಾಭಿವೃದ್ಧಿ ಕಟ್ಟಳೆಗಳು ಎಂಬ ಸಣ್ಣ ಪುಸ್ತಕವನ್ನು ರಚಿಸಿ ದೇಶದ ಮೇಲೆಲ್ಲಾ ಹರಡಿರುವರು. ಅದನ್ನು ಓದುವುದು ಒಳ್ಳೆಯದು. ಅರುಮ ಮಹಾಸ್ವಾಮಿ ಸತ್ಯಪ್ರಭುಗಳ ಕಾಲದಲ್ಲಿ ಇಂಥಾ ಮಹನೀಯರು ಲಭ್ಯವಾದುದಕ್ಕಾಗಿ ಆನಂದಪಡುವೆನು.

ಒಬ್ಬ ಹಳ್ಳಿಯವ.

ಪುರೋಹಿತ ಕೃಷ್ಣಾಚಾರ್ಯ, ನಂಜನಗೂಡು:—ಆ ವಿಷಯವನ್ನು ಯಾವ ಪತ್ರಿಕೆಯಲ್ಲಿ ಓದಿದಿರೋ ಅದೇ ಪತ್ರಿಕೆಯ ಸಂಪಾದಕರಿಗೆ ಬರೆದು ಜವಾಬು ಪಡೆಯಬೇಕು. ಆ ವಿಚಾರ ನಮಗೆ ತಿಳಿಯದು.

ಮಧುಗಿರಿ ತಾಲ್ಲೂಕು ಗುಡ್ಡೆಗ್ರಾಮದಲ್ಲಿ ಒಂದು ಸಭೆ ನಡೆದು ಶೇಕ್ ದಾರ್ ಮ|| ಕೆ. ನರಸಿಂಗರಾಯರು ಅಗ್ರಾಸನವನ್ನು ವಹಿಸಿ ಗ್ರಾಮಸ್ಥರ ಅಪೇ ಕ್ಷೆಯಂತೆ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿರುತ್ತಾರೆಂದು ಒಬ್ಬ ಬಾತ್ಮಿ ದಾರರು ಬರೆದಿದಾರೆ.

ತೀರ್ಥಹಳ್ಳಿ ತಾಲ್ಲೂಕು ಅರಳಸುರುಳಿ ಗ್ರಾಮದ ಕಲ್ಲೋಣಿಯಲ್ಲಿ ಸಾ|| ಕೃಷ್ಣಪ್ಪನವರೂ, ಸಿ. ಎಸ್. ವೆಂಕಪ್ಪಯ್ಯನವರೂ ಸಾಹಸಪಟ್ಟು ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಒಂದು ಪಾಠಶಾಲೆಯನ್ನು ಫೆಬ್ರವರಿ ತಾ. 28 ನೇ ಭಾನು ವಾರ ಪ್ರಾರಂಭಮಾಡಿರುತ್ತಾರೆಂದು ಒಬ್ಬ ಬಾತ್ಮಿದಾರರಿಂದ ತಿಳಿದು ಬಂದಿದೆ.

ಚೌನೋರ್ಮಿ ಸೇವೆಗಾಗಿ ಶ್ರೀಮನ್ ಮಹಾರಾಜರವರು ನಂಜನಗೂಡಿಗೆ ದಯಮಾಡಿದಾಗ ಅನೇಕ ಅಧಿಕಾರಿಗಳೂ ಧರ್ಮದರ್ಶಿಗಳೂ ಇದ್ದಾಗ್ಯೂ ಸಂತ ರ್ಪಣೆಯು ವಿಶದಣೆಯಾಗಿ ನಡೆಯುವುದಿಲ್ಲವೆಂದು ಮುಂತಾದ ಆಕ್ಷೇಪಣೆಯುಳ್ಳ ಬಾತ್ಮಿ ತಲಪಿದೆ. ಬಾತ್ಮಿದಾರರು ಅರಮನೆ ಕಂಟ್ರೋಲರವರಿಗೂ, ಮುಜರಾಯಿ ಸೂಪರಿಂಟೆಂಡೆಂಟರಿಗೂ ಅರ್ಜಿ ಬರೆದುಕೊಳ್ಳುವುದು ಉತ್ತಮ.

ಎಲ್. ಆರ್. ಚಾರ್, ಶ್ರೀನಿವಾಸಪುರ.—ನಮ್ಮ ಅಪೀಲು ತೀರ್ಮಾನ ವಾಗುವ ತನಕ ಕಾಯುವುದು ಒಳ್ಳೇದು.

ದೇಶ ಹಿತಕಾಂಕ್ಷಿ, ಹಾಸನ:—ನಮ್ಮ ಬಾತ್ಮಿ ಅಲಂಕಾರವುಳ್ಳದ್ದು. ವಿಷ ಯವನ್ನು ಸಂಕ್ಷೇಪಮಾಡಿ ಸ್ಪಷ್ಟವಾಗಿ ವಿವರಿಸಿಲ್ಲ.

ಜೀರ್ಣೋದ್ಧಾರದ ಕೆಲಸ, ಚಿಕ್ಕನಾಗಳೂರು; ಶುರುವೆಕೆರೆ ತಾ|| ದೊಡ್ಡ ಶೆಟ್ಟಿಗೆರೆ; ಮಂಜರಾಬಾದು ತಾ|| ಬೆಳಗೋಡು; ಅಧರ್ಮ ವಿರೋಧಿ, ಸಾಲಿ ಗ್ರಾಮ; ಬಿ. ವಿ. ರಾವ್, ಅರಕಲಗೂಡು; ಕೊರಟಗೆರೆ ತಾ|| ಮಣಿವಿನ ಕುರಿಕೆ; ರಿಟೈರ್ಡ್ ಆಫೀಸರ್, ಚಿತ್ರದುರ್ಗ:—ಈ ಬಾತ್ಮಿಗಳನ್ನು ಪ್ರಕಟಿ ಸಲಾರೆವೆಂದು ವಿಷಾದಿಸುತ್ತೇವೆ. —ಎಡಿ.]

ತಾಲ್ಲೂಕು ವರ್ತಮಾನಗಳು.

ಶ್ರೀರಂಗಪಟ್ಟಣದ ಗಂಜಾಂ.—ಬೆಳಗಿನಲ್ಲಿ ಕೊಂಚ ಚಳಿಯೂ ಆ ಮೇಲೆ ಬಿಸಿಲಿನ ಧಗೆಯೂ ಹೆಚ್ಚು. ಟವನ್ನಿನ ಕೆಲವು ಮುಖ್ಯ ಬೀದಿಗಳಲ್ಲಿ ಮೋರಿ ಗಳ ಮೇಲೆ ಹಾಸಿರುವ ಕಲ್ಲುಗಳು ಸಡಿಲವಾಗಿ ಗಾಡಿಗಳೂ ಜನಗಳೂ ತಿರುಗಾ ಡಲು ತೊಂದರೆಯಾಗುತ್ತದೆ.—ಟವನ್ನಿನಲ್ಲಿ ದನಕರುಗಳಿಗೆ ದೊಡ್ಡರೋಗ ಕಾಣಿ ಸಿದೆ. ಇದಕ್ಕಾಗಿ ಇಲ್ಲಿನ ಮ|| ರಾ|| ಕೃಷ್ಣಪ್ಪನವರೂ, ಗೌ|| ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಅಪ್ರಮೇಯ ಶಾಸ್ತ್ರಿಗಳವರೂ ಸಹ ಇಲ್ಲಿನ ರೈತಾಪಿ ಜನಗಳಿಗೆ ಪ್ರೋತ್ಸಾಹಿಸಿ ವೆಟರ್ನರಿ ಇನ್ಸ್ಪೆಕ್ಟರವರಿಂದ ದನಕರುಗಳಿಗೆ ಚಿಡುಬು ಹಾಕಿಸಿದ ಏರ್ಪಾಡು ತುಂಬಾ ಶ್ಲಾಘ್ಯವಾಗಿದೆ. ಚಿಡುಬು ಹಾಕಿದ ದನಗಳು ಆರೋಗ್ಯಸ್ಥಿತಿಯಲ್ಲಿರುವುದನ್ನು ನೋಡಿ ವೆಟರ್ನರಿ ಇನ್ಸ್ಪೆಕ್ಟರವರು ಪುನಃ ಬರಬೇಕೆಂದು ರೈತರು ಅಪೇಕ್ಷಿಸುತ್ತಿರುವ ಭಾಗ ಸಂತೋಷವೇ ಸರಿ.— ಈ ಮಾಹೆ 3 ನೇ ತಾ. ಬುಧವಾರ ಸಮೀಪವಿರುವ ಕರೀಘಟ್ಟದ ಶ್ರೀ ಶ್ರೀನಿವಾಸ ದೇವರ ರಥೋತ್ಸವವು ನಡೆಯಿತು. ಅಮಲ್ದಾರ್ರವರು ಹೊಸಬರಾಗಿದ್ದರೂ ರಥೋತ್ಸವದ ಕೆಲಸವು ತುಂಬಾ ಸಮರ್ಪಕವಾಗಿ ನಡೆಯಿತು. ಆದರೆ ಸ್ಥಳದ ಕೆಲವು ಜನಗಳ ಧೋರಣೆಯಿಂದ ಮಾಮೂಲಿಗಿಂತ ಕೊಂಚ ಹೊತ್ತಾಗಿ ರಥಾ ರೋಹಣವಾದದ್ದನ್ನು ತಿಳಿದು ಸರ್ಕಾರದವರು ತಕ್ಕ ಬಂದೋಬಸ್ತು ಮಾಡುವ ವಿಷಯದಲ್ಲಿ ಮುತವರ್ಜಿ ವಹಿಸಿರುವದು ತುಂಬಾ ಸ್ತೋತ್ರಾರ್ಹವಾಗಿದೆ. ಅಲ್ಲದೆ ಈ ರಥೋತ್ಸವ ಕಾಲದಲ್ಲಿ ಮಾಮೂಲಾಗಿ ಚಿಕ್ಕ ದೇವರಾಜಸಾಗರ ನಾಲೆಯಲ್ಲಿ ನೀರು ಬಿಡುತ್ತಿದ್ದದ್ದು ಈ ವರುಷ ಬಿಡದೆಹೋದದ್ದರಿಂದ ಜನಗ ಳಿಗೂ ಪ್ರದರ್ಶನದ ದನಗಳಿಗೂ ತುಂಬಾ ತೊಂದರೆ ಆಯಿತು.—ಮೂರನೇ ದಿನ ರಥೋತ್ಸವದ ಪ್ರಯುಕ್ತ ಸೇರಿದ್ದ ದನಗಳ ಪ್ರದರ್ಶನದಲ್ಲಿ ನಮ್ಮ ಅಮಲ್ದಾರ್ ಮ|| ಮಲ್ಲರಾಜೆ ಅರಸಿನವರು ಅಗ್ರಾಸನವನ್ನು ವಹಿಸಿದ್ದರು. ಆ ಕಾಲದಲ್ಲಿ ನೆರೆದಿದ್ದ ಅನೇಕ ರೈತ ಜನಗಳಿಗೆ ಚೆನ್ನಾಗಿ ತಿಳುವಳಿಕೆ ಆಗುವಂತೆ ಗಂಜಾಂ ಗೌ|| ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಅಪ್ರಮೇಯಶಾಸ್ತ್ರಿಗಳು ದನ ಕರುಗಳನ್ನು ಕಾಪಾಡಿಕೊಂಡಿರುವುದು, ಕಾಯಿಲೆ ಬಂದಾಗ ರೈತರು ಸ್ವತಂತ್ರಿಸಿ ಇಲಾಜು ನಡೆಸಿಕೊಳ್ಳುವುದು, ಕಾಯಿಲೆ ಬಂದಾಗ ಉಪಚರಿಸತಕ್ಕ ಕ್ರಮ, ಇವುಗಳನ್ನು ಕುರಿತು ಉಪನ್ಯಾಸ ಮಾಡಿದರು. ಮೈಸೂರು ಅಡ್ವೊಕೇಟ್ ಮ|| ಎ. ರಂಗಣ್ಣನವರು ವ್ಯವಸಾಯಕ್ಕೆ ಅನುಕೂಲವಾದ ಗೊಬ್ಬರವನ್ನು ತಯಾ ರುಮಾಡುವ ಭಾಗವನ್ನು ವಿವರಿಸಿದರು. ಅನಂತರ ನಮ್ಮ ಅಮಲ್ದಾರ್ರವರು ಇವುಗಳ ಜೊತೆಗೆ ರೈತರ ತಿಳುವಳಿಕೆಗೆ ಅವಶ್ಯಕವಾದ ವ್ಯವಸಾಯ ಕ್ರಮವನ್ನು ಮನಸ್ಸು ಹಿಡಿಯುವಂತೆ ಭಾಷಣ ಮಾಡಿದರು. ಅನಂತರ ದನಗಳ ಪ್ರದರ್ಶನೋ ತ್ಸವಕ್ಕಾಗಿ ನಿಯಮಿಸಲ್ಪಟ್ಟ ಬಹುಮಾನ ಮತ್ತು ಯೋಗ್ಯತಾಪತ್ರಗಳನ್ನು ಕೊಡಿಸಿದರು. ಬಳಿಕ ಶ್ರೀಮನ್ ಮಹಾರಾಜರವರಿಗೂ ಅವರ ಕುಟುಂಬವರ್ಗ ಕ್ಕೂ ಚಿರಕಾಲ ಆಯುರಾರೋಗ್ಯಾದಿಗಳನ್ನು ದಯಪಾಲಿಸಬೇಕು ಪ್ರಾರ್ಥನೆ ಯಿಂದ ಪ್ರದರ್ಶನೋತ್ಸವವು ಮುಕ್ತಾಯವಾಯಿತು.

ಕೊಪ್ಪ ತಾ|| ಹೊಸಕೊಪ್ಪ.—ಕಳೆದ ಜನವರಿ ತಿಂಗಳಲ್ಲಿ ಶ್ರೀಮನ್ ಯುವರಾಜರವರು ಶ್ರೀಯುತ ದಿವಾನ್ ಸಾಹೇಬರೊಡನೆ ಇಲ್ಲಿಗೆ ದಯಮಾಡಿಸಿ, ಮಲೆನಾಡ್ ಎಗ್ಜಿಭಿಷನ್ ತೆರೆದು ಜನಗಳಿಗೆ ಪ್ರೋತ್ಸಾಹಕೊಟ್ಟಿದ್ದರಷ್ಟೆ. ಆಗ ಪ್ರದರ್ಶನಕ್ಕೆ ಬಂದ ವಸ್ತುಗಳಿಗೆ ಬಹುಮಾನ ಕೊಡುವಸಲುವಾಗಿ ಫೆಬ್ರವರಿ ತಾ. 27 ನೇ ಶನಿವಾರ ಮಧ್ಯಾಹ್ನ 5 ಗಂಟೆಗೆ ಎಗ್ಜಿಭಿಷನ್ ಹಾಲಿನಲ್ಲಿ ಸಭೆಯು ಸೇರಿತ್ತು. ಶೃಂಗೇರಿಮಠದ ಏಜಂಟರು ಬ್ರ|| ಶ್ರೀಕಂಠಶಾಸ್ತ್ರಿಗಳು, ಡೆಪ್ಟಿ ಅಮ ಲ್ದಾರ್ರು, ಕೊಪ್ಪ ತಾಲ್ಲೂಕು ಅಮಲ್ದಾರ್ರು ಮುಂತಾಗಿ ಸಭೆಯಲ್ಲಿ ಸೇರಿದ್ದರು. ಸಭಿಕರ ಕೋರಿಕೆಯಂತೆ ಬ್ರ|| ಶ್ರೀಕಂಠಶಾಸ್ತ್ರಿಗಳು ಅಗ್ರಾಸನವನ್ನು ವಹಿಸಿದರು. ಎಗ್ಜಿಭಿಷನ್ ಸೆಕ್ರೆಟರಿಯವರಾದ ಮ|| ಹೊಸಕೊಪ್ಪದ ಕೃಷ್ಣರಾಯರು ಪ್ರದ ರ್ಶನದ ವಿವರವಾಗಿ ರಿಪೋರ್ಟು ಓದಿದ ತರುವಾಯ ಅಧ್ಯಕ್ಷರು ಮಲೆನಾಡು ಹೀನಸ್ಥಿತಿಗೆ ಬರುತ್ತಿರುವುದಕ್ಕೆ ಕೆಲವು ಕಾರಣಗಳನ್ನು ವಿವರಿಸಿ ಜನರಲ್ಲಿ ಐಕ ಮತ್ಯವಿಲ್ಲದೆ ಇರುವುದು ಮತ್ತು ಸಾಲಗಾರರಾಗುವುದು, ಇಲ್ಲದ ದುರ್ವ್ಯಾಜ್ಯ ಗಳನ್ನು ಕಟ್ಟಿಕೊಂಡು ಕೋರ್ಟಿಗೆ ಹೋಗಿ ತೊಂದರೆಪಡುವುದು ಮುಂತಾಗಿರು ವುದನ್ನು ಆದಮಟ್ಟಿಗೆ ತಪ್ಪಿಸಿ ಸಂಘಗಳನ್ನು ಏರ್ಪಡಿಸಿಕೊಂಡು, ವಿದ್ಯೆಯನ್ನು ಸಂಪಾದಿಸಿ ಬಾಳಬೇಕೆಂದು ಆ ಸಭೆಯಲ್ಲಿ ನೆರೆದಿದ್ದ ರೈತಮಂಡಲಿಗೆ ತಿಳಿಯು ವಂತೆ ಹೇಳಿದರು. ಅದನ್ನೆಲ್ಲಾ ಅಮಲ್ದಾರ್ರು ಅನುಮೋದಿಸಿದರು. ತರುವಾಯ ಮ|| ಕೃಷ್ಣರಾಯರ ಕೋರಿಕೆಯಂತೆ ಅಧ್ಯಕ್ಷರವರು ಸ್ವಹಸ್ತದಿಂದ ಬಹುಮಾನ ವನ್ನು ದಯಪಾಲಿಸಿದರು. ಮ|| ಕಂಚಿಕೋಟೆದ ಸಾಹುಕಾರ್ ಕೃಷ್ಣಪ್ಪನವ ರಿಗೂ, ವ್ಯಾಪಾರದಲ್ಲಿ ಪದಕಸರವನ್ನು ಪ್ರದರ್ಶಿಸಿಕೊಂಡ ಮ|| ಸುಬ್ಬಾಜೋಯಿಸ ರಿಗೂ, ಆಯುರ್ವೇದಿ ಔಷಧಗಳನ್ನು ಕಳುಹಿಸಿದ್ದ ಶೃಂಗೇರಿ ಮಠದ ಶೇಷ ಶಾಸ್ತ್ರಿಗಳಿಗೂ, ರಾವಣನ ಸುಂದರವಾದ ವಿಗ್ರಹಮಾಡಿ ತಂದಿದ್ದ ಬಣ್ಣಗಾರ ಗೋವಿಂದನಿಗೂ, ಕಲ್ಲುಕೆಲಸದಲ್ಲಿ ಕೆಟ್ಟಿಗನಾದ ದಾಮೋದರಾಚಾರಿಗೂ ಮುಂ ತಾಗಿ 20–23 ಜನಗಳಿಗೆ ಮೆಡಲುಗಳೂ, ಸರ್ಟಿಫಿಕೇಟುಗಳೂ ಕೊಡಲ್ಪಟ್ಟವು. ಮ|| ಸಂಜೀವರಾಯರು ಪದಾರ್ಥಗಳನ್ನು ಪ್ರದರ್ಶಿಸಿದವರ ಕೆಲಸಗಳನ್ನು ಅಧ್ಯ ಕ್ಷರಿಗೆ ತಿಳಿಯಪಡಿಸಿದರು. ತರುವಾಯ ಹೊಸಕೊಪ್ಪದಲ್ಲಿ ಮ್ಯೂಜಿಯಂ ಹಾಲ್ ಕಟ್ಟಬೇಕಾಗಿಯೂ, ಅದಕ್ಕೆ ಒಂದು ಸಭೆಯು ಏರ್ಪಾಡಾಗಬೇಕಾಗಿಯೂ ಪ್ರಾರ್ಥಿಸಲ್ಪಟ್ಟು ಆ ಸಭೆಗೆ ಕಡೂರು ಡೆಪ್ಟಿ ಕಮಿಷನರ್ ಸಾಹೇಬರನ್ನು ಪ್ರೆಸಿ ಡೆಂಟರಾಗಿರುವಂತೆ ಪ್ರಾರ್ಥಿಸಿಕೊಳ್ಳಬೇಕೆಂದೂ, ತಾಲ್ಲೂಕು ಅಮಲ್ದಾರ್ರವರು ವೈಸ್ ಪ್ರೆಸಿಡೆಂಟರಾಗಿರುವಂತೆಯೂ, 15 ಜನಗಳು ಮೆಂಬರಾಗಿಯೂ ಇರ ಬೇಕೆಂತ ತೀರ್ಮಾನವಾಗಿ ಸದ್ಯದಲ್ಲಿಯೇ ಒಂದು ಮೀಟಿಂಗ್ ನಡೆಸುವಂತೆ ಗೊತ್ತಾಯಿತು. ಸಭೆಯು ಆರಂಭವಾಗುವುದಕ್ಕೆ ಮೊದಲು ಈ ಸ್ಕೂಲಿನ ವಿದ್ಯಾ ರ್ಥಿಗಳ ಪೈಕಿ ಜ್ವರಗಡ್ಡೆ ಇರುವವರನ್ನು ಶೃಂಗೇರಿ ಡಾಕ್ಟರ್ ಗುರುರಾಯರೂ ಕೊಪ್ಪದ ಡಾಕ್ಟರವರೂ ಪರೀಕ್ಷಿಸಿದರು. ಜ್ವರಗಡ್ಡೆ ಉಳ್ಳವರನ್ನು ನಿಲ್ಲಿಸಿ ಫೋಟೋ ತೆಗಿಸಿದರು. ಮ|| ಕೃಷ್ಣರಾಯರು ಮಲೆನಾಡಿನ ಪ್ರಜೆಗಳ ವಿಚಾರ ದಲ್ಲಿ ಇಷ್ಟೊಂದು ಆಸಕ್ತಿಯನ್ನು ವಹಿಸಿ ಕೆಲಸಮಾಡುತ್ತಿರುವುದು ಬಹಳ ಶ್ಲಾಘ್ಯವಾಗಿದೆ.

ಶಿವಮೊಗ್ಗೆ.—ಹವಾ ಆರೋಗ್ಯವಾಗಿದೆ. ಈ ತಾಲ್ಲೂಕು ಮುತ್ತೂರು ಗ್ರಾಮದಲ್ಲಿ ಒಂದು ಭಾರಿ ಹುಲಿ ಸೇರಿಕೊಂಡು ದನಕರುಗಳಿಗೂ, ಜನಗಳಿಗೂ ತೊಂದರೆ ಮಾಡುತ್ತಾ ಇವೆ. ಇದನ್ನು ಯಾರಾದರೂ ಸಂಹರಿಸಿ ಕಷ್ಟವನ್ನು ತಪ್ಪಿಸಿಕೊಡಬೇಕಾಗಿ ಪ್ರಾರ್ಥಿಸಬೇಕಾಗಿದೆ.—ರೆ|| ಎ. ಇ. ಸ್ಟೆಯಿಂಗೇಲ್ ಸಾಹೇ ಬರವರು ಲಂಡನ್ನಿಗೆ ಪ್ರಯಾಣಮಾಡಿದರು. ಅವರಿಗೆ ಸ್ಕೂಲ್ ಮಾಸ್ತರುಗಳೆಲ್ಲಾ ಸೇರಿ ಒಂದು ಗಂಧದ ವಾಚ್ ಸ್ಟ್ಯಾಂಡನ್ನೂ, ಅವರ ಮಿತ್ರರು ಒಂದು ಹಿತ್ತಾ ಳೆಯ ಪೆಟ್ಟಿಗೆಯನ್ನೂ ತಮ್ಮ ಜ್ಞಾಪಕಾರ್ಥವಾಗಿ ಒಪ್ಪಿಸಿದರು.—ಶಿವಮೊಗ್ಗಾ ಟೌನ್ ಪೋಲೀಸ್ ಸ್ಟೇಷನ್ ಬಳಿ ಇರತಕ್ಕ ಹೋಟೆಲು ಬೋರ್ಡನ್ನೂ, ದೊಡ್ಡ ಬ್ರಾಹ್ಮಣರ ಬೀದಿಯಲ್ಲಿರುವ ಅಡ್ವೊಕೇಟರ ಮನೆಯ ಬೋರ್ಡನ್ನೂ, ಪೇಪರ್ ಏಜಂಟರ ಮನೆ ಬೋರ್ಡನ್ನೂ ತೆಗೆದು ದಾಂಧಲೆ ಮಾಡಿರುತ್ತಾರೆ. ಈ ರೀತಿ ಕೇರಿಗಳಲ್ಲಿ ದಾಂಧಲೆಯನ್ನು ಹುಡುಗರು ಮಾಡದಂತೆ ಪೋಲೀಸ್ ನಿಗಾ ಇಡ್ತಾ ರಾಗಿ ನಂಬಿರುತ್ತೇವೆ.—(ಇನ್ನೊಬ್ಬ ಬಾತ್ಮೀದಾರರಿಂದ) ಬಸವಣ್ಣದೇವರ ಗುಡಿ ಮಹಡಿ ಮೇಲೆ ಕಳೆದ ಜನವರಿ ಲಾಗಾಯಿತು ಪೇಟೆ ವರ್ತಕರುಗಳ ಸಹಾಯ ದಿಂದ ಪೇಟೆ ಫ್ರೀ ರೀಡಿಂಗ್ ರೂಮ್ ಮತ್ತು ಲೈಬ್ರೇರಿ ಎಂಬದಾಗಿ ಸ್ಥಾಪಿಸ ಲ್ಪಟ್ಟಿರುತ್ತೆ. ಮ|| ಸೇಮೂಜ ಖಂಡೇರಾಯರು 500 ರೂಪಾಯಿ ಮೂಲಧನ ಕೊಟ್ಟಿರುತ್ತಾರೆ. ಮಲೆನಾಡು ಪ್ರಾಂತ್ಯದಲ್ಲಿ ಇಂಥಾ ಕಾರ್ಯಗಳಿಗೆ ಆಶ್ರಯ ಕೊಟ್ಟವರಲ್ಲಿ ಇವರೇ ಮೊದಲನೆಯವರು.—ಘನವನ್ನು ಹೊಂದಿದ ಮ|| ಗೋಪಾಲಕೃಷ್ಣಗೋಖಲೆಯವರು ಗತಿಸಿದ್ದರಿಂದ ನಮ್ಮ ಹಿಂದುಸ್ಥಾನಕ್ಕೂ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೂ ಮತ್ತು ಅವರ ಕುಟುಂಬಕ್ಕೂ ಉಂಟಾದ ದುಃಖದಲ್ಲಿ ನಾವುಗಳು ಭಾಗಿಗಳಾಗಿರುವುದನ್ನು ತೋರ್ಪಡಿಸುವದ ಕ್ಕಾಗಿ ತಾ. 4 ನೇ ಸಾಯಂಕಾಲ ಶಿವಮೊಗ್ಗಾ ಟವನ್ ಹಾಲಿನಲ್ಲಿ ಶಿವಮೊಗ್ಗಾ ಪುರವಾಸಿಗಳ ಒಂದು ಸಭೆ ಸೇರಿತ್ತು. ಡೆಪ್ಟಿ ಕಮಿಷನರ್ ಮ|| ಕೆ. ಮೆಥ್ಯಾಕ್ ರವರು ಅಗ್ರಾಸನವನ್ನು ವಹಿಸಿದ್ದರು. ಮ|| ಗಳಾದ ಬಿ. ಗರುಡಾಚಾರ್ಯ, ಕೆ. ಶಂಕರನಾರಾಯಣರಾಯರೂ, ಎಸ್. ಆರ್. ಬಾಲಕೃಷ್ಣರಾಯರೂ ಮಹ ನೀಯರಾದ ಗೋಖಲೆಯವರು ಹಿಂದುಸ್ಥಾನಕ್ಕೋಸ್ಕರ ಚಿರಸ್ಮರಣೀಯವಾದ ಉಪಕಾರವನ್ನು ಮಾಡಿದ್ದನ್ನು ಕುರಿತು ಇಂಗ್ಲೀಷಿನಲ್ಲಿ ವಿವರಿಸಿದರು. ಇದನ್ನೇ ಕನ್ನಡದಲ್ಲಿ ಮ|| ಪಿ. ವೆಂಕಪ್ಪಯ್ಯನವರು ತಿಳಿಸಿದರು. ತರುವಾಯ ಅಗ್ರಾಸನಾ ಧಿಪತಿಗಳು ಸಹ ಮ|| ಗೋಖಲೆಯವರ ವಿಷಯ ಚೆನ್ನಾಗಿ ಗುಣಕಥನ ಮಾಡಿ ದ್ದಲ್ಲದೆ ಅವರ ಅಪಾರವಾದ ದುಃಖವನ್ನು ಸಭೆಯು ಎರಡು ನಿಮಿಷಗಳ ಕಾಲ ನಿಂತಿದ್ದರ ಮೂಲಕ ತೋರ್ಪಡಿಸಿದ್ದಲ್ಲದೆ ಈ ಪುರವಾಸಿಗಳ ದುಃಖವನ್ನು ತಂತಿ ಮೂಲಕ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಪೂನಾಕ್ಕೂ ಮತ್ತು ಅವರ ಕುಟುಂಬಕ್ಕೂ ಅಗ್ರಾಸನಾಧಿಪತಿಗಳಿಂದ ಕಳುಹಿಸಲ್ಪಟ್ಟಿತು. ನಮ್ಮ ಪೋಲೀಸ್ ಸೂಪರಿಂಟೆಂಡೆಂಟ್ ಅಬ್ದುಲ್ ವಾಜೀದ್ ರವರು ಮ|| ಗೋಖಲೆ ಯವರ ಗುಣಕಥನವನ್ನು ಕುರಿತು ಇಲ್ಲಿನ ಮಹಮದೀಯ ಜನಗಳ ಪರವಾಗಿ ಮಾತನಾಡಿ ಸದರಿ ಮಹಮದೀಯರ ದುಃಖವನ್ನು ತೋರ್ಪಡಿಸಿದರು.

ಮಧುಗಿರಿ.—ಬಿಸಿಲಿನ ತಾಪ ಅಧಿಕವಾಗಿ ಮೋಡವಾಡುತ್ತಿದ್ದು ಕಳೆದ ಸೋಮವಾರ ಮತ್ತು ಮಂಗಳವಾರ ಬಹು ವಿಶೇಷಮಳೆ ಸುರಿಯಿತು. ಚೋಳೇ ನಹಳ್ಳಿ ಕೆರೆಗೆ ಸುಮಾರು ಒಂದು ತಿಂಗಳಿನ ನೀರು ಬಂದಿರುತ್ತೆ. ಈ ಮಾಸದಲ್ಲಿ ಯಾವಾಗಲೂ ಇಂಥಾ ಮಳೆ ಬರಲಿಲ್ಲವಾದ್ದರಿಂದ ಮುಂದೆ ಹುಟ್ಟುವ ರಾಕ್ಷಸ ಸಂವತ್ಸರದಲ್ಲಿ ಉಂಟಾಗುವ ಕ್ಷಾಮಕ್ಕೆ ಇದು ಒಂದು ಸೂಚನೆ ಎಂದು ಜನಗಳು ನಾನಾ ತರವಾಗಿ ಆಡಿಕೊಳ್ಳುತ್ತಾರೆ. ಮನುಷ್ಯನ ಯೋಚನೆ ಒಂದಾದರೆ ಭಗ ವಂತನ ಕಾರ್ಯ ಮತ್ತೊಂದು ಎಂಬುದನ್ನು ಇವರು ಅರಿಯದೆ ಈ ರೀತಿ ಕಳ ವಳಪಡುತ್ತಾರೆ.—ಹಿಂದಿನ ವಾರ ನಡೆದ ಮಾರೀ ಜಾತ್ರೆಯಲ್ಲಿ ಕೋಣ, ಕುರಿ ಮುಂತಾದ್ದನ್ನು ಮಾರಮ್ಮನಿಗೆ ಬಲಿ ಕೊಟ್ಟದ್ದು ಕೇವಲ ಬುದ್ಧಿ ಶೂನ್ಯವಾದ ಕೃತ್ಯವಾಗಿದೆ. ಒಂದೆರಡು ದಿನಗಳ ತನಕ ಆ ಗುಡಿಯು ಬಳಿ ಉಂಟಾಗಿದ್ದ ದುರ್ವಾಸನೆಯನ್ನು ಹೇಗೆ ತಾನೇ ಜನರು ಸಹಿಸಿಕೊಂಡು ಆರತಿಗಳನು ತೆಗೆದು ಕೊಂಡು ಹೋಗುತ್ತಿದ್ದರೋ ತಿಳಿಯದು. ಕರ್ಣ ಕಠೋರವಾದ ವಾದ್ಯಗಳನ್ನು ಬಾರಿಸಿಕೊಂಡು ಕುಣಿದಾಡುತ್ತಾ, ಕೋಲಾಟಗಳನ್ನು ಹಾಕುತ್ತಾ ಇದ್ದುದನ್ನು ನೋಡಿದರೆ ಇವೆಲ್ಲಾ ಬರೀ ಹುಡುಗಾಟಿಕೆಯೇ ಶಿವಾಯಿ ಯಾವ ದೇವರಿಗೆ ಪ್ರೀತಿ ಯೋ ನಮಗೆ ತಿಳಿಯದು.—ಇಂಥಾ ಜನಸಂದಣೀ ಕಾಲದಲ್ಲಿ ಮಧುಗಿರಿ ಕೋ ಆಪರೇಟಿವ್ ಸೊಸೈಟಿಯ 2 ನೇ ಕಾನ್ಫರೆನ್ಸ್ ಎಂಬ ಕೂಟವು ನಡೆಯಿತು. ತುಮಕೂರು ಡೆಪ್ಟಿ ಕಮಿಷನರ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು. ಸ್ಥಳ ಪರಸ್ಥಳದ ಎಲ್ಲಾ ದೊಡ್ಡ ಮನುಷ್ಯರೂ ಸಭೆಯನ್ನಲಂಕರಿಸಿದ್ದರು. ಥೇರ್ ಮೆನ್ ರವರು ಜನಗಳಿಗೆಲ್ಲಾ ತಿಳಿಯುವಂತೆ ಸೊಸೈಟಿಯ ಮುಖ್ಯೋದ್ದೇಶವೇನು? ಅದ ರಲ್ಲಿರುವ ಮೆಂಬರುಗಳು ಎಂಥವರಾಗಿರಬೇಕು? ಮತ್ತು ಅವರ ಕರ್ತವ್ಯವೇನು? ಎಂಬೀ ವಿಚಾರವಾಗಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಬಳಿಕ ಮಧುಗಿರಿಯ ಸೊಸೈಟಿಯ ರಿಪೋರ್ಟನ್ನು ಅ|| ಸೆಕ್ರೆಟರಿ ಮ|| ಕೇಶವರಾಯರು ಓದಿದರು. ಈ ಸೊಸೈಟಿಯು ವರ್ಷ ವರ್ಷ ಬಹು ಒಳ್ಳೇ ಸ್ಥಿತಿಗೆ ಬರುತ್ತಲಿದೆ ಯೆಂದು ರಿಪೋರ್ಟ್ ಮೂಲಕ ತಿಳಿದು ಬಹಳ ಸಂತೋಷವಾಯಿತು. ಇಷ್ಟರಲ್ಲೇ ವಿಶೇಷ ಮಳೆ ಪ್ರಾರಂಭವಾದದ್ದರಿಂದ ಸಭೆಯನ್ನು ಬರಖಾಸ್ತುಮಾಡಿದರು..... 3 ನೇ ತಾ. ಬುಧವಾರ ತಾಲ್ಲೂಕು ಕಚೇರಿಯಲ್ಲಿ ಮೀಟಿಂಗ್ ನಡೆಯಿತು. ಪ್ರದ ರ್ಶನಕ್ಕಾಗಿ ಬಂದಿದ್ದ ಉತ್ತಮವಾದ ರಾಸುಗಳಿಗೂ ವಸ್ತು ಪ್ರದರ್ಶನದಲ್ಲಿ ವಿಶೇ ಷವಾದವುಗಳಿಗೂ ಬಹುಮಾನ ಕೊಡಲ್ಪಟ್ಟಿತು. ಕಳೆದ ಸಾಲಿಗಿಂತಲೂ ಈ ಸಲ ದನಗಳು ಹೆಚ್ಚಾಗಿ ಬಂದಿದ್ದವು ಮತ್ತು ವ್ಯಾಪಾರವೂ ತಕ್ಕ ಮಟ್ಟಿಗೆ ಆಯಿತು. ಆದರೆ ಮಳೆ ದೆಸೆಯಿಂದ ಜಾನುವಾರುಗಳು ಚದರಿ ಬಿಟ್ಟವು. ಜಾತ್ರೆಯಲ್ಲಿ ಜನ ರಿಗೆ ಕುಡಿಯುವ ನೀರಿಗಾಗಿ ತೆಗಿಸಿದ್ದ ಬಾವಿಗಳಲ್ಲಿ ಸ್ಯಾ|| ಇನ್ಸ್ಪೆಕ್ಟರು ಪುಡಿ ಗಳನ್ನು ಹಾಕಿಸಿದ್ದರು. ಸ್ಯಾನಿಟೇಷನ್ ಕೆಲಸವು ತೃಪ್ತಿಕರವಾಗಿರುವಂತೆಯೂ, ಯಾವ ಗಲೀಜಿಗೂ ಅಂಟು ಜಾಡ್ಯಕ್ಕೂ ಸ್ವಲ್ಪವೂ ಅವಕಾಶವಿಲ್ಲದಂತೆಯೂ ನಮ್ಮ ಡಾಕ್ಟರ್ ರಾಜರತ್ನಂ ಪಿಳ್ಳೆಯವರು ಒಳ್ಳೇ ಏರ್ಪಾಟು ಮಾಡಿದ್ದರು. ಪೋಲೀಸ್ ಇನ್ಸ್ಪೆಕ್ಟರ್ ಮ|| ದಾಸಪ್ಪರವರು ಕಳವು ದರೋಡೆ ಆದ ಕಾಶವಾಗದಂತೆ ಪೋಲೀಸ್ ಸಿಬ್ಬಂದಿಯನ್ನು ತುಂಬಾ ಎಚ್ಚರಿಕೆಯಿಂದಿರುವಂತೆ ನೇಮಿಸಿದ್ದು ಸಂತೋಷವಾಗಿದೆ. ನಮ್ಮ ತಾಲ್ಲೂಕಿನಲ್ಲಿ ಈ ವರೆವಿಗೂ ಆ ಸುದ್ದಿ ಯೇ ಇಲ್ಲದಿರುವುದು ಇವರ ದಕ್ಷತೆಯನ್ನೂ ಚಟುವಟಿಕೆಯನ್ನೂ ತೋರಿಸುತ್ತದೆ. ಸಬ್ ಡಿವಿಜನ್ ಆಫೀಸರವರು ಮತ್ತು ಅಮಲ್ದಾರ್ರವರು ಕೂಡಿ ಎಲ್ಲಾ ಜನ ಗಳಿಗೂ ಜಾನುವಾರುಗಳಿಗೂ ಎಲ್ಲಾ ವಿಷಯಗಳಲ್ಲೂ ಕೇವಲ ತೃಪ್ತಿಕರವಾದ ಏರ್ಪಾಟನ್ನು ಮಾಡಿದ್ದುದರಿಂದ ಈ ಜಾತ್ರೆಯು ವರ್ಷ ವರ್ಷ ಅಭಿವೃದ್ಧಿಸ್ಥಿತಿಗೆ ಬರುವದಕ್ಕೆ ಸಹಾಯವಾಯಿತು.—ತಾ. 6 ನೇ ಶುಕ್ರವಾರ ಸಾಯಂಕಾಲ ಟ್ರಾ ವೆಲರ್ಸ್ ಬಂಗ್ಲಾದಲ್ಲಿ ದೊಡ್ಡ ಮನುಷ್ಯರಿಗೆಲ್ಲಾ ಡೆಪ್ಟಿ ಕಮಿಷನರವರು ಭೇಟಿ ಕೊಟ್ಟು ಹೋದ ವರ್ಷ ಶೆಟ್ಟಿಹಳ್ಳಿ ದರೋಡೆ ಕೇಸಿನಲ್ಲಿ ಸಹಾಯಮಾಡಿ ಆಸಾಮಿಗಳನ್ನು ಹಿಡಿದುಕೊಟ್ಟ ಇಬ್ಬರು ಕಳವಾರರನ್ನು ಮಧ್ಯೆ ನಿಲ್ಲಿಸಿ ಘನ ವಾದ ಭಾಷಣಮಾಡಿ ಅವರಿಬ್ಬರಿಗೂ ಎರಡು ಹಳ್ಳಿಯ ಬಳೆಗಳ ಮೇಲೆ ಅವರವರ ಹೆಸರುಗಳನ್ನು ಕೆತ್ತಿಸಿ ಕೈಗಳಿಗೆ ಹಾಕಿಸಿದರು. ಮಹನೀಯರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳನ್ನಿತ್ತು ಅವರಿಬ್ಬರನ್ನೂ ಟ್ರಾವೆಲರ್ಸ್ ಬಂಗ್ಲೆ ಗೇಟ್ ನಿಂದ ಇಂಗ್ಲಿಷ್ ವಾದ್ಯದೊಂದಿಗೆ ಊರಲ್ಲೆಲ್ಲಾ ಮೆರವಣಿಗೆ ಮಾಡಿಸಿದರು. ಇದನ್ನು ನೋಡಿದವರು ಇನ್ನು ಮುಂದೆ ಇಂಥಾ ವಿಷಯಗಳಲ್ಲಿ ತಾವು ಎನ ಮಟ್ಟಿಗೂ ಸರ್ಕಾರದವರಿಗೆ ಸಹಾಯ ಮಾಡಿ ಒಳ್ಳೇ ಹೆಸರು ಪಡೆಯಬೇಕೆಂದು ಪ್ರೋತ್ಸಾಹಮಾಡಿದ್ದು ತುಂಬಾ ಸ್ತುತ್ಯವಾಗಿದೆ.

ಚಿಕ್ಕಮಗಳೂರು.—ಚಿಕ್ಕಮಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ 3 ನೇ ತಾ. ಬುಧವಾರ ಸಾಯಂಕಾಲ ಒಂದು ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ಹೆಡ್ ಮಿಸ್ಟ್ರೆಸ್‌ರವರಾದ ಶ್ರೀಮತಿ ಪಂಡಿತ ಸುಂದರಮ್ಮನವರು ಸ್ತ್ರೀಮಂಡಲಿಗೆ ಕರ್ಣಾನಂದವಾಗುವಂತೆ ಭಕ್ತಿವಿಚಾರವನ್ನು ಕುರಿತು ಕಥಾರೂಪವಾಗಿ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಶ್ರೀಮತಿಯವರು ಈ ಊರಿಗೆ ಬರುವುದಕ್ಕೆ ಮುಂಚೆ ಈ ಸ್ಕೂಲಿನಲ್ಲಿ ಯಾವ ಸಮಾಜವೂ ಇರಲಿಲ್ಲ. ಅವರು ಬಂದ ಮೇಲೆ ಬಹಳ ಮುತುವರ್ಜಿ ವಹಿಸಿ ಸ್ತ್ರೀಯರನ್ನೆಲ್ಲಾ ಬರಮಾಡಿ 15 ದಿವಸಕ್ಕೆ ಒಂದು ಸಲ ತಾವುಗಳೆಲ್ಲರೂ ಬಂದು ಕೂಡಿ ಸೇರಬೇಕೆಂದೂ, ಸದ್ವಿಷಯವಾಗಿರುವ ಪತಿಭಕ್ತಿ, ಪಾತಿವ್ರತ್ಯ, ಮಕ್ಕಳ ಪೋಷಣೆ ಮೊದಲಾದ ಉಪನ್ಯಾಸಗಳನ್ನು ಕೇಳಿ ಅದರಂತೆ ನಡೆಯಬೇಕೆಂದೂ ತಿಳಿಸಿ, ಈ ಸಭೆಗೆ ಆರ್ಯಮಹಿಳಾಸಮಾಜವೆಂದು ಹೆಸರಿಟ್ಟು, ಒಂದು ರೀಡಿಂಗ್ ರೂಮನ್ನೂ ಸ್ಥಾಪಿಸಿ, ಅದಕ್ಕೆ ಬೇಕಾದ ಪುಸ್ತಕಗಳನ್ನು ತಾವೇ ಸ್ವಂತವಾಗಿ ತೆಗೆದುಕೊಟ್ಟಿರುವರು. ಸ್ಕೂಲಿನ ಕೆಲಸಗಳನ್ನು ಬಹಳ ಮುತುವರ್ಜಿಯಿಂದ ಮಾಡುತ್ತಿರುವರು. ಇಷ್ಟುಮಟ್ಟಿಗೆ ಸ್ತ್ರೀ ವಿದ್ಯಾಭ್ಯಾಸವೂ ಸಮಾಜವೂ ಉನ್ನತಸ್ಥಿತಿಗೆ ಬರುತ್ತಿರುವುದು ಬಹಳ ಸಂತೋಷಪ್ರದವಾಗಿದೆ.

ಗುಬ್ಬಿ.—ಕಳೆದ ತಾ. 28 ನೇ ಭಾನುವಾರ ಇಲ್ಲಿನ ಶ್ರೀ ಚೆನ್ನಬಸವೇಶ್ವರ ಸ್ವಾಮಿಯ ಬೆಳ್ಳಿ ಪಾಲಕಿ ಉತ್ಸವಕ್ಕೆ ಈ ದೇಶದ ಅನೇಕ ಕಡೆಗಳಿಂದ ಭಕ್ತಾದಿಗಳು ಬಂದಿದ್ದರು. ಈ ಸಂದರ್ಭದಲ್ಲಿ ಸರ್ಕಾರದವರ ಪ್ರೋತ್ಸಾಹದಿಂದ ಒಂದು ದನಗಳ ಪ್ರದರ್ಶನವೂ ಆ ದಿನ ನಡೆಯಿತು. ಸುಮಾರು 500 ದನಗಳಿಗೆ ಮೇಲ್ಪಟ್ಟ ಉತ್ತಮವಾದ ರಾಸುಗಳು ಕೂಡಿದ್ದವು. ಇವುಗಳಲ್ಲಿ ಶ್ರೇಷ್ಠವಾದವುಗಳಿಗೆ ನೂರಾರು ರೂಪಾಯಿಗಳ ವರೆಗೆ ಬಹುಮಾನವೂ, ಅನೇಕ ಯೋಗ್ಯತಾಪತ್ರಿಕೆಗಳೂ ಡೆಪ್ಯುಟಿ ಕಮಿಷನರ್ ಸಾಹೇಬರವರ ಹಸ್ತದಿಂದ ಹಂಚಲ್ಪಟ್ಟವು. ಪ್ರದರ್ಶನ ಕಾಲದಲ್ಲಿ ಸಬ್ ಡಿವಿಜನ್ ಸಾಹೇಬರೂ, ಟ್ರೆಜರಿ ಅಸಿಸ್ಟೆಂಟರೂ, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರೇ ಮೊದಲಾಗಿ ಅನೇಕ ಸರ್ಕಾರಿ ಅಧಿಕಾರಿಗಳು ಬಂದಿದ್ದರು. ನಮ್ಮ ಹೊಸ ಅಮಲ್ದಾರರವರಾದ ಮ|| ಸುಬ್ಬರಾಯರು ಬಹು ಮುತುವರ್ಜಿ ವಹಿಸಿ ಪ್ರದರ್ಶನವನ್ನು ಆರಂಭಿಸಿ ಕಡೆಯವರೆಗೂ ತೃಪ್ತಿಕರವಾಗಿ ನಡಿಸಿದರು. ಪ್ರದರ್ಶನಕ್ಕಾಗಿ ಏರ್ಪಡಿಸಿದ್ದ ದಿವ್ಯವಾದ ಚಪ್ಪರದಲ್ಲಿಯೂ, ಹೊರಗೂ ಸಹಸ್ರಾರು ಜನರು ಸೇರಿದ್ದಾಗ ನಮ್ಮ ದೇಶೋನ್ನತಿಗೆ ಮುಖ್ಯ ಸಾಧನವಾದ ವ್ಯವಸಾಯಾಭಿವೃದ್ಧಿಗೆ ದನಗಳ ಪಾಲನೆಯೇ ಅತ್ಯವಶ್ಯಕವಾದುದೆಂತಲೂ, ನೂತನ ವ್ಯವಸಾಯ ಸಾಧನಗಳ ಉಪಯೋಗವೂ, ಶ್ರೇಷ್ಠತರದ ಬೀಜಗಳ ಚುನಾವಣೆಯೂ ಸಹ ಮುಖ್ಯವಾದ ಕರ್ತವ್ಯಗಳೆಂತಲೂ, ಇವುಗಳ ವಿಷಯದಲ್ಲಿ ರೈತರು ತುಂಬಾ ಶ್ರಮವನ್ನು ವಹಿಸುವುದರಿಂದಲೂ, ಅಂಥವರಿಗೆ ಸರ್ಕಾರದವರೂ ಪ್ರಜೆಗಳೂ ಪ್ರೋತ್ಸಾಹವನ್ನು ಕೊಡುತ್ತಾ ಬರುವುದರಿಂದಲೂ ರೈತರ ಸ್ಥಿತಿಗತಿಯು ಏಳಿಗೆಯಾಗುವುದೆಂತಲೂ ಪ್ರಜಾ ಹಿತಚಿಂತಕರಾದ ನಮ್ಮ ಡೆಪ್ಯುಟಿ ಕಮಿಷನರ್‌ರವರು ಅಪ್ಪಣೆ ಕೊಡಿಸಿದರು. ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಮ|| ಮರಿಗಪ್ಪನವರು ಜಾತ್ರೆಯ, ದೇವಸ್ಥಾನದ ಮತ್ತು ಬೆಳ್ಳಿ ಪಾಲಕಿಯ ವಿಷಯವಾಗಿ ಬಹು ರಮ್ಯವಾದ ಉಪನ್ಯಾಸ ಮಾಡಿದರು. ಹೀಗೆಯೇ ಸರ್ಕಾರದವರೂ ಪ್ರಜೆಗಳೂ ಏಕೀಭವಿಸಿ ಪ್ರೋತ್ಸಾಹಿಸುವುದರಿಂದ ವರ್ಷಂಪ್ರತಿ ದನಗಳ ಪ್ರದರ್ಶನವು ಇಲ್ಲಿ ನಡೆಯುತ್ತಾ ಏಳಿಗೆಗೆ ಬರುವುದರಲ್ಲಿ ಸಂದೇಹವಿಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ಈ ತಿಂಗಳ ಅಂತ್ಯಭಾಗದಲ್ಲಿ ನಮ್ಮ ವೈಸ್‌ರಾಯರವರು ಕಾಶ್ಮೀರ ಸಂಸ್ಥಾನಕ್ಕೆ ದಯಮಾಡುತ್ತಾರೆಂದು ವರ್ತಮಾನವಿದೆ.

ಕಲ್ಕತ್ತಾ ಪಟ್ಟಣದ ವಾಲಿಕ್ ಬೀದಿಯಲ್ಲಿ ಭೂಷಣ ಚಂದ್ರನೆಂಬೊಬ್ಬ ಬಂಗಾಳಿ ವರ್ತಕನು ಶಸ್ತ್ರವಿಲ್ಲದ ಅಷ್ಟ್ರಿಯಾದಿಂದ ಗಾಜಿನ ಮಣಿಗಳನ್ನು ತರಿಸಿ ವ್ಯಾಪಾರ ಮಾಡಿದನೆಂದು ಪೊಳದ್ದವು ಆಗಿ ಕಳೆದ ವಾರ ಅವನಿಗೆ 1,500 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು.

ಹಿಂದುಸ್ಥಾನದ ಸೈನಿಕರು ಗಾಯಪಟ್ಟು ಚಿಕಿತ್ಸೆಹೊಂದುತ್ತಿದ್ದರೂ, ಕಾಯಿಲೆಯಾಗಿದ್ದರೂ ಸರ್ಕಾರದವರು ಅಂಥವರ ಸಮೀಪಬಂಧುಗಳಿಗೆ ಆ ವಿಚಾರವನ್ನು ತಿಳಿಸುತ್ತಾರೆ. ಅಂಥಾ ಬಂಧುಗಳೇನಾದರೂ ಅವರ ಯೋಗಕ್ಷೇಮವನ್ನು ತಿಳಿಯಬೇಕೆಂದು ಕುತೂಹಲಪಟ್ಟಲ್ಲಿ ಕಾಯಿಲೆ ಅಥವಾ ಗಾಯಪಟ್ಟ ಸಂಗತಿಯನ್ನು ತಿಳಿಸಿದ ಅಧಿಕಾರಿಗೆ ಮಾರಾವರ್ತಿ ತಂತೀವರ್ತಮಾನವನ್ನು ಕೊಟ್ಟು ಜವಾಬು ತರಿಸಿಕೊಳ್ಳಬಹುದೆಂತಲೂ, ಇಂಥಾ ತಂತೀವರ್ತಮಾನಕ್ಕೆ ಛಾರ್ಜನ್ನು ಕೊಡಬೇಕಾದ್ದಿಲ್ಲವೆಂತಲೂ ಇಸ್ತಿಹಾರನಾಮೆಯನ್ನು ಕೊಟ್ಟದ್ದಾರೆ.

ಮಲಬಾರಿಗೆ ಸೇರಿದ ಮಂಡಿಕ್ಕಾಡ್ ಸ್ಥಳದಲ್ಲಿ ಕೆಲವು ಮಾಪಿಳ್ಳೆಗಳು ಕಲೆಕ್ಟರ್ ಮತ್ತೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿರುವ ಮ|| ಸಿ. ಎ. ಇನ್ನೆಸ್ ಸಾಹೇಬರನ್ನು ಕೊಂದುಹಾಕಬೇಕೆಂದು ಮಸಲತ್ತು ಮಾಡಿಕೊಂಡಿರುವಂತೆ ಸಾಹೇಬರಿಗೆ ವರ್ತಮಾನ ತಿಳಿಯಿತು. ಅವರು ಸಹಾಯ ಸಮೇತರಾಗಿ ಫೆಬ್ರವರಿ ತಾ. 27 ರಲ್ಲಿ ಕರುವರಕುಂಡು ಎಂಬಲ್ಲಿಗೆ ಹೋದರು. ದುಷ್ಟರು ಅವರಿಗೆ ಗುಂಡುಹೊಡೆದರು. ಆದರೆ ಅವರಿಗೆ ತಗಲಲಿಲ್ಲ. ಆ ಎಂಟು ಮಂದಿ ಕ್ರೂರಾತ್ಮರು ತಪ್ಪಿಸಿಕೊಂಡು ಹೋಗಿ ಕಾಡನ್ನು ಸೇರಿ ಒಂದು ದೇವಸ್ಥಾನದೊಳಗೆ ನಿಂತರು. ಸೈನಿಕರೇ ಮುಂತಾದವರು ಸುಮಾರು 70 ಜನ ಸೇರಿ ಹೋಗಿ ದೇವಸ್ಥಾನಕ್ಕೆ ಮುತ್ತಿಗೆ ಹಾಕಿ ಗುಂಡುಹೊಡೆದರು. ನಾಲ್ಕು ಜನ ಕ್ರೂರಾತ್ಮಗಳು ಕೊಲೆಯಾದರು. ಒಬ್ಬನು ಮಾತ್ರ ಗಾಯಪಟ್ಟು ಸಿಕ್ಕಿಬಿದ್ದನು. ಒಬ್ಬ ಹಿಂದುವಿಗೂ, ಇಬ್ಬರು ಪೋಲೀಸಿನವರಿಗೂ ಘೋರ ಗಾಯಗಳಾಗಿವೆ. ಈ ಕ್ರೂರಕೃತ್ಯಕ್ಕೆ ಕಾರಣವೇನೋ ಹೊರಪಟ್ಟಿಲ್ಲ.

ವಿದೇಶ ವರ್ತಮಾನಗಳು.

ಬ್ರಿಟಿಷ್ ಗವರ್ನ್‌ಮೆಂಟಿನವರು ಈಗಿನ ಯುದ್ಧಕಾರ್ಯಗಳಿಗೆ ಪ್ರತಿ ನಿಮಿಷಕ್ಕೂ 9,972 ರೂಪಾಯಿನಂತೆ ದ್ರವ್ಯವನ್ನು ಖರ್ಚುಮಾಡುತ್ತಿದ್ದಾರೆ.

ಲಂಡನ್ ಪಟ್ಟಣದ ಆವರಣದೊಳಗಿರುವ ಸಮಸ್ತ ಮನೆ ಮಠಾದಿಗಳನ್ನೂ ಕಾಣಿಸಿ ಒಂದು ನಕ್ಷೆ ಬರೆದಿಡಬೇಕೆಂದು 20 ವರುಷಗಳಿಂದ ಕೆಲಸಮಾಡುತ್ತ ಬಂದಿದ್ದಾರೆ. ಈಗ ಅದು ಪೂರೈಸಿತೆಂದೂ, ಈ ಮಹತ್ತರವಾದ ಕಾರ್ಯಕ್ಕೆ 3,00,000 ರೂಪಾಯಿ ಖರ್ಚಾಯಿತೆಂದೂ ತಿಳಿಯುತ್ತದೆ.

ಸ್ಕಾಟ್‌ಲೆಂಡಿಗೆ ಸೇರಿದ ಕ್ಲೈಡ್ ನದೀಮುಖದಲ್ಲಿ ಜಹಜುಗಳನ್ನು ತಯಾರುಮಾಡಿ ಒದಗಿಸುತ್ತಿದ್ದ ಕಾರ್ಖಾನೆಯೊಳಗೆ 10,000 ಇಂಜನಿಯರುಗಳು ಕೆಲಸಕ್ಕೆ ಬರುವದಿಲ್ಲವೆಂದು ಹಟಹಿಡಿದು ನಿಂತುಬಿಟ್ಟರು. ಇಂಗ್ಲಿಷ್ ಗವರ್ನ್‌ಮೆಂಟಿನವರು ಆ ಕಾರ್ಖಾನೆಯ ಅಧಿಕಾರಿಗಳಿಗೂ ಜನಗಳಿಗೂ ಕೂಡಲೇ ಕೆಲಸವನ್ನು ಮಾಡುತ್ತಾ ಬರಬೇಕೆಂದೂ, ಅವರ ಕಷ್ಟ ಅನನುಕೂಲಗಳನ್ನು ವಿಚಾರಿಸಿ ಸರಿಪಡಿಸುವುದಕ್ಕೆ ಒಂದು ಪಂಚಾಯಿತಿಯನ್ನು ಏರ್ಪಾಡುಮಾಡುತ್ತೇವೆಂದೂ ಹುಕುಂ ಕೊಟ್ಟಿದ್ದಾರೆ. ಈಚೆಗೆ ಅವರೆಲ್ಲಾ ಅದಕ್ಕೆ ಒಪ್ಪಿ ಕೆಲಸದ ಮೇಲೆ ಹೋಗುತ್ತಿರುವರು.

ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದ ಸೆಂಟ್ ಪ್ಯಾಟ್ರಿಕ್ ಎಂಬ ದೇವಾಲಯದಲ್ಲಿ ಕಳೆದ ವಾರ ಸುಮಾರು 800 ಜನರು ಸೇರಿ ಪ್ರಾರ್ಥನಾದಿಗಳನ್ನು ಮಾಡುತ್ತಿದ್ದಾಗ ದುರಾತ್ಮರುಗಳ್ಯಾರೋ ಬಾಂಬ್ ಎಂಬ ಸಿಡಿಮದ್ದಿನ ಗುಂಡನ್ನು ಎಸೆದರು. ಗೂಢಚಾರರಾಗಿದ್ದ ಪೋಲೀಸಿನವರು ಕೂಡಲೇ ಹೋಗಿ ಆ ಗುಂಡು ಒಡೆಯುವುದಕ್ಕೆ ಮುಂಚೆ ಅದನ್ನು ಹೊರಕ್ಕೆ ಸಾಗಿಸಿ ಅಷ್ಟು ಜನರ ಪ್ರಾಣಗಳನ್ನೂ, ಆ ದಿವ್ಯವಾದ ದೇವಾಲಯವನ್ನೂ ಕಾಪಾಡಿದರು. ಕೋಟ್ಯಾಧೀಶ್ವರರನ್ನೂ ಭಾರಿ ಕಟ್ಟಡಗಳನ್ನೂ ನಾಶಮಾಡಬೇಕೆಂಬ ಕ್ರೂರಾತ್ಮರ ಗುಂಪು ಆ ಪಟ್ಟಣದಲ್ಲಿ ಕಾಣಿಸಿಕೊಂಡಿದೆ. ಆ ದೇವಸ್ಥಾನದೊಳಗೆ ಗುಂಡು ಹಾಕಿದ ಕ್ರೂರಾತ್ಮರನ್ನು ಆ ಕೂಡಲೇ ದಸ್ತಗಿರಿ ಮಾಡಿಬಿಟ್ಟರು.



ಮಾರ್ಚಿ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1–14–0

ಇದೇ ಮಾರ್ಚಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಮಾರ್ಚಿ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [39-40]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.37 ಬಂದರ್ ಬೀದಿ, ಜಿ.ಟಿ., ಮದರಾಸು.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಕೇಶೋಲ್ಲಾಸಿನಿ ಶೀಸೆ 1 ಕ್ಕೆ 8 ಆಣೆ

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಸುಗಂಧಿ ಕಾರ್ಡು 1 ಕ್ಕೆ 1 ಆ. ಡಜನ್ ೧ ಕ್ಕೆ ೧೦ ಆಣೆ

ಈ ಕಾರ್ಡನ್ನು ಶರೀರದಲ್ಲಾಗಲೀ ಬಟ್ಟೆಯಲ್ಲಾಗಲೀ ಇಟ್ಟರೆ ಅದರ ಇಟ್ಟ ಜಾಗವೆಲ್ಲಾ ಉತ್ತಮವಾದ ಹೂವುಗಳ ಸುವಾಸನೆಯಂತೆ ಸುವಾಸನೆಯಾಗಿರುತ್ತೆ.

ಸುವಾಸನೆ ಸುಣ್ಣ ಶೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯೆಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಯಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,

[39-3] ಸುಗಂಧಕಾರಿ, ಮೈಸೂರು.

Mysore Government Stationery Depot

BANGALORE.

The Superintendent of the Mysore Government Stationery Depot is prepared to receive tenders at his office at Bangalore up to 2 p.m. on Saturday, the 17th April, 1915, for the supply of miscellaneous articles of stationery such as—sheep skins, straw boards, cotton tags, white tape, finger printing apparatus and blue black and red ink powders required by the Government for the year 1915—16.

For copy of tender schedule and for further particulars apply to the Superintendent, or refer to the Mysore Gazette, dated 11th, March 1915.

Bangalore, [47-1] *(Sd.)* C. H. YATES,
2nd March, 1915. *Superintendent of Stationery.*

ನೋಟೀಸು.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ

ಸನ್ 1914–15 ನೇ ಇಸವಿ ಅಸಲು ಮೊಕದ್ದಮೆ ನಂಬರು—6.

ವಾದಿಗಳು:—ಬೆಂಗಳೂರು ಸಿಟಿಗೆ ಸೇರಿದ ಕಲಾಸಿಪಾಳ್ಯದಲ್ಲಿರುವ ಕರ್ಣಪ್ಪಪಿಳ್ಳೆ ಮಕ್ಕಳು—(1) ಚೊಕ್ಕಲಿಂಗಪಿಳ್ಳೆ, (2) ಚಿದಂಬರಂಪಿಳ್ಳೆ

ಪ್ರತಿವಾದಿ:—ಎ ವಿ. ಗೋವಿಂದರಾಜಮೊದಲಿಯಾರ್, ಆಡಿಟರ್, ಕಂಟ್ರೋಲರ ಆಫೀಸ್, ಬೆಂಗಳೂರು.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:—

ಮೇಲ್ಕಂಡ ವಾದಿಗಳು ಬೆಂಗಳೂರು ಸಿಟಿಗೆ ಸೇರಿದ ಕಲಾಸಿಪಾಳ್ಯದಲ್ಲಿ ಧರ್ಮರಾಜ ಮತ್ತು ಇದಕ್ಕೆ ಸೇರಿದ ಪೆರುಮಾಳ್ ಕೋವಿಲ್ ಇದಕ್ಕೆ ಸೇರಿದ ಕೆಲವು ಸ್ಥಿತಿಗಳು ಧರ್ಮಸೊತ್ತುಗಳಾಗಿರುತ್ತವೆಂದೂ, ಡಿಟೋ ದೇವಸ್ಥಾನ ಮತ್ತು ಸೊತ್ತುಗಳ ವಿಚಾರದಲ್ಲಿ ವಾದಿಗಳು ತಮ್ಮನ್ನು ಟ್ರಸ್ಟಿಗಳಾಗಿ ಮಂಜೂರು ಮಾಡಬೇಕೆಂದೂ, ದೇವಸ್ಥಾನಗಳ ಮತ್ತು ಸೊತ್ತುಗಳ ಮ್ಯಾನೇಜಮೆಂಟು ಮಾಡಿಸಲು ತಕ್ಕ ಸ್ಕೀಂ ಯಾನೆ ಏರ್ಪಾಟು ಮಾಡಿಸಬೇಕೆಂದೂ ಈ ಕೋರ್ಟಿಗೆ ದಾವಾ ಹಾಕಿರುತ್ತಾರೆ.

ಮೇಲ್ಕಂಡ ದೇವಸ್ಥಾನ ಮತ್ತು ಸೊತ್ತುಗಳ ವಿಷಯದಲ್ಲಿ ಸಂಬಂಧಪಟ್ಟು ಈ ಕೇಸಿಗೆ ಕಕ್ಷಿಗಾರರಾಗಿ ಸೇರಲು ಇಷ್ಟವುಳ್ಳವರೆಲ್ಲಾ ಈ ಕೋರ್ಟು ರೂಬರೂಬು 1915 ನೇ ಇಸವಿ ಮಾರ್ಚಿ ತಿಂಗಳು 18 ನೇ ತಾರೀಖಿನಲ್ಲಿ ದಿವಿ 11 ಘಂಟೆಗೆ ಹಾಜರಾಗಿ ತಿಳಿಸತಕ್ಕದ್ದು.

ಸನ್ 1915 ನೇ ಇಸವಿ ಫೆಬ್ರುವರಿ ತಿಂಗಳು 27 ನೇ ತಾರೀಖಿನಲ್ಲಿ ನಮ್ಮ ದಸ್ತಕತ್ತು ಕೋರ್ಟು ಮೋಹರು ಸಹಿ ಕೊಟ್ಟಿದೆ.

R. B. PLUMER, Bar.-at-Law,

[46-1] **District Judge, Bangalore Division.**

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 5,00,000.

(1895 ನೇ ಇಸವಿ III ನೇ ನಂಬರು ಮೈಸೂರು ಕಂಪನಿಗಳ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರಾಗಿದೆ).

ನಿರ್ವಿವಾದವಾದ ಭದ್ರತೆ ! ಆಕರ್ಷಣಾವುಳ್ಳ ಏರ್ಪಾಡುಗಳು !! ಅನ್ಯಾಯವಿಲ್ಲದ ನಡವಳಿಕೆಗಳು !!!

ಮಾಫಿ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನದ) ಪತ್ರಗಳನ್ನು ಕೊಡುವದೇ ವಿಶೇಷ ವಿಷಯವಾಗಿದೆ. ಒಂದರಲ್ಲಿ—ಎರಡು (ಷೇರು ಮತ್ತು ಜೀವವಿಮೆ ಈ ಎರಡು ಪ್ರಯೋಜನಗಳು ಸೇರಿರುವ) ಏರ್ಪಾಡು ಮತ್ತು ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ (ಜಮೀನು ಮತ್ತು ಮನೆ ಕೊಂಡು ಕೊಡುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ) ಏರ್ಪಾಡುಗಳು ನೂತನ ವಿಷಯವಾಗಿದೆ.

ಬೇಕಾಗಿದೆ.

ಮೈಸೂರು ದೇಶದ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಒಂದರಲ್ಲಿ ಎರಡು ಮತ್ತು ಸ್ಥಿರಸ್ವತ್ತುಗಳ ಮೇಲೆ ಸಾಲಾ ಕೊಡುವ ಏರ್ಪಾಡುಗಳ ಕಾರ್ಯವನ್ನು ಜರುಗಿಸುವುದಕ್ಕೆ ನಂಬಿಕಸ್ಥರು ಮತ್ತು ಮಾಹಿತಿಗಾರರಾಗಿರತಕ್ಕ ಲೋಕಲ್ ಡೈರೆಕ್ಟರುಗಳು ಮತ್ತು ಜೀವವಿಮೆ ಮತ್ತು ಪ್ರಾವಿಡೆಂಟ್ ಏರ್ಪಾಡುಗಳ ಕಾರ್ಯವನ್ನು ಜರುಗಿಸುವುದಕ್ಕೆ ಚಟುವಟಿಕೆ ಮತ್ತು ಪ್ರಾಮಾಣಿಕರಾದ ಏಜಂಟರುಗಳು ಧಾರಾಳವಾದ ಕಮಿಷನ್ ಮತ್ತು ಆಫೀಸ್ ಅಲೋಯನ್ಸಿನ ಮೇಲೆ ಬೇಕಾಗಿದೆ.

ಪ್ರಕಟನ ಪತ್ರಿಕೆಗಳಿಗೂ ಮತ್ತು ನಿಬಂಧನೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

[15-9] **M. L. NAGANNAH,**

ಮ್ಯಾನೇಜಿಂಗ್ ಡೈರೆಕ್ಟರ್, ಲೈಫ್ ಮತ್ತು ಮ್ಯಾರಿಯೇಜ್ ಕಟ್ಟಡಗಳು, ಮೈಸೂರು.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರುಮಾಡಿರುವದು.

[9-9]

ಮೆಲಿನ್‌ರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರುಮಾಡಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಲವಲವಿಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಸೆಂಟ್ ಜಾರ್ಜ್ ಅಂಬ್ಯುಲೆನ್ಸ್ ಸಂಘ.

ಹತ್ತನೇ ಚಂದಾ ಪಟ್ಟಿ.

ಮೇಲ್ಕಂಡ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರೆಟರಿಯವರಾದ ಮಿಸ್ಟರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ತಮಗೆ ಮುಂದೆ ಹೇಳುವ ಹಣ ಹಣಗಳು ತಲಪಿವೆ ಎಂದು ತಿಳಿಸಿರುತ್ತಾರೆ:—

ತುಮಕೂರಿನ ಮಂಗಳದ ಪ್ರಜೆಗಳು 3 ನೇ ಖಿಸ್ತು ರೂ. 200, ಶೃಂಗೇರಿ ಪ್ರಜೆಗಳು ರೂ. 100, ತುಮಕೂರು ಡೆಪ್ಯುಟಿ ಕಮಿಷನರ್ ರ ಮೂಲಕ 6 ನೇ ಖಿಸ್ತು ರೂ. 8-8-8, ಹರಿಹರದ ತಾಲ್ಲೂಕು ಪ್ರಜೆಗಳು ರೂ. 73-0-6, ಹರಿಹರದ ತಾಲ್ಲೂಕಿಗೆ ಸೇರಿದ ಹಲವು ಗ್ರಾಮಗಳ ಪ್ರಜೆಗಳು ರೂ. 32-10-0, ಅರಸೀಕೆರೆ ಮುನ್ಸಿಫ್ ರೂ. 30, ಚಿತ್ರದುರ್ಗದ ಡಿ|| ಫಾರೆಸ್ಟ್ ಆಫೀಸು ರೂ. 16-12-0, ಹಾಸನದ ಅಮಲ್ದಾರ್ ರೂ. 12-10-0, ತುಮಕೂರಿನ ಕ್ರಿಶ್ಚಿ ಮತ್ತು ಹಿಂದು ಜನರು ವಿನಿಂಗ್ ನ್ಯಾಯಮಂದಿರದ ಮೂಲಕ ರೂ. 0-3-0, ಕೋಲಾರ್ ಎಂ. ಖ. ಮಿಷನ್ ವೀಮೆಗಳ್ ಸೆಕ್ರೆಟರಿ ರೂ. 6, ಐದು ರೂಪಾಯಿ ಒಳಗೆ ಕೊಟ್ಟವರದ್ದು ರೂ. 3, ಮುಮ್ಮಾ ರೂ. 557-12-2; ಮೊದಲು ಜಮಾ ಮಾಡಿರುವುದು ರೂ. 7,763-4-2; ಒಟ್ಟು ರೂಪಾಯಿ 8,321-0-4 ಪೈ.

ಒಟ್ಟು ಬಾಕ್ಸಿನಾರಿಂದ—ಅರಸೀಕೆರೆ ತಾಲ್ಲೂಕು ದಸರಾ ಮೆಂಬರರ ಮಾಯಾ, ಡಿ|| ಕಮಿಟಿ ಮೆಂಬರರಾಗಿಯೂ ಇರುವ ಮ|| ಎಂ. ಎಚ್. ಹರಿಯಣ್ಣನವರು ದೇಶಸೇವೆಯ ನಿಮಿತ್ತ ಈಗ ನಡೆಯುತ್ತಿರುವ ಯುದ್ಧದ ರಿಲೀಫ್ ಫಂಡಿಗೆ ತಾವು ಸಹಾಯಮಾಡಿರುವುದಲ್ಲದೆ ಗ್ರಾಮಾಂತರ ಪ್ರಜೆಗಳ ಮೂಲಕ ವಂತಿಗೆ ಹಣಗಳನ್ನು ವಸೂಲ್ಮಾಡಿ ಇರಸಾಲ್ ಮಾಡಿರುತ್ತಾರೆ. ಅಂಥಾ ಗ್ರಾಮಗಳ ವಿವರಗಳು ಎಷ್ಟೆಂದರೆ—ಮುಂಧಾಳು ರೂ. 15; ಕಿತ್ತನಕೆರೆ ರೂ. 19; ಬಿಳ್ಳೂರು ರೂ. 10; ದೊಡ್ಡಮುಟಿಕೆರೆ (1 ನೇ ಖಿಸ್ತು) ರೂ. 8; ಚಿಮ್ಮನಸಮುದ್ರ, ಕಡಲಿಮನೆ, ಹೊನ್ನಹಳ್ಳಿ ತಲಾ ರೂ. 6; ರೋಜನ ಕಟ್ಟೆ, ಗಿರಿಹಳ್ಳಿ, ನರಸಿಪುರ, ಶಂಕರನಹಳ್ಳಿ ತಲಾ ರೂ. 6; ಸಾತೇನಗೆರೆ ರೂ. 4; ಚಿಕ್ಕೊಂಡಿಹಳ್ಳಿ, ಚನ್ನಗುಂಡಿಹಳ್ಳಿ ತಲಾ ರೂ. 3, ಹೊಸಹಳ್ಳಿ ಪಟೇಲರು ರೂ. 1-4-0; ಜುಮ್ಲಾ ರೂಪಾಯಿ 95-12-0.

ಯುದ್ಧಭೂಮಿಗೆ ಹೋಗಿರುವ ಹಿಂದುಸ್ಥಾನದ ಸೈನಿಕರಿಗೆ ಅವಶ್ಯವಾಗಿರುವ ಪದಾರ್ಥಗಳು.

ಸರ್ಕಾರದ ಇಸ್ತಿಹಾರ್ನಾಮೆಯು.

ಯುದ್ಧ ಮಾಡುವುದರಲ್ಲಿ ಪ್ರವರ್ತಿಸಿರುವ ಇಂಡಿಯಾ ದೇಶದ ಸೈನಿಕರ ಉಪಯೋಗಕ್ಕಾಗಿ ಉಚಿತವಾಗಿ ವಸ್ತುಗಳನ್ನು ಒದಗಿಸಲಪೇಕ್ಷಿಸುವ ಜನಗಳಿಗೆ ಸಹಾಯವಾಗಿರಲು ಈ ಕೆಳಗೆ ಕಂಡ ತುಂಬಾ ಇಷ್ಟವಾದ ವಸ್ತುಗಳ ಪಟ್ಟಿಯನ್ನು ಸೇನಾ ಜನರ ಅಭಿಪ್ರಾಯವನ್ನು ಪಡೆದು ತಯಾರ್ ಮಾಡಲಾಗಿರುತ್ತದೆ.

ವಸ್ತುಗಳ ಕನ್ನಡ ಮತ್ತು ಉರ್ದು ಹೆಸರುಗಳು:—ತುಂಬಿದ ಉದ್ದವಾದ ಕಾಲು ಚೀಲಗಳು (ಲಂಬೀ ಊನಿ ಮೋಜೇ), ಬೆಚ್ಚಗಿರುವ ಕೈ ಚೀಲಗಳು (ಗರ್ಮ್ ದಸ್ತಾನೇ), ತೋರಿಸುವ ಬೆರಳಲ್ಲದೆ ಬೇರೇ ಬೆರಳುಗಳಿಲ್ಲದ ಕೈ ಚೀಲಗಳು (ದಸ್ತಾನೇ ಜಿಸ್‌ಮೇಂ ಸಿರ್ಫ್ ಅಂಗುಠೇ ಔರ್ ಶಹಾಡತ್ ಉಂಗ್ಲೀ ಕೆ ಲಿಯೇ ಜಗಹ್ ಹೋ), ಜರ್ಸಿಗಳು (ಮೋಟೇ ಬನ್ಯಾನ್), ತುಂಬಿದ ಕಂಫರ್ಟರುಗಳು (ಊನಿ ಗುಲೂಬಂದ್), ಹಣಿದ ಪಗ್ಗರಿಗಳು (ಊನಿ ಖಾಸ್ ಕುಳು ಪಗ್ಡಿಯಾನ್), ಬೆಚ್ಚಗಿರುವ ವೆಸ್ಟ್ ಕೋಟುಗಳು (ಗರ್ಮ್ ಬನ್ಯಾನ್), ಬಾಲಾಕ್ಲಾವಾ ಟೋಪಿಗಳು (ಕಿವಿ ಮೇಲೆ ತೆಳ್ಳಗೆ) [ಕನ್‌ಟೋಪ್ (ಕಾನೋಂ ಕೆ ಪಾಸ್ ಪತ್ಲೀ)], ಪಗ್ಗರಿಗಳಿಗೆ ವಾಟರ್ ಪ್ರೂಫುಗಳು (ಪಗ್ಡಿಯೋಂ ಕೆ ಲಿಯೇ ಮೋಮ್ ಜಾಮೇ ಟೋಪ್), ಕಮರ್ ಬಂದುಗಳು (ಕಮರ್ ಬಂದ್), ಹಸೀಫ್, ಗಟ್ಟಿ ಗುಂಡಿಗಳು, ಸೂಜಿಗಳು, ದಾರ (ಆಲೀಧಾನಿಯನ್ ಜಿಸ್‌ಮೇಂ ಸುಯಿ ಬಟನ್ ಔರ್ ಸೂಯಿ ತಾಗಾ ಹೋ), ದೀಪದ ಕಡ್ಡಿಗಳು (ದಿಯಾಸಲಾಯಿಯಾನ್), ಮಡಿಸುವ ಲಾಂದ್ರಗಳು (ಟಿಫಿನ್ ಲಾಲ್ ಟೀನ್‌ಯೇ), ಜುಟ್ಟು ಕತ್ತರಿಸುವ ಯಂತ್ರಗಳು (ಬಾಲ್ ಕತರ್‌ನೇಕೀ ಮೆಷೀನ್), ಸೋಟು ಪೇಪರುಗಳು (ಚಿಟ್ಠಿ ಕಾ ಕಾಗಜ್), ಎನ್‌ವಲೋಪುಗಳು (ಲಿಫಾಫೆ), ರಾತ್ರಿ ಉಪಯೋಗಿಸುವ ದೀಪಗಳು (ರೋಶನೀ ಚಲ್ನೇವಾಲಿ ಮೋಂಬತ್ತಿಯಾ), ಸಾದಾ ಪೋಸ್ಟ್ ಕಾರ್ಡುಗಳು (ಸಾದೇ ಪೋಸ್ಟ್ ಕಾರ್ಡ್), ಪೆನ್ಸಿಲುಗಳು (ಪೆನ್ಸಿಲ್), ತರಹವಾರಿ ಮಿಠಾಯಿಗಳು (ಮಿಠಾಯಿ ಹರ್ ಕಿಸ್ಮ್), ವಸ್ಯಕಲ್ ಸಕ್ಕರೆ, ಡಬ್ಬಿ ಹಾಲು (ಟೀನ್ ಕಾ ದೂದ್), ಪಲ್ಯದ ಪುಡಿ (ಪಿಸಾಹುವಾ ಮಸಾಲಾ), ಮಸಾಲೆ.

ಈ ಪಟ್ಟಿಯನ್ನು ತಯಾರ್ಮಾಡುವುದರಲ್ಲಿ ಗೌರ್ನಮೆಂಟಿನವರು ಸರಬರಾಯಿ ಮಾಡುವ ಎಲ್ಲಾ ಪದಾರ್ಥಗಳನ್ನು ಯಾ ಉಡುಪುಗಳನ್ನು ಬಿಟ್ಟಿರಲಾಗಿದೆ ಮತ್ತು ಸುಲಭವಾಗಿ ಮೂಟೆ ಕಟ್ಟತಕ್ಕ ಮತ್ತು ಸಮುದ್ರ ಪ್ರಯಾಣದ ಮೇಲೆ ಕೆಟ್ಟುಹೋಗದೇ ಇರತಕ್ಕ ಪದಾರ್ಥಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.—ಜುತೆರಾಂ ಆಸ್ಪತ್ರೆ ಸಾಮಾನುಗಳಿಗೆ ಸಂಬಂಧಪಟ್ಟ ವಸ್ತುಗಳು ಎಂದರೆ, ರೋಗಿಗಳಿಗೂ ಗಾಯಪಟ್ಟವರಿಗೂ ಬೇಕಾದ ಪದಾರ್ಥಗಳನ್ನು ಕೊಡುವವರು ಸೇಂಟ್ ಜಾನ್ ಅಂಬ್ಯುಲೆನ್ಸ್ ಅಸೋಸಿಯೇಷನ್ನಿಗೆ ಕಳುಹಿಸಿಕೊಡಬೇಕು.—ಧಾನ್ಯರೂಪವಾಗಿ ಕೊಡುವ ಪದಾರ್ಥಗಳನ್ನು ಯಾವುದಾದರೊಂದು ಗೊತ್ತಾದವರಿಗೆಂತಲಾಗಲೀ ಸರ್ವಸಾಧಾರಣವಾಗಿ ಹಂಚತಕ್ಕ ಬಗ್ಗೆ ಎಂತಲಾಗಲೀ ಕಳುಹಿಸಬಹುದು. ಈ ಪದಾರ್ಥಗಳಿರುವ ಪ್ಯಾಕೇಜುಗಳನ್ನು ಬೊಂಬಾಯಿಯಲ್ಲಿನ ಅಥವಾ ಕರಾಚಿಯಲ್ಲಿನ ಎಂಬಾರ್ಕೇಷನ್ ಕಮ್ಯಾಂಡೆಂಟರವರಿಗೆ ಸಾಗಿಸುವ ಚಾರ್ಜನ್ನು ಕೊಟ್ಟು ಕಳುಹಿಸಬೇಕು. ಯಾರಾದರೂ ಗೊತ್ತಾದವರೊಬ್ಬರಿಗೆ ಉದ್ದೇಶ ಮಾಡಿದಲ್ಲಿ ಸರಿಯಾಗಿ ಪ್ಯಾಕ್ ಮಾಡಿ ಅಂಥವರಿಗೆ ಎಂದು ಸ್ಪಷ್ಟವಾಗಿ ನಮೂದು ಮಾಡಬೇಕು.—ಎಂಬಾರ್ಕೇಷನ್ ಬಂದರಿನಲ್ಲಿ ಪ್ಯಾಕೇಜುಗಳು ವಿಂಗಡಿಸಲಾಗುವುದು. ಯಾವುದಾದರೂ ಒಂದು ಗೊತ್ತಾದ ಸೇನೆಗಾಗಿ ಅಡ್ರಸ್ ಮಾಡಿರುವವುಗಳನ್ನೆಲ್ಲಾ ಆಯಾ ಸೇನೆಗಳಿಗೆ ಕಳುಹಿಸಿಕೊಟ್ಟು ಉಳಿದವುಗಳನ್ನು ಸರ್ವಸಾಧಾರಣವಾಗಿ ಹಂಚತಕ್ಕ ಬಗ್ಗೆ ಬೇಗ (ಸೈನ್ಯವಿರುವ ಜಾಗಕ್ಕೆ) ಕಳುಹಿಸಲಾಗುವುದು.

ಅಮೇರಿಕಕ್ಕೆ ಸೇರಿದ ವೆಸ್ಟ್ ವರ್ಜಿನಿಯಾ ಡಿಸ್ಟ್ರಿಕ್ಟಿನಲ್ಲಿ ಗ್ಯಾಸ್ ಎಂಬ ಹೊಗೆಯು ಹತ್ತಿಕೊಂಡು ಉರಿಯು ವ್ಯಾಪಿಸಿ ಒಂದು ಗಣಿಯೊಳಗೆ ಕೆಲಸಮಾಡುತ್ತಿದ್ದ 171 ಜನ ಕೂಲಿ ಆಳುಗಳು ಮೃತಪಟ್ಟರು. ಇದುವರೆಗೆ ಇಬ್ಬರನ್ನು ಮಾತ್ರ ಬದುಕಿಸಿದರು; ಇವರಿಗೂ ಮೈಯೆಲ್ಲಾ ಸುಟ್ಟ ಗಾಯಗಳಾಗಿವೆ.

ಸಿಂಗಪುರದಲ್ಲಿರುವ 5 ನೇ ಲೈಟ್ ಇನ್‌ಫೆಂಟ್ರಿ ಎಂಬ ರೆಜಿಮೆಂಟಿನಲ್ಲಿ ಸಂಬಳ ಬಡ್ತಿ ಆದ ವಿಚಾರವನ್ನು ಕುರಿತು ಸಿಪಾಯಿಗಳು ಅಸಮಾಧಾನಪಟ್ಟು, ಆ ರೆಜಿಮೆಂಟನ್ನು ಅಲ್ಲಿಂದ ಹಾಂಕಾಂಗಿಗೆ ವರ್ಗಮಾಡಿದ್ದನ್ನು ಕೇಳಿ ಅಸಮಾಧಾನವು ಮತ್ತಷ್ಟು ಹೆಚ್ಚಿ ಫೆಬ್ರವರಿ ತಾ 15 ನೇ ಮಧ್ಯಾಹ್ನ 3 ಗಂಟೆಗೆ ದಂಗೆ ಮಾಡಿದರು. ಈ ರೆಜಿಮೆಂಟು ಬಹಳ ಒಳ್ಳೆ ಸರ್ವಿಸ್ ಮಾಡಿ ಶಾಬಾಸ್‌ಗಿರಿಯನ್ನು ಪಡೆದಿತ್ತು. ಸಿಪಾಯಿಗಳು ಮೂರು ದಿನಗಳ ವರೆಗೆ ದಂಗೇಕೃತ್ಯಗಳನ್ನು ನಡಿಸಿದರು. ತಾ 20 ರಲ್ಲಿ ಬ್ರಿಟಿಷ್ ಸೋಜರುಗಳು ಹೋಗಿ ದಂಗೆಯನ್ನು ಶಮನಮಾಡಿ ಅನೇಕ ಸಿಪಾಯಿಗಳನ್ನು ಹಿಡಿದುಕೊಂಡರು. ಈ ಹೋರಾಟದಲ್ಲಿ ಎಷ್ಟು ಮಂದಿ ನಷ್ಟವಾದರೋ ತಿಳಿಯಲಿಲ್ಲ. ದಂಗೆಯನ್ನು ಅಡಗಿಸುವುದಕ್ಕೆ ಹೋಗಿದ್ದವರಲ್ಲಿ ಪ್ರಜೆಗಳೂ ಸೈನಿಕರೂ 45 ಮಂದಿ ಕೊಲೆಯಾದರು; 19 ಮಂದಿಗೆ ಗಾಯಗಳಾಗಿವೆ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಬಾಯ್ ಮಿಲ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಚೋಟಾದಲ್ಲಾಳಿ, ಮೋಜಿಣಿ ಸುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ನಾನಾ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-47]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಸಂ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಿಕ್ಕಳಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-28]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.

ಆದರೆ ವೇದಗಳನ್ನು ಬಿಟ್ಟು ಪುರಾಣಗಳನ್ನು ನೋಡಿದರೆ ಯಮನನ್ನು ಕುರಿತು ಹೇಳಿರುವ ವರ್ಣನೆಯು ನಿಜವಾಗಿಯೂ ಅತಿ ಭಯಂಕರವಾಗಿದೆ. ಯಮನು ಪುರಾಣಗಳಲ್ಲಿ ಮನುಷ್ಯರ ನ್ಯಾಯಾಧಿಪತಿ; ನರಕಲೋಕಗಳ ಅಧಿಪತಿ; ಪಾಪಗ್ರಸ್ತರಾದ ನರಕದ ನಿವಾಸಿಗಳ ದೊರೆಯೆಂದು ಹೇಳಿದೆ. ಮತ್ತು ಅವನ ಹೆಸರು ಧರ್ಮರಾಯನೆಂದು ಮಾತ್ರವಲ್ಲ, ದಂಡಧರ ಪಾರ್ದ್ರಿಕ ಅಂದರೆ ಉರ್ಲ ಒಡ್ಡಿ ಹಿಡಿಯುವವನು ನರಕಸ್ವರ್ಗಗಳ ದ್ವಾರದ ಬೀಗದಕೈಗಳು ಇವನ ಸ್ವಾಧೀನದಲ್ಲಿವೆ. ಇವನು ಕೈಯಲ್ಲಿ ದೊಡ್ಡ ದೊಣ್ಣೆಯನ್ನೂ ಮತ್ತೊಂದರಲ್ಲಿ ಉರ್ಲನ್ನೂ ಹಿಡಿದಿರುವನು. ಉಗ್ರಾಕಾರಧರನಾದ ಅಘೋರಮೂರ್ತಿ. ಮೃತ್ಯುವು ಅವನ ದೂತನು ಕೆಲವು ವೇಳೆ ಅವನೇ ಸಾಕ್ಷಾತ್ ಪ್ರಸನ್ನನಾಗಿ ಸಾಯುತ್ತಿರುವವನ ದೇಹದಿಂದ ಅವನ ಆತ್ಮವನ್ನು ಸೆಳೆದು ಪ್ರತ್ಯೇಕಿಸುವನಂತೆ. ಅನಂತರ ತನ್ನ ಕರಣೀಕನಾದ ಚಿತ್ರಗುಪ್ತನನ್ನು ಸತ್ತವನ ಆತ್ಮದ ಎದುರಿಗೆ ನಿಲ್ಲಿಸಿ ಸತ್ತವನು ಮಾಡಿದ ದುಷ್ಕೃತಗಳನ್ನೂ ಸತ್ಕೃತಗಳನ್ನೂ ಬರದಿರುವ ಪಟ್ಟಿಯನ್ನು ಓದಿಸುವನು. ಅನಂತರ ಅವನ ಕೃತ್ಯಗಳನ್ನು ತೂಗಿನೋಡಿ ದುಷ್ಕೃತ್ಯಗಳು ಹೆಚ್ಚಾಗಿದ್ದರೆ ಆತನನ್ನು ನರಕಕ್ಕೂ ಸತ್ಕೃತ್ಯಗಳು ಹೆಚ್ಚಾಗಿದ್ದರೆ ಸ್ವರ್ಗಕ್ಕೂ ಮೃತಪಟ್ಟವನನ್ನು ಕಳುಹಿಸುವನು. ಮತ್ತು ವಿಷ್ಣುಭಕ್ತರು ನರಕದಿಂದ ಬಿಡುಗಡೆಯಾಗುವರೆಂದು ವೈಷ್ಣವಪುರಾಣಗಳಲ್ಲಿಯೂ ಶಿವಭಕ್ತರು ಯಮನ ಅಧಿಕಾರದಿಂದ ಬಿಡುಗಡೆಯಾಗುವರೆಂದು ಶಿವಪುರಾಣಗಳಲ್ಲಿಯೂ ಹೇಳಿದೆ.

ಯಮನ ವಿಷಯದಲ್ಲಿ ವೇದದಲ್ಲಿ ಹೇಳಿರುವ ವರ್ಣನೆಯು ಪುರಾಣಗಳಲ್ಲಿ ಹೇಳಿರುವ ವರ್ಣನೆಗೆ ಶುದ್ಧ ವಿರೋಧವಾಗಿದೆಯೆಂದು ಇದರಿಂದ ಪ್ರತ್ಯಕ್ಷವಾಗಿ ತೋರುತ್ತದೆ. ಪುರಾಣಗಳಲ್ಲಿ ಹೇಳಿರುವವನ್ನು ನೋಡಿದರೆ ಮಕ್ಕಳನ್ನು ಅಂಜಿಸುವದಕ್ಕೆ ಹೇಳಿದ ಅಜ್ಜಿ ಕಥೆಗಳಂತೆ ಇವೆ. ಮತ್ತು ಶಿವಭಕ್ತರಿಗೂ ವಿಷ್ಣುಭಕ್ತರಿಗೂ ಪರಸ್ಪರ ವೈರವೂ ಪಕ್ಷಪಾತವೂ ಕಾಣಬರುತ್ತೆ. ಈ ವಿವರವನ್ನು ಓದಿಯವರಿಬ್ಬರಿಗೆ ಕತ್ತರಗುಟ್ಟುವದು ಆಶ್ಚರ್ಯವಲ್ಲ. ಪುರಾಣಗಳ ಮಾತು ಹಾಗಿರಲಿ. ವೇದದಲ್ಲಿ ಯಮನನ್ನು ಕುರಿತು ಹೇಳಿರುವವನ್ನು ನೋಡಿದರೆ ವೇದಗಳ ಕಾಲದ ಋಷಿಗಳು ಮರಣದ ವಿಷಯದಲ್ಲಿಯೂ ತಮ್ಮ ಬಂಧುಮಿತ್ರರ ವಿಷಯದಲ್ಲಿಯೂ ಧೀರ್ಘವಾಗಿಯೂ ಗಂಭೀರವಾಗಿಯೂ ಯೋಚಿಸಿದರೆಂದು ತೋರುತ್ತೆ. ಮತ್ತು ಇವನ್ನು ಕುರಿತು ಕೆಲವು ಸರಿಯಾದ ಅಭಿಪ್ರಾಯಗಳನ್ನು ತಿಳಿದರು. ಮರಣವು ದೇಹದಿಂದ ಆತ್ಮವನ್ನು ಪ್ರತ್ಯೇಕಿಸುತ್ತದೆ. ಮತ್ತು ಮೃತಪಡುವವನನ್ನು ಪರಲೋಕಕ್ಕೆ ಕರಕೊಂಡು ಹೋಗಿ ಬಿಡುವ ನಾಯಕನು ಅವನಿಗೆ ಬೇಕು. ಅವನಿಗೆ ಪಾಪಪರಿಹಾರವೂ ಅಗತ್ಯವಾಗಿದೆ. ಪಾಪಪರಿಹಾರಹೊಂದಿದ ಹೊರತು ಆ ಮಹಿಮೆಯುಳ್ಳ ಪರಲೋಕದಲ್ಲಿ ಅವನು ಸೇರಿ ಸುಖಪಡಲಾರನು ಎಂದು ಭಾವಿಸಿದರು. ಮತ್ತು ಸತ್ತವನ ಪರವಾಗಿ ಇಷ್ಟನ್ನೂ ಮಾಡತಕ್ಕ ಮಹಾತ್ಮನು ಅವಶ್ಯಕವಾಗಿ ಬೇಕೆಂದು ನಂಬಿದರು.

ಪುರಾಣಗಳಲ್ಲಿ ವಿವರಿಸಿ ಬರೆದಿರುವ ಯಮನು ಮನುಷ್ಯರಿಗೆ ಪಾಪಪರಿಹಾರವನ್ನು ಕೊಟ್ಟು ಅವರನ್ನು ಮೋಕ್ಷಲೋಕಕ್ಕೆ ನಡಿಸಿಕೊಂಡು ಹೋಗಿ ಅಲ್ಲಿ ಅವರಿಗೆ ಪರಲೋಕಪದವಿಯನ್ನು ಕೊಡಬಲ್ಲನೇ ? ಯಮನು ಪಾಪಪುಣ್ಯಗಳನ್ನು ವಿಚಾರಿಸಿ ಪಾಪಿಗಳನ್ನು ನರಕಕ್ಕೂ ಪುಣ್ಯವಂತರನ್ನು ಪರಲೋಕಕ್ಕೂ ಕಳುಹಿಸುವನೆಂದು ಪುರಾಣಗಳು ಹೇಳುವದೇನೋ ನಿಜ. ಆದರೆ ಪಾಪಪರಿಹಾರದ ವಿಷಯವನ್ನು ಏನಾದರೂ ಬಲ್ಲನೆಂದು ಎಲ್ಲಿಯೂ ಹೇಳಿರುವದಿಲ್ಲ. ಪರಲೋಕವನ್ನು ಆರ್ಜಿಸತಕ್ಕಷ್ಟು ಪುಣ್ಯವನ್ನು ಮಾಡಿ ಪಾಪವನ್ನು ಮಾಡದೇ ಇರುವವರಿಗೆ ಯಮನಿಂದ ಸಹಾಯವಾದೀತು. ಅಂತಹ ಪರಿಶುದ್ಧರೂ ಪುಣ್ಯಾತ್ಮರೂ ಈ ಲೋಕದಲ್ಲಿ ಯಾರಿದ್ದಾರೆ ? ಅನೇಕ ಪುಣ್ಯಕ್ರಿಯೆಗಳನ್ನು ಮಾಡಿ ಕೆಲವು ಪಾಪಗಳನ್ನು ಮಾಡಿದವನಿಗೆ ಸಹ ಪಾಪಪರಿಹಾರವು ಅಗತ್ಯವಾಗಿದೆ. ಆದರೆ ಚನ್ನಾಗಿ ವಿಚಾರಿಸಲಾಗಿ ಪಾಪವನ್ನು ಮಾಡಿದವರೇ ಈ ಲೋಕದಲ್ಲಿದ್ದಾರೆಯೇ ಹೊರತು ಮನೋವಾಕ್ಕಾಯಗಳಲ್ಲಿ ಪಾಪ ಹತ್ತದಂತೆ ಕೇವಲ ಪರಿಶುದ್ಧರಾಗಿ ಬದುಕಿದವರು ಒಬ್ಬರೂ ಇಲ್ಲ. ಹೀಗಿರುವದರಿಂದ ಪುರಾಣದಲ್ಲಿ ಬಣ್ಣಿಸಿರುವ ಯಮನು ಪಾಪಿಗಳಿಗೆ ಸಹಾಯಮಾಡಲಾರನು. ಮನುಷ್ಯರು ಅವನನ್ನು ಆಶ್ರಯಿಸುವದು ಪ್ರಯೋಜನವಿಲ್ಲ.

ವೇದದಲ್ಲಿ ಯಮನು ನೀತಿವಂತನಾಗಿ ನಡೆದು ಮೃತಪಟ್ಟನೆಂದು ಹೇಳಿರುವದು ಸರಿಯಷ್ಟೆ. ಸಾಧಾರಣ ಜನಗಳು ಇಂಥವನಿಗೆ ಗೌರವವನ್ನು ಕೊಡತಕ್ಕದ್ದು ಸರಿ. ಆದರೆ ಅವನು ಪರಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುವದಕ್ಕೆ ಅವನಿಗೆ ಅಧಿಕಾರಕೊಟ್ಟವರು ಯಾರು ? ಅವನು ಪಾಪಪರಿಹಾರಮಾಡುವದಕ್ಕೆ ಅವನನ್ನು ನೇಮಿಸಿದವನು ಯಾರು ? ಪಾಪಪರಿಹಾರ ಕೊಡುವದಕ್ಕೆ ಅವನಿಗೆ ಅಧಿಕಾರವುಂಟೆಂದು ಎಲ್ಲಿ ಹೇಳಿದೆ ? ಅನೇಕ ಮನುಷ್ಯರು ತಕ್ಕಷ್ಟು ಪಾಪಭೀತರಾಗಿ ಬದುಕಿ ಸತ್ತಿದಾರೆ. ಆದರೆ ಅವರು ನಮಗೆ ಪಾಪಪರಿಹಾರವನ್ನೂ ಪವಿತ್ರಸ್ವಭಾವವನ್ನೂ ಕೊಟ್ಟು ಪರಲೋಕಕ್ಕೆ ಕರಕೊಂಡು ಹೋಗಲಾರರು.

ಯೇಸು ಕ್ರಿಸ್ತನೊಬ್ಬನೇ ಪರಲೋಕದಲ್ಲಿ ದೇವರ ಬಳಿಯಲ್ಲಿದ್ದು ದೇವರಿಂದ ಪಾಪಿಗಳಿಗೆ ರಕ್ಷಕನಾಗಿ ನೇಮಕವಾಗಿ ಈ ಲೋಕಕ್ಕೆ ಬಂದವನು. ಇದರ ವಿಷಯ ಸತ್ಯವೇದದಲ್ಲಿ ಹೇಳುವದೇನಂದರೆ—ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಲೋಕಕ್ಕೆ ಕಳುಹಿಸಿಕೊಟ್ಟನೇ ಹೊರತು ಲೋಕಕ್ಕೆ ಅಪರಾಧಿಯೆಂದು ತೀರ್ಪುಕೊಡುವದಕ್ಕೆ ಆತನನ್ನು ಕಳುಹಿಸಲಿಲ್ಲ. ಮತ್ತು ಆತನು ಈ ಲೋಕದಲ್ಲಿರುವವರಿಗೆ—ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮುಖಾಂತರವಲ್ಲದೆ ಯಾರೂ ತಂದೆಯ ಸಾನ್ನಿಧ್ಯವನ್ನು ಸೇರಲಾರನು. ನಾನು ಒಳ್ಳೇ ಕುರುಬನು. ನಾನು ನನ್ನ ಕುರಿಗಳ ರಕ್ಷಣೆಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು. ನನ್ನನ್ನು ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆಯೆಂದು ಹೇಳಿದ್ದಾನೆ.

ಯುದ್ಧದ ಸಮಾಚಾರಗಳು.

ಫ್ರಾನ್ಸಿನಲ್ಲಿ ನಮ್ಮ ಪಕ್ಷದವರ ಜಯಪ್ರದಗಳು.

ಡಾರ್ಡನೆಲ್ಸ್ ಕೋಟೆಗಳನ್ನು ಒಡೆಯುವುದು.

ಯುದ್ಧಭೂಮಿಯ ಹಲವು ಠಾಣ್ಯಗಳಲ್ಲಿ ಕದನಗಳು ನಿಲುಗಡೆಯಿಲ್ಲದೆ ನಡೆಯುತ್ತಾ ಬಂದಿವೆ. ಫ್ರಾನ್ಸಿನಲ್ಲಿ ಮಾತ್ರ ನಮ್ಮ ಪಕ್ಷದವರು ಮುಂದರಿಸಿ ನುಗ್ಗಿ ಹೋಗಿರುವುದು ಖಚಿತವಾಯಿತು. ಇಲ್ಲಿ ಜರ್ಮನಿಯವರನ್ನು ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ.

ಪಶ್ಚಿಮ ರಣರಂಗದಲ್ಲಿ.

ಕಳೆದ ಫೆಬ್ರವರಿ ತಾ. 16ರಿಂದ ನಡೆದಿರುವ ಯುದ್ಧ ಕಾರ್ಯಗಳನ್ನು ಕುರಿತು ಸರ್ಕಾರದವರು ಕೆಲವು ಸಂಗತಿಗಳನ್ನು ಪ್ರಕಟಮಾಡಿದಾರೆ. ಜರ್ಮನಿಯ ಸೈನ್ಯಗಳನ್ನು ಆದಷ್ಟು ಹೆಚ್ಚಾಗಿ ಪಶ್ಚಿಮ ರಣರಂಗದಲ್ಲಿ ಬರಮಾಡಿಕೊಳ್ಳಬೇಕೆನ್ನುವುದೂ, ಪೂರ್ವ ರಣರಂಗದಲ್ಲಿ ರಷ್ಯಾದವರ ಮೇಲೆ ಯುದ್ಧ ಮಾಡತಕ್ಕ ಜರ್ಮನಿ ಸೈನ್ಯಗಳು ಕೂಡಿದ ಮಟ್ಟಿಗೂ ಕಡಮೆಯಾಗುವಂತೆ ಮಾಡಬೇಕೆನ್ನುವುದೂ ನಮ್ಮ ಪಕ್ಷದವರ ಮುಖ್ಯವಾದ ಆಶಯವೆಂದು ತಿಳಿಯುತ್ತದೆ. ಈ ಉದ್ದೇಶದಿಂದ ಫ್ರೆಂಚರೂ ಬ್ರಿಟಿಷರೂ ಅಂದಾಜು ಹಾಕಿಕೊಂಡು ತಮ್ಮ ಸೈನ್ಯಗಳನ್ನು ಮುಂದಕ್ಕೆ ಕಳುಹಿಸಿದ್ದರಿಂದ ಇವರಿಗೂ ಜರ್ಮನಿಯವರಿಗೂ ಹಲವು ಠಾಣ್ಯಗಳಲ್ಲಿ ಸಂಧಿಯುಂಟಾಗಿ ಬಹಳ ಕಠಿಣವಾದ ಕದನಗಳು ನಡೆದಿರುತ್ತವೆ.

ಒಂದು ಠಾಣ್ಯದಲ್ಲಿ ಫ್ರೆಂಚರು ನುಗ್ಗಿಹೋಗಿ ಒಂದು ಗುಡ್ಡದ ಮೇಲಿರುವ ಕೋಟೆಯನ್ನು ಸ್ವಾಧೀನ ಪಡಿಸಿಕೊಂಡರು. ಇದಕ್ಕಾಗಿ ಅತ್ಯಂತ ಘೋರವಾದ ಕದನವಾಯಿತು. ಫ್ರೆಂಚರು ಜರ್ಮನಿಯವರ ಕೆಲವು ಕಂದಕಗಳನ್ನು ಸ್ವಾಧೀನಪಡಿಸಿಕೊಂಡರು ಜರ್ಮನಿಯವರು ಅವುಗಳನ್ನು ಗೆದ್ದುಕೊಳ್ಳಬೇಕೆಂದು ಅತಿವರ್ತಿ ಸಾಹಸಪಟ್ಟು ನುಗ್ಗಿಬಂದರು. ಇದು ನೆರವೇರಲಿಲ್ಲ; ಜರ್ಮನಿಯವರು ಈ ಪ್ರಯತ್ನದಲ್ಲಿ ಬಹಳ ನಷ್ಟಕ್ಕೆ ಗುರಿಯಾದರು ಈ ಸಂಗತಿಯನ್ನು ಅವರೇ ಹೇಳಿ ಒಪ್ಪಿಕೊಂಡಿದಾರೆ. ಫ್ರೆಂಚರ ಸೈನ್ಯಗಳನ್ನು ಒಬ್ಬ ಲೆಫ್ಟಿನೆಂಟನು ನಡಿಸಿಕೊಂಡು ಹೋದನು. ಇವನು ಗಾಯಪಟ್ಟು ಬಿದ್ದುಬಿಟ್ಟನು. ತರುವಾಯ ಇನ್ನೊಬ್ಬ ಲೆಫ್ಟಿನೆಂಟನು ಮುಂದರಿಸಿ ಸೈನ್ಯವನ್ನು ನುಗ್ಗಿಸಿದನು. ಇವನೂ ಕೊಲೆಯಾಗಿ ಬಿದ್ದುಹೋದನು. ಜರ್ಮನಿಯವರು ನುಗ್ಗಿ ಬಂದು ಒಂದು ಕಂದಕದಲ್ಲಿದ್ದ ಫ್ರೆಂಚರನ್ನು ಕೊಂದುಹಾಕಿದರು. ಇವರಲ್ಲಿ ಇಬ್ಬರು ಹುದ್ದೇದಾರರೂ ಒಬ್ಬ ಸಾರ್ಜಂಟೂ ಉಳುಕೊಂಡರು. ಇವರಾರೇ ರೋ ಸುಮ್ಮನಾಗದೆ ಶತ್ರುವಿಗೆ ಸಗ್ಗದೆ ಕಡಿದಾಡುತ್ತಲೇ ಪ್ರಾಣತ್ಯಾಗ ಮಾಡಿದರು. ಮಾರನೇ ದಿನ ಫ್ರೆಂಚರು ಮತ್ತೆ ಜರ್ಮನಿಯವರ ಮೇಲೆ ನುಗ್ಗಿಹೋದರು. ಜರ್ಮನಿಯವರಲ್ಲಿ ಅನೇಕರನ್ನು ಕೊಂದೂ ಗಾಯಪಡಿಸಿಯೂ ಅವರ ಕಂದಕಗಳನ್ನು ಕಿತ್ತುಕೊಂಡರು. ಇದರಲ್ಲಿ ಫ್ರೆಂಚರೂ ಬಹಳವಾಗಿ ನಷ್ಟಪಟ್ಟರು. ಆದರೆ ಜರ್ಮನಿಯವರ ಹೆಣಗಳು ರಾಶಿರಾಶಿಯಾಗಿ ಬಿದ್ದಿದ್ದದ್ದರಿಂದ ಕಡಿದಾಟವು ಅತ್ಯಂತ ಘೋರವಾಗಿದ್ದಿರಬೇಕೆಂದು ತಿಳಿಯಬಹುದಾಯಿತು. ಕಡೆಗೆ ಜರ್ಮನಿಯವರು ಕೋಟೆಯನ್ನು ಫ್ರೆಂಚರಿಗೆ ಒಪ್ಪಿಸಿಬಿಟ್ಟು ಹಿಮ್ಮೆಟ್ಟಿ ಹೊರಟುಹೋಗಬೇಕಾಯಿತು. ಈ ಕದನವು ರಾತ್ರಿ ಹೊತ್ತಿನಲ್ಲಿ ನಡೆಯಿತು. ಜರ್ಮನಿಯವರು ಕತ್ತಲಲ್ಲಿ ನುಗ್ಗಿ ಯುದ್ಧ ಮಾಡಲೊಲ್ಲದೆ ಹೋದರೆಂದು ಕಾಣುತ್ತದೆ. ಗುಂಡುಗಳ ಹಾರಾಟದ ಬೆಳಕಿನಲ್ಲಿ ಜರ್ಮನಿಯ ಹುದ್ದೇದಾರರು ತಮ್ಮ ಸೈನಿಕರನ್ನು ಹೊಡೆಯುತ್ತಲೂ, ಪಿಸ್ತೂಲುಗಳನ್ನು ತೋರಿಸಿ ಕೊಂದುಬಿಡುತ್ತೇವೆಂದು ಹೆದರಿಸುತ್ತಲೂ ಇದ್ದದ್ದು ಕಂಡುಬಂದಿತು. ನಾಲುಕೈದು ಮೈಲಿಗಳ ಉದ್ದಕ್ಕೂ ನಿಂತಿದ್ದ ಫ್ರೆಂಚರ ಸೈನ್ಯಗಳು ಉದ್ದಕ್ಕೂ ಒಂದುವರೆ ಮೈಲಿಯಷ್ಟು ಮುಂದರಿಸಿ ನುಗ್ಗಿಹೋದವು.

...ದಿಂದ ಉತ್ತರಕ್ಕೆ ಸುಮಾರು ಮೂರು ಮೈಲಿಗಳ ಉದ್ದಕ್ಕೆ ಸಾಲುಕಟ್ಟಿ ... ಬ್ರಿಟಿಷ್ ಸೈನಿಕರು ಅಷ್ಟು ಉದ್ದಕ್ಕೂ ಸುಮಾರು ಮುಕ್ಕಾಲು ಮೈಲಿ ಮುಂದಕ್ಕೆ ನುಗ್ಗಿಹೋಗಿ ಜರ್ಮನಿ ಸೈನಿಕರ ಹಿಂಭಾಗದಲ್ಲಿದ್ದ ಕಂದಕ ... ಮೇಲೆ ನುಗ್ಗಿದ್ದರಿಂದ ಜರ್ಮನಿಯವರು ಮಧ್ಯೆ ಸಿಕ್ಕಿಕೊಂಡರು. ಅಲ್ಲಿ ...ಗೆ ಎರಡು ಗ್ರಾಮಗಳು ಸ್ವಾಧೀನವಾದವು; ಸುಮಾರಾಗಿ ಒಂದು ಸಾವಿರ ...ಯವರು ಕೈಸೆರೆ ಸಿಕ್ಕಿದರು. ಜರ್ಮನಿಯವರು ಕಳೆಕೊಂಡಿದ್ದ ಪ್ರದೇಶ ... ಗೆದ್ದುಕೊಳ್ಳಬೇಕೆಂದು ಮತ್ತೆ ಸಾಹಸಪಟ್ಟು ನುಗ್ಗಿಬಂದು ಕದನ ...ದರು. ಇದು ನೆರವೇರಲಿಲ್ಲ, ಅನೇಕರನ್ನು ಕಳೆದುಕೊಂಡದ್ದು ಹೋಗ...ಯಿತು. ಬ್ರಿಟಿಷರು ಅಲ್ಲಿಗೇ ಸುಮ್ಮನಾಗದೆ ಮುಂದಕ್ಕೂ ನುಗ್ಗಿಹೋಗಿ ... ಕೆಲವರನ್ನು ಕೈಸೆರೆ ಹಿಡಿದಿರುತ್ತಾರೆ.

...ಬೆಲ್ಜಿಯಮ್‌ನಲ್ಲಿ ಕದನಮಾಡುತ್ತಿರುವ ಬೆಲ್ಜಿಯರ್ಕರು ಕೂಡ ಮುಂದ ... ಸುಮಾರು ಕಾಲು ಮೈಲಿ ದೂರ ನುಗ್ಗಿ ಹೋಗಿರುವರು.

...ರೀತಿಯಾಗಿ ನಮ್ಮ ಪಕ್ಷದವರು ಒತ್ತಿಸಿಕೊಂಡು ಹೋಗುತ್ತಿರುವುದು ಜರ್ಮನಿಯವರಿಗೆ ತುಂಬಾ ಕಷ್ಟವಾಗುತ್ತಿದೆ. ಅವರು ಪೂರ್ವ ರಣರಂ... ರಷ್ಯಾದವರ ಮೇಲೆ ಯುದ್ಧಮಾಡುವುದಕ್ಕಾಗಿ ಹೊಸ ಸೈನ್ಯಗಳನ್ನು ಕಳು... ತಯಾರಾಗಿರುವುದು ಸೈನ್ಯವನ್ನು ಅಲ್ಲಿಗೆ ಕಳುಹಿಸುವುದಕ್ಕೆ ಪ್ರತಿ... ಜರ್ಮನಿಯವರು ಪೂರ್ವ ರಣರಂಗದಿಂದ ಫ್ರಾನ್ಸಿನ ಕಡೆಗೆ ತಮ್ಮ ಸೈನ್ಯವನ್ನು ಕರಸಿಕೊಳ್ಳುವಂತಾಗಿದೆ. ಯುದ್ಧಭೂಮಿಯಲ್ಲಿ ಹತ್ತು ಸಹಸ್ರದ... ಜರ್ಮನಿಯವರ ಹೆಣಗಳು ಬಿದ್ದಿದ್ದವು. ಇದಲ್ಲದೆ 2,000 ಜರ್ಮನಿಯವರು ಕೈಸೆರೆ ಸಿಕ್ಕಿದರು. ಯುದ್ಧವು ಪ್ರಾರಂಭವಾದಾರಭ್ಯ ಜರ್ಮನಿಯವರು 30,00,000 ಸೈನ್ಯವನ್ನು ಕಳೆದುಕೊಂಡಿದಾರೆಂದೂ, ಮುದುಕರು ವಿನಾ ಉಳಿದ ...ರೆಲ್ಲಾ ಆಯುಧಪಾಣಿಗಳಾಗಿ ಯುದ್ಧಕ್ಕೆ ಹೊರಟಿದಾರೆಂದೂ ಎಣಿಸ...ಲ್ಪಟ್ಟಿದೆ.

ವಿಮಾನ ಯಂತ್ರಗಳ ಕಾರುಬಾರುಗಳೂ ತಡೆಯಿಲ್ಲದೆ ನಡೆಯುತ್ತಿವೆ. ನಮ್ಮ ಪಕ್ಷದವರು ವಿಮಾನ ಯಂತ್ರಗಳಲ್ಲಿ ಹೋಗಿ ಓಸ್ಟೆಂಡ್ ಎಂಬ ತೀರಪಟ್ಟಣಕ್ಕೆ 11 ಸಿಡಿಮದ್ದಿನ ಗುಂಡುಗಳನ್ನು ಇಳಿಯಬಿಟ್ಟರು. ಯುದ್ಧವು ಪ್ರಾರಂಭವಾದಂದಿನಿಂದ ನಮ್ಮ ಪಕ್ಷದ ವಿಮಾನಗಳು 10,000 ಸಲ ಅಂತರಿಕ್ಷದಲ್ಲಿ ಹಾರಾಡಿ, 18,000 ಗಂಟೆಗಳ ಹೊತ್ತು ಅಂತರಿಕ್ಷದಲ್ಲಿದ್ದುದಾಗೂ, ಅವು 11,35,000 ಮೈಲಿ ದೂರ ಆಕಾಶದಲ್ಲಿ ಸಂಚಾರಮಾಡಿರುವುದಾಗಿಯೂ ತಿಳಿಯುತ್ತದೆ; ಅಂದರೆ ವಿಮಾನ ಯಂತ್ರಗಳು ಭೂಪ್ರಪಂಚವನ್ನು 45 ಸಲ ಸುತ್ತಿಕೊಂಡು ಬಂದಂತಾಯಿತು.

ಫ್ರೆಂಚರ ದಳಪತಿಗಳಲ್ಲೊಬ್ಬರು ಒಂದು ರಂಧ್ರದ ಮೂಲಕ ಜರ್ಮನಿಯವರ ಸೈನ್ಯವನ್ನು ನೋಡುತ್ತಿದ್ದಾಗ ಅವರ ಮೇಲೆ ಗುಂಡುಗಳು ಬಿದ್ದು ಗಾಯಪಟ್ಟರು.

ಪೂರ್ವ ರಣರಂಗದಲ್ಲಿ.

ಈಗ ಬಂದಿರುವ ತಂತೀ ವರ್ತಮಾನಗಳು ಕೆಲವು ದಿನಗಳ ಹಿಂದೆ ನಡೆದ ಕದನಗಳ ವೃತ್ತಾಂತವನ್ನು ತಿಳಿಸುವವಲ್ಲದೆ ಈಚೆಗೆ ನಡೆದ ಯುದ್ಧಕಾರ್ಯಗಳ ಏನೂ ಹೇಳುವುದಿಲ್ಲ. ಚಳಿಗಾಲವು ಕಳೆಯುತ್ತಾ ಇದೆ; ನೆಲವು ಮೆತುವಾಗುತ್ತಿರೋಣದರಿಂದ ಸೈನ್ಯಗಳು ಚಲಿಸುವುದು ಕಷ್ಟವಾಗಿರುವುದು. ಕಳೆದ ತಿಂಗಳಲ್ಲಿ ಜರ್ಮನಿಯವರು ರಷ್ಯಾದವರ ಮೇಲೆ ಕದನಗಳನ್ನು ನಡಿಸಿದ್ದರಲ್ಲಿ 2,50,000 ಸೈನ್ಯಗಳನ್ನು ಕಳೆದುಕೊಂಡರೆಂದು ಎಣಿಸಲ್ಪಟ್ಟಿದೆ. ಉತ್ತರಭಾಗದ ಕೊನೆಯಲ್ಲಿ ಜರ್ಮನಿಯವರು ಹಿಮ್ಮೆಟ್ಟಿ ಬರುತ್ತಿರುವರು. ಇದಲ್ಲದೆ ಜರ್ಮನಿಯವರ ಸೈನ್ಯಗಳಲ್ಲಿ ಉತ್ತಮವಾದವೆಂದು ಎಣಿಸಲ್ಪಟ್ಟ ಒಂದು ಸೈನ್ಯದೊಳಗೆ 12,000 ಸೈನಿಕರು ಕೊಲೆಯಾದರೆಂದು ಹೇಳಲಾಗಿದೆ.

ಏನಾದರೂ ಮಾಡಿ ವಾರ್ಸಾ ನಗರವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಜರ್ಮನಿಯವರು ಸಂಕಲ್ಪ ಮಾಡಿಕೊಂಡಿರುವಂತೆ ಕಾಣುತ್ತದೆ. ಇದಕ್ಕೋಸ್ಕರ ಉತ್ತರ ಕಡೆಯಿಂದ ನುಗ್ಗಿಬರಬೇಕೆಂದು ಆ ಭಾಗದಲ್ಲಿ ಅಂದರೆ ಉತ್ತರ ಪೋಲೆಂಡಿನಲ್ಲಿ ಅವರು ಸೈನ್ಯಗಳನ್ನು ಜಮಾಯಿಸಿಕೊಳ್ಳುತ್ತಿದಾರೆ. ಜರ್ಮನಿಯವರು ನುಗ್ಗಿಹೋಗುವುದಕ್ಕೆ ಎಂಟು ಅಥವಾ ಹತ್ತು ಸೈನ್ಯಗಳನ್ನು ಸಿದ್ಧಪಡಿಸಿಕೊಂಡು ಇರುವಂತೆಯೂ, ಅಲ್ಲಿ ಜರ್ಮನಿಯವರಿಗೂ ರಷ್ಯಾದವರಿಗೂ ಘೋರವಾದ ಯುದ್ಧ ಪ್ರಾರಂಭವಾಗಿ ನಡೆಯುತ್ತಿರುವಂತೆಯೂ ಹೇಳಲಾಗಿದೆ. ಅತ್ತಲಾಗಿ ರಷ್ಯಾದವರು ಸುಮ್ಮನಿಲ್ಲ. ಅವರು ದಿನಕ್ರಮೇಣ ತಮ್ಮ ಸೈನ್ಯಗಳನ್ನು ಬಲಪಡಿಸಿಕೊಳ್ಳುತ್ತಿರುವರು. ಇದನ್ನು ನೋಡಿದರೆ ಜರ್ಮನಿಯವರಿಗೆ ಜಯವಾಗುವ ಸಂಭವವೇನೂ ಕಂಡುಬರುವುದಿಲ್ಲ.

ಕಾರ್ಪೇಥಿಯನ್ ಪರ್ವತ ಪ್ರಾಂತ್ಯಗಳಲ್ಲಿ ಕೆಲವು ಕದನಗಳಾದವು. ಅಲ್ಲಿ ಅನೇಕ ಆಸ್ಟ್ರಿಯಾದವರು ರಷ್ಯಾದವರಿಗೆ ಶರಣಾಗತರಾದರು. ಆಸ್ಟ್ರಿಯಾದವರು ಎಷ್ಟು ಸಲ ನುಗ್ಗಿ ಯುದ್ಧಮಾಡಿದಾಗ್ಯೂ, ಪ್ರಯೋಜನವಾಗದೆ ಬಹಳ ನಷ್ಟಪಟ್ಟು ವಾಪಸು ಬರಬೇಕಾಯಿತು. ರಷ್ಯಾದವರು ಆಸ್ಟ್ರಿಯಾದವರ ಮೇಲೆ ನುಗ್ಗಿ ಯುದ್ಧಮಾಡಿ 2 ಹೌವಿಟ್ಜರ್ ಎಂಬ ಫಿರಂಗಿಗಳನ್ನೂ, 2 ಸಾಧಾರಣ ಫಿರಂಗಿಗಳನ್ನೂ, 7 ಕ್ವಿಕ್‌ಫೈರರ್ ಎಂಬ ಫಿರಂಗಿಗಳನ್ನೂ ಸ್ವಾಧೀನಪಡಿಸಿಕೊಂಡದ್ದಲ್ಲದೆ 4,000 ಆಸ್ಟ್ರಿಯಾ ಸೈನಿಕರನ್ನು ಕೈಸೆರೆ ಹಿಡಿದು ಇರುತ್ತಾರೆ. ಪೂರ್ವ ಗೆಲಿಷಿಯಾದಲ್ಲಿ ಕೊಸೆಕ್ ಎಂಬ ರಷ್ಯಾ ಸೈನಿಕರು ಹಂಗೇರಿ ಹುಸ್ಸಾರ್ ಎಂಬ ಸವಾರ್ ಸೈನ್ಯದಲ್ಲಿ ಮೂರು ಸ್ಕ್ವಾಡ್ರನ್‌ಗಳನ್ನು ನಾಶಮಾಡಿರುತ್ತಾರೆ. 36 ಮಂದಿ ಮಾತ್ರ ಉಳುಕೊಂಡರು; ಅವರು ಕೈಸೆರೆ ಹಿಡಿಯಲ್ಪಟ್ಟದಾರೆ.

ಟರ್ಕಿ.

ಡಾರ್ಡನೆಲ್ಸ್ ಜಲಮಾರ್ಗದಲ್ಲಿರುವ ಟರ್ಕಿಯವರ ಕೋಟೆಗಳಿಗೆ ನಮ್ಮ ಪಕ್ಷದವರು ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆಯುತ್ತಲೇ ಬಂದಿದಾರೆ. ಆ ಜಲಮಾರ್ಗದಲ್ಲಿ ಇಕ್ಕಟ್ಟಾದ ಭಾಗಗಳಲ್ಲಿರುವ ಕೆಲವು ಕೋಟೆಗಳನ್ನು ಹೊಡದು ಹಾಳುಕೆಡವಿದರು. ಈ ಜಲಮಾರ್ಗದ ಉಭಯ ಪಾರ್ಶ್ವಗಳಲ್ಲೂ ನಾಲು ಕೋಟೆಗಳನ್ನು ಕಟ್ಟಿ ಅವುಗಳ ಮೇಲೆ 11 ಅಂಗುಲಗಳ ಫಿರಂಗಿಗಳನ್ನು ಎತ್ತಿಕಟ್ಟಿದ್ದರೆ ಯಾವ ಶತ್ರುವಿನ ಜಹಜೂ ಆ ಜಲಮಾರ್ಗದಲ್ಲಿ ಬರಲಾರದೆಂದು ಟರ್ಕಿಯವರೂ ಜರ್ಮನಿಯವರೂ ತಿಳಿದಿದ್ದರು. ಆದರೆ ಬ್ರಿಟಿಷರ ಕ್ವೀನ್ ಎಲಿಜಬೆತ್ ಎಂಬ ಜಹಜಿನಲ್ಲಿ 15 ಅಂಗುಲ ಪ್ರಮಾಣದ ಫಿರಂಗಿಗಳಿರುತ್ತವೆ. ಇವುಗಳಿಂದ ಹೊಡೆಯಲ್ಪಡುವ ಸುಮಾರು ಒಂದು ಟನ್ ತೂಕದ ಫಿರಂಗಿಗಳು ಹನ್ನೆರಡು ಮೈಲಿ ದೂರ ಹೋಗಿ ಬಿದ್ದು ಅಪಾಯತವನ್ನು ಮಾಡಬಲ್ಲವು. ಕೋಟೆಗಳು ಎಷ್ಟೇ ಬಲವಾಗಿದ್ದರೂ ಈ ಗುಂಡುಗಳು ನಾಶಪಡಿಸಿಬಿಡುತ್ತವೆ. ಈ ಜಲಮಾರ್ಗದಲ್ಲಿ ಉದ್ದಕ್ಕೂ ಅನೇಕ ಕೋಟೆಗಳಿರೋಣದರಿಂದ ನಮ್ಮ ಕಡೆಯವರ ಉದ್ದೇಶ ನೆರವೇರುವುದಕ್ಕೆ ಒಂದು ತಿಂಗಳಾದರೂ ಬೇಕಾದೀತೆಂದು ಕಾಣುವುದು. ಇದುವರೆಗೆ ನಮ್ಮ ಪಕ್ಷದವರು ನಡಿಸಿರುವ ಕಾರ್ಯಗಳು ತೃಪ್ತಿಕರವಾಗಿವೆ. ಕೋಟೆಗಳನ್ನು ಕೆಡವುತ್ತಿದಾರೆ, ಶತ್ರುವಿನ ನಾಲು ಫಿರಂಗಿಗಳ ಬಾಯಿ ಮುಚ್ಚಿಸಿದಾರೆ, ಜಲಮಾರ್ಗದಲ್ಲಿ ಶತ್ರುವು ಹಾಕಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಹುಡುಕಿ ತೆಗೆಯುತ್ತಿರುವರು. ಉತ್ತರ ಆಫ್ರಿಕಾದಲ್ಲಿ ಫ್ರೆಂಚರು ಬಲವಾದ ಸೈನ್ಯವನ್ನು ಇಟ್ಟು ಕಾದಿರುತ್ತಾರೆ. ಈ ಪೈಕಿ ಕೆಲವು ಸೈನ್ಯಗಳು ಟರ್ಕಿಗೆ ಹೊರಟಿರುವವು. ಬ್ರಿಟಿಷರೂ ಈಜಿಪ್ಟಿನಲ್ಲಿ ಬಹಳ ಸೈನ್ಯವನ್ನು ಇಟ್ಟುಕೊಂಡಿದಾರೆ. ಇದನ್ನೂ ಸಮಯ ಬಂದಾಗ ಟರ್ಕಿಗೆ ಕಳುಹಿಸಿಕೊಡುವರು. ಇದುವರೆಗೆ ಬ್ರಿಟಿಷರ ಕಡೆ 25 ಮಂದಿ ಕೊಲೆಯಾದರು, 23 ಜನರಿಗೆ ಗಾಯಗಳಾದವು, 3 ಮಂದಿ ಸಿಕ್ಕಿಲ್ಲ. ಕೆಲವು ಹಡಗುಗಳಿಗೆ ಶತ್ರುವಿನ ಗುಂಡೇಟು ತಗಲಿತು. ಆದರೆ ಇದರಿಂದ ವಿಶೇಷ ನಷ್ಟವೇನೂ ಆಗಿ ಇಲ್ಲ. ನಮ್ಮ ಕಡೆಯವರು ವಿಮಾನ ಯಂತ್ರಗಳಲ್ಲಿ ಏರಿಹೋಗಿ ಟರ್ಕಿಯವರ ನಾಲು ಫಿರಂಗಿಗಳ ಸ್ಥಾನವನ್ನು ಗೊತ್ತುಮಾಡಿಕೊಂಡು ಬಂದರು.

ನಮ್ಮ ಪಕ್ಷದವರು ಆಸ್ಯಾಮೈನರಿನಲ್ಲಿರುವ ಸ್ಮರ್ನಾ ಎಂಬ ತೀರಪಟ್ಟಣದ ಬಳಿ ಇರುವ ಕೋಟೆಗಳಿಗೆ ಜಹಜುಗಳಿಂದ ಫಿರಂಗಿ ಗುಂಡುಗಳನ್ನು ಹೊಡೆಯುತ್ತಿದಾರೆ. ಕೋಟೆಗಳಿಂದ ಜವಾಬಾಗಿ ಗುಂಡುಗಳು ಬರುವುದು ನಿಂತುಹೋಯಿತು. ಮತ್ತು ಸ್ಮರ್ನಾ ಕೊಲ್ಲಿಯಲ್ಲಿ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಹುಡುಕಿ ತೆಗೆಯುತ್ತಿದಾರೆ. ಸ್ಮರ್ನಾ ಪಟ್ಟಣದ ಗವರ್ನರು ಪ್ರಜೆಗಳನ್ನು ಊರುಬಿಟ್ಟು ಹೋಗಬೇಕೆಂದು ಸಾರಿಸಿದರು. ಆದರೆ ಅಲ್ಲಿರುವ ಪರರಾಜ್ಯಗಳ ರಾಯಭಾರಿಗಳು ಆ ಪಟ್ಟಣದಲ್ಲಿ ಒಂದು ಭಾಗವನ್ನು ಪ್ರತ್ಯೇಕ ಮಾಡಿಕೊಡಬೇಕೆಂದೂ, ಅದು ಯುದ್ಧಭೂಮಿಯಾಗಿ ಎಣಿಸಲ್ಪಡಕೂಡದೆಂದೂ ಅಪೇಕ್ಷೆಪಡುತ್ತಾರೆ.

ರಷ್ಯಾದವರ ಜಹಜುಗಳು ಕಪ್ಪು ಕಡಲಿನಲ್ಲಿರುವ ಕೆಲವು ಟರ್ಕಿ ಕೋಟೆಗಳಿಗೆ ಫಿರಂಗಿ ಗುಂಡುಗಳನ್ನು ಹಾಕಿದವು. ಕೋಟೆಗಳಲ್ಲಿದ್ದ ಶತ್ರುವಿನ ಫಿರಂಗಿಗಳ ಬಾಯಿ ಕಟ್ಟಿಹೋಯಿತು. ಇದಲ್ಲದೆ ಟರ್ಕಿಯವರ ಎಂಟು ಜಹಜುಗಳು ಮುಳುಗಿಸಲ್ಪಟ್ಟವು.

ಟರ್ಕಿಯವರು ಮದ್ದುಗುಂಡಿಲ್ಲದೆ ಕಾತರ್ಯಪಡುತ್ತಿದಾರೆ; ಜರ್ಮನಿಯವರು ಟರ್ಕಿಗೆ ಮದ್ದುಗುಂಡುಗಳನ್ನು ಒದಗಿಸುವಹಾಗಿಲ್ಲ.

ಆಸ್ಯಾಮೈನರಿನಲ್ಲಿ ರಷ್ಯಾದವರು ಟರ್ಕಿಯವರನ್ನು ಸೋಲಿಸಿ ಹಿಮ್ಮೆಟ್ಟಿಸಿಕೊಂಡು ಹೋಗುತ್ತಿದಾರೆ.

ಜರ್ಮನಿಯವರ ಗೇಬೆನ್ ಎಂಬ ಯುದ್ಧದ ಜಹಜು ಬಹಳ ಚೂರಾಯಿತು. ಆದಕಾರಣ ಅದರಲ್ಲಿದ್ದ ಫಿರಂಗಿಗಳನ್ನು ಇಳಿಸಿಕೊಂಡು ಹೋಗಿ ಕಾನ್‌ಸ್ಟೆಂಟಿನೋಪಲ್ ನಗರದ ರಕ್ಷಣೆಗಾಗಿ ನೆಲದ ಮೇಲೆ ಇಟ್ಟದಾರೆ.

ಒಬ್ಬಾನೊಬ್ಬ ಬಾತ್ಮೀದಾರನು ಬ್ರಿಟಿಷರ ಟ್ರಯಂಫ್ ಎಂಬ ಜಹಜನ್ನು ನೋಡಿಕೊಂಡು ಬಂದು ವಿವರಿಸುವಾಗ್ಗೆ ಆ ಜಹಜು 17 ಸಲ ಯುದ್ಧಕ್ಕೆ ಹೋಗಿತ್ತೆಂದೂ, 2,000 ಗುಂಡುಗಳನ್ನು ಆ ಜಹಜಿನ ಫಿರಂಗಿಗಳು ಹೊಡೆದವೆಂದೂ, ಇಷ್ಟಾದರೂ ಅದು ಜಾಖಮ ಆಗಿಲ್ಲವೆಂದೂ ಹೇಳುತ್ತಾನೆ. ಈ ಹಡಗಿಗೆ ಶತ್ರುವು ಮೂರು ಸಲ ಗುಂಡುಗಳನ್ನು ಹೊಡೆದಿದಾರೆ.

ಸಮುದ್ರದ ಮೇಲೆ.

ಜರ್ಮನಿಯವರು ಫೆಬ್ರವರಿ 18 ನೇ ತಾ. ನಿಂದ ಗ್ರೇಟ್ ಬ್ರಿಟನ್ ಸುತ್ತಲೂ ಸಿಕ್ಕುವ ಸಮಸ್ತ ಹಡಗುಗಳನ್ನೂ ಹಿಡಿದು ನಾಶಮಾಡುತ್ತೇವೆಂದು ಇಸ್ತಿಹಾರನಾಮೆಯನ್ನು ಪ್ರಕಟಮಾಡಿದರಷ್ಟೆ. ಆದಾಗ್ಯೂ, ಪ್ರತಿ ದಿನ 1,600 ಹಡಗುಗಳು ಗ್ರೇಟ್ ಬ್ರಿಟನ್ ತೀರಪಟ್ಟಣಗಳಿಗೆ ಬಂದು ಹೋಗುತ್ತಲಿವೆ. ಜರ್ಮನಿಯವರು ತಮ್ಮ ಮಾತನ್ನು ನೆರವೇರಿಸುವುದಕ್ಕೆ ಈಗಲೂ ಎಷ್ಟೋ ಅವಕಾಶವುಂಟು. ಆದರೆ ಇದುವರೆಗೆ ಬಂದಿರುವ ವರ್ತಮಾನಗಳು ಹೇಳುವುದೇನೆಂದರೆ—ಫೆಬ್ರವರಿ ತಾ. 25 ರಿಂದ ಮಾರ್ಚಿ ತಾ. 3 ರ ತನಕ ಜರ್ಮನಿಯವರ ಕೈಲಿ ಏನೂ ಆಗಲಾರದೆಹೋಯಿತು. ಮಾರ್ಚಿ ತಾ. 3 ರಿಂದ 14 ರ ವರೆಗೆ ಅವರು ಹಡಗುಗಳಿಗೆ ಟಾರ್ಪೆಡೋಗಳನ್ನು ಬಿಟ್ಟು ಹೊಡಿಸಿದರು. ಇದುವರೆಗೆ ಅವರು ಬ್ರಿಟಿಷರ ಹನ್ನೊಂದು ಹಡಗುಗಳನ್ನು ಮುಳುಗಿಸಿರುತ್ತಾರೆ; ಒಂದು ಯುದ್ಧದ ಜಹಜೂ, ಸ್ವೀಡನ್ ರಾಜ್ಯದ ಒಂದು ಹಡಗೂ, ಫ್ರೆಂಚರ ಒಂದು ಸಣ್ಣ ಹಡಗೂ ಅವರ ದೆಸೆಯಿಂದ ನಾಶವಾಡಲ್ಪಟ್ಟವೆ. ಬ್ರಿಟಿಷ್ ಹಡಗುಗಳ ಪೈಕಿ ಹತ್ತರೊಳಗಿದ್ದ ಜನರೆಲ್ಲಾ ಬದುಕಿಸಲ್ಪಟ್ಟದಾರೆ. ಆ ಪೈಕಿ ಮೂರು ಮಂದಿ ಮಾತ್ರ ಸಮುದ್ರದ ಪಾಲಾದರು. ಒಂದು ಹಡಗಿನಲ್ಲಿ ಮಾತ್ರ ಒಬ್ಬನ ಹೊರತು ಉಳಿದ 38 ಮಂದಿಯೂ ಬದುಕಿಸಲ್ಪಟ್ಟರು. ಯುದ್ಧದ ಜಹಜಿನಲ್ಲಿ 200 ಮಂದಿ ನಷ್ಟವಾದರು. ಅದರಲ್ಲಿದ್ದ 4 ಮಂದಿ ಹುದ್ದೇದಾರರೂ 22 ಜನರೂ ಬದುಕಿ ಬಂದಿದಾರೆ. ಇದಲ್ಲದೆ ಜರ್ಮನಿಯವರ ಸಬ್‌ಮೆರೀನುಗಳ ಏಟನ್ನು ಬ್ರಿಟಿಷರ ಹಲವು ಜಹಜುಗಳು ಚಮತ್ಕಾರವಾಗಿ ತಪ್ಪಿಸಿಕೊಂಡು ಬಂದಿರುತ್ತವೆ.

ಜರ್ಮನಿಯ ಒಂದು ಸಬ್‌ಮೆರೀನನ್ನು ಒತ್ತಿ ನಾಶಮಾಡಿದರು. ಅದರಲ್ಲಿದ್ದ 28 ಜನರಲ್ಲಿ 10 ಮಂದಿ ಬದುಕಿ ಬಂದರು. ಫೆಬ್ರವರಿ ತಾ. 18 ರಿಂದ ಜರ್ಮನಿಯವರ ಹನ್ನೊಂದು ಸಬ್‌ಮೆರೀನುಗಳು ನಾಶಮಾಡಲ್ಪಟ್ಟಿರುತ್ತವೆ. ಇದು ಯಥಾರ್ಥವಾದಪಕ್ಷಕ್ಕೆ ಜರ್ಮನಿಯವರಿಗೂ ಬ್ರಿಟಿಷರಿಗಾದಷ್ಟೇ ನಷ್ಟ ಸಂಭವಿಸಿರುವುದು. ಈಗ ಜರ್ಮನಿಯವರಲ್ಲಿ ಬಹುಶಾ 20 ಸಬ್‌ಮೆರೀನುಗಳು ಉಳಿದಿರಬಹುದೆಂದು ಕಾಣುತ್ತದೆ.

ಜರ್ಮನಿಯವರ ಒಂದು ಯುದ್ಧದ ಜಹಜು 310 ಪ್ರಯಾಣಿಕರನ್ನು ಕೂರಿಸಿಕೊಂಡು ಅಮೇರಿಕಕ್ಕೆ ಹೋಗಿದೆ. ಇದಲ್ಲದೆ ಆ ಜಹಜು ಅಮೇರಿಕದ ಬಳಿ ಮುಳುಗಿಸಿದ ಎಂಟು ಜಹಜುಗಳಲ್ಲೂ ಇದ್ದ ಜನರನ್ನೂ ಬದುಕಿಸಿ ಕರೆದುಕೊಂಡು ಹೋಗಿದೆ. ಈ ಪೈಕಿ ಮೂರು ಹಡಗುಗಳು ಬ್ರಿಟಿಷರದು, ಫ್ರೆಂಚರದು ಮೂರು, ರಷ್ಯಾದವರದು ಒಂದು, ಅಮೇರಿಕದ್ದು ಒಂದು. ಈ ಅಮೇರಿಕದ ಜಹಜು ಜನವರಿ ತಾ. 27 ರಲ್ಲಿ ಮುಳುಗಿಸಲ್ಪಟ್ಟಿತು. ಆ ಜಹಜಿನಲ್ಲಿ ಗೋಧಿಯನ್ನು ಇಂಗ್ಲೆಂಡಿಗೆ ರಫ್ತು ಮಾಡುತ್ತಿದ್ದವೆಂದೂ, ಇಂಥಾದ್ದನ್ನು ಜರ್ಮನಿಯವರು ಮುಳುಗಿಸಕೂಡದಾಗಿತ್ತೆಂದೂ ಅಮೇರಿಕದವರು ಆಕ್ಷೇಪಣೆ ಮಾಡಿ, ಅದನ್ನು ಮುಳುಗಿಸಿದ್ದಕ್ಕೆ ಜರ್ಮನಿಯವರು ನಷ್ಟವನ್ನು ಕೊಡಬೇಕೆಂದು ಕೇಳಿದಾರೆ. ಇಷ್ಟು ಜಹಜುಗಳನ್ನು ಮುಳುಗಿಸಿ ಬಂದ ಆ ಜರ್ಮನಿ ಜಹಜು ಚಾಪೆಯ ಆಗಿ ದುರಸ್ತಾಗಬೇಕು. ಇದಕ್ಕೋಸ್ಕರ ಅದು ಮೂರು ವಾರಗಳ ವರೆಗಾದರೂ ಅಮೇರಿಕದ ತೀರಪಟ್ಟಣದಲ್ಲಿ ಇದ್ದೇ ತೀರಬೇಕಾಗಿದೆ. ಬಳಿಕ ಅದು ಆ ತೀರಪಟ್ಟಣದಿಂದ ಹೊರಡಲು ಸಾಹಸಪಡುವುದೋ ಏನೋ? ಮುಂದೆ ನೋಡಬೇಕು. ಹಾಗೆ ಆಗದೆ ಹೋದರೆ ಯುದ್ಧ ಪೂರೈಸುವ ತನಕ ಆ ಜಹಜು ಅಮೇರಿಕದ ತೀರಪಟ್ಟಣದೊಳಗೇ ಸೆರೆಯಾಗಿ ಬಿದ್ದಿರಬೇಕಾಗುತ್ತದೆ.

ಜರ್ಮನಿಯ ಒಂದು ಯುದ್ಧದ ಜಹಜು ದಕ್ಷಿಣ ಅಮೇರಿಕದ ಬಳಿ ಫ್ರೆಂಚರಿಗೆ ಸೇರಿದ ಪ್ರಯಾಣಿಕರ ಹಡಗನ್ನು ಮುಳುಗಿಸಿಬಿಟ್ಟು, ಅದರಲ್ಲಿದ್ದ ಕೆಲಸಗಾರರನ್ನೂ 143 ಜನ ಪ್ರಯಾಣಿಕರನ್ನೂ ಬದುಕಿಸಿ ಬೋನಸ್ ಏರಸ್ ಎಂಬ ತೀರಪಟ್ಟಣಕ್ಕೆ ಕಳುಹಿಸಿರುತ್ತದೆ.

ಇತರ ವಿಷಯಗಳು.

ಗ್ರೀಸ್ ರಾಜ್ಯದಲ್ಲಿ ಗವರ್ನ್‌ಮೆಂಟನ್ನು ನಡಿಸುತ್ತಿದ್ದ ಮಂತ್ರಿ ಸಭೆಯವರು ತಮ್ಮ ಕೆಲಸವನ್ನು ಬಿಟ್ಟುಬಿಟ್ಟರು. ಯಾಕೆಂದರೆ ಮಂತ್ರಿಯು ಗ್ರೀಸ್ ರಾಜ್ಯವು ಯುದ್ಧದಲ್ಲಿ ಸೇರಿ ನಮ್ಮ ಪಕ್ಷದವರಿಗೆ ಸಹಾಯಕರಾಗಿ ನಿಂತು ಜರ್ಮನಿಯವರ ಹಾವಳಿಯನ್ನು ಅಡಗಿಸಬೇಕೆಂದು ಹೇಳಿದ್ದಕ್ಕೆ ಗ್ರೀಸ್ ದೊರೆಯವರು ಗ್ರೀಸ್ ರಾಜ್ಯವು ಇದುವರೆಗೆ ಇದ್ದಂತೆ ತಟಸ್ಥವಾಗಿಯೇ ಇದ್ದುಕೊಂಡು ಬರಬೇಕೆಂದು ಅಭಿಪ್ರಾಯಪಟ್ಟದ್ದರಿಂದ ದೊರೆಯ ಅಭಿಮತವನ್ನು ಒಪ್ಪದೆ ಮಂತ್ರಿ ಸಭೆಯವರು ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಗವರ್ನ್‌ಮೆಂಟನ್ನು ನಡಿಸುವುದಕ್ಕೆ ಹೊಸ ಮಂತ್ರಿಯನ್ನು ಹುಡುಕಿ ನೇಮಕಮಾಡಿಕೊಳ್ಳುವುದರಲ್ಲಿ ದೊರೆಯವರಿಗೆ ಸ್ವಲ್ಪ ಕಷ್ಟವಾಗಿದೆ. ಆದರೆ ಈಗಿರುವ ಪಾರ್ಲಿಮೆಂಟ್ ಮೆಂಬರುಗಳನ್ನು ತೆಗೆದುಹಾಕಿ ಹೊಸದಾಗಿ ಮೆಂಬರುಗಳನ್ನು ಚುನಾವಣೆ ಮಾಡಬೇಕೆಂಬ ಒಪ್ಪಂದದ ಮೇಲೆ ಹೊಸ ಗೌರ್ನಮೆಂಟ್ ರಚಿಸಲ್ಪಟ್ಟಿರುತ್ತದೆ. ಹೊಸ ಮೆಂಬರುಗಳ ಚುನಾವಣೆ ನಡೆದ ಮೇಲೆ ಗ್ರೀಸ್ ರಾಜ್ಯದ ಅಭಿಮತವು ಯುದ್ಧದಲ್ಲಿ ಸೇರಿಯತಕ್ಕದ್ದೋ ಅಥವಾ ತಟಸ್ಥವಾಗಿರತಕ್ಕದ್ದೋ ಗೊತ್ತಾಗಬೇಕು.

ಇಟಲಿಯವರು ಯುದ್ಧಸನ್ನಾಹಗಳನ್ನೆಲ್ಲಾ ಮಾಡಿಕೊಂಡು ಸಿದ್ಧರಾಗಿದಾರೆ. ಇಟಲಿಯಲ್ಲಿ ಅನೇಕ ಪ್ರಜೆಗಳು ಯುದ್ಧಕ್ಕೆ ಹೊರಡಬೇಕೆಂದು ಆತುರಪಡುತ್ತಿದಾರೆ. ಹೀಗಿರುವಲ್ಲಿ ಗವರ್ನ್‌ಮೆಂಟಿನವರು ಏನು ಮಾಡುವರೋ ನೋಡತಕ್ಕದ್ದಾಗಿದೆ. ಅವರ ಮಮಕಾರವೆಲ್ಲಾ ನಮ್ಮ ಪಕ್ಷದವರ ಮೇಲಿದೆ. ಈ ಭಾಗದಲ್ಲಿ ಅನುಮಾನವೇನೂ ಇರುವುದಿಲ್ಲ.

ಜೆಡ್ಡಾ ಎಂಬ ಮಹಮ್ಮದಿಯರ ಯಾತ್ರಾಸ್ಥಾನಕ್ಕೆ ಮುಸಲ್ಮಾನರಿಗೋಸ್ಕರ ಧಾನ್ಯವನ್ನು ಸಾಗಿಸಿಕೊಂಡು ಬರುತ್ತಿದ್ದ ಒಂದು ಹಡಗನ್ನು ಟರ್ಕಿಯವರು ತಡೆದಿಟ್ಟುಕೊಂಡಿದಾರೆಂದು ಇಂಡಿಯಾ ಗವರ್ನ್‌ಮೆಂಟಿನವರು ಪ್ರಕಟಮಾಡಿದಾರೆ. ಬ್ರಿಟಿಷರು ಯಾತ್ರಿಕರನ್ನು ಕಾಪಾಡಬೇಕೆಂದೂ, ಅವರ ಯಾತ್ರೆ ತೀರ್ಥಗಳಿಗೆ ಅಟಂಕಪಡಿಸದಂತೆ ನೋಡಿಕೊಳ್ಳಬೇಕೆಂದೂ ಅಪೇಕ್ಷಿಸುವರು. ಟರ್ಕಿಯವರು ತಮ್ಮ ಸೈನಿಕರಿಗೋಸ್ಕರ ಯಾತ್ರಿಕರ ಆಹಾರ ಧಾನ್ಯಗಳನ್ನು ಕಿತ್ತು ಸ್ವಾಧೀನಪಡಿಸಿಕೊಳ್ಳುತ್ತಾ ಬಂದರೆ ಬ್ರಿಟಿಷ್ ಗವರ್ನ್‌ಮೆಂಟಿನವರು ಇನ್ನು ಮುಂದೆ ಜೆಡ್ಡಾ ಎಂಬ ತೀರಪಟ್ಟಣಕ್ಕೆ ಯಾವ ಆಹಾರ ಧಿನಸುಗಳೂ ಹೋಗದಂತೆ ಎಲ್ಲಾ ಹಡಗುಗಳನ್ನೂ ತಡೆದುಬಿಡಬೇಕಾಗುತ್ತದೆ.

ಬಾಗ್ದಾದಿನ ಹತ್ತಿರ ಮೆಸೊಪೊಟೇಮಿಯಾದಲ್ಲಿ ಟರ್ಕಿಯವರು ಕರ್ಬೇಲಾ ಎಂಬ ಮಹಮ್ಮದಿಯರ ಪವಿತ್ರಸ್ಥಾನವನ್ನು ಕೊಳ್ಳೆಹೊಡೆದು ಹಾಳುಮಾಡಿದರೆಂದು ವರ್ತಮಾನ ಬಂದಿದೆ. ಆ ಸ್ಥಳವನ್ನು ಕಾಪಾಡುವುದಕ್ಕೆ ಬ್ರಿಟಿಷರು ಅದರ ಸಮೀಪದಲ್ಲಿ ಇಲ್ಲ.

ಗ್ರೀಕ್ ರಾಜ್ಯದಲ್ಲಿ ಹ್ಯಾಗೋ ಹಾಗೆ ಬಲ್ಗೇರಿಯಾದಲ್ಲೂ ಎರಡು ಪಕ್ಷಗಳುಂಟಾಗಿವೆ. ಪ್ರಜೆಗಳು ನಮ್ಮ ಪಕ್ಷದವರ ಕೂಡ ಸೇರಿ ಜರ್ಮನಿಯವರ ಮೇಲೆ ಯುದ್ಧಮಾಡಬೇಕೆಂದು ಅಪೇಕ್ಷಿಸುತ್ತಾರೆ; ಅಲ್ಲಿನ ದೊರೆಯವರಿಗೆ ಯುದ್ಧಕ್ಕೆ ಹೊರಡುವುದು ಸಮ್ಮತವಾಗಿಲ್ಲ.

ಚೀಣೆಯವರಿಗೂ ಜಪಾನ್‌ನವರಿಗೂ ವಾಗ್ವಾದಗಳು ನಡೆಯುತ್ತಲಿವೆ. ಅವರ ಉದ್ದೇಶವೂ ಕಾರಣಗಳೂ ಸರಿಯಾಗಿ ತಿಳಿದು ಬಂದಿಲ್ಲ. ಬಹುಶಾ ಈ ಯುದ್ಧವು ಪೂರೈಸುವ ತನಕ ಯಾವುದೂ ಇತ್ಯರ್ಥವಾಗುವುದಿಲ್ಲವೆಂದು ತೋರುತ್ತದೆ.

ಕ್ಯಾನಡಾ ಎಂಬ ಬ್ರಿಟಿಷ್ ಸ್ವಾತಂತ್ರ್ಯದವರು ಇನ್ನೊಂದು ಸೈನ್ಯವನ್ನು ಜೊತೆಮಾಡಿ ಕಳುಹಿಸಿಕೊಟ್ಟರು. ಅದು ಇಂಗ್ಲೆಂಡಿನಲ್ಲಿ ಇಳಿದಿದೆ. ಹೀಗೆಯೇ ಆಸ್ಟ್ರೇಲಿಯಾದಿಂದ ರವಾನೆಮಾಡಲ್ಪಟ್ಟ ಎರಡನೇ ಸೈನ್ಯವೂ ಇಂಗ್ಲೆಂಡಿಗೆ ತಲಪಿತು. ಈ ರೀತಿ ನಮ್ಮ ಚಕ್ರಾಧಿಪತ್ಯವನ್ನು ಸಂರಕ್ಷಣೆಮಾಡುವುದಕ್ಕೆ ಸ್ವಾಸ್ಥ್ಯಗಳು ಮಾಡಿರುವ ಸಹಾಯ ಸಂಪತ್ತಗಳು ಪರಮಾನಂದವನ್ನುಂಟುಮಾಡಿವೆ. ಇಂಗ್ಲೆಂಡಿನಲ್ಲೇ ಕೂಡಿಸಿ ತರಪೇತಾಗಿರುವ ಸೈನ್ಯಗಳು ಬಹಳ ಪರಾಕ್ರಮವುಳ್ಳದ್ದಾಗಿವೆ ಎಂದು ತಿಳಿಸಲ್ಪಟ್ಟಿದೆ.

ಒಳದೇಶದ ವೃತ್ತಾಂತಗಳು.

ದಿವಾನ್‌ರವರು ಪರಿವಾರ ಸಮೇತ ನೆನ್ನೆ ಬೆಳಗ್ಗೆ ಬೆಂಗಳೂರಿಂದ ರಾಜಧಾನಿಗೆ ದಯಮಾಡಿರುತ್ತಾರೆ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಕಾಲದಲ್ಲಿ ನಡೆಯುತ್ತಿದ್ದ ಕುದುರೆ ಜೂಜು ಪೋಲೋ ಪಂದ್ಯಗಳನ್ನು ಈ ವರುಷ ನಿಲ್ಲಿಸಿರುತ್ತಾರೆಂದು ತಿಳಿಯುವುದು.

ತಾ. 24 ನೇ ಬುಧವಾರ ಮಳವಳ್ಳಿ ತಾಲ್ಲೂಕು ಚಿಕ್ಕರಸಿನಕೆರೆ ಗ್ರಾಮದಲ್ಲಿ ಸಂಪದಭ್ಯುದಯ ಸಭೆಯೂ, ದನಗಳ ಪ್ರದರ್ಶನವೂ ನಡೆಯುವಂತೆ ಏರ್ಪಾಡಾಗಿದೆ.

ನಮ್ಮ ಸಂಸ್ಥಾನದಲ್ಲಿ ದರ್ಬಾರ್ ಸರ್ಜನ್‌ರಾಗಿದ್ದ ಕರ್ನಲ್ ಫೋರ್ಸ್‌ರವರನ್ನು ಇಂಡಿಯಾ ಗವರ್ನ್‌ಮೆಂಟಿನವರು ಸೈನ್ಯದ ಡಾಕ್ಟರ್ ಕೆಲಸಕ್ಕಾಗಿ ರಾವಲ್‌ಪಿಂಡಿಗೆ ಕರಸಿಕೊಂಡಿರುತ್ತಾರೆ.

ಕಳೆದ ವಾರ ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿದರು. ಇನ್ನು 3-4 ದಿನಗಳಲ್ಲೇ ಪುನಹಾ ನೀಲಗಿರಿಗೆ ಚಿತ್ತೈಸುವವರಾಗಿದಾರೆ.

ಲಾನ್ ಟೆನ್ನಿಸ್ ಎಂಬ ಚೆಂಡಿನಾಟದಲ್ಲಿ ಗಟ್ಟಿಗರೆನಿಸಿಕೊಂಡಿರುವ ರಾಜಧಾನಿಯ ಮ॥ ಡಿ. ಯು. ರಂಗರಾಯರು ಬೊಂಬಾಯಿನಲ್ಲಿ ಪಂದ್ಯಕ್ಕೆ ಸೇರಿ ಗೆದ್ದು ಘನತರವಾದ ಬಹುಮಾನವನ್ನು ಪಡೆದರೆಂದು ತಿಳಿಸಲು ಸಂತೋಷವಾಗುವುದು.

ಶ್ರೀ ಉತ್ತರಾದಿ ಮಠದ ಶ್ರೀ ಸ್ವಾಮಿಗಳವರು ಕಳೆದ ಭಾನುವಾರ ಬೆಂಗಳೂರಿಂದ ಹೊರಟರು. ಅವರು ಈ ದಿನ ಬೆಳಗ್ಗೆ ರಾಜಧಾನಿಗೆ ದಯಮಾಡುತ್ತಾರೆಂದೂ, ಅರಮನೆಯಲ್ಲಿ ನಮ್ಮ ಮಹಾರಾಜರವರು ಪಾದಪೂಜೆ ಮುಂತಾದದ್ದನ್ನು ಮಾಡುವರೆಂದೂ ಕೇಳುತ್ತೇವೆ.

ರಾಜಧಾನಿಯ ನಜರ್ಬಾದಿನಲ್ಲಿ ಒಬ್ಬ ಕಂಟ್ರಾಕ್ಟರ ಬಳಿ ಸೇವಕನಾಗಿದ್ದ ಪ್ರಯಾಗದ ದಶರಥ ಎಂಬವನು ತನ್ನ ಯಜಮಾನನ ಮನೆಯಲ್ಲಿ ಸುಮಾರು 450 ರೂಪಾಯಿನ ನಗಗಳನ್ನು ಕದ್ದು ಪೂನಾ ಪಟ್ಟಣದಲ್ಲಿ ವಿಕರಿಮಾಡುತ್ತಿದ್ದು ಸಿಕ್ಕಿಬಿದ್ದನು. ನಮ್ಮ ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರುಷ ಕಠಿಣ ಸಜಾ ವಿಧಿಸಿದರೆಂದು ಕೇಳುತ್ತೇವೆ.

ಬೆಂಗಳೂರು ಬೊಂಬಿನಕೇರಿಯಲ್ಲಿ ಬಿಕರಿಗೆ ಬಂದ ಮಾಂಸವನ್ನು ಕೊಂಡು ಅಡಿಗೆ ಮಾಡಿಕೊಂಡು ತಿಂದ ಅರ್ನ್ಸ್ಲಿ ಎಂಬ ಸಂಸಾರವವರಿಗೆ ಅದು ವಿಷವಾಗಿ ಪರಿಣಮಿಸಿ ತಂದೆ, ಮೂರು ಜನ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಈ ಐದು ಜನರೂ ಅಕಾಲ ಮರಣವನ್ನು ಹೊಂದಿದರು. ತಾಯಿಗೂ ಒಂದು ಮಗುವಿಗೂ ವಾಸಿಯಾಗಿ ಬದುಕಿಕೊಂಡಿದಾರೆ.

ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯ ಹಳೇ ಪೋಸ್ಟ್ ಆಫೀಸ್ ರಸ್ತೆಯಲ್ಲಿ ಪ್ರಾರಂಭಿಸಿದ ವೀರಶೈವ ವಿದ್ಯಾರ್ಥಿ ನಿಲಯವನ್ನು ರಾವ್ ಬಹದೂರ್ ಮ॥ ಎಂ. ಕಾಮರಾಯರು ಪ್ರತಿಷ್ಠೆಮಾಡಿದರು. ರಾಜಧಾನಿಯ ಹಲವು ದೊಡ್ಡ ಮನುಷ್ಯರು ಈ ಸಂತೋಷ ಕೂಟದಲ್ಲಿ ಹಾಜರಾಗಿದ್ದರು. ವೀರಶೈವರೇ ಅಲ್ಲದೆ ಇತರ ಮತಸ್ಥರೂ ಈ ನಿಲಯಕ್ಕೆ ಪ್ರೋತ್ಸಾಹಮಾಡಿ ಸಹಾಯಮಾಡುತ್ತಿರುವುದು ಸಂತೋಷಕರವಾಗಿದೆ.

ಒಬ್ಬ ಬಾತ್ಮಿದಾರರಿಂದ.—ಬರುವ ಏಪ್ರಿಲ್ ತಿಂಗಳಲ್ಲಿ ನಡೆಯತಕ್ಕ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಡೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ಆ॥ ಮಾಸ್ಟರುಗಳಿಗೂ ಮತ್ತು ವೀರಶೈವರಲ್ಲಿ ಭೋಜನಮಾಡತಕ್ಕ ಇತರ ಮತಸ್ಥರಿಗೂ ಸಹ ಕಡೂರು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಮ॥ ಬೀರೂರು ಶಿವಲಿಂಗಪ್ಪಯ್ಯನವರು ಕಡೂರಿನಲ್ಲಿ ಭೋಜನಕ್ಕೆ ಏರ್ಪಾಡು ಮಾಡುವವರಿಂದ ಬರತಕ್ಕವರೆಲ್ಲಾ ಅವರಿಗೆ ಮುಂಚಿತವಾಗಿ ತಿಳಿಸಬೇಕಾಗಿ ಕೋರುತ್ತಾರೆ.

ಮುಂದಿನ ಗುರುವಾರ ತಾ. 25 ರಿಂದ ಮೇಲುಕೋಟೆಯಲ್ಲಿ ವೈರಮುಡಿ ಜಾತ್ರೆಯೂ, ಪಂಚಮರ ವ್ಯವಸಾಯ, ಕೈಗಾರಿಕೆಗಳ ಮತ್ತು ದನಗಳ ಪ್ರದರ್ಶನಗಳೂ, ಬಳಿಕ ತಾ. 29 ರಿಂದ ಪಂಚಮರ ಮಹಾ ಸಭೆಯೂ ನಡೆಯುವಂತೆ ನಿಷ್ಕರ್ಷೆಯಾಗಿದೆ. ಇಂಥಾ ಪರಹಿತ ಕಾರ್ಯವನ್ನು ವಹಿಸಿ ಮಾಡುವ ಸೆಕ್ರೆಟರಿ ಮ॥ ಎಂ. ಜಿ. ರಾಮಯ್ಯಂಗಾರ್ರಿಗೆ ಧರ್ಮಿಷ್ಠರೆಲ್ಲಾ ದ್ರವ್ಯಾದಿ ಸಹಾಯಗಳನ್ನು ಮಾಡಿ, ಈ ಮಹಾ ಸ್ತೋತ್ರಾರ್ಹವಾದ ಕಾರ್ಯವನ್ನು ಸಾರ್ಥಕವಾಗಿ ನಡಿಸಬೇಕಾಗಿದೆ. ಆ ಪ್ರಾಂತ್ಯದಲ್ಲಿರುವ ಪಂಚಮರು ಈ ಕಾರ್ಯದಲ್ಲಿ ಬೆರೆದು ಅಭಿವೃದ್ಧಿಗೆ ಬಂದಾರೆಂದು ನಿರೀಕ್ಷಿಸಲ್ಪಟ್ಟಿದೆ.

ಫಾರೆಸ್ಟ್ ಇಲಾಖೆಯಲ್ಲಿ ಎ. ಎಸ್. ಕೋವೇರ್ ಎಂಬ ರೇಂಜರೂ, ಎಂ. ಎಸ್. ಶಂಕರಸ್ವಾಮಿ ಎಂಬ ಗುಮಾಸ್ತೆಯೂ ಸೇರಿ ದಾಗಿಹಳ್ಳಿ ಪ್ಲಾಂಟೇಷನ್‌ನಲ್ಲಿ 590 ರೂಪಾಯನ್ನೂ, ದೊಡ್ಡಬಳ್ಳಾಪುರದ ಫಾರೆಸ್ಟಿನಲ್ಲಿ 100 ರೂಪಾಯನ್ನೂ ತಿಂದುಹಾಕಿ ಸರ್ಕಾರಕ್ಕೆ ಮೋಸಮಾಡಿದರೆಂದು ಮೊಕದ್ದಮೆ ಬಂದು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ಆಯಿತು. ಮ್ಯಾಜಿಸ್ಟ್ರೇಟರು ಮೊದಲನೇ ಅಪರಾಧಿಗೆ ಒಂದು ವರುಷ ಕಠಿಣ ಸಜವನ್ನೂ 500 ರೂಪಾಯಿ ಜುಲ್ಮಾನೆಯನ್ನೂ; ಎರಡನೇ ಅಪರಾಧಿಗೆ ಒಂದು ವರುಷ ಕಠಿಣ ಸಜಾ 100 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮಾರ್ಚಿ 4 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—	(1) ಷೇರು ಮೊಬಲಗು	ರೂ. 10,00,000
,,	(2) ರಿಜರ್ವ್ ಫಂಡು	,, 26,000
,,	(3) ಡಿಪಾಜಿಟ್ಟುಗಳು	,, 25,40,496
,,	(4) ಇತರೆ	,, 16,034
	(ಆಣೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 35,81,630

ದೇಣಿ:—	(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 5,80,259
,,	(2) ಖಾತೆ ಮತ್ತು ಇತರ ಸಾಲಗಳು	,, 21,85,411
,,	(3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು	,, 3,36,952
,,	(4) ಇನ್ವೆಸ್ಟ್‌ಮೆಂಟುಗಳು	,, 3,67,277
,,	(5) ಬ್ರಾಂಚಿಗಳಲ್ಲಿರುವ ಮೊಬಲಗು	,, 86,150
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 14,974
,,	(7) ಇತರೆ	,, 10,507
	(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 35,81,630

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಯುಗಾದಿ.

ನಮ್ಮ ಭರತಖಂಡದಲ್ಲಿ ವರ್ಷಂಪ್ರತಿಯಲ್ಲೂ ಆಚರಿಸತಕ್ಕ ಹಬ್ಬಗಳಲ್ಲಿ ಈ ಯುಗಾದಿ ಹಬ್ಬವು ಬಹು ಪ್ರಾಮುಖ್ಯವಾಗಿ ಪ್ರತಿಯೊಬ್ಬ ಭಾರತೀಯನಿಂದ ಎಣಿಸಲ್ಪಟ್ಟಿದೆ. ಅದರವಶ್ಯಕತೆಯು ಪ್ರಯೋಜನವು ಎಲ್ಲಾ ಹಬ್ಬಗಳಿಗಿಂತಲು ಉತ್ತಮ ಫಲ ಪ್ರಾಪ್ತಿಯನ್ನುಂಟುಮಾಡತಕ್ಕ ಹಲವು ಧರ್ಮಾಭಿಮಾನಿಗಳು ಕರ್ತವ್ಯ ಪೂರ್ವಕವಾಗಿ ಆಚರಿಸತಕ್ಕ ನೂತನ ಸಂವತ್ಸರದ ಹೊಸ ಶುಭದಿವಸವಾಗಿರುತ್ತೆ. ಈ ಹೊಸ ಸಂವತ್ಸರದ ಆದಿಯಲ್ಲಿ ನಾವುಗಳು ಸ್ವಾರ್ಥತ್ಯಾಗ ಪೂರ್ವಕವಾಗಿ ಆಚರಿಸತಕ್ಕ ಆಚರಣೆಗಳು ಅನಂತವಾಗಿರುತ್ತವೆ. ಪೂರ್ವ ಕಾಲದ ನಮ್ಮ ಪೂರ್ವಜರಾದ ಆರ್ಯರು ಅದನ್ನು ಬಲುಮಟ್ಟಿಗೆ ಆಚರಿಸುತ್ತಿದ್ದರೆಂಬುದು ನಿಜವಾಗಿದ್ದಾಗಿರುತ್ತದೆ. ಈಗಲು ಅದರ ಉತ್ಸಾಹಕತೆಯ ಪೂರ್ಣಾಭಿಮಾನವು ಅಲ್ಲಲ್ಲಿ ಅಲ್ಪಸ್ವಲ್ಪ ಹರಡಿಕೊಂಡಿದೆಯೆಂದು ಹೇಳಬಹುದು. ಏತಕೆಂದರೆ, ಹಿಂದೂದೇಶದಲ್ಲಿ ಆರ್ಯರು ಹೊಸ ಸಂವತ್ಸರದ ಶುಭವಾದದನ್ನು ಮುಂದೆ ನಡಿಯತಕ್ಕ ದೇಶಕ್ಷೇಮ ಶುಭಾಶುಭ ಫಲಗಳನ್ನೂ, ದ್ವಾದಶಮಾಸಗಳ ಭವಿಷ್ಯತ್ಫಲೋದಯ ರೂಪವಾದ ಪಂಚಾಂಗ ಕಥನವನ್ನೂ ಕೇಳಿ, ತಮಗೆ ಮುಂದೆ ಕಾಲಮಾನಕ್ಕನುಗುಣವಾಗಿ ನಡೆಯತಕ್ಕ ವಿಚಾರವನ್ನು ಗುರು, ಹಿರಿಯರಲ್ಲೂ, ಜ್ಯೋತಿಷ್ಕರಲ್ಲೂ ಕೇಳಿ ತಿಳಿದುಕೊಂಡು ಸಂತೋಷಕೂಟ, ವಸ್ತ್ರಾಭರಣಾಲಂಕೃತರಾಗಿ ಕಾಲವನ್ನು ಕಳೆಯತಕ್ಕ ಪದ್ಧತಿಯು ಸಾಮಾನ್ಯವಾಗಿ ವಾಡಿಕೆಯಾಗಿರುತ್ತೆ. ಇದರಂತೆ ಹಿಂದೂ, ಮುಸಲ್ಮಾನರು, ಕ್ರೈಸ್ತರು ಮೊದಲಾದ ಇತರ ಜನಾಂಗದವರಲ್ಲಿಯೂ ಇದೇ ಪದ್ಧತಿಯು ಆಯಾ ಜನಾಂಗದವರ ಮೂಲಕವಾಗಿ ಅನುಸರಿಸಿಕೊಂಡು ನಡಿಸಿಕೊಂಡು ಬರುತ್ತಾ ಇದೆ. ಹಾಗೆಯೇ ಚಾಂದ್ರಮಾನ ಸಂವತ್ಸರಾರಂಭವಾದ ಈ ಯುಗಾದಿಯ ಪ್ರಥಮ ದಿವಸವು ಸಮಸ್ತರಿಗೂ ಚಿರಾಯುರಾರೋಗ್ಯೈಶ್ವರ್ಯಾಭಿವೃದ್ಧಿಗಳನ್ನುಂಟುಮಾಡತಕ್ಕ ಶುಭಚಿಹ್ನೆಯಾಗಿರುತ್ತದೆ. ಈ ಕಾಲದಲ್ಲಿ ಪ್ರತಿಯೊಂದು ಕುಟುಂಬದಲ್ಲು ಅಭ್ಯಂಗನ ಸ್ನಾನವನ್ನು ಮಾಡಿ, ಭಕ್ಷ್ಯಭೋಜ್ಯಾದಿ ಪದಾರ್ಥಗಳನ್ನು ಮಾಡಿಸಿ, ಅತಿಥಿ, ಅಭ್ಯಾಗತರೇ ಮೊದಲಾದ ಬಂಧುಮಿತ್ರಾದಿಗಳೊಡನೆ, ಈ ಹಬ್ಬಕ್ಕೆ ಮುಖ್ಯಗುರುತಾದ ಬೆಲ್ಲ ಬೇವಿನಹೂವು ಇವುಗಳೆರಡನ್ನು ಬೆರಸಿ ತಿಂದ ತರುವಾಯ ಊಟಮಾಡಿ, ನೂತನ ವಸ್ತ್ರಧಾರಣವನ್ನು ಮಾಡಿಕೊಳ್ಳುವ ಪದ್ಧತಿಯು ಮುಖ್ಯವಾದದ್ದಾಗಿರುತ್ತೆ. ಆದರೆ ಸಾಮಾನ್ಯವಾಗಿ ಈ ಹಬ್ಬವು ಬೇಸಗೆಯ ಕಾಲದಲ್ಲಿ ಆರಂಭವಾಗುವುದರಿಂದ ಬಿಸಲು ಬಹು ತೀಕ್ಷ್ಣವಾಗಿ ಕಾದು ಅನೇಕರಿಗೆ ಸಹಿಸುವುದಕ್ಕಾಗದಷ್ಟು ಶ್ರಮೆಯನ್ನೂ, ಬಳಲಿಕೆಯನ್ನೂ ಉಂಟುಮಾಡುತ್ತದೆ. ಆದ್ದರಿಂದ ಈ ತತ್ವವನ್ನು ನಮ್ಮ ಪೂರ್ವಿಕರಾದ ಆರ್ಯರು ತಿಳಿದು ಈ ಯುಗಾದಿ ಮೊದಲ್ಗೊಂಡು ಬೇಸಗೆ ತೀರುವ ಪರ್ಯಂತರವು ಧರ್ಮ ಪ್ರಭುಗಳಾದ ಪ್ರಜಾಪಾಲಕರು, ಶ್ರೀಮಂತರು, ಧರ್ಮಿಷ್ಠರು, ತಮ್ಮ ತಮ್ಮ ಭಕ್ತಿ ಪೂರ್ವಕವಾಗಿ ಶ್ರದ್ಧೆಯಿಂದ ನಿಷ್ಕಾಮ ಮನಸ್ಸಿನಿಂದ ಆಚರಿಸತಕ್ಕವುಗಳಲ್ಲಿ ಮುಖ್ಯವಾದವು ಯಾವುವೆಂದರೆ ಮಾರ್ಗದ ಎರಡು ಪಕ್ಕಗಳಲ್ಲೂ ಸಾಲುಮರಗಳನ್ನು ನೆಡಿಸಿ ಜನಗಳಿಗೆ ಮರಗಳ ನೆರಳಿನಿಂದಲು ತಂಪಾದ ಗಾಳಿಯಿಂದಲೂ ಬಿಸಿಲಿನ ತಾಪವು ಕಡಿಮೆಯಾಗುವಂತೆ ಮಾಡುವುದು. ಹೆಸರುಬೇಳೆ ಕಡಲೆಬೇಳೆ ಮಜ್ಜಿಗೆ, ಪಾನಕ ಮೊದಲಾದವುಗಳನ್ನು ಬಾಯಾರಿಕೆಯುಳ್ಳ ಮಾರ್ಗಸ್ಥರಿಗೆ ಕೊಡುವುದು. ಇವೇ ಮೊದಲಾದ ಹಸಿವು ತೃಷೆ ಪರಿಹಾರಸಾಧನಾರ್ಥಕವಾದ ಉತ್ತಮ ಏರ್ಪಾಡುಗಳನ್ನು ಮಾಡಿ ಸುಲಭವಾಗಿ ಪುಣ್ಯ ಸಂಪಾದನೆಮಾಡತಕ್ಕ ಉಪಾಯವನ್ನು ಕೈಕೊಂಡಿದ್ದರು. ಇದರಂತೆ ಈಗ ಸಾರ್ಥಕವಾದ ಏರ್ಪಾಡು ಪ್ರಭುಗಳಿಂದಲಾಗಲಿ, ಪ್ರಜೆಗಳಿಂದಾಗಲಿ ನಡೆಯುತ್ತೆಂಬುದನ್ನು ನಾವು ದೃಷ್ಟಿಸಿ ನೋಡಿದ್ದಾದರೆ ದಿನ ದಿನಕ್ಕೆ ಆ ಏರ್ಪಾಡುಗಳೆಲ್ಲಾ ಕ್ಷೀಣಿಸುತ್ತಾ ಇರುವುದು ಚಮತ್ಕಾರ ಕಲ್ಪಿತಪದ್ಧತಿಯಾಗಿರುತ್ತದೆ. ಆದರೆ ಪ್ರಭುಗಳು, ಶ್ರೀಮಂತರು, ಪದವೀಧರರು, ಬಹು ತೀಕ್ಷ್ಣವಾದ ವಸಂತ ಋತುವಿನ ತಾಪವನ್ನು ತಡೆಯಲಾರದೆ, ನೀಲಗಿರಿ, ನಂದೀದುರ್ಗ ಮುಂತಾದ ಇತರ ಸಮಶೀತೋಷ್ಣ ಪ್ರದೇಶಗಳಿಗೆ ಅನುಕೂಲವಾದ ದೇಶ, ಪಟ್ಟಣ, ಸರೋವರ, ಬೆಟ್ಟದ ಪ್ರದೇಶ ಈ ಪ್ರಾಂತ್ಯಗಳಲ್ಲಿ ತಂಪಾದ ತಂಗಾಳಿಯನ್ನು ತೆಗೆದುಕೊಂಡು ಬಿಸಲಕಾಲಕ್ಕನುಸಾರವಾದ ಪಂಚಭಕ್ಷ್ಯ, ಪಾನಕ, ನುಚ್ಚಿಗೆ ಮುಂತಾದ ಷೋಡಶೋಪಚಾರವನ್ನು ಹೊಂದುತ್ತಾ ಇರುವರಲ್ಲವೇ? ಆದ್ದರಿಂದ ಬಡವರಿಗೆ ಅಷ್ಟು ಶಕ್ತಿ ಸಾಲದ್ದರಿಂದ ಈ ಬಿಸಲಿನ ತಾಪಕ್ಕೋಸ್ಕರ ಪೂರ್ವಿಕರು ಧರ್ಮದ ಮೇಲೆ ಅಭಿಮಾನವಿಟ್ಟು ಏರ್ಪಡಿಸಿದ್ದ ಪ್ರಯಾಣಸ್ಥರಿಗೆ ದಾರಿಯಲ್ಲಿ ಹೋಗುವ ಮಾರ್ಗಸ್ಥರನ್ನು ನಾನಾ ವಿಧವಾಗಿ ಸಂತೈಸುತ್ತಿದ್ದರು. ಇದಲ್ಲವೇ ಸ್ವದೇಶದ ಸ್ವಧರ್ಮನಿಷ್ಠೆ? ಆದರೆ ಮನುಷ್ಯನಿಗೆ ಬಾಯಾರಿಕೆಯಷ್ಟು ಹಿಂಸೆಯನ್ನು ಕೊಡತಕ್ಕದ್ದು ಯಾವುದೂ ಇಲ್ಲ. ಊಟವಿಲ್ಲದೆ ಎರಡು ದಿವಸವಾಗಲಿ ಮೂರು ದಿವಸವಾಗಲಿ ಇರಬಹುದು. ತೃಷೆಯನ್ನು ತಡೆಯುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಒಂದೊಂದು ವೇಳೆ ಬಾಯಾರಿಕೆಯಿಂದ ಪ್ರಾಣ ಹೋಗುವುದು ಉಂಟು. ಅಂಥಾ ಸಮಯದಲ್ಲಿ ಆಪತ್ಕಾಲೆ ನಾಸ್ತಿ ಮರ್ಯಾದಾ ಎಂಬಂತೆ ತೃಷೆ ಪರಿಹಾರಾರ್ಥವಾಗಿ ಮತದ ಹಂಬಲ್ಯವನ್ನು ತೊರೆದು ಎಲ್ಲರು ಪ್ರಾಣವುಳಿಸಿಕೊಳ್ಳುವುದಕ್ಕೋಸ್ಕರ ಆ ಕಾಲದಲ್ಲಿ ಏನು ಸಿಕ್ಕುತ್ತದೋ ಅದನ್ನು ನಿರ್ಭಯವಾಗಿ ಸೇವಿಸು ಎಂದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುತ್ತೆ. ಆದುದರಿಂದ ಪುಣ್ಯಶಾಲಿಗಳು ಪ್ರಾಣಿಗಳಿಗೆ ಜಲಾಶ್ರಯವನ್ನು ಹೋಗಲಾಡಿಸತಕ್ಕ, ಬಳಲಿಕೆ ಪರಿಹಾರಾರ್ಥಕವಾದ ಏರ್ಪಾಡನ್ನು ತಮ್ಮ ಕೈಲಾದಷ್ಟು ಕೈಕೊಂಡು ನಡಿಸುವಂತೆ—ಯುಗಾದಿ ಯುಗದ ಆದಿಯಲ್ಲಿ ಆಚರಿಸುವ ಶುಭಸೂಚನೆಯನ್ನು ಲಕ್ಷ್ಯಕ್ಕೆ ತಂದು, ಈಗ ಬಂದಿರುವ ವಿಪತ್ತು ಪರಂಪರೆಗಳು ಜಾಗ್ರತ ಪರಿಹಾರವಾಗುವುದಕ್ಕೆ ನೂತನ ಸಂವತ್ಸರಾರಂಭದ ಶಾಂತಿಶ್ರಮವನ್ನು ಮಾಡಿ ಬ್ರಿಟಿಷ್ ಧ್ವಜಪತಾಕೆಯು ಸದಾ ಭಾರತೀಯರ ಮೇಲೆ ಸದಾ ಇರುವುದಕ್ಕೆ ಶೀಘ್ರದಲ್ಲಿ ಜಗದೀಶ್ವರನು ಜಯವನ್ನು ಕೊಡಲೆಂದು ನಾವು ಪ್ರಾರ್ಥಿಸುತ್ತಾ ಬರೆಯೋಣ.

ಕೆ. ಕೆ.

ಸಂಪದಭ್ಯುದಯ.

ಖರ್ಚುಗಳ ರೀತಿ—ಗೃಹಕೃತ್ಯ.

ಮನೆಯ ಯಜಮಾನನೇ ಕುಟುಂಬ ಪೋಷಣೆಯ ಜವಾಬುದಾರನಾಗಿರುತ್ತಾನೆ. ತಂದೆ, ಮಕ್ಕಳು, ಅಣ್ಣತಮ್ಮಂದಿರು, ತಾಯಿ, ಹೆಂಡತಿ, ಅಕ್ಕತಂಗಿಯರೇ ಮುಂತಾದವರಿಂದ ಕೂಡಿ ಒಂದು ಕುಟುಂಬವಾಗಿರುತ್ತದೆ. ಕುಟುಂಬದಲ್ಲಿ ಪ್ರಥಮತಃ ಏಕ ಕುಟುಂಬವಾಗಿದ್ದು, ಕೊನೆಗೆ ಕುಟುಂಬದಲ್ಲಿ ಏಕಮತ್ಯ ತಪ್ಪಿ, ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ಕೋರ್ಟುಗಳಿಗೆ ಹಣ ಹಾಕಿ ಬೇರೆ ಬೇರೆ ಕುಟುಂಬಗಳು ಉಂಟಾಗುವುದೇ ಹೆಚ್ಚು. ಒಂದು ಕುಟುಂಬದಲ್ಲಿ ಒಬ್ಬನು ಕಷ್ಟಪಟ್ಟು ಸಂಪಾದನೆ ಮಾಡುವವನಾಗಿರುತ್ತಾನೆ, ಒಬ್ಬನು ಕೆಲಸವಿಲ್ಲದೆ ಕುಳಿತುಬಿಡುತ್ತಾನೆ, ಒಬ್ಬನು ಅಲಂಕಾರ ಪ್ರಿಯನಾಗಿರುತ್ತಾನೆ, ಒಬ್ಬನು ಜೂಜುಗಾರನಾಗಿರುತ್ತಾನೆ, ಒಬ್ಬನು ಸಜ್ಜನನಾಗುತ್ತಾನೆ, ಒಬ್ಬನು ದುರ್ಜನನಾಗುತ್ತಾನೆ,—ಹೀಗೆ ಪರಸ್ಪರ ವ್ಯತ್ಯಾಸಗಳೂ, ಮನೆಯಲ್ಲಿನ ಹೆಂಗಸರುಗಳ ಆವೇಶದ ಜಗಳಾಟಗಳೂ ಉಂಟಾಗಿ ಕುಟುಂಬವು ಛಿದ್ರವಾಗಲು ಕಾರಣಗಳಾಗಿವೆ. ಮಕ್ಕಳು ಬಾಲ್ಯದಲ್ಲಿ ಇದ್ದ ಹಾಗೆಯೇ ಯುವಕರಾದ ಮೇಲೂ ತನ್ನ ಆಜ್ಞೆಗೆ ಒಳಪಟ್ಟು ಇರುವುದಾಗಿಯೂ, ಕೊನೇ ತನಕ ಒಬ್ಬರಿಗೊಬ್ಬರು ಅನ್ಯೋನ್ಯರಾಗಿರುವುದಾಗಿಯೂ, ತನ್ನ ಕಾಲಾಂತರವೂ ತಾನು ಯೋಚಿಸಿದಂತೆ ಏಕ ಗೃಹಕೃತ್ಯವುಳ್ಳವರಾಗಿರುತ್ತಾರೆಂಬುದಾಗಿಯೂ ಯಜಮಾನನಾದವನು ತಿಳಿದು, ಕುಟುಂಬವನ್ನು ಒಟ್ಟುಗೂಡಿಸಿಟ್ಟು ಸರ್ವ ಸ್ವತಂತ್ರವನ್ನೂ ತನ್ನ ಅಧೀನಪಡಿಸಿಕೊಂಡು, ಸಕಲ ಆದಾಯ ನಷ್ಟಕ್ಕೂ ತಾನೇ ಜವಾಬುದಾರನಾಗಿರುತ್ತಾನೆ. ಹೀಗೆ ಯಜಮಾನನ ಇಷ್ಟ ಪ್ರಕಾರ ಆತನ ಜೀವಮಾನದ ಪರಿಯಂತರ ನಡೆದರೂ ನಡೆಯಬಹುದು. ಆತನ ಕಾಲಾನಂತರ ಹಾಗೆ ನಡೆಯದೆ ಜಗಳಕ್ಕೆ ಮೂಲವಾಗಿ ಒಬ್ಬರಿಗೊಬ್ಬರಿಗೆ ಈರ್ಷ್ಯೆ ಹುಟ್ಟಿ ಅನರ್ಥಕ್ಕೆ ಕಾರಣವಾಗುತ್ತದೆ. ಕುಟುಂಬಗಳಲ್ಲಿ ಒಟ್ಟುಗೂಡಿದ್ದಾಗಲೂ ಸಹ ಮುಂದೆ ಒಬ್ಬರಿಗೊಬ್ಬರು ಮೋಸಪಡಿಸಬೇಕೆಂಬ ಇರಾದೆಯಿಂದ ತಮ್ಮ ತಮ್ಮ ಕೈಗಳಿಗೆ ಸಿಕ್ಕದ ನಗನಾಣ್ಯಗಳನ್ನು ಛಪಾವಣಿಮಾಡಲು ಉದ್ಯುಕ್ತರಾಗುತ್ತಾರೆ. ಹೀಗೆ ಛಪಾವಣೆ ಮಾಡಿದ ನಗನಾಣ್ಯಗಳನ್ನು ಗುಟ್ಟಾದ ಸ್ಥಳದಲ್ಲಾಗಲೀ, ಅಥವಾ ತಮ್ಮ ತಮ್ಮ ಆಪ್ತರುಗಳಲ್ಲಾಗಲೀ ಇಟ್ಟು, ಅಕಸ್ಮಾತ್ ಕಾಲಾಧೀನರಾದರೆ ಗುಟ್ಟಾಗಿ ನಡೆದ ಕೆಲಸವಾದುದರಿಂದ ಅದು ಬಹಿರಂಗಕ್ಕೆ ಬೀಳದೆ ಅನ್ಯಾಕ್ರಾಂತವಾಗಿ ಹಾಳಾಗುವುದೂ ಉಂಟು. ಒಂದು ವೇಳೆ ಅಣ್ಣತಮ್ಮಂದಿರಿಗೆ ಸರಿಬಂದರೂ ಪರರ ಮನೆಗಳಿಂದ ಬಂದ ಅತ್ತಿಗೆ ನಾದನಿಯರಿಗೆ ಸರಿಬಾರದೆ ತಮ್ಮ ತಮ್ಮ ಗಂಡಂದಿರುಗಳಲ್ಲಿ ಚಾಡಿ ಕಳ್ಳಪ್ರಗಳೆಗೆ ಪ್ರಾರಂಭಿಸುತ್ತಾರೆ. ಗಂಡಂದಿರು ಪ್ರಾಯಶಃ ತಮ್ಮ ತಮ್ಮ ಹೆಂಡಂದಿರು ಸತ್ಯವತಿಯರೆಂದೇ ಭಾವಿಸಿಕೊಂಡಿರುವುದರಿಂದ ಅವರ ಚಾಡಿ ಕಳ್ಳಪ್ರಗಳಿಗೆ ಲಕ್ಷ್ಯ ಕೊಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ಅವರ ಕಿರುಕುಳವನ್ನೂ, ಆಕ್ರಮಗಳನ್ನೂ ಸಹಿಸಲು ಅಸಾಧ್ಯವಾಗಿ, "ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯುವ" ಸಾಮತಿಯಂತೆ ಕುಟುಂಬದಲ್ಲಿ ಅನೇಕ ಬಗೆಯ ಕಿತ್ತಾಟಗಳು ಹುಟ್ಟಿ ಅರ್ಥಹಾನಿಯನ್ನುಂಟುಮಾಡುತ್ತವೆ.

ಮನೆಯಲ್ಲಿ ಹೆಂಗಸರು ಪ್ರಾಯಶಃ ಕೇವಲ ಅಜ್ಞಾನಿಗಳಾಗಿಯೂ, ಅಸಹನೆಯುಳ್ಳವರಾಗಿಯೂ ಇರುವುದೇ ಹೆಚ್ಚು. ಏಕೆಂದರೆ ವಿದ್ಯಾವಂತೆಯರಾಗಿ ಯುಕ್ತಾಯುಕ್ತ ಜ್ಞಾನವನ್ನು ತಿಳಿದ ಹೆಂಗಸರು ಇರುವುದೇ ಕಡಮೆ. ಈ ಹೆಂಗಸರು ಗೃಹಕೃತ್ಯದಲ್ಲಿ ಪದಾರ್ಥಗಳ ಬಳಕೆಯನ್ನೂ, ಮನೆಯ ಖರ್ಚುಗಳನ್ನೂ ಹೇಗೆ ಮಾಡಬೇಕೆಂಬುದನ್ನು ತಿಳಿದು ಅರಿಯರು. ಮಾಡುವ ಖರ್ಚಿನಲ್ಲಿ ತಾರತಮ್ಯವಿಲ್ಲ. ತಮ್ಮ ಸ್ಥಿತಿಯನ್ನು ತಿಳಿದುಕೊಂಡಿದ್ದರೂ ಅಟ್ಟಹಾಸವನ್ನು ಮಾಡುವುದಕ್ಕೆ ಅಪೇಕ್ಷೆಪಡುತ್ತಾರೆ. ಉಡಿಗೆತೊಡಿಗೆಗಳಲ್ಲಿ ಆಸೆ ಹೆಚ್ಚು. ಮುಂದಿನ ತೊಂದರೆಗಳನ್ನು ಯೋಚಿಸದೆ ವೈಭವಗಳಲ್ಲಿ ಹೆಚ್ಚಾದ ಹಣವ್ಯಯವನ್ನು ಮಾಡಿಸುತ್ತಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಕುವ ಹಣವು ಅನಾವಶ್ಯಕವೆಂದೂ, ಬಾಲ್ಯದಲ್ಲಿಯೇ ಮಕ್ಕಳಿಗೆ ವಿಜೃಂಭಣೆಯಿಂದ ಲಗ್ನ ಮುಹೂರ್ತಗಳನ್ನು ಮಾಡುವ ದುಂದು ಖರ್ಚುಗಳು ಯೋಗ್ಯವೆಂದೂ ಹಟಹಿಡಿದು ಮಾಡಿಸುತ್ತಾರೆ "ನೆರೆಮನೆಯವಳು ಸರಿಗೆ ಹಾಕಿಕೊಂಡರೆ ಹೊರಮನೆಯವಳು ಉರುಲನ್ನೇ ಹಾಕಿಕೊಳ್ಳುತ್ತಾಳೆ." ತಾವು ಬಡವರಾದರೂ ಐಶ್ವರ್ಯವಂತರಂತೆಯೇ ಖರ್ಚು ಮಾಡಬೇಕೆಂದು ಛಲಹಿಡಿದು ಯಜಮಾನನಿಗೆ ಸಾಲ ಮುಂತಾದುವುಗಳನ್ನು ಮಾಡಿಸುತ್ತಾರೆ. ಹೀಗೆ ತಳವೊಡೆದ ಪಾತ್ರೆಯಲ್ಲಿ ನೀರು ನಿಲ್ಲುವುದುಂಟೇ?

ಅನೇಕಾನೇಕ ಗಂಡಸರಾದರೋ ಯಾವ ಕೆಲಸವನ್ನೂ ಮಾಡದೆ ಬರೀ ಡಂಭಾಚಾರಿಗಳಾಗಿರುತ್ತಾರೆ. ಇವರಿಗೆ ಕಷ್ಟವೆಂದರೆ ಆಗದು. ಇಂಥವರು ಹೊತ್ತು ಕಳೆಯುವುದಕ್ಕೆ ಜೂಜುಗಳನ್ನಾಡಲೇ ಬೇಕಾಗಿರುತ್ತದೆ. ಅಲ್ಲದೆ ವ್ಯಭಿಚಾರ, ಕಳ್ಳತನ, ಮೋಸ ಮುಂತಾದವುಗಳನ್ನು ಕೈಕೊಳ್ಳಬೇಕಾಗಿದೆ. ಇವುಗಳಿಂದ ಬಾಧಕಗಳುಂಟಾದಾಗ ಸಾಲಮೂಲಗಳಿಂದ ಪಡೆದ ಹಣವನ್ನು ವ್ಯಯಮಾಡಿ ಉಳಿದುಕೊಳ್ಳಬೇಕಾಗಿದೆ. ಹೊತ್ತುಹೋಗದ ವ್ಯಾಜ್ಯಗಳನ್ನು ಕೈಕೊಳ್ಳುವುದೂ ಹೆಚ್ಚು. ಮತದ್ವೇಷಾದಿಗಳನ್ನು ಕಟ್ಟಿಕೊಂಡು ಏಕಮತ್ಯಕ್ಕೆ ಭಂಗ ತಂದುಕೊಳ್ಳುತ್ತಲಿದ್ದಾರೆ. ವಿದ್ಯಾವಿಹೀನರಾಗಿ ಆರೋಗ್ಯ ಸೂತ್ರಗಳನ್ನು ತಿಳಿದುಕೊಳ್ಳದಿರುವುದರಿಂದ ತಮ್ಮ ತಮ್ಮ ಜೀವಮಾನದಲ್ಲಿ ಅರೆವಾಸಿ ಕಾಲವನ್ನು ರೋಗದಲ್ಲಿ ಕಳೆಯುತ್ತಾರೆ. ಔಷಧೋಪಚಾರಗಳಿಗಾಗಿ ವಿಶೇಷ ಹಣ ವ್ಯಯವನ್ನು ಮಾಡಬೇಕಾಗಿದೆ. ಮದ್ಯಪಾನ ಮುಂತಾದವುಗಳಿಗಾಗಿ ವಿಶೇಷ ಹಣವ್ಯಯವನ್ನು ಮಾಡುತ್ತಾರೆ. ಬಾಲ್ಯದಲ್ಲಿಯೇ ವಿವಾಹವಾಗಿ ಮಧ್ಯ ಮಧ್ಯೆ ಪತ್ನೀವಿಯೋಗದಿಂದ 2-3 ವಿವಾಹಗಳನ್ನು ಮಾಡಿಕೊಂಡು ತನ್ಮೂಲಕ ವಿಶೇಷ ಹಣ ವ್ಯಯವನ್ನು ಮಾಡಿಕೊಳ್ಳುವವರೂ ಉಂಟು. ಆದಕಾರಣ

(1) ಪ್ರತಿಯೊಬ್ಬ ಯಜಮಾನನೂ ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಪ್ರಬುದ್ಧಮಾನರಾದ ಮೇಲೆ (18 ವರುಷಗಳ ತರುವಾಯ) ತನ್ನ ಆಸ್ತಿಯನ್ನು ಮಕ್ಕಳು ಅನ್ಯೋನ್ಯವಾಗಿ ಬಾಳಬೇಕಾದರೆಯೇ ಅವರ ಪಾಲನ್ನು ಕೊಟ್ಟು ತನ್ನ ಜೀವನಕ್ಕೆ ಬೇಕಾದಷ್ಟನ್ನು ಮಿಗಿಸಿಕೊಂಡು, ತನ್ನ ವೃದ್ಧಾಪ್ಯದಲ್ಲಿ ತಮ್ಮನ್ನು ಹಿತಮಾರ್ಗದಲ್ಲಿ ಸಂರಕ್ಷಣೆ ಮಾಡಿಕೊಂಡು ಬರುವ ಮಗನಿಗೆ ತಾವು ಮಿಗಿಸಿಕೊಂಡ ಆಸ್ತಿಯು ಸಲ್ಲುವಂತೆ ಮಾಡಬೇಕು. (2) ವಿವಾಹ ಸ್ವಾತಂತ್ರ್ಯವನ್ನು ಮಕ್ಕಳಿಗೇ ಬಿಡಬೇಕು. (3) ಮಿತವ್ಯಯದಿಂದಲೂ, ಸುಲಭಶೀಲತೆಯಿಂದಲೂ ಲಗ್ನ ಮುಹೂರ್ತಗಳು ನೆರವೇರುವಂತಹ ವಿಧಿಯನ್ನು ಏರ್ಪಡಿಸಿಕೊಂಡು ರೂಢಿಗೆ ತರಬೇಕು. (4) ಗೃಹಕೃತ್ಯಗಳಲ್ಲಿ ವಿವೇಕಿಗಳಾಗುವಂತೆ ಹೆಂಗಸರನ್ನು ತಿದ್ದಿ ಸರಿ ಮಾಡಿಕೊಳ್ಳಬೇಕು. (5) ಕುಡಿತ, ಜೂಜು, ವ್ಯಭಿಚಾರ ಮುಂತಾದುವುಗಳನ್ನು ಬಿಟ್ಟುಬಿಡಬೇಕು. (6) ಆದಾಯವರಿತು ಹಣ ವ್ಯಯ ಮಾಡಿ ದ್ರವ್ಯ ಶೇಖರಮಾಡಬೇಕು. (7) ಪ್ರತಿಯೊಬ್ಬನೂ ಸರ್ಕಾರದಲ್ಲಿ ಭೀಮ (ಲೈಫ್ ಇನ್ಷೂರೆನ್ಸ್), ಮಾಡುವಂತೆ ಆಗಬೇಕು. (8) ಸಾಲ ಮಾಡುವುದಿಲ್ಲವೆಂದು ಸಂಕಲ್ಪವನ್ನು ಮಾಡಿಕೊಳ್ಳಬೇಕು. (9) ಕೆಲಸಕ್ಕೆ ಬಾರದ ವ್ಯಾಜ್ಯಗಳಿಗಾಗಿ ಹಣವನ್ನು ವ್ಯಯಮಾಡಬಾರದು. (10) ಸತ್ಯಕ್ಕೆ ಯಾವಾಗಲೂ ಭಂಗ ತಂದುಕೊಳ್ಳಬಾರದು.

ಎಸ್. ಸುಬ್ರಾವ್, ಶಿಕಾರಿಪುರ.

ದಿವಾನ್‌ರವರ ಸರ್ಕೀಟು.

ನೆಲಮಂಗಲ

ಮೈಸೂರು ಸಂಸ್ಥಾನದ ದಿವಾನ್‌ರಾದ ಮ॥ ವಿಶ್ವೇಶ್ವರಯ್ಯನವರು ಇದೇ ತಿಂಗಳು 2 ನೇ ತಾ. ದಯಮಾಡಿಸಿ ಬೆಳಗ್ಗೆ 8 ಗಂಟೆ ಸುಮಾರಿನಲ್ಲಿ ಪುರಪ್ರವೇಶ ಮಾಡಿದರು. ಬರುತ್ತಲೇ ಅವರು ಪೇಟೆ ಬೀದಿಯನ್ನು ನೋಡಿಕೊಂಡು, ಆಫೀಸ್ ಕಟ್ಟಡಗಳು ಅಂದರೆ ಮಿಷನ್ ಗರಲ್ಸ್ ಸ್ಕೂಲು, ಪಂಚಮರ ಸ್ಕೂಲು, ಸಬ್ ರಿಜಿಸ್ಟ್ರಾರ್ ಆಫೀಸು, ಹಿಂದುಸ್ಥಾನಿ ಬಾಯ್ಸ್ ಸ್ಕೂಲು, ಗೌರ್ನಮೆಂಟ್ ಎ. ವಿ. ಸ್ಕೂಲು, ಹಾಸ್ಪಿಟಲ್, ಸಬ್ ಡಿವಿಜನ್ ಆಫೀಸು, ರೀಡಿಂಗ್ ರೂಂ ಇವುಗಳನ್ನು ಒಂದೊಂದಾಗಿ ಪ್ರವೇಶಿಸಿ ಪ್ರತಿಯೊಂದರಲ್ಲಿಯೂ 20-25 ನಿಮಿಷಗಳ ವರೆಗೂ ಇದ್ದು ಅದರ ಸ್ಥಿತಿಗತಿಗಳನ್ನು ವಿಶದವಾಗಿ ಅಂದರೆ ಸ್ಕೂಲುಗಳಲ್ಲಿ ಹಾಲಿ ವ್ಯಾಸಂಗಮಾಡುತ್ತಿರುವ ಗಂಡು ಹೆಣ್ಣು ಮಕ್ಕಳು ಎಷ್ಟು ಮಂದಿ? ಟೌನ್‌ನಲ್ಲಿರತಕ್ಕ ಒಟ್ಟು ಬಾಲಕರ ಸಂಖ್ಯೆ ಎಷ್ಟು? ಸ್ಕೂಲ್ ಫೀಸು ಎಷ್ಟರಲ್ಲಿ ವ್ಯಾಸಂಗಮಾಡುತ್ತಾರೆ? ಯಾವ ಯಾವ ಮತಸ್ಥರು ಎಷ್ಟೆಷ್ಟು ಮಂದಿ ಇರುವರು? ಕೆಲವು ವರ್ಷಗಳ ಮುಂಚಿನ ಅಭ್ಯಾಸಕ್ಕೂ ಹಾಲಿ ನಡೆಯುತ್ತಿರುವ ಅಭ್ಯಾಸಕ್ಕೂ ವ್ಯತ್ಯಾಸವಿದೆಯೇ? ಈಚೆಗೆ ಎಷ್ಟು ಮಟ್ಟಿಗೆ ಅಭಿವೃದ್ಧಿಯಾಗಿದೆ? ಹಾಲಿ ಸ್ಕೂಲುಗಳಿಗಿರತಕ್ಕ ಕೊರತೆಯೇನು? ಎಂಬದಾಗಿಯೂ, ಸರ್ಕಾರಿ ಆಫೀಸುಗಳಲ್ಲಿ ಅವುಗಳ ಅಭಿವೃದ್ಧಿ ಸ್ಥಿತಿಯು ಎಷ್ಟರ ಮಟ್ಟಿಗೆ ಹೆಚ್ಚಿದೆಯೆಂದೂ ವಿಚಾರಿಸಿಕೊಂಡು ತಾಲ್ಲೋಕ್ ಕಛೇರಿಯ ಮುಂಭಾಗಕ್ಕೆ ಬಂದರು. ಮತ್ತು ತಾಲ್ಲೋಕ್ ಕಛೇರಿಯಲ್ಲಿ ಸುಮಾರು 10½ ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ವರಿಗೂ ಮೀಟಿಂಗ್ ನಡಿಸಿದರು. ಹಲವು ಜನ ದೊಡ್ಡಮನುಷ್ಯರು ಹಾಜರಾಗಿದ್ದರು. ಸ್ಥಳೀಯ ಸಣ್ಣ ಸಣ್ಣ ಅಧಿಕಾರಿಗಳು ಆ ಕಾಲದಲ್ಲಿ ಕಪ್ಪು ಬಿಳಿಯ ಬಟ್ಟೆಗಳು ಅಥವ ಹಳೆಯ ಬಟ್ಟೆಗಳನ್ನು ಹಾಕಿರುವವರು ಒಳಗೆ ಪ್ರವೇಶಮಾಡಕೂಡದೆಂದು ತಡೆದುಬಿಟ್ಟರು. ಇದರಿಂದ ಮಧ್ಯಾಹ್ನದ ಬಿಸಿಲಿನಿಂದ ಅನೇಕ ಜನಗಳು ಹೊರಗಡೆ ಮುಖಭಂಗಿಗಳಾಗಿ ನಿಂತುಬಿಟ್ಟರು. ಹಾಗೂ ಒಬ್ಬಿಬ್ಬರು ಪ್ರವೇಶಿಸಲು ಮುಂದುವರಿದು ಅವಮಾನಿತರಾಗಿ ಹಿಂತಿರುಗಿದರು. ಆಬಾಲವೃದ್ಧರೂ ಮಂತ್ರಿವರ್ಯರ ಹಿತವಚನಗಳನ್ನು ಕೇಳಬಾರದೇ? ಅವರ ಅತಿಶಯವಾದ ಆಸೆಗಳನ್ನು ಸಾರ್ಥಕಗೊಳಿಸಿಕೊಳ್ಳಬಾರದೇ? ಸಾಹುಕಾರರಲ್ಲದೆ ಬಡವರು ಮಾತ್ರ ಮೀಟಿಂಗಿನಲ್ಲಿ ಮಾತನಾಡಬಾರದೇ? ದಿವಾನ್‌ರೊಡನೆ ಸಂಕಟಗಳನ್ನು ಹೇಳಿಕೊಳ್ಳಲು ಅತ್ಯಾತುರರಾಗಿದ್ದ ಜನಗಳು ದ್ವಾರಪಾಲಕರಿಂದ ಅಡ್ಡಿಪಡಿಸಲ್ಪಟ್ಟು ವ್ಯಸನದಿಂದ ಹಿಂದಕ್ಕೆ ಹೊರಟುಹೋದರು. ಮಹಾಸ್ವಾಮಿಗಳು ಮೀಟಿಂಗಿನಲ್ಲಿ ಪ್ರಜೆಗಳ ಕಷ್ಟ ಸುಖಗಳ ವಿಷಯವಾಗಿ ಬಹಳವಾಗಿ ವಿಚಾರಿಸಿದರು. ಹಾಲಿ ಊರಿನಲ್ಲಿರತಕ್ಕ ಪ್ರಜೆಗಳ ಸಂಖ್ಯೆ ಎಷ್ಟು? ಅವರಲ್ಲಿ ವ್ಯವಸಾಯದಿಂದ ಜೀವಿಸತಕ್ಕವರೆಷ್ಟು ಮಂದಿ? ವ್ಯಾಪಾರ ಕೈಗಾರಿಕೆಗಳಿಂದ ಜೀವಿಸತಕ್ಕವರೆಷ್ಟು ಮಂದಿ? ವೃಥಾ ಕಾಲಹರಣ ಮಾಡತಕ್ಕವರೆಷ್ಟು ಮಂದಿ? ಹೀಗೆಲ್ಲಾ ಪ್ರಶ್ನೆಗಳನ್ನು ಕೇಳಿ ಕಾಲಹರಣ ಮಾಡುತ್ತಿರುವ ಜನಗಳ ಸಂಖ್ಯೆ ಜಾಸ್ತಿ ಎಂದು ನಿರ್ಣಯಿಸಿ ಅವರು ಯಾವುದಾದರೊಂದು ಕೈಗಾರಿಕೆಗಳನ್ನು ಮಾಡಬೇಕೆಂದೂ, ಭಗವಂತನು ಮನುಷ್ಯನಿಗೆ ಕೊಟ್ಟಿರುವ (ಆಯುಷ್ಯ) ಕಾಲವನ್ನು ವೃಥಾ ಕಳೆಯದೆ ಪ್ರತಿ ಒಂದು ಕ್ಷಣವನ್ನೂ ತನ್ನ ತನ್ನ ನೆರೆಹೊರೆಯವರ ಮತ್ತು ತನ್ನ ದೇಶದ ಹಿತಕ್ಕಾಗಿ ಉಪಯೋಗಿಸುತ್ತಾ, ಅದನ್ನು ಕಾರ್ಯದಲ್ಲಿ ಸಾಧನೆಮಾಡುತ್ತಾ ಬರಬೇಕೆಂದು ಬೋಧಿಸಿದರು. ಎಲ್ಲರೂ ಸೇರಿ ಏಕಮತ್ಯದಿಂದ ಎಲ್ಲಾ ಮಾತಸ್ಥರೂ ಒಗ್ಗಟ್ಟಾಗಿ ಕಾರ್ಯವನ್ನು ಪ್ರಾರಂಭಿಸಬೇಕಾಗಿ ಹೇಳಿದರು. ಹೀಗೆಲ್ಲಾ ಹಿತವಾಕ್ಯಗಳನ್ನು ಹೇಳಿದ ನಂತರ ಪ್ರಜೆಗಳನ್ನು ಸರ್ಕಾರದಿಂದ ಅವರಿಗೆ ಯಾವ ಯಾವ ಸಹಾಯಗಳು ಅವಶ್ಯಕವಾಗಿವೆ ಎಂದು ಕೇಳುವಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಅಂದರೆ—ಒಬ್ಬರು ಬೇರೆ ಗ್ರಾಮಗಳಿಗೂ ಈ ಗ್ರಾಮಕ್ಕೂ ರಸ್ತೆಯಾಗಬೇಕೆಂದೂ, ಮತ್ತೊಬ್ಬರು ಈ ಊರಲ್ಲಿ ಸಂತೆಯನ್ನು ಟವನಿನಲ್ಲೇ ಆಗುವ ಹಾಗೆ ಹುಕುಂ ಆಗಬೇಕೆಂದೂ, ಒಬ್ಬರು ಊರಿನ ಹೊರಗೆ ಅನುಕೂಲವಾದ ಸ್ಥಳದಲ್ಲಿ ನಡಿಸುವಂತೆ ಆಗಬೇಕೆಂದೂ, ಮತ್ತೊಬ್ಬರು ಸಿವಿಲ್ ಕೋರ್ಟು ಈ ಊರಲ್ಲಿ ನಡೆಯುವಂತೆ ಆಗಬೇಕೆಂದೂ, ಮತ್ತೊಬ್ಬರು ಊರಿನ ಕೆರೆಯ ನೀರು ಜೀವಜಂತುಗಳ ಉಪಯೋಗಕ್ಕಾಗಿ ವ್ಯವಸಾಯಕ್ಕೆ ಬಿಡದಂತೆ ನಿಲ್ಲಿಸಬೇಕೆಂದೂ, ಈ ರೀತಿ ಹಲವು ವಿಧವಾಗಿ ಕೇಳಿಕೊಂಡರು. ಅದನ್ನೆಲ್ಲಾ ದಿವಾನ್‌ರವರು ಸಾವಧಾನದಿಂದ ಕೇಳಿ, ಸಂತೆ ಊರಿನೊಳಗೆ ಅಥವ ಹೊರಗೆ ಮಾಡಲು ಊರಿನ ಹೆಚ್ಚು ಜನಗಳು ಯಾವದನ್ನು ಅಪೇಕ್ಷಿಸಿದರೆ ಆ ರೀತಿ ನಡಿಸಬೇಕೆಂದೂ, ಬಾಕಿ ವಿಷಯಗಳನ್ನು ನೋಟ್ ಮಾಡಿಕೊಂಡಿರುವದಾಗಿಯೂ, ಆಲೋಚಿಸುವಂತೆಯೂ ಅಪ್ಪಣೆ ಮಾಡಿದರು. ಸಿವಿಲ್ ಕೋರ್ಟನ್ನು ಇಲ್ಲಿಗೆ ಬರಮಾಡುವದರಿಂದ ಈ ಊರು ಬಹು ಮಟ್ಟಿಗೆ ಅಭಿವೃದ್ಧಿಯಾಗುವದಲ್ಲದೆ ಇಲ್ಲಿನ ಜನಗಳಿಗಿರತಕ್ಕ ವಿಶೇಷವಾದ ಕಷ್ಟವನ್ನು ತಪ್ಪಿಸಿದಂತಾಗುವದು. ಇಲ್ಲಿಂದ ಸಿವಿಲ್ ಕೋರ್ಟು ವರ್ಗವಾದಾರಭ್ಯ ಇಲ್ಲಿನ ಜನಗಳು ಅನುಭವಿಸುತ್ತಿರುವ ಕಷ್ಟವನ್ನು ಹೇಳತೀರದು. ಅಲ್ಲದೆ ಇಲ್ಲಿ ಉತ್ಪತ್ತಿಯೂ ಜಾಸ್ತಿಯಾಗುವದಕ್ಕೆ ಸಂಶಯವಿಲ್ಲ. ಸವಾ ವಗ್ಯರೆ ಎಲ್ಲಾ ಅನುಕೂಲವಾಗಿವೆ. ಹಾಗಿದ್ದರೂ ಇಲ್ಲಿಂದ ತಪ್ಪಿಸಿದ್ದು ಶೋಚನೀಯವಾಗಿದೆ. ದಿವಾನ್‌ರವರು ದಯವಿಟ್ಟು ಮನಸ್ಕರಿಸಿ ಇಲ್ಲಿಗೆ ಕೋರ್ಟು ಬರುವಂತೆ ಮಾಡಿದರೆ ಇಲ್ಲಿನ ಜನಗಳಿಗೆ ಬಹಳ ಉಪಕಾರವಾಗುವುದು. ಬಲಾತ್ಕರಿಸಿ ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸುವುದು ಈ ತಾಲ್ಲೋಕಿಗೆ ಅತ್ಯವಶ್ಯಕವಾಗಿರುತ್ತದೆ. ಆ ಕಾನೂನನ್ನು ಜಾರಿಗೆ ತರುವಂತೆ ಅಪ್ಪಣೆ ಕೊಡಿಸುವದಾದರೆ ಮೂಢರಾದ ಅನೇಕ ಜನ ರೈತ ಬಾಲಕರು ನಾಗರಿಕರಾಗುವದಕ್ಕೆ ಏನೇನೂ ಸಂಶಯವಿಲ್ಲ. ಮತ್ತು ಈ ತಾಲ್ಲೋಕಿಗೆ ಯಾವದರಿಂದ ಅತ್ಯಂತ ಪ್ರಯೋಜನವಿದೆಯೋ ಅದನ್ನು ಮಾತ್ರ ದಿವಾನ್‌ರವರ ಗಮನಕ್ಕೆ ಒಬ್ಬರೂ ತಂದಂತೆ ತಿಳಿಯಲಿಲ್ಲ. ಈ ತಾಲ್ಲೋಕಿನಲ್ಲಿ ವಿಶೇಷವಾಗಿ ಈ ಡಿಸ್ಟ್ರಿಕ್ಟಿನಲ್ಲೇ ಸರಿಯಾದ ನೀರಾವರಿ ಆಶ್ರಯವಿಲ್ಲ. ಇಲ್ಲಿ ತರಿ ಅಥವಾ ಬಾಗಾಯತು ಜಮೀನುಗಳನ್ನು ಮಾಡುವ ರೈತರು ಅಪರೂಪ. ಬಹುಕಾಲಕ್ಕೆ ಮುಂಚೆ ಹಿಂದಿನ ಮಂತ್ರಿವರ್ಯರು ಈ ತಾಲ್ಲೋಕಿನಲ್ಲಿ ಹರಿಯುವ ಕುಮುದ್ವತೀ ನದಿಗೆ ಅಣೆಕಟ್ಟನ್ನು ದೊಡ್ಡದಾಗಿ ಹಾಕುವದರಿಂದ ವಿಶೇಷವಾದ ನೀರನ್ನು ನಿಲ್ಲಿಸಿ ಬಹಳ ಜಮೀನನ್ನು ಸಾಗುವಳಿಗೆ ತರಬೇಕೆಂದು ಏರ್ಪಾಡು ಮಾಡಿ ಸರ್ವೆ ವಗೈರೆ ಮಾಡಿಸಿ, ಮುಂದೆ ಅನುಕೂಲವಾದಾಗ ಅಂದರೆ ದುರ್ಭಿಕ್ಷ ವಗೈರೆ ಬಂದರೆ ಈ ಕಾಮಗಾರಿಯನ್ನು ಮಾಡಿಸಬೇಕೆಂದು ನಿಲ್ಲಿಸಿಬಿಟ್ಟರು. ಎಷ್ಟು ದಿನಗಳಾದಾಗ್ಯೂ ಇಂಥಾ ಅನುಕೂಲವಾಗಿರುವ ನೀರನ್ನು ವೃಥಾ ಪ್ರಯೋಜನವಿಲ್ಲದಂತೆ ಬಿಡುವದರಿಂದ ಈ ಪ್ರಾಂತ್ಯಕ್ಕೆ ಬಹಳ ನಷ್ಟವೆಂದು ಹೇಳಬೇಕು. ಈ ಅಣೆಕಟ್ಟನ್ನು ಹಾಕಿಸುವುದರಿಂದ ಸರ್ಕಾರದವರು ಏನು ಹಣ ಮಾಡಿದರೂ ಫಲವತ್ತಾಗಿ ಸಾಗುವಳಿಗೆ ಬಂದು ರೈತರಿಗೆ ವಿಶೇಷವಾದ ಸಹಾಯಕ್ಕೆ ಏರ್ಪಡುವುದು. ಇದನ್ನು ನಮ್ಮ ಮಂತ್ರಿವರ್ಯರು ಗಮನಕ್ಕೆ ತಂದುಕೊಂಡು ಕಾಮಗಾರಿ ನಡಿಸಲು ಪ್ರಾರಂಭಿಸಿದರೆ ಅಚಂದ್ರಾರ್ಕವಾಗಿಯೂ ಅವರ ಕೀರ್ತಿಯು ಇಲ್ಲಿನ ಬಡ ರೈತರಿಂದ ಹೊಗಳಲ್ಪಡುವದಕ್ಕೆ ಸಂದೇಹವಿಲ್ಲ. ಮಧ್ಯಾಹ್ನ 1 ಘಂಟೆಯ ನಂತರ ಅವರು ಟ್ರಾವೆಲರ್ಸ್ ಬಂಗಲೆಗೆ ದಯಮಾಡಿ, ಅಲ್ಲಿ ಭೋಜನಾದಿಗಳನ್ನು ತೀರಿಸಿಕೊಂಡು 3 ಘಂಟೆಯಿಂದ ಕೆಂಪೇಗೌಡನ ಹಳ್ಳಿ ವಗೈರೆ ಹಳ್ಳಿಗಳನ್ನು ನೋಡಿಕೊಂಡು, ಅಲ್ಲಿನ ವಿದ್ಯಮಾನಗಳನ್ನು ವಿಚಾರಿಸಿಕೊಂಡು, 5 ಘಂಟೆಗೆ ವಾಪಸ್ ಬಂಗಲೆಗೆ ಚಿತ್ತೈಸಿದರು. ಆಗಲೂ ಇಲ್ಲಿನ ನಾಲ್ಕಾರು ಜನ ದೊಡ್ಡ ಮನುಷ್ಯರುಗಳನ್ನು ಕರಸಿಕೊಂಡು, ಅವರೊಡನೆ ಸ್ನೇಹಿತರಂತೆಯೂ, ತಂದೆಗಳ ಹಾಗೂ, ವಾಲಕರಂತೆಯೂ ಬಹಳ ಸರಸರಿಂದ ವಿಶೇಷ ಸಲಿಗೆಯಿಂದ ಅವರವರ ಕಷ್ಟಗಳೇನೆಂದು ಒಬ್ಬೊಬ್ಬರನ್ನೇ ವಿಚಾರಿಸಿ, ಸಾಯಂಕಾಲ 6½ ಘಂಟೆಗೆ ವಾಪಸ್ ಬೆಂಗಳೂರಿಗೆ ಚಿತ್ತೈಸಿದರು. ಈ ರೀತಿ ಆ ದಿನ ನಮ್ಮ ದಿವಾನ್‌ರವರು ಒಂದು ಕ್ಷಣವಾದರೂ ವ್ಯರ್ಥವಾಗಿ ಕಳೆಯದೆ ನಮ್ಮಗಳಿಗೆ ಹಿತವಚನಗಳನ್ನು ಬೋಧಿಸುತ್ತಾ ಹಾಕಿಕೊಟ್ಟ ಮೇಲ್ಪಂಕ್ತಿಯು ಅನುಕರಣೀಯವಾದದ್ದಾಗಿದೆ.

ಶ. ಆರ್.

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ.

ಈ ಊರಿನಲ್ಲಿ ಸದ್ಯಾ ರೋಗಾದಿಗಳ ಭಯವೇನೂ ಇಲ್ಲ. ಸುತ್ತು ಮುತ್ತಲಿನ ಗ್ರಾಮಗಳಲ್ಲೆಲ್ಲಾ ಪ್ಲೇಗ್ ಅನಾಂತ್ರ ಬಹಳವಾಗಿದೆ. ಬಿಸ

...ಘವು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆ. ಎರಡು ವಾರಗಳ ಹಿಂದೆ ...ರಾತ್ರಿ ಮೂರು ಹದ ಒಳ್ಳೇ ಮಳೆಯಾದ್ದರಿಂದ ಕೆರೆಗಳಿಗೂ ಭಾವಿಗ... ...ರು ಬಂದದ್ದು ಬಹಳ ಪ್ರಯೋಜನವಾಯಿತು.—ಇದೇ ಮಾರ್ಚಿ ೩ ರಲ್ಲಿ ಘನವನ್ನು ಹೊಂದಿರುವ ದಿವಾನ್ ವಿಶ್ವೇಶ್ವರಯ್ಯನವರು ಬೆಳಗ್ಗೆ ...ಗೆ ದಯಮಾಡಿಸಿದರು. ಆ ಕಾಲದಲ್ಲಿ ಗ್ರಾಮದ ಮುಖ್ಯಾಧಿಕಾರಿಗಳು, ...ಮನುಷ್ಯರು, ಇತರ ಲೌಕಿಕ ವೈದಿಕ ಮಂಡಲಿಯವರು ಸಹಾ ಊರ ...ದ ರಸ್ತೆಯಲ್ಲಿ ವಾದ್ಯ ಬ್ಯಾಂಡುಗಳೊಡನೆ ಕಾದಿದ್ದು ಹಾರಾ ತುರಾ ...ಸಿದ ನಂತರ ತೋರಣಗಳಿಂದಲೂ ಧ್ವಜಗಳಿಂದಲೂ ಅಲಂಕರಿಸಲ್ಪ... ...ಗರ್ಲ್ಸ್ ಎ. ವಿ. ಸ್ಕೂಲನ್ನು ಪ್ರವೇಶಿಸಿ ಅಲ್ಲಿನ ವಿದ್ಯಮಾನಗಳನ್ನು ಪರಾಂಬ... ...ಕೊಂಡರು. ತರುವಾಯ ದಿವಾನ್ ಬಹದ್ದೂರರವರು ಪ್ರೈವೆಟ್ ಸೆಕ್ರೆ... ...ಡೆಪ್ಯುಟಿ ಕಮಿಷನರ್ ಸಾಹೇಬರು, ಅ॥ ಕಮಿಷನರವರು, ಡೆಪ್ಯುಟಿ ...ಸ್ಪೆಕ್ಟರ್ ಮೊದಲಾದ ಪರಿವಾರದೊಂದಿಗೆ ಪುರವಾಸಿಗಳಾದ ಮಹಾ ...ದೊಂದಿಗೂ ನೋಟಕರಾದ ಮಹಾ ಗುಂಪಿನೊಂದಿಗೂ ಕೆಲವು ಮೋಟ... ..., ಮೋಟರ್ ಸೈಕಲ್‌ಗಳು ಸಹಿತವಾಗಿ ಬ್ಯಾಂಡ್ ವಾದ್ಯದಿಂದ ಗ್ರಾಮ... ...ಪ್ರವೇಶಿಸಿ ಸ್ವರಬೀದಿನಲ್ಲಿ ಬರುತ್ತಿರುವಾಗ ಲಂಡನ್ ಮಿಷನ್ ಗರ್ಲ್ಸ್ ...ರ್ ಹೆಡ್ ಮಾಸ್ಟರ್ ಮ॥ ಎಲ್ಲಿಕಯ್ಯನವರು ಮಾಸ್ಟರುಗಳ ಸಹಾಯ... ...ಬಹು ವಿಧ ತೋರಣಗಳಿಂದ ಅಲಂಕರಿಸಿದ್ದ ಸ್ಕೂಲಿನ ಮುಂಭಾಗದಲ್ಲಿ ...ಮಾಸ್ಟರುಗಳ, ಅಲಂಕೃತರಾದ ಬಾಲಕಿಯರ ಸಹಿತ ಕಾಯುತ್ತಿದ್ದು ...ಯು ಸ್ಕೂಲ್ ಮುಂಭಾಗದಲ್ಲಿ ಬಂದು ನಿಂತಾಗಲೇ ಬಾಲಕಿಯರು ...ನಿಯಂ ವಾದ್ಯದೊಂದಿಗೆ ಮಂಗಳವನ್ನು ಹಾಡಿಸಿದರು. ಹೆಡ್ ...ರವರು ಪುಷ್ಪ ಹುರಾಯಿಗಳನ್ನರ್ಪಿಸಿ ಸ್ಕೂಲಿಗೆ ದಯಮಾಡಬೇಕೆಂದು ...ಸಿಕೊಂಡಾಗ ಅವರು ಒಳಗೆ ಪ್ರವೇಶಿಸಿ ಸ್ಕೂಲ್ ವಿಷಯ ಕೆಲವು ಸಂಗತಿ... ...ನ್ನು ಹೆಡ್ ಮಾಸ್ಟರ್ ಮತ್ತು ಮಿಸ್ಟ್ರೆಸ್‌ರವರಿಂದಲೂ, ಡೆಪ್ಯುಟಿ ಇನ್ಸ್‌ಪೆಕ್ಟ... ...ರಿಂದಲೂ ವಿಚಾರಿಸಿ ತಿಳುಕೊಂಡು ಬಾಲಕಿಯರು ಹಾಡಿದ ಸಂಗೀತವನ್ನು ...ಕೇಳಿ ಸಂತೋಷಪಟ್ಟು, ಅದೇ ರೀತಿ ಉತ್ಸವದಿಂದಲೇ ಊರು ಮಧ್ಯದಲ್ಲಿ ...ಇತ್ತ ಸುಂದರವಾದ ಚಪ್ಪರಕ್ಕೆ ದಯಮಾಡಿ ಕುಳಿತುಕೊಂಡು ಗ್ರಾಮ... ...ಆಹವಾಲನ್ನೂ ಜನಗಳ ಅಭಿಪ್ರಾಯವನ್ನೂ ಸಾವಧಾನದಿಂದ ವಿಚಾರಿಸಿ ...ಸಮಯೋಕ್ತಿಗಳಿಂದ ತೃಪ್ತಿಕರವಾದ ಉತ್ತರವನ್ನು ದಯಪಾಲಿಸಿ, ಹಾರ... ...ರಾಯಿ ತಾಂಬೂಲಾದಿಗಳನ್ನು ಸ್ವೀಕರಿಸಿ ಗ್ರಾಮವನ್ನೆಲ್ಲಾ ಪರಾಂಬರಿಸಿ ...೧೦½ ಗಂಟೆಗೆ ದೇವರಹಳ್ಳಿಗೆ ಪರಿವಾರ ಸಹಿತ ಪ್ರಯಾಣ ಬೆಳಸಿದರು. ...ದವರಾಳು ಪ್ರಭುಗಳು ನಮ್ಮ ಮೈಸೂರು ದೇಶದ ಏಳಿಗೆಗೂ ಪ್ರಜೆಗಳ ಪ್ರಯೋಜನಕ್ಕೂ ಪಡುವ ಪ್ರಯಾಸವನ್ನು ಪ್ರಜೆಗಳು ತಿಳುಕೊಂಡು ಅವರನ್ನು ...ಹಳವಾಗಿ ಕೊಂಡಾಡಿದರು [ಇದೇ ಅಭಿಪ್ರಾಯವುಳ್ಳ ಇನ್ನೊಂದು ವರ್ತಮಾನ ನಮಗೆ ತಲಪಿದೆ —ಎಡಿ.]

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಪ್ರಯಾಣಿಕರ ಗೋಳಾಟ.

ಅಯ್ಯಾ,—ಈ ಕಾಡ್ ಆನೆಹಳ್ಳಿಯಲ್ಲಿ ಹಿಂದೆ ಜಟ್ಕಾ ಗಾಡಿಯ ಕಂಪನಿ ಗಳು ಇರುತ್ತವೆ. ಇವುಗಳು ಕಾಡ್ ಆನೆಹಳ್ಳಿಯಿಂದ ಕೆಸ್ತೂರ್ ಪೇಟೆಗೂ ಮತ್ತು ಕೆಸ್ತೂರ್ ಪೇಟೆಯಿಂದ ಕಾಡ್ ಆನೆಹಳ್ಳಿಗೂ ಇದೇ ಒಬ್ಬರಿಗೆ ಆರು (೬ ಆ) ಆಣೆ ಗಳಂತೆ ದರಗಳನ್ನು ನಿಷ್ಕರ್ಷೆಮಾಡಿಕೊಂಡು ಇರುತ್ತಾರೆ. ಆದರೆ ಪ್ರಯಾಣಿಕರು ಇವರಲ್ಲಿ ಹೆಚ್ಚಾಗಿ ಜನರಿಗೆ ನಿಷ್ಕರ್ಷೆಮಾಡಿಕೊಂಡು ಇರುತ್ತಾರೆ. ಆದರೆ ಪ್ರಯಾಣಿಕರು ಇವರಲ್ಲಿ ಹಾಗೆಯೇ ಬೇಗ ನಿಷ್ಕರ್ಷೆಮಾಡಿ ಬಂದಿದ್ದಾಗಿಷ್ಟು ... ...ಯಾದಾಗ ಅವರು ... ಮಾಡಿಕೊಂಡು ಮಾತ್ರವಲ್ಲದೆ ... ಅವರ ಮೇಲುಗಡೆ ಜಾಸ್ತಿಯಾಗಿ ಕೇಳಿದರೆ ಹಣದ ಆಸೆಯಾಗಿ ಹೆಚ್ಚುಕೊಟ್ಟು ಹತ್ತಿ ಕೊಡತಕ್ಕವರಾಗಿ ಗಾಡಿಯನ್ನು ತೆಗೆದುಕೊಂಡು ಹೋಗಿ ಬಿಡುವುದು ಮತ್ತು ಸಮಯ ಸಂದರ್ಭಗಳನ್ನು ನೋಡಿ ಹಮ್ಮಿಲ್ಲ ಗಾಡಿಗಳು ಇದ್ದಾಗ್ಯೂ ಇಲ್ಲವೆಂತ ಸುಳ್ಳು ಹೇಳಿ ಫುಲ್ಲುಗಾಡಿ (ಪೂರಾಗಾಡಿ) ತೆಗೆದುಕೊಂಡರೇ ಗಾಡಿ ಬರುತ್ತದೆಂತಲೂ, ೮-೧೦-೧೨ ಆಣೆ ಕೊಟ್ಟರೆ ಗಾಡಿಯಲ್ಲಿ ಕೂರಿಸಿಕೊಂಡು ಹೋಗುತ್ತೇವೆಂತಲೂ ಬಹಳವಾಗಿ ಪ್ರಯಾಣಿಕರಿಗೆ ಉಪದ್ರವಕೊಡುತ್ತಾರೆ. ಅಲ್ಲದೆ ಇವುಗಳು ಒಂದು ನಿಘಂಟು ಮೂಲಕ ಕಂಪನಿಯನ್ನು ನಡಿಸುವುದಿಲ್ಲ. ಈ ರೀತಿ ನಾವೂ ಸಹ ಒಂದೆರಡು ವೇಳೆ ಅನುಭವಿಸಿರುತ್ತೇನೆ. ಮತ್ತು ಪತ್ರಿಕೆಯ ಮೂಲಕ ಇದನ್ನು ಸರ್ಕಾರದವರು ಮತ್ತು ಪ್ರಯಾಣಿಕರಿಗೆ ಸರ್ಕಾರದವರು ಮತ್ತು ಅಧಿಕಾರಿಗಳು ಸರ್ವ ಅನುಕೂಲಗಳನ್ನು ಒದಗಿಸಿಕೊಡುತ್ತಾರೆಂತ ನಂಬಿ ಬರೆದು ಇರುತ್ತೇನೆ.

ಬಿ.ಎಲ್. ಬೈಯಂಡ.

ನಂಜನಗೂಡಿನ ಸ್ಕೂಲುಗಳು.

ಅಯ್ಯಾ,—ಕಳೆದ ಮೂವತ್ತು ವರುಷಗಳಿಂದಲೂ ವೆಸ್ಲಿಯನ್ ಮಿಷನ್ ಸಂಘದವರು ಈ ಊರಿನಲ್ಲಿ ಒಂದು ಎ. ವಿ. ಸ್ಕೂಲನ್ನಿಟ್ಟು ನಡಿಸಿಕೊಂಡು ಬರುತ್ತಿರುವರು. ಈ ಸ್ಕೂಲು ಪ್ರಮುಖವಾದ ಸ್ಥಿತಿಯಲ್ಲಿರುವುದು. ಕಳೆದ ನಾಲ್ಕು ವರ್ಷಗಳ ಪರೀಕ್ಷೆಯ ಫಲಿತಾಂಶಗಳನ್ನು ಇಲ್ಲಿನ ಗೌರ್ನಮೆಂಟ್ ಸ್ಕೂಲಿನ ಫಲಿತಾಂಶದೊಡನೆ ಹೋಲಿಸಿ ಯಾವುದು ಮೇಲೆಂಬುವದನ್ನು ಸರ್ಕಾರದ ರಿಪೋರ್ಟಿನ ಮೂಲಕ ತಿಳಿಯಬಹುದು. ದಿನದಿನಕ್ಕೆ ಅಭಿವೃದ್ಧಿಗೆ ಬರುತ್ತಿರುವ ಈ ಸ್ಕೂಲನ್ನು ಓನಸ್ಥಿತಿಗೆ ತರಬೇಕೆಂತಲೋ ಏನೋ ಈಗ ಗೌರ್ನಮೆಂಟು ಕನ್ನಡ ತ್ಯೆ ಸ್ಕೂಲನ್ನು ಎ. ವಿ. ಸ್ಕೂಲನ್ನಾಗಿ ಮಾಡಲು ಪ್ರಯತ್ನಪಟ್ಟಿರುವರು. ಈ ದಿನ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಮಂಜೂರು ಅಪ್ಪಣೆಕೊಡಿಸಿರು ವಂತೆ ಇಷ್ಟರಲ್ಲೇ ಅದು ನೆರವೇರುವ ಸಂಭವವೂ ಇರುವುದು. ಒಂದು ವೇಳೆ ಹೀಗಾಗುವ ಪಕ್ಷ ಈ ಊರಿನಲ್ಲಿ ಎರಡು ಪಾರ್ಟಿಗಳಾಗುವುವೇನೋ ಎಂದು ಹೆದರು ಹೇಳಬಹುದು. ಸರ್ಕಾರದವರೇ ಹೀಗೆ ಏತಕ್ಕೆ ಪಾರ್ಟಿಗಳು ಹುಟ್ಟುವು ದಕ್ಕೆ ಅವಕಾಶ ಕೊಡಬೇಕೋ ತಿಳಿಯುವುದಿಲ್ಲ. ಸರ್ಕಾರವು ಒಂದು ಎ. ವಿ. ಸ್ಕೂಲನ್ನಿಟ್ಟರೆ ಮತ್ತೊಂದು ಪ್ರೈವೇಟ್ ಎ. ವಿ. ಸ್ಕೂಲೂ ಸಹ ಕ್ಷೀಣವಿಲ್ಲದೆ ನಾತ ಹೇಳಲು ಸ್ಥಾಪಿಸಲ್ಪಡುವ ಸಂಭವವಿಲ್ಲವೆಂದು ಹೇಳಲಾರೆನು. ಬೀದಿಬೀದಿಗೂ ಸ್ಕೂಲಾಗಿ ವೃಥಾ ಕಾಲಹರಣದಲ್ಲಿಯೇ ಪರಿಣಮಿಸದಿರಬಾರದು. ಒಂದು ಸ್ಕೂಲಿಗೇ ತಕ್ಕಷ್ಟು ಮಂದಿ ಬಾಲಕರಿಲ್ಲದಿರುವಲ್ಲಿ ಮತ್ತೊಂದು ಎ. ವಿ. ಸ್ಕೂಲನ್ನು ಏತಕ್ಕೆ ಏರ್ಪಡಿಸಬೇಕು? ಅಪ್ಪರ್ ಸೆಕಂಡರಿ ತರಗತಿಗೆ ಇಂಗ್ಲೀಷ್ ನ್ನು ವಿಚ್ಛಿಕ ಭಾಷೆಗಾಗಿ ತಯಾರ್ಮಾಡಬೇಕಾದರೆ ಪ್ರೈಮರಿ ತರಗತಿಗಳಲ್ಲಿ ಇಂಗ್ಲೀಷನ್ನೇಕೆ ಕಲಿಸಬೇಕು? ಮಿಷನ್ ಸ್ಕೂಲಿನಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದವರು ಅಪ್ಪರ್ ಸೆಕಂಡರಿಗೆ ಅನರ್ಹರೇ? ವೈಸ್ ಪ್ರೆಸಿಡೆಂಟರವರು ಹೀಗೆ ಹೇಳದೆ ಬಾಧಕವೇನು? ಸರ್ಕಲ್ ಇನ್ಸ್‌ಪೆಕ್ಟರವರಾದರೂ ಖಾಸಗೀ ಸ್ಕೂಲುಗಳನ್ನು ಪ್ರೋತ್ಸಾಹಿಸದೆ ಇರುವುದಕ್ಕೆ ಕಾರಣವೇನು? ಮುಖ್ಯವಾಗಿ ಈ ...ಯ ಇನಾಮ್ದಾರಿಯಲ್ಲ ನೌಕರರು ಈ ಏರ್ಪಾಡಿನಿಂದ ಮುಂದೆ ಬರು ವಂತೊಂದು ಕಲಹದ ಪೆಟ್ಟಿಯನ್ನೇ ಮುಂದಿಟ್ಟಂತಾಗುವುದು. ನಮ್ಮೂರಿನ ದೌರ್ಭಾಗ್ಯಕ್ಕೊಂದು ದೊಡ್ಡ ಕಾರಣವಾಗುವುದು. ಯಾರು ಪ್ರಜೆಗಳ ಗೌರವಕ್ಕೆ ಪಾತ್ರರೋ, ಯಾರು ಲೋಕಹಿತೈಷಿಗಳೋ, ಯಾರು ಸ್ವಾರ್ಥತ್ಯಾಗಿಗಳೋ ಅಂಥ ವರು ಸರ್ಕಾರದ ಅಧಿಕಾರಿಗಳ ಗಮನಕ್ಕೆ ಬರಲು ಇಷ್ಟಪಡುವುದಿಲ್ಲ. ಈ ಕಾರ ಣದಿಂದ ಕೇವಲ ಧನಿಕರೂ ಪ್ರಾಚೀನ ಕಾಲದ ಪರಿಚಯವುಳ್ಳವರೂ ಸಹ ಮುಂದಾಗಿ ವಿವೇಕವಿಲ್ಲದ ಸಲಹೆಗಳನ್ನು ಕೊಡುವುದಕ್ಕೂ, ಅಧಿಕಾರಿಗಳು ಕಿವಿ ಗೊಡುವುದಕ್ಕೂ ಅವಕಾಶವಿರುವುದು. ಮೇಲಾಗಿ ಲೋಕಪ್ರಿಯರಾದ ನಮ್ಮ ದಿವಾನ್ ಸಾಹೇಬರವರು ಇಲ್ಲಿಗೆ ದಯಮಾಡಿದ್ದಾಗ್ಗೆ ಎಲ್ಲವನ್ನೂ ವಿಮರ್ಶಿಸಿ ಒಂದೇ ಎ. ವಿ. ಸ್ಕೂಲ್ ಸಾಕೆಂದೂ, ಎರಡು ಅನವಶ್ಯಕವೆಂದೂ ಅಪ್ಪಣೆ ಕೊಡಿಸಿದ್ದರೂ ರಾವ್ ಬಹದ್ದೂರ್ ಮ॥ ಎಂ. ಶಾಮರಾಯರವರು ಯಾರ ಹೇಳಿಕೆಯಿಂದ ಈ ಕಾರ್ಯಕ್ಕೆ ಕೈಹಾಕಿದರೋ ನಮಗೆ ಗೊತ್ತಿಲ್ಲ. ಘನ ಹೊಂದಿದ ನಮ್ಮ ಸರ್ಕಾರದವರು ಖಾಸಗಿ ಸ್ಕೂಲುಗಳಿಗೆ ಯಾವ ವಿಧವಾದ ಅನ ನುಕೂಲವೂ ಬಂದು ಕೊರತೆಗಳೂ ಪ್ರಾಪ್ತವಾಗದಂತೆ ಕಾಪಾಡಿಕೊಂಡು ಬರ ಬೇಕೆಂದೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಹಸಪಡಬೇಕೆಂದೂ ಬೇಡುವ

ಪ್ರಜಾಭಿಮಾನಿ.

ಒಬ್ಬ ಹಿಂದು, ಚಂದ್ರಗುಪ್ತ.—ನಿಮ್ಮ ಪ್ರಶ್ನೆಗಳನ್ನು ಪ್ರಕಟಿಸಿ ಉತ್ತರಗ ಳನ್ನು ಪಡೆಯೋಣವರಲ್ಲಿ ಪ್ರಯೋಜನವೇನೂ ಕಾಣುವುದಿಲ್ಲ.

ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಮುತ್ತೂರು ಮಂಡಗಾರು ಹೋಬಳಿ ವಿಲೇಜ್ ಪೋಸ್ಟ್ ಮ್ಯಾನ್ ಸೋಮಶೆಟ್ಟಿಯು ಪ್ರಜೆಗಳಿಗೆ ಬರತಕ್ಕ ಕಾಗದ ಪತ್ರಗಳನ್ನು ತಪ್ಪದೆ ಕಾಲಕ್ಕೆ ಸರಿಯಾಗಿ ತಂದು ಕೊಡುತ್ತಾ, ಮುತುವರ್ಜಿ ವಹಿಸಿ ಜಾಗರೂಕತೆಯಿಂದ ನೌಕರಿ ಮಾಡುತ್ತಾ ಬಂದಿದ್ದಾನೆಂದೂ, ಈಗ ಅತ ನನ್ನು ಇಲಾಖೆಯವರು ಬದಲಾಯಿಸಬೇಕೆಂದಿದ್ದಾರೆಂದೂ, ಹಾಗೆ ಬದಲಾಯಿ ಸದೆ ಖಾಯಂ ಇಡಬೇಕೆಂದೂ ಕೆಲವು ರುಜುಗಳಾಗಿರುವ ಬಾತ್ಮಿ ನಮಗೆ ತಲ ಪಿದೆ. ಪ್ರಜೆಗಳು ಈ ವಿಚಾರವನ್ನು ಅಂಚೆ ಇಲಾಖೆಯವರಿಗೆ ತಿಳಿಸಿಕೊಳ್ಳಬೇಕು.

ಗುಬ್ಬಿ ತಾಲ್ಲೂಕು ಹೊಸಕೆರೆಯಲ್ಲಿ ಜನರು ಪಾರ್ಟಿಗಳನ್ನು ಮಾಡಿ ಕೊಂಡು ಸಭ್ಯಜನಗಳ ಇರುವಿಗೆ ಕುಂದಕ ಪಡಿಸುತ್ತಿದ್ದಾರೆಂದೂ, ಪರವೂರಿನ ವರ್ತಕರೇ ಮೊದಲಾದವರು ಅಲ್ಲಿಗೆ ಹೋಗಲು ಹೆಂಜರಿಯುತ್ತಾರೆಂದೂ ಒಂದು ಬಾತ್ಮಿ ನಮಗೆ ತಲಪಿದೆ. ನಮ್ಮ ಬಾತ್ಮಿದಾರರು ಆ ವಿಚಾರಗಳನ್ನೆಲ್ಲಾ ಚೆನ್ನಾಗಿ ವಿವರಿಸಿ ಸ್ಥಳದ ಅಮಲ್ದಾರರಿಗೂ, ಪೋಲೀಸ್ ಇನ್ಸ್‌ಪೆಕ್ಟರಿಗೂ ಮೊದಲು ತಿಳಿಸಬೇಕು —ಎಡಿ.]

ತಾಲ್ಲೂಕು ವರ್ತಮಾನಗಳು.

ಚಿಕ್ಕನಾಯಕನಹಳ್ಳಿ ತಾ॥ ನಳೆಯೂರು.—ಈ ಸ್ಥಳದಲ್ಲಿ ಮಾರ್ಚಿ ತಾ. ೧೮ರಿಂದ ೩೧ರ ವರೆಗೆ ರಥೋತ್ಸವವೂ, ತಾ. ೨೦, ೩೦ ರಲ್ಲಿ ದನಗಳ ಪರಿ ಷೆಯೂ, ಇದರ ಜೊತೆಗೆ ದನಗಳ ವ್ಯವಸಾಯ ಮತ್ತು ಕೈಗಾರಿಕೆ ಸಂಬಂಧ ವಾದ ಪ್ರದರ್ಶನ ಸಹ ನಡೆಯಲು ಏರ್ಪಾಡು ಮಾಡಿರುತ್ತೆ. ನಾನಾ ವಿಷಯಗ ಳನ್ನು ಕುರಿತು ಉಪನ್ಯಾಸಗಳು ಆಗುವವು. ಈ ಜಾತ್ರೆ ದೊಡ್ಡದಾದ್ದರಿಂದ ಅನೇಕ ಜನಗಳು ಸೇರುವದಲ್ಲದೆ ಅನೇಕ ತರಹ ವಸ್ತುಗಳ ಅಂಗಡಿಗಳು ಬಂದು ವ್ಯಾಪಾರವೂ ನಡೆಯುತ್ತವೆ. ಆದ್ದರಿಂದ ಈ ಪ್ರಾಂತ್ಯದ ಜನಗಳು ಈ ಜಾತ್ರೆ ಯಲ್ಲಿ ಉತ್ತಮ ತರಹ ದನಗಳನ್ನೂ, ವ್ಯವಸಾಯ ಮತ್ತು ಕೈಗಾರಿಕೆ ಸಾಮಾ ನುಗಳನ್ನೂ ಹೊಂದಬಹುದಾಗಿದೆ.

ಶಿವಮೊಗ್ಗೆ.—ಜನರ ಆರೋಗ್ಯಕರವಾಗಿದೆ. ಇಲ್ಲಿಗೆ ಈ ವಾರದಲ್ಲಿ ಶ್ರೀ ಮುಳಬಾಗಿಲು ಮಠದ ಶ್ರೀಗಳವರು ದಯಮಾಡಿಸಿದ್ದರು. ಇಲ್ಲಿಯ ಬ್ರಾಹ್ಮಣ ಮಹಾಜನರು ವಿಜೃಂಭಣೆಯಿಂದ ಬರಮಾಡಿಕೊಂಡು ಪಾದಪೂಜೆ ವಗೈರೆಗಳನ್ನು ಮಾಡಿದರು. ಶ್ರೀಗಳವರು ೪-೫ ದಿವಸ ಇದ್ದು ತೀರ್ಥಹಳ್ಳಿಗೆ ತೆರಳಿದರು.—ಇಲ್ಲಿಯ ಹೈಸ್ಕೂಲ್ ಬಾಲಕರು ನೆನ್ನೆ ಮನೋಹರವಾಗಿ ಇಂಗ್ಲೀಷಿನಲ್ಲಿ ಡ್ರಾಮವನ್ನು ಮಾಡಿದರು. ಇಲ್ಲಿ ಸಲಗೇರಿಕರ್ ಎಂಬ ನಾಟಕವು ಬಂದಿರುತ್ತೆ. ಕೇವಲ ಧಾರವಾಡ ಸೀಮೆಯವರಾಗಿದ್ದಾಗ್ಯೂ ಇವರು ನೋಟಕರಿಗೆ ಆನಂದವಾ ಗುವಂತೆ ನಾಟಕವನ್ನು ಆಡುತ್ತಾರೆ.—ಟೌನ್‌ನಲ್ಲಿ ಇಟ್ಟಿರುವ ಕಲ್ಲೆಣ್ಣೆ ಟ್ಯಾಂಕ್ ಗಳಿಂದ ಜನಗಳಿಗೆ ಪ್ರಯೋಜನ ಬಹಳವಾಗಿತ್ತು. ಈಗ ಕೆಲವು ಬಿದ್ದು ಹೋಗಿವೆ. ಅವುಗಳನ್ನು ಆಗಾಗ್ಗೆ ರಿಪೇರಿಮಾಡಿಸಿಕೊಟ್ಟರೆ ಜನಗಳಿಗೆ ಬಹಳ ಉಪಯೋಗ. ಈ ರೀತಿ ಅಧಿಕಾರಿಗಳು ಏರ್ಪಾಡು ಮಾಡುತ್ತಾರಾಗಿ ನಂಬುತ್ತೇವೆ.

ಚಳ್ಳಕೆರೆ ತಾ॥ ಕುರುಡಿಹಳ್ಳಿ.—ಈ ಗ್ರಾಮದಲ್ಲಿ ಈ ವರ್ಷ ಮಳೆಯ ಅಭಾವದಿಂದ ಫಸಲು ಪೈರು ಆಗದೆ ರೈತರಿಗೂ ವರ್ತಕರುಗಳಿಗೂ ತುಂಬಾ ತೊಂದರೆಯಾಗಿದೆ.—ಗ್ರಾಮಾಭಿವೃದ್ಧಿ ಮೆಂಬರುಗಳು ವಾರಕ್ಕೊಂದಾವರ್ತಿ ಎಲ್ಲಾ ಜನಗಳನ್ನೂ ಸಭೆ ಕೂಡಿಸಿ ಪ್ರತಿ ಮನುಷ್ಯನೂ ಪರರ ಹಂಗಿಲ್ಲದೆ ಯಾವ ದಾದರೂ ಒಂದು ಕಸುಬಿನಿಂದ ಜೀವನ ಮಾಡುವಂತೆಯೂ, ರಾಜಭಕ್ತಿ ವಿಶ್ವಾಸ ನಿರತರಾಗಿರುವಂತೆಯೂ ಪ್ರೋತ್ಸಾಹಕೊಡುತ್ತಾ, ಬಡ ಜನಗಳ ಜೀವ ನೋಪಾಯಕ್ಕಾಗಿ ತಕ್ಕ ಸಲಕರಣೆಗಳನ್ನು ಕಲ್ಪಿಸಿಕೊಡುತ್ತಾ, ಸದರಿ ಗ್ರಾಮದ ನೀರು ಬಳಸುವ ಭಾವಿಯನ್ನು ದುರುಸ್ತು ಮಾಡಲು ಪ್ರಯತ್ನಿಸಿ ಕೆಲಸಕ್ಕೆ ಪ್ರಾರಂಭಿಸಿರುತ್ತಾರೆ. ಸದರಿ ಗ್ರಾಮದ ಗೋಕಟ್ಟೆಯು ನೀರು ಇಲ್ಲದೆ ಅನುಪ ಯೋಗಸ್ಥಿತಿಯಲ್ಲಿದೆ. ಇದಕ್ಕೆ ಸರ್ಕಾರದವರು ಹಣಕೊಟ್ಟು ದುರಸ್ತು ಮಾಡಿಸಿ ಕೊಟ್ಟಲ್ಲಿ ಗೋವುಗಳಿಗೂ ಬಡ ಕೂಲೀ ಜನಗಳಿಗೂ ತುಂಬಾ ಸಹಾಯ ಮಾಡಿದಂತಾಗುತ್ತೆ.—ತಾ. ೧೨ ರಲ್ಲಿ ಚಳ್ಳಕೆರೆ ತಾ॥ ವ್ಯಾಕ್ಸಿನೇಟರು ಬಂದು ಗ್ರಾಮದ ಮೆಂಬರುಗಳನ್ನು ಕರಸಿಕೊಂಡು ದೇವಿ ಹಾಕುವ ವಿಷಯದಲ್ಲಿ ಉಪ ನ್ಯಾಸ ಮೂಲಕ ಜನಗಳಿಗೆ ತಕ್ಕ ತಿಳುವಳಿಕೆ ಕೊಟ್ಟು ಮಕ್ಕಳಿಗೆ ದೇವಿ ಹಾಕಿ ದ್ದಕ್ಕಾಗಿ ರೈತರು ತುಂಬಾ ಸಂತೋಷಪಟ್ಟರು.

ನೆಲಮಂಗಲ.—ತಾ. ೭ ನೇ ಸಾಯಂಕಾಲ ಇಲ್ಲಿನ ರೀಡಿಂಗ್ ರೂಂ ಕಟ್ಟಡದಲ್ಲಿ ಇಲ್ಲಿಂದ ವರ್ಗವಾದ ಶಿರಸ್ತೇದಾರ್ ಮ॥ ಜಗನ್ನಾಥಾಚಾರ್ರ ಮತ್ತು ಸಬ್ ಡಿವಿಜನ್ ಆಫೀಸರು ಮ॥ ಕೃಷ್ಣಸ್ವಾಮಯ್ಯನವರ ಜ್ಞಾಪಕಾ ರ್ಥವಾಗಿ ಪರಿಕಥೆಯು ನಡಿಸಲ್ಪಟ್ಟಿತು ಮತ್ತು ಕೆಲವು ಜನ ದೊಡ್ಡ ಮನು ಷ್ಯರಿಗೆ ಟಿಫನ್ ಫಲಪುಷ್ಪ ವಗೈರೆಗಳು ಹಂಚಲ್ಪಟ್ಟವು. ಮ॥ ಜಗನ್ನಾಥಾ ಚಾರ್ರು ಇಲ್ಲಿಂದ ವರ್ಗವಾದದ್ದು ವಿಶೇಷ ಜನಗಳಿಗೆ ವ್ಯಸನವನ್ನುಂಟುಮಾಡತ ಕ್ಕದ್ದಾಗಿದೆ. ಅವರು ಜನಾನುರಾಗಿಗಳಾಗಿ ಪ್ರಜೆಗಳನ್ನು ಬಹಳ ವಿಶ್ವಾಸದಿಂದ ನೋಡುತ್ತಿದ್ದರು. ಇಂಥಾ ಗುಣಶಾಲಿಗಳ ಸಹವಾಸ ನಮಗೆ ತಪ್ಪಿಹೋದುದ ಕ್ಕಾಗಿ ತುಂಬಾ ವಿಷಾದಿಸಬೇಕಾಗಿದೆ.—ಈ ಊರಿನ ಮೇಲೆಯೂ, ಅಕ್ಕಪಕ್ಕ ಗ್ರಾಮಗಳ ಮೇಲೆಯೂ ೮-೮ ದಿನಗಳ ಕೆಳಗೆ ಸ್ವಲ್ಪ ಮಳೆಯಾಯಿತು. ೫-೬ ಮೈಲಿ ದೂರದಲ್ಲಿ ದೊಡ್ಡಬಳ್ಳಾಪುರದ ತಾಲ್ಲೂಕಿನ ಕಡೆ ವಿಶೇಷ ಮಳೆಯಾಗಿ ದೊಡ್ಡ ಕೆರೆಗಳು ತುಂಬಿಹೋಗಿವೆ. ಪ್ಲೇಗ್ ಗಲಾಟೆ ವಗೈರೆ ಯಾವುದೂ ಈ ತಾಲ್ಲೂಕಿನಲ್ಲಿ ಇಲ್ಲ. ಟೌನ್ ಕಸಬೆಯಲ್ಲಿ ಮಾತ್ರ ೧೦-೧೫ ದಿನಗಳ ಕೆಳಗೆ ಸ್ವಲ್ಪ ಗಲಾಟೆಯಾಗಿತ್ತು. ಈಚೆಗೆ ಎಲ್ಲಾ ಸುರಕ್ಷಿತವಾಗಿದೆ. ರೈತರು ಆಹ್ಲಾದ ದಿಂದ ಕಣಗಳಲ್ಲಿ ಸುಗ್ಗಿಯ ಕೆಲಸಗಳನ್ನು ಮುಗಿಸುತ್ತಿರುವರು.

ದಾವಣಗೆರೆ.—ಹಾಲಾದ ಜರ್ಮನಿಯವರ ಅತ್ಯಾಸೆಯಿಂದ ಇಲ್ಲಿಯ ವ್ಯಾಪಾರಸ್ಥರಿಗೆ ಅತ್ಯಂತ ನಷ್ಟವಾಗಿ, ಸಾಲಕೊಟ್ಟ ಮಾರ್ವಾಡಿಗಳ ಕಾಟವನ್ನು ತಾಳಲಾರದೆ ಅನೇಕರು ದೇಶಾಂತರಗತರಾಗಿ ತಲೆ ತಪ್ಪಿಸಿಕೊಂಡಿರುತ್ತಾರೆ.—ಇಲ್ಲಿಯ ಪ್ರೊ. ಇನ್ ಮ॥ ನಾಗೇಶರಾಯರು ಬೆಂಗಳೂರು ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಗಳ ತಿಳುವಳಿಕೆಯ ಬಗ್ಗೆ ಕಳೆದ ಶನಿವಾರ ಯಶವಂತಪುರದ ಬೈಲಿನಲ್ಲಿ ಮಾಡಿದ ಭಾಷಣದ ಮುಖ್ಯ ಸಾರಾಂಶವೇನೆಂದರೆ—ದರೋಡೆಗಳನ್ನು ನಡೆಸಲು ಕಾರಣಗಳನ್ನೂ, ಯಾವ ಯಾವ ಜಾತಿಯ ಜನಗಳು ಹೇಗೆ ನಡೆಯು ತ್ತಾರೆಂಬುದನ್ನೂ, ಅವುಗಳು ನಡೆಯದಂತೆ ತಡೆಮಾಡುವ ವಿಧಾನವನ್ನೂ, ನಡೆದ ಮೇಲೆ ಪತ್ತೇಮಾಡುವ ರೀತಿಯನ್ನೂ ಬಹಳ ವಿಸ್ತಾರವಾಗಿ ಹೇಳಿದ ಮೇಲೆ ಸಭಾಧ್ಯಕ್ಷರಾದ ಬೆಂಗಳೂರು ಪೊ. ಸೂಪರಿಂಟೆಂಡೆಂಟರವರು ಕಳೆದ ಮೂರು ಉಪನ್ಯಾಸಗಳಿಗಿಂತ ಆ ದಿವಸದ ಉಪನ್ಯಾಸವು ಬಹಳ ಸ್ತೋತ್ರಾರ್ಹವಾಗಿರುವು ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಅದರಂತೆ ನಡಿಸಬೇಕೆಂದು ಸೂಚಿಸಿದ ರೆಂದು ಕೇಳಿ ಬಹಳ ಸಂತೋಷಪಟ್ಟೆವು. ಸದರಿ ಇನ್ಸ್‌ಪೆಕ್ಟರವರು ಬಹಳ ಅನುಭವಶಾಲಿಗಳೂ, ಅತ್ಯಂತ ಮೇಧಾಶಕ್ತಿಯುಳ್ಳವರೂ ಆಗಿರೋಣದರಿಂದ ನಮ್ಮ ಸೂಪರಿಂಟೆಂಡೆಂಟ್ ಸಾಹೇಬರವರು ಈ ಡಿಸ್ಟ್ರಿಕ್ಟಿನ ಪೋಲೀಸ್ ಹುದ್ದೇದಾರರುಗಳನ್ನು ಒಂದು ಸ್ಥಳದಲ್ಲಿ ಸಭೆ ಸೇರಿಸಿ ಸದರಿಯವರಿಂದ ಉಪ ನ್ಯಾಸ ಮಾಡಿಸುತ್ತಲೂ, ಅವರ ಅನುಭವವನ್ನು ತಿಳಿಸುತ್ತಲೂ ಬಂದಲ್ಲಿ ಕಳವು, ದರೋಡೆ ಮೊದಲಾದವುಗಳ ಹಾವಳಿಯು ಕಾಲಕ್ರಮದಲ್ಲಿ ಕಡಮೆಯಾ ಗಲು ಅಭ್ಯಂತರವಿರುವುದಿಲ್ಲ.

ಮಂಡ್ಯ.—ಈಚೆಗೆ ಎರಡು ಮೂರು ಮಳೆಗಳಾದವು. ರೈತರು ಮುಂದಿನ ಬಿತ್ತನೆಗೆ ಸಿದ್ಧವಾಗಿದ್ದಾರೆ.—ಸಿಡುಬಿನ ಉಪದ್ರ ಈಗ ಸ್ವಲ್ಪ ಕಮ್ಮಿಯಾಗಿ ದ್ದರೂ ಈ ವರೆಗೂ ಸುಮಾರು ೯೮ ರ ವರೆಗೆ ಮರಣಗಳಾದವೆಂದು ಹೇಳಬ ಹುದು. ಸುತ್ತುಮುತ್ತಲ ಗ್ರಾಮಗಳಲ್ಲೂ ಸಹ ಈ ರೋಗ ಹರಡುತ್ತಾ, ಅನೇಕ ಮಕ್ಕಳನ್ನು ಕೊಲ್ಲುತ್ತಾ ಇದೆ. ವಾಕ್ಸಿನೇಟರುಗಳು ತುಂಬಾ ಶ್ರಮ ಪಟ್ಟು ನೂರಾರು ಮಕ್ಕಳಿಗೆ ದೇವಿ ಹಾಕುತ್ತಿದ್ದಾರೆ.—ಈ ಸಾರಿ ಕಾಮನ ಹಬ್ಬವು ಯಾವ ವಿಧದ ಗಲಾಟೆಯಿಲ್ಲದೆ ನೆರವೇರಿತು. ಪೋಲೀಸ್ ಏರ್ಪಾಡು ಚೆನ್ನಾಗಿ ನಡೆಯಿತು.—ಮಂಡ್ಯದಲ್ಲಿ ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿ ಸುವದರ ಉದ್ದೇಶ್ಯ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರು ಕೂಡಿದ್ದ ಸಭಿಕರಿಗೆ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಇದಕ್ಕಾಗಿ ಪ್ರೆಸಿ ಡೆಂಟ್, ಸೆಕ್ರೆಟರಿ, ಖಜಾಂಚಿ ಮೊದಲಾದ ಮೆಂಬರುಗಳನ್ನು ಸ್ಥಳಿಕರಿಂದಲೇ ಚುನಾಯಿಸಿದರು. ಅನೇಕ ಷೇರುಗಳು ಬಿಕರಿಯಾದವು. ಆದರೆ ಇನ್ನೂ ಸ್ಥಿರ ಪಟ್ಟಿಲ್ಲ. ಮುಂದೆಯಾದರೂ ಈ ಸಂಘವು ಸ್ಥಿರಪಡುವಂತೆ ಇಲಾಖಾ ಅಧಿಕಾರಿ ಗಳು ಇನ್ನೂ ಸ್ವಲ್ಪ ಶ್ರಮಪಡುವದರ ಮೂಲಕ ಫಲಕಾರಿಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.—ನಮ್ಮ ಅಮಲ್ದಾರ್ ಬಸವರಾಜೇಅರಸಿನವರು ಈ ತಾಲ್ಲೂ ಕಿಗೆ ವರ್ಗಪಟ್ಟು ಬಂದಲಾಗಾಯ್ತು ಪ್ರಜೆಗಳ ಕಷ್ಟ ಅಹವಾಲ್ ಅರ್ಜಿ ಮುಂತಾದವುಗಳ ವಿಷಯಕ್ಕೆ ತುಂಬಾ ಗಮನಕೊಟ್ಟಿದ್ದಾರೆಂದು ಜನಜನಿತ ವಾಗಿದೆ. ಈ ವರೆಗೂ ಬಂದ ಒಬ್ಬೊಬ್ಬರು ವಿನಾ ಇಂಥಾ ಪರೋಪಕಾರಿಗಳು ಈ ತಾಲ್ಲೂಕಿಗೆ ಬಂದಿಲ್ಲವೆಂದು ಅನೇಕರ ಹೇಳಿಕೆ ಉಂಟು.—ಟೌನ್‌ನಲ್ಲಿರ ತಕ್ಕ ಸ್ಕೂಲುಗಳು ಇನ್ನೂ ಪರೀಕ್ಷೆಯಾಗಿಲ್ಲ. ಇನ್ನು ೧೫-೨೦ ದಿನಗಳೊಳ ಗಾಗಿ ಪರೀಕ್ಷೆ ನಡೆಯಬಹುದು.—ಈ ಊರಿನ ಅನೇಕ ಧರ್ಮಿಷ್ಠರು ಸೇರಿ ಹಣ ಹಾಕಿ ರೈಲ್ವೆ ಸ್ಟೇಷನ್ ಬಳಿ ರೈಲ್ವೆ ಪ್ರಯಾಣಿಕರಿಗೆ ದಾಹಶಾಂತಿಗೆ ತಕ್ಕ ಏರ್ಪಾಡುಗಳನ್ನು ೪-೫ ತಿಂಗಳವರೆಗೂ ನಡೆಯುವಂತೆ ಮಾಡಿರುವುದು ಸ್ತೋತ್ರಾರ್ಹವಾಗಿದೆ.

ಹೊಸಕೋಟೆ.—ಫೆಬ್ರವರಿ ತಾ. ೧೫ ರಲ್ಲು ವ್ಯವಸಾಯ ಡೈರೆಕ್ಟರಾದ ಡಾಕ್ಟರ್ ಕೋಲ್‌ಮನ್ ಸಾಹೇಬರು, ಡೆಪ್ಯುಟಿ ಡೈರೆಕ್ಟರ್ ಮ॥ ಯಜ್ಞನಾರಾ ಯಣ ಅಯ್ಯನವರು, ಸೂಪರಿಂಟೆಂಡೆಂಟ್ ಮ॥ ಅನಂತಸುಬ್ರಹ್ಮಣ್ಯ ಅಯ್ಯರ ಜೊತೆಗೆ ಇಲ್ಲಿಗೆ ದಯಮಾಡಿಸಿ ಎಲ್ಲಾ ಹೋಬಳಿಗಳ ಶೇಕದಾರ್, ಪಟೇಲ್ ಶಾನುಭೋಗರು ಮತ್ತು ರೈತರೇ ಮೊದಲಾದವರಿಂದ ಕೂಡಿಸಲ್ಪಟ್ಟ ಈ ಸಭೆಯು ಕಚೇರಿಯ ಪಡಸಾಲೆಯಲ್ಲಿ ಸಾಲು ಸಾಲಾಗಿ ಬೆಂಚುಗಳ ಮೇಲೆ ಕೂತುಕೊಂಡು ಇದ್ದ ಈ ಜನಗಳನ್ನು ನೋಡಿ ಬಹು ಆದರದಿಂದ ಕೇಳಿಕೊಂಡ ಪ್ರಕಾರ ಶ್ರೇಷ್ಠ ವಾದ ಆಸನದ ಮೇಲೆ ಕೂತುಕೊಂಡರು. ಅಮಲ್ದಾರ್ ಸಾಹೇಬರಿಂದ ಸೇರಿಸ ಲ್ಪಟ್ಟ ಈ ಸಭೆಯನ್ನು ನೋಡಿ ಬಹಳ ಸಂತೋಷಪಟ್ಟು ಕೆಲವು ಸ್ವಾರಸ್ಯವಾದ ವ್ಯವಸಾಯಕ್ಕೆ ಅನುಕೂಲವೂ ಮತ್ತು ಪ್ರಯೋಜನವೂ ಆದ ಮಾತುಗಳನ್ನು ಹೇಳಿದರು. ಆಗ ಮ್ಯುನಿಸಿಪಲ್ ಮೆಂಬರಾದ ಸೈಯದ್ ಸಾಬರೂ, ಬೈರೇ ಗೌಡರೂ, ಮುನಿಸ್ವಾಮಪ್ಪನವರೂ, ಮುಗಳೂರು ಸಂಪಂಗಿರಾಮಪ್ಪನವರೂ ಕೆಲವು ಅವಶ್ಯವಾದ ಪ್ರಶ್ನೆಗಳನ್ನು ಕೇಳಿದರು ಮತ್ತು ಕೆಲವರು ಸೀಮೆ ನೇಗಿಲ ನ್ನು ತೆಗೆದುಕೊಂಡಿದ್ದೇವೆಂತಲೂ ಹೇಳಿದರು. ಇನ್ನು ಕೆಲವರು ನಾನಾ ವಿಧ ವಾದ ಪ್ರಶ್ನೆಗಳನ್ನು ಕೇಳಿದರು. ಕೆಟ್ಟುಹೋಗಿದ್ದ ಭತ್ತದ ಪೈರು ಮತ್ತು ಉರುಳಗಡ್ಡೆಯನ್ನೂ ಅದರ ಸೊಪ್ಪನ್ನೂ ಅದಾರಾಯಿತೋ ಸ್ವಲ್ಪ ತಂದು ಡಾಕ್ಟರ್ ಕೋಲ್‌ಮನ್ ಸಾಹೇಬರಿಗೆ ತೋರಿಸಿದರು. ಅವರು ಅವುಗಳನ್ನು ಪರೀಕ್ಷೆ ಮಾಡುವ ಉದ್ದೇಶ್ಯ ತೆಗೆದಿಟ್ಟುಕೊಂಡರು. ಫಲಾಹಾರಗಳಿಂದ ಉಪಚಾರ ಮಾಡಲಾಗಿ ಹಾರ ತುರಾಯಿಗಳಿಂದ ಅಲಂಕೃತರಾಗಿ ಕೂಟವು ಮುಕ್ತಾಯ ವಾದ ಕೂಡಲೇ ಅವರು ಮೋಟರ್ ಗಾಡಿ ಹತ್ತಿ ಜೊತೆಯವರ ಕೂಡ ಬೆಂಗ ಳೂರಿಗೆ ತೆರಳಿದರು.—ತಾ. ೨೧ ರಲ್ಲಿ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಮಾಸಿಕ ಉಪಾಧ್ಯಾಯರ ಸಂಘವು ಮಧ್ಯಾಹ್ನ ಪಾಠಶಾಲೆಯಂತೆ ಸೇರಿತ್ತು. ಇದಕ್ಕೋಸ್ಕರ ಅ॥ ಡಿ॥ ಇನ್ಸ್‌ಪೆಕ್ಟರ್ ಮ॥ ಅನಂತಸುಬ್ರಾಯರೂ, ಡೆಪ್ಯುಟಿ ಇನ್ಸ್‌ಪೆಕ್ಟರಾದ ಮ॥ ಮಹಮ್ಮದ್ ಬೇಗ್ ಸಾಹೇಬರೂ ಈ ಕೂಟಕ್ಕೆ ಹಾಜರಾಗಿ ಇಬ್ಬರೂ ಅಗ್ರಸ್ಥಾನದಲ್ಲಿ ಕೂತುಕೊಂಡರು. ಉಪಾಧ್ಯಾಯರು ಒಬ್ಬರ ತರುವಾಯ ಒಬ್ಬರು ಕಡೇ ವರ್ಗದ ಹುಡುಗರಿಗೆ ಪಾಠವನ್ನು ಕಲಿಸುವುದಕ್ಕೆ ಪ್ರಾರಂಭ ಮಾಡಿ ಬೋರ್ಡಿನ ಮೇಲೆ ಕೆಲವು ಅಂಕೆಗಳನ್ನು ಹಾಕಿ ಹುಣಸೇ ಬೀಜಗಳ ಮುಖಾಂತರ ಕೂಡಿಸುವ ವಿಧಾನವನ್ನು ಕಲಿಸಿದರು. ಇನ್ನೊಬ್ಬರು ಕಾಗದ ಮಡಿಚುವ ಮತ್ತು ಅವುಗಳ ಹೆಸರುಗಳನ್ನು ಕಲಿಸಿದರು. ತರುವಾಯ ಕೆಲವು ಉಪಾಧ್ಯಾಯರುಗಳು ಇನ್ನು ಕೆಲವು ವಿಷಯಗಳನ್ನು ಕುರಿತು ಹೇಳಿದರು. ಸ್ವಲ್ಪ ಹೊತ್ತು ಚರ್ಚೆ ಆದ ಮೇಲೆ ಇಬ್ಬರು ಇನ್ಸ್‌ಪೆಕ್ಟರುಗಳೂ ಬಹು ಸ್ವಾರಸ್ಯವಾಗಿ ಕಲಿಸುವ ವಿಧಾನವನ್ನೂ, ಬುದ್ಧಿವಾದಗಳನ್ನೂ, ಇಲ್ಲಿಗೆ ಕೂಡಿ ಬರುವ ಉದ್ದೇಶ್ಯವನ್ನೂ ಕುರಿತು ವಿವರಿಸಿ ಹೇಳಿದರು. ಹೆಡ್ ಮಾಸ್ಟರು ಮಾಡಿ ರುವ ಹೊಸ ಕ್ರಮಗಳನ್ನೂ ಏರ್ಪಾಡುಗಳನ್ನೂ ನೋಡಿ ಇಬ್ಬರು ಇನ್ಸ್‌ಪೆಕ್ಟರು ಗಳೂ ಬಹಳ ಸಂತೋಷಪಟ್ಟರು.—ಮಾರ್ಚಿ ತಾ. ೬ರಲ್ಲಿ ನಮ್ಮ ದಿವಾನ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ಬೆಳಗ್ಗೆ ಬಹು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದ ರೀಡಿಂಗ್ ರೂಮಿನಲ್ಲಿ ಅವರನ್ನು ಡೆಪ್ಯುಟಿ ಕಮಿಷನರನ್ನೂ ಮತ್ತು ಎಲ್ಲಾ ಇಲಾಖೆಗಳ ಡಿಸ್ಟ್ರಿಕ್ಟ್ ಆಫೀಸರುಗಳನ್ನೂ ಬರಮಾಡಿಸಿದರು. ದಿವಾನ್ ಸಾಹೇಬರು ಶ್ರೇಷ್ಠವಾದ ಆಸನದ ಮೇಲೆ ಕೂತುಕೊಂಡ ಬಳಿಕ ಮ್ಯುನಿಸಿಪಲ್ ಮೆಂಬರುಗಳೂ, ಊರಿನವರೇ ಮೊದಲಾದವರು ಸಾಲು ಸಾಲಾಗಿ ಕೂತುಕೊಂಡರು. ದಿವಾನ್ ಸಾಹೇಬರು ಜನರು ಕೇಳಿಕೊಂಡ ಮನವಿಗಳಿಗೂ ಕೊಟ್ಟ ಅರ್ಜಿಗಳಿಗೂ ಬಹು ಸಾವಧಾನವಾಗಿ ಆಲಿಸಿ ಕೇಳುತ್ತಾ ತಕ್ಕ ಜವಾ ಬುಗಳನ್ನೂ ಕೊಟ್ಟು ಎಲ್ಲರನ್ನೂ ಸಂತೋಷಪಡಿಸಿದ್ದಲ್ಲದೆ ಕೆಲವು ವಿಷಯ ಗಳನ್ನು ತಮ್ಮ ನೋಟ್ ಪುಸ್ತಕದಲ್ಲಿ ಬರೆದುಕೊಂಡರು. ಎಲ್ಲರೂ ಮರ್ಯಾ ದಾರ್ಥವಾಗಿ ಹಾರ ತುರಾಯಿಗಳನ್ನು ಒಪ್ಪಿಸಿದ್ದಲ್ಲದೆ ದಿವಾನ್ ಸಾಹೇಬರ ಗುಣಾತಿಶಯವನ್ನು ಕೊಂಡಾಡಿದರು. ಮಧ್ಯಾಹ್ನ ಕಛೇರಿಯ ಎಲ್ಲಾ ಇಲಾಖೆ ಗಳ ಒಂದೊಂದು ಬಾಬನ್ನೂ ಸೂಕ್ಷ್ಮವಾಗಿ ಮೇಲುವಿಚಾರಣೆ ಮಾಡಿದರು. ಮತ್ತು ಅವರ ಸೆಕ್ರೆಟರಿಯವರು ಅವರು ಹೇಳುವ ಅವಶ್ಯವಾದ ವಿಷಯಗಳನ್ನು ಕುರಿತು ತಮ್ಮ ಪುಸ್ತಕದಲ್ಲಿ ದಾಖಲೆ ಮಾಡಿಕೊಳ್ಳುವದು ಮಾತ್ರವಲ್ಲದೆ ತಿಮ್ಮಪಾಟುಗಳ ವಿಷಯ ಹೇಳುತ್ತಿದ್ದರು. ಡೆಪ್ಯುಟಿ ಕಮಿಷನರು ತಕ್ಕ ಸಲಹೆ ಗಳನ್ನು ಕೊಡುತ್ತಾ ಇದ್ದರು. ಅಮಲ್ದಾರ್ ಮ॥ ಶ್ರೀನಿವಾಸಯ್ಯಂಗಾರ್ರು ಮಾಡಿರುವ ಎಲ್ಲಾ ಏರ್ಪಾಡುಗಳನ್ನೂ ಕುರಿತು ಬಹಳ ಸಂತೋಷಪಟ್ಟರು. ಪೋಲೀಸ್ ಏರ್ಪಾಡುಗಳು ಬಹು ಕ್ರಮವಾಗಿತ್ತು. ದಿವಾನ್ ಸಾಹೇಬರು ಪರಿವಾರ ಸಮೇತ ಸಾಯಂಕಾಲ ಬೆಂಗಳೂರಿಗೆ ಹೊರಟುಹೋದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಸ್ಥಳಪುರಾಣದ ವಿಷಯದಲ್ಲಿ ವಿದ್ಯಾರ್ಥಿಗಳಿಂದ ಮಾಡಿ ಸಿದ ಸಂವಾದವನ್ನು ಕೇಳಿ ದಿವಾನ್ ಸಾಹೇಬರು ಬಹಳ ಸಂತೋಷಪಟ್ಟರು.

ದೊಡ್ಡಬಳ್ಳಾಪುರ.—ದಿವಾನರವರು ಇಲ್ಲಿಗೆ ಪಕೀರಟು ದಯಮಾಡಿದ್ದ ವೇಳೆ ಮ್ಯುನಿಸಿಪಲ್ ಮೆಂಬರುಗಳ ಪಕ್ಷವಾಗಿಯೂ ಗ್ರಾಮದ ಮಹನೀಯರ ಪರವಾಗಿಯೂ ಮ|| ಸಾಹುಕಾರ್ ಚಂದ್ರಶೇಖರಯ್ಯನವರು ದಿವಾನರವರಿಗೆ ಹಬ್ಬಾರಿನಲ್ಲಿ ಒಳ್ಳೇ ದೆಂತದ ಕೆತ್ತಸ ಕೆಲಸ ಮಾಡಿರುವ ಸುಂದರವಾದ ಪೆಟ್ಟಿಗೆಯಲ್ಲಿ ಅಡ್ರೆಸ್ ಒಪ್ಪಿಸಿದರು.—ಕಳೆದ 1 ನೇ, 3 ನೇ ತಾ. ರಾತ್ರಿ ಸುರಿದ ಬಲವಾದ ಮಳೆಯಿಂದ ಈ ಪ್ರಾಂತ್ಯದ ಕೆರೆಗಳು ಮುಕ್ಕಾಲು ಪಾಲು, ಅರ್ಧ ಪಾಲು, ಈ ರೀತಿ ತುಂಬಿರುವದು ಸಂತೋಷವಾಗಿದೆ. ಜನ ದನಗಳಿಗೆ ನೀರಿನ ಕಷ್ಟ ಬಹಳ ಕಮ್ಮಿ ಆಗಿದೆ. ಹುಲ್ಲು ಬೆಳೆಯುತ್ತಿದೆ.—ತಾಲ್ಲೂಕು ಕಛೇರಿ ಮುಂದೆ ಹಾಕುವ ಚಪ್ಪರದಲ್ಲಿ ಎಕಾನಾಮಿಕ್ ಕಾನ್ಫರೆನ್ಸು ಈ ತಿಂಗಳ ಅಂತ್ಯದಲ್ಲಿ ನಡೆಯುವದು. ಆಗ್ಗೆ ನಾನಾ ಪದಾರ್ಥಗಳ ಪ್ರದರ್ಶನವೂ ಜರುಗುವಂತೆ ಈ ತಾಲ್ಲೂಕಿನ ಮಹನೀಯರೂ ಮುಖ್ಯಾಧಿಕಾರಿಗಳೂ ಪ್ರಯತ್ನಪಡುತ್ತಿದ್ದಾರೆ. ಆ ಕಾಲದಲ್ಲಿ ಅಧಿಕಾರಿಗಳೂ, ಮುಖಂಡ ಪ್ರಜೆಗಳೂ, ಗ್ರಾಮಾಂತರಗಳಿಂದ ಅನೇಕಾನೇಕರೂ ಬರುವಂತೆ ಏರ್ಪಾಡು ಆಗುತ್ತಿವೆ. ಇದಕ್ಕಾಗಿ ಈ ಊರಿನ ಮುಖಂಡರೂ ಗ್ರಾಮಸ್ಥರೂ ಸೇರಿ 800 ರೂಪಾಯಿ ಚಂದಾ ಕೊಟ್ಟಿರುವರು. ಈ ಕಾನ್ಫರೆನ್ಸಿನಲ್ಲಿ ನಾನಾ ವಿಷಯಗಳನ್ನು ಕುರಿತು ಉಪನ್ಯಾಸಗಳು ಜರಗುವವು. ಇದರ ಉದ್ದೇಶವೇನೆಂದರೆ ಜನರೆಲ್ಲರೂ ವಿದ್ಯೆ, ಐಶ್ವರ್ಯ, ನಾಗರಿಕ, ಕಸುಬುದಾರಿಗಳಲ್ಲಿ ಅಭಿವೃದ್ಧಿ ಹೊಂದಬೇಕೆಂತ ಬಲವಾಗಿ ಕೋರಿ ಪ್ರಯತ್ನಿಸುತ್ತಿರುವ ನಮ್ಮ ದಿವಾನ್ ಸಾಹೇಬರವರ ಕಾರ್ಯ ಭಾಗವು ಸಫಲವಾಗಬೇಕೆಂಬುವುದು ಈ ತಾಲ್ಲೂಕಿನವರೆಲ್ಲರೂ ಕೋರಿ ಇದಕ್ಕಾಗಿ ತುಂಬಾ ಉದಾರ ಮನಸ್ಸಿನಿಂದ ಸಹಾಯಮಾಡಿರುತ್ತಾರೆ.

ಈ ಲೋಕವನ್ನು ನೋಡಿರಿ. ಇದು ಒಂದು ವಿಸ್ತಾರವಾದ ಮನೆಯಹಾಗಿದೆ. ಇದರಲ್ಲಿ ನದಿಗಳೂ ಉದ್ಯಾನವನಗಳೂ ಅನೇಕವಾಗಿರುತ್ತವೆ. ಋತುಧರ್ಮವನ್ನನುಸರಿಸಿ ಮಳೆ ಗಾಳಿ ಬಿಸಿಲೂ ಸರಿಯಾದ ಕಾಲಕ್ಕೆ ಒದಗುತ್ತವೆ. ಹಗಲಲ್ಲಿ ಸೂರ್ಯನೂ ರಾತ್ರಿಯಲ್ಲಿ ಚಂದ್ರನಕ್ಷತ್ರಗಳೂ ಬೆಳಕುಕೊಡುತ್ತವೆ. ಈ ಸೃಷ್ಟಿಗೆ ಪತಿ ಯಾರು? ಎಲ್ಲವೂ ಕ್ರಮಾನುಸಾರವಾಗಿ ತಪ್ಪದೆ ನಡೆಯುತ್ತಿರುವದು. ಇದನ್ನೆಲ್ಲಾ ನಮ್ಮ ನಿಮಿತ್ತ ನಿರ್ಮಾಣಮಾಡಿ ಕುಂಬಾರನು ಚಕ್ರವನ್ನು ತಿರುಗಿಸುವ ಹಾಗೆ ನಡಿಸುತ್ತಿರುವವನನ್ನು ತಿಳಿದು ನಾವು ನಮ್ಮ ಕೃತಜ್ಞತೆಯನ್ನೂ ವಿಧೇಯತ್ವವನ್ನೂ ಅರ್ಪಿಸುವದು ನ್ಯಾಯವಾಗಿದೆ. ಆದರೆ ಪ್ರಪಂಚವು ಆತನನ್ನು ಗ್ರಹಿಸಲಿಲ್ಲ. ಕೆಲವರು ಪ್ರಾತಃಕಾಲದಲ್ಲಿ ಉದಯವಾಗಿ ಲೋಕಕ್ಕೆ ಬೆಳಕನ್ನೂ ಬಿಸಿಲನ್ನೂ ಕೊಡುವ ಸೂರ್ಯನನ್ನು ನೋಡಿ—ಇವೇ ಜಗನ್ನಿರ್ಮಾಣಕನಾದ ದೇವರು ಎಂದು ಪೂಜಿಸುವರು. ಬೇರೆ ಕೆಲವರು ಗಂಗಾ ಯಮುನಾ ಕಾವೇರಿ ಮೊದಲಾದ ನದಿಗಳನ್ನು ದೇವರೆಂದು ಆರಾಧಿಸುವರು. ಮತ್ತೆ ಕೆಲವರು ಗಿಡಗಳನ್ನೂ ವೃಕ್ಷಗಳನ್ನೂ ದೇವರೆಂದು ಅವುಗಳಿಗೆ ಅಡ್ಡಬೀಳುತ್ತಿರುವರು. ಬೇರೆ ಕೆಲವರು ಕಲ್ಲು ಮಣ್ಣು ಮರಗಳಿಂದ ಮಾಡಿದ ಬೊಂಬೆಗಳನ್ನು ಪೂಜಿಸುತ್ತಿರುವರು. ಕೆಲವರು ತಮ್ಮನ್ನು ತಾವೇ ಬ್ರಹ್ಮಜ್ಞಾನಿಗಳೆಂದು "ಸೋಹಂ" "ತತ್ವಮಸಿ" ಮಂತ್ರಗಳನ್ನು ಜಪಿಸುತ್ತಾ ಮಿಕ್ಕಾದವರನ್ನು ಪಾಮರರೆಂದು ಜರೆಯುತ್ತಿರುವರು. ಅಕಟಾ! ಈ ಲೋಕವು ತಂದೆಯನ್ನರಿಯದ ಮಕ್ಕಳಂತೆ ದೇವರನ್ನರಿಯದೆ ಅಲೆಯುತ್ತಿರುವದು. ಇದಕ್ಕೆ ಪರಿಹಾರವೇನು? ತಂದೆಯನ್ನು ತೋರಿಸಿ ಸಕಲರನ್ನು ತೃಪ್ತಿಗೊಳಿಸುವ ಮಹಾನುಭಾವನು ಯಾರು?

ತನ್ನ ಮಕ್ಕಳನ್ನು ಬಿಟ್ಟು ದೂರದೇಶಕ್ಕೆ ಹೋಗಿದ್ದ ತಂದೆಯು ತನ್ನ ಮಕ್ಕಳು ತನ್ನನ್ನು ನೋಡುವದಕ್ಕೆ ಕಾಂಕ್ಷಿತರಾಗಿ ತನ್ನನ್ನು ಕಾಣದೆ ಹೋದುದರಿಂದ ವಿಪರೀತವಾದ ನಡತೆಯಿಂದ ವರ್ತಿಸುತ್ತಿರುವದನ್ನು ಕೇಳಿ ತನ್ನ ಸಂಗಡಲೇ ಯಾವಾಗಲೂ ಇರುತ್ತಿದ್ದ ತನ್ನ ಹಿರೀ ಮಗನನ್ನು ಕರೆದು ಅವನಿಗೆ ಈ ಸಂಗತಿಗಳನ್ನೆಲ್ಲಾ ತಿಳಿಸಿ—ಮಗನೇ, ನಾನು ಇನ್ನೂ ಕೆಲವು ವರುಷಗಳು ಇಲ್ಲಿರುವದು ಅಗತ್ಯವಾಗಿದೆ. ಆದರೂ ನೀನು ನಿನ್ನ ತಮ್ಮಂದಿರ ಬಳಿಗೆ ಹೋಗಿ ಅವರಿಗೆ ನನ್ನ ವಿಷಯವಾಗಿ ತಕ್ಕ ತಿಳುವಳಿಕೆಯನ್ನು ಹುಟ್ಟಿಸು. ನಾನು ಇಲ್ಲಿ ಇದ್ದುಕೊಂಡು ಅವರ ಹಿತಕ್ಕೋಸ್ಕರವೇ ಕೆಲಸಮಾಡುತ್ತಿರುವದನ್ನು ನೀನು ನೋಡಿ ತಿಳಿದಿದ್ದೀ. ನಾನು ಅವರನ್ನು ಎಷ್ಟಾಗಿ ಪ್ರೀತಿಸುತ್ತಿದ್ದೇನೋ ಅವರಿಗೆ ತಿಳಿಸು ಎಂದು ತನ್ನ ಹಿರೀ ಮಗನನ್ನು ಆತನ ಸಹೋದರರ ಬಳಿಗೆ ಕಳುಹಿಸಿದನು. ಅವರು ತಮ್ಮ ಅಣ್ಣನನ್ನು ನೋಡಿ ಆತನ ಮಾತುಗಳನ್ನು ಕೇಳಿ ಕೆಲವರು—ಇವನು ಯಾರೋ! ಇವನು ಹೇಳುವದು ನಿಜವೋ ಏನೋ ಎಂದು ಸಂದೇಹಪಟ್ಟರು. ಬೇರೆ ಕೆಲವರು ಇವನು ತನ್ನನ್ನು ನಮಗಿಂತ ದೊಡ್ಡವನೆಂದು ನಮ್ಮ ಮೇಲೆ ಅಧಿಕಾರಿಯಾಗಿರಬೇಕೆಂದಿದ್ದಾನೆಂದು ಇವನನ್ನು ಹಗೆಮಾಡಿದರು. ಆದರೆ ಕೆಲವರು ಆತನ ಮಾತುಗಳು ನಿಜವೋ ಎಂದು ವಿಚಾರಿಸಿ ತಂದೆಯ ಗುಣಸ್ವಭಾವ, ರೂಪಗಳನ್ನು ಅವನಲ್ಲಿ ಕಂಡು ಅವನನ್ನು ನಂಬಿ ತಂದೆಯು ಆತನ ಮುಖಾಂತರ ಕಳುಹಿಸಿದ್ದ ಕಾಗದವನ್ನು ಓದಿಕೊಂಡರು.

ದೇವರನ್ನು ತಿಳಿಯದೆ ಕಂಡ ಕಂಡದ್ದನ್ನೆಲ್ಲಾ ದೈವವೆಂದು ಕೈಮುಗಿಯುತ್ತಿರುವ ಈ ಪ್ರಪಂಚದ ನಿವಾಸಿಗಳಿಗೆ ನಿಜದೇವರನ್ನು ಪ್ರಕಟಮಾಡುವದಕ್ಕೋಸ್ಕರ ದೇವರು ತನ್ನ ಪ್ರಿಯಕುಮಾರನಾದ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು. ನಿಜವಾದ ಬೆಳಕು ಲೋಕಕ್ಕೆ ಬಂತು. ಅಂದರೆ ದೇವರನ್ನು ಪ್ರಕಟಮಾಡುವ ಕ್ರಿಸ್ತನು ಈ ಲೋಕಕ್ಕೆ ಬಂದನು. ಲೋಕವು ಆತನನ್ನು ಅರಿಯಲಿಲ್ಲ. ಆದರೆ ಯಾರ್ಯಾರು ಆತನನ್ನು ನಂಬಿದರೋ ಅವರಿಗೆ ಆತನು ದೇವರ ಮಕ್ಕಳಾಗುವ ಅಧಿಕಾರಕೊಟ್ಟನು. ದೇವಕುಮಾರನು ನರಾವತಾರವೆತ್ತಿ ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು, ನಾವು ಆತನ ಮಹಿಮೆಯನ್ನು ನೋಡಿದೆವು. ದೇವರನ್ನು ಯಾವನೂ ಎಂದೂ ಕಂಡಿಲ್ಲ. ತಂದೆಯ ಎದೆಯಲ್ಲಿದ್ದ ಒಬ್ಬನೇ ಮಗನು ಆತನನ್ನು ತಿಳಿಯಪಡಿಸಿದನು ಎಂದು ಕ್ರಿಸ್ತನ ಶಿಷ್ಯರು ಆತನನ್ನು ಕುರಿತು ಬರೆದರು. ಮತ್ತು ಆತನೇ ಹೇಳಿದನು—ಮೇಲಣಿಂದ ಬರುವವನು ಎಲ್ಲರ ಮೇಲೆ ಇದ್ದಾನೆ. ತಾನು ಅಲ್ಲಿ ನೋಡಿ ಕೇಳಿದ್ದಕ್ಕೆ ಸಾಕ್ಷಿಕೊಡುತ್ತಾನೆ. ಆದರೆ ಆವನ ಸಾಕ್ಷಿಯನ್ನು ಯಾರೂ ಹಿಡಿಯುವದಿಲ್ಲ. ಆದರೆ ಆವನ ಸಾಕ್ಷಿಯನ್ನು ಹಿಡಿದವನು ದೇವರು ಸತ್ಯವಂತನೆಂಬ ಮಾತಿಗೆ ಮುದ್ರೆಹಾಕಿದ್ದಾನೆ. ಮಗನನ್ನು ನಂಬುವವನಿಗೆ ನಿತ್ಯಜೀವ ಸಿಕ್ಕುತ್ತದೆ. ನಂಬದವನ ಮೇಲೆ ದೇವರ ಕೋಪವು ನೆಲೆಯಾಗಿರುವದು.

ಯುದ್ಧದ ಸಮಾಚಾರಗಳು.

ನಮ್ಮ ಪಕ್ಷದ ಮೂರು ಜಹಜು ಮುಳುಗಿತು.

ವೆಂಪೆಲ್ ಕೋಟೆಯನ್ನು ರಷ್ಯಾದವರು ಗೆದ್ದುಕೊಂಡರು.

ಕಳೆದ ವಾರ ಬಂದಿರುವ ತಂತೀವರ್ತಮಾನಗಳಲ್ಲಿ ವೆಂಪೆಲ್ ಕೋಟೆಯನ್ನು ರಷ್ಯಾದವರು ಗೆದ್ದು ಸ್ವಾಧೀನಪಡಿಸಿಕೊಂಡದ್ದೇ ವಿಶೇಷವಾದದ್ದು. ಮತ್ತು ಎಲ್ಲಾ ಕಡೆಗಳಲ್ಲೂ ಜರ್ಮನಿಯವರ ಮೇಲೆ ನಮ್ಮ ಪಕ್ಷದ ಸೈನ್ಯಗಳ ಬಲವೇ ಹೆಚ್ಚಾಗಿರೋದರಿಂದ ಅವರು ತಮ್ಮ ಠಾಣ್ಯಗಳನ್ನು ಕಾಪಾಡಿಕೊಳ್ಳದಂತೆ ಆಗಿದೆ. ನಮ್ಮ ಪಕ್ಷದವರು ಮುಂದಕ್ಕೆ ನುಗ್ಗಿ ಹೋಗುತ್ತಿರುವುದು ನಿದಾನ; ಆದರೂ ಅವರು ನುಗ್ಗಿಹೋದ ಹಾಗೆ ತಮ್ಮ ಸ್ಥಾನಗಳನ್ನು ಚೆನ್ನಾಗಿಯೂ ತೃಪ್ತಿಕರವಾಗಿಯೂ ಕಾಪಾಡಿಕೊಳ್ಳುತ್ತಾ ಬಂದಿದಾರೆ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚರೂ ಬೆಲ್ಜಿಯನ್‌ರೂ ಹಲವು ಠಾಣ್ಯಗಳಲ್ಲಿ ಮುಂದಕ್ಕೆ ನುಗ್ಗಿ ಹೋಗಿದಾರೆ. ಬ್ರಿಟಿಷರು ಹಿಂದೆ ನಡೆದ ಯುದ್ಧದಲ್ಲಿ ಜರ್ಮನಿಯವರಿಂದ ಕಿತ್ತುಕೊಂಡಿರುವಂಥಾ ಠಾಣ್ಯಗಳನ್ನು ಬಲಪಡಿಸಿಕೊಂಡಿರುವರು.

ಫ್ರೆಂಚರಿಗೆ ಮುಖ್ಯವಾಗಿ ಒಂದು ಠಾಣ್ಯದಲ್ಲಿ ವಿಶೇಷ ಅನುಕೂಲವಾಯಿತು. ಅವರು ಒಂದು ಗುಡ್ಡವನ್ನು ಗೆದ್ದು ಅದರ ಮೇಲೆ ಇದ್ದ ಶತ್ರುವನ್ನು ಓಡಿಸಿಬಿಟ್ಟರು. ಅದು ಸಮುದ್ರಮಟ್ಟಕ್ಕೆ 1,000 [illegible]ದ ಗುಡ್ಡ. ಇದಕ್ಕೋಸ್ಕರ ಫ್ರೆಂಚರು ಜರ್ಮನಿಯವರ ಮೇಲೆ ಫೆಬ್ರವರಿ ತಾ. 17 ರಿಂದ ಯುದ್ಧಮಾಡುತ್ತಾ ಬಂದರು. ಫೆಬ್ರವರಿ ತಾ. 28 ರಲ್ಲಿ ಫ್ರೆಂಚರು ತಮ್ಮ ಸೈನ್ಯವನ್ನು ಗುಡ್ಡದ ಮೇಲಕ್ಕೆ ನುಗ್ಗಿಸಿದರು. ಆದರೆ ಕತ್ತಲಾದ ಮೇಲೆ ಫ್ರೆಂಚರು ಅಲ್ಲಿಂದ ವಾಪಸು ಬಂದುಬಿಡಬೇಕಾಯಿತು. ಮರುದಿನ ಫ್ರೆಂಚರು ನಾಲ್ಕು ಸಲ ಗುಡ್ಡದ ಮೇಲಕ್ಕೆ ನುಗ್ಗಿಹೋದರು; ಆದಾಗ್ಯೂ ಅದರ ತುದಿಯಲ್ಲಿರುವ ಗ್ರಾಮವು ಅವರಿಗೆ ಸ್ವಾಧೀನವಾಗಲಿಲ್ಲ. ಮಾರನೇ ದಿನ ಫ್ರೆಂಚರ ಮೂರು ರೆಜಿಮೆಂಟ್ ಸೈನಿಕರು ತಾವಿದ್ದ ಕಂದಕಗಳಿಂದ ಹೊರಹೊರಟು ಶತ್ರುವಿನ ಮೇಲೆ ಬಿದ್ದು 24 ಗಂಟೆಗಳ ಹೊತ್ತು ಕದನಮಾಡಿದರು. ಕಡೆಗೆ ಆ ಗ್ರಾಮವು ಅವರ ಸ್ವಾಧೀನವಾಯಿತು. ಅವರು ಗ್ರಾಮದಲ್ಲಿ ಅರ್ಧ ಭಾಗವನ್ನು ಹೋಗಿ ಆಕ್ರಮಿಸಿಕೊಂಡರು. ಕದನಗಳು ನಿಲುಗಡೆಯಿಲ್ಲದೆ ಹಲವು ದಿನಗಳ ತನಕ ನಡೆಯುತ್ತಾ ಬಂದವು. ಕೊನೆಯಲ್ಲಿ ಫ್ರೆಂಚರು ಜಯಶೀಲರಾಗಿ ಆ ಗ್ರಾಮವನ್ನು ಆಕ್ರಮಿಸಿಕೊಂಡು ಅಲ್ಲೇ ಠಾಣ್ಯಹಾಕಿಕೊಂಡರು. ಈ ದೀರ್ಘವಾದ ಕದನಗಳಲ್ಲಿ ಫ್ರೆಂಚರಿಗೆ ಬಹಳ ನಷ್ಟವಾಯಿತು; ಆದರೂ ಜರ್ಮನಿಯವರಿಗೆ ಆದ ಅಪಾರ ನಷ್ಟದಲ್ಲಿ ಇದು ಬಹಳ ಸ್ವಲ್ಪ. ಜರ್ಮನಿಯವರು ತಮ್ಮ ಠಾಣ್ಯವನ್ನು ಕಳೆದುಕೊಂಡು ಸುಮ್ಮನಾಗಲಿಲ್ಲ; ಅವರು ಅದನ್ನು ಮತ್ತೆ ಸ್ವಾಧೀನಪಡಿಸಿಕೊಳ್ಳಬೇಕೆಂದು ಮೇಲೆ ಬಿದ್ದು ನುಗ್ಗಿಬಂದರು. ಆದರೆ ಕುಡುಗೋಲು ಹುಲ್ಲು ಕತ್ತರಿಸಿ ಹಾಕುವಂತೆ ಫ್ರೆಂಚರ ಫಿರಂಗಿ ಗುಂಡುಗಳು ಜರ್ಮನಿಯವರನ್ನು ಕತ್ತರಿಸಿ ಕೆಡವಿದವು. ಅಲ್ಲಿ ಅನೇಕ ಜರ್ಮನಿಯವರು ಫ್ರೆಂಚರಿಗೆ ಕೈಸೆರೆ ಸಿಕ್ಕಿರುತ್ತಾರೆ.

ಬ್ರಿಟಿಷರಿಗೂ ಜರ್ಮನಿಯವರಿಗೂ ಆದ ಯುದ್ಧದಲ್ಲಿ ಜರ್ಮನಿಯವರು ಸೋತು ಹಿಮ್ಮೆಟ್ಟಿದರಷ್ಟೆ. ಈ ಕದನದ ವೃತ್ತಾಂತವನ್ನು ಈಗ ಬಂದಿರುವ ತಂತೀವರ್ತಮಾನಗಳು ತಿಳಿಸುತ್ತವೆ. ಬ್ರಿಟಿಷ್ ಸೈನ್ಯದವರು—ಅವರಲ್ಲಿ ಹಿಂದುಸ್ಥಾನದ ಸೈನಿಕರೂ ಬಹಳ ಮಂದಿ ಇದ್ದರು, 60,000 ಒಟ್ಟಾಗಿ ಸೇರಿ 4,000 ಗಜಗಳ ವಿಸ್ತಾರವಾಗಿ ಹರಡಿ ಶತ್ರುವಿನ ಮೇಲೆ ನುಗ್ಗಿಹೋದರು. ಬ್ರಿಟಿಷರ ಫಿರಂಗಿ ಗುಂಡುಗಳು ಅತ್ಯಂತ ಘೋರ ನಷ್ಟವನ್ನುಂಟುಮಾಡಿದವು. ಒಂದು ಗ್ರಾಮವು ಸಂಪೂರ್ಣವಾಗಿ ಹಾಳುಬಿದ್ದಿತು. ಅದರೊಳಗೆ ಜರ್ಮನಿಯವರ ನೂರಾರು ಹೆಣಗಳು ಬಿದ್ದಿದ್ದವು. ಬ್ರಿಟಿಷರ ಗುಂಡುಗಳು ಒಡೆದ ಭಯಂಕರವಾದ ಶಬ್ದಕ್ಕೇ ಅನೇಕ ಜರ್ಮನಿಯವರಿಗೆ ಕುಟುಕುಪ್ರಾಣವಾಯಿತು. ಬ್ರಿಟಿಷರು ನುಗ್ಗಿಬಂದಿದಾರೆಂದು ಕಡೇ ಗಳಿಗೆಯ ತನಕ ಜರ್ಮನಿಯವರಿಗೆ ಗೊತ್ತೇ ಆಗಲಿಲ್ಲ. ಅದು ಗೊತ್ತಾದ ಮೇಲೆ ಅವರು ಎದುರಿಸಿ ನಿಂತು ಯುದ್ಧಕೊಡುವುದಕ್ಕೂ, ಗ್ರಾಮವನ್ನು ತ್ಯಜಿಸಿ ಓಡಿಹೋಗುವುದಕ್ಕೂ ಸಮಯ ಮೀರಿ ಹೋದಹಾಗಾಯಿತು. ಜರ್ಮನಿಯವರಲ್ಲಿ ಕೆಲವರು ನಾಲ್ಕಾರು ಹೊತ್ತಿನಿಂದ ಊಟವೇ ಮಾಡಿರಲಿಲ್ಲವಾದದ್ದರಿಂದ ತುಂಬಾ ಸುಸ್ತಾಗಿಹೋಗಿದ್ದರು. ಕೈಸೆರೆ ಸಿಕ್ಕಿರುವ ಒಬ್ಬ ಪ್ರಷ್ಯನ್ ಹುದ್ದೇದಾರನನ್ನು ಪ್ರಶ್ನೆಮಾಡಿದಾಗ ಬ್ರಿಟಿಷರ ಸಿಡಿಮದ್ದಿನ ಗುಂಡುಗಳು ಹತ್ತು ಹತ್ತು ಗಜ ದೂರಕ್ಕೂ ಬಿದ್ದು ಒಡೆದು ಜರ್ಮನಿ ಸೈನಿಕರನ್ನು ಕೊಂದುಬಿಟ್ಟವೆಂದೂ, ಇದು ಬರಿಯ ಕೊಲೆಯಾಯಿತೇ ಹೊರತು ಧರ್ಮದ ಯುದ್ಧವೆನಿಸಲಾರದೆಂದೂ ಜವಾಬು ಕೊಟ್ಟನು. ಆ ಸೈನಿಕರಲ್ಲಿ ಜರ್ಮನಿಯ ಮೂವರು ರಾಜಕುಮಾರರಿದ್ದರೆಂದು ಹೇಳುತ್ತಾರಾದದ್ದರಿಂದ ಇವರೂ ಅಲ್ಲೇ ಕೊಲೆಯಾಗಿರಬೇಕೆಂದು ನಂಬಲ್ಪಟ್ಟಿದೆ. ಬ್ರಿಟಿಷರ ಕಂದಕಗಳ ಎದುರಿಗೆ ಪೂರ್ವ ಪಾರ್ಶ್ವದಲ್ಲಿ 2,000 ಜರ್ಮನಿ ಸೈನಿಕರ ಹೆಣಗಳನ್ನು ಲೆಕ್ಕ ಮಾಡಿದ್ದಾಯಿತು. ಅಲ್ಲಿಂದ ದಕ್ಷಿಣ ಭಾಗದಲ್ಲಿ 500 ಹೆಣಗಳು ಬಿದ್ದಿದ್ದವು. ಇದನ್ನು ನೋಡುವಲ್ಲಿ ಜರ್ಮನಿಯವರು ಈ ಕದನದಲ್ಲಿ 20,000 ಸೈನ್ಯಕ್ಕೆ ಕಡಮೆಯಿಲ್ಲದೆ ಕಳೆದುಕೊಂಡಿರಬೇಕೆಂದು ಕಾಣುತ್ತದೆ.

ಬ್ರಿಟಿಷರ ಕಡೆಯಲ್ಲೂ ಸೈನ್ಯಗಳು ವಿಶೇಷವಾಗಿ ನಷ್ಟಪಟ್ಟವು; ಆದರೆ ಅದರ ಸಂಖ್ಯೆಯನ್ನು ಪ್ರಕಟಮಾಡಲಿಲ್ಲ. ಗಾಯಪಟ್ಟು ಸುಮಾರು ಒಂದು

ಬ್ರಿಟಿಷ್ ಸೈನಿಕರನ್ನು ಚಿಕಿತ್ಸೆಗಾಗಿ ಇಂಗ್ಲೆಂಡಿನಲ್ಲಿರುವ ಬ್ರೈಟನ್ ನಗರಕ್ಕೆ ಸಾಗಿಸಿದರು ; ಇವರಲ್ಲಿ ಹಿಂದುಸ್ಥಾನದ ಸೈನಿಕರು 682 ಮಂದಿ ಇದ್ದಂತೆ ತಿಳಿಯುವದು.

ಬ್ರಿಟಿಷ್ ಯುದ್ಧದ ಜಹಜುಗಳಿಂದ ಬೆಲ್ಜಿಯಮ್ ತೀರಪಟ್ಟಣಕ್ಕೆ ಗುಂಡುಗಳನ್ನು ಹಾಕಿದ್ದರಿಂದ ಬೆಲ್ಜಿಯನ್ನರು ಮುಂದರಿಸಿ ನುಗ್ಗಿಹೋಗಲು ತುಂಬಾ ಸಹಾಯವಾಯಿತೆಂದು ಹೇಳಲಾಗಿದೆ. ಕಲೆ ಎಂಬ ತೀರಪಟ್ಟಣಕ್ಕೆ ಜೆಪ್ಪೆಲಿನ್ ಎಂಬ ಜರ್ಮನಿಯ ದೊಡ್ಡ ವಿಮಾನ ಯಂತ್ರವು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ರೈಲ್ವೆ ಸ್ಟೇಷನ್ನಲ್ಲಿ ಗುಂಡುಗಳು ಬಿದ್ದು ಒಡೆದು ಏಳು ಮಂದಿ ಸೈನಿಕರನ್ನು ಕೊಂದುಹಾಕಿರುತ್ತವೆ. ನಾಲ್ಕು ಜೆಪ್ಪೆಲಿನ್ ಎಂಬ ವಿಮಾನ ಯಂತ್ರಗಳು ಫ್ರಾನ್ಸಿನ ರಾಜಧಾನಿಯಾದ ಪಾರಿಸ್ ನಗರವನ್ನು ಸಿಡಿಮದ್ದಿನ ಗುಂಡುಗಳನ್ನು ಹಾಕಿ ಕೆಲವು ಭಾಗಗಳನ್ನು ನಾಶಮಾಡಬೇಕೆಂದು ಸಾಹಸಪಟ್ಟವು. ಆದರೆ ಆ ಪೈಕಿ ಎರಡು ವಿಮಾನ ಯಂತ್ರಗಳನ್ನು ಪಾರಿಸ್ಸಿನ ಸಮೀಪಕ್ಕೆ ಬರುವಷ್ಟರೊಳಗೇ ಹಿಂದಕ್ಕೆ ಓಡಿಸಿಬಿಟ್ಟರು. ಇನ್ನೆರಡು ವಿಮಾನಗಳನ್ನು ಓಡಿಸುವದಕ್ಕೆ ಪ್ರಯತ್ನಪಟ್ಟಾಗ ಅವು ಪಾರಿಸ್ಸಿನ ವಾಯುವ್ಯ ಬಹಿರ್ದೇಶಕ್ಕೆ ಬಂದು ಸುಮಾರು 12 ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಇದರಿಂದ ಪ್ರಾಣಾಪಾಯಗಳೇನೂ ವಿಶೇಷವಾಗಿ ನಷ್ಟವಾಗಲಿಲ್ಲ ; ಕೆಲವು ಕಟ್ಟಡಗಳಿಗೆ ಬೆಂಕಿ ಹತ್ತಿಕೊಂಡವು. ಏಳು ಜನರಿಗೆ ಗಾಯಗಳಾಗಿವೆ; ಈ ಪೈಕಿ ಒಬ್ಬನು ಬದುಕುವುದು ಪ್ರಯಾಸ. ಜರ್ಮನಿಯವರು ಮಾಡಿದ ಈ ದರೋಡೆ ಕೃತ್ಯವು ನಿಷ್ಫಲವಾಯಿತು. ಇಂಥಾ ಕೃತ್ಯಗಳಿಗೆ ಅವಕಾಶವಾಗದಂತೆ ಪಟ್ಟಣವನ್ನು ಬಲವಾಗಿ ಸಂರಕ್ಷಣೆಮಾಡಿಕೊಂಡಿದ್ದಾರೆ.

ಪಶ್ಚಿಮ ರಣರಂಗದಲ್ಲಿ ನಮ್ಮ ಪಕ್ಷದವರು ಮುಂದರಿಸಿ ನುಗ್ಗಿಹೋಗುತ್ತಿರುವರೆಂದೂ, ಜರ್ಮನಿಯವರು ಅವರನ್ನು ಅಡ್ಡಿಮಾಡಲಾರದೆ ಸೋತಿದ್ದಾರೆಂದೂ ಈಗ ಬಂದಿರುವ ವರ್ತಮಾನಗಳಿಂದ ಗೊತ್ತಾಗುತ್ತದೆ.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದಲ್ಲಿ ಯುದ್ಧ ನಡೆಯುವ ಸಾಲು ಸುಮಾರಾಗಿ ಒಂದು ಸಾವಿರ ಮೈಲಿ ದೂರದ ತನಕ ವ್ಯಾಪಿಸಿದೆ. ಈ ಒಂದು ಸಾವಿರ ಮೈಲಿ ಉದ್ದಕ್ಕೂ ಸ್ಥಳಗಳಲ್ಲಿ ನಡೆಯುವ ಕದನಗಳ ವೃತ್ತಾಂತವನ್ನು ಸರಿಯಾಗಿ ವಿವರಿಸಿ ತಿಳಿಸುವುದು ಪ್ರಯಾಸ. ರಷ್ಯಾದವರು ಪೂರ್ವ ಪ್ರಷ್ಯಾದೊಳಕ್ಕೆ ಮತ್ತೆ ನುಗ್ಗಿ ಬಂದಿರುವರಾಗಿ ಅಂದರೆ ಈಸಲ ಇನ್ನೂ ಉತ್ತರಕ್ಕೆ ಬಾಲ್ಟಿಕ್ ಕಡಲಿನ ಬಳಿ ಬಂದಿರುವಂತೆ ಕಾಣುತ್ತದೆ. ರಷ್ಯಾದವರು ಬಹಳ ಕಠಿಣವಾದ ಕದನವಾಡಿ ಜರ್ಮನಿಯವರನ್ನು ಹಿಮ್ಮೆಟ್ಟಿಸಿ ಓಡಿಸಿಬಿಟ್ಟು, ಮಾರ್ಚಿ ತಾ. 18 ನೇ ಗುರುವಾರ ಮೆಮಲ್ ಎಂಬ ಜರ್ಮನಿಯವರ ತೀರಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು. ಈ ಪಟ್ಟಣವು ಪೂರ್ವ ಪ್ರಷ್ಯಾದಲ್ಲಿ ಬಾಲ್ಟಿಕ್ ಕಡಲ ತೀರದಲ್ಲಿರುವುದು. ಇದನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ ರಷ್ಯದವರು ಪಟ್ಟಣದ ಬೀದಿಗಳಲ್ಲಿ ಭಯಂಕರವಾಗಿ ಯುದ್ಧಮಾಡಿದರು. ಅಲ್ಲಿಂದ ಪಶ್ಚಿಮಕ್ಕೆ ಜರ್ಮನಿಯವರು ಹಿಮ್ಮೆಟ್ಟಿಸಲ್ಪಟ್ಟರು ; ಆದಾಗ್ಯೂ ಜರ್ಮನಿಯವರು ಇನ್ನೂ ರಷ್ಯಾ ಪೋಲೆಂಡನ್ನು ಬಿಟ್ಟು ಹೋಗಿಲ್ಲ.

ಪಶ್ಚಿಮ ಭಾಗದಲ್ಲಿ ಜರ್ಮನಿಯವರು ವಾರ್ಸಾ ನಗರವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪ್ರಾಣದ ಮೇಲೆ ಆಸೆಯಿಡದೆ ಮೇಲೆಬಿದ್ದು ನುಗ್ಗಿ ಸಾಹಸಪಟ್ಟರು. ಮತ್ತೆ ಅವರ ಈ ಉದ್ದೇಶವು ವ್ಯರ್ಥವಾಯಿತು. ಅವರು ಅಲ್ಲಿಂದ ಹಿಮ್ಮೆಟ್ಟಿಹೋಗುತ್ತಿದ್ದಾರೆ. ಕಳೆದ ಎರಡು ವಾರಗಳಿಂದ ನಡೆದ ಕದನಗಳಲ್ಲಿ ಆ ಪ್ರಾಂತ್ಯ ಒಂದರಲ್ಲೇ ಜರ್ಮನಿಯವರು 25,000 ಸೈನ್ಯವನ್ನು ಕಳೆದುಕೊಂಡರೆಂದು ಊಹಿಸಲ್ಪಟ್ಟಿದೆ. ಪಶ್ಚಿಮ ದಿಕ್ಕಿನಲ್ಲಿ ವಾರ್ಸಾ ನಗರದ ಬಳಿ ಕದನಗಳೇನೂ ವಿಶೇಷವಾಗಿ ನಡೆದಿಲ್ಲ. ಆದರೆ ಅಲ್ಲಿಂದ ದಕ್ಷಿಣಕ್ಕೆ ಆಸ್ಟ್ರಿಯದವರೊಳಗೆ ಕಾರ್ಪೇಥಿಯನ್ ಪರ್ವತ ಪ್ರಾಂತ್ಯದಲ್ಲಿ ಆಸ್ಟ್ರಿಯಾದವರು ರಷ್ಯಾದವರನ್ನು ಹಿಂದಕ್ಕೆ ಓಡಿಸಬೇಕೆಂದು ವೃಥಾ ಪ್ರಯತ್ನಪಟ್ಟರು. ಅಲ್ಲಿ ರಷ್ಯಾದವರು 4,000 ಆಸ್ಟ್ರಿಯಾದವರನ್ನು ಸೆರೆ ಹಿಡಿದುಕೊಂಡರು.

ಕಾರ್ಪೇಥಿಯನ್ ಪರ್ವತಗಳ ಉತ್ತರ ಪಾರ್ಶ್ವದಲ್ಲಿ ಗೆಲಿಸಿಯಾದೊಳಗೆ ರಷ್ಯದವರು ಪೆರಮಿಸಲ್ ಎಂಬ ಭಾರಿ ಕೋಟೆಗೆ ಮುತ್ತಿಗೆ ಹಾಕಿಕೊಂಡು ಅನೇಕ ತಿಂಗಳುಗಳಿಂದ ಅದನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸಾಹಸಪಡುತ್ತಾ ಬಂದಿದ್ದಾರೆ. ಕೋಟೆಕೊತ್ತಲಗಳಿಂದ ದಿನವೂ 1,000 ಗುಂಡುಗಳಿಗೆ ಕಡಿಮೆಯಿಲ್ಲದಂತೆ ರಷ್ಯಾದವರ ಮೇಲೆ ಹೊಡೆಯುತ್ತಾ ಬಂದಿದ್ದಾಗ್ಯೂ ರಷ್ಯಾದವರನ್ನು ಹಿಮ್ಮೆಟ್ಟಿಸಲು ಅವರಿಂದ ಸಾಧ್ಯವಾಗದೆಹೋಯಿತು. ಕೋಟೆಯೊಳಗಿದ್ದ ಸೈನಿಕರು ಹೊರಗೆ ಬಂದು ರಷ್ಯಾದವರ ಮೇಲೆ ಯುದ್ಧಮಾಡಿದರು. ಎಂಟು ಗಂಟೆಗಳ ತನಕ ಕದನ ನಡೆದದ್ದರಲ್ಲಿ ಅವರು ಸೋತು ವಾಪಸು ಹೋಗಬೇಕಾಯಿತು. ರಷ್ಯಾದವರು ಅವರಲ್ಲಿ 3,000 ಸೈನಿಕರನ್ನು ಸೆರೆ ಹಿಡಿದುಕೊಂಡರು. ಈ ನಗರದ ಮುತ್ತಿಗೆಯನ್ನು ಬಿಡಿಸಿಕೊಳ್ಳಬೇಕೆಂದು ಆಸ್ಟ್ರಿಯಾದವರು ನಾನಾ ಸಾಹಸಪ್ರಯತ್ನಗಳನ್ನು ಮಾಡಿದರು ; ಅವರ ಸಾಹಸವೆಲ್ಲಾ ವ್ಯರ್ಥವಾಯಿತು. ಈಚೆಗೆ ಬಂದಿರುವ ತಂತೀವರ್ತಮಾನವೇನೆಂದರೆ— ಪೆರಮಿಸೆಲ್ ಎಂಬ ಬಲವಾದ ಕೋಟೆಯನ್ನು ಆಸ್ಟ್ರಿಯಾದವರು ಕಾಪಾಡಿಕೊಳ್ಳಲಾರದೆ ರಷ್ಯಾದವರಿಗೆ ಶರಣಾಗತರಾಗಿ ಒಪ್ಪಿಸಿಬಿಟ್ಟರು. ಅದರೊಳಗೆ 5,000 ಆಸ್ಟ್ರಿಯಾ ಸೈನ್ಯವಿತ್ತು. ಈ ಪೈಕಿ ಯುದ್ಧದಲ್ಲಿ ಅನೇಕರು ಲಯವಾದರು. ಈ ಕೋಟೆಯಲ್ಲಿ ಜನರು ತಿನ್ನುವುದಕ್ಕಿಲ್ಲದೆ ಬಹಳ ಸಂಕಟಪಡುತ್ತಿದ್ದರು. ಈ ಕೋಟೆ ರಷ್ಯಾದವರ ಸ್ವಾಧೀನವಾದದ್ದರಿಂದ ಅವರು ತಮ್ಮ ಸೈನ್ಯಗಳನ್ನು ಅಲ್ಲಿಂದ ಕ್ರಾಕೋ ನಗರದ ಮೇಲೆ ರವಾನೆಮಾಡುವುದಕ್ಕೆ ಅನುಕೂಲವಾಯಿತು.

ರಷ್ಯಾ ಸೈನಿಕರ ಸಾಲಿನ ದಕ್ಷಿಣ ಮೂಲೆಯಲ್ಲಿ ರಷ್ಯಾದವರು ಮತ್ತೆ ನುಗ್ಗಿಹೋಗುತ್ತಲೂ, ಆಸ್ಟ್ರಿಯಾದವರನ್ನೂ ಜರ್ಮನಿಯವರನ್ನೂ ಹಿಂದಕ್ಕೆ ಒತ್ತಿಸಿಕೊಂಡು ಹೋಗುತ್ತಲೂ ಇದ್ದಾರೆ. ರಷ್ಯಾದವರು ಅಪಾರವಾಗಿ ಹಿಮ ಬೀಳುತ್ತಿದ್ದಾಗಲೇ ಮುಂದರಿಸಿ ಹೋಗಿ 2,000 ಸೈನ್ಯವನ್ನು ಸೆರೆ ಹಿಡಿದುಕೊಂಡುಬಿಟ್ಟರು.

ರಷ್ಯಾದವರು ಜರ್ಮನ್ ಮತ್ತು ಆಸ್ಟ್ರಿಯಾದವರ ಮೇಲೆ ಕೆಲವು ತಿಂಗಳುಗಳಿಂದ ಯುದ್ಧಮಾಡುತ್ತಾ ಬಂದಿರುವುದರಲ್ಲಿ ಅನೇಕಸಾರ್ತಿ ಉಭಯ ಪಕ್ಷದವರೂ ಹಿಂದಕ್ಕೂ ಮುಂದಕ್ಕೂ ಹೋಗುತ್ತಲೂ ಬರುತ್ತಲೂ ಇರುವುದು ದೃಷ್ಟಾಂತವಾಯಿತು. ಇದರಿಂದ ಅಲ್ಲಿ ಯಥಾರ್ಥವಾಗಿ ನಡೆದಿರುವ ವಿದ್ಯಮಾನವನ್ನು ಗೊತ್ತುಮಾಡಿ ಹೇಳುವುದು ಸುಲಭವಾಗಿಲ್ಲ. ಆದರೂ ಜರ್ಮನಿ ಮತ್ತು ಆಸ್ಟ್ರಿಯಾದವರು ತಮ್ಮ ಕೈಲಾಗುವಷ್ಟು ಸಾಹಸ ಪ್ರಯತ್ನಗಳನ್ನು ಮಾಡಿದ್ದಾಯಿತೆಂದೂ, ಇನ್ನು ಮುಂದೆ ರಷ್ಯಾದವರು ಕ್ರಮವಾಗಿ ಮುಂದರಿಸಿ ನುಗ್ಗಿಹೋಗುತ್ತಾರೆಂದೂ ಈಗ ತೋರಿಬರುವುದು. ಈಗ ಜರ್ಮನಿಯವರು ತಮ್ಮ ಸೈನ್ಯವನ್ನು ಪಶ್ಚಿಮ ರಣರಂಗದಿಂದ ಇಲ್ಲಿಗೆ ಕರೆಸಿಕೊಳ್ಳಲಾರರು ; ಇಲ್ಲಿಂದ ಪಶ್ಚಿಮಕ್ಕೆ ಕಳುಹಿಸುವುದೂ ಸಾಧ್ಯವಲ್ಲ. ಎರಡು ಕಡೆಗಳಲ್ಲೂ ಜರ್ಮನಿ ಸೈನಿಕರಿಗೆ ಈಗ ಬೇಕಾದಷ್ಟು ಕೆಲಸವಿದ್ದೇ ಇದೆ. ಇನ್ನು ಕೆಲವು ವಾರಗಳ ತನಕ ನಮ್ಮ ಪಕ್ಷದವರಿಗೆ ವಿಶೇಷ ಅನುಕೂಲಗಳು ದೊರಕದೆ ಹೋದರೂ ಹೋಗಬಹುದು ; ಆದರೆ ನಮ್ಮವರು ಈಗ ಗೆದ್ದಿರುವ ಪ್ರದೇಶಗಳನ್ನು ಸಂರಕ್ಷಣೆಮಾಡಿಕೊಂಡು ದಿನಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಮುಂದರಿಸಿ ನುಗ್ಗಿಹೋಗುವರೆನ್ನುವದಕ್ಕೆ ಸಂಶಯ ಕಾಣುವುದಿಲ್ಲ.

ಟರ್ಕಿ.

ಈಗ ಸದ್ಯದಲ್ಲಿ ಎಲ್ಲರ ದೃಷ್ಟಿಯೂ ಡಾರ್ಡನೆಲ್ಸ್ ಜಲಮಾರ್ಗದ ಕಡೆ ತಿರುಗಿರುತ್ತದೆ. ಅಲ್ಲಿ ನಮ್ಮ ಪಕ್ಷದವರು ಜಹಜುಗಳನ್ನು ಇಟ್ಟುಕೊಂಡು ಮಾರ್ಗಬಿಡಿಸಿ ನುಗ್ಗಿಹೋಗಬೇಕೆಂದು ಸಾಹಸಪಡುತ್ತಿದ್ದಾರೆ. ಕಳೆದ ವಾರದ ವರ್ತಮಾನಗಳಿಂದ ನಮ್ಮ ಪಕ್ಷದವರಿಗೆ ತುಂಬಾ ನಷ್ಟವಾದಂತೆ ತಿಳಿಯುವುದು. ಆ ಜಲಮಾರ್ಗದಲ್ಲಿ ಹಾಕಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಬಡಿದು ಬ್ರಿಟಿಷರ ಎರಡು ಜಹಜುಗಳೂ, ಫ್ರೆಂಚರ ಒಂದು ಜಹಜೂ ಮುಳುಗಿ ಹೋದವು ; ಫ್ರೆಂಚರ ಒಂದು ಜಹಜಿಗೆ ಜಖಮಾ ಆಗಿದೆ.

ಕಳೆದ ಶುಕ್ರವಾರ ಬೆಳಿಗ್ಗೆ 10-45 ಗಂಟೆಗೆ ಬ್ರಿಟಿಷರ ನಾಲ್ಕು ಜಹಜುಗಳು ಜಲಮಾರ್ಗದಲ್ಲಿ ಇಕ್ಕಟ್ಟಾದ ಭಾಗದಲ್ಲಿರುವ ಕೋಟೆಗಳಿಗೆ ಗುಂಡುಗಳನ್ನು ಹೊಡೆಯುತ್ತಾ ಬಂದವು; ಅದೇ ಸಮಯದಲ್ಲಿ ಇನ್ನೆರಡು ಜಹಜುಗಳು ಟರ್ಕಿಯವರ ಸಾಲು ಫಿರಂಗಿಗಳಿಗೆ ಗುರಿಕಟ್ಟಿ ಗುಂಡುಗಳನ್ನು ಹೊಡೆಯಲಾರಂಭಿಸಿದವು. ಮಧ್ಯಾಹ್ನ 12 ಗಂಟೆಯ ಹೊತ್ತಿಗೆ ಫ್ರೆಂಚರ ನಾಲ್ಕು ಜಹಜುಗಳು ನುಗ್ಗಿ ಹೋಗಿ ಕೋಟೆಗಳ ಸಮೀಪಕ್ಕೆ ಸೇರಿ ಗುಂಡು ಹೊಡೆಯುತ್ತಾ ಬಂದವು. ನಾಲ್ಕು ಕೋಟೆಗಳಿಂದ ಟರ್ಕಿಯವರು ಜವಾಬಾಗಿ ಗುಂಡುಗಳನ್ನು ಹೊಡೆದರು. ಆದರೆ ಹತ್ತು ಯುದ್ಧದ ಜಹಜುಗಳೂ ಸೇರಿಕೊಂಡು ಟರ್ಕಿಯವರ ಗುಂಡುಗಳ ಬಾಯಿ ಮುಚ್ಚಿಸಿಬಿಟ್ಟವು. ಇದರಲ್ಲಿ ಜಹಜುಗಳಿಗೆಲ್ಲಾ ಗುಂಡಿನೇಟು ಬಿದ್ದವು. ಆದರೆ ಮಧ್ಯಾಹ್ನ 1-25 ಗಂಟೆಗೆ ಕೋಟೆಗಳಿಂದ ಗುಂಡು ಬೀಳುವುದು ನಿಂತುಹೋಯಿತು. ಅಷ್ಟು ಹೊತ್ತಿಗೆ ಗುಂಡು ಹೊಡೆಯುತ್ತಿದ್ದ ಜಹಜುಗಳ ಸಹಾಯಕ್ಕೆ ಇನ್ನೂ ಆರು ಹೊಸ ಜಹಜುಗಳು ಹೋಗಿ ಸೇರಿದವು. ಫ್ರೆಂಚ್ ಜಹಜುಗಳು ವಾಪಸು ಬರುತ್ತಿರುವಲ್ಲಿ ಬೊವೆ ಎಂಬ ಜಹಜು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಒಡೆದುಹೋಗಿ ಮೂರೇ ನಿಮಿಷಗಳಲ್ಲಿ ಮುಳುಗಿಹೋಯಿತು. ಅದರೊಳಗಿದ್ದವರು 64 ಜನರು ವಿನಹ ಉಳಿದವರೆಲ್ಲಾ ಸಮುದ್ರದ ಪಾಲಾದರು. ಅತ್ತಲಾಗಿ ಹೊಸ ಜಹಜುಗಳು ಕೋಟೆಗಳಿಗೆ ಗುಂಡುಗಳನ್ನು ಹೊಡೆಯುತ್ತಾ ಬಂದವು; ಶತ್ರುವಿನ ಕಡೆಯಿಂದ ಗುಂಡುಗಳು ಬಂದು ಬಿದ್ದವು. ಆ ಸಮಯದಲ್ಲೇ ಸಮುದ್ರದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹುಡುಕಿ ತೆಗೆದುಹಾಕಿದರು. ಸಾಯಂಕಾಲ 4 ಗಂಟೆಯಲ್ಲಿ "ಇರ್ರೆಸಿಸ್ಟಿಬಲ್" ಎಂಬ ಬ್ರಿಟಿಷ್ ಜಹಜು ಸಿಡಿಮದ್ದಿನ ಗುಂಡಿಗೆ ತಗುಲಿ ಮುಳುಗಿಹೋಯಿತು. ಆದರೆ ಅದರಲ್ಲಿದ್ದವರ ಪೈಕಿ ಮುಕ್ಕಾಲು ಪಾಲಿನಷ್ಟು ಜನರನ್ನು ಬದುಕಿಸಿದರು. ಬಳಿಕ ಸಂಜೆ 6 ಗಂಟೆ ಹೊತ್ತಿನಲ್ಲಿ "ಓಷನ್" ಎಂಬ ಬ್ರಿಟಿಷ್ ಜಹಜು ಮೈನ್ ಬಡಿದು ಮುಳುಗಿತು. ಅದರಲ್ಲಿದ್ದವರಲ್ಲೂ ಬಹು ಮಂದಿ ಬದುಕಿ ಬಂದರು. ಆ ಜಲಮಾರ್ಗದೊಳಕ್ಕೆ ಪ್ರವೇಶಿಸುವಾಗ್ಗೆ ನಮ್ಮ ಪಕ್ಷದವರು ಸಿಡಿಮದ್ದಿನ ಗುಂಡುಗಳನ್ನು ಹುಡುಕಿ ಎತ್ತಿಹಾಕಿದ್ದರು. ಆದರೂ ಇಂಥಾ ಅಪಾಯ ಸಂಭವಿಸಿದ್ದನ್ನು ನೋಡುವಲ್ಲಿ ಆ ಜಲಮಾರ್ಗದಲ್ಲಿ ನೀರಿನ ಸೆಳವು ಹುಟ್ಟಿ ಮೇಲಿನಿಂದ ಇತರ ಕಡೆಗಳಲ್ಲಿದ್ದ ಸಿಡಿಮದ್ದಿನ ಗುಂಡುಗಳು ಕೆಳಗಡೆಗೆ ಹೊಡೆದುಕೊಂಡು ಬಂದಿರಬೇಕೆಂದು ತೋರುತ್ತದೆ. ಆಗಲೇ ಹೊಸದಾಗಿ ಇನ್ನೆರಡು ಬ್ರಿಟಿಷ್ ಜಹಜುಗಳು ಅಲ್ಲಿಗೆ ಹೋಗಿ ಸೇರಿದವು. ಫ್ರೆಂಚರೂ ಕೂಡ ಇನ್ನೊಂದು ಹೊಸ ಹಡಗನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಕೋಟೆಗಳು ನಮ್ಮ ಪಕ್ಷದವರ ಗುಂಡುಗಳು ಬಿದ್ದು ಎಷ್ಟುಮಟ್ಟಿಗೆ ನಷ್ಟಪಟ್ಟವೋ ತಿಳಿಯಲಿಲ್ಲ; ಆದರೂ ಕೋಟೆಗಳನ್ನು ಹಾಳುಮಾಡುವ ಕಾರ್ಯವು ತೃಪ್ತಿಕರವಾಗಿ ಜರುಗಿದೆ ಎನ್ನುವುದಕ್ಕೆ ಸಂಶಯವಿಲ್ಲ.

ಅಮೆಥಿಸ್ಟ್ ಎಂಬುವುದು ಬ್ರಿಟಿಷರ ಒಂದು ಸಣ್ಣ ಜಹಜು. ಬ್ರಿಟಿಷರು ಇದನ್ನು ಜಲಮಾರ್ಗದ ಇಕ್ಕಟ್ಟಾದ ಭಾಗಕ್ಕೆ ಕಳುಹಿಸಿದರು. ಅಲ್ಲಿ ಹಾಕಿರುವ ವಿದ್ಯುಚ್ಛಕ್ತಿಯ ಟೆಲಿಗ್ರಾಫ್ ತಂತಿಯನ್ನು ಕತ್ತರಿಸಿಬಿಡಬೇಕೆಂಬುವದೇ ಅದರ ಉದ್ದೇಶ. ಈ ಸಣ್ಣ ಹಡಗು ಸಿಡಿಮದ್ದಿನ ಗುಂಡಿಗೆ ಬಡಿಯದೆ ನೆಟ್ಟಗೆ ಹೋಗಿ ಸೇರಿಕೊಳ್ಳದ್ದೆ ತಂತಿಯನ್ನೆತ್ತಿ ಕತ್ತರಿಸಿಬಿಟ್ಟಿತು. ಅದು ವಾಪಸು ಬರುವಲ್ಲಿ ಶತ್ರುವಿನ ಗುಂಡುಗಳು ಅದಕ್ಕೆ ಬಿದ್ದವು. ಅದರಲ್ಲಿದ್ದವರ ಪೈಕಿ 23 ಮಂದಿ ಕೊಲೆಯಾದರೆಂದೂ, 37 ಜನರಿಗೆ ಗಾಯಗಳಾದವೆಂದೂ ತಿಳಿಯುತ್ತದೆ. ಈ ಕಾರ್ಯಗಳನ್ನು ಸಾಂಗವಾಗಿ ನಡೆಸುವದಕ್ಕೆ ಹವಾ ಅನುಕೂಲವಾಗಿರಲಿಲ್ಲ. ಕೆಲವು ಕಾಲ ಜಹಜುಗಳು ಸುಮ್ಮನೆ ಇರಬೇಕಾಯಿತು.

ಆಫ್ರಿಕಾದಲ್ಲಿ.

ಜನರಲ್ ಬೋಥಾರವರು ದಕ್ಷಿಣ ಆಫ್ರಿಕದ ಸಂಯುಕ್ತ ಸೈನ್ಯಗಳನ್ನು ಜೊತೆಮಾಡಿಕೊಂಡು ಜರ್ಮನಿಯವರ ಮೇಲೆ ಬಿದ್ದು ಅವರ ಎರಡು ಪಿರಂಗಿಗಳನ್ನು ಕಿತ್ತುಕೊಂಡು 200 ಜರ್ಮನಿಯವರನ್ನು ಸೆರೆ ಹಿಡಿದು ತಂದಿದ್ದಾರೆ. ಅವರು ಬಹಳ ಘೋರವಾಗಿ ಕದನಮಾಡಿದರು. ಇನ್ನೂ ಯುದ್ಧವು ಕೊನೆಗೊಂಡಿಲ್ಲ. ಬ್ರಿಟಿಷರ ಕಡೆ ಅದ ನಷ್ಟ ತಿಳಿಸಿಲ್ಲ.

ಇಟಲಿ ರಾಜ್ಯವೂ ಯುದ್ಧವೂ.

ಆಸ್ಟ್ರಿಯಾದಲ್ಲಿ ಇಟಲಿ ಪ್ರಜೆಗಳು ವಾಸಮಾಡಿಕೊಂಡಿರುವಂಥಾ ಪ್ರದೇಶಗಳನ್ನೆಲ್ಲಾ ಇಟಲಿಯವರಿಗೆ ಬಿಟ್ಟುಕೊಡಬೇಕೆಂದು ಇಟಲಿಯವರು ಕೇಳಿದ್ದಾರೆಂದು ತಂತೀ ವರ್ತಮಾನಗಳು ತಿಳಿಸುತ್ತವೆ. ರಾಯಭಾರಿಗಳು ಜರ್ಮನಿಯವರಿಗೂ ಆಸ್ಟ್ರಿಯಾದವರಿಗೂ ಬಹಳ ಬೇಗನೆ ಇಟಲಿ ಸೀಮೆಯನ್ನು ಬಿಟ್ಟುಕೊಡುವಂತೆ ವಿವೇಕ ಹೇಳುತ್ತಾರೆ. ಈ ಮಧ್ಯೆ ಜರ್ಮನಿಯ ಅನೇಕ ಗೂಢಚಾರರು ಇಟಲಿಗೆ ಹೋಗಿರುವಂತೆ ವರ್ತಮಾನವಿದೆ.

ಸಮುದ್ರದ ಮೇಲೆ.

ಫಾಕ್ಲೆಂಡ್ ದ್ವೀಪಗಳ ಬಳಿ ನಡೆದ ಸಮುದ್ರ ಯುದ್ಧದಲ್ಲಿ ಜರ್ಮನಿಯ ಡ್ರೆಸ್ಡನ್ ಎಂಬ ಯುದ್ಧದ ಜಹಜು ತಪ್ಪಿಸಿಕೊಂಡುಹೋಗಿತ್ತು. ಇದನ್ನು ಬ್ರಿಟಿಷ್ ಜಹಜುಗಳು ಪೆಸಿಫಿಕ್ ಸಾಗರದಲ್ಲಿ ದಕ್ಷಿಣ ಅಮೇರಿಕದ ತೀರದ ಬಳಿ ಕಂಡು ಕಡೆವಾಗ ಅದಕ್ಕೂ ಬ್ರಿಟಿಷ್ ಜಹಜುಗಳಿಗೂ ಐದು ನಿಮಿಷ ಯುದ್ಧವಾಯಿತು. ಡ್ರೆಸ್ಡನ್ ಜಹಜು ಮುಳುಗಿಸಲ್ಪಟ್ಟಿತು. ಅದರಲ್ಲಿದ್ದವರನ್ನು ಬದುಕಿಸಿದರು ; ಆದರೆ 16 ಮಂದಿಗೆ ಘೋರ ಗಾಯಗಳಾಗಿದ್ದವು. ಬ್ರಿಟಿಷ್ ಜಹಜುಗಳಿಗೆ ಗುಂಡಿನೇಟು ಬೀಳಲಿಲ್ಲ ; ಯಾರೊಬ್ಬರಿಗೂ ಯಾವ ಅಪಾಯವೂ ಸಂಭವಿಸಲಿಲ್ಲ. ಜರ್ಮನಿಯ ಕಾರ್ಲ್ಸರೂಹೆ ಎಂಬ ಯುದ್ಧದ ಜಹಜಿನಲ್ಲಿದ್ದ ಮದ್ದುಗುಂಡು ಹತ್ತಿಕೊಂಡು ಕಳೆದ ನೊವೆಂಬರಿನಲ್ಲೇ ಮುಳುಗಿಹೋಯಿತೆಂದೂ, ಅವರ ಸ್ಟ್ರಾಸ್‌ಬರ್ಗ್ ಎಂಬ ಇನ್ನೊಂದು ಯುದ್ಧದ ಜಹಜು ನಾಶವಾಯಿತೆಂದೂ ಪ್ರಕಟವಾಗಿದೆ. ಮಸಿಡೋನಿಯಾ, ನವರ್ರಾ ಎಂಬ ಇನ್ನೆರಡು ಜರ್ಮನೀ ಜಹಜುಗಳಲ್ಲಿ ಒಂದನ್ನು ಹಿಡಿದದ್ದಾಯಿತು ; ಇನ್ನೊಂದು ಮುಳುಗಿಸಲ್ಪಟ್ಟಿತು. ಈಗ ಕೀಲ್ ಕಾಲುವೆಯ ಬಳಿ ಇರುವ ಜಹಜುಗಳ ವಿನಹಾ ಹೊರಗಡೆ ಇದ್ದ ಜರ್ಮನಿ ಜಹಜುಗಳೆಲ್ಲಾ ಸಿಕ್ಕಿದಂತಾಯಿತು.

ಜರ್ಮನಿಯವರ ಕೆಲವು ಸಬ್‌ಮರೀನ್ ಎಂಬ ಹಡಗುಗಳು ಗ್ರೇಟ್ ಬ್ರಿಟನ್ ಸುತ್ತಲೂ ಕಾರ್ಯಭಾಗಮಾಡುತ್ತಿವೆ. ಆದರೂ ಅವು ವಿಶೇಷ ನಷ್ಟವೇನೂ ಮಾಡಲಾರದೆ ಹೋಗಿರುವವು. ಐರ್ಲೆಂಡಿನ ಪಶ್ಚಿಮದಲ್ಲಿ ಬ್ರಿಟಿಷರ ಒಂದು ಜಹಜಿಗೆ ಜರ್ಮನಿಯ ಸಬ್‌ಮೆರೀನು ಬಡಿದಾಗ್ಯೂ ನಾವಿಕರು ಜಹಜನ್ನು ತೀರಪಟ್ಟಣಕ್ಕೆ ತಂದುಕೊಂಡರು. ಸ್ಕಾಟ್ಲೆಂಡಿನ ಪೂರ್ವಕ್ಕೆ ಇನ್ನೊಂದು ಜಹಜಿಗೆ ಸಬ್‌ಮರೀನ್ ಬಡಿದದ್ದರಿಂದ ಜಹಜು ಮುಳುಗಿ ಮೂವರು ಮಾತ್ರ ಬದುಕಿಬಂದರು. ಜರ್ಮನಿಯ ಟಾರ್ಪೀಡೋ ಬಡಿದು ಬ್ರಿಟಿಷರ ಇನ್ನೆರಡು ಹಡಗುಗಳು ಮುಳುಗಿಹೋದವು. ಒಬ್ಬ ಹುಡುಗನ ಹೊರತು ಉಳಿದವರೆಲ್ಲಾ ಬದುಕಿ ಬಂದರು. ಯಾರ್ಕ್‌ಷೈರಿನ ತೀರದಲ್ಲಿ ಕಳೆದ ಭಾನುವಾರ ಮಧ್ಯಾಹ್ನ ಜರ್ಮನಿಯ ಸಬ್‌ಮೆರೀನ್ ದೆಸೆಯಿಂದ ಒಂದು ಬ್ರಿಟಿಷ್ ಜಹಜು ಮುಳುಗಿಹೋಯಿತು. ಅದರಲ್ಲಿದ್ದವರ ಪೈಕಿ 34 ಜನರು ಬದುಕಿ ಬಂದರು. ಆಹಾರ ಪದಾರ್ಥಗಳು ಭರ್ತಿಯಾಗಿ ಹೋಗುತ್ತಿದ್ದ ಡಚ್ಚರ ಎರಡು ಜಹಜುಗಳನ್ನು ಜರ್ಮನಿಯವರು ಹಿಡಿದು ಜೀಬ್ರುಗ್ಗೆ ಎಂಬ ತೀರಪಟ್ಟಣಕ್ಕೆ ತೆಗೆದುಕೊಂಡು ಹೋದರು. ಇದು ಡಚ್ಚರಿಗೆ ಆಗ್ರಹವನ್ನುಂಟುಮಾಡಿದೆ.

ಆಹಾರ ಪದಾರ್ಥಗಳು ಭರ್ತಿಯಾಗಿ ಜರ್ಮನಿಗೆ ಹೋಗುತ್ತಿದ್ದ ಒಂದು ಸ್ವೀಡನ್ ಜಹಜನ್ನು ಬ್ರಿಟಿಷರು ತಡೆದು ಹಿಡಿದುಕೊಂಡರು. ತಟಸ್ಥವಾಗಿರುವ ದೇಶಗಳ ಹಡಗನ್ನು ಬ್ರಿಟಿಷರು ಹಿಡಿದಿದ್ದು ಇದೇ ಮೊದಲನೆಯದು. ಬ್ರಿಟಿಷರು ಜರ್ಮನಿಗೆ ಯಾವುದೊಂದು ಜಹಜನ್ನೂ ಬಿಡಕೂಡದೆಂದು ಸಂಕಲ್ಪಮಾಡಿಕೊಂಡು, ಮಾರ್ಚಿ ತಾ. 1 ರಿಂದ ಜರ್ಮನಿ ತೀರಪಟ್ಟಣಗಳಿಗೆ ಹೋಗುವಂಥಾ ಪ್ರತಿ ಒಂದು ಜಹಜನ್ನೂ ಸೆರೆಹಿಡಿದುಬಿಡುತ್ತೇವೆಂದು ಸಾರಿಸಿದ್ದಾರೆ.

ಇತರ ವಿಷಯಗಳು.

ಹೌಸ್ ಆಫ್ ಲಾರ್ಡ್ಸ್ ಎಂಬ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಯುದ್ಧದ ಇಲಾಖಾ ಮಂತ್ರಿ ಲಾರ್ಡ್ ಕಿಚ್ನರವರು ಕಳೆದ ವಾರ ಮೆಂಬರುಗಳನ್ನು ಕುರಿತು ಹೇಳಿದ ಮುಖ್ಯ ವಿಷಯಗಳೇನೆಂದರೆ—ಈಚೆಗೆ ಬ್ರಿಟಿಷ್ ಸೈನಿಕರ ಯುದ್ಧಕಾರ್ಯಗಳು ತುಂಬಾ ಫಲಕಾರಿಗಳಾಗಿವೆ. ಅವರ ಆರೋಗ್ಯಭಾಗ್ಯಕ್ಕೆ ಸ್ವಲ್ಪವೂ ಕೊರತೆಯುಂಟಾಗಿಲ್ಲ. ಫ್ರೆಂಚ್ ಸೈನ್ಯಗಳು ಬಹಳ ಪರಾಕ್ರಮದಿಂದ ಯುದ್ಧಮಾಡುತ್ತಾ ಮುಂದರಿಸಿ ನುಗ್ಗಿಹೋಗುತ್ತಿರುವವು. ರಷ್ಯಾದವರು ಅನೇಕ ಕಡೆಗಳಲ್ಲಿ ಜರ್ಮನಿಯವರನ್ನು ಮುಂದರಿಸಿಹೋಗದಂತೆ ತಡೆದೂ, ಕೆಲವು ಕಡೆಗಳಲ್ಲಿ ಹಿಮ್ಮೆಟ್ಟಿಸಿಯೂ ಇರುವರು. ಲಾರ್ಡ್ ಕಿಚ್ನರವರು ಹಿಂದುಸ್ಥಾನದ ಮತ್ತು ಕೆನಡಾದ ಸೈನ್ಯಗಳ ಪರಾಕ್ರಮವನ್ನು ಬಹಳವಾಗಿ ಹೊಗಳಿದರು. ಹೊಸ ಸೈನ್ಯಗಳನ್ನು ತರಪೇತುಮಾಡಿ ಫ್ರಾನ್ಸಿಗೆ ನಿಲುಗಡೆಯಿಲ್ಲದೆ ಕಳುಹಿಸುತ್ತಿರುವರು. ಡಾರ್ಡನೆಲ್ಸ್ ಜಲಸಂಧಿಯಲ್ಲಿ ಸಮುದ್ರಯುದ್ಧ ನಡೆಯುತ್ತಿರುವುದನ್ನು ನೋಡುವಲ್ಲಿ ನಮ್ಮ ಪಕ್ಷದವರ ಬಲಪರಾಕ್ರಮಗಳು ಅಪಾರವಾಗಿವೆಯೆಂದು ಗೊತ್ತಾಗುತ್ತದೆ. ಮದ್ದುಗುಂಡುಗಳನ್ನು ನಮ್ಮ ಕಾರ್ಖಾನೆಗಳಲ್ಲಿ ಯುದ್ಧಾರಂಭ ಕಾಲದಲ್ಲಿ ತಯಾರಾಗುತ್ತಿದ್ದದ್ದಕ್ಕಿಂತ 300 ರಷ್ಟು ಹೆಚ್ಚಾಗಿ ತಯಾರುಮಾಡಿ ಒದಗಿಸುತ್ತಿದ್ದಾರೆ ಎಂಬೀ ರೀತಿ ತಿಳಿಸಿದರು.

ಜರ್ಮನಿಯವರ ಒಂದು ವಿಮಾನ ಯಂತ್ರವು ಇಂಗ್ಲೆಂಡಿನ ದಕ್ಷಿಣ ತೀರದಲ್ಲಿರುವ ಡೀಲ್ ನಗರದ ಮೇಲೆ ಬಂದು, ಅಲ್ಲಿದ್ದ ಬ್ರಿಟಿಷ್ ಹಡಗುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಆದರೆ ಆ ಗುಂಡುಗಳೆಲ್ಲಾ ಸಮುದ್ರಕ್ಕೆ ಬಿದ್ದುಬಿಟ್ಟವಲ್ಲದೆ ಯಾವ ನಷ್ಟವನ್ನೂ ಮಾಡಲಾರದೆ ಹೋದವು.

ಗ್ರೇಟ್ ಬ್ರಿಟನ್ನಲ್ಲಿ ಅನೇಕ ಜನಗಳಿಗೆ ಕೆಲಸ ಕಾರ್ಯಗಳು ಬಹಳವಾಗಿ ಸಿಕ್ಕುತ್ತಿವೆ. ನೂಲಿನ ಕಾರ್ಖಾನೆಗಳಿಗೆ ತುಂಬಾ ಕಷ್ಟ ಉಂಟಾಗಿದ್ದು ಈಗ ಆ ಕಷ್ಟ ಕಡಮೆಯಾಗುತ್ತಿದೆ. ಇಲ್ಲಿಗೆ ಕಷ್ಟಕಾಲವು ಕೊನೆಗಂಡಿತೆಂದು ಹೇಳಲಾಗಿದೆ.—ಟರ್ಕಿಯ ಮಾಜಿ ಸುಲ್ತಾನರಾದ ಅಬ್ದುಲ್ ಹಮೀದ್‌ರವರ ಒಬ್ಬ ಕುಮಾರನನ್ನು ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್‌ನಲ್ಲಿ ಕೊಂದುಬಿಟ್ಟರೆಂದು ಪ್ರಕಟವಾಗಿದೆ.—ಸರ್ಬಿಯಾದಲ್ಲಿ ಟೈಫಸ್ ಎಂಬ ವಿಷಜ್ವರವು ಹಬ್ಬಿಕೊಂಡು ಹಾವಳಿಮಾಡುತ್ತಿದೆ. ಆಗಲೇ ಅನೇಕರು ಈ ರೋಗ ತಗಲಿ ಮೃತಪಟ್ಟರು.

ಒಳದೇಶದ ವೃತ್ತಾಂತಗಳು.

ಕಳೆದ ಬುಧವಾರ ದಿವಾನ್‌ರವರು ರಾಜಧಾನಿಗೆ ಬಂದು ಎರಡು ದಿನ ಇದ್ದು ವಾಪಸು ಬೆಂಗಳೂರಿಗೆ ಪ್ರಯಾಣಮಾಡಿದರು.

ಫಾರೆಸ್ಟ್ ನೌಕರರಾದ ಎಂ. ಎಸ್. ಕೋನೇರ್ ರವರು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿದ್ದರಿಂದ ಜಡ್ಜಿಯವರು ಅವರನ್ನು ಜಾಮಿನ್ ಮೇಲೆ ಬಿಟ್ಟು, ಏಪ್ರಲ್ ತಾ 6 ಕ್ಕೆ ಹೀರಿಂಗು ಇಟ್ಟಿದ್ದಾರೆ.

ಗಾಂಜಾ 80 ರೂಪಾಯಿ ತೂಕದ ಸೇರಿಗೆ ನಮ್ಮ ಸರ್ಕಾರದವರು ಸುಂಕವನ್ನು 10 ರೂಪಾಯಿನಿಂದ 12½ ರೂಪಾಯಿಗೆ ಜಾಸ್ತಿಮಾಡಿ, ಮುಂದಿನ ಜೂಲೈನಿಂದ ಜಾರಿಗೆ ಬರುವಂತೆ ಹುಕುಂ ಕೊಟ್ಟಿದ್ದಾರೆ.

ಕಳೆದ ಭಾನುವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ನೀಲಗಿರಿಗೆ ದಯಮಾಡಿಸಿದರು. ಮಹಾಮಾತೃಶ್ರೀಯವರೂ ಅರಮನೆಯ ರಾಣಿವಾಸದವರೂ ಈ ವಾರ ನೀಲಗಿರಿಗೆ ರೈಲಿನ ಮೇಲೆ ತೆರಳುವವರಾಗಿದ್ದಾರೆ.

ರೈಲ್ವೆ ಹಣವನ್ನು ಗಾಡಿಯಿಂದ ಪೆಟ್ಟಿಗೆ ಒಡೆದು ಕಳುವು ಮಾಡಿದ್ದ ಸುಬ್ಬಯ್ಯನೆಂಬುವನನ್ನು ಕುಬೀಸ್‌ಪೇಟೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ದರ್ಯಾಫ್ತುಮಾಡಿ ಕಳೆದ ವಾರ ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದರು. ಈ ಕಳುವಿನ ಪತ್ತೆಗಾಗಿ ಪ್ರಕಟವಾಗಿದ್ದ 200 ರೂಪಾಯಿ ಬಹುಮಾನವನ್ನು ಪತ್ತೆಮಾಡಿದವರಿಗೆಲ್ಲಾ ಹಂಚುತ್ತಾರೆ.

ಕನ್ನಡ ಭಾಷಾಭಿವೃದ್ಧಿಗೋಸ್ಕರ ನಮ್ಮ ಸರ್ಕಾರದವರು ಬೆಂಗಳೂರಿನಲ್ಲಿ ಮುಂದಿನ ಮೇ ತಿಂಗಳು 3-4 ನೇ ತಾರೀಖುಗಳಲ್ಲಿ ಒಂದು ಸಭೆಯನ್ನು ನಡಿಸುವಂತೆ ಏರ್ಪಾಡು ಮಾಡಿ, ಇದಕ್ಕೆ ಬೊಂಬಾಯಿ, ಮದರಾಸು, ಧಾರವಾಡ ಮುಂತಾದ ಕಡೆಗಳಿಂದ ಪ್ರತಿನಿಧಿಗಳು ಬರಬಹುದೆಂದು ತಿಳಿಸಿದ್ದಾರೆ. ಈ ಇಸ್ತಿಹಾರನ್ನು ವಿವರವಾಗಿ ಮುಂದಿನ ವಾರ ಪ್ರಕಟಿಸುವೆವು.

ಬೆಂಗಳೂರು ದಂಡಿನಲ್ಲಿ ಪ್ರಕಟವಾಗುತ್ತಿದ್ದ "ಆರ್ಮಿ ಅಂಡ್ ಸಿವಿಲ್ ನ್ಯೂಸ್" ಎಂಬ ಪತ್ರಿಕೆಯಲ್ಲಿ ಮೈಸೂರು ಗವರ್ನ್‌ಮೆಂಟ್ ದಿವಾನ್‌ರವರ ಆಫೀಸ್ ಲವಾಜಮೆ ವಿಷಯವಾಗಿ ಏನೇನೋ ಬರೆದಿತ್ತೆಂದು ನಮ್ಮ ಸರ್ಕಾರದ ಸಿಫಾರಸಿನ ಮೇಲೆ ಬ್ರಿಟಿಷ್ ರೆಸಿಡೆಂಟರು ಆ ಪತ್ರಿಕೆಯನ್ನು ಇನ್ನು ಮುಂದೆ ಪ್ರಕಟಿಸಕೂಡದೆಂದು ಕಳೆದ ತಾ. 16 ರಲ್ಲಿ ಅದರ ಸಂಪಾದಕರಿಗೆ ಹುಕುಂ ಕೊಟ್ಟು ನಿಲ್ಲಿಸಿಬಿಟ್ಟರು.

ಚಿತ್ರದುರ್ಗದ ಮ|| ನಾಟ ಹಾಲಪ್ಪನವರು ಬರೆಯುವುದು—ಮುಂದಿನ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋ. ಸ. ಪರೀಕ್ಷೆಗೋಸ್ಕರ ಚಿತ್ರದುರ್ಗದ ಸೆಂಟರಿಗೆ ಬರತಕ್ಕ ವೀರಶೈವ ಮತ್ತು ಇವರಲ್ಲಿ ಊಟಮಾಡತಕ್ಕ ಇತರೇ ಎಲ್ಲಾ ವಿದ್ಯಾರ್ಥಿಗಳಿಗೂ, ಅವರ ಸಹಾಯಕರಿಗೂ ಮಾಮೂಲಿನಂತೆ ಸಾಹುಕಾರ್ ಮ|| ಕಾಡಪ್ಪನವರು ತಮ್ಮ ಗೃಹದಲ್ಲಿ ಉಚಿತವಾಗಿ ಭೋಜನಾದಿಗಳಿಗೆ ಏರ್ಪಾಡುಮಾಡಿದ್ದಾರೆ. ಬರತಕ್ಕವರು ಒಂದು ವಾರ ಮುಂಚಿತವಾಗಿ ತಿಳಿಸಬೇಕೆಂದು ಸೂಚಿಸಿದೆ

ಒಬ್ಬ ಬಾತ್ಮಿದಾರರಿಂದ—ಚಿಕ್ಕನಾಯಕನಹಳ್ಳಿ ತಾ|| ಸಿದ್ದನಕಟ್ಟೆ ಗ್ರಾಮಕ್ಕೆ ಸೇರಿದ ರಂಗಾಪುರದ ಒಡ್ಡರಹಟ್ಟಿಗೆ ತಾ. 16 ನೇ ಮಂಗಳವಾರ ಉಗಾದಿ ಹಬ್ಬದ ದಿವಸ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಅಚಾತುರ್ಯದಿಂದ ಬೆಂಕಿಬಿದ್ದು ಗುಡಿಸಲುಗಳೆಲ್ಲಾ ಬೆಂದದ್ದಲ್ಲದೆ ಗಿರಿಯನೆಂಬುವನ ಮನೆಯಲ್ಲಿ ಒಂದು ಹೆಣ್ಣು ಮಗುವು ತೊಟ್ಟಿನಲ್ಲಿ ಬೆಂದು ಕೈಕಾಲು ಕಳಚಿಕೊಂಡು ಸತ್ತುಹೋಗಿತ್ತು. ಈ ದುರ್ಭಿಕ್ಷ ಕಾಲದಲ್ಲಿ ಮನೆಗಳಲ್ಲಿದ್ದ ದವಸಧಾನ್ಯವೆಲ್ಲಾ ಸುಟ್ಟುಹೋದದ್ದು ವ್ಯಸನವಲ್ಲದೆ ಮಗುವಿನ ವಿಚಾರದಲ್ಲಿ ಸರ್ವರೂ ವ್ಯಸನಪಡತಕ್ಕದ್ದಾಗಿದೆ.

ಒಬ್ಬ ಬಾತ್ಮಿದಾರರು ಬರೆಯುವುದು—ನಾಗಮಂಗಲದ ಒಳಕೋಟೆ ನರಸಿಂಹಶಾಸ್ತ್ರಿಗಳ ಮನೆಯಲ್ಲೂ, ಸಾತನೂರು ನಾರಾಯಣಶಾಸ್ತ್ರಿಗಳ ಮನೆಯಲ್ಲೂ, ಫಕ್ರುದ್ದೀನ್ ಸಾಬರ ಮನೆಯಲ್ಲೂ ಕಳೆದ ತಾ. 14 ನೇ ಭಾನುವಾರ ರಾತ್ರಿ ಕಳವು ನಡೆದದ್ದಲ್ಲದೆ, ಫಕ್ರುದ್ದೀನ್ ಸಾಬರ ಮನೆಯಲ್ಲಿರುವ ಜನಗಳಿಗೆಲ್ಲಾ ಪೆಟ್ಟು ಬಿದ್ದು ಆಸ್ಪತ್ರೆಯಲ್ಲಿ ಶ್ರಮಪಡುತ್ತಿದ್ದಾರೆ. ಇಂಥಾ ದೊಡ್ಡ ಟವನ್ನಲ್ಲಿ ಈ ರೀತಿ ಒಂದೇ ರಾತ್ರಿ ಮೂರು ಮನೆಗೆ ಕಳ್ಳರು ಬಿದ್ದದ್ದು ವಿಷಾದಕರವಾಗಿದೆ. ಪೋಲೀಸಿನವರು ಈ ಕಳ್ಳರನ್ನು ಪತ್ತೆಮಾಡಿ ತಕ್ಕ ಶಿಕ್ಷೆಮಾಡಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

ಮೈಸೂರು ಸಿಟಿ ಆಕ್ಟ್ರಾಯಿ ದರೋಗ ರಾಮಚಂದ್ರಶೆಟ್ಟರು, ರೈಲ್ವೆ ಸ್ಟೇಷನ್ ಉಕ್ಕಡದ ಮಣೆಗಾರ್ ವೆಂಕಟಪ್ಪ, ಇವರಿಬ್ಬರೂ ಕಳೆದ ಡಿಸೆಂಬರ್ ತಾ. 21 ರಲ್ಲಿ ಕಂಟ್ರಾಕ್ಟರ್ ತಿಮ್ಮಾಚಾರಿ ಬಿಲ್ವಾಚಾರಿ ಎಂಬುವರಿಗೆ ಬಂದ 20 ಗಾಡಿ ಬೊಂಬು 130 ಪ್ಯಾಕಗಳ ನಾಟಾಗಳಿಗೆ ರೂ. 64-4-6 ಪೈ ಸುಂಕ ವಸೂಲ್ಮಾಡಿ ರೂ. 1-4-0 ಯನ್ನು ಮಾತ್ರ ಲೆಕ್ಕಕ್ಕೆ ಬರೆದು ಸುಳ್ಳು ಲೆಕ್ಕ

[8 ನೇ ಪುಟವನ್ನು ನೋಡಿ.]

ಚಿತ್ರದುರ್ಗ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿ ಸಂಘವು.

ಈ ಸಂಘದ ಮೆಂಬರುಗಳು ತಾ. 14 ನೇ ಭಾನುವಾರ ಮಧ್ಯಾಹ್ನ 3 ಗಂಟೆಗೆ ಎ. ವಿ. ಸ್ಕೂಲ್ ಹಾಲಿನಲ್ಲಿ ಸೇರಿ ತಿಂಗಳಗಟ್ಟಲೆ ಮೀಟಿಂಗನ್ನು ನಡಿಸಿದರು. ಕೆಲವು ಮೆಂಬರುಗಳು ಮೀಟಿಂಗಿನ ದಿನ ಹೇಳದೆ ನಿಲ್ಲುವದೂ, ಕಾಲವಿಾರಿ ಬರುವದೂ, ಈ ಕಾರಣಗಳಿಂದ ಮೀಟಿಂಗು ಪ್ರಾರಂಭವಾಗುವಾಗ್ಗೆ 4-4½ ಯಾಗುವದು, ಈ ವಿಚಾರವಾಗಿ ಪದೇ ಪದೇ ಅರಿಕೆ ಮಾಡಿಕೊಂಡಾಗ್ಯೂ ಅನೇಕ ಮೆಂಬರುಗಳ ಗಮನಕ್ಕೆ ಬಾರದಿರುವದಕ್ಕಾಗಿ ವ್ಯಸನವಾಗುವದು. ಈ ಮೀಟಿಂಗಿನಲ್ಲಿ 19 ಜನ ಉಪಾಧ್ಯಾಯರು ಮಾತ್ರ ಹಾಜರಿದ್ದರು. ಕಳೆದ ತಿಂಗಳ ಮೀಟಿಂಗಿನ ಮುಖ್ಯಾಂಶಗಳನ್ನು ವಿಕಾರ್ಡು ಮಾಡಿಸಲಾಯಿತು. ಮೊದಲೇ ಗೊತ್ತಾಗಿದ್ದಂತೆ ಮ|| ಅಣ್ಣಯ್ಯನವರು ಕನ್ನಡ 2 ನೇ ತರಗತಿಗೆ ವ್ಯಾಕರಣ ಪಾಠವನ್ನು ಹುಡುಗರನ್ನಿಟ್ಟುಕೊಂಡು ಕ್ರಮವಾಗಿ ಬೋಧಿಸಿ ತೋರಿಸಿದರು. ಪಾದರಿ ಪಾಠವು ಬಹು ಚೆನ್ನಾಗಿದ್ದು ಸರ್ವರೂ ಆ ವಿಷಯವಾಗಿ ಅನೇಕ ಅಂಶಗಳನ್ನು ಗ್ರಹಿಸುವದಕ್ಕೆ ಅವಕಾಶವಾಯಿತು. ತರುವಾಯ ಅಗ್ರಾಸನಾಧಿಪತಿಗಳು ಈ ವ್ಯಾಕರಣ ಪಾಠದಲ್ಲೇ ಕೊಂಚ ಹೊತ್ತು ಪ್ರಸಂಗ ಮಾಡಿದರು. ಅನಂತರ ಸಂಘದ ಕೆಲಸದ ವಿಚಾರವಾಗಿ ಅನೇಕ ಅಂಶಗಳು ಚರ್ಚೆಗೆ ಬಂದವು. ಕೆಲವು ಮೆಂಬರುಗಳು ಕೆಲವು ಪ್ರಶ್ನೆಗಳನ್ನು ಮಾಡಿದರು. ಅವು ಸಮಂಜಸವಾದವುಗಳೆಂದು ಅನೇಕರು ಒಪ್ಪಲಿಲ್ಲ. ಸಂಘದ ಪ್ರಸಿಡೆಂಟರವರೇ ಇದನ್ನು ಇತ್ಯರ್ಥ ಮಾಡತಕ್ಕದ್ದೆಂದೂ, ಮುಂದಿನ ಮೀಟಿಂಗಿನಲ್ಲಿ ಚರ್ಚೆಗೆ ತರಕ್ಕದ್ದೆಂದೂ ನಿಷ್ಕರ್ಷೆಯಾಯಿತು. ಸಂಘದ ಉದ್ದೇಶ್ಯವೇನು? ಸಂಘದ ಕಾರ್ಯಗಳು ಯಾವವು? ಪ್ರತಿಯೊಬ್ಬರೂ ಸಂಘಕ್ಕಾಗಿ ಮಾಡಬೇಕಾದ ಕಾರ್ಯವೇನು? ಎಂಬೀ ಅಂಶಗಳನ್ನು ಅಚ್ಚು ಹಾಕಿಸಿ ಹಂಚತಕ್ಕದ್ದು ಮೊದಲನೇ ಕೆಲಸವೆಂದು ಎಲ್ಲರೂ ಒಪ್ಪಿದರು. ಮಸೂದೆಯು ತಯಾರಾಗಿ ಜೂಲೈ ತಿಂಗಳಲ್ಲಿ ಇತ್ಯರ್ಥ ಮಾಡತಕ್ಕದ್ದೆಂದು ತೀರ್ಮಾನಮಾಡಿದರು. ಬೇಸಗೇ ಬಿಸಿಲು ಹೆಚ್ಚಾದ್ದರಿಂದ ಏಪ್ರಿಲ್, ಮೇ, ಜೂನ್, ಈ ಮೂರು ತಿಂಗಳ ಮೀಟಿಂಗು ನಡೆಯತಕ್ಕದ್ದಲ್ಲವೆಂದೂ, ಜೂಲೈ ತಾ 11 ನೇ ಭಾನುವಾರ ಪುನಃ ಮೀಟಿಂಗು ನಡೆಯತಕ್ಕದ್ದೆಂದೂ ಇತ್ಯರ್ಥವಾಯಿತು. ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನು ಸಮರ್ಪಿಸಿ ಮೀಟಿಂಗನ್ನು ಮುಕ್ತಾಯ ಮಾಡಿದರು.

ವೀಣಾ ಭೀಮಪ್ಪ, ಜಾಯಿಂಟ್ ಸೆಕ್ರಟರಿ.

ಹೊಸ ವಾಚಕ ಮಂದಿರಗಳು.

ಕುಂಸಿ ಸಬ್ ತಾಲ್ಲೂಕು ಆಯನೂರು.

ಕಳೆದ ಬುಧವಾರ ಮಧ್ಯಾಹ್ನ 3 ಗಂಟೆಗೆ ನಮ್ಮ ಕುಂಸಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮ|| ನಾರಾಯಣರಾಯರು ಆಯನೂರು ಪೇಟೆಯಲ್ಲಿರುವ ಬಾಯಿಸ್ ಸ್ಕೂಲಿಗೆ ದಯಮಾಡಿಸಿದರು. ಆಗ ಸ್ಕೂಲ್ ಕಮಿಟಿ ಮೆಂಬರುಗಳನ್ನೂ, ಕೋಆಪರೇಟಿವ್ ಸೊಸೈಟಿ ಮೆಂಬರುಗಳನ್ನೂ ಕರೆಯಿಸಿ ಸಭೆಮಾಡಿ, ಎಲ್ಲರ ಕೋರಿಕೆಯಂತೆ ತಾವೆ ಅಗ್ರಾಸನವನ್ನು ವಹಿಸಿದರು. ಆಗ ಸ್ಕೂಲ್ ಹೆಡ್ ಮಾಸ್ಟರು ಮ|| ಕೆ. ಗುರುರಾಯಾಚಾರ್ಯರು ವಿದ್ಯಾಭಿವೃದ್ಧಿ ಮತ್ತು ವರ್ತಮಾನ ಪತ್ರಿಕೆಯನ್ನು ಓದುವುದರಿಂದುಂಟಾಗುವ ಪ್ರಯೋಜನ ಮುಂತಾದ ವಿಚಾರವಾಗಿ ಸ್ವಲ್ಪ ಹೊತ್ತು ಭಾಷಣಮಾಡಿದರು. ಅಮಲ್ದಾರ್ರವರು ಇಲ್ಲಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸುವಂತೆ ಎಲ್ಲರಿಗೂ ತುಂಬಾ ಪ್ರೋತ್ಸಾಹಿಸಿದ್ದಲ್ಲದೆ ತಾವು ಕೂಡ ಅದರ ವೃದ್ಧಿಗೆ ಯಥಾಶಕ್ತಿ ಸಹಾಯದ್ರವ್ಯವನ್ನು ದಯಪಾಲಿಸಿದರು. ಅಮಲ್ದಾರ್ರವರು ರೀಡಿಂಗ್ ರೂಮನ್ನು ಸ್ಥಾಪಿಸಿ ಜನಗಳಲ್ಲಿರುವ ಮಾತ್ಸರ್ಯಾದಿ ದೋಷಗಳನ್ನು ಹೋಗಲಾಡಿಸುವುದಕ್ಕನುಕೂಲವಾಗಿ ಜನಗಳಿಗೆ ಕೊಟ್ಟ ಉತ್ತೇಜನವು ಅತಿ ಶ್ಲಾಘನೀಯವಾದದ್ದಾಗಿದೆ. ಈ ರೀಡಿಂಗ್ ರೂಂ ಸಾರ್ಥಕವಾಗಿ ನಡೆದು ಬಹು ಜನ ಮೆಂಬರುಗಳನ್ನು ಹೊಂದಲೆಂದು ಪ್ರಾರ್ಥಿಸುತ್ತೇನೆ.

ನಿವಾಸಿ

ಅರಸೀಕೆರೆ ತಾಲ್ಲೋಕು ಬೆಂಡೆಕೆರೆ ಗ್ರಾಮ.

ಈ ಗ್ರಾಮದಲ್ಲಿನ ಜನಗಳೆಲ್ಲರೂ ಸೇರಿ ಮಾಡಿರುವ ವಾಚಕ ಮಂದಿರದ ಪ್ರವೇಶೋತ್ಸವವನ್ನು ಅರಸೀಕೆರೆ ತಾಲ್ಲೋಕು ಅಮಲ್ದಾರ್ ಸಾಹೇಬರವರ ಮೂಲಕ ನೆರವೇರಿಸಬೇಕೆಂದು ಅವರನ್ನು ಪ್ರಾರ್ಥಿಸಿದ ಮೇರೆಗೆ ಅಮಲ್ದಾರ್ ಮ|| ಗುಲಾಂ ಮಹಮ್ಮದ್ ಮೆಕ್ಕೆ ಸಾಹೇಬರವರ ಸವಾರಿಯು ಬೆಂಡೆಕೆರೆಗೆ ಮಧ್ಯಾಹ್ನ 11 ಗಂಟೆಗೆ ದಯಮಾಡಿಸಿದರು. ಇವರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದ ಗ್ರಾಮದ ಮುಖಂಡರೂ ಮತ್ತು ಸರ್ಕಾರಿ ಅಧಿಕಾರಿಗಳೂ ಬಾಜಾ ಬಜಂತ್ರಿಯೊಂದಿಗೆ ಅಮಲ್ದಾರರನ್ನು ಎದುರುಗೊಂಡು ಕದಳೀ ಸ್ತಂಭ ತೋರಣ ಧ್ವಜ ಪತಾಕೋಭಿತವಾದ ಶ್ರೀಮಂಗಳ ಸಿದ್ಧೇಶ್ವರಸ್ವಾಮಿಯ ದೇವಸ್ಥಾನದ ಸಭಾ ಮಂಟಪಕ್ಕೆ ಕರೆತಂದು ಈ ಸಭಾಕಾರ್ಯವನ್ನು ತಮ್ಮ ಹಸ್ತದಿಂದಲೇ ನೆರವೇರಿಸಬೇಕೆಂದು ಗ್ರಾಮಸ್ಥರು ಪ್ರಾರ್ಥಿಸಿಕೊಂಡ ಮೇರೆಗೆ ಅಮಲ್ದಾರ್ರವರು ಸಭಾಧ್ಯಕ್ಷತೆಯನ್ನು ವಹಿಸಿ ಪ್ರಜೆಗಳ ಏಳಿಗೆಯಲ್ಲಿ ನಮ್ಮನ್ನಾಳುವ ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರ್‌ರವರಿಗೂ ಸಚಿವಶಿರೋಮಣಿಗಳಾದ ಮ|| ದಿವಾನ್ ವಿಶ್ವೇಶ್ವರಯ್ಯನವರಿಗೂ ಇರತಕ್ಕ ಪುತ್ರನಿರ್ವಿಶೇಷ ಪ್ರೀತಿಯನ್ನೂ ಈ ವಿಷಾರಗಳಲ್ಲಿ ಪ್ರಜೆಗಳ ಮತ್ತು ಸರ್ಕಾರದವರ ಕರ್ತವ್ಯಗಳನ್ನು ವಿವರಿಸಿದರು. ಅನಂತರ ಈ ವಾಚಕ ಮಂದಿರದ ಸೆಕ್ರೆಟರಿಯವರೂ ಮತ್ತು ಈ ಗ್ರಾಮದ ಗ್ರಾಂಟು ಸ್ಕೂಲ್ ಉಪಾಧ್ಯಾಯರೂ ಆದ ಮ|| ಶ್ರೀರಂಗಪ್ಪನವರು ತಮ್ಮ ಸ್ಕೂಲಿನ ಮತ್ತು ವಾಚಕ ಮಂದಿರದ ರಿಪೋರ್ಟನ್ನು ಓದಿದರು. ಇದೇ ತಾ. ಬಾಣಾವಾರದ ಎ. ವಿ. ಸ್ಕೂಲ್ ಹೆಡ್ಮಾಸ್ಟರು ಮ|| ಅಹೋಬಲಶಾಸ್ತ್ರಿಗಳು ಜನಗಳಿಗೆ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಚೆನ್ನಾಗಿ ತಿಳಿಯುವಂತೆ ಉಪನ್ಯಾಸ ಮಾಡಿದರು. ಆ ಮೇಲೆ ಚೇರ್‌ಮೆನ್‌ರವರಾದ ಅಮಲ್ದಾರ್ರವರು ವಾಚಕ ಮಂದಿರದ ಅವಶ್ಯಕತೆಯನ್ನು ನಮ್ಮ ತಾಲ್ಲೋಕಿನಲ್ಲಿ ಇಂತಹ ಏರ್ಪಾಡು ನಡೆದು ಇಂತಹ ಸರ್ವೋತ್ತಮವಾದ ಮೇಲ್ಪಂಕ್ತಿಯನ್ನು ಹಾಕಿದ ಯಶಸ್ಸು ಈ ಗ್ರಾಮಕ್ಕೆ ದೊರಕಿದುದರಿಂದ ಈ ಗ್ರಾಮ ನಿವಾಸಿಗಳು ಧನ್ಯರೆಂದು ಅದರಂತೆ ಇನ್ನೂ ಅನೇಕ ಸ್ಥಳಗಳಲ್ಲಿ ನಡೆಯುವರೆಂದು ನಂಬಿರುವುದಾಗಿ ಅಪ್ಪಣೆಕೊಡಿಸಿ ಕೊಂಡಾಡಿ, ತಮ್ಮ ಸ್ವಹಸ್ತದಿಂದ ಪತ್ರಿಕೆಗಳನ್ನು ಬಿಚ್ಚಿ ಕೆಲವಂಶಗಳನ್ನು ಓದಿ ಪ್ರವೇಶೋತ್ಸವವನ್ನು ನೆರವೇರಿಸಿದರು. ವಾಚಕ ಮಂದಿರದ ಸೆಕ್ರೆಟರಿಯಾದ ಮ|| ಶ್ರೀರಂಗಪ್ಪನವರು ಮ|| ಅಮಲ್ದಾರ್ ಸಾಹೇಬರವರು ಈ ಗ್ರಾಮಸ್ಥರ ಪ್ರಾರ್ಥನೆಯನ್ನು ಲಾಲಿಸಿ ತಮ್ಮ ಸರ್ಕಾರಿ ಕೆಲಸಗಳೊಂದಿಗೆ ಇದೂ ಒಂದು ಕೆಲಸವೆಂದು ಭಾವಿಸಿ ಶ್ರಮೆಯನ್ನು ವಹಿಸಿ ದಯಮಾಡಿಸಿದ್ದರಿಂದಲೂ, ಹಾಜರಿದ್ದ ಸರ್ಕಾರಿ ನೌಕರರೆಲ್ಲರೂ ದಯವಿಟ್ಟು ಬಂದು ಸೇರಿ ಈ ಮಹೋತ್ಸವವನ್ನು ಆಗ ಮಾಡಿಸಿದ್ದರಿಂದಲೂ, ಗ್ರಾಮದ ಮಹಾ ಜನಗಳೆಲ್ಲರು ತಮ್ಮ ಸ್ವಂತ ಕೆಲಸಗಳನ್ನು ಬಿಟ್ಟು ಸೇರಿದ್ದಕ್ಕಾಗಿಯೂ ತುಂಬಾ ಕೃತಜ್ಞನಾಗಿದೇನೆಂದೂ ಹೇಳಿದ ಮೇಲೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಸಭೆಯವರಿಗೆ ಅರ್ಪಿಸಿದ ನಂತರ ಶ್ರೀಮನ್ಮಹಾರಾಜರವರಿಗೂ, ಶ್ರೀ ಯುವರಾಜರವರಿಗೂ, ಶ್ರೀಮಾನ್ ದಿವಾನ್ ವಿಶ್ವೇಶ್ವರಯ್ಯನವರಿಗೂ, ಚೇರ್‌ಮೆನ್‌ರವರಿಗೂ ಶ್ರೇಯಃಪ್ರಾರ್ಥನೆ ಮಾಡುವದರೊಂದಿಗೆ ಸಭೆಯು ಮುಕ್ತಾಯ ಮಾಡಲ್ಪಟ್ಟಿತು. ಅನಂತರ ಬಂದ ಅತಿಥಿಗಳಿಗೆಲ್ಲಾ ಮಧ್ಯಾಹ್ನ ಸಂತರ್ಪಣೆಯೂ, ಸಾಯಂಕಾಲ ಟೀ ಪಾರ್ಟಿಯೂ ನಡಿಸಲ್ಪಟ್ಟಿತು. ಇದೆಲ್ಲಾ ಆದ ನಂತರ ಆ ರಾತ್ರಿ ಶ್ರೀಮದುಳಸಿದ್ಧೇಶ್ವರಸ್ವಾಮಿಯವರ ಮತ್ತು ಇತರ ಗ್ರಾಮಗಳಿಂದ ಬಂದಿದ್ದ ದೇವರುಗಳ ಉತ್ಸವವು, ಬಾಣಾ ಬಿರುಸುಗಳು ಮತ್ತು ಬಾಜಾ ಬಜಂತ್ರಿಗಳೊಡನೆ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಪ್ರೇಕ್ಷಕ.

ಸಂಪದಭ್ಯುದಯ.

ಖರ್ಚುಗಳ ರೀತಿ.

ಸಾಲ.—ಇಲ್ಲಿಯ ಮುಖ್ಯ ಉಪಾಲು ಜನಗಳು ಸಾಲವಂದಿಗರಾಗಿ ಬಡ್ಡಿಯನ್ನು ತೆರುತ್ತಾ ಆಸ್ತಿಗಳನ್ನು ಕಳೆದುಕೊಳ್ಳುತ್ತಿದಾರೆ. ಸಾಲವನ್ನು ಪಡೆಯುವವನು ತನ್ನ ಚರಸ್ಥಿರ ಆಸ್ತಿಗಳನ್ನು ಆಧಾರ ಮಾಡದೆ ಸಾಲವನ್ನು ಪಡೆಯಲಾರನು. ಋಣವು ಕೇವಲ ನಂಬವಾಗಿ ಎಣಿಸಲ್ಪಟ್ಟು ಬಾಯಿಮಾತಿನ ಸತ್ಯತೆಯಿಂದಲೇ ಕೊಟ್ಟು ತೆಗೆದುಕೊಳ್ಳುವ ಕಾಲವು ಬಹು ಹಿಂದೆ ಹೋಗಿರುವುದು. ರಿಜಿಸ್ಟರ್ ಪತ್ರಗಳನ್ನು ಬರೆದುಕೊಟ್ಟದ್ದಾಗಲೂ ಸಹ ಹಣವನ್ನು ಮುಳುಗಿಸಿಬಿಡಬೇಕೆಂಬ ಅಭಿಲಾಷೆಯು ಉಂಟಾಗಿ ಕೋರ್ಟುಗಳ ಮುಖಾಂತರ ಕೊಟ್ಟ ಸಾಲವನ್ನು ತಿರುಗಿ ಪಡೆಯಬೇಕಾಗಿರುವುದು. ಸದರಿ ಕೋರ್ಟು ಖರ್ಚು ಸೇರಿ ಸಾಲಗಾರನು ತಾನು ಪಡೆದ ಹಣಕ್ಕೆ ದ್ವಿಗುಣ ಇಲ್ಲವೇ ತ್ರಿಗುಣವಾಗಿ ತೆರಬೇಕು. ಹೀಗೆ ತೆರುವುದಕ್ಕೆ ಹಣವಿಲ್ಲದುದರಿಂದ ತನ್ನ ಆಸ್ತಿಯನ್ನೇ ಒಪ್ಪಿಸಿಬಿಡಬೇಕಾಗಿದೆ. ಸದರಿ ಆಸ್ತಿಯು ಹರಾಜು ಕಾಲದಲ್ಲಿ ಅರ್ಧ ಬೆಲೆಗೇ ಕೈಬಿಟ್ಟು ಹೋಗುವುದೂ ಉಂಟು. ಹೀಗಾಗಿ ಅನೇಕಾನೇಕರು ನಿರ್ಗತಿಕರಾಗುತ್ತಲಿದಾರೆ.

ಸಾಲವು ವಿಶೇಷವಾಗಿ ಗೃಹಕೃತ್ಯದ ಅನನುಕೂಲಕ್ಕಾಗಿ ಎಂದೂ, ಲಗ್ನ ಮುಹೂರ್ತಗಳಿಗೆಂದೂ, ಭೂಮಿ ಮನೆಗಳನ್ನು ತೆಗೆದುಕೊಳ್ಳುವುದಕ್ಕೆಂದೂ ಮುಂತಾಗಿ ಮಾಡಲ್ಪಡುತ್ತಲಿದೆ. ಮನುಷ್ಯನು ತನ್ನ ಸಂಪಾದನೆಯಿಂದ ಗೃಹಕೃತ್ಯವನ್ನು ಸಾಗಿಸಿಕೊಳ್ಳಬೇಕಾಗಿದೆ. ಇದರಲ್ಲಿ ಸಂಪಾದಿಸುವವನು ರೋಗಗ್ರಸ್ಥನಾದರೆ, ಇಲ್ಲವೇ ಕುಟುಂಬ ಸಂರಕ್ಷಣೆಯು ಹೆಂಗಸರುಗಳಿಂದಲೂ ಮೈನರುಗಳಿಂದಲೂ ನಡೆಯಬೇಕಾಗಿದ್ದರೆ ಹೊರತು ಉಳಿಕೆ ಗೃಹಕಾರ್ಯ ನಿರ್ವಾಹಕ್ಕಾಗಿ ಎಂಬ ನೆಪದ ಮೇಲೆ ತೆಗೆದುಕೊಳ್ಳಲ್ಪಡುವ ಸಾಲದೊಳಗೆ ಅಟ್ಟಹಾಸಯುಕ್ತವಾದ ಕಾರ್ಯಗಳಿಗಾಗಿಯೇ ತೆಗೆದುಕೊಳ್ಳಲ್ಪಡುವ ಸಾಲವಾಗಿದೆ. ಇದರಲ್ಲಿ ದುಂದುಗಾರಿಕೆ ಕೆಲಸ ಮಾಡಿ, ಸಂಪಾದಿಸದೆ ಕುಳಿತು ಉಣ್ಣೋದು, ಜೂಜು, ಕುಡಿತ ಮುಂತಾದ ಕೆಟ್ಟಗಳಿಗಾಗಿಯೂ ಮೇಲೆ ಕಂಡ ಕಾರಣವನ್ನೇ ಸೂಚಿಸಿ ಸಾಲ ಮಾಡುವುದೂ ಉಂಟು. ಇಂಥಾ ಸಾಲಗಳು ಪಿತರಾರ್ಜಿತವಾದ ಸೊತ್ತುಗಳಿಂದಲೂ ಸಹ ತೀರತಕ್ಕದಾಗಿದೆ. ಲಗ್ನವನ್ನು ಮಾಡಿಕೊಳ್ಳುವವನು ತನ್ನ ಲಗ್ನದ ಖರ್ಚಿನ ಹಣವನ್ನು ಘೋಷಬೇಕಲ್ಲದೆ, ತನ್ನ ಸಂಪಾದನೆಯಲ್ಲಿ ಮುಂದೆ ಬರುವ ಇಂಥವರ ಲಗ್ನಕಾರ್ಯಕ್ಕರವೆಂದು ಸ್ವಲ್ಪ ಸ್ವಲ್ಪ ಹಣವನ್ನು ಮೊದಲಿನಿಂದಲೂ ಕೂಡಿಟ್ಟುಕೊಳ್ಳುತ್ತಾ ಬರಬೇಕು. ಮತ್ತು ತನ್ನ ಶಕ್ತಿಯನ್ನು ಅರಿತು ಖರ್ಚು ಮಾಡಬೇಕಲ್ಲದೆ, ದುಂದುವೆಚ್ಚಕ್ಕಾಗಿ ಎಂದಿಗೂ ಸಾಲ ಮಾಡಬಾರದು. ಈ ರೀತಿ ನಡವಳಿಕೆಯಲ್ಲದಿರುವುದರಿಂದ ಲಗ್ನ ಮುಹೂರ್ತಗಳಿಗೆಂದು ವಿಶೇಷ ಸಾಲ ಮಾಡುತ್ತಲಿದಾರೆ. ಸಾಲದಿಂದ ಹಣವನ್ನು ಪಡೆದು ಭೂಮಿ, ಮನೆ ಮುಂತಾದುವುಗಳನ್ನು ಕೊಂಡರೆ ಸಾಹುಕಾರರ ಹಣದ ಬಡ್ಡಿಗೆ ಸದರಿ ಆಸ್ತಿಯನ್ನು ಒಪ್ಪಿಸಿ ಅಸಲು ಹಣವನ್ನು ಮೈಮೇಲೆ ಹೊತ್ತುಕೊಳ್ಳಬೇಕಾಗುತ್ತದೆ.

ಸಾಹುಕಾರರ ಬಡ್ಡೀ ದರವು ಶೇಕಡ ಮಾಹೇಯಾನ ಒಂದು ರೂಪಾಯಿನಿಂದ ಮೂರು ರೂಪಾಯಿಗಳ ವರಿವಿಗೂ ರೂಢಿಯಲ್ಲಿರುವುದು. ಸಾಲಗಾರನು ಬಡ್ಡಿಯ ಹಣವನ್ನು ವರಷೇ ವರುಷಕ್ಕೆ ಪಾವತಿ ಮಾಡದಿರುವುದರಿಂದ ಕೆಲವು ಕಾಲದ ತರುವಾಯ ಸಾಹುಕಾರರು ತಮ್ಮ ಅಸಲು ಬಡ್ಡಿಗಳನ್ನು ಒಂದೇ ಗಂಟಿಗೆ ತೀರಿಸಬೇಕೆಂದು ಪಿಡಾತ ಮಾಡುತ್ತಾರೆ. ಹಾಗೆ ತೀರಿಸದಿದ್ದರೆ ಅಸಲು ಬಡ್ಡಿ ಹಣವನ್ನು ಮೊತ್ತವನ್ನಾಗಿ ಮಾಡಿ ಬೇರೆ ಪತ್ರಗಳನ್ನು ಬರಸಿಕೊಳ್ಳುತ್ತಾರೆ. ಇದರಿಂದ ಬಡ್ಡಿಗೆ ಬಡ್ಡಿಯಾಗಿ ಸೇರಿ ಚಕ್ರಬಡ್ಡಿಯಾಗುತ್ತದೆ. ಹೀಗಾಗುವುದರಿಂದ ಕೊನೆಗೆ ಕೋರ್ಟು ಖರ್ಚು ಸೇರಿ ವಿಪರೀತ ಹಣವಾಗುತ್ತದೆ. ಆದುದರಿಂದ ಒಂದು ಸಾವಿರ ರೂಪಾಯಿನ ಸೊತ್ತು ನೂರಿನ್ನೂರು ರೂಪಾಯಿಗೆ ಕೈಬಿಡುತ್ತದೆ. ಕೆಲವು ವೇಳೆ ದೀಡುಸೊತ್ತು ಹೇಗಾದರೂ ಪರಾಧೀನವಾಗುವುದೆಂದು ಎಣಿಸಿ, ಸೊತ್ತಿನ ಮಾಲೀಕನು ಅದರಿಂದ ಬರುವ ಉತ್ಪತ್ತಿಯನ್ನು ಮಾತ್ರ ಹೊಂದಿ, ಅದರ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ಅದೂ ಕೆಡಿಸಿಬಿಡುವುದೂ ಉಂಟು. ಕೆಲವರು ಸೊತ್ತುಗಳನ್ನು ಅಪಹರಿಸಬೇಕೆಂಬುದರ ಮೇಲೆ ಸುಳ್ಳು ಕಾಗದಗಳನ್ನು ಕಲ್ಪಿಸುವುದೂ ಉಂಟು.

ಸಾಲವನ್ನು ಮಾಡದಿದ್ದರೆ ಪ್ರಪಂಚವ್ಯವಹಾರ ನಡೆಯುವುದು ಕಷ್ಟ. ಆದುದರಿಂದ ಸಾಲವನ್ನು ಮಾಡಲೇ ಬೇಕಾಗಿದೆ. (1) ಮಾಡುವ ಸಾಲವು ಸ್ವಂತ ಜವಾಬುದಾರಿಯಿಂದಲೇ ಸಲ್ಲಬೇಕು. (2) ಹುಂಡಿ ಮತ್ತು ಪ್ರಾಮಿಸರಿ ನೋಟುಗಳ ಸಂಬಂಧದಿಂದಲೇ ಲೇವಾದೇವಿಯು ಹೆಚ್ಚಾಗಿ ಸಲ್ಲಬೇಕು. (3) ಬಡ್ಡಿಯ ದರವು ಕಡಮೆಯಾಗಿ ನಿರೂಪಿಸಬೇಕು. (4) ಸ್ಥಿರ ಸೊತ್ತುಗಳು ಆದವು, ಕ್ರಯ ಮುಂತಾದುವುಗಳನ್ನು ಮಾಡದಂತೆ ತಡೆಯಲು ಉಂಬಳಿ ಜಮೀನುಗಳ ವಿಧಿಯನ್ನೇ ಎಲ್ಲಾ ಜಮೀನುಗಳಿಗೂ ಅನ್ವಯಿಸುವಂತೆ ಮಾಡಬೇಕು.

ಮದ್ಯಪಾನ—ಬರುಬರುತ ಮದ್ಯಪಾನವು ವಿಶೇಷವಾಗಿ ಹಬ್ಬುತ್ತಲಿದೆ ಎಂಬುದಕ್ಕೆ ವರುಷಕ್ಕಿಂತಲೂ ವರುಷಕ್ಕೆ ಇದರ ಹುಟ್ಟುವಳಿ ಹೆಚ್ಚುತ್ತಲಿರುವುದೇ ಸಾಕ್ಷಿಯಾಗಿದೆ. ಇದನ್ನು ನೋಡಿದರೆ ಮದ್ಯಪಾನ ನಿರೋಧಕ ಮಹಸ್ಥರು ಸಹ ತಗೆದುಕೊಳ್ಳಲು ಪ್ರಾರಂಭಿಸಿರುವಂತೆ ಕಾಣುತ್ತದೆ. ಇದರಿಂದ ಒಂದು ಕಡೆ ನಮ್ಮ ಸರ್ಕಾರಕ್ಕೆ ಲಾಭ ಉಂಟಾಗುವುದೆಂದು ಯೋಚಿಸಿದರೆ ಇನ್ನೊಂದು ಕಡೆ ನಮ್ಮ ಪ್ರಜೆಗಳೇ ನಿರ್ಗತಿಕರಾಗುತ್ತಾರೆ. ನಿರ್ಗತಿಕರಾದ ಪ್ರಜೆಗಳನ್ನು ಪಡೆದ ಸರ್ಕಾರವು ಎಂದಿಗೂ ಸದ್ಗತಿಯನ್ನು ಪಡೆಯಲಾರದು. ಮದ್ಯಪಾನವು ನಾಗರಿಕರಿಗೆ ಕೇವಲ ದೂಷ್ಯವೂ, ನಿಷೇಧವೂ ಆಗಿರುತ್ತದೆ. ನಿಷೇಧವಿಲ್ಲದ ಕೆಲವು ನಾಗರಿಕ ಜನಾಂಗದವರಂತೆ ಆಗಬೇಕೆಂದು ಅವರ ಸದ್ಗುಣಗಳನ್ನೆಲ್ಲಾ ಬಿಟ್ಟು ಮದ್ಯಪಾನ ಅಲಂಕಾರಗಳಿಂದ ಮಾತ್ರ ನಾವೂ ನಾಗರಿಕರಾದವೆಂದು ತೋರ್ಪಡಿಸಿಕೊಂಡರೆ ನಾಗರಿಕರಾದಂತೆ ಆಗಲಿಲ್ಲ. ಕೆಲವು ನಾಗರಿಕ ಜನಾಂಗದವರು ಮದ್ಯಪಾನ ಮಾಡಲೇ ಬೇಕಾದ ಕೆಲವು ಕಾರಣಗಳಿವೆ. ನಮಗೆ ಅಂಥಾ ಕಾರಣಗಳು ವಿಶೇಷವಾಗಿರುವುದಿಲ್ಲ. ಅವರು ಶೀತ ಪ್ರದೇಶದಲ್ಲಿ ವಾಸಮಾಡಬೇಕಾಗಿರುವುದರಿಂದ ಶೀತವು ಸೋಕದಿರುವುದಕ್ಕಾಗಿಯೂ, ಕೇವಲ ಯೋಧಾಗ್ರಣಿಗಳಾಗಿರುವುದರಿಂದ ಯುದ್ಧಕಾಲಗಳಲ್ಲಿ ಉಂಟಾಗಬಹುದಾದ ನೋವುಗಳ ಬಾಧೆಗಳನ್ನು ತಡೆಯುವದಕ್ಕಾಗಿಯೂ ಮದ್ಯಪಾನ ಮಾಡಲೇ ಬೇಕಾಗಿದೆ. ಹೀಗಿದ್ದೂ ಅವರಲ್ಲೂ ಅನೇಕರು ಮದ್ಯಪಾನವನ್ನೂ ಅಮಲುಪದಾರ್ಥಗಳನ್ನೂ ನಿಷೇಧಿಸುತ್ತಲಿದಾರೆ.

ಮದ್ಯಪಾನದಿಂದ ಉಂಟಾಗುವ ಅನರ್ಥಗಳನ್ನು ಪ್ರತಿಯೊಬ್ಬರೂ ತಿಳಿದವರಾಗಿಯೇ ಇರುತ್ತಾರೆ. ತಿಳಿದೂ ತಿಳಿದು ಹತ್ತಿದ ಚಟವನ್ನು ತಪ್ಪಿಸಿಕೊಳ್ಳುವುದಕ್ಕಾಗದೆ ಸೇವಿಸುತ್ತಲೂ ಇದಾರೆ. ಇವರು ತಾವು ಕೆಡುವುದಲ್ಲದೆ ಏಳು ನೆರೆಯನ್ನೂ ಕೆಡಿಸಿದರೆಂಬ ಗಾದೆಗೆ ಸರಿಯಾಗಿ ತಮ್ಮ ಸ್ನೇಹಿತರುಗಳಲ್ಲಿಯೂ ಬಂಧುಗಳಲ್ಲಿಯೂ ಸಹ ಹಂಡುತ್ತಲಿದಾರೆ. ಮುಚ್ಚು ಮರೆಯಿಂದ ಮಾಡುವ ಮದ್ಯಪಾನವನ್ನು ತಮ್ಮಲ್ಲಿ ತಾವೇ ದೃಢಸಂಕಲ್ಪದಿಂದ ಬಿಡಬೇಕಲ್ಲದೆ ಅನ್ಯರ ಬಲಾತ್ಕಾರದಿಂದ ಅದನ್ನು ತಪ್ಪಿಸಲು ಎಂದಿಗೂ ಸಾಧ್ಯವಾಗುವುದಿಲ್ಲ. ಆದರೆ ಸರ್ಕಾರದವರು ಪ್ರತಿ ಅಂಗಡಿಯಲ್ಲಿಯೂ ಸ್ಥಿರ ವಿದ್ಯಮಾನದ ಮೇಲೆ ಒಂದು ವರುಷಕ್ಕೆ ಇಷ್ಟು ಮಾತ್ರವೇ ಖರ್ಚುಮಾಡಬೇಕೆಂದು ನಿಧಾಯಕವಾಡುವುದು ಕ್ಷೇಮಕರ. ಹೀಗೆ ಮಾಡಿದರೆ ಮುಂದೆ ಮದ್ಯಪಾನವು ಹೆಚ್ಚದಿರುವುದಕ್ಕೆ ಮಾರ್ಗವಾಗಿ ಕ್ಷಿಪ್ರವಾಗುತ್ತದೆ.

ಯಸ್, ಸುಬ್ರಾಯ್, ಶಿಕಾರಿಪುರ.

ದಿವಾನ್‌ರವರ ಸರ್ಕೀಟು.

ಚನ್ನಪಟ್ಟಣದಲ್ಲಿ ನಡೆದ ಕಾರ್ಯಗಳು.

ಶ್ರೀಮಾನ್ ದಿವಾನ್ ಸಾಹೇಬರವರ ಸವಾರಿಯು ಇಲ್ಲಿಗೆ 20 ನೇ ತಾ. ಶನಿವಾರ ಬೆಳಗ್ಗೆ 8-30 ಕ್ಕೆ ಚಿತ್ತೈಸಿತು. ತಾಲ್ಲೂಕು ಸಂಹದ್ದಿನಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಪ್ರಮುಖ ಪುರನಿವಾಸಿಗಳು ಕಾದಿದ್ದು, ದಿವಾನ್‌ರವರಿಗೆ ಸುಭಾಗಮನವನ್ನು ಬಯಸಿದರು ; ಕೋಗಲ್ ಹನುಮಂತರಾಯ ದೇವಸ್ಥಾನದ ಮರ್ಯಾದೆಯನ್ನು ಸ್ವೀಕರಿಸಿದ ನಂತರ ಮ|| ಮಂಡಿ ತಿಮ್ಮಪ್ಪನವರು ಮತ್ತು ವಡವಟ್ಟದ ತಿಮ್ಮಪ್ಪನವರು ದಿವಾನ್ ಸಾಹೇಬರ ಹೆಸರಿನಲ್ಲಿ ಯಾತ್ರಾರ್ಥಿಗಳ ಉಪಯೋಗಕ್ಕೋಸ್ಕರ ದೇವಸ್ಥಾನದ ಮುಂದಿರುವ ತೋಪಿನಲ್ಲಿ ಎರಡು ಧರ್ಮಸಾಲೆಗಳನ್ನು ಕಟ್ಟಲು ಅಪ್ಪಣೆಯಾಗಬೇಕೆಂದು ಕೇಳಿಕೊಂಡದ್ದನ್ನು ಒಪ್ಪಿ ಸಂತೋಷಪಟ್ಟರು. ಅಲ್ಲಿಂದ ಹೊರಟು ಸಾಹುಕಾರ್ ಮಸ್ತಾನ್ ಸಾಹೇಬರವರ ದೊಡ್ಡಿಯಲ್ಲಿ ಸ್ಥಾಪಿಸಿರುವ ಗವರ್ನಮೆಂಟ್ ಸೆಂಟ್ರಲ್ ರೇಷ್ಮೆ ದೆಮಾನ್ಸ್ಟ್ರೇಷನ್ ಫಾರಮಿಗೆ ಬಂದು ಅಲ್ಲಿ ನೋಡಬೇಕಾದ ಸಕಲ ಸಲಕರಣಗಳನ್ನೂ ಪರಾಂಬರಿಸಿದರು. ನಂತರ ಚಿಕ್ಕ ಮಾರ್ಕೆಟ್ ಮತ್ತು ದೊಡ್ಡ ಮಾರ್ಕೆಟ್ ಬಳಿ ಮೋಟರ್ ನಿಲ್ಲಿಸಿ, ಅಲ್ಲಿನ ಅಧಿಕಾರಿಗಳಿಂದ ಮರ್ಯಾದೆಯನ್ನು ಸ್ವೀಕರಿಸಿದ ಬಳಿಕ ಮೋಟರ್ ಇಳಿದು ಕೆಲವು ಗೋರಿಗಳನ್ನು ನೋಡಿದರು. ಕುನ್ನೀರು ಕಟ್ಟೆ ಬಳಿ ಹಾಕಿರುವ ಅಂದವಾದ ಚಪ್ಪರದಲ್ಲಿ ಪುರ ಪ್ರಮುಖರ ಮತ್ತು ತಾಲ್ಲೂಕು ಪ್ರತಿನಿಧಿಗಳ ಮರ್ಯಾದೆಯನ್ನು ಸ್ವೀಕರಿಸಿ ಸೈಯದ್ ವಾಡಿ ಕಡೆ ತಿರುಗಿ ಸಿಲ್ಕ್ ಕೋಆಪರೇಟಿವ್ ಸೊಸೈಟಿ ಮತ್ತು ಅಂಜುಮಾನ ಮುಸಲ್ಮಾನ ಅಹಲ್ ಅದಬ್ ಯವರುಗಳು ಹಾಕಿದ್ದ ಚಪ್ಪರದೊಳಗೆ ದಯಮಾಡಿ ಹಾರಾ ತುರಾಯಿಗಳನ್ನು ಸ್ವೀಕರಿಸಿದರು. ಮುಂದೆ ಹೊರಟು ಗವರ್ನಮೆಂಟ್ ಸೈಯದ್ ವಾಡಿ ಹಿಂದುಸ್ತಾನಿ ಗರ್ಲ್ಸ್ ಸ್ಕೂಲನ್ನು ಪರಾಂಬರಿಸಿ, ಪಟಾನ್ ವಾಡಿಯ ಜನರು ಹಾಕಿದ್ದ ಸುಂದರವಾದ ಚಪ್ಪರದೊಳಗೆ ಹೊಕ್ಕು ಅಲ್ಲಿರುವ ಅಂಜುಮಾನ ಉಸ್ತಾದುಲ್ ಅದಬ್‌ಗೆ ಸಂಬಂಧಪಟ್ಟ ಎಲಿಮೆಂಟರಿ ಸ್ಕೂಲು ಮತ್ತು ವಾಚಕಶಾಲೆಯನ್ನು ಪರಾಂಬರಿಸಿ ಸಾಹುಕಾರ್ ಮಸ್ತಾನ್ ಸಾಹೇಬರ ಮನೆಗೆ ಬಂದು ಅಲ್ಲಿ ಮಸ್ತಾನ್ ಮನೆತನದವರು ಓದಿದ ಅಡ್ರೆಸ್ಸನ್ನು ಲಾಲಿಸಿ ಸದುತ್ತರವನ್ನು ದಯಪಾಲಿಸಿದರು. ಈ ಅಡ್ರೆಸ್ಸು ಸುಂದರವಾದ ಬೆಳ್ಳಿಯ ಪಾಕೆಟ್ ಕೇಸಿನಲ್ಲಿ ಇಟ್ಟು ಒಪ್ಪಿಸಲಾಯಿತು. ಈ ಸಮಯದಲ್ಲಿ ಸಾಹುಕಾರ್ ಹೈದರ್ ಸಾಹೇಬರು ಈ ಭೇಟಿಯ ಜ್ಞಾಪಕಾರ್ಥವಾಗಿ ಹೈ ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಮೂರು ವೇತನಗಳನ್ನು (1 ಹಿಂದು, 1 ಮಹಮದೀಯ, 1 ಕ್ರೈಸ್ತ) ಕೊಡುವುದಾಗಿ ಸೂಚಿಸಿದರು. ಇದನ್ನು ಕೇಳಿ ದಿವಾನ್‌ರವರು ತುಂಬಾ ಹರ್ಷಪಟ್ಟರು. ಇವರ ಮನೆಯಲ್ಲಿರುವ ಮೈಸೂರು ಬ್ಯಾಂಕಿನ ಬ್ರಾಂಚಿ ಆಫೀಸನ್ನೂ ಮತ್ತು ಸಿಲ್ಕ್ ಅಸೋಸಿಯೇಷನಿನ ರೇಷ್ಮೆ ಹುರಿಮಾಡುವ ಕೆಲಸಗಳನ್ನೂ ನೋಡಿದರು. ಅಲ್ಲಿಂದ ಪೊಲೀಸ್ ಸ್ಟೇಷನ್ ಮುಂದೆ ಹೊರಟು ವರ್ತಕರು ಹಾಕಿದ್ದ ಚಪ್ಪರದಲ್ಲಿ ಮರ್ಯಾದೆಗಳನ್ನು ಸ್ವೀಕರಿಸಿ, ವೈಶ್ಯರ ದೇವಸ್ಥಾನದ ಬಳಿ ಹಾಕಿದ ಚಪ್ಪರದಲ್ಲಿ ನಿಂತು ಅಲ್ಲಿನ ಮರ್ಯಾದೆಗಳನ್ನು ತೆಗೆದುಕೊಂಡು, ಗಾಡಿ ಇಳಿದು ವೆಸ್ಲಿಯನ್ ಮಿಷನ್ ಸಂಘದ ಬಾಲಿಕಾ ಪಾಠಶಾಲೆಯನ್ನು ಪರಾಂಬರಿಸಿ, ಗಾಣಿಗರ ಚಪ್ಪರದಲ್ಲಿ ಹಾರಾ ತುರಾಯಿಗಳನ್ನು ಸ್ವೀಕರಿಸಿದರು. ಅನಂತರ ಬಣ್ಣದ ಸಾಮಾನು ತಯಾರಾಗುವ ಕೋಆಪರೇಟಿವ್ ಕಾರ್ಖಾನೆಗೆ ಹೋಗಿ ಅಲ್ಲಿನ ಕೆಲಸಗಳನ್ನು ನೋಡಿಕೊಂಡು ಅದರ ಪಕ್ಕದಲ್ಲಿರುವ ಚನ್ನಪಟ್ಟದ ಕೋಆಪರೇಟಿವ್ ಬ್ಯಾಂಕಿಗೆ ದಯಮಾಡಿ ಅಲ್ಲಿ ತಹಲ್ ವರಿವಿಗೆ ನಡೆದಿರುವ ಲೇವಾದೇವಿಗಳ ರಿಪೋರ್ಟನ್ನು ಕೇಳಿ ಬಹು ಸಂತೋಷಪಟ್ಟರು. ಅಲ್ಲಿಂದ ಆಂಗ್ಲೋ ಹಿಂದುಸ್ತಾನಿ ಸ್ಕೂಲಿಗೆ ದಯಮಾಡಿ ಅಲ್ಲಿ ಬಾಲಕರು ಮಾಡಿದ ಸುಭಾಗಮನದ ಹಾಡನ್ನು ಕೇಳಿ ಅವರು ಒಪ್ಪಿಸಿದ ಅಡ್ರೆಸ್ಸನ್ನು ಸ್ವೀಕರಿಸಿ ಅವರಿಗೆ ಸದುತ್ತರವನ್ನು ಕೊಟ್ಟರು. ಗವರ್ನಮೆಂಟ್ ಕನ್ನಡ ಸ್ಕೂಲು ನೋಡಿಕೊಂಡು ದಖಯರೀ ಜನಗಳು ತಮ್ಮ ಅಂಜುಮಾನ್ ಕಟ್ಟಡದ ಮುಂದೆ ಹಾಕಿದ್ದ ಚಪ್ಪರಕ್ಕೆ ದಯಮಾಡಿ, ಅಲ್ಲಿ ಅಂಜುಮಾನ್ ಜನಗಳು ಓದಿದ ಅಡ್ರೆಸ್ ಲಾಲಿಸಿ, ಕಟ್ಟುತ್ತಿರುವ ಕಟ್ಟಡಕ್ಕೆ ಹೋಗಿ, ನೋಡಬೇಕಾದದ್ದನ್ನು ನೋಡಿದರು. ಅಲ್ಲಿಂದ ಗವರ್ನಮೆಂಟ್ ಇಂಗ್ಲಿಷ್ ಹೈ ಸ್ಕೂಲಿಗೆ ದಯಮಾಡಿ, ಪ್ರತಿಯೊಂದು ತರಗತಿಗೂ ಹೋಗಿ ಕೆಲವು ವಿದ್ಯಾರ್ಥಿಗಳ ಕೂಡ ಸಂಭಾಷಿಸಿದರು. ಅಲ್ಲಿಂದ ಗವರ್ನಮೆಂಟ್ ಆಸ್ಪತ್ರೆಯೊಳಕ್ಕೆ ಹೋಗಿ ಡಾಕ್ಟರವರನ್ನು ಕೇಳಬೇಕಾದ ಸಂಗತಿಗಳನ್ನು ಕೇಳಿ ತಿಳಿದು ಅಲ್ಲಿಂದ ಸಿ. ಇ. ಜಡ್. ಆಸ್ಪತ್ರೆಗೆ ಹೋಗಿ ಅಲ್ಲಿ ಘೋಷಾ ಹೆಂಗಸರಿಗೆ ಮಾಡಿರುವ ಏರ್ಪಾಡುಗಳನ್ನೆಲ್ಲಾ ಪರಾಂಬರಿಸಿದರು. ದಿವಾನ್ ಸಾಹೇಬರವರ ಭೇಟಿಯ ಜ್ಞಾಪಕಾರ್ಥವಾಗಿ ಇಂಡಸ್ಟ್ರಿಯಲ್ ಹೋಮಿನಲ್ಲಿರುವ ಅನಾಥ ಮಕ್ಕಳಿಗೆ ಮ|| ಎಫ್ ಎಂ ಅಬ್ದುಲ್ ಖುದ್ದುಸ್ ಸಾಹೇಬರು ಮಿಠಾಯಿ ಹಂಚಿಸಿದರು.

ಸಿ. ಇ. ಜಡ್. ಮಿಷನ್‌ನವರು ಹೊಸದಾಗಿ ಕಟ್ಟುತ್ತಿರುವ ಆಸ್ಪತ್ರೆಯ ಕಟ್ಟಡವನ್ನು ಪರಾಂಬರಿಸಿ, ಸರ್ಕಾರದಿಂದ 3,500 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತೇವೆಂದು ಸೂಚಿಸಿದರು. ಗವರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲನ್ನು ಪರಾಂಬರಿಸಿ ಸೆಟ್ಟಿಗೆ ತಾಲ್ಲೂಕು ಕಛೇರಿಗೆ 11 ಘಂಟೆಗೆ ದಯಮಾಡಿದರು. ಅಲ್ಲಿ ನಡೆದ ದರ್ಬಾರಿನಲ್ಲಿ ಓದಿದ ಎಂಟು ಅಡ್ರೆಸ್ಸುಗಳನ್ನು ಸ್ವೀಕರಿಸಿದರು. ತಾಲ್ಲೂಕಿನ ಅಡ್ರೆಸ್ಸು ಬಹು ಅಂದವಾಗಿ ಬೆಳ್ಳಿ ಮತ್ತು ಬಂಗಾರದಿಂದ ಕೆತ್ತಲ್ಪಟ್ಟ ಸಂದೂಕದಲ್ಲಿ ಇಟ್ಟು ಒಪ್ಪಿಸಲ್ಪಟ್ಟಿತು. ಇದು ಮುಗಿದ ನಂತರ ದಿವಾನ್‌ರವರು ಅಡ್ರೆಸ್ಸುಗಳಲ್ಲಿ ಕಂಡ ವಿಷಯಗಳನ್ನು ಕುರಿತು ಬಂದಿದ್ದವರೊಡನೆ ಚರ್ಚಿಸಿ, ಅವರವರ ಅಭಿಪ್ರಾಯಗಳನ್ನು ಗುರುತು ಹಾಕಿಕೊಂಡರು. ಮುಖ್ಯವಾದ ಅಂಶಗಳ್ಯಾವವೆಂದರೆ— ಕೌಸಿಕ ನೀರಿನ ಸಪ್ಲೈ, ರೇಷ್ಮೆ ವ್ಯವಸಾಯಾಭಿವೃದ್ಧಿ, ಕೈಗಾರಿಕೆಗಳ ಬದಾವಣೆ, ಮುನ್ಸಿಫ್ ಕೋರ್ಟು, ಇದುವರೆದು ಗ್ರಾಮಾಭಿವೃದ್ಧಿ, ಇತ್ಯಾದಿ. ನೀರನ್ನು ಒದಗಿಸುವ ಕಾರ್ಯಕ್ಕಾಗಿ ಮ್ಯುನಿಸಿಪಾಲಿಟಿಯವರು 30,000 ರೂಪಾಯಿ ಕೊಡುವುದಾಗಿ ಒಪ್ಪಿದ್ದಕ್ಕೆ ದಿವಾನ್‌ರವರು ಬಹಳ ಸಂತೋಷಪಟ್ಟರು.

ಭೋಜನಾನಂತರ ತಾಲ್ಲೂಕು ಆಫೀಸ್ ಇನ್ಸ್‌ಪೆಕ್ಷನ್ ಮುಗಿಸಿಕೊಂಡು, ದಾಯಿರೆಯಲ್ಲಿ ಬಾಲಕ ಬಾಲಕಿಯರ ಪಾಠಶಾಲೆಗಳನ್ನು ನೋಡಿ, ಗೋರಕ್ಷಣ ಶಾಲೆ ಮತ್ತು ಜಟ್ಟಿಗಳ ಗರಡಿಗಳನ್ನು ಪರಾಂಬರಿಸಿ, ಶಿವದೇವಸ್ಥಾನದ ಮುಂದೆ ಹಾದು 4-30 ಕ್ಕೆ ಬಂಗಲೆಗೆ ಹೋಗಿ ಅಲ್ಲಿ ಸಾಹುಕಾರ್ ಎಫ್. ಎಂ. ಅಬ್ದುಲ್ ಖುದ್ದುಸ್ ಸಾಹೇಬರ ಅತಿಥಿಗಳಾಗಿ ಟೀ ತೆಗೆದುಕೊಂಡ ನಂತರ ದಿವಾನ್‌ರವರು ತಮ್ಮ ಸಂಗಡ ಬಂದಿದ್ದ ಆಫೀಸರುಗಳೊಡನೆ ಕಾಲೇಜಿನ ಫೋಟೋ ತಗೆದದ್ದಾಯಿತು. 20 ನಿಮಿಷಗಳ ವರಿಗೆ ಪ್ರಮುಖರಾದ ಐದಾರು ಜನಗಳ ಕೂಡ ಅಂತರಂಗದಲ್ಲಿ ಮಾತನಾಡಿದರು. ಸಾಯಂಕಾಲ 5 ಗಂಟೆ ಸಮಯದಲ್ಲಿ ಚಿಕ್ಕಮಳೂರು, ದೊಡ್ಡಮಳೂರು, ದೇವರಹಳ್ಳಿ, ಭೈರಾಪಟ್ಟಣ ಮುಂತಾದ ಹಳ್ಳಿಗಳಿಗೆ ದಯಮಾಡಿ ಅಲ್ಲಿ ರೈತರು ನಡಿಸಿರುವ ಗ್ರಾಮಾಭಿವೃದ್ಧಿ ಕೆಲಸಗಳೆಲ್ಲವನ್ನೂ ಸಾಂಗವಾಗಿ ಪರೀಕ್ಷಿಸಿದ್ದಲ್ಲದೆ ಅನೇಕರೊಡನೆ ಸಂಭಾಷಿಸಿ, ಅವರಿಗೆ ಅಂಥಾ ಕೆಲಸಗಳನ್ನು ಮಾಡುವುದರಲ್ಲಿ ಆಗುವ ಅನುಕೂಲ ಸಂಪತ್ತು ಮುಂತಾದವುಗಳ ವಿಷಯವಾಗಿ ಅನೇಕ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿದರು. ಸುತ್ತುಮುತ್ತಲ ಗ್ರಾಮಗಳ ಅನೇಕ ರೈತರುಗಳು ದಿವಾನ್‌ರನ್ನು ತಮ್ಮ ಗ್ರಾಮಗಳಿಗೂ ದಯಮಾಡಬೇಕೆಂಬದಾಗಿ ಬಹಳ ವಿನಯದಿಂದ ಹೇಳಿಕೊಳ್ಳಲು ಸಮಯ ಸಂಕೋಚವಾದ್ದರಿಂದ ಮತ್ತೊಂದಾವರ್ತಿ ಬರುವದಾಗಿ ಅಪ್ಪಣೆಕೊಡಿಸಿದರು. ಈ ತಾಲ್ಲೂಕಿನಲ್ಲಿ ಅಮಲ್ದಾರ್ ಮ|| ನಾರಾಯಣಸ್ವಾಮಿ ಮೊದಲಿಯಾರ್ರವರು ಮುತುವರ್ಜಿಯಿಂದ ಮಾಡಿಸಿರುವ ರಸ್ತೆಗಳೂ, ಇತರ ಗ್ರಾಮಾಭಿ

ಯ ಕಾರ್ಯಗಳೂ ದಿವಾನ್‌ರವರಿಗೆ ತುಂಬಾ ಹರ್ಷವನ್ನುಂಟುಮಾಡಿದ್ದ ಕ್ಕೆ ಮುಂದೆಯೂ ಹೀಗೆಯೇ ನಡೆಯಬೇಕೆಂಬದಾಗಿ ತಿಳಿದಿದ್ದ ಗ್ರಾಮಸ್ಥರಿ ಗೆ ಸಂತೋಷದಿಂದ ಅಪ್ಪಣೆಕೊಡಿಸಿ ಪಾವನ ದಯಮಾಡಿದರು.

ಪ್ರತ್ಯಕ್ಷಸಾಕ್ಷಿ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವು ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಕೊಪ್ಪದಲ್ಲಿ ಮುನ್‌ಸಿಫ್ ಕೋರ್ಟು—ಆಕ್ಷೇಪಕ್ಕೆ ಜವಾಬು.

ಅಯ್ಯಾ,—ತಮ್ಮ ಕಳೆದ ತಿಂಗಳು ತಾ 19 ನೇ ಪತ್ರಿಕೆಯಲ್ಲಿ ನಮ್ಮ ಸರ್ಕಾರದವರು ಕೊಪ್ಪದಲ್ಲಿ ಬರುವ ಜೂಲೈ ತಿಂಗಳಿಂದ ಒಂದು ಮುನ್‌ಸಿಫ್ ಕೋರ್ಟು ಇಡಿಸುವರೆಂದು ಕೇಳುತ್ತೇವಾಗಿ ಪ್ರಕಟಿಸೋಣವಾಗಿತ್ತಷ್ಟೆ. ನಿಜವಾಗಿ ಯೂ ಕೊಪ್ಪದಲ್ಲಿ ಮುನ್‌ಸಿಫ್ ಕೋರ್ಟು ಇಡಿಸುವ ವಿಷಯದಲ್ಲಿ ಸಂತೋಷ ಪಡಿರಿ. ಆದರೆ ಕ್ಷೇಮಾಭಿಲಾಷಿ ಎನ್ನುವ ಬಾತ್ಮಿದಾರರು ತಾ 4 ನೇ ತಮ್ಮ ಪತ್ರಿಕೆಯಲ್ಲಿ ಕೆಲವು ಪ್ರಶ್ನೆಗಳ ಮೂಲಕ ಕೊಪ್ಪಕ್ಕೆ ಮುನ್‌ಸಿಫ್ ಕೋರ್ಟು ತರುವ ವಿಚಾರದಲ್ಲಿ ಆಕ್ಷೇಪಣೆ ಮಾಡಿರುತ್ತಾರೆ. ಕೊಪ್ಪವು ಕೇವಲ ನಾಗರಿಕತೆಯಲ್ಲಿಯೂ, ಆರೋಗ್ಯದಲ್ಲಿಯೂ ಹಿಂದುಳಿದಿರುವ ಟವನ್‌ಗಳಲ್ಲಿ ಒಂದಾ ಗಿದೆ ಎಂಬ ವಿಚಾರವನ್ನು ಘನ ಸರ್ಕಾರದವರು ಆಲೋಚಿಸಿ ಆ ಬಗ್ಗೆ ಕೆಲವು ಏರ್ಪಾಡುಗಳನ್ನು ಮಾಡುವದರ ಮೂಲಕ ಕೊಪ್ಪಕ್ಕೆ ರೂಢಿಯಾಗಿ ಬರುತ್ತಿರುವ "ತಪ್ಪುವಾಡಿದವನನ್ನು ಕೊಪ್ಪಕ್ಕೆ ಹಾಕು" ಎಂಬ ಮಾತು ರೂಪಾಂತರ ಹೊಂದಿ ಉನ್ನತ ಸ್ಥಿತಿಗೆ ಬರಬಹುದೆಂಬ ನಿರೀಕ್ಷಣೆಯಿಂದಲೇ ಕೊಪ್ಪಕ್ಕೆ ಮುನ್‌ಸಿಫ್ ಕೋರ್ಟು ಇಡಿಸುತ್ತಾರಾಗಿ ನಂಬಿ ನಿರೀಕ್ಷಿಸಲ್ಪಟ್ಟಿದೆ. ಮತ್ತು ಈ ವಿಷಯದಲ್ಲಿ ಓರಿಕೆಯಿಂದ ಪಂಥ ಇಡಿಸುತ್ತಾರಾಗಿಯೂ ಕೇಳುತ್ತೇವೆ. ಮುನ್‌ಸಿಫ್ ಕೋರ್ಟಿಗೆ ಬರತಕ್ಕ ಕಕ್ಷಿಗಾರರುಗಳಿಗೆ ಇಳಿದುಕೊಳ್ಳಲು ಸ್ಥಳ ವಿಷಯ ವಿಷಯದಲ್ಲಿ ತೀರ್ಥಹಳ್ಳಿಯಲ್ಲಿ ಯಾವ ಏರ್ಪಾಡುಗಳುಂಟೋ ಅಂಥಾ ಏರ್ಪಾಡುಗಳೇ ಕೊಪ್ಪದಲ್ಲಿಯೂ ನಿರ್ಮಿಸಲ್ಪಟ್ಟಿವೆ. ಈ ವಿಚಾರಗಳ ನ್ನು ಕ್ಷೇಮಾಭಿಲಾಷಿಯು ತಿಳಿಯದೆ ಇರುವದು ತುಂಬಾ ಆಶ್ಚರ್ಯ.

ಕೊಪ್ಪ ತಾಲ್ಲೂಕಿನ ಒಬ್ಬ ರೈತ.

ಲೋಕಲ್ ಫಂಡು ಮತ್ತು ರೈಲ್ವೆ ಸೆಸ್ಸು

ಅಯ್ಯಾ,—ನಮ್ಮ ಮೈಸೂರು ಸೀಮೆಯಲ್ಲಿ ಅನೇಕ ವರ್ಷಗಳಿಂದ ಕಂದಾಯದ ಪ್ರತಿಯೊಂದು ರೂಪಾಯಿಗೂ ಒಂದಾಣೆಯಂತೆ ಲೋಕಲ್ ಫಂಡೆಂಬ ದಾಗಿ ವಸೂಲು ಮಾಡುತ್ತಾ, ಸದರಿ ಹಣವನ್ನು ಲೋಕಲ್ ಫಂಡು ರಸ್ತೆ ಮತ್ತು ಭಾವಿಗಳಿಗಾಗಿ ಉಪಯೋಗಿಸುತ್ತಾ ಬಂದಿರುತ್ತಾರೆ. ಏತನ್ಮಧ್ಯೆ ರೈಲ್ವೆ ಸೆಸ್ಸು ಎಂಬದಾಗಿ ಕಂದಾಯದ ಪ್ರತಿಯೊಂದು ರೂಪಾಯಿಗೂ ಆರು ಕಾಸಿನಂತೆ ವಸೂಲಿ ಮಾಡಲ್ಪಡುತ್ತಾ ಇವೆ. ಹ್ಯಾಗೂ ಭೂಬೇಸಾಯ ಮಾಡುವ ರೈತನಿಂದಲೇ ಪ್ರತಿ ಯೊಂದು ರೂಪಾಯಿಗೆ ಒಂದೂವರೆ ಆಣೆ ವಸೂಲಾಗುತ್ತೆ. ಎದ್ದರೆ ಸುಂಕ, ಕೂತರೆ ಸುಂಕ ಎಂಬ ಹೇಳಿಕೆಯಂತೆ ರೈತನಿಗೆ ಸಂತೆಗೆ ಹೋದರೆ ಸುಂಕ, ಜಾತ್ರೆಗೆ ಹೋದರೆ ಸುಂಕ; ಅಲ್ಲದೆ ರೈಲ್ವೆಗಳಾದ್ದರಿಂದ ಅಷ್ಟೋ ಇಷ್ಟೋ ಗಾಡಿಗಳಿಗೆ ಬಾಡಿಗೆ ದೊರೆಯುವದು ಸೊನ್ನೆಯಾಯಿತು. ವರುಷವೆಲ್ಲಾ ಕೆಲಸ ಮಾಡುತ್ತಾ ತನ್ನ ಬೆಳೆ ಕೈಗೆ ಬರಲು ಮಳೆ ಮೋಡಗಳನ್ನು ಕಾದುಕೊಂಡಿರುವ ರೈತರುಗಳಿಗೆ ಮಾತ್ರವೇ ಈ ಲೋಕಲ್ ಫಂಡು ರಸ್ತೆಗಳಿಂದಲೂ, ಭಾವಿಗಳಿಂದ ಲೂ, ರೈಲ್ವೆಗಳಿಂದಲೂ ಪ್ರಯೋಜನವುಂಟೋ? ಅಥವಾ ಮಾಹೆಯಾನ ಮಳೆ ಮೋಡಗಳಿಗೆ ಕಾಯದೆ ಕ್ರಮವಾಗಿ ತಮ್ಮ ಸಂಬಳಗಳನ್ನು ಹೊಂದುತ್ತಿರುವ ಸರ್ಕಾರಿ ನೌಕರರಿಗೂ, ವ್ಯಾಪಾರದಿಂದ ನೂರಾರು ರೂಪಾಯಿ ಲಾಭ ಪಡೆಯುತ್ತಿರುವ ವರ್ತಕರಿಗೂ ಈ ಸೌಲಭ್ಯಗಳಿಂದ ಪ್ರಯೋಜನವಿಲ್ಲವೋ? ರೈತರಿಗೆ ಕೆಲವರುಷಗಳಲ್ಲಿ ಕಾಲುಬೆಳೆ, ಅರ್ಧಬೆಳೆ, ಮುಕ್ಕಾಲುಬೆಳೆ, ಈ ರೀತಿ ಮಳೆಗಳ ಕೊರತೆಯುಂಟಾದರೂ ಪೂರ್ತಿ ಕಂದಾಯ ಕೊಡಬೇಕಾಗುತ್ತೆ. ತಗ್ಗು ಬಂದರೂ ರಿಯಾಯಿತಿ ಎಂಬದು ಕನಸಿನ ಮಾತಾಯಿತು. ಸರ್ಕಾರಿ ನೌಕರರಿಗೆ ಪೆನ್‌ಷನ್ ಮೊದಲಾದ ಸೌಲಭ್ಯಗಳುಂಟು. ಹಾಗಾದರೆ ನಮ್ಮ ಸರ್ಕಾರದವರು ಸರ್ಕಾರದ ಪ್ರತಿ ನೌಕರರಿಗೂ ವರುಷದ ಒಂದು ತಿಂಗಳಿನ ಸಂಬಳಕ್ಕೂ, ಯಾವ ದಾದರೂ ಒಂದು ಬಗೆಯಲ್ಲಿ ವರ್ತಕರಿಗೂ ಲೋಕಲ್ ಫಂಡು ಮತ್ತು ರೈಲ್ವೆ ಸೆಸ್ಸುಗಳನ್ನು ಯಾಕೆ ಲಗತ್ತು ಮಾಡಬಾರದು? ರೈಲ್ವೆಯಿಂದುಂಟಾಗುವ ಆದಾಯವು ಸದಾ ಸರ್ಕಾರಕ್ಕೆ ಸೇರುವದರಿಂದ ರೈಲ್ವೆ ಸೆಸ್ಸು ಕೊಡತಕ್ಕವರಿಗೆ ಯಾವ ರಿಯಾಯಿತಿ ದೊರೆಯುವದು? ಇದಕ್ಕೆಲ್ಲಾ ಯಾರಾದರೂ ತಕ್ಕ ಸಮಾಧಾನವನ್ನು ತಿಳಿಸಬಾರದೇ?

ವಾಚಕರೊಳ್ಲೊಬ್ಬನು.

ಗೋರಕ್ಷಣೆಯ ವಿಷಯವನ್ನು ಕುರಿತದ್ದು.

ಅಯ್ಯಾ,—ನಮ್ಮ ಮೈಸೂರು ಸರ್ಕಾರದವರು ವ್ಯಾಕ್ಸಿನೇಷನ್ ಡಿಪಾರ್ಟು ಮೆಂಟಿನಲ್ಲಿ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಜಾಗಾಗಳಲ್ಲಿ ಕೆಲಸಮಾಡುತ್ತಿರುವ ವ್ಯಾಕ್ಸಿನೇಟರುಗಳಿಗೆ ವ್ಯಾಕ್ಸಿನೇಷನ್ ವಿಷಯವಾದ ಒಂದೇ ವಿದ್ಯೆಯಲ್ಲಿ ತರಪೇತು ಮಾಡಿರುತ್ತಾರೆ. ಆ ಒಂದೇ ಕೆಲಸವನ್ನು ಮಾಡುವುದರಿಂದ ಕೆಲವರಿಗೆ ಬೇಕಾದಷ್ಟು ಮುತುವರ್ಜಿಯಿಲ್ಲದೆ ಚಟುವಟಿಕೆ ಕಡಮೆಯಾಗಬಹುದು. ವ್ಯಾಕ್ಸಿನೇಟರುಗಳ ಉದ್ಯೋಗವು ಅವರುಗಳಿಗೆ ವಹಿಸಿರುವ ತಾಲ್ಲೂಕಿನ ಪ್ರತಿ ಗ್ರಾಮವನ್ನೂ ಸುತ್ತುತ್ತಿರುವುದಾದ್ದರಿಂದ ಇವರುಗಳಿಗೆ ಗೋವುಗಳಿಗೆ ಪ್ರಾಪ್ತವಾಗಬಹುದಾ ದ ರೋಗಗಳಿಗೆ ತಕ್ಕ ಚಿಕಿತ್ಸೆಯನ್ನು ಮಾಡುವುದು, ಅವುಗಳ ರಕ್ಷಣೆ ಕ್ರಮ, ಈ ವಿಷಯವಾಗಿ ಅಲ್ಪ ಸ್ವಲ್ಪ ಟ್ರೈಯಿನಿಂಗ್, ಶಿಕ್ಷಣಕೊಟ್ಟಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಗೋವುಗಳ ವಿಷಯದಲ್ಲಿಯೂ ಸಂಪೂರ್ಣವಾದ ಉಪಕಾರವು ಆದಂತಾಗುತ್ತೆ. ಈಗ ಮೈಸೂರು ಟ್ರೈಯಿನಿಂಗ್ ಕಾಲೇಜಿನಲ್ಲಿ ಮೇಷ್ಟರುಗಳಿಗೆ ಕೊಡುತ್ತಿರುವ ವೆಟರ್ನರಿ ಟ್ರೈಯಿನಿಂಗ್ ಅಷ್ಟುಮಟ್ಟಿಗಾದರೂ ಇವರುಗಳಿಗೆ ತಿಳಿದಿದ್ದಲ್ಲಿ ಇವರುಗಳು ಗ್ರಾಮಾಂತರಗಳಲ್ಲಿ ತಿರುಗೋಣವುಂಟು ಕೆಲಸಮಾಡುವವರಿಗೂ ಉಲ್ಲಾಸ ಹುಟ್ಟಿ ಪರೋಪಕಾರವಾದೀತು. ನನ್ನ ಅನುಭವವಾಗಿ ಈ ಕೆಳಗೆ ರುಜುಮಾಡಿರುವ ನಾನು ಶಿವಮೊಗ್ಗ ಡಿಸ್ಟ್ರಿಕ್ಟ್ ನ ವ್ಯಾಕ್ಸಿನೇಟರಾಗಿದ್ದ ಕಾಲದಲ್ಲಿ ನಾನು ಪೂರ್ತಿಯಾಗಿ ಸಂಚರಿಸಿದ ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕು ಹಳ್ಳಿಹಳ್ಳಿ ಗ್ರಾಮಾಂತರಗಳಲ್ಲಿ ರೋಗದಿಂದ ಅನುಭವಿಸುತ್ತಿದ್ದ ಗೋವುಗಳನ್ನು ನಾನು ನೋಡಿದಾಗ ಆ ದೇಶದ ಜನರಂತೆಯೇ ನಾನು ಸಹ ಪಶ್ಚಾತ್ತಾಪಪಡಬೇಕಾಗಿತ್ತು. ರೋಗದ ವಿಷಯದಲ್ಲಿ ಅದನ್ನು ಚಿಕಿತ್ಸೆಕ್ರಮ ಕೇಳಿದಾಗ "ತಿಳಿಯದು" ಎಂಬ ಉತ್ತರವನ್ನೆ ಹೇಳಬೇಕಾಗಿತ್ತು. ನಾನು ಆ ಡಿಸ್ಟ್ರಿಕ್ಟಿನಲ್ಲಿ 4 ತಿಂಗಳ ಕಾಲ ಅತ್ಯಂತ ಮಲನಾಡಿನಲ್ಲಿ ವ್ಯಾಕ್ಸಿನೇಷನ್ ಕೆಲಸಮಾಡಿ ಸ್ವಲ್ಪ ಹೆಚ್ಚು ಕಮ್ಮಿ 1,300 ಕೇಸುಗಳನ್ನು ಮಾಡಿದೆನು. ಒಂದೇ ವಿಧವಾದ ಕೆಲಸವನ್ನು ಮಾಡುತ್ತಿದ್ದದ್ದರಿಂದ ಸ್ವಲ್ಪ ಹೆಚ್ಚು ಕಮ್ಮಿ ಬೇಜಾರು ಹುಟ್ಟಿದಂತೆಯೇ ಇತ್ತು. ಆದಕಾರಣ ನಮ್ಮ ಘನವಾದ ಮೈಸೂರು ಸರ್ಕಾರದವರು ಈ ವಿಧವಾದ ಕಾರ್ಯವನ್ನು ಮಾಡುವುದರಿಂದ ಗೋವುಗಳನ್ನು ಬದುಕಿಸಿದಂತೆಯೂ ಮತ್ತು ವ್ಯಾಕ್ಸಿನೇಟರುಗಳಿಂದ ಹೆಚ್ಚು ಕೆಲಸ ತೆಗೆದುಕೊಂಡಂತೆಯೂ ಆಗುತ್ತೆನ್ನುವುದಕ್ಕೆ ಸಂದೇಹವಿಲ್ಲ. ಇದು ಅನುಭವವಾದ ಸಂಗತಿ.

ವೈ. ಸೀತಾರಾಮಶಾಸ್ತ್ರಿ, ಶ್ಯಾಮಗೊಂಡ್ಲು.

ರೈಲ್ವೆಯವರು ಅನ್ಯಾಯ ಮಾಡಿದರಂತೆ.

ಅಯ್ಯಾ,—ನಾನೂ ನನ್ನ ಸಂಸಾರವೂ ಮಾರ್ಚಿ 15 ನೇ ತಾ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಸಬ್ಬಹಳ್ಳಿ ಸ್ಟೇಷನ್‌ನಿಂದ ಬೆಂಗಳೂರಿಗೆ ಬರುವುದಕ್ಕಾಗಿ ಕೆಲವು ಸಾಮಾನುಗಳೊಡನೆ ಹೋಗಿದ್ದೆವು. ನಮ್ಮಲ್ಲಿ ಕೆಲವು ನೇರಳೇ ಮರದ ದೂಲಗಳೂ ಸರಗಳೂ ಒಟ್ಟು ಹನ್ನೊಂದು ಇದ್ದವು. ಇವುಗಳು ಸರಾಸರಿ 9 ರಿಂದ 10½ ಅಡಿಗಳುದ್ದ ಇದ್ದವು. ರೈಲು ಮೇಲೆ ಹಾಕಲು ಸ್ಟೇಷನ್ ಅಧಿಕಾರಿಗಳನ್ನು ಕೇಳಲು ತೆಗೆದುಕೊಂಡು ಬರುವಂತೆ ಹೇಳಿದರು. ತದ್ವೀತ ತರಲು ದೂಲಗಳು ಬಹಳ ಉದ್ದವೆಂತಲೂ, ಇವುಗಳನ್ನು ಸಾಗಿಸಲು ಬೇರೆ ವಾಗನ್ ಗಾಡಿಯನ್ನೇ ತರಿಸಬೇಕಾಗುತ್ತೆಂತಲೂ, ಅದಕ್ಕೆ 18 ಇಲ್ಲವೇ 20 ರೂಪಾಯಿಗಳಾಗುವವೆಂತಲೂ ಹೇಳಿದರು. ಹಾಗಲ್ಲದ ಪಕ್ಷಕ್ಕೆ ಅವುಗಳನ್ನು ಎರಡಾಗಿ ತುಂಡುಮಾಡಿಬಿಡಬೇಕೆಂದೂ, ಆಗ ಅವುಗಳನ್ನು ಸಾಗಿಸಬಹುದೆಂದೂ ಹೇಳಿಬಿಟ್ಟರು. ಈ ರೀತಿ ಇವುಗಳನ್ನು ಸಾಗಿಸಲು ಅವಕಾಶವೇ ಕೊಡಲಿಲ್ಲ. ನಂತರ ಎತ್ತಿನ ಗಾಡಿ ಮಾಡಿ ಬೆಂಗಳೂರಿಗೆ ಸಾಗಿಸಿದ್ದಾಯಿತು. (6¾ ರೂ. ಬಾಡಿಗೆ ಮಾಡಿದ್ದಾಯಿತು.) ಅದೇ ರಾತ್ರಿ ಬಾಕಿಯಿದ್ದ ನಮ್ಮಲ್ಲಿ ಉಳಿದಿದ್ದ 2 ರಾಗಿಯ ಮೂಟೆ, 1 ಹುಣಸೇ ಮೂಟೆ ಇವುಗಳನ್ನಾದರೂ ರೈಲಿಗೆ ಹಾಕುವಂತೆ ಪ್ಯಾಸ್ ಕೇಳಲು ಆ ರಾತ್ರಿ ಬಂದ ಸ್ಟೇಷನ್ ಮಾಸ್ಟರು—ಇದು ಹಗಲು ಹೊತ್ತು ಇದ್ದವರು ಮಾಡಬೇಕಾದದ್ದು, ನನ್ನ ಕೆಲಸವಲ್ಲ, ಇದಕ್ಕೆ 1½ ರೂ. ಅಥವಾ 1¾ ರೂ. ಛಾರ್ಜು ಆಗುತ್ತದೆ ಎಂಬದಾಗಿ ನಾನಾ ರೀತಿಯಾಗಿ ತೊಂದರೆಪಡಿಸಿದರು. ಕಡೆಗೆ ಬಹಳವಾಗಿ ಕೇಳಿಕೊಳ್ಳಲು ನಮ್ಮಲ್ಲಿದ್ದ ಒಂದು 6 ಆಣೆ ಬಾಳುವ ಕಟ್ಟಿಗೆ ಸೌಟನ್ನೂ ಮತ್ತು ನಗದು 5 ಆಣೆ 4 ಪೈಯನ್ನೂ ತೆಗೆದುಕೊಂಡು ಪ್ಯಾಸ್ ಕೊಟ್ಟರು. ಹೀಗೆ ಕೊಟ್ಟು ಕೂಡಾ ಸಿಟಿ ಸ್ಟೇಷನ್‌ನಲ್ಲಿ ಬಂದಾಗ ಇದಕ್ಕೆ 8 ಆಣೆಗಳನ್ನು ಪುನಃ ದಂಡ ಕೊಟ್ಟಿದ್ದಾಯಿತು. ತೊಲೆಗಳ ವಿಷಯದಲ್ಲಿ ಆತನಿಗೆ 2 ರೂಪಾಯಿ ಕೊಟ್ಟಿದ್ದರೆ ತೆಗೆದುಕೊಳ್ಳುತಿದ್ದೆನೆಂದು ತಿಳಿಸಿದನು. ಅಯ್ಯಾ, ಕಂಪನಿಯವರು ಪ್ರಜೆಗಳ ಹಿತಾರ್ಥವಾಗಿ ಹಾಕಿಸಿರುವ ರೈಲು ಗಾಡಿಗಳಲ್ಲಿ ಇಂಥಾ ಅನ್ಯಾಯಗಳು ಜರುಗಬಹುದೇ? ಬಡವನೂ ಬಲ್ಲಿದನೂ ಸರ್ವರೂ ಸುಖಪಡುವಂತೆ ಅಲ್ಲವೇ ನಾನಾ ವಿಧ ಏರ್ಪಾಡುಗಳು ಮಾಡಲ್ಪಟ್ಟಿರುತ್ತವೆ? ಸ್ಟೇಷನ್ ಅಧಿಕಾರಿಗಳು ಕಂಪನಿಯಿಂದ ಸಂಬಳ ತೆಗೆದುಕೊಂಡಾಗ್ಯೂ ಇಂಥಾ ಅನ್ಯಾಯಗಳನ್ನು ಜನರಿಗೆ ಮಾಡಬಹುದೇ? ಈ ವಿಷಯಕ್ಕೆ ಏನು ಮಾಡಿದರೆ ಆದೀತು? ದಯವಿಟ್ಟು ಆಲೋಚನೆ ಹೇಳಬೇಕಾಗಿ ಬೇಡುತ್ತೇನೆ. ಒಂದು ವೇಳೆ ಈ ಸಂಬಂಧವಾಗಿ ಒಂದೆರಡು ಪಙ್ಕ್ತಿಗಳನ್ನು ನಿಮ್ಮ ಪತ್ರಿಕೆಯಲ್ಲಿ ಹಾಕಿದರೆ ಸರ್ವೋಪಕಾರವಾಗುವದು. ಇಂಥಾ ಉಪಕಾರವನ್ನು ತಾವು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು ಸಿಟಿ,
21-3-1915

ಸೌದಾಲು ತಿಮ್ಮಯ್ಯ,
62, ಉಪ್ಪಿಯೋಬೀದಿ, ಬಳೇಪೇಟೆ.

ತಾಲ್ಲೂಕು ವರ್ತಮಾನಗಳು.

ಮಂಡ್ಯ.—ಅಮಲ್ದಾರ್ ಶ್ರೀನಿವಾಸರಾಯರ ಛತ್ರದೇವಸ್ಥಾನ ದಿನೇ ದಿನೇ ಅಭಿವೃದ್ಧಿಸ್ಥಿತಿಗೆ ಬರುತ್ತಲಿದೆ.—ಕಳೆದ 16 ನೇ ತಾ ಮಂಗಳವಾರ ಯುಗಾದಿಹಬ್ಬ ಅಭಿಷೇಕ ಮಂಗಳಾದ್ದು ನಡೆದು ರಾತ್ರಿ ಪಂಚಾಂಗಶ್ರವಣವಾದ ನಂತರ ಮಂಗಳಾರತಿ ವಗೈರೆ ಬಹಳ ವಿಜೃಂಭಣೆಯಿಂದ ನಡೆದು, ಬಂದಿದ್ದ ಗ್ರಾಮಸ್ಥರೂ ಕಛೇರಿ ನೌಕರವರ್ಗದವರೆಲ್ಲಾ ಬಹಳ ಸಂತೋಷಪಟ್ಟರು.—17 ನೇ ತಾ. ಬುಧವಾರ ಶ್ರೀ ಉತ್ತರಾದಿಮಠದ ಸ್ವಾಮಿಗಳವರು ಬೆಳಗ್ಗೆ ದಯಮಾಡಿ 1 ಘಂಟೆ ಒಳಗಾಗಿ ಇಲ್ಲಿಂದ ಮೈಸೂರು ಮಾರ್ಗವಾಗಿ ದಯಮಾಡಿಸಿದರು. ಮಠದ ಅನೇಕ ಜನಗಳು ಶ್ರೀನಿವಾಸಮಂದಿರದಲ್ಲಿ ಇಳಿದುಕೊಂಡಿದ್ದರು. ಇಲ್ಲಿನ ಏಜಂಟರೂ ಛತ್ರದೇವಸ್ಥಾನವನ್ನು ಹಿಂಭಾಗದಲ್ಲಿ ರಥಕ್ಕೆ ಕೊಳವನ್ನೂ, ಬಹಳ ಪ್ರಶಸ್ತವಾಗಿ ಇಟ್ಟುಕೊಂಡಿರುವದರಿಂದ ಸ್ನಾನಪಾನಾದಿಗಳಿಗೆ ಸ್ಥಳ ಪರಸ್ಥರದ ಅನೇಕ ಜನಗಳಿಗೆ ಅನುಕೂಲವಾಗಿದೆ.

ಕುಣಿಗಲು.—ಬಿಸಿಲು ಜೋರಾಗುತ್ತಾ ಇದೆ. ಈ ಸಲ ಇಲ್ಲಿಯ ಕೆರೆಗಳು ತುಂಬಲಿಲ್ಲ. ಆದಾಗ್ಯೂ ಜನಗಳಿಗೂ ಗೋವುಗಳಿಗೂ ಸಾಲುವಷ್ಟು ನೀರು ಒದಗುತ್ತಾ ಇದೆ. ಧಾರಣೆವಾಸಿಗಳೆಲ್ಲಾ ಬಹಳ ತಗ್ಗಿದೆ. ರಾಂಬಾಹದ ಹಂತದ ಕೆಳಗೆ ಕೊಂಚ ಬೆಳೆಯಾಗುತ್ತದೆ. ಲಕ್ಷ್ಮೀದೇವಿಪುಂತದಲ್ಲಿ ಸುತರಾಂ ಬೆಳೆಯಾಗುವುದಿಲ್ಲ. ಆದ್ದರಿಂದ ಈ ಹಂತದ ರೈತರು ಕಂದಾಯ ರಿಮಿಷನ್ ಮಾಡಲು ಸರ್ಕಾರದವರನ್ನು ಬೇಡಿಕೊಂಡರೆ ರಿಮಿಷನ್ ಮಾಡಿಕೊಟ್ಟಾರು.—ನೀಲತ್ತಹಳ್ಳಿ ಶ್ಯಾನುಭೋಗರು ವೆಂಕಟಕೃಷ್ಣಯ್ಯನವರ ಮನೆಗೆ ಕಳ್ಳರು ಬಿದ್ದು ನೂರೈವತ್ತು ರೂಪಾಯಿ ನಗದಾಗಿ ಅಪಹರಿಸಿದರು. ಪೇಟೆ ಜಾಗದಲ್ಲಿ ಈ ಕಳುವು ನಡೆದಿರುವುದು ತುಂಬ ಆಶ್ಚರ್ಯವಾಗಿರುತ್ತೆ. ಇದರಿಂದ ಪೋಲೀಸಿನವರ ನಿಗ ಕಮ್ಮಿಯೆಂದು ಧಾರಾಳವಾಗಿ ಹೇಳಬಾರದೇ?—ಈಗ್ಗೆ 10 ವರುಷಗಳಿಂದ ನಿಂತು ಹೋಗಿದ್ದ ರಥೋತ್ಸವಗಳು ಈ ಸಾರಿ ನಮ್ಮ ಅಮಲ್ದಾರರವರ ಪ್ರೋತ್ಸಾಹದಿಂದ ನಡೆದವು. ಚೈತ್ರಶುದ್ಧ ಪೂರ್ಣಿಮಾ ಶ್ರೀ ನರಸಿಂಹಸ್ವಾಮಿಯವರ ರಥೋತ್ಸವ ನಡೆಯಲು ಏರ್ಪಾಡು ಆಗುತ್ತಿದೆ.—ನಮ್ಮ ಅಮಲ್ದಾರರವರು ಬಹಳ ಶ್ರಮಶಕ್ತಿಯಿಂದ ಕೆಲಸಮಾಡುತ್ತಾ, ಪ್ರಜೆಗಳಲ್ಲಿ ತುಂಬ ಅನುರಾಗಿಗಳಾಗಿರುತ್ತಾರೆ.—ಇಲ್ಲಿಯ ಕುಮಾರ ಫಾರಂ ರೈಟರು ಬಿ. ರಾಮಸಿಂಗ್‌ರವರಿಗೆ ಬೆಂಗಳೂರು ಏಲಿಟರಿ ಸ್ಟೋರ್ಸ್ ಇಲಾಖೆಗೆ ಬಡ್ತಿಯಿಂದ ವರ್ಗವಾಯ್ತು. ಇವರ ಮಿತ್ರಮಂಡಲಿಯವರು ಮ|| ನಂಜುಂಡಯ್ಯನವರ ತೋಟದಲ್ಲಿ ಟೀ ಪಾರ್ಟಿ ಮಾಡಿ ಮ|| ರಾಮಸಿಂಗರನ್ನು ಬೀಳ್ಕೊಟ್ಟು ಫಲಾಹಾರವಾದ ನಂತರ ಫಲಪುಷ್ಪಾದಿಗಳಿಂದ ಸತ್ಕರಿಸಿದರು.—ಇಲ್ಲಿನ ಆರ್ಯಬಾಲಿಕಾ ಪಾಠಶಾಲೆಯು ಸ್ಥಾಪಿತವಾಗಿ 7–8 ವರ್ಷವಾಗಿದೆ. ಇದಕ್ಕೆ ನಮ್ಮ ದಯಾಳುಗಳಾದ ಶ್ರೀಮನ್ ಯುವರಾಜರವರು ಪೋಷಕರಾಗಿದ್ದಾರೆ. ಈ ಸ್ಕೂಲು ಬಹಳ ಉಚ್ಛ್ರಾಯಸ್ಥಿತಿಯಲ್ಲಿದೆ. ಹೆಡ್ಮಾಸ್ತರು ಮ|| ಗುಂಡಪ್ಪನವರು ಪ್ರೆಸಿಡೆಂಟರಾಗಿ ಸ್ಕೂಲು ವಿಷಯದಲ್ಲಿ ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಾರೆ. ಮಾಹೆಯಾನ ಗೌರ್ನಮೆಂಟಿನಿಂದ 25, ಶ್ರೀಮನ್ ಯುವರಾಜರವರಿಂದ 15, ಒಟ್ಟು 40 ರೂಪಾಯಿ ಈ ಸ್ಕೂಲಿಗೆ ಸಲ್ಲುತ್ತಾ ಇದೆ. ತಾ 20 ರಲ್ಲಿ ಶ್ರೀರಾಮಾನಂದ ಬಾಲಸರಸ್ವತಿ ಸ್ವಾಮಿಯವರು ಸ್ಕೂಲಿಗೆ ದಯಮಾಡಿಸಿ ನೋಡಿ ಬಹಳ ಸಂತೋಷಪಟ್ಟರು. ಬಾಲಿಕಿಯರು ಹಾಡಿದ್ದನ್ನು ಕೇಳಿದರು. ಬಾಲಕಿಯರಿಗೆ ಪುಸ್ತಕ, ಪೆನ್ಸಿಲ್ಲು, ಸ್ಲೇಟು, ಬಳಪ ಹಂಚಿಸಿದರು. ಕೊನೆಯಲ್ಲಿ ಬಾಲಕಿಯರಿಗೆ ತಿಂಡಿ ಹಂಚಲಾಯ್ತು.

ದೊಡ್ಡಬಳ್ಳಾಪುರ.—ಇಲ್ಲಿ ನಡೆಯುವ ಎಕನಾಮಿಕ್ ಕಾನ್‌ಫರೆನ್ಸ್ ಸಭೆಗೆ 800 ರೂಪಾಯಿವರೆಗೂ ಖರ್ಚಾಗುವಂತಿದೆ. ಈ ಸಭೆಯು ಈ ತಿಂಗಳ ಅಂತ್ಯದಲ್ಲಿ ನಡೆಯುವ ಹಾಗಿಲ್ಲ. ಯಾಕೆಂದರೆ ಈಗ 15 ದಿನಗಳಿಂದಲೂ ಈ ಊರಿನ ಕುಚ್ಚಪ್ಪನ ಬೀದಿಯಲ್ಲಿ ಪ್ಲೇಗ್ ಪ್ರಾರಂಭಿಸಿ ಈ ವರೆಗೂ 5 ಜನರಿಗೆ ಪ್ಲೇಗ್ ಗೆಡ್ಡೆ ಬಂದು, ಆಗಲೇ ಇಬ್ಬರು ಕಾಲವಾದರು. ಮತ್ತು ಇಲಿಗಳು ಅನೇಕ ಕಡೆಗಳಲ್ಲಿ ಸಾಯುತ್ತಿರುವದರಿಂದ ಪ್ಲೇಗ್ ಇನ್ನೂ ಹರಡುವಂತಿದೆ. ನಮ್ಮ ಡಿಸ್ಟ್ರಿಕ್ಟು ಮೆಡಿಕಲ್ ಆಫೀಸರ್ ಡಾ|| ಮುತ್ತುಸಾಮಿದಾಸ್‌ಯವರು ಬಂದು ನೂರು ಜನರವರಿಗೆ ಇನಾಕ್ಯುಲೇಷನ್ ಮಾಡಿ, ಇಲ್ಲಿನ ಡಾ|| ಕೆಂಚಪ್ಪನಾಯುಡುಯವರಿಗೆ ಆ ಕೆಲಸವನ್ನು ವಹಿಸಿರುವದರಿಂದ ಇವರು ನೆನ್ನೆ, ಈ ಹೊತ್ತು ಎಲ್ಲಾ ಸ್ಕೂಲ್ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಜನಗಳಿಗೂ ಸುಮಾರು 300 ಮಂದಿಗೆ ಇನಾಕ್ಯುಲೇಷನ್ ಮಾಡಿದಾರೆ. ಮತ್ತು ಈಗೀಗ ಜನರಿಗೆ ಈ ಪ್ಲೇಗ್ ಸಿಡುಬಿನ ಪ್ರಯೋಜನ ಚೆನ್ನಾಗಿ ತಿಳಿದುಬಂದಿರುವದರಿಂದ ಅವರಾಗಿಯೇ ಮುಂದಾಳಾಗಿ ಬಂದು ಇನಾಕ್ಯುಲೇಷನ್ ಮಾಡಿಸಿಕೊಳ್ಳುತ್ತಾರೆ.—ಈ ವಾರದಲ್ಲಿ ಮ್ಯುನಿಸಿಪಾಲಿಟಿಯವರು ಪೋಲಿ ನಾಯಿಗಳನ್ನು ಕೊಲ್ಲಿಸುವಂತೆ ಡಂಗೂರ ಹಾಕಿಸಿದರು. ಆದರೆ ಒಂದನ್ನಾಗಲೀ ಈ ವರೆಗೂ ಕೊಲ್ಲಿಸಿರುವದಿಲ್ಲ.—ಯುಗಾದಿ ಮಾರನೇ ದಿವಸ ಮನೆಗಳ ಮೇಲೆ ಕಲ್ಲುಗಳನ್ನು ಎಸೆಯಬಾರದೆಂದು ಅಮಲ್ದಾರರವರು ಡಂಗೂರ ಹಾಕಿಸಿದರು. ಈ ಕೆಟ್ಟ ಪದ್ಧತಿಯಿಂದ ಅನೇಕರಿಗೆ ನಷ್ಟವಾಗುವದು. ತುಂಬಾ ಕಲಹವಾಗುವದು. ಅನೇಕ ಪೋಲೀಹುಡುಗರು ಮಾಡುವ ಈ ದುಷ್ಕೃತ್ಯದಿಂದ ಮಿಷನ್ ಮನೆಯ ಮೇಲೂ ಕಲ್ಲುಗಳು ಬಿದ್ದು ಸುಮಾರು 30-40 ಮಂಗಳೂರು ಹೆಂಚುಗಳು ನಷ್ಟವಾಗಿವೆ.—ಈ ಊರಲ್ಲಿ ದೇವಾಂಗದ ಛಲ್ಕುರು ಪುಟ್ಟಪ್ಪನ ಮತ್ತು ಜೂಲಪ್ಪ ಉರಫ್ ಚೌಡಪ್ಪನ ಮನೆಯಲ್ಲಿ ಕೊಂಚ ಕಾಲದಿಂದ ನೇಯುತ್ತಿದ್ದ ಕೋಯಮುತ್ತೂರಿನ ದೇವಾಂಗದ ಅರವ ಮಾತಾಡುವ ಸಿದ್ದಪ್ಪ, ರಾಮಸ್ವಾಮಿ ಎಂಬ ಇಬ್ಬರು ತಲಾ ಮೂವತ್ತು ರೂಪಾಯಿ ಅಡ್ವಾನ್ಸು ತೆಗೆದುಕೊಂಡು ಪರಾರಿ ಆಗಿರುತ್ತಾರೆ.—(ಇನ್ನೊಬ್ಬ ಬಾತ್ಮಿದಾರರಿಂದ) ಇಲ್ಲಿ ಪ್ಲೇಗ್ ಸ್ವಲ್ಪ ಮಟ್ಟಿಗೆ ತಲೆದೋರಿದ್ದರಿಂದ ಈ ತಿಂಗಳಿನಲ್ಲಿ ನಡೆಯಬೇಕೆಂತ ಏರ್ಪಾಡ್ಡು ಆಗಿದ್ದ ಎಗ್ಜಿಬಿಷನ್ ಮತ್ತು ಕಾನ್‌ಫರೆನ್ಸ್ ಸಹಾ ಮುಂದೆ ಜೂನ್ ತಿಂಗಳಿನಲ್ಲಿ ನೆರವೇರಿಸುವದಾಗಿ ಕಮಿಟಿಯವರು ತೀರ್ಮಾನಿಸಿರುತ್ತಾರೆ. ಇದುವರೆಗೂ ಪ್ರೋತ್ಸಾಹಕರಿಂದ ಕಾನ್‌ಫರೆನ್ಸ್‌ಗಾಗಿ 75 ರೂಪಾಯಿ ಚಂದಾ ವಸೂಲಾಗಿರುವುದು. ಅಲ್ಲದೆ ಇನ್ನೂ ತಗಲುವ ಖರ್ಚನ್ನು ತಾಲ್ಲೂಕ್ ಪ್ರೋಗ್ರೆಸ್ ಕಮಿಟಿ ಮೆಂಬರುಗಳು, ಲಾಯರ್ ಮಹನೀಯರು ಮತ್ತು ಮ್ಯುನಿಸಿಪಲ್ ಕಮಿಷನರೇ ಮುಂತಾದ ಪುರಪ್ರಮುಖ್ಯರು ವಹಿಸಿ ನಿಂತು ನಡಿಸುವುದಾಗಿ ಉದ್ದೇಶಿಸಿರುತ್ತಾರೆ.

ಬೆಂಗಳೂರು ತಾ|| ಯಲಹಂಕ.—ಇದೇ ತಿಂಗಳು 9 ನೇ ತಾ. ಎಜುಕೇಷನ್ ಡಿಪಾರ್ಟುಮೆಂಟಿನಿಂದ ಮ|| ಜೆಚ್. ಸೂರ್ಯನಾರಾಯಣಪ್ಪನವರು ಬಂದಿದ್ದರು. ಹೆಣ್ಣುಹುಡುಗರ ಪಾಠಶಾಲೆಯ ಮುಂಭಾಗದಲ್ಲಿ ಸ್ಥಳ ಅಲಂಕರಿಸಲ್ಪಟ್ಟಿತ್ತು. ಊರಿನ ಮ್ಯುನಿಸಿಪಲ್ ಮೆಂಬರುಗಳು, ಡಾಕ್ಟರು, ಪೋಲೀಸ್ ಹುದ್ದೇದಾರರು, ಶೇಕ್ದಾರರು, ಪಟೇಲ್ ಶ್ಯಾನುಭೋಗರು, ಇತರ ದೊಡ್ಡ ಮನುಷ್ಯರು ಹಾಜರಾಗಿದ್ದರು. ರಾತ್ರಿ 7 ಗಂಟೆಯಿಂದ 8 ಗಂಟೆವರೆಗೂ ವಿದ್ಯಾ ವಿಚಾರವನ್ನು ಕುರಿತು ಒಳ್ಳೇ ಉಪನ್ಯಾಸಮಾಡಿದರು. ಮತ್ತು ವಿದ್ಯಾವಂತರಿಗೂ ವಿದ್ಯಾಹೀನರಿಗೂ ಇರುವ ಭೇದವನ್ನು ಅನೇಕ ದೃಷ್ಟಾಂತರಗಳಿಂದ ಬಹು ಸ್ವಾರಸ್ಯವಾಗಿ ವಿವರಿಸಿದರು. ನಮ್ಮ ದೇಶದಲ್ಲಿ ಅನೇಕರು ವಿದ್ಯೆಯಿಲ್ಲದೆ ಸೋಮಾರಿತನವಾಗಿ ಬಿಕ್ಷೆ ಬೇಡಿ ಜೀವನಮಾಡುತ್ತಾರೆ. ಇಂಗ್ಲಾಂಡು ದೇಶದಲ್ಲಿ ಯಾರಾದರೂ ಭಿಕ್ಷಕ್ಕೆ ಬಂದರೆ ಅವರು ಕೊಡುವ ಭಿಕ್ಷೆ ಯಾವದೆಂದರೆ ಕೋರಡಾ ಏಟುಗಳೇ. ಅದರಿಂದ ಸೋಮಾರಿತನದಲ್ಲಿ ಭಿಕ್ಷೆ ಬೇಡಿ ಜೀವನಮಾಡುವದಕ್ಕೆ ಆಸ್ಪದವಿಲ್ಲ. ಅಂಗಹೀನರಿಗೆ ಒಂದು ಸ್ಥಳ ಏರ್ಪಾಡುಮಾಡಿ ಜೀವನ ನಡೆಸುತ್ತಾರೆಂದು ತಿಳಿಸಿದರು. ಇಂಗ್ಲಾಂಡು, ಜರ್ಮನಿ, ಅಮೇರಿಕ ದೇಶಗಳಲ್ಲಿ ಶೇಕಡ 80-90 ರಂತೆ ವಿದ್ಯಾವಂತರು ಇದಾರೆ. ನಮ್ಮ ಮೈಸೂರು ದೇಶದಲ್ಲಿ ಶೇಕಡ ಇಬ್ಬರಂತೆ ಇದಾರೆಂದೂ, ವಿದ್ಯೆಗೆ ಮೈಸೂರು ದೇಶ ಬಹಳ ಹಿಂದಾಗಿದೆ ಎಂದೂ ತಿಳಿಸಿ, ಮೈಸೂರು ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಬಹಳ ಹಣ ಖರ್ಚು ಮಾಡುತ್ತಾ ಇದಾರೆ. ಪ್ರತಿ ಒಂದು ಸ್ಥಳದಲ್ಲಿ ಸ್ಕೂಲುಗಳು ಏರ್ಪಾಟು ಮಾಡಿದಾರೆ. ಅದರಿಂದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ವಿದ್ಯಾಭ್ಯಾಸ ಮಾಡಿಸಬೇಕೆಂದು ತಿಳಿಸಿದರು. ನಮ್ಮ ದೇಶದವರು ನಮ್ಮ ಅದೃಷ್ಟ ಹೀಗಿದೆ ಎಂದು ಹೇಳುತ್ತಾರೆ. ಇಂಗ್ಲೀಷಿನವರು ದೃಷ್ಟಾಂತವಾಗಿ ಮಾಡುತ್ತಾರೆ. ಇಂಗ್ಲೀಷಿನವರು ಒಂದು ಕೆಲಸಮಾಡುವದಕ್ಕೆ ಪ್ರಯತ್ನಪಟ್ಟರೆ ಎಷ್ಟು ನಷ್ಟವಾದರೂ ಬಿಡುವದಿಲ್ಲ. ಅದನ್ನು ನೆರವೇರಿಸುತ್ತಾರೆ. ನಮ್ಮ ಜನರು ಎಲ್ಲಾ ವಿಷಯಗಳಲ್ಲಿ ಅದೃಷ್ಟವೆಂದು ಹೇಳಿಕೊಂಡು ಹಿಂದಾಗಿದಾರೆಂದು ತಿಳಿಸಿದರು. ವಿದ್ಯಾಭ್ಯಾಸದ ವಿಷಯದಲ್ಲಿ ಮಾಡಿದ ಉಪನ್ಯಾಸವು ಎಲ್ಲರಿಗೂ ಸಂತೋಷಕರವಾಗಿತ್ತು. ಉಪನ್ಯಾಸಕರು ವಿವರಿಸಿದ ಮೇಲೆ ಸಭೆಯವರ ಪರವಾಗಿ ಲಂಡನ್ ಮಿಷನ್ ಉಪದೇಶಿ ಮ|| ಬಿ. ನರಸಯ್ಯನವರು ಕೆಲವು ಮಾತುಗಳನ್ನಾಡಿ ಮುಕ್ತಾಯಮಾಡಿದ ಮೇಲೆ ಡಾಕ್ಟರವರು ಉಪನ್ಯಾಸಕರಿಗೆ ಹಾರ ಹಾಕಿದರು. ಸಭೆಯವರೆಲ್ಲರೂ ತಮ್ಮ ಸಂತೋಷವನ್ನು ಸೂಚಿಸಿದರು.—ಈ ಗ್ರಾಮದ ಮುಖ್ಯಸ್ಥರು ಒಂದು ರೀಡಿಂಗ್ ರೂಮ್ ವಿಷಯವಾಗಿ ತುಂಬಾ ಮುತುವರ್ಜಿ ವಹಿಸಿ ಇದೇ ತಿಂಗಳಿನಿಂದ ರೀಡಿಂಗ್ ರೂಮನ್ನು ಸ್ಥಾಪಿಸಿ ಕನ್ನಡ, ತೆಲುಗು, ಇಂಗ್ಲೀಷು ಪತ್ರಿಕೆಗಳನ್ನು ತರಿಸುತ್ತಾ ಇದಾರೆ. ಇದು ಮುಂದೆ ಅಭಿವೃದ್ಧಿಗೆ ಬರುವದಕ್ಕೆ ಸಂದೇಹವಿಲ್ಲ.—ಇಲ್ಲಿ ಪ್ಲೇಗ್ ಶುರುವಾಗಿ ಹೆಚ್ಚು ಕಡಮೆ 3 ತಿಂಗಳಾಯಿತು. ಇದುವರೆಗೂ ಇದರಿಂದ ಮೃತಪಟ್ಟವರು 20 ಜನ. ಈಗ ಜನರು ಊರುಬಿಟ್ಟು ಷೆಡ್ಡುಗಳನ್ನು ಹಾಕುತ್ತಾ ಇದಾರೆ. ಹೊಸ ಕಾಯಿಲೆಗಳು ಆಗುತ್ತಾ ಇವೆ.

ಬೇಲೂರು.—ಕಳೆದ ನಾಲ್ಕು ತಿಂಗಳಿಂದಲೂ ಈ ಊರಲ್ಲಿ ಪ್ಲೇಗ್ ರೋಗವು ಹರಡುತ್ತಾ ವಾರಕ್ಕೆ 2-3 ರಂತೆ ಕಾಯಿಲೆಗಳಾಗುತ್ತಾ ಇದೆ. ಈ ಸಾರಿ ಈ ಊರು ಕೋಟೆಯಲ್ಲಿಯೇ ಇದರ ಹಾವಳಿ ಬಲವಾಗಿ ಅನೇಕ ಯೌವನಸ್ಥರೂ, ಬಾಲಬಾಲೆಯರೂ ತೀರಿಹೋದರು. ಈ ಊರಿನ ಸುತ್ತಲೂ ಕೋಟೆಯ ಅಗಳಿನಲ್ಲಿ ಗ್ರಾಮಸಾರ ಸಂಬಂಧವಾದ ಕೊಚ್ಚೆ ನೀರು ಬಹು ಕಾಲದಿಂದಲೂ ನಿಂತೂ, ಕೋಟೆಯ ಮೇಲೆಲ್ಲಾ ಸೀಮೆ ಸೀಗೆಯ ಕಾಡು ಹಬ್ಬಿಯೂ ಊರಿಗೆ ನಿರ್ಮಲವಾದ ವಾಯು ಸಂಚಾರಕ್ಕೆ ಆಸ್ಪದ ಕೊಡದಿರುತ್ತವೆ. ಊರ ಸುತ್ತಲೂ ಆವರಿಸಿರುವ ಪೊದೆಗಳು ಅನೇಕ ಕಾಡು ಮೃಗ ಪಕ್ಷಿಗಳಿಗೆ ನಿವಾಸವಾಗಿ ರಾತ್ರಿ ವೇಳೆ ಕಲಕಲ ಧ್ವನಿಮಾಡುವವು. ಕೆಲವು ದಿವಸಗಳ ಹಿಂದೆ ಇಲ್ಲಿಗೆ ಮದ್ರಾಸ್ ಗವರ್ನರವರು ದಯಮಾಡಿಸಿದ್ದ ವೇಳೆ ಅವರ ದಿವ್ಯ ಗಮನಕ್ಕೂ ಮೇಲ್ಕಂಡ ವಿಷಯವು ಬಿದ್ದು ಇದೇ ಈ ಟವನ್ ಅನಾರೋಗ್ಯಕ್ಕೆ ಮುಖ್ಯ ಕಾರಣವೆಂದು ಅಪ್ಪಣೆ ಕೊಡಿಸಿದರಂತೆ. ಈ ಮಲೆನಾಡು ಪ್ರಾಂತ್ಯದ ಪುರೋಭಿವೃದ್ಧಿಗಾಗಿ ನಮ್ಮ ಸರ್ಕಾರದವರು ಅನೇಕ ಕಡೆಗಳಲ್ಲಿ ಕೆಲಸ ನಡಿಸುತ್ತಿದ್ದರೂ ಈ ಟವನ್ನಲ್ಲಿ ಮಾತ್ರ ಅದು ಇನ್ನೂ ಜಾರಿಗೆ ಬಂದಿಲ್ಲ. ಅವರು ಮೇಲ್ಕಂಡ ರೀತಿ ಈ ಊರು ಪ್ರಜಾ ಆರೋಗ್ಯಕ್ಕೆ ಸಂಬಂಧಪಟ್ಟ ಏರ್ಪಾಡುಗಳನ್ನೆಲ್ಲಾ ಜಾಗ್ರತೆಯಾಗಿ ನಡಿಸುತ್ತಾ ಬರುವರೆಂದು ಹಾರೈಸುತ್ತೇವೆ.—ಈ ತಿಂಗಳು 14 ತಾ. ಬೆಳಗ್ಗೆ ಹಾಸನದಿಂದ ನಮ್ಮ ಸಂಸ್ಥಾನದ ಸೀನಿಯರ್ ಸರ್ಜನ್‌ರವರು ದಯಮಾಡಿ ಇಲ್ಲಿನ ಆಸ್ಪತ್ರೆಯನ್ನು ತನಿಖೆ ಮಾಡಿ ಇಲ್ಲಿನ ಡಾಕ್ಟರು ವೆಂಕಟಾಚಾರ್ಯರವರ ಕಾರ್ಯ ಕ್ರಮಗಳನ್ನು ನೋಡಿ ಸಂತೋಷಪಟ್ಟು ಟವನ್ನಲ್ಲಿ ಕೆಲವೆಡೆ ಸಂಚರಿಸಿ ಕೋಟೆಯಲ್ಲಿದ್ದ ಒಬ್ಬ ಪ್ಲೇಗ್ ರೋಗಿಯನ್ನು ನೋಡಿ ಔಷಧಕೊಟ್ಟು ಮಧ್ಯಾಹ್ನವೇ ಹಳೇಬೀಡು ಮಾರ್ಗವಾಗಿ ಮುಂದಕ್ಕೆ ಪ್ರಯಾಣ ಮಾಡಿದರು.—ತಾ. 15 ರಲ್ಲಿ ಈ ಡಿಸ್ಟ್ರಿಕ್ಟಿನ ಹೊಸ ಡೆಪ್ಯುಟಿ ಕಮಿಷನರವರ ಸವಾರಿಯು ಈ ಪ್ರಾಂತ್ಯ ಮೊದಲನೇ ಸಾರಿ ಚಿತ್ತೈಸಿ 3 ದಿವಸ ಇಲ್ಲಿ ತಂಗಿದ್ದು ಬೆಳ್ಳೂರು, ಹಳೇಬೀಡು ಪ್ರಾಂತ್ಯವನ್ನೆಲ್ಲಾ ಸಂಚರಿಸಿ ಇಲ್ಲಿನ ಪ್ರಜೆಗಳ ಅಹವಾಲುಗಳನ್ನು ಲಾಲಿಸಿ ಸಮಯೋಚಿತವಾಗಿ ಪ್ರೀತಿಯಿಂದ ಸದುತ್ತರವಿತ್ತು ತಾ. 16 ರಲ್ಲಿ ಈ ಟವನ್ ಕೋಟೆಯಲ್ಲೆಲ್ಲಾ ಸಂಚಾರ ಮಾಡಿ ದೇವಾಲಯವನ್ನೂ ಪರಾಂಬರಿಸಿ ತಾ. 17 ನೇ ಪ್ರಾತಃಕಾಲ ಸಕಲೇಶಪುರ ಪ್ರಾಂತ್ಯ ಪ್ರಯಾಣ ಮಾಡಿದರು.—ನಮ್ಮ ಅಮಲ್ದಾರರವರು ಈ ಊರಿನ ಪುರೋಭಿವೃದ್ಧಿ ವಿಷಯದಲ್ಲಿ ತುಂಬಾ ಮುತುವರ್ಜಿವಹಿಸಿ ಮ್ಯುನಿಸಿಪಲ್ ಕಾರ್ಯಗಳನ್ನು ಸ್ವತಃ ದಿನಂ ಪ್ರತಿಯೂ ಟವನ್ ಗಸ್ತು ಮಾಡಿ ಕ್ರಮ ಪಡಿಸುತ್ತಲೂ, ರೈತರ ಕಷ್ಟ ಸುಖಗಳನ್ನು ಅನುರಾಗದಿಂದ ವಿಚಾರಿಸಿ ಅವರಿಗೆ ಆಗಾಗ ತಕ್ಕ ಹಿತೋಕ್ತಿಗಳನ್ನು ಹೇಳುತ್ತಲೂ, ಅವರುಗಳನ್ನು ಕಾರ್ಯೋತ್ಸಾಹಕರನ್ನಾಗಿ ಮಾಡುತ್ತಲೂ ಬಂದಿರುವದು ತುಂಬಾ ಶ್ಲಾಘ್ಯವಾಗಿದೆ.—ಕೆಲವು ದಿವಸಗಳ ಹಿಂದೆ ಇಲ್ಲಿನ ಮ|| ನಾರಾಯಣರಾಯರ ಮನೆಯಲ್ಲಿ ಕೆಲವು ಕಾಲದಿಂದ ಇದ್ದ ಅನಂತನು ಬ್ರಾಹ್ಮಣ ಎಂಬವನು ನೂರಾರು ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದನೆಂದು ಕೋರ್ಟಿನಲ್ಲಿ ವಿಚಾರಣೆ ನಡೆದು ಕೃತ್ಯ ನಡೆದದ್ದು ರುಜುವಾತಿಗೆ ಬಂದಿದ್ದರಿಂದ ಅಪರಾಧಿಗೆ ಆರು ವಾರ ಕಠಿಣಸಜಾ, 25 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು.

[5 ನೇ ಪುಟದಿಂದ ಮುಂದೆ.]

ಕಯಾವರ್ಜಾಡಿಸಿ ಮ್ಯುನಿಸಿಪಾಲಿಟಿಗೆ ಮೋಸಮಾಡಿದರೆಂದೂ, ಅವರನ್ನು ಕಾನೂನು ಪ್ರಕಾರ ದಯಾರ್ಕಿತ್ತಿಯಂಥ ಶಿಕ್ಷೆಗೆ ಗುರಿಮಾಡಬೇಕೆಂದೂ ಮ್ಯುನಿಸಿಪಲ್ ಪ್ರೆಸಿಡೆಂಟರು ಕೃಷ್ಣಯ್ಯನವರು ಸೆಂಟ್ರಲ್ ಪಬ್ಲಿಕ್ ಪ್ರಾಸಿಕ್ಯೂಟರ ಮೂಲಕ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆಯನ್ನು ಕಳೆದ ಶುಕ್ರವಾರ ದಾಖಲ್ ಮಾಡಿದರು. ಏಪ್ರಿಲ್ ತಾ. 13 ಕ್ಕೆ ಹಿಯರಿಂಗು ಇಟ್ಟಿದೆ.

ರಾಜಧಾನಿಯ ಅಡ್ವೋಕೇಟ್ ಮ|| ಬಿ. ಕೃಷ್ಣರಾಯರು ಕಳೆದ ವಾರ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಂದು ಮೊಕದ್ದಮೆಯನ್ನು ನಡಿಸುವುದಕ್ಕೆ ಒಬ್ಬ ಮೊಖ್ತ್ಯಾರ್ರು ವಕಾಲತ್ತು ಪಡೆದು ಬಂದದ್ದನ್ನು ನೋಡಿ, ಅನೇಕ ಲಾಯರುಗಳು ನಿಶ್ಚಯಿಸಿದ ಸ್ಥಳಗಳಲ್ಲಿ ಅಂಥವರಿಗೆ ವಕಾಲತ್ತು ನಡಿಸಲು ಮ್ಯಾಜಿಸ್ಟ್ರೇಟರು ಅವಕಾಶ ಕೊಡಕೂಡದೆಂದು ಚೀಫ್ ಕೋರ್ಟಿನವರು ಹುಕುಂ ಕೊಟ್ಟಿದ್ದಾರೆಂದೂ, ಆ ಹುಕುಮನ್ನು ಅನುಸರಿಸುವುದು ಕೋರ್ಟಿನ ಗೌರವಕ್ಕೆ ಯೋಗ್ಯವಾದದ್ದೆಂದೂ ಮುಂದಾಗಿ ಆಕ್ಷೇಪಣೆ ಮಾಡಿ ತಿಳಿಸಿದರು. ಮ್ಯಾಜಿಸ್ಟ್ರೇಟರು ಈ ವಿಚಾರವನ್ನು ತಮ್ಮ ಗಮನಕ್ಕೆ ತಂದದ್ದು ಅನುಕೂಲವಾಯಿತೆಂದೂ, ಇನ್ನು ಮುಂದೆ ಅಂಥವರಿಗೆ ತಮ್ಮ ಕೋರ್ಟಿನಲ್ಲಿ ವಕಾಲತ್ತು ನಡಿಸಲು ಅವಕಾಶ ಕೊಡುವುದಿಲ್ಲವೆಂದೂ ಹೇಳಿ ಆ ಅಡ್ವೊಕೇಟರನ್ನು ಸಮಾಧಾನಪಡಿಸಿದರು.

ರಾಜಧಾನಿಯಲ್ಲಿರುವ ಮ|| ಎಚ್. ಡಿ. ಬಿಷಪ್‌ರವರ ಮಗ ಅರ್ಜೀಸ ಎಂಬುವನೂ, ಮ|| ಜಮೀನ್‌ದಾರ್ ವೆಂಕೋಜಿರಾಯರ ಮಗ ಜನಾರ್ದನ ರಾಯನೆಂಬುವನೂ ಬ್ಯಾಕ್‌ಸ್ಟ್ರೀಟ್ ಬಜಾರಿನ ಒಂದು ಅಂಗಡಿಯಲ್ಲಿ ಕಳವು ಮಾಡಿದರೆಂದು ಮೊಕದ್ದಮೆ ಆಯಿತು. ರುಜುವಾತು ಬಂದದ್ದರಿಂದ ಸಿಟಿ ಮ್ಯಾಜಿಸ್ಟ್ರೇಟರು ಅಪರಾಧಿಗಳನ್ನು ಇನ್ನೂ ಚಿಕ್ಕ ವಯಸ್ಸಿನವರೆಂದು ತಿಳಿದು, ಅವರಿಬ್ಬರಿಗೂ ಎಚ್ಚರಿಕೆ ಹೇಳಿ ನೇಕಚಾಲಿಗೆ ಜಾಮೀನ್ ತೆಗೆದುಕೊಂಡು ಬಿಡಿಸಿಬಿಟ್ಟರು. ಇದೇ ರೀತಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ಬಿ. ಹಿರಾಸಿಂಗರವರ ಮನೆಯಲ್ಲಿ ಅವರ ಚ್ಯಾರ್ಲೀಸಿಂಗ್ ಎಂಬ ಕುಮಾರನೇ ಕೆಲವು ಪದಾರ್ಥಗಳನ್ನು ಕಳವು ಮಾಡಿದ್ದು ರುಜುವಾತಾದ್ದರಿಂದ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದಯಾರ್ಕಿಮಾಡಿ ಆ ಹುಡುಗನಿಗೆ ಎಚ್ಚರಿಕೆ ಹೇಳಿ ನೇಕಚಾಲಿಗೆ ಜಾಮೀನ್ ತೆಗೆದುಕೊಂಡು ಬಿಡಿಸಿರುತ್ತಾರೆ.

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ. ಲೇಪಕವೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ವೀಳ್ಯದೆಲೆಗೆ ಸವರಿಯೋ, ಬಿಸಿನೀರಿಗೆ ಹಾಕಿಯೋ ಬೆಳಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ ಭೇದಿ, ಪೋಟಳಿಕೆ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ವಾಯುನೋವು, ಕೀಲುನೋವು, ಗಾಯಗಳಿಗೆ 3 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 3 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ. [235-13]

ನಮ್ಮ ವಿಳಾಸ.—ಕೇಶವಜೀ ದೇವಚಂದ್,

ರಾಮ್‌ಭಾನ್ ಏಜೆನ್ಸಿ, ಸಾಹುಕಾರ್‌ಪೇಟೆ, ಮದರಾಸ್

ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ, ದೊಡ್ಡಪೇಟೆ, ಮೈಸೂರು.

ಬೆಲೆ ತಗ್ಗಿಸಿದೆ! ಬೇಗ ನೋಡಿ!

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಪಾಕೆಟ್ ಡೈರಿ

ಕೊಂಚ ಪ್ರತಿಗಳು ಮಾತ್ರ ಉಳಿದಿವೆ. ಬೇಗ ತರಿಸಿಕೊಳ್ಳಿರಿ. ಉತ್ತಮವಾದ ಕಾಗದ, ಮುದ್ದಾದ ಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿರುತ್ತವೆ. ಐದು (5) ಡೈರಿಗಳನ್ನು ಒಂದೇ ವಿಳಾಸಕ್ಕೆ ತರಿಸಿಕೊಂಡರೆ 1 ಡೈರಿ ಇನಾಂ. [220-23]

ನಂಬರ್ 1	0—2—6	ಪೋಸ್ಟೇಜು ಬೇರೆ.
" 2	0—4—0	"

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಿಸಿಲುಕಾಲದ ಆಯಾಸವನ್ನೂ, ಬಾಯಾರಿಕೆಯನ್ನೂ, ತಕ್ಷಣ ಪರಿಹರಿಸಿ ಆಬಾಲವೃದ್ಧರಿಗೂ ಅಪೂರ್ವವಾದ ಆನಂದವನ್ನುಂಟುಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ

ಆಮೋದಿನಿ

(ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟದ್ದು).

ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಕ್ತವನ್ನು ಶುದ್ಧಪಡಿಸುತ್ತವೆ. ನಾನಾ ತರಹಾ ಕೆಮ್ಮು, ದಮ್ಮು, ಉಬ್ಬಸ, ವಾಂತಿ, ವಾಕರಿಕೆ, ತಲೆತಿರುಗು, ಆರೋಚಕ, ಹೊಟ್ಟೆನೋವು, ಮಲಬಂಧಗಳನ್ನು ಜಾಗ್ರತೆ ಗುಣಮಾಡುತ್ತವೆ. ಸಂಗೀತಗಾರರಿಗೂ, ಉಪನ್ಯಾಸಕರಿಗೂ, ವ್ಯಾಯಾಮ ಮಾಡುವವರಿಗೂ ಅಮೃತವೇ ಸರಿ. [231-21]

150 ಮಾತ್ರೆಯುಳ್ಳ ಶೀಸೆ ಅನುಪಾನ ಪತ್ರ ಸಹಿತ 4 ಆಣೆ ; ಐದಕ್ಕೆ ಒಂದು ಇನಾಮು. ಟಪಾಲು ಖರ್ಚು ಪ್ರತ್ಯೇಕ.

25 ಶೀಸೆ ಒಟ್ಟಾಗಿ ತರಿಸಿದರೆ ಟ. ಖ. ಸೇರಿ 5 ರೂಪಾಯಿ ಮಾತ್ರ.

ನಮ್ಮ ವಿಳಾಸ :—ಬಿ. ವಿ. ಪಂಡಿತ್,

ಸದ್ವೈದ್ಯಶಾಲಾ, ಸಂಜನಗೂಡು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-3] 20, ಚೀನಾಬಜಾರು ರೋಡು, ಮದರಾಸು.

ಸಂತೋಷಕರವಾದ ಪ್ರಕಟನೆ.

ರೈಲ್ವೆ ರೆಗ್ಯುಲೇಟರ್ ವಾಚ್.



ಇದರ ಕ್ರಯ 6 ಬಹುಮಾನಗಳ ಸಮೇತ ರೂ. 3-8-0 ಮಾತ್ರ. 5 ವರುಷಗಳ ಗ್ಯಾರಂಟಿ. ಧನವಂತರೇ, ಪುನಃ ಇಂಜನ್ ಮಾರ್ಕ್ ಅಂದರೆ ಗುರುತುಳ್ಳ ಪ್ರಖ್ಯಾತಿಯಾದ ಲೀವರ್ ಕೆಲಸದಿಂದ ತಯಾರಾದ ಈ ವಾಚ್ ಈಗತಾನೆ ಬಂದಿರುತ್ತೆ. ಬಲಿಷ್ಟವಾದದ್ದು. ಕೆಟ್ಟು ಹೋಗುವುದೇನು? ದೀರ್ಘಕಾಲ ಬಾಳಿಕೆ ಬರುವ ವಾಚ್. ಸುಂದರವಾದದ್ದು. ಇದರ 6 ಬಹುಮಾನಗಳ ಪಟ್ಟೀಲು. (1) ಸುಂದರವಾದ ವಾಚ್ ಸರಪಣಿ, (2) ನಾಜೂಕುಳ್ಳ ಉಂಗುರ, (3) ಉತ್ತಮ ಬೆಲೆಯಾದ ಬೊಂಬೆ, (4) ನಾಜೂಕುಳ್ಳ ಕರವಸ್ತ್ರ, (5) ಸುವಾಸನೆಯುಳ್ಳ ಸೆಂಟ್ ಸೀಸೆ, (6) ಪಟೂನ್ ಗುಂಡಿಗಳ ಸೆಟ್ಟು.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ :—

[20-9] ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂಬರ್ 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಇನಾಂ ಸಾಮಾನುಗಳು 50 ಇನಾಂ ಸಾಮಾನುಗಳು 50

ಅನೇಕ ಯೋಗ್ಯತ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳ್ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ.

ಲೋಕಪ್ರಖ್ಯಾತಿಯಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪುಕೊಡುವದು ತಲೆಯಲ್ಲಿರುವ ಹುಳುಗಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿನ 6, ಮೈಥರಿಕೆ 1, ಅಡ್ಡಿ 1, ತಾಂಬೂಲಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜ ರಾಣಿ ಪಾಕೆಟ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, 6, ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನು ಇಲ್ಲದಂತೆ ಟೈಂಪೀಸು 1 ನ್ನು ಇನಾಮಾಗಿ ಕಳುಹಿಸುತ್ತೇನೆ.

ನಮ್ಮ ವಿಳಾಸ—ವೈರ್ಯ ಲಕ್ಷ್ಮಿ ಅಂಡು ಕಂಪನಿ,

[5R. 1] ನಂ. 3, ಇರುಳಪ್ಪನ್ ಬೀದಿ, ಮದರಾಸು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

One energetic and experienced *Secretary* for the Branch Office to be opened shortly at Bangalore, and District Agents for each and every district in the Mysore province *on both commission and office allowance.* Secretary's allowance *Rs. 50-20-200* and that of District Agents *Rs. 25* per mensem. Also taluk and local directors required in each and every taluk of the province. *Security and good reference essential.* For prospectuses and other particulars, please apply with your experience in the line to

M. L. NAGANNA,
Managing Director, Life & Marriage Assurance Buildings, Mysore.

[15-12]

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ತ್ರ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿಡೂಪಾಕ್ಷಿ, ಪವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಮೂವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಪ್ರಾಣಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲಿ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ಶಾಂಟೂಲಪಾತ್ರೆ 22, ಕೊಂಡೆ ಗಿಣಗಳು 6, ಕಾರ್ನೇಷನ್ ಬ್ರೂಚ್ 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪನಿ,
ನಂ. 44, ಸಂಬೋಳಿಯ್ಯರ ಬೀದಿ, ಮದರಾಸು

[250-16]

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲರು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ ;

[172-34]

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಪ್ರಪಂಚಯುದ್ಧ

ಘನ
ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಭಾವಚಿತ್ರ!!!

ಯೂರೋಪ್ ಖಂಡವೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಘೋರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಡಿಗೆ ಮಹಾತವಾದ ಎಮ್ಡನ್ನನ್ನು ನೋಡಿರುವಿರಾ? ಅದರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿರೋಮಣಿಯನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಶಾಸನ ದುಷ್ಟಳಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಠವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು

ಬೆಲೆ ೧ ರೂಪಾಯಿ.

ಷರಾ:—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ಸಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[18-13]

THE WAR AND ITS RESULTS

The Future of Europe and the End of the Age. by C. H. L. Mercar, B.A.

Price one anna. K. Chourappa and Son, Booksellers, Avenue Road, Bangalore City. If wanted by post, send 3 half-anna stamps.

This will shew you more of the Future, than all the Statesmen of Europe could tell you. [60-1]

ಗೃಹಕೃತ್ಯದ ನೋಟೀಸು.

ಕ್ಲೋಸ್‌ಪೇಟೆ ತಾಲ್ಲೂಕು ಶ್ಯಾನಾಪುರದಲ್ಲಿರುವ ಲಚ್ಚೀರಾಂ ತಿವಾರಿ ದತ್ತುಮಗ ಲಕ್ಷ್ಮೀಪ್ರಸಾದ್ ತಿಳಿಯಪಡಿಸುವದೇನಂದರೆ—ನಮ್ಮ ದತ್ತು ತಂದೆ ಲಚ್ಚಿರಾಮನು ಮತ್ತು ದತ್ತು ತಾಯಿ ಇಂದ್ರಾಣಿಬಾಯಮ್ಮನೂ ಸಹ ಈಗ ಸುಮಾರು 75-80 ವರುಷದ ವಯಸ್ಸಾಗುತ್ತಾ, ಜ್ಞಾನ ಸ್ವಾಧೀನವಿಲ್ಲದವರಾಗಿ ರುವದರಿಂದ ಯಾರಾದರು ಅವರಿಂದ ಆಧಾರ ಭೋಗ್ಯ ಕ್ರಯ ಮೂಲಕ ನಮ್ಮ ವಿಶಿಷ್ಟ ಸ್ಥಿರ ಚರ ಸ್ವತ್ತುಗಳನ್ನು ನನ್ನ ಅನುಮತಿ ಇಲ್ಲದೆ ಮಾಡಿಕೊಂಡಲ್ಲಿ ಅದು ಊರ್ಜಿತವಾಗಲಾರದು ಮತ್ತೂ ನನ್ನ ವಿಶಿಷ್ಟ ಖರ್ಚಿಗೂ, ಫಸಲು ಲುಕ್ಸಾನಿಗೂ ಜವಾಬ್ದಾರರಾಗಬೇಕಾದೀತೆಂದು ಈ ಮೂಲಕ ಎಚ್ಚರಿಸಿದೇನೆ.

[61-1] ಲಕ್ಷ್ಮೀಪ್ರಸಾದನ ರುಜು

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೧೫ ನೇ ಇಸವಿ ಏಪ್ರಿಲ್ ತಾ. ೧ ನೇ ಗುರುವಾರ.

ಮೈಸೂರು ಬೆಟ್ಟ ಗುಡ್ಡ ಪ್ರದೇಶಗಳು.

ನಮ್ಮ ಗವರ್ನ್‌ಮೆಂಟಿನವರು ಮೈಸೂರು ಸೀಮೆಗೆ ಸೇರಿದ ಮುಖ್ಯವಾದ ಕೆಲವು ಬೆಟ್ಟ ಗುಡ್ಡ ಪ್ರದೇಶಗಳನ್ನು ಆಬಾದು ಮಾಡಿಸಬೇಕೆಂದು ಕೆಲವು ಸೂಚನೆಗಳನ್ನು ಕಾಣಿಸಿ ಒಂದು ಹುಕುಮನ್ನು ಪ್ರಕಟಮಾಡಿರುತ್ತಾರೆ. ಇದಕ್ಕೋಸ್ಕರ ವಿಶೇಷ ಹಣವನ್ನು ಖರ್ಚುಮಾಡುವುದಕ್ಕಿಂತ ಮೊದಲು ಸರ್ಕಾರದವರು ಕೆಲವು ಸಂಗತಿಗಳನ್ನು ತಮ್ಮ ಗಮನಕ್ಕೆ ತಂದುಕೊಳ್ಳಬೇಕಾಗಿದೆ ಎಂದು ಸೂಚಿಸುತ್ತೇವೆ. ನಮ್ಮ ಪ್ರಜೆಗಳು ಸಾಮಾನ್ಯವಾಗಿ ಬೇಸಗೆಯನ್ನು ಕಳೆಯುವುದಕ್ಕೆ ಬೆಟ್ಟ ಗುಡ್ಡಗಳಿಗೆ ಹೋಗಿದ್ದು ಬರುವುದೇನೂ ಅಭ್ಯಾಸವಿಲ್ಲ. ಸೀತಪವೆಯು ನಮ್ಮವರಿಗೆ ಉಲ್ಲಾಸಕರವಾದದ್ದೆಂದೂ, ದೇಹಶಕ್ತಿಯೂ ಆರೋಗ್ಯವೂ ಇದರಿಂದ ಹೆಚ್ಚುವವೆಂದೂ ತಿಳಿದು ಕಾಣರು. ಅನೇಕಾನೇಕರಿಗೆ ಚಳಿಯು ಅಷ್ಟೇನೂ ಸಹ್ಯವಾದದ್ದಾಗಿಲ್ಲ. ಇದಲ್ಲದೆ ನಮ್ಮ ಜನಗಳ ಈಗಿನ ಸ್ಥಿತಿಗತಿಯನ್ನು ನೋಡಿದರೆ ಬೇಸಗೆಯಲ್ಲಿ ಅವರು ಬೆಟ್ಟ ಗುಡ್ಡಗಳ ಮೇಲೆ ಕೆಲವು ಕಾಲ ವಾಸಮಾಡಿಕೊಂಡಿದ್ದು ಜೀವನಾದಿಗಳಿಗೆ ಬೇಕಾಗುವಷ್ಟು ವಿಶೇಷ ಖರ್ಚನ್ನು ಮಾಡಲು ಅವರಿಗೆ ಚೈತನ್ಯವಿರುವುದು ಅಪರೂಪ. ನಮ್ಮ ಪ್ರಜೆಗಳಲ್ಲಿ ಅಂಥವರು ಸಾವಿರಕ್ಕೆ ಒಬ್ಬಿಬ್ಬರು ಸಿಕ್ಕುವುದೂ ಪ್ರಯಾಸ; ಒಂದು ವೇಳೆ ಸಿಕ್ಕಿದನೂ ಮನೆ ಮಠ ಕೆಲಸ ಕಾರ್ಯಗಳನ್ನು ಬಿಟ್ಟು ಹೋಗಲಪೇಕ್ಷಿಸುವವರು ಬಹಳ ವಿರಳ. ಆದಾಗ್ಯೂ ಹಾಗೆ ಕೆಲವು ಕಾಲ ಹೋಗಿದ್ದು ಬರಬೇಕೆಂದು ಕುತೂಹಲಪಡತಕ್ಕವರು ಇದ್ದಪಕ್ಷದಲ್ಲಿ ಸೀಬಗಿರಿಯಷ್ಟು ಚಳಿಯಾಗದಂಥಾ ಹಲವು ಬೆಟ್ಟ ಗುಡ್ಡ ಪ್ರದೇಶಗಳು ನಮ್ಮ ಸಂಸ್ಥಾನದೊಳಗೇ ಇರುವವೆಂದು ಧಾರಾಳವಾಗಿ ಹೇಳಬಹುದು.

ನಮ್ಮ ಸಂಸ್ಥಾನವನ್ನು ಬ್ರಿಟಿಷರು ವಹಿಸಿಕೊಂಡು ಪರಿಪಾಲನೆ ಮಾಡುತ್ತಿದ್ದಾಗ ಬ್ರಿಟಿಷ್ ಸರದಾರರು ಬೇಸಗೆಯಲ್ಲಿ ನಮ್ಮ ಸೀಮೆಯೊಳಗಿರುವ ಬೆಟ್ಟ ಗುಡ್ಡಗಳಿಗೆ ಹೋಗಿದ್ದು ಅಲ್ಲೇ ತಮ್ಮ ಸರ್ಕಾರಿ ಕೆಲಸಕಾರ್ಯಗಳನ್ನೆಲ್ಲಾ ಮಾಡುತ್ತಿದ್ದರು. ಇದರಿಂದ ಅವರಿಗೆ ಹರ್ಷವಾಗುತ್ತಿತ್ತು; ಸರ್ಕಾರದ ಕೆಲಸಗಳಿಗೆ ಯಾವ ಅಡಚಣೆಯೂ ಇರುತ್ತಿರಲಿಲ್ಲ. ಅವರ ಕಾಲದಲ್ಲಿ ನಂದಿದುರ್ಗ, ದೇವರಾಯದುರ್ಗ, ಚಾಮುಂಡಿಬೆಟ್ಟ, ಕಲ್ಹತ್ತಿಗಿರಿ, ಈ ಮೊದಲಾದ ಬೆಟ್ಟ ಗುಡ್ಡಗಳ ಮೇಲೆ ಯೂರೋಪಿಯನ್ ಅಧಿಕಾರಿಗಳು ಹೋಗಿ ಇದ್ದು ಬರುವುದಕ್ಕೋಸ್ಕರ ಬಂಗಲೆಗಳೂ ಆರಾಮುಗಳೂ ಕಲ್ಪಿಸಲ್ಪಟ್ಟವು. ಈಗ ಅಲ್ಲಿಗೆ ಹೋಗಿದ್ದು ಬರಲಪೇಕ್ಷಿಸುವವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ನಮ್ಮ ಗೌರ್ನಮೆಂಟಿನವರು ಕುತೂಹಲಪಟ್ಟಿದಾರೆ. ಚಾಮುಂಡಿ ಬೆಟ್ಟದ ಮೇಲೆ ಮಾಡಿಸಬೇಕಾದ ಕಾರ್ಯಗಳನ್ನು ನಮ್ಮ ದಿವಾನ್‌ರವರು ವಿವರಿಸಿ, ಅದರಂತೆ ಏರ್ಪಾಡು ಮಾಡಲ್ಪಟ್ಟರೆ ಪ್ರಜೆಗಳು ಅಲ್ಲಿ ಹೋಗಿದ್ದು ಬರಲು ಅನುಕೂಲವಾದೀತೆಂದು ಅಪ್ಪಣೆ ಕೊಟ್ಟಿರುವರು.

ಬೇಸಗೆಯ ವಿರಾಮ ದಿವಸಗಳಲ್ಲಿ ಇದ್ದು ಬರಬೇಕೆಂದು ಅಭಿಲಾಷೆಪಡುವಂಥವರಿಗೆ ಚಾಮುಂಡಿಬೆಟ್ಟದ ಮೇಲಣ ಹವಾಗುಣಕ್ಕೂ, ಮೈಸೂರು ಪಟ್ಟಣದ ಹವಾಕ್ಕೂ ಅಷ್ಟೇನೂ ವ್ಯತ್ಯಾಸ ಕಾಣಬರುವುದಿಲ್ಲವೆಂದು ನಮಗೆ ತೋರುತ್ತದೆ. ಹವಾ ಗುಣವು ಬೆಟ್ಟದ ಮೇಲೆ ಹೇಗಿದೆ ಎಂಬ ವಿಷಯದಲ್ಲಿ ಮೊದಲು ಪರೀಕ್ಷೆಗಳನ್ನು ಮಾಡಿಸಿ ನೋಡಬೇಕಾಗಿದೆ. ಈ ಬೆಟ್ಟದ ಮೇಲೆ ಈಗ ಮಾಡಿಸಬೇಕೆಂದು ಸೂಚಿಸಲ್ಪಟ್ಟಿರುವ ಏರ್ಪಾಡುಗಳಿಗೆ ಸುಮಾರು ಒಂದು ಲಕ್ಷ ರೂಪಾಯಿಯಾದರೂ ಬೇಕಾಗುವುದು. ಬೆಟ್ಟದ ಮೇಲಕ್ಕೆ ಹತ್ತಿ ಹೋಗುವುದನ್ನು ಸುಲಭಮಾಡಿಟ್ಟು, ಅನುಕೂಲವಾದ ಆಹಾರ ಪದಾರ್ಥಗಳು ಇನ್ನೂ ಹೆಚ್ಚಾಗಿ ಒದಗಿಸದೆ ಹೋದರೆ ಬೆಟ್ಟದ ಮೇಲೆ ಹೋಗಿದ್ದು ಬರೋಣವೆಂದು ಯಾರಿಗೂ ಅಭಿಲಾಷೆಯುಂಟಾಗಲಾರದು. ಹತ್ತು ಸಾವಿರ ರೂಪಾಯಿ ಮುಟ್ಟಿಸಿ ಬೆಟ್ಟದ ಮೇಲೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಬೇಕೆಂದೂ, ವಿದ್ಯುಚ್ಛಕ್ತಿಯಿಂದ ಒಳ್ಳೇ ನೀರನ್ನು ಮೇಲಕ್ಕೆ ಸಾಗಿಸಿ ಒದಗಿಸಬೇಕೆಂದೂ ಸೂಚಿಸಲಾಗಿದೆ. ಅಷ್ಟು ಹಣ ಖರ್ಚುಮಾಡಿದಾಗ್ಯೂ ಅವೆರಡೂ ಬೆಟ್ಟದ ಮೇಲೆ ದೊರಕುವುದು ಸಾಧ್ಯವಲ್ಲವೆಂದೂ, ಇನ್ನೂ ಹೆಚ್ಚು ದ್ರವ್ಯ ಬೇಕಾಗುವುದೆಂದೂ ನಮಗೆ ತೋರುತ್ತದೆ. ಮೈಸೂರು ಪಟ್ಟಣಕ್ಕೇನೇ ಈಗ ಒದಗಿಸುವ ನೀರು ಸಾಕಾಗುವುದಿಲ್ಲ; ಇಂಥಾದ್ದರಲ್ಲಿ ಆ ನೀರಿನಲ್ಲೇ ಸ್ವಲ್ಪ ಭಾಗವನ್ನು ಬೆಟ್ಟದ ಮೇಲಕ್ಕೂ ಒದಗಿಸಬೇಕೆನ್ನುವುದು ಸಹಜವಾಗಿ ಕಾಣುವುದಿಲ್ಲ. ದಿವಾನ್‌ರವರು ಬರೆದಿರುವ ಸಲಹೆಗಳಲ್ಲಿ ಬೆಟ್ಟದ ಮೇಲೆ ವಿದ್ಯುಚ್ಛಕ್ತಿಯ ದೀಪವನ್ನೂ ನೀರಿನ ಸರಬರಾಯನ್ನೂ ಕಲ್ಪಿಸಿ ನಡಿಸಿಕೊಂಡು ಬರುವುದಕ್ಕೆ ಸಿಬ್ಬಂದಿ ಮೊದಲಾದ ಖರ್ಚುಗಳನ್ನು ಕಾಣಿಸಿಲ್ಲ. ತೆರಿಗೆಗಳನ್ನು ಹಾಕಿ ಸಿಬ್ಬಂದಿ ಇಡುತ್ತೇವೆಂದು ಹೇಳಿದಪಕ್ಷಕ್ಕೆ ತೆರಿಗೆಗಳ ದರಗಳು ಹೆಚ್ಚಾಗಬೇಕು; ಹೆಚ್ಚು ತೆರಿಗೆಗಳನ್ನು ನೋಡಿ ಜನರು ಮನೆ ಮಠಗಳನ್ನು ಕಟ್ಟಿಕೊಳ್ಳಲು ಹಿಂತೆಗೆಯುತ್ತಾರೆ. ಹಾಗಿಲ್ಲದೆ ಸರ್ಕಾರದವರೇ ಆ ಖರ್ಚುಗಳನ್ನೆಲ್ಲಾ ವಹಿಸಿಕೊಂಡು ನಡಿಸುತ್ತೇವೆಂದು ಹೇಳುವುದಾದರೆ ರೈತನ ಹಣವನ್ನು ಈ ರೀತಿ ವಿನಿಯೋಗಮಾಡುವುದು ಧರ್ಮವೇ ಎಂಬ ಶಂಕೆಯುಂಟಾಗುವುದು. ಯಾಕಂದರೆ ಈ ಖರ್ಚಿನ ಪ್ರಯೋಜನವೆಲ್ಲಾ ಅನುಕೂಲಸ್ಥರಾದ ಪುಣ್ಯವಂತರಿಗೆ ದೊರಕುವುದೇ ಹೊರತು ಬಡ ಪ್ರಜೆಗಳಿಗೆ ಲಭ್ಯವಾಗುವುದಿಲ್ಲ.

ಚಾಮುಂಡಿ ಬೆಟ್ಟದ ಮೇಲಕ್ಕೆ ವಿದ್ಯುಚ್ಛಕ್ತಿಯ ರೈಲ್ ಗಾಡಿ ಇಡಿಸಬೇಕೆಂದು ಸೂಚಿಸಲಾಗಿದೆ. ಈ ರೈಲು ಮೈಸೂರು ಪಟ್ಟಣದೊಳಗಿಂದ ಹೊರಡದಿದ್ದರೆ ಹೋಗಿಬರತಕ್ಕವರಿಗೆ ಉತ್ಸಾಹವೂ ಅಭಿರುಚಿಯೂ ಕಡಮೆಯಾದೀತು. ಈ ರೈಲ್ವೆ ಉತ್ಪತ್ತಿಯಿಂದಲೇ ರೈಲ್ವೆ ಕಾಮಗಾರಿಯೆಲ್ಲಾ ಆಗುವುದೆಂಬ ಪಕ್ಷಕ್ಕೆ ಹೋಗಿಬರತಕ್ಕವರು ಬಹಳ ಹೆಚ್ಚಾಗಿ ರುಸುಂ ಕೊಡಬೇಕಾಗುತ್ತದೆ. ಜನರು ಅಷ್ಟು ಚೈತನ್ಯವಂತರಾಗಿದಾರೆಯೇ ಎಂಬ ಶಂಕೆ ಹುಟ್ಟುವುದು. ಕಡೆಗೆ ಸರ್ಕಾರದ ರಾಜಾದಾಯದಲ್ಲೇ ಇದಕ್ಕೆ ಬಹಳ ಹಣ ವಿನಿಯೋಗವಾಗಬೇಕಾದೀತು.

ಪ್ರಜೆಗಳು ಸಂತೋಷಕಾಲವನ್ನು ಆರಾಮುಗಳಲ್ಲೂ ವಿಹಾರಾದಿಗಳಲ್ಲೂ ಕಳೆಯುವುದಕ್ಕೆ ಸರ್ಕಾರದವರು ಇಂಥಾ ಏರ್ಪಾಡುಗಳನ್ನು ಮಾಡಬೇಕೆಂದು ಕುತೂಹಲಪಡುವುದನ್ನು ನೋಡಿ ನಾವು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಆದರೆ ಅಂಥಾ ಆರಾಮುಗಳ ಕಲ್ಪನೆಗೆ ರಾಜಾದಾಯವನ್ನು ವಿನಿಯೋಗಿಸತಕ್ಕದ್ದು ಸಹಜವೆಂದು ನಮಗೆ ತೋರುವುದಿಲ್ಲ. ಸರ್ಕಾರಿ ಅಧಿಕಾರಿಗಳಿಗೋಸ್ಕರ ಇವು ಆಗಬೇಕಾಗಿದ್ದಲ್ಲಿ ಆ ಮಾತು ಬೇರೆ ಆಯಿತು.

ಒಳ್ಳೆಯ ಶುಕ್ರವಾರ.

ನಾಳೆ ಎರಡನೇ ತಾರೀಖು ಶುಕ್ರವಾರವನ್ನು "ಗುಡ್ ಫ್ರೈಡೆ" ಎಂದು ಕರೆಯುತ್ತಾರೆ. "ಗುಡ್ ಫ್ರೈಡೆ" ಅಂದರೆ ಒಳ್ಳೆಯ ಶುಕ್ರವಾರ. ಮತ್ತು ಆ ದಿನ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಸಕಲ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ರಜಾ ಕೊಡುತ್ತಾರೆ. ಆ ದಿನ ಇಂತಹ ನಡತೆಯನ್ನು ನಡೆಯಿಸುವದಕ್ಕೆ ಕಾರಣವೇನು?

ದೇವರಾಗಿದ್ದು ಈಗ ಸುಮಾರು ಎರಡು ಸಾವಿರ ವರುಷಗಳಿಗೆ ಹಿಂದೆ ಮನುಷ್ಯನಾಗಿ ಈ ಲೋಕದಲ್ಲಿ ಹುಟ್ಟಿದ ಯೇಸು ಸ್ವಾಮಿಯು ಚೈತ್ರಮಾಸದ ಒಂದು ಶುಕ್ರವಾರದ ದಿನ ಸಂಹರಿಸಲ್ಪಟ್ಟನು. ಆತನು ನಿಷ್ಕಳಂಕವಾದ ನಡತೆಯನ್ನು ನಡೆದನು. ಪರಿಶುದ್ಧನಾಗಿಯೂ ನೀತಿವಂತನಾಗಿಯೂ ಸಮೋಪಕಾರಿಯಾಗಿಯೂ ಇದ್ದನು. ಬಡವರನ್ನೂ ರೋಗಿಗಳನ್ನೂ ಪ್ರೀತಿಮಾಡಿ ಅವರ ಕಷ್ಟನಷ್ಟಗಳನ್ನು ಪರಿಹರಿಸುವದರಲ್ಲೇ ತನ್ನ ಕಾಲವನ್ನೂ ಶಕ್ತಿಯನ್ನೂ ವ್ಯಯಮಾಡಿದನು. ವಿದ್ಯೆ, ವಿನಯ, ನಾಗರಿಕತೆ, ದೇವಭಕ್ತಿಗಳನ್ನು ತಿಳಿಯದೆ ಮಹಾ ಪಾಪಗಳನ್ನು ಮಾಡುತ್ತಿದ್ದ ಚಂಡಾಲರನ್ನೂ ಸ್ನೇಹಿಸಿ ಅವರಿಗೆ ನಯ, ಭಯ, ಭಕ್ತಿಗಳನ್ನು ಬೋಧಿಸುತ್ತಲಿರುವದೇ ತನ್ನ ಉದ್ಯೋಗವೆಂದು ನಿಶ್ಚಯಿಸಿ ಪ್ರತಿಫಲಾಭಿಲಾಷೆಯಿಲ್ಲದೆ ತನ್ನ ಬೋಧಕೋದ್ಯೋಗವನ್ನು ಮಾಡಿದನು. ಇಂತಹ ಸತ್ಪುರುಷನನ್ನು ಆ ದೇಶದ ಮತಾಭಿಮಾನಿಗಳೂ ಸರಕಾರದ ಅಧಿಕಾರಿಗಳೂ ಪ್ರಜೆಗಳಿಗೆ ದುರ್ಬೋಧನೆಮಾಡಿ ಆತನನ್ನು ಹಿಡಿಸಿ ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿ ವಿಚಾರಣೆಮಾಡಿದರು. ಆತನು ಕೇವಲ ನಿರಪರಾಧಿಯೆಂದು ಮಹಾಧಿಕಾರಿಗಳೂ ದೇಶಾಧಿಪತಿಗಳೂ ತಿಳಿದರು. ಆದರೂ ಆತನ ಮೇಲೆ ಹಟಸಾಧಿಸಿ ತಮ್ಮ ದುರಾಗ್ರಹಕ್ಕೆ ಆತನನ್ನು ಆಹುತಿಮಾಡಿದರು. ಹೀಗೆ ಕ್ರಿಸ್ತನು ನಿರಪರಾಧ, ನೀತಿ, ಸತ್ಯ ಪರೋಪಕಾರಗಳಿಗೆ ಸಾಕ್ಷಿಯಾಗಿ, ಸುಳ್ಳು, ಅನ್ಯಾಯ, ಕ್ರೌರ್ಯ, ಹಗೆಗಳಿಂದ ತಮ್ಮ ದುರುದ್ದೇಶಗಳನ್ನು ಸಾಧಿಸುವವರ ಕೈಗೆ ಸಿಕ್ಕಿ ಮೃತಪಟ್ಟದರ ಜ್ಞಾಪಕಾರ್ಥವಾಗಿ ಈ ಶುಕ್ರವಾರವನ್ನು ಕ್ರಿಸ್ತನ ಶಿಷ್ಯರು ಆಚರಿಸುತ್ತಾರೆ.

ಆದರೆ ಆತನು ಯಾತಕ್ಕೆ ತನ್ನ ವಿರೋಧಿಗಳ ಕೈಯಿಂದ ತಪ್ಪಿಸಿಕೊಳ್ಳುವದಕ್ಕೆ ಯತ್ನಿಸಲಿಲ್ಲ? ಬೇಕೆಂದು ಅಪಾಯಕ್ಕೂ ವಿಪತ್ತಿಗೂ ಯಾರೂ ಸಿಕ್ಕುವದಿಲ್ಲ. ಯಾರಾದರೂ ನಮ್ಮನ್ನು ಹಗೆಮಾಡಿ ನಮ್ಮ ಮೇಲೆ ಹಾವು ತೀರಿಸಿಕೊಳ್ಳಬೇಕೆಂದು ಯತ್ನಿಸಿದರೆ ನಾವು ಅದಕ್ಕೆ ತಕ್ಕ ಪರಿಹಾರವನ್ನು ಹುಡುಕುತ್ತೇವೆ. ಒಂದು ಗ್ರಾಮದಲ್ಲಿ ಪ್ಲೇಗ್, ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳಿದ್ದರೆ ಅಂತಹ ಗ್ರಾಮದಲ್ಲಿ ಎಷ್ಟೇ ಕೆಲಸವಿದ್ದರೂ ಅಲ್ಲಿಗೆ ಹೋಗುವದಕ್ಕೆ ಭಯಪಡುತ್ತೇವೆ. ನಾವು ಹೋಗುವ ದಾರಿಯಲ್ಲಿ ಮನುಷ್ಯರನ್ನು ಹಿಡಿದು ತಿನ್ನುವ ಹೆಬ್ಬುಲಿ ಇದೆಯೆಂದು ತಿಳಿದರೆ ಆ ಮಾರ್ಗವನ್ನೇ ಬಿಟ್ಟು ಬಳಸಿಕೊಂಡು ಹೋಗುತ್ತೇವೆ. ಪ್ರಾಣದ ಮೇಲೆ ಎಲ್ಲರಿಗೂ ಸ್ವಾಭಾವಿಕವಾಗಿ ಪ್ರೀತಿ ಇದೆ. ಹೀಗಿರುವಲ್ಲಿ ಕ್ರಿಸ್ತನು ಶತ್ರುಗಳ ಅಪಾಯಕ್ಕೆ ಯಾಕೆ ತಪ್ಪಿಸಿಕೊಂಡು ಹೋಗಲಿಲ್ಲ? ಮತ್ತು ಆತನು ದೇವರೇ ಆಗಿದ್ದರೆ ಶತ್ರುಗಳನ್ನು ನಾಶಮಾಡುವದು ಸುಲಭ ಸಾಧ್ಯವಾಗಿತ್ತು. ಆತನು ತನ್ನಲ್ಲಿದ್ದ ದೈವಶಕ್ತಿಯನ್ನು ಯಾಕೆ ಈ ಆಪತ್ಕಾಲದಲ್ಲಿ ಪ್ರಯೋಗಿಸಲಿಲ್ಲ? ಮತ್ತು ಆತನನ್ನು ಹಿಡಿಯುವದಕ್ಕೆ ಬಂದ ಶತ್ರುಗಳನ್ನು ಸಂಹರಿಸುವೆನೆಂದು ಆತನ ಶಿಷ್ಯರಲ್ಲಿ ಒಬ್ಬನು ಕತ್ತಿಯನ್ನು ಹಿಡಿದು ಅವರನ್ನು ಕಡಿಯುವದಕ್ಕೆ ಹೋಗುತ್ತಿರುವದನ್ನು ಕ್ರಿಸ್ತನು ಕಂಡು—ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕು; ನಾನು ನನ್ನ ತಂದೆಯಾದ ದೇವರನ್ನು ಬೇಡಿದರೆ ಆತನು ಈಗಲೆ ನನ್ನ ಸಹಾಯಕ್ಕೆ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೂತರನ್ನು ಕಳುಹಿಸಿಕೊಡುವನು ಎಂದು ತನ್ನ ಶಿಷ್ಯನನ್ನು ಶಾಂತಪಡಿಸಿದನು. ಇದನ್ನೆಲ್ಲಾ ನೋಡಲಾಗಿ ಕ್ರಿಸ್ತನಿಗೆ ಪ್ರಾಣಾಪತ್ತಿನಿಂದ ತಪ್ಪಿಸಿಕೊಳ್ಳುವದಕ್ಕೆ ಅನುಕೂಲಗಳಿದ್ದರೂ ಆತನು ತಪ್ಪಿಸಿಕೊಳ್ಳುವದಕ್ಕೆ ಸ್ವಲ್ಪವೂ ಪ್ರಯತ್ನಮಾಡಲಿಲ್ಲವೆಂದು ವ್ಯಕ್ತವಾಗುತ್ತದೆ. ತಪ್ಪಿಸಿಕೊಳ್ಳುವ ಉಪಾಯವನ್ನು ಮೊದಲು ಕೆಲವು ಸಾರಿ ಪ್ರಯೋಗಿಸಿ ತಪ್ಪಿಸಿಕೊಂಡಿದ್ದನು. ಆದರೆ ತಾನು ಪ್ರಾಣತ್ಯಾಗವನ್ನು ಮಾಡಬೇಕಾದ ಘಳಿಗೆ ಬಂದದ್ದನ್ನು ತಿಳಿದು ಇನ್ನು ತಪ್ಪಿಸಿಕೊಳ್ಳುವ ಉಪಾಯವನ್ನು ಪ್ರಯೋಗಿಸದೆ ಹೋದನು. ಆತನು ತಾನು ಪರಲೋಕವನ್ನೇರುವ ದಿವಸಗಳು ತುಂಬುತ್ತಾ ಬರುವಾಗ ಯೆರೂಸಲೇಮಿಗೆ ಹೋಗುವದಕ್ಕೆ ಧೀರಮುಖವುಳ್ಳವನಾಗಿದ್ದನು. ಮತ್ತು ಈ ಕಾಲದಲ್ಲಿ ತನ್ನ ಶಿಷ್ಯರಿಗೆ ಆತನು ಪದೇ ಪದೇ ಹೇಳುತ್ತಿದ್ದುದೇನಂದರೆ—ನೋಡಿರಿ; ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ. ಅವರು ನನ್ನನ್ನು ಅಲ್ಲಿ ಅನ್ಯಜಾತಿಗಳ ಕೈಗೆ ಹಿಡುಕೊಡುವರು. ಅವರು ನನ್ನನ್ನು ಅಪಹಾಸ್ಯಮಾಡಿ, ಬೈದು, ನನ್ನ ಮೇಲೆ ಉಗುಳಿ ನನ್ನನ್ನು ಕೊರಡೆಗಳಿಂದ ಹೊಡೆದು ಕೊಂದುಹಾಕುವರು ಎಂದು ಹೇಳಿದನು.

ಕ್ರಿಸ್ತನು ತನ್ನ ಜೀವಮಾನದ ಆದಿಭಾಗದಲ್ಲಿ ಶತ್ರುಗಳ ಅಪಾಯಕ್ಕೆ ತಪ್ಪಿಸಿಕೊಳ್ಳುತ್ತಿದ್ದು ಈಗ ಹೊಂಚು ಹಾಕುತ್ತಿದ್ದ ಶತ್ರುಗಳ ನಡುವೆ ತಾನೇ ನುಗ್ಗಿ ಅವರ ಕೈಗೆ ಸಿಕ್ಕಿದ್ದು ಯಾಕೆ? ಸತ್ಯ, ನೀತಿ, ಪರೋಪಕಾರ, ಧರ್ಮಗಳನ್ನು ಅಡ್ಡಿಯಿಲ್ಲದೆ ನಡಿಸುವದಕ್ಕೆ ಒಬ್ಬನು ಶಕ್ತನಾಗಿರುವ ವರೆಗೂ ಅನುಕೂಲವಿರುವ ವರೆಗೂ ಒಬ್ಬನು ತನ್ನ ಪ್ರಾಣವನ್ನು ಅಮೂಲ್ಯವಾದ ಸೊತ್ತೆಂದು ಭಾವಿಸಿ ಅದನ್ನು ಕಾಪಾಡಿಕೊಳ್ಳುವದಕ್ಕೆ ಪ್ರಯತ್ನಮಾಡುವದು ಸರಿ. ಆದರೆ ಪ್ರತಿ ಸತ್ಯವಂತನ ಜೀವಿತ ಕಾಲದಲ್ಲಿ ಒಂದು ಘಳಿಗೆಯು ಬರುತ್ತದೆ. ಆ ಕಾಲದಲ್ಲಿ ಅವನು ನಿರ್ವಾಹವಿಲ್ಲದೆ ಇಕ್ಕಟ್ಟಿಗೆ ಸಿಕ್ಕಿಬೀಳುತ್ತಾನೆ. ಅವನು ಈ ವರೆಗೂ ಸತ್ಯ, ನೀತಿ, ಪರೋಪಕಾರಗಳನ್ನು ತನ್ನ ಪ್ರಾಣಪದಕದ ಹಾಗೆ ಭಾವಿಸಿ ಅವುಗಳನ್ನು ನೆರವೇರಿಸುತ್ತಿದ್ದನು. ಈಗಲಾದರೋ ತನಗೆ ಪ್ರಾಣದಷ್ಟು ಪ್ರಿಯಕರವಾಗಿದ್ದ ಸತ್ಯ, ನೀತಿ, ಪರೋಪಕಾರಗಳನ್ನು ತ್ಯಜಿಸಿ ಅಸತ್ಯವನ್ನು ಹೇಳುವದಕ್ಕೂ ದುರ್ನೀತಿಯನ್ನು ಮಾಡುವದಕ್ಕೂ ಒಪ್ಪಬೇಕು. ಹಾಗಿಲ್ಲದೆ ಏನಾದರು ಸಂಭವಿಸಲಿ; ಸತ್ಯ, ನೀತಿ, ಧರ್ಮಗಳನ್ನು ನಾನು ತ್ಯಜಿಸಲೊಲ್ಲೆನೆಂದು ಅವನು ನಿಶ್ಚಯಿಸಿದರೆ ಪ್ರಾಣತ್ಯಾಗವನ್ನು ಮಾಡಲೇಬೇಕಾಗುವದು. ಈ ಲೋಕವು ಕೆಟ್ಟದ್ದು. ಇದರಲ್ಲಿದ್ದುಕೊಂಡು ನೀತಿ, ಸತ್ಯ, ಧರ್ಮಗಳನ್ನು ನಿಶ್ಚಾಸದಿಂದ ಅನವರತವೂ ಆಚರಿಸುವವನು ಹೇಡಿಗಳೂ, ಕಪಟಿಗಳೂ, ಸ್ವಾರ್ಥಪರರೂ ಆಗಿ ವರ್ತಿಸುವವರ ಹಗೆಗೂ ಮತ್ಸರಕ್ಕೂ ಗುರಿಯಾಗದೆ ಬಹುಕಾಲ ಇರುವದಕ್ಕೆ ಆಗುವದಿಲ್ಲ. ಲೋಕವು ಅಂಥವನನ್ನು ಹಿಡಿಯುವದಕ್ಕೆ ಹೊಂಚುಹಾಕುತ್ತಿದ್ದು ಸಂದರ್ಭವನ್ನು ಕಾದು—ಈಗ ನಿನ್ನ ಪ್ರಾಣವನ್ನು ಉಳಿಸಿಕೊಳ್ಳ ಮನಸ್ಸಿದ್ದರೆ ನೀನು ಆಚರಿಸುವ ಸತ್ಯವನ್ನೂ ನೀತಿಯನ್ನೂ ತ್ಯಜಿಸು; ಇಲ್ಲವಾದರೆ ಪ್ರಾಣವನ್ನು ಕಳಕೊಳ್ಳುವದಕ್ಕೆ ಸಿದ್ಧವಾಗು ಎಂದು ಹೇಳುವದು.

ಕ್ರಿಸ್ತನಿಗೆ ಆತನ ಮೂವತ್ತನೇ ವರುಷದಲ್ಲಿ ಇಂತಹ ಸಂದರ್ಭವು ಬಂದೊದಗಿತು. ಆತನು ಪರೋಪಕಾರ ಮಾಡುವದರಲ್ಲಿ ಅದ್ಭುತಶಕ್ತಿಯನ್ನು ಪ್ರಯೋಗಿಸುತ್ತಿದ್ದನು. ಆ ಸೀಮೆಯ ರಾಜಧಾನಿಯಾದ ಯೆರೂಸಲೇಮಿಗೆ ಸುಮಾರು ಒಂದು ಮೈಲು ದೂರದಲ್ಲಿದ್ದ ಹಳ್ಳಿಯಲ್ಲಿ ಕ್ರಿಸ್ತನ ಆಪ್ತ ಮಿತ್ರನು ಈ ಕಾಲಕ್ಕೆ ಸರಿಯಾಗಿ ಸತ್ತುಹೋದನು. ಮೃತಪಟ್ಟವನ ಬಂಧುಗಳು ಆ ಸುದ್ದಿಯನ್ನು ಯೇಸುವಿಗೆ ಹೇಳಿಕಳುಹಿಸಲು, ಯೇಸು ಕ್ರಿಸ್ತನು ಆ ಹಳ್ಳಿಗೆ ಹೋಗಿ ಸತ್ತವನಿಗೆ ಪುನಃ ಜೀವಬರುವಂತೆ ಮಾಡಿ ಅವನನ್ನು ಬದುಕಿಸಿದನು. ಕ್ರಿಸ್ತನ ಶತ್ರುಗಳು ಇದನ್ನು ನೋಡಿ ಸಹಿಸಲಾರದೆ—ಇವನನ್ನು ಹೇಗಾದರು ಮುಗಿಸಿಕೊಳ್ಳಬೇಕೆಂದು ನಿಶ್ಚಯಿಸಿ ಆತನನ್ನು ಹಿಡಿಸಿ ಕೊಂದುಹಾಕಿದರು.

ಯೇಸು ಕ್ರಿಸ್ತನು ಹೀಗೆ ಸತ್ತುಹೋದರೂ ಆತನು ಬದುಕಿ ಮಾಡಿದ ಉಪಕಾರಗಳಿಗಿಂತ ಆತನು ತನ್ನ ಮರಣದಿಂದ ಮಾಡಿದ ಪ್ರಾಯಶ್ಚಿತ್ತವೇ ಲೋಕವನ್ನು ರಕ್ಷಿಸುವ ಮಹೋಪಕಾರವಾಯಿತು. ಸತ್ಯ, ನೀತಿ, ಪರೋಪಕಾರಗಳನ್ನು ಮಾಡುವವರಲ್ಲಿ ಎಷ್ಟೇ ಕಷ್ಟಗಳು ಬಂದರೂ ಕಡೆಗೆ ಪ್ರಾಣಾಪತ್ತು ಸಂಭವಿಸಿದರೂ ಅವುಗಳನ್ನು ತ್ಯಜಿಸಲೇಕೂಡದೆಂದು ಯೇಸು ಕ್ರಿಸ್ತನು ತನ್ನ ಮರಣದಿಂದ ಎಲ್ಲರಿಗೂ ಹೇಳುತ್ತಾನೆ. ಮತ್ತು ಈ ಕಷ್ಟಕರವಾದ ಕೆಲಸದಲ್ಲಿ ಆತನ ಮೇಲ್ಪಂಕ್ತಿಯನ್ನು ಹಿಡಿದು ನಡೆಯುವವರಿಗೆ ಈಗಲೂ ಆತನು ತನ್ನ ಶಕ್ತಿಯನ್ನು ಅವರಿಗೆ ಸಹಾಯವಾಗಿ ಕೊಡುತ್ತಾನೆ. ಇದೂ ಅಲ್ಲದೆ ಯಾರಾದರೂ ಪಾಪವನ್ನು ಮಾಡಿ ಪಾಪದ ಸೇವೆಯಲ್ಲಿ ಬೇಸರಪಟ್ಟು ಪಶ್ಚಾತ್ತಾಪಪಟ್ಟು ಪಾಪವನ್ನು ವಿಸರ್ಜಿಸಿ ಸತ್ಯವನ್ನೂ ನೀತಿಯನ್ನೂ ಪವಿತ್ರತ್ವವನ್ನೂ ಹೊಂದಬೇಕೆಂದು ಅಪೇಕ್ಷಿಸಿ ಕ್ರಿಸ್ತನ ಬಳಿಗೆ ಬಂದು ಆತನನ್ನು ಆಶ್ರಯಿಸಿದರೆ ಈಗಲೂ ಆತನು ಅವರ ಅಪರಾಧವನ್ನು ಮನ್ನಿಸಿ ಅವರಿಗೆ ತನ್ನ ಪರಿಶುದ್ಧವಾದ ಸ್ವಭಾವವನ್ನು ಕೊಟ್ಟು ಅವರನ್ನು ರಕ್ಷಿಸುತ್ತಾನೆ.

ಯುದ್ಧದ ಸಮಾಚಾರಗಳು.

ರಷ್ಯಾದವರು ಮುಂದರಿಸಿದರು.

ಕಳೆದ ವಾರ ರಣರಂಗದ ಎಲ್ಲಾ ಕಡೆಗಳಲ್ಲೂ ವಿಶೇಷ ಕದನಗಳಾದಂತೆ ತಂತೀ ವರ್ತಮಾನಗಳು ತಿಳಿಸುತ್ತವೆ. ಆದರೆ ಉದ್ದಕ್ಕೂ ನಮ್ಮ ಪಕ್ಷದವರು ಮುಂದರಿಸಿ ಕ್ರಮವಾಗಿ ನುಗ್ಗಿ ಹೋಗುತ್ತಿರುವುದು ವಿನಾ ಬಹಳ ಪ್ರಾಮುಖ್ಯವಾದ ಸಂಗತಿಯೇನೂ ನಡೆದಿರುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ತಂತೀ ವರ್ತಮಾನಗಳು ಹಿಂದೆ ನಡೆದ ಕದನಗಳ ವಿವರಣೆಗಳನ್ನೇ ವಿಶೇಷವಾಗಿ ತಿಳಿಸಿರುವವು. ಕಳೆದ ವಾರದಲ್ಲಿ ಫ್ರೆಂಚರು ಆಲ್ಸಾಸಿನಲ್ಲಿ ಒಂದು ಬಹು ಮುಖ್ಯವಾದ ಗುಡ್ಡ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡರು. ಆ ಕಾಲದಲ್ಲಿ ನಡೆದ ಕದನದಲ್ಲಿ ಜರ್ಮನಿಯವರ ಕಡೆ ಕೆಲವು ಸಾವಿರ ಸೈನಿಕರು ಕೊಲೆಯಾದರು. ಫ್ರೆಂಚರು ಶತ್ರು ಸೈನಿಕರಲ್ಲಿ ಅನೇಕ ಗಾಯಪಟ್ಟವರನ್ನೂ 393 ಮಂದಿ ಗಾಯಪಡದವರನ್ನೂ ಕೈಸೆರೆ ಹಿಡಿದುಕೊಂಡರು.

ಜರ್ಮನಿಯವರು ವಿಮಾನ ಯಂತ್ರಗಳನ್ನು ಪಾರಿಸ್ಸಿಗೆ ಮತ್ತೆ ಕಳುಹಿಕೊಟ್ಟರು. ಆದರೆ ಅವುಗಳಿಗೆ ಆ ನಗರದ ಸಮೀಪಕ್ಕೆ ಬರಲು ಅವಕಾಶವೇ ದೊರೆಯಲಿಲ್ಲ. ರೀಮ್ಸ್ ನಗರದೊಳಕ್ಕೆ ಕೆಲವು ಸಿಡಿಮದ್ದಿನ ಗುಂಡುಗಳನ್ನು ಜರ್ಮನಿಯವರು ವಿಮಾನಗಳಿಂದ ಹಾಕಿದರು. ಅವು ಒಡೆದು ಪ್ರಜೆಗಳಲ್ಲಿ ಮೂರು ಮಂದಿ ಮೃತಪಟ್ಟರು. ಇದಲ್ಲದೆ ಜರ್ಮನಿಯವರು ಆಲ್ಬರ್ಟ್ ಎಂಬ ಪಟ್ಟಣದ ಸಿವಿಲ್ ಆಸ್ಪತ್ರೆಗೆ ಫಿರಂಗಿ ಗುಂಡುಗಳನ್ನು ಹೊಡೆದರು. ಮೂರು ಮಂದಿ ಮುದುಕರು ಕೊಲೆಯಾದರು; ಆಸ್ಪತ್ರೆಯ ಮೇಟ್ರನ್ ಎಂಬ ಸ್ತ್ರೀ ಅಧಿಕಾರಿಗೆ ತುಂಬಾ ಗಾಯವಾಗಿದೆ

ಜರ್ಮನಿಯವರ ಸ್ವಾಧೀನದಲ್ಲಿರುವ ಹದಿನಾರು ರೈಲ್ವೆ ಸ್ಟೇಷನ್‌ಗಳಿಗೆ ಫ್ರೆಂಚರ ವಿಮಾನ ಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ರೈಲ್ವೆ ಸ್ಟೇಷನ್‌ಗಳಲ್ಲೂ ಯುದ್ಧಸಾಮಗ್ರಿಗಳ ಉಗ್ರಾಣಗಳಲ್ಲೂ ಗುಂಡುಗಳು ಬಿದ್ದು ತುಂಬಾ ನಷ್ಟಪಡಿಸುತ್ತವೆ.

ಆಂಟ್ವರ್ಪ್ ನಗರದಲ್ಲಿ ಜರ್ಮನಿಯವರು ಸಬ್‌ಮರೀನುಗಳನ್ನು ಕಟ್ಟುತ್ತಿದ್ದ ಭಾಗದ ಮೇಲೆ ಬ್ರಿಟಿಷ್ ವಿಮಾನಕಾರರು ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಆಗ ಮಂಜು ವಿಶೇಷವಾಗಿ ಸುರಿಯುತ್ತಿದ್ದದ್ದರಿಂದ ಎರಡು ಯಂತ್ರಗಳು ವಾಪಸು ಬಂದುಬಿಟ್ಟವು; ಇನ್ನೊಂದು ವಿಮಾನವು ಹಾಲೆಂಡಿನಲ್ಲಿ ಇಳಿಯಿತು. ಮತ್ತೆರಡು ವಿಮಾನ ಯಂತ್ರಗಳು ತಲಾ ನಾಲ್ಕು ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಆ ಗುಂಡುಗಳು ಬಿದ್ದು ಜರ್ಮನಿಯವರ ಎರಡು ಸಬ್‌ಮರೀನುಗಳು ಹತ್ತಿಕೊಂಡು ಉರಿದುಹೋದವು.

ಒಬ್ಬಾನೊಬ್ಬ ಹೆಂಗಸು ಗೂಢಚಾರಳಾಗಿ ಜರ್ಮನಿಯವರಿಗೆ ಫ್ರೆಂಚರ ಕಡೆಯ ಸಮಾಚಾರಗಳನ್ನು ತೆಗೆದುಕೊಂಡುಹೋಗಿ ಹೇಳುತ್ತಿದ್ದದ್ದನ್ನು ಕಂಡು ಫ್ರೆಂಚರು ಅವಳನ್ನು ಹಿಡಿದು ಗುಂಡಿನಿಂದ ಹೊಡೆದು ಕೊಂದುಹಾಕಿದರು.

ಫ್ಲಾಂಡರ್ಸಿನಲ್ಲಿ ಮೊನ್ನೆ ತಾನೇ ನಡೆದ ಒಂದು ಕದನದಲ್ಲಿ ಬ್ರಿಟಿಷರ ಕಡೆ ಹುದ್ದೇದಾರರೇ 500 ಮಂದಿಯ ತನಕ ನಷ್ಟವಾದಂತೆ ಹೇಳಲಾಗಿದೆ. ಅವರು ಮುಂದರಿದು ತಮ್ಮ ಸೈನಿಕರನ್ನು ನುಗ್ಗಿಸಿ ಶತ್ರುವಿನ ಕಡೆ ವರ್ತಮಾನವನ್ನು ತಿಳಿಯಬೇಕೆಂದು ಪ್ರಯತ್ನಪಟ್ಟರೆಂದು ತಿಳಿಯುವುದು. ಸೈನಿಕರೂ ವಿಶೇಷ

ಜನೇ ನಷ್ಟವಾದರು. ಆದಾಗ್ಯೂ ಅಷ್ಟೊಂದು ಹುದ್ದೇದಾರರಿಗೆ ತಕ್ಕಷ್ಟು ಮಂದಿ ಸೈನಿಕರು ನಷ್ಟವಾಗಲಿಲ್ಲ. ಆ ಯುದ್ಧದಲ್ಲಿ ಹಿಂದುಸ್ಥಾನದ ಸೈನಿಕರು ಚೆನ್ನಾಗಿ ಕಾದಾಡಿದರು. ಅವರಲ್ಲಿ ಬಹು ಮಂದಿ ನಷ್ಟಪಟ್ಟಾಗ್ಯೂ ಅವರು ಇನ್ನೊಂದು ಸಲ ನುಗ್ಗಿ ಯುದ್ಧಮಾಡಬೇಕೆಂಬ ಆತುರವುಳ್ಳವರಾಗಿದ್ದರು.

ಫ್ರೆಂಚ್ ಸೈನ್ಯವು ಈಗ ಪರಿಪೂರ್ಣವಾದದ್ದಾಗಿದೆ. ಅವರ 25 ಲಕ್ಷ ಸೈನ್ಯವು ಬಹಳ ಚೆನ್ನಾಗಿ ತರಬೇತಾಗಿ ಯುದ್ಧಭೂಮಿಗೆ ಹೋಗಿದೆ. ಅವರ ಹುದ್ದೇದಾರರುಗಳೆಲ್ಲಾ ತುಂಬಾ ಸಮರ್ಥರೂ ಪರಾಕ್ರಮಿಗಳೂ ಆಗಿದಾರೆ. ಮುಂದೆ ಯುದ್ಧಸಾಲಿನಲ್ಲಿ ನಷ್ಟಪಡುವಂಥಾ ಸೈನಿಕರ ಸ್ಥಾನಗಳಿಗೆ ರವಾನೆ ಮಾಡುವುದಕ್ಕೆ ಬೇರೆ 15 ಲಕ್ಷ ಸೈನ್ಯವನ್ನು ತಯಾರುಮಾಡಿ ಸಿದ್ಧವಾಗಿ ಬೇರೆ ಬೇರೆ ಕಡೆಗಳಲ್ಲಿ ಇಟ್ಟುಕೊಂಡಿದಾರೆ. ಫ್ರೆಂಚರ ಪಿರಂಗಿ ಗುಂಡುಗಳಿಗೆ ಬೇಕಾದಷ್ಟು ಮದ್ದು ಗುಂಡು ಒಂದಾನೊಂದು ವೇಳೆ ಒದಗಿರಲಿಲ್ಲ. ಈಗ ಅವರುಗಳಿಗೆ ಬೇಕಾದಷ್ಟನ್ನೂ ತಯಾರುಮಾಡಿಕೊಳ್ಳುತ್ತಿದಾರಲ್ಲದೆ ತಾವು ತಯಾರುಮಾಡಿದ ಮದ್ದು ಗುಂಡನ್ನು ಸರ್ಬಿಯಾ ದೇಶದವರಿಗೂ ಕಳುಹಿಸಿಕೊಡುತ್ತಿದಾರೆ.

ಯುದ್ಧಭೂಮಿಯಲ್ಲಿ ಬ್ರಿಟಿಷ್ ಸೈನ್ಯಾಧಿಪತಿಯು ಒಬ್ಬ ಬಾತ್ಮೀದಾರರ ಕೂಡ ಮಾತನಾಡುವಾಗ್ಗೆ ಹೇಳಿದ್ದೇನೆಂದರೆ—ಜರ್ಮನಿಯವರು ಉದ್ದೇಶ ಮಾಡಿಕೊಂಡಿದ್ದದ್ದೆಲ್ಲಾ ತಲೆಕೆಳಗಾಯಿತು. ದಿನದಿನಕ್ಕೆ ಅವರ ಕಷ್ಟನಷ್ಟಗಳು ಹೆಚ್ಚುತ್ತಾ ಬಂದಿರುವವು. ಶೀತಕಾಲದ ದೆಸೆಯಿಂದ ನಮ್ಮ ಪಕ್ಷದ ಸೈನಿಕರಿಗೆ ಏನೂ ತೊಂದರೆಯಾಗಲಿಲ್ಲ. ಫ್ರೆಂಚರ ಸೈನ್ಯಗಳು ಬಹಳ ಒಳ್ಳೇ ಸ್ಥಿತಿಯಲ್ಲಿರುವವು. ಈ ಯುದ್ಧವು ದೀರ್ಘಕಾಲ ನಡೆಯುವುದೆಂದು ನನಗೆ ತೋರುವುದಿಲ್ಲ. ಮುಂದಿನಾಗಿಯೂ ನಮ್ಮ ಪಕ್ಷದವರಿಗೆ ಜಯಪ್ರದವಾಗುವುದೆಂದು ನಂಬುತ್ತೇನೆ ಎಂದು ಹೇಳಿದರು.

ಪೂರ್ವ ರಣರಂಗ.

ಪೆಂಸೆಲ್ ನಗರವು ರಷ್ಯಾದವರಿಗೆ ಸ್ವಾಧೀನವಾದ ವಿವರಗಳು ಈಗ ತಕ್ಕಮಟ್ಟಿಗೆ ತಿಳಿಯುತ್ತವೆ. ಆಸ್ಟ್ರಿಯಾದವರು ಆ ಕೋಟೆಯೊಳಗಿದ್ದ ತಮ್ಮ ಸೈನಿಕರು ನಾಲ್ಕೂವರೆ ತಿಂಗಳಿಂದಲೂ ಬಹು ಪರಾಕ್ರಮದಿಂದ ಕಾದಿದರೆಂದೂ, ಕಡೆಯಲ್ಲಿ ಅವರು ರಷ್ಯಾದವರ ಮೇಲೆ ನುಗ್ಗಿ ಅವರ ಸಾಲುಗಳನ್ನು ಭೇದಿಸಬೇಕೆಂದು ಪ್ರಾಣದ ಮೇಲೆ ಆಂಗೀಜರದೆ ಕದನ ಮಾಡಿದರೆಂದೂ ಹೇಳುವರು. ಅವರು ಏಳು ಗಂಟೆಗಳ ಹೊತ್ತು ಕಾದಾಡಿದರು. ರಷ್ಯಾದವರು ಅಪಾರವಾಗಿ ನುಗ್ಗಿ ಅವರನ್ನು ಹಿಂದಕ್ಕೆ ಓಡಿಸಿಬಿಟ್ಟರು. ಕಡೆಯಲ್ಲಿ ಆಸ್ಟ್ರಿಯಾ ಸೈನಿಕರು ಕೋಟೆಯೊಳಗೆ ಮೂರು ದಿನಗಳ ಮಟ್ಟಿಗಾಗುವಷ್ಟು ಆಹಾರ ಪದಾರ್ಥಗಳವೆ ಎಂಬುದನ್ನು ಕಂಡು ಕೋಟೆಯನ್ನು ರಷ್ಯಾದವರಿಗೆ ಒಪ್ಪಿಸಿ ಶರಣಾಗತರಾದರು. ಅವರು ಒಪ್ಪಿಸುವುದಕ್ಕೆ ಮುಂಚೆ ಕೋಟೆಯೊಳಗಿದ್ದ ಸೇತುವೆಗಳನ್ನೂ, ಕೋಟೆಗಳನ್ನೂ, ದೊಡ್ಡ ದೊಡ್ಡ ಪಿರಂಗಿಗಳನ್ನೂ ಒಡೆದು ಹಾಳು ಮಾಡಿದ್ದರು.

ಪೆಂಸೆಲ್ ನಗರದಲ್ಲಿ ರಷ್ಯಾದವರು ಮುಂದೆ ಹೇಳುವವುಗಳನ್ನು ಸ್ವಾಧೀನಪಡಿಸಿಕೊಂಡರೆಂದು ಹೇಳುತ್ತಾರೆ. ದಳಪತಿಗಳು 9 ಮಂದಿ, ಸ್ಟಾಫ್ ಹುದ್ದೇದಾರರು 93 ಮಂದಿ, ಹುದ್ದೇದಾರರು 2,500 ಮಂದಿ, ಸೈನಿಕರು 1,17,000 ಮಂದಿ, ಇದಲ್ಲದೆ ಅನೇಕ ಬಂದೂಕುಗಳೂ ಮದ್ದು ಗುಂಡುಗಳೂ ಅವರ ವಶವಾದವು. ಮೊದಲಾದ ತಿಳಿಸಿದ್ದಕ್ಕಿಂತ ಈ ಸಂಖ್ಯೆಗಳು ಹೆಚ್ಚಾಗಿರುತ್ತವೆ. ಈ ಕದನ ಪ್ರಾರಂಭವಾಗುವಾಗ್ಗೆ ಈ ಕೋಟೆಯಲ್ಲಿ 1,70,000 ಸೈನ್ಯವಿತ್ತು. ಈ ಪೈಕಿ 40,000 ಕೊಲೆಯಾದರೆಂದೂ, 20,000 ಗಾಯಪಟ್ಟರೆಂದೂ ತಿಳಿಯುತ್ತದೆ. ಈ ಪೆಂಸೆಲ್ ಕೋಟೆಯ ಮುತ್ತಿಗೆಯನ್ನು ಬಿಡಿಸಬೇಕೆಂದು ಆಸ್ಟ್ರಿಯಾದವರು ತುಂಬಾ ಸಾಹಸಪಟ್ಟರು. ಅದರಲ್ಲಿ 2,00,000 ಸೈನ್ಯ ನಷ್ಟವಾಯಿತೆಂದೂ, 1,00,000 ಸೈನ್ಯವನ್ನು ರಷ್ಯಾದವರು ಸೆರೆ ಹಿಡಿದುಕೊಂಡರೆಂದೂ ತಿಳಿಯುತ್ತಿದೆ.

ಪೆಂಸೆಲ್ ಎಂಬುವುದು ಬಹು ವಿಶೇಷವಾದ ರೈಲ್ವೆ ಮಧ್ಯಸ್ಥಾನ; ಅದರ ಕೋಟೆಯು ಬಹಳ ಬಲವಾದದ್ದು. ಈ ಕೋಟೆಯು ರಷ್ಯಾದವರಿಗೆ ಸ್ವಾಧೀನವಾದ್ದರಿಂದ ಇನ್ನು ಅವರು ತಮ್ಮ ಒಂದು ಒಂದೂವರೆ ಲಕ್ಷ ಸೈನ್ಯವನ್ನು ಅಲ್ಲಿಂದ ಕರೆಸಿಕೊಂಡು ಕ್ರಾಕೋ ನಗರಕ್ಕೋ, ಆಸ್ಟ್ರಿಯಾದೊಳಕ್ಕೋ ಇಲ್ಲವೇ ಅವೆರಡರ ಮೇಲೂ ಕಳುಹಿಸಲು ಅನುಕೂಲವಾಯಿತು.

ಈ ಯುದ್ಧದಲ್ಲೆಲ್ಲಾ ಈ ಕೋಟೆಯನ್ನು ರಷ್ಯಾದವರು ಗೆದ್ದುಕೊಂಡದ್ದು ಬಹಳ ಪ್ರಖ್ಯಾತವಾದ ವಿಷಯ. ಕೆಲವು ತಿಂಗಳಿಂದಲೂ ಇಂಥಾ ವಿಶೇಷವಾದ ಸುದ್ದಿ ಬರಲಿಲ್ಲ. ಅತ್ತಲಾಗಿ ಕ್ರಾಕೋ ನಗರದಲ್ಲಿರುವ ಪ್ರಜೆಗಳೆಲ್ಲಾ ಊರು ಬಿಟ್ಟು ಹೊರಟುಹೋಗುವಂತೆ ಅಪ್ಪಣೆ ಕೊಡಲಾಯಿತೆಂದು ವರ್ತಮಾನವಿದೆ.

ದಕ್ಷಿಣ ಭಾಗದ ಕೊನೆಯಲ್ಲಿ ರಷ್ಯಾದವರು ಮೆಮೆಲ್ ತೀರಪಟ್ಟಣವನ್ನು ಸ್ವಾಧೀನ ಹೊರಟು ಹೋದರೆಂದೂ, ಇವರನ್ನು ಹಿಂದಕ್ಕೆ ಹೊರಡಿಸಿದ ಜರ್ಮನಿ ಸೈನ್ಯದಲ್ಲಿ ಕೈಸರರ ಒಬ್ಬ ಕುಮಾರನೂ ಹೋಗಿದ್ದನೆಂದೂ ಪ್ರಕಟವಾಗಿದೆ.

ಪೋಲೆಂಡಿನಲ್ಲಿ ಬಹು ಕ್ರೂರವಾದ ಕದನಗಳು ನಡೆದವು. ಜರ್ಮನಿಯವರು ಪದೇ ಪದೇ ರಷ್ಯಾದವರ ಮೇಲೆ ನುಗ್ಗಿ ಕಾದಾಡಿದರು. ಆದಾಗ್ಯೂ ಅವರು ರಷ್ಯಾದವರನ್ನು ಹಿಮ್ಮೆಟ್ಟಿಸಲು ಸಮರ್ಥರಾಗಲಿಲ್ಲ. ಜರ್ಮನಿಯವರ ಎರಡು ಪಟಾಲಂ ಸೈನ್ಯಗಳು ಸಂಪೂರ್ಣವಾಗಿ ನಾಶವಾದವು; ಇನ್ನೊಂದು ಸೈನ್ಯ ಸೋತುಹೋಯಿತು. ಜರ್ಮನಿಯವರು ವಾರ್ಸಾ ನಗರವನ್ನು ಗೆದ್ದುಕೊಳ್ಳಬೇಕೆಂದು ಮಾಡುವ ಪ್ರಯತ್ನಗಳೊಂದೂ ಇದುವರೆಗೆ ಸಾಗದೆ ಸೋತುಹೋಗುತ್ತಿದಾರೆ.

ಅಲ್ಲಿಂದ ದಕ್ಷಿಣಕ್ಕೆ ಕಾರ್ಪೇಥಿಯನ್ ಪರ್ವತಪ್ರಾಂತ್ಯದಲ್ಲಿ ಮಹಾ ಘೋರವಾದ ಯುದ್ಧಗಳು ನಡೆಯುತ್ತಲಿವೆ. ಒಂದು ರಾಜ್ಯದಲ್ಲಿ ಆಸ್ಟ್ರಿಯಾದವರು ಮೂರು ದಿನ ಏಕಪ್ರಕಾರವಾಗಿ ರಷ್ಯಾದವರ ಮೇಲೆ ಯುದ್ಧಮಾಡಿದರು. ಈ ಯುದ್ಧದಲ್ಲಿ ರಷ್ಯಾದವರು ಅನೇಕ ಆಸ್ಟ್ರಿಯಾ ಸೈನಿಕರನ್ನು ಸೆರೆ ಹಿಡಿದಿರುತ್ತಾರೆ. ಅಲ್ಲಿ ರಷ್ಯಾದವರು ತಮ್ಮ ಪಿರಂಗಿಗಳನ್ನು ಕೈಯಿಂದ ಎಳೆದುಕೊಂಡು ಕಂದಕಗಳನ್ನು ದಾಟಿಕೊಂಡು ಹೋಗಬೇಕಾಯಿತೆಂದೂ, ಆದರೂ ಅವರು ಧೈರ್ಯ ಗುಂದದೆ ಮುಂದರಿಸಿ ನುಗ್ಗಿ ಹೋದರೆಂದೂ ತಿಳಿಯುತ್ತದೆ. ಅವರಿಗೆ ಅಲ್ಲಿ 6,700 ಆಸ್ಟ್ರಿಯಾ ಸೈನ್ಯ ಸೆರೆ ಸಿಕ್ಕಿತು.

ಹಂಗೆರಿಯಲ್ಲೂ ಕದನಗಳು ನಡೆದಿವೆ. ಇಲ್ಲಿ ರಷ್ಯಾದವರು ಅನೇಕ ಆಸ್ಟ್ರಿಯಾ ಸೈನ್ಯಗಳನ್ನು ಸೆರೆ ಹಿಡಿದುಕೊಂಡರು.

ಜರ್ಮನಿಯವರು ರಷ್ಯಾದವರಿಗೆ ಸೇರಿದ ಪೋಲೆಂಡಿನೊಳಕ್ಕೆ ನುಗ್ಗಿ ಹೋಗುತ್ತಾ ಮಾರ್ಗದಲ್ಲಿ ಸಿಕ್ಕಿದ 96 ಪಟ್ಟಣಗಳನ್ನೂ, 4,500 ಗ್ರಾಮಗಳನ್ನೂ ನಾಶಪಡಿಸಿರುತ್ತಾರೆಂದೂ, ಅವರು ಆ ಪ್ರಾಂತ್ಯದಲ್ಲಿ ಹಾಳುಮಾಡಿರುವ ಆಸ್ತಿಪಾಸ್ತಿಗಳು ಸುಮಾರು 150,00,00,000 ರೂಪಾಯಿ ಬೆಲೆಯಾದೀತೆಂದೂ ಹೇಳಲಾಗಿದೆ.

ಟರ್ಕಿ.

ಡಾರ್ಡನೆಲ್ಸ್ ಬಳಿಯಲ್ಲಿ ಹವಾ ಸ್ಥಿತಿಯು ಸ್ವಲ್ಪವೂ ಚೆನ್ನಾಗಿಲ್ಲ. ಇದರ ದೆಸೆಯಿಂದ ನಮ್ಮ ಪಕ್ಷದವರ ಯುದ್ಧದ ಜಹಜುಗಳು ಕಳೆದ ವಾರ ವಿಶೇಷ ಕಾರ್ಯಗಳನ್ನು ನಡಿಸಲಾರದೆ ಹೋದವು. ಆದರೂ ಕೆಲವು ಸಣ್ಣ ಹಡಗುಗಳು ಮತ್ತೆ ಆ ಜಲಮಾರ್ಗದ ಇಕ್ಕಟ್ಟಾದ ಭಾಗಗಳಿಗೆ ಹೋಗಿ ಅಲ್ಲಿ ಸಮುದ್ರದೊಳಗಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಹುಡುಕಿ ತೆಗೆದುಹಾಕುತ್ತಿರುವವು. ಇದರಿಂದ ಟರ್ಕಿಯವರಿಗೆ ಅವಕಾಶದೊರಕಿತು. ಅವರು ಈ ಮಧ್ಯೆ ಕೋಟೆಗಳನ್ನು ದುರಸ್ತಿಮಾಡಿಕೊಂಡು ಹೊಸದಾಗಿ ಪಿರಂಗಿಗಳನ್ನು ಇಟ್ಟುಕೊಂಡಿರಬಹುದು. ಆದಾಗ್ಯೂ ಅಲ್ಲಿರುವ ಸಾಲುಕೋಟೆಗಳ ಪೈಕಿ ಪ್ರಾಮುಖ್ಯವಾಗಿದ್ದವುಗಳೆಲ್ಲಾ ನಾಶವಾಡಲ್ಪಟ್ಟವೆಂದೂ, ಜಲಮಾರ್ಗದಲ್ಲಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತೆಗೆದಮೇಲೆ ನಮ್ಮ ಪಕ್ಷದ ಜಹಜುಗಳು ಬೇಗ ಒಳಗೆ ನುಗ್ಗಿ ಹೋಗಬಲ್ಲವೆಂದೂ ಹೇಳಬಹುದು. ನಮ್ಮ ಪಕ್ಷದವರು ಮೊದಲಿನಂತೆಯೇ ಜಹಜುಗಳನ್ನು ಇಟ್ಟು ಬಲಪಡಿಸಿಕೊಂಡಿದಾರೆ. ಹವಾ ಸ್ಥಿತಿಯು ಅನುಕೂಲವಾದ ಒಡನೆಯೇ ನಮ್ಮ ಪಕ್ಷದವರ ಜಹಜುಗಳು ಮುಂದರಿಸಿ ನುಗ್ಗಿಹೋಗುವ ಪ್ರಯತ್ನವನ್ನು ಮಾಡುತ್ತವೆ. ಟರ್ಕಿಯವರ ಕಡೆ ತುಂಬಾ ನಷ್ಟವಾಯಿತು. ಅವರ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ ಪಟ್ಟಣದೊಳಗೆ ಕಲ್ಲಿದ್ದಲಿಗೇ ಕ್ಷಾಮವುಂಟಾಗಿದೆ ಎಂದೂ, ಪಟ್ಟಣವೆಲ್ಲಾ ರಾತ್ರಿಹೊತ್ತು ದೀಪಗಳಿಲ್ಲದೆ ಕಗ್ಗತ್ತಲು ಕವಿದಿದೆಯೆಂದೂ ಹೇಳುತ್ತಾರೆ.

ಕಪ್ಪು ಕಡಲಿನಿಂದ ಕಾನ್ಸ್ಟಾಂಟಿನೋಪಲ್ ನಗರಕ್ಕೆ ಹೋಗುವ ಬಾಸ್ಫರಸ್ ಎಂಬ ಜಲಮಾರ್ಗದಲ್ಲಿ ಟರ್ಕಿಯವರ ಕೋಟೆಗಳಿಗೆ ರಷ್ಯಾದವರ ಯುದ್ಧದ ಜಹಜುಗಳು ಪಿರಂಗಿಗಳನ್ನು ಎತ್ತಿಕಟ್ಟಿ ಹೊಡೆಯಲಾರಂಭಿಸಿರುತ್ತವೆ.

ಸೂಯೆಸ್ ಕಡಲು ಕಾಲುವೆಯ ಬಳಿ ಇನ್ನೊಂದು ಸಣ್ಣ ಕದನವಾಯಿತು. ಸೂಯೆಸ್ಸಿನ ಪೂರ್ವದಿಕ್ಕಿನಲ್ಲಿ ಸುಮಾರು 1,000 ಟರ್ಕಿ ಸೈನ್ಯಗಳು ಠಾಣ್ಯ ಹಾಕಿಕೊಂಡಿದ್ದವು. ಬ್ರಿಟಿಷ್ ಸೈನ್ಯಗಳು ಅವುಗಳ ಮೇಲೆ ನುಗ್ಗಿ ಓಡಿಸಿಬಿಟ್ಟವು. ಟರ್ಕಿಯವರು 50 ಹೆಣಗಳನ್ನೂ ಕೆಲವು ಮದ್ದು ಗುಂಡನ್ನೂ ಯುದ್ಧಭೂಮಿಯಲ್ಲಿ ಬಿಟ್ಟು ಓಡಿಹೋದರು. ಬ್ರಿಟಿಷರ ಕಡೆ 3 ಮಂದಿ ಕೊಲೆಯಾದರು; 16 ಮಂದಿಗೆ ಗಾಯಗಳಾಗಿವೆ.

ಕಾಕಸಸ್ ಬೆಟ್ಟ ಪ್ರದೇಶದಲ್ಲಿ ರಷ್ಯಾದವರಿಗೂ ಟರ್ಕಿಯವರಿಗೂ ಸ್ವಲ್ಪಮಟ್ಟಿಗೆ ಕದನಗಳಾಗಿರುತ್ತವೆ. ಟರ್ಕಿಯವರು ಸೋತು ಓಡುತ್ತಲಿದ್ದಾರೆ. ರಷ್ಯಾದವರು ಅನೇಕರನ್ನು ಸೆರೆ ಹಿಡಿದುಕೊಂಡದ್ದಲ್ಲದೆ ಅವರ ಯುದ್ಧಸಾಮಗ್ರಿಗಳನ್ನು ಕಿತ್ತು ಸ್ವಾಧೀನಪಡಿಸಿಕೊಂಡಿದಾರೆ.

ಸಮುದ್ರದ ಮೇಲೆ.

ಜರ್ಮನಿಯ ಕಾರ್ಲ್ಸ್‌ರೂಹೆ ಎಂಬ ಯುದ್ಧದ ಜಹಜು ಪಶ್ಚಿಮ ಇಂಡೀಸ್ ದ್ವೀಪಸಮುದಾಯಗಳಲ್ಲಿ ಬಂಡೆಗೆ ಬಡಿದು ಹಾಳಾಯಿತೆಂದು ಕಾಣುವುದು. ಬಾಲ್ಟಿಕ್ ಕಡಲಿನಲ್ಲೂ, ಕೀಲ್ ಕಾಲುವೆಯಲ್ಲೂ ಇರುವ ಜಹಜುಗಳನ್ನು ಬಿಟ್ಟರೆ ಜರ್ಮನಿಯವರ ಒಂದೇ ಒಂದು ಜಹಜು ಹೊರಗಡೆ ಇರುವಂತೆ ತಿಳಿಯುವುದು.

ಜರ್ಮನಿಯ ಕೆಲವು ಯುದ್ಧದ ಜಹಜುಗಳು ಬಾಲ್ಟಿಕ್ ಕಡಲಿನಲ್ಲಿ ರಷ್ಯಾ ತೀರದ ಮಾರ್ಗವಾಗಿ ಹೋಗಿ ಕೆಲವು ಗ್ರಾಮಗಳಿಗೆ ಗುಂಡುಗಳನ್ನು ಹೊಡೆದವು.

ಬ್ರಿಟಿಷರ ವ್ಯಾಪಾರದ ಹಡಗುಗಳನ್ನು ನಾಶಮಾಡುವೆವೆಂದು ಜರ್ಮನಿಯವರು ಕೊಚ್ಚಿಕೊಳ್ಳುವ ಮಾತು ಅಷ್ಟೇನೂ ವಿಶೇಷವಾಗಿ ಸಾರ್ಥಕವಾಗದೆ ಹೋಗಿದೆ. ಅವರು ಎರಡು ಬ್ರಿಟಿಷ್ ಹಡಗುಗಳನ್ನೂ ಒಂದು ಡಚ್ ಹಡಗನ್ನೂ ಮುಳುಗಿಸಿದರು. ಅವುಗಳಲ್ಲಿದ್ದವರು ಬದುಕಿಬಂದರು. ಡಚ್ಚರು ಯುದ್ಧಕ್ಕೆ ಸಂಬಂಧಪಟ್ಟವರಲ್ಲವಾದಕಾರಣ ಅವರ ಜಹಜನ್ನು ಜರ್ಮನಿಯವರು ಮುಳುಗಿಸಿದ್ದನ್ನು ನೋಡಿ ಅವರು ಜರ್ಮನಿಯವರ ಮೇಲೆ ಬಹಳ ಆಗ್ರಹ ಪಡುತ್ತಿದಾರೆ. ಜರ್ಮನಿಯ ವಿಮಾನ ಯಂತ್ರವು ಒಂದು ಬ್ರಿಟಿಷ್ ಜಹಜನ್ನು ಮುಳುಗಿಸಬೇಕೆಂದು ಪ್ರಯತ್ನಪಟ್ಟಿತು. ಆದರೆ ಜಹಜು ಅದರ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಬಂದಿದೆ. ಹೀಗೆಯೇ ಇನ್ನೊಂದು ಹಡಗು ತಪ್ಪಿಸಿಕೊಂಡು ಬಂತು. ಜರ್ಮನಿಯವರ ಒಂದು ಸಬ್‌ಮೆರೀನ್ ಹಡಗು ಮುಳುಗಿಸಲ್ಪಟ್ಟಿತು. ಇಂಗ್ಲಿಷ್ ತೀರಪಟ್ಟಣಗಳಿಗೆ ಬಂದು ಹೋಗುವ ಹಡಗುಗಳಿಗೆ ಯಾವ ಅಪಾಯವೂ ಸಂಭವಿಸದಂತೆ ಬಹಳ ಜಾಗರೂಕರಾದ ಏರ್ಪಾಟುಗಳನ್ನು ಮಾಡಿಟ್ಟು ನೋಡಿಕೊಳ್ಳುತ್ತಿದಾರೆ. ಇದುವರೆಗೆ ಸಂಭವಿಸಿರುವ ನಷ್ಟಗಳೆಲ್ಲಾ ಬಹಳ ಸ್ವಲ್ಪವೇ ಸರಿ. ಜರ್ಮನಿಯವರು ಬ್ರಿಟಿಷ್ ವ್ಯಾಪಾರವನ್ನು ನಾಶಮಾಡುವುದು ಎಷ್ಟುಮಾತ್ರಕ್ಕೂ ಸಾಧ್ಯವಾಗಲಾರದೆಂದು ನಂಬಬಹುದು.

ಲಿಜ್ಜಿ ಎಂಬ ಒಂದು ಬ್ರಿಟಿಷ್ ಜಹಜು ಐಲ್ ಆಫ್ ವೈಟ್ ಎಂಬ ದ್ವೀಪದ ಬಳಿ ಜರ್ಮನಿಯವರ ಒಂದು ಸಬ್‌ಮೆರೀನನ್ನು ಮುಳುಗಿಸಿಬಿಟ್ಟಿತು. ಆ ಸಬ್‌ಮೆರೀನು ಕೆಲವು ದೋಣಿಗಳನ್ನು ತಳ್ಳಿಕೊಂಡು ಹೋಗುತ್ತಿದ್ದು ಲಿಜ್ಜಿಯನ್ನು ಕಂಡು ದೋಣಿಗಳನ್ನು ಬಿಟ್ಟು ಲಿಜ್ಜಿಯ ಕಡೆ ನುಗ್ಗಿಹೋಯಿತು. ಆಗ ಲಿಜ್ಜಿಯ ಕ್ಯಾಪ್ಟನ್ (ಅಧಿಪತಿಯು) ಅದರ ಮಾರ್ಗವನ್ನೇ ಹಿಡಿದುಹೋಗಿ ಅದನ್ನು ಬಲವಾಗಿ ಅಪ್ಪಳಿಸಿಬಿಟ್ಟು, ಅದರ ಮೇಲೆ ಬಂದಾಗ ಸಬ್‌ಮೆರೀನು ಮುಳುಗಿ ಅದೃಶ್ಯವಾಯಿತು. ಲಿಜ್ಜಿಯು ಆ ಪ್ರದೇಶದಲ್ಲೇ ಒಂದು ಗಂಟೆಯ ಹೊತ್ತು ಸಂಚರಿಸುತ್ತಿತ್ತು. ಸಬ್‌ಮೆರೀನಿನ ಸುಳಿವೇ ಕಾಣಲಿಲ್ಲ. ಅದು ಮುಳುಗಿದ ಕಡೆ ನೀರಿನ ಮೇಲೆ ಎಣ್ಣೆಯ ಗುಳ್ಳೆಗಳು ಕಾಣಿಸಿಕೊಂಡವು.

ಆಫ್ರಿಕಾದಲ್ಲಿ.

ಜರ್ಮನಿಯವರಿಗೆ ಸೇರಿದ ದಕ್ಷಿಣ ಪಶ್ಚಿಮ ಆಫ್ರಿಕಾದಲ್ಲಿ ಜರ್ಮನಿಯವರು 10,000 ತರಪೇತಾದ ಸೈನ್ಯವನ್ನೂ 120 ಪಿರಂಗಿಗಳನ್ನೂ ಇಟ್ಟುಕೊಂಡಿದಾರೆಂದು ತಿಳಿಯುವುದು. ದಕ್ಷಿಣ ಅಮೇರಿಕದಿಂದ 15,000 ಜರ್ಮನಿ ಸೈನಿಕರು ಬರುತ್ತಾರೆಂದು ನಿರೀಕ್ಷಿಸಿಕೊಂಡಿದ್ದರು. ಅವರಲ್ಲಿ ಒಬ್ಬರಾದರೂ ಆಫ್ರಿಕಕ್ಕೆ ಬಾರದಂತೆ ನಮ್ಮ ಪಕ್ಷದವರು ಅವರನ್ನೆಲ್ಲಾ ಅಲ್ಲೇ ತಡೆದುಬಿಟ್ಟಿದಾರೆ. ಜನರಲ್ ಬೋಥಾರವರು ದಕ್ಷಿಣ ಆಫ್ರಿಕದ ಸೈನ್ಯಗಳನ್ನು ಜೊತೆಮಾಡಿಕೊಂಡು ಜರ್ಮನಿಯವರ ಸ್ವಾಸ್ಥ್ಯದ ಮೇಲೆ ನುಗ್ಗಿ ಹೋಗಿರುತ್ತಾರೆ. ಇದುವರೆಗೆ ಆಗಲೇ 100 ಜರ್ಮನಿಯವರು ಸೆರೆ ಸಿಕ್ಕಿದರು. ಜರ್ಮನಿಯವರ ಎರಡು ಮೆಷೀನ್ ಪಿರಂಗಿಗಳನ್ನು ಕಿತ್ತುಕೊಂಡದ್ದಲ್ಲದೆ ಅವರ ಕೆಲವು ಮದ್ದುಗುಂಡುಗಳನ್ನು ನಾಶಪಡಿಸಿದ್ದೂ ಆಗಿದೆ. ನಮ್ಮ ಪಕ್ಷದವರು ಜರ್ಮನಿ ಸ್ವಾಸ್ಥ್ಯದೊಳಕ್ಕೆ ನುಗ್ಗಿ ಹೋಗಿರುವರು. ಆ ಪ್ರಾಂತ್ಯವು ಬಹು ವಿಸ್ತಾರವಾಗಿಯೂ, ನೀರು ಸಿಕ್ಕುವುದು ಪ್ರಯಾಸವಾಗಿಯೂ ಇರೋಣದರಿಂದ ಇವರು ಜರ್ಮನಿಯವರನ್ನು ಸಂಧಿಸಿ ಅವರನ್ನು ಸೋಲಿಸುವುದಕ್ಕೆ ಕೆಲವು ಕಾಲ ಹಿಡಿದೀತೆಂದು ಕಾಣುತ್ತದೆ.

ಇತರ ವಿಷಯಗಳು.

ಇಟಲಿಯವರು ನಮ್ಮ ಪಕ್ಷದವರ ಕಡೆ ಬಂದು ನಿಂತು ಯುದ್ಧಮಾಡುತ್ತೇವೆಂಬ ಭಾಗದಲ್ಲಿ ಖಂಡಿತವಾದ ಕಾರ್ಯಭಾಗವೇನೂ ಮಾಡಿರುವುದಿಲ್ಲ. ಆದರೂ ಆ ರಾಜ್ಯದ ಪ್ರಜೆಗಳು ಈ ವಿಚಾರವನ್ನು ಬಹು ಆತುರದಿಂದ ಚರ್ಚೆ ಮಾಡುತ್ತಿದಾರೆಂದು ಚೆನ್ನಾಗಿ ತಿಳಿಯುತ್ತದೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಇಂಗ್ಲೆಂಡಿನ ಪೂರ್ವ ತೀರದಲ್ಲಿರುವ ಹಾರಿಚ್ ನಗರಕ್ಕೆ ದಯಮಾಡಿ ಕೆಲವು ಬ್ರಿಟಿಷ್ ಯುದ್ಧದ ಜಹಜುಗಳನ್ನು ಪರಾಂಬರಿಸಿದರು. ಅವರು ಜಹಜುಗಳಿಗೆ ಚಿತ್ತೈಸಿ ಅದರೊಳಗೆ ಕಲ್ಲಿದ್ದಲು ಭರ್ತಿಮಾಡಿದ್ದ ಭಾಗಗಳನ್ನೂ ಪರಾಂಬರಿಸಿ, ಅಲ್ಲಿ ಕೆಲಸಮಾಡುತ್ತಿದ್ದ ಸೇವಕರುಗಳ ಕೂಡ ಸಂಭಾಷಣೆಮಾಡಿದರು. ಅವರು ಯುದ್ಧಕ್ಕೆ ಹೋಗಿದ್ದು ಬಂದ ಕೆಲವು ಜಹಜುಗಳೊಳಕ್ಕೂ ದಯಮಾಡಿ, ಶತ್ರುವಿನ ಗುಂಡುಗಳು ಬಿದ್ದ ಸ್ಥಳಗಳನ್ನೂ ಪರಾಂಬರಿಸಿದರು.

ಇಂಗ್ಲೆಂಡಿನಲ್ಲಿ ಮದ್ದುಗುಂಡು ಮುಂತಾದ ಯುದ್ಧದ ಸಾಮಗ್ರಿಗಳನ್ನು ತಯಾರುಮಾಡುವ ಕಾರ್ಖಾನೆಗಳಲ್ಲಿ ಕೂಲಿಕೆಲಸ ಮಾಡುವಂಥಾ ಜನರಲ್ಲಿ ಹಲವರು ನೇಮಕವಾದಷ್ಟು ಹೊತ್ತಿಗಿಂತ ಹೆಚ್ಚಾಗಿ ಕೆಲಸ ಮಾಡಲಾರೆವೆಂದೂ, ಕೂಲಿಯ ದರಗಳನ್ನು ಇನ್ನೂ ಹೆಚ್ಚುಮಾಡಿ ಕೊಡಬೇಕೆಂದೂ ಹೇಳಿ ಗಲಭೆ ಮಾಡಿದರು. ಈಚೆಗೆ ಈ ಗಲಭೆಗಳೂ, ಅಡಚಣೆಗಳೂ ನಿವಾರಣೆ ಆದವೆಂದೂ, ಈಗ ಯುದ್ಧಭೂಮಿಯಲ್ಲಿ ನಮ್ಮ ಸೈನಿಕರಿಗೆ ಬೇಕಾಗುವ ಮದ್ದುಗುಂಡು ಮೊದಲಾದವುಗಳನ್ನು ಅಪಾರವಾಗಿ ತಯಾರುಮಾಡಿ ಒದಗಿಸುತ್ತಿದಾರೆಂದೂ ತಿಳಿದುಬಂದಿದೆ. ನಮ್ಮ ಪಕ್ಷದವರಿಗೆ ಜರ್ಮನಿಯ ಪಟಾಟೋಪವನ್ನು ಸಂಪೂರ್ಣವಾಗಿ ಅಡಗಿಸಿಯೇ ತೀರಬೇಕೆಂಬ ಸಂಕಲ್ಪವು ಎಂದಿಗಿಂತಲೂ ಸ್ವಲ್ಪವೂ ಕಡಮೆಯಾಗಿಲ್ಲ. ಕೆಲವರು ಜರ್ಮನಿಯನ್ನು ಸೋಲಿಸುವುದಕ್ಕೆ ಬಹಳ ಕಾಲ ಹಿಡಿಯುವುದೆಂದು ಊಹಿಸುತ್ತಾರೆ. ಆದರೆ ಸರ್ ಜಾನ್ ಫ್ರೆಂಚ್ ಮೊದಲಾದವರು ಅದಕ್ಕೆ ದೀರ್ಘಕಾಲ ಬೇಕಾಗುವುದಿಲ್ಲವೆಂದು ಅಭಿಪ್ರಾಯಪಡುವರು.

ಒಳದೇಶದ ವೃತ್ತಾಂತಗಳು.

ಮ|| ಕಪೂರ್ ಶ್ರೀನಿವಾಸರಾಯರನ್ನು ನಮ್ಮ ಸರ್ಕಾರದವರು ಕಳೆದ ಡಿಸೆಂಬರ್ ಗುರ್‍ತಿ ತಾರೀಖಿನಿಂದ ಮೈಸೂರು ಸಂಸ್ಥಾನದ ಚೀಫ್ ಇಂಜನಿಯರ್ ಮತ್ತು ಗವರ್ನ್‌ಮೆಂಟ್ ಸೆಕ್ರೆಟರಿಯಾಗಿ ಖಾಯಂ ಮಾಡಿರುತ್ತಾರೆ.

ಮೈಸೂರು ವಿಧವಾ ಸದನಕ್ಕೆ ಶ್ರೀಮನ್ ಮಹಾರಾಜರವರು 1,000 ರೂಪಾಯನ್ನೂ, ಮೇಲುಕೋಟೆಯ ಪಂಚಮಾ ಸಭೆಗೆ ಶ್ರೀಮದ್ಯುವರಾಜರವರು 500 ರೂಪಾಯನ್ನೂ ದಯಪಾಲಿಸಿದರೆಂದು ತಿಳಿಯುತ್ತೇವೆ.

ನಮ್ಮ ಸರ್ಕಾರದವರು ತುಮಕೂರಿನಲ್ಲಿ ಎರಡನೆಯ ಮುನ್‌ಸೀಫ್ ಕೋರ್ಟನ್ನು ಹಂಗಾಮಿಯಾಗಿ ಇಡುವಂತೆ ಸ್ಯಾಂಕ್ಷನ್ ಮಾಡಿದಾರೆ. ಬೇಸಗೆಯ ರಜಾ ಪೂರೈಸಿದ ಬಳಿಕ ಈ ಕೋರ್ಟು ಪ್ರಾರಂಭವಾಗುವುದು.

ಈ ಸಲ ನವಂಬರ್ ತಿಂಗಳಲ್ಲಿ ನಮ್ಮ ಸರ್ಕಾರದವರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನಿಟ್ಟು, ತೇರ್ಗಡೆ ಹೊಂದುವವರಲ್ಲಿ ಉತ್ತಮರೆನಿಸುವ ಮೂರು ಮಂದಿಯನ್ನು ಅಸಿಸ್ಟೆಂಟ್ ಕಮಿಷನರಾಗಿ ನೇಮಕ ಮಾಡುತ್ತೇವೆಂದು ಪ್ರಕಟಮಾಡಿದಾರೆ.

ಈ ಸಲ ನಮ್ಮ ಮಹಾರಾಜರವರ ವರ್ಧಂತಿ ನಡೆಯುವ ಕಾಲದಲ್ಲಿ ರಾಜಧಾನಿಯಲ್ಲಿ ಒಂದು ಮ್ಯುನಿಸಿಪಲ್ ಕಾನ್ಫರೆನ್ಸು ನಡೆಯಬೇಕೆಂದು ಏರ್ಪಾಡಾಗುತ್ತಿದೆ. ಸಂಸ್ಥಾನಾದ್ಯಂತದ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರತಿನಿಧಿಗಳು ಬರತಕ್ಕವರಾಗಿದಾರೆ.

ಚನ್ನರಾಯಪಟ್ಟಣದ ತಾಲ್ಲೂಕ್ ಪರಸ್ಪರ ಸಹಾಯಸಂಘಗಳ ಮೊದಲನೇ ಮಹಾ ಸಭೆಯು ಶ್ರವಣಬೆಳ್ಗೊಳದಲ್ಲಿ ನಾಳೆಯೂ ನಾಡಿದ್ದೂ ನಡೆಯುವಂತೆ ಏರ್ಪಾಡಾಗಿದೆ. ಡೆಪ್ಯುಟಿ ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರು ಸಭಾಧ್ಯಕ್ಷತೆಯನ್ನು ವಹಿಸಲು ಒಪ್ಪಿರುತ್ತಾರೆ.

ಶ್ರೀಮನ್ ಮಹಾರಾಜರವರು ಕಳೆದ ಶನಿವಾರ ನೀಲಗಿರಿಯಿಂದ ಮೋಟಾರಿನಲ್ಲಿ ರಾಜಧಾನಿಗೆ ದಯಮಾಡಿ, ದೊಡ್ಡಜಾತ್ರೆಗೂ ಪೌರ್ಣಿಮೆಗೂ ನಂಜನಗೂಡಿಗೆ ಚಿತ್ತೈಸಿದ್ದರು. ಅವರು ಅರಮನೆಯ ರಾಣಿವಾಸದವರ ಕೂಡ ನಾಳೆ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ.

ಮೈಸೂರಿನಿಂದ ವಾಪಸು ಹೋಗುತ್ತಿದ್ದ ಕೆಲವು ಸಿಲ್ಲೇದಾರರಿಗೂ ಪೋಲೀಸಿನವರಿಗೂ ಬಿಡದಿಯಲ್ಲಿ ಕಳೆದ ವಾರ ಕಲಹವಾಯಿತೆಂದೂ, ಮೂವರು ಪೋಲೀಸಿನವರಿಗೂ, ಕೆಲವರು ರೈತರಿಗೂ, ಕೆಲವು ಸಿಲ್ಲೇದಾರರಿಗೂ ಪೂರಾ ಗಾಯಗಳಾದವೆಂದೂ, ಡೆಪ್ಯುಟಿ ಕಮಿಷನರವರು ಅದರ ಪೂರ್ವೋತ್ತರವನ್ನು ತನಿಖೆ ಮಾಡುತ್ತಿದಾರೆಂದೂ ಪ್ರಕಟವಾಗಿದೆ.

ಮದರಾಸು ಪಟ್ಟಣದ ಮಿಂಟ್ ಪೋಸ್ಟ್ ಮ|| ಸಿ. ಎ. ನಟೇಶನ್ ಬುಕ್ ಡಿಪೋದವರು ಈಗ ನಡೆಯುತ್ತಿರುವ ಯುದ್ಧದ ನಕ್ಷೆಗಳನ್ನು ಸುಂದರವಾದ ನಾನಾ ಬಣ್ಣಗಳಲ್ಲಿ ಮಾಡಿಸಿ ತರಿಸಿ, ನಮಗೊಂದು ಪ್ರತಿಯನ್ನು ಕಳುಹಿಸಿದಾರೆ. ರೂಪಾಯಿಗೆ ಒಂದರಂತೆ ವಿಕರಿ ಮಾಡುವರು. ಈ ಚಿತ್ರಪಟಗಳು ತಪ್ಪೇರುಮಾಡಿಕೊಳ್ಳುವುದಕ್ಕೆ ಯೋಗ್ಯವಾಗಿರುತ್ತವೆ.

ನಮ್ಮ ಎರಡನೇ ಕೌನ್ಸೆಲರಾದ ಮ|| ಎಂ. ಕಾಂತರಾಜೆ ಅರಸಿನವರು ಚಿಕ್ಕಬಳ್ಳಾಪುರದ ಪ್ರಾಂತ್ಯ ಸರ್ಕೀಟು ದಯಮಾಡಿ ಕಳೆದ ಶನಿವಾರ ಶಿಡ್ಲಘಟ್ಟ ತಾಲ್ಲೂಕು ಗಂಜಿಗುಂಟೆ ಮೊದಲಾದ ಗ್ರಾಮಗಳನ್ನು ಪರಾಂಬರಿಸಿ ಸಬ್ ಡಿವಿಜನ್ ಆಫೀಸರವರು ಪ್ರಜಾ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತಿರುವುದನ್ನು ವಿಚಾರಿಸಿ ಸಂತೋಷಪಟ್ಟುಕೊಂಡು ಬಂದರೆಂದು ತಿಳಿಯುವುದು.

ಈ ಸಲ ಲೋಅರ್ ಸೆಕೆಂಡರಿ ಪರೀಕ್ಷೆಗಾಗಿ ಹೋಗತಕ್ಕ ವಿದ್ಯಾರ್ಥಿಗಳಿಗೂ ಅವರ ಕೂಡ ಹೋಗತಕ್ಕವರಿಗೂ ಶ್ರೀರಂಗಪಟ್ಟಣದಲ್ಲಿ ಜಮೀನ್‌ದಾರ್ ಮ|| ಕೆ. ಕೃಷ್ಣಾಚಾರ್ರ್ಯ ಮತ್ತು ಮ|| ಎಸ್. ಎ. ಜವರಯ್ಯನವರೂ, ತುಮಕೂರಿನಲ್ಲಿ ಮ|| ಗುಬ್ಬಿ ಪೇಟೆ ಶೆಟ್ರು ಕಪ್ಪಣ್ಣನವರು ಮತ್ತು ಮ|| ನಿಡಸಾಲೆ ಚನ್ನಂಜಪ್ಪನವರೂ ಭೋಜನಾದಿಗಳಿಗೆ ಅನುಕೂಲಮಾಡಿಕೊಡುವವರಾಗಿದಾರೆಂದು ತಿಳಿಸಲು ಸಂತೋಷವಾಗುತ್ತದೆ.

ರಾಜಧಾನಿಯ ಕೆಲವು ದೊಡ್ಡಮನುಷ್ಯರು ಶ್ರೀಉತ್ತರಾದಿ ಮಠದ ಸ್ವಾಮಿಗಳ ಭೇಟಿಮಾಡಿ, ವಿಧವಾ ಪುನರ್ವಿವಾಹ ಮತ್ತು ಋತುಮತೀ ವಿವಾಹಗಳನ್ನು ಕುರಿತು ಅವರ ಕೂಡ ಸಂಭಾಷಣೆ ನಡಿಸುತ್ತಿದಾರೆ. ಇವೆರಡೂ ಶಾಸ್ತ್ರಸಮ್ಮತವಾದದ್ದಲ್ಲವೆಂದು ಶ್ರೀಸ್ವಾಮಿಗಳು ಅಪ್ಪಣೆ ಕೊಡಿಸಿದರು. ಅವರ ಕೂಡ ಬಂದಿರುವ ಪಂಡಿತರು ಮರಿಮಲ್ಲಪ್ಪನವರ ಹೈ ಸ್ಕೂಲಿನಲ್ಲಿ ಧರ್ಮವಿಚಾರಗಳನ್ನು ಕುರಿತು ಉಪನ್ಯಾಸ ಮಾಡುತ್ತಿದಾರೆ.

ಮೈಸೂರು ಸಂಸ್ಥಾನದ ಇಂಜನಿಯರುಗಳು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಸೇರಿ ವಾರ್ಷಿಕ ಸಭೆಯನ್ನು ನಡಿಸಿದರು. ನಮ್ಮ ದಿವಾನ್‌ರವರು ಸಭೆಯ ಅಗ್ರಾಸನವನ್ನು ವಹಿಸಿ ಉಪನ್ಯಾಸಮಾಡಿದ್ದಲ್ಲದೆ ಈ ಸಲ ನಮ್ಮ ಡೆಪ್ಯುಟಿ ಚೀಫ್ ಇಂಜನಿಯರ್ ಮ|| ಕೆ. ಕೃಷ್ಣಯ್ಯಂಗಾರ್ರಿಗೆ ದೊರಕಿರುವ ರಾವ್ ಬಹದೂರ್ ಎಂಬ ಬಿರುದಿನ ಸನ್ನದನ್ನು ಸಭೆಯಲ್ಲಿ ಅವರಿಗೆ ಒಪ್ಪಿಸಿ, ಅವರಂತೆ ಇತರ ಇಂಜನಿಯರುಗಳೂ ಸಚ್ಚರಿತ್ರರಾಗಿ ಯಶಸ್ಸನ್ನು ಪಡೆಯಬೇಕೆಂದು ಹಾರೈಸಿದರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಈ ತಿಂಗಳ ಅಂತ್ಯ ಭಾಗದಲ್ಲಿ ಅಲ್ಲಿನ ಲಾಲ್ ಬಾಗ್ ಉದ್ಯಾನವನದೊಳಗೆ ಪ್ರದರ್ಶನವನ್ನು ನಡಿಸುವವರಾಗಿದಾರೆ. ಆ ಕಾಲದಲ್ಲಿ ಪ್ರದರ್ಶನಾಲಯದೊಳಗೆ ಕುತುಕರ ಅಂಗಡಿಯನ್ನೂ, ಸೂಳೆಯರ ನಾಟ್ಯವನ್ನೂ, ಜೂಜುಗಳನ್ನೂ ನಡಿಸುವವರಿಗೆ ಅವಕಾಶ ಕೊಡಲು ಏರ್ಪಾಡು ಮಾಡಿದಾರೆ. ಈ ಭಾಗಗಳು ನಡೆಯಕೂಡದೆಂದು ಬೆಂಗಳೂರಿನಲ್ಲಿ ಅನೇಕ ಪ್ರಜೆಗಳು ಅಸಹ್ಯಪಟ್ಟುಕೊಳ್ಳುತ್ತಿದಾರೆಂದೂ, ಈ ವಿಷಯದಲ್ಲಿ ಶ್ರೀಮನ್ ಮಹಾರಾಜರವರಿಗೂ, ದಿವಾನ್‌ರವರಿಗೂ ವಿಜ್ಞಾಪನಾ ಪತ್ರಿಕೆಗಳನ್ನು ಕಳುಹಿಸಿದಾರೆಂದೂ ತಿಳಿಯುತ್ತದೆ. ಹ್ಯಾಗೂ ಈ ವಿಚಾರವು ಅಲ್ಲಿನ ಪ್ರಜೆಗಳಲ್ಲಿ ತಕ್ಕ ಮಟ್ಟಿಗೆ ಕಳವಳವನ್ನೂ ವ್ಯಸನವನ್ನೂ ಉಂಟು ಮಾಡಿದೆ. ಅಂಥಾ ದುಷ್ಟವಾದ ವಿನೋದಗಳಿಗೆ ಅವಕಾಶವಾಗದಂತೆ ಸರ್ಕಾರದವರು ಹುಕುಂ ಕೊಡುವರೆಂದು ನಂಬುತ್ತೇವೆ.

ರಾಜಧಾನಿಯ ಮಿಷನ್ ಹೈ ಸ್ಕೂಲಿನ ಪ್ರಿನ್ಸಿಪಲ್‌ರಾದ ರೆವ್|| ಆರ್. ಡಬ್ಲ್ಯು. ಬೂಟ್, ಬಿ. ಎಸ್. ಸಿ. ರವರು ಶಿವಮೊಗ್ಗೆಗೆ ವರ್ಗಪಟ್ಟು ಹೋಗೋಣದರಿಂದ ಹೈ ಸ್ಕೂಲಿನ ವಿದ್ಯಾರ್ಥಿಗಳೂ ಉಪಾಧ್ಯಾಯರುಗಳೂ ಸೇರಿ ಕಳೆದ ಶನಿವಾರ ಅವರಿಗಾಗಿ ಒಂದು ಸಂತೋಷಕೂಟವನ್ನು ಹೈ ಸ್ಕೂಲಿನಲ್ಲಿ ನಡಿಸಿ ಅವರಿಗೆ ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಈ ಸಂತೋಷಕೂಟದಲ್ಲಿ ವಿದ್ಯಾರ್ಥಿಗಳು ಬಹು ಸಂತೋಷಕರವಾಗಿ ನಾಟಕಾದಿಗಳನ್ನು ನಡಿಸಿದರು. ರೆವ್|| ಬೂಟ್‌ರವರು ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರುಗಳ ಪ್ರೀತಿ ವಿಶ್ವಾಸಗಳನ್ನು ಕೊಂಡಾಡಿ ಸಮಯೋಚಿತವಾದ ಪ್ರತ್ಯುತ್ತರವನ್ನು ದಯಪಾಲಿಸಿದರು. ಚೇರ್‌ಮನ್‌ರಾಗಿದ್ದ ರೆವ್|| ಎಚ್. ಗಲ್ಲಿಫೋರ್ಡ್ ಸಾಹೇಬರು ವಿದ್ಯಾರ್ಥಿಗಳನ್ನು ಕುರಿತು ಈಗ ಹಿಂದುಸ್ಥಾನದಲ್ಲಿ ಸತ್ಯಸಂಧರಾದ ಸ್ತ್ರೀಪುರುಷರು ಬಹಳ ಮಂದಿ ಬೇಕೆಂದೂ, ವಿದ್ಯಾರ್ಥಿಗಳಾಗಿರುವವರು ಸಚ್ಚರಿತ್ರೆಯನ್ನು ಅಭ್ಯಾಸಮಾಡಿ ದೇಶವನ್ನು ಉದ್ಧರಿಸಿದ ಪಕ್ಷದಲ್ಲಿ ರೆವ್|| ಬೂಟ್‌ರವರು ಅವರಿಗೆ ಹೇಳಿಕೊಟ್ಟಿರುವುದು ಸಾರ್ಥಕವಾದೀತೆಂದೂ ಹೇಳಿ ಸಭೆಯನ್ನು ಮುಕ್ತಾಯಮಾಡಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮಾರ್ಚಿ 18 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 25,000
,, (3) ಡಿಪಾಜಿಟ್ಟುಗಳು	....	,, 25,59,818
,, (4) ಇತರೆ	....	,, 19,123
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 36,03,941

ಬೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 6,43,803
,, (2) ಖಾತೆ ಮತ್ತು ಇತರ ಸಾಲಗಳು	......	,, 21,94,569
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 3,53,907
,, (4) ಇನ್‌ವೆಸ್ಟ್‌ಮೆಂಟುಗಳು	....	,, 2,87,277
,, (5) ಏಜನ್ಸಿಗಳಲ್ಲಿರುವ ಮೊಬಲಗು	......	,, 1,28,381
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 15,330
,, (7) ಇತರೆ	....	,, 10,674
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 36,03,941

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಸರ್ಕಾರಿ ರಿಪೋರ್ಟುಗಳು.

ಸ್ಟ್ಯಾಂಪ್ ಇಲಾಖೆ.—ಕಳೆದ ಸಾಲಿನಲ್ಲಿ ಮೈಸೂರು ಸರ್ಕಾರದವರು ನಮ್ಮ ಮಹಾರಾಜರವರ ಆಕೃತಿಯುಳ್ಳ ಹೊಸ ತರಹಾ ಸ್ಟ್ಯಾಂಪುಗಳನ್ನು ಜಾರಿಗೆ ತಂದರು ಮತ್ತು ಈ ಸ್ಟ್ಯಾಂಪುಗಳ ತಯಾರಿಗೋಸ್ಕರ ಬೆಂಗಳೂರು ಗೌರ್ನಮೆಂಟ್ ಛಾಪಖಾನೆಯ ಬಳಿ ಹೊಸದಾಗಿ ಕಟ್ಟಲ್ಪಟ್ಟಿರುವ ಬಂಗಲೆಗೆ ಈ ಕಾರ್ಖಾನೆಯನ್ನು ವರ್ಗ ಮಾಡಿರುತ್ತಾರೆ. ಸ್ಟ್ಯಾಂಪುಗಳ ಮಾರಾಟದಿಂದ ಕಳೆದ ಸಾಲಿನ ಉತ್ಪತ್ತಿಯು ಹಿಂದಿನ ಸಾಲಿನ ಉತ್ಪತ್ತಿಗಿಂತ ಜಾಸ್ತಿಯಾಯಿತು; ಅಂದರೆ 1912-13 ನೇ ಸಾಲಿನಲ್ಲಿ 9,41,434 ರೂಪಾಯಿನ ಸ್ಟ್ಯಾಂಪು ವಿಕರಿ ಆಗಿತ್ತು; 1913-14 ನೇ ಸಾಲಿನಲ್ಲಿ ಈ ಬಾಬಿನ ಉತ್ಪತ್ತಿಯು 10,66,358 ರೂಪಾಯಿ ಆಗಿರುತ್ತದೆ. ಎಲ್ಲಾ ತರಹಾ ಸ್ಟ್ಯಾಂಪುಗಳ ಬಿಕರಿಯೂ ಸಾಮಾನ್ಯವಾಗಿ ಹೆಚ್ಚಿರುವುದನ್ನು ನೋಡಿದರೆ ನಮ್ಮ ಸಂಸ್ಥಾನದಲ್ಲಿ ಸಿವಿಲ್ ಕ್ರಿಮಿನಲ್ ವ್ಯಾಜ್ಯಗಳೂ, ಸೊತ್ತುಗಳ ಕ್ರಯವಿಕ್ರಯಾದಿ ಪರಿವರ್ತನಗಳೂ, ವ್ಯಾಪಾರವೂ ಬಹಳ ಮಟ್ಟಿಗೆ ಹೆಚ್ಚಿರುವವೆಂದು ಕಂಡುಬರುತ್ತದೆ.

ಗಣಿಗಳ ಕಾನೂನು.—ಕೋಲಾರದ ಚಿನ್ನದ ಗಣಿಗಳ ಪ್ರದೇಶದಲ್ಲಿ ನಾನಾ ದೇಶದ ಪ್ರಜೆಗಳು ಬಗೆಬಗೆಯ ಉದ್ಯೋಗಗಳಲ್ಲಿ ಇದ್ದುಕೊಂಡಿದ್ದಾರೆ. ಕೂಲಿ ಕಾರರೂ ಇತರರೂ ಅನೇಕರಿರುವರು. ಗಣಿಗಳಿಂದ ತೆಗೆಯುವ ಚಿನ್ನವನ್ನು ನಾನಾ ರೂಪಗಳಲ್ಲಿ ಬಹು ಜನರು ಕದಿಯುವದನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರದವರು ಈ ಕಾನೂನು ಮಾಡಿಟ್ಟು ಜಾರಿಗೆ ತಂದಿದ್ದಾರೆ. ಬದ್ಧ ಚಾಲಿಸ ಅನೇಕ ಜನರು ಅಲ್ಲಿಗೆ ಹೋಗುವುದು ವಿಶೇಷವಾದ ಕಾರಣ ಸರ್ಕಾರದವರು ಪೋಲೀಸ್ ಏರ್ಪಾಡನ್ನು ಅಲ್ಲಿ ತುಂಬಾ ಬಿಟ್ಟುನಿಟ್ಟಾಗಿ ಮಾಡಿರುವರು. ಗಣಿ ಕಾನೂನಿನ ಷರತ್ತುಗಳಂತೆ ಪೋಲೀಸಿನವರು ಕಳೆದ ಸಾಲಿನಲ್ಲಿ 92 ಫಿರ್ಯಾದುಗಳನ್ನು ತಂದದ್ದರಲ್ಲಿ 65 ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲ್ಪಟ್ಟಿದೆ. ಮತ್ತು ಕಸಬಿನಲ್ಲಿ ಪ್ರಸಿದ್ಧರೆನಿಸಿದ ಕೆಲವು ಅಪರಾಧಿಗಳನ್ನು ಹಿಡಿದು ಶಿಕ್ಷೆ ಮಾಡಿಸಿರುತ್ತಾರೆ. ಕೆಲವು ಜಾತಿಯ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಈಗ ವಿಧಿಸುವ ಶಿಕ್ಷೆಗಳು ಸಾಲವೆಂದೂ, ಇನ್ನೂ ಹೆಚ್ಚು ಶಿಕ್ಷೆ ವಿಧಿಸುವುದಕ್ಕೆ ಮ್ಯಾಜಿಸ್ಟ್ರೇಟರಿಗೆ ಅಧಿಕಾರವನ್ನು ಕೊಡಬೇಕೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ಅತ್ತಲಾಗಿ ಗಣಿಗಳೊಳಗೆ ಕಳೆದ ಸಾಲಿನಲ್ಲಿ 66 ಅನಾಹುತಗಳು ನಡೆದು 102 ಜನರಿಗೆ ಅಕಾಲ ಮರಣ ಪ್ರಾಪ್ತವಾಯಿತೆಂದು ಈ ರಿಪೋರ್ಟು ಹೇಳುವುದು. ಗಣಿಗಳೊಳಗೆ ವಾಯು ಚಲನೆಯೂ, ಕಲ್ಲು ಮಣ್ಣು ಕುಸಿದು ಬೀಳೋಣವೇ ಮುಂತಾದ ಕಾರಣಗಳಿಂದ ಈ ಅನಾಹುತಗಳು ಸಂಭವಿಸಿದವಂತೆ. ವಾಯು ಚಲನೆ ಎಂಬುವುದೇನೋ, ಅದು ಯಾತಕ್ಕಾಗಿ ಹುಟ್ಟುವುದೋ ಇನ್ನೂ ಯಾರಿಗೂ ಗೋಚರವಾಗಿಲ್ಲ. ಸರ್ಕಾರದವರೂ, ಗಣಿಗಳ ಕಂಪನಿಯವರೂ ಈ ಅನಾಹುತಗಳು ಪ್ರಾಪ್ತವಾಗದಂತೆಯೂ, ಕೂಲೀ ಜನರನ್ನು ಚೆನ್ನಾಗಿ ಕಾಪಾಡುವುದಕ್ಕೂ ಜಾಗರೂಕತೆಯ ಕಾರ್ಯಗಳನ್ನು ಮಾಡುತ್ತಿರುವಂತೆ ಕಾಣುವುದು. ಆದರೂ ಒಂದು ವರುಷದಲ್ಲಿ 102 ಜನರು ದುರ್ಮರಣ ಹೊಂದಿದ್ದು ಘೋರವಾಗಿರುತ್ತದೆ.

ಸಂಪದಭ್ಯುದಯ.

ವಿಭವಗಳ ರೀತಿ—ಡಾಂಭಿಕತ್ವ.

ನಮ್ಮ ಸೀಮೆಯಲ್ಲಿ ಅನೇಕಾನೇಕರು ಶ್ರೇಷ್ಠತ್ವವನ್ನು ಬಯಸುತ್ತಾರೆ. ಇದು ಸಂತೋಷವೇ ಸರಿ. ಆದರೆ ಈ ಶ್ರೇಷ್ಠತ್ವವು ಯೋಗ್ಯತೆಯಿಂದುಂಟಾಗದೆ ಬರೇ ಡಾಂಭಿಕತನದಿಂದುಂಟಾಗುವುದೆಂದು ಆಚರಿಸುತ್ತಲಿರುವುದು ಕೇವಲ ಪರಿಹಾಸಕರವಾಗಿದೆ. ಆಫೀಸರುಕಿಂತಲೂ ನೌಕರರ ಡೌಲುದಾರಿಯೇ ಹೆಚ್ಚು. ಐಶ್ವರ್ಯವಂತರಕಿಂತಲೂ ದರಿದ್ರರು ಅಲಂಕಾರಿಗಳಾಗಿರುತ್ತಾರೆ. ಅರಿಸ ಅಟ್ಟ ಹಾಸವು ಧನಿಗೆ ಇರುವುದಿಲ್ಲ. ಇಷ್ಟೇಕೆ? ತಮಗೆ ಗತಿಯಿಲ್ಲದಿದ್ದರೂ ಬಾಡಿಗೆ ಬಟ್ಟೆಗಳನ್ನು ಹಾಕಿಕೊಂಡು ವಿಜೃಂಭಿಸುತ್ತಲಿರುವ ನಾಗರಿಕರು ಅನೇಕರಿರುವರು. ಅದು ಹೊಟ್ಟೆ ಕಿಚ್ಚಿನ ಮಾತಲ್ಲ; ತಮಗಿರುವ ದಾರಿದ್ರ್ಯದಲ್ಲಿ ಮತ್ತೂ ದಾರಿದ್ರ್ಯವನ್ನು ತಂದುಕೊಂಡು ಸಂಕಟಪಡುವುದನ್ನು ನೋಡಬೇಕಾಗಿರುವದಲ್ಲಾ ಎಂಬ ವ್ಯಥೆಯು ಮಾತ್ರವಾಗಿದೆ. ಇನ್ನೂ ಕೆಲವರು ಡಾಂಭಿಕ ವೇಷದಿಂದ ದೊಡ್ಡ ಮನುಷ್ಯರಾಗಬೇಕೆಂದು ಅಂಗಡಿಗಳಲ್ಲಿ ಉದರಿ ಸಾಮಾನುಗಳನ್ನು ಪಡೆದು, ಕಡೆಗೆ ಅಂಗಡಿಕಾರರ ಹಣವನ್ನೂ ಮುಳುಗಿಸಿಬಿಡುವುದುಂಟು. ಹೀಗಾಗುವುದಕ್ಕೆ ಕಾರಣವೇನೆಂದರೆ—ನಮ್ಮ ಸೀಮೆಯು ಅಲಂಕಾರಕ್ಕೆ ಮಾತ್ರ ಮರ್ಯಾದೆಕೊಡುತ್ತಲಿದೆ. ಅಲಂಕಾರಿಯಾದ ಕಳ್ಳನು ಸಹ ಒಂದೊಂದು ವೇಳೆ ಸನ್ಮಾನಕ್ಕೆ ಪಾತ್ರನಾಗುತ್ತಾನೆ. ಆಡಂಬರವಿಲ್ಲದ ಸದ್ಗೃಹಸ್ಥನು ಸನ್ಮಾನ ವರ್ತನಗಳಲು ಸಹ ಅಯೋಗ್ಯನಾಗಿರುತ್ತಾನೆ. ಇದರಿಂದ ಡಂಭಾಚಾರವೇ ಮರ್ಯಾದಾಹರ್ವೇದು ನಮ್ಮ ಸೀಮೆಯಲ್ಲಿ ನಿರ್ಣಯವಾದಂತೆ ತೋರುತ್ತದೆ. ನಮ್ಮ ಸೀಮೆಯಲ್ಲಿರುವ ಯುರೋಪಿಯನ್ನರೂ, ಪಾರಸಿಗಳೂ, ಪರ್ವಾರಿಗಳೂ ಸಹ ತಾತ್ವ ಉಡಿಗೆ ತೊಡಿಗೆಗಳನ್ನು ಬಿಟ್ಟಿರುವರೇ! ನಾವು ಅವರಂತೆ ಉಡಿಗೆ ತೊಡಿಗೆಗಳನ್ನು ಮಾಡಿಕೊಂಡು, ವೇಷಧಾರಿಗಳಾದಮಾತ್ರಕ್ಕೇ ಅವರ ಹಾಗೆ ಆಗಬಲ್ಲೆವೇ? ಅವರೂ ನಮ್ಮ ಉಡಿಗೆ ತೊಡಿಗೆಗಳೇನೂ ಅಡ್ಡಬರುವುದಿಲ್ಲ. ಹಾಗಾದ ಮೇಲೆ ದಿನಕ್ಕೆ ಎರಡು ಮೂರು ವಿಧವಾದ ವೇಷಗಳನ್ನು ಧರಿಸಿ ಹಣ ವ್ರಯಮಾಡಿಕೊಳ್ಳುವುದೇತಕ್ಕೆ? ಡಂಭಾಚಾರಿಯಾದ ಮನುಷ್ಯನು ಅಹಂಕಾರವನ್ನು ಹೊಂದುವುದು ಸಹಜವಾಗಿದೆ. ಗರ್ವಿಷ್ಠರಿಗೆ ಯಾವಾಗಲೂ ಯುಕ್ತಾಯುಕ್ತಜ್ಞಾನವೂ, ಪಾಪ ಪುಣ್ಯ ಭೀತಿಯೂ ಲೋಪವಾಗಿರುತ್ತವೆ. ಇದರಿಂದ ಸುಳ್ಳು, ಮೋಸ ಮುಂತಾದುವುಗಳು ಉಂಟಾಗಿ ನಂಬಿಕೆ ಕೆಡಿಸಿಕೊಳ್ಳಬೇಕಾಗಿದೆ. ನಂಬಿಕೆಯಿಲ್ಲದಿದ್ದರೆ ಪರಸಹಾಯ ಸಿಕ್ಕುವುದಿಲ್ಲ. ಸಹಾಯವಿಲ್ಲದೆ ಕಾರ್ಯಸಾಧನೆಯಾಗುವುದಿಲ್ಲ. ಕಾರ್ಯವನ್ನು ಸಾಧಿಸದೆ ಐಶ್ವರ್ಯವನ್ನು ಪಡೆಯುವುದಕ್ಕಾಗುವುದಿಲ್ಲ. ಈ ರೀತಿಯಾದ ಡಂಭಾಚಾರವು ಈಗಿನ ವಿದ್ಯಾರ್ಥಿಗಳಲ್ಲಿ ವಿಶೇಷವಾಗಿ ಹಬ್ಬುತ್ತಲಿರುವುದು ಶೋಚನೀಯವಾಗಿದೆ. ಮತ್ತು ಡಂಭಾಚಾರಿಗಳು ಅಹಂಬ್ರಹ್ಮತ್ವವನ್ನು ಹೊಂದಿ ಒಬ್ಬರನ್ನೂ ಲಕ್ಷಿಸದೆ ಒಬ್ಬರ ಸಹಾಯವನ್ನು ಕೂಡ ಅಲ್ಲಗಳೆಯುತ್ತಲಿರುತ್ತಾರೆ. ಇಷ್ಟೇ ಅಲ್ಲ, ಸೂಳೆಗಾರಿಕೆ ಮುಂತಾದುವುಗಳು ಸಹಾ ಡಾಂಭಿಕರನ್ನಾಶ್ರಯಿಸಿ ಹಣ ವ್ರಯಮಾಡಿಸುತ್ತವೆ. ಹೀಗೆಯೇ ತಿಂಡಿತೀರ್ಥಗಳಲ್ಲೂ ಅಧಿಕವ್ರಯವಾಗುತ್ತಲಿದೆ.

ಆದಕಾರಣ—(1) ತಮ್ಮ ಯೋಗ್ಯತೆಯನ್ನರಿತು ಬಟ್ಟೆಬರೆಗಳನ್ನೂ, ತಿಂಡಿ ತೀರ್ಥಗಳನ್ನೂ ಉಪಯೋಗಿಸಿಕೊಳ್ಳಬೇಕು. (2) ಅಲಂಕಾರಗ್ರಾಹ್ಯವನ್ನು ಬಿಟ್ಟು, ಸರ್ವರೂ ಗುಣಗ್ರಾಹ್ಯವನ್ನವಲಂಬಿಸಬೇಕು. (3) ಸರ್ವರೂ ಒಂದೇ ವಿಧವಾದ ಶುಭ್ರವಾದ ಉಡುಪನ್ನು ಧರಿಸುವಂತೆ ಸರ್ಕಾರದವರು ದೇಶದ ಉಡಿಗೆ ತೊಡಿಗೆಗಳಿಗೆ ಮಾನ್ಯವನ್ನು ಕೊಡುವಂತಾಗಬೇಕು. (4) ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಡಾಂಭಿಕರಾಗದಂತೆ ಉಪಾಧ್ಯಾಯರು ತಿದ್ದುಪಡಿಮಾಡುವಂತೆ ಆಗಬೇಕು.

ಯಸ್. ಹುಚ್ಚಾರಾವ್, ಸಿಕಾರಿಪುರ.

ಕನ್ನಡಿಗರ ಸಮ್ಮೇಳನ.

ಪ್ರಸಿದ್ಧಪತ್ರಿಕೆ.

ಕಳೆದ ಜೂನ್ ತಿಂಗಳಲ್ಲಿ ನಡೆದ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಕಮಿಟಿಯ ಒಂದು ಸಭೆಯಲ್ಲಿ ಕನ್ನಡ ಭಾಷೆಯಲ್ಲಿ ಪ್ರಜಾ ಸಾಮಾನ್ಯಕ್ಕೆ ಉಪಯೋಗಕರವಾದ ಗ್ರಂಥಗಳ ಪ್ರಾಚುರ್ಯವನ್ನು ಹೆಚ್ಚಿಸುವುದಕ್ಕೋಸ್ಕರವೂ, ಈಗಿನ ಕಾಲದ ಪ್ರಪಂಚ ಜ್ಞಾನವನ್ನು ಕನ್ನಡಿಗರಲ್ಲೆಲ್ಲಾ ಹರಡುವುದಕ್ಕೋಸ್ಕರವೂ ಈ ಭಾಷೆಯಲ್ಲಿ ಯಾವ ಯಾವ ಬದಲಾವಣೆಗಳನ್ನು ರೂಢಿಗೆ ತರಬಹುದು ಎಂಬ ವಿಚಾರವು ಚರ್ಚೆಯಾಗಿ ಈ ವಿಷಯವನ್ನು ಇತ್ಯರ್ಥಪಡಿಸುವುದಕ್ಕೋಸ್ಕರ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮ|| ರಾವ್ ಬಹದ್ದೂರ್ ಎಂ. ಶ್ಯಾಮರಾವ್, ಎಂ.ಎ., ಯವರು, ಮೈಸೂರು ಸೀಮೆಯ ಚೀಫ್ ಇಂಜನಿಯರ್ ಮ|| ಕೆಪ್ಪೂರ್ ಶ್ರೀನಿವಾಸರಾವ್, ಬಿ.ಎಸ್.ಸಿ.,ಎಲ್.ಸಿ.ಇ. ಯವರು, ರಿಟೈರ್ಡ್ ಸೀನಿಯರ್ ಸರ್ಜನ್ ಮ|| ಪಿ. ಎಸ್. ಅಚ್ಯುತರಾವ್, ಎಲ್.ಎಂ. & ಎಸ್. ಯವರನ್ನು ಒಳಗೊಂಡು ಒಂದು ಸಭೆಯು ಏರ್ಪಡಿಸಲ್ಪಟ್ಟಿತು. ಈ ಸಭೆಯವರು ಈ ವಿಷಯವನ್ನು ಚೆನ್ನಾಗಿ ವಿಚಾರಮಾಡುವುದಕ್ಕೋಸ್ಕರ ಕನ್ನಡಿಗರ ಸಮ್ಮೇಳನವನ್ನು ಇದೇ ಮೇ ತಿಂಗಳು 3-4 ನೇ ತಾರೀಖುಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ನಡೆಯಿಸಬೇಕೆಂದು ತೀರ್ಮಾನಮಾಡಿದ್ದಾರೆ. ಅದಕ್ಕೆ ಬೊಂಬಾಯಿ, ಮದರಾಸು, ಧಾರವಾಡ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ದಯಮಾಡುವರು.

ಈ ಸಮ್ಮೇಳನದಲ್ಲಿ—(1) ಕನ್ನಡ ಭಾಷೆಯು ಪ್ರಚಾರದಲ್ಲಿರುವ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡ ಗ್ರಂಥಕರ್ತರುಗಳಲ್ಲಿ ಐಕಮತ್ಯವನ್ನು ಹೆಚ್ಚಿಸುವಿಕೆ. (2) ಅಂಥಾ ಭಾಗಗಳಲ್ಲೆಲ್ಲಾ ಕಾಣಬರುವ ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರುವಿಕೆ. (3) ಅಂಥಾ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡ ಪಾಠಶಾಲೆಗಳಲ್ಲಿ ಒಂದೇ ವಿಧವಾದ ಪಠ್ಯ ಪುಸ್ತಕಗಳನ್ನು ಬಳಸುವಿಕೆ. (4) ಕನ್ನಡಿಗರ ಪ್ರಜಾ ಸಾಮಾನ್ಯದಲ್ಲೆಲ್ಲಾ ಪ್ರಯೋಜನಕರವಾದ ಜ್ಞಾನವನ್ನು ಹರಡುವುದಕ್ಕಾಗಿ ಸಣ್ಣ ಸಣ್ಣ ಗ್ರಂಥಗಳನ್ನು ಪ್ರಚುರಪಡಿಸುವಿಕೆ. (5) ಕನ್ನಡ ಗ್ರಂಥಗಳಲ್ಲಿ ಉಪಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಪಡಿಸುವಿಕೆ ಎಂಬೀ ಐದು ಉದ್ದೇಶಗಳನ್ನು ಸಾಧಿಸುವ ಅತ್ಯಂತ ಸುಲಭ ಮಾರ್ಗಗಳು ಮತ್ತು ಕರ್ನಾಟಕ ಭಾಷಾಭಿವೃದ್ಧಿಯನ್ನು ಕುರಿತ ಇತರ ವಿಷಯಗಳು. ಈ ವಿಚಾರಗಳಲ್ಲಿ ಉಪನ್ಯಾಸಗಳೂ ಚರ್ಚೆಗಳೂ ನಡೆಯುವವು.

ಕನ್ನಡ ಭಾಷೆಯ ಅಭಿವೃದ್ಧಿಯಲ್ಲಿ ಆಸಕ್ತರಾದ ಮಹನೀಯರುಗಳಲ್ಲಿ ಈ ಸಮ್ಮೇಳನವನ್ನು ಕುರಿತು ಹೆಚ್ಚು ಸಂಗತಿಗಳನ್ನು ತಿಳಿಯಬೇಕೆಂದಿರುವವರು ಈ ಕೆಳಗೆ ರುಜು ಮಾಡಿರುವವರ ಮೇಲ್ವಿಳಾಸಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು. ಸಮ್ಮೇಳನದ ಉದ್ದೇಶಗಳನ್ನು ಸಾಧಿಸುವ ವಿಷಯದಲ್ಲಿ ಕೊಡಬಹುದಾದ ಸಲಹೆಗಳೂ, ಮೇಲೆ ಸೂಚಿಸಿದ ವಿಷಯಗಳನ್ನು ಕುರಿತು ಬರೆದ ಉಪನ್ಯಾಸಗಳೂ ಅತ್ಯಂತ ಕೃತಜ್ಞತೆಯಿಂದ ಅಂಗೀಕರಿಸಲ್ಪಡುವವು. ಸಲಹೆಗಳನ್ನೂ ಉಪನ್ಯಾಸಗಳನ್ನೂ ಕಳುಹಿಸಬೇಕೆಂದಿರುವವರು ದಯವಿಟ್ಟು 1915 ನೇ ಏಪ್ರಿಲ್ 15 ರೊಳಗಾಗಿ ಕಳುಹಿಸಿಕೊಡಬೇಕೆಂದು ಕೋರಿದೆ.

ಬಿ. ಕೃಷ್ಣಪ್ಪ, ಎಂ.ಎ.,
23-3-1915. ಪ್ರೊ|| ಸೆಕ್ರೆಟರಿ, ಕನ್ನಡಿಗರ ಸಮ್ಮೇಳನ.
ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್
ಜನರಲ್ ರವರ ಆಫೀಸು, ಬೆಂಗಳೂರು.

ದಿವಾನ್ ರವರ ಸರ್ಕೀಟು.

ಮಾಗಡಿ

ಕಳೆದ 23 ನೇ ತಾ. ಬೆಳಗ್ಗೆ ದಿವಾನ್ ಸಾಹೇಬರವರ ಸವಾರಿ ದಯಮಾಡಿಸಿತು. ತಿರುಮಲೆ ದೇವಸ್ಥಾನ, ಆಸ್ಪತ್ರೆ, ಸ್ಕೂಲುಗಳು, ಪಬ್ಲಿಕ್ ಆಫೀಸುಗಳು, ಇವುಗಳನ್ನೆಲ್ಲಾ ಇನ್ಸ್‌ಪೆಕ್ಷನ್ ಮಾಡಿ, ಸ್ಕೂಲು ಹಾಲಿನಲ್ಲಿ ದರ್ಬಾರು ನಡಿಸಿ, ಪ್ರಜೆಗಳ ಅಹವಾಲುಗಳಿಗೆಲ್ಲ ಸದುತ್ತರ ದಯಪಾಲಿಸಿದರು. ಮ್ಯುನಿಸಿಪಲ್ ಮೆಂಬರೂ, ಲೋಕಲ್ ಬೋರ್ಡ್ ಮೆಂಬರುಗಳೂ, ಮ|| ಕರಣೀಕ ಕೃಷ್ಣಮೂರ್ತಿಗಳೂ, ಟೀಚರ್ಸ್ ಅಸೋಸಿಯೇಷನ್ ಮೆಂಬರುಗಳೂ ಒಪ್ಪಿಸಿದ ಅಡ್ರೆಸ್ಸುಗಳನ್ನು ಸ್ವೀಕರಿಸಿ ಸಾಧ್ಯವಾದ ಅನುಕೂಲತೆಗಳನ್ನು ಮಾಡಿಕೊಡುವುದಾಗಿ ಅನುಗ್ರಹಿಸಿದರು. ಪಂಚಮ ಸ್ಕೂಲು ವಿದ್ಯಾರ್ಥಿಗಳನ್ನೂ, ಲಂಬಾಣಿ ಹುಡುಗರನ್ನೂ ನೋಡಿ ಸಂತೋಷಪಟ್ಟರು. ಕೆಲವರು ಸೇಗೆ ಹುಡುಗರು ನರ್ತನಮಾಡಿದ್ದನ್ನು ನೋಡಿ ಬಹುಮಾನವನ್ನು ಕೊಡಿಸಿದರು. ಮಾಗಡಿಗೆ ಟ್ರಾಂವೆಯನ್ನು ಹಾಕಿಸುವುದು, ಟೆಲಿಗ್ರಾಫ್ ಆಫೀಸು ತೆರೆಯುವುದು, ಜಲಮತಿಯನ್ನು ಕಲ್ಪಿಸುವುದು, ಈ ಮುಖ್ಯ ವಿಷಯಗಳಿಗೆ ಜಾಗ್ರತೆಯಾಗಿ ಗಮನ ಕೊಡುವುದಾಗಿ ಹೇಳಿದರು. ಸ್ಕೂಲುಗಳ ಏರ್ಪಾಡೂ, ಅಲಂಕಾರವೂ ಬಹು ಚೆನ್ನಾಗಿದ್ದುವು. ಮ|| ಕರಣೀಕರು ಬಂಗಲೆಯಲ್ಲಿ ಒಂದು ಟೀಪಾರ್ಟಿ ಕೊಟ್ಟರು. ಸಾಯಂಕಾಲ 6 ಘಂಟೆಗೆ ಸವಾರಿ ಸೋಲೂರು ಮಾರ್ಗವಾಗಿ ವಾಪಸು ದಯಮಾಡಿಸಿತು. ಅಮಲ್ದಾರ್ ಮ|| ರಾಜಾರಾಯರವರು ಯಾವ ಪುಕಾರಿಗೂ ಅವಕಾಶವಿಲ್ಲದಂತೆ ಮಾಡಿದ್ದ ಏರ್ಪಾಡುಗಳನ್ನು ನೋಡಿ ಸಂತೋಷಿಸಿದರು. ಇವರು ನೆಮ್ಮದಿಗಳಲ್ಲಿ ಇದ್ದಾರೆ. ಬಿಸಿಲಿನ ತಾಪ ಹೆಚ್ಚು. ನೀರಿಗೆ ಕಷ್ಟ.

ಆನೆಕಲ್ ತಾ|| ದೊಮ್ಮಸಂದ್ರ.

ಹಜರತ್ ದಿವಾನ್ ಸಾಹೇಬರವರ ಸವಾರಿಯು ಈ ಗ್ರಾಮಕ್ಕೆ ಬೆಳಗ್ಗೆ 9 ಗಂಟೆಗೆ ಚಿತ್ತೈಸಿತು. ಗ್ರಾಮದಲ್ಲಿನ ದೊಡ್ಡ ಮನುಷ್ಯರೂ, ಗ್ರಾಮಾಧಿಕಾರಿಗಳೂ, ಈ ತಾಲ್ಲೂಕಿನ ಅಮಲ್ದಾರರೂ ಪತ್ತೆ ಬಳಿ ಕಾದಿದ್ದು ತಕ್ಕ ಮರ್ಯಾದೆಗಳೊಡನೆ ಎದುರುಗೊಂಡು ಹಾರ ತುರಾಯಿಗಳನ್ನು ಅರ್ಪಿಸಿ ವಾದ್ಯ ಘೋಷಗಳೊಡನೆ ಗ್ರಾಮಕ್ಕೆ ಕರೆತಂದರು. ದಿವಾನ್‌ರವರು ಇಲ್ಲಿನ ಪಾಠಶಾಲೆಗಳನ್ನೂ, ರೀಡಿಂಗ್ ರೂಮನ್ನೂ, ಕೋಆಪರೇಟಿವ್ ಸೊಸೈಟಿಗಳನ್ನೂ ಪರಾಂಬರಿಸಿದರು. ಕೋಆಪರೇಟಿವ್ ಸೊಸೈಟಿಯ ಮೆಂಬರುಗಳು ಕನ್ನಡದಲ್ಲೂ, ಹಿಂದುಸ್ಥಾನಿ ಗರ್ಲ್ಸ್ ಸ್ಕೂಲ್ ಸೆಕ್ರೆಟರಿಗಳು ಹಿಂದುಸ್ಥಾನಿಯಲ್ಲೂ ಸಮಯೋಚಿತವಾದ ಅಡ್ರೆಸ್ ಒಪ್ಪಿಸಿದರು. ಗ್ರಾಮಸ್ಥರ ಅಹವಾಲುಗಳನ್ನು ವಿಚಾರಿಸಿ ಈ ಗ್ರಾಮದಲ್ಲಿ ಗೌ|| ಹಿಂದುಸ್ಥಾನಿ ಸ್ಕೂಲುಗಳು 2, ಎಯಿಡ್ ಕನ್ನಡ ಸ್ಕೂಲುಗಳು 2, ಗೌ|| ಕನ್ನಡ ಸ್ಕೂಲು 1 ಇರುವುದಲ್ಲದೆ ರಾತ್ರಿ ಪಾಠಶಾಲೆ ಮತ್ತು ಇಂಗ್ಲೀಷ್ ಪ್ರೈವೇಟ್ ಸ್ಕೂಲುಗಳೂ ಸಹಾ ಇರುವುದನ್ನು ಕೇಳಿ ಬಹಳ ಸಂತೋಷಪಟ್ಟು, ಪಂಚಮರ ಸ್ಕೂಲ್ ಸ್ಥಾಪಿಸುವುದು ಆವಶ್ಯಕವೆಂತ ಗ್ರಾಮದ ಮುಖಂಡರಿಗೂ ಪಂಚಮರ ಮಂಡಲಿಗೂ ಬುದ್ಧಿವಾದಗಳನ್ನು ಹೇಳಿದ್ದಲ್ಲದೆ ಗ್ರಾಮಸ್ಥರ ಪ್ರಾರ್ಥನೆ ಮೇರೆಗೆ ಈ ಗ್ರಾಮಕ್ಕೆ ಒಂದು ಆಸ್ಪತ್ರೆಯನ್ನೂ, ಕನ್ನಡ ಸ್ಕೂಲಿಗಾಗಿ ಇಲ್ಲಿನ ಪಟೇಲ್ ಮ|| ಮೃತ್ಯುಂಜಯರಾಯರು ಉಚಿತವಾಗಿ ಕೊಟ್ಟಿರುವ ಸುಮಾರು ಒಂದು ಎಕರೆ ಜಮೀನಿನಲ್ಲಿ ಒಂದು ಉತ್ತಮವಾದ ಕಟ್ಟಡ ಆಗುವುದಕ್ಕೂ ಹುಕುಂ ದಯಪಾಲಿಸುವುದಾಗಿ ವಾಗ್ದಾನ ಮಾಡಿ, ಈ ವಿಷಯಗಳನ್ನು ನೋಟ್ ಮಾಡಿಕೊಂಡು, ಇಲ್ಲಿನ ಒಬ್ಬ ಬಡವರ ಮನೆಯನ್ನು ಪ್ರವೇಶಿಸಿ ಅವರ ಕಷ್ಟಗಳನ್ನು ವಿಚಾರಿಸಿ ಸಮಯೋಚಿತವಾದ ಬುದ್ಧಿವಾದಗಳನ್ನು ಹೇಳಿ ಮುಂದಕ್ಕೆ ದಯಮಾಡಿಸಿದರು.

ನಿಜವಾದ ಅಭಿವೃದ್ಧಿಯು ಯಾವುದು?

ಈಗ ಸಾಮಾನ್ಯವಾಗಿ ಎಲ್ಲರೂ ಸುಖವಾಗಿರಬೇಕೆಂಬ ಅಭಿಲಾಷೆಯುಳ್ಳವರಾಗಿಯೂ, ನಿಜವಾದ ಅಭಿವೃದ್ಧಿಯ ಮಾರ್ಗವನ್ನು ಕಲ್ಪಿಸಬೇಕೆಂಬ ಕುತೂಹಲವುಳ್ಳವರಾಗಿಯೂ ಇರುತ್ತಾರಷ್ಟೆ. ಈ ಅಭಿಲಾಷೆಯು ಸಾಮಾನ್ಯವಾಗಿ ಪೂರ್ವದಿಂದಲೂ ಸ್ವಲ್ಪಸ್ವಲ್ಪವಾಗಿ ವೃದ್ಧಿಹೊಂದಿ ಈಗ ವಿಶೇಷವಾಗಿ ಸರ್ವರಲ್ಲಿಯೂ ಹಬ್ಬುತ್ತಿದೆ. ಈಗ ಸಾಧಾರಣವಾಗಿ ಸರ್ಕಾರದವರು ಪ್ರಜೆಗಳಿಗೆ ಅಭಿವೃದ್ಧಿಯ ಮಾರ್ಗವನ್ನು ಸುಲಭೋಪಾಯವಾಗಿ ದೊರಕಿಸಿಕೊಡುವುದಕ್ಕೆ ಸರ್ಕಾರದವರು ಅನಂತ ಸಂಪದಭ್ಯುದಯ ಸಭೆಗಳನ್ನೂ, ಇತರ ನಾನಾವಿಧ ಕಾರ್ಯಗಳನ್ನೂ ಮಾಡಿ, ಪ್ರಜೆಗಳಿಗೆ ಆವಶ್ಯಕವಾದ ಸ್ವಾತಂತ್ರ್ಯವನ್ನೂ, ಕುಶಲ ವಿದ್ಯೆಯಲ್ಲಿ ಪ್ರವೀಣರಾದ ಬೋಧಕರನ್ನೂ, ನಾನಾವಿಧವಾದ ಸಹಾಯವನ್ನೂ ಪ್ರತ್ಯಕ್ಷದಲ್ಲಿ ಕೊಟ್ಟಿರುತ್ತಲೂ, ಮುಂದೆ ಕೊಡುತ್ತಲೂ ಇದ್ದಾರಷ್ಟೆ. ಇದರಿಂದ ಗವರ್ನಮೆಂಟಿನವರ ಉದ್ದೇಶದ ಸಹಾಯವೂ, ಅವರ ಪ್ರೋತ್ಸಾಹದಿಂದ ಏರ್ಪಟ್ಟ ಕರ್ತವ್ಯಪೂರ್ವಕವಾಗಿ ಆಚರಿಸತಕ್ಕ ಯೂನಿಯನ್ ಸಂಘಗಳಿಂದಲೂ, ಮುಂದೆ ನಾವು ಅವುಗಳ ಸೂಚನೆಯಿಂದ ಏರ್ಪಟ್ಟ ವಿಷಯಗಳಲ್ಲಿ ಪ್ರವೇಶಿಸಿ ಸ್ವತಂತ್ರ ಉದ್ಯೋಗದಿಂದ ಯಾವ ಫಲಪ್ರಯೋಜನವನ್ನೂ ಪಡೆಯುವುದಕ್ಕೆ ಪ್ರತ್ಯಕ್ಷದಲ್ಲಿ ಏನನ್ನು ಕೈಕೊಂಡಿರುವೆವೆಂಬುದನ್ನು ಯೋಚಿಸತಕ್ಕದಾಗಿದೆಯಲ್ಲವೇ? ಇಂಥಾ ಮಹತ್ತರವಾದ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ಮೂವತ್ತು ವರ್ಷಗಳಿಂದಲೂ ರೆಪ್ರೆಜಂಟೆಟಿವ್ ಅಸೆಂಬ್ಲಿಯಲ್ಲಿ ಪ್ರತಿಗಳೊಡನೆ ಚರ್ಚಿಸಿರುವ ಅನಂತ ಪ್ರಶ್ನೆಗಳಿಂದ ಪ್ರಯೋಜನವಾಗಲಿ ಈ ವರೆಗೂ ಉಂಟಾಗದೆ ಪತ್ರವ್ಯವಹಾರ ಮೂಲಕವಾದ ಸಭೆಯ ಮೀಟಿಂಗ್ ಇವುಗಳಲ್ಲೇ ಅದರ ಅಂತ್ಯಪರಿಣಾಮಾವಸ್ಥೆಯಾಗಿರುತ್ತದೆ. ಆದರೆ ಮಹತ್ತರವಾದ ಅಭಿವೃದ್ಧಿಯ ಮಾರ್ಗದ ಏರ್ಪಾಡನ್ನು ಸರ್ಕಾರದವರು ಅನೇಕ ದುಡ್ಡು ವ್ರಯಮಾಡಿ ಅದರ ಫಲಿತಾಂಶವನ್ನು ತಿಳಿಸುವುದಕ್ಕಾಗಿ ಅಲ್ಲಲ್ಲಿ ಪ್ರದರ್ಶನ, ಫಾರಮು ಮುಂತಾದವುಗಳ ಮೂಲಕ ಜನಗಳಿಗೆ ತಿಳುವಳಿಕೆ ಕೊಟ್ಟರೂ ಅವರ ಉದ್ದೇಶವನ್ನೂ, ಸೂಚನೆಯ ಮುಖ್ಯಫಲಿತಾಂಶವನ್ನೂ ಮನಸ್ಸಿಗೆ ತಾರದೆ ಅನಾದರಣೆ, ಸೋಮಾರಿತನ ಮತ್ತು ಹಟಮಾರಿತನವನ್ನು ವಹಿಸತಕ್ಕವರೇ ಅತ್ಯಧಿಕವಾಗಿ ಹೆಚ್ಚುತ್ತಾ ಇದ್ದಾರೆ. ಮತ್ತು ಗಂಟು ವ್ಯಾಜ್ಯಗಳನ್ನು ಪರಸ್ಪರ ತಂದು ಅಂಟು ಹಾಕುವುದರಲ್ಲಿ ಸಮರ್ಥರಾದ ನಿರುದ್ಯೋಗಿಗಳ ಗುಂಪು ದಿನೇ ದಿನೇ ಪ್ರತಿಯೊಂದು ಗ್ರಾಮದಲ್ಲೂ ಹೆಚ್ಚುತ್ತಾ ಇರುವುದು ನಿಜವಾದ ಅಭಿವೃದ್ಧಿಯ ಮಾರ್ಗಕ್ಕೆ ಕಂಟಕವೆನಿಸಿರುತ್ತೆ. ಅಭಿವೃದ್ಧಿಗೆ ಅವಶ್ಯಕವಾದ ಅರ್ಥಸಾಧನೆಯ ಏರ್ಪಾಡುಗಳಿಗೆ ಮುಖ್ಯವಾಗಿ ಐಕಮತ್ಯ, ನಂಬಿಕೆ, ಕಾರ್ಯ ಚಟುವಟಿಕೆ, ಮುಂದಾಲೋಚನೆ, ವಿಷಯಗ್ರಹಣ ಅತ್ಯವಶ್ಯಕವಾದವುಗಳಾಗಿರುತ್ತವೆ. ಈ ಮೇಲ್ಕಂಡ ವಿಷಯಗಳಲ್ಲಿ ಒಂದಾದರೂ ನಮ್ಮ ಪ್ರಜೆಗಳಲ್ಲಿ ಮುಕ್ಕಾಲುಪಾಲು ಆಚರಿಸತಕ್ಕವರಲ್ಲ. ಇದಕ್ಕೆ ಅಸೂಯೆ, ಹೀತೋಕ್ತಿಗಳಿಂದ ಜರಿಯುವುದು, ಸಾಮಾನ್ಯವಾಗಿ ನಿಜವಾದ ವ್ಯವಹಾರದಲ್ಲಿ ಅಭಿವೃದ್ಧಿಯುಂಟಾಗತಕ್ಕವರಿಗೆ ಮಾಡತಕ್ಕ ಅಸೌಲಭ್ಯಗಳನ್ನು ಕಲ್ಪಿಸುವ ವಾಡಿಕೆಯಾಗಿರುತ್ತೆ. ಆದ್ದರಿಂದ ಈಗ ನಮ್ಮ ದೇಶವು ದಿನದಿನಕ್ಕೆ ಪ್ರತಿಯೊಂದು ಕಸಬಿನಲ್ಲಿ ಹಿಂದೆ ಬೀಳುತ್ತಿರುವುದರಿಂದಲೂ, ಕಾಲಕ್ಕೆ ಮಳೆಯು ಸರಿಯಾಗಿ ನಡಿಸದೆ ಇರುವುದರಿಂದಲೂ, ಅನೇಕ ರೈತರಿಗೆ ವ್ಯವಸಾಯಸಂಜ್ಞಾನವು ಈ ಕಾಲಕ್ಕೆ ತಕ್ಕಂತೆ ತಿಳಿಯದೆ ಪ್ರತಿವರ್ಷದಲ್ಲೂ ತಿನ್ನುವುದಕ್ಕೆ ರಾಗಿ, ಬತ್ತ ಇಲ್ಲದೆಯೂ, ಹಗಲಿರುಳು ಗೇದರೂ ಅವರ ಸಂಸಾರಕ್ಕಾಗುವಷ್ಟು ದ್ರವ್ಯವನ್ನು ಸಂಪಾದಿಸುವುದಕ್ಕೆ ಶಕ್ತಿಯುಳ್ಳವರಾಗಿಲ್ಲದೆ ವಿದ್ಯಾವಿಹೀನರು ಮಾಡಿದ ಪೂರ್ವಪದ್ಧತಿಗಳನ್ನು ಅನುಸರಿಸಿಕೊಂಡು ಬರುತ್ತಾ ಇರುವುದೇ ಈ ರೀತಿಯ ಬಡಸ್ತನಕ್ಕೆ ಕಾರಣವಾಯಿತು. ಆದರೆ ಇವನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಗೆ ತರಬೇಕಾದರೆ ಬಲವಂತದಿಂದ ಗವರ್ನಮೆಂಟಿನವರು ತಾಲ್ಲೋಕುಗಳಲ್ಲಿ ಮುಖ್ಯಮುಖ್ಯವಾದ ಸಂಘಗಳಿಗೆ ಇದರ ಅಧಿಕಾರವನ್ನು ವಹಿಸುವಂತೆ ಮಾಡಬೇಕು. ಮುಖ್ಯವಾಗಿ ಇಷ್ಟು ಬಡತನಕ್ಕೆ ಅವಿದ್ಯೆಯೇ ಕಾರಣವು. ಆದರೆ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿರುವ ಮುಕ್ಕಾಲುಮೂರುವೀಸ ಪಾಲು ಬಡತನಸ್ಥಿತಿಯನ್ನು ತಮ್ಮ ಕರ್ಮವ್ಯಲೋಪದಿಂದ ಅನುಭವಿಸುತ್ತಾ ಇದ್ದಾರೆ. ಇದರ ಪರಿಹಾರಮಾರ್ಗವು ಎಲ್ಲರೂ ವಿದ್ಯಾಭ್ಯಾಸಮಾಡತಕ್ಕದ್ದಾಗಿ ಸ್ವತಂತ್ರ ಉದ್ಯೋಗವನ್ನು ಕೈಕೊಂಡು ನಡಿಸತಕ್ಕದ್ದಾಗಿರುತ್ತೆ.

ಕೆ. ಶಿವಬಸವಯ್ಯ, ಕ್ಯಾತಸಂದ್ರ.

ಆನೆಕಲ್ಲಿನಲ್ಲಿ ನಡೆದ ಪರಸ್ಪರಸಹಾಯ ಸಂಘಗಳ ಪ್ರಥಮ ಸಮ್ಮೇಳನ.

ಕಳೆದ ಮಾರ್ಚಿ ಮಾಹೆ 24 ನೇ ತಾರೀಖಿನಲ್ಲಿ ಆನೇಕಲ್ ಶ್ರೀತಿಮ್ಮರಾಯಸ್ವಾಮಿ ರಥೋತ್ಸವ ಕಾಲದಲ್ಲಿ ಆನೇಕಲ್ ತಾಲ್ಲೂಕು ಪರಸ್ಪರಸಹಾಯ ಸಂಘಗಳ ಪ್ರಥಮ ಸಮ್ಮೇಳನವು ಆ ಕಾಲಕ್ಕಾಗಿ ತಯಾರಾಗಿದ್ದ ವಿಶಾಲವಾದ ಮತ್ತು ಮನೋಹರವಾಗಿ ಅಲಂಕಾರಮಾಡಲ್ಪಟ್ಟಿದ್ದ ಮಂಟಪದಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಾದ ರಾವ್ ಬಹದೂರ್ ಮ|| ಎಂ. ಶಾಮರಾವ್, ಎಂ.ಎ. ಯವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಸಭೆಯನ್ನು ಅಲಂಕರಿಸಿದ್ದ ಆಫೀಸರುಗಳು ಯಾರೆಂದರೆ—ಮ|| ಸಾರಿಬ ಸಿ. ಕೃಷ್ಣರಾಯರು, ಬಿ. ವಾಸಪ್ಪನವರು, ಎ. ಸುಬ್ರಹ್ಮಣ್ಯ ಅಯ್ಯರವರು, ಎಸ್. ಎ. ಶೆಟ್ಟಿರವರು, ಪಿ. ಗೋಪಾಲರಾಜೆ ಅರಸಿನವರು, ಆರ್. ಅನಂತ ಸುಬ್ರಹ್ಮಣ್ಯಂ ಅಯ್ಯರವರು, ರೆವ್. ಎಸ್. ಪಿ. ಆಕ್ಸು ಸಾಹೇಬರವರು, ಮತ್ತು ತಾಲ್ಲೂಕು ಅಧಿಕಾರಿಗಳೂ ದೊಡ್ಡಮನುಷ್ಯರೂ ಸಹ ಕೂಡಿದ್ದರು. ಈ ತಾಲ್ಲೂಕಿನಲ್ಲಿರುವ 13 ಕೋಆಪರೇಟಿವ್ ಸೊಸೈಟಿಗಳಿಂದ ಸುಮಾರು 100 ಮಂದಿ ಪ್ರತಿನಿಧಿಗಳು ಮತ್ತು ವಿಜಿಟರುಗಳು ಸೇರಿದ್ದರು. ತಾಲ್ಲೂಕು ಆಮಿಲ್ ಪಟೇಲ್ ಶ್ಯಾನುಭೋಗರುಗಳು, ಮುಖಂಡ ರೈತರುಗಳು ಮತ್ತು ಜಾತ್ರೆಗಾಗಿ ಸೇರಿದ್ದ ಅನೇಕ ಜನರು ಬಂದಿದ್ದರು. ಈ ಜಾತ್ರೆಯು ಆನೇಕಲ್‌ಗೆ ಮುಕ್ಕಾಲು ಮೈಲಿ ದೂರದಲ್ಲಿ ಶ್ರೀತಿಮ್ಮರಾಯಸ್ವಾಮಿಯ ದೇವಸ್ಥಾನದ ಸಮೀಪದಲ್ಲಿ ನಡೆಯುತ್ತದೆ. ಪರಿಷೆಗೆ ಸೇರಿದ ಜನಗಳಿಗೆ ಸೊಸೈಟಿಗಳ ಪ್ರಯೋಜನವು ಚೆನ್ನಾಗಿ ತಿಳಿಯಲೆಂಬ ಉದ್ದೇಶದಿಂದ ಜನಸಮ್ಮರ್ದವಿರುವ ಪ್ರದೇಶದಲ್ಲೇ ಈ ಸಮ್ಮೇಳನವು ನಡೆಯುವಂತೆ ರೀಡ್ ಫರ್ಡ್ ಸು ಕಮಿಟಿಯ ಪ್ರೆಸಿಡೆಂಟರು ಅಮಲ್ದಾರ್ ಮ|| ಗೋಪಾಲಕೃಷ್ಣಯ್ಯಂಗಾರ್ರವರು ಏರ್ಪಾಡುಮಾಡಿದರು. ಜಾತ್ರೆಯಾದಾಗ್ಯೂ ಜನಗಳು ನಿಶ್ಶಬ್ದದಿಂದ ತಮ್ಮ ಆಸಕ್ತಿಯನ್ನು ತೋರ್ಪಡಿಸಿದರು.

ಮಧ್ಯಾಹ್ನ ಸಭೆಯು ಪ್ರಾರಂಭವಾದ ಕೂಡಲೇ ಅಮಲ್ದಾರ್ ಮ|| ಗೋಪಾಲಕೃಷ್ಣಯ್ಯಂಗಾರ್ರವರು ರಾವ್ ಬಹದೂರ್ ಮ|| ಎಂ. ಶಾಮರಾವ್,

...ಯವರು ಅಗ್ರಾಸನವನ್ನು ವಹಿಸಬೇಕೆಂದು ಕೇಳಿಕೊಂಡು ಅಡ್ರೆಸ್ಸನ್ನು ... ಈ ದಿನ ಅಧ್ಯಕ್ಷತೆಯನ್ನು ವಹಿಸಿದವರು ಸೊಸೈಟಿಗಳ ರಿಜಿಸ್ಟ್ರಾರ್ ... ದಿಂದ ಈ ಕಾನ್ಫರೆನ್ಸಿನಲ್ಲಿ ನಮ್ಮಗಳ ಪುಣ್ಯೋದಯದಿಂದ ಒದಗಿ ... ಕೃತಜ್ಞತೆಯನ್ನು ಕಮಿಟಿಯ ಪರವಾಗಿ ಅರ್ಪಿಸಿದ್ದಲ್ಲದೆ ಅಧ್ಯಕ್ಷರ ...ಯುಗಳನ್ನು ಮತ್ತು ಇಂಡಿಯಾ ಸರ್ಕಾರದವರು ಇವರ ಅತಿಶಯವಾದ ...ಗೆ "ರಾವ್ ಬಹದೂರ್" ಎಂಬ ಬಿರುದನ್ನು ದಯಪಾಲಿಸಿದ ವಿಚಾರ ... ಸೂಚಿಸಿದರು. ಸಭಾಧ್ಯಕ್ಷರು ಕೋಆಪರೆಟಿವ್ ಸೊಸೈಟಿಗಳಿಂದ ವ್ಯವ ಸಾಯಗಾರರಿಗೂ, ಕೈಗಾರಿಕೆಯವರಿಗೂ ಮತ್ತು ಇತರರಿಗೂ ಉಂಟಾಗುವ ಪ್ರಯೋಜನಗಳನ್ನು ತಿಳಿಯಹೇಳಿ, ಸಂಕ್ಷೇಪವಾದ ವಿಸ್ತೀರ್ಣಗಳಲ್ಲಿ ಸೊಸೈಟಿ ಗಳನ್ನು ಈಗ ಇರುವುದಕ್ಕಿಂತ ಹೆಚ್ಚಾಗಿ ಏರ್ಪಡಿಸಿಕೊಂಡು ಕ್ರಮವಾಗಿ ನಡೆಸಿ, ಅದರ ಫಲವನ್ನು ಹೊಂದುವುದರಿಂದ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ನಿರೀಕ್ಷೆ ಮತ್ತು ಸದುದ್ದೇಶವನ್ನು ಸಾರ್ಥಕಪಡಿಸಬೇಕೆಂದೂ ಮತ್ತು ಸೊಸೈಟಿಗಳ ಮೇಲ್ವಿಚಾರಣೆಗೂ, ಈ ಸಂಘಗಳನ್ನು ಏರ್ಪಡಿಸುವುದಕ್ಕೂ ಮತ್ತು ಸಂಘಗಳಿಗೆ ಬೇಕಾಗುವ ಬಂಡವಾಳ ಒದಗಿಸುವುದಕ್ಕೂ ಫೆಡರಲ್ ಕೋಆಪರೆಟಿವ್ ಬ್ಯಾಂಕಿಂಗ್ ಯೂನಿಯನ್ ಒಂದನ್ನು ಈ ತಾಲ್ಲೂಕಿನಲ್ಲಿ ಏರ್ಪಡಿಸಿಕೊಳ್ಳುವುದು ಉತ್ತಮವೆಂದೂ ಅಪ್ಪಣೆಕೊಡಿಸಿದರು

ಅನಂತರ ಈ ತಾಲ್ಲೂಕಿನಲ್ಲಿ ಹಾಲಿ ಪರಸ್ಪರಸಹಾಯ ಸಂಘಗಳ ಸ್ಥಿತಿಯನ್ನು ಕುರಿತು ಕೋಆಪರೆಟಿವ್ ಸೊಸೈಟಿಗಳ ಇನ್ಸ್‌ಪೆಕ್ಟರ್ ಮ|| ಎಸ್. ...ಯ್ಯನವರು ಉಪನ್ಯಾಸಮಾಡಿದರು ತರುವಾಯ ತಾಲ್ಲೂಕಿನ ಸೊಸೈಟಿಗಳ ಸೆಕ್ರೆಟರಿಯವರು ತಮ್ಮ ತಮ್ಮ ಸೊಸೈಟಿಯ ಕೆಲಸದ ವಿಚಾರವನ್ನು ಕುರಿತು ರಿಪೋರ್ಟುಗಳನ್ನು ಓದಿದರು. ಅನಂತರ ಪರಸ್ಪರಸಹಾಯ ಸಂಘಗಳ ಅಭಿವೃದ್ಧಿಗೆ ಸಹಕಾರಿಯಾದ ವಿಷಯಗಳ ಮೇಲೆ ಅನೇಕರು ಉಪನ್ಯಾಸ ಮಾಡಿದರು. ಮೆಂಬರುಗಳು ಬಹಳ ಉತ್ಸಾಹದಿಂದ ವಿಷಯಗಳನ್ನು ಚರ್ಚಿಸಿ ಸರಿಯಾದ ತೀರ್ಮಾನಗಳನ್ನು ಮಾಡಿದರು

ಮೆಂಬರುಗಳ ಆಸ್ತಿ ಪಟ್ಟಿಯನ್ನು ಸಬ್ ರಿಜಿಸ್ಟ್ರಾರವರು ಈ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸುವುದರಿಂದ ಅನ್‌ಲಿಮಿಟೆಡ್ ಸಂಘಗಳಿಗೆ ಉತ್ತಮವೆಂದು ಅಮಲ್ದಾರ್ ಮ|| ಯರ್ ಗೋಪಾಲಕೃಷ್ಣಯ್ಯಂಗಾರ್ರವರು ಸೂಚಿಸಿದ್ದರ ಮೇಲೆ ಬಹಳ ಚರ್ಚೆ ನಡೆದು ಪ್ರೆಸಿಡೆಂಟರವರು—ಈ ವಿಷಯವು ಸಫಲವಾಗಬೇಕಾದಲ್ಲಿ ರಿಜಿಸ್ಟ್ರೇಷನ್ ಆಕ್ಟು ಬದಲಾಯಿಸಬೇಕಾಗಿ ಬರುವದಲ್ಲದೆ ನಮ್ಮ ದೇಶದ ಈಗಿನ ಸ್ಥಿತಿಯಲ್ಲಿ ಇದರ ಗುಣವನ್ನು ಜನಗಳು ತಿಳಿದು ಅನುಸರಿಸುವರೆಂದು ತೋರುತ್ತದೆಂತ ಅಪ್ಪಣೆ ಕೊಡಿಸಿದರು.

ಮೈಸೂರು ಕಾನ್ಫರೆನ್ಸು ಯಜುಕೇಷನ್ ಕಮಿಟಿ ಸೆಕ್ರೆಟರಿಯವರಾದ ಮ|| ಕೆ. ಕೃಷ್ಣರಾಯರು ವಿದ್ಯಾಭ್ಯಾಸವನ್ನು ಪ್ರಚುರಪಡಿಸಬೇಕೆಂದೂ, ಪ್ರಜೆಗಳು ಗ್ರಾಂಟ್ ಇನ್ ಏಡ್ ಸ್ಕೂಲುಗಳನ್ನು ಹೆಚ್ಚಿಸಬೇಕೆಂದೂ ಅಪ್ಪಣೆಕೊಟ್ಟು, ವಿದ್ಯಾಪ್ರಸಾರದ ಮೇಲೆ ಬರೆದಿರುವ ಪುಸ್ತಕಗಳನ್ನು ಎಲ್ಲರಿಗೂ ಉಚಿತವಾಗಿ ಕೊಟ್ಟರು ಕಾನ್ಫರೆನ್ಸಿನಲ್ಲಿ ನಡೆಯಬೇಕಾದ ಚರ್ಚೆಗಳೆಲ್ಲಾ ಮುಗಿದ ತರುವಾಯ ಪ್ರೆಸಿಡೆಂಟರವರು ಹಾಲಿ ಇರುವ ಸಂಘಗಳವರು ನಡಿಸುವ ಕೆಲಸಗಳನ್ನು ಕೇಳಿ ತಮ್ಮ ಸಂತೋಷವನ್ನು ಸೂಚಿಸಿದರು

ಅಮಲ್ದಾರ್ ಮ|| ಯರ್. ಗೋಪಾಲಕೃಷ್ಣಯ್ಯಂಗಾರ್ರವರು ಸಭಾಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿದರು ಸಂತರ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರಿಗೂ, ನಮ್ಮ ಶ್ರೀಮನ್ಮಹಾರಾಜರು ಮತ್ತು ಶ್ರೀಮದ್ಯುವರಾಜರಿಗೂ ಆಯುರಾರೋಗ್ಯಾದಿಗಳು ಹೆಚ್ಚಿ ಸರ್ವದಾ ಜಯಪ್ರದವಾಗಲೆಂದು ಜಯಘೋಷದಿಂದ ಸಭೆಯು ಮುಕ್ತಾಯವಾಯಿತು

ಈ ಸಮ್ಮೇಳನವು ನಡೆದದ್ದು ಇದೇ ಮೊದಲನೆದಾಗ್ಯೂ, ಕಾನ್ಫರೆನ್ಸು ಕಮಿಟಿಯ ಪ್ರೆಸಿಡೆಂಟರಾದ ಅಮಲ್ದಾರ್ ಮ|| ಗೋಪಾಲಕೃಷ್ಣಯ್ಯಂಗಾರ್ರವರ, ಜೋಡಿದಾರ್ ಮ|| ಬಿ. ಶ್ರೀನಿವಾಸಯ್ಯಂಗಾರ್ರವರ ಮತ್ತು ಆನೆಕಲ್ ಶ್ರೀಲಕ್ಷ್ಮೀನಿಲಯ ಸಂಘದ ಸೆಕ್ರೆಟರಿಯವರಾದ ಮ|| ಬಿ. ಶ್ರೀನಿವಾಸಯ್ಯಂಗಾರ್ ಮತ್ತು ಇತರ ಕಮಿಟಿ ಮೆಂಬರುಗಳು ಶ್ರಮಪಟ್ಟದ್ದರಿಂದ ಎಲ್ಲವೂ ಸರಾಗವಾಗಿ ನಡೆಯಿತು.

ಕಂಟ್ರಾಕ್ಟರ್ ಮ|| ಗೋವಿಂದರಾಜುಯವರು ಕಾನ್ಫರೆನ್ಸಿಗೆ ಬಂದ ಮೆಂಬರುಗಳಿಗೆ ಊಟ ಉಪಚಾರಗಳಿಗೆ ಏರ್ಪಾಡುಮಾಡಿದರು ಮ|| ಮರಿಗೆ ಹನುಮಂತಪ್ಪನವರು ದೇವಸ್ಥಾನದ ಬಳಿ ತಮ್ಮ ತೋಟದಲ್ಲಿ ಕಾನ್ಫರೆನ್ಸು ನಡೆಯುವ ಬಗ್ಗೆ ಏರ್ಪಡಿಸಿದ್ದರು ಪ್ರತಿ ವರ್ಷವೂ ಇದೇ ರೀತಿ ಅಲ್ಲಿ ಕಾನ್ಫರೆನ್ಸು ನಡೆಯಬೇಕೆಂತ ಪ್ರೆಸಿಡೆಂಟರಿಗೆ ಬಿನ್ನೈಸಿಕೊಂಡರು.

ಪ್ರತ್ಯಕ್ಷದರ್ಶಿ.

ಸೊಳ್ಳೆಗಳ ವಿಷಯದಲ್ಲಿ ಸೂಚನೆಗಳು.

ಮೈಸೂರು ಸಿಟಿ ಹೆಲ್ತ್ ಆಫೀಸರ್ ಡಾಕ್ಟರ್ ಎ. ಕೆ ಪಾಣೆಯವರು ಮೇಲ್ಕಂಡ ವಿಷಯವನ್ನು ಕುರಿತು ಪ್ರಕಟಿಸಮಾಡಿರುವುದೇನೆಂದರೆ—

(1) ಸೊಳ್ಳೆಗಳು ಮೊಟ್ಟೆಗಳನ್ನು ಇಟ್ಟು ಮರಿಮಾಡುವುದು ನೀರಿನಲ್ಲಿಯೇ ಹೊರತು ಮತ್ತೆಲ್ಲಿಯೂ ಅಲ್ಲ. (2) ಅಂಥಾ ನೀರು ಒಂದು ಕೊಳದಷ್ಟು ದೊಡ್ಡದಾಗಿಯಾದರೂ ಅಥವಾ ಒಂದು ಬಾಟಲಿನಲ್ಲಿ ಹಿಡಿಸಬಹುದಾದಷ್ಟು ಸ್ವಲ್ಪವಾಗಿಯಾದರೂ ಇರಬಹುದು. (3) ಅಂಥಾ ನೀರು ಶುಚಿಯಾಗಿದ್ದರೂ ಸರಿಯೆ, ಕೊಳಕಾಗಿದ್ದರೂ ಸರಿಯೆ. ಉಪಯೋಗಿಸದೆ ನಿಂತ ನೀರಾದರೂ ಸರಿಯೆ. ಅಥವಾ ಸಣ್ಣದಾಗಿ ಹರಿಯುತ್ತಿರುವ ನೀರಾಗಿದ್ದರೂ ಸರಿಯೆ—ಇಂಥಾ ನೀರುಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದಕ್ಕೆ ಅಸ್ಪದವಾಗುತ್ತದೆ (4) ಸೊಳ್ಳೆಗಳು ಮರಳಲ್ಲಾಗಲೀ, ಕುರುಚಲು ಗಿಡಗಳಲ್ಲಾಗಲೀ, ಹುಲ್ಲಿನಲ್ಲಾಗಲೀ, ಶ್ಯಾಮವಾದ ನೆಲದಲ್ಲಾಗಲೀ, ಗೊಬ್ಬರದ ಗುಂಡಿಗಳಲ್ಲಾಗಲೀ, ಕಾಡಾಗಿ ಬೆಳೆಯುವ ಸಣ್ಣ ಗಿಡಗಳಲ್ಲಾಗಲೀ ಉತ್ಪತ್ತಿಯಾಗುವುದಿಲ್ಲ. (5) ಮನೆಗಳ ಒಳಗೂ ಮತ್ತು ಹೊರಗೂ ನೀರು ನಿಂತರೆ ಆ ನೀರು ಚೊಕ್ಕಟವಾಗಿದ್ದರೂ ಅಥವಾ ಕೊಳಕಾಗಿದ್ದರೂ ಒಂದು ವಾರದ ವರಿವಿಗೂ ಬದಲಾಯಿಸದೆ ಅಥವಾ ಇಂಗಿ ಅಥವಾ ಒಣಗಿಹೋಗದೆ ನಿಂತಿದ್ದರೆ ಅಂಥಾ ನೀರಿನಲ್ಲಿ ಸೊಳ್ಳೆಗಳು ಮೊಟ್ಟೆಗಳನ್ನು ಇಡುವದರಿಂದ ಮರಿಗಳಾಗುತ್ತವೆ (6) ಊರುಗಳಲ್ಲಿ ಮತ್ತು ಹಳ್ಳಿಹಳ್ಳಿಗಳಲ್ಲಿ ಮಳೆ ನೀರು ನಿಲ್ಲುವ ಗುಂಡಿಗಳಲ್ಲಿಯೂ, ಹಳ್ಳಕೊಳ್ಳಗಳಲ್ಲಿ ನಿಂತ ಕೊಚ್ಚೆ ನೀರಿನಲ್ಲಿಯೂ, ಹರಿದುಹೋಗದೆ ನಿಂತಿರುವ ಬಚ್ಚಲು ನೀರಿನಲ್ಲಿಯೂ, ಕೆರೆಗಳ ಅಂಚುಗಳಲ್ಲಿ ಆಳವಿಲ್ಲದೆ ಇರುವ ನೀರಿನಲ್ಲಿಯೂ, ಕೆರೆಗಳ ಅಂಚುಗಳಲ್ಲಿ ಅಲ್ಲಲ್ಲಿ ನಿಂತ ನೀರಿನಲ್ಲಿಯೂ, ಯಾವಾಗಲೂ ನೀರು ಸೇದದೇ ಇರುವ ಅಥವಾ ಅಪರೂಪವಾಗಿ ನೀರು ಸೇದುವ ಭಾವಿಗಳಲ್ಲಿಯೂ, ಇದೇ ರೀತಿಯಲ್ಲಿ ಪ್ರತಿಯೊಂದು ಸಣ್ಣ ಹಳ್ಳದಲ್ಲಿ ಆಗಲೀ ಅಥವಾ ಯಾವದೊಂದು ಪಾತ್ರೆಯಲ್ಲಿಯೇ ಆಗಲೀ ನೀರು ಒಂದು ವಾರದ ವರಿವಿಗೂ ನಿಂತಿದ್ದರೆ ಸಾಕು—ಇಂಥಾ ನೀರುಗಳಲ್ಲಿಯೂ ಸೊಳ್ಳೆಗಳು ಮೊಟ್ಟೆಗಳನ್ನು ಇಡುವುದಕ್ಕೆ ಆಸ್ಪದವಾಗುತ್ತಾದ್ದರಿಂದ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. (7) ಒಂದು ಸೊಳ್ಳೆಯು ಒಂದು ಸಲಕ್ಕೆ ಸುಮಾರು 300 ರ ವರಿವಿಗೆ ಬಹಳ ಸಣ್ಣ ಮೊಟ್ಟೆಗಳನ್ನು ನೀರಿನ ಮೇಲೆಯೇ ಇಡುವುದು. ಮೊಟ್ಟೆಗಳು ಒಡೆದ ಬಳಿಕ ಸೊಳ್ಳೆಮರಿಗಳು ನೀರಿನಲ್ಲಿ ಸಣ್ಣ ಹುಳಗಳಂತೆ ಕಾಣುತ್ತವೆ, ಬೆಳೆದು ರೆಕ್ಕೆಗಳು ದೊಡ್ಡ ಸೊಳ್ಳೆಗಳಂತೆ ಕಾಣುವುದಿಲ್ಲ ಈ ಮರಿಸೊಳ್ಳೆಗಳಲ್ಲಿ ಕೆಲವು ತರಹದವುಗಳು ನೀರಿನಲ್ಲಿ ಮೇಲಕ್ಕೂ ಕೆಳಕ್ಕೂ ಚಿಮ್ಮಿಕೊಂಡು ಓಡಾಡಿಕೊಂಡು ಇರುತ್ತವೆ ಮತ್ತೆ ಕೆಲವು ತರಹದವುಗಳು ನೀರಿನ ಮೇಲೆ ಪಕ್ಕದಿಂದ ಪಕ್ಕಕ್ಕೆ ಹರಿದಾಡುತ್ತಿರುವವು. (8) ಈ ರೀತಿ ನೀರಿನಲ್ಲಿ ಹುಳಗಳಂತೆ ಹರಿದಾಡುತ್ತಿರುವ ಮರಿಸೊಳ್ಳೆಗಳು ಸುಮಾರು ಒಂದು ವಾರದಲ್ಲಿ ಬೆಳವಣಿಗೆಯನ್ನು ಹೊಂದಿ ರೆಕ್ಕೆಗಳನ್ನು ಪಡೆದು ಸೊಳ್ಳೆಗಳಾಗಿ ಹಾರಿಹೋಗುತ್ತವೆ. (9) ಸೊಳ್ಳೆಗಳು ಒಬ್ಬರನ್ನು ಕಡಿದು ಮತ್ತೊಬ್ಬರನ್ನು ಕಡಿಯೋಣದರಿಂದ ಒಬ್ಬರಿಂದೊಬ್ಬರಿಗೆ ನಾನಾ ಬಗೆಯ ರೋಗಗಳನ್ನು ಅಂಟಿಸುತ್ತವೆ ಎಂಬುವದು ಪರಿಷ್ಕಾರವಾಗಿ ರುಜುವಾತು ಮಾಡಲ್ಪಟ್ಟಿದೆ. ಕೆಲವು ಜಾತಿಯ ಸೊಳ್ಳೆಗಳು ಕೆಲವು ಊರುಗಳಲ್ಲಿ ಆನೆಯ ಕಾಲು ರೋಗವನ್ನೂ, ಅರಸಿನರೂಪವನ್ನುಂಟುಮಾಡತಕ್ಕ ಜ್ವರವನ್ನೂ (ಯಲ್ಲೋ ಫೀವರ್) ಅಂಥಾ ರೋಗಿಗಳನ್ನು ಕಡಿದು ಮತ್ತೊಬ್ಬರನ್ನು ಕಡಿಯುವುದರಿಂದ ತಗಲಿಸುತ್ತವೆ; ನಮ್ಮ ಮೈಸೂರಿನಲ್ಲಿ ಬಲವಾಗಿರುವ (ಮಲೇರಿಯಾ) ಛಳಿಜ್ವರ ರೋಗವೂ ಕೆಲವು ತರಹ ಸೊಳ್ಳೆಗಳ ಕಡಿತದಿಂದಲೇ ಅಂಟಿ ವ್ಯಾಪಿಸುವುದು. (10) ಈ ರೋಗಗಳು ಬಾರದೆ ಹೋಗಬೇಕಾದರೆ ಮೊದಲು ಸೊಳ್ಳೆಗಳ ಕಾಟವನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳಬೇಕು. ಸೊಳ್ಳೆಗಳ ಕಾಟ ತಪ್ಪಬೇಕಾದರೆ ಉಪಯೋಗಿಸದೆ ನಿಂತಿರುವ ಮೇಲ್ಕಂಡ ಯಾವ ತರಹಾ ನೀರೂ ಇಲ್ಲದಂತೆ ನೋಡಿಕೊಳ್ಳಬೇಕು.

(11) ಸೊಳ್ಳೆಗಳು ಮೊಟ್ಟೆಗಳನ್ನಿಟ್ಟು ಮರಿ ಮಾಡುವಂಥಾ ಸ್ಥಳಗಳನ್ನು ನಾಶಪಡಿಸುವುದಕ್ಕೆ ಮಾಡಬೇಕಾಗಿರುವ ಕಾರ್ಯಗಳೇನೆಂದರೆ:—ಎಲ್ಲಾ ನಿಂತ ನೀರನ್ನೂ, ಬಚ್ಚಲ ರೊಚ್ಚು ನೀರನ್ನೂ ಕಡೇ ಪಕ್ಷ ವಾರಕ್ಕೆ ಒಂದಾವರ್ತಿಯಾದರೂ ಎಲ್ಲಾ ಚೊಕ್ಕಟವಾಗಿ ಕೊಚ್ಚಿಕೊಂಡು ಹೋಗುವಂತೆ ಮಾಡಬೇಕು. ಕೊಚ್ಚೆ ಗುಂಡಿಗಳ ನೀರನ್ನೂ, ಮಳೆ ನೀರನ್ನೂ ನಿಲ್ಲದಂತೆ ಚೆನ್ನಾಗಿ ಹರಿಸಿಬಿಟ್ಟು ಒಳ್ಳೆ ಒಣಗಿದ ನೆಲ ಕಾಣುವಂತೆ ಮಾಡಬೇಕು; ಅಥವಾ ಅಂಥಾ ಗುಂಡಿಗಳಿಗೆ ಮಣ್ಣು ಮುಂತಾದದ್ದನ್ನು ಹಾಕಿ ಭರ್ತಿ ಮಾಡಿಬಿಡಬೇಕು ನೀರಾಗಲೀ, ಬಚ್ಚಲ ರೊಚ್ಚಿನ ನೀರಾಗಲೀ ಎಲ್ಲೂ ನಿಂತು ಕೊಳೆಯುವಂತೆ ಇತರ ಹಳ್ಳಗಳನ್ನು ಮಾಡಕೂಡದು. ಕೆರೆಯೊಳಗೆ ಅಂಚು ಕಟ್ಟುಗಳನ್ನು ತೋಡಿ, ಸುತ್ತಲೂ ಬಹಳ ಆಳವಾಗಿ ನೀರು ಒಂದೇ ಸಮವಾಗಿ ನಿಲ್ಲುವಂತೆ ಮಾಡಬೇಕು ಕೆರೆಗಳ ಅಡಾಬಾಡಾದಲ್ಲಿ ನೀರು ನಿಲ್ಲದಂತೆ ಎಲ್ಲಾ ತರಹ ಸಣ್ಣ ಸಣ್ಣ ಗುಂಡಿ, ಹಳ್ಳಕೊಳ್ಳಗಳನ್ನೂ ಮುಚ್ಚಿಬಿಡಬೇಕು. ಕೆರೆಗಳ ಅಂಚಿನಲ್ಲಿ ಹೆಚ್ಚಿಯ ಗುರುಕು ಮುಂತಾದ ಸಣ್ಣ ಸಣ್ಣ ಹಳ್ಳ ತಿಟ್ಟುಗಳಾಗದಂತೆಯೂ, ಅವುಗಳಲ್ಲಿ ನೀರು ನಿಂತು ಸೊಳ್ಳೆಗಳು ಮೊಟ್ಟೆಗಳು ಹಾಕಲು ಆಸ್ಪದವಾಗದಂತೆಯೂ ನೋಡಿಕೊಳ್ಳಬೇಕು. ಜೊಂಡು, ಕಾಡಾಗಿ ಬೆಳೆಯುವ ಸೊಪ್ಪುಸೊದೆ, ಹುಲ್ಲು, ಗಿಡಗೆಂಡೆ. ಈ ಮೊದಲಾದವು ಕೆರೆಗಳ ಮಧ್ಯದಲ್ಲಿಯೂ ಮತ್ತು ಸುತ್ತಲೂ ಬೆಳೆಯೋಣದರಿಂದ ಅಂಥಾ ಅಂಚುಕಟ್ಟಿನ ನೀರಿನಲ್ಲಿ ಸೊಳ್ಳೆಗಳು ಮೊಟ್ಟೆಗಳನ್ನು ಇಡಲು ಅನುಕೂಲವಾಗಿರೋಣದರಿಂದ ಅಂಥಾ ಜೊಂಡು, ಹುಲ್ಲು ಮೊದಲಾದದ್ದು ಸ್ವಲ್ಪವೂ ಬೆಳೆಯದಂತೆ ನೋಡಿಕೊಳ್ಳಬೇಕು ಕೆರೆಗಳಲ್ಲಿ ಸಣ್ಣ ಸಣ್ಣ ಜಾತಿ ಮೀನುಗಳನ್ನು ತಂದು ಬಿಟ್ಟು ಸಾಕಬೇಕು ಇವು ನೀರಿನಲ್ಲಿರುವ ಸೊಳ್ಳೆ ಮರಿಗಳನ್ನು ತಿಂದು ಹಾಕುತ್ತವೆ ನೀರು ಸೇದದೆ ಇರುವಂಥಾ ಅಥವಾ ಅಪರೂಪವಾಗಿ ಸೇದುವಂಥಾ ಭಾವಿಗಳನ್ನು ಕಲ್ಲುಚಪ್ಪಡಿ ಹಾಸಿ ಮುಚ್ಚಿಬಿಡಬೇಕು ಸಂದಿಗಳಿಗೆಲ್ಲಾ ಗಾರೆಯನ್ನೂ ಸಿಮೆಂಟನ್ನೂ ಹಾಕಿ ಸ್ವಲ್ಪವೂ ಸಂದು ಇಲ್ಲದಂತೆ ಚೆನ್ನಾಗಿ ಮುಚ್ಚಿಬಿಡಬೇಕು ಹಾಗಿಲ್ಲದಿದ್ದರೆ ಬಹಳ ಸಣ್ಣ ರಂಧ್ರಗಳುಳ್ಳ ಧೂಳರಿ ತಗಡನ್ನು ಹಾಕಿರುವ ಬಾಗಿಲನ್ನು ಮಾಡಿ ಭಾವಿಗೆ ಹಾಕಿಸಬೇಕು. ಈ ಬಾಗಿಲನ್ನು ನೀರು ಸೇದುವಾಗ ಮಾತ್ರವೇ ತೆರೆದು ಇತರ ಕಾಲಗಳಲ್ಲೆಲ್ಲಾ ಮುಚ್ಚಿಯೇ ಇರುವಂತೆ ನೋಡಿಕೊಳ್ಳಬೇಕು. ಹೀಗೆ ಮಾಡೋಣದರಿಂದ ಸೊಳ್ಳೆಗಳು ಮೊಟ್ಟೆ ಇಟ್ಟು ಮರಿಮಾಡುವುದಕ್ಕೆ ಆಸ್ಪದವಿರುವುದಿಲ್ಲ. ಉಪಯೋಗಿಸದೆ ನಿಂತ ನೀರಿನ ಮೇಲೆಲ್ಲಾ ಸಂಪೂರ್ಣವಾಗಿ ತೆಳ್ಳಗೆ ಹರಡಿಕೊಳ್ಳುವಂತೆ ಸೀಮೆಯೆಣ್ಣೆಯನ್ನು ವಾರಕ್ಕೊಂದಾವರ್ತಿ ತಪ್ಪದಂತೆ ಚಿಮುಕಿಸಿದರೆ ಅಂಥಾ ನೀರಿನಲ್ಲಿರುವ ಸೊಳ್ಳೆ ಮರಿಗಳೆಲ್ಲಾ ಸತ್ತುಹೋಗುತ್ತವೆ.

(12) ಅರ್ಥವೇನೆಂದರೆ ಸುತ್ತಲೂ ಉಪಯೋಗಿಸದೆ ನಿಂತ ನೀರಾಗಲೀ, ಬಚ್ಚಲ ನೀರಾಗಲೀ, ನೀರು ನಿಂತ ನೀತ ಭೂಮಿಯಾಗಲೀ, ಉಪಯೋಗಿಸದೆ ಇರುವ ನೀರಿನ ಹಳ್ಳಕೊಳ್ಳಗಳಾಗಲೀ, ಸೇದದೇ ಇರುವ ಭಾವಿಯಾಗಲೀ ಇಲ್ಲದಿರುವ ಪಕ್ಷಕ್ಕೆ ಸೊಳ್ಳೆಗಳೇ ಇಲ್ಲವೆಂದು ತಿಳಿದುಕೊಳ್ಳಬೇಕು.

ಸೊಳ್ಳೆಗಳಿಲ್ಲದಿದ್ದರೆ (ಮಲೇರಿಯಾ ಜ್ವರ) ಛಳಿಜ್ವರವೇ ಇಲ್ಲ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಮದರಾಸ್ ಕಂಪನಿಯ ಮೋಸ.

ಅಯ್ಯಾ,—ನಾನು ಮೈಸೂರು ದೇಶದ ವರ್ತಮಾನ ಪತ್ರಿಕೆಗಳ ಆಧಾರದ ಮೇಲೆ ವಿ ಎ ಎಸ್ ಪಾಣೆ, ನಂ ೧, ಇರುಳಪ್ಪನ್ ಬೀದಿ, ಮದರಾಸು, ಈ ಕಂಪೆನಿಯಲ್ಲಿ ಲೇಪನಾಶಕ ದರ್ಬಾರ್ ಸೋಪ್ ಎರಡು ಪೆಟ್ಟಿಗೆಗಳನ್ನು ವಿ. ಪಿ. ಮೂಲಕ ತರಿಸಿ ಕಂಪೆನಿಯವರು ಹೇಳಿರುವ ಕ್ರಮಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ 2-3 ಆವೃತ್ತಿ ಪರೀಕ್ಷೆಮಾಡಿ ನೋಡಿದ್ದಾಯಿತು ಇದರಿಂದ ಎಳ್ಳಷ್ಟು ಪ್ರಯೋಜನವಾದರೂ ಕಾಣಬರಲಿಲ್ಲ ಈ ವಿಷಯವನ್ನು ಕುರಿತು ಸದರಿ ಕಂಪೆನಿಯವರಿಗೆ ತಿಳಿಸಿ ನಮ್ಮ ಹಣ ವಾಪಸ್ ಮಾಡಬೇಕೆಂದು ಪದೇ ಪದೇ ಬರೆದ ಕಾಗದಗಳಿಗೆ ಸರಿಯಾದ ಉತ್ತರವನ್ನೂ ಕೊಡದೆ, ಹಣವನ್ನೂ ಕಳುಹಿಸದೆ ಉದಾಸೀನದಿಂದಿರುವುದನ್ನು ನೋಡಿದರೆ ಜನಗಳನ್ನು ಮೋಸಪಡಿಸುವ ಉದ್ದೇಶವಾಗಿ ಈ ಕಂಪೆನಿಯು ಸ್ಥಾಪಿಸಲ್ಪಟ್ಟಿರುವುದಾಗಿ ಕಾಣಬರುತ್ತೆ ಆದುದರಿಂದ ಮುಂದೆ ಯಾರೂ ಈ ಕಂಪೆನಿಯ ಮೋಸಕ್ಕೆ ಪಾತ್ರರಾಗದಂತೆ ಎಚ್ಚರಿಸುತ್ತೇನೆ.

ಮೋಸಹೋದವನು.

ಜಾತ್ರೆಯೂ, ಪ್ರದರ್ಶನವೂ.

ಅಯ್ಯಾ,—ಬಾಗೇಪಲ್ಲಿ ತಾಲ್ಲೂಕು ದೇವರಗುಡ್ಡಪಲ್ಲಿ ಗ್ರಾಮದಲ್ಲಿ ಮೇ ತಾ. 23 ರಿಂದ ಜೂನ್ 6 ರವರಿವಿಗೆ ರಥೋತ್ಸವವು ಬಹಳ ವಿಜೃಂಭಣೆಯಿಂದ ಆಗುತ್ತವೆ. ಈ ಸ್ಥಳದಲ್ಲಿ ಮತ್ತು 27 ರಿಂದ ಜೂನ್ 6 ನೇ ತಾ. ವರಿಗೆ ದನಗಳ ಪರಿಷೆಯೂ, ಇದರ ಜೊತೆಗೆ ದನಗಳ ವ್ಯವಸಾಯ ಮತ್ತು ಕೈಗಾರಿಕೆ ಸಂಬಂಧವಾದ ಪ್ರದರ್ಶನಸಹಾ ನಡೆಯಲು ಮ|| ಅಮಲ್ದಾರ್ ವಾಸುದೇವರಾಯರು ಏರ್ಪಾಟುಮಾಡಿರುತ್ತಾರೆ. ಆ ರಥೋತ್ಸವ ಕಾಲದಲ್ಲಿ ಕಛೇರಿ ಗುಮಾಸ್ತೆಗಳೂ ಶಿರಸ್ತೇದಾರರೂ ಆ ಪರಿಷೆಯಲ್ಲೇ ಇರುತ್ತಾರೆ. ನಾನಾ ವಿಷಯಗಳನ್ನು ಕುರಿತು ಉಪನ್ಯಾಸಗಳಾಗುವವು ಈ ಜಾತ್ರೆ ದೊಡ್ಡದಾಗುವದರಿಂದ ಅನೇಕ ಜನಗಳು ಸೇರುವುದಲ್ಲದೆ ಅನೇಕ ತರಹ ವಸ್ತುಗಳೂ, ಅಂಗಡಿಗಳೂ ಮತ್ತು ಜವಳಿ ಅಂಗಡಿಗಳೂ, ಪಾತ್ರೆಸಾಮಾನುಗಳ ಅಂಗಡಿಗಳೂ, ಬಂದು ಲಕ್ಷಾಂತರ ರೂಪಾಯಿಗಳ ವ್ಯಾಪಾರ ನಡೆಯುವುದು ನೋಡುವುದಕ್ಕೆ ಬಹಳ ಸಂತೋಷವಾಗುವುದು ಈ ಪ್ರಾಂತ್ಯದ ಜನಗಳು ಈ ಜಾತ್ರೆಯಲ್ಲಿ ಉತ್ತಮತರಹ ದನಗಳನ್ನು ವ್ಯವಸಾಯ ಮತ್ತು ಕೈಗಾರಿಕೆ ಸಾಮಾನುಗಳನ್ನು ಪಡೆಯಲಾಗುವದಾಗಿದೆ ಮೈಸೂರು, ಬೆಂಗಳೂರು, ಚಿಂತಾಮಣಿ, ಗೌರಿಬಿದನೂರು, ಹಿಂದೂಪುರ, ಚಿಕ್ಕಬಳ್ಳಾಪುರ, ಇವೇ ಮುಂತಾದ ಊರುಗಳಿಂದ ಒಳ್ಳೆ ಸಾಧುಗಳೂ ವಿಡಾಯಿ ಅಂಗಡಿಗಳೂ ಬರುತ್ತವೆ. ಈ ಪರಿಷೆಗೆ ಸೊಗಸಾದ ನಾಟಕಗಳು ಬರುವುದಲ್ಲದೆ ಪೋಲೀಸ್ ಉಸ್ತುವಾರಿ ಚೆನ್ನಾಗಿಟ್ಟಿರುತ್ತಾರೆ. ಬ್ರಾಹ್ಮಣರಿಗೂ, ವರ್ತಕರಿಗೂ ಅಂಕುರಾರ್ಪಣದ ರಾಗಾಯಿತು 11 ದಿವಸ ಸಂತರ್ಪಣೆಗಳೂ ಆಗುತ್ತವೆ. ಇಲ್ಲಿ ಜನಗಳ ಉಪಯೋಗಕ್ಕೋಸ್ಕರ ನೀರಿನ ಅರವಟ್ಟಿಗೆಗಳನ್ನು ಪುಣ್ಯವಂತರು ಇಡಿಸುತ್ತಾರೆ. ಮತ್ತು ಬಹಳ ವಿಜೃಂಭಣೆಯಿಂದ ಉತ್ಸವಗಳು ಆಗುವವು. ನಿಜ ವೈಶಾಖ ಶುದ್ಧ ಹುಣ್ಣಿಮೆ ದಿವಸ ಹಗಲೂ ರಾತ್ರಿ ಬಾಗೇಪಲ್ಲಿ ತಾಲ್ಲೂಕು ಪೈಕಿ ಸಾಹುಕಾರರಾದ ಮ|| ತೋಳ್ಪಪಲ್ಲಿ ದೊಡ್ಡನಾರಾಅರಡ್ಡಿಯವರೂ, ಟಾರಿರಡ್ಡಿಪಲ್ಲಿ ವೆಂಕಟರಡ್ಡಿಯವರೂ ಸಹಾ ಬಹಳ ವಿಜೃಂಭಣೆಯಿಂದ ಎಲ್ಲರಿಗೂ ಸಂತರ್ಪಣೆ ಮಾಡಿಸುತ್ತಾರೆ ಆ ದಿವಸ 7,000 ಜನಗಳು ಪಂಪಸಗೆ ಬಯವಾಗುತ್ತಾರೆ.

ಟಿ. ರಾಮಲಿಂಗಾರಡ್ಡಿ, ತೋಳ್ಪಪಲ್ಲಿ ಪಟೇಲ್.

ಯುಗಾದಿಹಬ್ಬವೂ, ನಾಮಧಾರಿಗಳೂ.

ಅಯ್ಯಾ,—ಮಲನಾಡು ನಿವಾಸಿಗಳಲ್ಲಿ ಕೆಲವರಾದ ನಾಡವರು ಇಲ್ಲವೇ ನಾಮಧಾರಿಗಳು ಯುಗಾದಿಹಬ್ಬವನ್ನು ಕಳೆದ ತಾ. 16 ನೇ ಮಂಗಳವಾರ ಬಹಳ ಉಡಿಗೆ ತೊಡಿಗೆಗಳ ಆಡಂಬರದಿಂದಲೂ, ನಡೆನುಡಿಗಳ ಅಟ್ಟಹಾಸದಿಂದಲೂ, ವಿವಿಧಭಕ್ಷ್ಯಗಳನ್ನು ಊಟಮಾಡುವ ಸಂತೋಷದಿಂದಲೂ ಆಚರಿಸಿದರೇ ಶಿವಾಯಿ ನ್ಯಾಯವಾಗಿ ಪೂರ್ವಿಕರ ಕಟ್ಟಳೆಯಂತೆ ಅನುಸರಿಸಿ ಶರೀರಾತ್ಮಗಳಿಗೆ ಸಂತೋಷವನ್ನು ಪಡಕೊಳ್ಳಲಿಲ್ಲ. ಪ್ರತಿಯೊಂದು ನೂತನಾಚಾರಗಳನ್ನೂ ಅವಲಂಭಿಸುವದರಲ್ಲಿ ಪೂರ್ವಾಚಾರಗಳನ್ನೇ ಮೂಲಾಧಾರವಾಗಿಟ್ಟುಕೊಂಡು ಅದ್ದಿ ಹೇಳತಕ್ಕಂಥಾ ಮಹಾನುಭಾವರುಗಳೆಲ್ಲರೂ ಈ ನೂತನ ವರ್ಷದ ಮೊದಲನೇ ದಿನದ ಹಬ್ಬವನ್ನು ಪೂರ್ವಾಚಾರ ಅತಿಕ್ರಮಿಸಿ ನಡೆಯಲು ಕಾರಣವೇನೋ ತಿಳಿಯಲಿಲ್ಲ. ಯುಗಾದಿಹಬ್ಬದ ವಿಷಯದಲ್ಲಿ ಪೂರ್ವಿಕರು ಒಂದು ಒಳ್ಳೇ ಸೂಚನೆಯನ್ನಿಟ್ಟು ಆಚರಣೆಗೆ ತಂದಿರುತ್ತಾರೆ. ಹ್ಯಾಗೆಂದರೆ ಯುಗಾದಿ ಎಂದರೆ ವರ್ಷದ ಪ್ರಾರಂಭವೆಂದರ್ಥ. ಈ ಹೊಸ ವರ್ಷದ ಮೊದಲನೇ ದಿವಸ ನಾವು ಕಳೆದ ವರ್ಷದಲ್ಲಿ ಮಾಡಿರತಕ್ಕ ಕ್ರಿಯೆಗಳೆಲ್ಲವೂ ಪಾಪಕ್ಕೆ ಹೇತುವೆಗಳಾಗಿವೆ; ಅಂದರೆ ಈ ಬೇವಿನ ಹಾಗೆ ಕಹಿಯಾಗಿರುತ್ತವೆ ಒಂದು ಮನೆಯವರೆಲ್ಲರೂ ಆತ್ಮಸ್ಥೈರ್ಯದಿಂದ ದೇವರಿಗೆ ಪ್ರಾರ್ಥನೆಯ ಮೂಲಕ ಅರಿಕೆಮಾಡಿಕೊಂಡು ಬೇವನ್ನು ತಿನ್ನಬೇಕೆಂತಲೂ, ಕಳೆದ ವರ್ಷ ನಾವುಗಳು ನಮ್ಮ ಮನೋವಾಕ್ಕಾಯಗಳಲ್ಲಿಯೂ ದೇವರಿಗೆ ವಿರೋಧವಾಗಿ ಅನೇಕ ಪಾಪಗಳನ್ನು ಮಾಡಿರುವದರಿಂದ ಈ ಗೇರೆಣ್ಣೆಯ ಮೂಲಕ ನಮ್ಮ ಪಾಪದೇಹವನ್ನು ಸುಟ್ಟು ಶುದ್ಧಿಗೊಳಿಸಿಕೊಂಡಿರುವದನ್ನು ಅಂಗೀಕರಿಸಬೇಕೆಂತಲೂ, ದೇವರಿಗೆ ಪ್ರಾರ್ಥನೆಯ ಮೂಲಕ ಅರಿಕೆಮಾಡಿಕೊಂಡು ಗೇರೆಣ್ಣೆಯನ್ನು ಚಸಗೆ ಹಚ್ಚಿಕೊಳ್ಳಬೇಕೆಂತಲೂ. ಈ ನೂತನ ವರ್ಷದ ಮೊದಲನೆಯ ದಿನದಿಂದ ನಮ್ಮ ಶರೀರಾತ್ಮಗಳು ಪಾಪಕ್ಕೊಳಗಾಗದೆ ನಮ್ಮ ಪ್ರತಿಯೊಂದು ಕ್ರಿಯೆಯೂ ದೇವರಿಗೆ ಪ್ರಿಯವಾಗಿರುವಂತೆ ಅಂದರೆ ಬೆಲ್ಲದ ಹಾಗೆ ಸಿಹಿಯಾಗಿರುವಂತೆ ಪ್ರೇರೇಪಿಸು ಎಂಬದಾಗಿ ದೇವರಿಗೆ ಪ್ರಾರ್ಥನೆಮಾಡಿ ಬೆಲ್ಲವನ್ನು ತಿನ್ನಬೇಕೆಂತಲೂ ಸಹಾ ಬೇವು ಬೆಲ್ಲವೆಂಬ ಫಲವನ್ನು ಕೊಟ್ಟಿದ್ದಾರೆ

ಬೇವು ಬೆಲ್ಲದ ಅಮೌಲ್ಯವಾದ ಸೂಚನೆಗೆ ನಮ್ಮ ನಾಮಧಾರಿಗಳು ಅರ್ಥವನ್ನು ತಿಳಿಯದೆ ಜನಮೆಚ್ಚಿಕೆಗಾಗಿ ಅವರವರ ಮನಸ್ಸಿಗೆ ಬಂದಂತೆ ಬೇವು, ಬೆಲ್ಲ ಯಾ ಸಕ್ರೆ, ಕಡಲೆ, ಎಳ್ಳು, ಕೊಬರಿ, ಇತ್ಯಾದಿಗಳನ್ನು ತಿನ್ನುವದಕ್ಕೆ ರುಚಿಯಾಗುವ ರೀತಿಯಲ್ಲಿ ಸೇರಿಸಿ ಮೊದಲು ಜಗಲಿಗಳಿಗೆ ಇಟ್ಟು, ನಂತರ ತುಲಸಿ ಎದುರಿಗೆ ಇಟ್ಟು ಪೂಜೆಮಾಡಿ, ಮೊದಲು ಗೋವುಗಳಿಗೆ ತಿನ್ನಿಸಿ ತರುವಾಯ ಅವನಿಗೆ ಹೆಚ್ಚು, ತನಗೆ ಕಮ್ಮಿ ಎಂಬ ರೀತಿಯಲ್ಲಿ ಹಸ್ಸೆಮಾಡಿಕೊಂಡು ವಿಚಾರವಿಲ್ಲದೆ ಬಸವಣ್ಣನು ಹುಲ್ಲು ತಿಂದಹಾಗೆ ತಿನ್ನುವ ಮಹಾನುಭಾವರನ್ನು ಏನೆಂದು ಹೇಳಲಿ! ಈ ಪ್ರಕಾರವಾಗಿಯೇ ಪೂರ್ವಿಕರ ಅಭಿಪ್ರಾಯಗಳಿಗೆ ಭಿನ್ನವಾಗಿ ವೇದ, ಪುರಾಣ, ಮತತತ್ವಗಳನ್ನು ಸಹಾ ರೂಪಾಂತರ ಹೊಂದಿದವೆಂದು ಹೇಳಬಹುದಲ್ಲವೇ? ಪೂರ್ವಿಕರು ಕಲಿಸಿಕೊಟ್ಟಿರುವ ಪ್ರತಿಯೊಂದು ಆಚಾರವೂ ನ್ಯಾಯವಾಗಿದೆ ಎಂದು ಹೇಳಲಿಕ್ಕಾಗದಿದ್ದರೂ ಪ್ರತಿಯೊಂದು ಆಚರಣೆಯ ವಿಷಯದಲ್ಲಿಯೂ ವಿಚಾರಮಾಡಿ ಒಳ್ಳೇದು ಕೆಟ್ಟದ್ದೆಂದು ತಿಳಿಯದೆ ಪಶುವಿನಂತೆ ಹಿಂಬಾಲಿಸುವದು ಯಾವ ದೇವರಿಗೆ ಪ್ರೀತಿಯುಂಟಾದೀತೋ ತಿಳಿಯದು

ಎಂ ಡಿ. ಕೆ.

ಪೇಪರ್, ಚಾಮುಂಡಿಬೆಟ್ಟ; ಹಿತಚಿಂತಕ, ಸೋಮವಾರದ ಪೇಟೆ—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಬ್ರಿಟಿಷರು, ಫ್ರೆಂಚರು, ಬೆಲ್ಜಿಯನ್ನರು, ರಷ್ಯಾದವರು, ಜರ್ಮನಿಯವರು, ಸರ್ವಿಯಾದವರು, ಟರ್ಕಿಯವರು—ಈ ಜನಾಂಗಗಳ ಮತಗಳ್ಯಾವವು ಎಂಬದಾಗಿ ಒಬ್ಬ ಬಾತ್ಮಿದಾರರು ಕೇಳುತ್ತಾರೆ. ಟರ್ಕಿಯವರು ಮಹಮ್ಮದೀಯ ಮತಸ್ಥರು; ಉಳಿದ ರಾಜ್ಯಗಳವರೆಲ್ಲಾ ಕ್ರೈಸ್ತರೇ ಆಗಿದ್ದರೂ ಆ ಮತದಲ್ಲಿ ಬೇರೆಬೇರೆ ಶಾಖೆಗಳಿಗೆ ಸೇರಿದವರಾಗಿದ್ದಾರೆ

ಶಿಡ್ಲಘಟ್ಟ ತಾ| ಗಂಜಿಗುಂಟೆ ಗ್ರಾಮದಲ್ಲಿ ಪ್ರತಿ ಮಂಗಳವಾರವೂ ಸಂತೆ ನಡೆಯುವಂತೆ ಸರ್ಕಾರದವರು ಹುಕುಂ ಕೊಟ್ಟದ್ದರಿಂದ ಕಳೆದ 23 ನೇ ತಾರೀಖಿನಿಂದ ಪ್ರಾರಂಭವಾಗಿರುತ್ತದೆ. ಆ ದಿನ ಅಲ್ಲಿನ ಮುಖಂಡ ಪ್ರಜೆಗಳೆಲ್ಲಾ ಸರ್ಕಾರಿ ನೌಕರರೂ ಮೈದಾನದಲ್ಲಿ ಸೇರಿ ಸಂತೆಯನ್ನು ಕ್ರಮವಾಗಿ ಪ್ರಾರಂಭಿಸಿ ಅಲ್ಲಿ ಸೇರಿದ್ದವರಿಗೆಲ್ಲಾ ಫಲಾಹಾರ ಗಂಧ ಪುಷ್ಪಾದಿಗಳನ್ನು ಹಂಚಿ ಸಂತೋಷಪಡಿಸಿ, ದೇವರುಗಳಿಗೆ ಉತ್ಸವಾದಿಗಳನ್ನು ನಡಿಸಿದರೆಂದು ಒಬ್ಬ ಬಾತ್ಮಿದಾರರು ಬರೆದಿದ್ದಾರೆ —ಎಡಿ.]

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗ.—ಇವ ಆರೋಗ್ಯಕರವಾಗಿರುತ್ತದೆ ರವಿವಾರ ಬೆಳಿಗ್ಗೆ ಸ್ಕೂಲ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಸವಾರಿ ದಯಮಾಡಿಸಿತು. ಆ ದಿನವೂ ಮರುದಿನವೂ ಅವರು ಪ್ರತಿ ಸ್ಕೂಲಿಗೂ ದಯಮಾಡಿಸಿದರು. ಇನ್ನೂ 1-2 ದಿವಸಗಳು ನಿಲ್ಲುವವರಾಗಿದ್ದಾರೆ.—ಸೀನಿಯರ್ ಸರ್ಜನ್ ಡಾ ಅರುಮುಗಂ ಮುದಲಿಯಾರ್ರವರು ದಯಮಾಡಿಸಿ, ತೀರ್ಥಹಳ್ಳಿಯ ಕಡೆ ಹೋಗಿರುತ್ತಾರೆ. ಪುನಹ ಇಲ್ಲಿಗೆ ದಯಮಾಡಿಸಿ ಇನ್ಸ್‌ಪೆಕ್ಷನ್ ವಗೈರೆ ನಡಿಸುವವರಾಗಿರುತ್ತಾರೆ—ಈ ತಾಲ್ಲೂಕು ಕೂಡಲಿಯಲ್ಲಿ ತಾ. 24 ರಲ್ಲಿ ಒಂದು ಪ್ರದರ್ಶನ ನಡೆಯಿತು. ಪ್ರದರ್ಶನಕ್ಕೆ ಅನೇಕ ಭಾರೀ ಎತ್ತುಗಳು ಬಂದಿದ್ದವು ಇವುಗಳಲ್ಲಿ ಮುಖ್ಯವಾದವುಗಳಿಗೆ ಬಹುಮಾನ ಮೆಡಲ್ ವಗೈರೆಗಳು ಕೊಡಲ್ಪಟ್ಟವು. ಹೀಗೆ ಪ್ರದರ್ಶನ ನಡೆದು ಬಹುಮಾನಕೊಡುವ ಏರ್ಪಾಡು ಇರುವುದರಿಂದ ಅನೇಕ ದಾಸುಗಳು ಸೇರಲು ಅವಕಾಶವಾಗುತ್ತದೆ

ಕಡೂರು.—ಇಲ್ಲಿನ ಕೋಟೆಯಲ್ಲಿ ವಾಸಮಾಡುವ ದೊಡ್ಡವರೂ ಚಿಕ್ಕವರೂ ರಾತ್ರಿ ಕಾಲದಲ್ಲಿ ಬಲ, ಎಡಭಾಗದ ರಸ್ತೆಯ ಪಕ್ಕದಲ್ಲಿ ಬಹಿರ್ಭೂಮಿಗೆ ಹೋಗುತ್ತಾರೆ. ಆ ದಾರಿ ತಿರುಗುವವರಿಗೆ ಅಸಹ್ಯಕರವಾಗಿದೆ. ಇಂಥಾ ಗಲೀಜೂ ದುರ್ವಾಸನೆಯೂ ರೋಗಗಳಿಗೆ ತೌರುಮನೆಯಾಗಿದೆ ಎಂದು ಹೇಳಲು ಸಂದೇಹವಿಲ್ಲ. ಅಲ್ಲದೆ ಇಲ್ಲಿನ ಧೂಡಿಮಾಲಿಗಳು 8½ ಘಂಟೆಗೆ ವಾಡೀಜಿಗಾಗಿ ಬರುತ್ತಾರೆ ಆಚರಣೆ ಬಿಡುವದಿಲ್ಲ, ಅನಾಚಾರ ತ್ಯಜಿಸುವದಿಲ್ಲ ಎಂಬಂತೆ ಕೋಟೆ ಜನಗಳ ಚೊಕ್ಕಟಕ್ಕೆ ಇದೊಂದು ಕೊರತೆಯಾದದ್ದರಿಂದ ತುಂಬಾ ವಿಚಾರಿಸಬೇಕಾಗಿದೆ. ಸರ್ಕಾರದ ದೊಡ್ಡ ಹುದ್ದೆದಾರರು ವಾಸಮಾಡುವ ಸ್ಥಳವೇ ಹೀಗಿದ್ದ ಮೇಲೆ ಟವನಿನಲ್ಲಿ ವಾಸಮಾಡುವ ಅನಾಗರಿಕ ಪ್ರಜೆಗಳ ಪಾಡೇನೋ! ಇನ್ನು ಹೇಳಲು ಅಸಾಧ್ಯ. ಇದಲ್ಲದೆ ಇಲ್ಲಿನ ಲಾಂದ್ರಗಳು ಅಷ್ಟು ತೃಪ್ತಿಕರವಾಗಿಲ್ಲ—ನಮ್ಮ ಹಿತಚಿಂತಕರಾಗಿಯೂ, ಪ್ರಜಾಪ್ರೀತಿ ಪಾತ್ರರಾಗಿಯೂ ಇರುವ ಪೋಲೀಸ್ ಇನ್ಸ್‌ಪೆಕ್ಟರವರು ಚಿತ್ತಕ್ಕೆ ತಂದು ಬಡವರ ಹಿಂಸೆಯನ್ನು ಪರಿಹರಿಸಿಯಶಸ್ಸು ಪಡೆಯಬೇಕೆಂದು ಪ್ರಾರ್ಥಿಸುತ್ತೇವೆ.

ಹಾಸನ.—ಬೇಸಗೆಯ ಧಗೆ ಸಹಿಸಕೂಡದಷ್ಟಾಗಿದೆ. ಮಳೆಯು ಬರುವ ಸೂಚನೆಯೇ ಕಾಣುವುದಿಲ್ಲ. ಜಲಾಶಯಗಳೆಲ್ಲವೂ ಬತ್ತುತ್ತಾ ಬಂದಿವೆ. ಪ್ಲೇಗ್ ರೋಗವು ಸಂಪೂರ್ಣವಾಗಿ ನಿಂತುಹೋದಂತೆ ಕಾಣುತ್ತಿದ್ದುದು ಪುನಹ ತಲೆ ಎತ್ತಿ ಈ ವಾರದಲ್ಲಿ ಮೂವರು ಕಾಲವಾದರು. ಇವರೆಲ್ಲರೂ ಯುವಕರೇ. ಕೆಲವರು ರೋಗ ನಿಂತುಹೋಯಿತೆಂದು ಊರಿನೊಳಕ್ಕೆ ಪ್ರವೇಶಮಾಡಿದ್ದರು ಇನ್ನೂ ಕೆಲವರು ಹೋಗುವವರಾಗಿದ್ದರು.—ಈ ಕಾರಣದಿಂದ ಈ ಊರಿನಲ್ಲಿ ನಡೆಯಬೇಕಾಗಿದ್ದ ಕೇಶವ ದೇವರ ರಥೋತ್ಸವವು ನಿಂತೇ ಹೋಯಿತು. ಬೇಲೂರಿನಲ್ಲೂ ಪ್ಲೇಗ್ ರೋಗವು ಪ್ರಬಲವಾಗಿರುವುದರಿಂದ ತಾ. 29 ನೇ ಸೋಮವಾರ ಅಲ್ಲಿ ನಡೆಯುವ ರಥೋತ್ಸವಕ್ಕೆ ಯಾರೂ ಹೋಗಕೂಡದೆಂದೂ, ಹೋದವರನ್ನು ಹಿಂದಕ್ಕೆ ತಕ್ಷಣ ಕಡೆದು ಕಳುಹಿಸುವರೆಂದೂ ಪ್ರಕಟಿಸಿದಾರೆ. ಇನ್ನು ಮುಂದೆ ಈ ಪ್ರಾಂತ್ಯ ಕುಡಿಯುವ ನೀರಿಗೇ ಕೊರತೆಯುಂಟಾದೀತೆಂದು ತೋರುತ್ತದೆ. ದನಗಳ ಪಾಡೇನೋ ಹೇಳತೀರದು. ಈ ಸ್ಥಳಕ್ಕೆ ನಮ್ಮ ಸರ್ಕಾರದವರು ಕುಡಿಯುವ ನೀರಿಗೆ ಒಳ್ಳೇ ಏರ್ಪಾಡನ್ನು ಮಾಡಿಸಿ ಕೀರ್ತಿಹೊಂದಬೇಕಾಗಿ ಸಕಲರೂ ಪ್ರಾರ್ಥಿಸುತ್ತಾರೆ. ಅಲ್ಲಲ್ಲಿ ಸಿಡುಬುರೋಗವೂ ಇರುವಂತೆ ಕಾಣುತ್ತದೆ. ಮ್ಯುನಿಸಿಪಾಲಿಟಿಯವರು ಬಲಾತ್ಕಾರದಿಂದ ಸಿಡುಬು ಹಾಕಿಸುವ ಆಜ್ಞೆಯನ್ನು ಇಲ್ಲಿ ಜಾರಿಗೆ ತರುವದು ಸ್ತೋತ್ರಾರ್ಹವಾಗಿದೆ. ಎಲ್ಲಾ ಭಾಗಗಳಲ್ಲೂ ಪಟ್ಟಣವನ್ನು ಶುಚಿಮಾಡುತ್ತಾ ಬರುವದು ಮ್ಯುನಿಸಿಪಾಲಿಟಿಯ ಕರ್ತವ್ಯವಾಗಿದೆ.—ಕಾರೊನೇಷನ್ ಹಾಲ್ ಕಾಮಗಾರಿಯು ಅರೆವಾಸಿಯಲ್ಲಿ ನಿಂತಿದ್ದುದು ಈಗ ಕೆಲಸ ಪ್ರಾರಂಭವಾಗಿ ಸರಾಸರಿಯಿಂದ ನಡೆಯುತ್ತಲಿದೆ.—ಕ್ವಿಲ್ಸಿ ಸ್ಟೇಷನ್ ಮುಂತಾದ ಕಟ್ಟಡಗಳೂ, ಗೌರ್ನಮೆಂಟ್ ಹೈಸ್ಕೂಲ್ ಕಟ್ಟಡವೂ ಕೆಲಸ ಪ್ರಾರಂಭವಾಗಿ ನಡೆಯುತ್ತಲಿವೆ.

ನಂಜನಗೂಡು.—ಇಲ್ಲಿನ ವೆಸ್ಲಿಯನ್ ಮಿಷನ್ ಎ. ವಿ ಸ್ಕೂಲಿನಲ್ಲಿ ಪ್ರತಿ ಶನಿವಾರವೂ ಒಬ್ಬೊಬ್ಬ ವಿದ್ಯಾರ್ಥಿಗಳು ಒಂದೊಂದು ವಿಷಯವನ್ನು ಕುರಿತು ಉಪನ್ಯಾಸಕೊಡುತ್ತಿರುವರು. ಕೆಲವು ಉಪನ್ಯಾಸಗಳನ್ನು ಉಪನ್ಯಾಸಕರು ಉಚಿತವಾಗಿ ಮುದ್ರಿಸಿ ಅಪೇಕ್ಷಿಸಿದವರಿಗೆ ಕೊಡುವರು; ಮತ್ತು ಬಾಲಕರಿಗಾಗಿ ಒಂದು ಪ್ರತ್ಯೇಕ ರೀಡಿಂಗ್ ರೂಮನ್ನು ಸಹ ಏರ್ಪಡಿಸಿರುವರು. ಇಲ್ಲಿನ ಪ್ರಜಾ ಮುಖಂಡರು ಇಂಗ್ಲಿಷ್ ಹೈಸ್ಕೂಲಿಗಾಗಿ ತಕ್ಕ ರೀತಿಯಲ್ಲಿ ಯತ್ನಿಸಬಾರದೇ?—ಈಗ ಮೈಸೂರಿಗೆ ಬಂದಿರುವ ಶ್ರೀ ಉತ್ತರಾದಿ ಸ್ವಾಮಿಗಳನ್ನು ಇಲ್ಲಿಗೆ ಕರೆದುಕೊಂಡು ಬಂದು ಮಾಮೂಲಿಗೆ ವಿರುದ್ಧವಾದ ಬೀದಿಗಳಲ್ಲಿ ಬಿರುದಾವಳಿ ಸಹಿತವಾಗಿ ಉತ್ಸವಮಾಡಿಸಿ ವ್ಯಥಾ ಕಲಹವನ್ನು ಗಂಟಿಕ್ಕಬೇಕೆಂದು ಇಲ್ಲಿನ ಕೆಲವು ಶಿಷ್ಯರು ಯತ್ನಿಸುತ್ತಿರುವುದಾಗಿ ಕೇಳುತ್ತೇನೆ. ಅಧಿಕಾರಿಗಳಾದರೂ ಅಷ್ಟಕ್ಕೆ ಅವಕಾಶಕೊಡಬಾರದು.—ಚಾಮಲಾಪುರದ ಮುಖಂಡರು ಮ|| ಮಲ್ಲೆ ವಾಸಣ್ಣನವರ ಮತ್ತು ಮ|| ಮಳೆ ನಾರಾಯಣಸ್ವಾಮಿಗಳ ಅಧ್ಯಕ್ಷತೆಯಲ್ಲಿ ಒಂದು ಸ್ಕೂಲನ್ನು ಕೇವಲ ಬಾಲಕರಿಗಾಗಿ ಏರ್ಪಡಿಸುವರೆಂದು ಕೇಳುತ್ತೇನೆ. ಇಲ್ಲಿನ ಜವಳಿ ಅಂಗಡಿ ವರ್ತಕರು ಮ|| ಮರಿಸ್ವಾಮಿಗೌಡರು ಈ ಸ್ಕೂಲಿಗೆ ವಿಶೇಷ ಪ್ರೋತ್ಸಾಹಕರಾಗಿ ನಿಂತಿರುವರೆಂದೂ, ಮ|| ನಾಯಕ ನರಸಿಂಗರಾಯರೆಂಬ ಭಾವಸಾರಕ್ಷತ್ರಿಯರೂ ಯಥೋಚಿತ ಸಹಾಯಮಾಡುವುದಾಗಿಯೂ ಕೇಳುತ್ತೇನೆ. ಇವರುಗಳ ಪ್ರಯತ್ನವು ಸಾರ್ಥಕವಾಗಲೆಂದೂ, ಅದರಿಂದ ಬಾಲಕರಿಗೆ ಪ್ರಯೋಜನವಾಗಲೆಂದೂ ಕೋರುತ್ತೇನೆ.—ಈ ದಿನ ಶ್ರೀಮನ್ ಮಹಾರಾಜರವರ ಸ್ವಾರಿಯು ಚಿಕ್ಕ ಸಿ ಬೇವಿನ ದರ್ಶನವನ್ನು ಮಾಡಿ, ವಾಪಸು ಮೈಸೂರಿಗೆ ತೆರಳಿದರು. ಈ ಬಾರಿ ರಥೋತ್ಸವಕ್ಕೆ ಬಹು ಜನರು ಬಂದಿದ್ದರು. ಉತ್ಸವಾದಿಗಳು ಅಧಿಕಾರಿಗಳ ವಿಶ್ವಾಸದಿಂದ ಸಮರ್ಪಕವಾಗಿ ನೆರವೇರಿದವು. ಬಿಸಿಲಿನ ಧಗೆಯು ಸಹಿಸಲಸದಳವಾಗಿದೆ.

ಚಿತ್ರದುರ್ಗದ ತಾಲ್ಲೋಕು ಭೀಮಸಮುದ್ರ.—ಈ ಗ್ರಾಮಕ್ಕೆ ಪ್ಲೇಗ್ ಬಾಧೆಯು ಪ್ರಾರಂಭವಾಗಿ ಸುಮಾರು 2 ತಿಂಗಳಾಗುತ್ತಾ ಬಂತು ಆ ಕಾಗಾಯಿತು ಜನಗಳು ಕ್ಯಾಂಪುಗಳಲ್ಲಿ ಇರುತ್ತಾರೆ. ದೇವರ ದಯದಿಂದ ಯಾರೂ ಪ್ಲೇಗ್ ಬಾಧೆಯಿಂದ ಮೃತಪಡಲಿಲ್ಲ. ಆದರೆ ಮಳೆಯ ದೆಸೆಯಿಂದ ಜನರು ಸ್ವಲ್ಪ ಕಷ್ಟವನ್ನು ಅನುಭವಿಸಿದರು. ಇಷ್ಟರಲ್ಲಿಯೇ ಜನಗಳು ಊರೊಳಕ್ಕೆ ಹೋಗುವವರಾಗಿದ್ದಾರೆ.—ಈ ಗ್ರಾಮಕ್ಕೂ ಮತ್ತು ಹಾಳ್ಯ ಗ್ರಾಮಕ್ಕೂ ಪಟೇಲರಾಗಿಯೂ, ಭಾರಿ ಜಮೀನುದಾರರಾಗಿಯೂ ಮತ್ತು ಸಾಹುಕಾರರಾಗಿಯೂ ಇದ್ದ ಪಟೇಲ್ ಕೆಂಚವೀರಪ್ಪನವರು ಮಾರ್ಚಿ ತಾ. 18 ನೇ ಗುರುವಾರ ಸಾಯಂಕಾಲ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮರುದಿನ ಬೆಳಗ್ಗೆ ಸಮಾಧಿಸಂಸ್ಕಾರ ಮಾಡಬೇಕೆಂದು ನಿರ್ಧಾರವಾಗಿತ್ತು. ಆದರೆ ಜನಗಳ ಅಸಂಖ್ಯಾತವಾದ ಸಂದಣಿಯ ದೆಸೆಯಿಂದ ಶವಸಂಸ್ಕಾರವು ಮಧ್ಯಾಹ್ನ 3 ಗಂಟೆಯಾಯಿತು. ಈ ಗ್ರಾಮದ ಮತ್ತು ಅಜೂಬಾಜು ಗ್ರಾಮದ ಸಾಹುಕಾರರುಗಳೂ, ಪಟೇಲರುಗಳೂ, ಶ್ಯಾನುಭೋಗರುಗಳೂ, ಜಂಗಮ ಮಠಪತಿಗಳೂ, ಬ್ರಾಹ್ಮಣರೂ, ಇನ್ನೂ ಬಡಜನಗಳೂ ಸಹ ಸ್ಮಶಾನಕ್ಕೆ ತೆರಳಿದರು. ಅಲ್ಲಿ ಸಮಾಧಿ ಮೊದಲಾದ ಮತಪದ್ಧತಿಯ ಕೆಲಸಗಳೆಲ್ಲವೂ ಪೂರೈಸಿದ ನಂತರ ಬಂದಿದ್ದ ಜಂಗಮ ಮಠಪತಿಗಳಿಗೂ, ಬ್ರಾಹ್ಮಣರಿಗೂ, ಭಕ್ತರಿಗೂ ಸಹ ಸದರಿಯವರ ಮಕ್ಕಳಾದ ಮಲ್ಲಪ್ಪನವರು ತಲಾ ಒಂದು ರೂಪಾಯಿ ದಕ್ಷಿಣೆ ಮತ್ತು ವಸ್ತ್ರಗಳನ್ನು ಬಹಳ ಉದಾರಮನಸ್ಸಿನಿಂದ ದಾನಮಾಡಿದರು. ಆ ದಿವಸ ಗ್ರಾಮದ ಸರ್ಕಾರಿ ಸ್ಕೂಲು ವ್ಯಸನಸೂಚನಾರ್ಥವಾಗಿ ಮುಚ್ಚಲ್ಪಟ್ಟಿತ್ತು. ಅನೇಕ ಜನ ಕೂಲಿಕಾಯಕದವರು ಕೆಲಸಕಾರ್ಯಗಳನ್ನು ಬಿಟ್ಟು ವ್ಯಸನದಲ್ಲಿ ಮುಳುಗಿದ್ದರು. ಗತಿಸಿದ ಪಟೇಲ್ ಕೆಂಚವೀರಪ್ಪನವರು ಬಾಲ್ಯದಲ್ಲಿ ಕಷ್ಟಪಟ್ಟು ವಿದ್ಯಾರ್ಜನೆ ಮಾಡಿ ಬುದ್ಧಿಬಲದಿಂದಲೂ, ವ್ಯಾಪಾರಾದಿಗಳ ಚಟುವಟಿಕೆಯಿಂದಲೂ ಭಾರಿ ಸಾಹುಕಾರರಾಗಿ ಕೆಲವು ವರ್ಷಗಳು ಮೈಸೂರು ಪ್ರಜಾಪ್ರತಿನಿಧಿ ಸಭೆಯ, ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ತಾಲ್ಲೋಕು ಬೋರ್ಡಿನ ಮೆಂಬರಾಗಿ ಇದ್ದರು. ಈಚೆಗೆ ಶಕ್ತಿ ಕುಂದಿ ಧ್ಯಾನಮಾರ್ಗದಲ್ಲಿ ಕಾಲ ಕಳೆಯುತ್ತಾ, ಅನೇಕ ಪರೋಪಕಾರ ಕೆಲಸಗಳನ್ನು ಮಾಡುತ್ತಾ, ಆಗಾಗ್ಗೆ ಜನಗಳಿಗೆ ಸದ್ಗುಣಗಳನ್ನು ಬೋಧಿಸುತ್ತಾ ಇದ್ದನು.

ದೊಡ್ಡಬಳ್ಳಾಪುರ.—ಗೌರೀಬಿದನೂರು ತಾಲ್ಲೋಕು ಹುದಗೂರು ಬ್ರಾಹ್ಮಣ ಅಪ್ಪಾಜಯ್ಯ ಎಂಬಾತನಿಂದ ಬೆಂಗಳೂರು ಸಿಟಿ ಬಿ. ನಾರಾಯಣರಾವ್ ಮತ್ತು ಈ ಊರಲ್ಲಿರುವ ಬೊಕ್ಕನಹಳ್ಳಿ ಜೋಡಿದಾರ್ ಇದಂಬರಭಟ್ಟ ಉರುಫ್ ಗುಂಡಪ್ಪಜೋಯಿಸ ಮುಂತಾದವರು ಸುಮಾರು 300 ರೂಪಾಯಿ ತೆಗೆದುಕೊಂಡು ಅತನಿಗೆ ಹೆಣ್ಣು ಕೊಡದೆ ವಂಚಿಸಿದರೆಂತ ವಗೈರೆ ಫಿರ್ಯಾದಾಗಿದ್ದದ್ದು ಕೆಲವು ವಾರಗಳ ಹಿಂದೆ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಜಾ ಆಯಿತೆಂತ ತಿಳಿಯಿತು. ಮತ್ತು ಬಿ. ನಾರಾಯಣರಾವ್ ಮತ್ತು ಗುಂಡಪ್ಪಜೋಯಿಸರು ಮೇಲ್ಕಂಡ ಹುದಗೂರು ಅಪ್ಪಾಜಯ್ಯನು ತಮ್ಮಗಳ ಮೇಲೆ ಸುಳ್ಳು ಫಿರ್ಯಾದು ಮಾಡಿ ತುಂಬಾ ನಷ್ಟ ಅವಮಾನ ಪಡಿಸಿದಂತೆ ಆತನ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಮತ್ತು ಸಿವಿಲ್ ನಷ್ಟಕ್ಕೆ ದಾವಾಮಾಡುವರೆಂತ ತಿಳಿಯುವುದು.—ಈಚೆಗೆ ದೊಡ್ಡಬಳ್ಳಾಪುರದಲ್ಲಿ ಹೊಸದಾಗಿ ಪ್ಲೇಗ್ ಕಾಯಿಲೆಗಳೇನೂ ಇಲ್ಲ. ಕಾಯಿಲೆ ಆಗಿದ್ದ ಮೂವರಿಗೆ ವಾಸಿಯಾಗುತ್ತಿದೆ. ಇಲಿಗಳು ಮಾತ್ರ ಅಲ್ಲಲ್ಲಿ ಬೀಳುವದು ತಪ್ಪಿಲ್ಲ.—(ಅನ್ಯೋಪಟ್ಟ ದ್ವಾಪ್ತಿವಾರರಿಂದ) ಈಗ್ಗೆ ಸುಮಾರು 15 ದಿವಸಗಳ ಕೆಳಗೆ ಕುಬ್ಜ ಶೃಂಗ ಪೇಟೆಯಲ್ಲಿ ಇಬ್ಬರು ಪ್ಲೇಗ್ ದೆಸೆಯಿಂದ ಮೃತಪಟ್ಟರು. ಅಷ್ಟಕ್ಕೇ ಜನಗಳು ಘಾಬರಿಬಿದ್ದರು. ಅಲ್ಲಿಂದೀಚೆಗೆ ಯಾವ ವಿಧವಾದ ಕಾಯಿಲೆಗಳೂ ಇಲ್ಲದೆ ಸುಭಿಕ್ಷವಾಗಿರುವುದರಿಂದ ಟವನ್ ನಿವಾಸಿಗಳು ಹಸನ್ಮುಖಿಗಳಾಗಿದಾರೆ.—ಗೌ|| ಎ. ವಿ. ಸ್ಕೂಲಿಗೆ ಜಿಮ್ನಾಸ್ಟಿಕ್ ಮಾಸ್ಟರಾಗಿ ವಿ. ತಿಮ್ಮಯ್ಯನೆಂಬುವರು ಬಂದಿದಾರೆ. ಇವರ ನಡವಳಿಕೆಯು ಸಾಯಂಕಾಲದ ವೇಳೆ ಹುಡುಗರಿಗೆ ಕಳವಳವನ್ನುಂಟುಮಾಡುತ್ತಿದೆ. ಹೆಡ್ ಮಾಸ್ಟರು ಸರಿಯಾದ ನಿಗಾ ಇಟ್ಟರೆ ಕ್ಷೇಮವಾದೀತು.—ಈ ಊರಲ್ಲಿ ಅನೇಕ ಜನಗಳಿಗೆ ಉಪಕಾರಿಗಳಾಗಿ ನಲ್ಲಿಗಳು ಬರಬೇಕೆಂಬುದಾಗಿ ಅಭಿಲಾಷೆ ಪಡುತ್ತಿದ್ದ ಅಬಂಕಲ್ಲಿ ವೆಂಕಟನಾರಾಯಣಪ್ಪನವರು 3 ತಿಂಗಳಿನಿಂದಲೂ ಕಾಯಿಲೆ ಇದ್ದು ಕಳೆದ ವಾರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದ ಪಡುತ್ತೇವೆ. ಇವರು ಧರ್ಮದ ಫಂಡಿಗಾಗಿ 5,000 ರೂಪಾಯಿ ಕೊಡಬೇಕೆಂದು ಮರಣ ಶಾಸನವನ್ನು ಬರೆದಿರುವಂತೆ ವ್ಯಕ್ತವಾಗಿದೆ.—ಈ ಊರಿಗೆ ಚೀಫ್ ಜಡ್ಜಿಯವರು ದಯಮಾಡಿ ಮುನ್ಸಿಫ್ ಕೋರ್ಟ್ ಇನ್ಸ್‌ಪೆಕ್ಷನ್ ಮಾಡುತ್ತಿದಾರೆ.

ಚಿತ್ರದುರ್ಗ.—ಈ ಪ್ರಾಂತ್ಯ ಮೊನ್ನೆ ಯುಗಾದಿ ಹಬ್ಬದ ದಿವಸ ವಿಪರೀತವಾಗಿ ಮಳೆ ಬಂತು. ಆದರಿಂದ ಕುಡಿಯುವ ನೀರಿಗೆ ಕೆಲವು ಕಡೆ ಅನುಕೂಲವಾಗಿರಬಹುದು. ಇಲ್ಲಿ ನೀರಿನ ಕ್ಷಾಮವು ತಪ್ಪಲಿಲ್ಲ. ರಾತ್ರಿ ಹಗಲೂ ಜನಗಳು ನೀರಿಗಾಗಿ ಬಹಳ ಕಷ್ಟಪಡುತ್ತಿರುವರು. ಇದನ್ನು ನಮ್ಮ ಘನವೆತ್ತ ಪ್ರಜಾ ಹಿತೈಷಿಗಳಾದ ಚೆ|| ಕೆ|| ಮ|| ತ್ಯಾಗರಾಜಅಯ್ಯರವರು ನೋಡಿ ಊರಲ್ಲಿರುವ ಎಲ್ಲಾ ಬಾವಿಗಳನ್ನೂ ಖುದ್ದು ಪರಾಂಬರಿಕೆಯಿಂದ ಹೂಳು ವಗೈರೆ ತೆಗಿಸಿದ್ದಲ್ಲದೆ ಕೆಲವು ಬಾವಿಗಳನ್ನು ಆಳಕ್ಕೆ ತೋಡಿಸಿ ಸ್ವಲ್ಪ ಮಟ್ಟಿಗೆ ನೀರಿಗೆ ಅನುಕೂಲ ಪಡಿಸಿಕೊಟ್ಟರು. ಈ ಮಹನೀಯರ ಪ್ರಜಾವಾತ್ಸಲ್ಯವು ಬಹಳ ಸ್ತೋತ್ರಾರ್ಹವಾಗಿದೆ.—ವೈಸ್ ಪ್ರೆಸಿಡೆಂಟರವರು ಟೌನ್ ಶಾಕೀಟು ವಿಷಯದಲ್ಲಿ ಬಹಳ ಶ್ರಮ ತೆಗೆದುಕೊಳ್ಳುತ್ತಾರಾದ್ದರಿಂದ ಜನಗಳ ಆರೋಗ್ಯಕ್ಕೆ ಕುಂದಕವಿಲ್ಲದಿದೆ ರೋಗಾದ್ಯುಪದ್ರಗಳೇನೂ ಇಲ್ಲ.—ಈ ಡಿಸ್ಟ್ರಿಕ್ಟಿನಲ್ಲಿ ಕ್ರಿಮಿನಲ್ ಕೇಸುಗಳೂ, ದೊಂಬಿ ಕೇಸುಗಳೂ ಬಹಳವಾಗಿವೆ. ಪೋಲೀಸಿನವರು ಸ್ವಲ್ಪ ಮೆಹನತ್ತು ತೆಗೆದುಕೊಂಡು ಪುಂಡು ಜನಗಳಿಗೆ ತಕ್ಕ ಬಂದೋಬಸ್ತು ಮಾಡಿಸಿದ ಹೊರತು ಹದ್ದುಬಸ್ತಿಗೆ ಬರುವುದಿಲ್ಲ.—ಸರ್ಕಲ್ ಇನ್ಸ್‌ಪೆಕ್ಟರವರು ಇಲ್ಲಿಗೆ ದಯಮಾಡಿಸಿ ಎಲ್ಲಾ ಸ್ಕೂಲುಗಳನ್ನೂ ಪರಾಂಬರಿಸಿ ತಾಲ್ಲೂಕುವಾರು ಎ. ವಿ. ಸ್ಕೂಲುಗಳನ್ನು ನೋಡಿಕೊಂಡು ಬೆಂಗಳೂರಿಗೆ ವಾಪಸು ಹೋದರು. ಕಂಪಲ್‌ಸರಿ ವಿದ್ಯಾಭ್ಯಾಸವು ಈ ಹೆಡ್‌ಕ್ವಾರ್ಟರಿನಲ್ಲಿ ಜಾರಿಗೆ ಇದುವರೆಗೂ ಬಾರದಿರುವುದು ಇಲಾಖಾ ಅಧಿಕಾರಿಗಳ ಕಾಮಸ ಪ್ರವೃತ್ತಿಯನ್ನು ಸೂಚಿಸುತ್ತದೆ. ಇಷ್ಟರಲ್ಲಿಯೇ ಜಾಗ್ರತೆಯಾಗಿ ಜಾರೀಲಿ ತಂದಾರೆಂದು ಜನರು ನಿರೀಕ್ಷಿಸುತ್ತಾರೆ.—ಮೈ ಸ್ಕೂಲ್ ಅ|| ಮಾಸ್ಟರು ಲಕ್ಷ್ಮೀಪತಯ್ಯನವರು ಹಿರೀ ಹೆಂಡತಿಯನ್ನು ಸೀಮೆಎಣ್ಣೆ ಹಾಕಿ ಶರೀರದ ಕೆಲವು ಭಾಗಗಳನ್ನು ಸುಟ್ಟಹಾಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಾ ಆ ಹೆಣ್ಣು ಮಗಳು ಕೈಫಿಯತ್ತು ಕೊಟ್ಟು, ಕೆಲವು ದಿವಸ ಇದ್ದು ಅಲ್ಲಿಯೇ ಮೃತಿಹೊಂದಿದಳು. ಇವರ ಮೇಲೆ ಈಗ ಮೊಕದ್ದಮೆ ಆಗಿ ಸಾಕ್ಷಿಗಳ ವಿಚಾರವು ನಡೆದು ಮುಂದಿನ ತಿಂಗಳು ಹೀರಿಂಗು ಇಟ್ಟಿದೆ. ಇತ್ಯರ್ಥ ಏನಾಗುವುದೋ ನೋಡಬೇಕು.—ನಮ್ಮ ಡೆಪ್ಯುಟಿ ಇನ್ಸ್‌ಪೆಕ್ಟರವರು ಆಫೀಸಿನ ಅವ್ಯವಸ್ಥೆಯು ಹೇಳತೀರದ್ದಾಗಿದೆ. ರೈಟರುಗಳ ಮನೆಗೆ ಸ್ಕೂಲ್ ಮಾಸ್ಟರುಗಳ ಓಡಾಟ ಜಾಸ್ತಿಯಾಗಿದೆ. ನವೀನ ವಿದ್ಯಾಭ್ಯಾಸದ ಗಂಧವೇ ತಿಳಿಯದ ಸರ್ವಿಸ್ ಮಾತ್ರ ಆದ ಕೆಲವರಿಗೆ ಬಡ್ತಿ ಕೊಟ್ಟದ್ದೇ ಅದರ ಸರ್ಕಾರದವರ ಕೋರಿಕೆ ಈಡೇರುವುದಿಲ್ಲ. ನವೀನ ವಿದ್ಯಾಭ್ಯಾಸ ಕ್ರಮವನ್ನು ತಿಳಿದ ಮಾಸ್ಟರುಗಳಿಗೆ ಪ್ರೋತ್ಸಾಹಕೊಟ್ಟಲ್ಲಿ ಗೌರ್ನಮೆಂಟಿನವರ ಉದ್ದೇಶವು ಸಫಲವಾಗುವುದು. ಈ ಡಿಸ್ಟ್ರಿಕ್ಟಿನಿಂದ ತೋಕ ಸ್ಕೇಲ್ ಮುಂಜೂರು ಬಗ್ಗೆ ಇನ್ಸ್‌ಪೆಕ್ಟರ್ ಜನರಲ್ ರವರಲ್ಲಿಗೆ ಕಳುಹಿಸಿಕೊಟ್ಟಿರುವ ಶಿಫಾರಸು ಲೀಸ್ಟಿನಂತೆ ಅವರು ಎಂದಿಗೂ ಮುಂಜೂರು ಮಾಡದೆ ಹಾಗೇ ಎಲ್ಲಾ ಮಾಸ್ಟರುಗಳ ಈಗಿನ ಕಾಲಕ್ಕೆ ಸರಿಯಾದ ಪ್ಯಾಸ್ ವಗೈರೆ ಮಾಡಿಕೊಂಡು ಸರ್ವಿಸ್ ಆದವರನ್ನು ಲೆಕ್ಕಗಳಿಂದ ಮುದ್ದು ಪರಾಂಬರಿಸಿ ಪ್ರಮೋಷನ್ ಮುಂಜೂರು ಮಾಡಿದಲ್ಲಿ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಉದ್ದೇಶವು ನೆರವೇರುವುದೆಂದು ಹೇಳಬಹುದು.

ಏಪ್ರಿಲ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ 1-14-0

ಇಷ್ಟು ಭಾರಿ ಕ್ರಯವುಳ್ಳ ಕೈಗಡಿಯಾರವನ್ನು ನಮ್ಮ ಕಂಪನಿ ಪ್ರಖ್ಯಾತಿಹೊಂದುವದಕ್ಕೆ ಇದೇ ತಿಂಗಳು ಒಳಗಾಗಿ ಖರೀದಿಸಿಕೊಳ್ಳುವವರಿಗೆ ಅರ್ಧ ಕ್ರಯ ರೂ. 1-14-0 ಕ್ಕೆ ಕೊಡುತ್ತೇವೆ. ಈ ಸಮಯ ಬಹು ಶ್ಲಾಘ್ಯಕರವಾದದ್ದು.

ನಮ್ಮ ವಿಳಾಸ:—ಟಿ. ರಾಮಚಂದ್ರರಾವ್, 16, ತಿರುಪಳ್ಳಿ ಬೀದಿ, ಸಾಹುಕಾರ್ ಪೇಟೆ, ಮದರಾಸು.

[36-5]

ಕನ್ಯಾಪಿತೃತು ಬೇಕು.

ರೂಪವತಿಯಾದ 18—25 ವಯಸ್ಸಿನ ಮಾಧ್ವ ಕನ್ಯಾಪಿತೃವು 45 ವಯಸ್ಸಿನ ವಿಧುರನಿಗೆ ಬೇಕಾಗಿದೆ. ಈಗ ಆತನಿಗೆ 60 ರೂಪಾಯಿ ಸಂಬಳ ಬರುತ್ತಿದೆ. ವಿವಾಹವಾಗತಕ್ಕವರು ಈ ವಿಳಾಸಕ್ಕೆ ಬರೆಯಿರಿ—

ವಿಧುರ C/o ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-39] Bangalore City.

ಅರ್ಧ ಕ್ರಯ. ಈ ತಿಂಗಳು ಮಾತ್ರ.

ಇಂಗ್ಲೀಷು ಗೋಲ್ಡನ್ ಜುಯೆಲ್ಡ್ ಪಾಕೆಟ್ ರಿಜಿಸ್ಟರ್ ವಾಚ್.

5 ವರುಷದ ಗ್ಯಾರಂಟಿ ಕೊಡುತ್ತೇವೆ.

ಅಸಲ್ ಕ್ರಯ ರೂ. 6-0-0; ಈಗ ರೂ. 2-8-0.

ಅಯ್ಯಾ ಮಿತ್ರರೇ, ಈ ನಕ್ಷೆಯಲ್ಲಿ ತೋರಿಸಿರುವ ಇಂಗ್ಲೀಷು ಗೋಲ್ಡನ್ ಜುಯೆಲ್ಡ್ ಪಾಕೆಟ್ ಗಡಿಯಾರ 6 ರತ್ನಗಳುಳ್ಳ ಕಂಪೆನ್‌ಸೇಷನ್ ಬ್ಯಾಲೆನ್ಸ್ ಬಹು ಬಲಿಷ್ಠವಾದ ಗಡಿಯಾರ. ಭಂಗಾರದ ಬಹುಮತಿ ಪದಕವು ಪಡೆದ ಗಡಿಯಾರ. ಎಷ್ಟು ಉತ್ತಮವಾದದ್ದೋ ತಾವೇ ಯೋಚಿಸಿರಿ. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಲ್ಲಿ ತಯಾರಿಸಲ್ಪಟ್ಟದ್ದು. ಇದನ್ನು ನೋಡುವವರೆಲ್ಲರೂ 10 ರೂಪಾಯಿ ಬೆಲೆಬಾಳುವದೆಂದು ಹೇಳುವರು. ರೈಲ್ವೇ ಉದ್ಯೋಗಸ್ಥರಿಗೆ ಗಾರ್ಡ್ ಮೊದಲಾದವರಿಗೂ ಸಪ್ಲೈ ಮಾಡುತ್ತೇವೆ. ಬರೀ ಮಾತುಗಳಿಂದರೇನು? ಒಂದನ್ನು ತರಿಸಿ ನೋಡಿದರೆ ತಾವೇ ಸಂತೋಷಪಡುವಿರಿ. ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ಇತರ ಕಂಪನಿಯವರಂತೆ ಚಿಟ್ಟು ವ್ಯಾಪಾರ ನಾವು ಮಾಡಲಾರೆವು. ಕೂಡಲೆ ಬರೆದು ತರಿಸಿಕೊಳ್ಳಿ. ವಿಳಾಸ—

[36-5] ಟಿ. ರಾಮಚಂದ್ರರಾವ್ ನಂ. 16, ತಿರುಪಳ್ಳಿ ಬೀದಿ, ಮದರಾಸ್

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳವಾಗಿವೆ.

ಕೇಶೋಲ್ಲಾಸಿನಿ ಶೀಸಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಸುಗಂಧಿ ಕಾರ್ಡು 1 ಕ್ಕೆ 1 ಆ. ಡಜನ್ 1 ಕ್ಕೆ ೧೦ ಆಣೆ.

ಈ ಕಾರ್ಡನ್ನು ಪರ್ಸಿನಲ್ಲಾಗಲೀ ಬಟ್ಟೆಯಲ್ಲಾಗಲೀ ಇಟ್ಟದ್ದೇ ಆದರೆ ಇಟ್ಟ ಜಾಗವೆಲ್ಲಾ ಉತ್ತಮವಾದ ಹೂವುಗಳ ಸುವಾಸನೆಯಂತೆ ಸುವಾಸನೆಯಾಗಿರುತ್ತೆ.

ಸುವಾಸನೆ ಸಾಬೂ ಶೀಸೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ವೇದವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನೂ ಸಹಾ ಸೇರಿಸಿ ಸ್ನಾನಕ್ಕೆ ಇಟ್ಟುಕೊಳ್ಳುವದಕ್ಕೆ ಅನುಕೂಲವಾಗಿ ತಯಾರಿಸಿದೆ ಅತ್ಯಂತ ಸುವಾಸನೆಯಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ.—ಟಿ. ಎಲ್. ಉಪಾಧ್ಯಾಯ,

[39-6] ಸುಗಂಧಕಾರಿ, ಮೈಸೂರು.

ಹಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಅನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾವು), ಮೈ ನಡುಕ, ಶೀತಾಂಶಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಪರಿಹರಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎರವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-30]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಸರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಕಾರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳುಳ್ಳ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು [illegible]ಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ತಾಲ್ಲೂಕು ವರ್ತಮಾನಗಳು.

ಕುಣಿಗಲ್.—ನಮ್ಮ ಅಮಲ್ದಾರ್ರವರು ಈ ತಾಲ್ಲೂಕಿಗೆ ಸೇರಿದ ಕೋಆಪರೇಟಿವ್ ಸೊಸೈಟಿಗಳ ಮೆಂಬರುಗಳನ್ನೂ, ಗ್ರಾಮಾಭಿವೃದ್ಧಿ ಸಂಘದ ಮೆಂಬರುಗಳನ್ನೂ ತಾ. 14 ರಲ್ಲಿ ಕರಸಿಕೊಂಡು ಬರುವ ಏಪ್ರೇಲ್ ತಾ 16 ನೇ ದಿವಸ ಕೋಆಪರೇಟಿವ್ ಸೊಸೈಟಿಗಳ ಮತ್ತು ಗ್ರಾಮಾಭಿವೃದ್ಧಿ ಸಂಘದ ಕಾನ್ಫರೆನ್ಸು ನಡೆಸಲಾಗಿರುತ್ತೆಂದೂ, ಅದಕ್ಕಾಗಿ ನಮ್ಮ ಡೆಪ್ಟಿ ಕಮಿಷನರ್ ರವರನ್ನು ಸೆಷ್ಷೆ ಜಡ್ಜ್ ಸಾಹೇಬರವರನ್ನೂ ಬರಮಾಡಿಕೊಳ್ಳಬೇಕಾಗಿರುತ್ತೆಂದೂ, ಅದಕ್ಕಾಗಿ ಒಂದು ಸಬ್ ಕಮಿಟಿಗೆ ಸ್ವಯಂಸೇವಕರನ್ನು ಚುನಾಯಿಸಬೇಕೆಂದೂ, ತಾಲ್ಲೂಕಿನಲ್ಲಿ ಇಂಥಾ ಕಾನ್ ಫರೆನ್ಸು ನಡೆಯುವದು ಇದೇ ಪ್ರಥಮವಾದದರಿಂದ ತಾಲ್ಲೂಕಿನ ಮರ್ಯಾದೆಗಳು ಗೌರವವಾಗಿರಬೇಕೆಂದೂ, ಬರುವ ಬರತಕ್ಕ ಪ್ರತಿನಿಧಿಗಳ ಆಹಾರ ವಗೈರೆಗಾಗಿ ಏರ್ಪಾಡುಮಾಡಬೇಕೆಂದೂ ಸೂಚಿಸಿದರು. ಇಲ್ಲಿದ್ದ ಸುಮಾರು ೨೦೦ ವರ್ತಕರು ಆ ಸಭೆಯಲ್ಲಿ ಬಹು ಸಂತೋಷದಿಂದ ಒಪ್ಪಿಕೊಂಡು ಒಂದು ಕಮಿಟಿಯನ್ನು ಆರಿಸಿದರು. ಒಬ್ಬ ಮೆಂಬರು ಆಗಂತುಕ ಮೆಂಬರುಗಳಿಗೆಲ್ಲಾ ಭೋಜನಕ್ಕೆ ಏರ್ಪಾಡು ಮಾಡಬೇಕಾದ ಅಗತ್ಯವಿಲ್ಲವೆಂದು ಸೂಚಿಸಿದ್ದನ್ನು ಯಾರೂ ಪುರಸ್ಕರಿಸಲಿಲ್ಲ ... ಹೊರಟುಹೋದರು.

ಹೊಳಲ್ಕೆರೆ ತಾ|| ಹುಲೇಮಳಲಿಗ್ರಾಮ.—ನಮ್ಮ ಸ್ಕೂಲಿಗೆ ಬಂದಿರುವ ಮೇಷ್ಟರು ಕೆ. ಹನುಮಂತರಾಯರು ಬಹು ದಿನಗಳಿಗೆ ತುಂಬ ಪ್ರೋತ್ಸಾಹಕೊಟ್ಟು ಹುಡುಗರು ಬಾಲಕರನ್ನು ಪರಸ್ಪರ ಸೇರಿಸಿ ಸ್ಕೂಲನ್ನು ಅಭಿವೃದ್ಧಿಗೆ ತಂದಿರುವರು. ಈ ತಾ. 16 ನೇ ಮಂಗಳವಾರ ಸ್ಕೂಲ್ ಕಟ್ಟಡದಲ್ಲಿ ಗ್ರಾಮದ ಮುಖಂಡರುಗಳು ಸೇರಿದ್ದರು. ಮ|| ಸಂಪುರಾಯ ಮತ್ತು ಕದೂರು ದ್ಯಾವಣ್ಣನವರು ಸಭೆಯ ಕೋರಿಕೆಯಂತೆ ಅಗ್ರಾಸನವನ್ನು ವಹಿಸಿದರು. ಆಗ್ಗೆ ಮ|| ಪಟೇಲ್ ಮಲ್ಲಪ್ಪನವರು, ಚಿಕ್ಕಣ್ಣನವರು ವಗೈರೆ ಸೇರಿದ್ದರು. ಆ ಕಾಲದಲ್ಲಿ ಸ್ಕೂಲ್ ಮೇಷ್ಟರು ಹನುಮಂತರಾಯರು ವಿದ್ಯಾಭಿವೃದ್ಧಿ ವಿಚಾರವಾಗಿ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ದೇವರ ಉತ್ಸವಗಳು ಬಹಳ ವಿಜೃಂಭಣೆಯಿಂದ ನಡೆದುವು. ನಮ್ಮ ಸರ್ಕಾರದವರು ಪ್ರಜೆಗಳಲ್ಲಿ ಭಕ್ತಿ ವಿಶ್ವಾಸಗಳನ್ನು ತೋರಿಸುವುದಕ್ಕಾಗಿ ನಮ್ಮನ್ನಾಳುವ ಶ್ರೀಮನ್ ಮಹಾರಾಜಾ ಬಹದ್ದೂರರವರು, ಶ್ರೀಮದಿಂಡಿಯಾ ಚಕ್ರವರ್ತಿಗಳಾದ ಜಾರ್ಜ್ ಸಾರ್ವಭೌಮರವರಿಗೆ ಈ ಯುದ್ಧದಲ್ಲಿ ಭಗವಂತನು ಜಯಪ್ರದನನ್ನಿತ್ತು ಚಿರಾಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥನಾರೂಪವಾದ ವಂದನೆಗಳು ಬಾಲಕರಿಂದ ಹೇಳಲ್ಪಟ್ಟು ಸಭೆಯು ಬರಖಾಸ್ತಾಯಿತು.

ಕೊಡಗು ಜಿಲ್ಲಾ ಮಡಿಕೇರಿ.—ಬೆಳೆಗಳ ಧಾರಣೆಯು ಏಕರೀತಿ ... ಪ್ರೀತಿಯ ಹೆಚ್ಚಾದಂತ ವರ್ತಕರಿಗೆ ಲಾಭವು ಪುಷ್ಕಳವಾಗಿ ದೊರೆಯುವ ಹಾಗಾಯಿತು.—ಮ್ಯುನಿಸಿಪಾಲಿಟಿಯವರು ಟವನಿನ ಶಾಂತಿಯನ್ನು ಬಹು ಶ್ರದ್ಧೆಯಿಂದ ನೋಡುತ್ತಾರೆ. ರಾತ್ರಿಯಲ್ಲಿ ಕೆಲವು ಕಡೆಗಳಲ್ಲಿ ಗ್ಯಾಸ್ ಲೈಟ್ ಲಾಂದ್ರಗಳ ದೀಪಗಳು ಬೇಗನೆ ಆರಿಹೋಗುವದರಿಂದ ಅದನ್ನು ಕಂಡು ಈ ದೋಷವನ್ನು ಕ್ಷಿಪ್ರದಲ್ಲಿ ಕ್ರಮಪಡಿಸಿಯಾರು ಎಂತ ಪಟ್ಟಣವಾಸಿಗಳು ನಂಬುತ್ತಾರೆ.—ಕಳೆದ ತಾ 28 ರಲ್ಲಿ ಮಾಜಿ ಗವರ್ನ್ ಮೆಂಟ್ ಪ್ಲೀಡರ್ ರಾವ್ ಬಹದೂರ್ ಕೊತ್ರವಂಡ್ರ ನಂಜಪ್ಪನವರ ಕಿರೀ ಮಗನ ಮದುವೆಯು ಬಹಳ ವಿಜೃಂಭಣೆಯಿಂದ ನಡೆಯಿತು. ಇವರು ಕೊಟ್ಟ ಆಮಂತ್ರಣವನ್ನು ಅಂಗೀಕರಿಸಿ ಕೊಡಗು ಚೀಫ್ ಕಮಿಷನರ್ ಸಾಹೇಬರವರು ಕರ್ನಲ್ ಡಾಲಿ, ಸಿ.ಐ.ಇ., ಸಿ.ಎಸ್.ಐ. ಯವರು ಈ ಮದುವೆಗೆ ದಯಮಾಡಿಸಿದ್ದರು. ಇನ್ನು ಅನೇಕ ಆಂಗ್ಲೋ ಇಂಡಿಯನ್ ಕಾಫಿ ಪ್ಲಾಂಟರುಗಳು ಸಹ ನೆರೆದಿದ್ದರು.—ಇದೇ ಮಾರ್ಚಿ ತಾ 7 ನೇ ದಿನ ಬೆಳಗ್ಗೆ ಈ ಜಿಲ್ಲೆಯ ಮೆಡಿಕಲ್ ಆಫೀಸರು ಮತ್ತು ಜೈಲ್ ಸೂಪರಿಂಟೆಂಡೆಂಟರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಜೆ. ಮೊರ್ ಸಾಹೇಬರವರನ್ನು ದಾವಲ್ ಪಿಂಡಿಗೆ ವರ್ಗಮಾಡಿರುವದಾಗಿ ಹುಕುಂ ಬಂದಪ್ರಕಾರ ದೆಸೆಯಿಂದ ಅವರು ಛಾರ್ಜನ್ನು ಮೆ|| ಪಾಂಡಂಡಚಿಕ್ಕಪ್ಪನವರಿಗೆ ವಹಿಸಿ ಆಂಧ್ರ ಕ್ಕೆ ಪ್ರಯಾಣಬೆಳೆಸಿದರು. ಇವರು ಜನರಲ್ಲಿ ಅನುರಾಗಿಗಳಾಗಿದ್ದುದರ ಕಾರಣ ಅವರ ಪ್ರೀತಿಗೆ ಪಾತ್ರರಾಗಿದ್ದರು. ಇವರು ಸರ್ಜರಿ ಎಂಬ ಶಸ್ತ್ರವಿದ್ಯೆಯಲ್ಲಿ ಬಹಳ ದಾಕ್ಷ್ಯವೂ ತಾಳ್ಮೆಯೂ ಉಳ್ಳವರಾಗಿದ್ದರು. ತಾಟೀದಾರರುಗಳನ್ನು ದಯೆ ಯಿಂದ ನಡಿಸುತ್ತಾ ಬಂದದ್ದರಿಂದ ಇವರ ಅಗಲುವಿಕೆಯು ಪ್ರಜೆಗಳಿಗೆ ಸಂತಾಪ ಕಾರಣವಾಗಿದೆ. ಏಕಾಏಕಿ ವರ್ಗದ ಹುಕುಂ ಬಂದದ್ದರಿಂದಲೂ, ಕೂಡಲೇ ಇವರು ಪ್ರಯಾಣಮಾಡಿದ್ದರಿಂದಲೂ ಅವರಿಗೆ ತಕ್ಕ ಔತಣವನ್ನು ನಡೆಸಲಿಕ್ಕೆ ಅವಕಾಶವಾಗಲಿಲ್ಲವಲ್ಲಾ ಎಂಬದಾಗಿ ವಿಷಾದಿಸುತ್ತಾರೆ. ಇವರ ಜಾಗೆಗೆ ಕೇಪ್ಟನ್ ಕೆಪ್ರಸರ್ ಸಾಹೇಬರವರು ದಯಮಾಡಿಸಿರುತ್ತಾರೆ.—ಇದೇ ಮಾರ್ಚಿ ತಾ. 8 ರಲ್ಲಿ ಮಡಿಕೇರಿ ಜೈಲ್ ಅ|| ಜೈಲರ್ ಸಾಹೇಬರು ಮ್ಯಾ ಟವರ್ಸ್ ಸಾಹೇಬರು 2 ತಿಂಗಳ ರಜಾದ ಮೇಲೆ ಕುಟುಂಬ ಸಮೇತ ಮಂಗಳೂರಿಗೆ ಹೋಗಿರುತ್ತಾರೆ. ಜೈಲ್ ಡಾಕ್ಟರು ಮೆ|| ಕಾಡೇಮಾಡಕರುಂಬಯ್ಯನವರು 1½ ತಿಂಗಳ ರಜಾದ ಮೇಲೆ ಹವಾ ಬದಲಾವಣೆಗಾಗಿ ಮದರಾಸ್ ಪ್ರಾಂತ್ಯ ಕ್ಕೆ ಹೋದರು. ಇವರ ಬದ್ಲಿ ಕೆಲಸ ನೋಡುವದಕ್ಕೆ ಮೆ|| ಚೇರಂಡ ಅಚ್ಚಯ್ಯ ನವರು ನೇಮಕವಾಗಿ, ಕೆಲಸಕಾರ್ಯವನ್ನು ಮುಂದೆ ಇದ್ದವರಿಗಿಂತ ತತ್ಪರವಾಗಿ ಶ್ರದ್ಧೆಯಿಂದಲೂ ವಿವೇಕದಿಂದಲೂ ನಡಿಸುತ್ತಾರೆ.

ಸಿದ್ದಾಪುರ—ಇಲ್ಲಿ ಸೆಕೆ ಬಹಳ. ಮೋಡವಾಡುತ್ತದೆಯೇ ಹೊರತು ಮಳೆಯಾಗುವುದಿಲ್ಲ. ಹವಾ ಆರೋಗ್ಯಕರವಾಗಿದೆ. ಶಿವಮೊಗ್ಗ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರವರು ಇಲ್ಲಿಗೆ ದಯಮಾಡಿಸಿದ್ದರು. ಇವರು ಒಂದು ದಿವಸ ಎ. ವಿ. ಸ್ಕೂಲಿನಲ್ಲಿಯೂ, ಮರುದಿನ ಪೇಟೆ ಗರಲ್ಸ್ ಸ್ಕೂಲಿನಲ್ಲಿಯೂ ಬಾಲಕ ಬಾಲಕಿಯರನ್ನು ಮತ್ತು ನೂರಾರು ಜನ ಪ್ರಜೆಗಳನ್ನು ಪ್ರೋತ್ಸಾಹದಿಂದ ಎಲ್ಲಾ ಸೇರುವಂತೆ ಮಾಡಿ ಸದರಿ ಎರಡು ದಿವಸಗಳಲ್ಲಿಯೂ 3—4 ಗಂಟೆಗಳವರೆಗೆ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾಲಕ್ಕೆ ತಕ್ಕ ಚಿತ್ರಗಳನ್ನು ಉಪಯೋಗಿಸುವುದರ ಮೂಲಕ ಆಬಾಲ ವೃದ್ಧರಿಗೂ ಸುಲಭವಾಗಿ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಕಾಲೋಚಿತ ಉದಾಹರಣೆಗಳೊಡನೆ ಬಹು ಸರಸವಾಗಿ ಉಪನ್ಯಾಸಮಾಡಿದರು. ಇಂಥಾ ಸರಳ ಹೃದಯರು ನಿಷ್ಕಪಟದಿಂದ ಕೆಲಸಮಾಡುವ ಮಹನೀಯರೇ ಹೆಚ್ಚಾಗಿ ನಮ್ಮ ಮೈಸೂರು ಸೀಮೆಗೆ ದೊರೆಯಲೆಂದು ಹಾರೈಸುತ್ತೇನೆ.—ಶಿವಮೊಗ್ಗ ಡೆಪ್ಟಿ ಕಮಿಷನರ್ ಮ|| ಮೆಫಾರ್ ಸಾಹೇಬರವರು ಸಿದ್ದಾಪುರದ ಬಡರೈತರ ಕಷ್ಟನಿವಾರಣಾರ್ಥವಾಗಿ ಚಿಕ್ಕಮಗಳೂರಿಗೆ ಹೋಗಿದ್ದು ಆಲೆ ಆಡುವ ಮಿಷನ್ ನನ್ನು ಸಿದ್ದಾಪುರ ತಾಲ್ಲೂಕಿನಲ್ಲಿ ಕಟ್ಟಿ ವಿಶೇಷ ರೀತಿಯ ಗೌರ್ನಮೆಂಟಿನವರ ಸಂಗಡ ಬಹಳ ಹೋರಾಡಿ ತೆಗೆದುಕೊಂಡು ಬಂದರು. ಈಗ ಸಿದ್ದಾಪುರದ ಟವನ್ ನಲ್ಲಿ ಅದು ಕೆಲಸಮಾಡುತ್ತಿದೆ ಮತ್ತು ಈ ಟವನ್ ನಲ್ಲಿ ಅನೇಕ ಜನ ದೊಡ್ಡಮನುಷ್ಯರು ಆಲೆ ಕಂಪನಿಗೆ ಕಬ್ಬು ಹಾಕುತ್ತೇವೆಂತಲೂ, ಇದರಿಂದ ತುಂಬ ಅನುಕೂಲವಾಗಬಹುದೆಂದೂ ಅನುಮೋದಿಸಿದ್ದರು. ಮಿಷನು ಬಂದ ಮೇಲೆ ಕೆಲವು ದಿನಗಳು ಮಾತ್ರ ಬೀಜ ತೆಗೆದೋ ಅಥವಾ ಇನ್ನು ಯಾವುದೋ ಈ ತರದ ಕಬ್ಬನ್ನು ಕಂಪನಿಗೆ ಹಾಕಲಿಕ್ಕೆ ಪ್ರಾರಂಭವಾದದ್ದು ಬೆಲ್ಲ ಸ್ವಲ್ಪ ಸುಮಾರಾಗಿರಬಹುದು. ಇದೇ ಅಲ್ಪಕಾರಣದಿಂದ ಅನೇಕ ಜಮೀನ್ ದಾರರೂ ರೈತರೂ ಕಂಪನಿಗೆ ಬೆಲ್ಲ ಹಾಕುವದಿಲ್ಲವೆಂಬದಾಗಿ ಸ್ವಂತ ಆಲೆಮನೆ ಕಟ್ಟಿ ಆಲೆ ಆಡಲು ಶುರುಮಾಡಿದರು. ಇಷ್ಟರಲ್ಲೇ ಇಲ್ಲಿಗೆ ... ರವರು ದಯಮಾಡಿಸಿ ಪ್ರಜೆಗಳಿಗೆಲ್ಲಾ ಕಂಪನಿ ವಿಚಾರದಲ್ಲಿ ... ನಂಬಿಕೆ ಹುಟ್ಟುವಂತೆ ಆಲೋಚನೆ ತಿಳಿಸಿ ಕಬ್ಬು ಪುನಃ ತಂದುಹಾಕಲು ... ಮಾಡಿದರು. ನಮ್ಮ ಅಮಲ್ದಾರ್ ಮ|| ಮೊಹಿದೀನ್ ಷರೀಫ್ ರವರೂ

ಕಸಬಾ ಶೇಕದಾರ್ ಅಹಮದಲ್ಲಿ ಬೇಗ್ ರವರೂ ಒಂದು ದಿವಸದೊಳಗಾಗಿ ಕಂಪನಿಗೆ ಕಬ್ಬು ಬರುವಂತೆ ಏರ್ಪಾಡು ಮಾಡಿದ್ದಲ್ಲದೆ ಇನ್ನೂ ಅನೇಕ ತರದ ಸಹಾಯ ಮಾಡಿದ್ದನ್ನು ನೋಡಿ ಕಂಪನಿ ಏಜಂಟರವರು ಸಂತೋಷಭರಿತರಾದರು. ಮುಂದೆ ಕಂಪನಿಯಿಂದ ರೈತರಿಗೆ ತುಂಬಾ ಪ್ರಯೋಜನವಾಗುವುದರಲ್ಲಿ ಯಾವ ಸಂದೇಹವೂ ಕಂಡುಬರುವುದಿಲ್ಲ. ಈಗಲಾದರೋ ಇದುವರೆಗೆ ಹಾಕದಿರುವ ರೈತರು ಹಾಕಿ ಒಳ್ಳೇ ಬೆಲ್ಲ ಬಂತೆಂದು ಸಂತೋಷದಿಂದ ಬೆಲ್ಲವನ್ನು ಮನೆಗೆ ಒಯ್ಯುತ್ತಾರೆ. ರೈತರು ಸ್ವಂತ ಆಲೆ ಕಟ್ಟಿ 1-2 ತಿಂಗಳು ನಿದ್ದೆಗೆಟ್ಟು ಬೆಲ್ಲಮಾಡುವುದು ತಪ್ಪಿ, ಕಂಪನಿಯಲ್ಲಿ 4-6 ದಿವಸದಲ್ಲಿ ಮಾಡಿಕೊಳ್ಳಬಹುದು. ರೈತನಿಗೆ ಪ್ರತಿ ವರ್ಷವೂ ಆದಾಯವಾಗುವುದಲ್ಲದೆ ಇನ್ನು ಅನೇಕ ಕಡೆಯಿಂದ ತನ್ನ ಆರಂಬದ ಕೆಲಸ ಪೂರೈಸಿಕೊಳ್ಳಬಹುದು. ಮತ್ತು ಎತ್ತುಗಳ, ಮನುಷ್ಯರ ಶ್ರಮ ಬಹಳ ಮಟ್ಟಿಗೆ ಉಳಿಯುವುದು. ಇಂಥಾ ಅನೇಕ ತರದ ಸಹಾಯವಾದ ಈ ಕಂಪನಿಯು ಬಹುಕಾಲ ನಡೆಯಲೆಂದು ಹಾರೈಸುತ್ತೇನೆ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳೂ, ಮಫಲರುಗಳೂ, ದರಗಳೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-30] GIRLS' INDUSTRIAL SCHOOL, HASSAN.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವಿಷವನ್ನು ಎಡಬಿಡದೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯ ಅಥವಾ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಯುಕ್ತ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ತಳವಾದ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಗ್ಗಲು ಎದ್ದೇಳಲು ... ತಲೆನೋವು ... ; ಕಣ್ಣು ಮಬ್ಬು, ತಲೆ ತಿರುಗುವಿಕೆ ಮೈನೋವು. ... ಇವೇ ಮೊದಲಾದುವು. ... ಮೂತ್ರ ... ಉರುಮೂತ್ರ, ಮೂತ್ರಕೋಶದ ... ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ... ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-31]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ - ಇವರಲ್ಲಿ ದೊರೆಯುವುದು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ		ದಂತಶುದ್ಧಿ ಚೂರ್ಣ	2 ಆಣೆ	
ಬಾಲಸಂಜೀವಿನಿ	4	,,	ಕೆಮ್ಮಿನ ಮಾತ್ರೆ	8	,,
ಅಜೀರ್ಣದ ಮಾತ್ರೆ	12	,,	ಉಬ್ಬಸದ ಮಾತ್ರೆ	12	,,
ಸರಳಭೇದಿ ಮಾತ್ರೆ	8	,,	ಬಾಧನಿವಾರಿಣಿ	4	,,

[262-17] ನಮ್ಮ ವಿಳಾಸ :—ಓರಿಯಂಟಲ್ ಫಾರ್ಮಸಿ, ಮೈಸೂರು.

ಕುಂತಳಾನಂದ ತೈಲವು.

213-28

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ದಪ್ಪನಾಗಿಯೂ ಕರಿಯದಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸುಗಂಧ ದ್ರವ್ಯಗಳಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟ್ಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕ್ಯಾಟಲಾಗನ್ನು ತರಿಸಿ ನೋಡಿರಿ

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ನಕ್ಕಲ್ ಗಳಿಂದ ಮೋಸಹೋಗದಿರಿ, ಜೋಕೆ!

ಬಹಳ ಕಾಲವಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ

ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್ ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್ ಗೆ 0-12-0.

ಕೂದಲೆಣ್ಣೆಗೆ ಹಾಕುವ ಪೀ-ಕೆರೋಸೀನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಾಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,

[296-14] 177, ಮಿಂಟ್ ನಾಬಜಾರ್ ರೋಡ್, ಮದರಾಸ್.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಮುರಬ್ಬಾಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾ ವನ್ನು" ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಯಲವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶುಂಠಿ ಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [62-3]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು

ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.

ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು

ಸಾಲಾಮಿಸ್ರೀ ಮುರಬ್ಬಾವು—ಕಾಂಚನ, ಬೆಳ್ಳಿ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1916 ನೆ ಇಸವಿ ಮಾರ್ಚಿ ತಾರೀಖು 15 ರವರೆಗೂ ಡಿಪಾಜಿಟ್ಟು ಇಟ್ಟಿರುತ್ತೇವೆ. 16 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು— ಡಿ. ಸೈಯದ್ ಉಸ್ಮಾನ್ ಅಂಡ್ ಕೊ.,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೯. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Messrs. Petrie-Hay & Son, Hunsur.

ನಮ್ಮಲ್ಲಿ ಹೇಗದ ತೊಲೆಗಳು ೩ ಸಲೇ ಅತಿ ಉದ್ದವಾಯಿತು 30-40 ಸಲೇ ಅಡಿಯ ವರೆಗೂ ಇರುತ್ತವೆ. ಇಷ್ಟವುಳ್ಳವರು ತಪ್ಪೀಲನ್ನು ಹುಣಸೂರಿನಲ್ಲಿರುವ ಮೆ|| ಪಿಟ್ರಿ ಹೆ ಅಂಡ್ ಸನ್ಸರಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೆಗಳು ತಯಾರಿಗೂ ಮನೆ ಕಟ್ಟುವದಕ್ಕೂ ಆಗುತ್ತವೆ. [232-22]

ಅಮೂಲ್ಯವಾದ ರೋಗ ಸಂಹಾರಿಣಿ.

ಬೇಗಂಸಾಹಿ ಸಾಬೂನು.

ನೂತನ ವಸ್ತು ಪರೀಕ್ಷಗಳಿಂದ ತಯಾರಾಗಲ್ಪಟ್ಟಿರುವದು. ಯಾವ ಸ್ಥಳದಲ್ಲಿ ಬೇಕಾದರೆ ಸರ್ಪಾಯವಾಗಿ ಸ್ವಲ್ಪ ನೀರಿನಿಂದ ಆ ಸ್ಥಳವನ್ನು ತೊಳೆದು

ಬಿಟ್ಟು ಈ ಸಾಬೂನನ್ನು ಸ್ವಲ್ಪ ನೀರಿನಲ್ಲಿ ಮರ್ದಿಸಿ ತೊಳೆದ ಸ್ಥಳದಲ್ಲಿ ಹಚ್ಚಿ ಎರಡು ನಿಮಿಷಗಳ ತನಕ ಬಟ್ಟೆಯಿಂದ ಒರಸಿಬಿಟ್ಟರೆ ಆ ಸ್ಥಳವು ಪರಿಶುದ್ಧವಾಗಿ ಯಾವ ವಿಧವಾದ ನೋವು ಉರಿ ಮುಂತಾದವು ಇಲ್ಲದೆ ಸುಖವಾಗಿರುವದು ಅನೇಕರು ಇದನ್ನು ಉಪಯೋಗ ಮಾಡುವರು ಬಿಡಬೇಡಿ.

ಮೂರು ಸಾಬೂನು ಪೆಟ್ಟಿಗೆ 1 ಕ್ಕೆ ರೂ 1-0-0, ಟಪಾಲು ಚಾರ್ಜು 0-4-0. ಮೂರು ಪೆಟ್ಟಿಗೆ ರೂ 2-10-0. ಟಪಾಲು ಚಾರ್ಜು 6 ಆಣೆ

ನಮ್ಮ ವಿಳಾಸ:—ಆರ್. ಪಿ. ಪಂಡಿಟ್ ಅಂಡ್ ಕೋ,

[58-3] ನಂ. 6, ಬಂದರು ಬೀದಿ, ಮದರಾಸು.

ಏಪ್ರಿಲ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0

ಇದೇ ಏಪ್ರಿಲ್ ಹುಟ್ಟಿದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಏಪ್ರಿಲ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-43]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. ೨-೬-೦.

ಏಪ್ರಿಲ್ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಬಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೀರೆಗಳು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

[99-43]

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ —ಮಿ|| ಎಂ. ಎಸ್. [illegible], ಚೀಫ್ ಏಜಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು [illegible] ಮ|| ವೆಂಕಟೇಶಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್

[221-26]

ಹುಚ್ಚು ಹಿಡಿಸತಕ್ಕ ತಲೆ ನೋವುಗಳು.

ಲಿಟಲ್ಸ್ ಓರಿಯಂಟಲ್ ಬಾಂ ಎಂಬ ತೈಲ [illegible] ಉಪಯೋಗಿಸುವದರಿಂದ ತಲೆನೋವು, ತಲೆ ಕೊಡೆತ, ಕಣ್ಣುಬ್ಬಿನ ನೋವು, [illegible]ನ ನೋವು, ತಿವಿತ, ಕಣತಲೆ ನೋವು [illegible]ಗಳನೋವು, ತಲೆಯಲ್ಲಿರುವ ನಾನಾ ಜಾತಿಯ ತಿವಿತಗಳೂ, ಅನೇಕ ರೀತಿಯಲ್ಲಿ ಬಾಧೆಪಡಿಸುವ ನೋವುಗಳೆಲ್ಲವೂ, ಒಡನೇ ಸ್ವಸ್ಥವಾಗುತ್ತವೆ. ನ್ಯೂಜೆರ್ಸಿಯ ನ್ಯೂಗ್ರೆಹಿಯನ ಮಿ|| ಜೆ. ವಿಲ್ಕಾಕ್ಸ್ ಬರೆಯುವುದು:—"ತಲೆಯಲ್ಲಿದ್ದ ಕಠಿಣನೋವುಗಳೆಲ್ಲವೂ, ನನ್ನನ್ನು ಹುಚ್ಚುಹಿಂತೆ ಮಾಡಿದ್ದ ಭಯಂಕರ ನೋವುಗಳೆಲ್ಲವೂ, ಲಿಟಲ್ಸ್ ಓರಿಯಂಟಲ್ ಬಾಂ ಎಂಬ ತೈಲವನ್ನು ನನ್ನ ಹಣೆಯ ಮೇಲೆಯೂ [illegible] ಮೇಲೆಯೂ ಉಪಯೋಗಿಸಿದ ಒಡನೇ ಅದ್ಭುತರೀತಿಯಲ್ಲಿ ವಾಸಿಯಾಯಿತು."

ಸೀಸೆ 1 ಕ್ಕೆ 1 ರೂ. ಮೇಲಿಗೆ ಔಷಧಗಳ ಅಂಗಡಿಗಳಲ್ಲಿಯೂ ಸಿಗುತ್ತೆ.

101-48

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳೆಲ್ಲಾ ಇರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-[illegible]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; [illegible]ವ್ಯಾಗ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; [illegible] ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ [illegible] ಸಾಹಸಿಕ 2½ ಆ; [illegible] 6 ಆ; ನಭೋ ಭಾಗ 1, 8 ಆ; ವಿಲಕ್ಷಣ ದ್ವಂದ್ವ 4 ಆ, ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರೆಗೆ ನಡಿಸಲ್ಪಡುತ್ತೆ.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖುಶಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಷಿನ್ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ. [illegible] ರಾಮಸ್ವಾಮಿ, ಸಲ್ಲಾಕ್-ಶಾಸಿಟಿಯನ 20-2-15.

ಅರ್ಧ ಬೆಲೆ ಮಾತ್ರ.

ಸರಕಾರದ ಸರ್ವ [illegible] ಸನದಂತ ಗಿಲೀಟಿನ ಗಡಿಯಾರಗಳನ್ನು ಅಚ್ಚುಕಟ್ಟಿನ [illegible] ಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೋಲ್ಡ್ ಲೆಟರ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ಸರಕಾರದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಾರೆ ಕೊಡಲ್ಪಡುವ ನಕ್ಕಲ್ ಬೆಳ್ಳಿ [illegible] ಗಟ್ಟಿಯಾಗಿಯೂ ಬಹಳ ದಿವಸ ಬಾಳಿಕೆ ಬರುವವಾಗಿಯೂ ಇವೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ [illegible] ಇರುವದಿಲ್ಲ. ಒಂದು [illegible] ಎಂಟು ದಿನಸವಾಗಿ ಪುನಃ ಕೊಡಬೇಕಾದ ಅವಶ್ಯವಿಲ್ಲ. [illegible]ನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು [illegible] ರೂ. 8-0-0. ಗ್ಯಾರಂಟಿ 10 ವರ್ಷಗಳು ಕರೆಸ್ಪಾಂಡೆನ್ಸು ಇಂಗ್ಲೀಷಿನಲ್ಲಿ, [illegible] [illegible] ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-18] ಪಿ. ಓ. ಬಾಕ್ಸ್ 330, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—3—1915 ರಿಂದ 19—3—1915 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	4	4	0	0
ಮೈಸೂರು	,,	1	1	0	0
ಬೆಂಗಳೂರು ಡಿ	ಸ್ಟ್ರಿಕ್ಟು	43	30	0	0
ಮೈಸೂರು	,,	27	18	0	0
ಕೋಲಾರ್	,,	17	9	0	0
ಕೋಲಾರ್ ಚಿನ್ನದ ಗಣಿಗಳು		19	15	0	0
ತುಮಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	10	9	0	0
ಚಿತ್ರದುರ್ಗ	,,	1	0	0	0
ಕಡೂರ್	,,	3	1	0	0
ಶಿವಮೊಗ್ಗ	,,	5	3	0	0
	ಒಟ್ಟು	130	85	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣ ವಸಂತಋತು ಚೈತ್ರ ಬಹುಳ ಬಿದಿಗೆ ಶುಕ್ರವಾರದಿಂದ ಚೈತ್ರ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಏಪ್ರಿಲ್

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
2	ಶುಕ್ರ *	[illegible]	[illegible]	[illegible]	54-22	20
3	ಶನಿ †	ಚೌತಿ	49-32	[illegible]	27-53	31
4	ಭಾನು	ಪಂಚಮಿ	43-26	ಅನುರಾಧ	23-40	22
5	ಸೋಮ	ಷಷ್ಟಿ	37-34	ಜ್ಯೇಷ್ಠ	19-38	23
6	ಮಂಗಳ §	ಸಪ್ತಮಿ	32-14	ಮೂಲ	16-0	24
7	ಬುಧ	ಅಷ್ಟಮಿ	27-27	ಪೂರ್ವಾ	12-46	25
8	ಗುರು ::	ನವಮಿ	23-27	ಉತ್ತರಾ	10-28	26

* ಶುಭಪ್ರದ ಗೌರೀವ್ರತ, ಕಲ್ಪ ಲಕ್ಷ್ಮೀಕಾಂತ ರಥ. † ಸಂಕಷ್ಟ ಚತುರ್ಥಿ, ಮಳೆ ನಕ್ಷತ್ರ— ರೇವತಿ 3 ನೇ ಪಾದ † ಮತ್ಸ್ಯಜಯಂತಿ, ಮೃತ್ಯುಯೋಗ § ಮಳೆ ನಕ್ಷತ್ರ—ರೇವತಿ 4 ನೇ ಪಾದ. :: ಪರ್ವತ್ರ ನವಮಿ [illegible] ಹಿಮವದ್ಗೋಪಾಲಸ್ವಾಮಿ ರಥ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿ‌ತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೆಶಿ‌ತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ 200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ 80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ 550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,, 200 ,, ಟಿನ್ ,, 9 ,, 100 ,, ಸೀಸೆ ,, 4½ ,, 1300 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರೆಲ್ಲರ ಬಳಿಯಲ್ಲಿ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಟಿ. ಸಿ. ಷಾ ಕಂಪನಿ, 177,

[26-9] ಬೀಡಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

Printed and Published by the Rev. H. Gulliford, Proprietor and Manager, Wesleyan Mission Press, Mysore. 1/4/1915.

REGISTERED
M. 80

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸ್ರ ೧೯೧೬ ನೇ ಇಸವಿ ಏಪ್ರಿಲ್ ತಾರೀಖು ೬ ನೇ ಗುರುವಾರ. ಸಂಚಿಕೆ ೪೫

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1–0–0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ತನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು ಕಣ್ಣಿನಲ್ಲಿ ಮಂಜನ್ನು ತೆಗೆವು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜಪ್ಪಾಜಿ, ಘಮಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಸ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಯೊಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1–0–0.

ಇನಾಂ ಸಾಮಾನುಗಳ ಪಟ್ಟಿ:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಟ್ಟಿ 1, ವಾಸನೆಯುಳ್ಳ ಸೋಪು 1, ತಾಂಬೂಲಪತ್ರ 22, ಕೊಂಡೆ ಗಿಣಿಗಳು 6, ಕಾರ್ನೇಷನ್ ಬ್ರೂಚ್ 1, ಜವಾದು ಪೆಟ್ಟಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. 44, ನಂಬುಳಯ್ಯರ ಬೀದಿ, ಮದರಾಸು.

[260-17]

ಕನ್ಯಾಪಿತಂತು ಬೇಕು.

ರೂಪವತಿಯಾದ 18–25 ವಯಸ್ಸಿನ ಮಾಧ್ವ ಕನ್ಯಾಪಿತಂತುವು 45 ವಯಸ್ಸಿನ ವಿಧುರನಿಗೆ ಬೇಕಾಗಿದೆ. ಈಗ ಆತನಿಗೆ 60 ರೂಪಾಯಿ ಸಂಬಳ ಬರುತ್ತಿದೆ. ವಿವಾಹವಾಗತಕ್ಕವರು ಈ ವಿಳಾಸಕ್ಕೆ ಬರೆಯಿರಿ— (3)

ವಿಧುರ C/o ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [100-38]

ಅತ್ಯುತ್ತಮ ಕಾದಂಬರಿಗಳು:—ಜಯ 1 ವಾಲ್ಮೀಕಿ 12 ಆ; ಅಶ್ವತ್ಥಮೃಗ $1\frac{1}{2}$ ಆ; ಅಡವಿಯ ರಾಜ $1\frac{1}{2}$ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇಮ 1 ಆ; ಸನ್ಯಾಸಿನಿ $1\frac{1}{2}$ ಆ; ಸಾಹಸಿಕೆ $2\frac{1}{2}$ ಆ; ಸುಶೀಲೆ 4 ಆ; ನಭಾ ಭಾಗ I, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

1916 ನೆಯ ಕ॥ ಲೋ॥ ಸೆ॥ ಟೆ॥ ನೋಟ್ಸ್.

ಬಿಕರಿಗೆ ಸಿದ್ಧವಾಗಿದೆ. ಕ್ರಯ 4 ಆಣೆ.

ಪರೀಕ್ಷೆಗೆ ಅವಶ್ಯಕವಾದ ವಿಷಯಗಳನ್ನೆಲ್ಲಾ ಒಳಗೊಂಡಿದೆ. ನಮ್ಮ ದೇಶೀಯ ವಿದ್ಯಾರ್ಥಿಗಳೆಲ್ಲರೂ ಇದರ ಪ್ರಯೋಜನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಬೆಲೆಯನ್ನು ಕಮ್ಮಿ ಮಾಡಿದೆ. ಪುಸ್ತಕ ಕೈಗೆ ಬಂದ ಮೇಲೆ ಅದರ ಯೋಗ್ಯತೆ ತಿಳಿಯುವುದು. ಅಲ್ಲದೆ ನಮ್ಮಲ್ಲಿ ಸರ್ಕಾರದ, ಮಿಷನ್ನಿನ ಮತ್ತು ಇತರ ಎಲ್ಲಾ ಪುಸ್ತಕಗಳೂ ಬಿಕರಿಗೆ ದೊರೆಯುವವು. ದೊರೆಯುವ ಸ್ಥಳಗಳು:—(1) ಅಕ್ಷರಶಾಲಾ, ಮೈಸೂರು; (2) ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು; (3) ಕೆ. ಎ. ಚೌರಪ್ಪ ಅಂಡ್ ಸನ್, ಅವೆನ್ಯೂ ರೋಡ್, ಬೆಂಗಳೂರು ಸಿಟಿ. [37-7]

ಪ್ರಪಂಚಯುದ್ಧ

ಘನ ಘೋರ ಸಂಗ್ರಾಮ!!

ಚಿತ್ರರೂಪ!!

ಯೋಧಾಗ್ರಣಿಗಳ ಛಾಯಾಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಘೋರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದೊಳಗೆ ಪತನವಾದ ಎಮ್‌ಡನ್ನನ್ನು ನೋಡಿರುವಿರಾ? ಅದರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿಖಾಮಣಿಯನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಯಾಸನ ದುಷ್ಟರಂತೆ ಕಾಲುಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು

ಬೆಲೆ ೧ ರೂಪಾಯಿ.

ಮರಾ:—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[10-12]

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40. 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-9] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-31] GIRLS' INDUSTRIAL SCHOOL, HASSAN.

The General Assurance Society Ltd., Ajmer.

(*A Popular Life Office.*)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-40] Bangalore City.

ಏಪ್ರಿಲ್ ಮಹೋತ್ಸವದ ಕೈಗಡಿಯಾರ.



ಅರ್ಧ ಕ್ರಯ ರೂ. 1-14-0

ಈ ಏಪ್ರಿಲ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಏಪ್ರಿಲ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಅಣೆಗೆ ಕೊಡಲಾಗು. [99-44]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಮಧುರೆ ಜರತಾರಿ ಅಂಚಿನ ಸೀರೆ ಅಸಲ್ ರಿಬಿಂ ರೂ. 3-6-0.

ಏಪ್ರಿಲ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ರಿಂಗಿನ ಕೈ ಹರಳಿನ ಉಂಗುರ ನಿಜ ಉಚಿತವಾಗಿ ಕೊಡಲ್ಪಡುವುದು.

ಇದು ಉಡುವುದಕ್ಕೆ ಭಡಕವಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

[99-44] ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಪರಸ್ಪರ ಆರ್ಡರುಗಳು ಬರುವ ಮೇ 15 ರ ವರಿಗೆ ನಡೆಸಲ್ಪಡುತ್ತೆ.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಪಾತ್ರಿಯಾದ ಬರೆದು ತಿಳಿಸುವದೇನೆಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನ್ ಸಹಾ ಬಲವಾಗಿಯೂ ಮತ್ತು ನಂಬಬೊಹವಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪೆನಿಯವರು ಇಷ್ಟು ಅಗ್ಗದ ದರ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಲ್ಲಾಸ-ಕಾ-ಸಿಬುನ, 20-2-15.

ಅರ್ಧಬೆಲೆ ಮಾತ್ರ.

ಸಾರ್ವಜನಿಕರಿಗೆ ನಮ್ಮ ಮಾದರಿಯ ಗಿರಾಕಿಗಳಿಗಾಗಿ ಗಡಿಯಾರವನ್ನು ಹೆಚ್ಚಿಸಿ ಬೀದಿ. ಅವರಿಂದ ಪಾತ್ರಿಕೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ನಂಬಬೊಹವಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಸಮಯವರದಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರಿಗೆ ವಿ. ಪಿ. ಖರ್ಚು ಸಹ ರೂ 8-0-0. ಗ್ಯಾರಂಟಿ 10 ವರ್ಷಗಳು. ಕೆರೆನ್ಸಿ ಡಿನ್ನ ಇಂಗ್ಲಿಷಿನಲ್ಲಿ ಕ್ಯಾಟಲಾಗು ಕಳುಹಿಸಲ್ಪಡುವುದು ಬೇಕಾದರೆ ಬರೆಯಿರಿ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡ್ ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-19] ಪಿ. ಓ. ಬಾಕ್ಸ್ 330, ಬೊಂಬಾಯಿ.

To let | To let | To let

Convenient Upstairs House in Nazarbad High Road to let at Rs. 10/ per month or offers.

[51-4] Apply to **Dr. M. R. G. RAO,**

Madanapalli Road Station, M. S. M. Ry.

THE GENERAL AGENCY,

MYSORE.

NOW READY!

TEXTS FOR 1916

III, IV, V & VI Forms English Texts!

Lower Secondary Canarese Texts and English

[8-13] **Notes!**

Government Kannada Books.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿ ಯವರ ಬಾಬತು, ಮೆಸ್ಸರ್ಸ್ ಫಜಲಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಟೋಟಾದಲ್ಲಾಳಿ, ಮಜೂರಿ ಮುಮ್ಮಾ, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಮುಂತಾದ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ನೇಕಡ ೩ ರೂಪಾಯಿ ಲಾಗಾಯ್ತು ೪½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-51]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ಕೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಕೂಡ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳು ನಮಗೆ ಹೆಚ್ಚಾಗಿ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಜರ್ಮನ್ ಫಿರಂಗಿ ಚಿತ್ರ ಸಹಿತ ಅಚ್ಚಾಗಿರುವದು. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನುಯಲ್ ಕರ್ತವ್ಯ 1 ರೂಪಾಯಿ.

[143-39] ವಿಳಾಸ:—ಪಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರಿಗೆ ಕೊಡುತ್ತಾ ಬರುವದು.

ಕಂಪನಿಗೆ ದಾಖಲಾಗಿ ಪಾಲಿಸಿ ಪಡೆದು ಸಲೀಸು ಪ್ರೀಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಷ್ಟ ಸಮೇತ ವಾರಿಸಿಗೆ ಕೊಡಲಾಗುತ್ತೆ. 20 ವರುಷದವರಿಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲುಪ್ತವಿಲ್ಲದೆ ಎಲ್ಲಾ ಹೆಣ್ಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿ ನಂತೆ ಕೊಡುತ್ತಾ ಬರುವದು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲಿ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್ರ ಹಣವು ಹಂಚಿಕೆ ರೀತಿಯೆಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿಮೆ ಮೊಬಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜರೂ ಏಜಂಟ್ರು ಮುದ್ದು ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ [292-16]

ಒಳ್ಳೆ ಚಟುವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೋಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದ್ದಕ್ಕೆ ಬರೆಯಿರಿ.

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪಾಲು ಹಾಸಲು ಸಹ ಮಾತ್ರ ಇತರರಿಗೆ ವಿ. ಪಿ. ಖರ್ಚು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0 ಇದು ಜನವರಿ ಆಖೈರು ವರಿಗೆ ಮಾತ್ರ ಸಿಗುವದು. ನಂತರ ಉಳಿಯಲಾರದು ಆದುದರಿಂದ ತ್ವರೆಮಾಡಿರಿ.

ಅಮೃತಾಂಜನ ರಿಜಿಸ್ಟರ್ಡ್

[61-1]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅವಯವಗಳನೋವು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳೂ ಶಾಶ್ವತವಾಗಿ ನಿಲ್ಲುವವು. ಬೇರೆ ಔಷಧಗಳನ್ನು ಪಡೆಯಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡ್ ಮಾರ್ಕ ಮತ್ತು ಹೆಸರು ಛಾಪಿನಗಳ ಸುಂದರವಾದ ಕಾಗದಿಗಳಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರೆಯಿಗೆ ಇಲ್ಲದ ಬಾಟ್ಲಿಗಳನ್ನು ಕರೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕ್ರಯ 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಕೇಶ ತೈಲ 0-12-0 ಮತ್ತು ಮುಲಾಮು 0-3-0. ಜುಲಾಬು ಮಾತ್ರ 0-8-0. ಸುಂದರಿ ಮುಲಾಮು 0-4-0 ಕ್ಯಾಟಲಾಗ್ ಬೇಕಾದರೆ ವ್ಯಾಪಾರಸ್ಥರಿಗೆ ಬೇರೆ ಕಮಿಷನ್ ಕೊಡಲಾಗುವುದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ಜಹಂಗೀರ್ ಸ್ಟ್ರೀಟ್, ಮದ್ರಾಸು.

ಸಾಳ್ವದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾದ್ಯ), ಮೈ ನಡುಕ, ಕೀಲು ತಗಳ ಬಾವು, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ಹಾಲುಣಿಸುವದರ ಆಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೆಚ್ಚು ಸುವಾಸನೆಯಾಗಿರುತ್ತಾ, ಎಂತಹ ಅಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಯೂ ಬಾರಿಸೀಕೊಡದೆ, ನೀರುಗಳ ಹಾಗೆ ಬಲಹೀನವನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಪ್ರಿಯರ ಮುತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಸ್ತ್ರೀಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ. 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [103-31]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಪ್ರಾಮಿಸ್ ಪರ ಎಂ. ಇ. ಸ್ಕೂಲ್, ಮಾಂಡು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾಥಿಕ್, ಹೋಮಿಯೋಪ್ಯಾಥಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಕಾರರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಮಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಸಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್ ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಪರ್ಯಂತ ಉಪಯೋಗಿಸಿದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ನಿಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸುವವರಲ್ಲಿ ರೂಢಿ ಹೋಗುತ್ತಿದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಒಳ್ಳೇ ಹಸನಾದ ಉಂಡೆ ನಶ್ಯ.

ನಮ್ಮ ಪ್ರಸಿದ್ಧ ಉಂಡೆ ನಶ್ಯವು ಚುರುಕಾಗಿದೆ, ಸುವಾಸನೆಯಾಗಿದೆ, ತಿಂಗಳ ... ದುರ್ವಾಸನೆಯಾಗದು. ವಿ.ಪಿ.ಯಲ್ಲೂ ತರಿಸಬಹುದು. ಕ್ರಯ ಸೇರಿಗೆ ... ವಿ.ಪಿ. ಛಾರ್ಜು ಬೇರೆ. ವಿಳಾಸ.—ಎ. ಎನ್. ನಂಜುಂಡಯ್ಯ.
[14-13] ಸ್ನಫ್ ಮರ್ಚೆಂಟ್, ಶಿವರಾಮಪೇಟೆ, ಮೈಸೂರು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. ... ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ದೋಷದಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ— ರಾಜವೈದ್ಯ ನಾರಾಯಣಜೀ ಕೇಶವಜೀ,
[117-21] 20, ಚೀನಾಬಜಾರು ರೋಡು, ಮದರಾಸು.

ಇನಾಂ ಸಾಮಾನುಗಳು 50 | ಇನಾಂ ಸಾಮಾನುಗಳು 50

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ

ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳ್ ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ತಲೆಯನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ... ಎಣ್ಣೆಯನ್ನು ಉಪಯೋಗಿಸಿರಿ ಈ ... ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಅದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇವಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಹರಿಸುವದು ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನು ಗಳ ತಪಸೀಲು ಸ್ತ್ರೀಯರು ಧರಿಸಿಕೊಳ್ಳುವ ಕೆಂಪು ಪಚ್ಚೆ 6, ಮೈಸೂರ್ 1, ಅದ್ದಾ 1, ಕಾಯೂಲುವಾತ್ರ 30, ದಂತದ ಬಾಚಣಿಗೆ 1, ಸೊಗಸಾದ ರೋಜ ರಾಣಿ ಕಾಡ ಪೌಡರ್ ಪೆಟ್ಟಿಗೆ 1, ಐವರಿ ಫೊಸ್ಟ್ ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1. 6. ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನು ಇಲ್ಲದಂತೆ ಸ್ಟೈಯಿಂಪೀಸು 1ನ್ನು ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ— ಫ್ರೈಯರ್ ಏಜೆನ್ಸಿ ಅಂಡ್ ಕಂಪನಿ,
[68-2] ನಂ. 3, ವರುಳಪ್ಪನ್ ಬೀದಿ, ಮದರಾಸು.

ಗೃಹಕೃತ್ಯದ ನೋಟೀಸು.

ಆನೆಕಲ್ ಟವನ್ ಮತ್ತು ಆನೆಕಲ್ ಗ್ರಾಮ ಮತ್ತು ಆನೆಕಲ್ಲು ಕಸಬಾ ಹೋಬಳಿ ಕರ್ಪೂರ ಗ್ರಾಮದ ದಾಖಲೆ ಬಿಂದೇರಾಯನಪುರ ಗ್ರಾಮಗಳಲ್ಲಿ ನಮ್ಮ ಪಿತ್ರಾರ್ಜಿತ ಮತ್ತು ಸ್ವಾಧೀನಾನುಭವದ ಸ್ವತ್ತುಗಳನ್ನು ಹಾಲಿ ಹೊಸಕೋಟೆಯಲ್ಲಿರುವ ಕುರಿಗುಂಡಪ್ಪ ಸುಬ್ಬಣ್ಣ ಕೃಷ್ಣಪ್ಪ ಇವರು ವಿಕ್ರಯಿಸುವದಾಗಿ ತಿಳಿಯಬರುತ್ತೆ. ಈ ಸಮಸ್ತ ಸ್ವತ್ತುಗಳಲ್ಲಿಯೂ ನಾನೂ, ನನ್ನ ಮೈನರ್ ತಮ್ಮಂದಿರಿಬ್ಬರೂ ಅರ್ಧ ಭಾಗದ ಬಾಧ್ಯತೆವುಳ್ಳವರಾಗಿರುವದರಿಂದ ನಮ್ಮ ತಿಳುವಳಿಕೆಯಿಲ್ಲದೆ ಕ್ರಯಕ್ಕೆ ಪಡೆಯುವವರು ನಮ್ಮ ನಷ್ಟಗಳೆಲ್ಲಕ್ಕೂ ಆರ್ಹರೆಂಬ ಸಂಗತಿಯನ್ನು ಈ ಮೂಲಕ ಮೊದಲೇ ತಿಳಿಯಪಡಿಸಿರುತ್ತೆ. [62-1]
ಟಿ. ಕೆ. ವಿಶ್ವೇಶ್ವರಯ್ಯರ್, ಕಾನ್ಫರೆನ್ಸು ಕ್ಲಾರ್ಕು, ಕುಣಿಗಲ್.

ಮಕ್ಕಳ ಆರೋಗ್ಯ. ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹಂಕಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೀತ, ಗಂಟಲಲ್ಲಿ ಗುರುಗುಟ್ಟುವದು, ಕುರಿ, ಉಬ್ಬಸ, ಕ್ಷಯ, ಗರ್ಭವಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು

ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲು 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-22]

ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಬಾಸಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.
ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.
ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.
ಏಳು ವರ್ಷಗಳ ಖಾತ್ರಿಯುಳ್ಳ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು, ಖಾತ್ರಿಯಾದದ್ದು, ಸಂಬಳವಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸಂಕಲೆ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ಕೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180-23] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮಾರ್ಚಿ 25 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	ರೂ.	10,00,000
,, (2) ರಿಜರ್ವ್ ಫಂಡು	,,	26,000
,, (3) ಡಿಪಾಜಿಟ್ಟುಗಳು	,,	25,63,647
,, (4) ಇತರೆ	,,	21,271
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	36,09,918

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	5,95,821
,, (2) ಖಾತೆ ಮತ್ತು ಇತರ ಸಾಲಗಳು	,,	22,53,718
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,79,075
,, (4) ಇನ್‌ವೆಸ್ಟ್‌ಮೆಂಟುಗಳು	,,	2,67,277
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	87,177
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	15,470
,, (7) ಇತರೆ	,,	10,780
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	36,09,918

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ

ಕಾಮಿನಿಯಾ ತೈಲವೇ!
(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೂಡಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಅದರ ಅವು ದಟ್ಟವಾಗಿ ಬೆಳೆದು ನಮ್ಮ ದ್ರವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನೂ ಹಾಳುಮಾಡುವ ದಕ್ಕಿಂತ ಒಂದೆಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ನಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ಪ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-11]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರ್ಯಾಮಿನ (ಮಧ್ಯಮ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—
ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

Mellin's Food

ಮೆಲಿನ್ಸ್ ಆಹಾರವು

ಕೈಸೋಕದ ತಯಾರಾಗಿರುವದು. [9-13]

ಮೆಲ್ಲಿನರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲ್ಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರು ಮಾಡಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲ್ಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಬಲವಲಿಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ವೃತ್ತಾಂತ ಪತ್ರಿಕೆ.

——:o:——

೧೯೧೫ ನೇ ಇಸವಿ ಏಪ್ರಿಲ್ ೮ ನೇ ಗುರುವಾರ.

ರಾಜಧಾನಿಯ ಮ್ಯುನಿಸಿಪಲ್ ಹುಟ್ಟುವಳಿ.

ನಮ್ಮ ಸಂಸ್ಥಾನಕ್ಕೆ ರಾಜಧಾನಿಯಾಗಿರುವ ಮೈಸೂರು ಪಟ್ಟಣವು ದಿನಕ್ರಮೇಣ ದೊಡ್ಡದಾಗುತ್ತಿದೆ. ಇದರಿಂದ ರಸ್ತೆಗಳನ್ನು ಚೆನ್ನಾಗಿ ಇಡುವುದಕ್ಕೂ, ಬೆಳಕನ್ನೂ ನೀರನ್ನೂ ಒದಗಿಸುವುದಕ್ಕೂ, ಕನ್ಸರ್ವೆನ್ಸಿ ಮುಂತಾದ ಇತರ ಬಾಬುಗಳಿಗೂ ಖರ್ಚುಮಾಡಬೇಕಾದ ಹಣವು ಕೂಡ ದಿನಕ್ರಮೇಣ ಹೆಚ್ಚುತ್ತಿರುವುದು. ಮ್ಯುನಿಸಿಪಾಲಿಟಿಗೆ ಇರುವ ವರಮಾನಗಳು ಯಾವವೆಂದರೆ—ಮನೆ ಮತ್ತು ಖಾಲಿ ನಿವೇಶನಗಳ ತೆರಿಗೆಗಳು, ಆಕ್ಟ್ರಾಯಿ ಸುಂಕಗಳು, ಅಂಗಡಿ ಮತ್ತು ಗಾಣಗಳ ಮೊಹತರ್ಫಾ ತೆರಿಗೆಗಳು, ಇಷ್ಟೇ. ಈ ಮೊಹತರ್ಫಾ ತೆರಿಗೆ ಎಂಬ ಬಾಬು ಹೊಸ ಮ್ಯುನಿಸಿಪಲ್ ರೆಗ್ಯುಲೇಷನ್‌ನಲ್ಲಿ ಕಾಣಬರುವುದಿಲ್ಲ; ಪೂರ್ವ ಕಾಲದಲ್ಲಿ ಚೀಫ್ ಕಮಿಷನರವರು ಕೊಟ್ಟಿರುವ ಹುಕುಮನ್ನು ಇನ್ನೂ ಚಲಾವಣೆಯಲ್ಲಿಟ್ಟುಕೊಂಡು ಅದರಲ್ಲಿ ಕಂಡ ಪ್ರಕಾರ ಮೊಹತರ್ಫಾ ತೆರಿಗೆಯನ್ನು ಹಾಕಿ ವಸೂಲ್ಮಾಡುತ್ತಾರೆ. ಹೊಸ ರೆಗ್ಯುಲೇಷನ್ ಜಾರಿಗೆ ಬಂದು ಹಲವು ವರ್ಷಗಳಾಗಿದ್ದರೂ ಅದರಲ್ಲಿ ಕಂಡ ಷರತ್ತುಗಳಂತೆ ತೆರಿಗೆಗಳ ಶಿಸ್ತನ್ನು ಕ್ರಮಪಡಿಸಿಕೊಳ್ಳಬೇಕೆಂದು ಮೈಸೂರು ಮ್ಯುನಿಸಿಪಲ್ ಕೌನ್ಸಿಲ್‌ನವರು ಪರ್ಯಾಲೋಚಿಸುತ್ತಲೇ ಬಂದರು. ಕಳೆದ ತಿಂಗಳ ಅಂತ್ಯ ಭಾಗದಲ್ಲಿ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕೌನ್ಸಲರುಗಳು ಈಗಿನ ತೆರಿಗೆಯ ಶಿಸ್ತನ್ನು ಬದಲಾವಣೆಮಾಡಿ ಅದರಂತೆ ಜಾರಿ ಮಾಡಬಹುದೆಂದು ಸಮ್ಮತಿ ಪಟ್ಟಿರುತ್ತಾರೆ.

ಈಗ ಅಂಗಡಿ ಮತ್ತು ಎಣ್ಣೆಗಾಣಗಳಿಗೆ ಹಾಕಿರುವ ಮೊಹತರ್ಫಾ ತೆರಿಗೆಗಳನ್ನು ವಜಾ ಮಾಡಬೇಕೆಂದೂ, ವಾಸದ ಮನೆಗಳಿಗೆ ಹ್ಯಾಗೋ ಹಾಗೆ ಅಂಗಡಿಗಳಿಗೂ ಅವುಗಳ ಬಾಡಿಗೆ ದರಗಳ ಮೇಲೆ ಶೇಕಡಾ ೬ ರೂಪಾಯಿನಂತೆ ತೆರಿಗೆ ಹಾಕಬೇಕೆಂದೂ; ಗಾಣಗಳಿಗೆ ಈಗ ಹಾಕಿ ವಸೂಲ್ಮಾಡುವ ತೆರಿಗೆಯನ್ನು ವಜಾ ಮಾಡಬೇಕೆಂದೂ, ಇದಕ್ಕೆ ಪ್ರತಿಯಾಗಿ ಈಗ ಪ್ರತಿ ಒಂದು ಗಾಣಕ್ಕೂ ವಸೂಲಾಗುವ ತೆರಿಗೆಯಲ್ಲಿ ಅರ್ಧವನ್ನು ಮಾತ್ರ ಇಟ್ಟು ಇದನ್ನು ಗಾಣದ ಮಾಲೀಕರಿಂದ ಪ್ರತಿ ವರುಷವೂ ಲೈಸೆನ್ಸ್ ಫೀಜಿನಂತೆ ಹಾಕಿ ವಸೂಲ್ಮಾಡಿಕೊಳ್ಳಬೇಕೆಂದೂ ಮೆಂಬರುಗಳು ಒಪ್ಪಿ ತೀರ್ಮಾನಮಾಡಿಕೊಂಡಿರುತ್ತಾರೆ. ಇದನ್ನು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಬೇಕಾಗಿರುತ್ತದೆ. ಇದರಿಂದ ತೆರಿಗೆಗಳನ್ನು ಹಾಕುವುದರಲ್ಲಿ ಈಗಿರುವ ಅವ್ಯವಸ್ಥೆಯು ಕೊನೆಗಂಡು, ಹೊಸ ರೆಗ್ಯುಲೇಷನ್‌ಗೆ ಅನುಸಾರವಾಗಿ ತೆರಿಗೆಗಳು ವಸೂಲಾಗುವವು.

ಆಕ್ಟ್ರಾಯಿ ಬಾಬಿನಲ್ಲಿ ಪ್ರಜೆಗಳಿಗೆ ನಾನಾ ಕಷ್ಟನಷ್ಟಗಳುಂಟೆನ್ನುವುದು ನಮಗೆಲ್ಲಾ ಚೆನ್ನಾಗಿ ತಿಳಿದಿದೆ. ಜನಗಳು ಕೊಡುವ ಸುಂಕಗಳೆಲ್ಲಾ ಮ್ಯುನಿಸಿಪಲ್ ಖಜಾನೆಗೆ ತಲಪುವುದಿಲ್ಲವೆಂಬುದೂ ಎಲ್ಲರಿಗೂ ವೇದ್ಯವಾಗಿದೆ. ಆದಕಾರಣ ಇಂಥಾ ಕಷ್ಟ ನಷ್ಟಗಳನ್ನೂ ಅಕ್ರಮಗಳನ್ನೂ ತಪ್ಪಿಸಬೇಕೆಂದು ಮ್ಯುನಿಸಿಪಲ್ ಕೌನ್ಸಲರುಗಳು ಒಂದು ಹೊಸ ಏರ್ಪಾಡನ್ನು ಕಲ್ಪನೆ ಮಾಡಿ, ಆಕ್ಟ್ರಾಯಿ ಸುಂಕಗಳು ವಸೂಲಾಗುವಂಥಾ ಹಲವು ಚಿಲ್ಲರೆ ಬಾಬುಗಳನ್ನು ವಜಾ ಮಾಡಿಬಿಡಬೇಕೆಂದೂ, ಜವಳಿ, ಸಾಗುವಾನಿ, ಸಕ್ಕರೆ, ಕೆರೊಸೀನ್ ಎಣ್ಣೆ, ಕುರಿ ಮತ್ತು ಆಡು, ಇಷ್ಟು ಬಾಬುಗಳನ್ನು ಮಾತ್ರ ಇಟ್ಟುಕೊಳ್ಳಬೇಕೆಂದೂ ಗೊತ್ತು ಮಾಡಿದರು. ಕುರಿ ಮತ್ತು ಆಡುಗಳ ಸುಂಕವೇನೋ ಉಕ್ಕಡಗಳಲ್ಲಿ ವಸೂಲಾಗುವುದಿಲ್ಲ: ಕಸಾಯಿ ಖಾನೆಯಲ್ಲಿ ವಸೂಲ್ಮಾಡುತ್ತಾರೆ.

ಈ ಹೊಸ ಏರ್ಪಾಡು ಜಾರಿಗೆ ಬಂದರೆ ರಾಜಧಾನಿಯಲ್ಲಿ ಈಗ ಇರುವಷ್ಟು ಉಕ್ಕಡಗಳು ಅವಶ್ಯವಿರುವುದಿಲ್ಲ. ಕೆಲವು ಉಕ್ಕಡಗಳನ್ನು ತೆಗೆದುಹಾಕಿಬಿಟ್ಟರೆ ಆಕ್ಟ್ರಾಯಿ ಸಿಬ್ಬಂದಿ ಖರ್ಚಿನಲ್ಲಿ ಸಾಲಿಯಾನಾ ಎರಡು ಮೂರು ಸಾವಿರ ರೂಪಾಯಿ ಕಡಮೆಯಾಗುವುದು. ಆದರೆ ಚಿಲ್ಲರೆ ಬಾಬುಗಳ ಮೇಲಣ ಸುಂಕಗಳನ್ನು ವಜಾ ಮಾಡಿದಲ್ಲಿ ಮ್ಯುನಿಸಿಪಾಲಿಟಿಗೆ ಸಾಲಿಯಾನಾ ಸುಮಾರು 26,000 ರೂಪಾಯಿ ಕೆಲಕ ನಷ್ಟ ಸಂಭವಿಸುತ್ತದೆ. ಈ ನಷ್ಟವನ್ನು ಎತ್ತಿಕೊಳ್ಳುವುದಕ್ಕೆ ಈಗಿನ ಟೋಲ್ ಗೇಟುಗಳಲ್ಲಿ ವಸೂಲಾಗುತ್ತಿರುವ ದರಗಳನ್ನೆಲ್ಲಾ ದ್ವಿಗುಣಮಾಡಿ ವಸೂಲ್ಮಾಡಬೇಕೆಂದು ಕೌನ್ಸಲರುಗಳು ಒಪ್ಪಿ ಸೂಚಿಸಿರುತ್ತಾರೆ. ಆಗ್ಗೆ ಈ ಟೋಲ್ ಗೇಟಿನ ಹೊಸ ದರಗಳು ಇತರ ಕಡೆಗಳ ಟೋಲ್ ಗೇಟ್ ದರಗಳಿಗೆ ಸರಿಹೋಗುವವು. ಇದರಿಂದ ಮ್ಯುನಿಸಿಪಾಲಿಟಿಗೆ ಸುಮಾರು 24,000 ರೂಪಾಯಿ ಉತ್ಪತ್ತಿಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಈ ಆಕ್ಟ್ರಾಯಿ ಬಾಬಿಗೆ ಪೆಟ್ರೋಲ್ ಎಂಬ ಕಲ್ಲೆಣ್ಣೆ (ಮೋಟರುಗಳಿಗೆ ಉಪಯೋಗಿಸುವುದು) ಯನ್ನು ಸೇರಿಸಬೇಕೆಂದೂ, ಜವಳಿಗೆ ಈಗ ವಸೂಲಾಗುವುದಕ್ಕೆ (ರೂಪಾಯಿಗೆ ೩ ಕಾಸು) ಇನ್ನೊಂದು ಕಾಸನ್ನು ಹೆಚ್ಚಿಸಿ ವಸೂಲ್ಮಾಡಬೇಕೆಂದೂ ತೀರ್ಮಾನವಾಗಿರುತ್ತದೆ. ಎಣ್ಣೆಬೀಜಗಳು, ಬೆಣ್ಣೆ, ತುಪ್ಪ, ಬೆಲ್ಲ, ವೀಳ್ಯದೆಲೆ, ತೆಂಗಿನಕಾಯಿ, ಎಳನೀರು, ಈ ಮೊದಲಾದ ಸಣ್ಣ ಬಾಬುಗಳಿಗೆ ಸುಂಕಗಳನ್ನು ತೆಗೆದುಬಿಡಬೇಕೆಂದು ತೀರ್ಮಾನಮಾಡಿರುವುದು ಬಹಳ ಮಟ್ಟಿಗೆ ಅನುಕೂಲವಾಯಿತು. ಈಗ ಮಾಡಿರುವ ಏರ್ಪಾಡಿನಲ್ಲಿ ಸಣ್ಣ ನೌಕರರ ಉಪಬಾಧೆಗಳು ತಪ್ಪಿ ಸುಂಕಗಳ ವಸೂಲಿಯು ಎಷ್ಟೋ ಸುಖಕರವಾಗಿಯೂ, ಪ್ರಜಾರಂಜಕವಾಗಿಯೂ ಆದೀತೆನ್ನುವುದಕ್ಕೆ ಸಂಶಯವಿಲ್ಲ.

ಇದಲ್ಲದೆ ಮ್ಯುನಿಸಿಪಲ್ ಕೌನ್ಸಲರುಗಳು ಕಸಬುದಾರಿ ಕಂದಾಯವೆಂಬುದನ್ನು ಹೊಸದಾಗಿ ಹಾಕಿ ಪ್ರಜೆಗಳಿಂದ ವಸೂಲ್ಮಾಡಬೇಕೆಂದು ಯೋಚಿಸಿರುತ್ತಾರೆ. ಈ ಕಂದಾಯವನ್ನು ಸಮಸ್ತ ಪ್ರಜೆಗಳೂ ಕೊಡಬೇಕಾಗುವುದಿಲ್ಲ. ತಿಂಗಳಿಗೆ 100 ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ವರಮಾನವುಳ್ಳವರು ಮಾತ್ರ ಈ ತೆರಿಗೆಯನ್ನು ಕೊಡಬೇಕಾದೀತು. ಅಂಥವರಿಗೆಲ್ಲಾ ಈ ತೆರಿಗೆ ಅಷ್ಟೇನೂ ಭಾರವಾಗಿರಲಾರದು. 100 ರೂಪಾಯಿ ವರಮಾನವಿರತಕ್ಕವರು ವರುಷಕ್ಕೆ ೨ ರೂಪಾಯಿ ಮಾತ್ರ ಕೊಡಬೇಕಾಗುವುದು. ನಗರದಲ್ಲಿ ಬಡಪ್ರಜೆಗಳಿಗೆ ತೆರಿಗೆಗಳು ಕಡಮೆಯಾಗಬೇಕಾದದ್ದೂ, ಪುಣ್ಯವಂತರು ಅಲ್ಪಸ್ವಲ್ಪ ತೆರಿಗೆಗಳನ್ನು ಕೊಡಬೇಕಾದದ್ದೂ ನ್ಯಾಯವೂ ಧರ್ಮವೂ ಆಗಿದೆ. ಇದನ್ನು ಸಕಲರೂ ಒಪ್ಪಿಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ.

ಹೊಗೇಸೊಪ್ಪು ನಸ್ಯ ಮುಂತಾದದ್ದನ್ನು ವಿಕರ ಮಾಡುವ ಅಂಗಡಿಕಾರರೂ, ಗಾಣಗಳನ್ನಿಡುವವರೂ ಲೈಸೆನ್ ಪಡೆದು ಆ ಕಸಬನ್ನು ನಡಿಸಬೇಕಾಗುತ್ತದೆ. ಇದರಿಂದಲೂ ಮ್ಯುನಿಸಿಪಾಲಿಟಿಗೆ ಸ್ವಲ್ಪ ಹಣ ಹುಟ್ಟುವಳಿ ಆಗುವುದು. ಹೊಗೇಸೊಪ್ಪು ಜೀವನಕ್ಕೆ ಅಗತ್ಯವಾದ ಪದಾರ್ಥವೇನೂ ಅಲ್ಲ; ಅದು ಭೋಗ್ಯವಸ್ತುವಾಗಿದೆ. ಅದನ್ನು ಉಪಯೋಗಿಸತಕ್ಕವರು ಅದರ ಮೇಲೆ ಹಾಕುವ ತೆರಿಗೆ ಸ್ವಲ್ಪ ಹೆಚ್ಚಾದರೂ ಲಕ್ಷ್ಯಮಾಡದೆ ಕೊಂಡುಕೊಳ್ಳುವರು.

ಮೈಸೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿರುವ ಕೋಟೆ ಜಮೀನುಗಳ ಕಂದಾಯಗಳನ್ನು ಈಗ ಸರ್ಕಾರದವರು ವಸೂಲ್ಮಾಡಿಕೊಳ್ಳುತ್ತಾರೆ. ಇದು ನ್ಯಾಯವಲ್ಲವೆಂದೂ, ಈ ಕಂದಾಯಗಳೆಲ್ಲಾ ಮ್ಯುನಿಸಿಪಾಲಟಿಗೆ ಜಮಾ ಆಗುವಂತೆ ಮಾಡಿಕೊಡಬೇಕೆಂದೂ ಕೌನ್ಸಲರುಗಳು ಗವರ್ನ್‌ಮೆಂಟಿಗೆ ಬರೆದುಕೊಂಡಿರುವರು. ಇದು ನ್ಯಾಯವಾದ ಪ್ರಾರ್ಥನೆ. ಒಂದು ನಗರದಲ್ಲಿ ಇಬ್ಬರು ಯಜಮಾನಿಕೆ ಮಾಡುವುದು ತರವಲ್ಲ.

ಮೇಲ್ಕಂಡ ರೀತಿಯಲ್ಲಿ ತೆರಿಗೆಯ ಶಿಸ್ತು ಬದಲಾವಣೆಯಾಗೋಣದರಿಂದ ಬಹಳ ಪ್ರಯೋಜನವಾಗುವುದೆಂದು ನಮಗೆ ನಂಬಿಕೆಯುಂಟು. ಈಗ ಒಡಬಗ್ಗರಿಗೆ ಹೊರೆಯಾಗಿರುವ ಹಲವು ತೆರಿಗೆ ಸುಂಕಗಳು ನಿವಾರಣೆಯಾಗುವವು: ಸಣ್ಣ ನೌಕರರು ಮೋಸಪಡಿಸಿ ಕಿರಿಯ ಜನರಿಂದ ಹಣ ಕಸುಕೊಳ್ಳುವುದು ತಪ್ಪುತ್ತದೆ. ಅನುಕೂಲಸ್ಥರಾದ ಪ್ರಜೆಗಳೇನೋ ಇನ್ನೂ ಸ್ವಲ್ಪ ಹೆಚ್ಚು ತೆರಿಗೆಗಳನ್ನು ಕೊಡಬೇಕಾಗುವುದು. ಆದರೆ ಇದು ನ್ಯಾಯವಾದ ಏರ್ಪಾಡು; ಅವರು ಕೊಡಬಲ್ಲರು. ಈಗ ಮ್ಯುನಿಸಿಪಲ್ ಕೌನ್ಸಲರುಗಳು ಮಾಡಿರುವ ಏರ್ಪಾಡುಗಳನ್ನು ಮೈಸೂರಿನ ಪ್ರಜೆಗಳು ಸಂಪೂರ್ಣವಾಗಿ ಒಪ್ಪಿಕೊಳ್ಳುವರೆಂದು ನಂಬಿ ಹಾರೈಸುತ್ತೇವೆ. ಸಕಲ ಪ್ರಜೆಗಳನ್ನೂ ತೃಪ್ತಿಪಡಿಸುವುದು ಸಾಧ್ಯವಲ್ಲ. ಆದರೂ ಈಗ ಸೂಚಿಸಲ್ಪಟ್ಟಿರುವ ಹೊಸ ಏರ್ಪಾಡಿನಿಂದ ಸಾಮಾನ್ಯವಾಗಿ ನಮ್ಮ ನಗರಕ್ಕೆ ಕ್ಷೇಮವೂ ಅನುಕೂಲವೂ ಆಗುವುದೆಂದು ಹೇಳಬಹುದು. ನಮ್ಮ ಸರ್ಕಾರದವರು ಈ ಹೊಸ ಏರ್ಪಾಡನ್ನು ಸಂಪೂರ್ಣವಾಗಿಯೂ ಜಾಗ್ರತೆಯಿಂದಲೂ ಸ್ಯಾಂಕ್ಷನ್ ಮಾಡಿಕೊಡುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ. ಜಾಗ್ರತೆಯಾಗಿ ಸ್ಯಾಂಕ್ಷನ್ ಮಾಡಿದ ಪಕ್ಷದಲ್ಲಿ ಮ್ಯುನಿಸಿಪಾಲಿಟಿಯವರು ಮುಂದಿನ ಜೂಲೈ ಆರಾಭ್ಯ ಇದರಂತೆ ಜಾರಿಗೆ ತರಲು ಬಹಳ ಸಹಾಯವಾಗುತ್ತದೆ.

ಅಮರತ್ವ.

ಸತ್ಯ, ನೀತಿ, ಪವಿತ್ರತ್ವ ಈ ಗುಣಗಳು ಸಾಕ್ಷಾತ್ ಸೃಷ್ಟಿಕರ್ತನಾದ ದೇವರ ಲಕ್ಷಣಗಳಾಗಿವೆ. ದೇವರು ನಿತ್ಯನು; ನಿರ್ಲಯನು. ಹಾಗೆಯೇ ಆತನನ್ನು ಹೊಂದಿ ಆತನಲ್ಲಿರುವ ಲಕ್ಷಣಗಳು ನಿತ್ಯವಾಗಿಯೂ ಇರುತ್ತವೆ. ಮನುಷ್ಯರಾದ ನಾವು ದೇವರಲ್ಲಿರುವ ಈ ಲಕ್ಷಣಗಳನ್ನು ತಿಳಿದು ನಮ್ಮಲ್ಲಿ ಈ ವಿಧವಾದ ಲಕ್ಷಣಗಳು ಏನಾದರು ಇವೆಯೋ ಎಂದು ಪ್ರಶ್ನೆಮಾಡುವದು ಸಹಜವಾಗಿದೆ. ಇಂತಹ ಗುಣಗಳು ತೀರ ನಿಶ್ಶೇಷವಾಗಿ ಇಲ್ಲದ ಮನುಷ್ಯನು ಯಾರೂ ಇಲ್ಲ. ಈ ಗುಣಗಳಲ್ಲಿ ಕೇವಲ ಕಡಿಮೆಯಾಗಿರುವವರು ಸಹ ಅಂತಹ ಗುಣಗಳು ಬೇರೆ ಯಾರಲ್ಲಾದರೂ ಪ್ರಕಟವಾದದ್ದನ್ನು ನೋಡಿ ಮೆಚ್ಚುವರು. ಮತ್ತು ಅವು ತಮಗೂ ಇದ್ದರೆ ಲೇಸಾಗಿರುವದೆಂದು ನಿಜವಾಗಿ ಅಪೇಕ್ಷೆಪಡುವರು. ಮನುಷ್ಯನನ್ನು ಬಿಟ್ಟು ಬಾಕಿ ಮೃಗಗಳೇ ಆದಿಯಾಗಿ ಎಲ್ಲಾ ಜೀವಜಂತುಗಳೂ ಈ ಗುಣಗಳನ್ನು ತಿಳಿಯಲಾರವು; ಯಾರಲ್ಲಾದರೂ ಅಂತಹ ಗುಣಗಳಿರುವದನ್ನು ನೋಡಿ ಮೆಚ್ಚಲಾರವು. ತಮಗೆ ಅಂತಹ ಗುಣಗಳಿಲ್ಲವಲ್ಲಾ ಎಂದು ಅವು ಇಲ್ಲದ್ದಕ್ಕಾಗಿ ಕೊರತೆಪಟ್ಟದ್ದೂ ಇಲ್ಲ. ಮೃಗಗಳಿಗೂ ಮನುಷ್ಯರಿಗೂ ಇದೊಂದು ಬಹು ದೊಡ್ಡ ಭೇದ.

ಮನುಷ್ಯನಲ್ಲಿ ಇಂತಹ ಧರ್ಮಾಧರ್ಮ, ನೀತಿದುರ್ನೀತಿ, ಪಾಪಪುಣ್ಯಗಳ ಭೇದವನ್ನು ತಿಳಿಯುವದೂ ಅಧರ್ಮ ಅನೀತಿ, ಪಾಪಗಳನ್ನು ತೊರೆದು ಧರ್ಮ ನೀತಿ, ಪುಣ್ಯಗಳನ್ನು ಮೆಚ್ಚಿ ಅವುಗಳನ್ನು ಆಚರಿಸಬೇಕೆಂಬ ಅಭಿಲಾಷೆ ಅವನಲ್ಲಿ ಹುಟ್ಟುವದೂ ದೈವಸಂಬಂಧವಾದ ಸ್ವಭಾವವಾಗಿದೆ. ಇವನು ಈ ಸದ್ಗುಣಗಳನ್ನು ಎಡೆಬಿಡದ ಅಭ್ಯಾಸಮಾಡಿ ಅವುಗಳನ್ನೇ ಅನುಷ್ಠಾನಕ್ಕೆ ತರುತ್ತಿದ್ದರೆ ಅವನು ಇನ್ನೂ ಉತ್ತಮೋತ್ತಮನಾಗುವನು. ಯಾಕೆಂದರೆ ಈ ಗುಣಗಳು ಹೆಚ್ಚಿದಷ್ಟೂ ಅವನು ದೇವರ ಸ್ವಭಾವದಲ್ಲಿ ಬೆಳೆದು ಅಭಿವೃದ್ಧಿಯಾಗಿ ಕಡೆಕಡೆಗೆ ಅವನು ನಿತ್ಯನೂ ನಿರ್ಲಯನೂ ಮೃತ್ಯುಂಜಯನೂ ಆಗುವನು.

ಮನುಷ್ಯನು ಪಾರಮಾರ್ಥಿಕ ವಿಷಯಗಳಲ್ಲಿ ಹೀಗೆ ಅಭಿವೃದ್ಧಿಯಾಗುತ್ತಾ ಬರುವದಕ್ಕೆ ಒಂದು ದೊಡ್ಡ ವಿಘ್ನವು ಪ್ರಾಪ್ತಿಸಿತು. ಅದೇನಂದರೆ ಮನುಷ್ಯನು ಪಾಪಾತ್ಮನಾಗಿ ಮೇಲೆ ವಿವರಿಸಿರುವ ದೇವರ ಸದ್ಗುಣಗಳಿಗೆ ಬದಲಾಗಿ ಪಾಪವನ್ನು ಮೆಚ್ಚಿ ಅದೇ ತನ್ನಗಿರಲೆಂದು ಅದನ್ನು ಆದರದಿಂದ ಆಚರಿಸುವವನಾದನು. ಪಂಚೇಂದ್ರಿಯಗಳ ಅಭಿಲಾಷೆಗಳನ್ನು ತೃಪ್ತಿಗೊಳಿಸಿಕೊಳ್ಳುವದು ದೇವರ ಚಿತ್ತವೇನೆಂದು ತಿಳಿದು ಅದನ್ನು ಮಾಡುವದಕ್ಕಿಂತಲೂ ಅವನಿಗೆ ಪ್ರಯೋಜನಕರವಾಗಿ ಕಾಣಿಸಿತು. ಅಂತರಿಕ್ಷದಲ್ಲಿ ಹಾರುವ ಪಕ್ಷಿಯ ರೆಕ್ಕೆಗಳನ್ನು ಕತ್ತರಿಸಿ ಅದರ ಕಾಲಿಗೆ ದೊಡ್ಡದೊಂದು ಕಲ್ಲನ್ನು ಕಟ್ಟಿದರೆ ಹೇಗೋ ಹಾಗೆಯೇ ದೇವರ ಚಿತ್ತವನ್ನನುಸರಿಸಿ ನಡೆಯುವೆನೆಂದು ಅಪೇಕ್ಷಿಸುವ ಮನುಷ್ಯನಿಗೆ ಪಾಪವು ಆಟಂಕವನ್ನುಂಟುಮಾಡಿತು. ಮನುಷ್ಯನು ಸನ್ಮಾರ್ಗವನ್ನವಲಂಬಿಸದೆ ಪಾರಮಾರ್ಥಿಕದಲ್ಲಿ ಅಭಿರುಚಿಯನ್ನು ಹೋಗಲಾಡಿಸಿಕೊಂಡು ಪ್ರಪಂಚಕ್ಕೂ ಪಂಚೇಂದ್ರಿಯದ ಅಭಿಲಾಷೆಗಳಿಗೂ ಪಾಪಕ್ಕೂ ಸಿಕ್ಕಿಬಿದ್ದು ಬಲೆಯಲ್ಲಿ ಒದ್ದಾಡುವ ಪಕ್ಷಿಯಂತೆ ವ್ಯಥೆಪಡುತ್ತಿದ್ದಾನೆ. ದೇವರ ಜ್ಞಾನವೂ ಆತನು ಮನುಷ್ಯನಲ್ಲಿ ಅಂಕುರಗಳಾಗಿ—ಅಂದರೆ ಬೆಳೆಯುವ ಮೊಳಕೆಯಂತೆ ನಿಟ್ಟ, ನೀತಿ, ಸತ್ಯ, ಪವಿತ್ರತ್ವ, ಸ್ವಾರ್ಥತ್ಯಾಗ, ಪರೋಪಕಾರಗಳೂ ಮಬ್ಬಾಗಿ ಕಳೆಗುಂದಿಹೋದವು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳು ಇವನನ್ನು ಅಡ್ಡಿ ಸದ್ದೆ ಇಲ್ಲದೆ ಆಕ್ರಮಿಸಿಕೊಂಡು ಆಳಲಾರಂಭಿಸಿದವು. ಈ ವಾಗ್ಯದ ಅಂತ್ಯವು ಮರಣ. ಇದರ ವಿಷಯ ಹೇಳುವದನ್ನು ವಾಚಕರು ಲಕ್ಷ್ಯವಿಟ್ಟು ಧ್ಯಾನಿಸಬೇಕು. ಅದೇನಂದರೆ—ಶರೀರಾಧೀನ ಸ್ವಭಾವದ ಗುರಿಯೇ ಮರಣ. ಪವಿತ್ರಾತ್ಮನ ಅಂದರೆ ದೇವರ ಪರಿಶುದ್ಧಾತ್ಮನ ಗುರಿಯೋ ಜೀವವೂ ಮನಶ್ಶಾಂತಿಯೂ ಆಗಿದೆ. ಯಾಕೆಂದರೆ ಶಾರೀರಕ ವಿಷಯಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು. ಅಂಥಾ ಮನಸ್ಸು ದೇವರ ಧರ್ಮಪ್ರಮಾಣಕ್ಕೆ ಒಳಪಡುವದಿಲ್ಲ. ಒಳಪಡುವದಕ್ಕಾಗುವದೂ ಇಲ್ಲ. ಶರೀರಾಧೀನ ಸ್ವಭಾವವುಳ್ಳವರು ದೇವರನ್ನು ಮೆಚ್ಚಿಸಲಾರರು, ಎಂಬುವದೇ.

ಹೀಗಿದ್ದರೂ ದೇವರು ಮನುಷ್ಯನಲ್ಲಿ ಇಟ್ಟಿರುವ ಪಾರಮಾರ್ಥಿಕ ಸ್ವಭಾವವು ಸಂಪೂರ್ಣವಾಗಿ ಸತ್ತುಹೋಗಿಲ್ಲ. ಅದಕ್ಕೆ ರೋಗವೂ, ಸೋಲೂ ಪ್ರಾಪ್ತವಾಗಿ ಮರಣದ ಸ್ಥಿತಿಯು ಸಮೀಪಿಸುತ್ತಾ ಬಂದಿದ್ದರೂ ಅದು ನಿಶ್ಶೇಷವಾಗಿ ಹೋಗಲಿಲ್ಲ. ಪ್ರಾಪಂಚಿಕಕ್ಕೂ ಪಾರಮಾರ್ಥಿಕಕ್ಕೂ ವಿರೋಧವೂ ಹೋರಾಟವೂ ಸಂಭವಿಸಿರುತ್ತವೆ.

ಮನುಷ್ಯನಿಗೆ ಈ ಸ್ಥಿತಿಯು ಪ್ರಾಪ್ತಿಸಿರುವಲ್ಲಿ ದೇವರು ಅವನನ್ನು ಕರುಣಿಸಿ ಅವನ ಪಕ್ಷದಲ್ಲಿ ನಿಂತು ಸಹಾಯಮಾಡಿದನೋ? ಹಾಗೆ ಮಾಡುವದು ಸಹಜವಾಗಿದೆ. ಯಾಕೆಂದರೆ ಈ ಯುದ್ಧದಲ್ಲಿ ಮನುಷ್ಯನನ್ನು ಒಂಟಿಗನಾಗಿ ಬಿಟ್ಟುಬಿಟ್ಟರೆ ಕಡೆಗೆ ಪಾಪವು ಶರೀರಾಧೀನ ಸ್ವಭಾವದ ಮೂಲಕ ಮನುಷ್ಯನ ಒಳಹೊಕ್ಕು ತನಗೆ ಕಟ್ಟಕಡೆಯಲ್ಲಿ ಸಂಪೂರ್ಣವಾದ ಜಯವೂ ಮನುಷ್ಯನಿಗೆ ಆ ಮೂಲಕ ನಿತ್ಯನಾಶವೂ ಪ್ರಾಪ್ತವಾದೀತು.

ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ಇದೇ ದೇವರು ಮನುಷ್ಯನಿಗೆ ಮಾಡಿದ ಸಹಾಯ. ಯೇಸು ಕ್ರಿಸ್ತನು ದೇವರು. ಆತನು ಮನುಷ್ಯರ ಮೇಲಣ ಪ್ರೀತಿಯಿಂದ ಮನುಷ್ಯನಾದನು. ಪಾಪವೂ ಅಧರ್ಮವೂ ಆತನು ಮನುಷ್ಯರ ಪಕ್ಷವನ್ನು ವಹಿಸಿ ಬಂದದ್ದನ್ನು ನೋಡಿ ತನ್ನ ಸಕಲ ಸಾಹಿತ್ಯಗಳಿಂದ ಆತನನ್ನು ಮುತ್ತಿತು. ಸಾಮ, ಧಾನ, ಭೇದ, ದಂಡೋಪಾಯಗಳಲ್ಲಿ ಒಂದನ್ನೂ ಬಿಡಲಿಲ್ಲ. ಈ ವ್ಯೂಹದಲ್ಲಿ ಕ್ರಿಸ್ತನು—ನಾನು ಮನುಷ್ಯರಿಗೆ ಹೇಗೆ ಸಹಾಯವನ್ನು ಮಾಡಿದರಾದೀತು ಎಂದು ಆಲೋಚಿಸುತ್ತಿರುವಾಗ ಅಧರ್ಮಸ್ವರೂಪನಾದ ಪಿಶಾಚನು ಆತನನ್ನು ಇದಿಗೊರಿಂದು ಮಿತ್ರನಂತೆ ನಟಿಸಿ ದೇವರ ಆಜ್ಞೆಗಳನ್ನು ಭಂಗಪಡಿಸಿ, ಶರೀರಾಧೀನ ಸ್ವಭಾವಕ್ಕೆ ಅಥವಾ ಪ್ರಾಪಂಚಿಕ ವಿಷಯಗಳಿಗೆ ಅಧೀನನಾಗುವಂತೆ ಆತನನ್ನು ಪ್ರೇರಿಸಿದನು. ಕ್ರಿಸ್ತನಾದರೋ ಅವನ ಕುಯುಕ್ತಿಗಳನ್ನೆಲ್ಲಾ ತಿಳಿದು ಖಂಡಿಸಿ ಕಡೇ ವರೆಗೂ ಪಾಪಕ್ಕಾದರೂ ಅಧರ್ಮಸ್ವರೂಪನಾದ ಪಿಶಾಚನಿಗಾದರೂ ಎಡಕೊಡಲಿಲ್ಲ. ಪಾಪವು ಆತನಲ್ಲಿ ಆಸ್ಪದವನ್ನು ಹುಡುಕಿ ದೊರಕಿಸಿಕೊಳ್ಳಲಿಲ್ಲ. ಮತ್ತು ಈ ಯುದ್ಧವು ಕಡೇ ವರೆಗೂ ಆಗಿ ಕಡೆಗೆ ಕೊನೆಮುಟ್ಟಿತು. ಅಧರ್ಮಸ್ವರೂಪನ ಯುಕ್ತಿಗಳೆಲ್ಲಾ ಪ್ರಯೋಜನಕ್ಕೆ ಬರಲಿಲ್ಲ. ಯೇಸು ನಮ್ಮ ಹಾಗೆ ಸಕಲ ಶೋಧನೆಗಳಿಗೆ ಗುರಿಯಾದರೂ ಪಾಪವನ್ನು ಮಾತ್ರ ಮಾಡಲೇ ಇಲ್ಲ. ಅದಕ್ಕೆ ಬದಲಾಗಿ ದೇವರ ಸಕಲ ಸದ್ಗುಣಗಳೂ ಆತನಲ್ಲಿ ಪರಿಪಾಕವನ್ನು ಹೊಂದಿದವು.

ಹೀಗೆ ಆತನು ಮೃತಪಡಬೇಕಾಗಿ ಬಂದರೂ ಪಾಪಕ್ಕೂ ಆತನಿಗೂ ಲವಲೇಶವಾದರೂ ಸಂಬಂಧವಾಗಲಿಲ್ಲ. ಆದ್ದರಿಂದ ದೇವರು ಸತ್ತುಹೋಗಿದ್ದ ಆತನನ್ನು ಜೀವಿತನಾಗಿ ಬದುಕಿಸಿದನು. ಪಾಪವನ್ನು ಜೈಸುವದರಲ್ಲಿ ಇಂಥಾ ಹೋರಾಟವನ್ನು ಮಾಡಿ ಕಡೇ ವರೆಗೂ ಅದನ್ನು ಸೋಲಿಸಿ, ನೀತಿ, ಸತ್ಯ, ಪವಿತ್ರತ್ವ, ಪರೋಪಕಾರಗಳನ್ನು ದಿಗ್ವಿಜಯಕ್ಕೆ ತಂದವನಿಗೆ ಮರಣವು ಇಲ್ಲ. ಆತನು ಮೃತ್ಯುಂಜಯನು. ಈಗ ಯೇಸುವನ್ನು ಯಾರು ಮರೆಹೊಕ್ಕು ಆತನ ಶಿಷ್ಯರಾಗುತ್ತಾರೋ ಅವರಿಗೆ ಪಾಪವನ್ನು ವಿರೋಧಿಸಿ ಗೆದ್ದು, ನೀತಿ, ಸತ್ಯ, ಪವಿತ್ರತ್ವಗಳನ್ನು ದಿಗ್ವಿಜಯಕ್ಕೆ ತರುವದರಿಂದ ಮೃತ್ಯುಂಜಯನಾದವನ ಆತ್ಮವು ಕೊಡಲ್ಪಡುವದು. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ. ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ನಿಮಿತ್ತ ಸತ್ತದ್ದಾಗಿದ್ದರೂ ಆತ್ಮವು ನೀತಿಯ ನಿಮಿತ್ತ ಜೀವಸ್ವರೂಪವಾಗಿದೆ. ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮ ಮರ್ತ್ಯದೇಹಗಳನ್ನು ಸಹ ನಿಮ್ಮಲ್ಲಿ ವಾಸವಾಗಿರುವ ಆತನ ಆತ್ಮನ ಮೂಲಕ ಬದುಕಿಸುವನು.

ಯುದ್ಧದ ಸಮಾಚಾರಗಳು.

ಜರ್ಮನಿಯ ಸಬ್‌ಮರೀನುಗಳು.

ಕಳೆದ ವಾರ ಯುದ್ಧದ ಸಮಾಚಾರಗಳು ಬಹಳವಾಗಿ ಬಂದಿವೆ; ಆದರೆ ಖಚಿತವೆಂದು ನಿರ್ಧರವಾಗುವ ಕದನ ವೃತ್ತಾಂತವೇನೂ ತಿಳಿಸಿಲ್ಲ. ಆದಾಗ್ಯೂ ಈಗಿನ ಸ್ಥಿತಿಗತಿಯನ್ನು ನೋಡಿದ ಪಕ್ಷದಲ್ಲಿ ನಮ್ಮ ಪಕ್ಷದವರಿಗೇನೇ ಅನುಕೂಲವಾಗಿದೆ ಎಂದು ಗೊತ್ತಾಗುತ್ತದೆ.

ಪಶ್ಚಿಮ ರಣರಂಗದಲ್ಲಿ.

ಫ್ರಾನ್ಸಿನಲ್ಲೂ ಬೆಲ್ಜಿಯಮ್‌ನಲ್ಲೂ ಕದನಗಳೇನೂ ವಿಶೇಷವಾಗಿ ನಡೆದಿಲ್ಲ. ಆದರೂ ಬೆಲ್ಜಿಯಮ್‌ನಲ್ಲಿ ಒಂದು ದೊಡ್ಡ ಯುದ್ಧ ನಡೆಯುತ್ತಾ ಇದೆ ಎಂಬ ಸುದ್ದಿಯುಂಟು. ಆ ಪ್ರಾಂತ್ಯದಲ್ಲಿ ನಮ್ಮ ಪಕ್ಷದವರು ಜರ್ಮನಿ ಸೈನ್ಯಗಳ ಸಾಲುಗಳನ್ನು ಭೇದಿಸಿ ನುಗ್ಗಿಹೋದರೆಂಬ ವಾರ್ತೆ ಸರ್ಕಾರಿಯಾಗಿ ತಿಳಿದು ಬಂದಿಲ್ಲ.

ಫ್ರೆಂಚರು ಜರ್ಮನಿಯವರನ್ನು ಅವರ ಕಂದಕಗಳಿಂದ ಹೊರಡಿಸಿ ಓಡಿಸಿದರು. ಒಂದು ಸ್ಥಳದಲ್ಲಿ 100 ಮಂದಿ ಜರ್ಮನಿಯವರನ್ನೂ, ಇನ್ನೊಂದು ಜಾಗದಲ್ಲಿ 3 ಮಂದಿ ಹುದ್ದೇದಾರರನ್ನೂ 140 ಸೈನಿಕರನ್ನೂ ಫ್ರೆಂಚರು ಕೈಸೆರೆ ಹಿಡಿದುಕೊಂಡರೆಂದು ತಿಳಿಯುತ್ತದೆ. ಕೆಲವು ಸ್ಥಳಗಳಲ್ಲಿ ಹಿಮದ ಮಳೆ ಸುರಿಯುತ್ತಿದ್ದ ಕಾರಣ ಯುದ್ಧಕಾರ್ಯಗಳು ವಿಶೇಷವಾಗಿ ನಡೆಯದಂತೆ ಅಡಚಣೆಯುಂಟಾಯಿತು. ಈ ಯುದ್ಧಭೂಮಿಯು ಒಂದು 20 ದಿನಗಳ ತನಕ ಕದನವಾಯಿತು. ಆ ಭಾಗದ ಕಂದಕಗಳಲ್ಲಿ ಜರ್ಮನಿಯವರ ಹೆಣಗಳೇ 11,000 ಸಿಕ್ಕಿರುತ್ತವೆ.

ನಮ್ಮ ಪಕ್ಷದವರ ವಿಮಾನ ಯಂತ್ರಗಳು ಬಹಳ ಚಟುವಟಿಕೆಯಿಂದ ಕಾರ್ಯಗಳನ್ನು ನಡಿಸಿ ಜರ್ಮನಿಯಲ್ಲೂ ಬೆಲ್ಜಿಯಮ್‌ನಲ್ಲೂ ಹಲವು ಸ್ಥಳಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿಬಂದವು. ಬೆಲ್ಜಿಯಮ್‌ನಲ್ಲಿ ಜರ್ಮನಿಯವರು ಎರಡು ಕಡೆ ಸಬ್‌ಮರೀನುಗಳನ್ನು ಕಟ್ಟಿ ತಯಾರ್ಮಾಡುತ್ತಿದ್ದರು. ಬ್ರಿಟಿಷರು ಅವರ ಮೂರು ಸಬ್‌ಮರೀನುಗಳನ್ನು ನಾಶಪಡಿಸಿ ಬಂದರು. ಇನ್ನೊಂದು ದಿನ ಫ್ರೆಂಚರು ಹೋಗಿ ಜರ್ಮನಿಯವರ ಮೂರು ವಿಮಾನ ಯಂತ್ರಗಳನ್ನು ಹಾಳುಮಾಡಿಬಿಟ್ಟರು.

ಯುದ್ಧ ಪ್ರಾರಂಭವಾದಂದಿನಿಂದ ನಡೆದಿರುವ ವಿದ್ಯಮಾನಗಳನ್ನು ಫ್ರೆಂಚರು ಕ್ರೋಡೀಕರಿಸಿ ಪ್ರಕಟಮಾಡಿರುತ್ತಾರೆ. ಅವರು ಹೇಳುವ ಪ್ರಕಾರ ನಮ್ಮ ಪಕ್ಷದಲ್ಲಿ ಆಗಿರುವ ನಷ್ಟಕ್ಕಿಂತಲೂ ಜರ್ಮನಿಯವರ ಕಡೆ ಎರಡರಷ್ಟು ನಷ್ಟವಾಗಿರುವಂತೆ ಗೊತ್ತಾಗಿದೆ. ಜರ್ಮನಿಯವರು ತಮ್ಮ ರಾಜ್ಯಗಳನ್ನು ಕಾಪಾಡಿಕೊಳ್ಳುವುದಕ್ಕೇನೇ ಸಾಕಷ್ಟು ಹೊಸ ಸೈನ್ಯಗಳನ್ನು ತರಲು ಅವರಲ್ಲಿ ಜನರೇ ಇಲ್ಲವೆಂದು ಹೇಳಲಾಗಿದೆ. ಇದನ್ನು ನೋಡಿದರೆ ಇನ್ನು ಮುಂದೆ ಜರ್ಮನಿಯವರು ಮುಂದರಿಸಿ ಬಂದು ನಮ್ಮ ಪಕ್ಷದವರ ಮೇಲೆ ಬಂದು ಕದನಮಾಡುವುದು ತಪ್ಪಿದಂತೆ ಕಾಣುತ್ತದೆ. ಈಗಿಗೆ ಅವರ ಸೈನಿಕರು ಮೊದಲಿನಷ್ಟು ಮದ್ದುಗುಂಡನ್ನು ಉಪಯೋಗಿಸದೆ ಇರುತ್ತಾರೆ. ಫ್ರೆಂಚರು ಈಚೀಚೆಗೆ ತಮ್ಮ ಸ್ಥಾನಗಳನ್ನು ಚೆನ್ನಾಗಿ ಬಲಪಡಿಸಿಕೊಂಡಿದ್ದಾರೆ. ಯುದ್ಧ ಪ್ರಾರಂಭದಲ್ಲಿ ಅವರು ತಯಾ

...ಕೊಳ್ಳುತ್ತಿದ್ದ ಮದ್ದು ಗುಂಡಿಗಿಂತ ಅವರು ಈಗ ಆರರಷ್ಟು ಹೆಚ್ಚಾಗಿ ...ಕೊಳ್ಳುತ್ತಿರುವರು; ಇಷ್ಟೇ ಅಲ್ಲ. ಅವರಲ್ಲಿ ಮೊದಲಿಗಿಂತ ಈಗ ಆರ... ಹೆಚ್ಚು ಫಿರಂಗಿಗಳಿರುತ್ತವೆ. ಫ್ರೆಂಚರು ಈಗ ಒದಗಿಸಿಕೊಂಡಿರುವ ...ಸಂಪತ್ತುಗಳಿಂದ ತಮ್ಮ ಕಡೆ ವಿಶೇಷ ನಷ್ಟಪಡಿಸಿಕೊಳ್ಳದೆ ಜರ್ಮನಿಯು ...ಕಂದಕಗಳನ್ನು ಆಕ್ರಮಿಸಿಕೊಳ್ಳಬಲ್ಲರು. ಫ್ರೆಂಚರ ಫಿರಂಗಿಗಳು ಜರ್ಮ... ಫಿರಂಗಿಗಳಿಗೆ ಗುಂಡುಹಾಕಿ ಅವುಗಳ ಬಾಯಿಕಟ್ಟಿಬಿಡುತ್ತವೆ. ಬಳಿಕ ...ಗುಂಡುಗಳು ಜರ್ಮನಿ ಕಂದಕಗಳಲ್ಲಿ ಬಿದ್ದು ಒಡೆದು ಕಂದಕಗಳನ್ನು ...ಡುವವು. ಅವು ಅಷ್ಟಕ್ಕೇ ಸುಮ್ಮನಾಗುವುದಿಲ್ಲ. ಫ್ರೆಂಚ್ ಫಿರಂಗಿ... ಜರ್ಮನಿಯು ಹೊಸ ಸೈನಿಕರು ಬಂದು ಕಂದಕಗಳಲ್ಲಿ ರಕ್ಷಣೆಗೆ ನಿಂ... ನಿಲ್ಲದಂತೆ ಗುಂಡುಗಳನ್ನು ಸುರಿಸಿ ತಡೆಯನ್ನು ಕಲ್ಪಿಸುತ್ತವೆ. ಮತ್ತು ...ರು ಕಂದಕಗಳನ್ನು ತಾವೇ ಹಿಡಿದುಕೊಂಡು ತಮ್ಮ ಸ್ಥಾನಗಳನ್ನು ಅವಿವಾದಿತ... ಸನ್ನಾಹ ಮಾಡಿಕೊಳ್ಳುವ ತನಕ ಫ್ರೆಂಚರ ಫಿರಂಗಿಗಳು ಶತ್ರುವಿನ ...ಗುಂಡಿನ ಮಳೆ ಸುರಿಸುತ್ತಾ ಬರುವವು. ಈಚೆಗೆ ನಡೆದ ಕದನಗಳಿಂದ ...ವಿಷಯಗಳು ಚೆನ್ನಾಗಿ ದೃಷ್ಟಾಂತಕ್ಕೆ ಬಂದಿವೆ. ಮೊದಲನೆಯದಾಗಿ ...ತ್ರುವು ಅಪೇಕ್ಷಿಸಿದಾಗ ಜರ್ಮನಿ ಸೈನಿಕರ ಸಾಲುಗಳನ್ನು ನುಗ್ಗ... ಬಲ್ಲರು. ಎರಡನೆಯದಾಗಿ ಜರ್ಮನಿಯವರು ಹೊಸ ಸೈನ್ಯಗಳನ್ನು ...ದು ಒದಗಿಸಲಾರದೆ ಇರೋಣದರಿಂದ ಅವರ ಸಾಲಿನಲ್ಲಿ ಒಂದು ಕಡೆ ರಂಧ್ರ ...ದರೆ ಸಾಲಿಗೆಸಾಲೇ ಕೆಟ್ಟು ಹಲಾಕಾಗುವುದು.

ಫ್ರೆಂಚ್ ಸೈನ್ಯಾಧಿಪತಿಯಾದ ಜನರಲ್ ಜೊಫ್ರೆಯವರು ಫ್ರೆಂಚ್ ಸೈನ್ಯಗ...ನ್ನು ಈಚೆಗೆ ಅಜಮಾಯಿಷಿ ಮಾಡಿದರು. ಆ ಸೈನಿಕರು ತಿಂಗಳುಗಟ್ಟಲೆಯಾಗಿ ...ಗಳಲ್ಲಿ ಇದ್ದವರಾದಾಗ್ಯೂ ತುಂಬಾ ಪರಾಕ್ರಮಶಾಲಿಗಳಾಗಿ ಕಾಣಿಸಿ...ದರು. ಫ್ರೆಂಚ್ ಸೈನಿಕರು ತಮ್ಮ ದಳಪತಿಯಲ್ಲಿ ವಿಶೇಷವಾದ ಪ್ರೀತಿ...ನ್ನೂ ಭರವಸೆಯನ್ನೂ ಪಡೆದಿರುತ್ತಾರೆ. ಈ ದಳಪತಿಯು ಸರ್ವಸಾಧಾರಣ ...ಮನುಷ್ಯನಂತೆ ತುಂಬಾ ಗಂಭೀರಸ್ಥನಾಗಿದ್ದರೂ ಆತನನ್ನು ಪ್ರಖ್ಯಾತನಾದ ...ಪೋಲಿಯನ್‌ನಂತೆ ಭಾವಿಸಿರುತ್ತಾರೆ.

ಪೂರ್ವ ರಣರಂಗದಲ್ಲಿ.

ದೀರ್ಘವಾದ ಯುದ್ಧಸಾಲಿನ ಉತ್ತರ ಭಾಗದಲ್ಲಿ ಬಹು ಕಠಿಣವಾದ ...ದನಗಳು ನಡೆಯುತ್ತಿರುವವು. ಆದರೆ ಬಂದಿರುವ ವರ್ತಮಾನಗಳು ಸ್ಪಷ್ಟ...ವಾಗಿಲ್ಲ. ಈ ಯುದ್ಧ ನಡೆಯುವ ಸಾಲು ಬಾಲ್ಟಿಕ್ ಕಡಲಿನಿಂದ ಹಿಡಿದು ...ಕಡಲಿನ ವರೆಗೂ, ಅಲ್ಲಿಂದ ಬೋಸ್ಪರಸ್ ವರೆಗೂ ವ್ಯಾಪಿಸಿಕೊಂಡಿರುತ್ತದೆ. ...ಷ್ಯದವರು ಪೂರ್ವ ಪ್ರಷ್ಯದೊಳಕ್ಕೆ ನುಗ್ಗಿ ಬಂದಿದ್ದರು; ಅವರನ್ನು ಈಗ ...ದಿಂದ ಆಚೆಗೆ ಓಡಿಬಿಟ್ಟಿದಾರೆ. ಆದರೆ ರಷ್ಯದವರು ಅಷ್ಟಕ್ಕೆ ಸುಮ್ಮನಾಗದೆ ...ಮತ್ತೆ ರೇಗುಕಟ್ಟಿ ಬಂದು ಜರ್ಮನಿಯವರನ್ನು ಹಿಂದಕ್ಕೆ ಅಟ್ಟುತ್ತಿರುವರು. ...ಲ್ಲ ನಡೆದಿರುವ ವಿದ್ಯಮಾನಗಳನ್ನೆಲ್ಲಾ ತಂತೀ ವರ್ತಮಾನಗಳು ತಿಳಿಸಿರುವ ...ಪಕ್ಕ ಪೋಲೆಂಡಿನಲ್ಲಿ ಯುದ್ಧಕಾರ್ಯಗಳು ವಿಶೇಷವಾಗಿ ನಡೆಯದೆ ತಕ್ಕ...ಮಟ್ಟಿಗೆ ಶಾಂತವಾಗಿದೆ ಎಂದು ಹೇಳಬಹುದು.

ಕಾರ್ಪೇಥಿಯನ್ ಪರ್ವತ ಪ್ರಾಂತ್ಯದಲ್ಲಿ ರಷ್ಯದವರು ಕ್ರಮವಾಗಿ ಮುಂದುಸಿ ಹೋಗುತ್ತಿದಾರೆ. ಒಂದು ಕಡೆ ಅವರು 23 ಮೈಲಿ ಉದ್ದಕಷ್ಟ ...ವ ಆಸ್ಟ್ರಿಯಾದವರ ಕಂದಕಗಳನ್ನು ಸ್ವಾಧೀನ ಮಾಡಿಕೊಂಡರು. ...ಪರ್ವತಗಳ ಮೇಲೆ ಈಗ ವಿಶೇಷ ಹಿಮ ಸುರಿಯುತ್ತಿದೆ. ಆದರೂ ಅದನ್ನು ...ಕ್ಕೆ ಮಾಡದೆ ರಷ್ಯದವರು ನುಗ್ಗಿ ಹೋಗಿ ಒಂದು ದಿನ ದಿನಸಾವರಿಯ ...ಫಿರಂಗಿಗಳ ಸಮೇತ 5,400 ಸೈನಿಕರನ್ನೂ, ಇನ್ನೊಂದು ದಿನ 5 ಫಿರಂಗಿಗಳ ...2,300 ಸೈನಿಕರನ್ನೂ ಕೈಸೆರೆ ಹಿಡಿದುಕೊಂಡು ಹೋದರು. ಕಾರ್ಪೇಥಿ...ಯನ್ ಪರ್ವತ ಪ್ರದೇಶದಲ್ಲಿ ಮಾರ್ಚಿ ತಾ 20 ಕ್ಕೂ 29 ಕ್ಕೂ ನಡುವೆ ...ಷ್ಯದವರು 16,410 ಸೈನ್ಯವನ್ನೂ 72 ಫಿರಂಗಿಗಳನ್ನೂ ಕೈಸೆರೆ ಹಿಡಿದಿದಾರೆ.

ಯುದ್ಧಸಾಲಿನ ದಕ್ಷಿಣ ಮೂಲೆಯಲ್ಲಿ ಆಸ್ಟ್ರಿಯಾದವರು ರಷ್ಯಾ ಎಲ್ಲೆ...ಯನ್ನು ದಾಟಿಕೊಂಡು ಒಳಕ್ಕೆ ನುಗ್ಗಿ ಹೋಗಿ ರಷ್ಯಾ ಸೀಮೆಯೊಳಗೆ ದಾಂಧಳೆ...ಯನ್ನು ನಡಿಸಿದಾರೆ.

ಜರ್ಮನಿಯವರು ಕೂಡ ಬಾಲ್ಟಿಕ್ ಕಡಲಿನಲ್ಲಿ ರಷ್ಯದವರಿಗೆ ಸೇರಿದ ...ಗ್ರಾಮಗಳಿಗೆ ಫಿರಂಗಿ ಗುಂಡುಗಳನ್ನು ಹೊಡೆದರು. ಲೀಬೌ ಎಂಬ ಊರಿ...ನಲ್ಲಿ ಗುಂಡುಗಳು ಬಿದ್ದು 15 ಮನೆಗಳು ನಾಶವಾದವು; ಒಬ್ಬ ಪ್ರಜೆಯು ಮೃತಪಟ್ಟನು.

ಪೆಮೆಸ್ಲ್‌ನಲ್ಲಿ ರಷ್ಯಾದವರು ಕೈಸೆರೆ ಹಿಡಿದ ಸೈನಿಕರಲ್ಲಿ 472 ಮಂದಿ ದಂಗೆ...ಯ ಸರದಾರರು ಇದ್ದರು. ಇವರು ಆ ಕೋಟೆಯೊಳಗೆ ಹುದ್ದೇದಾರರಾಗಿದ್ದರು.

ಟರ್ಕಿ.

ನಮ್ಮ ಸರ್ಕಾರದವರು ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಮತ್ತೆ ಕಾರ್ಯ...ವಹಿಸುತ್ತಿದಾರೆ. ಆ ಸಮುದ್ರ ಮಾರ್ಗದಲ್ಲಿರುವ ಮೈನ್ ಎಂಬ ಸಿಡಿ...ಮದ್ದಿನ ಗುಂಡುಗಳನ್ನು ಹುಡುಕಿ ತೆಗೆದುಹಾಕುವುದೇ ಅವರ ಪ್ರಥಮಕಾರ್ಯ...ವಾಗಿದೆ. ಈ ಕಾರ್ಯ ಮೊದಲು ನಡೆದ ಪಕ್ಷದಲ್ಲಿ ದೊಡ್ಡ ಯುದ್ಧದ ಜಹಜು...ಗಳು ಆ ಜಲಮಾರ್ಗದಲ್ಲಿ ಸುರಕ್ಷಿತವಾಗಿ ನುಗ್ಗಿಹೋಗುವುದಕ್ಕೆ ಅನುಕೂಲ...ವಾಗುವುದು. ಬಳಿಕ ಆ ಜಹಜುಗಳು ಕೋಟೆಗಳಿಗೆ ಫಿರಂಗಿಗಳನ್ನು ಎತ್ತಿಕಟ್ಟ...ಬಹುದಾಗಿದೆ.

ರಷ್ಯದವರ ಯುದ್ಧದ ಜಹಜುಗಳು ಕಪ್ಪು ಕಡಲಿನಲ್ಲಿ ಬಹಳ ಚಟುವಟಿಕೆ...ಯಾಗಿ ಕಾರ್ಯ ನಡಿಸುತ್ತವೆ. ಅವು ಬೋಸ್ಪೊರಸ್ ಜಲಮಾರ್ಗದ ಬಾಗಿಲಲ್ಲಿ...ರುವ ಕೆಲವು ಕೋಟೆಗಳನ್ನು ಗುಂಡುಗಳ ಮಳೆ ಸುರಿಸಿ ನಾಶಪಡಿಸಿದವು. ರಷ್ಯಾ...ದವರು ಆ ಸಮುದ್ರ ತೀರದಲ್ಲೇ ಇನ್ನು ಕೆಲವು ಸ್ಥಳಗಳಿಗೂ ಗುಂಡುಗಳನ್ನು ...ಹೊಡೆದಿರುತ್ತಾರೆ.

ಟರ್ಕಿಯವರು ಡಾರ್ಡನೆಲ್ಸಿನ ಜಲಮಾರ್ಗದಲ್ಲಿ ಟರ್ಕಿ ಕಡೆಯ ಮೂಲೆಗೆ ...ರುವ ಸೈನ್ಯವನ್ನು ಕಳುಹಿಸಬಾರದೆಂದೂ, ಅವರ ಯುದ್ಧದ ಜಹಜುಗಳು ...ಕಾನ್‌ಸ್ಟಾಂಟಿನೋಪಲ್ ಪಟ್ಟಣದ ತೀರದಲ್ಲಿ ಇರುವುದಾಗಿಯೂ ತಿಳಿಯುತ್ತದೆ.

ಟರ್ಕಿಯವರ ಒಂದು ಯುದ್ಧದ ಜಹಜು ಕಳೆದ ಶನಿವಾರ ರಾತ್ರಿ ರಷ್ಯಾ...ದವರ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು.

ಜರ್ಮನಿಯವರು ಟರ್ಕಿಯವರನ್ನು ಅವರ ಪಾಡಿಗೆ ಬಿಟ್ಟುಬಿಡುತ್ತಾರೆಂದೂ, ...ರಾಗಿ ಸಹಾಯ ಸಂಪತ್ತುಗಳನ್ನು ಒದಗಿಸುವುದಿಲ್ಲವೆಂದೂ, ಟರ್ಕಿಯಲ್ಲಿರುವ ...ಜರ್ಮನಿಯವರು ಅಲ್ಲಿಂದ ವಾಪಸು ಬರುತ್ತಿದಾರೆಂದೂ ವರ್ತಮಾನವಿದೆ.

ಜರ್ಮನಿಯವರು ತಮ್ಮ ಸೈನ್ಯವನ್ನು ರೂಮೇನಿಯಾ ದೇಶದ ಮೂಲಕ ...ಟರ್ಕಿಗೆ ಕಳುಹಿಸಬೇಕೆಂದು ಪ್ರಯತ್ನಪಟ್ಟು ಕೇಳಿದ ಹಾಗೂ, ಅದಕ್ಕೆ ...ರೂಮೇನಿಯಾದವರು ಒಪ್ಪದೆ ಹೋದರೆಂದೂ ಹೇಳಲಾಗಿದೆ.

ಕಾಕಸಸ್ ಪ್ರಾಂತ್ಯದಲ್ಲಿ ರಷ್ಯಾದವರು ಟರ್ಕಿ ಸೈನಿಕರನ್ನು ಸೋಲಿಸಿ ...ಹಿಂದಕ್ಕೆ ಓಡಿಸುತ್ತಾ ಬಂದಿದಾರೆ.

ದಕ್ಷಿಣ ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದ ಸಂಯುಕ್ತ ಸೈನ್ಯಗಳನ್ನು ಜನರಲ್ ಬೋಥಾರವರು ...ಜರ್ಮನಿಯ ದಕ್ಷಿಣ ಪಶ್ಚಿಮ ಆಫ್ರಿಕಾ ಸ್ವಾಸ್ಥ್ಯದ ಮೇಲೆ ನುಗ್ಗಿಸಿ ನಡಿಸಿ...ಕೊಂಡು ಹೋಗುತ್ತಿದಾರೆ. ಅವರು ಜರ್ಮನಿಯ ಒಂದು ಠಾಣ್ಯವನ್ನು ಗೆದ್ದು...ಕೊಂಡರು. ಅಲ್ಲಿ ಜರ್ಮನಿಯವರಲ್ಲಿ 4 ಮಂದಿ ಕೊಲೆಯಾದರು, 6 ...ಜನ ಗಾಯಪಟ್ಟರು, 13 ಜನ ಕೈಸೆರೆಯಾದರು. ಇದಲ್ಲದೆ ಜರ್ಮನಿಯವರ ...ವಶದಲ್ಲಿದ್ದ ಆಹಾರ ಪದಾರ್ಥಗಳೂ, ಮದ್ದು ಗುಂಡೂ ನಮ್ಮವರ ವಶವಾ...ಯಿತು. ನಮ್ಮವರ ಕಡೆ ಒಬ್ಬನು ಕೊಲೆಯಾದನು, ಇಬ್ಬರು ಗಾಯಪಟ್ಟರು.

ನಮ್ಮ ಸೈನ್ಯಗಳು ಶತ್ರುಪ್ರದೇಶವನ್ನು ದಾಟಿ ನುಗ್ಗಿಹೋಗಿ ಆರೆಂಜ್ ...ನದಿ ...ದ್ವೀಪವನ್ನು ಸ್ವಾಧೀನಪಡಿಸಿಕೊಂಡಿರುತ್ತವೆ. ಅಲ್ಲಿ ನೀರೂ ಮೇವೂ ...ಹಳ ವಿಶೇಷವಾಗಿರುವವು. ಆ ದೇಶದ ಬಹು ಭಾಗವೆಲ್ಲಾ ಬೆಂಗಾಡಾದದ್ದು.

ಜರ್ಮನಿಯವರ ಆ ಸ್ವಾಸ್ಥ್ಯವನ್ನು ಗೆದ್ದು ಸ್ವಾಧೀನಮಾಡಿಕೊಳ್ಳುವುದಕ್ಕೆ ನಮ್ಮ ಕಡೆಯವರು ಬಹಳ ಕಾಲ ತುಂಬಾ ಕಷ್ಟಪಡಬೇಕಾಗುವುದು.

ಸಮುದ್ರದ ಮೇಲೆ.

ಜರ್ಮನಿಯ ಸಬ್‌ಮೆರೀನುಗಳು ಬಂದಿರುವುದರಿಂದ ಇಂಗ್ಲೆಂಡಿನ ಸುತ್ತಲೂ ಸಮುದ್ರತೀರದಲ್ಲಿ ಅನೇಕ ಉತ್ಸಾಹಕರವಾದ ಕಾರ್ಯಗಳು ನಡೆದಿರುವವು. ಈಗ ಬ್ರಿಟಿಷ್ ಸರ್ಕಾರದವರು ಪ್ರತಿ ವಾರವೂ ಪ್ರಕಟಮಾಡುತ್ತಿರುವ ಸಂಗತಿಗಳಿಂದ 1,559 ಹಡಗುಗಳು ಬ್ರಿಟನ್‌ಗೆ ಬಂದು ಹೋಗಿರುವವೆಂದೂ, 5 ಹಡಗುಗಳು ಮಾತ್ರ ಮುಳುಗಿಸಲ್ಪಟ್ಟವೆಂದೂ ಗೊತ್ತಾಗುತ್ತದೆ.

ಬ್ರಿಟಿಷರ ಫಲಬಾ ಎಂಬ ಜಹಜಿಗೆ ಸಂಭವಿಸಿದ ಕೇಡು ಬಹಳ ದುಃಖಕರವಾದದ್ದು. ಅದರಲ್ಲಿ 140 ಮಂದಿ ಪ್ರಯಾಣಸ್ಥರೂ, 120 ಜನ ಸೇವಕಾಳಿಗಳೂ ಇದ್ದರು. ಅದು ವೇಲ್ಸ್ ದೇಶದ ಸಮುದ್ರತೀರ ಮಾರ್ಗವಾಗಿ ಪ್ರಯಾಣಮಾಡುತ್ತಿತ್ತು. ಮಾರ್ಚಿ ತಾ. 28 ನೇ ಭಾನುವಾರ ಜರ್ಮನಿಯವರ ಒಂದು ಸಬ್‌ಮೆರೀನ್ ಎಂಬ ಹಡಗು ಅದನ್ನು ತಡೆದು ನಿಲ್ಲಿಸಿಕೊಂಡು, ಐದು ನಿಮಿಷಗಳೊಳಗಾಗಿ ಒಂದು ಟಾರ್ಪೀಡೊ ಎಂಬ ಹಡಗನ್ನು ಬಿಟ್ಟು ಅದರ ತಳಕ್ಕೆ ಬಡಿಸಿ ಸಮುದ್ರದ ತಳಕ್ಕೆ ಮುಳುಗಿಸಿಬಿಟ್ಟಿತು. ಅಷ್ಟರೊಳಗೇ ಆ ಜಹಜಿನಲ್ಲಿದ್ದ ಅನೇಕರು ದೋಣಿಗಳಿಗೆ ಇಳಿದು ಹೊರಕ್ಕೆ ಬಂದುಬಿಟ್ಟಿದ್ದರು. ದೇವರ ದಯದಿಂದ ಅದರ ಸಮೀಪದಲ್ಲೇ ಬ್ರಿಟಿಷರ ಇನ್ನೊಂದು ಸಣ್ಣ ಹಡಗು ಇದ್ದಿತು. ಇದರಿಂದ ಒಟ್ಟು 148 ಜನರು ಬದುಕಿಬಂದರು. ಆ ಜಹಜಿನಲ್ಲಿದ್ದ 112 ಜನರು ನೀರಿನ ಪಾಲಾದರು. ಜರ್ಮನಿಯವರ ಆ ಸಬ್‌ಮೆರೀನ್ ಎಂಬ ಹಡಗಿನ ಮೇಲೆ ಬ್ರಿಟಿಷ್ ಬಾವುಟಾ ಕಟ್ಟಿತ್ತೆಂತಲೂ, ಅದು ಮುಳುಗಿಹೋಗುತ್ತಿದ್ದವರಲ್ಲಿ ಯಾರನ್ನೂ ಬದುಕಿಸುವುದಕ್ಕೆ ಪ್ರಯತ್ನವೇ ಮಾಡದೆ ಹೋಯಿತೆಂತಲೂ, ಜಹಜಿನಲ್ಲಿ ಜನಗಳು ಮುಳುಗಿ ಪ್ರಾಣ ಬಿಡುತ್ತಿದ್ದಾಗ ನೋಡಿಕೊಂಡು ಅದರ ಸುತ್ತಲೂ ಸುತ್ತುತ್ತಾ ಪರಿಹಾಸ್ಯಮಾಡುತ್ತಿತ್ತೆಂತಲೂ ಹೇಳಲಾಗಿದೆ. ಮುಳುಗಿ ಹೋದ ಜಹಜಿನ ಅಧಿಪತಿಯ ಶವವು ಸಿಕ್ಕಿತು. ಅದರ ಮುಖ್ಯ ಹುದ್ದೇದಾರನು ನೀರಿನಲ್ಲಿ ಬಿದ್ದು 3½ ಗಂಟೆ ಹೊತ್ತು ಕಷ್ಟಪಡುತ್ತಿದ್ದಾಗ ಅವನನ್ನು ಎತ್ತಿ ಬದುಕಿಸಲಾಯಿತು. ಜಹಜಿನಲ್ಲಿ ಉಗ್ರಾಣಗಿತ್ತಿಯರಾಗಿದ್ದ ಸ್ತ್ರೀಯರಿಬ್ಬರು ನೀರಿನಲ್ಲಿ ಮುಳುಗಿ ಮೃತರಾದರು. ಪ್ರಯಾಣಿಕರಾಗಿದ್ದ ಇಬ್ಬರು ಸ್ತ್ರೀಯರು ಜಹಜುಬಿಟ್ಟು ಬರಲೊಲ್ಲದೆ ನೀರಿನ ಪಾಲಾದರು. ಶವಗಳನ್ನು ತರಿಸಿಟ್ಟುಕೊಂಡು ಲಾಷ್ ಮಹಜರು ತೂಡಿದ ಅಧಿಕಾರಿಯು ಎಲ್ಲಾ ಸಂಗತಿಗಳನ್ನೂ ವಿಚಾರಣೆ ಮಾಡಿ, ಅದು ದರೋಡೆಕೋರರ ಕೃತ್ಯವೆಂದೂ, ಜರ್ಮನಿಯವರು ಮಾಡಿದ್ದು ಕೊಲೆಸಾಹಸ ಕೃತ್ಯವೇ ಸರಿಯೆಂದೂ ಹೇಳಿದ ಮೇಲೆ ಜೂರಿ ಪಂಚಾಯತರು - ಇದು ಜರ್ಮನಿಯ ಟಾರ್ಪೀಡೋದಿಂದ ನಡೆದ ಕೊಲೆ - ಎಂಬದಾಗಿ ತೀರ್ಮಾನ ಮಾಡಿರುತ್ತಾರೆ. ಈ ಬ್ರಿಟಿಷ್ ಜಹಜಿನಲ್ಲಿದ್ದ ಒಬ್ಬ ಅಮೇರಿಕಾದವನೂ ಮೃತಪಟ್ಟನು. ಇದರಿಂದ ಜರ್ಮನಿಗೂ ಅಮೇರಿಕಕ್ಕೂ ಮನಸ್ತಾಪವುಂಟಾಗಬಹುದೆಂದು ಕಾಣುತ್ತದೆ. ಅಮೇರಿಕದ ವರ್ತಮಾನ ಪತ್ರಿಕೆಗಳು ಕೋಪಗೊಂಡು ಇದು ಯುದ್ಧವಲ್ಲ, ಕೊಲೆಯೇ ಸರಿ ಎಂದು ಹೇಳುತ್ತಿವೆ. ಜಹಜು ನಡಿಸುವವರು ಜಹಜುಗಳಲ್ಲಿ ಆತ್ಮಸಂರಕ್ಷಣೆಗಾಗಿ ಫಿರಂಗಿಗಳನ್ನು ಇಟ್ಟುಕೊಂಡಿರಬೇಕೆಂದು ಕೇಳುತ್ತಿದಾರೆ. ಇದು ನ್ಯಾಯವಾದ ಪ್ರಾರ್ಥನೆಯಾಗಿದೆ.

ಇತರ ಜಹಜುಗಳು ಮುಳುಗಿಸಲ್ಪಟ್ಟದ್ದರಲ್ಲಿ ಅವುಗಳೊಳಗಿದ್ದವರನ್ನೆಲ್ಲಾ ಬದುಕಿಸಿ ಕರೆತಂದರು. ಇವರಲ್ಲಿ ಸುಮಾರು 40 ಮಂದಿ ಸಮುದ್ರದ ಪಾಲಾಗಿರಬಹುದು. ಕೆಲವು ಹಡಗುಗಳು ಬಹಳ ಸ್ವಲ್ಪದರಲ್ಲೇ ಶತ್ರುವಿನ ಕೈಗೆ ಸಿಕ್ಕದೆ ತಪ್ಪಿಸಿಕೊಂಡವು. ಒಂದು ಹಡಗನ್ನು ಶತ್ರುವು 18 ಗಂಟೆ ಹೊತ್ತಿನ ವರೆಗೆ ಬೆನ್ನಟ್ಟಿ ಓಡಿಸಿಕೊಂಡು ಬಂತು. ಆದರೂ ಸಿಕ್ಕದೆ ಆ ಹಡಗು ತಪ್ಪಿಸಿಕೊಂಡಿತು. ಸಿಟಿ ಆಫ್ ಕೇಂಬ್ರಿಜ್ ಎಂಬ ಜಹಜು ಬೇರೆ ಕಡೆ ತಿರುಗಿಕೊಂಡುಹೋದದ್ದರಿಂದ ಶತ್ರುವಿನ ಟಾರ್ಪೀಡೋ ಅದಕ್ಕೆ ತಗಲದಂತಾಯಿತು. ಆದರೆ ಶತ್ರುವಿನ ಸಬ್‌ಮೆರೀನು ಸುಮಾರು ಒಂದೂವರೆ ಗಂಟೆಯ ಹೊತ್ತು ಆ ಜಹಜಿಗೆ ಫಿರಂಗಿ ಗುಂಡುಗಳನ್ನು ಹಾರಿಸುತ್ತಿತ್ತು. ಈ ಗುಂಡುಗಳು ಬಡಿದದ್ದರಿಂದ ಜಹಜಿನಲ್ಲಿ ಸ್ವಲ್ಪ ಜಖಮ್ ಆಯಿತು. ಆದರೆ ಅದರಲ್ಲಿದ್ದ ಹುದ್ದೇದಾರರ‍್ಯಾರಿಗೂ ಗಾಯವಾಗಲಿಲ್ಲ. ಕಡೆಗೆ ಆ ಜಹಜು ತಪ್ಪಿಸಿಕೊಂಡು ಬಂದುಬಿಟ್ಟಿತು.

ಬ್ಲೂ ಜಾಕೆಟ್ ಎಂಬ ಇನ್ನೊಂದು ಹಡಗಿಗೆ ಶತ್ರುವಿನ ಟಾರ್ಪೀಡೊ ಬಡಿಯಿತು. ಅದರಲ್ಲಿದ್ದವರು ದೋಣಿಗಳಿಗೆ ಇಳಿದುಬಿಟ್ಟರು. ಆ ಮೇಲೆ ಆ ಹಡಗು ಮುಳುಗಲಿಲ್ಲವೆಂದು ತಿಳಿದು ಅದರಲ್ಲಿದ್ದ ಅಧಿಪತಿಯು ದೋಣಿಗಳಿಂದ ಮತ್ತೆ ಅರೆವಾಸಿ ಜನರನ್ನು ಕರೆದು ಹಡಗಿನಲ್ಲಿ ಕೂರಿಸಿಕೊಂಡು ಸುರಕ್ಷಿತವಾಗಿ ಸೌತ್‌ಹಾಂಪ್ಟನ್ ತೀರಪಟ್ಟಣವನ್ನು ತಲಪಿಸಿರುತ್ತಾನೆ. ಆ ಹಡಗಿನಲ್ಲಿ 3,500 ಟನ್‌ಗಳ ಧಾನ್ಯ ಭರ್ತಿಯಾಗಿತ್ತು.

ಬಿಸ್ಕೆ ಕೊಲ್ಲಿಯಲ್ಲಿ ಬ್ರಿಟಿಷರ ಒಂದು ಜಹಜು ಮುಳುಗಿಸಲ್ಪಟ್ಟಿತು. ಅದರಲ್ಲಿದ್ದವರನ್ನು ಬದುಕಿಸಿ ಲಿಸ್ಬನ್ ನಗರಕ್ಕೆ ಕರೆದುಕೊಂಡುಹೋಗಿ ಇಳಿಸಿದರು. ಫ್ರೆಂಚರ ಒಂದು ಯುದ್ಧದ ಜಹಜು ಫ್ರಾನ್ಸ್ ಸಮುದ್ರ ತೀರದ ಆಚೆ ಜರ್ಮನಿಯ ಒಂದು ಸಬ್‌ಮೆರೀನನ್ನು ಅಟ್ಟಿಸಿಕೊಂಡುಹೋಗಿ ಅದನ್ನು ಅದುಮಿಬಿಟ್ಟಿತು. ಸಬ್‌ಮೆರೀನು ಬಳಿಕ ಕಾಣಿಸಲಿಲ್ಲ. ಆ ಸ್ಥಳದಲ್ಲಿ ಸಮುದ್ರದ ಮೇಲೆ ಎಣ್ಣೆ ಕಾಣಿಸಿಕೊಂಡಿತು. ಇದರಿಂದ ಆ ಸಬ್‌ಮೆರೀನು ಮತ್ತೆ ಕಾಣಿಸಲಾರದೆಂದು ನಿರೀಕ್ಷಿಸಲ್ಪಟ್ಟಿದೆ.

ಬ್ರಿಟಿಷರು ಸಬ್‌ಮೆರೀನುಗಳಲ್ಲಿ ಕೈಸೆರೆ ಹಿಡಿದ ಜರ್ಮನಿ ಸೈನಿಕರನ್ನೂ ಜರ್ಮನಿಯ ಭೂಸೈನಿಕರನ್ನೂ ಬೇರೆಬೇರೆ ಸ್ಥಳಗಳಲ್ಲಿ ಬೈದುಮಾಡಿದಾರೆ. ಇದನ್ನು ನೋಡಿ ಜರ್ಮನಿಯವರು ತಮ್ಮ ಸಮುದ್ರ ಸೈನಿಕರನ್ನು ಬ್ರಿಟಿಷರು ಕಷ್ಟಪಡಿಸುತ್ತಿದಾರೆಯೋ ಎಂದು ಅಮೇರಿಕದವರ ಮೂಲಕ ಪ್ರಶ್ನೆಮಾಡಿ, ಹಾಗಿರುವ ಪಕ್ಷದಲ್ಲಿ ಜರ್ಮನಿಯವರೂ ತಾವು ಹಿಡಿದಿಟ್ಟುಕೊಂಡಿರುವ ಬ್ರಿಟಿಷ್ ಸೈನಿಕರನ್ನು ಕ್ರೂರತರವಾಗಿ ನೋಡಬೇಕಾಗುತ್ತದೆಂದು ತಿಳಿಸಿರುವರು. ಬ್ರಿಟಿಷ್ ಪರರಾಷ್ಟ್ರಗಳ ಮಂತ್ರಿಯಾದ ಸರ್ ಎಡ್ವರ್ಡ್ ಗ್ರೇಯವರು ಅದಕ್ಕೆ ಪ್ರತಿಯಾಗಿ ಜರ್ಮನಿ ಸಮುದ್ರದ ಸೈನಿಕರು ಘನವಂತರಾದ ಯುದ್ಧ ಭಟರಲ್ಲವಾದಾಗ್ಯೂ ಅವರನ್ನು ಯಾವ ಕಷ್ಟನಷ್ಟಗಳಿಗೂ ಗುರಿಪಡಿಸುವುದಿಲ್ಲವೆಂದು ಜವಾಬು ಕೊಟ್ಟರು. ಬ್ರಿಟಿಷ್ ನಾವೆಯ ಸೈನಿಕರು ಸಾವಿರಕ್ಕಿಂತಲೂ ಹೆಚ್ಚಾಗಿ ಜರ್ಮನಿ ನಾವಿಕರನ್ನು ಬದುಕಿಸಿರುವಲ್ಲಿ ಜರ್ಮನಿಯ ನಾವಿಕರು ಬ್ರಿಟಿಷ್ ನಾವಿಕರಲ್ಲಿ ಒಬ್ಬನನ್ನೂ ಬದುಕಿಸಿಲ್ಲ.

ಇತರ ವಿಷಯಗಳು.

ಬ್ರಿಟನ್‌ನಲ್ಲಿ ಕೂಲಿಕಾರರು ಕೆಲಸಮಾಡಿ ಸಂಪಾದಿಸಿದ ಹಣವನ್ನು ಕುಡಿತಕ್ಕೆ ಹಾಕಿ ಕೆಲಸಕ್ಕೆ ಬಾರದೆಹೋಗೋಣದರಿಂದ ಕಾರ್ಖಾನೆಗಳಲ್ಲಿ ಸೈನ್ಯಕ್ಕೆ ಬೇಕಾಗುವಷ್ಟು ಮದ್ದುಗುಂಡು ಮುಂತಾದ ಯುದ್ಧಸಾಮಗ್ರಿಗಳನ್ನು ತಯಾರ್ಮಾಡಿ ಒದಗಿಸುವುದು ಸ್ವಲ್ಪ ಕಷ್ಟವಾಗಿತ್ತು. ಮದ್ಯಪಾನ ಮಾಡದಂಥಾ ಅನೇಕ ಬ್ರಿಟಿಷ್ ಕೂಲಿಕಾರರು ಖಜಾನಾ ಛಕ್ತಿಯಾದ ಮಿ|| ಲ್ಲಾಯಿಡ್ ಜಾರ್ಜ್‌ರವರನ್ನು ಕಂಡು, ಮದ್ಯಪಾನವನ್ನು ನಿಲ್ಲಿಸಿಬಿಡಬೇಕೆಂದು ಬೇಡಿಕೊಂಡರು. ನಮ್ಮ ಜಾರ್ಜ್ ಸಾರ್ವಭೌಮರವರು ಈ ಭಾಗದಲ್ಲಿ ಕಾರ್ಯವನ್ನು ತೊಡಗಿ, ತಾವು ಮದ್ಯವನ್ನು ಮುಟ್ಟುವುದಿಲ್ಲವೆಂದೂ, ತಮ್ಮ ರಾಜಮಂದಿರದಲ್ಲಿ ಯಾರೂ ಮದ್ಯವನ್ನು ಉಪಯೋಗಿಸದಂತೆ ತಡೆದುಬಿಟ್ಟಿದೇವೆಂದೂ ಮಿ|| ಲ್ಲಾಯಿಡ್ ಜಾರ್ಜ್‌ರವರಿಗೆ ಅಪ್ಪಣೆಕೊಟ್ಟು ತಿಳಿಸಿರುತ್ತಾರೆ. ಇದೇ ರೀತಿ ಸೈನ್ಯದ ಇಲಾಖಾ ಮಂತ್ರಿಯಾದ ಲಾರ್ಡ್ ಕಿಚ್ನರವರು ಕೂಡ ತಮ್ಮ ಮನೆಯಲ್ಲಿ ಮದ್ಯವನ್ನು ಉಪಯೋಗಿಸದೆ ಬಿಟ್ಟುಬಿಟ್ಟರು. ಹೀಗೆಯೇ ಇನ್ನೂ ಅನೇಕ ಮಹನೀಯರು ತಮ್ಮ ತಮ್ಮ ಮನೆಗಳಲ್ಲಿ ಮದ್ಯವನ್ನು ಬಿಟ್ಟಿರುತ್ತಾರೆ. ಮದ್ಯಗಳನ್ನು ಬಿಕರಿಮಾಡುವಂಥಾ ವರ್ತಕರು ಕೂಡ ಗವರ್ನ್‌ಮೆಂಟಿಗೆ ಈ ವಿಚಾರದಲ್ಲಿ ಸಹಾಯಕರಾಗಿರುತ್ತಾರೆ. ಯಾಕೆಂದರೆ ಸಮಸ್ತರೂ ಸೈನ್ಯಕ್ಕೆ ಬೇಕಾಗುವಷ್ಟು ಮದ್ದುಗುಂಡನ್ನು ಕಾರ್ಖಾನೆಗಳಿಂದ ಮಾಡಿಸಿ ಒದಗಿಸಬೇಕೆಂದು ನಿಶ್ಚಯಿಸಿಕೊಂಡಿದಾರೆ. ಈ ವಿಷಯದಲ್ಲಿ ಈ ಯುದ್ಧದಿಂದ ಬ್ರಿಟನ್‌ಗೆ ತುಂಬಾ ಪ್ರಯೋಜನವಾದೀತೆಂದು ಕಾಣುತ್ತದೆ. ಕುಡುಕತನವು ನಿಂತುಹೋಗುವುದು ಕ್ಷೇಮಕರವಾದದ್ದೆಂದು ನಮಗೆಲ್ಲಾ ತಿಳಿದಿರುತ್ತದೆ. ಬಹುಶಃ ಯಾವ ಯಾವ ಪ್ರದೇಶಗಳಲ್ಲಿ ಗವರ್ನ್‌ಮೆಂಟಿನವರಿಗೆ ಬೇಕಾಗುವಂಥಾ ಯುದ್ಧಸಾಮಗ್ರಿಗಳೇ ಮುಂತಾದ ಪದಾರ್ಥಗಳು ತಯಾರಾಗುವವೋ ಅಂಥಾ ಕಡೆ ಮದ್ಯದ ಅಂಗಡಿಗಳೆಲ್ಲಾ ಮೋಕೂಫ್ ಮಾಡಲ್ಪಡಬಹುದೆಂದು ಕಾಣುತ್ತದೆ.

ಕೆಲವು ತೀರಪಟ್ಟಣಗಳಲ್ಲಿ ಜಹಜುಗಳಿಂದ ಆಮದು ರಫ್ತಾಗುವ ಸರಕುಗಳನ್ನು ಸಾಗಿಸುವಂಥಾ ಕೂಲಿಕಾರರು ಸೈನ್ಯಕ್ಕೆ ಸೇರಿ ತರಪೇತಾಗುತ್ತಿದಾರೆ.

ಬ್ರಿಟಿಷ್ ಸೈನ್ಯದಲ್ಲಿ ಪರಾಕ್ರಮವನ್ನು ತೋರಿಸಿರುವಂಥಾ 482 ಸೈನಿಕರಿಗೂ, ಹುದ್ದೇದಾರರಿಗೂ, ಗಾಯಪಟ್ಟವರನ್ನು ಉಪಚರಿಸಿ ಕರೆದುತಂದವರಿಗೂ ಬಿರುದುಗಳನ್ನೂ ಮೆಡಲುಗಳನ್ನೂ ಕೊಟ್ಟಿದಾರೆ. ಹಿಂದುಸ್ಥಾನದ ಸೈನಿಕರಲ್ಲಿ ಕಾಯಿಲೆಯಾದವರನ್ನೂ ಗಾಯಪಟ್ಟವರನ್ನೂ ಚಿಕಿತ್ಸೆಗಾಗಿ ಬ್ರೈಟನ್ ನಗರಕ್ಕೆ ಕರೆದುಕೊಂಡುಹೋಗುತ್ತಾರೆ. ಈ ಸೈನಿಕರನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಕ್ರೂ ರವರು ಹೋಗಿ ಪರಾಂಬರಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದರು. ಅಲ್ಲಿ ಈಗ 2,100 ಜನ ಹಿಂದುಸ್ಥಾನದ ಸೈನಿಕರಿದ್ದು ಇಲಾಜು ತೊಂಡುತ್ತಿದಾರೆ.

ಜರ್ಮನಿ ಸೈನಿಕರು ಉಪಯೋಗಿಸುವಂಥಾ ಒಂದು ಫಿರಂಗಿ ಗುಂಡನ್ನು (ಸಿಡಿಮದ್ದಿನ ಗುಂಡು) ಫ್ರಾನ್ಸ್ ರಾಜಧಾನಿಯಾದ ಪಾರಿಸ್ ನಗರದಲ್ಲಿಟ್ಟು ತೋರಿಸುತ್ತಿದಾರೆ. ಇದು ಒಂದು ಟನ್ನಷ್ಟು ಭಾರವುಳ್ಳದ್ದು, 6 ಅಡಿ ಎತ್ತರವಾಗಿದೆ.—ಜರ್ಮನಿಯವರು ಯುದ್ಧದ ಖರ್ಚಿಗೆ ಮತ್ತೆ 45 ಕೋಟಿಯೂ 30 ಲಕ್ಷ ಪೌಂಡು ದ್ರವ್ಯವನ್ನು ಸಾಲಮಾಡಿದರು. ಅದರ ಷೇರು ಪತ್ರಗಳನ್ನು 25 ಲಕ್ಷ ಜನರು ಕೊಂಡುಕೊಂಡಿದಾರೆ. ಆದರಲ್ಲೂ ಈ ಸಾಲದ ಹಣದಲ್ಲಿ ಬಹಳ ಭಾಗವನ್ನು ಬ್ಯಾಂಕುಗಳಿಂದಲೂ, ಸೇವಿಂಗ್ಸ್ ಬ್ಯಾಂಕುಗಳಿಂದಲೂ ಒದಗಿಸಿಕೊಂಡಿದಾರೆ.

ಒಳದೇಶದ ವೃತ್ತಾಂತಗಳು.

ಈ ತಿಂಗಳ 17 ನೇ ತಾ ಶನಿವಾರ ಮಧ್ಯಾಹ್ನ ನಮ್ಮ ದಿವಾನ್‌ರವರು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸಂಪದಭ್ಯುದಯ ಸಭೆಯನ್ನು ನಡಿಸುವವರಾಗಿದಾರೆಂದು ಕೇಳುತ್ತೇವೆ.

ಬೆಂಗಳೂರು-ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಾಮಗಾರಿಗಳೆಲ್ಲಾ ಯಲಹಂಕದಿಂದ ದೇವನಹಳ್ಳಿಯ ತನಕ ಪೂರೈಸಿದ್ದರಿಂದ ನೆನ್ನೆ ಬೆಳಗ್ಗಿನಿಂದ ಅಲ್ಲಿಂದಲ್ಲಲ್ಲಿಗೆ ರೈಲ್ ಗಾಡಿಗಳನ್ನು ಬಿಡುವಂತೆ ಏರ್ಪಾಡಾಗಿತ್ತು.

ನಮ್ಮ ಸರ್ಕಾರದವರು ನಂದಿ ಬೆಟ್ಟದ ಮೇಲೆ ವಿಹಾರಾರ್ಥವಾಗಿ ಹೋಗತಕ್ಕ ಜನಗಳಿಗೆ ಬೇಕಾಗುವಂಥಾ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಹುಕುಂ ಕೊಟ್ಟು, 15,000 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ನಂಜನಗೂಡಿನಲ್ಲಿ ವೀರಾಸಾಮಿ ಎಂಬವನು ಪೋಲೀಸಿನವರ ವಶದಲ್ಲಿರುವಾಗ ಮೃತಪಟ್ಟನೆಂಬ ಮೊಕದ್ದಮೆ ಹುಟ್ಟಿ, ಒಬ್ಬ ದಫೇದಾರನನ್ನೂ ಇಬ್ಬರು ಕಾನ್‌ಸ್ಟೇಬಲ್‌ರನ್ನೂ ಸರ್ಕಾರದವರು ಹಿಡಿದು ತನಿಖೆ ಮಾಡುತ್ತಿದಾರೆಂದು ಕೇಳುತ್ತೇವೆ.

ಜೈನರ ಗುರುಗಳಾಗಿದ್ದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರು ಶ್ರವಣಬೆಳುಗುಳದಲ್ಲಿ ಸುಮಾರು ಎರಡು ವಾರಗಳಿಂದ ಕಾಯಿಲೆ ಇದ್ದು, ಕಳೆದ ತಾ. 31 ನೇ ಬುಧವಾರ ಕಾಲಗತಿಯನ್ನೈದಿದರೆಂದು ಒಬ್ಬ ಬಾತ್ಮೀದಾರರು ಬರೆದಿರುವುದನ್ನು ಓದಿ ವಿಷಾದಪಡುತ್ತೇವೆ.

ಒಬ್ಬ ಬಾತ್ಮೀದಾರರಿಂದ.—ಕಳೆದ ಗುರುವಾರ ಸಾಯಂಕಾಲ ನಂಜನಗೂಡು ಮಾರ್ಗದ ಉಕ್ಕಡದ ಬಳಿಯಲ್ಲಿರುವ ಪಾದ್ರಿ ಮರದ ಮೇಲೆ ಒಬ್ಬ ಹೂವಾಡಿಗನು ಹೂಗೋಸ್ಕರ ಹತ್ತಿ, ಕಾಲುಜಾರಿ ಕೆಳಗೆ ಬಿದ್ದು ಮಾರ್ಗಸ್ಥರ ಸಹಾಯದಿಂದ ತನ್ನ ಮನೆಗೆ ಬಂದು ಅಲ್ಲಿ ಸ್ವಲ್ಪಕಾಲವಿದ್ದು ನಂತರ ಮೃತನಾದನು.

ಅರಮನೆಯಲ್ಲಿ ರಾಜಪುರೋಹಿತರಾಗಿದ್ದ ಮ|| ಪುಟ್ಟಣ್ಣಶಾಸ್ತ್ರಿಗಳು ಕಳೆದ ಸೋಮವಾರ ಜ್ವರದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಸುಮಾರು 68 ವಯಸ್ಸಾಗಿದ್ದು, ಅರಮನೆಯಲ್ಲಿ ನಡೆಯುತ್ತಿದ್ದ ಸಮಸ್ತ ಹಬ್ಬ ಹರ್ವ ಉತ್ಸವಾದಿಗಳನ್ನೂ ಬಹಳ ಸಾಮರ್ಥ್ಯದಿಂದ ಮಾಡಿಸುತ್ತಾ, ಶ್ರೀಮನ್ ಮಹಾರಾಜರವರಲ್ಲೂ ರಾಣಿವಾಸದವರಲ್ಲೂ ಪ್ರೀತಿ ವಿಶ್ವಾಸಗಳನ್ನೂ ಗೌರವವನ್ನೂ ಸಂಪಾದಿಸಿಕೊಂಡಿದ್ದರು. ಇವರಿಗೆ ಒಬ್ಬ ದತ್ತಪುತ್ರನೂ, ವಯಸ್ಸಾದ ಪತ್ನಿಯೂ, ಅನೇಕ ಬಂಧುಬಳಗಗಳೂ ಇದ್ದು ವಿಯೋಗ ದುಃಖ ಭಾಜನರಾದರು.

ನೆಲ್ಲೂರಿನಲ್ಲಿ ಮುಂದಿನ ತಿಂಗಳ ಮೊದಲನೇ ವಾರ ಸಂಘಪರಿಷ್ಕರಣ ಸಮಾಜವು ನಡೆಯುತ್ತದೆ. ಈ ಸಭೆಯಲ್ಲಿ ಮೈಸೂರು ಓರಿಯಂಟಲ್ ಲೈಬ್ರರಿ ಕ್ಯೂರೇಟರವರಾದ ಮ|| ಎ. ಮಹದೇವಶಾಸ್ತ್ರಿಗಳು ಅಗ್ರಾಸನವನ್ನು ವಹಿಸುವಂತೆ ಒಪ್ಪಿಕೊಂಡಿದಾರೆ. ಸಂಘಪರಿಷ್ಕರಣ ಕಾರ್ಯದಲ್ಲಿ ಇವರು ತುಂಬಾ ಉತ್ಸಾಹಶಾಲಿಗಳು. ಸಂಸ್ಕೃತದಲ್ಲೂ ಇಂಗ್ಲಿಷಿನಲ್ಲೂ ಪಂಡಿತರೆನಿಸಿಕೊಂಡಿದಾರೆ. ಹಿಂದುಗಳ ಆಚಾರ ವ್ಯವಹಾರಗಳನ್ನು ಶ್ರುತಿ ಸ್ಮೃತಿಗಳಿಗೆ ವಿರೋಧವಿಲ್ಲದಂತೆ ಬದಲಾವಣೆ ಮಾಡಿಕೊಳ್ಳಬೇಕೆಂದು ಅವರು ಅನೇಕ ವೇಳೆ ಉಪನ್ಯಾಸಗಳನ್ನು ಮಾಡಿದಾರೆ; ಹಲವು ಪುಸ್ತಕಗಳನ್ನೂ ಬರೆದಿರುವರು. ಇವರು ಆ ಸಮಾಜದಲ್ಲಿ ಸಂಘಪರಿಷ್ಕರಣದ ವಿಚಾರವನ್ನು ಕುರಿತು ಭಾಷಣಮಾಡುವವರಾಗಿದಾರೆ.

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ 19 ನೇ ವಾರ್ಷಿಕೋತ್ಸವವು ಕಳೆದ ಭಾನುವಾರ ನಡೆಯಿತು. ಮೆಂಬರುಗಳು ಆಟಗಳಲ್ಲಿ ವಿನೋದಹೊಂದಿ ವ್ಯಷ್ಟ್ಯಾನ್ನಭೋಜನದಲ್ಲಿ ಸಂತೃಪ್ತರಾಗಿ ರಾಯಬಹದ್ದೂರ್ ಮ|| ಎ. ನರಸಿಂಹಯ್ಯಂಗಾರ‍್ರ ಅಧ್ಯಕ್ಷತೆಯಲ್ಲಿ ವಾರ್ಷಿಕ ಕೂಟವನ್ನು ನಡಿಸಿದರು. ಸೆಕ್ರೆಟರಿ ಮ|| ಟಿ. ಜಿ. ಲಕ್ಷ್ಮಣರಾಯರು ರಿಪೋರ್ಟುಗಳನ್ನು ಓದಿದ್ದರಲ್ಲಿ ಮೆಂಬರುಗಳ ಸಂಖ್ಯೆ 79 ಕ್ಕೆ ಹೆಚ್ಚಿದರೂ ಮೆಂಬರುಗಳು ಇನ್ನೂ ಸುಮಾರು 950 ರೂಪಾಯಿ ತನಕ ಚಂದಾ ಕೊಡದೆ ಬಾಕಿನಿಂತಿದೆ ಎಂದೂ, ಹೀಗೆ ಉಳಿಸಿಕೊಂಡಿರುವ ಹಣವನ್ನು ವಸೂಲ್ಮಾಡಬೇಕೆಂದೂ, ಸರ್ಕಾರದವರು ಕ್ಲಬ್ಬಿನ ಆವರಣಕ್ಕೆ ಇನ್ನೂ ಸುಮಾರು 60 ಅಡಿಯಷ್ಟು ಹೊಸ ನಿವೇಶನವನ್ನು ಸೇರಿಸಿ ಕೊಟ್ಟಿರೆಂದೂ, ಕೆಲವು ಅವಶ್ಯವಾದ ಕಾಮಗಾರಿ ಮಾಡಿಸುವುದಕ್ಕೆ ಸುಮಾರು 2,800 ರೂಪಾಯಿ ಬೇಕಾಗಿರೋಣದರಿಂದ ಮೆಂಬರುಗಳು ಕಟ್ಟಡದ ಪತ್ರಗಳನ್ನು ಕೊಂಡುಕೊಂಡು ಹಣವನ್ನು ಒದಗಿಸಬೇಕಾಗಿದೆಯೆಂದೂ ತಿಳಿಯಲಾಯಿತು. ಶ್ರೀಮನ್ ಮಹಾರಾಜರವರು ತಮ್ಮ ಫೋಟೋವನ್ನು ಕ್ಲಬ್ಬಿಗೆ ದಯಪಾಲಿಸಿದರು. ಕ್ಲಬ್ಬಿನ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿ ಕಾರ್ಯಗಳನ್ನು ನಡಿಸಿದ ಡಾ|| ಸಿ. ರಾಮಾರಾಮರಾಯರ ಭಾವ ಚಿತ್ರವನ್ನು ಮೆಂಬರುಗಳು ಉತ್ಸಾಹದಿಂದ ಕಟ್ಟಡದಲ್ಲಿ ಇಡಿಸಿದರು. ಮೆಂಬರುಗಳು ಮ|| ಎನ್. ವೆಂಕಟಕೃಷ್ಣಯ್ಯನವರನ್ನೂ ಮ|| ಕರಿಗೌಡರನ್ನೂ ಸೆಕ್ರೆಟರಿಗಳಾಗಿ ಚುನಾಯಿಸಿ, ಶ್ರೀಮನ್ ಮಹಾರಾಜರವರ ಮತ್ತು ಯುವರಾಜರವರ ಶ್ರೇಯಸ್ಸನ್ನು ಬಯಸಿ, ಆ ಸಂತೋಷ ಕೂಟವನ್ನು ಮುಕ್ತಾಯಮಾಡಿದರು.

ಒಂದು ಕೋಆಪರೆಟಿವ್ ಸೊಸೈಟಿ ಸ್ಥಾಪನೆ.

ಚನ್ನರಾಯಪಟ್ಟಣದ ತಾಲ್ಲೂಕು ಜನ್ನೇನಹಳ್ಳಿ ಗ್ರಾಮದಲ್ಲಿ ಕಳೆದ ತಿಂಗಳು ೨೦ ನೇ ತಾ. ಸ್ಥಿರವಾರ ಒಂದು ಸಂಘವು ಸ್ಥಾಪನೆಯಾಯಿತು. ಈ ಉತ್ಸವ ಕ್ಕೋಸ್ಕರ ಚನ್ನರಾಯಪಟ್ಟಣದಿಂದ ಆನರರಿ ಸೂಪರವೈಜರರೂ, ಹಿರೀಸಾವೆ ಶೇಕ್ದಾರರೂ, ಶ್ಯಾ. ಮ|| ಸುಬ್ಬರಾಯರೂ ಮುಂತಾದ ದೊಡ್ಡ ಮನುಷ್ಯರುಗಳು ಈ ಗ್ರಾಮಕ್ಕೆ ದಯಮಾಡಿಸಿದರು. ಗ್ರಾಮಸ್ಥರು ಇವರುಗಳನ್ನೆದುರುಗೊಂಡು ಅತ್ಯಂತ ಗೌರವದಿಂದ ಗ್ರಾಮದಲ್ಲಿ ಅಲಂಕರಿಸಲ್ಪಟ್ಟಿದ್ದ ಚಾವಡಿಗೆ ಕರೆದು ಕೊಂಡುಹೋಗಿ ಇಳಿಸಿದರು. ಭೋಜನಾನಂತರ ಮೀಟಿಂಗು ಶುರುವಾಗಿ ಸೂಪರವೈಜರ್ ಮ|| ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ವಿಷಯಗಳ ಚರ್ಚೆಯಿಂದ ಸಂಘವು ಸ್ಥಾಪನೆಯಾಗಿ ಕಾರ್ಯಾರಂಭವಾಯಿತು. ಛೇರ್ಮನ್ರವರು ಅತಿ ವಿನಯದಿಂದ ಸಭಿಕರನ್ನು ಗೌರವಿಸಿ ಸೊಸೈಟಿಗಳ ಅನುಕೂಲಾನನುಕೂಲಗಳ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದ್ದರಿಂದ ಗ್ರಾಮದ ಬಾಲಕರೂ, ಹೆಂಗಸರೂ ಚಾವಡಿಯಲ್ಲಿ ಸೇರಿ ಸುಮಾರು 15-20 ಜನಗಳ ವರಿಗೂ ಬಾಲಕರೂ ಹೆಂಗಸರೂ ಸಂಘಕ್ಕೆ ಸೇರಿದರು. ಸೂಪರವೈಜರವರು ಬಾಲಕರುಗಳಿಗೆ ಪ್ರೋತ್ಸಾಹಕರವಾದ ಚೆಂಡು ವಗೈರೆ ಆಟದ ಸಾಮಗ್ರಿಗಳನ್ನು ಬಹುಮಾನವಾಗಿ ಸಭೆಯಲ್ಲಿ ಕೊಟ್ಟರು. ಇದರಿಂದ ಬಾಲಕರೂ, ಹೆಂಗಸರೂ ಇನ್ನೂ ಜಾಸ್ತಿಯಾಗಿ ಸಂಘಕ್ಕೆ ಸೇರಿ ಉತ್ತಮಸ್ಥಿತಿಗೆ ಬರಲು ಅವಕಾಶವಾಯಿತು. ಮ|| ಸುಬ್ಬರಾಯರು ಸಂಘಗಳ ಏರ್ಪಾಡು ಮಾಡಿದ ಪ್ರಜಾಹಿತಚಿಂತಕರಾದ ಸರ್ಕಾರದ ಉದ್ದೇಶಗಳನ್ನು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಹಾಲಿ ಪ್ರಾರಂಭವಾಗಿರುವ ಕದನದಲ್ಲಿ ಜಯಲಕ್ಷ್ಮಿಯು ನಮ್ಮ ಚಕ್ರವರ್ತಿಗಳಿಗೆ ಒಲಿಯಲೆಂದು ಪ್ರಾರ್ಥಿಸಿದರು. ೫೦ ಜನ ಮೆಂಬರು ಸೇರಿ 1,000 ಷೇರುಗಳ ಪೈಕಿ 400 ಷೇರುಗಳ ವರಿಗೂ ಪಡೆದರು. ನಂತರ ನಮ್ಮ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನೆ ಮಾಡಿ ವಂದನೆಗಳನ್ನರ್ಪಿಸಿದರು. ಸಭೆಯಲ್ಲಿ ಗಂಧ, ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಛೇರ್‌ಮನ್‌ರವರಿಗೆ ವಂದನೆಗಳನ್ನರ್ಪಿಸಿ ಮೀಟಿಂಗು ಅಂತ್ಯ ಮಾಡಲಾಯಿತು. ಈ ಸಂತೋಷಾರ್ಥವಾಗಿ ಗ್ರಾಮಸ್ಥರು ಆ ದಿವಸ ಚೆಂಡಿ ಆಟವನ್ನಾಡಿಸಿದರು. ಮಾರನೇ ಬೆಳಿಗ್ಗೆ ಸೂಪರವೈಜರವರು ತಾಳ್ಮೆಯಿಂದ ಸಂಘದ ಲೆಕ್ಕಗಳನ್ನು ತಾವೇ ಬರೆದುಕೊಡುವದರ ಮೂಲಕ ನೌಕರರಿಗೆ ಮಾಹಿತಿ ಮಾಡಿಕೊಟ್ಟರು. ಇವರು ವಾಪಸು ದಯಮಾಡಿಸುವಾಗ್ಗೆ ಮ|| ಬೋರಾ ಮೇಸ್ತ್ರಿಗಳು, ಮ|| ಬೊಮ್ಮ ಮೇಸ್ತ್ರಿಗಳು ಮುಂತಾದವರು ಇವರನ್ನು ತಮ್ಮ ತಮ್ಮ ಮನೆಗೆ ಕರೆದುಕೊಂಡುಹೋಗಿ ಫಲ, ಪುಷ್ಪ, ತಾಂಬೂಲಾದಿಗಳನ್ನು ಕೊಟ್ಟು ಉಪಚರಿಸಿದರು. ಸೂಪರವೈಜರು ಪ್ರತಿ ಮನೆಗೆ ದಯಮಾಡಿಸಿದಾಗಲೂ ಈ ಗ್ರಾಮದ ಬಾಲಕರಿಗೆ ವಿದ್ಯಾಭ್ಯಾಸಕ್ಕೆ ಕುಂದಕವಾಗಿರುವ ವಿಷಯದಲ್ಲಿ ಅನೇಕ ಸಲಹೆಗಳನ್ನು ಸೂಚಿಸಿದರು. ಈ ಮಹನೀಯರು ಸ್ವಭಾವತಃಲೋಭಿಗಳು ಆದರೂ ತಮ್ಮ ಆದಾಯ, ಅಧಿಕಾರ, ಗೌರವ, ದೇಹಸೌಖ್ಯ ಇವುಗಳನ್ನೆಣಿಸದೆ ಪ್ರಜಾಸೌಖ್ಯವೇ ತಮ್ಮ ಶ್ರೇಯಸ್ಸೆಂದೆಣಿಸಿ ಸರ್ಕಾರದಿಂದ ಯಾವ ವೇತನವನ್ನೂ ಅಪೇಕ್ಷಿಸದೆ ಅಪಾರ ಶ್ರಮಪಡುತ್ತಿರುವದು ಹಳ್ಳಿಗಾಡಿನ ಪ್ರಜೆಗಳ ಭಾಗ್ಯೋದಯವೇ ಸರಿ

ಗ್ರಾಮಸ್ಥ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಬುಧವಾರ ಬೆಳಿಗ್ಗೆಯೂ ಗುರುವಾರವೂ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಲರುಗಳು ಸಭೆ ಸೇರಿ ತಿಂಗಳ ಗಟ್ಟಿಯ ಮೀಟಿಂಗನ್ನು ನಡಿಸಿದರು. ಅಗ್ಗೆ ತೀರ್ಮಾನಿಸಲ್ಪಟ್ಟ ಮುಖ್ಯ ವಿಷಯಗಳ್ಯಾವವೆಂದರೆ—

ಟವನ್ನಲ್ಲಿ ಕಂದಾಯಗಳ ಕಿಸ್ತನ್ನು ಅದರಲ್ಲೂ ಆಕ್ಟ್ರಾಯಿ ತೆರಿಗೆಗಳನ್ನು ಪುನರ್ವಿಮರ್ಶೆ ಮಾಡುವುದರಲ್ಲೀ ಮೆಂಬರುಗಳು ತುಂಬಾ ಚರ್ಚೆ ನಡಿಸಿದರು. ಇದು ಇತ್ಯರ್ಥವಾಗುವುದಕ್ಕೆ ಬಹಳ ಕಾಲ ವಿನಿಯೋಗಿಸಲ್ಪಟ್ಟಿತು. ಈ ಭಾಗವನ್ನು ಕುರಿತು ಇನ್ನೊಂದು ಕಡೆ ಪ್ರಸ್ತಾಪ ಮಾಡಿರುತ್ತೇವೆ.—ರಾಜಧಾನಿಯ ಮಾರ್ಕೆಟ್ಟಿನಲ್ಲಿರುವ ಕಟ್ಟಿಟಿಕೆ ಮತ್ತು ಯುನಾನಿ ಆಸ್ಪತ್ರೆಗಳ ವಿಚಾರವನ್ನು ಚರ್ಚೆಮಾಡಿ ಕ್ರಮಪಡಿಸುವುದಕ್ಕೆ ಒಂದು ಕಮಿಟಿಯನ್ನು ಏರ್ಪಾಡು ಮಾಡಿದರು.—ಈ ಸಲ ನವರಾತ್ರಿ ಪ್ರಜಾಪ್ರತಿನಿಧಿ ಸಭೆಗೆ ಮ್ಯುನಿಸಿಪಾಲಿಟಿಯ ಪರವಾಗಿ ಮ|| ಗಳಾದ ಎಂ. ಸಿ. ರಂಗಯ್ಯಂಗಾರ್ರು, ಎಲ್. ವೆಂಕಟಕೃಷ್ಣಯ್ಯನವರು, ಅಂಬಳೆ ಅಣ್ಣಯ್ಯಪಂಡಿತರು ಮತ್ತು ರೆವ್|| ಎಚ್. ಗಲ್ಲಿಫೋರ್ಡ್‌ರವರು, ಈ ನಾಲ್ಕು ಮಂದಿಯೂ ಮೆಂಬರಾಗಿ ಹೋಗತಕ್ಕದ್ದೆಂದು ಚುನಾವಣೆ ಮಾಡಲ್ಪಟ್ಟರು.—ಕನ್ನೆಗೌಡನ ಕೊಪ್ಪಲ ಮ|| ಲಿಂಗೇಗೌಡರಿಗೆ ಸ್ಕೂಲನ್ನು ಕಟ್ಟುವುದಕ್ಕಾಗಿ ನಿವೇಶನವನ್ನು ಮುಫತ್ತಾಗಿ ಕೊಡಬಹುದೆಂದು ಸರ್ಕಾರದವರು ಹುಕುಂ ಕೊಟ್ಟರು. ಕೆಲವು ರಸ್ತೆಗಳಲ್ಲಿ ಹೊಸದಾಗಿ ನೀರಿನ ನಲ್ಲಿಗಳನ್ನು ಹಾಕಿ, ಎತ್ತರವಾದ ಭಾಗಗಳಿಗೂ ಪ್ಯಾಲೇಸ್ಗಳಿಗೂ ನೀರು ಒದಗಿಸುವುದಕ್ಕೂ ರಸ್ತೆಗಳಿಗೆ ನೀರು ಹಾಕುವುದಕ್ಕೂ ಕಾಮಗಾರಿ ಮಾಡಿಸಬೇಕೆಂದೂ, ಇದಕ್ಕೆಲ್ಲಾ ಒಟ್ಟು ೩,೦೬,೭೧೩ ರೂಪಾಯಿ ಖರ್ಚಾಗಬಹುದೆಂದೂ ತಯಾರಾಗಿದ್ದ ಅಂದಾಜಾಪಟ್ಟಿಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.

ಸುಬ್ರಾಯನ ಕೆರೆಗೂ, ದೊಡ್ಡ ಕೆರೆಗೂ ನೀರುಬರುವ ನಾಲೆಗಳಲ್ಲಿ ಮಕ್ಕಲುಮಣ್ಣು ಮುಂತಾದವನ್ನು ತೆಗಿಸಿ ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ 1,200 ರೂಪಾಯಿ ಖರ್ಚಾಗುತ್ತೆಂದು ಅಂದಾಜಾಪಟ್ಟಿ ತಯಾರಾಗಿದೆ. ಈ ಕಾಮಗಾರಿಗಳನ್ನು ಅಮಾನಿಯಿಂದ ಮಾಡಿಸಲು ಏರ್ಪಾಡು ಮಾಡುವುದಕ್ಕೆ ಒಂದು ಕಮಿಟಿ ನೇಮಕವಾಯಿತು.—ಕೆಲವು ಆಕ್ಟ್ರಾಯಿ ಸುಂಕಗಳನ್ನು ವಾಪಸು ಕೊಡುವ ವಿಷಯದಲ್ಲಿ ಚರ್ಚೆಮಾಡಿ ನಾಗುವಾಸಗೆ 6 ತಿಂಗಳೂ, ಚೇಣಾಜರಿಗೆ 3 ತಿಂಗಳೂ, ಇತರ ಎಲ್ಲಾ ಬಾಬುಗಳಿಗೂ 1 ತಿಂಗಳೂ ರೀಫಂಡು ಮಾಯದೆಯನ್ನು ಹೆಚ್ಚಿಸಿರುತ್ತಾರೆ. ಇದನ್ನು ಗವರ್ನ್‌ಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಬೇಕಾಗಿದೆ.—ಚಾಮುಂಡಿ ಬೆಟ್ಟದ ಮೇಲೆ ಹಾಕಿರುವ ಗಿಡಗಳಿಗೆ ನೀರು ಹಾಕುವ ಜವಾನನಿಗೆ ಒಂದು ವರುಷಕಾಲ 5 ರೂಪಾಯಿ ನಂತೆ ಸಂಬಳ ನಿಷ್ಕರ್ಷೆ ಮಾಡಲಾಯಿತು.—ಕೃಷ್ಣರಾಜ ಮೊಹಲ್ಲೆಯ ಗರಲ್ಸ್ ಸ್ಕೂಲನ್ನು ಅನುಕೂಲವಾದ ಇನ್ನೊಂದು ಕಟ್ಟಡಕ್ಕೆ ವರ್ಗಮಾಡಿ, ಅದರ ಬಾಡಿಗೆಯನ್ನು ಇನ್ನೂ 3 ರೂಪಾಯಿ ಜಾಸ್ತಿ ಮಾಡಬಹುದೆಂದು ಒಪ್ಪಿಕೊಂಡರು.—ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಖರ್ಚಿಗಾಗಿ ಮ್ಯುನಿಸಿಪಲಿಟಿಯವರು ತೆಗೆದಿರುವಷ್ಟು ಹಣವನ್ನು ಸ್ಯಾಂಕ್ಷನ್ ನಿರೀಕ್ಷಿಸದೆ ಖರ್ಚು ಮಾಡುವುದಕ್ಕೆ ಗವರ್ನ್‌ಮೆಂಟಿನವರು ಬೋರ್ಡಿಗೆ ಅಧಿಕಾರ ಕೊಡಬೇಕೆಂದು ಮೆಂಬರುಗಳು ಕೇಳಿಕೊಂಡಿದಾರೆ.—ರಾಜಧಾನಿಯಲ್ಲಿರುವ ರೋಡುಗಳೂ, ಗಲ್ಲಿಗಳೂ ಯಾವ ಯಾವನೆಂದು ಗೊತ್ತಾಗುವಂತೆ ಮ್ಯುನಿಸಿಪಾಲಿಟಿಯಲ್ಲಿ ಒಂದು ಪುಸ್ತಕದಲ್ಲಿ ಬರೆದಿಡಬೇಕೆಂದೂ, ಯಾವ ಯಾವ ಡಾರೀಖಿನಲ್ಲಿ ಯಾವ ಯಾವ ರಸ್ತೆಗಳೂ ಸಂದಿಗಳೂ ದುರಸ್ತು ಮಾಡಲ್ಪಟ್ಟವೆಂಬುದನ್ನೂ ಕಾಣಿಸಬೇಕೆಂದೂ ರಾವ್ ಬಹದೂರ್ ಮ|| ರಂಗಯ್ಯಂಗಾರ್ರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು.—ಅವರ ಸಲಹೆಯ ಮೇಲೆ ಕಟ್ಟಡಗಳ ಲೈಸೆನ್ಸುಗಳು ಜಾಗ್ರತೆಯಾಗಿ ಜನಗಳಿಗೆ ದೊರಕುವುದಕ್ಕಾಗಿ ಒಂದು ಕಮಿಟಿ ಏರ್ಪಾಡು ಮಾಡಲಾಯಿತು. ಅಲ್ಲದೆ ಹೆಲ್ತ್ ಆಫೀಸರವರು ಪ್ರಾಸಿಕ್ಯೂಷನ್ ಮಾಡುವ ಮೊಕದ್ದಮೆಗಳ ಪಟ್ಟಿಯನ್ನು ಮಾನೇಜಿಂಗ್ ಕಮಿಟಿಗೆ ಆಗಿಂದಾಗ್ಗೆ ಕಳುಹಿಸಬೇಕೆಂದೂ ಇತ್ಯರ್ಥಮಾಡಿದರು.

ರಾಜಧಾನಿಯ ಪ್ರತಿ ಒಂದು ದೊಡ್ಡ ರಸ್ತೆಯಲ್ಲೂ ಅಲಂಕಾರವಾದ ಸಾಲುಗಿಡಗಳನ್ನು ಹಾಕುತ್ತಿರುವುದು ಎಷ್ಟೋ ಸಂತೋಷಕರವಾಗಿದೆ. ಇದು ಪುರಾಭಿವೃದ್ಧಿ ಕಾರ್ಯವಾಗಿರೋಣದರಿಂದ ಇದನ್ನು ಟ್ರಸ್ಟ್ ಬೋರ್ಡಿನವರೇ ವಹಿಸಿಕೊಂಡು ಮಾಡಿಸಬೇಕೆಂದು ಮೆಂಬರುಗಳು ಸಮ್ಮತಿ ಸಾಕಿದರು.—ಹೆಲ್ತ್ ಕಮಿಟಿಯವರ ಸಿಫಾರಸಿನಂತೆ ಜಲಪುರಿ ಪಸಾಬ್ ಖಾನೆಗೆ ಒಬ್ಬ ಜವಾನನ್ನು ನೇಮಕ ಮಾಡಬಹುದೆಂದು ನಿಶ್ಚಯವಾಯಿತು.—ಪಟ್ಟಣದ ಎಲ್ಲಾ ಭಾಗಗಳಲ್ಲೂ ಪಾಯಖಾನೆಗುಂಡಿ, ನೀರು ನಿಂತು ಕೊಳೆಯುವ ಹಳ್ಳಕೊಳ್ಳಗಳನ್ನೆಲ್ಲಾ ಮುಚ್ಚುವ ಕಾಮಗಾರಿಯನ್ನೂ, ಅವುಗಳ ಸ್ಥಾನದಲ್ಲಿ ದಿನಾ ಗುಡಿಸಿಕೊಂಡು ಹೋಗುವಂಥಾ ಪಾಯಖಾನೆಗಳನ್ನು ಕಟ್ಟಿಸುವ ಕಾಮಗಾರಿಯನ್ನೂ ನೋಡಿಕೊಂಡು ಮಾಡಿಸುತ್ತಾ ಬರುವುದಕ್ಕೋಸ್ಕರ ಹಂಗಾಮಿಯಾಗಿ ಒಬ್ಬ ಮೇಸ್ತ್ರಿಯನ್ನು ನೇಮಿಸಬಹುದೆಂದು ಒಪ್ಪಲಾಯಿತು. ಈ ಕೆಲಸವು ಮೊದಲು ಚಾಮರಾಜಮೊಹಲ್ಲೆಯಲ್ಲಿ ಪ್ರಾರಂಭಿಸಲ್ಪಡುತ್ತದೆ.

ಬರೋಡಾ ಮಹಾರಾಜರವರೂ, ಸಂಸ್ಕೃತ ವಿದ್ಯೆಯೂ.

ಸಂಸ್ಕೃತ ಭಾಷೆಯು ಮೃತಭಾಷೆಯಾಗಿದೆ. ಪ್ರಕೃತ ಸಂಸ್ಕೃತ ಪಂಡಿತರಿಂದ ಸಮಾಜಕ್ಕೂ ದೇಶಕ್ಕೂ ವಿಶೇಷ ಪ್ರಯೋಜನವಿಲ್ಲವೆಂದು ಚರ್ಚಿಸುವಂಥವರು ಇತ್ತಲಾಗೆ ಬರೋಡಾದಲ್ಲಿ ಜರುಗಿದ ಸಂಸ್ಕೃತಪಂಡಿತರ ಮಹಾಸಭೆಯ ವೃತ್ತಾಂತವನ್ನೂ, ಆ ಕಾಲದಲ್ಲಿ ಮಹಾರಾಜರವರು ಅಪ್ಪಣೆಕೊಡಿಸಿದ ಮಾತುಗಳನ್ನೂ ತಿಳಿದುಕೊಳ್ಳುವುದು ಅವಶ್ಯವಾಗಿರುವುದು. ಪ್ರಕೃತ ಸಂಸ್ಕೃತ ವಿದ್ಯೆಯನ್ನು ಹೇಗೆ ಕಲಿಯುತ್ತಿರುವರೆಂಬ ವಿಷಯ ಮಹಾರಾಜರವರ ಅಭಿಪ್ರಾಯವೇನು ? "ಈ ವಿದ್ಯೆಯನ್ನು ಧಾರ್ಮಿಕಶ್ರದ್ಧೆಯಿಂದ ಕಲಿಯುತ್ತಿರುವರು ತಾರ್ಕಿಕ, ನೈಯಾಯಿಕ, ವೇದಾಂತಿಗಳಾಗಬೇಕೆಂಬುದೇ ಇವರ ಉದ್ದೇಶಗಳಾಗಿವೆ. ಆದ್ದರಿಂದ ನಿಷ್ಪ್ರಯೋಜನವಾದ ಶಾಬ್ದಿಕ ಚರ್ಚೆಯಲ್ಲಿಯೂ, ಕ್ರಮಗೊಳಿಸಿದ ಪದ್ಧತಿಗನುಸರಿಸಿ ವಿಷಯಗಳ ಖಂಡನ ಮಂಡನಗಳಲ್ಲಿಯೂ ಪರಿಶ್ರಮಪಡುತ್ತಿರುವರು. ಈ ವಿಧವಾದ ಉದ್ದೇಶ ಮತ್ತು ಪರಿಶ್ರಮಗಳಿಂದ ಇವರ ಜ್ಞಾನವು ಕೇವಲ ಏಕಮುಖವಾಗಿ ಕೂಪಮಂಡೂಕ ನ್ಯಾಯದಂತೆ ಸಂಕುಚಿತ ವಿಚಾರವಾಗುವುದು. ಇಂತಹ ಅಧ್ಯಯನದಿಂದ ಸ್ವತಂತ್ರ ವಿಚಾರವು ಕುಂಠಿತವಾಗಿ ತಾರತಮ್ಯ ಶಕ್ತಿಯು ಲೋಪವಾಗುತ್ತದೆ. ಈ ಪ್ರಕಾರ ಕಲಿತ ಪಂಡಿತರಿಂದ ಸಮಾಜಕ್ಕಾಗಲಿ ದೇಶಕ್ಕಾಗಲಿ ಯಾವ ಪ್ರಯೋಜನವೂ ಆಗದೆ, ಮತಭೇದಗಳು ಮಾತ್ರ ಅಧಿಕವಾಗುತ್ತವೆ." ಬರೋಡೆಯ ಮಹಾರಾಜರವರ ಈ ವಚನಗಳು ಸರ್ವರ ಮನ್ನಣೆಗೆ ಪಾತ್ರವಾಗಿರುವವು. ಪ್ರಜೆಗಳ ಉನ್ನತಿಯನ್ನು ಹೇಗೆ ಸಾರ್ಥಕವಾದ ರೀತಿಯಲ್ಲಿ ಸಾಧಿಸಬಹುದೆಂಬ ವಿಚಾರದೃಷ್ಟಿಯಿಂದ ಪಾಶ್ಚಾತ್ಯದೇಶಗಳನ್ನು ಆಗಿಂದಾಗ್ಗೆ ಸಂಚರಿಸಿ, ತಮ್ಮ ಸಂಚಾರದ ಅನುಭವವನ್ನು ತಮ್ಮ ಸಂಸ್ಥಾನದ ಪ್ರಜಾಪಾಲನೆಯಲ್ಲಿ ಹೇಗೆ ಉಪಯೋಗಿಸುತ್ತಿರುವರೆಂಬುದು ವಾಚಕರೆಲ್ಲರಿಗೂ ಗೊತ್ತಿರಬಹುದು. ಜರ್ಮನಿ, ಇಂಗ್ಲೆಂಡು, ಫ್ರಾನ್ಸು ಮೊದಲಾದ ದೇಶಗಳನ್ನು ಸಂಚರಿಸುತ್ತಿದ್ದಾಗ ಪಾಶ್ಚಾತ್ಯ ಪಂಡಿತರು ಸಂಸ್ಕೃತವನ್ನು ಕಲಿತು ಅನೇಕ ಶೋಧನೆಗಳನ್ನು ಮಾಡಿರುವ ವೃತ್ತಾಂತಗಳನ್ನು ಮಹಾರಾಜರವರು ಪ್ರತ್ಯಕ್ಷ ಕಂಡಿರಬಹುದು. ಸಂಸ್ಕೃತ ವಿದ್ಯೆಯ ಪರಿಚಿತಿಯನ್ನು ಮಾಡಿಕೊಳ್ಳುವ ಅಭಿರುಚಿಯು ಪಾಶ್ಚಾತ್ಯ ಜನಗಳಲ್ಲಿ ಈಗ ತಾನೇ ಉದ್ಭವಿಸಿರುವುದನ್ನೂ ಮಹಾರಾಜರವರು ತಿಳಿದಿರಬಹುದು. ಆದ್ದರಿಂದ ಸಂಸ್ಕೃತ ವಿದ್ಯೆಯನ್ನು ನೂತನ ಪದ್ಧತಿಯ ಪ್ರಕಾರ ಭಾರತೀಯರು ಸಹ ಕಲಿಯಬೇಕೆಂದು ಸುಧಾರಕರ ಅಗ್ರಗಣ್ಯರಾದ ಈ ಮಹನೀಯರು ಅಪ್ಪಣೆ ಕೊಡಿಸಿರುವರು. ಇವರು ಸಂಸ್ಕೃತ ಕಾನ್ಫರೆನ್ಸ್ ನಡೆದ ಸಂದರ್ಭದಲ್ಲಿ ಮಾಡಿದ ಭಾಷಣದ ಇನ್ನು ಕೆಲವು ಅಂಶಗಳಿಂದ ಮಹಾರಾಜರವರ ಸೂಚನೆಗಳೇನೆಂಬುದನ್ನು ತಿಳಿಯಬಹುದು. ಈ ಭಾಷಣದ ಸಾರಾಂಶವೇನೆಂದರೆ—ಯಾವ ವಿಷಯಕವಾದ ಜ್ಞಾನವು ಸಮಾಜಕ್ಕೆ ಪ್ರಯೋಜನಕಾರಿಯಾಗಿಲ್ಲವೋ ಅದು ಎಷ್ಟು ಶ್ರೇಷ್ಠವಾಗಿದ್ದಾಗ್ಯೂ ನಿರರ್ಥಕವಾದುದೇ ಸರಿ. ಆಚರಣೆಯಲ್ಲಿಯೂ ಪದ್ಧತಿಯಲ್ಲಿಯೂ ಕಾಲಾನುಗುಣ್ಯವಾಗಿ ಹೆಚ್ಚುಕಡಮೆ ಮಾಡುತ್ತಿರಬೇಕು. ಸೃಷ್ಟಿಯ ನಿಯಮವನ್ನನುಸರಿಸಿ ಆಗುತ್ತಿರುವ ಈ ವ್ಯತ್ಯಾಸವನ್ನು ಪ್ರತಿಬಂಧ ಪಡಿಸಲು ಪ್ರಯತ್ನಿಸುತ್ತಿರುವವರ ಪ್ರಯತ್ನವು ವ್ಯರ್ಥವಾಗುತ್ತೆಂದು ಸಮಾಜ ಶಾಸ್ತ್ರದಿಂದ ವ್ಯಕ್ತವಾಗುತ್ತದೆ. ಈ ವಿಧವಾದ ಪ್ರತಿಬಂಧವು ಎಷ್ಟು ಪ್ರಬಲವಾಗಿ ಆಗುತ್ತದೆಯೋ ಅಷ್ಟು ಸುಧಾರಣೆಯ ವೇಗವು ಕುಂಠಿತವಾಗುತ್ತದೆ. ಕಾಲ ಸ್ಥಿತಿಗೆ ಅನುಸಾರವಾಗಿ ವ್ಯತ್ಯಾಸವನ್ನು ಮಾಡಿಕೊಳ್ಳುವುದೇ ಸುಧಾರಣೆಗೆ ಮುಖ್ಯ ಉಪಾಯವು. ಸಾಮಾನ್ಯವಾಗಿ ಬೇಕಾಗಿರುವ ಸುಧಾರಣೆಯ ವಿಶೇಷತ್ವವನ್ನು ಸಭೆಯಲ್ಲಿ ಸೇರಿದ್ದ ಸಂಸ್ಕೃತ ಪಂಡಿತರಿಗೆ ಈರೀತಿ ಸೂಚಿಸಿ ಸಂಸ್ಕೃತ ವಿದ್ಯೆಯನ್ನು ಕಲಿತುಕೊಳ್ಳುವ ನವೀನ ಸುಧಾರಣೆಯ ಉಪಾಯವನ್ನು ತೋರಿಸಿಕೊಟ್ಟಿರುತ್ತಾರೆ.—"ಯಾವ ಭಾಷೆಯಾದರೂ ಸರಿಯೆ ಆ ಭಾಷೆಗಳನ್ನಾಡುವ ಜನಗಳ ಆಚಾರ ವಿಚಾರಗಳನ್ನು ತೋರಿಸುವ ಕನ್ನಡಿಯಂತಿದೆ. ಆದರೆ ಆ ಭಾಷೆಯ ಅಧ್ಯಯನವನ್ನು ಶೋಧಕ ಬುದ್ಧಿಯಿಂದಲೂ, ಸ್ವತಂತ್ರ ವಿಚಾರದಿಂದಲೂ, ತಾರತಮ್ಯ ದೃಷ್ಟಿಯಿಂದಲೂ ಮಾಡಬೇಕು. ಸಂಸ್ಕೃತ ಪಂಡಿತರಿಗೆ ಮತಪರಿಶ್ರಯವಿಲ್ಲದ್ದರಿಂದ ಇಂತಹ ನೂತನ ವಿಚಾರಗಳುಂಟಾಗಲವಕಾಶವಿಲ್ಲದಾಗಿದೆಯೆಂದು ಕೆಲವರು ಹೇಳಬಹುದು. ಇದು ಯುಕ್ತವಾದುದಲ್ಲ. ಅನೇಕ ಸಂಸ್ಥಾನಗಳಿಂದ ತುಂಬಾ ಪ್ರೋತ್ಸಾಹ ದೊರೆಯುತ್ತಿದೆ. ನಮ್ಮ ಸಂಸ್ಥಾನದಲ್ಲಿಯೇ ಕಳೆದ ನೂರಾರು ವರುಷಗಳಿಂದಲೂ ಸಂಸ್ಕೃತ ಪಂಡಿತರಿಗೆ ದಕ್ಷಿಣೆ ವರ್ಷಾಶನಗಳ ಮೂಲಕ ಲಕ್ಷಾಂತರ ರೂಪಾಯಿ ವ್ಯಯವಾಗಿದೆ. ಈ ವರೆಗೆ ಒಬ್ಬರಾದರೂ ಶೋಧಕ ಬುದ್ಧಿಯಿಂದ ಅಧ್ಯಯನ ಮಾಡಿರುವರೇ ? ಸಮಾಜಕ್ಕೆ ತಮ್ಮ ಜ್ಞಾನದಿಂದ ಏನಾದರೊಂದು ಪ್ರಯೋಜನವನ್ನು ಮಾಡುತ್ತಿರುವರೇ ? ಒಬ್ಬರಾದರೂ ಒಂದು ನೂತನ ಶೋಧನವನ್ನಾಗಲಿ ಹೊಸ ಮಾರ್ಗವನ್ನಾಗಲಿ ಕಲ್ಪಿಸಿರುವರೇ ? ಯಾವ ಕಾರ್ಯವು ವ್ಯಕ್ತಿಗೆ ಅವಮಾನವಾದ ಪ್ರಯೋಜನವನ್ನುಂಟುಮಾಡುವದಿಲ್ಲವೋ ಆ ಕಾರ್ಯವು ಬಹು ದಿವಸ ನಡೆಯಲಾರದು. ವಿದ್ಯೆ ಧರ್ಮಜ್ಞಾನಗಳು ಸಕಲರ ಸಂಪತ್ತುಗಳಾಗಿರುವದರಿಂದ ಅವು ಸಕಲರಿಗೂ ಪ್ರಾಪ್ತವಾಗುವ ಅವಕಾಶವಿರಬೇಕು. ಮತಾಭಿಮಾನ, ಜಾತ್ಯಭಿಮಾನ, ಧರ್ಮಾಭಿಮಾನಗಳನ್ನು ಬಿಟ್ಟು ಶಾಸ್ತ್ರೀಯ ಪದ್ಧತಿಯನ್ನನುಸರಿಸಿ ಪ್ರಯತ್ನಿಸದ ವಿನಹ ನಮ್ಮ ಪ್ರಾಚೀನ ಭಂಡಾರದ ನಿಜಜ್ಞಾನವಾಗುವದಿಲ್ಲ. ಪಾಶ್ಚಾತ್ಯ ಪಂಡಿತರ ಪ್ರಯತ್ನದಿಂದಲೂ, ಪಾಶ್ಚಾತ್ಯ ಜ್ಞಾನದಿಂದಲೂ ಈ ಪದ್ಧತಿಯು ನಮಗೆ ಗೊತ್ತಾಗಿದೆ. ಈ ಪದ್ಧತಿಯನ್ನು ಸಕಲರೂ ಅನುಸರಿಸುವುದು ಯುಕ್ತವು. ಹಿಂದುಸ್ಥಾನದಲ್ಲಿರುವ ಹಿಂದುಗಳಿಗೆ ತಮ್ಮ ಧರ್ಮವೂ ಅದರ ನಿಜವಾದ ತತ್ವವೂ ತಿಳಿದಿಲ್ಲವೆಂದು ಹೇಳಬಹುದು. ತಮ್ಮ ಧರ್ಮದ ಶಿಕ್ಷಣವು ತಮ್ಮ ಜನಾಂಗಕ್ಕೇನೇ ಇಲ್ಲದ ಸ್ಥಿತಿಯು ಸುಧಾರಿಸಿದ ಯಾವ ದೇಶದಲ್ಲಿಯೂ ಇಲ್ಲ." ಈ ರೀತಿ ಮಹಾರಾಜರವರು ಹೇಳಿದ ಸೂಚನೆಗಳೆಲ್ಲಾ ಬೇಗ ಆಚರಣೆಗೆ ಬರುವಂತೆ ಬರೋಡಾದಲ್ಲಿ ಒಂದು ಸಂಸ್ಕೃತ ಕಾಲೇಜು ಸ್ಥಾಪಿಸಲ್ಪಡುವುದೆಂದು ಕೇಳುತ್ತೇವೆ. ಈ ಸುಧಾರಕ ಮಹಾರಾಜರ ಅರ್ಥಗರ್ಭಿತವಾದ ಮಾತುಗಳನ್ನು ಈ ಪ್ರಾಂತ್ಯಗಳ ಧರ್ಮಗುರುಗಳೂ, ಪುರೋಹಿತರೂ ಅವಶ್ಯವಾಗಿ ತಿಳಿದುಕೊಳ್ಳಬೇಕಾಗಿದೆ.—ಸ್ವ.

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ವಿಷಯ ತಿಳಿಯಬೇಕಂತೆ.

ಅಯ್ಯಾ,—ಒಂದು ಕುಟುಂಬದಲ್ಲಿದ್ದ ಮೂರು ಜನ ಸಹೋದರರ ಪೈಕಿ ಹಿರಿಯವನು ಮಗಳನ್ನೂ, ಇನ್ನೊಬ್ಬನು ತನ್ನ ಅಣ್ಣನ ಪತ್ನಿಯ ಚಿಕ್ಕ ತಾಯಿಯನ್ನೂ ವಿವಾಹ ಮಾಡಿಕೊಳ್ಳುತ್ತಾರೆಂದೂ, ಮಿಕ್ಕುಳಿದ ಸಹೋದರನು ಅಕ್ಕನನ್ನೂ, ಮಗನಾದವನು ಕಿರಿಯ ಸಹೋದರಿಯನ್ನೂ ಮದುವೆಮಾಡಿಕೊಳ್ಳುತ್ತಾರೆಂದೂ, ಹೀಗೆ ಲಗ್ನ ಬೆಳಸಿಕೊಂಡ ತರುವಾಯ ಈ ತಮ್ಮ ಪತ್ನಿಯವರಿಬ್ಬರಿಗಿರುವ ಸಹೋದರಿಯನ್ನು ಮೇಲ್ಕಂಡ ಮೂರು ಜನ ಸಹೋದರರು ತಮ್ಮ ಭಾವನಿಗೊಬ್ಬನಿಗೆ ವಿವಾಹ ಮಾಡಿ ತಂದುಕೊಳ್ಳುತ್ತಾರೆಂದೂ ಊಹಿಸೋಣ. ಈ ಬಂಧುತ್ವವು ಹ್ಯಾಗೆ ? ಮತ್ತು ಮೇಲ್ಕಂಡ ಜನರು ಪರಸ್ಪರ ಯಾವ ವಿಧವಾಗಿ ಕರೆಕೊಳ್ಳಬೇಕು ಎಂಬವನ್ನು ದಯವಿಟ್ಟು ಯಾರಾಗಲಿ ತಿಳಿಸುವಿರೇ ?

ವಿಚಾರಕರ್ತ.

[ಇಂಥಾ ಸಂಬಂಧಗಳು ಎಲ್ಲೂ ನಡೆದಂತೆ ಕೇಳಿಲ್ಲ —ಎಡಿ.]

ಹುಚ್ಚು ನಾಯಿಗಳ ಕಾಟ.

ಅಯ್ಯಾ,—ಕಳೆದ ಯುಗಾದಿ ಹಬ್ಬದ ಮರುದಿನ ಬಳ್ಳಾರಿಯಲ್ಲಿ ರಾತ್ರಿ ಸುಮಾರು 8 ಘಂಟೆ ಸಮಯದಲ್ಲಿ ಒಂದು ಹುಚ್ಚು ನಾಯಿ 20 ಜನಗಳನ್ನು ಕಡಿಯಿತು. ಆ ಪೈಕಿ 9 ಜನಗಳು ಬಹಳ ಬಾಧೆಪಟ್ಟು ನೀಲಗಿರಿಯಲ್ಲಿರುವ ಆಸ್ಪತ್ರೆಗೆ ಇಲಾಜಿಗೋಸ್ಕರ ಹೋಗುತ್ತಾ ಇದ್ದರು. ಅವರ ರೋಗಕ್ಲೇಶವನ್ನು ವಿಚಾರಿಸಲು ಅವರಿಂದ ಮುದ್ದಾಗಿ ತಿಳಿಯಿತು. ಇವರು ಮಹಮದೀಯರು. ಆ ನಾಯನ್ನು ಹೊಡೆದುಹಾಕಿದರಂತೆ. ಇನ್ನೂ ಅನೇಕ ಕಡೆಯಲ್ಲಿ ಹುಚ್ಚು ನಾಯಿ ಹೀಗೆ ಕಡಿಯುತ್ತದೆ. ಮನುಷ್ಯನ ರಕ್ತದ ರುಚಿಯು ನಾಯಿಗೆ ತಿಳಿದ ಮೇಲೆ ಅದು ಇತರರನ್ನು ಕಡಿಯುತ್ತದೆ. ಆದ್ದರಿಂದ ಇಂಥಾ ನಾಯಿಗಳನ್ನು ಪರಿಹರಿಸುವದು ಒಳ್ಳೇದು. ಸಾಕುವ ನಾಯಿಗಳಾದರೆ ಒಡನೆ ಯಜಮಾನನಿಗೆ ತಿಳಿಸಬೇಕು. ಸಣ್ಣ ಗ್ರಾಮಗಳಲ್ಲಿದ್ದರೆ ಇಂಥಾ ನಾಯಿ ಈ ರೀತಿ ಕಡಿಯುತ್ತೆಂದು ಪಟೇಲ್ ಶ್ಯಾನುಭೋಗರು ತಿಳಿದ ಕೂಡಲೇ ಹೊಡಿಸಿಹಾಕಬೇಕು. ಇದರಿಂದ ಗ್ರಾಮಾಂತರಗಳಲ್ಲಿ ಹುಚ್ಚುನಾಯಿಗಳ ಕಾಟ ತಪ್ಪುವದು.

ಒಬ್ಬ ಪ್ರಯಾಣಿಕ.

ಪೋಸ್ಟ್ ಮೆನ್ ಸಂಬಳ ವಿಚಾರವು.

ಅಯ್ಯಾ,—ಶಿವಮೊಗ್ಗ ಡಿಸ್ಟ್ರಿಕ್ಟು ಚನ್ನಗಿರಿ ತಾಲ್ಲೂಕು ಬಸವಾಪಟ್ಣ ಪೋಸ್ಟಿಗೆ ಸುಮಾರು 40 ಹಳ್ಳಿಗಳು ಸೇರಿವೆ. ಈ ಎಲ್ಲಾ ಗ್ರಾಮಗಳೂ ವಾರಕ್ಕೆ ಎರಡಾವರ್ತಿ ಸುತ್ತಬೇಕಾಗಿದೆ. ಸಂಬಳ ಮಾತ್ರ 8 ರೂಪಾಯಿ ಇರುವುದರಿಂದ ಇಷ್ಟು ಅಲ್ಪ ಸಂಬಳ ತೆಗೆದುಕೊಂಡು ಕೆಲಸಮಾಡಲು ಯಾರೂ ಪೋಸ್ಟ್‌ಮೆನ್ ಕೆಲಸಕ್ಕೆ ಒಪ್ಪದೆ ಬಹಳ ಕಾಲದಿಂದಲೂ ಪೋಸ್ಟ್‌ಮೆನ್ ಇರಲೇ ಇಲ್ಲ. ಹಳ್ಳಿ ಜನಗಳಿಗೆ ಕಾಗದ ತಲಪುತ್ತಲೇ ಇರಲಿಲ್ಲ. ಪೋಸ್ಟ್ ಆಫೀಸಿಗೆ 2-3 ತಿಂಗಳಿಗೊಂದಾವರ್ತಿ ಆಕಸ್ಮಾತ್ತು ಹೋದಾಗ ಒಂದೇ ಸರ್ತಿ ಸಿಕ್ಕುತ್ತಿದ್ದವು. ಇಂಥಾ ಅವ್ಯವಸ್ಥೆಯಾದ ಇಲಾಖೆಯು ಈ ರೀತಿ ಅವ್ಯವಸ್ಥೆ ಆದಲ್ಲಿ ಜನರಿಗೆ ಎಷ್ಟು ತೊಂದರೆಯೆಂಬುವುದು ಪೋಸ್ಟ್ ಇಲಾಖೆಯವರು ಯೋಚಿಸತಕ್ಕ ವಿಷಯವಾಗಿದೆ. ಈಗ ಮಾತ್ರ ಇಲ್ಲಿನ ಜನಗಳ ಅದೃಷ್ಟದಿಂದ ತೋರಿಗೆರೆ ಪಾರಿ ಮಲ್ಲಪ್ಪನೆಂಬುವರು ಪೋಸ್ಟ್‌ಮೆನ್ ಕೆಲಸಕ್ಕೆ ಒಪ್ಪಿ ಕೆಲಸದ ಮೇಲೆ ನಿಂತು ವಾರಕ್ಕೆ ಎರಡು ಆವರ್ತಿ ಕ್ರಮವಾಗಿ ಬಂದು ಕಾಗದ ಪತ್ರಗಳನ್ನು ಬಟವಾಡೆ ಮಾಡುತ್ತಾರೆ. ಆದರೆ ಸಂಬಳದ ವಿಷಯದಲ್ಲಿ ಬೇಸರಪಡುತ್ತಾ ಇದಾರೆ. ಮಾಹೆಯಾನಾ ಹತ್ತು ರೂಪಾಯಿ ಸಂಬಳದಿಂದ ಇವರನ್ನು ಪ್ರೋತ್ಸಾಹಿಸಿದರೆ ಜನಗಳಿಗೂ ಪೋಸ್ಟ್ ಇಲಾಖೆಯವರಿಗೂ ಅನುಕೂಲವಾಗಿದೆ. ಪೋಸ್ಟ್‌ಮೆನ್ ಪ್ರೋತ್ಸಾಹಹೀನರಾದರೆ ಬಸವಾಪಟ್ಣದ ಪೋಸ್ಟ್ ತೆಗೆದುಬಿಡುವುದು ಲೇಸಾಗಿ ತೋರುತ್ತೆ.

ಪ್ರಜಾ ಹಿತಚಿಂತಕ.

ಪ್ಲೇಗ್ ಮತ್ತು ಇನಾಕ್ಯುಲೇಷನ್ ಫಲ.

ಅಯ್ಯಾ,—ಈ ನಮ್ಮ ಹಿಂದೂ ದೇಶಕ್ಕೆ ಪ್ಲೇಗ್ ವ್ಯಾಧಿಯು ಬಂದು ಸುಮಾರು 20 ವರ್ಷಗಳಿಂದಲೂ ಅನೇಕರನ್ನು ಆಹುತಿ ತೆಗೆದುಕೊಳ್ಳುತ್ತಿರುವುದು ಸರ್ವತ್ರ ವಿದಿತವಾದ ವಿಷಯವಾಗಿರುವುದು. ಈ ಭಯಂಕರ ವ್ಯಾಧಿಯನ್ನು ಅಡಗಿಸಲು ಆಂಗ್ಲ ಸಾರ್ವಭೌಮ ಸರಕಾರದವರು ಅನೇಕ ಚಿಕಿತ್ಸೆಗಳನ್ನು ಕಂಡುಹಿಡಿದಿರುವರು. ಆ ಚಿಕಿತ್ಸೆಗಳಲ್ಲಿ ಇನಾಕ್ಯುಲೇಷನ್ ಎಂಬುದು ಪರಮ ಪ್ರಯೋಜನಕಾರಿಯಾಗಿರುವುದು. ಹೇಗೆಂದರೆ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ಈ ನಂದಿ ಗ್ರಾಮಕ್ಕೆ ಪ್ಲೇಗ್ ವ್ಯಾಧಿಯು ಸಂಭವಿಸಿತ್ತು. ಡಿಸ್ಟ್ರಿಕ್ಟ್ ಹೆಲ್ತಾಫೀಸರವರು ಬಂದು ಇಲ್ಲಿನ ಜನಗಳಿಗೆ ಅನೇಕ ಬುದ್ಧಿವಾದಗಳನ್ನು ಹೇಳಿ ಕೆಲವು ಜನಗಳಿಗೆ ಇನಾಕ್ಯುಲೇಷನ್ ಮಾಡಿದ್ದರು. ಆಗ್ಗೆ ನನ್ನ ಮಗ ಮೂರು ವರ್ಷದ ಮಗುವಾಗಿದ್ದರೂ ಅಂಜದೆ ಇನಾಕ್ಯುಲೇಷನ್ ಮಾಡಿಸಿದ್ದೆನು. ನಾನು ಸಹಾ ಹಾಕಿಸಿಕೊಂಡಿದ್ದೆನು. ಈ ವಿಷಯದಲ್ಲಿ ಅನುಮಾನಸ್ಥನಾಗಿದ್ದ ನನಗೆ ಯಾವ ಅಪಾಯವೂ ತೋರಿಬರಲಿಲ್ಲವು. ಹೋದ ವರುಷ ನವಂಬರು ತಿಂಗಳಲ್ಲಿ ಪುನಃ ಈ ಪ್ಲೇಗ್ ವ್ಯಾಧಿಯು ಈ ನಂದಿ ಪ್ರಾಂತ್ಯವನ್ನೆಲ್ಲಾ ಆವರಿಸಿಕೊಂಡದ್ದರ ಮೇಲೆ ಕೋಲಾರದ ಹೆಲ್ತಾಫೀಸರವರು, ಚಿಕ್ಕಬಳ್ಳಾಪುರದ ಅಮಲ್ದಾರ್ರವರು, ಡಾಕ್ಟರವರು ಸಹಾ ಈ ಗ್ರಾಮಕ್ಕೆ ದಯಮಾಡಿಸಿ ದೊಡ್ಡವರು ಮತ್ತು ಬಾಲಕರು ಸುಮಾರು 300 ಮಂದಿಗೆ ಇನಾಕ್ಯುಲೇಷನ್ ಹಾಕಿದರು. ಆ ವೇಳೆಯಲ್ಲಿ ನಾನೂ, ನನ್ನ ಮಗ ಆರು ವರ್ಷದ ನಂದೀಶ್ವರಯ್ಯ ಸಹಾ ಹಾಕಿಸಿಕೊಂಡೆವು. ಇನಾಕ್ಯುಲೇಷನ್ ಹಾಕಿಸಿಕೊಂಡವರ ಪೈಕಿ ನನ್ನ ಮಗನಿಗೆ ಇದ್ದಕ್ಕಿದ್ದ ಹಾಗೇ ಜ್ವರವೂ, ಗಡ್ಡೆಯೂ ಕಾಣಿಸಿಕೊಂಡಿತು. ನನಗೆ ಒಬ್ಬನೇ ಮಗನಾಗಿದ್ದುದರಿಂದ ಬಹಳ ಭಯವೂ, ವ್ಯಸನವೂ ಮನಸ್ಸಿಗೆ ಉಂಟಾಯಿತು. ಇನಾಕ್ಯುಲೇಷನ್ ಮಾಡಿಸಿದ್ದರೂ ಧೈರ್ಯ ಸಾಲದೆ ಬದುಕುವನೋ ಇಲ್ಲವೋ ಎಂಬ ಸಂಶಯದಿಂದ ಸಹಿಸಲಾಗದಷ್ಟು ವ್ಯಸನದಲ್ಲಿ ಮುಳುಗಿದ್ದೆನು. ಹೀಗಿರಲಾಗಿ ಮೂರು ದಿನಗಳ ನಂತರ ನನ್ನ ಮಗನು ಎದ್ದು ಎಂದಿನಂತೆ ಓಡಾಡಲಾರಂಭಿಸಿದನು. ಎಂಟು ದಿನಗಳ ವರೆಗೆ ಗಡ್ಡೆಯು ಇದ್ದು ಕರಗಿಹೋಯಿತು. ಯಾವದೊಂದು ಚಿಕಿತ್ಸೆಯನ್ನೂ ಮಾಡಲಿಲ್ಲವು. ಈಗ ಆಡಿಕೊಂಡು ಆರೋಗ್ಯದಿಂದಿರುವನು. ಇದೇ ವಿಧವಾಗಿ ಈ ಗ್ರಾಮದ 5-6 ಮಂದಿ ಬಾಲಕರಿಗೆ (ಇವರು ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರು) ಪ್ಲೇಗ್ ಸಂಭವಿಸಿದ್ದರೂ ಯಾವ ಅಪಾಯವೂ ಇಲ್ಲದೆ ಬದುಕಿಕೊಂಡಿರುತ್ತಾರೆ. ಇದಕ್ಕೆಲ್ಲಾ ಇನಾಕ್ಯುಲೇಷನ್ನೇ ಮುಖ್ಯವಲ್ಲದೆ ಬೇರೊಂದಲ್ಲವೆಂಬುದು ನನ್ನ ಸಿದ್ಧಾಂತಾಭಿಪ್ರಾಯವಾಗಿದೆ. ಇಂಥಾ ಪ್ರಾಣ ರಕ್ಷಣೆಯನ್ನು ಮಾಡುವ ಚಿಕಿತ್ಸೆಗಾಗಿ

ಪ್ರಜಾ ಸಂರಕ್ಷಣಾ ತತ್ಪರರಾದ ಶ್ರೀಮನ್ ಮಹಾರಾಜಾ ಸರಕಾರದವರು ಸಾವಿರಾರು ರೂಪಾಯಿ ಖರ್ಚು ಮಾಡುತ್ತಿರುವುದು ನಮಗೋಸ್ಕರವಲ್ಲವೇ? ಈ ಭಯಂಕರ ವ್ಯಾಧಿಯಿಂದ ಪಾರಾಗಲು ಕೋರುವವರೆಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಂಡಲ್ಲಿ ನಿರ್ಭಯರಾಗಿರಬಹುದೆಂಬುದು ನನ್ನ ಅನುಭವದಿಂದ ವೃಢಪಡಿಸುವೆನು. ಮತ್ತು ಪ್ಲೇಗಿನ ವ್ಯಾಧಿಗೆ ಇನಾಕ್ಯುಲೇಷನ್ನೇ ಪರಮೌಷಧವಾಗಿರುವುದೆಂದು ನನ್ನ ಮನಃಪೂರ್ವಕವಾದ ನಂಬಿಕೆಯಾಗಿದೆ.

ಯೂನಿಯನ್ ಮೆಂಬರ್ ಅಂಗಡಿ ನಂಜುಂಡಪ್ಪ.

ಇಂಗ್ಲಿಷ್ ಲೋವರ್ ಸೆಕೆಂಡರಿ ಟ್ರೈಯನಿಂಗ್ ಇಡಬೇಕು.

ಅಯ್ಯಾ,—ನಮ್ಮ ಎಡ್ಯುಕೇಷನ್ ಇಲಾಖೆಯಲ್ಲಿ ಕೆಲಸಮಾಡಲು ಆಶಿಸುತ್ತಿರುವ ಉಮೇದುವಾರರು ಜೀವನೋಪಾಯಕ್ಕಾಗಿ ಕೆಲಸ ಕೇಳಿಕೊಂಡಲ್ಲಿ ಮೇಲ್ಪಟ್ಟ ಅಧಿಕಾರಿಗಳು ಉಮೇದುವಾರರು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯೊಂದರಲ್ಲೇ ತೇರ್ಗಡೆಹೊಂದಿದ್ದಾಗ್ಯೂ, ಹತ್ತು ರೂಪಾಯಿ ವೇತನ ನಿರ್ಣಯವಾಗಿ ಇರುವ ಸ್ಥಳಕ್ಕೆ ಭರ್ತಿಮಾಡುತ್ತಾರೆ. ಅದರಂತೆಯೇ ಇಂಗ್ಲಿಷ್ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ತಕ್ಕ ಯೋಗ್ಯತಾ ಪತ್ರಿಕೆಗಳನ್ನು ಹೊಂದಿದ್ದಾಗ್ಯೂ, ನಂತರ ಸ್ಕೂಲ್ ಫೈನಲ್ (ಮೆಟ್ರಿಕ್ಯುಲೇಷ್) ಪರೀಕ್ಷೆಗೆ 2-3 ಸಲ ಹೋಗಿ ಉತ್ತೀರ್ಣರಾಗದೆ ಇದ್ದವರಿಗೂ ಮತ್ತು ಮೇಲ್ಕಂಡ ಪರೀಕ್ಷೆಗಾಗಿ ಓದಿದವರ ಪೈಕಿ ಮತ್ತೆ ಕೆಲವರು 4, 5, ಅಥವಾ 6 ನೇ ಫಾರಂ ತನಕ ಓದುತ್ತಿದ್ದು ಸಂದರ್ಭಾನುಸಾರ ಅನನುಕೂಲತೆಗಳಿಂದ ವ್ಯಾಸಂಗ ಬಿಟ್ಟು ಈ ಇಲಾಖೆಗೆ ಬಂದಲ್ಲಿ ಅಂಥವರಿಗೂ ಹತ್ತು ರೂಪಾಯಿ ವೇತನವನ್ನೇ ನಿರ್ಣಯಮಾಡಿ ಅನೇಕ ಜನಗಳನ್ನು ನಿಯಮಿಸಿರುವುದೂ ನಿಯಮಿಸುತ್ತಲೂ ಇರುತ್ತಾರೆ. ಇದರಿಂದ ಕನ್ನಡ ಲೋ. ಸೆ. ಪರೀಕ್ಷೆಯಲ್ಲಿ ಮಟ್ಟಿಗೆ ತೇರ್ಗಡೆಯಾದವರಿಗೂ ಮತ್ತು ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಪರೀಕ್ಷೆಗಳನ್ನು ಕೊಟ್ಟು ಉತ್ತೀರ್ಣರಾದವರಿಗೂ ಮತ್ತು ಸ್ಕೂಲ್ ಫೈನಲ್ (ಮೆಟ್ರಿಕ್ಯುಲೇಷನ್) ಸ್ಟ್ಯಾಂಡರ್ಡಿನ ಯಾವ ಅಂತಸ್ತುಗಳಲ್ಲಿಯೇ ಆಗಲಿ ಓದಿ ವಿದ್ಯಾಪ್ರಾಚುರ್ಯತೆಯನ್ನು ಹೊಂದಿರುವವರಿಗೂ ಸಹ ಶ್ರಮ, ಯೋಗ್ಯತೆ, ಧನವ್ಯಯ, ಇವುಗಳಲ್ಲಿ ಯಾವ ವ್ಯತ್ಯಾಸವೂ ಮಾಡಿರುವಂತೆ ಕಾಣಬರುವುದಿಲ್ಲ. ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆ ಒಂದರ ಸಂಗಡ ಸ್ಕೂಲ್ ಫೈನಲ್ ಪರೀಕ್ಷೆಯ ವರೆಗೆ ಆಗಬಹುದಾದ ಶ್ರಮ, ಮನ, ಧನ ವ್ಯಯಗಳನ್ನು ಊಹಿಸಿದಲ್ಲಿ ಅಜಗಜಾಂತರವಾಗಿ ಕಾಣುತ್ತೆ.

ಈಗ ನಮ್ಮ ಇಲಾಖೆಯಲ್ಲಿ ಟ್ರೈಯನಿಂಗ್ ಶಿಕ್ಷಣವಿಷಯವನ್ನು ಕುರಿತು ನೋಡುವಲ್ಲಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ, ಸ್ಕೂಲ್ ಫೈನಲ್ ಪರೀಕ್ಷೆಯ ಯಾವದೊಂದು ಅಂತಸ್ತಿನವರಿಗಾಗಲಿ ಓದಿ ಬಿಟ್ಟಿರುವ ಮಾಸ್ಟರುಗಳಿಗೆ ಎಫ್. ಎ., ಬಿ. ಎ. ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಈಗ ಇರುವಂತೆ ಇಂಗ್ಲಿಷ್ ಭಾಷೆಯಲ್ಲಿ ತಕ್ಕ ಲೋವರ್ ಟ್ರೈಯನಿಂಗ್ ಇಲ್ಲವಾದ್ದರಿಂದಲೂ, ಅವರುಗಳ ಯೋಗ್ಯತಾನುಸಾರವಾದ ವೇತನವಿಲ್ಲ ಮತ್ತು ಇಂಗ್ಲಿಷ್ ವರ್ಗಗಳಿಗೆ ಪಾಠ ಹೇಳುವಿಕೆಗಳೂ ಸಹ ಮಾಡದಿರುತ್ತಿರುವುದರಿಂದಲೂ ಅವರುಗಳು ಓದಿರುವ ಅಲ್ಪಸ್ವಲ್ಪ ವಿದ್ಯೆಯು ಆಲೋಚನೆಗೆ ಅವಕಾಶವಿಲ್ಲದೆ ಮಾಲಿನ್ಯವನ್ನು ಹೊಂದಿ ತೇಜೋಭಂಗವೂ ಸಹ ಆದಂತೆ ಪರಿಣಮಿಸಿದೆ. ಇಂಥಾ ಮಾಸ್ಟರುಗಳು ಕನ್ನಡ ಲೋವರ್ ಸೆಕೆಂಡರಿ ಟ್ರೈಯನಿಂಗ್ ಪರೀಕ್ಷೆಯಲ್ಲಿ ಶಿಕ್ಷಣವಾಗುವಂತೆ ತೋಳಬಹುದು. ಕನ್ನಡ ಪರೀಕ್ಷೆಯಲ್ಲಿ ಶಿಕ್ಷಣವಾಗುವುದರಲ್ಲಿ ಇಂಗ್ಲಿಷ್ ಭಾಷಾ ಅಲ್ಪಪರಿಚಯವೂ ಮಲಿನವಾಗಬಹುದು. ಕನ್ನಡ ಟ್ರೈಯನಿಂಗಿನ ಶಿಕ್ಷಣದ ತರ್ಜುಮೆಯೇ ಇಂಗ್ಲಿಷಿನಲ್ಲಿ ಇವರುಗಳಿಗೆ ಸ್ಕೂಲ್ಲಿ ವಿದ್ಯಾಪ್ರಾಚುರ್ಯಕ್ಕೆ ತಕ್ಕ ಅವಕಾಶವಾದೀತನ್ನುವುದಕ್ಕೆ ಸಂದೇಹವಿಲ್ಲ. ಆದ್ದರಿಂದ ಮಹಾನೀಯರುಗಳಾದ ಇಲಾಖಾ ಮುಖ್ಯಾಧಿಕಾರಿಗಳು ಸ್ಕೂಲ್ ಫೈನಲ್, ಎಫ್. ಎ. ಬಿ. ಎ. ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಇಂಗ್ಲಿಷ್ ಭಾಷೆಯಲ್ಲಿ ಟ್ರೈಯನಿಂಗ್ ಕೊಡುವಂತೆಯೇ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸ್ಕೂಲ್ ಫೈನಲ್ ಅಂತಸ್ತಿನ ವರೆಗೆ ಓದಿರುವ ಬಿಸಿ ಮಾಸ್ಟರುಗಳಿಗೂ ಸಹ ಇಂಗ್ಲಿಷ್ ಲೋವರ್ ಟ್ರೈಯನಿಂಗ್ ಪರೀಕ್ಷೆಯನ್ನಿಟ್ಟು ತಕ್ಕ ಉತ್ತೇಜನ ಕೊಟ್ಟಲ್ಲಿ ನಮ್ಮ ಇಲಾಖೆಯು ಮತ್ತಷ್ಟು ವೃದ್ಧಿಯಾಗುತ್ತೆನ್ನುವುದಕ್ಕೆ ಸಂದೇಹವಿಲ್ಲ ನೆಂದು ತೋರುವ

ವಿದ್ಯಾಹಿತೈಷಿ.

ನಾಮಧಾರಿಗಳೂ, ಸ್ತ್ರೀ ಪುನರ್ವಿವಾಹವೂ.

ಅಯ್ಯಾ,—ನಾಮಧಾರಿಗಳಲ್ಲಿ ಸ್ತ್ರೀ ಪುನರ್ವಿವಾಹದ ಕ್ರಮವು ಆಚರಣೆಯಲ್ಲಿದ್ದರೂ ಕೇವಲ ನಿರ್ಗತಿಕರಾದ ಬಡವರ ಪಾಲಿಗೆ ಸೇರಿದ್ದಾಗಿದೆ. ಗೌರವವುಳ್ಳವರೂ, ಹಣಗಾರರೂ ಆದವರಲ್ಲಿ ಸ್ತ್ರೀ ಪುನರ್ವಿವಾಹವು ಕೇವಲ ತುಚ್ಛವೆಂತಲೂ, ಗೌರವಯೋಗ್ಯವಲ್ಲವೆಂತಲೂ ಭಾವಿಸಿ, ಒಬ್ಬ ಭಾರ್ಯೆ ಮೃತಪಟ್ಟರೆ ಮತ್ತೊಂದು ಕನ್ಯೆಯನ್ನೂ, ಆಕೆಯೂ ಮೃತಪಟ್ಟರೆ ಮತ್ತೊಂದು ಲಗ್ನಮಾಡಿಕೊಳ್ಳಬೇಕಾಗಿದ್ದಲ್ಲಿಯೂ ಕೂಡ ಕನ್ಯೆಯೇ ಆಗಬೇಕು. ವಯಸ್ಸಿನಲ್ಲಿ 10-12 ಆಗಿದ್ದರೂ ಆಗಬಹುದು. ಅಂಥಾ ಕನ್ಯೆಗೆ 300 ರಿಂದ 700-800 ರೂಪಾಯಿ ವರಿಗೆ ಕನ್ಯಾಶುಲ್ಕವೆಂಬ ತೆರವನ್ನು ಕೊಟ್ಟು ಲಗ್ನಮಾಡಿಕೊಳ್ಳುತ್ತಾರೆ. ಹಣಗಾರನಾದವನು 700-800 ರೂಪಾಯಿಗಳನ್ನಾದರೂ ಕೊಟ್ಟು ಲಗ್ನಮಾಡಿಕೊಳ್ಳುತ್ತಾನೆ. ಬಡವನಾಗಿರತಕ್ಕವನು ಏನು ಮಾಡಬೇಕು? ತನ್ನ ಆಸ್ತಿಯನ್ನು ಮಾರಾಟಮಾಡಿದರೂ ಅಷ್ಟು ಹಣ ದೊರೆಯುವುದಿಲ್ಲ. ಇಂಥಾ ವರ ಲಗ್ನವು ಕೇವಲ ಕಷ್ಟಕರವೆಂದು ಹೇಳುವುದರಲ್ಲಿ ಏನೇನೂ ಸಂಶಯವಿಲ್ಲ. ಒಂದು ವೇಳೆ ಸಾಲಸೋಲಮಾಡಿ ಲಗ್ನಮಾಡಿಕೊಂಡ ಮನುಷ್ಯನು ಹ್ಯಾಗೂ ಸಾಲ ಕೊಟ್ಟವರಿಗೆ ಗುಲಾಮನಾಗಿಬೇಕಾಗುವುದು. ವಿಧವೆಯರನ್ನು ಪುನರ್ವಿವಾಹ ಮಾಡಿಕೊಳ್ಳಬೇಕಾದರೂ ಮಹಳ ಬಲವಾದ ಕಟ್ಟು ಇರುತ್ತದೆ. ವಿಧವೆಯನ್ನು ಮದುವೆಮಾಡಿಕೊಳ್ಳಬೇಕಾದರೆ ಮಾಡಿಕೊಳ್ಳುವವನಿಗೆ ಮೊದಲು ಕನ್ಯೆಯು ಲಗ್ನವಾಗಿರಬೇಕು. ಮತ್ತು ವಿಧವೆಯು ಲಗ್ನವಾದ ತರುವಾಯ ಸದರಿ ದಂಪತಿಗಳು ಶುಭಾಶುಭ ಕಾರ್ಯಗಳಲ್ಲಿ ಯೋಗ್ಯರಲ್ಲವೆಂದು ದೂರೀಕರಿಸುತ್ತಾರೆ. ಇಂಥಾ ವಿವಾಹ ಮಾಡಿಕೊಂಡು ಗೌರವಹೀನರಾಗುವುದಕ್ಕಿಂತಲೂ ಹಾಗೆಯೇ ಇರುವುದು ಲೇಸೆಂದು ಸ್ತ್ರೀ ಪುನರ್ವಿವಾಹ ಕ್ರಮವನ್ನು ಕೇವಲ ಬಡವರಿಗೆ ಬಿಟ್ಟಿರುತ್ತಾರೆ. ಹೆಂಡತಿ ಸತ್ತುಹೋದವರಿಗೇನೇ ಲಗ್ನವಾಗಲಿಕ್ಕೆ ಪ್ರತಿಬಂಧಕವು ಶೇಕಡ 50 ರ ಸಂಖ್ಯೆಯನ್ನು ಮೀರಿಸುತ್ತದೆ. ಸ್ತ್ರೀಯರಲ್ಲಿ ಪುನರ್ವಿವಾಹವಾಗಲು ಯೋಗ್ಯರಾದವರು ಸಹಾ ಶೇಕಡ 50-60 ಸಿಕ್ಕಬಹುದು. ಸ್ತ್ರೀ ಪುನರ್ವಿವಾಹವಾಗುವುದರಿಂದ ಜಾತಿಯರಿಗೆ ಹೆಚ್ಚು ಅಭಾವವೂ ಮತ್ತೂ ಈಗ ಸಹಾ ಕುಗ್ಗಿರುವ ಸ್ಥಿತಿಗಿಂತಲೂ ಎಷ್ಟೋ ಉತ್ತಮಸ್ಥಿತಿಗೆ ಬರಬಹುದಲ್ಲವೇ? ಸ್ತ್ರೀ ಪುನರ್ವಿವಾಹ ಕ್ರಮವು ಹಿಂದುಳಿದಿರುವುದರಿಂದ ವಿಧವೆಯರಿಗೆ ಆಜನ್ಮಾಂತದವರೆಗೆ ಇಟ್ಟುಕೊಳ್ಳುವುದರಿಂದ ಉಂಟಾಗುವ ಅನರ್ಥಗಳು ಅಷ್ಟಿಷ್ಟೆಂದು ಹೇಳಲು ಶಕ್ಯವಲ್ಲ. ಆದರೂ ಸ್ವಲ್ಪ ಮಟ್ಟಿಗೆ ಉದಾಹರಿಸುವೆನು.

ವಿಧವೆಯರಿಗೆ ಪುನರ್ವಿವಾಹ ಮಾಡದೆಹೋಗುವುದರಿಂದ ಬಾಲವಿಧವೆಯರಲ್ಲಿ ಸಾಧಾರಣವಾಗಿ ಜರುಗುವ ಹೀಯವಾದ ವ್ಯಭಿಚಾರವೂ, ಕಾಮೋದ್ರೇಕದಿಂದ ಜಾತಿ ಗುಣ ವಿವೇಚನೆಯಿಲ್ಲದೆ ವಿಧವೆಯರು ಪರಪುರುಷರಲ್ಲಿ ಸೇರಿ ನಡೆಸುವ ಜಾರತ್ವವೂ ಮಾನವಂತರಾದ ಬಂಧುಗಳ ಕಣ್ಣಿಗೆ ಕಂಡುಬಂದಾಗ ಅದರಿಂದ ಅನಿವಾರ್ಯವಾಗಿ ಸಂಭವಿಸುವ ನರಹತ್ಯಗಳೂ ಮೊದಲಾದ ಕೃತ್ಯಗಳೂ, ವ್ಯಭಿಚಾರದೋಷಾಸಕ್ತಿಯುಳ್ಳ ವಿಧವೆಯರು ತಮ್ಮ ಉಪಪತಿಗಳ ನಿಮಿತ್ತ ಮಾಡುವ ದುಷ್ಪ್ರಕ್ರಿಯೆಗಳು, ಅಂಥಾ ಅನಾಥ ಯುವತಿಯರು ತಮಗೆ ವಶವಾಗಿರುವುದಕ್ಕಾಗಿ ಗಂಡಸರು ಭಾರ್ಯೆಯರನ್ನು ಸಹ ವ್ಯಭಿಚಾರಕ್ಕೆ ಎಳೆದು ಅವರ ಅಣ್ಣತಮ್ಮಂದಿರು ಮೊದಲಾದವರಿಗೆ ಉಂಟುಮಾಡುವ ಅವಮಾನ ಮನಃಖೇದಗಳು, ಮನೆಯಲ್ಲಿರುವ ನಿರ್ಬಂಧಗಳನ್ನು ತಾಳಲಾರದೆ ಕಾಮಪ್ರೇರಣೆಯಿಂದ ಬೀದಿಗೆ ಬಂದು ನೀಚರಾದ ವಿಟಪುರುಷರ ಸಹಾಯದಿಂದ ಬಾಲವಿಧವೆಯರುಗಳು ಹೊರಗೆ ಹೋದಾಗ ಬಂಧುವರ್ಗಕ್ಕುಂಟಾಗುವ ಮಾನಭಂಗಗಳು, ವಿಧವೆಯರ ವ್ಯಭಿಚಾರಕ್ಕೆ ಫಲವಾದ ಗರ್ಭಸ್ರಾವಗಳು, ಶಿಶುಹತ್ಯಗಳು ಮೊದಲಾದ ಘಾತಕ ಕೃತ್ಯಗಳು ಅನೇಕವಾಗಿರುವವು. ಅಂಥಾ ಕ್ರೂರ ಕೃತ್ಯಗಳು ರಾಜಕೀಯ ಅಧಿಕಾರಿಗಳಿಗೆ ತಿಳಿದು ಅವುಗಳಿಗೆ ಸಮ್ಮಂಧಪಟ್ಟವರನ್ನೆಲ್ಲಾ ನ್ಯಾಯ ಸಭೆಗಳಿಗೆ ಎಳೆದುಕೊಂಡುಹೋದಾಗ ನಿರ್ದೋಷಿಗಳಿಗೆ ಸಹಿತ ಪ್ರಾಪ್ತವಾಗುವ ಶಿಕ್ಷೆಗಳು, ಮಾನಭಂಗಗಳು ಸಹಾ ಕೇಳತಕ್ಕದ್ದಾಗಿರುತ್ತವೆ. ವೃದ್ಧರಾದವರು ಸಹಿತ 1-2 ಬಾಲೆಯರನ್ನು ವಿವಾಹವಾಗುವುದರಿಂದಲೂ, ಬಾಲ್ಯದಸೆಯಲ್ಲಿರುವ ಚಿಕ್ಕ ಕನ್ಯೆಯರು ವಿವಾಹಾವಶ್ಯಕತೆ ಅರಿಯದೆ ನಿರರ್ಥಕರಾಗುವುವಂದಲೂ, ಬಾಲೆಯರಿಗೆ ಬರಬಂದು ಧನಪಿಶಾಚಗ್ರಸ್ತರಾದ ಜನಕರು ನರಮಾಂಸ ವಿಕ್ರಯಕ್ಕೂ ಅಂಜದೆ ತೆರವೆಂಬ ಕ್ರಯದ ಮೊಬಲಗನ್ನು ಸ್ವೀಕರಿಸಿ, ತಮ್ಮ ಮುದ್ದು ಮಕ್ಕಳನ್ನು ವೃದ್ಧ ಪಿಗ್ರಹಗಳಿಗೆ ವಿವಾಹದ ನೆಪದಲ್ಲಿ ಬಲಿಯಿಡುವುದರಿಂದಲೂ ಕನ್ಯಾಶುಲ್ಕವು ಪ್ರಬಲಿಸಲು ಕಾರಣವಾಗಿದೆ. ವಿವಾಹವೆಂದರೆ ಏನೋ ಅರಿಯದ ಅಜ್ಞಾನದಸೆಯಲ್ಲಿಯೇ ಪತಿಗಳು ಪರಲೋಕಗತರಾಗಿ ಶೋಕಸಮುದ್ರದೊಳು ಮುಳುಗಿ ಗಟ್ಟಿಯಾಗಿ ಅಳುತ್ತಿರುವ ಜನನೀ ಜನಕರು ಸಮೀಪಕ್ಕೆ ಹೋಗಿ ಎಳೇ ಬಾಲಕಿಯರು ದುಃಖ ಕಾರಣಗಳನ್ನು ತಿಳಿದುಕೊಳ್ಳಲಾರದೆ, ಅರಿಯದ ಪ್ರಶ್ನೆಗಳನ್ನು ಹಾಕುವಾಗ ತಾಯಿತಂದೆಗಳು ಮಾತ್ರವೇ ಅಲ್ಲದೆ ನೋಡಿದವರಿಗೂ ಕೇಳಿದವರಿಗೂ ಸಹಾ ಉಂಟಾಗುವ ಹೃದಯಶಲ್ಯದ ಸಂತಾಪವೂ, ಸವನ ಸ್ತ್ರೀಯರು ಹೆತ್ತು ಸಾಕುತ್ತಿರುವಾಗ ತಮ್ಮ ಮುದ್ದು ಮಕ್ಕಳ ಮೂಲಕ ಸಂತೋಷವನ್ನು ಅನುಭವಿಸುತ್ತಿರುವಾಗಲೂ, ವೃದ್ಧರಾದ ತಾಯಿತಂದೆಗಳು ಸಹ ಸಜ್ಜೀಗೃಹದಲ್ಲಿ ಪಟ್ಟೆ ಮಂಚಗಳ ಮೇಲೆ ಶಯನಿಸಿ ರಾತ್ರಿಯನ್ನು ಸುಖವಾಗಿ ಕಳೆಯುತ್ತಿರುವಾಗಲೂ, ತಾವು ಒಂಟಿಯಾಗಿ ಬಾಗಿಲುಗಳ ಬಳಿಯಲ್ಲಿಯೋ ಇಲ್ಲವೇ ಪಡಸಾಲೆಗಳಲ್ಲಿಯೋ ಮಲಗಿಕೊಂಡು ಅವರನುಭವಿಸುವಂಥಾ ದುಃಖವನ್ನೂ ದುರವಸ್ಥೆಯನ್ನೂ ನೆನಸಿಕೊಂಡಾಗ ಎಂಥಾ ಕಲ್ಲು ಹೃದಯರಾದಾಗ್ಯೂ ಚಿಂತಿಸದೆ ಇರಲಾರರು. ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಬಾಲೆಯರು ಚಿಕ್ಕತನದಲ್ಲಿಯೇ ವಿಧವೆಯರಾಗಿ ಒಳ್ಳೇ ಬಟ್ಟೆಬರೆಗಳಿಲ್ಲದೆ ವಿರೂಪಿಗಳಾಗಿ ದಾಸಿಯರು ಕೆಲಸಮಾಡುವ ರೀತಿಯಲ್ಲಿ ದುಡಿಯುತ್ತಿದ್ದರೂ ಎಲ್ಲರಿಂದಲೂ ಬೈಗಳು ತಿಂದು ಕೆಟ್ಟ ಮಾತುಗಳಾಡಿಸಿಕೊಳ್ಳುತ್ತಾ ಎಡೆಬಿಡದ ದುಃಖವನ್ನನುಭವಿಸುತ್ತಿರುವಾಗ ನೋಡಲಾರದೆ ಶೋಕಿಸುವ ತಂದೆತಾಯಿಗಳ ಮನೋವೇದನೆಯೂ, ಪ್ರತಿ ದಿನವೂ ಪ್ರತ್ಯಕ್ಷವಾಗಿ ನೋಡುತ್ತಿರುವಾಗಲೂ ಸಹಾ ಏಕಪತಿವ್ರತಾ ಧರ್ಮದಿಂದ ಕಟ್ಟಿರುವ ಹಗ್ಗಗಳನ್ನು ಕಡಿದು, ಬಹಿರಾಚಾರವೆಂಬ ಕಾವಲುಗಾರನನ್ನು ನಿವೃತ್ತಿಸಿ, ವಿಧವೆಯರಿಗೆ ಪುನರ್ವಿವಾಹ ಮಾಡತಕ್ಕ ವಿಷಯದಲ್ಲಿ ಹಣಗಾರರೂ ಮತ್ತು ಗೌರವಶಾಲಿಗಳೂ ಸಹಾ ಏಕೀಭವಿಸಿ ಹೆಬ್ಬಾಗಿಲ ದಾರಿಗೆ ತರದೆ ಹಿಂದು ಹಿಂದಕ್ಕೆ ಬಿಟ್ಟಿರುವುದು ನಾಮಧಾರಿಗಳಾದ ನಮ್ಮ ಶೋಚನೀಯವಾದ ಸ್ಥಿತಿಯು ಹೊರಗಿನವರಿಗೆ ವ್ಯಕ್ತವಾಗುತ್ತದೆಯಲ್ಲವೇ?

ಎಂ. ಡಿ. ಕೆ., ಕೊಪ್ಪ ತಾಲ್ಲೂಕು.

ಕೊರಟಗೆರೆ ವಿಚಾರ—ಇದನ್ನು ಪ್ರಕಟಿಸಲಾರೆವು.

ಒಬ್ಬ ಬಾಲಕಿ, ಮೇಗರವಳ್ಳಿ; ಒಬ್ಬ ಬಾತ್ಮಿದಾರ, ಮಾಲೂರು:— ಈ ಬಾತ್ಮಿಗಳಲ್ಲಿ ಬಾತ್ಮಿದಾರರು ತಮ್ಮ ಹೆಸರು ವಿಳಾಸಗಳನ್ನು ಬರೆದು ತಿಳಿಸಿಲ್ಲ.

ಸೀಲಗಿರಿ ಮುದ್ದೇಗೌಡ್ರ ಮಗ ಶಿವ್ವೇಗೌಡರೆಂಬ 50 ವರುಷದವರು ಎಲ್ಲಿಯೋ ಹೋಗಿಬಿಟ್ಟಿರೆಂದೂ, ಇದುವರೆಗೆ ಸಿಕ್ಕಲಿಲ್ಲವೆಂದೂ ಉಟಕಮಂಡ್ ಸ್ಟೋನ್‌ರಿಡ್ಜ್ ಸ್ಕೂಲ್ ಲಿಂಗಣ್ಣಗೌಡರು ತಿಳಿಸಿ, ಪತ್ತೆ ಮಾಡಿಕೊಟ್ಟವರಿಗೆ ಬಹುಮಾನ ಸಿಕ್ಕುವುದೆಂದು ಬರೆದಿದಾರೆ —ಎಡಿ.]

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರದ ತಾ|| ಪಾಡೋಸಪಳ್ಳಿ.—ಕಳೆದ ತಿಂಗಳು 13-14 ನೆಯ ತಾರೀಖುಗಳ ಸಾಯಂಕಾಲ ಗ್ರಾ. ಸಿ. ಇ. ಸ್ಕೂಲ್ ಕಟ್ಟಡದಲ್ಲಿ ಒಂದು ಸಭೆಯು ಸೇರಿಸಲ್ಪಟ್ಟಿದ್ದಿತು. ಇದಕ್ಕೆ ತಾ|| ಬೋರ್ಡ್ ಮೆಂಬರು ಮ|| ರಾಮಸ್ವಾಮಯ್ಯನವರೂ, ಸ್ಕೂಲ್ ಮಾಸ್ಟರ್ ಕೆ. ನರಸಪ್ಪನವರೂ, ಶ್ಯಾ|| ವೆಂಕಟರಮಣಪ್ಪನವರೂ, ಮತ್ತು ಸ್ಕೂಲ್ ಬಾಲಕ ಬಾಲಕಿಯರೇ ಆದಿಯಾಗಿ ಗ್ರಾಮಸ್ಥರು ಸುಮಾರು 200 ಜನಗಳ ವರೆಗೂ ಜಮಾಯಿಸಿದ್ದರು. ಸಭೆಯವರ ಅನುಮತಿಯಂತೆ ಎಕನಾಮಿಕ್ ಕಾನ್ಫರೆನ್ಸ್ ಐಟನರೆಂಟ್ ಲೆಕ್ಚರರ್ ಮ|| ಎಚ್. ಕೊಯರ್‌ನಾರಣಪ್ಪನವರು ಅಗ್ರಾಸನವನ್ನು ವಹಿಸಿದರು. ಇವರು ವಿದ್ಯಾಭ್ಯಾಸ, ನೈರ್ಮಲ್ಯ, ಯುದ್ಧಸ್ವರೂಪ ಮೊದಲಾದ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸಗಳನ್ನು ಅಪ್ಪಣೆ ಕೊಡಿಸಿದರು. ಸ್ಕೂಲ್ ಬಾಲಕರಿಂದ ಘನವನ್ನು ಹೊಂದಿದ ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜ ಯುವರಾಜರುಗಳ ಶ್ರೇಯಃಪ್ರಾರ್ಥನೆಯೂ ಮಂಗಳವೂ ನಡಿಸಲ್ಪಟ್ಟು ಸಭಿಕರಿಗೆ ಗಂಧ ತಾಂಬೂಲವನ್ನೂ, ವಿದ್ಯಾರ್ಥಿಗಳಿಗೆ ಮಿಠಾಯಿಯನ್ನೂ ಹಂಚಿ ಸಭೆಯು ಬರಖಾಸ್ತಾಯಿತು. ಘನವನ್ನು ಹೊಂದಿದ ಸರ್ಕಾರದವರು ಪ್ರಜೆಗಳ ಏಳಿಗೆಗಾಗಿ ಈ ರೀತಿಯಾದ ಉಪನ್ಯಾಸಗಳನ್ನು ಪದೇ ಪದೇ ಮಾಡಿಸುತ್ತಾ ಬರುವುದರಿಂದ ಜನಗಳಿಗೆ ಹೆಚ್ಚು ಪ್ರಯೋಜನವೂ, ಸರ್ಕಾರಕ್ಕೆ ಕೀರ್ತಿಯೂ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಶಿಡ್ಲಘಟ್ಟ.—ಮೈಸೂರು ಸೀಮೆಯ ಎರಡನೇ ಕೌನ್ಸಲರ್ ಸಾಹೇಬರವರಾದ ಮ|| ಸರದಾರ್ ಎಂ. ಕಾಂತರಾಜೆ ಅರಸಿನವರ ಸವಾರಿಯು ತಾ. 29 ನೆಯ ಸೋಮವಾರ ಬೆಳಿಗ್ಗೆ 9 ಗಂಟೆಗೆ ಈ ಊರಿಗೆ ದಯಮಾಡಿಸಿತು. ಪೇಟೆಯ ಚೌಕದಲ್ಲಿ ಮ್ಯುನಿಸಿಪಾಲಿಟಿಯವರಿಂದ ಏರ್ಪಡಿಸಿದ್ದ ಅಂದವಾದ ಚಪ್ಪರದಲ್ಲಿ ನಮ್ಮ ಅಮಲ್ದಾರ್ ಸಾಹೇಬರವರೂ, ಮ್ಯುನಿಸಿಪಲ್ ಮೆಂಬರುಗಳೂ, ಇತರ ದೊಡ್ಡ ಮನುಷ್ಯರೂ ಕಾದಿದ್ದು ಮ|| ಅರಸಿನವರಿಗೆ ಫಲ ಪುಷ್ಪಗಳನ್ನು ಅರ್ಪಿಸಿದರು. ನಂತರ ಸಬ್ ಡಿವಿಜನ್ ಸಾಹೇಬರವರೂ, ಎಕನಾಮಿಕ್ ಕಾನ್ಫರೆನ್ಸ್ ಡಿಸ್ಟ್ರಿಕ್ಟ್ ಸೂಪ್ರಂಡೆಂಟ್ ಸಾಹೇಬರವರೂ ಸಹಾ ಕೌನ್ಸಲರವರ ಸಂಗಡಲೇ ಇದ್ದುಕೊಂಡು ಇಲ್ಲಿನ ಕೋಆಪರೆಟಿವ್ ಸೊಸೈಟಿ, ರೀಡಿಂಗ್ ರೂಂ, ಕನ್ನಡ ಮತ್ತು ಹಿಂದುಸ್ಥಾನಿ ಸ್ಕೂಲುಗಳೂ ಮತ್ತು ಫ್ರೀ ರೀಡಿಂಗ್ ರೂಂ ಮುಂತಾದವುಗಳನ್ನು ಪರಿಶೀಲಿಸಿ ಸಂತೋಷಿಸಿ, ಸದರಿ ಫ್ರೀ ರೀಡಿಂಗ್ ರೂಂ ಸೆಕ್ರೆಟರಿಯವರಾದ ಮ|| ಎಸ್. ಹಂಪಯ್ಯನವರು ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಮುತುವರ್ಜಿ ವಹಿಸಿ ಸುತ್ತಣ ಹಳ್ಳಿಗಳಲ್ಲಿ ಕೋಆಪರೆಟಿವ್ ಸೊಸೈಟಿ, ವ್ಯವಸಾಯ ಸಂಘ, ರಾತ್ರಿ ಪಾಠಶಾಲೆಗಳು, ರೀಡಿಂಗ್ ರೂಮುಗಳು ವಗೈರೆ ಏರ್ಪಡಿಸಿರುವದನ್ನು ಸಬ್ ಡಿವಿಜನ್ ಸಾಹೇಬರವರ ಮೂಲಕ ಕೇಳಿ ಬಹಳ ಸಂತೋಷಿಸಿದ್ದಲ್ಲದೆ ಮಧ್ಯಾಹ್ನ ಜಂಗಮಕೋಟೆ, ಮಳಮಾಚನಹಳ್ಳಿ ಮುಂತಾದ ಊರುಗಳನ್ನು ನೋಡಿಕೊಂಡು ಬಂದು ಸಾಯಂಕಾಲ ಬಂಗ್ಲೆಯಲ್ಲಿ ದರ್ಬಾರು ನಡಿಸಿ ಪ್ರಜೆಗಳ ಅಹವಾಲುಗಳನ್ನು ವಿಚಾರಿಸಿದರು. ಊರಿಗೆ ಮುಖ್ಯವಾಗಿ ಬೇಕಾದ ಟವನ್ ಪೋಲೀಸು ಸ್ಟೇಷನ್, ಅಮ್ಮನ ಕೆರೆಗೆ ನೀರು ಒದಗಿಸುವದಕ್ಕಾಗಿ ಒಂದು ಕಟ್ಟುಕಾಲುವೆ, ರೀಸರ್ವ್ ಕಾಲದಲ್ಲಿ ತಲೀ ಕಂದಾಯ ದಾಖಿಲ್ಮಾಡುವ ವಿಷಯದಲ್ಲಿ ಕೆರೆಯ ಸ್ಥಿತಿಯು ಮೇಲೆ ದಾಖಿಲ್ಮಾಡುವದು, ಈ ಮುಂತಾದ ವಿಷಯಗಳ ಅರ್ಜಿಗಳನ್ನು ತೆಗೆದುಕೊಂಡು ಮಾರನೇ ದಿನ ಚಿಕ್ಕಬಳ್ಳಾಪುರಕ್ಕೆ ದಯಮಾಡಿಸಿದರು. ಹೀಗೆ ಆಗಾಗ್ಗ ದೊಡ್ಡ ಅಧಿಕಾರಿಗಳು ದಯಮಾಡುವದರಿಂದ ಬಡಪ್ರಜೆಗಳ ಕಷ್ಟನಿವಾರಣೆಯಾಗಲು ಅನುಕೂಲವಾಗಿರುತ್ತೆ.

ಇಂಡಿಯಾ ದೇಶದ ವೃತ್ತಾಂತಗಳು.

ಒಂದು ಬ್ರಿಟಿಷ್ ಜಹಜು ಕಳೆದ ವಾರ ಯುದ್ಧ ಭೂಮಿಯಲ್ಲಿ ಕೈಸೆರೆ ಹಿಡಿಯಲ್ಪಟ್ಟ ಕೆಲವು ಟರ್ಕಿ ಮತ್ತು ಅರಬ್ಬಿ ಸೈನಿಕರನ್ನು ಬರ್ಮಾ ಅಧಿಕೃತ್ಯಕ್ಕೆ ಸೇರಿದ ಥಿಯಟ್ಮಿಯೊ ಎಂಬ ಪಟ್ಟಣಕ್ಕೆ ಕರೆದುತಂದಿದೆ.

ರಂಗೂನ್ ಪಟ್ಟಣದ ಗ್ರಾಹಾಂ ಕಂಪನಿಯ ಮ್ಯಾನೇಜರಾಗಿದ ಮಿ|| ಎಚ್. ಸಿ. ಎಲ್ಲಿ ಎಂಬಾತನು ಆ ಕಂಪನಿಯ ಲೆಕ್ಕಗಳನ್ನು ತಿದ್ದಿ ಸುಮಾರು 31 ಲಕ್ಷ ರೂಪಾಯಿಗಳನ್ನು ತಿಂದುಹಾಕಿದನೆಂದು ಮೊಕದ್ದಮೆ ಬಂದು ಈಗ ವಿಚಾರಣೆ ನಡೆಯುತ್ತಿದೆ.

ಹೆಜ್ಜಾಜಿಗೆ ಯಾತ್ರೆಹೋಗಿದ್ದ 600 ಮಂದಿ ಮಹಮದಿಯ ಹಾಜಿಗಳು ಕಳೆದ ವಾರ ಬೊಂಬಾಯಿಗೆ ಬಂದಿಳಿದರು. ಇವರನ್ನು ಕರೆದುತರುವುದಕ್ಕೆ 7,000 ರೂಪಾಯಿ ಖರ್ಚಾಯಿತು. ಇದರಲ್ಲಿ ಕೆಲವು ಭಾಗವನ್ನು ಯಾತ್ರಾರ್ಥಿಗಳ ಫಂಡಿನಿಂದಲೂ, ಕೆಲವು ಭಾಗವನ್ನು ಸರ್ಕಾರದವರೂ ಕೊಟ್ಟಿರುತ್ತಾರೆ.

ಫೆರೋಜ್‌ಪುರದ ಕೊಲೆ ಮೊಕದ್ದಮೆಯಲ್ಲಿ ಏಳು ಜನ ಅಪರಾಧಿಗಳಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಈ ಪೈಕಿ 3 ಜನರನ್ನು ಕಳೆದ ತಾ. 26 ರಲ್ಲಿ ಮಾಂಟ್ಗಾಮರಿ ಜೈಲಿನಲ್ಲೂ, ಇಬ್ಬರನ್ನು ಮರುದಿನ ಲಾಹೋರ್ ಪಟ್ಟಣದ ಸೆಂಟ್ರಲ್ ಜೈಲಿನಲ್ಲೂ, ಉಳಿದ ಇಬ್ಬರನ್ನು ಆ ಮಾರನೆಯ ದಿನ ಇನ್ನೊಂದು ಬಂದೀಖಾನೆಯಲ್ಲೂ ಗಲ್ಲಿಗೆ ಹಾಕಿದರು.

ಡಾರ್ಜಿಲಿಂಗ್ ನಗರದ ಪೋಲೀಸ್ ಇನ್ಸ್‌ಪೆಕ್ಟರಾದ ಸಿಂಪ್ಸನ್ ಎಂಬುವನು ಅಲ್ಲಿನ ಒಂದು ಷಾಪಿನಲ್ಲಿ ನೌಕರನಾಗಿದ್ದ ಬಾರ್ಕೆರ್ಲ್ಲಾ ಎಂಬಾತನಿಂದ 3,000 ರೂಪಾಯಿಯನ್ನೂ ಎರಡು ಉಂಗುರಗಳನ್ನೂ ಲಂಚ ತಗೆದುಕೊಂಡದ್ದು ಚೆನ್ನಾಗಿ ರುಜುವಾತಾದದ್ದರಿಂದ ಸೆಷನ್ಸ್ ಜಡ್ಜರು ಅವನಿಗೆ ಎಂಟು ತಿಂಗಳ ಕಠಿಣಸಜಾ ವಿಧಿಸಿರುತ್ತಾರೆ.

ಮಲಬಾರ್ ಪ್ರಾಂತ್ಯಕ್ಕೆ ಸೇರಿದ ಯೇರ್ನಾಡ್ ತಾಲ್ಲೂಕಿನಲ್ಲಿ ಕೆಲವು ದುಷ್ಟರಾದ ಮಾಪಿಳ್ಳೆಗಳು ಕಲೆಕ್ಟರನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟಿದ್ದು, ಅದು ಸಾಗದೆ ಸಿಕ್ಕಿಬಿದ್ದರಷ್ಟೆ. ಈಚೆಗೂ ಅಲ್ಲಿನ ಮಾಪಿಳ್ಳೆಗಳು ಜನರಲ್ಲಿ ವೀರವೈಷಮ್ಯಗಳನ್ನು ಹುಟ್ಟಿಸುವಂಥಾ ಕೃತ್ಯಗಳನ್ನು ಮಾಡುತ್ತಿದಾರೆ. ಸರ್ಕಾರದವರು ಕಳೆದ ವಾರವೂ ಕೆಲವರನ್ನು ದಸ್ತಗಿರಿ ಮಾಡಿದರು. ಆ ಪ್ರಾಂತ್ಯ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ಹೊಸ ಕಾನೂನನ್ನು ಜಾರಿಗೆ ತರಬೇಕೆಂದು ಸೂಚಿಸಲಾಗಿದೆ.

ಯೂರೋಪಿನಲ್ಲಿ ಯುದ್ಧಾರಂಭವಾದಂದಿನಿಂದ ಹಿಂದುಸ್ಥಾನದಲ್ಲಿ 45,000 ಜನರು ಸೈನ್ಯಕ್ಕೆ ಸೇರಿಕೊಂಡಿದಾರೆ. ಈ ಪೈಕಿ ಪಂಜಾಬಿನವರೇ ಅರ್ಧಕ್ಕಿಂತ ಹೆಚ್ಚು. ರಾವಲ್‌ಪಿಂಡಿಯವರು 10,000 ಕ್ಕೆ ಮೇಲ್ಪಟ್ಟು ಸೈನಿಕರಾದರು. ವಿಕ್ಟೋರಿಯಾ ಕ್ರಾಸ್ ಎಂಬ ಅತ್ಯಂತ ಘನತರವಾದ ಬಿರುದನ್ನು ಸಂಪಾದಿಸಿದ ಹಿಂದುಸ್ಥಾನದ ಸೈನಿಕರಲ್ಲಿ ಖುದಾದಾದ್‌ಖಾನ್ ಎಂಬಾತನು ಜೀಲಂ ಪ್ರಾಂತ್ಯದವನು ಎಂಬದಾಗಿ ಲೆಫ್ಟಿನೆಂಟ್ ಗವರ್ನರವರು ರಾವಲ್‌ಪಿಂಡಿಯಲ್ಲಿ ನಡೆದ ಒಂದು ದರ್ಬಾರಿನಲ್ಲಿ ಅಪ್ಪಣೆಕೊಡಿಸಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಭಾಯಿ ಜಾವರಭಾಯಿ ಎಂಬ ಗುಜರಾತಿ ಪುಣ್ಯವತಿಯು ದಿಕ್ಕಿಲ್ಲದಂಥಾ ಗುಜರಾತಿ ಹಿಂದೂ ಸ್ತ್ರೀಯರಿಗೋಸ್ಕರ ಒಂದು ಧರ್ಮಶಾಲೆಯನ್ನು ಕಟ್ಟಿ ಅಂಥವರನ್ನು ಸಂರಕ್ಷಣೆ ಮಾಡಬೇಕೆಂದು 50,000 ರೂಪಾಯಿ ಧರ್ಮ ಮಾಡಿದಳು. ಸರ್ಕಾರದವರೂ ಇತರ ಮಹನೀಯರೂ ಈ ಧರ್ಮಕಾರ್ಯಕ್ಕೆ ಸಹಾಯ ಮಾಡಿದ್ದರಿಂದ ಒಂದು ಲಕ್ಷ ರೂಪಾಯಿ ಖರ್ಚಾಗಿ ಒಂದು ದಿವ್ಯವಾದ ನಿಲಯವು ಸಿದ್ಧವಾಯಿತು. ಇದನ್ನು ಕಳೆದ ವಾರ ಗವರ್ನರವರ ಪತ್ನಿಯವರು ಪ್ರತಿಷ್ಠೆಮಾಡಿ, ಅದಕ್ಕೆ ವನಿತಾ ವಿಶ್ರಮ ನಿಲಯ ಎಂಬ ಅಂಕಿತವನ್ನಿಟ್ಟರು.

ಪೂರ್ವ ಬಂಗಾಳಾದಲ್ಲಿ ನ್ಯೂಮನ್‌ಸಿಂಗ್ ಡಿಸ್ಟ್ರಿಕ್ಟಿಗೆ ಸೇರಿದ ಕೈಲತಿ ಎಂಬ ಗ್ರಾಮದಲ್ಲಿ ಒಂದು ಸಿಡಿಮದ್ದಿನ ಗುಂಡು ಬಿದ್ದಿತ್ತು. ಕೆಲವು ಗ್ರಾಮಸ್ಥರು ಸೇರಿ ಅದನ್ನು ಕೋಲಿನಿಂದ ತಳ್ಳಿ ನೋಡುತ್ತಾ ಇದ್ದಾಗ ಅದು ದೊಡ್ಡ ಶಬ್ದದಿಂದ ಹತ್ತಿಕೊಂಡು ಸುತ್ತುಮುತ್ತ ಇದ್ದ ಜನರೆಗೆಲ್ಲಾ ಬಡಿಯಿತು. ಕೂಡಲೇ 8 ಜನರು ಮೃತಪಟ್ಟರು. ಸುಮಾರು 30 ಜನರಿಗೆ ನಾನಾ ಗಾಯಗಳಾದವು. ಸರ್ಕಾರದವರು ಹೋಗಿ ಗಾಯಪಟ್ಟವರನ್ನೆಲ್ಲಾ ಆಸ್ಪತ್ರೆಗೆ ಸಾಗಿಸಿದರು. ಈ ಪೈಕಿ ಮೂರು ಮಂದಿ ಮೃತಪಟ್ಟರೆಂದೂ, ಆಸ್ಪತ್ರೆಯಲ್ಲಿ ಇನ್ನೂ ಅನೇಕರು ಬದುಕುವಹಾಗಿಲ್ಲವೆಂದು ತಿಳಿಯುತ್ತದೆ.

ಅಮೃತಸಾರ ಡಿಸ್ಟ್ರಿಕ್ಟಿಗೆ ಸೇರಿದ ಛಬ್ಬಾ ಎಂಬ ಗ್ರಾಮಕ್ಕೆ ಕೆನಡಾ ದಿಂದ ವಾಪಸು ಬಂದ ಕೆಲವು ಸಿಖ್ ಜನಗಳು ಆಯುಧಧಾರಿಗಳಾಗಿ ನುಗ್ಗಿ ಒಂದು ಮನೆಯಲ್ಲಿ ಕಳುವು ಮಾಡಲಾರಂಭಿಸಿದರು. ಸುತ್ತುಮುತ್ತಿನ ಗ್ರಾಮಸ್ಥರು ಸೇರಿ ಆ ಕಳ್ಳರನ್ನು ಹಿಡಿಯಬೇಕೆಂದು ಪ್ರಯತ್ನಪಟ್ಟಾಗ ಘೋರವಾದ ಕದನವಾಯಿತು. ಒಬ್ಬ ಮಾತ್ರ ಸಿಕ್ಕಿಬಿದ್ದನು. ಉಳಿದವರೆಲ್ಲಾ ಗಾಯಪಟ್ಟ ಒಬ್ಬನನ್ನು ಎತ್ತಿಕೊಂಡು ಓಡಿಹೋದರು. ಒಬ್ಬ ಕಳ್ಳನು ಕೊಲೆಯಾದನು. ಗ್ರಾಮಸ್ಥರಲ್ಲೂ ಎಂಟು ಜನರು ತುಂಬಾ ಗಾಯಪಟ್ಟರು. ಈ ವಿಚಾರವನ್ನು ಗವರ್ನಮೆಂಟಿನವರು ಕೇಳಿ ಗ್ರಾಮಸ್ಥರ ಧೈರ್ಯವನ್ನೂ ಸಾಹಸಕಾರ್ಯಗಳನ್ನೂ ಮೆಚ್ಚಿ ಅವರಲ್ಲಿ ತುಂಬಾ ಮೊಹನತ್ತು ಮಾಡಿದವರಿಗೆ ಹಣವನ್ನು ಇನಾಮಾಗಿ ಕೊಡಿಸಿದ್ದಲ್ಲದೆ ಅವರಿಗೂ ಇತರ ಗ್ರಾಮಸ್ಥರಿಗೂ ಅವರವರ ಜಮೀನ್ ಕಂದಾಯಗಳನ್ನು ರಿಮಿಷನ್ ಮಾಡಿರುತ್ತಾರೆ.

ಕಾಶೀಪಟ್ಟಣದಲ್ಲಿರುವ ಘನವನ್ನೈದಿದ ಮ|| ಬಿ. ಮೋತಿಚಂದ್ ಎಂಬ ಭಾರೀ ಜಮೀನ್‌ದಾರರಿಗೆ ಕಾಶಿ, ಫೈಜಾಬಾದ್, ಜಾನ್‌ಪುರ, ಅಜಾಂಘಡ, ಆರಾ ಡಿಸ್ಟ್ರಿಕ್ಟುಗಳಲ್ಲಿ ಅನೇಕ ಜಮೀನುಗಳು ಇರುತ್ತವೆ. ಅವರಿಗೆ ಸೇರಿದ ಗ್ರಾಮಗಳಲ್ಲಿರುವ ಅನೇಕ ಜನರು ಬ್ರಿಟಿಷ್ ಸೈನ್ಯದಲ್ಲಿ ಸೇರಿ ಈಗ ಯುದ್ಧಭೂಮಿಯಲ್ಲಿ ಕಾದಾಡುತ್ತಲೂ, ಸ್ವರಾಜ್ಯ ಸಂರಕ್ಷಣಾರ್ಥವಾಗಿ ಪ್ರಾಣ ಕೊಡುತ್ತಲೂ ಇದಾರೆ. ಈಗಲೂ ಅನೇಕ ರೈತ ಪ್ರಜೆಗಳು ಸೈನ್ಯಕ್ಕೆ ಸೇರಿಕೊಳ್ಳುತ್ತಲೂ ಇರುವರು. ಇಂಥವರಿಗೆಲ್ಲಾ ವಿಶೇಷ ಪ್ರೋತ್ಸಾಹವನ್ನೀಯಬೇಕೆಂದು ರಾಜಭಕ್ತಿಯುಳ್ಳ ಆ ಜಮೀನ್‌ದಾರರು ಕಂದಾಯ ಬಾಕಿಗಳನ್ನು ವಸೂಲ್ಮಾಡದೆ ಮಾಫಿ ಬಿಡಬೇಕೆಂದೂ, ಪರಾಕ್ರಮಿಗಳಾಗಿ ಗಾಯಪಟ್ಟು ಬರುವವರಿಗೂ, ಬಿರುದು ಪಡೆದು ಬಂದವರಿಗೂ, ಕೊಲೆಯಾದವರ ವಾರಸುದಾರರಿಗೂ ಇನ್ನೂ ಅನೇಕ ರಿಯಾಯತಿಗಳನ್ನು ತೋರಿಸಲಾಗುವುದೆಂದೂ ತಮ್ಮ ಕೈಕೆಳಗಣ ಅಧಿಕಾರಿಗಳಿಗೆ ಹುಕುಂ ಕೊಟ್ಟು, ಈ ತಮ್ಮ ಹುಕುಮನ್ನು ಆ ಗ್ರಾಮಗಳಲ್ಲೆಲ್ಲಾ ಇಸ್ತಿಹಾರು ಹಾಕಿಸಿರುತ್ತಾರೆ.

ಮಲಬಾರ್ ಜಿಲ್ಲೆಗೆ ಸೇರಿದ ಪೂಕುಳಿ ಎಂಬ ಜಂಗಲಿನಲ್ಲಿ ಒಂದು ಕಾಡಾನೆಯು ಒಬ್ಬ ಮಾಪಿಳ್ಳೆಯನ್ನೂ ಮೂರು ಮಂದಿ ಹೆಂಗಸರನ್ನೂ ಕೊಂದು ಬಿಟ್ಟಿತು. ಅದರ ದೇಹದಲ್ಲಿ ಹದಿಮೂರು ಗುಂಡೇಟುಗಳು ಬಿದ್ದಿದ್ದರೂ ಅದು ಸಿಕ್ಕದೆ ತಪ್ಪಿಸಿಕೊಂಡು ಅಲೆಯುತ್ತಿದೆ.

ಕಳೆದ ಫೆಬ್ರವರಿ ಅಖೈರ್ ವರೆಗೆ ಹಿಂದುಸ್ಥಾನಕ್ಕೆ ಹೊರಗಿನಿಂದ 0,88,46,118 ರೂಪಾಯಿನ ಚಿನ್ನದ ಗಟ್ಟಿಗಳೂ, 8,16,67,413 ರೂಪಾಯಿನ ಬೆಳ್ಳಿ ಗಟ್ಟಿಗಳೂ ರಫ್ತಾಗಿ ಬಂದಿರುತ್ತವೆ. ಇದಲ್ಲದೆ ಕಲ್ಕತ್ತಾ ಮತ್ತು ಬೊಂಬಾಯಿ ಟಂಕಸಾಲೆಗಳಿಗೆ ವರ್ತಕರು ಚಿನ್ನ ಬೆಳ್ಳಿ ತಂದುಕೊಟ್ಟು 2 61,935 ರೂಪಾಯಿ ನಾಣ್ಯಗಳನ್ನು ಛಾಪಾಮಾಡಿಸಿ ತೆಗೆದುಕೊಂಡು ಹೋದರು. ಇದಲ್ಲದೆ ಆ ಟಂಕಸಾಲೆಗಳಲ್ಲಿ 1,8·,91,205 ರೂಪಾಯಿಗಳನ್ನೂ, 29,62,851 ರೂಪಾಯಿನ ಚಿಲ್ಲರೆ ಬೆಳ್ಳಿ ನಾಣ್ಯಗಳನ್ನೂ ಛಾಪಾಮಾಡಿ ಚಲಾವಣೆಗೆ ಕೊಟ್ಟರು.

ಬೊಂಬಾಯಿ ಪಟ್ಟಣದಲ್ಲಿ ಬಟ್ಟೆ ವ್ಯಾಪಾರಿಯಾದ ಹಾಜಿ ಅಬ್ದುಲ್ ರಹಮಾನ್ ಎಂಬಾತನು ಕಳೆದ ಮಂಗಳವಾರ 400 ರೂಪಾಯಿ ಥೈಲಿಯನ್ನು ಕೈಲಿ ಹಿಡಿದುಕೊಂಡು ಬೀದಿಯಲ್ಲಿ ಹೋಗುತ್ತಿದ್ದಾಗ ಅವನ ಕಣ್ಣಿಗೆ ಯಾರೋ ಮಣ್ಣು ಎರಚಿ ಅವನು ಅದನ್ನು ಒರಸಿಕೊಳ್ಳುತ್ತಿರುವಲ್ಲಿ ಕೈಲಿದ್ದ ಹಣದ ಗಂಟನ್ನು ಕಿತ್ತುಕೊಂಡು ಓಡಿಹೋದನು. ಅಷ್ಟರಲ್ಲೇ ಅವನು ಗಲಭೆಮಾಡಿದಾಗ ಓಡಿಹೋಗುತ್ತಿದ್ದ ಒಬ್ಬ ಹಿಂದು ಹುಡುಗನನ್ನು ಜನರು ಹಿಡಿದು ಶೋಧನೆ ಮಾಡಿದರು. ಅವನ ಬಳಿ ಹಣದ ಗಂಟು ಇರಲಿಲ್ಲ. ಆದರೂ ಅವನನ್ನು ಪೋಲೀಸಿಗೆ ಒಪ್ಪಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದ ಚಿತ್ಪುರವೆಂಬ ಭಾಗದಲ್ಲಿ ರೈಲ್ವೆ ಸರಹದ್ದಿನೊಳಗಿರುವ ಒಂದು ಮಸೀದಿಯನ್ನು ರೈಲ್ವೆ ಕೂಲಿಕಾರರು ಕೆಡವುತ್ತಾರೆಂಬ ಅನುಮಾನದಿಂದ ಸುಮಾರು 400 ಮುಸಲ್ಮಾನರು ಅಲ್ಲಿ ಆಯುಧಪಾಣಿಗಳಾಗಿ ಜಮಾಯಿಸಿ ಇಟ್ಟಿಗೆ ಕಲ್ಲು ಮುಂತಾದವುಗಳನ್ನು ಕೂಡಿಸಿಟ್ಟುಕೊಂಡು ಗಲಭೆ ಮಾಡಲಾರಂಭಿಸಿದರು. ಪೋಲೀಸಿನವರೂ ಸೈನಿಕರೂ ಹೋದಾಗ ಅವರ ಮೇಲೆ ಕಲ್ಲುಗಳ ಮಳೆ ಸುರಿಯಿತು. ಒಬ್ಬ ಪೋಲೀಸ್ ಉದ್ಯೋಗಸ್ಥನಿಗೆ ಪೂರಾ ಗಾಯವಾಯಿತು. ಕೂಡಲೇ ಆಯುಧ ಸಮೇತರಾದ ಸೈನಿಕರು ಹೋಗಿ ಗಲಭೆಯನ್ನು ಶಮನಮಾಡಿ, ಜನಗಳ ದೊಂಬಿಯನ್ನು ಚದರಿಸಿದರು.

ಕೆಲವು ದಿನಗಳ ಹಿಂದೆ ದೆಹಲಿ ಪಟ್ಟಣದಲ್ಲಿ ಯೂರೋಪಿಯನ್ನರು ಕ್ಲಬ್ ಎಂಬ ತಮ್ಮ ವಿಹಾರ ಸ್ಥಳದಿಂದ ರಾತ್ರಿ ತಮ್ಮ ತಮ್ಮ ಮನೆಗಳಿಗೆ ಹೊರಡುವಾಗ್ಗೆ ಆ ವಿಹಾರ ಸ್ಥಳದ ಬಳಿ ಯಾರೋ ಒಂದು ಬಾಣವನ್ನು ಹಚ್ಚಿದರು. ಅದು ಶಬ್ದದೊಡನೆ ಹಾಂದ್ದರಿಂದ ಸಿಡಿಮದ್ದಿನ ಗುಂಡು ಆಗಿರಬಹುದೆಂಬ ಊಹೆಯಿಂದ ಯೂರೋಪಿಯನ್ನರಿಗೆ ತುಂಬಾ ಗಾಬರಿಯಾಯಿತು. ಪೋಲೀಸಿನವರು ಪತ್ತೆ ತರದೂದು ನಡೆಸಿದ್ದರಲ್ಲಿ ಗೋಕುಲಚಂದನೆಂಬುವನು ಆ ಬಾಣವನ್ನು ಹಚ್ಚಿದನೆಂದು ಅವನನ್ನು ಹಿಡಿದು ಮೊಕದ್ದಮೆ ಮಾಡಿದರು. ಕಳೆದ ವಾರ ಮ್ಯಾಜಿಸ್ಟ್ರೇಟರು ಅವನಿಗೆ ಒಂಭತ್ತು ತಿಂಗಳ ಕಠಿಣಶಿಕ್ಷೆ ವಿಧಿಸಿರುತ್ತಾರೆ.

ಕಳೆದ ತಿಂಗಳ 25-26 ನೇ ತಾರೀಖುಗಳಲ್ಲಿ ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿರುವ ಕೋಟ ಕಣಿವೆಯಲ್ಲಿ ಚಾರ್ಸ್ದ ಮತ್ತು ಮಂಗಲ್ ಎಂಬ ಗುಂಪಿನ ಜನರು ಸುಮಾರು 1,000 ಮಂದಿ ಆಯುಧಪಾಣಿಗಳಾಗಿ ಡೂರಾಂಡ್ ಎಲ್ಲೆಯನ್ನು ದಾಟಿಬಂದು ಗುಡ್ಡಗಳ ಮೇಲೆ ಠಾಣ್ಯ ಹಾಕಿಕೊಂಡರು. ಬ್ರಿಟಿಷ್ ಸೈನ್ಯಗಳು ಅವರನ್ನು ಓಡಿಸುವುದಕ್ಕೆ ಮಿರಾನ್ ಷಾ ಠಾಣ್ಯದಿಂದ ಅಲ್ಲಿಗೆ ಕಳುಹಿಸಲ್ಪಟ್ಟವು. ಈ ಸೈನಿಕರು ಅವರ ಮೇಲೆ ನುಗ್ಗಿ ಹೋಗಿ ಕದನಮಾಡಿ ಅವರನ್ನು ಡೂರಾಂಡ್ ಎಲ್ಲೆಯಿಂದಾಚೆಗೆ ಓಡಿಸಿಬಿಟ್ಟರು. ಅವರ ಕಡೆ ಸುಮಾರು 200 ಜನರು ಕೊಲೆಯಾದರೆಂದೂ, 300 ಜನರು ಗಾಯಪಟ್ಟರೆಂದೂ ತಿಳಿಯುತ್ತದೆ. ನಮ್ಮ ಕಡೆಯವರು ಅವರಲ್ಲಿ ಅನೇಕರನ್ನು ಕೈಸೆರೆ ಹಿಡಿದುತಂದರು ಮತ್ತು ಅನೇಕ ಬಂದೂಕುಗಳೂ, ಕತ್ತಿಗಳೂ, ಧ್ವಜಗಳೂ, ಬಾವುಟಗಳೂ ಸಿಕ್ಕಿರುತ್ತವೆ. ರಣರಂಗದಲ್ಲಿ ಗಾಯಪಟ್ಟು ಬಿದ್ದಿದ್ದ ಶತ್ರುಗಳನ್ನು ಮಿರಾನ್ ಷಾ ಕ್ಯಾಂಪಿಗೆ ತಂದಿಟ್ಟುಕೊಂಡು ಚಿಕಿತ್ಸೆ ಮಾಡಿಸುತ್ತಿದ್ದಾರೆ.

ಬೊಂಬಾಯಿ ಪಟ್ಟಣದಲ್ಲಿ ಗವರ್ನರವರು 80,000 ರೂಪಾಯಿ ಮುಟ್ಟದ ಒಂದು ವಿಶಾಲವಾದ ಹೊಸ ಕಟ್ಟಡವನ್ನು ಕಳೆದ ವಾರ ಪ್ರತಿಷ್ಠೆ ಮಾಡಿದರು. ಇದರಲ್ಲಿ ಪ್ರಜೆಗಳಿಗೆ ಆರೋಗ್ಯ ವಿಚಾರಗಳನ್ನು ಕಲಿಸುವಂಥಾ ಕಾರ್ಯಗಳು ನಡೆಸಲ್ಪಡುತ್ತವೆ. ಆ ಪಟ್ಟಣದಲ್ಲಿ ಪ್ರಜಾ ಆರೋಗ್ಯಸಂರಕ್ಷಣಾ ಸಂಘದವರು ಅಲ್ಲಿನ 60,000 ಮನೆಗಳಿಗೆ ಹೋಗಿ, 16,000 ಮನೆಗಳ ಆರೋಗ್ಯವನ್ನು ಕ್ರಮಪಡಿಸಿರುತ್ತಾರೆ. ಅವರು ನೂರಾರು ಕಡೆಗಳಲ್ಲಿ ಪ್ರಜೆಗಳಿಗೆ ಆರೋಗ್ಯ ಸೂತ್ರಗಳನ್ನು ಕುರಿತು ಉಪನ್ಯಾಸ ಮಾಡಿರುವರು. ಮತ್ತು ಅಂಥಾ ಸೂತ್ರಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಬರೆದು ಅಚ್ಚುಹಾಕಿಸಿ ಸಾವಿರಾರು ಪ್ರತಿಗಳನ್ನು ಹಂಚಿರುತ್ತಾರೆ. ಈಗ ಪ್ರತಿಷ್ಠೆ ಮಾಡಲ್ಪಟ್ಟಿರುವ ಹೊಸ ಕಟ್ಟಡದಲ್ಲಿ ಆರೋಗ್ಯ ವಿಷಯಗಳನ್ನು ಉಪನ್ಯಾಸಗಳ ಮೂಲಕವೂ, ಚಿತ್ರಗಳ ಮೂಲಕವೂ ತಿಳಿಸುವುದಲ್ಲದೆ, ಆರೋಗ್ಯಕರವಾದ ಮನೆಮಠಾದಿಗಳನ್ನು ಕಟ್ಟಿಕೊಳ್ಳುವ ಭಾಗದಲ್ಲಿ ಜನರಿಗೆ ವಿವೇಕ ಹೇಳುವುದಕ್ಕೂ ಅವಕಾಶವನ್ನು ಕಲ್ಪಿಸಿದಾರೆ.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗೆದುಕೊಳ್ಳುತ್ತೇವೆ.

ಪೀತಾಂಬರ ಸೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಜೇಬು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಜೇಬು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಅಣೆ 8 ಮೊದಲು ಅಣೆ 10 ವರಿಗೆ.

ಜಪಮಾಲೆಗಳು.—ಅಣೆ 6 ಮೊದಲು ರೂ. 10 ವರೆಗೆ.

ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು. [63—1]

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ, ಕಾಶಿ.

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆಗೊತ್ತಾಗುವುದು!

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ. ಲೇಪನಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ವಿಳ್ಯೇದೆಲೆಗೆ ಸವರಿಯೋ, ಬಿಸೀನೀರಿಗೆ ಹಾಕಿಯೋ ಬೆಳಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ, ಬೇದಿ, ಪೋಟರಿಕೆ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ವಾಯು ನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು. ಕ್ರಯ ಒಂದು ಬಾಟ್ಲಿಗೆ 10 ಅಣೆ ಮಾತ್ರ [285-14]

ನಮ್ಮ ವಿಳಾಸ—ಕೇಶವಜೀ ದೇವಚಂದ್,
ರಾಮ್‌ಭಾನ್ ಏಜೆನ್ಸಿ, ಸಾವ್ಕಾರ್‌ಪೇಟೆ, ಮದರಾಸ್.

ನಮ್ಮ ಏಜಂಟರು.—ದಿ ಲಕ್ಷ್ಮೀ ಸಹಾಯ ನಿಧಿ ಕೋಆಪರೇಟಿವ್ ಸೊಸೈಟಿ,
ದೊಡ್ಡಪೇಟೆ, ಮೈಸೂರು.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಸುವಾಸನೆ ಸುಣ್ಣ ಸೀಸೆ 1 ಕ್ಕೆ 2 ಅಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯೆಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಬಾಲಗ್ರಹಧೂಪ ಟಿನ್ 1 ಕ್ಕೆ 8 ಅಣೆ.

ಮಕ್ಕಳಿಗೆ ಬರತಕ್ಕ ಬಾಲಗ್ರಹಕ್ಕೆ ಈ ಧೂಪವನ್ನು ಹಾಕಿದ ಕೂಡಲೇ ಬಾಲಗ್ರಹ ಚೇಷ್ಟೆಯು ಖಂಡಿತವಾಗಿಯೂ ಗುಣವಾಗುತ್ತೆ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಅಣೆ.

ಇದನ್ನು ನಮ್ಮ ಆರ್ಯಮತವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನೂ ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-7] ಸುಗಂಧಕಾರಿ, ಮೈಸೂರು.

ಬಿಸಿಲುಕಾಲದ ಆಯಾಸವನ್ನೂ, ಬಾಯಾರಿಕೆಯನ್ನೂ ತಕ್ಷಣ ಪರಿಹರಿಸಿ ಆಬಾಲವೃದ್ಧರಿಗೂ ಅಪೂರ್ವವಾದ ಆನಂದವನ್ನುಂಟುಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ

ಆಮೋದಿನಿ

(ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿದೆ).

ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಕ್ತವನ್ನು ಶುದ್ಧಪಡಿಸುತ್ತವೆ. ನಾನಾ ತರಹಾ ಕೆಮ್ಮು, ದಮ್ಮು, ಉಬ್ಬಸ, ವಾಂತಿ, ವಾಕರಿಕೆ, ಪಿತ್ತರುಗು, ಅರೋಚಕ, ಹೊಟ್ಟೆನೋವು, ಮಲಬಂಧಗಳನ್ನು ಜಾಗ್ರತೆ ಗುಣಮಾಡುತ್ತವೆ. ಸಂಗೀತಗಾರರಿಗೂ, ಉಪನ್ಯಾಸಕರಿಗೂ, ವ್ಯಾಯಾಮ ಮಾಡುವವರಿಗೂ ಅತ್ಯವಶ್ಯಕವೇ ಸರಿ. [231-22]

160 ಮಾತ್ರೆಯುಳ್ಳ ಸೀಸೆ ಅನುಪಾನ ಪತ್ರ ಸಹಿತ 4 ಅಣೆ ; ಐದಕ್ಕೆ ಒಂದು ಇನಾಮು. ಟಪಾಲು ಖರ್ಚು ಪ್ರತ್ಯೇಕ.

25 ಸೀಸೆ ಒಟ್ಟಾಗಿ ತರಿಸಿದರೆ ವಿ. ಪಿ. ಸೇರಿ 5 ರೂಪಾಯಿ ಮಾತ್ರ.

ನಮ್ಮ ವಿಳಾಸ :—ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.

ಸಂತೋಷಕರವಾದ ಪ್ರಕಟನೆ.

ರೈಲ್ವೆ ರೆಗ್ಯುಲೇಟರ್ ವಾಚ್.



ಇದರ ಕ್ರಯ 6 ಬಹುಮಾನಗಳ ಸಮೇತ ರೂ. 3-8-0 ಮಾತ್ರ. 5 ವರುಷಗಳ ಗ್ಯಾರಂಟಿ. ಘನವಂತರೇ, ಪುನಃ ಇಂಥ ಅವಕಾಶ ಅಂದರೆ ಗುರುತುಳ್ಳ ಪ್ರಖ್ಯಾತಿಯಾದ ಲೀವರ್ ಕೆಲಸದಿಂದ ತಯಾರಾದ ಈ ವಾಚ್ ಈಗತಾನೆ ಬಂದಿರುತ್ತೆ. ಬಲಿಷ್ಟವಾದದ್ದು. ಹೆಚ್ಚು ವಿವರಗಳಿಂದೇನು? ದೀರ್ಘಕಾಲ ಬಾಳಿಕೆ ಬರುವ ವಾಚ್. ಸುಂದರವಾದದ್ದು. ಇದರ 6 ಬಹುಮಾನಗಳ ಪಟ್ಟೀಯು: (1) ಸುಂದರವಾದ ವಾಚ್ ಸರಪಣಿ, (2) ನಾಜೂಕುಳ್ಳ ಉತ್ತರಮುಖಿ, (3) ಹೊಸ ಪಯಾದ ಬೊಂಬೆ, (4) ನಾಜೂಕುಳ್ಳ ಕರವಸ್ತ್ರ, (5) ಪರಿಮಳವುಳ್ಳ ಸಂಟ್ ಸೀಷೆ, (6) ಷರ್ಟು ಗುಂಡಿಗಳ ಸೆಟ್ಟು.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ :—

[20—10] ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ್ 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಬಹಿರಂಗವಾಯಿತು. ಶೀಘ್ರದಿಂದ ತರಿಸಿಕೊಳ್ಳಿ,

ಎಲ್ಲರೂ ಅಪೇಕ್ಷಿಸುತ್ತಿರುವ ಪಟವು ಇದೇ.

ಜರ್ಮನಿ ಯುದ್ಧ ಪಟವು.

ಯೂರೋಪಿನಲ್ಲಿ ಈಗಲೂ ದೊಡ್ಡ ಯುದ್ಧವು ಜರುಗುತ್ತಲಿದೆ. ಅದರ ವಿಷಯವಾಗಿ ಸಮಾಚಾರಗಳು ಪೇಪರುಗಳು, ಪುಸ್ತಕಗಳ ಮೂಲಕದಿಂದ ತಿಳಿದಿರಬಹುದು. ಆದರೆ ಯುದ್ಧವು ಜರುಗುವ ಪಟವು ಮಾತ್ರ ಈ ವರೆಗೂ ಯಾರೂ ನೋಡಿರಲಾರರು. ಈ ಪಟಗಳು ನಮ್ಮಲ್ಲಿ ಬಿಟ್ಟರೆ ಇತರ ಯಾವ ಕಡೆಯಲ್ಲಿ ದೊರೆಯಲಾರದು ಕೆಲವು ಕಾಪಿಗಳೇ ಉಳಿದಿರುವದರಿಂದ ಶೀಘ್ರದಿಂದ ತರಿಸಿಕೊಳ್ಳುವವರಿಗೆ ದೊರೆಯುವದು. ಅನಂತರ ದೊರೆಯಲಾರದು.

ಇದು ಯೂರೋಪಿನಲ್ಲಿ ಜರುಗುವ ಯುದ್ಧವನ್ನು ರೂಬರೂಬಾಗಿ ನೋಡುವಂತೆ ಕಾಣಿಸುವದು. ಜರ್ಮನಿಯವರು ಒಂದು ಭಾಗದಲ್ಲಿಯೂ, ಇತರ ಸೈನ್ಯಗಳು ಮತ್ತೊಂದು ಭಾಗದಲ್ಲಿಯೂ ನಿಂತು ಯುದ್ಧಮಾಡುವುದನ್ನೂ, ತೋಪು ಪ್ರಯೋಗ ಮಾಡುವದು, ಬಾಂಬನ್ನು ಮಳೆ ಸುರಿಸುವ ಆಕಾಶ ಮಾರ್ಗದಿಂದ ಪಟ್ಟಣಗಳ ಮೇಲೆಯೂ ಸೈನ್ಯಗಳ ಮೇಲೆಯೂ ಪ್ರಯೋಗಿಸುವದನ್ನೂ, ಅವುಗಳಿಂದ ಸೀಳಿಹೋದ ಪಟ್ಟಣಗಳು ಹಾಳಾಗುವದನ್ನೂ, ದುರ್ಗಗಳ ಯುದ್ಧ ಜರುಗುವ ವಿಧವನ್ನೂ, ಆಕಾಶ ವಿಮಾನಗಳು ಪಟ್ಟಣಗಳ ಮೇಲೆ ತೋರಿಸುವದನ್ನೂ, ಅವುಗಳನ್ನು ನೆಲದ ಮೇಲಿದ್ದು ಫಿರಂಗಿಗಳ ಮೂಲಕ ಹೊಡೆಯುವದನ್ನೂ, ಸೈನ್ಯಗಳಲ್ಲಿ ಹಾರಿಸುವ ಗುಂಡುಗಳ ಪೆಟ್ಟು ತಗಲಿ ಕುದುರೆಗಳ ಮೇಲಿಂದ ಕೆಳಗೆ ಬೀಳುವದನ್ನೂ, ಕುದುರೆಗಳು ವೇಗದಿಂದ ದಾಟಿ ಓಡುವದನ್ನೂ—ಇವನ್ನೆಲ್ಲಾ ತೋರಿಸುವದು. ಇವನ್ನು ನೋಡಿದಾಗ್ಗೆ ಶಿಲಾ ಸಮಾನವಾದ ಮನಸ್ಸು ಸಹಾ ಕರಗುವದು. ಇನ್ನೂ ಅನೇಕ ವಿಧಗಳ ಯುದ್ಧ ಜರುಗುತ್ತಿದೆ. ಇವನ್ನೂ ನೋಡಲು ಮನಸ್ಸಿಗೆ ಸಂತೋಷಪಡಿಸಿ, ನೋಡುವವರಿಗೆಲ್ಲಾ ಸದಾ ಆನಂದವಾಗಿಯೂ ಇರುವದು.

ಈ ಪಟಗಳು ಹೆಚ್ಚಾದ ದಪ್ಪ ಕಾಗದಗಳ ಮೇಲೆ 7 ವಿಧ ಬಣ್ಣಗಳನ್ನು ಕೊಟ್ಟು ಇರುವದು.

ಯೂರೋಪು ಯುದ್ಧ ಪಟವು ಕ್ರಯ 1 ಕ್ಕೆ	ರೂ. 1-0-0
ವಿ. ಪಿ. ಟಪಾಲ್ ಖರ್ಚು	ಅಣೆ 0-3-0
ಎರಡು ತರಿಸುವವರಿಗೆ ಟಪಾಲ್ ಖರ್ಚು ಇನಾಂ.	
ನಾಲ್ಕು ತರಿಸುವವರಿಗೆ ಕ್ರಯ	ರೂ. 3-9-0
ಆರು ತರಿಸುವವರಿಗೆ ಕ್ರಯ	ರೂ. 5-0-0
ವಿ. ಪಿ. ಟಪಾಲ್ ಚಾರ್ಜು .	ಅಣೆ 0-3-0
12 ತರಿಸುವವರಿಗೆ ಕ್ರಯ	ರೂ. 9-0-0
ವಿ. ಪಿ. ಟಪಾಲ್ ಚಾರ್ಜು	ಅಣೆ 0-4-0

ನಮ್ಮ ಕಂಪೆನಿಯ ದೊಡ್ಡ ಕ್ಯಾಟಲಾಗನ್ನು ಬೇಕುವವರು ವಿಳಾಸವನ್ನು ತಿಳಿಸಿದರೆ ಇನಾಮಾಗಿ ಕಳುಹಿಸಲ್ಪಡುವದು.

ವಿಳಾಸ—ಸಿ. ಎ. ನಟೇಶನ್ ಬುಕ್ಕು ಡಿಪೋ,
[65—1] ಮಿಂಟು ಪೋಸ್ಟು, ಮದರಾಸು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Princip[les]

Free Insurance and Provident (Marriage and Upanayana) Policies are a speciality. Two-in-o[ne] (Share Policy) Scheme and property investment (Land and house purchase and investment) Sche[mes] are a novelty.

ಬೇಕಾಗಿದೆ.

ಆಫೀಸ್ ಅರೋಯನ್ಸ್ ಮತ್ತು ಆಡಿಟರ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕೆಲಸವನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೋಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನು ಮತ್ತು ಮನೆಗಳನ್ನು ಕೊಂಡು ಮತ್ತು ಅವುಗಳ ಮೇಲೆ ಸಾಲ ಕೊಡುವ ಡಿಪಾರ್ಟುಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರ್ಸ್ ಸಹಾ ಬೇಕಾಗಿದೆ. ಅಪೇಕ್ಷೆಯುಳ್ಳವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

M. L. NAGANNA,
[15-13] Managing Director, Life & Marriage Assurance Buildings, My[sore].

ನಮ್ಮ ಪುಸ್ತಕ ಭಂಡಾರವು.

"ಹಿಂದೂದೇಶದ ಸಂಕ್ಷೇಪಚರಿತ್ರೆ"—ಅರಮನೆ ಇಲಾಖೆಯಲ್ಲಿ ಶಿರಸ್ತೆದಾರರಾಗಿರುವ ಮ|| ಎಂ. ವಿ. ಸುಬ್ಬರಾಯರು ಸುಮಾರು ೩೦ ವರುಷಗಳ ಹಿಂದೆ ಪುರಿಮಲ್ಲಪ್ಪನವರ ಸ್ಕೂಲಿನಲ್ಲಿ ಬಾಲಕರಿಗೆ ಚರಿತ್ರೆಯನ್ನು ಹೇಳಿಕೊಡುತ್ತಿದ್ದರು. ಆಗ್ಗೆ ಅವರು ಬರೆದಿಟ್ಟುಕೊಂಡಿದ್ದ ಹಿಂದೂಚರಿತ್ರ ವಿಚಾರಗಳನ್ನು ಈಗ ವಿದ್ಯಾರ್ಥಿಗಳಿಗೋಸ್ಕರ ಪ್ರಕಟಮಾಡಿರುತ್ತಾರೆ. ಇದರ ಕ್ರಯ 4 ಆಣೆ. ಹಿಂದೂ ಚರಿತ್ರೆಯನ್ನು ಓದುವ ವಿದ್ಯಾರ್ಥಿಗಳಿಗೆ ಇದು ಉಪಯುಕ್ತವಾಗಿದೆ.

"ತೆಲುಗು ಬಣಜಿಗರು, ಕುಂಚಿಗರು, ಗಾಣಿಗರು, ದೇವಾಂಗದವರು".—ಮೈಸೂರು ಜನಾಂಗ ವಿವರಣೆಯ ಇಲಾಖೆಯಿಂದ ಪ್ರಕಟಮಾಡಲ್ಪಟ್ಟಿರುವ ಈ ನಾಲ್ಕು ಪಂಗಡದ ಪ್ರಜೆಗಳ ಚರಿತ್ರೆಗಳು ನಮಗೆ ತಲುಪಿರುತ್ತವೆ. ಇದರ ಕ್ರಯ ಒಂದು ಪ್ರತಿಗೆ 4 ಆಣೆ; ಬೇಕಾದವರು ಬೆಂಗಳೂರು ಸರ್ಕಾರಿ ಸೆಂಟ್ರಲ್ ಬುಕ್ ಡಿಪೋಗೆ ಬರೆದು ತರಿಸಿಕೊಳ್ಳಬಹುದು. ಇವುಗಳನ್ನೆಲ್ಲಾ ನಮ್ಮ ಸಂಸ್ಥಾನದ ಮೊದಲನೇ ಕೌನ್ಸಿಲರವರಾದ ಮ|| ಎಚ್. ವಿ. ನಂಜುಂಡಯ್ಯನವರು ವಿಷಯಗಳನ್ನು ಸಂಗ್ರಹಮಾಡಿ ಬರೆದಿರುತ್ತಾರೆ. ಈ ಪುಸ್ತಕಗಳಲ್ಲಿ ಆಯಾ ಪಂಗಡದ ಜನಗಳ ಪೂರ್ವೋತ್ತರಗಳು ಸಂಕ್ಷೇಪವಾಗಿ ತಿಳಿಸಲ್ಪಟ್ಟಿವೆ. ಅವರ ಜನನ, ಮರಣ, ಶುಭಶೋಭನಾದಿಗಳು, ಹಬ್ಬಹರಿದಿನಗಳು, ಹವ್ಯಕವ್ಯಾದಿಗಳು, ಅವರ ಜಾತಿಯ ಧರ್ಮ, ಕಸಬು, ಈ ಮೊದಲಾದ ವಿಷಯಗಳು ವಿವರಿಸಲ್ಪಟ್ಟಿರುತ್ತವೆ. ಈ ಜನಾಂಗಗಳ ಚರಿತ್ರೆಯೆಲ್ಲಾ ಸಂಪೂರ್ಣವಾಗಿ ಪೂರೈಸಿದ ಬಳಿಕ ಒಟ್ಟು ಗ್ರಂಥವು ಓದಲು ಬಹು ಸ್ವಾರಸ್ಯವುಳ್ಳದ್ದಾಗುವುದು. ಆದರೆ ಅನೇಕ ಸಂದರ್ಭಗಳಲ್ಲಿ ಎಲ್ಲಾ ಜಾತಿ ಪಂಗಡಗಳಲ್ಲೂ ಪೂರ್ವದ ಪದ್ಧತಿ ಆಚರಣೆಗಳು ಬಹುಮಟ್ಟಿಗೆ ಬದಲಾಯಿಸಿ ಹೋಗಿರುವವೆಂದು ಹೇಳಬಹುದಾಗಿದೆ.

"ಕೃಷ್ಣಾ ಕುಮಾರಿ."—ಇದು ಬಂಗಾಳಿ ಕವಿಶ್ರೇಷ್ಠನಾದ ಮಧುಸೂದನದತ್ತ ಮಹಾಶಯನಿಂದ ಆ ಭಾಷೆಯಲ್ಲಿ ರಚಿಸಲ್ಪಟ್ಟಿದ್ದು. ಈಗ ಮದರಾಸಿನ ಮ|| ಬಿ. ರಾಮರಾವ್ ಎಂ.ಎ., ಎಲ್ ಎಲ್.ಬಿ. ಎಂಬವರಿಂದ ನಾಟಕರೂಪವಾಗಿ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿವೆ. ಕೃಷ್ಣಾ ಕುಮಾರಿಯೇ ಕಥಾನಾಯಕಿಯು. ಉದಯಪುರದ ರಾಜನಾದ ಭೀಮಸಿಂಹನ ಮಗಳೀಕೆ. ಇವಳನ್ನು ಮದುವೆಯಾಗುವುದಕ್ಕೋಸ್ಕರ ಜಯಪುರದ ರಾಜನಾದ ಜಗತ್ಸಿಂಹನೂ ಮರೂದೇಶದ ರಾಜನಾದ ಮಾನಸಿಂಹನೂ ಯುದ್ಧಕ್ಕೆ ನಿಲ್ಲುವರು. ಈ ಸಮಯದಲ್ಲಿ ಉದಯಪುರದ ರಾಜನಿಗೆ ಬಹು ವ್ಯಥೆಯುಂಟಾಗಿ ಚಿತ್ತಭ್ರಮಣೆಯನ್ನು ಹೊಂದಿ ತನ್ನ ಮಗಳಾದ ಕೃಷ್ಣಾ ಕುಮಾರಿಯನ್ನು ಕೊಲ್ಲಲು ಯತ್ನಿಸುವನು. ಕೃಷ್ಣಾ ಕುಮಾರಿಯೇ ಆತ್ಮಹತ್ಯ ಮಾಡಿಕೊಳ್ಳುವಳು. ಇದೇ ಕಥಾ ಸಾರಾಂಶವಾಗಿದೆ. ಕಥಾಸಂವಿಧಾನವು ಮನೋಹರವಾಗಿದ್ದು ಉಚಿತಯುಕ್ತ ಪಾತ್ರಗಳಿಂದ ಕೂಡಿದೆ. ಕನ್ನಡ ಭಾಷೆಯು ಉಚಿತವಾಗಿ ಸಂದಿತ ಪಾಮರರೀರ್ವರಿಗೂ ಪ್ರಯೋಜನಕಾರಿಯಾಗಿರುವುದೆಂದು ನಾವು ಅಭಿಪ್ರಾಯಪಡುತ್ತೇವೆ. ಈ ಗ್ರಂಥಕರ್ತನ ಇಂಥಾ ಪ್ರಯತ್ನವು ಕರ್ಣಾಟಕ ಭಾಷೆಯನ್ನು ಅಭಿವೃದ್ಧಿಗೆ ತರುವುದಕ್ಕೆ ಒಳ್ಳೇ ಸಹಾಯಕವಾಗಿರುವುದರಿಂದ ಆ ಭಾಷಾಭಿಮಾನಿಗಳೆಲ್ಲರೂ ಇದನ್ನು ತರಿಸಿಕೊಂಡು ಓದಿ ಸಂತೋಷಿಸುವರೆಂದು ನಾವು ನಂಬಿದ್ದೇವೆ.

"ಜಯವಿಜಯ, ಅಥವಾ ತೂಗಾಡುವ ಅಸ್ಥಿಪಂಜರ."—ಈ ಗ್ರಂಥವು ಮೊದಲು ಬೊಂಬಾಯಿನಲ್ಲಿರುವ ಮಧುಂದಾಸ್ ಗೋಕುಲದಾಸ್ ಎಂಬವರಿಂದ ಗುಜರಾತಿ ಭಾಷೆಯಲ್ಲಿ ಬರೆಯಲ್ಪಟ್ಟಿದ್ದಿತು. ಇದನ್ನು ಬೊಂಬಾಯಿನಲ್ಲಿರುವ ವೆಂಕಪ್ಪ ಚೆನ್ನಪ್ಪ ಅಮೀನ್ ಎಂಬವರು ಹೊಸದಾಗಿ ಗುಜರಾತಿ ಭಾಷೆಯನ್ನು ಅಭ್ಯಾಸಮಾಡಿ ಕನ್ನಡಕ್ಕೆ ಪರಿವರ್ತಿಸಿದ್ದಾರೆ. ರಾಜಾ ಮೋಹನ ಸಿಂಹನೆಂಬವನು ದುರ್ಮಾರ್ಗಪ್ರವರ್ತಕನಾಗಿ ಸ್ತ್ರೀ ಲಂಪಟತ್ವದಿಂದ ಬುದ್ಧಿ ಶೂನ್ಯನಾಗಿ, ಧೀರನೂ ಸತ್ಯಸಂಧನೂ ಆದ ವಿಜಯಸಿಂಹನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿ ನಿರಪರಾಧಿಯಾದ ಇವನ ಮೇಲೆ ತಪ್ಪನ್ನು ಹೊರಿಸಿ ಬಂಧನದಲ್ಲಿ ಇರಿಸುತ್ತಾನೆ. ಇವನ ಹೆಂಡತಿಯನ್ನು ಅವಳ ತಂದೆಯಿಂದಲೇ ಕೊಲ್ಲಿಸಲೆತ್ನಿಸುತ್ತಾನೆ. ದೇವರ ಕೃಪೆಯಿಂದ ಇವೆಲ್ಲಾ ವ್ಯರ್ಥವಾಗಿ ವಿಜಯಸಿಂಹನಿಗೆ ಒಳ್ಳೆಯದಾಗುತ್ತದೆ. ಅನೇಕ ಅನ್ಯಾಯ ಪಕ್ಷಪಾತಗಳೂ ವಿವಿಧ ವೇಷಗಳಿಂದ ಮರೆಯಾಗಿದ್ದ ದುಷ್ಟನಾದ ರಾಜನ ಅಕೃತ್ಯಗಳಿಗೆಲ್ಲಾ ಪ್ರತೀಕಾರವನ್ನು ಮಾಡಿ ನ್ಯಾಯವನ್ನು ಸ್ಥಾಪಿಸುತ್ತಾರೆ. ಇದರಿಂದ ಈ ಗ್ರಂಥಕ್ಕೆ ಜಯವಿಜಯವೆಂದು ಹೆಸರಾಗಿದೆ. ಮತ್ತು ಮೇಲೆ ಹೇಳಿದ ಮೋಹನ ಸಿಂಹನು ಕಲಾವತಿ ಅಥವಾ ಜಯೆಯೆಂಬವಳನ್ನು ವಶಪಡಿಸಿಕೊಳ್ಳುವುದಕ್ಕೆ ಅನೇಕವಾದ ಉಪಾಯಗಳಿಂದ ಪ್ರಯತ್ನಿಸಿದರೂ ಎಲ್ಲಾ ವ್ಯರ್ಥವಾಗುತ್ತದೆ. ಕಡೆಗೆ ಕ್ರೂರನಾದ ಈ ರಾಜನು ಆ ಜಯೆಯ ಮೂರು ವರುಷದ ಹೆಣ್ಣು ಮಗುವನ್ನು ಅವಳೆದುರಿಗೆ ಛಲಕೆಳಗಾಗಿ ತೂಗಹಾಕಿ ಕತ್ತು ಕೊಯ್ದು ಕೆಳಗೊಂದು ಪಾತ್ರೆಯನ್ನಿಡಿಸಿ ಅದಕ್ಕೆ ಆ ಶಿಶುವಿನ ತೊಟ್ಟಿಕ್ಕುವ ರಕ್ತವನ್ನು ಬೀಳಿಸುತ್ತಾನೆ. ಹೀಗಾದರೂ ಪರಮ ಪತಿವ್ರತೆಯಾದ ಆಕೆಯು ಒಡಂಬಡುವುದಿಲ್ಲ. ಹೀಗೆ ಸದಾ ಆ ಜಯೆಯು ತೂಗಾಡುತ್ತಿರುವ ತನ್ನ ಪ್ರಿಯ ಪುತ್ರಿಯ ಅಸ್ಥಿಪಂಜರವನ್ನು ನೋಡುತ್ತಾ ಸೆರೆಯಲ್ಲಿರುವಳು. ಕಡೆಗೆ ಇವಳಿಗೂ ಬಿಡುಗಡೆಯಾಗುವುದು. ಈ ಕಾರಣದಿಂದ ಈ ಗ್ರಂಥಕ್ಕೆ ತೂಗಾಡುವ ಅಸ್ಥಿಪಂಜರವೆಂಬ ಇನ್ನೊಂದು ಹೆಸರೂ ಉಂಟಾಗಿದೆ. ಈ ಕಥೆಯು ಎಲ್ಲಾ ಭಾಗವೂ ಬಹು ಯುಕ್ತಿಯುಕ್ತವಾಗಿದ್ದು ಓದುವವರಿಗೆ ವಿಚಾರ ಪೂರ್ವಕವಾದ ಆಲೋಚನಾ ಶಕ್ತಿಯನ್ನು ವೃದ್ಧಿಗೊಳಿಸತಕ್ಕದಾಗಿದೆ. ಮತ್ತು ಲೋಕದಲ್ಲಿ ದುಷ್ಟರು ಶಿಷ್ಟರನ್ನೂ, ಶಿಷ್ಟರು ದುಷ್ಟರನ್ನೂ ಜಯಿಸುವುದಕ್ಕೆ ಮಾಡುವ ಅಸಾಧಾರಣ ಪ್ರಯತ್ನಗಳು ಈ ಗ್ರಂಥದಲ್ಲಿ ಚೆನ್ನಾಗಿವೆ. ಭಾಷೆಯು ಸರಳವಾಗಿದೆ. ಅಲ್ಲಲ್ಲಿ ಮುದ್ರಣದೋಷಗಳು ವಿರಳವಾಗಿವೆ. ಈ ತರದ ಗ್ರಂಥಗಳು ಕನ್ನಡದಲ್ಲಿ ಬರೆಯಲ್ಪಡುವುದು ಶ್ಲಾಘ್ಯವಾಗಿದೆ. ಇಂಥ ಗ್ರಂಥವನ್ನು ಕನ್ನಡಿಗರು ಚೆನ್ನಾಗಿ ಓದಿ ಪ್ರಯೋಜನವನ್ನು ಹೊಂದಲೆಂದು ನಾವು ಧಾರಾಳವಾಗಿ ಹೇಳುತ್ತೇವೆ.

ಬೆಲೆ ತಗ್ಗಿಸಿದೆ! ಬೇಗ ನೋಡಿ!

೧೯೧೫ನೆಯ ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಪಾಕೆಟ್ ಡೈರಿ



ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಬೇಗ ತರಿಸಿಕೊಳ್ಳಿರಿ. ಉತ್ತಮವಾದ ಕಾಗದ, ಮುದ್ದಾದ ಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿರುತ್ತವೆ. ಐದು (5) ಡೈರಿಗಳನ್ನು ಒಂದೇ ದಿವಸಕ್ಕೆ ತರಿಸಿಕೊಂಡರೆ 1 ಡೈರಿ ಇನಾಂ. [329-24]

ನಂಬರ್ 1	0—2—6	ಪೋಸ್ಟೇಜು ಬೇರೆ.
,, 2	0—4—0	,,

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Messrs. Petrie-Hay & Son, Hunsur.

ನಮ್ಮಲ್ಲಿ ಶೇಗಡೆ ತೊಲೆಗಳು 2 ಸಲೀ ಅಡಿ ಬಾಗಾಯತು 30-40 ಸಲೀ ಅಡಿ ವರೆಗೂ ಇರುತ್ತವೆ. ಇಷ್ಟಪಡುವವರು ಪಟ್ಟೀಲನ್ನು ಹುಣಸೂರಿನಲ್ಲಿರುವ ಮೆ|| ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಂದುಕೊಳ್ಳಬಹುದು. ಈ ತೊಲೆಗಳು ಎಂಥಾ ಕೆಲಸಕ್ಕೂ ಮನೆ ಕಟ್ಟುವದಕ್ಕೂ ಆಗುತ್ತವೆ. [232-23]

ಯಾವಾಗಲೂ ಆರೋಗ್ಯವಂತರಾಗಿರಬೇಕೇ?

ಹಾಗಾದರೆ ತಡಮಾಡದೆ ಒಂದು ಕಾಲಾಣೆ ಕಾರ್ಡು ನಿಮ್ಮ ವಿಳಾಸದ ಸಂಗಡ ಬರೆದುಕೊಳ್ಳಿರಿ.

ಆರೋಗ್ಯವರ್ಧಕ ಜೀವನ್



ಇಂದು ಅಮೃತೋಪಮಾನವಾದ ಔಷಧವು ನಮ್ಮಗಳಿಗೆ ಬಲವು, ಶೌರ್ಯವು, ಸುಖವು ಕೊಡುವದು. ಬಲಹೀನತೆಯಿಂದುಂಟಾಗುವ ಶ್ರಮವು, ಮಲಬದ್ಧಕತ್ವವು ಪರಿಹಾರವಾಗುವದು. ನರಗಳಿಗೆ ಬಲ, ವೀರ್ಯವೃದ್ಧಿ, ಬುದ್ಧಿ ಕುಶಲತ್ವ, ಜ್ಞಾಪಕಶಕ್ತಿ ಇವುಗಳನ್ನು ವೃದ್ಧಿ ಮಾಡುವದರಲ್ಲಿ ಅಗ್ರಗಣ್ಯವಾದದ್ದು. ಪ್ರಪಂಚಸುಖವನ್ನು ತೃಪ್ತಿಯಾಗಿ ಅನುಭವಿಸಬೇಕೆಂಬುವವರಿಗೆ ಅಪ್ರತಿಮ ಪ್ರಭಾವವುಳ್ಳದ್ದು. ಪಡೆವಾಗಲೆ ಬರೆದುಕೊಳ್ಳಿರಿ. ಒಂದು ಸಲ ತರಿಸುವವರು ಯಾವಾಗಲೂ ಬಿಡಲಾರರು.

1 ಪೌಂಡಿನ ಡಬ್ಬಿ 1 ಕ್ಕೆ ರೂ. 5-0-0 | ವಿ. ಪಿ. ಛಾರ್ಜು
½ ,, ,, ,, ,, 2-8-0 | ಪ್ರತ್ಯೇಕ.

ವಿಳಾಸ—ಆರ್. ವಿ. ಪಂಡಿತ್ ಅಂಡ್ ಕೋ.,

[63—4] ನಂ. 6, ಬಂದರ್ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಭಾವಿಕ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಅಪಾರವಾಗಿಯೋ ಬಿಳುಪಾಗಿಯೋ ಇಳಿಯುವುದು; ಪಿಡದೆ ಬಾಯಾರಿಕೆ; ಊರಿಕೆ; ಎದೆ ತಲ್ಲಣಿಸುವಿಕೆ; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು, ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅರುಮೂತ್ರ ಮೂತ್ರಕೋಶದ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆನ್ನು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಗುಣಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-32]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



ಬೆಲೆ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಫೋಸ್ಟರ್, ಪೆ. ೬. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,46,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ|| ಎಂ. ಎಸ್. ರಟಿಪಿ, ಚೀಫ್ ಏಜೆಂಟ್, ಬೆಂಗಳೂರು, ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಸುಬ್ಬಯ್ಯನವರು ಕಂಪನಿ ಏಜೆಂಟರು, ಮೈಸೂರು; ಅಥವಾ

[221-20] ಬ್ರಾಂಚ್ ಸೆಕ್ರೆಟರಿ, ಮದರಾಸ್.

"ಈ ವಾಯುವಿನಿಂದ ನಾನು ಬಹಳ ನೋವನ್ನು ಹೊಂದುವೆನು, ಈ ಕಠಿಣ ನೋವನ್ನು ನಿಲ್ಲಿಸುವೆನು, ನಾನು ಆರೋಗ್ಯಹೊಂದಿ ಬಲಿಷ್ಠನಾಗಿ, ಕೆಲಸಮಾಡಿ ಜೀವದಲ್ಲಿ ಸಂತೋಷಪಡುವೆನೆಂದು "ಸುವದ್ಯ ಜಿತ ಮನಸ್ಸು ನಿನಗಿದ್ದರೆ," ಮೈಸೂರು ನಗರದ ಪಾಲಿಕ್ ಬೈಬಲಿ ವಾಸವಾಗಿರುವ ಮ|| ಪಿ. ಟಿ. ಧೋರೆಯವರು ಸ್ವಸ್ಥವಾದ್ದನ್ನು ಕುರಿತು ಓದಿ.

"ಐದು ವರುಷಗಳ ಕಾಲ ನಾನು ವಾಯುವಿನಿಂದ ಹೇಳಲಾಗದ ಸಂಕಟ ಪಟ್ಟೆನು. ನನಗೆ ತಿಳಿದ ಔಷಧಗಳನ್ನೆಲ್ಲಾ ಉಪಯೋಗಿಸಿದೆನು. ಉತ್ತಮ ವೈದ್ಯರ ಆಲೋಚನೆಗಾಗಿಯೂ ಔಷಧಗಳಿಗಾಗಿಯೂ 150 ರೂಪಾಯಿಗಳನ್ನು ಖರ್ಚುಮಾಡಿದೆನು. ರಾತ್ರೀ ವೇಳೆಗಳಲ್ಲಿನ ನೋವು ಅಧಿಕವಾಗಿದ್ದದ್ದರಿಂದ ನಿದ್ರೆಯೇ ಬರುತ್ತಿರಲಿಲ್ಲ. ಕೆಲವುಗಳೆಲ್ಲಾ ಪ್ಲಾಸ್ಟರುಗಳನ್ನು ಕಟ್ಟುತ್ತಿದ್ದದ್ದರಿಂದ ತಾತ್ಕಾಲಿಕ ಸ್ವಸ್ಥವಾಗಿ ಕಾಣುತ್ತಿತ್ತು. ಕಡೆಗೆ ಕ್ರುಷೆನ್ ಸಾಲ್ಟನ್ನು ಉಪಯೋಗಿಸಿದೆ. ಪೈಲಟ್ ನನ್ನನ್ನು ಸಂಪೂರ್ಣವಾಗಿ ವಾಸಿಮಾಡಿತು. ಐದು ವರುಷಗಳಲ್ಲಿ ನನ್ನ ಜೀವನ ನನಗೆ ವಹಿಸಲು ಸಾಧ್ಯವಿಲ್ಲ."

ಔಷಧ ಮಾರುವವರೆಲ್ಲರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ಮಾರಲ್ಪಡುತ್ತೆ. [61-49]

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದನ್ನ ಜೀರ್ಣವಾಗುವುದಲ್ಲದೆ ಅಜೀರ್ಣವೃತ್ತಿಯು ಕಡಿಮೆಯಾಗಿ ಬರುತ್ತ ಯಾವ ರೋಗಕ್ಕೂ ಆಸ್ಪದವುಂಟಾಗದಿರುವುದು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದ್ದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಪಿ. ಸಿ. ಷಾ ಕಂಪನಿ, 177, [26-10] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮುಸಂಜೀವ ಶೆಟ್ಟರು, ಚನ್ನಪಟ್ಟಣ.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧಿನಿವಾರಿಣಿ	4 ,,

[262-18] ನಮ್ಮ ವಿಳಾಸ :—ಓರಿಯಂಟಲ್ ಫಾರ್ಮಸಿ, ಮೈಸೂರು.

ಕುಂತಳಕೇಶವರ್ಧಿನಿ ತೈಲವು.

213-29

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಪದಕಗಳನ್ನೂ, ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರಿತವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ.

ಸುವಾಸನೆಯಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 3 ರೂಪಾಯಿ 10 ಆಣೆ. ಅಂಚೆ ಸಾಗಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ.—ವಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!
ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ
ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಶೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇನೆ. ಕ್ರಯ ¼ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೇರೆ ಕೆರೋಸೀನ್ ಎಣ್ಣೆ ಕೊಟ್ಟಾರು,
ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕೇರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತ ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಶಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[296-15] 177, ಟ್ರಿಪ್ಲಿಕೇನ್ ಬಜಾರ್ ರೋಡ್, ಮದರಾಸ್.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರ	0-8-0	ಪದ್ಮಿನಿ	0-8-0
ತಾರಾಸುಂದರಿ	0-8-0	ಕುಮುದಿನಿ	0-8-0
ರಾಧಾಮಾಧವ	0-8-0	ಸಂತಾಪಕ	0-4-0

[275-17] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲುದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಥಾಂಪ್ಸನ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಡಿ. ಜೆ. ಗೋರಿಯೋ ಕಂಪನಿ, ವಾಲಿನ್ ಬೀದಿ,

[172-36] ಬೊಂಬಾಯಿ ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹ!!!

ಗೆಜ್ಜೆ ಬಣ್ಣದ ಧರ್ಮಾವರ ಸೀರೆಗಳು.

ಸೋಲಾಪುರದ ತರಹೆವಾರಿ ಚೌಕ್ಕಗಳು.

ಶುದ್ಧಿ ಮಾಡಿದ ಹಸರ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [55-3]

ತ್ವರೆಮಾಡಿ! ನಾವಕಾಶ ಮಾಡಿದರೆ ಸನಗು ಸಿಕ್ಕದು.

ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್.
159, ಕಿಲಾರಿ ರೋಡು (ಕುಂಬಿಗರ ಪೇಟೆ), ಬೆಂಗಳೂರು ಸಿಟಿ.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 6 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,
[31-6] ಸುಬೋಧ ಗ್ರಂಥಾಲಯ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

19—3—1915 ರಿಂದ 27—3—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	2	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	28	9	0	0
ಮೈಸೂರು ,,	19	17	0	0
ಕೋಲಾರ್ ,,	8	10	0	0
ಕೋಲಾರ್ ಚಿನ್ನದ ಗಣಿಗಳು	19	15	0	0
ತುಂಕೂರು ಡಿಸ್ಟ್ರಿಕ್ಟು	7	8	0	0
ಹಾಸನ ,,	0	0	0	0
ಚಿತ್ರದುರ್ಗ ,,	16	2	0	0
ಕಡೂರ್ ,,	0	1	0	0
ಶಿವಮೊಗ್ಗ ,,	14	7	0	0
ಒಟ್ಟು.....	88	63	0	0

ಶಾಲಿವಾಹನ ಶಕ ವರುಷಂಗಳು 1836 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೇ ವಸಂತಋತೌ ಚೈತ್ರ ಬಹುಳ ದಶಮಿ ಶುಕ್ರವಾರದಿಂದ ಅಧಿಕ ವೈಶಾಖ ಶುದ್ಧ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಏಪ್ರಿಲ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ದಿವಸ ಮೇಷ ಕೇಂದ್ರ
9	ಶುಕ್ರ *	ದಶಮಿ	20-26	ಶ್ರವಣ	9-1	27
10	ಶನಿ ‡	ಏಕಾದಶಿ	18-25	ಧನಿಷ್ಠ	8-34	28
11	ಭಾನು †	ದ್ವಾದಶಿ	17-43	ಶತಭಿಷ	9-17	29
12	ಸೋಮ ,,	ತ್ರಯೋದಶಿ	18-11	ಪೂಭಾ	11-1	30
13	ಮಂಗಳ §	ಚತುರ್ದಶಿ	19-59	ಉತ್ತಭಾ	14-24	1
14	ಬುಧ ;;	ಅಮಾವಾಸ್ಯೆ	23-57	ರೇವತಿ	18-47	2
15	ಗುರು ::	ಪಾಡ್ಯಮಿ	26-57	ಅಶ್ವಿನಿ	24-13	3

* ತಿಥಿದ್ವಯಂ, ವಾಕ್ಯರೀತ್ಯಾ ದಶಮಿ ತಿಥಿ, ಮಳೆ ನಕ್ಷತ್ರ—ರೇವತಿ 4 ನೇ ಪಾದ. ‡ ಮೈತ್ರ, ದ್ವಾದಶಿ ತಿಥಿ, ಸರ್ವತ್ರ ಏಕಾದಶಿ, ವಾಕ್ಯರೀತ್ಯಾ ತಿಥಿದ್ವಯಂ. † ತ್ರಯೋದಶೀ ತಿಥಿ, ವಾಕ್ಯರೀತ್ಯಾ ಶೂನ್ಯತಿಥಿ, ಪ್ರದೋಷ, ದಗ್ಧಯೋಗ. ,, ಚತುರ್ದಶೀ ತಿಥಿ, ವಾಕ್ಯರೀತ್ಯಾ ತ್ರಯೋದಶೀ ತಿಥಿ, ಮಾಸ ಶಿವರಾತ್ರಿ. § ಶೂನ್ಯತಿಥಿ, ಮಳೆ ನಕ್ಷತ್ರ—ಅಶ್ವಿನಿ 1 ನೇ ಪಾದ. ;; ಸರ್ವತ್ರ ಕರಿನಮಾವಾಸ್ಯಾ, ಸೌರಸಂವತ್ಸರಾರಂಭ. :: ಚಂದ್ರೋದಯ, ಇಮಾಂಡಿಸಾನಿ ಬಂದ್ 1.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುವಗಡ್ಡೆ, ಶಿವಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [53-4]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಕೇಪಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕಾಂಟ್ರಾ, ಬೆಳ್ಳಿ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಪಡಿಸುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1916 ನೆ ಇಸವಿ ಮಾರ್ಚಿ ತಾರೀಖು 16 ರಲ್ಲು ಇಡಾಇಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಾ. ಮುನ್ನಾಲಾಲ್, ಡಿಲ್ಲಿ ವೈದ್ಯರು,
6. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 8/4/1915.

REGISTERED
M. 20.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸರ್ ೧೯೧೬ ನೇ ಇಸವಿ ಏಪ್ರಿಲ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೪೬

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಶೋಭಿತವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು! ಇಂಥಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿದ ಕೂಡಲೆ ಬೆಳೆದು ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವು, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಸ್ಥಳಗಳಿಂದ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳದ ಬಂಧುಗಳು. ಬಸವಣ್ಣ, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಜನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಅದು ಅದಕ್ಕಿಂತ ಉತ್ತಮವೂ ಅಗ್ಗವೂ ಆದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವ ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾಗದೆ ಅಸಲಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತಯಾರಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಆದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-12]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ ರೂ. 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾ ಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 26, 3 ನೇ ದರ್ಜೆ ರೂ. 10.

[28-10] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಕನ್ಯಾವಿತಂತು ಬೇಕು.

ರೂಪವತಿಯಾದ 18–25 ವಯಸ್ಸಿನ ಮಾಧ್ವ ಕನ್ಯಾವಿತಂತುವು 45 ವಯಸ್ಸಿನ ವಿಧುರನಿಗೆ ಬೇಕಾಗಿದೆ. ಈಗ ಆತನಿಗೆ 60 ರೂಪಾಯಿ ಸಂಬಳ ಬರುತ್ತಿದೆ. ವಿವಾಹವಾಗತಕ್ಕವರು ಈ ವಿಳಾಸಕ್ಕೆ ಬರೆಯಿರಿ— (3)

ವಿಧುರ C/o ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-39]

ಅತ್ಯುತ್ತಮ ಕಾದಂಬರಿಗಳು :—ಜಯ ! ವಾಲ್ಮೀಕಿ 12 ಆ ; ಅಶ್ವತ್ಥಾಮ್ನ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ನಭೋ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ :—ಹನುಮಾನ್ ಕಂಪೆನಿ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-32] GIRLS' INDUSTRIAL SCHOOL, HASSAN.

1916 ನೆಯ ಕೆ. ಲೋ. ಸೆ. ಟೆ. ನೋಟ್ಸ್.

ಬಿಕರಿಗೆ ಸಿದ್ಧವಾಗಿದೆ. ಕ್ರಯ 4 ಆಣೆ.

ಪರೀಕ್ಷೆಗೆ ಆವಶ್ಯಕವಾದ ವಿಷಯಗಳನ್ನೆಲ್ಲಾ ಒಳಗೊಂಡಿವೆ. ನಮ್ಮ ದೇಶೀಯ ವಿದ್ಯಾರ್ಥಿಗಳೆಲ್ಲರೂ ಇದರ ಪ್ರಯೋಜನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಬೆಲೆಯನ್ನು ಕಮ್ಮಿ ಮಾಡಿದೆ. ಪುಸ್ತಕ ಕೈಗೆ ಬಂದ ಮೇಲೆ ಅದರ ಯೋಗ್ಯತೆ ತಿಳಿಯುವುದು. ಅಲ್ಲದೆ ನಮ್ಮಲ್ಲಿ ಸರ್ಕಾರದ, ಮಿಷನ್ನಿನ ಮತ್ತು ಇತರ ಎಲ್ಲಾ ಪುಸ್ತಕಗಳೂ ಬಿಕರಿಗೆ ದೊರೆಯುವವು. ದೊರೆಯುವ ಸ್ಥಳಗಳು:—(1) ಅಕ್ಷರಶಾಲಾ, ಮೈಸೂರು ; (2) ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು ; (3) ಕೆ. ಎ. ಚೌರಪ್ಪ ಅಂಡ್ ಸನ್, ಅವೆನ್ಯೂ ರೋಡ್, ಬೆಂಗಳೂರು ಸಿಟಿ. [37-8]

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, *Mr. H. E. W. Lutt*, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-41] Bangalore City.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-13]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ ೪ ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವಿ	0-8-0	ಸಂತಾಪಕ	0-4-0

[276–18] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,

MYSORE.

NOW READY!

TEXTS FOR 1916

III, IV, V & VI Forms English Texts!

Lower Seccndary Canarese Texts and English

[8-14] Notec!

Government Kannada Books.

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹೆ!!!

ಗಟ್ಟಿ ಬಣ್ಣದ ಥಡಕಿನಾದ ಸೀರೆಗಳು.

ಸೋಲಾಪುರದ ತರಹೆವಾರಿ ಚೌಕಗಳು.

ಶುದ್ಧಿ ಮಾಡಿದ ಪರ್ಸ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [55–4]

ತ್ವರೆಮಾಡಿ! ನಿರವಕಾಶ ಮಾಡಿದರೆ ಸರಕು ಸಿಕ್ಕದು.

ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್.
159, ಕಿಲಾರಿ ರೋಡು (ಕುಂಬಾರಪೇಟೆ), ಬೆಂಗಳೂರು ಸಿಟಿ.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 16 ವರುಷದ ವರೆಗೆ ಕೊಡುತ್ತಾ ಬರುವದು.

ಕಂಪನಿಗೆ ದಾಖಲಾಗಿ ಪಾಲಸಿ ಪಡೆದು ಸಲೀಸು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಫೆ ಸಮೇತ ನಾಮಿನಿಗೆ ಕೊಡಲಾಗುತ್ತೆ. 20 ವರುಷದವರಿಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಣ್ಣು ಗಂಡು ಮಕ್ಕಳು 16 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿಯಂತೆ ಕೊಡುತ್ತಾ ಬರುವದು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲೂ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್ರ ಹಣವು ಹಂಚಿಕೆ ರೀತಿಯಿಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿಮೆ ಮೊಬಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಿಂಗ ಏಜಂಟ್ರು ಖುದ್ದು ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ [292-17]

ಒಳ್ಳೆ ಚಟುವಟಿಕೆಯುಳ್ಳ ಸಂಬಳಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೋಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್ರಿಗೆ ಬರೆಯಿರಿ:—

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ
ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು...............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಪ್ರಾಸ್ಪೆಕ್ಟಸ್ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[231-37] ಬ್ರಾಂಚ್ ಸೆಕ್ರೆಟರಿ, ಮದರಾಸ್

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂತರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ಕೊನಲಿನ ಟೀಲ, (4) ರಾತ್ರಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕೆಂಡಪ್ಪ

[180-24] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಇನಾಂ ಸಾಮಾನುಗಳು 50 ಇನಾಂ ಸಾಮಾನುಗಳು 50

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ

ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳ್ ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಕೀರ್ತಿಪ್ರಖ್ಯಾತಿಯಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಅದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಮೆದುಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿನೆ 6, ಮೈಭರಣೆ 1, ಅದ್ದಾ 1, ತಾಂಬೂಲಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜ ರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, 6, ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನು ಇಲ್ಲದಂತೆ ಟೈಂಪೀಸು 1 ನ್ನು ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ—ಧೈರ್ಯ ಲಕ್ಷ್ಮಿ ಅಂಡು ಕಂಪನಿ,

[58-3] ನಂ. 3, ಇರುಳಪ್ಪನ್ ಬೀದಿ, ಮದರಾಸು.

ಏಪ್ರಿಲ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0



ಈದೇ ಏಪ್ರಿಲ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಏಪ್ರಿಲ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-46]

ವಿಳಾಸ—ಏ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 37, ಬಂದರ್ ಬೀದಿ, ಜಿ. ಟಿ., ಮದರಾಸು..

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3-0-0.

ಏಪ್ರಿಲ್ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ರಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧರಪತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಏ. ಕೃಷ್ಣಸ್ವಾಮಿ ಮೊದ

[99-46] ಲಿಯಾರ್, ನಂ. 37, ಬಂದರ್ ಬೀದಿ, ಜಿ. ಟಿ., ಮದರಾಸು

ನಕ್ಲೀಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಶ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಲೀಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ¼ ಔನ್ಸ್ ಗಾಜಿನ ಬುಡ್ಡಿ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲಿಣ್ಣೆಗೆ ಹಾಕುವ ಬೀ ಕೆರೋಸೀನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕೇರ ಕೂದಲೆಣ್ಣೆ

ಯಲ್ಲಿ ಬೀ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತ ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ಪಿಕೇಷನ್ಸುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[296-16] 177, ಬೈನಾಬಜಾರ್ ರೋಡ್, ಮದರಾಸ್.

ಇನಾಂ ಸಾಮಾನು 50!! ಇನಾಂ ಸಾಮಾನು 50!!!

ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿರುವ

"ರಾಜಸುಂದರಿ ಸಿರೋಜ"

ಇದರ ಬೆಲೆ ೫೦ ಇನಾಂ ಸಾಮಾನುಗಳೊಡನೆ ಬುಡ್ಡಿ ೧ ಕ್ಕೆ ರೂ. ೦-೧೨-೦ ಮಾತ್ರವೇ.

ಯಾವ ಸ್ತ್ರೀಯರಿಗೆ ತಮ್ಮ ತಲೆ ಕೂದಲು ಅಂದವಾಗಿರಬೇಕೆಂಬ ಆಸೆಯುಂಟೋ, ಸ್ತ್ರೀಯಾವ ರಿಯರಿಗೆ ತಮ್ಮ ಉದುರುತ್ತಿರುವ ಕೂದಲನ್ನು ತಡೆದು ಕೋಮಲವಾಗಿ ಬೆಳೆಸಬೇಕೆಂಬ ಉದ್ದೇಶವುಂಟೋ ಅಂಥಾವರು ಈ ನಮ್ಮಲ್ಲಿ ದೊರೆಯುವ ಹೆಚ್ಚು

ಯೋಗ್ಯತೆಯುಳ್ಳ "ರಾಜಸುಂದರಿ ಸಿರೋಜ" ಯನ್ನುವ ಎಣ್ಣೆಯನ್ನು ಉಪಯೋಗಿಸಬೇಕೇ ಹೊರ್ತು ಇತರ ಸಾಧಾರಣ ಎಣ್ಣೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ನಮ್ಮ ಎಣ್ಣೆಯನ್ನು ಸ್ವಲ್ಪ ಕೈಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಚೆನ್ನಾಗಿ ಹಚ್ಚಿಕೊಂಡು ಬಾಚುತ್ತಾಬಂದರೆ ಉದುರುತ್ತಿರುವ ಕೂದಲಿನ ಬುಡವು ದೃಢವಾಗಿ ನಿಲ್ಲುತ್ತದೆ. ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದಲ್ಲದೆ ಮುಖಕ್ಕೆ ಕಾಂತಿಯನ್ನೂ ಮನಸ್ಸಿಗೆ ಉಲ್ಲಾಸವನ್ನೂ ಕೊಟ್ಟು ಕೂದಲನ್ನು ಉದ್ದವಾಗಿ ಬೆಳೆಸುತ್ತದೆ. ಒಂದು ಬಾಟ್ಲಿಯನ್ನು ತರಿಸಿ ನೋಡಿ.

ಇನಾಂ ಸಾಮಾನುಗಳ ವಿವರ:—ಕೊಂಡಿ ಗಿಣಿ 6, ಕಪ್ಪು ಭರಣಿ 1, ಕನ್ನಡಿ 1, ದಂತದ ಬಾಚಣಿಗೆ 1, ರಾಜರಾಣಿ ಕಾರೋನೇಷನ್ ಪೆಟ್ಟಿಗೆ 1, ತಾಂಬೂಲ ಮಾತ್ರೆ 30, ರವಿವರ್ಮ ಪೋಸ್ಟ್ ಕಾರ್ಡು 6, ಅತ್ತರ್ ಬಿಲ್ಲೆ 1, ಗಂಧದ ಬಿಲ್ಲೆ 1, ಬ್ರೂಚ್ 1. [260-18]

ನಮ್ಮ ವಿಳಾಸ:—ಯರ್. ಮುನಿಸಾಮಿ ಮೊದಲಿಯಾರ್,

ನಂ. ೬, ವೆಂಕಟೇಶಮೇಸ್ತ್ರಿ ಬೀದಿ, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಪಿ. ಸಿ. ಷಾ ಕಂಪನಿ, 177, [25-11] ಚೇಣಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಪ್ರಾರಂಭವಾಯಿತು. ಶೀಘ್ರದಿಂದ ತರಿಸಿಕೊಳ್ಳಿ.

ಎಲ್ಲರೂ ಅಪೇಕ್ಷಿಸುತ್ತಿರುವ ಪಟವು ಇದೇ.

ಜರ್ಮನಿ ಯುದ್ಧ ಪಟವು.

ಯುರೋಪಾದಲ್ಲಿ ಈಗಲೂ ದೊಡ್ಡ ಯುದ್ಧವು ಜರುಗುತ್ತಲಿದೆ. ಅದರ ವಿಷಯವಾಗಿ ಸಮಾಚಾರಗಳು ಪೇಪರುಗಳು, ಪುಸ್ತಕಗಳ ಮೂಲಕದಿಂದ ತಿಳಿದು ಬರುವದು. ಆದರೆ ಯುದ್ಧವು ಜರುಗುವ ಪಟವು ಮಾತ್ರ ಈ ವರಿವಿಗೂ ಯಾರೂ ನೋಡಿರಲಾರರು. ಈ ಪಟಗಳು ನಮ್ಮಲ್ಲಿ ಬಿಟ್ಟರೆ ಇತರ ಯಾವ ಕಡೆ ಯಲ್ಲೂ ದೊರೆಯಲಾರದು. ಕೆಲವು ಕಾಪಿಗಳೇ ಉಳಿದಿರುವದರಿಂದ ಶೀಘ್ರದಿಂದ ತರಿಸಿಕೊಳ್ಳುವವರಿಗೆ ದೊರೆಯುವದು. ಅನಂತರ ದೊರೆಯಲಾರದು.

ಈ ಪಟ ಯೂರೋಪಾನಲ್ಲಿ ಜರುಗುವ ಯುದ್ಧವನ್ನು ಕಣ್ಣಿರೂಬಾಗಿ ನೋಡು ವಂತೆ ಕಾಣಿಸುವದು. ಜರ್ಮನಿಯವರು ಒಂದು ಭಾಗದಲ್ಲಿಯೂ, ಇತರ ಸೈನ್ಯ ಗಳು ಮತ್ತೊಂದು ಭಾಗದಲ್ಲಿಯೂ ನಿಂತು ಯುದ್ಧಮಾಡುವುದನ್ನೂ, ಫಿರಂಗಿ ಪ್ರಯೋಗ ಮಾಡುವದು, ಬಾಂಬನ್ನು ವ ಬೆಂಕಿ ಮಳೆ ಸುರಿಸುವ ಬಾಣವು ಆಕಾಶ ಮಾರ್ಗದಿಂದ ಪಟ್ಟಣಗಳ ಮೇಲೆಯೂ ಸೈನ್ಯಗಳ ಮೇಲೆಯೂ ಪ್ರಯೋ ಗಿಸುವದನ್ನೂ, ಅವುಗಳಿಂದ ಸಿಡಿಗಳೆದ್ದು ಪಟ್ಟಣಗಳು ಹಾಳಾಗುವದನ್ನೂ, ಹಡ ಗಿನ ಯುದ್ಧ ಜರುಗುವ ವಿಧವನ್ನೂ, ಆಕಾಶ ವಿಮಾನಗಳು ಪಟ್ಟಣಗಳ ಮೇಲೆ ಹಾರಾಡುವದನ್ನೂ, ಅವುಗಳನ್ನು ನೆಲದ ಮೇಲಿದ್ದು ಫಿರಂಗಿಗಳ ಮೂಲಕದಿಂದ ಹೊಡೆಯುವದನ್ನೂ, ಸೈನ್ಯಗಳಲ್ಲಿ ಹಾರಿಸುವ ಗುಂಡುಗಳ ಪೆಟ್ಟು ತಗಲಿ ಕುದುರೆಗಳ ಮೇಲಿಂದ ಕೆಳಗೆ ಬೀಳುವದನ್ನೂ, ಕುದುರೆಗಳು ವೇಗದಿಂದ ದಾಟಿ ಓಡುವ ದನ್ನೂ—ಇವನ್ನೆಲ್ಲಾ ತೋರಿಸುವದು. ಇವನ್ನು ನೋಡಿದಾಗ್ಗೆ ಶಿಲಾ ಸಮಾನ ವಾದ ಮನಸ್ಸು ಸಹಾ ಕರಗುವದು. ಇನ್ನೂ ಅನೇಕ ವಿಧಗಳ ಯುದ್ಧವು ಜರುಗುತ್ತಿದೆ. ಇವನ್ನೂ ನೋಡಲು ಮನಸ್ಸಿಗೆ ಸಂತೋಷಪಡಿಸಿ, ನೋಡುವಾ ಗ್ಗೆಲ್ಲಾ ಸದಾ ಆನಂದವಾಗಿಯೂ ಇರುವದು.

ಈ ಪಟಗಳು ಹೆಚ್ಚಾದ ದಪ್ಪ ಕಾಗದಗಳ ಮೇಲೆ 7 ವಿಧ ಬಣ್ಣಗಳನ್ನು ಹಚ್ಚಿ ಇರುವದು.

ಯೂರೋಪಾ ಯುದ್ಧ ಪಟವು ಕ್ರಯ 1 ಕ್ಕೆ	ರೂ. 1-0-0
ವಿ. ಪಿ. ಟಪಾಲ್ ಖರ್ಚು	ಆಣೆ 0-3-0
ಎರಡು ತರಿಸುವವರಿಗೆ ಟಪಾಲ್ ಖರ್ಚು ಇನಾಂ.	
ನಾಲ್ಕು ತರಿಸುವವರಿಗೆ ಕ್ರಯ	ರೂ. 3-8-0
ಆರು ತರಿಸುವವರಿಗೆ ಕ್ರಯ	ರೂ. 5-0-0
ವಿ. ಪಿ. ಟಪಾಲ್ ಚಾರ್ಜು	ಆಣೆ 0-3-0
12 ತರಿಸುವವರಿಗೆ ಕ್ರಯ	ರೂ. 9-0-0
ವಿ. ಪಿ. ಟಪಾಲ್ ಚಾರ್ಜು	ಆಣೆ 0-4-0

ನಮ್ಮ ಕಂಪೆನಿಯ ದೊಡ್ಡ ಕ್ಯಾಟಲಾಗನ್ನು ಬೇಡುವವರು ವಿಳಾಸವನ್ನು ಬರೆದರೆ ಇನಾಮಾಗಿ ಕಳುಹಿಸಲ್ಪಡುವದು

ವಿಳಾಸ—ಸಿ. ಎ. ಸತೀಶರ್ ಬುಕ್ಕು ಡಿಪೋ,
[66–2] ಮಿಂಟು ಪೋಸ್ಟು, ಮದರಾಸು.

ಮಲೇರಿಯಾ

ಮತ್ತು ಹಮಾ ದೇಶಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 16 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಥಾಸ್ಪರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;

2. ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172–36] ಬೊಂಬಾಯಿ ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮಾರ್ಚಿ 31 ನೇ ತಾ. ವರೆಗಿನ ಬ್ಯಾಂಕಿನ ರೀತ್ಯ.

ಲೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 26,000
,, (3) ಡಿಪಾಜಿಟ್ಟುಗಳು	....	,, 25,58,521
,, (4) ಇತರೆ	....	,, 55,617
(ಆಣೆ ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ 36,39,138

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 4,80,561
,, (2) ಖಾತೆ ಮತ್ತು ಇತರ ಸಾಲಗಳು	....	,, 23,93.912
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು		,, 3,78,086
,, (4) ಇನ್ವೆಸ್ಟ್ಮೆಂಟುಗಳು	......	,, 2,67,277
,, (5) ಏಜನ್ಸಿಗಳಲ್ಲಿರುವ ಮೊಬಲಗು	......	,, 90,764
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	.....	,, 15,492
,, (7) ಇತರೆ	....	,, 13,047
(ಆಣೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 36,39,138

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಟೆ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,
[31–9] ಸುಬೋಧ ಗ್ರಂಥಾಲಯ, ಮೈಸೂರು.

ಪ್ರಪಂಚಯುದ್ಧ

ಘನ ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಭಾವಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ತೋಳರುವ ಘೋರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಲ್ಲೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದಿಗೆ ಪ್ರಾಪ್ತವಾದ ಎಮ್ಡೆನ್ನನ್ನು ನೋಡಿರುವಿರಾ? ಅದರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ ಅದರ ನಾಯಕನನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಶಾಸನ ದುಷ್ಟರಂತೆ ಕಾಲಾಗ್ನಿಗೆ ತುತ್ತಾಗುವದ ಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಜರೂರು:—ಯುದ್ಧಪ್ರಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟ ವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸಪ್ಪ ಕಂಪೆನಿ, ಮದರಾಸು.

[10-16]

ವೃತ್ತಾಂತ ಪತ್ರಿಕೆ.

—:o:—

೧೯೧೫ ನೇ ಇಸವಿ ಏಪ್ರಿಲ್ ತಾ. ೧೫ ನೇ ಗುರುವಾರ.

ಸ್ಥಳೀಯ ಸ್ವತಂತ್ರಾಧಿಕಾರವು.

ಬರುವ ಜೂನ್ ತಿಂಗಳಲ್ಲಿ ನಮ್ಮ ಶ್ರೀಮನ್ ಮಹಾರಾಜರವರ ವರ್ಷ ವರ್ಧಂತಿ ಉತ್ಸವಕಾಲದಲ್ಲಿ ರಾಜಧಾನಿಯೊಳಗೆ ಮ್ಯುನಿಸಿಪಾಲಿಟಿಗಳ ಮತ್ತು ಲೋಕಲ್ ಬೋರ್ಡುಗಳ ಪ್ರತಿನಿಧಿಗಳು ಒಂದು ಮಹಾಸಭೆಯನ್ನು ನಡಿಸುವಂತೆ ಏರ್ಪಾಡಾಗಿರುತ್ತದೆ. ಇದಕ್ಕಾಗಿ ಸಂಸ್ಥಾನಾಮಳೆಯ ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳಿಂದ ವಿಶೇಷವಾಗಿ ಖಾಸಗಿಯಾದ ಮೆಂಬರುಗಳೇ 61 ಮಂದಿ ದಯಮಾಡುವರು. ಇವರನ್ನೆಲ್ಲಾ ಸತ್ಕರಿಸಿ ಉಪಚಾರ ಮಾಡುವುದಕ್ಕೆ ಮೈಸೂರು ಮ್ಯುನಿಸಿಪಲ್ ಕೌನ್ಸಿಲ್‌ನವರು ಬಗೆಬಗೆಯ ಸೌಕರ್ಯಗಳನ್ನು ಒದಗಿಸುವ ಕಾರ್ಯಭಾರವನ್ನು ವಹಿಸಿಕೊಂಡಿರುತ್ತಾರೆ. ಬಹುಶಾ ಈ ಮಹಾಸಭೆಯು ಮೂರು ದಿನ ಜರುಗುವಂತೆ ಕಾಣುತ್ತದೆ.

ನಮ್ಮ ಸರ್ಕಾರದವರು ಮುಂದೆ ಹೇಳುವ ವಿಚಾರಗಳನ್ನು ಸೂಚಿಸಿ ಅವುಗಳನ್ನು ಈ ಮಹಾಸಭೆಯಲ್ಲಿ ಚರ್ಚಿಸುವುದರಿಂದ ಪ್ರಯೋಜನವಾಗಬಹುದೆಂದು ನಿರೀಕ್ಷಿಸಿರುತ್ತಾರೆ:—(1) ಲೋಕಲ್ ಬೋರ್ಡುಗಳ (ಅಡ್ಮಿನಿಸ್ಟ್ರೇಷನ್) ಆಡಳಿತಗಳನ್ನು ಕ್ರಮಪಡಿಸುವುದಕ್ಕೆ ಸಲಹೆಗಳು ಮತ್ತು ಇವುಗಳ ಆದಾಯವನ್ನು ಹೆಚ್ಚಿಸುವುದಕ್ಕೆ ಸಲಹೆಗಳು. (2) ಟವರ್ನ್ ಪ್ಲಾನಿಂಗ್ ಮತ್ತು ಟವರ್ನ್ ಬಡಾವಣೆಗಳು. (3) ಸ್ಯಾನಿಟರಿ ವಿಷಯಗಳು. (4) ನೀರಿನ ಆಮದಾನು ಮತ್ತು ಸಂರಕ್ಷಣೆ. (5) ಕನ್ಸರ್ವೆನ್ಸಿ ವಿಷಯಗಳು. (6) ಹೆಚ್ಚು ಜನಗಳು ಮನೆಗಳಲ್ಲಿ ವಾಸಿಸುವುದನ್ನು ತಪ್ಪಿಸೋಣ; ಇದರ ನಿವಾರಣೆ ಮತ್ತು ಇದರಿಂದ ಮನೆಯಿಲ್ಲದೆ ಹೋಗುವವರಿಗೆ ಮನೆಗಳನ್ನು ಮಾಡಿಕೊಡೋಣ. (7) ಮಾರ್ಗಗಳನ್ನು ಸರಿಪಡಿಸುವುದೂ; ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ರೈಲ್ವೆಗಳನ್ನೂ ಟ್ರಾಂವೇಗಳನ್ನೂ ಹಾಕುವುದೂ. (8) ಜನಗಳ ಸೌಖ್ಯಕ್ಕೂ, ಅನುಕೂಲಕ್ಕೂ, ನೆಮ್ಮದಿಗೂ ಅನುಕೂಲವಾಗುವ ಇತರ ವಿಷಯಗಳು.

ಮೇಲ್ಕಂಡ ವಿಷಯಗಳನ್ನು ಸಾಮಾನ್ಯವಾಗಿ ರಾಜ್ಯಪರಿಪಾಲಕರೇ ಯೋಚಿಸಿ ರೂಢಿಸಬೇಕೆಂದು ಪ್ರಜೆಗಳು ಹಿಂದುಸ್ಥಾನದಲ್ಲೆಲ್ಲಾ ನಿರೀಕ್ಷಿಸಿಕೊಂಡಿರುತ್ತಾರೆ. ತಾವು ವಾಸಮಾಡಿಕೊಂಡಿರುವ ಪಟ್ಟಣ ಊರು ಗ್ರಾಮಗಳನ್ನು ಅಭಿವೃದ್ಧಿಗೆ ತಂದುಕೊಳ್ಳುವುದಕ್ಕೆ ಪ್ರಜೆಗಳೇ ಸ್ವತಂತ್ರಿಸಿ ಕಾರ್ಯಮಾಡುವುದು ರೂಢಿಯಲ್ಲಿ ಬಂದಿಲ್ಲ. ಪ್ರಜಾಪಾಲನೆಗಾಗಿ ನೇಮಕವಾದ ಸ್ಥಳಾಧಿಕಾರಿಗಳು ತಮ್ಮ ಕೆಲಸದಲ್ಲಿ ಶ್ರದ್ಧೆಯನ್ನೂ ಪ್ರಜೆಗಳಲ್ಲಿ ಪ್ರೀತಿಯನ್ನೂ ಯಥಾರ್ಥವಾಗಿ ಪಡೆದವರಾಗಿದ್ದು, ಅಂಥವರು ತಮ್ಮ ಅಧಿಕಾರಕ್ಕೊಳಪಟ್ಟ ಪ್ರಜೆಗಳ ಸ್ಥಿತಿಗತಿ ಇಂಗಿತಾದಿಗಳನ್ನು ಅನುಭವಕ್ಕೆ ತಂದುಕೊಂಡು ಕಾರ್ಯಗಳನ್ನು ಮಾಡುವಷ್ಟು ದೀರ್ಘಕಾಲ ಒಂದೇ ಸ್ಥಳದಲ್ಲಿ ಇರುವುದಾದರೆ ಮೇಲ್ಕಂಡ ಕಾರ್ಯಗಳನ್ನು ಸರ್ಕಾರದವರು ಮಾಡಿಸುತ್ತಾರೆಂದು ಪ್ರಜೆಗಳು ನಿರೀಕ್ಷಿಸುವುದು ಸಹಜವೆಂದೇ ಹೇಳಬಹುದು. ಅನೇಕ ಅಧಿಕಾರಿಗಳು ಪ್ರಜೆಗಳಿರುವುದು ತಮ್ಮ ಪ್ರಯೋಜನಕ್ಕೆಂದು ಭಾವಿಸಿಕೊಂಡು ಅಂಥಾ ಪ್ರಜೆಗಳ ಸೌಕರ್ಯಕ್ಕಾಗಲಿ ಅವರ ಆರೋಗ್ಯಾಭಿವೃದ್ಧಿಗಾಗಲಿ ಯಾವುದೊಂದು ಕಾರ್ಯವನ್ನೂ ನಡಿಸದೆ ನಿರ್ಲಕ್ಷ್ಯಭಾವದಿಂದಿರುತ್ತಾರೆ. ಅವರಲ್ಲಿ ತಾವು ಸರ್ಕಾರದ ಅಧಿಕಾರಿಗಳಾದಾಗ್ಯೂ ಪ್ರಜೆಗಳ ಚಾಕರರಾಗಿರೆಂಬ ಭಾವನೆಯು ಯಥಾರ್ಥವಾಗಿಯೂ ಇರುವ ಪಕ್ಷಕ್ಕೆ ಅವರು ಪ್ರಜೆಗಳ ಸ್ಥಿತಿಗತಿ ಜೀವನಾದಿಗಳನ್ನು ಇನ್ನೂ ಸುಖಕರವಾಗಿರುವಂತೆ ಮಾಡಿಡಲು ವಿಶೇಷ ಶ್ರದ್ಧೆಯನ್ನು ವಹಿಸಿ ಕಾರ್ಯಗಳನ್ನು ಮಾಡುತ್ತಿದ್ದರು. ಒಂದು ವೇಳೆ ಅಂಥಾ ಪ್ರಜಾಹಿತಕರವಾದ ಕೆಲಸ ಕಾರ್ಯಗಳನ್ನು ಯಾವ ಅಧಿಕಾರಿಯಾದರೂ ಮಾಡಲಾರಂಭಿಸಿದರೆ ಅಂಥವನನ್ನು ಅನೇಕ ವೇಳೆ ವರ್ಗಮಾಡಿಬಿಡುತ್ತಾರೆ. ಇಂಥವರು ಹೊಸ ಸ್ಥಳಗಳಿಗೆ ಹೋಗಿ ಅಲ್ಲಿನ ಪ್ರಜೆಗಳ ಸ್ಥಿತಿಗತಿಯನ್ನು ಮಂದಟ್ಟು ಮಾಡಿಕೊಳ್ಳುವುದಕ್ಕೆ ಬಹಳ ಕಾಲ ಹಿಡಿಯುವುದು. ಆದಕಾರಣ ಉದ್ದೇಶಪಟ್ಟ ಕಾರ್ಯಗಳನ್ನು ಮಾಡಿ ಪೂರೈಸುವ ಸನಕ ಸರ್ಕಾರದವರು ಅಧಿಕಾರಿಗಳನ್ನು ದೀರ್ಘಕಾಲ ಒಂದೊಂದು ಸ್ಥಳದಲ್ಲಿಟ್ಟಿರಬೇಕಾದದ್ದೂ, ಹಾಗೆ ಇಟ್ಟಿದ್ದರೂ ಅಂಥಾ ಕಾರ್ಯಗಳಾವುವೂ ನಡೆಯಲಿಲ್ಲವೆಂದು ತಿಳಿದುಬಂದಾಗ ಅಂಥವರ ವಿಷಯದಲ್ಲಿ ಸರ್ಕಾರದವರು ತಮ್ಮ ಅಗ್ರಹವನ್ನು ಪ್ರಕಾಶಪಡಿಸಬೇಕಾದದ್ದೂ ಪರಮಾವಶ್ಯವಾಗಿದೆ.

ಅದು ಹೇಗಾದರೂ ಇರಲಿ. ಪ್ರಜೆಗಳು ತಾವೇ ಮುಂದರಿಸಿ ತಮ್ಮ ಪಟ್ಟಣ ಊರು ಗ್ರಾಮಗಳ ಆಡಳಿತಗಳನ್ನು ಎಲ್ಲಾ ಭಾಗಗಳಲ್ಲೂ ನಡಿಸಿ ಅಭಿವೃದ್ಧಿಗೆ ತಂದುಕೊಳ್ಳುವುದೇ ಎಷ್ಟೋ ಮೇಲೆಂದು ಹೇಳುತ್ತೇವೆ. ಅಧಿಕಾರಿಗಳು ಬಂದು ಕಣ್ಣು ತೆರೆದು ನೋಡಿ ಕಾರ್ಯಗಳನ್ನು ಮಾಡುತ್ತಾರೆಂದು ಕಾದಿರುವುದು ಎಷ್ಟು ಮಾತ್ರಕ್ಕೂ ತರವಲ್ಲ. ವಿದ್ಯೆಯು ಎಲ್ಲಾ ಕಡೆಗಳಲ್ಲೂ ಹರಡಿಕೊಂಡು ಬುದ್ಧಿ ವಿವೇಕಾದಿಗಳನ್ನು ಪ್ರಸರಿಸುತ್ತಲಿದೆ. ತಮ್ಮ ಮನೆ ಮಠಗಳನ್ನೂ ಸ್ಥಿತಿಗತಿ ಜೀವನಾದಿಗಳನ್ನೂ ಅಭಿವೃದ್ಧಿಸ್ಥಿತಿಗೆ ತಂದುಕೊಳ್ಳುವುದು ಹೇಗೆ ಎಂಬ ವಿಚಾರಗಳು ಈಗ ಗಂಡಸರಿಗೆ ಮಾತ್ರವೇ ಅಲ್ಲ, ಹೆಂಗಸರಿಗೂ ತಕ್ಕಮಟ್ಟಿಗೆ ತಿಳಿದಿರುವವು. ಮಠಗಳನ್ನಿಟ್ಟು ಮಕ್ಕಳಿಗೆ ವಿದ್ಯೆಕಲಿಸಬೇಕೆಂಬುವುದನ್ನು ಬಲ್ಲರು; ಮನೆ ಮಠಗಳನ್ನು ಆರೋಗ್ಯಜನಕವಾದ ರೀತಿಯಲ್ಲಿ ಕಟ್ಟಿಕೊಳ್ಳಬೇಕೆಂಬ ಪರಿಜ್ಞಾನವು ಉಂಟಾಗಿರುತ್ತದೆ; ರಸ್ತೆಗಳೂ ಬೀದಿಗಳೂ ಚೊಕ್ಕಟವಾಗಿರಬೇಕೆನ್ನುವುದೂ, ಕತ್ತಲ ಕಾಲದಲ್ಲಿ ಲಾಂದ್ರಾದೀಪಗಳಿರಬೇಕೆನ್ನುವುದೂ ತಿಳಿದಿದೆ; ಪ್ರಜೆಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸಬೇಕೆನ್ನುವುದು ಪರವಾಸ್ತವವಾಗಿ ಗೊತ್ತಿದೆ. ಅಗತ್ಯವಾಗಿ ನಡೆಯಬೇಕಾಗಿರುವ ಕಾರ್ಯಗಳನ್ನು ವಿದ್ಯಾವಂತರಿಂದಲ್ಲದೆ ಇತರರಿಂದ ಮಾಡಿಸಲು ಸಾಧ್ಯವಲ್ಲ. ವಿದ್ಯಾವಂತರೇ ಮುಂದಾಳುಗಳಾಗಿ ನಿಂತು ಜನರಿಗೆ ಪ್ರೋತ್ಸಾಹಕೊಡಬೇಕು. ಮುಂದೆ ನಡೆಯುವ ಮೇಲ್ಕಂಡ ಮಹಾ ಸಭೆಯಿಂದ ವಿಶೇಷ ಪ್ರಯೋಜನವಾಗಬಹುದಾಗಿದೆ. ಇತರ ಕಡೆಗಳಿಂದ ಬರತಕ್ಕ ಪ್ರತಿನಿಧಿಗಳು ಅನೇಕ ವಿಚಾರಗಳನ್ನು ಸಭೆಯಿಂದ ತಿಳಿದುಕೊಂಡು ಹೋಗಿ ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲೂ ಪಟ್ಟಣಗಳಲ್ಲೂ ರೂಢಿಗೆ ತರಬಹುದು. ಆದರೂ ಈ ಮಹಾಸಭೆಯು ಬರೀ ಬಾಯಿ ಮಾತಿನಲ್ಲೇ ಪರಿಣಾಮವಾಗೊಂದುವುದೇನೋ ಎಂಬ ಶಂಕೆಯುಂಟು. ಹೀಗೆ ಆಗಬೇಕು, ಹಾಗೆ ಆಗಬೇಕು ಎಂದು ಬಾಯಿಂದ ಹೇಳುವುದು ಸುಲಭ; ಆದರೆ ಅದರಂತೆ ಕಾರ್ಯಗಳನ್ನು ನಡಿಸುವುದು ಅಷ್ಟು ಸುಲಭವಲ್ಲ. ಯಾವ ಬದಲಾವಣೆಯ ಕಾರ್ಯ ನಡೆಯಬೇಕಾದರೂ ಹಣವಿಲ್ಲದೆ ಆಗುವುದಿಲ್ಲ; ಹಣವನ್ನು ಒದಗಿಸುವುದು ಪ್ರಯಾಸ. ತೆರಿಗೆ, ಸುಂಕ ಎಂದ ಮಾತ್ರಕ್ಕೇ ಕಣ್ಣು ಕೆಂಪಗಾಗುವುದು. ದಾರಿದ್ರ್ಯವಾಗಿಯೂ ಅನೇಕರು ಹೆಚ್ಚು ತೆರಿಗೆಗಳನ್ನು ಕೊಡಲಾರರು. ಅಭಿವೃದ್ಧಿಯ ಕಾರ್ಯಗಳು ನಡೆಯಬೇಕಾಗಿದ್ದರೆ ಏನಾದರೂ ಮಾಡಿ ಹಣ ಒದಗುವಂತೆ ಮಾಡಿಕೊಳ್ಳಬೇಕು. ಈ ಮಹಾ ಸಭೆಯು ಮ್ಯುನಿಸಿಪಲ್ ಮತ್ತೂ ಡಿಸ್ಟ್ರಿಕ್ಟ್ ಬೋರ್ಡುಗಳ ಕಾರ್ಯಗಳಿಗೆ ಹಣ ಒದಗುವ ಮಾರ್ಗವನ್ನು ತೋರಿಸಿಕೊಡುವುದಾದರೆ ಮಹದುಪಕಾರವಾದೀತು.

ಪ್ರಜೆಗಳಿಗೂ ಗ್ರಾಮಸ್ಥರಿಗೂ ತಿಳಿಸಬೇಕಾಗಿರುವ ವಿಚಾರಗಳು ಇನ್ನೂ ಅನೇಕವಾಗಿರುತ್ತವೆ. ಶರೀರದ ವಿಷಯದಲ್ಲೂ, ಬಟ್ಟೆಬರೆಗಳ ವಿಷಯದಲ್ಲೂ, ಆಹಾರವಿಹಾರಗಳ ವಿಷಯದಲ್ಲೂ, ಮನೆ ಮಠಗಳು ಆವರಣಗಳ ವಿಷಯದಲ್ಲೂ ಗಂಡಸರಿಗೂ ಹೆಂಗಸರಿಗೂ ಅವಶ್ಯವಾದ ಮತ್ತೂ ಆರೋಗ್ಯ ಜನಕವಾದ ವಿಚಾರಗಳನ್ನು ಇನ್ನೂ ಚೆನ್ನಾಗಿ ತಿಳಿಸಬೇಕಾಗಿರುತ್ತದೆ. ಈ ಮಹಾ ಸಭೆಯು ಮುಖ್ಯವಾಗಿ ಈ ವಿಚಾರಕ್ಕೆ ವಿಶೇಷವಾದ ಗಮನವನ್ನು ಕೊಟ್ಟು ಪ್ರಜೆಗಳಿಗೆ ನೈರ್ಮಲ್ಯವನ್ನೂ ಚೊಕ್ಕಟವನ್ನೂ ಸುಲಭವಾಗಿ ಕಲಿಸಿಕೊಡತಕ್ಕ ಉಪಾಯವನ್ನು ತೋರಿಸಿಕೊಡಬೇಕು. ಈ ವಿಚಾರದಲ್ಲಿ ಜನಗಳಿಗೆ ಚೆನ್ನಾಗಿ ಪರಿಶ್ರಮವುಂಟಾದ ಹೊರತು ಅವರಿಗೆ ಚೊಕ್ಕಟ ಶುಭ್ರದಲ್ಲಿ ಅಭಿರುಚಿಯುಂಟಾಗುವುದಿಲ್ಲ; ಅದು ಎಲ್ಲಾ ಕಡೆಗಳಲ್ಲೂ ಹರಡಿಕೊಳ್ಳುವುದೂ ಪ್ರಯಾಸವಾದೀತು.

ಹಣವನ್ನು ಒದಗಿಸುವ ಮಾರ್ಗಗಳಾವವು; ಆರೋಗ್ಯಭಾಗ್ಯವೂ ಚೊಕ್ಕಟ ಶುಭ್ರವೂ ಸ್ತ್ರೀಪುರುಷರಲ್ಲಿ ಹೇಗೆ ಅಭಿರುಚಿ ಉತ್ಸಾಹಗಳನ್ನು ಉಂಟುಮಾಡಬಹುದು; ಪ್ರಜೆಗಳಲ್ಲಿ ಆರೋಗ್ಯವನ್ನು ವೃದ್ಧಿಪಡಿಸುವ ಉಪಾಯಗಳೇನು ಎಂಬೀ ವಿಷಯಗಳನ್ನು ಮೇಲ್ಕಂಡ ಮಹಾ ಸಭೆಯು ಪರ್ಯಾಲೋಚಿಸಿ ಸುಲಭ ಸಾಧ್ಯವಾದ ಸಲಹೆಗಳನ್ನು ಸೂಚಿಸಬೇಕಾಗಿರುತ್ತದೆ. ಈ ಕಾರ್ಯವನ್ನು ಮಾಡಿದ ಪಕ್ಷದಲ್ಲಿ ಈ ಸಭೆಯು ಕೂಡಿದ್ದಕ್ಕೆ ಸಾರ್ಥಕವಾಗುವುದು.

ಪುನರುತ್ಥಾನ.

ಒಂದು ಚಿಕ್ಕ ಸೀಮೆಯ ಜನಗಳು ತಮ್ಮ ರಾಜ್ಯದ ಕಟ್ಟಳೆ ಕಾನೂನುಗಳನ್ನು ಕೈಕೊಂಡು ನೆಮ್ಮದಿಯಾಗಿದ್ದರು. ಆದರೆ ಅವರು ಕೆಲವು ವರುಷಗಳ ನಂತರ ಶಾಂತವಾದ ತಮ್ಮ ತಮ್ಮ ಸ್ವಗೃಹಗಳಲ್ಲಿ ಕುಟುಂಬ ಮಕ್ಕಳೊಂದಿಗೆ ಸುಖವಾಗಿರುವದಕ್ಕೆ ಬೇಸರಪಟ್ಟು ತಮ್ಮ ನೆರೆಹೊರೆ ಸೀಮೆಗಳ ಜನಗಳೊಂದಿಗೆ ಬೆರೆತು ಅವರ ಪದ್ಧತಿ, ಆಚಾರ, ನಡತೆಗಳನ್ನೂ ರಾಜತಂತ್ರವನ್ನೂ ತಿಳಿದು ಅವುಗಳನ್ನು ತಮ್ಮಲ್ಲಿ ರೂಢಿಗೆ ತರಬೇಕೆಂದು ಅಪೇಕ್ಷಿಸಿದರು. ಆ ಚಿಕ್ಕ ಸೀಮೆಯ ಹಿರಿಯರೂ ಮತಬೋಧಕರೂ ಭಕ್ತರೂ ಆ ಜನಗಳ ಅಭಿಪ್ರಾಯಕ್ಕೆ ಒಡಂಬಡದೆ—ನಮ್ಮ ಸೀಮೆಯಿಂದ ಆಚೆಯಿರುವ ದೇಶದ ಜನಗಳು ನೀತಿ, ಸತ್ಯ, ಸದಾಚಾರಗಳನ್ನು ಅರಿಯದವರು; ನಿಜವಾದ ದೇವರು ಯಾರೋ ಅವರಿಗೆ ಗೊತ್ತಿಲ್ಲ; ಮತ್ತು ಅವರು ವಿಗ್ರಹಗಳನ್ನು ದೇವರುಗಳೆಂದು ಪೂಜಿಸುತ್ತಾರೆ. ನಾವೂ ನಮ್ಮ ಜನಗಳೂ ಅವರಲ್ಲಿ ಮಿಶ್ರವಾಗಕೂಡದು ಎಂದು ಬಹು ವಿಧಗಳಿಂದ ಆ ಜನಗಳಿಗೆ ಎಚ್ಚರಿಕೆಕೊಟ್ಟರೂ ಅವರು ಈ ಜನಗಳ ಮಾತುಗಳನ್ನು ತಿರಸ್ಕರಿಸಿ ದುಮೋನ್ಮತ್ತರಾಗಿ ತಮ್ಮ ನೆರೆಹೊರೆ ಜನಗಳ ಆಡಳಿತ, ನಡವಳಿಕೆ, ವ್ಯಾಪಾರ ವ್ಯಾಸಂಗಗಳಲ್ಲಿ ಸೇರಿ ಬೇಗ ತಮ್ಮ ಚಿಕ್ಕ ರಾಜ್ಯವನ್ನು ಅತೃಪ್ತಿ, ಕಲಹ, ಪಿತೂರಿ, ದುರಾಸೆ, ದಂಗೆಗಳಲ್ಲಿ ಸೇರುವಂತೆ ಮಾಡಿದರು. ಲೌಕಿಕ ವ್ಯಾಪಾರದಲ್ಲಿ ಅವರು ಆಸಕ್ತರಾಗಿ ದೇವಭಕ್ತಿಯನ್ನು ಮರೆತುಬಿಟ್ಟರು. ಭೋಗಾಸಕ್ತರಾಗಿ ಅಪವಿತ್ರವಾದ ಕೆಲಸಗಳನ್ನು ಮಾಡತೊಡಗಿದರು. ಐಶ್ವರ್ಯವಂತರು ಬಡವರನ್ನು ಅವರ ಆಸ್ತಿ ಸೊತ್ತು ಮನೆ ಹೊಲಗಳನ್ನು ಕಿತ್ತುಕೊಂಡರು. ಅಧಿಕಾರಿಗಳು ಲಂಚಪ್ರಿಯರಾದರು. ಯೌವನಸ್ಥರೂ ಯೌವನಸ್ಥೆಯರೂ ವಿಷಯಲಂಪಟರಾದರು. ಕಡೆಗೆ ಆ ಚಿಕ್ಕ ಸೀಮೆಯು ಈ ಸರಿ ಅನಾಯಕವಾಗಿರುವದನ್ನು ಬೇರೊಂದು ದೇಶದ ದೊರೆಯು ತಿಳಿದು ಆ ಸೀಮೆಯನ್ನು ಹೊಕ್ಕು ಅವರ ಅರಸನನ್ನೂ ಅಧಿಕಾರಿಗಳನ್ನೂ ದೇಶಾಧಿಪತಿಗಳನ್ನೂ ಸೆರೆಹಿಡಿದು ಅವರನ್ನೂ ಆ ಸೀಮೆಯ ಪ್ರಜೆಗಳಲ್ಲಿ ಗಟ್ಟಿಮುಟ್ಟಾಗಿದ್ದ ಪುರುಷಸ್ತ್ರೀಯರನ್ನೂ ತನ್ನ ದೇಶಕ್ಕೆ ನೈದು ಅವರನ್ನು ಅಲ್ಲಿಬಿಟ್ಟೀ ಕೆಲಸಕ್ಕೆ ಹಚ್ಚಿದನು.

ಆ ಅನ್ಯದೇಶದಲ್ಲಿ ಈ ಸೆರೆಯವರು ಗುಲಾಮರಾಗಿ ಮನೆ, ಭೂಮಿ, ಆಸ್ತಿ, ಸುಖ, ಕುಟುಂಬ ಮಕ್ಕಳನ್ನೆಲ್ಲಾ ತ್ಯಜಿಸಬೇಕಾಯಿತು. ಮತ್ತು ಅವರು ತಮ್ಮ ಯಜಮಾನರಾದ ಆ ದೇಶದ ಜನಗಳ ಗುಲಾಮರಾಗಿ ಅವರ ಮನೆಗಳನ್ನು ಕಟ್ಟುವದು, ಅವರ ಹೊಲ ತೋಟಗಳಲ್ಲಿ ಅವರು ಹೇಳಿದ ಜೀತವನ್ನು ಮಾಡುವದು, ಕಟ್ಟಿಗೆ ಹೊರುವದು, ದನಾಕಾಯುವದು ಇವೇ ಮುಂತಾದ ಚಾಕರಿಯಿಂದ ಹೊಟ್ಟೆ ಹೊರೆಯಲಾರಂಭಿಸಿದರು. ಈಗ ಅವರ ದುಃಖವನ್ನು ವರ್ಣಿಸಲಸಾಧ್ಯವು. ಅವರು ಹಗಲೆಲ್ಲಾ ಹೊರಗೆ ದುಡಿದು ಸಂಜೆಯಲ್ಲಿ ಊರಿಂದ ಹೊರಗಿದ್ದ ತಮ್ಮ ಜೋಪಡಿಗೆ ಬಂದು ಅಲ್ಲಿ ಕೂತುಕೊಂಡು ತಮ್ಮ ಸ್ವದೇಶವನ್ನೂ ಅಲ್ಲಿ ತಮಗಿದ್ದ ಸುಖವನ್ನೂ ನೆನೆದು ಪ್ರಲಾಪಿಸುವರು. ಹೀಗೆ ಇವರು ಸುಮಾರು ಎಪ್ಪತ್ತು ವರುಷ ಅನ್ಯದೇಶದವರಿಗೆ ಗುಲಾಮರಾಗಿದ್ದರು.

ಆದರೆ ಆಗ ಇವರ ಹಿರಿಯರೂ ಜ್ಞಾನಿಗಳೂ ನೀತಿಜ್ಞರೂ ದೇವಭಕ್ತರೂ ಏನು ಮಾಡುತ್ತಿದ್ದರೆಂದು ಕೇಳುವಿರಿ. ಅವರು ಈ ಜನಗಳ ಪಾಪಕೃತ್ಯಗಳಿಗೋಸ್ಕರ ಅವರಲ್ಲಿ ಅಸಹ್ಯಪಟ್ಟು ಅವರನ್ನು ತಿರಸ್ಕರಿಸಿದರೋ? ಇಲ್ಲ. ಅವರು ವೃದ್ಧರಾಗಿ ನಿರುಪಯೋಗಿಗಳಾಗಿದ್ದುದರಿಂದಲೂ ದುಡಿಯಲಿಕ್ಕೆ ಅಶಕ್ತರಾದುದರಿಂದಲೂ ಅವರನ್ನು ಆ ಅರಸನು ಹಿಡುಕೊಂಡು ಹೋಗಲಿಲ್ಲ. ಸರಿ, ಆದರೆ ಈ ಜ್ಞಾನಿಗಳು ತಮ್ಮ ದೇಶಕ್ಕೂ ಸ್ವಜನಗಳಿಗೂ ಬಂದ ವಿಪತ್ತನ್ನು ನೋಡಿ ವ್ಯಾಕುಲಚಿತ್ತರಾಗಿ ಅವರ ಸಂಗಡಲೇ ತಾವೂ ಹೋದರು. ಮತ್ತು ಅಲ್ಲಿ ಅವರಿಗೆ ಪ್ರಾಪ್ತಿಸಿದ ಈ ವಿಪತ್ತನ್ನೆಲ್ಲಾ ನೋಡಿ ಅವರಿಗೆ ತಮ್ಮ ಮಾತನ್ನು ಕೇಳದೆ ದುರಾಚಾರ, ದುಷ್ಟಬುದ್ಧಿ, ಪಾಪಕೃತ್ಯಗಳನ್ನು ಮಾಡಿ ದೇವರ ಮಾರ್ಗವನ್ನೂ ಆತ್ಮಭಕ್ತಿಯನ್ನೂ ತಾತ್ಸಾರ ಮಾಡಿದ್ದರಿಂದಲೇ ನಿಮಗೆ ಈ ದಂಡನೆ ಬಂತು. ಮತ್ತು ಈಗಲೂ ನೀವು ಪಶ್ಚಾತ್ತಾಪಪಟ್ಟು ನಿಮ್ಮ ಪಾಪಗಳನ್ನು ತ್ಯಜಿಸಿ ದೇವರ ಕಡೆಗೆ ನಿಮ್ಮ ಮನಸ್ಸುಗಳನ್ನು ತಿರುಗಿಸಿದರೆ ದೇವರು ಕರುಣಿಸಿ ನಿಮ್ಮನ್ನು ರಕ್ಷಿಸುವನೆಂದು ಅವರಿಗೆ ಬೋಧಿಸಿದರು. ಆ ಜನಗಳು ಹಿಂದೆ ತಮ್ಮ ಹಿರಿಯರಾದ ಜ್ಞಾನಿಗಳ ಮಾತನ್ನು ಕೇಳದೆ ಧಿಕ್ಕರಿಸಿದ್ದಕ್ಕಾಗಿ ತಮಗೆ ಪ್ರಾಪ್ತಿಸಿದ ಕಷ್ಟನಷ್ಟಗಳನ್ನು ನೆನೆದು ದೇವರನ್ನು ಸ್ಮರಿಸಿ ಪಶ್ಚಾತ್ತಾಪದಿಂದ ಆತನನ್ನು ಮರೆಹೊಕ್ಕರು. ದೇವರು ಅವರ ವಿಜ್ಞಾಪನೆಯನ್ನು ಕೇಳಿ ಅವರನ್ನು ಅನ್ಯದೇಶದ ಅರಸನ ಕೈಯಿಂದ ಬಿಡಿಸಿ ಅವರನ್ನು ಪುನಃ ಅವರ ಸ್ವದೇಶಕ್ಕೆ ಬರುವಂತೆ ಮಾಡಿದನು.

ಆದರೆ ಆ ಸೆರೆಹೋಗಿದ್ದ ಜನಗಳಲ್ಲಿ ಅನೇಕರು ಅನ್ಯದೇಶದಲ್ಲಿ ಸತ್ತುಹೋದರು. ಅವರು ತಮ್ಮ ಸಹೋದರರನ್ನೂ ತಂದೆಗಳನ್ನೂ ಪ್ರಿಯರಾದ ಪತ್ನೀಪುತ್ರರನ್ನೂ ಹೋಲಾಡಿಸಿಕೊಂಡು ಸ್ವದೇಶವನ್ನು ಕುರಿತು ಹೊರಟು ಅಲ್ಲಿಗೆ ಬಂದು ಸೇರಿದರು. ಇವರ ಹಿರಿಯರಾದ ಜ್ಞಾನಿಗಳೂ ಭಕ್ತರೂ ಬೋಧಕರೂ ಮೃತಪಟ್ಟಿದ್ದರು. ಅವರು ಈ ಸ್ಥಿತಿಯಲ್ಲಿ ಸ್ವದೇಶಕ್ಕೆ ಬಂದು ಹಾಳಾಗಿಹೋಗಿದ್ದ ದೇಶವನ್ನು ವಸತಿಗೆತಂದು ಪಟ್ಟಣದ ಸುತ್ತಲು ಬಿದ್ದುಹೋಗಿದ್ದ ಕೋಟೆ ಕೊತ್ತಳಗಳನ್ನು ಕಟ್ಟಿ ವ್ಯವಸಾಯಮಾಡಿ ದೇವಾಲಯವನ್ನು ಜೀರ್ಣೋದ್ಧಾರಮಾಡಿ ತಮ್ಮ ಪೂರ್ವಿಕರು ಭಜಿಸುತ್ತಿದ್ದ ನಿಜದೇವರನ್ನು ಆರಾಧಿಸಿ ಆತನ ಆಜ್ಞೆಗಳನ್ನು ಕೈಕೊಳ್ಳತೊಡಗಿದರು. ಆದರೆ ಅವರು ಮನೆಗಳಲ್ಲಿರುವಾಗಲೂ ಹೊಲಗಳಲ್ಲಿ ಕೆಲಸಮಾಡುವಾಗಲೂ ದೇವಾಲಯದಲ್ಲಿ ಉಪಾಸನೆಮಾಡುವಾಗಲೂ ಒಂದು ದೊಡ್ಡ ಕೊರತೆಯು ಅವರನ್ನು ಬಾಧಿಸುತ್ತಿತ್ತು. ಅವರು—ನಮಗೆ ಸ್ವತಂತ್ರವೂ ಸ್ವದೇಶವೂ ಆಸ್ತಿಯೂ ಇವೆ. ಸರಿ. ಮತ್ತು ದೇವರು ನಮ್ಮನ್ನು ಕರುಣಿಸಿ ನಮಗೆ ಪಾಪಕ್ಷಮೆಯನ್ನು ದಯಪಾಲಿಸಿದನು. ಆದರೆ ನಮ್ಮ ಹಿರಿಯರೂ ಜ್ಞಾನಿಗಳೂ ನಮಗೆ ಸನ್ಮಾರ್ಗವನ್ನು ಉಪದೇಶಮಾಡಿದ ಬೋಧಕರೂ ಮೃತಪಟ್ಟಿದ್ದಾರೆ. ನಮ್ಮ ಸಹೋದರ ಸಹೋದರಿಯರೂ ತಾಯಿತಂದೆಗಳೂ ಪತ್ನೀಪುತ್ರರೂ ನಮ್ಮನ್ನು ವಿಯೋಗತಪ್ತರಾಗಮಾಡಿ ಹೋದರು. ಅವರಿಲ್ಲದೆ ಈ ಬಾಳು, ಈ ಭಾಗ್ಯ ನಮಗೆ ಅಸಂತೋಷಕರವಾಗಿದೆ. ಇದಲ್ಲದೆ ನಮಗೆ ತಾನೆ ಇದು ಶಾಶ್ವತವೇ? ಕೆಲವು ಕಾಲದ ಮೇಲೆ ನಾವೂ ಇದನ್ನೆಲ್ಲಾ ಬಿಟ್ಟು ಹೋಗಬೇಕು. ದೇವರ ಮಾರ್ಗವನ್ನೂ ಆತನ ಭಕ್ತಿಯನ್ನೂ ಉಲ್ಲಂಘಿಸಿದ್ದರಿಂದ ನಮಗೆ ಈ ಗತಿಯಾಯಿತು. ಮರಣವು ನಮ್ಮ ಪ್ರಿಯರನ್ನು ನಮ್ಮಿಂದ ಪ್ರತ್ಯೇಕಿಸಿತು. ದೇವರಿಂದ ಪುನಃ ನಮ್ಮನ್ನು ಪ್ರತ್ಯೇಕಿಸಿ ನಾವು ಆತನನ್ನು ಬಿಟ್ಟಗಲುವಂತೆ ಮಾಡುವದಲ್ಲಾ! ನಾವಿನ್ನು ಆತನನ್ನು ಬಿಟ್ಟು ಬಾಳಲಾರೆವು. ನಮ್ಮನ್ನು ನಮ್ಮ ದೇಶದಿಂದ ಸೆರೆಹಿಡುಕೊಂಡು ಹೋದ ನಮ್ಮ ವೈರಿಗಳಿಗಿಂತ ನಮ್ಮ ದೇವರಿಂದಲೂ ನಮ್ಮ ಗುರುಹಿರಿಯರಿಂದಲೂ ನಿತ್ಯವಾಗಿ ನಮ್ಮನ್ನು ಪ್ರತ್ಯೇಕಿಸಿ ಸಕಲ ಸಂಬಂಧವನ್ನೂ ಕಡಿದುಬಿಡುವ ಮೃತ್ಯುವಿನ ಕೊಡಲಿಯಿಂದ ನಮ್ಮನ್ನು ಬಿಡಿಸುವರಾರು? ಎಂದು ಪ್ರಲಾಪಿಸುತ್ತಿದ್ದರು. ಇದು ಸಹಜವಾದ ದುಃಖವಲ್ಲವೇ? ಸಂದರ್ಭ ಹೀಗಿರುವಲ್ಲಿ ಅವರ ಆಚಾರ್ಯರಲ್ಲಿಯೋ ಅಥವಾ ಹಿರಿಯರಲ್ಲೋ ಪರಮಬೋಧಕನೊಬ್ಬನು ಆ ದೇವಾಲಯದಲ್ಲಿ ನೆರೆದುಬಂದಿದ್ದ ಆ ಸಭೆಯವರ ಎದುರಿನಲ್ಲಿ ನಿಂತು ಕೈ ಎತ್ತಿ ಸಂಜ್ಞೆಮಾಡಿ—ಎಲೈ ಸಭಿಕರೇ, ನೀವು ಕಳಕೊಂಡಿರುವ ನಿಮ್ಮ ಪಿತಾಮಹರಿಗೋಸ್ಕರವೂ ಗುರುಹಿರಿಯರಿಗೋಸ್ಕರವೂ ನೀವು ದುಃಖಿಸುವದು ನ್ಯಾಯವೇ ಸರಿ. ಮತ್ತು ಅವರನ್ನು ನಿಮ್ಮಿಂದ ಅಗಲಿಸಿಕೊಂಡು ಹೋದ ಮೃತ್ಯುವು ನಿಮ್ಮನ್ನೂ ಇಹಲೋಕದಿಂದ ಕಡಿದು ಹಾಕುವದೂ ನಿಜ. ಆದರೆ ನಿಮ್ಮನ್ನು ನಿಮ್ಮ ವೈರಿಗಳ ಕೈಯಿಂದ ಬಿಡಿಸಿ ಸ್ವದೇಶಕ್ಕೆ ಕರಕೊಂಡು ಬಂದಿರುವ ದೇವರು ನೀವು ಈಗ ಹೆದರುವ ಮೃತ್ಯುವಿಗಿಂತ ದೊಡ್ಡವನೂ ಕರುಣಾಳುವೂ ಆಗಿದ್ದಾನೆ. ನೀವು ಆತನನ್ನು ನಂಬಿ ಆಶ್ರಯಿಸಿದರೆ ಆತನು ನಿಮ್ಮನ್ನು ಕರುಣಿಸಿ ನಿಮ್ಮ ಶತ್ರುವಾದ ಮರಣವನ್ನು ಗೆದ್ದು ಅದನ್ನು ನಾಶಮಾಡುವನು. ಸತ್ತುಹೋಗಿರುವ ನಿಮ್ಮ ಹಿರಿಯರನ್ನು ಬದುಕಿಸಿ ಕರಕೊಂಡು ಬರುವನು. ನೀವು ಹೂಳಿರುವ ಪ್ರೇತಗಳು ಎದ್ದು ಬರುವವು ಎಂದು ದೇವರಾತ್ಮಪ್ರೇರಿತನಾಗಿ ಬೋಧಿಸಿದನು.

ಯೇಸು ಕ್ರಿಸ್ತನಲ್ಲಿ ಈ ಕಾಲಜ್ಞಾನವು ಈಡೇರಿತು. ಆತನು ನಿಷ್ಕಳಂಕನಾಗಿ ಬದುಕಿ ಸತ್ತರೂ ಪುನಃ ಎದ್ದು ಬಂದನು. ಮಾನವರ ಪ್ರತಿನಿಧಿಯಾದ ಆತನು ತನ್ನನ್ನು ನಂಬುವವರಿಗೆ ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ಬದುಕಿ ನನ್ನನ್ನು ನಂಬುವವನು ಎಂದಿಗೂ ಸಾಯುವದಿಲ್ಲ. ಮತ್ತು ನನ್ನನ್ನು ನಂಬಿದವನು ಸತ್ತರೂ ಬದುಕುವನು. ನಾನು ಬದುಕುವದರಿಂದ ನೀವೂ ಬದುಕುವಿರಿಯೆಂದು ಶಿಷ್ಯರಿಗೆ ಅಭಯಕೊಟ್ಟನು. ಅವರು ಆತನ ನಿತ್ಯವಾದ ಪ್ರಸನ್ನತೆಯನ್ನು ಅನುಭವಿಸುತ್ತಾ ಇಗೋ ದೇವರ ಗುಡಾರವು ಮನುಷ್ಯರಲ್ಲಿ ಹೊಡೆದದೆ. ಆತನು ಅವರ ಸಂಗಡ ವಾಸಮಾಡುವನು. ಅವರಿಗೆ ದುಃಖವಾಗಲಿ ಗೋಳಾಟವಾಗಲಿ ಇರುವದಿಲ್ಲ. ಮರಣವು ಅವರಿಗೆ ಇರುವದಿಲ್ಲವೆಂದು ಅನುಭವದಿಂದ ತಿಳಿದರು.

ಯುದ್ಧದ ಸಮಾಚಾರಗಳು.

ನಮ್ಮ ಪಕ್ಷದವರು ಮುಂದರಿಸುವುದು.

ಈ ವಾರ ಹೆಚ್ಚು ಬೇಳುವಂಥಾ ತಂತೀವರ್ತಮಾನವೇನೂ ಬಂದಿಲ್ಲ. ಇದುವರೆಗೆ ಬಂದಿರುವ ತಂತೀವರ್ತಮಾನಗಳಿಂದ ಪಶ್ಚಿಮದಲ್ಲೂ, ಪೂರ್ವದಲ್ಲೂ, ಯುದ್ಧ ನಡೆಯುವ ಪ್ರತಿ ಒಂದು ಕಡೆಯಲ್ಲೂ ನಮ್ಮ ಪಕ್ಷದವರು ಕ್ರಮವಾಗಿ ಯುದ್ಧಕಾರ್ಯಗಳನ್ನು ನಡಿಸುತ್ತಾ ಮುಂದರಿಸುತ್ತಾ ಬಂದಿದಾರೆಂದು ಗೊತ್ತಾಗುತ್ತದೆ. ಹವಾ ಸ್ಥಿತಿಯು ಅನುಕೂಲವಾಗಿ, ಸನ್ನಾಹಗಳೆಲ್ಲಾ ಸಿದ್ಧವಾದಾಗ ನಮ್ಮ ಪಕ್ಷದವರು ಶತ್ರುವಿನ ಮೇಲೆ ಬಿದ್ದು ನುಗ್ಗಿ ಯುದ್ಧಕಾರ್ಯಗಳನ್ನು ನಡಿಸುವವರಾಗಿರುವಂತೆ ವೇದ್ಯವಾಗುತ್ತದೆ.

ಪಶ್ಚಿಮ ರಣರಂಗದಲ್ಲಿ.

ಯುದ್ಧದ ಸಾಲಿನ ಉತ್ತರ ಪಾರ್ಶ್ವದ ಕೊನೆಯಲ್ಲಿ ಜರ್ಮನಿಯವರು ಬೆಲ್ಜಿಯನ್ ಸೈನಿಕರನ್ನು ಹಿಂದಕ್ಕೆ ಅಟ್ಟಬೇಕೆಂದು ಪ್ರಯತ್ನಪಟ್ಟರು. ಒಂದು ದಿನ ಅವರು ಇಸರ್ ನದಿಯನ್ನು ದಾಟಿ ಬಂದರು; ಆದರೆ ಬೆಲ್ಜಿಯನ್‌ರು ಅವರನ್ನು ಮತ್ತೆ ಹಿಂದಕ್ಕೆ ಓಡಿಸಿರುತ್ತಾರೆ.

ಜನರಲ್ ಜೋಫ್ರೆಯವರು ಹೋಗಿ ಬೆಲ್ಜಿಯನ್ ಸೈನಿಕರ ಸ್ಥಿತಿಗತಿ ಹೇಗಿದೆ ಎಂದು ನೋಡಿಕೊಂಡು ಬಂದರು. ಆಗ ಬೆಲ್ಜಿಯನ್ ಪ್ರಜೆಗಳ ದೊರೆಯಾದ ಆಲ್ಬರ್ಟ್ ರವರು ಸೇನಾಪತಿಯನ್ನು ಕಂಡು ಅವರನ್ನು ಸತ್ಕರಿಸಿದರು.

ಬ್ರಿಟಿಷ್ ಸೈನ್ಯಗಳು ಇರುವ ಸಾಲುಗಳಲ್ಲಿ ವಿಶೇಷ ಯುದ್ಧಕಾರ್ಯಗಳೇನೂ ನಡೆದಿರುವಂತೆ ಕಾಣಲಿಲ್ಲ.

ಫ್ರೆಂಚರು ಹಲವು ಠಾಣ್ಯಗಳಲ್ಲಿ ಚಟುವಟಿಕೆಯಾಗಿ ಕಾರ್ಯಗಳನ್ನು ನಡಿಸಿ ಹವಾ ಸ್ಥಿತಿಯು ವಿರೋಧವಾಗಿದ್ದರೂ ಲಕ್ಷ್ಯಮಾಡದೆ ಜರ್ಮನಿಯವರನ್ನು ಅವರು ಹೊಡಲಿದ್ದ ಠಾಣ್ಯಗಳಿಂದ ತಪ್ಪಿಸಿ ಹಿಂದಕ್ಕೆ ಓಡಿಸಿದಾರೆ. ಒಂದು ಠಾಣ್ಯದಲ್ಲಿ ಘೋರವಾಗಿ ಕದನ ನಡೆಯಿತು. ಅಲ್ಲಿ ಜರ್ಮನಿಯವರು 1,000 ಹೆಣಗಳನ್ನು ಬಿಟ್ಟು ಹೋಗಿದಾರೆ. ಇನ್ನೊಂದು ಠಾಣ್ಯದಲ್ಲಿ ಫ್ರೆಂಚರು ಜರ್

...ನ್ನು ಕೈಸೆರೆ ಹಿಡಿದುಕೊಂಡರು. ಈ ಪ್ರಕಾರ ಫ್ರೆಂಚರು ಕೆಲವೆಡೆಗಳಲ್ಲಿ ...ಕೊಂಡು ಬಂದಿದಾರೆಂದು ಜರ್ಮನಿಯವರೇ ಒಪ್ಪಿ ಹೇಳುವರು.

ಈಗ ಬಂದಿರುವ ತಂತೀ ವರ್ತಮಾನಗಳು ಕೆಲವು ಕಾಲದ ಹಿಂದೆ ನಡೆದ ...ನ್ನು ವರದಿಗಿಂತ ಚೆನ್ನಾಗಿ ವಿವರಿಸಿ ಹೇಳುವವು. ಮಾರ್ಚಿ ಆಖೈರಿ ... ಬ್ರಿಟಿಷರಿಗೂ ಜರ್ಮನಿಯವರಿಗೂ ಆದ ಘೋರ ಯುದ್ಧದಲ್ಲಿ ಜರ್ಮನಿ ...ರು ತಮ್ಮಲ್ಲಿ ಗಾಯಪಟ್ಟ ಸೈನಿಕರನ್ನು ಕರೆದುಕೊಂಡು ಹೋಗ ಅನ್ನಕೆ ... ಯುದ್ಧಭೂಮಿಯಲ್ಲೇ ಬಿಟ್ಟು ಹೋದರೆಂದೂ, ಅದನ್ನು ನೋಡಿ ...ರು ಆ ಗಾಯಪಟ್ಟವರಿಗೆ ಸಹಾಯ ಮಾಡಬೇಕೆಂದು ಹೋದಾಗ ...ನಿಯವರು ಬ್ರಿಟಿಷರ ಮೇಲೆ ಗುಂಡಿನ ಮಳೆ ಸುರಿಸಿದರೆಂದೂ ಹೇಳಲಾ... ಆ ಕದನದಲ್ಲಿ ಬ್ರಿಟಿಷರ ಕಡೆ ಸ್ವಲ್ಪ ಹೆಚ್ಚಾಗಿಯೇ ನಷ್ಟನಾಯಿತು. ...ಪಟ್ಟವರ ಸಂಖ್ಯೆಗಳನ್ನು ಈಗ ಪ್ರಕಟಮಾಡಿದಾರೆ. ಅದರಿಂದ ಬ್ರಿಟಿಷರಲ್ಲಿ ...ಸ 8,880 ಮಂದಿ ನಷ್ಟಪಟ್ಟರು ; ಈ ಪೈಕಿ 866 ಮಂದಿ ಕೊಲೆಯಾದರು.

ಈಗ ಬ್ರಿಟಿಷ್ ವಿಮಾನಯಂತ್ರಗಳು ಜರ್ಮನಿ ಸೈನಿಕರಲ್ಲಿ ತುಂಬಾ ...ಮಾಡಿರುವವೆಂದು ಈಗ ಹೇಳಲಾಗಿದೆ. ಜರ್ಮನಿಯವರು ವಿಮಾನ ...ಂತ್ರಗಳನ್ನಿಟ್ಟುಕೊಂಡಿದ್ದ ತಬೇಲೆಯು ಬಹಳ ಮಟ್ಟಿಗೆ ಕೆಟ್ಟುಹೋಯಿತು. ...ನಿಯವರು ವಿಮಾನಯಂತ್ರಗಳನ್ನು ಕಟ್ಟಿ ತಯಾರಾಗುವ ಕಾರ್ಖಾನೆ...ನ್ನು ಬ್ರಿಟಿಷ್ ವಿಮಾನಯಂತ್ರಗಳು ಉರಿಸಿಬಿಟ್ಟವು. ಸಬ್‌ಮೆರೀನುಗಳೆಂಬ ... ಹಡಗುಗಳು ನಾಶಮಾಡಲ್ಪಟ್ಟು, ಕಾನ್ನೊಂದನ್ನು ಒಡೆದುಹಾಕಿದವು. ...ರ ಈ ಬ್ರಿಟಿಷ್ ವಿಮಾನಯಂತ್ರಗಳು ಜರ್ಮನಿಯ 40 ಮಂದಿ ಆಳೇ...ನ್ನು ಕೊಂದುಹಾಕಿ 62 ಜನರನ್ನು ಗಾಯಪಡಿಸಿರುತ್ತವೆ.

ಜರ್ಮನಿಯವರು ಆಲ್ಸೇಸ್ಸಿನಲ್ಲಿ ಬಹಳ ಪರಾಕ್ರಮದಿಂದ ಹಿಡಿದು ಕಾಪಾಡಿ...ದ್ದ ಒಂದು ಗುಡ್ಡವನ್ನು ಫ್ರೆಂಚರು ಯಾವ ರೀತಿಯಾಗಿ ಗೆದ್ದುಕೊಂಡ...ದು ಈಗ ತಿಳಿದುಬಂದಿದೆ. ಫ್ರೆಂಚ್ ಸರ್ಕಾರದವರು ಈ ವಿಚಾರವಾಗಿ ಬರೆ...ದ್ದೇನೆಂದರೆ, ಯುದ್ಧವು ಪ್ರಾರಂಭವಾದಾಗ ಫ್ರೆಂಚರು ಆಲ್ಸೇಸ್ಸಿಗೆ ನುಗ್ಗಿ... ಆ ಗುಡ್ಡವನ್ನು ಆಕ್ರಮಿಸಿಕೊಂಡಿದ್ದರು ಈಚೆಗೆ ಜನವರಿ ತಿಂಗಳಲ್ಲಿ ...ನಿಯವರು ನುಗ್ಗಿಬಂದು ಫ್ರೆಂಚರನ್ನು ಅಲ್ಲಿಂದ ಓಡಿಸಿ ಆ ಗುಡ್ಡವನ್ನು ...ಕೊಂಡರು. ಬಳಿಕ ಫ್ರೆಂಚರು ಹೊಸದಾಗಿ ಸೈನ್ಯಗಳನ್ನು ಕೂಡಿಸಿಕೊಂಡು ಆ ಗುಡ್ಡಕ್ಕೆ ಮುತ್ತಿಗೆಹಾಕಿ ಫೆಬ್ರವರಿ ತಿಂಗಳಲ್ಲಿ ಕಂದಕಗಳನ್ನು ತೋಡಿ ...ವನ್ನು ಗೆದ್ದುಕೊಳ್ಳುವ ಸನ್ನಾಹಮಾಡಿದರು. ಅಷ್ಟರೊಳಗೆ ಜರ್ಮನಿ...ಯವರು ಗುಡ್ಡಕ್ಕೆ ಬಕೇರಿಗಳನ್ನು ಕಟ್ಟಿ ಬಲಪಡಿಸಿಕೊಂಡು, ಗುಡ್ಡದ ಎಲ್ಲಾ ...ಂದಲೂ ವರ್ತಮಾನಗಳು ಬರುವಂತೆ ಟೆಲಿಫೋನ್ ತಂತಿಗಳನ್ನು ಹಾಕಿ...ದ್ದರು. ಮಾರ್ಚಿ ತಿಂಗಳ ಎರಡನೇ ವಾರದಲ್ಲಿ ಫ್ರೆಂಚರು ತಮ್ಮ ಫಿರಂಗಿಗಳನ್ನು ...ತ್ತು ನಾಲ್ಕು ಗಂಟೆ ಹೊತ್ತು ಗುಂಡುಗಳ ಮಳೆ ಸುರಿಸಿದರು. ಬಳಿಕ ಘೋರವಾದ ಯುದ್ಧ ಸಂಭವಿಸಿತು. ಫ್ರೆಂಚ್ ಕಾಲ್ಬಲದ ಸಿಪಾಯಿಗಳು ...ವೇಗದಿಂದ ಶತ್ರುವಿನ ಮೇಲೆ ನುಗ್ಗಿದರು. ಆಗ ಜರ್ಮನಿಯವರ ಸಾಲು ...ಹೋಗಿ ಅವರೆಲ್ಲಾ ದಿಕ್ಕುಪಾಲಾದರು. ಫ್ರೆಂಚರು ಜರ್ಮನಿಯವರನ್ನು ... ಅವರ ಎರಡು ಕಂದಕಗಳನ್ನು ಆಕ್ರಮಿಸಿಕೊಂಡರು. ಜರ್ಮನಿಯವರು ...ಮ್ಮನಾಗಲಿಲ್ಲ. ಇವರು ಫ್ರೆಂಚರನ್ನು ಓಡಿಸಿ ತಮ್ಮ ಕಂದಕಗಳನ್ನು ಗೆದ್ದು...ಬೇಕೆಂದು ಮಹತ್ತರವಾದ ಸಾಹಸಪ್ರಯತ್ನಗಳನ್ನು ಮಾಡಿದರು. ಆದಾ...ಗ್ಯೂ ಫ್ರೆಂಚರು ಅವರಿಗೆ ಸಗ್ಗದೆ ಆ ಕಂದಕಗಳನ್ನು ಬಹು ಪರಾಕ್ರಮದಿಂದ ...ಕೊಂಡರು. ಮಾರ್ಚಿ ತಾ. 26 ರಲ್ಲಿ ಮಂಜು ಮುಸುಕಿದ್ದು ಸಿದ್ದ... ...ಯಿತು. ಫ್ರೆಂಚರು ಸಮಯ ಸಿಕ್ಕಿತೆಂದು ಒಂದೇ ಸಲ ಶತ್ರುವಿನ ಮೇಲೆ ನುಗ್ಗಿಹೋದರು. ಫ್ರೆಂಚರ ಫಿರಂಗಿ ಸಾಲುಗಳು ನಿಲುಗಡೆ ಇಲ್ಲದೆ ಗುಂಡಿನ ಮಳೆ ಸುರಿಸುತ್ತಿದ್ದವು. ಇದರಿಂದ ಗಿಡ ಮರಗಳೂ ಜರ್ಮನಿಯವರ ಕಂದಕ...ಳು ನಾಶವಾದವು. ಜರ್ಮನಿಯವರ ಮದ್ದುಗುಂಡಿನ ಮನೆಗಳಿಗೆ ಗುಂಡು ... ಎಲ್ಲಾ ಹತ್ತಿಕೊಂಡು ನಾಶಹೊಂದಿದವು. ಈ ರೀತಿಯಾಗಿ ನಾಲ್ಕು ಗಂಟೆ ...ತ್ತು ನೆಮಿಸಿದಲ್ಲಿ ಶತ್ರುವಿನ ಬಲವೆಲ್ಲಾ ಕುಗ್ಗಿಹೋಯಿತು. ಬಳಿಕ ಫ್ರೆಂಚರ ಕಾಲ್ಬಲವು ಮುಂದರಿಸಿ ನುಗ್ಗಿಹೋಗಿ ಆ ಗುಡ್ಡದ ನೆತ್ತಿಯನ್ನು ಆಕ್ರಮಿಸಿಕೊಂಡದ್ದು ಮಾತ್ರವೇ ಅಲ್ಲ ; ದಾರಿಯಲ್ಲಿ ಸಿಕ್ಕಿದ ಶತ್ರುವಿನ ಕಂದಕ... ಆ ಸೈನ್ಯದ ವಾಲಾವು ಫ್ರೆಂಚರು ತುದಿಯ ಮೇಲೆ ಹೋಗಿ ದಾಣ್ಣಾ...ಕೊಂಡು ನಿಂತುಬಿಟ್ಟು ಸುತ್ತಲೂ ಕಂದಕಗಳನ್ನು ತೋಡಿಕೊಂಡರು. ...ಮ ಮಳೆ ಸುರಿಯಿತು. ಯುದ್ಧಭೂಮಿಯಲ್ಲಿ ಜರ್ಮನಿಯವರ 700 ಹೆಣ...ನ್ನು ಲೆಕ್ಕಮಾಡಿದ್ದಾಯಿತು. ಅಪಾರವಾದ ಯುದ್ಧಸಾಮಗ್ರಿಗಳೊಡನೆ ... ಜರ್ಮನಿ ಸೈನಿಕರನ್ನು ಫ್ರೆಂಚರು ಕೈಸೆರೆಹಿಡಿದುಕೊಂಡರು.

ಫ್ರೆಂಚರು ಪ್ರಕಟಿಸಿರುವ ರಿಪೋರ್ಟಿನಿಂದ ಯುದ್ಧ ಪ್ರಾರಂಭವಾದಾ...ಗ್ಯೂ ಜರ್ಮನಿಯವರ ಕಡೆ ಇದ್ದ ಒಟ್ಟು 52,855 ಮಂದಿ ಹುದ್ದೇದಾರರ ಪೈಕಿ 9,925 ಮಂದಿ ಹುದ್ದೇದಾರರು ಕೊಲೆಯಾದರೆಂದೂ, ಗಾಯಪಟ್ಟವರೂ ...ದ ಆದವರೂ 21,361 ಮಂದಿ ಹುದ್ದೇದಾರರೆಂದೂ, ಅವರೊಳಗೆ ದಳ...ಪತಿ (ಜನರಲ್) 160 ಮಂದಿ ಎಂದೂ ಗೊತ್ತಾಗುವುದು.

ಪೂರ್ವ ರಣರಂಗದಲ್ಲಿ.

ಆಸ್ಟ್ರಿಯಾದವರನ್ನೂ ಜರ್ಮನಿಯವರನ್ನೂ ಹಿಂದಕ್ಕೆ ಓಡಿಸುವುದು ...ಷ್ಟ ಪ್ರಯಾಸವಾದ ಕಾರ್ಯವಾಗಿದೆ. ತಂತೀ ವರ್ತಮಾನಗಳು ರಷ್ಯಾದವರು ...ಲವು ಪ್ರದೇಶಗಳಲ್ಲಿ ಚೆನ್ನಾಗಿ ನುಗ್ಗಿ ಹೋಗಿದಾರೆಂದು ತಿಳಿಸುವವು. ಯುದ್ಧ... ಉತ್ತರ ಭಾಗದಿಂದ ವಿಶೇಷ ವರ್ತಮಾನಗಳೇನೂ ಬಂದಿರುವುದಿಲ್ಲ. ...ದ್ಯ ಭಾಗದಲ್ಲಿ ನಡೆದಿರುವ ವಿದ್ಯಮಾನಗಳೊಂದೂ ಗೊತ್ತಾಗಲಿಲ್ಲ. ಕಾರ್ಪೇ...ಥಿಯನ್ ಪರ್ವತ ಪ್ರಾಂತ್ಯ ಮತ್ತು ಯುದ್ಧ ಸಾಲಿನ ದಕ್ಷಿಣ ಕೊನೆ ಇವರಡು ಪ್ರದೇಶಗಳಲ್ಲೇ ಮುಖ್ಯವಾದ ಯುದ್ಧ ಕಾರ್ಯಗಳು ನಡೆಯುತ್ತವೆ.

ದಕ್ಷಿಣದಲ್ಲಿ ಆಸ್ಟ್ರಿಯಾದವರು ರಷ್ಯಾದೊಳಕ್ಕೆ ಸ್ವಲ್ಪ ದೂರ ನುಗ್ಗಿ ...ಹೋಗಿದ್ದರು. ರಷ್ಯಾದವರು ಅಲ್ಲಿ ಕಾಣಿಸಿಕೊಂಡು ಶತ್ರುವು ಮುಂದಕ್ಕೆ ...ದಂತೆ ತಡೆ ಹಾಕಿದರು. ಇಷ್ಟೇ ಅಲ್ಲ. ಆಸ್ಟ್ರಿಯಾದವರು ಅಲ್ಲಿ... ಹೋಯಿತು. ಮಾರ್ಚಿ ತಾ 30 ರಲ್ಲಿ ಬಹಳ ಘೋರವಾದ ಯುದ್ಧ ...ಭವಿಸಿತು. ಅಲ್ಲಿ ರಷ್ಯಾದವರು 2,133 ಮಂದಿ ಶತ್ರು ಸೈನಿಕರನ್ನೂ ಬಹಳ ಯುದ್ಧ ಸಾಮಗ್ರಿಗಳನ್ನೂ ಸ್ವಾಧೀನ ಪಡಿಸಿಕೊಂಡರು ರಷ್ಯಾದವರು ಅಲ್ಲಿಂದ ಆಸ್ಟ್ರಿಯಾದವರನ್ನು ಸಂಪೂರ್ಣವಾಗಿ ಹಿಂದಕ್ಕೆ ಓಡಿಸಿದರೋ ಇಲ್ಲವೋ ...ಲ್ಲ ; ಆದರೆ ಓಡಿಸಿರಬೇಕೆಂದು ಕಾಣುತ್ತದೆ.

ಕಾರ್ಪೇಥಿಯನ್ ಪರ್ವತಗಳ ಪ್ರಾಂತ್ಯದಲ್ಲಿ ರಷ್ಯಾದವರು ತುಂಬಾ ಮುಂದರಿಸಿ ಹೋಗಿದಾರೆ. ಅವರು ಆಸ್ಟ್ರಿಯಾದವರನ್ನೂ ಜರ್ಮನಿಯವರನ್ನೂ ...ರು ಸ್ಥಾನಗಳಿಂದ 16 ಮೈಲಿ ದೂರ ಹಿಂದಕ್ಕೆ ಹೊರಡಿಸಿರುವರು. ಒಂದು ...ದವರು ಆ ಪರ್ವತಗಳ ಅತ್ಯಂತ ಎತ್ತರವಾದ ಭಾಗವನ್ನು ದಾಟಿ ...ಳಗೆ ಇಳಿದು ಬರುತ್ತಿರುವರು. ಆಸ್ಟ್ರಿಯಾದವರು ತಮ್ಮ ಸೈನಿಕರು ...ಟ್ಟು ಬರುತ್ತಿದಾರೆಂದು ಒಪ್ಪಿಕೊಂಡಿದಾರೆ. ಮಾರ್ಚಿ ತಾ 20 ರಿಂದ ...ಲ್ ತಾ 8 ರ ವರೆಗೆ ರಷ್ಯಾದವರು ಕಾರ್ಪೇಥಿಯನ್ ಪರ್ವತಗಳಲ್ಲಿ 389 ...ದಾರರನ್ನೂ, 33,155 ಸೈನಿಕರನ್ನೂ ಕೈಸೆರೆ ಹಿಡಿದುಕೊಂಡರು ; 17 ...ಗಳೂ, 101 ಮೆಷೀನ್ ಫಿರಂಗಿಗಳೂ ಅವರ ಸ್ವಾಧೀನವಾದವು. ಏಪ್ರಿಲ್ ...ತಾ. 5 ರಲ್ಲಿ ಅವರು ಮತ್ತೆ 2,900 ಸೈನಿಕರನ್ನು 3 ಫಿರಂಗಿಗಳ ಸಹಿತ ಕೈಸೆರೆ ...ದರು. ಆಸ್ಟ್ರಿಯಾದವರನ್ನು ಪರ್ವತ ಪ್ರದೇಶಗಳಿಂದ ಓಡಿಸುವುದು ಬಹಳ ...ವಾದ ಕಾರ್ಯ. ಅದರಲ್ಲಿ ಚಳಿಯ ಕಾಟವು ಅಪಾರವಾಗಿರುತ್ತದೆ. ...ರುವ ಸೈನಿಕರು ಕ್ಲಿಷ್ಟವನ್ನು ಸಹಿಸಲಾರದೆ ಕೊರಗಿದಲ್ಲೇ ಸತ್ತು ...ಗಿರುವರು. ಆದಾಗ್ಯೂ ಈ ವಿಧವಾದ ಕಷ್ಟಗಳ್ಯಾವುದನ್ನೂ ಲಕ್ಷ್ಯಮಾಡದೆ ...ವರು ಬಹು ಸಾಹಸ...ದಕ್ಕೆ ನುಗ್ಗಿ ಹೋಗುತ್ತಿರುವರು. ಆಸ್ಟ್ರಿಯಾ ರಾಜ್ಯದೊಳಗೆ ಜರ್ಮನಿಯ ಏಳು ಸೈನ್ಯಗಳು ಆಸ್ಟ್ರಿಯಾದವರಿಗೆ ಸಹಾಯಮಾಡುತ್ತಿದ್ದರೂ ಜನವು ಬಹಳ ಮಟ್ಟಿಗೆ ಖಿನ್ನರಾಗಿರುವರು.

ಈಗ ರಷ್ಯಾದವರ ಸ್ವಾಧೀನದಲ್ಲಿ 8,00,000 ಆಸ್ಟ್ರಿಯಾ ಸೈನಿಕರು ಕೈಸೆರೆಯಾಗಿ ಬಿದ್ದುಕೊಂಡಿದಾರೆ. ಪೆಸೆಲ್ ಕೋಟೆಯಲ್ಲಿ ರಷ್ಯಾದವರಿಗೆ ಸಿಕ್ಕಿದ ಸೈನಿಕರೂ, ಸರಕುಗಳೂ ಮೊದಲು ನಾವು ತಿಳಿದಿದ್ದಕ್ಕಿಂತ ಎಷ್ಟೋ ಹೆಚ್ಚಾಗಿರುವುದು. ರಷ್ಯಾದವರು ಈ ಕೋಟೆಯೊಳಗಿದ್ದ 9 ಮಂದಿ ದಳಪತಿಗಳನ್ನೂ, 2,307 ಹುದ್ದೇದಾರರನ್ನೂ, 1,13,890 ಸೈನಿಕರನ್ನೂ ರಷ್ಯಾಕ್ಕೆ ಕೈಸೆರೆ ಹಿಡಿದುಕೊಂಡು ಹೋದರು. ಅಲ್ಲದೆ ಪೆಸೆಲ್ ಕೋಟೆಯಲ್ಲಿ ಕಾಯಿಲೆಯಾದ ಮತ್ತು ಗಾಯಪಟ್ಟ 6,800 ಶತ್ರು ಸೈನಿಕರನ್ನು ಇಟ್ಟು ಇವರ ಕೂಡ ಹಿಡಿಯಲ್ಪಟ್ಟ 229 ಮಂದಿ ಆಸ್ಟ್ರಿಯಾ ವೈದ್ಯಮಂಡಲಿಯವರಿಂದ ಅಲ್ಲೇ ಚಿಕಿತ್ಸೆಮಾಡಿಸುತ್ತಿದಾರೆ. ಅಲ್ಲಿ ಸಿಕ್ಕಿದ 900 ಫಿರಂಗಿಗಳನ್ನು ಲೆಕ್ಕಮಾಡಿದ್ದಾಯಿತು. ಇಷ್ಟೇ ಅಲ್ಲ. ಅಪಾರವಾದ ಯುದ್ಧಸಾಮಗ್ರಿಗಳೂ, ಮದ್ದುಗುಂಡುಗಳೂ, ಬಂಡುಕುಗಳೂ ರಷ್ಯಾದವರಿಗೆ ಸಿಕ್ಕಿರುತ್ತವೆ.

ಟರ್ಕಿ.

ಪ್ರಕಟನೆಗೆ ಯೋಗ್ಯವಾದ ವಿಶೇಷ ವರ್ತಮಾನವೇನೂ ಕಾಣಲಿಲ್ಲ. ನಮ್ಮ ಪಕ್ಷದವರು ಸೇರಿಕೊಂಡು ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸುವುದರಲ್ಲೇ ಉದ್ಯುಕ್ತರಾಗಿದಾರೆ. ಅವರು ಕಳೆದ ವಾರ ಸ್ವಲ್ಪ ಮುಂದರಿಸಿ ನುಗ್ಗಿ ಹೋದಂತೆ ತಿಳಿಯುತ್ತದೆ. ಅಪಾಯ ವಿಶೇಷವಾದದ್ದರಿಂದ ಅಲ್ಲಿ ಬಹಳ ಜಾಗರೂಕತೆಯಿಂದ ಕಾರ್ಯಸಾಧನೆ ಮಾಡಬೇಕಾಗಿರುತ್ತದೆ.

ನಮ್ಮ ಪಕ್ಷದವರು ಮತ್ತೆ ಸ್ಮರ್ನಾ ಎಂಬ ತೀರಪಟ್ಟಣಕ್ಕೆ ಸಮುದ್ರದ ಕಡೆಯಿಂದ ಗುಂಡುಗಳನ್ನು ಹಾಕಿದರು. ಹವಾಸ್ಥಿತಿಯು ಕೆಟ್ಟಿರುವುದರಿಂದ ಟರ್ಕಿಯವರು ಈ ವಿರಾಮ ಕಾಲದಲ್ಲಿ ಕೆಲವು ಕೋಟೆಗಳನ್ನು ದುರಸ್ತು ಮಾಡಿಕೊಂಡಿದಾರೆ.—ಜರ್ಮನಿಯವರ ಎರಡು ಯುದ್ಧದ ಜಹಜುಗಳು ಕಪ್ಪು ಕಡಲನ್ನು ದಾಟಿ ಬಂದವೆಂದೂ, ಅಷ್ಟರಲ್ಲೇ ನಮ್ಮ ಪಕ್ಷದವರು ಅವೆರಡನ್ನೂ ಬಾಸ್ಫೊರಸ್ ಕಡೆಗೆ ಹಿಂದಕ್ಕೆ ಓಡಿಸಿಬಿಟ್ಟರೆಂದೂ ಹೇಳಲಾಗಿದೆ. ಹವಾಸ್ಥಿತಿಯು ಚೆನ್ನಾಗಿಲ್ಲವಾದ್ದರಿಂದ ರಷ್ಯಾದವರು ಅಲ್ಲಿ ವಿಶೇಷ ಕಾರ್ಯಗಳನ್ನು ನಡಿಸಲು ಅವಕಾಶವಾಗಲಿಲ್ಲ.—ಟರ್ಕಿಯವರು ಅಪಾರ ಸೈನ್ಯವನ್ನು ಇಟ್ಟುಕೊಂಡಿದಾರೆಂದೂ, ಅದಕ್ಕೆ ಬಟ್ಟೆಬರೆ ಮದ್ದು ಗುಂಡು ಮುಂತಾದ್ದಾವುದೂ ಒದಗಿಸಲ್ಪಟ್ಟಿಲ್ಲವೆಂದೂ ಜರ್ಮನಿಯವರು ಹೇಳುತ್ತಾರೆ.

ಈಜಿಪ್ಟಿನಲ್ಲಿ.

ಸೂಯೆಸ್ ಕಾಲುವೆಗೆ ಸ್ವಲ್ಪ ದೂರದಲ್ಲಿ ಒಂದು ಸಣ್ಣ ಟರ್ಕಿ ಸೈನ್ಯವು ಕಾಣಿಸಿಕೊಂಡು, ಕೆಲವು ಗುಂಡುಗಳನ್ನು ಹೊಡೆದು ವಾಪಸು ಹೋಗಿಬಿಟ್ಟಿತೆಂದು ವರ್ತಮಾನವಿದೆ.

ಏಪ್ರಿಲ್ ತಾ. 8 ರಲ್ಲಿ ಕೈರೊ ಪಟ್ಟಣದೊಳಗೆ ಸುಲ್ತಾನರು ಅರಮನೆಯಿಂದ ಸಾರೋಟಿನಲ್ಲಿ ಕುಳಿತು ಕೆಲವು ಸ್ಥಳಗಳನ್ನು ನೋಡಿ ಬರಬೇಕೆಂದು ರಾಜಬೀದಿಯಲ್ಲಿ ಸವಾರಿ ಹೋಗುತ್ತಿದ್ದರು. ಸುಮಾರು 25 ವಯಸ್ಸಿನ ಈಜಿಪ್ಟ್ ವ್ಯಾಪಾರಿಯೊಬ್ಬನು ಹಿಂಭಾಗದಿಂದ ಹೊರಗೆ ಬಂದು ಸುಲ್ತಾನರಿಗೆ ಗುರಿಯಿಟ್ಟು ಪಿಸ್ತೂಲನ್ನು ಹಾರಿಸಿ ಗುಂಡು ಹೊಡೆದನು. ದೇವರ ದಯದಿಂದ ಆ ಗುಂಡು ಗುರಿತಪ್ಪಿ ಸುಲ್ತಾನರಿಗೆ ಬಡಿಯಲಿಲ್ಲ. ಸುಲ್ತಾನರು ನಿಲ್ಲದೆ ಉದ್ದೇಶಪಟ್ಟ ಸ್ಥಳಗಳಿಗೆ ಹೋಗಿ ಬಂದರು. ರಸ್ತೆಯ ಉದ್ದಕ್ಕೂ ಪ್ರಜೆಗಳು ಸುಲ್ತಾನರನ್ನು ನೋಡಿ ಜಯಧ್ವನಿ ಮಾಡಿದರು. ಪೋಲೀಸಿನವರು ಆ ಕೊಲೆಗೇಡಿಯಾದ ವರ್ತಕನನ್ನು ಹಿಡಿದಿರುತ್ತಾರೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕದ ಸಂಯುಕ್ತ ಸೈನ್ಯಗಳು ಜರ್ಮನಿಯವರ ದಕ್ಷಿಣ ಪಶ್ಚಿಮ ಆಫ್ರಿಕಾ ಸೀಮೆಯೊಳಗೆ ನುಗ್ಗಿ ಹೋಗುತ್ತಿರುವವು. ಈಗ ಆ ಸೈನ್ಯವು ಬಹಳ ಪ್ರಾಮುಖ್ಯವಾದ ವಾರ್ಮ್‌ಬಾಡ್ ಎಂಬ ಪಟ್ಟಣವನ್ನೂ ಅದರಿಂದಾಚೆ ಇರುವ ಎರಡು ಗ್ರಾಮಗಳನ್ನೂ ಗೆದ್ದು ಆಕ್ರಮಿಸಿಕೊಂಡಿರುವುದು. ಈಗ ಆ ಸೈನಿಕರು ಅಲ್ಲಿಂದ ಮೂರು ಕಡೆಗಳಿಗೆ ನುಗ್ಗಿ ಹೋಗುತ್ತಿರುವವು.

ಮಧ್ಯ ಆಫ್ರಿಕದ ಒಂದು ದೊಡ್ಡ ಕೆರೆಯಲ್ಲಿ ಬ್ರಿಟಿಷರು ಜರ್ಮನಿಯ ಒಂದು ಸಣ್ಣ ಫಿರಂಗಿ ಹಡಗನ್ನು ಸಂಧಿಸಿ ಎರಡು ಗಂಟೆ ಹೊತ್ತು ಕದನಮಾಡಿ ಅದನ್ನು ಮುಳುಗಿಸಿ ಬಿಟ್ಟರು.

ಸರ್ವಿಯಾ ಮತ್ತು ಬಲ್ಗೇರಿಯಾ.

ಸರ್ವಿಯಾದವರಿಗೂ ಬಲ್ಗೇರಿಯಾದವರಿಗೂ ಅವರೆಡು ರಾಜ್ಯಗಳ ಎಲ್ಲೆ ಕಟ್ಟಿನಲ್ಲಿ ಒಂದು ಕದನವಾಯಿತು. ಇದಕ್ಕೆ ಸರ್ವಿಯಾದವರೇ ಕಾರಣರೆಂದು ಬಲ್ಗೇರಿಯಾದವರು ಹೇಳುವರು. ಈ ಕದನದಲ್ಲಿ 80 ಮಂದಿ ಬಲ್ಗೇರಿಯಾದವರೂ, 60 ಮಂದಿ ಸರ್ವಿಯಾದವರೂ ಕೊಲೆಯಾಗಿ ಅನೇಕರಿಗೆ ಗಾಯವಾಗಿವೆಯೆಂದೂ ಹೇಳಲಾಗಿದೆ. ಈಚೆಗೆ ಅವರವರೇ ವಿಚಾರಿಸಿ ತಮ್ಮ ಮನಸ್ತಾಪಗಳನ್ನು ಇತ್ಯರ್ಥಪಡಿಸಿಕೊಂಡಿರುವಂತೆಯೂ, ಇನ್ನು ಅವರವರು ಕದಿದಾಡುವ ಹಾಗಿಲ್ಲವೆಂದೂ ಪ್ರಕಟವಾಗಿದೆ.

ಸಮುದ್ರದ ಮೇಲೆ.

ಜರ್ಮನಿಯವರು ಎಷ್ಟು ಬ್ರಿಟಿಷ್ ಹಡಗುಗಳನ್ನು ಮುಳುಗಿಸಿದಾರೆಂಬ ವಿಷಯದಲ್ಲಿ ಪ್ರತಿ ವಾರವೂ ಬ್ರಿಟಿಷರು ಒಂದು ರಿಪೋರ್ಟನ್ನು ಪ್ರಕಟಮಾಡುತ್ತಾರೆ. ಕಳೆದ ವಾರ ಪ್ರಕಟಮಾಡಲ್ಪಟ್ಟಿರುವ ರಿಪೋರ್ಟಿನಿಂದ ಜರ್ಮನಿಯವರು ಅಷ್ಟೇನೂ ವಿಶೇಷ ನಷ್ಟಪಡಿಸಲಾರದೆಹೋದರೆಂದು ತಿಳಿಯುವುದು. ಹಿಂದಿನ ವಾರ ಈಸ್ಟರ್ ಎಂಬ ಹಬ್ಬದ ದಿನಗಳಾಗಿದ್ದರೂ ಬ್ರಿಟಿಷ್ ತೀರಪಟ್ಟಣಗಳಿಗೆ 1,234 ಹಡಗುಗಳು ಬಂದು ಹೋಗಿರುತ್ತವೆ. ಆ ವಾರದಲ್ಲಿ ಐದು ಹಡಗುಗಳು ಮಾತ್ರ ಜರ್ಮನಿಯವರಿಂದ ಮುಳುಗಿಸಲ್ಪಟ್ಟವು. ಇದಲ್ಲದೆ ಏನನ್ನು ಹಿಡಿಯುವುದಕ್ಕಾಗಿ ಹೋಗಿದ್ದ ಐದು ಸಣ್ಣ ಹಡಗುಗಳು ಮುಳುಗಿಸಿ ತವು. ಅನೇಕ ನಾವಿಕರು ಬದುಕಿ ಬಂದರು.—ರಷ್ಯಾ ಸಮುದ್ರತೀರದಲ್ಲಿರುವ ಲಿಬೌ ಎಂಬ ನಗರಕ್ಕೆ ಜರ್ಮನಿಯವರು ಫಿರಂಗಿಗಳಿಂದ ಗುಂಡುಗಳನ್ನು ಹೊಡೆದ ಸಂದರ್ಭದಲ್ಲಿ ಕೆಲವು ಗುಂಡುಗಳು ನಾರ್ವೆ ರಾಜ್ಯಕ್ಕೆ ಸೇರಿದ ಒಂದು ಜಹಜಿಗೆ ಬಡಿದು ಅದರ ಅಧಿಪತಿ (ಕ್ಯಾಪ್ಟನ್) ಯನ್ನು ಕೊಂದುಹಾಕಿತು.—ಜರ್ಮನಿಗೆ ಬಂದು ಹೋಗುತ್ತಿದ್ದ ಐದು ಜಹಜುಗಳನ್ನು ನಮ್ಮ ಪಕ್ಷದವರು ಹಿಡಿದುಕೊಂಡು ಬಂದಿದಾರೆ.—ಬ್ಯಾಲ್ಟಿಕ್ ಕಡಲಿನಲ್ಲಿ ಒಂದು ಜರ್ಮನಿ ಜಹಜನ್ನು ಮುಳುಗಿಸಿ ದ್ದಾಯಿತು. 25 ಜನರು ಸಮುದ್ರದ ಪಾಲಾದರು.—ದಕ್ಷಿಣ ಅಮೇರಿಕದಿಂದ ಸ್ವಾಕ್‌ಹಂ ಪಟ್ಟಣಕ್ಕೆ ಧಾನ್ಯವನ್ನು ಭರ್ತಿಮಾಡಿಕೊಂಡು ಬರುತ್ತಿದ್ದ ಒಂದು ಸ್ವೀಡನ್ ಜಹಜನ್ನು ಜರ್ಮನಿಯವರು ಹಿಡಿದಿಟ್ಟುಕೊಂಡರು.

ಹೊರಗಡೆ ಇದ್ದ ಜರ್ಮನಿಯ ಕಡೇ ಯುದ್ಧದ ಜಹಜು ಸಿಕ್ಕಿಬಿದ್ದಿದೆ. ಪ್ರಿನ್ಸ್ ಐಟೆಲ್ ಫ್ರೆಡ್ರಿಕ್ ಎಂಬ ಆ ಯುದ್ಧದ ಜಹಜನ್ನು ಅಮೇರಿಕದವರು ಹೊರಕ್ಕೆ ಬಿಡದೆ ತಡೆದಿಟ್ಟುಕೊಂಡದ್ದಾಯಿತು. ಇನ್ನು ಜರ್ಮನಿಯವರ ಜಹಜುಗಳು ಅವರ ತೀರಪಟ್ಟಣಗಳಲ್ಲಿರುವುದಷ್ಟೇ ಅಷ್ಟು. ಹೊರಗೆ ಎಲ್ಲೂ ಅವರ ಜಹಜು ಯಾವುದೂ ಇಲ್ಲವೆಂದು ಹೇಳಬಹುದು.

ಇತರ ವಿಷಯಗಳು.

ಜರ್ಮನಿಯ ಯುದ್ಧದ ಜಹಜು ಅಮೇರಿಕದ ಒಂದು ಜಹಜನ್ನು ಮುಳುಗಿಸಿದ ಕಾರಣ ಅದಕ್ಕಾಗಿ 2,28,060 ಡಾಲರ್ (ಡಾಲರ್ ಎನ್ನುವುದು ಸುಮಾರು 4 ರೂಪಾಯಿನ ನಾಣ್ಯ) ಗಳನ್ನು ಪ್ರತಿಫಲಕೊಡಬೇಕೆಂದು ಅಮೇರಿಕದವರು ಜರ್ಮನಿಯವರನ್ನು ಕೇಳಿದಾರೆ. ಜರ್ಮನಿಯವರು ಮುಳುಗಿಸಿದ್ದುಂಟೆಂದು ಒಪ್ಪಿಕೊಂಡು, ಪಂಚಾಯಿತರು ಅದನ್ನು ಇತ್ಯರ್ಥಮಾಡಲಿ ಎಂದು ತಿಳಿಸಿದಾರೆ.

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಜರ್ಮನಿ ವಂಶಕ್ಕೆ ಸೇರಿದ್ದ ಆ ನಗರದ ಮೇಯರ್ ಎಂಬ ಪುರಾಧ್ಯಕ್ಷನ ಸ್ಥಾನಕ್ಕೆ ಚುನಾಯಿತನಾಗಬೇಕೆಂದು ಅಲ್ಲಿನ ಜನರ ಓಟು (ಸಮ್ಮತಿ) ಗಳನ್ನು ಕೇಳಿದನು. ಅವನು ತನಗೆ ಬೇಡವೆಂದು ಪ್ರಜೆಗಳು ತಿರಸ್ಕರಿಸಿಬಿಟ್ಟರು. ಚಿಕಾಗೋ ಎಂಬ ಆ ಮಹಾ ಪಟ್ಟಣದಲ್ಲಿ ಜರ್ಮನಿಯವರ ಕಾರುಬಾರುಗಳು ವಿಶೇಷವಾಗಿದ್ದರೂ ಅಲ್ಲಿನ ಪ್ರಜೆಗಳಿಗೆ ಜರ್ಮನಿಯವರ ಮೇಲೆ ಅಪಾರವಾದ ಅಸ್ತಾಪವುಂಟಾಗಿರುತ್ತದೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಈ ಯುದ್ಧವು ಪೂರೈಸುವ ತನಕ ತಮ್ಮ ಉಪಯೋಗಕ್ಕೊಂದು ಅರಮನೆಯಲ್ಲಿ ಯಾವ ತರದ ಮದ್ಯವನ್ನೂ ಉಪಯೋಗಿಸಕೂಡದೆಂದು ಆಜ್ಞೆಮಾಡಿರುತ್ತಾರೆ. ಬ್ರಿಟನ್ನಿನಲ್ಲಿ ಅನೇಕಾನೇಕ ಪ್ರಜೆಗಳೂ ಅಧಿಕಾರಿಗಳೂ ಅವರ ಮೇಲ್ಪಂಕ್ತಿಯನ್ನೇ ಅನುಸರಿಸಬಿಟ್ಟಿರುವರು. ಸರ್ಕಾರದವರು ಕಾನೂನ್ ಮಾಡಬೇಕಾದ ಅವಶ್ಯಕತೆಯೇ ಇಲ್ಲದೆ ಈ ಮದ್ಯದ ವಿಚಾರವು ಇತ್ಯರ್ಥವಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಕೂಲಿಮಾಡತಕ್ಕವರು ಹೇಳಿದಂತೆ ಕೇಳುವ ಸ್ಥಿತಿಗೆ ಬಂದಿದಾರೆ. ಇದರಿಂದ ಬ್ರಿಟಿಷ್ ಸೈನ್ಯಕ್ಕೆ ಬೇಕಾಗುವಷ್ಟು ಮದ್ದು ಗುಂಡು ಕಾರ್ಖಾನೆಗಳಲ್ಲಿ ತಯಾರಾಗಿ ಒದಗಿಸಲ್ಪಡುವುದು ಸುಲಭವಾಯಿತು. ಚಕ್ರವರ್ತಿಯವರ ಶ್ರೇಯಸ್ಸನ್ನು ಬಯಸತಕ್ಕವರು ಮದ್ಯವನ್ನು ಬಿಟ್ಟು ನೀರನ್ನು ಸೇವಿಸಬಹುದೆಂದು ತಿಳಿಸಲಾಗಿದೆ.

ಕ್ಯಾನಡಾ ಎಂಬ ಬ್ರಿಟಿಷ್ ಸ್ವಾತಂತ್ರ್ಯದವರು ಕಳುಹಿಸಿಕೊಟ್ಟಿರುವ ಸೈನ್ಯಗಳು ಯುದ್ಧ ಭೂಮಿಯಲ್ಲಿ ಬಹಳ ಪರಾಕ್ರಮವಾಗಿ ಕಾದುತ್ತಿರುವವು. ಯುದ್ಧ ಭೂಮಿಯಲ್ಲಿ ಕ್ಯಾನಡಾ ಸೈನ್ಯಗಳು ಸರ್ವದಾ 50,000 ಇರುವಂತೆ ಹೊಸ ಸೈನ್ಯಗಳನ್ನು ಕಳುಹಿಸುತ್ತಾ ಬರುವೆನೆಂದು ಕ್ಯಾನಡಾದವರು ತೀರ್ಮಾನ ಮಾಡಿದಾರೆ.—ಕರ್ಬೇಲಾ ಎಂಬ ಮುಸಲ್ಮಾನರ ಯಾತ್ರಾಸ್ಥಳವನ್ನು ಟರ್ಕಿಯವರು ನುಗ್ಗಿ ಲೂಟಿ ಮಾಡಿದರೆಂಬ ಸುದ್ದಿಯು ನಿಜವಲ್ಲವೆಂದು ಈಗ ಗೊತ್ತಾಯಿತು. ಇದನ್ನು ತಿಳಿಸಲು ಸಂತೋಷವಾಗುವುದು.

ಒಳದೇಶದ ವೃತ್ತಾಂತಗಳು.

ಯುದ್ಧ ಭೂಮಿಯಲ್ಲಿ ಗಾಯಪಟ್ಟ ಸುಮಾರು 50 ಮಂದಿ ಹಿಂದುಸ್ಥಾನದ ಸಿಪಾಯಿಗಳನ್ನು ಬೆಂಗಳೂರಿಗೆ ಕರೆದುತಂದು ಇಟ್ಟುಕೊಂಡು ಚಿಕಿತ್ಸೆ ಮಾಡುವುದಕ್ಕೆ ಏರ್ಪಾಡು ನಡೆದಿದೆ. ಆ ಸೈನಿಕರು ಕಳೆದ ವಾರ ಬರುವವರಾಗಿದ್ದರು.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಅರಕೆರೆ ಗ್ರಾಮದಲ್ಲಿ ಜನರು ಪ್ಲೇಗ್ ನಿಮಿತ್ತ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾಗ ಬೆಂಕಿಯು ವ್ಯಾಪಿಸಿ ಗುಡಿಸಲು ಗಳೆಲ್ಲಾ ಸುಟ್ಟು ಹೋದದ್ದಲ್ಲದೆ ವಿಶೇಷ ನಷ್ಟವೂ ಆಗಿರುವುದಾಗಿ ತಿಳಿದುಬಂದಿದೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮಳೆ ನಡೆಸದೆ ಬೆಳೆಯಾಗದಿರುವ ಕಾರಣ ಅಲ್ಲಿನ ರೈತರ ಪರವಾಗಿ ನಾಲ್ವರು ದೊಡ್ಡ ಮನುಷ್ಯರು ಬೆಂಗಳೂರಿಗೆ ಬಂದು ನಾಳೆ ದಿವಾನರವರ ಭೇಟಿಮಾಡಿ, ಕಂದಾಯ ರಿಮಿಷನ್ ಮಾಡಬೇಕೆಂಬ ಅಂತ ವನ್ನು ಅರಿಕೆಮಾಡುವವರಾಗಿದಾರೆ.

ಒಬ್ಬ ಬಾತ್ಮೀದಾರರಿಂದ—ರಾಜಧಾನಿಯ ಹಳೇ ಅಗ್ರಹಾರದ ವರ್ತಕ ಮಂಡಲಿಯವರು ತಾ. 7 ನೇ ಬುಧವಾರ ರಾತ್ರಿ ಸ್ವದೇಶಸ್ಥರಾದ ವೇ|| ಶಿವಯ್ಯ ಶಾಸ್ತ್ರಿಗಳು ಕರಬಲೀಕೆ ಎಂಬ ಕಥೆಯನ್ನು ಮಾಡಿದರು. ಅಗ್ಗಿ ಸಾವಿರಾರು ಜನರು ಕೂಡಿದ್ದು ಆನಂದವನ್ನು ಹೊಂದಿದರು.

ಹಿಂದಿನ ವಾರ ಚನ್ನಪಟ್ಟಣದಲ್ಲಿ ಜನಾನಾ ಮಿಷನ್ ನವರು ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಪ್ರಾರಂಭಮಾಡಿದರು. ಅದಕ್ಕೆ ಸುಮಾರು 10,000 ರೂಪಾಯಿ ಖರ್ಚಾಗುವುದೆಂದೂ, ಆ ಪೈಕಿ ಮೂರನೇ ಒಂದಂಶವನ್ನು ಸರ್ಕಾರದವರು ಕೊಡುವುದಾಗಿ ಒಪ್ಪಿದಾರೆಂದೂ ಕೇಳುತ್ತೇವೆ.

ಚನ್ನಪಟ್ಟಣ, ಕೊಲೀಸ್‌ಪೇಟೆ ಫಾರೆಸ್ಟ್ ಬಾಬಿನ 170 ಚಿಲ್ಲರೆ ರೂಪಾಯಿ ಹುಟ್ಟುವಳಿಯನ್ನು ಎಚ್. ರಾಮಚಂದ್ರರಾಯನೆಂಬ ಫಾರೆಸ್ಟ್ ನೌಕರನು ತಿಂದುಹಾಕಿದನೆಂದು ಹೊಳದ್ದಮೇ ಬಂದು ವಿಚಾರಣೆ ಆಗಿ ಕಳೆದ ವಾರ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ 269 ರೂಪಾಯಿ ಜುಲ್ಮಾನೆವಿಧಿಸಿದರು.

ಈ ಸಲ ಮೇಲ್ಕೋಟೆ ವೈರಮುಡಿ ಉತ್ಸವಕ್ಕೆ ಹೋಗಿದ್ದ ಸಾವಿರಾರು ವೈಶ್ಯ ಪ್ರಜೆಗಳಿಗೂ ಇತರರಿಗೂ ತುಮಕೂರಿನ ಸಾಹುಕಾರ್ ಮ|| ಕೋದಂಡರಾಮಶೆಟ್ಟರು ಪ್ರತಿದಿನವೂ ತುಂಬಾ ಆದರದಿಂದ ಭೋಜನಾದಿಗಳನ್ನು ಮಾಡಿಸಿ ಸಂತೋಷಪಡಿಸಿದರೆಂದು ತಿಳಿದು ಬಂದಿದೆ. ಜಾತ್ರೆ ಮತ್ತು ಉತ್ಸವ ಕಾಲಗಳಲ್ಲಿ ಪುಣ್ಯಕಾರ್ಯಗಳನ್ನು ಐಶ್ವರ್ಯವಂತರು ಮಾಡುವುದು ಸ್ತೋತ್ರಾರ್ಹವಾಗಿದೆ.

ಒಬ್ಬ ಬಾತ್ಮೀದಾರರು ಬರೆಯುವುದು.—ಶಿವಮೊಗ್ಗ ತಾ|| ಆಯನೂರ್ ಸ್ಕೂಲಿನಲ್ಲಿ ಮ|| ಪಾಂಡುರಂಗಪ್ಪ ಬೆಂಕಿಪುರ್ ಇವರು ಸಿಗರೇಟ್ ಚುಟ್ಟಾ ವಗೈರೆ ಸೇದಕೂಡದೆಂಬದಾಗಿ ಒಂದು ಉಪನ್ಯಾಸಮಾಡಿದರು. ಅದು ಬಹಳ ತೃಪ್ತಿಕರವಾಗಿತ್ತು. ಅನಂತರ ಹೆಡ್ ಮಾಸ್ಟರು ಸಭಿಕರೊಡನೆ ಶ್ರೀ ವೇಣು ಗೋಪಾಲಸ್ವಾಮಿ ಗೋಪುರದ ಮರಳನ್ನು ಹೊರಿಸಿ ದೈವಕಾರ್ಯಮಾಡಿದರು. ಆಗ ಗ್ರಾಮದ ಮುಖಂಡರೆಲ್ಲಾ ಸೇರಿದ್ದರು.

ರಾಜಧಾನಿಯಲ್ಲಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಕಸಬುಗಳನ್ನು ಕಲಿಯುತ್ತಿರುವ ವಿದ್ಯಾರ್ಥಿಗಳು ಮಾಡಿರುವಂಥಾ ವಸ್ತು ವಿಶೇಷಗಳನ್ನು ಸೂಪರಿಂಟೆಂಡೆಂಟರವರು ಆ ಕಟ್ಟಡದೊಳಗೆ ಪ್ರದರ್ಶನವನಿಡಿಸಿ, ವಿದ್ಯಾರ್ಥಿಗಳ ತಂದೆತಾಯಿಗಳೂ ಕಸಬುಗಳಲ್ಲಿ ಪ್ರೀತಿಯುಳ್ಳವರೂ ಹೋಗಿ ನೋಡಬಹುದೆಂದು ತಿಳಿಸಿರುತ್ತಾರೆ. ಮಿ|| ಚಾಟರ್ಟನ್ ರವರೂ, ಚೀಫ್ ಇಂಜನಿಯರವರೂ, ರಾವ್ ಬಹದೂರ್ ರಾಮರಾಯರವರೂ, ರೈಲ್ವೆ ಇಂಜನಿಯರವರೂ ಈ ದಿನ ರಾಜಧಾನಿಗೆ ಬಂದು ಮೇಲ್ಕಂಡ ಕಸಬುದಾರಿ ಪಾಠಶಾಲೆಯನ್ನು ಪರಾಂಬರಿಸುವರೆಂದು ಕೇಳಿದೆವು.

ಈಜಿಪ್ಟಿಗೆ ಹೋಗಿ ಅಲ್ಲಿ ಗಾಯಪಟ್ಟಿರುವ ನಮ್ಮ ಹಿಂದುಸ್ಥಾನದ ಸೈನಿಕರಿಗೆ ಬಾಕಿ ಬಟ್ಟೆಯಲ್ಲಿ ಪಟ್ಟೆಗಳನ್ನು ಪುಣ್ಯಾರ್ಥವಾಗಿ ಮಾಡಿಸಿಕೊಡಬಹುದೆಂದು ಮದರಾಸ್ ಗವರ್ನರವರ ಪತ್ನಿಯಾದ ಲೇಡಿ ಪೆಂಟ್ಲೆಂಡ್‌ರವರು ಪ್ರಚುರಪಡಿಸಿದ್ದನ್ನು ನೋಡಿ ರಾಜಧಾನಿಯಲ್ಲಿರುವ ಮಿಷನ್ ಗರಲ್ಸ್ ಸ್ಕೂಲುಗಳ ಲೇಡಿ ಸೂಪರಿಂಟೆಂಡೆಂಟರಾದ ಮಿಸ್ ಸಿ. ಇ. ಪಾರ್ಕರ್‌ರವರು ಅದಕ್ಕಾಗಿ ಮೈಸೂರಿನಲ್ಲಿ ಮಹಿಳೆಯರಿಂದ ಚಂದಾ ವಸೂಲ್ಮಾಡುತ್ತಲೂ, ಪಟ್ಟೆಗಳನ್ನು ತಯಾರುಮಾಡಿಸುತ್ತಲೂ ಇದಾರೆ. ಈ ವರೆಗೆ ಅವರಿಗೆ ತಲಪಿರುವ ಚಂದಾ ಹಣಗಳ ವಿವರವೇನೆಂದರೆ.—ಲಕ್ಷ್ಮೀಪುರದಲ್ಲಿ ಮಿ|| ರಾಜದ ಎ. ವಿ. ಲಿಂಗರಾಜೇಅರಸ್, ಎಮ್. ಎಸ್. ಸುಬ್ಬರಾವ್, ತಲಾ ರೂ. 10, ಎ. ಶ್ರೀನಿವಾಸರಾಘವಾಚಾರ್ ರೂ. 2-8-0 ; ಎಸ್. ವೆಂಕಟಲಕ್ಷ್ಮಯ್ಯ, ಪಿ. ರಾಮರಾವ್, ರಂಗಣ್ಣ, ತಲಾ ರೂ. 2; ಮಿಸ್ ಮೂರ್, ಮೈಲಾರ್ರಾವ್, ಸಿ. ನಾರಾಯಣರಾವ್, ಸಿ. ಆರ್. ನಾರಾಯಣರಾವ್, ಶ್ರೀ ರುಕ್ಮಿಣಮ್ಮ, ಎ ಮಹದೇವಶಾಸ್ತ್ರಿ, ಶ್ರೀರಂಗಮ್ಮ, ಬಿ. ಸುಬ್ಬಣ್ಣ, ತಲಾ ರೂ. 1-4-0; ಎ ಕೃಷ್ಣರಾವ್, ಸಿ. ನರಸಿಂಹಯ್ಯಂಗಾರ್, ತಲಾ ರೂ. 1-0-0; ವಿಕ್ಟೋರಿಯಾ ಗರಲ್ಸ್ ಸ್ಕೂಲಿನಲ್ಲಿ ಸಾವಿತ್ರಿಬಾಯಿ, ಯಲ್ಲಮ್ಮ, ಪುಟ್ಟಮ್ಮ, ನರಸಮ್ಮ, ನಾಗಮ್ಮ, ತಲಾ ರೂ 1-4-0 ; ಬ್ರಹ್ಮರಾಜಮ್ಮ, ಕಾಯಕ್ಕ, ತಲಾ ರೂ. 1 ; ಚಿಲ್ಲರೆಯಾಗಿ ಸೂಲವಾಗಿರುವುದು ರೂ. 4-10-0 ; ಜುಮ್ಲಾ ರೂ. 53-6-0. ಇನ್ನೂ ಅನೇಕರು ಚಂದಾ ಕೊಡುವಂತೆ ವಾಗ್ದಾನಮಾಡಿದಾರೆ. ಮೈಸೂರಿನ ಅಬ್ದುಲ್ ಘಕೂರ್ ಸೇಟರವರ ಷಾಪಿನಲ್ಲಿ 30 ಬಾಕಿ ಪಟ್ಟೆಗಳು ತಯಾರಾಗಿ ಈ ವಾರ ರವಾನೆಯಾಗಲಿರುತ್ತವೆ. ಈ ಷಾಪಿನವರು ಕೂಡ ಈ ಪುಣ್ಯ ಕಾರ್ಯಕ್ಕೆ ಸಹಾಯವಾದಂತಾಗಲೆಂದು ಹೇಳಿ, ಪಟ್ಟೆಗಳನ್ನು ಅರ್ಧ ಬೆಲೆಗೆ ಮಾಡಿಕೊಡಲು ಒಪ್ಪಿಕೊಂಡಿದಾರೆ.

ಲೋಕಲ್ ಬೋರ್ಡ್ ಮತ್ತು ಮ್ಯುನಿಸಿಪಲ್ ಕಾನ್ಫರೆನ್ಸು.

ಚರ್ಚಿಸ ಬಹುದಾದ ವಿಷಯಗಳು.

ಮೇಲ್ಕಂಡ ಮಹಾ ಸಭೆಯು ಈ ವರುಷ ನಮ್ಮ ಮಹಾರಾಜರವರ ವರ್ಧಂತಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವಂತೆ ಏರ್ಪಾಡಾಗಿರುತ್ತದೆ. ಆ ಸಭೆಯಲ್ಲಿ ಮೆಂಬರುಗಳು ಚರ್ಚಿಸುವುದಕ್ಕಾಗಿ ಇಟ್ಟುಕೊಂಡಿರುವ ವಿಷಯಗಳನ್ನು ರಾಜಧಾನಿಯ ಮೆಂಬರುಗಳು ಇತ್ಯರ್ಥ ಮಾಡಿರುತ್ತಾರೆ. ಅವು ಯಾವವೆಂದರೆ—

(1) ಲೋಕಲ್ ಬೋರ್ಡುಗಳ (ಅಡ್ಮಿನಿಸ್ಟ್ರೇಷನ್) ಆಡಳಿತಗಳನ್ನು ಕ್ರಮಪಡಿಸುವದಕ್ಕೆ ಸಲಹೆಗಳು ಮತ್ತು ಇವುಗಳ ಆದಾಯವನ್ನು ಹೆಚ್ಚಿಸುವುದಕ್ಕೆ ಸಲಹೆಗಳು. (2) ಟೌನ್ ಪ್ಲಾನಿಂಗ್ ಮತ್ತು ಟೌನ್ ಬಡಾವಣೆಗಳು (3) ಸ್ಯಾನಿಟರಿ ವಿಷಯಗಳು. (4) ನೀರಿನ ಸರಬರಾಜು ಮತ್ತು ರಕ್ಷಣೆ (5) ಕನ್ಸರ್ವೆನ್ಸಿ ವಿಷಯಗಳು. (6) ಹೆಚ್ಚು ಜನಗಳು ಮನೆಗಳಲ್ಲಿ ಸೇರುವುದನ್ನು ತಪ್ಪಿಸೋಣ; ಇದರ ನಿವಾರಣೆ ಮತ್ತು ಇದರಿಂದ ಮನೆ ಇಲ್ಲದೆ ಹೋಗುವವರಿಗೆ ಮನೆಗಳನ್ನು ಮಾಡೋಣ. (7) ಮಾರ್ಗಗಳನ್ನು ಸರಿಪಡಿಸುವುದೂ; ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ರೈಲ್ವೆಗಳನ್ನೂ ಟ್ರಾಂವೆಗಳನ್ನೂ ಹಾಕುವುದೂ. (8) ಜನಗಳ ಸೌಖ್ಯಕ್ಕೂ, ಅನುಕೂಲಕ್ಕೂ, ನೆಮ್ಮದಿಗೂ ಅನುಕೂಲವಾಗುವ ಇತರ ವಿಷಯಗಳು.

ಒಂದು ಪೂರ್ವದ ಯುದ್ಧ ಸಮ್ಮೇಳನ ಪದ್ಧತಿ.

ನಂಜನಗೂಡಿಗೆ 6 ಮೈಲಿ ದೂರದಲ್ಲಿರುವ ಕೆಂಬಲ್ ಎಂಬ ಪೂರ್ವದ ಪಾಳ್ಯಗಾರರ ಸಂಸ್ಥಾನವು ಇರುತ್ತದೆ. ಅದು ಈಗ ಕೇವಲ ಶಿಥಿಲವಾಗಿ ನಿರ್ನಾಮವನ್ನು ಹೊಂದಿರುತ್ತದೆ. ಅಲ್ಲಿ ಈಗ ಕೇವಲ ಪ್ರತ್ಯಕ್ಷದಲ್ಲಿ ಒಂದು ಮಣ್ಣಿನ ಕೋಟೆ ಇರುತ್ತದೆ. ಇದು ಮೈಸೂರು ರಾಜಮನೆತನದವರಿಗೆ ಮುಂಬಳಿಯಾಗಿ ಕೊಟ್ಟಿದ್ದಂತೆ ತಿಳಿಯಬರುತ್ತದೆ. ಆ ಕಾಲದಲ್ಲಿ ವೀರಣ್ಣನೆಂಬುವನು ಕೆಂಬಲನ್ನು ಹಲ್ಲಾ ಮಾಡಿದನೆಂಬುದಾಗಿ ಪ್ರತೀತಿ ಇರುತ್ತದೆ. ಆಗ ಕೆಂಬಲನ್ನು ಹಲ್ಲಾ ಮಾಡಿದ ವೀರಣ್ಣನೆಂಬ ಪಾಳ್ಯಗಾರನ ಪದ್ಧತಿಯೇ ಈಗಲೂ ಅನುಸರಿಸಲ್ಪಟ್ಟು ಅವನ ವಿಗ್ರಹವನ್ನು ಕೋಟೆಯ ತಳಪಾಯಿಯಲ್ಲಿ ನಿಲ್ಲಿಸಿ ಅದನ್ನು ಪೂಜಿಸುತ್ತಾರೆ. ಹೀಗೆ ಕೆಂಬಲ್ ಗ್ರಾಮದ ಸಮೀಪ ಗ್ರಾಮಗಳಾದ ಬಿದರಗೂಡು, ದೂರ ಇವೇ ಮೊದಲಾದ ಹತ್ತಾರು ಗ್ರಾಮಗಳ ಪ್ರಜೆಗಳು ಕೂಡಿ ಈ ಸಮ್ಮೇಳನವನ್ನು ಕೂಡಿಸಿ ಈಟಿ, ಭರ್ಜಿ, ದೊಣ್ಣೆ, ಹೊಳೆಯಲ್ಲಿ ಬೆಳೆಯತಕ್ಕ ಗಾಜನಗೆಡ್ಡೆ, ಚಲ್ಲಿ ಇವುಗಳಿಂದ ಸಮೇತರಾದ ಕೂಟಕರನ್ನು ಕೂಡಿಸಿಕೊಂಡು ಜಾತ್ರೆ ದಿವಸ ಮನೆಗೆ ಒಬ್ಬ ಒಬ್ಬನು ಹಾಜರ್ ಆಗುತ್ತಾರೆ. ಕೂಟವೆಲ್ಲಾ ಸೇರಿದೊಡನೆಯೇ ಬಿದರಗೂಡಿನವನನ್ನು ರಾಜನನ್ನಾಗಿಯೂ ದೂರದ ಗ್ರಾಮದವನೊಬ್ಬನನ್ನು ಮಂತ್ರಿಯನ್ನಾಗಿಯೂ ಮಾಡಿಕೊಂಡು ಹೊಳೆಗೆ ಮರ್ಯಾದೆಗಳೊಡನೆ ಕುದುರೆಯ ಮೇಲೆ ಸವಾರಿ ಮಾಡಿಸಿಕೊಂಡು ಹೋಗಿ ಹೊಳೆಯಲ್ಲಿ ಎಲ್ಲರೂ ನೀರು ಮುಳುಗಿ ಆಯುಧಸಮೇತರಾಗಿ ದೊರೆ, ಮಂತ್ರಿ ಸಮೇತರಾಗಿ ಕೆಂಬಲ್ ಸಮೀಪದಲ್ಲಿರುವ ಒಂದು ಎತ್ತರವಾದ ದಿಣ್ಣೆಯ ಮೇಲೆ ಯುದ್ಧಕ್ಕೆ ಶುರುಮಾಡಿ ಅಲ್ಲಿಂದ ಒಬ್ಬರಿಗೊಬ್ಬರು ಹೊಡೆದಾಡುತ್ತ ಕೆಂಬಲ್ಲಿನ ಕೋಟೆಯನ್ನು ಕೆಲವು ಪಕ್ಷದವರೂ, ಮತ್ತೆ ಕೆಲವರು ಕೆಳಗೂ ನಿಂತುಕೊಂಡು ಮೇಲ್ಕಂಡ ಸಾಧನಗಳಿಂದ ಒಂದು ಘಂಟೆ ಕಾಲ ಅವಿಚ್ಛಿನ್ನವಾಗಿ ಒಬ್ಬರಿಗೊಬ್ಬರು ಯುದ್ಧ ಮಾಡುತ್ತಾರೆಂದೂ, ಇದು ಮೂರು ವರ್ಷಕ್ಕೊಂದಾವರ್ತಿ ಪೂರ್ವದಿಂದ ನಡೆದುಕೊಂಡು ಬರುತ್ತಾ ಇದೆಯೆಂದು ತಿಳಿಯಬರುತ್ತದೆ. ಆದರೆ ಈ ವರ್ಷ ಸರ್ಕಾರದವರು ಪ್ರಾಣಹಾನಿಯಾಗದಂತೆ ನೋಡಿಕೊಳ್ಳುವದಕ್ಕೆ ಪೋಲೀಸು ಜಮೇದಾರ್ರನ್ನು ಸರಿಯಾದ ಕುಮ್ಮಕ್ಕಿನಿಂದ ಕಳಿಸಿಕೊಟ್ಟಿದ್ದರು. ಗ್ರಾಮಸ್ಥರು ಸರಿಯಾದ ಮುಚ್ಚಳಿಕೆಯನ್ನು ಕೊಡದೆ ಹಿಂಜರಿದರು. ಈ ಜಾತ್ರೆಗೆ ಆ ದಿವಸ ಮುನ್ನೂರು ಜನ ದೊಣ್ಣೆಯವರೂ ಇತರ ಆಯುಧ ಸಾಮಗ್ರಿಯನ್ನು ಉಂಟಾಗಿದ್ದವರೂ ವಿಶೇಷವಾಗಿ ಬಂದಿದ್ದರು. ಅದಕ್ಕೋಸ್ಕರ ಆ ದಿವಸ ಜಾತ್ರೆ ನಡೆಯದಂತೆ ತಡೆಮಾಡಿಬಿಟ್ಟರು. ಇಂಥಾ ನಾಗರಿಕ ಕಾಲದಲ್ಲೂ ಇಂಥಾ ಮೂಢ ಆಚರಣೆಯನ್ನು ಜನಗಳು ಆಚರಿಸಿ ಪ್ರಾಣಹಾನಿಗೆ ಬಲಿಯಾಗುವುದು ಯಾವ ಧರ್ಮ? ಆದ್ದರಿಂದ ಸರ್ಕಾರದವರು ಇದನ್ನು ನಿಲ್ಲಿಸಿದ್ದು ಬಹು ಉತ್ತಮವಾಯಿತು. ಹಾಗಿಲ್ಲದ ಪಕ್ಷದಲ್ಲಿ ಬಹು ಜನ ಪ್ರಾಣಹಾನಿಗೆ ತುತ್ತಾಗುತ್ತಿದ್ದರೆಂಬುದು ಆ ದಿವಸದ ವಿಚಿತ್ರ ಯುದ್ಧ ಸಮ್ಮೇಳನ ಸಾಮಗ್ರಿಯ ವೀರಾವೇಶದಿಂದ ನನಗೆ ಗೊತ್ತಾಗುತ್ತದೆ.

ಕೆ. ಯಸ್.

ಸಂಪದಭ್ಯುದಯ ವಿಚಾರಗಳು.

ಈ ತಿಂಗಳು 17 ನೇ ತಾ. ಮೈಸೂರು ಡೆಪ್ಯುಟಿ ಕಮಿಷನರ ಆಫೀಸಿನಲ್ಲಿ ನಮ್ಮ ದೇಶದ ವ್ಯವಸಾಯ, ಕೈಗಾರಿಕೆಗಳು, ವ್ಯಾಪಾರ, ವಿದ್ಯಾಭ್ಯಾಸ ಇವುಗಳ ವಿಷಯದಲ್ಲಿ ಇದುವರಿಗೂ ಏನು ಕೆಲಸಗಳು ನಡೆದಿವೆಯೋ ಮುಂದೆ ಏನು ಮಾಡಲ್ಪಡುತ್ತದೆಯೋ ಅದನ್ನು ಪರ್ಯಾಲೋಚಿಸಿ ನಿಶ್ಚಯಿಸುವದಕ್ಕೆ ಒಂದು ಸಭೆಯು ನಡೆಯುವುದು. ಆದಕ್ಕೆ ಈ ರಾಜಧಾನಿಯ ಮಹಾಜನಗಳಲ್ಲಿ ಮುಖಂಡರಾದವರೆಲ್ಲಾ ಕರೆಯಲ್ಪಡುವರು. ಸದರಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಪರಿಶೀಲಿಸಿ ಗೊತ್ತುಮಾಡುವುದಕ್ಕೆ ಮೈಸೂರು ಡಿಸ್ಟ್ರಿಕ್ಟ್ ಕಮಿಟಿಯ ಮೆಂಬರುಗಳು ಈ ತಿಂಗಳು 3 ನೇ ತಾರೀಖಿನಲ್ಲಿ ಸೇರಿ ಪ್ರೋಗ್ರಾಮನ್ನು ತಯಾರ್ ಮಾಡಿದರು. 1914 ನೇ ಏಪ್ರಿಲ್ ತಿಂಗಳ ಲಾಗಾಯಿತು ಈ ಏಪ್ರಿಲ್ ತಿಂಗಳವರೆಗೆ ಕೈಗಾರಿಕೆ ಮತ್ತು ವ್ಯಾಪಾರದ ವಿಷಯದಲ್ಲಿ ಎಷ್ಟು ಅಭಿವೃದ್ಧಿಯಾಗಿರುವುದು? ಮೈಸೂರು ಟವನ್ನಿನಲ್ಲಿಯೂ, ಡಿಸ್ಟ್ರಿಕ್ಟಿನಲ್ಲಿಯೂ ಯಾವ ಕೈಗಾರಿಕೆಗಳು ವಿಶೇಷವಾಗಿ ನಡೆಯುತ್ತಲಿರುವವು? ದೊಡ್ಡ ಕೈಗಾರಿಕೆಗಳಿಗೂ, ಗ್ರಾಮದ ಕೈಗಾರಿಕೆಗಳಿಗೂ ಯಾವ ಉತ್ತೇಜನವು ಕೊಡಲ್ಪಟ್ಟಿರುವುದು? ಈ ಯುದ್ಧದಿಂದ ಈ ಡಿಸ್ಟ್ರಿಕ್ಟಿನ ವ್ಯಾಪಾರವ್ಯಾವುದಾದರೂ ಹೀನಸ್ಥಿತಿಗೆ ಬಂದಿರುವುದೇ? ಹಾಗಿದ್ದರೆ ಯಾವುದು ಯಾವ ರೀತಿಯಲ್ಲಿ ಹೀನಸ್ಥಿತಿಗೆ ಬಂದಿದೆ? ಪಟ್ಟಣದ ಕೈಗಾರಿಕೆ ಯಾವುದಾದರೂ ಹೀನಸ್ಥಿತಿಗೆ ಬಂದಿರುವುದೇ? ಹಾಗೆ ಬಂದಿದ್ದರೆ ಅದು ಯಾವ ರೀತಿಯಲ್ಲಿ ಒಂದಿರುವುದು? ಯಾವುದಾದರೂ ಕೈಗಾರಿಕೆಗೆ ಸರ್ಕಾರದವರ ಪ್ರೋತ್ಸಾಹವು ಬೇಕೇ? ಹಾಗಿದ್ದರೆ ಯಾವ ಕೈಗಾರಿಕೆಗೆ ಎಂಥಾ ಪ್ರೋತ್ಸಾಹವು ಬೇಕು? ಈ ಡಿಸ್ಟ್ರಿಕ್ಟಿನ ನೇಯಿಗೆ ಕೆಲಸಕ್ಕೆ ಯಾವ ವಿಧವಾದ ಉತ್ತೇಜನವು ಕೊಡಲ್ಪಡಬೇಕು? ಯಾವ ಕೈಗಾರಿಕೆಗಳು ಎಲ್ಲಿ ಸ್ಥಾಪಿಸಲ್ಪಡಬೇಕೋ ಅಂಥಾವುಗಳಿಗೆ ಸರ್ಕಾರದವರಿಂದ ಎಂಥಾ ಸಹಾಯವಾಗಬೇಕು? ಎಣ್ಣೆಯ ತಯಾರಿ ಯಂತ್ರಗಳೂ, ಕಬ್ಬಿನ ರಸವನ್ನು ತೆಗೆಯತಕ್ಕ ಯಂತ್ರಗಳೂ, ಹಿಟ್ಟು ಮಾಡತಕ್ಕ ಯಂತ್ರಗಳೂ, ಮೂಳೆ ಪುಡಿಮಾಡತಕ್ಕ ಯಂತ್ರಗಳೂ, ಗರಗಸದ ಯಂತ್ರಗಳೂ, ಜಮಖಾನೆಗಳನ್ನು ಮಾಡುವುದೂ, ಜೋಡು ಮೋಜಾಗಳನ್ನು ಮಾಡುವುದೂ, ಹೆಂಚನ್ನು ತಯಾರಿಸುವುದೂ, ಗಂಧದಕಡ್ಡಿ ವೊದಲಾದವುಗಳನ್ನು ಮಾಡುವುದೂ, ಲೋಹದ ಕೆಲಸಗಳೂ ಇವುಗಳಲ್ಲಿ ಯಾವುದನ್ನು ಎಲ್ಲಿ ಮಾಡಿದರೆ ಪ್ರಯೋಜನವಾಗುವುದು? ಜನಗಳಿಗೆ ಉದ್ಯೋಗವು ದೊರೆಯಬೇಕಾದರೆ ಯಾವ ಉದ್ಯೋಗಗಳನ್ನು ಎಲ್ಲಿ ಕಲ್ಪಿಸಬೇಕು? ವಿದ್ಯುಚ್ಛಕ್ತಿಯಿಂದ ಯಾವ ಚಿಲ್ಲರೇ ಕೆಲಸಗಳನ್ನು ಮಾಡಿ ಜನಗಳು ಅದರಿಂದ ಆತ್ಮಾವಲಂಬಿಗಳಾಗುವಂತೆ ಮಾಡಲ್ಪಡಬಹುದು? ಮೈಸೂರಿನಲ್ಲಿ ಅಕ್ಕಿಯ ಯಂತ್ರಗಳನ್ನು ಹೆಚ್ಚಾಗಿಡುವುದರಿಂದ ಪ್ರಯೋಜನವುಂಟೇ? ಸಂಘಗಳನ್ನು ಮಾಡಿ, ಅದರ ಮೂಲಕ ವರ್ತಕರು ಹೆಚ್ಚು ಕೆಲಸವನ್ನು ಮಾಡಿ, ಹೆಚ್ಚು ಲಾಭವನ್ನು ಸಂಪಾದಿಸುವಂತೆ ಮಾಡುವ ವಿಷಯದಲ್ಲಿ ಯಾತಕ್ಕೆ ಆಲಸ್ಯವು ಮಾಡಲ್ಪಡುತ್ತಲಿದೆ? ಪ್ರತಿ ವಾರದಲ್ಲಿಯೂ ಮೈಸೂರಿನ ಆಮದು ರಫ್ತು ವಿಷಯದಲ್ಲಿ ಲೆಕ್ಕವನ್ನು ಗೊತ್ತುಮಾಡುವುದು ಪ್ರಯೋಜನವಲ್ಲವೇ? ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಈಗ ಕಲಿಸತಕ್ಕ ಕಸಬುಗಳ ಜತೆಗೆ ಇನ್ನೂ ಯಾವುದನ್ನು ಕಲಿಸಬಹುದು? ಇವೇ ಮೊದಲಾದ ವಿಷಯಗಳಲ್ಲಿ ಜನಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ದಿವಾನ್ ಸಾಹೇಬರವರು ಒಂದು ಮೀಟಿಂಗನ್ನು ಮಾಡಿಸಿ, ತಾವೇ ಅಧ್ಯಕ್ಷತೆಯನ್ನು ವಹಿಸಿ, ಜನಗಳ ಅಭಿಪ್ರಾಯವನ್ನು ತಿಳಿದುಕೊಂಡು ಅವುಗಳಲ್ಲಿ ಯಾವ ಕೆಲಸಗಳಿಂದ ಪ್ರಜೆಗಳಿಗೆ ಅನುಕೂಲವೋ ಅದನ್ನು ಮಾಡಬೇಕೆಂದು ಇರುತ್ತಾರೆ. ಸದರಿ ಮೀಟಿಂಗಿಗೆ ಕರೆಯಲ್ಪಡುವರು ತಮ್ಮ ಅಭಿಪ್ರಾಯಗಳನ್ನು ಖುದ್ದಾಗಿ ದಿವಾನ್ ಸಾಹೇಬರವರಿಗೆ ತಿಳಿಸಬಹುದು.—ಸಾ

ಶ್ರೀಚಾರುಕೀರ್ತಿಪಂಡಿತಾಚಾರ್ಯರು.

ಶ್ರವಣಬೆಳಗೊಳದ ಜೈನ ಮಠಾಧಿಪತಿಗಳಾದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರೆಂಬ ಈ ಮಹನೀಯರು ಮದ್ರಾಸ್ ಪ್ರಾವಿನ್ಸಿನಲ್ಲಿ ಚಿತ್ತೂರು ಜಿಲ್ಲಾ ಪೋಳೂರು ತಾಲ್ಲೂಕಿಗೆ ಸೇರಿದ ತಿರುಮಲೆ ಎಂಬ ಕ್ಷೇತ್ರದಲ್ಲಿ ಸೌಮ್ಯ ಸಂವತ್ಸರದಲ್ಲಿ ಜನಿಸಿದರು. ಇವರ ಗೃಹಸ್ಥನಾಮವು ಶಾಂತರಾಜಶಾಸ್ತ್ರಿಗಳೆಂದು ಇತ್ತು. ಇವರು ಬಾಲ್ಯದಲ್ಲಿ ತಮ್ಮ ಅಣ್ಣಂದಿರಾದ ಶಿವಾಪಣಿಶಾಸ್ತ್ರಿಗಳಿಂದಲೂ, ವಿಖ್ಯಾತರಾದ ಬ್ರಹ್ಮಸೂರಿಶಾಸ್ತ್ರಿಗಳಿಂದಲೂ ಜೈನಾಗಮ ಜೈನಸಾಹಿತ್ಯ ಮೊದಲಾದ ಸಮಸ್ತ ವಿದ್ಯೆಗಳನ್ನೂ ಅಭ್ಯಾಸ ಮಾಡುತ್ತಿದ್ದರು. ಇವರ ವಿದ್ಯಾವಿನಯ ಮುಂತಾದ ಅನೇಕ ಸುಗುಣಗಳನ್ನು ನೋಡಿ ಇವರ ಪೂರ್ವಿಕರೂ ಇಲ್ಲಿನ ಶ್ರೀ ಮಠಾಧಿಪತಿಗಳೂ ಆದ ಸ್ವಾಮಿಗಳವರು ತಮಗೆ ಮರಣವು ಸಮೀಪಿಸುತ್ತೆಂದು ತಿಳಿದು ಇವರಿಗೆ ಜಿನದೀಕ್ಷೆಯನ್ನು ಕೊಟ್ಟು ಶ್ರೀಮಠದ ಅಧಿಪತ್ಯವನ್ನು ವಹಿಸಿದರು. ಇದು ಕಳೆದ ಬಹುಧಾನ್ಯ ಸಂವತ್ಸರದ ಮಾರ್ಗಶೀರ್ಷ ಶುದ್ಧ 12 ದಿವಸ ಜರುಗಿತು. ಇವರ ಮುಖ್ಯವಾದ ಸಿಂಹಾಸನವು ಜಗತ್ಪ್ರಸಿದ್ಧವಾದ ಶ್ರೀ ಗೋಮಟೇಶ್ವರ ಸ್ವಾಮಿಯವರ ಅಪ್ರತಿಮವಾದ ಪ್ರತಿಮೆಯನ್ನುಳ್ಳ ಶ್ರವಣಬೆಳಗುಳದಲ್ಲಿ ಇರುವದು. ಈ ಶ್ರವಣಬೆಳಗುಳದಲ್ಲಿ ವಿಂಧ್ಯಗಿರಿ ಚಂದ್ರಗಿರಿಗಳೆಂಬ ಎರಡು ಪರ್ವತಗಳಿರುವವು. ಈ ಕ್ಷೇತ್ರವು ದಕ್ಷಿಣ ದೇಶದಲ್ಲಿ ಜೈನರಿಗೆ ಮುಖ್ಯವಾದ ತೀರ್ಥಸ್ಥಾನವಾಗಿರುವದು. ಈ ಶ್ರವಣಬೆಳಗುಳದಲ್ಲಿರುವ ಮೂವತ್ತೆರಡು ದೇವಸ್ಥಾನಗಳ ಆಧಿಪತ್ಯವನ್ನು ಗವರ್ನ್‌ಮೆಂಟಿನವರು ಈ ಸ್ವಾಮಿಗಳಿಗೆ ವಹಿಸಿರುವರು. ಈ ಕ್ಷೇತ್ರವು ಸರ್ವಸಾಮಾನ್ಯವಾಗಿ ಇದಕ್ಕೆ ಸೇರಿರುವ ಗ್ರಾಮಗಳೊಡನೆ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರಿಂದ ಬಿಡಲ್ಪಟ್ಟಿರುವದು. ಇವರ ಕಾಲದಲ್ಲಿ ಶ್ರೀ ಗೋಮಟೇಶ್ವರ ಸ್ವಾಮಿಯವರ ಮಹಾಭಿಷೇಕವೆಂಬ ದೊಡ್ಡ ಮಹೋತ್ಸವವು ಎರಡು ಮೂರು ವೇಳೆ ಬಹು ಧನದ ವ್ಯಯದ ಮೂಲಕ ಬಹಳ ವಿಜೃಂಭಣೆಯಿಂದ ನಡೆಯಿತು. ಇವರು ಜೈನಹಿತೈಷಿಣೀ ಕರ್ಣಾಟಕ ಪ್ರಾಂತಿಕ ನಿಯಮಿತವಾದ ಅಧ್ಯಕ್ಷರಾಗಿದ್ದರು. ಇವರು ಸಂಸ್ಕೃತ ವಿದ್ಯೆಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಪ್ರತ್ಯೇಕ ವಿದ್ಯಾರ್ಥಿನಿಲಯ ಒಂದನ್ನು ಬಹುಧನ ವ್ಯಯದಿಂದ ಕಟ್ಟಿಸುತ್ತಿದ್ದರು. ಹಿಂದೆ ಯಾತ್ರಿಕರ ಸೌಕರ್ಯಕ್ಕೋಸ್ಕರ ವಿಶಾಲವೂ ರಮಣೀಯವೂ ಆದ ಒಂದು ಧರ್ಮಶಾಲೆಯನ್ನು ಕಟ್ಟಿಸಿರುವರು. ಇವರು ಈ ದೊಡ್ಡ ಪ್ರಭುತ್ವವನ್ನು ಬಹಳ ಉದಾರಭಾವದಿಂದಲೂ ನಿಸ್ಪೃಹತೆಯಿಂದಲೂ ಜರುಗಿಸುತ್ತಿದ್ದರು. ಇವರು ತಮ್ಮ ಶಿಷ್ಯರುಗಳಿಗೆ ಧರ್ಮೋಪದೇಶವನ್ನು ಮಾಡುತ್ತಾ, ಅವರುಗಳ ಭಕ್ತಿ ಗೌರವಗಳಿಗೆ ಪಾತ್ರರಾಗಿದ್ದರು. ನಮ್ಮ ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ ಸವಾರಿಯು ಎರಡು ಮೂರು ವೇಳೆ ಶ್ರೀ ಮಠಕ್ಕೆ ದಯಮಾಡಿಸಿ ಶ್ರೀ ಸ್ವಾಮಿಗಳಲ್ಲಿ ವಿಶೇಷ ಭಕ್ತಿ ಗೌರವಗಳನ್ನು ಪ್ರಕಾಶಪಡಿಸುತ್ತಿದ್ದರು. ಈ ಕ್ಷೇತ್ರಕ್ಕೆ ಆಗಾಗ್ಗೆ ಬರುವ ಬಹು ದೂರದೇಶದ ಯಾತ್ರಿಕರಲ್ಲಿಯೂ ಅಧಿಕಾರಿಗಳಲ್ಲಿಯೂ ವಾತ್ಸಲ್ಯ ಆದರಗಳನ್ನು ಪ್ರಕಾಶಪಡಿಸುತ್ತಿದ್ದರು. ಇಂಥಾ ಮಹನೀಯರು ಒಂದು ವಾರ ಕಾಯಿಲೆಯಿದ್ದು ಇದೇ ಚೈತ್ರ ಶುದ್ಧ 15 ಬುಧವಾರ ರಾತ್ರಿ 7 ಘಂಟೆಯಲ್ಲಿ ಪರಮಾತ್ಮ ಧ್ಯಾನದಿಂದ ಈ ದುಃಖಮಯವಾದ ಕಳೇಬರದಿಂದ ಮುಕ್ತರಾಗಿ ಪರಂಧಾಮವನ್ನು ಹೊಂದಿದರು. ಇವರ ವಿಯೋಗದಿಂದ ಇವರ ಶಿಷ್ಯಮಂಡಲಿಗೆ ಮಾತ್ರವಲ್ಲ, ಈ ಭಾರತವರ್ಷಕ್ಕೇನೇ ಬಹಳ ನಷ್ಟವೂ ವ್ಯಾಕುಲವೂ ಉಂಟಾಗಿರುವದು ಆಶ್ಚರ್ಯವಲ್ಲವು. ಇವರಿಂದ ಇತರರು ಕಲಿಯಬೇಕಾಗಿದ್ದ ಎಷ್ಟೋ ಗುಣಗಳೇ ಇದಕ್ಕೆ ಕಾರಣವಾಗಿರುವದು. ಉತ್ತರಾಧಿಕಾರವನ್ನು ಕುರಿತು ಮರಣಶಾಸನವನ್ನು ಬರಿಸಿಟ್ಟಿರುವರು. ಶೀಘ್ರದಲ್ಲಿಯೇ ಆಶ್ರಯವಾದ ಈ ಗುರುಪೀಠವು ಉತ್ತರಾಧಿಕಾರಿಗಳಿಂದ ಸಮಲಂಕೃತವಾಗಿ ಎಲ್ಲರಿಗೂ ಪೂರ್ವದಂತೆ ಆನಂದ ಉಂಟಾಗಲೆಂದು ಹಾರೈಸುತ್ತೇವೆ.

ದೋರ್ಬಲಿಜಿನದಾಸಶಾಸ್ತ್ರೀ.

ಸಂಪದಭ್ಯುದಯ.

ಧರ್ಮಾಚರಣೆ—ಸತ್ಯತೆ.

ಮಾನವ ಧರ್ಮಗಳಲ್ಲಿ ಸತ್ಯಾಚರಣೆಯೇ ಶ್ರೇಷ್ಠವಾದುದು. ಯಾವ ರಾಜ್ಯವು ಸತ್ಯವಂತರಾದ ಪ್ರಜೆಗಳನ್ನೂ ಅಧಿಕಾರಿಗಳನ್ನೂ ಪಡೆದಿರುತ್ತದೆಯೋ ಆ ರಾಜ್ಯವೇ ಐಶ್ವರ್ಯಕ್ಕೆ ತವರುಮನೆಯಾಗಿರುತ್ತದೆ. ಅಸತ್ಯಕ್ಕೆ ಯಾವಾಗಲೂ ಜಯವಿಲ್ಲ. ಪೂರ್ವದಿಂದ ಸತ್ಯವಂತರೆಂಬ ಹೆಸರನ್ನು ಪಡೆದು ಈಗ ಅಪಕೀರ್ತಿಗೆ ಆಸ್ಪದವಾಗುವುದು ಎಂದಿಗೂ ಸರಿಯಾದುದಲ್ಲ. ಎಂಥಾ ಕಷ್ಟಕಾಲದಲ್ಲಿಯಾದರೂ ಸತ್ಯಕ್ಕೆ ಲೋಪವನ್ನು ತಂದುಕೊಳ್ಳದ ಮಹಾ ಪುರುಷರು ನಮ್ಮ ಚರಿತ್ರೆಯಲ್ಲಿಯೂ ಪುರಾಣಗಳಲ್ಲಿಯೂ ಸಹ ಪ್ರಸಿದ್ಧರಾಗಿ ಪ್ರಕಾಶಿಸುತ್ತಲಿದ್ದಾರೆ. ಈಗಿನ ಪ್ರಸಿದ್ಧವಾದ ರಾಜ್ಯಗಳು ಸತ್ಯಾವಲಂಬನದಿಂದಲೇ ಉಚ್ಛ್ರಾಯ ಸ್ಥಿತಿಯನ್ನು ಹೊಂದಿರುವವು. ಐಶ್ವರ್ಯ ಮತ್ತು ಅಧಿಕಾರಗಳು ಗಾಳಿಯಲ್ಲಿನ ದೀಪದಂತೆ ಕೆಲವು ಕಾಲಗಳಲ್ಲಿ ನಾಶವಾಗುವವು. ಸತ್ಯತೆಯು ಫಲವಾದರೋ ಯಾವಾಗಲೂ ಸ್ಥಿರವಾಗಿರುವುದು. ಆದುದರಿಂದ ಎಂಥಾ ಸುಖಕಾಲದಲ್ಲಾದರೂ ಮದೋನ್ಮತ್ತರಾಗಿ ಸತ್ಯಾಚರಣೆಯನ್ನು ನಿರ್ಲಕ್ಷ್ಯ ಮಾಡಲಾಗದು. ಈಗ ಒಂದೇ ನಾಲ್ಕಾಣೆಗೆ ನೂರು ಸುಳ್ಳು ಸಾಕ್ಷಿಗಳನ್ನು ಹೇಳುವವರು ಅನೇಕರಿರುವರು. ತಮ್ಮ ಭಾದ್ಯಡೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ಬುರುಡೇ ಮಾತುಗಳನ್ನು ಕೊಚ್ಚಿಕೊಳ್ಳುವವರು ಹಲವರಿರುವರು. ಕಲಿತ ನಾಲ್ಕು ಅಕ್ಷರಗಳಲ್ಲೇ ಸುಳ್ಳು ಪತ್ರಗಳನ್ನೂ ತರಲೆ ಅರ್ಜಿಗಳನ್ನೂ ನಿರ್ಮಿಸುವವರು ವಿಶೇಷವಾಗಿರುವರು. ಒಬ್ಬರ ನಂಬಿಕೆ ಒಬ್ಬರಿಗಿಲ್ಲದೆ ಕಷ್ಟಕಾಲಗಳಲ್ಲಿ ಸಹಾಯ ಶೂನ್ಯರಾಗಿ ಸಂಕಟಪಡುವವರು ಅತ್ಯಧಿಕವಾಗಿರುವರು. ಗಂಡ ಹೆಂಡಿರುಗಳಲ್ಲಿಯೂ ತಂದೆಮಕ್ಕಳಲ್ಲಿಯೂ ಸಹ ಮೋಸದ ಇರಾದೆಯು ಅಂಕುರಿಸಿರುವಲ್ಲಿ ಉಳಿದವರುಗಳಲ್ಲಿ ಇನ್ನು ಎಷ್ಟರ ಮಟ್ಟಿಗೆ ಪ್ರಾಮಾಣಿಕತೆ ಇರುವುದೋ ಊಹಿಸುವುದು ಅಸಾಧ್ಯವಾಗಿದೆ. ಇದರಿಂದಲೇ ಅನೇಕ ವ್ಯಾಜ್ಯಗಳು ಹೆಚ್ಚುತ್ತಲಿವೆ. ವ್ಯಾಜ್ಯಗಳನ್ನು ಕೇಳುವವರು ಹೆಚ್ಚಿದ ಹಾಗೆಲ್ಲಾ ವ್ಯಾಜ್ಯಗಳನ್ನು ಮಾಡುವವರೂ ಅಧಿಕವಾಗುತ್ತಾರೆ. ಇದರಿಂದ ವಿಪರೀತ ಅನರ್ಥವುಂಟಾಗಲು ಕಾರಣವಾಗಿರುತ್ತದೆ.

ತಂದೆ ತಾಯಿಗಳು ಸತ್ಯಸಂಧರಾಗಿದ್ದರೆ ಮಕ್ಕಳು ಸತ್ಯವಂತರಾಗುತ್ತಾರೆ. ಉಪಾಧ್ಯಾಯರ ಸತ್ಯತೆಯೇ ವಿದ್ಯಾರ್ಥಿಗಳ ಸತ್ಯಾಚರಣೆಗೆ ಕಾರಣ. ಸರ್ಕಾರದ ಅಧಿಕಾರಿಗಳ ಸತ್ಯಸಂಧತೆಯು ಪ್ರಜೆಗಳನ್ನು ಸತ್ಯವಂತರನ್ನಾಗಿ ಮಾಡಲು ಹೇತುವಾಗಿದೆ. ಅದು ಹೇಗೆಂದರೆ, ಮಕ್ಕಳಿಗೆ ಪ್ರಥಮತಃ ನಡೆನುಡಿಗಳನ್ನು ಕಲಿಸುವವರು ತಂದೆತಾಯಿಗಳು. ಅವರು ಮಕ್ಕಳನ್ನು ಹೆದರಿಸುವದಕ್ಕಾಗಿಯೋ ವಿನೋದಕ್ಕಾಗಿಯೋ ಗುಮ್ಮನ ಕೈಲಿ ಹಿಡಿದುಕೊಡುತ್ತೇವೆ; ನಿನಗೆ ಆಟದ ಸಾಮಾನು ತೆಗೆಸಿಕೊಡುತ್ತೇನೆ ಎಂದು ಮುಂತಾಗಿ ಹೇಳ ತಪ್ಪುವ ಸುಳ್ಳು ಮಾತುಗಳೇ ಮಕ್ಕಳನ್ನು ಕೊನೆಗೆ ಅಸತ್ಯವಂತರನ್ನಾಗಿ ಮಾಡಲು ಕಾರಣವಾಗುತ್ತದೆ. ಉಪಾಧ್ಯಾಯರು ಹೇಳುವ ಸುಳ್ಳುಗಳೇ ವಿದ್ಯಾರ್ಥಿಗಳಲ್ಲಿ ಅಂಕುರಿಸುತ್ತವೆ. ಅಧಿಕಾರಿಗಳು ತಮ್ಮ ಹುಕುಂಗಳಂತೆ ವರ್ತಿಸದೆಯೂ ಬಾಯಿಯಲ್ಲಿ ಆಡಿದಂತೆ ಕಾರ್ಯದಲ್ಲಿ ಮಾಡದೆಯೂ ಇದ್ದರೆ ಪ್ರಜೆಗಳೂ ಅದನ್ನೇ ಅವಲಂಬಿಸುತ್ತಾರೆ. ಹೀಗೆ ನಿರ್ಲಕ್ಷ್ಯವಾಗಿ ಹೇಳುವ ಸಣ್ಣ ಪುಟ್ಟ ಸುಳ್ಳುಗಳೇ ಕೊನೆಗೆ ದೊಡ್ಡ ಸುಳ್ಳುಗಳಿಗೆ ಆಸ್ಪದವಾಗುತ್ತವೆ. ಅಲ್ಲದೆ ಅಸತ್ಯವೆಂಬುದು ಸಾಮಾನ್ಯವಾಗಿ ಹೋಗುತ್ತದೆ. ಸರ್ಕಾರವು ಶಿಕ್ಷಾಧಿಕಾರವನ್ನು ಹೊಂದಿರುವುದರಿಂದ ಗುರುಪದವಾಗಿರುತ್ತದೆ. ಅನೇಕ ಅಧಿಕಾರಿಗಳಿಂದ ಸಕಾರವಾಗಿರುತ್ತದೆ. "ಗುರುವಿನಂತೆ ಶಿಷ್ಯ" ಎಂಬಂತೆ ಅಧಿಕಾರಿಗಳ ನಡತೆಯೇ ಪ್ರಜೆಗಳಿಗೂ ಉಂಟಾಗುತ್ತದೆ. ಸತ್ಯಾಚರಣೆಯು ಯಾವಾಗಲೂ ನಿದರ್ಶನವಾದುದು. ಪಾಪಿಷ್ಠರಾಗುವುದಕ್ಕೆ ಅಸತ್ಯವೇ ಮೂಲಕಾರಣವೆಂಬುದನ್ನು ನಾವು ಮುಖ್ಯವಾಗಿ ತಿಳಿಯಬೇಕು.

ನಾವು ಸತ್ಯವಂತರಾಗಿದ್ದರೆ ನಮ್ಮ ಐಶ್ವರ್ಯಕ್ಕೆ ಚ್ಯುತಿಯೇ ಇರುವುದಿಲ್ಲ; ಸಂಪದಭ್ಯುದಯ ಮೊದಲಾದ ಸಮಾಜಗಳ ಆವಶ್ಯಕತೆಯೂ ಇರುವುದಿಲ್ಲ. ಇಷ್ಟು ಜನ ಪೋಲೀಸಿನವರೂ, ಇಷ್ಟು ಜನ ನ್ಯಾಯಾಧಿಪತಿಗಳೂ, ಇಷ್ಟು ನ್ಯಾಯಸ್ಥಾನಗಳೂ, ಇಷ್ಟು ಅಧಿಕಾರಿಗಳೂ, ಇಷ್ಟು ನೌಕರರುಗಳೂ ಸಹ ಅವಶ್ಯಕವಿರುವುದಿಲ್ಲ. ನಮಗೆ ಯಾವ ಕೊರತೆಗೂ ಆಸ್ಪದವಾಗುವುದಿಲ್ಲ. ಹೆಚ್ಚು ಹಣ ವ್ಯಯವೂ ಆಗುವುದಿಲ್ಲ.

ಈಗ ಸಂಪೂರ್ಣವಾಗಿ ಸತ್ಯ ಲೋಪವಾಗಿರುವುದಿಲ್ಲ. ಹಾಗೆ ಪೂರ್ಣ ಸತ್ಯ ಲೋಪವಾಗಿದ್ದರೆ ನಾವು ಇಷ್ಟರ ಮಟ್ಟಿಗೂ ಇರುತ್ತಿರಲಿಲ್ಲ. ನಮ್ಮಲ್ಲಿ ಅನೇಕಾನೇಕರು ಸತ್ಯವಂತರಿರುವರು. ಆದರೆ ಸತ್ಯವಂತರಿಗೆ ಪ್ರಾಶಸ್ತ್ಯ ಕಡಮೆ. ಈಗಲಿಂದಲೂ ಜನಗಳ ಸತ್ಯಾಚರಣೆಗೆ ಭಂಗಬಾರದಂತೆ ಮಾಡಿಕೊಳ್ಳುವುದು ಮೊದಲನೇ ಕರ್ತವ್ಯವಾಗಿದೆ. ಅದು ಬಿಟ್ಟು, ಸುಮ್ಮನೆ ಹಾಗೆಯೇ ಬಿಟ್ಟುಬಿಟ್ಟರೆ ಮುಂದೆ ಇನ್ನೂ ಸತ್ಯಕ್ಕೆ ಲೋಪವುಂಟಾಗಿ ಬಹಳ ಅನರ್ಥಕ್ಕೆ ಗುರಿಯಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ.

ದ್ವಿಶಕ್ತಿಯಾಗದೆ ವ್ಯಾಜ್ಯಗಳು ಉಂಟಾಗುವುದಿಲ್ಲ. ವ್ಯಾಜ್ಯಗಳ ಹುಟ್ಟನ್ನು ಕಡಮೆ ಮಾಡದಿದ್ದರೆ ಸತ್ಯತೆ ಉಳಿಯುವುದಿಲ್ಲ. ಆದುದರಿಂದ ವ್ಯಾಜ್ಯಕಾರರಲ್ಲಿ ಶಕ್ತಿ ಪ್ರತಿಶಕ್ತಿಗಳಿಬ್ಬರಿಗೂ ಶಿಕ್ಷೆಯಾಗುವಂತಾದರೆ ಸಣ್ಣ ಪುಟ್ಟ ವ್ಯಾಜ್ಯಗಳ ಹುಟ್ಟೇ ಅಡಗುವುದು. ಕ್ರಿಮಿನಲ್ ವ್ಯಾಜ್ಯಗಳಲ್ಲಿ ಅಪರಾಧಿಗೆ ಆಗುವ ಅರ್ಧ ಶಿಕ್ಷೆಯಾದರೂ ಫಿರ್ಯಾದಿಗೆ ಆಗುವಂತೆ ಆಗಬೇಕು. ಮತ್ತು ಅಧಿಕಾರಿಗಳು ಕಾಯಾ ವಾಚಾ ಮನಸಾ ಪ್ರಾಮಾಣಿಕರಾಗಿದ್ದು, ಪ್ರಜೆಗಳು ಪ್ರಾಮಾಣಿಕರಾಗಲು ಮಾರ್ಗದರ್ಶಿಗಳಾಗಬೇಕು. ಎಲ್ಲರೂ ಪಾಪಕ್ಕೆ ಹೆದರಬೇಕು.

ಯಸ್. ಸುಬ್ರಾವ್, ಸಿಕಾರಪುರ.

ಮೈಸೂರು ಸಿಟಿ ಲಾಯರುಗಳ ಸಂಘವು.

ರಾಜಧಾನಿಯಲ್ಲಿರುವ ಲಾಯರುಗಳು ತಮ್ಮ ಸಂಘದ 9 ನೇ ವರುಷದ ಸಂತೋಷ ಕೂಟವನ್ನು ಕಳೆದ ಭಾನುವಾರ ಸಿವಿಲ್ ಕೋರ್ಟ್ ಕಟ್ಟಡದಲ್ಲಿ ನಡಿಸಿದರು. ಬೆಳಗ್ಗೆ ನಡೆದ ಮೀಟಿಂಗಿನಲ್ಲಿ ಸೆಕ್ರೆಟರಿಗಳು ಕಳೆದ ವರುಷದ ರಿಪೋರ್ಟನ್ನು ಓದಿದರು. ಅದರಲ್ಲಿ ಕಂಡು ಬಂದ ಮುಖ್ಯ ವಿಷಯಗಳೇನೆಂದರೆ—ರಾಜಧಾನಿಯಲ್ಲಿ ಲಾಯರುಗಳ ಸಂಘವು ಕಳೆದ 1907 ನೇ ಫೆಬ್ರವರಿಯಲ್ಲಿ ಪ್ರಾರಂಭವಾಗಿ ನಡೆದು ಅದರಲ್ಲಿ ಈಗ 69 ಮಂದಿ ಮೆಂಬರುಗಳಿರುತ್ತಾರೆ. ಕಳೆದ ಸಾಲಿನಲ್ಲಿ ಚಂದಾ ಮೂಲಕ 683 ಚಿಲ್ಲರೆ ರೂಪಾಯಿ ವಸೂಲಾಗಿ ಖರ್ಚು ಜಾತಾ 117 ಚಿಲ್ಲರೆ ರೂಪಾಯಿ ಶಿಲ್ಕು ಉಳಿದಿದೆ. ಕಮಿಟಿಯ ಮೆಂಬರುಗಳು 4 ಮೀಟಿಂಗ್ ನಡಿಸಿದರು. ಲಾಯರುಗಳಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ವೃದ್ಧಿಮಾಡುವುದಕ್ಕೂ, ಆ ಕಸಬಿಗೆ ಸಂಬಂಧಪಡುವ ವಿಷಯಗಳನ್ನು ಚರ್ಚೆಮಾಡುವುದಕ್ಕೂ ಕಳೆದ ವರುಷ ನಾಲ್ಕು ಸಂತೋಷಗಳನ್ನು ನಡಿಸಿದರು. ಈ ಸಂಘದ ಪುಸ್ತಕ ಭಂಡಾರವು ವೃದ್ಧಿ ಹೊಂದುತ್ತಿದೆ. ಅದರಲ್ಲಿ ಸುಮಾರು 700 ಕ್ಕಿಂತಲೂ ಹೆಚ್ಚಾಗಿ ಲಾ ಪುಸ್ತಕಗಳೂ, ರಿಪೋರ್ಟುಗಳೂ ಶೇಖರ ಮಾಡಲ್ಪಟ್ಟಿರುವವು. ಅಡ್ವೊಕೇಟ್ ಮ|| ವಿ. ರಾಘವಾಚಾರ್ಯರು ಕಳೆದ ವರುಷ ವಾಗ್ದಾನ ಮಾಡಿದ್ದಂತೆ ತಮ್ಮ ಬಳಿ ಇದ್ದ 67 ಲಾ ಪುಸ್ತಕಗಳನ್ನು ಈ ಸಂಘಕ್ಕೆ ಉಚಿತವಾಗಿ ಕೊಟ್ಟು ಇರುತ್ತಾರೆ. ಇದಕ್ಕಾಗಿ ಲಾಯರುಗಳು ಮ|| ರಾಘವಾಚಾರ್ಯರ ಔದಾರ್ಯವನ್ನು ಕೊಂಡಾಡಿ ಅವರನ್ನು ವಂದನೆ ಮಾಡಿದರು. ಅರಮನೆಯಲ್ಲಿ ನಡೆಯುವ ದರ್ಬಾರುಗಳಲ್ಲಿ ಅಡ್ವೊಕೇಟರಿಗೆ ಖಾಸಾ ಹಾರ ಹಾಕಿಸುವಂತೆ ಏರ್ಪಾಡು ಮಾಡಬೇಕೆಂದು ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳಬೇಕೆಂದು ಆ ಸಂಘದಲ್ಲಿ ತೀರ್ಮಾನವಾಗಿದೆ. ಚಾಲ್ತಿ ವರುಷದಲ್ಲಿ ಮ|| ಎಚ್. ನರಸಿಂಗರಾಯರು ಸಂಘದ ಪ್ರೆಸಿಡೆಂಟರಾಗಿಯೂ, ಮ|| ಎ. ಕೃಷ್ಣರಾಯರೂ, ಮ|| ಎಂ. ಡಿ. ತಿರುಮಲಾಚಾರ್ಯರೂ ಸೆಕ್ರೆಟರಿಗಳಾಗಿಯೂ ಇರತಕ್ಕದ್ದೆಂದು ಇತ್ಯರ್ಥಮಾಡಿ ಕಮಿಟಿ ಮೆಂಬರುಗಳ ಚುನಾವಣೆಯೂ ಜರುಗಿ ಬೆಳಗಿನ ಮೀಟಿಂಗು ಕೊನೆಮುಟ್ಟಿತು.

ಮಧ್ಯಾಹ್ನ ನಡೆದ ಸಂತೋಷಕೂಟಕ್ಕೆ ರಾಜಧಾನಿಯಲ್ಲಿರುವ ಸಿವಿಲ್ ಕ್ರಿಮಿನಲ್ ಕೋರ್ಟುಗಳ ಜಡ್ಜಿಗಳು ಕರೆಸಲ್ಪಟ್ಟಿದ್ದರು. ಅಲ್ಪಾಹಾರವಾದ ಬಳಿಕ ಎಲ್ಲರೂ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟ್ ಹಾಲಿನಲ್ಲಿ ಸಭೆ ಸೇರಿದರು. ವಿದ್ವಾನ್ ಚಿಕ್ಕರಾಮರಾಯರ ಮನೋಹರವಾದ ಹಾಡುಗಾರಿಕೆಯು ಬೆಳೆದ ಬಳಿ ಸಭಿಕರ ಕುತೂಹಲವನ್ನು ನೆರವೇರಿಸಿ ಡಿಸ್ಟ್ರಿಕ್ಟ್ ಜಡ್ಜ್ ಮ|| ಮಾರ್ ಹಂಜಾ ಹುಸೇನ್‌ರವರು ಸಭೆಯ ಅಗ್ರಾಸನವನ್ನು ವಹಿಸಿದರು. ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು ಲಾಯರುಗಳ ಪೂರ್ವೋತ್ತರವನ್ನು ಕುರಿತು ಭಾಷಣಮಾಡಿದರು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೇರಿಕ, ಹಿಂದುಸ್ಥಾನಗಳಲ್ಲಿ ಲಾಯರ್‌ತನವು ಹುಟ್ಟಿ ರೂಢಿಗೆ ಬಂದು ಹರಡಿಕೊಂಡಿರುವ ವಿಚಾರಗಳನ್ನೂ, ಪ್ರಜೆಗಳ ಮತ್ತು ಸರ್ಕಾರಗಳ ಪುರೋಭಿವೃದ್ಧಿಗೆ ಲಾಯರುಗಳು ಅವಶ್ಯ, ಅವರು ಉಪಕಾರಿಗಳು, ಆದಕಾರಣ ಈ ಕಸಬಿಗೆ ವಿಶೇಷವಾದ ಸನ್ಮಾನವುಂಟು ಎಂಬ ವಿಷಯವನ್ನೂ ಬಹಳ ಗ್ರಾಹ್ಯವಾಗಿ ವಿವರಿಸಿ ವೃತ್ತಾಂತಪಡಿಸಿದರು. ಬಳಿಕ ಈ ಕಸಬನ್ನು ಅವಲಂಬಿಸುವವರಿಗೆ ಬಂದಿರುವ ಕೆಟ್ಟ ಹೆಸರುಗಳನ್ನು ಮ|| ರಂಗಯ್ಯಂಗಾರ್ರು ವಿವರಿಸಿ ಅವುಗಳ ಪರಿಹಾರಕ್ಕೆ ಲಾಯರುಗಳು ಮಾಡಬೇಕಾಗಿರುವ ಕಾರ್ಯಗಳನ್ನು ತಿಳಿಸಿದರು. ಈ ಕಸಬಿನವರು ಪ್ರಾರಂಭದೆಸೆಯಲ್ಲಿ ಪ್ರತಿಫಲಾಪೇಕ್ಷೆಯಿಲ್ಲದೆ ಕಕ್ಷಿಗಾರರ ಪ್ರಾಣ, ಧನ ಮಾನಗಳನ್ನು ಸಂರಕ್ಷಣೆಮಾಡುತ್ತಿದ್ದರು. ಈಗ ವೊಕದ್ದಮೆಯ ಮತ್ತು ಕಕ್ಷಿಗಾರನ ಯೋಗ್ಯತೆ ವಿಚಾರಿ ಫೀಜು ಕೇಳುತ್ತಾರೆ. ನಿರ್ವಾಹವಿಲ್ಲದೆ ಅವನ ಫೀಜು ಕೊಡಬೇಕಾಗಿದೆ ಎಂಬುದಾಗಿ ಕೆಲವು ಲಾಯರುಗಳು ಸದ್ಗುಣ ಸಚ್ಚರಿತ್ರೆಯುಳ್ಳವರಾಗಿಲ್ಲ. ಅಯೋಗ್ಯವಾದ ವರ್ತನವನ್ನು ತಿದ್ದಿ ಕ್ರಮಪಡಿಸುವುದು ಕಷ್ಟ. ಇದಕ್ಕೆ ಪರದೇಶಗಳಲ್ಲಿರುವಂಥಾ ಏರ್ಪಾಡ್ಯಾವುದೂ ನಮ್ಮಲ್ಲಿ ಇಲ್ಲ. ಸರ್ಕಾರದ ಕಾನೂನ್ ಇದ್ದರೂ ಅದು ಅಷ್ಟು ಪ್ರಯೋಜನಕಾರವಾಗುವುದಿಲ್ಲ. ಈ ಸಂಘವು ಅಂಥಾ ವರ್ತನವನ್ನು ತಿದ್ದಬೇಕೆಂದು ಹಿಂದೆ ಪ್ರಯತ್ನಪಟ್ಟಾಗ ವಿರೋಧವುಟ್ಟಿದ್ದರಿಂದ ಅಂಥಾ ಕಾರ್ಯಕ್ಕೆ ಈಗ ಕೈಹಾಕದಂತಾಗಿದೆ. ಪ್ರತಿ ಒಂದು ವೊಕದ್ದಮೆಯಲ್ಲೂ ಒಂದೊಂದು ಪಕ್ಷದಲ್ಲಿ ಇಬ್ಬರಿಬ್ಬರು ಲಾಯರುಗಳು ವಕಾಲತ್ತು ಹಿಡಿಯುವಂತಾದರೆ ಕ್ಷೇಮ. ನಮ್ಮಲ್ಲಿ ಈಗ ಲಾಯರಾಗಿ ಬಂದಿರತಕ್ಕವರು ವಿದ್ಯಾಸಾಮರ್ಥ್ಯವುಳ್ಳವರಾಗಿಲ್ಲ. ಅನೇಕ

ಕೆಲವು ಕಾಲ ಶಿಕ್ಷ್ಯರಾಗಿ ನಿಂತು ಕೆಲಸಮಾಡುವುದು ಅವಶ್ಯ. ದಾವಾ ಅರ್ಜಿ ಮುಂತಾದವುಗಳನ್ನು ಬರೆಯುವಾಗ್ಗೆ ಚೆನ್ನಾಗಿ ವಿಚಾರ ಮಾಡಿ ಅವಶ್ಯವಿದ್ದಾಗ ಅನುಭವದಾರರಾದ ಲಾಯರುಗಳ ಆಲೋಚನೆ ಕೇಳಬೇಕು. ಅವರು ಜಡ್ಜಿಗಳಲ್ಲಿ ಪ್ರೀತಿ, ಗೌರವ, ಭರವಸೆಗಳನ್ನು ಮಾಡಿಕೊಳ್ಳದಿದ್ದರೆ ಕಕ್ಷಿಗಾರರಿಗೆ ನಷ್ಟವಾಗಿ ಹೆಸರು ಕೆಡುತ್ತದೆ. ಅವರು ಸತ್ಯಶೀಲರಾಗಿಯೂ, ಸತ್ಯಸಂಧರಾಗಿಯೂ ಇದ್ದು ಯಶಸ್ಸು ಪಡೆಯಬೇಕು ... ಪ್ರಕಾರ ವಿವೇಕವನ್ನು ಹೇಳಿದರು

ಮ|| ವಿಠಲ್ ಹಂಜಾ ಸುಸೇರ್‌ರವರು ಜಡ್ಜಿಗಳಿಗಿರುವ ಕಷ್ಟವನ್ನು ವಿವರಿಸಿ ... ಯಾದ ಲಾಯರುಗಳಿಂದ ನ್ಯಾಯವಿಮರ್ಶೆಗೆ ತುಂಬಾ ಸಹಾಯವಾಗುವುದು ಹೇಳಿದರು. ಹತ್ತು ವರುಷದಿಂದೀಚೆಗೆ ಬಂದಿರುವ ಜಡ್ಜಿಗಳು ಸತ್ಯಸಂಧ ... ಚತುರತೆಯಿಂದ ಕೆಲಸಮಾಡುತ್ತಾರೆ. ಅವರಲ್ಲಿ ಲಂಚಕೋರತನವು ... ಮವಾಗಿದೆ. ಜಡ್ಜಿಯಾದವನು ದೇವರಿಗೆ ಹೆದರಿ ಕಕ್ಷಿಗಾರನನ್ನು ಲಕ್ಷ್ಯ ... ನ್ಯಾಯವಿಮರ್ಶೆ ಮಾಡಬೇಕೆಂದು ಮುಸಲ್ಮಾನರಲ್ಲೂ, ಅವನು ... ಧ್ಯಾನಮಾಡಿ ಜಡ್ಜಿ ಪೀಠವನ್ನು ಹತ್ತಬೇಕೆಂದು ಹಿಂದುಗಳಲ್ಲೂ ಅನೇಕ ... ವಿಧಿಗಳುಂಟು. ಜಡ್ಜಿಗಳ ತೀರ್ಮಾನಗಳನ್ನು ಪುನರಾಲೋಚನೆಮಾಡಿ ... ರುವ ಗುಣದೋಷಗಳನ್ನು ಎತ್ತಿಹಾಕುವ ಏರ್ಪಾಡು ಇರಬೇಕೆಂದೂ, ... ಕೆಲವು ಲಾಯರುಗಳು ವಹಿಸಿ ಮಾಡಿದರೆ ತುಂಬಾ ಉಪಕಾರವಾಗುವು ... ಹೇಳಿ ಸಭೆಯನ್ನು ಮುಕ್ತಾಯಮಾಡಿದರು. ಬಳಿಕ ಮ|| ಎಂ. ಸುಬ್ಬ ... ವು ಇನ್ನೂ ಅನುಭವ ಸಾಲದಂಥಾ ಹೊಸ ಲಾಯರುಗಳ ಪಕ್ಷವನ್ನು ... ರಾವ್ ಬಹದೂರ್ ಮ|| ರಂಗಯ್ಯಂಗಾರ್ಯರವರು ಹೇಳಿದ ಬುದ್ಧಿವಾದ ... ಲಾಯರ್ ಕೆಲಸದಲ್ಲಿ ಈಗೀಗ ಕಣ್ಣು ಬಿಡುತ್ತಿರುವವರಿಗೆ ತುಂಬಾ ಹಿತ ... ವಾಗಿಯೂ ಶ್ರೇಯಸ್ಕರವಾಗಿಯೂ ಇವೆ ಎಂದೂ, ಅವರು ಆ ಪ್ರಕಾರ ... ಸಲು ಸಾಹಸಪಡುತ್ತಾರೆಂದೂ ಹೇಳಿ ವಂದನೆ ಮಾಡಿದರು.

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ... ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ... ವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ... ಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ... ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧ ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ... ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಚಿತ್ರದುರ್ಗಕ್ಕೆ ಹೋದ ವಿದ್ಯಾರ್ಥಿಗಳ ಕಷ್ಟ.

ಅಯ್ಯಾ,—ಚಿತ್ರದುರ್ಗಕ್ಕೆ ಲೋಕಲ್ ಪರೀಕ್ಷಾರ್ಥವಾಗಿ ಹೊರಗಿನಿಂದ ಅನೇಕ ಜನ ವಿದ್ಯಾರ್ಥಿಗಳು ಬರುವುದುಂಟು ಸದರಿ ವಿದ್ಯಾರ್ಥಿಗಳ ಅನುಕೂಲ ಕ್ಕಾಗಿ ಅಲ್ಲಿರುವ ಸ್ಟೂಡೆಂಟ್ಸ್ ಹೋಮಿನಲ್ಲಿ ಡೆಪ್ಯುಟಿ ಇನ್‌ಸ್ಪೆಕ್ಟರವರು ಪರ ... ವಿದ್ಯಾರ್ಥಿಗಳಿಗೆಲ್ಲಾ ಪ್ರತಿ ವರ್ಷವೂ ಸಮಾರಾಧನೆ ಮಾಡಿಸುತ್ತಿರುವರು ... ವರ್ಷವೂ ಅದೇ ಏರ್ಪಾಡನ್ನು ಮಾಡಿ ಅವರು ದಾವಣಗೆರೆಗೆ ಹೊರಟು ಹೋದರು ವಿದ್ಯಾರ್ಥಿಗಳೂ ಸಹ ಅದೇ ಪ್ರಕಾರ ನಡೆಸುತ್ತಾರೆಂದು ಸುಮ್ಮನಿ ದ್ದರು. ಮತ್ತು ಸ್ಟೂಡೆಂಟ್ಸ್ ಹೋಮಿನ ಸೂಪರಿಂಟೆಂಡೆಂಟರವರೂ ಇವಕ್ಕೆಲ್ಲಾ ಅನುಕೂಲಮಾಡಿಕೊಡಬೇಕೆಂದು ಮ್ಯಾನೇಜರಿಗೆ ವಿದ್ಯಾರ್ಥಿಗಳ ಮೊಬಾ ಬಲಿಕೆ ಮಾಡಿ ಹೊರಟು ಹೋದರು ಆದರೆ ಮ್ಯಾನೇಜರವರು ಯಾವ ಕಾರಣದಿಂದಲೋ ವಿದ್ಯಾರ್ಥಿಗಳಿಗೆ ಅಲ್ಲಿ ಅವಕಾಶವಿಲ್ಲದಂತೆ ಮಾಡಿದ ಹಾಗೆ ತೋರುತ್ತೆ. ಪ್ರಕೃತ ಚಿತ್ರದುರ್ಗದಲ್ಲಿ ನೀರಿಗೆ ಬಹಳ ತೊಂದರೆಯಾಗಿರುವುದು ಎಲ್ಲರಿಗೂ ತಿಳಿದೇ ಇದೆ. ಇಂಥಾ ಕಷ್ಟಕಾಲದಲ್ಲಿ ಇಲಾಖೆಯವರು ಚೆನ್ನಾಗಿ ವಿಚಾರಿಸಿ ವಿದ್ಯಾರ್ಥಿಗಳ ಅನುಕೂಲಮಾಡಿಸಿಕೊಟ್ಟು ಮುಂದಕ್ಕೆ ಇಂಥಾ ತೊಂದರೆಗಳಿಲ್ಲದಂತೆ ನಡೆಯಿಸಿಕೊಡುವರೆಂದು ನಂಬಿದೇನೆ.

ವಿದ್ಯಾರ್ಥಿಗಳ ಹಿತಚಿಂತಕ.

ಶ್ಯಾನುಭೋಗರಿಂದ ರೈತರಿಗಿರುವ ಕಷ್ಟ.

ಅಯ್ಯಾ,—ಅರಕಲಗೂಡು ತಾಲ್ಲೂಕು ಸರ್ವಮಾನ್ಯ ಹೆಬ್ಬಾಲೆ ಗ್ರಾಮದ ರೈತರು ನಾವು ಸರ್ಕಾರಕ್ಕೆ ಕೊಡಬೇಕಾಗಿರುವ ರೆವಿನ್ಯು ಕಂದಾಯವನ್ನು ಶ್ಯಾನುಭೋಗರಿಗೆ ಕೊಡಲು ಹೋದಾಗ್ಗೆ—ಈಗ ಸಮಯವಿಲ್ಲ, ನಾಳೆ ನಾಡಿದ್ದು ಬನ್ನಿ ; ಇಲ್ಲವೇ ಹಣ ಕೊಡು, ರಸೀತಿ ಈಗ ದೊರೆಯುವುದಿಲ್ಲವೆಂದು ಹೇಳುತ್ತಾರಂತೆ. ಇದು ನ್ಯಾಯವೇ ? ಹೀಗೆ ಅನೇಕ ರೈತರು ಕಂದಾಯ ಕೊಟ್ಟು ರಸೀತಿಯನ್ನು ಹೊಂದದೆ ಕೊನೆಯಲ್ಲಿ ರೆವಿನ್ಯು ಹರಾಜಾಗಿ ಜಮೀನು ಕಳೆದುಕೊಂಡಿರುವುದೂ, ಇಲ್ಲವೇ ಪುನಃ ಕಂದಾಯಕೊಟ್ಟು ರಸೀತಿಯನ್ನು ಪಡೆದು ಜಮೀನು ಉಳಿಸಿಕೊಂಡಿರುವುದೂ ಉಂಟು. ಶ್ಯಾನುಭೋಗರು ಹೀಗೆ ಮಾಡುವುದರಿಂದ ರೈತರಿಗೆ ಉಪಕಾರಿಗಳಾಗಿರುತ್ತಾರೋ ? ಇಲ್ಲವೇ ರೈತರನ್ನು ಕಷ್ಟಪಡಿಸುವವರಾಗಿರುತ್ತಾರೋ ? ಸರ್ಕಾರದವರು ಕ್ರಮಪಡಿಸಿ ರೈತರ ಕಷ್ಟ ವನ್ನು ಹೋಗಲಾಡಿಸುತ್ತಾರೆಂತ ನಂಬುತ್ತೇನೆ.

ಎಚ್ ಜೋಸೆಫ್, ಟೀಚರ್.

[ಸರ್ಕಾರದ ರೂಲಿನಂತೆ ರೈತರು ಪಟೇಲರಿಗೆ ಕಂದಾಯ ಪಾವತಿಮಾಡ ಬೇಕಲ್ಲದೆ ಶ್ಯಾನುಭೋಗರಿಗೆ ಕೊಡಕೂಡದು. ಅದಕ್ಕೆ ಪಟೇಲರು ಜವಾಬ್ದಾ ರರು. ಶ್ಯಾನುಭೋಗರು ಕಂದಾಯ ತೆಗೆದುಕೊಳ್ಳಕೂಡದೆಂದು ವಿಧಿಸಲ್ಪಟ್ಟಿರು ವಂತೆ ಕಾಣುವುದು —ಎಡಿ]

ಮೋಸವಾಯಿತಂತೆ.

ಅಯ್ಯಾ,—ವೀರಕೇಸರಿ ಕಾರ್ಯಾಲಯ, ನಂ. 2 ಬೊಮ್ಮಲಯ್ಯನ ಬೀದಿ, ಮದರಾಸ್, ಇವರು ನನಗೆ ಮಾಡಿದ ಮೋಸವೇನೆಂದರೆ—ಇವರ ಕ್ಯಾಟಲಾಗಿ ನಂತೆ ಚಂದಾದಾರನಾಗಬೇಕೆಂದು ಟೈಂಪೀಸ್ ಎಂಬ ಘಡಿಯಾರದ ಬಹುಮಾನ ದೊಂದಿಗೆ ತಮ್ಮ ಪತ್ರಿಕೆಯನ್ನು ಒಂದು ವರ್ಷದವರೆಗೆ ಕಳಿಸಬೇಕೆಂದು 1914 ನೇ ಅಕ್ಟೋಬರ್ ತಿಂಗಳಲ್ಲಿ ಅಪ್ಲಿಕೇಷನ್ ಹಾಕಿದೆ ಅದು ಅದರಂತೆ 1915 ನೇ ಜನವರಿ 1 ನೇ ತಾ. ಪತ್ರಿಕೆಯೊಂದಿಗೆ ಘಡಿಯಾರವನ್ನು ವಿ ಪಿ ಮೂಲಕ ಕಳುಹಿಸಿದ್ದರು ವಿ. ಪಿ ಮೊಬಲಗು ರೂ. 2-5-0 ಪಾವತಿಮಾಡಿ ಪತ್ರಿಕೆ ಯನ್ನು ಪಡೆದೆ. ಅಂದಿನಿಂದ ನ್ಯಾಯವಾಗಿ ಪತ್ರಿಯನ್ನು ಕಳಿಸದೆ ಬಿಟ್ಟು ಬಿಟ್ಟರು. ಈಗ ನಾನು ನನ್ನ ವಿಳಾಸಕ್ಕೆ ಬರಬೇಕಾದ ಪತ್ರಿಕೆಗಳು ಈ ವರೆಗೆ ಕಳುಹಿಸಿದ್ದಾಗ್ಯೂ ಬರಲಿಲ್ಲ. ದಯವಿಟ್ಟು ಕೂಡ್ಲೆ ಕಳಿಸಬೇಕೆಂತ ಮೂರು ಕಾಗದಗಳನ್ನು ಬರೆದಾಗ್ಯೂ ಜವಾಬನ್ನಾದರೂ ಕೊಡಲಿಲ್ಲ. ಅವರ ಪತ್ರಿಕೆಗಳ ... ಮೊದಲೇ ಇಲ್ಲವಾದ್ದರಿಂದ ಇಂಥಾ ಮೋಸಕೃತ್ಯವನ್ನು ಮಾಡಿ ಬಹು ಜನವೆಂದು ಅರಿಕೆಮಾಡುತ್ತಾ ತಮ್ಮ ಸಾಮಾನುಗಳನ್ನು ವೀರಕೇಸರಿ ಎಂಬ ಪತ್ರಿಕೆ ಆಧಾರದ ಮೇಲೆ ವಿಕ್ರಯಿಸುತ್ತಿರುವ ಈ ಕಾರ್ಯಾಲಯವನ್ನು ನನ್ನಂತೆ ನಂಬಿ ಯಾರೂ ಮೋಸಹೋಗಬಾರದೆಂದು ಅರಿಕೆಮಾಡಿಕೊಳ್ಳುತ್ತೇನೆ.

ದಾವಣಗೆರೆ ತಾ|| ಮುದಹದಡಿ, 7—4—1916.

ಸಿದ್ಧಲಿಂಗಯ್ಯ, ಮಾಸ್ಟರ್.

ಸ್ತ್ರೀಯರ ನಾಲ್ಕಾಣೆ ಯುದ್ಧದ ಫಂಡು.

ಅಯ್ಯಾ,—ಈಗ ನಡೆಯುತ್ತಿರುವ ಘೋರವಾದ ಯುದ್ಧವು ಇನ್ನೂ ಈಗಲೇ ಮುಗಿಯುವಂತೆ ಕಾಣಲಿಲ್ಲವಾಗಿ ಯುದ್ಧದ ಖರ್ಚು ದಿನೇ ದಿನೇ ಹೆಚ್ಚುತ್ತಾ ಇರುವುದರಿಂದ ಯುದ್ಧ ಮುಗಿಯುವ ವರೆಗೂ ನಾವುಗಳು ನಮಗೋ ಸ್ಕರ ಕಷ್ಟಪಟ್ಟು ಯುದ್ಧಮಾಡುತ್ತಿರುವ ಸೈನಿಕರ ಸಹಾಯಾರ್ಥವಾಗಿ ಸಾಧ್ಯ ವಾದಷ್ಟು ಹಣವನ್ನು ಕಳುಹಿಸತಕ್ಕದ್ದು ಅವಶ್ಯಕವಾದದ್ದರಿಂದ ನಾನು “ಹೆಂಗ ಸರ ಮಾಹೆಯಾನ 4 ಆಣೆ ಫಂಡ” ನ್ನು (Ladies' Monthly Four Anna War Fund) ಏರ್ಪಡಿಸಿದೇನೆ. ಇದಕ್ಕೆ ಆರ್ಯ ಮಹಿಳೆಯರೆ ಲ್ಲರೂ ಸಹಾಯಮಾಡುತ್ತಾರೆಂದು ನಂಬಿದೇನೆ. ಹಣವನ್ನು ಈ ಕೆಳಗಣ ವಿಳಾ ಸಕ್ಕೆ ಕಳುಹಿಸಿದರೆ ಅದನ್ನು ಖಜಾನೆಗೆ ಕಳುಹಿಸಿ ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಜಮಾ ಮಾಡಿಸುತ್ತೇನೆ. ಹಣವನ್ನು ಪ್ರತಿ ತಿಂಗಳೂ ಮನಿ ಆರ್ಡರ್ ಮಾಡಲು ಅನನುಕೂಲವಾದರೆ 3-4 ತಿಂಗಳಿನ ಹಣವನ್ನು ಅಡ್ವಾನ್ಸ್ ಆಗಿ ಕಳುಹಿಸಬಹುದು ಪ್ರತಿ ತಿಂಗಳಲ್ಲಿಯೂ ವಸೂಲಾದ ಹಣದ ಲೆಕ್ಕವನ್ನು ಇದೇ ಪತ್ರಿಕೆಯ ಮೂಲಕ ಸರ್ವರಿಗೂ ತಿಳಿಸುತ್ತೇನೆ. ಇದೇ ರೀತಿ ಪ್ರತಿ ಊರಿ ನಲ್ಲಿಯೂ ಫಂಡುಗಳನ್ನು ಸ್ತ್ರೀಯರು ಏರ್ಪಡಿಸುತ್ತಾರೆಂದು ಕೋರುತ್ತೇನೆ.

(ಮಿಸೆಸ್ ಬಿ ರಂಗಯ್ಯಂಗಾರ್) ಮಹಾಲಕ್ಷ್ಮಮ್ಮ,
ಕೇರಾಫ್ ಮ|| ಬಿ. ಆರ್ ಅಯ್ಯಂಗಾರ್,
ಮುನ್‌ಸಿಫ್, ತುಮಕೂರು.

ವಂದನಾಪೂರ್ವಕವಾದ ಸ್ವೀಕಾರ.

ಅಯ್ಯಾ,—ಚನ್ನರಾಯಪಟ್ಟಣ ತಾಲ್ಲೂಕು ಜನ್ನೇನಹಳ್ಳಿ ಗ್ರಾಮದಲ್ಲಿ ಒಂದು ಪರಸ್ಪರ ಸಹಾಯಸಂಘವು ಸ್ಥಾಪನೆಯಾದ ವಿಷಯದಲ್ಲಿ ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಚುರಪಡಿಸಿರುವುದು ಸರಿಯಷ್ಟೆ. ಆದರೆ ಅದ್ಯರಿನಲ್ಲಿ “ಸೂಪರ್‌ವೈಜರು ಅಪಾರ ಶ್ರಮಪಡುತ್ತಿರುವದು ಹಳ್ಳಿಗಾಡಿನ ಪ್ರಜೆಗಳ ಭಾಗ್ಯೋ ದಯವೇ ಸರಿ” ಎಂದು ಇರುವುದು ನೋಡಿ ತುಂಬಾ ಖಿನ್ನನಾಗಬೇಕಾಯ್ತು. ನಾನು ಅಷ್ಟೊಂದು ಗೌರವಕ್ಕೆ ಅರ್ಹನಲ್ಲದವನಾದರೂ ಹಾಗೆ ಭಾವಿಸಿದವರಿ ಗೋಸ್ಕರ ತುಂಬಾ ಕೃತಜ್ಞನಾಗಿದೇನೆ. ಅಲ್ಲದೆ ಇಂಥಾ ಸಂಘಗಳ ಆಮೂ ಲಾಗ್ರ ತತ್ವವನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲವುಳ್ಳವರು ಯಾರಾ ರಾದರೂ ಸರಿಯೆ, ಯಾವ ಊರಿನವರಾದರೂ ಸರಿಯೆ ಅಪೇಕ್ಷಿಸಿದರೆ ಕೂಡಲೇ ನನಗೆ ತಿಳಿಸಬಹುದು ಅನಂತರ ನಾನೇ ಅಲ್ಲಿಗೆ ಹೋಗಿ ನನಗೆ ತಿಳಿದ ಮಟ್ಟಿಗೂ ಇಂಥಾ ಸಂಘಗಳ ಅನುಕೂಲತೆಗಳು, ಸಂಘಗಳಿಗೋಸ್ಕರ ದಯಾಶಾಲಿಗಳಾದ ನಮ್ಮ ಸರ್ಕಾರದವರು ಕಲ್ಪಿಸಿಕೊಟ್ಟಿರುವ ಅನೇಕ ವಿಧವಾದ ರಿಯಾಯಿತಿಗಳು ಮುಂತಾದವುಗಳನ್ನೆಲ್ಲಾ ತಿಳಿಸಿಕೊಟ್ಟು ಅವಶ್ಯವಿದ್ದರೆ ಹೊಸ ಸಂಘದ ಕಟ್ಟು ನಿಯಮ ಮಾಡಿಸಿಕೊಟ್ಟು, ಅವರಿಗೆ ಬೇಕಾಗಬಹುದಾದ ಮಾಹಿತಿಗಳನ್ನೂ ಮಾಡಿಕೊಡಲು ಸಿದ್ಧನಾಗಿದೇನೆ —ಇನ್ನೊಂದು ವಿಜ್ಞಾಪನೆ ಇರುವುದು. ಪರ ಸ್ಪರ ಸಹಾಯಾಭಿಮಾನಿಗಳಾದ ತಾವು ತಮ್ಮ ಪತ್ರಿಕೆಯಲ್ಲಿ ಪರಸ್ಪರ ಸಹಾಯ ಸಂಘಗಳ ವಿಚಾರವನ್ನು ಪ್ರಚುರಪಡಿಸುವದರ ಮುಖೇನ ಪ್ರಜೆಗಳಲ್ಲಿ ಅನ್ಯೋನ್ಯ ಸಹಾಯ ಗುಣಾಭಿವೃದ್ಧಿಪಡಿಸುತ್ತಿರುವ ತಮ್ಮ ಸಹಜವಾದ ಔದಾರ್ಯಕ್ಕೆ ನಾನು ತುಂಬಾ ಕೃತಜ್ಞನಾಗಿ ಸಂಘಗಳ ಪರವಾಗಿ ತಮ್ಮನ್ನು ವಂದಿಸುವೆನು.

ಎ. ಯನ್. ಲಕ್ಷ್ಮೀನಾರಾಯಣರಾವ್,
ಆ|| ಆ||, ಚನ್ನರಾಯಪಟ್ಟಣ.

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯ ಕನ್ನಡ ಪ್ರಶ್ನ ಪತ್ರಿಕೆ.

ಅಯ್ಯಾ,—ಲೋ. ಸೆ. ಪರೀಕ್ಷೆಗೆ ಈ ವರುಷ ಕೊಟ್ಟ ಕನ್ನಡ ಪತ್ರಿಕೆ ಯಷ್ಟು ಕಷ್ಟವಾದ ಪತ್ರಿಕೆಯು ಹಿಂದೆ ಯಾವಾಗಲೂ ಇಲ್ಲವೆಂದು ಹೇಳಬ ಹುದು. ಕನ್ನಡದಲ್ಲಿ ಒಳ್ಳೇ ಪಾಂಡಿತ್ಯವಿದ್ದವರು ಸಹ ಉತ್ತರಕೊಡುವುದಕ್ಕೆ ಕಷ್ಟವಾಗಿ ಇವೆ. ಮೊದಲನೆಯ ಪ್ರಶ್ನೆಯಲ್ಲಿ ವಚನಕಾವ್ಯವೆಲ್ಲವನ್ನೂ ಸೇರಿಸಿ ಸುಮಾರು 40 ಪುಟಗಳಲ್ಲಿ ಅಡಗಿರುವ ಒಂದು ಪ್ರಶ್ನೆಯನ್ನು ಕೇಳಿರುತ್ತಾರೆ. ಎರಡನೆಯ ಪ್ರಶ್ನೆಯನ್ನು ವಿದ್ಯಾರ್ಥಿಗಳು ತೃಪ್ತಿಕರವಾಗಿ ಬರೆಯುವುದು ಕಷ್ಟ. ಮೂರನೆಯ ಪ್ರಶ್ನೆಯಲ್ಲಿ ಉಪಮಾನಗಳ ತಾತ್ಪರ್ಯವನ್ನು ಕೇಳಿದಾರೆ ಅದಕ್ಕೆ ಸಾಮಾನ್ಯರಿಗೆ ಥಟ್ಟನೆ ಉತ್ತರ ಹೊಳೆಯುವುದಿಲ್ಲ. ನಾಲ್ಕನೇ ಪ್ರಶ್ನೆಯಲ್ಲಿ ವ್ಯಾಕರಣ ವಿಶೇಷವನ್ನು ಕೇಳಿರುವ ಪದಗಳು ವಿದ್ಯಾರ್ಥಿಗಳಿಗಿಟ್ಟಿರುವ ವ್ಯಾಕರಣ ಣದಲ್ಲೇ ಇಲ್ಲ ; ಸ್ಕೂಲ್ ಪಂಡಿತರುಗಳು ಹೇಳಿಕೊಟ್ಟಿದ್ದೂ ಇಲ್ಲ. ಕೆಲವು ಧಾತು ಗಳಿಂದ ಹುಟ್ಟಿ ಬೇರೆಬೇರೆ ಅರ್ಥವಾಗುವ ಎರಡೆರಡು ಭಾವನಾಮಗಳನ್ನು ಕೇಳಿರುತ್ತಾರೆ ಇವನ್ನು ಈ ವಿದ್ಯಾರ್ಥಿಗಳ ತರಗತಿಗೆ ಕೊಡಬಹುದಾದ ಪ್ರಶ್ನೆ ಯೋ ? ಐದನೇ ಪ್ರಶ್ನೆಯಂತೂ ಕೇಳಕೂಡದು ಇಂಗ್ಲೀಷು ಮಾದರಿಯ ಪ್ರಕಾರ ವಾಕ್ಯವಿಭಜನೆಯನ್ನು ಕೇಳಿದಾರೆ. ವಾಕ್ಯವೋ ತುಂಬಾ ಕಷ್ಟ. ಎಷ್ಟೇ ಯೋಚಿ ಸಿದರೂ ತೃಪ್ತಿಕರವಾಗಿ ಬರೆಯುವದಕ್ಕಾಗದ ಇಂಥಾ ಪ್ರಶ್ನೆಗಳಿಗೆ 80 ಅಂಕಗಳ ನ್ನಿಟ್ಟಿರುವರು. ಒಟ್ಟು 125 ಎಲ್ಲಾ 3 ಗಂಟೆಯಲ್ಲಿ ಬರೆಯಬೇಕು. ಹೀಗಿ ದ್ದರೆ ಸ್ವಭಾಷೆಯಾಗಿ ಸರಾಗವೆನಿಸಿದ ಕನ್ನಡದಲ್ಲಿ ತೇರ್ಗಡೆಹೊಂದುವುದು ಹೇಗೆ ? ಇದರಲ್ಲಿ ಪರೀಕ್ಷರು ತಮ್ಮ ಪಾಂಡಿತ್ಯವನ್ನು ಹೆಚ್ಚಾಗಿ ತೋರಿಸುವರೇ ಹೊರತು ವಿದ್ಯಾರ್ಥಿಗಳ ತರಗತಿಯ ಪರೀಕ್ಷೆಗೆ ಎಷ್ಟು ಕ್ಲುಪ್ತವಾಗಿ ಪ್ರಶ್ನೆಗ ಳನ್ನು ಕೊಡಬೇಕೆಂದು ಆಲೋಚಿಸಿಲ್ಲ. ತಾವಾದರೂ ಬಡಕನ್ನಡಿಗರ ವಿಷಯ ದಲ್ಲಿ ಕರುಣೆಯಿಟ್ಟು ಇದನ್ನು ಸರ್ಕಾರದವರ ಗಮನಕ್ಕೆ ತಂದು ಕಾಪಾಡುವಿ ರಾಗಿ ಬಹಳವಾಗಿ ಪ್ರಾರ್ಥಿಸುತ್ತೇನೆ. ಇಲ್ಲವಾದರೆ ಅನೇಕರು ಫೇಲಾಗಿ ನಿರುತ್ಸಾಹಿಗಳಾಗುವರು.

ಬೆಂಗಳೂರು.

ವಿದ್ಯಾರ್ಥಿಗಳ ಹಿತಚಿಂತಕ.

II

ಅಯ್ಯಾ,—ಈ ಸಲ ಲೋ. ಸೆ. ಪರೀಕ್ಷೆಯ ಪ್ರಶ್ನಪತ್ರಿಕೆಗಳು ಆ ತರಗ ತಿಯ ವಿದ್ಯಾರ್ಥಿಗಳ ಯೋಗ್ಯತೆಗೆ ತಕ್ಕಂತೆ ಸರಿಯಾಗಿವೆ ಎಂಬ ಅಭಿಪ್ರಾಯವು ಅನೇಕ ಮಂದಿಗೆ ಬರಬಹುದು . ಲೋ. ಸೆ ಬಾಲಕನಿಗೆ ಅನೇಕ ಪ್ರಶ್ನೆಗಳಿಗೆ ಉತ್ತರಕೊಡುವುದು ಸುಲಭ ಸಾಧ್ಯವೆಂದು ಹೇಳುವದಕ್ಕಾಗುವುದಿಲ್ಲ. ಈ ವರ್ಷದ ಈ ಭಾಷೆಯ ಪ್ರಶ್ನ ಪತ್ರಿಕೆಯನ್ನು ಕಳೆದ ಅನೇಕ ಸಂವತ್ಸರಗಳ ಇಂಥವು ಪತ್ರಿಗಳೊಡನೆ ಹೋಲಿಸಿ ನೋಡಿದರೆ ಅಜಗಜನ್ಯಾಯ ವೆಂಬದಾಗಿ ಹೇಳುವುದು ಅತಿಶಯೋಕ್ತಿಯಲ್ಲ. ಕೆಲವು ಪ್ರಶ್ನೆಗಳು ವಿದ್ಯಾರ್ಥಿಗಳ ಬುದ್ಧಿ ಶಕ್ತಿಯನ್ನೂ ಆಲೋಚನಾ ಶಕ್ತಿಯನ್ನೂ ಪರೀಕ್ಷಿಸತಕ್ಕವುಗಳಾಗಿವೆ. ಈ ರೀತಿ ಹೊಸ ಮಾದರಿಯಾಗಿ ಕನ್ನಡ ಭಾಷೆಯಲ್ಲಿ ಪ್ರಶ್ನಿಸುವುದು ಬಹಳ ಶ್ಲಾಘನೀಯ ವಾದುದು. ಇದರಿಂದ ಕನ್ನಡ ಭಾಷೆಯಲಿ ನವೀನ ಕಾಲದ ವಿದ್ಯಾರ್ಥಿಗಳಿಗೆ ಇರ ತಕ್ಕ ತಾತ್ಸಾರವು ಕಡಮೆಯಾಗಿ ಇನ್ನು ಮುಂದೆ ಬಾಲಕರು ಇದಕ್ಕೆ ಹೆಚ್ಚಾಗಿ ಗಮನ ಕೊಡುವಂತೆ ಮಾಡಿದಹಾಗಾಯ್ತು. ಪರಂತು ಇಂತಹ ಪ್ರಶ್ನೆಗಳನ್ನು ಲೋ. ಸೆ. ತರಗತಿಯ ಸಾಮಾನ್ಯ ವಿದ್ಯಾರ್ಥಿಯು ಅರ್ಥಮಾಡಿಕೊಳ್ಳುವುದೇ ಅಸಾಧ್ಯವೆಂದು ಹೇಳಬಹುದು ಪ್ರಶ್ನೆಗಳನ್ನು ಗ್ರಹಿಸುವದೇ ಕಷ್ಟವಾಗಿರುವಾಗ ತಕ್ಕ ಉತ್ತರಗಳನ್ನು ಕೊಡುವುದು ಮತ್ತೂ ಕಷ್ಟ. ನನ್ನ ಅನುಭವದಲ್ಲಿ ಕೆಲವು ಪ್ರಶ್ನೆಗಳು ಲೋ. ಸೆ. ವಿದ್ಯಾರ್ಥಿಗಳ ತರಗತಿಗೆ ಒಂದು ಮೆಟ್ಟಿಲು ಮೀರಿವೆ ಎಂದು ಹೇಳಿದರೆ ತಪ್ಪಾಗಲಾರದು. ಎಷ್ಟು ಮಂದಿ ಈ ಸಲ ಕನ್ನಡದಲ್ಲಿ ತೇರ್ಗಡೆಯಾ ಗುವರೋ ಎಂಬ ಆತಂಕದಿಕದ ಫಲಿತಾಂಶವನ್ನು ನಿರೀಕ್ಷಿಸುತ್ತೇನೆ.

ಬೆಂಗಳೂರು.

ಹೆ. ಎಸ್.

ಕೆ. ಶಿವಬಸವಯ್ಯ, ಕ್ಯಾತನಹಳ್ಳಿ ; ವಿ. ಪಿ , ದೊಡ್ಡಬಳ್ಳಾಪುರ ; ಮಹಾ ಭಿಮಾನಿ, ತೀರ್ಥಹಳ್ಳಿ ; ವಿದ್ಯಾರ್ಥಿನಿ, ಮಳವಳ್ಳಿ ; ಧರ್ಮಪರಿಪಾಲನಾದರ್ಶಿ ಮತ್ತು ನ್ಯಾಯವಿಮರ್ಶಕಪರದರ್ಶಿ, ಅರಗ—ಈ ಬಾತ್ಮಿಗಳನ್ನು ಪ್ರಕಟಿಸಲಾರೆ ವೆಂದು ವಿಷಾದಿಸುತ್ತೇವೆ.

ತ್ಯಾಮಗೊಂಡ್ಲಿನಲ್ಲಿ ಆರ್ಯವೈಶ್ಯ ಕುಮಾರ ಮಂಡಲಿಯವರು ರಾಮ ನವಮಿ ಉತ್ಸವಗಳನ್ನು ಬಹು ಸ್ತೋತ್ರಾರ್ಹವಾಗಿಯೂ ಆನಂದದಿಂದಲೂ ನಡಿಸಿ ದರೆಂದು ಒಬ್ಬ ಬಾತ್ಮಿದಾರರು ಅದರ ವಿವರಗಳನ್ನು ಬರೆದಿರುತ್ತಾರೆ —ಎಡಿ.]

ತಾಲ್ಲೂಕು ವರ್ತಮಾನಗಳು.

ಮೂಡಿಗೆರೆ ತಾ|| ಮಾಕೋನಹಳ್ಳಿ.—ಕಡೂರು ಡಿಸ್ಟ್ರಿಕ್ಟ್ ಉಪನ್ಯಾಸ ಕರಾದ ಮ|| ಬಿ. ಕೆ. ಸಿಂಗಯ್ಯಂಗಾರ್ಯ ಈ ಊರಿಗೆ ಬಂದು ಇಲ್ಲಿನ ಸ್ಕೂಲಿ ನಲ್ಲಿ ಗ್ರಾಮಸ್ಥರನ್ನು ಕೂಡಿಸಿ ಮಕ್ಕಳ ಶಿಕ್ಷಣ, ಪರಸ್ಪರ ಸಹಾಯ, ವಿದ್ಯೆ, ಕಾಲವಿನಿಯೋಗ ಮುಂತಾದ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಬಾಲಕರ ಮತ್ತು ಗ್ರಾಮಸ್ಥರ ಮನರಂಜಕವಂತೆ ಉಪನ್ಯಾಸ ಮಾಡಿದ್ದರಲ್ಲಿ ಅನೇಕ ಹೊಸ ಸಂಗತಿಗಳನ್ನು ಇಲ್ಲಿನವರು ಗ್ರಹಿಸುವಂತಾಯ್ತು. ಇಂತಹ ಉಪನ್ಯಾಸಕರು ಆಗಿಂದಾಗ್ಗೆ ಈ ನಮ್ಮ ಮಲನಾಡು ಪ್ರಾಂತ್ಯ ಬಂದು ವಿದ್ಯೆ ಮತ್ತು ನಾಗರೀಕತೆಯಲ್ಲಿ ಹಿಂದುಳಿದಿರುವ ಇಲ್ಲಿನ ಜನಗಳಿಗೆ ಈ ತೆರನಾದ ಉಪನ್ಯಾಸಗಳ ಮೂಲಕ ವಿವೇಕವನ್ನು ಬೋಧಿಸುತ್ತಾ ಬಂದಲ್ಲಿ ಕ್ಷಿಪ್ರದಲ್ಲಿಯೇ ಪುರೋಭಿವೃದ್ಧಿಗೆ ಬರಲು ಯಾವ ಅಭ್ಯಂತರವೂ ಇರುವುದಿಲ್ಲ.

ಕೋಲಾರ್.—ಹವಾ ಆರೋಗ್ಯಕರವಾಗಿದೆ. ಜನಗಳು ಹರ್ಷಚಿತ್ತರಾಗಿ ಅವರವರ ಕಾರ್ಯದಲ್ಲಿ ಆಸಕ್ತರಾಗಿದಾರೆ.—ಸ್ಕೂಲ್ ವಿದ್ಯಾರ್ಥಿಗಳು ಸತ್ಯ ವಂತರಾಗಿಯೂ ಗುಣಗಳಲ್ಲಿ ಅತ್ಯಂತ ವಿಧೇಯರಾಗಿಯೂ ಇರುವರು. ಮೊನ್ನೆ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಈ ಊರಿಗೆ ಪರಸ್ಥಳಗಳಿಂದ ಬಂದಿದ್ದ ವಿದ್ಯಾರ್ಥಿಗಳನ್ನು ಅನ್ನೋದಕಗಳಿಂದ ಉಪಚರಿಸುವ ವಿಷಯದಲ್ಲಿ ಇಲ್ಲಿನ ಹೈ ಸ್ಕೂಲ್ ವಿದ್ಯಾರ್ಥಿಗಳು ತೋರಿಸಿರುವ ಅನ್ಯಾದೃಶವಾದ ಸಾಹಸವು ಅವರ ದೇಶವಾತ್ಸಲ್ಯ, ಕಷ್ಟಸಹಿಷ್ಣುತೆ, ಸ್ವಾರ್ಥತ್ಯಾಗ, ಪರೋಪಕಾರಬುದ್ಧಿ, ಇವು ಗಳನ್ನು ದೃಷ್ಟಾಂತಪಡಿಸುವವು. ಜಿಮ್ನಾಸ್ಟಿಕ್ ಮಾಸ್ಟರ್ ಮ|| ಪ್ರಾಣೇಶರಾ ಯರು ಪರೀಕ್ಷಾ ವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಒದಗಿಸುವ ನೂತನ ಪದ್ಧ ತಿಯನ್ನು ಈ ವರುಷ ಪ್ರಾರಂಭಿಸಿ ಅತ್ಯಂತ ವಿಶದತೆಯಿಂದ ನೆರವೇರಿಸಿದ್ದು ಸ್ಮರಿಸತಕ್ಕದ್ದಾಗಿದೆ. ಇವರು ಮಾಡಿದ್ದ ಏರ್ಪಾಡುಗಳೆಲ್ಲವೂ ಎಷ್ಟೊಂದು ಶ್ಲಾಘನೀಯವಾದುದೋ ಅದೆಲ್ಲಕ್ಕಿಂತಲೂ ಜಾತಿ ಮತ ಭೇದಗಳಿಲ್ಲದೆ ಎಲ್ಲ ಮತದ ವಿದ್ಯಾರ್ಥಿಗಳನ್ನೂ ಏಕರೀತಿಯಾದ ಭಾವನೆಯಿಂದ ಕಾಣುತ್ತಲಿದ್ದುದು ಆನಂದಕರವಾಗಿದೆ.

ಹುಣಸೂರು ತಾ|| ರಾವಂದೂರು.—ಕಳೆದ ಮಾರ್ಚಿ ತಾ. 26 ನೇ ಸೋಮವಾರ ಬೆಳಗ್ಗೆ ಇಲ್ಲಿನ ಸ್ಕೂಲ್ ಕಮಿಟಿಯ ಮೆಂಬರುಗಳು ಮತ್ತು ಇತರ ಗ್ರಾಮಸ್ಥರೂ ಸಹಾ ಇಲ್ಲಿನ ಬಾಯ್ಸ್ ಸ್ಕೂಲಿನಲ್ಲಿ ಸೇರಿ ಬಾಲಕರನ್ನು ಪರೀಕ್ಷಿಸಿದರು. ಇದು ಸುಮಾರು 3 ಘಂಟೆ ಹೊತ್ತು ಜರುಗಿತು. ನಂತರ ಸ್ವಲ್ಪ ಹೊತ್ತು ಸರ್ಕಲ್ ಇನ್‌ಸ್ಪೆಕ್ಟರ್ ಮ|| ಶ್ರೀನಿವಾಸರಾಯರು ಪ್ರದಾಪ್ರತಿ ಸಿಧಿ ಸಭೆಯಲ್ಲಿ ವಿದ್ಯಾ ಸಂಪದಭ್ಯುದಯ ಸಂಘದ ಪರವಾಗಿ ಅಪ್ಪನೆ ಕೊಡಿಸಿದ್ದ ಉಪನ್ಯಾಸದ ಪುಸ್ತಕವನ್ನು ಮಾಸ್ಟರವರು ಓದಿ ಹೇಳಿದ್ದನ್ನು ಕೇಳಿ ಪುರಪ್ರ ಮುಖರೆಲ್ಲರೂ ಸಂತೋಷ ಹೊಂದಿದರು. ಆ ಕಾಲದಲ್ಲಿ ಹಾಜರಿದ್ದ 53 ಮಂದಿ ಬಾಲಕರು ತೃಪ್ತಿಕರವಾಗಿ ಉತ್ತರವನ್ನು ಕೊಟ್ಟರು. ಆ ದಿನ ಹಾಜರಾಗದೆ ಇದ್ದ ಬಾಲಕರು 5 ಮಂದಿ. ಜುಮ್ಲ 58 ಮಂದಿ ಈ ಸ್ಕೂಲಿನಲ್ಲಿರುತ್ತಾರೆ. ಇಷ್ಟು ಮಂದಿ ಬಾಲಕರಿಗೆ ಪಾಠ ಹೇಳಲು ಒಬ್ಬ ಮಾಸ್ಟರಿಂದ ಸಾಧ್ಯವಲ್ಲ. ಈಗ ಬಂದಿ ರತಕ್ಕ ಮಾಸ್ಟರು ಮ|| ಎಸ್. ಎನ್. ಸುಬ್ಬರಾಯರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಇದೇ ರೀತಿ ಸದಾ ಕಾಲವೂ ಒಬ್ಬರೇ ಕೆಲಸಮಾಡಲು ಸಾಧ್ಯ ವಿಲ್ಲ. ಈ ನ್ಯೂನತೆಯನ್ನು ಸರ್ಕಾರದವರು ಚಿತ್ತಕ್ಕೆ ತಂದುಕೊಂಡು ಇನ್ನೊಬ್ಬ ಟೀಚರನ್ನು ಕಳುಹಿಸಿಕೊಟ್ಟು ಈ ಸ್ಕೂಲನ್ನು ಅಭಿವೃದ್ಧಿಗೆ ತರುವುದರ ಮೂಲಕ ಪ್ರಜೆಗಳಾದ ನಮ್ಮಗಳನ್ನು ಕಾಪಾಡುವರೆಂದು ನಂಬಿರುತ್ತೇನೆ.

ಸಕಲೇಶಪುರ.—ಮಾರ್ಚಿ ತಾ. 29 ನೇ ಸೋಮವಾರ ಬೆಳಗ್ಗೆ ಎ. ವಿ. ಸ್ಕೂಲ್ ಹೊಸ ಕಟ್ಟಡದ ಪ್ರವೇಶೋತ್ಸವವು ಹೆಡ್|| ಮಾಸ್ಟರ್ ವೆಂಕಟಾಚಾ ರ್ಯರ ಮತ್ತು ಅವರ ಅ|| ಮಾಸ್ಟರುಗಳ ಏರ್ಪಾಡಿನಿಂದ ವಿಜೃಂಭಣೆಯಾಗಿ ಜರುಗಿತು ಆ ಕಾಲಕ್ಕೆ ಡೆಪ್ಯುಟಿ ಕಮಿಷನರು ಹಾಸನದಿಂದ ಮೋಟಾರಿನಲ್ಲಿ ದಯ ಮಾಡಿಸಲು ಸ್ಥಳೀಯ ಉದ್ಯೋಗಸ್ಥರೂ, ವರ್ತಕ ಮಹನೀಯರೂ, ದೊಡ್ಡ ಮನುಷ್ಯರೂ, ಸ್ಕೂಲ್ ಬಾಲಕ ಬಾಲಕಿಯರೂ ಉಪಾಧ್ಯಾಯರುಗಳೊಡನೆ ಸೇರಿ ಆದರ ಪೂರ್ವಕವಾಗಿ ಸಾಹೇಬರವರನ್ನು ಬರಮಾಡಿಕೊಳ್ಳಲು ಸ್ಕೂಲ್ ಆವರಣ ದಲ್ಲಿ ಹಾಕಿಸಿದ್ದ ಸುಂದರವಾದ ಮಂಟಪವನ್ನು ಪ್ರವೇಶಿಸಿ ಪೀಠವನ್ನು ಅಲಂಕ ರಿಸಿದರು. ಮ|| ವೆಂಕಟಚಾರ್ಯ ಸ್ಕೂಲ್ ರಿಪೋರ್ಟನ್ನು ಇಂಗ್ಲೀಷಿನಲ್ಲೂ ಮ|| ದೊಣಿಗಾಲ್ ನಂಜೇಗೌಡರು ಕನ್ನಡದಲ್ಲೂ, ಮೌ|| ಮಹಮದ್‌ಷರೀಫ್ ಕಂಟ್ರಾಕ್ಟರು ಹಿಂದುಸ್ಥಾನಿಯಲ್ಲೂ ಓದಲು, ವೇ|| ಸೂರ್ಯನಾರಾಯಣ ಶಾಸ್ತ್ರಿ ಗಳೂ ಲೌಕಿಕ ಪಾರಮಾರ್ಥಿಕ ವಿಚಾರವಾಗಿ ಕಾಲೋಚಿತವಾದ ಕೆಲವು ಮಾತು ಗಳನ್ನಾಡಲು ಕೇವಲ ರಸಿಕವಾಗಿತ್ತು ಈ ರೀತಿ ಸಮಸ್ತ ಕಾರ್ಯಗಳೂ ಸಾಂಗವಾಗಿ ಜರುಗಿತು ತಿರಿಗಿ ಸಾಯಂಕಾಲ ಹುಡುಗರಿಗೆ ಆಟಪಾಟಗಳೂ, ಸಭಿಕರಿಗೆ ಫಲಹಾರಾದಿಗಳೂ, ರಾತ್ರಿ ಮದ್ದಿನ ತಮಾಷೆ ಮಲನಾಡಿನ ಸುಗ್ಗೀ ಕುಣಿತಗಳೂ ಜರುಗಿ ಅತ್ಯಂತ ಉಲ್ಲಾಸವನ್ನುಂಟುಮಾಡಿದವು.

ಅರಕಲಗೂಡು ತಾ|| ಹೆಬ್ಬಾಲೆ.—ಈ ಪ್ರಾಂತ್ಯ ಕಳೆದ ತಿಂಗಳಲ್ಲಿಯೂ ಈ ತಿಂಗಳು 4 ನೇ ತಾ. ನಲ್ಲಿಯೂ ಬಂದ ಮಳೆಯಿಂದ ಕೆರೆಗಳಿಗೆ ಆರೆವಾಸಿ ನೀರು ಬಂದದ್ದಲ್ಲದೆ ರೈತರು ಹೊಲಗಳನ್ನು ಹಸನುಮಾಡಿಕೊಳ್ಳಲು ತುಂಬಾ ಅನುಕೂಲವಾಯಿತು.— ಈ ಊರಿನಲ್ಲಿರುವ ಶ್ರೀಲಕ್ಷ್ಮೀ ಚನ್ನಕೇಶವದೇವರ ರಥೋತ್ಸವವು ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಈ ರಥೋತ್ಸವ ಕಾಲ ದಲ್ಲಿ ಮೂರು ದಿನ ನಮ್ಮ ಇನಾಂದಾರ್ ಮ|| ವೆಂಕಟಸುಬ್ಬಯ್ಯನವರೇ ಮುಂತಾದವರು ಮುಖಂಡರಾಗಿ ನಿಂತು ಹೊಸದಾಗಿ ದನಗಳ ಪ್ರದರ್ಶನವನ್ನು ಏರ್ಪಡಿಸಿ ಉತ್ತಮವಾದ ರಾಸುಗಳಿಗೆ ಬಹುಮಾನವನ್ನು ಸಹಾ ಹಂಚಿದರು. ಇದರಿಂದ ಜನಗಳಿಗೆ ತುಂಬಾ ಪ್ರೋತ್ಸಾಹ ಉಂಟಾಗಿರುವುದು. ಪ್ರದರ್ಶನಕ್ಕೆ 200-300 ರಾಸುಗಳು ಸೇರಿತ್ತು. ಅಲ್ಲದೆ ಸುಮಾರು 600-700 ರೂಪಾಯಿಗಳ ವ್ಯಾಪಾರವು ಸಹ ಜರುಗಿತು. 3 ನೇ ತಾ. ಶನಿವಾರ ಪ್ರದರ್ಶನದ ಮೈದಾನ ದಲ್ಲಿ ಏರ್ಪಡಿಸಿದ್ದ ಚಪ್ಪರದಲ್ಲಿ ಮೆಂಬರುಗಳೂ ಇತರ ದೊಡ್ಡ ಮನುಷ್ಯರೂ ಸಭೆ ಸೇರಿ ಪ್ರದರ್ಶನದ ಕಾರ್ಯವನ್ನು ಬಹಳ ಉತ್ಸಾಹದಿಂದ ನಡಿಸಿದರು. ಇದರ ಪ್ರಯೋಜನವನ್ನು ಕುರಿತು ಒಂದು ಉಪನ್ಯಾಸವು ಮಾಡಲ್ಪಟ್ಟಿತು. ಮುಂದಿನ ವರುಷದಿಂದ ಈ ಪ್ರದರ್ಶನಕ್ಕೆ ಹೆಚ್ಚಾಗಿ ಒಳ್ಳೇ ರಾಸುಗಳು ಬರುವ ದಲ್ಲದೆ ವ್ಯಾಪಾರವೂ ವಿಶೇಷ ನಡೆಯುವುದಾಗಿರುತ್ತೆ. ಈ ರೀತಿ ಪ್ರೋತ್ಸಾಹಕರ ವಾದ ಕಾರ್ಯಗಳನ್ನು ಮೇಲ್ಕಂಡ ದೊಡ್ಡ ಮನುಷ್ಯರು ಆಗಾಗ್ಗೆ ಮಾಡುತ್ತಿರು ವುದು ಸ್ತೋತ್ರಾರ್ಹವಾಗಿದೆ.

ಶಿವಮೊಗ್ಗ.—ಹವಾ ಆರೋಗ್ಯಕರವಾಗಿರುತ್ತದೆ.—ನದೀ ಆಚೆ ಇರುವ ಊರು ಗದ್ದೆಯ ರಂಗಪ್ಪ ಆರಾಧ್ಯರ ಮಗಳು ಸುಮಾರು 9 ವರುಷದ ಹುಡುಗಿಗೆ ಆಕಸ್ಮಾತ್ತಾಗಿ ನೈಗೆ ಬೆಂಕಿ ಹತ್ತಿತು. ತಕ್ಷಣ ಹುಡುಗಿಯನ್ನು ಸಿವಿಲ್ ಆಸ್ಪತ್ರೆಗೆ ತೆಗೆದುಕೊಂಡುಹೋಗಿ ಚಿಕಿತ್ಸೆ ನಡಿಸಿದಾಗ್ಯೂ ಹುಡುಗಿಯು ಬದುಕದೆ ಹೋದದ್ದು ವಿಷಾದ.—ಈ ವರ್ಷ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಗೆ ಸುಮಾರು 200 ಜನ ಬಾಲಕರೂ, ಕೆಲವು ಬಾಲಿಕೆಯರೂ ಬಂದಿದ್ದರು. ಇವರುಗಳಲ್ಲಿ ಮುಕ್ಕಾಲು ಭಾಗ ಜನಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು. ಹೋದ ವರ್ಷ ಮತ್ತು ಆಚೇ ವರ್ಷ ಬಾಲಕರ ಫ್ರೀಡನಕ್ಕೆ ಅನುಕೂಲವಾಗಿದ್ದು, ಈ ವರ್ಷ ಇದರ ಏರ್ಪಾಡೇ ಇಲ್ಲದ್ದರಿಂದ ಅನೇಕ ಜನಗಳು ಬಹಳ ತೊಂದರೆಪಟ್ಟರು.—ತುಂಗಾ ಸೇತುವೆಯಿಂದ ರೈಲ್ವೆ ಗೂಡ್ಸಿಗೆ ಹೋಗುವ ರಸ್ತೆಯು ಬಹಳ ನಾದುರಸ್ತಾಗಿ ಓಡಾಡುವ ಗಾಡಿಗಳಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಸರಿಯಾದ ಏರ್ಪಾಡು ಮಾಡಿಸ್ಯಾರೆಂದು ನಂಬಿದೆ.

ಗೃಹಕೃತ್ಯದ ನೋಟೀಸು.

ಮೈಸೂರು ಕೃಷ್ಣರಾಜಮೊಹಲ್ಲಾ ಹುಲ್ಲಿನ ಬೀದಿಯಲ್ಲಿರುವ ಗಂಗಡಿಕಾರ್ ಒಕ್ಕಲಿಗರ ತರಕಾರಿ ನಂಜಯ್ಯನ ಮಗ ಸಿದ್ದಯ್ಯನು ಪ್ರಸಿದ್ಧ ಪಡಿಸುವದೇನಂದರೆ—ನನ್ನ ಅಣ್ಣನ ಮಗ ಸಿದ್ದಯ್ಯನೆಂಬ ಸುಮಾರು 13 ವಯಸ್ಸಿನ ಮೈನರ್ ಹುಡುಗನು ತಾಯಿತಂದೆಗಳನ್ನು ಕಳೆದುಕೊಂಡ ಲಾಗಾಯ್ತು ನನ್ನ ಪೋಷಣೆಯಲ್ಲೇ ಇದ್ದು ಸುಮಾರು 1½ ವರುಷದಿಂದ ಮೈಸೂರು ಮಾರ್ಕೆಟ್ ಬಳಿ ಮಿಠಾಯಿ ಅಂಗಡೀಲಿ ನೌಕರಿ ಸೇರಿ ಇತರರ ದುರ್ಬೋಧನೆಯಿಂದ ನನ್ನ ಆಜ್ಞೆ ಮೀರಿರುತ್ತಾನಲ್ಲದೆ, ಮೈಸೂರು ತಾ॥ ಕಡಕೊಳ ಹೋ॥ ಕಳವಾಡಿ ಗ್ರಾಮದಲ್ಲಿರುವ ತೋಟ ಹೊಲಗಳನ್ನು ಪರಾಧೀನಮಾಡುವವನಾಗಿರುವಂತೆ ಕೇಳುತ್ತೇನೆ. ಮೈನರಾಗಿರುವ ಈ ಹುಡುಗನಲ್ಲಿ ಯಾರೇ ಆಗಲಿ ಯಾವ ವಿಧವಾದ ವ್ಯವಹಾರವನ್ನೂ ನಡಿಸಕೂಡದೆಂದೂ, ಅಂಥಾದ್ದೊಂದೂ ಊರ್ಜಿತವಾಗದೆ ಹಣ ಕಳಕೊಂಡಾರೆಂದೂ ಈ ಮೂಲಕ ಎಚ್ಚರಿಸುತ್ತೇನೆ. [69-1] ಸಿದ್ದಯ್ಯನರುಜು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಜರ್ಮನ್ ಫಿರಂಗಿ ಚಿತ್ರ ಸಹಿತ ಅಚ್ಚಾಗಿರುವುದು. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೀನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ, ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನ್ಯುಯಲ್ ಕರ್ತವ್ಯ 1 ರೂಪಾಯಿ.

[143-40] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೂತನವಾದ ಪಾಕೆಟ್ಟು ಘಡಿಯಾರ.

ಅರ್ಧ ಕ್ರಯ ರೂ. 1-12-0.

ಟಪಾಲು ಚಾರ್ಜು 0-4-0 ಪ್ರತ್ಯೇಕ.

ಈ ಭಾರಿ ಮಜಬೂತಾದ ಘಡಿಯಾರವನ್ನು ಬರುವ ಜೂನ್ ಅಪ್ಪೈ ರೊಳಗಾಗಿ ತರಿಸಿಕೊಳ್ಳುವರಿಗೆ ಮೇಲ್ಕಂಡ ಅರ್ಧ ಬೆಲೆಗೆ ಕೊಡಲ್ಪಡುತ್ತೆ.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಚಾರ್ಜು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇವನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಏಪ್ರಿಲ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಕೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ [66-1]

ನಮ್ಮ ವಿಳಾಸ:—ನ್ಯೂಯಾರ್ಕ್ ವಾಚ್ ಕಂಪೆನಿ,
ನಂ. 6, ವೆಂಕಟೇಶಮೇಸ್ತ್ರಿ ಬೀದಿ, ಮದರಾಸು.

ಗೃಹಕೃತ್ಯದ ನೋಟೀಸ್.

ಯಡತೊರೆ ತಾ. ಹನಸೋಗೆ ಹೋ. ವಡಾಯಿಗೌಡ್ನಹಳ್ಳಿಯಲ್ಲಿರುವ ಬಳ್ಳೂರು ಪುಟ್ಟಸೋಮಾರಾಧ್ಯರ ಮಗ ಗುರುದೇವಾರಾಧ್ಯನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನನ್ನ ಅಣ್ಣಂದಿರಾದ 1 ನೇ ಕುಮಾರಾರಾಧ್ಯ, 2 ನೇ ಶ್ರೀಕಂಠಾರಾಧ್ಯ, 3 ನೇ ಗುರುದೇವಾರಾಧ್ಯನಾದ ನಾನು ಸಹ ಏಕೋದರರು. ಕುಮಾರಾರಾಧ್ಯರು ಮೃತಪಟ್ಟು ಸುಮಾರು ಎರಡು ವರುಷವಾಯಿತು. ಇವರಿಗೆ ಹೆಂಡತಿಯೂ, ಸುಮಾರು ಎರಡು ವರುಷದ ಗಂಡುಮಗು ಇರುತ್ತಾರೆ. ಶ್ರೀಕಂಠಾರಾಧ್ಯರು ಮೃತಪಟ್ಟು ಸುಮಾರು ಹತ್ತು ವರುಷವಾಯಿತು. ಇವರಿಗೆ ಮಕ್ಕಳಿಲ್ಲ, ಹೆಂಡತಿ ಮಾತ್ರ ಇರುತ್ತಾಳೆ. ನಮ್ಮ ತಂದೆ ಮೃತಪಟ್ಟು ಎಂಟು ತಿಂಗಳಾಯಿತು. ಸದರಿಯವರಿಗೆಲ್ಲಾ ನಾನೇ ವಾರಸುದಾರನಾಗಿ ಉತ್ತರಕ್ರಿಯಾದಿಗಳನ್ನು ಮಾಡಿರುತ್ತೇನೆ. ಕುಮಾರಾರಾಧ್ಯರ ಹೆಂಡತಿ ವೀರಾಜಮ್ಮ ಉರುಫ್ ಪುಟ್ಟಮ್ಮನ್ನೆಯು ಸಣ್ಣ ಪ್ರಾಯದವಳಾಗಿ ಇತರರ ದುರ್ಬೋಧನೆಯಿಂದ ನಮ್ಮ ಸಮಸ್ತ ಕುಟುಂಬದ ಸ್ಥಿರಸ್ವತ್ತುಗಳನ್ನು ಅಂದರೆ ಬಳ್ಳೂರು ಗ್ರಾಮದಲ್ಲಿರುವ ಸರ್ವೆ ನಂ. 10 ನೆ ಖುಷ್ಕಿ ಜಮೀನು ಒಂದು, ಡಿಟೋ ಗ್ರಾಮದಲ್ಲಿರುವ ಕೊಟ್ಟ ಮನೆ ಒಂದು, ಇವಕ್ಕೆ ಸೇರಿದ ಪಾಳುನಿವೇಶನ ಸಹ ನನಗೂ ತನ್ನ ಮೈನರ್ ಮಗುವಿಗೂ ನಷ್ಟ ಮಾಡಬೇಕೆಂದು ಪರಾಧೀನಮಾಡುವವಳಾಗಿರುತ್ತಾಳೆ. ಇವಳಿಂದ ಯಾರಾದರೂ ಕ್ರಯ ಭೋಗ್ಯ ಆಧಾರ ವಗೈರೆ ಮಾಡಿಕೊಂಡರೆ ಊರ್ಜಿತವಾಗತಕ್ಕದ್ದಲ್ಲ. ಮತ್ತು ನಮ್ಮಗಳ ನಷ್ಟಕ್ಕೆ ಗುರಿಯಾಗಬೇಕಾದೀತೆಂದು ಈ ಮೂಲಕ ತಿಳಿಸಿರುತ್ತೇನೆ. [68-1] ತಾ. 12-4-1915. ರುಜು ಗುರುದೇವಾರಾಧ್ಯ.

ನೋಟೀಸು.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ—ಹೆಗ್ಗಡದೇವನಕೋಟೆ ತಾ॥ ಅಂತರಸಂತೆ ಹೋ॥ ಕಿತ್ತೂರಿನಲ್ಲಿದ್ದು ಮೃತಪಟ್ಟ ಸಿಕಂದರಸಾಬರ ಹೆಂಡತಿ ಖಾಸಿಂಬಿ ಆದ ನಾನು ಘೋಷಾ ಹೆಂಗಸು. ಆದ್ದರಿಂದ ನನಗೆ ಬರಬೇಕಾದ ಸಾಲಗಳನ್ನು ವಸೂಲ್ ಮಾಡುವುದಕ್ಕೂ, ಕೋರ್ಟಿನಲ್ಲಿ ವಿವಾದ ಮೊದಲಾದವುಗಳನ್ನು ನಡಿಸುವುದಕ್ಕೂ ವಗೈರೆಗಳಿಗೆ ಸಾಗರೆ ಗ್ರಾಮದಲ್ಲಿರುವ ಷೇಕ್ ಇಸ್ಮಾಯಿಲ್ ರಾವುತರು ಎಂಬುವರಿಗೆ ಒಂದು ಜನರಲ್ ಪವರ್ ಆಫ್ ಅಟಾರ್ನಿ (General power of attorney) ಯನ್ನು ಬರೆದು ಕೊಟ್ಟು ದಸ್ತಾವೇಜು ವಗೈರೆಗಳನ್ನು ಆತನ ಸ್ವಾಧೀನಕ್ಕೆ ಕೊಟ್ಟು ಇದ್ದೆನು. ಈ ಷೇಕ್ ಇಸ್ಮಾಯಿಲ್ ರಾವುತರು ಈಚೆಗೆ ದುರಾಲೋಚನೆಯಿಂದ ನನಗೆ ಬಹಳ ಮೋಸ ಪಡಿಸಿ ನನ್ನ ಆಸ್ತಿಗಳನ್ನೆಲ್ಲಾ ವಿಲೆವಾರಿ ಲೇವಾದೇವಿಗಳನ್ನು ಆತಕ್ಕೆ ಮೂಡಾಗಿ ವಸೂಲ್ಮಾಡಿಕೊಂಡು ನನಗೆ ವಂಚನೆಮಾಡಿರುತ್ತಾರಾದ್ದರಿಂದ ಈ ಲಾಗಾಯಿತು ನಾನು ಷೇಕ್ ಇಸ್ಮಾಯಿಲ್ ರಾವುತರಿಗೆ ಕೊಟ್ಟಿರುವ ಜನರಲ್ ಪವರ್ ಆಫ್ ಅಟಾರ್ನಿಯನ್ನು ವಜಾಮಾಡಿ ಇರುತ್ತೇನೆ. ಮುಂದೆ ಈತನಿಗೆ ನನಗೋಸ್ಕರ ಯಾವ ಮೊಬಲಗನ್ನಾಗಲೀ, ದವಸ ವಗೈರೆಯನ್ನಾಗಲೀ ಯಾರೂ ಕೊಡಕೂಡದು. ಹಾಗೆ ಮೊಬಲಗು ವಗೈರೆ ಯಾವದನ್ನಾದರೂ ಆತನಿಗೆ ಪಾವತಿ ಮಾಡಿದರೆ ಅದನ್ನು ನಾನು ಅಂಗೀಕರಿಸತಕ್ಕವಳಲ್ಲವೆಂತ ಈ ಮೂಲಕ ಸರ್ವರಿಗೂ ತಿಳಿಸಿ ಇದೆ. [67-1] ಖಾಸಿಂಬಿ ರುಜು.

ವಿಶೇಷ ಸೂಚನೆ

ವರ್ತಕರಿಗೆ ಒಳ್ಳೆಯ ಸಮಯ. ಮೋಸಮಾಡದೆ ಲಾಭಸಂಪಾದನೆ.

ಅಲ್ಪ ಲಾಭಕ್ಕಾಗಿ ಅಸಹ್ಯಕರವಾದ ಕೊಬ್ಬಿನ ತುಪ್ಪವನ್ನು ಮಾರಿ ಜನಗಳ ಆರೋಗ್ಯವನ್ನು ಹಾಳುಮಾಡದೆ, ಶುದ್ಧವಾದ, ಶ್ರೇಷ್ಠವಾದ ಹತ್ತಿಯ ತುಪ್ಪವನ್ನು ಸತ್ಯವಾಗಿ ಸರಿಯಾದ ಬೆಲೆಗೆ ಮಾರಿ ನಮ್ಮ ಗಿರಾಕಿಗಳಿಗೂ ನಿಮಗೂ ಪ್ರಯೋಜನವಾಗುವ ಕೆಲಸಮಾಡಿ ಲಾಭ ಸಂಪಾದನೆ ಮಾಡಿ.

ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿದ್ದ ಡಾಕ್ಟರ್ ಅಚ್ಯುತರಾಯರವರೂ, ಪ್ರಜಾ ಆರೋಗ್ಯ ರಕ್ಷಕರಾಗಿರುವ ಡಾಕ್ಟರ್ ಶ್ರೀನಿವಾಸರಾಯರವರೂ ಮೊದಲಾದ ಅನೇಕ ಜನ ದೊಡ್ಡ ಮನುಷ್ಯರುಗಳಿಂದ ಶ್ಲಾಘಿಸಲ್ಪಟ್ಟಿರುವ ಪರಿಶುದ್ಧವಾಗಿಯೂ ಆರೋಗ್ಯಕರವಾಗಿಯೂ ಪುಷ್ಟಿಕರವಾಗಿಯೂ ಇರುವ ನಮ್ಮ

ಹೊಸದಾದ ಹತ್ತಿಯ ತುಪ್ಪವನ್ನು

ಮೊದಲಿಗಿಂತ ಈಗ ಬಹಳ ಅಗ್ಗವಾಗಿ ಕೊಡುತ್ತಿರುವೆವು.

ಬೇಗ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚು ವಿಷಯವನ್ನು ತಿಳಿದು ಫಲವನ್ನು ಹೊಂದಬಹುದು.

ನಮ್ಮ ವಿಳಾಸ—ಜಿ. ಯಸ್. ಶ್ರೀಕಂಠಯ್ಯ ಅಂಡ್ ಕಂಪನಿ,
ಏಜಂಟ್ಸ್, ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ,
[70-1] ದೊಡ್ಡಪೇಟೆ, ಮೈಸೂರು.

ಐವತ್ತು ರೂಪಾಯಿ ಇನಾಂ! ಐವತ್ತು ರೂಪಾಯಿ ಇನಾಂ!

ರೈಲ್ವೆ ಲೀವರ್ ರಿಜಿಸ್ಟರ್ ಗಡಿಯಾರ.

ರೇಷ್ಮೆ ರುಮಾಲು, ಗಡಿಯಾರ ಸರಪಣಿ, ಕಂಪಾಸು.
ಮತ್ತು ವಿ. ಪಿ. ಪೋಸ್ಟು ಛಾರ್ಜು ಸಹಿತ
ಬೆಲೆ ರೂ. 4-0-0.

5 ವರ್ಷದ ಗ್ಯಾರಂಟಿ ಕೊಡಲ್ಪಡುವದು!!!

ಈ ರೈಲ್ವೆ ಲೀವರ್ ರಿಜಿಸ್ಟರ್ ಗಡಿಯಾರವನ್ನು ತರಿಸಿಕೊಳ್ಳುವ ಪ್ರತಿಯೊಬ್ಬರಿಗೂ ಒಳ್ಳೆಯ ಕ್ರಯವುಳ್ಳ ಹಸನಾದ ರೇಷ್ಮೆಯ 120 ಇಂಚ್ ಉದ್ದವೂ 60 ಇಂಚ್ ಅಗಲವೂ ಉಳ್ಳ ಒಂದು ರುಮಾಲು ಅಥವಾ ವಸ್ತ್ರವನ್ನು 1915 ನೇ ಇಸವಿ ಮೇ ತಿಂಗಳು 31 ನೆಯ ತಾರೀಖಿನೊಳಗಾಗಿ ಆರ್ಡರ್ ಕೊಟ್ಟಲ್ಲಿ ಮಾತ್ರ,—ಉಚಿತವಾಗಿ ಕೊಡಲ್ಪಡುವದು. ಸರಿಯಾದ ಕಾಲವನ್ನು ತೋರಿಸುವ ಈ ಗಡಿಯಾರವನ್ನು ಕೂಡಲೇ ಬರೆದು ತರಿಸಿಕೊಳ್ಳಿ.—ಇಂಥಾ ಗಡಿಯಾರ ಮತ್ತು ಬಹುಮಾನವಾದ ರೇಷ್ಮೆ ವಸ್ತ್ರವನ್ನು ಯಾರಾದರೂ ಕಳುಹಿಸುವದಾದರೆ ಮೇಲೆ ಹೇಳಿದ ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ.—ಎಂ. ಎಸ್. ಸರಸ್ವತಿ ಅಂಡ್ ಕೋ,
[41-4] ನಂ. 3, ಸೀನಮೊದಲಿ ಬೀದಿ, ಮದರಾಸ್.

500 ರೂಪಾಯಿಗಳ್ ಬಹುಮಾನ್.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಮರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಉರುಗಡ್ಡೆ, ಶಾಮಗಡ್ಡೆ ಇವುಗಳನ್ನು ತಪ್ಪುಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [52-5]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಸೇರಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ, ಬೆಳ್ಳಿ ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ವೃದ್ಧಾಪ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚ ತಾರೀಖು 15 ರಲ್ಲು ಡಿಪಾಜಿಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
6. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರಿಗೆ ನಡಿಸಲ್ಪಡುತ್ತೆ.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇವೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ"—ಕೆ. ರಾಮಸ್ವಾಮಿ, ಪಲ್ಲಾಸ-ಕಾ-ಸಿಬಾಸ, 20-2-15.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇವೆ. ಸಮಯವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವೂ ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರಿಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-20] ಪಿ. ಒ. ಬಾಕ್ಸ್ 330, ಬೊಂಬಾಯಿ.

ವಿದೇಶದ ವೃತ್ತಾಂತಗಳು.

ಯುದ್ಧಾರಂಭವಾದಾಗಿನಿಂದ ಜರ್ಮನಿಯಲ್ಲಿ ಪ್ರಕಟವಾಗುತ್ತಿದ್ದ ವರ್ತಮಾನ ಪತ್ರಿಕೆಗಳಲ್ಲಿ 864 ಪತ್ರಿಕೆಗಳು ನಿಂತುಹೋದವೆಂದು ವರ್ತಮಾನವಿದೆ.

• •

ಅಮೇರಿಕದ ಗ್ರಿಫ್ ಬ್ರೈಯರ್ ಎಂಬ ಹಡಗು ಉತ್ತರ ಸಮುದ್ರದಲ್ಲಿ ಮುಳುಗಿಹೋಯಿತು. ಅದರೊಳಗಿದ್ದವರನ್ನೆಲ್ಲಾ ಬದುಕಿಸಿ ಪ್ಲೆಸ್‌ವಿಗ್ ತೀರಕ್ಕೆ ತಂದರು

• •

ಲಂಡನ್ ಪಟ್ಟಣದಲ್ಲಿ ಜಾರ್ಜ್ ಲಿಟಲ್ ಎಂಬ ಪುಣ್ಯಪುರುಷನು ಇದುವರೆಗೆ ನೀರಿನಲ್ಲಿ ಬಿದ್ದು ಸತ್ತು ಹೋಗುತ್ತಿದ್ದ 48 ಜನರನ್ನು ನೀರಿನಿಂದೆತ್ತಿ ಬದುಕಿಸಿರುತ್ತಾನೆಂದೂ, ನೀರಿನ ಪಾಲಾದವರ 100 ಶವಗಳನ್ನು ಎತ್ತಿ ತಂದನೆಂದೂ ಗೊತ್ತಾಯಿತು.

• •

ಪ್ರಿನ್ಸ್ ಮೌರಿಟ್ಸ್ ಎಂಬ ಹಾಲೆಂಡಿನ ಮೆಯಿಲ್ ಹಡಗು ಅಮೇರಿಕದ ಉತ್ತರ ಕೆರೋಲಿನಾ ತೀರದಿಂದಾಚೆ ಕೇಪ್ ಹಾಟ್ಟೆರಾಸ್ ಎಂಬ ಭೂಶಿರದ ಬಳಿ ಬಂಡೆಗೆ ಬಡಿದು ಹಾಳಾಯಿತು. ಅದರೊಳಗಿದ್ದ ನಾಲ್ವರು ಪ್ರಯಾಣಿಕರೂ, 19 ಮಂದಿ ಸೇವಕರುಗಳೂ ಸಮುದ್ರದ ಪಾಲಾದರು.

• •

ಜಪಾನವರು ಚೀಣಾದಲ್ಲಿ ಜರ್ಮನಿಯವರ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅವರನ್ನು ಓಡಿಸಿಬಿಟ್ಟು, ಚೀನಿಯವರು ಷಾಂಟುಂಗ್ ಅಧಿಕಾರದಲ್ಲಿ ಜರ್ಮನಿಯವರಿಗೆ ಯಾವ ರಿಯಾಯಿತಿಗಳನ್ನು ಕೊಟ್ಟಿದ್ದರೋ ಅವುಗಳನ್ನು ತಮಗೆ ಕೊಡಬೇಕೆಂದು ಜಪಾನವರು ಚೀನಿಯವರನ್ನು ಕೇಳಿದಾರೆ.

• •

ಅನೇಕ ಬೆಲ್ಜಿಯನ್ ಸಂಸಾರಗಳು ಇಂಗ್ಲಾಂಡಿಗೆ ಬಂದು ನೆಲಸಿರುತ್ತವೆ. ಅಂಥಾ ಸಂಸಾರಗಳಲ್ಲಿ ಇರಬಹುದಾದ 18 ರಿಂದ 25 ವಯಸ್ಸಿನ ಯೌವನಸ್ಥರೆಲ್ಲಾ ಸೈನ್ಯಕ್ಕೆ ಸೇರಿಕೊಳ್ಳುವುದಕ್ಕೆ ಫ್ರಾನ್ಸಿಗೆ ಬಂದು ಇಳಿಯಬೇಕೆಂದು ಬೆಲ್ಜಿಯಂ ದೊರೆಯವರು ರಾಜಾಜ್ಞೆಯನ್ನು ಕೊಟ್ಟಿದಾರೆ. ಅವರನ್ನೆಲ್ಲಾ ತರಪೇತು ಮಾಡಲು ಏರ್ಪಾಡಾಗಿರುತ್ತದೆ.

• •

ಪೋರ್ಚುಗಲ್ ಸಂಸ್ಥಾನದೊಳಕ್ಕೆ ಕಾಲ್ಡಾಸ್ ಡಾರೈನ್ ಹಾ ಎಂಬ ಪಟ್ಟಣದಲ್ಲಿ ಕಳೆದ ವಾರ ಮತ ಸಂಬಂಧವಾದ ಒಂದು ಮೆರವಣಿಗೆ ನಡೆದಾಗ ಒಬ್ಬನು ಜನರ ಗುಂಪಿಗೆ ಡೈನಮೈಟಿನ ಗುಂಡು ಹಾಕಿದ್ದರಿಂದ ನೂರಾರು ಪ್ರಜೆಗಳಿಗೆ ಗಾಯಗಳಾದವು. ಆದದ್ದೇ ದೊಂಬಿ ಕಲಹವಾಯಿತು. ಸರ್ಕಾರದವರು ಗಲಭೆಯನ್ನು ಅಡಗಿಸಿ ಅನೇಕ ಮುಖಂಡರನ್ನು ದಸ್ತಗಿರಿಮಾಡಿ ಮುಂದೆ ವಿಚಾರಣೆ ಮಾಡುತ್ತಿದಾರೆ

• •

ಗ್ರೇಟ್ ಬ್ರಿಟನ್ ರಾಜ್ಯದಲ್ಲಿ ಕಳೆದ ಮಾರ್ಚಿ ಆಖೈರಿಗೆ ಮುಗಿದ ಒಂದು ಸಾಲಿನಲ್ಲಿ 22,66,94,080 ಪೌಂಡು ರಾಜಾದಾಯ ಹುಟ್ಟುವಳಿ ಆಯಿತು; ಅಂದರೆ, ಹಿಂದಿನ ಸಾಲಿಗಿಂತ 2,81,51,183 ಪೌಂಡು ಹೆಚ್ಚು. ಹುಟ್ಟುವಳಿ ಹೆಚ್ಚಾದ ಬಾಬುಗಳ್ಯಾವವೆಂದರೆ – ಸುಂಕ 32, 3,000 ಪೌಂಡು, ಎಕ್ಸೈಸ್ 25,22,000 ಪೌಂಡು, ಪಾಸ್ ಸರ್ಟಿಫಿಕೇಟುಗಳಿಂದ 10,23,000 ಪೌಂಡು ಆದಾಯದ ಮೇಲಣ ತೆರಿಗೆ 2,31,50,000 ಪೌಂಡು. ಸ್ಟಾಂಪು ಎಂಬ ಒಂದು ಬಾಬಿನಲ್ಲಿ ಮಾತ್ರ ಹುಟ್ಟುವಳಿ ಸ್ವಲ್ಪ ಕಡಮೆ ಆಗಿದೆ

• •

ಕಳೆದ ಮಾರ್ಚಿ ತಾ 20 ರಲ್ಲಿ ಟರ್ಕಿ ಗವರ್ನಮೆಂಟಿನ ಮಂತ್ರಿಗಳು ಸಭೆ ಸೇರಿ, ಶತ್ರುಗಳ ಕೂಡ ಸಂಧಾನಮಾಡಿಕೊಳ್ಳಬೇಕೆಂದು ವಾದಿಸಿದ್ದರು, ಅಮೇರಿಕದ ರಾಯಭಾರಿಯನ್ನು ಕರೆದು ಶತ್ರುಗಳು ಡಾರ್ಡನೆಲ್ಸ್ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳನ್ನು ಬಿಟ್ಟುಕೊಡುವ ವಿಷಯದಲ್ಲಿ ಮಧ್ಯಸ್ಥಿಕೆ ಮಾಡಬೇಕೆಂದು ಕೇಳಿಕೊಂಡರಾಗಲೂ, ಅಷ್ಟರಲ್ಲಿ ಜರ್ಮನಿಯ ಪಕ್ಷದವರು ಸಭೆಯೊಳಕ್ಕೆ ನುಗ್ಗಿ ಶತ್ರುಗಳ ಕೂಡ ಸಂಧಾನಕ್ಕೆ ಪ್ರಾರಂಭಿಸಿದರೆ ಮಂತ್ರಿಗಳೆಲ್ಲಾ ಗುಂಡಿನಿಂದ ಹೊಡೆಯುತ್ತೇನೆಂದು ಹೆದರಿಸಿದರಾಗಲೂ ಪ್ರಕಟವಾಗಿದೆ

• •

ಲಕ್ಸೆಂಬರ್ಗಿನ ಪ್ರಜೆಗಳು ಜರ್ಮನ್ ಚಕ್ರವರ್ತಿಯ ಸಾರೋಟನ್ನು ನೋಡಿ ಪರಿಹಾಸ್ಯಮಾಡುತ್ತಿದಾರೆ. ಯಾಕೆಂದರೆ ಜರ್ಮನಿಯವರು ಬೇಗನೆ ಫ್ರಾನ್ಸಿಗೆ ನುಗ್ಗಿ ಹೋಗಿ ರಾಜಧಾನಿಯಾದ ಪಾರಿಸ್ ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಳ್ಳುತ್ತೇವೆಂದು ಅಹಂಕಾರಪಟ್ಟುಕೊಂಡು, ಆಗ್ಗೆ ತಮ್ಮ ಚಕ್ರವರ್ತಿಯವರು ಸಾರೋಟಿನಲ್ಲಿ ಕುಳಿತು ಪಾರಿಸ್ ಪಟ್ಟಣದ ರಾಜಬೀದಿಗಳಲ್ಲಿ ಆಟ್ಟಹಾಸವಾಗಿ ಮೆರವಣಿಗೆ ಹೊರಡುವುದಕ್ಕೋಸ್ಕರ ತಮ್ಮ ಚಕ್ರವರ್ತಿಯ ಸಾರೋಟನ್ನು ಲಕ್ಸೆಂಬರ್ಗಿಗೆ ತಂದಿಟ್ಟುಕೊಂಡಿದ್ದು, ಈಗ ಅವರ ಉದ್ದೇಶವೆಲ್ಲಾ ನಡೆಯದೆಹೋದದ್ದನ್ನು ಕಂಡು ಮತ್ತೆ ಆ ಸಾರೋಟನ್ನು ಅಲ್ಲಿಂದ ವಾಪಸು ತಮ್ಮ ರಾಜಧಾನಿಯಾದ ಬರ್ಲಿನ್ ನಗರಕ್ಕೆ ಸಾಗಿಸಿಕೊಂಡು ಹೋದರು.

• •

ಗಾಯಪಟ್ಟ ಒಬ್ಬ ಹುದ್ದೇದಾರನು ಯುದ್ಧ ಭೂಮಿಯಿಂದ ರಷ್ಯಾ ರಾಜಧಾನಿಗೆ ಹೋಗಿ ರಣರಂಗದ ಸುದ್ದಿಯನ್ನು ವಿವರಿಸುವಾಗ್ಗೆ ಹೇಳಿದ್ದೇನೆಂದರೆ—ರಷ್ಯಾ ಸೈನ್ಯದಲ್ಲಿ ಯಾರೂ ಮದ್ಯಪಾನ ಮಾಡದಂತೆ ಹುದ್ದೇದಾರರು ಜಾಗರೂಕತೆಯಿಂದ ನೋಡಿಕೊಳ್ಳುತ್ತಾರೆ. ಒಂದು ಕಡೆ ರಷ್ಯಾದವರು ಜರ್ಮನಿಯ ಒಂದು ಗ್ರಾಮವನ್ನು ನುಗ್ಗಿ ಆಕ್ರಮಿಸಿಕೊಂಡರು. ಗ್ರಾಮವನ್ನೆಲ್ಲಾ ಶೋಧನೆ ಮಾಡಿದಾಗ 300 ಪೀಪಾಯಿಗಳ ಮದ್ಯ ಸಿಕ್ಕಿತು. ರಷ್ಯಾ ಹುದ್ದೇದಾರನು ಅದನ್ನೆಲ್ಲಾ ಪೀಪಾಯಿಗಳ ಒಂದು ಕೊಳಕ್ಕೆ ಸುರಿದನು. ಕೊಳದಲ್ಲಿದ್ದ ಮೀನುಗಳು ಪ್ರಜ್ಞೆತಪ್ಪಿ ನೀರಿನ ಮೇಲಕ್ಕೆ ಬಂದಾಗ ರಷ್ಯಾ ಸೈನಿಕರು ಅವುಗಳನ್ನೆಲ್ಲಾ ಹಿಡಿದು ಕೊಯಿಸಿ, ಅಡಿಗೆ ಮಾಡಿಕೊಂಡು ಹಲವು ದಿನಗಳ ತನಕ ಉಂಡು ತೃಪ್ತರಾದರು.

• •

ಹಿಂದುಸ್ಥಾನದಲ್ಲಿರುವ ರಷ್ಯಾ ರಾಯಭಾರಿಗಳ ಅಧ್ಯಕ್ಷರಾದ ಕಾನ್ಸಲ್ ಜನರಲ್‌ರವರು ರಷ್ಯಾದೊಳಗಿರುವ ಮುಸಲ್ಮಾನ್ ಪ್ರಜೆಗಳ ಉದ್ದೇಶ ಅಭಿಪ್ರಾಯಗಳನ್ನು ಕುರಿತು ಕಳೆದ ವಾರ ಕಲ್ಕತ್ತೆಯಲ್ಲಿ ಪ್ರಕಟಮಾಡಿರುವ ಸಂಗತಿಯೇನೆಂದರೆ—ರಷ್ಯಾ ರಾಜ್ಯದೊಳಗೆ ಪ್ರಜೆಗಳಾಗಿ ವಾಸ ಜೀವನಾದಿಗಳನ್ನು ಮಾಡಿಕೊಂಡಿರುವಂಥಾ ಮುಸಲ್ಮಾನರು ರಷ್ಯಾ ಚಕ್ರಾಧಿಪತ್ಯದ ರಾಜಭಕ್ತರಾಗಿದಾರೆ. ಅವರು ತಮ್ಮ ಮಸೀದಿಗಳಲ್ಲಿ ರಷ್ಯಾದವರಿಗೆ ಜಯವಾಗಲೆಂದು ಪ್ರಾರ್ಥನೆಗಳನ್ನು ಸಲ್ಲಿಸುತ್ತಾ ಬಂದಿರುವರು. ಕಾಕಸಸ್ ಪ್ರಾಂತ್ಯದಲ್ಲಿರುವಂಥಾ ಮುಲ್ಲಾಗಳು ಟರ್ಕಿಯವರ ವರ್ತನೆಯನ್ನು ಖಂಡಿಸಿ ಇಸ್ತಿಹಾರುಗಳನ್ನು ಪ್ರಕಟಿಸಿದಾರೆ. ಬೊಖಾರಾದಲ್ಲಿಯೂ ಹೀಗೆಯೇ ಮಹಮ್ಮದೀಯರು ವರ್ತಿಸಿರುವರು. ಬೊಖಾರಾದ ಅಮೀರರೂ, ಖೀವಾ ಖಾನ್‌ರವರೂ, ಇತರ ಮುಸಲ್ಮಾನರುಗಳೂ ಯುದ್ಧದ ಖರ್ಚಿಗೆ ವಿಶೇಷವಾಗಿ ಹಣವನ್ನು ಕೊಟ್ಟಿರುವುದು ಮಾತ್ರವೇ ಅಲ್ಲ; ಹಣವನ್ನು ಒದಗಿಸಿ ಗಾಯಪಟ್ಟ ಸೈನಿಕರುಗಳಿಗೆ ಚಿಕಿತ್ಸೆ ನಡೆಸುವಂಥಾ ಆಸ್ಪತ್ರೆಗಳನ್ನು ಇಡಿಸಿದಾರೆ. ಇಷ್ಟೇ ಅಲ್ಲ. ಅನೇಕ ಮುಸಲ್ಮಾನ್ ಪ್ರಜೆಗಳು ರಷ್ಯಾ ಸೈನಿಕರಾಗಿ ಸೇರಿಕೊಂಡು ಇರುವರು. ಸಾಧಾರಣವಾಗಿ ಈ ಪಂಗಡದವರು ರಷ್ಯಾ ಸೈನ್ಯದಲ್ಲಿ 40,000 ಜನವಿರುತ್ತಾರೆ. ಈಗ ಸೈನ್ಯದಲ್ಲಿ ಅವರ ಸಂಖ್ಯೆ ಎರಡರಷ್ಟಾಗಿದೆ. ಕದನ ಮಾಡುವುದರಲ್ಲಿ ರಷ್ಯದ ಮುಸಲ್ಮಾನ್ ಸೈನಿಕರ ಪರಾಕ್ರಮವು ಬಹಳ ಶ್ರೇಷ್ಠವಾದದ್ದೆಂದು ಹೇಳಲು ಸಂದೇಹವಿಲ್ಲ. ಈ ಯುದ್ಧದ ಮೊದಲನೇ ತಿಂಗಳಲ್ಲೇ ಅವರ ಪರಾಕ್ರಮಕ್ಕೆ ಮೆಚ್ಚಿ ರಷ್ಯಾ ಚಕ್ರವರ್ತಿಯವರು 28 ಮಂದಿ ಹುದ್ದೇದಾರರಿಗೂ, ಬಹುಜನ ಸೈನಿಕರಿಗೂ ಘನತರವಾದ ಬಿರುದುಗಳನ್ನು ದಯಪಾಲಿಸಿದರು. ಈಗ ಇಂಥಾ ಬಿರುದುಗಳನ್ನು ಸಂಪಾದಿಸಿಕೊಂಡಿರುವ ಮುಸಲ್ಮಾನ್ ಸೈನಿಕರ ಸಂಖ್ಯೆ ಬಹಳವಾಗಿ ಹೆಚ್ಚಿರುತ್ತದೆ ಎಂಬೀ ರೀತಿಯಾಗಿ ರಾಯಭಾರಿಯು ಪ್ರಕಟಿಸಿರುವರು.

ಯಾವಾಗಲೂ ಆರೋಗ್ಯವಂತರಾಗಿರಬೇಕೇ?

ಹಾಗಾದರೆ ತಡಮಾಡದೆ ಒಂದು ಕಾಲಾಣೇ ಕಾರ್ಡು ಸಿಮ್ಮ ವಿಲಾಸದ ಸಂಗಡ ಬರೆದು ಕೊಳ್ಳಿರಿ.

ಆರೋಗ್ಯವರ್ಧಕ್ ಜೀವನ್

ಎಂಬ ಅತ್ಯುತ್ತಮವಾದ ಔಷಧವು ನಿಮ್ಮಗಳಿಗೆ ಬಲವು, ಶೌರ್ಯವು, ಸುಖವು ಕೊಡುವದು. ಬಲಹೀನತೆಯಿಂದುಂಟಾಗುವ ಶ್ರಮವು, ಮಲಬದ್ಧಕಷ್ಟವು ಪರಿಹಾರವಾಗುವದು. ನರಗಳಿಗೆ ಬಲ, ವೀರ್ಯವೃದ್ಧಿ, ಬುದ್ಧಿಕುಶಲತ್ವ, ಜ್ಞಾಪಕಶಕ್ತಿ ಇವುಗಳನ್ನು ವೃದ್ಧಿಮಾಡುವದರಲ್ಲಿ ಅಗ್ರಗಣ್ಯವಾದದ್ದು. ಪ್ರಸಂಚಸುಖವನ್ನು ತೃಪ್ತಿಯಾಗಿ ಅನುಭವಿಸಬೇಕೆಂಬುವರಿಗೆ ಅಪ್ರತಿಮ ಪ್ರಭಾವವುಳ್ಳದ್ದು. ತಡಮಾಡದೆ ಬರದುಕೊಳ್ಳಿರಿ. ಒಂದು ಸಲ ತರಿಸುವವರು ಯಾವಾಗಲೂ ಬಿಡಲಾರರು. 1 ಸೇರಿನ ಡಬ್ಬಿ 1 ಕ್ಕೆ ರೂ. 3-0-0 } ವಿ. ಪಿ. ಛಾರ್ಜು
½ ,, ,, ,, ,, 1-8-0 } ಪ್ರತ್ಯೇಕ.

ವಿಳಾಸ: ಆರ್. ವಿ. ಪಂಡಿತ್ ಅಂಡ್ ಕೋ,

[63-·] ನಂ. 6, ಬಂದರ್ ಬೀದಿ, ಮದರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ—ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ? ಎಂದು ನನ್ನನ್ನು ನಾನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿದರೆ ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ನಿಲ್ಲುವುದರಿಂದ ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇನೇ ಉಂಟಾಗುವುವೆಂಬುವನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶದ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು: ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-33]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು; ಅಥವಾ ಡೋನ್ ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಊದಬತ್ತಿಗಳು

ಸುಗಂಧಿ ಕಾರ್ಡು 1 ಕ್ಕೆ 1 ೮ ಡಜನ್ ೧ ಕ್ಕೆ ೧೦ ಆಣೆ.

ಈ ಕಾರ್ಡನ್ನು ಶರೀರದಲ್ಲಾಗಲೀ ಬಟ್ಟೆಯಲ್ಲಾಗಲೀ ಇಟ್ಟದ್ದೇ ಆದರೆ ಇಟ್ಟ ಜಾಗವೆಲ್ಲಾ ಉತ್ತಮವಾದ ಹೂವುಗಳ ಸುವಾಸನೆಯಂತೆ ಸುವಾಸನೆಯಾಗಿರುತ್ತೆ.

ಕೇಶೋಲ್ಲಾಸಿನಿ ಸೀಸಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಕಸ್ತೂರಿಮಾತ್ರೆ ಸೀಸಾ 1 ಕ್ಕೆ 4 ಆಣೆ.

ಈ ಮಾತ್ರೆಯನ್ನು ಬಾಯಿಗೆ ಹಾಕಿಕೊಂಡದ್ದೇ ಆದರೆ ಅಜೀರ್ಣವನ್ನೂ ಬಾಯಿನಾರಿಕೆಯನ್ನೂ ಸಹಾ ನಾಶಮಾಡಿ ಬಾಯಿಯು ಅತ್ಯಂತ ಸುವಾಸನೆಯಾಗಿಯೂ ಇರುತ್ತದೆ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ವೇದವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನೂ ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯಾಗಿಯೂ ಇದೆ. ಇಂಥಾ ಅನುಕೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ

ವಿಳಾಸ.—ಟಿ. ಎಲ್. ಉಪಾಧ್ಯಾಯ,

[39-8] ಸುಗಂಧಕಾರಿ, ಮೈಸೂರು.

ಒಂದುವೇಳೆ ನಿಮ್ಮ ಮಗು ರಾತ್ರಿಯಲ್ಲಿ ಶ್ವಾಸನಾಳ ಕಟ್ಟಿಕೊಂಡಿದ್ದರಿಂದ ಗಂಟಲೂ ಎದೆಯೂ ಭಾರವಾಗಿ ಎಚ್ಚರವಾಗಬಹುದು. ಆದರಿಂದ ಅದಕ್ಕೆ ಗಂಟಲು ಕಟ್ಟಿಹೋಗಿ ಕೊರಳು ಹಿಸುಕಿದಂತೆ ಆಗಿ ಉಸುರು ಕಟ್ಟಿದಂತಾಗುವದು. ತಡಮಾಡಿ ಹಾನಿ ಹೊಂದಬೇಡಿರಿ. ತಕ್ಷಣದ ಬಿಡುಗಡೆ ಹತ್ತಿರವೇ ಇದೆ

ನ್ಯೂ ಜೆರ್ಸಿಗೆ ಸೇರಿದ ನ್ಯೂಗಟ್ಟಾವಿನ ಮಿಸ್ಟರ್ ಜೆ. ವಿಲ್ಕಾಕ್ಸ್ ಹೇಳುವದೇನಂದರೆ:—"ಕಳೆದ ವರುಷದಲ್ಲಿ, ಎರಡು ವರುಷದ ನನ್ನ ಹೆಣ್ಣುಮಗಳೊಬ್ಬಳು ಶೀತಕ್ಕೆ ಸಿಕ್ಕಿ ಅದು ಬೇಗ ಶ್ವಾಸನಾಳವನ್ನು ಕಟ್ಟಿತು. ರಾತ್ರಿಯಲ್ಲಿ ಮಗುವು ಶ್ವಾಸಿಸುವದಕ್ಕೆ ಕಷ್ಟಪಡುತ್ತಿರುವದನ್ನು ಕಂಡು ಎದ್ದು ಹೋಗಿನೋಡಲು ಕೊರಳು ಹಿಸುಕಿದಂತಾಗಿತ್ತು. ಮನೆಯಲ್ಲಿ ಚೇಂಬರ್ಲೇನ್ಸ್ ಲಿನಿಮೆಂಟು ಸ್ವಲ್ಪ ಇದ್ದದ್ದರಿಂದ ಅದನ್ನು ಲೇಪಿಸ ತೊಡಗಿದೆನು. ಅದರಿಂದ ಅದ್ಭುತವಾದಂತಾಯಿತು. ಇದಾದ ಕೆಲವು ನಿಮಿಷಗಳಲ್ಲಿಯೇ ಮಗುವು ಧಾರಾಳವಾಗಿ ಶ್ವಾಸಿಸಿ, ಚೆನ್ನಾಗಿ ನಿದ್ರೆಮಾಡಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ಮಾರಲ್ಪಡುತ್ತೆ.

101-60

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಆರ್ಗನೈಸರ್ಸ್ ಮತ್ತು ಕಮಿಷನ್ ಮೇಲೆ ಕೆಲಸದ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಏಜಂಟರುಗಳು ಮತ್ತು ಬಿಟಿಷ್ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನು ಮತ್ತು ಮನೆಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟುಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳೂ ಸಹಾ ಬೇಕಾಗಿದೆ. ಇಷ್ಟಪಡ್ಡವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರಿಯಿರಿ

M. L. NAGANNA,

15-14. Managing Director, Life & Marriage Assurance Buildings, Mysore.

ಕುಂತಳಾನಂದ ತೈಲವು.

213-30

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪದಕಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಕ್ಕಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಬೆಳ್ಳಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ.

ನಿಪ್ಪ್ರಭಂಗವನ್ನು ಪರಿಹರಿಸುವದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೂಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ 2-0-0. ಬಾಲಪುಷ್ಟಿ ಕರವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 32 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0 ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೂಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೇಳಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-22] 20, ಚೀನಾಬಜಾರು ರೋಡು, ಮದರಾಸು.

Messrs. Petrie-Hay & Son, Hunsur.

ನಮ್ಮಲ್ಲಿ ಕೇಗಡ ಕೊಲೆಗಳು 2 ಸಲೇ ಅಡಿ ಉದ್ದಾಯಿತು 30-40 ಸಲೇ ಅಡಿ ವರೆಗೂ ಇರುತ್ತವೆ. ಅಪೇಕ್ಷೆಯುಳ್ಳವರು ಪಟ್ಟಿಯನ್ನು ಹುಣಸೂರಿನಲ್ಲಿರುವ ಮೆ|| ಪಿಟ್ರಿಹೆ ಅಂಡ್ ಸಂನ್ಸರಿಗೆ ಬರೆದು ತಿಳಿದುಕೊಳ್ಳಬಹುದು. ಈ ಕೊಲೇಗಾಡಿ ಹಂಚಾರಿಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-24]

ಮಕ್ಕಳ ಆರೋಗ್ಯ. ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟುಹರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ನೆಗಡಿ, ಗಂಟಲಲ್ಲಿ ಗುರುಗುಟ್ಟುವದು, ಕುರು, ಉಬ್ಬಸ, ಕ್ಷಯ, ಗರ್ಭಪೆಟ್ಟು ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ ಅಂಚೆ ವೆಚ್ಚ ಬೇರೆ. [235-23]

ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಶ್ವಾಸಕಾಸ, ಬಾಣಂತಿಸನ್ನಿ ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಬೇಲು, ಕೆಂಪು, ಊದ, ಪಚ್ಚೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರೆಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಬೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರೆಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರೆಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ರೂ. 10 ವರೆಗೆ.

ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ.

ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು. [63-2]

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	3 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	6 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧಾನಿವಾರಿಣಿ	4 ,,

[269-19] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಜೋಖಾಮಜೂರಿ, ಮೊಹರು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಖರೀದಿಮಾಡುವ ವರಿಗೆ ವಸೂಲಿನ ಮೇಲೆ ಶೇಕಡ 3 ರೂಪಾಯಿ ಮೊದಲು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-52]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಪರ ಊರು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿಯುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಸಾಡರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—3—1916 ರಿಂದ 2—4—1916 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	16	19	0	0
ಮೈಸೂರು ,,	9	5	0	0
ಕೋಲಾರ್ ,,	7	7	0	0
ಕೋಲಾರ್ ಚಿನ್ನದ ಗಣಿಗಳು	6	4	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	7	7	0	0
ಚಿತ್ರದುರ್ಗ ,,	0	0	0	0
ಕಡೂರ್ ,,	4	4	0	0
ಶಿವಮೊಗ್ಗ ,,	2	1	0	0
ಜುಮ್ಲಾ.....	52	47	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ವಸಂತಋತೌ ಅಧಿಕ ವೈಶಾಖ ಶುದ್ಧ ಬಿದಿಗೆ ಶುಕ್ರವಾರದಿಂದ ಶುದ್ಧ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಏಪ್ರಿಲ್

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮೇಷ ಮಾಸ ತೇದಿ
16	ಶುಕ್ರ *	ಬಿದಿಗೆ	31-41	ಭರಣಿ	30-20	4
17	ಶನಿ	ತದಿಗೆ	36-57	ಕೃತ್ತಿಕೆ	36-53	5
18	ಭಾನು	ಚೌತಿ	42-12	ರೋಹಿಣಿ	43-28	6
19	ಸೋಮ ‡	ಪಂಚಮಿ	46-56	ಮೃಗಶಿರ	49-41	7
20	ಮಂಗಳ §	ಷಷ್ಠಿ	51-2	ಆರಿದ್ರಾ	55-5	8
21	ಬುಧ †	ಅಷ್ಟಮಿ	54-2	ಪುನರ್ವಸು	59-27	9
22	ಗುರು ::	ನವಮಿ	56-27	ಪುಷ್ಯ	60-0	10

* ಮಳೆ ನಕ್ಷತ್ರ—ಅಶ್ವಿನಿ 2 ನೇ ಪಾದ. ‡ ಶ್ರೀ ಭಾಷ್ಯಕಾರ್ರ ರಥ, ಶ್ರೀರಂಗದಲ್ಲಿ ಕೊಡುತ್ತಿರುನಾಳ್ ಉತ್ಸವಾರಂಭ § ಶ್ರೀ ಭಾಷ್ಯಕಾರರ್ ತಿರುನಕ್ಷತ್ರ ಸಾಲಿಗ್ರಾಮದ ಯೋಗಾ ನೃಸಿಂಹಸ್ವಾಮಿ ರಥ, ಮಳೆ ನಕ್ಷತ್ರ—ಅಶ್ವಿನಿ 3 ನೇ ಪಾದ. † ಶ್ರೀರಂಗಪಟ್ಟಣದ ಶ್ರೀರಂಗನಾಥ ಜಯಂತಿ :: ಅಮೃತಸಿದ್ಧಿಯೋಗ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 14 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು ಆದುದರಿಂದ ತ್ವರೆಮಾಡಿರಿ!

[64-2]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ರೋಗಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-3-0. ಮೋಹಿನಿ ತೈಲ 0-12-0 ಖಜ್ಜು ಮುಲಾಮು 0-3-0. ಗುಲಾಬಿ ಮಾತ್ರ 0-8-0. ಸುಂದರಿ ಮುಲಾಮು 0-8-0 ಕ್ಯಾಟಲಾಗಿಗೆ ಬರೆಯಿರಿ ವ್ಯಾಪಾರಸ್ಥರಿಗೆ ಜಾಸ್ತಿ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾವು), ಮೈ ನಡುಕ, ಶೀತದ ತಲೆ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ಶಾಂಟಾಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-32]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಹರ ಎಂ. ಇ. ಸ್ಕೂಲ್, ಪಡಂಬು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸಜ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳುಳ್ಳ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಟ ಡಿಸ್ಟ್ರಿಕ್ಟ್ ಅವರು ಬರೆಯುವುದು.—"ಎಷ್ಟೋ ಔಷಧಿಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಸೂರಲು ಗಡೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. Gulliford, Proprietor and Manager, Wesleyan Mission Press, Mysore. 15/4/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ನೇ ಇಸವಿ ಏಪ್ರಿಲ್ ತಾರೀಖು ೨೭ನೇ ಗುರುವಾರ. ಸಂಚಿಕೆ ೪೭

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-6-0
ರಘಾವನಾಥನ	0-8-0	ಸಂತಾಪಕ	0-4-0

[176-19] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಛಂದೋಬಂಧಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-15]

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹೆ!!!

ಗಟ್ಟಿ ಬಣ್ಣದ ಧಡೂತಿಯಾದ ಸೀರೆಗಳು.

ಸೋಲಾಪುರದ ತರಹೆವಾರಿ ಚೌಕ್ಕಗಳು.

ಶುದ್ಧಿ ಮಾಡಿದ ಹರ್ಸ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [56-6]

ತ್ವರೆಮಾಡಿ! ನಾವಕಾಶ ಮಾಡಿದರೆ ಸನಗು ಸಿಕ್ಕದು.

ಹೆಚ್ಚು ವಿವರ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್.
159, ಕಿಲಾರಿ ರೋಡು (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು.

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರೆಗೆ ಕೊಡುತ್ತಾ ಬರುವದು.

ಕಂಪನಿಗೆ ದಾಖಲಾಗಿ ಪಾಲಸಿ ಪಡೆದು ಸಲೀಸು ಪ್ರೀಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ವಾರಸುದಾರನಿಗೆ ಕೊಡಲಾಗುತ್ತೆ. 20 ವರುಷದವರೆಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಂಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿನಂತೆ ಕೊಡುತ್ತಾ ಬರುವದು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲಿ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿ ದಾಸ್ತ್ ಹಣವು ಹಂಚಿಕೆ ರೀತಿಯಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಚಂದಾಗಳಿಗೆ ಕಾಲಕ್ಕೆ ಸರಿಯಾಗಿ ವಿಮೆ ಮೊಬಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಿಂಗ ಏಜಂಟ್ರು ಮುದ್ದಾ ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಬವಾಬ್ದಾರರಾಗಿರುತ್ತೇವೆ. [292-18]

ಒಳ್ಳೆ ಚಟುವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೊಯನ್ಸ್ ಕೊಡಲಾಗುವದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್ರಿಗೆ ಬರಿಯಿರಿ:—

ಮೆಸ್ಸರ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

FIVE RUPEES REWARD.

Stolen from the White House, Lakshmipuram, Mysore, on or about April 17th a Fountain Pen, with gold bands. Apply to—MISS MARTHA HUTSON, near the Railway Station, Mysore. [75-1]

ಕನ್ಯಾವಿತಂತು ಬೇಕು.

ರೂಪವತಿಯಾದ 18–25 ವಯಸ್ಸಿನ ಮಾಧ್ವ ಕನ್ಯಾವಿತಂತುವು 45 ವಯಸ್ಸಿನ ವಿಧುರನಿಗೆ ಬೇಕಾಗಿದೆ. ಈಗ ಆತನಿಗೆ 60 ರೂಪಾಯಿ ಸಂಬಳ ಬರುತ್ತಿದೆ. ವಿವಾಹವಾಗತಕ್ಕವರು ಈ ವಿಳಾಸಕ್ಕೆ ಬರಕೊಳ್ಳಿ— (4)

ವಿಧುರ C/o ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-40]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಶ್ವತ್ಥಮ್ಮನ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕ 2½ ಆ; ಸುಶೀಲೆ 6 ಆ; ಸಭಾ ಭಾಗ I, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪನಿ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಜರ್ಮನ್ ಫಿರಂಗಿ ಚಿತ್ರ ಸಹಿತ ಅಚ್ಚಾಗಿರುವುದು. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನಿಯಲ್ ಕರ್ತವ್ಯ 1 ರೂಪಾಯಿ.

[143-41] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-25] ಬ್ರಾಂಚ್ ಸೆಕ್ರೆಟರಿ, ಮದರಾಸ್

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ತೊಲೆಗಳು 2 ಸಲೀ ಅಡಿ ಲಾಗಾಯತು 30-40 ಸಲೀ ಅಡಿಯ ವರಿಗೂ ಇರುತ್ತವೆ. ಇಷ್ಟವುಳ್ಳವರು ಪಟ್ಟೀಲನ್ನು ಹುಣಸೂರಲ್ಲಿರುವ ಮೆ॥ ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೇ ಗಾಡಿ ತಯಾರಿಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-25]

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-11] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಹಾವು ಕಡಿದದ್ದಕ್ಕೂ, ಪ್ಲೇಗಿಗೂ ಔಷಧ.

ಇವೆರಡು ಔಷಧಗಳೂ ಅತ್ಯಂತ ಖಾತರಿಯಾದವು. ಪ್ಲೇಗ್ ಔಷಧವು ಜ್ವರವನ್ನು ನಿಲ್ಲಿಸಿ ಜೀವರು ಕರುವುದು ಖಂಡಿತ. ಮ॥ ಕೆ. ಅಯ್ಯರ್, ರಾಂಪಾರ್ಟ್, ಬ್ಯಾಂಜಲೂರು—"ಎರಡು ವಾರಗಳಲ್ಲಿ ನಿಮ್ಮ ಹಾವಿನ ಔಷಧದಿಂದ ಇಬ್ಬರಿಗೆ ವಾಸಿಮಾಡಿದೆ. ಒಬ್ಬನಿಗೆ ಪ್ರಜ್ಞೆ ಇತ್ತು, ಇನ್ನೊಬ್ಬನಿಗೆ ಜ್ಞಾನ ತಪ್ಪಿತ್ತು. ಇನ್ನೆರಡು ಬಾಟ್ಲ ಕಳಿಸಿ." ಹಾವಿನ ಔಷಧಕ್ಕೆ ರೂ. 1-4-0; ಪ್ಲೇಗ್ ಔಷಧಕ್ಕೆ ಸಣ್ಣ ಬಾಟ್ಲಿಗೆ ರೂ. 1-4-0 ಮತ್ತು ದೊಡ್ಡ ಬಾಟ್ಲಿಗೆ ರೂ. 3.

[71-1] ನಮ್ಮ ವಿಳಾಸ—ಆಂಟಿ ಕೋಬ್ರಾ ಕಂಪನಿ, ಬೌರಿಂಗ್‌ಪೇಟೆ.

1916 ನೆಯ ಕೆ॥ ಲೋ॥ ಸೆ॥ ಟೆ॥ ನೋಟ್ಸ್.

ಬಿಕರಿಗೆ ಸಿದ್ಧವಾಗಿದೆ. ಕ್ರಯ 4 ಆಣೆ.

ಪರೀಕ್ಷೆಗೆ ಅವಶ್ಯಕವಾದ ವಿಷಯಗಳನ್ನೆಲ್ಲಾ ಒಳಗೊಂಡಿದೆ. ನಮ್ಮ ದೇಶೀಯ ವಿದ್ಯಾರ್ಥಿಗಳೆಲ್ಲರೂ ಇದರ ಪ್ರಯೋಜನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಬೆಲೆಯನ್ನು ಕಮ್ಮಿ ಮಾಡಿದೆ. ಪುಸ್ತಕ ಕೈಲಿ ಬಂದ ಮೇಲೆ ಅದರ ಯೋಗ್ಯತೆ ತಿಳಿಯುವುದು. ಅಲ್ಲದೆ ನಮ್ಮಲ್ಲಿ ಸರ್ಕಾರದ, ಮಿಷನ್‌ನ ಮತ್ತು ಇತರ ಎಲ್ಲಾ ಪುಸ್ತಕಗಳೂ ಬಿಕರಿಗೆ ದೊರೆಯುವವು. ದೊರೆಯುವ ಸ್ಥಳಗಳು:—(1) ಅಕ್ಷರಶಾಲಾ, ಮೈಸೂರು; (2) ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು; (3) ಜನರಲ್ ಏಜನ್ಸಿ, ಮೈಸೂರು. [37-9]

ತುಂಕೂರು ಜಮೀನು ಕ್ರಯ

ತುಂಕೂರು ವೀರಸಾಗರ ಗ್ರಾಮಕ್ಕೆ ಸೇರಿದ ಕುರಿ ಪಾಳ್ಯದಲ್ಲಿ, ಲೇಟ್ ಮುನ್ಸಿಫ್ ಸಿ. ಸುಬ್ಬರಾಯರ ಬಾಬ್ತು ತರಿ ಜಮೀನು ಸುಮಾರು 20 ಎಕರೆ ಖರೀದಿಗೆ ಬಂದಿದೆ. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಎಲ್ಲಾ ಸಂಗತಿಗಳನ್ನೂ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದು ಕೊಳ್ಳಬಹುದು. [74-1]

ವಿಳಾಸ:—ಸಿ. ಕೃಷ್ಣಮೂರ್ತಿರಾವ್,
ಪ್ಲೀಡರ್, ಶ್ರೀರಂಗಪಟ್ಟಣ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-33] GIRLS' INDUSTRIAL SCHOOL, HASSAN.

ಎಲ್ಲರಿಗೂ ಬೇಕಾದದ್ದು! ಉತ್ತಮ ಕ್ರಮ. ಉತ್ತಮ ವಿಷಯ.

{ಸಚಿತ್ರ ಆಂಗ್ಲಭಾಷಾ ಪ್ರಕಾಶಕ}

ನಮ್ಮ ಕನ್ನಾಡಕ್ಕೆ ಉತ್ತಮ ಸಂಪಾದನೆ.

(ಸ್ವತಃ ಇಂಗ್ಲಿಷ್ ಕಲಿಯುವದಕ್ಕೆ ವಿದ್ವಾಂಸರಿಂದ ತಯಾರಾದ ಅತ್ಯಂತ ನೂತನ ಪುಸ್ತಕ)

ಮೂರು ಪುಸ್ತಕಗಳುಳ್ಳ ದೊಡ್ಡ ಪುಸ್ತಕ-ಕ್ರಯ ರೂ. 1-12-0 ಪೋಸ್ಟೇಜ್ ಮಾಫಿ.

1 ನೇ ಪುಸ್ತಕ (5 ಭಾಗಗಳೂ ಅಡಗಿವೆ.) ,, ,, 0-14-0 ,, ,,

ಉತ್ತಮ ಕ್ರಮಗಳನ್ನು ಅನುಸರಿಸಿ ಇಂಗ್ಲಿಷ್ ಭಾಷೆಯನ್ನು ಸ್ವತಃ ಕಲಿಯಲಿಷ್ಟವುಳ್ಳವರಿಗೂ, ಶಾಲಾ ವಿದ್ಯಾರ್ಥಿಗಳಿಗೂ, ನೂರಾರು ವಿಷಯಗಳಿರುವ ಇಷ್ಟು ಪ್ರಯೋಜನವುಳ್ಳ ಪುಸ್ತಕ ಇದುವರೆವಿಗೆ ಇದ್ದೇ ಇರಲಿಲ್ಲ. ವಿದ್ಯಾಭಿಮಾನಿಗಳಾದ ಮಾತಾಪಿತೃಗಳಿಗೂ, ಉಪಾಧ್ಯಾಯರು, ಗುಮಾಸ್ತೆಯರು, ವರ್ತಕರು, ಬಾಲಕ ಬಾಲಕಿಯರು ಮೊದಲಾದ ಸರ್ವರಿಗೂ ಅವಶ್ಯಕವಾದದ್ದು. ಈ ಮುದ್ರಣಕ್ಕೆ ಮೊದಲಿಗಿಂತಲೂ ಎರಡರಷ್ಟು ವಿಷಯಗಳು ಹೆಚ್ಚಾಗಿ ಸೇರಿಸಿರುವದಲ್ಲದೆ ಪ್ರತಿಯೊಂದು ಭಾಗವೂ ನೂತನ ಕ್ರಮಗಳನ್ನು ಅನುಸರಿಸಿ ಬರೆದು ಇದೆ. ಇದನ್ನು ಹೆಚ್ಚು ಹೊಗಳಬೇಕಾದುದಿಲ್ಲ. ಇದನ್ನು ಪರಿಶೀಲಿಸಿದ ವಿದ್ವಾಂಸರ ಅಭಿಪ್ರಾಯಗಳೇ ಸಾಕಾಗಿವೆ. ಸರ್ವರ ಅನುಕೂಲಕ್ಕಾಗಿ ಬೆಲೆ ಕಡಮೆ ಮಾಡಿದೆ. ಹೆಚ್ಚು ಪ್ರತಿಗಳಿಲ್ಲ. [72-1]

ನಮ್ಮ ವಿಳಾಸ—ಬಾಲಕೃಷ್ಣ ಬುಕ್ ಡಿಪೋ,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು ಆದುದರಿಂದ ತ್ವರೆಮಾಡಿರಿ!

[64-3]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಮಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0 ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-3-0. ನೋಹಿನಿ ತೈಲ 0-12-0. ಚುಚ್ಚ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಜೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದರಾಸು.

ಇನಾಂ ಸಾಮಾನು 50!! ಇನಾಂ ಸಾಮಾನು 50!!!

ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿರುವ
"ರಾಜಸುಂದರಿ ಸಿರೋಜ"

ಇದರ ಬೆಲೆ ೫೦ ಇನಾಂ ಸಾಮಾನುಗಳೊಡನೆ ಬುಡ್ಡಿ ೧ ಕ್ಕೆ ರೂ. ೨-೧೨-೦ ಮಾತ್ರವೇ.

ಯಾವ ಸ್ತ್ರೀಯರಿಗೆ ತಮ್ಮ ತಲೆ ಕೂದಲು ಅಂದವಾಗಿರಬೇಕೆಂಬ ಆಶೆಯುಂಟೋ, ಸ್ತ್ರೀಯಾವರಿಯರಿಗೆ ತಮ್ಮ ಉದುರುತ್ತಿರುವ ಕೂದಲನ್ನು ತಡೆದು ಕೋಮಲವಾಗಿ ಬೆಳಸಬೇಕೆಂಬ ಉದ್ದೇಶವುಂಟೋ ಅಂಥಾವರು ಈ ನಮ್ಮಲ್ಲಿ ದೊರೆಯುವ ಹೆಚ್ಚು ಯೋಗ್ಯತೆಯುಳ್ಳ "ರಾಜಸುಂದರಿ ಸಿರೋಜ" ಯೆನ್ನುವ ಎಣ್ಣೆಯನ್ನು ಉಪಯೋಗಿಸಬೇಕೇ ಹೊರ್ತು ಇತರ ಸಾಧಾರಣ ಎಣ್ಣೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ನಮ್ಮ ಎಣ್ಣೆಯನ್ನು ಸ್ವಲ್ಪ ಕೈಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಚೆನ್ನಾಗಿ ಹಚ್ಚಿಕೊಂಡು ಬಾಚುತ್ತಾ ಬಂದರೆ ಉದುರುತ್ತಿರುವ ಕೂದಲಿನ ಬುಡವು ದೃಢವಾಗಿ ನಿಲ್ಲುತ್ತದೆ. ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದಲ್ಲದೆ ಮುಖಕ್ಕೆ ಕಾಂತಿಯನ್ನೂ ಮನಸ್ಸಿಗೆ ಉಲ್ಲಾಸವನ್ನೂ ಕೊಟ್ಟು ಕೂದಲನ್ನು ಉದ್ದವಾಗಿ ಬೆಳಸುತ್ತದೆ. ಒಂದು ಬಾಟ್ಲಿಯನ್ನು ತರಿಸಿ ನೋಡಿ.

ಇನಾಂ ಸಾಮಾನುಗಳ ವಿವರಾ:—ಕೊಂಡಿ ಗಿಣ್ 6, ಕಪ್ಪು ಫಣಿ 1, ಕನ್ನಡಿ 1, ದಂತದ ಬಾಚಣಿಗೆ 1, ರಾಜರಾಣಿ ಕಾರ್ಪೋರೇಷನ್ ಪೆಟ್ಟಿಗೆ 1, ತಾಂಬೂಲ ಮಾತ್ರೆ 30, ರವಿವರ್ಮ ಪೋಸ್ಟ್ ಕಾರ್ಡು 6, ಅತ್ತರ್ ಬಿಲ್ಲೆ 1, ಗಂಧದ ಬಿಲ್ಲೆ 1, ಬ್ರೂಚ್ 1. [250 19]

ನಮ್ಮ ವಿಳಾಸ:—ಯಂ. ಮುನಿಸಾಮಿ ಮೊದಲಿಯಾರ್,

ನಂ. ೬, ವೆಂಕಟೇಶಮೇಸ್ತ್ರಿ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

೧. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;

೨. ಬಿ. ಜಿ. ಗೋರಿಯೋ ಕಂಪನಿ, ಪಾಲೆಸ ಬೀದಿ,

[172-37] ಬೊಂಬಾಯಿ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಪ್ರಪಂಚಯುದ್ಧ

ಘನ ಘೋರ ಸಂಗ್ರಾಮ!!



ಚಿತ್ರರೂಪ!!

ಯೋಧಾಗ್ರಣಿಗಳ ಭಾವಚಿತ್ರ!!!

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳರುವ ಘೋರ ಯುದ್ಧದ ನಾಯಕರನ್ನೂ, ಆಯಾ ದೇಶದ ರಾಜಾಧಿರಾಜರನ್ನೂ, ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ದಪ್ಪ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ.

ತ್ವರೆಮಾಡಿ! ಸ್ವಲ್ಪವೇ ಪ್ರತಿಗಳಿವೆ!!

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ, ಯುದ್ಧದ ಹಡಗುಗಳನ್ನೂ ಹತಮಾಡಿ, ಕಡೆಗೆ ತಾನೂ ಉರಿದು ಸಮುದ್ರದೊಳಗೆ ಪತನವಾದ ಎಮ್ಡೆನ್ನನ್ನು ನೋಡಿರುವಿರಾ? ಅದರ ನಾಯಕನನ್ನು ಬಲ್ಲಿರಾ? ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ? ಕಡೆಗೆ ಅದಕ್ಕೆ ಗತಿಕಾಣಿಸಿದ ಸಿಡ್ನಿ ಎಂಬ ಹಡಗನ್ನೂ, ಅದರ ನಾಯಕಶಿಖಾಮಣಿಯನ್ನೂ ನೋಡಿರುವಿರಾ?

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಂ, ಜಪಾನ್ ಚಕ್ರವರ್ತಿಗಳನ್ನೂ—ದುರ್ಯೋಧನ, ದುಶ್ಯಾಸನ ದುಷ್ಟಳೆಗಳಂತೆ ಕಾಲಾಗ್ನಿಗೆ ತುತ್ತಾಗುವ ಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನು ನೋಡಿರುವಿರಾ? ಆಯಾ ರಾಷ್ಟ್ರಗಳ ಸೇನಾ ನಾಯಕರನ್ನೂ, ನೌಕಾ ನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ?

ಇಲ್ಲವಾದರೆ, ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರಪಟವನ್ನು ತರಿಸಿ ನೋಡಿ! ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಹು ಸುಲಭವಾಗಿ ನಾಟುವವು.

ಬೆಲೆ ೧ ರೂಪಾಯಿ.

ಷರಾ:—ಯುದ್ಧವಾರಂಭವಾದ ಮೇಲೆ ರಣರಂಗದಲ್ಲಿ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವ ಹಾಗೆ ಕಳುಹಿಸಿಕೊಡುತ್ತೇವೆ.

ಈ ದಿನವೇ ಬರೆಯಿರಿ!

ನಮ್ಮ ವಿಳಾಸ:—ಗುರುಬಸವ ಕಂಪೆನಿ, ಮದರಾಸು.

[10-16]

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಶೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೂಡಿಕ (ಭ್ರಾಂತಿ), ಮೈ ನಡುಕ, ಶೀತಜಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗಳು ಬಾರದೆಹೋದರೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-33]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಮಿಕ್ ಪರ ಎಂ. ಇ. ಸ್ಕೂಲ್, ಮೂಂಬು, ಹೌರಾ ಡಿಸ್ಟ್ರಿಕ್ಟು, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಕಾರರು ಶೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಖಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು. ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಶೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ಅನೇಕ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ನಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್.)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
5. ಪಾಠಕರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗಗಳನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

8 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
8 " " " 4 "	200 " ಟಿನ್ " 9 "	100 " ಸೀಸೆ " 4½ "	1200 " " " 2 "

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಮಾರಾಟಕ್ಕೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ದಿ. ಸಿ. ಷಾ ಕಂಪನಿ, 177, [25-12] ಚೀನಾ ಬಜಾರ್.' ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

---

500 ರೂಪಾಯಿಗಳ್ ಬಹುಮಾನ್.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಮುಖ್ಯಾಂಶಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ

ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಆಹಾರವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶತಾವರಿಗಡ್ಡೆ ಇವುಗಳನ್ನು ಪಾಕಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [52-6]

- ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
- ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೋಧಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು
- ಸಾಲಾಮಿಸ್ರೀ ಮುರಬ್ಬಾವು—ಕಾಂಜಾ, ಚೇಕ್ಕಿ ಮತ್ತು ಭಂಗಾದಿಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳ ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರ ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚಿ ತಾರೀಖು 15 ರಲ್ಲು ಇಟ್ಟಿರುತ್ತೇನೆ. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0 ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನಕ್ಕೆ ಬೇಕಾದ ಔಷಧಗಳು ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಢಿಲ್ಲಿ ವೈದ್ಯರು, 6. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1918, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-42] Bangalore City.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಉದ್ದವಾದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಿಲ್ಲದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟೊ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಬೆಸ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-13]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜಂಟ್, ದಿ ಕುಲ್ಕ್ ಮಾರ್ಟ್, ಮಂಗಳೂರು

ವೃತ್ತಾಂತ ಪತ್ರಿಕೆ.

ಸನ್ ೧೯೧೫ ನೇ ಇಸವಿ ಏಪ್ರಿಲ್ ತಾ. ೨೨ ನೇ ಗುರುವಾರ.

ಮೈಸೂರು ಸೀಮೆಯಲ್ಲಿ ಮದ್ಯಪಾನವು.

ಸರ್ಕಾರದವರು ಪ್ರಕಟಿಸಿರುವ ಕಳೆದ ವರುಷದ ರಿಪೋರ್ಟಿನಿಂದ ನಮ್ಮ ಮೈಸೂರು ಸಂಸ್ಥಾನದೊಳಗೆ ಪ್ರಜೆಗಳು ಅಪಾರವಾದಷ್ಟು ಮದ್ಯಗಳನ್ನು ಕೊಂಡು ಉಪಯೋಗಿಸಿರುತ್ತಾರೆಂದೂ, ಇದರಿಂದ ಸರ್ಕಾರಕ್ಕೆ ವಿಶೇಷ ದ್ರವ್ಯ ಹುಟ್ಟುವಳಿ ಆಗಿದೆಯೆಂದೂ ಗೊತ್ತಾಗುತ್ತದೆ. ಪ್ರಜೆಗಳು ಮದ್ಯಗಳಿಗೆ ಹೆಚ್ಚಾಗಿ ದ್ರವ್ಯವನ್ನು ಖರ್ಚುಮಾಡಿರುವುದನ್ನೂ, ದ್ರಾವಕಗಳ ದರಗಳನ್ನು ಸರ್ಕಾರದವರು ಹೆಚ್ಚಿಸಿದ್ದಾಗ್ಯೂ ಮದ್ಯಗಳು ಎಂದಿಗಿಂತಲೂ ಬಹಳ ಹೆಚ್ಚಾಗಿ ವಿಕರಿ ಆಗಿರುವುದನ್ನೂ ಈ ರಿಪೋರ್ಟಿನಲ್ಲಿ ಓದಿ ನಾವು ದುಃಖಪಡುತ್ತೇವೆ.

ಕಳೆದ ಸಾಲಿನಲ್ಲಿ ನಮ್ಮ ಸರ್ಕಾರಕ್ಕೆ ಎಕ್ಸೈಸ್ ಬಾಬಿನಲ್ಲಿ ಒಟ್ಟು 65,26,079 ರೂಪಾಯಿ ಹುಟ್ಟುವಳಿ ಆಗಿರುತ್ತದೆ; ಅಂದರೆ ಹಿಂದಿನ ಸಾಲಿನ ಹುಟ್ಟುವಳಿಗಿಂತ 4,59,782 ರೂಪಾಯಿ ಹೆಚ್ಚಾಯಿತು. ಮದ್ಯಪಾನ ಪದಾರ್ಥಗಳ ಧಾರಣೆಗಳನ್ನು ಹೆಚ್ಚಿಸಿದ್ದರಿಂದಲೇ ಉತ್ಪತ್ತಿಯು ಇಷ್ಟು ಮಟ್ಟಿಗೆ ಹೆಚ್ಚಿದ್ದಪಕ್ಷದಲ್ಲಿ ಯಾರಿಗೂ ವಿಷಾದವಾಗುತ್ತಿರಲಿಲ್ಲ. ಅದಕ್ಕೆ ಪ್ರತಿಯಾಗಿ ಕಳೆದ ಸಾಲಿನಲ್ಲಿ 4,66,107 ಗ್ಯಾಲನ್ ಅಂದರೆ ಹಿಂದಿನ ಸಾಲಿಗಿಂತ 37,284 ಗ್ಯಾಲನ್ ಹೆಚ್ಚಾಗಿ ಸಾರಾಯಿ ವಿಕರಿ ಆಗಿ ಜನಗಳು ಕುಡಿದಿರುತ್ತಾರೆ; ಇದಲ್ಲದೆ ಕಳೆದ ಸಾಲಿನಲ್ಲಿ ಹೆಂಡ ಇಳಿಸಿದ ಮರಗಳ ಸಂಖ್ಯೆಯೂ ಹಿಂದಿನ ಸಾಲಿಗಿಂತ ಹೆಚ್ಚಾಯಿತು. ಹಿಂದಿನ ಸಾಲಿನಲ್ಲಿ 4,63,294 ಮರಗಳಲ್ಲಿ ಶೇಂದಿ ಇಳಿಸಿದರು; ಕಳೆದ ಸಾಲಿನಲ್ಲಾದರೋ 4,84,024 ಮರಗಳಲ್ಲಿ ಶೇಂದಿಯನ್ನು ಇಳಿಸಿರುವರು. ಇದರಿಂದ ನಮ್ಮ ಸೀಮೆಯ ಪ್ರಜೆಗಳು ಕಳೆದ ಸಾಲಿನಲ್ಲಿ ಮದ್ಯಗಳನ್ನು ಬಹಳ ಹೆಚ್ಚಾಗಿ ಕುಡಿದಿರುತ್ತಾರೆನ್ನುವುದು ಸ್ಪಷ್ಟವಾಯಿತು. ಆದರೆ ಪ್ರಜೆಗಳು ಮದ್ಯಗಳಿಗಾಗಿ ಖರ್ಚುಮಾಡಿರುವ ಹಣವೆಲ್ಲಾ 65 ಲಕ್ಷವೇ ಸರಿ ಎಂದು ಭಾವಿಸಬಾರದು; ಸರ್ಕಾರಕ್ಕೆ ಹುಟ್ಟುವಳಿ ಕಂಡುಬಂದಿರುವುದೇನೋ 65 ಲಕ್ಷ ರೂಪಾಯಿ. ಈ ವ್ಯಾಪಾರದಲ್ಲಿ ದುಕಾನ್ದಾರರಿಗೂ, ಇಜಾರೆದಾರರಿಗೂ ಲಾಭ ಸಂಪಾದನೆಯಾಗಿರುತ್ತದೆ. ಆದಕಾರಣ ನಮ್ಮ ಸೀಮೆಯ ಪ್ರಜೆಗಳು ನಿಷ್ಪ್ರಯೋಜನವಾದ ಮತ್ತೂ ಅನೇಕ ಸಂದರ್ಭಗಳಲ್ಲಿ ಅನರ್ಥಕಾರಿಯಾಗಿ ಪರಿಣಮಿಸುವ ಈ ಮದ್ಯಪಾನಗಳಿಗೆ ಕಳೆದ ಸಾಲಿನಲ್ಲಿ ಖರ್ಚುಮಾಡಿರುವುದು ಬಹುತರ 80 ಲಕ್ಷ ರೂಪಾಯಿ ತನಕ ಆಗಿರಬೇಕೆಂದು ತೋರುವುದು; ಅಂದರೆ ನಮ್ಮ ಸೀಮೆಯ ಪ್ರಜೆಗಳೆಲ್ಲರೂ—ಪ್ರತಿ ಒಬ್ಬ ಗಂಡಸೂ, ಹೆಂಗಸೂ, ಮಗುವೂ ತಲಾ ಒಂದೂವರೆ ರೂಪಾಯನ್ನು ಈ ದುರಭ್ಯಾಸಕ್ಕೆ ಖರ್ಚುಮಾಡಿದಂತಾಗಿದೆ.

ಗವರ್ನ್‌ಮೆಂಟಿನವರು ಸಾರಾಯಿನ ಕ್ರಯವನ್ನು ಹೆಚ್ಚಿಸಿದರು; ಇದಲ್ಲದೆ ಸಾರಾಯಿ ದುಕಾನುಗಳ ಪೈಕಿ ಹತ್ತನ್ನು ಮುಚ್ಚಿಸಿಬಿಟ್ಟರು. ಪ್ರಜೆಗಳಲ್ಲಿ ಹಬ್ಬಿ ಹರಡಿಕೊಳ್ಳುತ್ತಿರುವ ಈ ಮದ್ಯಪಾನದ ದುರಭ್ಯಾಸವನ್ನು ಕಡಮೆಮಾಡುವುದಕ್ಕೆ ಈ ಉಪಾಯಗಳೇ ಫಲಕಾರಿಗಳಾಗುವಂತೆ ಕಾಣುವುದಿಲ್ಲ. ಇದು ಹಾಗಿರಲಿ. ಕೋಲಾರ್ ಚಿನ್ನದ ಗಣಿಗಳ ಪ್ರದೇಶದಲ್ಲಿ ಎರಡು ಸ್ಪೆಷಲ್ ಮದ್ಯದ ಅಂಗಡಿಗಳನ್ನು ಹೊಸದಾಗಿ ಇಟ್ಟಿದ್ದನ್ನು ನೋಡಿ ವ್ಯಾಕುಲಪಡುತ್ತೇವೆ. ಕಳೆದ ಸಾಲಿನಲ್ಲಿ ಈ ಬಾಬಿನ ಉತ್ಪತ್ತಿ ಮೊದಲಾದವು ಬಹಳ ತೃಪ್ತಿಕರವಾಗಿದ್ದವೆಂದೂ, ಸಾರಾಯಿ ಹೆಚ್ಚಾಗಿ ವಿಕರಿ ಆಗಿರುವುದು ಕೂಲಿಕಾರರ ಭಾಗ್ಯೋದಯವನ್ನು ಸೂಚಿಸುತ್ತದೆಂದೂ, ಅವರು ಅಷ್ಟು ಅನುಕೂಲಸ್ಥರಾಗಿಲ್ಲದಿದ್ದರೆ ಅಷ್ಟೊಂದು ಸಾರಾಯಿ ವಿಕರಿ ಆಗುತ್ತಿರಲಿಲ್ಲವೆಂದೂ, ಶೇಂದಿ ಬಾಬಿನಲ್ಲಿ ಇಜಾರೆದಾರರ ಪೋಟಾಪೋಟಿಯ ದೆಸೆಯಿಂದ ಹೆಚ್ಚು ಹುಟ್ಟುವಳಿ ಆಯಿತೆಂದೂ ಈ ರಿಪೋರ್ಟು ಹೇಳುತ್ತದೆ.

ಕೂಲಿಯ ದರಗಳು ಹೆಚ್ಚಿದ್ದರಿಂದ ಕೂಲಿಯವರು ಸಂಪಾದಿಸುವ ಹೆಚ್ಚು ಹಣವನ್ನು ಕುಡಿತಕ್ಕೆ ಹಾಕಿದರೆಂದು ಹೇಳುವುದಾದರೆ ಕೂಲೀ ಹೆಚ್ಚಿದ್ದು ಅವರ ಕ್ಷೇಮಕ್ಕಲ್ಲವೆಂದೂ, ಅದರಿಂದ ಅವರು ಹಾಳಾಗುವುದಕ್ಕೆ ಮಾರ್ಗವಾಯಿತೆಂದೂ ಧಾರಾಳವಾಗಿ ಹೇಳಬಹುದು. ಅದಕ್ಕೆ ಬದಲಾಗಿ ಕೂಲಿಯವರು ತಮ್ಮ ಹೆಚ್ಚು ಸಂಪಾದನೆಯಿಂದ ಒಳ್ಳೇ ತಿಂಡಿ ತಿಂದು, ಆರೋಗ್ಯಕರವಾದ ಮನೆಗಳನ್ನು ಕಟ್ಟಿಕೊಂಡು ಬದುಕಿ, ಪುಸ್ತಕಗಳಿಗೂ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೂ ಖರ್ಚುಮಾಡುತ್ತಾ ಬಂದ ಪಕ್ಷದಲ್ಲಿ ದೇಶದಲ್ಲಿ ನಾಗರಿಕತೆ ಸುಖಜೀವನಾದಿಗಳು ಹರಡಿಕೊಳ್ಳಲು ಸಂದೇಹವಿಲ್ಲ. ಮದ್ಯಪಾನಕ್ಕೆ ದುಡಿದು ತರುವ ಹಣವನ್ನು ಹಾಕುವುದಾದರೆ ಅದರ ಪರಿಣಾಮವೇನೆನ್ನುವಿರೋ? ಜಗಳ ಕದಿದಾಟಗಳು, ಸೋಮಾರಿತನ, ನಾನಾ ಬಗೆಯ ರೋಗಗಳು, ಇವೇ. ಸಮಸ್ತ ರಾಜ್ಯಗಳಲ್ಲೂ ಪ್ರಜಾಪಾಲಕರು ಪ್ರಜೆಗಳಲ್ಲಿ ಕುಡುಕುತನವನ್ನು ಕಡಮೆಮಾಡುತ್ತಾ ಬಂದು ಅದನ್ನು ಸಂಪೂರ್ಣವಾಗಿ ತೊಡೆದುಬಿಡಬೇಕಾದದ್ದೇ ಅವರ ಧರ್ಮ. ನಮ್ಮ ಮೈಸೂರು ಗವರ್ನ್‌ಮೆಂಟಿನವರೂ ಕೂಡ ಈ ಭಾಗದಲ್ಲಿ ಇನ್ನೂ ಹೆಚ್ಚಾಗಿ ಮನಸ್ಸಿರಿಸಬೇಕಾಗಿರುತ್ತದೆ. ಅವರು ಕೆಲವು ಸ್ಥಳಗಳಲ್ಲಿ ವಿದ್ಯೆಯನ್ನು ಎಲ್ಲರೂ ಕಲಿಯಬೇಕೆಂದು ಬಲಾತ್ಕಾರ ಮಾಡುವ ಕಾನೂನನ್ನು ಜಾರಿಗೆ ತಂದಿರುವರು. ಹೀಗೆಯೇ ಕೆಲವು ಪ್ರದೇಶಗಳನ್ನು ಗೊತ್ತುಮಾಡಿ ಅಲ್ಲಿ ಯಾರೂ ಕುಡಿಯದಂತೆ ಬಲಾತ್ಕರಿಸಿ ಅಡ್ಡಿ ಮಾಡುವವರಾಗಲಿ; ಅಂಥಾ ಸ್ಥಳಗಳಲ್ಲಿ ಶೇಂದಿ ಮತ್ತು ಶರಾಬ್ ದುಕಾನುಗಳು ಒಂದಾದರೂ ಇಲ್ಲದಂತೆ ಮಾಡಿಡಲಿ. ಪ್ರಜೆಗಳು ಕೆಲವು ಕಾಲದೊಳಗಾಗಿಯೇ ಅದರ ಫಲವನ್ನು ತಿಳಿದುಕೊಳ್ಳುವರು. ಹಾಗೆಯೇ ಕ್ರಮೇಣ ಅಂಥಾ ಪ್ರದೇಶಗಳನ್ನು ಹೆಚ್ಚಿಸುತ್ತಾ ಬರಬಹುದು. ಹ್ಯಾಗೂ ಈ ಮದ್ಯಪಾನದ ಕೇಡುಗಳನ್ನು ನಮ್ಮ ಸರ್ಕಾರದವರೂ, ಸ್ಥಳಾಂತರಗಳಲ್ಲಿರುವ ಪ್ರಜೆಗಳ ಮುಖಂಡರೂ ನಿವಾರಣೆ ಮಾಡುವ ಭಾಗದಲ್ಲಿ ಮುತುವರ್ಜಿ ವಹಿಸಿ ಕಾರ್ಯಗಳನ್ನು ಮಾಡುವವರಾಗಬೇಕೆಂದು ಒತ್ತಿ ಹೇಳುತ್ತೇವೆ.

ನಮ್ಮ ಸರ್ಕಾರದವರು ಗೌರಿಬಿದನೂರು ತಾಲ್ಲೂಕಿನಲ್ಲಿ ಗಾಂಜಾ ಸೊಪ್ಪನ್ನು ಬೆಳೆಯುವುದಕ್ಕೆ ಸಹಾಯಮಾಡಿ ಪ್ರೋತ್ಸಾಹಪಡಿಸುತ್ತಿರುವುದನ್ನು ನೋಡಿ ದುಃಖಪಡುವೆವು. ಈ ಗಾಂಜಾದಿಂದ ಪ್ರಯೋಜನವಾಗುವುದಕ್ಕಿಂತಲೂ ಕೆಡುಕೇ ಹೆಚ್ಚಾಗಿದ್ದರೂ ಆಹಾರ ಧಾನ್ಯಗಳನ್ನು ಬೆಳೆಯುವಂಥಾ ಒಳ್ಳೆಯದಾದ 100 ಎಕರೆ ಜಮೀನಿನಲ್ಲಿ ಈ ದುಷ್ಟ ಪದಾರ್ಥವನ್ನು ಬೆಳೆಮಾಡುತ್ತಾರೆ. ನಮ್ಮ ಸೀಮೆಯಲ್ಲಿ ಈ ಸೊಪ್ಪನ್ನು ಯಾರೂ ಬೆಳೆಯದಂತೆ ಅಡ್ಡಿಮಾಡಲ್ಪಡುವ ಕಾಲವು ಎಂದಿಗೆ ಬಂದೀತೋ ಎಂದು ನಿರೀಕ್ಷಿಸುವವರಾಗಿದೇವೆ. ಕೇಡುಕಾರಿಯಾದಂಥಾ ಈ ಪದಾರ್ಥ ಬೇಕಾಗಿದ್ದಲ್ಲಿ ಇನ್ನೆಲ್ಲಿಂದಲಾದರೂ ತರಿಸಿಕೊಳ್ಳಲಿ. ಪ್ರಜೆಗಳನ್ನು ಕೆಡಿಸಿ ನಾನಾ ರೀತಿಯಲ್ಲಿ ಹಾಳುಮಾಡುವಂಥಾ, ಅವರ ಸಂಪತ್ತನ್ನು ಅಭಿವೃದ್ಧಿಗೆ ತರುವುದಕ್ಕೆ ಪ್ರತಿಯಾಗಿ ಅವರನ್ನು ದಿನ ಕ್ರಮೇಣ ಕ್ಷೀಣದೆಸೆಗೆ ತರುವಂಥಾ ಈ ಗಾಂಜಾ, ಅಫೀಮು, ಶೇಂದಿ, ಸಾರಾಯಿ ಮೊದಲಾದ ಮಾದಕ ಪದಾರ್ಥಗಳಿಗೂ ನಮ್ಮ ಸರ್ಕಾರಕ್ಕೂ ಇರುವ ಅಭಿಮಾನವೂ ಸಂಬಂಧವೂ ದಿನ ಕ್ರಮೇಣ ಕಡಮೆಯಾಗುತ್ತಾ ಬರಬೇಕು. ಈ ಪದಾರ್ಥಗಳು ಸುಲಭವಾಗಿ ಸಿಕ್ಕದಂತೆ ಅವುಗಳ ಬೆಲೆಯನ್ನು ಇನ್ನೂ ಹೆಚ್ಚಿಸಬೇಕೆಂದೂ, ದುಕಾನುಗಳ ಸಂಖ್ಯೆಯನ್ನು ಇನ್ನೂ ಕಡಮೆಮಾಡಬೇಕೆಂದೂ, ಈ ದುಷ್ಟ ಪದಾರ್ಥಗಳ ಸೇವನೆಯಿಂದ ಉಂಟಾಗುವ ಕೇಡುಗಳನ್ನೂ ಅನರ್ಥಗಳನ್ನೂ ಪ್ರಜೆಗಳಿಗೆ ತಿಳಿಯಪಡಿಸುವ ಭಾಗದಲ್ಲಿ ದೇಶಾಭಿಮಾನಿಗಳು ವಿಶೇಷವಾದ ಪ್ರಯತ್ನಗಳನ್ನು ಮಾಡಬೇಕೆಂದೂ ಆಸೆಮಾಡುತ್ತೇವೆ. ಈ ಎಕ್ಸೈಸ್ ಬಾಬಿನಲ್ಲಿ ನಮ್ಮ ಗವರ್ನ್‌ಮೆಂಟಿಗೆ ಹೆಚ್ಚು ಹಣ ಹುಟ್ಟುವಳಿ ಆದ ವಿಷಯದಲ್ಲಿ ನಾವೇನೂ ಸಂತೋಷಪಡತಕ್ಕವರಾಗಿಲ್ಲ.

ದೈವಸಾನ್ನಿಧ್ಯವನ್ನು ಅನುಷ್ಠಾನಮಾಡುವದು.

ದೈವಸಾನ್ನಿಧ್ಯವೆಂದರೇನು? ನಾವಿರುವ ಹಳ್ಳಿ ಅಥವಾ ಊರು ಬಹು ಸಾಧಾರಣವಾದ ಸ್ಥಳ. ಅದರಲ್ಲಿ ನಮ್ಮ ಹಾಗೆಯೇ ಇವತಕ್ಕ ಸಾಧಾರಣವಾದ ಜನಗಳು ಸಾಧಾರಣವಾದ ಮನೆಗಳನ್ನು ಕಟ್ಟಿಕೊಂಡು ಸಾಧಾರಣವಾದ ಉದ್ಯೋಗ, ವ್ಯಾಪಾರ, ವ್ಯವಸಾಯಗಳನ್ನು ಮಾಡಿಕೊಂಡು ಜೀವನೋಪಾಯ ಮಾಡುತ್ತಾರೆ. ದೂರದಲ್ಲಿರುವ ತಿರುಪತಿ, ಕಾಸಿ, ರಾಮೇಶ್ವರ ಮುಂತಾದ ಪ್ರಸಿದ್ಧ ಯಾತ್ರಾಸ್ಥಳಗಳಿಗೆ ಹೋದರೆ ಅಲ್ಲಿ ದೊಡ್ಡ ದೇವಾಲಯಗಳಿರುತ್ತವೆ. ದೇವರ ಪೂಜೆಯೂ ಮೆರವಣಿಗೆಯೂ ಅತಿ ವಿಜೃಂಭಣೆಯಿಂದ ನಡೆಯುತ್ತವೆ. ಅದು ಸಾಕ್ಷಾತ್ ದೇವರ ಸಾನ್ನಿಧ್ಯ. ಅಲ್ಲಿ ಆತನ ದರ್ಶನವು ನಮಗಾಗುತ್ತೆ. ಆತನು ಅಲ್ಲಿ ಪ್ರತ್ಯಕ್ಷಪ್ರಸನ್ನನಾಗಿದ್ದಾನೆ. ಅಲ್ಲಿ ಆತನ ದರ್ಶನದಿಂದ ಪಾಪವಿಮೋಚನೆಯೂ ಪುಣ್ಯವೂ ಲಭ್ಯವಾಗುತ್ತವೆ. ಹೀಗೆಂದು ಭಾವಿಸಿ ಜನಗಳು ಮಹಾಕ್ಷೇತ್ರಗಳಿಗೆ ಹೋಗುತ್ತಾರೆ.

ಆದರೆ ದೇವರು ಎಲ್ಲೆಲ್ಲಿಯೂ ಇದ್ದಾನೆಯಲ್ಲವೇ! ಆತನು ಇಲ್ಲದ ಸ್ಥಳವು ಯಾವದೂ ಇಲ್ಲ. ಮತ್ತು ಆತನು ಜನಸಂದಣಿಯ ಗದ್ದಲದಲ್ಲಿಯೂ ಶಂಖ, ತಮಟೆ, ಭೇರಿ, ತುತೂರಿಗಳ ಧ್ವನಿಯಲ್ಲಿಯೂ ನಮಗೆ ಪ್ರಸನ್ನನಾಗುವದಕ್ಕಿಂತ ಸುಲಭವಾಗಿ ಏಕಾಂತದಲ್ಲಿ ಆತನನ್ನು ಧ್ಯಾನಮಾಡುವವನಿಗೆ ಪ್ರತ್ಯಕ್ಷನಾಗುವನಲ್ಲವೇ? ನೀನು ಪ್ರಾರ್ಥನೆಮಾಡುವಾಗ ಜನರು ನೋಡಬೇಕೆಂದು ಸಭಾಮಂದಿರಗಳಲ್ಲಿಯೂ ಬೀದೀ ಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆಮಾಡಬೇಡ. ನೀನು ಪ್ರಾರ್ಥನೆನಡಬೇಕಾದರೆ ಏಕಾಂತವಾದ ನಿನ್ನ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು. ಅಂತರಂಗದಲ್ಲಿಯೂ ನಡೆಯುವವನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. ದೇವರನ್ನು ಸೇವಿಸಬೇಕೆಂದು ಯಥಾರ್ಥವಾದ ಮನಸ್ಸಿನಿಂದ ಅಭಿಲಾಷೆಪಡುವವನು ಯಾರೇ ಆಗಲಿ ಅವನಿಗೆ ಯಾವ ಕಾಲದಲ್ಲೇ ಆಗಲಿ ಯಾವ ಸ್ಥಳದಲ್ಲೇ ಆಗಲಿ ಪ್ರತ್ಯಕ್ಷನಾಗಿ ಅವನ ಭಕ್ತಿಪೂರ್ವಕವಾದ ಸೇವೆಯನ್ನು ದೇವರು ಸ್ವೀಕರಿಸುವನು.

ಒಂದು ಸನ್ಯಾಸಾಶ್ರಮದಲ್ಲಿ ವಾಸವಾಗಿದ್ದ ಸನ್ಯಾಸಿಗಳಿಗೆ ಅಡಿಗೆಮಾಡುವ ಒಬ್ಬ ಪರಿಚಾರಕನಿದ್ದನು. ಆ ಸನ್ಯಾಸಿಗಳು ದೇವಧ್ಯಾನಪರಾಯಣರು. ವೇದಾಧ್ಯಯನ, ಜಪ, ತಪಗಳೇ ಅವರ ಕಸಬು. ಈ ಪರಿಚಾರಕನಾದರೋ ಬಹು ಸಾಧಾರಣವಾದ ಮನುಷ್ಯನು. ಮುಸರೇ ಪಾತ್ರೆಗಳನ್ನು ತಿಕ್ಕುವದು, ಅಂಗಡಿಗೆ ಹೋಗಿ ವೆಚ್ಚ ತರುವದು, ಕಸ ಗುಡಿಸುವದು ಮುಂತಾದ ಕೆಲಸಗಳು ಇವನ ಪಾಲಿಗೆ ಬಂದವು. ವೇದಾಧ್ಯಯನ, ಜಪ, ತಪಗಳ ಗಂಧವು ಇವನಿಗೆ ಅಪರೂಪ. ಆದರೇನು! ಅವನು ಈ ಲೌಕಿಕ ವೃತ್ತಿಗಳನ್ನೇ ನಂಬುಗೆಯಿಂದ ಮಾಡುತ್ತಾ ದೇವರು ನನಗೆ ಈ ಕೆಲಸಗಳನ್ನು ಮಾಡಬೇಕೆಂತ ನಿಯಮಿಸಿದ್ದಾನೆ; ಆತನು ಮೆಚ್ಚುವ ಹಾಗೆ ಎಲ್ಲವನ್ನು ನಡಿಸುತ್ತೇನೆ ಎಂದು ಆತನ ಧ್ಯಾನದಲ್ಲಿಯೇ ನಿಷ್ಠನಾಗಿದ್ದನು. ಹೀಗಿರುತ್ತಿರುವಲ್ಲಿ ದೇವರು ತನ್ನ ಸಾಕ್ಷಾತ್ ಪ್ರಸನ್ನತೆಯನ್ನು ಅವನಿಗೆ ಕೊಟ್ಟು ಅವನ ಮನಸ್ಸನ್ನು ಸಂತೋಷಪಡಿಸಿ ಅವನು ಮಾಡುತ್ತಿದ್ದ ಕೀಳು ಚಾಕರಿಯನ್ನೇ ತನ್ನ ಸೇವೆಯೆಂತ ಸ್ವೀಕರಿಸಿದನು. ಮತ್ತು ಆ ಭಕ್ತನು ಕಡೇ ವರೆಗೂ ಆ ಕೀಳು ಸೇವೆಯನ್ನೇ ನಂಬುಗೆಯಿಂದ ದೇವರು ಮೆಚ್ಚಲಿಯೆಂದು ಮನಃಪೂರ್ತಿಯಿಂದ ನಡಿಸುತ್ತಿದ್ದನು. ದೇವರ ಸಾನ್ನಿಧ್ಯವು ಅವನಲ್ಲಿ ಹೇಗೆ ಅನುಷ್ಠಾನಕ್ಕೆ ಬಂದಿತು?

ಪುಸ್ತಕಗಳನ್ನು ಓದುವದು, ಪುರಾಣಶ್ರವಣಮಾಡುವದು, ಯಾತ್ರೆ ಹೋಗುವದು ಇವುಗಳಲ್ಲಿ ಮಂದಿಯು ದೇವರು ಪ್ರತ್ಯಕ್ಷನಾಗುವನೆಂದು ದಣಿಯುತ್ತಾರೆ. ಬ್ರದರ್ ಲಾರೆನ್ಸನೆಂಬ ಈ ಪರಿಚಾರಕನಿಗೆ ಪುಸ್ತಕ ಪುರಾಣ ಶ್ರವಣಗಳಿಗೆ ತಕ್ಕ ಪುರಸತ್ತು ಇರಲಿಲ್ಲ. ಯಾವದು ಪವಿತ್ರಸ್ಥಳ ಯಾವ ಗುರುಗಳ ಬೋಧೆಯಿಂದ ನನಗೆ ದೇವದರ್ಶನವಾದೀತೆಂದು ಅವನು ಚಿಂತಿಸಲಿಲ್ಲ. ದೇವರು ಯಥಾರ್ಥವಾದ ಸೇವೆಯನ್ನು ಮೆಚ್ಚುತ್ತಾನೆಂದು ಮಾತ್ರ ಗಟ್ಟಿಯಾಗಿ ನಂಬಿ ತನಗೆ ನೇಮಕವಾದುದನ್ನು ತನ್ನ ಮನ ಮೆಚ್ಚುವ ಹಾಗೆ ಮಾಡಲೆತ್ನಿಸಿದನು. ಹೀಗೆ ಅವನು ಆ ಆಶ್ರಮದಲ್ಲಿ ಸೇವಾವೃತ್ತಿಯನ್ನು ಮಾಡುತ್ತಿರುವಾಗ ಆ ಆಶ್ರಮದ ಮಗ್ಗುಲಲ್ಲೇ ಇದ್ದ ಒಂದು ಮರವು ಹಣ್ಣೆಲೆಗಳೆಲ್ಲಾ ಉದುರಿ, ಹೂವು ಹಣ್ಣು ಕಾಯಿ ಮೊದಲಾದ್ದೇನೂ ಇಲ್ಲದೆ ಬರಲಿನಂತೆ ಒಣಗಿ ನಿಂತಿದ್ದಿತು. ಅವನು ಅದನ್ನು ನೋಡಿ ಮನದಲ್ಲಿ ಯಾವ ಹೊಸ ಯೋಚನೆ ಏನೂ ಇಲ್ಲದೆ ತನ್ನ ಕೆಲಸಕ್ಕೆ ಹೋಗಿಬಿಟ್ಟನು. ಮತ್ತೆ ಕೆಲವು ದಿನಗಳ ಮೇಲೆ ಅಕಸ್ಮಾತವಾಗಿ ಅವನ ದೃಷ್ಟಿಯು ಪುನಹ ಅದೇ ಮರದ ಮೇಲೆ ಬಿದ್ದಿತು. ಮೊದಲು ಬರಲಿನಂತೆ ನಿರ್ಜೀವವಾಗಿದ್ದ ಆ ಮರವು ಈಗ ಕೋಮಲವಾದ ತಳಿರುಗಳಿಂದ ಚಿಗುರಿ ಕಳಕಳಾಯಮಾನವಾಗಿ ಒಪ್ಪುತ್ತಿರುವದನ್ನು ಅವನು ನೋಡಿ ಅದರಲ್ಲಿ ದೇವರ ಮಹಿಮೆಯನ್ನು ತಿಳಿದನು.

ನಾವು ದೇವರ ಸಾನ್ನಿಧ್ಯದಲ್ಲಿಯೇ ಸದಾ ಇದ್ದೇವೆ. ಆತನ ಸಾನ್ನಿಧ್ಯವನ್ನು ಬಿಟ್ಟು ಬದುಕುವದಕ್ಕಾಗುವದಿಲ್ಲವೆಂದು ಮನಗಂಡ ಒಬ್ಬ ಭಕ್ತನು—ನಾನು ನಿನ್ನ ಸನ್ನಿಧಾನವನ್ನು ತಪ್ಪಿಸಿಕೊಂಡು ಎಲ್ಲಿಗೆ ಹೋಗುವದಕ್ಕಾದೀತು? ಎಲ್ಲಿಗೆ ಓಡಿಹೋದರೆ ನಿನ್ನ ಸಮುಖಕ್ಕೆ ತಪ್ಪಿಸಿಕೊಳ್ಳುವದು ಸಾಧ್ಯವಾದೀತು? ನಾನು ಆಕಾಶಕ್ಕೆ ಏರಿ ಹೋದರೂ ನೀನು ಅಲ್ಲಿಯೂ ಇದ್ದೀ. ಪಾತಾಳದಲ್ಲಿ ನನ್ನ ಹಾಸಿಗೆ ಹಾಸಿಕೊಂಡು ಮಲಗಿದರೆ ಅಗೋ ನೀನು ಅಲ್ಲಿಯೂ ಇದ್ದೀ. ಅಂತರಿಂದ್ರಿಯಗಳನ್ನು ಸಿದ್ಧಮಾಡಿ ನನ್ನ ತಾಯಿಯ ಗರ್ಭದಲ್ಲಿ ನನ್ನನ್ನು ಮುಚ್ಚಿದಿ. ನಾನು ಕೂಡ್ರುವದನ್ನೂ ಏಳುವದನ್ನೂ ನನ್ನ ಆಲೋಚನೆಗಳನ್ನೇ ಗ್ರಹಿಸಿಕೊಂಡಿದ್ದೀ. ನನ್ನ ಮಾರ್ಗಗಳೆಲ್ಲಾ ನಿನಗೆ ಗೊತ್ತಾಗಿವೆ. ಹಿಂದೆಯೂ ಮುಂದೆಯೂ ನನ್ನನ್ನು ಇರಿಸಿ ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ ಎಂದು ಬರೆದನು.

ದೇವರ ಸಾನ್ನಿಧ್ಯದಲ್ಲಿ ನಾವು ಸದಾ ಇರುತ್ತೇವೆಂದು ಆತನ ಸಾನ್ನಿಧ್ಯವನ್ನು ಸದಾ ಅನುಷ್ಠಾನಕ್ಕೆ ತರುವದರಿಂದ ನಮ್ಮಲ್ಲಿ ನ್ಯಾಯವಾಗಿ ಮೊದಲು ಹುಟ್ಟುವ ಯೋಚನೆ ಯಾವದು? ಆತನು ನಮ್ಮೆಲ್ಲರ ಸ್ಥಿತಿ, ಸ್ಥಾನ, ಕಷ್ಟ ನಿಷ್ಠೂರಗಳನ್ನೂ ಬಲ್ಲನು. ಎಲ್ಲರ ಸ್ಥಿತಿ, ಸ್ಥಾನ, ಕಷ್ಟ ನಿಷ್ಠೂರಗಳನ್ನು ತಿಳುಕೊಳ್ಳುವದಲ್ಲದೆ ಪ್ರತಿವ್ಯಕ್ತಿ ಪುರುಷನ ಅಥವಾ ಸ್ತ್ರೀಯ ಸ್ಥಿತಿ, ಸ್ಥಾನ, ಕಷ್ಟ, ನಿಷ್ಠೂರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ತಿಳಿದಿದ್ದಾನೆ. ನನ್ನನ್ನು ಹಿಡಿಯಬೇಕೆಂದು ಬೇಡನು ಒಡ್ಡಿರುವ ಉರ್ಲಿನಿಂದಲೂ ನಷ್ಟದ ವ್ಯಾಧಿಯಿಂದಲೂ ಅವನು ಬಿಡಿಸುವನು. ತನ್ನ ಗರಿಗಳಿಂದ ನನ್ನನ್ನು ಹೊದಗಿಸುವನು. ಆತನ ರೆಕ್ಕೆಗಳೊಳಗೆ ಆಶ್ರಯಿಸಿಕೊಳ್ಳುವೆನು. ಆತನ ಸತ್ಯವು ನನಗೆ ಖೇಡ್ಯವೂ ಡಾಲೂ ಆಗಿದೆ. ನಾನು ಭರವಸವಿಡುವ ನನ್ನ ದೇವರು ಆತನೇ ಎಂದು ಎಲ್ಲರೂ—ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ದೇವರ ಪರಾಮರಿಕೆಗೆ ಒಪ್ಪಿಸಿ ಅಲ್ಲೋಲ ಕಲ್ಲೋಲವಾದ ಈ ಪ್ರಪಂಚಸಾಗರದಲ್ಲಿ ಯಾನಮಾಡಬೇಕಾದರೂ ನಿಶ್ಚಿಂತನಾಗಿರಬಹುದು ಅಲ್ಲವೇ?

ದೇವರ ಸಾಕ್ಷಾತ್ ಸಾನ್ನಿಧ್ಯದಲ್ಲಿಯೇ ನಾವು ಸದಾ ಇರುತ್ತೇವೆಂದು ಅನುಷ್ಠಾನವನ್ನು ಮಾಡುವದರಿಂದ ನಾವು ಸಕಲ ವಿಧವಾದ ದೋಷ, ಪಾಪ, ಅಪರಾಧಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕಾಗುವದು. ದೇವರಿಗೆ ಕಾಣದ ಹಾಗೆ ನಾವು ಏನು ಮಾಡುವದೂ ಅಸಾಧ್ಯವಾದರೆ ಆತನೆದುರಿಗೆ ಪಾಪವನ್ನು ಕುರಿತು ಆಲೋಚಿಸುವದೂ ಅದನ್ನು ಮಾಡುವದೂ ಕೂಡ ಅಸಾಧ್ಯವಾಗಿರುವದಲ್ಲವೇ?

ಯುದ್ಧದ ಸಮಾಚಾರಗಳು.

ಇಂಗ್ಲೆಂಡಿನ ಮೇಲೆ ವಿಮಾನ ದರೋಡೆ.

ಆಸ್ಟ್ರಿಯಾದಲ್ಲಿ ಕಠಿಣವಾದ ಕದನಗಳು.

ಈ ವಾರದಲ್ಲಿ ಬಂದಿರುವ ಸಮಾಚಾರಗಳು ವಿಶೇಷವಾಗಿ ರಷ್ಯಾದವರಿಗೂ ಆಸ್ಟ್ರಿಯಾದವರಿಗೂ ಕದನಗಳು ನಡೆದದ್ದನ್ನು ಸೂಚಿಸತಕ್ಕವುಗಳಾಗಿವೆ. ಅಲ್ಲಿ ಒಂದು ಘೋರವಾದ ಯುದ್ಧ ನಡೆಯುತ್ತಿರುವುದು. ನಿಂಡಿತವಾದ ಫಲಿತಾಂಶವೇನೂ ಹೊರಪಟ್ಟಿಲ್ಲ. ಯುದ್ಧಭೂಮಿಯ ಎಲ್ಲಾ ಕಡೆಗಳಲ್ಲೂ ಸೈನ್ಯಗಳ ಚಳವಳಿ ಹೆಚ್ಚಾಗಿದೆ. ಆದರೆ ನಮ್ಮ ಪಕ್ಷದವರು ಮುಂದರಿಸಿ ನುಗ್ಗಿಹೋಗುವುದು ನಿದಾನವಾಗಿದೆ.

ಪಶ್ಚಿಮ ರಣರಂಗದಲ್ಲಿ.

ಒಂದು ತಿಂಗಳಿಗಿಂತಲೂ ಹಿಂದೆ ನಡೆದ ಯುದ್ಧದ ವಿವರಗಳನ್ನು ತಂತೀವರ್ತಮಾನಗಳು ತಿಳಿಸುತ್ತವೆ. ಈ ವಾರದಲ್ಲಿ ಫ್ರೆಂಚರು ಅನೇಕ ಠಾಣ್ಯಗಳಲ್ಲಿ ಮುಂದರಿಸಿ ನುಗ್ಗಿ ಹೋಗಿರುವರು. ಅದರಲ್ಲೂ ವೇರ್ಡುನ್ ಹತ್ತರ ಅವರು ವಿಶೇಷವಾಗಿ ನುಗ್ಗಿಹೋಗಿದಾರೆ. ಕಳೆದ ಸಪ್ಟಂಬರ್ ತಾ. 29 ರಲ್ಲಿ ಜರ್ಮನಿಯವರು ಒಂದು ಗುಡ್ಡದಿಂದ ಫ್ರೆಂಚರನ್ನು ಓಡಿಸಿಬಿಟ್ಟು, ಅದನ್ನು ಕೋಟೆಕೊತ್ತಲಗಳಿಂದ ಬಲಪಡಿಸಿಕೊಂಡಿದ್ದರು. ಆಗಿನಿಂದಲೂ ಆ ಗುಡ್ಡವನ್ನು ಗೆದ್ದುಕೊಳ್ಳಬೇಕೆಂದೂ, ಸಮೀಪದಲ್ಲಿರುವ ಲೆ ಎಪಾರ್ಜ್ ಎಂಬ ಗ್ರಾಮವನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದೂ ಸಿದ್ಧಪಡಿಸಿಕೊಳ್ಳುತ್ತಾ ಬಂದು, ಏಪ್ರಿಲ್ ತಾ. 5 ರಲ್ಲಿ ಅವರು ತಮ್ಮ ಸೈನ್ಯವನ್ನು ಆ ಕಡೆ ನುಗ್ಗಿಹೋಗುವಂತೆ ಕಳುಹಿಸಿದರು. ಮಳೆ ವಿಶೇಷವಾಗಿ ಸುರಿಯುತ್ತಿತ್ತು, ಹವಾ ಕೆಟ್ಟುಹೋಗಿತ್ತು; ಆ ಪ್ರಾಂತ್ಯವೆಲ್ಲಾ ತುಂಬಾ ಕೆಸರಾಗಿತ್ತು. ಈ ಕೆಸರಿನಲ್ಲಿ ಕೆಲವು ಫ್ರೆಂಚ್ ಸೈನಿಕರು ಸಿಕ್ಕಿ ಬಿದ್ದುಕೊಂಡರು. ಅವರು ಮುಂದರಿಸಿ ನುಗ್ಗಿಹೋಗುವುದು ಅಸಾಧ್ಯವಾಗಿತ್ತು. ಅಂಥಾದ್ದರಲ್ಲೂ ಅವರು ಹಿಮ್ಮೆಟ್ಟದೆ ಅಧೈರ್ಯಪಡದೆ ನುಗ್ಗಿಹೋದರು. ಅವರ ಬಂದೂಕುಗಳಿಗೆ ಗುಂಡು ಹಾಕಿ ಹೊಡೆಯುವುದಕ್ಕಾಗದಂತೆ ಮಣ್ಣೂ ಕೆಸರೂ ತುಂಬಿಕೊಂಡಿತ್ತು. ಆದಕಾರಣ ಅವರು ಬಂದೂಕುಗಳ ಸತ್ತಿಗೆ ಸಿಕ್ಕಿಸಿಕೊಂಡಿದ್ದ ಸನೀನುಗಳನ್ನೇ ಹಿಡಿದು ಜರ್ಮನಿಯವರ ಮೇಲೆ ನುಗ್ಗಿಹೋಗಿ ಅವರನ್ನೆಲ್ಲಾ ಆವರಿದ್ದ ಕಂದಕಗಳಿಂದ ಓಡಿಹೋಗುವಂತೆ ಮಾಡಿಬಿಟ್ಟರು. ಜರ್ಮನಿಯವರು ಪ್ರಾಣದ ಮೇಲೆ ಅಂಗೀಜಿಗದೆ ನಿಂತು ಕದನವಮಾಡಿದಾಗ್ಯೂ ನಿಲ್ಲಲಾರದೆ ಅಲ್ಲಿಂದ ಓಡಿಹೋಗಬೇಕಾಯಿತು. ಕೆಲವು ಜರ್ಮನಿಯವರು ಅವರ ಫಿರಂಗಿಗಳನ್ನು ಬಿಟ್ಟುಹೋಗದಂತೆ ಸರಪಣಿಗಳಿಂದ ಕಟ್ಟಲ್ಪಟ್ಟಿದ್ದ ಕಾರಣ ಅವರು ಫಿರಂಗಿಗಳನ್ನು ಬಿಟ್ಟುಹೋಗಲು ಸಾಧ್ಯವಾಗಲಿಲ್ಲ. ಫ್ರೆಂಚರು ಅಲ್ಲಿ ಅನೇಕರನ್ನು ಕೈಸೆರೆ ಹಿಡಿದುಕೊಂಡರು. ಆ ಠಾಣ್ಯವು ಬಹಳ ಪ್ರಾಮುಖ್ಯವಾಗಿರುವ ಕಾರಣ ಅದನ್ನು ಗೆದ್ದುಕೊಳ್ಳಬೇಕೆಂದು ಜರ್ಮನಿಯವರು ಮತ್ತೆ ಸಾಹಸಪಟ್ಟು ನುಗ್ಗಿದರು. ಅದು ಅಸಾಧ್ಯವಾಯಿತು. ಈ ಠಾಣ್ಯದಿಂದ ಜರ್ಮನಿಯವರ ಠಾಣ್ಯಗಳಿಗೆ ಹೋಗಲು ಇರುವಂಥಾ ಮಾರ್ಗಗಳೆಲ್ಲಾ ಸುಲಭಸಾಧ್ಯವಾಗಿರುತ್ತದೆ. ಆದಕಾರಣ ಇನ್ನು ಮುಂದೆ ಜರ್ಮನಿಯವರು ಅಲ್ಲಿರುವ ಠಾಣ್ಯಗಳನ್ನೂ ತ್ಯಜಿಸಿ ಹಿಮ್ಮೆಟ್ಟಿಹೋದಾರೆಂದು ನಿರೀಕ್ಷಿಸಲ್ಪಟ್ಟಿದೆ.

ಬೆಲ್ಜಿಯಮ್‌ನಲ್ಲಿ ಇಸರ್ ನದಿಯ ಬಳಿ ಕಠಿಣವಾದ ಕದನವಾಯಿತು. ಕೆಲವು ಜರ್ಮನಿಯವರು ನದಿಯನ್ನು ದಾಟಿ ಬಂದರು; ಇವರನ್ನು ಹಿಂಬಾಲಿಸಿ ಇನ್ನು ಕೆಲವರು ಬಂದರು. ಬೆಲ್ಜಿಯನ್ನರಿಗೆ ಫ್ರೆಂಚರೂ ಬ್ರಿಟಿಷರೂ ಬೆಂಬಲಕೊಟ್ಟರು. ಅದರಿಂದ ಜರ್ಮನಿಯವರು ನಿಲ್ಲಲಾರದೆ ಸೋತು ಹಿಮ್ಮೆಟ್ಟಬೇಕಾಯಿತು. ಅಲ್ಲಿ ಅನೇಕರು ಮಡಿದುಹೋದರು. ಆ ಪ್ರಾಂತ್ಯದಲ್ಲಿ ಇದರಿಂದ ನಮ್ಮ ಪಕ್ಷದವರು ಒಂದು ಮೈಲಿ ದೂರ ಮುಂದರಿಸಿ ನುಗ್ಗಿಹೋಗಲು ಅನುಕೂಲವಾಯಿತು.

ಇತರ ಠಾಣ್ಯಗಳಲ್ಲಿ ಫ್ರೆಂಚರು ನುಗ್ಗಿಹೋಗಿ, ಮಹಾ ಶೌರ್ಯದಿಂದ ಕದನಮಾಡಿ ಜರ್ಮನಿಯವರನ್ನು ಕೈಸೆರೆ ಹಿಡಿದುತಂದರು

ಎರಡು ಪಕ್ಷಗಳಲ್ಲೂ ವಿಮಾನಗಳ ಸಂಚಾರವೂ ಕಾರ್ಯಭಾಗಗಳೂ ಬಹಳ ಹೆಚ್ಚಾಗಿರುತ್ತವೆ. ಅನೇಕ ಸ್ಥಳಗಳಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹಾಕಿರುವವು. ಆದರೆ ಯಾವ ಸ್ಥಳದಲ್ಲೂ ವಿಶೇಷ ನಷ್ಟವೇನೂ ಆಗಿರುವುದಿಲ್ಲ. ಜರ್ಮನಿಯವರ ಹಲವು ವಿಮಾನಯಂತ್ರಗಳನ್ನು ಹಾಳುಮಾಡಿದ್ದಾಯಿತು.

ನೇವ್ ಚಪೆಲ್ ಎಂಬ ಯುದ್ಧದಲ್ಲಿ ನಷ್ಟಪಟ್ಟವರ ಸಂಖ್ಯೆಗಳನ್ನು ಪ್ರಕಟಿಸಿದಾರೆ. ಯುದ್ಧವು ಮಹಾ ಘೋರವಾಗಿ ನಡೆಯಿತು. ಬ್ರಿಟಿಷರ ಕಡೆ 190

... ಹುದ್ದೇದಾರರೂ, 2,337 ಮಂದಿ ಸೈನಿಕರೂ ಕೊಲೆಯಾದರು ; 359 ... ಹುದ್ದೇದಾರರೂ, 8,174 ಮಂದಿ ಸೈನಿಕರೂ ಗಾಯಪಟ್ಟಿದಾರೆ. 23 ... ದಾರರೂ, 1,728 ಸೈನಿಕರೂ ಸಿಕ್ಕಿ ಇಲ್ಲ. ಅಂದರೆ ಒಟ್ಟು 12,811 ... ನಷ್ಟಪಟ್ಟರು. ಜರ್ಮನಿಯವರ ಕಡೆ ಎಷ್ಟು ಸೈನ್ಯ ನಷ್ಟವಾಯಿತೋ ... ತಿಳಿಯಲಿಲ್ಲ. ಅನೇಕ ಸಾವಿರ ಸೈನಿಕರು ಯುದ್ಧಭೂಮಿಯಲ್ಲಿ ಕೊಲೆಯಾಗಿ ... ದ್ದರು. ಗಾಯಪಟ್ಟ 12,000 ಸೈನ್ಯವನ್ನು ಸಾಗಿಸಿದರು. 30 ಹುದ್ದೇದಾ... 1,657 ಮಂದಿ ಸೈನಿಕರೂ ಕೈಸೆರೆ ಸಿಕ್ಕಿದರು. ಈ ಯುದ್ಧವು ಮಾರ್ಚಿ ... 10 ರಲ್ಲಿ ನಡೆದದ್ದು.

ಏಪ್ರಿಲ್ ತಾ. 11 ರ ವರೆಗೆ ಬ್ರಿಟಿಷ್ ಸೈನಿಕರಲ್ಲಿ ಕೊಲೆಯಾದವರು, ಗಾಯಪಟ್ಟವರು, ಸಿಕ್ಕದೆ ಇರುವವರು, ಎಲ್ಲಾ ಸೇರಿ 1,39,347 ಮಂದಿ ಎಂದು ಪ್ರಕಟಮಾಡಿದಾರೆ.

ಇಂಗ್ಲೆಂಡಿನ ಮೇಲೆ ವಿಮಾನ ದರೋಡೆ.

ಏಪ್ರಿಲ್ ತಾ. 15 ನೇ ಗುರುವಾರ ರಾತ್ರಿ ಜರ್ಮನಿಯವರ ಜೆಪ್ಪೆಲಿನ್ ಎಂಬ ಭಾರೀ ವಿಮಾನ ಯಂತ್ರಗಳು ಮೂರೂ (ಒಂದೊಂದು ಸುಮಾರು 40 ಜನವನ್ನು ಹೊರಬಲ್ಲದ್ದು), ಇನ್ನು ಕೆಲವು ಸಣ್ಣ ವಿಮಾನ ಯಂತ್ರಗಳೂ ಅಂತ ರಿಕ್ಷದಲ್ಲೇ ಇಂಗ್ಲೆಂಡಿನ ಹಲವು ಕಡೆಗಳಿಗೆ ಹಾರಿಬಂದು ಸಿಡಿಮದ್ದಿನ ಗುಂಡು ಗಳನ್ನು ಎಸೆಯಬಿಟ್ಟವು. ಒಂದು ವಿಮಾನ ಯಂತ್ರವು ನಾರ್ದಂಬರ್ಲೆಂಡಿನ ತೀರ ಹಾರಿಬಂದು ಕಲ್ಲಿದ್ದಲ ಗಣಿಗಳಿರುವ ಹಲವು ಗ್ರಾಮಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಆ ವಿಮಾನ ಯಂತ್ರವು ಬ್ಲೈತ್ ನಗರದ ಮೇಲ್ಗಡೆ ಹಾರುತ್ತಿದ್ದಾಗ ಅಲ್ಲಿನ ಪ್ರಜೆಗಳು ಒಂದು ಕಡೆ ಹೇರಳವಾಗಿ ಕೂಡಿ ಸೈನ್ಯಕ್ಕೆ ಜನವನ್ನು ಸೇರಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತಿದ್ದರು. ಆ ಸಮಯ ದಲ್ಲಿ ಒಬ್ಬ ಪಾದ್ರಿಯು ಸಭೆಯಲ್ಲಿ ನಿಂತು ಭಾಷಣಮಾಡುತ್ತಿದ್ದನು. ಆಗ ಜರ್ಮನಿಯವರ ಜೆಪ್ಪೆಲಿನ್‌ನನ್ನು ನೋಡಿ ಸಭೆಯಲ್ಲಿ ಕೂಡಿದ್ದವರಿಗೆ ಸೈನ್ಯಕ್ಕೆ ಜನ ಸೇರಿಸಿಕೊಳ್ಳಬೇಕೆಂಬ ಉತ್ಸಾಹವೂ ಆತುರವೂ ಇನ್ನೂ ಹೆಚ್ಚಾಯಿತು. ಆ ಪ್ರದೇಶದಲ್ಲೇ ಹಲವು ಸಿಡಿಮದ್ದಿನ ಗುಂಡುಗಳು ಬಿದ್ದವು. ಆದರೆ ಪ್ರಾಣ ನಷ್ಟವೇನೂ ಆಗಲಿಲ್ಲ. ಹಲವು ಕಟ್ಟಡಗಳು ಹತ್ತಿಕೊಂಡು ಉರಿದವು ... ಮೇಲೆ ಹೋಗುತ್ತಿದ್ದ ಒಬ್ಬನಿಗೆ ಸ್ವಲ್ಪ ಗಾಯವಾಯಿತು. ಅವನ ... ಕಿತ್ತುಹೋಯಿತು.

ಇನ್ನೊಂದು ವಿಮಾನ ಯಂತ್ರವು ಸಫೋಕ್ ಡಿಸ್ಟ್ರಿಕ್ಟಿಗೆ ಸೇರಿದ ಲೊಯಿ ಸ್ಟಫ್ ಎಂಬ ಊರಿನ ಮೇಲೆ ಕಾಣಿಸಿಕೊಂಡಿತು. ಅಲ್ಲಿ ಆದ ನಷ್ಟವೇನೋ ವರ್ತಮಾನಗಳು ನಿಚಿತವಾಗಿ ತಿಳಿಸಿಲ್ಲ.

ಮೂರನೆಯ ವಿಮಾನವು ಎಸ್ಸೆಕ್ಸ್ ಡಿಸ್ಟ್ರಿಕ್ಟಿನ ಮೇಲೆ ಕಾಣಿಸಿಕೊಂಡು ಹಲವು ಸ್ಥಳಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಎಸೆಯಿತು. ಇದರಿಂದ ಒಬ್ಬ ಹುಡುಗನಿಗೆ ಸ್ವಲ್ಪ ಗಾಯವಾಗಿದೆ, ಮೂರು ಕುದುರೆಗಳು ಮೃತಪಟ್ಟವು, ಹಲವು ... ಹತ್ತಿಕೊಂಡಿತು.

ಒಂದು ಸಣ್ಣ ವಿಮಾನಯಂತ್ರವು ಕೆಂಟ್ ಡಿಸ್ಟ್ರಿಕ್ಟಿನ ಮೇಲೆ ಕಾಣಿಸಿ ಕೊಂಡು ಹಲವು ಸ್ಥಳಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಆದರೆ ... ಬ್ರಿಟಿಷ್ ವಿಮಾನಕಾರರು ಹೋಗಿ ಅದನ್ನು ಓಡಿಸಿಬಿಟ್ಟರು.

ಮುಂದೆ ಬರತಕ್ಕ ವರ್ತಮಾನಗಳಿಂದ ನಷ್ಟಸಂಭವಿಸಿದ ವಿವರ ಗೊತ್ತಾಗ ಬಹುದು. ಆದರೆ ಇದುವರೆಗೆ ನೋಡುವುದರಲ್ಲಿ ಈ ವಿಮಾನಗಳಿಂದ ವಿಶೇಷ ನಷ್ಟವೇನೂ ಆಗಿಲ್ಲವೆಂದು ಹೇಳಬಹುದು. ಜನಗಳಿಗೆ ಎಲ್ಲೂ ಗಾಬರಿಯುಂಟಾ ಗಲಿಲ್ಲ. ಕೆಲವು ಕಟ್ಟಡಗಳಿಗೆ ಅಲ್ಪಸ್ವಲ್ಪ ನಷ್ಟವಾಗಿದೆ ; ಕೆಲವರಿಗೆ ಸ್ವಲ್ಪ ಸ್ವಲ್ಪ ಗಾಯಗಳಾಗಿವೆ ಇಷ್ಟಲ್ಲದೆ ಹೆಚ್ಚು ನಷ್ಟವೇನೂ ಆಗಲಿಲ್ಲ. ಜರ್ಮನಿ ಯವರ ಮೂರು ಜೆಪ್ಪೆಲಿನ್ ವಿಮಾನಯಂತ್ರಗಳು ಇಂಗ್ಲೆಂಡಿನ ಕಡೆಯಿಂದ ಹಿಂತಿರುಗಿ ಹೋಗುತ್ತಿದ್ದವೆಂದೂ, ಹಾಲೆಂಡಿನ ಸಮುದ್ರ ತೀರದಲ್ಲಿ ಕಂಡರೆಂದೂ ಪ್ರಕಟವಾಗಿದೆ. ಇಷ್ಟೊಂದು ಸಿಡಿಮದ್ದಿನ ಗುಂಡುಗಳು ಬಿದ್ದರೂ ಇಂಗ್ಲೆಂಡಿನಲ್ಲಿ ಇಷ್ಟು ಸ್ವಲ್ಪವೇ ನಷ್ಟವಾಗಿರುವುದನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ.

ಪೂರ್ವ ರಣರಂಗದಲ್ಲಿ.

ಆಸ್ಟ್ರಿಯಾದೊಳಗೆ ಕಾರ್ಪೇಥಿಯನ್ ಪರ್ವತದ ತಪ್ಪಲುಗಳಲ್ಲಿ ಘೋರವಾದ ಕದನವು ನಡೆಯುತ್ತಿರುವುದು. ರಷ್ಯಾದವರು ಹಂಗೇರೀ ರಾಜ್ಯದೊಳಕ್ಕೆ ನುಗ್ಗಬೇಕೆಂದು ಅಪಾರ ಸೈನ್ಯಗಳನ್ನು ಕೂಡಿಸಿ ತರುತ್ತಿದಾರೆ. ಇವರನ್ನು ಬಾರದಂತೆ ತಡೆಯುವುದಕ್ಕೋಸ್ಕರ ಜರ್ಮನಿಯವರೂ ಆಸ್ಟ್ರಿಯಾದವರೂ ಬಹಳ ಹೊಸ ಸೈನ್ಯಗಳನ್ನು ಅಲ್ಲಿಗೆ ಕಳುಹಿಸಿರುವರು. ಕದನಗಳು ಬಹಳ ವಿಸ್ತಾರವಾದ ಪ್ರದೇಶದಲ್ಲಿ ಉದ್ದಕ್ಕೂ ನಡೆಯುತ್ತಾ ಬಂದಿರುವವು. ಆಸ್ಟ್ರಿಯಾದವರೂ ಜರ್ಮನಿಯವರೂ ಗೆಲಿಸಿಯಾದಲ್ಲಿ ರಷ್ಯಾದವರ ಎಡ ಪಾರ್ಶ್ವಕ್ಕೆ ... ಸುತ್ತುಕಟ್ಟಬೇಕೆಂದು ಸಾಹಸ ಪಡುತ್ತಿದಾರೆ. ಈಗ ಆಸ್ಟ್ರಿಯಾದವರು ... ಸ್ಟ್ರಿ ಎಂಬ ನದಿಯ ಬಳಿಗೂ ನುಗ್ಗಿಹೋದರು. ಆದರೂ ಅವರು ರಷ್ಯಾದವರನ್ನು ಬಳಸುವುದು ಸಾಧ್ಯವಾಗಲಿಲ್ಲ. ರಷ್ಯಾ ತಂತೀ ವರ್ತಮಾನಗಳಿಂದ ಆಸ್ಟ್ರಿಯಾದವರನ್ನು ಹಿಮ್ಮೆಟ್ಟಿಸಿದೆ ಎಂದೂ, ಈಗ ರಷ್ಯಾದವರು ಆ ಪ್ರದೇಶ ದಲ್ಲೇ ಮುಂದುಮುಂದಕ್ಕೆ ನುಗ್ಗಿಹೋಗುತ್ತಿದಾರೆಂದೂ ಗೊತ್ತಾಗುತ್ತದೆ.

ಪರ್ವತಗಳಲ್ಲಿ ನಡೆಯುವ ಯುದ್ಧಗಳೇ ಪ್ರಾಮುಖ್ಯವಾದವು. ರಷ್ಯಾದವರು ಸುಮಾರು 70 ಮೈಲಿ ವಿಸ್ತಾರವುಳ್ಳ ಪ್ರದೇಶದೊಳಗೆ ಕಣಿವೆಗಳೆಲ್ಲಾ ತಮ್ಮ ವಶವಾಗಿವೆ ಎಂದೂ, ಅಲ್ಲಿಂದ ಅವರು ಹಂಗೇರಿಯೊಳಕ್ಕೆ ಇಳಿದು ನುಗ್ಗು ತ್ತಿದಾರೆಂದೂ ಹೇಳುವರು. ಇದು ತುಂಬಾ ವಿಶೇಷವಾದದ್ದೆಂದು ಆಸ್ಟ್ರಿಯಾದವರೂ ಜರ್ಮನಿಯವರೂ ತಿಳಿದುಕೊಂಡು ತಮ್ಮ ಸೈನ್ಯಗಳನ್ನು ಅತ್ಯಂತ ಅವಸರದಿಂದ ಅಲ್ಲಿಗೆ ಕಳುಹಿಸುತ್ತಿರುವರು. ಅದೇ ಪ್ರದೇಶದಲ್ಲಿ ಜರ್ಮನಿಯ ಚಕ್ರವರ್ತಿಯವರೂ, ಸೈನ್ಯಗಳ ಮುಖ್ಯ ದಳಪತಿಗಳೂ ಇದ್ದು ಸೈನ್ಯಗಳನ್ನು ನಡೆಸುತ್ತಿರುವುದಾಗಿ ವರ್ತಮಾನವಿದೆ.

ಈ ಯುದ್ಧದ ಸಾಲಿನಲ್ಲಿ ನಡೆಯುವ ವಿದ್ಯಮಾನಗಳು ತಂತೀವರ್ತಮಾನದಿಂದ ಸರಿಯಾಗಿ ಗೊತ್ತಾಗುವುದಿಲ್ಲ. ರಷ್ಯಾದವರು ಸೈನಿಕರನ್ನು ಕೈಸೆರೆ ಹಿಡಿದೆವೆಂದು ಹೇಳುತ್ತಾರೆ. ಈಗ ಅವರು ಕೈಸೆರೆ ಹಿಡಿಯುವುದು ಸಾವಿರಗಟ್ಲೆ ಬಿಟ್ಟು ನೂರರಗಟ್ಲೆಗೆ ಇಳಿದಿದೆ. ಒಂದು ಕಣಿವೆಯನ್ನು ಆಸ್ಟ್ರಿಯಾದವರೇ ಮತ್ತೆ ಆಕ್ರಮಿಸಿಕೊಂಡಿದಾರೆ. ಆದರೆ ಅದನ್ನು ಕಾಪಾಡಿಕೊಳ್ಳುವುದು ಅವರಿಗೆ ಬಹಳ ಕಷ್ಟವಾಗಿ ಪರಿಣಮಿಸಿದೆ. ಈ ಭಯಂಕರವಾದ ಕದನವು ಯಾವ ಪರಿಣಾಮ ಹೊಂದುವುದೋ ಇನ್ನು ಕೆಲವು ದಿನಗಳೊಳಗೇ ಗೊತ್ತಾಗು ವುದು. ಒಂದು ವೇಳೆ ರಷ್ಯಾದವರು ಶತ್ರುವಿನ ಸಾಲನ್ನು ಭೇದಿಸಿಕೊಂಡು ಹೋಗಿ ಹಂಗೇರಿ ರಾಜ್ಯದ ಮೈದಾನ್ ಪ್ರದೇಶಗಳಿಗೆ ನುಗ್ಗಬಹುದು ; ಅಥವಾ ಆಸ್ಟ್ರಿಯಾ ಮತ್ತು ಜರ್ಮನಿಯವರು ಅಡ್ಡಗಟ್ಟಿ ಕಂದಕಗಳನ್ನು ತೋಡಿ ... ಸೈನ್ಯಗಳನ್ನಿಟ್ಟು ಅವರು ಮುಂದರಿಸಿ ಬಾರದಂತೆ ಅಡ್ಡಮಾಡಿದರೂ ಮಾಡಬಹುದು.

ಈ ಯುದ್ಧಭೂಮಿಯ ಇತರ ಕಡೆಗಳಲ್ಲಿ ಕದನಗಳಾದಂತೆ ವರ್ತಮಾನ ಗಳು ಬಂದಿಲ್ಲ. ಉತ್ತರ ಭಾಗದಲ್ಲಿ ಜರ್ಮನಿಯವರು ಹಿಂದಕ್ಕೆ ಓಡಿಸಲ್ಪ ಟ್ಟರು ; ಅವರಲ್ಲಿ ಕೆಲವರು ರಷ್ಯಾದವರಿಗೆ ಕೈಸೆರೆ ಸಿಕ್ಕಿರುತ್ತಾರೆ. ಪೋಲೆಂಡಿನಲ್ಲಿ ಉಭಯ ಸೈನ್ಯಗಳೂ ಎದುರುಬದುರಾಗಿ ಕಂದಕಗಳನ್ನು ತೋಡಿಕೊಂಡು ... ಕೊಂಡಿವೆ. ಅಲ್ಲಿ ನಡೆಯುವ ಯುದ್ಧಕಾರ್ಯಗಳೂ ಪಶ್ಚಿಮ ರಣರಂಗದ ಯುದ್ಧಕಾರ್ಯಗಳಂತೆ ಇರುವವು. ಬೆಕ್ವಿನಾ ಕೋನೆಯಲ್ಲಿ ಆಸ್ಟ್ರಿಯಾದವರು ... ಯುದ್ಧಮಾಡಿ ಹಿಂದಕ್ಕೆ ಓಡಿಸಲ್ಪಟ್ಟಿದಾರೆ.

... ರಷ್ಯಾದವರೇ ಶತ್ರುವಿನ ಮೇಲೆ ನುಗ್ಗಿ ಯುದ್ಧಮಾಡುತ್ತಿರುವರು. ... ಆಸ್ಟ್ರಿಯಾದವರೂ ರಷ್ಯಾದವರನ್ನು ನುಗ್ಗಿಬಾರದಂತೆ ... ಅಪಾರವಾದ ಸೈನ್ಯಗಳನ್ನು ತಂದು ಒದಗಿಸಬೇಕಾಗಿದೆ. ರಷ್ಯಾದವರಾದರೂ ಹಂಗೇರಿಯೊಳಕ್ಕೆ ನುಗ್ಗಬೇಕೆಂದು ಕಾರ್ಪೇಥಿಯನ್ ಪರ್ವತಗಳ ಕಣಿವೆ ಹಾದಿಗಳನ್ನು ಗೆದ್ದು ಆಕ್ರಮಿಸಿಕೊಳ್ಳುತ್ತಿರುವರು. ರಷ್ಯಾದವರ ಉದ್ದೇಶವು ಎಷ್ಟುಮಟ್ಟಿಗೆ ನೆರವೇರೀತೋ ಕೆಲವು ವಾರಗಳೊಳಗೆ ಗೊತ್ತಾಗಬೇಕು.

ರಷ್ಯಾದವರಲ್ಲಿ ರಿಜರ್ವ್ ಸೈನ್ಯಗಳು ಅಪಾರವಾಗಿರುತ್ತವೆ. ಅವರು ಟರ್ಕಿಯವರ ಮೇಲೆ ಯುದ್ಧ ಮಾಡುವುದಕ್ಕೆ ತಮ್ಮ ಸೈನ್ಯದಲ್ಲಿ ಸ್ವಲ್ಪ ಭಾಗ ವನ್ನೂ ಕಳುಹಿಸದೆ ಎಲ್ಲಾ ಸೈನ್ಯವನ್ನೂ ಇತರ ಯುದ್ಧ ಭೂಮಿಗಳಿಗೆ ರವಾನೆ ಮಾಡಿದಾರೆ. ರಷ್ಯಾ ಸೈನ್ಯಗಳಿಗೆ ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳು ಬಹಳ ಚೆನ್ನಾಗಿ ಒದಗಿಸಲ್ಪಟ್ಟಿವೆ ಎಂದೂ, ಸೈನಿಕರು ತುಂಬಾ ಚುರುಕಾಗಿಯೂ, ಪರಾಕ್ರಮಿಗಳಾಗಿಯೂ, ಕುಶಲರಾಗಿಯೂ ಇದಾರೆಂದೂ ತಂತೀ ವರ್ತಮಾನಗಳು ಅವರನ್ನು ಕೊಂಡಾಡುತ್ತಿರುವವು.

ಟರ್ಕಿ.

ನಮ್ಮ ಪಕ್ಷದವರು ಹಲವು ಸ್ಥಳಗಳಲ್ಲಿ ಟರ್ಕಿಯವರ ಮೇಲೆ ಯುದ್ಧ ಕಾರ್ಯಗಳನ್ನು ನಡಿಸುತ್ತಿದಾರೆ. ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸುವ ಕಾರ್ಯ ಮುಂದರಿಯುತ್ತಿದೆ. ಆದರೆ ಇದರ ವಿವರಗಳು ಸರಿಯಾಗಿ ತಿಳಿಯ ಲಿಲ್ಲ. ಬ್ರಿಟಿಷರ ಒಂದು ಸಣ್ಣ ಜಹಜು ಈ ಜಲಮಾರ್ಗದಲ್ಲಿ 10 ಮೈಲಿ ದೂರ ಮುಂದರಿಸಿ ನುಗ್ಗಿ ಹೋಯಿತು. ಅದನ್ನು ಹಿಂಬಾಲಿಸಿ ಒಂದು ಯುದ್ಧದ ಜಹಜು ನುಗ್ಗಿತು. ಕೋಟೆಗಳಿಂದ ಶತ್ರುವು ಈ ಜಹಜುಗಳಿಗೆ ಗುಂಡುಗಳನ್ನು ಹೊಡೆದರೂ ಅವಕ್ಕೆ ನಷ್ಟವೇನೂ ಆಗಲಿಲ್ಲ.

ಬ್ರಿಟಿಷರಿಗೆ ಸಹಾಯಮಾಡುವುದಕ್ಕೆ ಫ್ರೆಂಚ್ ಸೈನ್ಯಗಳು ಬಹಳವಾಗಿ ಈಜಿಪ್ಟಿಗೆ ಬಂದಿರುವಂತೆ ಪ್ರಕಟವಾಗಿದೆ. ಇನ್ನು ಮುಂದೆ ಸಮುದ್ರದ ಕಡೆ ಯಿಂದಲೂ ನಮ್ಮ ಪಕ್ಷದವರು ಟರ್ಕಿಯ ಮೇಲೆ ನುಗ್ಗುತ್ತಾರೆಂದು ಕಾಯು ವುದು. ಸಮುದ್ರದ ಕಡೆಯಿಂದ ನಮ್ಮ ಜಹಜುಗಳು ನುಗ್ಗಿ ಒಡೆದುಹಾಕು ವಂಥಾ ಕೋಟೆಗಳನ್ನು ಭೂಸೈನಿಕರು ನುಗ್ಗಿ ಹೋಗಿ ಆಕ್ರಮಿಸಿಕೊಳ್ಳುವರು. ಸದ್ಯದಲ್ಲಿ ಆ ಕಡೆ ಹವಾ ಸ್ಥಿತಿ ಅನುಕೂಲವಾಗಿಲ್ಲ. ಆದರೂ ನಮ್ಮ ಪಕ್ಷದ ವರು ಈ ವಿರಾಮ ಕಾಲದಲ್ಲಿ ಒಂದೇ ಸಲ ನುಗ್ಗುವುದಕ್ಕೆ ಅವಶ್ಯವಾದ ಸನ್ನಾಹ ಗಳನ್ನು ಮಾಡಿಕೊಳ್ಳುತ್ತಿದಾರೆ.

ಫ್ರೆಂಚರ ಯುದ್ಧದ ಜಹಜು ಪಾಲೆಸ್ಟೈನ್‌ನಲ್ಲಿ ಗಾಜಾ ಎಂಬ ತೀರಪಟ್ಟಣದ ಬಳಿ ಇರುವ ಟರ್ಕಿಯವರ ಛಾವಣಿಕ್ಕೆ ಗುಂಡುಗಳನ್ನು ಹೊಡೆಯಿತು.

ಜನರಲ್ ಗೋಲ್ಟ್ಸ್ ಎಂಬ ದಳಪತಿಯು ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್‌ನಿಂದ ಜರ್ಮನಿ ರಾಜಧಾನಿಯಾದ ಬರ್ಲಿನ್ ನಗರಕ್ಕೆ ಹೋಗಿ 3,00,000 ಜರ್ಮನಿ ಸೈನಿಕರನ್ನು ಸರ್ಬಿಯಾಕ್ಕೆ ಕಳುಹಿಸಿ ಆ ದೇಶ ವನ್ನು ಗೆದ್ದುಕೊಂಡು ಬಲ್ಗೇರಿಯಾದವರಿಗೆ ಗಾಬರಿಯನ್ನುಂಟುಮಾಡಿದರೆ ಆಗ್ಗ ಟರ್ಕಿಗೆ ಸೈನ್ಯವನ್ನೂ ಪಿರಂಗಿಗಳನ್ನೂ ಕಳುಹಿಸುವುದಕ್ಕೆ ಅನುಕೂಲವಾಗುವು ದೆಂದು ತಿಳಿಸಿದಂತೆ ವರ್ತಮಾನವಿದೆ.

ಈಜಿಪ್ಟಿನಲ್ಲಿ ಟರ್ಕಿಯವರ ಕೆಲಕೆಲವು ಕುದುರೆ ಸವಾರರು ಸೂಯೆಸ್ ಕಡಲುಕಾಲುವೆಯ ಸಮೀಪದಲ್ಲಿ ಕಾಣಿಸಿಕೊಂಡಿರುತ್ತಾರೆ.

ಮೆಸೊಪೊಟೇಮಿಯಾದೊಳಗೆ ಯೂಫ್ರೆಟೀಸ್ ನದಿಯ ಮೇಲ್ಭಾಗದಲ್ಲಿ ಬ್ರಿಟಿಷರು ಟರ್ಕಿ ಮತ್ತು ಅರಬ್ಬಿ ಸೈನಿಕರನ್ನು ಸಂಧಿಸಿ ಕದನಗಳನ್ನು ನಡಿಸಿ ದರು. ಬ್ರಿಟಿಷರು ನುಗ್ಗಿಹೋಗಿ ಬಾಸ್ರಾ ಪಟ್ಟಣದಲ್ಲಿ ತಮ್ಮ ಸೈನ್ಯವನ್ನು ಇಟ್ಟುಕೊಂಡಿದಾರೆ. ಅಲ್ಲಿಂದ 9 ಮೈಲಿ ಆಚೆ ಟರ್ಕಿಯವರು 20,000 ಸೈನ್ಯ ವನ್ನು ಇಟ್ಟುಕೊಂಡಿದ್ದರು. ಏಪ್ರಿಲ್ ತಾ. 13 ನೇ ಮಂಗಳವಾರ ಅವರು 28 ಪಿರಂಗಿಗಳ ಸಮೇತ ನುಗ್ಗಿಬಂದು ಬ್ರಿಟಿಷ್ ಸೈನ್ಯದ ಮೇಲೆ ಬಿದ್ದರು. ಬ್ರಿಟಿಷರು ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿ 460 ಸೈನಿಕರನ್ನೂ, ಎರಡು ಪಿರಂಗಿ ಗಳನ್ನೂ ಹಿಡಿದುತಂದಿದಾರೆ.

ಮರುದಿನ ಬ್ರಿಟಿಷರೇ ಶತ್ರುವಿನ ಮೇಲೆ ನುಗ್ಗಿಹೋಗಿ ಅವರನ್ನೆಲ್ಲಾ ಅವರ ಕಂದಕಗಳಿಂದ ಹೊರಡಿಸಿ ಹಿಂದಕ್ಕೆ 16 ಮೈಲಿ ದೂರ ಓಡಿಸಿರುತ್ತಾರೆ. ಟರ್ಕಿ ಸೈನಿಕರು 200 ಮಂದಿ ಕೈಸೆರೆಯಾದರು ; ಅವರು ಕೆಲವು ಮೆಷೀನ್ ಪಿರಂಗಿ ಗಳನ್ನೂ ಕಳೆದುಕೊಂಡರು.

ಬ್ರಿಟಿಷರ ಕಡೆ ಎಷ್ಟು ನಷ್ಟವಾಯಿತೋ ತಂತೀ ವರ್ತಮಾನಗಳಿಂದ ಸ್ಪಷ್ಟ ವಾಗಿ ತಿಳಿಯುವುದಿಲ್ಲ. ಈ ಸೈನ್ಯವೆಲ್ಲಾ ಹಿಂದುಸ್ಥಾನದಿಂದ ಹೋಗಿದ್ದದ್ದು. ಈ ಪ್ರಾಂತ್ಯದಲ್ಲಿ ಹಿಂದುಸ್ಥಾನದ ಅನೇಕ ಸೈನ್ಯಗಳನ್ನು ಇಟ್ಟಿದಾರೆ. ಬ್ರಿಟಿಷ್ ಸೈನ್ಯದಲ್ಲಿ ಯಾರೂ ಕೊಲೆಯಾಗಲಿಲ್ಲವೆಂದೂ, 4 ಮಂದಿ ಬ್ರಿಟಿಷ್ ಹುದ್ದೇದಾ ರರಿಗೂ, 23 ಮಂದಿ ಬ್ರಿಟಿಷ್ ಸೋಜರುಗಳಿಗೂ, 65 ಮಂದಿ ಹಿಂದುಸ್ಥಾನದ ಸಿಪಾಯಿಗಳಿಗೂ ಗಾಯಗಳಾದವೆಂದೂ ಹೇಳಲಾಗಿದೆ. ಟರ್ಕಿ ಸೈನಿಕರು ಬಹಳ ಪರಾಕ್ರಮದಿಂದ ಕಾದಿದರಂತೆ. ನಷ್ಟಪಟ್ಟವರ ಸಂಖ್ಯೆಗಳು ಮುಂದೆ ಪ್ರಕಟವಾಗ ಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಆಫ್ರಿಕಾದಲ್ಲಿ.

ಜರ್ಮನಿಯ ದಕ್ಷಿಣ ಪಶ್ಚಿಮ ಆಫ್ರಿಕಾದೊಳಕ್ಕೆ ಬ್ರಿಟಿಷ್ ಸೈನ್ಯಗಳು ನುಗ್ಗಿ ಹೋಗುತ್ತಿರುವವು. ಜರ್ಮನಿಯವರು ಸ್ಥಳಗಳನ್ನು ಬಿಟ್ಟು ಹೋಗುತ್ತಾ ಬಾವಿಗಳಿಗೆ ವಿಷಪದಾರ್ಥಗಳನ್ನು ಹಾಕಿಹೋಗಿರುವುದು ಗೊತ್ತಾಗಿದೆ. ಈ ಪ್ರಾಂತ್ಯ ಕದನಗಳು ನಡೆದ ಸುದ್ದಿಯೇನೂ ಬಂದಿಲ್ಲ.

ಸಮುದ್ರದ ಮೇಲೆ.

ಬ್ರಿಟಿಷರ ಹಡಗುಗಳನ್ನು ನಾಶಮಾಡುವೆವೆಂಬ ಜರ್ಮನಿಯವರ ಮಹಾ ಸಾಹಸವೂ ಸಾಗಲಿಲ್ಲ. ಕಳೆದ ವಾರದ ಸುದ್ದಿಯೇನೆಂದರೆ, ಬ್ರಿಟಿಷ್ ತೀರಪಟ್ಟ ಣಗಳಿಗೆ ಬಂದು ಹೋದಂಥಾ 1,432 ಹಡಗುಗಳ ಪೈಕಿ ಜರ್ಮನಿಯವರು ಎರ ಡನ್ನು ಮಾತ್ರ ಮುಳುಗಿಸಿರುತ್ತಾರೆ.

ಹಲವು ಬ್ರಿಟಿಷ್ ಜಹಜುಗಳು ಬಹಳ ದೊಡ್ಡ ಗಂಡಾಂತರಗಳಿಂದ ತಪ್ಪಿಸಿ ಕೊಂಡು ಬಂದವು. ಒಂದು ಜಹಜನ್ನು ಜರ್ಮನಿಯ ಸಬ್‌ಮೆರೀನು ಮುಳು ಗಿಸಬೇಕೆಂದು ಸುಮಾರು 75 ಮೈಲಿ ದೂರ ಓಡಿಸಿಕೊಂಡು ಬಂತು. ಅದರ ಮೇಲೆ ಗುಂಡೂ ಹಾಕಿತು. ಆದರೆ ಟಾರ್ಪೀಡೋವನ್ನು ಬಿಟ್ಟು ಹೊಡೆಯಲು ಬ್ರಿಟಿಷ್ ಜಹಜು ಅವಕಾಶಕೊಡಲಿಲ್ಲ.

ಜರ್ಮನಿಯ ಸಬ್ ಮೆರೀನು ಹಾಲೆಂಡಿನ ತೀರದಲ್ಲಿ ಧಾನ್ಯ ಭರ್ತಿಯಾಗಿದ್ದ ಆ ರಾಜ್ಯದ ಒಂದು ಜಹಜನ್ನು ಮುಳುಗಿಸಿದೆ. ಹಾಲೆಂಡಿನಲ್ಲಿ ಹೊಟ್ಟೆ ಗಿಲ್ಲದಂಥಾ ಬೆಲ್ಜಿಯನ್ ಪ್ರಜೆಗಳಿಗೋಸ್ಕರ ಆಹಾರ ಪದಾರ್ಥಗಳನ್ನು ಸಾಗಿಸಿ ಕೊಂಡು ಹೋಗುತ್ತಿದ್ದ ಬ್ರಿಟಿಷ್ ಜಹಜನ್ನು ಜರ್ಮನಿಯವರು ಮುಳುಗಿಸುವು ದಿಲ್ಲವೆಂಬರ್ಥಕ್ಕೆ ಅವರ ಅಧಿಪತಿಗೆ ಕಾಗದ ಬರೆದು ಕಳುಹಿಸದ ಮೇಲೂ, ಮುಳುಗಿಸಿಬಿಟ್ಟರು. ಹಾಲೆಂಡಿನವರ ಜಹಜುಗಳನ್ನು ಜರ್ಮನಿಯವರು ಮುಳು ಗಿಸುತ್ತಿರುವುದನ್ನು ನೋಡಿ ಆ ಜನರಿಗೆ ಆಗ್ರಹವುಂಟಾಗಿದೆ ; ಅಲ್ಲಿನ ವರ್ತ ಮಾನ ಪತ್ರಿಕೆಗಳು ಜರ್ಮನಿಯವರ ಮೇಲೆ ಕಠಿಣವಾಗಿ ಆಕ್ಷೇಪಣೆ ಮಾಡು ತ್ತಿರುವವು.

ನೋರ್ವೆ ರಾಜ್ಯದ ಸಮುದ್ರತೀರದ ಆಚೆ ಒಂದು ಸಮುದ್ರಯುದ್ಧ ನಡೆ ದಂತೆ ನೋರ್ವೆಯ ತಂತೀವರ್ತಮಾನಗಳು ಹೇಳಿದವು. ಈಚೆಗೆ ಅದು ನಿಜವಲ್ಲ ವೆಂದು ಗೊತ್ತಾಯಿತು.

ದಕ್ಷಿಣ ಅಮೇರಿಕಕ್ಕೆ ಸೇರಿದ ಚಿಲಿ ಸಂಸ್ಥಾನದ ಸಮುದ್ರತೀರದಲ್ಲಿ ಬ್ರಿಟಿಷರು ಜರ್ಮನಿಯವರ ಡ್ರೆಸ್ಡನ್ ಎಂಬ ಯುದ್ಧದ ಜಹಜನ್ನು ಮುಳುಗಿಸಿ ದ್ದು ನ್ಯಾಯವಲ್ಲವೆಂದು ಆ ಸಂಸ್ಥಾನದವರು ಆಕ್ಷೇಪಣೆ ಮಾಡಿದರು. ಬ್ರಿಟಿಷ್ ರಾಜ್ಯದ ಪರರಾಜ್ಯಗಳ ಮಂತ್ರಿಯಾದ ಸರ್ ಎಡ್ವರ್ಡ್ ಗ್ರೇ ಯವರು ಅದು ತಪ್ಪಾಯಿತೆಂದು ಒಪ್ಪಿಕೊಂಡು ಜವಾಬುಕೊಟ್ಟರು. ಆ ಯುದ್ಧದ ಜಹಜನ್ನು ಚಿಲಿ ಸರ್ಕಾರದವರು ತಡೆದಿಟ್ಟುಕೊಂಡಿರಲಿಲ್ಲವೆಂದೂ, ಆ ಜಹಜಿನ ಮೇಲೆ ಜರ್ಮನಿಯ ಬಾವುಟಾ ಎತ್ತಿಕಟ್ಟಿತ್ತೆಂದೂ, ಅದನ್ನು ನೋಡಿ ಬ್ರಿಟಿಷ್ ಜಹಜು ಅದರ ಮೇಲೆ ನುಗ್ಗಿಹೋಗಿ ಅದನ್ನು ಮುಳುಗಿಸಿತೆಂದೂ ಮಂತ್ರಿಯು ತಿಳಿಸಿದಾರೆ.

ಇತರ ವಿಷಯಗಳು.

ಇಟಲಿಯವರೂ ಸರ್ಬಿಯಾದವರೂ ಆಡ್ರಿಯಾಟಿಕ್ ಕಡಲ ತೀರದ ವಿಷಯ ದಲ್ಲಿ ಏಕವಾಗಿದಾರೆಂದು ವರ್ತಮಾನವಿದೆ. ಇಟಲಿ ಪ್ರಜೆಗಳು ಅನೇಕ ಸ್ಥಳಗ ಳಲ್ಲಿ ಸಭೆಗಳನ್ನು ನಡಿಸಿ ಯುದ್ಧಕ್ಕೆ ಹೊರಡಬೇಕೆಂದು ಕೇಳುತ್ತಿದಾರೆ. ಆಸ್ಟ್ರಿಯಾದವರಿಗೂ ಇಟಲಿಯವರಿಗೂ ಹಲವು ವಿಚಾರಗಳಲ್ಲಿ ಏಕಮತ್ಯವಿಲ್ಲ ; ಚರ್ಚೆಗಳು ಆಗುತ್ತಲೇ ಇರುವವು.

ಇಂಗ್ಲೆಂಡಿನಲ್ಲಿ ಕೂಲಿ ಜನರ ತೊಂದರೆ ನಿವಾರಣೆಯಾದಂತೆ ತೋರುವುದು. ಕೂಲಿಕಾರರು ಯುದ್ಧದ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಕಾರ್ಖಾನೆಗಳಲ್ಲಿ ದುಡಿಯುತ್ತಿದಾರೆ. ಸೈನ್ಯಕ್ಕೆ ಬೇಗ ಬೇಗನೆ ಯುದ್ಧ ಸಾಮಗ್ರಿಗಳನ್ನು ತಯಾರು ಮಾಡಿ ಒದಗಿಸಿದ ಪಕ್ಷದಲ್ಲಿ ಬ್ರಿಟಿಷ್ ಪ್ರಜೆಗಳನ್ನು ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾನೂನು ಜಾರಿಗೆ ತರಲ್ಪಡುವುದಿಲ್ಲವೆಂದು ಲಾರ್ಡ್ ಕಿಚ್ನರವರು ಪ್ರಕಟಮಾಡಿರುತ್ತಾರೆ.

ಈ ಯುದ್ಧವು ಪ್ರಾರಂಭವಾದ ಈಚೆಗೆ 1,546 ಮಂದಿ ಸೋಜರುಗಳಿಗೆ ಬ್ರಿಟಿಷ್ ಸೈನ್ಯದಲ್ಲಿ ಹುದ್ದೆಗಳು ದೊರಕಿರುತ್ತವೆ. ಬ್ರಿಟನ್ನಿನಲ್ಲಿ 33,000 ಸ್ತ್ರೀಯರು ಯುದ್ಧದಲ್ಲಿ ಸಹಾಯ ಮಾಡುತ್ತೇವೆಂದು ಒಪ್ಪಿ ತಮ್ಮ ಹೆಸರು ಗಳನ್ನು ಬರಸಿರುತ್ತಾರೆ.

ಬ್ರಿಟಿಷ್ ರಾಜ್ಯಾಂಗಗಳ ಮಂತ್ರಿಗಳ ಮಹಾ ಸಭೆಯು ಈ ವರುಷ ಲಂಡನ್ ಪಟ್ಟಣದಲ್ಲಿ ನಡೆಯುವುದಿಲ್ಲವೆಂದೂ, ಆವಾಗ್ಯ ಕರಾರು ನಡೆಯುವ ಕಾಲ ಒದಗಿದಾಗ ಬ್ರಿಟಿಷ್ ಗೌರ್ನಮೆಂಟಿನವರು ಸ್ವಾಸ್ಥ್ಯಗಳ ಮುಖ್ಯ ಮಂತ್ರಿ ಗಳ ಅಭಿಮತವನ್ನು ಕೇಳಿ ತಿಳಿಯುವುದಾಗಿಯೂ ಪ್ರಕಟವಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದ ಗುರುವಾರ ರಾತ್ರಿ ರಾಜಧಾನಿಯಲ್ಲಿ ಒಂದು ಹದ ಒಳ್ಳೇ ಮಳೆ ಆಯಿತು. ಸೆಕೆ ಸಹಿಸಕೂಡದಂತಿದೆ.

ಬೆಂಗಳೂರು ಸಿಟಿ ವೈಸ್ ಪ್ರೆಸಿಡೆಂಟರಾಗಿದ್ದ ಮ|| ಸಿ. ವೆಂಕಟರಾಯರನ್ನು ಸರ್ಕಾರದವರು ಮಿಲಿಟರಿ ಸಕ್ರೆಟರಿಯವರ ಅಸಿಸ್ಟೆಂಟರಾಗಿ ನೇಮಕಮಾಡಿರು ತ್ತಾರೆ.

ರಾಜಧಾನಿಯಲ್ಲಿ ಪ್ರಜೆಗಳಿಗೆ ಹಿತಕರವಾದ ಕೆಲವು ಉಪನ್ಯಾಸಗಳನ್ನು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಮಾಡುವುದಾಗಿ ಕೆಲವು ವಿದ್ಯಾವಂತರಾದ ದೊಡ್ಡ ಮನುಷ್ಯರು ಒಪ್ಪಿಕೊಂಡಿದಾರೆ.

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರ ಕುಮಾರರು ನೀಲಗಿರಿಗೆ ಹೋಗುವ ಉದ್ದೇಶ್ಯ ಮೊನ್ನೆ ರಾಜಧಾನಿಗೆ ಬಂದು ಒಂದು ದಿನ ಇದ್ದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ತೆರಳಿದರು.

ರಾಜಧಾನಿಯಲ್ಲಿ ಸಿಕಾಂದಾರರಾಗಿ ಪ್ರಸಿದ್ಧಿಹೊಂದಿರುವ ಮಿ|| ತಿಯೊಬಾಲ್ಡ್‌ರವರು ಬೆಂಗಳೂರು ಎಗ್ಸಿಕ್ಯೂಟಿವ್ ಇನ್‌ಜನಿಯರ್ ಮಿ|| ಡಿಕ್ರೂಸ್‌ರವರ ಕುಮಾರ್ತೆಯನ್ನು ವರಿಸಿ ಕಳೆದ ವಾರ ಬೆಂಗಳೂರಿನಲ್ಲಿ ವಿವಾಹಮಾಡಿಕೊಂಡರು.

ಕಬ್ಬಿನ ಪಾಲನ್ನು ಕಾಯಿಸುವುದಕ್ಕೆ ಸಿಕಾರಿಪುರದ ಕೆಲವು ಸ್ಟೇಟ್ ಫಾರೆಸ್ಟುಗಳಲ್ಲಿ ರೈತರು ಸೆಪ್ಟಂಬರ್ ಲಾಗಾಯಿತು ಜನವರಿ ಆಖೈರ್ ವರೆಗೆ ಲೈಸೆನ್ಸ್ ಪಡೆದು ಸೌದೆಯನ್ನು ಸಾಗಿಸಿಕೊಂಡುಹೋಗಬಹುದೆಂದು ಸರ್ಕಾರದ ವರು ಹುಕುಂ ಕೊಟ್ಟಿದಾರೆ.

ಸಂಸ್ಥಾನದ ಗಡೀ ಪರಗಣೆಗಳಲ್ಲಿ ದನಗಳ ರೋಗಚಿಕಿತ್ಸೆ ಮಾಡುವು ದಕ್ಕೂ, ಅಂಟುಜಾಡ್ಯ ಹರಡದಂತೆ ಅವಕ್ಕೆ ಸಿಡುಬು ಹಾಕುವುದಕ್ಕೂ ಹೊಸ ದಾಗಿ 4 ಮಂದಿ ಪಶುವೈದ್ಯರನ್ನೂ, 4 ಮಂದಿ ಸಾಲೋತ್ರಿಗಳನ್ನೂ ನೇಮಿಸಿಕೊ ಳ್ಳಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.

ಎರಡು ವರ್ಷಗಳ ಹಿಂದೆ ಜರ್ಮನಿಗೆ ಹೋಗಿ ಸಂಸ್ಕೃತ ಪಂಡಿತರೆಂಬ ಬಿರುದನ್ನು ಪಡೆದು ಬಂದಿರುವ ಡಾ|| ಎ. ವೆಂಕಟಸುಬ್ಬಯ್ಯ, ಎಂ.ಎ. ಯವ ರನ್ನು ನಮ್ಮ ಸರ್ಕಾರದವರು ಪ್ರಾಚೀನ ಲಿಪ್ಯನ್ವೇಷಣ ಇಲಾಖೆಯ ಅಸಿಸ್ಟೆಂಟ ರಾಗಿ ನೇಮಕಮಾಡಿರುತ್ತಾರೆ.

ನಮ್ಮ ಸಂಸ್ಥಾನದ ಸೀನಿಯರ್ ಸರ್ಜನ್ನಾದ ರಾವ್ ಸಾಹೆಬ್ ಮಿ|| ಟಿ. ಎ. ಆರುಮುಗಂ ಮೊದಲಿಯಾರ್ರವರು ಕಳೆದ ಸುಮಾರು ಒಂದೂವರೆ ತಿಂಗಳಿನಲ್ಲಿ ಈ ಸೀಮೆಯಲ್ಲೆಲ್ಲಾ ಸಂಚಾರಮಾಡಿ, ಸಂಸ್ಥಾನಾಮುಳೆ ಇರು ವಂಥಾ ಪ್ರತಿ ಒಂದು ಆಸ್ಪತ್ರೆಯನ್ನೂ ಅಜಮಾಯಿಷಿಮಾಡಿಕೊಂಡು ಬಂದರು.

ರಾಜಧಾನಿಯ ಬಂದೀಖಾನೆಯಲ್ಲಿ ಜೈಲರಾಗಿದ್ದ ಮಿ|| ನಾಗವ್ಯಾರ್‌ಯ ವರು ಉತ್ತರದೇಶದ ರಾಜಪಿಪ್ಲಾ ಸಂಸ್ಥಾನದಲ್ಲಿ ಪೋಲೀಸ್ ಸೂಪರಿನ್‌ಟೆಂಡೆಂಟ ರಾಗಿ ಎರಡು ವರ್ಷ ನೌಕರಿಮಾಡಿ ಅಲ್ಲಿನ ಪೋಲೀಸ್ ಇಲಾಖೆಯನ್ನು ಕ್ರಮ ಪಡಿಸುವ ಉದ್ಯೋಗವನ್ನು ವಹಿಸಿಕೊಂಡು, ನಮ್ಮ ಸರ್ಕಾರದವರ ಅನುಮತಿ ಪಡೆದು ಪ್ರಯಾಣಮಾಡಿದರು.

ಕಳೆದ ಶನಿವಾರ ಮಧ್ಯಾಹ್ನವೂ ಭಾನುವಾರ ಬೆಳಿಗ್ಗೆಯೂ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನ್‌ರವರು ಮೈಸೂರು ಸಿಟಿ ಮತ್ತು ಡಿಸ್ಟ್ರಿಕ್ಟಿನ ಮುಖ್ಯ ವರ್ತಕರನ್ನೂ ವ್ಯವಹಾರಜ್ಞರನ್ನೂ ಕರೆಸಿಕೊಂಡು ಸಂಪ ದಭಿವೃದ್ಧಿಗೆ ಸಹಕಾರಿಗಳಾದ ನಾನಾ ವಿಚಾರಗಳನ್ನು ಅವರ ಕೂಡ ಚರ್ಚೆಮಾಡಿ ಅವರ ಅಭಿಪ್ರಾಯಗಳನ್ನು ತಿಳಿದುಕೊಂಡು ಬೆಂಗಳೂರಿಗೆ ತೆರಳಿದರು.

ದೇಶೀಯ ಮಿಷನರಿ ಸಂಘದ (ಕನ್ನಡ ಶಾಖೆ) ಪ್ರತಿನಿಧಿಗಳಾದ ಮೆ|| ಪುಟ್ಟರಾಜು, ಬಿ. ಎ., ಮತ್ತು ವೇದರತ್ನಂ, ಬಿ. ಎ., ಇವರುಗಳು ರಾಜಧಾ ನಿಗೆ ಬಂದು ಕಳೆದ ಶನಿವಾರ, ಭಾನುವಾರ ಮತ್ತು ಸೋಮವಾರ ಇಲ್ಲಿನ ದೇಶೀಯ ಕ್ರೈಸ್ತರಿಗೆ ತಮ್ಮ ಸಂಘದ ಉದ್ದೇಶಗಳನ್ನು ಕುರಿತು ಉಪನ್ಯಾಸಗ ಳನ್ನು ಮಾಡಿ, ಇಲ್ಲಿ ಒಂದು ಬ್ರಾಂಚ್ ಸಂಘವನ್ನು ಏರ್ಪಡಿಸುವ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟು ಮುಂದಕ್ಕೆ ತೆರಳಿದರು.

ರಾಜಧಾನಿಗೆ ದಯಮಾಡಿರುವ ಶ್ರೀ ಉತ್ತರಾದಿಮಠದ ಶ್ರೀ ಸ್ವಾಮಿಗಳ ಬಳಿ ಪಂಡಿತಮಂಡಲಿಗೆ ಸೇರಿದ ವೇ|| ಕೃಷ್ಣಾಚಾರ್ಯರು ವೇದ, ಶಾಸ್ತ್ರ, ಧರ್ಮ, ಭಗವದ್ಗೀತೆ, ಋತುಮತೀ ವಿವಾಹ, ಈ ಮೊದಲಾದ ವಿಷಯಗಳನ್ನು ಕುರಿತು ಮರಿಮಲ್ಲಪ್ಪನವರ ಹೈ ಸ್ಕೂಲಿನಲ್ಲೂ ಟೌನ್ ಹಾಲ್ ಬಂಗಲೆಯಲ್ಲೂ 7–8 ಉಪನ್ಯಾಸಗಳನ್ನು ಮಾಡಿದರು ವೈದಿಕ ಲೌಕಿಕ ದೊಡ್ಡ ಮನುಷ್ಯರೂ ಪ್ರಜೆ ಗಳೂ ಸಾವಿರಗಟ್ಲೆ ಸೇರಿ ಅವರ ಉಪನ್ಯಾಸಗಳನ್ನು ಕೇಳಿ ಅವರ ಸಾಮರ್ಥ್ಯವನ್ನೂ ಪಾಂಡಿತ್ಯವನ್ನೂ ಮೆಚ್ಚಿ ಮೊನ್ನೆ ಮಂಗಳವಾರ ಸಾಯಂಕಾಲ ಅವರಿಗೆ ಒಂದು ಬಂಗಾರದ ತೋಡೆಯನ್ನೂ ಶಾಲುಗಳನ್ನೂ ಮ|| ಅಂಬಳೆ ಅಣ್ಣಯ್ಯ ಪಂಡಿತರವರ ಅಧ್ಯಕ್ಷತೆಯಲ್ಲಿ ಒಪ್ಪಿಸಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿ ದರು. ಋತುಮತೀ ವಿವಾಹಕ್ಕೆ ಯಾವ ವೇದದಲ್ಲೂ ಶಾಸ್ತ್ರ ಸಿದ್ಧಾಂತದಲ್ಲೂ ವಿಧಿಪೂರ್ವಕವಾದ ಆಧಾರವೇನೂ ಇಲ್ಲವೆಂಬುವುದೇ ಈ ಪಂಡಿತರ ಅಭಿಮತ ವಾಗಿದೆ. ಈ ಅರ್ಥವನ್ನು ಸ್ಥಾಪಿಸುವುದಕ್ಕೂ ಎದುರು ಪಕ್ಷದವರ ಸಾಧನ ಗಳನ್ನು ಖಂಡಿಸುವುದಕ್ಕೂ ಒಂದು ಸಣ್ಣ ಪುಸ್ತಕವನ್ನು ಬರೆದು ಅಚ್ಚುಹಾಕಿಸಿ ಸಕಲ ಪ್ರಜೆಗಳಿಗೂ ಉಚಿತವಾಗಿ ಹಂಚುತ್ತೇವೆಂದು ಈ ಪಂಡಿತರು ಹೇಳಿದಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಏಪ್ರಿಲ್ 8 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	.....	ರೂ. 10,00,000
,, (2) ರಿಜರ್ವ್ ಫಂಡು	.....	,, 25,000
,, (3) ಡಿಪಾಜಿಟ್ಟುಗಳು	.....	,, 27,04,623
,, (4) ಇತರೆ	.....	,, 56,253
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 37,85,876

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 6,58,031
,, (2) ಖಾತೆ ಮತ್ತು ಇತರ ಸಾಲಗಳು	.....	,, 23,60,468
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 3,00,997
,, (4) ಇನ್ವೆಸ್ಟ್‌ಮೆಂಟುಗಳು	.....	,, 2,07,277
,, (5) ಏಜನ್ಸಿಗಳಲ್ಲಿರುವ ಮೊಬಲಗು	.....	,, 89,903
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	.....	,, 15,692
,, (7) ಇತರೆ	.....	,, 13,508
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 37,85,876

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಗ್ರಾಮಗಳನ್ನು ಅಭಿವೃದ್ಧಿಮಾಡುವುದು.

ಮೈಸೂರು ಸರ್ಕಾರದವರು ಡೆಪ್ಯುಟಿ ಕಮಿಷನರುಗಳಿಗೆ ತಿಳಿಸಿರುವುದು.

ರಸ್ತೆಗೆ ಬೇಕಾದ ಗ್ರಾವಲ್ ವಗೈರೆ ಸಾಮಾನುಗಳನ್ನು ತೆಗೆದುಕೊಳ್ಳುವುದ ಕ್ಕೋಸ್ಕರ, ವಾಸಮಾಡತಕ್ಕ ಗ್ರಾಮಗಳ ಸಮೀಪದಲ್ಲಿ ಗುಂಡಿಗಳನ್ನು ಅಗೆಯುವುದರಿಂದ, ಅವುಗಳಲ್ಲಿ ನೀರು ನಿಂತು ನಾರುವುದಕ್ಕೆ ಅವಕಾಶವಾಗುವುದರಿಂದ, ಗ್ರಾಮಗಳ ಆರೋಗ್ಯಕ್ಕೆ ಹಾನಿಯುಂಟಾಗುತ್ತದೆ. ಇದಲ್ಲದೆ ಗ್ರಾಮಗಳ ಸಮೀಪ ಪ್ರದೇಶವು ನೋಡುವುದಕ್ಕೆ ಅಸಹ್ಯಕರವಾಗುತ್ತದೆ. ಗ್ರಾಮದ ಒಂದು ಫರ್ಲಾಂಗಿನ ಒಳಗಾಗಿ ಇಂಥಾ ಗುಂಡಿಗಳನ್ನು ಮಾಡಕೂಡದೆಂದು ತಮ್ಮ ಕಂಟ್ರಾಕ್ಟುದಾರರುಗಳಿಗೆ ತಿಳಿಸಬೇಕೆಂದು ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ತಿಳುವಳಿಕೆಯನ್ನು ಕೊಟ್ಟು ಇರುತ್ತದೆ. ಇಂಥಾ ಗುಂಡಿಗಳನ್ನು ತೆಗೆದು ರಸ್ತೆಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಳ್ಳುತ್ತಿರುವಂಥ ಇತರ ಎಲ್ಲಾ ಕಂಟ್ರಾಕ್ಟುದಾರರುಗಳಿಗೂ ಇತರರಿಗೂ ಇದೇ ರೀತಿಯಾದ ತಿಳುವಳಿಕೆಗಳನ್ನು ಕೊಡಬೇಕೆಂದು ಡೆಪ್ಯುಟಿ ಕಮಿಷನರುಗಳನ್ನೂ ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರೆಸಿಡೆಂಟರುಗಳನ್ನೂ ಕೋರಲಾಗಿದೆ.—ಗ್ರಾಮಗಳ ಸಮೀಪದಲ್ಲಿ ಹಾಲಿ ಇರತಕ್ಕ ಗುಂಡಿಗಳ ನೀರನ್ನು ಆಚೆಗೆ ಹೊರಡಿಸಿಬಿಟ್ಟು ಹಳ್ಳಗಳನ್ನು ಭರ್ತಿಮಾಡುವ ಕೆಲಸವನ್ನು ಗ್ರಾಮ ಕಮಿಟಿಯವರು ಪ್ರತಿ ವಾರದಲ್ಲಿಯೂ ಗ್ರಾಮಸ್ಥರು ಒಟ್ಟು ಸೇರಿ ಮಾಡಬೇಕಾದ ಕಾರ್ಯಗಳಲ್ಲೊಂದಾಗಿಟ್ಟುಕೊಂಡು, ತಪ್ಪದೆ ಮಾಡಿಸುತ್ತ ಬರತಕ್ಕದ್ದಾಗಿದೆ.—ಪ್ರತಿ ಗ್ರಾಮದ ಸುತ್ತಲೂ ಅಥವಾ ಜನರು ವಾಸವಾಗಿರುವ ಪ್ರದೇಶದ ಸುತ್ತಲೂ ನೂರು ಅಡಿಗಳ ಅಗಲವುಳ್ಳ ಜಾಗವನ್ನು ಗುರುತುಮಾಡಿ ಸ್ವಲ್ಪವೂ ಕಸ್ತಲವಿಲ್ಲದಂತೆ ಶುಚಿಯಾಗಿಟ್ಟು, ಅಲ್ಲಿ ಗುಂಡಿಗಳೂ ಹಳ್ಳಗಳೂ ಮತ್ತು ಸತ್ತೆ ಮೊದಲಾದವುಗಳೂ ಇಲ್ಲದಂತೆ ನೋಡಿಕೊಳ್ಳಬೇಕು.—ಪ್ರತಿ ಗ್ರಾಮದ ಊರ ಬಾಗಿಲನ್ನೂ ಅಂದವಾಗಿಯೂ ರಮಣೀಯವಾಗಿಯೂ ಇರುವಂತೆ ಇಟ್ಟುಕೊಳ್ಳಬೇಕು.

ಕನ್ನಡ ಭಾಷೆಯಲ್ಲಿ ಅಭಿರುಚಿ.

ತಿಳಿಗನ್ನಡಕ್ಕೆ ತೌರುಮನೆಯಾದ ನಮ್ಮ ಮೈಸೂರು ಸೀಮೆಯಲ್ಲಿ ಪುರುಷರೂ ಸ್ತ್ರೀಯರೂ ಸೇರಿ 57 ಲಕ್ಷ ಪ್ರಜೆಗಳಿರುವರು. ಇವರಲ್ಲಿ 3½ ಲಕ್ಷ ಜನರು ಕನ್ನಡ ಅಥವಾ ಮತ್ತೊಂದು ಭಾಷೆಯಲ್ಲಿ ಓದು ಬರಹ ಬಲ್ಲವರಾಗಿದ್ದಾರೆ. ಉಳಿದ 53½ ಲಕ್ಷ ಮಂದಿಗೆ ಅಕ್ಷರಾಭ್ಯಾಸವೇ ಇಲ್ಲ. ಇವರ ಮಾತು ಹಾಗಿರಲಿ. ಪ್ರಕೃತ ಓದು ಬರಹ ಬರತಕ್ಕ 3½ ಲಕ್ಷ ಜನರ ವಿಷಯವಾಗಿ ಪ್ರಸ್ತಾಪಿಸುವುದು ಆವಶ್ಯಕ. ಇವರಲ್ಲಿ ಕೆಲವರು ಇಂಗ್ಲಿಷ್ ಭಾಷೆಯಲ್ಲಿ ಪ್ರೌಢವಿದ್ಯಾಭ್ಯಾಸ ಮಾಡಿ ಸರಕಾರದ ದೊಡ್ಡ ದೊಡ್ಡ ಉದ್ಯೋಗಸ್ಥರಾಗಿಯೂ, ಸಣ್ಣ ಉದ್ಯೋಗಸ್ಥರಾಗಿಯೂ ಇರುವರು. ಹಲವರು ವಕೀಲರಾಗಿಯೂ, ವಿದ್ಯಾಶಾಲೆಗಳ ಉಪಾಧ್ಯಾಯರುಗಳಾಗಿಯೂ ಜೀವಿಸುವರು. ಇಂತಹ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದವರಲ್ಲಿ ಬಹು ಜನರಿಗೆ ಕನ್ನಡ ಭಾಷೆಯಲ್ಲಿ ಅಭಿರುಚಿಯೇ ಕಡಮೆ. ಇಂತಹವರಿಗೆ ವಿರಾಮವಿಲ್ಲವೆಂಬ ಕಾರಣದಿಂದಲೋ, ಅಥವಾ ಒದಗಿದಷ್ಟು ವಿರಾಮ ಕಾಲವನ್ನು ಇಂಗ್ಲಿಷ್ ಪತ್ರ ಪುಸ್ತಕಗಳಿಗೆ ವಿನಿಯೋಗಿಸುವರೋ, ಅಥವಾ ಅರ್ಥ ದೃಷ್ಟಿಯಿಂದ ನೋಡಲು ಉಪಯೋಗವಿಲ್ಲವೆಂಬ ಅಭಿಪ್ರಾಯದಿಂದಲೋ, ಅಥವಾ ಅದು ರುಚಿ ಭಾಷೆಯಲ್ಲವೆಂಬ ನಿಮಿತ್ತದಿಂದಲೋ ಕನ್ನಡ ಭಾಷೆಯು ರುಚಿಸದೇ ಇರುವುದು. ಇಂಥಾವರ ರುಚಿಗನುಸಾರವಾಗಿರತಕ್ಕ ಪುಸ್ತಕಗಳೂ ಅತಿ ವಿರಳ. ಸಾಮಾನ್ಯವಾಗಿ ಇಂಗ್ಲಿಷ್ ಭಾಷೆಯನ್ನು ಕಲಿತುಕೊಳ್ಳಲು ಆ ಭಾಷೆಯ ಗ್ರಂಥಕರ್ತರು ಬರೆದಿರತಕ್ಕ ನಾವೆಲ್ ಅಂದರೆ ಕಥೆ ಮತ್ತು ಇತರ ಪುಸ್ತಕಗಳನ್ನು ಓದಿ ಒಳ್ಳೆಯ ಬರವಣಿಗೆಯನ್ನು ಕಲಿತುಕೊಳ್ಳುವಂತೆ ಕನ್ನಡ ಭಾಷೆಯಲ್ಲಿ ಮಾದರಿಯಾದ ಗದ್ಯ ಪುಸ್ತಕಗಳು ಇರುವವೋ, ಇಲ್ಲವೋ, ಹೇಳುವುದು ಸಂದೇಹ. ಅದರಲ್ಲೂ ನವೀನ ಕಾಲದ ವಿದ್ಯಾಭ್ಯಾಸ ಮಾಡಿರುವವರ ರುಚಿಗೆ ತಕ್ಕಂತೆ ಇರತಕ್ಕ ತಿಳಿಗನ್ನಡದ ಗ್ರಂಥಗಳು ಮತ್ತೂ ವಿರಳವೆಂದು ಹೇಳಬೇಕು.

ಇಂಗ್ಲಿಷ್ ಭಾಷೆಯಲ್ಲದೆ ಕನ್ನಡದಲ್ಲೇ ಓದು ಬರಹ ಬರತಕ್ಕವರ ವಿಷಯವಾಗಿ ಸ್ವಲ್ಪ ವಿಚಾರ ಮಾಡೋಣ. ಗ್ರಾಮಾಂತರಗಳಲ್ಲಿ ವಾಸಿಸುವ ಅಕ್ಷರಸ್ಥರಾದ ಕೆಲವು ಮಂದಿ ಕನ್ನಡಿಗರು ರಾಜಶೇಖರ, ಭಾರತ ಮೊದಲಾದ ಕೆಲವು ಹಿಂದಿನ ಗ್ರಂಥಗಳನ್ನು ಪಠಿಸುವರು. ಅನೇಕ ಮಂದಿ ಬಜಾರಿನಲ್ಲಿ ಬಹು ಅಗ್ಗವಾಗಿ ಸಿಕ್ಕುವಂಥಾ ನಾಟಕ ಪುಸ್ತಕಗಳನ್ನೂ, ಕಟ್ಟು ಕಥೆಗಳ ಪುಸ್ತಕಗಳನ್ನೂ ಮತ್ತೆ ಹಲವರು ಶೃಂಗಾರ ರಸದಿಂದ ಪರಿಪೂರ್ಣವಾದ ಗ್ರಂಥಗಳೆಂದೆನಿಸಿಕೊಳ್ಳುವ ವಿಚಿತ್ರ ಕನ್ನಡ ಪುಸ್ತಕಗಳನ್ನು ವ್ಯಾಸಂಗ ಮಾಡುವರು. ಇಂಥಾ ಕೆಟ್ಟ ರುಚಿಯುಳ್ಳ ಜನಗಳಲ್ಲಿ ಒಳ್ಳೆಯ ರುಚಿಯು ಉತ್ಪತ್ತಿಯುಂಟಾಗುವ ಬಗೆ ಹೇಗೆ? ಈ ವಿಷಯಗಳನ್ನು ವಿಚಾರ ಮಾಡುವುದಕ್ಕೆ ಮುಂಚೆ ನಮ್ಮ ಜನ ಸಾಮಾನ್ಯದ ಸ್ವಭಾವವೆಂಥಾದ್ದೆಂಬುದನ್ನು ತಿಳಿಯಬೇಕು. ನಮ್ಮ ದೇಶೀಯರು ವೈರಾಗ್ಯ ಪ್ರಕೃತಿಯುಳ್ಳವರು; ಮತ ಮತ್ತು ನೀತಿ ಸಂಬಂಧವಾದ ಗ್ರಂಥಗಳನ್ನು ಓದುವದರಲ್ಲಿ ಬಹಳ ಅಭಿರುಚಿ. ಕನ್ನಡ ಭಾಷೆಯ ವರ್ಣಮಾಲೆಯನ್ನು ತಿಳಿದವರೆಲ್ಲರೂ ಗ್ರಂಥಕರ್ತರಾಗಬೇಕೆಂದು ಅಗ್ಗವಾದ ಪುಸ್ತಕಗಳನ್ನು ಬರೆದು, ಅಕ್ಷರಸ್ಥರಾದ ಗ್ರಾಮಾಂತರ ನಿವಾಸಿಗಳಲ್ಲಿ ಒಂದು ಕೆಟ್ಟ ರುಚಿಯನ್ನು ಹುಟ್ಟಿಸಿ ಸಾಮಾನ್ಯ ಜನರು ಒಳ್ಳೆಯ ಪುಸ್ತಕಗಳನ್ನು ಓದದಂತೆ ಅಡಚಣೆಯಾಗಿರುತ್ತದೆ. ನಮ್ಮ ಗೃಹಿಣಿಯರು ಓದಿ ಫಲವನ್ನು ಹೊಂದಲು ತಕ್ಕ ಮಾದರಿ ಪುಸ್ತಕಗಳು ಕಡಮೆ. ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿರತಕ್ಕ ಜನಗಳಿಗೂ, ಗ್ರಾಮಾಂತರವಾಸಿಗಳಾದ ಅಕ್ಷರಸ್ಥರಿಗೂ ಅಂದರೆ ಅವರವರ ರುಚಿಗನುಸಾರವಾಗಿ ಪಾಶ್ಚಾತ್ಯ ಜನಾಂಗಗಳ ಅಭಿಪ್ರಾಯಗಳಿಗೆ ಅನುಗುಣವಾಗಿರುವ ಹಾಗೆ ಕೆಲವು ಮಾದರಿ ಪುಸ್ತಕಗಳನ್ನು ಬರೆಯತಕ್ಕದು ಮೊದಲನೆಯ ಕೆಲಸ. ಅಲ್ಲದೆ ಶಾಲಾ ಬಾಲಕರಿಗೂ, ಬಾಲಕಿಯರಿಗೂ ಉಪಯುಕ್ತವಾಗುವಂತೆ ಜೀವನ ಚರಿತ್ರೆಗಳನ್ನು ತಿಳಿಗನ್ನಡದಲ್ಲಿ ಬರೆದು ಪ್ರಚುರಗೊಳಿಸುವುದು ಎರಡನೆಯ ಕರ್ತವ್ಯ. ಈ ವಿಷಯಗಳಿಗೆ ಕನ್ನಡ ಭಾಷಾ ಸಮ್ಮೇಳನದ ಮುಖಂಡರು ಗಮನಿಸಿ ತಕ್ಕ ಪ್ರಯತ್ನ ಮಾಡುತ್ತಾರೆಂದು ನಂಬಿದೇನೆ. ಇದರಿಂದ ಕನ್ನಡ ಭಾಷೆಯಲ್ಲಿ ಸಕಲರಿಗೂ ಅಭಿರುಚಿ ಹುಟ್ಟಿ ಭಾಷೆಯು ಅಭಿವೃದ್ಧಿಗೆ ಬಂದು ದೇಶವು ಔನ್ನತ್ಯವನ್ನು ಪಡೆದೀತು.

ಜಿ. ಸುಬ್ಬರಾವ್.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಮೋಸವಾಯಿತಂತೆ.

ಅಯ್ಯಾ,—ನಾನು ಬಸವರಾಜು ಅಂಡ್ ಕಂಪನಿ, ಪಾರ್ಕ್ ಟೌನ್, ಮದರಾಸ್, ಇವರಿಗೆ ಬ್ಲೂಬ್ಲಾಕ್ ಇಂಕಿ ಪೌಡರ್‌ಗಳ ಪ್ಯಾಕೆಟುಗಳು 100 ನ್ನು ವಿ. ಪಿ. ಮೂಲಕ ಕಳಿಸಬೇಕೆಂತ ಬರೆದ. ಇದೇ ಮೇರೆ ಪಾರ್ಸೆಲ್ ಬಂದದ್ದನ್ನು ಪೋಸ್ಟ್ ಆಫೀಸಿನಲ್ಲೇ ಒಡೆದು ನೋಡುವಲ್ಲಿ ಒಳಗೆ 23 ಪೊಟ್ಟಣಗಳನ್ನು ಮಾತ್ರ ಇಟ್ಟು ಬಾಕಿ ಬರಿಯ ಚೂರು ಕಾಗದಗಳನ್ನು ತುಂಬಿದ್ದರು. ನಂತರ ಈ ವಿಷಯವನ್ನು ಕುರಿತು ಅಕನಾಲೆಡ್ಜ್‌ಮೆಂಟ್ ರಿಜಿಸ್ಟರ್ ಮೂಲಕ ಲೆಟರ್ ಬರೆದು ಕೇಳಿದೆ. ಅದಕ್ಕೂ ಜವಾಬಿಲ್ಲ. ಮತ್ತು ರಶೀತಿಗೂ ಸಹ ಅವರ ರುಜು ವಿರಲಿಲ್ಲ. ಆ ಮೇಲೆ ಇದೇ ರಶೀತಿಯೊಡನೆ ನನ್ನ ಅಪ್ಲಿಕೇಷನ್ನನ್ನು ಮೈಸೂರ್ ಡಿವಿಜನ್ ಪೋಸ್ಟ್ ಆಫೀಸ್‌ಗಳ ಇನ್ಸ್‌ಪೆಕ್ಟರವರಿಗೆ ಬರೆದುಕೊಂಡೆ. ಇದಕ್ಕೂ ಸಹ ಜವಾಬಿಲ್ಲ. ಪೋಸ್ಟ್ ಆಫೀಸಿನವರೂ ಕೂಡ ಈ ರೀತಿ ತಾತ್ಸಾರಮಾಡಿರುವುದಕ್ಕಾಗಿ ತುಂಬಾ ವಿಷಾದಿಸುತ್ತೇನೆ. ಅಂತು ಸ್ವಲ್ಪ ವಿಷಯಕ್ಕಾಗಿ ಸದರಿ ಬಸವರಾಜು ಕಂಪನಿಯವರಿಂದ ತುಂಬಾ ಲುಕ್ಸಾನ್ ಪಟ್ಟೆನಾಗಿ ಇತರರಿಗೆ ಎಚ್ಚರಿಕೆ ಕೊಟ್ಟಿದೇನೆ.

ಗಾವಡಿಗೆರೆ, ಹುಣಸೂರು ತಾಲ್ಲೂಕು. — ವೈ. ತಿಮ್ಮಪ್ಪಯ್ಯ, ಸ್ಕೂಲ್ ಮಾಸ್ಟರ್.

ರಾಜಧಾನಿಯ ಮ್ಯುನಿಸಿಪಲ್ ಆಕ್ಟ್ರಾಯಿ.

ಅಯ್ಯಾ,—ತಮ್ಮ 8 ನೇ ತಾ. ಪತ್ರಿಕೆಯಲ್ಲಿ ರಾಜಧಾನಿಯ ಆಕ್ಟ್ರಾಯಿ ಬಾಬಿನಲ್ಲಿ ಉದ್ದೇಶಿಸಿರುವ ಬದಲಾವಣೆಗಳನ್ನು ಕುರಿತು ಪ್ರಚುರಪಡಿಸಿ ಇರುವದನ್ನು ನೋಡಿ ನನಗೆ ಅತ್ಯಂತ ತೃಪ್ತಿಯುಂಟಾಗಿ ನನಗೆ ಆ ವಿಷಯದಲ್ಲಿ ತೋರುವ ಕೆಲವು ಅಂಶಗಳನ್ನು ಅರಿಕೆ ಮಾಡುವೆನು. ಜವಳಿ, ಬೌಬೀನೆ, ಸಕ್ಕರೆ, ಕೆರೊಸಿನ್ ಎಣ್ಣೆ, ಕುರಿ ಮತ್ತೂ ಆಡು, ಇಷ್ಟು ಬಾಬುಗಳಿಗೆ ಮಾತ್ರ ಸುಂಕವನ್ನು ಖಾಯಂ ಇಟ್ಟು, ಇತರ ಎಲ್ಲಾ ಬಾಬುಗಳಿಗೂ ಸುಂಕವನ್ನು ವಜಾ ಮಾಡೋಣವು ಪರಮಶ್ಲಾಘ್ಯವಾಗಿರುವದು. ಪೆಟ್ರೋಲಿಯಂಗೆ ಈ ವರೆಗೆ ಸುಂಕ ವಸೂಲಾಗದೇ ಇದ್ದದ್ದೇ ವಿಸ್ಮೃತಿ ಎಂದು ಎಣಿಸಬೇಕಾಗಿದೆ. ಮುಂದೆ ಉಚಿತವಾದ ಸುಂಕವನ್ನು ವಸೂಲ್ಮಾಡೋಣವು ನ್ಯಾಯವಾಗಿರುವದು. ಆದರೆ ವಜಾ ಮಾಡುವ ಬಾಬುಗಳಿಂದ ಸುಮಾರು 26,000 ರೂಪಾಯಿ ಹುಟ್ಟುವಳಿ ಕಮ್ಮಿಯಾಗುವದೆಂದು ಪತ್ರಿಕೆಯಲ್ಲಿ ಕಾಣಿಸಿ ಇದೆ. ಉಳಿಸಲ್ಪಟ್ಟ ಬಾಬುಗಳನ್ನು ಉಚಿತ ಮಾರ್ಗದಲ್ಲಿ ರೂಢಿಸಿ ಆ ಮೊಬಲಗಿಗೆ ಹೊಸದಾಗಿ ಸೇರಿಸುವ ಪೆಟ್ರೋಲಿಯಮ್ಮಿನ ಸುಂಕದ ಮೊಬಲಗನ್ನೂ ಸೇರಿಸಿದಲ್ಲಿ ಪ್ರಾಯಶಃ ಕಮ್ಮಿಯಾಗಲಾರದೆಂತಲೂ, ಅಥವಾ ಸಾವಿರಾರು ರೂಪಾಯಿನ ಮಟ್ಟಿಗಾಗಬಹುದೆಂತಲೂ ಆ ಬಾಬಿನಲ್ಲಿ ಪೂರಾ ಅನುಭವದಾರನಾದ ನಾನು ದೃಢವಾಗಿ ಹೇಳಬಲ್ಲೆನು. ಅನೇಕ ಚಿಲ್ಲರೆ ಬಾಬುಗಳ ಮೇಲೆ ಸುಂಕವನ್ನು ವಜಾ ಮಾಡಿದ್ದರಿಂದ ಉಂಟಾಗುತ್ತಿರುವ ತೃಪ್ತಿಯನ್ನು ಒಂದು ಕಡೆಯ ಪ್ರಜೆಗಳು ಅನುಭವಿಸುತ್ತಿರುವಲ್ಲಿ ಟೋಲ್‌ಗೇಟಿನ ದರಗಳನ್ನೂ ಜವಳಿಯ ದರಗಳನ್ನೂ ಹೆಚ್ಚಾಗಿ ತೆರಬೇಕಾದ ಮತ್ತೊಂದು ಕಡೆಯ ಪ್ರಜೆಗಳು ಅತೃಪ್ತಿಯನ್ನು ಹೊಂದಬೇಕಾದ ಅವಶ್ಯಕವೇನೂ ಇರುವದಿಲ್ಲ. ಇತರವೂ ಮೊದಲಿನಂತೆ ಇದ್ದರೂ ಬದಲಾಯಿಸಲ್ಪಡುವ ಆಕ್ಟ್ರಾಯಿಗೆ ಯಾವ ಬಾಧಕವೂ ಉಂಟಾಗಲಾರದು.

ಒಬ್ಬ ಅನುಭವಶಾಲಿ.

ಸುಂಕದಕಟ್ಟೆಯ ಅನ್ಯಾಯವಂತೆ.

ಅಯ್ಯಾ,—ಟಿ. ನರಸಿಪುರದ ತಾಲ್ಲೂಕು ಮೂಡಪುರ ಕಲಿಯೂರ್ ರೋಡಿನಲ್ಲಿ ಒಂದು ಸುಂಕದಕಟ್ಟೆಯನ್ನು ಈಗ ಸುಮಾರು ಎರಡು ವರ್ಷಗಳಿಂದಲೂ ಸರ್ಕಾರದವರು ಏರ್ಪಡಿಸಿರುತ್ತಾರೆ. ಈ ಸುಂಕದಕಟ್ಟೆಯಲ್ಲಿ ವಸೂಲ್ಮಾಡುವ ದರಗಳು ಬಹಳ ಜಾಸ್ತಿಯಾಗಿವೆ. ಹೀಗೆ ವಸೂಲ್ಮಾಡಿದರೂ ಕೂಡ ಸರ್ಕಾರದವರು ರಸ್ತೆಯನ್ನು ಸರಿಪಡಿಸಿಲ್ಲ. ರಸ್ತೆಯಲ್ಲೆಲ್ಲಾ ಹಳ್ಳಕೊಳ್ಳಗಳು ಇವೆ. ಮಳೆಗಾಲದಲ್ಲೋ ಪ್ರಯಾಣಿಕರ ಪಾಡನ್ನು ಇಷ್ಟೆಂದು ಹೇಳಲಾಗುವುದಿಲ್ಲ. ಈ ಜನಗಳ ಮಾತನ್ನು ಕೇಳುವವರೇ ಇಲ್ಲ. ಈ ರಸ್ತೆಯಲ್ಲಿ ಅಲ್ಲಲ್ಲಿ ಅಡ್ಡಳ್ಳಗಳೂ, ಕೊರಕಲುಗಳೂ ಇವೆ. ಇವುಗಳಲ್ಲಿ ನೀರು ಬಂದರೆ ಪ್ರಯಾಣಿಕರು ಹೋಗುವುದಕ್ಕೇ ಆಗುವುದಿಲ್ಲ. ಇದೂ ಅಲ್ಲದೆ ಸರ್ಕಾರದವರು ಪೈದಲ್ ಹೋಗುವ ಪ್ರತಿ ಮನುಷ್ಯನಿಗೂ ಕಾಲಾಣೆಯಂತೆ ವಸೂಲ್ಮಾಡುತ್ತಾರೆ. ವೈಸ್ ಪ್ರೆಸಿಡೆಂಟರು ಕೊಟ್ಟಿರುವ ಹುಕುಮಿನ 16 ನೇ ನಂಬರು ಪಟ್ಟಿಯಲ್ಲಿ ಒಂದು ಎತ್ತಿನಿಂದ, ಕೋಣದಿಂದ, ಕುದುರೆಯಿಂದ, ಕತ್ತೆಯಿಂದ, ಯಾ ಹೇಸರಕತ್ತೆಯಿಂದ ಎಳೆಸುವ ಭರ್ತಿ ಗಾಡಿಗೆ ಎರಡಾಣೆ ಎಂದೂ, ಡಿಟೋ ಖಾಲಿ ಗಾಡಿಗೆ ಒಂದಾಣೆ ಎಂದೂ ಇದೆ. ಆದರೆ ಇಲ್ಲಿಯ ಸುಂಕ ವಸೂಲ್ಮಾಡುವ ಮುಣೇಗಾರರು ಒಂದು ಕುದುರೆಯಿಂದ ಎಳೆಸುವ ಭರ್ತಿ ಗಾಡಿಗೆ ನಾಲ್ಕಾಣೆಗಳಂತೆಯೂ, ಡಿಟೋ ಖಾಲಿ ಗಾಡಿಗೆ ಎರಡಾಣೆಗಳಂತೆಯೂ ವಸೂಲ್ಮಾಡುತ್ತ ಇರುತ್ತಾರೆ. ಇದನ್ನು ಸರ್ಕಾರದವರು ಗಮನಕ್ಕೆ ತರದೇ ಇರುವುದು ನೋಡಿದರೆ ಬಹಳ ಆಶ್ಚರ್ಯವಾಗುತ್ತೆ. ಇನ್ನು ಮೇಲಾದರೂ ಸರ್ಕಾರದವರು ಹೀಗೆ ಹೆಚ್ಚು ಸುಂಕ ವಸೂಲ್ಮಾಡುವುದನ್ನು ತಪ್ಪಿಸುವುದಲ್ಲದೆ ಪೈದಲ್ ಹೋಗುವ ಪ್ರತಿ ಮನುಷ್ಯನಿಗೂ ಹಾಕಿರುವ ಸುಂಕವನ್ನು ತೆಗೆದುಹಾಕಿ, ರಸ್ತೆಯನ್ನು ಸರಿಪಡಿಸಿ, ಜನಗಳನ್ನು ಕಾಪಾಡಬೇಕೆಂದು ಪ್ರಾರ್ಥಿಸುವ

ಒಬ್ಬ ಪ್ರಯಾಣಿಕ.

[ಆ ಪ್ರಾಂತ್ಯದಲ್ಲಿ ಮುಖಂಡರಾದ ಜನಗಳು ಈ ವಿಚಾರವನ್ನು ಡೆಪ್ಯುಟಿ ಕಮಿಷನರಿಗೆ ತಿಳಿಸಬೇಕಲ್ಲದೆ ಟಿ. ನರಸಿಪುರದಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ ಮೂಲಕ ಬೋರ್ಡ್ ಮೀಟಿಂಗಿನಲ್ಲಿ ಚರ್ಚೆಗೆ ತರುವಂತೆ ಮಾಡಬೇಕೆಂದು ನಮಗೆ ತೋರುತ್ತದೆ.—ಎಡಿ.]

ಹಳ್ಳಿಗಾಡಿನಲ್ಲಿ ಉಪಾಧ್ಯಾಯರ ವರ್ತನವು.

ಅಯ್ಯಾ,—ದಯವಿಟ್ಟು ಯಾರಾದರೂ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ದಯಪಾಲಿಸಬೇಕಾಗಿ ಬೇಡುತ್ತೇನೆ. ಯಾಕೆಂದರೆ ಕೆಲವು ಅಪ್ಪರ್ ಸೆಕೆಂಡರಿ ಪರೀಕ್ಷೆ ಪ್ಯಾಸ್ ಮಾಡಿರತಕ್ಕ ಉಪಾಧ್ಯಾಯರುಗಳು ಅನೇಕವಾಗಿ ಅನ್ಯಾಯ ಮಾಡುತ್ತಿರುವುದರಿಂದ ನಾನು ಕೇಳಿದೆನೆಯೇ ಹೊರತು ಬೇರೆ ಅಲ್ಲ. ಯಾರೂ ಅಗ್ರಹಮಾಡಿಕೊಳ್ಳಕೂಡದು.—ಮೈಸೂರ್ ಗೌರ್ನಮೆಂಟಿನವರು ಸ್ಕಾಲರ್‌ಷಿಪ್ ಕೊಟ್ಟು ಮೂರು ವರ್ಷಗಳ ವರೆಗೆ ಉಪಾಧ್ಯಾಯರನ್ನು ಅಪ್ಪರ್ ಸೆಕೆಂಡರಿ ಪರೀಕ್ಷೆಗೆ ಕಳುಹಿಸುವುದು ಯಾತಕ್ಕೋಸ್ಕರ? ಆಡಂಬರವಾಗಿ ಬಟ್ಟೆಗಳನ್ನು ಹಾಕಿಕೊಂಡು ಸ್ಕೂಲಿಗೆ ಬರುವುದು, ತಮ್ಮ ಕೆಲಸಗಳನ್ನು ಮಾಡದೆ "ಉತ್ತರನ ಪೌರುಷ ಒಲೆಯ ಮುಂದೆ" ಎಂಬ ಗಾದೆಗೆ ಸರಿಯಾಗಿ ಬಾಲಕರೆದುರಿಗೆ ಇತರರನ್ನು ದೂರುವುದು, ತಮ್ಮ ಹಿಂದಿನ ಸ್ಥಿತಿಯಲ್ಲಿ ತಾವು ಮಾಡಿದ ವಿಷಯಗಳನ್ನು ಮನಸ್ಸಿಗೆ ತಾರದೆ ಹೆಮ್ಮೆಯಿಂದ ತಾವು ಅಪ್ಪರ್ ಸೆಕೆಂಡರಿ ಪ್ಯಾಸ್ ಮಾಡಿದೇವೆಂದು ಪೌರುಷವನ್ನು ಹೇಳಿಕೊಳ್ಳುವುದಕ್ಕೋಸ್ಕರವೋ? ಬಾಲಕರೆದುರಿಗೆ ಆವೇ ಪುಸ್ತಕಗಳನ್ನು ತರಿಸಿಕೊಡುತ್ತೇವೆಂಬುದಾಗಿ ಮನೆಯ ಯಜಮಾನರು ಹೇಳಿದರೆ ಆವಾಗದು, ನಿಮಗೆ ತಿಳಿಯದು, ನಾವೇ ತರಿಸಿಕೊಡುತ್ತೇವೆ, ನಾವು ಹೇಳಿದಷ್ಟು ರೂಪಾಯಿಗಳನ್ನು ಕೊಡಿ, ನಾವು ಹೇಳಿದ ಮೇಲೆ ನೀವು ಪುನಹ ನಮ್ಮನ್ನು ಕೇಳಕೂಡದು, ಹಾಗೆ ನಾವು ಹೇಳಿದಂತೆ ನೀವು ಕೇಳದಿದ್ದರೆ ನಿಮ್ಮ ಹುಡುಗರಿಗೆ ಪ್ರಮೋಷನ್ ಕೊಡುವುದಿಲ್ಲವೆಂದು ಹೆದರಿಸುವುದಕ್ಕೋಸ್ಕರವೋ? ಬಾಲಕರನ್ನು ಮನೆಯವರು ಒಂದೆರಡು ಹೊತ್ತು ಕೆಲಸಕ್ಕೆ ನಿಲ್ಲಿಸಿಕೊಂಡು ಸದರಿ ವಿಷಯವನ್ನು ಕಾಗದದ ಮುಖಾಂತರ ಹೆಡ್ ಮಾಸ್ಟರಿಗೆ ತಿಳಿಸಿದರೆ ನಿರಾಕರಿಸಿ ಪುಸ್ತಕಗಳನ್ನು ಕೊಟ್ಟು ಬಾಲಕರನ್ನು ಮನೆ ಕಳುಹಿಸುವುದಕ್ಕೋಸ್ಕರವೋ? ತಮ್ಮ ಸಹಾಯೋಪಾಧ್ಯಾಯರನ್ನು ಆಳುಗಳಂತೆ ಮಾನಭಂಗಮಾಡಿ ನಿರಾಕರಿಸುವುದಕ್ಕೋಸ್ಕರವೋ? ನೋಟ್ಸುಗಳನ್ನು ತರಿಸಿ ಅದರಂತೆ ಪಾಠಗಳನ್ನು ನಡಿಸಬೇಕೆಂದು ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ಹೇಳಿದೆಯೋ? ಈ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ಯಾಸಾಗಿ ಬಂದ ಉಪಾಧ್ಯಾಯರುಗಳ ಮಾತನ್ನು ಕೇಳಿಕೊಂಡು ಬಾಲಕರು ಮನೆಯವರಿಗೆ ಅವಿಧೇಯರಾಗಬೇಕೆಂದು ಈಚೆಗೆ ಏನಾದರೂ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ರೂಲ್ಸು ಹುಟ್ಟಿದೆಯೋ? ಎಂಬೀ ವಿಷಯಗಳು ಈಚೆಗೆ ಬದಲಾಯಿಸಲ್ಪಟ್ಟಿದ್ದರೆ ಸದರಿ ನಡವಳಿಕೆ ಹೇಗೆಂಬ ವಿಷಯವನ್ನು ವಿದ್ಯಾಭಿಮಾನಿಗಳು ತಿಳಿಸಿಬೇಕಾದೀತು.

ಬಾಲಕರ ಹಿತಚಿಂತಕ.

ಬಡ ನೌಕರರ ಕಷ್ಟಗಳು.

ಅಯ್ಯಾ,—ಈ ಮೈಸೂರು ದೇಶದಲ್ಲಿ ಅನೇಕ ಬಡಪಾಯಿಗಳು ಪ್ರೌಢ ವಿದ್ಯಾಭ್ಯಾಸ ಮಾಡಲು ತಕ್ಕ ಅನುಕೂಲಗಳಿಲ್ಲದೆ ತತ್ಕಾಲಕ್ಕೆ ಫಲಿಸಿದ ಯಾವದಾದರೊಂದು ಕೆಲಸವನ್ನು ಮಾಡಿಕೊಂಡು ಸಂಸಾರ ತಾಪತ್ರಯಗಳಲ್ಲಿ ಮಗ್ನರಾಗಿ ಕಷ್ಟಕ್ಕೆ ಸಿಕ್ಕಿ ಉಪಾಯವಿಲ್ಲದೆ ಜೀವನಮಾಡುತ್ತಾರೆ. ಯೋಗ್ಯತಾನುಸಾರ ಕೆಲವರು ದ್ರವ್ಯಾರ್ಜನೆಮಾಡಿಯೂ, ಮತ್ತೆ ಕೆಲವರು ಗೌರವ ಸಂಪಾದಿಸಿಯೂ, ಇನ್ನು ಕೆಲವರು ಅಪಾರವಾದ ಕಷ್ಟ ಸಂಕಟಗಳಿಗೆ ಗುರಿಯಾಗಿಯೂ ಸರ್ಕಾರದ ಉದ್ಯೋಗಗಳಲ್ಲಿ ಸೇರಿ ವರ್ಷಗಟ್ಟಲೆ ಸರ್ವಿಸ್ ಮಾಡಿರುತ್ತಾರೆ. ಇಂಥಾದ್ದರಲ್ಲಿ ನೌಕರರ ಸ್ವಭಾವತಃ ಬಂದಿರುವ ಬುದ್ಧಿಕೌಶಲ್ಯವನ್ನು ಉಪಯೋಗಿಸಲು ತಮಗೆ ಬೇಕಾದ ಕಸಬು (ಬರವಣಿಗೆಯ ಸಂಬಂಧವಾದ—ಚಿತ್ರಗಾರ, ಗುಮಾಸ್ತೆ, ಕಾಪಿಸ್ಟ್ ಮೊದಲಾದವು, ಸೇಡ್ಯ, ಕೆತ್ತನೆ, ಉಪಾಧ್ಯಾಯರು, ಕಾನ್ಸ್‌ಟೇಬಲ್, ಕಂಪೌಂಡರ್, ಪೋಸ್ಟ್ ಮ್ಯಾನ್, ಟ್ರೀ ವಾಚರ್) ಗಳ ಪೈಕಿ ಯಾವದಾದರೊಂದನ್ನು ಸೇರಿ ಸುಖವಾಗಿರಲು ಅನೇಕರು ಪ್ರಯತ್ನಪಟ್ಟಾಗ್ಯೂ ನಿಷ್ಫಲವಾಗಿರುವುದು. ದೊಡ್ಡ ಉದ್ಯೋಗಸ್ಥರ ಶಿಫಾರಸ್ ಈ ಬಡಪಾಯಿಗಳಿಗೆ ಎಲ್ಲಿ ಲಭಿಸೀತು? ಅಲ್ಲವಾದರೆ ಹೆಚ್ಚಾದ ಹಣವನ್ನು ಪಾಸೀ ತಂದು ಸುರಿಸಲು ಅಸಾಧ್ಯ. ಇಂಥಾ ಬಡನೌಕರರ ಕಷ್ಟವನ್ನು ವಿಚಾರಿಸುವವರು ವಿರಳ.

ಏನೂ ಅರಿಯದ, ರುಜುವನ್ನು ಹಾಕಲೂ, ಒಂದು ಕಾಗದವನ್ನಾದರೂ ಓದಲೂ, ಸುಭಾಷೆ ಮಾಡಲೂ ಅರಿಯದಂಥಾ ಮನುಷ್ಯರಿಗೂ ಸಹ ತಕ್ಕ ಶಿಫಾರಸ್ಸಿಂದಲೋ, ಪರಿಚಯಾದಿಕಸ್ಮಿಂದಲೋ ವಿವಾಹ ಕರೆಗಿಂತಲೂ ಉದ್ಯೋಗವು ಹೆಚ್ಚಿರುವುದು. ವಿದ್ಯಾಭ್ಯಾಸವು ಈಗೀಗ ಬಹಳ ವೃದ್ಧಿಯಾಗುತ್ತಿರುವುದು. ಅನೇಕ ಮಂದಿ ಅಲ್ಪ ವಿದ್ಯಾವಂತರುಗಳ ಅಹವಾಲುಗಳನ್ನು ಘನ ಸರ್ಕಾರದವರು ವಿಮರ್ಶೆಯಿಂದ ವಿಚಾರಿಸಿ ಅವರ ಯೋಗ್ಯತೆ, ನಡತೆ, ಕೆಲಸದ ರೀತಿ ಮೊದಲಾದ ಅಂಶಗಳನ್ನು ಪರಾಮರ್ಶಿಸಿ ಹೆಚ್ಚಾದ ಪ್ರಮೋಷನ್ ಕೊಡುವುದಕ್ಕಿಂತಲೂ ಎರಡು ರೂಪಾಯಿ ಮಟ್ಟಿಗಾದರೂ ದಯಪಾಲಿಸುವಂತೆ ಮಾಡಿದಲ್ಲಿ ಈ ಸಹಾಯವು ಚಿರಸ್ಮರಣೀಯವಾಗಿರುವುದು. ಆಯಾಯ ದೊಡ್ಡ ಉದ್ಯೋಗಸ್ಥರ ಮತಾಚಾರರೀತ್ಯಾ ಕೆಲಸಕಾರ್ಯಗಳು ನಡೆಯುತ್ತಿವೆಯೇ ಹೊರತು ಯಾವ ಜಾತಿಯೇ ಆಗಲೀ ಯೋಗ್ಯತೆ, ನಡತೆ, ವಿದ್ಯೆ ಮೊದಲಾದ ಅಂಶಗಳನ್ನು ನೋಡುವುದೇ ಅಪರೂಪವಾಗಿದೆ. ನ್ಯಾಯವೇ, ಅನ್ಯಾಯವೇ ಎಂಬ ವಿಮರ್ಶೆಯೇ ಕಡಮೆ. ನಿಷ್ಕಾರಣವಾದ ವರ್ಗಾವರ್ಗಿಗಳೂ, ಬಡ್ತಿ ರಿವರ್ಷನ್‌ಗಳೂ, ಅವಶ್ಯವಾಗಿ ಬೇಡುವವರಿಗೆ ಇಲ್ಲವಾಗಿಯೂ, ಇಷ್ಟವಿಲ್ಲದವರಿಗೆ ಬೇಕಾಗಿಯೂ ನಡೆಯುತ್ತಿವೆ. ನಮ್ಮ ದಿವಾನರವರು ಈ ಸಂಕಟಗಳನ್ನೆಲ್ಲಾ ಹೋಗಲಾಡಿಸಿ ಮೈಸೂರು ದೇಶದ ಪ್ರಜೆಗಳನ್ನು ಸುಖಿಗಳನ್ನಾಗಿ ಮಾಡ್ಯಾರೆಂದು ಪ್ರಾರ್ಥಿಸುವ

ಪ್ರಜಾ ಹಿತೈಷಿ.

ಕೊಡಗುದೇಶ ಸಂಪ್ರಾಯಪಟ್ಟಣ ತಾಲೂಕಿನ ಹೆಣ್ಣುಮಕ್ಕಳು.

ಅಯ್ಯಾ,—ಈ ತಾಲ್ಲೋಕಿನಲ್ಲಿ ಹುಡುಗಿಯರಿಗೆ ಯಾಕೆ ಬೇಗ ಲಗ್ನವಾಗುವುದಿಲ್ಲವೆಂದು ಕೆಲವರು ವ್ಯಥೆಪಡುತ್ತಿರುವರು. ಇದರ ಕಾರಣವನ್ನು ವಿವರಿಸಲು ಶಕ್ಯವಲ್ಲವಾದರೂ ಸ್ವಲ್ಪಮಟ್ಟಿಗೆ ಉದಹರಿಸುವೆನು. (1) ಹುಡುಗಿಯರಿಗೆ 100 ರಿಂದ 500-600 ರೂಪಾಯಿಗಳ ವರೆಗೆ ಕ್ರಯ ತೆಗೆದುಕೊಂಡು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ದನಕರುಗಳಂತೆ ಮಾರುವುದರಿಂದ ಬಡರೈತರ ಸಾಲಮಾಡಿ ಸಾಲಗಾರನಿಗೆ ಗುಲಾಮರಾಗಿರುವುದಕ್ಕಿಂತ ಲಗ್ನವಾಗದೆ ಇರುವದೇ ಲೇಸೆಂದು ಪ್ರಾಯವಾದರೂ ಮದುವೆಯಾಗದೆ ಇರುವರು. (2) ಕೈಲಿ ಕಾಸಿಲ್ಲದಿದ್ದರೂ ಅನೇಕರು ಮದ್ಯಪಾನವನ್ನು ರೂಢಿಯಲ್ಲಿಟ್ಟುಕೊಂಡು ಪೋಲಿಗಳಾಗಿರುವುದರಿಂದ ಅಂಥವರಿಗೆ ಹೆಣ್ಣು ಕೊಡಲಿಕ್ಕೆ ಹಿಂಜರಿವರು. ಬುದ್ಧಿವಂತರಾದರೋ ಹಣಗಾರರ ಮಕ್ಕಳನ್ನು ಪಾಣಿಗ್ರಹಣಮಾಡಿಕೊಳ್ಳುವರು; ಗರೀಬರ ಮಕ್ಕಳಿಗೆ ದಿಕ್ಕೇ ಇಲ್ಲ. (3) ಕೆಲವು ಹಣಗಾರರು ಸಹ ತಮ್ಮ ಮಕ್ಕಳನ್ನು ಐಶ್ವರ್ಯವಂತರಿಗೆ ಲಗ್ನಮಾಡಿಕೊಡಬೇಕೆಂದು ಹುಡುಗಿಯರಿಗೆ ಪ್ರಾಯವಾಗಿದ್ದರೂ ಮದುವೆ ಮಾಡದೆ ಇಟ್ಟುಕೊಂಡಿರುವರು; ಅಂಥವರು ಸಿಕ್ಕುವದೇ ಕಷ್ಟ. (4) ರೂಪಾಯಿ ಸಿಕ್ಕುವದೇ ಕಷ್ಟ, ಸಿಕ್ಕಿದರೂ ಬಡ್ಡಿ ಜಾಸ್ತಿ. ಸಾಲವನ್ನು ತೀರಿಸಲಿಕ್ಕೆ ಶಕ್ತಿಯಿಲ್ಲದವರು ಈ ತಾಲ್ಲೋಕಿನಲ್ಲಿ ಮುಕ್ಕಾಲು ಪಾಲಿಗಿಂತಲೂ ಜಾಸ್ತಿಯೇ ಆಗಿದಾರೆ. (5) ಒಬ್ಬನು ಒಬ್ಬ ಹುಡುಗಿಯನ್ನು ಲಗ್ನವಾಗುವುದಕ್ಕೆ ಕೇಳಿದರೆ ಮತ್ತೊಬ್ಬನು ಅವಳನ್ನು ತನಗೆ ಇಲ್ಲವೇ ತನ್ನ ಮಗನಿಗೆ ಲಗ್ನಮಾಡಿಕೊಳ್ಳಲಿಕ್ಕೆ ಚಿತ್ತಾಚಿತ್ತವಾಗಿ ನನಗೆ ತನಗೆಂದು ಪರಸ್ಪರ ಕಲಹಮಾಡಿಕೊಂಡು ಹುಡುಗಿಗೆ ಕನ್ಯಾಶುಲ್ಕವೆಂಬ ತೆರವನ್ನು ಜಾಸ್ತಿಯಾಗಿ ಮಾಡುವರು. ಇಲ್ಲವೇ ಎರಡು ಜನರೂ ಬಿಟ್ಟು ಬೇರೆಯವರು ಲಗ್ನಮಾಡಿಕೊಳ್ಳುವಾಗ ಹುಡುಗಿಯಲ್ಲಿ ಅನೇಕ ತರದ ದುರ್ಗುಣಗಳನ್ನು ಆಪಾದಿಸಿ ಕಳ್ಳಕಾಗದ ಮುಂತಾದವುಗಳನ್ನು ಬರೆಯುವರು. (6) ತನ್ನ ಮಕ್ಕಳನ್ನು ಐಶ್ವರ್ಯವಂತರಾದ ಲಕ್ಷಣವಂತರಿಗೆ ಕೊಡಬೇಕೆಂದು ಸಾಧಾರಣದವರಿಗೆ ಲಗ್ನಮಾಡಿಕೊಡದೆ ಇರುವರು. (7) ತಂದೆತಾಯಿಗಳು ಒಪ್ಪಿದರೂ ಬೇರೆ ಜನರು ಹೊಟ್ಟೆಕಿಚ್ಚಿನಿಂದ

...ಗೆ ಯಾ ಹುಡುಗಿಗೆ ಬಾಡಿ ಹೇಳಿ ಲಗ್ನಕ್ಕೆ ವಿಘ್ನವಾಡುವರು. ಮೇ...ಲ್ಕಂಡ ಕಾರಣಗಳಿಂದ ಹುಡುಗಿಯರು ಸುಮಾರಾಗಿ 5–6 ವರುಷಗಳವರಿಗೆ ಇದ್ದರೂ ...ಲ್ಲದೆಯೂ, ಮತ್ತೆ ಕೆಲವು ಹುಡುಗಿಯರು ಬೇಗ ವಿವಾಹವಾಗುವುದಿಲ್ಲ ...ಅಭಿಪ್ರಾಯದಿಂದ 20–24 ವರುಷವಾಗಿದ್ದರೂ ತಂದೆಯ ಮನೆಯಲ್ಲಿ ...ತ್ತಿರುವರು. ತಂದೆಯ ಮನೆಯಲ್ಲಿ ಇಷ್ಟು ಕಷ್ಟಪಡುತ್ತಿದ್ದರೂ ...ವಿಕ್ರಯಮಾಡುವುದು ಯಾವ ಧರ್ಮ? ಗಂಡಾಗಿ ಹುಟ್ಟಿದ್ದ ಪಕ್ಷದಲ್ಲಿ ...ಯಲ್ಲಿ ಪಾಲು ಕೊಡಬೇಕಿತ್ತಲ್ಲವೇ? ಗಂಡುಮಕ್ಕಳಂತೆ ಹೆಣ್ಣುಮಕ್ಕಳು ...ದವರಲ್ಲವೇ? ಹಾಗಾದ ಪಕ್ಷಕ್ಕೆ ಗಂಡುಮಕ್ಕಳನ್ನು ಸಲಹುವ ರೀತಿಯಲ್ಲಿ ...ಹೆಣ್ಣುಮಕ್ಕಳನ್ನು ಕಾಪಾಡಬಾರದು? ಮೇಲ್ಕಂಡ ಕಾರಣಗಳಿಂದ ...ಸಮ ವಯಸ್ಸಿನವರು ದೊರಕದಿರುವುದರಿಂದ ಹುಡುಗನಿಗಿಂತಲೂ ವಯ...ರ ಹುಡುಗಿಯನ್ನು ತಂದು, ಧಾರೆ ಎರೆಯುವಾಗ ಹುಡುಗಿಯ ತಲೆಯ ...ಹನ್ನು (ಚಿನ್ನದ ನಾಣ್ಯ) ಇಟ್ಟು ಅದಕ್ಕೆ ಧಾರೆ ಎರೆಯುವುದು ಕೆಲವು ...ಸ್ವಭಾವವಾಗಿದೆ. ಮೇಲ್ಕಂಡ ಐದು ಕಾರಣಗಳಿಂದ ಹುಡುಗಿಯರಿಗೆ ...ಯದಲ್ಲಿ ಲಗ್ನವಾಗದೆ ಇರುವುದರಿಂದ ಲೋಕಾಪವಾದಕ್ಕೆ ಗುರಿಯಾಗುವ ...ಲ್ಲದೆ ಮುಂದಿನ ಅಭಿವೃದ್ಧಿಯನ್ನು ಹಾಳುಮಾಡಿಕೊಳ್ಳುತ್ತಾರಾದ್ದರಿಂದ ಈ ...ಕಿನ ಮಹನೀಯರು ತಮ್ಮ ಬುದ್ಧಿ ಕೌಶಲತೆಯನ್ನು ಪ್ರಯೋಗಿಸಿ ಯಾವ ...ವಾದವೂ ಇಲ್ಲದಂತೆ ಮಾಡಿಕೊಂಡಾರೆಂದು ಕೋರುವ

...ನಾಮಾವರಪೇಟೆ. ಯಚ್. ಟಿ. ಮುತ್ತಣ್ಣ.

ಬೇಗಾಭವಾನಿ, ಚಿತ್ರದುರ್ಗ.—ನಿಮ್ಮ ಬರಹವನ್ನು ಓದುವುದು ಪ್ರಯಾಸ.

ಸಂಚನಗೂಡು ಬಾತ್ಮಿ.—ಇದರಲ್ಲಿ ವರ್ತಮಾನವೇನೂ ಇಲ್ಲ. ಬರಿಯ ...ಕರನ್ನು ಅಭಿಪ್ರಾಯಗಳನ್ನು ಪ್ರಕಟಿಸಲಾರೆವು.

ವಿ. ಪಿ., ದೊಡ್ಡಬಳ್ಳಾಪುರ.—ಚಂದಾ ಕೊಟ್ಟವರು ಆ ಸಂಗತಿಯನ್ನು ...ಅಮಲ್ದಾರರಿಗೆ ಬರೆದುಕೊಂಡರೆ ಅಥವಾ ಫಿರ್ಯಾದು ಮಾಡಿದರೆ ...ಅವರು ...ದಿಂದ ಕ್ರಮಪಡಿಸುವರು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಗಂಜಿಗುಂಟೆಯಲ್ಲಿ ಕಳೆದ ವಾರ ಹೊಸದಾಗಿ ಒಂದು ...ಲು ಪ್ರಾರಂಭವಾಯಿತೆಂದೂ, ಅದಕ್ಕಾಗಿ ಒಂದು ಸಭೆ ನಡೆದು ಉತ್ಸವಾದಿ ...ಜರುಗಿದವೆಂದೂ ಒಬ್ಬ ಬಾತ್ಮಿದಾರರು ಬರೆದಿದಾರೆ.

ಅರಸೀಕೆರೆ ತಾಲ್ಲೂಕು ಕೋಳಗುಂದ ಗ್ರಾಮದಲ್ಲಿ ಪ್ರಜೆಗಳು ಸೇರಿ ...ತ್ಸವವನ್ನು ನಡೆಸಿ, ಒಂದು ದಿವಸ ಉಪನ್ಯಾಸಗಳನ್ನು ಮಾಡಿಸಿ ಉತ್ಸವ ...ರೂ ಸಂತೋಷದಿಂದ ಪೂರೈಸಿದರೆಂದು ಒಬ್ಬ ಬಾತ್ಮಿದಾರರು ಬರೆದಿದಾರೆ.

...ಗೆ ಸೇರಿದ ಹಲೇಪಾಳ್ಯದ ಮ. ಸಣ್ಣಲಕ್ಷ್ಮಯ್ಯನವರು ಶ್ರೀ ಗವಿ...ರಂಗನಾಥಸ್ವಾಮಿಯವರನ್ನು ಕರಸಿ ಒಂದು ವಾರದ ತನಕ ಅನೇಕ ಉತ್ಸವಗ...ಳನ್ನು ಮಾಡಿಸಿದಲ್ಲದೆ ಸಾವಿರಾರು ಜನರಿಗೆ ಅನ್ನದಾನ ಮಾಡಿಸಿರುತ್ತಾರೆಂದು ...ಬ್ಬ ಬಾತ್ಮಿದಾರರು ತಿಳಿಸಿದಾರೆ.

ಮೈಸೂರು ಸಿಟಿ ಧಾಮುದರುಗಳ ಸಂಘದ ವಾರ್ಷಿಕೋತ್ಸವ ನಡೆದ ...ತ್ತಾಂತವನ್ನು ಕಳೆದ ವಾರ ಪ್ರಕಟಿಸಿದ್ದರಲ್ಲಿ "ಅನುಭವಸಾಲದ ಹೊಸ ...ಯರುಗಳು" ಎಂಬ ಮಾತುಗಳ ವಿಷಯದಲ್ಲೂ, "ಅವರು ಆ ಪ್ರಕಾರ ...ಲು ನಾಚಿಕೆಪಡುತ್ತಾರೆ" ಎಂಬ ಮಾತುಗಳ ವಿಷಯದಲ್ಲೂ ಒಬ್ಬ ಬಾತ್ಮಿದಾರರು ಆಕ್ಷೇಪಣೆ ಮಾಡಿ, ಆದು ಅವರ ಅಭಿಪ್ರಾಯವಲ್ಲವೆಂದು ತಿಳಿಸಿ, ...ಲವಾಗಿ ಧಾಮುದಾರರು" ಎಂದೂ, "ಅವರ ಹಿತೋಕ್ತಿಗಳಿಗಾಗಿ ಅವ...ನ್ನು ವಂದನೆ ಮಾಡಿದರು" ಎಂದೂ ಪ್ರಕಟಿಸಬೇಕಾಗಿತ್ತೆಂಬುದಾಗಿ ನಮಗೆ ...ರೆಯುತ್ತಾರೆ. ಅನಾವಶ್ಯವಾದ ದುರಭಿಪ್ರಾಯಗಳನ್ನು ಯಾರಲ್ಲೂ ಉಂಟು ...ಮಾಡಬೇಕೆಂಬುವುದು ನಮ್ಮ ಅಭಿಮತವಲ್ಲವಾದಕಾರಣ ವಾಚಕರು ಮೇಲ್ಕಂಡ ತಿದ್ದಿ ಓದಿಕೊಳ್ಳುವರೆಂದು ನಂಬುತ್ತೇವೆ. —ಎಡಿ.]

ತಾಲ್ಲೂಕು ವರ್ತಮಾನಗಳು.

ಮೂಡಿಗೆರೆ ತಾ॥ ಗೋಣೀಬೀಡು.—ಶಿವಮೊಗ್ಗ ಡಿಸ್ಟ್ರಿಕ್ಟ್ ಉಪನ್ಯಾಸಕರಾದ ಮ॥ ಬಿ. ಕೆ. ರಂಗಸ್ವಾಮಿಗೌಡ್ರು ನಮ್ಮ ಹೋಬಳಿಯಲ್ಲಿ ಸಂಚರಿಸಿ ...ಈ ವಾಲಿನಾಡು ಪ್ರಜೆಗಳು ಅಭಿವೃದ್ಧಿಯಾಗಿ ಐಶ್ವರ್ಯವಂತರಾಗುವ ಮಾರ್ಗವನ್ನೂ, ಆರೋಗ್ಯ ಸುಸಾಯಂಗುವ ಮಾರ್ಗವನ್ನೂ ಬೋಧಿಸುತ್ತಾ ...ಈ ಗ್ರಾಮಕ್ಕೆ ಬಂದು ನಮ್ಮ ಶಾಲೆಯಲ್ಲಿ ಮಕ್ಕಳ ಶಿಕ್ಷಣ, ವಿವಾಹ, ...ವೃದ್ಧಿ, ಸಹೋದರಭಾವಬುದ್ಧಿ, ಗುರುಭಕ್ತಿ, ಆರೋಗ್ಯ, ಪರಸ್ಪರ ಸಹಾಯ ...ಮುಂತಾದ ವಿಚಾರಗಳನ್ನು ಕುರಿತು ಉಪನ್ಯಾಸಮಾಡಿದರು. ಇದರಿಂದ ಮಕ್ಕಳಿಗೆ ಶಿಕ್ಷಣದ ತಿಳುವಳಿಕೆಯುಂಟಾಯಿತು. ಉಪನ್ಯಾಸಕರು ಪದೇ ಪದೇ ನಮ್ಮ ಸ್ಕೂಲುಗಳಲ್ಲಿಯೂ ಮತ್ತೊಂದು ಪ್ರಜಾ ಸಮುದಾಯದಲ್ಲೂ ಹೀಗೆ ಉಪನ್ಯಾಸವಾಡುತ್ತಾ ಇದ್ದರೆ ಪ್ರಜೆಗಳು ಪುರೋಭಿವೃದ್ಧಿಗೆ ಬರುವದರಲ್ಲಿ ಸಂಶಯವಿಲ್ಲ. ಅಲ್ಲದೆ ಪಾಠಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿ, ಅಭಿವೃದ್ಧಿಗೆ ಬಂದು, ಕನ್ನಡ ನಮ್ಮ ದೇಶದ ಸುಖವೂ ನಾಗರಿಕತೆಯೂ ಹೆಚ್ಚುವುದರಲ್ಲಿ ಅಡ್ಡಿಯಿಲ್ಲ. [ಈ ಉಪನ್ಯಾಸಕರು ಇದೇ ರೀತಿ ಕಮ್ಮರಗೋಡು ಗ್ರಾಮಕ್ಕೂ ಹೋಗಿ ಉಪನ್ಯಾಸಮಾಡಿದರೆಂದು ತಿಳಿಯುತ್ತೇವೆ.—ಎಡಿ.]

ದಾವಣಗೆರೆ ತಾ॥ ಮಾಯಕೊಂಡ.—ಇದೇ ರಾಕ್ಷಸನಾಮ ಸಂವತ್ಸರದ ಚೈತ್ರ ಬಹುಳ 10 ಶುಕ್ರವಾರ ಆಚಾರವಂತ ಸಂಸ್ಥಾನಕ್ಕೆ ಪಟ್ಟಾಧ್ಯಕ್ಷರಾದ ...ನಿರಂಜನ ಮಹಾಸ್ವಾಮಿಗಳವರ ಆಜ್ಞಾನುಸಾರ ...ಯಾನೆ ವ್ಯವಸ್ಥಾಪಕರ ಮೇರೆ ಮೂರುಸಾವಿರ...ಸ್ವಾಮಿಗಳವರ ಕುಮಾರರು ಪಣಿಭೂಷಣ ಸ್ವಾಮಿಗಳವರಿಗೆ ನವಮಿ ಗುರುವಾರ ಮಂಗಳಸ್ನಾನವೂ, ಮಾರನೆ ದಿನ ಬ್ರಹ್ಮೋಪದೇಶವೂ ಮತ್ತು ಪಟ್ಟಾಭಿಷೇಕವೂ, ಶನಿವಾರ ಪಲ್ಲಕ್ಕಿ ಉತ್ಸವವೂ, ಭಾನುವಾರ ಶಿಷ್ಯಮಂಡಲಿಗೆ ಫಲಮಂತ್ರಾಕ್ಷತೆಯೂ ಈ ರೀತಿ ಚಿತ್ರದುರ್ಗದ ತಾಲ್ಲೂಕು ...ರುಗಟ್ಟೆಯ ಸಂಸ್ಥಾನದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ...ಸದರಿ ಬಸವನಾಗರುಗಟ್ಟೆಯ ಗ್ರಾಮಸ್ಥರು ಸರ್ವರೂ ಸೇರಿ ಪಾಲಮಿ ...ಉತ್ಸವ ಪಟ್ಟಿಯನ್ನು ಕೇವಲ ವಿಶ್ವಾಸದಿಂದ ಸಾಂಗವಾಗಿ ನಡಿಸಿದರು. ಇದಲ್ಲದೆ ಈ ಗ್ರಾಮಕ್ಕೆ ಹಾಸನ, ಬೇಲೂರು, ಹರೀಹರ, ಶಿವಮೊಗ್ಗ, ಹೊಸದುರ್ಗ, ದಾವಣಗೆರೆ, ಹೊಳಲ್ಕೆರೆ ಇದೇ ಮುಂತಾದ ಸ್ಥಳಗಳಿಂದಲೂ ಶಿಷ್ಯಮಂಡಲಿಯು ...ಬಂದಿದ್ದರು. ಉಪನ್ಯಾಸ ಮೊದಲಾದವುಗಳು ಬಹಳ ಆಸಕ್ತಿಯಿಂದ ...ಲ್ಪಟ್ಟವು. ಹೂವು, ಗಂಧಾದಿಗಳು ಸಭಾಜನಗಳಿಂದ ಸಂತೋಷವಾಗಿ ...ಗೊಳಲ್ಪಟ್ಟವು. ಈ ಮೂರು ನಾಲ್ಕು ದಿನಗಳು ಜನರೆಲ್ಲರೂ ಸಂತೋಷ ...ದಲ್ಲಿ ಮಗ್ನರಾಗಿದ್ದು ನಂತರ ಸದರಿ ಉತ್ಸವದ ಅಧಿಕ್ಯತೆಯ ಆನಂದವನ್ನು ವಿವರಿಸುತ್ತಾ ತಮ್ಮ ತಮ್ಮ ಊರಿಗೆ ತೆರಳಿದರು.

ಅರಸೀಕೆರೆ.—ಬಿಸಿಲಿನ ತಾಪ ಸಹಿಸಕೂಡದ್ದಾಗಿದೆ. ಈ ವರಿವಿಗೂ ಮಳೆ ...ಇಲ್ಲ. ಸೆಕೆ ಬಹಳ. ಆಗಾಗ್ಗೆ ಸ್ವಲ್ಪ ಮೋಡ ಕವಿಚಿಕೊಳ್ಳುವದರಿಂದ ಜ್ವರ, ...ಲು ಮುಂತಾದ ಕಾಯಿಲೆಗಳು ಪ್ರಾಪ್ತವಾಗಿವೆ. ಕುಡಿಯುವ ನೀರು, ಉಪ್ಪು ...ಇವುಗಳ ಕಷ್ಟ ಹೇಳುವದಕ್ಕೆ ಅಸಾಧ್ಯ. ಇದಕ್ಕಾಗಿ ಹಾಸನದಿಂದ ಡೆಪ್ಯುಟಿ ಕಮೀಷನರ್‌ರವರು ಎರಡಾವರ್ತಿ ದಯಮಾಡಿಸಿ, ಕೆಲವು ಭಾವಿ ತೆಗಸುವಹಾಗೂ, ದೊಡ್ಡ ಭಾವಿಯಲ್ಲಿ ಬುರದೆಗಳನ್ನು ತೆಗಸುವಹಾಗೆಯೂ ಸ್ವಲ್ಪ ಹಣವನ್ನು ಸರ್ಕಾರದಿಂದ ಸ್ಯಾಂಕ್ಷನ್ ಮಾಡಿಸಿರುತ್ತಾರೆ. ಕೆಲಸ ನಡೆಯುತ್ತಲಿದೆ. ...ಪ್ರಜೆಗಳು ಸಾಹುಕಾರ್ ಚೌಡಪ್ಪನವರು ಕಟ್ಟಿಸಿರುವ ಧರ್ಮದ ಭಾವಿ...ವಿಲ್ಲದೆ ನೀರು ಸೇದಿಕೊಳ್ಳುತ್ತಾ ಬರುತ್ತಾರೆ. ಅದರಲ್ಲಿಯೂ ಬೆಳಗಿನ 8 ಗಂಟೆಯೊಳಗಾಗಿ ಅರ್ಧ ಬಿಂದಿಗೆ ಸಿಕ್ಕುವದೂ ಕಷ್ಟವಾಗಿದೆ.—ಇಲ್ಲಿ ಶುಕ್ರವಾರ ಸಂತೆ ಸುಮಾರಾಗಿ ದೊಡ್ಡದು. ಬೇಲು ಕಾಲದಲ್ಲಾಗಲಿ, ಮಳೆಗಾಲದಲ್ಲಾಗಲಿ ನಿಲ್ಲುವದಕ್ಕೆ ಮರಗಳ ನೆರಳಾಗಲಿ ಚಪ್ಪರಗಳಾಗಲಿ ಇಲ್ಲ. ಜನಗಳ ಸಂದಣಿ ಬಹಳ. ಚಕ್ಕಡಿಗಾಡಿಗಳ ತಿರುಗಾಟ ಹೆಚ್ಚು. ಸಂತೆ ನಡೆಯುವದರಿಂದ ಪ್ರತಿವಾರವೂ ನೀಳ್ಕದೆಲೆ, ಹೊಗೆಸೊಪ್ಪು ಮುಂತಾದವುಗಳಿಂದ ಮ್ಯುನಿಸಿಪಾಲಿಟಿಗೆ ಹೆಚ್ಚಾದ ಸುಂಕ ವಸೂಲಾಗುತ್ತೆ. ಮ್ಯುನಿಸಿಪಾಲಿಟಿಯವರು ಈ ವಿಷಯ ಯೋಚಿಸಿ, ಸಂತೆ ನಡೆಯುವ ಕಾಲಲ್ಲಿ ನಿಲ್ಲುವದಕ್ಕೆ ನೆರಳನ್ನು ಕಲ್ಪಿಸಿ ದನಕರುಗಳಿಗೆ ಇರುವ ನೀರಿನ ತೊಂದರೆಯನ್ನು ನಿವಾರಣೆ ಮಾಡುವಹಾಗೆ ಯಾವದಾದರು ಏರ್ಪಾಡು ಮಾಡಬೇಕಾಗಿದೆ.

ಉಡುಪಿ ತಾ॥ ಸಾಂತೂರು ಮುದರಂಗಡಿ.—ಇಲ್ಲಿ ಕಳೆದ ಜನವರಿ ತಾ. 8 ರಿಂದ ವಾರಕ್ಕೊಮ್ಮೆ ಶನಿವಾರ ಸಂತೆ ಆಗುತ್ತಾ ಇದೆ. ಈ ಸಂತೆಯನ್ನು ಸದರಿ ಸಾಂತೂರು ಗ್ರಾಮದ ರಹಿತರು ಏರ್ಪಡಿಸಿದ್ದಾಗಿರುತ್ತದೆ. ಈ ಸಂತೆಯು ಇದುವರೆಗೆ ಒಳ್ಳೇ ಸ್ಥಿತಿಯಿಂದ ಆಗುತ್ತಾ ಇದೆ. ಆದರೂ ಈ ಸಂತೆ ಆಗುವ ಸ್ಥಳದ ವಿಷಯದಲ್ಲಿ ವ್ಯಾಜ್ಯ ಹುಟ್ಟಿ ಸದರಿ ಸ್ಥಳದಲ್ಲಿ ಸಂತೆ ಆಗುವದರಿಂದ ಈ ಸ್ಥಳವನ್ನು ಯಾರಿಗೂ ಕೊಡುವದಿಲ್ಲವೆಂಬದಾಗಿ ತಾ. 9 ರ ಡಿ॥ ಅ॥ ಕಲೆಕ್ಟರ್ ಧೊರೆಗಳವರಿಂದ ಹುಕುಂ ಕೊಡೋಣಾಯ್ತು. ಇದನ್ನು ಕೇಳಿ ಸರ್ವ ಜನರೂ ಸಂತೋಷಪಟ್ಟಿರುತ್ತಾರೆ.—ಆದರೂ ಈ ಸ್ಥಳದಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೆ ಸಂತೆಗೆ ಕೂಡಿದ ಜನರಿಗೂ ಮತ್ತು ಗಾಡಿ ಎತ್ತುಗಳಿಗೂ, ಮುಖ್ಯವಾಗಿ ರುವ ಪ್ರಜೆಗಳಿಗೂ ಬಹಳ ಕಷ್ಟಕರವಾಗಿದೆ. ಆದ್ದರಿಂದ ಇಲ್ಲಿ ದಯಾಳುಗಳಾದ ಸರ್ಕಾರದವರು ಭಾವಿ ಅಗಿಸಿ ಜಲಾಶ್ರಯ ಒದಗಿಕೊಟ್ಟಾರೆಂದು ಬಹಳವಾಗಿ ಪ್ರಾರ್ಥಿಸುತ್ತೇವೆ.—ಈ ಸಂತೆ ಆಗುವ ಸ್ಥಳದ ಮಧ್ಯದಲ್ಲಿ ಒಂದು ಹಳೇ ಕಟ್ಟೆ ಉಂಟು. ಇದರ ಅರ್ಧ ಭಾಗ ಲೋಕಲ್‌ಫಂಡ್ ರಸ್ತೆಗೆ ಮಣ್ಣು ತೆಗೆಯೋಣದರಿಂದ ಅರ್ಧ ಕಟ್ಟೆ ಉಳಿದಿದೆ. ಈ ಕಟ್ಟೆಯಲ್ಲಿ ವಿಷಜಂತುಗಳು ಸೇರಿಕೊಂಡಿರುವ ಬಿಲಗಳು ಇದ್ದು, ಈ ಬೇಸಗೆ ಸಮಯದಲ್ಲಿ ವಿಷಜಂತುಗಳು ರಸ್ತೆಯ ಧೂಳಿನಲ್ಲಿ ಹೊರಳಾಡಿಕೊಂಡಿರುವದರಿಂದ ರಸ್ತೆ ಪ್ರಯಾಣಿಕರನ್ನು ಕಂಡ ಕ್ಷಣವೇ ಬಿಲಕ್ಕೆ ಹೊಕ್ಕೊಳ್ಳುತ್ತವೆ. ಆದ್ದರಿಂದ ಈ ಅರ್ಧ ಕಟ್ಟೆಯನ್ನೂ ಸರ್ಕಾರದವರು ತೆಗಿಸಿದ್ದಾದರೆ ಮಹದುಪಕಾರವೇ ಸರಿ.

ದಾವಣಗೆರೆ.—ಮೈಸೂರಿನಲ್ಲಿ ಪ್ರಸಿದ್ಧಿಪಡೆದ ಮ॥ ಜಯರಾಮಾಚಾರ್ಯ ಕೊಪ್ಪಳ, ಪ್ರಚಾರಕ, ದಿ ಪೈಸಾ ಫಂಡ್ ಕಮಿಟಿ, ಹೆಡ್ ಆಫೀಸ್ ಮೈಸೂರು ಇವರು ಇಲ್ಲಿಗೆ ಬಂದಿದ್ದು, ಅನೇಕ ವ್ಯಾಖ್ಯಾನಗಳನ್ನು ಮಾಡುತ್ತಲಿದಾರೆ. ಪೈಸಾ ಫಂಡಿನ ಹಣವನ್ನು ಇಂಡಸ್ಟ್ರಿಯಲ್ಲಿಗೂ, ಪರದೇಶಕ್ಕೆ ಹೋಗತಕ್ಕ ವಿದ್ಯಾರ್ಥಿಗಳ ಅನುಕೂಲಕ್ಕೂ, ಕರ್ನಾಟಕ ದೇಶದಲ್ಲಿ ಭಾಷೆ ವಿದ್ಯೆ ಜ್ಞಾನ ಹೆಚ್ಚಿಸುವ ದಕ್ಕೂ ಅನೇಕ ಉಪನ್ಯಾಸಕರನ್ನು ನಿರ್ಧಾರಮಾಡಿ, ಗ್ರಾಮಾಂತರಗಳಿಗೆ ಕಳಿಸಬೇಕೆಂಬುದು ಇವರ ಉದ್ದೇಶವಾಗಿದೆ. ದಾವಣಗೆರೆಯಲ್ಲಿ ದೊಡ್ಡ ದೊಡ್ಡ ವ್ಯಾಪಾರಸ್ಥರು, ನವಕರರು, ಸ್ಕೂಲ್ ಮಾಸ್ಟರು ಇದಕ್ಕೆ ತುಂಬಾ ಶ್ರದ್ಧೆಯುಳ್ಳವರಾಗಿ ಕೆಲಸ ಮಾಡಬೇಕೆಂದು ನಿರ್ಧಾರಮಾಡಿದಾರೆ. 8–10 ಜನರು ಲೆಕ್ಚರರಾಗಿ ಡಿಸ್ಟ್ರಿಕ್ಟುಗಳಿಗೆ ಹೋಗಬೇಕೆಂದು ನಿರ್ಣಯಿಸಿದಾರೆ. ಅದರಲ್ಲಿ ಎಂ. ಕೆ. ರಾಘವೇಂದ್ರರಾವ ದತ್ತಾತ್ರಯರಾವ, ನಾಡಗಿರಿ, ಮಂಜಪ್ಪ, ಎಡಿಟರ್, ಧನುರ್ಧಾರಿ ವಗೈರೆಯವರು ಲೆಕ್ಚರನ್ನು ತಯಾರು ಮಾಡಲು ಉದ್ಯುಕ್ತರಾಗಿದಾರೆ. ಎಲ್ಲರೂ ಹೀಗೆ ಶ್ರದ್ಧೆಯಿಂದ ಕೆಲಸ ಮಾಡಿದರೇನೇ ನಮ್ಮ ಕನ್ನಡಿಗರ ಅಭ್ಯುದಯವಾಗುವದು. ಅದರಲ್ಲಿ ಜಯರಾಮಾಚಾರ್ಯರಂಥ ಸ್ವಯಂಸೇವಕರು ತಮ್ಮ ಸ್ವಾರ್ಥವನ್ನು ಬಿಟ್ಟು ಮನೆಬಾಗಿಲು ತ್ಯಜಿಸಿ, ದೇಶೋನ್ನತಿಗೆ ಅನೇಕ ಗ್ರಾಮಗಳಲ್ಲಿ ತಿರುಗಿ ಲೆಕ್ಚರ್ ಹೇಳಿ, ಅಜ್ಞಜನರನ್ನು ಎಚ್ಚರಗೊಳಿಸುವರು. ಅವರ ಸಂಗಡ ಬಂದಿದ್ದ ಶಿಷ್ಯರಲ್ಲಿ 4-5 ವರ್ಷದ ಹುಡುಗರೂ, ಚಿಕ್ಕ ಚಿಕ್ಕ ಬಾಲಿಕೆಯರೂ ಅಸ್ಖಲಿತವಾಗಿ, ಮಧುರವಾಗಿಯೂ ಜನರಿಗೆ ಮನಾನಂದವಾಗುವಂತೆ ಉಪನ್ಯಾಸಮಾಡುತ್ತಾರೆ.

ದೊಡ್ಡಬಳ್ಳಾಪುರ.—ಈ ತಿಂಗಳ ಆದಿಯಿಂದ ಒಂದು ವಾರ ವಿದುರಾಶ್ವತ್ಥದಲ್ಲಿ ಈ ಸಾರಿ ನಡೆದ ಜಾತ್ರೆಯಲ್ಲಿ ಸೀರಿಗೆ ಕಳೆದ ವರ್ಷಗಳ ಹಾಗೆ ಕಷ್ಟವಿಲ್ಲ. ಜನರೂ ದನಗಳೂ ಸುಮಾರು ಹತ್ತು ಸಾವಿರದ ಮಟ್ಟಿಗೆ ಜಮಾಯಿಸಿದ್ದರು. ದೊಡ್ಡಬಳ್ಳಾಪುರದಿಂದ ಮಿಸ್ ಮೋರಿಬಾಯಿಯವರೂ ಅವರ ಮೂವರು ...ಯರೂ ಮ॥ ಭಕ್ತಿಶಿರೋಮಣಿಯವರೊಂದಿಗೆ ಈ ಜಾತ್ರೆಗೆ ಹೋಗಿ ಅನೇಕರಿಗೆ ದೇವರ ವಾಕ್ಯವನ್ನು ತಿಳಿಸಿದರು.—ರಾಜನಕೋಟೆ ಬಳಿ ಪಟಾಳಮ್ಮನ ಪರಿಷೆ ನಡೆಯಿತು. ಒಕ್ಕಲಿಗರೂ ಹೊಲೆಯರಾದಿಗಳೂ ಸುಮಾರು ಸಾವಿರ ಜನರೂ ನೂರಾರು ದನಗಳೂ ಸೇರಿದ್ದುವು. ಇದು ಸಹ ಒಂದು ವಾರ ಜರುಗಿತು.—ಈ ತಿಂಗಳು 3 ನೇ ತಾ. ತಿಮ್ಮಣ್ಣಗುಂಟೆಯಲ್ಲಿ ಒಬ್ಬ ತಿಗಳರ ಹುಡುಗನೂ, ಚಿಕ್ಕತುಮಕೂರು ಕೆರೆಯಲ್ಲಿ ಒಬ್ಬ ಮಾದಿಗರ ಹುಡುಗನೂ ಆಕಸ್ಮಾತ್ ಕಾಲುಜಾರಿ ಮೃತರಾದಂತೆ ತಿಳಿಯಿತು.—ಬೇಸಿಗೆ ಝಳ ಅಧಿಕವಾಗಿದ್ದರೂ ಕಳೆದ ಶನಿವಾರ ರಾತ್ರಿ ಮತ್ತೊಂದು ಹದ ಮಳೆ ಸುರಿಯಿತು. ಪ್ಲೇಗಿನ ಹಾವಳಿ ಇಲ್ಲ.—ವ್ಯಾಪಾರಸ್ಥರಲ್ಲಿ ಅನೇಕರು ನೇಯ್ಗೆಯ ನೂಲೇ ಬಣ್ಣ ಸಿಕ್ಕದೆ ತುಂಬಾ ತೊಂದರೆಪಡುತ್ತಾರೆ.—ಕಳೆದ ಶುಕ್ರವಾರ ಬೆಂಗಳೂರಲ್ಲಿ ನಡೆದ ಲೇಟ್ ಪಾದ್ರಿ ಸತ್ಯವೀರಯ್ಯನವರ ಮಗ ಮ॥ ಗುರುಶಾಂತಯ್ಯನವರ ಮತ್ತು ಮ॥ ದೇವದತ್ತಮ್ಮನವರ ಕುಮಾರ್ತೆಯರ ಮದುವೆ ಬಹು ವಿಜೃಂಭಣೆಯಾಗಿ ನಡೆಯಿತು. ನಮ್ಮ ಚೇರ್ ಮ್ಯಾರ್ಕ್ ಸಾಹೇ ದೊರೆಯವರೂ, ಘನ ಎಡ್ವರ್ಸ್ ದೊರೆಸಾನಿಯವರೂ, ಕೆಲವು ಮಿಸ್ಸಿಗಳೂ, ಅನೇಕ ಕ್ರೈಸ್ತರೂ ಮದುವೆಗೆ ದಯಮಾಡಿ ವಧೂವರರನ್ನು ಆಶೀರ್ವದಿಸಿದರು.—ನಮ್ಮ ಮಾಯಂ ಚೇರ್ ಮ್ಯಾರ್ಕ್ ಘನರೀಸ್ ದೊರೆಯವರೂ, ದೊರೆಸಾನಿಯವರೂ, ಕುಮಾರ್ತೆಯರೂ ವಿಲಾಯತಿಯಿಂದ ಕಳೆದ ಬುಧವಾರ ಕ್ಷೇಮವಾಗಿ ಬೆಂಗಳೂರನ್ನು ತಲಪಿರುತ್ತಾರೆ.—ಕಳೆದ ಆಚೆ ವಾರದಲ್ಲಿ ಈ ಊರಲ್ಲಿ ಸುಮಾರು 15 ಪೋಲೀ ನಾಯಿಗಳನ್ನು ಮ್ಯುನಿಸಿಪಾಲಿಟಿಯವರು ಕೊಲ್ಲಿಸಿರುತ್ತಾರೆ.—ಕೆಟ್ಟ ರಾಗಿ ಮಾರತಕ್ಕವರಿಗೆ ಶಿಕ್ಷೆ ಅವಶ್ಯವಾಗಿದೆ. ನೀರಿನ ಕಷ್ಟ ಕಮ್ಮಿ.

ಹರೀಹರ.—ಆಗಾಗ್ಗೆ ಸ್ವಲ್ಪ ಮಳೆ ಬರುತ್ತೆ. ಮೋಡವೂ ಆಗಾಗ್ಗೆ ಮುಚ್ಚಿಕೊಳ್ಳುತ್ತೆ. ಬಿಸಿಲೂ ಸೆಕೆಯೂ ಸಹಿಸಲಾರದಷ್ಟಿದೆ. ಊರಿನಲ್ಲೂ ಗ್ರಾಮಗಳಲ್ಲೂ ನ್ಯೂಮೋನಿಯಾ ಯಾನೆ ರೇಷ್ಮೆ ಜಾಡ್ಯವು ಕಾಣಿಸಿಕೊಂಡು ಅನೇಕ ಮರಣಗಳಾಗುತ್ತಲಿವೆ. ಇಲ್ಲಿನ ಡಾಕ್ಟರ್ ರಾಜಗೋಪಾಲನಾಯ್ಡು ಯವರಿಗೆ ಇಲ್ಲಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗವಾಯಿತು. ಈ ವಿಷಯ ಈ ಊರಿನ ಮತ್ತು ಗ್ರಾಮಾಂತರಗಳ ಜನರಿಗೆ ತುಂಬಾ ವ್ಯಸನವಾಗಿದೆ. ಯಾಕೆಂದರೆ ಈ ಸ್ಥಳಕ್ಕೆ ಬಂದ ಡಾಕ್ಟರುಗಳ ಪೈಕಿ ವಾಸ್ತವ್ಯವಾಗಿಯೂ ಇವರಂತೆ ಬಲ್ಲಿದರಿಗೂ, ಬಡವರಿಗೂ ಸರಾಗವಾಗಿಯೂ ಪರಿಚಿತಸ್ಥರಾಗಿಯೂ, ಅನುರಾಗವುಳ್ಳವರಾಗಿಯೂ ಇದ್ದವರು ಯಾರೂ ಇಲ್ಲ. ಬಡವರ ಮನೆಗಳಿಗೆ ಊರಿನಲ್ಲೂ, ಗ್ರಾಮಗಳಲ್ಲೂ ಫೀಜಿಲ್ಲದೆ ಹೋಗಿ ಬಂದಿದಾರೆ. ಇವರು ರೋಗಿಗಳನ್ನು ನೋಡುವ ವಿಷಯದಲ್ಲೂ, ಔಷಧ ಕೊಡುವದರಲ್ಲೂ, ಮನೆಗಳಿಗೆ ಹೋಗುವದರಲ್ಲೂ ನಿಜವಾಗಿ ತಮ್ಮ ಸುಖ ನೋಡಿದವರಲ್ಲ. ದಿಕ್ಕಿಲ್ಲದ ಅನೇಕ ರೋಗಿಗಳನ್ನು ಸ್ವಂತ ಖರ್ಚಿನಿಂದ ಸ್ವಂತ ಮನೆಯಲ್ಲಿಟ್ಟು ಪೋಷಣೆಮಾಡಿದಾರೆ. ಕಾಯಿಲೆ ಮನೆಗಳವರಿಗೆ ಬಿಟ್ಟ ಆಳು ಎಂದು ಹೇಳಿದರೆ ಅದು ವರ್ಣನೆಯಲ್ಲ.—ಈ ತಾಲ್ಲೋಕಿನ ಬೋಕಿಕೆರೆ ಎಂಬ ಗ್ರಾಮದ ತೋಟದ ಭಾವಿಯಲ್ಲಿ ಸುಮಾರು 1½ ಗಜದ ನೀರಿನಲ್ಲಿ ಬಿದ್ದು ಒಬ್ಬನು ಸತ್ತನು. ಇದು ಆತ್ಮಹತ್ಯವೋ, ಏನೋ ಕೃತ್ರಿಮವೋ ಎಂದು ಹೇಳುತ್ತಾರೆ.—ಲಕ್ಕವಳ್ಳಿ ದಾರಿಯಲ್ಲಿರುವ ಕಂಚಿನ ಬಾಗಲೆಂಬ ಸೇತುವೆಯನ್ನು ಲೈಟ್ ರೈಲ್ವೆಯ ದೆಸೆಯಿಂದ ದುರಸ್ತುಮಾಡುತ್ತಾರೆ. ಜನರಲ್ಲಿ ಈ ಸೇತುವೆಗೆ 7 ಜನರನ್ನು, ಒಬ್ಬ ಮೇಸ್ತ್ರಿಯನ್ನು ಬಲಿಕೊಡಬೇಕೆಂದೂ, ಆದ್ದರಿಂದ ಜನರನ್ನು ಹಿಡಿಯುತ್ತಾರೆಂದೂ, ಇನ್ನೆಲ್ಲೋ ಬಹಳ ದೊಡ್ಡದಾದ ಒಂದು ಸೇತುವೆ ಕಟ್ಟುತ್ತಾರೆಂದೂ, ಅದಕ್ಕೆ 800 ಜನ ಬೇಕೆಂದೂ, ಇದಕ್ಕಾಗಿ ಮಕ್ಕಳು, ಹೆಂಗಸರು, ಗಂಡಸರು ಕೈಗೆ ಸಿಕ್ಕಿದವರನ್ನೆಲ್ಲಾ ಹಿಡಿಯುತ್ತಾರೆಂದೂ, ಹೆಣ್ಣು ವೇಷ ಹಾಕಿಕೊಂಡು ಹೆಂಗಸರನ್ನು ಹಿಡಿಯುತ್ತಾರೆಂದೂ ನಾನಾ ರೀತಿಯಾದ ಸುದ್ದಿ ಹುಟ್ಟಿ ಜನರು ಬಹಳ ಗಾಬರಿಯಾಗಿ ಒಬ್ಬೊಬ್ಬರೇ ತಿರುಗಲು ಹೆದರುತ್ತಾರೆ. ಈ ಮೂಢ ಸುದ್ದಿಗೆ ಕಾರಣರಾದವರನ್ನೂ, ಹರಡುವವರನ್ನೂ ಹಿಡಿದು ಸರ್ಕಾರದವರು ಸ್ವಲ್ಪ ಶಿಕ್ಷೆಯನ್ನು ಮಾಡಿಸಿದರೆ ಒಳ್ಳೇದು.—ಹೊಸ ಡಾಕ್ಟರವರು ಮೊದಲಿನವರಂತೆ ಜನಾನುರಾಗವುಳ್ಳವರಾಗಿ ರೋಗಿಗಳನ್ನು ಪರಾಮರಿಸಿ ಕೀರ್ತಿಪಡೆಯುವರೆಂದು ನಂಬಿರುತ್ತೇವೆ.

ತುಂಕೂರು ತಾ॥ ಊರುಕೆರೆ.—ಈ ಪ್ರಾಂತ್ಯ ಫೆಬ್ರವರಿ ಮಾಹೆ ಅಂತ್ಯಭಾಗ ಅಂದರೆ ಪೂರ್ವಾಭಾದ್ರ ಮಳೆಯ ಆದಿ ಭಾಗದಲ್ಲಿ ಒಂದೆರಡು ಹದಪೂರಾ ಮಳೆಯು ಬಂದು, ಈ ಪ್ರದೇಶದ ಕೆಲವು ಕೆರೆ ಕಟ್ಟೆಗಳಿಗೆ ಅರ್ಧ ಮುಕ್ಕಾಲು ಭಾಗ ನೀರು ಬಂದಿರುತ್ತೆ. ಈಗ ಜನ ಜಾನ್ವಾರುಗಳಿಗೆ ನೀರಿನ ಕ್ಷೋಭೆಯು ಕಳೆದು ಹೋಗಿ ತಾತ್ಕಾಲಿಕ ಸುಖ ದೊರಕಿರುತ್ತೆ. ಈ ಪ್ರದೇಶದಲ್ಲಿ ತಕ್ಕ ಮಟ್ಟಿಗೆ ಮುಸ್ಕಿ ಫಸಲು ಆಗಿರುತ್ತೆ.—ಈ ಊರಿಗೆ ಸೇರಿದ ರಂಗಾಪುರವೆಂಬ ಗ್ರಾಮದ ಬಳಿ ಜಮೀನ್ ಮಾಡಿಕೊಂಡಿರುವ ತುಂಕೂರು ನಿರೂಪಾಕ್ಷಯ್ಯನೆಂಬುವನ ಹೊಲದಲ್ಲಿ ಕಟ್ಟಿಕೊಂಡಿದ್ದ ಹುಲ್ಲು ಮನೆಗೆ ಮಾರ್ಚಿ ತಾ. 20 ನೇ ಸಾಯಂಕಾಲ ಅಕಸ್ಮಾತ್ ಬೆಂಕಿ ಬಿದ್ದು ಗುಡ್ಲಿನಲ್ಲಿ ಕಟ್ಟಿದ್ದ ಸುಮಾರು 175 ರೂಪಾಯಿ ಬೆಲೆ ಬಾಳುವ 3 ಹಸುಗಳು ಬೆಂದು ಹೋದದ್ದಲ್ಲದೆ ದವಸ ಧಾನ್ಯ ಮೊದಲಾದ ಸಾಮಾನುಗಳೆಲ್ಲವೂ ಸುಟ್ಟುಹೋದವು. ಆ ಕಾಲದಲ್ಲಿ ಮನೆ ಜನಗಳೂ ಇತರರೂ ಯಾರೂ ಇರಲಿಲ್ಲವಾದ್ದರಿಂದ ಇಷ್ಟು ಅನರ್ಥಕ್ಕೆ ಕಾರಣವಾಯ್ತು.—ಇರಂತು ಈ ಗ್ರಾಮದಲ್ಲಿ ಸಿಹಿನೀರಿನ ಭಾವಿ ತೋಡಿಸುವುದಕ್ಕಾಗಿ ನಮ್ಮ ಅಮಲ್ದಾರ್ರವರೂ, ಶೇಕದಾರರೂ ದಯಮಾಡಿ ಇಲ್ಲಿನ ಮುಖಂಡ ಜನಗಳನ್ನು ಬರಮಾಡಿಕೊಂಡು ಬುದ್ಧಿವಾದಗಳನ್ನು ಅಪ್ಪಣೆ ಕೊಡಿಸಿ ಸೀನೀರು ಭಾವಿಯನ್ನು ಮಾಡಿಸುವುದಕ್ಕೆ ಕಬೂಲ್ ಪಡಿಸಿ ಜನಗಳಿಂದ 250 ರೂಪಾಯಿ ಚಂದಾ ವಸೂಲ್ಮಾಡಿ ಸರ್ಕಾರದಿಂದಲೂ 250 ರೂಪಾಯಿ ಕೊಟ್ಟು 500 ರೂಪಾಯಿಗೆ ಭಾವಿಯನ್ನು ದೇವಸ್ಥಾನದ ಮುಂದೆ ಮಾಡಿಸುವುದಾಗಿ ತೀರ್ಮಾನ ಮಾಡಿದಾರೆ. ಊರಿಗೆ ಪಶ್ಚಿಮ ದಿಕ್ಕಿನಲ್ಲಿರುವ ಶಿವಾಲಯದ ಮುಂದೆ ಭಾವಿಯನ್ನು ತೋಡಿದರೆ ಸಿಹಿನೀರು ಸಿಕ್ಕುವುದಲ್ಲದೆ, ಹೈರೋಡಿನ ಪಕ್ಕವಾಗಿಯೂ ಪರಸ್ಥಳದವರಿಗೂ ಸ್ಥಳದವರಿಗೂ ಅನುಕೂಲವಾಗಿಯೂ ಇರುವುದಲ್ಲದೆ ತುಂಬಾ ಮೈದಾನ ಪ್ರದೇಶವಾಗಿಯೂ ಇರುತ್ತೆ. ಸರ್ಕಾರದವರು ಈ ಸ್ಥಳದಲ್ಲಿ ಭಾವಿ ಮಾಡಿಸಿದರೆ ಎಲ್ಲಾ ವಿಧದಲ್ಲಿಯೂ ತುಂಬಾ ಸುಖವುಂಟಾಗುವುದು.—ಈ ಗ್ರಾಮದಲ್ಲಿ ಸ್ಕೂಲ್ ಮಾಸ್ಟರಾಗಿರುವ ಎನ್. ಗುರುಸಿದ್ಧಾರಾಧ್ಯರು ಇಲ್ಲಿಗೆ ಬಂದ ಮೇಲೆ ಹೊಸ ಸ್ಕೂಲ್ ಕಟ್ಟಡವಾಗಲು ಕಾರಣವಾಯ್ತು. ಮತ್ತು ಈ ಗ್ರಾಮದಲ್ಲಿ ಯಾವಾಗಲೂ ವರ್ತಮಾನ ಪತ್ರಿಕೆಗಳ ಪ್ರಯೋಜನವನ್ನರಿಯದಿದ್ದವರಿಗೆ ಅವುಗಳ ಗುಣ ಶೀಲಗಳನ್ನು ಬೋಧಿಸಿ ಈಗ ಈಗ 5-6 ಪತ್ರಿಕೆಗಳನ್ನು ಬರುವಹಾಗೆ ಮಾಡಿದರು. ಈಗ ಸ್ಕೂಲ್ ತುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆ. ಯೌವನಸ್ಥರಿಗೂ ವಿದ್ಯಾಲತೆ ಎಂಬ ಬಳ್ಳಿಯನ್ನು ಹಬ್ಬಿಸುತ್ತಿದಾರೆ.

ಚನ್ನರಾಯಪಟ್ಟಣ.—ಈ ಊರು ಕೆರೆಯಲ್ಲಿ ನೀರಿಲ್ಲದೆ ಜನಗಳಿಗೂ, ಜಾನ್ವಾರುಗಳಿಗೂ ಸ್ನಾನ ಪಾನಗಳಿಗೆ ತುಂಬಾ ತೊಂದರೆಯಾಗಿರುತ್ತೆ. ಜನರು ಬಹು ದೂರ ಫಾಸಲೆಯಿಂದ ನೀರು ಹೊತ್ತು ತಂದು ಜೀವಿಸುತ್ತಿರುತ್ತಾರೆ. ಕೂಡಲೆ ಮಳೆಯಾಗಿ ಜನರ ಕಷ್ಟ ನಿವಾರಣೆಯಾಗುವದೆಂದು ನಂಬಿದೇವೆ.—ಇಲ್ಲಿಗೆ 8 ಮೈಲಿಯಲ್ಲಿರುವ ಶ್ರವಣಬೆಳಗುಳಲ್ಲಿ ಈ ಮಾಹೆ 1-2-3 ನೇ ತಾ. ನಮ್ಮ ಅಮಲ್ದಾರ್ ಮ॥ ಹೈದರಲ್ಲಿ ಖಾನ್ ಸಾಹೇಬರು, ಡಾಕ್ಟರ್ ಚನ್ನಯ್ಯನವರು, ಪೊ॥ ಇನ್‌ಸ್ಪೆಕ್ಟರವರು, ಸಬ್ ರಿಜಿಸ್ಟ್ರಾರವರು, ಭಾರಿ ಸಾಹುಕಾರರು ಮುಂತಾದ ದೊಡ್ಡ ಮನುಷ್ಯರೆಲ್ಲರೂ ಸೇರಿ ವಸ್ತುಗಳು, ದನಗಳು ಮತ್ತು ಕೋಆಪರೇಟಿವ್ ಸೊಸೈಟಿ ಎಂಬ ನೂತನ ಸಭೆಯನ್ನು ಮೇಲ್ಕಂಡ ದೊಡ್ಡ ಮನುಷ್ಯರ ಅಭಿಪ್ರಾಯದಂತೆ ನಮ್ಮ ಡೆ॥ ಕಮಿಷನರ್ ಮ॥ ಬಿ. ರಾಮಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡಿಸಿದರು. ಸ್ಥಳ, ಪರಸ್ಥಳದ ಜನಗಳನ್ನು ಪತ್ರಿಕೆಗಳನ್ನು ಕಳುಹಿಸಿ ಬರಮಾಡಿಕೊಂಡಿದ್ದರು. ರೈತರು ಬಳ್ಳೊಳ್ಳೆಯ ರಾಸುಗಳನ್ನೂ, ತಾವುಗಳು ಬೆಳೆದ ದವಸ ಧಾನ್ಯಗಳನ್ನೂ, ಕೈಗಾರಿಕೆ ವಸ್ತುಗಳನ್ನೂ ತೆಗೆದುಕೊಂಡು ಬಂದು ಇಲ್ಲಿ ನಮ್ಮ ಅಮಲ್ದಾರ್ರವರು ಏರ್ಪಡಿಸಿದ್ದ ಸ್ಥಳಗಳಲ್ಲಿ ಕ್ರಮವರಿತು ಪ್ರದರ್ಶನ ಮಾಡಿದ್ದರು. ನಮ್ಮ ಡಾಕ್ಟರ್ ಚಿನ್ನಯ್ಯನವರು ಪ್ರದರ್ಶನ ಶಾಲೆಯಲ್ಲಿ ಒಂದು ವಿಚಿತ್ರವಾದ ಇಲೀಜೋನನ್ನು ಮಣ್ಣಿನಲ್ಲಿ ಮಾಡಿಸಿ ಕುಂಬಾರರ ಕೈಯಲ್ಲಿ ಸುಡಿಸಿ ಇಡಿಸಿದ್ದರು. ಇದು ಸ್ವಾಭಾವಿಕವಾಗಿ ಇಲಿಗಳು ಹ್ಯಾಗೆ ಬಿಲಗಳನ್ನು ನೆಲದಲ್ಲಿ ತೋಡಿ ಮಾಡುತ್ತವೋ ಹಾಗೆ ನೆಲದಲ್ಲಿ ಹೂಳಿಸಿಟ್ಟಿದ್ದದ್ದನ್ನು, ಅದರ ಸಂಬಂಧವಾಗಿ ಪ್ಲೇಗು ನಿವಾರಣೆ ಆಗತಕ್ಕ ವಿಷಯವನ್ನೂ ಜನರಿಗೆ ಹೇಳಿದ್ದನ್ನು ಕೇಳಿ ಎಲ್ಲರೂ ತುಂಬಾ ಸಂತೋಷಪಟ್ಟರು. ಈ ಮಹೋತ್ಸವಕ್ಕೆ ಎಕನಾಮಿಕ್ ಸೂಪರಿಂಟೆಂಡೆಂಟ್ ಮಿ॥ ಅಬ್ದುಲ್ ಖಾಲಕ್ ಸಾಹೇಬರೂ, ಅ॥ ಕ॥ ಮ॥ ಹಬ್ಲೀಕರ್ ರವರೂ, ತಾಲ್ಲೋಕು ಅಧಿಕಾರಿಗಳೂ, ಹಾಸನ, ಹೊಳೆನರಸೀಪುರ, ಚನ್ನರಾಯಪಟ್ಟಣ, ಈ ಸ್ಥಳದ ಉಪದೇಶಿಗಳೂ, ಇತರ ದೊಡ್ಡ ಮನುಷ್ಯರೂ ಸೇರಿದ್ದರು. ಇವರನ್ನೆಲ್ಲಾ ನಮ್ಮ ಅಮಲ್ದಾರ್ರವರು ಸಭೆಗೆ ಕರಸಿಕೊಂಡು, ನಮ್ಮ ಡೆ॥ ಕಮಿಷನರ್ ಸಾಹೇಬರವರನ್ನು ಅಧ್ಯಕ್ಷತೆ ವಹಿಸಬೇಕೆಂತ ಕೇಳಿಕೊಂಡ ಪ್ರಕಾರ ಅವರು ಅಗ್ರಾಸನಾಧಿಪತಿಗಳಾಗಿ ಕುಳಿತುಕೊಂಡ ಬಳಿಕ ನಮ್ಮ ಅಮಲ್ದಾರ್ರವರು—ಚನ್ನರಾಯಪಟ್ಟಣದಲ್ಲಿ ಈ ಪ್ರದರ್ಶನವನ್ನು ಮಾಡಬೇಕೆಂತ ಉದ್ದೇಶವಿತ್ತು; ಅಲ್ಲಿ ನೀರಿಗೆ ಬಹಳ ತೊಂದರೆಯಾಗಿದ್ದನ್ನು ಕಂಡು ಈ ಬೆಳಗುಳದ ಸಾಹುಕಾರರೂ ಇತರ ದೊಡ್ಡ ಮನುಷ್ಯರ ಸಹಾಯದಿಂದ ಈ ಸ್ಥಳದಲ್ಲಿ ಏರ್ಪಾಡು ಮಾಡಿದ್ದಾಯಿತೆಂತ ತಿಳಿಸಿದ ಬಳಿಕ ನಮ್ಮ ಡೆ॥ ಕಮಿಷನರವರು ತಾವೇ ಮೊದಲು ಪ್ರಾರಂಭಿಸಿ ವಸ್ತುಗಳನ್ನೂ, ಜಾನ್ವಾರುಗಳನ್ನೂ, ಏರ್ಪಾಡುಗಳನ್ನೂ ನೋಡಿ ನಮ್ಮ ಅಮಲ್ದಾರ್ರವರನ್ನೂ ಸಾಹುಕಾರರನ್ನೂ ಬಹಳ ಕೊಂಡಾಡಿದರು. ನಮ್ಮ ಅಮಲ್ದಾರ್ರವರು ಡೆಪ್ಯುಟಿ ಕಮಿಷನರವರಿಗೂ, ಸಹಾಯ ಮಾಡಿದ ಜನರಿಗೂ, ಸಭೆಗೂ ವಂದನೆಯನ್ನು ಹೇಳಿ ಕುಳಿತುಕೊಂಡ ಬಳಿಕ ಉತ್ತಮವಾದ ವಸ್ತುಗಳಿಗೂ, ಜಾನ್ವಾರುಗಳಿಗೂ, ಬಹುಮಾನವನ್ನು ಕೊಟ್ಟು ಸಭೆಯನ್ನು ಮುಕ್ತಾಯ ಮಾಡಿದರು.—ಕಳೆದ ಬುಧವಾರ ರಾತ್ರಿ ಸುಮಾರು 12 ಗಂಟೆ ಸಮಯದಲ್ಲಿ ಈ ಊರಿನ ಕೋಟೆಯಲ್ಲಿರುವ ಗರ್ಲ್ಸ್ ಸ್ಕೂಲ್ ಹೆಡ್ ಮಾಸ್ಟರ್ ನರಸಿಂಹಯ್ಯನವರ ಮನೆಗೆ ಕಳ್ಳರು ಹಿತ್ತಲ ಕಡೆಯಿಂದ ನುಗ್ಗಿ ಒಳಬಾಗಿಲಿಗೆ ಬಂದರು. ಒಳಗೆ ಪ್ರವೇಶಮಾಡಲು ಮನೆಯ ಯಜಮಾನನು ಎಚ್ಚರವಾಗಿದ್ದದ್ದರಿಂದ ನಿರಾಶರಾಗಿ ಹೊರಟುಹೋಗಿ ಕೋಟೆಯಲ್ಲೇ ಇರುವ ಚಿಲ್ಲರೆ ಅಂಗಡಿ ಸೋಮಲಿಂಗಯ್ಯನ ಮನೆಗೆ ಮುಂಬಾಗಿಲಿನ ತಿರುಗಣೆಯನ್ನು ತಪ್ಪಿಸಿ ಒಳಕ್ಕೆ ನುಗ್ಗಿ ದೊಡ್ಡ ಪೆಟ್ಟಿಗೆಯ ಬಾಗಿಲನ್ನು ತೆಗೆದು ಒಡವೆ ಮತ್ತು ರೂಪಾಯಿಗಳನ್ನು ಇಟ್ಟಿದ್ದ ಸಣ್ಣ ಪೆಟ್ಟಿಗೆಯನ್ನು ತೆಗೆದುಕೊಂಡು ಅಂಗಡಿಗೆ ನುಗ್ಗಿ ಅಲ್ಲಿ ಸ್ವಲ್ಪ ಚಿಲ್ಲರೇ ಸಾಮಾನನ್ನು ತೆಗೆದುಕೊಂಡು ಪುನಃ ಒಳಕ್ಕೆ ಪ್ರವೇಶಿಸುವಾಗ ಮನೆಯ ಯಜಮಾನನು ಎಚ್ಚರಗೊಂಡು ಗದ್ದಲ ಮಾಡಿದನು. ನಿಶಿ ಹೊತ್ತಾದ್ದರಿಂದ ಯಾರೂ ಸಹಾಯಕ್ಕೆ ಬರಲಿಲ್ಲ. ಕಳ್ಳರು ಓಡಿಹೋದರು. ಪೋಲೀಸ್ ಅಧಿಕಾರಿಗಳು ಇಂಥಾ ಬೇಗಾಲದಲ್ಲಿ ಸರಿಯಾಗಿ ನಿಗಾ ತೆಗೆದುಕೊಂಡು ಪ್ರಜೆಗಳಿಗೆ ಸಂಭವಿಸುವ ಕಷ್ಟಗಳನ್ನು ನಿವಾರಣೆ ಮಾಡುತ್ತಾರೆಂದು ನಂಬಿರುತ್ತೇನೆ.

ಶಿಕಾರಿಪುರ.—ನಮ್ಮ ದಿವಾನ್ ಸಾಹೇಬರವರ ಸವಾರಿಯು ತಾ. 6 ನೇ ಸೋಮವಾರ ಬೆಳಗ್ಗೆ ಹೊನ್ನಾಳಿ ಮಾರ್ಗವಾಗಿ ಈ ಟವನ್ ಬೌಂಡರಿ ಬಳಿ ಹಾಕಿದ್ದ ಛಪ್ಪರದಲ್ಲಿ ದಯಮಾಡಿಸಿತು. ಅಲ್ಲಿ ಅವರ ದರ್ಶನಾರ್ಥವಾಗಿ ನೆರೆದಿದ್ದ ಬ್ರಾಹ್ಮಣರುಗಳಿಂದ ಕೊಡಲ್ಪಟ್ಟ ಆಶೀರ್ವಾದ ಯುಕ್ತವಾದ ಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿದರು. ಮ್ಯುನಿಸಿಪಲ್ ಕೌನ್ಸಲರುಗಳೂ, ಟವನ್ ಇತರೆ ಮಹನೀಯರೂ ದಿವಾನ್‌ರವರಿಗೆ ಸ್ವಾಗತಪೂರ್ವಕವಾದ ವಂದನೆಯನ್ನು ಅರ್ಪಿಸಿದ ನಂತರ ಮೋಟರಿನಿಂದ ಇಳಿದು ಛಪ್ಪರದಲ್ಲಿ ದರ್ಶನಾಕಾಂಕ್ಷಿಗಳಾದ ಎಲ್ಲಾ ಪ್ರಜೆಗಳಿಗೂ ದರ್ಶನವನ್ನಿತ್ತರು. ಆ ವೇಳೆ ವೇ|| ಶ್ರೀನಿವಾಸ ದೀಕ್ಷಿತರು ಓದಿದ ಅಡ್ರೆಸ್ಸು ಠಾಲಿಸಿ ಚಿತ್ರವಿಚಿತ್ರ ನಕ್ಷೆಗಳಿಂದ ಕೆತ್ತಲ್ಪಟ್ಟ ಗಂಧದ ಪೆಟ್ಟಿಗೆಯಲ್ಲಿ ಸದರಿ ಅಡ್ರೆಸ್ಸನ್ನು ಟವನ್ ಪರವಾಗಿ ವೇ|| ವಿಟ್ಠಲಮೂರ್ತ್ಯಾಚಾರ್ರು ಕೊಟ್ಟಿದ್ದನ್ನು ಅಂಗೀಕರಿಸಿ ದಿವಾನ್‌ರವರು ಅಡ್ರೆಸ್ಸಿನಲ್ಲಿ ವಿಜ್ಞಾಪಿಸಿಕೊಂಡ ಅಂಶಗಳ ವಿಷಯದಲ್ಲಿ ಮಾತನಾಡಲು ಬಂಗಲೆ ಬಳಿ ಬರಬೇಕೆಂದು ಅಪ್ಪಣೆಕೊಟ್ಟು ಕಬ್ಬಿನ ಯಂತ್ರದ ಬಳಿ ಪಯಮಾಡಿದರು.—ಮಧ್ಯಾಹ್ನ 1½ ಘಂಟೆಗೆ ಮದಗದ ಕೆರೆಯಿಂದ ವಾಪಸು ಬಂದು 3 ಘಂಟೆಗೆ ಸರಿಯಾಗಿ ಬಂಗಲೆ ಬಳಿ ಎಲ್ಲಾ ಸಂಘದ ಪ್ರತಿನಿಧಿಗಳನ್ನೂ ಪಟೇಲರು, ಶಾನುಭೋಗರು, ಮೊದಲಾದ ಅಧಿಕಾರಸ್ಥರನ್ನೂ ಪ್ರಜೆಗಳನ್ನೂ ಇಟ್ಟುಕೊಂಡು ಪ್ರಜಾಕ್ಷೇಮ ವಿಚಾರವಾದ ಮಾತುಗಳು ನಡೆಸಿದರು. ಅಡ್ರೆಸ್ಸಿನಲ್ಲಿ ಯಾವದು ಮುಖ್ಯವಾದ ವಿಜ್ಞಾಪನೆಯೆಂದು ಸೂಚಿಸಲ್ಪಟ್ಟಿತ್ತೋ ಅದನ್ನೇ ಅಂದರೆ ನೀರಿನ ವಿಷಯವಾಗಿ, ಕೆರೆಗಳ ಆಬಾದು ವಿಚಾರವಾಗಿ ಪ್ರಜೆಗಳ ಅಹವಾಲನ್ನು ಕೇಳಿಕೊಂಡು ಸದುತ್ತರವನ್ನು ದಯಪಾಲಿಸಿದರು. ಆ ನಂತರ ರಸ್ತೆಗಳ ವಿಚಾರವಾಗಿಯೂ, ಗ್ರಾಮಾಭಿವೃದ್ಧಿ ವಿಚಾರವಾಗಿಯೂ ಪಟೇಲ ಶಾನುಭೋಗರುಗಳೂ, ಇತರ ದೊಡ್ಡ ಮನುಷ್ಯರುಗಳೂ ನಡಿಸಿರತಕ್ಕ ಕೆಲಸಗಳನ್ನೆಲ್ಲಾ ಕೇಳಿ ಸಂತೋಷಪಟ್ಟರು. ತಾಲ್ಲೂಕು ಆಡಳಿತಕ್ಕೆ ಸಂಬಂಧಪಟ್ಟ ಸಲಹೆಗಳನ್ನು ದಿವಾನ್‌ರವರಿಗೆ ಒದಗಿಸುವದರಲ್ಲಿ ಡೆಪ್ಟಿ ಕಮಿಷನರ್ ಸಾಹೇಬರವರು ಬುದ್ಧಿ ಶ್ರಮವನ್ನು ವಹಿಸಿದರು. ಈ ಪ್ರಕಾರವಾಗಿ ಅಹವಾಲುಗಳನ್ನು ಕೇಳಿ ಅನೇಕ ಅರ್ಜಿಗಳನ್ನು ತೆಗೆದುಕೊಂಡು ದಿವಾನ್‌ಗಿ ಪೂರೈಸಿಕೊಂಡು ಪೇಟೆಮಾರ್ಗವಾಗಿ ಮಿಡ್ಲ್ ಗರಲ್ಸ್ ಸ್ಕೂಲ್ ಪರಾಂಬರಿಸಿ ವರ್ತಕರ ಛಪ್ಪರದಲ್ಲಿ ದಯಮಾಡಿಸಿ ಹಾರ ತುರಾಯಿ ಸ್ವೀಕರಿಸಿ ಅಲ್ಲಿಂದ ಮುಂದೆ ಕೋಆಪರೇಟಿವ್ ಸೊಸೈಟಿ ಛಪ್ಪರಕ್ಕೆ ಬಂದು ಸೊಸೈಟಿ ಆಡಳಿತವನ್ನು ವಿಚಾರಿಸಿ ಸಂತೋಷದಿಂದ ಆಡಳಿತದ ರಿಪೋರ್ಟು ತೆಗೆದುಕೊಂಡು ಪ್ರೆಸಿಡೆಂಟರವರಾದ ಮ|| ಭವಾನಿರಾಯರಿಂದಲೂ, ಮೆಂಬರ್ ಮ|| ಸೊರಬದ ರಾಮರಾಯರಿಂದಲೂ ಕೊಡಲ್ಪಟ್ಟ ಹಾರ ಫಲ ಮೊದಲಾದವನ್ನು ತೆಗೆದುಕೊಂಡು ಆರ್ಯ ಬಾಲಿಕಾ ಪಾಠಶಾಲೆಯನ್ನು ವಿಜಿಟ್ ಮಾಡಿ ತಾಲ್ಲೂಕು ಕಛೇರಿ ... ಸ್ಕೂಲ್ ಪರಾಂಬರಿಸಿ ಸಾಯಂಕಾಲ ಸವಳಂಗದ ಮಾರ್ಗವಾಗಿ ಹೊನ್ನಾಳಿಗೆ ವಾಪಸು ತೆರಳಿದರು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-31]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಗೃಹಕೃತ್ಯದ ನೋಟೀಸ್.

ಯಡತೊರೆ ತಾ. ಹನಸೋಗೆ ಹೋ. ಮಾಯಿಗೌಡನಹಳ್ಳಿಯಲ್ಲಿರುವ ಬಳ್ಳೂರು ಪುಟ್ಟಸೋಮಾರಾಧ್ಯರ ಮಗ ಗುರುದೇವಾರಾಧ್ಯನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನನ್ನ ಅಣ್ಣಂದಿರಾದ 1 ನೇ ಕುಮಾರಾರಾಧ್ಯ, 2 ನೇ ಶ್ರೀಕಂಠಾರಾಧ್ಯ, 3 ನೇ ಗುರುದೇವಾರಾಧ್ಯನಾದ ನಾನು ಸಹ ಏಕೋದರರು. ಕುಮಾರಾರಾಧ್ಯರು ಮೃತಪಟ್ಟು ಸುಮಾರು ಎರಡು ವರುಷವಾಯಿತು. ಇವರಿಗೆ ಹೆಂಡತಿಯೂ, ಸುಮಾರು ಎರಡು ವರುಷದ ಗಂಡುಮಗು ಇರುತ್ತಾರೆ. ಶ್ರೀಕಂಠಾರಾಧ್ಯರು ಮೃತಪಟ್ಟು ಸುಮಾರು ಹತ್ತು ವರುಷವಾಯಿತು. ಇವರಿಗೆ ಮಕ್ಕಳಿಲ್ಲ, ಹೆಂಡತಿ ಮಾತ್ರ ಇರುತ್ತಾಳೆ. ನಮ್ಮ ತಂದೆ ಮೃತಪಟ್ಟು ಎಂಟು ತಿಂಗಳಾಯಿತು. ಸದರಿಯವರಿಗೆಲ್ಲಾ ನಾನೇ ವಾರಸುದಾರನಾಗಿ ಉತ್ತರಕ್ರಿಯಾದಿಗಳನ್ನು ಮಾಡಿರುತ್ತೇನೆ. ಕುಮಾರಾರಾಧ್ಯರ ಹೆಂಡತಿ ವೀರಾಜಮ್ಮ ಉರುಫ್ ಪುಟ್ಟಮ್ಮಣ್ಣಿಯು ಸಣ್ಣಪ್ರಾಯದವಳಾಗಿ ಇತರರ ದುರ್ಬೋಧನೆಯಿಂದ ನಮ್ಮ ಸಮಷ್ಟಿಕುಟುಂಬದ ಸ್ಥಿರಸ್ವತ್ತುಗಳನ್ನು ಅಂದರೆ ಬಳ್ಳೂರು ಗ್ರಾಮದಲ್ಲಿರುವ ಸರ್ವೆ ನಂ. 10 ನೆ ಖುಸ್ಕಿ ಜಮೀನು ಒಂದು, ಡಿಟೋ ಗ್ರಾಮದಲ್ಲಿರುವ ಕೊಟ್ಟ ಮನೆ ಒಂದು, ಇದಕ್ಕೆ ಸೇರಿದ ಪಾಳುನಿವೇಶನ ಸಹ ನನಗೂ ತನ್ನ ಮೈನರ್ ಮಗುವಿಗೂ ನಷ್ಟ ಮಾಡಬೇಕೆಂದು ಪರಾಧೀನಮಾಡುವವಳಾಗಿರುತ್ತಾಳೆ. ಇವಳಿಂದ ಯಾರಾದರೂ ಕ್ರಯ ಭೋಗ್ಯ ಆಧಾರ ವಗೈರೆ ಮಾಡಿಕೊಂಡರೆ ಊರ್ಜಿತವಾಗತಕ್ಕದ್ದಲ್ಲ. ಮತ್ತು ನಮ್ಮಗಳ ನಷ್ಟಕ್ಕೆ ಗುರಿಯಾಗಬೇಕಾದೀತೆಂದು ಈ ಮೂಲಕ ತಿಳಿಸಿರುತ್ತೇನೆ. [68-2] ತಾ. 12-4-1915. ರುಜು ಗುರುದೇವಾರಾಧ್ಯ.

ನೋಟೀಸು.

ಇದರಿಂದ ಸುಸ್ತಜನಗಳಿಗೂ ತಿಳಿಯಪಡಿಸುವದೇನಂದರೆ—ಹೆಗ್ಗಡದೇವನಕೋಟೆ ತಾ|| ಅಂತರಸಂತೆ ಹೋ|| ಕಿತ್ತೂರಿನಲ್ಲಿದ್ದು ಮೃತಪಟ್ಟ ಸಿಕಂದರಸಾಬರ ಹೆಂಡತಿ ಖಾಸಿಂಬಿ ಆದ ನಾನು ಘೋಷಾ ಹೆಂಗಸು. ಆದ್ದರಿಂದ ನನಗೆ ಬರಬೇಕಾದ ಸಾಲಗಳನ್ನು ವಸೂಲ್ ಮಾಡುವುದಕ್ಕೂ, ಕೋರ್ಟಿನಲ್ಲಿ ವಿವಾದ ಮೊದಲಾದವುಗಳನ್ನು ನಡಿಸುವುದಕ್ಕೂ ವಗೈರೆಗಳಿಗೆ ಸಾಗರೆ ಗ್ರಾಮದಲ್ಲಿರುವ ಷೇಕ್ ಇಸ್ಮಾಯಿಲ್ ರಾವುತರು ಎಂಬವರಿಗೆ ಒಂದು ಜನರಲ್ ಪವರ್ ಆಫ್ ಅಟಾರ್ನಿ (General power of attorney) ಯನ್ನು ಬರೆದು ಕೊಟ್ಟು ದಸ್ತಾವೇಜು ವಗೈರೆಗಳನು ಆತನ ಸ್ವಾಧೀನಕ್ಕೆ ಕೊಟ್ಟು ಇದ್ದೆನು. ಈ ಷೇಕ್ ಇಸ್ಮಾಯಿಲ್ ರಾವುತರು ಈಚೆಗೆ ದುರಾಲೋಚನೆಯಿಂದ ನನಗೆ ಬಹಳ ಮೋಸಪಡಿಸಿ ನನ್ನ ಆಸ್ತಿಗಳನ್ನೆಲ್ಲಾ ಖಿಲಾಫ್‌ವಾಡಿ ಲೇವಾದೇವಿಗಳನ್ನು ಆರಕ್ಕೆ ಮೂರಾಗಿ ವಸೂಲ್ಮಾಡಿಕೊಂಡು ನನಗೆ ವಂಚನೆಮಾಡಿರುತ್ತಾರಾದ್ದರಿಂದ ಈ ಲಾಗಾಯಿತು ನಾನು ಷೇಕ್ ಇಸ್ಮಾಯಿಲ್ ರಾವುತರಿಗೆ ಕೊಟ್ಟಿರುವ ಜನರಲ್ ಪವರ್ ಆಫ್ ಅಟಾರ್ನಿಯನ್ನು ವಜಾಮಾಡಿ ಇರುತ್ತೇನೆ. ಮುಂದೆ ಈತನಿಗೆ ನನಗೋಸ್ಕರ ಯಾವ ಮೊಬಲಗನ್ನಾಗಲೀ, ದವಸ ವಗೈರೆಯನ್ನಾಗಲೀ ಯಾರೂ ಕೊಡಕೂಡದು. ಹಾಗೆ ಮೊಬಲಗು ವಗೈರೆ ಯಾವದನ್ನಾದರೂ ಆತನಿಗೆ ಬಾವತಿ ಮಾಡಿದರೆ ಅದನ್ನು ನಾನು ಅಂಗೀಕರಿಸತಕ್ಕವಳಲ್ಲವೆಂತ ಈ ಮೂಲಕ ಸರ್ವರಿಗೂ ತಿಳಿಸಿ ಇದೆ. [67-3] ಖಾಸಿಂಬಿ ರುಜು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-23] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ
ರೂ. 2-13-0 ಮಾತ್ರ.
5 ವರುಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ! ಈ ವಾಚ್ ಸಾಧಾರಣವಾಗಿ, ಬಹಳ ಕಾಲ ಬಾಳಿಕೆ ಬರುವ ವಾಚ್ ಎಂದೂ, ಸರಿಯಾದ ಕಾಲವನ್ನು ತೋರಿಸುವದೆಂದೂ ಸರ್ವರಿಗೂ ತಿಳಿದ ವಿಷಯವೇ ಸರಿ. ಇದರ 6 ಬಹುಮಾನಗಳ ಪಟ್ಟೀಲು.—(1) ಸುಂದರವಾದ ವಾಚ್ ಸರಪಣಿ. (2) ವಾಚ್ ಪಟ್ಟಿಗೆ. (3) ಕತ್ತಿನಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖಾದ, ನಾಜೂಕವಾದ ರೇಷ್ಮೆ ಧಾರ. (4) ದಿಕ್ಕುಗಳನ್ನು ತೋರಿಸುವ ಉತ್ತರ ಮುಖಿ. (5) ಇಪಾರ್ ಸೆಂಟ್ ಶೀಸೆ. (6) ಸುಂದರವಾದ ಮೋಕ್ ಉಂಗುರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

[20-11] ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ್ 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ
ಲೋವರ್ ಸೆಕಂಡರಿ ಕನ್ನಡ ಟೆ|| ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಂ. ಆರ್. ವೆಂಕಟಸುಬ್ಬಾಚಾರ್ಯ,
[31-10] ಸುಬೋಧ ಗ್ರಂಥಾಲಯ, ಮೈಸೂರು.

ಬೇಕಾಗಿದೆ.

ವಿದ್ಯಾವಂತಳು, ಚೆನ್ನಾಗಿರುವ 20 ವರುಷದೊಳಗಿನ ಬ್ರಾಹ್ಮಣ ವಿಧವೆಯು ಸರ್ಕಾರಿ ನೌಕರಿಯಲ್ಲಿರುವ 28 ವಯಸ್ಸಿನ ಬ್ರಾಹ್ಮಣ ಯೌವನಸ್ಥನನ್ನು ಮದುವೆ ಮಾಡಿಕೊಳ್ಳಬೇಕಾಗಿದೆ. ಪ್ರೀತಿಗಾಗಿ ವರಿಸಬೇಕೆಂಬ ವಿಧವೆಯರು "ರಿಫಾರಂ" ಕೇರಾಫ್ ಮ್ಯಾನೆಜರ್, "ವೃತ್ತಾಂತ ಪತ್ರಿಕೆ," ಮೈಸೂರು, ಈ ವಿಳಾಸಕ್ಕೆ ಬರೆಯಬಹುದು. [77-1]

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧನಿವಾರಿಣಿ	4 ,,

[262-20] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಡಾಕ್ಟರ್ ಗೋಪೀನಾಥ ಕೃಷ್ಣಾಜಿ ಕ್ಷತ್ರಿಯರು ಇವರ ಔಷಧಗಳನ್ನು ಪರೀಕ್ಷಿಸಿ ನೋಡಿ.

ಈ ಔಷಧಗಳಿಗೆ ನಾನಾ ಪ್ರದರ್ಶನಗಳಲ್ಲಿ 3 ಚಿನ್ನದ, 4 ಬೆಳ್ಳಿಯ, 1 ಕಂಚಿನ ಮೆಡಲುಗಳೂ, ಗೌರವವಾದ 8 ಘನ ಪತ್ರಿಕೆಗಳೂ ಲಭ್ಯವಾಗಿರುವವು.

ಜ್ವರನಾಶಿನಿ, ಸಾರ್ಸಪರಿಲ, ಕೆಮ್ಮಿನೌಷಧ, ಪ್ರತಿ ಒಂದೂ ಬಾಟ್ಲು 1 ಕ್ಕೆ ಕ್ರಯ ರೂ. 1; ಭೇದಿ ಮತ್ತು ಕಾಲರಾ ಔಷಧ, ಕೆಮ್ಮಿನ ಮಾತ್ರೆಗಳು, ಸಣ್ಣ ಬಾಟ್ಲು 1 ಕ್ಕೆ ಕ್ರಯ 12 ಆಣೆ; ಕರ್ಪೂರ, ಪೆಪ್ಪರ್‌ಮೆಂಟ್, ಪುದೀನಾ, ಇವುಗಳ ಎಸ್ಸೆನ್ಸ್ ಅಥವಾ ದ್ರಾವಕಗಳು ಮತ್ತು ಹುಳುಕಡ್ಡಿಲೇಪನ, ಸಣ್ಣ ಬಾಟ್ಲು 1 ಕ್ಕೆ 6 ಆಣೆ.

ವಿಳಾಸ—ಡಾ|| ಗೋ. ಕೃಷ್ಣಾಜಿ ಕ್ಷತ್ರಿಯಾ,
[76-1] ಗಿರ್ಗಾವ ಪೋಸ್ಟ್, ಬೊಂಬಾಯಿ.

ಊದಬತ್ತಿಗಳು

ಸುವಾಸನೆ ಸುಣ್ಣ ಶೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರಿ ಪಚ್ಚಕರ್ಪೂರ ಬಾದಾಮಿ ಯಿಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಬಾಲಗ್ರಹಧೂಪ ಟಿನ್ 1 ಕ್ಕೆ 8 ಆಣೆ.

ಮಕ್ಕಳಿಗೆ ಬರತಕ್ಕ ಬಾಲಗ್ರಹಕ್ಕೆ ಈ ಧೂಪವನ್ನು ಹಾಕಿದ ಕೂಡಲೇ ಬಾಲಗ್ರಹ ಚೇಷ್ಟೆಯು ಖಂಡಿತವಾಗಿಯೂ ಗುಣವಾಗುತ್ತೆ.

ಸುವಾಸನೆ ಸಾದು ಶೀಸೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ಮತವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನು ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯುಳ್ಳದಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-9] ಸುಗಂಧಕಾರಿ, ಮೈಸೂರು.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗೆದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಬೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಬೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ.

ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರಿಗೆ.

ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು. [63-3]

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ, ಕಾಶಿ.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Scheme are a novelty.

ಬೇಕಾಗಿದೆ.

ಆಫೀಸ್ ಅಸೋಸಿಯೇಟ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೂಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಜಮೀನ್ ಮತ್ತು ಮನೆಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟ್‌ಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳು ಸಹಾ ಬೇಕಾಗಿದೆ. ಇಷ್ಟಪಟ್ಟವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರಿಯಿರಿ.

[15-15]

M. L. NAGANNA,
Managing Director, Life & Marriage Assurance Buildings, Mysore

ತಾಲ್ಲೂಕು ವರ್ತಮಾನಗಳು.

ದಾವಣಗೆರೆ ತಾ|| ಮುದಹದದಿ.—ಈ ಗ್ರಾಮಕ್ಕೆ ದಾವಣಗೆರೆ ಸಬ್ ಡಿವಿಜನಲ್ ಆಫೀಸರ್ ಮ|| ಚೊಕ್ಕಣ್ಣನವರೂ, ಅಮಲ್ದಾರ್ ಮ|| ವೇದಾಂತ ... ತಾ. 10 ರಲ್ಲಿ ದಯಮಾಡಿಸಿ ಗ್ರಾಮವನ್ನು ಪರಾಂಬರಿಸಿ ಸ್ಕೂಲಿಗೆ ... ಸ್ಕೂಲ್ ಮಾಸ್ಟರ್ ಸಿದ್ಧಲಿಂಗಯ್ಯನವರೂ ಗ್ರಾಮ ಸಂಘದ ... ಸನ್ಮಾನದಿಂದ ಬರಮಾಡಿಕೊಂಡು, ಅವರಿಗಾಗಿ ಅಲಂಕರಿಸಿದ್ದ ... ಕೂಡಿಸಿದರು. ಪಟೇಲ್ ವೀರಪ್ಪನವರೂ, ಶಾಂತವೀರಯ್ಯನವರೂ ... ಗಳನ್ನು ಮಾಡಿದ ಮೇಲೆ ಸ್ಕೂಲ್ ಮಾಸ್ಟರ್ ಸಿದ್ಧಲಿಂಗಯ್ಯನವರು ... ಪತ್ರಿಕೆಯನ್ನು ಒಪ್ಪಿಸಿದರು. ಅಧಿಕಾರಿಗಳು ಸಭಿಕರನ್ನು ಸಂತೋಷ ... ಗ್ರಾಮದೇವಿಗೆ ಇನ್ನೂ ಕೆಲವು ಪತ್ರಿಕೆಗಳನ್ನು ತರಿಸಬೇಕೆಂದು ಅಪ್ಪಣೆ ... ಸ್ಕೂಲ್ ಬಾಲಕರನ್ನು ಇನ್‌ಸ್ಪೆಕ್ಟ್ ಮಾಡಿಕೊಂಡು ತೆರಳಿದರು.

ಮುಳಬಾಗಲು.—ಬೇಸಗೆಯ ಧಗೆ ಸಹಿಸಲು ಕಷ್ಟ. ಮಳೆಬರುವ ಸೂಚನೆ ಕಾಣುವದಿಲ್ಲ. ಜಲಾಶಯಗಳೆಲ್ಲಾ ಬತ್ತಿಹೋದವು. ಈ ಊರಿನಲ್ಲಿ ... ಕಷ್ಟ ಹೇಳತೀರದು. ಈ ನೀರಿನ ಕೊರತೆ ವಿಷಯದಲ್ಲಿ ಪ್ರಜೆಗಳ ಕಷ್ಟವನ್ನು ದಯಾಳುವಾದ ಸರ್ಕಾರದವರು ಕ್ಷಿಪ್ರದಲ್ಲಿ ಗಮನಕ್ಕೆ ತೆಗೆದುಕೊಳ್ಳುವರೆ ... ಇಲ್ಲಿನ ದನ ದನಗಳು ಜೀವಿಸುವದು ಬಹಳ ಕಷ್ಟವಾಗಿದೆ. ದಯಾಳು ಸರ್ಕಾರದವರು ಇದನ್ನು ಕ್ಷಿಪ್ರದಲ್ಲಿ ನಿವಾರಣೆಮಾಡುಶ್ತಾರೆಂತ ಹಾರೈಸುತ್ತೇವೆ.—ಮ|| ಬಿ ಮುದ್ದುಕೃಷ್ಣಪ್ಪನವರು ಇಲ್ಲಿಗೆ ಅಮಲ್ದಾರ್ರಾಗಿ ದಯಮಾಡಿಸಿದಾಗಾಯ್ತು ಅವರು ಸರಕೀಟು ಹೋಗದೆ ಹೆಡ್‌ಕ್ವಾರ್ಟರಿನಲ್ಲಿ ... ಟವರ್ನಲ್ಲಿ ಸಂಚರಿಸುವದರಿಂದ ಟವರ್ ಪಾಕೀಟು ಬಹಳ ಮಟ್ಟಿಗೆ ಚೆನ್ನಾಗಿ ... ಇನ್ನು ಕೊಂಚ ದಿನಗಳಲ್ಲಿಯೇ ಟವರ್ ಎಲ್ಲಾ ಪಾಕೀಜು ಆಗುತ್ತೆಂಬುದರಲ್ಲಿ ಸಂದೇಹವಿಲ್ಲ. ಇವರು ರಾತ್ರಿಯೊಳ್ಳು ಟವರ್ನಲ್ಲಿ ತಿರುಗುವದರಿಂದ ... ದೀಪಗಳುಸರಿಯಾಗಿ ಉರಿಯುವದಲ್ಲದೆ ಪೋಲೀಸ್ ಗಸ್ತು ಸರಿಯಾಗಿ ನಡೆಯುತ್ತ, ಕಂದರಿಗೂ ತುಂಟರಿಗೂ ಅವಕಾಶವಿಲ್ಲದೆ ರಾತ್ರಿ ಕಾಲದಲ್ಲಿ ಗ್ರಾಮದ ಜನರು ನಿರ್ಭೀತಿಯಾಗಿ ಇರುತ್ತಾರೆ. ಇವರು ಸರ್ಕಾರದ ಬಾಕಿ ವಸೂಲಿ ವಿಷಯದಲ್ಲಿಯೂ, ಆಗಾಗ್ಗೆ ಸಂತೆಯಲ್ಲಿ ಆಕ್ಸ್ಟ್ರೈಯಿ ಬಾಬು ತನಿಖೆಮಾಡುವದರಲ್ಲಿಯೂ ಸರಕಾರಕ್ಕೆ ಆಕ್ಸ್ಟ್ರೈಯಿ ಹಾಸಲು ಮೋಸಮಾಡಲು ಅವಕಾಶವಿಲ್ಲ. ಈ ತಾಲ್ಲೂಕು ಕುಂಫಣಿ ಸೀಮೆ ವೆಂಕಟಗಿರಿ ಕೋಟೆ ಪಲಮನೇರಿಗೆ ಸಮೀಪವಾಗಿ, ಕಡೇ ತಾಲ್ಲೂಕಾದ್ದರಿಂದಲೂ, ಈ ತಾಲ್ಲೂಕಿನಲ್ಲಿ ... ಜನರು ವಿಶೇಷವಾಗಿರುವದರಿಂದಲೂ ಈ ಅಮಲ್ದಾರ್ರು ಇಲ್ಲಿಗೆ ದಯಮಾಡಿಸಿದಾಗಾಯ್ತು ಖಂಡು ಜನಗಳ ಹಾವಳಿ ಕೊಂಚ ಕಮ್ಮಿಯಾಗಿರುತ್ತೆ. ... ಇವರಿಗೆ 2 ನೇ ಕ್ಲಾಸ್ ಮೇಜಿಸ್ಟ್ರೇಟು ಅಧಿಕಾರಕೊಟ್ಟಲ್ಲಿ ಖಂಡು ... ಆಗಿಹೋಗುತ್ತೆ. ಇವರು ಆಬಾಲವೃದ್ಧರಿಗೂ ನ್ಯಾಯವಾದ ಕಾರ್ಯಗಳಿಗೆ ಸ್ನೇಹಿತರಂತೆ ಇದ್ದು ಪಕ್ಷಪಾತವಿಲ್ಲದೆ ಕಾರ್ಯಗಳನ್ನು ನಡೆಸುತ್ತ ಬರುತ್ತಾರೆ. ಈ ಮುಳಬಾಗಲಿನ ಶ್ರೀಪಾದರಾಜಸ್ವಾಮಿಗಳವರು ... ಮಾಡಿದ ಮಹಾ ಸಮಾರಾಧನೆಯು ಬಹಳ ವಿಜೃಂಭಣೆಯಿಂದ ಮೂರು ದಿವಸಗಳು ನಡೆಯಿತು. ಬಗೆಬಗೆ ಭಕ್ಷ್ಯಗಳನ್ನು ಮಾಡಿಸಿ ಭೋಜನಮಾಡಿಸಿದ್ದಲ್ಲದೆ ಸ್ವಾಮಿಗಳು ಪರಸ್ಥಳದಿಂದ ಬಂದಿದ್ದ ವಿದ್ವಾಂಸರುಗಳಿಗೆ ಅವರವರ ಯೋಗ್ಯತಾನುಸಾರ ಶಾಲುಜೋಡಿಗಳು, ಕ್ಷೇತ್ರಗಳು, ನಗದು ಸಂಭಾವನೆಗಳನ್ನು ಕೊಟ್ಟು ಎಲ್ಲರನ್ನೂ ಸಂತೋಷಪಡಿಸಿದರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯ ದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬಿಟ್ಟುಬಿಟ್ಟಾಗಿಯೋ ಇಳಿಯುತ್ತದು; ಬಿಡದೆ ಬಾಯಾರಿಕೆ, ಬಳಲಿಕೆ; ಎದೆ ತಲ್ಲಣಿಸುವುದು. ತಲೆನೋವು; ಗಂಟಲು; ಕಣ್ಣುಮೊಬ್ಬು, ಕಾಲು ಊತು ... ; ಮೈನೋವು; ಕೀಲುನೋವು; ಮಂಪರು; ನಿಶ್ಶಕ್ತಿ; ಇವೇ ಮೊದಲಾದುವು. ಉಪೇಕ್ಷೆಮಾಡಿದರೆ ಮೂತ್ರಪ್ರಮೇಹ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-31]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೧—೮—೦. ಔಷಧ ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ತೋಂಪ್ಸ್, ಪಿ. ಓ. ಬಾಕ್ಸ್ ೨೦. ಬೆಂ ಗಳೂರು—ಇವರಲ್ಲಿ ದೊರೆಯುವುದು.

ಮಧುರೆ ಪುನ್ನಡಿ ಅಂಚಿನ ಸೀರೆ ಅಪ್ಪಲ್ ರಮಿಂ ರೂ. ೨-೦-೦. ಏಪ್ರಿಲ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಬಂಗಾರದ ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಥಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಏಪ್ರಿಲ್ ಮಹೋತ್ಸವದ ಕೈಗಡಿಯಾರ.



ಅರ್ಧ ಕ್ರಯ ರೂ. 1-14-0

ಇದೇ ಏಪ್ರಿಲ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಏಪ್ರಿಲ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಪಡುತ್ತೆ. [93-46]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರೆಗೆ ನಡಿಸಲ್ಪಡುತ್ತೆ.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ ಪಿ. ಮೂಲಕ ಕಳುಹಿಸಿಕೊಡಿ"—ಕೆ. ರಾಮಸ್ವಾಮಿ, ಪಲ್ಲಾಸ-ಕಾ-ಸಟುನ, 20-2-15.

ಅರ್ಧಬೆಲೆ ಮಾತ್ರ.

ಸಿರಾಪರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡ್ ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,

[260-21] ಪಿ. ಓ. ಬಾಕ್ಸ್ 330, ಬೊಂಬಾಯಿ.

ಬಹಿರಂಗವಾಯಿತು. ಶೀಘ್ರದಿಂದ ತರಿಸಿಕೊಳ್ಳಿ.

ಎಲ್ಲರೂ ಅಪೇಕ್ಷಿಸುತ್ತಿರುವ ಪಟವು ಇದೇ.

ಜರ್ಮನಿ ಯುದ್ಧ ಪಟವು.

ಯುರೋಪಿನಲ್ಲಿ ಈಗಲೂ ದೊಡ್ಡ ಯುದ್ಧವು ಜರುಗುತ್ತಲಿದೆ. ಅದರ ವಿಷಯವಾಗಿ ಸಮಾಚಾರಗಳು ಪೇಪರುಗಳು, ಪುಸ್ತಕಗಳ ಮೂಲಕದಿಂದ ತಿಳಿದು ಇರಬಹುದು. ಆದರೆ ಯುದ್ಧವು ಜರುಗುವ ಪಟವು ಮಾತ್ರ ಈ ವರಿವಿಗೂ ಯಾರೂ ನೋಡಿರಲಾರರು. ಈ ಪಟಗಳು ನಮ್ಮಲ್ಲಿ ಬಿಟ್ಟರೆ ಇತರ ಯಾವ ಕಡೆಯಲ್ಲೂ ದೊರೆಯಲಾರದು. ಕೆಲವು ಕಾಪಿಗಳೇ ಉಳಿದಿರುವದರಿಂದ ಶೀಘ್ರದಿಂದ ತರಿಸಿಕೊಳ್ಳುವವರಿಗೆ ದೊರೆಯುವದು. ಅನಂತರ ದೊರೆಯಲಾರದು.

ಇದು ಯುರೋಪಿನಲ್ಲಿ ಜರುಗುವ ಯುದ್ಧವನ್ನು ಕಣ್ಣಾರೆ ನೋಡುವಂತೆ ಕಾಣಿಸುವದು. ಜರ್ಮನಿಯವರು ಒಂದು ಭಾಗದಲ್ಲಿಯೂ, ಇತರ ಸೈನ್ಯಗಳು ಮತ್ತೊಂದು ಭಾಗದಲ್ಲಿಯೂ ನಿಂತು ಯುದ್ಧಮಾಡುವುದನ್ನೂ, ಫಿರಂಗಿ ಪ್ರಯೋಗ ಮಾಡುವದು, ಬಾಂಬನ್ನು ವ ಬೆಂಕಿ ಮಳೆ ಸುರಿಸುವ ಬಾಣವು ಆಕಾಶ ಮಾರ್ಗದಿಂದ ಪಟ್ಟಣಗಳ ಮೇಲೆಯೂ ಸೈನ್ಯಗಳ ಮೇಲೆಯೂ ಪ್ರಯೋಗಿಸುವದನ್ನೂ, ಅವುಗಳಿಂದ ಸೆಕೆಗಳಿದ್ದ ಪಟ್ಟಣಗಳು ಹಾಳಾಗುವದನ್ನೂ, ಹಡಗುಗಳ ಯುದ್ಧ ಜರುಗುವ ವಿಧವನ್ನೂ, ಆಕಾಶ ವಿಮಾನಗಳು ಪಟ್ಟಣಗಳ ಮೇಲೆ ತೋರಡಿಸುವದನ್ನೂ, ಅವುಗಳನ್ನು ನೆಲದ ಮೇಲಿದ್ದು ಫಿರಂಗಿಗಳ ಮೂಲಕದಿಂದ ಸುಡುವದನ್ನೂ, ಸೈನ್ಯಗಳಲ್ಲಿ ಹಾರಿಸುವ ಗುಂಡುಗಳ ಪೆಟ್ಟು ತಗಲಿ ಕುದುರೆಗಳ ಮೇಲಿಂದ ಕೆಳಗೆ ಬೀಳುವದನ್ನೂ, ಕುದುರೆಗಳು ವೇಗದಿಂದ ದಾಟಿ ಓಡುವದನ್ನೂ—ಇವನ್ನೆಲ್ಲಾ ತೋರಿಸುವದು. ಇವನ್ನು ನೋಡಿದಾಗ್ಗೆ ಶಿಲಾ ಸಮಾನವಾದ ಮನಸ್ಸು ಕೂಡಾ ಕರಗುವದು. ಇನ್ನೂ ಅನೇಕ ವಿಧಗಳ ಯುದ್ಧವು ಜರುಗುತ್ತಿದೆ. ಇವನ್ನು ನೋಡಲು ಮನಸ್ಸಿಗೆ ಸಂತೋಷಪಡಿಸಿ, ನೋಡುವಾಗ್ಗೆಲ್ಲಾ ಸದಾ ಆನಂದವಾಗಿಯೂ ಇರುವದು.

ಈ ಪಟಗಳು ಹೆಚ್ಚಾದ ದಪ್ಪ ಕಾಗದಗಳ ಮೇಲೆ 7 ವಿಧ ಬಣ್ಣಗಳನ್ನು ಕೊಟ್ಟು ಇರುವದು.

ಯುರೋಪಾ ಯುದ್ಧ ಪಟವು ಕ್ರಯ 1 ಕ್ಕೆ	ರೂ. 1-0-0
ವಿ. ಪಿ. ಟಪಾಲ್ ಖರ್ಚು	ಆಣೆ 0-3-0
ಎರಡು ತರಿಸುವವರಿಗೆ ಟಪಾಲ್ ಖರ್ಚು ಇನಾಂ.	
ನಾಲ್ಕು ತರಿಸುವವರಿಗೆ ಕ್ರಯ	ರೂ. 3-8-0
ಆರು ತರಿಸುವವರಿಗೆ ಕ್ರಯ	ರೂ. 5-0-0
ವಿ. ಪಿ. ಟಪಾಲ್ ಚಾರ್ಜು	ಆಣೆ 0-3-0
13 ತರಿಸುವವರಿಗೆ ಕ್ರಯ	ರೂ. 9-0-0
ವಿ. ಪಿ. ಟಪಾಲ್ ಚಾರ್ಜು	ಆಣೆ 0-4-0

ನಮ್ಮ ಕಂಪೆನಿಯ ದೊಡ್ಡ ಕ್ಯಾಟಲಾಗನ್ನು ಬೇಡುವವರು ವಿಳಾಸವನ್ನು ಕಳಿಸಿದರೆ ಇನಾಮಾಗಿ ಕಳುಹಿಸಲ್ಪಡುವದು.

ವಿಳಾಸ—ಸಿ. ಎ. ನಟೇಶನ್ ಬುಕ್ಕು ಡಿಪ್ಪೋ,

[65-3] ಮಿಂಟು ಪೋಸ್ಟು, ಮದರಾಸು.

ಅಮೂಲ್ಯವಾದ ರೋಮ ಸಂಹಾರಿಣಿ.

ಬೇಗಂಸಾಹಿ ಸಾಬೂನು.

ನೂತನ ವಸ್ತು ವಿಶೇಷಗಳಿಂದ ತಯಾರುಮಾಡಲ್ಪಟ್ಟಿರುವದು. ಯಾವ ಸ್ಥಳದಲ್ಲಿ ಬೇಕಾದರೆ ನಿರ್ಭಯವಾಗಿ ಸ್ವಲ್ಪ ನೀರಿನಿಂದ ಆ ಸ್ಥಳವನ್ನು ತೊಳೆದುಬಿಟ್ಟು ಈ ಸಾಬೂನನ್ನು ಸ್ವಲ್ಪ ನೀರಿನಲ್ಲಿ ಮರ್ದಿಸಿ ತೊಳೆದ ಸ್ಥಳದಲ್ಲಿ ಹಚ್ಚಿ ಐದು ನಿಮಿಷಗಳು ಕಳೆದ ಬಟ್ಟೆಯಿಂದ ಒರಸಿಬಿಟ್ಟರೆ ಆ ಸ್ಥಳವು ಪರಿಶುದ್ಧವಾಗಿ ಯಾವ ವಿಧವಾದ ನೋವು ಉರಿ ಮುಂತಾದವು ಇಲ್ಲದ ಸುಖವಾಗಿರುವದು. ಅನೇಕರು ಇದನ್ನು ಉಪಯೋಗ ಮಾಡುವರು ಬಿಡಬೇಡಿ.

ಮೂರು ಸಾಬೂನು ಪೆಟ್ಟಿಗೆ 1 ಕ್ಕೆ ರೂ 1-0-0. ಟಪಾಲು ಚಾರ್ಜು 0-4-0. ಮೂರು ಪೆಟ್ಟಿಗೆ ರೂ 2-10-0. ಟಪಾಲು ಚಾರ್ಜು 6 ಆಣೆ

ನಮ್ಮ ವಿಳಾಸ:—ಆರ್. ವಿ. ಪಂಡಿಟ್ ಅಂಡ್ ಕೋ,

[63-6] ನಂ. 6, ಬಂದರು ಬೀದಿ, ಮದರಾಸು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತತುಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 3-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬುಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತತುಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-23] 20, ಚೀನಾಬಜಾರು ರೋಡು, ಮದರಾಸು.

ಗಂಟ್ಲಿನ ಹುಣ್ಣು ಹಾನಿಕರವಾದದ್ದು.

ಸಾಧಾರಣವಾದ ಗಂಟ್ಲುನೋವು ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬದನ್ನು ಒಂದು ಅಥವ ಎರಡಾವರ್ತಿ ಉಪಯೋಗಿಸುವದರಿಂದ ಸುಲಭವಾಗಿ ವಾಸಿಯಾಗುತ್ತೆ. ಹಾಗಿಲ್ಲದೆ ನಿರ್ಲಕ್ಷ್ಯಮಾಡುವದಾದರೆ, ಅನೇಕ ವೇಳೆ ಎದೆ ನೆಗಡೆಯೂ ಕೆಮ್ಮೂ ಇತರ ಮರಣಕರವಾದ ದೊಪ್ಪರೋಗಗಳು ಪ್ರಾಪ್ತವಾಗುವವು. ಇಷ್ಟು ಸ್ವಲ್ಪ ಖರೀದಿಗೆ ಇಷ್ಟು ಸುಲಭವಾಗಿಯೂ ಖಂಡಿತವಾಗಿಯೂ ಚಿಕಿತ್ಸೆ ದೊರಕುವದರಿಂದ ಅಪ್ಪದೆ ಕಳಕೊಳ್ಳಬೇಡಿ.

ಸಾಧಾರಣ ಗಂಟ್ಲು ನೋವಿಗಾಗಲೀ ಅಥವಾ ಹಾನಿಕರವಾದ ಕೆಮ್ಮಿಗಾಗಲೀ ಲಿಟ್ಲ್ಸ್ ಓರಿಯೆಂಟಲ್ ಬಾಮಿನಷ್ಟು, ಖಂಡಿತವಾಗಿಯೂ ವೇಗವಾಗಿಯೂ ವಾಸಿಮಾಡುವಂಥಾದ್ದು ಮತ್ತೊಂದಿಲ್ಲ.

ಉರ್ಸೆಸ್ಟರ್‌ಷೈರಿಗೆ ಸೇರಿರುವ ಇವೇಷಾಂ ಪಟ್ಟಣದ ಮೊ|| ಎ. ಡ್ರಿನ್‌ಕೇಲ್‌ರವರು ಬರೆಯುವದೇನಂದರೆ:—ನನಗೆ ಕಠಿಣ ಎದೆನೆಗಡಿಯಾಗಿ ಅದರಿಂದ ಕೆಮ್ಮಿಗೆ ಕಾರಣವಾಯಿತು. ಇದರಿಂದ ಯಾವಾಗಲೂ ಗಂಟ್ಲಿನಲ್ಲಿ ಕಡತವೂ ಕಟ್ಟುಬಿಡಿಸುವ ಒಣಕೆಮ್ಮೂ ಆಗಿ ರಾತ್ರಿಯಲ್ಲಿ ನಿದ್ರೆ ಇರಲಿಲ್ಲ. ಹೇಳಿದ ಅನೇಕ ಔಷಧಿಗಳನ್ನು ಉಪಯೋಗಿಸಿ ಗುಣ ಕಾಣಲಿಲ್ಲ. ಕಡೆಗೆ ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬದರಿಂದ ಗುಣವಾಯಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1 ಕ್ಕೆ 1 ರೂ. ಮೇರಿಗೆ ಮಾರಲ್ಪಡುತ್ತೆ.

101-51

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟೆಯರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವದು, ಶುರಿ, ಉಬ್ಬಸ, ಕ್ಷಯ, ಗರ್ಭವಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲು 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235—24]

ಮಹಾ ಸೌಭಾಗ್ಯ ಕುಂಠಿ:— ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಶ್ವಾಸಕಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills.

BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈ ಮಲ್ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಟೋಟಾದಳ್ಳಾಳಿ, ಮೊಕ್ತಾ ಹುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೀಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [87-53]

ನಮ್ಮ ಟ್ರಾವೆಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಊರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರಿ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3—8—0 ಮಾತ್ರ. ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180—26] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ವಿಶೇಷ ಸೂಚನೆ

ವರ್ತಕರಿಗೆ ಒಳ್ಳೆಯ ಸಮಯ. ಮೋಸವಿಲ್ಲದೆ ಲಾಭಸಂಪಾದನೆ.

ಅಲ್ಪ ಲಾಭಕ್ಕಾಗಿ ಅನಾರೋಗ್ಯಕರವಾದ ಕೆಟ್ಟ ತುಪ್ಪವನ್ನು ಮಾರಿ ಜನಗಳ ಆರೋಗ್ಯವನ್ನು ಹಾಳುಮಾಡದೆ, ಶುದ್ಧವಾದ, ಶ್ರೇಷ್ಠವಾದ ಹತ್ತಿಯ ತುಪ್ಪವನ್ನು ಸತವಾಗಿ ಸರಿಯಾದ ಬೆಲೆಗೆ ಮಾರಿ ನಿಮ್ಮ ಗಿರಾಕಿಗಳಿಗೂ ನಿಮಗೂ ಪ್ರಯೋಜನವಾಗುವ ಕೆಲಸಮಾಡಿ ಲಾಭ ಸಂಪಾದನೆ ಮಾಡಿ.

ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ರಾಗಿದ್ದ ಡಾಕ್ಟರ್ ಅಚ್ಯುತರಾಯರವರೂ, ಪ್ರಜಾ ಆರೋಗ್ಯ ರಕ್ಷಣೆಕ್ಕಾಗಿರುವ ಡಾಕ್ಟರ್ ಶ್ರೀನಿವಾಸರಾಯರವರೂ ಮೊದಲಾದ ಅನೇಕ ಜನ ದೊಡ್ಡ ಮನುಷ್ಯರುಗಳಿಂದ ಸರ್ಟಿಫಿಕೇಟ್ಟುಗಳನ್ನು ಪಡೆದು ಶುದ್ಧವಾಗಿಯೂ ಆರೋಗ್ಯಕರವಾಗಿಯೂ ಪುಷ್ಟಿಕರವಾಗಿಯೂ ಇರುವ ನಮ್ಮ

ಹೊಸದಾದ ಹತ್ತಿಯ ತುಪ್ಪವನ್ನು

ಮೊದಲಿಗಿಂತ ಈಗ ಬಹಳ ಅಗ್ಗವಾಗಿ ಕೊಡುತ್ತಿರುವೆವು.

ಬೇಗ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚು ವಿಷಯವನ್ನು ತಿಳಿದು ಫಲವನ್ನು ಹೊಂದಬಹುದು.

ನಮ್ಮ ವಿಳಾಸ—ಜಿ. ಯಸ್. ಶ್ರೀಕಂಠಯ್ಯ ಅಂಡ್ ಕಂಪನಿ, ಏಜಂಟ್ಸ್, ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ,

[70-2] ದೊಡ್ಡಪೇಟೆ, ಮೈಸೂರು

ನಕ್ಕಲ್‌ಗಳಿಂದ ಮೋಸಹೋಗಬೇಡಿ, ಜೋಕೆ!

ಈಗಿನ ಕಾಲದಲ್ಲಿ ಸಿಲ್ಕುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೀಳಿ ಕೆರೋಸೀನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕೇಶ ಕೂದಲೆಣ್ಣೆ

ಯಲ್ಲಿ ಬೀಳಿ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[296-17] 177, ಬೈನಾಬಜಾರ್ ರೋಡ್, ಮದರಾಸ್

ಇನಾಂ ಸಾಮಾನುಗಳು 50 ಇನಾಂ ಸಾಮಾನುಗಳು 50

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಹೊಂದಿರುವ (ರಿಜಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳ್ ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತಿಯಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ

ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಮದುಳನ್ನು ಪರಿಪಾಡುವದು. ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿನ 6, ಮೈಭರಣೆ 1, ಅದ್ದ 1, ತಾಂಬೂಲಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜ ರಾಣಿ ಕಾರ ನೇಷನ್ ಪೆಟ್ಟಿಗೆ 1, ಲಿವಿಮರ್ ಫೋಟೋಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, 6, ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನು ಇಲ್ಲದಂತೆ ಟೈಂಪೀಸು 1 ನ್ನು ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ—ಧೈರ್ಯ ಲಕ್ಷ್ಮಿ ಅಂಡು ಕಂಪನಿ,

[58—4] ನಂ. 1, ಇರುಳಪ್ಪನ್ ಬೀದಿ, ಮದರಾಸು.

ನೂತನವಾದ ಪಾಕೆಟ್ಟು ಘಡಿಯಾರ.

ಅರ್ಧ ಕ್ರಯ ರೂ. 1—12—0.

ಟಪಾಲು ಛಾರ್ಜು 0-4-0 ಪ್ರತ್ಯೇಕ.

ಈ ಘಾರಿ ಮಜಬೂತಾದ ಘಡಿಯಾರವನ್ನು ಇರುವ ಜಾಗ ತಿಳಿ ಕೊಳಗಾಗಿ ತರಿಸಿಕೊಳ್ಳುವರಿಗೆ ಮೇಲ್ಕಂಡ ಅರ್ಧ ಬೆಲೆಗೆ ಕೊಡಲ್ಪಡುತ್ತೆ.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4—0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಛಾರ್ಜು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0 ಇದನ್ನು ಏಪ್ರಿಲ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ. [66-8

ನಮ್ಮ ವಿಳಾಸ:— ನ್ಯೂ ಮ್ಯಾರ್ಕ್ ವಾಚ್ ಕಂಪೆನಿ,

ನಂ. 6, ವೆಂಕಟಾಚಲಮೇಸ್ತ್ರಿ ವೀದಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

2—4—1915 ರಿಂದ 9-4—1915 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	9	0	0
ಬೆಂಗಳೂರು ಡಿಸ್ಟ್ರಿಕ್ಟು		22	21	0	0
ಮೈಸೂರು	,,	11	8	0	0
ಕೋಲಾರ್	,,	13	9	0	0
ಕೋಲಾರ್ ಚಿನ್ನದ ಗಣಿಗಳು		7	6	0	0
ತುಮಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	0	1	3	3
ಚಿತ್ರದುರ್ಗ	,,	0	0	0	0
ಕಡೂರ್	,,	2	0	0	0
ಶಿವಮೊಗ್ಗ	,,	5	2	0	0
	ಜುಮ್ಲಾ......	60	47	3	3

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರ ಉತ್ತರಾಯಣ ವಸಂತಋತು ಅಧಿಕ ವೈಶಾಖ ಶುದ್ಧ ನವಮಿ ಶುಕ್ರವಾರದಿಂದ ಶುದ್ಧ ಪೌರ್ಣಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಏಪ್ರಿಲ್.

ತಾ.	ವಾರ		ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಮೇಷಮಾಸ ತೇದಿ
23	ಶುಕ್ರ	*	ನವಮಿ	55-48	ಪುಷ್ಯ	3-1	11
24	ಶನಿ		ದಶಮಿ	54-54	ಆಶ್ಲೇಷ	3-49	12
25	ಭಾನು	;;	ಏಕಾದಶಿ	52-39	ಮಘಾ	4-22	13
26	ಸೋಮ	‡	ದ್ವಾದಶಿ	49-19	ಪುಬ್ಬ	3-46	14
27	ಮಂಗಳ	§	ತ್ರಯೋದಶಿ	45-13	ಉತ್ತರಾ	2-5	15
28	ಬುಧ	†	ಚತುರ್ದಶಿ	30-58	ಚಿತ್ತ	56-46	16
29	ಗುರು	::	ಪೌರ್ಣಮಿ	34-24	ಸ್ವಾತಿ	52-58	17

* ಸೌರ ಶ್ರೀರಾಮನವಮಿ, ಮಳೆ ನಕ್ಷತ್ರ—ಅಶ್ವಿನಿ 4 ನೇ ಪಾದ. ;; ಸ್ಮಾರ್ತ ಶ್ರೀವೈಷ್ಣವ ಏಕಾದಶಿ. ‡ ಪಾಳ್ಯರೀತ್ಯಾ ಆರ್ಯಮಾನರೀತ್ಯಾ ವೈಷ್ಣವ ಏಕಾದಶಿ, ಪರಿವಾಕರ § ಪ್ರದೋಷ, ಮಳೆ ನಕ್ಷತ್ರ—ಭರಣಿ 1 ನೇ ಪಾದ † ಬಿಳಿಗಿರಿರಂಗಸ್ವಾಮಿರಥ. :: ಸೌರ ಚಿತ್ರಾಪೂರ್ಣಿಮಾ.

Printed and Published by the Rev. H. Gulliford, Proprietor and Manager, Wesleyan Mission Press, Mysore, 22/4/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸ್ ೧೯೧೫ ನೇ ಇಸವಿ ಏಪ್ರಿಲ್ ತಾರೀಖು ೨೯ ನೇ ಗುರುವಾರ. ಸಂಚಿಕೆ ೪೮

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-41]

ಅತ್ಯುತ್ತಮ ಕಾದಂಬರಿಗಳು :—ಆಯ ! ವಾಲ್ಮೀಕಿ 12 ಆ ; ಅಶ್ವತ್ಥಮ್ಮ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ಕಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಮಾಲತಿ 2½ ಆ; ಸುಶೀಲೆ 6 ಆ; ನಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 1 ಆ; ಇತ್ಯಾದಿ. ನಮ್ಮ ವಿಳಾಸ :—ಹನುಮಾನ್ ಕಂಪೆನಿ, ಮೈಸೂರು.

ಡಾಕ್ಟರ್ ಗೋಪೀನಾಥ ಕೃಷ್ಣಾಜಿ ಕ್ಷತ್ರಿಯ ಇವರ ಔಷಧಗಳನ್ನು ಪರೀಕ್ಷಿಸಿ ನೋಡಿ.

ಈ ಔಷಧಗಳಿಗೆ ನಾನಾ ಪ್ರದರ್ಶನಗಳಲ್ಲಿ 3 ಚಿನ್ನದ, 4 ಬೆಳ್ಳಿಯ, 1 ಕಂಚಿನ ಮೆಡಲುಗಳೂ, ಗೌರವವಾದ 8 ಘನ ಪತ್ರಿಕೆಗಳೂ ಲಭ್ಯವಾಗಿರುವವು.

ಜ್ವರನಾಶಿನಿ, ಸಂಕರ್ಷಬಿಲ, ಕೆಮ್ಮಿನೌಷಧ, ಪ್ರತಿ ಒಂದೂ ಬಾಟ್ಲಿ 1 ಕ್ಕೆ ಕ್ರಯ ರೂ. 1; ಭೇದಿ ಮತ್ತು ಕಾಲರಾ ಔಷಧ, ಕೆಮ್ಮಿನ ಮಾತ್ರೆಗಳು, ಕಲಾ ಬಾಟ್ಲಿ 1 ಕ್ಕೆ ಕ್ರಯ 12 ಆಣೆ. ಕರ್ಪೂರ, ಪೆಪ್ಪರ್‌ಮೆಂಟ್, ಪುದೀನಾ, ಇವುಗಳ ಎಕ್ಸ್‌ಟ್ರಾಕ್ಟ್ ಅಥವಾ ದ್ರಾವಕಗಳು ಮತ್ತು ಹುಳುಕಡ್ಡಿಲೇಪನ, ಕಲಾ ಬಾಟ್ಲಿ 1 ಕ್ಕೆ 6 ಆಣೆ.

ವಿಳಾಸ—ಡಾ|| ಗೋ. ಕೃಷ್ಣಾಜಿ ಕ್ಷತ್ರಿಯಾ.

[76-2] ಗೀರ್ಗಾವ ಪೋಸ್ಟ್, ಬೊಂಬಾಯಿ.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ಪ್ರಕಾಶಪಡಿಸುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [239-13]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಜರ್ಮನ್ ಫಿರಂಗಿ ಚಿತ್ರ ಸಹಿತ ಅಚ್ಚಾಗಿರುವವು. ಕ್ರಯ 4 ಆಣೆ ; ವಿ ಪಿ ಮೂಲಕ 6 ಆಣೆ ಮಾತ್ರ

ಈ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯುವ ಪ್ರಶ್ನೋತ್ತರ ರೀತ್ಯಾ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2 ; ಹೀಗೆ ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನುಯಲ್ ಕರ್ತವ್ಯ 1 ರೂಪಾಯಿ.

[143-42] ವಿಳಾಸ :—ಬಿ. ನರಸಿಂಗರಾವ್,

ಎಡಿಟರ್, ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-12] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಹಾವು ಕಡಿದದ್ದಕ್ಕೆ ಔಷಧ.

ನಮ್ಮ ಆಂಟಿ ಕೋಬ್ರಾ ಔಷಧವು ಹಾವು ಮತ್ತು ನಾಯಿ ಕಡಿದರೆ ಖಂಡಿತ ವಾಸಿಮಾಡುತ್ತದೆ. ಪ್ಲೇಗ್ ಕ್ಯೂರ್ ಎಂಬ ಔಷಧವು ಪ್ಲೇಗ್ ಜ್ವರವನ್ನು ತಪ್ಪದೆ ಗುಣಪಡಿಸುತ್ತದೆ. ನಮ್ಮಲ್ಲಿ ಬೇರೆ ಔಷಧಿಗಳಿಲ್ಲ. ಇವೆರಡು ಔಷಧಗಳನ್ನು ಪರಿಷ್ಕಾರವಾಗಿ ಪರೀಕ್ಷಿಸಿದ್ದಾಗಿದೆ. ಡಾ|| ಬಿ. ಆರ್. ನಾಡ್‌ರವರು—"ಹಾವು ಕಡಿದದ್ದಕ್ಕೆ ಆಂಟಿ ಕೋಬ್ರಾ ಒಂದೇ ಔಷಧವೆಂದು ಬಲ್ಲೆ. ಅದು ಖಂಡಿತವಾಗಿ ನಾಯಿ ಮತ್ತು ಹಾವು ಕಡಿದವರನ್ನು ವಾಸಿಮಾಡುತ್ತೆ." ಹಾವಿನ ಔಷಧಕ್ಕೆ ರೂ. 1-4-0 ; ಪ್ಲೇಗ್ ಔಷಧಕ್ಕೆ ಸಣ್ಣ ಬಾಟ್ಲಿಗೆ ರೂ. 1-4-0 ಮತ್ತು ದೊಡ್ಡ ಬಾಟ್ಲಿಗೆ ರೂಪಾಯಿ 3.

[71-2] ನಮ್ಮ ವಿಳಾಸ—ಆಂಟಿ ಕೋಬ್ರಾ ಕಂಪನಿ ಬೌರಿಂಗ್‌ಪೇಟೆ.

ತುಂಕೂರು ಜಮೀನು ಕ್ರಯ

ತುಂಕೂರು ವೀರಸಾಗರ ಗ್ರಾಮಕ್ಕೆ ಸೇರಿದ ಕುರಿ ಪಾಳ್ಯದಲ್ಲಿ, ಲೇಟ್ ಮುನ್‌ಸಿಫ್ ಸಿ. ಸುಬ್ಬರಾಯರ ಬಾಬ್ತು ತರಿ ಜಮೀನು ಸುಮಾರು 20 ಎಕರೆ ಬಿಕರಿಗೆ ಬಂದಿದೆ. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಎಲ್ಲಾ ಸಂಗತಿಗಳನ್ನೂ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದು ಕೊಳ್ಳಬಹುದು. [74-2]

ವಿಳಾಸ:—ಸಿ. ಕೃಷ್ಣಮೂರ್ತಿರಾವ್,

ಪ್ಲೀಡರ್, ಶ್ರೀರಂಗಪಟ್ಟಣ.

ಪಟ್ಟೆಪೀತಾಂಬರ ಕಂಪನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಜೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಜೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ.

ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ.

ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು. [63-4]

ವಿಳಾಸ—ಮ್ಯಾನೇಜರು, ಪಟ್ಟೆಪೀತಾಂಬರ ಕಂಪೆನಿ, ಕಾಶಿ.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಚಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ಹಾಸಿನಾಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವ	0-8-0	ಸಂತಾಪಕ	0-4-0

[275-20] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,

MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದೂಚರಿತ್ರಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-16]

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹೆ!!!

ಗಟ್ಟಿ ಬಣ್ಣದ ಧಡೂತಾದ ಶೀರೆಗಳು.

ಸೋಲಾಪುರದ ತರಹೆವಾರಿ ಚೆಕ್ಕುಗಳು.

ಶುದ್ಧಿ ಮಾಡಿದ ಹರ್ಸ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [55-6]

ತ್ವರೆಮಾಡಿ! ಸಾವಕಾಶ ಮಾಡಿದರೆ ಸನಗು ಸಿಕ್ಕದು.

ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್. 159, ಕಿಲಾರಿ ರೋಡು (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರಿಗೆ ಕೊಡುತ್ತಾ ಬರುವದು.

ಕಂಪನಿಗೆ ದಾಖಲಾಗಿ ಪಾಲಸಿ ಪಡೆದು ಸಲೀಸು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಫೆ ಸಮೇತ ನಾಮಿನಿಗೆ ಕೊಡಲಾಗುತ್ತೆ 20 ವರುಷದವರಿಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಂಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿನಂತೆ ಕೊಡುತ್ತಾ ಬರುವದು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲೂ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಸ್ಸಾನಾಗಿ ಕೊಡಲಾಗುತ್ತೆ

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್‍ರು ಹಣವು ಹಂಚಿಕೆ ರೀತಿಯಿಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿಮೆ ಮೊಬಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಿಂಗ ಏಜಂಟ್ರು ಖುದ್ದು ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ [292-19]

ಒಳ್ಳೆ ಚಟುವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೊಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್‍ರಿಗೆ ಬರಿಯಿರಿ:—

ಮೆಸ್ಸರ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ

ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ಎಲ್ಲರಿಗೂ ಬೇಕಾದದ್ದು ! ಉತ್ತಮ ಕ್ರಮ. ಉತ್ತಮ ವಿಷಯ.

{ಸಚಿತ್ರ ಆಂಗ್ಲಭಾಷಾ ಪ್ರಕಾಶಿಕ}

ನಮ್ಮ ಕಪ್ಪಾಜೀಸಕ್ತಿ ಉತ್ತಮ ಸಂಪಾದನೆ

(ಸ್ವತಃ ಇಂಗ್ಲಿಷ್ ಕಲಿಯುವದಕ್ಕೆ ವಿದ್ವಾಂಸರಿಂದ ತಯಾರಾದ ಅತ್ಯಂತ ನೂತನ ಪುಸ್ತಕ)

ಮೂರು ಪುಸ್ತಕಗಳುಳ್ಳ ದೊಡ್ಡ ಪುಸ್ತಕ-ಕ್ರಯ ರೂ. 1-12-0 ಪೋಸ್ಟೇಜ್ ಮಾಫಿ.

1 ನೇ ಪುಸ್ತಕ (5 ಭಾಗಗಳೂ ಅಡಗಿವೆ.) ,, ,, 0-14-0 ಪೋಸ್ಟೇಜ್ ಮಾಫಿ.

ಉತ್ತಮ ಕ್ರಮಗಳನ್ನು ಅನುಸರಿಸಿ ಇಂಗ್ಲಿಷ್ ಭಾಷೆಯನ್ನು ಸ್ವತಃ ಕಲಿಯಲಿಷ್ಟವುಳ್ಳವರಿಗೂ, ಶಾಲಾ ವಿದ್ಯಾರ್ಥಿಗಳಿಗೂ, ನೂರಾರು ವಿಷಯಗಳಿರುವ ಇಷ್ಟು ಪ್ರಯೋಜನವುಳ್ಳ ಪುಸ್ತಕ ಇದುವರಿಗೆ ಇದ್ದೇ ಇರಲಿಲ್ಲ. ವಿದ್ಯಾಭ್ಯಾಸಿಗಳಾದ ಮಾತಾಪಿತೃಗಳಿಗೂ, ಉಪಾಧ್ಯಾಯರು, ಗುಮಾಸ್ತೆಯರು, ವರ್ತಕರು, ಬಾಲಕ ಬಾಲಿಕೆಯರು ಮೊದಲಾದ ಸರ್ವರಿಗೂ ಅವಶ್ಯಕವಾದದ್ದು. ಅನೇಕ ಹೊಸ ವಿಷಯಗಳು ಸೇರಿವೆ. ನೂರಾರು ವಿಷಯಗಳು ಇದೊಂದರಲ್ಲೇ ಅಡಗಿರುವುದರಿಂದ ಇತರ ಪುಸ್ತಕಗಳು ಬೇಕಾಗುವದಿಲ್ಲ. ಕಣ್ಣಿಂದ ನೋಡಿ ಪರೀಕ್ಷಿಸಿ ಸರ್ವರ ಅನುಕೂಲಕ್ಕಾಗಿ ಬೆಲೆ ಕಡಮೆ ಮಾಡಿದೆ. ಈಗಾಗಲೆ ನೂರಾರು ಪುಸ್ತಕಗಳು ಖರ್ಚಾಗಿಹೋದವು. ಆಲಸ್ಯ ಮಾಡಬೇಡಿ. ಹೆಚ್ಚು ಪ್ರತಿಗಳಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. [72-2]

ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳವಾದ ಡಿಸ್ಕೌಂಟು ದೊರೆಯುತ್ತೆ.

ನಮ್ಮ ವಿಳಾಸ—ಬಾಲಕೃಷ್ಣ ಬುಕ್ ಡಿಪೊ,

ಅವಿನ್ಯೂ ರೋಡ್, ಬೆಂಗಳೂರು ಸಿಟಿ.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-43] Bangalore City.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಪುರಸ್ಕಾರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-5-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳು ವಷ್ಟು ಮುತುವರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಕವಾದೊಂದು ವುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-14]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿನಾಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾಡುಗಳ, ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ದಿ ಉರ್ಲ್ ಮಾರ್ಟ್, ಮಂಗಳೂರು.

ಶಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೂಡಿಕ (ಛಾತು), ಮೈ ನಡುಕ, ಬಿಕ್ಕಳಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಪರಿಹರಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸುಸುಕೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-34]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಪರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟು, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಆಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಕಾರರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕೆಂಚಿ ಡಿಸ್ಟ್ರಿಕ್ಟು, ಅವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)



ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1ಕ್ಕೆ 4 ಆಣೆ	660 ಮಾತ್ರೆಗಳ ಪೆಟ್ಟಿಗೆ 1ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177, [25-13] ಬೇಣಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ತಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [52-7]



ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವದು.

ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವದು.

ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಕೇಪುಗೊಳಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ, ಬೆಳ್ಳಿ ಮತ್ತು ಬಂಗಾರ ಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚಿ ತಾರೀಖು 16 ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಕಲು ಸಹ ಪತ್ರಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ತರುವಾಯ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!



ಅಮೃತಾಂಜನ ರಿಜಿಸ್ಟರ್ಡ್

[64-4]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮುಕ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0 ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಬಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್, ... ಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಹಾರಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಜೆ 6, ಮೈಭರಣಿ 1, ತಾಂಬೂಲ ಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಫೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೇಸ್ಲೆಟ್ 1, ಮೊತ್ತ 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡ್ಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ ಪಿ. ಎ. ಎಸ್. ಪಾಣಿ ಕಂಪನಿ,

[73-1] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಬಹಿರಂಗವಾಯಿತು. ಶೀಘ್ರದಿಂದ ತರಿಸಿಕೊಳ್ಳಿ.

ಎಲ್ಲರೂ ಅಪೇಕ್ಷಿಸುತ್ತಿರುವ ಪಟವು ಇದೇ.

ಜರ್ಮನಿ ಯುದ್ಧ ಪಟವು.

ಯುರೋಪದಲ್ಲಿ ಈಗಲೂ ದೊಡ್ಡ ಯುದ್ಧವು ಜರುಗುತ್ತಲಿದೆ. ಅದರ ವಿಷಯವಾಗಿ ಸಮಾಚಾರಗಳು ಪೇಪರುಗಳು, ಪುಸ್ತಕಗಳ ಮೂಲಕದಿಂದ ತಿಳಿದು ಇರಬಹುದು. ಆದರೆ ಯುದ್ಧವು ಜರುಗುವ ಪಟವು ಮಾತ್ರ ಈ ವರೆವಿಗೂ ಯಾರೂ ನೋಡಿರಲಾರರು. ಈ ಪಟಗಳು ನಮ್ಮಲ್ಲಿ ಬಿಟ್ಟರೆ ಇತರ ಯಾವ ಕಡೆಯಲ್ಲೂ ದೊರೆಯಲಾರದು. ಕೆಲವು ಕಾಪಿಗಳೇ ಉಳಿದಿರುವದರಿಂದ ಶೀಘ್ರದಿಂದ ತರಿಸಿಕೊಳ್ಳುವವರಿಗೆ ದೊರೆಯುವದು. ಅನಂತರ ದೊರೆಯಲಾರದು.

ಇದು ಯುರೋಪಿನಲ್ಲಿ ಜರುಗುವ ಯುದ್ಧವನ್ನು ರೂಬರೂಬಾಗಿ ನೋಡುವಂತೆ ಕಾಣಿಸುವದು. ಜರ್ಮನಿಯವರು ಒಂದು ಭಾಗದಲ್ಲಿಯೂ, ಇತರ ಸೈನ್ಯಗಳು ಮತ್ತೊಂದು ಭಾಗದಲ್ಲಿಯೂ ನಿಂತು ಯುದ್ಧಮಾಡುವುದನ್ನೂ, ಫಿರಂಗಿ ಪ್ರಯೋಗ ಮಾಡುವದು, ಬಾಂಬನ್ನು ವ ಬೆಂಕಿ ಮಳೆ ಸುರಿಸುವ ಬಾಣವು ಆಕಾಶ ಮಾರ್ಗದಿಂದ ಪಟ್ಟಣಗಳ ಮೇಲೆಯೂ ಸೈನ್ಯಗಳ ಮೇಲೆಯೂ ಪ್ರಯೋಗಿಸುವದನ್ನೂ, ಅವುಗಳಿಂದ ಸೆಕೆಗಳೆದ್ದು ಪಟ್ಟಣಗಳು ಹಾಳಾಗುವದನ್ನೂ, ಹಡಗುಗಳ ಯುದ್ಧ ಜರುಗುವ ವಿಧವನ್ನೂ, ಆಕಾಶ ವಿಮಾನಗಳು ಪಟ್ಟಣಗಳ ಮೇಲೆ ಹೊರಡಿಸುವದನ್ನೂ, ಅವುಗಳನ್ನು ನೆಲದ ಮೇಲಿದ್ದು ಫಿರಂಗಿಗಳ ಮೂಲಕದಿಂದ ಸುಡುವದನ್ನೂ, ಸೈನ್ಯಗಳಲ್ಲಿ ಹಾರಿಸುವ ಗುಂಡುಗಳ ಪೆಟ್ಟು ತಗಲಿ ಕುದುರೆಗಳ ಮೇಲಿಂದ ಕೆಳಗೆ ಬೀಳುವದನ್ನೂ, ಕುದುರೆಗಳು ವೇಗದಿಂದ ದಾಟಿ ಓಡುವದನ್ನೂ—ಇವನ್ನೆಲ್ಲಾ ತೋರಿಸುವದು. ಇವನ್ನು ನೋಡಿದಾಗ್ಗೆ ಶಿಲಾ ಸದೃಶವಾದ ಮನಸ್ಸು ಸಹಾ ಕರಗುವದು. ಇನ್ನೂ ಅನೇಕ ವಿಧಗಳ ಯುದ್ಧವು ಜರುಗುತ್ತಿದೆ. ಇವನ್ನೂ ನೋಡಲು ಮನಸ್ಸಿಗೆ ಸಂತೋಷಪಡಿಸಿ, ನೋಡುವಾಗ್ಗೆಲ್ಲಾ ಸದಾ ಆನಂದವಾಗಿಯೂ ಇರುವದು.

ಈ ಪಟಗಳು ಹೆಚ್ಚಾದ ದಪ್ಪ ಕಾಗದಗಳ ಮೇಲೆ 7 ವಿಧ ಬಣ್ಣಗಳನ್ನು ಕೊಟ್ಟು ಇರುವದು.

ಯುರೋಪಾ ಯುದ್ಧ ಪಟವು ಕ್ರಯ 1 ಕ್ಕೆ	ರೂ 1-0-0
ವಿ. ಪಿ. ಟಪಾಲ್ ಖರ್ಚು	ಆಣೆ 0-3-0
ಎರಡು ತರಿಸುವವರಿಗೆ ಟಪಾಲ್ ಖರ್ಚು ಇನಾಂ.	
ನಾಲ್ಕು ತರಿಸುವವರಿಗೆ ಕ್ರಯ	ರೂ 3-8-0
ಆರು ತರಿಸುವವರಿಗೆ ಕ್ರಯ	ರೂ. 5-0-0
ವಿ. ಪಿ. ಟಪಾಲ್ ಚಾರ್ಜು	ಆಣೆ 0-3-0
12 ತರಿಸುವವರಿಗೆ ಕ್ರಯ	ರೂ. 9-0-0
ವಿ. ಪಿ. ಟಪಾಲ್ ಚಾರ್ಜು	ಆಣೆ 0-4-0

ನಮ್ಮ ಕಂಪೆನಿಯ ದೊಡ್ಡ ಕ್ಯಾಟಲಾಗನ್ನು ಬೇಡುವವರು ವಿಳಾಸವನ್ನು ತಿಳಿಸಿದರೆ ಇನಾಮಾಗಿ ಕಳುಹಿಸಲ್ಪಡುವದು.

ವಿಳಾಸ:—ಸಿ. ಎ. ನಟೇಶನ್ ಬುಕ್ಕು ಡಿಪೋ,

[65-4] ಮಿಂಟು ಪೋಸ್ಟು, ಮದರಾಸು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಪಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇವನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು.

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0	...	ವಿ. ಪಿ. ಚಾರ್ಜು 0 3 0
ಡಜನ್ 1 ಕ್ಕೆ ಕ್ರಯ ರೂ. 2 8 0	...	ವಿ. ಪಿ. ಚಾರ್ಜು 0 6 0

[10-16]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಏಪ್ರಿಲ್ ತಾ ೨೯ ನೇ ಗುರುವಾರ.

ಮೈಸೂರು ಸಿವಿಲ್ ಕೋರ್ಟುಗಳು.

ಮೈಸೂರು ಸೀಮೆಯ ಸಿವಿಲ್ ಕೋರ್ಟುಗಳ ಕಳೆದ ಸಾಲಿನ ರಿಪೋರ್ಟು ಸಂಕ್ಷೇಪವಾದದ್ದಾಗಿದೆ; ಆದರೆ ಅದು ತೃಪ್ತಿಕರವಾದದ್ದೆಂದು ನಮಗೆ ತೋರುವುದಿಲ್ಲ. ಮಿ|| ಜಸ್ಟಿಸ್ ಪಿ. ಎಸ್. ಕೃಷ್ಣರಾವ್, ರಾವ್ ಬಹದೂರ್ ಯವರು ಕಾಲವಾದ ತರುವಾಯ ಚೀಫ್ ಕೋರ್ಟಿನ ಜಡ್ಜಿಗಳು ಕಡಮೆಯಾಗಿ ಮೊದಲನೇ ಕೌನ್ಸಲರ್ ಮ|| ಎಚ್. ವಿ. ನಂಜುಂಡಯ್ಯನವರು ಕೌನ್ಸಲರ ಕೆಲಸಮಾಡುವುದರ ಜೊತೆಗೆ ಚೀಫ್ ಜಡ್ಜರಾಗಿಯೂ ಕುಳಿತು ಮೊಕದ್ದಮೆಗಳನ್ನು ಫೈಸಲ್ ಮಾಡುತ್ತಾ ಬರಬೇಕಾಯಿತು. ಚೀಫ್ ಕೋರ್ಟಿನ ಜಡ್ಜಿಗಳು ವರುಷಕ್ಕೆಲ್ಲಾ 117 ಸಲ ಮಾತ್ರ ಕುಳಿತು ಕೋರ್ಟು ಮಾಡಿದರು. ಇದು ತೃಪ್ತಿಕರವಾದದ್ದೆಂದು ನಾವು ಒಪ್ಪಲಾರೆವು. ಚೀಫ್ ಕೋರ್ಟಿನಲ್ಲಿ ಇತ್ಯರ್ಥವಾಗದೆ ಮೊಕದ್ದಮೆಗಳು ಹೆಚ್ಚಾಗಿ ಉಳಿದುಕೊಂಡವು; ಮತ್ತು ಮೊಕದ್ದಮೆಗಳ ಫೈಸಲಾತಿಗೆ ಅಪರಿಮಿತವಾದ ಕಾಲ ಹಿಡಿಯಿತು. ಇವೆರಡು ಭಾಗಗಳನ್ನೂ ಕುರಿತು ಪರ್ಯಾಲೋಚನೆ ಮಾಡಿದರೆ ನಮ್ಮ ಚೀಫ್ ಕೋರ್ಟಿನ ನಡವಳಿಕೆಯಲ್ಲಿ ಏನೋ ತಪ್ಪಿರುವಂತೆ ಕಾಣುವುದು. ಪ್ರಥಮ ಅಪೀಲುಗಳು 104 ಫೈಸಲಾಗುವುದರಲ್ಲಿ ಪ್ರತಿ ಅಪೀಲಿಗೂ 218 ದಿನಗಳು ಹಿಡಿದಿರುತ್ತವೆ; ಮತ್ತು 98 ಮೊಕದ್ದಮೆಗಳು ಇತ್ಯರ್ಥವಾಗಲು ಪ್ರತಿ ಒಂದಕ್ಕೂ ಜಡ್ಜಿಗಳು 653 ದಿನಗಳನ್ನು ವಿನಿಯೋಗಿಸಬೇಕಾಯಿತು. ಎರಡನೇ ಅಪೀಲುಗಳ ಪಾಡೇನೆಂದು ನೋಡಿದರೆ 118 ಮೊಕದ್ದಮೆಗಳ ಫೈಸಲಾತಿಗೆ ತಲಾ 145 ದಿನಗಳಂತೆಯೂ, 68 ಮೊಕದ್ದಮೆಗಳ ಫೈಸಲಾತಿಗೆ ತಲಾ 365 ದಿನಗಳಂತೆಯೂ ಜಡ್ಜಿಗಳು ವಿನಿಯೋಗಿಸಿರುತ್ತಾರೆ. ಕಕ್ಷಿಗಾರರು ತಮ್ಮ ಮೊಕದ್ದಮೆಗಳ ಪರಿಣಾಮವನ್ನು ತಿಳಿಯುವುದಕ್ಕೆ ಹೀಗೆ ಎರಡು ವರುಷ ಕಾಲ ಕಾಯಬೇಕಾದ ಪಕ್ಷದಲ್ಲಿ ಅವರು ಗೊಣಗುಟ್ಟುವುದೂ ಆಕ್ಷೇಪಣೆ ಮಾಡುವುದೂ ನ್ಯಾಯವೆಂದು ಹೇಳಬೇಕಾಗುವುದು. ಆದಕಾರಣ ಮೊಕದ್ದಮೆಗಳು ಬೇಗ ಬೇಗನೆ ಇತ್ಯರ್ಥವಾಗುವುದಕ್ಕೆ ಸರ್ಕಾರದವರು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಬೇಕಾಗಿರುತ್ತದೆ.

ಇತರ ಸಿವಿಲ್ ಕೋರ್ಟುಗಳಲ್ಲಿ ವ್ಯಾಜ್ಯಗಳ ಸಂಖ್ಯೆಯು ಬಹಳವಾಗಿ ಹೆಚ್ಚಿರುತ್ತದೆ; ಇದು ನಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಹಿತಕರವಾದದ್ದಲ್ಲ. ನಮ್ಮ ಸೀಮೆಯ ಪ್ರಜೆಗಳಲ್ಲಿ ಕೋರ್ಟಿಗೆ ವ್ಯಾಜ್ಯಗಳನ್ನು ತೆಗೆದುಕೊಂಡು ಹೋಗಬೇಕೆಂಬ ದುರಿಚ್ಛೆಯು ಅಪರಿಮಿತವಾಗಿರುತ್ತದೆ. ಇದರಿಂದ ಅವರು ತಮ್ಮ ಸಹಜವಾದ ಕಸುಬು ವ್ಯಾಪಾರಾದಿ ಕಾರ್ಯಗಳನ್ನು ನಡಿಸಲು ಅವಕಾಶವೇ ದೊರಕುವುದಿಲ್ಲ. ಅವರ ಕಾಲವೆಲ್ಲಾ ಕೋರ್ಟಿಗೂ, ಲಾಯರ ಮನೆಗೂ ಅಲೆಯುವುದರಲ್ಲೇ ಪರ್ಯವಸಾನ ಹೊಂದುತ್ತವೆ. ಅನೇಕ ಮೊಕದ್ದಮೆಗಳು ವಿಚಾರಣೆಗೆ ಇಲ್ಲದೇನೇ ಕೊನೆಗಂಡವೆಂದೂ, ಕಕ್ಷಿಗಾರರು ರಾಜಿಯಾಗಿ ಮೊಕದ್ದಮೆಗಳನ್ನು ವಾಪಸು ತೆಗೆದುಕೊಂಡರೆಂದೂ ಈ ರಿಪೋರ್ಟಿನಲ್ಲಿ ಓದಿ ಸಂತೋಷಪಡುತ್ತೇವೆ. ಈ ಕೋರ್ಟುಗಳಲ್ಲಿಯೂ ಕೂಡ ಮೊಕದ್ದಮೆಗಳು ಫೈಸಲಾಗುವುದು ಬಹಳ ನಿಧಾನವೆಂದು ನಮಗೆ ತೋರುವುದು. ಪ್ರತಿವಾದಿಯು ವ್ಯಾಜ್ಯಕ್ಕೆ ಒಂದು ಸಿಲ್ಲದೆ ಇರುವಂಥಾ ಮೊಕದ್ದಮೆಗಳೂ ಕೂಡ ಫೈಸಲಾಗುವುದಕ್ಕೆ 32 ದಿನಗಳು ಹಿಡಿದಿರುತ್ತವೆ. ಪ್ರತಿವಾದಿಯು ಎದುರು ವಾದಿಸಿದ ಸ್ಮಾಲ್ ಕಾಸ್ ಮೊಕದ್ದಮೆಗಳನ್ನು ಜಡ್ಜಿಗಳು ಮೊಕದ್ದಮೆ ಒಂದಕ್ಕೆ 103 ದಿನಗಳಂತೆ ವಿನಿಯೋಗಿಸಿ ವ್ಯವಸ್ಥೆ ಮಾಡಿದಾರೆ. ಸಾಮಾನ್ಯವಾದ ಮೊಕದ್ದಮೆಗಳಿಗಾದರೋ ತಲಾ 227 ದಿನಗಳಂತೆ ಹಿಡಿದಿರುವವು. ವಿಶೇಷ ವಹಿಸಿದ ಮೊಕದ್ದಮೆಗಳನ್ನು ಫೈಸಲ್ ಮಾಡುವುದರಲ್ಲಿ ಜಡ್ಜಿಗಳು ಕೆಲವಕ್ಕೆ 744 ದಿನಗಳನ್ನೂ, ಇನ್ನು ಕೆಲವಕ್ಕೆ 908 ದಿನಗಳನ್ನೂ ತೆಗೆದುಕೊಂಡರು. ಇದು ದೊಡ್ಡ ಕೇಡೆಂದು ನಮಗೆ ತೋರುತ್ತದೆ. ಇದನ್ನು ದರ್ಪಪಟ್ಟು ತಿದ್ದಿ ಕ್ರಮಪಡಿಸಬೇಕಾದದ್ದು ನಮ್ಮ ಗವರ್ನ್ಮೆಂಟಿನವರ ಕರ್ತವ್ಯವಾಗಿದೆ. ಆದಕಾರಣ ಸರ್ಕಾರದವರು ತಕ್ಕ ಪರಿಹಾರೋಪಾಯಗಳನ್ನು ಕಂಡುಹಿಡಿದು ಬೇಗನೆ ರೂಢಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ. ಇಷ್ಟು ನಾವಕಾಶವಾಗುವುದಕ್ಕೆ ಕೆಲವು ವೇಳೆ ಲಾಯರುಗಳೂ, ಕೆಲವು ವೇಳೆ ಕಕ್ಷಿಗಾರರೂ, ಮತ್ತೆ ಕೆಲವು ವೇಳೆ ಜಡ್ಜಿಗಳೂ ಕಾರಣರಾಗಬಹುದು. ಏನೇ ಕಾರಣವಿದ್ದಾಗ್ಯೂ ಮೊಕದ್ದಮೆಗಳು ಇಷ್ಟು ನಾವಕಾಶವಾಗಿ ಇತ್ಯರ್ಥವಾಗುವುದನ್ನು ನಿಲ್ಲಿಸಬೇಕಾದದ್ದೇ ಅವಶ್ಯ. ಅನೇಕ ಸಂದರ್ಭಗಳಲ್ಲಿ ಹಣ ಹೋದರೂ ಚಿಂತೆಯಿಲ್ಲ: ಕೋರ್ಟಿಗೆ ಹೋಗಿ ಸಿಕ್ಕಿಕೊಂಡು ಪರದಾಡುವುದೂ, ಲಾಯರುಗಳ ಮನೆಗೆ ಅಲೆಯುವುದೂ, ಇವರಿಗೂ ಕೋರ್ಟಿಗೂ ದುಡ್ಡು ಸುರಿಯುವುದೂ, ನಿತ್ಯಗಟ್ಟಲೆಯ ಕೆಲಸ ಕಾರ್ಯಗಳನ್ನು ಹಾಳುಮಾಡಿಕೊಂಡು ಕೋರ್ಟು ಬಾಗಿಲಲ್ಲಿ ಕಾದಿರುವುದೂ, ಇವೆಲ್ಲಾ ತಪ್ಪಿದರೆ ಸಾಕಪ್ಪಾ ಎಂದು ಹೇಳುವ ಹಾಗಾಗುತ್ತದೆ.

ಇಷ್ಟೆಲ್ಲಾ ಆಗಿ ಕಡೆಯಲ್ಲಿ ನ್ಯಾಯವು ದೊರಕಬಹುದು. ಆದರೆ ಅದಕ್ಕಾಗಿ ವಿನಿಯೋಗಿಸಿದ ತನು ಮನ ಧನಗಳು ಕಾಲವಿಳಂಬದ ದೆಸೆಯಿಂದ ಅದರ ಸ್ವಾರಸ್ಯವನ್ನೇ ವ್ಯರ್ಥವಾಗಿ ಮಾಡಿಬಿಡುವವು. ಇಂಥಾದ್ದರಲ್ಲಿ ನ್ಯಾಯ ದೊರಕದೆ ಹೋದರೆ ಕಕ್ಷಿಗಾರರ ಪಾಡನ್ನು ಊಹಿಸಲಾಗದು. ಅವರು ನಿರಾಶರಾಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಆದಕಾರಣ ನಮ್ಮ ಗವರ್ನ್ಮೆಂಟಿನವರು ಈ ಸೀಮೆಯ ಸಿವಿಲ್ ಕೋರ್ಟುಗಳ ವಿದ್ಯಮಾನಗಳನ್ನು ಮುತುವರ್ಜಿಯಿಂದ ತನಿಖೆಮಾಡಿ, ಕಕ್ಷಿಗಾರರ ಮೊಕದ್ದಮೆಗಳು ಇನ್ನೂ ಬೇಗ ಬೇಗನೆ ಇತ್ಯರ್ಥವಾಗುವುದಕ್ಕೆ ತಕ್ಕ ಏರ್ಪಾಡುಗಳನ್ನು ರೂಢಿಸಬೇಕೆಂದು ಒತ್ತಿ ಹೇಳುತ್ತೇವೆ.

ರಷ್ಯಾದಲ್ಲಿ ನಡೆದ ದೊಡ್ಡ ತಿದ್ದುಪಾಟು.

ಕಳೆದ ವಾರದ ವೃತ್ತಾಂತ ಪತ್ರಿಕೆಯಲ್ಲಿ—ಮೈಸೂರು ಸಂಸ್ಥಾನದೊಳಗೆ ಪ್ರಜೆಗಳು ಅಪಾರವಾದಷ್ಟು ಮದ್ಯಗಳನ್ನು ಉಪಯೋಗಿಸುತ್ತಾರೆ. ಇದರಿಂದ ಸರಕಾರಕ್ಕೆ ವಿಶೇಷ ದ್ರವ್ಯ ಹುಟ್ಟುವಳಿಯಾಗಿದೆ. ಎಕ್ಸೈಜ್ ಬಾಬಿನಲ್ಲಿ ಹಿಂದಣ ಸಾಲಿನ ಹುಟ್ಟುವಳಿಗಿಂತ ಈ ಸಾಲಿನಲ್ಲಿ 4,59,782 ರೂಪಾಯಿಗಳು ಹೆಚ್ಚು ಹುಟ್ಟುವಳಿಯಾಯಿತು. ಹಿಂದಣ ಸಾಲಿಗಿಂತ ಈ ಸಾಲಿನಲ್ಲಿ 37,281 ಗ್ಯಾಲನ್ ಸಾರಾಯಿ ಹೆಚ್ಚಾಗಿ ಬಿಕರಿಯಾಗಿ ಜನಗಳು ಕುಡಿದಿರುತ್ತಾರೆ. ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಸೇಂದಿ ಇಳಿಸಿದ ಮರಗಳು 20,730 ಹೆಚ್ಚಾದವು. ನಮ್ಮ ಸೀಮೆಯ ಪ್ರಜೆಗಳು ಬಹುತರ 80 ಲಕ್ಷ ರೂಪಾಯಿ ತನಕ ಮದ್ಯಪಾನಕ್ಕೆ ಖರ್ಚುಮಾಡುವರು. ಮತ್ತು ಸರಕಾರದವರು ಗೌರೀಬಿದನೂರು ತಾಲ್ಲೂಕಿನಲ್ಲಿ ಗಾಂಜಾ ಸೊಪ್ಪನ್ನು ಬೆಳೆಯುವದಕ್ಕೆ ಸಹಾಯಮಾಡಿ ಪ್ರೋತ್ಸಾಹಪಡಿಸುತ್ತಾರೆಂದು ನೋಡಿ ದುಃಖಪಡುವೆವು. ಆಹಾರ ಧಾನ್ಯಗಳನ್ನು ಬೆಳೆಯುವಂಥಾ ಒಳ್ಳೆಯದಾದ 100 ಎಕರೆ ಜಮೀನಿನಲ್ಲಿ ಈ ದುಷ್ಟ ಪದಾರ್ಥವನ್ನು ಬೆಳೆಮಾಡುತ್ತಾರೆಂದು ವಿಷಾದಿಸಿ ಬರೆದಿದ್ದಾರೆ. ಮತ್ತು ಮೇಲೆ ಉದಾಹರಿಸಿರುವ ಲೆಕ್ಕಗಳು ಸರಕಾರದವರು ಪ್ರಕಟಿಸಿರುವ ಕಳೆದ ವರುಷದ ರಿಪೋರ್ಟಿನಿಂದ ತಿಳಿದುಬಂದಿರುತ್ತದೆ.

ಇವನ್ನು ಓದಿ ಆಲೋಚಿಸುವಾಗ ಮನಸ್ಸಿಗೆ ಬಹು ವ್ಯಾಕುಲವುಂಟಾಗುತ್ತದೆ. ಯಾವದಾದರೊಂದು ಸೀಮೆಯ ಜನಗಳು ಕ್ರಮೇಣ ದುಷ್ಟ ಪದ್ಧತಿಗಳನ್ನು ಅಡಗಿಸುತ್ತಾ ಒಳ್ಳೇ ಪದ್ಧತಿ ಆಚಾರ ಕ್ರಮಗಳನ್ನು ಕಲಿಯುತ್ತಾ ಬಂದರೆ ಅವರು ಅಭಿವೃದ್ಧಿಗೆ ಬಂದಾರೆಂಬ ನಿರೀಕ್ಷಣೆ ಕಾರಣವುಂಟು. ಆದರೆ ಪ್ರಜೆಗಳೂ ಸರಕಾರದವರೂ ದೇಶವನ್ನು ದೌರ್ಬಲ್ಯಾವಸ್ಥೆಗೆ ತಂದು ಮನಸ್ಸನ್ನೂ ಬುದ್ಧಿಯನ್ನೂ ವಿಕಾರಗೊಳಿಸಿ ನಾಶನಕ್ಕೆ ಗುರಿಮಾಡುವ ಮಾದಕದ್ರವ್ಯಗಳ ಸೇವನೆಯನ್ನೂ ಬೆಳೆಯನ್ನೂ ಹೆಚ್ಚಿಸುತ್ತಾ ವರುಷಂಪ್ರತಿ ಪ್ರೋತ್ಸಾಹಗೊಳಿಸುತ್ತಾರೆಂದು ತಿಳಿದರೆ ಯಾವ ದೇಶಬಾಂಧವರು ವಿಷಾದಪಡದಿರುವರು?

ಅತ್ತಲಾ ರಷ್ಯಾದಲ್ಲಿ ನಡೆದಿರುವ ತಿದ್ದುಪಾಟನ್ನು ಸ್ವಲ್ಪ ಕೇಳಿರಿ. ಅಲ್ಲಿ ಓಡ್ಕ—ಎಂಬ ಮದದ್ರಾವಕವನ್ನು ರಷ್ಯಾದವರು ಹೇರಳವಾಗಿ ಕುಡಿಯುತ್ತಿದ್ದರು. ಓಡ್ಕ ದ್ರಾವಕದಲ್ಲಿ ಬುದ್ಧಿಯನ್ನು ಮಾದಕಪಡಿಸುವ ಆಲ್ಕೊಹಾಲೆಂಬ ವಿಷಕರವಾದ ಸಾರಪದಾರ್ಥವು ಬಹಳ ಹೆಚ್ಚಾಗಿರುತ್ತದೆ. ಆದರೆ ಈಚೆಗೆ ರಷ್ಯಾದಲ್ಲಿ ಓಡ್ಕ, ವಿಸ್ಕಿ, ಬ್ರಾಂದಿ, ಜಿನ್ ಮೊದಲಾದ ಯಾವ ವಿಧ ಸಾರಪದಾರ್ಥಗಳನ್ನೂ ದುಕಾನ್ದಾರರು ಮಾರಲೂ ಕೂಡದು; ಪ್ರಜೆಗಳು ಕುಡಿಯಲೂ ಕೂಡದೆಂದು ಸರಕಾರದವರು ಕಟ್ಟಾಜ್ಞೆಯನ್ನು ಮಾಡಿ ಕೂಡಲೆ ಅದನ್ನು ಜಾರಿಗೆ ತಂದರು. ಮತ್ತು ಈಗ ಅವರು ಜರ್ಮನರ ಸಂಗಡ ನಡಿಸುತ್ತಿರುವ ಯುದ್ಧಕ್ಕೆ ತಮ್ಮ ಸೈನ್ಯವನ್ನು ರಣರಂಗಕ್ಕೆ ಹೊರಡಿಸುವ ದಿನ ರಷ್ಯಾ ಸರ್ಕಾರದವರು ಅದಕ್ಕಾಗಿ ನೇಮಿಸಿದ ಪೋಲೀಸಿನವರನ್ನು ಕಳುಹಿಸಿ ತಮ್ಮ ದೇಶಕೋಶ ಪಟ್ಟಣಗಳ ಬಹಿರಂಗವಾದ ಸ್ಥಳಗಳನ್ನೆಲ್ಲಾ ಪರೀಕ್ಷಿಸಿ ಓಡ್ಕ ಮೊದಲಾದ ಸಾರಪದಾರ್ಥಗಳನ್ನೂ ದ್ರಾವಕಗಳನ್ನೂ ಮಾರುವ ದುಕಾನ್‌ಗಳನ್ನೆಲ್ಲಾ ಒಂದೂ ಬಿಡದೆ ಮುಚ್ಚಿ ಬೀಗಹಾಕಿ ಚಕ್ರವರ್ತಿಯವರ ರಾಜಮುದ್ರೆಯನ್ನು ಅವುಗಳ ಮೇಲೆ ಹಾಕಿದರು.

ಈ ಕ್ರಮವನ್ನನುಸರಿಸಿದ ದಿನ ಮೊದಲ್ಗೊಂಡು ರಷ್ಯಾ ಚಕ್ರಾಧಿಪತ್ಯದಲ್ಲಿ ಸಾರಪದಾರ್ಥ ದ್ರಾವಕಗಳ ಸೇವನೆಯು ಸಂಪೂರ್ಣವಾಗಿ ನಿಂತುಹೋಯಿತು. ಇದರ ಫಲವೇನಂದರೆ—ಕೈತರೇ ಮುಂತಾದ ಸಕಲ ಪ್ರಜೆಗಳೂ ನವೀನ ಪುರುಷ ಸ್ತ್ರೀಯರಾಗಿದ್ದಾರೆ. ಅನ್ನವಸ್ತ್ರಗಳಿಗೆ ಕೊರತೆಯಿಲ್ಲ. ರೋಗಾದ್ಯುಪದ್ರವಗಳು ಕಡಮೆಯಾದವು. ಅವರ ಮುಖಗಳ ಮೇಲೆ ಅಸಾಧಾರಣವಾದ ಕಾಂತಿಯುಂಟು. ಅವರ ವಸ್ತ್ರಗಳು ನಿರ್ಮಲವಾಗಿಯೂ ಹರಕಿಲ್ಲದವುಗಳಾಗಿಯೂ ಇವೆ. ಅವರು ನೋಟಕ್ಕೆ ಈಗ ಎಷ್ಟೋ ಚೊಕ್ಕಟವಾಗಿದ್ದಾರೆ. ಶಿಥಿಲವಾಗಿ ಬಿದ್ದುಹೋಗುತ್ತ ಮತ್ತು ಸೋರುತ್ತಲಿದ್ದ ಮನೆಮಠಗಳು ಭದ್ರವಾಗಿಯೂ ಅಲಂಕಾರವಾಗಿಯೂ ಕ್ರಮಪಡಿಸಲ್ಪಟ್ಟವೆ.

ಇಷ್ಟೊಂದು ಒಳ್ಳೇ ಏರ್ಪಾಡುಗಳು ಹೇಗೆ ಅನುಷ್ಠಾನಕ್ಕೆ ಬಂದವು? ಕುಡಿಕತನವೆಂಬ ರಾಕ್ಷಸಾಧಮನನ್ನು ತಮ್ಮ ಮನೆಗಳಿಂದಲೂ ದೇಶದಿಂದಲೂ ಸರಕಾರವೂ ಪ್ರಜೆಗಳೂ ಏಕರೂಪವಾಗಿ ಸ್ಥಿರಚಿತ್ತದಿಂದ ಓಡಿಸಿಬಿಟ್ಟದ್ದರಿಂದಲೇ ಇದು ಸಾಧ್ಯವಾಯಿತು. ಇದನ್ನು ಮಾಡುವುದು ಒಬ್ಬ ಮನುಷ್ಯನು ತೋರಿಸಿದ ಹಿತವನ್ನು ಸಾವಧಾನ ಅನುಕೂಲಿಸಿತು. ಆ ಮಹಾತ್ಮನ ಚರಿತ್ರೆಯು ನಮ್ಮ ಸಹೋದರರಿಗೆ ತಿಳಿದರೆ ಒಳ್ಳೇದೆಂದು ಈ ಕೆಳಗೆ ಸಂಕ್ಷೇಪವಾಗಿ ಬರೆದಿದ್ದೇವೆ.

ಮಹತ್ತರವಾದ ಈ ಅದ್ಭುತ ತಿದ್ದುಪಾಟಿಗೆ ಮುಖ್ಯ ಕಾರಣನಾದ ಈತನ ಹೆಸರು ಮೈಕಲ್ ಡಿ ಚೆಲಿಷೆಫ್ ಎಂಬುವನು. ಈತನು ರೈತನು. ಮೊದಲು ಬಡಿಗಾರನು. ಹೀಗೆ ಇದ್ದು ಕ್ರಮೇಣ ಸುತನ್ಯಾಯದಿಂದಲೂ ಉದ್ಯೋಗದ ಮಹತ್ತಿನಿಂದಲೂ ಸತ್ಯಸಂಧತೆಯಿಂದಲೂ ಅಭಿವೃದ್ಧಿಯನ್ನು ಹೊಂದುತ್ತಾ ಕಡೆಕಡೆಗೆ ಸಮಾರವೆಂಬ ಪಟ್ಟಣದ ಮುಖ್ಯಾಧಿಕಾರಿಯಾದನು. ಈಗ ಲಕ್ಷಾಧಿಪತಿಯಾಗಿದ್ದಾನೆ.

ಈತನು ಇಲ್ಲಿ ಅಲ್ಲಿ ಸಿಕ್ಕುವ ಪುಸ್ತಕಗಳಿಂದಲೂ ವರ್ತಮಾನ ಪತ್ರಿಕೆಗಳಿಂದಲೂ ವಿದ್ಯೆಕಲಿತುಕೊಂಡನು. ಇಂಥಹ ಯಾವದೋ ಒಂದು ಪತ್ರಿಕೆಯಲ್ಲಿ—ರಷ್ಯಾದ ಜನಗಳು ಬಹು ಸಾಧಾರಣವಾಗಿ ಕುಡಿಯುವ ಓಡ್ಕವೆಂಬ ಮದದ್ರಾವಕವು ಜೀವವನ್ನು ಕ್ರಮೇಣ ಸಂಹರಿಸುವ ಪಾಷಾಣವಾಗಿದೆ ಎಂದು ಓದಿ ಭಾವುಕನಾದನು. ಮತ್ತು ಆ ದಿನದಿಂದ ಅದನ್ನು ತಮ್ಮ ದೇಶದಿಂದ ಹೊರಡಿಸಬೇಕೆಂದು ಅದಕ್ಕೆ ವಿರೋಧಿಯಾಗಿ ಯುದ್ಧಮಾಡಲಾರಂಭಿಸಿದನು. ರಷ್ಯಾದಲ್ಲಿ ಕಳೆದ ಹತ್ತು ವರುಷಗಳಲ್ಲಿ ಕ್ಷಾಮ ಪ್ರಾಪ್ತಿಸಿದಾಗ ಓಡ್ಕ ಮದ್ಯಪಾನ ಮಾಡುವವರೇ ಕೇವಲ ಸಂಕಟಗಳಿಗೊಳಗಾಗಿ ಮೊದಲು ಸತ್ತುಹೋದರೆಂದು ಅವನಿಗೆ ನಿಜಾರಕ್ಷೇಣ ತಿಳಿದುಬಂದಿತು.

ಈತನು ಸಮಾರಪಟ್ಟಣದ ಮುಖ್ಯಾಧಿಕಾರಿಯಾಗಿ ಆ ಪಟ್ಟಣದ ಆಲೋಚನಾಸಭೆಗೆ ಒಂದು ಕಾಯಿದೆಯ ಮಸೂದೆಯನ್ನು ತಂದನು. ಆ ಮಸೂದೆಯ ಅಭಿಪ್ರಾಯವೇನಂದರೆ—ಪಟ್ಟಣದಲ್ಲಿ ಓಡ್ಕವನ್ನು ಮಾರಬೇಕೊಡದು. ಸರಕಾರಕ್ಕೆ ಈ ವ್ಯಾಪಾರವನ್ನು ನಿಲ್ಲಿಸುವದರಿಂದ ಸಂಭವಿಸುವ ನಷ್ಟವನ್ನು ತಾವು ಕಟ್ಟಿಕೊಡಬೇಕೆಂಬುವದೇ. ಸರಕಾರದವರು ಈ ಮಸೂದೆಯನ್ನು ಒಪ್ಪದೆ ತಿರಸ್ಕರಿಸಿದ್ದನ್ನು ನೋಡಿ—ಸ್ವಸ್ಥ ಬುದ್ಧಿಯುಳ್ಳ ಪ್ರಜೆಗಳನ್ನು ಆಳುವದಕ್ಕಿಂತ ಕುಡಿದು ಮತ್ತೇರಿದವರನ್ನು ಆಳುವದು ಸುಲಭವೆಂದು ಅಧಿಕಾರಿಗಳು ತಿಳಿದಿದ್ದಾರೆಂದು ನಿಶ್ಚಯಿಸಿಕೊಂಡನು.

ರಷ್ಯಾ ದೇಶದ ಡೂಮ ಎಂಬ ಆಲೋಚನಾ ಸಭೆಗೆ ಈತನು ಸದಸ್ಯನಾಗಿ—ಓಡ್ಕವನ್ನು ಬಿಕರಿಮಾಡುವ ದುಕಾನುಗಳನ್ನು ಮುಚ್ಚುವದಕ್ಕೂ ಓಡ್ಕದ ಪ್ರತಿಯೊಂದು ಸೀಸೆಯ ಮೇಲೆ ಅದು ಪಾಷಾಣವೆಂದು ಬರೆಯುವದಕ್ಕೂ ಅಪ್ಪಣೆಯಾಗಬೇಕೆಂದು ಒಂದು ಮಸೂದೆಯನ್ನು ತಂದನು. ಈ ಮಸೂದೆಯನ್ನು ಸರಕಾರದವರು ಅನುಮೋದಿಸಿದರು. ಅನಂತರ ಚಲಿಷೆಫನು ಚಕ್ರವರ್ತಿಯವರ ಭೇಟಿಯಾಗಬೇಕೆಂದು ಬೇಡಿದನು. ರಷ್ಯಾ ಚಕ್ರವರ್ತಿಯವರು ಆತನಿಗೆ ಭೇಟಿಕೊಟ್ಟು ಅವನ ಅಭಿಪ್ರಾಯವನ್ನು ಉತ್ಸಾಹದಿಂದ ಒಪ್ಪಿ ಅವರೇ ಬೇರೆ ಬೇರೆ ಪಟ್ಟಣಗಳನ್ನು ತೊಳ್ಳು ಸಾರಪದಾರ್ಥಗಳ ಹಾವಳಿಯಿಂದ ಕೆಟ್ಟುಹೋಗುತ್ತಿರುವವರ ಸಹಾಯಕ್ಕೆ ಬಂದರು.

1904 ರಲ್ಲಿ ರಷ್ಯಾದಲ್ಲಿ ಯುದ್ಧಕ್ಕೆ ಸೈನ್ಯವನ್ನು ಹೊರಡಿಸಿದಾಗ ಮದ್ಯಸೇವನೆಯಿಂದ ಆದ ಗಲಿಬಿಲಿಯನ್ನು ನೆನಸಿಕೊಂಡು ಈ ಯುದ್ಧದಲ್ಲಿ ಓಡ್ಕವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ಇದರಿಂದ ಈ ಘೋರ ಯುದ್ಧದಲ್ಲಿಯೂ ಪ್ರಜೆಗಳು ಊಟ ಉಡಿಗೆ ತೊಡಿಗೆಗಳಿಗೆ ಕೊರತೆಯಾಗಲಿಲ್ಲ. ಜನಗಳು—ಹಣವನ್ನು ಸೇವಿಂಗ್ಸ್ ಬ್ಯಾಂಕಿಗೆ ಹೆಚ್ಚಾಗಿ ಹಾಕುವಷ್ಟು ಧನವುಳಿಸಿಕೊಳ್ಳುತ್ತಾರೆ. ಹಣ್ಣು, ಹಾಲು, ದವಸ, ಕಾಯಿಪಲ್ಯಗಳನ್ನು ಚೆನ್ನಾಗಿ ಕೊಂಡು ತಿನ್ನಲಿಕ್ಕೆ ಬೇಕಾದಷ್ಟು ದುಡ್ಡು ಅವರ ಕೈಯ್ಯಲ್ಲಿದೆ. ಮನೆಗಳಿಗೆ ಬೇಕಾದ ಕುರ್ಚಿ, ಮೇಜು, ದೀಪ, ಬಟ್ಟೆಬರೆ ಮೊದಲಾದ ಸಾಮಗ್ರಿಗಳನ್ನು ಹೆಚ್ಚಾಗಿ ಎಲ್ಲರೂ ಕೊಂಡು ಪ್ರಯೋಗಿಸುತ್ತಿದ್ದಾರೆ. ಕೂಲೀ ಜನಗಳು ಕುಡಿದು ಮತ್ತೇರಿ ವಾರಕ್ಕೆ ಮೂರು ಅಥವಾ ನಾಲ್ಕು ದಿನಗಳಿಗಿಂತ ಹೆಚ್ಚಾಗಿ ಕೆಲಸಮಾಡದೆ ಬಿದ್ದುಕೊಂಡಲ್ಲಿಯೇ ಬಿದ್ದಿರುತ್ತಿದ್ದರು. ಈಗಲಾದರೋ ಪ್ರತಿಯೊಬ್ಬ ಕೂಲಿಯವನು ವಾರಕ್ಕೆ ಒಂದೇ ದಿನ ಕೆಲಸಕ್ಕೆ ಹೋಗದೆ ವಿಶ್ರಾಂತಿಯಾಗಿರುತ್ತಾನೆ. ಬಾಕಿ ಆರು ದಿನಗಳು ಕೆಲಸಮಾಡಿ ದುಡಿಯುತ್ತಾನೆ.

ಯುದ್ಧದ ಸಮಾಚಾರಗಳು.

ಫ್ರಾನ್ಸಿನಲ್ಲಿ ಬ್ರಿಟಿಷರಿಗಾದ ಜಯ.

ಬ್ರಿಟಿಷರಿಂದ ಟರ್ಕಿಗಾದ ಸೋಲು.

ರಣರಂಗದ ಎಲ್ಲಾ ಪ್ರದೇಶಗಳಲ್ಲೂ ಬಹಳ ಚಟುವಟಿಕೆಯಿಂದ ಯುದ್ಧಕಾರ್ಯಗಳು ನಡೆಯುತ್ತಿವೆ. ದೊಡ್ಡ ದೊಡ್ಡ ಯುದ್ಧಗಳು ನಡೆಯುವದಕ್ಕೆ ಉಭಯ ಪಕ್ಷಗಳಲ್ಲೂ ಸನ್ನಾಹಗಳನ್ನು ಮಾಡಿಕೊಳ್ಳುತ್ತಿದಾರೆ. ನಮ್ಮ ಪಕ್ಷದವರು ಶತ್ರು ಸೈನ್ಯದ ಮೇಲೆ ನುಗ್ಗಿ ಯುದ್ಧಮಾಡುವುದಕ್ಕೆ ಹವಾ ಸ್ಥಿತಿಯು ಇನ್ನೂ ತೃಪ್ತಿಕರವಾಗಿಲ್ಲ. ನಮ್ಮ ಪಕ್ಷದವರು ಇನ್ನು ಕೆಲವು ವಾರಗಳಲ್ಲೇ ಮುಂದರಿಸಿ ನುಗ್ಗಿ ಯುದ್ಧಮಾಡುವುದರಲ್ಲಿದಾರೆ. ಆತುರಪಡಬೇಕಾದ ಅಗತ್ಯವೇನೂ ಇರುವುದಿಲ್ಲ. ಯಾಕೆಂದರೆ ನಮ್ಮ ಪಕ್ಷದವರಿಗೆ ಇದುವರೆಗೆ ಎಲ್ಲಾ ಅನುಕೂಲವಾಗಿಯೇ ಇರುವುದು. ಅಲ್ಲದೆ ಉಭಯ ಯುದ್ಧರಂಗಗಳಲ್ಲೂ ನಮ್ಮ ಪಕ್ಷದವರು ಜರ್ಮನಿಯವರನ್ನೂ ಆಸ್ಟ್ರಿಯಾದವರನ್ನೂ ಕ್ರಮೇಣ ಹಿಮ್ಮೆಟ್ಟಿಸಿಕೊಂಡು ಹೋಗುತ್ತಿದಾರೆ. ಕದನಗಳು ಬಹಳ ಕಠಿಣವಾಗಿ ನಡೆಯುತ್ತಿರುವವು. ನಷ್ಟವೂ ಅಪಾರವಾಗಿ ಆಗುತ್ತಿದೆ.

ಪಶ್ಚಿಮ ರಣರಂಗದಲ್ಲಿ.

ಬೆಲ್ಜಿಯಮ್‌ನಲ್ಲಿರುವ ನಂಬರ್ 60 ಎಂಬ ಹೆಸರಿನ ಒಂದು ಗುಡ್ಡವನ್ನು ಬ್ರಿಟಿಷರು ಗೆದ್ದು ಸ್ವಾಧೀನ ಪಡಿಸಿಕೊಂಡದ್ದೇ ಈ ವಾರದ ಮುಖ್ಯ ಸಮಾಚಾರ. ಬ್ರಿಟಿಷರು ಈ ಗುಡ್ಡದ ಕೆಳಭಾಗದಲ್ಲಿ ಸುರಂಗಗಳನ್ನು ತೋಡಿಕೊಂಡು ಹೋಗಿ ಅವುಗಳಿಗೆ ಸಿಡಿಮದ್ದನ್ನೂ ಗುಂಡುಗಳನ್ನೂ ಜಡಿದು ಬೆಂಕಿ ಹೊತ್ತಿಸಿ ಜರ್ಮನಿಯವರ ಕಂದಕಗಳನ್ನು ಉಡಾಯಿಸಿಬಿಟ್ಟರು. ಈ ಅನಾಹುತಕ್ಕೆ ಸಿಕ್ಕಿ 150 ಮಂದಿ ಜರ್ಮನಿಯವರು ಕಂದಕಗಳಲ್ಲಿ ಸಿಕ್ಕಿಕೊಂಡು ಹತರಾದರು. ಆ ಸ್ಥಳದಲ್ಲಿ ಒಂದು ಭಾರೀ ಕೊರಕಲು ಬಿದ್ದಿತು. ಬ್ರಿಟಿಷರು ನುಗ್ಗಿ ಹೋಗಿ ಆ ಕೊರಕಲೊಳಗೆ ಸೇರಿಕೊಂಡರು. ಜರ್ಮನಿಯವರು ಫಿರಂಗಿಗಳ ಸಮೇತ ನುಗ್ಗಿ ಬಂದು ಬ್ರಿಟಿಷರನ್ನು ಅಲ್ಲಿಂದ ಹೊರಡಿಸಬೇಕೆಂದು ಸಾಹಸಪಟ್ಟರು. ಆದರೆ ಈ ಕಾರ್ಯವು ಅವರಿಂದ ಸಾಧ್ಯವಾಗಲಿಲ್ಲ. ಮರುದಿನ ಜರ್ಮನಿಯವರು ಇನ್ನಷ್ಟು ಸೈನ್ಯವನ್ನು ಕೂಡಿಸಿಕೊಂಡು ನುಗ್ಗಿಬಂದು ಬ್ರಿಟಿಷರ ಕಂದಕಗಳನ್ನು ಸಮೀಪಿಸಿದರು. ಆಗ ಬ್ರಿಟಿಷರು ಸಂಗೀನುಗಳನ್ನು ಹಿಡಿದುಕೊಂಡು ಹೊರಗೆ ಬಂದು ಶತ್ರುಗಳನ್ನು ತಿವಿಯುತ್ತಾ ಮೇಲೆ ಬಿದ್ದು ನುಗ್ಗಿ ಅವರನ್ನೆಲ್ಲಾ ಹಿಂದಕ್ಕೆ ಓಡಿಸಿಬಿಟ್ಟರು. ಬ್ರಿಟಿಷರು ಮೋಟಾರುಗಳ ಮೇಲೆ ಮೆಷೀನ್ ಫಿರಂಗಿಗಳನ್ನು ಸಾಗಿಸಿಕೊಂಡು ಹೋಗಿ ಗುಂಡುಗಳ ಮಳೆ ಸುರಿಸಿದ್ದರಿಂದ ಜರ್ಮನಿ ಸೈನಿಕರಲ್ಲಿ ನೂರಾರು ಮಂದಿ ನಾಶಹೊಂದಿದರು. ಇದಲ್ಲದೆ ಬ್ರಿಟಿಷರ ಸಾಧಾರಣ ಫಿರಂಗಿಗಳು ಶತ್ರುವಿನ ವಿನಾಶವನ್ನು ಪೂರ್ತಿ ಮಾಡಿಬಿಟ್ಟವು. ಜರ್ಮನಿಯವರು ಅಪಾರವಾಗಿ ನಷ್ಟಹೊಂದಿ ಅಲ್ಲಿಂದ ಹಿಮ್ಮೆಟ್ಟಿ ಹೊರಟು ಹೋಗಬೇಕಾಯಿತು. ಆ ಬಳಿಕಲೂ ಜರ್ಮನಿಯವರು ಬಿಡದೆ ಬ್ರಿಟಿಷರನ್ನು ಅಲ್ಲಿಂದ ಹೊರಡಿಸಬೇಕೆಂದು ಪದೇ ಪದೇ ಮೇಲೆ ಬಿದ್ದು ನುಗ್ಗಿ ಕದನ ಮಾಡಿದರೂ ಅವರು ಬೇರೆ ಆ ಗುಡ್ಡವನ್ನು ಗೆದ್ದುಕೊಳ್ಳಲಾಗಲಿಲ್ಲ. ಈ ಗುಡ್ಡವಾದರೋ ಬಹಳ ಪ್ರಾಮುಖ್ಯವಾದ ಸ್ಥಾನ. ಜರ್ಮನಿಯವರ ಕಡೆಯಾಗಲಿ ನಮ್ಮ ಬ್ರಿಟಿಷರ ಕಡೆಯಾಗಲಿ ಎಷ್ಟು ಮಂದಿ ನಷ್ಟವಾದರೋ ಇನ್ನೂ ಪ್ರಕಟವಾಗಿಲ್ಲ. ಜರ್ಮನಿಯವರು 4,000 ಸೈನ್ಯಕ್ಕೆ ಕಡಿಮೆ ಇಲ್ಲದೆ ನಷ್ಟಪಟ್ಟರೆಂದು ಹೇಳಲಾಗಿದೆ. ಇದಲ್ಲದೆ ಬ್ರಿಟಿಷರಿಗೆ ಅನೇಕರು ಸೆರೆ ಸಿಕ್ಕಿರುತ್ತಾರೆ. ಬ್ರಿಟಿಷರ ಕಡೆಯೂ ಹೆಚ್ಚಾಗಿ ನಷ್ಟವಾಗಿದೆ. ಆದರೂ ಜರ್ಮನಿಯವರಿಗಾದಷ್ಟು ನಷ್ಟವಾಗಿಲ್ಲ. ಈ ಗುಡ್ಡವನ್ನು ಗೆದ್ದದ್ದರಿಂದ ಇನ್ನು ಮುಂದೆ ನಮ್ಮ ಪಕ್ಷದವರು ಬೆಲ್ಜಿಯಮ್‌ನೊಳಗೆ ನುಗ್ಗಿ ಹೋಗುವುದಕ್ಕೆ ತುಂಬಾ ಸಹಾಯವಾಯಿತು.

ಜರ್ಮನಿಯವರು ಇಸರ್ ನದಿಯ ಬಳಿ ಬೆಲ್ಜಿಯರ್ನರ ಮೇಲೆ ನುಗ್ಗಿ ಕದನವಾಡಿದರು. ಈ ಕದನದಲ್ಲಿ ಜರ್ಮನಿಯವರು ಒಂದು ಜಾತಿಯ ವಿಷದ ಗುಂಡುಗಳನ್ನು ತಂದಿದ್ದರು. ಅದನ್ನು ಶತ್ರುವಿನ ಮೇಲೆ ಹೊಡೆದರೆ ಅದು ಸೈನಿಕರ ಮಧ್ಯೆ ಬಿದ್ದು ಒಡೆದು ಅದರಲ್ಲಿದ್ದ ವಿಷ ವಾಯುಗಳು ಸೈನಿಕರಿಗೆಲ್ಲಾ ಹರಡಿಕೊಂಡು ಅವರ ಉಸಿರನ್ನು ಕಟ್ಟಿಬಿಟ್ಟವು. ಇಂಥಾ ಗುಂಡುಗಳ ಪ್ರಯೋಗದಿಂದ ಜರ್ಮನಿಯವರು ಸ್ವಲ್ಪ ಹೊತ್ತು ಮುಂದರಿಸಿ ನುಗ್ಗಿ ಹೋದರು. ಆದರೆ ಕಡೆಯಲ್ಲಿ ಬೆಲ್ಜಿಯರ್ನರು ಅವರನ್ನು ಹಿಮ್ಮೆಟ್ಟಿಸಿ ಓಡಿಸಿದ್ದಲ್ಲದೆ ಅವರ ಕೆಲವು ಕಂದಕಗಳನ್ನೂ ಗೆದ್ದು ಸ್ವಾಧೀನಪಡಿಸಿಕೊಂಡರು.

ನಮ್ಮ ಪಕ್ಷದವರ ವಿಮಾನಯಂತ್ರಗಳು ಬಹಳ ಚುರುಕಾಗಿ ಕಾರ್ಯಗಳನ್ನು ನಡಿಸುತ್ತವೆ. ಈ ವಿಮಾನಯಂತ್ರಗಳು ಶತ್ರುವಿನ ದೇಶಕೋಶಗಳಿಗೆ ಹೋಗಿ ಜರ್ಮನಿಯವರ ವಿಮಾನಯಂತ್ರಗಳನ್ನು ಓಡಿಸಿಬಿಟ್ಟು, ಶತ್ರುವಿನ ಮದ್ದಿನ ಮನೆಗಳಿಗೂ, ವಿಮಾನಯಂತ್ರಗಳ ಕಟ್ಟೆಲೆಗಳಿಗೂ, ವಿದ್ಯುಚ್ಛಕ್ತಿಯ ಕಾರ್ಖಾನೆಗಳಿಗೂ, ರೈಲ್ ರಸ್ತೆಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ಅಗಾಧವಾದ ನಷ್ಟವನ್ನುಂಟುಮಾಡಿರುತ್ತವೆ. ಗಾರೊಸ್ ಎಂಬೊಬ್ಬ ಫ್ರೆಂಚ್ ವಿಮಾನಚಾರನು ಈ ಯುದ್ಧದಲ್ಲಿ ಬಹಳ ಸ್ತೋತ್ರಾರ್ಹವಾದ ಸಾಹಸ ಕಾರ್ಯಗಳನ್ನು ಮಾಡಿರುತ್ತಾನೆ. ಕೆಲವು ದಿನಗಳ ಕೆಳಗೆ ಈತನು ಬೆಲ್ಜಿಯಮಿನ ಮೇಲ್ಭಾಗದಲ್ಲಿ ಸಂಚರಿಸುತ್ತಿದ್ದಾಗ ಜರ್ಮನಿಯವರು ಆತನನ್ನು ಇಳಿಸಿಬಿಟ್ಟು ಕೈಸೆರೆಹಿಡಿದುಬಿಟ್ಟುಕೊಂಡರು. ಒಂದು ಕಡೆಯಲ್ಲಿ ನಮ್ಮ ಪಕ್ಷದವರು ಜರ್ಮನಿಯವರ ಐದು ವಿಮಾನಯಂತ್ರಗಳನ್ನು ನಾಶಮಾಡಿರುತ್ತಾರೆ.

ಎರಡು ರಾಜ್ಯಗಳಲ್ಲಿ ನಾವು ಹಿಮ್ಮೆಟ್ಟಿ ಬರಬೇಕಾಯಿತು ಎಂದು ಜರ್ಮನಿಯವರೇ ಒಪ್ಪಿಕೊಂಡು ಹೇಳಿರುವರು.

ಈ ಮಹಾ ಘೋರವಾದ ಯುದ್ಧದಲ್ಲಿ ಮದ್ದು ಗುಂಡು ಎಷ್ಟು ಅಪಾರವಾಗಿ ಖರ್ಚಾಗುತ್ತದೆಂಬುದನ್ನು ಊಹಿಸುವುದೂ ಪ್ರಯಾಸ. ಮಿ|| ಲ್ಲಾಯಡ್ ಜಾರ್ಜ್‌ರವರು—ನೇವ್ ಚಪ್ಪೆಲ್ ಎಂಬ ಒಂದೇ ಒಂದು ಯುದ್ಧದಲ್ಲಿ [ಈ ಯುದ್ಧವು ಎರಡು ಅಥವಾ ಮೂರು ದಿನ ನಡೆದಿರಬಹುದು.] ಮೂರು ವರುಷದ ತನಕ ನಡೆದ ಬೋಅರ್ ಯುದ್ಧದಲ್ಲೆಲ್ಲಾ ಖರ್ಚಾದಷ್ಟು ಮದ್ದು ಗುಂಡು ಖರ್ಚಾಗಿರುತ್ತದೆ ಎಂದು ತಿಳಿಸುತ್ತಾರೆ. ಒಂದಾನೊಂದು ಠಾಣ್ಯದಲ್ಲಿ ಫ್ರೆಂಚರು ಜರ್ಮನಿಯವರ ಸ್ವಾಧೀನದಲ್ಲಿದ್ದ ಒಂದು ಗುಡ್ಡವನ್ನು ಗೆದ್ದುಕೊಂಡರು. ಆಗ ಜರ್ಮನಿಯವರು ಕೆಲವು ಗಂಟೆಗಳಲ್ಲೇ 20,000 ಸಿಡಿಮದ್ದಿನ ಗುಂಡುಗಳ ಮಳೆ ಸುರಿಸಿಬಿಟ್ಟರು. ಅವೆಲ್ಲಾ ಉದ್ದದಲ್ಲಿ 300 ಗಜಗಳೂ, ಅಗಲದಲ್ಲಿ

...ಇದ್ದ ಒಂದೇ ಬೌಳದಲ್ಲಿ ಬಂದು ಬಿದ್ದವು. ಆದಾಗ್ಯೂ ಫ್ರೆಂಚರು ...ಸ್ವಾಧೀನವಾಗಿದ್ದ ಗುಡ್ಡವನ್ನು ಬಿಟ್ಟುಕೊಡಲಿಲ್ಲ. ಈಗಲಾದರೋ ನಮ್ಮ ...ಗೆ ಮದ್ದು ಗುಂಡು ಒದಗುವ ಭಾಗದಲ್ಲಿ ಯಾವುದೊಂದು ಅಡಚಣೆ ...ಯೂ ಇರುವುದಿಲ್ಲ. ಮಿ|| ಲ್ಲಾಯಿಡ್ ಜಾರ್ಜ್‌ರವರು—ಈಗ ...3,000 ಕಾರ್ಖಾನೆಗಳಲ್ಲಿ ಯುದ್ಧ ಸಾಮಗ್ರಿಗಳೂ ಮದ್ದು ಗುಂಡು ...ಕ್ಕೆ ಬೇಕಾಗುವುದರ ನಲುಗಡೆ ಇಲ್ಲದೆ ತಯಾರಾಗುತ್ತಿರುವವು ಎಂದು ಹೇಳಿ ...ಗೆ ಹೊಸದಾಗಿ ಬ್ರಿಟಿಷ್ ಸೈನ್ಯಗಳನ್ನು ಕಳುಹಿಸಿಕೊಟ್ಟರು ...ರ ನೊವೆಂಬರಿನಲ್ಲಿದ್ದ ಸೈನ್ಯಕ್ಕಿಂತ ಈಗ ಆರರಷ್ಟು ಜಾಸ್ತಿಯಾಗಿರುವವು. ...ಕ್ಕೆ ಹೊಡ ಕಳುಹಿಸಿರುವ ವೈದ್ಯದ ಇಲಾಖೆಯವರು ಸಪ್ರೋತ್ಕೃಷ್ಟ ...ಮಾಡುತ್ತಿದಾರೆ. ಅವರು ಗಾಯಪಟ್ಟವರನ್ನು ಕಾಯಿಲೆಯಾದವ ...ಯೂ ಕೂಡಲೇ ಚಿಕಿತ್ಸೆಮಾಡಿ ಆರೈಕೆಮಾಡುತ್ತಿರುವರು. ಇದರಿಂದ ...ಮಂದಿ ಸೈನಿಕರು ಆರೋಗ್ಯಹೊಂದಿ ಮತ್ತೆ ಯುದ್ಧಶಾಲೆಗೆ ಹೋಗಿ ...ತ್ತಿದಾರೆ.

ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ರಾಜ್ಯಧುರೀಣನೆಂಬ ಖ್ಯಾತಿವಂತನಾಗಿದ್ದ ...ಗ್ಲಾಡ್‌ಸ್ಟನ್ ಮಹಾಪುರುಷನ ಮೊಮ್ಮಗನಾಗಿಯೂ ಬ್ರಿಟಿಷ್ ಪಾರ್ಲಿ ...ಮೆಂಬರಾಗಿಯೂ ಇದ್ದ ಮಿ|| ಗ್ಲಾಡ್‌ಸ್ಟನ್ ಎಂಬಾತನು ಕಳೆದ ವಾರ ...ದಲ್ಲಿ ಮಡಿದುಹೋದನೆಂಬ ಸುದ್ದಿ ಬಂದಿದೆ.

ಪೂರ್ವ ರಣರಂಗದಲ್ಲಿ.

...ಕಾರ್ಪೇಥಿಯನ್ ಪರ್ವತಗಳಲ್ಲಿ ಹವಾ ಸ್ಥಿತಿಯು ಯುದ್ಧ ಕಾರ್ಯಗ ...ಳಿಗೆ ಅಷ್ಟೇನೂ ಅನುಕೂಲವಾಗಿಲ್ಲ. ಹಿಮವು ಕರಗಿ ನೀರಾಗಿ ...ಗಳೂ, ನೆಲವೆಲ್ಲಾ ಬಿರಿಯಾಗುತ್ತಲೂ ಇವೆ. ಆದರೂ ಆ ಪ್ರಾಂತ್ಯದಲ್ಲಿ ...ದ ಕದನಗಳಾಗಿರುವವು. ಇದರಲ್ಲಿ ಸೋಲು ಗೆಲುವು ಹೇಳುವುದು ...ವಾಗಿಲ್ಲ. ಗೇಲಿಷಿಯಾದಲ್ಲಿರುವ ರಷ್ಯಾ ಸೈನಿಕರ ಸಾಲಿನ ಎಡಭಾಗವನ್ನು ...ವಂತೆ ಮಾಡಬೇಕೆಂದು ಆಸ್ಟ್ರಿಯಾದವರು ಸಾಹಸಪಟ್ಟರು ಇದು ...ದ ಅರ್ಥವಾಗಲಿಲ್ಲ. ಎಲ್ಲಾ ಠಾಣ್ಯಗಳಲ್ಲೂ ರಷ್ಯಾದವರು ತಮ್ಮ ಸ್ಥಾನ ...ಬಲಪಡಿಸಿಕೊಂಡು ಕಾಪಾಡಿಕೊಳ್ಳುತ್ತಿರುವುದು ಮಾತ್ರವೇ ಅಲ್ಲ; ...ಕೆಲವೆಡೆಗಳಲ್ಲಿ ಮುಂದರಿಸಿ ನುಗ್ಗಿಹೋಗಿಯೂ ಇರುತ್ತಾರೆ. ನೆಲವು ...ಯುದ್ಧ ಕಾರ್ಯಗಳಿಗೆ ಅನುಕೂಲವಾಗುವ ತನಕ ವಿಶೇಷಸಂಗತಿಗಳೇನೂ ...ಕಾಣುವುದಿಲ್ಲ. ಮಾರ್ಚಿ ತಾ 19 ರಿಂದ ಏಪ್ರಿಲ್ ತಾ 12 ...ರಷ್ಯಾದವರು 70,000 ಸೈನಿಕರನ್ನು ಕೈಸೆರೆ ಹಿಡಿದು ಇರುತ್ತಾರೆ. ಈ ...ಉದ್ಯೋಗದಾರರೇ 900 ಮಂದಿ. ಇದಲ್ಲದೆ 30 ಫಿರಂಗಿಗಳೂ, 200 ...ಬಂದೂಕುಗಳೂ ರಷ್ಯಾದವರಿಗೆ ಸಿಕ್ಕಿರುವವು. ಕಳೆದ ಸಾರಿವೂ ರಷ್ಯಾದ ...ದವರನ್ನು ಕೈಸೆರೆ ಹಿಡಿದಿರುವರು. ಪೆರೆಮಿಲ್ ಎಂಬ ಭಾರಿ ಕೋಟೆಯೂ ...ರಷ್ಯಾದವರಿಗೆ ಸಿಕ್ಕಿದ ಫಿರಂಗಿಗಳು 1,010 [illegible] ತಿಳಿಯುವುದು. ಇದ ...ಇನ್ನೂ ಹದಿನೈದು ದಿನಗಳಿಗಾಗುವಷ್ಟು ಆಹಾರವ, ಯುದ್ಧದ ಸಾಮಗ್ರಿ ...ಕೋಟೆಯೊಳಗಿದ್ದವೆಂದು ಹೇಳಲಾಗಿದೆ.

ಟರ್ಕಿ.

...ಅನೇಕ ಸ್ಥಳಗಳಲ್ಲಿ ಕದನಗಳು ನಡೆದಿರುವವು. ಆ ಪೈಕಿ ಮೆಸೊಪೊಟೇ ...ಮಿಯಾದೊಳಗೆ ಯೂಫ್ರೆಟೀಸ್ ನದಿಯ ಕಣಿವೆಯಲ್ಲಿ ಬ್ರಿಟಿಷರಿಗೂ ಟರ್ಕಿ ...ಯವರಿಗೂ ನಡೆದ ಯುದ್ಧವೇ ಬಹು ವಿಶೇಷವಾದದ್ದು. ದು ಹೇಳಬೇಕು ...ತಾ. 14ರಲ್ಲಿ ಬಾಸ್ರಾದಿಂದ ಸ್ವಲ್ಪ ಉತ್ತರ ಭಾಗದಲ್ಲಿ ಬ್ರಿಟಿಷ್ ಹಿಂದುಸ್ಥಾನದ ಸೈನ್ಯಗಳು ಠಾಣ್ಯಹಾಕಿಕೊಂಡಿದ್ದನ್ನು ಕಂಡು ಟರ್ಕಿ ...ನುಗ್ಗಿಬಂದರು. ಈ ಬಂಧದ ವಿವರಗಳಿಂದ ಟರ್ಕಿಯವರು ಸಂಪೂ ...ರ್ಣ ಸೋತುಹೋದರೆಂದೂ, ಮೂರು ದಿನಗಳಲ್ಲಿ ಉಳಿದ ಸೈನಿಕರೆಲ್ಲಾ ...ಎಪ್ಪತ್ತು ಮೈಲಿ ದೂರಕ್ಕೆ ಓಡಿಹೋದರೆಂದೂ ಗೊತ್ತಾಗುತ್ತದೆ. ...ಯವರ ಕಡೆ 2,500 ಸೈನ್ಯ ನಷ್ಟವಾಯಿತೆಂದು ಮೊದಲು ಹೇಳಿದ್ದರು; ...6,000 ಸೈನ್ಯಕ್ಕೆ ಕಡಮೆಯಿಲ್ಲದೆ ನಷ್ಟವಾಗಿರುವಂತೆ ತಿಳಿಯುವುದು. ...ಸುಕ 6 ಸೈನಿಕರನ್ನು ಕೈಸೆರೆಹಿಡಿದು ಬಾಸ್ರಾಗೆ ತಂದಿರುತ್ತಾರೆ. ಕೊಂದ ...ವರಲ್ಲಿ ಮೂವರು ಜರ್ಮನ್ ಹುದ್ದೆದಾರರು, ಒಬ್ಬಾತನು ಬಹಳ ದೊಡ್ಡ ...ಮನು. ಬ್ರಿಟಿಷರು ಅಪಾರವಾದ ಮದ್ದು ಗುಂಡನ್ನೂ ಸಾಮಗ್ರಿಯನ್ನೂ ...ವಶಮಾಡಿಕೊಂಡು ಬಂದರು. ಬ್ರಿಟಿಷ್ ಮತ್ತು ಹಿಂದುಸ್ಥಾನದ ಸೈನಿಕರಲ್ಲಿ ...ಮಾತ್ರ ನಷ್ಟವಾದರೆಂದು ಹೇಳಲಾಗಿದೆ. ನಷ್ಟಹೊಂದಿದ ಬ್ರಿಟಿಷ್ ಹುದ್ದೆ ...ರಲ್ಲಿ 17 ಮಂದಿ ಕೊಲೆಯಾದರು, 37 ಮಂದಿಗೆ ಗಾಯವಾಗಿದೆ. ಈ ...ಸುದ್ದಿಯನ್ನು ಕೇಳಿ ನಮ್ಮ ಚಕ್ರವರ್ತಿಯವರು ಸಂತೋಷಪಟ್ಟು ಆ ಸೈನಿಕ ...ರನ್ನು ಉಲ್ಲಾಸವನ್ನು ತಿಳಿಸಿರುತ್ತಾರೆ. ಅಲ್ಲಿಂದ ಬ್ರಿಟಿಷ್ ಸೈನಿಕರು ...ಮುಂದೆ ನುಗ್ಗಿಹೋಗಿರುತ್ತಾರೋ ಇಲ್ಲವೋ ತಿಳಿಯಲಿಲ್ಲ.

...ಡಾರ್ಡನೆಲ್ಸ್ ಜಲಮಾರ್ಗದಲ್ಲಿ ನಮ್ಮ ಪಕ್ಷದವರು ಇನ್ನೂ ಸ್ವಲ್ಪದೂರ ...ಹೋಗಿದಾರೆ. ನಮ್ಮ ಪಕ್ಷದ ಭೂಸೈನ್ಯಗಳು ಹಿಂದಿನಿಂದ ಬಂದಿಳಿಯು ...ವುದನ್ನು ಎದುರು ನೋಡುತ್ತಿರುವ ಹಾಗೆ ಕಾಣುತ್ತದೆ. ಅದು ಒದಗಿದ ಕೂಡಲೇ ...ಸೈನ್ಯವು ಭೂಮಿಯ ಕಡೆಯಿಂದಲೂ, ಸಮುದ್ರದ ಕಡೆಯಿಂದಲೂ ನುಗ್ಗಿ ...ಹೋಗುವುದಾಗಿದಾರೆಂದು ತೋರುವುದು. ಆ ಜಲಮಾರ್ಗದಲ್ಲಿ ಕಂಡ ...ಕೋಟೆಗಳಿಗೆ ನಮ್ಮ ಪಕ್ಷದವರು ಫಿರಂಗಿ ಗುಂಡುಗಳನ್ನು ಹಾಕುತ್ತಾ ...ಇರುವರು. ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಒಂದು ಬ್ರಿಟಿಷ್ ಸಬ್ ...ಮೆರೀನ್ ಎಂಬ ಹಡಗು ನೆಲದ ಗಡ್ಡೆಯ ಮೇಲೆ ನಿಂತಿತು. ಅವರಲ್ಲಿದ್ದವರನ್ನು ...ಟರ್ಕಿಯವರು ಕೈಸೆರೆ ಹಿಡಿದಿಟ್ಟುಕೊಂಡರು. ಅದರಲ್ಲಿ 31 ಮಂದಿ ಇದ್ದ ...ರು, ಈ ಪೈಕಿ 3 ಮಂದಿ ಹುದ್ದೆದಾರರನ್ನೂ 31 ಮಂದಿ ಇತರರನ್ನೂ ...ಹಿಡಿದರೆಂದು ಟರ್ಕಿಯವರು ತಿಳಿಸುತ್ತಾರೆ. ಆ ಸಬ್‌ಮೆರೀನು ...ಕೆಟ್ಟುಹೋಗಿಲ್ಲವಾದಕಾರಣ ಅದನ್ನು ಟರ್ಕಿಯವರು ಸ್ವಾಧೀನಪಡಿಸಿ ...ಕೊಳ್ಳಬಹುದೆಂಬ ಸಂಶಯವುಂಟಾಗಿತ್ತು. ಇದಕ್ಕಾಗಿ ಬ್ರಿಟಿ ...ಷರು ಕೆಲವು ದೋಣಿಗಳನ್ನು ನಾವಿಕರನ್ನಿಟ್ಟು ಕಳುಹಿಸಿ, ಆ ಸಬ್ ...ಮೆರೀನನ್ನು ಒಡೆದು, ಅದನ್ನು ಟರ್ಕಿಯವರು ತೆಗೆದುಕೊಂಡರೂ ಅವರಿಗೆ ಉಪ ...ಯೋಗವಾಗದಂತೆ ಮಾಡಿಬಿಟ್ಟರು.

...ದಲ್ಲಿ ಟರ್ಕಿಯ ಒಂದು ಸಣ್ಣ ಯುದ್ಧದ ಜಹಜು ತಪ್ಪಿಸಿ ...ಕೊಂಡುಹೋಗಿ ಸೈನ್ಯಗಳಿದ್ದ ಒಂದು ಬ್ರಿಟಿಷ್ ಹಡಗನ್ನು ಟಾರ್ಪೆಡೋ ...ಹೊಡೆದು ಮುಳುಗಿಸಬೇಕೆಂದು ಪ್ರಯತ್ನಪಟ್ಟಿತು. ಆದರೆ ಅದು ಬಿಟ್ಟ ...ಟಾರ್ಪೆಡೋ ಬ್ರಿಟಿಷ್ ಹಡಗಿಗೆ ಬಡಿಯದೆ ತಪ್ಪಿಹೋಯಿತು. ಆದರೂ ...ದಲ್ಲಿ ಕೆಲವು ಬ್ರಿಟಿಷ್ ಸೈನಿಕರಿದ್ದರು. ಈ ಪೈಕಿ 24 ಮಂದಿ ಸಮು ...ದ್ರದಲ್ಲಿ ಮುಳುಗಿದರು; 27 ಮಂದಿ ಸಿಕ್ಕಿ ಇಲ್ಲ. ಅಷ್ಟರಲ್ಲೇ ಬ್ರಿಟಿಷ್ ಯುದ್ಧದ ...ಹಡಗುಗಳು ಆ ಟರ್ಕಿ ಜಹಜನ್ನು ಓಡಿಸಿಕೊಂಡು ಹೋಗಿ ಅದು ಕೀಯಸ್ ...ಎಂದು ಗ್ರೀಕ್ ಗಡ್ಡೆಯ ಮೇಲೆ ನಿಲ್ಲುವಂತೆ ಮಾಡಿದರು. ಆ ಕೂಡಲೇ ...ಗ್ರೀಕ್ ಸರ್ಕಾರದವರು ಬಂದು ಆ ಟರ್ಕಿ ಜಹಜಿನಲ್ಲಿದ್ದ 36 ಮಂದಿ ಟರ್ಕಿ ...ಯವರನ್ನೂ 5 ಮಂದಿ ಜರ್ಮನಿಯವರನ್ನೂ ಹಿಡಿದು ಬಂಧನದಲ್ಲಿ ...ಇಟ್ಟಿರುತ್ತಾರೆ.

...ರಿಂದ ಬಂದು ಯುದ್ಧದ ಜಹಜು ಸಿರಿಯಾದಲ್ಲಿ ಗುಂಡುಗಳನ್ನು ಸುರಿಸಿ ...ಕೆಲವನ್ನು ನಾಶಪಡಿಸಿದೆ. ಈ ಗುಂಡುಗಳು ಬಿದ್ದ ಟರ್ಕಿಯವರ ...ಕೆಲವು ಹಾಳಾಯಿತು. ಈ ರಾಜ್ಯವು ಮೆಡಿಟರೇನಿಯನ್ ಕಡಲ ತೀರ ...ದಲ್ಲಿ ಈಜಿಪ್ಟಿನ ಪೂರ್ವದಿಕ್ಕಿನ ಸಮೀಪದಲ್ಲಿರುವುದು.

...ಎಂಬ ಕಡಲಿನಲ್ಲಿ ಟರ್ಕಿಯವರ ಹತ್ತು ಹಡಗುಗಳನ್ನು ...ಕಡಲ ತೀರದಲ್ಲಿರುವ ಕೆಲವು ಕೋಟೆಗಳಿಗೆ ಗುಂಡುಗಳನ್ನು ಹೊಡೆ...

ಕಾಕಸಸ್ ಪರ್ವತಪ್ರಾಂತ್ಯದಲ್ಲಿ ರಷ್ಯಾದವರು ಟರ್ಕಿಯವರನ್ನು ಹಿಂದು ಹಿಂದಕ್ಕೆ ಓಡಿಸಿಕೊಂಡು ಹೋಗುತ್ತಿರುವರು.

ಏಡನ್ ಎಂಬ ತೀರಪಟ್ಟಣಕ್ಕೆ ವಾಯುವ್ಯದಲ್ಲಿ ಸುಮಾರು 120 ಮೈಲಿ ಆಚೆ ಟರ್ಕಿಯವರು ಓಡೆಮ್ ಎಂಬ ಊರಿಗೆ ಬಂದು ಅಲ್ಲಿರುವ ಅರಬ್ಬಿ ಜನಗಳ ಮೇಲೆ ಕದನಮಾಡಿ, ಆ ಪೈಕಿ ಕೆಲವರನ್ನು ಕೈಸೆರೆ ಹಿಡಿದುಕೊಂಡರು. ಆ ಅರಬ್ಬಿಯವರ ಬಳಿ ಇದ್ದ ಮದ್ದುಗುಂಡೆಲ್ಲಾ ಮುಗಿದು ಹೋದದ್ದರಿಂದ ಅವರು ಟರ್ಕಿಯವರಿಗೆ ಶರಣಾಗತರಾಗಬೇಕಾಯಿತು. ಇದರಿಂದ ಅರಬ್ಬೀ ಜನರೆಲ್ಲಾ ಟರ್ಕಿಯವರ ಪಕ್ಷವನ್ನು ವಹಿಸಲಿಲ್ಲವೆನ್ನುವುದು ಗೊತ್ತಾಗುತ್ತದೆ.

ಆಫ್ರಿಕಾದಲ್ಲಿ.

ಜರ್ಮನಿಯವರಿಗೆ ಸೇರಿದ ದಕ್ಷಿಣ ಪಶ್ಚಿಮ ಆಫ್ರಿಕಾದಲ್ಲಿ ಬ್ರಿಟಿಷರ ಸಂಯುಕ್ತ ಸೈನ್ಯಗಳು ವಿಶೇಷ ಅಡಚಣೆಯೇನೂ ಇಲ್ಲದೆ ನುಗ್ಗಿಹೋಗುತ್ತಿರುವವು. ಈ ಸೈನ್ಯಗಳು ಆಗಲೇ ಅಲ್ಲಿನ ಹಲವು ಮುಖ್ಯ ಸ್ಥಳಗಳನ್ನು ಆಕ್ರಮಿಸಿಕೊಂಡು, ಎಲ್ಲಾ ಒಟ್ಟು ಸೇರುತ್ತಲಿವೆ.

ಪಶ್ಚಿಮ ಆಫ್ರಿಕಕ್ಕೆ ಸೇರಿದ ಕ್ಯಾಮರೂನ್ಸ್ ಸೀಮೆಯಲ್ಲಿ ಜರ್ಮನಿಯವರು ಹಿಮ್ಮೆಟ್ಟಿ ಒಳದೇಶಕ್ಕೆ ಹೋಗಿರುವರು. ಅಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ಅವರ ಬೆನ್ನುಹತ್ತಿ ಹೋಗುತ್ತಿದಾರೆ.

ಪೂರ್ವ ಆಫ್ರಿಕಾದಲ್ಲಿ ಬ್ರಿಟಿಷ್ ಸೈನಿಕರು ಸ್ವಲ್ಪ ಮಟ್ಟಿಗೆ ಮುಂದರಿಸಿ ಹೋಗಿರುವಂತೆ ಸಮಾಚಾರ ಬಂದಿದೆ. ಅಲ್ಲಿ ವಿಶೇಷ ಕದನಗಳೇನೂ ನಡೆದಂತೆ ಕಾಣುವುದಿಲ್ಲ. ಬ್ರಿಟಿಷರು ಸಮುದ್ರ ತೀರಕ್ಕೆ ಜಹಜುಗಳನ್ನು ಕಳುಹಿಸಿ ಸಮುದ್ರದ ಕಡೆಯಿಂದ ಯುದ್ಧ ಸಾಮಗ್ರಿಯಾಗಲಿ ಆಹಾರ ಪದಾರ್ಥಗಳಾಗಲಿ ಆ ಸೀಮೆಗೆ ತಲಪದಂತೆ ಏರ್ಪಾಡು ಮಾಡಿರುತ್ತಾರೆ.

ಸಮುದ್ರದ ಮೇಲೆ.

ಈ ವಾರ ಜರ್ಮನಿಯವರು ತಮ್ಮ ಸಬ್‌ಮೆರೀನುಗಳಿಂದ ಟ್ರೇಡ್ ಸುತ್ತಲೂ ವಿಶೇಷ ನಷ್ಟವನ್ನುಂಟುಮಾಡಿಲ್ಲ. ಸರ್ಕಾರದಿಂದ ರಿಪೋರ್ಟಿನಿಂದ ಬ್ರಿಟಿಷರ ಒಂದು ವ್ಯಾಪಾರದ ಹಡಗೂ, ವಿಮಾನ ಹಿಡಿಯುವುದಕ್ಕೆ ಹೋಗಿದ್ದ ಒಂದು ಹಡಗೂ ಮುಳುಗಿಸಲ್ಪಟ್ಟವೆಂದೂ, 1,519 ಹಡಗುಗಳೂ ಜಹಜುಗಳೂ ಯಾವ ಅಪಾಯವೂ ಇಲ್ಲದೆ ಬ್ರಿಟಿಷ್ ತೀರಪಟ್ಟಣಗಳಿಗೆ ಬಂದು ಹೋಗಿರುತ್ತವೆಂದೂ ಗೊತ್ತಾಗುತ್ತದೆ.—ಜರ್ಮನಿಯವರು ವಿಮಾನ ಹಿಡಿಯುವುದಕ್ಕಾಗಿ ಹೋಗಿದ್ದ ಒಂದು ಬ್ರಿಟಿಷ್ ಹಡಗನ್ನು ಮುಳುಗಿಸಿದರು. ಅದರಲ್ಲಿದ್ದವರನ್ನು ಬದುಕಿಸಿ ಕರತರಬೇಕೆಂದು ಪ್ರಯತ್ನಪಟ್ಟ ಇನ್ನೊಂದು ಹಡಗಿಗೆ ಜರ್ಮನಿಯವರು ಗುಂಡುಹಾಕಿ ಹೊಡೆದರು. ಈ ಪ್ರಕಾರ ಜರ್ಮನಿಯವರು ನಿರಪರಾಧಿಗಳಾದ ಬ್ರಿಟಿಷ್ ಪ್ರಜೆಗಳನ್ನು ಕೊಲ್ಲುತ್ತಿದಾರೆ. ಅವರು ಮುಳುಗಿಹೋಗುತ್ತಿರುವವರನ್ನು ಬದುಕಿಸುವ ಪ್ರಯತ್ನವನ್ನು ಮಾಡುವುದಿಲ್ಲ.

ಜರ್ಮನಿಯವರು ಎಚ್ಚರಿಕೆ ಕೊಡದೇನೇ ಗ್ರೀಕರ ಒಂದು ಹಡಗನ್ನು ಮುಳುಗಿಸಿದರು. ಅದರ ಅದರಲ್ಲಿದ್ದವರು ಬದುಕಿ ಬಂದರು.

ಡಚ್ಚರ ಒಂದು ಹಡಗು ಉತ್ತರ ಸಮುದ್ರದಲ್ಲಿ ಒಂದು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು. ಅದರಲ್ಲಿದ್ದವರು ಬದುಕಿ ಬಂದರು. ಜರ್ಮನಿಯವರು ನೋರ್ವೆಯವರಿಗೆ ಸೇರಿದ ಒಂದು ಜಹಜನ್ನು ಹಿಡಿದಿಟ್ಟುಕೊಂಡಿದಾರೆ.—ಜರ್ಮನಿಯವರು ಡಚ್ಚರ ಒಂದು ಜಹಜನ್ನು ಮುಳುಗಿಸಿದ್ದಕ್ಕಾಗಿ ಅವರು ಆಕ್ಷೇಪಣೆಮಾಡಿದಾರೆ. ಜರ್ಮನಿಯವರು ತಾವು ಬೇಕೆಂದು ಆ ಜಹಜನ್ನು ಮುಳುಗಿಸಲಿಲ್ಲವೆಂದು ಜವಾಬುಕೊಟ್ಟರು. ನಡೆದಿರುವ ವಿದ್ಯಮಾನಗಳನ್ನು ತನಿಖೆ ಮಾಡಿಸಿ ಆ ಹಡಗನ್ನು ಮುಳುಗಿಸಿದ್ದು ನ್ಯಾಯವಲ್ಲವೆಂದು ಕಂಡುಬಂದರೆ ಆಗ್ಗೆ ಜರ್ಮನಿಯವರು ಕ್ಷಮಾಪಣೆಯನ್ನು ಬೇಡುವರೆಂದೂ, ನಷ್ಟಪರಿಹಾರ ದ್ರವ್ಯವನ್ನು ಕೊಡುವರೆಂದೂ ಡಚ್ಚರಿಗೆ ತಿಳಿಸಿದಾರೆ.

ಇತರ ವಿಷಯಗಳು.

ಇಟಲಿ ರಾಜ್ಯದವರ ಉದ್ದೇಶವೇನೋ ಸ್ಪಷ್ಟವಾಗಿ ಗೊತ್ತೇ ಆಗುವುದಿಲ್ಲ. ಆಸ್ಟ್ರಿಯಾದವರು ಎಲ್ಲಿ ಕಟ್ಟಿರುವರು ಇಟಲಿಯವರ ಮೇಲೆ ಬಿದ್ದು ಕದನಮಾಡಿ ದರೆಂದೂ, ಅದರ ಪೂರ್ವೋತ್ತರಗಳನ್ನು ಕುಂತು ತನಿಖೆಮಾಡುತ್ತಿದಾರೆಂದೂ ಕೇಳಲಾಗಿದೆ. ಇಟಲಿಯವರು ಜರ್ಮನಿ ಮತ್ತು ಆಸ್ಟ್ರಿಯಾದವರ ಕೂಡ ಕೆಲವು ದೂರ ಸಂಧಾನಗಳನ್ನು ನಡಿಸಿ ಅವರ ಪತ್ರಗಳನ್ನು ಓಡಾಡಿಸಿದರು ಆದರೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂದು ತಿಳಿಯುತ್ತದೆ. ಇಟಲಿಯವರು ಜರ್ಮನಿಗೆ ಸಾಗಿಹೋಗುತ್ತಿದ್ದ ಕಬ್ಬಿಣ, ತಾಂಬ್ರ ಮೊದಲಾದ ಅನೇಕ ಪದಾರ್ಥಗಳನ್ನು ತಡೆದು ಇಟಲಿಗೆ ಸೇರಿದ ಕೆಲವೂ ಎಂಬಲ್ಲಿ ಇಟ್ಟು ಕೊಂಡಿದಾರೆ.—ಹಂಗೇರಿಯ ಪ್ರಜೆಗಳು ಕರಾರು ಮಾಡಿಕೊಂಡು ನೆಮ್ಮದಿಯಾಗಿ ರೋಣಿದರೆಂದು ಕೇಳಿಕೂಡಲಾಗುತ್ತಿರುವನಾಗೂ, ಆಸ್ಟ್ರಿಯಾದೊಳಗೆ ಆಹಾರ ಪದಾರ್ಥಗಳಿಗೆ ಕೊರತೆಯುಂಟಾಗಿ ಪ್ರಜೆಗಳು ದಂಗೆಕೂಡುತ್ತಿರುವನ್ನು ನಡೆಸುತ್ತಿರುವಂತೆಯೂ, ಆಸ್ಟ್ರಿಯಾದವರು ಸೈನ್ಯಕ್ಕೆ ಸೇರಲು ಯೋಗ್ಯರೆಂದು 19 ರಿಂದ 42 ವಯಸ್ಸಿನೊಳಗಿನವರೆಂದು ಇರುವುದನ್ನು ಕ್ರಮವನ್ನು ಬದಲಾಯಿಸಿ 18 ರಿಂದ 50 ವಯಸ್ಸಿನೊಳಗಿನವರೆಲ್ಲಾ ಸೈನ್ಯಕ್ಕೆ ಬಾರಬೇಕೆಂದು ಬದಲಾವಣೆ ಮಾಡಿರುತ್ತಾರೆಂದೂ ಪ್ರಕಟವಾಗಿರುತ್ತದೆ.

ಜರ್ಮನಿಯವರ ಸೈನಿಕರಲ್ಲಿ ಇದುವರೆಗೆ 27,50,000 ಜನರು ನಷ್ಟವಾಗಿರುತ್ತಾರೆಂದು ಸರ್ಕಾರಿಯಾಗಿ ಪ್ರಕಟಿಸಲಾಗಿದೆ.

ಬ್ರಿಟಿಷರು ಜರ್ಮನಿಯ ಸಬ್‌ಮೆರೀನುಗಳಲ್ಲಿ ಕೈಸೆರೆ ಹಿಡಿದಿರುವಂಥಾ ಜರ್ಮನಿ ಸೈನಿಕರನ್ನು ಸರಿಯಾಗಿ ಆರೈಕೆಮಾಡುವುದಿಲ್ಲವೆಂದು ಶಾಪವನ್ನು ಹೇಳಿ ಜರ್ಮನಿಯವರು ಕೈಸೆರೆ ಹಿಡಿದಿರುವ ಬ್ರಿಟಿಷ್ ಹುದ್ದೆದಾರರನ್ನು ಬಂದೀಖಾನೆಗಳಲ್ಲಿ ಹಾಕಿಕೊಂಡು ಕಷ್ಟಪಡಿಸುತ್ತಿರುವರು.

ಕೈಸರೋ ಪಟ್ಟಿನದಲ್ಲಿ ಈಜಿಪ್ಟಿನ ಸುಲ್ತಾನನನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟವನನ್ನು ಗಲ್ಲಿಗೆ ಹಾಕಿದರು.

ನಮ್ಮ ಪ್ರಿನ್ಸ್ ಆಫ್ ವೇಲ್ಸ್‌ರವರು ಸೈನ್ಯದಲ್ಲಿ ಬಹಳ ಮಟ್ಟಿಗೆ ತರ ಬೇತಿಯಾಗಿದಾರೆ. ಅವರಿಗೆ ನಮ್ಮ ಸೈನಿಕರ ಮೇಲೆ ತುಂಬಾ ವಿಶ್ವಾಸವೂ ಕನಿಕರವೂ ಉಂಟಾಗಿರುವುದು. ಸರ್ ಜಾನ್ ಫ್ರೆಂಚರವರು ಯುದ್ಧ ಭೂಮಿಯಿಂದ ಯುದ್ಧ ಕಾರ್ಯಗಳ ವೃತ್ತಾಂತಗಳನ್ನು ಬರೆದು ಆ ರಿಪೋರ್ಟನ್ನು ಪ್ರಿನ್ಸ್ ಆಫ್ ವೇಲ್ಸ್‌ರವರ ಮೂಲಕ ಬ್ರಿಟಿಷ್ ಗವರ್ನ್‌ಮೆಂಟಿಗೆ ಕಳುಹಿಸಿಕೊಟ್ಟರು. ಇಂಥಾ ರಿಪೋರ್ಟನ್ನು ತೆಗೆದುಕೊಂಡು ಹೋಗುವುದು ವಿಶೇಷ ಗೌರವವಾದ ಕಾರ್ಯವೆಂದು ಎಣಿಸಲ್ಪಟ್ಟಿದೆ.—ಹಿಂದುಸ್ಥಾನದ 26 ನೇ ಸಿಕ್ ರೆಜಿಮೆಂಟ್ ಸೈನ್ಯವು ಚೀನಾಕ್ಕೆ ಹೋಗಿದ್ದ ಅಲ್ಲಿ ಜಪಾನ್‌ನವರಿಗೆ ತುಂಬಾ ಸಹಾಯವಾಗಿತ್ತು ಈಗ ಆ ಸೈನಿಕರು ಚೀನಾದಿಂದ ವಾಪಸು ಕರಿತು ಪಟ್ಟಣಕ್ಕೆ ಬಂದಿದಾರೆ. ಅಲ್ಲಿನ ಪ್ರಜೆಗಳು ಅವರಿಗಾಗಿ ವಿನೋದಗಳನ್ನು ಕಲ್ಪಿಸಿ ತಮ್ಮ ಸಂತೋಷಾದರವನ್ನು ಪ್ರಕಾಶಪಡಿಸಿರುವರು.

ಒಳದೇಶದ ವೃತ್ತಾಂತಗಳು.

ಕಳೆದ ವಾರ ರಾಜಧಾನಿಯಲ್ಲಿ ಎರಡು ದಿನ ಒಳ್ಳೇ ಮಳೆಗಳಾಗಿ ಹವಾ ಸ್ವಲ್ಪ ಮಟ್ಟಿಗೆ ತಂಪಾಗಿದೆ.

ಕಳೆದ ಶನಿವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಮಹಾನಾಡಿ ಶ್ರೀಯವರ ಕೂಡ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿದರು. ಅವರು ಮತ್ತೆ ಈ ವಾರ ಅಲ್ಲಿಗೆ ಚಿತ್ತೈಸುವರೆಂದು ಕೇಳುತ್ತೇವೆ.

ಕಳೆದ ಶುಕ್ರವಾರವೂ ಶನಿವಾರವೂ ನಂಜನಗೂಡಿನಲ್ಲಿ ಕರ್ನಾಟಕ ವೈದ್ಯ ಜ್ಞಾನ ಸಭೆ ನಡೆಯಿತು. ಮದರಾಸಿನ ಮ|| ಸಿ. ಜನರಾಜ ಭಾರವರು ಅಗ್ರಾಸನವನ್ನು ವಹಿಸಿದ್ದರು. ಪ್ರೆಸಿಡೆಂಟರೂ, ಮ|| ಎ. ಮಹಾದೇವಶಾಸ್ತ್ರಿಗಳೂ ಉಪನ್ಯಾಸಗಳನ್ನು ಮಾಡಿದರು. ಮ|| ಕೆ. ಎಸ್. ಚಂದ್ರಶೇಖರ ಅಯ್ಯರವರ ಪತ್ನೀಯವರು ಅಲ್ಲಿನ ಸ್ತ್ರೀಯರನ್ನು ಕರಸಿ ಒಂದು ಸಭೆಯನ್ನು ನಡಿಸಿ ಹಿತೋಕ್ತಿಗಳನ್ನು ಹೇಳಿದರು.

ಬೆಂಗಳೂರು ಕಲಾಸಿ ಪಾಳ್ಯದಲ್ಲಿ ಕಳೆದ ಭಾನುವಾರ ಸಾಯಂಕಾಲ ಅಗ್ನಿ ಕೊಂಡದ ಉತ್ಸವ ನಡೆಯಿತು. ಸಾವಿರಾರು ಪ್ರಜೆಗಳು ಸೇರಿ, ಸುಮಾರು ನೂರು ಜನರು ಮಕ್ಕಳನ್ನೆತ್ತಿಕೊಂಡು ಅರ್ಧಘಂಟೆ ಹೊತ್ತು ಬೆಂಕಿ ಕೆಂಡಗಳ ಮೇಲೆ ನಡೆದಾಡಿದ್ದನ್ನು ಸಂಭ್ರಮದಿಂದ ನೋಡಿದರು.

ಶ್ರೀ ಉತ್ತರಾದಿ ಮಠದ ಶ್ರೀ ಸ್ವಾಮಿಗಳು ಕಳೆದ ಬುಧವಾರ ನಡಿಸಿದ ವಿದ್ವತ್ ಸಭೆಯಲ್ಲಿ ಅರಮನೆ ವಿದ್ವಾಂಸರಾದ ವೇ|| ಮಂಡಿಕಲ್ ರಾಮಶಾಸ್ತ್ರಿಗಳಿಗೆ "ಕವಿಶಿರೋಮಣಿ" ಎಂಬ ಬಿರುದನ್ನೂ, ವಿದ್ವಾನ್ ವಾಸುದೇವಾಚಾರ್ಯರಿಗೆ "ಸಂಗೀತಪ್ರವೀಣ ಶಿಖಾಮಣಿ" ಎಂಬ ಬಿರುದನ್ನೂ ಬಹುಮಾನಗಳ ಸಮೇತ ದಯಪಾಲಿಸಿದರು.

ವ್ಯವಸಾಯದ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಮ|| ಎ. ಕೆ. ಯಜ್ಞನಾರಾಯಣ ಅಯ್ಯರವರು ಮಂಡ್ಯದಲ್ಲಿ ಬೆಳೆ ಮಾಡುವುದಕ್ಕೆ ಒಂದು ಕಂಪನಿಯ ಸ್ಥಾಪಿಸಿ, ಯಂತ್ರ ಮುಂತಾದ ಸಾಧನಗಳನ್ನು ತರಿಸಿ ಆ ಕಸಬನ್ನು ಅಭಿವೃದ್ಧಿಗೆ ತರಬೇಕೆಂದು ಪ್ರಯತ್ನ ಪಡುತ್ತಿದಾರೆ. ಇದಕ್ಕೆ ಮಂಡ್ಯದ ಅಮಲ್ದಾರ್ ಮ|| ಟಿ. ತಕರಾಜೆ ಅರಸಿನವರು ಮುತುವರ್ಜಿ ವಹಿಸಿ ಸಹಾಯ ಮಾಡುತ್ತಲೂ, ಅಲ್ಲಿನ ಮುಖಂಡ ಪ್ರಜೆಗಳನ್ನು ಪ್ರೋತ್ಸಾಹ ಪಡಿಸುತ್ತಲೂ ಬಂದಿರಾರೆಂದು ಕೇಳಿ ಸಂತೋಷಪಡುವವು.

ಕಳೆದ ಸೋಮವಾರ ಬೆಳಿಗ್ಗೆ ಸುಮಾರು 11 ಘಂಟೆಗೆ ಬರೋಡಾ ಸಂಸ್ಥಾನದ ಮಹಾರಾಜರವರೂ ಮಹಾರಾಣಿಯವರೂ ರಾಜಧಾನಿಗೆ ಬೆಂಗಳೂರಿಂದ ಮೋಟರಿನಲ್ಲಿ ದಯಮಾಡಿ ಜಾನ್‌ಬಂಗಲೆಯಲ್ಲಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ನಮ್ಮ ಮಹಾರಾಜರವರ ಕೂಡ ಸ್ವಲ್ಪಹೊತ್ತು ಯೋಗಕ್ಷೇಮವನ್ನು ಬೆಳಸಿ ಆ ದಿನವೇ ಮಧ್ಯಾಹ್ನದ ನಂತರ ಮೋಟರಿನಲ್ಲಿ ನೀಲಗಿರಿಗೆ ಚಿತ್ತೈಸಿದರು. ನಮ್ಮ ಮಹಾರಾಣಿ ಶ್ರೀಯವರೂ ಬರೋಡಾ ಮಹಾರಾಣಿಯವರನ್ನು ಕಾಣಿಸಿಕೊಂಡು ಬೀಳ್ಕೊಡುವ ಮಾಡಿದರು.

ಈ ಸಲದ ಪ್ರಜಾಪ್ರತಿನಿಧಿ ಸಭೆಗೆ ಸಂಸ್ಥಾನದ ಸಭೆಗಳು ನಡೆದು ಪ್ರಜೆಗಳು ಸಮ್ಮತಿಕೊಟ್ಟು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಬೇಕೆಂದೂ, ಇದಕ್ಕಾಗಿ ಸರ್ಕಾರದಿಂದ ಹೊಸದಾಗಿ ಪ್ರಕಟವಾಗಿರುವ ನಿಬಂಧನೆಗಳನ್ನು ಅನುಸರಿಸಿ ಚುನಾವಣೆ ಕೇಳುವವನ್ನು ಜರುಗಿಸಬೇಕೆಂದೂ ವಿಧಿಸಿರುತ್ತಾರೆ. ಓಟ್ ಹಾಕುವ ರೈತರೇ ಮುಂತಾದ ಪ್ರಜೆಗಳು ನಿಶ್ಚಾರಸಿಗಾಗಲಿ, ಮುಖ ದಾಕ್ಷಿಣ್ಯಕ್ಕಾಗಲಿ ಕಟ್ಟು ಬೀಳದೆ ಪ್ರಜಾಪಕ್ಷವನ್ನು ಹಿಡಿದು ವಾದಿಸುವುದಕ್ಕೆ ಯೋಗ್ಯತೆ ಸಾಮರ್ಥ್ಯಾದಿಗಳನ್ನು ಪಡೆದಿರುವಂಥವರನ್ನೇ ಚುನಾಯಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

ಕಳೆದ ಬುಧವಾರ ಮಧ್ಯಾಹ್ನ ಶ್ರೀ ಉತ್ತರಾದಿ ಮಠದ ಶ್ರೀ ಸ್ವಾಮಿಗಳವರು ನಂಜರಾಜಬಹದ್ದೂರರವರ ಚತ್ರದಲ್ಲಿ ಒಂದು ವಿದ್ವತ್ ಸಭೆಯನ್ನು ನಡಿಸಿ ರಾಜಧಾನಿಯಲ್ಲಿರುವ ವಿದ್ವಾಂಸರಿಗೆಲ್ಲಾ ಶಾಲು ಮೊದಲಾದ ಬಹುಮಾನಗಳನ್ನೂ, ಲೌಕಿಕ ದೊಡ್ಡ ಮನುಷ್ಯರಿಗೆ ಫಲಮಂತ್ರಾಕ್ಷತೆಗಳನ್ನೂ ದಯಪಾಲಿಸಿ, ಅರಮನೆಯ ಮರ್ಯಾದೆಗಳ ಸಮೇತ 11 ತೋಪುಗಳಾಗುತ್ತಿರುವಲ್ಲಿ ಗಜಾರೋಹಣರಾಗಿ ನಂಜನಗೂಡನ್ನು ಕುರಿತು ಪ್ರಯಾಣಮಾಡಿದರು. ಆ ದಿನ ಸಾಯಂಕಾಲ ತುಂಬಾ ಮಳೆ ಬಂದಕಾರಣ ಅವರು ಮಧುವನದಲ್ಲಿ ತಂಗಿದರು. ಈ ಊರಿಗೆ ಕೆಲವು ತಿಂಗಳು ಅಲ್ಲೇ ಅವರಿಗೆ ಪಾದಪೂಜೆಗಳನ್ನು ಮಾಡಿ ಸಮಾರಾಧನೆಗಳನ್ನು ನಡಿಸುತ್ತಾ ಬಂದಕಾರಣ ಅವರು ಆ ವನದಲ್ಲೇ ತಂಗಿದ್ದು ಮೊನ್ನೆ ಸೋಮವಾರ ಬೆಳಿಗ್ಗೆ ರಾಜಧಾನಿಯ ವೈದಿಕ ಲೌಕಿಕ ದೊಡ್ಡ ಮನುಷ್ಯರನ್ನು ಕರಸಿಕೊಂಡು ಪ್ರಾಧಾನ್ಯವಾಗಿ ವಿಚಾರವಾಗಿ ಸ್ವಲ್ಪ ಹೊತ್ತು ಚರ್ಚೆ ನಡೆಸಿದರು. ಶ್ರೀ ಸ್ವಾಮಿಗಳು ನೆನ್ನೆ ಅಲ್ಲಿಂದ ನಂಜನಗೂಡಿಗೆ ತೆರಳುವವರಾಗಿದ್ದರು.

ಹಿತಚಿಂತಕ ಎಂಬ ಪತ್ರಿಕೆಯವರು ಬರೆಯುವುದು:—ಸಿದ್ಧಘಟ್ಟದಲ್ಲಿ ಸುಮಾರು ಇಪ್ಪತ್ತೈದು ದಿನಗಳಿಂದ ಕಳ್ಳರ ಅವಾಂತ್ರ ಜಾಸ್ತಿಯಾಗಿ ಜನರು ಕಣ್ಣಿಗೆ ನಿದ್ರೆಯಿಲ್ಲದೆ ಕಷ್ಟಪಡುತ್ತಿದಾರೆ. ಪೊಲೀಸ್ ಇನ್ಸ್‌ಪೆಕ್ಟರು, ಜಮಾದಾರರು, ಪೊಲೀಸಿನವರೂ ಕಷ್ಟಪಟ್ಟು ರಾತ್ರಿ ಹಗಲೂ ತಿರುಗಿ ಗಸ್ತು ಮಾಡುತ್ತಿದ್ದಾಗ್ಯೂ ವರ್ತಮಾನಕ್ಕೆ ಕಳ್ಳರ ಅವಾಂತ್ರವೂ ಭಯವೂ ದಿನೇ ದಿನೇ ಹೆಚ್ಚುತ್ತಲೇ ಇವೆ. ಹೊತ್ತು ಮುಳುಗುತ್ತಲೇ ಕಳ್ಳುಗಳು ಬೀಳುವಿಕೆ, ಮನೆಗಳಿಗೆ ನುಗ್ಗುವುದು ಕಳ್ಳತನ ಈ ರೀತಿ ನಡೆಯುವುದು. ಮನೆಯಲ್ಲಿ ಎರಡು ಕೋಟಿಗಳು ಬೇರೆ ಬೇರೆಯಾಗಿದ್ದು ಒಂದು ಕೋಠಡಿಯಿಂದ ಮತ್ತೊಂದು ಕೋಠಡಿಗೆ ಹೆಂಗಸು ಮಕ್ಕಳು ಹೋಗಬೇಕಾದರೆ ಹಿಂದೆ ಒಬ್ಬ ಗಂಡಸು ಕಾವಲಿದ್ದೇ ಇರಬೇಕಾಗಿದೆ. ಈ ದರೋಡೆಕಳ್ಳರಿಗೆ ಇರುವವರು ಇಲ್ಲದವರು ಎಲ್ಲರೂ ಒಂದೇ ಆಗಿವೆ. ಸಾಹುಕಾರರಿಗೂ, ಕೂಲಿ ಮಾಡುವ ತಿರುಕನಿಗೂ ಇವರ ಭಯ ಬಹಳವಾಗಿದೆ. ಇಂಥಾ ದೊಡ್ಡ ಟೌನಿನಲ್ಲಿ ಪೊಲೀಸ್ ಸಿಬ್ಬಂದಿ ಇದ್ದೂ ಈ ರೀತಿ ಅನಾಹುತಗಳು ನಡೆಯುತ್ತಾ ಇರುವುದನ್ನು ನೋಡಿದರೆ ಬಹಳ ಸಂಕಟವೂ ಆಶ್ಚರ್ಯವೂ ಆಗುತ್ತದೆ.

ಆಂಬ್ಯುಲೆನ್ಸ್ ಸಂಘದ ಮೈಸೂರು ಬ್ರಾಂಚಿನ ಆನರರಿ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಯುದ್ಧದ ರಿಲೀಫ್ ಫಂಡಿಗೆ ಕೆಳಗೆ ಹೇಳುವವರಿಂದ ವಾವತಿ ಬಂದಿರುವ ಚಂದಾ ಹಣಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತಾರೆ. ಹನ್ನೊಂದನೇ ಚಂದಾ ಪಟ್ಟಿ:—ತುಂಕೂರು ಡೆಪ್ಯುಟಿ ಕಮಿಷನರು 6, 7, 8 ನೇ ಚಂದಾ ಪಟ್ಟಿಗಳ ಮೂಲಕ ರೂ. 82-1-0, ನೆಲಮಂಗಲದ ಪ್ರಜೆಗಳು ರೂ. 76-4-6, ಕೋಲಾರ್ ಟೌನ್ ಎಂ. ಇ. ಬರ್ಟ್ ಟ್ರೆಜರರ್ ರೂ. 56-6-0, ತುಂಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ರೂ. 60, ಅರಸೀಕೆರೆ ಪ್ರಜೆಗಳು ಎರಡು ಬಿಸ್ತು ರೂ. 31, ಬೆಂಗಳೂರು ಗವರ್ನ್‌ಮೆಂಟ್ ಸರ್ವೆ ಇಲಾಖಾ ನೌಕರರು 2 ನೇ ಸಲ ರೂ. 26, ತುಂಕೂರು ಗವರ್ನ್‌ಮೆಂಟ್ ಹೈಸ್ಕೂಲ್ ಉಪಾಧ್ಯಾಯರೂ ವಿದ್ಯಾರ್ಥಿಗಳೂ ರೂ. 19-2-0, ಶಿವಮೊಗ್ಗಾ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ರೂ. 15-4-0, ಶಿವಮೊಗ್ಗಾ ಹಿರಿಯೂರು ಪ್ರಜೆಗಳು ರೂ. 13-14-0, ಮಾಗಡಿ ತಾಲ್ಲೂಕು ಆಲೂರು ಗ್ರಾಮದ ಪ್ರಜೆಗಳು ರೂ. 5-8-0, ತುಂಕೂರು ಡೆಪ್ಯುಟಿ ಕಮಿಷನರು 9ನೇ ಚಂದಾ ಪಟ್ಟಿ ರೂ. 65-8-6, ಚನ್ನಪಟ್ಟಣದ ಅಮಲ್ದಾರ್ರು ರೂ. 27-14-0, ಮೈಸೂರು ಗವರ್ನ್‌ಮೆಂಟ್ ಎ. ವಿ. ಸ್ಕೂಲ್ ಉಪಾಧ್ಯಾಯರೂ ವಿದ್ಯಾರ್ಥಿಗಳೂ ರೂ. 13-15-2, ಐದು ರೂಪಾಯಿ ಒಳಗೆ ವಸೂಲಾಗಿರುವುದು ರೂ. 4-2-0, ಜುಮ್ಲಾ ರೂ. 488-15-2; ಹಿಂದೆ ವಸೂಲಾಗಿರುವುದು ರೂ. 321-0-4 ಒಟ್ಟು ರೂ. 8,809-15-6 ಪೈ.

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಮೊಜಫರ್‌ಘಡದಲ್ಲಿ ಕಮಿಷನರ್ ಮಿ|| ಮ್ಯಾಲಿಫ್ಯಾಕ್ಸ್‌ರವರು ಕಳೆದ ಬುಧವಾರ ಒಂದು ದರ್ಬಾರ್ ನಡಿಸಿದರು. ಜಲ್ಲಾದಾರರು, ಲಂಬದಾರ್‌ರು, ಗ್ರಾಮಾಂತರಗಳ ಮುಖಂಡ ಪ್ರಜೆಗಳು ಮುಂತಾದವರೆಲ್ಲಾ ಕರೆಸಲ್ಪಟ್ಟಿದ್ದರು. ಈ ದರ್ಬಾರಿನಲ್ಲಿ ಕಮಿಷನರರು ಹೇಳಿದ್ದೇನೆಂದರೆ—ನೀವುಗಳೆಲ್ಲಾ ನಿಮ್ಮ ನಿಮ್ಮ ಪಟ್ಟಣ ಊರು ಗ್ರಾಮಗಳಲ್ಲಿ ನೆಮ್ಮದಿಗೆ ಭಂಗವುಂಟಾಗದಂತೆ ನೋಡಿಕೊಳ್ಳಬೇಕು. ಗಲಭೆಗಳೇನಾದರೂ ನಡೆದರೆ ನೀವೇ ಅದಕ್ಕೆ ಜವಾಬ್ದಾರರಾಗಬೇಕಾದೀತು. ನೆಮ್ಮದಿಗೆ ಭಂಗವನ್ನುಂಟುಮಾಡಿದವರೆಂದು ತೀರ್ಮಾನದಂತೆ 600 ಜನರನ್ನು ಮೊಜಫರ್‌ಘಡ ಡಿಸ್ಟ್ರಿಕ್ಟಿನಲ್ಲೂ, 400 ಜನರನ್ನು ಝಂಗ್ ಡಿಸ್ಟ್ರಿಕ್ಟಿನಲ್ಲೂ, ಸುಮಾರು 200 ಜನಗಳನ್ನು ಮುಲ್ತಾನ್ ಡಿಸ್ಟ್ರಿಕ್ಟಿನಲ್ಲೂ ಸರ್ಕಾರದವರು ದಸ್ತಗಿರಿಮಾಡಿ ಅವರ ಮೇಲೆ ಮೊಕದ್ದಮೆ ಮಾಡಿದಾರೆ. ಹೊಸದಾಗಿ ಸ್ಪೆಷಲ್ ಟ್ರಿಬ್ಯುನಲ್ಲನ್ನು ನೇಮಕ ಮಾಡಿರುವರು. ಇವರು ಬೇಗ ಬೇಗನೆ ದರ್ಯಾಫ್ತು ಮುಗಿಸಿ, ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸುವರು ಎಂಬುದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಏಪ್ರಿಲ್ 15 ನೇ ತಾ. ವರೆಗಿನ ಬ್ಯಾಂಕಿನ ಲೆಖ್ಖ.

ಶೇಕಿ:—(1) ಷೇರು ಮೊಬಲಗು	ರೂ.	10,00,000
,, (2) ರಿಜರ್ವ್ ಫಂಡು	,,	25,000
,, (3) ಡಿಪಾಜಿಟ್ಟುಗಳು	,,	26,89,129
,, (4) ಇತರೆ	,,	57,160
(ಆಣೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	37,71,289
ಪೇಕಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಸಹ	ರೂ.	587,571
,, (2) ಖಾತೆ ಮತ್ತು ಇತರ ಸಾಲಗಳು	,,	23,58,630
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	,,	393,197
,, (4) ಇನ್ವೆಸ್ಟ್‌ಮೆಂಟುಗಳು	,,	267,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	136,307
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	15,723
,, (7) ಇತರೆ	,,	13,584
(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	37,71,289

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಸಂಪದಭ್ಯುದಯ.

ಧರ್ಮಾಚರಣೆ—ಐಕಮತ್ಯ.

ನಮ್ಮ ಸೀಮೆಯಲ್ಲಿ ಐಕಮತ್ಯವಿಲ್ಲದೆ ವಿಶೇಷ ಪೇಚಾಟಕ್ಕೆ ಗುರಿಯಾಗ ಬೇಕಾಗಿದೆ. ಒಂದು ಮನೆಯವರು ಐಕಮತ್ಯವಾಗಿರುವುದಿಲ್ಲ. ಪ್ರತಿಯೊಂದು ಊರು ಕೇರಿಗಳಲ್ಲೂ ಸಹ ಪಂಗಡಗಳು ಹೆಚ್ಚು. ನಾನಾ ಜನರ ನಡತೆ ನಾನಾ ವಿಧವಾಗಿದೆ. ಒಬ್ಬರ ಮನಸ್ಸಿನಂತೆ ಮತ್ತೊಬ್ಬರ ಮನಸ್ಸಿರುವುದಿಲ್ಲ. ಒಬ್ಬರ ಕಾರ್ಯ ಮತ್ತೊಬ್ಬರಿಗಾಗದು. ಇಷ್ಟೇಕೆ? ನಮ್ಮ ನಮ್ಮಲ್ಲೇ ಒಬ್ಬನು ಚೆನ್ನಾಗಿದ್ದರೆ ಮತ್ತೊಬ್ಬನು ಅಸಹನೆ ಪಡುತ್ತಾನೆ. ಹೀಗಿರುವುದರಿಂದ ಪರಸ್ಪರ ಸಹಾಯ ರಹಿತವಾಗಿ ಸಣ್ಣ ಸಣ್ಣ ಕಾರ್ಯಗಳನ್ನು ಸಹ ಸಾಧಿಸಿಕೊಳ್ಳಲು ಚೈತನ್ಯವಿಲ್ಲದವರಾಗಿದ್ದಾರೆ. ಈ ಮಧ್ಯೆ ಜಾತಿ ಮಾತ್ಸರ್ಯವು ಬೇರೆ ತುಂಬಿ ತುಳುಕುತ್ತಲಿದೆ. ಅಲ್ಲದೆ ಪ್ರತಿಷ್ಠೆಗಾಗಿ ಒಬ್ಬರು ಪೂರ್ವನೆಂದರೆ ಒಬ್ಬರು ಪಶ್ಚಿಮವೆಂದು ಸಾಧಿಸುವ ಹಠವಾದಿತನವು ವಿಶೇಷವಾಗಿದೆ. ಅಸಹನೆ, ಮೋಸ ಮುಂತಾದ ದುರ್ಗುಣಗಳನ್ನು ಹೊಂದಿ ಪರಸ್ಪರ ವಿಶ್ವಾಸವನ್ನು ಹುಟ್ಟಿಸಿಕೊಳ್ಳದೆ ಅಪನಂಬಿಕೆಗೆ ಪಾತ್ರರಾಗಿರುತ್ತಾರೆ.

ಐಕಮತ್ಯವಿಲ್ಲದೆ ಯಾವ ಕಾರ್ಯವೂ ಸುಲಭಸಾಧ್ಯವಾಗುವುದಿಲ್ಲ. ಕಾರ್ಯವನ್ನು ಸುಲಭವಾಗಿ ಸಾಧಿಸದೆ ಅರ್ಥಾರ್ಜನೆಯಾಗುವುದಿಲ್ಲ. ಇಲ್ಲಿಯ ಅನೈಕಮತ್ಯವು ಬಹುಕಾಲದಿಂದಲೂ ಉಂಟಾಗಿರುತ್ತದೆಯಾದುದರಿಂದ ಆತುರದಲ್ಲಿ ಐಕಮತ್ಯವನ್ನುಂಟುಮಾಡುವುದು ಅಸಾಧ್ಯ. ಈಚೆಗೆ ತಮ್ಮ ತಮ್ಮ ಜಾತಿಗಳಲ್ಲಾದರೂ ಒಕ್ಕಟ್ಟನ್ನುಂಟುಮಾಡಿಕೊಳ್ಳೋಣವೆಂದು ಕೆಲವು ಜಾತಿಯವರು ಸಂಘಗಳನ್ನು ಮಾಡಿಕೊಂಡಿದ್ದರೂ ಅಂಥಾ ಕೆಲವು ಸಂಘಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಇತರ ಮತಸ್ಥರಲ್ಲಿ ಅಸೂಯೆಯನ್ನುಂಟುಮಾಡಿಕೊಂಡು ಸಾರ್ವಜನಿಕವಾದ ಐಕಮತ್ಯಕ್ಕೆ ಅಟಂಕವನ್ನು ಕಲ್ಪಿಸಿರುತ್ತವೆ. ಇದರಿಂದಲೇ ಪರಸ್ಪರ ಸಹಾಯಕ ಸಂಘಗಳು ಸಹ ವಿಶೇಷ ಏಳಿಗೆಯನ್ನು ಹೊಂದದೆ ಇರುತ್ತವೆ. ಮತ್ತು ಈಗಿನ ಸಂಘಗಳು ವಿಶೇಷ ವಾಗಾಡಂಬರವಾಗಿರುತ್ತವಲ್ಲದೆ ವಾಗಾಡಂಬರಕ್ಕೆ ತಕ್ಕಂತೆ ಕಾರ್ಯಸಾಧನೆಯಲ್ಲಿರುವುದಿಲ್ಲ.

ಐಕಮತ್ಯವೆಂದರೆ ಎಲ್ಲರ ಮನಸ್ಸೂ ಏಕೀಭವಿಸಿ ವರ್ತನೆಗಳಿಂದ ಕಾರ್ಯತಃ ತೋರ್ಪಡಿಸುವುದು. ಇಂಥಾ ಐಕಮತ್ಯವು ಯಾವ ಕಾಲದಲ್ಲಾದರೂ ಎಂಥಾ ಸಂದರ್ಭಗಳಲ್ಲಾದರೂ ಕೆಂದಿಕುಂದದಂತಿರಬೇಕು. ಹೀಗಾಗುವುದಕ್ಕೆ ನಮ್ಮ ದೇಶದಲ್ಲಿ ಹಲವು ತೊಡಕುಗಳಿರುವವು. ಎಷ್ಟೋ ಪ್ರತಿಬಂಧಕಗಳಿದ್ದಾಗ್ಯೂ ಪ್ರಯತ್ನಶೀಲರಾದ ಮಹಾತ್ಮರು ಐಕಮತ್ಯ ಕಾರ್ಯವನ್ನು ಸಾಧಿಸಲು ಶಕ್ತರಾಗಿದ್ದಾರೆ. ಅದು ಹೇಗೆಂದರೆ, ಇಂಗ್ಲೆಂಡ್ ಮುಂತಾದ ದೇಶಗಳು ಮಹಾತ್ಮರ ಪ್ರಯತ್ನಗಳಿಂದ ಐಕಮತ್ಯವನ್ನುಂಟುಮಾಡಿಕೊಂಡು ಅಜೇಯವಾಗಿರುವುದು ನಿದರ್ಶನವಾಗಿರುತ್ತದೆ.

ಆದುದರಿಂದ ಪ್ರತಿಯೊಬ್ಬರೂ ದೇಶಹಿತೈಷಿಗಳಾಗಿ ತಮ್ಮ ತಮ್ಮ ಊರು ಕೇರಿಗಳಲ್ಲಿ ಸಾರ್ವಜನಿಕವಾದ ಸಂಘಗಳನ್ನು ಸ್ಥಾಪಿಸಿಕೊಂಡು ಕನಿಷ್ಠ ನಡೆನುಡಿಗಳನ್ನು ತಿದ್ದಿಕೊಂಡು, ಐಕಮತ್ಯವನ್ನು ಕಾಪಾಡಿಕೊಳ್ಳುವಂತೆ ಮಾಡಬೇಕು. ಉಪಾಧ್ಯಾಯರುಗಳು ವಿದ್ಯೆಯೊಂದಿಗೆ ನಡತೆಯನ್ನೂ ಮಕ್ಕಳಿಗೆ ಚಿಕ್ಕಂದಿನಿಂದಲೂ ಕಲಿಸುವಂತೆ ಮಾಡಬೇಕು.

ಎಸ್. ಪುಟ್ಟರಾವ್, ಶಿಕಾರಿಪುರ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡೆಸಿದರು. ಕಳೆದ ಮಾರ್ಚಿ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿ ರಿಕಾರ್ಡು ಮಾಡಿದ್ದಾಯಿತು. ಇದರಿಂದ ಆ ತಿಂಗಳಲ್ಲಿ ಎಲ್ಲಾ ಬಾಬುಗಳಿಂದಲೂ ಮ್ಯುನಿಸಿಪಾಲಿಟಿಗೆ ರೂ 20,311-10-9 ಪೈ ಜಮಾ ಆಯಿತು; ರೂ 13,085-0-3 ಪೈ ಖರ್ಚಾಯಿತು. ಆ ತಿಂಗಳಲ್ಲಿ ಜನನ 290; ಮರಣ—ಪ್ಲೇಗ್ 3, ಸಿಡುಬು 6, ಕ್ಷಯ 17, ಮಲೇರಿಯಾ ಜ್ವರ 10, ಒಟ್ಟು 179; ಈ ಪೈಕಿ ಮಕ್ಕಳು 1 ವರುಷದೊಳಗೆ 23, 5 ವರುಷದೊಳಗೆ 16, ಅಂತು 39 ಮಂದಿ ಮೃತಪಟ್ಟರು.—ಆಡಿಟರುಗಳ ರಿಪೋರ್ಟಿನಿಂದ ಆಕ್ಟ್ರಾಯಿ ಉತ್ಪತ್ತಿಯು 1,000 ರೂಪಾಯಿ ಜಾಸ್ತಿಯಾಗಿದೆ ಎಂದೂ, ಮೊಹತರ್ಫಾ ಬಾಬಿನ ವಸೂಲಾತಿ ತಿಂಗಳು ತಿಂಗಳಿಗೆ ಕಡಮೆಯಾಗುತ್ತಿದೆ ಎಂದೂ ತಿಳಿಯಿತು.

ಪಟ್ಟಣದೊಳಗೆ ಬಂದಿರುವ ಚಿಕ್ಕಹರದನಹಳ್ಳಿ ನಾಲೆಯನ್ನು ದುರಸ್ತುಮಾಡುವಲ್ಲಿ ಬರೀ ಕಲ್ಲುಗುಂಡುಗಳನ್ನು ಜೋಡಿಸುವುದಕ್ಕಿಂತ ಚಪ್ಪಡಿಗಳನ್ನು ಹಾಸಿದರೆ ಕ್ಷೇಮವೆಂದೂ, ಈಗ ಮಾಡಿಸುವ ಕಾಮಗಾರಿ ತಾತ್ಕಾಲಿಕವಾಗಿ ಆಗಲಿ, ಶಾಶ್ವತವಾಗಿ ಆಗಲಿ ಆಗಲಾರದೆಂದೂ ಮ॥ ಅನಂತರಾಮಯ್ಯನವರು ಸೂಚಿಸಿದರು. ಪ್ರೆಸಿಡೆಂಟರು—ಚಪ್ಪಡಿಗಳನ್ನೇ ಹಾಸಿದ್ದರೆ ಖರ್ಚು ಹೆಚ್ಚಾಗುತ್ತಿತ್ತು. ಈಗಲೂ ಕಲ್ಲುಗುಂಡುಗಳಿಗೆ ಮೇಲೆ ಗಾರೆ ಹಾಕಿ ಗಟ್ಟಿಯಾಗಿ ನಿಲ್ಲುವಂತೆ ಮಾಡಿಸುತ್ತೇವೆ ಎಂದು ಹೇಳಿದರು.—ಸೊಳ್ಳೆಗಳು ಹುಟ್ಟಿ ಪ್ರಜೆಗಳಿಗೆ ಮಲೇರಿಯಾ ಜ್ವರವನ್ನು ತರುವಂಥಾ ಭಾವಿಗಳನ್ನು ಮುಚ್ಚಿಸುತ್ತೇವೆಂದು ಹೆಲ್ತ್ ಆಫೀಸರವರು ತಿಳಿಸಿದಾಗ ಕೆಲವು ಮೆಂಬರುಗಳು—ಪ್ರಜೆಗಳಿಗೆ ನೀರಿಗೆ ತೊಂದರೆ ಪಡಿಸುವುದು ಧರ್ಮವಲ್ಲವೆಂದು ಸೂಚಿಸಿದರು. ಕೆತ್ತಲಲ್ಲಿದ್ದು ಜನರು ಉಪಯೋಗಿಸದೆ ಇರುವಂಥಾ ಭಾವಿಗಳನ್ನು ಮಾತ್ರ ಮುಚ್ಚಿಸುತ್ತೇವೆಂದು ಹೆಲ್ತ್ ಆಫೀಸರು ತಿಳಿಸಿದರು.

ಸುಬ್ರಾಯನಕೆರೆ ಕೋಡಿ ನಾಲೆಯನ್ನು ಉದಕಕ್ಕೆ ದುರಸ್ತು ಮಾಡಿಸುವುದಕ್ಕೆ 1,200 ರೂಪಾಯಿ ಖರ್ಚಾಗುವುದೆಂದು ಅಂದಾಜು ಆಗಿತ್ತು. ಆದನ್ನೆಲ್ಲಾ ದುರಸ್ತು ಮಾಡಬೇಕಾದದ್ದಿಲ್ಲವೆಂದು ಮ॥ ಪಂಡಿತರವರು ಸೂಚಿಸಿದ್ದರ ಮೇಲೆ ಅಂದಾಜಾ ಪಟ್ಟಿಯನ್ನು 800 ರೂಪಾಯಿಗೆ ಕಡಮೆಮಾಡಿದ್ದರು. ಈ ಕಾಮಗಾರಿ ವಿಷಯ ಬಹಳ ಹೊತ್ತು ಚರ್ಚೆಯಾಯಿತು. ಮೆಂಬರುಗಳು 1,200 ರೂಪಾಯಿನ ಅಂದಾಜಾ ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿ, ಮೊದಲು 800 ರೂಪಾಯಿನ ಕಾಮಗಾರಿ ಮಾಡಿಸಬೇಕೆಂದೂ, ಬಳಿಕ ಅವಶ್ಯ ತೋರಿದರೆ ಬಾಕಿ ಹಣವನ್ನೂ ಖರ್ಚುಮಾಡಿ ಕಾಮಗಾರಿ ಪೂರೈಸಬಹುದೆಂದೂ ತೀರ್ಮಾನ ಮಾಡಿದರು.

ರಾಜಧಾನಿಯಲ್ಲಿ ಬೀಳುವ ಕಸ ಮತ್ತು ಗೊಬ್ಬರದಿಂದ ಮ್ಯುನಿಸಿಪಾಲಿಟಿಗೆ ಉತ್ಪತ್ತಿಯೇನೂ ಆಗುತ್ತಾ ಇಲ್ಲ. ಬೆಂಗಳೂರಿನಲ್ಲಿ ವರುಷಕ್ಕೆ 10,000 ರೂಪಾಯಿ ಹಣ ಈ ಬಾಬಿನಲ್ಲಿ ವರಮಾನವಿದೆ. ಅದೇ ರೀತಿ ಮೈಸೂರಿನಲ್ಲೂ ಹುಟ್ಟುವಳಿ ಮಾಡಬೇಕೆಂದು ಸರ್ಕಾರದವರು ಹೆಲ್ತ್ ಆಫೀಸರಿಗೆ ತಿಳಿಸಿದ್ದಾರೆ. ಅದರ ಮೇಲೆ ಹೆಲ್ತ್ ಆಫೀಸರವರು ಒಂದು ಏರ್ಪಾಡು ಸೂಚಿಸಿದರು. ಅವರ ಸಾರಾಂಶವೇನೆಂದರೆ, ಪ್ರತಿ ದಿನವೂ ಈಗ ಹೊರಗಿನಿಂದ 60-70 ಗೊಬ್ಬರದ ಗಾಡಿಗಳು ಶ್ರೀರಂಗಪಟ್ಟಣ ಮೊದಲಾದ ಕಡೆಗಳಿಂದ ರಾಜಧಾನಿಗೆ ಬಂದು ಗೊಬ್ಬರವನ್ನೆಲ್ಲಾ ಕೂಡಿಸಿ ಸಾಗಿಸಿಕೊಂಡು ಹೋಗುತ್ತವೆ. ಇದನ್ನು ತಡೆದುಬಿಟ್ಟು ಮ್ಯುನಿಸಿಪಾಲಿಟಿಯವರೇ ಗೊಬ್ಬರವನ್ನೆಲ್ಲಾ ಕೂಡಿಸಿ ನಾಲ್ಕಾರು ದಿಕ್ಕುಗಳಲ್ಲಿ ಕೂಡಿಸಿಟ್ಟು 6 ತಿಂಗಳಿಗೋ ವರುಷಕ್ಕೋ ಒಂದು ಸಲ ಹರಾಜು ಹಾಕಿದರೆ ತುಂಬಾ ಉತ್ಪತ್ತಿಯಾಗುತ್ತದೆ. ಇದಕ್ಕೆ ಗಾಡಿಗಳನ್ನು ಹೆಚ್ಚಾಗಿಡಬೇಕು. ಜನಗಳನ್ನು ಹೆಚ್ಚಾಗಿ ನೇಮಿಸಬೇಕು. ಒಂದು ವರುಷವಾದರೂ ಈ ರೀತಿ ಮ್ಯುನಿಸಿಪಾಲಿಟಿ ಸಿಬ್ಬಂದಿ ಇಟ್ಟು ನಡಿಸಿದರೆ ಬಳಿಕ ಗೊಬ್ಬರವನ್ನು ಕಂಟ್ರ್ಯಾಕ್ಟು ಕೊಡಬಹುದು ಎಂದು ಸೂಚಿಸಿದರು. ಈ ಭಾಗದಲ್ಲಿ ಇನ್ನು ಕೆಲವು ಸಂಗತಿಗಳೂ, ಖರ್ಚು ಬಾಬುಗಳೂ ಖಚಿತವಾಗಿ ಇಷ್ಟೇ ಸರಿ ಎಂದು ಗೊತ್ತಾಗಬೇಕಾಗಿರೋಣವರಿಂದ ಹೆಲ್ತ್ ಕಮಿಟಿಯವರು ಮತ್ತೆ ಈ ವಿಚಾರವನ್ನು ಪುನರಾಲೋಚಿಸಮಾಡುವುದು ಉತ್ತಮವೆಂದು ರಾವ್ ಬಹದೂರ್ ಮ॥ ರಂಗಯ್ಯಂಗಾರ್ರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು.

ಮೈಸೂರು ಪುರಾಭಿವೃದ್ಧಿ ಸಂಘವು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ತಿಂಗಳು ಕಟ್ಟಳೆಯ ಮೀಟಿಂಗು ಕಳೆದ ಸೋಮವಾರ ಬೆಳಿಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ನಡೆಯಿತು. ಚೇರ್‌ಮನ್ ಮ॥ ಟಿ. ಜಿ. ಲಕ್ಷ್ಮೀನರಸಾಯರೂ, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಡಾ॥ ಶ್ರೀನಿವಾಸರಾಯರೂ, ಹೆಲ್ತ್ ಆಫೀಸರ್ ಮಿ॥ ಎ. ಕೆ. ಪಾಣಿಯವರೂ, ವೈಸ್ ಪ್ರೆಸಿಡೆಂಟ್ ಮ॥ ಬಿ. ನಾರಾಯಣರಾಯರೂ, ರೆವ॥ ಜೆ. ಡಬ್ಲಿಯು. ಸಾಡ್ಲರ್ ಸಾಹೇಬರೂ, ರಾವ್ ಬಹದೂರ್ ಮ॥ ಎಂ. ಸಿ. ರಂಗಯ್ಯಂಗಾರ್ರೂ, ಮಿ॥ ಮಹಮದ್ ಜಾಫರ್ ಸಾಹೇಬರೂ ಹಾಜರಾಗಿದ್ದರು.

ರಾಜಧಾನಿಯ ಮುಖ್ಯ ಮುಖ್ಯವಾದ ಸುಮಾರು 40 ದೊಡ್ಡ ಬೀದಿಗಳಲ್ಲಿ ಸುಮಾರು 39,000 ಸುಂದರವಾದ ಸಾಲುಗಿಡಗಳನ್ನು ಹಾಕಿಸಬೇಕೆಂದೂ, ಇದಕ್ಕೆಲ್ಲಾ ಸುಮಾರಾಗಿ 35-40 ಸಾವಿರ ರೂಪಾಯಿ ಖರ್ಚಾಗುವುದೆಂದೂ, ಇದಕ್ಕಾಗಿ ಮ್ಯುನಿಸಿಪಾಲಿಟಿಯವರು 40 ರೂಪಾಯಿ ಸಂಬಳದ ಒಬ್ಬ ಓವರ್ಸೀಯರ್‌ನನ್ನು ನೇಮಿಸುತ್ತಾರೆ ದೂ ಪ್ರೆಸಿಡೆಂಟರು ತಿಳಿಸಿ, ಈ ಕಾರ್ಯವನ್ನು ಟ್ರಸ್ಟ್ ಬೋರ್ಡಿನಿಂದ ಮಾಡಿಸಬೇಕೆಂದು ಮ್ಯುನಿಸಿಪಲ್ ಕೌನ್ಸಿಲಿನವರು ಇಚ್ಛಿಸುತ್ತಾರೆಂದು ಹೇಳಿದರು. ಅಂಥಾ ಬೀದಿಗಳನ್ನು ಕರ್ಜನ್ ಪಾರ್ಕಿನ ಒಂದು ಕಡೆ ಬೆಳೆಯುವುದಕ್ಕೂ, ದಕ್ಷಿಣಾಭಿವೃದ್ಧಿಯಲ್ಲಿ ಗ್ರಾಮಸಾರವು ಊರಾಚೆ ಬೀಳುವ ಸೂಯೆಜ್ ಫಾರಮಿನಲ್ಲಿ ಗಿಡಗಳನ್ನು ಮೊದಲು ಬೆಳೆಯುವುದಕ್ಕೂ 6,000 ರೂಪಾಯಿ ಖರ್ಚಾಗಬೇಕೆಂದು ಸೂಚಿಸಿದರು. ಈ ಕೆಲಸವನ್ನೆಲ್ಲಾ ಟ್ರಸ್ಟ್ ಬೋರ್ಡಿನಿಂದಲೇ ಮಾಡಿಸಬೇಕೆಂದು ಮೆಂಬರುಗಳು ಒಪ್ಪಿ ಆ ಖರ್ಚು ಪಟ್ಟಿಯನ್ನು ಪ್ಯಾಸ್ ಮಾಡಿದರು.—ಕನ್ನೇಗೌಡನ ಕೊಪ್ಪಲಲ್ಲಿ ಲಿಂಗೇಗೌಡರಿಗೆ ದೇವಸ್ಥಾನವನ್ನೂ ಸತ್ರವನ್ನೂ ಕಟ್ಟುವುದಕ್ಕೆ ಸುಮಾರು ಮೂರು ಎಕರೆ ನಿವೇಶನವನ್ನು ಕೊಡಬಹುದೆಂದೂ, ಆದರೆ ಆ ದೇವಸ್ಥಾನಕ್ಕೆ ಅವರಿಂದ ಬರುವ ಉತ್ಪತ್ತಿಯನ್ನೆಲ್ಲಾ ವಿನಿಯೋಗಿಸುವಂತೆ ಅವರಿಂದ ಒಪ್ಪಂದ ಮಾಡಿಕೊಂಡು ನಿವೇಶನವನ್ನು ಕೊಡಬೇಕೆಂದೂ ಮೆಂಬರುಗಳು ಒಪ್ಪಿಕೊಂಡರು.—ಹಾರ್ಡಿಂಗ್ ಸರ್ಕಲಿನ ಆರು ಬಾಗಿಲುಗಳ ಮೇಲ್ಗಡೆಯೂ ವಿದ್ಯುಚ್ಛಕ್ತಿಯ ದೀಪಗಳನ್ನು ಇಡುವಂಥಾ 12 ಲಾಂದ್ರಗಳನ್ನು ಸೀಮೆಯಿಂದ 810 ರೂಪಾಯಿಗೆ ತರಿಸಿದೆ ಎಂದು ಪ್ರೆಸಿಡೆಂಟರು ತಿಳಿಸಿದ್ದನ್ನು ಮೆಂಬರುಗಳು ಅದಕ್ಕೆ ಹಣ ಕೊಡಬಹುದೆಂದು ಸಮ್ಮತಿಪಟ್ಟರು.

ದೊಡ್ಡಕೆರೆ ಏರಿ ಬಳಿ ಪೊಲೀಸ್ ಸ್ಟೇಷನ್ನಿಂದ ಹರಿಯುವ ಕರೋಹಟ್ಟಿ ಹಿಂಭಾಗದಲ್ಲಿ ಇರುವ ಕೆರೆಯ ನಾಲೆಯನ್ನು ಚೆನ್ನಾಗಿ ದುರಸ್ತು ಮಾಡಿಸುವುದಕ್ಕೆ 312 ರೂಪಾಯಿನ ಖರ್ಚು ಪಟ್ಟಿಯನ್ನು ಪ್ಯಾಸ್ ಮಾಡಿದರು.—ಸುಣ್ಣದಕೇರಿಯಲ್ಲಿ ಹೊಸದಾಗಿ ಹಾಕುವ ರಸ್ತೆಗೆ ಮಧ್ಯೆ ಸಿಕ್ಕುವ ಸುಮಾರು 200 ರೂಪಾಯಿ ಬಾಳುವ ಒಂದು ಮನೆಯನ್ನು ಬೋರ್ಡಿನವರು ಕೊಂಡುಕೊಳ್ಳಬಹುದೆಂದು ಒಪ್ಪಲಾಯಿತು.—ಫಕೀರ್ ಸಯ್ಯದ್ ಮಹಮ್ಮದ್ ಅರಬ್ ಎಂಬ ಸಾಹೇಬರು ಮಹಮದೀಯರಿಗಾಗಿ ಒಂದು ಮುಸಾಫರ್‌ಖಾನೆಯನ್ನು ಧರ್ಮಾರ್ಥ ಹಣ ಕೊಡಿಸಿ ಕಟ್ಟಿಸುವುದಾಗಿಯೂ, ಅದಕ್ಕೆ ರೈಲ್ವೆ ಸ್ಟೇಷನ್ ರಸ್ತೆಯಲ್ಲಿ ಜನಾನಾ ಮಿಷನ್ ಹಿಂದೂಸ್ತಾನಿ ಸ್ಕೂಲಿನ ಪಕ್ಕದಲ್ಲಿರುವ ಖಾಲಿ ನಿವೇಶನವನ್ನೂ ಗಳುವಿನ ಅಂಗಡಿಗಳನ್ನೂ ಸೇರಿಸಿ ತಮಗೆ ಕೊಡಿಸಬೇಕೆಂದೂ ಕೇಳಿದ್ದರು. ಗಳುವಿನ ಅಂಗಡಿಗಳನ್ನು ಅಲ್ಲಿಂದ ತೆಗೆಯುವುದು ಬಡಬಗ್ಗರಾದ ಪ್ರಜೆಗಳಿಗೆ ನಾನಾ ಕೆಲಸಗಳಿಗೆ ಅಡಚಣೆಯೂ ಕಷ್ಟವೂ ಆಗುತ್ತಿಂದೂ, ಆ ನಿವೇಶನವು ಪ್ರತ್ಯೇಕವಾದ ಕಾರ್ಯಕ್ಕೆ ತೆಗೆದಿಟ್ಟಿರೋಣದರಿಂದ ಚಟ್ಟಹಳ್ಳಿ ಬಡಾವಣೆಯಲ್ಲಿ ಅವರಿಗೆ ಇಷ್ಟವಿದ್ದರೆ ನಿವೇಶನವನ್ನು ಕೊಡಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು.—ಚಟ್ಟದ ತಪ್ಪಲಲ್ಲಿರುವ ಕುರುಬಾರಹಳ್ಳಿಯನ್ನು ತೆಗೆದು ಹಾಕಿ ಆ ಪ್ರಾಂತ್ಯದಲ್ಲೆಲ್ಲಾ 2-3 ಎಕರೆಯಷ್ಟು ವಿಸ್ತಾರವುಳ್ಳ ಬಂಗಲಾ ನಿವೇಶನಗಳನ್ನು ಮಾಡುತ್ತೇವೆಂದೂ, ಬಂಗಲೆ ಒಂದಕ್ಕೆ 10,000 ರೂಪಾಯಿಗೆ ಕಮ್ಮಿ ಇಲ್ಲದಂತೆ ಖರ್ಚುಮಾಡಿ ಕಟ್ಟುವಂಥಾ ಪ್ರಜೆಗಳ್ಯಾರಾದರೂ ಇದ್ದರೆ ಬೇಗನೆ ಅರ್ಜಿ ಹಾಕಿಕೊಳ್ಳಬಹುದೆಂದೂ ಪ್ರೆಸಿಡೆಂಟರವರು ಮೆಂಬರುಗಳಿಗೆ ತಿಳಿಸಿದರು.—ಜೀವಣ್ಣರಾಯನಕಟ್ಟೆ ಒಳಪ್ರದೇಶವನ್ನು ಹಳ್ಳ ಕೆಟ್ಟು ಇಲ್ಲದಂತೆ ಸಮಪಡಿಸಿ, ಫಿಲ್ಟರ್ ಬೆಡ್ಡಿನಿಂದ ಬರುವ ನೀರು 3-4 ಅಡಿಯಷ್ಟು ನಿಲ್ಲುವಂತೆ ಅಲಂಕಾರವಾದ ಏರಿಯನ್ನು ಕಟ್ಟಿಸುವುದೇ ಮುಂತಾದ ಕಾಮಗಾರಿಗಳಿಗೆ 16,100 ರೂಪಾಯಿ ಖರ್ಚುಮಾಡಬಹುದೆಂದು ಮೆಂಬರುಗಳು ಅಂದಾಜಾ ಪಟ್ಟಿಯನ್ನು ಪ್ಯಾಸ್ ಮಾಡಿದರು.—ಚಟ್ಟಹಳ್ಳಿ ಬಡಾವಣೆಯಲ್ಲಿ ರಸ್ತೆಗಳನ್ನೂ ಮನೆ ನಿವೇಶನಗಳನ್ನೂ ಗುರುತುಮಾಡಿ ಕಲ್ಲುಗಳನ್ನು ನೆಡಿಸುವುದಕ್ಕೆ 330 ರೂಪಾಯಿ ಖರ್ಚಿನ ಪಟ್ಟಿ ತಯಾರಾಗಿತ್ತು. ಇದನ್ನು ಮೆಂಬರುಗಳು ಒಪ್ಪಿದರು.

ಮಹಾರಾಜರವರ ಸಂಸ್ಕೃತ ಕಾಲೇಜಿಗೂ ಸಾಹುಕಾರ್ ಮ॥ ಬನುಮಯ್ಯನವರು ಕಟ್ಟಿಸುತ್ತಿರುವ ಟೆಂಬಟಿಗರ ಸ್ಕೂಲಿಗೂ ಮಧ್ಯೆ ಇರುವ ಮನೆಗಳನ್ನೆಲ್ಲಾ ಟ್ರಸ್ಟ್ ಬೋರ್ಡಿಗೆ ಸುಮಾರು 20,890 ರೂಪಾಯಿಗೆ ಕೊಂಡುಕೊಂಡು ಒಡೆದು ಹಾಕಿ, ಆ ನಿವೇಶನದಲ್ಲಿ 1,30,000 ರೂಪಾಯಿಗೆ ಮ್ಯುನಿಸಿಪಲ್ ಆಫೀಸನ್ನು ಅಲಂಕಾರವಾಗಿ ಕಟ್ಟಿಸಬೇಕೆಂದು ಇಚ್ಛೆಯಾಯಿತು. ಸರ್ಕಾರದವರು ಆ ನಿವೇಶನವನ್ನು ಸರಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ.—ಪುರಾಲಂಕಾರ, ಬಡಾವಣೆ, ಆರೋಗ್ಯ ಏರ್ಪಾಡು ಮೊದಲಾದ ವಿಚಾರಗಳನ್ನು ಕುರಿತು ಉಪನ್ಯಾಸ ಮಾಡಿದ ಪ್ರೊಫೆಸರ್ ಗೆಡ್ಡೀಸ್‌ರವರು ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಹತ್ತು ದಿನ ಇದ್ದರೆಂದೂ ಅವರಿಗೆ ದಿನ 1 ಕ್ಕೆ 7 ಗಿನಿಯಂತೆ ಅಂದರೆ ಒಟ್ಟು ಸುಮಾರು 1,100 ರೂಪಾಯಿ ಪ್ರತಿಫಲ ಕೊಡಲಾಗಿದೆ ಎಂದೂ, ಈ ಹಣವನ್ನು ಟ್ರಸ್ಟ್ ಬೋರ್ಡಿನವರು ವಹಿಸಿಕೊಂಡು ಕೊಡಬೇಕೆಂತಲೂ ಸರ್ಕಾರದವರು ಕೇಳಿದಕ್ಕೆ ಅದರಲ್ಲಿ ಅರ್ಧ ಮೊಬಲಗನ್ನು ಮೈಸೂರಿನ ಟ್ರಸ್ಟ್ ಬೋರ್ಡಿನಿಂದ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಗಾರ್ಡನ್ ಹೋಟೇಲಿನ ಎದುರಿಗೆ ಗರ್ಲ್ಸ್ ಸ್ಕೂಲಿಗಾಗಿ ಬಾಡಿಗೆಗೆ ತೆಗೆದುಕೊಂಡಿರುವ ಕಟ್ಟಡದ ಕಕ್ಕಸಿನ ನೀರನ್ನು ಮ್ಯುನಿಸಿಪಲ್ ಸೂಯೆಜ್ ನಲ್ಲಿಗೆ ಬೀಳುವಂತೆ ಕಾಮಗಾರಿ ಮಾಡುವುದಕ್ಕೆ 300 ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಲಾಯಿತು.—ಜಗನ್ಮೋಹನಬಂಗಲೆ ಎದುರಿನ ಲಕ್ಷ್ಮೀವಿಲಾಸ್ ರಸ್ತೆಯಲ್ಲಿ ಎರಡು ಕಡೆಗಳಲ್ಲೂ 6 ಅಡಿಯ ಫುಟ್ ಪ್ಯಾತ್ (ಜನರು ತಿರುಗುವ ಹಾದಿ) ಮಾಡುವುದಕ್ಕೆ ಈಗ ಖರ್ಚಾಗಿರುವ 310 ರೂಪಾಯಿನ ಜೊತೆಗೆ ಇನ್ನೂ 600 ರೂಪಾಯಿ ಖರ್ಚುಮಾಡಬಹುದೆಂದು ಅಂದಾಜಾ ಪಟ್ಟಿಯನ್ನು ಪ್ಯಾಸ್ ಮಾಡಿದರು.

ಋತುಮತೀ ವಿವಾಹವು ಸಾಧುವೇ, ಅಸಾಧುವೇ?

ಶ್ರೀ ಉತ್ತರಾದಿ ಸ್ವಾಮಿಗಳ ಸನ್ನಿಧಿಯಲ್ಲಿ ನಡೆದ ಚರ್ಚೆಯ ಸಾರಾಂಶ.

ಕಳೆದ ಮಾರ್ಚಿ ತಾ 28 ರಲ್ಲಿ ಶ್ರೀ ಉತ್ತರಾದಿ ಸ್ವಾಮಿಗಳು ರಾಜಧಾನಿಯ ಅಡ್ವೊಕೇಟ್ ಮ॥ ಹೆಚ್. ನರಸಿಂಗರಾಯರ ಮನೆಯಲ್ಲಿರುವಾಗ್ಗೆ ವೇ॥ ಗಳಾದ ಎ. ಮಹದೇವ ಶಾಸ್ತ್ರಿಗಳು, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, ಧರ್ಮಾಧಿಕಾರಿ ರಾಘವೇಂದ್ರಾಚಾರ್ಯರೇ ಮುಂತಾದ ವೈದಿಕರೂ, ಮ॥ ಗಳಾದ ಅಂಬಳೆ ಅಣ್ಣಯ್ಯಪಂಡಿತರು, ಎಂ. ವೆಂಕಟಕೃಷ್ಣಯ್ಯನವರು, ಎ. ಗೋವಿಂದಾಚಾರ್ಯರು, ಅಡ್ವೊಕೇಟ್ ಕೆ. ಚಂದ್ರಶೇಖರಯ್ಯನವರು, ಅಡ್ವೊಕೇಟ್ ಎಂ. ಡಿ. ನಾರಣಯ್ಯಂಗಾರ್ರು, ಟಿ. ಗುಂಡಪ್ಪನವರು ಮೊದಲಾದ ಲೌಕಿಕರೂ ಬಹಳವಾಗಿ ಸೇರಿದ್ದರು.

ನಮ್ಮ ಶಾಸ್ತ್ರದಲ್ಲಿ ಉಕ್ತವಾದ ಧರ್ಮಗಳೆಲ್ಲವೂ ಜನಗಳ ಕ್ಷೇಮಕ್ಕೋಸ್ಕರವಾಗಿಯೇ ಪೂರ್ವಿಕರಿಂದ ಮಾಡಲ್ಪಟ್ಟವು. ಆದರೆ ಈಗಿನ ಕಾಲಸ್ಥಿತಿಯಲ್ಲಿ ಆ ಧರ್ಮಗಳ ದೆಸೆಯಿಂದ ಜನಗಳಿಗೆ ತೊಂದರೆ ಉಂಟಾಗುವ ಪಕ್ಷದಲ್ಲಿ, ಈಗಿನ ಮಹನೀಯರು ಜನಗಳ ಕ್ಷೇಮಕ್ಕಾಗಿ ಆ ಧರ್ಮಗಳನ್ನು ಯಾತಕ್ಕೆ ಬದಲಾಯಿಸಕೂಡದು ಎಂದು ಕೆಲವು ಯುಕ್ತವಾದಿಗಳಿಂದ ಪೂರ್ವಪಕ್ಷ ಮಾಡಲಾಯಿತು. ಇದಕ್ಕೆ ಉತ್ತರ ಬಂದದ್ದು.—ದೃಷ್ಟಪ್ರಯೋಜನಗಳೆಂದೂ, ಅದೃಷ್ಟಪ್ರಯೋಜನಗಳೆಂದೂ ಎರಡು ವಿಧ ಪ್ರಯೋಜನಗಳುಂಟು. ನಮ್ಮ ಶಾಸ್ತ್ರಗಳ ರೀತ್ಯಾ ತಾತ್ಕಾಲಿಕವಾಗಿ ತೋರಿಬರುವ ಸುಖ ಲೇಶವು ಎಂದಿಗೂ ಪ್ರಯೋಜನವಾಗಿ ಎಣಿಸಲ್ಪಡುವುದಿಲ್ಲ. ತತ್ಕಾಲದಲ್ಲಿ ಕಿಂಚಿತ್ ಕಷ್ಟ ಕಂಡುಬಂದರೂ ಪರಿಣಾಮ ದೆಸೆಯಲ್ಲಿ ಸುಖಾಧಿಕ್ಯ ಉಂಟಾಗುವುದಾವುದೋ ಅದೇ ಮುಖ್ಯ ಪ್ರಯೋಜನವಾಗಿ ಎಣಿಸಲ್ಪಡುವುದು. ಹೀಗೆ ನಮ್ಮ ಶಾಸ್ತ್ರ ರೀತ್ಯಾ ಅದೃಷ್ಟ ಪ್ರಯೋಜನವೇ ಮುಖ್ಯವಾದದ್ದು. ತಾನಾಗಿ ಲಭಿಸುವ ದೃಷ್ಟಪ್ರಯೋಜನವು ಮುಖ್ಯವಲ್ಲ. ದೃಷ್ಟಪ್ರಯೋಜನವೇ ಮುಖ್ಯವಾಗಿದ್ದಲ್ಲಿ ವಿವಾಹಾದಿ ಸಂಸ್ಕಾರಗಳಿಗೂ, ಶಾಸ್ತ್ರ ನಿಯಮಗಳಿಗೂ ಕಟ್ಟುಬಿದ್ದು ಅವುಗಳನ್ನು ಆಚರಿಸಿಯೇ ದೃಷ್ಟಪ್ರಯೋಜನಗಳನ್ನು ಪಡೆಯಬೇಕೆಂಬ ನಿರ್ಬಂಧವೇಕೆ? ವಿವಾಹಾದಿ ಸಂಸ್ಕಾರಗಳೂ ನಿಯಮಗಳೂ ಇಲ್ಲದೇನೇ ಸ್ತ್ರೀಸಂಗ, ಪುತ್ರೋತ್ಪಾದನ ಮುಂತಾದ ದೃಷ್ಟಪ್ರಯೋಜನಗಳು ಲಭಿಸುವುದಿಲ್ಲವೇ? ಬಾಲಕಕಾರ್ಯದಲ್ಲಿ ಕಷ್ಟಗಳಿದ್ದಾಗ್ಯೂ ಭೋಜನದ ಸುಖವೇ ಹೇಗೆ ಮುಖ್ಯವೋ, ವಿದ್ಯಾಭ್ಯಾಸಕ್ಕಾಗಿ ಬಾಲಕರಿಗೆ ಮಾಡುವ ಶಿಕ್ಷಣ ನಿಯಮಗಳು ಕಷ್ಟವಾಗಿ ತೋರಿಬಂದರೂ ವಿದ್ಯಾವಂತರಾಗಿ ಸುಖಪಡುವುದು ಹೇಗೆ ಮುಖ್ಯವೋ ಹಾಗೆ ಧರ್ಮಗಳ ವಿಷಯದಲ್ಲಿಯೂ ದೃಷ್ಟಪ್ರಯೋಜನಗಳು ತತ್ಕಾಲದಲ್ಲಿ ತೊಂದರೆಯಾಗಿ ಕಂಡುಬಂದರೂ ನಮ್ಮ ಮಹರ್ಷಿಗಳು ತಮ್ಮ ದಿವ್ಯಜ್ಞಾನದಿಂದ ನೋಡಿ ನಮ್ಮ ಮೇಲಿನ ವಾತ್ಸಲ್ಯದಿಂದ ಶಾಸ್ತ್ರದಲ್ಲಿ ಬರೆದಿಟ್ಟಿರುವಂತೆ ಮುಂದೆ ಬರತಕ್ಕ ಮಹತ್ತಾದ ಅದೃಷ್ಟ ಪ್ರಯೋಜನಗಳ ದೆಸೆಯಿಂದ ಧರ್ಮಗಳು ಪರಿಗ್ರಾಹ್ಯವೇ ವಿನಾ ಎಂದಿಗೂ ಬದಲಾಯಿಸಲ್ಪಡತಕ್ಕವುಗಳಲ್ಲ.

ಆ ಮುಂದೆ ನಡೆದ ಚರ್ಚೆಯಲ್ಲಿ ಮುಖ್ಯವಾಗಿ ಮಾತನಾಡಿದವರು ವೇ॥ ಮಹದೇವ ಶಾಸ್ತ್ರಿಗಳು ಮತ್ತು ಶ್ರೀ ಶ್ರೀ ಗಳವರೂ. ಆದರೆ ಉಭಯ ಪಕ್ಷಕ್ಕೆ ಸೇರಿದ ಕೆಲವು ಲೌಕಿಕ ವೈದಿಕರೂ ಮಧ್ಯೆ ಒಂದೊಂದು ಮಾತನಾಡುತ್ತಿದ್ದರು.

ಪೂರ್ವ ಪಕ್ಷದವರು—ಆಪಸ್ತಂಭ ಧರ್ಮಸೂತ್ರದಲ್ಲಿ “ಸಾಮಯಾಚಾರಿಕಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ” ಎಂದೇ ಪ್ರಾರಂಭವಾಗಿರುವುದರಿಂದ ಸಮಯ, ಅಂದರೆ ಕಾಲಕ್ಕೆ ತಕ್ಕಂತೆ ಪುರುಷರು ಏಕದೇಶವಾಗಿ ಮಾಡಿಕೊಳ್ಳುವ ವ್ಯವಸ್ಥೆಯನ್ನನುಸರಿಸಿ ಮಾಡುವ ಆಚಾರಗಳೇ ಸಮಯಾಚಾರವೆನ್ನಿಸಿಕೊಳ್ಳುವವು. ಆದುದರಿಂದ ಪುರುಷ ವ್ಯವಸ್ಥೆಗಳು ಭಿನ್ನಭಿನ್ನವಾಗುತ್ತ ಬಂದ ಹಾಗೆಲ್ಲಾ, ಆಚಾರಗಳು ಭೇದಿಸಿದ ಹಾಗೆಲ್ಲಾ ಧರ್ಮಬೋಧಕ ಶಾಸ್ತ್ರಗಳನ್ನು ಬದಲಾಯಿಸಬೇಕು. ಉತ್ತರವಾದಿಗಳು.—ಸಮಯಾಚಾರ ಧರ್ಮಗಳು ಎಂಬ ವಚನದಲ್ಲಿ “ಸಮಯ” ಶಬ್ದಕ್ಕೆ ಈ ಅರ್ಥವು ಸಾಧುವಲ್ಲ. ಸಮಯಾಚಾರಗಳೆಂದರೆ ಕೇವಲ ಪುರುಷ ವ್ಯವಸ್ಥೆಗಳಿಂದ ಸಿದ್ಧಿಸುವ ಆಚಾರಗಳೆಂದು ಅರ್ಥವಲ್ಲ. ಅದೇ ಧರ್ಮಸೂತ್ರದಲ್ಲಿ ಇನ್ನು ಸ್ವಲ್ಪ ಮುಂದೆ ನೋಡಿದರೆ “ಧರ್ಮಜ್ಞ ಸಮಯಃ ಪ್ರಮಾಣಂ” ಎಂದೂನೂ, ಮನ್ವಾದಿಗಳು “ಧರ್ಮಜ್ಞರು” ಎಂದೂ ಸಹ ಬರೆದಿರುವುದು. ಆದ್ದರಿಂದ ಈಗ ನವೀನವಾಗಿ ಧರ್ಮ ವ್ಯವಸ್ಥಾಪಕರೆಂದು ಬದ್ಧಕಂಕಣರಾಗಿ ನಿಲ್ಲಲು ಆತುರರಾಗಿರುವವರು ಶಾಸ್ತ್ರಾನುಸಾರವಾಗಿ ಅಗಲಿ ಜ್ಞಾನದೃಷ್ಟಿಯಿಂದಾಗಲಿ ಮನು ಮೊದಲಾದ ಮಹರ್ಷಿಗಳಿಗೆ ಸಮಾನರಾಗಿರುವ ಪಕ್ಷದಲ್ಲಿ ಅವರು ಮಾಡುವ ವ್ಯವಸ್ಥೆಯೂ ಕೂಡ ಜನಗಳ ಆದರಣೆಗೆ ಪಾತ್ರವಾಗಬಹುದು. ಹಾಗಿಲ್ಲದೆ ಧರ್ಮ ಸ್ವರೂಪವನ್ನು ಸ್ವಪ್ರತ್ಯಕ್ಷದಿಂದಾಗಲಿ ಶೈಸ್ತ್ರಾಧಾರಗಳಿಂದಾಗಲಿ ತಿಳಿಯಲಾರದೆ ಇರುವವರು ಮಾಡಲೆತ್ನಿಸುವ ವ್ಯವಸ್ಥೆಯು ಕಾರ್ಯಕಾರಿಯಾಗಲಾಗದು; ಅದು ಜನಗಳಿಗೆ ಆದರಣೀಯವೂ ಆಗಲಾರದು. ಅವರು ಮಾಡಲೆಳಿಸುವ ವ್ಯವಸ್ಥೆಯು ಬರೀ ಅವ್ಯವಸ್ಥೆಯಾಗುವುದಲ್ಲದೆ ಅದು ಮುಂದೆ ವಿಪರೀತ ಫಲವನ್ನುಂಟುಮಾಡೀತು! ಅಲ್ಪಜ್ಞರಾದ ಕೆಲವರು ತಮ್ಮ ಬಡ ಮತಿಗೆ ಸಧ್ಯ ಕಾಣಬರುವ ಸುಖಲೇಶದಿಂದ ಮೋಹಿತರಾಗಿ ಮಾಡುವ ಏರ್ಪಾಡುಗಳಿಂದ ಮುಂದೆ ನಮ್ಮ ಸನಾತನ ಲೋಕಾಚಾರಗಳಿಗೆ ಎಂಥೆಂಥ ಅಪಾಯಗಳೂ ಉಪಹತಿಗಳೂ ಸಂಭವಿಸುವವು ಎಂಬ ಅಂಶವನ್ನು ಆಧುನಿಕ ಸಂಘಸಂಸ್ಕಾರಕರು ಆಲೋಚನೆಗೆ ತರುವುದಿಲ್ಲ.

ತರುವಾಯ ಪ್ರೌಢಾ ವಿವಾಹದ ವಿಷಯದಲ್ಲಿ ಪುನಃ ಚರ್ಚೆ ನಡೆಯಿತು. ಆರಂಭದಲ್ಲಿ ಧರ್ಮ ವಿಷಯದಲ್ಲಿ ಪ್ರಮಾಣಗಳು ಯಾವವು ಎಂಬ ವಿಚಾರ ನಡೆದು ಶ್ರುತಿ, ಸ್ಮೃತಿ, ಪುರಾಣ, ಇತಿಹಾಸಗಳು, ಇವೆಲ್ಲವೂ ಪ್ರಮಾಣಗಳೆಂದು ವ್ಯವಸ್ಥಿತವಾಯಿತು. ಆಗ ವೇ॥ ಮಹದೇವಶಾಸ್ತ್ರಿಗಳು ವೇ॥ ಲಕ್ಷ್ಮೀಪುರ ಶ್ರೀನಿವಾಸಾಚಾರ್ಯರ ಸಹಾಯದಿಂದ ಲೋಕಸಿದ್ಧವಾದ ಅರ್ಥಗಳನ್ನು ತಿಳಿಸುವ ಶೃತ್ಯಾದಿ ವಚನಗಳು ಅಪ್ರಮಾಣವೆಂತಲೂ, ಅಪೂರ್ವಾರ್ಥಗಳನ್ನು ಬೋಧಿಸುವ ವಚನಗಳು ಮಾತ್ರ ಪ್ರಮಾಣವೆಂತಲೂ ಹೇಳಿದರು. ಅದಕ್ಕೆ ಉತ್ತರ ಆಯಿತು ಯಾವುದೇನೆಂದರೆ, ಲೋಕಸಿದ್ಧವಾದ ಅರ್ಥಗಳನ್ನು ತಿಳಿಸುವ ವಚನಗಳೂ ಸಹ ಪ್ರಮಾಣಗಳೇ ಹೌದು. ಪ್ರಮಾಣವೆಂದರೆ ವಸ್ತು ಹೇಗಿದೆಯೋ ಅದು ಲೋಕಸಿದ್ಧವಾಗಿದ್ದರೂ ಹಾಗೆಯೇ ಅದನ್ನು ತಿಳಿಸುವುದು ಎಂದರ್ಥ. ಲೋಕಸಿದ್ಧವಾದ ಅರ್ಥಗಳನ್ನು ತಿಳಿಸುವ ವಚನಗಳಿಂದ ಪ್ರಯೋಜನವೇನು ಎಂಬ ವಿಚಾರವು ಒಂದು ವೇಳೆ ಬರಬಹುದೇ ವಿನಾ ಅವು ಪ್ರಮಾಣಗಳಲ್ಲವೆಂತ ಎಂದಿಗೂ ಹೇಳಲವಕಾಶವಿಲ್ಲ ಎಂದು ನಿರೂಪಿಸಿದರು. ಶ್ರುತಿ ಸ್ಮೃತ್ಯಾದಿ ವಚನಗಳು ಅಪೂರ್ವಾರ್ಥವನ್ನು ತಿಳಿಸುವುದಾಗಿದ್ದರೂ, ಸ್ವಪ್ರಯೋಜನವಾಗಿ ಲೋಕಸಿದ್ಧವಾದ ವಿಷಯಗಳನ್ನು ತಿಳಿಸುವುದಾಗಿದ್ದರೂ ಅವು ಪ್ರಮಾಣಗಳೇ ಎಂದು ಸರ್ವರೂ ಒಪ್ಪಿದರು.

ಪೂರ್ವಪಕ್ಷ.—ವಿವಾಹಕ್ಕೆ ಎರಡು ಫಲವುಂಟು ; ದೃಷ್ಟಫಲ, ಅದೃಷ್ಟಫಲ. ಮೊದಲಾದುವು ದೃಷ್ಟಫಲ ಸಾಧಕವು; ಮದುವೆಯಾದ ಮೇಲೆ ಮಕ್ಕಳು ಹುಟ್ಟುವುದೂ ದೃಷ್ಟಫಲ. ಅದೃಷ್ಟಫಲವನ್ನು ಹೇಳುವ ಭಾಗದಲ್ಲಿ ಶಾಸ್ತ್ರಗಳನ್ನು ಬದಲಾಯಿಸಲಾಗದು. ಆದರೆ ದೃಷ್ಟಫಲವನ್ನು ಹೇಳುವ ಶಾಸ್ತ್ರಭಾಗಗಳನ್ನು ಕಾಲ ಧಾರಾಳವಾಗಿ ಬದಲಾಯಿಸಬಹುದು. ಇವಕ್ಕೆ ಉತ್ತರವಾದಿಗಳು ಹೇಳಿದ್ದು.—ಮದುವೆಯಾದ ಮೇಲೆ ಮಕ್ಕಳಾಗುವುದೇ ಮೊದಲಾದದ್ದನ್ನು ದೃಷ್ಟಫಲವೆನ್ನುವಿರಲ್ಲವೇ ? ಈ ವಿಧವಾದ ನಿಮ್ಮ ದೃಷ್ಟಫಲವನ್ನು ಪಡೆಯಲು ಮದುವೆಯೇ ಆಗಬೇಕೇ ? ಏಕೆಂದರೆ ವಿವಾಹವಾಗಿ ಮಕ್ಕಳು ಪಡೆಯಬೇಕು, ವಿವಾಹವಿಲ್ಲದೆ ಮಕ್ಕಳನ್ನು ಪಡೆಯಕೂಡದು ; ಸಜಾತಿಯವಳನ್ನೇ ವಿವಾಹವಾಗಬೇಕು, ಅನ್ಯಜಾತಿಯವಳು ನಿಷಿದ್ಧ ; ಅಸಗೋತ್ರದವಳನ್ನೇ ವಿವಾಹ ಮಾಡಿಕೊಳ್ಳಬೇಕು, ಸಗೋತ್ರದವಳನ್ನು ಕೂಡದು ; ಹೀಗೆ ವಿವಾಹಿತರಾಗುವ ದಂಪತಿಗಳಿಂದ ಹುಟ್ಟುವ ಪುತ್ರರೇ ಪುತ್ರರು, ಅವರಿಂದಲೇ ಪಿತೃಗಳು ಉತ್ತೀರ್ಣರಾಗುತ್ತಾರೆ, ಇತರವಾದ ಮಕ್ಕಳಿಂದ ಈ ಫಲವುಂಟಾಗುವುದಿಲ್ಲ ಎಂಬೀ ಮುಂತಾದ ವಿಷಯಗಳನ್ನು ಪರ್ಯಾಲೋಚಿಸಿ ನೋಡಿದರೆ ಶಾಸ್ತ್ರೋಕ್ತ ಅದೃಷ್ಟ ಫಲಕ್ಕೆ ಬೇರೆಯಾದ ಫಲವು ದೃಷ್ಟಫಲಕ್ಕೆ ಎಲ್ಲಿಂದ ಬಂತು ? ನೀವು ಹೇಳುವ ದೃಷ್ಟಫಲವೆಂಬುವುದು ಕೂಡ ಅದೃಷ್ಟಫಲವನ್ನೇ ಅನುಸರಿಸುವುದಾಗಿದೆಯಲ್ಲವೇ ?

ಪೂರ್ವಪಕ್ಷ.—ಚಿಂತೆಯಿಲ್ಲ. ದೃಷ್ಟಾದೃಷ್ಟ ಫಲ ವಿಚಾರಗಳನ್ನು ಬಿಟ್ಟು ಬಿಡೋಣ. ವಿವಾಹದಲ್ಲಿ ಮೊದಲನೆಯ ದಿನ ವರನು ವಧುವನ್ನು ಕುರಿತು ವಧುವಿನ ಕಿವಿಯಲ್ಲಿ ಕೆಲವು ಮಂತ್ರಗಳನ್ನು ಹೇಳುತ್ತಾನೆ. ಆ ಮಂತ್ರಗಳನ್ನು ಕೇಳಿ ತಿಳಿದುಕೊಳ್ಳಲು ಸಮರ್ಥಳಾಗಿರಬೇಕಾದರೆ ವಧುವು ಪ್ರೌಢೆಯಾಗಿಯೇ ಇರಬೇಕು. ಇದಕ್ಕೆ ಉತ್ತರವಾದಿಗಳು.—ತಾವು ಹೇಳುವ ಈ ಮಾತುಗಳಿಗೂ ನಮ್ಮ ಉದ್ದೇಶಕ್ಕೂ ಸಾಮರಸ್ಯವೇ ಇಲ್ಲ. ಬಾಲ್ಯವಿವಾಹವು ತಪ್ಪು, ಪ್ರೌಢಾ ವಿವಾಹವೇ ಶಾಸ್ತ್ರವಿಹಿತವಾದದ್ದು ಎಂಬುದು ತಮ್ಮ ಉದ್ದೇಶವಾಗಿರುವಲ್ಲಿ ತಾವು ವಿವಾಹವಾಗುವ ಹೆಣ್ಣಿಗೆ ಮಂತ್ರಾರ್ಥ ಜ್ಞಾನವಿಲ್ಲವಾದ್ದರಿಂದ ಪ್ರೌಢಾ ವಿವಾಹವು ಶ್ರೇಷ್ಠವಾಯಿತು ಎಂಬ ತೀರ್ಮಾನಕ್ಕೆ ಬಂದಿರಿ. ನಿಮ್ಮ ವಾದದಿಂದ ವಿವಾಹ ಕಾಲವು ಎಂದಿಗೂ ನಿರ್ಣಯವಾಗಲಿಲ್ಲ. ಏಕೆಂದರೆ ಎಂಟು ವರ್ಷದ ಹುಡುಗಿಗಾಗಲಿ, ಹದಿನಾರು ವರ್ಷದ ಇಪ್ಪತ್ತು ವರ್ಷದ ಕನ್ನಿಕೆಗೆ ಈಗ ಮದುವೆಯಾಗುವುದಕ್ಕು ಅನೇಗೂ ಸಂಸ್ಕೃತ ಮಂತ್ರಾರ್ಥ ಜ್ಞಾನವಿಲ್ಲ. ವಧುವಿನ ಮಾತು ಹಾಗಿರಲಿ, ಮಂತ್ರವನ್ನು ಹೇಳುವ ವರನಾದರೂ ಈ ಕಾಲದಲ್ಲಿ ಮಂತ್ರಾರ್ಥ ಜ್ಞಾನವುಳ್ಳವನಲ್ಲವಾದ್ದರಿಂದ ಬಾಲ್ಯವಿವಾಹವು ಸಿದ್ಧಿಸುವುದಿಲ್ಲ.

ಪೂರ್ವಪಕ್ಷ.—ಪ್ರೌಢಾ ವಿವಾಹವೇ ಶಾಸ್ತ್ರದಲ್ಲಿ ಉಕ್ತವಾಗಿರುತ್ತದೆ ಎಂಬುದಕ್ಕೆ ವಿವಾಹದ ನಾಲ್ಕನೇ ದಿನ ವಧುವರರು ಹೇಳುವ ಮಂತ್ರವು ಬಲವಾದ ಸಾಧಕವಾಗಿರುತ್ತೆ. “ಪ್ರಜಾಯ ಸ್ವಪ್ರಜಯಾ ಪುತ್ರಕಾಮ,” “ಪ್ರಜಾಯ ಸ್ವಪ್ರಜಯಾ ಪುತ್ರಕಾಮೌ” ಎಂದು ಮೊದಲಾಗಿ ಹೇಳುವ ಕಾರ್ಯಗಳು ಬಾಲೆಯಾದವಳಿಗೆ ಸಂಭವಿಸಲಾರದು. ಕಾರಣ ಪ್ರೌಢಾ ವಿವಾಹವೇ ಉತ್ಕೃಷ್ಟ. ಇದಕ್ಕೆ ಉತ್ತರವಾದಿಗಳು.—ನೀವು ಹೇಳಿದ ಮಂತ್ರದಲ್ಲಿರುವ ಕ್ರಿಯಾಪದವು ದರ್ಶ ‘ಲಿಙ್’ ಅರ್ಥದಲ್ಲಿ ಯಾವ ‘ಲ’ ಕಾರವಾಗುವುದು ?

ಪೂರ್ವಪಕ್ಷದವರು ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ ತಲೆ ಬೊಗ್ಗಿಸಿಕೊಂಡದ್ದನ್ನು ನೋಡಿ ಉತ್ತರವಾದಿಗಳು ಹೇಳಿದ್ದು.—ಅಲ್ಲಿನ ಕ್ರಿಯಾಪದವು ‘ಲೋಟ್’ ಪ್ರಯೋಗವಾಗಿರುತ್ತವೆ. ಲೋಟು ಪ್ರಯೋಗವು ಯಾವಾಗಲೂ ಪ್ರಾರ್ಥನಾರ್ಥವನ್ನು ಅಂದರೆ ಮುಂದೆ ಆಗುವ ಅರ್ಥವನ್ನು ಸೂಚಿಸುತ್ತದೆ. ಆದ್ದರಿಂದ “ಮುಂದೆ ಹೀಗೆ ಹೀಗೆ ಮಾಡೋಣ” ಎಂಬ ಕೋರಿಕೆಗಳನ್ನು ಸೂಚಿಸುವುದೇ ಹೊರತು ವಿವಾಹದ ನಾಲ್ಕನೇ ದಿವಸವೇ ಆ ಕಾರ್ಯವನ್ನು ಮಾಡಬೇಕೆಂಬ ಅರ್ಥವೆಂದಿಗೂ ಆಗುವುದಿಲ್ಲ. ಅಷ್ಟೇಕೆ ; “ಪ್ರಜಯುಕ್ತ” ಅಂದರೆ ಮಕ್ಕಳನ್ನು ಪಡೆ ಎಂಬುವ ವಾಕ್ಯವು ಪ್ರಾರ್ಥನಾ ರೂಪವಾದ, ಮುಂದಾಗುವ ಕಾರ್ಯಕ್ಕೆ ಅನ್ವಯವಾಗಿದೆ. ಸದ್ಯಃ ಕಾರ್ಯವನ್ನೂ, ಸದ್ಯಃ ಫಲವನ್ನೂ ಸೂಚಿಸುವುದಾದರೆ ವಿವಾಹ ಕಾಲದಲ್ಲಿಯೇ ಕನ್ಯೆಯು ಗರ್ಭಿಣಿಯಾಗಿ ಪ್ರಸವ ಕಾಲಪ್ರಾಪ್ತವಾಗಿರಬೇಕಾಗುತ್ತದೆ. ವಿವಾಹದ ಪ್ರಥಮ ದಿನವೇ ಪ್ರಧಾನಹೋಮ ಕಾಲದಲ್ಲಿ ಹೇಳುವ ಮಂತ್ರದಲ್ಲಿ ವರನು ವಧುವನ್ನು ಉದ್ದೇಶಿಸಿ “ನಿನ್ನ ಹಾಲು ಕುಡಿಯುವ ಮಗುವನ್ನು ಸೂರ್ಯನು ರಕ್ಷಿಸಲಿ !” ಎಂದು ಹೇಳುತ್ತಾನೆ. ನಿಮ್ಮ ವಾದವು ಸಾಧುವಾಗುವಲ್ಲಿ ವಿವಾಹದ ಪ್ರಥಮ ದಿನವೇ ವಧುವಿಗೆ ಹಾಲು ಕುಡಿಯುವ ಮಗು ಇರಬೇಕಾಯಿತ್ತು.

ಆಗ ಪೂರ್ವಪಕ್ಷದವರು ಮೌನವಾಗಿ ನಿರುತ್ತರರಾದದ್ದನ್ನು ಕಂಡು ಉತ್ತರವಾದಿಗಳು.—ಈ ವಿಧವಾಗಿ ಸಿಕ್ಕಾಬಟ್ಟೆ ಚರ್ಚಿಸುವುದು ಪ್ರಯೋಜನವಿಲ್ಲ. ನಾವು ಮಾಡುವ ಚರ್ಚೆಯು ಶಾಸ್ತ್ರಪದ್ಧತಿಯನ್ನು ಹಿಡಿದ ಚರ್ಚೆಯೋ, ಅಥವಾ ಶಾಸ್ತ್ರವನ್ನು ಬಿಟ್ಟ ಚರ್ಚೆಯೋ ವ್ಯವಸ್ಥೆಯಾಗಲಿ ಎಂದು ಕೇಳಿದರು.

ಪೂರ್ವಪಕ್ಷ.—ಶಾಸ್ತ್ರದಲ್ಲಿ ದೃಷ್ಟಫಲವನ್ನು ಹೇಳುವ ಭಾಗವನ್ನು ಬಿಟ್ಟೇ ಚರ್ಚೆಗಳು ನಡೆಸಬೇಕು. ಉತ್ತರವಾದಿಗಳು.—ಇವಕ್ಕೆ ಉತ್ತರ ಹಿಂದೆಯೇ ಹೇಳಿ ಆಗಿದೆ.

ಪೂರ್ವಪಕ್ಷ.—ಹೌದು, ಶಾಸ್ತ್ರವನ್ನು ಹಿಡಿದೇ ನಮ್ಮ ಚರ್ಚೆಯಲ್ಲವೂ ನಡೆಯಬೇಕೆಂದಿಟ್ಟುಕೊಳ್ಳಿ. ಇಲ್ಲ, ಇಲ್ಲ ; ಶಾಸ್ತ್ರವನ್ನು ಬಿಟ್ಟು ಮಾತನಾಡಬೇಕಾಗುತ್ತೆ. ಏಕೆಂದರೆ ಒಂದೊಂದು ಶಾಸ್ತ್ರದಲ್ಲಿ ಒಂದೊಂದು ವಿಧವಾಗಿ ಹೇಳಿದ್ದೆ. ಹೀಗೆ ಶಾಸ್ತ್ರಗಳು ಭಿನ್ನಾರ್ಥವಾದಲ್ಲಿ ಒಂದು ಶಾಸ್ತ್ರವನ್ನು ಬಿಟ್ಟು ಮತ್ತೊಂದು ಶಾಸ್ತ್ರವನ್ನೇ ಅವಲಂಬಿಸಬೇಕಾಗುತ್ತೆ. ಉತ್ತರವಾದಿಗಳು.—ನಿಮ್ಮ ವಾದವು ಅಸಂಗತವಾದದ್ದು. ಭಿನ್ನಾರ್ಥ ಶಾಸ್ತ್ರಗಳಲ್ಲಿ ಒಂದನ್ನು ಹಿಡಿಯುವುದು, ಒಂದನ್ನು ಬಿಡುವುದು ಕೂಡ ಶಾಸ್ತ್ರಾರ್ಥ ವಿಚಾರವೇ ಹೊರತು ಬೇರೆಯಾದುದಲ್ಲ. ಶಾಸ್ತ್ರಗಳಲ್ಲಿ ಭಿನ್ನಾರ್ಥ ಬಂದಾಗ್ಗೆ ಅವುಗಳನ್ನು ಪರಸ್ಪರ ಸಮನ್ವಯವಾಗುವಂತೆ ಅರ್ಥಮಾಡುವುದು ಶಾಸ್ತ್ರಾರ್ಥವಿಚಾರವಲ್ಲದೆ ಬೇರೆ ಅಲ್ಲ.

ಪೂರ್ವಪಕ್ಷದವರು ಪ್ರೌಢಾ ವಿವಾಹವನ್ನು ದೃಢೀಕರಿಸುವ ಪ್ರಮಾಣವನ್ನು ಹೇಳಲಾರಂಭ ಮಾಡಿದರು. ಸ್ಮೃತಿಯಲ್ಲಿ ಕನ್ಯೆಯು ಋತುಮತಿಯಾದ ಮೇಲೆ ಮೂರು ವರ್ಷಗಳ ವರೆಗೂ ನಿರೀಕ್ಷಿಸಿ ಸರಿಯಾದ ವರನನ್ನು ವರಿಸಬಹುದು ಎಂದಿರುತ್ತದೆ. ಉತ್ತರವಾದಿಗಳು.—ನೀವು ಹೇಳುವ ವಚನವು ಕೇವಲ ಆಪದ್ಧರ್ಮ ವಿಷಯ. ಅದೇ ಸ್ಮೃತಿಗಳಲ್ಲಿ ತಂದೆ ತಾಯಿಗಳು ಹೆಣ್ಣು ಮಗಳಿಗೆ ಎಂಟು ಅಥವಾ ಹತ್ತು ವರ್ಷದೊಳಗಾಗಿ ಋತು ಕಾಲಕ್ಕೆ ಮುಂಚೆ ಮದುವೆ ಮಾಡಬೇಕು ; ಹಾಗೆ ಮಾಡದೆ ಇದ್ದಲ್ಲಿ ಪಾಪವು ಘಟಿಸುವುದು ಎಂದು ಶಾಸ್ತ್ರೋಕ್ತವಾಗಿ ವಿವಾಹಕಾಲ ವಿಧಿಯನ್ನು ನಿಷ್ಕರ್ಷೆಮಾಡಿ, ಆ ತರುವಾಯ ಆ ಕಾಲದಲ್ಲಿ ವಿವಾಹ ಮಾಡಲು ಆಪತ್ತುಗಳುಂಟಾಗಿ ವಿವಾಹವಾಗದೆ ಇರುವ ಸಂದರ್ಭ ಕಾಲಕ್ಕೆ ಕನ್ಯೆಯು ಋತುಮತಿಯಾಗಿದ್ದರೂ ಪ್ರಾಯಶ್ಚಿತ್ತ ಮಾಡಿ ವಿವಾಹ ನಡೆಯಬೇಕಾಗಿರುತ್ತೆ ಎಂದು ಹೇಳಿರುವುದು ಪ್ರಾಯಶ್ಚಿತ್ತಾರ್ಹ ಧರ್ಮವು ಎಂದಿಗೂ ಧರ್ಮವಾಗಲಾರದು.

ಪೂರ್ವಪಕ್ಷದವರು ಮುಂದಕ್ಕೆ ಯಾವ ಮಾತನ್ನಾಡದೆ ಸುಮ್ಮನೆ ಕುಳಿತರು. ಸಭೆಯ ವರೆಗೂ ಸಭೆಯು ಮೌನವಾಗಿತ್ತು. ಆಗ ಉತ್ತರವಾದಿಗಳು.—ನಿಮಗೆ ನೀವು ಹೇಳಿದ ಒಂದು ಪ್ರಮಾಣವೂ ಸಾಧಕವಾಗಲಿಲ್ಲ. ಮುಂದೆ ಬೇರೆ ಪ್ರಮಾಣಗಳಾದರೂ ಉಂಟೇ ಎಂದು ಕೇಳಿದ್ದಕ್ಕೆ ಪೂರ್ವಪಕ್ಷದವರು.—ನಾವು ಹೇಳುವುದು ಇಷ್ಟೇ. ನಾವು ಹೇಳತಕ್ಕದ್ದನ್ನೆಲ್ಲಾ ಸೂಚಿಸಿದ್ದೇವೆ ಒಪ್ಪಿದರೆ ಒಪ್ಪಿ, ಬಿಟ್ಟರೆ ಬಿಡಿ ಎಂದು ಹೇಳಿದರು. ಅಲ್ಲಿಗೆ ಸಭೆ ಮುಗಿಯಿತು.

ಹಿತೇಚ್ಛು.

ತಾಲ್ಲೂಕು ವರ್ತಮಾನಗಳು.

ಶ್ರೀರಂಗಪಟ್ಟಣದ ಕಸಬಾ ಗಂಜಾಂ.—ಬಿಸಿಲಿನ ಝಳ ಜಾಸ್ತಿಯಾಗಿ ಜನರು ಮಳೆಯನ್ನು ನಿರೀಕ್ಷಿಸುತ್ತಿದಾರೆ. ಮ್ಯುನಿಸಿಪಾಲಿಟಿ ಕಟಲಾ ಸಹಾಯಕ್ಕೆ ಬಾರದಾಗಿ ಸಾಗುತ್ತಿಲ್ಲ. ಟೌನ್ ಮಧ್ಯಭಾಗಗಳಲ್ಲಿರುವ ಚರಂಡಿ ಮೋರಿಗಳು ಜನಗಳೂ ಪ್ಲಾಪಾಂದ ಥಂಡಿಗಳೂ ಕಿರುಗಲು ಅಡಚಣೆಯಾಗಿವೆ. ಮ್ಯುನಿಸಿಪಲ್ ಮೆಂಬರುಗಳೂ, ವೈಸ್ ಪ್ರಸಿಡೆಂಟರೂ ನಿಗಾವಣೆಯಿಂದ ಸರಿಪಡಿಸುತ್ತಾರೆಂದು ನಂಬುತ್ತೇನೆ.—ಟೌನ್‌ನಲ್ಲಿ ಕಂಪಲ್‌ಸರಿ ವಿದ್ಯಾಭ್ಯಾಸವು ಜಾರೀಗೆ ಬರುವ ಪ್ರಯತ್ನ ನಡೆಯುತ್ತಿದೆ ಕಾರ್ಯತಃ ನಡೆಯುವದನ್ನು ನಿರೀಕ್ಷಿಸುತ್ತಿದಾರೆ. ಹಾಲೀ ಇರುವ ಗೌ॥ ಬಾಯಿಸ್ ಸ್ಕೂಲಿನಿಂದ 3 ಮಂದಿಯೂ, ಆರ್. ಸಿ ಸ್ಕೂಲಿನಿಂದ 4 ಮಂದಿಯೂ ಲೋ. ಸೆಕೆಂಡರೀ ಪರೀಕ್ಷೆಗೆ ಕಟ್ಟಿರುತ್ತಾರೆ. ಭಾರೀ ಸ್ಕೂಲಾಗಿ ಇಟ್ಟು ಕಮ್ಮಿಯಾಗಿ ತೇರ್ಗಡೆ ಹೊಂದಲು ಕಾರಣವು ಗ್ರಾಮಸ್ಥರಿಗೆ ವಿದ್ಯಾಸಕ್ತಿ ಇಲ್ಲವೆನ್ನುವುದೂ, ವಿದ್ಯೆಯ ಬೆಲೆಯೇ ಇಲ್ಲಿನವರಿಗೆ ತಿಳಿಯದೆಂದೂ ಹೇಳಬಹುದು.—ರೈಸ್‌ಮಿಲ್ಲನ್ನಿಡುವ ಪ್ರಯತ್ನವು ನಡೆಯುತ್ತಿದೆ ಕೂಡಲೇ ಮಿಲ್ಲನ್ನು ತರಿಸುವುದಕ್ಕೂ ಕಟ್ಟಡಕ್ಕೂ ಮೊಬಲಗು ವಸೂಲಾಗುತ್ತಿರುವುದು.

ಶಿವಮೊಗ್ಗ.—ಹವಾ ಆರೋಗ್ಯವಾಗಿರುತ್ತದೆ 2-3 ದಿವಸಗಳಿಂದ ಹದಮಳೆಯು ಬರುತ್ತಾ ಇದೆ. ಇದರಿಂದ ಜನ ದನಕರುಗಳಿಗೆ ಬಹಳ ಅನುಕೂಲವಾಯಿತು. ಆದರೂ ಬಿಸಿಲಿನ ತಾಪ ಕಡಮೆಯಾಗಿಲ್ಲ.—ಮೆ॥ ಮೆಥಾರ್ ಸಾಹೇಬರು ರಜಾ ಹೋಗಿರುವದರಿಂದ ಮ॥ ಸಿ. ವೆಂಕಟರಾಯರು ಡೆಪ್ಯುಟಿ ಕಮಿಷನರ ಭಾರವನ್ನು ವಹಿಸಿರುತ್ತಾರೆ.—ಮ॥ ಸಾಹುಕಾರ್ ರಾಚಪ್ಪರಾಯರು ತೆಗೆದುಕೊಂಡ ಹೊಸ ಎತ್ತು ಅವರ ಆಳನ್ನು ಕೊಂಬಿನಿಂದ ತಿವಿಯಿತು. ಇದರಿಂದ ಅವನಿಗೆ ಗಾಯವಾಗಿ ಆಸ್ಪತ್ರೆಯಲ್ಲಿರುತ್ತಾನೆ.—ಬಾರ್ ಲೈನ್ ಮುಂಭಾಗದ ಚರಂಡಿಗಳಲ್ಲಿ ನೀರು ತುಂಬಿ ಮುಂದಕ್ಕೆ ಹರಿದುಹೋಗದೆ ನಿಂತು ಅನಾರೋಗ್ಯವನ್ನುಂಟುಮಾಡುತ್ತದೆ. ಅಧಿಕಾರಿಗಳು ಇದನ್ನು ಕ್ರಮಪಡಿಸಬೇಕು.—ದೊಡ್ಡಪೇಟೆಯಲ್ಲಿರುವ ಬಾಡಿಹಾಲ್ ಸುಬ್ಬಣ್ಣನವರ ಅಂಗಡಿಯಲ್ಲಿ ಮೊನ್ನೆ ಬುಧವಾರ ರಾತ್ರಿ ಸುಮಾರು 12 ಘಂಟೆಯ ಸಮಯದಲ್ಲಿ ಮಳೆ ಹೆಚ್ಚಾಗಿ ಬಂದದ್ದರ ದೆಸೆಯಿಂದ ರಸ್ತೆಯಿಂದ ಅಂದರೆ ಚರಂಡಿಯಿಂದ ಮನೆಯೊಳಕ್ಕೆ ನೀರು ನುಗ್ಗಿತು. ಇದರಿಂದ ಅಂಗಡಿಯಲ್ಲಿರತಕ್ಕ ಸಾಧಾರಣ 100-150 ರೂಪಾಯಿನ ಸಾಮಾನುಗಳು ನೀರಿನಿಂದ ತೊಯ್ಯಲ್ಪಟ್ಟವು. ನಂತರ ಕೆಲವು ಜನಗಳು ಸೇರಿ ಬಹಳ ಮೆಹನತ್ತಿನಿಂದ ನೀರನ್ನು ಹೊರಕ್ಕೆ ತೆಗೆದು ಹಾಕಿದರು.

ಕೋಗುಡೇರ.—ಸಂಚಾರ್ಯಪಟ್ಟಣದ ತಾಲ್ಲೂಕು ಗಡಿನಾಡುತಾಳೀ ಗ್ರಾಮದ ಕಜ್ಜಗೌಡ್ರ ಪುಟ್ಟಯ್ಯನಿಗೂ, ಅಪ್ಪಯ್ಯನಿಗೂ ಕೊಡಗು ಆ॥ ಕಮಿಷನರ ಕೋರ್ಟಿನಲ್ಲಿ ಒಂದು ಮೊಕದ್ದಮೆ ನಡೆದು, ಕಡೆಗೆ ಎರಡು ಜನರೂ ರಾಜಿಯಿಂದ ತೀರ್ಮಾನಮಾಡಿಕೊಂಡಿದ್ದರು. ಈಚೆಗೆ ತಾ. 14 ರಲ್ಲಿ ಮೇಲ್ಕಂಡ ಪುಟ್ಟಯ್ಯನ ಎರಡು ಜನ ಹೆಂಡತಿಯರು ಒಬ್ಬ ಹುಡುಗಿಯ ಸಮೇತ ಮನೆಯಿಂದ ಒಂದುವರೆ ಮೈಲು ದೂರದಲ್ಲಿರುವ ದನದ ಕೊಟ್ಟಿಗೆಗೆ ಹೋಗಿರುವಾಗ ಅಪ್ಪಯ್ಯನು ಪುಟ್ಟಯ್ಯನ ಹೆಂಡತಿಯರಿಬ್ಬರನ್ನೂ ಕತ್ತಿಯಿಂದ ಕಡಿದು ಕೊಂದುಹಾಕಿ, ಹುಡುಗಿಯನ್ನು ಬೆದರಿಸಿ ಮನೆಗೆ ಓಡಿಸಿ, ಮರಣಪಟ್ಟವರ ಶರೀರದಲ್ಲಿದ್ದ ನಗಗಳನ್ನು ತೆಗೆದುಕೊಂಡು ಹೋಗಿ ಅದೇ ದಿವಸ ಪೇಟೆಯಲ್ಲಿ ವಿಕ್ರಯಮಾಡಿ ತಾನು ಕೋವಿ ಕತ್ತಿ ಸಮೇತ ಅಡವಿಯಲ್ಲಿದ್ದನು. ನಮ್ಮ ಸರಕಾರದವರು ಅನೇಕ ಪೋಲೀಸ್ ಆಫೀಸರುಗಳೂ ಮತ್ತು ತಾಲ್ಲೂಕ್ ಮ್ಯಾಜಿಸ್ಟ್ರೇಟರು ಸಹ ಸದರಿ ಗ್ರಾಮದಲ್ಲೇ ಪತ್ತೆ ತರಮಾಡಿಸಲ್ಲಿದ್ದು ಕೊಲೆಪಾತಕಿಯನ್ನು ತಾ. 16 ನೇ ರಾತ್ರಿ ಹಿಡಿದಿರುತ್ತಾರೆ. ಮರಣಪಟ್ಟವಳ ಪೈಕಿ ಒಬ್ಬಳು 6 ತಿಂಗಳ ಗರ್ಭಿಣಿಯಾಗಿದ್ದಳು. ಇವಳನ್ನು ಲಗ್ನವಾಗಿ 3-4 ವರ್ಷವಾಗಿತ್ತು. ಮೇಲ್ಕಂಡ ಪುಟ್ಟಯ್ಯನು ಮಕ್ಕಳಿಲ್ಲವಾಗಿ ಮೂರು ಮದುವೆಯಾಗಿದ್ದನು ಇವರ ಪೈಕಿ ಮಧ್ಯದ ಹೆಂಡತಿಯು ನಾಲ್ಕು ವರ್ಷಕ್ಕೆ ಮುಂಚೆಯೇ ಗತಿಸಿದಳು ಮಕ್ಕಳಾಗುವ ಸಮಯದಲ್ಲಿ ಇಂಥಾ ಅಳವಲ್ಲದ ಕ್ರೂರಕೃತ್ಯವು ನಡೆದಿರುತ್ತದೆ.

ಶ್ರವಣಬೆಳಗೊಳ.—ಇಲ್ಲಿ ಕಾಲಗತಿಯನ್ನೈದಿದ ಸರ್ವಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳವರ ಶರೀರ ಸಂಸ್ಕಾರಕ್ಕಾಗಿ ಭಕ್ತಿ ವಿಶಿಷ್ಟರಾದ ಸಮಸ್ತ ಪ್ರಜೆಗಳೂ ಸೇರಿ ಹೋಗತಕ್ಕ ಉತ್ಸವವು ಅಭೂತಪೂರ್ವವಾದ ಆಶ್ಚರ್ಯವನ್ನುಂಟುಮಾಡುತ್ತಾ ಇತ್ತು. ವೇ॥ ದೋರ್ಬಲಿ ಜಿನದಾಸ ಶಾಸ್ತ್ರಿಗಳವರು ಆಯಾಯ ದಿವಸಗಳಲ್ಲಾಗಬೇಕಾದ ಕಾರ್ಯಗಳನ್ನು ಜಾಗರೂಕತೆಯಿಂದ ನೆರವೇರಿಸುತ್ತಾ, ಮಠಾಭಿಮಾನಿಗಳ ಸಹಾಯದಿಂದ 12 ನೇ ತಾ. ದೊಡ್ಡಬೆಟ್ಟದ ಶ್ರೀಗೋಮಟೇಶ್ವರಸ್ವಾಮಿಯವರ ಚರಣಾರವಿಂದದಲ್ಲಿ ಶ್ರೀ ಸ್ವಾಮಿಗಳವರ ಕೇವಲ ಜ್ಞಾನಪೂಜೆಯನ್ನು ಸಾವಿರದ ಎಂಟು ಕಲಶಗಳಿಂದ ನಡಿಸಿದ್ದನ್ನು ಎಷ್ಟು ವರ್ಣಿಸಿದರೂ ಸಾಲದ್ದಾಗಿರುತ್ತದೆ. ಇದನ್ನು ನೋಡುವುದಕ್ಕಾಗಿ ಬಂದಿದ್ದ ಮೈಸೂರು, ಸಾಲಿಗ್ರಾಮ, ಹಾಸನ ಮೊದಲಾದ ಗ್ರಾಮಾಂತರದವರೂ, ಸ್ವಲ್ಪವೂ ಸ್ಥಳವಿಲ್ಲದಂತೆ ನೆರೆದಿದ್ದ ಜನಗಳೂ ಜಯಘೋಷವನ್ನು ಮಾಡುತ್ತಾ, ರಾತ್ರಿ 8 ಗಂಟೆಗೆ ಎಲ್ಲರೂ ಬೆಟ್ಟದಿಂದ ಇಳಿದು ತಮ್ಮ ತಮ್ಮ ಬಿಡಾರಕ್ಕೆ ತೆರಳಿದರು. 13, 14, 15 ನೇ ತಾ. ಚಿಕ್ಕಬೆಟ್ಟದ ಮೇಲೂ ಊರಿನ ಎಲ್ಲಾ ದೇವಸ್ಥಾನಗಳಲ್ಲೂ ಪೂಜೆ ಉತ್ಸವಾದಿಗಳು ನಡಿಸಲ್ಪಟ್ಟವು. 16 ನೇ ತಾ. ಶುಕ್ರವಾರ ಮಹಾಸಂತರ್ಪಣೆಯೂ, ಅನಂತರ ಭೂರಿ ದಾನ ದಕ್ಷಿಣೆಗಳೂ, ಅನಂತರ ನೆರೆದಿದ್ದ ಸಭಾ ಮಧ್ಯದಲ್ಲಿ ಕಳೆದ ವಾರದ “ವೃತ್ತಾಂತ ಪತ್ರಿಕೆ” ಯಲ್ಲಿ ಛಾಪಿಸಿರುವ ವ್ಯಸನಸೂಚಕವಾದ ಈ ಸ್ವಾಮಿಗಳವರ ಪೂರ್ವ ಚರಿತ್ರ ವೃತ್ತಾಂತವು ಓದಲ್ಪಟ್ಟ ನಂತರ ಇವರ ಜ್ಞಾಪಕಾರ್ಥವಾಗಿ ಅವರ ಸಮಾಧಿ ಸ್ಥಳದಲ್ಲಿ ಒಂದು ಮಂಟಪವನ್ನು ಕಟ್ಟಿಸುವುದಕ್ಕೆ ಚಂದಾ ಹಾಕಲು ಎಲ್ಲರೂ ಒಪ್ಪಿ ಆನಂದಭರಿತರಾಗಿ ಸರ್ವರೂ ದಯಮಾಡಿಸಿದರು.

ಅರಕಲಗೂಡು.—ಈ ಊರಿನಲ್ಲಿ ತಾ. 23 ನೇ ಗುರುವಾರ ರಾತ್ರಿ ಸಾಧಾರಣ ಒಂದುವರೆ ಇಂಚು ಮಳೆ ಬಂತು. ರೈತರು ಬಹಳ ಉತ್ಸಾಹಕರಾಗಿರುತ್ತಾರೆ ಬಿಸಿಲಿನ ತಾಪ ಕಡಮೆಯಾಗಿದೆ.—ಈ ಟೌನ್ ಪೇಟೆಯಲ್ಲಿ ಈಗ್ಗೆ 10 ದಿನಗಳ ಕೆಳಗೆ ಒಂದೇ ರಾತ್ರಿ ಚೆನ್ನಕೃಷ್ಣಶೆಟ್ಟರ ಮನೆಗೂ, ಇಬ್ರಾಹಿಂಸಾಹೇಬರ ಅಂಗಡಿಗೂ ಕಳ್ಳರು ಕನ್ನಹಾಕಿ ಕೆಲವು ಬೆಲೆ ಬಾಳತಕ್ಕ ಪದಾರ್ಥಗಳನ್ನು ಕಳವು ಮಾಡಿರುತ್ತಾರೆ. ಇಂಥಾ ದೊಡ್ಡ ತಾಲ್ಲೂಕು ಆಗಿ ಪೋಲೀಸಿನ ಏರ್ಪಾಡು ಸರಿಯಾಗಿದ್ದೂ ಈ ರೀತಿ ನಡೆದಿರುವುದು ತುಂಬಾ ಶೋಚನೀಯವಾಗಿದೆ. ಈ ವಿಚಾರದಲ್ಲಿ ಸರ್ಕಾರಿ ಉದ್ಯೋಗಸ್ಥರು ನಿಗಾವಣೆ ಮಾಡಿದರೆ ಉತ್ತಮ. ಇದೆಲ್ಲಾ ಕೆಲವು ಪುಂಡುಜನರಿಂದ ನಡೆದ ಕೃತ್ಯವಾಗಿದೆ. ತಾಲ್ಲೂಕು ಅಮಲ್ದಾರ್ರು ಈ ವಿಷಯದಲ್ಲಿ ಗಮನ ಕೊಡಬೇಕಾಗಿ ಪ್ರಾರ್ಥನೆ.—ಮೊನ್ನೆ ಗುರುವಾರ ಬೆಳಿಗ್ಗೆ ನಮ್ಮ ಡೆಪ್ಯುಟಿ ಕಮಿಷನರವರು ದಯಮಾಡಿಸಿ ಅಮಲ್ದಾರರೊಡನೆಯೂ, ಗ್ರಾಮದ ಮುಖ್ಯಸ್ಥರೊಡನೆಯೂ ಟೌನ್ ಎಲ್ಲಾ ಭಾಗಗಳಲ್ಲೂ ಪರೀಕ್ಷೆಮಾಡಿ, ಗ್ರಾಮ ಠಾಕೀಜಾವನ್ನು ನೋಡಿಕೊಂಡು ಚತ್ರಗಳನ್ನೂ, ದೇವಸ್ಥಾನಗಳನ್ನೂ ನೋಡಿ ಜನಗಳ ಅಹವಾಲುಗಳನ್ನು ಕೇಳಿ ಸರಿಯಾದ ಏರ್ಪಾಡು ಮಾಡುವ ಹಾಗೆ ಹೇಳಿದರು. ಪೇಟೆಯಲ್ಲಿರುವ ಹಾಳ್ಯದ ಕೊಂಡಯ್ಯಶೆಟ್ಟರ ಚತ್ರದಲ್ಲಿ ಅವರ ತಮ್ಮಂದಿರು ಮ॥ ರಾಮಸ್ವಾಮಿಶೆಟ್ಟರು ಈಗ 12 ವರ್ಷಗಳಿಂದ ವಾಸ ಮಾಡಿಕೊಂಡು ಅದರ ವರಮಾನಗಳನ್ನೂ ತಾವೇ ಅನುಭವಿಸುತ್ತಾ ಇದಾರೆಂಬ ಸಂಗತಿಗಳು ಅಡಗಿದ ಅರ್ಜಿಯು ಹಾಳ್ಯದ ಸೂರ್ಯನಾರಾಯಣಶೆಟ್ಟರಿಂದ ಕೊಡಲ್ಪಟ್ಟಿತ್ತು ಈ ವಿಚಾರವಾಗಿ ನಮ್ಮ ಡೆಪ್ಯುಟಿ ಕಮಿಷನರವರು ಪರಾಂಬರಿಸಿ ಸದರಿ ರಾಮಸ್ವಾಮಿಶೆಟ್ಟರಿಗೆ ಚತ್ರವನ್ನು ಬಿಟ್ಟುಬಿಡುವಂತೆ ಆದರದಿಂದ ಹೇಳಿದಾಗ ಅವರು ಒಪ್ಪಿಕೊಂಡರು. ನಂತರ ಸಾಹೇಬರು ಎಲ್ಲವನ್ನೂ ನೋಡಿಕೊಂಡು ಕಚೇರಿಗೆ ಹೋಗಿ ತನಿಖೆ ಮಾಡಿದರು.

ಮುಳಬಾಗಲು.—ಮುಳಬಾಗಿಲಿಗೆ ಸೇರಿದಂತೆ ಇರುವ ಸೋಮೇಶ್ವರಪಾಳ್ಯದ ಶ್ರೀಪ್ರಸನ್ನಸೋಮೇಶ್ವರಸ್ವಾಮಿಗೆ ನಡೆಯತಕ್ಕ ರಥೋತ್ಸವ, ದನ ಮತ್ತು ದನಗಳ ಪರಿಷೆಗಳಲ್ಲಿ ಈ ಊರಲ್ಲಿ ಇರತಕ್ಕ ಛತ್ರಾದಿಗಳು ಪರಸ್ಥಳಗಳಿಂದ ಬಂದಿದ್ದ ಜನಗಳಿಗೂ ಮತ್ತು ಸ್ಥಳದವರಿಗೂ ಸಹ ಎಲ್ಲಾ ಮತದವರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಸಂತರ್ಪಣೆಗಳನ್ನು ಮಾಡಿಸಿ, ಜನಗಳನ್ನು ಸಂತೋಷಪಡಿಸಿದರು. ಚೈತ್ರ ಬಹುಳ 11 ಮೊದಲು ಅಧಿಕ ವೈಶಾಖ ಶುದ್ಧ 6 ರ ವರಿವಿಗೂ ಉತ್ಸವಾದಿಗಳನ್ನು ಬಹು ವಿಜೃಂಭಣೆಯಾಗಿ ನಡಿಸಿದರು. ಪರಿಷೆಯಲ್ಲಿ ಎತ್ತುಗಳಿಂದಲೂ, ಅಂಗಡಿಗಳಿಂದಲೂ ವಸೂಲಾಗತಕ್ಕ ಸುಂಕ ಪೋಲಾಗದಂತೆ ನಮ್ಮ ಅಮಲ್ದಾರ್ ಮ॥ ಮುದ್ದುಕೃಷ್ಣಪ್ಪನವರು ತಕ್ಕ ಏರ್ಪಾಟನ್ನು ಮಾಡಿದ್ದರು.—ಈ ಊರು ಎಲ್ಲಾ ವಿಷಯದಲ್ಲೂ ಅಧಮ ಪಕ್ಷವನ್ನು ವಹಿಸಿತ್ತು. ಇದನ್ನು ನೋಡಿ ನಮ್ಮ ಅಮಲ್ದಾರ್ರು ಉತ್ತಮ ಸ್ಥಿತಿಗೆ ತರಬೇಕೆಂದು ಬಹು ತರದೂದುಗಳನ್ನು ನಡಿಸುತ್ತಾ ಇದಾರೆ. ಯಾರೊಬ್ಬರೂ ಸುಳ್ಳನ್ನು ಹೇಳಕೂಡದು ; ಹೇಳಿದವರ ವಿಷಯದಲ್ಲಿ ತುಂಬಾ ಆಗ್ರಹಮಾಡಿ ಶಿಕ್ಷೆಮಾಡುತ್ತಾ ಇದಾರೆ. ಮಾಡಿದ ತಪ್ಪಿತವನ್ನು ಮರೆಮಾಚಕೂಡದು ; ಅಂಥಾವರಿಗೆಲ್ಲಾ ತಪ್ಪಿತವನ್ನು ಬಹಿರಂಗಪಡಿಸಿ, ಕೈಲಾದಮಟ್ಟಿಗೂ ಸರಿಮಾಡೋಣವೆಂತ ತಿಳಿಸುತ್ತಲೂ, ಅಂಥಾವುಗಳನ್ನು ಸರಿಮಾಡುತ್ತಲೂ ಇದಾರೆ ಇವರು ಬಂದು 4 ತಿಂಗಳಾದಾಗ್ಯೂ ಈಗಾಗಲೇ ಸರ್ಕಾರಿ ನೌಕರರಲ್ಲಿ ಮೇಲ್ಕಂಡ ವಿಷಯಗಳಲ್ಲಿ ಬಹು ತಿದ್ದುಪಾಟುಗಳು ನಡೆದು ಇರುತ್ತೆ. ಇಷ್ಟರಲ್ಲೇ ಜನಗಳಮೇಲೂ ಈ ದೃಷ್ಟಿ ಬಿದ್ದರೆ ಬಹು ಒಳ್ಳೇದೆಂತ ತೋರುತ್ತೆ.—ಈ ಊರು ಕೋಆಪರೇಟಿವ್ ಸೊಸೈಟಿಯಲ್ಲಿ ಇದ್ದ ಅನೇಕ ಲೋಪಗಳನ್ನು ನಮ್ಮ ಅಮಲ್ದಾರ್ರು ಸರಿಮಾಡಿ ಪರಸ್ಪರ ಸಹಾಯದ ಪಟ್ಟಾರ್ಥವನ್ನು ಚೆನ್ನಾಗಿ ಬೋಧಿಸಿ ಸಾಲಪಡೆಯತಕ್ಕ ಜನಗಳಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟು ಇರುವದಲ್ಲದೆ ಷೇರುದಾರರಿಗೆ ಪ್ರೋತ್ಸಾಹಪಡಿಸಿ ಅಭಿವೃದ್ಧಿಸ್ಥಿತಿಗೆ ತರುತ್ತಾ ಇದಾರೆ. ಇವರು ನ್ಯಾಯಪಕ್ಷಪಾದಿಗಳೇ ಹೊರತು ದಾಕ್ಷಿಣ್ಯ ಪಕ್ಷಪಾದಿಗಳಲ್ಲವೆಂಬುವದು ಇವರು ಮಾಡತಕ್ಕ ಕಾರ್ಯಗಳಿಂದ ಕಂಡು ಬರುತ್ತಾ ಇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಈಜಿಪ್ಟನಲ್ಲಿ ಸುಲ್ತಾನರನ್ನು ಕೊಲ್ಲಬೇಕೆಂದು ಗುಂಡುಹೊಡೆದ ಮಿಲೀಲ್ ಎಂಬ ಯೌವನಸ್ಥನನ್ನು ಕೈರೋ ಪಟ್ಟಣದಲ್ಲಿ ದರ್ಯಾಫ್ತುಮಾಡಿ ಕಳೆದ ಶನಿವಾರ ಗಲ್ಲಿಗೆ ಹಾಕಿದರು.

ಕಳೆದ ಮಾರ್ಚಿ ಆಖೈರಿಗೆ ಮುಗಿದ ಒಂದು ಸಾಲಿನಲ್ಲಿ ಹಿಂದುಸ್ಥಾನದ ಒಟ್ಟು ರೈಲ್ವೆ ಉತ್ಪತ್ತಿಯು ಹಿಂದಿನ ಸಾಲಿನ ಹುಟ್ಟುವಳಿಗಿಂತ 228 ಲಕ್ಷ ರೂಪಾಯಿ ಕಡಮೆಯಾಯಿತು ; ಅಂದರೆ 5,960 ಲಕ್ಷ ರೂಪಾಯಿ ಮಾತ್ರ ಹುಟ್ಟುವಳಿ ಆಗಿದೆ.

ಪಂಜಾಬ್ ಅಧಿಪತ್ಯದ ಪಶ್ಚಿಮ ಡಿಸ್ಟ್ರಿಕ್ಟುಗಳಲ್ಲಿ ಕಳೆದ ಮೂರು ತಿಂಗಳಲ್ಲಿ ಅನೇಕ ದರೋಡೆಗಳು ನಡೆದವು ಈ ದರೋಡೆಗಳಲ್ಲಿ ಪ್ರಜೆಗಳು 14 ಮಂದಿ ಕೊಲೆಯಾದರೆಂದೂ, ದರೋಡೆಗಾರರಲ್ಲೂ 12 ಮಂದಿ ಕೊಲ್ಲಲ್ಪಟ್ಟರೆಂದೂ ಪ್ರಕಟವಾಗಿದೆ.

ಪೋಲೀಸಿನವರು ವಾರಂಟುಗಳನ್ನು ಪಡೆದು ಕಳೆದ ವಾರ ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲೂ, ಕಾಶಿ ಪಟ್ಟಣದಲ್ಲೂ, ಕಾನ್ ಪುರದಲ್ಲೂ ಕೆಲವರ ಮನೆಗಳನ್ನೂ, ಪ್ರತಾಪವೆಂಬ ವರ್ತಮಾನ ಪತ್ರಿಕೆಯ ಆಫೀಸನ್ನೂ ಶೋಧನೆಮಾಡಿ ಅನೇಕ ಅನುಮಾನಾಸ್ಪದವಾದ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು.

ಕಳೆದ ಶುಕ್ರವಾರ ಮಧ್ಯಾಹ್ನ ರಂಗೂನ್ ಪಟ್ಟಣದಲ್ಲಿ ಬಹಳ ಅಪೂರ್ವವಾದ ಸಿಡಿಲು ಗುಡುಗು ಮಿಂಚು ಬಿರುಗಾಳಿಯೊಡನೆ ಕೂಡಿದ ಮಳೆಯು ಪ್ರಾರಂಭವಾಗಿ ಸುಮಾರು ಒಂದು ಘಂಟೆಯ ಹೊತ್ತು ಸುರಿಯಿತು. ಅನೇಕ ಗಿಡ ಮರಗಳೂ, ಹಲವು ಬಂಗಲೆಗಳೂ, ಬಡಬಗ್ಗರ ನೂರಾರು ಮನೆಗಳೂ ಕಳಚಿ ಬಿದ್ದುಹೋದವು ಪ್ರಾಣನಷ್ಟವೇನೂ ಆಗಲಿಲ್ಲ. ಸ್ವಲ್ಪ ಹೊತ್ತಿನ ವರೆಗೆ ಪ್ರಜೆಗಳಿಗೆಲ್ಲಾ ತುಂಬಾ ಗಾಬರಿಯುಂಟಾಗಿತ್ತು.

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಮೂರು ಪೋಲೀಸ್ ಸ್ಟೇಷನ್ ಸರಹದ್ದುಗಳಲ್ಲಿ ಒಂಭತ್ತು ದರೋಡೆಗಳು ನಡೆದವು. ಪೋಲೀಸಿನವರು 111 ಜನರನ್ನು ಹಿಡಿದು ಮೊಕದ್ದಮೆ ಮಾಡಿದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದರ್ಯಾಫ್ತುಮಾಡಿ ಆ ಪೈಕಿ 109 ಜನ ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸಿದರು ಒಬ್ಬನಿಗೆ 12 ವರುಷದ ಜಂಕೋಲ್ ಶಿಕ್ಷೆಯಾಯಿತು. 8 ಮಂದಿಗೆ ತಲಾ 10 ವರುಷವೂ, 25 ಜನರಿಗೆ ತಲಾ 7 ವರುಷವೂ, 29 ಮಂದಿಗೆ ತಲಾ 5 ವರುಷವೂ, 38 ಜನಕ್ಕೆ ತಲಾ 4 ವರುಷವೂ, 9 ಮಂದಿಗೆ ತಲಾ 2 ವರುಷವೂ, ಒಬ್ಬನಿಗೆ ಮೂರು ತಿಂಗಳೂ ಕಠಿಣ ಸಜಾ ಆಯಿತು.

ಬೊಂಬಾಯಿ ಗವರ್ನಮೆಂಟಿನವರು ಆ ಅಧಿಪತ್ಯಕ್ಕೆ ಸೇರಿದ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಟೋಲ್ ಗೇಟುಗಳಿಂದ ಉತ್ಪತ್ತಿಯಾಗುತ್ತಿರುವ ಹಣದಲ್ಲಿ ಕೆಲವು ಭಾಗವನ್ನು ಸರ್ಕಾರದಿಂದ ಕೊಡುವುದಾಗಿ ಅಪ್ಪಣೆ ಕೊಟ್ಟು, ಟೋಲ್ ಗೇಟುಗಳನ್ನು ವಜಾ ಮಾಡಬೇಕೆಂದು ಹುಕುಂ ಮಾಡಿದಾರೆ. ಅವು ಯಾವವೆಂದರೆ ಅಹಮದಾಬಾದ್, ಪೂನ, ಅಹಮದ್‌ನಗರ, ನಾಸಿಕ್, ಸಾತಾರೆ, ಪಶ್ಚಿಮ ಖಾಂದೇಷ್, ಬೆಳ್ಗಾವ, ಬಿಜಾಪುರ, ಧಾರವಾಡ, ಕೆನರಾ. ಗವರ್ನಮೆಂಟಿನವರು ಆ ಹುಕುಂ ಅನುಸರಿಸಿ ಸದ್ಯಕ್ಕೆ ಸ್ಯಾಂಕ್ಷನ್ ಮಾಡಿರುವ ಗ್ರಾಂಟು ಎಷ್ಟೆಂದರೆ—ಅಹಮದಾಬಾದ್ ರೂ. 7,100, ಸಾತಾರೆ ರೂ. 6,700, ಕೆನರಾ ರೂ. 2,700, ಬಿಜಾಪುರ ರೂ. 3,300.

ಕಲ್ಕತ್ತೆಯ ಪೋಲೀಸ್ ಕಮಿಷನರಾದ ಸರ್ ಫ್ರೆಡ್ರಿಕ್ ಹ್ಯಾಲಿಡೆಯವರೂ, ಹಿಮಾಂಶು ಭೂಷಣರಾಯ್ ಎಂಬ ಪೋಲೀಸ್ ಹೆಡ್ ಅಸಿಸ್ಟೆಂಟರೂ ದೀನ್ ಮಹಮದ್ ಎಂಬಾತನ ಅಂಗಡಿಗೆ ಹೋಗಿ ಸರ್ಕಾರದಿಂದ ಮುಟ್ಟುಗೋಲು ತೆಗೆದುಕೊಳ್ಳದೆ ಇರುವ ಒಂದು ಹಿಂದುಸ್ತಾನಿ ಪುಸ್ತಕದ 1,016 ಪ್ರತಿಗಳನ್ನು ಕೂಡಿಸಿ ಸಾಗಿಸಿಕೊಂಡುಹೋಗಿ ಸುಟ್ಟುಹಾಕಿದರೆಂದೂ, ಆ ಪುಸ್ತಕಗಳ ಕ್ರಯವನ್ನೂ 1,618 ರೂಪಾಯಿ ಖರ್ಚನ್ನೂ ಅವರಿಂದ ಕೊಡಿಸಬೇಕೆಂದೂ ದೀನ್ ಮಹಮದ್ ಎಂಬಾತನು ಕಲ್ಕತ್ತಾ ಹೈ ಕೋರ್ಟಿನಲ್ಲಿ ಫಿರ್ಯಾದು ಮಾಡಿದಾನೆ. ವಿಚಾರಣೆಯಲ್ಲಿ ಪೋಲೀಸ್ ಕಮಿಷನರವರು ತಾವು ಸರ್ಕಾರದ ಅಪ್ಪಣೆಯಂತೆ ಪುಸ್ತಕಗಳನ್ನು ತೆಗೆದುಕೊಂಡು ಹೋದಂತೆ ಶೈಫಿಯತ್ತು ಕೊಟ್ಟರು ಮೊಕದ್ದಮೆ ಇನ್ನೂ ದರ್ಯಾಫ್ತು ಆಗುತ್ತಿದೆ.

ಉತ್ತರ ದೇಶದಿಂದ ಹಡಗಿನ ಮೇಲೆ ಪರರಾಜ್ಯಗಳಿಗೆ ವರ್ತಕರ ಮೂಲಕ ಸಾಗಿ ಹೋಗುತ್ತಿದ್ದ ಗೋಧೀ ಬೆಳೆಯನ್ನು ಇಂಡಿಯಾ ಗವರ್ನಮೆಂಟಿನವರು ನಿಲ್ಲಿಸಿಬಿಟ್ಟು, ತಮ್ಮ ಕಡೆಯ ಏಜಂಟರನ್ನು ನೇಮಕಮಾಡಿ ರೈತರಿಗೆ ನಷ್ಟವೇನೂ ಆಗದಂತೆ ಏರ್ಪಾಡು ಮಾಡಿರುತ್ತಾರೆ. ಈ ಏಜಂಟರು ಕರಾಚಿ, ಬೊಂಬಾಯಿ ಮುಂತಾದ ಸ್ಥಳಗಳಲ್ಲಿದ್ದುಕೊಂಡು ರೈತರು ಬೆಳೆದು ತರುವ ಧಾನ್ಯವನ್ನೆಲ್ಲಾ ಮಾರ್ಕೆಟ್ ಧಾರಣೆಯಂತೆ ಕೊಂಡು ದಾಸ್ತಾನ್ ಮಾಡಿ, ಬ್ರಿಟಿಷ್ ಹಡಗುಗಳಿಗೆ ಭರ್ತಿಮಾಡಿ ಲಂಡನ್ ಪಟ್ಟಣಕ್ಕೆ ಸಾಗಿಸಿ ಅಲ್ಲಿ ಒಳ್ಳೇ ಬೆಲೆಗೆ ಬಿಕರಿ ಮಾಡುತ್ತಾರೆ. ಇದರಿಂದ ನಮ್ಮ ದೇಶದ ರೈತರ ಧಾನ್ಯ ಖರ್ಚಾಗುವುದಕ್ಕೂ, ಈ ಧಾನ್ಯ ಶತ್ರುಗಳ ರಾಜ್ಯಕ್ಕೆ ಹೋಗದಂತೆ ನೋಡಿಕೊಳ್ಳುವುದಕ್ಕೂ ತುಂಬಾ ಅನುಕೂಲವಾಯಿತು ಕಳೆದ ವಾರ ಕರಾಚಿ ಪಟ್ಟಣದಲ್ಲಿ 4,800 ಟನ್ ಗಳ ಗೋಧಿಯನ್ನು ಭರ್ತಿಮಾಡಿದ ಹಡಗುಗಳು ಸೀಮೆಯನ್ನು ಕುರಿತು ತೆರಳಿದವು. ಈ ವ್ಯಾಪಾರದಿಂದ ಇಂಡಿಯಾ ಗವರ್ನಮೆಂಟಿಗೆ ವಿಶೇಷ ಲಾಭ ಉತ್ಪತ್ತಿಯಾಗುವುದು ಅವರು ಈ ಲಾಭವನ್ನೆಲ್ಲಾ ಕೂಡಿಸಿಟ್ಟುಕೊಂಡು ಮುಂದೆ ಯುದ್ಧ ಪೂರೈಸಿದ ಮೇಲೆ ಅದರಿಂದ ನಮ್ಮ ಸೀಮೆಯ ರೈತರಿಗೆ ಪ್ರಯೋಜನವಾಗುವಂಥಾ ಕಾರ್ಯಗಳಿಗೆ ವಿನಿಯೋಗಿಸುತ್ತೇವೆಂದು ಹೇಳಿದಾರೆ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-34] GIRLS' INDUSTRIAL SCHOOL, HASSAN.

ವಿಶೇಷ ಸೂಚನೆ

ವರ್ತಕರಿಗೆ ಒಳ್ಳೆಯ ಸಮಯ. ಮೋಸಮಾಡದೆ ಲಾಭಸಂಪಾದನೆ.

ಅಲ್ಪ ಲಾಭಕ್ಕಾಗಿ ಅಸತ್ಯಕರವಾದ ಕೊಬ್ಬಿನ ತುಪ್ಪವನ್ನು ಮಾರಿ ಜನಗಳ ಆರೋಗ್ಯವನ್ನು ಹಾಳುಮಾಡದೆ, ಶುದ್ಧವಾದ, ಶ್ರೇಷ್ಠವಾದ ಹತ್ತಿಯ ತುಪ್ಪವನ್ನು ಸಸ್ತಾವಾಗಿ ಸರಿಯಾದ ಬೆಲೆಗೆ ಮಾರಿ ನಿಮ್ಮ ಗಿರಾಕಿಗಳಿಗೂ ನಿಮಗೂ ಪ್ರಯೋಜನವಾಗುವ ಕೆಲಸಮಾಡಿ ಲಾಭ ಸಂಪಾದನೆ ಮಾಡಿ.

ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿದ್ದ ಡಾಕ್ಟರ್ ಅಚ್ಯುತರಾಯರವರೂ, ಪ್ರಜಾ ಆರೋಗ್ಯ ರಕ್ಷಣಾಕ್ಕಾಗಿರುವ ಡಾಕ್ಟರ್ ಶ್ರೀನಿವಾಸರಾಯರವರೂ ಮೊದಲಾದ ಅನೇಕ ಜನ ದೊಡ್ಡ ಮನುಷ್ಯರುಗಳಿಂದ ಶ್ಲಾಘಿಸಲ್ಪಟ್ಟಿರುವ ಪರಿಶುದ್ಧವಾಗಿಯೂ ಆರೋಗ್ಯಕರವಾಗಿಯೂ ಪುಷ್ಟಿಕರವಾಗಿಯೂ ಇರುವ ನಮ್ಮ

ಹೊಸದಾದ ಹತ್ತಿಯ ತುಪ್ಪವನ್ನು

ಮೊದಲಿಗಿಂತ ಈಗ ಬಹಳ ಅಗ್ಗವಾಗಿ ಕೊಡುತ್ತಿರುವೆವು.

ಬೇಗ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚು ವಿಷಯವನ್ನು ತಿಳಿದು ಫಲವನ್ನು ಹೊಂದಬಹುದು.

ನಮ್ಮ ವಿಳಾಸ—ಜಿ. ಯಸ್. ಶ್ರೀಕಂಠಯ್ಯ ಅಂಡ್ ಕಂಪನಿ,
ಏಜಂಟ್ಸ್, ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ,
[70-3] ದೊಡ್ಡಪೇಟೆ, ಮೈಸೂರು.

ನಕ್ಲಿಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಲಿಗಳಿಗೆ ಆಸಿಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೇರೆ ಕೆರೋಸಿನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತ ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ಪಿಕೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[296-18] 177, ಚೈನಾಬಜಾರ್ ರೋಡ್, ಮದರಾಸ್.

ಬೇಗ ತರಿಸಿಕೊಳ್ಳಿರಿ! ಕೆಲವು ಪ್ರತಿಗಳೇ ಉಳಿದಿವೆ!!

ತಡವಾದರೆ ಮತ್ತೆ ದೊರೆಯವು!!!

ರೂ. 1-8-0 ವೆಚ್ಚ ಮಾಡಿದರೆ ಸಾವಿರಾರು ರೂಪಾಯಿ ಲಾಭ.

ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ.

ಜನರು ರೋಗಾದಿ ನಿವಾರಣೆಗಾಗಿ ಎಷ್ಟೋ ಹಣವನ್ನು ಕಳೆಯುತ್ತಾರೆ. ಇದಕ್ಕಿಂತಲೂ ನಮ್ಮ "ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ" ಪುಸ್ತಕ

ವನ್ನು ಒಂದುವರೆ ರೂಪಾಯಿಗೆ ಕೊಳ್ಳುವುದರಿಂದ ಪರಿಹಾರವಿಲ್ಲದ ರೋಗಗಳಿಗೂ ಮರಿತು ಮಾತ್ರೆ, ಚೂರ್ಣ, ಎಣ್ಣೆ, ಭಸ್ಮ, ಸಿಂಧೂರ, ಲೇಹ, ಘೃತ, ಶರಬತ್, ಮುರಬ್ಬ ಮೊದಲಾದ ಔಷಧಗಳನ್ನು ಕಷ್ಟವಿಲ್ಲದೆ ತಯಾರುಮಾಡಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಬಹುದು. ಇದರ ಸುಗಂಧಾಧ್ಯಾಯದಲ್ಲಿ ಕೇವಲ ಗುಟ್ಟಾಗಿ ಸಾವಿರಾರು ರೂಪಾಯಿ ದುಡಿಯುತ್ತಿರುವ-ಊದಬತ್ತಿ, ಗಂಧದಬಿಲ್ಲೆ, ಅರಗಜ ಮೊದಲಾದವುಗಳನ್ನು ಮಾಡುವ ವಿಧಾನವು ಮರ್ಮವಿಲ್ಲದೆ ಬೋಧಿಸುವುದರಿಂದ ಸುಖ ಜೀವನಮಾರ್ಗವನ್ನು ಹೊಂದಬಹುದು. ಇಂತಹ ಉಪಯುಕ್ತ ಪುಸ್ತಕವು ನಮ್ಮ ಕನ್ನಡದಲ್ಲಿ ಇಲ್ಲವೇ ಇಲ್ಲ!! ಕೆಲವು ಕಲ್ಪನಾ ಪುಸ್ತಕಗಳಿವೆ; ಮೋಸಹೋಗಬೇಡಿ! ಶಾಸ್ತ್ರೋಕ್ತ ಮತ್ತು ಅನುಭವೀಯ ಪ್ರಯೋಗಗಳನ್ನು ನಾವು ದೇಶೋಪಕಾರಕ್ಕಾಗಿ ಪ್ರಚುರಪಡಿಸಿರುವೆವು. ಕ್ರಯ ಪುಸ್ತಕ 1 ಕ್ಕೆ ರೂ. 1-8-0.

ವಿಳಾಸ:—ವೆಂಕಟೇಶ ವಿಲಾಸ ಬುಕ್ ಡಿಪ್ಪೋ,

೫೭೩, ಹಲಸೂರುಪೇಟೆ, ಬೆಂಗಳೂರು ಸಿಟಿ.

ಕುಂತಲಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿನ್ನದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲೋಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-32]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಮಕ್ಕಳ ಆರೋಗ್ಯ. ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹಾಳಿಸಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಉಬ್ಬಸ, ಕ್ಷಯ, ಗರ್ಭವೆಟ್ಟ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-26]

ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಮಹಾಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಏಪ್ರಿಲ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0



ಇದೇ ಏಪ್ರಿಲ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಏಪ್ರಿಲ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಾಗುತ್ತೆ. [99-47]

ವಿಳಾಸ—ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-6-0.

ಏಪ್ರಿಲ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಗಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು. [99-47]

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ,,
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧನಿವಾರಣಿ	4 ,,

[262-21] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹೆಗ್ಗಡದೇವನಕೋಟೆ ತಾ॥ ಅಂತರಸಂತೆ ಹೋ॥ ಕಿತ್ತೂರಿನಲ್ಲಿದ್ದು ಮೃತಪಟ್ಟ ಸಿಕಂದರ್ ಬರ ಹೆಂಡತಿ ಜಾಸಿಂಬಿ ಆದ ನಾನು ಘೋಷಾ ಹೆಂಗಸು. ಆದ್ದರಿಂದ ನನಗೆ ಬರಬೇಕಾದ ಸಾಲಗಳನ್ನು ವಸೂಲ್ ಮಾಡುವುದಕ್ಕೂ, ಕೋರ್ಟಿನಲ್ಲಿ ವ್ಯಾಜ್ಯ ಮೊದಲಾದವುಗಳನ್ನು ನಡಿಸುವುದಕ್ಕೂ ವಗೈರೆಗಳಿಗೆ ಸಾಗರೆ ಗ್ರಾಮದಲ್ಲಿರುವ ಷೇಕ್ ಇಸ್ಮಾಯಿಲ್ ರಾವುತರು ಎಂಬವರಿಗೆ ಒಂದು ಜನರಲ್ ಪವರ್ ಆಫ್ ಅಟಾರ್ನಿ (General power of attorney) ಯನ್ನು ಬರೆದು ಕೊಟ್ಟು ದಸ್ತಾವೇಜು ವಗೈರೆಗಳನ್ನು ಆತನ ಸ್ವಾಧೀನಕ್ಕೆ ಕೊಟ್ಟು ಇದ್ದನು. ಈ ಷೇಕ್ ಇಸ್ಮಾಯಿಲ್ ರಾವುತರು ಈಚೆಗೆ ದುರಾಲೋಚನೆಯಿಂದ ನನಗೆ ಬಹಳ ತೊಂದರೆ ಪಡಿಸಿ ನನ್ನ ಆಸ್ತಿಗಳನ್ನೆಲ್ಲಾ ಖಿಲಾಫ್‌ಮಾಡಿ ಲೇವಾದೇವಿಗಳನ್ನು ಆತಕ್ಕೆ ನೂರಾರು ವಸೂಲ್ಮಾಡಿಕೊಂಡು ನನಗೆ ವಂಚನೆಮಾಡಿರುತ್ತಾರಾದ್ದರಿಂದ ಈ ಲಾಗಾಯ್ತು ನಾನು ಷೇಕ್ ಇಸ್ಮಾಯಿಲ್ ರಾವುತರಿಗೆ ಕೊಟ್ಟಿರುವ ಜನರಲ್ ಪವರ್ ಆಫ್ ಅಟಾರ್ನಿಯನ್ನು ವಜಾಮಾಡಿ ಇರುತ್ತೇನೆ. ಮುಂದೆ ಈತನಿಗೆ ನನಗೋಸ್ಕರ ಯಾವ ಮೊಬಲಗನ್ನಾಗಲೀ, ದವಸ ವಗೈರೆಯನ್ನಾಗಲೀ ಯಾರೂ ಕೊಡಕೂಡದು. ಹಾಗೆ ಮೊಬಲಗು ವಗೈರೆ ಯಾವದನ್ನಾದರೂ ಆತನಿಗೆ ಪಾವತಿ ಮಾಡಿದರೆ ಅದನ್ನು ನಾನು ಅಂಗೀಕರಿಸತಕ್ಕವಳಲ್ಲವೆಂತ ಈ ಮೂಲಕ ಸರ್ವರಿಗೂ ತಿಳಿಸಿ ಇದೆ. [67-3] ಜಾಸಿಂಬಿ ರುಜು.

ಹೊಸ ಭೂವಿವರಣೆ.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ ಲೋವರ್ ಸೆಕೆಂಡರಿ ಕನ್ನಡ ಟೆ॥ ನೋಟ್ಸು

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೋಷ್ಟತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[31-11] ಸುಬೋಧ ಗ್ರಂಥಾಲಯ, ಮೈಸೂರು.

ಊದಬತ್ತಿಗಳು

ಸುವಾಸನೆ ಸುಂಣಿ ತೊಲೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯೆಸೆನ್ಸ್ ಇವುಗಳ ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಸುಗಂಧಿ ಕಾಡ್ಸ್ 1 ಕ್ಕೆ 1 ಆ. ಡಜನ್ ೧ ಕ್ಕೆ ೧೦ ಆ.

ಈ ಕಾರ್ಡನ್ನು ಶರೀರದಲ್ಲಾಗಲೀ ಪೆಟ್ಟಿಯಲ್ಲಾಗಲೀ ಇಟ್ಟರೆ ಆ ಇಟ್ಟ ಜಾಗವೆಲ್ಲಾ ಉತ್ತಮವಾದ ಹೂವುಗಳ ಸುವಾಸನೆಯಂತೆ ಸುವಾಸನೆಗಿರುತ್ತೆ.

ಸುವಾಸನೆ ಸಾದು ತೊಲೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ವೇದವನ್ನನುಸರಿಸಿ ಉತ್ತಮವಾದ ಅತ್ತರುಗಳ ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿ ಅತ್ಯಂತ ಸುವಾಸನೆಯಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರ ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-10] ಸುಗಂಧಕಾರಿ, ಮೈಸೂರು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. CAPITAL Rs. 5,00,000. Soundest Principle

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Scheme are a novelty.

ಬೇಕಾಗಿದೆ.

ಆಫೀಸ್ ಅಸೋಸಿಯೇಟ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೂಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಜಮೀನ್ ಮತ್ತು ಮನೆಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟುಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳು ಸಹಾ ಬೇಕಾಗಿದೆ. ಇಷ್ಟಪಡುವವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

M. L. NAGANNA,
[15-16] Managing Director, Life & Marriage Assurance Buildings, Mysore.

ಮೈಸೂರು ಗೆಜೆಟ್ ಸಂಗ್ರಹ.

[illegible] ದೇವೀಕಿಡುಬು ಹಾಕುವ ಕಾನೂನು 1915 ನೇ ಇಸವಿ ಜುಲೈ [illegible] ಎರಡು ವರುಷಗಳ ವರೆಗೆ ಹೊಸದುರ್ಗ ಮ್ಯುನಿಸಿಪಾಲಿಟಿಯಲ್ಲಿ [illegible]ಪಡುವುದು. ಮಾಗಡಿ, ದೊಡ್ಡಬಳ್ಳಾಪುರ, ಆನೆಕಲ್ಲು, ನೆಲಮಂ[illegible] ಕುದುರೂರು ಮ್ಯುನಿಸಿಪಾಲಿಟಿಗಳಲ್ಲಿ ಆ ಕಾನೂನು ಮೇಲ್ಕಂಡ [illegible] ಮೂರು ವರುಷ ಜಾರಿಗೆ ತರಲ್ಪಡುವುದು.

[illegible] ಸರ್ಕಾರದವರು ಬಾಡಿಗೆ ಗಾಡಿಗಳಿಗೆ ಸಂಬಂಧಪಡುವ ರೆಗ್ಯು[illegible] ಚಿತ್ರದುರ್ಗದ ಮ್ಯುನಿಸಿಪಾಲಿಟಿಯಲ್ಲಿ ಜಾರಿಮಾಡಲ್ಪಡುವುದೆಂದು [illegible] ಮಾಡಿರುತ್ತಾರೆ.

[illegible] ತಾಲ್ಲೂಕು ಮಡಸ್ತಿ ಹೋಬಳಿಯಲ್ಲಿರುವ ವರದಪ್ಪನಹಳ್ಳಿ [illegible] ಗ್ರಾಮವನ್ನು ಇನ್ನು ಮುಂದೆ "ರಾಮಸಾಗರ" ವೆಂದೂ, [illegible] ಗೆ ಸೇರಿದ ಯತಹಳ್ಳಿ ಕಸಬೆಯನ್ನು ಆ ಸಬ್ ತಾಲ್ಲೂಕಿನನ್ನು [illegible] ಮುಂದೆ "ನರಸಿಂಹರಾಜಪುರ" ವೆಂದೂ ಕರೆಯಲ್ಪಡತಕ್ಕದ್ದೆಂದು [illegible] ಪ್ರಕಟಮಾಡಿದಾರೆ.

[illegible] ದೇವನಹಳ್ಳಿ ಸಬ್ ಡಿವಿಜನ್ ಭಾರ್ಜನ್ನು ವಹಿಸಿರುವ ಆಕ್ಟಿಂಗ್ [illegible] ಕಂಟ್ರೋಲರ್ ಎಂ|| ಎಚ್. ಪಿ. ಮಾಸ್ಕರೆನ್‌ಹಾಸ್ ಅವರಿಗೆ [illegible] 10 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು [illegible] ತಿಂಗಳು ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮೈಸೂರು [illegible] ಫಾರೆಸ್ಟ್ ಆಫೀಸರವರೇ ಆ ಕೆಲಸದ ಭಾರ್ಜನ್ನು ವಹಿಸತಕ್ಕದ್ದು.

[illegible] ಡಿಸ್ಟ್ರಿಕ್ಟ್ ಖಜಾನೆ ಅಧಿಕಾರಿಯಾದ ಅ|| ಸೀನಿಯರ್ ಅ|| [illegible] ಮ|| ನರಸಿಂಗರಾವ್ ಪೂರ್ಣಯ್ಯನವರಿಗೆ ಮೇ ತಾ. 7 ರಿಂದ [illegible] ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ [illegible] ಕೊಟ್ಟಿದೆ. ಗುಬ್ಬಿ ಸಬ್ ಡಿವಿಜನ್ ಆಫೀಸರ್ ಮ|| ಎಚ್. ವಿ. [illegible]ಯವರು ಖಜಾನೆಯ ಭಾರ್ಜನ್ನು ವಹಿಸತಕ್ಕದ್ದು.

[illegible] ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ವಿ. ಆರ್. ತ್ಯಾಗ[illegible]ರವರಿಗೆ ಮೇ ತಾ. 1 ರಿಂದ ಅಥವಾ ಅವರು ಉಪಯೋಗಿಸಿ[illegible]ವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. [illegible] ಸಬ್ ಡಿವಿಜನ್ ಆಫೀಸರ್ ಮ|| ಟಿ. ಬೊಕ್ಕಣ್ಣನವರು ಚಿತ್ರ[illegible] ಡಿಸ್ಟ್ರಿಕ್ಟ್ ಭಾರ್ಜನ್ನು ವಹಿಸತಕ್ಕದ್ದು.

[illegible] ತಾಲ್ಲೂಕು ಅಮಲ್ದಾರ್ ಮ|| ಕೆ. ಲಿಂಗೋಪಂತ್ ಬಾದಾ[illegible] ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ವಾರಗಳ [illegible] ರಜಾ ಕೊಟ್ಟಿದೆ. ಆಲೂರು ಡೆಪ್ಯುಟಿ ಅಮಲ್ದಾರ್ ಮ|| ಜಿ. ನಾರಣಯ್ಯ [illegible] ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ [illegible] ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಕೆ. ಸೂರಪ್ಪನವರು ಆಲೂರಿನ [illegible]ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ [illegible]ದ್ದು.

[illegible] ಸಬ್ ಡಿವಿಜನ್ ಆಫೀಸರ್ ಮ|| ಎಸ್. ಎನ್. ಅಪ್ಪಣ್ಣ[illegible]ಗೆ ಏಪ್ರಿಲ್ ತಾ. 20 ರಿಂದ ಅಥವಾ ಅವರು ಉಪಯೋಗಿಸಿಕೊ[illegible] ತಾರೀಖಿನಿಂದ ಇಪ್ಪತ್ತೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವ[illegible] ಖಜಾನೆ ಅ|| ಕಮಿಷನರವರು ಆ ಸಬ್ ಡಿವಿಜನ್ ಭಾರ್ಜನ್ನು [illegible]ದ್ದು.

[illegible] ಡಿಸ್ಟ್ರಿಕ್ಟ್ ಪ್ರೈ|| ಅ|| ಕಮಿಷನರ್ ಮ|| ಜಿ. ರುದ್ರಪ್ಪನ[illegible] ಏಪ್ರಿಲ್ ತಾ. 14 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. [illegible] ಕನ್ಸರ್ವೇಟರವರ ಪರ್ಸನಲ್ ಅಸಿಸ್ಟೆಂಟ್ ಮ|| ಎಂ. ವೆಂಕಟ[illegible] ಏಪ್ರಿಲ್ ತಾ. 29 ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ [illegible]ದೆ.

[illegible] ಕಂಟ್ರೋಲರ್ ಮ|| ಟಿ. ಸತ್ಯನಾರಾಯಣಶೆಟ್ಟಿಯವರಿಗೆ ಏಪ್ರಿಲ್ ತಾ. 7 [illegible] ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

[illegible] ಫೋಲೀಸ್ ಸೂಪರಿಂಟೆಂಡೆಂಟ್ ಮ|| ಎ. ವೇದಾಂತದೇಶಿ[illegible]ಗಾರ್ರಿಗೆ ಏಪ್ರಿಲ್ ತಾ. 23 ರಿಂದ ಅಥವಾ ಅವರು ಉಪಯೋಗಿಸಿ[illegible]ವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. [illegible] ಸಬ್ ಡಿವಿಜನ್ ಆಫೀಸರ್ ಮ|| ಎಂ. ಕೃಷ್ಣಸ್ವಾಮಿಅಯ್ಯಂ[illegible] ಕೆಲಸದ ಭಾರ್ಜನ್ನು ವಹಿಸತಕ್ಕದ್ದು.

[illegible] ಸಿಟಿ ಟ್ರಸ್ಟ್ ಬೋರ್ಡ್ ಓವರ್‌ಸೀಯರ್ ಮ|| ಟಿ. ಜಿ. ಲಕ್ಷ್ಮಣ[illegible] ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ [illegible] ರಜಾ ಕೊಟ್ಟಿದೆ. ಹೆಲ್ತ್ ಆಫೀಸರ್ ಮ|| ಎ. ಕೆ. ನಾಣಯ್ಯನವರು [illegible]ರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

[illegible] ತಾಲ್ಲೂಕ್ ಭಾರ್ಜನ್ನು ವಹಿಸಿರುವಾಗ್ಗೆ ಮ|| ನರಸಿಂಹಯ್ಯ[illegible] ಸೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

[illegible] ಕೆ. ಆರ್. ಕೃಷ್ಣಸ್ವಾಮಿಅಯ್ಯಂಗಾರ್ರನ್ನು ಅ|| ಕಂಟ್ರೋಲರಾಗಿಯೂ, [illegible] ರಾಮಸ್ವಾಮಿಅಯ್ಯಂಗಾರ್ರನ್ನೂ ಮ|| ಎಂ. ಎ. ರಂಗಾಚಾರ್ರನ್ನೂ [illegible]ಂಡೆಂಟರುಗಳಾಗಿಯೂ ನೇಮಕಮಾಡಿದೆ.

[illegible] ಕಮಿಷನರ್ ಮತ್ತು ಬೆಂಗಳೂರು ಸಿಟಿ ವೈಸ್ ಪ್ರೆಸಿಡೆಂಟ್ ಮ|| ಸಿ. [illegible] ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರಿಗೆ ಆಫೀ[illegible]ರಾಗಿ ನೇಮಕಮಾಡಿದೆ.

[illegible] ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಭಾರ್ಜನ್ನು ಸೀನಿಯರ್ [illegible] ಮ|| ಸಿ. ವೆಂಕಟರಾಯರು ಡೆಪ್ಯುಟಿ ಕಮಿಷನರ್ ಎಂ|| [illegible] ಏಪ್ರಿಲ್ ತಾ. 12 ರಲ್ಲಿ ವಹಿಸಿಕೊಂಡಿರುತ್ತಾರೆ.

[illegible] ಸೊಸೈಟಿಗಳ ರೆಜಿಸ್ಟ್ರಾರವರ ಅಸಿಸ್ಟೆಂಟ್ ಮ|| ಆರ್. [illegible] ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿ[illegible] ಜಾಸ್ತಿಮಾಡಿದೆ.

[illegible] ಡಿವಿಜನ್ ಅ|| ಇಂಜನಿಯರ್ ಮ|| ವೈ. ಎಸ್. ಕೇಶವ[illegible] ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

[illegible] ತಾಲ್ಲೂಕು ಅಮಲ್ದಾರ್ ಮ|| ಬಿ. ಭೀಮರಾಯರಿಗೆ [illegible] ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ [illegible] ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮ|| ಎಂ. ಎಸ್. [illegible] ಅಯ್ಯಂಗಾರ್ರು ತಾಲ್ಲೂಕ್ ಭಾರ್ಜನ್ನು ವಹಿಸತಕ್ಕದ್ದು.

[illegible] ತಾಲ್ಲೂಕ್ ಅಮಲ್ದಾರ್ ಮ|| ಬಿ. ಟಿ. ಸೀತಾರಾಮಯ್ಯನವರಿಗೆ [illegible] ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ [illegible] ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ಆ ಕಾಲದಲ್ಲಿ [illegible]ನ್ನು ವಹಿಸತಕ್ಕದ್ದು.

[illegible] Petrie-Hay & Son, Hunsur.

[illegible] ಕೋಲೆಗಳು 2 ಸಲೀ ಅಡಿ ಲಾಗಾಯತು 30-40 ಸಲೀ [illegible] ಯುತ್ತವೆ. ಇಷ್ಟಪಟ್ಟವರು ಪಟ್ಟೀಲನ್ನು ಹುಣಸೂರಲ್ಲಿರುವ [illegible] ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ಕೋಲೇ[illegible] ಕಟ್ಟುವದಕ್ಕೆ ಆಗುತ್ತವೆ. [232-26]

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಥಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ಹಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-35]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರೆಗೆ ನಡಿಸಲ್ಪಡುತ್ತೆ.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನೆಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಸಲ್ಲಾಸ-ಕಾ-ಸಿಬುನ, 20-2-16.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರಿಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರಿಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266—22] ಪಿ. ಒ. ಬಾಕ್ಸ್ 330, ಬೊಂಬಾಯಿ.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರೆಡ್ಡಿ, ಚೀಫ್ ಏಜಂಟ್, ಬೆಂಗಳೂರು; ಮ|| ಎಂ. ಎಸ್. ಸಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-29] ಬ್ರಾಂಚ್ ಸೆಕ್ರೆಟರಿ, ಮದರಾಸ್

ಜಂಟಲ್‌ಮೆನ್ ಪಾಕೆಟ್ ವಾಚ್.

ಓದಿದ ಕೂಡಲೇ ಬರೆದು ತರಿಸಿ ನೋಡಿ.

ಅತಿ ಸುಂದರವಾದದ್ದು, ಒಂದು ಸಲ ನೋಡಿದರೆ ಮತ್ತು [illegible]. ಹೊಸ ನಮೂನೆ ಮತ್ತೊಂದು ಗಡಿಯಾರದ ಹಾಗೆ ಇರುವುದಿಲ್ಲ. ಸೀಮೆ ಮತ್ತು



ಮೆಳ್ಳ ದೇಶಗಳ ನಿಪುಣರಿಂದ ಮಾಡಲ್ಪಟ್ಟಿದೆ. ವಾಚು ಇರುವವು ಸ್ವಲ್ಪ. ಆದರಿಂದ ಶೀಘ್ರ ಬರೆದು ತರಿಸಿಕೊಳ್ಳಿ. ಈ ವಾಚು ಜೂಲೈ ಮಾಸದೊಳಗೆ ತೆಗೆಯುವವರಿಗೆ 16 ಬಹುಮಾನಗಳೊಂದ ಬೆಲೆ ರೂ. 3-14-0. ಇಂಥಾ ಸಮಯ ನಿಮಗೆ ಮತ್ತೆ ದೊರೆಯುವುದಿಲ್ಲ. ತಾತ್ಕಾರ ಮಾಡದೆ ಬರೆದು ನೋಡಿ. ಬಹುಮಾನಗಳು 1. ಗಡಿಯಾರದ ಸರಪಣಿ, 2. ಉತ್ತರ ಮುಖಿ, 3. ಹಣದ ಚೀಲ, 4. ಎಲೆಕ್ಟ್ರಿಕ್ ಪಾಮಂಗಿ ಹೂವು, 5. ಇಮಿಟೇಷನ್ ಡೈಮಂಡ್ ಸರಟುಗುಂಡಿ, 6. ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 7. ಡಿಟೋ ಸಾದಿನ ಚಿಪ್ಪು, 8. ಡಿಟೋ ಕಣ್ಣುಕಪ್ಪಿನ ಭರಣಿ, 9. ಡಿಟೋ ನಶ್ಯದ ಡಬ್ಬಿ, 10. ಇಮಿಟೇಷನ್ ಡೈಮಂಡ್ ಮೂಗು ಬಟ್ಟು, 11. ಚಾಕು, 12. ರೇಷ್ಮೆ ದಾರ, 13. ಕರವಸ್ತ್ರ, 14. ಕೆಂಪು ಶಾಯಿ ಪುಟ್ಟಿ, 15. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಕೆ.

ಚಿನ್ನದ ಗಿಲ್ಟು ಬೆಲ್ಟು ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು ಬೆಲೆ ರೂ. 4—0—0 } ಪೋಸ್ಟೇಜು
ಬೆಳ್ಳಿ ಗಿಲ್ಟು ಡಾಬು ,, ,, 3—0—0 } ಬೇರೆ.



ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 150 ಗಟ್ಟಿ ಗೆಜ್ಜೆಗಳು ಸುತ್ತಲ್ಪಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಅಲ್ಪ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಿದಾರೆ. ಚಿನ್ನದ ಗಿಲ್ಟು ನಾಗಮುರಿಗೆ ರೂ. 3-8-0.

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಬೆಳ್ಳಿ ಕಂಬಿಯಿಂದ ತಯಾರಾಗಿ ಇವೆ. ಇವು ಎಂದಿಗೂ ಕೆಡುವದಿಲ್ಲ. ಇವು ಎಲ್ಲರು ಧರಿಸಿಕೊಳ್ಳಬಹುದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-4-0	1-2-0	0-12-0	0-8-0

ಅಂದವಾದ ಡಾಬು (ಒಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-4-0	1-2-0	0-14-0

ಅಂದವಾದ ಪುದುಚೇರಿ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-12-0	1-9-0	1-5-0	1-3-0

ಪೋಸ್ಟೇಜ್ ಬೇರೆ.

ಮಧುರೆ ಚುನ್ನಡಿ ಸೀರೆ ರೂ. 2-6-0; ತಂಜಾವೂರು ಗೆಜ್ಜೆ ಅಡ್ಡಿಕೆ 6 ಆಣೆ; ಕೈ ಗಡಿಯಾರ ರೂ. 1-14-0. [78-1]

ವಿಳಾಸ—ದಯಾನಿಧಿ, ರಾಜಾವಿಲಾಸ, ವಿಲ್ಲಿವಾಕಂ, ಮದ್ರಾಸು.

ಇನಾಂ ಸಾಮಾನು 50!! ಇನಾಂ ಸಾಮಾನು 50!!!

ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿರುವ "ರಾಜಸುಂದರಿ ಸಿರೋಜ"

ಇದರ ಬೆಲೆ ೫೦ ಇನಾಂ ಸಾಮಾನುಗಳೊಡನೆ ಬುಡ್ಡಿ ೧ ಕ್ಕೆ ರೂ. ೦—೧೨—೦ ಮಾತ್ರವೇ.

ಯಾವ ಸ್ತ್ರೀಯರಿಗೆ ತಮ್ಮ ತಲೆ ಕೂದಲು ಅಂದವಾಗಿರಬೇಕೆಂಬ ಆಶೆಯುಂಟೋ, ಯಾವ ಸ್ತ್ರೀಯರಿಗೆ ತಮ್ಮ ಉದುರುತ್ತಿರುವ ಕೂದಲನ್ನು ತಡೆದು ಕೋಮಲವಾಗಿ ಬೆಳೆಸಬೇಕೆಂಬ ಉದ್ದೇಶವುಂಟೋ ಅಂಥಾವರು ಈ ನಮ್ಮಲ್ಲಿ ದೊರೆಯುವ ಹೆಚ್ಚು ಯೋಗ್ಯತೆಯುಳ್ಳ "ರಾಜಸುಂದರಿ ಸಿರೋಜ" ಯನ್ನುವ ಎಣ್ಣೆಯನ್ನು ಉಪಯೋಗಿಸಬೇಕೇ ಹೊರ್ತು ಇತರ ಸಾಧಾರಣ ಎಣ್ಣೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ನಮ್ಮ ಎಣ್ಣೆಯನ್ನು ಸ್ವಲ್ಪ ಕೈಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಚೆನ್ನಾಗಿ ಹಚ್ಚಿಕೊಂಡು ಬಾಚುತ್ತಾ ಬಂದರೆ ಉದುರುತ್ತಿರುವ ಕೂದಲಿನ ಬುಡವು ದೃಢವಾಗಿ ನಿಲ್ಲುತ್ತದೆ. ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದಲ್ಲದೆ ಮುಖಕ್ಕೆ ಕಾಂತಿಯನ್ನೂ ಮನಸ್ಸಿಗೆ ಉಲ್ಲಾಸವನ್ನೂ ಕೊಟ್ಟು ಕೂದಲನ್ನು ಉದ್ದವಾಗಿ ಬೆಳೆಸುತ್ತದೆ. ಒಂದು ಬಾಟ್ಲಿಯನ್ನು ತರಿಸಿ ನೋಡಿ.

ಇನಾಂ ಸಾಮಾನುಗಳ ವಿವರ:—ಕೊಂಡಿ ಗಿಣಿ 6, ಕಪ್ಪು ಭರಣಿ 1, ಕನ್ನಡಿ 1, ದಂತದ ಬಾಚಣಿಗೆ 1, ರಾಜರಾಣಿ ಕಾರೋನೇಷನ್ ಪೆಟ್ಟಿಗೆ 1, ತಾಂಬೂಲ ಮಾತ್ರೆ 30, ರವಿವರ್ಮ ಪೋಸ್ಟ್ ಕಾರ್ಡು 6, ಅತ್ತರ್ ಬಿಲ್ಲೆ 1, ಗಂಧದ ಬಿಲ್ಲೆ 1, ಬ್ರೂಚ್ 1. [350—20]

ನಮ್ಮ ವಿಳಾಸ:—ಯಸ್. ಮುನಿಸಾಮಿ ಮೊದಲಿಯಾರ್,

ನಂ. ೬, ವೆಂಕಟೇಶಮೇಸ್ತ್ರಿ ಬೀದಿ, ಮದರಾಸು.

ಅಮೂಲ್ಯವಾದ ರೋಮ ಸಂಹಾರಿಣಿ.

ಬೇಗಂಸಾಹಿ ಸಾಬೂನು.

ನೂತನ ವಸ್ತು ವಿಶೇಷಗಳಿಂದ ತಯಾರುಮಾಡಲ್ಪಟ್ಟಿರುವದು. ಯಾವ ಸ್ಥಳದಲ್ಲಿ ಬೇಕಾದರೆ ನಿರ್ಭಯವಾಗಿ ಸ್ವಲ್ಪ ನೀರಿನಿಂದ ಆ ಸ್ಥಳವನ್ನು ತೊಳೆದು

ಬಿಟ್ಟು ಈ ಸಾಬೂನನ್ನು ಸ್ವಲ್ಪ ನೀರಿನಲ್ಲಿ ಮರ್ದಿಸಿ ತೊಳೆದ ಸ್ಥಳದಲ್ಲಿ ಹಚ್ಚಿ ಐದು ನಿಮಿಷಗಳು ಒಣ ಬಟ್ಟೆಯಿಂದ ಒರಸಿಬಿಟ್ಟರೆ ಆ ಸ್ಥಳವು ಪರಿಶುದ್ಧವಾಗಿ ಯಾವ ವಿಧವಾದ ನೋವು ಉರಿ ಮುಂತಾದವು ಇಲ್ಲದೆ ಸುಖವಾಗಿರುವದು. ಅನೇಕರು ಇದನ್ನು ಉಪಯೋಗ ಮಾಡುವರು. ಬಿಡಬೇಡಿ.

ಮೂರು ಸಾಬೂನು ಪೆಟ್ಟಿಗೆ 1 ಕ್ಕೆ ರೂ 1-0-0, ಟಪಾಲು ಚಾರ್ಜು 0-4-0. ಮೂರು ಪೆಟ್ಟಿಗೆ ರೂ 2-10-0, ಟಪಾಲು ಚಾರ್ಜು 6 ಆಣೆ.

ನಮ್ಮ ವಿಳಾಸ:—ಆರ್. ಎ. ಪಂಡಿಟ್ ಅಂಡ್ ಕೋ,

[63—7] ನಂ. 6, ಬಂದರು ಬೀದಿ, ಮದರಾಸು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ, ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತತುಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿ ಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತತುಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247—24] 20, ಚೀನಾಬಜಾರು ರೋಡು, ಮದರಾಸು.

ಊತದ ಮೊಣಕಾಲು.

ದಿನದ ಸಮಯದಲ್ಲಿ ನಿಮ್ಮ ಕಂಡುಕೊಳ್ಳುವ ನೋವಿನಂತೆಯೇ ಇದೂ ನೋವಾಗಿಯೂ ಅನಾನುಕೂಲವಾಗಿಯೂ ಇರುತ್ತದೆ, ಮತ್ತು ಅದು ಅಪಾಯಕರವಾದದ್ದು. ಊತದ ಮೊಣಕಾಲು ಸದಾ ಕುಂಟರಾಗುವಂತೆ ಮಾಡುತ್ತದೆ.

ಫಿಲಡೆಲ್ಫಿಯಾದ, ಎ. ಸಿ. ಲೇಮರ್ ಎಂಬುವರು ಬರೆಯುವುದು :—"ಎರಡು ವರುಷಗಳಕಾಲ ಮೊಣಕಾಲಿನ ದೊಡ್ಡ ಊತದ ಬೇನೆಯಿಂದ ಮರಣಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಪಡಿಸಲಿಲ್ಲ. ನಮ್ಮ ನಗರದ ಸಾಲ್ಯರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಲ್‌ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿ, ಕ್ಷಣದಲ್ಲಿ ಪೂರ್ಣ ಗುಣಹೊಂದಿದೆನು." ಲಿಟಲ್‌ಸ್ ಓರಿಯಂಟಲ್ ಬಾಂ ಎಂಬುದನ್ನು ಲೇಪಿಸುವದರಿಂದ ಉಳುಕುಗಳೂ, ಘಾಯಗಳೂ, ಹರಿವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ಮಾರಲ್ಪಡುತ್ತೆ.

101-52

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ, ಟಪಾಲ್ ಖರ್ಚು ಬೇರೆ

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದವ ಟಪಾಲ್ ಖರ್ಚು ಮುಫತ್ತು.

[231-24] ವಿಳಾಸ: ಸದ್ವೈದ್ಯಶಾಲಾ, ನಂಜನಗೂಡು.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ

ರೂ. 2-13-0 ಮಾತ್ರ.

5 ವರುಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ! ಈ ವಾಚ್ ಸಾಧಾರಣವಾಗಿ, ಬಹಳ ಕಾಲ ಬಾಳಿಕೆ ಬರುವ ವಾಚ್ ಎಂದೂ, ಸರಿಯಾದ ಕಾಲವನ್ನು ತೋರಿಸುವದೆಂದೂ ಸರ್ವರಿಗೂ ತಿಳಿದ ವಿಷಯವೇ ಸರಿ. ಇದರ 6 ಬಹುಮಾನಗಳ ತಪ್ಸೀಲು—(1) ಸುಂದರವಾದ ವಾಚ್ ಸರಪಣಿ. (2) ವಾಚ್ ಪೆಟ್ಟಿಗೆ (3) ಕೊತ್ತಳದಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖಾದ, ನಾಜೂಕಾದ ರೇಷ್ಮೆ ಧಾರ. (4) ದಿಕ್ಕುಗಳನ್ನು ತೋರಿಸುವ ಉತ್ತರ ಮುಖಿ (5) ಜಪಾನ್ ಸೆಂಟ್ ಶೀಸೆ. (6) ಸುಂದರವಾದ ಪೋಕ್ ಉಂಗುರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

[20—12] ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ, ನಂಬರ್ 7, ಕೋಪಾ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಡಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172—38] ಬೊಂಬಾಯಿ ;

ಇವಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೇ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ. (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180—26] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—4—1915 ರಿಂದ 16—4—1915 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		9	5	0	0
ಮೈಸೂರು	,,	6	5	0	0
ಕೋಲಾರ್	,,	4	5	0	0
ಕೋಲಾರ್ ಚಿನ್ನದ ಗಣಿಗಳು		8	5	0	0
ತುಂಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	1	1	0	0
ಚಿತ್ರದುರ್ಗ	,,	1	1	0	0
ಕಡೂರ್	,,	0	0	0	0
ಶಿವಮೊಗ್ಗ	,,	0	0	0	0
	ಜುಮ್ಲಾ.....	29	22	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ವಸಂತಋತೌ ಅಧಿಕ ವೈಶಾಖ ಬಹುಳ ಪಾಡ್ಯಮಿ ಶುಕ್ರವಾರದಿಂದ ಬಹುಳ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಏಪ್ರಿಲ್ ಮತ್ತು ಮೇ.

ತಾ.	ವಾರ		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮೇಷ ಮಾಸ ದಿನ
30	ಶುಕ್ರ	*	ಪಾಡ್ಯಮಿ	28-26	ವಿಶಾಖ	48-47	18
1	ಶನಿ	†	ಬಿದಿಗೆ	22-20	ಅನುರಾಧ	44-20	19
2	ಭಾನು	;;	ತದಿಗೆ	16-13	ಜ್ಯೇಷ್ಠ	40-22	20
3	ಸೋಮ	‡	ಚೌತಿ	10-22	ಮೂಲ	36-37	21
4	ಮಂಗಳ	§	ಪಂಚಮಿ	4-55	ಪೂರ್ವಾ	33-21	22
5	ಬುಧ		ಷಷ್ಠಿ	0-3	ಉತ್ತರ	55-38	23
6	ಗುರು	::	ಅಷ್ಟಮಿ	52-28	ಶ್ರವಣ	29-0	24

* ಪ್ರಥಮಾ ತಿಥಿ, ಶ್ರೀಲಕ್ಷ್ಮೀರಮಣಸ್ವಾಮಿ ರಥ, ಮಳೆ ನಕ್ಷತ್ರ—ಭರಣಿ 2 ನೇ ಪಾದ. † ತಿಥಿದ್ವಯಂ, ಗಾಢಾಸ್ತಂ ಬುಧಃ. ;; ಚತುರ್ಥೀ ಸಂಕಟಹರಚತುರ್ಥೀ ‡ ಚೈತ್ರೋತ್ಸವಾರಂಭ. § ಅಗ್ನಿನಕ್ಷತ್ರ ಪ್ರವೇಶ ಮದ್ದೂರು ನೃಸಿಂಹಸ್ವಾಮಿ ರಥ, ದಗ್ಧಯೋಗ, ಮಳೆ ನಕ್ಷತ್ರ—ಭರಣಿ 3 ನೇ ಪಾದ. :: ವೈಪ್ರ

Printed and Published by the Rev. H. Gulliford, Proprietor and Manager, Wesleyan Mission Press, Mysore 29/4/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ ನೇ ಇಸವಿ ಮೇ ತಾರೀಖು ೪ ನೇ ಗುರುವಾರ. ಸಂಚಿಕೆ ೧೯

New Paper! 128 Pages!!

READY FOR SALE.

ENGLISH L. S. TEXT NOTES, 1916

By H. Nagappa, B.A., & A. Srikantaiya, B.A. Copies can be had at the Student's Hall, Mysore; C. L. S. Book Depot, Mysore; General Agency, Mysore; or H. N. Rao Bros., Bangalore City. [83]

ತುಂಕೂರು ಜಮೀನು ಕ್ರಯ

ತುಂಕೂರು ಪೇಟೆಯ ಗ್ರಾಮಕ್ಕೆ ಸೇರಿದ ಕುರಿ ಪಾಳ್ಯದಲ್ಲಿ, ಲೇಟ್ ಮುನ್ಷಿ ಎ. ಸುಬ್ಬರಾಯರ ಬಾಬ್ತು ತರಿ ಜಮೀನು ಸುಮಾರು 20 ಎಕರೆ ಮಾರಾಟಕ್ಕೆ ಬಂದಿದೆ. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಎಲ್ಲಾ ಸಂಗತಿಗಳನ್ನೂ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಬಹುದು. [74-3]

ವಿಳಾಸ:—ಸಿ. ಕೃಷ್ಣಮೂರ್ತಿರಾವ್,
ಪ್ಲೀಡರ್. ಶ್ರೀರಂಗಪಟ್ಟಣ.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಪೋಸ್ಟೇಜ್ ಚಾರ್ಜು 6 ಕಾಸೆ.

ಅಪರಾಜಿತ	0-8-0	ಸರಳಬಾಲಿ	0-8-0
ಹಡಗಿನ ನಿಧಿ	0-8-0	ಕುಮುದಿನಿ	1-6-0
ರಾಧಾಮಾಧವ	0-8-0	ಸಂತಾಪಕ	0-4-0

[5-21] ವಿಳಾಸ—ಇಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0. Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ವ್ಯಾಕರಣಸಾರ 0-8-0, L. S. English Texts 0-10-0, Kanarese Text 0-4-6. English Notes 0-6-0, Kanarese Notes 0-4-0 and 0-7-0. [8-17]

ಗೃಹಕೃತ್ಯದ ನೋಟೀಸು.

ಸರ್ವಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಲಷ್ಕರ್ ಮೊಹಲ್ಲಾ ಕುರುಬಗೇರಿಯಲ್ಲಿರುವ ಮ್ಯುನಿಸಿಪಲ್ ನಂಬರು 1372 ಖಾತೆ ಮನೆಯು ನನ್ನದು ಎಂದು ಇರುತ್ತೆ. ಪಾಪಾಚಾರಿ ಹೆಂಡತಿ ಮುನಿಯಮ್ಮನೆಂಬುವಳು ಅನ್ಯಾಯದಿಂದ ಈ ಮನೆಯೊಳಗೆ ಅತಿಕ್ರಮಪ್ರವೇಶ ಮಾಡಿ ಮನೆ ತನ್ನದೆಂದು ಹೇಳಿ ವಾಸವಾಗಿರುತ್ತಾಳೆ. ಇವಳಿಗೆ ಜೀವನಾಂಶದ ಹಕ್ಕೇ ವಿನಹಾ ಈ ಮನೆಯನ್ನು ಆಧಾರ ಭೋಗ್ಯ ಕ್ರಯ ವಗೈರೆ ಮಾಡುವದಕ್ಕೆ ಹಕ್ಕಿಲ್ಲ. ಹಾಗೆ ಯಾರಾದರೂ ಬರೆಸಿಕೊಂಡವರು ನಷ್ಟಹೊಂದುತ್ತಾರೆ ಮತ್ತು ಅಂಥಾ ಪತ್ರಗಳು ಊರ್ಜಿತವಾಗತಕ್ಕದ್ದಲ್ಲವೆಂದು ಈ ಮೂಲಕ ಎಚ್ಚರಿಸಿರುತ್ತೆ.

[84-1] ಕೃಷ್ಣಾಚಾರಿ ಪತ್ರಸಂಬಂಧಿ ವಾಚ್‌ಮೇಕರ್ ನಂಜುಂಡಾಚಾರಿ.

ಗೃಹಕೃತ್ಯದ ನೋಟೀಸು.

ಮಂಡ್ಯದ ತಾಲ್ಲೂಕು ಕೊಪ್ಪದ ಹೋಬಳಿ ಹೊಸಕೆರೆ ಗ್ರಾಮದಲ್ಲಿರುವ ಒಕ್ಕಲಿಗರ ಆನೇಗೌಡನ ಅಂಕೇಗೌಡನ ಚಿಕ್ಕೈದನ ಮಕ್ಕಳು ... ಇವರುಗಳ ತಾಯಿ ಗಾರ್ಡಿಯನ್ ಹೊಂಬಿ ಉರುಫ್ ... ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಮೇಲ್ಕಂಡ ಗ್ರಾಮದಲ್ಲಿ ನಮ್ಮಗಳ ಪಿತ್ರಾರ್ಜಿತವಾಗಿ ನಮ್ಮ ಸ್ವಾಧೀನಾನುಭವ ... ಆನೇಗೌಡ ವಗೈರೆಯ ಹೆಸರಿಗೆ ಇರುವ 9 ನೇ ಖಾತೆಯಲ್ಲಿರುವ ಸರ್ವೆ 41, 41-3, 42-1, 144-3, 505-1 ನಂ ಉಳ್ಳ ಖುಷ್ಕಿ ಜಮೀನುಗಳು, 483, 486, 487 ನಂ. ಉಳ್ಳ ತರಿಬಾಗಾಯ್ತು ಜಮೀನುಗಳು, ಕುಂಬಿ ಅಂಕೇಗೌಡನ ಹೆಸರಿಗೆ ಖಾತೆಯಾಗಿರುವ 116 ನೇ ಖಾತೆಯಲ್ಲಿರುವ ಸರ್ವೆ ನಂ 455 ... ಈ ಜಮೀನುಗಳಲ್ಲಿ ಲಾಗಾಯ್ತು ನಮ್ಮ ನಮ್ಮ ಸ್ವಾಧೀನದಲ್ಲಿ ... ಮುಕ್ಕಾಲು ಭಾಗವಾಗಿ ಅನುಭವಿಸುತ್ತಿರುವದರಿಂದ ಈ ಗ್ರಾಮದ ... ನಮ್ಮ ಏಕೋದರನಾದ ಆನೇಗೌಡನ ಕುಳ್ಳೇಗೌಡನ ಮಗ ಆನೇಗೌಡ ... ಖಾತೆದಾರನಾಗಿ ಮತ್ತು ಗ್ರಾಮದ ಯಜಮಾನನಾಗಿ ಇರುವದ ... ಸೀರಮ್ಮನವರಿಗೆ ಚಿತಾವಣೆ ಮಾಡಿ ನಮ್ಮ ಮತ್ತು ಅವರ ... ರುವ ಮೇಲ್ಕಂಡ ಜಮೀನುಗಳನ್ನು ನನಗೂ ನನ್ನ ಮೈನರ್ ಮಕ್ಕಳಿಗೂ ... ಪರಾಧೀನ ಮಾಡುವಂತೆ ಕಾಣುತ್ತೆ. ನಮ್ಮಗಳ ಅನುಮತಿ ... ಆ ಜಮೀನುಗಳನ್ನು ಕ್ರಯ ಭೋಗ್ಯ ವಗೈರೆ ಮಾಡಿಕೊಂಡರೆ ... ಸಿಂಧುವಾಗಲಾರದೆಂದೂ, ನಮ್ಮ ನಷ್ಟಗಳಿಗೆಲ್ಲಾ ಗುರಿಯಾಗುವರೆಂದೂ ಎಚ್ಚರಿಸಿದೆ. [84-1] ಹೊಂಬಿ ಉರುಫ್ ಅಮ್ಮಣ್ಣಿ ರುಜು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧನಿವಾರಿಣಿ	4 ,,

[262-22] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಹಾವಿನ ಮತ್ತು ಪ್ಲೇಗಿನ ಔಷಧಗಳು.

ಹಾವು, ನಾಯಿ ಕಡಿದವಕ್ಕೆ ಆಂಟಿ ಕೋಬ್ರಾ ಖಂಡಿತವಾದ ಔಷಧ; ಪ್ಲೇಗನ್ನು ಪ್ಲೇಗ್ ಕ್ಯೂರ್ ಔಷಧವು ಗುಣಮಾಡಬಲ್ಲದು. ಇವೆರಡೇ ನಮ್ಮಲ್ಲಿರುವ ಗುಣಕಂಡ ಔಷಧಗಳು. ಸ್ಥಳದವರಿಗೆ ಖಚಿತಪಟ್ಟು ವಾಸಿಮಾಡುವೆವು. ಜಲಂಧರದ ಹಕೀಂ ಇಮಾಮುದ್ದೀನ್ ಖಾನರು ಬರೆಯುವುದು—ನನ್ನ ಬಳಿಗೆ ಬಂದ 35 ಪ್ಲೇಗ್ ರೋಗಿಗಳನ್ನೂ ವಾಸಿಮಾಡಿದೇನೆ. ಇದು ಖಚಿತವಾದ ಔಷಧ. ಪರೀಕ್ಷಕರು ಇದನ್ನು ಹೊಗಳುತ್ತಾರೆ. ಒಂದು ಬಾಟ್ಲಿ ತರಿಸಿ ಪರೀಕ್ಷಿಸಿ. ಕ್ರಯ—ಹಾವಿನ ಔಷಧಕ್ಕೆ ರೂ. 1-4-0; ಪ್ಲೇಗಿನ ಔಷಧ ಸಣ್ಣ ಬಾಟ್ಲಿಗೆ ರೂ. 1-4-0, ದೊಡ್ಡ ಬಾಟ್ಲಿಗೆ ರೂ. 3

[71-3] ನಮ್ಮ ವಿಳಾಸ—ಆಂಟಿ ಕೋಬ್ರಾ ಕಂಪನಿ, ಚೌರಿಂಗ್‌ಪೇಟೆ.

ಡಾಕ್ಟರ್ ಗೋಪೀನಾಥ ಕೃಷ್ಣಾಜಿ ಕ್ಷತ್ರಿಯ ಇವರ ಔಷಧಗಳನ್ನು ಪರೀಕ್ಷಿಸಿ ನೋಡಿ.

ಈ ಔಷಧಗಳಿಗೆ ನಾನಾ ಪ್ರದರ್ಶನಗಳಲ್ಲಿ 3 ಚಿನ್ನದ, 4 ಬೆಳ್ಳಿಯ, 1 ಕಂಚಿನ ಮೆಡಲುಗಳೂ, ಗೌರವವಾದ 8 ಪ್ರಶಸ್ತಿ ಪತ್ರಿಕೆಗಳೂ ಲಭ್ಯವಾಗಿರುವವು.

ಜ್ವರನಾಶಿನಿ, ಸಾರ್ಸಪರಿಲ, ಕೆಮ್ಮಿನೌಷಧ, ಪ್ರತಿ ಒಂದೂ ಬಾಟ್ಲಿ 1 ಕ್ಕೆ ಕ್ರಯ ರೂ. 2; ಭೇದಿ ಮತ್ತು ಕಾಲರಾ ಔಷಧ, ಕೆಮ್ಮಿನ ಮಾತ್ರೆಗಳು, ತಲಾ ಬಾಟ್ಲಿ 1 ಕ್ಕೆ ಕ್ರಯ 12 ಆಣೆ; ಕರ್ಪೂರ, ಪೆಪ್ಪರ್‌ಮಿಂಟ್, ಪುದೀನಾ, ಇವುಗಳ ಎಕ್ಸ್‌ಟ್ರಾಕ್ಟ್ ಅಥವಾ ದ್ರಾವಕಗಳು ಮತ್ತು ಹುಳುಕಡ್ಡಿಲೇಪನ, ತಲಾ ಬಾಟ್ಲಿ 1 ಕ್ಕೆ 6 ಆಣೆ.

ವಿಳಾಸ—ಡಾ|| ಗೋ. ಕೃಷ್ಣಾಜಿ ಕ್ಷತ್ರಿಯಾ,
[76-3] ಗಿರ್ಗಾವ ಪೋಸ್ಟ್, ಬೊಂಬಾಯಿ.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಪಟ್ಟಣ ಚಿತ್ರಸಹಿತ ಅಚ್ಚಾಗಿರುವುದು. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹೊಸ ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನಿಯಲ್ ಕರ್ತವ್ಯ 1 ರೂಪಾಯಿ.

[143-13] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ
ಲೋವರ್ ಸೆಕೆಂಡರಿ ಕನ್ನಡ ಟೆ|| ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[31-12] ಸುಬೋಧ ಗ್ರಂಥಾಲಯ, ಮೈಸೂರು.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಳಕೆಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 26, 3 ನೇ ದರ್ಜೆ ರೂ. 10.

[28-13] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-42]

ಅತ್ಯುತ್ತಮ ಕಾದಂಬರಿಗಳು:—ಆದಿ ವಾಲ್ಮೀಕಿ 12 ಆ; ಅಶ್ವತ್ಥ ತ್ಯಾಗ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ಸಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಊದಬತ್ತಿಗಳು

ಸುವಾಸನೆ ಸುಂಣ ಸೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯೆಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ರಾಯಲ್ ಸುಗಂಧಿ ಸೀಸಾ 1 ಕ್ಕೆ 8 ಆಣೆ.

ಗಂಧದಬತ್ತಿಯನ್ನು ಹಚ್ಚುವುದಕ್ಕೆ ಕೆಲವರು ಬೇಜಾರುಪಡುತ್ತಾರೆ. ಮತ್ತು ಬಿಸಿಲಿನಲ್ಲಿ ಒಣಗುವದರಿಂದ ಸುವಾಸನೆಯೂ ಬಹಳ ಕಡಮೆಯಾಗಿರುತ್ತೆ ಎಂಬದಾಗಿ ಬತ್ತಿಗೆ ಹಾಕುವ ಪದಾರ್ಥವನ್ನೇ ಪುನಗುಜವಾದಿ ಸಹಾ ಸೇರಿಸಿ ಅಪೇಕ್ಷಿಸಿದ ಕೂಡಲೇ ಹಚ್ಚಿಕೊಳ್ಳುವಂತೆ ತಯಾರಿಸಿರುತ್ತೆ.

ಫಿತ್ನ ತೊಲಾ 1 ಕ್ಕೆ 1 ರೂ.

ಇದು ಅತ್ಯಂತ ಸುವಾಸನೆಯಾಗಿಯೂ ಥಳಥಳನೆ ಹೊಳೆಯುವದಾಗಿಯೂ ಇದೆ. ಗಂಡಸರ ಮೀಸೆಗೂ ಹೆಂಗಸರ ಮುಂಗುರುಳಿಗೂ ಹಣೆಗೂ ಸಹಾ ಹಚ್ಚಿಕೊಳ್ಳುತ್ತಾರೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-11] ಸುಗಂಧಕಾರಿ, ಮೈಸೂರು.

ಬೇಗ ತರಿಸಿಕೊಳ್ಳಿರಿ! ಕೆಲವು ಪ್ರತಿಗಳೇ ಉಳಿದಿವೆ!!
ತಡವಾದರೆ ಮತ್ತೆ ದೊರೆಯವು!!!

ರೂ. 1-8-0 ವೆಚ್ಚ ಮಾಡಿದರೆ ಸಾವಿರಾರು ರೂಪಾಯಿ ಲಾಭ.

ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ.

ಜನರು ರೋಗಾದಿಗಳ ನಿವಾರಣೆಗಾಗಿ ಎಷ್ಟೋ ಹಣವನ್ನು ಕಳೆಯುತ್ತಾರೆ. ಇವಕ್ಕೆಂತಲೂ ನಮ್ಮ "ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ" ಪುಸ್ತಕ

ವನ್ನು ಒಂದುವರೆ ರೂಪಾಯಿಗೆ ಕೊಳ್ಳುವದರಿಂದ ಪರಕಹಾಯವಿಲ್ಲದೆ ರೋಗಗಳಿಗೆ ಮರಿಕು ಮಾತ್ರೆ, ಚೂರ್ಣ, ಎಣ್ಣೆ, ಭಸ್ಮ, ಸಿಂಧೂರ, ಲೇಹ, ಘೃತ, ಷರಬತ್, ಮುರಬ್ಬ ಮೊದಲಾದ ಔಷಧಗಳನ್ನು ಕಷ್ಟವಿಲ್ಲದೆ ತಯಾರುಮಾಡಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಬಹುದು. ಇದರ ಸುಗಂಧಾಧ್ಯಾಯದಲ್ಲಿ ಕೇವಲ ಗುಟ್ಟಾಗಿ ಸಾವಿರಾರು ರೂಪಾಯಿ ದುಡಿಯುತ್ತಿರುವ ಊದಬತ್ತಿ, ಗಂಧದಬತ್ತಿ, ಅರಗದ ಮೊದಲಾದವುಗಳನ್ನು ಮಾಡುವ ವಿಧಾನವು ಮರ್ಮವಿಲ್ಲದೆ ಬೋಧಿಸುವುದರಿಂದ ಸುಖಜೀವನಮಾರ್ಗವನ್ನು ಹೊಂದಬಹುದು. ಇಂತಹ ಉಪಯುಕ್ತ ಪುಸ್ತಕವು ನಮ್ಮ ಕನ್ನಡದಲ್ಲಿ ಇಲ್ಲವೇ ಇಲ್ಲ!! ಕೆಲವು ಕೆಲ್ಪನಾ ಪುಸ್ತಕಗಳಿವೆ; ಮೋಸಹೋಗಬೇಡಿರಿ! ಶಾಸ್ತ್ರೋಕ್ತ ಮತ್ತು ಅನುಭವೀಯ ಪ್ರಯೋಗಗಳನ್ನು ನಾವು ದೇಶೋಪಕಾರಕ್ಕಾಗಿ ಪ್ರಚುರಪಡಿಸಿರುವೆವು. ಕ್ರಯ ಪುಸ್ತಕ 1 ಕ್ಕೆ ರೂ. 1-8-0.

ವಿಳಾಸ:—ವೆಂಕಟೇಶ ವಿಲಾಸ ಬುಕ್ ಡಿಪೋ,
[79-2] ಇಂಡಿ, ಹಲಸೂರುಪೇಟೆ, ಬೆಂಗಳೂರು ಸಿಟಿ.

ಅಮೂಲ್ಯವಾದ ರೋಮ ಸಂಹಾರಿಣಿ.

ಬೇಗಂಸಾಹಿ ಸಾಬೂನು.

ನೂತನ ವಸ್ತು ವಿಶೇಷಗಳಿಂದ ತಯಾರ್ಮಾಡಲ್ಪಟ್ಟಿರುವದು. ಯಾವ ಸ್ಥಳ 'ದಲ್ಲಿ ಬೇಕಾದರೆ ನಿರ್ಭಯವಾಗಿ ಸ್ವಲ್ಪ ನೀರಿನಿಂದ ಆ ಸ್ಥಳವನ್ನು ತೊಳೆದು

ಬಿಟ್ಟು ಈ ಸಾಬೂನನ್ನು ಸ್ವಲ್ಪ ನೀರಿನಲ್ಲಿ ಮರ್ದಿಸಿ ತೊಳೆದ ಸ್ಥಳದಲ್ಲಿ ಹಚ್ಚಿ ಐದು ನಿಮಿಷಗಳು ತಿಕ್ಕಿ ಬಟ್ಟೆಯಿಂದ ಒರಸಿಬಿಟ್ಟರೆ ಆ ಸ್ಥಳವು ಪರಿಶುದ್ಧವಾಗಿ ಯಾವ ವಿಧವಾದ ನೋವು ಉರಿ ಮುಂತಾದವು ಇಲ್ಲದೆ ಸುಖವಾಗಿರುವದು. ಅನೇಕರು ಇದನ್ನು ಉಪಯೋಗ ಮಾಡುವರು. ಬಿಡಬೇಡಿ.

ಮೂರು ಸಾಬೂನು ಪೆಟ್ಟಿಗೆ 1 ಕ್ಕೆ ರೂ 1-0-0, ಟಪಾಲು ಚಾರ್ಜು 0-4-0. ಮೂರು ಪೆಟ್ಟಿಗೆ ರೂ 2-10-0, ಟಪಾಲು ಚಾರ್ಜು 6 ಆಣೆ.

ನಮ್ಮ ವಿಳಾಸ:—ಆರ್. ಎ. ಪಂಡಿಟ್ ಅಂಡ್ ಕೋ,

[53—7] ನಂ. 6, ಬಂದರು ಬೀದಿ, ಮದರಾಸು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ದೀರ್ಘಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿ ಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247—24] 20, ಚೇನಾಬಜಾರು ರೋಡು, ಮದರಾಸು.

ಊತದ ಮೊಣಕಾಲು.

ದಿನದ ಪಯಣದಲ್ಲಿ ನೀವು ಕಂಡುಕೊಳ್ಳುವ ನೋವಿನಂತೆಯೇ ಇದೂ ನೋವಾಗಿಯೂ ಅನಾನುಕೂಲವಾಗಿಯೂ ಇರುತ್ತದೆ. ಮತ್ತು ಅದು ಹಾನಿಕರವಾದದ್ದು. ಊತದ ಮೊಣಕಾಲು ಸದಾ ಕುಂಟರಾಗಮಾಡುತ್ತದೆ.

ಫಿಲಡೆಲ್ಫಿಯದ, ಎ. ಸಿ. ಲೇಮ್ಸ್ ಎಂಬುವರು ಬರೆಯುವುದು:—"ಎರಡು ವರುಷಗಳಕಾಲ ಮೊಣಕಾಲಿನ ದೊಡ್ಡ ಊತದ ದೆಸೆಯಿಂದ ಮರಣಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಮಾಡಲಿಲ್ಲ. ನನ್ನ ನಗರದ ನೂರ್ವರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಿಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿ, ಕ್ಷಣದಲ್ಲಿ ಪೂರ್ಣ ಗುಣಹೊಂದಿದೆನು." ಲಿಟಿಲ್ಸ್ ಓರಿಯಂಟಲ್ ಬಾಂ ಎಂಬದನ್ನು ಲೇಪಿಸುವದರಿಂದ ಉಳುಕುಗಳೂ, ಘಾಯಗಳೂ, ಪರಿವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ಮಾರಲ್ಪಡುತ್ತೆ.

101-53

ಆಯುರ್ವೇದ ವಿದ್ವಾನ್—ಬಿ ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇಟ್ಟುಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[211-24] ವಿಳಾಸ: ಸದ್ವೈದ್ಯಶಾಲಾ, ನಂಜನಗೂಡು.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ

ರೂ. 2-13-0 ಮಾತ್ರ.

5 ವರುಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ! ಈ ವಾಚ್ ಸಾಧಾರಣವಾಗಿ, ಬಹಳ ಕಾಲ ಬಾಳಿಕೆ ಬರುವ ವಾಚ್ ಎಂದೂ, ಸರಿಯಾದ ಕಾಲವನ್ನು ತೋರಿಸುವದೆಂದೂ ಸರ್ವರಿಗೂ ತಿಳಿದ ವಿಷಯವೇ ಸರಿ. ಇದರ 6 ಬಹುಮಾನಗಳ ತಪ್ಸೀಲು—(1) ಸುಂದರವಾದ ವಾಚ್ ಸರಪಣಿ. (2) ವಾಚ್ ಪೆಟ್ಟಿಗೆ (3) ಕತ್ತಿನಲ್ಲಿ ಧರಿಸಿಕೊಳ್ಳುವದಕ್ಕೆ ಅನುಕೂಲವಾದ, ನಾಜೂಕಾದ ರೇಷ್ಮೆ ಧಾರ. (4) ದಿಕ್ಕುಗಳನ್ನು ತೋರಿಸುವ ಉತ್ತರ ಮುಖಿ (5) ಜರ್ಮನ್ ಸಿಲ್ವರ್ ಶೀಷೆ. (6) ಸುಂದರವಾದ ಪೋಕ್ ಉಂಗುರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

[20—12] ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ, ನಂಬರ್ 7, ಕೋಪ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 18 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲುದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪೆನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೋರಿಯೋ ಕಂಪನಿ, ಪಾಲೆಸ್ ಬೀದಿ,

[172—38] ಬೊಂಬಾಯಿ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3—8—0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲಿ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟ್ಟಿಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ಮಜಬೂತಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಕಲಂದರ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕತ್ತಿನಲ್ಲಿ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ. (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180—26] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—4—1915 ರಿಂದ 16—4—1915 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		9	5	0	0
ಮೈಸೂರು	,,	6	5	0	0
ಕೋಲಾರ್	,,	4	5	0	0
ಕೋಲಾರ್ ಚಿನ್ನದ ಗಣಿಗಳು		8	5	0	0
ತುಂಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	1	1	0	0
ಚಿತ್ರದುರ್ಗ	,,	1	1	0	0
ಕಡೂರ್	,,	0	0	0	0
ಶಿವಮೊಗ್ಗ	,,	0	0	0	0
	ಜುಮ್ಲಾ......	29	22	0	0

ಶಾಲಿವಾಹನ ಶಕೆ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ವಸಂತಋತೌ ಅಧಿಕ ವೈಶಾಖ ಬಹುಳ ಪಾಡ್ಯಮಿ ಶುಕ್ರವಾರದಿಂದ ಬಹುಳ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಏಪ್ರಿಲ್ ಮತ್ತು ಮೇ.

ತಾ.	ವಾರ		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮೇಷ ಮಾಸ ತಾರೀ
30	ಶುಕ್ರ	*	ಪಾಡ್ಯಮಿ	28-28	ವಿಶಾಖ	48-47	18
1	ಶನಿ	†	ಬಿದಿಗೆ	22-20	ಅನುರಾಧ	44-29	19
2	ಭಾನು	;;	ತದಿಗೆ	16-13	ಜ್ಯೇಷ್ಠ	40-22	20
3	ಸೋಮ	‡	ಚೌತಿ	10-22	ಮೂಲ	36-37	21
4	ಮಂಗಳ	§	ಪಂಚಮಿ	4-55	ಪೂರ್ವಾ	33-21	22
5	ಬುಧ		ಷಷ್ಠಿ	0-3	ಉತ್ತರಾ	55-38	23
6	ಗುರು	::	ಅಷ್ಟಮಿ	52-28	ಶ್ರವಣ	29-0	24

* ಪ್ರಥಮಾ ತಿಥಿ, ಶ್ರೀಲಕ್ಷ್ಮೀರಮಣಸ್ವಾಮಿ ರಥ, ಮಳೆ ನಕ್ಷತ್ರ—ಭರಣಿ 2 ನೇ ಪಾದ. † ತಿಥಿದ್ವಯಂ, ಗಾಢಾಷ್ಟಂ ಬುಧೇ. ;; ಚತುರ್ಥಿ ಸಂಕಟಹರಚತುರ್ಥಿ ‡ ಚೈತ್ರೋತ್ಸವಾರಂಭ. § ಅಗ್ನಿನಕ್ಷತ್ರ ಪ್ರವೇಶ ಮಧೂರು ನೃಸಿಂಹಸ್ವಾಮಿ ರಥ, ದಗ್ಧಯೋಗ, ಮಳೆ ನಕ್ಷತ್ರ—ಭರಣಿ 3 ನೇ ಪಾದ. :: ವೈಧೃತಿ

Printed and Published by the Rev. H. Gulliford, Proprietor and Manager, Wesleyan Mission Press, Mysore 29/4/1915.

REGISTERED
M. 30

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ನೇ ಇಸವಿ ಮೇ ತಾರೀಖು ೬ನೇ ಗುರುವಾರ. ಸಂಚಿಕೆ ೪೯

New Paper! 128 Pages!!

READY FOR SALE.

ENGLISH L. S. TEXT NOTES, 1916

By H. Nagappa, B.A., & A. Srikantaiya, B.A. Copies can be had at the Student's Hall, Mysore; C. L. S. Book Depot, Mysore; General Agency, Mysore; or H. N. Rao Bros., Bangalore City. [83]

ತುಂಕೂರು ಜಮೀನು ಕ್ರಯ

ತುಂಕೂರು ನೀರಸಾಗರ ಗ್ರಾಮಕ್ಕೆ ಸೇರಿದ ಕೆರೆ ಪಾರ್ಶ್ವದಲ್ಲಿ, ಲೇಟ್ ಪ್ಲೀಡರ್ A. ಸುಬ್ಬರಾಯರ ಬಾಬ್ತು ತರಿ ಜಮೀನು ಸುಮಾರು 20 ಎಕರೆ ಮಾರಾಟಕ್ಕೆ ಬಂದಿದೆ. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಎಲ್ಲಾ ಸಂಗತಿಗಳನ್ನೂ ಕೆಳಗಿನ ವಿಳಾಸದಾರನಿಗೆ ಬರೆದು ತಿಳಿದುಕೊಳ್ಳಬಹುದು. [74-3]

ವಿಳಾಸ:—ಸಿ. ಕೃಷ್ಣಮೂರ್ತಿರಾವ್,
ಪ್ಲೀಡರ್. ಶ್ರೀರಂಗಪಟ್ಟಣ.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಭಾಗ್ಯ ಚಾಣಕ್ಯ 6 ಆಣೆ.

ಕಮಲಸುಂದರಿ	0-8-0	ಸರಳಬಾಲೆ	0-8-0
ಚಂದ್ರಸುಂದರಿ	0-8-0	ಕುಸುಮಾವತಿ	0-6-0
ಅಘಾಮೂಢ	0-8-0	ಸಂತಾಪಕ	0-4-0

[115-21] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY, MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಕನ್ನಡ ವ್ಯಾಕರಣ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-17]

ಗೃಹಕೃತ್ಯದ ನೋಟೀಸು.

ಸರ್ವರಿಗೂ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಮೈಸೂರು ಲಷ್ಕರ್ ಮೊಹಲ್ಲಾ ಕುರುಬಗೇರಿಯಲ್ಲಿರುವ ಮ್ಯುನಿಸಿಪಲ್ ನಂಬರು 1372 ಖಾತೆ ಮನೆ ಎಂದು ಇರುತ್ತೆ. ನಾಪಾಚಾರಿ ಹೆಂಡತಿ ಮುನಿಯಮ್ಮ ಎಂಬುವಳು ದಾವೆಯಿಂದ ಈ ಮನೆಯೊಳಗೆ ಅನಿಕ್ತ ಪ್ರವೇಶ ಮಾಡಿ ಮನೆ ತನ್ನದೆಂದು ಹೇಳಿ ವಾಸವಾಗಿರುತ್ತಾಳೆ. ಇವಳಿಗೆ ಜೀವನಾಂಶದ ಹಕ್ಕೇ ವಿನಹಾ ಈ ಮನೆಯನ್ನು ಆಧಾರ ಭೋಗ್ಯ ಕ್ರಯ ವಗೈರೆ ಮಾಡುವದಕ್ಕೆ ಹಕ್ಕಿಲ್ಲ. ಹಾಗೆ ಯಾರಾದರೂ ಪಡೆದವರು ನಷ್ಟಹೊಂದುತ್ತಾರೆ ಮತ್ತು ಅಂಥಾ ಪತ್ರಗಳು ಊರ್ಜಿತವಾಗವು ಎಂದು ಈ ಮೂಲಕ ಎಚ್ಚರಿಸಿರುತ್ತೆ.

[84-1] ಕೃಷ್ಣಾಚಾರಿ ಪತ್ರಸಂಬಂಧಿ ಪಾಚ್‌ಮೇಕರ್ ನಂಜುಂಡಾಚಾರಿ.

ಗೃಹಕೃತ್ಯದ ನೋಟೀಸು.

ಮಂಡ್ಯದ ತಾಲ್ಲೂಕು ಕೊಪ್ಪದ ಹೋಬಳಿ ಹೊಸಕೆರೆ ಗ್ರಾಮದಲ್ಲಿರುವ ಒಕ್ಕಲಿಗರ ಆನೇಗೌಡನ ಅಂಕೇಗೌಡನ ಚಿಕ್ಕೈದನ ಮಕ್ಕಳು ..., ವ್ಯಾವಸ, ಇವರುಗಳ ತಾಯಿ ಗಾರ್ಡಿಯನ್ ಹೊಂಬಿ ಉರುಫ್ ... ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಮೋಲ್ಕಂಡ ಗ್ರಾಮದಲ್ಲಿ ನಮ್ಮಗಳ ಪಿತರಾರ್ಜಿತವಾಗಿ ನಮ್ಮ ಸ್ವಾಧೀನಾನುಭವದಲ್ಲಿರುವ ಆನೇಗೌಡ ವಗೈರೇರ ಹೆಸರಿಗೆ ಇರುವ 9 ನೇ ಖಾತೆಯಲ್ಲಿರುವ ಸರ್ವೆ ..., 43-1, 144-3, 505-1 ನಂ ಉಳ್ಳ ಖುಷ್ಕಿ ಜಮೀನುಗಳು, ..., 486, 487 ನಂ. ಉಳ್ಳ ತರಿಬಾಗಾಯ್ತು ಜಮೀನುಗಳು, ಕುರಿ ಅಂಕೇಗೌಡನ ಹೆಸರಿಗೆ ಖಾತೆಯಾಗಿರುವ 116 ನೇ ಖಾತೆಯಲ್ಲಿರುವ ಸರ್ವೆ ನಂ 455 ..., ಈ ಜಮೀನುಗಳಲ್ಲಿ ಬಾಗಾಯ್ತು ನಮ್ಮ ನಮ್ಮ ಸ್ವಾಧೀನದಲ್ಲಿ ... ಮುಕ್ಕಾಲು ಭಾಗವಾಗಿ ಅನುಭವಿಸುತ್ತಿರುವದರಿಂದ ಈ ಗ್ರಾಮದ ... ನಮ್ಮ ಪಕ್ಷೋದರನಾದ ಆನೇಗೌಡನ ಕುಳ್ಳೇಗೌಡನ ಮಗ ಆನೇಗೌಡ ... ಖಾತೆದಾರನಾಗಿ ಮತ್ತು ಗ್ರಾಮದ ಯಜಮಾನನಾಗಿ ಇರುವದರಿಂದ ... ಸೀರಮ್ಮನವರಿಗೆ ಚತಾವಣಿ ಮಾಡಿ ನಮ್ಮ ಮತ್ತು ಅವರ ... ರುವ ಮೇಲ್ಕಂಡ ಜಮೀನುಗಳನ್ನು ನನಗೂ ನನ್ನ ಮೈನರ್ ಮಕ್ಕಳಿಗೂ ... ಪರಾಧೀನ ಮಾಡುವಂತೆ ಕಾಣುತ್ತೆ. ನಮ್ಮಗಳ ಅನುಮತಿ ... ಆ ಜಮೀನುಗಳನ್ನು ಕ್ರಯ ಭೋಗ್ಯ ವಗೈರೆ ಮಾಡಿಕೊಂಡವರು ... ಹೊಣೆಗಾರರಾಗುವರೆಂದೂ, ನಮ್ಮ ನಷ್ಟಗಳಿಗೆಲ್ಲಾ ಗುರಿಯಾಗುವರೆಂದೂ ಎಚ್ಚರಿಸಿದೆ. [84-1] ಹೊಂಬಿ ಉರುಫ್ ಅಮ್ಮಣ್ಣಿ ರುಜು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

ಜ್ವರದ ಮಾತ್ರೆ	8 ಆಣೆ	ದಂತಶುದ್ಧಿ ಚೂರ್ಣ	2 ಆಣೆ
ಬಾಲಸಂಜೀವಿನಿ	4 ,,	ಕೆಮ್ಮಿನ ಮಾತ್ರೆ	8 ,,
ಅಜೀರ್ಣದ ಮಾತ್ರೆ	12 ,,	ಉಬ್ಬಸದ ಮಾತ್ರೆ	12 ,,
ಸರಳಭೇದಿ ಮಾತ್ರೆ	8 ,,	ಬಾಧನಿವಾರಿಣಿ	4 ,,

[262-22] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಹಾವಿನ ಮತ್ತು ಪ್ಲೇಗಿನ ಔಷಧಗಳು.

ಹಾವು ಮತ್ತು ನಾಯಿ ಕಡಿದದ್ದಕ್ಕೆ ಆಂಟಿ ಕೋಬ್ರಾ ಖಂಡಿತವಾದ ಔಷಧ; ಪ್ಲೇಗನ್ನು ಪ್ಲೇಗ್ ಕ್ಯೂರ್ ಔಷಧವು ಗುಣಮಾಡಬಲ್ಲದು. ಇವೆರಡೇ ನಮ್ಮಲ್ಲಿರುವ ಗುಣಕಂಡ ಔಷಧಗಳು. ಸ್ಥಳದವರಿಗೆ ಪುಗಸಟ್ಟೆ ವಾಸಿಮಾಡುವೆವು. ಜಲಂಧರದ ಹಕೀಂ ಇನಾಮುದ್ದೀನ್ ಖಾನ್‌ರು ಬರೆಯುವದು—ನನ್ನ ಬಳಿಗೆ ಬಂದ 35 ಪ್ಲೇಗ್ ರೋಗಿಗಳನ್ನು ವಾಸಿಮಾಡಿದೆನು. ಇದು ಖಚಿತವಾದ ಔಷಧ. ಹಕೀಮರು ಇದನ್ನು ಕೊಡುತ್ತಾರೆ. ಒಂದು ಬಾಟ್ಲು ತರಿಸಿ ಪರೀಕ್ಷಿಸಿ. ಕ್ರಯ—ಹಾವಿನ ಔಷಧಕ್ಕೆ ರೂ. 1-4-0; ಪ್ಲೇಗಿನ ಔಷಧ ಸಣ್ಣ ಬಾಟ್ಲಿಗೆ ರೂ. 1-4-0, ದೊಡ್ಡ ಬಾಟ್ಲಿಗೆ ರೂ. 3

[71-3] ನಮ್ಮ ವಿಳಾಸ—ಆಂಟಿ ಕೋಬ್ರಾ ಕಂಪನಿ, ಬೌರಿಂಗ್‌ಪೇಟೆ.

ಡಾಕ್ಟರ್ ಗೋಪೀನಾಥ ಕೃಷ್ಣಾಜಿ ಕ್ಷತ್ರಿಯ ಇವರ ಔಷಧಗಳನ್ನು ಪರೀಕ್ಷಿಸಿ ನೋಡಿ.

ಈ ಔಷಧಗಳಿಗೆ ನಾನಾ ಪ್ರದರ್ಶನಗಳಲ್ಲಿ 3 ಚಿನ್ನದ, 4 ಬೆಳ್ಳಿಯ, 1 ಕಂಚಿನ ಪದಕಗಳೂ, ಗೌರವವಾದ 8 ಘನ ಪತ್ರಿಕೆಗಳೂ ಲಭ್ಯವಾಗಿರುವವು.

ಜ್ವರನಾಶಿನಿ, ಸೌಂದರ್ಯವಲ್ಲಿ, ಕೆಮ್ಮಿನೌಷಧ, ಪ್ರತಿ ಒಂದೂ ಬಾಟ್ಲು 1 ಕ್ಕೆ ಕ್ರಯ ರೂ. 2; ಭೇದಿ ಮತ್ತು ಕಾಲರಾ ಔಷಧ, ಕೆಮ್ಮಿನ ಮಾತ್ರೆಗಳು, ತಲಾ ಬಾಟ್ಲು 1 ಕ್ಕೆ ಕ್ರಯ 12 ಆಣೆ; ಕರ್ಪೂರ, ಪೆಪ್ಪರ್‌ಮೆಂಟ್, ಪುದೀನಾ, ಇವುಗಳ ಎಸ್ಸೆನ್ಸ್ ಅಥವಾ ದ್ರಾವಣಗಳು ಮತ್ತು ಹುಳುಕಡ್ಡಿ ಲೇಪನ, ತಲಾ ಬಾಟ್ಲು 1 ಕ್ಕೆ 6 ಆಣೆ.

ವಿಳಾಸ—ಡಾ|| ಗೋ. ಕೃಷ್ಣಾಜಿ ಕ್ಷತ್ರಿಯಾ,
[70-3] ಗಿರ್ಗಾವ ಪೋಸ್ಟ್, ಬೊಂಬಾಯಿ.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಪರ್ಯಾಪ್ತವಾಗಿ ಚಿತ್ರ ಸಹಿತ ಅಚ್ಚಾಗಿರುವದು. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ಕಿಮ್ಮತ್ತು ಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನ್ಯುಯಲ್ ಕರ್ತವ್ಯ 1 ರೂಪಾಯಿ.

[143-43] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ ಲೋವರ್ ಸೆಕಂಡರಿ ಕನ್ನಡ ಟೆ|| ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,
[31-12] ಸುಬೋಧ ಗ್ರಂಥಾಲಯ, ಮೈಸೂರು.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಳಕೆಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-13] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಧರ್ಮ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-42]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಶ್ವತ್ಥಾಮ್ನ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಧವಾವಾಹ 4 ಆ; ಅನಾಥಪ್ರೇಮ 1 ಆ; ಸನ್ಯಾಸಿನಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ನಳಿನಿ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಊದಬತ್ತಿಗಳು

ಸುವಾಸನೆ ಸುಂಣ ಶೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರಿ ಪಚ್ಚಕರ್ಪೂರ ಬಾದಾಮಿ ಯಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ರಾಯಲ್ ಸುಗಂಧಿ ಶೀಸಾ 1 ಕ್ಕೆ 8 ಆಣೆ.

ಗಂಧದಬತ್ತಿಯನ್ನು ತೆಯ್ಯುವದಕ್ಕೆ ಕೆಲವರು ಬೇಜಾರುಪಡುತ್ತಾರೆ. ಮತ್ತು ಬೇಲಿನಲ್ಲಿ ಒಣಗುವದರಿಂದ ಸುವಾಸನೆಯೂ ಬಹಳ ಕಡಮೆಯಾಗಿರುತ್ತೆ ಎಂಬವಾಗಿ ಬಿಲ್ಲೆಗೆ ಹಾಕುವ ಪದಾರ್ಥವನ್ನೇ ಪುನಗುಹೂವಿನಸಾರ ಸಹಾ ಸೇರಿಸಿ ಅಪೇಕ್ಷಿಸಿದ ಕೂಡಲೇ ಹಚ್ಚಿಕೊಳ್ಳುವಂತೆ ತಯಾರಿಸಿರುತ್ತೆ.

ಪುಷ್ಪ ತೊಲಾ 1 ಕ್ಕೆ 1 ರೂ.

ಇದು ಅತ್ಯಂತ ಸುವಾಸನೆಯಾಗಿಯೂ ಥಳಥಳನೆ ಹೊಳೆಯುವದಾಗಿಯೂ ಇದೆ. ಗಂಡಸರ ವಾಸೆಗೂ ಹೆಂಗಸರ ಮುಂಗುರುಳಿಗೂ ಹಣೆಗೂ ಸಹಾ ಹಚ್ಚಿಕೊಳ್ಳುತ್ತಾರೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-11] ಸುಗಂಧಕಾರಿ, ಮೈಸೂರು.

ಬೇಗ ತರಿಸಿಕೊಳ್ಳಿರಿ! ಕೆಲವು ಪ್ರತಿಗಳೇ ಉಳಿದಿವೆ!!
ತಡವಾದರೆ ಮತ್ತೆ ದೊರೆಯವು!!!

ರೂ. 1-8-0 ವೆಚ್ಚ ಮಾಡಿದರೆ ಸಾವಿರಾರು ರೂಪಾಯಿ ಲಾಭ.

ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ.

ಜನರು ರೋಗಾದಿಗಳ ನಿವಾರಣೆಗಾಗಿ ಎಷ್ಟೋ ಹಣವನ್ನು ಕಳೆಯುತ್ತಾರೆ. ಇದಕ್ಕಿಂತಲೂ ನಮ್ಮ "ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ" ಪುಸ್ತಕ

ವನ್ನು ಒಂದುವರೆ ರೂಪಾಯಿಗೆ ಕೊಳ್ಳುವದರಿಂದ ಪರೀಕ್ಷಿಸುಮಿಲ್ಲದೆ ರೋಗಲಕ್ಷಣ ವರಿತು ಮಾತ್ರೆ, ಚೂರ್ಣ, ಎಣ್ಣೆ, ಭಸ್ಮ, ಸಿಂಧೂರ, ಲೇಹ, ಘೃತ, ಷರಬತ್, ಮುರಬ್ಬ ಮೊದಲಾದ ಔಷಧಗಳನ್ನು ಕಷ್ಟವಿಲ್ಲದೆ ತಯಾರಿಸಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಬಹುದು. ಇದರ ಸುಗಂಧಾಧ್ಯಾಯದಲ್ಲಿ ಕೇವಲ ಗುಟ್ಟಾಗಿ ಸಾವಿರಾರು ರೂಪಾಯಿ ದುಡಿಯುತ್ತಿರುವ ಊದಬತ್ತಿ, ಗಂಧದಬತ್ತಿ, ಅರಗಜ ಮೊದಲಾದವುಗಳನ್ನು ಮಾಡುವ ವಿಧಾನವು ಮರ್ಮವಿಲ್ಲದೆ ಬೋಧಿಸುವುದರಿಂದ ಸುಖಜೀವನಮಾರ್ಗವನ್ನು ಹೊಂದಬಹುದು. ಇಂತಹ ಉಪಯುಕ್ತ ಪುಸ್ತಕವು ನಮ್ಮ ಕನ್ನಡದಲ್ಲಿ ಇಲ್ಲವೇ ಇಲ್ಲ!! ಕೆಲವೆ ಕೆಲವು ಪುಸ್ತಕಗಳಿವೆ; ಮೋಸಹೋಗಬೇಡಿರಿ! ಶಾಸ್ತ್ರೋಕ್ತ ಮತ್ತು ಅನುಭವೀಯ ಪ್ರಯೋಗಗಳನ್ನು ನಾವು ದೇಶೋಪಕಾರಕ್ಕಾಗಿ ಪ್ರಚುರಪಡಿಸಿರುವೆವು. ಕ್ರಯ ಪುಸ್ತಕ 1 ಕ್ಕೆ ರೂ. 1-8-0.

ವಿಳಾಸ:—ವೆಂಕಟೇಶ ವಿಲಾಸ ಬುಕ್ ಡಿಪೋ,
[79-2] ಕೆಳಕಿರಿ, ಬಳಸೂರುಪೇಟೆ, ಬೆಂಗಳೂರು ಸಿಟಿ.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು ; ಆದರೆ ನಮ್ಮ ಈಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಥಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜೆ. ಗೋರಿಯೋ ಕಂಪನಿ, ವಾಲೇಸ್ ಬೀದಿ, ಬೊಂಬಾಯಿ ;

[172-39]

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ ; 6 ಕ್ಕೆ 13 ಆಣೆ ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು, ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ !

[64-5]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ಮೈನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳುಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪರೀಕ್ಷಿಸಿಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕಾಗದಗಳಲ್ಲಿ ಪ್ಯಾಕ್ ಮಾಡಿರುತ್ತೇವೆ. ಕಾಗದಗಳಿಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0, ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಕೋಹಿನೂರ ತೈಲ 0-12-0. ಖಜಿ ಮುಲಾಮು 0-3-0. ಮಲಾಬಾರು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದರಾಸು.

ಇನಾಮ್ ಸಾಮಾನು 60! ಇನಾಮ್ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 13 ಆಣೆ. ಯಾವ ಸ್ತ್ರೀಯರಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೇಮುಗಳನ್ನು ನಿವಾರಿಸುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಣೆ 6, ವೈಭವಣಿ 1, ತಾಂಬೂಲ ಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಣಿ ಕಾರ್ಪೊರೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಸುವಾಸನೆ ಅತ್ತರುಬುಡ್ಡಿ 1, ಗಂಧದಬಟ್ಟಿ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೇಸ್ಲೆಟ್ 1, ಒಟ್ಟು 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವದಕ್ಕಾಗಿ ಇದೇ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ರಾಣಿ ಕಂಪೆನಿ,

[73-2] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಾಂತಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 16 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿಗೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾರೆವು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಛಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಛಾರ್ಜು 0 6 0

[10-17]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Apply for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

Bangalore City.

[10-44]

...ಯರ ಭೂಷಣವು!!!

...ದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ನಿಬಿಡವಾದ ...ವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ... ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೆಂದರೋ?

ಕಾಮಿನಿಯಾ ತೈಲವೇ!

(ರಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು..., ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾ...

...ರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ... ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

...ಲ್ಲಿ ಒಂದನ್ನೇ ನೋಡಿರಿ: ನೇಗಿನಹಾಳಕರ ಬಂಧುಗಳು. ಬಸವನ... —ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲ ...ಯುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನ ...ತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ...ವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ... ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

...—ಅನೇಕ ದುರ್ಮಾರ್ಗಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ...ಷ್ಟ ವಸ್ತುಗಳ ಮಾರಾಟದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ... "ಕಾಮಿನಿಯಾ ತೈಲ" ವನ್ನು ಕೇಳುವರೆ, "ಇದು ಅದಕ್ಕಿಂತ ಉತ್ತಮವೂ ... ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ...ವನ್ನು ನಿಮಗೆ ಕೊಟ್ಟು ಮೋಸಗೊಳಿಸುವರು. ಅಂಥಾ ಸಂದರ್ಭದಲ್ಲಿ ಮೋಸ ... "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ... ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳು... ಮಿಶನ್ ಪಾವತಿಸದೆ ನೀವು ಬೆಂಬಳದ ಬೆಲೆಯಲ್ಲಿ ಸಿಲುಕಿಬೀಳದೆ ... ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯು... ... ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ...ವಾದುದು. ಇದರಲ್ಲಿ ಮದ್ಯಸಾರವು (ಆಲ್ಕೋಹೋಲ್) ಸಂಪರ್ಕವಿಲ್ಲವು. ... ಹನಿಗಳನ್ನು ನಿಮ್ಮ ಕೈಚಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ... ಹನಿಗಳನ್ನು ಚಿಮುಕಿಸಿದರ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ...ಯು ಆವರಿಸಿಕೊಳ್ಳುವುದು. ಬೇರೆ ಯಾವ ಪರಿಮಳ ದ್ರವ್ಯದ ... ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗ... ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಒಂದೇ ...ಯನ್ನು ತರಿಸಿಕೊಳ್ಳಿರಿ. [18-15]

... ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿಶಾಡಿಯಂ) ಸೀಸೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ... ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ... ಒಂದಕ್ಕೆ 0-12-0.

... ಇಂಥ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ... ಮಾರ್ಕೆಟ್, ಮಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಕನಕದ ಭಸ್ಮ, ಅನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ... ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕಾಲು ಹೊಡೆತ (ಬಾವು), ಮೈ ನವೆ, ... ಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಶೀಘ್ರ ... ವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಎಡೆಗೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟಿನ ..., ಮಕ್ಕಳ ಎರವು, ಜ್ವರ, ನೆಟ್ಟು ಜ್ವರ, ಕೈಕಾಲುಗಳನ್ನು ಗುಣಪಡಿಸುತ್ತದೆ ... ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ [199-35]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಟ್ರೈನಿಂಗ್ ಪರ ಎಂ. ... ಸ್ಕೂಲ್, ಮಾಂಡ್ಯ, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಆ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ಸರಿ ಸುಮಾರು ಉಪಯೋಗಿಸುತ್ತ ಒಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್ ಅನಂತಪದ್ಮಾಚಾರ್, ತಿರುವನಂತಪುರ, ಕೆಂಟಿ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗುಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೆ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಈಗಲೇ ಪರೀಕ್ಷಿಸಿ ನೋಡಿ. ಇನ್ಯಾವುದನ್ನೂ ಉಪಯೋಗಿಸಬೇಡಿ.

ಮಕ್ಕಳಿಗೂ ಕೂಡ ಬಹಳ ಪ್ರಯೋಜನವಾದದ್ದು.

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ವಾಸನೆಯೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿ ತಯಾರುಮಾಡುತ್ತಾರೆ.

ಈ ಮಾತ್ರೆಗಳ ಕ್ರಯ: 30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ. 65 ಮಾತ್ರೆ ಪೊಟ್ಟಣಕ್ಕೆ 3 ಆಣೆ. 195 ,, ದಬ್ಬಿ ಸಮೇತ 8 ಆಣೆ. 455 ,, ಕನ್ನಡಿ ದಬ್ಬಿಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲೂ ವಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,

[... 1] ನಾರ್ತ್ ಬೀಚ್, ಮದ್ರಾಸ್.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ

ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಹೆಚ್ಚಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಊರುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ಇರಹಾದ್ದೇ ಎಂಬುವದು ತಿಳಿದುಬರುತ್ತದೆ. [62-8]

- ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
- ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
- ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
- ಸಾಲಾಮಿಸ್ರೀ ಮುರಬ್ಬಾವು—ಕಾಜಾಪ್ರ, ಬೆಳ್ಳಿ ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರಕೃತಿಯುಳ್ಳವರೂ ಸೇವಿಸುವ ಹಾಗೆ ಕ್ರಯದಿಂದ ಮುಟ್ಟಿದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚಿ ತಾರೀಖು 15 ರಲ್ಲು ಡಿಪಾಜಿಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಆಹುವಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ., ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು, 5. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

—:o:—

೪೯ ೧೯೧೫ ನೇ ಇಸವಿ ಮೇ ತಾ. ೬ ನೇ ಗುರುವಾರ.

ಮೈಸೂರು ಸಂಸ್ಥಾನದ ವ್ಯವಸಾಯದ ಇಲಾಖೆ.

ನಮ್ಮ ಗವರ್ನ್‌ಮೆಂಟಿನವರು ಹೊಸದಾಗಿ ವ್ಯವಸಾಯದ ಇಲಾಖೆಯನ್ನು ರೂಪಿಸಿರುತ್ತಾರೆ. ಈ ಇಲಾಖೆಯ ಮೊದಲನೇ ಸಾಲಿನ ವಾರ್ಷಿಕ ರಿಪೋರ್ಟನ್ನು ನೋಡಿ ನಮಗೆ ತುಂಬಾ ಸಂತೋಷವುಂಟಾಗಿದೆ. ಈ ಇಲಾಖೆಯ ಡೈರೆಕ್ಟರಾದ ಡಾಕ್ಟರ್ ಕೋಲ್‌ಮನ್‌ರವರು ರಿಪೋರ್ಟಿನಲ್ಲಿ ಬರೆದಿರುವ ವಿಷಯಗಳು ಅತ್ಯಂತ ಸ್ವಾರಸ್ಯವಾಗಿಯೂ, ವಿಶೇಷ ಬೋಧಕವಾಗಿಯೂ ಇರುವವಲ್ಲದೆ ಇದರ ಮೂಲಕ ನಮ್ಮ ಸಂಸ್ಥಾನದ ವ್ಯವಸಾಯ ಕಾರ್ಯಗಳು ತುಂಬಾ ಅಭಿವೃದ್ಧಿಗೆ ಬರತಕ್ಕ ಮಾರ್ಗಗಳು ಸೂಚಿಸಲ್ಪಟ್ಟಿರುವವು.

ಈ ಇಲಾಖೆಯ ಕಾರ್ಯಭಾಗಗಳು ಸಂಸ್ಥಾನಾಮಳೆ ಹರಡಿಕೊಳ್ಳುತ್ತಲೂ, ರೈತಪ್ರಜೆಗಳಲ್ಲಿ ಜನಜನಿತವಾಗುತ್ತಲೂ ಬರುತ್ತಿರುವವು. ಈ ಇಲಾಖೆಗೆ ರೈತರಿಂದ ಬಂದು ಜವಾಬಾಗುತ್ತಿರುವ ಕಾಗದಪತ್ರಗಳು ಶೇಕಡ 40 ರಷ್ಟು ಹೆಚ್ಚಿರುವುದನ್ನು ನೋಡಿದರೆ ತುಂಬಾ ಸಂತೋಷವಾಗುತ್ತದೆ. ಹೊಸ ತರದ ನೇಗಿಲುಗಳ ಮಾರಾಟವು 193 ರಿಂದ 456 ಕ್ಕೆ ಹೆಚ್ಚಿರುವುದು. ಈ ನೇಗಿಲುಗಳಲ್ಲಿ ಸವೆದು ಕೆಟ್ಟುಹೋಗುವಂಥಾ ಭಾಗಗಳನ್ನು ಗ್ರಾಮಾಂತರಗಳಲ್ಲಿರುವ ಕಮ್ಮಾರರೇ ಸುಲಭವಾಗಿ ಸಮಮಾಡಿಕೊಳ್ಳುವಂತೆ ಏರ್ಪಾಡು ಆಗುತ್ತಿರೋಣದರಿಂದ ರೈತರಿಗೆ ಹೊಸ ನೇಗಿಲನ್ನು ಕೊಂಡು ಉಪಯೋಗಿಸುವುದಕ್ಕೆ ತುಂಬಾ ಪ್ರೋತ್ಸಾಹವೂ ಅನುಕೂಲವೂ ಆದೀತೆನ್ನುವುದರಲ್ಲಿ ಅನುಮಾನವಿಲ್ಲ. ಈ ಭಾಗವು ಈಗ ರೈತರಿಗೆ ಕಷ್ಟ ನಷ್ಟಗಳನ್ನುಂಟುಮಾಡುತ್ತಿದೆ. ಆದಕಾರಣ ಸರ್ಕಾರದವರು ಈ ಏರ್ಪಾಡನ್ನು ಬೇಗನೆ ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ.

ನಾನಾ ವಿಚಾರಗಳಲ್ಲಿ ಈ ಇಲಾಖೆಯವರು ಪರೀಕ್ಷೆಗಳನ್ನು ನಡಿಸಿರುತ್ತಾರೆ. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕೆಲವು ಜಾತಿಯ ಹತ್ತಿಗಿಂತಲೂ ಬೇರೆ ಜಾತಿಯ ಹತ್ತಿ ಚೆನ್ನಾಗಿ ಆಗುವುದೆಂದು ಗೊತ್ತುಮಾಡಿದಾರೆ. ಇದಕ್ಕಾಗಿಯೇ ಸರ್ಕಾರದವರು ಆ ಡಿಸ್ಟ್ರಿಕ್ಟಿನಲ್ಲಿ ಒಂದು ಪರೀಕ್ಷಾರ್ಥವಾದ ಫಾರಮನ್ನು ಬೇಗನೆ ಪ್ರಾರಂಭಮಾಡುವರೆಂದು ತಿಳಿಯುವುದು. ಈ ಇಲಾಖೆಯವರು ಬೆಳೆಯನ್ನು ಒಕ್ಕಿ ಧಾನ್ಯವನ್ನು ತೂರುವಂಥಾ ಯಂತ್ರವನ್ನು ಅನೇಕ ಗ್ರಾಮಗಳಲ್ಲಿ ಇಟ್ಟು ಅದರ ಪ್ರಯೋಜನವನ್ನು ದೃಷ್ಟಾಂತಪಡಿಸಿದರು. ಇದನ್ನು ಕಣ್ಣಾರ ನೋಡಿದಂಥಾ ರೈತಪ್ರಜೆಗಳು ತಾವು ಆಚರಣೆಯಲ್ಲಿಟ್ಟುಕೊಂಡಿರುವ ಪದ್ಧತಿಗಿಂತಲೂ ಅಂಥಾ ಯಂತ್ರವನ್ನು ಉಪಯೋಗಿಸಿ ಒಕ್ಕಣೆಮಾಡಿಕೊಂಡರೆ ರಾಗಿಯನ್ನು ಜಾಗ್ರತೆಯಿಂದಲೂ ಸುಲಭವಾಗಿಯೂ ಹುಲ್ಲಿನಿಂದ ಬಿಡಿಸಬಹುದೆಂದು ಮುಂದಟ್ಟುಮಾಡಿಕೊಂಡರು. ಬೆಲ್ಲದ ತಯಾರಿಗೆ ಕಬ್ಬಿನ ಹಾಲನ್ನು ಕುದಿಸುವ ವಿಧಾನವನ್ನೂ ಇಲಾಖೆಯವರು ತೋರಿಸಿಕೊಟ್ಟಿದಾರೆ. ಇದರಿಂದ ಪ್ರಯೋಜನವಿದೆ ಎಂದು ನೋಡಿದವರಿಗೆ ಚೆನ್ನಾಗಿ ಗೊತ್ತಾಯಿತು. ಕೆಲವು ಸಂದರ್ಭಗಳಲ್ಲಿ ಕಬ್ಬು ಬಹಳ ಹಳೇದಾಗಿದ್ದರೂ ಪರೀಕ್ಷೆ ಮಾಡಿ ತೋರಿಸಿದ್ದರಲ್ಲಿ ಹಾಲೂ ಅದರಿಂದ ಬೆಲ್ಲವೂ ಹೆಚ್ಚಾಗಿ ಬಂದವೆಂದು ದೃಷ್ಟಾಂತವಾಯಿತು. ಈ ಇಲಾಖೆಯ ಅಧಿಕಾರಿಗಳು ಪ್ರಜೆಗಳಲ್ಲಿ ಬೆರೆದು ಅವರಿಗೆ ವಿವೇಕವನ್ನು ಹೇಳಿ ಅವರು ತಾವಾಗಿಯೇ ಅಭಿವೃದ್ಧಿಗೆ ಬರುವಂತೆ ಮಾಡುವ ಭಾಗದಲ್ಲಿ ಅಭಿಲಾಷೆಯುಳ್ಳವರಾಗಿ ಕಾರ್ಯಗಳನ್ನು ನಡಿಸುತ್ತಿದಾರೆಂದು ಗೊತ್ತಾಗುವುದು.

ಪೈರುಗಳಿಗೆ ಹಿಡಿಯುವ ರೋಗಗಳನ್ನೂ ಹುಳ ಹುಪ್ಪಟೆಗಳನ್ನೂ ನೋಡಿ ಅವುಗಳಿಗೆ ತಕ್ಕ ಪರಿಹಾರೋಪಾಯಗಳನ್ನು ಕಂಡುಹಿಡಿಯುವ ಭಾಗದಲ್ಲೂ ನಾನಾ ಪರೀಕ್ಷೆಗಳು ನಡೆದಿರುತ್ತವೆ. ಒಂದು ತರಹಾ ಔಷಧದ ನೀರನ್ನು ಎರಚುವುದರಿಂದ ಅಡಿಕೆ ಫಸಲಿಗೆ ಹಿಡಿಯುತ್ತಿದ್ದ ಕೊಳೆ ರೋಗವನ್ನು ಕೆಲವು ಸ್ಥಳಗಳಲ್ಲಿ ಸಂಪೂರ್ಣವಾಗಿ ಹೊಡೆದು ಬಿಟ್ಟದ್ದಾಯಿತು. ಈ ಉಪಾಯದ ದೆಸೆಯಿಂದ ಕಳೆದ ಸಾಲಿನಲ್ಲಿ ಮಲೆನಾಡಿನ ಬಾಗಾಯಿತು ಜಮೀನ್ದಾರರಿಗೆ 50,000 ರೂಪಾಯಿನ ತನಕ ಕೂಡಿಬಂದೆಂದು ಎಣಿಸಲ್ಪಟ್ಟಿದೆ. ತೋಟಗಾರರೇ ಈಗ ನೀರು ಎರಚುವ ಸಾಧನಗಳನ್ನು ದುಡ್ಡಿಟ್ಟುಕೊಂಡು ತರಿಸಿ ಉಪಯೋಗಿಸುತ್ತಿದಾರೆ. ಕಳೆದ ಸಾಲಿನಲ್ಲಿ 650 ಎಕರೆ ತೋಟಗಳಲ್ಲಿ ಅಡಿಕೆ ಫಸಲಿಗೆ ಮೇಲ್ಕಂಡ ಔಷಧದ ನೀರನ್ನು ಎರಚಿರುತ್ತಾರೆ; ಹಿಂದಿನ ಸಾಲಿನಲ್ಲಿ 176 ಎಕರೆ ತೋಟಗಳಲ್ಲಿ ಮಾತ್ರ ಅದನ್ನು ಪ್ರಯೋಗ ಮಾಡಿದ್ದರು.

ಕಂಬಳಿ ಹುಳಗಳು ಹುಟ್ಟಿ ಫಸಲನ್ನು ನಾಶಮಾಡುತ್ತಿದ್ದವು. ರೈತರಿಗೆ ಜಮೀನುಗಳಲ್ಲಿ ಮಕ್ಕಳನ್ನು ಬಿಟ್ಟು ಕಂಬಳಿ ಹುಳಗಳಾಗುವಂಥಾ ಮೊಟ್ಟೆಗಳನ್ನು ಹುಡುಕಿ ಹಿಡಿದುಹಾಕುವ ಸುಲಭ ಮಾರ್ಗವನ್ನು ಇಲಾಖೆಯವರು ತೋರಿಸಿಕೊಟ್ಟಿದಾರೆ. ಸಕಾಲದಲ್ಲಿ ರೈತರು ತಮ್ಮ ಮಕ್ಕಳಿಂದ ಈ ಮೊಟ್ಟೆಗಳನ್ನು ಹಿಡಿಸಿ ಹಾಕಿಬಿಟ್ಟರೆ ಹುಲುಸಾದ ಬೆಳೆಯನ್ನು ಶೇಖರಿಸಿಕೊಳ್ಳಬಹುದು. ಇದಕ್ಕೆ ಅವರು ಅಷ್ಟೇನೂ ಖರ್ಚುಮಾಡಬೇಕಾದ ಅಗತ್ಯವೇ ಇಲ್ಲ.

ಕಾಫೀ ಗಿಡಕ್ಕೆ ಹಿಡಿಯುವ ಹಸುರುಹುಳ, ಗಂಧದ ಮರವನ್ನು ಹಿಡಿದು ಕೊರೆಯುವ ಹುಳ, ಈ ಮೊದಲಾದ ಕೆಲವು ವಿಚಾರಗಳನ್ನು ಈ ಇಲಾಖೆಯವರು ಪರಿಶೋಧನೆ ಮಾಡುತ್ತಿರುವರು. ನಮ್ಮ ಗವರ್ನ್‌ಮೆಂಟಿನವರು ಈ ಇಲಾಖೆಗೆ ತಕ್ಕಮಟ್ಟಿಗೆ ಸಹಾಯ ಸಂಪತ್ತುಗಳನ್ನು ಒದಗಿಸುತ್ತಾ ಬಂದ ಪಕ್ಷದಲ್ಲಿ ಈ ಸೀಮೆಯ ರೈತರಿಗೆ ಕಾಲಕ್ರಮದಲ್ಲಿ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಅನುಮಾನವಿಲ್ಲ. ನಮ್ಮ ರೈತ ಪ್ರಜೆಗಳು ಹೊಸ ವಿಷಯಗಳನ್ನು ಗ್ರಹಿಸುವುದೂ, ಗ್ರಹಿಸಿದ್ದನ್ನು ರೂಢಿಸುವುದೂ ಸ್ವಲ್ಪ ನಿಧಾನ. ಆದರೆ ವ್ಯವಸಾಯ ಕಾರ್ಯಗಳಲ್ಲಿ ನವೀನ ಮಾರ್ಗಗಳನ್ನು ಅನುಸರಿಸಿದರೆ ಹುಲುಸಾದ ಬೆಳೆ ಕೈಸೇರುವುದೆಂದೂ, ಅದರಲ್ಲಿ ಲಾಭ ಹೆಚ್ಚಾಗಿ ಬರುವುದೆಂದೂ ನಮ್ಮ ರೈತರಿಗೆ ಸಾಕ್ಷಾತ್ತಾಗಿ ತಿಳಿದು ಬಿಟ್ಟ ಪಕ್ಷದಲ್ಲಿ ಅವರೇ ಕಾಲಕ್ರಮದಲ್ಲಿ ಅಂಥಾ ಹೊಸ ಮಾರ್ಗಗಳನ್ನು ಅವಲಂಬಿಸುತ್ತಾ ಬಂದಾರು.

ಈ ಹೊಸ ಇಲಾಖೆಯ ಕಾರುಬಾರುಗಳನ್ನು ನೋಡಿ ಗವರ್ನ್‌ಮೆಂಟಿನವರ ಕೂಡ ನಾವೂ ಸಂತೋಷಪಡುತ್ತೇವೆ. ಈಗಿನಂತೆಯೇ ಈ ಇಲಾಖೆಯವರು ಪ್ರೀತಿಯಿಂದ ಮುತುವರ್ಜಿವಹಿಸಿ ಕಾರ್ಯಗಳನ್ನು ನಡಿಸುತ್ತಾ ಬಂದ ಪಕ್ಷದಲ್ಲಿ ನಮ್ಮ ಸಂಸ್ಥಾನಕ್ಕೆ ಶ್ರೇಯಸ್ಸುಂಟಾಗುವುದು. ಈ ಇಲಾಖೆಯು ಸದ್ಯದಲ್ಲಿ ತನ್ನ ಕರ್ತವ್ಯವನ್ನು ಪಟಾಟೋಪವೇನೂ ಇಲ್ಲದೆ ನೆರವೇರಿಸುತ್ತಿರುವುದು. ನಮ್ಮ ಸೀಮೆಯ ಸಂಪತ್ತು ಅಭಿವೃದ್ಧಿಯಾಗುವುದಕ್ಕೆ ಈ ಇಲಾಖೆಯ ನಿರ್ದುಷ್ಟವಾದ ಕಾರ್ಯಗಳೇ ಪರಮ ಸಾಧಕಗಳಾಗಿರುತ್ತವೆ.

ಜಪಾನ್ ರಾಜ್ಯವೂ ಕ್ರೈಸ್ತಮತವೂ.

ಜಪಾನ್ ರಾಜ್ಯದ ನಿವಾಸಿಗಳು ಈಚೀಚೆಗೆ ವಿದ್ಯೆಯಲ್ಲಿಯೂ ನಾಗರಿಕತೆಯಲ್ಲಿಯೂ ಸಕಲ ವಿಧವಾದ ವ್ಯಾಪಾರ, ವ್ಯವಸಾಯ, ಕುಶಲವಿದ್ಯೆಗಳಲ್ಲಿಯೂ ಬಹು ಮಟ್ಟಿಗೆ ಅಭಿವೃದ್ಧಿಗೆ ಬಂದು ಇಂಗ್ಲೆಂಡ್, ಜರ್ಮನಿ, ಅಮೇರಿಕದ ಸಂಯುಕ್ತ ಸಂಸ್ಥಾನಗಳವರಿಂದ ಸ್ತೋತ್ರಪೂರ್ವವಾದ ಕೀರ್ತಿಯನ್ನು ಪಡೆದರು. ಮತ್ತು ಹಿಂದೂದೇಶದ ನಾನಾವಿಧವಾದ ಜನಗಳಿಗೆ ಅಭಿವೃದ್ಧಿಯ ವಿಷಯದಲ್ಲಿ ಮಾದರಿಯಾಗಿ ನಿಂತಿದ್ದಾರಷ್ಟೆ. ಅವರು ಮೊದಲು ಯಾವ ಮತವನ್ನು ಅವಲಂಬಿಸಿದ್ದರು? ಈಗ ಅವರಲ್ಲಿ ಯಾವ ಮತವು ಅಭಿವೃದ್ಧಿಯಾಗುತ್ತಾ ಇದೆ? ಎಂದು ತಿಳಿಯುವದು ಪ್ರಯೋಜನಕಾರಿಯಾಗಿರುವದು. ಮತ್ತು ಈ ವಿಷಯಗಳನ್ನು ವಿಚಾರಿಸುವಾಗ ಅವರು ಯಾತಕ್ಕೆ ತಮ್ಮ ಪೂರ್ವದ ಮತವನ್ನು ತ್ಯಜಿಸಿ ಹೊಸ ಮತವನ್ನು ಸ್ವೀಕರಿಸಿದರು ಎಂದು ವ್ಯಕ್ತವಾಗುವದು. ಕೌಂಟ್ ಓಕುಮ ಎಂಬವರು ಜಪಾನ್ ದೇಶದ ರಾಜಮಂತ್ರಿಧುರೀಣರು. ಇವರು ಈ ವಿಷಯವನ್ನು ಕುರಿತು ಬರೆದಿರುವದನ್ನು ಕೆಳಗೆ ಭಾಷಾಂತರಮಾಡಿ ಬರೆದಿರುತ್ತೇವೆ.

ಜಪಾನ್ ದೇಶದಲ್ಲಿ ಕ್ರೈಸ್ತಮತವನ್ನು ಈಗ ಸುಮಾರು ಎರಡು ಲಕ್ಷ ಚಿಲ್ಲರೆ ಜನಗಳು ಅವಲಂಬಿಸಿದ್ದಾರೆ. ಆದರೆ ಕ್ರೈಸ್ತಮತವು ಜಪಾನ್ ರಾಜ್ಯದ ಯಾವತ್ತು ಪ್ರಜೆಗಳ ಮನಸ್ಸು, ಅಭಿಪ್ರಾಯ, ಪದ್ಧತಿ, ಮನೋಭಾವನೆಗಳಲ್ಲೆಲ್ಲಾ ವ್ಯಾಪಿಸಿ ತನ್ನ ಕಡೆಗೆ ಅವರನ್ನು ಸೂಕ್ಷ್ಮರೀತಿಯಿಂದ ಒಲಿಸಿಕೊಳ್ಳುತ್ತಾ ಬರುವದು ಸಕಲರಿಗೂ ವೇದ್ಯವಾಗಿದೆ. ಯುರೋಪ್‌ಖಂಡದ ನಾಗರಿಕತೆಯ ರೂಪವಾಗಿ ಅದು ನಮ್ಮ ದೇಶವನ್ನೂ ಪ್ರಜೆಗಳನ್ನೂ ಹೊಕ್ಕಿತು. ಇಂಗ್ಲಿಷ್ ಗ್ರಂಥಕಾರರೂ ಕವಿಗಳೂ ನೀತಿಶಾಸ್ತ್ರಕೋವಿದರೂ ತತ್ವಜ್ಞಾನಿಗಳೂ ಬರೆದಿರುವ ಪುಸ್ತಕಗಳನ್ನು ಇಂಗ್ಲಿಷ್ ಕಲಿಯುವ ಅನೇಕ್ಷೆಯುಳ್ಳ ನಮ್ಮ ರಾಜ್ಯದ ಪ್ರಜೆಗಳೂ ಬಾಲಕಬಾಲಕಿಯರೂ ಪ್ರೌಢವಿದ್ಯಾಭ್ಯಾಸವನ್ನು ಮಾಡುವ ತರುಣರೂ ಓದುತ್ತಲಿದ್ದಾರೆ. ಈ ಪುಸ್ತಕಗಳು ನೇರವಾಗಿ ಕ್ರೈಸ್ತಮತವನ್ನೇ ವಿವರಿಸಿ ಬೋಧಿಸುವದಕ್ಕೆಂದು ಬರೆದವುಗಳಲ್ಲ. ಆದರೆ ಈ ಪುಸ್ತಕಗಳ ಗ್ರಂಥಕಾರರು ಅವರಿಗೂ ತಿಳಿಯದಂತೆ ಕ್ರೈಸ್ತಮತದ ಅಭಿಪ್ರಾಯಗಳನ್ನು ತಾವು ಬರೆದ ಗ್ರಂಥಗಳಲ್ಲಿ ನಿಬಿಡೀಕೃತವಾಗಿಟ್ಟಿದ್ದಾರೆ. ಇವುಗಳನ್ನು ಜಪಾನ್ ರಾಷ್ಟ್ರದ ಪ್ರಜೆಗಳು ಓದುವದರಿಂದ ಆ ಗ್ರಂಥದಲ್ಲಿರುವ ಕ್ರೈಸ್ತಮತದ ಅಭಿಪ್ರಾಯಗಳು ನಮ್ಮ ಜನಗಳ ಬುದ್ಧಿ, ಮನಸ್ಸು, ಯೋಚನೆ, ಭಾವನೆಗಳನ್ನು ಆಕ್ರಮಿಸಿಕೊಂಡಿವೆ. ಕ್ರೈಸ್ತಮತದ ಅಭಿಪ್ರಾಯಗಳು ಈ ದೇಶದ ಯಾವದೊ ಒಂದು ಕಡೆಯಲ್ಲಿ ಕೆಲವು ದಿನಗಳು ಕೆಲವರಲ್ಲಿ ರೂಢಿಯಾಗಿವೆ ಎಂದು ತಿಳಿಯಬಾರದು. ದೇಶದ ಶ್ರೀಮಂತರು, ಅಧಿಕಾರಿಗಳು, ವ್ಯಾಪಾರಿಗಳು, ಕೈಕೆಲಸಗಳಲ್ಲಿ ನಿಪುಣರು ಇವರೂ ಮತ್ತು ಇವರ ಮಕ್ಕಳೂ ಪೂರ್ವಾಚಾರ, ಪದ್ಧತಿ, ವಿದ್ಯೆಗಳನ್ನು ಬಿಟ್ಟು ಕ್ರೈಸ್ತಮತದ ಅಭಿಪ್ರಾಯಗಳನ್ನು ನಾನಾರೀತಿಯಲ್ಲಿ ವಿಸ್ತಾರವಾಗಿ ಮತ್ತು ಸ್ಥಿರಮನಸ್ಸಿನಿಂದ ರೂಢಿಸುತ್ತಾ ಬರುತ್ತಾರೆ. ಕ್ರೈಸ್ತಮತದ ಪದ್ಧತಿಯ ಪ್ರಕಾರ ಆದಿತ್ಯವಾರವನ್ನು ಸರಕಾರದ ರಜಾ ದಿನವೆಂದು ಭಾವಿಸಿ ಆ ದಿನ ಕೋರ್ಟು ಕಚೇರಿ, ಆಫೀಸುಗಳನ್ನು ಮುಚ್ಚಿ ಲೌಕಿಕ ಕೆಲಸಗಳನ್ನು ನಿಲ್ಲಿಸುತ್ತೇವೆ. ಇದು ಬಹಿರಂಗವಾದ ಒಂದು ಪದ್ಧತಿ. ಆರೋಗ್ಯಕ್ಕೆ ವಾರದಲ್ಲಿ ಒಂದು ದಿನ ಸಾಧಾರಣವಾದ ಕೆಲಸವನ್ನು ಸಡಿಲಬಿಟ್ಟು ವಿಶ್ರಾಂತಿಯಾಗಿರುವದು ಸರ್ವಸಮ್ಮತವಾಗಿದೆ. ಇದರೊಳಗೇನೂ ಕ್ರೈಸ್ತ ಮತಕ್ಕೇನೂ ವಿಶೇಷವಾಗಿ ಸಂಬಂಧಪಟ್ಟದ್ದಿಲ್ಲವೆಂದು ವಾದಿಸಬಹುದು. ಅದು ನಿಜವೆ. ಆದರೆ ನಮ್ಮ ರಾಜ್ಯಾದಳಿತಕ್ಕೆಂದು ಏರ್ಪಡಿಸಲ್ಪಟ್ಟು ಈಗ ಜಾರಿಯಲ್ಲಿರುವ ನ್ಯಾಯನಿಬಂಧನೆಗಳು ನಮ್ಮ ಕುಟುಂಬಗಳಲ್ಲಿ ವ್ಯಾಪನೆಯಾಗಿ ಹೊಸೆಯಲ್ಪಟ್ಟಿರುವ ನೇಮ, ನಿಷ್ಠೆ, ಆಚರಣೆಗಳು ನಮ್ಮ ಸ್ತ್ರೀ ಜನಗಳ ಸ್ಥಿತಿ, ಕ್ರಮ, ಕಟ್ಟುಗಳು ಇವೆಲ್ಲಾ ಕ್ರೈಸ್ತಮತದವರು ಅನುಸರಿಸಿಕೊಂಡು ಬರುವ ಕ್ರಮಗಳಿಗನುಸಾರವಾಗಿವೆ. ಸಾಧಾರಣವಾದ ವರ್ತಮಾನಪತ್ರಿಕೆಗಳೂ ಕಾದಂಬರಿಗಳೂ ಆಂಗ್ಲೊಸಾಕ್ಸನರ ಮತ್ತು ಜರ್ಮನರ ಪತ್ರಿಕೆಗಳನ್ನೂ ಕಾದಂಬರಿಗಳನ್ನೂ ಅವುಗಳ ಗ್ರಂಥಕಾರರ ಮನೋಗತವನ್ನೂ ಅನುಸರಿಸಿ ನರ್ತಿಸುತ್ತವೆ. ಚೀನಾದಾಜ್ಯದವರ ಅಭಿಮತ, ಪದ್ಧತಿ, ವಿದ್ಯೆ, ಗ್ರಂಥಗಳನ್ನು ಅನುಸರಿಸುವದು ನಮ್ಮ ದೇಶದಲ್ಲಿ ಪೂರ್ವದಿಂದ ವಾಡಿಕೆಯಾಗಿತ್ತಷ್ಟೆ. ಈಗಲಾದರೋ ಅದೆಲ್ಲಾ ಹೋಗಿ ಆಂಗ್ಲೇಯರನ್ನು ಅನುಸರಿಸುವದು ನಮ್ಮ ದೇಶದವರಿಗೆ ಬಹು ಒಳ್ಳೇದಾಗಿ ತಿಳಿದುಬಂದಿದೆ. ಚೀನಾ ದೇಶದವರ ಮಾತುಕತೆಗಳೇ ಈಗಲೂ ರೂಢಿಯಲ್ಲಿದ್ದರೂ ಅದು ಬರೇ ಮೇಗಣ ಬಹಿರಂಗವಾದ ಸಿಪ್ಪೆಯಷ್ಟೆ. ನಿಜವಸ್ತು, ಅಂತರಂಗದ ಆಸೆ, ಕ್ರೈಸ್ತನ ಮತದಲ್ಲಿಯೇ ನೆಲೆಗೊಂಡು ಅದರಲ್ಲಿಯೇ ತೃಪ್ತಿಪಡೆಯುವದಕ್ಕೆ ನಿರೀಕ್ಷಿಸುತ್ತವೆ. ಜಪಾನ್ ದೇಶದ ನ್ಯಾಯಸ್ಥಾನಗಳಲ್ಲಿ ಈ ದಿನ ಕಾರ್ಯತಃ ಆಚರಣೆಯಲ್ಲಿರುವ ಕಟ್ಟಳೆ ಕಾನೂನುಗಳು ಯೂರೋಪ್‌ಖಂಡದ ಕ್ರೈಸ್ತರ ದೇಶದ ಕಟ್ಟಳೆಗಳನ್ನು ಅನುಸರಿಸಿವೆಯೇ ಹೊರತು ಚೀನಾರಾಜ್ಯದ ಕಟ್ಟಳೆಗಳನ್ನು ಅನುಸರಿಸಿಲ್ಲವೆಂಬದು ಪ್ರತ್ಯಕ್ಷಪ್ರಮಾಣವಾಗಿದೆ. ಚೀನಾದೇಶದ ಕಟ್ಟಳೆ ಕಾನೂನುಗಳು ಎಲ್ಲಕ್ಕಿಂತ ವಿಶೇಷವಾಗಿ ಹಿರಿಯರ ಸಂಪ್ರದಾಯಗಳನ್ನೂ ಕುಟುಂಬದ ಒಟ್ಟು ಸಂರಕ್ಷಣೆಯನ್ನೂ ಕುರಿತಾದವುಗಳು. ಆದರೆ ಈಗ ನಮ್ಮಲ್ಲಿ ಅನುಷ್ಠಾನಕ್ಕೆ ಬಂದಿರುವ ಕಟ್ಟಳೆಗಳೂ ಕಾನೂನುಗಳೂ ಪ್ರತಿವ್ಯಕ್ತಿ ಪುರುಷನ ಹಕ್ಕು, ಧನ ಪ್ರಾಣ, ಏಳಿಗೆ, ಮಾನಗಳನ್ನೂ ನೀತಿಯನ್ನೂ ಕಾಪಾಡುವ ಉದ್ದೇಶದಿಂದ ಕ್ರೈಸ್ತಮತದ ಮೇಲ್ಪಂಗ್ತಿಯನ್ನು ಆಧಾರವಾಗಿಟ್ಟುಕೊಂಡು ಬರೆಯಲ್ಪಟ್ಟವೆ. ಪ್ರತಿ ಮನುಷ್ಯನೂ ತನಗೆ ಸತ್ಯವೆಂದು ತಿಳಿದುಬಂದದ್ದನ್ನು ಧೈರ್ಯವಾಗಿ ಅನುಸರಿಸಿ ಉಳಿದದ್ದನ್ನು ಮತ, ಸಂಪ್ರದಾಯ, ಕಟ್ಟುಗಳನ್ನು ಉಲ್ಲಂಘನೆಮಾಡಿದ ಅಪರಾಧಕ್ಕೆ ಗುರಿಯಾದೇನಲ್ಲಾ ಎಂಬುವ ಯೋಚನೆ ಲವಲೇಶವಾದರು ಇಲ್ಲದೆ ತಿರಸ್ಕರಿಸಬಹುದು. ಇದು ಕ್ರೈಸ್ತ ಮತದ ಭಾವನೆಯೇ ಆಗಿದ್ದು ನಮ್ಮಲ್ಲಿ ಈಗ ರೂಢಿಗೆ ಬಂದಿದೆ.

ಕಳೆದ ಸೋಮವಾರವೂ ಮಂಗಳವಾರವೂ ಸಾಯಂಕಾಲ ರಾಜಧಾನಿಯಲ್ಲಿ ಒಂದೆರಡು ಹದ ಒಳ್ಳೇ ಮಳೆ ಆಯಿತು. ಕಳೆದ ವಾರ ಸುತ್ತುಮುತ್ತಲೂ ಒಂದೆರಡು ಒಳ್ಳೇ ಮಳೆಗಳಾಗಿರುವಂತೆ ತಿಳಿಯುತ್ತದೆ. ಹವಾ ತಂಪಾಗಿಯೂ ಆರೋಗ್ಯದಾಯಕವಾಗಿಯೂ ಇದೆ.

ಯುದ್ಧದ ಸಮಾಚಾರಗಳು.

ಬೆಲ್ಜಿಯಮ್‌ನಲ್ಲಿ ಘೋರ ಯುದ್ಧ.

ಡಾರ್ಡನೆಲ್ಸ್ ಜಲಮಾರ್ಗ ಪ್ರವೇಶ.

ಈ ವಾರ ಪಶ್ಚಿಮ ರಣರಂಗದಲ್ಲೇ ವಿಶೇಷ ಕದನಗಳು ನಡೆದಿರುವವು. ಡಾರ್ಡನೆಲ್ಸ್ ಜಲಮಾರ್ಗದಲ್ಲೂ ಕದನಗಳಾಗಿವೆ. ಯುದ್ಧರಂಗದ ಇತರ ಭಾಗಗಳಲ್ಲೂ ತಕ್ಕ ಮಟ್ಟಿಗೆ ಯುದ್ಧ ಕಾರ್ಯಗಳೇನೋ ನಡೆದಿದ್ದರೂ ಪ್ರಾಮುಖ್ಯವಾದ ಸಂಗತಿಗಳೇನೂ ಕಂಡುಬರುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ಈಗ ಈ ಯುದ್ಧಭೂಮಿಯಲ್ಲಿ ನಡೆಯುವ ಯುದ್ಧಕಾರ್ಯಗಳನ್ನು ಗ್ರಹಿಸಿಕೊಳ್ಳುವುದಕ್ಕೆ ಬ್ರಿಟಿಷರು ಇಪ್ರಿಯಿಂದ ಪೂರ್ವಕ್ಕೆ ನುಗ್ಗಿ ಹೋಗಿ ನಂಬರ್ 60 ಎಂಬ ಒಂದು ಗುಡ್ಡವನ್ನು ಗೆದ್ದು ಸ್ವಾಧೀನಪಡಿಸಿಕೊಂಡಿರುವ ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಅದು ಸ್ವಲ್ಪ ಎತ್ತರವಾದ ಗುಡ್ಡ; ಅದು ಸುಮಾರು 250 ಗಜ ಉದ್ದವಾಗಿಯೂ, 200 ಗಜ ಅಗಲವಾಗಿಯೂ ಇದೆ. ಇದರ ಸುತ್ತಲೂ ಇರುವ ಪ್ರದೇಶವು ಬಹು ದೂರದ ತನಕ ಹಳ್ಳ ದಿಟ್ಟುಗಳಿಲ್ಲದೆ ಒಂದೇ ಸಮನಾಗಿ ಚಟ್ಟೆಯೋಪಾದಿಯಲ್ಲಿ ಮೈದಾನವಾಗಿರೋಣದರಿಂದ ಈ ಗುಡ್ಡವು ಬಹಳ ವಿಶೇಷವಾದ ಸ್ಥಾನವಾಗಿದೆ. ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಬ್ರಿಟಿಷರು ಅದರ ಕೆಳಗೆ ಉದ್ದಕ್ಕೂ ಸುರಂಗಗಳನ್ನು ತೋಡಿ ಸಿಡಿಮದ್ದನ್ನು ತುಂಬಿಸಿ ಹಾರಿಸಿದ್ದರಿಂದ ಜರ್ಮನಿಯವರು ತುಂಬಿಕೊಂಡಿದ್ದ ಕಂದಕಗಳು ಒಡೆದು ನಾಶವಾದವು. ಕೂಡಲೇ ಬ್ರಿಟಿಷರು ಮುಂದರಿಸಿ ನುಗ್ಗಿ ಹೋಗಿ ಸಿಡಿಮದ್ದು ಹಾರಿ ಬಿರುಕುಗಳನ್ನು ಮಾಡಿದ್ದ ದೊಡ್ಡ ಹಳ್ಳಗಳೊಳಗೆ ಸೇರಿಕೊಂಡರು. ಅಲ್ಲಿದ್ದ ಜರ್ಮನಿಯವರೆಲ್ಲಾ ಕೊಲೆಯಾದರು. ಆ ಸಮೀಪದ ಕಂದಕಗಳಲ್ಲಿದ್ದ ಜರ್ಮನಿಯವರಿಗೆ ಗೊತ್ತಾಗದಂತೆ ಬ್ರಿಟಿಷರು ಅವರ ಮೇಲೆ ಕೈ ಸಿಡಿಮದ್ದಿನ ಗುಂಡುಗಳನ್ನು ಹಿಡಿದು ನುಗ್ಗಿ ಎಸೆಯುತ್ತಾ ಬಂದಾಗ ಜರ್ಮನಿಯ ಸೈನಿಕರು ಗಾಬರಿಬಿದ್ದು ಚೆಲ್ಲಾಬಿಲ್ಲಿಯಾದರು. ಬ್ರಿಟಿಷರು ಕಂದಕಗಳಿಂದ ಶತ್ರು ಸೈನಿಕರನ್ನು ಓಡಿಸಿಬಿಟ್ಟರು. ಜರ್ಮನಿಯವರಲ್ಲಿ ಕೊಲೆಯಾಗದೆ ಉಳಿದವರು ಕೈಸೆರೆ ಹಿಡಿಯಲ್ಪಟ್ಟರು. ಬಳಿಕ ಜರ್ಮನಿಯವರು ಫಿರಂಗಿ ಸೈನ್ಯವನ್ನು ತಂದು ಗುಡ್ಡಕ್ಕೆ ಮುತ್ತಿಗೆಹಾಕಿ ಗುಂಡುಗಳ ಮಳೆ ಸುರಿಸುತ್ತಾ ಬಂದರು. ನಾಲ್ಕೈದು ದಿನಗಳ ತನಕ ನಿಲುಗಡೆಯಿಲ್ಲದಂತೆ ಜರ್ಮನಿಯವರು ಫಿರಂಗಿ ಗುಂಡುಗಳನ್ನು ಗುಡ್ಡದ ಮೇಲಕ್ಕೆ ಹೊಡೆದಾಗ್ಯೂ ಬ್ರಿಟಿಷರನ್ನು ಬೇರೆ ಅಲ್ಲಿಂದ ಹೊರಡಿಸಲಾರದೆಹೋದರು. ಬ್ರಿಟಿಷರ ಕಡೆ ಅನೇಕ ಸೈನ್ಯಗಳು ನಷ್ಟವಾದವು. ಆದರೂ ಹೊಸ ಸೈನಿಕರು ಹಿಂದಿನಿಂದ ನುಗ್ಗಿ ಹೋಗಿ ಸತ್ತುಬಿದ್ದ ಹೆಣಗಳ ಮೇಲೆ ನಿಂತು ಆ ಕಂದಕಗಳನ್ನು ಆಕ್ರಮಿಸಿಕೊಂಡರು. ಇದಲ್ಲದೆ ಜರ್ಮನಿಯವರು ವಿಷಗಾಳಿಗಳನ್ನು ತುಂಬಿದಂಥಾ ಗುಂಡುಗಳನ್ನು ಬ್ರಿಟಿಷ್ ಸೈನಿಕರ ಮೇಲೆ ಹಾಕಿದ್ದರಿಂದ ಅನೇಕರು ನಷ್ಟಪಟ್ಟರು. ಜರ್ಮನಿಯವರು ಇಷ್ಟೆಲ್ಲಾ ಸಾಹಸಪಟ್ಟಾಗ್ಯೂ ಅವರು ಬೇರೆ ಬ್ರಿಟಿಷರನ್ನು ಗುಡ್ಡದಿಂದ ಹೊರಡಿಸಲಾಗಲಿಲ್ಲ. ಅವರು ಇಪ್ರೆ ಎಂಬ ಊರಿಗೆ ಗುಂಡುಗಳನ್ನು ಹಾಕಿದರು. ಇದರಿಂದ ಬೀದಿಯಲ್ಲಿ ಆಟವಾಡುತ್ತಿದ್ದ ಹದಿನೈದು ಮಂದಿ ಹುಡುಗರು ಮೃತಪಟ್ಟಿರುತ್ತಾರೆ. ಜರ್ಮನಿಯವರು ಏನೆಲ್ಲಾ ಉಪಾಯಮಾಡಿದಾಗ್ಯೂ ಅವರ ಸಾಹಸವು ವ್ಯರ್ಥವಾಯಿತು.

ತರುವಾಯ ಜರ್ಮನಿಯವರು ಬ್ರಿಟಿಷರ ಠಾಣ್ಯದ ಉತ್ತರಕ್ಕೆ ಹೋಗಿ ಅಲ್ಲಿದ್ದ ಫ್ರೆಂಚ್ ಮತ್ತು ಬೆಲ್ಜಿಯನ್ ಸೈನಿಕರ ಮೇಲೆ ಬಿದ್ದರು. ಇದು ಏಪ್ರಿಲ್ ತಾ. 22 ನೇ ಗುರುವಾರ ಪ್ರಾರಂಭವಾಯಿತು. ಜರ್ಮನಿಯವರು ವಿಷಕರವಾದ ವಾಯುಗಳನ್ನು ಬಹಳವಾಗಿ ತಯಾರುಮಾಡಿಕೊಂಡು ಹೋಗಿ ಗಾಳಿಯು ಅವರಿಗೆ ಅನುಕೂಲವಾಗಿ ಬೀಸಿದ್ದನ್ನು ನೋಡಿ ಫ್ರೆಂಚರ ಕಡೆಗೆ ಆ ವಿಷವಾಯುವನ್ನು ಹಾರಿಸಿಬಿಟ್ಟರು. ಅದನ್ನು ಸೇವಿಸಿದ ಕೂಡಲೆ ಫ್ರೆಂಚರಿಗೆ ಸ್ಮರಣೆತಪ್ಪಿತು; ಅನೇಕರಿಗೆ ಕ್ಲೋರಿನ್ ಎಂಬ ವಿಷಗಾಳಿ ಬಡಿದು ಬಹಳವಾಗಿ ನರಳಿ ಪ್ರಾಣಹೋಯಿತು. ಈ ವಿಷಗಾಳಿಯು ಧೂಮದಿಂದ ನಾಲ್ಕು ಅಡಿ ಎತ್ತರಕ್ಕೆ ಹಸರು ಹೊದೆಯೋಪಾದಿಯಲ್ಲಿ ನೆಲವನ್ನು ಸವರಿಕೊಂಡು ಬಂದಿತು. ಮಬ್ಬು ಕವಿದು ಮುಚ್ಚಿಕೊಂಡಿದ್ದಂಥಾ ಜರ್ಮನಿ ಸೈನಿಕರು ಅದನ್ನು ಲಕ್ಷ್ಯಮಾಡದೆ ಮುಂದರಿಸಿ ನುಗ್ಗಿ ಹೋಗಿ ಫ್ರೆಂಚರ ಮೇಲೆ ಬಿದ್ದು ಅವರ ಸಾಲು ಒಡೆದು ಅವರನ್ನೆಲ್ಲಾ ಬಹಳ ದೂರದ ತನಕ ಹಿಮ್ಮೆಟ್ಟಿಸಿದರು. ಸಮೀಪದಲ್ಲಿದ್ದ ಇಂಗ್ಲಿಷ್ ಸೈನಿಕರು ಪೂರ್ವ ದಿಕ್ಕನ್ನು ನೋಡದೆ ಉತ್ತರ ದಿಕ್ಕನ್ನು ನೋಡುವಂತೆ ಸಾಲುಕಟ್ಟಿ ನಿಂತಿದ್ದ ಕಾರಣ ಅವರು ತಮ್ಮ ಸಾಲನ್ನು ಮಡಚಿಕೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ನಮ್ಮ ಪಕ್ಷದವರು ಆಕಸ್ಮಿಕವಾಗಿ ಶತ್ರುವಿಗೆ ಸಿಕ್ಕಿಬಿದ್ದಿರಬೇಕೆಂದು ತೋರುತ್ತದೆ. ಅಲ್ಲಿ ಜರ್ಮನಿಯವರು ಕೆನೇಡಿಯನ್ ಸೈನಿಕರ ಬಳಿ ಇದ್ದ ನಾಲ್ಕು ಫಿರಂಗಿಗಳನ್ನೂ, ಫ್ರೆಂಚರ ಬಳಿ ಇದ್ದ ಕೆಲವು ಹೌವಿಟ್ಸರುಗಳೆಂಬ ಫಿರಂಗಿಗಳನ್ನೂ ಸ್ವಾಧೀನಪಡಿಸಿಕೊಂಡರು. ಆದಾಗ್ಯೂ ಅವರು ಅವುಗಳನ್ನು ಸಾಗಿಸಿಕೊಂಡು ಹೋಗುವುದಕ್ಕೆ ಮೊದಲೇ ನಮ್ಮ ಪಕ್ಷದವರು ಅವನ್ನು ಜರ್ಮನಿಯವರಿಂದ ಕಿತ್ತುಕೊಂಡು ಬಂದರು.

ಯುದ್ಧಕಾರ್ಯವು ಕೆಟ್ಟು ಹೋಗುವುದೆಂಬ ವಿಚಾರ ಆಗ ಬ್ರಿಟಿಷರಿಗೆ ಗೋಚರವಾಯಿತು. ಆ ಭಾಗದ ಬ್ರಿಟಿಷ್ ಸೈನಿಕರಲ್ಲಿದ್ದ ಕೆನೇಡಿಯನ್ ಸೈನಿಕರು ಜರ್ಮನಿಯವರ ಮೇಲೆ ಯುದ್ಧ ಕೊಡುವುದಕ್ಕೆ ನಿಲ್ಲಬೇಕಾಗಿ ಬಂದಿತು. ಇವರ ಅಧಿಪತಿಯು ಶತ್ರುವಿನ ಮೇಲೆ ನುಗ್ಗಿ ಹೋಗಬೇಕೆಂದು ಹುಕುಂ ಕೊಟ್ಟುಬಿಟ್ಟನು. ಅದೇ ಪ್ರಕಾರ 3,500 ಕೆನಡಾ ಸೈನಿಕರು ಗಿಡಗಳ ಮಧ್ಯೆ ಸೇರಿಕೊಂಡಿದ್ದ 7,000 ಜರ್ಮನಿ ಸೈನಿಕರ ಮೇಲೆ ನುಗ್ಗಿ ಹೋದರು. ಅಲ್ಲಿಗೆ ಸೂರ್ಯಾಸ್ತಮಾನವಾಗಿ ಅಂತರಿಕ್ಷದಲ್ಲಿ ಮೋಡಗಳ ಮಧ್ಯೆ ಚಂದ್ರನು ಬೆಳಗುತ್ತಿದ್ದನು. ಫಿರಂಗಿಗಳ ಗುಂಡುಗಳು ಬಿದ್ದು ಮಾರ್ಗವನ್ನು ಸಿದ್ಧಪಡಿಸಿದವು. ಬಳಿಕ ಸ್ವಲ್ಪ ಹೊತ್ತು ಎಲ್ಲಾ ಶಾಂತವಾಗಿತ್ತು. ತರುವಾಯ ಕೆನಡಾ ಸೈನಿಕರು ನುಗ್ಗಿ ಮುಂದರಿಸಿ ಜರ್ಮನಿಯವರ ಕಂದಕಗಳಿಗೆ 50 ಗಜದಷ್ಟು ಸಮೀಪಕ್ಕೆ ಹೋದರು. ಅಲ್ಲಿ ಅವರ ಮೇಲೆ ಶತ್ರುವಿನ ಮಹಾ ಘೋರವಾದ ಗುಂಡಿನ ಮಳೆ ಸುರಿಸಲಾಯಿತು. ಇದರಲ್ಲಿ ಕೆನಡಾ ಸೈನಿಕರ ಸಾಲಿನಲ್ಲಿ ಮುಂಭಾಗದಲ್ಲಿದ್ದವರೆಲ್ಲಾ ಕೊಲೆಯಾದರು, ಇಲ್ಲವೇ ಗಾಯಪಟ್ಟು ಬಿದ್ದುಕೊಂಡರು. ಆದರೆ ಅವರ ಹಿಂದಿದ್ದ ಸಾಲಿನವರು ಮುಂದೆ ಬಂದು ಶತ್ರುವಿನ ಮೇಲೆ ನುಗ್ಗಿ ಕಡಿದಾಡಿ ಅವರನ್ನೆಲ್ಲಾ ಸೋಲಿಸಿ ಹಿಂದಕ್ಕೆ ಓಡಿಸಿ, ಫಿರಂಗಿಗಳನ್ನು ಪುನಹ ಕಿತ್ತು ಸ್ವಾಧೀನಪಡಿಸಿಕೊಂಡರು. ಮೆಷೀನ್ ಫಿರಂಗಿಗಳನ್ನು ಹೊಡೆಯುತ್ತಿದ್ದ ಜರ್ಮನಿಯ ಸೈನಿಕರೆಲ್ಲಾ ಕೊಲ್ಲಲ್ಪಟ್ಟರು, ಇಲ್ಲವೇ ಗಾಯಪಟ್ಟರು. ಆದರೂ ಕಂದಕಗಳೊಳಗೆ ನಡೆದ ಕದನವು ಮಹಾಘೋರವಾಯಿತು. ಈ ಕೆನಡಾ ಸೈನಿಕರು ಬ್ರಿಟಿಷ್ ಸೈನ್ಯದಿಂದ ಪ್ರತ್ಯೇಕ ಮಾಡಲ್ಪಟ್ಟದ್ದ ಕಾರಣ ಅವರು ಊಟಮಾಡಿ 48 ಗಂಟೆಯಾಗಿತ್ತು; ಅದರಲ್ಲೂ ಕೆಲವರು ಇನ್ನೂ ದೀರ್ಘಕಾಲದಿಂದ ಹಸಿದಿದ್ದರು. ಇವರು ಜರ್ಮನಿಯವರನ್ನು ಹಿಮ್ಮೆಟ್ಟಿಸಿ ಅವರ ಕಂದಕಗಳನ್ನು ಆಕ್ರಮಿಸಿಕೊಂಡು ಅವರು ಎಷ್ಟಾವರ್ತಿ ನುಗ್ಗಿ ಬಂದರೂ ಸಗ್ಗದೆ ಅವರಿಗೆ ಕಂದಕಗಳನ್ನು ಬಿಟ್ಟುಕೊಡದೆ ಹೊಸ ಸೈನ್ಯಗಳು ಬಂದು ಸಹಾಯಮಾಡುವ ತನಕ ಬಹು ಪರಾಕ್ರಮದಿಂದ ಕಾಪಾಡಿಕೊಂಡಿದ್ದರು. ಕೆನಡಾದ ಈ ಸೈನಿಕರು ಅತ್ಯಂತ ಶೌರ್ಯದಿಂದ ಯುದ್ಧ ಮಾಡಿರುತ್ತಾರೆ; ಸರ್ವಸೇನಾಪತಿಯಾದ ಸರ್ ಜಾನ್ ಫ್ರೆಂಚ್‌ರವರು ಅವರ ಪರಾಕ್ರಮವನ್ನು ನೋಡಿ ಸಂತೋಷಪಟ್ಟು ಅವರನ್ನೆಲ್ಲಾ ಕೊಂಡಾಡಿದಾರೆ. ಈ ಸುದ್ದಿಯು ಕೆನಡಾ ಸಾಮ್ರಾಜ್ಯಕ್ಕೆ ತಿಳಿದಾಗ ಅಲ್ಲಿನ ಪ್ರಜೆಗಳು ಅಪಾರವಾಗಿ ಉತ್ಸಾಹಪಟ್ಟರು. ಚಕ್ರವರ್ತಿ ಸಾರ್ವಭೌಮರವರು ಕೆನಡಾವಿಗೆ ತಮ್ಮ ಆನಂದವನ್ನೂ ಮೆಚ್ಚುಗೆಯನ್ನೂ ತಿಳಿಸಿದರು. ಈಗ ಅಲ್ಲಿನ ಜನರು ಇನ್ನೂ ಹೆಚ್ಚಾಗಿ ಮುಂದೆಬಂದು ಸೈನ್ಯಕ್ಕೆ ಸೇರಿಕೊಳ್ಳುತ್ತಿದಾರೆ.

ಮ್ಮ ಕಡೆಯೂ, ಜರ್ಮನಿಯವರ ಕಡೆಯೂ ಅಪಾರ ಸೈನ್ಯ ನಷ್ಟ ವೆ. ಎಷ್ಟೆಷ್ಟು ಎಂಬುವುದು ಇನ್ನೂ ಗೊತ್ತುಮಾಡಲು ಅವಕಾಶ ಸಾಲದು. ಪ್ರಕಟವಾಗಿರುವ ಪಟ್ಟಿಯಿಂದ ಕೆನೇಡಿಯನ್ ಸೈನಿಕರಲ್ಲಿ 32 ಮಂದಿ ದಾರರು ಕೊಲೆಯಾದರೆಂದೂ, 92 ಮಂದಿಗೆ ಗಾಯಗಳಾದವೆಂದೂ ಗುತ್ತದೆ. ಜರ್ಮನಿಯವರ ಕಡೆಯಲ್ಲಾದರೋ ಅಪಾರ ನಷ್ಟವಾಯಿತು. ಪ್ರಾಣ್ಯದಲ್ಲೇ 1,000 ಹೆಣಗಳನ್ನು ಲೆಕ್ಕಮಾಡಿದರು. ಇನ್ನೊಂದು ಕಡೆ ಗಳು ಬಿದ್ದಿದ್ದವು. ಇದಲ್ಲದೆ ಜರ್ಮನಿಯವರು ಅನೇಕ ರೈಲ್ ಗಾಡಿ ಹೆಣಗಳನ್ನೂ ಗಾಯಪಟ್ಟವರನ್ನೂ ಯುದ್ಧಭೂಮಿಯಿಂದ ಸಾಗಿಸಿ ಹೋಗಿದ್ದಾರೆ. ಈ ಕದನದಲ್ಲಿ ಕೈಸೆರೆ ಸಿಕ್ಕಿದ ಜರ್ಮನಿಯವರು ಲ್ಲ.

ಈ ಸ್ಥಾನ್ಯದಿಂದ ಇನ್ನೂ ಉತ್ತರ ಭಾಗದಲ್ಲಿ ಜರ್ಮನಿಯವರು ಇಸರ್ ನ್ನು ದಾಟಿಹೋಗಿ ಅಲ್ಲಿದ್ದ ಬೆಲ್ಜಿಯನ್ ಸೈನಿಕರ ಮೇಲೆ ನುಗ್ಗಿ ಕದನ ಅವರನ್ನು ಸ್ವಲ್ಪ ದೂರ ಹಿಮ್ಮೆಟ್ಟಿಸಿದರು. ಆದರೆ ನದಿಯ ಎಡಪಾರ್ಶ್ವ ರ್ಮನಿಯವರು ದೀರ್ಘ ಕಾಲ ನಿಲ್ಲಲು ಬೆಲ್ಜಿಯನ್ನರು ಅವರಿಗೆ ಅವಕಾಶ ದೆ ಅವರನ್ನು ಮತ್ತೆ ನದೀ ದಾಟಿ ವಾಪಸು ಹೋಗುವಂತೆ ಓಡಿಸಿಬಿಟ್ಟರು. ರ್ಮನಿಯವರು ಅಲ್ಲಿಂದ ಹಿಮ್ಮೆಟ್ಟಿ ಬರುವಾಗ ಬಹಳ ಸೈನ್ಯವನ್ನು ಕಳೆದು ಕೊಳ್ಳಬೇಕಾಯಿತು.

ಈ ಪ್ರಕಾರ ಜರ್ಮನಿಯವರು ಉತ್ತಮೋತ್ತಮವಾದ ರೀತಿಯಲ್ಲಿ ಸನ್ನಾಹ ಗೊಂಡು ಎದುರಿಗಿದ್ದ ನಮ್ಮ ಪಕ್ಷದವರ ಸೈನ್ಯಗಳ ಸಾಲುಗಳನ್ನು ಭೇದಿ ಸಿ ಕೊಂಡು ಮುಂದೆ ನುಗ್ಗಬೇಕೆಂದು ತುಂಬಾ ಸಾಹಸಪಟ್ಟರು. ಆದರೆ ಅವರು ಸೋತು ಬಹಳ ಸೈನ್ಯವನ್ನು ಕಳೆದುಕೊಂಡಿರುತ್ತಾರೆ.

ವಿಷಕರವಾದ ವಾಯುಗಳನ್ನು ಶತ್ರುಗಳ ಮೇಲೆ ಪ್ರಯೋಗಿಸುವುದು ಯು ದ್ಧಧರ್ಮವಲ್ಲವೆಂದು ಹಿಂದೆ ಜರ್ಮನಿಯವರೇ ಒಪ್ಪಿಕೊಂಡಿದ್ದಾರೆ. ಈಗ ಈ ರೀತಿ ವರ್ತಿಸಿರುವುದನ್ನು ನೋಡಿದರೆ ಒಳ್ಳೇದೋ ಕೆಟ್ಟದ್ದೋ ಆ ಮಾರ್ಗದಿಂದು ಉಪಾಯದಿಂದ ಜಯಪ್ರದ ಹೊಂದಿದರೆ ಸರಿ ಎಂಬ ಅಭಿ ಪ್ರಾಯ ಅವರಲ್ಲಿರುವಂತೆ ಸ್ಪಷ್ಟವಾಗಿ ಗೊತ್ತಾಗುವುದು. ಜರ್ಮನಿಯವರ ಅನ್ಯಾಯವಾದ ಹೊಸ ತರಹಾ ಕೃತ್ರಿಮಕೃತ್ಯಕ್ಕೆ ನಮ್ಮ ಪಕ್ಷದವರು ತಕ್ಕ ಪ್ರತೀ ಕಾರವನ್ನು ಮಾಡದೆ ಇರಲಾರರು. ಹ್ಯಾಗೂ ನಮ್ಮ ಪಕ್ಷದವರಿಗೆ ಬಹಳ ಕಷ್ಟ ಪ್ರಾಪ್ತವಾಗಿರುತ್ತದೆಂದು ಗೊತ್ತಾಗುತ್ತದೆ. ಆದರೂ ಅವರ ಧೈರ್ಯವಾ ಗಲಿ, ಪರಾಕ್ರಮವಾಗಲಿ, ಉತ್ಸಾಹವಾಗಲಿ ಎಷ್ಟು ಮಾತ್ರವೂ ಕಂದಿ ಕುಂದಿ ಲ್ಲ. ಪರಿಣಾಮದಲ್ಲಿ ಅವರು ಜಯಪ್ರದ ಹೊಂದುತ್ತಾರೆಂದು ಚೆನ್ನಾಗಿ ತಿಳಿ ಯುವರು.

ಯುದ್ಧಸಾಲಿನ ದಕ್ಷಿಣ ಕಡೆ ಅಂದರೆ ಆಲ್ಸೇಸಿನಲ್ಲಿ ಕೆಲವು ಕಠಿಣವಾದ ಕದನಗಳು ನಡೆದಿರುತ್ತವೆ. ಫ್ರೆಂಚರು ಗೆದ್ದು ಆಕ್ರಮಿಸಿಕೊಂಡಿದ್ದ ಒಂದು ಗುಡ್ಡವನ್ನು ಜರ್ಮನಿಯವರು ನುಗ್ಗಿ ಬಂದು ಅವರಿಂದ ಕಿತ್ತು ಸ್ವಾಧೀನ ಪಡಿಸಿಕೊಂಡದ್ದಲ್ಲದೆ ಕೆಲವು ಫ್ರೆಂಚ್ ಸೈನಿಕರನ್ನು ಕೈಸೆರೆಯೂ ಹಿಡಿದಿದ್ದಾರೆ. ಆದರೆ ಫ್ರೆಂಚರು ಆ ಗುಡ್ಡವನ್ನು ಮತ್ತೆ ಅವರಿಂದ ಕಿತ್ತುಕೊಂಡಿರುವಂತೆ ಗೊತ್ತಾಗುತ್ತದೆ.

ನಮ್ಮ ಪಕ್ಷದ ವಿಮಾನ ಯಂತ್ರಗಳು ಚಟುವಟಿಕೆಯಾಗಿ ಕಾರ್ಯಗಳನ್ನು ನಡೆಸುತ್ತಾ ಹೆಚ್ಚು ಮಟ್ಟಿಗೆ ಫಲಕಾರಿಯಾಗಿವೆ. ನಮ್ಮ ಕಡೆಯ ವಿಮಾನ ಯಂತ್ರ ಗಳು ಬೆಲ್ಜಿಯನ್ ರಾಜ್ಯದ ಮೇಲೆ ಸಂಚಾರಮಾಡಿ ಹಲವು ರೈಲ್ವೆ ಸ್ಟೇಷನ್‌ಗಳಿಗೆ ಸಿಡಿಮದ್ದಿನ ಗುಂಡುಗಳು ಹಾಕಿ ಹಾಳುಮಾಡಿದ್ದರಿಂದ ಜರ್ಮನಿಯವರು ತಮ್ಮ ಸೈನ್ಯವನ್ನು ಸಾಗಿಸಿಕೊಂಡು ಬರುವುದಕ್ಕೆ ಅಡಚಣೆಯುಂಟಾಯಿತು. ಇದ ಲ್ಲದೆ ಜರ್ಮನಿಯವರ ಕೆಲವು ವಿಮಾನಯಂತ್ರಗಳನ್ನು ಗುಂಡಿನಿಂದ ಹೊಡೆದು ನಮ್ಮ ಪಕ್ಷದವರು ಇಳಿಸಿ ಕಿತ್ತುಕೊಂಡರು; ಇಲ್ಲವೇ ನಾಶಮಾಡಿದರು.

ಜರ್ಮನಿಯವರು ಜೆಪ್ಲಿಂಪ್ಪೆಲಿನ್ ವಿಮಾನಯಂತ್ರಗಳಲ್ಲಿ ಇಂಗ್ಲೆಂಡಿನ ಮೇಲೆ ಹಾರಿಬಂದು ದರೋಡೆ ಕೃತ್ಯಗಳನ್ನು ನಡೆಸಿದ್ದಾರೆ ಕಳೆದ ಶುಕ್ರವಾರ ರಾತ್ರಿ ಜರ್ಮನಿಯ ಒಂದು ವಿಮಾನಯಂತ್ರವು ಹಾರಿಬಂದು ಇಪ್ಸಿಚ್ ಮೊದ ಲಾದ ಕೆಲವು ನಗರಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಇದ ರಿಂದ ಯಾರಿಗೂ ಪ್ರಾಣ ಹೋಗಲಿಲ್ಲ, ಯಾರಿಗೂ ಗಾಯಗಳೂ ಆಗಲಿಲ್ಲ. ಕೆಲವು ಮನೆಗಳು ಮಾತ್ರ ಉರಿದು ಸುಟ್ಟುಹೋದವು. ಒಂದು ಮನೆಯೊಳಗೆ ಒಂದು ಮಗು ಮಲಗಿ ನಿದ್ದೆಮಾಡುತ್ತಿತ್ತು. ಆ ಕೊಠಡಿಗೆ ಸಿಡಿಮದ್ದಿನ ಗುಂಡು ಬಿದ್ದಿತು. ಮನೆಯು ಹತ್ತಿಕೊಂಡಿತಾದರೂ ತಂದೆಯು ನುಗ್ಗಿಹೋಗಿ ಆ ಮಗುವನ್ನು ಎತ್ತಿಕೊಂಡು ಬಂದುಬಿಟ್ಟನು

ಪೂರ್ವ ರಣರಂಗದಲ್ಲಿ.

ಹಿಮಗಡ್ಡೆಗಳು ಕರಗಿ ಬಿದಿ ಸಹಿತ ಹರಿಯುತ್ತಿರುವುದರಿಂದ ರಷ್ಯಾದವ ರಾಗಲಿ ಆಸ್ಟ್ರಿಯಾದವರಾಗಲಿ ವಿಶೇಷವಾಗಿ ಯುದ್ಧ ಕಾರ್ಯಗಳನ್ನು ನಡೆಸಲು ಸಾಧ್ಯವಾಗಿಲ್ಲ. ಅಲ್ಲಿ ಈಗ ಸಂಚಾರಮಾಡುವುದೇ ಪ್ರಯಾಸವಾಗಿದೆ. ಆದರೂ ಕೆಲವು ಕದನಗಳೇನೋ ನಡೆದಿರುವವು. ಜರ್ಮನಿಯವರನ್ನೂ ಆಸ್ಟ್ರಿಯಾದವರನ್ನೂ ರಷ್ಯಾದವರು ಸೋಲಿಸಿ ಹಿಮ್ಮೆಟ್ಟಿಸಿ ಮುಂದೆ ನುಗ್ಗಿ ಹೋಗುತ್ತಿರುವಂತೆ ಕಾಣುತ್ತದೆ. ಒಂದು ತಂತೀವರ್ತಮಾನವು ಆಸ್ಟ್ರಿಯಾದವರಲ್ಲಿ 8,000 ಸೈನ್ಯ ನಷ್ಟವಾಯಿತೆಂದೂ, ಈ ಪೈಕಿ 31,000 ಸೈನ್ಯ ಕೈಸೆರೆಯಾಗಿದೆ ಎಂದೂ ತಿಳಿಸುತ್ತಾರೆ. ಇದು ಸರ್ಕಾರೀಯವಾದ ವರ್ತಮಾನವಲ್ಲ. ಇನ್ನೂ ಕೆಲವು ದಿವಸಗಳಾಗುವ ತನಕ ಆ ಪ್ರಾಂತ್ಯವು ಯುದ್ಧಕಾರ್ಯಗಳಿಗೆ ಅನುಕೂಲವಾಗು ವ ಹಾಗಿರುವುದಿಲ್ಲ.

ಟರ್ಕಿ.

ಕಳೆದ ಏಪ್ರಿಲ್ ತಾ. 25 ರಿಂದ ನಮ್ಮ ಪಕ್ಷದವರು ಡಾರ್ಡನೆಲ್ಸ್ ಜಲ ಮಾರ್ಗದಲ್ಲಿ ನುಗ್ಗಿ ಹೋಗಿ ಟರ್ಕಿ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ ನಗರವನ್ನು ಪ್ರವೇಶಮಾಡಬೇಕೆಂದು ಸಾಹಸಪಡುತ್ತಿದ್ದಾರೆ. ಆ ಜಲಮಾರ್ಗ ದ ಎರಡು ಪಾರ್ಶ್ವದ ಕೋಟೆಗಳಿಗೆ ಫಿರಂಗೀ ಗುಂಡುಗಳನ್ನು ಹೊಡೆದರು ಟರ್ಕಿ ಸೈನ್ಯಗಳಿದ್ದ ಕಂದಕಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ಆ ಜಲಮಾರ್ಗದ ಪಶ್ಚಿಮತೀರದಲ್ಲಿ ಬ್ರಿಟಿಷ್ ಮತ್ತು ಆಸ್ಟ್ರೇಲಿಯನ್ ಸೈನ್ಯಗ ಳು ನುಗ್ಗಿಕೊಂಡು ಹೋಗಿ ನಾಲ್ಕು ಕಡೆ ಇಳಿಸಿದರು. ಪೂರ್ವತೀರದಲ್ಲಿ ಫ್ರೆಂಚ್ ಸೈನ್ಯಗಳನ್ನು ಇಳಿಸಿದ್ದಾಯಿತು. ಇದುವರೆಗೆ ನಡೆದಿರುವ ಕದನಗಳು ನಮ್ಮ ಪಕ್ಷಕ್ಕೆ ಅನುಕೂಲವಾಗಿವೆ. ಗಲ್ಲಿಪೊಲಿ ಎಂಬ ಅರ್ಧ ದ್ವೀಪದ ದಕ್ಷಿಣಭಾಗವೆಲ್ಲಾ ಈಗ ನಮ್ಮ ಪಕ್ಷದವರ ಸ್ವಾಧೀನವಾಗಿರುತ್ತದೆ.

ಆ ಜಲಮಾರ್ಗದ ನಡುವೆ ಇರುವ ಮೈಡೋಸ್ ಎಂಬ ಪಟ್ಟಣಕ್ಕೆ ನಮ್ಮ ವರು ಗುಂಡುಗಳನ್ನು ಹೊಡೆದರು. ಈಗ ಆ ನಗರವು ಬೆಂಕಿ ಬಿದ್ದು ಉರಿಯುತ್ತಿದೆ. ಈ ಜಲಮಾರ್ಗದ ಇಕ್ಕಟ್ಟಾದ ಪ್ರದೇಶವನ್ನು ಇನ್ನೂ ನಮ್ಮವರು ಭೇದಿಸಿಲ್ಲ. ಆದರೆ ನಮ್ಮ ಪಕ್ಷದ ಭೂಸೈನ್ಯಗಳೂ ನಮ್ಮ ಕದನದ ಹಡಗುಗಳೂ ಎರಡು ಕಡೆಗಳಿಂದಲೂ ನುಗ್ಗಿ ಯುದ್ಧ ಕಾರ್ಯಗಳನ್ನು ನಡೆಸಿದಲ್ಲಿ ಟರ್ಕಿ ಕೋಟೆಗಳು ಬೇಗನೆ ಸ್ವಾಧೀನವಾಗುವವೆಂದು ಹೇಳಬಹುದಾಗಿದೆ. ಶತ್ರುಗಳ ಯುದ್ಧದ ಹಡಗುಗಳು ಸಮೀಪದಲ್ಲಿರುತ್ತವೆ. ಬ್ರಿಟಿಷರ ಕ್ವೀನ್ ಎಲಿಜಬೆತ್ ಎಂಬ ಅಗಾಧವಾದ ಜಹಜನ್ನು ನೋಡಿ ಅವುಗಳಿಗೆ ಹೆದರಿಕೆಯಾಗಿದೆ. ನಮ್ಮ ಈ ಜಹಜು ಟರ್ಕಿಯವರ ಸೈನಿಕರಿದ್ದ ಒಂದು ಹಡಗನ್ನು ಮುಳುಗಿಸಿರುವುದು.

ಇನ್ನೊಂದು ತಂತೀವರ್ತಮಾನವು ಟರ್ಕಿಯವರು ಮೋಸಹೋದ ರೆಂದು ಹೇಳುತ್ತದೆ. ಹ್ಯಾಗೆಂದರೆ, ಬ್ರಿಟಿಷರು ಕೆಲವು ದೋಣಿಗಳಲ್ಲಿ ಮರದಿಂದ ಮಾಡಿದ ನಕಲಿ ಫಿರಂಗಿಗಳನ್ನೂ ಹೇಸರಕತ್ತೆಗಳನ್ನೂ ಕಳುಹಿಸಿ ದಡದ ಕಡೆಗೆ ಬಿಟ್ಟರು. ಟರ್ಕಿಯವರು ಅವುಗಳ ಮೇಲೆ ನುಗ್ಗಿ ಅವನ್ನೆಲ್ಲಾ ಹಾಳು ಮಾಡಿದರು. ಈ ಕಾರ್ಯ ಆ ಕಡೆ ನಡೆಯುವಾಗ್ಗೆ ಬ್ರಿಟಿಷ್ ಸೈನ್ಯಗಳು ಹೋಗಿ ಇನ್ನೊಂದು ಕಡೆ ಸುರಕ್ಷಿತವಾಗಿ ಇಳಿದುಬಿಟ್ಟವು. ಇದು ವರೆಗೆ ಟರ್ಕಿ ಸೈನಿಕರಲ್ಲಿ ಫ್ರೆಂಚರು 1,800 ಮಂದಿಯನ್ನೂ, ಬ್ರಿಟಿಷರು 1,200 ಮಂದಿ ಯನ್ನೂ ಕೈಸೆರೆಹಿಡಿದಿರುವಂತೆ ಹೇಳಲಾಗಿದೆ.

ಸ್ಮರ್ನಾ ನಗರಕ್ಕೆ ಮತ್ತೆ ಫಿರಂಗಿ ಗುಂಡುಗಳನ್ನು ಹೊಡೆದರು. ನಮ್ಮ ಪಕ್ಷದವರು ಅಲ್ಲೂ ಸಮೀಪದಲ್ಲಿ ಸೈನ್ಯವನ್ನು ತೆಗೆದುಕೊಂಡುಹೋಗಿ ಇಳಿಸಿರು ವಂತೆ ಪ್ರಕಟವಾಗಿದೆ.

ಪರ್ಷಿಯ ಖಾರಿಯ ಸಮೀಪದಲ್ಲಿರುವ ಮೆಸೊಪೊಟೇಮಿಯದಲ್ಲಿ ನಡೆದ ಯುದ್ಧದಲ್ಲಿ ಮೊದಲು ತಿಳಿದದ್ದಕ್ಕಿಂತಲೂ ಟರ್ಕಿಯವರಿಗೆ ವಿಶೇಷ ನಷ್ಟವಾಗಿ ರುವಂತೆ ತಿಳಿಯುತ್ತದೆ. ಟರ್ಕಿಯವರು ಅಪಾರವಾದಷ್ಟು ಸಾಮಗ್ರಿಗಳನ್ನು ಹಿಂದೆ ಬಿಟ್ಟು 90 ಮೈಲಿ ದೂರ ಹಿಮ್ಮೆಟ್ಟಿ ಹೋಗಿಬಿಟ್ಟರು. ಪರ್ಷಿಯ ಖಾರಿ ಯಿಂದ ಒಂದು ಜಹಜಿನಲ್ಲಿ ಗಾಯಪಟ್ಟ 10 ಮಂದಿ ಬ್ರಿಟಿಷ್ ಸೈನಿಕರೂ, 301 ಮಂದಿ ಹಿಂದುಸ್ಥಾನದ ಸೈನಿಕರೂ, ಕೈಸೆರೆ ಹಿಡಿದಿರುವ 614 ಮಂದಿ ಟರ್ಕಿ ಮತ್ತು ಅರಬ್ಬಿ ಸೈನಿಕರೂ ಕಳೆದ ವಾರ ಬೊಂಬಾಯಿಗೆ ಬಂದಿಳಿದರು.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಬಂದಿರುವ ವರ್ತಮಾನ ಬಹಳ ಸ್ವಲ್ಪ. ಒಂದು ತಂತೀ ವರ್ತಮಾನವು ಸಂಯುಕ್ತ ಸೈನ್ಯಗಳು ಜರ್ಮನಿಯ ದಕ್ಷಿಣ ಪಶ್ಚಿಮ ಆಫ್ರಿಕಾ ದೊಳಗೆ ನುಗ್ಗಿ ಹೋದದ್ದರಲ್ಲಿ ಒಂದು ಗ್ರಾಮವು ಅವರ ಸ್ವಾಧೀನವಾಯಿ ತೆಂದೂ, ಅಲ್ಲಿ ಬಚ್ಚಿಟ್ಟಿದ್ದ ಜರ್ಮನಿಯವರ ಅಪಾರ ಯುದ್ಧ ಸಾಮಗ್ರಿಗಳು ಸಿಕ್ಕಿದವೆಂದೂ ಹೇಳುತ್ತದೆ.

ಸಮುದ್ರದ ಮೇಲೆ.

ಕಳೆದ ವಾರವೂ ಜರ್ಮನಿಯವರು ಬ್ರಿಟಿಷರ ಹಡಗುಗಳನ್ನು ವಿಶೇಷ ನಷ್ಟ ಪಡಿಸಲಾರದೆಹೋದರು. ಸರ್ಕಾರಿಯಾಗಿ ಪ್ರಕಟವಾಗಿರುವ ಲೆಕ್ಕಗಳಿಂದ 1,441 ಹಡಗುಗಳು ನಿರುಪಾಧಿಕವಾಗಿ ಬ್ರಿಟನ್‌ಗೆ ಬಂದು ಹೋದವೆಂದೂ, ಜರ್ಮನಿ ಯವರು ಒಂದು ಜಹಜನ್ನೂ, ನಾಲ್ಕು ಬೆಸ್ತರ ಹಡಗುಗಳನ್ನೂ ಮಾತ್ರ ಮುಳು ಗಿಸಿದಾರೆಂದೂ ಗೊತ್ತಾಗುತ್ತದೆ.—ಜರ್ಮನಿಯವರು ನೊರ್ವೆ ರಾಜ್ಯದ ಎರಡು ಜಹಜುಗಳಿಗೂ, ಸ್ವೀಡನ್ ರಾಜ್ಯದ ಒಂದು ಜಹಜಿಗೂ ಟಾರ್ಪೀಡೋವನ್ನು ಬಿಟ್ಟು ಹೊಡೆದದ್ದಲ್ಲದೆ ಒಂದು ಡೇನಿಷ್ ಜಹಜನ್ನು ಹಿಡಿದಿಟ್ಟುಕೊಂಡಿ ದ್ದಾರೆ.—ಬಹಳ ಘೋರವಾದ ಒಂದು ನಷ್ಟವಾಯ್ತೆಂದರೆ ಆಸ್ಟ್ರಿಯಾದ ಒಂದು ಸಬ್‌ಮೆರೀನು ಇಟಲಿಯ ದಕ್ಷಿಣತೀರದ ಬಳಿ ಟಾರ್ಪೀಡೋವನ್ನು ಬಿಟ್ಟು ಹೊಡಿಸಿ ಫ್ರೆಂಚರ ಒಂದು ದೊಡ್ಡ ಯುದ್ಧದ ಜಹಜನ್ನು ಹಾಳುಮಾಡಿ ರುತ್ತದೆ. ಇದು ನಿದಾನವಾಗಿ ಸಮುದ್ರದ ಮೇಲೆ ಹೋಗುತ್ತಿದ್ದಾಗ ಅದಕ್ಕೆ ಟಾರ್ಪೀಡೋ ಬಡಿದು ಮುಳುಗಿಕೊಂಡಿತು. ಅದರಲ್ಲಿದ್ದ 700 ಜನರ ಪೈಕಿ 133 ಜನರನ್ನು ಮಾತ್ರ ಇಟಲಿಯವರು ಬದುಕಿಸಿ ತೀರವನ್ನು ತಲಪಿಸಿದರು.— ಕೆಲವು ದಿವಸಗಳ ಹಿಂದೆ ದಕ್ಷಿಣ ಅಮೇರಿಕದ ಬಳಿಯಿಂದ ಒಂದು ಜರ್ಮನಿ ಜಹಜು ತಪ್ಪಿಸಿಕೊಂಡು ಹೋಗಿತ್ತು. ಈಗ ಬ್ರಿಟಿಷರ ಒಂದು ಯುದ್ಧದ ಜಹಜು ಅದನ್ನು ಹಿಡಿದು ಸ್ವಾಧೀನಪಡಿಸಿಕೊಂಡಿರುತ್ತದೆ.—ಸಂಯುಕ್ತ ಸಂಸ್ಥಾ ನಗಳ (ಯುನೈಟೆಡ್ ಸ್ಟೇಟ್ಸ್) ಒಂದಾನೊಂದು ತೀರಪಟ್ಟಣಕ್ಕೆ ಹೋಗಿರುವ ಜರ್ಮನಿಯ ಒಂದು ಯುದ್ಧದ ಜಹಜನ್ನು ಅಲ್ಲಿನವರು ಹೊರಕ್ಕೆ ಬಿಡದೆ ತಡೆ ದಿಟ್ಟುಕೊಂಡರು. ಜರ್ಮನಿಯವರ ಜಹಜುಗಳ್ಯಾವೂ ಹೊರಸಮುದ್ರದಲ್ಲಿ ಎಲ್ಲೂ ಒಂದಾದರೂ ಇಲ್ಲದಂತಾಯಿತು. ಅವರ ಜಹಜುಗಳೆಲ್ಲಾ ಜರ್ಮ ನಿಯ ತೀರಪಟ್ಟಣಗಳಲ್ಲಿ ಮಾತ್ರ ಇರುತ್ತವೆ.—ಗ್ರೇಟ್ ಬ್ರಿಟನ್ ಮಂತ್ರಿ ಶ್ರೇಷ್ಠರಾದ ಮಿ|| ಆಸ್ಕಿತ್‌ರವರು ಕಳೆದ ಮಾರ್ಚಿ ತಾ. 31 ರ ವರೆಗೆ ಬ್ರಿಟಿಷರ ಕಡೆ ಸಮುದ್ರದ ಮೇಲೆ 432 ಮಂದಿ ಹುದ್ದೇದಾರರು ನಷ್ಟಪಟ್ಟರೆಂದೂ, ಈ ಪೈಕಿ 332 ಮಂದಿ ಹುದ್ದೇದಾರರು ಕೊಲೆಯಾದರೆಂದೂ, ಸಮುದ್ರ ಸೈನ್ಯದಲ್ಲಿ 8,141 ಜನರು ನಷ್ಟವಾದರೆಂದೂ, ಈ ಪೈಕಿ 4,981 ಜನರು ಕೊಲೆಯಾಗಿದಾ ರೆಂದೂ ಅಪ್ಪಣೆಕೊಡಿಸಿವಾರೆ. ಅವರೆಲ್ಲಾ ಸಮುದ್ರದಲ್ಲಿ ಮುಳುಗಿ ಸತ್ತಿರಬಹು ದೆನ್ನುವುದಕ್ಕೆ ಸಂಶಯವಿಲ್ಲ.

ಇತರ ವಿಷಯಗಳು.

ಲಾರ್ಡ್ ಕಿಚ್ನರವರೂ, ಮಿ|| ಆಸ್ಕಿತ್‌ರವರೂ ಇಂಗ್ಲಿಷ್ ಪಾರ್ಲಿಮೆಂಟ್ ಸಭೆ ಮನೆಗಳಲ್ಲಿ ಬಹು ವಿಶೇಷವಾದ ಭಾಷಣಗಳನ್ನು ಮಾಡಿದಾರೆ. ಲಾರ್ಡ್ ಕಿಚ್ನರವರು—ಜರ್ಮನಿಯವರ ಪರಾಕ್ರಮವು ಸ್ತೋತ್ರಾರ್ಹವಾಗಿದೆ ಎಂದೂ, ಆದರೆ ಅವರು ಕೈಸೆರೆ ಹಿಡಿದಿರುವಂಥಾ ಬ್ರಿಟಿಷ್ ಹುದ್ದೇದಾರರನ್ನು ಬಂದೀ ಖಾನೆಗೆ ಹಾಕಿ ಕ್ರೂರವಾಗಿ ನಡಿಸುತ್ತಿರುವುದು ಅವರ ಶೌರ್ಯಕ್ಕೆ ಅವಮಾನಕ ರವಾಗಿದೆ ಎಂದೂ, ಅವರು ಕೆಲವರನ್ನು ಬಟ್ಟೆ ಬಿಚ್ಚಿಸಿ ಹಿಂಸೆ ಪಡಿಸಿಯೂ ಕೆಲವ ರನ್ನು ನಿಷ್ಕಾರಣವಾಗಿ ಗುಂಡಿನಿಂದ ಹೊಡಿಸಿ ಕೊಲ್ಲಿಸಿಯೂ ಇರುವರೆಂದೂ, ಗಾಯ ಪಟ್ಟಿರುವಂಥಾ ಬ್ರಿಟಿಷ್ ಹುದ್ದೇದಾರರನ್ನು ದುರ್ಭಾಷೆಗಳನ್ನಾಡಿ ಹೊಡೆದ ರೆಂದೂ, ಆಸ್ಪತ್ರೆಗಳಲ್ಲಿ ಬ್ರಿಟಿಷ್ ಸೈನಿಕರನ್ನು ಸರಿಯಾಗಿ ಆರೈಕೆ ಮಾಡುವುದಿ ಲ್ಲವೆಂದೂ ಹೇಳಿದಾರೆ. ಲಾರ್ಡ್ ಕಿಚ್ನರ್, ಮಿ|| ಆಸ್ಕಿತ್‌ರವರಂಥಾ ಪ್ರಧಾ ನಾಧಿಕಾರಿಗಳೇ ಇಂಥಾ ಅವಮಾನಕರವಾದ ಸಂಗತಿಗಳನ್ನು ತಿಳಿಸಿರುವುದರಿಂದ ಜರ್ಮನಿಯವರ ನಡವಳಿಕೆಗಳು ಬಹಳ ತುಚ್ಛವಾಗಿರುತ್ತವೆಂದು ತಿಳಿದು ಕೊಳ್ಳಬಹುದು.

ಜರ್ಮನಿಯವರ ಯಮ್‌ಡೆನ್ ಎಂಬ ಯುದ್ಧದ ಜಹಜನ್ನು ಬ್ರಿಟಿಷರು ನಾಶಮಾಡಿದರಷ್ಟೆ. ಅದರಲ್ಲಿದ್ದ ಕೆಲವರು ತಲೆತಪ್ಪಿಸಿಕೊಂಡು ಕೆಂಪು ಕಡಲಿಗೆ ಹೋಗಿ ಅರೇಬಿಯಾದಲ್ಲಿ ಇಳಿದರು. ಅರಬ್ಬಿಯವರು ಅವರ ಮೇಲೆ ಬಿದ್ದು ಮೂರು ದಿವಸಗಳ ತನಕ ಕಾದಾಡಿದರು. ಜರ್ಮನಿಯವರ ಕಡೆ ಒಬ್ಬ ಹುದ್ದೇ ದಾರನೂ ಇನ್ನಿಬ್ಬರೂ ಕೊಲೆಯಾದರು; ಮೂರು ಮಂದಿ ಗಾಯಪಟ್ಟರು. ಇವರ ಸಂಗಡಿದ್ದ ಕೆಲವು ಟರ್ಕಿ ಸೈನಿಕರಿಗೂ ಗಾಯಗಳಾದವು.

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರು ಬ್ರಿಟಿಷ್ ಸೈನಿಕರಿಗೋಸ್ಕರ 30 ಮೆಷೀನ್ ಫಿರಂಗಿಗಳನ್ನು ಕಳುಹಿಸಿಕೊಟ್ಟರು. ಜಾರ್ಜ್ ಸಾರ್ವಭೌಮರವರು ಆ ಫಿರಂಗಿಗಳನ್ನು ಪರಾಂಬರಿಸಿ ಮಂತ್ರಿಯವರಿಗೆ ತಮ್ಮ ವಂದನೆಗಳನ್ನು ತಿಳಿಸಿ ರುತ್ತಾರೆ. ಈ ಫಿರಂಗಿಗಳನ್ನು ಫ್ರಾನ್ಸಿಗೆ ರವಾನೆಮಾಡುವರು.

39 ನೇ ಘರ್ವಾಲ್ ಎಂಬ ಹಿಂದುಸ್ಥಾನದ ಸೈನಿಕರ ಪೈಕಿ ಗೋಬರ್ ನೇಗಿ ಎಂಬ ಸಿಪಾಯಿಯ ಪರಾಕ್ರಮವನ್ನು ಮೆಚ್ಚಿ ಆತನಿಗೆ "ವಿಕ್ಟೋರಿಯಾ ಕ್ರಾಸ್" ಎಂಬ ಬಿರುದನ್ನು ಕೊಟ್ಟದ್ದಾರೆ. ಈತನು ಜರ್ಮನಿಯವರ ಕಂದಕಗಳಿಗೆ ಮೊದಲು ನುಗ್ಗಿಹೋಗಿ ಹಿಂದಿನವರಿಗೆ ದಾರಿ ಮಾಡಿಕೊಟ್ಟನು. ಕಡೆಗೆ ಈತನು ಯುದ್ಧದಲ್ಲಿ ಮಡಿದುಹೋದನು.

ಇಟಲಿಯವರು ಏನು ಮಾಡಬೇಕೆಂದಿದ್ದಾರೆಯೋ ಸ್ಪಷ್ಟವಾಗಿ ತಿಳಿಯುವು ದಿಲ್ಲ. ಅವರು ನಮ್ಮ ಪಕ್ಷವನ್ನು ವಹಿಸಿ ಜರ್ಮನಿಯವರ ಮೇಲೆ ಯುದ್ಧಕ್ಕೆ ನಿಲ್ಲುವರೆಂದು ಕೆಲವರು ಹೇಳುತ್ತಾರೆ. ಟ್ರಿಯಸ್ಟ್ ನಗರದಲ್ಲಿ ಜನಗಳು ತಿನ್ನು ವುದಕ್ಕಿಲ್ಲದೆ ಆಸ್ಟ್ರಿಯಾದವರ ಮೇಲೆ ದಂಗೆ ಕೃತ್ಯಗಳನ್ನು ನಡಿಸುತ್ತಿದಾರೆ.

ಒಳದೇಶದ ವೃತ್ತಾಂತಗಳು.

ಈ ದಿನ ಬೆಂಗಳೂರಿನಲ್ಲಿ ಪತ್ರಿಕಾ ಎಡಿಟರುಗಳ ಕೂಟವು ನಡೆಯುವಂತೆ ಏರ್ಪಾಡಾಗಿದೆ

ಕಳೆದ ಸೋಮವಾರ ಮಧ್ಯಾಹ್ನ ಸುಮಾರು 3 ಗಂಟೆಗೆ ನಮ್ಮ ಶ್ರೀಮನ್ ಮಹಾರಾಜರವರು ಮಹಾಮಾತೃಶ್ರೀಯವರ ಸಮೇತ ಮೋಟರಿನಲ್ಲಿ ರಾಜಧಾನಿ ಯಿಂದ ನೀಲಗಿರಿಗೆ ಚಿತ್ತೈಸಿದರು.

ಹರಿಹರದ ಟವನ್‌ಗೆ ನೀರು ಎತ್ತಿ ಒದಗಿಸುವ ಈಗಿನ ಯಂತ್ರವು ಕೆಟ್ಟು ಹೋಗಿರೋಣದರಿಂದ ಸರ್ಕಾರದವರು 3,450 ರೂಪಾಯಿಗೆ ಬೇರೆ ಯಂತ್ರ ವನ್ನು ತರಿಸಬೇಕೆಂದು ಹುಕುಂ ಕೊಟ್ಟಿದಾರೆ.

ಬೆಂಗಳೂರು ಸರ್ ಶೇಷಾದ್ರಿ ಅಯ್ಯರವರ ಮೆಮೋರಿಯಲ್ ಬಂಗಲೆ ಯಲ್ಲಿ ಕಳೆದ ಶನಿವಾರ ನಮ್ಮ ದಿವಾನ್‌ರವರು ಪಬ್ಲಿಕ್ ಸರಸ್ವತೀ ಭಂಡಾರ ವನ್ನೂ ವಾಚಕಶಾಲೆಯನ್ನೂ ಪ್ರಾರಂಭಮಾಡಿದರು.

ಮೈಸೂರು ಮತ್ತು ಹಾಸನ್ ಡಿವಿಜನ್ನುಗಳಲ್ಲಿರುವಂಥಾ ಅಚ್ಚುಕಟ್ಟುಗ ಳನ್ನು ಕೆರೆಗಳ ಕೋಡಿಗಳನ್ನೂ ಎತ್ತರಿಸಿ, ಈ ಬೇಸಗೆಯಲ್ಲಿ ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆ ಕೆಲಸಕ್ಕೆ ಕಾವೇರಿಯಲ್ಲಿ ನೀರನ್ನು ಒದಗಿಸುವ ಏರ್ಪಾಡಿಗಾಗಿ ಸರ್ಕಾರದವರು 66,700 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ರಾಜಧಾನಿಯಲ್ಲಿ ನೀರಿನ ನಲ್ಲಿಗಳನ್ನಿಡಿಸಿಕೊಂಡಿರುವಂಥಾ ಅನೇಕರ ಮನೆ ಗಳಿಗೆ ಇನ್ನೂ ಮೀಟರ್ ಎಂಬ ನೀರು ಅಳೆಯುವ ಯಂತ್ರಗಳನ್ನಿಟ್ಟಿಲ್ಲ. ಸರ್ಕಾರ ದವರು 347 ಮೀಟರುಗಳನ್ನು ಹೊಸದಾಗಿ ಕೊಂಡು ತರಿಸಿ ಅಂಥಾ ಮನೆಗಳಿಗೆ ಇಡಬೇಕೆಂದು ಹೇಳಿ ಅದಕ್ಕಾಗಿ 26,500 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಪ್ರಜೆಗಳಲ್ಲಿ ಯಾರಾದರೂ ಎಮ್ಮೆ ಹಸುಗಳನ್ನು ಸಾಕಿ ಬೆಣ್ಣೆ ತೆಗೆದು ಬಿಕರಿಮಾಡುವಂಥಾ ಹೈನದ ಮನೆ ಮತ್ತು ಕಾರಖಾನೆಗಳನ್ನಿಟ್ಟು ನಡಿಸುವುದಾ ದರೆ ಅಂಥವರಿಗೆ 5,000 ರೂಪಾಯಿ ತನಕ ಸಾಲವನ್ನೂ ಇತರ ರಿಯಾಯಿತಿ ಯನ್ನೂ ಸರ್ಕಾರದವರು ಒದಗಿಸಿ ಪ್ರೋತ್ಸಾಹಮಾಡುವುದಾಗಿ ಹುಕುಂ ಕೊಟ್ಟಿದಾರೆ.

ತುರುವೆಕೆರೆ ಸಬ್ ತಾಲೂಕಿಗೆ ಸೇರಿದ ಕುರಡಿಗೆರೆ ಗ್ರಾಮದಲ್ಲಿ ಒಂದು ಬಾಲ್ಯವಿವಾಹ ನಡೆಯಿತು. ಮದುವೆಯಾದ ಹುಡುಗಿಯ ತಂದೆಯಾದ ಚೋಳೈ ಯ್ಯನಿಗೆ 30 ರೂಪಾಯಿ, ಹುಡುಗನ ತಂದೆ ಚೋಳೈಯನಿಗೆ 20 ರೂಪಾಯಿ, ವಿವಾಹಮಾಡಿಸಿದ ಪುರೋಹಿತ ರಾಮಜೋಯಿಸರಿಗೆ 15 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿದೆ.

ಅರಮನೆಯ ನಾಟಕದ ಕಂಪನಿಯವರು ಕಳೆದ ಶನಿವಾರ ರಾತ್ರಿ ರಾಜಧಾ ನಿಯ ಟೌನ್ ಹಾಲಿನಲ್ಲಿ ವೀರಸಿಂಹ ಚರಿತ್ರೆ ಎಂಬ ನಾಟಕವನ್ನು ಆಡಿದರು. ಹಾಡುಗಾರಿಕೆಯೂ, ಸೀನರಿಗಳೂ ನೇತ್ರಾನಂದಕರವಾಗಿಯೂ, ಮನೋಹರ ವಾಗಿಯೂ ಇದ್ದವು. ನಾಳೆ 8ನೇ ತಾ. ಶನಿವಾರ ಗಯಚರಿತ್ರೆಯನ್ನು ಆಡುವ ರೆಂದು ಕೇಳುತ್ತೇವೆ.

ಹಗಲುಹೊತ್ತಿನಲ್ಲಿ ಕಸಬುಗಳಲ್ಲಿ ಕೆಲಸಮಾಡುವಂಥಾ ಗಂಡಸರಿಗೆ ಬೆಂಗ ಳೂರು ಇನ್‌ಜನಿಯರಿಂಗ್ ಸ್ಕೂಲಿನಲ್ಲಿ ದಿನವಹಿ ಸಾಯಂಕಾಲ 6 ರಿಂದ 7½ ಗಂಟೆಯ ತನಕ ಮರಗೆಲಸ, ಯಂತ್ರ ಡ್ರಾಯಿಂಗ್, ಮೋಟರ್ ವಿಚಾರ, ವಿದ್ಯು ಚ್ಛಕ್ತಿವಿಚಾರ, ಈ ಕಸಬುಗಳನ್ನು ಪುಗಸಟ್ಟೆ ಹೇಳಿಕೊಡುವಂತೆ ಸರ್ಕಾರದವರು ಏರ್ಪಾಡು ಮಾಡಿದಾರೆ.

ಕೋಲಾರ್ ಚಿನ್ನದ ಗಣಿಗಳ ಸಿವಿಲ್ ಆಸ್ಪತ್ರೆಯಲ್ಲಿ ಪ್ರತ್ಯೇಕ ಪ್ರತ್ಯೇಕ ವಾದ ರೋಗಿಗಳಿರುವ ವಾರ್ಡುಗಳನ್ನು ಕಟ್ಟುವುದಕ್ಕೆ 16,700 ರೂಪಾಯಿ, ಚಿಕ್ಕಮಗಳೂರಿನಲ್ಲಿ ಹೊಸ ತಾಲ್ಲೂಕ್ ಕಚೇರಿಯನ್ನು ಕಟ್ಟುವುದಕ್ಕೆ 30,400 ರೂಪಾಯಿ, ಆನೆಕಲ್‌ನಲ್ಲಿ ಹೊಸದಾಗಿ ತಾಲೂಕ್ ಕಚೇರಿಯನ್ನು ಕಟ್ಟಿಸುವು ದಕ್ಕೆ 27,100 ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ.

ಸರ್ಕಾರಿ ಗ್ರಾಂಟು ಪಡೆಯುವ ಸ್ಕೂಲುಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರು ಗವರ್ನ್‌ಮೆಂಟ್ ಲೈಫ್ ಇನ್‌ಷೂರೆನ್ಸ್ ಕಂಪನಿಗೆ ಸೇರಿ ಚಂದಾಕೊಡುತ್ತಾ ಬರಬಹುದೆಂದು ಸರ್ಕಾರದವರು ರಿಯಾಯಿತಿಯನ್ನು ತೋರಿ ಸಿರುತ್ತಾರಷ್ಟೆ. ಅಂಥವರು ಈ ವರುಷ ಡಿಸೆಂಬರ್ ಆಖೈರಿನೊಳಗಾಗಿ ಸೇರಿ ಕೊಳ್ಳತಕ್ಕದ್ದೆಂದು ಮಿಯಾದೆಯನ್ನು ಗೊತ್ತುಮಾಡಿದಾರೆ.

ತರೀಕೆರೆಯ ಪೋಲೀಸಿನವರು ಒಂದು ಕಳುವಿನ ಮೊಕದ್ದಮೆಯಲ್ಲಿ ಪತ್ತೆ ಹಚ್ಚೋಡು ನಡಿಸುವಾಗ್ಗೆ ಸುಮಾರು 34 ಜನರ ಮನೆಗಳಲ್ಲಿ 1908 ನೇ ಅಕ್ಟೋ ಬರ್ ತಾ. 10 ರಲ್ಲಿ ಚಿನ್ನ ಬೆಳ್ಳಿ ಒಡವೆಗಳೂ, ನಾನಾ ಪದಾರ್ಥಗಳೂ, ಬಟ್ಟೆ ಬರೆಗಳೂ ಸಿಕ್ಕಿದ್ದರಿಂದ ಅವುಗಳ ಮಾಲೀಕರ್‍ಯಾರಾದರೂ ಇದ್ದರೆ ಬಂದು ಗುರುತು ಹಿಡಿಯಬಹುದೆಂದು ಕಳೆದ ವಾರದ ಗೆಜೆಟಿನಲ್ಲಿ ಪ್ರಕಟಿಸಿದಾರೆ. ಸುಮಾರು ಏಳು ವರ್ಷಗಳ ಹಿಂದೆ ಸಿಕ್ಕಿರುವ ಈ ಪದಾರ್ಥಗಳ ವಿವರವನ್ನು ಪ್ರಕಟಿಸುವುದಕ್ಕೆ ಇಷ್ಟು ಸಾವಕಾಶವ್ಯಾಕಾಯಿತೋ ತಿಳಿಯಲಿಲ್ಲ.

ನಮ್ಮ ಸರ್ಕಾರದವರು ಹುಡುಗರು ಕೆಟ್ಟುಹೋಗಬಾರದೆಂಬ ಉದ್ದೇಶ ದಿಂದ ಸಣ್ಣ ವಯಸ್ಸಿನವರು ಬೀಡಿ ಸಿಗರೇಟ್ ಸೇದದಂತೆ ಒಂದು ಕಾನೂನ್ ಮಾಡಿ ಜಾರಿಯಲ್ಲಿ ತಂದಿದಾರೆ ಇದು ಎಷ್ಟು ಮಟ್ಟಿಗೆ ಸಾರ್ಥಕವಾಗಿದೆಯೋ ನಮಗೆ ತಿಳಿಯದು ಈಚೆಗೆ ಚಿತ್ರದುರ್ಗದ ಡೆಪ್ಟಿ ಕಮಿಷನರವರು ಈ ಬಾಬಿಗೆ ಒಂದು ವಾರ್ಷಿಕ ರಿಪೋರ್ಟನ್ನು ಬರೆಯಬೇಕೇ ಎಂದು ಕೇಳಿದ್ದಕ್ಕೆ ಸರ್ಕಾರ ದವರು ರಿಪೋರ್ಟನ್ನೂ ಬರೆಯಬೇಕಾದದ್ದಿಲ್ಲವೆಂದು ತಿಳಿಸಿರುವಂತೆ ವರ್ತಮಾ ನವಿದೆ. ಹಾಗಾದರೆ ಈ ಕಾನೂನನ್ನು ನಮ್ಮ ಸರ್ಕಾರದವರು ಮಾಡಿರುವುದು ರೂಢಿಗುವುದಕ್ಕಲ್ಲವೇ ಎಂಬ ಪ್ರಶ್ನೆ ಹುಟ್ಟುತ್ತದೆ.

ಮೈಸೂರು-ಅರಸೀಕೆರೆ ರೈಲ್ ರಸ್ತೆಗೆ ಬೇಕಾಗುವ ಜಮೀನುಗಳನ್ನು ಸರ್ಕಾ ರಕ್ಕೆ ಕೊಂಡುಕೊಳ್ಳುವ ಕೆಲಸಕ್ಕೆ ನೇಮಕವಾಗಿರುವ ಅ|| ಕಮಿಷನರ್ ಮಿ|| ಕೆ. ಮೈಲಾರಿರಾಯರನ್ನು ಸರ್ಕಾರದವರು ಶ್ರೀಮದ್ಯುವರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿ ನೇಮಕ ಮಾಡಿರುತ್ತಾರೆ. ಮಿ|| ಕೆ ಮೈಲಾರಿರಾಯರು ಮುನ್‌ಸಿಫರಾಗಿದ್ದು ಸಿವಿಲ್ ವ್ಯಾಜ್ಯಗಳಲ್ಲೂ, ಅ|| ಕಮಿಷನ್‌ರಾಗಿ ರೆವಿನ್ಯೂ ಮತ್ತು ಕ್ರಿಮಿನಲ್ ಬಾಬುಗಳಲ್ಲೂ, ಗವರ್ನ್‌ಮೆಂಟಿನಲ್ಲಿ ಲೆಜಿಸ್ಲೆಟಿವ್ ಸೆಕ್ರೆಟರಿ ಯಾಗಿದ್ದು ಕಾನೂನುಗಳ ರಚನೆಯ ವಿಚಾರದಲ್ಲೂ ವಿಶೇಷ ಅನುಭವವೂ ಪರಿಶ್ರ ಮವೂ ಉಳ್ಳವರಾದದ್ದರಿಂದ ಈಗಿನ ಹೊಸ ಕೆಲಸದಲ್ಲಿ ಅವರು ಶ್ರೀಮದ್ಯುವ ರಾಜರವರಿಗೆ ಸರ್ಕಾರಿ ಕೆಲಸವನ್ನು ನಿರ್ವಹಿಸುವುದರಲ್ಲಿ ಸಹಾಯ ಮಾಡಬಲ್ಲ ರೆಂದು ನಿರೀಕ್ಷಿಸಬಹುದಾಗಿದೆ.

ಒಬ್ಬ ದಾತೃದಾರರಿಂದ.—ಚಾಮರಾಜನಗರದ ತಾಲೂಕು ನಂಜದೇವನ ಪುರದಲ್ಲಿ ಪ್ರಜಾಹಿತೈಷಿಗಳೆಂದು ಹೆಸರು ಪಡೆದಿದ್ದ ನಮ್ಮ ಏಜಂಟ್ ರಾಮಣ್ಣ ನವರು ಕಳೆದ 15 ನೇ ತಾ. ಸಾಯಂಕಾಲ ಕಾಲವಾದರೆಂದು ತಿಳಿಸಲು ವಿಷಾದ ವಾಗುತ್ತೆ. ಇವರಿಗೆ ಕೇವಲ ಪೂರ್ಣವಯಸ್ಸಾಗಿತ್ತು. ಇವರು ಧರ್ಮಛತ್ರ ದೇವಾ ಲಯಗಳನ್ನು ಕಟ್ಟಿಸಿ ಅನೇಕ ಬಡಬಗ್ಗರನ್ನು ಉದ್ಧಾರಮಾಡಿರುವುದು ಇವರ ಹೆಸರನ್ನು ಶಾಶ್ವತಪಡಿಸುತ್ತಾ ಇವೆ ಇಲ್ಲಿ ಕೆಲವು ದಿವಸಗಳ ಕೆಳಗೆ ಕ್ಷಾಮದ ಅವಸ್ಥೆ ಬಂದಿದ್ದಾಗ ಒಬ್ಬರು ವೈಶ್ಯ ಮಹನೀಯರು ಮತ್ತು ಒಬ್ಬರು ಉಪ್ಪಲಿ ಗರ ಯಜಮಾನರು ಬಡಬಗ್ಗರಿಗೆ ದವಸಧಾನ್ಯ ಬಟ್ಟೆಬರೆ ದಾನಮಾಡಿದಾಗ ಅವ ರಂತೆ ಇವರು ಅನೇಕ ಪಲ್ಲ ಛತ್ರವನ್ನು ಧರ್ಮಮಾಡಿರುತ್ತಾರೆ. ಈ ಸರಹದ್ದಿನಲ್ಲಿ ಇವರಂತೆ ಭೂತದಯೆ ಪರೋಪಕಾರಿಗಳು ಮಹನೀಯರು ದೊಡ್ಡಂಗಡಿ ವೆಂಕಟ ಶೆಟ್ಟರು ವಿನಹ ಮತ್ತಾರೂ ಇರಲಿಲ್ಲ.

ಬೊಂಬಾಯಿ ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂ ರೆನ್ಸ್ ಕಂಪನಿಯವರು ಕಳೆದ ತಿಂಗಳು 9 ನೇ ತಾ. ಬೊಂಬಾಯಿ ಓರಿಯಂ ಟಲ್ ಕಟ್ಟಡದಲ್ಲಿ ನಡಿಸಿದ ತಮ್ಮ ನಲವತ್ತನೇ ವರ್ಷದ ಮೀಟಿಂಗಿನ ವಾರ್ಷಿಕ ರಿಪೋರ್ಟನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಈ ವರ್ಷ ಹೊಸದಾಗಿ ಈ ಕಂಪನಿಗೆ 5,546 ವಿಮೇದಾರರುಗಳು 75 ಲಕ್ಷ ರೂಪಾಯಿಗಳಷ್ಟು ಇನ್‌ಷೂರು ಮಾಡಿರುತ್ತಾರೆ. ಮೃತಪಟ್ಟವರಿಗೂ, ನಿಯಮಿತ ವರ್ಷಗಳು ಕಳೆದುಹೋದ ವಿಮೇದಾರರುಗಳಿಗೂ ಕೊಟ್ಟಮೇಲೆ ಜಾಸ್ತಿ 38 ಲಕ್ಷ ರೂಪಾಯಿನಷ್ಟು ಹಿಂದಿನ ಬಂಡವಾಳವಾದ 4,44,61,888 ರೂಪಾಯಿಗಳಿಗೆ ಸೇರಿಸಿರುವುದರಿಂದ ಕಂಪನಿ ಯ ಬಂಡವಾಳವು ಈಗ 5 ಕೋಟಿ ರೂಪಾಯಿಗಳಷ್ಟು ಆಗಿರುತ್ತದೆ ಕಂಪನಿಯ ವಿಮೇದಾರರ ಪೈಕಿ ಮೃತಪಟ್ಟವರ ಸಂಖ್ಯೆಯು ಕಳೆದ ಸಾಲಿಗಿಂತಲೂ ಚಾಲ್ತಿ ಸಾಲಿನಲ್ಲಿ ಬಹಳ ಕಡಮೆ. ಪ್ರತಿ ಒಬ್ಬರೂ ಈ ಕಂಪನಿಯಲ್ಲಿ ಬಹಳ ಭರವಸೆ, ನಂಬಿಕೆಗಳನ್ನು ಇಟ್ಟು ಇರುತ್ತಾರೆ ಇದು ಮುಂದೆ ಇನ್ನೂ ಒಳ್ಳೇ ಅಭಿವೃದ್ಧಿ ಸ್ಥಿತಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915ನೇ ಇಸವಿ ಏಪ್ರೆಲ್ 32 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	......	ರೂ. 10,00,000
,, (2) ರಿಜರ್ವ್ ಫಂಡು	.....	,, 25,000
,, (3) ಡಿಪಾಜಿಟ್ಟುಗಳು	.....	,, 26,86,308
,, (4) ಇತರೆ	.....	,, 57,579
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 37,68,887

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	514,601
,, (2) ಖಾತೆ ಮತ್ತು ಇತರ ಸಾಲಗಳು	,,	24,02,239
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	,,	394,747
,, (4) ಇನ್ವೆಸ್ಟ್‌ಮೆಂಟುಗಳು	,,	267,277
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	160,675
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು ..	,,	15,724
,, (7) ಇತರೆ	,,	13,624
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	37,68,887

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಬೌರಿಂಗ್‌ಪೇಟೆಯಲ್ಲಿ ನಡೆಯುವ ಪ್ರದರ್ಶನವು.

ಪ್ರದರ್ಶನಾರಂಭ.—ಈ ಪ್ರದರ್ಶನವು ಜೂನ್ 3 ನೇ ತಾರೀಖಿನಲ್ಲಿ ಶುರುವಾಗಿ 5 ನೇ ತಾರೀಖು ಸಾಯಂಕಾಲದ ವರೆಗೂ ನಡೆಯುತ್ತದೆ.

ಪ್ರದರ್ಶನದ ಉದ್ದೇಶ.—ಸಮಸ್ತರಿಗೂ ತಿಳುವಳಿಕೆಯನ್ನು ಉಂಟುಮಾಡುವುದು ಮತ್ತು ರೈತರಿಗೂ, ಶಿಲ್ಪಗಾರರಿಗೂ, ಇತರ ಕೈಗಾರಿಕೆ ಕೆಲಸದವರಿಗೂ ಅವಶ್ಯಕವಾಗಿ ತಿಳಿಯಬೇಕಾದಂಥಾ ಪದಾರ್ಥಗಳನ್ನೂ, ಯಂತ್ರ ವಗೈರೆಗಳನ್ನೂ ಒಂದು ಕಡೆ ಸೇರಿಸಿ ಅವುಗಳನ್ನು ಉಪಯೋಗಿಸುವ ವಿಧಾನವನ್ನು ತಿಳಿಯಪಡಿಸುವುದು ಕಮಿಟಿಯವರ ಮುಖ್ಯ ಉದ್ದೇಶವಾಗಿದೆ. ಪ್ರದರ್ಶನಕ್ಕೆ ಮಾತ್ರ ಒಂದೊಂದು ಸಾಮಾನುಗಳನ್ನು ತಂದರೆ ನೋಟಕರಿಗೆ ಎಲ್ಲಾ ವಿಷಯವೂ ತಿಳಿಯದೇ ಹೋಗಬಹುದಾದುದರಿಂದ ವ್ಯಾಪಾರಮಾಡುವುದಕ್ಕೂ ಕೂಡ ಸಾಮಾನುಗಳನ್ನು ಪ್ರದರ್ಶನಕ್ಕಾಗಿ ತರಬಹುದು.—ಜಾನ್‌ವಾರುಗಳನ್ನು ಒಳ್ಳೇ ಸ್ಥಿತಿಗೆ ತಂದು ಅವುಗಳಲ್ಲಿ ಶ್ರೇಷ್ಠವಾದುವುಗಳು ಹೇಗೆ ಇರುವುವೆಂಬುದನ್ನು ಜನರಿಗೆ ತಿಳಿಯಪಡಿಸುವುದಕ್ಕೋಸ್ಕರ ದನಗಳು, ಆಡು ಮತ್ತು ಮೇಕೆ, ಕೋಳಿ ವಗೈರೇವು, ನಾಯಿ ಮತ್ತು ಕುದುರೆ ತಳಿಗಳ ಪ್ರದರ್ಶನವೂ ಕೂಡ ನಡೆಯುವುದು.

ವಾಯಿದೆ.—ವಸ್ತುಗಳನ್ನು ಪ್ರದರ್ಶಿಸಲು ಅಪೇಕ್ಷಿಸುವಂಥವರು ಪ್ರದರ್ಶನವು ಶುರುವಾಗುವುದಕ್ಕೆ 15 ದಿವಸ ಮುಂಚಿತವಾಗಿಯೇ ಕಮಿಟಿಯ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು. ಹಾಗೆ ಬರೆಯುವಾಗ್ಗೆ ಪ್ರದರ್ಶಕರ ಅಡ್ರೆಸ್ ವಗೈರೆ ತಪಸೀಲ್ ನಮೂದು ಮಾಡಬೇಕು. ಕೋಲಾರ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಮತ್ತು ಹೊರಗಡೆಯಿಂದಲೂ ಸಾಮಾನುಗಳನ್ನು ಪ್ರದರ್ಶನಕ್ಕೆ ಕಳುಹಬಹುದು.

ಹಣ್ಣು, ತರಕಾರಿ ಮತ್ತು ಹುವ್ವುಗಳ ಪ್ರದರ್ಶನವು ಶುರು ಅಂದರೆ 3 ನೇ ತಾರೀಖಿನಲ್ಲಿ ಜರುಗಿ ಮಾರನೇ ದಿವಸ ಆಖೈರು ಆಗುತ್ತದೆ.—ಉಳುವುದರಲ್ಲೂ, ನೆಯಿಗೆಯಲ್ಲೂ, ದರ್ಜಿ ಕೆಲಸದಲ್ಲೂ, ಕುಂಬಾರ ಕೆಲಸದಲ್ಲೂ ಪಂದ್ಯಗಳನ್ನು ಇಡುವುದಕ್ಕೆ ಪ್ರದರ್ಶನ ಜಾಗದಲ್ಲಿ ಅಥವಾ ಸಮೀಪದಲ್ಲಿ ಏರ್ಪಾಡು ಮಾಡಲ್ಪಡುವುದು. ಹಳೇತರವಾದ ಮತ್ತು ಹೊಸ ನಮೂನೆಯ ನೇಗಿಲುಗಳಿಂದ ಉಳುವವನ್ನೂ, ಮಗ್ಗಗಳಿಂದ ನೆಯ್ಯುವುದನ್ನೂ ಪ್ರತ್ಯಕ್ಷವಾಗಿ ಪ್ರದರ್ಶಿಸಲು ಏರ್ಪಾಡು ನಡೆಯುತ್ತಿವೆ. ಉಳುವೆಯ ಎತ್ತುಗಳನ್ನು ಪಂಚಾಯಿತರು ಅಪೇಕ್ಷಿಸಿದಲ್ಲಿ ನೇಗಿಲಿಗೆ ಕಟ್ಟಿ ಉಳುವುದೂ, ಭಾರವನ್ನು ಎಳೆಯುವುದೂ ಮುಂತಾದ ರೀತಿಯಾಗಿ ಪರೀಕ್ಷೆ ಮಾಡಬಹುದು.

ಜಾನ್‌ವಾರುಗಳ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದರಲ್ಲೂ, ಕೈಗಾರಿಕೆ ಮತ್ತು ವ್ಯವಸಾಯವನ್ನು ಊರ್ಜಿತಪಡಿಸುವುದರಲ್ಲೂ ಆಸಕ್ತಿಯುಳ್ಳ ದೊಡ್ಡ ಮನುಷ್ಯರುಗಳಾಗಲೀ, ಸಂಘಗಳಾಗಲೀ ಬಹುಮಾನಗಳನ್ನು ಕೊಡುವುದಕ್ಕೆ ದ್ರವ್ಯ ಸಹಾಯ ಮಾಡಿದರೆ ಕಮಿಟಿಯವರು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿಕೊಳ್ಳುತ್ತಾರೆ. ಪ್ರದರ್ಶನವನ್ನು ನೋಡಲು ಬರುವ ಪ್ರತಿಯೊಂದು ಆಸಾಮಿಗೂ ತಲೆ 1 ಕ್ಕೆ 2 ಆಣೆಯಂತೆ ಫೀ ವಸೂಲ್ಮಾಡಲಾಗುತ್ತೆ. 12 ವರುಷಗಳಿಗೆ ಒಳಪಟ್ಟ ಹುಡುಗರಿಗೆ ಮಾತ್ರ ಅರ್ಧ ಛಾರ್ಜು.

ಪ್ರದರ್ಶನದ ಪ್ರಶಂಸೆಯ ವಿಷಯಗಳು.—ವ್ಯವಸಾಯ ಕೈಗಾರಿಕೆ, ಪ್ರಜೆಗಳ ಆರೋಗ್ಯ, ಪರಸ್ಪರಸಹಾಯ ಸಂಘಗಳು ಮುಂತಾದ ವಿಷಯಗಳ ಮೇಲೆ ಅನುಭವಸ್ಥರಾದ ದೊಡ್ಡ ಮನುಷ್ಯರಿಂದ ಕನ್ನಡದಲ್ಲಿ ಉಪನ್ಯಾಸಗಳು ಪ್ರದರ್ಶನ ಕಾಲದಲ್ಲಿ ಕೊಡಲ್ಪಡುತ್ತವೆ. ವಿಧವಿಧವಾದ ತಮಾಷೆ ಆಟಗಳೂ, ನೋಟಗಳೂ ನಡೆಯಲು ಏರ್ಪಾಡು ಮಾಡಲ್ಪಡುತ್ತದೆ.—ಈ ಪ್ರದರ್ಶನ ಕಾಲದಲ್ಲಿ ಶ್ರೀ ಕೋದಂಡರಾಮಸ್ವಾಮಿಯವರ ಜಾತ್ರೆಯು ನಡೆಯುವುದರಿಂದ ವಿಶೇಷ ಜನರು ಸೇರಲು ಅವಕಾಶವಾಗಿದೆ. ಪ್ರದರ್ಶನಕ್ಕೆ ಕೋಲಾರದ ಚಿನ್ನದ ಗಣಿಯು ಸಮೀಪವಾಗಿ, ಗಣಿಯ ಯೂರೋಪಿಯನ್ ಮತ್ತು ನಮ್ಮ ದೇಶದ ವಿಶೇಷ ಪ್ರಜೆಗಳು ಬಂದು ಸೇರುತ್ತಾರೆ. ಪ್ರದರ್ಶನದ ಜಾಗವೂ ಕೂಡ ರೈಲ್ವೇ ಸ್ಟೇಷನ್ನಿಗೆ 1 ಫರಲಾಂಗಿನೊಳಗೆ ಅತಿ ಸಮೀಪವಾಗಿ ಇರುತ್ತದೆ. ಈ ಕಾರಣಗಳಿಂದ ಪ್ರದರ್ಶಕರ ಸಾಮಾನುಗಳಿಗೂ ಜಾನುವಾರುಗಳಿಗೂ ಒಳ್ಳೆಯ ವ್ಯಾಪಾರ ಕಾಲವಾಗಿದೆ.

ಎಲ್ಲಾ ಕಾಗದಪತ್ರಗಳನ್ನೂ "ಕೋಲಾರ್ ಡಿಸ್ಟ್ರಿಕ್ಟು ಕೈಗಾರಿಕೆ, ವ್ಯವಸಾಯ, ಹಣ್ಣು, ಹುವ್ವು ಮತ್ತು ರಾಸುಗಳ ಪ್ರದರ್ಶನದ ಸೆಕ್ರೆಟರಿಯವರಿಗೆ, ಬೌರಿಂಗ್‌ಪೇಟೆಗೆ" ಎಂದು ಬರೆದುಕೊಳ್ಳಬೇಕು.

ಎಂ. ಜಿ. ರಾಮರಾಯರು, ಆ. ಸೆಕ್ರೆಟರಿ

[ಮೇಲ್ಕಂಡ ಪ್ರದರ್ಶನದಲ್ಲಿ ಬಹುಮಾನ ಕೊಡಲ್ಪಡುವ ವಸ್ತು ಮುಂತಾದವುಗಳ ಹೆಸರುಗಳನ್ನೂ, ಬಹುಮಾನಗಳ ಬೆಲೆಗಳನ್ನೂ ಕಾಣಿಸಿರುವ ಪಟ್ಟಿಗಳನ್ನು ಸೆಕ್ರೆಟರಿಯವರು ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಸ್ಥಳ ಸಂಕೋಚದಿಂದ ಅವುಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದು ವಿಷಾದಿಸುತ್ತೇವೆ.—ಎಡಿ.]

ಮೈಸೂರು ಗೆಜಿಟಿನ ಸಂಗ್ರಹ.

ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿಗೆ ಡಾ|| ಎಲ್. ಪಿ. ಪ್ಲೋಕ್ಸ್‌ರವರನ್ನೂ, ಶ್ರೀನಿವಾಸಪುರದ ತಾಲ್ಲೂಕ್ ಬೋರ್ಡಿಗೆ ಮ|| ಮಹಮದ್‌ಗಫೂರ್ ಸಾಹೇಬರನ್ನೂ, ಮೆಂಬರಾಗಿ ನೇಮಿಸಿದೆ.

ಸಬ್ ರೆಜಿಸ್ಟ್ರಾರ್‌ಗಳಾದ ಮ|| ಎಂ. ರಾಘವೇಂದ್ರರಾಯರು ಕೋಲಾರ್ ತಾಲ್ಲೂಕ್ ಬೋರ್ಡಿಗೂ, ಮ|| ಎಸ್. ಎ. ಸುಬ್ರಹ್ಮಣ್ಯ ಅಯ್ಯರವರು ಬೌರಿಂಗ್‌ಪೇಟೆ ತಾಲ್ಲೂಕ್ ಬೋರ್ಡಿಗೂ, ಮ|| ಚನ್ನಮಲ್ಲಪ್ಪಶೆಟ್ಟರವರು ಮಾಲೂರು ತಾಲ್ಲೂಕ್ ಬೋರ್ಡಿಗೂ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಕೋಲಾರ್ ಡೆಪ್ಯುಟಿ ಕಮಿಷನರ್ ಮಿ|| ಸಿ. ಎಫ್. ಬೌರಿಂಗ್‌ಯವರಿಗೆ ಮೇ ತಾ. 1ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನಂಜನಗೂಡು ಸಬ್ ಡಿವಿಜನ್ ಆಫೀಸರ್ ಮ|| ನಗರ್ ಸುಬ್ಬರಾಯರು ಕೋಲಾರ್ ಡೆಪ್ಯುಟಿ ಕಮಿಷನರಾಗಿಯೂ, ಅ|| ಕಮಿಷನರ್ ಮ|| ವೈ. ವಿ. ಕೃಷ್ಣಮೂರ್ತಿಯವರು ನಂಜನಗೂಡು ಸಬ್ ಡಿವಿಜನ್ ಆಫೀಸರಾಗಿಯೂ, ಪ್ರೊ|| ಅ|| ಕಮಿಷನರ್ ಮಿ|| ಜಿ. ಎಂ. ಮೋಕ್ರಿಯವರು ಮೈಸೂರು ಡಿಸ್ಟ್ರಿಕ್ಟ್ ಖಜಾನೆ ಆಫೀಸರಾಗಿಯೂ ಇರತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮ|| ಸಿ. ಕೃಷ್ಣಮನಾಯ್ಡುಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳೂ ಇಪ್ಪತ್ತೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ತಾಲ್ಲೂಕು ಅಮಲ್ದಾರ್ ಮ|| ಆರ್. ಎ. ನರಸಿಂಹಯ್ಯಂಗಾರ್ರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿಯೂ, ಸಬ್ ರೆಜಿಸ್ಟ್ರಾರ್ ಮ|| ಜಿ. ಶ್ರೀಕಂಠರಾಯರು ಮೈಸೂರು ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ.

ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಮಹಮದ್ ಓಬೇದುಲ್ಲಾರವರಿಗೆ ಏಪ್ರೆಲ್ ತಾ 27 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಎಕ್ಸೈಸ್ ಆಫೀಸರ್ ಮ|| ಡಿ. ಶ್ರೀನಿವಾಸಯ್ಯಂಗಾರ್ರು ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು.

ಸ್ಪೆಷಲಿಸ್ಟ್ ಡಾ|| ಎಸ್. ಬಿ. ಮೈಲಪ್ಪಗನಾರವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ವಾರ ಜಾಸ್ತಿ ಮಾಡಿದೆ.

ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಮಿ|| ಸಿ. ಎಚ್. ಯೇಟ್ಸ್‌ರವರಿಗೆ ಏಪ್ರೆಲ್ ತಾ. 17 ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಡಿ. ಬಿ. ರಾಮಚಂದ್ರ ಮೊದಲಿಯಾರ್ರು ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು.

ಪ್ರೊ|| ಅ|| ಕಮಿಷನರ್ ಮ|| ಪಿ. ಗೋಪಾಲರಾಜೆ ಅರಸಿನವರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗೀ ಹುಕುಂ ಮಾಡಿದೆ:—ಮ|| ಎಸ್. ಧರ್ಮರಾಯರನ್ನು ತೀರ್ಥಹಳ್ಳಿಯಿಂದ ಕುಂಕೂರಿಗೆ, ಮ|| ಎಸ್. ಶ್ರೀನಿವಾಸಯ್ಯಂಗಾರ್ರನ್ನು ತುಮಕೂರಿಂದ ತೀರ್ಥಹಳ್ಳಿಗೆ, ಮ|| ಎಚ್. ಪಿ. ಗಂಗಾಧರಪ್ಪನವರನ್ನು ಮದ್ದಗಿರಿಯಿಂದ ನಗರಕ್ಕೆ, ಮಿ|| ಎಸ್. ಮೊಹಿಯುದ್ದೀನ್ ಷರೀಫ್‌ರವರನ್ನು ನಗರದಿಂದ ಮದ್ದಗಿರಿಗೆ.

ಬೇಲೂರ್ ತಾಲ್ಲೂಕು ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿರುವ ಮ|| ಜಿ. ನಾರಾಯಣಯ್ಯನವರಿಗೆ ಬ್ರೀಚ್ ಆಫ್ ಕಂಟ್ರ್ಯಾಕ್ಟ್ ಆಕ್ಟಿನ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತು ಮಾಡುವ ಅಧಿಕಾರ ವಹಿಸಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜನ್ನು ಅ|| ಕಮಿಷನರ್ ಮ|| ಎಂ. ಶ್ರೀನಿವಾಸಮೂರ್ತಿಯವರು ಮಿ|| ಕೆ. ಚಾಂಡಿಯವರಿಂದ ಏಪ್ರೆಲ್ ತಾ. 12 ರಲ್ಲಿ ವಹಿಸಿಕೊಂಡಿರುತ್ತಾರೆ.

ಮ|| ಗಳಾದ ಎಸ್. ಕೆ. ರಾಜಗೋಪಾಲ ಅಯ್ಯರ್, ಕೆ. ಗುಂಡಪ್ಪ, ಎಚ್. ರಂಗಚಾರ್, ಈ ಮೂವರನ್ನೂ ಸರ್ಕಾರದ ರೈಲ್ವೆ ಇಲಾಖೆಯಲ್ಲಿ ಟ್ರ್ಯಾಫಿಕ್ ಪ್ರೊಬೇಷನರುಗಳಾಗಿ ನೇಮಿಸಿರುತ್ತಾರೆ.

ಕೊಪ್ಪದ ತಾಲ್ಲೂಕ್ ಅಮಲ್ದಾರ್ ಮಿ|| ಎಂ. ಅಬ್ದುಲ್ ಹಕ್‌ಯವರಿಗೆ ಏಪ್ರೆಲ್ ತಾ. 23ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶೃಂಗೇರಿ ಡೆಪ್ಯುಟಿ ಅಮಲ್ದಾರ್ ಮ|| ಸಿ. ಎನ್. ಗರುಡಯ್ಯಂಗಾರ್ರು ಕೊಪ್ಪ ತಾಲ್ಲೂಕ್ ಛಾರ್ಜನ್ನೂ ವಹಿಸತಕ್ಕದ್ದು.

ಮಾಲೂರು ತಾಲ್ಲೂಕು ಅಮಲ್ದಾರ್ ಮಿ|| ಎಸ್. ರೂಬೆನ್‌ರವರಿಗೆ ಏಪ್ರೆಲ್ ತಾ. 19ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಬೌರಿಂಗ್‌ಪೇಟೆ ತಾಲ್ಲೂಕು ಶಿರಸ್ತೇದಾರ್ ಮ|| ಎಂ. ಎಸ್. ನಾರಾಯಣರಾಯರು ಮಾಲೂರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಚಿತ್ರದುರ್ಗದ ತಾಲ್ಲೂಕು ಅಮಲ್ದಾರ್ ಮ|| ಎಂ. ಕೇಶವಯ್ಯನವರಿಗೆ ಮೇ ತಾ 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸಿನ ಹೆಡ್ ಅಕೌಂಟೆಂಟ್ ಮ|| ವಿ. ಗೋಪಾಲರಾಯರು ಆ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಸರ್ಕಾರದ ರಿಪೋರ್ಟುಗಳೂ, ಹುಕುಮುಗಳೂ.

ವರ್ಧಂತಿಯ ಏರ್ಪಾಡು.—ನಮ್ಮ ಮಹಾರಾಜರವರ ವರ್ಷವರ್ಧಂತಿ ಉತ್ಸವಗಳು ಈ ಸಲ ಜೂನ್ ತಾ 23 ರಲ್ಲಿ ನೆರವೇರಬೇಕಾಗಿರೋಣದರಿಂದ ಅದಕ್ಕಾಗಿ ಹೊರಗಿನಿಂದ ರಾಜಧಾನಿಗೆ ಬರುವಂಥಾ ದೇಶೀಯ ಅತಿಥಿಗಳ ಸತ್ಕಾರಕ್ಕೆ ಮ|| ಬಿ. ನಾರಾಯಣಸ್ವಾಮಯ್ಯಂಗಾರ್ರನ್ನು ಸ್ಪೆಷಲ್ ಡ್ಯೂಟಿ ಆಫೀಸರಾಗಿದ್ದು ಎಲ್ಲಾ ಏರ್ಪಾಡುಗಳನ್ನು ನೋಡಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಅತಿಥಿಗಳಾಗಿ ಬರತಕ್ಕವರು ಇಳಿಯುವುದಕ್ಕೆ ಸ್ಥಳವೇ ಮೊದಲಾದ ಎಲ್ಲಾ ವಿಚಾರಗಳನ್ನೂ ಅವರಿಗೆ ಬರೆದು ಗೊತ್ತುಮಾಡಿಕೊಳ್ಳಬಹುದು.

ಮಠಾಧಿಪತ್ಯ.—ಟಿ. ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಶ್ರೀ ವ್ಯಾಸರಾಯಸ್ವಾಮಿಗಳ ಮಠದ ಶ್ರೀ ಸ್ವಾಮಿಗಳವರು ವೇ|| ರಾಮಾಚಾರ್ಯರಿಗೆ ಆಶ್ರಮವನ್ನು ದಯಪಾಲಿಸಿ, ಅವರು ಶ್ರೀಮದ್ವಿದ್ಯಾವಾರಿಧಿ ತೀರ್ಥಪಾದಂಗಳವರು ಎಂಬ ಅಂಕಿತದಿಂದ ಮಠದಲ್ಲಿ ತಮ್ಮ ಉತ್ತರಾಧಿಕಾರವನ್ನು ನಡಿಸಿಕೊಂಡು ಬರುತ್ತಾರೆಂದೂ, ಅವರು ಪೀಠವನ್ನಲಂಕರಿಸಲು ಅತ್ಯಂತ ಸಮರ್ಥರಾಗಿದ್ದಾರೆಂದೂ, ಈ ಏರ್ಪಾಡು ಮಠದ ಶಿಷ್ಯರಿಗೆಲ್ಲಾ ಒಪ್ಪಿತವಾಗಿದೆಯೆಂದೂ ಮೈಸೂರು ಡೆಪ್ಯುಟಿ ಕಮಿಷನರವರಿಗೆ ಶ್ರೀಮುಖವನ್ನು ಕಳುಹಿಸಿದರು. ಡೆಪ್ಯುಟಿ ಕಮಿಷನರವರು ಆ ಶ್ರೀಮುಖವನ್ನೇ ಇಟ್ಟು ಗವರ್ನ್‌ಮೆಂಟಿಗೆ ರಿಪೋರ್ಟ್ ಮಾಡಿದ್ದರ ಮೇಲೆ ಸರ್ಕಾರದವರು ಅದಕ್ಕೆ ಸಮ್ಮತಿಪಟ್ಟು ಆ ರೀತಿ ಸ್ಯಾಂಕ್ಷನ್ ಮಾಡಿರುತ್ತಾರೆ.

ವ್ಯವಸಾಯದ ಬ್ಯಾಂಕುಗಳು.—ಗವರ್ನ್‌ಮೆಂಟಿನವರು ಏರ್ಪಾಡು ಮಾಡಿದ್ದ ವ್ಯವಸಾಯದ ಬ್ಯಾಂಕುಗಳೆಲ್ಲಾ ಕಣ್ಣು ಮುಚ್ಚಿಕೊಂಡ ಹಾಗಾಯಿತು. ಆ ಪೈಕಿ ಎರಡು ಬ್ಯಾಂಕುಗಳೇನೋ ತಲೆಯೆತ್ತಿಕೊಳ್ಳುತ್ತಿರುವವು. ಶ್ರೀರಂಗಪಟ್ಟಣದಲ್ಲಿರುವ ಪಾಲಹಳ್ಳಿ ವ್ಯವಸಾಯದ ಬ್ಯಾಂಕಿನವರೂ, ಮಾಲೂರು ತಾಲ್ಲೂಕಿನಲ್ಲಿರುವ ಹೊಂಗೇನಹಳ್ಳಿ ಬ್ಯಾಂಕಿನವರೂ ಸರ್ಕಾರದಿಂದ ಪಡೆದಿದ್ದ ಸಾಲವನ್ನೆಲ್ಲಾ ತೀರಿಸಿದ್ದಲ್ಲದೆ ಅಲ್ಪ ಸ್ವಲ್ಪ ಮೂಲಧನವನ್ನೂ ಕೂಡಿಸಿಕೊಂಡು ಲೇವಾದೇವಿ ಮಾಡುತ್ತಿದ್ದಾರೆ. ಇನ್ನೂ 19 ಬ್ಯಾಂಕುಗಳು ಸರ್ಕಾರಕ್ಕೆ 59,700 ಚಿಲ್ಲರೆ ರೂಪಾಯಿನ ಸಾಲ ತೀರಿಸಬೇಕಾಗಿದೆ. ಡೆಪ್ಯುಟಿ ಕಮಿಷನರುಗಳು ಈ ಬಾಕಿಗಳನ್ನು ವಸೂಲ್ಮಾಡುವ ಭಾಗದಲ್ಲಿ ಮುತುವರ್ಜಿ ವಹಿಸಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ.

ಟಾಂಗಾ ಕುದುರೆಗಳು.—ಕಳೆದ ಸಾಲಿನಲ್ಲಿ ಪೋಲೀಸ್ ರೆಗ್ಯುಲೇಷನ್ ಅನುಸರಿಸಿ ಇಬ್ಬರ ಮೇಲೆ ಮೊಕದ್ದಮೆ ತರಲಾಯಿತು. ಅವರಿಬ್ಬರಿಗೂ ಕೋರ್ಟಿನಲ್ಲಿ ಶಿಕ್ಷೆ ವಿಧಿಸಲ್ಪಟ್ಟಿದೆ. ಬಾಡಿಗೆ ಗಾಡಿಗಳಿಗೆ ಕಟ್ಟುವ ಕುದುರೆಗಳೂ ಎತ್ತುಗಳೂ ಸಂಸ್ಥಾನಾದ್ಯಂತ ತುಂಬಾ ತೃಪ್ತಿಕರವಾಗಿರಬೇಕು; ಹಾಗಿಲ್ಲದಿದ್ದರೆ ಪೋಲೀಸಿನವರು ಕಳೆದ ಸಾಲಿನಲ್ಲಿ ತಮ್ಮ ಕರ್ತವ್ಯವನ್ನು ಲೋಪಮಾಡಿರಬೇಕು. ಈ ಪೈಕಿ ಎರಡನೆಯ ಭಾಗವೇ ನಿಜವಾದದ್ದೆಂದು ನಮಗೆ ತೋರುತ್ತದೆ. ಅನೇಕ ಸ್ಥಳಗಳಲ್ಲಿ ಈ ಮೂಗು ಪ್ರಾಣಿಗಳನ್ನು ಬಹಳವಾಗಿ ಹಿಂಸೆಪಡಿಸುತ್ತಾರೆ. ಗಾಯಪಟ್ಟೋ ಅಂಗಶಕ್ತಿಹೀನವಾಗಿಯೋ ಇರುವಂಥಾ ಅನೇಕ ಪ್ರಾಣಿಗಳನ್ನು ಗಾಡಿಗಳಿಗೆ ಕಟ್ಟಿ ದುಡಿಸಿ ಸಂಕಟಪಡಿಸುವರು. ಅಂಥವರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸುವುದಕ್ಕೆ ಪೋಲೀಸಿನವರಿಗೆ ಸರ್ಕಾರದವರು ಅಧಿಕಾರಕೊಟ್ಟಿದ್ದರೂ ಅವರು ತಮ್ಮ ಕರ್ತವ್ಯವನ್ನು ನಡಿಸದೆ ಆಲಸ್ಯಮಾಡುತ್ತಿರುವುದೂ, ಸರ್ಕಾರದವರಾದರೂ ಎಚ್ಚರಿಸದೆ ಇರುವುದೂ ಯಾಕೋ ತಿಳಿಯಲಿಲ್ಲ.—ಮದರಾಸ್ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಪ್ರಜೆಗಳು ಸೇರಿ ಚಂದಾ ಹಾಕಿ ನೌಕರರನ್ನು ಇಟ್ಟು ಇವರ ಮೂಲಕ ಅಂಥಾ ಪ್ರಾಣಿಗಳ ಹಿಂಸಕರನ್ನು ಹಿಡಿಸಿ ಶಿಕ್ಷೆಮಾಡಿಸುವುದೂ, ಧರ್ಮಸಾಲೆಯನ್ನಿಟ್ಟು ಅಂಥಾ ಪ್ರಾಣಿಗಳನ್ನು ಆರೈಕೆ ಮಾಡುವುದೂ ರೂಢಿಯಲ್ಲಿದೆ. ನಮ್ಮ ಸಂಸ್ಥಾನದಲ್ಲೂ ಅಲ್ಲಲ್ಲಿ ಇಂಥಾ ಸಂಘಗಳನ್ನು ಏರ್ಪಡಿಸಿ ಸ್ಥಳೀಯ ಅಧಿಕಾರಿಗಳಿಗೆ ಸಹಾಯಮಾಡಿದರೆ ಮೂಗು ಪ್ರಾಣಿಗಳ ಹಿಂಸೆಯು ದಿನಕ್ರಮೇಣ ಕಡಮೆಯಾಗುವುದು; ಇದರಿಂದ ಬಾಡಿಗೆ ಗಾಡಿಗಳ ಕುದುರೆ ಮತ್ತು ಎತ್ತುಗಳು ಚೆನ್ನಾಗುವುವು. ಈ ವಿಚಾರವನ್ನು ಆಯಾ ಸ್ಥಳೀಯ ಮಹಾಜನರು ಪರ್ಯಾಲೋಚನೆ ಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಕ್ರಿಮಿನಲ್ ನ್ಯಾಯಸ್ಥಾನಗಳು.—ಕಳೆದ 1913-14 ನೇ ಸಾಲಿನಲ್ಲಿ ಸಂಸ್ಥಾನಾದ್ಯಂತ 20,064 ಮೊಕದ್ದಮೆಗಳು ಮ್ಯಾಜಿಸ್ಟ್ರೇಟರಿಗೆ ರಿಪೋರ್ಟಾದವು; ಅಂದರೆ, ಹಿಂದಿನ ಸಾಲಿಗಿಂತ 630 ಅಪರಾಧಗಳು ಹೆಚ್ಚು. ಸ್ಪೆಷಲ್ ಮತ್ತು ಲೋಕಲ್ ನಿಬಂಧನೆಗಳನ್ನನುಸರಿಸಿದ ಮೊಕದ್ದಮೆಗಳು 416 ಹೆಚ್ಚಿದವು. ಹೀಗೆ ಹೆಚ್ಚಿದ್ದು ಬೆಂಗಳೂರು ಡಿಸ್ಟ್ರಿಕ್ಟಿನಲ್ಲೇ ವಿಶೇಷ. ಈ ಸಾಲಿನಲ್ಲಿ 34,497 ಜನಗಳ ಮೇಲೆ ಮೊಕದ್ದಮೆಗಳು ತರಲ್ಪಟ್ಟವು; ಅಂದರೆ, ಹಿಂದಿನ ವರುಷಕ್ಕಿಂತ 311 ಮಂದಿ ಕಡಮೆ.—ಅಪರಾಧಿಗಳು ರುಜುವಾತಿಗೆ ಬಂದು ಶಿಕ್ಷೆ ವಿಧಿಸಲ್ಪಟ್ಟದ್ದು ಹಿಂದಿನ ಸಾಲಿಗಿಂತ ಕಡಮೆ. ಈ ಬಾಬು ಅಭಿವೃದ್ಧಿಯಾದಂತೆ ಕಾಣುವುದಿಲ್ಲ. ಕೆಲವು ಕೋರ್ಟುಗಳಲ್ಲಿ ಸಾಕ್ಷಿಗಳನ್ನು ಮೂರು ದಿನಗಳಿಗಿಂತ ಹೆಚ್ಚಾಗಿ ನಿಲ್ಲಿಸಿಕೊಳ್ಳುವುದು ಯೋಗ್ಯವಲ್ಲವೆಂದು ಹಿಂದಿನ ಸಾಲಿನಲ್ಲೇ ಸೂಚಿಸಿದ್ದರೂ ಈ ಸಾಲಿನಲ್ಲಿ ಅದು ಕಡಮೆಯಾಗಲಿಲ್ಲ. ಈ ಪದ್ಧತಿಯು ಗವರ್ನ್‌ಮೆಂಟಿಗೆ ಒಪ್ಪಿತವಾಗಿಲ್ಲ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳು ಈ ಸಾಲಿನಲ್ಲಿ 26 ಮೊಕದ್ದಮೆಗಳನ್ನು ಮಾತ್ರ ದರ್ಯಾಫ್ತಿಮಾಡಿದ್ದಾರೆ; ಹೋದ ವರುಷಕಿಂತಲೂ 48 ಕಡಮೆಯಾಯಿತು. ಇದು ಗವರ್ನ್‌ಮೆಂಟಿಗೆ ತೃಪ್ತಿಕರವಾಗಿಲ್ಲ. ಈ ಸಾಲಿನಲ್ಲಿ ಹೊಸದಾಗಿ ಅಪರಾಧಮಾಡಿದವರ ಸಂಖ್ಯೆ 161; ಅಂದರೆ ಹಿಂದಿನ ಸಾಲಿಗಿಂತ 25 ಮಂದಿ ಕಡಮೆ.—ಆನರರಿ ಮ್ಯಾಜಿಸ್ಟ್ರೇಟರು ಈ ಸಾಲಿನಲ್ಲಿ 1,006 ಅಂದರೆ ಹಿಂದಿನ ವರುಷಕ್ಕಿಂತ 446 ಮೊಕದ್ದಮೆಗಳನ್ನು ಹೆಚ್ಚಾಗಿ ತನಿಖೆಯಿಂದ ವ್ಯವಸ್ಥೆಮಾಡಿದರು. ಇವರ ಈ ಒಳ್ಳೆಯ ಕಾರ್ಯವನ್ನು ನೋಡಿ ಸರ್ಕಾರದವರು ಸಂತೋಷಪಟ್ಟಿದ್ದಾರೆ.—ಚೀಫ್ ಕೋರ್ಟಿನ ಜಡ್ಜಿಗಳೂ, ಸೆಷನ್ಸ್ ಜಡ್ಜಿಗಳೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳೂ ಸಂಸ್ಥಾನದ್ಯಂತ ಸಂಚಾರಮಾಡಿ ಹಲವು ಕೋರ್ಟುಗಳ ನಡವಳಿಕೆಗಳನ್ನು ತನಿಖೆಮಾಡಿರುತ್ತಾರೆ.

ಮೈಸೂರು ಸಿಟಿ ಟ್ರಸ್ಟ್ ಬೋರ್ಡು.—ಮೈಸೂರು ನಗರಾಭಿವೃದ್ಧಿಗೆ ಟ್ರಸ್ಟ್ ಬೋರ್ಡು ಏರ್ಪಾಡಾಗಿದೆಯಷ್ಟೆ. ಈ ಬೋರ್ಡಿನವರು ಕಳೆದ ಸಾಲಿನಲ್ಲಿ ನಡಿಸಿರುವ ಅಭಿವೃದ್ಧಿ ಕಾರ್ಯಗಳ ರಿಪೋರ್ಟನ್ನು ನೋಡಿದ್ದರಲ್ಲಿ ಸರ್ಕಾರದವರಿಗೆ ತೃಪ್ತಿಯುಂಟಾಗಿಲ್ಲ. ಕೆಲಸ ಕಾರ್ಯಗಳು ಇನ್ನೂ ಹೆಚ್ಚು ಚಟುವಟಿಕೆಯಿಂದ ನಡೆಯಬೇಕೆಂದು ಸೂಚಿಸಿದ್ದಾರೆ. ಜಾಗ್ರತೆಯಾಗಿ ಕೆಲಸಗಳನ್ನು ಮಾಡಿಸದೆ ತಡೆಯದೆ ನಡೆಯಬೇಕಾದ ಎಲ್ಲಾ ಕಾರ್ಯಗಳೂ ವಿಳಾಯಿತವಾಗಿರುವ ಕಾಲದಲ್ಲಿ ಮುಗಿಯಲಾರವು. ಟ್ರಸ್ಟ್ ಬೋರ್ಡಿನವರು ಮನೆ ಮಠಗಳನ್ನು ಅಭಿವೃದ್ಧಿ ಕಾರ್ಯಗಳಿಗೋಸ್ಕರ ತೆಗೆದುಕೊಳ್ಳುವುದಕ್ಕೆ ಫಾಯಿಸ್ ಮಾಡಿಸಿದಷ್ಟು ಅಂದಾಜು ಕಟ್ಟಿದರೂ ಆಗದೆ. ಇಂಥಾ ಸೊತ್ತುಗಳು ಇನ್ನೂ ವ್ಯವಸ್ಥೆ ಆಗದೆ 1,385 ಉಳಿದಿರುವವು. ಹಣ ಪಾವತಿಮಾಡಿ ಸೊತ್ತನ್ನು ಸ್ವಾಧೀನ ಪಡಿಸಿಕೊಳ್ಳುವುದೇ ಬಾಕಿಯುಳ್ಳದೆ. ಬೇರ್‌ಮನ್ ರವರು ಬಾಕಿ ಸಾಲ್ ಆಪ್ಯಾಸೆಸೊಳಗಾಗಿ ಈ ಅಕ್ವಿಜಿಷನ್ ಕೇಸನ್ನು ಪೂರೈಸಬೇಕೆಂದು ಸರ್ಕಾರದವರು ತಿಳಿಸಿರುತ್ತಾರೆ.—ಮನೆ ಕಟ್ಟಿಕೊಳ್ಳುವವರಿಗೆ ಬೋರ್ಡಿನಿಂದ ಕೊಟ್ಟಿರುವ ಸಾಲವು 14,857 ರೂಪಾಯಿನಲ್ಲಿ 6,349 ರೂಪಾಯಿ ಮಾತ್ರ ವಸೂಲಾಗಿರುತ್ತದೆ. ವಸೂಲಾಗದೆ ಉಳಿದಿರುವ ಬಾಕಿಯು 6,280 ರೂಪಾಯಿ ಇದ್ದದ್ದು 8,508 ರೂಪಾಯಿಗೆ ಹೆಚ್ಚಿತು. ಇದು ತೃಪ್ತಿಕರವಾಗಿಲ್ಲ... ಹೊಸ ಮನೆಗಳನ್ನು ಕಟ್ಟಿಕೊಳ್ಳುವವರ್ಕೆ ಹಿಂದಿನ ಸಾಲಿನಲ್ಲಿ 13,061 ರೂಪಾಯಿಯನ್ನು ಸಾಲಕೊಟ್ಟಿರು; ಕಳೆದ ಸಾಲಿನಲ್ಲಾದರೋ ಬೋರ್ಡಿನವರು 5,682 ರೂಪಾಯಿ ಮಾತ್ರ ಸಾಲ ಕೊಟ್ಟಿದ್ದಾರೆ. ಇದರಿಂದ ಹೊಸದಾಗಿ ಮನೆ ಕಟ್ಟಿಕೊಳ್ಳಬೇಕೆಂಬವರಿಗೆ ಟ್ರಸ್ಟ್ ಬೋರ್ಡಿನ ಸಹಾಯವು ವರುಷೇ ವರುಷ ಕಡಮೆಯಾಗುತ್ತಾ ಬಂದಿರುತ್ತದೆ. ಈ ಭಾಗವೂ ಸಂತೋಷಪ್ರದವಾಗಿಲ್ಲ. ಸರ್ಕಾರದವರು ಈ ಪ್ರಕಾರ ನಮೂದು ಮಾಡಿ, ಕಡೆಯಲ್ಲಿ ಟ್ರಸ್ಟ್ ಬೋರ್ಡಿನ ಮೆಂಬರುಗಳು ನಡಿಸಿರುವ ಕಾರ್ಯಗಳಿಗಾಗಿ ಅವರನ್ನು ವಂದಿಸಿರುತ್ತಾರೆ. ಪಟ್ಟಣದ ಯಾವ ಒಂದು ಭಾಗದಲ್ಲಾಗಲಿ, ಯಾವ ಮನೆಯಲ್ಲಾಗಲಿ ಹೆಚ್ಚು ಸಂಸಾರಗಳು ಸೇರಿಕೊಂಡು ವಾಸ ಮಾಡದಂತೆ ಕಾರ್ಯತಃ ಬೇಗನೆ ಸಾರ್ಥಕವಾಗುವಂಥಾ ಏರ್ಪಾಡುಗಳನ್ನು ರೂಢಿಸಬೇಕೆಂದೂ, ಕಳೆದ ಸಾಲಿಗಿಂತಲೂ ಚಾಲ್ತಿ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಗಳು ಹೆಚ್ಚಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದೂ ಗವರ್ನ್‌ಮೆಂಟಿನವರು ತಿಳಿಸಿದ್ದಾರೆ.

ರೆಜಿಸ್ಟ್ರೇಷನ್ ಇಲಾಖೆ.—ಕಳೆದ 1913-14 ನೇ ಸಾಲಿನಲ್ಲಿ ಸಂಸ್ಥಾನದ ಮುಳೆ 78 ಸಬ್ ರೆಜಿಸ್ಟ್ರಾರ್ ಆಫೀಸುಗಳಲ್ಲಿ ಒಟ್ಟು 1,09,000 ಪತ್ರಗಳು ರೆಜಿಸ್ಟರಾಗಿರುತ್ತವೆ. ಇಷ್ಟು ಪತ್ರಗಳು ರೆಜಿಸ್ಟರ್ ಮಾಡಲ್ಪಟ್ಟದ್ದು ಹಿಂದೆ ಯಾವ ಸಾಲಿನಲ್ಲೂ ಇಲ್ಲ. 1912-13 ನೇ ಸಾಲಿನಲ್ಲಿ 96,924 ಪತ್ರಗಳು ರೆಜಿಸ್ಟರಾಗಿದ್ದವು. ಈ ಇಲಾಖೆಯಿಂದ ಕಳೆದ ಸಾಲಿನಲ್ಲಿ ಸರ್ಕಾರಕ್ಕೆ 2,08,178 ಚಿಲ್ಲರೆ ರೂಪಾಯಿ ಉತ್ಪತ್ತಿಯೂ, 87,787 ಚಿಲ್ಲರೆ ರೂಪಾಯಿ ಖರ್ಚೂ ಆಗಿ 1,20,000 ರೂಪಾಯಿಗಿಂತ ಹೆಚ್ಚು ಆದಾಯ ಕಂಡು ಬಂದಿದೆ. ಕಳೆದ 1913 ನೇ ಇಸವಿಯಲ್ಲಿ ಸರ್ಕಾರದವರು ಈ ಇಲಾಖೆಯ ಸಣ್ಣ ನೌಕರರಿಗೆ ಸಂಬಳಗಳನ್ನು ಜಾಸ್ತಿಮಾಡಿದ್ದರಿಂದ ಖರ್ಚು ಬಾಬಿನಲ್ಲಿ 2,635 ಚಿಲ್ಲರೆ ರೂಪಾಯಿ ಜಾಸ್ತಿಯಾಯಿತು. ಇನ್ನೂ 26 ಸ್ಥಳಗಳಲ್ಲಿ ತಾಲ್ಲೂಕ್ ಶಿರಸ್ತೇದಾರರುಗಳಿಂದಲೇ ರೆಜಿಸ್ಟ್ರೇಷನ್ ಕೆಲಸಗಳನ್ನು ಮಾಡಿಸುತ್ತಾರೆ. ಇದಕ್ಕೆ ಪ್ರತಿಯಾಗಿ ಸಾಧ್ಯವಾಗುವ ಮಟ್ಟಿಗೂ ಪ್ರತ್ಯೇಕವಾದ ಸಬ್ ರೆಜಿಸ್ಟ್ರಾರುಗಳನ್ನು ನೇಮಕಮಾಡುವುದು ಪತ್ರಗಳು ಬೇಗನೆ ರೆಜಿಸ್ಟ್ರಾಗುವುದಕ್ಕೆ ಸಹಾಯವಾಗುತ್ತದೆ. ಇದಲ್ಲದೆ ಸಬ್ ರೆಜಿಸ್ಟ್ರಾರುಗಳ ಸಂಬಳದ ದರಗಳು ನಿಷ್ಪಕ್ಷಪಾತದಿಂದ ನೌಕರಿಮಾಡುವುದಕ್ಕೆ ಪ್ರೋತ್ಸಾಹಕರವಾಗಿಲ್ಲವೆಂದು ಹೇಳಬೇಕಾಗಿದೆ.—ಸಬ್ ರೆಜಿಸ್ಟ್ರಾರ್ ಆಫೀಸುಗಳ ಮೇಲ್ವಿಚಾರಣೆ ಕೆಲಸವು ಕಳೆದ ಸಾಲಿನಲ್ಲಿ ತೃಪ್ತಿಕರವಾಗಿ ನಡೆಯಲಿಲ್ಲ. ಕಡೂರು ಡಿಸ್ಟ್ರಿಕ್ಟ್ ರೆಜಿಸ್ಟ್ರಾರವರು ಒಂದು ಆಫೀಸನ್ನಾದರೂ ತನಿಖೆ ಮಾಡಲಿಲ್ಲ. ಮೈಸೂರು, ಕೋಲಾರ, ಶಿವಮೊಗ್ಗ, ಚಿತ್ರದುರ್ಗ, ಈ ಡಿಸ್ಟ್ರಿಕ್ಟುಗಳ ಡಿಸ್ಟ್ರಿಕ್ಟ್ ರೆಜಿಸ್ಟ್ರಾರ್ರುಗಳು, ಕ್ರಮವಾಗಿ, 1,2,2,3 ಆಫೀಸುಗಳನ್ನು ಮಾತ್ರ ತನಿಖೆಮಾಡಿದ್ದಾರೆ. ಮೈಸೂರು ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳ ಇನ್ಸ್‌ಪೆಕ್ಟರುಗಳಾದರೂ ಈ ಮುಖ್ಯವಾದ ಕಾರ್ಯವನ್ನು ಮುತುವರ್ಜಿ ಮಾಡಿ ನಡಿಸಿರುವುದಿಲ್ಲ. ನಂಜನಗೂಡು ಮತ್ತು ಯಳಂದೂರು ಸಬ್ ರೆಜಿಸ್ಟ್ರಾರ್ ಆಫೀಸುಗಳು ತನಿಖೆ ಆಗಿ ನಾಲ್ಕು ವರ್ಷಗಳಾದವು. 1910-11ನೇ ಸಾಲಿನಿಂದೀಚೆಗೆ ಕೃಷ್ಣರಾಜಪೇಟೆ ಆಫೀಸನ್ನು ಆಜಮಾಯಿಷಿಮಾಡಿರುವುದಿಲ್ಲ. ಕಳೆದ 1914 ಫೆಬ್ರವರಿ ಎರಡನೇ ವಾರದಲ್ಲಿ ಮ|| ಪಿ. ರಾಘವೇಂದ್ರರಾಯರು ಅಧಿಕಾರವನ್ನು ವಹಿಸಿಕೊಂಡು ಈ ಇಲಾಖೆಯ ಕಾರ್ಯಭಾಗಗಳನ್ನು ಕ್ರಮಪಡಿಸುವುದರಲ್ಲಿ ತುಂಬಾ ಉತ್ಸಾಹವುಳ್ಳವರಾಗಿದ್ದಾರೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬುವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ವಿಷಯ ತಿಳಿಯಬೇಕು.

ಅಯ್ಯಾ,—ಮೈಸೂರು ಬ್ಯಾಂಕು ಎಂಬ ಬ್ಯಾಂಕಿನಲ್ಲಿ ಹಳ್ಳಿಗಳಲ್ಲಿರುವ ರೈತರು ಸಾಲ ಅಪೇಕ್ಷೆಮಾಡಿದರೆ ಕೊಡುತ್ತಾರೆಯೇ? ಬಡ್ಡಿಯು ದರ ಹ್ಯಾಗೆ? ಗಡುವು ಎಷ್ಟು ದಿವಸ? ಸಾಲದ ಮೊಬಲಗು ಬೇಕಾದರೆ ತಾಲ್ಲೂಕು ಅಮಲ್ದಾರರ ಮೂಲಕ ಅಪ್ಲಿಕೇಷನ್ ಕೊಡಬೇಕೇ? ಬ್ಯಾಂಕು ಅಧೀಕರರವರನ್ನೇ ಕೇಳಬೇಕೇ? ಬ್ಯಾಂಕಿನಲ್ಲಿ ನಡೆಯುವ ಲೇವಾದೇವಿ ವಿಚಾರಗಳನ್ನು ತಮ್ಮ ಪತ್ರಿಕಾ ಮುಖೇನ ತಿಳಿಸಬೇಕೆಂತ ಕೋರುತ್ತೇನೆ.

(2) ತಮ್ಮ ಕಳೆದ ಫೆಬ್ರವರಿ ತಾ. 18ರ ಪತ್ರಿಕೆಯಲ್ಲಿ ಸಾಹುಕಾರಿ ಬ್ಯಾಂಕಿಗೆ ಕೊಟ್ಟ ಷೇರು ಮೊಬಲಗು ವಾಪಸು ಕೊಡಲು ಎಷ್ಟು ದಿವಸ ಬೇಕು ಎಂಬ ವಿಚಾರಕ್ಕೆ ಹಣ ಹಾಕಿರುವ ಬ್ಯಾಂಕಿನ ರೂಲಸನ್ನು ನೋಡಿ ಅದರಲ್ಲಿ ಕಂಡ ಷರತ್ತಿನಂತೆ ನಡೆದುಕೊಳ್ಳಬೇಕೆಂತ ಜವಾಬು ಬಂದಿದೆ. ಹಾಗಾದರೆ ಸಾಹುಕಾರಿ ಬ್ಯಾಂಕಿಗೆ ಬ್ಯಾಂಕಿನವರ ಇಷ್ಟವೇ ಹೊರತು ಸರ್ಕಾರಿ ಹಿಡಿತ ಇಲ್ಲವೇ? ತಿಳಿಸಬೇಕೆಂತ ಕೋರುತ್ತೇನೆ. ಚಂದಾದಾರ್.

ಕ್ಷಾಮದ ಅಲೋಯನ್ಸು ಪಾವತಿ ಆಗಿಲ್ಲವಂತೆ.

ಅಯ್ಯಾ,—ನಮ್ಮ ಸರ್ಕಾರದವರು ಕಳೆದ ಸಾಲಿನಲ್ಲಿ ಮೂರು ತಿಂಗಳ ಮಟ್ಟಿಗೆ ಕೆಲವು ತಾಲ್ಲೂಕುಗಳಲ್ಲಿ ಶತಕ್ಕೆ ಇಪ್ಪತ್ತು ರೂಪಾಯಿ ವರೆಗೆ ಸಂಬಳವುಳ್ಳ ಎಲ್ಲಾ ಇಲಾಖೆಯ ನೌಕರರಿಗೂ ಕ್ಷಾಮದ ಅಲೋಯನ್ಸ್ ಪಾವತಿಮಾಡಿ ಎಂದು ಹುಕುಂ ಕೊಟ್ಟದ್ದು ಸರಿಯಷ್ಟೆ. ಅದೇ ರೀತಿ ಆಯಾ ತಾಲ್ಲೂಕುಗಳಲ್ಲಿರುವ ಸಮಸ್ತ ಸರ್ಕಾರಿ ನೌಕರರಿಗೂ ಅಲೋಯನ್ಸು ಪಾವತಿಯಾಗಿರುತ್ತದೆ. ಆದರೆ ಈ ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ರೆವಿನ್ಯು, ಇಲಾಖೆಯ ನೌಕರರಿಗೂ ಮತ್ತು ಎ ವಿ ಸ್ಕೂಲ್ ನೌಕರರಿಗೂ ಮಾತ್ರವೇ ಅಲೋಯನ್ಸ್ ಪಾವತಿಯಾಗಿ ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಏಕೆ ಪಾವತಿಯಾಗಲಿಲ್ಲವೋ ಆಶ್ಚರ್ಯವಾಗಿದೆ. ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾಗ್ಯೂ ನಮ್ಮ ಈ ತಾಲ್ಲೂಕಿನವರು ಸದರಿ ಅಲೋಯನ್ಸಿಗಾಗಿ ಎ ವಿ ಸ್ಕೂಲ್ ಮಾಸ್ಟರುಗಳು ಕೇಳಿದಾಗಲೆಲ್ಲಾ ಇಂದು, ನಾಳೆ ಕೊಡುತ್ತೇವೆಂದೂ, ಜೆಟ್ಟಾಗಿ ಕೇಳಿದಾಗ ನಿಮಗೆ ಕೊಡಬೇಕೆಂಬ ಹುಕುಂ ನಮ್ಮಲ್ಲಿಗೆ ಬಂದಿಲ್ಲ ಹೋಗಿ ಎಂದೂ ಹೇಳುತ್ತಾ 6-7 ತಿಂಗಳಿಂದಲೂ ಕೊಡದೆ ಇರುತ್ತಾರೆ. ಈ ಕ್ಷಾಮದ ಅಲೋಯನ್ಸು ಈ ತಾಲ್ಲೂಕು ಎ ವಿ ಸ್ಕೂಲ್ ಮಾಸ್ಟರುಗಳಿಗೆ ಮುಂದಾದರೂ ಲಭ್ಯವೇ ಅಥವಾ ಅಲಭ್ಯವೇ? ದಯವಿಟ್ಟು ತಿಳಿಸಬೇಕಾಗಿ ಬೇಡುತ್ತೇನೆ.

ಒಬ್ಬ ಬಡಮಾಸ್ಟರು.

[ಸರ್ಕಾರದ ಸ್ಯಾಂಕ್ಷನ್ ಆಗಿದ್ದ ಪಕ್ಷದಲ್ಲಿ ಪಾವತಿ ಆಗವನ್ನು ಸ್ಥಳಾಧಿಕಾರಿಗಳು ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳ ಬೇಕಾಗಿದೆ.—ಎಡಿ.]

ಬೇಸಿಗೆಯ ರಜಾ ವಿಚಾರ.

ಅಯ್ಯಾ,—ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲವು ಪ್ರಾಥಮಿಕರಿಗೆ ಡಿಸೆಂಬರ್ ರಜಾ ಒಂದು ತಿಂಗಳು ಮತ್ತು ಬೇಸಿಗೆ ರಜಾ 1½ ತಿಂಗಳ ವರೆಗೂ ದೊರೆಯುತ್ತದೆ. ಮಿಡಲ್ ಸ್ಕೂಲುಗಳಿಗೆ ಸುಮಾರು 16 ದಿನಗಳು ಒಪ್ಪತ್ತು ಮತ್ತು 6 ವಾರಗಳು ಪೂರ್ತಿ ರಜವು ಬೇಸಿಗೆಯಲ್ಲಿ ದೊರೆಯುತ್ತದೆ. ಗ್ರಾಮ ಶಾಲೆಗಳಿಗೆ ಮಾತ್ರ ಈ ಬೇಸಿಗೆಯ ರಜಾ ಇಲ್ಲವಂತಲೆ ತೋರುತ್ತದೆ. ಬೇಸಗೆಯಲ್ಲಿ ರಜಾ ಕಾಲದಲ್ಲೂ ಸಹ ಒಪ್ಪತ್ತು ಸ್ಕೂಲ್ ನಡೆಸಬೇಕೆಂಬ ಆರ್ಡರುಂಟು, ರಜಾ ಯಾತಕ್ಕೋಸ್ಕರ ಕೊಡುವುದು? ದಿನ ದಿನಕ್ಕೆ ಕಡಿಮೆಯಾಗುವ ವರೆಗೆ ಕೆಲಸ ಕ್ರಮವಾಗಿ ನಡೆಯುತ್ತಿಲ್ಲವೆಂತಲೂ, ಉಪಾಧ್ಯಾಯರು ಬದಲಾಯಿಸಿಕೊಂಡು ಉದ್ದಿಷ್ಟವಾಗಿಯೂ, ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಸ್ವಾತಂತ್ರ್ಯದಿಂದಲ್ಲಾ ವಿಶ್ರಾಂತಿಮಾಡಿಕೊಂಡು ನಿಶ್ಚಿಂತೆಯಾಗಿ ಕೆಲಸಮಾಡಬೇಕೆಂಬ ಉದ್ದೇಶವಾಗಿಯೂ ಇವೇ ಮೊದಲಾದ ಅನೇಕ ಕಾರಣಗಳಿಂದ ಅಲ್ಲವೇ ಈ ರಜಾ ಕೊಡುತ್ತಿರುವುದು? ವಿಶೇಷ ಮಾಸ್ಟರುಗಳು ಬಾಕಿಯವರಿಗಿಂತ ಸ್ವಲ್ಪವಷ್ಟು ಕೆಲಸಮಾಡಿರುವುದಲ್ಲದೆ ಅವರ ಪಾಪಕ್ಕೆ ಯೋಗ್ಯತೆ ಬರೆಯಲಸಾಧ್ಯ, ಮತ್ತು ಪ್ರಿವಿಲೆಜ್ ರಜಾ ಕೇಳಿಕೊಂಡರೂ ಅದು ದೊರೆಯುವುದೇ ದುರ್ಲಭ. ಅಥವಾ ದೊರೆತರೂ ಸಲಬಲ್ಲದ ಪ್ರಿವಿಲೆಜ್ ರಜಾ ದೊರೆಯುತ್ತದೆ. ಅಥವಾ ಮಾಸ್ಟರುಗಳೇ ಕೈಯಿಂದ ಸಂಬಳಕೊಟ್ಟು ಬದಲಿಯನ್ನು ನೇಮಿಸಿ ರಜಾ ಉಪಯೋಗಿಸಿಕೊಳ್ಳಬೇಕಾಗಿದೆ. ಇಷ್ಟು ನಿರ್ಬಂಧ ಪಟ್ಟರೆ ಹರ್ಷದಿಂದ ಕೆಲಸಮಾಡುವ ಬಗೆ ಹ್ಯಾಗೆ? ಧರ್ಮ ಪ್ರಭುಗಳು ಪಕ್ಷಪಾತವಿಲ್ಲದೆ ಎಲ್ಲಾ ಮಾಸ್ಟರುಗಳನ್ನೂ ಏಕರೀತಿಯಾಗಿ ಭಾವಿಸುವರೆಂದು ಪ್ರಾರ್ಥಿಸುವ

ದೇಶಿಕ.

ಇದು ನಿಜವಿರಬಹುದೇ?

ಅಯ್ಯಾ,—ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಈ ಮೂರು ತಾಲ್ಲೂಕುಗಳ ಮಧ್ಯ ಪ್ರದೇಶದಲ್ಲಿ ಕೊಂಗಾಣ, ನಿಟ್ರೆ, ಕೊರವಳ್ಳಿ, ಹೊನ್ನೂರು, ತರದಲೆ ಒಂಬೇಗೌಡು, ಶೀಗವಾಡಿ ವಗೈರೆ ಗ್ರಾಮಗಳಿರುತ್ತವೆ. ಈ ಗ್ರಾಮಗಳಲ್ಲಿ ಹೋದ ಸಾಲಿನಲ್ಲಿ ಮಳೆಯಿಲ್ಲದೆ ಸುತರಾಂ ಬೆಳೆಯಿಲ್ಲದ್ದರಿಂದ ದನಗಳಿಗೆ ಹುಲ್ಲು ಇಲ್ಲದೆ ತುಂಬಾ ತೊಂದರೆಯಾಗಿರುತ್ತೆ. ಮತ್ತು ಜನರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಕಳೆದ ಜನವರಿ ತಿಂಗಳ ವರೆಗೆ ಅಲ್ಪವಾದ ಕೂಲಿ ಸಿಕ್ಕುತ್ತಾ ಇತ್ತು. ಅಲ್ಲಿಂದೀಚೆ ಫೆಬ್ರವರಿ ತಿಂಗಳಲ್ಲಿ ಹುಣಿಸೆ ಬೀಜ ಬೇಯಿಸಿ ತಿಂದು ಜೀವಿಸಿದರು; ಮಾರ್ಚಿ ತಿಂಗಳಲ್ಲಿ ಬೇರಂಬಾಡಿ ಕೆರೆ ಅಂಗಳಕ್ಕೆ ಹೋಗಿ ಬಿದಿರಕ್ಕಿಯನ್ನು ತಂದು ಅದರಿಂದ ಕೆಲವು ದಿವಸ ಜೀವಿಸಿದರು. ಈಗ ಅಂಗಳದಲ್ಲಿ ಅದು ಕೂಡ ಸಿಕ್ಕುವದಿಲ್ಲ. ಆದ್ದರಿಂದ ಜನಗಳು ವಿಶೇಷವಾಗಿ ಸಂಕಟಪಡುತ್ತಾರೆ. ಇದು ವರೆಗೆ ಅಂದರೆ ಹೋದ ಸಾಲ್ ವರೆಗೆ ಈ ಗ್ರಾಮಗಳಲ್ಲಿ ಅಥವಾ ಬಾಜೂ ಗ್ರಾಮಗಳಲ್ಲಿ ಜನಗಳಿಗೆ ದವಸ 80 ಸೇರಿನ ಖಂಡುಗಕ್ಕೆ ತಿಂಡುಗ ಒಂದಕ್ಕೆ 12 ಸೇರಿನ ಲಾಗಾಯ್ತು 20 ಸೇರು ವರೆಗೆ ಬಡ್ಡಿ ಸಹಿತ ತಿಂಡು ಸಾಲ ಕೊಡುವ ಪದ್ಧತಿ ಹಿಂದಲಿಂದಲೂ ಇತ್ತು. ಈಗ ಹೋದ ವರ್ಷದಲ್ಲಿ ಬೆಳೆಯಿಲ್ಲವಾದ್ದರಿಂದ ಯಾರೂ ಸಾಲ ಕೊಡುವವರೇ ಇಲ್ಲ; ಮತ್ತು ಕೂಲಿ ಕರೆಯುವವರೇ ಇಲ್ಲ. ಕೆಲವರು ಕೊಟ್ಟಿಗೆ ಹೋಗಲು ಪ್ರಯತ್ನಪಡುತ್ತಿದ್ದಾರೆ. ಈ ಗ್ರಾಮಗಳಲ್ಲಿ ಎಲ್ಲಿಯೂ ಪರಸ್ಪರಸಹಾಯ ಸಂಘವನ್ನು ಸ್ಥಾಪಿಸಿಲ್ಲ. ಇಂಥಾ ದುರ್ದೆಸೆ ಪ್ರಾಪ್ತವಾಗಿರುವದರಿಂದ ಈ ವಿಚಾರದಲ್ಲಿ ಜನಗಳ ಕಷ್ಟವನ್ನು ಎಷ್ಟು ಬರೆದರೂ ಸಾಲದ್ದಾಗಿರುತ್ತೆ. ಕೊಂಗಾಣದ ಗ್ರಾಮದ ಶಾನುಭೋಗ ಅಮಾಲ್ದಾರಿಯಾಗುತ್ತಿಂತ ಕೂಲಿಕಾರರು ತುಂಬಾ ಆಸೆಯುಳ್ಳವರಾಗಿದ್ದರು. ಅವರಲ್ಲಿ ಯಾವ ಹುಕುಂ ಸಹ ಇನ್ನೂ ಆಗಿಲ್ಲ. ಧರ್ಮಪ್ರಭುಗಳಾದ ಸರ್ಕಾರದವರು ಲ್ಯಾಂಡು ಇಂಪ್ರೂವ್‌ಮೆಂಟ್ ಲೋನ್ಸ್ ರೂಲ್ಸು ಪ್ರಕಾರ ದುರ್ಭಿಕ್ಷ ನಿವಾರಣಾರ್ಥವಾಗಿ ಸಾಲವಾದರೂ ಕೊಡಿಸಿ ಕಾಪಾಡುವದೇ ಆಗಲಿ, ಅಥವಾ ಕೆಲಸ ತೆಗೆಸಿ ಕೂಲಿ ಕಾಮಗಾರಿಗೆ ಹುಕುಂ ಕೊಡಿಸಿ ಕೂಲಿ ಸಿಕ್ಕುವಂತೆಯೇ ಆಗಲಿ ಮಾಡಿ ಕೊಡಿಸಿ ಬಡ ರೈತರನ್ನು ಕಾಪಾಡಿಕೊಡಬೇಕೆಂತ ಪ್ರಾರ್ಥಿಸುವ

ಒಬ್ಬ ರೈತ.

ಗ್ರಾಮಗಳ ಸೇವಿಂಗ್ಸ್ ಬ್ಯಾಂಕ್ ಮುಸೂದಾ ವಿಷಯ.

ಅಯ್ಯಾ,—ಇದನ್ನು ಒಂದು ಪತ್ರಿಕೆಯಲ್ಲಿ ನಾನು ಓದಿ ನೋಡಿದೆ. ಇದರ ಮುಸೂದಾ ನಿಬಂಧನೆಗಳನ್ನು ನೋಡುವುದಕ್ಕೆ ಮೊದಲು ಇದರ ಉದ್ದೇಶವನ್ನು ಕುರಿತು ಕೊನೇ ಪ್ಯಾರಾದಲ್ಲಿ ವಿಸ್ತರಿಸಿರುವುದನ್ನು ನೋಡುವುದು ಅತ್ಯವಶ್ಯಕವೆಂದು ಎಣಿಸುತ್ತೇನೆ. ನನ್ನ ಅಭಿಪ್ರಾಯದಿಂದ ಇದು ಕೇವಲ ನಿಷ್ಪ್ರಯೋಜನವೆಂತ ನಾನು ಎಂದಿಗೂ ತಿಳಿದುಕೊಂಡಿಲ್ಲ. ಆದರೆ ಒಂದು ಕಾರ್ಯಕ್ಕೆ ಅಭಿವೃದ್ಧಿ ನಡವಳಿಕೆಗಳಾದ ಬೇರೇ ಮಾರ್ಗವನ್ನು ಹುಡುಕುವುದರಲ್ಲಿ ಅದಕ್ಕಿಂತಲೂ ಸುಲಭೋಪಾಯವಾಗಿರಬೇಕು. ಅದಕ್ಕೆ ಸಮಾನವಾಗಿದ್ದರೆ ಅದರೊಂದಿಗೆ ಸೇರಬೇಕು. ಇಲ್ಲವಾದರೆ ನಡೆಯುತ್ತಿರುವ ಕಾರ್ಯಕ್ಕೆ ತಡೆಯಿಲ್ಲದಿದ್ದರೂ ತಾಮಸವಾಗುತ್ತೆ. ಆದರೆ ಇದರ ಸೂಚನೆಕರ್ತರ ತಿಳುವಳಿಕೆ ನಮಗಿಲ್ಲವಾದಾಗ್ಯೂ ಕೇವಲ ಉದಾರ ಮನಸ್ಸಿನಿಂದ ಪ್ರಜೆಗಳ ಅನುಮಾನವು ಮುಂದಕ್ಕೆ ಬರಲೆಂದು ಧಾರಾಳವಾದ ಹಕ್ಕನ್ನು ದಯಪಾಲಿಸಿರುವುದು ನಮ್ಮಂಥಾ ಮೂಢಮತಿಗಳು ಕೂಡ ಒಂದೊಂದು ಮಾತಾಡುವುದಕ್ಕೆ ಅವಕಾಶ ಸಿಕ್ಕಿತು. ಕೊನೇ ಪ್ಯಾರಾದಲ್ಲಿ ಕಂಡ ಅಂಶಗಳ ಪೈಕಿ ಕೆಲವದರ ಒಟ್ಟಿನಲ್ಲಿ ಜನಗಳು ತಮ್ಮ ಧನ ರಕ್ಷಣೆಗೆ ತಮ್ಮ ಗ್ರಾಮದ ಅಥವಾ ನೆರೆ ಗ್ರಾಮದ ಜನಗಳಿಗಿಂತಲೂ ಸರಕಾರದವರನ್ನೇ ಹಣದ ವಿಷಯದಲ್ಲಿ ಹೆಚ್ಚು ನಂಬಬೇಕೆಂಬ ಅಭಿಪ್ರಾಯವು ಮೊದಲು ರೈತನಿಗೆ ಹುಟ್ಟಬಹುದು. ಈಗಿನ ರಾಜಕೀಯ ಅಭಿಪ್ರಾಯದಲ್ಲಿ ಸಾಧ್ಯವಾದ ಮಟ್ಟಿಗೂ ಸರಕಾರದ ಓಡ್ಯಾಟವನ್ನು ರೈತರು ಕಡಮೆ ಮಾಡಿಕೊಳ್ಳುವುದು ಒಳ್ಳೇದೆಂದೂ, ಪರಸ್ಪರ ನಂಬಿಕೆಯನ್ನು ಹೆಚ್ಚಿಸಬೇಕೆಂದೂ ಸಂಪದಭಿವೃದ್ಧಿ ಸಮಾಜದ ರಾಜಿಯವರು ಅಸಾಧಾರಣ ಪ್ರಯತ್ನಪಡುತ್ತಿರುವಾಗ ಪುನಃ ಸರ್ಕಾರದಲ್ಲಿ ಹಣ ಡಿಪಾಜಿಟ್ಟು ಇಡುವುದು ರೈತನಿಗೆ ಏನು ಸುಲಭ ಮಾರ್ಗವೋ ತಿಳಿಯದಾಗಿದೆ. ಆತುರ ಇರುವ ಮನುಷ್ಯನು ಸೀದಾ ತಾಲ್ಲೂಕು ಕಛೇರಿಗೆ ಹೋಗಿ ಡಿಪಾಜಿಟ್ಟು ವಾಪಸ್ ಪಡೆಯಬಹುದೆಂಬ ಸೌಲಭ್ಯವು ಬೇರೆ ವಿಷಯವಾಗಿ ಕಲ್ಪಿಸಿದೆ. ಕೇವಲ ಆತುರದ ವಿಷಯದಲ್ಲಿ ಹಳ್ಳಿಯಿಂದ ರಜಾ ಇಲ್ಲದ ದಿವಸ ಆಫೀಸು ವೇಳೆಗೆ ಸರಿಯಾಗಿ ಬಂದು ಇವನ ನಂಬರು ಬರುವವರೆಗೆ ಕಾದಿದ್ದು ಹಣ ತೆಗೆದುಕೊಂಡು ವಾಪಸು ಗ್ರಾಮಕ್ಕೆ ಹೋಗಿ ತನ್ನ ಆತುರವನ್ನು ತೀರಿಸಿಕೊಳ್ಳಬೇಕು. ಇದು ಎಷ್ಟರಮಟ್ಟಿಗೆ ಹಳ್ಳೀ ರೈತರಿಗೆ ಈಗಿರುವ ಅನುಕೂಲತೆಗಳಿಗಿಂತಲೂ ಹೆಚ್ಚು ಪ್ರಯೋಜನವೋ ಸಂದೇಹವಾಗಿದೆ. ಗ್ರಾಮದಲ್ಲಿಟ್ಟರಕ್ಕೆ ಪೆಟ್ಟಿಗೆಯು ಎಷ್ಟರಮಟ್ಟಿಗೆ ಹಣಕ್ಕೆ ವಿಮಾರಿಕೆಯಾದದೆಂಬುದು ಪ್ರತಿದಿನ ಅವರ ಸಾಗಾಣಿಕೆ ಕೆಲಸವನ್ನು ಕಛೇರಿಗೆ ಜಮಗೆ ತರುವಾಗ ಅದರ ಬಂದೋಬಸ್ತು ಎಲ್ಲವೂ ಮುಂದೆ ರೂಲ್ಸು ಆಗಬಹುದು. ಇದರಿಂದ ಮಿತವ್ಯಯ ಮೊದಲಾದ ಬುದ್ಧಿಯು ಹುಟ್ಟುವುದೆಂದು ಸೂಚಿಸಿರುವಂತೆ ತೋರುತ್ತೆ. ಮಿತವ್ಯಯ ಬುದ್ಧಿಯು ತನ್ನ ಮನಸ್ಸಿಗೆ ತಾನೇ ಹುಟ್ಟುವುದು ಸುಲಭವಾಗುವವೋ, ಪರಸ್ಪರ ಗೃಹಕೃತ್ಯ ವಿಚಾರದಿಂದ ಜಾಗ್ರತೆಯಾಗಿಯೂ ವಿವೇಕದಿಂದಲೂ ಹುಟ್ಟುತ್ತೋ ಅನುಮಾನವಾಗಿದೆ.

ಸರ್ಕಾರಿ ಸೇವಿಂಗ್ಸಿನಲ್ಲಿ ಹಾಕುವ ಹಣವು ಸುರಕ್ಷಿತವೆಂದೂ, ಸ್ವಲ್ಪ ಬಡ್ಡಿಯನ್ನು ಹೊಂದಿ ತನಗೆ ಬೇಕಾದಾಗ ಸುಲಭವಾಗಿ ಹಿಂದಕ್ಕೆ ತೆಗೆದುಕೊಳ್ಳಬಹುದೆಂದೂ ಬರೆಯಲ್ಪಟ್ಟಿದೆ. ಸುಲಭವಾಗಿ ಹಿಂದಕ್ಕೆ ತೆಗೆದುಕೊಳ್ಳುವ ವಿಷಯವಂತೂ ಮೇಲೆ ಬರೆದಿದೆ. ಹಣದ ಭದ್ರತೆ ವಿಷಯದಲ್ಲಿ ಸದಾ ಕಾಲದಲ್ಲೂ ಸರ್ಕಾರದ ಆಶ್ರಯವನ್ನು ಅಪೇಕ್ಷಿಸುವ ಮನುಷ್ಯನಿಗೆ ಭಂಗಾರ ದಾಗೀನೆ ಮೊದಲಾದುವನ್ನು ಯಾವ ರೀತಿ ರಕ್ಷಿಸಿಕೊಳ್ಳುವ ಏರ್ಪಾಡುಮಾಡಿಕೊಳ್ಳುವನೋ ಅದು ಅವನ ಕೆಲಸವಾಗಿದೆ. ಇನ್ನು ಪರಸ್ಪರ ಸಹಾಯಸಂಘದ ಏರ್ಪಾಡಿಗೆ ಸಹಕಾರಿಯಾದದ್ದೆಂದು ಬರೆಯಲ್ಪಟ್ಟಿದೆ. ಇದನ್ನು ಒಪ್ಪಿಕೊಳ್ಳಬಹುದು. ಆದರೆ ಇದು ಪ್ರಯೋಜನವಿಲ್ಲ. ಸಹಕಾರಕ್ಕಿಂತಲೂ ಹೆಚ್ಚು ಪ್ರಯೋಜನ ತೋರಿದರೆ ಈ ಹೊಸ ಏರ್ಪಾಡಿಗೆ ನ್ಯಾಯವಾದ ಪ್ರಾಶಸ್ತ್ಯವು ಬರುತ್ತೆ. ಪರಸ್ಪರ ಸಹಾಯಸಂಘವಿಷ್ಟೇ ಪ್ರಯೋಜನವಾದರೂ ಉಪಯೋಗವಿಲ್ಲವೆಂತ ತೋರುತ್ತೆ. ಯಾಕೆಂದರೆ ಪರಸ್ಪರ ಸಹಾಯ ಸಂಘದ ಬೀಜವು ಜಮೀನಿನಲ್ಲಿ ಬಿತ್ತನೆಮಾಡಿ ವೃಕ್ಷದಲ್ಲಿ ಸಾಧಾರಣ ಮೊಗ್ಗು, ಹಣ್ಣು ಬಿಡುವುದಕ್ಕೆ ಪ್ರಾರಂಭಿಸಿಗೆ ಅದರಲ್ಲಿ ಈಗ ಅಷ್ಟೇ ಫಲದಾಯಕವಾದ ಬೀಜವನ್ನು ಅದೇ ನೆಲದಲ್ಲಿ ಅಥವಾ ಮಗ್ಗುಲು ನೆಲದಲ್ಲಿ ಪೈರುಮಾಡಲು ಬೋಧಿಸಿದರೆ ರೈತನು ಮಗ್ಗುಲು ಹೊಲದಲ್ಲಿ ಹಣ್ಣು ಬಿಟ್ಟಿರುವುದನ್ನು ನೋಡಿ ಅದರಂತೆ ಮಾಡಲೋ ಈ ಹೊಸ ಬೀಜ ಹಾಕಲೋ ಎಂದು ಡೋಲಾಯಮಾನವಾಗಿ ಮೊದಲು ತಂದ ಬೀಜ ಬಿತ್ತುವುದಿಲ್ಲ. ಎರಡನೇ ಬೀಜ ತೆಗೆದುಕೊಳ್ಳುವುದಕ್ಕೆ ಅನುಮಾನ. ಈ ರೀತಿ ಆಗಬಹುದು. ಇದಕ್ಕಿಂತಲೂ ಪರಸ್ಪರ ಸಹಾಯ ಸಂಘಗಳನ್ನು ಎಲ್ಲಾ ಕಡೆಯಲ್ಲೂ ಜಾಗ್ರತವಾಗಿ ಮಾಡುವುದಕ್ಕೆ ತಕ್ಕ ಉಪಾಯಗಳನ್ನು ಕಲ್ಪಿಸಿದರೆ ಪ್ರಜೆಗಳಿಗೆ ನಾನಾತರದ ಕ್ಷೇಮವು ದೊರೆಯಬಹುದು. ಪರಸ್ಪರ ಸಹಾಯ ಸಂಘಗಳು ನೆರೆಗ್ರಾಮದಲ್ಲಿದ್ದಾಗ್ಯೂ ಕೂಡ ಚಾಲ್ತಿ ಡಿಪಾಜಿಟ್ಟಿನಲ್ಲಿ ಹಣ ಇಟ್ಟರೆ ಸರ್ಕಾರದ ಖಜಾನೆಗಿಂತಲೂ ಸುಲಭವಾಗಿ ಈಗ ವಾಪಸು ಪಡೆಯಬಹುದು. ಈಗ ಪರಸ್ಪರ ಸಹಾಯ ಸಂಘದವರು ಮಾಡಿರುವ ಏರ್ಪಾಡಿನಲ್ಲಿ ಕಾಲಕ್ರಮೇಣ ಪ್ರತಿ ಒಂದು ಗ್ರಾಮಕ್ಕೆ ಯೋಗ್ಯತೆಗೆ ತಕ್ಕ ಸಂಘಗಳು ಏರ್ಪಟ್ಟು ಮಿತವ್ಯಯ ಬುದ್ಧಿಯೂ, ಪರಸ್ಪರ ನಂಬಿಕೆಯೂ, ಇದರಿಂದ ತನುವಾನಿಧನರಕ್ಷಣೆಯೂ, ಹೆಚ್ಚಿನ ಸಧಾಂಶವೂ ದೊರೆತು ತಾವು ಜೀತಾಳುಗಳೆಂಬುದನ್ನು ಮರೆತು ಅಧಿಕಾರಿಗಳಿಗೆ ಸರ್ಕಾರದ ಕೆಲಸಕ್ಕೆ ಪ್ರಜೆಗಳು ಹೆಚ್ಚು ಸಹಕಾರಿಯಾಗುತ್ತಾರೆಂಬುದರಲ್ಲಿ ಸಂದೇಹವಿಲ್ಲವೆಂತ ತೋರುತ್ತೆ.

ಬಾತ್ಮಿದಾರ್

ಡಿ ರಾಮಸ್ವಾಮಯ್ಯ, ಬೆಂಗಳೂರು:—ನೀವು ಬರೆಯುವ ವಿಷಯ ನಡೆದು ಮೂರು ತಿಂಗಳಾಯಿತು. ಈಗ ಅವನ್ನು ಕುರಿತು ಚರ್ಚೆ ಮಾಡುವುದರಲ್ಲಿ ಫಲವೇನೂ ಕಾಣುವುದಿಲ್ಲ.

ಎಂ ಡಿ ಕೆ., ಕೊಪ್ಪ ತಾಲ್ಲೂಕು; ಬಿ ವಿ. ರಾವ್, ಅರಕಲಗೂಡು. ದೇಶಿಕ; ಎಚ್ ಟಿ ಮುತ್ತಣ್ಣ, ಸೋಮವಾರಪೇಟೆ; ಎ. ಎಸ್, ಅರಕಲಗೂಡು, ಪ್ರಜಾಹಿತಚಿಂತಕ, ಮೂಡಿಗೆರೆ; ವೇದ್ಯಪಾಲಕಿ, ಚಗಳೂರು ತಾಲ್ಲೂಕು; ಬಾತ್ಮಿದಾರ್, ಮೂಗೂರು; ಟಿ. ವಿ ಎಸ್; ಶಲಕು; ಬಾತ್ಮಿದಾರ್, ಸಾಪಲಿ:—ಈ ಬಾತ್ಮಿಗಳಲ್ಲಿ ವರ್ತಮಾನಗಳೇನೂ ಕಂಡುಬಂದಿಲ್ಲ—ಎಡಿ.]

ತಾಲ್ಲೂಕು ವರ್ತಮಾನಗಳು.

ಹೊಳಲ್ಕೆರೆ ತಾ|| ಚಿಕ್ಕಜಾಜೂರು.—ಈ ಗ್ರಾಮವು ರೈಲ್ವೆ ಸ್ಟೇಷನ್ ಜಾಗವಾಗಿ ಸುಮಾರು 150 ಮನೆಗಳಿದ್ದು 950 ಪ್ರಜಾ ಸಂಖ್ಯೆಯುಳ್ಳದ್ದಾಗಿದೆ. ಇಲ್ಲಿ ಬ್ರಾಂಚ್ ಪೋಸ್ಟ್ ಆಫೀಸೂ, ಎ ವಿ. ಸ್ಕೂಲೂ ಇದೆ. ಸ್ಕೂಲ್ ಬಂದು 16 ವರ್ಷವಾಯಿತು. ಇದುವರೆಗೆ ಯಾರೂ ಸ್ಕೂಲ್ ಅಭಿವೃದ್ಧಿಗೆ ತರಲಿಲ್ಲ. ಮ|| ಎ. ವೆಂಕಟಗಿರಿರಾಯರು ಬೀಳಬೋಡು ಸ್ಕೂಲಿನಿಂದ ವರ್ಗಪಟ್ಟು ಬಂದು 10 ತಿಂಗಳಾಯಿತು. ಈ ಗ್ರಾಮಕ್ಕೆ ಪ್ಲೇಗ್ ಬಿದ್ದು 6 ತಿಂಗಳ ವರೆಗೂ ಕ್ಯಾಂಪಿನಲ್ಲಿದ್ದರು. ಪುನಃ ಊರು ಸೇರಿ 3 ತಿಂಗಳಾಗುತ್ತಾ ಬಂತು. ಇಷ್ಟರಲ್ಲಿಯೇ ಈ ಮಾಸ್ಟರು 60 ಬಾಲಕರ ವರೆಗೂ ಜಮಾಯಿಸಿ ಜನಾನುರಾಗಕ್ಕೆ ಪಾತ್ರರಾಗಿ ತುಂಬಾ ಮುತುವರ್ಜಿ ವಹಿಸಿ ಸ್ಕೂಲ್ ಅಭಿವೃದ್ಧಿಗೆ ತರುತ್ತಲಿದ್ದಾರೆ.—ಇಂಥಾ ಸದ್ಗೃಹಸ್ಥರ ಮನೆಗೆ ಕಳೆದ ತಾ. 12 ನೇ ರಾತ್ರಿ ಕಳ್ಳರು ಬಿದ್ದು ಕನ್ನಹಾಕಿ ಸುಮಾರು 300 ರೂಪಾಯಿ ಬೆಲೆಯುಳ್ಳ ಬೆಳ್ಳಿ ಭಂಗಾರ ಒಡವೆ ವಸ್ತ್ರಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ. ಇವರೂ ಇವರ ಕುಟುಂಬದವರೂ ತುಂಬಾ ಗೋಳಾಡುತ್ತಲಿದ್ದಾರೆ. ಪೋಲೀಸಿಗೆ ರಿಪೋರ್ಟಾಗಿರುತ್ತೆ. ಈ ವರೆಗೂ ಪತ್ತೆ ಇಲ್ಲ. ಇವರ ಕಷ್ಟವನ್ನು ನೋಡಿ ಈ ಗ್ರಾಮದವರು ಮತ್ತು ಅಸ್‌ಪಾಸ್ ಗ್ರಾಮದವರೂ ಸಹ ಮರುಗಿ ಸಾಧ್ಯವಾದಷ್ಟು ಚಂದಾ ಕೊಡಿಸುತ್ತಲಿದ್ದಾರೆ.

ಶಿವಮೊಗ್ಗ.—ಹವಾ ಹಿತಕರವಾಗಿದೆ. ಈ ವಾರದಲ್ಲಿಯೂ ಕೂಡ 2-3 ಹದ ಮಳೆ ಬಿದ್ದಿರುವುದರಿಂದ ಬಹಳ ಪ್ರಯೋಜನವಾಗಿರುತ್ತದೆ.—ಈ ಸ್ಥಳಕ್ಕೆ ಸಮೀಪವಾದ ಯಾವದೋ ಒಂದು ಹಳ್ಳಿಯಿಂದ ಒಂದು ಮಗುವನ್ನು ತೆಗೆದುಕೊಂಡು ಬಂದಿದ್ದರು. ಆ ಮಗುವಿಗೆ 2 ತಲೆ ಇತ್ತು. ಬಾಕಿ ಅಂಗಗಳೆಲ್ಲಾ ಸರಿಯಾಗಿಯೇ ಇತ್ತು.—ಇಲ್ಲಿಗೆ 7 ಮೈಲಿ ದೂರದಲ್ಲಿ ತುಂಗಾ ನದಿಯು 7 ಸೀಳುಗಳಾಗಿ ಹರಿಯುತ್ತದೆ. ಪೂರ್ವ ಕಾಲದಲ್ಲಿ ಈ ಸ್ಥಳವು ಸಪ್ತ ಋಷಿಗಳ ಆಶ್ರಮವಾಗಿತ್ತೆಂದು ಹೇಳುತ್ತಾರೆ. ಈ ಪ್ರದೇಶವು ಬಹಳ ಮನೋಹರವಾಗಿದೆ. ಆದರೆ ಜನಗಳ ಸಂಚಾರಕ್ಕೆ ವಿಶೇಷ ಅವಕಾಶವಿಲ್ಲದೆ ಗಿಡ ಮರಗಳು ವಿಪರೀತವಾಗಿ ಬೆಳೆದಿವೆ. ತಾ. 27 ನೇ ಬುಧವಾರ ಈ ಸ್ಥಳದಲ್ಲಿ ವನಭೋಜನವು ನಡೆಯಿತು. ಬೇರೆ ಬೇರೆ ಮಹಸ್ಥರು ಬೇರೆ ಬೇರೆ ಸ್ಥಳಗಳಲ್ಲಿ ಸೇರಿಕೊಂಡು ಭೋಜನಮಾಡಿ, ನಂತರ ಸಂತೋಷಾರ್ಥವಾಗಿ ಸಂಗೀತವೇ ಇತ್ಯಾದಿ ಸಲಕರಣೆಗಳಿಂದ ವಿಜೃಂಭಣೆಯಾಗಿ ಕಾಲವನ್ನು ಸಾರ್ಥಕಗೊಳಿಸಿ ಆನಂದಭರಿತರಾಗಿ ಸಾಯಂಕಾಲದ ಭೋಜನವನ್ನು ಮುಗಿಸಿಕೊಂಡು ಹೊರಟುಬಂದರು. ಜನಗಳು ಪದೇ ಪದೇ ಈ ರೀತಿಯಾಗಿ ಸಂತೋಷ ಕೂಟಗಳನ್ನು ಈ ಸ್ಥಳದಲ್ಲಿ ನಡಿಸುವುದರಿಂದ ಹಿಂದೆ ಪ್ರಸಿದ್ಧಿ ಹೊಂದಿರತಕ್ಕ ಸ್ಥಳವು ಪುನಃ ಪ್ರಸಿದ್ಧಿ ಹೊಂದಲು ಅನುಮಾನವಿಲ್ಲ.—ಜನರಲ್ ಜೋನ್ಸ್ ರವರು ದಯಮಾಡಿಸಿ ಇಲ್ಲಿನ ಮಿಲಿಟರಿ ಸವಾರ್ ಸೈನ್ಯಗಳನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ವಾಪಸು ಬೆಂಗಳೂರಿಗೆ ಪ್ರಯಾಣಮಾಡಿದರು.

ಗೌರೀಬಿದನೂರು ತಾ|| ಮಂಚೇನಹಳ್ಳಿ.—ಈ ಗ್ರಾಮಕ್ಕೆ, ಈಗ್ಗೆ ನಾಲ್ಕು ತಿಂಗಳುಗಳ ಕೆಳಗೆ ಪ್ಲೇಗ್ ಶುರುವಾಗಿ ಜನಗಳನ್ನು ಬಹಳ ಕಷ್ಟನಷ್ಟಗಳಿಗೆ ಗುರಿಮಾಡಿತು. ಆದರೆ ಈಗ 1½ ತಿಂಗಳಿಂದಲೂ ಆ ವಿಘವಾದ ಸುಂಕು ಏನೂ ಇಲ್ಲದ್ದರಿಂದ ಜನಗಳೆಲ್ಲರೂ ಊರು ಸೇರಿರುತ್ತಾರೆ.—ಈ ಹೋಬಳಿಯಲ್ಲಿ ಈಗ ಸುಮಾರು 3-4 ವರುಷಗಳಿಂದಲೂ ಶೇಕ್ದಾರ್ರಾಗಿದ್ದ ಮ|| ವೈ. ನಾರಣಯ್ಯನವರನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಿರುತ್ತಾರೆ. ಅವರಿಗೆ ಬದಲಾಗಿ ಮ|| ವೆಂಕಟರಮಣಯ್ಯ ಬಿ. ಎ. ಎಂಬುವರು ಬಂದಿರುತ್ತಾರೆ. ಮೇಲ್ಕಂಡ ಮ|| ನಾರಣಯ್ಯನವರು ಇಲ್ಲಿಗೆ ಬಂದಂದಿನಿಂದಲೂ ಅವರು ಇಲ್ಲಿನ ಪ್ರಜೆಗಳಲ್ಲಿ ತೋರ್ಪಡಿಸಿದ್ದ ಅವರ ಸದ್ಗುಣಗಳ ವಿಷಯದಲ್ಲಿ ಎಷ್ಟು ವರ್ಣಿಸಿದಾಗ್ಯೂ ಸಾಲದು. ಇಲ್ಲಿನವರಿಗೆ ಅವರಲ್ಲಿರುವ ನೈಜವಾದ ವಿಶ್ವಾಸವನ್ನು ತೋರ್ಪಡಿಸುವದಕ್ಕಾಗಿ ಮಾರ್ಚಿ 27 ನೇ ತಾ. ಮೇಲ್ಕಂಡ ಶೇಕ್ದಾರ್ರವರಿಗೆ ಔತಣವನ್ನು ಬಹಳ ವಿಜೃಂಭಣೆಯಿಂದ ಮಾಡಿಸಿದರು. ಭೋಜನಾನಂತರ ಇಲ್ಲಿನ ಇಂಗ್ಲೀಷ್ ಸ್ಕೂಲ್ ಹೆಡ್ ಮಾಸ್ಟರ್ ಮ|| ವಿಠಲಮೂರ್ತ್ಯಾಚಾರ್ಯರು ಮ|| ನಾರಣಯ್ಯನವರ ಅಗಲುವಿಕೆಯಿಂದ ಸರ್ವರಿಗೂ ಉಂಟಾಗಿರುವ ವ್ಯಸನವನ್ನು ಬಹಳ ಸ್ವಾರಸ್ಯವಾದ ಉಪನ್ಯಾಸದ ಮೂಲಕ ಸೂಚಿಸಿದರು. ನಂತರ ಮ|| ಆದಿಪ್ಪನವರ ಆತ್ಮಾನಂದಕರವಾದ ಗಾಯನವಾಯಿತು. ಈ ಸಮಾಜಕ್ಕೆ ನಮ್ಮ ತಾಲ್ಲೂಕಿನ ಕೆಲವು ಅಧಿಕಾರಿಗಳು ದಯಮಾಡಿಸಿದ್ದರು. ಮೂರನೇ ದಿನ ಈ ಸೆಂಟ್ರಲ್ ಜಮಾದಾರ್ರವರ ಮನೆಯಲ್ಲಿ ಸಂಗೀತವಾಯಿತು. ಅಲ್ಲದೆ ನೆನ್ನೆ ದಿನ ಈ ಕಸಬಾ ಸ್ಕಾ. ಮ|| ವೆಂಕಟಸುಬ್ಬಯ್ಯನವರು ತಮ್ಮ ಮನೆಗೆ ಸರ್ವರನ್ನೂ ಬರಮಾಡಿಕೊಂಡು ಟಿಫಿನ್ ಪಾರ್ಟಿ ಮತ್ತು ಮೇಲ್ಕಂಡವರ ಸಂಗೀತ ಸಹ ಮಾಡಿಸಿ ಬಹಳ ಮರ್ಯಾದೆಯಿಂದ ಮ|| ನಾರಣಯ್ಯನವರನ್ನು ಪ್ರಯಾಣಮಾಡಿಸಿದರು. ಈಗ ಬಂದಿರುವ ಹೊಸ ಶೇಕ್ದಾರ್ರವರೂ ಹಿಂದಿನವರಂತೆ ಹೆಸರು ಪಡೆದಾರೆಂದು ನಂಬುತ್ತೇವೆ.

ದೇವನಹಳ್ಳಿ.—ಈ ಟೌನಿನಲ್ಲಿ 5-6 ದಿನಗಳ ಹಿಂದೆ 1½ ಹದ ಮಳೆಯಾಗಿ ರೈತರೆಲ್ಲಾ ಹೊಲಗಳನ್ನು ಉತ್ತು ಹದ ಮಾಡುತ್ತಾರೆ. ಕಡುಕಾಲವು ತೀರಿಬಂತು. ಈ ಕಾಲದಲ್ಲಿಯೂ ರೂಪಾಯಿಗೆ 16 ಸೇರು ರಾಗಿ, ಅಕ್ಕಿ 7 ಸೇರು ಮಾರುತ್ತಾರೆ. ಹೀಗಿದ್ದಾಗ್ಯೂ ವರ್ತಕರು ಕಮ್ಮಿ ಸೇರು ಬಟ್ಟುಗಳಲ್ಲಿ ಅಳತೆ ಮಾಡುವದು ಬಿಟ್ಟಿಲ್ಲ. ಇವನ್ನು ಪೋಲೀಸ್ ಇನ್ಸ್‌ಪೆಕ್ಟರವರು ಆದಾಯಮಾಯಿಯಿಂದ ಸರಿಪಡಿಸುವರೆಂದು ನಂಬುತ್ತೇವೆ.—ಕಸಬೆಯಲ್ಲಿ ಕಳ್ಳತನಗಳು ವಿಶೇಷವಾಗಿ ನಡೆದಿರುತ್ತವೆ. ಇವುಗಳಲ್ಲಿ ಕೋಟೆ ಜ್ಯೋತಿನಗರದ ದಾಸಶೆಟ್ಟರ ಮನೆಯಲ್ಲಿಯೂ 1,000 ರೂಪಾಯಿ ಕಳವು ನಡೆದಿರುವದು. ಇದಕ್ಕೆ ಪೋಲೀಸ್ ಸಿಬ್ಬಂದಿ ಸಾಲದೆ ಇದೆಯೋ, ಇಲ್ಲವೇ ಟೌನಿನಲ್ಲಿ ಪೋಲೀಸ್ ಸ್ಟೇಷನ್ ಇಲ್ಲದೆಯೋ ಈ ರೀತಿ ನಡೆಯುವದೆಂದು ಪ್ರಜೆಗಳು ಆಡುಕೊಳ್ಳುತ್ತಾರೆ. ಈ ವಿಚಾರ ಹುಜೂರ್ ದಿವಾನ್ ಸಾಹೇಬರು ಸವಾರಿ ದಯಮಾಡಿದ್ದಾಗ್ಗೆ ಪುರಸಭಾಸಗಳು ಕೇಳಿಕೊಂಡದ್ದಕ್ಕೆ ಯೋಚನೆ ಮಾಡುತ್ತೇನೆ ಎಂದು ಅಪ್ಪಣೆ ಕೊಡಿಸಿದರು. ಇದುವರೆಗೂ ವಿಮರ್ಶೆಯಾಗಿಲ್ಲವೆಂದು ಜನಗಳು ಅಂದುಕೊಳ್ಳುವದನ್ನು ಕೇಳುತ್ತೇವೆ.—ಟೌನಿನಲ್ಲಿ ಮ್ಯುನಿಸಿಪಲ್ ಲಾಂದ್ರಗಳ ವಿಚಾರವಂತು ಹೇಳತೀರದು. ಬರ್ನರುಗಳು ಮುರಿ ಸಡಿಲವಾಗಿಯೂ, ಇವುಗಳಿಗೆ ಕಂಟ್ರಾಕ್ಟುದಾರರು ಎಣ್ಣೆ ಸರಿಯಾಗಿ ಹಾಕದೆಯೂ, ಆಗಾಗ ಮ್ಯುನಿಸಿಪಲ್ ಮೆಂಬರುಗಳು ತಕ್ಕ ಹಾಗೆ ತನಿಖೆ ಮಾಡದೆಯೂ, ವೈಸ್ ಪ್ರೆಸಿಡೆಂಟರು ಗಮನ ಕೊಡದೆಯೂ, ಟೌನಿನ ದೊಡ್ಡ ರೋಡುಗಳು ಜನ ಸಂಚಾರ, ಬಂಡಿಗಳ ಸಂಚಾರ, ಬೈಸಿಕಲ್ ಮುಂತಾದ್ದಕ್ಕೆ ಅವಕಾಶವಿಲ್ಲದೆ ಇರುವದರಿಂದ ಈ ವಿಚಾರ ಮತ್ತು ಕಳವಿನ ವಿಚಾರ, ಲಾಂದ್ರಗಳ ವಿಚಾರ, ಊರಿನ ಪಾಕೀಜಾ ವಿಚಾರ, ರಸ್ತೆಗಳ ವಿಚಾರಗಳನ್ನು ನಮ್ಮ ಅಮಲ್ದಾರ್ರವರೂ, ಪೋಲೀಸ್ ಇನ್ಸ್‌ಪೆಕ್ಟರವರೂ, ಸ್ಯಾನಿಟರಿ ಇನ್ಸ್‌ಪೆಕ್ಟರವರೂ ತಮ್ಮ ತಮ್ಮ ತಾಬೆಯವರನ್ನು ಕಾವು ಮುಂದಾಗಿ ನಡಿಸುತ್ತಾ ಬಂದಲ್ಲಿ ಎಲ್ಲಾ ಕೆಲಸಗಳೂ ಸರಾಗವಾಗಿ ನಡೆಯುವವೆಂದು ಜನಗಳು ಹೇಳಿಕೊಳ್ಳುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಲಾಹೋರ್ ಪಟ್ಟಣದ ಎಣ್ಣೆ ಮತ್ತು ಹಿಟ್ಟಿನ ಕಾರ್ಖಾನೆಯಲ್ಲಿ ಕಳೆದ ಮಂಗಳವಾರ ರಾತ್ರಿ ಅಕಸ್ಮಾತ್ತಾಗಿ ಬೆಂಕಿಬಿದ್ದು ಕಟ್ಟಡವೂ ಯಂತ್ರಗಳೂ ಎಲ್ಲಾ ಕೆಟ್ಟು ಹಾಳಾಗಿ ಸುಮಾರು 50,000 ರೂಪಾಯಿ ನಷ್ಟವಾಗಿದೆ.

ಕಳೆದ ಶನಿವಾರ ರಾತ್ರಿ ಬೊಂಬಾಯಿನಲ್ಲಿ ಅಪಾರವಾದ ಮಳೆ ಸುರಿಯಿತು. ಅದರ ಬಿರುಸಿಗೆ ಸಮುದ್ರ ತೀರದಲ್ಲಿದ್ದ ನಾಲ್ಕಾರು ಭರ್ತಿ ದೋಣಿಗಳು ಮುಳುಗಿಹೋದವು. ಸಾವಿರಾರು ಮೂಟೆಗಳ ಹತ್ತಿಯೂ, ಕೆರೋಸಿನ್ ಎಣ್ಣೆಯೂ ಸಮುದ್ರದ ಪಾಲಾಗಿ ಸಾಹುಕಾರರಿಗೆ ಕೆಲವು ಲಕ್ಷ ರೂಪಾಯಿಗಳೇ ನಷ್ಟವಾಗಿದೆ.

ಮುಲ್ತಾನ್ ಪಟ್ಟಣದ ಸ್ಪೆಷಲ್ ಕೋರ್ಟಿನವರು ಸಿನಿ ಎಂಬ ಊರಿನ ದರೋಡೆ ಮೊಕದ್ದಮೆಯಲ್ಲಿ ಅಪರಾಧ ರುಜುವಾತಾಗಲಿಲ್ಲವೆಂದು 67 ಮಂದಿ ಅಪರಾಧಿಗಳನ್ನು ಖುಲಾಸ್ ಮಾಡಿಬಿಟ್ಟರು. ಇನ್ನೂ ಈ ಕೋರ್ಟಿನವರು 17 ಮೊಕದ್ದಮೆಗಳನ್ನು ದರ್ಯಾಫ್ತು ಮಾಡಬೇಕಾಗಿದೆ. ಈ ಮೊಕದ್ದಮೆಗಳಲ್ಲಿ ಅಪರಾಧಿಗಳು 1,300 ಜನರು; ಸಾಕ್ಷಿಗಳು 700 ಜನರೂ ಇರುತ್ತಾರೆ.

ಕಳೆದ ತಾ 24 ಕ್ಕೆ ಮುಕ್ತಾಯವಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು 27,612 ಜನರಿಗೆ ಪ್ಲೇಗ್ ತಗಲಿತು; 22,253 ಜನ ಈ ರೋಗದಲ್ಲಿ ಸಾಲುವೇದರು. ಇವರ ಹಂಚಿಕೆ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 652 ಮರಣಗಳು, ಮದರಾಸ್ 7, ಬಂಗಾಳಾ 18, ಬೇಹಾರ್ ಮತ್ತು ಒರಿಸ್ಸಾ 830, ಸಂಯುಕ್ತ ಅಧಿಪತ್ಯಗಳು 2,800, ಪಂಜಾಬ್ 17,347, ಬರ್ಮಾ 34, ಮಧ್ಯ ಪ್ರಾಂತ್ಯಗಳು 179, ಎಲ್ಲೆಕಟ್ಟಿನ ಪ್ರಾಂತ್ಯ 25, ಈ ರೀತಿ ಮರಣಗಳಾಗಿರುತ್ತವೆ.

ಈ ಸಲ ಜೂನ್ ತಾ. 3 ರಲ್ಲಿ ನಮ್ಮ ಚಕ್ರವರ್ತಿಯವರ ಜನ್ಮೋತ್ಸವವನ್ನು ಆಚರಿಸಬೇಕಾದದ್ದಿಲ್ಲವೆಂದು ಹುಕುಂ ಆಗಿದೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ಪೆಗ್ಗೂ ಡಿಸ್ಟ್ರಿಕ್ಟಿನಲ್ಲಿ ನಾಗಪ್ಪಶೆಟ್ಟಿ ಎಂಬ ಸಾಹುಕಾರನ ಮನೆಗೆ ಮದ್ದುಗುಂಡು ಸಹಿತರಾದ 20 ಮಂದಿ ದರೋಡೆ ಕೋರರು ನುಗ್ಗಿ ಲಕ್ಷಾಂತರ ರೂಪಾಯಿ ದೋಚಿಕೊಂಡು ಹೋದರು. ಆಗ್ಗೆ ಅವರಿಗೂ ಗ್ರಾಮಸ್ಥರಿಗೂ ಪೋಲೀಸಿನವರಿಗೂ ಸಣ್ಣ ಕದನವಾಯಿತು. ಆ ಶೆಟ್ಟಿಯ ಮನೆಯವರಿಗೂ, ಪೋಲೀಸಿನವರಿಗೂ, ಕೆಲವು ಗ್ರಾಮಸ್ಥರಿಗೂ ಗುಂಡಿ ನೇಟು ಬಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಕಳ್ಳರಲ್ಲಿ ಮೂವರು ಮಾತ್ರ ಸಿಕ್ಕಿರುತ್ತಾರೆ.

ಮೀರಟ್ ನಗರದಲ್ಲಿ ಹಿಂದುಸ್ಥಾನದ ಸೈನ್ಯದಲ್ಲಿರುವ ಸವಾರ್ ಈಶ್ವರಸಿಂಗ್, ಸವಾರ್ ಹಜರಾಸಿಂಗ್, ಹಾವಿಲ್ದಾರ್ ಬಾಬೂಸಿಂಗ್, ಸಿಪಾಯಿ ಫುಲಾಸಿಂಗ್ ಎಂಬೀ ನಾಲ್ವರು ಸೈನಿಕರೂ ಇಂಡಿಯಾ ಗವರ್ನಮೆಂಟಿನ ಮೇಲೆ ತಿರುಗಿಬೀಳಬೇಕೆಂಬ ಅಂತರಂಗವಾದ ಪಿತೂರಿ ನಡೆಯುತ್ತಿರುವುದನ್ನು ತಿಳಿದಿದ್ದರೂ ತಮ್ಮ ಮೇಲ್ಪಟ್ಟ ಹುದ್ದೇದಾರರಿಗೆ ತಿಳಿಸದೆ ಮರೆಮಾಚಿದರೆಂದು ಗೊತ್ತಾಯಿತು. ಅವರನ್ನು ಸೈನ್ಯದ ಕೋರ್ಟಿನಲ್ಲಿ ದರ್ಯಾಫ್ತಿಮಾಡಿ, ಕೋರ್ಟಿನ ತೀರ್ಮಾನದ ಪ್ರಕಾರ ಆ ನಾಲ್ವರನ್ನೂ ಕಳೆದ ತಾ 26 ರಲ್ಲಿ ಮೀರಟ್ ನಗರದ ಸಿವಿಲ್ ಜೈಲಿನಲ್ಲಿ ಗಲ್ಲಿಗೆ ಹಾಕಿರುತ್ತಾರೆ.

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹೆ!!!

ಗಟ್ಟಿ ಬಣ್ಣದ ಧಡೂತಾದ ಸೀರೆಗಳು.

ಸೋಲಾಪುರದ ತರಹೆವಾರಿ ಚೆಕ್ಕುಗಳು.

ಶುದ್ಧಿ ಮಾಡಿದ ಹರ್ಸ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [55–7]

ತ್ವರೆಮಾಡಿ! ತಾವಕಾಶ ಮಾಡಿದರೆ ಸನಗು ಸಿಕ್ಕದು.

ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್.
159, ಕಿಲಾರಿ ರೋಡು (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಆಯುರ್ವೇದ ವಿದ್ವಾನ್—ಬಿ ವಿ ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[331-25] ವಿಳಾಸ :—ಸದ್ವೈದ್ಯಶಾಲಾ, ನಂಜನಗೂಡು.

ಪ್ರೊಫೆಸರ್ ಗಜ್ಜರ್‌ರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ಪ್ಲೇಗ್ ದ್ರಾವಕ.—ಇದು ಸರ್ವೋತ್ಕೃಷ್ಟವಾಗಿ ತಯಾರಿಸಲ್ಪಟ್ಟ ಔಷಧ. ಇದು ಅನೇಕ ಪ್ರಾಣಗಳನ್ನು ಗಂಡಾಂತರದಿಂದ ತಪ್ಪಿಸಿದೆ. ಸಕಾಲದಲ್ಲಿ ಉಪಯೋಗಿಸಿದರೆ ಪ್ರಾಣಭೀತಿ ಇಲ್ಲ. ನಿಮ್ಮ ಸ್ನೇಹಿತರಿಗೂ ತಿಳಿಸಿರಿ. ಇದರ ಕ್ರಯ ರೂ. 0-8-0.

ರಕ್ತಶೋಧಕ ದ್ರಾವಕ.—ರಕ್ತವನ್ನು ಶುದ್ಧಿಮಾಡುವುದರಲ್ಲಿ ಇದು ಪ್ರಖ್ಯಾತಿಪಡೆದಿದೆ. ಇದಲ್ಲದೆ ಈ ದ್ರಾವಕವು ನಾನಾ ದೀರ್ಘ ರೋಗಗಳನ್ನು ಗುಣಮಾಡಿ, ಆರೋಗ್ಯದಲ್ಲಿಡುತ್ತದೆ. ಕ್ರಯ ರೂ. 1-0-0.

ಚಳಿಜ್ವರ ದ್ರಾವಕ.—ಇದು ಬಹಳ ಚೆನ್ನಾಗಿ ಗುಣಕಂಡ ಔಷಧ. ಇದರಲ್ಲಿ ಕ್ವಿನೈನ್ ಸ್ವಲ್ಪವೂ ಮಿಶ್ರಮಾಡಿಲ್ಲ. ಬಹಳ ಕ್ಷೇಮಕರವಾದದ್ದು. ಕ್ರಯ ರೂ. 0-8-0

ಹುಳುಕಡ್ಡಿ ಔಷಧ.—ಇದಕ್ಕೆ ಸಮಾನವಾದ ಔಷಧವು ಎಲ್ಲೂ ಸಿಕ್ಕುವುದೇ ಇಲ್ಲ. 2-3 ನಿಮಿಷಗಳ ತನಕ ಈ ಔಷಧವನ್ನು ಹಚ್ಚಿ ಉಜ್ಜಿ ಬಿಸಿನೀರಿನಲ್ಲಿ ತೊಳೆದ ಕೂಡಲೇ ಹುಳುಕಡ್ಡಿಯು ಹುಟ್ಟೇ ಇರುವುದಿಲ್ಲ. ಎಂದೆಂದಿಗೂ ಮತ್ತೆ ಅದು ಕಲೆಹಾಕದು ಕ್ರಯ ರೂ. 0-4-0.

ಅಪೂರ್ವ ಹಲ್ಲುಪುಡಿ.—ಎಲ್ಲಾ ತರದ ಹಲ್ಲುನೋವಿಗೂ ಸರ್ವೋತ್ತಮವಾದ ಹಲ್ಲುಪುಡಿ. ಥಳ್ಥಳ ಬೇರನ್ನೂ, ಒಸಡನ್ನೂ ಬಹಳ ಚೆನ್ನಾಗಿಟ್ಟು ಕಾಪಾಡುತ್ತದೆ. ಕ್ರಯ ರೂ. 0-4-0, 0-6-0, 0-8-0.

ಲಿವರ್ ದ್ರಾವಕ—ಪಿತ್ತಕೋಶದ ಮೇಲೆ ಇದು ಬಹಳ ಚನ್ನಾಗಿ ಕೆಲಸ ಮಾಡಿ, ಮಲಬದ್ಧವನ್ನು ಪರಿಹರಿಸುತ್ತದೆ. ಕ್ರಯ ರೂ. 0-10-0.

ಟಾನಿಕ್ ಸೊಲ್ಯೂಷನ್.—ಇದರಲ್ಲಿ ಗ್ಲಿಸರೊಫೋಸ್ಫೇಟ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಸೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ,
[80-1] ಬ್ಲಾಕ್ ಟೌನ್, ಮದರಾಸ್.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಕಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
[247–25] 20, ಚೀನಾಬಜಾರು ರೋಡು, ಮದರಾಸು.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರಿಗೆ ಕೊಡುತ್ತಾಬರುವದು.

ಕಂಪನಿಗೆ ದಾಖಲಾಗಿ ಪಾಲಸಿ ಪಡೆದು ಸಲೀಸು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಷ್ಟ ಸಮೇತ ನಾಮಿನಿಗೆ ಕೊಡಲಾಗುತ್ತ 20 ವರುಷದವರಿಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಣ್ಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿನಂತೆ ಕೊಡುತ್ತಾಬರುವದು. ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮಗುವೆ ಆದಲ್ಲೂ ನುದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಆಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್ರು ಹಣವು ಹಂಚಿಕೆ ರೀತಿಯಲ್ಲೂ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿಮೆ ನೋಟಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಂಗು ಏಜಂಟ್ರು ಖುದ್ದು ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ. [292-20]

ಒಳ್ಳೆ ಚಟುವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೊಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್ರಿಗೆ ಬರಿಯಿರಿ:—

ಮೆಸ್ಸರ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ
ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ
ರೂ. 2-13-0 ಮಾತ್ರ.
5 ವರುಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ! ಈ ವಾಚ್ ಸಾಧಾರಣವಾಗಿ, ಬಹಳ ಕಾಲ ಬಾಳಿಕೆ ಬರುವ ವಾಚ್ ಎಂದೂ, ಸರಿಯಾದ ಕಾಲವನ್ನು ತೋರಿಸುವದೆಂದೂ ಸರ್ವರಿಗೂ ತಿಳಿದ ವಿಷಯವೇ ಸರಿ ಇದರ 6 ಬಹುಮಾನಗಳ ತಪ್ಸೀಲು.—(1) ಸುಂದರವಾದ ವಾಚ್ ಸರಪಣಿ. (2) ವಾಚ್ ಪೆಟ್ಟಿಗೆ (3) [illegible] ವದಕ್ಕೆ ಉಪಯೋಗವಾದ, ನಾಜೂಕಾದ ರೇಷ್ಮೆ ಧಾರ. (4) ದಿಕ್ಕುಗಳನ್ನು ತೋರಿಸುವ ಉತ್ತರ ಮುಖಿ (5) ಜರ್ಮನ್ ಸಿಲ್ವರ್ ಕೇಸು. (6) ಸುಂದರವಾದ ಪೋಕ್ ಉಂಗುರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

[20–13] ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ್ 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3–8–0 ಮಾತ್ರ.
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂತರ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ತೀಷ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180–27] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)



ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಜರುಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177,

[25–14] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಮೂಡಿಗೆರೆ ಕಾರೊನೇಷನ್ ಹಾಲ್.

ನವಿನ್ನ ಭಾರತ ಭೂಮಿಯ ರಾಜಧಾನಿಯಾದ ಇಂದ್ರಪ್ರಸ್ಥವೆಂದು ಕರೆಯುಟ್ಟ ದೆಹಲಿ ನಗರದಲ್ಲಿ ಕಿಂಗ್ ಜಾರ್ಜ್ ಸಾರ್ವಭೌಮರವರಿಗೆ 1911 ನೇ ಡಿಸೆಂಬರ್ ತಿಂಗಳಲ್ಲಿ ನಡೆದ ಪಟ್ಟಾಭಿಷೇಕ ಮಹೋತ್ಸವದ ಜ್ಞಾಪಕಾರ್ಥವಾಗಿ ಈ ಮೂಡಿಗೆರೆಯಲ್ಲಿ ತಯಾರಾಗಿದ್ದ ಕಿಂಗ್ ಜಾರ್ಜ್ ಕಾರೊನೇಷನ್ ಮೆಮೋರಿಯಲ್ ಹಾಲ್ ಎಂಬ ಕಟ್ಟಡದ ಬಾಗಿಲು ಏಪ್ರಿಲ್ ತಾ. 17 ನೇ ಶನಿವಾರ ಬೆಳಿಗ್ಗೆ ತೆರೆಯಲ್ಪಟ್ಟು ಸಾರ್ವಜನೋಪಯುಕ್ತವಾದ ರೀಡಿಂಗ್ ರೂಮ್ (ವಾಚಕ ಮಂದಿರ) ಮತ್ತು ಪುಸ್ತಕ ಭಂಡಾರಕ್ಕೆ ಸ್ಥಳ ಕಲ್ಪಿಸಲಾಯಿತು.

ಈ ಮಹೋತ್ಸವ ಕಾಲಕ್ಕೆಂತ ಕಟ್ಟಡದ ಮುಂಭಾಗದಲ್ಲಿ ಅತಿ ಸಿಸ್ತಿನಿಂದ ಅಲಂಕರಿಸಲ್ಪಟ್ಟಿದ್ದ ಹಸರು ಚಪ್ಪರದಲ್ಲಿ ಕಾಫಿ ಪ್ಲಾಂಟರ್ ಮಿ|| ಎಚ್. ಎಂ. ಹ್ಯಾಮಿಲ್ಟನ್ ಸಾಹೇಬರವರು, ಮಿ|| ಡಬ್ಲಿಯು. ಆರ್. ಫ್ರಾಂಕ್ಲಿನ್ ಸಾಹೇಬರವರು, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ಎಂ. ವಾಚಯ್ಯನವರು, ಎಕ್ಸೈಸ್ ಅ|| ಮ|| ಡಿ. ಶ್ರೀನಿವಾಸಯ್ಯಂಗಾರ್ರವರು, ಡಿಸ್ಟ್ರಿಕ್ಟ್ ಎಗ್ಸಾಮಿನರ್ ಆಫ್ ಫರೆಸ್ಟ್ ಸೂಪರಿಂಟೆಂಡೆಂಟ್ ಮ|| ಡಿ. ಮೆಸ್ತನ್ ಸಾಹೇಬರವರು, ಡಾಕ್ಟರ್ ಸಿದ್ದಪ್ಪನವರು, ಅಮಲ್ದಾರ್ ಮಿ|| ಷೇಕ್ ಅಬ್ದುಲ್ಲಾಯವರು, ಪೋಲೀಸ್ ಇನ್‌ಸ್ಪೆಕ್ಟರ್ ಮಿ|| ಪೊಡ್ಡಿಶೆಟ್ಟಿಯವರು, ಇಂಜನಿಯರ್ ಸಬ್ ಡಿವಿಜನ್ ಆಫೀಸರ್ ಮ|| A. ಟಿ. ನರಸಿಂಹಯ್ಯಂಗಾರ್ರವರು, ಪೋಸ್ಟ್ ಮಾಸ್ಟರ್ ಮ|| ಕೆ. ಸುಬ್ಬಣ್ಣನವರು, ತಾಲ್ಲೋಕ್, ರೆವಿನ್ಯು, ಪೋಲೀಸ್, ಅಬ್ಕಾರಿ ಇಲಾಖಾ ನೌಕರರುಗಳು, ಹೋಬಳಿ ಶೇಕದಾರ್ರುಗಳು, ಮ್ಯುನಿಸಿಪಲ್ ಮತ್ತು ತಾಲ್ಲೋಕು ಬೋರ್ಡು ಮೆಂಬರುಗಳು, ಪುರನಿವಾಸಿಗಳು ಸೇರಿದ್ದರು. ಮಂಗಳವಾದ್ಯ ವೈಭವಗಳೊಡನೆ ನಮ್ಮ ಡೆಪ್ಯುಟಿ ಕಮಿಷನರ್ ಮ|| ಕೆ. ಕೃಷ್ಣ ಅಯ್ಯರವರನ್ನು ಕರೆದುತಂದು ಅಗ್ರಾಸನದಲ್ಲಿ ಕುಳ್ಳಿರಿಸಿದರು.

ಹಿಂದೆ ಈ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್‌ರಾಗಿದ್ದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರಿಂದ ಚುನಾಯಿಸಲ್ಪಟ್ಟ ಸ್ಥಳದಲ್ಲಿ ಈ ತಾಲ್ಲೋಕು ...ದಾರರಾಗಿದ್ದ ಮ|| ಎಸ್. ರಾಬರ್ಟ್ ರವರು ಕಾರೊನೇಷನ್ ಮೆಮೋರಿಯಲ್ ಹಾಲ್ ಎಂಬ ಈ ಕಟ್ಟಡವನ್ನು ಕಟ್ಟಲು ಅಸ್ತಿಭಾರವನ್ನು ಹಾಕಿ ... ಮುಂತಾದ್ದನ್ನು ಕೇಪಿರಿಸಿ ಈ ತಾಲ್ಲೋಕಿನಿಂದ ವರ್ಗವಟ್ಟರು. ಅವರ ... ಬಂದಿರುವ ಅಮಲ್ದಾರ್ ಮಿ|| ಷೇಕ್ ಅಬ್ದುಲ್ಲಾ ಸಾಹೇಬರವರು ಎಸ್. ರಾಬರ್ಟ್ ರವರು ಪ್ರಾರಂಭಿಸಿದ್ದ ಕಟ್ಟಡವನ್ನು ಪೂರ್ತಿ ಮಾಡಿದರು. ಮಹದುದ್ದೇಶ್ಯವನ್ನು ಸಾರ್ಥಕಗೊಳಿಸಲು ದಯಾಳುಗಳಾದ ನಮ್ಮ ಡಿ|| ಕಮಿಷನರ್ ಮ|| ಕೆ. ಕೃಷ್ಣ ಅಯ್ಯರವರು ಅಗ್ರಾಸನವನ್ನು ವಹಿಸಿ ಕಟ್ಟಡವನ್ನು ಸಾರ್ವಜನೋಪಯುಕ್ತವನ್ನಾಗಿ ಮಾಡಿದರೆಂಬ ಅರ್ಥಗರ್ಭಿತ ... ಪತ್ರಿಯನ್ನು ಸಾಹುಕಾರ್ ಮ|| ಅಲಿ ಅಕ್ಬರ್ ಸಾಹೇಬರವರು ಇಂಗ್ಲೀಷಿನಲ್ಲಿಯೂ, ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ|| ಎಸ್. ರಾಮಚಂದ್ರರವರು ಕನ್ನಡದಲ್ಲಿಯೂ ಉಪನ್ಯಾಸವಮಾಡಿದರು. ಅನಂತರ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಸಭಿಕರಿಗೆ ಕಾಲೋಚಿತವಾದ ಪ್ರತ್ಯುತ್ತರಗಳನ್ನು ... ಕೊಡಿಸಿ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದ ಮೆಮೋರಿಯಲ್ ಹಾಲ್ ಕಟ್ಟಡದ ಬಾಗಿಲ ಬೀಗವನ್ನು ತಮ್ಮ ಹಸ್ತಗಳಿಂದ ತೆಗೆದು ಒಳಗೆ ... ಸಿದರು. ಬಳಿಕ ಜಯಘೋಷಗಳು ಮಂಗಳವಾದ್ಯ ವೈಭವಗಳ ಮಧ್ಯೆ ... ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ನಮ್ಮ ಡೆಪ್ಯುಟಿ ಕಮಿಷನರ್ ಕೆ. ಕೃಷ್ಣಯ್ಯರವರು ದಯಮಾಡಿಸಿ ಪುರನಿವಾಸಿಗಳ ಪ್ರಾರ್ಥನೆಯನ್ನು ನೆರವೇರಿಸಿದ್ದಕ್ಕಾಗಿ ಅವರ ಶ್ರೇಯಸ್ಸನ್ನು ಬಯಸಿದರು. ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಬಾತ್ಮೀದಾರ್.

ಗುರುವು—ಗೌರವವು.

ಲೋಕದಲ್ಲಿನ ಪ್ರಾಣಿವರ್ಗಗಳಲ್ಲಿ ಮನುಷ್ಯಜನ್ಮವೇ ಶ್ರೇಷ್ಠವಾದುದು. ಮನುಷ್ಯನ ಸೌಖ್ಯಕ್ಕೆ ವಿದ್ಯೆಯೇ ಮೂಲ. ಇಂಥಾ ಸೌಖ್ಯಪ್ರದವಾದ ವಿದ್ಯೆಯನ್ನು ದಯಪಾಲಿಸುವ ಬೋಧಕರ ಕೆಲಸವು ಎಲ್ಲಾ ಕೆಲಸಗಳಿಗಿಂತಲೂ ಶ್ರೇಷ್ಠವಾದುದೆಂದು ನಿರ್ಧರಿಸಲ್ಪಟ್ಟಿರುವುದು. ಉಪಾಧ್ಯಾಯರ ಉತ್ತಮೋದ್ಯೋಗದ ಮೂಲಕ ದೇಶವೆಲ್ಲವೂ ಸತ್ಪ್ರಜೆಗಳಿಂದ ತುಂಬಿಕೊಳ್ಳುವುದು. ಹೀಗೆ ... ವಿದ್ಯಾವಂತರಾದರೆ ಸಂಸ್ಥಾನದಲ್ಲಿರುವ ಅನೇಕ ಇಲಾಖೆಗಳೇ ಹೋಗಿ ... ಕೆಲಸವು ಕಡಮೆಯಾಗಬೇಕಾಗುವುದು. ಪ್ರತಿಯೊಬ್ಬರೂ ತಮ್ಮ ತಮ್ಮ ... ಶ್ರೇಷ್ಠವಾದುದೆಂದು ತಿಳಿದಿರಬೇಕಾದದ್ದು ಯುಕ್ತ. ಹೀಗೆ ... ಸೌಖ್ಯಕ್ಕೆ ಕಾರಣವಾದ ವಿದ್ಯಾದಾನ ಮಾಡತಕ್ಕ ಉಪಾಧ್ಯಾಯರು ಎಲ್ಲರಿಂದಲೂ ಗೌರವಿಸಲ್ಪಡತಕ್ಕದೆಂಬುವದನ್ನು ಯಾರೂ ಮರೆಯ... ಆದರೆ ಪ್ರತ್ಯಕ್ಷವಿಚಾರದಲ್ಲಿ ಸಂಸ್ಥಾನದ ಎಲ್ಲಾ ವಿಳೇಜು ಎಲಿಮೆಂಟರಿ ಸ್ಕೂಲು ಉಪಾಧ್ಯಾಯರಿಗೆ ಕಲಬು ಬಹಳ ಕಡಮೆಯಾಗಿ ಬರುತ್ತೆ. ಇವರು ... ಅರ್ಹರೇ ಅಲ್ಲವೆಂದು ಅನೇಕರು ಭಾವಿಸಿ, ಕೇವಲ ಅಗೌರವವಾದ ... ಪ್ರವರ್ತಿಸುತ್ತಿರುವರು. ಉಪಾಧ್ಯಾಯರ ಸಂಬಳ ಯಾವುದು? ... ಜೀವನಕ್ಕಾಗಿ ತಿಂಗಳಿಗೆ ಇಷ್ಟಿಷ್ಟೆಂದು ನಿಯಮಿತಿಯಿಂದ ಕೊಡುತ್ತಿರುವ ... ಹೋ, ಅಥವಾ ಜನರು ಹೊಗಳುವುದೋ? ಎರಡೂ ಅಲ್ಲ. ಹಾಗಾದರೆ ... ಯಾವುದು? ಯಾವುದೆಂದರೆ, ಈ ಸೀಮೆಯ ದುರ್ಗುಣ, ದುರ್ನಡತೆ... ತಮ್ಮ ಪ್ರಯತ್ನಗಳಿಂದ ಸ್ವಲ್ಪ ಮಟ್ಟಿಗಾದರೂ ಕಡಮೆಮಾಡಿ ವಿವೇಕ ... ಹೆಚ್ಚುತ್ತಾ ಬರುವಂತೆ ಮಾಡುವುದೇ ಅವರ ಸಂಬಳ. ಇದಕ್ಕೆ ಬೆಲೆ ... ಕಟ್ಟಲಾಗುವುದಿಲ್ಲ. ಆದುದರಿಂದ ಉಪಾಧ್ಯಾಯರಿಗೂ ಭಾರಿ ಸಂಬಳ ಬರು... ಭಾವಿಸಿ ಅವರನ್ನು ಗೌರವಿಸಿ ವಿದ್ಯಾ ಸಂಪಾದನೆಮಾಡತಕ್ಕದ್ದೇ ಮನುಷ್ಯ ... ವಾಗಿರುತ್ತೆ. ಉಪಾಧ್ಯಾಯರು ಮಕ್ಕಳಲ್ಲಿ ಸತ್ಕೃತ, ಪರೋಪಕಾರ ... ಮಾತೃ ಪಿತೃ ಭಕ್ತಿ, ಗುರುಭಕ್ತಿ, ರಾಜಭಕ್ತಿ, ದೈವಭಕ್ತಿ, ಪ್ರಾಣಿ ... ದಯೆ, ತಾಳ್ಮೆ, ಸನ್ಮಾರ್ಗದಿಂದ ಜೀವನೋಪಾಯ, ಇತ್ಯಾದಿ ಗುಣಗಳನ್ನು ಬೆಳಸಿ, ದುರ್ಗುಣಗಳು ನಾಶವಾಗುವಂತೆ ಮಾಡುವುದು. ಈ ರೀತಿ ... ಸವಲತ್ತಿಯನ್ನು ತಾಯಿತಂದೆಗಳೇ ಮಾಡಲು ಅನುಕೂಲವಿಲ್ಲದಿರುವುದರಿಂದ ತಮ್ಮ ಮಕ್ಕಳು ಬುದ್ಧಿವಂತರಾಗಿ ಬಾಳಲಿ ಎಂಬ ಅಭಿಪ್ರಾಯದಿಂದ ಉಪಾಧ್ಯಾಯರ ವಶಕ್ಕೆ ಒಪ್ಪಿಸುತ್ತಾರೆ. ಉಪಾಧ್ಯಾಯರು ಅತ್ಯವಶ್ಯಕ ವಿಷಯಗಳನ್ನು ಬೋಧಿಸಿ, ಮಕ್ಕಳು ದೊಡ್ಡವರಾದ ಮೇಲೆ ಸುಖದಿಂದ ಬಾಳುವಂತೆ ಮಾಡುವ ಕೆಲಸವು ತಾಯಿತಂದೆಗಳು ಸಂಪಾದಿಸಿ ಇಟ್ಟ ಆಸ್ತಿಗಿಂತಲೂ ... ಶ್ರೇಷ್ಠವಾದುದು. ಆಸ್ತಿ ಸಂಪಾದನೆ ಇಲ್ಲದವರ ಮಕ್ಕಳು ... ವಂತರಾಗಿ ತಮ್ಮ ಮನೆಯ, ಊರಿನ, ದೇಶದ ಜನಗಳನ್ನು ಸೌಖ್ಯಪಡಿಸುವುದಲ್ಲದೆ ತಾವೂ ಸುಖಪಡುತ್ತಾ ಇರುವುದಕ್ಕೆ ಎಷ್ಟೋ ನಿದರ್ಶನಗಳಿವೆ. ... ಗುರುವು ಗೌರವಕ್ಕೆ ಎಷ್ಟರಮಟ್ಟಿಗೆ ಅರ್ಹನೆಂಬುವುದು ವ್ಯಕ್ತವಾಗುವುದು.

ಈ ರೀತಿ ಇದ್ದರೂ ಗ್ರಾಮಾಂತರಗಳಲ್ಲಿರುವ ಉಪಾಧ್ಯಾಯರು ವಿದ್ಯಾವಂತರ ... ದಿಂದಲೂ, ಉಪಾಧ್ಯಾಯರಿಗೆ ಗೌರವಕೊಟ್ಟರೆ ತಮ್ಮ ಗೌರವಕ್ಕೆ ... ತೆಂಬ ಇತರ ಇಲಾಖೆಯ ಕೆಲವು ನೌಕರರುಗಳಿಂದಲೂ ಕಷ್ಟಕ್ಕೆ ... ರಾಗಿರುತ್ತೆ. ಉಪಾಧ್ಯಾಯ ಕೆಲಸವು ಎಲ್ಲಾ ರಾಜಕಾರ್ಯಗಳಿಗೂ ... ದುದರಿಂದಲೂ, ಕಷ್ಟಸಾಧ್ಯವಾದುದರಿಂದಲೂ, ಸಮಸ್ತ ಪ್ರಜೆಗಳೂ ... ಸುಖ ದೊರೆಯುವುದಿಲ್ಲವಾದುದರಿಂದಲೂ ಗ್ರಾಮಾಂತರಗಳಲ್ಲಿರುವ ... ಇಲಾಖೆಯ ನೌಕರರೂ ಉಪಾಧ್ಯಾಯ ಕೆಲಸವನ್ನು ಗೌರವಿಸುವುದರ ... ಎಲ್ಲಾ ಪ್ರಜೆಗಳೂ ಗೌರವಿಸುವಂತೆ ಮಾಡುವುದು ಯುಕ್ತವಾಗಿರುತ್ತೆ.

ಗ್ರಾಮಾಂತರಗಳಲ್ಲಿರುವ ಪಾಠಶಾಲೆಯ ಉಪಾಧ್ಯಾಯರುಗಳಿಗೆ ಜೀವನಾರ್ಥವಾಗಿ ರಾಜನಿಯಮಿತವಾಗಿರುವ ಕಲಬು ರೆವಿನ್ಯೂ ನೌಕರಮಾನೇರುಗಳವರಿಂದ ಪಾವತಿ ಮಾಡಲ್ಪಡಬೇಕೆಂದು ವಿಧಿ ಇರುವುದು. ಅಂಥಾ ಅಧಿಕಾರಿಗಳಲ್ಲಿ ಕೆಲವರು ತಮ್ಮ ಆಜ್ಞೆಗೆ ಒಳಪಟ್ಟ ಕುಳವಾಡಿ, ತಳವಾರರ ಮೂಲಕ ಉಪಾಧ್ಯಾಯರನ್ನು ಕರಸುವದು, ಯಾವುದೋ ಸ್ಥಳದಲ್ಲಿ ಗ್ರಾಮಸ್ಥರೊಡನೆ ಕುಳಿತುಕೊಂಡು ಕಲಬು ಬೇಕೋ ಬೇಡವೋ ಎಂದು ಕೇಳುವುದು, ಈ ರೀತಿ ಅಗೌರವವಾದ ಮಾರ್ಗದಲ್ಲಿ ಕಲಬು ಪಾವತಿ ಮಾಡಲು ಪ್ರಯತ್ನಿಸುತ್ತಿರುವರು. ಗ್ರಾಮದ ಜನಗಳು ಇದನ್ನು ನೋಡಿ ಉಪಾಧ್ಯಾಯರು ಗೌರವಕ್ಕೆ ಪಾತ್ರರೇ ಅಲ್ಲವೆಂದು ತಿಳಿದುಕೊಳ್ಳುವರು. ಇದರಿಂದ ಉಪಾಧ್ಯಾಯರ ಪ್ರಯತ್ನಕ್ಕೆ ಸಂಬಳವಿಲ್ಲದೆ ನಿಷ್ಪ್ರಯೋಜನವಾದಂತಾಗಿ ರಾಜ್ಯದಲ್ಲಿ ದುಷ್ಪ್ರವರ್ತನೆಗಳೇ ಜಾಸ್ತಿಯಾಗುತ್ತಾ ಬರುವುವು. ಆದುದರಿಂದ ವಿದ್ಯಾವಂತರಾಗಿರುವ ಇತರ ಇಲಾಖೆಯವರೂ ಇಂಥಾ ಆಕ್ಷೇಪಣೆಗೆ ಅವಕಾಶಕೊಡದೆ ಬೋಧಕರ ಕೆಲಸ ಸಾರ್ಥಕವಾಗಲು ಸಾಧ್ಯವಾದಷ್ಟು ಸಹಾಯಮಾಡುತ್ತಾ ತಾವೂ ಮಾದರಿಯಾಗಿದ್ದರೆ ಬೇಕಾದಷ್ಟು ಪ್ರಯೋಜನವಾಗಿ ಸಣ್ಣ ಹಳ್ಳಿಯವರೂ ಮೇಲಾದ ಸ್ಥಿತಿಗೆ ಬರುವುದರ ಮೂಲಕ ದೇಶವು ಅಭಿವೃದ್ಧಿಯಾಗಿ ಸರ್ವರೂ ಸುಖವಾಗಿ ಬಾಳುತ್ತಾರೆಂದು ಹಾರೈಸುವ

ಗುರು ಗೌರವಾರ್ಥಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ತಾಪದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

-ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-35] GIRLS' INDUSTRIAL SCHOOL, HASSAN.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ರೋಗಿಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [108-36]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೩೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಮಣಿ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[321-30] ಬ್ರಾಂಚ್ ಸೆಕ್ರೆಟರಿ, ಮದರಾಸ್.

ವಿಶೇಷ ಸೂಚನೆ

ವರ್ತಕರಿಗೆ ಒಳ್ಳೆಯ ಸಮಯ. ಮೋಸಮಾಡದೆ ಲಾಭಸಂಪಾದನೆ.

ಅಲ್ಪ ಲಾಭಕ್ಕಾಗಿ ಅಸಹ್ಯಕರವಾದ ಕೊಬ್ಬಿನ ತುಪ್ಪವನ್ನು ಮಾರಿ ಜನಗಳ ಆರೋಗ್ಯವನ್ನು ಹಾಳುಮಾಡದೆ, ಶುದ್ಧವಾದ, ಶ್ರೇಷ್ಠವಾದ ಹತ್ತಿಯ ತುಪ್ಪವನ್ನು ಸತ್ಯವಾಗಿ ಸರಿಯಾದ ಬೆಲೆಗೆ ಮಾರಿ ನಿಮ್ಮ ಗಿರಾಕಿಗಳಿಗೂ ನಿಮಗೂ ಪ್ರಯೋಜನವಾಗುವ ಕೆಲಸಮಾಡಿ ಲಾಭ ಸಂಪಾದನೆ ಮಾಡಿ.

ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನ್‌ರಾಗಿದ್ದ ಡಾಕ್ಟರ್ ಅಚ್ಯುತರಾಯರವರೂ, ಪ್ರಜಾ ಆರೋಗ್ಯ ರಕ್ಷಣೆಕ್ಕಾಗಿರುವ ಡಾಕ್ಟರ್ ಶ್ರೀನಿವಾಸರಾಯರವರೂ ಮೊದಲಾದ ಅನೇಕ ಜನ ದೊಡ್ಡ ಮನುಷ್ಯರುಗಳಿಂದ ಶ್ಲಾಘಿಸಲ್ಪಟ್ಟಿರುವ ಪರಿಶುದ್ಧವಾಗಿಯೂ ಆರೋಗ್ಯಕರವಾಗಿಯೂ ಪುಷ್ಟಿಕರವಾಗಿಯೂ ಇರುವ ನಮ್ಮ

ಹೊಸದಾದ ಹತ್ತಿಯ ತುಪ್ಪವನ್ನು

ಮೊದಲಿಗಿಂತ ಈಗ ಬಹಳ ಅಗ್ಗವಾಗಿ ಕೊಡುತ್ತಿರುವೆವು.

ಬೇಗ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚು ವಿಷಯವನ್ನು ತಿಳಿದು ಫಲವನ್ನು ಹೊಂದಬಹುದು.

ನಮ್ಮ ವಿಳಾಸ—ಜಿ. ಯಸ್. ಶ್ರೀಕಂಠಯ್ಯ ಅಂಡ್ ಕಂಪನಿ,
ಏಜಂಟ್ಸ್, ಇಂಡಿಯನ್ ಕೋಅಪರೆಟಿವ್ ಸ್ಟೋರ್ಸ್ ಕಂಪನಿ,
[70-4] ದೊಡ್ಡಪೇಟೆ, ಮೈಸೂರು.

ನಕ್ಕಲ್‌ಗಳಿಂದ ಮೋಸಹೋಗದಿರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರತಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬರಣಿ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೀಟ್ ಕೆರೋಸೀನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಟಿಕರ ಕೂದಲೆಣ್ಣೆ

ಯಲ್ಲಿ ಬೀಟ್ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ.—ಶಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[296-19] 177, ಜೈನಾಬಜಾರ್ ರೋಡ್, ಮದರಾಸ್.

ಇನಾಂ ಸಾಮಾನು 50!! ಇನಾಂ ಸಾಮಾನು 50!!!

ಅನೇಕ ಯೋಗ್ಯತಾ ಪತ್ರಿಕಗಳು ಪಡೆದಿರುವ "ರಾಜಸುಂದರಿ ಸಿರೋಜ"

ಇದರ ಬೆಲೆ ೫೦ ಇನಾಂ ಸಾಮಾನುಗಳೊಡನೆ ಬುಡ್ಡಿ ೧ ಕ್ಕೆ ರೂ. ೦-೧೨-೦ ಮಾತ್ರವೇ.

ಯಾವ ಸ್ತ್ರೀಯರಿಗೆ ತಮ್ಮ ತಲೆ ಕೂದಲು ಅಂದವಾಗಿರಬೇಕೆಂಬ ಆಶೆಯುಂಟೋ, ಯಾವ ಸ್ತ್ರೀಯರಿಗೆ ತಮ್ಮ ಉದುರುತ್ತಿರುವ ಕೂದಲನ್ನು ತಡೆದು ಕೋಮಲವಾಗಿ ಬೆಳೆಸಬೇಕೆಂಬ ಉದ್ದೇಶವುಂಟೋ ಅಂಥಾವರು ಈ ನಮ್ಮಲ್ಲಿ ದೊರೆಯುವ ಹೆಚ್ಚು ಯೋಗ್ಯತೆಯುಳ್ಳ "ರಾಜಸುಂದರಿ ಸಿರೋಜ" ಯೆನ್ನುವ ಎಣ್ಣೆಯನ್ನು ಉಪಯೋಗಿಸಬೇಕೇ ಹೊರ್ತು ಇತರ ಸಾಧಾರಣ ಎಣ್ಣೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ನಮ್ಮ ಎಣ್ಣೆಯನ್ನು ಸ್ವಲ್ಪ ಕೈಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಚೆನ್ನಾಗಿ ಹಚ್ಚಿಕೊಂಡು ಬಾಚುತ್ತಾ ಬಂದರೆ ಉದುರುತ್ತಿರುವ ಕೂದಲಿನ ಬುಡವು ದೃಢವಾಗಿ ನಿಲ್ಲುತ್ತದೆ. ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದಲ್ಲದೆ ಮುಖಕ್ಕೆ ಕಾಂತಿಯನ್ನೂ ಮನಸ್ಸಿಗೆ ಉಲ್ಲಾಸವನ್ನೂ ಕೊಟ್ಟು ಕೂದಲನ್ನು ಉದ್ದವಾಗಿ ಬೆಳೆಸುತ್ತದೆ. ಒಂದು ಬಾಟ್ಲಿಯನ್ನು ತರಿಸಿ ನೋಡಿ.

ಇನಾಂ ಸಾಮಾನುಗಳ ವಿವರ:—ಕೊಂಡಿ ಗಿಣಿ 6, ಕಪ್ಪು ಭರಣಿ 1, ಕನ್ನಡಿ 1, ದಂತದ ಬಾಚಣಿಗೆ 1, ರಾಜರಾಣಿ ಕಾರೋನೇಷನ್ ಪೆಟ್ಟಿಗೆ 1, ತಾಂಬೂಲ ಮಾತ್ರೆ 30, ರವಿವರ್ಮ ಫೋಸ್ಟ್ ಕಾರ್ಡು 6, ಅತ್ತರ್ ಬಿಲ್ಲೆ 1, ಗಂಧದ ಬಿಲ್ಲೆ 1, ಬ್ರಷ್ 1. [250-21]

ನಮ್ಮ ವಿಳಾಸ:—ಯನ್. ಮುನಿಸಾಮಿ ಮೊದಲಿಯಾರ್,
ನಂ. ೬, ವೆಂಕಟೇಶಮೇಸ್ತ್ರಿ ಬೀದಿ, ಮದರಾಸು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸದ್ಗುಣಗಳನ್ನು ಪರಿಶೋಧಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-33]

ನಮ್ಮ ವಿಳಾಸ:—ಬಿ. ಎಸ್. ಸಾಧು ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಮಕ್ಕಳ ಆರೋಗ್ಯ.
ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಿಹುಳಗಳಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವದು, ಕುಡಿ, ಉಬ್ಬಸ, ಕ್ಷಯ, ಗರ್ಭವಿಟ್ಟ ಮುಂತಾದ ಅನೇಕ ವ್ಯಾಧಿಗಳನ್ನು ನಾಶನಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಉಪಯೋಗಿಸಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ ಅಂಚೆ ವೆಚ್ಚ ಬೇರೆ. [335-20]



ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಶೈತ್ಯ, ಬಾಹ್ಯಾಸ, ಬಾಣಂತಿಸನ್ನಿ, ಸೂತಿಕಾಶೂಲ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ಪುಷ್ಟವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಮೇ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0

ಈವೇ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-48]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 3-6-0.

ಮೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಬೆಂಗಳೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

[99-48] ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರಿಗೆ ನಡಿಸಲ್ಪಡುತ್ತೆ.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಅಲ್ಲಾಸ-ಕಾ-ನಬಾದ, 20-3-15.

ಅರ್ಧ ಬೆಲೆ ಮಾತ್ರ.

ಸರಾಕರಾದ ನಮ್ಮ ಮಾನನೀಯ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ಪರೀಕ್ಷಿಸಿದವರಿಗೆ ಇದೊಂದು ಉತ್ತಮ ಸಮಯ. ಈ ಎಂಟು ದಿನಕ್ಕೊಂದು ಸಲ ಕೀ ಕೊಡಲ್ಪಡುವ ಸಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಆರ್ಡರುಗಳನ್ನು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರೆಯಬೇಕು.

ನಮ್ಮ ವಿಳಾಸ:— ದಿ ಮಾರುತಿ ಏಜೆನ್ಸಿ,
[260-23] ಪಿ. ಒ. ಬಾಕ್ಸ್ 330, ಬೊಂಬಾಯಿ.

ನೂತನವಾದ ಜೇಬಿನ ಘಡಿಯಾರ.

ಅರ್ಧ ಕ್ರಯ ರೂ. 1-12-0.

ಟಪಾಲು ಚಾರ್ಜು 0-4-0 ಪ್ರತ್ಯೇಕ.

ಈ ಭಾರಿ ಮಜಬೂತಾದ ಘಡಿಯಾರವನ್ನು ಜರೂರ ಕ್ರಯದಲ್ಲಿ ಕೊಳ್ಳುವವರಿಗೆ ಕಾಲ ಮೇರೆಗಾಗಿ ಹೇಳಿಕೊಳ್ಳುವಂತೆ ಮೇಲ್ಕಂಡ ಅರ್ಧ ಬೆಲೆಗೆ ಕೊಡಲ್ಪಡುತ್ತೆ.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇವರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟಿದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ಚಿತ್ರದಲ್ಲಿ ಕಂಡ ಲೇಡಿ ವಾಚ್ ಶೀಲ್ಡ್ ಲಿವರ್ ಚಿಕ್ಕ ಸೈಜು ಕಂಪೆನಿ ಸೇಫರ್ ಬ್ರಾಸ್ಲೆಟ್ ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಏಪ್ರಿಲ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ. [68-3]

ನಮ್ಮ ವಿಳಾಸ:— ನ್ಯೂಯಾರ್ಕ್ ವಾಚ್ ಕಂಪೆನಿ,
ನಂ. 6, ವೆಂಕಟೇಶಮೇಸ್ತ್ರಿ ಪೇಟೆ, ಮದರಾಸು.

ರೊಂಡಿನೋವನ್ನು "ಸ್ನೇಹಿತರಿಂದ ಹಿಂಸೆಪಡುವದಕ್ಕೆ" ಸಮಾನವಾಗಿ ಒಬ್ಬ ಪ್ರಖ್ಯಾತ ಬರವಣಿಗಾರನು ವಿವರಿಸಿ ಬರೆದಿದ್ದಾನೆ. ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬದು ಹಂಪಾತವನ್ನು ಆದ್ಭುತರೀತಿಯಲ್ಲಿ ವಾಸಿ ಮಾಡುತ್ತೆ.

ಲಕ್ಷಾಂತ್ರ ಜನಗಳ ಪೈಕಿ ಕೆಲವರು ನಂಬಿಕೆಯಿಂದಲೂ, ಕೆಲವರು ಬೆರವಸದಿಂದಲೂ, ಕೆಲವರು ಅವಿಶ್ವಾಸದಿಂದಲೂ ಉಪಯೋಗಿದ್ದಾರೆ. ಆದರೆ ನೋವಿನ ಬಿಡುಗಡೆಯಾದಾಗ, ನಿಮ್ಮಂತೆಯೇ ಎಲ್ಲರೂ, "ರೊಂಡಿನೋವಿಗೆ ಇದೊಂದೇ ಕೈಕಂಡ ಔಷಧವೆಂದು" ಹೇಳುವರು.

ಬಾತ್ ನಗರದ ಟ್ರಾಜೆಂಟ್ ಬೀದಿಯಲ್ಲಿರುವ ಮಿ॥ ಡಬ್ಲ್ಯು. ನೌಲ್ಸ್ ಬರೆಯುವುದು:—"5 ವರುಷಗಳ ಹಿಂದೆ ನಾನು ರೊಂಡಿನೋವಿನಿಂದ ಬೋಳಾಬಿದ್ದಿದ್ದೆ. ನನ್ನ ಬಲ ತೊಡೆಯಿಂದ ಅಂಗಾಲಿನವರಿಗೆ ವಾಯುವಿನ ಯಾತನೆಯಿಂದ ರಾತ್ರೀ ಹಗಲು ಕಳೆಯುತ್ತಿದ್ದೆನು. ರಾತ್ರಿಯಲ್ಲಿ ನೋವಿನ ಬಿಸಿಯಿಂದ ಎಚ್ಚರವಾಗಿ, ನಿದ್ರೆಯೇ ಬರುತ್ತಿರಲಿಲ್ಲ. "ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬದನ್ನು ಒಂದು ಸೀಸೆ ಉಪಯೋಗಿಸಿ ಪೂರ್ಣ ಸೌಖ್ಯ ಹೊಂದಿದೆನು."

ಸೀಸೆ 1ಕ್ಕೆ 1 ರೂಪಾಯಿಯಂತೆ ಎಲ್ಲಾ ಔಷಧಗಾರರಿಂದಲೂ ಮಾರಲ್ಪಡುತ್ತೆ. [81-1]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

16—4—1915 ರಿಂದ 23—4—1915 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	2	0	0	0
ಮೈಸೂರು ,,	6	4	0	9
ಕೋಲಾರ್ ,,	1	1	0	0
ಕೋಲಾರ್ ಚಿನ್ನದ ಗಣಿಗಳು	1	2	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	1	2	2
ಚಿತ್ರದುರ್ಗ ,,	0	0	0	0
ಕಡೂರ್ ,,	10	9	0	0
ಶಿವಮೊಗ್ಗ	11	8	0	0
ಜುಮ್ಲಾ....	36	25	2	2

ಶಾಲಿವಾಹನ ಶಕ 1838 ನೇ ರಾಕ್ಷಸ ಸಂವತ್ಸರ ಉತ್ತರಾಯಣ ವಸಂತ ಋತು ಅಧಿಕ ವೈಶಾಖ ಬಹುಳ ನವಮಿ ಶುಕ್ರವಾರದಿಂದ ಬಹುಳ ಅಮಾವಾಸ್ಯೆ ಗುರುವಾರದ ವರೆಗೆ ಒಂದು ವಾರದ ಪಂಚಾಂಗ.

1915 ನೇ ಮೇ

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮೊಹ ರಮ ತಾರೀ
7	ಶುಕ್ರ *	ನವಮಿ	50-22	ಧನಿಷ್ಠ	28-20	25
8	ಶನಿ	ದಶಮಿ	49-31	ಶತಭಿಷ	28-48	26
9	ಭಾನು ;;	ಏಕಾದಶಿ	49-55	ಪೂರ್ವಾಭಾದ್ರ	30-30	27
10	ಸೋಮ ‡	ದ್ವಾದಶಿ	51-38	ಉತ್ತರಾಭಾದ್ರ	33-25	28
11	ಮಂಗಳ §	ತ್ರಯೋದಶಿ	54-24	ರೇವತಿ	37-28	29
12	ಬುಧ †	ಚತುರ್ದಶಿ	58-20	ಅಶ್ವಿನಿ	43-40	30
13	ಗುರು ::	ಅಮಾವಾಸ್ಯೆ	60-0	ಭರಣಿ	48-43	31

* ಮಳೆ ನಕ್ಷತ್ರ—ಭರಣಿ 4 ನೇ ಪಾದ. ;; ಸರ್ವತ್ರ ಏಕಾದಶಿ. ‡ [illegible] ನಕ್ಷತ್ರ—ಕೃತ್ತಿಕೆ 1 ನೇ ಪಾದ. § ಪ್ರದೋಷ, ಶ್ರೀರಂಗದಲ್ಲಿ [illegible] ಸ್ವಾಮಿ ರಥ. † ಮಾಸಶಿವರಾತ್ರಿ, ಮೃತ್ಯುಯೋಗ. :: ಸರ್ವತ್ರ ಅಮಾವಾಸ್ಯೆ.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಆರ್ಗನೈಸರ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ನಡೆಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೋಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಏಜೆಂಟರುಗಳು ಮತ್ತು ಬ್ರಿಟಿಷ್ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನು ಮತ್ತು ಮನೆಗಳನ್ನು ಕೊಂಡುಕೊಡುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟ್‌ಮೆಂಟಿನ ಕಾರ್ಯಗಳನ್ನು ನಡೆಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳೂ ಸಹಾ ಬೇಕಾಗಿದೆ. ಇಷ್ಟವುಳ್ಳವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

M. L. NAGANNA,
[15-17] Managing Director, Life & Marriage Assurance Buildings, Mysore.

Printed and Published by the Rev. H. G[illegible] Proprietor and Manager, Wesleyan Mission Press, Mysore. 6/5/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ ನೇ ಇಸವಿ ಮೇ ತಾರೀಖು ೧೮ ನೇ ಗುರುವಾರ. ಸಂಚಿಕೆ ೫೦

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ಕರಪಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಳಕೆಗೆ ಸಿದ್ಧವಾಗಿವೆ ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[38-14] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯೆ, ನೀತಿ, ಕಲೆ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [160-43]

ಅತ್ಯುತ್ತಮ ಕಾದಂಬರಿಗಳು:—ವಿಜಯ 1 ವಾಲ್ಮೀಕಿ 12 ಆ; ಅಶ್ವತ್ಥಾಮ್ನ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿನಾಶ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ನಾಟಕ 2½ ಆ; ಸುಶೀಲೆ 6 ಆ; ಸಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 1 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪನಿ, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಸುಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುವುದು. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-14]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಜರ್ಮನ್ ಫಿರಂಗಿ ಚಿತ್ರ ಸಹಿತ ಅಚ್ಚಾಗಿರುವುದು. ಕ್ರಯ 4 ಆಣೆ; ವಿ. ಪಿ. ಮೂಲಕ 6 ಆಣೆ ಮಾತ್ರ.

ಈ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯುವುದಕ್ಕೆ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ. ಪಟೇಲರ ಮ್ಯಾನುಯಲ್ ಕರ್ತವ್ಯ 1 ರೂಪಾಯಿ.

[143-44] ವಿಳಾಸ:—ಬಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,

[31-13] ಸುಬೋಧ ಗ್ರಂಥಾಲಯ, ಮೈಸೂರು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

"ಜ್ವರದಮನಿತ್ರಿ." ಬಹು ಖಂಡಿತ! ಬಹು ಜಾತಿಯಿಂದ ಎಲ್ಲಾ ವಿಧ ಜ್ವರಗಳನ್ನೂ ನಿವಾರಿಸಿ ಶಾಶ್ವತ ಗುಣಕೊಟ್ಟಿದೆ. ಇದರಿಂದ ಗುಣ ಕಾಣದವರೇ ಇಲ್ಲ. 24 ಮಾತ್ರೆ ಶೀಷೆಗೆ 8 ಆಣೆ. 6 ಶೀಷೆಗೆ 2½ ರೂ. ಇನ್ನೂ ಬಹು ಗುಣಕಾರಿ ಔಷಧಿಗಳು ನಮ್ಮಲ್ಲಿವೆ

[262-23] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು

Price, 6 as. **Price, 0-6-0.**

READY FOR SALE.

ENGLISH L. S. TEXT NOTES, 1916

By H. Nagappa, B.A., & A. Srikantaiya, B.A. Copies can be had at the Student's Hall, Mysore; C. L. S. Book Depot, Mysore; General Agency, Mysore; or H. N. Rao Bros., Bangalore City. [83]

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ ...	0-8-0
ತಾರಾಸುಂದರಿ	0-8-0	ಕುಮುದಿನಿ ...	0-6-0
ರಾಧಾಮಾಧವಿ	0-8-0	ಸಂತಾಪಕ ...	0-4-0

[275-22] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,

MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದುಚರಿತ್ರಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-18]

MYSORE L. S. EXAMINATION 1916.

The Story of Rama 0-4-0, Romantic Tales 0-6-0, The Best & Cheapest Notes on These Two 0-5-0, Dictation Book 0-4-0, English Essays & Letter-Writing 0-6-0, General English Papers with Answers 0-8-0. Can be had from the Mission Book Depot, Bangalore City; C. L. S. Depot or Students' Hall or General Agency, Mysore. Apply to

M. N. SITA RAMA RAO,

[88-1] **Krishnaraja Mohalla, Mysore**

ಊದಬತ್ತಿಗಳು

ಸುವಾಸನೆ ಸುಂಣ ಶೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯೆಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಕೇಶೋಲ್ಲಾಸಿನಿ ಶೀಷಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಭೃಂಗಾಮಲಕತೈಲ ಶೀಷಾ 1 ಕ್ಕೆ 1 ರೂ.

ಇದು ಸ್ನಾನಮಾಡುವಾಗಲೂ ರಾತ್ರಿ ಮಲಗಿಕೊಳ್ಳುವಾಗಲೂ ತಲೆಗೆ ಹಚ್ಚಿಕೊಂಡದ್ದೇ ಆದರೆ ಸಮಸ್ತ ಉಷ್ಣವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯೂ ಸಹಾ ಬರುತ್ತೆ.

ವಿಳಾಸ—ಟಿ. ಎಲ್. ಉಪಾಧ್ಯಾಯ,

[39-12] ಸುಗಂಧಕಾರಿ, ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಳನಳಿಸುವ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾತ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಕಾವೇರಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೊಡೆಯ ಕೂಡಗಿಡ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ಸೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ, ವಸ್ತುವಿನ ಮೊಹರುಟಾನ್ ನೋಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ತುಷ್ಟಿವಾದಿಕೆಯು ಆರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-16]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾಡುಗಳು ಕೇಸ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಪಿ ಉಲ್ಲ್ ಮಾರ್ಕೆಟ್, ಮಂಗಳೂರು.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-45] Bangalore City.

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹೆ!!!

ಗಟ್ಟಿ ಬಣ್ಣದ ಧಡೂತಾದ ಸೀರೆಗಳು.

ಸೋಲಾಪುರದ ತರಹೆವಾರಿ ಚೆಕ್ಕುಗಳು.

ಶುದ್ಧಿ ಮಾಡಿದ ಹರ್ಸ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [55-8]

ತ್ವರೆಮಾಡಿ! ಸಾವಕಾಶ ಮಾಡಿದರೆ ಸನಗು ಸಿಕ್ಕದು.

ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್, 159, ಕಿಲಾರಿ ರೋಡು (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಪ್ರೊಫೆಸರ್ ಗಜ್ಜಾರ್‌ರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ಪ್ಲೇಗ್ ದ್ರಾವಕ.—ಇದು ಸರ್ವೋತ್ಕೃಷ್ಟವಾಗಿ ತಯಾರಿಸಲ್ಪಟ್ಟ ಔಷಧ. ಇದು ಅನೇಕ ಪ್ರಾಣಗಳನ್ನು ಗಂಡಾಂತರದಿಂದ ತಪ್ಪಿಸಿದೆ. ಸಕಾಲದಲ್ಲಿ ಉಪಯೋಗಿಸಿದರೆ ಪ್ರಾಣಭೀತಿ ಇಲ್ಲ. ನಿಮ್ಮ ಸ್ನೇಹಿತರಿಗೂ ತಿಳಿಸಿರಿ. ಇದರ ಕ್ರಯ ರೂ. 0-8-0.

ರಕ್ತಶೋಧಕ ದ್ರಾವಕ.—ರಕ್ತವನ್ನು ಶುದ್ಧಿಮಾಡುವುದರಲ್ಲಿ ಇದು ಪ್ರಖ್ಯಾತಿಪಡೆದಿದೆ. ಇದಲ್ಲದೆ ಈ ದ್ರಾವಕವು ನಾನಾ ದೀರ್ಘ ರೋಗಗಳನ್ನು ಗುಣಪಡಿಸಿ, ಆರೋಗ್ಯದಲ್ಲಿಡುತ್ತದೆ. ಕ್ರಯ ರೂ. 1-0-0.

ಚಳಿಜ್ವರ ದ್ರಾವಕ.—ಇದು ಬಹಳ ಚೆನ್ನಾಗಿ ಗುಣಕಂಡ ಔಷಧ. ಇದರಲ್ಲಿ ಕ್ವಿನೈನ್ ಸ್ವಲ್ಪವೂ ಮಿಶ್ರಮಾಡಿಲ್ಲ. ಬಹಳ ಕ್ಷೇಮಕರವಾದದ್ದು. ಕ್ರಯ ರೂ. 0-8-0.

ಹುಳುಕಡ್ಡಿ ಔಷಧ.—ಇದಕ್ಕೆ ಸಮಾನವಾದ ಔಷಧವು ಎಲ್ಲಿ ಸಿಕ್ಕುವುದೇ ಇಲ್ಲ. 2-3 ನಿಮಿಷಗಳ ತನಕ ಈ ಔಷಧವನ್ನು ಹಚ್ಚಿ ಉಜ್ಜಿ ಬಿಸಿನೀರಿನಲ್ಲಿ ತೊಳೆದ ಕೂಡಲೇ ಹುಳುಕಡ್ಡಿಯು ಹುಟ್ಟೇ ಇರುವುದಿಲ್ಲ. ಎಂದೆಂದಿಗೂ ಮತ್ತೆ ಅದು ಕಲೆಹಾಕದು. ಕ್ರಯ ರೂ. 0-4-0.

ಅಪೂರ್ವ ಹಲ್ಲುಪುಡಿ.—ಎಲ್ಲಾ ತರದ ಹಲ್ಲುನೋವಿಗೂ ಸರ್ವೋತ್ತಮವಾದ ಹಲ್ಲುಪುಡಿ. ಹಲ್ಲಿನ ಬೇರನ್ನೂ, ಒಸಡನ್ನೂ ಬಹಳ ಚೆನ್ನಾಗಿಟ್ಟು ಕಾಪಾಡುತ್ತದೆ. ಕ್ರಯ ರೂ. 0-4-0, 0-6-0, 0-8-0.

ಲಿವರ್ ದ್ರಾವಕ.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸ ಮಾಡಿ, ಮಲಬದ್ಧವನ್ನು ಪರಿಹರಿಸುತ್ತದೆ. ಕ್ರಯ ರೂ. 0-10-0.

ಟಾನಿಕ್ ಸೊಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೋಟ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರಿಸಲಾಗಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,

[80-2] ಪಾರ್ಕ್ ಟೌನ್, ಮದರಾಸ್

ಜುವೆಲ್ಡ್ ಸ್ಪ್ರಿಂಗ್ ಪಾಕೆಟ್ಟು (ರಿಜಿಸ್ಟರ್ಡ್) ಲೀವರ್ ಗಡಿಯಾರ.

8 ಬಹುಮಾನಗಳ ಸಮೇತ ರೂ. 3-4-0.

5 ವರುಷದ ಗ್ಯಾರಂಟಿ ಕೊಡಲ್ಪಡುತ್ತೆ.

ಪ್ರಿಯ ಮಿತ್ರರೇ, ಈ ನಕ್ಷೆಯಲ್ಲಿ ತೋರಿಸಿರುವ ಜುವೆಲ್ ಸ್ಪ್ರಿಂಗ್ ಪಾಕೆಟ್ಟು ರಿಜಿಸ್ಟರ್ಡ್ ಲೀವರ್ ಗಡಿಯಾರ. 6 ರತ್ನಗಳು ಉಳ್ಳ ಕಂಪೆನ್ಸೇಷನ್ ಬ್ಯಾಲೆನ್ಸ್, ಬಹು ಬಲಿಷ್ಠವಾದ ಗಡಿಯಾರ. ಈ ಗಡಿಯಾರ ನಾಜೂಕಾದ ಯಂತ್ರದಲ್ಲಿಯೂ, ಶ್ರೇಷ್ಠವಾದ ಕೇಸಿನಲ್ಲಿಯೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟದ್ದು. ಇದನ್ನು ಕೈಗೂ ಕಟ್ಟಿಕೊಳ್ಳಬಹುದು. ಇದು ನೋಡುವುದಕ್ಕೆ ಸುಂದರವಾಗಿಯೂ, ಮುಚ್ಚಟವಾಗಿಯೂ ಇರುತ್ತೆ.

ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶದಿಂದಲೂ, ಭಾರಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಗಡಿಯಾರವನ್ನು ಈಗಲೆ ಬರೆದು ತರಿಸಿಕೊಳ್ಳಿ.

ಬಹುಮಾನ ತಪಸೀಲು ಹ್ಯಾಗಂದರೆ—(1) ಸುಂದರವಾದ ಸರಪಣಿ, (2) ಉತ್ತರ ಮುಖಿ (3) ಇಂಗ್ಲಿಷ್ ನಮೂನೆ ಬಾಚಣಿಗೆ, (4) ಜರ್ಮನ್ ಕನ್ನಡಿ, (5) ಜರ್ಮನ್ ಸಿಲ್ಕು ಕರವಸ್ತ್ರ, (6) ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ (ಬಹು ಸೊಗಸಾದದ್ದು), (7) ಸರಟು ಗುಂಡಿ ಸೆಟ್, (8) ಸುವಾಸನೆಯುಳ್ಳ ಸಾಬೂನ ಸೀಸೆ (ಸೆಟ್).

ನಮ್ಮ ವಿಳಾಸ:—ಕೆ ರಾಮಚಂದ್ರರಾವ್,

[85-1] ನಂ. 92, ಆದಿಯಪ್ಪನಾಯ್ಕನ್ ಬೀದಿ, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಮು (ಭಾರ), ಮೈ ನಡುಕ, ... ತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಶೀಘ್ರವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ... ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಂಪಡಿಸಿ, ರಕ್ತದಲ್ಲಿಯ ... ವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತೆ ... ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳ ... ಕುಪ್ಪಿಗೆ 4 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-36]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಹಿ ಎಂ. ಇ. ಸ್ಕೂಲ್, ಪಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಕಾರರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಈಗಲೇ ಪರೀಕ್ಷಿಸಿ ನೋಡಿ. ಇನ್ಯಾವುದನ್ನೂ ಉಪಯೋಗಿಸಬೇಡಿ.

ಮಕ್ಕಳಿಗೂ ಕೂಡ ಬಹಳ ಪ್ರಯೋಜನವಾದದ್ದು.

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ;-ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಏರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಿಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಶೋಧಿಸಿ ಪ್ರೀತಿಯಿಂದ ಉಪಯೋಗಿಸುತ್ತಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿ ತಯಾರ್ಮಾಡುತ್ತಾರೆ.

ಈ ಮಾತ್ರೆಗಳ ಕ್ರಯ	
	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ. 65 ಮಾತ್ರೆ ಪೊಟ್ಲಕ್ಕೆ 3 ಆಣೆ.
	195 ,, ಡಬ್ಬಾ ಸಮೇತ 8 ಆಣೆ. 455 ,, ಕನ್ನಡಿ ಡಬ್ಬಕ್ಕೆ 1 ರೂಪಾಯಿ

ಎಲ್ಲಾ ಅಂಗಡಿಗಳಲ್ಲೂ ವಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,

[80-2] ಪಾರ್ಕ್ ಟೌನ್, ಮದ್ರಾಸ್.

---

500 ರೂಪಾಯಿಗಳ ಬಹುಮಾನ್.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬಿ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ - ಸಾಲಾಮಿಸ್ರೀ ಮುರಬ್ಬವನ್ನು ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ, ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ... ಹೆಸರುಗಳನ್ನು ಇಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [62-9]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.

ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಮಾಂಸವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹ, ಬುದ್ಧಿಶಕ್ತಿ, ... ಶರೀರಕಾಂತಿಯು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—... ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಆಯುಷ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚಿ ತಾರೀಖು 15 ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ... ಪಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
6. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯು ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ಉಳಿಯಬಾರವು ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ ರಿಜಿಸ್ಟರ್ಡ್

[64-6]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಉಬಾಬು ಮಾತ್ರೆ 0-8-0. ಸುಂದರಿ ಮುಲಾಮು 0-3-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚಿಲ್ಲರೆ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಹಾರಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ವೈಭರಣೆ 1, ತಾಂಬೂಲ ಪಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಹಾರೋನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೇಸ್‌ಲೆಟ್ 1, ಮೊತ್ತ 60. ನಮ್ಮ ಕಂಪೆನಿ ಪ್ರಖ್ಯಾತಿಕೊಂಡುವುದಕ್ಕಾಗಿ ಇದೇ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡ್ಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,

[73-3] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ;

[172-40]

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ೧ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-18]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಸಕಲೇಶಪುರ ಟವರ್ ಬ್ರಾಹ್ಮಣರ ಶ್ರೇಣಿಯಲ್ಲಿ ಪಿತ್ರಾರ್ಜಿತವಾಗಿ ನನ್ನ ಹಕ್ಕಿಗೆ ಒಳಪಟ್ಟಿರುವ ನಮ್ಮ ತಂದೆ ಜ ಬರಡಿ ಸೂರ್ಯನಾರಾಯಣರವರ ಮನೆ ಮತ್ತು ಇದಕ್ಕೆ ಸಂಬಂಧಪಟ್ಟ ಹಿತ್ತಲು ವಗೈರೆ ಸ್ಥಿರಸ್ವತ್ತನ್ನು ಸಕಲೇಶಪುರದಲ್ಲಿರುವ ಆಚಂಗಿ ರಾಮಶಾಸ್ತ್ರಿಗಳು ವಿಕ್ರಯಿಸುವದಾಗಿ ಕೇಳುತ್ತೇನೆ. ನನ್ನ ಹಕ್ಕುದಾರಿಗೆ ಒಳಪಟ್ಟದ್ದು ರಾಮಶಾಸ್ತ್ರಿಗಳಿಗೆ ವಿಕ್ರಯಿಸಲು ಬಾಧ್ಯತೆ ಇರುವುದಿಲ್ಲ. ಅವರು ಅಕ್ರಮವಾಗಿ ಪರಜನರಲ್ಲಿ ಸದರಿ ಸ್ವತ್ತು ಪಡೆದಿರುವುದು ಊರ್ಜಿತವಾಗತಕ್ಕದ್ದಲ್ಲ. ಸದರಿ ಸ್ವತ್ತನ್ನು ರಾಮಶಾಸ್ತ್ರಿಗಳಿಂದ ಕ್ರಯ ದಾನ ವಗೈರೆ ಮೂಲಕ ತೆಗೆದುಕೊಂಡವರು ಕೊಟ್ಟ ಹಣವನ್ನು ಕಳೆದುಕೊಂಡು ನಮ್ಮ ನಷ್ಟ ಸಹಿತ ಸ್ವತ್ತನ್ನೆಲ್ಲಾ ಬಿಡಬೇಕಾಗುತ್ತೆ, ತಿಳಿಯುವುದು

[91-1] ಜಂಬರಡಿ ಸುಬ್ರಾಯ್, ಸಕಲೇಶಪುರ.

ಗೃಹಕೃತ್ಯದ ನೋಟೀಸು.

ಈ ಕೆಳಗೆ ರುಜು ಮಾಡಿರತಕ್ಕವರು ಈ ಪತ್ರಿಕೆಯಲ್ಲಿ 5-6-1913 ರಲ್ಲಿ ಫಾಯಿಸ್ ಮಾಡಿರತಕ್ಕದ್ದನ್ನು ಅನುಸರಿಸಿ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಸ್ಯೆಯದ್ ಪತ್ತಾ ಮತ್ತು ಸ್ಯೆಯದ್ ಮೊಹದೀನ್ ಸಾಬರುಗಳು ಏಕೋದರರು. ಪತ್ತಾ ಸಾಬರಿಗೆ ಸ್ಯೆಯದ್ ಗೌಸ್ ಎಂಬ ಮಗನೂ, ಮೊಹದೀನ್ ಸಾಹೇಬರಿಗೆ ಸ್ಯೆಯದ್ ಹುಸೇನ್ ಮತ್ತು ಇವರ ತಮ್ಮ ಮೈಸರ್ ಸ್ಯೆಯದ್ ಗಫರ್ ಸಾಬಿ ಎಂಬ ಇಬ್ಬರು ಮಕ್ಕಳೂ ಇರುತ್ತಾರೆ. ಸ್ಯೆಯದ್ ಮೊಹದೀನ್ ಸಾಹೆಬರು ಈಗ್ಗೆ 10 ವರುಷದಲ್ಲಿ ಮೃತರಾದರು. ಸಂಸ್ಥಕ್ಕೆ ಸೇರಿದ ಭಾರಿ ಬೆಲೆ ಬಾಳುವ ಸ್ಥಿರ ಆಸ್ತಿಗಳು ಹುಣಸೂರು ಮತ್ತು ಮಡಿಕೇರಿಯಲ್ಲಿ ಇರುತ್ತೆ. ಸ್ಯೆಯದ್ ಪತ್ತಾ ಸಾಬರಿಗೆ ಸುಮಾರು 87 ವರುಷ ವಯಸ್ಸಾಗಿ ಅತಿಯಾದ ಮುಪ್ಪಿನಿಂದ ಬುದ್ಧಿ ಸ್ವಾಧೀನವಿಲ್ಲದೆ ಮದುವೆಯಾದ ಹೆಂಡತಿಯು ಇದ್ದಾಗ್ಯೂ ಕೊರಮರವಳನ್ನು ಲಗ್ನ ಮಾಡಿಕೊಂಡು ಮನೆ ಬಿಟ್ಟು ಇತರರ ದುರ್ಬೋಧನೆಗೆ ಒಳಗಾಗಿ ಆಸ್ತಿಗಳನ್ನು ಪೋಲು ಮಾಡಲು ಶುರುಮಾಡಿ, ಖಾಲಿ ಇವರು ಮಾಡಿ ಇರತಕ್ಕ ಕಾನೂನಿಗೆ ವಿರೋಧವಾದ ಸೊತ್ತು ಪರಾಧೀನತೆ ವಿಷಯವಾಗಿ ಮಡಿಕೇರಿ ಸಿವಿಲ್ ಕೋರ್ಟಿನಲ್ಲಿ ನ್ಯಾಯ ನಡಿಸುತ್ತಾ ಇರುತ್ತೇವೆ ಮತ್ತು ಇವರು ಹೊಸೂರಲ್ಲಿ ಸ್ಯೆಯದ್ ಮೊಹದೀನ್ ಸಾಬರು ಸಹಾ ಜಂಟಿಯಾಗಿ ಹಾಕಿದ್ದ ಉದ್ದಿಮೆಯನ್ನು ಈಚಿಗೆ ಸ್ಯೆಯದ್ ಮೊಹದೀನ್ ಮತ್ತು ಇವನ ತಮ್ಮ ಸ್ಯೆಯದ್ ಗಫರ್ ಇವರುಗಳ ಮೈನಾರಿಟಿ ಕಾಲದಲ್ಲಿ ರುಜು ಮಾಡಿಸಿಕೊಂಡು ಮೋಸದಿಂದ ಉದರಿ ವಸೂಲ್ಮಾಡಿಕೊಂಡದ್ದಕ್ಕಾಗಿ ಅಲಾಯಿದಾ ವ್ಯಾಜ್ಯ ದಾಖಲಾಗಬೇಕಾಗಿರುತ್ತೆ. ಹೀಗಿದ್ದಾಗ್ಯೂ ತರಿಗಿ ಸ್ಯೆಯದ್ ಪತ್ತಾ ಸಾಹೇಬರು ಹುಣಸೂರಲ್ಲಿ ನಮ್ಮ ಸ್ವಾಧೀನಾನುಭವದಲ್ಲಿರುವ ಮಾವಿನ ತೋಟವನ್ನು ಫಸಲು ಸಮೇತ ಕೆಲವು ಜನಗಳ ದುರ್ಬೋಧನೆಯಿಂದ ಪರಾಧೀನವಾಡಲು ಪ್ರಯತ್ನಪಟ್ಟಿರುವದಾಗಿ ತಿಳಿದು ಈ ವಿಷಯಕ್ಕೂ ಸಹಾ ನಮ್ಮದಿಗೆ ಭಂಗಬಾರದಂತೆ ನಿಗಾ ಇಡಿಸಿ ಕಾಪಾಡಬೇಕೆಂದು ತಪ್ಶೀಲಾಗಿ ಅರ್ಜಿ ಬರೆದು ತಾ 6-5-15 ರಲ್ಲಿ ಹುಣಸೂರು ತಾಲ್ಲೂಕು ಮೇಜಿಸ್ಟ್ರೇಟ್ ಕೋರ್ಟಿಗೆ ಕೊಟ್ಟಿರುತ್ತೇವೆ. ಆದ್ದರಿಂದ ನಮ್ಮಗಳ ಅನುಮತಿ ಇಲ್ಲದೆ ಸದರಿ ಸ್ಯೆಯದ್ ಪತ್ತಾ ಸಾಹೇಬರಿಂದ ಯಾರಾದರೂ ಕುಟುಂಬದ ಆಸ್ತಿ ಪೈಕಿ ಯಾವ ಸೊತ್ತೇ ಆಗಲಿ ಕ್ರಯ ಭೋಗ್ಯ ಆಧಾರ ಗುತ್ತಾ ವಗೈರೆ ಹೊಂದಿದಲ್ಲಿ ಅಂಥಾ ಪರಾಧೀನತೆಯು ಊರ್ಜಿತವಾಗಲಾರದೆಂದು ತರಿಗಿ ಈ ಮೂಲಕ ತಿಳಿಸಿರುತ್ತೇವೆ

ಹುಣಸೂರು, 1. ಸ್ಯೆಯದ್ ಗೌಸ್ ಸಾಬರ ರುಜು,

7-5-1915. 2. ಸ್ಯೆಯದ್ ಹುಸೇನ್ ಸಾಬರ ರುಜು.

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೧೫ ನೇ ಇಸವಿ ಮೇ ತಾ. ೧೩ ನೇ ಗುರುವಾರ.

ಜರ್ಮನಿಯವರ ಯುದ್ಧದ ಲಕ್ಷಣಗಳು.

ಪ್ರಪಂಚದಲ್ಲಿ ಸಂಭವಿಸುವ ಸಕಲ ವಿಧವಾದ ಕೇಡುಗಳಿಗಿಂತಲೂ ಯುದ್ಧವೆಂಬುವುದೇ ಮಹಾ ಘೋರವಾದದ್ದು. ಜನರು ಹೊರಟು ಒಬ್ಬರನ್ನೊಬ್ಬರು ಕಡಿದುಹಾಕುವರು. ಈ ನವನಾಗರಿಕ ಕಾಲದಲ್ಲಾದರೋ ಇಪ್ಪತ್ತು ಮೈಲಿ ಆಚೆ ಇರುವಂಥಾ ಶತ್ರುವನ್ನು ಕೊಲ್ಲುವುದಕ್ಕೆ ಆಯುಧಗಳು ಸಿದ್ಧವಾಗಿರುವವು. ಅಷ್ಟು ದೂರಕ್ಕೂ ಗುಂಡುಗಳು ಹೋಗಿ ಬಿದ್ದು ಒಡೆದು ವಿನಾಶವನ್ನುಂಟುಮಾಡುತ್ತವೆ.

ನಾಗರಿಕರಾದ ಜನಾಂಗಗಳು ಯುದ್ಧವನ್ನೇ ನಿಲ್ಲಿಸಿಬಿಡಬೇಕೆಂದೂ, ಮನಸ್ತಾಪಗಳನ್ನೂ ವ್ಯಾಜ್ಯಗಳನ್ನೂ ಪಂಚಾಯತಿಯಲ್ಲಿ ಇತ್ಯರ್ಥ ಮಾಡುವಂತಾಗಬೇಕೆಂದೂ ಆಶಿಸುತ್ತಾರೆ. ಅಂಥಾ ಸತ್ಕಾಲವು ಪ್ರಾಪ್ತವಾಗುವ ತನಕ ನಡೆಯಲೆಂದು ನಾಗರಿಕ ಜನಾಂಗಗಳು ಯುದ್ಧಕಾರ್ಯಗಳನ್ನು ಈ ಈ ರೀತಿ ನಡಿಸಬೇಕೆಂದು ವಿಧಾಯಕ ಮಾಡಿರುವರು. ಆ ರೀತಿ ನಡೆದ ಪಕ್ಷದಲ್ಲಿ ಯುದ್ಧದ ಘೋರಾಕೃತಿಯು ತಕ್ಕ ಮಟ್ಟಿಗೆ ಶಮನವಾದೀತೆನ್ನುವುದೇ ಅವರ ಅಭಿಮತವಾಗಿದೆ. ದೃಷ್ಟಾಂತವಾಗಿ, ಯುದ್ಧಭಟನಾಗಿ ನಿಲ್ಲದಂಥಾ ಇಲ್ಲವೇ ಆಯುಧಪಾಣಿಯಾಗಿ ಇಲ್ಲದಂಥಾ ಯಾವನೊಬ್ಬನನ್ನೂ ಕೊಲ್ಲಬಾರದು ಎಂಬುವುದು ಒಂದು ವಿಧಿ. ಆದರೆ ಎಲ್ಲೋ ಒಂದೊಂದು ಗುಂಡು ತಗುಲಿ ಅಂಥವನು ಸಾಯುವುದು ಸ್ವಭಾವ. ಅಂಥವನನ್ನು ಮನಸ್ಸಾರ ಕೊಲ್ಲುವುದು ಯುದ್ಧದ ಧರ್ಮವೆನಿಸಲಾರದು. ಎರಡನೆಯದಾಗಿ ರಣರಂಗದಲ್ಲಿ ಹಿಡಿಯಲ್ಪಟ್ಟ ಸೈನಿಕರನ್ನು ಪ್ರೀತಿಯಿಂದಲೂ ಆದರಣೆಯಾಗಿಯೂ ಕಾಪಾಡಬೇಕೆನ್ನುವುದು ಇನ್ನೊಂದು ವಿಧಿ. ಅಂಥಾ ಯುದ್ಧಭಟರಿಗೆ ಒಳ್ಳೆಯ ಆಹಾರವನ್ನೂ ಬಟ್ಟೆಬರೆಗಳನ್ನೂ ಕೊಟ್ಟು ಸಾಕಬೇಕಲ್ಲದೆ ಅವರು ಕಾಯಿಲೆಬಿದ್ದಿದ್ದರೂ ಗಾಯಪಟ್ಟಿದ್ದರೂ ಅವರಿಗೆ ತಕ್ಕ ಚಿಕಿತ್ಸೆ ಉಪಚಾರಾದಿಗಳನ್ನು ಮಾಡಿ ಕಾಪಾಡಬೇಕು. ಯುದ್ಧವಾಗುವಾಗ್ಗೆ ಶತ್ರುಗಳ ಮೇಲೆ ವಿಷವಾಯುಗಳನ್ನು ಪ್ರಯೋಗಮಾಡಕೂಡದೆಂಬುವುದು ಯುದ್ಧದಲ್ಲಿ ಇನ್ನೊಂದು ಧರ್ಮವಾಗಿದೆ. ಸೈನಿಕರಾಗಲಿ, ಮದ್ದುಗುಂಡಾಗಲಿ ಇಲ್ಲದೆ ಇರುವಂಥಾ ಯಾವ ಹಡಗನ್ನೂ ಮುಳುಗಿಸಬಾರದು; ಮೊದಲೇ ಅಂಥಾ ಹಡಗಿಗೆ ಎಚ್ಚರಿಕೆ ಹೇಳಿ ಅದರಲ್ಲಿರುವವರನ್ನು ಇಳಿಸಿ ಬದುಕಿಸಬೇಕು. ಇತರ ನಾಗರಿಕ ರಾಜ್ಯಗಳಂತೆ ಜರ್ಮನಿಯೂ ಈ ವಿಧಿಗಳನ್ನು ಒಪ್ಪಿಕೊಂಡಿರುತ್ತದೆ. ನಮ್ಮ ಪಕ್ಷದವರು ಈ ವಿಧಿಗಳ ಪ್ರಕಾರ ಜರ್ಮನಿಯವರು ನಡೆದುಕೊಂಡಾರೆಂದು ನಂಬಿ ನಿರೀಕ್ಷಿಸಿಕೊಂಡಿದ್ದರು.

ಜರ್ಮನಿಯವರಾದರೋ ಈ ವಿಧಿಗಳಲ್ಲಿ ಪ್ರತಿ ಒಂದನ್ನೂ ಮೀರಿ ಕ್ರೂರ ಕೃತ್ಯಗಳನ್ನು ನಡಿಸುತ್ತಾ ಬಂದಿದಾರೆ. ಬೆಲ್ಜಿಯಮ್‌ನಲ್ಲಿ ಜರ್ಮನಿಯ ಸೈನಿಕರು ಮುದುಕರಾದ ಗಂಡಸರು ಹೆಂಗಸರನ್ನೂ ಚಿಕ್ಕ ಮಕ್ಕಳನ್ನೂ ಜಡಿದೆ ಕೊಂದುಬಿಟ್ಟದ್ದಲ್ಲದೆ ಅವರ ಮನೆಗಳನ್ನು ಸುಟ್ಟುಹಾಕಿರುವರು. ಫ್ರಾನ್ಸಿನೊಳಗೂ ಅವರು ಅದೇ ರೀತಿ ದುಷ್ಕಾರ್ಯಗಳನ್ನು ನಡಿಸಿರುತ್ತಾರೆ. ಜರ್ಮನಿಯವರು ಕೈಸೆರೆ ಹಿಡಿದಿಟ್ಟುಕೊಂಡಿರುವಂಥಾ ಯುದ್ಧಭಟರನ್ನು ಹಿಂಸೆ ಪಡಿಸಿದಾರೆ. ಅವರಿಗೆ ಆಹಾರಕೊಡದೆಹೋಗಿದಾರೆ; ಅವರನ್ನು ಒದ್ದು ಅವಮಾನ ಪಡಿಸಿ, ಗಾಯಗೊಳಿಸಿರುವರು. ಅವರಿಗೆ ಸರಿಯಾದ ಬಟ್ಟೆಬರೆಗಳನ್ನು ಕೊಡಲಿಲ್ಲ. ಯುದ್ಧಭೂಮಿಯಲ್ಲಾದರೋ ಅವರು ವಿಷವಾಯುಗಳನ್ನು ಪ್ರಯೋಗಿಸುವುದೇ ಮೊದಲಾದ ನಾನಾ ಬಗೆಯ ಕ್ರೂರಮಾರ್ಗಗಳನ್ನು ಆಚರಣೆಯಲ್ಲಿ ತಂದಿರುವರು. ಅವರು ಶತ್ರುಸೈನ್ಯದ ಮೇಲೆ ಉರಿವ ದ್ರಾವಕಗಳನ್ನು ಎರಚಿದರು. ಅದು ಹತ್ತಿಕೊಂಡು ಸೈನಿಕರು ಉರಿದು ಹೋಗುವಂತೆ ಮಾಡಿದರು. ಅವರ ವಿಷವಾಯುಗಳು ಶತ್ರು ಸೈನಿಕರನ್ನು ಹಿಡಿದು ತುಂಬಾ ನರಳಾಡಿಸಿ ಮರಣವನ್ನುಂಟುಮಾಡಿದವು. ಈ ವಿಷವಾಯುವಿನ ಸೇವನೆಯಿಂದ ಇಂಗ್ಲಿಷ್ ಸೈನಿಕರು ಕೊರಗಿ ಸಾಯುವುದನ್ನು ನೋಡಿ ಒಬ್ಬ ಪ್ರಷ್ಯಾ ಸುಬೇದಾರನು ಕೇಕೆಹಾಕಿ ನಗುತ್ತಾ—"ಇದು ಹೇಗಿದೆ?" ಎಂದು ಕೇಳಿದನು. ದಕ್ಷಿಣ ಆಫ್ರಿಕಾದಲ್ಲಿ ಅವರು ಕುಡಿಯುವ ನೀರಿನ ಭಾವಿಗಳಿಗೆ ವಿಷಪದಾರ್ಥಗಳನ್ನು ಹಾಕಿದರು. ಸಮುದ್ರದ ಮೇಲೆ ಪ್ರಾರಂಭದಲ್ಲಿ ಜರ್ಮನಿಯವರು ಯುದ್ಧದ ಧರ್ಮವನ್ನು ಪಾಲಿಸಿ ನಡೆದುಕೊಂಡರು. "ಎಮ್ಡೆನ್" ಎಂಬ ಅವರ ಜಹಜು ಹಡಗುಗಳನ್ನು ಮುಳುಗಿಸುವುದಕ್ಕೆ ಮುಂಚೆ ಅವುಗಳಲ್ಲಿದ್ದವರನ್ನು ಬದುಕಿಸುತ್ತಿತ್ತು. ಈಗಲಾದರೋ ಜರ್ಮನಿಯ ಸಬ್‌ಮೆರೀನುಗಳು ಸಕಲ ಜನಾಂಗಗಳ ಪ್ರಯಾಣಿಕರೂ ಇರುವಂಥಾ ಜಹಜುಗಳನ್ನು ಕೂಡ ಅವರಿಗೆ ಎಚ್ಚರಿಕೆ ಕೊಡದೇನೇ ಮುಳುಗಿಸುತ್ತಲಿವೆ. ಕಳೆದ ಶುಕ್ರವಾರ ಐರ್ಲೆಂಡಿನ ಬಳಿ ಲೂಸಿಟೇನಿಯಾ ಎಂಬ ಜಹಜನ್ನು ಮುಳುಗಿಸಿದ್ದು ಘೋರ ಕೃತ್ಯವಾಗಿರುತ್ತದೆ. ಅದರಲ್ಲಿ 2,000 ಕ್ಕಿಂತಲೂ ಹೆಚ್ಚಾಗಿ ಗಂಡಸರು, ಹೆಂಗಸರು, ಮಕ್ಕಳೂ ಇದ್ದರು. ಈ ಜಹಜಿಗೆ ಜರ್ಮನಿಯವರು ಟಾರ್ಪೀಡೋವನ್ನು ಬಿಟ್ಟು ಹೊಡಿಸಿದ್ದರಿಂದ 1,300 ಜನಕ್ಕಿಂತಲೂ ಹೆಚ್ಚಾಗಿ ಅಕಾಲಮರಣವನ್ನು ಹೊಂದಿದರು. ಅದರಲ್ಲಿ 188 ಮಂದಿ ಅಮೇರಿಕಾದವರೂ ಇದ್ದರು. ಈಗಿನ ಯುದ್ಧದಲ್ಲಿ ಸೇರಿಯದಂಥಾ ರಾಜ್ಯಗಳಿಗೆ ಸೇರಿದ ಪ್ರಜೆಗಳೂ ಆ ಜಹಜಿನಲ್ಲಿದ್ದು ಜರ್ಮನಿಯ ಕ್ರೂರ ಕೃತ್ಯಕ್ಕೆ ಸಿಕ್ಕಿ ಪ್ರಾಣಬಿಟ್ಟರು. ಜರ್ಮನಿಯವರು ಅವರಿಗೆ ಮೊದಲೇ ಎಚ್ಚರಿಕೆ ಹೇಳದೇನೂ, ಜನಗಳು ಮುಳುಗಿ ಸಾಯುತ್ತಿದ್ದರೆ ಸಾಹಸಪಟ್ಟು ಬದುಕಿಸದೇನೂ ಹೋದರು.

ಇಂಥಾ ಸರ್ವಸಾಮಾನ್ಯವಾದ ನಯ ನೀತಿಗಳನ್ನೂ ಆಚರಿಸದೆ ಇರುವ ಈ ಜರ್ಮನಿಯವರು ತಾವೇ ಪ್ರಪಂಚದಲ್ಲೆಲ್ಲಾ ಮಹಾ ನಾಗರಿಕವಂತರೆಂದು ಪಟಾಟೋಪ ಕೊಚ್ಚಿಕೊಳ್ಳುತ್ತಾರೆ. ಈಗ ಅವರು ಕಿರಾತರಿಗೂ ಸಲ್ಲದಂಥಾ ಕ್ರೂರಕೃತ್ಯಗಳನ್ನೂ ನೀಚ ಮಾರ್ಗಗಳನ್ನೂ ಅವಲಂಬಿಸಿರುವರು. ಯಾಕೆಂದರೆ ಎಂಥಾ ಕಿರಾತರೂ ಕೂಡ ಜರ್ಮನಿಯ ಭೂ, ಸಮುದ್ರ ಸೈನಿಕರಂತೆ ಮಕ್ಕಳನ್ನು ಮನಸ್ಸಾರ ಕೊಲ್ಲಬೊಪ್ಪುವುದಿಲ್ಲ. ಜರ್ಮನಿಯವರು ತಮಗೆ ಜಯವಾಗುವುದಿಲ್ಲವೆಂದು ತಿಳಿದುಕೊಂಡೇ ಇಂಥಾ ಕ್ರೂರಕೃತ್ಯಗಳನ್ನು ನಡಿಸಲಾರಂಭಿಸಿ, ಸಿಕ್ಕಿದವರನ್ನೆಲ್ಲಾ—ಯುದ್ಧಭಟರಾಗಿರಲಿ, ಇಲ್ಲದೇ ಇರಲಿ—ಕೊಂದುಹಾಕೋಣವೆಂದೂ, ನಾಲ್ಕು ಕಡೆ ಒತ್ತರಿಸಲ್ಪಟ್ಟಾಗ್ಗೆ "ನಾನು ಸೋತೆ" ಎಂದು ಒಪ್ಪಿಕೊಳ್ಳೋಣವೆಂದೂ ವರ್ತಿಸಿರುವಂತೆ ಕಾಣುತ್ತದೆ. ಇದು ಹ್ಯಾಗಾದರೂ ಆಗಲಿ; ಸದ್ಯ ಜರ್ಮನಿಯ ಮೇಲೆ ಯಾವ ಬುದ್ಧಿಶಾಲಿಗೂ ಈಗ ಸ್ವಲ್ಪವೂ ಅಭಿಮಾನವಿಲ್ಲದಂತಾಗಿದೆ. ಎಷ್ಟೇ ಧರ್ಮವಾಗಿ ನಡೆದಾಗ್ಯೂ ಯುದ್ಧವೆಂಬುವುದೇ ಮಹಾ ಘೋರವಾದದ್ದು. ಈಗ ಜರ್ಮನಿಯ ವರ್ತನವನ್ನು ನೋಡಿದರೆ ಕದನ ಮಾಡುವವರು ಮನುಷ್ಯರಲ್ಲ, ರಾಕ್ಷಸರೇ ಸರಿ ಎಂದು ಹೇಳಬಹುದಾಗಿದೆ. ಇಂಥಾ ಯುದ್ಧವನ್ನು ಜರ್ಮನಿಯು ಮತ್ತೆ ಪ್ರಾರಂಭಿಸದಂತಾಗಬೇಕು. ಪ್ರಪಂಚವೆಲ್ಲಾ ಏಕವಾಗಿ ಅದನ್ನು ತುಳಿದುಬಿಟ್ಟು, ಅದಕ್ಕೆ—"ನಿನ್ನ ನಾಗರಿಕತೆಯೆಲ್ಲಾ ಕಿರಾತಕೃತ್ಯವಾಗಿ ಪರಿಣಮಿಸಿದೆ" ಎಂದೂ, "ಈ ಕ್ರೂರಸ್ವಭಾವವನ್ನೆಲ್ಲಾ ವರ್ಜ ಮಾಡಿದ್ದಲ್ಲದೆ ನಿನ್ನನ್ನು ನಾಗರಿಕ ಜನಾಂಗದ ಪಙ್ಕ್ತಿಗೆ ಸೇರಿಸುವುದಿಲ್ಲ" ಎಂದೂ ಖಂಡಿತವಾಗಿ ಹೇಳುವಂತಾಗಬೇಕು.

ಚಕ್ರವರ್ತಿಯವರು ಮದದ್ರಾವಕಗಳನ್ನು ಕುರಿತು ಹೊರಡಿಸಿರುವ ಅಪ್ಪಣೆ.

ಕಳೆದ ಏಪ್ರಿಲ್ ತಿಂಗಳು 6 ನೇ ತಾರೀಖಿನಲ್ಲಿ ಚಕ್ರವರ್ತಿಯವರಾದ ಜಾರ್ಜ್ ದೊರೆಯವರು ಒಂದು ಹುಕುಮನ್ನು ಕೊಟ್ಟರು. ಅದರ ಅರ್ಥವೇನಂದರೆ—ಯಾವ ವಿಧವಾದ ವೈನು, ಬೀರ್, ಸಾರಾಯಿ ಮುಂತಾದ ಅಮಲೇರಿಸುವ ಪದಾರ್ಥಗಳನ್ನು ನಮ್ಮ ಅರಮನೆಗಳಲ್ಲಿ ಈ ತಾರೀಖಿನಿಂದ ಮುಂದೆ ಪ್ರಯೋಗಿಸಕೂಡದು ಎಂಬುವದೇ. ಮತ್ತು ಇಂಗ್ಲೆಂಡ್ ದೇಶದಲ್ಲಿ ಹಡಗುಗಳನ್ನು ಕಟ್ಟುವ ಬೇರೆ ಬೇರೆ ಕಂಪನಿಯವರ ಪ್ರತಿನಿಧಿಗಳು ಒಂದು ಸಭೆ ಸೇರಿ ಆ ಸಭೆಯಲ್ಲಿ ಅಮಲೇರಿಸುವ ಪದಾರ್ಥಗಳನ್ನು ಬಿಕರಿಮಾಡುವವನ್ನೂ ಸೇರಿಸುವವನ್ನೂ ನಿಲ್ಲಿಸಬೇಕೆಂದು ಚರ್ಚಿಸಿ ಆ ಸಭೆಯಿಂದ ಪ್ರತಿನಿಧಿಗಳನ್ನು ಚುನಾಯಿಸಿ ಈ ಪ್ರತಿನಿಧಿಗಳು ಇಂಗ್ಲೆಂಡಿನ ಮುಂತ್ರಿಶ್ರೇಷ್ಠರಾದ ಲ್ಲಾಯಿಡ್ ಜಾರ್ಜಿಯವರನ್ನು ಕಂಡು ಅವರಿಗೆ ಈ ವಿಷಯದಲ್ಲಿ ಪ್ರಾರ್ಥನೆಮಾಡಿ ಮದದ್ರಾವಕಗಳ ಸೇವನೆಯನ್ನು ನಿಲ್ಲಿಸಬೇಕೆಂದು ಅವರನ್ನು ಬೇಡುವದಕ್ಕೆ ಕಳುಹಿಸಿದರು. ಆ ಮಂತ್ರಿಶ್ರೇಷ್ಠರು ಈ ಪ್ರತಿನಿಧಿಗಳ ಬಿನ್ನಹಗಳನ್ನು ಕೇಳಿ ಅವರ ಅಭಿಪ್ರಾಯವನ್ನು ಅನುಮೋದಿಸಿ ಅವರಿಗೆ ಪ್ರತ್ಯುತ್ತರ ಹೇಳುವದರಲ್ಲಿ ಕೆಳಗೆ ಬರೆದಿರುವ ಅಭಿಪ್ರಾಯವನ್ನು ಹೇಳಿದರು. ಏನಂದರೆ.—ನಾವು ಜರ್ಮನಿ, ಆಸ್ಟ್ರಿಯಾ ದೇಶಗಳಿಗೆ ವಿರೋಧವಾಗಿಯೂ ಮದದ್ರಾವಕಗಳಿಗೆ ವಿರೋಧವಾಗಿಯೂ ಯುದ್ಧಮಾಡುತ್ತಿದ್ದೇವೆ—ಮತ್ತು ನನಗೆ ತೋರುವದೇನಂದರೆ, ಈ ಮೂರು ಭಯಂಕರವಾದ ಶತ್ರುಗಳಲ್ಲಿ ಮದದ್ರಾವಕದ ಸೇವನೆಯೇ ನಮಗೆ ಅಪಾಯಕರವಾದ ಶತ್ರುವಾಗಿದೆ. ಯುದ್ಧದಲ್ಲಿ ಜಯಹೊಂದುವದಕ್ಕೆ ಈಗ ಕೇವಲ ಅವಶ್ಯಕವಾದದ್ದು ಮದ್ದುಗುಂಡು ಮುಂತಾದ ಯುದ್ಧ ಸಾಮಗ್ರಿಗಳೇ. ಅತಿಯಾಗಿ ಅಮಲೇರಿಸುವ ಪದಾರ್ಥಗಳನ್ನು ಕೆಲಸಗಾರರೂ ಕೂಲಿಯವರೂ ಕುಡಿಯುವದರಿಂದ ಈ ಯುದ್ಧಸಾಮಗ್ರಿಗಳು ತಯಾರಾಗುವದಕ್ಕೆ ಮಾಡಬೇಕಾದ ಕೆಲಸವು ಬಹಳ ಜಂಗೆಗೆ ಕಾರಣವಾಗುವಷ್ಟು ಸುಸ್ತಾಗುವಂತೆ ಮಾಡಿವೆಯೆಂದು ಈ ದಿನ ನೀವು ಸ್ಪಷ್ಟವಾಗಿ ದೃಷ್ಟಾಂತಪಡಿಸಿರುತ್ತೀರಿ ಎಂದು ಅಪ್ಪಣೆ ಕೊಡಿಸಿರುವರು. ಮತ್ತು ಪ್ರಜೆಗಳೂ ಕೈ ಕೆಲಸದವರ ಮುಖಂಡರೂ ಸರ್ಕಾರದವರ ಹುಕುಮನ್ನು ಈ ವಿಷಯದಲ್ಲಿ ನಿರೀಕ್ಷಿಸುತ್ತಿರುವರು ಸರ್ಕಾರದವರು ಈ ನಿಶಾಪದಾರ್ಥಗಳ ಸೇವನೆಯನ್ನೂ ಅದರಿಂದಾಗುವ ನಷ್ಟಕಷ್ಟಗಳನ್ನು ತೊಡೆದುಬಿಡುವದಕ್ಕೆ ಬೇಕಾದ ಹುಕುಮನ್ನು ಕೊಟ್ಟರೆ ಪ್ರಜೆಗಳು ಬಹುಮಂದಿ ಸರ್ಕಾರಕ್ಕೆ ಬೆಂಬಲವಾಗಿ ನಿಂತು ಸಹಾಯಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ.

ಫ್ರಾನ್ಸ್ ದೇಶದಲ್ಲಿಯೂ ಇದೇ ತರವಾಗಿ ನಿಶಾಪದಾರ್ಥಗಳ ಸೇವನೆಯನ್ನು ರದ್ದುಪಡಿಸಬೇಕೆಂದು ಸರ್ಕಾರದವರೂ ಪ್ರಜೆಗಳೂ ಯತ್ನಿಸುತ್ತಿರುವರೆಂದು ತಿಳಿದುಬರುತ್ತದೆ.

ಇತ್ತ ನಮ್ಮ ದೇಶದಲ್ಲಿ ನಿಶಾಪದಾರ್ಥಗಳ ಸೇವನೆಯು ಹೆಚ್ಚುತ್ತಾ ಬರುತ್ತದೆ ಎಂದು ಕೇಳಿದರೆ ನಮ್ಮ ಮನಸ್ಸಿಗೆ ಬಹಳ ವ್ಯಾಕುಲ ಉಂಟಾಗುತ್ತದೆ. ಯುದ್ಧವು ಬಹಳ ಕೆಟ್ಟದ್ದು ಸರಿ. ಆದರೆ ಈ ಯುದ್ಧವು ಯೂರೋಪ್ ಖಂಡದವರಿಗೆ ಒಂದು ಒಳ್ಳೇ ಪಾಠವನ್ನು ಹೃದಯಂಗಮವಾಗಿ ಕಲಿಸಿತು. ಅದೇನಂದರೆ—ಮಾದಕದ್ರವ್ಯಗಳು ಕಾಯಪುಷ್ಟಿಗಾಗಲಿ, ಸೂಕ್ಷ್ಮಬುದ್ಧಿಗಾಗಲಿ ಕಷ್ಟಕರವಾದ ಪ್ರಸಂಗದಲ್ಲಿ ಧೈರ್ಯಾವಲಂಬನೆಗಾಗಲಿ ಎಳ್ಳಷ್ಟು ಸಹಾಯಮಾಡುವದಿಲ್ಲ. ಅದಕ್ಕೆ ಬದಲಾಗಿ ಅಮಲೇರಿಸುವ ಪದಾರ್ಥಗಳು ಮನುಷ್ಯನ ಶಕ್ತಿಯನ್ನು ಕುಂದಿಸಿ ಬುದ್ಧಿಯನ್ನು ಕೆಡಿಸಿ ಕಾರ್ಯಾಸಕ್ತಿಯಲ್ಲಿ ಅವನು ಉತ್ಸಾಹಹೀನನಾಗುವಂತೆ ಮಾಡುತ್ತವೆ. ಆದುದರಿಂದ ಈ ಅಮಲೇರಿಸುವ ಪದಾರ್ಥಗಳು ಯುದ್ಧದ ಕಷ್ಟದಲ್ಲಿ ನಮಗೆ ಸಹಾಯವಾಗದೆ ನಮ್ಮನ್ನು ಎದೆಗುಂದಿಸುವ ಮಹಾ ಶತ್ರುವು ಎಂಬುವದೇ. ಆದ್ದರಿಂದ ಪ್ರಜೆಗಳೂ ಅಧಿಪತಿಗಳೂ ಏಕಮುಖದಿಂದ ಒಂದುಗೂಡಿ ಈ ಒಳ ಶತ್ರುವನ್ನು ಮೊದಲು ಹತಮಾಡಬೇಕೆಂದು ಹೊರಗಿನ ಶತ್ರುವನ್ನು ಅದನ್ನು ಅನುಸರಿಸಿ ಇಂಗ್ಲೆಂಡ್ ಫ್ರಾನ್ಸ್ ರಾಜ್ಯಗಳು ಪ್ರತಿಭಟಿಸುತ್ತಲಿವೆ.

ಮತ್ತು ಮಿ ಲಾಯಿಡ್ ಜಾರ್ಜ್ ಮಂತ್ರಿಶ್ರೇಷ್ಠರು ಹೇಳಿದ್ದೇನಂದರೆ—ಮದದ್ರಾವಕಗಳನ್ನು ಯಾರೂ ಬದ್ಧಪಡಿಸಕೂಡದು; ಮತ್ತು ಯಾರೂ ಬಹಿರಂಗವಾಗಿಯಾಗಲಿ ಅಂತರಂಗವಾಗಿಯಾಗಲಿ ಬಿಕರಿಮಾಡಬಾರದು; ಯಾರೂ ಅಂಥಾ ನಿಶಾಪದಾರ್ಥಗಳನ್ನು ಕೊಳ್ಳಕೂಡದೆಂದು ಸರ್ಕಾರದವರು ಅಪ್ಪಣೆಕೊಡುವದಕ್ಕೆ ನಮ್ಮ ದೇಶದ ಸಾಮಾನ್ಯ ಪ್ರಜೆಗಳು ಈ ಕಟ್ಟಳೆಯನ್ನು ಅನುಮೋದಿಸಿ ಸರ್ಕಾರಕ್ಕೆ ಈ ವಿಷಯದಲ್ಲಿ ಪ್ರೋತ್ಸಾಹವನ್ನು ಕೊಟ್ಟು ನಮ್ಮ ಪಕ್ಷವನ್ನು ವಹಿಸುವರೋ ತಿಳಿಯಬೇಕೆಂದು ಅಭಿಪ್ರಾಯಪಟ್ಟರು. ಇದನ್ನು ಕೇಳಿ ಎಲ್ಲಾ ಶ್ರೀಮಂತರೂ ವರ್ತಕರೂ, ಸಾಧಾರಣ ಕೂಲೀ ಕೆಲಸದವರೂ, ಕಸುಬುದಾರರೂ ನೆಟ್ಟಗೆ ಮಿ ಲಾಯಿಡ್ ಜಾರ್ಜರವರಿಗೆ ಪ್ರತಿಯೊಬ್ಬನೂ ಕಾಗದಗಳನ್ನು ಬರೆದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಿದ್ದಾರೆ. ಸರ್ವಸಾಧಾರಣವಾಗಿ ಅವರು ಬರೆಯುವ ಕಾಗದಗಳ ಅಭಿಪ್ರಾಯವೇನಂದರೆ "ಯುದ್ಧ ಮುಗಿಯುವ ಪರ್ಯಂತರ ಮದದ್ರಾವಕಗಳನ್ನು ಯಾರೂ ಮಾಡಬಾರದು. ಮತ್ತು ಮಾರಕೂಡದು. ಹೀಗೆ ಮಾಡಿದರೆ ಯುದ್ಧದಲ್ಲಿ ನಮಗೆ ಬೇಗ ಜಯವಾಗುವದೆಂದು ನಾನು ನಂಬಿ ಸರ್ಕಾರದವರು ಇದನ್ನು ರದ್ದುಪಡಿಸುವದಕ್ಕೆ ಹೊರಡಿಸುವ ಹುಕುಮನ್ನು ನಾನು ಪೂರ್ಣಮನಸ್ಸಿನಿಂದ ಒಪ್ಪಿ ಇದಕ್ಕೆ ಬೆಂಬಲವಾಗಿ ನಿಂತಿರುವೆನು" ಎಂಬುವದೇ. ಭಲಾ! ಅವರ ಪ್ರಯತ್ನವು ಸಿದ್ಧಿಸಲಿ!

ಇದನ್ನು ಓದುವ ವಾಚಕರೇ, ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಜರ್ಮನಿ ಮುಂತಾದ ರಾಜ್ಯಗಳು ಮದದ್ರಾವಕಗಳನ್ನು ತಮ್ಮ ಶತ್ರುವೆಂದು ನಿಶ್ಚಯಿಸಿ ತಮ್ಮ ದೇಶಗಳ ಗಡಿ ದಾಟಿಸುತ್ತಿರುವಲ್ಲಿ ನಮ್ಮ ದೇಶದವರು ಆ ಶತ್ರುವನ್ನು "ಬಾ ಇಲ್ಲಿ ಬಾ" ಎಂದು ಕರೆದು ಪ್ರೋತ್ಸಾಹಿಸುವದು ಹೆಡ್ಡತನವೂ ಪಾಪವೂ ಅಲ್ಲವೆ?

ಯುದ್ಧದ ಸಮಾಚಾರಗಳು.

ಸಮುದ್ರದ ಮೇಲೆ ಅನೇಕ ಪ್ರಾಣನಷ್ಟ.

ಗೆಲಿಷಿಯಾದಲ್ಲಿ ಘೋರವಾದ ಕದನ.

ಯುದ್ಧಭೂಮಿಯಿಂದ ಕಳೆದ ವಾರ ಬಂದಿರುವ ವರ್ತಮಾನಗಳು ನಮ್ಮ ಪಕ್ಷದವರಿಗೆ ತೃಪ್ತಿಕರವಾಗಿಲ್ಲ. ಜರ್ಮನಿಯ ಸಬ್‌ಮೆರೀನುಗಳು ಹಲವು ಜಹಜುಗಳನ್ನು ಮುಳುಗಿಸಿರುತ್ತವೆ. ಯುದ್ಧಭಟರಲ್ಲದಂಥಾ ಅನೇಕ ಜನಗಳು ಸಮುದ್ರದಲ್ಲಿ ಮುಳುಗಿಹೋದರು, ಇಲ್ಲವೇ ಕೊಲೆಯಾದರು. ಜರ್ಮನಿಯವರು ಮಹಾ ಹೀನವಾದ ಕಾರ್ಯಗಳನ್ನೆಲ್ಲಾ ಮಾಡಲಾರಂಭಿಸಿದಾರೆ. ಅವರು ಯುದ್ಧಭೂಮಿಯಲ್ಲಿ ವಿಷಕರವಾದ ವಾಯುಗಳನ್ನು ಪ್ರಯೋಗಮಾಡುವರು; ದಕ್ಷಿಣ ಆಫ್ರಿಕಾದಲ್ಲಿ ಕುಡಿಯುವ ನೀರಿನ ಭಾವಿಗಳಿಗೆ ವಿಷವನ್ನು ಹಾಕುತ್ತಾರೆ; ಯುದ್ಧಭಟರಲ್ಲದಂಥಾ ಗಂಡಸರು, ಹೆಂಗಸರು, ಮಕ್ಕಳೂ ಪ್ರಯಾಣಮಾಡುವ ಜಹಜುಗಳನ್ನು ಮುಳುಗಿಸುವರು. ಇಂಥಾ ಕೃತ್ಯಗಳು ಹೇಯವಾದವುಗಳೆಂದೂ, ಕದನವೆನಿಸಿಕೊಳ್ಳಲಾರವೆಂದೂ ಜರಿಯುವುದರಲ್ಲೂ ಪ್ರತಿಭಟಿಸುವುದರಲ್ಲೂ ಪ್ರಯೋಜನ ಕಾಣುವುದಿಲ್ಲ. ಜರ್ಮನಿಯವರನ್ನು ಸೋಲಿಸುವುದೊಂದೇ ಅವರ ಅಕೃತ್ಯಗಳಿಗೆಲ್ಲಾ ಪ್ರತೀಕಾರವಾಗುವುದು.

ಪಶ್ಚಿಮ ರಣರಂಗದಲ್ಲಿ.

ಬೆಲ್ಜಿಯಮ್‌ನೊಳಗೆ ಜರ್ಮನಿಯವರು ವಿಷಕರವಾದ ವಾಯುಗಳನ್ನು ಹರಡಿ ನಮ್ಮ ಪಕ್ಷದವರನ್ನು ಅಂದರೆ ಫ್ರೆಂಚರನ್ನೂ ಬ್ರಿಟಿಷರನ್ನೂ ಸ್ವಲ್ಪ ದೂರ ಹಿನ್ನಟ್ಟುವಂತೆ ಮಾಡಿದರಷ್ಟೆ. ಆ ಬಳಿಯಲ್ಲಿ ಬಹಳ ಕದನಗಳು ನಡೆದಿರುವವು. ನಮ್ಮ ಪಕ್ಷದವರು ಮುಂದೆ ನುಗ್ಗಿ ಹೋಗಿ ಕದನಮಾಡಿ ಕೆಲವು ಪ್ರದೇಶವನ್ನು ಮತ್ತೆ ಗೆದ್ದುಕೊಂಡರು; ಆದರೂ ಇವರು ಬಿಟ್ಟುಕೊಟ್ಟು ಬಂದಿದ್ದ ಪ್ರದೇಶವನ್ನೆಲ್ಲಾ ಸ್ವಾಧೀನಪಡಿಸಿಕೊಂಡಿಲ್ಲ. ಇದಲ್ಲದೆ ಬ್ರಿಟಿಷರು ಈಚೆಗೆ 60 ಎಂಬ ಗುಡ್ಡವನ್ನು ಜರ್ಮನಿಯವರಿಂದ ಕಿತ್ತು ಸ್ವಾಧೀನಪಡಿಸಿಕೊಂಡಿದ್ದರಷ್ಟೆ. ಅದನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಜರ್ಮನಿಯವರು ಅತ್ಯಂತ ಸಾಹಸಪ್ರಯತ್ನಗಳನ್ನು ಮಾಡುತ್ತಾ ಬಂದಿದಾರೆ. ಅವರು ವಿಷವಾಯುಗಳನ್ನು ಹರಡಿಸಿ ಬ್ರಿಟಿಷರನ್ನು ಕೆಲವು ಕಂದಕಗಳಿಂದ ಹೊರಡಿಸಿ ಆಕ್ರಮಿಸಿಕೊಂಡಿದಾರೆ. ಬ್ರಿಟಿಷರು ಈ ಕಂದಕಗಳನ್ನು ಒಂದೊಂದಾಗಿ ಮತ್ತೆ ಗೆದ್ದುಕೊಳ್ಳುತ್ತಿರುವರು. ಕದನಗಳು ಬಹಳ ಘೋರವಾಗಿ ನಡೆಯುತ್ತಲೂ, ಎರಡು ಪಕ್ಷಗಳಲ್ಲೂ ಅಪಾರ ಸೈನ್ಯಗಳು ನಷ್ಟವಾಗುತ್ತಲೂ ಇರುವವು. ಬೆಲ್ಜಿಯಮ್ ಮತ್ತು ಫ್ರಾನ್ಸಿನೊಳಗೆ ಕಳೆದ 2–3 ವಾರಗಳಲ್ಲಿ ಜರ್ಮನಿಯವರ ಕಡೆ 25,000 ಸೈನ್ಯ ನಷ್ಟವಾದಂತೆ ಹೇಳಲಾಗಿದೆ. ಫಿರಂಗಿಗಳ ಹಾರಾಟವು ಬೆಲ್ಜಿಯಮ್ ಪಶ್ಚಿಮದಲ್ಲಿಯಲ್ಲೆಲ್ಲಾ ಕೇಳಿಸುತ್ತಲೂ, ಗುಂಡುಗಳು ಬೀಳುತ್ತಲೂ ಇರುವವು. ಜರ್ಮನಿಯವರು ಗಾಯಪಟ್ಟ ಮತ್ತು ಸತ್ತುಹೋದ ತಮ್ಮ ಸೈನಿಕರನ್ನು ರೈಲ್‌ಗಾಡಿಗಳಲ್ಲಿ ವಿರಾಮವಿಲ್ಲದೆ ಸಾಗಿಸಿಕೊಂಡು ಹೋಗುತ್ತಿದಾರೆ.

ಜರ್ಮನಿಯವರು ಬೆಲ್ಜಿಯಮ್ ತೀರದಲ್ಲಿ ತಮ್ಮ ಭಾರಿ ಫಿರಂಗಿಯಿಂದ ದೊಡ್ಡ ಗುಂಡುಗಳನ್ನು ಬಿಡುತ್ತ ಅಲ್ಲಿಂದ 20 ಮೈಲಿ ದೂರದಲ್ಲಿರುವ ಡನ್‌ಕರ್ಕ್ ಎಂಬ ಪಟ್ಟಣಕ್ಕೆ ಹೊಡೆದರು. ಮೊದಲು ಜರ್ಮನಿಯವರ ಜಹಜಿನಿಂದ ಈ ಗುಂಡುಗಳನ್ನು ಹೊಡೆದಿರಬೇಕೆಂದು ಊಹಿಸಲಾಯಿತು. ಬಳಿಕ ವಿಮಾನಕಾರರು ಅಂತರಿಕ್ಷದಲ್ಲಿ ಹೋಗಿ ಆ ಫಿರಂಗಿಯ ಸ್ಥಾನವನ್ನು ಕಂಡು ಹಿಡಿದು ಅದರ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ಆ ಫಿರಂಗಿಯು ನಾಶವಾಯಿತೋ ಇಲ್ಲವೋ ತಿಳಿದುಬರಲಿಲ್ಲ. ಆದರೆ ಡನ್‌ಕರ್ಕ್ ನಗರಕ್ಕೆ ಗುಂಡುಗಳು ಬೀಳುವುದು ಕೆಲವು ದಿವಸ ನಿಂತುಹೋಗಿತ್ತು. ಈಚೆಗೆ ತಿರಿಗಿ ಗುಂಡುಗಳನ್ನು ಹಾಕುತ್ತಿದಾರೆ.

ವಿಮಾನಯಂತ್ರಗಳ ಕಾರುಬಾರುಗಳು ವಿಶೇಷವಾಗಿ ನಡೆದವು. ಬ್ರಿಟಿಷರ ಒಂದು ವಿಮಾನವು ಅಂತರಿಕ್ಷದಲ್ಲಿ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬೆಲ್ಜಿಯಮ್‌ನೊಳಗೆ ಒಂದು ರೈಲ್ವೆ ಜಂಕ್ಷನ್ನನ್ನು ಹಾಳುಮಾಡಿತು. ಇದಕ್ಕಾಗಿ ಆ ವಿಮಾನಕಾರನು ಭೂಮಿಗೆ ಸಮೀಪವಾಗುವಂತೆ ಇಳಿಯಬೇಕಾಯಿತು. ಆದರೆ ಶತ್ರುವಿನ ಗುಂಡು ತಗುಲಿ ಆ ವಿಮಾನಕಾರನು ಗಾಯಪಟ್ಟನು. ಅವನು ಭೂಮಿಯ ಮೇಲ್ಭಾಗದಲ್ಲಿ ಬಹಳ ಕೆಳಗೆ ಸಂಚರಿಸುತ್ತಿದ್ದಾಗ ಮತ್ತೆ ಅವನಿಗೆ ಗುಂಡು ಬಡಿದು ಗಾಯವಾಯಿತು. ಆದಾಗ್ಯೂ ಆ ವಿಮಾನಕಾರನು ತನ್ನ ಯಂತ್ರ ಸಮೇತ ವಾಪಸು ಬಂದು, ತಾನು ನಡಿಸಿದ ಕಾರ್ಯಗಳನ್ನು ವಿವರಿಸಿ ಬಳಿಕ ಪ್ರಾಣಬಿಟ್ಟನು.

ಫ್ರೆಂಚರು ಮೆಟ್ಸ್ ಎಂಬ ಜರ್ಮನಿಯ ನಗರವನ್ನು ಕುರಿತು ನುಗ್ಗಿ ಹೋಗುತ್ತಿದಾರೆ. ಅದು ಬಹಳ ಬಲವಾಗಿ ಕಟ್ಟಲ್ಪಟ್ಟಿರುವ ಕೋಟೆಕೊತ್ತಲಗಳುಳ್ಳ ಪಟ್ಟಣ. ಫ್ರೆಂಚರು ಅದಕ್ಕೆ ಹೊಡೆಯುತ್ತಿರುವ ಫಿರಂಗಿ ಗುಂಡುಗಳು ಆ ನಗರದ ಹೊರಗಣ ಠಾಣ್ಯಗಳಿಗೆ ಬಡಿಯುತ್ತಿರುವವು.

ಒಂದು ಕಡೆ ಫ್ರೆಂಚರು ಸುಮಾರು ಮೂರು ಮೈಲಿ ದೂರ ನುಗ್ಗಿ ಹೋಗಿ 3,000 ಕ್ಕಿಂತಲೂ ಹೆಚ್ಚಾಗಿಯೇ ಜರ್ಮನಿಯ ಸೈನಿಕರನ್ನು ಆರು ಫಿರಂಗಿಗಳ ಮತ್ತು 50 ಮೆಷೀನ್ ಫಿರಂಗಿಗಳ ಸಹಿತ ಕೈಸೆರೆ ಹಿಡಿದು ತಂದಿದಾರೆ.

ಬ್ರಿಟಿಷ್ ಸೇನಾಪತಿಯಾದ ಸರ್ ಜಾನ್ ಫ್ರೆಂಚರವರು ಹಿಂದುಸ್ಥಾನದಿಂದ ಹೋಗಿರುವ ಗೂರ್ಖಾ ಸೈನಿಕರ ಪರಾಕ್ರಮ ಕಾರ್ಯಗಳನ್ನು ನೋಡಿ ಸಂತೋಷಪಟ್ಟು ಅವರನ್ನು ಕೊಂಡಾಡಿದರು. ನಮ್ಮ ಹಿಂದುಸ್ಥಾನದ ದೇಶೀಯ ಸೈನ್ಯಗಳು ಬಹಳ ಸಾಹಸ ಕಾರ್ಯಗಳನ್ನು ನಡಿಸುತ್ತವೆ. ಪಠಾಣ್ ಜನರ ಒಂದು ರೆಜಿಮೆಂಟು ಒಂದು ಕಡೆ ನುಗ್ಗಿ ಹೋಗುತ್ತಿದ್ದಾಗ ಶತ್ರುವಿನ ಸಿಡಿಮದ್ದಿನ ಗುಂಡು ಅವರ ಮಧ್ಯೆ ಬಿದ್ದು ಒಡೆಯಿತು. ಆ ಸೈನಿಕರಲ್ಲಿ 16 ಮಂದಿ ನಷ್ಟಪಟ್ಟರು. ಆದಾಗ್ಯೂ ಅವರು ನಿಲ್ಲದೆ ಮತ್ತೆ ಧೈರ್ಯಗೊಟ್ಟು ಮುಂದಕ್ಕೆ ನುಗ್ಗಿ ಹೋದರು. ಶತ್ರುವಿನ ಗುಂಡುಗಳ ಮಳೆ ಸುರಿಯುತ್ತಿದ್ದಾಗ ಅವರು 1,200 ಗಜಗಳ ದೂರ ನುಗ್ಗಿ ಹೋಗಬೇಕಾಯಿತು. ಅದನ್ನು ಲಕ್ಷ್ಯವೇ ಮಾಡದೆ ಅಷ್ಟು ದೂರವೂ ನಡೆಯುತ್ತಲೇ ಹೋದರು. ಇವರನ್ನು ನಡಿಸಿಕೊಂಡು ಹೋಗುತ್ತಿದ್ದ ಒಬ್ಬ ಹುದ್ದೇದಾರನಿಗೆ ನಾಲ್ಕಾವರ್ತಿ ಶತ್ರುವಿನ ಗುಂಡು ಬಡಿದು ಗಾಯವಾಯಿತು. ಆತನು ಮೈಯೆಲ್ಲಾ ಗುಂಡೇಟು ತಗುಲಿ ಬಿದ್ದುಬಿಡುವ ತನಕ ಸೈನ್ಯವನ್ನು ನಡಿಸಿಕೊಂಡೇ ಹೋದನು.

ಬ್ರಿಟಿಷ್ ಚಕ್ರಾಧಿಪತ್ಯವನ್ನು ಸುರಕ್ಷಿತವಾಗಿ ಕಾಪಾಡುವ ಮಹತ್ತರವಾದ ಕಾರ್ಯವನ್ನು ಲಕ್ಷೋಪಲಕ್ಷ ಪ್ರಜೆಗಳು ತಮ್ಮ ತನು ಮನ ಧನಗಳನ್ನು ವಿನಿಯೋಗಿಸುತ್ತಿರುವುದು ಸ್ತೋತ್ರಾರ್ಹವಾಗಿದೆ ಎಂದು ಮಂತ್ರಿವರ್ಯರು ಭಾಷಣ ಮಾಡಿ ಹೊಗಳಿರುತ್ತಾರೆ. ಯುದ್ಧದ ಸಾಲು ಕದನಗಳಲ್ಲಿ ಸೈನ್ಯ ಮುರಿದು ಹೋಗುತ್ತಿದ್ದಾಗ್ಯೂ ರಂಧ್ರಗಳು ಬಿದ್ದು ಶತ್ರುವಿಗೆ ನುಗ್ಗಿಬರಲು ಅವಕಾಶ ಕೊಡದಂತೆ ಹೊಸ ಸೈನ್ಯಗಳು ಹಿಂದಿನಿಂದ ಹೋಗಿ ತುಂಬಿ ಎಂದಿನಂತೆ ಇದ್ದೇ ಇರುತ್ತವೆ. ಆದರೂ ಇನ್ನು ಮುಂದೆ ಕ್ರಮವಾದ ಯುದ್ಧಗಳು ನಡೆಯಬೇಕಾಗಿರೋಣದರಿಂದ ಆಗ್ಗೆ ಒದಗುವಂಥಾ ಸೈನ್ಯಗಳು ಇನ್ನೂ ಅನಾವರವಾಗಿ ಬೇಕಾಗಿರುತ್ತೆಂದೂ, ಜನರು ಸೈನ್ಯಕ್ಕೆ ಸೇರಿಕೊಂಡು ತರಪೇತಾಗಬೇಕಾಗಿದೆ ಎಂದೂ ಮಿ|| ಆಸ್ಕಿತ್‌ರವರು ಸೂಚಿಸಿರುತ್ತಾರೆ.

ಜರ್ಮನಿಯವರು ಕೈಸೆರೆ ಹಿಡಿದುಕೊಂಡು ಹೋಗಿರುವಂಥಾ ಕೆಲವು ಬ್ರಿಟಿಷ್ ಸೈನಿಕರನ್ನು ಕ್ರೂರತರವಾಗಿ ನಡಿಸುತ್ತಿರುವುದನ್ನು ಕುರಿತು ಬ್ರಿಟಿಷ್ ಗವರ್ನ್‌ಮೆಂಟಿನ ಮಂತ್ರಿ ಶ್ರೇಷ್ಠರಾದ ಮಿ|| ಆಸ್ಕಿತ್‌ರವರು ಕೆಲವು ಸಂಗತಿಗಳನ್ನು ಹೇಳಿದರು. ಯಾವ ಕಿರಾತಜನರೂ ಜರ್ಮನಿಯವರು ನಡಿಸುತ್ತಿರುವಂಥಾ ಕ್ರೂರ ಕೃತ್ಯಗಳನ್ನು ನಡಿಸಲಾರರೆನ್ನುವಂತಿದೆ. ಇಂಥಾ ಕೃತ್ಯಗಳನ್ನು ಕುರಿತು ಜರ್ಮನಿಯವರ ಕೂಡ ಚರ್ಚಿಸುವುದು ನಿಷ್ಪ್ರಯೋಜನ. ಜರ್ಮನಿಯವರು ನ್ಯಾಯಕ್ಕೂ ಧರ್ಮಕ್ಕೂ ಕಟ್ಟು ಬೀಳುವವರಾಗಿಲ್ಲ. ಕ್ರೂರವಾದ ದಂಡೋಪಾಯದಿಂದಲೇ ಅವರನ್ನು ಸೋಲಿಸಿ ಅವರ ನೀಚ ಕೃತ್ಯಗಳನ್ನು ಅಡಗಿಸಬೇಕಾಗಿದೆ ಎಂಬೀ ರೀತಿ ಮಂತ್ರಿವರ್ಯರು ಹೇಳಿರುತ್ತಾರೆ.

ಖಜಾನಾ ಛಕ್ಷಿಯವರಾದ ಮಿ|| ಲಾಯಡ್ ಜಾರ್ಜ್‌ರವರು ಗ್ರೇಟ್ ಬ್ರಿಟನ್ ರಾಜ್ಯದ ಜಮಾ ಖರ್ಚುಗಳ ಅಂದಾಜಾ ಪಟ್ಟಿ (ಬಡ್ಜೆಟ್) ಗಳನ್ನು ಪಾರ್ಲಿಮೆಂಟಿನಲ್ಲಿ ಹಾಜರುಮಾಡಿದರು. ಅವರು ಆಗ ಹೇಳಿದ್ದೇನೆಂದರೆ— ಈಗಿನ ಯುದ್ಧಕ್ಕೆ ಕಳೆದ ಎಂಟು ತಿಂಗಳಲ್ಲಿ ಗ್ರೇಟ್ ಬ್ರಿಟನ್‌ಗೆ 30,70,00,000 ಪೌಂಡು ಖರ್ಚಾಗಿದೆ. ಮುಂದಿನ ಸೆಪ್ಟಂಬರಿಗೆ ಯುದ್ಧವು ಮುಗಿದ ಪಕ್ಷಕ್ಕೆ ಯುದ್ಧದ ಖರ್ಚು 78,60,00,000 ಪೌಂಡು ಆಗುವುದು. ಈ ಪೈಕಿ 40 ಕೋಟಿ ಪೌಂಡು ಭೂಸೈನ್ಯಕ್ಕೂ, 10 ಕೋಟಿ ಪೌಂಡು ಸಮುದ್ರ ಸೈನ್ಯಕ್ಕೂ, 10 ಕೋಟಿ ಪೌಂಡು ನಮ್ಮ ಸ್ನೇಹಿತರಿಗೇ ಮೊದಲಾದ ದೇಶಗಳಿಗೆ ಸಹಾಯವೂ ದಿದ್ದಕ್ಕೂ ವಿನಿಯೋಗವಾದೀತು. ಯುದ್ಧವು ಇನ್ನೊಂದು ವರುಷ ನಡೆಯುವುದಾದರೆ 113,60,00,000 ಪೌಂಡು ಯುದ್ಧದ ಖರ್ಚಿಗೆ ಒದಗಿಸಬೇಕಾಗುತ್ತದೆ. ಕಳೆದ ಸಾಲಿನಲ್ಲಿ ಗ್ರೇಟ್ ಬ್ರಿಟನ್ ರಾಜ್ಯದ ರಾಜಾದಾಯವು 27,00,00,000 ಪೌಂಡು; ಅಂದರೆ ಹಿಂದಿನ ಸಾಲಿನ ಉತ್ಪತ್ತಿಗಿಂತ 4,35,00,000 ಪೌಂಡು ಹೆಚ್ಚಿರುತ್ತದೆ. ಆದಕಾರಣ ಯುದ್ಧವು ನಡೆದಾಗ್ಯೂ ಗ್ರೇಟ್ ಬ್ರಿಟನ್ ರಾಜ್ಯಕ್ಕೆ ದ್ರವ್ಯಕ್ಕೆ ಕೊರತೆಯುಂಟಾಗುವುದೆಂಬ ಸಂಶಯವೇನೂ ಇರುವುದಿಲ್ಲ ಎಂದು ಹೇಳಿದರು.

ಪೂರ್ವ ರಣರಂಗದಲ್ಲಿ.

ಪೆಂಪೆಲ್ ಪಟ್ಟಣವನ್ನು ಆಸ್ಟ್ರಿಯಾದವರಿಂದ ಕಿತ್ತು ಸ್ವಾಧೀನ ಪಡಿಸಿಕೊಂಡ ಬಳಿಕ ರಷ್ಯಾದವರು ಪಶ್ಚಿಮಕ್ಕೆ ತಿರುಗಿ ಕ್ರಾಕೋ ನಗರದ ಕಡೆ ನುಗ್ಗಿದರು; ಇನ್ನು ಕೆಲವು ರಷ್ಯಾ ಸೈನ್ಯಗಳು ಹಂಗೇರಿ ರಾಜ್ಯದೊಳಕ್ಕೆ ಪ್ರವೇಶ ಮಾಡಬೇಕೆಂಬ ಉದ್ದೇಶದಿಂದ ದಕ್ಷಿಣಕ್ಕೆ ಕಾರ್ಪೇಥಿಯನ್ ಪರ್ವತಗಳನ್ನು ಕುರಿತು ಹೊರಟವು. ಜರ್ಮನಿಯವರು ಇವೆರಡು ಕಡೆಗಳಿಂದಲೂ ರಷ್ಯಾದವರನ್ನು ಹಿಮ್ಮೆಟ್ಟಿಸಿಬಿಡಬೇಕೆಂದು ಅಪಾರವಾದ ಹೊಸ ಸೈನ್ಯಗಳನ್ನು ಕೂಡಿಸಿಕೊಂಡರು. ಜರ್ಮನಿಯವರು ತಮಗೆ ದೊಡ್ಡ ಜಯಪ್ರದವಾಯಿತೆಂದೂ, 8,000 ರಷ್ಯಾ ಸೈನ್ಯಗಳನ್ನು ಕೈಸೆರೆ ಹಿಡಿದುಕೊಂಡೆವೆಂದೂ ಹೇಳುತ್ತಾರೆ. ಅತ್ತಲಾಗಿ ಆಸ್ಟ್ರಿಯಾದವರು ಒಂದು ನಗರವು ತಮಗೆ ಸ್ವಾಧೀನವಾಯಿತೆಂದು ಹೇಳುವರು. ಆದರೆ ಆ ಪ್ರಾಂತ್ಯ ಬಹು ವಿಸ್ತಾರವಾದ ಪ್ರದೇಶದಲ್ಲಿ ಮಹಾ ಘೋರವಾದ ಕದನವು ಇನ್ನೂ ಜರುಗುತ್ತಿರುವಂತೆ ಕಾಣುವುದು. ಕೆಲವು ಠಾಣ್ಯಗಳಲ್ಲಿ ಜರ್ಮನಿಯವರು ರಷ್ಯಾದವರನ್ನು ಹಿಮ್ಮೆಟ್ಟಿಸಿ ಕೆಲವು ಸೈನ್ಯವನ್ನು ಕೈಸೆರೆ ಹಿಡಿದುಕೊಂಡಿದಾರೆಂದೂ, ಇತರ ಕಡೆಗಳಲ್ಲಿ ರಷ್ಯಾದವರು ಜರ್ಮನಿಯವರನ್ನು ಹಿಂದಕ್ಕೆ ಓಡಿಸಿ ಹಲವರನ್ನು ಕೈಸೆರೆ ಹಿಡಿದುಕೊಂಡಿದಾರೆಂದೂ ಹೇಳಬಹುದಾಗಿದೆ. ಜರ್ಮನಿಯವರು ಅಲ್ಲಿ ಜಯಪ್ರದವನ್ನು ಹೊಂದಬೇಕೆಂದು ಮಹತ್ತರವಾದ ಸನ್ನಾಹ ಮಾಡುತ್ತಿರುವುದಾಗಿಯೂ, ತಮಗೆ ಜಯವಾಯಿತೆಂದು ಹೇಳಿಕೊಂಡಿರುವುದಾಗಿಯೂ ಕಾಣುತ್ತದೆ. ಈಚೆಗೆ ಬಂದಿರುವ ವರ್ತಮಾನಗಳಿಂದ ಜರ್ಮನಿಯವರು ರಷ್ಯಾದವರನ್ನು ಹಿಂದಕ್ಕೆ ಓಡಿಸಿದರೆಂಬ ಮಾತು ಸಂಶಯಾಸ್ಪದವೆಂದು ಗೊತ್ತಾಗುವುದು.

ಯುದ್ಧ ನಡೆಯುತ್ತಿರುವ ಸಾಲಿನ ಉತ್ತರ ಭಾಗದಲ್ಲಿ ಜರ್ಮನಿಯವರು ನುಗ್ಗಿ ರಷ್ಯಾ ಸೀಮೆಯೊಳಕ್ಕೆ ಪ್ರವೇಶಿಸಿ ರೈಗ ಎಂಬ ನಗರವನ್ನು ಕುರಿತು ಹೋಗುತ್ತಿದ್ದರು. ಈ ಸೈನ್ಯ ಬಹಳ ಸ್ವಲ್ಪ; ಒಂದು ಕಳ್ಳರ ಗುಂಪು ನುಗ್ಗಿ ಹೋದಂತಾಗಿದೆ. ಈ ಸೈನಿಕರು ಮುಂದರಿಸಿ ನುಗ್ಗಿ ಹೋಗಲಾರದೆ ತಾವು ಗೆದ್ದುಕೊಂಡಿದ್ದ ಕೆಲವು ಫಿರಂಗಿಗಳನ್ನು ಅಲ್ಲೇ ಬಿಟ್ಟು ವಾಪಸು ಜರ್ಮನಿಗೆ ಬಂದುಬಿಡುತ್ತಿದಾರೆ. ಇನ್ನೊಂದು ಕಡೆ ಜರ್ಮನಿಯವರು ರಷ್ಯಾ ದೇಶದಲ್ಲಿರುವ ಲೀಬೌ ಎಂಬ ಪಟ್ಟಣವನ್ನು ಸ್ವಾಧೀನಮಾಡಿಕೊಂಡರು.

ಯುದ್ಧ ಸಾಲಿನ ದಕ್ಷಿಣ ಭಾಗದಲ್ಲಿ ಆಸ್ಟ್ರಿಯಾದವರು ರಷ್ಯಾದವರನ್ನು ಒಂದು ಪಾರ್ಶ್ವದಿಂದ ಬೆನ್ನುಹತ್ತಿ ಬರಬೇಕೆಂದು ಸಾಹಸಪಡುತ್ತಿರುವರು. ಅಲ್ಲಿ ಒಂದೆರಡು ವಾರಗಳಿಂದಲೂ ಬಹು ಕ್ರೂರವಾದ ಕದನಗಳು ನಡೆಯುತ್ತಾ ಬಂದಿವೆ. ರಷ್ಯಾದವರು ಈಗ ಆಸ್ಟ್ರಿಯಾದವರನ್ನು ಸೋಲಿಸಿಬಿಟ್ಟು ಅವರ ಮೇಲೆ ಬಿದ್ದು ಹಿಂದುಹಿಂದಕ್ಕೆ ಓಡಿಸುತ್ತಾ ಬಂದಿದಾರೆ. ಆಸ್ಟ್ರಿಯಾ ಸೈನಿಕರನೇಕರು ರಷ್ಯಾದವರಿಗೆ ಕೈಸೆರೆಯಾದರು.

ಜರ್ಮನಿಯವರನ್ನೂ ಆಸ್ಟ್ರಿಯಾದವರನ್ನೂ ಮುಂದರಿಸಿ ಬಾರದಂತೆ ತಡೆಯುವುದರಲ್ಲಿ ರಷ್ಯಾದವರು ಬಹಳ ಕಷ್ಟಪಡುತ್ತಿದಾರೆ. ಅವರು ಈಚೆಗೆ ಬಹಳ ಮಟ್ಟಿಗೆ ಮುಂದರಿಸಿ ನುಗ್ಗಿಹೋಗುತ್ತಾ ಇಲ್ಲ. ಆದರೂ ಅವರು ಜರ್ಮನಿಯವರ ಮತ್ತು ಆಸ್ಟ್ರಿಯಾದವರ ಬಹಳ ಪರಾಕ್ರಮವುಳ್ಳ ಸೈನಿಕರನ್ನು ತಡೆದು ಅವರು ಮೇಲೆ ಬೀಳುವುದನ್ನು ಅಡಗಿಸುತ್ತಾ ಬಂದಿರುವರು. ಆದಕಾರಣ ಇಷ್ಟರಲ್ಲೇ ರಷ್ಯಾದವರೂ ಶತ್ರುಗಳ ಮೇಲೆ ಬಿದ್ದು ನುಗ್ಗಿ ಯುದ್ಧ ಮಾಡುವ ಸಮಯ ಒದಗೀತೆಂದು ನಿರೀಕ್ಷಿಸಲ್ಪಟ್ಟಿದೆ.

ಟರ್ಕಿ.

ನಮ್ಮ ಪಕ್ಷದವರು ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸಿಕೊಂಡು ನುಗ್ಗಿ ಹೋಗುವ ಸುದ್ದಿಯು ನಮಗೆ ನಿಧಾನವಾಗಿ ಬರುತ್ತಿದೆ. ಕಳೆದ ಏಪ್ರಿಲ್ ತಾ. 25 ರಲ್ಲಿ ನಮ್ಮ ಪಕ್ಷದ ಸೈನ್ಯಗಳು ಏಕಕಾಲದಲ್ಲಿ ಐದು ಸ್ಥಳಗಳಿಗೆ ಜಹಜುಗಳಿಂದ ಇಳಿದು ಹೋಗಿ ಠಾಣ್ಯಹಾಕಿಕೊಂಡರೆಂದು ಈಗ ತಿಳಿಯುತ್ತದೆ. ಈ ಸೈನ್ಯಗಳಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡಿನ ಯುದ್ಧಭಟರೇ ಹೆಚ್ಚಾಗಿರುವರು. ಒಂದು ಕಡೆ ಸೈನ್ಯವು ಜಹಜಿನಿಂದ ಕರೆಗೆ ಇಳಿಯುವುದು ಕಷ್ಟವಾಯಿತು. ಸೈನಿಕರು ಆ ಕಷ್ಟವನ್ನು ಪರಿಹರಿಸಿಕೊಂಡು ಇಳಿದುಬಿಟ್ಟರು. ಒಡನೆಯೇ ಗಲ್ಲಿಪೊಲಿ ಅರ್ಧ ದ್ವೀಪದಲ್ಲಿ 29,000 ಸೈನ್ಯಗಳು ಇಳಿದವು. ಬಳಿಕ ಹಲವು ದಿನಗಳ ತನಕ ಅಲ್ಲಿ ಬಹು ಘೋರವಾದ ಕದನಗಳು ನಡೆದು, ನಮ್ಮ ಪಕ್ಷದ ಸೈನಿಕರು ನುಗ್ಗಿ ಮುಂದಕ್ಕೆ ಹೋಗಿದಾರೆ. ಈ ಜಲಮಾರ್ಗದ ಇನ್ನೊಂದು ಕಡೆಯ ಕರೆಯಲ್ಲಿ ಫ್ರೆಂಚ್ ಸೈನ್ಯಗಳು ಹೋಗಿ ಇಳಿದು ಅಲ್ಲಿ ಯುದ್ಧಕಾರ್ಯಗಳನ್ನು ತೀರಿಸಿಕೊಂಡು ಬಂದು ಬ್ರಿಟಿಷ್ ಸೈನ್ಯಗಳ ಜೊತೆಗೆ ಸೇರಿಕೊಂಡವು. ಈಚೆಗೆ ಏಪ್ರಿಲ್ ತಾ. 28, 29 ರಲ್ಲಿಯೂ ಇನ್ನೂ ಕೆಲವು ಸೈನ್ಯಗಳು ಹೋಗಿ ಕರೆಯನ್ನು ಸೇರಿಕೊಂಡವು. ಆ ಪ್ರದೇಶದಲ್ಲಿ ಗುಡ್ಡಗಳು ವಿಶೇಷ. ನಮ್ಮ ಪಕ್ಷದ ಸೈನ್ಯಗಳು ಅವುಗಳನ್ನು ದಾಟಿ ನುಗ್ಗಿ ಹೋಗುತ್ತಿವೆ. ಇತ್ತಲಾಗಿ ಜಲಮಾರ್ಗದೊಳಗೆ ನಮ್ಮ ಪಕ್ಷದ ಯುದ್ಧದ ಜಹಜುಗಳು ಕರೆಯಲ್ಲಿರುವ ಕೋಟೆಗಳಿಗೆ ಫಿರಂಗಿ ಗುಂಡುಗಳನ್ನು ಹೊಡೆದು ಹಲಾಕು ಮಾಡುತ್ತಾ ಬಂದಿರುವವು. ಒಂದು ಕೋಟೆಯು ಹೊರತು ಉಳಿದ ಕೋಟೆಗಳಲ್ಲಿದ್ದ ಶತ್ರುವಿನ ಫಿರಂಗಿಗಳ ಬಾಯಿ ಮುಚ್ಚಿಹೋಯಿತು ಎಂದು ಹೇಳಲಾಗಿದೆ. ಆದರೆ ಸರಕಾರಿಯಾಗಿ ಇನ್ನೂ ಖಚಿತವಾದ ಸಮಾಚಾರ ತಿಳಿಯಲಿಲ್ಲ.

ಈ ಮಧ್ಯೆ ಬಾಸ್ಫೋರಸ್ ಜಲಮಾರ್ಗದ ಅಂತ್ಯದಲ್ಲಿರುವ ಏಳು ಕೋಟೆಗಳಿಗೆ ರಷ್ಯಾದವರು ಫಿರಂಗಿ ಗುಂಡುಗಳನ್ನು ಹೊಡೆಯುತ್ತಾ ಬಂದಿದಾರೆ. ಆ ಕೋಟೆಗಳಿಂದ ಗುಂಡುಗಳು ಬರುವುದು ಬಹಳ ನಿಧಾನ. ಕೋಟೆಗಳಲ್ಲಿ ಕಟ್ಟಡ ಮುಂತಾದವುಗಳು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿದವು. ನಮ್ಮ ಪಕ್ಷದವರು ನಡಿಸಬೇಕಾಗಿರುವ ಕಾರ್ಯಗಳು ಬಹಳ ಕಷ್ಟತರವಾಗಿರೋಣದರಿಂದ ನಾವು ತುಂಬಾ ಆತುರಪಡುವುದು ಉಚಿತವಲ್ಲ.

ಈಜಿಪ್ಟಿನಲ್ಲಿ ಸೂಯೆಸ್ ಕಡಲುಕಾಲುವೆಯ ಸಮೀಪದಲ್ಲಿ ಒಂದು ಕಡೆ ಟರ್ಕಿಯ ಸ್ವಲ್ಪ ಸೈನ್ಯ ಠಾಣ್ಯ ಹಾಕಿಕೊಂಡಿತ್ತು. ಹಿಂದುಸ್ಥಾನದಿಂದ ಹೋಗಿರುವ ಬಿಕ್ಯಾನೀರ್ ಒಂಟೆ ಸವಾರರು ಆ ಸೈನ್ಯದ ಮೇಲೆ ಬಿದ್ದು ಚದರಿಸಿಬಿಟ್ಟಿದಾರೆ.

ಪರ್ಷಿಯಾದಲ್ಲೂ ಆರ್ಮೀನಿಯಾದಲ್ಲೂ ಟರ್ಕಿಯವರು ಮತ್ತೆ ಸೋತು ಹೋದರು. ಒಂದು ಕಡೆ ಯುದ್ಧವಾದದ್ದರಲ್ಲಿ ಟರ್ಕಿಯವರ 3,500 ಯುದ್ಧಭಟರು ರಣರಂಗದಲ್ಲಿ ಕಡಿದು ಬಿದ್ದುಕೊಂಡರು. ಈಗ ರಷ್ಯಾದವರು ಟರ್ಕಿಯವರನ್ನು ಓಡಿಸಿಕೊಂಡು ಹೋಗುತ್ತಿದಾರೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕದ ಸಂಯುಕ್ತ ಸೈನ್ಯಗಳು ಜರ್ಮನಿಯವರ ದಕ್ಷಿಣ ಪಶ್ಚಿಮ ಆಫ್ರಿಕಾದೊಳಗೆ ಬೇಗಬೇಗನೆ ನುಗ್ಗಿ ಹೋಗಿರುವವು. ಜರ್ಮನಿಯವರು ತಪ್ಪಿಸಿಕೊಂಡು ಹೋಗದಂತೆ ತಡೆಯುವುದಕ್ಕಾಗಿ ನಮ್ಮ ಸೈನಿಕರು ಒಂದು ರೈಲ್ ರಸ್ತೆಯನ್ನು ಕಿತ್ತು ಹಾಳುಮಾಡಿಬಿಟ್ಟರು. ಅಲ್ಲಿ ಘೋರವಾದ ಯುದ್ಧವಾಯಿತು. ನಮ್ಮ ಸೈನಿಕರಲ್ಲಿ 70 ಮಂದಿಯನ್ನು ಜರ್ಮನಿಯವರು ಕೈಸೆರೆ ಹಿಡಿದುಕೊಂಡರು. ಅಷ್ಟರಲ್ಲೇ ಹಿಂದಿನಿಂದ ನಮ್ಮ ಹೊಸ ಸೈನ್ಯಗಳು ಅಲ್ಲಿಗೆ ತಲಪಿ ಕದನಮಾಡಿ ಜರ್ಮನಿಯವರನ್ನು ಸೋಲಿಸಿ, ಅವರು ಕೈಸೆರೆ ಹಿಡಿದಿದ್ದ ಸೈನಿಕರನ್ನು ಬಿಡಿಸಿಕೊಂಡದ್ದಲ್ಲದೆ ಜರ್ಮನಿಯವರನ್ನು ಅಲ್ಲಿಂದ ಇಪ್ಪತ್ತು ಮೈಲಿ ದೂರ ಓಡಿಸಿಕೊಂಡು ಹೋದರು. ಜರ್ಮನಿಯವರ ಎರಡು ಫಿರಂಗಿಗಳೂ, ಹಲವು ಮೆಷೀನ್ ಫಿರಂಗಿಗಳೂ, ಬಹಳ ಯುದ್ಧಸಾಮಗ್ರಿಗಳೂ 200 ಸೈನಿಕರೂ ಕೈಸೆರೆ ಹಿಡಿಯಲ್ಪಟ್ಟರು. ನಮ್ಮ ಸೈನಿಕರಲ್ಲಿ 23 ಮಂದಿ ಕೊಲೆಯಾದರು, 55 ಜನರಿಗೆ ಗಾಯಗಳಾದವು; ಜರ್ಮನಿಯವರ ಕಡೆ ಎಷ್ಟು ನಷ್ಟವಾಯಿತೋ ಇನ್ನೂ ಗೊತ್ತಾಗಲಿಲ್ಲ.

ಅಲ್ಲಿಂದ ಉತ್ತರಕ್ಕೆ ನಮ್ಮ ಸೈನಿಕರು ನುಗ್ಗಿಹೋಗಿ ಇನ್ನೊಂದು ಪಟ್ಟಣವನ್ನು ಸ್ವಾಧೀನಪಡಿಸಿಕೊಂಡಿದಾರೆ. ಅಲ್ಲಿ 28 ಜರ್ಮನರು ಕೈಸೆರೆ ಸಿಕ್ಕಿರುವರು. ನಮ್ಮವರಲ್ಲಿ 3 ಮಂದಿ ಕೊಲೆಯಾದರು; ಇಬ್ಬರಿಗೆ ಗಾಯವಾಗಿದೆ.

ಜರ್ಮನಿಯವರು ತಮ್ಮ ಶತ್ರುಗಳನ್ನು ನಾಶಪಡಿಸಬೇಕೆಂದು ಹಲವು ತಂತ್ರಗಳನ್ನು ಮಾಡಲಾರಂಭಿಸಿದಾರೆ. ಕುಡಿಯುವ ನೀರಿನ ಭಾವಿಗಳಿಗೆ ವಿಷ ಹಾಕಿದರು. ಇದರಿಂದ ನಮ್ಮ ಸೈನ್ಯ ಮುಂದರಿಸಿ ನುಗ್ಗಿಹೋಗದಂತೆ ಅಡ್ಡಿಯಾಗುವುದೆಂದು ಅವರು ಊಹಿಸಿದ್ದರು.

ಸಮುದ್ರದ ಮೇಲೆ.

ಜರ್ಮನಿಯವರ ಸಬ್‌ಮೆರೀನ್ ಎಂಬ ಹಡಗುಗಳ ಕಾರುಬಾರು ಬಹಳ ಚುರುಕಾಗಿತ್ತು. ಅವು ಅನೇಕ ಹಡಗುಗಳನ್ನು ಹಾಳುಮಾಡಿರುತ್ತವೆ. ಆ ಪೈಕಿ ಲೂಸಿಟೇನಿಯಾ ಎಂಬ ಜಹಜು ಮುಳುಗಿಹೋದದ್ದು ಬಹಳ ದೊಡ್ಡ ನಷ್ಟ. ಇದು ಬ್ರಿಟಿಷರ ಭಾರಿ ಜಹಜು. ಈ ಜಹಜು ಅಮೇರಿಕದಿಂದ ವಾಪಸು ಬರುತ್ತಿತ್ತು. ಐರ್ಲೆಂಡಿನ ತೀರದ ಸಮೀಪಕ್ಕೆ ಬರುವಷ್ಟರಲ್ಲೇ ಶತ್ರುವಿನ ಸಬ್‌ಮೆರೀನು ಆಕಸ್ಮಿಕವಾಗಿ ಕಾಣಿಸಿಕೊಂಡು, ಎಚ್ಚರಿಕೆ ಏನೂ ಕೊಡದೇನೇ, ಟಾರ್ಪಿಡೋಗಳನ್ನು ಬಿಟ್ಟು ಆ ಜಹಜಿಗೆ ಹೊಡಿಸಿಬಿಟ್ಟಿತು. ಆಗ ಆ ಜಹಜಿನೊಳಗೆ 2,160 ಜನರಿದ್ದರು; ಈ ಪೈಕಿ ಬಹು ಮಂದಿ ಅಮೇರಿಕದವರು. ಜಹಜು ಮುಳುಗಿದ್ದರಿಂದ 1,396 ಮಂದಿ ಗಂಡಸರು, ಹೆಂಗಸರು, ಮಕ್ಕಳೂ ಸಮುದ್ರದ ಪಾಲಾದರೆಂದು ಹೇಳಲಾಗಿದೆ; 764 ಜನರು ಮಾತ್ರ ಬದುಕಿಬಂದರು. ಯುದ್ಧದಲ್ಲಿ ಸೇರಿಯದ ಇಂಥಾ ನಿರಪರಾಧಿಗಳಾದ ಪ್ರಯಾಣಿಕರಿಗೆ ದುಃಖಕರವಾದ ಅಕಾಲ ಮರಣ ಪ್ರಾಪ್ತವಾಗಿರುವುದು. ಟಾರ್ಪಿಡೊ ಬಂದು ಬಡಿದ ರಭಸಕ್ಕೆ ಆ ಜಹಜಿನಲ್ಲಿ ಯಂತ್ರಗಳು ಬಹಳ ಘೋರವಾದ ಶಬ್ದದಿಂದ ಒಡೆದು ಅದರಲ್ಲಿದ್ದವರು ಅನೇಕರು ಮೃತಪಟ್ಟರು. ಜರ್ಮನಿಯವರ ಈ ಘೋರ ಕೃತ್ಯವನ್ನು ನೋಡಿ ಪ್ರಪಂಚದಲ್ಲೆಲ್ಲಾ ಅವರ ಮೇಲೆ ಆಗ್ರಹವನ್ನು ಪ್ರಕಾಶಪಡಿಸಿರುತ್ತಾರೆ.

ಇತರ ಕೆಲವು ಹಡಗುಗಳನ್ನೂ ಪರರಾಜ್ಯಗಳ ಹಡಗುಗಳನ್ನೂ ಜರ್ಮನಿಯವರು ಮುಳುಗಿಸಿರುವರು. ಈ ಪೈಕಿ ಒಂದು ಅಮೇರಿಕದ ಹಡಗು. ಅಮೇರಿಕದವರು ಜರ್ಮನಿಯವರ ಮೇಲೆ ತುಂಬಾ ಆಗ್ರಹಪಟ್ಟು ಪ್ರತಿಫಲವನ್ನು ಕೇಳುವವರಾಗಿದಾರೆ.

ಮೇ ತಾ. 5 ಕ್ಕೆ ಆಖೈರಾದ ಒಂದು ವಾರದಲ್ಲಿ ಜರ್ಮನಿಯವರ ಸಬ್‌ಮೆರೀನುಗಳ ದೆಸೆಯಿಂದ ಬ್ರಿಟಿಷರ ಐದು ಜಹಜುಗಳೂ, ಹದಿನಾರು ಅಂಬಿಗರ ಹಡಗುಗಳೂ ಮುಳುಗಿಹೋಗಿರುತ್ತವೆ. ಆ ವಾರದಲ್ಲಿ 1,604 ಜಹಜುಗಳೂ ಹಡಗುಗಳೂ ಗ್ರೇಟ್ ಬ್ರಿಟನ್‌ಗೆ ಬಂದು ಪ್ರಯಾಣಮಾಡಿರುವವು. ಇದರಲ್ಲಿ ಲ್ಯೂಸಿಟೇನಿಯಾ ಜಹಜು ನಷ್ಟವಾದದ್ದು ಸೇರಿರುವುದಿಲ್ಲ.

ಉತ್ತರ ಸಮುದ್ರದಲ್ಲಿ ಸಬ್‌ಮೆರೀನಿನಿಂದ ಇಂಗ್ಲಿಷರ ಟಾರ್ಪೆಡೊ ಬೋಟ್ ಡಿಸ್ಟ್ರಾಯರ್ ಎಂಬ ಹಡಗು ನಾಶವಾಯಿತು. ಆದರೆ ಅದರಲ್ಲಿದ್ದವರು ಬಹುಭಾಗ ಬದುಕಿ ಬಂದರು. ಬಳಿಕ ಜರ್ಮನಿಯವರ ಎರಡು ಟಾರ್ಪೆಡೊ ಬೋಟ್ ಡಿಸ್ಟ್ರಾಯರುಗಳು ಕಾಣಿಸಿಕೊಂಡವು. ಇಂಗ್ಲಿಷರ ಡಿಸ್ಟ್ರಾಯರುಗಳು ಹೋಗಿ ಅವುಗಳನ್ನು ಸ್ವಲ್ಪ ದೂರ ಓಡಿಸಿ ಒಂದು ಗಂಟೆಯೊಳಗೆ ಎರಡನ್ನೂ ಮುಳುಗಿಸಿ ಬಿಟ್ಟವು. ಮುಳುಗಿಹೋದ ಡಿಸ್ಟ್ರಾಯರುಗಳಲ್ಲಿದ್ದ ಜರ್ಮನಿ ನಾವಿಕರನ್ನು ಬದುಕಿಸುವುದಕ್ಕೆ ತುಂಬಾ ಶ್ರಮಪಟ್ಟರು. ಜರ್ಮನಿಯ ಇಬ್ಬರು ಆಫೀಸರುಗಳನ್ನೂ, 44 ನಾವಿಕರನ್ನೂ ಸಮುದ್ರದಿಂದೆತ್ತಿ ಕರೆತಂದಿದಾರೆ. ಜರ್ಮನಿಯವರ ಒಂದು ದೋಣಿಯಲ್ಲಿ ಕೈಸೆರೆ ಹಿಡಿಯಲ್ಪಟ್ಟ ಕೆಲವು ಬ್ರಿಟಿಷ್ ಯುದ್ಧಭಟರಿದ್ದರೆಂದೂ, ಅವರನ್ನು ಬದುಕಿಸುವುದಕ್ಕೆ ಜರ್ಮನಿಯವರು ಸ್ವಲ್ಪವೂ ಪ್ರಯತ್ನಮಾಡಲಿಲ್ಲವೆಂದೂ, ಅವರೆಲ್ಲಾ ಸಮುದ್ರದ ಪಾಲಾದರೆಂದೂ ಹೇಳಲಾಗಿದೆ. ಜರ್ಮನಿಯವರು ಯುದ್ಧಕಾಲದಲ್ಲಿ ಆಚರಿಸಬೇಕಾದ ಪ್ರತಿ ಒಂದು ನೀತಿಯನ್ನೂ ಧರ್ಮವನ್ನೂ ಮೀರಿ ನಡೆಯುತ್ತಾ, ತಮ್ಮ ಕೈಲಾಗುವ ಮಟ್ಟಿಗೂ ಜನಗಳನ್ನು ಕೊಂದು ಹಾಕಬೇಕೆಂದು ಸಂಕಲ್ಪ ಮಾಡಿಕೊಂಡಿರುವಂತೆ ಕಾಣುವುದು.

ಇತರ ವಿಷಯಗಳು.

ಇಟಲಿ ರಾಜ್ಯದವರು ಏನು ಮಾಡಬೇಕೆಂದಿರುತ್ತಾರೆಯೋ ಈಗ ಬಂದಿರುವ ತಂತೀವರ್ತಮಾನಗಳಿಂದ ಸರಿಯಾಗಿ ಗೊತ್ತಾಗುವುದಿಲ್ಲ. ಇಟಲಿಯವರನ್ನು ಈ ಯುದ್ಧದಿಂದ ಹೊರಗೆ ಇಟ್ಟಿರಬೇಕೆಂದು ಜರ್ಮನಿಯವರು ತುಂಬಾ ಸಾಹಸಪಡುತ್ತಿದಾರೆ. ಆದರೆ ಅವರ ಉದ್ದೇಶವು ಸಾರ್ಥಕವಾಗುವುದೇ ಎಂದು ಅನೇಕರಿಗೆ ಸಂಶಯವುಂಟಾಗಿದೆ.

ಜಪಾನ್‌ಗೂ ಚೀನಕ್ಕೂ ಮನಸ್ತಾಪ ಹುಟ್ಟಿ ಅವರವರಿಗೆ ಯುದ್ಧವಾಗುವುದೋ ಎಂಬ ಸ್ಥಿತಿಗೆ ಬಂದಿತ್ತು. ಆದರೆ ಚೀನಿಯವರು ಈಚೆಗೆ ಜಪಾನಿನವರ ಕೋರಿಕೆಯಂತೆ ಒಪ್ಪಿಕೊಂಡು ಇರುತ್ತಾರೆ. ಅವರವರಿಗೆ ನಡೆದ ವಾಗ್ವಾದಗಳೇ ಮುಂತಾದವು ಸ್ಪಷ್ಟವಾಗಿ ತಿಳಿಯುವುದಿಲ್ಲ.

ಜರ್ಮನಿಯವರ ಕೆಲವು ವಿಮಾನಯಂತ್ರಗಳು ಎರಡಾವರ್ತಿ ಇಂಗ್ಲೆಂಡಿನ ಮೇಲೆ ಹಾರಿ ಬಂದು ಕಾಣಿಸಿಕೊಂಡವು. ಆದರೆ ಅವುಗಳನ್ನು ಹೆದರಿಸಿ ಓಡಿಸಿಬಿಟ್ಟಿರುತ್ತಾರೆ. ಅವುಗಳ ದೆಸೆಯಿಂದ ನಷ್ಟವೇನೂ ಸಂಭವಿಸಲಿಲ್ಲ.

ಒಳದೇಶದ ವೃತ್ತಾಂತಗಳು.

ಮೈಸೂರು ಸಿಟಿ ಮ್ಯುನಿಸಿಪಲ್ ಸರಹದ್ದಿನೊಳಗೆ ಎಲ್ಲೂ ನೀರು ನಿಂತು ಕೊಳೆಯದಂತೆ ಹಳ್ಳ ಕೊಳ್ಳಗಳನ್ನೆಲ್ಲಾ ಮುಚ್ಚಿ ನೆಲಸಮಮಾಡುವ ಕಾಮಗಾರಿಗೆ ಟ್ರಸ್ಟ್ ಬೋರ್ಡಿನವರು 40,869 ರೂಪಾಯಿನ ಅಂದಾಜಾ ಪಟ್ಟಿಯನ್ನು ಒಪ್ಪಿ ಗವರ್ನ್‌ಮೆಂಟ್ ಸ್ಯಾಂಕ್ಷನ್ ಬಗ್ಗೆ ಕಳುಹಿಸಿದಾರೆ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಕಾಲದಲ್ಲಿ ಸಂಸ್ಥಾನಾಮಳೆಯ ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಮಹಾಸಭೆಯು ರಾಜಧಾನಿಯಲ್ಲಿ ನಡೆಯುವುದಷ್ಟೆ. ಈ ಸಭೆಗೆ ದಿವಾನ್ ಬಹದೂರ್ ಮ|| ಕೆ. ಪಿ. ಪುಟ್ಟಣ್ಣಶೆಟ್ಟರವರನ್ನು ಪ್ರೆಸಿಡೆಂಟಾಗಿ ಚುನಾಯಿಸುತ್ತಾರೆಂದು ಕೇಳುವೆವು.

ಮೈಸೂರು ನ್ಯಾಯವಿಧಾಯಕ ಸಭೆಯ ಪ್ರಜಾಪಕ್ಷದ ಮೆಂಬರಾದ ಮ|| ಕರಣಿಕ ಕೃಷ್ಣಮೂರ್ತಿರಾಯರು ಬೆಂಗಳೂರು ಒಕ್ಕಲಿಗರ ಪತ್ರಿಕೆಯ ಸಂಪಾದಕರ ಮೇಲೆ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟದ ಫಿರ್ಯಾದು ತಂದಿದಾರೆ. ಮೊಕದ್ದಮೆಯು ಜೂನ್ ತಾ. 4 ಕ್ಕೆ ವಿಚಾರಣೆಯಾಗುವುದು.

ನಮ್ಮ ದಿವಾನ್‌ರವರು ಒಂದು ವಾರದ ತನಕ ರಾಜಧಾನಿಯಲ್ಲಿದ್ದು ಕಳೆದ ಶುಕ್ರವಾರ ಅಪರಾಹ್ನದಲ್ಲಿ ಬೆಂಗಳೂರಿಗೆ ಮೋಟರಿನಲ್ಲಿ ತೆರಳಿದರು. ಮರುದಿನ ಕೌನ್ಸಿಲ್ ಮೀಟಿಂಗನ್ನು ನಡಿಸಿದರು. ದಿವಾನ್‌ರವರು ಪರಿವಾರ ಸಮೇತ ಸುಮಾರು 20 ನೇ ತಾ. ಗೆ ಬೆಂಗಳೂರಿನಿಂದ ನೀಲಗಿರಿಗೆ ದಯಮಾಡಿ 3-4 ವಾರಗಳ ತನಕ ಅಲ್ಲಿ ಇರುತ್ತಾರೆಂದು ಕೇಳುತ್ತೇವೆ.

ಹೆಗ್ಗಡದೇವನಕೋಟೆಯಲ್ಲಿ ವಿಲೇಜ್ ಪೋಸ್ಟ್‌ಮನ್ ಆಗಿದ್ದ ಎಚ್. ಎಸ್. ಕೃಷ್ಣಶೆಟ್ಟಿನೆಂಬುವನು ಮೂರು ರಿಜಿಸ್ಟರ್ ಕಾಗದಗಳನ್ನೂ, ಎರಡು ವಿ. ಪಿ. ಪಾರ್ಸೆಲುಗಳನ್ನೂ ವಿಳಾಸದಾರರಿಗೆ ಪಾವತಿಮಾಡುವುದಕ್ಕೆಂದು ಕಳೆದ ಮಾರ್ಚಿ ತಾ. 31 ರಲ್ಲಿ ತೆಗೆದುಕೊಂಡು ಹೋದವನು, ಎಲ್ಲಿ ಹೋದನೋ ಇದುವರೆಗೆ ಪತ್ತೆ ಆಗಲಿಲ್ಲ. ಪೋಲೀಸಿನವರು ತಲಾಸ್ ಮಾಡುತ್ತಿದಾರೆ.

ರಾಜಧಾನಿಯಲ್ಲಿರುವ ಸರಕಾರಿ ಆಯುರ್ವೇದ ವೈದ್ಯ ಪಾಠಶಾಲೆಯಲ್ಲಿ ಆಷೇರ್ಯದಿಂದ ವೈದ್ಯಮಾಡುವ ಮನೆತನಗಳ ಹುಡುಗರು ಸೇರಿ ವೈದ್ಯವನ್ನು ಕಲಿಯಬಹುದೆಂದೂ, ಅಂಥವರಿಗೆ ಇಂಗ್ಲಿಷು, ಸಂಸ್ಕೃತ, ಕನ್ನಡ ತಕ್ಕಮಟ್ಟಿಗೆ ಕಲಿತು ವಿದ್ಯಾರ್ಥಿಗಳಾಗಿ ಸೇರಿದವರಿಗೆ ವೇತನಗಳನ್ನು ಕೊಡುವದಾಗಿಯೂ, ಇಷ್ಟವುಳ್ಳವರು ಈ ತಿಂಗಳ 24 ನೇ ತಾ. ಒಳಗೆ ಹೆಡ್‌ಮಾಸ್ಟರಿಗೆ ಅರ್ಜಿ ಬರೆದುಕೊಳ್ಳಬೇಕೆಂದೂ ಪ್ರಕಟವಾಗಿರುತ್ತದೆ. ಉಮೇದುವಾರರನ್ನು ತಾ. 31 ರಲ್ಲಿ ಪರೀಕ್ಷೆ ಮಾಡುವರು. ಪಾಠಶಾಲೆಯು ಜೂನ್ ತಾ. 4 ರಿಂದ ಪ್ರಾರಂಭವಾಗುತ್ತದೆ.

ಕಳೆದ ವಾರ ಬೆಂಗಳೂರಿನಲ್ಲಿ ಕನ್ನಡ ಭಾಷೆಯನ್ನು ಕರ್ನಾಟಕ ದೇಶದಲ್ಲೆಲ್ಲಾ ಒಂದೇ ರೂಪವಾಗುವಂತೆ ಮಾಡಿ, ಗ್ರಂಥಗಳನ್ನು ಅನೇಕವಾಗಿ ಪ್ರಚಾರಕ್ಕೆ ತರುವುದಕ್ಕೆಂದು ಒಂದು ಮಹಾಸಭೆ ಜರುಗಿತು. ಮ|| ಎಚ್. ವಿ. ನಂಜುಂಡಯ್ಯನವರು ಅಗ್ರಾಸನವನ್ನು ವಹಿಸಿ ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು. ಸಭಿಕರ ಉದ್ದೇಶಗಳು ನೆರವೇರುವುದಕ್ಕೆ ಒಂದು ಕಮಿಟಿ ರೂಪಿಸಲ್ಪಟ್ಟಿದೆ. ಕರ್ನಾಟಕ ಸೀಮೆಯ ಪ್ರತಿನಿಧಿಗಳು ಬಹಳ ಮಂದಿ ಈ ಸಭೆಗೆ ಬಂದಿದ್ದರು. ಬಳಿಕ ನಮ್ಮ ಸಂಸ್ಥಾನದಲ್ಲಿ ಪತ್ರಿಕೆಗಳನ್ನು ನಡಿಸುವವರೂ ಸೇರಿ ಒಂದು ಸಭೆಯನ್ನು ನಡಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಹಿಂದುಸ್ಥಾನದಿಂದ ಹೋಗಿರುವ ಜನಗಳ ಕಷ್ಟಗಳನ್ನು ಪರಿಹರಿಸುವ ಭಾಗದಲ್ಲಿ ತನುಮನಧನಗಳನ್ನು ವಿನಿಯೋಗಿಸಿ ಸರಕಾರದವರ ಕೂಡ ಹೋರಾಡಿ ಕೀರ್ತಿಹೊಂದಿರುವ ಮ|| ಗಾಂಧಿಯವರು ಪತ್ನೀಸಮೇತ ಕಳೆದ ವಾರ ಬೆಂಗಳೂರಿಗೆ ಬಂದು ಪೇಟೆಯಲ್ಲೂ ದಂಡಿನಲ್ಲೂ ಪ್ರಜೆಗಳಿಂದ ಸತ್ಕಾರವನ್ನು ಹೊಂದಿ ಸಂತೋಷಪಟ್ಟು ವಾಪಸು ಬೊಂಬಾಯಿಗೆ ತೆರಳಿದರು. ದಾರಿಯಲ್ಲಿ ಕಳೆದ ಭಾನುವಾರ ಬೆಳಗ್ಗೆ ದಾವಣಗೆರೆಯ ಪ್ರಜಾ ಮುಖಂಡರು ಸ್ಟೇಷನ್ನಿನಲ್ಲಿ ಕಾದಿದ್ದು ಆ ದಂಪತಿಗಳನ್ನು ಸತ್ಕರಿಸಿ ಅವರಿಗೆ ಹಾರ ಹಾಕಿ ಹಣ್ಣು ಹಂಪಲನ್ನು ಒಪ್ಪಿಸಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಏಪ್ರಿಲ್ 30 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—(1)	ಷೇರು ಬಂಡವಾಳ	... ರೂ.	10,00,000
,, (2)	ರಿಜರ್ವ್ ಫಂಡು	... ,,	26,000
,, (3)	ಡಿಪಾಜಿಟ್ಟುಗಳು	... ,,	28,81,077
,, (4)	ಇತರೆ	... ,,	60,089
(ಆಣೆ ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ.	39,66,166

ಲೇಣಿ:—(1)	ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	604,830
,, (2)	ಖಾತೆ ಮತ್ತು ಇತರ ಸಾಲಗಳು	,,	24,88,046
,, (3)	ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	411,703
,, (4)	ಇನ್‌ವೆಸ್ಟ್‌ಮೆಂಟುಗಳು	,,	267,277
,, (5)	ಏಜೆನ್ಸಿಗಳಲ್ಲಿರುವ ಬಾಕಿಗಳು	,,	162,775
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,,	15,715
,, (7)	ಇತರೆ	,,	15,820
(ಆಣೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ.	39,66,166

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಹಂಪಾಪುರ-ಕೊಡಗು ರೈಲ್ವೆ ಏರ್ಪಾಡು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಮತ.

ಮೈಸೂರು ಗವರ್ನ್‌ಮೆಂಟಿನ ಫೈನಾನ್ಷಲ್ ಸೆಕ್ರೆಟರಿಯವರು ಹಂಪಾಪುರದಿಂದ ಬಿಳಿಕೆರೆ, ಸಾಲಿಗ್ರಾಮ, ರಾಮನಾಥಪುರಗಳ ಮೇಲೆ ಕೊಡಗಿನ ಎಲ್ಲಿಕಟ್ಟಿನ ತನಕ 33 ಮೈಲಿ ದೂರ ರೈಲ್ ರಸ್ತೆ ಹಾಕಿಸಬೇಕೆಂಬ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಬರೆದು ಕೇಳಿದ ವಿಚಾರಗಳೇನೆಂದರೆ—

(1) ಆ ಪ್ರದೇಶಗಳಲ್ಲಿರುವ ಪ್ರಜೆಗಳು ರೈಲ್ ರಸ್ತೆ ಆಗಬೇಕೆಂದು ಅಪೇಕ್ಷಿಸುತ್ತಾರೆಯೇ ?

(2) ಅದಕ್ಕೆ ಸುಮಾರು 12 ಲಕ್ಷ ರೂಪಾಯಿ ಬೇಕಾದೀತು ; ಈ ಪೈಕಿ ಅರ್ಧ ಹಣವನ್ನು ಪ್ರಜೆಗಳು ವಹಿಸಿಕೊಂಡು ಡಿಬೆಂಚರ್ ಪತ್ರಗಳ ಮೇಲೆ ಸಾಲ ಕೊಡಲು ಸಿದ್ಧರಾಗಿವಾರೆಯೇ ?

(3) ಈ ರೈಲ್ ರಸ್ತೆ ಹಾಕುವುದು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸಮ್ಮತವಾಗಿದೆಯೇ ?

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಸಭೆ ಸೇರಿ ಮೇಲ್ಕಂಡ ವಿಷಯಗಳನ್ನು ಕುರಿತು ಚರ್ಚೆಮಾಡಿ ಗವರ್ನ್‌ಮೆಂಟಿಗೆ ತಿಳಿಯಪಡಿಸಿರುವ ಜವಾಬೇನೆಂದರೆ—

(1) ಕೊಡಗಿನ ಎಲ್ಲಿಕಟ್ಟಿನ ತನಕ ರೈಲ್ ರಸ್ತೆ ಹಾಕಿಸುವುದು ಅವಶ್ಯವಾಗಿದೆ

(2) ಈ ರೈಲ್ ರಸ್ತೆಯನ್ನು ಹುಣಸೂರು, ಹಂಪಾಪುರಗಳ ಮೇಲೆ ಹಾಕಿದರೆ ಅನುಕೂಲವೆಂದು ಪ್ರಜೆಗಳು ಅಭಿಪ್ರಾಯಪಡುತ್ತಾರೆ

(3) ಅದನ್ನು ಡಿಸ್ಟ್ರಿಕ್ಟ್ ಬೋರ್ಡಿನವರೂ ಒಪ್ಪಿಕೊಳ್ಳುವರು ; ಈಗ ಸೂಚಿಸಲ್ಪಟ್ಟಿರುವ ರೈಲ್ ಮಾರ್ಗವು ಪ್ರಾಮುಖ್ಯವಾದ ಸ್ಥಳಗಳಿಗೆ ಸಮೀಪವಾಗುವುದಿಲ್ಲವಾದಕಾರಣ ಉತ್ಪತ್ತಿಯು ಲಾಭಕರವಾಗಲಾರದು.

(4) ಮೈಸೂರು-ಅರಸೀಕೆರೆ ರೈಲ್ವೆ ಲೈನಿನಲ್ಲಿ ಹೊಸ ಅಗ್ರಹಾರದ ಬಳಿ ರೈಲ್ವೆ ಸ್ಟೇಷನ್ ಮಾಡಿದರೆ ಬಿಳಿಕೆರೆಗೂ ಸಾಲಿಗ್ರಾಮಕ್ಕೂ ಅನುಕೂಲವಾಗುತ್ತವೆ ಆದಕಾರಣ ಜನರಿಗೆ ಈಗ ಸೂಚಿಸಲ್ಪಟ್ಟಿರುವ ರೈಲ್ ಮಾರ್ಗದ ಮೇಲೆ ಅಷ್ಟು ಅಭಿರುಚಿ ಇಲ್ಲ ; ಇದಕ್ಕೆ ಹಣವನ್ನು ಒದಗಿಸುವುದಕ್ಕೂ ಅವರಿಗೆ ಅಭಿಮತವಿಲ್ಲ ಆದರೆ ರೈಲ್ ರಸ್ತೆಯನ್ನು ಹುಣಸೂರು ಪೆರಿಯಾಪಟ್ಟಣಗಳ ಮೇಲೆ ಹಾಸಿಹೋಗುವಂತೆ ಹಾಕಿಸುವ ಪಕ್ಷದಲ್ಲಿ ಆರು ಲಕ್ಷ ರೂಪಾಯನ್ನು ಸಾಲದ ಪತ್ರಗಳ ಬಿಕರಿಯಿಂದ ಕೊಡಿಸಬಹುದೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ನಿರೀಕ್ಷಿಸುವರು.

ಮೈಸೂರು ಗೆಜೆಟ್ ಸಂಗ್ರಹ.

ಶೃಂಗೇರಿ ಮ್ಯುನಿಸಿಪಲ್ ಸರಹದ್ದಿನೊಳಗೆ 1915 ನೇ ಜುಲೈ ಲಾಗಾಯತು ಬಲಾತ್ಕರಿಸಿ ದೇವೀ ಸಿಡುಬು ಹಾಕುವ ಕಾನೂನನ್ನು ಇನ್ನೆರಡು ವರುಷಗಳ ವರೆಗೆ ಜಾರಿಗೆ ತರಲ್ಪಡತಕ್ಕದ್ದು.

ಮೈಸೂರು-ಅರಸೀಕೆರೆ ರೈಲ್ವೆ ಕಾಮಗಾರಿಗೆ ಜಮೀನುಗಳನ್ನು ಸರ್ಕಾರಕ್ಕೆ ಕ್ರಯಕಟ್ಟಿ ತೆಗೆದುಕೊಳ್ಳುವ ಸ್ಪೆಷಲ್ ಡ್ಯೂಟಿಗೆ ನೇಮಿಸಲ್ಪಟ್ಟಿರುವ ಅ॥ ಕಮಿಷನರ್ ಮ॥ ಕೆ. ಮೈಲಾರ್ ರಾಯರನ್ನು ಶ್ರೀಮದ್ಯುವರಾಜರವರ ಪ್ರೈವೇಟ್ ಸೆಕ್ರೆಟರಿಯಾಗಿ ನೇಮಿಸಿದೆ ಇವರು ಜುಲೈ ತಾ. 1 ರಲ್ಲಿ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೇಲ್ಕಂಡ ಮ॥ ಕೆ. ಮೈಲಾರ್ ರಾಯರಿಗೆ ಸ್ಪೆಷಲ್ ಡ್ಯೂಟಿ ಪೂರೈಸಿದ ತಾರೀಖಿನಿಂದ ಜುಲೈ ತಾ. 1 ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಂಟ್ರೋಲರವರ ಆಫೀಸ್ ಪ್ರೊ॥ ಅ॥ ಕಮಿಷನರ್ ಮ॥ ಎ ಎನ್. ರಘುನಾಥಾಚಾರ್ರಿಗೆ ಮೇ ತಾ. 18 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಸರ್ಜನ್ ಮ॥ ಬಿ. ಕೃಷ್ಣಮೂರ್ತಿರಾಯರಿಗೆ ಮೇ ತಾ. 5 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅಮಲ್ದಾರ್ ಮ॥ ರಾಬರ್ಟ್‌ರವರು ರಜದ ಮೇಲಿರುವಾಗ್ಗೆ ಬೌರಿಂಗ್‌ಪೇಟೆ ತಾಲ್ಲೂಕ್ ಶಿರಸ್ತೇದಾರ್ ಮ॥ ಎಂ. ಎಸ್. ನಾರಾಯಣರಾಯರು ಆ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಪ್ರೊ॥ ಅ॥ ಕಮಿಷನರ್ ಮ॥ ಬಿ. ರುದ್ರಪ್ಪನವರನ್ನು ಬೆಂಗಳೂರಿನಿಂದ ಹಾಸನಕ್ಕೆ ವರ್ಗಮಾಡಿದೆ. (ರಜಾ ಪೂರೈಸಿದ ಮೇಲೆ ಅಲ್ಲಿಗೆ ಹೋಗತಕ್ಕದ್ದು)

ಡಾಕ್ಟರ್ ಎ. ವೆಂಕಟಸುಬ್ಬಯ್ಯನವರನ್ನು ಪ್ರಾಚೀನ ಲಿಪ್ಯನ್ವೇಷಣ ಇಲಾಖೆಯ ಆಫೀಸರವರ ಅಸಿಸ್ಟೆಂಟರಾಗಿ ನೇಮಕಮಾಡಿದೆ.

ಮುಂದೆ ಹೇಳುವ ಅಧಿಕಾರಿಗಳ ವರ್ಗಾವರ್ಗಿಗಳನ್ನು ಮುಕಂ ಮಾಡಿದೆ—ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ ಮ॥ ವೈ. ವಿ ಕೃಷ್ಣಮೂರ್ತಿಯವರನ್ನು ಎಕ್ಸೈಸ್ ಇಲಾಖೆಗೆ ; ಎಕ್ಸೈಸ್ ಕಮಿಷನರವರ ಅಸಿಸ್ಟೆಂಟರಾದ ಮ॥ ಟಿ ರಾಯಲುಶೆಟ್ಟರನ್ನು ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜಿಗೆ ; ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮ॥ ಡಿ ಶ್ರೀನಿವಾಸಯ್ಯಂಗಾರ್ರನ್ನು ಕಡೂರಿನಿಂದ ಮೈಸೂರಿಗೆ ; ಮೂಡಿಗೆರೆ ಅಮಲ್ದಾರ್ ಮ॥ ಷೇಕ್ ಅಬ್ದುಲ್ಲಾಯವರು ಕಡೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿರತಕ್ಕದ್ದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿ ಸೀನಿಯರ್ ಅ॥ ಕಮಿಷನರ್ ಮ॥ ಮಹಮದ್ ಜಹಿರುದ್ದೀನ್ ಮೆಕ್ರಿಯವರಿಗೆ ಅವರು ದರ್ಯಾಪ್ತಿಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರವನ್ನು ವಹಿಸಿದೆ.

ಮೈಸೂರು ಡಿಸ್ಟ್ರಿಕ್ಟಿನ ಸಂಪದಭ್ಯುದಯ ಸೂಪರಿನ್‌ಟೆಂಡೆಂಟರಾದ ಮ॥ ಎಸ್. ಎನ್. ಶ್ರೀನರಸಿಂಹಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಲೋಕಲ್ ಸಂಸ್ಥೆಗಳ ಆಫೀಸ್ ಮ್ಯಾನೇಜರ್ ಮ॥ ಕೆ. ರಾಮಯ್ಯನವರನ್ನು ಎಸ್.ಎಲ್.ಸಿ. ಬೋರ್ಡಿನ ಸೆಕ್ರೆಟರಿಯಾಗಿ ನೇಮಿಸಿದೆ.

ಸೀನಿಯರ್ ಅ॥ ಕೆಮಿಸ್ಟ್ ಮ॥ ಎನ್. ಸಂಪತ್ತಯ್ಯಂಗಾರ್ರಿಗೆ ಮೇ ತಾ. 3 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಬಿ. ಶಂಕರರಾವ್ ಬಾದಾಮಿಯವರು ಬದಲಿ ನೇಮಿಸಲ್ಪಟ್ಟಿರುವರು.

ಹಾಸನದ ಡಿಸ್ಟ್ರಿಕ್ಟ್ ಸಂಪದಭ್ಯುದಯ ಸೂಪರಿನ್‌ಟೆಂಡೆಂಟರಾದ ಮ॥ ಟಿ ಅಬ್ದುಲ್ ಖಾದರ್ ಯವರಿಗೆ ಮೇ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಮ॥ ಷೇಕ್ ಅಬ್ದುಲ್ಲಾರವರಿಗೆ ಮೇ ತಾ. 3 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮ॥ ಎಚ್. ಕೋನೇರಿರಾಯರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮ॥ ಆರ್. ತಿರುನಾರಾಯಣ ಅಯ್ಯಂಗಾರ್ರಿಗೆ ಹದಿನೈದು ದಿನಗಳು ಪ್ರಿವಿಲೆಜ್ ರಜಾ ಕೊಟ್ಟಿತ್ತು. ಶಿರಸ್ತೇದಾರ್ ಮ॥ ಎನ್. ಚೌಡಯ್ಯನವರು ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಚಿಕ್ಕನಾಯಕನಹಳ್ಳಿಯಿಂದ ಮೇಲುಕೋಟೆಗೆ ರಸ್ತೆ ಆಗಬೇಕು.

ಅಯ್ಯಾ,—ಮೈಸೂರಿಂದ ಅರಸೀಕೆರೆ ವರಿಗೆ ರೈಲ್ ರಸ್ತೆ ತಯಾರಾಗುತ್ತಾ ಇದೆಯಷ್ಟೆ. ಈ ರಸ್ತೆಯನ್ನು ಮೊದಲು ಮೈಸೂರು, ಕಾವೇರಿ ರಿಜರ್ವಾಯರ್, ಚಿಕ್ಕಕುರಳಿ, ಶ್ರವಣಬೆಳಗೊಳ, ಚನ್ನರಾಯಪಟ್ಣ, ಹಾಸನ, ಅರಸೀಕೆರೆ, ಈ ಮಾರ್ಗವಾಗಿ ಹಾಕುವ ಸಂಭವ ಇದ್ದದ್ದು ತಪ್ಪಿ ಬೇರೆ ರಸ್ತೆ ತಯಾರಾಗುತ್ತಾ ಇದೆ. ಆದರೂ ಈ ಲೈನ್ 100 ಮೈಲಿ ವರಿಗೆ ಬಹಳ ಟ್ರಾಫಿಕ್ಕು ಉಳ್ಳ ದೊಡ್ಡ ರಸ್ತೆ ಇದೆ. ಚಿಕ್ಕಕುರಳಿ ಛಾಟು ಮಾರ್ಗದಿಂದ ಮೇಲುಕೋಟೆ ಮೇಲೆ ಶ್ರವಣಬೆಳಗೊಳದ ವರಿಗೆ ಸುಮಾರು 25 ಮೈಲಿಗಳಾಗಬಹುದು. ಇಲ್ಲಿ ರಸ್ತೆ ಅನುಕೂಲವಾಗಿಲ್ಲ. ಅನೇಕ ಗಾಡಿಗಳು ಕೃಷ್ಣರಾಜಪೇಟೆ ಮೇಲೆಯೂ, ಕೆಲವು ಗಾಡಿ ಫ್ರೆಂಚ್ ರಾಕ್ಸಿನ ಮೇಲೆಯೂ ಬಳಸಿಕೊಂಡು ಮೇಲುಕೋಟೆಗೂ ಇನ್ನೂ ಶ್ರವಣಬೆಳಗೊಳ ಇನ್ನು ಉತ್ತರಕ್ಕೂ ಅನೇಕ ಗಾಡಿಗಳು ರಾತ್ರಿ ಹಗಲೂ 20-30 ಮೈಲಿ ವರೆಗೆ ಬಳಸಿಕೊಂಡು ತಿರುಗಬೇಕಾಗಿದೆ ಈಗ ಕೆಲವು ದಿವಸಗಳಲ್ಲಿ ಮೇಲುಕೋಟೆ, ಶ್ರವಣಬೆಳಗೊಳಕ್ಕೆ ರಸ್ತೆ ತಯಾರಾಗಲು ಏರ್ಪಾಡಾಗಿದೆ. ಮೇಲುಕೋಟೆಯಿಂದ ಚಿಕ್ಕಕುರಳಿ ವರಿಗೆ ಸುಮಾರು 6-7 ಮೈಲಿ ದೂರ ಹಾಲಿ ಇರುವ ಹಳೇ ಬಂಡಿ ಜಾಡೆಯನ್ನು ಸಲೀಸ್ ಗಾಡಿ ತಿರುಗುವಂತೆ ತಯಾರುಮಾಡಿದಲ್ಲಿ ಮೇಲುಕೋಟೆಗೆ ಫ್ರೆಂಚ್ ರಾಕ್ಸ್ ರೈಲ್ವೆ ಸ್ಟೇಷನ್ನಿಂದ ಹೋಗಲು ಸಮೀಪದಾರಿಯಾಗಿಯೂ, ಕಣಿವೆ ವಗೈರೆ ಇಲ್ಲದೆ ಮಟ್ಟವಾದ ರಸ್ತೆಯಾಗಿಯೂ ಅನೇಕ ಯಾತ್ರಾರ್ಥಿಗಳಿಗೂ ರೈತ ಪ್ರಜೆಗಳಿಗೂ ಅನುಕೂಲವಾಗಿರುತ್ತೆ ಈ ವಿಷಯವನ್ನು ಕುರಿತು ರೈತ ಪ್ರಜೆಗಳು ಅನೇಕ ದಿನಸದಿಂದ ಚಿಕ್ಕಕುರಳಿ ಮೇಲುಕೋಟೆ ರಸ್ತೆ ತಯಾರುಮಾಡಿಸಿಕೊಡಬೇಕೆಂದು ಅನೇಕ ಅರ್ಜಿ ಬರೆದುಕೊಂಡು ಕರೆಸ್‌ಪಾಂಡೆನ್ಸ್ ನಡಿಸಿದ್ದಾಗ್ಯೂ ಯಾವ ಅಧಿಕಾರಿಗಳ ಮನಸ್ಸಿಗೂ ಬಾರಲಿಲ್ಲ. ಈ ರಸ್ತೆ ಇಲ್ಲದ್ದರಿಂದ ದಸೆಯಿಂದ ಮೇಲುಕೋಟೆಗೆ ಸಲೀಸ್ ಬರಲು ಮಟ್ಟವಾದ ರಸ್ತೆ ಇಲ್ಲದೆ ಅನೇಕ ಯಾತ್ರಾರ್ಥಿಗಳಿಗೂ ಅನೇಕ ರೈತರಿಗೂ ಬಹಳ ಕಷ್ಟವಾಗಿವೆ. ಈ ವಿಷಯಗಳನ್ನು ಬೋರ್ಡು ಮೆಂಬರಲ್ಲಿ ಹೇಳಿಕೊಂಡರೆ ಗಣನೆಗೂ ತರುವಂತೆ ಇಲ್ಲ. ಅನುಪಯೋಗವಾದ ಕೆಲಸಕ್ಕೆ ಸರ್ಕಾರದಿಂದ ವ್ಯಯಪಡಿಸುತ್ತಾರೆ. ಇಂಥಾ ಉಪಯೋಗಕರವಾಗಿಯೂ, ಸರ್ವ ಜನ ಸಮ್ಮತವಾಗಿಯೂ, ಅನೇಕ ದೂರ ರಸ್ತೆಗೆ ಜಾಯಿಂಟಾಗತಕ್ಕದ್ದಾಗಿಯೂ ಇರುವ ಈ ರಸ್ತೆಯನ್ನು ಧರ್ಮ ಪ್ರಭುಗಳಾದ ಸರ್ಕಾರಕ್ಕೂ, ಆಫೀಸರುಗಳ ಘನ ಚಿತ್ತಕ್ಕೂ ಬರುವಂತೆ ತಾವಾದರೂ ಪ್ರಕಟಿಸಿ, ಸರ್ವ ಸಮ್ಮತವಾದ ಈ ಚಿಕ್ಕಕುರಳಿ ಮೇಲುಕೋಟೆ ರಸ್ತೆಯನ್ನು ತಯಾರುಮಾಡಿಸಿಯಾರೆಂದು ಬಹಳ ತ್ವರೆಯಿಂದ ಕಾದಿರುತ್ತೇವೆ. ಈ 5-6 ಮೈಲಿ ರಸ್ತೆ ತಯಾರಾದಲ್ಲಿ ಮೈಸೂರಿನಿಂದ ಅರಸೀಕೆರೆ ವರಿಗೆ ದೊಡ್ಡ ರಸ್ತೆ ಆದ ಹಾಗೆ ಆಗುತ್ತದೆ.

ಅಭಿಮಾನಿ.

ಅನುಭವಶಾಲಿ, ಮುದ್ದಗಿರಿ ; ಮಲೆನಾಡು ನಿವಾಸಿ ಸಿಕಾರಿಪುರ ; ಎಸ್. ಕೃಷ್ಣಪ್ಪ, ಮೈಸೂರು —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಪಡುತ್ತೇವೆ.

ರಾಮಾಚಾರ್ಯ ಮತ್ತು ವೀರಭದ್ರಾಚಾರ್ಯ, ಪಿರಿಯಾಪಟ್ಣ.—ನೀವು ಹೇಳುವ ವಿಚಾರದಲ್ಲಿ ನಮಗೆ ನಂಬಿಕೆ ಇಲ್ಲವಾದದ್ದರಿಂದ ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವು.

ಮಯಾಳು ವೆಂಕಟಾಚಾರ್ಯರು, ಹುಲಿಕಲ್ಲು.—ಮೈಸೂರಲ್ಲಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಸೂಪರಿನ್‌ಟೆಂಡೆಂಟರಿಗೆ ಬರೆದುಕೊಂಡರೆ ಅವರು ನಿಮಗೆ ಜವಾಬು ಕೊಟ್ಟಾರು

ಮ॥ ಬಿ ಕೆ. ಸಿಂಗರಯ್ಯಂಗಾರ್ರು ಮೂಡಿಗೆರೆ ತಾಲ್ಲೂಕು ಮಾಳಿಗನಾಡು ಗ್ರಾಮಕ್ಕೆ ಹೋಗಿ ಪ್ರಜೆಗಳನ್ನು ಕೂಡಿಸಿ ಅವರಿಗೆ ವಿದ್ಯೆ, ಪರಸ್ಪರ ಸಹಾಯ, ಆರೋಗ್ಯ, ಈ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರೆಂದು ತಿಳಿಯುತ್ತದೆ.

ದೇಶಾಭಿಮಾನಿ ಎಂಬ ಬಾತ್ಮಿದಾರರು ಚಿತ್ರದುರ್ಗದ ಒಂದು ಅಂಗಡಿಯಲ್ಲಿ ವ್ಯಾಪಾರ ಮಾಡಿದಾಗ ಆ ವರ್ತಕನು ಮೋಸಮಾಡಿದನೆಂದು ಮುಂತಾಗಿ ಒಂದು ಬಾತ್ಮಿ ಬರೆದಿರುತ್ತಾರೆ ಅನೇಕ ಸಂದರ್ಭಗಳಲ್ಲಿ ಗಿರಾಕಿಗಳು ಸರಕನ್ನು ಸಾಕಲ್ಯತ್ತಾಗಿ ಕೊಂಡುಕೊಳ್ಳುವುದು ಸಾಧ್ಯವಲ್ಲವಾದದ್ದರಿಂದ ನಮ್ಮ ವರ್ತಕರು ತಮ್ಮ ಧರ್ಮವನ್ನು ಮೀರಿ ಮೋಸಮಾಡುವುದು ಯೋಗ್ಯವಲ್ಲ.

ಕರ್ನಾಟಕ ಪೈಸಾ ಫಂಡ್ ಕಮಿಟಿಯ ಪ್ರೆಸಿಡೆಂಟರು ಮ॥ ಪಂಡಿತ ಜಯರಾಮಾಚಾರ್ರು ಕೊಡಗನೂರಿಗೆ ಬಂದು ಪರಹಿತಕರವಾದ ಉಪನ್ಯಾಸಗಳನ್ನು ಮಾಡಿ, ಮೂರು ತಿಂಗಳಲ್ಲಿ ಒಂದು ವಾಚಕಮಂದಿರವನ್ನೂ, ಒಂದು ಕೋಆಪರೇಟಿವ್ ಸೊಸೈಟಿಯನ್ನೂ ಪ್ರಾರಂಭಿಸಿರುವರೆಂದೂ, ಒಂದು ರಾತ್ರಿ ಸ್ಕೂಲನ್ನು ನಡಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆಂದೂ ಒಂದು ಬಾತ್ಮಿ ಬರೆದುಬಂದಿದೆ.

—ಎಡಿ.]

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗ.—ಈಗ ಮಳೆ ಬಿದ್ದದ್ದರಿಂದ ವ್ಯವಸಾಯಗಾರರಿಗೆ ಭೂಮಿ ಹದ ಮಾಡಲು ಅನುಕೂಲವಾಯಿತು. ದನ ಕರುಗಳಿಗೆ ಗಿಡದಲ್ಲಿ ಸ್ವಲ್ಪ ಹುಲ್ಲು ಸಿಕ್ಕಿದ್ದರಿಂದ ಗೌಳಿಗರು ಹಾಲು ಮೊಸರು ಮಾರಿ ಹೊಟ್ಟೆ ಹೊರಲು ಅವಕಾಶ ಕಡಮೆಯಾಯಿತು.—ಈ ಊರಲ್ಲಿ ಲಂಬಾಣೇರು ಕಬಳೆಹಣ್ಣು ತಂದು ಮಾರುತ್ತಾರೆ. ಕೆಲವು ಕೊಳೆತು ಹುಳಬಿದ್ದಿರುವುದನ್ನು ಅನೇಕರು ನೋಡಿದರು. ಪೋಲೀಸಿನವರು ನಿಗಾ ಕೊಟ್ಟು ಅಂಥವುಗಳನ್ನು ನಾಶಪಡಿಸಿದರೆ ಜನರ ಆರೋಗ್ಯ ಕಾಪಾಡಿದಂತೆ ಆಗುತ್ತೆ.—ಡೆಪ್ಟಿ ಕಮಿಷನರ್ ಸಾಹೇಬರವರು ಚನ್ನಗಿರಿಗೆ ಅಬ್ಕಾರಿ ಹರಾಜಿಗೆ ಹೋಗಿದ್ದು ನೆನ್ನೆ ಬಂದರು.—ಈ ಊರು ನೈಟ್ ಸ್ಕೂಲು ಚೆನ್ನಾಗಿ ನಡೆಯುವದನ್ನು ನೋಡಿ ಸಂತೋಷಪಡುತ್ತೇವೆ. ಈ ಸ್ಕೂಲಿನಲ್ಲಿ ಇಂಗ್ಲಿಷು ಕಲಿಯುವ ಜನಗಳಿಗೆ ಅವಕಾಶ ಮಾಡಿಕೊಟ್ಟಲ್ಲಿ ಅನೇಕರು ಸೇರಲು ಅಪೇಕ್ಷಿಸುತ್ತಾರೆ.

ತುಮಕೂರು ತಾ॥ ಎಲೆರಾಂಪುರ.—ಈ ಗ್ರಾಮವು ತುಮಕೂರು ತಾಲ್ಲೂಕಿಗೆ ಸೇರಿದೆ. ವೀಳ್ಯದೆಲೆ ವ್ಯಾಪಾರ ವಿಶೇಷ ಆದುದರಿಂದಲೇ ಎಲೆರಾಂಪುರವೆಂದು ಹೆಸರಾಯಿತು. ಇಲ್ಲಿಂದ ವೀಳ್ಯದೆಲೆಯು ಮುದ್ದಗಿರಿ, ತುಮಕೂರು, ಹಿಂದೂಪುರ ಮೊದಲಾದ ಸಂತೆಗಳಿಗೆ ರಫ್ತು ಆಗುವುದು. ಪ್ರಜಾ ಸಂಖ್ಯೆ 600.—ಇಲ್ಲಿ ಗ್ರಾಂಟ್ ಇನ್ ಏಡ್ ಪಾಠಶಾಲೆ ಉಂಟು ಗ್ರಾಮಾಭಿವೃದ್ಧಿ ಸಂಘದವರು ಸುಮಾರು 600 ರೂಪಾಯಿ ಗ್ರಾಮಸ್ಥರಿಂದ ಸೇರಿಸಿ ಒಂದು ಸಿಹಿ ನೀರಿನ ಬಾವಿಯನ್ನೂ, ಸ್ಕೂಲ್ ಕಟ್ಟಡವನ್ನೂ ತಯಾರುಮಾಡಲು ಕೈಕೊಂಡಿರುವರು. ಸರ್ಕಾರದವರೂ ಅಷ್ಟು ಹಣ ದಯಪಾಲಿಸಿದಾರೆ. ಬಾವಿಯ ಕೆಲಸ ಪೂರೈಸುತ್ತಾ ಬಂದಿದೆ ಗ್ರಾಮಸ್ಥರು ಇಂಥಾ ವಿಷಯಗಳಲ್ಲಿ ತುಂಬಾ ಉತ್ಸಾಹಶಾಲಿಗಳು ಒಗ್ಗಟ್ಟು ಬಲವೆಂಬುದನ್ನು ಚೆನ್ನಾಗಿ ಬಲ್ಲವರು.—ಈ ಗ್ರಾಮಕ್ಕೆ ದೊಬ್ಬಸ್ಪೇಟೆ ಸ್ಕೂಲ್ ಮಾಸ್ಟರ್ ಮ॥ ಡಿ ವಾಸುದೇವರಾಯರು ದಯಮಾಡಿದ್ದಾಗ ಸಂಘದವರ ಅಪೇಕ್ಷೆಯಂತೆ ಅವರು ವಿದ್ಯಾಭ್ಯಾಸ, ಯುದ್ಧ, ಆರೋಗ್ಯ ವಿಚಾರವಾಗಿ ಉಪನ್ಯಾಸವನ್ನು ಗ್ರಾಮಸ್ಥರ ಮನಸ್ಸಿಗೆ ಹತ್ತುವಂತೆ ಸುಲಭವಾದ ಭಾಷೆಯಲ್ಲಿ ಬಹು ಸ್ವಾರಸ್ಯವಾಗಿ ಮಾಡಿದರು ಆರೋಗ್ಯ ವಿಷಯವನ್ನು ಹೇಳಿದ ದಿನ ತುಮಕೂರು ತಾಲ್ಲೂಕು ಸ್ಯಾನಿಟರಿ ಇನ್‌ಸ್ಪೆಕ್ಟರವರು ಅಗ್ರಾಸನವನ್ನು ವಹಿಸಿದ್ದರು.

ತುಮಕೂರು ತಾ॥ ಗೂಳೂರು —ಈ ಗ್ರಾಮವು 600-900 ಮನೆಗಳು 3-4 ಸಾವಿರ ಪ್ರಜಾ ಸಂಖ್ಯೆಯೂ ಉಳ್ಳ ಭಾರಿ ಗ್ರಾಮವಾಗಿರುತ್ತೆ. ಈಗ್ಗೆ 3-4 ತಿಂಗಳ ಕೆಳಗೆ ಇಲ್ಲಿ ದೊಡ್ಡ ಸಿಡುಬೂ, ಪ್ಲೇಗ್ ಸಹ ಸಂಭವಿಸಿ ಅನೇಕ ಮಕ್ಕಳನ್ನೂ, ದೊಡ್ಡವರನ್ನೂ ಕೊಲ್ಲುತ್ತಾ ಇದ್ದದ್ದು ಈಗ 1-2 ತಿಂಗಳಿಂದ ಶಾಂತವಾಗಿದೆ. ಧಾರಣೆವಾಸಿಗಳಂತೂ ಕ್ಷಾಮಕಾಲವನ್ನು ಸೂಚಿಸುತ್ತಲಿವೆ ನಮ್ಮ ಪೂರ್ವಿಕರು 40-60 ವರ್ಷಕ್ಕೊಂದು ಕ್ಷಾಮವೆಂದು ಹೇಳುತ್ತಿದ್ದರು. ನಮ್ಮ ಕಾಲಕ್ಕಾದರೋ ಪ್ರತಿ ವರ್ಷವೂ ದುರ್ಭಿಕ್ಷವೇ ತಲೆದೋರುತ್ತಿದೆ.—ಈ ಊರ ಕೆರೆಯು ಎಕ್ಕಲು ಮುಚ್ಚಿಕೊಂಡು ತುಂಬಾ ಹೀನಸ್ಥಿತಿಯಲ್ಲಿರುವುದರಿಂದ ಪ್ರತಿ ವರ್ಷವೂ ಫಸಲಾಗುವುದು ತುಂಬಾ ಪ್ರಯಾಸ. ಈ ವಿಚಾರದಲ್ಲಿ ನಮ್ಮ ವ॥ ಕೃಷ್ಣರಾಯರು ತಾಲ್ಲೂಕು ಮೊದಲುಗೊಂಡು ನಮ್ಮನ್ನಾಳುವ ಮಹಾಸ್ವಾಮಿಯವರ ಮಹಾಸನ್ನಿಧಾನದವರಿಗೂ ವಿಜ್ಞಾಪಿಸಿಕೊಂಡಾಗ್ಯೂ ಇನ್ನೂ ಯಾ ಫಲಿತಾಂಶವೂ ಲಭಿಸಲಿಲ್ಲ—ಈಗ್ಗೆ ಕೆಲವು ದಿನಗಳ ಹಿಂದೆ ನಮ್ಮ ಪೋಸ್ಟ್ ಮಾಸ್ಟರ ಮನೆಗೆ ಕಳ್ಳರು ಬಿದ್ದು 600-800 ರೂಪಾಯಿ ಬೆಲೆ ಬಾಳುವ ಚಿನ್ನ ಬಂಗಾರ ಒಡವೆ ವಸ್ತ್ರಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ. ಪೋಲೀಸ್ ರಿಪೋರ್ಟಾಗಿದ್ದರೂ ಈ ವರೆಗೂ ಪತ್ತೆಯಿಲ್ಲ ಈ ಗ್ರಾಮದಲ್ಲಿ ಪ್ರತಿ ವರ್ಷವೂ ಈ ರೀತಿ ದುರ್ವ್ಯಾಪಾರಗಳು ನಡೆಯುತ್ತಲೇ ಇವೆ ಈ ತೊಂದರೆಗಳನ್ನು ದರ್ಪದಿಂದ ಕಮಪಡಿಸುವುದು ಎಂದಿಗೋ ತಿಳಿಯದು ಸರ್ಕಾರದವರು ಒಂದು ಪೋಲೀಸ್ ಸ್ಟೇಷನ್ ಕಲ್ಪಿಸಿಕೊಟ್ಟರೆ ತುಂಬಾ ಉಪಕಾರವಾಗುತ್ತೆ.—ಊರಿನ ಪುರೋಭಿವೃದ್ಧಿ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿ ಯೂನಿಯನ್ ಕಾರ್ಯಗಳನ್ನು ದಿನಂಪ್ರತಿ ಟವರ್ ಗಸ್ತುಮಾಡಿ ಕ್ರಮಪಡಿಸುತ್ತಿರುವ ನಮ್ಮ ಪಟೇಲ್ ಮ॥ ಕೋಪಗೌಡರನ್ನು ಪ್ರಜೆಗಳು ವಂದಿಸುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ದಕ್ಷಿಣ ಬಾಕರ್‌ಗಂಜ್ ಡಿಸ್ಟ್ರಿಕ್ಟಿನಲ್ಲಿ ಪೋಲೀಸಿನವರು ಪತ್ತೇ ತರದಿ ನಡಿಸಿ 70 ಮಂದಿ ಡಕಾಯಿತಿ ಕಳ್ಳರನ್ನು ದಸ್ತಗಿರಿ ಮಾಡಿರುತ್ತಾರೆ.

ಬೊಂಬಾಯಿನ ಸಮುದ್ರತೀರದಲ್ಲಿ ಪೆಟ್ರೋಲ್ ಎಣ್ಣೆ ಭರ್ತಿಯಾಗಿ ಒಂದು ದೋಣಿ ಹತ್ತಿಕೊಂಡು ಉರಿದು ಹೋಯಿತು ಅದರಿಂದ ಸುಟ್ಟಗಾಯಗಳಾದ ಏಳು ಮಂದಿ ಅಕಾಲಮರಣಕ್ಕೆ ಗುರಿಯಾದರು.

ಬೊಂಬಾಯಿ ಪಟ್ಟಣದಲ್ಲಿ ಕ್ಷಯರೋಗವು ಹರಡಿಕೊಳ್ಳುತ್ತಿರುವುದರಿಂದ ಒಂದೊಂದು ಸಲ 60 ರೋಗಿಗಳನ್ನಿಟ್ಟು ಚಿಕಿತ್ಸೆಮಾಡಬಹುದಾದಂಥಾ ಆಸ್ಪತ್ರೆಯನ್ನು ಏರ್ಪಾಡುಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ಚರ್ಚಿಸುತ್ತಿದ್ದಾರೆ

ಬೊಂಬಾಯಿನ ಒಂದು ದೊಡ್ಡ ಕಂಪನಿಯಲ್ಲಿ ಮ್ಯಾನೇಜರಾಗಿದ್ದ ಎಚ್. ಇ. ಸ್ಟಾರ್ಕ್ ಎಂಬವನು ಆ ಕಂಪನಿಯಲ್ಲೂ, ಇನ್ನೊಂದು ಕಂಪನಿಯಲ್ಲೂ 45,000 ರೂಪಾಯಿ ತಿಂದುಹಾಕಿದನೆಂದು ಕ್ರಿಮಿನಲ್ ಮೊಕದ್ದಮೆ ಹೈ ಕೋರ್ಟ್ ಸೆಷನ್ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ

ಪೂರ್ವ ಬಂಗಾಳಕ್ಕೆ ಸೇರಿದ ಢಕ್ಕಾ ನಗರದಲ್ಲಿ ಡಿಕ್ರೂಸ್ ಎಂಬೊಬ್ಬ ರೈಲ್ವೆ ಗಾರ್ಡು ಗುಪ್ತವಾಗಿ ಪಿಸ್ತೂಲು ತೋಟಾಗಳನ್ನು ಬಚ್ಚಿಟ್ಟುಕೊಂಡಿದ್ದನು. ಒಬ್ಬ ಪೋಲೀಸ್ ಉದ್ಯೋಗಸ್ಥನು ವೇಷ ಮರೆಸಿಕೊಂಡು ಹೋಗಿ ಅವನಲ್ಲಿ ಸ್ನೇಹ ಬೆಳಸಿ ಪಿಸ್ತೂಲುಗಳನ್ನು ಅವನಿಂದ ಕೊಂಡುಕೊಂಡು ಗುರುತು ಮಾಡಿದ ಕರೆನ್ಸಿ ನೋಟನ್ನು ಕೊಟ್ಟು ಬಂದು ಅವನ ಮೇಲೆ ಫಿರ್ಯಾದು ತಂದಿದಾನೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ನಾಮಟಿ ಎಂಬಲ್ಲಿ ಐದು ಎಮ್ಮೆಗಳು ಕಳುವಾದದ್ದಕ್ಕೆ ಸರ್ಕಾರದವರು ಇಬ್ಬರನ್ನು ದಸ್ತಗಿರಿಮಾಡಿದರು. ಇದನ್ನು ನೋಡಿ ಇವರ ಕಡೆಯವರು ಆ ಊರಿಗೆ ನುಗ್ಗಿ ಸರ್ಕಾರಿ ಬಂಗಲೆಗೆ ಬೆಂಕಿಹಾಕಿ ಸುಟ್ಟಿದ್ದಲ್ಲದೆ ಹಲವು ಪ್ರಜೆಗಳಿಗೆ ಗುಂಡುಗಳನ್ನು ಹೊಡೆದು ಗಾಯ ಮಾಡಿದರು. ಈಗ ಸರ್ಕಾರದವರು 10 ಮಂದಿ ದರೋಡೆಕೋರರನ್ನು ಹಿಡಿದು ವಿಚಾರಣೆಗೆ ಗುರಿಪಡಿಸಿದಾರೆ.

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಒಂದು ಗ್ರಾಮದಲ್ಲಿ ಆಲಿ ಅಹಮದ್ ಎಂಬೊಬ್ಬ ಶೇಕ್ದಾರನು ಕುದುರೆ ಸವಾರಿಮಾಡಿಕೊಂಡು ಹೋಗುತ್ತಿದ್ದಾಗ ಐದು ಮಂದಿ ಜಾಟ್ ಎಂಬ ಜನರು ಗುಂಡು ಹೊಡೆದು ಆ ಅಧಿಕಾರಿಯನ್ನು ಕೊಂದುಹಾಕಿದರು. ಈ ಮೊಕದ್ದಮೆ ವಿಚಾರಣೆ ಆಗಿ ಸೆಷನ್ಸ್ ಜಡ್ಜರು ಆ ಐದು ಮಂದಿ ಅಪರಾಧಿಗಳಿಗೂ ಮರಣದಂಡನೆಯನ್ನು ವಿಧಿಸಿದರು ಈಗ ಅವರು ಅಪೀಲ್ ಮಾಡಿಕೊಂಡಿದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಮಂಗಳವಾರ ಗವರ್ನ್‌ಮೆಂಟ್ ಛಾಪಾಖಾನೆಯ ಕ್ಯಾಷಿಯರು ಸರ್ಕಾರದ ಹಣವನ್ನು ಸಂಬಳ ಬಟವಾಡೆಗೆಂದು ಚೀಲಗಳಲ್ಲಿ ತೆಗೆಸಿಕೊಂಡು ಹೋಗುತ್ತಿದ್ದಾಗ ಇಬ್ಬರು ದೊಡ್ಡಮನುಷ್ಯರಂತೆ ವೇಷ ಮರೆಸಿಕೊಂಡು ಬಂದು ಆ ಚೀಲಗಳ ಪೈಕಿ ಒಂದನ್ನು ಕಸುಕೊಂಡು ಹೋದರು ಅದರಲ್ಲಿ ಬಾಳ ದುಡ್ಡು ಇತ್ತು. ಕೂಡಲೇ ಗಲಭೆಯಾಗಿದ್ದರಿಂದ ಜನರು ಸೇರಿ ಒಬ್ಬನನ್ನು ಹಿಡಿದಿರುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ದುರ್ಗೇಂದ್ರನಾಥಗುಪ್ತನೆಂಬುವನು ಯದುನಾಥಸರ್ಕಾರನೆಂಬವನಿಗೆ ನೌಕರಿಮಾಡಿಸುತ್ತೇನೆಂದು ನಂಬಿಕೆ ಹುಟ್ಟಿಸಿ ಅವನ ತಂದೆಯಿಂದ 1,230 ರೂಪಾಯನ್ನೂ ಒಂದು ಜೊತೆ ಚಿನ್ನದ ಕಡಗವನ್ನೂ ತೆಗೆದುಕೊಂಡು, ಅದು ಸಾಲದೆಂದೂ ಇನ್ನೂ 250 ರೂಪಾಯಿ ಬೇಕೆಂದೂ ಕೇಳಿದಾಗ ಅವನ ನಡವಳಿಕೆಯು ಅನುಮಾನವಾಗಿ ಕಂಡು ಬಂದಿತು. ಪೋಲೀಸಿ

ತಿಳಿಸಿದಾಗ ಆವರು ಅವನನ್ನು ಹಿಡಿದು ತನಿಖೆಮಾಡಿ ಅವನು ಮೋಸಗಾರನೆಂದು ಕಂಡುಬಂದದ್ದರಿಂದ ಮೊಕದ್ದಮೆಮಾಡಿದ್ದರಲ್ಲಿ ಸೆಷನ್ಸ್ ಜಡ್ಜರು ಅವನಿಗೆ ನಾಲ್ಕು ವರುಷ ಕಠಿಣ ಸಜಾ ವಿಧಿಸಿದರು.

ಹಿಂದುಸ್ಥಾನದಲ್ಲಿ ಕಳೆದ ಏಪ್ರೆಲ್ ತಾ. 24 ರ ವರೆಗೆ ಯುದ್ಧದ ರಿಲೀಫ್ ಫಂಡಿಗೆ 98,95,476 ಚಿಲ್ಲರೆ ರೂಪಾಯಿ ಚಂದಾ ವಸೂಲಾಗಿರುತ್ತದೆ. ಇದರ ವಿವರ ಹ್ಯಾಗಂದರೆ—ಸಿಂಲಾ ಪಟ್ಟಣದಲ್ಲಿರುವ ಅಲಯನ್ಸ್ ಬ್ಯಾಂಕಿಗೆ ಜಾವತಿ ಆಗಿರುವ ಚಂದಾ ರೂಪಾಯಿ 28,82,382; ಬಂಗಾಳಾ ಬ್ಯಾಂಕಿಗೆ 38,03,327 ರೂಪಾಯಿ ; ಬೊಂಬಾಯಿ ಬ್ಯಾಂಕಿಗೆ 9,79,230 ರೂಪಾಯಿ ; ಮದರಾಸ್ ಬ್ಯಾಂಕಿಗೆ 6,31,636 ರೂಪಾಯಿ.

ಬೊಂಬಾಯಿ ಪಟ್ಟಣದಲ್ಲಿ ಮಾರ್ವಾಡಿಗಳ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಸುಮಾರು ನಾಲ್ಕು ಲಕ್ಷ ರೂಪಾಯಿ ಮುಟ್ಟುವ ಒಂದು ದೊಡ್ಡ ವಿದ್ಯಾಶಾಲೆ ತಯಾರಾಗುತ್ತಿದೆ. ಮಾರ್ವಾಡಿಗಳು ಅದಕ್ಕೆ ಸಾವಿರಾರು ರೂಪಾಯಿ ಚಂದಾ ಕೊಡುತ್ತಿದ್ದಾರೆ. ಸೇಟ್ ರಾಮ್‌ನಾರಾಯಣ್, ಸೇಟ್ ದುಂಗರ್ಸಿದಾಸ್, ಸೇಟ್ ರಾಮಚಂದರ್ ಎಂಬೀ ಸಾಹುಕಾರರು ಕಳೆದ ವಾರ ಈ ಕಟ್ಟಡದ ಫಂಡಿಗೆ ತಲಾ 6 ಸಾವಿರ ರೂಪಾಯಿಯಂತೆ ಚಂದಾ ಕೊಟ್ಟರು.

ಹಿಂದುಸ್ಥಾನದಲ್ಲಿ ಅನೇಕ ಮಂದಿ ವೈದ್ಯದಲ್ಲಿ ಪರೀಕ್ಷೆಕೊಟ್ಟು ತೇರ್ಗಡೆ ಹೊಂದಿರುತ್ತೇವೆಂದು ಜನರಿಗೆ ನಂಬಿಕೆ ಹುಟ್ಟಿಸಿ ಮೋಸದಿಂದ ದುಡ್ಡು ಕಸುಕೊಳ್ಳುತ್ತಿದ್ದಾರೆಂದೂ, ಇಂಥವರಿಂದ ಪ್ರಜೆಗಳಿಗೆ ನಾನಾ ಸಂಕಟಗಳುಂಟಾಗುತ್ತಿವೆ ಎಂದೂ ತಿಳಿದುಬಂದದ್ದರಿಂದ ಇಂಡಿಯಾ ಗವರ್ನ್‌ಮೆಂಟಿನವರು ಅಂಥಾ ಮೋಸಗಾರರಿಂದ ವೈದ್ಯರ ಹುಟ್ಟನ್ನೇ ಅಡಗಿಸಬೇಕೆಂಬ ಉದ್ದೇಶದಿಂದ ಹೊಸದಾಗಿ ಒಂದು ಕಾನೂನು ರಚಿಸುತ್ತಿದ್ದಾರೆಂದು ತಿಳಿಯುತ್ತದೆ.

ಕಳೆದ 1 ನೇ ತಾ. ಗೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು 26,373 ಜನರಿಗೆ ಪ್ಲೇಗ್ ತಗಲಿತು ; 21,427 ಜನರು ಆ ರೋಗದಲ್ಲಿ ಸತ್ತು ಹೋದರು. ಈ ಮರಣ ಸಂಖ್ಯೆಯ ಹಂಚಿಕೆ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 639, ಮದರಾಸ್ ಅಧಿಪತ್ಯ 5, ಬಂಗಾಳಾ 10, ಬೀಹಾರ್ ಮತ್ತು ಒರಿಸ್ಸಾ 094, ಸಂಯುಕ್ತ ಅಧಿಪತ್ಯಗಳು 3,445, ಪಂಜಾಬ್ 16,848 ಬರ್ಮ 48, ಮಧ್ಯಪ್ರಾಂತ್ಯಗಳು 180, ಈ ರೀತಿ ಮರಣಗಳಾಗಿವೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಖುಲ್ನಾ ಡಿಸ್ಟ್ರಿಕ್ಟಿನಲ್ಲಿ ದ್ವಿಜೇಂದ್ರ ಚಂದ್ರ ಮುಖರ್ಜಿ ಎಂಬ ಗೋಪ್ಯ ಪೊಲೀಸ್ ಹುದ್ದೇದಾರನು ತನ್ನ ಪುರೋಹಿತನ ಮಗಳು ಸುಮಾರು 11 ವಯಸ್ಸಿನವಳನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟನೆಂದು ಮೊಕದ್ದಮೆ ಆಗಿ ಸೆಷನ್ಸ್ ಜಡ್ಜರು ಅವನಿಗೆ ಮರಣ ದಂಡನೆಯನ್ನು ವಿಧಿಸಿದರು. ಅದರ ಮೇಲೆ ಅವನು ಅಪೀಲ್ ಮಾಡಿಕೊಂಡಿದ್ದಾನೆ. ಹೈ ಕೋರ್ಟಿನಲ್ಲಿ ಇಬ್ಬರು ಜಡ್ಜಿಗಳು ವಿಚಾರಣೆ ಮಾಡುವರು.

ಕಲ್ಕತ್ತಾ ಪಟ್ಟಣದ ಡೈಮಂಡ್ ಹಾರ್ಬರ್ ಡಿವಿಜನ್‌ಗೆ ಸೇರಿದ ಬಾಕರ್ಗರಿ ಎಂಬಲ್ಲಿ ಕಳೆದ ಮಂಗಳವಾರ ರಾತ್ರಿ ಲಕ್ಷ್ಮಣಮಂಡಲನೆಂಬ ಸಾಹುಕಾರನ ಮನೆಗೆ ಸುಮಾರು 25 ಜನ ಕಳ್ಳರು ನುಗ್ಗಿ ಸಿಡಿಮದ್ದಿನ ಗುಂಡುಗಳನ್ನು ಹಾರಿಸಿ ಕೊಳ್ಳೆಹೊಡೆಯುವುದಾಗಿ ಮನೆಯವರಿಗೆ ಹೇಳಿ ಮನೆಯಲ್ಲಿದ್ದವರನ್ನು ಹೊಡೆದು ಒಬ್ಬ ಹೆಂಗಸನ್ನು ಘೋರ ಗಾಯಮಾಡಿದರು. ಸುತ್ತುಮುತ್ತಿನ ಜನರು ಬಹಳವಾಗಿ ಬಂದು ಸೇರಿ ಕಳ್ಳರ ಆಯುಧಗಳನ್ನು ನೋಡಿ ಅವರ ಮೇಲೆ ಬೀಳಲಾರದೆ ಹೆದರಿ ಸುಮ್ಮನಾದರು. ಕಳ್ಳರು ಕಬ್ಬಿಣದ ಪೆಟ್ಟಿಗೆಯನ್ನು ಒಡೆದು ಲಕ್ಷಾಂತರ ರೂಪಾಯಿ ನಗನಾಣ್ಯಗಳನ್ನು ಎತ್ತಿಕೊಂಡು ಓಡಿಹೋದರು.

ಹಿಂದುಸ್ಥಾನದಿಂದ ಯುದ್ಧಭೂಮಿಗೆ ಕಳುಹಿಸಲ್ಪಟ್ಟಿರುವ ಸಿಖ್ ಸೈನಿಕರಿಗೆ ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ಹಂಚಿ ಕೊಡಬೇಕೆಂದು ಕಳುಹಿಸಿರುವ ಪದಾರ್ಥಗಳ್ಯಾವವೆಂದರೆ—10,000 ಖಾಕಿ ಪಂಟುಗಳು, 10,000 ಟವಲುಗಳು, 10,000 ಬಾಚಣಿಗೆಗಳು, 2,000 ಮಫ್ಲರುಗಳು, 1,500 ರೂಪಾಯಿನ ಸೀಗೆಕಾಯಿ, 700 ರೂಪಾಯಿನ ಎಣ್ಣೆ. ಇದಲ್ಲದೆ ನಮ್ಮ ಚಕ್ರವರ್ತಿಯವರ ಜನ್ಮೋತ್ಸವದ ದಿನ ಆ ಸೈನಿಕರಿಗೆಲ್ಲಾ ಯುದ್ಧಭೂಮಿಯಲ್ಲಿ ಮಿಠಾಯಿ ಹಂಚಿಕೆಯುವುದಕ್ಕೆ ಏರ್ಪಾಡು ಮಾಡಿದ್ದಾರೆ. ನಮ್ಮ ವೈಸ್‌ರಾಯರವರು ಅದನ್ನೆಲ್ಲಾ ಸ್ವೀಕರಿಸಿ ಮಹಾರಾಜರವರ ಔದಾರ್ಯವನ್ನು ಕೊಂಡಾಡಿರುತ್ತಾರೆ.

ಯುದ್ಧಭೂಮಿಯಿಂದ ಗಾಯಪಟ್ಟು ಬರುವ ಹಿಂದುಸ್ಥಾನದ ಸೈನಿಕರಿಗೆ ಚಿಕಿತ್ಸೆ ಆರೈಕೆಗಳು ನಡೆಯುವುದಕ್ಕೆ ಮುಂದೆ ಹೇಳುವ ಸ್ಥಳಗಳಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಸ್ಪೆಷಲ್ ಆಸ್ಪತ್ರೆಗಳನ್ನು ಮಾಡಿದ್ದಾರೆ. ಆ ಸ್ಥಳಗಳ್ಯಾವವೆಂದರೆ—ಅಬ್ಬಾಟಬಾದ್, ಜೀಲಂ, ಸಿಯಾಲ್ಕೋಟೆ, ಫಿರೋಜ್‌ಪುರ, ಮುಲ್ತಾನ್, ಅಂಬಾಲಾ ಛಾವಣಿ, ಧರಂಸಾಲಾ, ಜಲಂಧರ, ಡೆಹರಾಡೂನ್, ಲ್ಯಾನ್ಸ್‌ಡೌನ್, ಆಗ್ರಾ, ಫತ್ತೆಘರ್, ಝಾಂಸಿ, ಕಾನ್ಪುರ, ಬ್ಯಾರೇಲಿ, ಫೈಜಾಬಾದ್, ದಿನಾಪುರ, ಡಾಕ್ಕಾ, ಸಿಂಧುಹೈದರಾಬಾದು, ಕರಾಚಿ, ಮಾವ್, ಜಬ್ಬಲ್ಪುರ, ಸೌಗೂರು, ಅಜ್ಮೀರ, ನಸೀರಾಬಾದ್, ನೀಮುಚ್, ಅಹಮದ್‌ನಗರ, ಬೆಳ್ಗಾವ, ಬೆಂಗಳೂರು.

ಕಳ್ಳರ ಹೆಜ್ಜೆ ಗುರುತುಗಳನ್ನು ನೋಡಿ ಕಳ್ಳರನ್ನು ಹಿಡಿಯುವಂಥಾ ವಿದ್ಯೆಯನ್ನು ಉತ್ತರ ದೇಶದಲ್ಲಿ ಒಬ್ಬ ಪೊಲೀಸ್ ಹುದ್ದೇದಾರನು ಕಲಿತಿರುತ್ತಾನೆ. ಇವರಿಂದ ಕಳ್ಳರನ್ನು ಹಿಡಿಯಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರಿಗೆ ನಂಬಿಕೆಯುಂಟಾದದ್ದರಿಂದ ಈಗ ಈ ವಿದ್ಯೆಯನ್ನು ಪೊಲೀಸಿನವರಿಗೆ ಕಲಿಸಿಕೊಡಬೇಕೆಂದು ಒಂದು ಪಾಠಶಾಲೆಯನ್ನು ಇಟ್ಟಿದ್ದಾರೆ. ಬೀಹಾರಿಗೆ ಸೇರಿದ ಚಿಕಾಲ್ಡಾ ಎಂಬ ಊರಿನಲ್ಲಿ ಈ ಪಾಠಶಾಲೆ ಏರ್ಪಾಡಾಗಿದೆ. ಹಿಂದುಸ್ಥಾನದ ಎಲ್ಲಾ ಅಧಿಪತ್ಯಗಳಿಂದಲೂ ಸರ್ಕಾರದವರು ಕೆಲಕೆಲವು ಪೊಲೀಸಿನವರನ್ನು ಆರಿಸಿ ಆ ವಿದ್ಯೆಯನ್ನು ಕಲಿತು ಬರಬೇಕೆಂದು ಏರ್ಪಾಡುಮಾಡಿದ್ದಾರೆ. ಮದರಾಸಿನಿಂದ ಸಬ್ ಇನ್ಸ್‌ಪೆಕ್ಟರ್ ವಾಣಿಕಂಪಿಳ್ಳೆ ಎಂಬಾತನು ಅಲ್ಲಿಗೆ ಹೋಗಿರುವನು.

ಬಂಗಾಳಾ ಅಧಿಪತ್ಯದಲ್ಲಿ ಪೊಲೀಸಿನವರಿಗೂ ಪ್ರಜೆಗಳಿಗೂ ಪರಸ್ಪರ ನಂಬಿಕೆ ಪ್ರೀತಿ ವಿಶ್ವಾಸಗಳು ತಪ್ಪಿಹೋಗಿ ಪ್ರಜೆಗಳು ಪೊಲೀಸಿನವರಿಗೆ ಸಹಾಯ ಮಾಡುತ್ತಾ ಇಲ್ಲವೆಂದು ಪೊಲೀಸ್ ಇಲಾಖೆಯ ಮೂಲಕ ಗವರ್ನರವರು ತಿಳಿದು ಅದರ ಕಾರಣ ಏನೆಂಬುದನ್ನು ವಿಚಾರಿಸಿ ತಿಳಿದು ಕ್ರಮಪಡಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ. ಇದಕ್ಕಾಗಿ ಗವರ್ನರವರು ತಮ್ಮ ಪ್ರೈವೇಟ್ ಸೆಕ್ರೆಟರಿಯನ್ನು ನೇಮಿಸಿರುವರು. ಈ ಅಧಿಕಾರಿಯು ಕಲ್ಕತ್ತಾ, ಢಕ್ಕಾ, ಗೌರಾ ಮುಂತಾದ ಕಡೆಗಳಲ್ಲಿ ಸಂಚಾರಮಾಡಿ ಆಯಾ ಸ್ಥಳಗಳಲ್ಲಿರುವ ಪ್ರಜೆಗಳ ಮುಖಂಡರನ್ನು ಕಂಡು ಅವರ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳುವರು. ಪೊಲೀಸಿನವರು ಪ್ರಜೆಗಳ ಸಂರಕ್ಷಣೆಗಾಗಿ ಇರುವರೆಂದು ಜನರು ತಿಳಿದು ಅವರಿಗೆ ಸಹಾಯಮಾಡಿದಲ್ಲಿ ಕ್ಷೇಮವಾದೀತು. ಆದರೆ ಪೊಲೀಸಿನವರ ನಡವಳಿಕೆಯು ಬಂಗಾಳಾದಲ್ಲಿ ಪ್ರಜೆಗಳಿಗೆ ಹಿತಕರವಾಗಿಲ್ಲವೆಂಬುದನ್ನು ಗವರ್ನರವರು ತಿಳಿದು ಅದರ ಪರಿಹಾರಕ್ಕೆ ತಕ್ಕ ಉಪಾಯಗಳನ್ನು ಕಂಡುಹಿಡಿದು ರೂಢಿಸಬೇಕೆಂದು ಪ್ರಾರಂಭಿಸಿರುತ್ತಾರೆ.

ಕಳೆದ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯವಾದ ಆರು ತಿಂಗಳಲ್ಲಿ ಹಿಂದುಸ್ಥಾನದೊಳಗೆ 49 ಲಕ್ಷ ರೂಪಾಯಿ ಮೂಲಧನವುಳ್ಳ 130 ಕಂಪನಿ ಬ್ಯಾಂಕುಗಳು ದಿವಾಳಿಯಾದವು ; 70 ಲಕ್ಷ ರೂಪಾಯಿ ಮೂಲಧನದ 57 ಕಂಪನಿಗಳು ಹೊಸದಾಗಿ ರಿಜಿಸ್ಟರ್ ಮಾಡಲ್ಪಟ್ಟವು. ಖಾಯಮಾಗಿ ನಡೆಯುತ್ತಾ ಬಂದಿರುವ ಕಂಪನಿಗಳು ತಮ್ಮ ಮೂಲಧನವನ್ನು 311 ಲಕ್ಷ ರೂಪಾಯಿ ಹೆಚ್ಚಿಸಿಕೊಂಡಿರುತ್ತವೆ. ಈಗ ಹಿಂದುಸ್ಥಾನದ ಎಲ್ಲಾ ಕಂಪನಿಗಳ ಮೂಲಧನವೂ 7,846 ಲಕ್ಷ ರೂಪಾಯಿ ಆಗಿರುವುದಲ್ಲದೆ 1,018 ಲಕ್ಷ ರೂಪಾಯಿನ ಡಿಬೆಂಚರ್ ಪತ್ರಗಳನ್ನೂ ಬಿಕರಿಮಾಡಿರುವವು. ಬೇರೆಬೇರೆ ಅಧಿಪತ್ಯಗಳಲ್ಲಿ ದಿವಾಳಿ ಆದ ಕಂಪನಿಗಳ ಸಂಖ್ಯೆ ಎಷ್ಟೆಂದರೆ—ಬೊಂಬಾಯಿನಲ್ಲಿ 16 ಲಕ್ಷ ರೂಪಾಯಿನ 18 ಕಂಪನಿಗಳು ; ಮದರಾಸಿನಲ್ಲಿ 12 ಲಕ್ಷ ರೂಪಾಯಿನ 24 ಕಂಪನಿಗಳು ; ಪಂಜಾಬಿನಲ್ಲಿ 14 ಲಕ್ಷ ರೂಪಾಯಿನ 24 ಕಂಪನಿಗಳು.

ಮದರಾಸ್ ಪಟ್ಟಣದ ಅರ್ಮೇನಿಯನ್ ಬೀದಿಯಲ್ಲಿ ಒಂದು ಕಂಪನಿ ಆಫೀಸು ಇದೆ. ಈ ಕಂಪನಿಯವರು ಸ್ಥಿರ ಚರ ಆಸ್ತಿಗಳನ್ನು ಆಸುವು ಇಟ್ಟುಕೊಂಡು ಜನರಿಗೆ ಸಾಲ ಕೊಡುತ್ತಿದ್ದರು. ಏಪ್ರೆಲ್ ತಾ. 30 ರಲ್ಲಿ ಕಂಪನಿ ಬಾಗಿಲು ತೆರೆದಿತ್ತು. ಅಜಮಾಯಿಸಿ ಮಾಡುವಲ್ಲಿ ಕಬ್ಬಿಣದ ಪೆಟ್ಟಿಗೆಗಳೊಳಗೆ ಇಟ್ಟುಕೊಂಡಿದ್ದ ಸುಮಾರು 30,000 ರೂಪಾಯಿನ ನಗಗಳೂ, ಕರೆನ್ಸಿ ನೋಟುಗಳೂ, ಪ್ರಾಮಿಸರಿ ಪತ್ರಗಳೂ ಕಳುವಾಗಿದ್ದವು. ಲೆಕ್ಕದ ಪುಸ್ತಕಗಳನ್ನು ನೋಡಿದಾಗ ಕೆಲವು ಪುಸ್ತಕಗಳ ಹಾಳೆಗಳನ್ನು ಕಿತ್ತುಕೊಂಡು ಹೋಗಿದ್ದರು. ಪೊಲೀಸಿನವರು ಆ ಕಂಪನಿಯ ಸೆಕ್ರೆಟರಿಯಾಗಿದ್ದ ಸಿ. ಮುರುಗೇಶಶೆಟ್ಟಿ ಎಂಬಾತನನ್ನು ಹಿಡಿದು ಈಗ ಜಾಮೀನಿನ ಮೇಲೆ ಬಿಟ್ಟು ಪತ್ತೆ ತರದೂದು ನಡಿಸುತ್ತಿದ್ದಾರೆ. ಪೊಲೀಸಿನವರು ಜಾರ್ಜ್ ಟೌನ್‌ನಲ್ಲಿ ಕೆಲವು ಮನೆಗಳನ್ನು ಶೋಧನೆಮಾಡಿದಾಗ ಮುರುಗೇಶಶೆಟ್ಟಿಯು ಆಗಿಂದಾಗ್ಗೆ ಅಡವು ಇಡುತ್ತಿದ್ದ ಕೆಲವು ನಗಗಳು ಸಿಕ್ಕಿರುತ್ತವೆ.

ಅಟ್ಟಾಕ್ ಪಟ್ಟಣದಲ್ಲಿ ಅಫ್ಘಾನ್ ರಾಜಕುಮಾರರಿಬ್ಬರನ್ನು ಇಂಡಿಯಾ ಗವರ್ನ್‌ಮೆಂಟಿನವರು ಕೈಸೆರೆಹಿಡಿದು ತಂದು ಲಾಹೋರ್ ಪಟ್ಟಣದಲ್ಲಿ ಹಾಕಿರುತ್ತಾರೆಂಬ ವರ್ತಮಾನ ಹುಟ್ಟಿತು. ಈ ವಿಷಯದಲ್ಲಿ ಹಿಂದುಸ್ಥಾನದ ಪ್ರಜೆಗಳಿಗೆ ದುರಭಿಪ್ರಾಯಗಳೇನೂ ಉಂಟಾಗಬಾರದೆಂದು ಸರ್ಕಾರದವರು ಅದರ ಪೂರ್ವೋತ್ತರವನ್ನು ಕುರಿತು ಪ್ರಕಟಿಸಿರುವುದೇನೆಂದರೆ—ಲೇಟ್ ಸರ್ದಾರ್ ಆಯೂಬ್ ಖಾನ್ ರವರ ಇಬ್ಬರು ಕುಮಾರರು ಇಂಡಿಯಾ ಗವರ್ನ್‌ಮೆಂಟಿನ ಪೋಷಣೆಯಲ್ಲಿದ್ದುಕೊಂಡು ರಾಜ ಪೆನ್ಷನ್ ಪಡೆಯುತ್ತಾ ಲಾಹೋರ್ ಪಟ್ಟಣದಲ್ಲಿದ್ದರು. ಗವರ್ನ್‌ಮೆಂಟಿನ ಅಪ್ಪಣೆ ಪಡೆಯದೆ ಈ ರಾಜಕುಮಾರರು ಲಾಹೋರನ್ನು ಬಿಟ್ಟು ಎಲ್ಲೂ ಹೋಗಕೂಡದೆಂಬ ನಿರ್ಬಂಧವಿದ್ದರೂ ಅವರು ಕಳೆದ ತಾ. 23 ರಲ್ಲಿ ಸರ್ಕಾರದವರಿಗೆ ತಿಳಿಸದೇನೇ ಮೋಟರಿನಲ್ಲಿ ಕುಳಿತು ವಾಯವ್ಯ ಸರಹದ್ದಿಗೆ ಹೊರಟುಹೋದರು. ಸರ್ಕಾರದ ಹುಕುಂ ಪ್ರಕಾರ ಅವರನ್ನು ಅಟ್ಟಾಕ್ ಸೇತುವೆಯ ಬಳಿ ಹಿಡಿದು ವಾಪಸು ಲಾಹೋರಿಗೆ ತಂದದ್ದಾಯಿತು. ಈಗ ಅವರಿಬ್ಬರೂ ಸರ್ಕಾರದ ಅಪ್ಪಣೆ ಪಡೆಯದೆ ಹೋಗಿದ್ದ ವಿಚಾರದಲ್ಲಿ ತನಿಖೆ ನಡೆಯುತ್ತಿದೆ.

ಮೊರಾದಾಬಾದಿನ ಕೋರ್ಟಿನಲ್ಲಿ ಒಂದು ಮೊಕದ್ದಮೆ ದಯಾರಾಕ್ತಿ ಆಗುತ್ತಿದೆ. ಫಿರ್ಯಾದಿಯು ಹೇಳುವುದೇನೆಂದರೆ—ನಾನೊಬ್ಬ ವಕೀಲ. ಒಂದು ಮೊಕದ್ದಮೆ ನಡಿಸುವುದಕ್ಕೆ ದಿಗರು ಸ್ಥಳಕ್ಕೆ ಹೋಗಿದ್ದು ರೈಲಿನಲ್ಲಿ ವಾಪಸು ಬರುತ್ತಿದ್ದಾಗ ಒಬ್ಬ ಹೆಂಗಸು ನನ್ನ ಗಾಡಿಗೆ ಬಂದಳು. ನಾನು ಗಾಡಿಯಲ್ಲಿ ನನ್ನ ಬಳಿ ಇದ್ದ ಹಣವನ್ನು ಲೆಕ್ಕಮಾಡುತ್ತಿದ್ದದ್ದನ್ನು ಕಂಡು ಆ ಹೆಂಗಸು ಆ ಹಣ ತನಗೆ ಕೊಡದಿದ್ದರೆ ಸರಪಣಿ ಎಳೆದು ಗಾಡಿ ನಿಲ್ಲಿಸುವಂತೆ ಮಾಡಿ ನೀನು ನನ್ನ ಮಾನಭಂಗಮಾಡಲು ಪ್ರಯತ್ನಪಟ್ಟಂತೆ ಫಿರ್ಯಾದು ಮಾಡುತ್ತೇನೆ ಎಂದು ಹೇಳಿ ಸರಪಣಿ ಎಳೆಯುವುದಕ್ಕೆ ಎದ್ದಳು. ನಾನು ಅವಳ ಬಳಿಗೆ ಹೋಗಿ ನನಗೆ ಕಿವಿ ಮಂದವಾಗಿದೆ ಎಂದೂ, ಅವಳು ಹೇಳಿದ್ದು ನನಗೆ ಕೇಳಲಿಲ್ಲವೆಂದೂ, ಅವಳು ಹೇಳುವುದನ್ನು ಕಾಗದದಲ್ಲಿ ಬರೆದು ತೋರಿಸಿದರೆ ಆ ರೀತಿ ನಡಿಸುತ್ತೇನೆಂದೂ ಹೇಳಿದ್ದಕ್ಕೆ ಅವಳು ಒಪ್ಪಿ ಆ ರೀತಿ ಬರೆದುಕೊಟ್ಟಳು. ಆ ಕಾಗದವನ್ನಿಟ್ಟುಕೊಂಡು ನಾನು ಅವಳಿಗೆ—ಈಗ ನಿನ್ನ ಮೇಲೆ ಫಿರ್ಯಾದು ಮಾಡುತ್ತೇನೆ ಎಂದು ಹೇಳಿದಾಗ ಅವಳು ಸುಮ್ಮನಾದಳು. ಇಂಥಾ ಹೆಂಗಸಿಗೆ ತಕ್ಕ ಹಾಗೆ ಶಿಕ್ಷೆಯಾಗಬೇಕು ಎಂದು ಆ ವಕೀಲನು ಫಿರ್ಯಾದು ತಂದಿದ್ದಾನೆ.

ಬೊಂಬಾಯಿ ಪಟ್ಟಣದಲ್ಲಿ ಪ್ರಜೆಗಳ ಆರೋಗ್ಯಭಾಗ್ಯವನ್ನು ಕ್ರಮಪಡಿಸುವುದಕ್ಕೆ ಹೆಲ್ತ್ ಆಫೀಸರವರು ಸ್ಯಾನಿಟರಿ ಅಸೋಸಿಯೇಷನ್ ಎಂಬ ಸಂಘವನ್ನು ಮಾಡಿಕೊಂಡಿದ್ದಾರೆ. ಈ ಸಂಘದವರು ಕಳೆದ ವರುಷ ಮಾಡಿರುವ ಪ್ರಜೋಪಕಾರ ಕಾರ್ಯಗಳ ರಿಪೋರ್ಟು ಪ್ರಕಟವಾಗಿರುತ್ತದೆ. ಅದರ ಮುಖ್ಯಾಂಶಗಳೇನೆಂದರೆ—ಈ ಸಂಘಕ್ಕೆ ಸೇರಿದ ಮೆಂಬರುಗಳು ಅಲ್ಲಿರುವ ಮನೆಗಳಿಗೆ ಹೋಗಿ ಮನೆಯಲ್ಲಿ ವಾಸಮಾಡತಕ್ಕ ಜನರಿಗೆ ಆರೋಗ್ಯ ವಿಷಯಗಳನ್ನು ಹೇಳಿದರು. ಆರೋಗ್ಯಕರವಾಗಿಲ್ಲದಂಥಾ 1,000 ಮನೆಗಳ ವಿಷಯದಲ್ಲಿ ಹೆಲ್ತ್ ಆಫೀಸರಿಗೆ ರಿಪೋರ್ಟು ಮಾಡಿ ತಿಳಿಸಿದರು. ಬಡಬಗ್ಗರ ಮನೆ ಹೆಂಗಸರಿಗೆ ಹೆರಿಗೆ ಮಾಡಿಸುವುದಕ್ಕೆ ಒಂದು ಆಸ್ಪತ್ರೆಯನ್ನಿಟ್ಟಿದ್ದಾರೆ. ಆರೋಗ್ಯ ವಿಚಾರಗಳನ್ನು ಕಲಿಯುವುದಕ್ಕೂ ಕಲಿತುಕೊಂಡು ಆಚರಿಸುವುದಕ್ಕೂ ತುಂಬಾ ಸಹಾಯಮಾಡಿರುವರು. ಇದಲ್ಲದೆ ನಮ್ಮ ಚಕ್ರವರ್ತಿಯವರ ಹೆಸರಿನ ಮೇಲೆ ಮಿ. ರತನ್ ತಾತಾರವರು ಅವಾರು ಧರ್ಮವನ್ನು ಖರ್ಚುಮಾಡಿ ಕ್ಷಯರೋಗಿಗಳಿಗೆ ಚಿಕಿತ್ಸೆ ನಡೆಯುವಂಥಾ ಆಸ್ಪತ್ರೆಯನ್ನು ಇಡಿಸಿದ್ದಾರೆ. ಅದರಲ್ಲಿ 2,000 ರೋಗಿಗಳು ಚಿಕಿತ್ಸೆ ಮಾಡಲ್ಪಟ್ಟರು. ಸ್ಕೂಲುಗಳಿಗೆ ಹೋಗಿ ಮಕ್ಕಳ ಆರೋಗ್ಯ ಸ್ಥಿತಿಯನ್ನು ಪರೀಕ್ಷೆ ಮಾಡುತ್ತಾ ಬಂದಿದ್ದಾರೆ.

ವಿದೇಶದ ವೃತ್ತಾಂತಗಳು.

ಇಂಗ್ಲೆಂಡಿಗೆ ಸೇರಿದ ಡರ್ಬಿ ಎಂಬಲ್ಲಿ ಜರ್ಮನಿ ಹುದ್ದೇದಾರರಿಬ್ಬರು ಬಂಧೀಖಾನೆಯಿಂದ ತಪ್ಪಿಸಿಕೊಂಡು ಹೋಗಿದ್ದರು. ಇವರಿಬ್ಬರನ್ನೂ ಈಚೆಗೆ ತಲಾಷ್‌ಮಾಡಿ ಹಿಡಿದು, ಅವರಿಗೆ ತಲಾ 28 ದಿನಗಳ ಸಜಾ ವಿಧಿಸಿದ್ದಾರೆ.

ಜಪಾನ್ ನೈಪ್ಪಿಯವರು ಹಿಪ್ಪಲನೇರಳೆ ಗಿಡದ ತೊಗಟೆಯಿಂದ ತಯಾರಾದ ಕಾಗದವನ್ನು ಉಪಯೋಗಿಸಿ ಉಡುಪುಗಳನ್ನು ಮಾಡುತ್ತಿದ್ದಾರೆ. ಅದು ಮೃದುವಾಗಿಯೂ, ಬಾಳಿಕೆಯಾಗಿಯೂ ಇರುತ್ತದೆ. ಎರಡು ಗಜಗಳ ನಡುವೆ ಸಣ್ಣ ರೇಷ್ಮೆ ಬಟ್ಟೆಯನ್ನು ಅಂಟಿಸಿ ಬಟ್ಟೆಮಾಡುವರು.

ರಷ್ಯಾದಲ್ಲಿ ಕುಡುಕುತನವನ್ನು ನಿಲ್ಲಿಸಬೇಕೆಂದು ಗವರ್ನ್‌ಮೆಂಟಿನವರು ತುಂಬಾ ಸಾಹಸಪಡುತ್ತಿದ್ದಾರೆ. ಮದ್ಯ ವಸ್ತುಗಳನ್ನು ಜನರು ಕುಡಿಯುವುದಕ್ಕೆ ಅನುಕೂಲಪಟ್ಟಕೊಳ್ಳುವಂಥಾ ಪದಾರ್ಥವೆ ನಾದರೂ ಕಂಡು ಹಿಡಿದ ಪಕ್ಷದಲ್ಲಿ ಅವರಿಗೆ ಇಪ್ಪತ್ತು ಬಹುಮಾನಗಳನ್ನು ಕೊಡುವುದಾಗಿ ಸಾರಿಸಿದ್ದಾರೆ. ಈ ಪೈಕಿ ಮೊದಲನೆಯ ಬಹುಮಾನಕ್ಕೆ 11,25,000 ರೂಪಾಯಿ ಇಟ್ಟಿರುವರು. ಕಂಡು ಹಿಡಿಯುವ ಹೊಸ ವಸ್ತುವನ್ನು ಮದ್ಯಗಳಿಗೆ ಬೆರಕೆ ಮಾಡಿದರೆ ಅವುಗಳನ್ನು ಕುಡಿಯಲು ಅಸಹ್ಯವಾಗಬೇಕಲ್ಲದೆ ಅವುಗಳಲ್ಲಿರುವ ಗುಣಗಳು ಕೆಡಬಾರದೆಂಬುವುದೇ ಸರ್ಕಾರದವರ ಅಭಿಮತವಾಗಿದೆ.

ಸ್ಪೇಯಿನ್ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ಬೆಂಕಿಬಿದ್ದು ಪ್ರಸಿದ್ಧವಾದ ಲಾ ಕೋರ್ಟುಗಳು ಸುಟ್ಟುಹೋದವು. ಅವು ಕಟ್ಟಿ ಸುಮಾರು ಮುನ್ನೂರು ವರುಷಗಳಾಗಿರಬಹುದು. ಅರಂಡಾ ಎಂಬ ಜಡ್ಜಿಯು ಕೋರ್ಟಿನ ರೆಕಾರ್ಡುಗಳನ್ನು ಉಳಿಸಬೇಕೆಂದು ಸಾಹಸಪಡುವಲ್ಲಿ ಉರಿಗೆ ಸಿಕ್ಕಿ ಮೃತನಾದನೆಂದೂ, ಬೆಂಕಿಯನ್ನು ಆರಿಸುತ್ತಿದ್ದವರಲ್ಲಿ ಕೆಲವರಿಗೆ ಸುಟ್ಟ ಗಾಯಗಳಾದವೆಂದೂ ತಿಳಿಯುತ್ತದೆ.

ಇನ್ನು ಮುಂದೆ ಕೆಲವು ಸಂವತ್ಸರಗಳ ತನಕ ಇಂಗ್ಲೆಂಡಿನಲ್ಲಿ ವೈದ್ಯರು ಸಿಕ್ಕುವುದು ದುರ್ಲಭವಾಗುವುದೆಂದು ತಿಳಿದು ಅದನ್ನು ಪರಿಹರಿಸುವುದಕ್ಕೆ ಲಂಡನ್ ಪಟ್ಟಣದಲ್ಲಿ ಒಂದು ದೊಡ್ಡ ಸಭೆ ನಡೆಯುವುದಾಗಿದೆ. ಲಂಡನ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪಂಕ್ತಿಯಲ್ಲಿ ಇನ್ನು ಮುಂದೆ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪೈಕಿ ಅನೇಕರನ್ನು ಸರ್ಕಾರದಿಂದ ಪ್ರೋತ್ಸಾಹಪಡಿಸಿ ವೈದ್ಯಶಾಸ್ತ್ರವನ್ನು ಕಲಿಯುವಂತೆ ಮಾಡಬೇಕೆಂದು ಏರ್ಪಾಡಾಗಿದೆ.

ಜರ್ಮನಿಯವರ ಸ್ವಾಧೀನದಲ್ಲಿರುವ ಬೆಲ್ಜಿಯಮ್ ರಾಜಧಾನಿಯಾದ ಬ್ರಸ್ಸಲ್ಸ್ ನಗರದೊಳಗೆ ಜರ್ಮನಿಯವರು ಒಂದು ದೊಡ್ಡ ಬೀದಿಯ ಹೆಸರನ್ನು ಬದಲಾಯಿಸಬೇಕೆಂದು ತೀರ್ಮಾನಿಸಿದ್ದಕ್ಕೆ ಬೆಲ್ಜಿಯಮ್ ಪ್ರಜೆಗಳು ಒಪ್ಪದೆ ಹೋದದ್ದರಿಂದ ಜರ್ಮನಿಯವರು ಪಟ್ಟಣದಲ್ಲಿರುವ ಪ್ರಜೆಗಳಿಗೆ 25,000 ಪೌಂಡು ಜುಲ್ಮಾನೆ ವಿಧಿಸಿ, ಏಪ್ರೆಲ್ ಆಖೈರಿನೊಳಗಾಗಿ ಜುಲ್ಮಾನೆ ಹಣವನ್ನು ಕೊಡದೆ ತಪ್ಪಿದರೆ 100 ಮಂದಿ ಪ್ರಜೆಗಳನ್ನು ಗುಂಡಿನಿಂದ ಹೊಡೆದು ಕೊಂದುಹಾಕುತ್ತೇವೆಂದು ಭೀತಿಪಡಿಸಿದರು.

ಆಸ್ಟ್ರಿಯಾ ರಾಜಧಾನಿಯಾದ ವಿಯನ್ನಾ ಪಟ್ಟಣದಲ್ಲಿ, ಯುದ್ಧದ ಇಲಾಖೆಗೆ ಕಬ್ಬಿಣ, ಉಕ್ಕು, ಸೀಸ, ಈ ಮೂರು ಪದಾರ್ಥಗಳ ವಿನಹಾ ಉಳಿದ ಎಲ್ಲಾ ವಿಧವಾದ ಲೋಹಗಳ ಪಾತ್ರೆಪದಾರ್ಥಗಳನ್ನೂ ಭಿಕ್ಷವೆತ್ತಿ ಕೂಡಿಸಿ ತರಬೇಕೆಂದು ಸ್ಕೂಲ್ ಮಕ್ಕಳನ್ನು ಕೇರಿ ಮನೆಗಳ ಮೇಲೆ ಕಳುಹಿಸಿರುತ್ತಾರೆ. ಇದಲ್ಲದೆ ಆಸ್ಟ್ರೋ ಹಂಗೆರಿಗೆ ಸೇರಿದ ಪಟ್ಟಣಗಳಲ್ಲೂ ಊರುಗಳಲ್ಲೂ ದೊಡ್ಡ ದೊಡ್ಡ ಬೋರ್ಡುಗಳನ್ನು ಅಲ್ಲಲ್ಲಿ ಕಟ್ಟಿಸಿ, ಯುದ್ಧದ ಖರ್ಚಿಗೆ ಎಲ್ಲರೂ ಸಹಾಯಮಾಡಬೇಕೆಂದು ತಿಳಿಸಿರುವರು.

ಈಗಿನ ಯುದ್ಧದಲ್ಲಿ ಯಾವ ಪಕ್ಷಕ್ಕೂ ಸೇರದೆ ಇರುವ ಸ್ವಿಟ್ಜರ್‌ಲೆಂಡಿನ ಮಾರ್ಗವಾಗಿ ಒಂದು ರೈಲ್ವೆ ವ್ಯಾಗನ್‌ನಲ್ಲಿ ತರಕಾರಿ ಎಂಬ ಹೆಸರಿಟ್ಟು ಜಿನೋವಾದಿಂದ ಜರ್ಮನಿಗೆ ಹೋಗುತ್ತಿದ್ದದ್ದನ್ನು ಸ್ವಿಟ್ಸರ್‌ಲೆಂಡಿನ ಸುಂಕದ ಕಟ್ಟೆಯವರು ತಡೆದು ಶೋಧನೆ ಮಾಡಿದರು. ಆ ವ್ಯಾಗನ್ ತುಂಬಾ ತರಕಾರಿಗೆ ಬದಲಾಗಿ ಅಮೇರಿಕದಲ್ಲಿ ತಯಾರಾದ ಬಂದೂಕುಗಳು ಭರ್ತಿಯಾಗಿದ್ದವು. ಅದನ್ನೆಲ್ಲಾ ಮುಂದಕ್ಕೆ ಬಿಡದೆ ಕಿತ್ತಿಟ್ಟುಕೊಂಡರು. ಇಟಲಿಯ ಎಲ್ಲೆಕಟ್ಟುಗಳಲ್ಲಿ ಅಧಿಕಾರಿಗಳು ಜರ್ಮನಿಗೆ ಲೋಹ ಮೊದಲಾದ ಯುದ್ಧಸಾಮಗ್ರಿಗಳ್ಯಾವವೂ ಜರ್ಮನಿಗೆ ಹೋಗದಂತೆ ಉಸ್ತುವಾರಿ ಇಟ್ಟು ನೋಡಿಕೊಳ್ಳುತ್ತಿದ್ದಾರೆ.

ಇಂಗ್ಲೆಂಡಿನಲ್ಲಿ ಸರ್ಕಾರದವರು ಅಪರಾಧಿಗಳ ಶಿಕ್ಷಾಪ್ರಕರಣವನ್ನು ಮ್ಯಾಜಿಸ್ಟ್ರೇಟರಿಗೆ ಸುಲಭವಾಗುವಂತೆ ಮಾಡಿ ಕಳೆದ ಆಗಸ್ಟ್ ತಿಂಗಳಿಂದ ಜಾರಿಗೆ ತಂದಿದ್ದಾರೆ. ಮ್ಯಾಜಿಸ್ಟ್ರೇಟರು ಅಪರಾಧಿಗೆ ಸಜಾ ವಿಧಿಸಿ ಬಂದೀಖಾನೆಗೆ ಕಳುಹಿಸದೆ ಕೋರ್ಟಿನಲ್ಲೇ ಅವನನ್ನು ಒಂದು ದಿನ ತಡೆದಿಟ್ಟುಕೊಂಡಿರಬಹುದು. ಅವರು 10 ರೂಪಾಯಿ ಜುಲ್ಮಾನೆ, ತಪ್ಪಿದರೆ 14 ದಿನ ಸಜಾ ಎಂಬ ಶಿಕ್ಷೆ ವಿಧಿಸಿದರೆ ಅಪರಾಧಿಯಿಂದ ಅರ್ಧ ಹಣ ವಸೂಲ್ಮಾಡಿಕೊಂಡು ಅರ್ಧ ಅಂದರೆ 7 ದಿನ ಸಜಾ ಅನುಭವಿಸಬೇಕೆಂದು ಹುಕುಂ ಕೊಡಬಹುದು. ಇದಲ್ಲದೆ ಜುಲ್ಮಾನೆ ಹಣವನ್ನು ಕೊಡುವುದಕ್ಕೆ ಗತಿ ಇಲ್ಲದಂಥಾ ಅಪರಾಧಿಗೆ ತಕ್ಕ ಮಟ್ಟಿಗೆ ವಾಯಿದೆ ಕೊಡುವುದಕ್ಕೂ ಮ್ಯಾಜಿಸ್ಟ್ರೇಟರಿಗೆ ಅಧಿಕಾರವಿರುತ್ತದೆ.

ಜರ್ಮನಿಯವರು ಈಗ ಆಕ್ರಮಿಸಿಕೊಂಡಿರುವ ಬರ್ಗೆಸ್ ಎಂಬ ಊರಿನಲ್ಲಿ ಹುಡುಗನ್ಯಾರೋ ಜರ್ಮನಿ ಬಾವುಟಕ್ಕೆ ಬಣ್ಣವನ್ನು ಎರಚಿ ಕೊಳೆಮಾಡಿದರು. ಇದಕ್ಕೆ ಜರ್ಮನಿ ಸೈನ್ಯಾಧಿಪತಿಯು ಆ ನಗರದ ಪುರಾಧ್ಯಕ್ಷನನ್ನು ಕರಸಿಕೊಂಡು ಬಾವುಟ ಕೆಡಿಸಿದ ಹುಡುಗನನ್ನು ಹಿಡಿದು ಶಿಕ್ಷೆಗೆ ಗುರಿಮಾಡದಿದ್ದರೆ ಈ ಪಟ್ಟಣದವರೆಲ್ಲಾ ಸೇರಿ 3,00,000 ರೂಪಾಯಿ ಜುಲ್ಮಾನೆ ತೆರಬೇಕು ಎಂದು ಆಜ್ಞೆ ಮಾಡಿದರು. ಪೊಲೀಸಿನವರು ಕೆಲವು ಹುಡುಗರನ್ನು ಹಿಡಿದೊಪ್ಪಿಸಿದಾಗ ಅವರ ತಾಯಿತಂದೆಗಳಿಗೆ ಮೂರು ವಾರಗಳ ಸಜಾ ವಿಧಿಸಲ್ಪಟ್ಟಿತು. ಇದಲ್ಲದೆ ಊರಿನವರಿಗೆಲ್ಲಾ 6,000 ರೂಪಾಯಿ ಜುಲ್ಮಾನೆ ಹಾಕಿದರು. ಇನ್ನೊಂದು ವೇಳೆ ಜರ್ಮನಿ ಬಾವುಟಾಕ್ಕೆ ಇಂಥಾ ಅಪಮಾನ ಕೃತ್ಯ ನಡೆದರೆ ಊರಿಗೆಲ್ಲಾ 3 ಲಕ್ಷ ರೂಪಾಯಿ ಜುಲ್ಮಾನೆ ಹಾಕುತ್ತೇವೆಂದು ಸೈನ್ಯಾಧಿಪತಿಯು ಸಾರಿಸಿದನು ಎಂದು ಒಂದು ಪತ್ರಿಕೆಯು ತಿಳಿಸುತ್ತದೆ.

ಆಂಟ್ವರ್ಪ್ ಎಂಬ ಬೆಲ್ಜಿಯಮ್ ನಗರವು ಜರ್ಮನಿಯವರ ಸ್ವಾಧೀನದಲ್ಲಿ ಬಿದ್ದಮೇಲೆ ಅಲ್ಲಿರುವ ಪ್ರಜೆಗಳಿಂದ ಜರ್ಮನಿಯ ಅಧಿಕಾರಿಗಳು 34,00,000 ಪೌಂಡುಗಳ ರಕಮುಗಳು ವಸೂಲಾಗಬೇಕೆಂದು ವಿಧಿಸಿದರು. ಪ್ರಜೆಗಳು 8,00,000 ಪೌಂಡುಗಳ ಸರಕನ್ನು ಜಾಮೀನುಮಾಡಿದ್ದಾರೆ. ಇದುವರೆಗೆ 120 ಲಕ್ಷ ಪೌಂಡುಗಳ ಸರಕು ಜರ್ಮನಿಯವರಿಗೆ ಸಲ್ಲಿಸಲ್ಪಟ್ಟಿದ್ದರೂ ಡಿಸೆಂಬರ್ ತಿಂಗಳಲ್ಲಿ ಇನ್ನು ಮುಂದಕ್ಕೆ ತಿಂಗಳಿಗೆ 16,00,000 ಪೌಂಡುಗಳಂತೆ ಕೊಡಬೇಕೆಂದು ಶಾಸನವನ್ನು ಹೊರಡಿಸಿ ಕೇಳಿದರು. ರಾಜಧಾನಿಯಾದ ಬ್ರಸ್ಸೆಲ್ಸ್ ಪಟ್ಟಣದ ಮ್ಯುನಿಸಿಪಾಲಿಟಿಯವರಿಂದ ಒಂದು ಭಾಗವನ್ನು ದುರಸ್ತಿ ಮಾಡಬೇಕೆಂದು ಜರ್ಮನಿಯವರು ಆಜ್ಞೆಮಾಡಿ, ಅವರು ಅದು ತಮ್ಮ ಕೆಲಸವಲ್ಲವೆಂದು ಜವಾಬು ಹೇಳಿದಕ್ಕೆ 20,000 ಪೌಂಡು ಜುಲ್ಮಾನೆ ಹಾಕಿದ್ದಲ್ಲದೆ ಆ ರಸ್ತೆಯನ್ನು ಮಾಡಿಸಿಯೇ ತೀರಬೇಕೆಂದು ಹುಕುಂ ಕೊಟ್ಟಿರುತ್ತಾರೆಂದು ಪ್ರಕಟವಾಗಿದೆ.

ಈಗಿನ ಯುರೋಪಿಯನ್ ಯುದ್ಧದಲ್ಲಿ ಬೆರೆದಿರುವ ರಾಜ್ಯಗಳ ದೊರೆಗಳ ವಯಸ್ಸುಗಳು ಪ್ರಕಟವಾಗಿವೆ. ಬೆಲ್ಜಿಯಮ್ ದೊರೆಯಾದ ಆಲ್ಬರ್ಟರವರೇ ಎಲ್ಲರಿಗಿಂತಲೂ ಚಿಕ್ಕವರು ; ಅಂದರೆ ಅವರಿಗೆ 40 ವರುಷ ತುಂಬಿತು. ಆಸ್ಟ್ರಿಯಾ ಚಕ್ರವರ್ತಿಯವರು ತುಂಬಾ ಮುದುಕರು ; ಇವರ ವಯಸ್ಸು ಆಗಸ್ಟ್ ತಾ. 18 ಕ್ಕೆ 85 ವರುಷವಾಗುವುದು. ಇವರಿಗಿಂತ ಮಾಂಟಿನಿಗ್ರೋ ದೊರೆಯವರು ಚಿಕ್ಕವರು ; ಇವರಿಗೆ ಆಕ್ಟೋಬರ್‌ನಲ್ಲಿ 74 ತುಂಬುವುದು. ಸರ್ಬಿಯದ ಪೀಟರ್ ದೊರೆಯವರೂ, ಟರ್ಕಿ ಸುಲ್ತಾನರವರೂ ಒಂದೇ ವಯಸ್ಸಿನವರು ; ಅವರಿಬ್ಬರಿಗೂ 71 ವರುಷವಾಗಿದೆ. ಕಳೆದ ಜನವರಿ ತಿಂಗಳಲ್ಲಿ ಜರ್ಮನಿ ಚಕ್ರವರ್ತಿಯವರಿಗೆ 56 ವರುಷ ತುಂಬಿತು. ಫ್ರಾನ್ಸಿನ ಪ್ರೆಸಿಡೆಂಟ್ ಪಾಯಿನ್‌ಕೇರ್‌ಯವರು ಅವರಿಗಿಂತ ಒಂದು ವರುಷ ಚಿಕ್ಕವರು. ನಮ್ಮ ಚಕ್ರವರ್ತಿಯವರಿಗೆ ಜೂನ್ ತಿಂಗಳಿಗೆ 50 ತುಂಬುವುದು. ರಷ್ಯಾ ಚಕ್ರವರ್ತಿಯವರ ವಯಸ್ಸು 47.

ಡಾಕ್ಟರ್ ಗೋಪೀನಾಥ ಕೃಷ್ಣಾಜಿ ಕ್ಷತ್ರಿಯ ಇವರ ಔಷಧಗಳನ್ನು ಪರೀಕ್ಷಿಸಿ ನೋಡಿ.

ಈ ಔಷಧಗಳಿಗೆ ನಾನಾ ಪ್ರದರ್ಶನಗಳಲ್ಲಿ 3 ಚಿನ್ನದ, 4 ಬೆಳ್ಳಿಯ, 1 ಕಂಚಿನ ಪದಕಗಳೂ, ಗೌರವಸೂಚಕ 8 ಘನ ಪತ್ರಿಕೆಗಳೂ ಲಭ್ಯವಾಗಿರುವವು.

ಜ್ವರನಾಶಿನಿ, ಸಾರ್ಸಪರಿಲ, ಕೆಮ್ಮಿನೌಷಧ, ಪ್ರತಿ ಒಂದೂ ಬಾಟ್ಲಿ 1 ಕ್ಕೆ ಕ್ರಯ ರೂ. 2; ಭೇದಿ ಮತ್ತು ಕಾಲರಾ ಔಷಧ, ಕೆಮ್ಮಿನ ಮಾತ್ರೆಗಳು, ತಲಾ ಬಾಟ್ಲಿ 1 ಕ್ಕೆ ಕ್ರಯ 12 ಆಣೆ; ಕರ್ಪೂರ, ಪೆಪ್ಪರ್‌ಮೆಂಟ್, ಪುದೀನಾ, ಇವುಗಳ ಎಕ್ಸ್ಟ್ರಾಕ್ಟ್ ಅಥವಾ ದ್ರಾವಕಗಳು ಮತ್ತು ಹುಳುಕಡ್ಡಿ ಲೇಪನ, ತಲಾ ಬಾಟ್ಲಿ 1 ಕ್ಕೆ 6 ಆಣೆ.

ವಿಳಾಸ—ಡಾ|| ಗೋ. ಕೃಷ್ಣಾಜಿ ಕ್ಷತ್ರಿಯಾ,

[76-4] ಗೀರ್ಗಾವ ಪೋಸ್ಟ್, ಬೊಂಬಾಯಿ.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರಿಗೆ ನಡಿಸಲ್ಪಡುತ್ತೆ.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ನೋಡಲಿಕ್ಕೆ ಸಾಟಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಲ್ಲಾಕ್ಕ-ಕಾ-ಸಿಬುನ, 20-2-15.

ಅರ್ಧ ಬೆಲೆ ಮಾತ್ರ.

ಸರಾಕರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರಿಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರಿಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು ಕಲೆಕ್ಷಾಂಡೆಸ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-24] ಪಿ. ಒ. ಬಾಕ್ಸ್ 330, ಬೊಂಬಾಯಿ.

ಹತ್ತು ರೂಪಾಯಿಗಳು ಬಹುಮಾನ

ಇದೇ ಮಾಹೆ ತಾ. 3 ನೇ ಸೋಮವಾರ ಹಗಲು 10 ಘಂಟೆಯ ಸಮಯದಲ್ಲಿ ನಾನು ಗುತ್ತಲುಗ್ರಾಮಕ್ಕೆ ಸಾಲದ ಮೊಬಲಗು ವಸೂಲಿಗಾಗಿ ಹೋಗಿ ಬರುವಾಗ್ಗೆ ದಾರಿಯಲ್ಲಿ ನನ್ನ ಹೆಸರಿಗೆ ಬಂದು ಇರುವ 200 ರೂಪಾಯಿನ ಆಧಾರದ ಪತ್ರವು ರಿಜಿಸ್ಟರ್ ಆದ ಭೂಬಾಕಾಗದ ದಸ್ತಾವೇಜು ನನ್ನ ಕೈತಪ್ಪಿ ಬಿದ್ದು ಹೋಗಿರುವುದರಿಂದ ಸದರಿ ಪತ್ರವನ್ನು ಯಾರಾದರೂ ನನಗೆ ತಂದುಕೊಟ್ಟಲ್ಲಿ ಮೇಲ್ಕಂಡ ಬಹುಮಾನವನ್ನು ಹೊಂದಬಹುದು.

[90-1] ಕಂಟ್ರಾಕ್ಟರ್ ಏಕಾಂಬ್ರಂಪಿಳ್ಳೆ, ಮಂಡ್ಯ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-36] GIRLS' INDUSTRIAL SCHOOL, HASSAN.

ಮೇ ಮಹೋತ್ಸವದ ಕೈಗಡಿಯಾರ.



ಅರ್ಧ ಕ್ರಯ ರೂ. 1-14-0

ಇದೇ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-49]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜೆ. ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-6-0.

ಮೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜೆ. ಟಿ., ಮದರಾಸು. [99-49]

THE MYSORE GOVERNMENT-SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

One energetic and experienced *Secretary* for the Branch Office to be opened shortly at Bangalore, and District Agents for each and every district in the Mysore Province *on both commission and office allowance.* Secretary's allowance *Rs. 50-20-200,* and that of District Agents *Rs. 25* per mensem. Also taluk and local directors required in each and every taluk in the Province. *Security and good reference essential.* For prospectuses and other particulars please apply, with your experience in the line, to

M. L. NAGANNA,

[15-18] Managing Director, Life & Marriage Assurance Buildings, Mysore.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲಾ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 16 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂದವನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಸೇವಂತಿಗೆ, ಕ್ಯಾದಿಗೆ, ಗುಲಾಬಿ, ಮರುವಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

16 ತೊಲೆ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿರ್ಡೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡೆ ಗಿಣಗಳು 6, ಕಾರೊನೇಷನ್ ಬ್ರೂಚ್ 1, ಇವಾದು ಹಚ್ಚೆ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[87-1] ನಂ. 44, ಗೆಂಬುಳಯ್ಯರ ಬೀದಿ, ಮದರಾಸು.

ಬೇಗ ತರಿಸಿಕೊಳ್ಳಿರಿ! ಕೆಲವು ಪ್ರತಿಗಳೇ ಉಳಿದಿವೆ!!

ತಡವಾದರೆ ಮತ್ತೆ ದೊರೆಯಲಾರವು!!!

ಈ ಪುಸ್ತಕದ ಸಹಾಯದಿಂದ ಸ್ವತಃ ಔಷಧಗಳನ್ನು ತಯಾರಿಸಬಾರದೇಕೆ?

ರೂಪಾಯಿ 1-8-0 ಮಾತ್ರ ವೆಚ್ಚಮಾಡಿದರೆ ನಿಮಗೆ ಸಾವಿರಾರು ರೂಪಾಯಿನ ಲಾಭ ಉಂಟು.

ಹಿಂದು-ಯುನಾನಿ ವೈದ್ಯ, ಸುಗಂಧ ಬೋಧಕ.



ಈ ಕಾಲದಲ್ಲಿ ವಿಧವಿಧವಾದ ವೈದ್ಯ ಮುಂತಾದ ಹೆಸರಿನಿಂದ ಸಂದೋಹಸಂಖ್ಯ ಪುಸ್ತಕಗಳು ಹೊರಟು, ಅವುಗಳಲ್ಲಿ ಹೇಳುವಂತ ಯಾವ ಉಪಯೋಗವೂ ತೋರದಿದ್ದರೂ ಜನರನ್ನು ಮೋಸಗೊಳಿಸುತ್ತಿರುವದರಿಂದ, ನ್ಯಾಯವಾದ ಪುಸ್ತಕಗಳು ಪ್ರಚಾರಕ್ಕೆ ಬರಲು ಭಯಪಡುತ್ತಾ ಸಮಯನಿರೀಕ್ಷಿಸುತ್ತಲಿದ್ದವು. ನಾವು ವೈದ್ಯ ಮುಂತಾದ ಜನೋಪಕಾರ ವಿಷಯಗಳಲ್ಲಿ ಎಷ್ಟೋ ವರ್ಷಗಳಿಂದ ಪ್ರಯಾಸಪಟ್ಟು ಅನುಭವವನ್ನು ಸಂಪಾದಿಸಿರುವದರಿಂದ ಈ ವಿಷಯಗಳನ್ನು "ಹಿಂದು-ಯುನಾನಿ ವೈದ್ಯ, ಸುಗಂಧಬೋಧಕ" ಎಂಬ ಹೆಸರಿನಿಂದ ಜನಗಳ ಉಪಯೋಗಾರ್ಥವಾಗಿ ಪ್ರಕಟಿಸಿರುವೆವು.

ಈ ಪುಸ್ತಕವು ಮೂರು ಅಧ್ಯಾಯಗಳಿಂದ ಅಡಕವಾಗಿದೆ.

೧ ನೇ ಭಾಗದ ಹಿಂದುವೈದ್ಯದಲ್ಲಿ

ಕಸ್ತೂರಿ ಮಾತ್ರೆಗಳು, ಪಚ್ಚಕರ್ಪೂರ ಮಾತ್ರೆಗಳು, ವಿಶ್ವಾಮಿತ್ರಸ್ಫಟಿಕ, ನಾನಾ ತರಹ ಭೇದಿಮಾತ್ರೆಗಳು, ನಾನಾ ತರಹ ಭೇದಿಚೂರ್ಣ, ಯೋಗಿ ರಸಾಯನಮಾತ್ರೆ, ಭೇದಿ ನಿಲ್ಲುವದಕ್ಕೆ ವಜ್ರಕಪಾಟಮಾತ್ರೆ, ಬಾಲಸಂಜೀವಿನೀಮಾತ್ರೆ, ವಾಯುಪುತ್ರಮಾತ್ರೆ, ಆನಂದಭೈರವೀಮಾತ್ರೆ, ಅಮೃತಸಂಜೀವಿನೀಮಾತ್ರೆ, ಮಹಾಸಂಜೀವನೀಮಾತ್ರೆ, ನೀಲಕಂಠಮಾತ್ರೆ, ರಾಮಬಾಣಮಾತ್ರೆ, ವಿಷಕಂಠಮಾತ್ರೆ; ಸಂಜೀವಿಮಾತ್ರೆ, ಚಿಂತಾಮಣಿಮಾತ್ರೆ, ಮಹಾಘೋಟಾಚೋಳಿಮಾತ್ರೆ, ಜ್ವರಾಂಕುಶಮಾತ್ರೆ; ಹಯಪತಿಚೂರ್ಣ, ತಾಳಗಾದಿಚೂರ್ಣ, ಮಹಾಕಾಳೇಸಾದಿಚೂರ್ಣ, ಅಶ್ವಗಂಧಿಚೂರ್ಣ, ಮಂದಾದ್ರಿಚೂರ್ಣ, ದ್ರಾಕ್ಷಾದಿಚೂರ್ಣ, ಭೃಂಗಾದಿಚೂರ್ಣ, ಏಲಾದಿಚೂರ್ಣ, ಬಡಬಾಗ್ನಿಚೂರ್ಣ, ಇಂಗುವಾದಿಚೂರ್ಣ, ರಾಸ್ನಾದಿಚೂರ್ಣ, ಗಂಧಕಾದಿಚೂರ್ಣ, ಚಂದ್ರೋದಯಚೂರ್ಣ, ಭಲ್ಲಾತಕಿಚೂರ್ಣ, ವಿಷಕೋಲಾಹಲಚೂರ್ಣ, ಪಂಚಲವಣಚೂರ್ಣ, ಅಜೀರ್ಣಜ್ವರಗಳಿಗೆ ಮಧುಕಾದಿಚೂರ್ಣ, ಪಂಚಬಾಣಚೂರ್ಣ; ಪಿಂಡಪಿಪ್ಪಲ್ಯಾದಿಲೇಹ, ಅಶ್ವಗಂಧಿಲೇಹ, ಚಂದ್ರಕಳಾಲೇಹ, ಅಲ್ಲದಿಲೇಹ, ಲವಂಗಾದಿಲೇಹ, ಕಳಿಂಗಾದಿಲೇಹ, ಉಡದಲೇಹ, ಬ್ರಾಹ್ಮಿಲೇಹ, ಅನೇಕ ತರಹ ಧಾತುಪುಷ್ಟಿಲೇಹಗಳು, ಭಲ್ಲಾತಕಿಲೇಹ; ಪಿಪ್ಪಲ್ಯಾದಿ ರಸಾಯನ, ಜೀರಿಗೆ ರಸಾಯನ, ಬೃಹಂತಿಕಾರ; ಮಕ್ಕಳ ರೋಗಗಳಿಗೆ ಅನೇಕ ತರಹ ಎಣ್ಣೆಗಳು, ಮರಪುಚ್ಛಿಕಾಯಿ ಎಣ್ಣೆ, ಬಲ್ಲಾತಕಿ ಎಣ್ಣೆ, ಅನೇಕ ತರಹ ಉಷ್ಣಸಂಬಂಧವಾದ ವ್ಯಾಧಿಗಳಿಗೆ ಎಣ್ಣೆಗಳು; ಮಕ್ಕಳ ಸುತ್ತುಕಾರ, ತಾಳೀಸಾದಿ ವಟಕೆ, ಘುಕ್ತಾಜೀರ್ಣಮಾತ್ರೆ, ಧಾತುಪುಷ್ಟಿಮಾತ್ರೆ, ವೀರ್ಯಸ್ತಂಭನಮಾತ್ರೆಗಳು, ಕಣ್ಣಿನ ಅಂಜನ; ಪಂಚಲೋಹಭಸ್ಮ, ಸೀಸಭಸ್ಮ, ವಂಗಭಸ್ಮ, ಬೆಳ್ಳಿಭಸ್ಮ, ಕರ್ಪೂರಶಿಲಾಜತುಭಸ್ಮ, ಸುವರ್ಣಭಸ್ಮ, ಶೃಂಗಿಭಸ್ಮ, ಶಂಖಭಸ್ಮ, ತಾಳಕಭಸ್ಮ, ಹವಳದ ಭಸ್ಮ, ಗೋಮೂತ್ರಶಿಲಾಜತುಭಸ್ಮ, ಸಂಜಿನಮಾತ್ರೆ, ವ್ರಣಗಳಿಗೆ ಮುಲಾಮುಗಳು, ದಂತಚೂರ್ಣ, ಭೃಂಗಾಮಲಕತೈಲ, ರಬ್ಬಣಸಿಂಧೂರ, ವತ್ಸನಾಭಸಿಂಧೂರ, ರಸಂತಸಿಂಧೂರ ಮುಂತಾದ ಇನ್ನೂ ಅನೇಕ ಔಷಧಿಗಳು ಶಾಸ್ತ್ರೋಕ್ತವಾಗಿ ತಯಾರ್ಮಾಡತಕ್ಕ ವಿವರಣೆ, ಅವುಗಳ ಅನುಪಾನ ಮತ್ತು ಸೇವನಾ ಕ್ರಮ ಮುಂತಾದವು ಮರ್ಮವಿಲ್ಲದೆ ವಿವರಿಸಲ್ಪಟ್ಟಿವೆ.

೨ ನೇ ಭಾಗದ ಯುನಾನಿ ವೈದ್ಯದಲ್ಲಿ

ಆಬಾಲವೃದ್ಧ ಸ್ತ್ರೀಪುರುಷರಿಗೆ ಹಿತಕರವಾಗಿ ರುಚಿಯಾಗಿಯೂ ಗುಣವುಳ್ಳ ನಾನಾ ತರಹ ಷರಬತ್, ನಾನಾ ತರಹ ಗುಲ್ಕನ್, ನಾನಾ ತರಹ ಮುರಬ್ಬ, ಸಾಲಾಮಿಸ್ರಿಲೇಹ, ಅನೇಕ ತರಹ ಧಾತುಪುಷ್ಟಿ ಲೇಹಗಳು, ಷಿರಂಜ, ನಾನಾ ತರಹ ಉಷ್ಣ ವ್ಯಾಧಿಗಳಿಗೆ ಎಣ್ಣೆಗಳು ಮುಂತಾದ ಯುನಾನಿ ವೈದ್ಯವಿಧಾನದಂತೆ ಸಕಲ ವಿಧ ಚಿಕಿತ್ಸೆಯೂ ಸಮರ್ಪಕವಾಗಿ ವಿವರಿಸಲ್ಪಟ್ಟಿರುತ್ತೆ.

೩ ನೇ ಭಾಗದ ಸುಗಂಧದ ಅಧ್ಯಾಯದಲ್ಲಿ

ಅಗರುಕಡ್ಡಿ, ಹಸನು ಕಸ್ತೂರಿಕಡ್ಡಿ, ಧೂಪದಕಡ್ಡಿ, ಮೈಣದ ಹಸೀ ಕಡ್ಡಿ, ಹಸನು ಗುಲಾಬಿಕಡ್ಡಿ, ಪುನಗುಕಡ್ಡಿ, ಪಚ್ಚಕರ್ಪೂರಕಡ್ಡಿ, ಹಸನು ಪನ್ನೀರುಕಡ್ಡಿ, ಹಸನು ಪುನುಗಿನಕಡ್ಡಿ, ಸಾದಾ ಪುನಗುಕಡ್ಡಿ, ಹಸನುಕಡ್ಡಿ, ಮಸಾಲು ಕೇಸರಿಕಡ್ಡಿ, ಜವ್ವಾಜಿಕಡ್ಡಿ, ಹಸನುಕಡ್ಡಿ, ಬತ್ತಿಮಸಾಲು ಕ್ರಮ, ನಾಗಂಗದ ದಿನಸು, ಹಸನು ಗಂಧೂಡಿ ದಿನಸು, ಹಸನು ಕಸ್ತೂರಿ ಕಡ್ಡಿ, ಹಸೀಬತ್ತಿ ಮಾಡುವ ವಿಧ, ಕಿರಿದು ಬಿಳೀ ಕಡ್ಡಿ ಮಸಾಲು, ಹಸನು ಬಿಳೀ ಕಡ್ಡಿ ಮಸಾಲು, ಹಸೀಬತ್ತಿ, ಸ್ನಾನೋಲ್ಲಾಸಿನಿ, ಸುವಾಸನೆ ಹೊಗೆ ಬರುವ ಬರ್ಮೀಕ್ಕಿ ಮಾತ್ರೆಗಳು, ಮತಾಬಿ ಊದುಬತ್ತಿ, ಅನೇಕ ತರಹ ಜವ್ವಾಜಿಗಂಧ, ಅನೇಕ ತರಹ ಅರಗಜ, ಕೇಸರಿಬತ್ತಿಗಳು, ಕಿರಿದು ಮತಾಪುಬತ್ತಿ, ಕಿರಿದು ಗಂಧದ ಬತ್ತಿ ಮಾಡುವ ಕ್ರಮ ಮುಂತಾದ ಸುವಾಸನಾ ಪದಾರ್ಥಗಳನ್ನು ಶಾಸ್ತ್ರೋಕ್ತವಾಗಿ ಮಾಡತಕ್ಕ ವಿಧಾನಗಳು ವಿವರಿಸಲ್ಪಟ್ಟಿವೆ.

ಕ್ರಯ ಪುಸ್ತಕ ೧ ಕ್ಕೆ ರೂ. ೧-೮-೦.

ವಿಳಾಸ:—ವೆಂಕಟೇಶ ವಿಲಾಸ ಬುಕ್ ಡಿಪೋ,

[79-2] ೩೩೩, ಹಲಸೂರುಪೇಟೆ, ಬೆಂಗಳೂರು ಸಿಟಿ.

ಅರಸಿಕೆರೆ-ಮಂಗಳೂರು ರೈಲ್ವೆಯು.

ಮಂಗಳೂರು “ಸತ್ಯದೀಪಿಕೆ” ಬರೆಯುವುದು.

ಅರಸಿಕೆರೆ-ಮಂಗಳೂರು ರೈಲ್ವೆಯ ಪ್ರಸ್ತಾಪವು ಹೊಸದಲ್ಲ. ಈ ಪ್ರಸ್ತಾಪವನ್ನು ಈ ತೀರದವರಾದ ನಾವು ಕಳೆದ ಹೆಚ್ಚು ಕಡಮೆ 30 ವರ್ಷಗಳಿಂದ ಕೇಳುತ್ತೇವೆ. ಈ ರೈಲ್ವೆ ಲೈನನ್ನು ಹಾಕಬೇಕೆಂದು ಅನೇಕ ಕಾಲಗಳಿಂದ ಸರಕಾರದವರಿಗೆ ಮಾಡಿದ ಅರಿಕೆಗಳೆಲ್ಲಾ ವ್ಯರ್ಥವಾದ ಮೇಲೆ ಇತ್ತ ಒಂದೆರಡು ವರ್ಷಗಳಲ್ಲಿ ಈ ರೈಲ್ವೆ ಹ್ಯಾಗಾದರೂ ಹಾಕಲ್ಪಡುವದು. ಇನ್ನು ನಾಲ್ಕೈದು ವರ್ಷಗಳೊಳಗೆ ನಾವು ರೈಲ್ವೆ ಮೂಲಕ ಮೈಸೂರು ಸಂಸ್ಥಾನಕ್ಕೂ ಅಲ್ಲಿಂದ ಆಚೆ ದೇಶ ಊರುಗಳಿಗೂ ಬಹು ಸುಲಭವಾಗಿ ಪ್ರಯಾಣ ಮಾಡುವೆವು. ಮೂಡಣದೇಶದ ಸರಕುಗಳು ರೈಲ್ವೆ ಮೂಲಕ ಈ ಕಡೆಗೆ ಸುಲಭವಾಗಿ ಬರುವವು ಎಂಬಿತ್ಯಾದಿ ನಿರೀಕ್ಷೆಯುಳ್ಳವರಾಗಿ ಆ ಸಂಗತಿಗಳು ನೆರವೇರುವ ಕಾಲವನ್ನು ಎದುರುನೋಡುತ್ತಿದ್ದೆವು. ಆದರೆ ಆ ನಿರೀಕ್ಷೆಯು ಈಗ ಮಣ್ಣಾಗಿ ನಿರಾಶೆಗೆ ಕಾರಣವಾಯಿತು ಎಂಬದನ್ನು ಕೇಳಲು ವಾಚಕರಿಗೆ ವ್ಯಸನವಿರುವದು. ಅದರ ವಿಷಯ ನಾಲ್ಕು ಮಾತುಗಳನ್ನು ಇಲ್ಲಿ ಬರೆಯುವೆವು.

ಅರಸಿಕೆರೆ-ಮಂಗಳೂರು ರೈಲ್ವೆಯನ್ನು ಹಾಕಬೇಕೆಂಬ ಪ್ರಯತ್ನವನ್ನು ಮುಖ್ಯವಾಗಿ ಮಾಡುತ್ತಿದ್ದದ್ದು ಪ್ಲಾಂಟರುಗಳು. ಇವರು ಇಲ್ಲಿ ಮಾತ್ರವಲ್ಲ, ದಕ್ಷಿಣ ಇಂಡಿಯದ ಹಲವು ದಿಕ್ಕುಗಳಲ್ಲಿ ತಮ್ಮ ಪ್ರದೇಶವನ್ನು ದಾಟಿ ರೈಲ್ವೆಯನ್ನು ಹಾಕಬೇಕೆಂದು ಸಾಧನೆ ಮಾಡಿದರು. ಇವುಗಳಲ್ಲಿ ಮೆಟಪಾಲಿಯ-ಉದಕಮಂಡಲ ರೈಲ್ವೆ ಹೊರತು ಬೇರೆ ಯಾವದಾದರೂ ಈ ವರೆಗೆ ಕಾರ್ಯಾರ್ಥವಾಗಿ ನೆರವೇರಿದ್ದು ಕಾಣುವದಿಲ್ಲ. ಮದ್ರಾಸ್ ಸರಕಾರದವರು ವರ್ಷದ ಒಂದು ಭಾಗದಲ್ಲಿ ಉದಕಮಂಡಲದಲ್ಲಿ ಪ್ರವಾಸ ಮಾಡುವದು ಇಲ್ಲವಾಗುತ್ತಿದ್ದರೆ ಇದಾದರೂ ನೆರವೇರುತ್ತಿದ್ದಿಲ್ಲವಾದ್ದರಿಂದ ಪ್ಲಾಂಟರುಗಳು ಈ ವಿಷಯವನ್ನು ಹೊಗಳಿಕೊಳ್ಳುವ ಹಾಗೆ ಇಲ್ಲವೆಂದು ಒಬ್ಬ ಪ್ಲಾಂಟರರು ಬರೆಯುತ್ತಾರೆ. ಇತ್ತ ಕೆಲವು ವರ್ಷಗಳಲ್ಲಿ ಪ್ಲಾಂಟರುಗಳು ಈ ತೀರದಲ್ಲಿ ೨ ಲೈನುಗಳನ್ನು ಹಾಕಿಸುವ ಸಂಬಂಧವಾಗಿ ಪ್ರಯತ್ನಿಸುತ್ತಿದ್ದರು. ಒಂದು ಯಾವದೆಂದರೆ—ಮೈಸೂರು ಪ್ರಾಂತದಿಂದ ಕೊಡಗು ದಾಟ ತಲಚೇರಿಗೆ ಲೈನು ಹಾಕಿ ದಕ್ಷಿಣ ಇಂಡಿಯಾ ರೈಲ್ವೆಗೆ ಮುಟ್ಟಿಸಬೇಕೆಂಬದು; ಎರಡನೇದು ಅರಸಿಕೆರೆ-ಮಂಗಳೂರು ರೈಲ್ವೆಯು. ಕೊಡಗಿನ ಪ್ಲಾಂಟರುಗಳು ತಮ್ಮ ಭಾಗದ ರೈಲ್ವೆಯ ಖರ್ಚಿಗೆ ತಾವೇ ವಂತಿಗೆ (ಚಂದಾ) ಎತ್ತಬೇಕೆಂಬ ನಿರ್ಣಯ ಮಾಡಿದ್ದರು. ಆದರೆ ಮಲಬಾರ್ ಜಿಲ್ಲಾ ಬೋರ್ಡಿನವರು ತಮ್ಮ ಭಾಗದ ರೈಲ್ವೆ ಹಾಕುವದಕ್ಕಾಗಿ ಜಿಲ್ಲೆಯವರಿಂದ ರೈಲ್ವೆ ವರಿಯನ್ನು ಎತ್ತಲು ಒಪ್ಪದ್ದರಿಂದ ಈ ಆಲೋಚನೆಯು ಬಿದ್ದುಹೋಯಿತು. ಆಗ ದಕ್ಷಿಣ ಇಂಡಿಯಾ ಪ್ಲಾಂಟರುಗಳ ಸಂಘದವರು ಅರಸಿಕೆರೆ-ಮಂಗಳೂರು ಲೈನಿನ ವಿಷಯ ಹೆಚ್ಚಿಗೆ ಮನಸ್ಸು ತಕ್ಕೊಂಡು ಆ ವಿಷಯ ಪ್ರಯತ್ನಿಸುತ್ತಿದ್ದರು. ಆದರೆ ನಾವು ಮೇಲೆ ಹೇಳಿದಂತೆ ಅನೇಕ ವರ್ಷಗಳ ತನಕ ಅವರ ಪ್ರಯತ್ನ ಕೈಗೂಡಿ ಬರಲಿಲ್ಲ. ವಿವಿಧ ವೈಸರಾಯರುಗಳೂ ಗವರ್ನರುಗಳಿಗೂ ಅವರ ಅಪೇಕ್ಷೆಯನ್ನು ನೆರವೇರಿಸಿಕೊಡುವದಕ್ಕೆ ಉಪಾಯ ತೋರಲಿಲ್ಲ. ಇದಕ್ಕಿಂತ ವಿಶೇಷವಾದ ಇತರ ರೈಲುಗಳಿಗಾಗಿ ಅವರು ಹಣ ವೆಚ್ಚ ಮಾಡುವ ಅವಶ್ಯಕತೆ ತೋರಿಬಂತು. ಅತ್ತಕಡೆ ಮೈಸೂರು ಸರಕಾರದವರಾದರೂ ಅವರ ನಿರೀಕ್ಷೆಗೆ ಹೆಚ್ಚಿಗೆ ಆಸ್ಪದ ತೋರಿಸಲಿಲ್ಲ. ಅವರು ಮಾರ್ಗೋವೆಯನ್ನು ತಮ್ಮ ಮುಖ್ಯ ಬಂದರವಾಗಿ ಮಾಡಿ ದಕ್ಷಿಣ ಮಹಾರಾಷ್ಟ್ರ ರೈಲ್ವೆಗೆ ತಮ್ಮ ಲೈನು ಮುಟ್ಟಿಸಲು ಧಾವತಿಪಡುತ್ತಿದ್ದರು. ದಕ್ಷಿಣ ಇಂಡಿಯಾ ರೈಲ್ವೆ ಕಂಪೆನಿಯವರು ಮೈಸೂರಿಗೆ ಹತ್ತರ ದಾರಿ ಮಾಡಬೇಕೆಂಬ ಚಿಂತೆಯುಳ್ಳವರಾಗಿರಲಿಲ್ಲ. 1909 ರಲ್ಲಿ ಪ್ಲಾಂಟರುಗಳ ಪ್ರತಿನಿಧಿಗಳು ಮೈಸೂರು ರೆಸಿಡೆಂಟರಾಗಿದ್ದ ಮಿ॥ ಎಸ್. ಎಮ್. ಫ್ರೇಸರ್ ಧೊರೆಗಳನ್ನು ಕಂಡು ಪ್ರಸ್ತಾಪಿಸಿದ್ದರಲ್ಲಿ ಅವರು ಈ ರೈಲ್ವೆ ಹಾಕಲ್ಪಡುವ ಸಂಭವವಿಲ್ಲವೆಂತ ಹೇಳಿಬಿಟ್ಟರು. ಆದರೆ ೩ ವರ್ಷಗಳ ಮೇಲೆ 1913 ರಲ್ಲಿ ಮೈಸೂರು ಸರಕಾರಕ್ಕೆ ರೈಲ್ವೆ ಸಂಬಂಧವಾಗಿ ನೇಮಿಸಲ್ಪಟ್ಟ ಮಿ॥ ಬೆಲ್ ಎಂಬವರು ಈ ಲೈನಿನ ವಿಷಯ ತಿರಿಗಿ ಮನಸ್ಸಿಗೆ ತಂದುಕೊಳ್ಳುವೆವು ಅಂದರು. ಪ್ಲಾಂಟರುಗಳ ಪ್ರತಿನಿಧಿಗಳು ಆ ಕಾಲದಲ್ಲಿ ಮದ್ರಾಸ್ ಗವರ್ನರರನ್ನು ಸಂದರ್ಶಿಸಿ ತಮ್ಮ ಅರಿಕೆಯನ್ನು ಹೇಳಿಕೊಂಡಾಗ ಅವರು ಆ ಆಲೋಚನೆಯನ್ನು ಒಪ್ಪಿಕೆ ತೋರಿಸಿದರು. ತನ್ಮಧ್ಯೆ ಮೈಸೂರು ದಿವಾನರು ದಕ್ಷಿಣ ಕನ್ನಡ ಜಿಲ್ಲೆಗೆ ಚಿತ್ತಯಿಸಿ ಮಂಗಳೂರು ಮಲ್ಪೆ ಬಂದರುಗಳನ್ನು ಕಂಡು, ಜಿಲ್ಲೆಯ ಬೋರ್ಡಿನವರ ಸಂಗಡ ಆಲೋಚಿಸಿ ಅವರು ಅದಕ್ಕೆ ಒಪ್ಪುತ್ತಾರೆ ಎಂಬದನ್ನು ಕಂಡು ಈ ಲೈನು ಬೇಗ ಹಾಕಲ್ಪಡುವದು ಎಂಬದಕ್ಕೆ ನಿರೀಕ್ಷೆ ತೋರಿಸಿದರು. ಹೀಗೆ ಮೈಸೂರು ಸರಕಾರದವರು ಈ ಲೈನಿನ ಖರ್ಚಿಗಾಗಿ ತಮ್ಮ ಸಾಲನ್ನು ತಯಾರಿಸುತ್ತಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರು ಜಿಲ್ಲೆಯಲ್ಲಿ ರೈಲ್ವೆ ವರಿಯನ್ನು ಎತ್ತ ತೊಡಗಿ ಹಣವನ್ನು ಒದಗಿಸುತ್ತಿದ್ದರು. ಹೀಗೆ ಲೈನಿನ ಕೆಲಸ ನಿಸ್ಸಂಶಯವಾಗಿ ತೊಡಗುವದು ಎಂತ ಎಲ್ಲರೂ ನಿರೀಕ್ಷಿಸುತ್ತಿದ್ದರು. ಹಳೇ ಸರ್ವೆಯ ಸುಧಾರಣೆಯ ಸಂಬಂಧವಾದ ಕೆಲವು ಸಣ್ಣ ಪ್ರಶ್ನೆಗಳು ಮಾತ್ರ ಉಳಿದಿದ್ದವು. ಸಂಗತಿ ಹೀಗಿರುವಲ್ಲಿ ಈಗ ಫಕ್ಕನೆ ಕೇಳುವ ವರ್ತಮಾನವೇನಂದರೆ ಅರಸಿಕೆರೆ-ಮಂಗಳೂರು ರೈಲ್ವೆ ಲೈನು ಹಾಕುವ ಆಲೋಚನೆ ಬಿದ್ದುಹೋಯಿತೆಂಬದೇ. ಇದಕ್ಕೆ ಕಾರಣವು ಮಂಗಳೂರು ಬಂದರವು ಉತ್ತಮವಾದದ್ದಲ್ಲವೆಂಬದು. ಈ ಮಾತು ಖರೆ ಎಂಬದಕ್ಕೆ ಏನೂ ಸಂಶಯವಿಲ್ಲ. ಆದರೆ ಮಂಗಳೂರು ಬಂದರವು ಈಗ ಕೆಟ್ಟು ಹೋಯಿತೆಂಬದಲ್ಲ. ಅದು ಅಂದಿನಿಂದಲೇ ಕೆಟ್ಟದ್ದು. ಇದು ಸರ್ವರಿಗೆ ತಿಳಿದ ಮಾತು. ಮೈಸೂರು ಸರಕಾರದವರು ಇಂಡಿಯಾ ಸರಕಾರದವರನ್ನು ಅವರು ಮಂಗಳೂರು ಅಥವಾ ಮಲ್ಪೆ ಬಂದರವನ್ನು ಸುಧಾರಿಸಿ ತಕ್ಕ ಸ್ಥಿತಿಗೆ ತಂದ ಪಕ್ಷದಲ್ಲಿ ಈ ಲೈನಿಗೆ ತಮ್ಮ ಒಪ್ಪಿಗೆ ಅದೆ ಎಂಬದಾಗಿ ಬರೆದುಕೊಂಡರಂತೆ. ಇದು ಹಿತಕರವಾದ ಆಲೋಚನೆ ಎಂಬದನ್ನು ಒಪ್ಪಿಕೊಳ್ಳಬೇಕು. ಆದರೆ ಈ ಬಂದರುಗಳಿಗೆ ಲಕ್ಷಗಟ್ಟಲೆ ರೂಪಾಯಿ ವೆಚ್ಚ ಮಾಡುವದಕ್ಕೆ ಇಂಡಿಯಾ ಸರಕಾರದವರು ಸಿದ್ಧರಾಗಿರುವದಿಲ್ಲ. ಈ ಪಶ್ಚಿಮ ಕರಾವಳಿಯಲ್ಲಿ ಅವರು ಈಗ ಕೊಚ್ಚಿ ಬಂದರವನ್ನು ಉತ್ಕೃಷ್ಟ ಸ್ಥಿತಿಗೆ ತರುವ ಕೆಲಸಕ್ಕೆ ಕೈಹಾಕಿದಾರೆ. ಅದು ತೀರಿದ ನಂತರ ಈ ಬಂದರುಗಳ ಆಲೋಚನೆ ಮಾಡಲ್ಪಡುವದು. ಹಾಗಿದ್ದರೆ ಮೈಸೂರು ಸರಕಾರದವರು ಈ ಲೈನಿನ ಆಲೋಚನೆ ಬಿಡುವದೇ ಸೈ ಎಂತಾಯಿತು. ಅವರೀಗ ಭಟ್ಕಳವನ್ನು ತಮ್ಮ ಬಂದರವಾಗ ಮಾಡಿಕೊಳ್ಳಬೇಕೆಂಬ ಆಲೋಚನೆಯುಳ್ಳವರೆಂತ ಕೇಳುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಲೈನಿನ ಪ್ರಸ್ತಾಪ ಸದ್ಯ ಬಿದ್ದುಹೋದಲ್ಲಿ ಸರಕಾರದವರೂ ಜಿಲ್ಲಾ ಬೋರ್ಡಿನವರೂ ತಮ್ಮ ಚಟುವಟಿಕೆಯನ್ನು ಇತರ ವಿಷಯಗಳಲ್ಲಿ ತೋರಿಸ ತೊಡಗಿದಾರೆ. ಈಗ ಎರಡು ಲೈನುಗಳ ಸರ್ವೆಯು ನಡೆಯುವದು. ಜಿಲ್ಲಾ ಬೋರ್ಡಿನವರಂತೂ ರೈಲ್ವೆ ವರಿಯನ್ನು ಇನ್ನೂ ಎತ್ತುತ್ತಿರುವರು. ಸದ್ಯ ಮಂಗಳೂರು-ಪಾಣೆಮಂಗಳೂರು ಲೈನಿನ ಆಲೋಚನೆ ಮೊದಲು ನಡೆಯುವದು. ಇದು ಈಗ ಸಾರ್ಥಕವಾದರೆ ಅದನ್ನು ಪುತ್ತೂರಿಗೆ ಮುಂದರಿಸುವ ಸಂದರ್ಭ ಬಂದೀತು. ಅದೂ ತಕ್ಕಕಾಲದಲ್ಲಿ ಮುಂದರಿದು ಮೈಸೂರು ಪ್ರಾಂತ್ಯಕ್ಕಾಗಲಿ ಕೊಡಗಿನ ಮೇರೆಗಾಗಲಿ ಮುಟ್ಟುವ ಕಾಲ ಬರುವದು. ಆಗ ಮೈಸೂರು ದರಬಾರಿನವರು ಅದನ್ನು ಕಡಿದುಹೋದ ತುಂಡಾಗಿ ಬಿಡುವರೆಂದು ತೋರುವದಿಲ್ಲ. ಅದನ್ನು ತಮ್ಮ ಲೈನಿಗೆ ಸೇರಿಸುವದು ಸಾಧ್ಯವಾದೀತು. ಅಷ್ಟರೊಳಗೆ ಮಂಗಳೂರು ಬಂದರಕ್ಕೆ ಹೊಸ ಕಾಲ ಉದಯವಾಗುವದು. ಇನ್ನೊಂದು, ಮಂಗಳೂರು-ಉಡಿಪಿ ಲೈನು. ಇದರ ಸರ್ವೆಯೂ ನಡೆಯುವದು. ಇದು ಪ್ರಯಾಣಿಕರಿಗೆ ಬಹು ಪ್ರಯೋಜನಕರವಾದ ಲೈನಾಗಿರುವದು. ಇದಾದರೂ ಮುಂದರಿದು ಉತ್ತರ ಕನ್ನಡ ಜಿಲ್ಲೆಗೆ ತಲಪಿ ಅದನ್ನು ದಾಟಿ ಮಾರ್ಮಗೋವಿನ ದಕ್ಷಿಣ ಮಹಾರಾಷ್ಟ್ರ ರೈಲ್ವೆಯನ್ನು ಸೇರಿಕೊಳ್ಳುವ ಕಾಲ ಬಂದೀತು. ಆಗ ಇತ್ತಕಡೆಯ ರೈಲ್ವೆಗಳು ಒಂದಕ್ಕೊಂದು ತಾಗಿಸಿ ಒಂದು ಉತ್ತಮ ಮತ್ತು ಸಂಪೂರ್ಣದ ಸಂಬಂಧವನ್ನು ಕಟ್ಟಿಕೊಂಡ ಹಾಗಾದೀತು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಸದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ. 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲಿನ್ನಿಗೆ ಹಾಕುವ ಬೇರೆ ಕೆರೋಸೀನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇವೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[298-೩೮] 177, ಚೈನಾಬಜಾರ್ ರೋಡ್, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಉಳಿಕೆ; ಎದೆ ಕಲ್ಲೆನಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಮೇಹದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-37]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೬. ೬. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮಕ್ಕಳ ಆರೋಗ್ಯ.
ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಟ್ಟಿಹರಳಿನಿಂದಲೂ ತಯಾರಾದ “ಬಾಲಕೇಸರಿ” ಎಂಬ ತೈಲವು ಜ್ವರ, ಕೆಮ್ಮು, ಸಳವು, ಗಂಟಲಲ್ಲಿ ಗುರುಗುಟ್ಟುವುದು, ಹುರಿ, ಉಬ್ಬಸ, ಕ್ಷಯ, ಗರ್ಭವೆಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-27]

ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಖಾಸಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಒಂದು ಬುದ್ಧಿಮಾತು.

ನೀವು ಸದಾ ವಾಯುವಿನಿಂದ—ಕಷ್ಟಪಟ್ಟು ಹಾಸಿಗೆಯ ಮೇಲೆಯೋ ಇದ್ದು, ವಾತರೋಗದಿಂದ ಪೀಡಿತರಾಗಿ ಔಷಧಗಳಿಂದಲೂ ಆಸ್ಪತ್ರೆಗಳ ಸೇವೆಗಳಿಂದಲೂ ಗುಣ ಹೊಂದದೆ ಇದ್ದರೆ, ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸುವದರಿಂದ ನಿಜವಾಗಿ ಗುಣ ಹೊಂದುವಿರಿ.

ಕೆರ್ರಿ ಪಟ್ಟಣದ ರತ್ಮೋರ್ ಕಂಪನಿಯಲ್ಲಿ 16 ವರುಷದಿಂದ ಹಾಸಿಗೆಯಮೇಲೆ ಬಿದ್ದಿದ್ದ ಒಬ್ಬ ಅಂಗಡಿಯವನಿಗೆ ವಾಸಿಮಾಡಿತು. ಯೋರ್ಕ್ ನಗರದ ಪಿಸ್ಲಿಯಲ್ಲಿ 20 ವರುಷಗಳಿಂದ ಕಷ್ಟಪಡುತ್ತಿದ್ದವನು ವಾಸಿಯಾದನು, ಬ್ರಿಕ್ಸ್ಟನ್ ಪಟ್ಟಣದಲ್ಲಿ 40 ವರುಷಗಳಿಂದ ಕಷ್ಟಪಟ್ಟವನೊಬ್ಬನು ಸ್ವಸ್ಥಹೊಂದಿದನು. ಚೆಸ್ಟರ್ ನಗರದಲ್ಲಿ 80 ವಯಸ್ಸಿನ ಎ. ಬೂತ್ ಎಂಬಾತನು ಹೇಳುವದು:—

“ವಾಯುವಿನಿಂದ ಅಂಗಹೀನನಾಗಿ ಭಯಂಕರವಾದ ಸ್ಥಿತಿಯಲ್ಲಿದ್ದೆ. ಎಲ್ಲಾ ವಿಧವಾದ ಔಷಧಗಳನ್ನೂ, ವೈದ್ಯರನ್ನೂ ಪರೀಕ್ಷಿಸಿ, ಉತ್ತಮ ಆಸ್ಪತ್ರೆಗೂ ಹೋದೆನು, ಆದರೆ ಅವುಗಳಿಂದ ಏನೂ ಮೇಲಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬದರಲ್ಲಿ 2 ಸೀಸೆಗಳನ್ನು ಉಪಯೋಗಿಸಿದ್ದರಿಂದ ಪೂರ್ಣ ಸ್ವಸ್ಥವಾಯಿತು. ವಾಯುನೋವಿಗೆ ಕೈಕಂಡ ಔಷಧಿಯಾದ ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿರಿ.”

ಸೀಸೆ 1ಕ್ಕೆ 1 ರೂ. ಮೇರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. [81 2]

ಇನಾಂ ಸಾಮಾನು 60!! ಇನಾಂ ಸಾಮಾನು 60!!!

ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿರುವ
“ಗಾಯತ್ರಿ ಹೇರಾಯಿಲ್”

ಇದರ ಬೆಲೆ ೬೦ ಇನಾಂ ಸಾಮಾನುಗಳೊಡನೆ ಬುಡ್ಡಿ ೧ ಕ್ಕೆ ರೂ. ೦—೧೦—೦ ಮಾತ್ರವೇ.

ಯಾವ ಸ್ತ್ರೀಯರಿಗೆ ತಮ್ಮ ತಲೆ ಕೂದಲು ಅಂದವಾಗಿರಬೇಕೆಂಬ ಆಶೆಯುಂಟೋ, ಯಾವ ಸ್ತ್ರೀಯರಿಗೆ ತಮ್ಮ ಉದುರುತ್ತಿರುವ ಕೂದಲನ್ನು ತಡೆದು ಕೋಮಲವಾಗಿ ಬೆಳಸಬೇಕೆಂಬ ಉದ್ದೇಶವುಂಟೋ ಅಂಥಾವರು ಈ ನಮ್ಮಲ್ಲಿ ದೊರೆಯುವ ಹೆಚ್ಚು ಯೋಗ್ಯತೆಯುಳ್ಳ “ರಾಜಸುಂದರಿ ಸಿರೋಜ” ಯನ್ನುವ ಎಣ್ಣೆಯನ್ನು ಉಪಯೋಗಿಸಬೇಕೇ ಹೊರ್ತು ಇತರ ಸಾಧಾರಣ ಎಣ್ಣೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ನಮ್ಮ ಎಣ್ಣೆಯನ್ನು ಸ್ವಲ್ಪ ಕೈಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಚೆನ್ನಾಗಿ ಹಚ್ಚಿಕೊಂಡು ಬಾಚುತ್ತಾ ಬಂದರೆ ಉದುರುತ್ತಿರುವ ಕೂದಲಿನ ಬುಡವು ದೃಢವಾಗಿ ನಿಲ್ಲುತ್ತದೆ. ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದಲ್ಲದೆ ಮುಖಕ್ಕೆ ಕಾಂತಿಯನ್ನೂ ಮನಸ್ಸಿಗೆ ಉಲ್ಲಾಸವನ್ನೂ ಕೊಟ್ಟು ಕೂದಲನ್ನು ಉದ್ದವಾಗಿ ಬೆಳೆಸುತ್ತದೆ. ಒಂದು ಬಾಟ್ಲಿಯನ್ನು ತರಿಸಿ ನೋಡಿ.

ಇನಾಂ ಸಾಮಾನುಗಳ ವಿವರ:—ಕೊಂಡಿ ಗಿಣಿ 6, ಕಪ್ಪು ಭರಣಿ 1, ಕನ್ನಡಿ 1, ದಂತದ ಬಾಚಣಿಗೆ 1, ರಾಜರಾಣಿ ಕಾರೋನೇಷನ್ ಪೆಟ್ಟಿಗೆ 1, ತಾಂಬೂಲ ಮಾತ್ರೆ 40, ರವಿವರ್ಮ ಪೋಸ್ಟ್ ಕಾರ್ಡು 6, ಅತ್ತರ್ ಬಿಲ್ಲೆ 1, ಗಂಧದ ಬಿಲ್ಲೆ 1, ಬ್ರೂಚ್ 1. [250-22]

ನಮ್ಮ ವಿಳಾಸ:—ಯನ್. ಮುನಿಸಾಮಿ ಮೊದಲಿಯಾರ್,
ನಂ. ೬, ವೆಂಕಟೇಶಮೇಸ್ತ್ರಿ ಬೀದಿ, ಮದರಾಸು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ 120 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೇಳಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-26] 20, ಚೀನಾಬಜಾರು ರೋಡು, ಮದರಾಸು.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು.

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರಿಗೆ ಕೊಡುತ್ತಾ ಬರುವದು.

ಕಂಪನಿಗೆ ದಾಖಲಾಗಿ ಪಾಲಿಸಿ ಪಡೆದು ಸಲೀಸು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಫೆ ಸಮೇತ ನಾಮಿನಿಗೆ ಕೊಡಲಾಗುತ್ತೆ 20 ವರುಷದವರಿಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲುಪ್ತವಿಲ್ಲದೆ ಎಲ್ಲಾ ಹೆಣ್ಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿಯಂತೆ ಕೊಡುತ್ತಾ ಬರುವದು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲೂ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್ರ ಹಣವು ಹಂಚಿಕೆ ರೀತಿಯಿಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿಮೆ ಮೊಬಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಿಂಗು ಏಜಂಟ್ರು ಜುಮ್ಮೆದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜಮಾದಾರರಾಗಿರುತ್ತೇವೆ [292-21]

ಒಳ್ಳೆ ಚಟವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೋಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್‌ರಿಗೆ ಬರೆಯಿರಿ.—

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-34]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ರುತ್ರಿಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180-28] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ. ಎಸ್. ರ... ರೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-31] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ, ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-26] ವಿಳಾಸ:—ವೈದ್ಯಶಾಲಾ, ನಂಜನಗೂಡು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

23—1—1915 ರಿಂದ 30—4—1915 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	1	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		3	2	2	3
ಮೈಸೂರು	,,	6	5	0	0
ಕೋಲಾರ	,,	6	5	0	0
ಕೋಲಾರ್ ಚಿನ್ನದ ಗಣಿಗಳು		1	2	0	0
ತುಮಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	1	1	0	0
ಚಿತ್ರದುರ್ಗ	,,	0	0	0	0
ಕಡೂರ್	,,	0	0	0	0
ಶಿವಮೊಗ್ಗ	,,	6	6	0	0
ಜುಮ್ಲಾ......		23	21	2	3

ಶಾಲಿವಾಹನ ಶಕ ಪಂಚಾಂಗಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ವಸಂತಋತೌ ಅಧಿಕ ವೈಶಾಖ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ನಿಜ ವೈಶಾಖ ಶುದ್ಧ ಷಷ್ಠಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಮೇ.

ತಾ.	ವಾರ		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವೈಶಾಖ ಮಾಸ ತೇದಿ
14	ಶುಕ್ರ	†	ಅಮಾವಾಸ್ಯೆ	3-27	ಕೃತ್ತಿಕೆ	55-16	1
15	ಶನಿ	*	ಪಾಡ್ಯಮಿ	8-33	ರೋಹಿಣಿ	60-0	2
16	ಭಾನು	;;	ಬಿದಿಗೆ	13-37	ರೋಹಿಣಿ	1-52	3
17	ಸೋಮ	‡	ತದಿಗೆ	18-14	ಮೃಗಶಿರ	8-5	4
18	ಮಂಗಳ	§	ಚೌತಿ	21-6	ಆರಿದ್ರ	13-33	5
19	ಬುಧ	,,	ಪಂಚಮಿ	24-54	ಪುನರ್ವಸು	18-3	6
20	ಗುರು	::	ಷಷ್ಠಿ	26-27	ಪುಷ್ಯ	21-23	7

† ಮಳೆ ನಕ್ಷತ್ರ—ಕೃತ್ತಿಕೆ 2 ನೇ ಪಾದ. * ರಜಬ್ ಚಂದ್ರ 1 ಅಮೃತಸಿದ್ಧಿಯೋಗ. ;; ಪರಶುರಾಮಜಯಂತಿ ‡ ಚತುರ್ಥೀ ತಿಥಿ, ವಾಕ್ಯರೀತ್ಯಾ ಶೂನ್ಯತಿಥಿ, ತ್ರೇತಾಯುಗಾದಿ, ವಾರ್ತಾಗೌರೀವ್ರತ, ಅಕ್ಷಯತೃತೀಯಾ, ಮಳೆ ನಕ್ಷತ್ರ—ಕೃತ್ತಿಕೆ 3 ನೇ ಪಾದ § ಶೂನ್ಯತಿಥಿ. ,, ಪಂಚಮಿ ತಿಥಿ, ಲಾವಣ್ಯಗೌರೀವ್ರತ, ಶಂಕರಜಯಂತಿ :: ಶ್ರೀರಂಗದಲ್ಲಿ ವಸಂತೋತ್ಸವಾರಂಭ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)



ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲಾ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಶಾಲಿಯಾದ ಸೇಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1 ಕ್ಕೆ 3 ಆಣೆ 200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ 80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ 550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ

95 ,, ,, ,, 4 ,, 200 ,, ಟಿನ್ ,, 9 ,, 100 ,, ಸೀಸೆ ,, 4½ ,, 1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177,

[26-15] ಬೀಣಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

Printed and Published by the Rev. H. Gulliford, Proprietor and Manager, Wesleyan Mission Press, Mysore. 13/5/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ ನೇ ಇಸವಿ ಮೇ ತಾರೀಖು ೨೦ ನೇ ಗುರುವಾರ. ಸಂಚಿಕೆ ೪೧

Price, 6 as. Price, 0-6-0.

READY FOR SALE,

ENGLISH L. S. TEXT NOTES, 1916

By H. Nagappa, B.A., & N. Srikantaiya, B.A. Copies can be had at the Student's Hall, Mysore; L. S. Book Depot, Mysore; General Agency, Mysore; or H. N. Rao Bros., Bangalore City. [84]

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯುಕ್ತಗಳಿಂದು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಪೋಸ್ಟೇಜ್ ಚಾರ್ಜ್ ೧ ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ಶಾರದಾಸುಂದರಿ	0-8-0	ಕುಮುದಿನಿ	0-6-0
ರಾಧಾನಾಥನ	0-8-0	ಸಂತಾನಕ	0-4-0

[275-23] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಕಂಠೀರವಚರಿತ್ರೆ 0-8-0, L. S. English Texts 0-10-0, Canarese Text 0-4-0, English Notes 0-6-0, Canarese Notes 0-4-0 and 0-7-0. [8-19]

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-46] Bangalore City.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಸಕಲೇಶಪುರ ಟೌನ್ ಬ್ರಾಹ್ಮಣರ ಕೇರಿಯಲ್ಲಿ ಪಿತ್ರಾರ್ಜಿತವಾಗಿ ನನ್ನ ವಶಕ್ಕೆ ಒಳಪಟ್ಟಿರುವ ನಮ್ಮ ತಂದೆ ಜ ಬರದಿ ಸೂರ್ಯನಾರಾಯಣರವರ ಮನೆ ಮತ್ತು ಇದಕ್ಕೆ ಸಂಬಂಧಪಟ್ಟ ಹಿತ್ತಲು ವಗೈರೆ ಸ್ಥಿರಸ್ವತ್ತನ್ನು ಸಕಲೇಶಪುರದಲ್ಲಿರುವ ಆಚಂಗಿ ರಾಮಾಶಾಸ್ತ್ರಿಗಳು ವಿಕ್ರಯಿಸುವದಾಗಿ ಕೇಳುತ್ತೇನೆ. ನನ್ನ ಹಕ್ಕುದಾರಿಗೆ ಒಳಪಟ್ಟಿದ್ದ ರಾಮಾಶಾಸ್ತ್ರಿಗಳಿಗೆ ವಿಕ್ರಯಿಸಲು ಬಾಧ್ಯತೆ ಇರುವುದಿಲ್ಲ. ಅವರು ಅಕ್ರಮವಾಗಿ ಪಂಚಾಯಿತಿ ನನ್ನ ಸ್ವತ್ತು ಪಡೆದಿರುವುದು ಊರ್ಜಿತವಾಗತಕ್ಕದ್ದಲ್ಲ. ನನ್ನ ಸ್ವತ್ತನ್ನು ರಾಮಾಶಾಸ್ತ್ರಿಗಳಿಂದ ಕ್ರಯ ದಾನ ವಗೈರೆ ಮೂಲಕ ತೆಗೆದುಕೊಂಡವರು ಕೊಟ್ಟ ಹಣವನ್ನು ಕಳೆದುಕೊಂಡು ನಮ್ಮ ನಷ್ಟ ಸಹಿತ ಕೊಡಬೇಕಾಗುತ್ತೆ, ತಿಳಿಯುವುದು.
[91-3] ಜಂಬರದಿ ಸುಬ್ಬರಾವ್, ಸಕಲೇಶಪುರ.

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹೆ!!!

ಗಟ್ಟಿ ಬಣ್ಣದ ಧಡೂತಾದ ಸೀರೆಗಳು.
ಸೋಲಾಪುರದ ತರಹೆವಾರಿ ಚಿಕ್ಕುಗಳು.
ಶುದ್ಧಿ ಮಾಡಿದ ಹಸು ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [55-9]

ತ್ವರೆಮಾಡಿ! ಸಾವಕಾಶ ಮಾಡಿದರೆ ಸನಗು ಸಿಕ್ಕದು.
ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.
ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್.
309, ಕಿಲಾರಿ ರೋಡು (ತುಂಬಿಗರ ಪೇಟೆ), ಬೆಂಗಳೂರು ಸಿಟಿ.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.
[28-15] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

"ಜ್ವರಹರಮಾತ್ರೆ" ಇದು ಮಂಡಿಸಿ! ಬಹು ಜಾತಿಯಿಂದ ಎಲ್ಲಾ ವಿಧ ಜ್ವರಗಳನ್ನೂ ನಿವಾರಿಸಿ ಶಾಸ್ವತ ಗುಣಕೊಟ್ಟಿದೆ. ಇದರಿಂದ ಗುಣ ಕಾಣದವರೇ ಇಲ್ಲ. 24 ಮಾತ್ರೆ ಸೀಸೆಗೆ 8 ಆಣೆ 6 ಸೀಸೆಗೆ 2½ ರೂ. ಇನ್ನೂ ಬಹು ಗುಣಕಾರಿ ಔಷಧಿಗಳು ನಮ್ಮಲ್ಲಿವೆ.
[263-24] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಮಾದರಿಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[201-37] GIRLS' INDUSTRIAL SCHOOL, HASSAN.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು ಮಾದರಿ ಸಂಚಿಕೆಗೂ, ಕಾರ್ಡಿಗೂ ಬೆಲೆಯಿಲ್ಲ. [160-44]

ಅತ್ಯುತ್ತಮ ಕಾದಂಬರಿಗಳು.—ನಮ್ಮ ವಾಲ್ಮೀಕಿ 12 ಆ; ಅಶ್ವತ್ಥವೃಗ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿನಿ 1½ ಆ; ಸಾಹಸಿಕ 2½ ಆ; ಸುಶೀಲೆ 6 ಆ; ಸಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಓರಿಯಂಟಲ್ ಗವ ಸೆಕ್ಯೂರಿಟಿ ಲೈಫ್ ಅಸೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 6,00,00,000
ಕಂಪನಿಯಿಂದ ಪಾವತಿ ಆಗಿರುವದು „ 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರಾವ್, ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ನಂಜಪ್ಪನವರು ಅಥವಾ ಮಿ॥ ವೆಂಕಟಪತಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ
[321-32] ಬ್ರಾಂಚ್ ಸೆಕ್ರೆಟರಿ, ಮದರಾಸ್

ಪಟ್ಟೆಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗೆದುಕೊಳ್ಳುತ್ತೇವೆ.

ಪೀತಾಂಬರ ಸೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಪೀಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರೆಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಪೀಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರೆಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರೆಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರೆಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟೆಪೀತಾಂಬರ ಕಂಪೆನಿ,
[63-6] ಧಾರಾನಗರ್ ಬೀದಿ, ಕಾಶಿ.

ಸಾತಾರದ ಪ್ರಸಿದ್ಧ ಕೋಲ್ಹಟಕರ

ರಾಜವೈದ್ಯಕೃತ

ಮಲರೋಗ, ಫಿಟ್ಸ, ಬಾಲಗ್ರಹ, ಅಪಸ್ಮಾರ, ಹುಡುಗರ ಹೊಟ್ಟೆಯೊಳಗಿನ ಬೇನೆ, ಹಾಗೂ ಎಲ್ಲ ಪ್ರಕಾರದ ಜ್ವರ, ಅರ್ಧಾಂಗವಾಯು, ಬಾಲಕರ ನಾನಾ ತರದ ಬೇನೆ ಮುಂತಾದವುಗಳ ಮೇಲೆ ಕಸ್ತೂರಿಯ ಗುಳಿಗೆಗಳು. ಸಣ್ಣವರ, ಹಾಗೂ ದೊಡ್ಡವರ ಎಲ್ಲ ಹೊಸ, ಹಾಗೂ ಹಳೇ ಬೇನೆಗಳು ನಿಶ್ಚಯವಾಗಿ ನೆಟ್ಟಗಾಗುತ್ತವೆ 1 ಬಾಟಲಿಯ ಬೆಲೆ 2-0-0 ಅನುಪಾನ ಪತ್ರಕ ಸಹಿತವಾಗಿ. ರೋಖ ಹಣದಿಂದ, ಕಳಿಸಿ, ಅಥವಾ ವಿ. ಪಿ. ಯಿಂದ ಬೇಡಿರಿ. ಚೆಟ್ಟಿನ ಮಾಹಿತಿಯು ಪತ್ರದ್ವಾರದಿಂದ [92-1]

ಗುಳಿಗೆಗಳು ಮಾರುವದರ ಸಲುವಾಗಿ ಊರೂರಿಗೆ ಏಜಂಟರು ಬೇಕು.

ನಮ್ಮ ವಿಳಾಸ—ಸದಾಶಿವ ಅಪ್ಪಾಜಿ ಕೋಲ್ಹಟಕರ, ವೈದ್ಯ,
ದವಾಖಾನಾ, ಠಾಕುರದ್ವಾರ ರೋಡ, ಮುಂಬಯಿ, ನಂ. 2.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಬಾಲಗ್ರಹಧೂಪ ಟಿನ್ 1 ಕ್ಕೆ 8 ಆಣೆ.

ಮಕ್ಕಳಿಗೆ ಬರತಕ್ಕ ಬಾಲಗ್ರಹಕ್ಕೆ ಈ ಧೂಪವನ್ನು ಹಾಕಿದ ಕೂಡಲೇ ಬಾಲಗ್ರಹ ಚೇಷ್ಟೆಯು ಖಂಡಿತವಾಗಿಯೂ ಗುಣವಾಗುತ್ತೆ.

ಕಸ್ತೂರಿಮಾತ್ರೆ ಸೀಸಾ 1 ಕ್ಕೆ 4 ಆಣೆ.

ಈ ಮಾತ್ರೆಯನ್ನು ಬಾಯಿಗೆ ಹಾಕಿಕೊಂಡದ್ದೇ ಆದರೆ ಅಜೀರ್ಣವನ್ನೂ ಬಾಯಿನಾತಿಕೆಯನ್ನೂ ಸಹಾ ನಾಶಮಾಡಿ ಬಾಯಿಯು ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಇರುತ್ತದೆ.

ಭೃಂಗಾಮಲಕತೈಲ ಸೀಸಾ 1 ಕ್ಕೆ 1 ರೂ.

ಇದು ಸ್ನಾನಮಾಡುವಾಗಲೂ ರಾತ್ರಿ ಮಲಗಿಕೊಳ್ಳುವಾಗಲೂ ತಲೆಗೆ ಹಚ್ಚಿಕೊಂಡದ್ದೇ ಆದರೆ ಸಮಸ್ತ ಉಷ್ಣವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯೂ ಸಹಾ ಬರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-13] ಸುಗಂಧಕಾರಿ, ಮೈಸೂರು.

ಪರಸ್ಥಳದ ಆರ್ಡರುಗಳು ಬರುವ ಮೇ 15 ರ ವರೆಗೆ ನಡೆಸಲ್ಪಡುತ್ತೆ.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನೆಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಷೀನರಿ ಸಹಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಲ್ಲಾವ-ಕಾ-ಸಿಟನ, 20-2-16.

ಅರ್ಧಬೆಲೆ ಮಾತ್ರ.

ಸರಾತರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿ ದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೋಂಟಿ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಆವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-25] ಪಿ. ಓ. ಬಾಕ್ಸ್ 330, ಬೊಂಬಾಯಿ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 11 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[64-7]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ಕಿವಿನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಜೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಿಚ್ಚು ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚು ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಈಗಲೇ ಪರೀಕ್ಷಿಸಿ ನೋಡಿ. ಇನ್ಯಾವುದನ್ನೂ ಉಪಯೋಗಿಸಬೇಡಿ.

ಮಕ್ಕಳಿಗೂ ಕೂಡ ಬಹಳ ಪ್ರಯೋಜನವಾದದ್ದು.

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನ ಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿ ತಯಾರ್ಮಾಡುತ್ತಾರೆ.

ಈ ಮಾತ್ರೆಗಳ ಕ್ರಯ { 30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ. 65 ಮಾತ್ರೆ ಪೊಟ್ಲಕ್ಕೆ 3 ಆಣೆ.
195 ,, ಡಬ್ಬಾ ಸಮೇತ 8 ಆಣೆ. 455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲೂ ಬಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್ ಟೌನ್, ಮದ್ರಾಸ್.

[80-3]

ಮಕ್ಕಳ ಆರೋಗ್ಯ. ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವದು, ಶೂಲೆ, ಉಬ್ಬಸ, ಕ್ಷಯ, ಧರ್ಮವೆಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ.

[235-28]

ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಖಾಸಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ಪದ್ಧತಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕಾಂಟು 10 ಕ್ಕೆ 1.

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕಾಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 3 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

[13-14]

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0
ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-19]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್.



ಮೇ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1–14–0.

ಇದೇ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಮೇ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [99-60]

ವಿಳಾಸ—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಆ ಕೆಮ್ಮಿನ ಹಿಂದೆ ಮರಣವು ಔತುಕೊಂಡಿದೆ.

ಉತ್ತಮ ಔಷಧಿಗಳಿಂದಲೂ ಚಿಕಿತ್ಸೆಯಿಂದಲೂ ವಾಸಿಯಾಗದೆ ನಿಮ್ಮ ಪ್ರಾಣವನ್ನು ಸಾಸುತ್ತಿರುವ ಕೆಮ್ಮು ನಿಮಗಿದೆಯೋ? ಹಾಗಿದ್ದರೆ ಒಂದು ವೇಳೆ ನಿರೀಕ್ಷೆ ಇಲ್ಲದವರಾಗಿದ್ದೀರಿ. ಅಂಥವರಿಗೆಲ್ಲಾ ಲಿಟಲ್ಸ್ ಓರಿಯೆಂಟಲ್ ಬಾಂ ಎಂಬದನ್ನು ಉಪಯೋಗಿಸಬೇಕೆಂದು ಹೇಳುತ್ತೇವೆ.

ಉರಿಸ್ಟವ್‌ಶೈರಿನ ಇವೇಷಂ ಸ್ಥಳದ ಮಿ॥ ಎಫ್. ಡ್ರಿಸ್‌ಡೇಲ್ ಯವರು ಹೇಳುವದು :—"2 ವರುಷಗಳಕಾಲ ನನಗೆ ಸದಾ ಬಾಧಿಸುವ ಒಣಕೆಮ್ಮೂ ಅದರೊಂದಿಗೆ ಕುತ್ತಿಗೆಯಲ್ಲಿ ಕಟ್ಟ್ಯಾಡಿಸುವಿಕೆಯೂ ಉಂಟಾಗಿ ರಾತ್ರಿಯೆಲ್ಲಾ ಎದ್ದೇ ಇರುತ್ತಿದ್ದೆನಲ್ಲದೆ, ಮನೆಯವರೆಲ್ಲರಿಗೂ ತೊಂದರೆಯನ್ನುಂಟು ಮಾಡುತ್ತಿತ್ತು. ಕೆಮ್ಮಿನ ಔಷಧಿಗಳನೇಕ ಉಪಯೋಗಿಸಲು, ತತ್ಕಾಲದ ಪ್ರಯೋಜನವೇ ಹೊರ್ತು ಬೇರೆ ಪ್ರಯೋಜನವಾಗಲಿಲ್ಲ. ಕಡೆಗೆ ಲಿಟಲ್ಸ್ ಓರಿಯೆಂಟಲ್ ಬಾಂ ಎಂಬದನ್ನು ಉಪಯೋಗಿಸಲು ಮನಸ್ಸು ಮಾಡಿದೆನು. ಅರ್ಧ ಸೀಸೆ ಉಪಯೋಗಿಸುವಷ್ಟರಲ್ಲಿಯೇ, ಮೊದಲನೇ ಇಡೀ ರಾತ್ರಿಯ ನಿದ್ರೆಯಾಯಿತು. ಹಾಗೆಯೇ ಪೂರ್ಣ ವಾಸಿಯೂ ಆಯಿತು."

ಸೀಸೆ 1ಕ್ಕೆ 1 ರೂ. ಮೇರಿಗೆ ಎಲ್ಲಾ ಔಷಧಿಗಾರರಲ್ಲಿಯೂ ಸಿಗುತ್ತೆ. [81-3]

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247–27] 20, ಚೀನಾಬಜಾರು ರೋಡು, ಮದರಾಸು

ಪ್ರೊಫೆಸರ್ ಗಜ್ಜರ್‌ರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ಪ್ಲೇಗ್ ದ್ರಾವಕ.—ಇದು ಸರ್ವೋತ್ಕೃಷ್ಟವಾಗಿ ತಯಾರಿಸಲ್ಪಟ್ಟ ಔಷಧ. ಇದು ಅನೇಕ ಪ್ರಾಣಗಳನ್ನು ಗಂಡಾಂತರದಿಂದ ತಪ್ಪಿಸಿದೆ. ಸಕಾಲದಲ್ಲಿ ಉಪಯೋಗಿಸಿದರೆ ಪ್ರಾಣಭೀತಿ ಇಲ್ಲ. ನಿಮ್ಮ ಸ್ನೇಹಿತರಿಗೂ ತಿಳಿಸಿರಿ. ಸೀಸೆಯ ಕ್ರಯ ರೂ. 0-8-0.

ರಕ್ತಶೋಧಕ ದ್ರಾವಕ.—ರಕ್ತವನ್ನು ಶುದ್ಧಿಮಾಡುವುದರಲ್ಲಿ ಇದು ಪ್ರಖ್ಯಾತಿಪಡೆದಿದೆ. ಇದಲ್ಲದೆ ಈ ದ್ರಾವಕವು ನಾನಾ ದೀರ್ಘ ರೋಗಗಳನ್ನು ಗುಣಮಾಡಿ, ಆರೋಗ್ಯದಲ್ಲಿಡುತ್ತದೆ. ಕ್ರಯ ರೂ. 1-0-0.

ಚಳಿಜ್ವರ ದ್ರಾವಕ.—ಇದು ಬಹಳ ಚೆನ್ನಾಗಿ ಗುಣಕಂಡ ಔಷಧ. ಇದರಲ್ಲಿ ಕ್ವಿನೈನ್ ಸ್ವಲ್ಪವೂ ಮಿಶ್ರಮಾಡಿಲ್ಲ. ಬಹಳ ಕ್ಷೇಮಕರವಾದದ್ದು. ಕ್ರಯ ರೂ. 0-0-0.

ಹುಳುಕಡ್ಡಿ ಔಷಧ.—ಇದಕ್ಕೆ ಸಮಾನವಾದ ಔಷಧವು ಎಲ್ಲೂ ಸಿಕ್ಕುವುದೇ ಇಲ್ಲ. 2-3 ನಿಮಿಷಗಳ ತನಕ ಈ ಔಷಧವನ್ನು ಹಚ್ಚಿ ಉಜ್ಜಿ ಬಿಸಿನೀರಿನಲ್ಲಿ ತೊಳೆದ ಕೂಡಲೇ ಹುಳುಕಡ್ಡಿಯು ಹುಟ್ಟೇ ಇರುವುದಿಲ್ಲ. ಎಂದೆಂದಿಗೂ ಮತ್ತೆ ಅದು ತಲೆಹಾಕದು. ಕ್ರಯ ರೂ. 0-4-0.

ಅಪೂರ್ವ ಹಲ್ಲು ಪುಡಿ.—ಎಲ್ಲಾ ತರದ ಹಲ್ಲುನೋವಿಗೂ ಸರ್ವೋತ್ತಮವಾದ ಹಲ್ಲುಪುಡಿ. ಹಲ್ಲಿನ ಬೇರನ್ನೂ, ಒಸಡನ್ನೂ ಬಹಳ ಚೆನ್ನಾಗಿಟ್ಟು ಕಾಪಾಡತಕ್ಕದ್ದು. ಕ್ರಯ ರೂ. 0-4-0, 0-6-0, 0-8-0.

ಲಿವರ್ ದ್ರಾವಕ.—ಪಿತ್ತಕೋಶದ ಮೇಲೆ ಇದು ಬಹಳ ಚನ್ನಾಗಿ ಕೆಲಸ ಮಾಡಿ, ಮಲಬದ್ಧವನ್ನು ಪರಿಹರಿಸುತ್ತದೆ. ಕ್ರಯ ರೂ. 0-10-0.

ಟಾನಿಕ್ ಸೋಫೋಸ್ಫರ್.—ಇದರಲ್ಲಿ ಗ್ಲಿಸರಿನೋಫೇಟ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಸೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ,

[80-3] ಪಾರ್ಕ್ ಟೌನ್, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2–8–0.

ಮೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಬೆಂಗಳೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸರಕು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಣುಸಾಮಿ

[99-50] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯುಳ್ಳ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲಿಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಕಾವೇರಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೊಡೆಯ ಕೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದುಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗರಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಮನೀಷರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟಿಓ-ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಆಕರ್ಷಕವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಕವಾದೊಂದು ಪ್ರಸನ್ನತೆಯು ಆರಂಭವಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟಿಓ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-17]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟಿಓ-ದಿಲ್ ಬಹಾರ್ ಪರಿಮಳದ ಕಾರ್ಡು ಗಳ ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜಂಟ್, ದಿ ಜುಬ್ಲೀ ವರ್ಕ್ಸ್, ಮಂಗಳೂರು.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ



ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಒಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಬಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [52-10]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೋಧಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉಲ್ಲಾಸವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಹಾಲು, ಬೆಳ್ಳಿ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾ ಜೊತೆಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚಿ ತಾರೀಖು 16 ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

ಸನ್ ೧೯೧೫ ನೇ ಇಸವಿ ಮೇ ತಾ. ೨೦ ನೇ ಗುರುವಾರ.

ಲೋಕಲ್ ಸೆಲ್ಫ್ ಗವರ್ನಮೆಂಟು.

ಸ್ಥಳೀಯ ವ್ಯವಹಾರಗಳನ್ನು ಪ್ರಜೆಗಳು ನಿರ್ವಹಿಸುವಂಥಾ ವಿಚಾರಗಳನ್ನು ಕುರಿತು ಇಂಡಿಯಾ ಗವರ್ನಮೆಂಟಿನವರು ಒಂದು ವಿಶೇಷವಾದ ರೆಜಲ್ಯೂಷನ್ ಯಾನೆ ತೀರ್ಮಾನವನ್ನು ಕೆಲವು ದಿನಗಳ ಹಿಂದೆ ಪ್ರಕಟಮಾಡಿದರು. ನಮ್ಮ ಮೈಸೂರು ಗವರ್ನಮೆಂಟಿನವರೂ ಕೂಡ ಈ ಸಂಸ್ಥಾನದಲ್ಲಿ ಸ್ಥಳೀಯ ವಿಚಾರಗಳ ನಿರ್ವಹಣೆಯಲ್ಲಿ ಲೋಕಲ್ ಬೋರ್ಡುಗಳಿಗೆ ಹೆಚ್ಚಾದ ಸ್ವಾತಂತ್ರ್ಯಗಳನ್ನು ವಹಿಸುವ ಉದ್ದೇಶದಿಂದ ಅದಕ್ಕಾಗಿ ನೇಮಿಸಲ್ಪಟ್ಟ ಕಮಿಟಿಯ ಅಭಿಪ್ರಾಯಗಳನ್ನು ಪ್ರಕಟಿಸಿರುತ್ತಾರೆ. ಇಂಡಿಯಾ ಗವರ್ನಮೆಂಟಿನವರಿಗೆ ಮ್ಯುನಿಸಿಪಲ್ ಕೌನ್ಸಿಲ್‌ಗಳೂ ಲೋಕಲ್ ಬೋರ್ಡುಗಳೂ ಕೆಲವು ಕಾಲದಿಂದ ತೃಪ್ತಿಕರವಾಗಿ ಕಾರ್ಯಗಳನ್ನು ನಡಿಸುತ್ತಾ ಬಂದಿರುವವೆಂದು ಕಂಡುಬಂದಿರೋಣದರಿಂದ ಅವರು ಈ ಬೋರ್ಡುಗಳ ಸ್ವತಂತ್ರಾಧಿಕಾರಗಳನ್ನು ಇನ್ನೂ ಸ್ವಲ್ಪ ಹೆಚ್ಚಿಸಬಹುದೆಂಬ ಅಭಿಮತವುಳ್ಳವರಾಗಿದಾರೆ.

ಇಂಡಿಯಾ ಗವರ್ನಮೆಂಟಿನವರು ಪ್ರಜೆಗಳಿಗೆ ವಹಿಸಬಹುದೆಂದು ಅಭಿಪ್ರಾಯಪಟ್ಟಿರುವ ಹೆಚ್ಚು ಅಧಿಕಾರಗಳ್ಯಾವವೆಂದರೆ, ಲೋಕಲ್ ಬೋರ್ಡಿನವರಾಗಲಿ ಮ್ಯುನಿಸಿಪಲ್ ಕೌನ್ಸಿಲ್‌ನವರಾಗಲಿ ಅಧಿಕಾರಿಯಲ್ಲದಂಥಾ ಸ್ಥಳೀಯ ದೊಡ್ಡ ಮನುಷ್ಯನನ್ನು ಛೇರ್ಮನ್ ಯಾನೆ ಅಧ್ಯಕ್ಷನನ್ನಾಗಿ ಮಾಡಿಕೊಳ್ಳಬಹುದು. ಆದರೆ ಮ್ಯುನಿಸಿಪಲ್ ಕೌನ್ಸಿಲ್‌ನವರು ಒಪ್ಪಿ ತೀರ್ಮಾನಮಾಡುವಂಥಾ ವಿಚಾರಗಳನ್ನು ಜಾರಿಯಲ್ಲಿ ತರುವುದಕ್ಕೋಸ್ಕರ ಸರ್ಕಾರದವರು ಖಾಯಮಾಗಿ ಒಬ್ಬ ಮ್ಯುನಿಸಿಪಲ್ ಕಮಿಷನರನ್ನು ನೇಮಕಮಾಡುವರು. ಈ ಏರ್ಪಾಡು ತೃಪ್ತಿಕರವಾದದ್ದೆಂದು ಒಪ್ಪಿಕೊಳ್ಳುತ್ತೇವೆ. ಸಿಬ್ಬಂದಿಯನ್ನು ಹತೋಟಿಯಲ್ಲಿಟ್ಟುಕೊಂಡು ದರ್ಪದಿಂದ ಕಾರ್ಯಗಳನ್ನು ನಿರ್ವಹಿಸುವುದಕ್ಕೂ ಖರ್ಚುಗಳನ್ನು ವಿತರಣೆಯಿಂದ ಮಾಡುವುದಕ್ಕೂ ಕೌನ್ಸಿಲ್‌ಗಳಿಗೂ ಬೋರ್ಡುಗಳಿಗೂ ಇನ್ನೂ ಹೆಚ್ಚಾದ ಅಧಿಕಾರ ಕೊಡಲ್ಪಡುತ್ತದೆ. ಗ್ರಾಮಾಂತರಗಳ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಅನುಕೂಲವಾಗಿರುವಂಥಾ ಕಡೆ ಗ್ರಾಮ ಪಂಚಾಯತಿಗಳನ್ನು ರೂಪಿಸಬೇಕೆಂದೂ, ಈ ಪಂಚಾಯತಿಗಳಿಗೆ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಹಿಡಿದು ವ್ಯವಸ್ಥೆ ಮಾಡುವಂಥಾ ಅಧಿಕಾರವನ್ನೂ, ಸ್ಥಳೀಯ ಕೆಲಸಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನೂ ವಹಿಸಬೇಕೆಂದೂ ಅಭಿಪ್ರಾಯಪಟ್ಟಿದಾರೆ. ಹೀಗೆ ವಹಿಸಲ್ಪಡುವ ಅಧಿಕಾರಗಳು ಸದ್ಯದಲ್ಲಿ ಅಲ್ಪಮಾತ್ರವೇ ಆಗಿದ್ದಾಗ್ಯೂ ಕಾಲಕ್ರಮದಲ್ಲಿ ಅವನ್ನು ಹೆಚ್ಚಿಸಲು ಸಹಾಯವಾಗತಕ್ಕವುಗಳಾಗಿರುತ್ತವೆ.

ನಮ್ಮ ಸಂಸ್ಥಾನದಲ್ಲಿ ಕೆಲವು ಅಧಿಕಾರಿಗಳೂ ಕೆಲವು ದೊಡ್ಡಮನುಷ್ಯರೂ ಕಲೆತು ಚರ್ಚೆಯಿಂದ ಇತ್ಯರ್ಥಮಾಡಿರುವ ವಿಚಾರಗಳನ್ನು ಮೈಸೂರು ಗವರ್ನಮೆಂಟಿನವರು ಪ್ರಕಟಮಾಡಿರುತ್ತಾರೆ. ಸ್ಥಳೀಯ ವಿಚಾರಗಳೆಲ್ಲವನ್ನೂ ಮ್ಯುನಿಸಿಪಲ್ ಕೌನ್ಸಿಲ್‌ಗಳಿಗೂ ಲೋಕಲ್ ಬೋರ್ಡುಗಳಿಗೂ ವಹಿಸಬೇಕು; ಅವು ತಮ್ಮ ತಮ್ಮಲ್ಲೇ ಅಧಿಕಾರಿಗಳನ್ನು ಚುನಾಯಿಸಿ ನೇಮಿಸಿಕೊಳ್ಳಬೇಕು; ಅವುಗಳಿಗೆ ಸೂಕ್ತತೋರುವ ರೀತಿ ಖುಟ್ಟುವಳಿ ಬಾಬುಗಳನ್ನು ಹೆಚ್ಚಿಸುವುದಕ್ಕೂ ಕಡಮೆ ಮಾಡುವುದಕ್ಕೂ ಸ್ವಾತಂತ್ರ್ಯವಿರಬೇಕು. ಸರ್ಕಾರ ಕೋರ್ಟುಗಳ ತೀರ್ಮಾನಗಳಲ್ಲದೆ ಇತರ ಯಾವ ನಿರ್ಬಂಧಗಳೂ ಇರಕೂಡದು, ಇವೇ ಮೇಲ್ಕಂಡ ಕಮಿಟಿಯವರ ಮುಖ್ಯ ಆಶಯವಾಗಿರುವವು.

ಸ್ಥಳೀಯ ಬೋರ್ಡುಗಳವರೇ ಇತ್ಯರ್ಥಪಡಿಸಿಕೊಳ್ಳಬಹುದಾಗಿರುವಂಥಾ ಅನೇಕ ವಿಚಾರಗಳಲ್ಲಿ ಸರ್ಕಾರದವರು ತಮ್ಮ ಸ್ಯಾಂಕ್ಷನ್ ಪಡೆಯಬೇಕೆಂದು ಕೇಳುವುದು ನ್ಯಾಯವಲ್ಲವೆಂದು ಈ ಕಮಿಟಿಯವರು ಆಕ್ಷೇಪಣೆಮಾಡಿರುತ್ತಾರೆ. ಇದು ಸಹಜವಾದ ಆಕ್ಷೇಪಣೆಯೆಂದು ನಾವು ಒಪ್ಪುತ್ತೇವೆ. ಬೋರ್ಡುಗಳಿಂದ ಅನೇಕ ವಿಷಯಗಳು ಪ್ರತಿ ತಿಂಗಳಲ್ಲೂ ಗವರ್ನಮೆಂಟ್ ಸ್ಯಾಂಕ್ಷನ್ ಬಗ್ಗೆ ಹೋಗುತ್ತಿರುವವು. ಈ ವಿಷಯಗಳೆಲ್ಲಾ ಗವರ್ನಮೆಂಟಿನಲ್ಲಿರುವ ಅಧಿಕಾರಿಗೆ ಪತ್ರಮುಖೇಣಿಯುವುದನ್ನು ನಾವು ಒಪ್ಪಲಾರೆವು. ಅನೇಕ ವೇಳೆ ಕಾಲವಿಳಂಬಕ್ಕೆ ಅವಕಾಶವಿದೆ; ತೀರ್ಮಾನಗಳಾದರೋ ಒಂದಕ್ಕೊಂದು ಸಮಂಜಸವಿಲ್ಲದೆ ಸ್ವೇಚ್ಛಾಪ್ರವರ್ತನಗಳಂತೆ ಕಾಣುವವು.

ಮೇಲ್ಕಂಡ ಕಮಿಟಿಯವರು ಲೋಕಲ್ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ಇನ್ನೂ ಹೆಚ್ಚಾದ ಸ್ವಾತಂತ್ರ್ಯಗಳನ್ನು ವಹಿಸಬೇಕೆಂದು ಸೂಚಿಸಿ ಕಾರಣಗಳನ್ನು ತೋರಿಸಿರುತ್ತಾರೆ. ಈಗಿನ ಮ್ಯುನಿಸಿಪಲ್ ರೆಗ್ಯುಲೇಷನು ಸಣ್ಣ ಊರುಗಳಲ್ಲಿ ಜಾರಿ ಮಾಡುವುದಕ್ಕೆ ಅರ್ಹವಾದದ್ದಾಗಿಲ್ಲವೆಂದೂ, ಸಣ್ಣ ಮ್ಯುನಿಸಿಪಾಲಿಟಿಗಳಿಗೆ ಆ ಕಾನೂನಿನ ಕೆಲವು ಭಾಗಗಳನ್ನು ಮಾತ್ರ ಜಾರಿಗೆ ತರಬೇಕೆಂದೂ ಅವರು ಸೂಚಿಸಿದಾರೆ. ಹೀಗೆ ಮಾಡುವುದೇ ಸಾಧುವೆಂದು ನಮಗೂ ತೋರುತ್ತದೆ.

ಕಮಿಟಿಯವರು ಸೂಚಿಸಿರುವ ಬದಲಾವಣೆಗಳಿಂದ ಲೋಕಲ್ ಬೋರ್ಡುಗಳ ಮತ್ತೂ ಮ್ಯುನಿಸಿಪಲ್ ಕೌನ್ಸಿಲ್‌ಗಳ ಶ್ರೇಯೋಭಿವೃದ್ಧಿಯು ನೆಲೆಗೊಳ್ಳುವುದೆಂದು ಸಂತೋಷದಿಂದಲೂ ಧಾರಾಳವಾಗಿಯೂ ಹೇಳಬಹುದಾಗಿದೆ. ಮೈಸೂರು ಗವರ್ನಮೆಂಟಿನವರು ಕೂಡಿದ ಮಟ್ಟಿಗೂ ಅವುಗಳನ್ನೆಲ್ಲಾ ಒಪ್ಪಿಕೊಂಡು ಸ್ಯಾಂಕ್ಷನ್‌ಮಾಡಿ ಜಾರಿಗೆ ತರುತ್ತಾರೆಂದು ನಿರೀಕ್ಷಿಸುತ್ತೇವೆ.

ಸದ್ಯದಲ್ಲಿ ಈ ಲೋಕಲ್ ಬೋರ್ಡುಗಳ ಮತ್ತು ಮ್ಯುನಿಸಿಪಲ್ ಕೌನ್ಸಿಲ್‌ಗಳ ಕಾರುಬಾರುಗಳನ್ನು ನಮ್ಮ ಸರ್ಕಾರದವರು ಚೆನ್ನಾಗಿಯೂ ವಿತರಣೆಯಿಂದಲೂ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವಂತೆ ಕಾಣುವುದಿಲ್ಲ; ತನಿಖೆಯು ಕಟ್ಟುನಿಟ್ಟಾಗಿದ್ದಲ್ಲದೆ ಕಾರ್ಯಗಳು ತೃಪ್ತಿಕರವಾಗಿ ನಡೆಯಲಾರವು. ಲೆಕ್ಕಗಳ ವಿಚಾರವನ್ನೂ ಮ್ಯುನಿಸಿಪಲ್ ರೆಗ್ಯುಲೇಷನನ್ನೂ ಚೆನ್ನಾಗಿ ಬಲ್ಲಂಥಾ ನೌಕರರನ್ನು ಸರ್ಕಾರದವರು ಗೊತ್ತುಮಾಡಿ ಅವರಿಂದ ವರುಷಕ್ಕೆ ಎರಡು ಸಲವಾದರೂ ಮ್ಯುನಿಸಿಪಾಲಿಟಿಗಳ ಮತ್ತೂ ಲೋಕಲ್ ಬೋರ್ಡುಗಳ ಲೆಕ್ಕಪತ್ರಗಳನ್ನು ತನಿಖೆ ಮಾಡಿಸಬೇಕಾದದ್ದು ಅವಶ್ಯವೆಂದು ನಮಗೆ ತೋರುವುದು. ಹೀಗೆ ಬಂದು ತನಿಖೆ ಮಾಡತಕ್ಕವರು ಸತ್ಯಸಂಧರಾಗಿಯೂ, ಸಚ್ಚರಿತ್ರರಾಗಿಯೂ, ಒಳ್ಳೆಯ ಅನುಭವಶಾಲಿಗಳಾಗಿಯೂ ಇರಬೇಕು. ಅಂಥವರು ಬಂದು ತನಿಖೆ ಮಾಡುವಾಗ ಹೇರು ಪೇರಾಗಿರುವ ಮತ್ತು ಅನ್ಯಾಯವಾಗಿರುವ ಖರ್ಚುಗಳನ್ನು ಆಗಿಂದಾಗ್ಗೆ ತೋರಿಸುತ್ತಾ ಬರುವುದಕ್ಕೂ, ಖುಟ್ಟುವಳಿ ಬಾಬನ್ನು ಹೆಚ್ಚಿಸಬಹುದಾದ ಮಾರ್ಗಗಳನ್ನು ತೋರಿಸಿ ಕೊಡುವುದಕ್ಕೂ ಅನುಕೂಲವಾಗುತ್ತದೆ. ಲೆಕ್ಕಗಳ ತನಿಖೆಯು ಬಿಂಡಿಸಿದಂತೆ ಆದಪಕ್ಷದಲ್ಲಿ ಮ್ಯುನಿಸಿಪಲ್ ಕೌನ್ಸಿಲ್‌ಗಳು ಅಕ್ರಮ ಕಾರ್ಯಗಳಿಗೆ ಪ್ರವರ್ತಿಸಲು ಅವಕಾಶವಾಗುವುದಿಲ್ಲ. ಅನೇಕ ಮ್ಯುನಿಸಿಪಾಲಿಟಿಗಳಲ್ಲಿ ಲೆಕ್ಕಪತ್ರಗಳ ವಿಲೇವಾರಿಯೂ, ಕಂದಾಯ ಕೌಳಿಗಗಳ ವಸೂಲಾತಿಯೂ ಬಹಳ ಮಟ್ಟಿಗೆ ಬಾಕೀ ಬಿದ್ದುಹೋಗಿ ಕೆಲಸಗಳು ತುಂಬಾ ನಿದಾನಕ್ಕೆ ಬಂದಿರುವವೆಂದು ಹೇಳಬಲ್ಲೆವು. ಕೆಲಸಗಳನ್ನು ನಡಿಸತಕ್ಕ ಮುಖ್ಯಾಧಿಕಾರಿಯು ಸಾಧ್ಯವಾದ ಮಟ್ಟಿಗೂ ಖಾಯಂಬಾರನಾಗಿರಬೇಕು. ಯಾಕಂದರೆ ಅಧಿಕಾರಿಯು ಮ್ಯುನಿಸಿಪಾಲಿಟಿಯ ಕೆಲಸ ಕಾರ್ಯಗಳನ್ನು ಗ್ರಹಿಸಿಕೊಳ್ಳುವುದಕ್ಕೇನೇ ದೀರ್ಘಕಾಲ ಹಿಡಿಯುತ್ತದೆ; ಮತ್ತು ಅಂಥಾ ಅಧಿಕಾರಿಯನ್ನು ಚಟುವಟಿಕೆಯಿಂದಲೂ ಸತ್ಯವಾಗಿಯೂ ಧರ್ಮವಾಗಿಯೂ ಕೆಲಸ ಮಾಡುತ್ತಿದ್ದ ಪಕ್ಷದಲ್ಲಿ ಬೇರೆ ಕಡೆಗೆ ವರ್ಗಮಾಡದೆ ದೀರ್ಘಕಾಲ ಒಂದೇ ಕಡೆ ಇಟ್ಟಿರಬೇಕಾದದ್ದು ಅವಶ್ಯವು.

ಬ್ರಿಟಿಷ್ ಇಂಡಿಯಾದಲ್ಲೂ ಮೈಸೂರು ಸಂಸ್ಥಾನದಲ್ಲೂ ಲೋಕಲ್ ಬೋರ್ಡುಗಳವರೂ ಮ್ಯುನಿಸಿಪಲ್ ಕೌನ್ಸಿಲ್‌ನವರೂ ಸ್ಥಳೀಯ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಮಾಡುವುದರಲ್ಲಿ ಹೆಚ್ಚಾದ ಉತ್ಸಾಹವನ್ನು ವಹಿಸುತ್ತಾ ಬಂದಿರುವುದನ್ನು ನೋಡಿ ಸಂತೋಷಪಡುತ್ತೇವೆ. ಅನುಭವಶಾಲಿಗಳಾಗಿಯೂ, ಪ್ರವಧಾನವುಳ್ಳವರಾಗಿಯೂ ಇರುವಂಥಾ ಸ್ಥಳೀಯ ದೊಡ್ಡ ಮನುಷ್ಯರು ಇನ್ನೂ ವಿಶೇಷವಾಗಿ ಮುಂದಾಳುಗಳಾಗಿ ಒಂದು ನಿಂತರೆ ಅಂಥವರ ಸಹಿತ ಕಾರ್ಯಗಳ ದೆಸೆಯಿಂದ ಸಾಮಾನ್ಯ ಪ್ರಜೆಗಳ ಆರೋಗ್ಯ ಭಾಗ್ಯವು ವೃದ್ಧಿ ಹೊಂದುವುದೆಂದೂ, ಅಂಥಾ ಪ್ರಜೆಗಳು ದೃಢಕಾಯರಾಗಿ ಚಟುವಟಿಕೆಯಿಂದ ಉದ್ಯೋಗಗಳನ್ನು ಮಾಡುತ್ತಾ ತಮಗೂ ತಮ್ಮ ದೇಶಕ್ಕೂ ಹಿತಕಾರಿಗಳಾಗುವರೆಂದೂ ಧಾರಾಳವಾಗಿ ಹೇಳುತ್ತೇವೆ.

ಕ್ರೈಸ್ತ ಮತವಿಷಯದಲ್ಲಿ ಕೌಂಟ್ ಓಕುಮಾಯವರ ಅಭಿಪ್ರಾಯ

ಕೌಂಟ್ ಓಕುಮಾಯವರು ಜಪಾನ್ ರಾಜ್ಯದ ಮಂತ್ರಿ ಶ್ರೇಷ್ಠರಾಗಿದ್ದಾರೆ. ಇವರು ಯಾವ ವಿಷಯದಲ್ಲಿಯಾದರೂ ತಮ್ಮ ಅಭಿಪ್ರಾಯವನ್ನು ನಿಷ್ಪಕ್ಷಪಾತವಾಗಿ ನುಡಿಯುವರು. ಇತರ ಮತವಿಷಯದಲ್ಲಿಯೂ ಮುಖ್ಯವಾಗಿ ಕ್ರೈಸ್ತ ಮತವಿಷಯದಲ್ಲಿಯೂ ಹೇಳಿರುವ ಅಭಿಪ್ರಾಯವನ್ನು ಸರ್ವರೂ ಲಕ್ಷ್ಯಕೊಟ್ಟು ಓದತಕ್ಕದ್ದಾಗಿದೆ. ಅವರು ಮತವಿಷಯದಲ್ಲಿ ಹೇಳುವದೇನಂದರೆ:—

ಮನುಷ್ಯನಿಗೂ ದೇವರಿಗೂ ಇರುವ ಸಂಬಂಧವು ಮನುಷ್ಯನ ಜನ್ಮಸ್ವಭಾವದಲ್ಲಿ ನೆಲಸಿದೆ. ಬಟ್ಟೆಯು ಮೈಯನ್ನು ಹೊಂದಿಸಿ ಮಾಡಲು ನೇಯ್ದಿರುವ ಹಾಗೆ ಅದು ಅವನ ಸ್ವಭಾವಕ್ಕೆ ಹೊಂದಿಸಲ್ಪಟ್ಟಿದೆ. ಈ ಸಂಬಂಧವನ್ನು ನಾಶಮಾಡುವದು ಅಸಾಧ್ಯ. ಲೋಕದ ಬೇರೆಬೇರೆ ಜನಾಂಗಗಳವರು ಓದಿದು ಸಾಧಿಸುತ್ತಿರುವ ಮತಸಂಬಂಧವಾದ ಸತ್ಯೋಪದೇಶದ ತತ್ವಗಳೂ ಅನುಭವಗಳೂ ಸ್ಥಿರಸ್ವಾಯಿಯಾಗಿ ಕೇವಲ ನಿತ್ಯ ಕ್ರಮೋನ್ನತ ಸರ್ವಸತ್ಯಗಳನ್ನು ಒಳಗೊಂಡು ಉತ್ಕೃಷ್ಟವಾದ ಒಂದೇ ಮತವಾಗಿ ಸಕಲರಿಂದಲೂ ಪೂಜಿತವೆಂದು ಭಾವಿಸಲ್ಪಡುವವು. ಇದು ಉತ್ಸಾಹಪ್ರೇರಕವಾದ ಭಾವನೆಯಲ್ಲವೇ? ಒಂದು ಕಾಲವು ಸಮೀಪಿಸಿ ಬರುತ್ತದೆ. ಅಪ್ಪಟಿ ಬೇರೆಬೇರೆ ಜನಾಂಗದವರು ಪೃಥಕ್ ಪೃಥಕಾಗಿ ಸತ್ಯದ ಯಾವದೋ ಒಂದೊಂದು ಭಾಗವನ್ನು ತಮ್ಮ ತಮ್ಮಲ್ಲಿ ಪ್ರಬಲಗೊಳಿಸುತ್ತಾ ಆ ಭಾಗಕ್ಕೆ ಮಾತ್ರ ವಿಶೇಷ ಲಕ್ಷ್ಯವನ್ನೂ ಉತ್ತೇಜನವನ್ನೂ ಕೊಡುತ್ತಾ ಬಂದಿದ್ದಾರೆ. ಆದರೆ ಬೇರೆಬೇರೆ ಜನಾಂಗಗಳು ಪ್ರತ್ಯೇಕವಾಗಿ ಹಿಡಿದಿರುವ ಸತ್ಯದ ಭಾಗಗಳನ್ನು ಮುಂದೆ ಬರುವ ಕಾಲದಲ್ಲಿ ಒಟ್ಟುಗೂಡಿಸಿ ಏಕಮುಖವಾದ ಸರ್ವಸಂಪೂರ್ಣವಾಗಿ ಸಂಗ್ರಹವಾದ ಸತ್ಯವನ್ನು ಪರಸ್ಪರ ಏಕಮತ್ಯದಿಂದಲೂ ಪೂರ್ಣ ಮೈತ್ರೀಭಾವದಿಂದಲೂ ಅಂಗೀಕರಿಸಿ ಕೈಕೊಳ್ಳುತ್ತಿರುವರು. ಇದು ಎಷ್ಟೋ ತೃಪ್ತಿಕರವಾದ ಯುಗವಾಗಿರುವದಲ್ಲವೇ? ಆ ಯುಗವು ಸಾಕ್ಷಾತ್ ದೇವರ ರಾಜ್ಯವನ್ನೆನಿಸಿಕೊಳ್ಳುವದು.

ಮನುಷ್ಯನು ಲಯವಾಗದೆ ಅಕ್ಷಯವಾಗಿ ಬದುಕಿರುವನು, ಮತ್ತು ಅವನು ಅದೃಶ್ಯನಾದ ಪರಮಾತ್ಮನೊಂದಿಗೆ ನಿತ್ಯವಾದ ಸಂಬಂಧವನ್ನು ಪಡೆದಿರುವನು ಎಂಬ ಈ ಎರಡು ತತ್ವಗಳು ಜನಜನಿತವಾಗಿ ಸಕಲ ಮಾನವಕುಲದವರಲ್ಲಿಯೂ ಸಹಜವಾಗಿ ನೆಲೆಗೊಂಡಿವೆ. ಈ ಅರುಹನ್ನು ಮೂಲೋತ್ಪಾಟನ ಮಾಡುವದಕ್ಕೆ ಯತ್ನಿಸುವದು ಹ್ಯಾಗಿದೆಯೆಂದರೆ—ಮನುಷ್ಯನಿಗೆ ಸಹಜವಾಗಿ ಬಂದಿರುವ ಹಸಿವು ತೃಷೆಗಳನ್ನು ನಿರ್ಮೂಲಮಾಡುತ್ತೇನೆಂದು ಹೇಳಿದ್ದಕ್ಕೆ ಸಮನಾಗಿದೆ. ಇದು ಸ್ವಭಾವಜನ್ಯವಾದದ್ದಕ್ಕೆ ಎದುರುಬಿದ್ದು ನಡೆಯುವ ಗರ್ವವೂ ಮೂಢತನವೂ ಆಗಿವೆಯೇ ಹೊರತು ಮತ್ತೇನೂ ಅಲ್ಲ. ಅಪರಿಚಿತನೂ ನಿತ್ಯನೂ ಆದ ದೇವರನ್ನು ಸೇರಬೇಕೆಂದು ಮನುಷ್ಯನು ಆದಿಯಿಂದ ಪ್ರಯತ್ನಪಡುತ್ತಾ ಬಂದಿದ್ದಾನೆ. ಈಗಲೂ ಆ ಅಭಿಲಾಷೆ ಅವನನ್ನು ತೊಲಗಿಹೋಗಿಲ್ಲ. ಮುಂದೆಯೂ ಅದನ್ನು ಬಿಟ್ಟು ಅವನು ಬದುಕಲಾರನು. ಅದು ಅವನಿಗೆ ಸಿದ್ಧಿಸೇ ಸಿದ್ಧಿಸುವದು.

ಕ್ರಿಸ್ತನ ವಿಷಯವಾಗಿ ಈ ಮಂತ್ರಿವರ್ಯನು ಬರೆದಿರುವ ಅಭಿಪ್ರಾಯವೇನಂದರೆ:—ಕ್ರಿಸ್ತನು ಬರೀ ಮನುಷ್ಯನೋ ಅಥವಾ ದೇವರೋ ಎಂಬ ತರ್ಕವು ನನ್ನ ಮನಸ್ಸಿಗೆ ಅಸಂಗತವಾಗಿದೆ. ಇದನ್ನು ಬಿಟ್ಟು ಆತನ ಪ್ರಾಮುಖ್ಯವಾದ ಬೋಧನೆ ಏನು? ಎಂದು ಚನ್ನಾಗಿ ತಿಳಿಯುವದು ನನ್ನ ಮನಸ್ಸಿಗೆ ಬಹು ಅಗತ್ಯವಾಗಿದೆ. ಮತ್ತು ಆತನ ಸರ್ವೋತ್ಕೃಷ್ಟವಾದ ಗುಣನಡತೆಯನ್ನು ನನ್ನ ಗುಣ ಮತ್ತು ನಡತೆಯು ಮುಟ್ಟಬೇಕೆಂದು ಅಭಿಲಾಷೆಪಡುತ್ತೇನೆ. ಮನುಷ್ಯರನ್ನು ಸತ್ಯದ ಕಡೆಗೆ ಪ್ರೇರಿಸಿ ಆಕರ್ಷಿಸುವದಕ್ಕೆ ಆತನು ಪ್ರಯೋಗಿಸಿದ ಆಶ್ಚರ್ಯಕರವಾದ ಶಕ್ತಿಯನ್ನು ನಾನು ಹೇಗೆ ಗ್ರಹಿಸಲಿ? ಆತನು ರೋಗಿಗಳನ್ನು ಸ್ವಸ್ಥಮಾಡಿದನು ಕುರುಡನಿಗೆ ದೃಷ್ಟಿಯನ್ನೂ ಸತ್ತವನಿಗೆ ಜೀವವನ್ನೂ ಕೊಟ್ಟನು ಎಂದು ಹೇಳಿರುವದು ನಿಜ. ಆದರೆ ಯೇಸು ಮಾಡಿದಂಥ ಸದ್ಬೋಧೆಯನ್ನು ಹೇಳಿ, ಆತನ ನಡತೆಯಂಥ ಅಪ್ರತಿಮವಾದ ನಡತೆಯನ್ನು ನಡೆದು ಬದುಕಿದವನು ಮೇಲೆ ಹೇಳಿರುವ ಮಹತ್ತುಗಳನ್ನು ಮಾಡಿದ್ದು ಆಶ್ಚರ್ಯವಲ್ಲ. ಅಂಥ ಬೋಧೆಯೂ ನಡತೆಯೂ ಉಳ್ಳವನು ಮಹತ್ತುಗಳನ್ನು ಮಾಡಿದನೆಂದು ನಾನು ನಂಬುತ್ತೇನೆ. ಪ್ರೀತಿಯನ್ನು ಕುರಿತೂ ಪರಸ್ಪರ ಸನ್ನಡತೆಯನ್ನು ಕುರಿತು ಸಕಲ ಮನುಷ್ಯರೂ ಒಬ್ಬರನ್ನೊಬ್ಬರು ಸಹೋದರರಂತೆ ಭಾವಿಸಬೇಕೆಂಬುದನ್ನು ಕುರಿತು ಆತನು ಹೇಳಿದ್ದನ್ನು ಅನುಷ್ಠಾನಮಾಡಿ, ಆತನ ನಡತೆಯಲ್ಲಿ ಅನುಷ್ಠಾನಕ್ಕೆ ತರುವದು ಮಹತ್ತುಗಳನ್ನು ಮಾಡುವದಕ್ಕಿಂತ ಸುಲಭವಲ್ಲ.

ಲೋಕದ ಮುಖ್ಯವಾದ ಜನಾಂಗಗಳೆದುರಿಗೆ ಜಪಾನ್ ರಾಜ್ಯವು ಕೀರ್ತಿಪ್ರದವಾಗಿ ಶೋಭಿಸುತ್ತಾ ನಿಂತಿದೆ. ಇದು ಇನ್ನೂ ವೃದ್ಧಿಹೊಂದುತ್ತಾ ಹೋಗುವದು. ಈ ಕಾಲದಲ್ಲಿ ಅದರ ಪುರೋಭಿವೃದ್ಧಿಗೆ ತನ್ನ ಹಾಗೆ ಕ್ರೈಸ್ತಮತವು ಅದರಲ್ಲಿ ಹೊಂದಿಕೆಯಾಗಿ ಅದರ ಅಧುನಿಕಕಾರ್ಯಗಳಲ್ಲಿ ಅಗತ್ಯವಾಗಿ ಬೇಕಾಗುವ ಸಹಾಯಸಂಪತ್ತುಗಳನ್ನು ಒದಗಿಸುತ್ತ ಅವಶ್ಯಕವಾದ ಬದಲಾವಣೆಗಳನ್ನು ಮಾಡುವದರಲ್ಲಿ ಈ ಜಪಾನ್ ರಾಷ್ಟ್ರದ ಏಳಿಗೆಗೆ ಕ್ರಿಸ್ತನು ಅಗ್ರಗಾಮಿಯಂತೆ ಅದನ್ನು ನಡಿಸಬೇಕು.

ವಿದ್ಯಾಭ್ಯಾಸದ ಇಲಾಖೆಯು ನೀತಿಬೋಧೆಯನ್ನು ಹೇಳುವದಕ್ಕೆ ಸಮಂಜಸವಾದ ರೀತಿಯನ್ನು ಅನುಸರಿಸಿಲ್ಲ. ದೇಶಾಭಿಮಾನಿಗಳಾಗಿಯೂ ರಾಜಭಕ್ತಿಯುತರಾಗಿಯೂ ಇರಬೇಕೆಂದು ಈ ಇಲಾಖಾಧಿಕಾರಿಗಳು ವಿದ್ಯಾರ್ಥಿಗಳನ್ನು ಪ್ರೇರಿಸುವದೇನೋ ನಿಜ. ಆದರೆ ಅಸ್ವಾರ್ಥಪರರಾದ ಬೋಧಕರು ಅದಕ್ಕೆ ಕಾರಣಗಳನ್ನು ಹೇಳಿಕೊಟ್ಟು ತಾವು ಬಾಯಿಯಿಂದ ಹೇಳುವ ಬೋಧನೆಯನ್ನು ತಮ್ಮ ನಡತೆಯಿಂದಲೇ ದಿನದಿನ ತಮ್ಮ ವಿದ್ಯಾರ್ಥಿಗಳ ಮುಂದೆ ಅನುಷ್ಠಾನಕ್ಕೆ ತರುತ್ತಿರಬೇಕಾಗಿದೆ.

ಓಕುಮಾಯವರ ಈ ಅಭಿಪ್ರಾಯವು ನಮ್ಮ ಸೀಮೆಯ ವಿದ್ಯಾರ್ಥಿಗಳಿಗೂ ವಿದ್ಯಾಬೋಧಕರಿಗೂ ಅಗತ್ಯವಾದುದಲ್ಲವೇ?

ಯುದ್ಧದ ಸಮಾಚಾರಗಳು.

ಅನೇಕ ಕಡೆಗಳಲ್ಲಿ ಭಾರಿಯಾದ ಕದನಗಳು

ಅಮೇರಿಕಕ್ಕೂ ಜರ್ಮನಿಗೂ ವಾಗ್ವಾದಗಳು.

ರಣರಂಗಗಳಲ್ಲಿ ಮಡಿದುಹೋದವರ ಮತ್ತೂ ಗಾಯಪಟ್ಟವರ ಪಟ್ಟಿಗಳು ಉದ್ದವಾಗಿ ಈಚೆಗೆ ವಿವರವು ಪ್ರಕಟವಾಗುತ್ತಿರುವುದನ್ನು ನೋಡಲಾಗಿ ಕದನಗಳು ಬಹಳ ಘೋರವಾಗಿ ನಡೆಯುತ್ತಿರುವವೆಂದು ಗೊತ್ತಾಗುತ್ತದೆ. ಈ ವಾರ ಯುದ್ಧಭೂಮಿಯಿಂದ ಬಂದಿರುವ ಸಮಾಚಾರಗಳು ಪಶ್ಚಿಮ ರಣರಂಗದಲ್ಲಿ ಫ್ರೆಂಚರು ವಿಶೇಷ ಮುಂದರಿಸಿ ನುಗ್ಗಿಹೋಗಿರುವರೆಂದೂ, ರಷ್ಯಾದವರು ಪೂರ್ವ ರಣರಂಗದಲ್ಲಿ ಜರ್ಮನಿಯವರಿಗೆ ತಮ್ಮ ಸ್ಥಾನಗಳನ್ನು ಬಿಟ್ಟುಕೊಟ್ಟು ಹಿಮ್ಮೆಟ್ಟಿ ಹೋದರೆಂದೂ ಹೇಳುತ್ತವೆ. ದಕ್ಷಿಣ ಆಫ್ರಿಕಾದೊಳಗಾದರೋ ನಮ್ಮ ಪಕ್ಷದವರಿಗೆ ಬಹು ವಿಶೇಷವಾದ ಜಯವಾಗಿರುತ್ತದೆ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚರೂ ಬೆಲ್ಜಿಯನ್‌ರೂ, ಬ್ರಿಟಿಷರೂ ಬಹಳ ಹುರುಪಾಗಿ ಸೈನ್ಯವನ್ನಿಟ್ಟುಕೊಂಡು ಕದನಗಳನ್ನು ನಡಿಸುತ್ತಾ ಬಂದಿದಾರೆ; ಯಾಕಂದರೆ ಜರ್ಮನಿಯವರು ಅಪಾರ ಸೈನ್ಯಗಳನ್ನು ತಂದು ಬೆಲ್ಜಿಯಮ್‌ನಲ್ಲಿ ನಮ್ಮ ಪಕ್ಷದ ಯುದ್ಧದ ಸಾಲನ್ನು ಭೇದಿಸಿ ನುಗ್ಗಬೇಕೆಂದು ಇನ್ನೊಂದು ಸಲ ಮೇಲೆ ಬಿದ್ದು ಯುದ್ಧಮಾಡಿದರು. ಅವರು ಬಹು ಘೋರವಾಗಿ ನುಗ್ಗಿ ಕದನಮಾಡಿದಾಗ ಅವರ ಉದ್ದೇಶವು ನೆರವೇರದೆ ಹೋಯಿತು. ಫ್ರೆಂಚರು ಜರ್ಮನಿಯವರನ್ನು ಮಹಾ ಪರಾಕ್ರಮದಿಂದ ಕಾದಿ ಹಿಂದಕ್ಕೆ ಓಡಿಸಿರುತ್ತಾರೆ.

ಬೆಲ್ಜಿಯಮ್‌ನಿಂದ ದಕ್ಷಿಣಕ್ಕೆ ಫ್ರಾನ್ಸಿನ ಉತ್ತರ ಭಾಗದಲ್ಲಿ ಫ್ರೆಂಚರು ಜರ್ಮನಿಯವರ ಮೇಲೆ ಬಹು ಘೋರವಾದ ಕದನವನ್ನು ಮಾಡಿದರು. ಅಲ್ಲಿಗೆ ಉತ್ತರಕ್ಕೂ ಬ್ರಿಟಿಷರಿಗೂ ಜರ್ಮನಿಯವರಿಗೂ ಸಂಧಿಯಾಗಿ ಭಾರೀ ಕದನವಾಗಿರುತ್ತದೆ. ಆದಕಾರಣ ಜರ್ಮನಿಯವರು ಫ್ರೆಂಚರ ಮೇಲೆ ಯುದ್ಧಮಾಡುವದಕ್ಕೆ ಹೊಸ ಸೈನ್ಯಗಳನ್ನು ಕಳುಹಿಸಲಾರದೆಹೋದರು. ಈ ಯುದ್ಧದ ಫಲಿತಾಂಶವೇನಾಯಿತೆಂದರೆ, ಐದು ಮೈಲಿ ಉದ್ದದಷ್ಟು ಜರ್ಮನಿ ಸೈನಿಕರನ್ನು ಅವರಿದ್ದ ಠಾಣ್ಯಗಳಿಂದ ಹಿಂದಕ್ಕೆ ಎರಡೂವರೆ ಮೈಲಿ ದೂರ ಓಡಿಸಿ, ವಾರಿಯ ಸಿಕ್ಕಿದ ಹಲವು ಗ್ರಾಮಗಳನ್ನು ನಮ್ಮ ಪಕ್ಷದವರು ಸ್ವಾಧೀನಪಡಿಸಿಕೊಂಡಿರು. ಜರ್ಮನಿಯವರ ಕಡೆ ಅನೇಕ ಸೈನ್ಯಗಳು ಮಡಿದುಹೋದವು. ಪ್ರತಿ ನಿತ್ಯ ಜರ್ಮನಿಯ ಸೈನಿಕರನ್ನು ಕೈಸೆರೆ ಹಿಡಿದು ತರುತ್ತಿರೋಣದರಿಂದ ಅವರ ಎಷ್ಟು ನಷ್ಟವಾಗಿದೆಯೆಂಬೀ ಲೆಕ್ಕವಮಾಡಿ ಹೇಳುವುದು ಕಷ್ಟ. ಒಟ್ಟು 3,8 ಜರ್ಮನಿ ಸೈನಿಕರು ಕೈಸೆರೆ ಸಿಕ್ಕಿದಾರೆ; ನಾನಾ ಜಾತಿಯ 17 ದೊಡ್ಡ ಫಿರಂಗಿಗಳನ್ನೂ, 60 ಮಷೀನ್ ಫಿರಂಗಿಗಳನ್ನೂ, 3,000 ಬಂದೂಕುಗಳನ್ನೂ, ಅಪಾರ ಮದ್ದು ಗುಂಡನ್ನೂ ನಮ್ಮ ಪಕ್ಷದವರು ಕಿತ್ತುಕೊಂಡು ಬಂದಿದಾರೆ. ಜರ್ಮನಿಯವರು ಆ ಗ್ರಾಮಗಳಿಗೆ ಕೋಟೆ ಕೊತ್ತಲಗಳನ್ನು ಕಟ್ಟಿ ಬಹಳ ಬಲಪಡಿಸಿಕೊಂಡಿದ್ದರು. ಆದರೂ ಫ್ರೆಂಚರು ಲಕ್ಷ್ಯವಿಡದೆ ಆ ಕೋಟೆಗಳಿಗೆ ಮುತ್ತಿಗೆ ಹಾಕಿ ಕಂದಲಗಳನ್ನೂ ಗ್ರಾಮಗಳನ್ನೂ ಒಂದೊಂದಾಗಿ ಜರ್ಮನಿಯವರಿಂದ ಕಿತ್ತು ಆಕ್ರಮಿಸಿಕೊಂಡರು. ಫ್ರೆಂಚರಿಗೆ ಇದು ವರೆಗೆ ಇಷ್ಟು ವಿಶೇಷವಾದ ಜಯಪ್ರದವುಂಟಾಗಲಿಲ್ಲ. ಫ್ರೆಂಚರ ಕಡೆ ಎಷ್ಟು ಸೈನ್ಯ ನಷ್ಟವಾಗಿದೆಯೋ ತಿಳಿಸಿಲ್ಲ. ಯಾಕಂದರೆ ಅವರು ಯುದ್ಧಾರಂಭದಿಂದ ಇದು ವರೆಗೆ ತಮ್ಮ ಕಡೆ ನಷ್ಟವಾದ ಸೈನಿಕರ ಪಟ್ಟಿಗಳನ್ನು ಪ್ರಕಟಿಸಿರುವುದಿಲ್ಲ.

ಅಲ್ಲಿಂದ ಉತ್ತರ ಭಾಗಕ್ಕೆ ಇಪ್ರೆ ಎಂಬ ಠಾಣ್ಯದಲ್ಲಿ ಜರ್ಮನಿಯವರು ಬ್ರಿಟಿಷ್ ಸೈನಿಕರ ಸಾಲನ್ನು ಒಡೆದು ನುಗ್ಗಬೇಕೆಂದು ಸಾಹಸಪಟ್ಟಿರುವರು. ಈ ಭಾಗದಲ್ಲಿದ್ದ ಯುದ್ಧಕಾರ್ಯವನ್ನು ಕಣ್ಣಾರ ನೋಡಿದೆನೆಂದು ಹೇಳುವ ವಾರ್ತಾಹರನು ತಿಳಿಸುವುದೇನೆಂದರೆ—ಮೇ ತಾ. ೮ ನೇ ಶನಿವಾರ ಯುದ್ಧಪ್ರಾರಂಭವಾಯಿತು. ಜರ್ಮನಿಯವರು ಮೊದಲು ಫಿರಂಗಿ ಗುಂಡುಗಳ ಮಳೆ ಸುರಿಸಿದರು. ಬೆಳಿಗ್ಗೆ ಹತ್ತು ಗಂಟೆ ಹೊತ್ತಿನಲ್ಲಿ ಜರ್ಮನಿಯ ಸೈನ್ಯಗಳು ನುಗ್ಗಿಬಂದು, ವಿಷಗಾಳಿಗಳನ್ನು ಪ್ರಯೋಗಿಸಿ ಬ್ರಿಟಿಷ್ ಸೈನ್ಯಗಳ ಸಾಲಿನಲ್ಲಿ ಕೆಲವು ಕಡೆ ರಂಧ್ರಗಳನ್ನು ಮಾಡಿ ಒಳಹೊಕ್ಕರು. ಬಳಿಕ ಬ್ರಿಟಿಷರು ತಿರುಗಿಕೊಂಡು ಜರ್ಮನಿಯವರ ಮೇಲೆ ನುಗ್ಗಿ ಕಾದಾಡಿದಾಗ್ಯೂ ಜರ್ಮನಿಯವರ ಮಷೀನ್ ಫಿರಂಗಿಗಳ ದೆಸೆಯಿಂದ ಮುಂದಕ್ಕೆ ಹೋಗಲಾರದೆಹೋದರು. ಅಲ್ಲಿಂದ ದಕ್ಷಿಣ ಭಾಗದಲ್ಲೂ ಕೂಡ ಜರ್ಮನಿಯವರು ವಿಷವಾಯುಗಳನ್ನು ಪದೇಪದೇ ಪ್ರಯೋಗಮಾಡುತ್ತಾ ಬ್ರಿಟಿಷ್ ಸೈನ್ಯಗಳ ಮೇಲೆ ನುಗ್ಗಿ ಬಂದರು. ಇದರ ದೆಸೆಯಿಂದ ಬ್ರಿಟಿಷರು ತಮ್ಮ ಸ್ಥಾನಗಳನ್ನು ಬಿಟ್ಟು ಸ್ವಲ್ಪ ದೂರ ಹಿಂದಕ್ಕೆ ಬರಬೇಕಾಯಿತು.

ಆದರೂ ರಾತ್ರಿಯೆಲ್ಲಾ ಕದನ ನಡೆಯುತ್ತಲೇ ಇತ್ತು. ಯುದ್ಧವು ಮಹಾ ಘೋರವಾಗಿ ಬೆಳೆಯಿತು. ಒಂದು ಸಮಯದಲ್ಲಿ ಜರ್ಮನಿಯ ಸೈನಿಕರು ಬ್ರಿಟಿಷ್ ಸಾಲನ್ನು ಭೇದಿಸಿ ಒಂದು ರಸ್ತೆಯೊಳಕ್ಕೆ ನುಗ್ಗಿ ಬಂದರು. ಬ್ರಿಟಿಷರು ಅವರನ್ನು ಬಿಟ್ಟುಕೊಡದೆ ಅವರ ಮೇಲೆ ನುಗ್ಗಿ ಸೋಲಿಸಿ ಒಂದು ಹಳ್ಳಿಯ ತನಕ ಹಿಂದಕ್ಕೆ ಓಡಿಸಿಬಿಟ್ಟರು. ಅಷ್ಟುಹೊತ್ತಿಗೆ ಜರ್ಮನಿಯ ಹೊಸ ಸೈನ್ಯಗಳು ಅಲ್ಲಿಗೆ ಬೆಂಬಲವಾಗಿ ಬಂದು ಸೇರಿಕೊಂಡವು. ಆ ಬಳಿಕಲೂ ಬ್ರಿಟಿಷರು ಮತ್ತೆ ತಮ್ಮ ಠಾಣ್ಯವನ್ನು ಬಿಟ್ಟು ಹಿಮ್ಮೆಟ್ಟಿ ಬರಬೇಕಾಯಿತು. ಆದರೆ ಬೆಳಗಿನ

ಮದ ಒಂದು ಗಂಟೆ ಹೊತ್ತಿನಲ್ಲಿ ಅವರು ಸೈನ್ಯವನ್ನು ಕೂಡಿಸಿಕೊಂಡು ಹೋಗಿ ಸಣೀನುಗಳನ್ನು ಹಿಡಿದು ಚುಚ್ಚುತ್ತಾ ಜರ್ಮನಿ ಸೈನ್ಯಗಳ ಮೇಲೆ ಅವರ ಪಡೆಯನ್ನೇ ಸಮೂಲವಾಗಿ ಉರುಳಿಸಿಬಿಟ್ಟರು. ಆ ಗ್ರಾಮವೆಲ್ಲಾ ಜರ್ಮನಿ ಸೈನಿಕರ ಹೆಣಗಳ ಮಯವಾಗಿ ಹೋಯಿತು. ಬ್ರಿಟಿಷರು ಅಲ್ಲಿಗೇ ನಿಲ್ಲದೆ ಮುಂದರಿಸಿ ನುಗ್ಗಿಹೋಗಿ ಮೊದಲು ಬಿಟ್ಟುಬಂದಿದ್ದ ಸ್ಥಾನಗಳನ್ನು ಗೆದ್ದು ಆಕ್ರಮಿಸಿಕೊಂಡರು. ಆ ಪ್ರಾಂತ್ಯದಲ್ಲೂ ರಾತ್ರಿರಾತ್ರಿ ಕದನಗಳು ನಡೆದವು. ಕತ್ತಲೆಯಲ್ಲಿ ಫಿರಂಗಿ ಗುಂಡುಗಳ ಹಾರಾಟದಿಂದಲೂ, ಗ್ರಾಮಗಳು ಹತ್ತಿ ಉರಿಯುತ್ತಿದ್ದದ್ದರಿಂದಲೂ ಆಕಾಶದಲ್ಲಿ ಮಿಣುಗುವ ಜ್ವಾಲೆಗಳು ಪ್ರಕಾಶವನ್ನುಂಟುಮಾಡಿ ಹಾರಾಡುತ್ತಿದ್ದವು.

ಭಾನುವಾರ ಬೆಳಕು ಹರಿದ ಮೇಲೆ ಕದನಗಳು ಸ್ವಲ್ಪ ಹೊತ್ತು ಕಮ್ಮಿಯಾದವು. ಮಧ್ಯಾಹ್ನದ ಮೇಲೆ ಜರ್ಮನಿಯ ಸೈನಿಕರು ಐದಾವರ್ತಿ ಬ್ರಿಟಿಷ್ ಸೈನ್ಯದ ಸಾಲುಗಳ ಮೇಲೆ ಬಹು ರೌದ್ರವಾಗಿ ನುಗ್ಗಿ ಕಡಿದಾಡಿದರು. ಅಗಾಧವಾದ ಕಾಲ್ಬಲಗಳನ್ನು ತಂದು ಬ್ರಿಟಿಷ್ ಕಂದಕಗಳ ಮೇಲೆ ನುಗ್ಗಿಸಿದರು. ಬ್ರಿಟಿಷರು ಮಹಾ ಘೋರವಾಗಿ ಕದನಮಾಡಿ ಶತ್ರುವನ್ನು ಅನೇಕವಾಗಿ ಕೊಂದು ಹಿಂದಕ್ಕೆ ಓಡಿಸಿಬಿಟ್ಟರು. ಒಂದು ಠಾಣ್ಯದಲ್ಲಿ ಜರ್ಮನಿಯ 600 ಸೈನಿಕರು ಒಂದು ಕಟ್ಟಡದ ಮೇಲೆ ನುಗ್ಗಿ ಅದನ್ನು ಗೆದ್ದುಕೊಳ್ಳಬೇಕೆಂದು ಮಹತ್ತರವಾದ ಪ್ರಯತ್ನಮಾಡಿದರು. ಆದರೆ ಅವರಲ್ಲಿ ಒಬ್ಬನಾದರೂ ಬದುಕಿ ಹಿಂತಿರುಗಿ ಹೋಗಲಿಲ್ಲ.

ಭಾನುವಾರ ಸಾಯಂಕಾಲ 6½ ಗಂಟೆ ಹೊತ್ತಿಗೆ ಜರ್ಮನಿಯವರು ಹಿಮ್ಮೆಟ್ಟಿ ಹೊರಟುಹೋದರು. ಅವರ ಮೇಲೆ ಬ್ರಿಟಿಷರ ಫಿರಂಗಿ ಗುಂಡುಗಳು ಸುಳಿಯೋಪಾದಿಯಲ್ಲಿ ಸುರಿದದ್ದರಿಂದ ಅನೇಕ ಮಂದಿ ನಷ್ಟವಾದರು. ಉದ್ದಕ್ಕೂ ಭೂಮಿಯ ಮೇಲೆ ಹೆಣಗಳು ಹರಡಿದಂತೆ ಬಿದ್ದು ಇದ್ದವು. ಜರ್ಮನಿಯವರ ಫಿರಂಗಿ ಗುಂಡುಗಳ ಮಳೆ ಅಪಾರವಾಗಿ ಸುರಿದಾಗ್ಯೂ ಬ್ರಿಟಿಷ್ ಸೈನಿಕರ ಚಿತ್ತಸ್ಥೈರ್ಯವೂ ಪರಾಕ್ರಮವೂ ಹುಮ್ಮಸ್ಸೂ ಸ್ತೋತ್ರಾರ್ಹವಾದ ಕಾರಣ ಅವರು ನಿಂತು ಜರ್ಮನಿಯವರಿಗೆ ಸ್ವಲ್ಪವೂ ಅವಕಾಶ ಕೊಡದೆ ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿದರು. ಬ್ರಿಟಿಷರ ಕಡೆ ಆದ ನಷ್ಟವು ಶತ್ರುವಿನ ನಷ್ಟಕ್ಕಿಂತ ಬಹಳ ಸ್ವಲ್ಪ. ಜರ್ಮನಿಯವರಾದರೋ ಅನಾರತವಾಗಿ ನುಗ್ಗಿಬಂದು ಬ್ರಿಟಿಷರ ಫಿರಂಗಿ ಗುಂಡುಗಳಿಗೆ ಎದುರಿಗೆ ಸಿಕ್ಕಿದ್ದರಿಂದ ಬ್ರಿಟಿಷರು ಶತ್ರುವನ್ನು ಸೂರೆ ಗಟ್ಟಿ ಕೊಂದು ಅಪಾರ ನಷ್ಟವನ್ನುಂಟುಮಾಡಿದರು.

ಅದೇ ಭಾನುವಾರದ ದಿನ ಅಲ್ಲಿಂದ ದಕ್ಷಿಣಕ್ಕೆ ನಮ್ಮ ಪಕ್ಷದವರು ಬೆಳಗಿನ ಝಾಮದ 5 ಗಂಟೆ ಹೊತ್ತಿಗೆ ಜರ್ಮನಿಯವರ ಮೇಲೆ ಫಿರಂಗಿಗಳನ್ನು ಎತ್ತಿ ಗುಂಡುಗಳನ್ನು ಸುರಿಸಲಾರಂಭಿಸಿದರು. ಫಿರಂಗಿ ಗುಂಡುಗಳ ಹಾರಾಟಕ್ಕೆ ಸುತ್ತಮುತ್ತಿನ ಭೂಪ್ರದೇಶವೆಲ್ಲಾ ಭೂಕಂಪವಾದಂತೆ ನಡುಗಿಹೋಯಿತು. ಸ್ವಲ್ಪ ಹೊತ್ತಿನೊಳಗಾಗಿ ದೂರದಲ್ಲಿದ್ದ ಪಟ್ಟಣಗಳು ಹೊಗೆಯಲ್ಲೂ ಧೂಳಿನಲ್ಲೂ ಕಾಣದಂತೆ ಮರೆಯಾದವು. ಆ ಸಮಯದಲ್ಲಿ ಬ್ರಿಟಿಷರು ಮುಂದರಿಸಿ ನುಗ್ಗಿಹೋಗಿ ಶತ್ರುವಿನ ಹಲವು ಕಂದಕಗಳನ್ನು ಕಿತ್ತುಕೊಂಡು ಈಗಲೂ ಆಕ್ರಮಿಸಿಕೊಂಡಿದ್ದಾರೆ.

ನಮ್ಮ ಪಕ್ಷದವರು ಬಹಳ ಚೆನ್ನಾಗಿ ನುಗ್ಗಿಹೋಗಿರುವರು; ಜರ್ಮನಿಯವರು ಅನೇಕ ಸೈನ್ಯಗಳನ್ನು ಕಳೆದುಕೊಂಡಿದ್ದಾರೆ.

ಈಚೆಗೆ ಬಂದಿರುವ ತಂತೀವರ್ತಮಾನಗಳಿಂದ ಬ್ರಿಟಿಷ್ ಸೈನ್ಯಗಳು ಲಾ ಬ್ಯಾಸೆಯ ಸಮೀಪದಲ್ಲಿ ಜರ್ಮನಿಯ ಸೈನಿಕರ ಸಾಲುಗಳನ್ನು ಸುಮಾರು ಎರಡು ಮೈಲಿಯಷ್ಟು ಒಡೆದುಹಾಕಿ ನುಗ್ಗಿ ಹೋಗಿ ಶತ್ರುವನ್ನು ಸುಮಾರು ಅರ್ಧ ಮೈಲಿಯಷ್ಟು ಹಿಂದಕ್ಕೆ ಓಡಿಸಿರುವರೆಂದು ತಿಳಿಯುತ್ತದೆ. ಯುದ್ಧಗಳು ನಡೆಯುತ್ತಿದ್ದರೂ ಬ್ರಿಟಿಷರಿಗೇ ಅನುಕೂಲವಾಗಿದೆ.

ಅಲ್ಲಿಂದ ದಕ್ಷಿಣಕ್ಕೆ ಜರ್ಮನಿಯವರು ಮೇಲೆ ಬಿದ್ದು ಫ್ರೆಂಚರ ಸಾಲುಗಳನ್ನು ಹಾರಿಸಿಬಿಟ್ಟು, ಮುಂದರಿಸಿ ಬಂದು ಅವರ ಸ್ಥಾನಗಳನ್ನು ಆಕ್ರಮಿಸಿಕೊಂಡರು. ಬಳಿಕ ಫ್ರೆಂಚರು ಜರ್ಮನಿಯವರ ಮೇಲೆ ಬಿದ್ದು ಕದನಮಾಡಿ ಆ ಸ್ಥಳವನ್ನು ಅವರಿಂದ ಕಿತ್ತು ಮತ್ತೆ ಸ್ವಾಧೀನಪಡಿಸಿಕೊಂಡಿದ್ದಾರೆ. ಕಂದಕಗಳಲ್ಲಿ 1,500 ಕ್ಕಿಂತಲೂ ಹೆಚ್ಚಾಗಿಯೇ ಜರ್ಮನಿ ಸೈನಿಕರ ಹೆಣಗಳು ಬಿದ್ದಿದ್ದವು. 12 ಮಂದಿ ಹುದ್ದೇದಾರರ ಸಮೇತ 377 ಮಂದಿಯನ್ನು ಫ್ರೆಂಚರು ಸೆರೆ ಹಿಡಿದರು.

ಜರ್ಮನಿಯ ವಿಮಾನಚಾರರು ಪಾರಿಸ್ಸಿನ ಹೊರಪಾರ್ಶ್ವದ ತನಕ ಅಂತರಿಕ್ಷಮಾರ್ಗವಾಗಿ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಇದರಿಂದ ಅಲ್ಲಿದ್ದ ಸೈನಿಕರಲ್ಲಿ ಆರು ಮಂದಿ ಗಾಯಪಟ್ಟಿದ್ದಾರೆ.

ಪೂರ್ವ ರಣರಂಗದಲ್ಲಿ.

ಈ ವಾರ ಬಂದಿರುವ ತಂತೀ ವರ್ತಮಾನಗಳಿಂದ ಪೂರ್ವರಣರಂಗದ ವಿದ್ಯಮಾನಗಳು ತಕ್ಕಮಟ್ಟಿಗೆ ಗೋಚರವಾಗುತ್ತವೆ. ಇಲ್ಲಿನ ಸ್ಥಿತಿಗತಿಯನ್ನು ನಮಗೆ ತಿಳಿಯುವ ಮಟ್ಟಿಗೆ ಇಲ್ಲಿ ವಿವರಿಸುತ್ತೇವೆ:—

ಉತ್ತರ ಪಾರ್ಶ್ವದ ಕೊನೆಯಲ್ಲಿ ಅಂದರೆ ಬ್ಯಾಲ್ಟಿಕ್ ಕಡಲಿನ ಸಮೀಪದಲ್ಲಿ ಜರ್ಮನಿಯವರು ಎಲ್ಲೆಕಟ್ಟುಗಳನ್ನು ದಾಟಿ ರಷ್ಯಾ ಸೀಮೆಯೊಳಕ್ಕೆ ನುಗ್ಗಿ ಹಲವು ಮೈಲಿಗಳ ದೂರ ಹೋಗಿರುತ್ತಾರೆ. ರಷ್ಯಾದವರು ಈಗ ಅಲ್ಲಿಗೆ ಹೊಸ ಸೈನ್ಯಗಳನ್ನು ಕೂಡಿಸಿ ಕಳುಹಿಸಿರುವರು. ಈ ಸೈನ್ಯಗಳು ಜರ್ಮನಿಯವರ ಮೇಲೆ ನುಗ್ಗಿ ಕದನಮಾಡುತ್ತಾ ಜರ್ಮನಿಯವರನ್ನು ಹಿಮ್ಮೆಟ್ಟಿಸಿ ಓಡಿಸುತ್ತಾ ಬಂದಿವೆ. ಒಂದು ಕಡೆ ರಷ್ಯಾದವರು ಜರ್ಮನಿ ಸೈನ್ಯದಲ್ಲಿ 1,000 ಮಂದಿಯನ್ನು ಕೆಲವು ಮೆಷೀನ್ ಫಿರಂಗಿಗಳ ಸಮೇತ ಸೆರೆ ಹಿಡಿದುಕೊಂಡಿದ್ದಾರೆ. ಈ ಕಡೆ ಎರಡು ಪಕ್ಷಗಳಲ್ಲಿ ಎಷ್ಟೆಷ್ಟು ಸೈನ್ಯಗಳಿರುವವೋ ತಿಳಿದು ಹೇಳುವುದು ಪ್ರಯಾಸ. ಆದರೂ ಅಲ್ಲಿ ಬಹಳ ಸೈನ್ಯಗಳಿರಲಾರವೆಂದು ಹೇಳಬಹುದಾಗಿದೆ. ರಷ್ಯಾದವರು ಜರ್ಮನಿಯವರನ್ನು ಮುಂದೆ ನುಗ್ಗಬಾರದಂತೆ ತಡೆದು ಹಿಮ್ಮೆಟ್ಟಿಸುತ್ತಾ ಬಂದಿರುವರು.

ಪೋಲೆಂಡಿನಲ್ಲಿ ಕದನಗಳು ನಡೆದ ಸುದ್ದಿಯೇನೂ ತಿಳಿದು ಬರಲಿಲ್ಲ. ಆದರೆ ಪಶ್ಚಿಮ ಗೆಲಿಷಿಯಾದೊಳಗೆ ಒಂದು ಘೋರ ಯುದ್ಧವಾಗಿರುವುದು. ರಷ್ಯಾದವರು ಕ್ರಾಕೋ ನಗರವನ್ನು ಕುರಿತು ನುಗ್ಗಿ ಹೋಗುತ್ತಿದ್ದರು. ಅವರನ್ನು ತಡೆದು ಹಿಮ್ಮೆಟ್ಟಿಸುವುದಕ್ಕೆ ಆಸ್ಟ್ರಿಯಾದವರಿಂದ ಸಾಧ್ಯವಾಗದೆ ಹೋದ ಕಾರಣ ಜರ್ಮನಿಯವರು ಏಳು ಸೈನ್ಯಗಳನ್ನು ತೆಗೆದುಕೊಂಡು ಹೋಗಿ, ರಷ್ಯಾದವರಿಗೆ ಅಡ್ಡಲಾಗಿ ಹದಿಮೂರು ಮೈಲಿ ವಿಸ್ತಾರಕ್ಕೆ ಸಾಲುಕಟ್ಟಿ ನಿಲ್ಲಿಸಿದ್ದರು. ಈ ಸೈನಿಕರು ಬಹಳ ಪರಾಕ್ರಮದಿಂದ ನುಗ್ಗಿಹೋದ ಕಾರಣ ರಷ್ಯಾದವರಲ್ಲಿ ಅವರನ್ನು ತಡೆಯುವಷ್ಟು ಸೈನ್ಯವಿಲ್ಲದೆ ಹಿಮ್ಮೆಟ್ಟಬೇಕಾಯಿತು. ಜರ್ಮನಿಯವರು ಅಲ್ಲಿ ತಮಗೆ ವಿಶೇಷ ಜಯಪ್ರದವಾಯಿತೆಂದು ಪ್ರಕಟಮಾಡಿದರು. ಆದಾಗ್ಯೂ ಪರಾಕ್ರಮಶೀಲರಾದ ರಷ್ಯಾದವರು ಜರ್ಮನಿಯವರಿಗೆ ಅವಕಾಶ ಕೊಡದೆ ತಡೆದು, ಹಿಮ್ಮೆಟ್ಟಿಹೋದರು. ಇವರು ಎಷ್ಟುದೂರ ಹಿಮ್ಮೆಟ್ಟಿಹೋದರೋ ತಿಳಿಸಿಲ್ಲ; ಬಹುಶಃ 30-40 ಮೈಲಿ ದೂರ ಹೋಗಿರಬಹುದೆಂದು ಕಾಣುತ್ತದೆ. ಈಗ ರಷ್ಯಾದವರು ಹಿಮ್ಮೆಟ್ಟಿ ಹೋದದ್ದು ಅವರಿಗೆ ತುಂಬಾ ಅನುಕೂಲವಾಯಿತು; ಅವರು ಇನ್ನು ಮುಂದರಿಸಿ ನುಗ್ಗಿ ಹೋಗುವುದು ಬಹಳ ಸಾಮಾನ್ಯವಾಗಿಯುತ್ತದೆ. ಅವರ ಸೈನ್ಯವೇನೂ ಜರ್ಮನಿಯವರ ವಶವಾಗಲಿಲ್ಲ. ಜರ್ಮನಿಯವರು ಅವರ ಮೇಲೆ ನುಗ್ಗಿ ಕದನಮಾಡುವುದೂ ನಿಂತಿದೆ ಎಂದು ಕಾಣುವುದು. ಉಭಯಪಕ್ಷದವರೂ ಕದನಗಳನ್ನು ಮಾಡಿ ದಣಿದು ಇರುತ್ತಾರಾದ ಕಾರಣ ಯುದ್ಧಪ್ರಕರಣಗಳು ಸ್ವಲ್ಪ ವಿರಾಮಕ್ಕೆ ಬನ್ನಿದೆ; ಆದರೂ ಈ ವಿರಾಮವು ಬಹುಕಾಲ ಎಳೆಯುವ ಹಾಗಿಲ್ಲ.

ಈಗ ಜರ್ಮನಿಯವರು ಮೇಲ್ಕಂಡಂತೆ ಮುಂದರಿಸಿ ನುಗ್ಗಿ ಹೋಗಿರುವುದರಿಂದ ಕಾರ್ಪೇಥಿಯನ್ ಪರ್ವತ ಪ್ರಾಂತ್ಯಗಳಲ್ಲಿರುವ ರಷ್ಯಾ ಸೈನ್ಯಗಳಿಗೆ ಸ್ವಲ್ಪ ಕಷ್ಟಪ್ರಾಪ್ತವಾಗಬಹುದೆಂದು ತೋರುತ್ತದೆ. ರಷ್ಯಾ ಸೈನ್ಯಗಳು ಕಣಿವೆಗಳನ್ನು ದಾಟಿಕೊಂಡು ಆ ಪರ್ವತಗಳ ಮೇಲೆ ಹತ್ತಿಹೋಗಿ ಅಲ್ಲಿಂದ ಹಂಗೆರಿ ಸೀಮೆಗೆ ಪ್ರವೇಶಮಾಡಬೇಕೆಂದು ಸನ್ನಾಹ ಮಾಡುತ್ತಿದ್ದವು. ಅಲ್ಲಿನ ಯಥಾರ್ಥವಾದ ಸ್ಥಿತಿ ಹೇಗಿದೆಯೋ ತಂತೀವರ್ತಮಾನಗಳಿಂದ ತಿಳಿಯುವುದಿಲ್ಲ. ಆದರೂ ಅಲ್ಲಿ ರಷ್ಯಾದವರು ಗೆದ್ದು ಸ್ವಾಧೀನಪಡಿಸಿಕೊಂಡಿರುವ ಠಾಣ್ಯಗಳನ್ನು ಚೆನ್ನಾಗಿ ಕಾಪಾಡಿಕೊಳ್ಳುತ್ತಿದ್ದಾರೆಂದು ಕಾಣುವುದು.

ಅಲ್ಲಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಆಸ್ಟ್ರಿಯಾದವರು ರಷ್ಯಾ ಸೈನ್ಯದ ಎಡಭಾಗದ ಕಡೆಯಿಂದ ಸುತ್ತಿಕೊಂಡು ಅವರನ್ನು ಆವರಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಅಲ್ಲಿ ಕೆಲವು ವಾರಗಳಿಂದ ಕದನಗಳು ನಡೆಯುತ್ತಲೇ ಇರುವವು. ಈಗ ರಷ್ಯಾದವರು ಆಸ್ಟ್ರಿಯಾದವರ ಮೇಲೆ ನುಗ್ಗಿ ಕದನಮಾಡಿ ಅವರನ್ನು ಸುಮಾರು ನಾಲ್ವತ್ತು ಮೈಲಿ ದೂರ ಹಿಂದಕ್ಕೆ ಓಡಿಸಿಕೊಂಡುಹೋಗಿರುತ್ತಾರೆಂದೂ, 6 ಫಿರಂಗಿಗಳ ಸಮೇತ 6,000 ಆಸ್ಟ್ರಿಯಾ ಸೈನ್ಯವನ್ನು ಸೆರೆ ಹಿಡಿದಿರುತ್ತಾರೆಂದೂ ವರ್ತಮಾನ ಬಂದಿದೆ. ಅಲ್ಲಿ ಆಸ್ಟ್ರಿಯಾದವರ ಅನೇಕ ಪಟಾಲಮುಗಳ ಸೈನ್ಯಗಳು ಸಂಪೂರ್ಣವಾಗಿ ನಾಶಹೊಂದಿದವು.

ಇನ್ನೊಂದು ಠಾಣ್ಯದಲ್ಲಿ ರಷ್ಯಾದವರು ಜರ್ಮನಿಯವರ ಮೇಲೆ ನುಗ್ಗಿ ಕದನಮಾಡಿದರು. 6,000 ಜರ್ಮನಿ ಸೈನ್ಯಗಳು ಮಡಿದು ರಣಭೂಮಿಯಲ್ಲಿ ಬಿದ್ದುಕೊಂಡವು.

ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾದವರನ್ನು ಸೋಲಿಸಬೇಕೆಂದು ಮಹತ್ತರವಾದ ಪ್ರಯತ್ನ ಮಾಡಿದರು. ಕೆಲವು ಸ್ಥಳಗಳಲ್ಲಿ ರಷ್ಯಾದವರು ಅಲ್ಪ ಸ್ವಲ್ಪ ಹಿಮ್ಮೆಟ್ಟಿ ಹೋಗಬೇಕಾಯಿತಾದಾಗ್ಯೂ ಒಟ್ಟು ಕೂಡಿಸಿ ನೋಡಿದರೆ ಜರ್ಮನಿಯವರ ಮತ್ತು ಆಸ್ಟ್ರಿಯಾದವರ ಉದ್ದೇಶವು ನೆರವೇರಲಿಲ್ಲ.

ಟರ್ಕಿ.

ನಮ್ಮ ಪಕ್ಷದವರು ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸಿ ನುಗ್ಗಿ ಹೋಗುವ ಕಾರ್ಯಗಳನ್ನು ಮುಂದರಿಸುತ್ತಿದ್ದಾರೆ. ಇದರ ವಿವರಗಳು ವಿಶೇಷವಾಗಿ ನಮಗೆ ತಿಳಿಸಿಲ್ಲ. ಗೆಲಿಪೋಲಿ ಅರ್ಧ ದ್ವೀಪದ ಮೇಲೆ ಇಳಿದ ನಮ್ಮ ಪಕ್ಷದ ಸೈನ್ಯಗಳಿಗೆ ಆಹಾರ ಪದಾರ್ಥಗಳನ್ನೂ ಮದ್ದು ಗುಂಡನ್ನೂ ಒದಗಿಸಿ, ಅಲ್ಲಿ ಶತ್ರುವನ್ನು ನಿಗ್ರಹಮಾಡುವ ಕಾರ್ಯಗಳನ್ನು ಸಾಧಿಸಬೇಕಾಗಿದೆ. ಟರ್ಕಿಯವರು ಹಲವು ವೇಳೆ ನಮ್ಮ ಪಕ್ಷದವರ ಮೇಲೆ ನುಗ್ಗಿ ಕದನಮಾಡಿದರು; ಆದರೆ ಪ್ರತಿ ಸಲವೂ ಅವರು ಸೋತು ಹಿಮ್ಮೆಟ್ಟಬೇಕಾಯಿತು. ಆಸ್ಟ್ರೇಲಿಯಾ ದೇಶದಿಂದ ಬಂದ ಸೈನ್ಯಗಳೂ ಮರ್ಮೊರಾ ಕಡಲಿನ ಬಳಿ ಆ ಅರ್ಧ ದ್ವೀಪಕ್ಕೆ ಬಂದಿರುವುದಾಗಿ ಸಮಾಚಾರವಿದೆ.

ಯುದ್ಧದ ಜಹಜುಗಳ ಕಾರುಬಾರುಗಳನ್ನು ಹೆಚ್ಚಾಗಿ ತಿಳಿಸಿಲ್ಲ. ಬ್ರಿಟಿಷ್ ಜಹಜುಗಳಿಗೆ ವಿಶೇಷ ನಷ್ಟ ಸಂಭವಿಸಿತೆಂದು ಗೊತ್ತಾಗುತ್ತದೆ. ಗೋಲಿಯತ್ ಎಂಬ ಜಹಜಿಗೆ ಟಾರ್ಪೀಡೋ ಬಡಿದು ಮುಳುಗಿಹೋಯಿತು. ಅದರಲ್ಲಿದ್ದ ಒಟ್ಟು ಸುಮಾರು 700 ಜನರ ಪೈಕಿ 20 ಮಂದಿ ಹುದ್ದೇದಾರರೂ, 160 ಜನಗಳೂ ಮಾತ್ರ ಬದುಕಿ ಬಂದರು. ಅದು ಹಳೇ ತರದ ಯುದ್ಧದ ಜಹಜು; 1900 ನೇ ಇಸವಿಯಲ್ಲಿ ಅದನ್ನು ಕಟ್ಟಿದ್ದು.

ನಮ್ಮ ಪಕ್ಷದವರ ಒಂದು ಸಬ್‌ಮೆರೀನು ಮರ್ಮೊರಾ ಕಡಲಿನೊಳಕ್ಕೆ ಪ್ರವೇಶಮಾಡಿ, ಟರ್ಕಿಯ ಫಿರಂಗಿದೋಣಿಗಳೆರಡನ್ನೂ ಸೈನ್ಯಗಳನ್ನು ಸಾಗಿಸುವ ಒಂದು ಜಹಜನ್ನೂ ಮುಳುಗಿಸಿರುತ್ತದೆ.

ರಷ್ಯಾದವರು ಬಾಸ್ಫೊರಸ್ ಜಲಮಾರ್ಗದಲ್ಲಿರುವ ಟರ್ಕಿ ಕೋಟೆಗಳಿಗೆ ಫಿರಂಗಿಗಳನ್ನು ಗುರಿಕಟ್ಟಿ ಗುಂಡುಗಳನ್ನು ಹೊಡೆದದ್ದಲ್ಲದೆ ಗೇಬೆನ್ ಎಂಬ ಜರ್ಮನಿಯ ಯುದ್ಧದ ಜಹಜಿನ ಮೇಲೆ ನುಗ್ಗಿಹೋದರು. ಆದರೆ ಅದು ಸಿಕ್ಕದೆ ತಪ್ಪಿಸಿಕೊಂಡು ಓಡಿಹೋಯಿತು.

ಆಫ್ರಿಕಾದಲ್ಲಿ.

ಜನರಲ್ ಬೋಥಾಯವರ ಸೈನ್ಯಗಳು ಜರ್ಮನಿಯವರ ದಕ್ಷಿಣ-ಪಶ್ಚಿಮ ಆಫ್ರಿಕಾದಲ್ಲಿ ನುಗ್ಗಿಹೋಗುತ್ತಾ ಜಯಪ್ರದ ಹೊಂದಿರುತ್ತವೆ. ಅಲ್ಲಿರುವ ಜರ್ಮನಿಯ ಸ್ವಾಸ್ಥ್ಯಕ್ಕೆ ಮೂರು ಸೈನ್ಯಗಳು ನುಗ್ಗಿಹೋಗಿರುವವು. ಉತ್ತರ ದಿಕ್ಕಿನಿಂದ ಒಂದು ಸೈನ್ಯವೂ, ಪೂರ್ವ ಪಶ್ಚಿಮ ದಿಕ್ಕುಗಳಿಂದ ಎರಡು ಸೈನ್ಯಗಳೂ ನುಗ್ಗಿರುತ್ತವೆ. ಈಗ ಈ ಪೈಕಿ ಎರಡು ಸೈನ್ಯಗಳು ಒಂದು ಕಡೆ ಕೂಡಿ ಮುಖ್ಯ ನಗರವಾದ ವಿಂಡ್ಹೋಕ್ ಪಟ್ಟಣದೊಳಕ್ಕೆ ಪ್ರವೇಶಮಾಡಿರುವವು. ಅಲ್ಲಿ ಅಡಚಣೆಯೇನೂ ಉಂಟಾಗಲಿಲ್ಲ. ಜರ್ಮನಿಯವರು ಅಲ್ಲಿಂದ ಉತ್ತರಭಾಗವನ್ನು ಕುರಿತು ಹೊರಟುಹೋಗಿದ್ದಾರೆ. ಮೇಲ್ಕಂಡ ಮುಖ್ಯ ನಗರದಲ್ಲಿ 3,000 ಯೂರೋಪಿಯನ್ನರೂ, 12,000 ದೇಶೀಯರೂ ಇದ್ದರು. ರೈಲ್ ಗಾಡಿಗಳಿಗೆ ಸಂಬಂಧಿಸುವ ಅನೇಕ ಸಾಮಾನು ನಮ್ಮ ಪಕ್ಷದವರ ವಶವಾಯಿತು. ಪಟ್ಟಣದ ಮೇಲೆ ಬ್ರಿಟಿಷ್ ಬಾವುಟವನ್ನು ಎತ್ತಿಕಟ್ಟಿದರು. ಜನರಲ್ ಬೋಥಾರವರು ನಗರದಲ್ಲಿ ಇಶ್ತಿಹಾರ್‌ನಾಮೆಯನ್ನು ಪ್ರಕಟಿಸಿ ಯುದ್ಧಕಾಲದ ಕಾನೂನು ಜಾರಿಗೆ ತಂದಿರುವುದಾಗಿ ತಿಳಿಯಪಡಿಸಿ ತಮ್ಮ ಸೈನ್ಯಗಳು ಬಹಳ ಕಷ್ಟವನ್ನು ಅನುಭವಿಸಿದಾಗ್ಯೂ ವಿಶೇಷವಾದ ಪರಾಕ್ರಮವನ್ನು ಪ್ರಕಾಶಪಡಿಸಿರುವವೆಂದು ಹೊಗಳಿರುತ್ತಾರೆ. ಇದಲ್ಲದೆ ಅವರು ಇನ್ನೂ ಆಜ್ಞೆಮಾಡಿರುವುದೇನೆಂದರೆ — ಹೆಂಗಸರುಮಕ್ಕಳಿಗೆ ಯಾವ ವಿಧವಾದ ತೊಂದರೆಗಳೂ ಉಂಟಾಗದಂತೆ ಸೈನಿಕರು ಬಹು ಜಾಗರೂಕತೆಯಿಂದ ಕಾಪಾಡಬೇಕಾಗಿದೆ. ಈ ಕಾರ್ಯವನ್ನು ಅವರು ನಿರ್ವಹಿಸಬಲ್ಲರೆಂದು ಜನರಲ್‌ರವರು ನಂಬುವರು. ಆ ಸ್ವಾಸ್ಥ್ಯವೆಲ್ಲಾ ಸ್ವಾಧೀನವಾಗುವುದಕ್ಕೆ ಮೊದಲು ಇನ್ನೂ ಕೆಲವು ಕದನಗಳು ನಡೆಯಬಹುದು. ಆದರೆ ಇದುವರೆಗೆ ನಡೆದಿರುವ ಕಾರ್ಯಗಳಲ್ಲಿ ವಿಶೇಷ ನಷ್ಟವೇನೂ ಆಗಲಿಲ್ಲ.

ಸಮುದ್ರದ ಮೇಲೆ.

ಕಳೆದ ವಾರ ಸರ್ಕಾರಿ ಪುಸ್ತಕದಲ್ಲಿ ಪ್ರಕಟವಾದ ರೀತಿ 1,427 ಜಹಜುಗಳೂ ಹಡಗುಗಳೂ ಗ್ರೇಟ್ ಬ್ರಿಟನ್ ತೀರಪಟ್ಟಣಗಳಿಗೆ ಬಂದಿದ್ದು ಹೋಗಿರುತ್ತವೆಂದೂ, ಜರ್ಮನಿಯವರು ಆರು ಹಡಗುಗಳನ್ನು ಮುಳುಗಿಸಿದ್ದಾರೆಂದೂ ಗೊತ್ತಾಗುವುದು.

ಒಂದು ಯುದ್ಧದ ಜಹಜು ಒತ್ತಿಸಿಕೊಂಡು ಹೋಗಿ ಜರ್ಮನಿಯ ಒಂದು ಸಬ್‌ಮೆರೀನನ್ನು ಮುಳುಗಿಸಿತೆಂದು ಹೇಳಲಾಗಿದೆ.

ಕಳೆದ ವಾರ ನಾವು ಹೇಳಿದಂತೆ ಲೂಸಿಟೇನಿಯಾ ಜಹಜನ್ನು ಜರ್ಮನಿಯವರು ಮುಳುಗಿಸಿದ್ದನ್ನು ಕೇಳಿ ಎಲ್ಲಾ ಕಡೆಗಳಲ್ಲೂ ಜನಗಳು ಆಗ್ರಹಪಡುತ್ತಿದ್ದಾರೆ. ಅಮೇರಿಕದವರು ಜರ್ಮನಿಗೆ ಖಂಡಿತವಾದ ಕಾಗದವನ್ನು ಬರೆದರು. ಅಮೇರಿಕದ ಪ್ರಜೆಗಳನ್ನು ಲೂಸಿಟೇನಿಯಾದಲ್ಲಿ ಮುಳುಗಿಸಿದ್ದಕ್ಕೆ ಜರ್ಮನಿಯವರು ಜವಾಬ್ದಾರಿಯನ್ನು ವಹಿಸಬೇಕೆಂದು ತಿಳಿಸಿದರು. ಇದಲ್ಲದೆ ಜರ್ಮನಿಯವರು ತಮ್ಮ ಸಬ್‌ಮೆರೀನುಗಳಿಂದ ವ್ಯಾಪಾರದ ಹಡಗುಗಳನ್ನು ಮುಳುಗಿಸುವುದು ಸತ್ಯಧರ್ಮಗಳಿಗೂ ರಾಜ್ಯರಾಜ್ಯಗಳ ನೀತಿಗಳಿಗೂ ಬಹಳ ವಿರೋಧವಾಗಿರುತ್ತದೆಂದೂ ಅಮೇರಿಕದವರು ತಿಳಿಸಿದ್ದಾರೆ. ಅಮೇರಿಕದವರು ಸಮುದ್ರದ ಮೇಲೆ ಪ್ರಯಾಣಮಾಡುವ ಹಕ್ಕನ್ನು ಸಾಧಿಸದೆ ಬಿಡಲಾರೆವು ಎಂದೂ ಹೇಳಿರುತ್ತಾರೆ. ಇದಕ್ಕೆಲ್ಲಾ ಜರ್ಮನಿಯು ಯಾವ ರೀತಿ ಸಮಾಧಾನ ಹೇಳುವುದೋ ನೋಡಬೇಕು. ಬಹುಶಃ ಜರ್ಮನಿಯು ಇನ್ನು ಮುಂದೆ ತಟಸ್ಥ ರಾಜ್ಯಗಳ ಹಡಗುಗಳನ್ನಾಗಲಿ, ಪ್ರಯಾಣಿಕರು ಇರುವ ಜಹಜುಗಳನ್ನಾಗಲಿ ಮುಳುಗಿಸುವುದಿಲ್ಲವೆಂದು ಒಪ್ಪಿಕೊಳ್ಳಬಹುದು.

ಲೂಸಿಟೇನಿಯವನ್ನು ಮುಳುಗಿಸಿದ್ದರಿಂದ ಅನೇಕಾನೇಕ ಸ್ಥಳಗಳಲ್ಲಿ ಜರ್ಮನಿಯವರ ಮೇಲೆ ಬಹಳ ಕಠಿಣವಾದ ವಾಕ್ಯಗಳು ಸುರಿಯಲ್ಪಟ್ಟಿವೆ. ಅಮೇರಿಕಕ್ಕೆ ಸೇರಿದ ವಾಷಿಂಗ್‌ಟನ್ ನಗರದಲ್ಲಿ ಜರ್ಮನಿಯ ರಾಯಭಾರಿ ಇರುವ ಕಟ್ಟಡವನ್ನು ಪೋಲೀಸಿನವರು ಕಾವಲಿದ್ದು ಸಂರಕ್ಷಣೆಮಾಡಬೇಕಾಗಿ ಬಂದಿದೆ. ಇಂಗ್ಲೆಂಡಿಗೆ ಸೇರಿದ ಲಂಡನ್, ಲಿವರ್‌ಪೂಲ್, ನ್ಯೂಕ್ಯಾಸಲ್ ಮೊದಲಾದ ಹಲವು ಪಟ್ಟಣಗಳಲ್ಲೂ ದಕ್ಷಿಣ ಆಫ್ರಿಕಾಕ್ಕೆ ಸೇರಿದ ಜೋಹಾನಸ್‌ಬರ್ಗ್ ನಗರದಲ್ಲೂ ಜನಗಳು ಕೋಪೋದ್ರೇಕರಾಗಿ ಜರ್ಮನಿಯವರ ವರ್ತಕರ ಅಂಗಡಿಗಳನ್ನೂ ಮನೆಮಠಗಳನ್ನೂ ನುಗ್ಗಿ ಹಲಾಕು ಮಾಡಿದರು. ಲಂಡನ್ ಪಟ್ಟಣದಲ್ಲಿರುವ ಅನೇಕ ಜರ್ಮನಿ ಪ್ರಜೆಗಳು ಜರ್ಮನಿಯ ವರ್ತನವು ಅಧರ್ಮವಾದದ್ದೆಂದು ಹೇಳಿ ಒಪ್ಪಿಕೊಂಡಿದ್ದಾರೆ. ಜನಗಳು ಕೋಪದಿಂದ ಅಕೃತ್ಯಗಳನ್ನು ನಡಿಸಲವಕಾಶವಾಗದಂತೆ ಬ್ರಿಟನ್‌ನಲ್ಲಿರುವ ಜರ್ಮನಿ ಪ್ರಜೆಗಳನ್ನೆಲ್ಲಾ ಸುರಕ್ಷಿತವಾದ ಸ್ಥಳಗಳಲ್ಲಿಟ್ಟು ಕಾಪಾಡಬೇಕಾಗಿ ಬಂದಿದೆ. ಇದು ಬಹಳ ದುಃಖಕರವಾದ ಸಂಗತಿಯಾಗಿದ್ದರೂ ನಿರಪರಾಧಿಗಳಾದ ಹೆಂಗಸರನ್ನೂ ಮಕ್ಕಳನ್ನೂ ಒಟ್ಟೊಟ್ಟಾಗಿ ಕೊಂದು ಹಾಕಿದ್ದನ್ನು ನೋಡಿದರೆ ಸಾಮಾನ್ಯ ಜನಗಳಲ್ಲಿ ಆಕ್ರೋಶವು ಹುಟ್ಟಿ ಅಕೃತ್ಯಗಳನ್ನು ಮಾಡುವುದಕ್ಕೂ ಹಿಂತೆಗೆಯರೆನ್ನುವುದೇನೂ ಆಶ್ಚರ್ಯವಲ್ಲ.

ಇತರ ವಿಷಯಗಳು.

ಇಟಲಿಯಲ್ಲಿ ರಾಜ್ಯಭಾರ ಕಾರ್ಯಗಳನ್ನು ನಿರ್ವಹಿಸುತ್ತಿರುವ ಮಂತ್ರಿಸಭೆಯವರು ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟುಬಿಟ್ಟರು. ಈಗ ವಿಶೇಷವಾದ ಯುದ್ಧದ ಗಂಡಾಂತರ ಸಂಭವಿಸಿರುವುದರಿಂದ ಸಕಲ ಪಕ್ಷದವರ ಪ್ರತಿನಿಧಿಗಳೂ ಗವರ್ನ್‌ಮೆಂಟಿನಲ್ಲಿ ಸೇರಿಲ್ಲವೆಂಬುವುದೇ ಇದಕ್ಕೆ ಕಾರಣ. ಪ್ರಧಾನ ಮಂತ್ರಿಶ್ರೇಷ್ಠರ ರಾಜೀನಾಮೆಯನ್ನು ದೊರೆಯವರು ಅಂಗೀಕರಿಸದೆ ಇರುತ್ತಾರೆಂದು ಹೇಳಲಾಗಿದೆ. ಪ್ರಜೆಗಳಲ್ಲಿ ಹಲವು ಪಕ್ಷಗಳವರು ಈ ಯುದ್ಧದಲ್ಲಿ ನಮ್ಮ ಪಕ್ಷದವರ ಕೂಡ ಬೆರೆದು ಜರ್ಮನಿಯವರ ಪಟಾಟೋಪವನ್ನು ಅಡಗಿಸಿಬಿಡಬೇಕೆಂದು ಅಭಿಪ್ರಾಯಪಡುತ್ತಿರೋಣದರಿಂದ ಅಲ್ಲಿ ಈ ಒಂದೇ ಅಭಿಪ್ರಾಯವುಳ್ಳ ಗವರ್ನ್‌ಮೆಂಟು ರೂಪಿಸಲ್ಪಡುವುದೆಂದು ಕಾಣುತ್ತದೆ.

ಜರ್ಮನಿಯವರ ವಿಮಾನ ಯಂತ್ರವು ಇಂಗ್ಲೆಂಡಿನ ದಕ್ಷಿಣ ಪ್ರಾಂತ್ಯದಲ್ಲಿ ಬಂದು ದರೋಡೆಕೃತ್ಯವನ್ನು ನಡಿಸಿತು. ಒಬ್ಬ ಪ್ರಜೆಯು ಸತ್ತುಹೋದನು; ಹಲವರಿಗೆ ಗಾಯಗಳಾದವು. ಆಸ್ತಿಪಾಸ್ತಿಯು ಅಪಾರ ನಷ್ಟವಾಯಿತು.

ನಮ್ಮ ಮಂತ್ರಿಶ್ರೇಷ್ಠರ ಕುಮಾರರಾದ ಮಿ|| ಆಸ್ಕಿತ್‌ರವರು ಡಾರ್ಡನೆಲ್ಸ್ ಜಲಮಾರ್ಗದಲ್ಲಿ ನಡೆಯುತ್ತಿರುವ ಯುದ್ಧಕಾರ್ಯಗಳಲ್ಲಿ ಗುಂಡಿನೇಟು ತಗುಲಿ ಗಾಯಪಟ್ಟಿದ್ದಾರೆ.

ನಮ್ಮ ಮೈಸೂರು ಸಂಸ್ಥಾನದಲ್ಲೆಲ್ಲಾ ಸುಪ್ರಸಿದ್ಧರಾಗಿರುವ ಡಾಕ್ಟರ್ ಮೆಗ್ಗಾನ್‌ರವರ ಅಳಿಯಂದಿರಾದ ಮೇಜರ್ ಇರ್ವಿನ್‌ರವರು ಡಾರ್ಡನೆಲ್ಸ್ ಜಲಮಾರ್ಗದಲ್ಲಿ ನಡೆಯುವ ಯುದ್ಧದಲ್ಲಿ ಮಡಿದುಹೋದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ.

ದಿ ಆರ್ಡರ್ ಆಫ್ ದಿ ಗಾರ್ಟರ್ ಎಂಬ ಅತ್ಯಂತ ಘನತರವಾದ ಬ್ರಿಟಿಷ್ ಬಿರುದಿನ ಪಟ್ಟಿಯಿಂದ ಮುಂದೆ ಹೇಳುವ ದೊರೆಗಳ ಹೆಸರುಗಳನ್ನು ಹೊಡೆದು ಹಾಕಿರುತ್ತಾರೆ.—ಆಸ್ಟ್ರಿಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿ, ವುರ್ಟೆಂಬರ್ಗ್ ದೊರೆ, ಪ್ರಷ್ಯದ ಪ್ರಿನ್ಸ್ ಹೆನ್ರಿ, ಡ್ಯೂಕ್ ಆಫ್ ಸ್ಯಾಕ್ಸ್‌ಕೊಬರ್ಗ್, ಡ್ಯೂಕ್ ಆಫ್ ಕಂಬರ್ಲೆಂಡ್.

ಜರ್ಮನಿಯ ಜೆಪ್ಲಿನ್ ಎಂಬ ವಿಮಾನಯಂತ್ರವು ಕಳೆದ ಸೋಮವಾರ ಬೆಳಗಿನ ಝಾಮದ 2 ಗಂಟೆ ಹೊತ್ತಿನಲ್ಲಿ ಇಂಗ್ಲೆಂಡಿಗೆ ಸೇರಿದ ರಾಮ್ಸ್‌ಗೇಟ್ ಎಂಬ ನಗರದ ಮೇಲೆ ಬಂದು 40 ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಮೂರು ಮಂದಿಗೆ ಗಾಯಗಳಾಗಿವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ನಂಜನಗೂಡಿನಲ್ಲಿ ಒಂದು ಸಣ್ಣ ರೀಡಿಂಗ್ ರೂಮನ್ನು ಕಟ್ಟಿಸಿಕೊಡುವವರಾಗಿದ್ದಾರೆಂದು ಕೇಳುತ್ತೇವೆ.

ಕಳೆದ ಸೋಮವಾರ ಮಧ್ಯಾಹ್ನ ಸುಮಾರು 1 ಗಂಟೆ ಹೊತ್ತಿಗೆ ನಮ್ಮ ಮಹಾರಾಜರವರು ಮಹಾಮಾತೃಶ್ರೀಯವರ ಸಮೇತ ನೀಲಗಿರಿಯಿಂದ ರಾಜಧಾನಿಗೆ ಚಿತ್ತೈಸಿದರು.

ನಮ್ಮ ದಿವಾನ್‌ರವರು ಹದಿನೆಂಟು ದಿನಗಳ ರಜಾದ ಮೇಲೆ ಸಿಲೋನ್ (ಲಂಕಾ) ದ್ವೀಪಕ್ಕೆ ಪ್ರಯಾಣಮಾಡಿದರು. ಸೀನಿಯರ್ ಕೌನ್ಸಲರ್ ಮ|| ಎಚ್. ವಿ. ನಂಜುಂಡಯ್ಯನವರು ಬದಲಿ ನೋಡುತ್ತಿದ್ದಾರೆ.

ರೈಲ್ವೆ ಬಡಾವಣೆಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಬರುವ ಜಮೀನಿನ ರೆವಿನ್ಯೂ ಕಂದಾಯದ ಮೇಲೆ ರೂಪಾಯಿಗೆ 3 ಕಾಸಿನಂತೆ ರೈಲ್ವೆ ಸೆಸ್ಸು ವಸೂಲ್ಮಾಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.

ರಾಜಧಾನಿಯಲ್ಲಿ ಪ್ರಜೆಗಳಿಗೆ ಇನ್ನೂ ಧಾರಾಳವಾಗಿ ಕುಡಿಯುವ ನೀರನ್ನು ಒದಗಿಸುವುದಕ್ಕೂ, ರಸ್ತೆಗಳಿಗೆ ನೀರು ಹಾಕುವುದಕ್ಕೂ ಬೆಳಗೊಳದಲ್ಲಿ ಹೆಚ್ಚಾಗಿ ನೀರನ್ನು ಕಾಲುವೆಯಿಂದ ಎತ್ತಿ ತರುವ ಏರ್ಪಾಡುಗಳಿಗೆ ಸರ್ಕಾರದವರು 2,05,200 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರಿನ ಮ|| ಕರಣಿಕ ಕೃಷ್ಣಮೂರ್ತಿರಾಯರು ರಾಜಧಾನಿಯಲ್ಲಿ ಪ್ರಕಟವಾಗುವ ಸಂಪದಭ್ಯುದಯವೆಂಬ ಪತ್ರಿಕಾ ಸಂಪಾದಕರ ಮೇಲೂ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟದ ಫಿರ್ಯಾದು ತಂದಿದ್ದಾರೆ. ಮೊಕದ್ದಮೆಯು ಜೂನ್ ತಾ. 21 ರಲ್ಲಿ ವಿಚಾರಣೆಯಾಗುವುದಾಗಿದೆ.

ಬೆಂಗಳೂರು ಆನಂದಮಹಲ್ ಬಂಗಲೆಯಲ್ಲಿ ಸ್ಥಾಪಿತವಾಗಿರುವ ವೀರಶೈವಾಶ್ರಮ ಯೂ ಸ್ಟೂಡೆಂಟ್ಸ್ ಹೋಮಿಗೆ ವೀರಶೈವ ವಿದ್ಯಾರ್ಥಿಗಳನ್ನು ಸೇರಿಸಲಪೇಕ್ಷಿಸುವ ಪೋಷಕರು ಇದೇ ಮೇ ತಾ 28 ರ ಒಳಗೆ ತಿಳಿಯುವಂತೆ ಅರ್ಜಿ ಬರೆಯಬೇಕೆಂದು ಆ|| ಸೆಕ್ರಟರಿ ಮ|| ಜಿ. ಕೆ. ರುದ್ರಾರ್ಯರು ತಿಳಿಸುತ್ತಾರೆ.

ಕಳೆದ 10 ನೇ ತಾ. ಸೋಮವಾರ ಕೋಲಾರ ಚಿನ್ನದ ಗಣಿಗಳ ಪೈಕಿ ಊರಗದ ಒಂದು ಗಣಿಯಲ್ಲಿ ಅಚಾತುರ್ಯ ನಡೆದು ಮೂವರು ಕೂಲಿಗಳು ಗಾಯಪಟ್ಟಿದ್ದರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ಪ್ರಾಣಬಿಟ್ಟನು. ಇನ್ನು ಮೂವರು ಮಂದಿ ಗಣಿಯಲ್ಲಿ ಸಿಕ್ಕಿಕೊಂಡರು. ಇವರು ಬದುಕಿ ಬಂದರೋ ಇಲ್ಲವೋ ತಿಳಿಯಲಿಲ್ಲ.

ನಮ್ಮ ಸರ್ಕಾರದವರು ಯುದ್ಧದ ನಿಮಿತ್ತ ಈ ಸಲ ರಾಜಧಾನಿಯಲ್ಲಿ ಕುದುರೆ ಜೂಜನ್ನೂ, ದಸರಾ ಪ್ರದರ್ಶನೋತ್ಸವವನ್ನೂ ನಿಲ್ಲಿಸಿ ಬಿಟ್ಟಿದ್ದಾರೆ. ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವಕಾಲದಲ್ಲೂ, ನವರಾತ್ರಿಯಲ್ಲೂ ಸ್ಕೂಲ್ ಹುಡುಗರಿಗೂ ಹೆಣ್ಣುಮಕ್ಕಳಿಗೂ ನಾನಾ ಅಂಗಸಾಧನೆಯ ವಿನೋದ (ಸ್ಪೋರ್ಟ್ಸ್) ಗಳನ್ನು ಮಾಡಿಸಿ ಬಹುಮಾನಗಳನ್ನು ಕೊಡಬೇಕೆಂದು ಏರ್ಪಾಡು ನಡೆಯುತ್ತಿದೆ.

ನಮ್ಮ ಸರ್ಕಾರದವರು ಮುಂದೆ ಹೇಳುವ ಸ್ಥಳಗಳಲ್ಲಿ ಗ್ರಾಮ ಮುನ್ಸಿಫ್ ಕೋರ್ಟುಗಳನ್ನು ಮುಂದಿನ ಜೂಲೈನಿಂದ ಪ್ರಾರಂಭಮಾಡುವಂತೆ ಹುಕುಂ ಕೊಟ್ಟಿದ್ದಾರೆ—ದೇವನಹಳ್ಳಿ ತಾಲೂಕಿನಲ್ಲಿ (1) ಆವತಿ (2) ವಡಿಗೇನಹಳ್ಳಿ, (3) ಬಾಗಲೂರು; ಆನೇಕಲ್ ತಾಲೂಕಿನಲ್ಲಿ (1) ಸರ್ಜಾಪುರ, (2) ದೊಮ್ಮಸಂದ್ರ, (3) ಅತ್ತಿಬೆಲೆ, (4) ಜಿಗಣಿ. ಆಯಾ ಪಟೇಲರುಗಳನ್ನೇ ಮುನ್ಸಿಫರಾಗಿ ನೇಮಕಮಾಡಿರುವರು.

ಈಗ್ಗೆ ಸುಮಾರು ಮೂರು ವರುಷಗಳ ಹಿಂದೆ ನಡೆದ ಟರ್ಕಿ ಬಾಲ್ಕನ್ ಯುದ್ಧಕಾಲದಲ್ಲಿ ಮೈಸೂರು ಪೋಲೀಸ್ ಪಟ್ಟಣದಿಗೆ ಸೇರಿದ ಮಿ|| ರಹಮಾನ್ ಖಾನ್, ಮಿ|| ಬಾದ್‌ಷಾ ಎಂಬಿಬ್ಬರು ಯುದ್ಧಭೂಮಿಗೆ ಹೋಗಿ ಆಸ್ಪತ್ರೆಗಳಲ್ಲಿ ಬಹಳ ಕಷ್ಟಪಟ್ಟು ಕೆಲಸಮಾಡಿದರು. ರೂಮೇನಿಯಾ ದೊರೆಯವರೂ ರಾಣಿಯವರೂ ಇವರ ಪರಹಿತಕಾರ್ಯಗಳನ್ನು ನೋಡಿ ತುಂಬಾ ಸಂತೋಷಪಟ್ಟು ಅವರ ಸ್ನೇಹಬೆಳಸಿದ್ದಲ್ಲದೆ ಅವರಿಬ್ಬರಿಗೂ ತಮ್ಮ ಮೆಚ್ಚುಗೆಯನ್ನು ಪ್ರಕಾಶಪಡಿಸುವ ಭಂಗಾರದ ಪದಕಗಳನ್ನು ಕೊಟ್ಟರು. ಕೋಲಾರದ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಎಸ್. ಎಂ. ಪ್ರಿಚರ್ಡ್‌ರವರು ಉರಿಗದಲ್ಲಿ ಕಳೆದ ಸೋಮವಾರ ಬೆಳಗ್ಗೆ ಪೋಲೀಸ್ ಪೆರೇಡಿನಲ್ಲಿ ಆ ಮಹನೀಯರಿಬ್ಬರ ಸಾಹಸಕಾರ್ಯಗಳನ್ನು ವಿವರಿಸಿ, ಅವರಿಗೆ ಮೇಲ್ಕಂಡ ಬಹುವಿನ ಪದಕಗಳನ್ನು ಕೊಟ್ಟುಕೊಂಡಾಡಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮೇ 6 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 25,000
,, (3) ಡಿಪಾಜಿಟ್ಟುಗಳು	....	,, 28,74,894
,, (4) ಇತರ	....	,, 59,617
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 39,59,511
ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 5,93,824
,, (2) ಖಾತೆ ಮತ್ತು ಇತರ ಸಾಲಗಳು	..	,, 26,07,516
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 4,29,262
,, (4) ಇನ್ವೆಸ್ಟ್‌ಮೆಂಟುಗಳು	....	,, 2,67,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	..	,, 1,29,591
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,, 15,998
,, (7) ಇತರ	....	,, 16,053
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 39,59,511

ಡಬ್ಲಿಯು. ಸಿ ರೋಸ್, ಮ್ಯಾನೇಜರ್.

ಇಂಡಿಯದ ಡಿಫೆನ್ಸ್ ಆಕ್ಟು.

ಇಂಡಿಯಾ ಸರಕಾರದವರು ರಚಿಸಿ ಜಾರಿಗೆ ತಂದು ಪ್ರಚುರ ಪಡಿಸಿದ 1915 ನೇ ಇಸವಿಯ ಇಂಡಿಯದ ಡಿಫೆನ್ಸ್ ಆಕ್ಟು ಎಂಬ ಇಂಡಿಯದ ಸಂರಕ್ಷಣಾ ಶಾಸನದ 2 ನೇ ಪ್ರಕರಣವನ್ನು ಈ ಮೂಲಕ ಸರ್ವರ ತಿಳುವಳಿಕೆಗಾಗಿ ಪ್ರಕಟಿಸುತ್ತೇವೆ

ಯಾವನೊಬ್ಬನು ಈ ಕೆಳಗೆ ಕಾಣಿಸಿದ ಪ್ರಕಾರ ಏನಾದರೂ ಒಂದು ಹೇಳಿಕೆ ಯಾ ಕಥೆ ಸುದ್ದಿಗಳನ್ನು ಪ್ರಕಟಿಸಿ ಪ್ರಚುರ ಪಡಿಸಿದರೆ ಕೆಳಗೆ ನಮೂದಿಸಿದ ಶಿಕ್ಷೆಗೆ ಅರ್ಹನಾಗುವನು.

ಆ ಹೇಳಿಕೆ ಸುದ್ದಿ ವರದಿಗಳನ್ನು ಬಾಯಿಂದಲಾಗಲಿ, ಅಥವಾ ಬರವಣಿಗೆಯಿಂದಾಗಲಿ, ಸನ್ನೆಗಳಿಂದಾಗಲಿ, ದೃಶ್ಯವಾದ ಗುರುತು ಚಿತ್ರಗಳಿಂದಾಗಲಿ, ಇನ್ನು ಯಾವದೊಂದು ವಿಧದಿಂದಲಾಗಲಿ ಪ್ರಕಟಿಸಲೂ ಪ್ರಚುರ ಪಡಿಸಲೂ ಬಹುದು ಅಥವಾ ಪ್ರಕಟಿಸಲೂ ಪ್ರಚುರ ಪಡಿಸಲೂ ಪ್ರಯತ್ನಿಸಬಹುದು. ಈ ಹೇಳಿಕೆ ಕಥೆ ಸುದ್ದಿಗಳು ಸುಳ್ಳಾಗಿರಬಹುದು, ಅಥವಾ ಸತ್ಯವೆಂದು ನಂಬಲಿಕ್ಕೆ ನ್ಯಾಯವಾದ ಕಾರಣಗಳಿಲ್ಲದಿರಬಹುದು. ಈ ಕೃತ್ಯಕ್ಕೆ ಜನರೊಳಗೆ ಅಥವಾ ಜನಸಮೂಹದ ಯಾವದೊಂದು ಭಾಗದವರೊಳಗೂ ಭಯ ಯಾ ದಿಗಿಲು ಹುಟ್ಟಿಸುವವುಗಳು ಇಲ್ಲವೆ ಹುಟ್ಟಿಸಬಹುದಾಗುವ ಉದ್ದೇಶವಿರುವದು ಅಥವಾ ಅವಕ್ಕೆ ಮಹಾರಾಜಾ ಚಕ್ರವರ್ತಿಯವರ ಜಲನೆಲಗಳ ಸೈನ್ಯಗಳ ಪ್ರಭುತ್ವಕ್ಕಾಗಲಿ, ಮಹಾರಾಜಾ ಚಕ್ರವರ್ತಿಯವರ ಪಕ್ಷದ ಯಾವದೊಂದು ರಾಜ್ಯದವರ ಸೈನ್ಯಗಳ ಜಯಕ್ಕಾಗಲಿ ಅಪಾಯ ತರುವ ಅಥವಾ ಮೋಸ ತರಿಸಬಹುದಾದ ಉದ್ದೇಶವಿರುವುದು ಇಲ್ಲವೇ ಅವಕ್ಕೆ ಮಹಾರಾಜಾ ಚಕ್ರವರ್ತಿಯವರಿಗೆ ಪರದೇಶ ಸರಕಾರಗಳವರ ನಂಗಡ ಇರುವ ಸ್ನೇಹಸಂಬಂಧಕ್ಕೆ ಕೇಡು ತರುವ ಯಾ ಕೇಡು ತರಬಹುದಾದ ಗುಣ ಇರುವದು, ಇದರ ಹೊರತು ಅವಕ್ಕೆ ಮಹಾರಾಜಾ ಚಕ್ರವರ್ತಿಯವರ ಪ್ರಜೆಗಳಲ್ಲಿ ವಿವಿಧ ಸಮುದಾಯಗಳೊಳಗೆ ಹಗೆ ಮತ್ಸರವನ್ನು ಹುಟ್ಟಿಸಿ ಹೆಚ್ಚಿಸುವ ಅಥವಾ ಹುಟ್ಟಿಸಿ ವರ್ಧಿಸಬಹುದಾಗುವ ಉದ್ದೇಶವಿರುವದು

ಇಂಥವರು ಯಾವ ತರದ ಶಿಕ್ಷೆಗೆ ಅರ್ಹನಾಗಿದ್ದಾರೆ ಎಂದರೆ—ಎರಡು ನಮೂನೆಯ ಕಾರಾಗೃಹ ಶಿಕ್ಷೆಯು ವಿಧಿಸಲ್ಪಡುವದು. ಇದು ಮೂರು ವರ್ಷಗಳ ತನಕವೂ ವಿಧಿಸಬಹುದಾದ ಯಾವದೊಂದು ಅವಧಿಯ ಶಿಕ್ಷೆಯಾಗಿರುವದು, ಅಥವಾ ಜುಲುಮೆಯ ಶಿಕ್ಷೆಗೆ ಅರ್ಹರಾಗಿರುವರು. ಅದಲ್ಲದೆ ಅಂಥವರಿಗೆ ಮಹಾರಾಜಾ ಚಕ್ರವರ್ತಿಯವರ ವೈರಿಗಳಿಗೆ ಸಹಾಯಬೇಕೆಂಬ ಉದ್ದೇಶವಿತ್ತೆಂಬದು ಪ್ರಮಾಣಪೂರ್ವಕ ತಿಳಿಯಬಂದ ಪಕ್ಷದಲ್ಲಿ ಮರಣದಂಡನೆ ಅಥವಾ ಮರಣಾಂತ ಬಂಕೋಲೆ ಶಿಕ್ಷೆ ಇಲ್ಲವೇ 10 ವರ್ಷಗಳ ತನಕವೂ ವಿಧಿಸಬಹುದಾದ ಸಜಾ ಎಂಬವುಗಳೇ

ಈ ಮೇಲಿನ ಕ್ರಮ ಸೂತ್ರಕ್ಕೆ ವಿರೋಧವಾದ ಯಾವದೊಂದು ಅಪರಾಧವನ್ನು ಕೌನ್ಸಿಲ್ ಸಹಿತವಾದ ಗವರ್ನರ್ ಜನರಲರಾಗಲಿ, ಸ್ಥಳಿಕ ಸರಕಾರದವರಾಗಲಿ, ಕೌನ್ಸಿಲ್ ಸಹಿತವಾದ ಗವರ್ನರ್ ಜನರಲರಿಂದ ಅಧಿಕಾರ ಪಡೆದ ಯಾವ ಆಫೀಸರನಾಗಲಿ ಕೊಟ್ಟ ಹುಕುಮಿನ ಮೂಲಕ ಅಥವಾ ಅಧಿಕಾರದ ದೆಸೆಯಿಂದ ಮಾಡಿದ ಫಿರ್ಯಾದಿಯ ಹೊರತು ಯಾವ ಕೋರ್ಟಿನವರಾದರೂ ಅದರ ತನಿಖೆಗೆ ಕೈ ಹಾಕಕೂಡದು.

ಮೈಸೂರು ಗೆಜೆಟ್ ಸಂಗ್ರಹ.

ಈ ಸಲ ಚಕ್ರವರ್ತಿಯವರ ಜನ್ಮೋತ್ಸವದ ನಿಮಿತ್ತ ಜೂನ್ 3 ನೇ ತಾ. ರಜಾ ಕೊಟ್ಟಿದೆ ಎಂದು ಪ್ರಕಟಿಸಿದ್ದ ಹುಕುಮನ್ನು ರದ್ದು ಮಾಡಿದೆ.

ಸಬ್ ರಿಜಿಸ್ಟ್ರಾರ್ ಮ ರಾಘವೇಂದ್ರರಾಯರು ಕುಣಿಗಲ್ ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿದ್ದಾರೆ.

ಎ ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಕೃಷ್ಣರಾಯರು ಚಿಕ್ಕನಾಯಕನಹಳ್ಳಿ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ ಎ. ಸುಬ್ರಮಣ್ಯ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸ್ಪೆಷಲ್ ಆಫೀಸರ್ ಮ ಎಲ್. ಕೃಷ್ಣರಾಯರು ಡೆಪ್ಯುಟಿ ಕಮಿಷನರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ.

ಚಳ್ಳಕೆರೆ ಸಬ್ ಡಿವಿಜನ್ ಆಫೀಸರ್ ಮ ಎಸ್. ಚಕ್ರಪಾಣಿ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚಿತ್ರದುರ್ಗದ ಖಜಾನೆ ಅ ಕಮಿಷನರು ಚಳ್ಳಕೆರೆ ಸಬ್ ಡಿವಿಜನ್ ಭಾರವನ್ನೂ ವಹಿಸತಕ್ಕದ್ದು.

ಗವರ್ನಮೆಂಟ್ ಛಾಪಖಾನೆಯ ಸೂಪರಿಂಟೆಂಡೆಂಟ್ ಮಿ ಸಿ. ಎಚ್. ಯೇಟ್ಸ್‌ಯವರಿಗೆ ಮೇ ತಾ 7 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಡಿ. ಬಿ ರಾಮಚಂದ್ರಮುದಲಿಯಾರ್ರವರು ಬದಲಿ ನೇಮಿಸಲ್ಪಟ್ಟಿದ್ದಾರೆ.

ಗವರ್ನಮೆಂಟ್ ಡೆಪ್ಯುಟಿ ಸೆಕ್ರೆಟರಿ ಮಿ|| ಪಿ ಜಿ ಡಿಸೌಜಾರವರಿಗೆ ಮೇ ತಾ. 27 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗವರ್ನಮೆಂಟ್ ಸೆಕ್ರೆಟರಿ ಮ ಡಿ. ಎಂ. ನರಸಿಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಚಾಲ್ತಿ ಕೆಲಸಗಳ ಭಾರವನ್ನು ಮಿ|| ಪಿ. ಜಿ. ಡಿಸೌಜಾರವರು ವಹಿಸಿರತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ ಎಂ. ನರಸಿಂಹಯ್ಯನವರು ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಮ|| ಸಿ. ಗೋಪಾಲಾಚಾರ್ಲರವರನ್ನು ಜನವರಿ ತಾ. 23 ರಿಂದ ರೆವಿನ್ಯೂ ಸರ್ವೇ ಡೆಪ್ಯುಟಿ ಸೂಪರಿಂಟೆಂಡೆಂಟರಾಗಿ ಖಾಯಂ ಮಾಡಿದೆ.

ಚಿತ್ರದುರ್ಗದ ಪ್ಲೀಡರ್ ಮ|| ಸಿ. ಅಬ್ದುಲ್ ಘನಿಯವರನ್ನು ಚಿಕ್ಕಮಗಳೂರು ಮುನ್ಸಿಫರಾಗಿ ನೇಮಿಸಿದೆ.

ಮುನ್ಸಿಫ್ ಮ|| ಡಿ. ಅಳಸಿಂಗ್ರಾಚಾರ್ರನ್ನು ಚಿಕ್ಕಮಗಳೂರಿನಿಂದ ತುಮಕೂರಿಗೆ 2 ನೇ ಮುನ್ಸಿಫರಾಗಿ ವರ್ಗ ಮಾಡಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮ|| ಗಳಾದ ಎಸ್. ವೆಂಕಟರಮಣ ಶ್ರೋತ್ರಿಯವರು ಶ್ರೀರಂಗಪಟ್ಟಣದಿಂದ ಚಳ್ಳಕೆರೆಗೆ, ಕೆ. ಹನುಮಂತರಾಯರು ಚಳ್ಳಕೆರೆಯಿಂದ ದಾವಣಗೆರೆಗೆ, ಕೆ. ವೇದಾಂತಯ್ಯಂಗಾರ್ರು ದಾವಣಗೆರೆಯಿಂದ ಶ್ರೀರಂಗಪಟ್ಟಣಕ್ಕೆ.

ಮುಂದೆ ಹೇಳುವ ಅ|| ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮಿ|| ಜಹಿರುದ್ದಿನ್ ಮೆಕ್ಕಿಯವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯಿಂದ ಸಾಗರ್ ಸಬ್ ಡಿವಿಜನ್‌ಗೆ, ಮ|| ಗಳಾದ ಎಸ್. ನಾರಾಯಣರಾಯರು ಸಾಗರ್ ಸಬ್ ಡಿವಿಜನ್‌ನಿಂದ ಚಳ್ಳಕೆರೆ ಸಬ್ ಡಿವಿಜನ್‌ಗೆ, ಎಸ್. ಚಕ್ರಪಾಣಿ ಅಯ್ಯಂಗಾರ್ರು ಚಳ್ಳಕೆರೆ ಸಬ್ ಡಿವಿಜನ್‌ನಿಂದ ಹಾಸನ್ ಡಿಸ್ಟ್ರಿಕ್ಟ್ ಖಜಾನೆಗೆ, ಸಿ. ಗೋಪಾಲಾಚಾರ್ರು ಹಾಸನ್ ಡಿಸ್ಟ್ರಿಕ್ಟ್ ಖಜಾನೆಯಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಗೆ, ಎ ಮೃತ್ಯುಂಜಯ ಅಯ್ಯರವರು ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯಿಂದ ತುಮಕೂರು ಡಿಸ್ಟ್ರಿಕ್ಟ್ ಖಜಾನೆಗೆ, ನರಸಿಂಗರಾವ್ ಪೂಣಯ್ಯನವರು ತುಮಕೂರು ಡಿಸ್ಟ್ರಿಕ್ಟ್ ಖಜಾನೆಯಿಂದ ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಗೆ.

ಹೊಳಲ್ಕೆರೆ ತಾಲ್ಲೂಕ್ ಭಾರವನ್ನು ವಹಿಸಿರುವ ಮ|| ಸಿ. ಕಾಶೀನಾಥರಾಯರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮ|| ಸಿ. ನಾರಾಯಣರಾಯರಿಗೆ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಿದೆ.

ಎಕನಾಮಿಕ್ ಕಾನ್ಫರೆನ್ಸಿನ ಸೆಕ್ರೆಟರಿ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಪನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮ ಬಿ. ಟಿ. ಸೀತಾರಾಮಯ್ಯನವರು ರಜದ ಮೇಲಿರುವಾಗ್ಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ ಎಚ್. ಶ್ರೀನಿವಾಸರಾಯರು ಸಾಗರದ ತಾಲ್ಲೂಕ್ ಭಾರವನ್ನು ವಹಿಸತಕ್ಕದ್ದು.

ಆನೇಕಲ್ ತಾಲ್ಲೂಕು ಅಮಲ್ದಾರ್ ಮ ಎನ್. ಗೋಪಾಲಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕ್ ಭಾರವನ್ನು ವಹಿಸತಕ್ಕದ್ದು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅದೇ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಅರಸಿಕೆರೆ—ಹಾಸನ—ಸಕಲೇಶಪುರ ಟಾಂಗಾ ಕಂಪನಿ.

ಅಯ್ಯಾ,—ಅರಸಿಕೆರೆಯಿಂದ ಹಾಸನಕ್ಕೂ ಸಕಲೇಶಪುರಕ್ಕೂ ಈಗ ಹಾಲಿ ಇಟ್ಟಿರುವ ಮೇಲ್ ಟಾಂಗಾ ಏಜೆಂಟರು ಬೆಂಗಳೂರಲ್ಲಿ ರಿಟೈರಾದ ಕುದುರೆಗಳನ್ನೂ ಹೇಸರಕತ್ತೆಗಳನ್ನೂ ಕೊಂಡುಕೊಂಡು ಬಂದು ಇಲ್ಲಿ ಟಪ್ಪಾಲು ಗಾಡಿಗಳನ್ನು ನಡಿಸುತ್ತಾ ಇದ್ದಾರೆ. ಈ ಪ್ರಾಣಿಗಳ ಹಿಂಸೆಯನ್ನು ಪ್ರಯಾಣಿಕನಾದ ನಾನು ಕಂಡು ಬಹಳ ನೊಂದುಕೊಂಡು, ಇನ್ನು ಮೇಲೆ ಈ ಟಾಂಗಾದಲ್ಲಿ ಪ್ರಯಾಣಮಾಡಕೂಡದೆಂದು ನಿರ್ಧರಮಾಡಿಕೊಂಡೆನು. ಸರ್ಕಾರದವರು ಟಾಂಗಾ ಕುದುರೆಗಳ ವಿಷಯವಾಗಿ ರೂಲ್ಸು ಮಾಡಿದ ಕಾಲಮನ್ನು ತಮ್ಮ ಕಳೆದ 3 ನೇ ವಾರದ ಪತ್ರಿಕೆಯಲ್ಲಿ ನೋಡಿದೆನು. ಈ ರೂಲ್ಸು ನಮ್ಮ ಪತ್ರಿಕೆಗೆ ಮಾತ್ರವೇ ಹೊರತು ಹಾಸನದ ಟಾಂಗಾ ಸರ್ವೀಸ್ ಕಂಪನಿಗೆ ಒಳಪಡತಕ್ಕ ಹಾಗೆ ಕಾಣುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಸರಿಯಾದ ವಿಚಾರಣೆ ಮಾಡಿ, ಮುಖ್ಯ ದಾಕ್ಷಿಣ್ಯಕ್ಕೆ ಒಳಪಡದೆ, ಮೂಗು ಪ್ರಾಣಿಗಳ ನರಕಯಾತನೆಯನ್ನು ತಪ್ಪಿಸುವರೆಂದು ನಂಬಿರುತ್ತೇನೆ ಒಬ್ಬ ಪ್ರಯಾಣಿಕ.

[ಮೂಗು ಪ್ರಾಣಿಗಳ ಹಿತಚಿಂತಕರು ಹೆಚ್ಚಿದ ಹಾಗೆಲ್ಲಾ ಅವುಗಳ ಹಿಂಸೆಯೂ ಕಡಮೆಯಾಗುವುದು —ಎಡಿ.]

ಆಯುರ್ವೇದ ವೈದ್ಯಶಿಖಾಮಣಿಗಳಿಗೆ ವಿಜ್ಞಾಪನೆ.

ಅಯ್ಯಾ,—ಸಮಸ್ತ ಭಾರತ ವರ್ಷೀಯ ಆಯುರ್ವೇದ ವೈದ್ಯ ಸಮ್ಮೇಳನ (All India Ayurvedic Conference) ವೆಂಬ ಒಂದು ಸಂಘವು ಈಗ್ಗೆ ಎಂಟು ವರುಷಗಳ ಕೆಳಗೆ ನಾಶಿಕ (Nasik) ಕ್ಷೇತ್ರದಲ್ಲಿ ಬರೋಡ ಮತ್ತು ಪಟಿಯಾಲಾ ಮಹಾರಾಜರುಗಳ ಪೋಷಣೆಯಲ್ಲಿ ಸ್ಥಾಪಿಸಲ್ಪಟ್ಟು, ಕಳೆದ ಆರು ವರ್ಷಗಳಿಂದ ಅಲಹಾಬಾದ್ ಪಟ್ಟಣವೇ ಮುಖ್ಯ ಸ್ಥಾನವಾಗಿ ಏರ್ಪಡಿಸಿಕೊಂಡು, ಅಲ್ಲಿಂದಲೇ ಈ ಸಂಘದ ಕಾರ್ಯಗಳನ್ನು ನೆರವೇರಿಸುತ್ತಿರುವುದು ತಮಗೆಲ್ಲರಿಗೂ ಗೋಚರವೇ ಇದೆಯಷ್ಟೆ. ಆ ಅಂಗವಾಗಿ ವಾರ್ಷಿಕ ಸಭೆಗಳು ನಾಶಿಕ, ಬೊಂಬಾಯಿ, ಕಾನ್ಪೂರ್, ಅಲಹಾಬಾದ್, ಮಥುರೆ, ಕಲ್ಕತ್ತಾ ಪಟ್ಟಣಗಳಲ್ಲಿ ನಡೆಯಿಸಲ್ಪಟ್ಟವು. ಆದರೆ ಈಗಲ್ ವರೆಗೂ ನಮ್ಮ ದಕ್ಷಿಣ ಹಿಂದುಸ್ಥಾನದಲ್ಲಿ ಎಲ್ಲಿಯೂ ವಾರ್ಷಿಕ ಮಹಾಸಭೆ ನಡೆಯದಿರುವುದಕ್ಕೆ ನಮ್ಮ ದೇಶದಲ್ಲಿನ ವೈದ್ಯಶಿಖಾಮಣಿಗಳಿಗೆ ಈ ಸಂಘದ ವಿಷಯವೇ ತಿಳಿಯದಿರುವಿಕೆಯೇ ಮುಖ್ಯ ಕಾರಣವಾಗಿದೆ.

ಈ ವರ್ಷ ನಡೆಯಬೇಕಾದ ವಾರ್ಷಿಕ ಸಭೆಯು ಮತ್ತು ಆಯುರ್ವೇದ ವೈದ್ಯ ವಸ್ತು ಪ್ರದರ್ಶನೋತ್ಸವವೂ ನಮ್ಮ ದಕ್ಷಿಣ ಹಿಂದುಸ್ಥಾನದ ಪಟ್ಟಣಗಳಲ್ಲಿ ಮುಖ್ಯ ಪಟ್ಟಣವಾದ ಮದರಾಸಿನಲ್ಲಿಯೇ ನಡೆಯಿಸುವುದು ಕರ್ತವ್ಯವೆಂದೆಣಿಸಿ ಮದರಾಸ್ ಹೈಕೋರ್ಟ್ ರಿಟೈರ್ಡ್ ಜಡ್ಜ್ ಡಾಕ್ಟರ್ ಸರ್ ಎಸ್. ಸುಬ್ರಹ್ಮಣ್ಯ ಅಯ್ಯರ್, ಕೆ.ಸಿ.ಐ ಇ., ಎಲ್ ಎಲ್. ಡಿ. ಯವರ ಸಭಾಧ್ಯಕ್ಷತೆಗೊಳಪಟ್ಟಿರುವ ಶ್ರೀಚೆನ್ನಪುರಿ ಆಯುರ್ವೇದ ಪ್ರಚಾರಿಣೀ ಸಭೆಯವರು ಮೇಲ್ಕಂಡ ವೈದ್ಯ ಸಮ್ಮೇಳನವನ್ನು ಮದ್ರಾಸಿಗೆ ದಯಮಾಡಬೇಕೆಂದು ಕೋರಿದರು. ಈ ದೊಡ್ಡ ಕಾರ್ಯವನ್ನು ಸಾಧಿಸಲು ಒಬ್ಬರಿಂದ ಸಾಧ್ಯವಲ್ಲ. ಆದುದರಿಂದ ವೈದ್ಯರು, ವೈದ್ಯ ವಿದ್ಯಾಭಿಮಾನಿಗಳೂ ಸಹ ತಮಗೆ ತಿಳಿದ ಮಟ್ಟಿಗೆ ತಮ್ಮ ಸುತ್ತುಮುತ್ತಲೂ ಇರತಕ್ಕ ವೈದ್ಯಶಿಖಾಮಣಿಗಳ ಮತ್ತು ನಮ್ಮ ಉದ್ದೇಶಗಳನ್ನು ನೆರವೇರಿಸಲು ಪ್ರೋತ್ಸಾಹಕರಾಗುವರೆಂದು ತಮಗೆ ತೋರಬರುವ ಇತರ ಮಹನೀಯರುಗಳ ಹೆಸರುಗಳನ್ನೂ, ಅವರು ವಾಸವಾಗಿರತಕ್ಕ ಗ್ರಾಮದ ಹೆಸರು, ತಾಲ್ಲೂಕು, ಡಿಸ್ಟ್ರಿಕ್ಟು, ಪೋಸ್ಟು ಮುಂತಾದ ವಿವರಗಳನ್ನೂ ಸಹ ನಮಗೆ ತಿಳಿಸಬೇಕೆಂದು ಕೋರುವದಲ್ಲದೆ ನಮ್ಮ ಹಿಂದೂ ದೇಶಾಭಿವೃದ್ಧಿಗಾಗಿ ಮಾಡಬೇಕಾದ ಈ ಕೆಲಸವನ್ನು ಕ್ರಮೆಯೆಂದು ತಾವು ಭಾವಿಸಲಾರಿರೆಂದು ನಂಬುತ್ತೇನೆ.

ಈ ಸಭೆಯು ಮತ್ತು ಆಯುರ್ವೇದ ವಸ್ತು ಪ್ರದರ್ಶನ ಮಹೋತ್ಸವವೂ ಇದೇ ವರುಷದ ಡಿಸೆಂಬರ್ ತಿಂಗಳಲ್ಲಿ ನಡೆಯುವವು. ಸಭೆಯು ನಡೆಯತಕ್ಕ ತಾರೀಖುಗಳು ಮತ್ತು ಸಭೆಯಲ್ಲಿ ನಡೆಯತಕ್ಕ ಚರ್ಚಾಂಶಗಳು ಮುಂತಾದ ವಿವರಣೆಗಳೆಲ್ಲಾ ಆಗಿಂದಾಗ್ಗೆ ಪತ್ರಿಕಾ ಮುಖವಾಗಿ ತಿಳಿಸಲ್ಪಡುತ್ತೆ.

ತಮ್ಮ ವಿಧೇಯ

ಆಯುರ್ವೇದ ಕಲಾಭವನ,
12, ತಂಬುಚೆಟ್ಟಿ ಬೀದಿ,
ಜಿ. ಟಿ., ಮದ್ರಾಸ್.

ವೈದ್ಯರತ್ನ ಪಂಡಿತ ಡಿ ಗೋಪಾಲಾಚಾರ್ಲು,
ಎ. ವಿ. ಎಸ್. ಎ. ಎಂ. ಬಿ.
ಮ್ಯಾನೇಜಿಂಗ್ ಪ್ರೊಪ್ರೈಟರ್,
ಆಯುರ್ವೇದ ಪ್ರಚಾರಿಣೀ ಸಭಾ.

ತಾಲ್ಲೂಕು ವರ್ತಮಾನಗಳು.

ಕೊಪ್ಪ ತಾ ಬಗ್ಗುಂಡಿ.—ಕಡೂರು ಡಿಸ್ಟ್ರಿಕ್ಟ್ ಉಪನ್ಯಾಸಕರಾದ ಮ|| ಬಿ. ಕೆ. ಸಂಗಮ್ಮಯ್ಯಂಗಾರ್ರು ಮೊನ್ನೆ ದಿವಸ ನಮ್ಮ ಹಳ್ಳಿ ಗ್ರಾಮಕ್ಕೂ, ಈ ದಿವ ಆ ಮಗುಲ ಗ್ರಾಮದ ಶಿಖನೆಟ್ಟಿಲು ಸ್ಕೂಲಿನಲ್ಲಿಯೂ ಬಹು ಮಂದಿ ಗ್ರಾಮಸ್ಥರನ್ನೂ, ಸ್ತ್ರೀಯರನ್ನೂ ಮತ್ತು ಯೌವನಸ್ಥರನ್ನೂ ಸೇರಿಸಿ ವಿದ್ಯೆ, ನಾಗರಿಕತೆ, ಬಾಲಕ ಬಾಲಿಕೆಯರ ಮತ್ತು ಯೌವನಸ್ಥರ ವಿದ್ಯಾಭ್ಯಾಸದ ಕ್ರಮ, ಪರಸ್ಪರ ಸಹಾಯ ಸಂಘ, ಆರೋಗ್ಯ, ವ್ಯವಸಾಯ ಮುಂತಾದ ವಿಷಯಗಳನ್ನು ಸದರೀ ಸ್ಥಳಗಳಲ್ಲಿ ಸೇರಿದ್ದ ಸ್ಕೂಲ್ ಬಾಲಕ ಬಾಲಿಕೆಯರಿಗೂ ಎಲ್ಲರ ಮನಸ್ಸಿಗೂ ಚೆನ್ನಾಗಿ ಗ್ರಾಹ್ಯವಾಗುವಂತೆ ಬಹು ಸ್ವಾರಸ್ಯೋಪನ್ಯಾಸ ಮಾಡಿದರು. ಇದರಿಂದ ಇಲ್ಲಿ ಸೇರಿದ್ದವರೆಲ್ಲರೂ ಇವರ ಉಪನ್ಯಾಸದಿಂದ ನಮ್ಮ ಮಲೆನಾಡು ಪ್ರಜೆಗಳ ಏಳಿಗೆಗೆ ಸಾಧಕವಾದ ಅನೇಕ ಸಂಗತಿಗಳನ್ನು ತಿಳಿದುಕೊಂಡರೆಂಬುವದರಲ್ಲಿ ಸಂದೇಹವಿಲ್ಲ. ಸರಕಾರದವರು ನಮ್ಮುಗಳ ಪುರೋಭಿವೃದ್ಧಿಗಾಗಿ ಇಂಥಾ ಏರ್ಪಾಡುಗಳನ್ನು ನಡಿಸಿದ್ದಕ್ಕಾಗಿ ಬಹಳ ಕೃತಜ್ಞರಾಗಿದ್ದೇವೆ.

ಹಾಸನದ ತಾ|| ಕಟ್ಟಾಯ.—ಗವರ್ನಮೆಂಟ್ ಉಪನ್ಯಾಸಕರಾದ ಮ|| ಬಿ. ಕೆ. ವೆಂಕಟಾಚಾರ್ಯರು ಹಾಸನ ತಾಲ್ಲೂಕು ಕಟ್ಟಾಯದ ಗ್ರಾಮಕ್ಕೆ ದಯಮಾಡಿ ಪ್ರಜೆಗಳನ್ನೆಲ್ಲಾ ಸೇರಿಸಿ ಗಂಡು ಮತ್ತು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಆವಶ್ಯಕತೆ, ಪರಸ್ಪರ ಸಹಾಯಕ ಸಂಘದ ಪ್ರಯೋಜನ, ಆರೋಗ್ಯ ವಿಚಾರ, ಸತ್ಕಾಲಕ್ಷೇಪ ಕ್ರಮ, ವ್ಯವಸಾಯದ ನೂತನ ಕ್ರಮದ ವಿವರ, ಅಪಾಯ ಕಾಲದಲ್ಲಿ ತಕ್ಷಣದಲ್ಲಿ ಮಾಡಬೇಕಾದ ಉಪಾಯಗಳು, ಸರ್ಕಾರದವರು ಪ್ರಜೆಗಳಿಗೆ ಮಾಡುತ್ತಿರುವ ಉಪಕಾರಗಳ ವಿವರಣೆ ಮುಂತಾದ ವಿಷಯಗಳನ್ನು ಚೆನ್ನಾಗಿ ತಕ್ಕ ದೃಷ್ಟಾಂತಗಳೊಡನೆ ವಿವರಿಸಿ ಬೋಧಿಸಿದರು. ನೂರಾರು ಮಂದಿ ಹೆಂಗಸರು, ಗಂಡಸರು, ಮಕ್ಕಳೂ ಸಹ ಸೇರಿದ್ದರು. ಈ ಉಪನ್ಯಾಸವು ಸರ್ವರಿಗೂ ಆನಂದವನ್ನುಂಟುಮಾಡಿತು. ಈ ಸಭೆಯ ಅದಿ ಅಂತ್ಯ ಭಾಗಗಳಲ್ಲಿ ಸ್ಕೂಲ್ ಬಾಲಕ ಬಾಲಿಕೆಯರಿಂದ ಪಿಟೀಲ್ ವಾದ್ಯದೊಡನೆ ಭಜನೆ ಮತ್ತು ಚಕ್ರವರ್ತಿಯವರು ಮತ್ತು ಮಹಾರಾಜರವರ ಶ್ರೇಯಸ್ಸಾಪ್ರಾರ್ಥನೆಗಳು ನಡೆದು ಸಭೆಯು ಮುಕ್ತಾಯವಾಯಿತು.

ಗೊರೂರಿಬಿದನೂರು ತಾ ಹೊಸೂರು.—ಇಲ್ಲಿಗೆ ನಮ್ಮ ಮೈಸೂರು ಸಂಸ್ಥಾನದ 3 ನೇ ಕೌನ್ಸಿಲ್ ಮೆಂಬರ್ ಯಂ ಕಾಂತರಾಜೆ ಅರಸಿನವರ ಕೂಡ ಸಬ್ ಡಿವಿಜನ್ ಆಫೀಸರ್ ಮ ಎಂ. ಜಿ. ಕೃಷ್ಣಸ್ವಾಮಿರಾಯರು, ಅಮಲ್ದಾರ್ ಮ|| ಸಿ. ವಿ ಕೃಷ್ಣಸ್ವಾಮಿರಾಯರು, ಮತ್ತು ಇನ್ಸ್‌ಪೆಕ್ಟರ್ ಇಲಾಖಾ ಮುಖ್ಯಾಧಿಕಾರಿಗಳು ಇವರೊಡನೆ ದಯಮಾಡಿದರು ರಿಟೈರ್ಡ್ ಕೌನ್ಸಿಲರ್ ಮ|| ಸಿ ರಾಘವೇಂದ್ರ ರಾಯರ ಮನೆ ತನಕ ಅಡವಾಗಿ ಹಾಕಿದ್ದ ಚಪ್ಪರದ ಬಳಿ ಗ್ರಾಮಾಧಿಕಾರಿಗಳೂ, ಪುರ ಪ್ರಮುಖರೂ, ಯೂನಿಯನ್ ಮೆಂಬರುಗಳೂ ಮಂಗಳ ವಾದ್ಯಗಳೊಡನೆ ಕೌನ್ಸಿಲರ್ ಸಾಹೇಬರನ್ನು ಎದುರುಗೊಂಡು, ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿ ಸುಸ್ವಾಗತವನ್ನು ಬಯಸಿದರು ವೈದಿಕ ಮಂಡಳಿಯವರು ಆಶೀರ್ವದಿಸಿ ಕೊಟ್ಟ ಫಲಮಂತ್ರಾಕ್ಷತೆಯನ್ನು ಅವರು ಸ್ವೀಕರಿಸಿ ಗ್ರಾಮದೊಳಕ್ಕೆ ಚಿತ್ತೈಸಿದರು. ಇಲ್ಲಿನ ಗರಲ್ಸ್ ಸ್ಕೂಲು, ವಾಚನಾಲಯ, ಹಿಂದಿ ಬಾಯ್ಸ್ ಸ್ಕೂಲು, ಕೋಆಪರೇಟಿವ್ ಸೊಸೈಟಿ, ಕೆರೆ ಮುಂತಾದವುಗಳನ್ನು ಪರಾಂಬರಿಸಿ, ಪ್ರಜೆಗಳ ವಿಜ್ಞಾಪನೆಗಳನ್ನು ಸಾವಧಾನದಿಂದ ಆಲಿಸಿ, ಯಥೋಚಿತವಾದ ಸದುತ್ತರಗಳನ್ನು ದಯಪಾಲಿಸಿ, ಅನಂತರ ಎ. ವಿ. ಬಾಯ್ಸ್ ಸ್ಕೂಲಿಗೆ ದಯಮಾಡಿಸಿದರು. ಮ ಜಿ. ವಿದ್ಯಾರ್ಥಿಗಳು ಚಪ್ಪರ ತೋರಣಗಳಿಂದಲೂ, ಧ್ವಜಪಟಗಳಿಂದಲೂ ಅಲಂಕೃತವಾಗಿದ್ದ ಸ್ಕೂಲಿಗೆ ಅವರನ್ನು ಬರಮಾಡಿಕೊಂಡು, ಸುಸ್ವಾಗತವನ್ನು ಬಯಸಿದರು. ಬಾಲಕರ ಮನೋಹರವಾದ ಗಾನಗಳೂ, ಅಂಗಸಾಧನೆಯ ಆಟಗಳೂ ಸಿನೋಪದರ್ಶನವಾಗಿ ನಡೆದವು ಕೌನ್ಸಿಲರವರು ಉಪಾಧ್ಯಾಯರವರ ಕಾರ್ಯ ಶ್ರದ್ಧೆಯನ್ನು ತಿಳಿದು ತುಂಬಾ ಸಂತೋಷಪಟ್ಟು ಹಿಂದಿರುಗಿದರು. ಕೌನ್ಸಿಲರ್ ಮ|| ಸಿ. ರಾಘವೇಂದ್ರರಾಯರ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿನ ಶ್ರದ್ಧೆಯೂ, ವಾಚನಾಲಯದಲ್ಲಿನ ಏರ್ಪಾಡುಗಳೂ ನಮ್ಮ ಕೌನ್ಸಿಲರ್ ಸಾಹೇಬರವರ ಮನಸ್ಸಿಗೆ ತುಂಬಾ ಹರ್ಷವನ್ನುಂಟುಮಾಡಿದವು. ಅನಂತರ ಮಂಗಳವಾದ್ಯಗಳ ಸೊಂಪನ್ನಾಲಿಸಿ 9 ಘಂಟೆಗೆ ಗೌರೀಬಿದನೂರಿಗೆ ಪ್ರಯಾಣ ಬೆಳಸಿದರು.

ಮದ್ದಗಿರಿ.—ಇಲ್ಲಿ 2-3 ವಾರಗಳಿಂದ ಬಿಸಿಲಿನ ತಾಪ ಹೆಚ್ಚು, ರಾತ್ರಿ ಬೆಳಗಿನ ಝಾವ 2 ಘಂಟೆಯಾಗಾವತ್ತು ವಿಪರೀತ ಗಾಳಿ ಬೀಸುತ್ತದೆ. ಇದರಿಂದ ಭಾವಿಗಳಲ್ಲಿ ನೀರು ದೊರೆಯುವುದು ಪ್ರಯಾಸವಾಗಿದೆ. ಟೌನ್ ಉಪಯೋಗಕ್ಕೆ ಮುಖ್ಯವಾಗಿರತಕ್ಕ ತೆಂಗಿನಮರದ ಸೀನೀರು ಭಾವಿಯನ್ನು ಮುನ್ಸಿಪಲ್ ಆಫೀಸಿನವರು ಗಮನಕ್ಕೆ ತಂದು ಪ್ರಜೆಗಳಿಗೆ ಅನುಕೂಲವಾಗುವಂತೆ ಸದರಿ ಭಾವಿಯನ್ನು ಪಾಕು ಮಾಡಿಸಿದರು ಈಗ ಅದರಲ್ಲಿ ನೀರು ಸರಿಯಾಗಿ ಸಿಕ್ಕುತ್ತಲಿವೆ. ಇದರಂತೆ ಟೌನ್ ಮಧ್ಯರಾಸ್ತೆಗಳಲ್ಲಿ ಇರತಕ್ಕ ಕೆಲವು ಭಾವಿಗಳನ್ನು ಆಳಮಾಡಿಸಿ ನೀರು ಸಿಕ್ಕುವ ಹಾಗೆ ಅನುಕೂಲಪಡಿಸಿಯಾರೆಂದು ಹಾರೈಸುತ್ತಿರುವರು.—ಈ ಸಾಲಿನಲ್ಲಿ ಪ್ರಜೆಗಳಿಗೆ ಮಳೆ ಒಮ್ಮೆಬ್ಬ ಸರಿಯಾದ ಫಸಲು ಕೈಸೇರದೆ ಇರುವದು ಎಲ್ಲಾ ಅಧಿಕಾರಿಗಳಿಗೂ ಗೊತ್ತೇ ಇರುತ್ತೆ. ಇಂಥಾ ಕಾಲದಲ್ಲಿ ಸರ್ಕಾರದವರು ರೆವಿನ್ಯೂ ಕಂದಾಯದ ವಿಷಯದಲ್ಲಿ ರಿಯಾಯ್ತಿ ತೋರಿಸುವರೆಂದು ಹಾರೈಸುತ್ತಿರುವರು ಐಶ್ವರ್ಯವಂತರಿಗೆ ಕೊರತೆಯಿಲ್ಲ. ಬಡಜನಗಳ ಗೋಳು ವಿವರಿಸಲು ತೀರದು. ಇವರುಗಳ ವಿಷಯದಲ್ಲಾದರೂ ಸ್ವಲ್ಪ ಗಮನಕ್ಕೆ ತಂದು ಕಾಪಾಡಬೇಕೆಂದು ಹಾರೈಸುತ್ತಿರುವರು. ಈಗಾಗಲೇ 3 ವಿಪತ್ತು ಕಳೆಯಿತು. ಬಹಳ ಶ್ರಮಪಡುತ್ತಿರುವ ರೈತರನ್ನು ಘನವನ್ನು ಹೊಂದಿದ ಸರ್ಕಾರದವರು ಕಾಪಾಡಿ ಅವರುಗಳಿಗೆ ಒಂದು ವಾಯಿದೆ ವಗ್ಗೈರೆ ಕೊಡುತ್ತಾರೆಂದು ನಿರೀಕ್ಷಿಸಿಕೊಂಡಿರುತ್ತಾರೆ.—ಇಲ್ಲಿನ ಡಾಕ್ಟರು ರಾಜರತ್ನಂಪಿಳ್ಳೆಯವರು ಬೆಳಗ್ಗೆ 8 ಘಂಟೆವರಿವಿಗೂ ಟೌನ್ ಸರ್ಕೀಟುಮಾಡಿ ಬಾಯಿಲ್ ಇರತಕ್ಕ ಪ್ರತಿ ಮನೆಯನ್ನೂ ನೋಡಿಕೊಂಡು ಬಡ ಜನಗಳಿಗೆ ಧೈರ್ಯ ಹೇಳಿ ಬಾಯಿಲೆಯನ್ನು ಕುಟುಂಬ ಮಹನೀಯನಿಂದ ಗುಣಮಾಡುತ್ತಿರುವರು. ಮತ್ತು ರಾತ್ರಿ ಹೊತ್ತು ಎಷ್ಟೇ ಬಾಯಿಲೆ ಇರತಕ್ಕ ಮನೆಯವರು ಬಂದು ತಿಳಿಸಿದರೆ ಸ್ವಲ್ಪವೂ ಬೇಜಾರುಪಡದೆ ಅಂಥಾವರ ಮನೆಗೆ ಹೋಗಿ ತಕ್ಕ ಚಿಕಿತ್ಸೆಯನ್ನು ಮಾಡುತ್ತಿರುವರು. ಅವರಲ್ಲಿ

ಬಡವರು, ಐಶ್ವರ್ಯವಂತರು ಎಂಬ ಭೇದವಿಲ್ಲ ; ಎಲ್ಲರಿಗೂ ಬೇಕಾದವರಾಗಿ ದ್ದರೆ. ಕೂಲಗಿತ್ತಿ ನಂಜಮ್ಮನವರ ಕೆಲಸಗಳೂ ಸಂತೋಷಕರವಾಗಿರುತ್ತೆ. ಪ್ರಜೆಗಳು ಇವರುಗಳನ್ನು ಬಹಳವಾಗಿ ಕೊಂಡಾಡುತ್ತಿರುವರು.

ಅರಸೀಕೆರೆ ತಾ|| ದೊಡ್ಡಮೇಟಿಕುರ್ಕೆ.—ಶ್ರೀಮಾನ್ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಅನಿರೀಕ್ಷ್ಯವಾಗಿ ದುಷ್ಟನಿಗ್ರಹಾರ್ಥವಾಗಿ ಒದಗಿರುವ ಈ ಯುದ್ಧದಲ್ಲಿ ಚಕ್ರವರ್ತಿಯವರಿಗೆ ಜಯಲಕ್ಷ್ಮಿಯು ಕೈಸೇರಲೆಂದು ವಿಧಿಪೂರ್ವಕವಾಗಿ ದೇವರ ಸೇವಾ, ಬಹು ಜನ ಸಂತರ್ಪಣೆ ನಡೆಸಬೇಕೆಂದು ಮ|| ರಾ. ಎಚ್ ಹರಿಯಣ್ಣನವರು ಗ್ರಾಮಸ್ಥರಿಗೆ ತಿಳಿಸಿದ್ದರ ಮೇರೆ ಈ ಗ್ರಾಮದ ಮ|| ಗೌಡ ರಾ||. ಹರಿಯಪ್ಪನವರು, ಪ. ಹರಳೇಗೌಡರು, ಪ. ರಾಮಚ್ಚಗೌಡರು, ಸಾ. ಶಿವಪ್ಪನವರು ಮೊದಲಾದ ಗ್ರಾಮದ ಮುಖಂಡರುಗಳು ಈ ಕಾರ್ಯವನ್ನು ಆಗಮಾಡಬೇಕೆಂದು ಸರ್ವ ಸನ್ನಾಹವನ್ನೂ ಮಾಡಿಕೊಂಡು ಈ ಮಾಹೆ ತಾ 9 ನೇ ಭಾನುವಾರ ಸುತ್ತುಮುತ್ತಣ ಗ್ರಾಮಗಳ ದೇವರುಗಳನ್ನು ಬರಮಾಡಿಕೊಂಡರು. ಮತ್ತು ತೊಳಲಕೆರೆ ದೇವರ ರಜತಾಂದೋಳಿಕೋತ್ಸವವು ಸ್ವಮರ್ಯಾದೆಗಳಿಂದ ನಡೆಯಿತು. ಹಾಲ್ಕುರಿಕೆ ವಿರಕ್ತ ಮಠದ ನಿರಂಜನ ಮಹಾಸ್ವಾಮಿಗಳು, ಹುಲ್ಕೂರು ಶ್ರೀಮಠದ ಪಟ್ಟದ ಸ್ವಾಮಿಗಳು, ಚರಮೂರ್ತಿ ಸ್ವಾಮಿಗಳು ಮೊದಲಾದವರು ಈ ಗ್ರಾಮದ ರೇವಣಸಿದ್ಧೇಶ್ವರ ಮೊದಲಾದ ಸಮಸ್ತ ದೇವರುಗಳಿಗೂ ಮಹಾಭಿಷೇಕ ವಿಧಿಪೂರ್ವಕ ನೆರವೇರಿಸಿದರು. ಶ್ರೀ ಪ್ರಸನ್ನರಾಮೇಶ್ವರಸ್ವಾಮಿಯು ಮಂಗಳಾರತಿ ಕಾಲದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಜಯವಾಗಲೆಂದು ಸರ್ವರೂ ಪ್ರಾರ್ಥಿಸಿದರು. ಈ ಮಹಾ ಕಾರ್ಯಕ್ಕೆ ಸಾವಿರಾರು ಜನಗಳು ಬಂದಿದ್ದರು. ಇವರಿಗೆಲ್ಲಾ ದೊಡ್ಡ ಸಂತರ್ಪಣೆಯು ನಡೆಯಿತು. ಮ|| ರಾ||. ಹರಿಯಪ್ಪನವರು ತಮ್ಮ ಗೃಹದಲ್ಲಿ ಸುಮಾರು ಐನ ಬ್ರಾಹ್ಮಣರಿಗೆ ಸಮಾರಾಧನಾ ಮಾಡಿದರು. ಸಮಸ್ತ ವರ್ಣದವರಿಗೂ ಸಮಷ್ಟಿಯಿಂದ ಅನ್ನದಾನ ಮಾಡಬೇಕಾಗಿಯೂ, ಏನಾದರೂ ವ್ಯತ್ಯಾಸ ಬಾರದಾಗಿಯೂ ತೊಳಲಕೆರೆ ಮ|| ರಾ||. ಪುಟ್ಟಯ್ಯನವರು, ಮ|| ಹರಿಯಪ್ಪನವರು ಮುದ್ದು ನಂಜು ಜಾತಿ ಮತವೆಂಬ ಬಾಹ್ಯ ವರ್ತನೆಗಳನ್ನು ಬಿಟ್ಟು ಭಕ್ತಿಯೇ ಮುಖ್ಯವೆಂದು ಭಾವಿಸಿ ಪ್ರತಿ ಪಙ್ತಿಯಲ್ಲಿಯೂ ಸಂಚರಿಸಿ, ಬೇಕಾದವರಿಗೆ ಬೇಕಾದ ಪದಾರ್ಥಗಳನ್ನು ಒದಗಿಸುತ್ತಾ ಇದ್ದದ್ದು ತುಂಬಾ ಸಂತೋಷಕರವಾಗಿತ್ತು. ತಾ. 11 ನೇ ಮಂಗಳವಾರ ಯಥಾಪ್ರಕಾರ ಅಭಿಷೇಕ, ಮಂಗಳಾರತಿ, ಮಹಾ ಸಂತರ್ಪಣೆ ಕಾರ್ಯಗಳು ಜರುಗಿದವು —ಮಧ್ಯಾಹ್ನ 3 ಘಂಟೆಗೆ ಈ ಗ್ರಾಮದ ಸ್ಕೂಲ್ ಬಾಲಕರಿಂದ ಹಾಸನದಲ್ಲಿ ಈ ಮಾಹೆ 28-29 ರಲ್ಲಿ ನಡೆಯುವ ಟೀಚರ್ಸ್ ಕಾನ್ಫರೆನ್ಸಿನ ಪ್ರದರ್ಶನಕ್ಕೆ ತಯಾರಿಸಿದ್ದ ಕೈಗಾರಿಕೆ ಪದಾರ್ಥಗಳು ದಸರಾ ಮೆಂಬರ್ ಮ|| ಎಂ. ಎಚ್. ಹರಿಯಣ್ಣನವರ ಅಭಿಪ್ರಾಯದಂತೆ ಸ್ಕೂಲ್ ಹಾಲಿನಲ್ಲಿ ಹೆಡ್ ಮಾಸ್ಟರ್ ಕೃಷ್ಣಮೂರ್ತಿಗಳಿಂದ ಅಂದವಾಗಿ ಇಡಲ್ಪಟ್ಟವು. ಪ್ರದರ್ಶನ ಪ್ರಾರಂಭೋತ್ಸವವು ಲೀಡರ್ ಮ|| ಎ. ಹರಿಯಣ್ಣಯ್ಯನವರಿಂದ ಆರಂಭಗೊಂಡಿತು. ನಾಡಿನ ದೊಡ್ಡ ಮನುಷ್ಯರು ಪ್ರದರ್ಶನ ವಸ್ತುಗಳನ್ನು ನೋಡಿ ಮೆಚ್ಚಿಕೊಂಡು ಉತ್ತಮವಾದ ಪದಾರ್ಥಗಳನ್ನು ತಯಾರಿಸಿದ್ದ ವಿದ್ಯಾರ್ಥಿನಿಯರುಗಳಿಗೆ ಬಹುಮಾನವನ್ನು ದಯಪಾಲಿಸಿದರು. ಈ ಸಮಯದಲ್ಲಿ ಮ|| ಹರಿಯಣ್ಣನವರು ವ್ಯಾಪಾರ, ಕೈಗಾರಿಕೆ, ವ್ಯವಸಾಯ, ವಿದ್ಯಾಭಿವೃದ್ಧಿ, ಇವುಗಳ ವಿಚಾರವಾಗಿ ಸರ್ಕಾರದವರು ಮಾಡಿರತಕ್ಕ ಅನುಕೂಲಗಳನ್ನು ಕುರಿತು ಉಪನ್ಯಾಸ ಮಾಡಿದರು. ಅನಂತರ ಶಾಲೆ ಬಾಲಕಿಯರಿಂದ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ ಮಹಾರಾಜರವರಿಗೂ ಮಂಗಳವಾಗಲೆಂದು ಗಾನವಾಡಿದರು. ತರುವಾಯ ವಿದ್ಯಾಭಿವೃದ್ಧಿಯಲ್ಲಿ ಕೇವಲ ಆಸಕ್ತಿಯನ್ನು ತೋರಿಸುತ್ತಿರುವ ಹೆಡ್ ಮಾಸ್ಟರವರಿಗೆ ವಂದನೆಯನ್ನು ಅರ್ಪಿಸಿದರು. ಸಾಯಂಕಾಲ ಶ್ರೀಪ್ರಸನ್ನರಾಮೇಶ್ವರಸ್ವಾಮಿಯ ಉತ್ಸವವು ಅತಿ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಈ ಮಹಾಕಾರ್ಯವು ಯಾವ ನ್ಯೂನತೆಯೂ ಇಲ್ಲದಂತೆ ಗ್ರಾಮಸ್ಥರು ಏಕೀಭವಿಸಿ ನಡೆಸಿದ್ದು ಶ್ಲಾಘನೀಯವಾಗಿದೆ. ಈ ರೀತಿ ಎಲ್ಲಾ ಕಡೆಗಳಲ್ಲಿಯೂ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಜಯವುಂಟಾಗಲೆಂದು ದೇವರ ಸೇವೆಗಳು ನಡೆಯಬೇಕೆಂಬುವದೇ ನಮ್ಮ ಪ್ರಾರ್ಥನೆ.

ಬೇಲೂರು.—ಈ ಊರು ಪೇಟೆಯಲ್ಲಿ ಇನ್ನೂ ಪ್ಲೇಗಿನ ಹಾವಳಿ ತಪ್ಪಿಲ್ಲ. ಕಳೆದ 5-6 ತಿಂಗಳ ಈಚೆಗೆಯಿಂದ್ದ ಇಲ್ಲಿ ಪ್ಲೇಗ್ ನೆಲಸಿರುವುದು ತುಂಬಾ ವ್ಯಸನಕರವಾಗಿದೆ. ಕಳೆದ ತಾ 9 ನೇ ಭಾನುವಾರ ಸಾಯಂಕಾಲ ಬಾಣಾವಾರದ ಕಡೆಯಿಂದ ನಮ್ಮ ಸಂಸ್ಥಾನದ ಚೀಫ್ ಕೌನ್ಸಿಲರ್ ಸರ್ದಾರ್ ಕಾಂತರಾಜೆ ಅರಸಿನವರ ಸವಾರಿಯು ನೋಟಿನಲ್ಲಿ ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರೊಡನೆ ದಯಮಾಡಿಸಲು ಇಲ್ಲಿನ ತಾಲ್ಲೂಕ್ ಕಛೇರಿ ಮುಂದುಗಡೆ ಸಿಂಗರಿಸಿದ್ದ ಪಿನ್ನ ಪೆಂಡಲಿನಲ್ಲಿ ಈ ಸ್ಥಳದ ವೈದಿಕ ವಿದ್ವಾಂಸ ಮಂಡಲಿಯವರೂ, ಲೌಕಿಕ ದೊಡ್ಡ ಮನುಷ್ಯರೂ [illegible], ಅರಸರವರ ಸವಾರಿ ಪೆಂಡಲಿಗೆ ತಲುಪಿದ ಕೂಡಲೆ ವೈದಿಕ ಮಂಡಲಿಯವರ ಆಶೀರ್ವಾದ ಪೂರ್ವಕ ಫಲಮಂತ್ರಾಕ್ಷತೆಗಳು ಕೊಡಲ್ಪಟ್ಟವು. ತರುವಾಯ ಲೌಕಿಕ ದೊಡ್ಡ ಮನುಷ್ಯರುಗಳ ನಜರ್ ಮುಜರೆಯಾಗಿ ಅನಂತರ ವಿಶ್ರಾಂತಿ ದಯಮಾಡಿಸಿದರು. ಮಾರನೇ ಸಾಯಂಕಾಲ ಬೇಕ್ಕಾದು ಪ್ರಾಂತ್ಯ ಸವಾರಿ ದಯಮಾಡಿಸಿ, ಹಗರೆಯಲ್ಲಿರುವ ಮಕೆಸಾಮಿಕ್ ಮೋತಲಾ ಸೆಡಸ್ಸ್ ಯುವಗೆ ಭೇಟಿ ದಯಪಾಲಿಸಿ ಅದರಿಗೆ ಸಂಬಂಧಪಟ್ಟ ಕೆಲವು ಕಾಗದ ಪತ್ರಗಳನ್ನು ತನಿಖೆಮಾಡಿ ಅನಂತರ ಬಿಕ್ಕೋಡು ಪ್ರಾಂತ್ಯದಲ್ಲಿ ಮಲೆನಾಡು ಪ್ರಜಾಭಿವೃದ್ಧಿ ಕಾರ್ಯಗಳು ಏನೇನು ನಡೆದಿರುವುವೆಂಬುದನ್ನು ಕಣ್ಣಾರ ನೋಡಿಬಂದು ವಾಪಸು [illegible] ಘಂಟೆಗೆ ಇಲ್ಲಿಗೆ ತಲುಪಿ, ಇಲ್ಲಿನ ಚನ್ನಕೇಶವ ಸ್ವಾಮಿಯ ದೇವಾಲಯಕ್ಕೆ ದಯಮಾಡಿ, ದೇವರ ದರ್ಶನಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ತೋರಿಸಲ್ಪಟ್ಟ ದೇವರ ಒಡವೆಗಳನ್ನೆಲ್ಲಾ ಪರೀಕ್ಷಿಸಿ, ಮೇ. ನರಸಿಂಹ [illegible] ಭಟ್ಟರು ಈ ದೇವಸ್ಥಾನದ ಪೂರ್ವ ಚರಿತ್ರೆಯನ್ನು ಸಂಕ್ಷೇಪವಾಗಿ ಸೂಚಿಸಿದ್ದನ್ನು ಆದರದಿಂದ ಆಲಿಸಿ, ಸುತ್ತು ಪ್ರಾಕಾರದಲ್ಲಿರುವ ಎಲ್ಲಾ ದೇವರ ದರ್ಶನವನ್ನು ಮಾಡಿಕೊಂಡು ದಯಮಾಡಿದರು. ಮಧ್ಯಾಹ್ನ ಡಿಸ್ಟ್ರಿಕ್ಟ್ ಎಂಜಿನಿಯರ್ ಇನ್ಸ್‌ಪೆಕ್ಟರ್ ಮಾಡಿಕೊಂಡು ಸಾಯಂಕಾಲ 4 ಘಂಟೆಗೆ ದರ್ಬಾರ್ ನಡೆಸಿ ಪ್ರಜೆಗಳ ಅಹವಾಲುಗಳನ್ನೆಲ್ಲಾ ಪ್ರೀತಿಯಿಂದ ವಿಚಾರಿಸಿ, ಅವರೆಲ್ಲರಿಗೂ ಸಮಾಧಾನಕರವಾದ ಸದುತ್ತರವನ್ನಿತ್ತು, ಇಲ್ಲಿನ ಮುನಿಸಿಪಲ್ ಪ್ರಜಾಮುಖಂಡರು ಕೊಟ್ಟ ಅಡ್ರೆಸ್ಸನ್ನು ಪ್ರೀತಿಯಿಂದ ಸ್ವೀಕರಿಸಿ ಅವರೆಲ್ಲರಿಗೂ ತಕ್ಕ ಉತ್ತರವಿತ್ತು ಬಳಿಕ ಸಾಯಂಕಾಲ 7½ ಘಂಟೆ ದರ್ಬಾರ್ ಬರಖಾಸ್ತಾಯಿತು ಮಾರನೇ ಬೆಳಗ್ಗೆ ನ್ಯಾಯ ಕಲಿಯುತ್ತಿರುವವರುಗಳಿಂದ ಅಲಂಕರಿಸಲ್ಪಟ್ಟಿದ್ದ ಟವನ್ ಹಾಲ್‌ನಲ್ಲಿಯೂ, ಹಾಲು ನಡೆಯುತ್ತಲೇ ಸಂಚರಿಸಿ ಇಲ್ಲಿನ ಲಕ್ಷ್ಮೀ ವಿಲಾಸ ಬಾಲಿಕಾ ಪಾಠಶಾಲೆ, ಸಂಸ್ಕೃತ ಪಾಠಶಾಲೆಗಳನ್ನು ನೋಡಿಬಂದು ಅಲ್ಲಿ ತರತರವಾಗಿ ನಡೆಯುತ್ತಿರುವ ಕಾರ್ಯಕ್ರಮಗಳನ್ನೆಲ್ಲಾ ಮೆಚ್ಚಿ ಸಂತೃಪ್ತಿ ಹೊಂದಿ ಕಾಫಿ ಪ್ಲಾಂಟರ್ ಮ|| ತಮ್ಮಯ್ಯನವರ ಮನೆಗೆ ದಯಮಾಡಿ ಅಲ್ಲಿ ಬೆಳಗಿನ ಉಪಾಹಾರವನ್ನು ಅಂಗೀಕರಿಸಿದವರಾಗಿ ಬೆಳಗ್ಗೆ 9 ಘಂಟೆಗೆ ಹಾಸನಕ್ಕೆ ಪ್ರಯಾಣ ಬೆಳಸಿದರು. — ಈ ತಾಲ್ಲೂಕಿನ ಎಲ್ಲಾ ಪ್ರಜೆಗಳ ಆಹ್ಲಾದಕ್ಕೆ ಪಾತ್ರರೂ ಪ್ರಜಾಹಿತೈಷಿಗಳೂ ಆಗಿರುವ ನಮ್ಮ ಅಮಲ್ದಾರ್ ಮ|| ಲಿಂಗೇಗೌಡರ್ ಬಾಬ್ತು ಯಾವ ಅರು ಸಾರಿಗಳ ರಜಾ ಪಡೆದು ಪ್ರಯಾಣ ಮಾಡುವರೆಂಬ ಸಮಾಚಾರ ಕೇಳಿದ ಸರ್ವರೂ ಇದರ ಅಗಲುವಿಕೆಗೆ ಅತ್ಯಂತ ವ್ಯಸನಪಡುತ್ತಿದ್ದಾರೆ ಈ ಕೊಂಡತೆಯು ಸಮಾರಣೆಯಾಗುವಂತೆ ನಮ್ಮ ಅಮಲ್ದಾರರವರು ವಾಪಸು ಎಂಬುದೇ ನಮ್ಮ ಮುಖ್ಯ ಕೋರಿಕೆಯಾಗಿದೆ—ಇವರೆಯೇ! ಇಲ್ಲಿನ ಆಸ್ಪತ್ರೆ ಡಾಕ್ಟರು ಬಿ ಕೆ ವೆಂಕಟಾಚಾರ್ಯರವರೂ ಈ ಊರಿಗೆ ಬಂದಲಾಗಾಯ್ತು ಕೇವಲ ಸರ್ಕಾರಿ ನೌಕರಿ ಎಂದು ಎಣಿಸದೆ ಕೇವಲ ಲೋಕೋಪಕಾರಬುದ್ಧಿಯನ್ನೇ ಉದ್ದೇಶಿಸಿಕೊಂಡು ಕಾಲಕಾಲಗಳಲ್ಲಿ ಪ್ರಜಾಸೇವೆಯನ್ನೆಸಗುತ್ತಾ, ಸಕಲರ ಪ್ರೀತಿಗೂ ಪಾತ್ರರಾಗಿರುವುದು ಅತ್ಯಂತ ಸ್ತೋತ್ರಾರ್ಹವಾಗಿದೆ.—ಇಲ್ಲಿಯ ಪ್ರಜೆಗಳ ಮನಸ್ಸಿಗೆ ಮುಖ್ಯ ಹೃದಯವಾಗಿರುವ ವಿಷ್ಣು ಸಮುದ್ರದಲ್ಲಿ ಜನರು ಕಕ್ಕಸ ಸಂಬಂಧವಾದ್ದನ್ನು ನೀರಿಗೆ ಕಲಕಿ ಹೋಗಿಸಿ ಮುಂತಾದ್ದು ಮಡಲವಕಾಶವಿಲ್ಲದಂತೆ ಬಿಗಿಯಾಗಿಯೂ ಕೆರೆಯ ಹತ್ತಿರ ಪೋಲೀಸ್ ಪಹರೆ ಇಟ್ಟು ಇದ್ದರು. ಈಚೆಗೆ ಯಾವ ಕಾರಣದಿಂದಲೋ ಈ ಪಹರೆಯನ್ನು ತಪ್ಪಿಸಿಬಿಟ್ಟಿರುವ ಪ್ರಯುಕ್ತ ಆ ಅಶುಚಿಯಾದ ನೀರನ್ನೇ ಜನರು ಕುಡಿದು ನಿರಂತರವಾದ ಬಾಧೆಗೆ ಈಡಾದವರಾಗಿದೆ. ನಮ್ಮ ಅಮಲ್ದಾರರವರೂ, ಡಾಕ್ಟರವರೂ ಸಹ ಈ ಕೊರತೆಯನ್ನು ಹೋಗಲಾಡಿಸುವುದರ ಮೂಲಕ ಪ್ರಜಾ ಆರೋಗ್ಯವನ್ನು ಕಾಪಾಡಿದ ಪುಣ್ಯಕೊಂದುವರೆಂದು ಹಾರೈಸುತ್ತೇನೆ.

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದ ರೈಲ್ವೆ ಹುಟ್ಟುವಳಿಯು ಕಳೆದ ಏಪ್ರಿಲ್ ತಾ. 1 ರಿಂದ ಸುಮಾರು 17½ ಕೋಟಿ ರೂಪಾಯಿ ಕಡಮೆಯಾಗಿರುತ್ತದೆ.

ಫರಿದ್‌ಪುರದ ಭಾಂಗಾ ಎಂಬ ಇಂಗ್ಲಿಷ್ ಸ್ಕೂಲಿನಲ್ಲಿ ಕಟ್ಟಿದ್ದ ಕೆಲವು ಸುಂದರವಾದ ಕುರ್ಚಿಗಳನ್ನು ಯಾರೋ ಸುಟ್ಟುಹಾಕಿದರು. ಪೋಲೀಸಿನವರೂ ಅಧಿಕಾರಿಗಳೂ ಅದರ ಪೂರ್ವೋತ್ತರವನ್ನು ತನಿಖೆಮಾಡುತ್ತಿದ್ದಾರೆ.

ಕೂಚ್ ಬೇಹಾರ್ ಮಹಾರಾಜರವರ ಮನೆಯಲ್ಲಿ ಮಹಾರಾಣಿಯವರ ನಾಲ್ಕುವರೆ ಲಕ್ಷ ರೂಪಾಯಿನ ನಗಗಳು ಕಳುವಾದವು. ಪತ್ತೆಮಾಡಿದವರಿಗೆ 30,000 ರೂಪಾಯಿ ಇನಾಮು ಕೊಡಿಸುವುದಾಗಿ ಪ್ರಕಟಮಾಡಿದಾರೆ.

ಬೊಂಬಾಯಿ ಪಟ್ಟಣದ ಮಗನ್ ಪೋಲೀಸ್ ಕೋರ್ಟಿನ ಗುಮಾಸ್ತೆಯಾದ ಪೀಟರ್ ಜಾರ್ಜ್ ಎಂಬುವನು 1,800 ರೂಪಾಯಿನ ತನಕ ತಿಂದುಹಾಕಿರುತ್ತಾನೆಂದು ಅವನ ಮೇಲೆ ಕ್ರಿಮಿನಲ್ ಮೊಕದ್ದಮೆ ಬಂದು ವಿಚಾರಣೆಯಲ್ಲಿದೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಯಿಂಗ್ಯಾನ್ ಎಂಬ ಪಟ್ಟಣದ ಕೋರ್ಟ್ ಬಂಗಲೆಗೂ ಅದರ ಪಕ್ಕದಲ್ಲಿರುವ ಎರಡು ಕಟ್ಟಡಗಳಿಗೂ ಬೆಂಕಿಬಿದ್ದು ಸುಟ್ಟುಹೋದವು. ಟಾಲತಿಯ ಮತ್ತು ಗುಟ್ಟಿನ ರಿಕಾರ್ಡುಗಳೂ ಕಾಗದ ಪತ್ರಗಳೂ ನಾಶವಾಗಿರುತ್ತವೆ.

ನಮ್ಮ ವೈಸ್‌ರಾಯಿ ಪ್ರಭುಗಳ ಜನ್ಮೋತ್ಸವವು ಜೂನ್ ತಾ. 20 ರಲ್ಲಿ ಆಗೋಣವರಿಂದ ಅದಕ್ಕೋಸ್ಕರ ಒದಗಿಸಲ್ಪಟ್ಟಿರುವ 5,000 ರೂಪಾಯಿ ಖರ್ಚುಮಾಡಿ ಆ ದಿನ ಹಿಂದುಸ್ಥಾನದ ಸಮಸ್ತ ಆಸ್ಪತ್ರೆಗಳೊಳಗೂ ಇರುವಂಥಾ ಚಿಣ್ಣ ಮಕ್ಕಳಿಗೆ ತಿಂಡಿಕೊಡಿಸಿ ಸಂತೋಷಪಡಿಸಬೇಕೆಂದು ಏರ್ಪಾಡಾಗಿದೆ.

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಬಹಳ ಎಚ್ಚರಿಕೆಯುಳ್ಳ ಏರ್ಪಾಡು ಮಾಡಿಟ್ಟುಕೊಂಡು ಏಕಕಾಲದಲ್ಲಿ 100 ಮಂದಿ ದರೋಡೆಕೋರರನ್ನು ದಸ್ತಗಿರಿ ಮಾಡಿದ್ದರಿಂದ ಬಾಕರ್‌ಗಂಜ್ ಡಿಸ್ಟ್ರಿಕ್ಟಿನೊಳಗೆ ದರೋಡೆಗಳ ಹುಟ್ಟೇ ಇಲ್ಲದೆ ಈಗ ಮೂರು ವಾರಗಳಿಂದಲೂ ಪ್ರಜೆಗಳು ನೆಮ್ಮದಿಯಾಗಿದಾರೆ.

ಮುಲ್ತಾನ್ ಡಿಸ್ಟ್ರಿಕ್ಟಿಗೆ ಸೇರಿದ ಕಬೀರ್‌ವಾಲಾ ಇಲಾಖೆಯ ಹಿಂದೂ ಪ್ರಜೆಗಳು ಅಲ್ಲಿನ ಮಹಮ್ಮದೀಯರಿಂದ ಅನುಭವಿಸುತ್ತಿರುವ ಕಷ್ಟನಷ್ಟ ಮನೋವ್ಯಥೆಗಳನ್ನೂ ಹೆದರಿಕೆಯನ್ನೂ ವಿವರಿಸಿ, ಅವನ್ನೆಲ್ಲಾ ನಿಲ್ಲಿಸಿ ಕೊಡಬೇಕೆಂದು ಅರ್ಜಿ ಬರೆದು ಪಂಜಾಬ್ ಲೆಫ್ಟಿನೆಂಟ್ ಗವರ್ನರವರಿಗೆ ಒಪ್ಪಿಸಿರುತ್ತಾರೆ.

ಬಳ್ಳಾರಿ ಟವನ್ನಲ್ಲಿ ಈ ತಿಂಗಳು ತಾ. 27-28-29 ಈ ಮೂರು ದಿನಗಳೂ ಆರ್ಯ ವೈಶ್ಯರ ಮಹಾ ಸಭೆಯು ನಡೆಯುವಂತೆ ಏರ್ಪಾಡಾಗಿದೆ. ಅದು ಅಪ್ಪಾರ್ ಮ|| ವಿ. ಸುಬ್ಬಶೆಟ್ಟರವರು ರಿಸೆಪ್‌ಷನ್ ಕಮಿಟಿಯ ಚೇರ್‌ಮನ್‌ರಾಗಿ [illegible] ಸಭೆಯ ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸುತ್ತಾರೆ.

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಝಾಂಗ್ ಡಿಸ್ಟ್ರಿಕ್ಟಿನಲ್ಲಿ ನಡೆದ ದರೋಡೆ ಮೊಕದ್ದಮೆಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು 22 ಮಂದಿ ಅಪರಾಧಿಗಳನ್ನು ದಯಾಕ್ಷಿಮಾಡಿ, ಇಬ್ಬರಿಗೆ ತಲಾ 7 ವರುಷವೂ, 10 ಮಂದಿಗೆ ತಲಾ 5 ವರುಷವೂ, 7 ಮಂದಿಗೆ ತಲಾ ಮೂರು ವರುಷವೂ ಕಠಿಣ ಸಜಾ ವಿಧಿಸಿ, ಮೂರು ಮಂದಿಯನ್ನು ಬಿಡಿಸಿಬಿಟ್ಟರು.

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಸಾರ್ಜಂಟನು ಯಾತಕ್ಕಾಗಿಯೋ ತನ್ನ ಬಂದೂಕನ್ನು ಹಾರಿಸಿದನು. ಅದರಿಂದ ಹೊರಟ ಗುಂಡು ದೂರದಲ್ಲಿ ತನ್ನ ಮನೆ ಜಗಲಿಯ ಮೇಲೆ ನಿಂತಿದ್ದ ಒಬ್ಬ ಮಾರ್ವಾಡಿ ಹೆಂಗಸಿನ ತಲೆಗೆ ಬಡಿದು ಅವಳನ್ನು ಕೆಡವಿಬಿಟ್ಟಿತು. ಜನರು ಸೇರಿ ಅವಳನ್ನು ಆಸ್ಪತ್ರೆಗೆ ಸಾಗಿಸಿದರು. ಅದರ ಪೂರ್ವೋತ್ತರವನ್ನು ಪೋಲೀಸಿನವರು ತನಿಖೆ ಮಾಡುತ್ತಿದಾರೆ.

ಅಮೃತಸರ ಪಟ್ಟಣದಲ್ಲಿ ಸಾಹಿದ್ ಅಕ್ಬರ್ ಎಂಬ ಪತ್ರಿಕೆಯ ಎಡಿಟರಾದ ಬರಕತ್ ಎಂಬಾತನು ಆರ್ಯಸಮಾಜವನ್ನು ದೂಷಣೆಮಾಡಿ ಆ ಪತ್ರಿಕೆಯಲ್ಲಿ ಬರೆದದ್ದಕ್ಕಾಗಿ ಮಿ. ಶೇಖ್ ನಜಮುದ್ದೀನ್ ಎಂಬ ಮ್ಯಾಜಿಸ್ಟ್ರೇಟರು ಆತನನ್ನು ದಯಾಕ್ಷಿಮಾಡಿ ಕಳೆದ ಗುರುವಾರ ಆತನಿಗೆ 400 ರೂಪಾಯಿ ಜುಲ್ಮಾನೆ, ಇಲ್ಲವೇ ಮೂರು ತಿಂಗಳ ಸಾದಾ ಸಜವೆಂಬ ಶಿಕ್ಷೆಯನ್ನು ವಿಧಿಸಿದರು.

ಬೊಂಬಾಯಿ ಪಟ್ಟಣದಲ್ಲಿ ಕ್ಷಯರೋಗ ನಿವಾರಣೆಯ ಕಾರ್ಯಗಳು ಬಹಳ ಏಕರೀತಿಯಿಂದ ನಡೆಯುತ್ತಿರುವುದಾಗಿಯೂ, ಆ ರೋಗವನ್ನು ಕೆಲವು ದಿನಗಳಲ್ಲೇ ಅಡಗಿಸಿಬಿಡುತ್ತಾರೆಂದೂ, ಈ ಕೆಲಸಕ್ಕೆ ಬೊಂಬಾಯಿ ಗವರ್ನ್‌ಮೆಂಟಿನವರು ಪ್ರಜೆಗಳು ಕೂಡಿಸುವ ಫಂಡಿಗೆ ಮೂರು ವರುಷಗಳ ತನಕ 10,000 ರೂಪಾಯಿನಂತೆ ದ್ರವ್ಯಸಹಾಯ ಮಾಡಲು ಒಪ್ಪಿ ಹುಕುಂ ಕೊಟ್ಟಿರುವುದಾಗಿಯೂ ತಿಳಿಯುವುದು.

ಕಳೆದ 7 ನೇ ತಾ. ಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಪ್ಲೇಗ್ ಉಪದ್ರವು 23,831 ಜನರಿಗೆ ತಗಲಿತು ; 20,764 ಮರಣಗಳಾದವು. ಈ ಮರಣ ಸಂಖ್ಯೆಗಳ ವಿವರವೇನಂದರೆ—ಬೊಂಬಾಯಿ ಅಧಿಪತ್ಯದಲ್ಲಿ 672 ಮರಣಗಳು, ಮದರಾಸ್ 5, ಬಂಗಾಳಾ 16, ಬೇಹಾರ್ ಮತ್ತು ಒರಿಸ್ಸಾ 300, ಸಂಯುಕ್ತ ಅಧಿಪತ್ಯಗಳು 1,603, ಪಂಜಾಬ್ 17,739 ಬರ್ಮ 19, ಮಧ್ಯ ಪ್ರಾಂತ್ಯಗಳು 124, ಎಲ್ಲಿಕಟ್ಟಿನ ಅಧಿಪತ್ಯ 75.

ರಂಗೂನ್ ಪಟ್ಟಣಕ್ಕೆ ಸೇರಿದ ಬಸೀನ್ ಪಟ್ಟಣದಲ್ಲಿ 11 ಮಂದಿ ದರೋಡೆಕಳ್ಳರು ಆಯುಧಪಾಣಿಗಳಾಗಿ ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಕೊಳ್ಳೆಹೊಡೆದು ಆಸ್ತಿಯನ್ನು ಸಾಗಿಸಿಕೊಂಡು ಹೋಗುವಲ್ಲಿ ಗ್ರಾಮಸ್ಥರು ಸೇರಿ ಅವರನ್ನು ತಡೆದು ಅವರ ಮೇಲೆ ಬಿದ್ದು ಹೊಡೆದಾಡಿದರು. ಗ್ರಾಮದ ಮುಖಂಡನೂ ಇನ್ನೂ ಮೂವರೂ ಸತ್ತರು. ಆರು ಜನಗಳಿಗೆ ಗಾಯಗಳಾದವು ಕಳ್ಳರ ಮುಖಂಡನಿಗೆ ಗಾಯವಾಯಿತು. ಆದರೂ ಕಳ್ಳರೆಲ್ಲಾ ತಪ್ಪಿಸಿಕೊಂಡು ಓಡಿಹೋದರು.

ಮದರಾಸ್ ಪಟ್ಟಣದ ಬೀಚ್ ರೋಡಿನಲ್ಲಿ ನೇಪಿಯರ್ ಬಿಡ್ಜ್ ಹತ್ತಿರ ಕಳೆದ ಶುಕ್ರವಾರ ಮಧ್ಯಾಹ್ನ ಮೂವರು ಗಂಡಸರೂ ಇಬ್ಬರು ಹೆಂಗಸರೂ ಒಂದೇ ಕಡೆ ಸತ್ತು ಬಿದ್ದಿದ್ದರು ಅವರು ಬೈರಾಗಿಗಳೆಂದು ಗೊತ್ತಾದಾಗ ಮದರಾಸಿನಲ್ಲಿರುವ ಬೈರಾಗಿಗಳನ್ನೆಲ್ಲಾ ಪೋಲೀಸಿನವರು ಕರತಂದು ಹೆಣಗಳನ್ನು ತೋರಿಸಿದಾಗ್ಯೂ, ಸತ್ತವರು ಯಾರೆಂಬುವುದು ತಿಳಿಯಲಿಲ್ಲ. ಶವಗಳ ಮೇಲೆ ಅನುಮಾನಾಸ್ಪದವಾದ ಗಾಯ ಮುಂತಾದವುಗಳೇನೂ ಇರಲಿಲ್ಲ. ಶವಗಳನ್ನು ಡಾಕ್ಟರ ಅಭಿಪ್ರಾಯಕ್ಕೆ ಕಳುಹಿಸಿದಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬೋಗ್ರ ಎಂಬ ಊರಿನಲ್ಲಿ ಈಚೆಗೆ ದರೋಡೆಗಳು ಹೆಚ್ಚಿ ಪ್ರಜಾ ನೆಮ್ಮದಿಗೆ ಬಹಳ ಕುಂದುಕವಾಗಿದ್ದದ್ದರಿಂದ ಆ ಊರಿನವರೇ ಸೇರಿ ಒಂದು ರಕ್ಷಣಾ ಪಾರ್ಟಿಯನ್ನು ಮಾಡಿಕೊಂಡು ರಾತ್ರಿ ಹೊತ್ತು ಕಾವಲು ಕಾಯುತ್ತಾರೆ. ಈ ಪಾರ್ಟಿಗೆ ಅಲ್ಲಿರುವ ದೊಡ್ಡ ಮನುಷ್ಯರು, ಸರ್ಕಾರಿ ನೌಕರರು, ವಕೀಲರು, ಗುಮಾಸ್ತರು, ಮೊಖ್ತಾರರು, ಸ್ಕೂಲ್ ಮಾಸ್ಟರುಗಳು, ವಿದ್ಯಾರ್ಥಿಗಳು, ಯುರೋಪಿಯನ್ ಪಾದ್ರಿಗಳು, ಇವರೆಲ್ಲಾ ಮೆಂಬರಾಗಿ ಸೇರಿ, ಎರಡು ತಂಗಡ ಮಾಡಿಕೊಂಡಿದಾರೆ. ರಾತ್ರಿ 12 ರಿಂದ 2 ಗಂಟೆ ವರೆಗೆ ಒಂದು ಪಂಗಡದವರೂ, 2 ರಿಂದ ಬೆಳಗಿನ 5 ಗಂಟೆ ವರೆಗೆ ಎರಡನೇ ಪಂಗಡದವರೂ ಊರೆಲ್ಲಾ ಸಂಚಾರ ಮಾಡುತ್ತಾ ಪ್ರತಿ ಒಂದು ಮನೆಗೂ ಹೋಗಿ ಜನರಿಗೆ ಎಚ್ಚರಿಕೆ ಧೈರ್ಯಗಳನ್ನು ಹೇಳುತ್ತಲೂ ಬಂದಿದಾರೆ. ಆ ಡಿಸ್ಟ್ರಿಕ್ಟಿನ ಮ್ಯಾಜಿಸ್ಟ್ರೇಟರು ಇಂಥಾ ಪಾರ್ಟಿಯವರಿಗೆ ಬೇಕಾದ ಸಹಾಯವನ್ನು ಒದಗಿಸುತ್ತಾ ಬಂದಿದಾರೆ.

ಕಳೆದ 1914 ನೇ ವರುಷದಲ್ಲಿ ಮದರಾಸ್ ಅಧಿಪತ್ಯದೊಳಗೆ ಕಾಡುಮೃಗಗಳಿಂದ 349 ಜನರು ಮೃತಪಟ್ಟರು; ಹಾವುಗಳು ಕಡಿದು 1,514 ಜನರು ಸತ್ತುಹೋದರು. ಆ ವರುಷ ಕಾಡುಮೃಗಗಳು 11,576 ಗೋಕರುಗಳನ್ನು ಕೊಂದು ತಿಂದವು; 1,712 ಗೋಕರುಗಳು ಹಾವು ಕಡಿದು ಸತ್ತವು. ಕೊಯಮುತ್ತೂರು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಕಾಡುಮೃಗಗಳಿಂದ ಅನೇಕರು ಕೊಲ್ಲಲ್ಪಟ್ಟರೆಂದೂ, ಇದಕ್ಕೆ ಆ ಡಿಸ್ಟ್ರಿಕ್ಟುಗಳ ಅಧಿಕಾರಿಗಳು ಗಮನಕೊಡಬೇಕೆಂದೂ ಮದರಾಸ್ ಗವರ್ನ್‌ಮೆಂಟಿನವರು ತಿಳಿಸಿದಾರೆ.

ಕಳೆದ 1ನೇ ತಾರೀಖಿನವರೆಗೆ ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ವಸೂಲಾಗಿರುವಂಥಾ ಹಣಗಳೆಷ್ಟೆಂದರೆ :—

ಸಿಂಲಾ ಬ್ಯಾಂಕಿಗೆ ಪಾವತಿ ಆಗಿರುವುದು		ರೂ.	38,99,323-2-8
ಬಂಗಾಳಾ ಬ್ಯಾಂಕಿಗೆ	,, ...	,,	36,09,455-8-1
ಬೊಂಬಾಯಿ ಬ್ಯಾಂಕಿಗೆ	,, ...	,,	7,84,670-8-4
ಮದರಾಸ್ ಬ್ಯಾಂಕಿಗೆ	,, ...	,,	6,32,149-7-7
		ಜುಮ್ಲಾ ರೂ.	89,25,598-10-8

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೊಳಂಬೊ ಪಟ್ಟಣದಲ್ಲಿ ಲಕ್ಷ್ಮಣಶೆಟ್ಟಿ ಎಂಬ ವರ್ತಕನು ಬ್ರಿಟಿಷರಿಗೆ ಶತ್ರುವಾಗಿರುವ ಜರ್ಮನಿ ವರ್ತಕರ ಕಂಪನಿಗೆ 2,332 ರೂಪಾಯಿ ಪಾವತಿಮಾಡಿ ಅವರಿಂದ ಕೆಲವು ವ್ಯಾಪಾರ ಸರಕುಗಳನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟನು. ಶತ್ರುವಿನ ಕೂಡ ವ್ಯಾಪಾರ ನಡಿಸಕೂಡದೆಂದು ಪ್ರಕಟಮಾಡಿದ್ದರೂ ಈ ವರ್ತಕನು ಹುಕುಮನ್ನು ಉಲ್ಲಂಘಿಸಿದ್ದರಿಂದ ಸರ್ಕಾರದವರು ಅವನ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು. ಮ್ಯಾಜಿಸ್ಟ್ರೇಟರು ಆ ವರ್ತಕನಿಗೆ 7,500 ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದ ಕ್ಯಾನಿಂಗ್ ಟೌನ್ ಎಂಬ ವಿಭಾಗದಲ್ಲಿ ಸಾವಧಾನ ಮಲಿಕ್ ಎಂಬೊಬ್ಬ ಐಶ್ವರ್ಯವಂತನಾದ ಪ್ರಾಯಸಮರ್ಥನು ಸಣ್ಣ ವಯಸ್ಸಿನ ಗಂಡಸುಳ್ಳ ಗರತಿಯನ್ನು ಎತ್ತಿಕೊಂಡುಹೋಗಿ ಒಂದು ನೆಲಮಾಳಿಗೆ ಮನೆಯೊಳಗಿಟ್ಟುಕೊಂಡನು ಅದರೊಳಗೆ ಅವನು ಅವಳಿಗೆ ಬೇಕಾಗುವ ಆಹಾರ ವಸ್ತುಗಳನ್ನೂ ಭೋಗ್ಯ ಪದಾರ್ಥಗಳನ್ನೂ ಅಣಿಮಾಡಿ ಒದಗಿಸಿದ್ದನು. ಆದರೆ ಅವನ ಶತ್ರುವಿನಿಂದ ಪೋಲೀಸಿಗೆ ವರ್ತಮಾನ ತಿಳಿದು ಅವರು ಹೋಗಿ ಆ ಹುಡುಗಿಯನ್ನು ಬಂಧನದಿಂದ ಬಿಡಿಸಿ ಕರೆದು ತಂದಿದಾರೆ. ಆ ದುಷ್ಟನ ಮೇಲೆ ಮೊಕದ್ದಮೆ ಬಂದು ವಿಚಾರಣೆ ಆಗುತ್ತಿರುವುದು.

ಮದರಾಸಿನ ಹತ್ತಿರ ಇರುವ ತಿರುವಳ್ಳೂರು ರಥೋತ್ಸವಕ್ಕೆ ಮೊನ್ನೆ ಅಮಾವಾಸ್ಯೆಯ ದಿನ ಅನೇಕರು ಹೋಗಿದ್ದರು. ಒಬ್ಬ ನಾಯುಡುವು ತನ್ನ ಹೆಂಡತಿಯನ್ನೂ ಮಗುವನ್ನೂ ಕರೆದುಕೊಂಡು ಹೋಗಿ ದೇವಸ್ಥಾನದ ಬಳಿ ಇದ್ದ ಆನೆಯನ್ನು ನೋಡಿ ಅದರ ಮಾವಟಿಗನು ಇಲ್ಲದ್ದನ್ನು ಕಂಡು ತನ್ನ ಮಗುವಿನ ಸಮೇತ ಆ ಆನೆಯ ಮೇಲೆ ಕುಳಿತು ಅದರ ಮೇಲೆ ಸ್ವಲ್ಪ ದೂರ ಹೋದನು. ಅಷ್ಟರಲ್ಲೇ ಅದು ಅವರಿಬ್ಬರನ್ನೂ ಕೆಡವಿ ನಾಯುಡುವನ್ನು ತುಳಿದು ಕೊಂದುಹಾಕಿತು. ಮಗುವಿಗೆ ಏನೂ ಅಪಾಯವಾಗಿರಲಿಲ್ಲ. ತಾಯಿ ಮಗುವನ್ನೆತ್ತಿಕೊಂಡು, ಗಂಡನನ್ನು ಕಳೆದುಕೊಂಡದ್ದಕ್ಕಾಗಿ ಗೋಳಾಡುತ್ತಾ ಹೋದಳು.

ಅಯೋಧ್ಯಾ ಜಿಲ್ಲೆಗೆ ಸೇರಿದ ಧಾಮವಾ ಎಂಬ ತಾಲ್ಲೂಕಿನಲ್ಲಿರುವ ಏಕ್‌ವಾನ್ ಜಹಗೀರಿಯ ಯಜಮಾನರುಗಳಾದ ದಿವಿಜಯಬಹದೂರ್ ಸಿಂಗ್‌ರವರೂ, ಮಿತ್ರಸೇನಸಿಂಗ್‌ರವರೂ ತಮ್ಮ ಜಮೀನ್‌ದಾರಿಯಲ್ಲಿರುವ ಗಂಡಸರು ಈಗ ಸೈನ್ಯಕ್ಕೆ ಸೇರಿಕೊಂಡು ಶರವೇಗಾಗಿ ಯುದ್ಧಕ್ಕೆ ಹೋಗುವ ಪಕ್ಷದಲ್ಲಿ ಪ್ರತಿ ಒಬ್ಬರಿಗೂ ಐವತ್ತು ಎಕರೆ ಜಮೀನು ಕೊಡುವುದಾಗಿಯೂ, ಯುದ್ಧಭೂಮಿಯಲ್ಲಿ ಕೊಲೆಯಾದರೆ ಅವರ ಮನೆ ಹಕ್ಕುದಾರರಿಗೆ ಆ ಜಮೀನು ಕೊಡಲ್ಪಡುವುದೆಂದೂ, ಗಂಡು ಸಂತತಿ ಇಲ್ಲದಿದ್ದರೆ ಅಂಥವರ ಹೆಂಡತಿಗೆ ಸಾಯುವ ತನಕ 3 ರೂಪಾಯಿ ಪೆನ್ಷನ್ ಕೊಡುತ್ತೇವೆಂದೂ ಪ್ರಕಟಮಾಡಿ ಪ್ರೋತ್ಸಾಹಪಡಿಸಿರುತ್ತಾರೆ.

ರಂಗೂನ್ ಪಟ್ಟಣದಲ್ಲಿ ಸರಾಂಗ್ ಅಬ್ದುಲ್ ರಹೀಂ ಎಂಬುವನೂ ಅವನ ಕಡೆಯ 33 ಜನಗಳೂ ವುಸ್ತರ್‌ಷೀರ್ ಎಂಬ ಹಡಗಿನಲ್ಲಿ ಹನ್ನೆರಡು ತಿಂಗಳ ತನಕ ಕೆಲಸಮಾಡುವುದಾಗಿ ಒಪ್ಪಿಕೊಂಡು ಮೂರು ತಿಂಗಳ ನಂತರ ಅಂದರೆ ಕಳೆದ ತಾ. 6 ರಲ್ಲಿ ಹಡಗಿನಲ್ಲಿ ಕೆಲಸಕ್ಕೆ ಬರುವುದಿಲ್ಲವೆಂದು ನಿಂತುಬಿಟ್ಟರು. ಹಡಗಿನ ಅಧಿಕಾರಿಯು ಅವರ ಮೇಲೆ ಫಿರ್ಯಾದು ಮಾಡಿದನು. ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ತನಿಖೆಮಾಡಿದಾಗ ಅವರು ಕೆಲಸವನ್ನು ಬಿಟ್ಟದ್ದಕ್ಕೆ ಹೇಳಿದ ಕಾರಣಗಳು ತೃಪ್ತಿಕರವಾಗಿರಲಿಲ್ಲ. ಅದಕ್ಕಾಗಿ ಅವರಿಗೆಲ್ಲಾ ತಲಾ 2½ ರೂಪಾಯಿ ಲಾಗಾಯಿತು 3½ ರೂಪಾಯಿ ವರೆಗೆ ಜುಲ್ಮಾನೆಯನ್ನೂ, ಎಂಟೆಂಟು ದಿನಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ.

ಪೂನಾ ಪಟ್ಟಣದಲ್ಲಿ ಸೆಷನ್ಸ್ ಜಡ್ಜರಾದ ಮ|| ಬಾಲಕರಾಮ್‌ರವರು ಒಂದು ದರೋಡೆ ಗುಂಪಿನ ಕಳ್ಳರ ಮೇಲೆ ಬಂದಿದ್ದ ಮೊಕದ್ದಮೆಯನ್ನು ದಯಾಕ್ಷಿ ಮಾಡಿ ಕಳೆದ ವಾರ ಅಪರಾಧಿಗಳಲ್ಲಿ 12 ಜನರಿಗೆ ಯಾವಜ್ಜೀವವೂ ಬಂಕೋಲ್ ಶಿಕ್ಷೆಯನ್ನೂ, 4 ಮಂದಿಗೆ ತಲಾ 7 ವರುಷ ಬಂಕೋಲ್ ಸಜವನ್ನೂ, 7 ಜನರಿಗೆ ತಲಾ 3 ವರುಷ ಕಠಿಣಸಜವನ್ನೂ, 6 ಮಂದಿಗೆ ತಲಾ ಒಂದು ವರುಷವೂ, 10 ಜನರಿಗೆ ತಲಾ ಒಂದು ದಿನವೂ ಕಠಿಣ ಸಜವನ್ನು ವಿಧಿಸಿದ್ದಲ್ಲದೆ ಅವರೆಲ್ಲಾ ಜೈಲಿನಿಂದ ಬಿಡುಗಡೆ ಹೊಂದಿ ಬಂದ ನಂತರ ತಲಾ ಐದು ವರುಷ ಪೋಲೀಸಿನವರ ಉಸ್ತುವಾರಿಯಲ್ಲಿರಬೇಕೆಂದೂ, ಈ ಕಳ್ಳರ ಬಳಿ ಸಿಕ್ಕಿದ 15,000 ರೂಪಾಯಿನ ಬೆಲೆಬಾಳುವ ನಗಗಳನ್ನು ಸರ್ಕಾರಕ್ಕೆ ಸೇರಿಸಕೊಳ್ಳಬೇಕೆಂದೂ ತೀರ್ಮಾನಮಾಡಿದರು.

ಕಳೆದ ಮಾರ್ಚಿ ತಾ. 4 ರಲ್ಲಿ ನಮ್ಮ ವೈಸ್‌ರಾಯರವರು ಕಲ್ಕತ್ತಾ ಪಟ್ಟಣದಲ್ಲಿ ಮಾಜಿ ವೈಸ್‌ರಾಯರುಗಳಾಗಿದ್ದ ಲಾರ್ಡ್ ರಿಪನ್ ಮತ್ತು ಲಾರ್ಡ್ ಮಿಂಟೋ ಪ್ರಭುಗಳ ಭಾವಪ್ರತಿಮೆಗಳನ್ನು ಪೀಠಗಳ ಮೇಲೆ ನಿಲ್ಲಿಸಿ ಪ್ರತಿಷ್ಠೆ ಮಾಡಿದರು. ಈ ಉತ್ಸವದ ದಿನ ಅನೇಕ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಅಲ್ಲಿಗೆ ಕರೆಸಲಾಯಿತು. ಉತ್ಸವದ ಆವರಣದ ಹೊರಪಾರ್ಶ್ವದ ಬಾಗಿಲಲ್ಲಿ ಕಾವಲಾಗಿದ್ದ ಸಿಪಾಯಿಗಳಿಬ್ಬರು ಹಲವು ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ತಡೆದು ಅವರ ಸಾರೋಟುಗಳನ್ನು ತೋಧನೆಮಾಡಿದರು. ಅವರೆಲ್ಲಾ ತಮಗೆ ಇಂಥಾ ಉತ್ಸವದಲ್ಲಿ ಇಷ್ಟು ಮಟ್ಟಿನ ಅವಮಾನವಾಯಿತೆಂದು ವ್ಯಥೆಪಟ್ಟರು. ಗವರ್ನರವರು ಈ ಅಚಾತುರ್ಯದ ಪೂರ್ವೋತ್ತರವನ್ನು ತನಿಖೆಮಾಡಿಸಿ, ಆ ಸಿಪಾಯಿಗಳು ತಡೆದದ್ದು ಅಕ್ರಮವೆಂದೂ, ಇದು ತಮಗೆ ಬಹಳ ವ್ಯಸನವನ್ನುಂಟುಮಾಡಿದೆ ಎಂದೂ ಹೇಳಿ ಈಗ ಒಂದು ಇಸ್ತಿಹಾರನ್ನು ಪ್ರಕಟಮಾಡಿದಾರೆ.

ಬಂಗಾಳಕ್ಕೆ ಸೇರಿದ ಗೋಲಂಡೋ ಊರಿನ ಬಳಿ ಒಂದು ಕಳ್ಳರ ಗುಂಪು ದರೋಡೆಯನ್ನು ನಡಿಸಿ ಬೆಲ್ಲಾಚಿ ಎಂಬ ಊರಿನ ಕಡೆ ಹೋದರೆಂದು ವರ್ತಮಾನ ಬಂದದ್ದರಿಂದ ಪಬ್ನ ಮತ್ತು ಫರಿದ್ಪುರ ಡಿಸ್ಟ್ರಿಕ್ಟುಗಳ ಪೋಲೀಸ್ ಹುದ್ದೇದಾರರೂ ಕಾನ್‌ಸ್ಟೇಬಲ್‌ರೂ ಅವರನ್ನು ಹಿಡಿಯಬೇಕೆಂದು ಆಯುಧಪಾಣಿಗಳಾಗಿ ಅಲ್ಲಿಗೆ ಹೋದರು. ಬೆಲ್ಲಾಚಿಯಲ್ಲಿ ಗ್ರಾಮಸ್ಥರು ಇವರಾಯಿತಿ ಕಳ್ಳರನ್ನು ಹಿಡಿಯುವ ಪ್ರಯತ್ನಮಾಡಿದಾಗ ಕಳ್ಳರು ಅವರ ಮೇಲೆ ಸಿಸ್ತೂಲು

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮೇ 6 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು		ರೂ. 10,00,000
,, (2) ರಿಜರ್ವ್ ಫಂಡು	....	,, 26,000
,, (3) ಡಿಪಾಜಿಟ್ಟುಗಳು	....	,, 28,74,894
,, (4) ಇತರೆ	....	,, 59,617
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 39,59,611
ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 5,03,824
,, (2) ಖಾತೆ ಮತ್ತು ಇತರ ಸಾಲಗಳು	....	,, 26,07,516
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 4,29,252
,, (4) ಇನ್‌ವೆಸ್ಟ್‌ಮೆಂಟುಗಳು	....	,, 2,67,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	....	,, 1,29,591
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	....	,, 16,998
,, (7) ಇತರೆ	....	,, 16,053
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 39,59,611

ಡಬ್ಲಿಯು. ಸಿ ರೋಸ್, ಮ್ಯಾನೇಜರ್.

ಇಂಡಿಯದ ಡಿಫೆನ್ಸ್ ಆಕ್ಟ್.

ಇಂಡಿಯಾ ಸರಕಾರದವರು ರೂಪಿಸಿ ಜಾರಿಗೆ ತಂದು ಪ್ರಚುರ ಪಡಿಸಿದ 1915 ನೇ ಇಸವಿಯ ಇಂಡಿಯದ ಡಿಫೆನ್ಸ್ ಆಕ್ಟು ಎಂಬ ಇಂಡಿಯದ ಸಂರಕ್ಷಣಾ ಕಾನೂನಿನ 2 ನೇ ಪ್ರಕರಣವನ್ನು ಈ ಮೂಲಕ ಸರ್ವರ ತಿಳುವಳಿಕೆಗೆ ಪ್ರಕಟಿಸುತ್ತೇವೆ

ಯಾವನೊಬ್ಬನು ಈ ಕೆಳಗೆ ಕಾಣಿಸಿದ ಪ್ರಕಾರ ಏನಾದರೂ ಒಂದು ಹೇಳಿಕೆ ಯಾ ಕಥೆ ಸುದ್ದಿಗಳನ್ನು ಪ್ರಕಟಿಸಿ ಪ್ರಚುರ ಪಡಿಸಿದರೆ ಕೆಳಗೆ ನಮೂದಿಸಿದ ಶಿಕ್ಷೆಗೆ ಅರ್ಹನಾಗುವನು.

ಆ ಹೇಳಿಕೆ ಸುದ್ದಿ ವದಂತಿಗಳನ್ನು ಬಾಯಿಂದಲಾಗಲಿ, ಅಥವಾ ಬರವಣಿಗೆ ಮೂಲಕವಾಗಿಯಾಗಲಿ, ಸನ್ನೆಗಳಿಂದಾಗಲಿ, ದೃಶ್ಯವಾದ ಗುರುತು ಚಿತ್ರಗಳಿಂದಾಗಲಿ, ಇನ್ನು ಯಾವದೊಂದು ವಿಧದಿಂದಲಾಗಲಿ ಪ್ರಕಟಿಸಲೂ ಪ್ರಚುರ ಪಡಿಸಲೂ ಬಹುದು. ಅಥವಾ ಪ್ರಕಟಿಸಲೂ ಪ್ರಚುರ ಪಡಿಸಲೂ ಪ್ರಯತ್ನಿಸಬಹುದು. ಈ ಹೇಳಿಕೆ ಕಥೆ ಸುದ್ದಿಗಳು ಸುಳ್ಳಾಗಿರಬಹುದು, ಅಥವಾ ಸತ್ಯವೆಂದು ನಂಬಿಕೆಗೆ ನ್ಯಾಯವಾದ ಕಾರಣಗಳಿಲ್ಲದಿರಬಹುದು. ಈ ಕೃತ್ಯಕ್ಕೆ ಜನರೊಳಗೆ ಅಥವಾ ಜನಸಮೂಹದ ಯಾವದೊಂದು ಭಾಗದವರೊಳಗೂ ಭಯ ಯಾ ದಿಗಿಲು ಹುಟ್ಟಿಸುವವುಗಳು ಇಲ್ಲವೆ ಹುಟ್ಟಿಸಬಹುದಾಗುವ ಉದ್ದೇಶವಿರುವದು ಅಥವಾ ಅದಕ್ಕೆ ಮಹಾರಾಜಾ ಚಕ್ರವರ್ತಿಯವರ ಜಲನೆಲಗಳ ಸೈನ್ಯಗಳ ಜಯಕ್ಕಾಗಲಿ, ಮಹಾರಾಜಾ ಚಕ್ರವರ್ತಿಯವರ ಪಕ್ಷದ ಯಾವದೊಂದು ರಾಜ್ಯದವರ ಸೈನ್ಯಗಳ ಜಯಕ್ಕಾಗಲಿ ಅಪಾಯ ತರುವ ಅಥವಾ ಮೋಸ ತರಿಸಬಹುದಾದ ಉದ್ದೇಶವಿರುವುದು ಇಲ್ಲವೇ ಅದಕ್ಕೆ ಮಹಾರಾಜಾ ಚಕ್ರವರ್ತಿಯವರಿಗೆ ಪರದೇಶ ಸರಕಾರಗಳವರ ಸಂಗಡ ಇರುವ ಸ್ನೇಹಸಂಬಂಧಕ್ಕೆ ಕೇಡು ತರುವ ಯಾ ಕೇಡು ತರಬಹುದಾದ ಗುರಿ ಇರುವದು, ಇದರ ಹೊರತು ಅದಕ್ಕೆ ಮಹಾರಾಜಾ ಚಕ್ರವರ್ತಿಯವರ ಪ್ರಜೆಗಳಲ್ಲಿ ವಿವಿಧ ಸಮುದಾಯಗಳೊಳಗೆ ಹಗೆ ಮತ್ಸರವನ್ನು ಹುಟ್ಟಿಸಿ ಹೆಚ್ಚಿಸುವ ಅಥವಾ ಹುಟ್ಟಿಸಿ ವರ್ಧಿಸಬಹುದಾಗುವ ಉದ್ದೇಶವಿರುವದು.

ಇಂಥವರು ಯಾವ ತರದ ಶಿಕ್ಷೆಗೆ ಅರ್ಹವಾಗಿದಾರೆ ಎಂದರೆ—ಎರಡು ನಮೂನೆಯ ಕಾರಾಗೃಹ ಶಿಕ್ಷೆಯು ವಿಧಿಸಲ್ಪಡುವದು. ಇದು ಮೂರು ವರ್ಷಗಳ ತನಕವೂ ವಿಧಿಸಬಹುದಾದ ಯಾವದೊಂದು ಅವಧಿಯ ಶಿಕ್ಷೆಯಾಗಿರುವದು; ಅಥವಾ ಜುಲುಮೆಯ ಶಿಕ್ಷೆಗೆ ಅರ್ಹರಾಗಿರುವರು. ಅದಲ್ಲದೆ ಅಂಥವರಿಗೆ ಮಹಾರಾಜಾ ಚಕ್ರವರ್ತಿಯವರ ವೈರಿಗಳಿಗೆ ಸಹಾಯಬೇಕೆಂಬ ಉದ್ದೇಶವಿತ್ತೆಂಬದು ಪ್ರಮಾಣಪೂರ್ವಕ ತಿಳಿದುಬಂದ ಪಕ್ಷದಲ್ಲಿ ಮರಣದಂಡನೆ ಅಥವಾ ಮರಣಾಂತ ಬಾಕೋಲೆ ಶಿಕ್ಷೆ ಇಲ್ಲವೇ 10 ವರ್ಷಗಳ ತನಕವೂ ವಿಧಿಸಬಹುದಾದ ಸಜಾ ಎಂಬವುಗಳೇ

ಈ ಮೇಲಣ ಕ್ರಮ ಸೂತ್ರಕ್ಕೆ ವಿರೋಧವಾದ ಯಾವದೊಂದು ಅಪರಾಧವನ್ನು ಕೌನ್ಸಿಲ್ ಸಹಿತವಾದ ಗವರ್ನರ್ ಜನರಲರಾಗಲಿ, ಸ್ಥಳಿಕ ಸರ್ಕಾರದವರಾಗಲಿ, ಕೌನ್ಸಿಲ್ ಸಹಿತವಾದ ಗವರ್ನರ್ ಜನರಲರಿಂದ ಅಧಿಕಾರ ಪಡೆದ ಯಾವ ಆಫೀಸರನಾಗಲಿ ಕೊಟ್ಟ ಹುಕುಮಿನ ಮೂಲಕ ಅಥವಾ ಅಧಿಕಾರದ ದೆಸೆಯಿಂದ ಮಾಡಿದ ಫಿರ್ಯಾದಿಯ ಹೊರತು ಯಾವ ಕೋರ್ಟಿನವರಾದರೂ ಅದರ ತನಿಖೆಗೆ ಕೈ ಹಾಕಕೂಡದು

ಮೈಸೂರು ಗೆಜೆಟ್ ಸಂಗ್ರಹ.

ಈ ಸಲ ಚಕ್ರವರ್ತಿಯವರ ಜನ್ಮೋತ್ಸವದ ನಿಮಿತ್ತ ಜೂನ್ 3 ನೇ ತಾ. ರಜಾ ಕೊಟ್ಟಿದೆ ಎಂದು ಪ್ರಕಟಮಾಡಿದ್ದ ಹುಕುಮನ್ನು ರದ್ದು ಮಾಡಿದೆ.

ಸಬ್ ರಿಜಿಸ್ಟ್ರಾರ್ ಮ|| ರಾಘವೇಂದ್ರರಾಯರು ಕುಣಿಗಲ ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿದಾರೆ.

ಎ ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಕೃಷ್ಣರಾಯರು ಚಿಕ್ಕನಾಯಕನಹಳ್ಳಿ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಲ್ಪಟ್ಟಿದಾರೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಎ. ಸುಬ್ರಮಣ್ಯ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸ್ಪೆಷಲ್ ಆಫೀಸರ್ ಮ|| ಎಲ್. ಕೃಷ್ಣರಾಯರು ಡೆಪ್ಯುಟಿ ಕಮಿಷನರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಚಳ್ಳಕೆರೆ ಸಬ್ ಡಿವಿಜನ್ ಆಫೀಸರ್ ಮ|| ಎಸ್. ಚಕ್ರಪಾಣಿ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚಿತ್ರದುರ್ಗದ ಖಜಾನೆ ಅ. ಕಮಿಷನರು ಚಳ್ಳಕೆರೆ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು.

ಗವರ್ನ್‌ಮೆಂಟ್ ಛಾಪಖಾನೆಯ ಸೂಪರಿಂಟೆಂಡೆಂಟ್ ಮಿ. ಸಿ. ಎಚ್. ಯೇಟ್ಸ್‌ಯವರಿಗೆ ಮೇ ತಾ 7 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಡಿ. ಬಿ. ರಾಮಚಂದ್ರಮುದಲಿಯಾರ್ರವರು ಬದಲಿ ನೇಮಿಸಲ್ಪಟ್ಟಿದಾರೆ.

ಗವರ್ನ್‌ಮೆಂಟ್ ಡೆಪ್ಯುಟಿ ಸೆಕ್ರೆಟರಿ ಮಿ|| ಪಿ ಜಿ ಡಿಸೌಜಾರವರಿಗೆ ಮೇ ತಾ. 27 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗವರ್ನ್‌ಮೆಂಟ್ ಸೆಕ್ರೆಟರಿ ಮ|| ಡಿ. ಎಂ. ನರಸಿಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಬಾಬ್ತಿ ಕೆಲಸಗಳ ಛಾರ್ಜನ್ನು ಮಿ|| ಪಿ. ಜಿ. ಡಿಸೌಜಾರವರು ವಹಿಸಿರತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಎಂ. ನರಸಿಂಹಯ್ಯನವರು ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮ|| ಸಿ. ಗೋಪಾಲಾಚಾರ್ಯರವರನ್ನು ಜನವರಿ ತಾ. 23 ರಿಂದ ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರಾಗಿ ಖಾಯಂ ಮಾಡಿದೆ.

ಚಿತ್ರದುರ್ಗದ ಪ್ಲೀಡರ್ ಮ|| ಸಿ. ಅಬ್ದುಲ್ ಘನಿಯವರನ್ನು ಚಿಕ್ಕಮಗಳೂರು ಮುನ್ಸಿಫರಾಗಿ ನೇಮಿಸಿದೆ.

ಮುನ್ಸಿಫ್ ಮ|| ಡಿ. ಅಳಸಿಂಗ್ರಾಚಾರ್ರನ್ನು ಚಿಕ್ಕಮಗಳೂರಿನಿಂದ ತುಮಕೂರಿಗೆ 2 ನೇ ಮುನ್ಸಿಫರಾಗಿ ವರ್ಗಮಾಡಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮ|| ಗಳಾದ ಎಸ್. ವೆಂಕಟರಮಣ ಶ್ರೋತ್ರಿಯವರು ಶ್ರೀರಂಗಪಟ್ಟಣದಿಂದ ಚಳ್ಳಕೆರೆಗೆ, ಕೆ. ಹನುಮಂತರಾಯರು ಚಳ್ಳಕೆರೆಯಿಂದ ದಾವಣಗೆರೆಗೆ, ಕೆ. ವೇದಾಂತಯ್ಯಂಗಾರ್ರು ದಾವಣಗೆರೆಯಿಂದ ಶ್ರೀರಂಗಪಟ್ಟಣಕ್ಕೆ.

ಮುಂದೆ ಹೇಳುವ ಅ|| ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮಿ|| ಜಹಿರುದ್ದೀನ್ ಮೆಕ್ಕಿಯವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯಿಂದ ಸಾಗರ್ ಸಬ್ ಡಿವಿಜನ್‌ಗೆ, ಮ|| ಗಳಾದ ಎನ್. ನಾರಾಯಣರಾಯರು ಸಾಗರ್ ಸಬ್ ಡಿವಿಜನ್‌ನಿಂದ ಚಳ್ಳಕೆರೆ ಸಬ್ ಡಿವಿಜನ್‌ಗೆ, ಎಸ್. ಚಕ್ರಪಾಣಿ ಅಯ್ಯಂಗಾರ್ರು ಚಳ್ಳಕೆರೆ ಸಬ್ ಡಿವಿಜನ್‌ನಿಂದ ಹಾಸನ್ ಡಿಸ್ಟ್ರಿಕ್ಟ್ ಖಜಾನೆಗೆ, ಸಿ. ಗೋಪಾಲಾಚಾರ್ರು ಹಾಸನ್ ಡಿಸ್ಟ್ರಿಕ್ಟ್ ಖಜಾನೆಯಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಗೆ, ಎ. ಮೃತ್ಯುಂಜಯ ಅಯ್ಯರವರು ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯಿಂದ ತುಮಕೂರು ಡಿಸ್ಟ್ರಿಕ್ಟ್ ಖಜಾನೆಗೆ, ನರಸಿಂಗರಾವ್ ಪೂರ್ಣಯ್ಯನವರು ತುಮಕೂರು ಡಿಸ್ಟ್ರಿಕ್ಟ್ ಖಜಾನೆಯಿಂದ ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಗೆ.

ಹೊಳಲ್ಕೆರೆ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಮ|| ಸಿ. ಕಾಶೀನಾಥರಾಯರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮ|| ಸಿ. ನಾರಾಯಣರಾಯರಿಗೆ ಸಾಕ್ಷಿಗಳ ಹೇಳಿಕೆಗಳನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಿದೆ.

ಎಕನಾಮಿಕ್ ಕಾನ್‌ಫರೆನ್ಸಿನ ಸೆಕ್ರೆಟರಿ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮ|| ಬಿ. ಟಿ. ಸೀತಾರಾಮಯ್ಯನವರು ರಜದ ಮೇಲಿರುವಾಗ್ಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಎಚ್. ಶ್ರೀನಿವಾಸರಾಯರು ಸಾಗರದ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಆನೆಕಲ್ ತಾಲ್ಲೂಕು ಅಮಲ್ದಾರ್ ಮ|| ಎನ್. ಗೋಪಾಲಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಅರಸೀಕೆರೆ—ಹಾಸನ—ಸಕಲೇಶಪುರ ಟಾಂಗಾ ಕಂಪನಿ.

ಅಯ್ಯಾ,—ಅರಸೀಕೆರೆಯಿಂದ ಹಾಸನಕ್ಕೂ ಸಕಲೇಶಪುರಕ್ಕೂ ರಸ್ತೆ ಹಾಕಿಟ್ಟಿರುವ ಮೇಲ್ ಟಾಂಗಾ ಏಜೆಂಟರು ಬೆಂಗಳೂರಲ್ಲಿ ರಿಟೈರಾದ ಕುದುರೆಗಳನ್ನೂ ಹೇಸರಕತ್ತೆಗಳನ್ನೂ ಕೊಂಡುಕೊಂಡು ಬಂದು ಇಲ್ಲಿ ಟಪ್ಪಾಲು ಗಾಡಿಗಳನ್ನು ನಡಿಸುತ್ತಾ ಇದಾರೆ. ಈ ಪ್ರಾಣಿಗಳ ಹಿಂಸೆಯನ್ನು ಪ್ರಯಾಣಿಕನಾದ ನಾನು ಕಂಡು ಬಹಳ ನೊಂದುಕೊಂಡು, ಇನ್ನು ಮೇಲೆ ಈ ಟಾಂಗಾದಲ್ಲಿ ಪ್ರಯಾಣಮಾಡಕೂಡದೆಂದು ನಿರ್ಧರಮಾಡಿಕೊಂಡೆನು. ಸರ್ಕಾರದವರು ಟಾಂಗಾ ಕುದುರೆಗಳ ವಿಷಯವಾಗಿ ರೂಲ್ಸು ಮಾಡಿದ ಕಾಲಮನ್ನು ತಮ್ಮ ಕಳೆದ 3 ನೇ ವಾರದ ಪತ್ರಿಕೆಯಲ್ಲಿ ನೋಡಿದೆನು. ಈ ರೂಲ್ಸು ನಿಮ್ಮ ಪತ್ರಿಕೆಗೆ ಮಾತ್ರವೇ ಹೊರತು ಹಾಸನದ ಟಾಂಗಾ ಸರ್ವಿಸ್ ಕಂಪನಿಗೆ ಒಳಪಡತಕ್ಕ ಹಾಗೆ ಕಾಣುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಸರಿಯಾದ ನಿಗಾವಣೆ ಮಾಡಿ, ಮುಖದಾಕ್ಷಿಣ್ಯಕ್ಕೆ ಒಳಪಡದೆ, ಮೂಗು ಪ್ರಾಣಿಗಳ ನರಕಯಾತನೆಯನ್ನು ತಪ್ಪಿಸುವರೆಂದು ನಂಬಿರುತ್ತೇನೆ.

ಒಬ್ಬ ಪ್ರಯಾಣಿಕ.

[ಮೂಗು ಪ್ರಾಣಿಗಳ ಹಿತಚಿಂತಕರು ಹೆಚ್ಚಿದ ಹಾಗೆಲ್ಲಾ ಅವುಗಳ ಹಿಂಸೆಯೂ ಕಡಮೆಯಾಗುವುದು —ಎಡಿ]

ಆಯುರ್ವೇದ ವೈದ್ಯಶಿಖಾಮಣಿಗಳಿಗೆ ವಿಜ್ಞಾಪನೆ.

ಆರ್ಯರೇ,—ನಿಖಿಲ ಭಾರತ ವರ್ಷೀಯ ಆಯುರ್ವೇದ ವೈದ್ಯ ಸಮ್ಮೇಳನ (All India Ayurvedic Conference) ವೆಂಬ ಒಂದು ಸಂಘವು ಈಗ್ಗೆ ಎಂಟು ವರುಷಗಳ ಕೆಳಗೆ ನಾಶಿಕಾ (Nasik) ಕ್ಷೇತ್ರದಲ್ಲಿ ಬರೋಡ ಮತ್ತು ದರ್ಭಾಂಗ ಮಹಾರಾಜರುಗಳ ಪೋಷಣೆಯಲ್ಲಿ ಸ್ಥಾಪಿಸಲ್ಪಟ್ಟು, ಕಳೆದ ಆರು ವರ್ಷಗಳಿಂದ ಅಲಹಾಬಾದ್ ಪಟ್ಟಣವೇ ಮುಖ್ಯ ಸ್ಥಾನವಾಗಿ ಏರ್ಪಡಿಸಿಕೊಂಡು, ಅಲ್ಲಿಂದಲೇ ಈ ಸಂಘದ ಕಾರ್ಯಗಳನ್ನು ನೆರವೇರಿಸುತ್ತಿರುವುದು ತಮಗೆಲ್ಲರಿಗೂ ಗೋಚರವೇ ಇದೆಯಷ್ಟೆ. ಆ ಲಾಗಾಯಿತು ವಾರ್ಷಿಕ ಸಭೆಗಳು ನಾಶಿಕ, ಬೊಂಬಾಯಿ, ಕಾನ್‌ಪುರ್, ಅಲಹಾಬಾದ್, ಮಧುರೆ, ಕಲ್ಕತ್ತಾ ಪಟ್ಟಣಗಳಲ್ಲಿ ನಡೆಯಿಸಲ್ಪಟ್ಟವು. ಆದರೆ ಇದುವರೆಗೂ ನಮ್ಮ ದಕ್ಷಿಣ ಹಿಂದುಸ್ಥಾನದಲ್ಲಿಯೂ ವಾರ್ಷಿಕ ಮಹಾಸಭೆ ನಡೆಯದಿರುವುದಕ್ಕೆ ನಮ್ಮ ದೇಶದಲ್ಲಿನ ವೈದ್ಯಶಿಖಾಮಣಿಗಳಿಗೆ ಈ ಸಂಘದ ವಿಷಯವೇ ತಿಳಿಯದಿರುವಿಕೆಯೇ ಮುಖ್ಯ ಕಾರಣವಾಗಿದೆ.

ಈ ವರ್ಷ ನಡೆಯಬೇಕಾದ ವಾರ್ಷಿಕ ಸಭೆಯು ಮತ್ತು ಆಯುರ್ವೇದ ವೈದ್ಯ ವಸ್ತು ಪ್ರದರ್ಶನೋತ್ಸವವೂ ನಮ್ಮ ದಕ್ಷಿಣ ಹಿಂದುಸ್ಥಾನದ ಪಟ್ಟಣಗಳಲ್ಲಿ ಮುಖ್ಯ ಪಟ್ಟಣವಾದ ಮದರಾಸಿನಲ್ಲಿಯೇ ನಡೆಯಿಸುವುದು ಕರ್ತವ್ಯವೆಂದೆಣಿಸಿ ಮದರಾಸ್ ಹೈ ಕೋರ್ಟ್ ರಿಟೈರ್ಡ್ ಜಡ್ಜ್ ಡಾಕ್ಟರ್ ಸರ್ ಎಸ್. ಸುಬ್ರಹ್ಮಣ್ಯ ಅಯ್ಯರ್, ಕೆ.ಸಿ.ಐ.ಇ., ಎಲ್ ಎಲ್. ಡಿ. ಯವರ ಸಭಾಧ್ಯಕ್ಷತೆಗೊಳಪಟ್ಟಿರುವ ಶ್ರೀಚನ್ನಪುರಿ ಆಯುರ್ವೇದ ಪ್ರಚಾರಿಣಿ ಸಭೆಯವರು ಮೇಲ್ಕಂಡ ವೈದ್ಯ ಸಮ್ಮೇಳನವನ್ನು ಮದ್ರಾಸಿಗೆ ದಯಮಾಡಿಸಬೇಕೆಂದು ಕೋರಿದರು. ಈ ದೊಡ್ಡ ಕಾರ್ಯವನ್ನು ಸಾಧಿಸಲು ಒಬ್ಬರಿಂದ ಸಾಧ್ಯವಲ್ಲ. ಆದುದರಿಂದ ವೈದ್ಯರು, ವೈದ್ಯ ವಿದ್ಯಾಭಿಮಾನಿಗಳೂ ಸಹ ತಮಗೆ ತಿಳಿದ ಮಟ್ಟಿಗೆ ತಮ್ಮ ಸುತ್ತುಮುತ್ತಲೂ ಇರತಕ್ಕ ವೈದ್ಯಶಿಖಾಮಣಿಗಳ ಮತ್ತು ನಮ್ಮ ಉದ್ದೇಶಗಳನ್ನು ನೆರವೇರಿಸಲು ಪ್ರೋತ್ಸಾಹಕರಾಗುವರೆಂದು ತಮಗೆ ತೋರುವ ಮಹನೀಯರುಗಳ ಹೆಸರುಗಳನ್ನೂ, ಅವರು ವಾಸವಾಗಿರತಕ್ಕ ಗ್ರಾಮದ ಹೆಸರು, ತಾಲ್ಲೂಕು, ಡಿಸ್ಟ್ರಿಕ್ಟು, ಪೋಸ್ಟು ಮುಂತಾದ ವಿವರಣೆಗಳನ್ನೂ ನಮಗೆ ತಿಳಿಸಬೇಕೆಂದು ಕೋರುವದಲ್ಲದೆ ನಮ್ಮ ಹಿಂದೂ ದೇಶಾಭಿವೃದ್ಧಿಗಾಗಿ ಮಾಡಬೇಕಾದ ಈ ಕೆಲಸವನ್ನು ಶ್ರಮೆಯೆಂದು ತಾವು ಭಾವಿಸಲಾರಿರೆಂದು ನಂಬುತ್ತೇನೆ.

ಈ ಸಭೆಯು ಮತ್ತು ಆಯುರ್ವೇದ ವಸ್ತು ಪ್ರದರ್ಶನ ಮಹೋತ್ಸವವೂ ಇದೇ ವರುಷದ ಡಿಸೆಂಬರ್ ತಿಂಗಳಲ್ಲಿ ನಡೆಯುವವು. ಸಭೆಯು ನಡೆಯುವ ತಾರೀಖುಗಳು ಮತ್ತು ಸಭೆಯಲ್ಲಿ ನಡೆಯತಕ್ಕ ಚರ್ಚಾಂಶಗಳು ಮುಂತಾದ ವಿವರಣೆಗಳೆಲ್ಲಾ ಆಗಿಂದಾಗ್ಗೆ ಪತ್ರಿಕಾ ಮುಖವಾಗಿ ತಿಳಿಸಲ್ಪಡುತ್ತೆ.

ತಮ್ಮ ವಿಧೇಯ

ಆಯುರ್ವೇದ ಕಲಾಭವನ, 12, ತಂಬುಚೆಟ್ಟಿ ಬೀದಿ, ಜಿ. ಟಿ., ಮದ್ರಾಸ್.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಯ, ಎ. ಪಿ. ಎಸ್. ಎ. ಎಂ. ಬಿ. ಮ್ಯಾನೇಜಿಂಗ್ ಡೈರೆಕ್ಟರ್, ಆಯುರ್ವೇದ ಪ್ರಚಾರಿಣೀ ಸಭಾ.

ತಾಲ್ಲೂಕು ವರ್ತಮಾನಗಳು

ಕೊಪ್ಪ ತಾ|| ಬಗ್ಗುಂಜಿ.—ಕಡೂರು ಡಿಸ್ಟ್ರಿಕ್ಟ್ ಉಪನ್ಯಾಸಕರಾದ ಮ|| ಬಿ. ಕೆ. ಸಿಂಗಯ್ಯಂಗಾರ್ರು ಮೊನ್ನೆ ದಿವಸ ನಮ್ಮ ಹದ್ದೆ ಗ್ರಾಮಕ್ಕೆ ಈ ದಿವಸ ಅಂದುಗುಳೇ ಗ್ರಾಮದ ಕಿರಿಗೆಬೈಲು ಸ್ಕೂಲಿನಲ್ಲಿಯೂ ಬಹು ಮಂದಿ ಗ್ರಾಮಸ್ಥರನ್ನೂ, ಪುರುಷರನ್ನೂ ಮತ್ತು ಯೌವನಸ್ಥರನ್ನೂ ಸೇರಿಸಿ ವಿದ್ಯೆ, ನಾಗರಿಕತೆ, ಬಾಲಕ ಬಾಲಕಿಯರ ಮತ್ತು ಯೌವನಸ್ಥರ ವಿದ್ಯಾಭ್ಯಾಸದ ಕ್ರಮ, ಪರಸ್ಪರ ಸಹಾಯ ಸಂಘ, ಆರೋಗ್ಯ, ವ್ಯವಸಾಯ ಮುಂತಾದ ವಿಷಯಗಳನ್ನು ಸದರೀ ಸ್ಥಳಗಳಲ್ಲಿ ಸೇರಿದ್ದ ಸಣ್ಣ ಬಾಲಕ ಬಾಲಕಿಯರಾದಿಯಾಗಿ ಎಲ್ಲರ ಮನಸ್ಸಿಗೂ ಚೆನ್ನಾಗಿ ಗ್ರಾಹ್ಯವಾಗುವಂತೆ ಬಹು ಸಮಾಧಾನವಾಗಿ ಉಪನ್ಯಾಸ ಮಾಡಿದರು. ಇದರಿಂದ ಇಲ್ಲಿ ಸೇರಿರತಕ್ಕವರೆಲ್ಲರೂ ಇವರ ಉಪನ್ಯಾಸದಿಂದ ನಮ್ಮ ಮಲೆನಾಡು ಪ್ರಜೆಗಳ ಏಳಿಗೆಗೆ ಸಾಧಕವಾದ ಅನೇಕ ಸಂಗತಿಗಳನ್ನು ತಿಳಿದುಕೊಂಡರೆಂಬುವದರಲ್ಲಿ ಸಂಶಯವಿಲ್ಲ. ಸರಕಾರದವರು ನಮ್ಮಗಳ ಪುರೋಭಿವೃದ್ಧಿಗಾಗಿ ಇಂಥಾ ಏರ್ಪಾಡುಗಳನ್ನು ನಡಿಸಿದ್ದಕ್ಕಾಗಿ ಬಹಳ ಕೃತಜ್ಞರಾಗಿದೇವೆ.

ಹಾಸನದ ತಾ|| ಕಟ್ಟಾಯ.—ಗವರ್ನ್‌ಮೆಂಟ್ ಉಪನ್ಯಾಸಕರಾದ ಮ|| ಬಿ. ಕೆ. ವೆಂಕಟಾಚಾರ್ಯರು ಹಾಸನ ತಾಲ್ಲೂಕು ಕಟ್ಟಾಯದ ಗ್ರಾಮಕ್ಕೆ ದಯಮಾಡಿ ಪ್ರಜೆಗಳನ್ನೆಲ್ಲಾ ಸೇರಿಸಿ ಗಂಡು ಮತ್ತು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಅವಶ್ಯಕತೆ, ಪರಸ್ಪರ ಸಹಾಯಕ ಸಂಘದ ಪ್ರಯೋಜನ, ಆರೋಗ್ಯ ವಿಚಾರ, ಸತ್ಕಾಲಕ್ಷೇಪ ಕ್ರಮ, ವ್ಯವಸಾಯದ ನೂತನ ಕ್ರಮದ ವಿವರಣೆ, ಅಪಾಯ ಕಾಲದಲ್ಲಿ ತಕ್ಷಣದಲ್ಲಿ ಮಾಡಬೇಕಾದ ಉಪಾಯಗಳು, ಸರ್ಕಾರದವರು ಪ್ರಜೆಗಳಿಗೆ ಮಾಡುತ್ತಿರುವ ಉಪಕಾರಗಳ ವಿವರಣೆ ಮುಂತಾದ ವಿಷಯಗಳನ್ನು ಚೆನ್ನಾಗಿ ತಕ್ಕ ದೃಷ್ಟಾಂತಗಳೊಡನೆ ವಿವರಿಸಿ ಬೋಧಿಸಿದರು. ನೂರಾರು ಮಂದಿ ಹೆಂಗಸರು, ಗಂಡಸರು, ಮಕ್ಕಳೂ ಸಹ ಸೇರಿದ್ದರು. ಈ ಉಪನ್ಯಾಸವು ಸರ್ವರಿಗೂ ಆನಂದವನ್ನುಂಟುಮಾಡಿತು. ಈ ಸಭೆಯ ಆದಿ ಅಂತ್ಯ ಭಾಗಗಳಲ್ಲಿ ಸ್ಕೂಲ್ ಬಾಲಕ ಬಾಲಕಿಯರಿಂದ ಪಿಟೀಲ್ ವಾದನದೊಡನೆ ಭಜನೆ ಮತ್ತು ಚಕ್ರವರ್ತಿಯವರು ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದು ಸಭೆಯು ಮುಕ್ತಾಯವಾಯಿತು.

ಗೊಂಬೆಹೊಸೂರು ತಾ|| ಹೊಸಕೋಟೆ.—ಇಲ್ಲಿಗೆ ನಮ್ಮ ಮೈಸೂರು ಸಂಸ್ಥಾನದ 3 ನೇ ಕೌನ್ಸಿಲ್ ಮೆಂಬರ್ ಯಂ. ಕಾಂತರಾಜೆ ಅರಸಿನವರ ಜೊತೆ ಸಬ್ ಡಿವಿಜನ್ ಆಫೀಸರ್ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು, ಅಮಲ್ದಾರ್ ಮ|| ಸಿ. ವಿ. ಕೃಷ್ಣಸ್ವಾಮಿರಾಯರು, ಮತ್ತು ಇಂಜನಿಯರ್ ಇಲಾಖಾ ಮುಖ್ಯಾಧಿಕಾರಿಗಳು ಇವರೊಡನೆ ದಯಮಾಡಿದರು. ರಸ್ತೆಯಲ್ಲಿ ಚೇರ್ಮನ್ ಮ|| ಸಿ. ರಾಘವೇಂದ್ರ ರಾಯರ ಏರ್ಪಾಡಿನಂತೆ ಅಂದವಾಗಿ ಹಾಕಿಸಿದ್ದ ಚಪ್ಪರದ ಬಳಿ ಗ್ರಾಮಾಧಿಕಾರಿಗಳೂ, ಪುರ ಪ್ರಮುಖರೂ, ಯೂನಿಯನ್ ಮೆಂಬರುಗಳೂ ಮಂಗಳವಾದ್ಯಗಳೊಡನೆ ಕೌನ್ಸಿಲರ್ ಸಾಹೇಬರನ್ನು ಎದುರುಗೊಂಡು, ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿ ಸುಸ್ವಾಗತವನ್ನು ಬಯಸಿದರು. ವೈದಿಕ ಮಂಡಳಿಯವರು ಆಶೀರ್ವದಿಸಿ ಕೊಟ್ಟ ಫಲಮಂತ್ರಾಕ್ಷತೆಯನ್ನು ಅವರು ಸ್ವೀಕರಿಸಿ ಗ್ರಾಮದೊಳಕ್ಕೆ ಚಿತ್ತೈಸಿದರು. ಇಲ್ಲಿನ ಗರಲ್ಸ್ ಸ್ಕೂಲು, ವಾಚಕಶಾಲೆ, ಹಿಂದಿ ಬಾಯ್ಸ್ ಸ್ಕೂಲು, ಕೋಆಪರೇಟಿವ್ ಸೊಸೈಟಿ, ಕೆರೆ ಮುಂತಾದವುಗಳನ್ನು ಸಾವಕಾಶವಾಗಿ ಸಂದರ್ಶಿಸಿ, ಪ್ರಜೆಗಳ ವಿಜ್ಞಾಪನೆಗಳನ್ನು ಸಾವಧಾನದಿಂದ ಲಾಲಿಸಿ, ಯಥೋಚಿತವಾದ ಸದುತ್ತರಗಳನ್ನು ದಯಪಾಲಿಸಿ, ಅನಂತರ ವಿ. ಇ ಬಾಯ್ಸ್ ಸ್ಕೂಲಿಗೆ ದಯಮಾಡಿಸಿದರು. ಮ|| ಜಿ. ಸಿದ್ದಪ್ಪನವರು ಚಪ್ಪರ ತೋರಣಗಳಿಂದಲೂ, ಧ್ವಜಪಟಗಳಿಂದಲೂ ಅಲಂಕೃತವಾಗಿದ್ದ ಸ್ಕೂಲಿಗೆ ಅವರನ್ನು ಬರಮಾಡಿಕೊಂಡು, ಸುಸ್ವಾಗತವನ್ನು ಬಯಸಿದರು. ಬಾಲಕರ ಮನೋಹರವಾದ ಗಾನಗಳೂ, ಅಂಗಸಾಧನೆಯ ಆಟಗಳೂ ವಿನೋದಕರಗಳಾಗಿ ನಡೆದವು. ಕೌನ್ಸಿಲರವರು ಉಪಾಧ್ಯಾಯರವರ ಕಾರ್ಯ ಶ್ರದ್ಧೆಯನ್ನು ತಿಳಿದು ತುಂಬಾ ಸಂತೋಷಪಟ್ಟು ಹಿಂದಿರುಗಿದರು. ಚೇರ್ಮನ್ ಮ|| ಸಿ. ರಾಘವೇಂದ್ರರಾಯರ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿನ ಶ್ರದ್ಧೆಯೂ, ಪಾಠಶಾಲೆಯಲ್ಲಿನ ಏರ್ಪಾಡುಗಳೂ ನಮ್ಮ ಕೌನ್ಸಿಲರ್ ಸಾಹೇಬರವರ ಮನಸ್ಸಿಗೆ ತುಂಬಾ ಹರ್ಷವನ್ನುಂಟುಮಾಡಿದವು. ಅನಂತರ ಮಂಗಳವಾದ್ಯಗಳ ಸೊಂಪಿನಲ್ಲಿರಿಸಿ 9 ಘಂಟೆಗೆ ಗೋರೀಬಿದನೂರಿಗೆ ಪ್ರಯಾಣ ಬೆಳಸಿದರು.

ಮಧುಗಿರಿ.—ಇಲ್ಲಿ 2-3 ವಾರಗಳಿಂದ ಬಿಸಿಲಿನ ತಾಪ ಹೆಚ್ಚು. ರಾತ್ರಿ ಬೆಳಗಿನ ಝಾವ 3 ಘಂಟೆಯಾಗುತ್ತು ವಿಪರೀತ ಗಾಳಿ ಬೀಸುತ್ತದೆ. ಇದರಿಂದ ಭಾವಿಗಳಲ್ಲಿ ನೀರು ದೊರೆಯುವುದು ಪ್ರಯಾಸವಾಗಿದೆ. ಟೌನ್ ಉಪಯೋಗಕ್ಕೆ ಮುಖ್ಯವಾಗಿರತಕ್ಕ ತೆಂಗಿನಮರದ ತೀರ್ಥ ಭಾವಿಯನ್ನು ಮುನಿಸಿಪಲ್ ಆಫೀಸಿನವರು ಗಮನಕ್ಕೆ ತಂದು ಪ್ರಜೆಗಳಿಗೆ ಅನುಕೂಲವಾಗುವಂತೆ ಸದರಿ ಭಾವಿಯನ್ನು ಪಾಕು ಮಾಡಿಸಿದರು. ಈಗ ಅದರಲ್ಲಿ ನೀರು ಸರಿಯಾಗಿ ಸಿಕ್ಕುತ್ತಲಿದೆ. ಇದರಂತೆ ಟೌನ್ ಮಧ್ಯರಾಷ್ಟ್ರಗಳಲ್ಲಿ ಇರತಕ್ಕ ಕೆಲವು ಭಾವಿಗಳನ್ನು ಆಳ ಮಾಡಿಸಿ ನೀರು ಸಿಕ್ಕುವ ಹಾಗೆ ಅನುಕೂಲಪಡಿಸಿಯಾರೆಂದು ಹಾರೈಸುತ್ತಿರುವರು —ಈ ಸಾಲಿನಲ್ಲಿ ಪ್ರಜೆಗಳಿಗೆ ಮಳೆ ಹಿಮ್ಮೆಟ್ಟಿ ಸರಿಯಾದ ಫಸಲು ಕೈಸೇರದೆ ಇರುವದು ಎಲ್ಲಾ ಅಧಿಕಾರಿಗಳಿಗೂ ಗೊತ್ತೇ ಇರುತ್ತೆ. ಇಂಥಾ ಕಾಲದಲ್ಲಿ ಸರ್ಕಾರದವರು ರೆವಿನ್ಯೂ ಕಂದಾಯದ ವಿಷಯದಲ್ಲಿ ರಿಯಾಯಿತಿ ತೋರಿಸುವರೆಂದು ಹಾರೈಸುತ್ತಿರುವರು ಐಶ್ವರ್ಯವಂತರಿಗೆ ಕೊರತೆಯಿಲ್ಲ. ಬಡವರುಗಳ ಗೋಳು ವಿವರಿಸಲು ತೀರದು. ಇವರುಗಳ ವಿಷಯದಲ್ಲಾದರೂ ಸ್ವಲ್ಪ ಗಮನಕ್ಕೆ ತಂದು ಕಾಪಾಡ್ಯಾರೆಂದು ಹಾರೈಸುತ್ತಿರುವರು. ಈಗಾಗಲೇ 3 ವರ್ಷ ಕಳೆಯಿತು. ಬಹಳ ಶ್ರಮಪಡುತ್ತಿರುವ ರೈತರನ್ನು ಘನವನ್ನು ಹೊಂದಿದ ಸರ್ಕಾರದವರು ಕಾಪಾಡಿ ಅವರುಗಳಿಗೆ ಒಂದು ವಾಯಿದೆ ವಗೈರೆ ಕೊಡುತ್ತಾರೆಂದು ನಿರೀಕ್ಷಿಸಿಕೊಂಡಿರುತ್ತಾರೆ.—ಇಲ್ಲಿನ ಡಾಕ್ಟರು ರಾಜರತ್ನಂಪಿಳ್ಳೆಯವರು ಬೆಳಗ್ಗೆ 8 ಘಂಟೆವರಿವಿಗೂ ಟೌನ್ ಸರ್ಕೀಟುಮಾಡಿ ಖಾಯಿಲೆ ಇರತಕ್ಕ ಪ್ರತಿ ಮನೆಯನ್ನು ನೋಡಿಕೊಂಡು ಬಡ ಜನಗಳಿಗೆ ಧೈರ್ಯ ಹೇಳಿ ಖಾಯಿಲೆಯನ್ನು ತುಂಬಾ ಮೆಹನತ್ತಿನಿಂದ ಗುಣಮಾಡುತ್ತಿರುವರು. ಮತ್ತು ರಾತ್ರಿ ಹೊತ್ತು ಎಷ್ಟರೆ ಖಾಯಿಲೆ ಇರತಕ್ಕ ಮನೆಯವರು ಬಂದು ತಿಳಿಸಿದರೆ ಸ್ವಲ್ಪವೂ ಬೇಜಾರುಮಾಡದೆ ಅಂಥಾವರ ಮನೆಗೆ ಹೋಗಿ ತಕ್ಕ ಚಿಕಿತ್ಸೆಯನ್ನು ಮಾಡುತ್ತಿರುವರು. ಇವರಿಗೆ

ಬಡವರು, ಐಶ್ವರ್ಯವಂತರು ಎಂಬ ಭೇದವಿಲ್ಲ ; ಎಲ್ಲರಿಗೂ ಬೇಕಾದವರಾಗಿದ್ದಾರೆ. ಸೂಲಗಿತ್ತಿ ನಂಜಮ್ಮನವರ ಕೆಲಸಗಳೂ ಸಂತೋಷಕರವಾಗಿರುತ್ತೆ. ಪ್ರಜೆಗಳು ಇವರುಗಳನ್ನು ಬಹಳವಾಗಿ ಕೊಂಡಾಡುತ್ತಿರುವರು.

ಅರಸೀಕೆರೆ ತಾ॥ ದೊಡ್ಡಮೇಟಿಕುರ್ಕೆ.—ಶ್ರೀಮನ್ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಅನಿರೀಕ್ಷ್ಯವಾಗಿ ದುಷ್ಟನಿಗ್ರಹಾರ್ಥವಾಗಿ ಒದಗಿರುವ ಈ ಯುದ್ಧದಲ್ಲಿ ಚಕ್ರವರ್ತಿಯವರಿಗೆ ಜಯಲಕ್ಷ್ಮಿಯು ಕೈಸೇರಲೆಂದು ವಿಧಿಪೂರ್ವಕವಾಗಿ ದೇವರ ಸೇವಾ, ಬಡು ಜನ ಸಂತರ್ಪಣೆ ನಡಿಸಬೇಕೆಂದು ಮ॥ ಎಂ. ಎಚ್. ಹರಿಯಣ್ಣನವರು ಗ್ರಾಮಸ್ಥರಿಗೆ ತಿಳಿಸಿದ್ದರ ಮೇರೆ ಈ ಗ್ರಾಮದ ಮ॥ ಗಳಾದ ಶ್ಯಾ. ಹರಿಯಪ್ಪನವರು, ಪ. ಹರಳೇಗೌಡರು, ಪ. ರಾಮಜ್ಜಗೌಡರು, ಸಾ. ಶಿವಪ್ಪನವರು ಮೊದಲಾದ ಗ್ರಾಮದ ಮುಖಂಡರುಗಳು ಈ ಕಾರ್ಯವನ್ನು ಆಗಮಾಡಬೇಕೆಂದು ಸರ್ವ ಸನ್ನಾಹವನ್ನು ಮಾಡಿಕೊಂಡರು. ಈ ಮಾಹೆ ತಾ 9 ನೇ ಭಾನುವಾರ ಸುತ್ತುಮುತ್ತಣ ಗ್ರಾಮಗಳ ದೇವರುಗಳನ್ನು ಬರಮಾಡಿಕೊಂಡರು. ಮತ್ತು ಹೊಳಲಕೆರೆ ದೇವರ ರಜತಾಂಧೋಳಿಕೋತ್ಸವವು ತಕ್ಕ ಮರ್ಯಾದೆಗಳಿಂದ ನಡೆಯಿತು. ಹಾಲ್ಕುರಿಕೆ ವಿರಕ್ತ ಮಠದ ನಿರಂಜನ ಮಹಾಸ್ವಾಮಿಗಳು, ಹಲ್ಕೂರು ಶ್ರೀಮಠದ ಪಟ್ಟದ ಸ್ವಾಮಿಗಳು, ಚರಮೂರ್ತಿ ಸ್ವಾಮಿಗಳು ಮೊದಲಾದವರು ಈ ಗ್ರಾಮದ ರೇವಣಸಿದ್ಧೇಶ್ವರ ಮೊದಲಾದ ಸಮಸ್ತ ದೇವರುಗಳಿಗೂ ಮಹಾಭಿಷೇಕ ವಿಧಿಪೂರ್ವಕ ನೆರವೇರಿಸಿದರು. ಶ್ರೀ ಪ್ರಸನ್ನರಾಮೇಶ್ವರಸ್ವಾಮಿಯ ಮಂಗಳಾರತಿ ಕಾಲದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಜಯವಾಗಲೆಂದು ಸರ್ವರೂ ಪ್ರಾರ್ಥಿಸಿದರು. ಈ ಮಹಾ ಕಾರ್ಯಕ್ಕೆ ಸಾವಿರಾರು ಜನಗಳು ಬಂದಿದ್ದರು. ಇವರಿಗೆಲ್ಲಾ ದೊಡ್ಡ ಸಂತರ್ಪಣೆಯು ನಡೆಯಿತು. ಮ॥ ಶ್ಯಾ. ಹರಿಯಪ್ಪನವರು ತಮ್ಮ ಗೃಹದಲ್ಲಿ ನೂರಾರು ಜನ ಬ್ರಾಹ್ಮಣರಿಗೆ ಸಮಾರಾಧನಾ ಮಾಡಿದರು. ಸಮಸ್ತ ವರ್ಣದವರಿಗೂ ಸಮದೃಷ್ಟಿಯಿಂದ ಅನ್ನದಾನ ಮಾಡಬೇಕಾಗಿಯೂ, ಏನಾದರೂ ವ್ಯತ್ಯಾಸ ನಡೆದೀತಾಗಿಯೂ ಹೊಳಲಕೆರೆ ಮ॥ ಶ್ಯಾ. ಪುಟ್ಟಯ್ಯನವರು, ಮ॥ ಹರಿಯಪ್ಪನವರು ಖುದ್ದು ನಿಂತು ಜಾತಿ ಮತವೆಂಬ ಬಾಹ್ಯ ವರ್ತನೆಗಳನ್ನು ಬಿಟ್ಟು ಭೂತತೃಪ್ತಿಯೇ ಮುಖ್ಯವೆಂದು ಭಾವಿಸಿ ಪ್ರತಿ ಪಙ್ಕ್ತಿಯಲ್ಲಿಯೂ ಸಂಚರಿಸಿ, ಬೇಕಾದವರಿಗೆ ಬೇಕಾದ ಪದಾರ್ಥಗಳನ್ನು ಒದಗಿಸುತ್ತಾ ಇದ್ದದ್ದು ತುಂಬಾ ಸ್ತೋತ್ರಾರ್ಹವಾಗಿತ್ತು. ತಾ. 11 ನೇ ಮಂಗಳವಾರ ಯಥಾಪ್ರಕಾರ ಅಭಿಷೇಕ, ಮಂಗಳಾರತಿ, ಮಹಾ ಸಂತರ್ಪಣೆ ಕಾರ್ಯಗಳು ಜರುಗಿದವು.—ಮಧ್ಯಾಹ್ನ 3 ಘಂಟೆಗೆ ಈ ಗ್ರಾಮದ ಸ್ಕೂಲ್ ಬಾಲಕರಿಂದ ಹಾಸನದಲ್ಲಿ ಈ ಮಾಹೆ 28-29 ರಲ್ಲಿ ನಡೆಯುವ ಟೀಚರ್ಸ್ ಕಾನ್ಫರೆನ್ಸಿನ ಪ್ರದರ್ಶನಕ್ಕೆ ತಯಾರಿಸಿದ್ದ ಕೈಗಾರಿಕೆ ಪದಾರ್ಥಗಳು ದಸರಾ ಮೆಂಬರ್ ಮ॥ ಎಂ. ಎಚ್. ಹರಿಯಣ್ಣನವರ ಅಭಿಪ್ರಾಯದಂತೆ ಸ್ಕೂಲ್ ಹಾಲಿನಲ್ಲಿ ಹೆಡ್ ಮಾಸ್ಟರ್ ಕೃಷ್ಣಮೂರ್ತಿಗಳಿಂದ ಅಂದವಾಗಿ ಇಡಿಸಲ್ಪಟ್ಟವು. ಪ್ರದರ್ಶನ ಪ್ರಾರಂಭೋತ್ಸವವು ಶೇಕದಾರ್ ಮ॥ ಬಿ. ಹಿರಿಯಣ್ಣಯ್ಯನವರಿಂದ ಆರಂಭಗೊಂಡಿತು. ಹಾಜರಿದ್ದ ದೊಡ್ಡಮನುಷ್ಯರು ಪ್ರದರ್ಶನ ವಸ್ತುಗಳನ್ನು ನೋಡಿ ಮೆಚ್ಚಿಕೊಂಡು ಉತ್ತಮವಾದ ಪದಾರ್ಥಗಳನ್ನು ತಯಾರಿಸಿದ್ದ ವಿದ್ಯಾರ್ಥಿನಿಯರುಗಳಿಗೆ ಬಹುಮಾನವನ್ನು ದಯಪಾಲಿಸಿದರು. ಈ ಸಮಯದಲ್ಲಿ ಮ॥ ಹರಿಯಣ್ಣನವರು ವ್ಯಾಪಾರ, ಕೈಗಾರಿಕೆ, ವ್ಯವಸಾಯ, ವಿದ್ಯಾಭಿವೃದ್ಧಿ, ಇವುಗಳ ವಿಚಾರವಾಗಿ ಸರ್ಕಾರದವರು ಮಾಡಿರತಕ್ಕ ಅನುಕೂಲಗಳನ್ನು ಕುರಿತು ಉಪನ್ಯಾಸ ಮಾಡಿದರು. ಅನಂತರ ಬಾಲಕ ಬಾಲಕಿಯರಿಂದ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ಮಹಾರಾಜರವರಿಗೂ ಮಂಗಳವಾಗಲೆಂದು ಗಾನಮಾಡಿದರು. ತರುವಾಯ ವಿದ್ಯಾಭಿವೃದ್ಧಿಯಲ್ಲಿ ಕೇವಲ ಆಸಕ್ತಿಯನ್ನು ತೋರಿಸುತ್ತಿರುವ ಹೆಡ್ ಮಾಸ್ಟರವರಿಗೆ ವಂದನೆಯನ್ನು ಅರ್ಪಿಸಿದರು. ಸಾಯಂಕಾಲ ಶ್ರೀಪ್ರಸನ್ನರಾಮೇಶ್ವರಸ್ವಾಮಿಯ ಉತ್ಸವವು ಅತಿ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಈ ಮಹಾಕಾರ್ಯವು ಯಾವ ನ್ಯೂನತೆಯೂ ಇಲ್ಲದಂತೆ ಗ್ರಾಮಸ್ಥರು ಏಕೀಭವಿಸಿ ನಡಿಸಿದ್ದು ಶ್ಲಾಘನೀಯವಾಗಿದೆ. ಈ ರೀತಿ ಎಲ್ಲಾ ಕಡೆಗಳಲ್ಲೂ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಜಯವುಂಟಾಗಲೆಂದು ದೇವರ ಸೇವೆಗಳು ನಡೆಯಬೇಕೆಂಬುವದೇ ನಮ್ಮ ಪ್ರಾರ್ಥನೆ

ಬೇಲೂರು.—ಈ ಊರು ಪೇಟೆಯಲ್ಲಿ ಇನ್ನೂ ಪ್ಲೇಗಿನ ಹಾವಳಿ ತಪ್ಪಿಲ್ಲ. ಕಳೆದ 6–6 ತಿಂಗಳ ಲಾಗಾಯ್ತು ಇಲ್ಲಿ ಪ್ಲೇಗ್ ನೆಲಸಿರುವುದು ತುಂಬಾ ವ್ಯಸನಕರವಾಗಿದೆ. ಕಳೆದ ತಾ 9ನೇ ಭಾನುವಾರ ಸಾಯಂಕಾಲ ಬಾಣಾವಾರದ ಕಡೆಯಿಂದ ನಮ್ಮ ಸಂಸ್ಥಾನದ ಚೀಫ್ ಕೌನ್ಸಿಲರ್ ಸರ್ದಾರ್ ಕಾಂತರಾಜೆ ಅರಸಿನವರ ಸವಾರಿಯು ಮೋಟರಿನಲ್ಲಿ ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರೊಡನೆ ದಯಮಾಡಿಸಲು ಇಲ್ಲಿನ ತಾಲ್ಲೋಕ್ ಕಚೇರಿ ಮುಂದುಗಡೆ ಹಾಕಿದ್ದ ದಿವ್ಯ ಮಂಟಪದಲ್ಲಿ ಈ ಸ್ಥಳದ ವೈದಿಕ ವಿದ್ವಾಸ ಮಂಡಲಿಯವರೂ, ಲೌಕಿಕ ದೊಡ್ಡ ಮನುಷ್ಯರೂ ಬಾಳಿರಿಸ್ತ, ಅರಸರವರ ಸವಾರಿ ಮಂಟಪಕ್ಕೆ ತಲಪಿದ ಕೂಡ್ಲೆ ವೈದಿಕ ಮಂಡಲಿಯವರ ಆಶೀರ್ವಾದ ಪೂರ್ವಕ ಫಲಮಂತ್ರಾಕ್ಷತೆಗಳು ಸಮರ್ಪಿಸಲ್ಪಟ್ಟವು. ತರುವಾಯ ಲೌಕಿಕ ದೊಡ್ಡ ಮನುಷ್ಯರುಗಳ ನಜರ್ ಮುಜರೆಯಾಗಿ ಆನಂದ ಬಿಡಾರಕ್ಕೆ ದಯಮಾಡಿಸಿದರು. ಮಾರನೇ ಸಾಯಂಕಾಲ ಬಿಕ್ಕೋಡು ಪ್ರಾಂತ್ಯ ಸವಾರಿ ದಯಮಾಡಿಸಿ, ತಗರೆಯಲ್ಲಿರುವ ಯಕನಾಮಿಕ್ ಮಾಡಲ್ ಸೊಸೈಟಿಯವರಿಗೆ ಭೇಟಿ ದಯಪಾಲಿಸಿ ಅವರಿಗೆ ಸಂಬಂಧಪಟ್ಟ ಕೆಲವು ಉತ್ತಮ ಸಲಹೆಗಳನ್ನು ಅಪ್ಪಣೆಕೊಡಿಸಿ ಅನಂತರ ಬಿಕ್ಕೋಡು ಪ್ರಾಂತ್ಯದಲ್ಲಿ ಮಲೆನಾಡು ಪ್ರಜಾಭಿವೃದ್ಧಿ ಕಾರ್ಯಗಳು ಏನೇನು ನಡೆದಿರುವುದೆಂಬುದನ್ನು ಕಣ್ಣಾರ ಪರಾಂಬರಿಸಿ ವಾಪಸು 11 ಘಂಟೆಗೆ ಇಲ್ಲಿಗೆ ತಲಪಿ, ಇಲ್ಲಿನ ಚನ್ನಕೇಶವ ಸ್ವಾಮಿಯ ದೇವಾಲಯಕ್ಕೆ ದಯಮಾಡಿ, ದೇವರ ದರ್ಶನಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಸಂತೋಷಪಟ್ಟು ದೇವರ ಜವಾಹಿರಿಗಳನ್ನೆಲ್ಲಾ ಪರೀಕ್ಷಿಸಿ, ವೇ॥ ಸಂಪತ್ಕುಮಾರ ಭಟ್ಟರು ಈ ದೇವಸ್ಥಾನದ ಪೂರ್ವ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳಿಸಿದ್ದನ್ನು ಆದರದಿಂದ ಲಾಲಿಸಿ, ಸುತ್ತೂ ಪ್ರಾಕಾರದಲ್ಲಿರುವ ಎಲ್ಲಾ ದೇವರ ದರ್ಶನವನ್ನೂ ಮಾಡಿಕೊಂಡು ದಯಮಾಡಿದರು. ಮಧ್ಯಾಹ್ನ ತಾಲ್ಲೂಕ್ ಕಚೇರಿ ಇನ್ಸ್ಪೆಕ್ಷನ್ ಮಾಡಿಕೊಂಡು ಸಾಯಂಕಾಲ 4 ಘಂಟೆಗೆ ದರ್ಬಾರ್ ನಡಿಸಿ ಪ್ರಜೆಗಳ ಅಹವಾಲುಗಳನ್ನೆಲ್ಲಾ ಪ್ರೀತಿಯಿಂದ ವಿಚಾರಿಸಿ, ಅವರೆಲ್ಲರಿಗೂ ಸಮಯೋಚಿತವಾದ ಸದುತ್ತರವನ್ನಿತ್ತು, ಇಲ್ಲಿನ ಮಹಮ್ಮದೀಯ ಪ್ರಜಾಮುಖಂಡರು ಕೊಟ್ಟ ಅಡ್ರೆಸ್ಸನ್ನು ಪ್ರೀತಿಯಿಂದ ಸ್ವೀಕರಿಸಿ ಅವರೆಲ್ಲರಿಗೂ ತಕ್ಕ ಉತ್ತರವಿತ್ತು ಬಳಿಕ ಸಾಯಂಕಾಲ 7½ ಘಂಟೆ ದರ್ಬಾರ್ ಬರಖಾಸ್ತಾಯಿತು. ಮಾರನೇ ಬೆಳಗ್ಗೆ ಮಟಪ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದ ಟವನ್ ಒಳಭಾಗದಲ್ಲೆಲ್ಲಾ ಕಾಲು ನಡೆಯಿಂದಲೇ ಸಂಚರಿಸಿ ಇಲ್ಲಿನ ಲಕ್ಷ್ಮೀವಿಲಾಸ ಬಾಲಿಕಾ ಪಾಠಶಾಲೆ, ಸಂಸ್ಕೃತ ಪಾಠಶಾಲೆಗಳನ್ನು ಪರಾಂಬರಿಸಿ ಅನಂತರ ನಗರದ ಸಹಾಯಕಂಥವೆ ಕಾರ್ಯಕ್ರಮಗಳನ್ನೆಲ್ಲಾ ಪರೀಕ್ಷಿಸಿ ತೃಪ್ತಿಹೊಂದಿ ಕಾಫಿ ಪ್ಲಾಂಟರ್ ಮ॥ ತಮ್ಮಯ್ಯನವರ ಮನೆಗೆ ದಯಮಾಡಿ ಅಲ್ಲಿ ಬೆಳಗಿನ ಟೀಪಾರ್ಟಿಯನ್ನು ಅಂಗೀಕರಿಸಿದವರಾಗಿ ಬೆಳಗ್ಗೆ 9 ಘಂಟೆಗೆ ಹಾಸನಕ್ಕೆ ಪ್ರಯಾಣ ಬೆಳಸಿದರು.—ಈ ತಾಲ್ಲೂಕಿನ ಎಲ್ಲಾ ಪ್ರಜೆಗಳ ಅತ್ಯಾದರಕ್ಕೆ ಪಾತ್ರರೂ ಪ್ರಜಾಹಿತೈಷಿಗಳೂ ಆಗಿರುವ ನಮ್ಮ ಅಮಲ್ದಾರ್ ಮ॥ ಲಿಂಗೇಗೌಡರ್ ಬಾಹಾದೂರವರು ಆರು ವಾರಗಳ ರಜಾ ಪಡೆದು ಪ್ರಯಾಣವಾಗುವರೆಂಬ ಸಮಾಚಾರ ಕೇಳಿದ ಸರ್ವರೂ ಇವರ ಅಗಲುವಿಕೆಗೆ ಅತ್ಯಂತ ವ್ಯಸನಪಡುತ್ತಿದ್ದಾರೆ. ಈ ಕೊರತೆಯು ನಿವಾರಣೆಯಾಗುವಂತೆ ನಮ್ಮ ಅಮಲ್ದಾರರವರು ವರ್ಗವಾಗಲಿ ಎಂಬುದೇ ನಮ್ಮ ಮುಖ್ಯ ಕೋರಿಕೆಯಾಗಿದೆ.—ಇವರಂತೆಯೇ ಇಲ್ಲಿನ ಆಸ್ಪತ್ರೆ ಡಾಕ್ಟರು ಸಿ. ಕೆ. ವೆಂಕಟಾಚಾರ್ಯರವರೂ ಈ ಊರಿಗೆ ಬಂದಲಾಗಾಯ್ತು ಕೇವಲ ಸರ್ಕಾರಿ ನೌಕರಿ ಎಂದು ಎಣಿಸದೆ ಕೇವಲ ಪರೋಪಕಾರಬುದ್ಧಿಯನ್ನೇ ಮುಖ್ಯವಾಗಿಟ್ಟುಕೊಂಡು ಬಾಲಕಾಲಗಳ ನ್ನದೆ ಪ್ರಜಾಸೇವೆಯನ್ನೆಸಗುತ್ತಾ, ಸಕಲರ ಪ್ರೀತಿಗೂ ಪಾತ್ರರಾಗಿರುವುದು ಅತ್ಯಂತ ಸ್ತೋತ್ರಾರ್ಹವಾಗಿದೆ.—ಇಲ್ಲಿಯ ಪ್ರಜೆಗಳ ಜೀವನಕ್ಕೆ ಮುಖ್ಯಾಶ್ರಯವಾಗಿರುವ ವಿಷ್ಣು ಸಮುದ್ರದಲ್ಲಿ ಜನರು ಕಕ್ಕಲ ಸಂಬಂಧವಾದ್ದನ್ನು ನೀರಿಗೆ ಕಲಕಿ ಹೇಸಿಕೆ ಮುಂತಾದ್ದು ಮಾಡಲವಕಾಶವಿಲ್ಲದಂತೆ ಯಾವಾಗ್ಯೂ ಕೆರೆಯ ಹತ್ತಿರ ಪೋಲೀಸ್ ಪಹರೆ ಇಟ್ಟು ಇದ್ದರು. ಈಚೆಗೆ ಯಾವ ಕಾರಣದಿಂದಲೋ ಈ ಪಹರೆಯನ್ನು ತಪ್ಪಿಸಿಬಿಟ್ಟಿರುವ ಪ್ರಯುಕ್ತ ಆ ಅಶುಚಿಯಾದ ನೀರನ್ನೇ ಜನರು ಕುಡಿದು ನಿರಂತರವಾದ ಖಾಯಿಲೆಗೆ ಆಸ್ಪದವಾಗಿದೆ. ನಮ್ಮ ಅಮಲ್ದಾರರವರೂ, ಡಾಕ್ಟರವರೂ ಸಹ ಈ ಕೊರತೆಯನ್ನು ಹೋಗಲಾಡಿಸುವುದರ ಮೂಲಕ ಪ್ರಜಾ ಆರೋಗ್ಯವನ್ನು ಕಾಪಾಡಿದ ಪುಣ್ಯಹೊಂದುವರೆಂದು ಹಾರೈಸುತ್ತೇನೆ.

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದ ರೈಲ್ವೆ ಹುಟ್ಟುವಳಿಯು ಕಳೆದ ಏಪ್ರಿಲ್ ತಾ. 1 ರಿಂದ ಸುಮಾರು 17½ ಕೋಟಿ ರೂಪಾಯಿ ಕಡಮೆಯಾಗಿರುತ್ತದೆ

ಫರಿದ್‌ಪುರದ ಭಾಂಗಾ ಎಂಬ ಇಂಗ್ಲಿಷ್ ಸ್ಕೂಲಿನಲ್ಲಿ ಕಟ್ಟಿದ್ದ ಕೆಲವು ಸುಂದರವಾದ ಚಿತ್ರಪಟಗಳನ್ನು ಯಾರೋ ಸುಟ್ಟುಹಾಕಿದರು. ಪೋಲೀಸಿನವರೂ ಅಧಿಕಾರಿಗಳೂ ಅದರ ಪೂರ್ವೋತ್ತರವನ್ನು ತನಿಖೆಮಾಡುತ್ತಿದ್ದಾರೆ.

ಕೂಚ್ ಬೀಹಾರ್ ಮಹಾರಾಜರವರ ಮನೆಯಲ್ಲಿ ಮಹಾರಾಣಿಯವರ ನಾಲ್ಕುವರೆ ಲಕ್ಷ ರೂಪಾಯಿನ ನಗಗಳು ಕಳುವಾದವು. ಪತ್ತೆಮಾಡಿದವರಿಗೆ 30,000 ರೂಪಾಯಿ ಇನಾಮು ಕೊಡಿಸುವುದಾಗಿ ಪ್ರಕಟಿಸಿದ್ದಾರೆ.

ಬೊಂಬಾಯಿ ಪಟ್ಟಣದ ಮಗಜ್ ಪೋಲೀಸ್ ಕೋರ್ಟಿನ ಗುಮಾಸ್ತೆಯಾದ ಪೀಟರ್ ಜಾರ್ಜ್ ಎಂಬುವನು 1,800 ರೂಪಾಯಿನ ಹಣ ತಿಂದುಹಾಕಿರುತ್ತಾನೆಂದು ಅವನ ಮೇಲೆ ಕ್ರಿಮಿನಲ್ ಮೊಕದ್ದಮೆ ಬಂದು ವಿಚಾರಣೆಯಲ್ಲಿದೆ.

ಬರ್ಮಾ ಆಧಿಪತ್ಯಕ್ಕೆ ಸೇರಿದ ಮಯಿಂಗ್ಯಾನ್ ಎಂಬ ಪಟ್ಟಣದ ಕೋರ್ಟ್ ಬಂಗಲೆಗೂ ಅದರ ಪಕ್ಕದಲ್ಲಿರುವ ಎರಡು ಕಟ್ಟಡಗಳಿಗೂ ಬೆಂಕಿಬಿದ್ದು ಸುಟ್ಟುಹೋದವು. ಚಾಲತಿಯ ಮತ್ತು ಗುಟ್ಟಿನ ರಿಕಾರ್ಡುಗಳೂ ಕಾಗದ ಪತ್ರಗಳೂ ನಾಶವಾಗಿರುತ್ತವೆ.

ನಮ್ಮ ವೈಸ್‌ರಾಯಿ ಪ್ರಭುಗಳ ಜನ್ಮೋತ್ಸವವು ಜೂನ್ ತಾ. 20 ರಲ್ಲಿ ಆಗೋಣದರಿಂದ ಅದಕ್ಕೋಸ್ಕರ ಒದಗಿಸಲ್ಪಟ್ಟಿರುವ 5,000 ರೂಪಾಯಿ ಖರ್ಚು ಮಾಡಿ ಆ ದಿನ ಹಿಂದುಸ್ಥಾನದ ಸಮಸ್ತ ಆಸ್ಪತ್ರೆಗಳೊಳಗೂ ಇರುವಂಥಾ ಸಣ್ಣ ಮಕ್ಕಳಿಗೆ ತಿಂಡಿಕೊಡಿಸಿ ಸಂತೋಷಪಡಿಸಬೇಕೆಂದು ಏರ್ಪಾಡಾಗಿದೆ.

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಬಹಳ ಎಚ್ಚರಿಕೆಯುಳ್ಳ ಏರ್ಪಾಡು ಮಾಡಿಟ್ಟುಕೊಂಡು ಏಕಕಾಲದಲ್ಲಿ 100 ಮಂದಿ ದರೋಡೆಕೋರರನ್ನು ದಸ್ತಗಿರಿ ಮಾಡಿದ್ದರಿಂದ ಬಾಕರ್‌ಗಂಜ್ ಡಿಸ್ಟ್ರಿಕ್ಟಿನೊಳಗೆ ದರೋಡೆಗಳ ಹುಟ್ಟೇ ಇಲ್ಲದೆ ಈಗ ಮೂರು ವಾರಗಳಿಂದಲೂ ಪ್ರಜೆಗಳು ನೆಮ್ಮದಿಯಾಗಿದ್ದಾರೆ.

ಮುಲ್ತಾನ್ ಡಿಸ್ಟ್ರಿಕ್ಟಿಗೆ ಸೇರಿದ ಕಬೀರ್‌ವಾಲಾ ಇಲಾಖೆಯ ಹಿಂದೂ ಪ್ರಜೆಗಳು ಅಲ್ಲಿನ ಮಹಮ್ಮದೀಯರಿಂದ ಅನುಭವಿಸುತ್ತಿರುವ ಕಷ್ಟನಷ್ಟ ಮನೋವ್ಯಥೆಗಳನ್ನೂ ಹೆದರಿಕೆಯನ್ನೂ ವಿವರಿಸಿ, ಅವನ್ನೆಲ್ಲಾ ತಪ್ಪಿಸಿ ಕೊಡಬೇಕೆಂದು ಅರ್ಜಿ ಬರೆದು ಪಂಜಾಬ್ ಲೆಫ್ಟಿನೆಂಟ್ ಗವರ್ನರವರಿಗೆ ಒಪ್ಪಿಸಿರುತ್ತಾರೆ.

ಬಳ್ಳಾರಿ ಟವನ್ನಲ್ಲಿ ಈ ತಿಂಗಳು ತಾ. 27-28-29 ಈ ಮೂರು ದಿನಗಳೂ ಆರ್ಯ ವೈಶ್ಯರ ಮಹಾ ಸಭೆಯು ನಡೆಯುವಂತೆ ಏರ್ಪಾಡಾಗಿದೆ, ಅಮಲ್ದಾರ್ ಮ॥ ಪಿ. ಸುಬ್ಬಶೆಟ್ಟಿರವರು ರಿಸೆಪ್ಷನ್ ಕಮಿಟಿಯ ಚೇರ್‌ಮನ್ನರಾಗಿದ್ದು ಮಹಾಸಭೆಯ ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸುತ್ತಾರೆ

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಝೂಂಗ್ ಡಿಸ್ಟ್ರಿಕ್ಟಿನಲ್ಲಿ ನಡೆದ ದರೋಡೆ ಮೊಕದ್ದಮೆಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು 22 ಮಂದಿ ಅಪರಾಧಿಗಳನ್ನು ದರ್ಯಾಪ್ತುಮಾಡಿ, ಇಬ್ಬರಿಗೆ ತಲಾ 7 ವರುಷವೂ, 10 ಮಂದಿಗೆ ತಲಾ 5 ವರುಷವೂ, 7 ಮಂದಿಗೆ ತಲಾ ಮೂರು ವರುಷವೂ ಕಠಿಣ ಸಜಾ ವಿಧಿಸಿ, ಮೂರು ಮಂದಿಯನ್ನು ಬಿಡಿಸಿಬಿಟ್ಟರು.

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಸಾರ್ಜಂಟನು ಯಾತಕ್ಕಾಗಿಯೋ ತನ್ನ ಬಂದೂಕನ್ನು ಹಾರಿಸಿದನು. ಅದರಿಂದ ಹೊರಟ ಗುಂಡು ದೂರದಲ್ಲಿ ತನ್ನ ಮನೆ ಜಗಲಿಯ ಮೇಲೆ ನಿಂತಿದ್ದ ಒಬ್ಬ ಮಾರ್ವಾಡಿ ಹೆಂಗಸಿನ ತಲೆಗೆ ಬಡಿದು ಅವಳನ್ನು ಕೆಡವಿಬಿಟ್ಟಿತು. ಜನರು ಸೇರಿ ಅವಳನ್ನು ಆಸ್ಪತ್ರೆಗೆ ಸಾಗಿಸಿದರು. ಅದರ ಪೂರ್ವೋತ್ತರವನ್ನು ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ.

ಅಮೃತಸಾರ ಪಟ್ಟಣದಲ್ಲಿ ಷಾಹಿದ್ ಅಕ್ಬರ್ ಎಂಬ ಪತ್ರಿಕೆಯ ಎಡಿಟರಾದ ಚರಸಿಂಗ್ ಎಂಬಾತನು ಆರ್ಯಸಮಾಜವನ್ನು ದೂಷಣೆಮಾಡಿ ಆ ಪತ್ರಿಕೆಯಲ್ಲಿ ಬರೆದದ್ದಕ್ಕಾಗಿ ವಿ॥ ಷೇಕ್ ನಜಮುದ್ದೀನ್ ಎಂಬ ಮ್ಯಾಜಿಸ್ಟ್ರೇಟರು ಆತನನ್ನು ದರ್ಯಾಪ್ತುಮಾಡಿ ಕಳೆದ ಗುರುವಾರ ಆತನಿಗೆ 400 ರೂಪಾಯಿ ಜುಲ್ಮಾನೆ, ಇಲ್ಲವೇ ಮೂರು ತಿಂಗಳ ಸಾದಾ ಸಜಾವೆಂಬ ಶಿಕ್ಷೆಯನ್ನು ವಿಧಿಸಿದರು.

ಬೊಂಬಾಯಿ ಪಟ್ಟಣದಲ್ಲಿ ಕ್ಷಯರೋಗ ನಿವಾರಣೆಯ ಕಾರ್ಯಗಳು ಬಹಳ ವಿಶದಣೆಯಿಂದ ನಡೆಯುತ್ತಿರುವುದಾಗಿಯೂ, ಆ ರೋಗವನ್ನು ಕೆಲವು ದಿನಗಳಲ್ಲೇ ಅಡಗಿಸಿಬಿಡುತ್ತಾರೆಂದೂ, ಈ ಕೆಲಸಕ್ಕೆ ಬೊಂಬಾಯಿ ಗವರ್ನ್‌ಮೆಂಟಿನವರು ಪ್ರಜೆಗಳು ಕೂಡಿಸುವ ಫಂಡಿಗೆ ಮೂರು ವರುಷಗಳ ತನಕ 10,000 ರೂಪಾಯಿನಂತೆ ದ್ರವ್ಯಸಹಾಯ ಮಾಡಲು ಒಪ್ಪಿ ಹುಕುಂ ಕೊಟ್ಟಿರುವುದಾಗಿಯೂ ತಿಳಿಯುವುದು.

ಕಳೆದ 7 ನೇ ತಾ. ಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಪ್ಲೇಗ್ ಉಪದ್ರವು 23,334 ಜನರಿಗೆ ತಗಲಿತು ; 20,764 ಮರಣಗಳಾದವು ಈ ಮರಣ ಸಂಖ್ಯೆಗಳ ವಿವರವೇನೆಂದರೆ—ಬೊಂಬಾಯಿ ಆಧಿಪತ್ಯದಲ್ಲಿ 672 ಮರಣಗಳು, ಮದರಾಸ್ 6, ಬಂಗಾಳಾ 16, ಬೀಹಾರ್ ಮತ್ತು ಒರಿಸ್ಸಾ 303, ಸಂಯುಕ್ತ ಆಧಿಪತ್ಯಗಳು 1,643, ಪಂಜಾಬ್ 17,730 ಬರ್ಮಾ 19, ಮಧ್ಯ ಪ್ರಾಂತ್ಯಗಳು 124, ಎಲ್ಲೆಕಟ್ಟಿನ ಆಧಿಪತ್ಯ 75.

ರಂಗೂನ್ ಪಟ್ಟಣಕ್ಕೆ ಸೇರಿದ ಬಸೀನ್ ಪಟ್ಟಣದಲ್ಲಿ 11 ಮಂದಿ ದರೋಡೆ ಕಳ್ಳರು ಆಯುಧಪಾಣಿಗಳಾಗಿ ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಕೊಳ್ಳೆಹೊಡೆದು ಆಸ್ತಿಯನ್ನು ಸಾಗಿಸಿಕೊಂಡು ಹೋಗುವಲ್ಲಿ ಗ್ರಾಮಸ್ಥರು ಸೇರಿ ಅವರನ್ನು ತಡೆದು ಅವರ ಮೇಲೆ ಬಿದ್ದು ಹೊಡೆದಾಡಿದರು. ಗ್ರಾಮದ ಮುಖಂಡನೂ ಇನ್ನೂ ಮೂವರೂ ಮೃತಪಟ್ಟರು, ಆರು ಜನಗಳಿಗೆ ಗಾಯಗಳಾದವು ಕಳ್ಳರ ಮುಖಂಡನಿಗೆ ಗಾಯವಾಯಿತು. ಆದರೂ ಕಳ್ಳರೆಲ್ಲಾ ತಪ್ಪಿಸಿಕೊಂಡು ಓಡಿಹೋದರು.

ಮದರಾಸ್ ಪಟ್ಟಣದ ಬೀಚ್ ರೋಡಿನಲ್ಲಿ ನೇಪಿಯರ್ ಬಕೇರಿ ಹತ್ತಿರ ಕಳೆದ ಶುಕ್ರವಾರ ಮಧ್ಯಾಹ್ನ ಮೂವರು ಗಂಡಸರೂ ಇಬ್ಬರು ಹೆಂಗಸರೂ ಒಂದೇ ಕಡೆ ಸತ್ತು ಬಿದ್ದಿದ್ದರು. ಅವರು ಬೈರಾಗಿಗಳೆಂದು ಗೊತ್ತಾದಾಗ ಮದರಾಸಿನಲ್ಲಿರುವ ಬೈರಾಗಿಗಳನ್ನೆಲ್ಲಾ ಪೋಲೀಸಿನವರು ಕರೆತಂದು ಶವಗಳನ್ನು ತೋರಿಸಿದಾಗ್ಯೂ, ಸತ್ತವರು ಯಾರೆಂಬುವುದು ತಿಳಿಯಲಿಲ್ಲ. ಶವಗಳ ಮೇಲೆ ಅನುಮಾನಾಸ್ಪದವಾದ ಗಾಯ ಮುಂತಾದವುಗಳೇನೂ ಇರಲಿಲ್ಲ. ಶವಗಳನ್ನು ಡಾಕ್ಟರ ಅಜಮಾಯಿಷಿಗೆ ಕಳುಹಿಸಿದ್ದಾರೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ್ದ ಬೋಗ್ರ ಎಂಬ ಊರಿನಲ್ಲಿ ಈಚೆಗೆ ದರೋಡೆಗಳು ಹೆಚ್ಚಿ ಪ್ರಜಾ ನೆಮ್ಮದಿಗೆ ಬಹಳ ಕುಂದುಕವಾಗಿದ್ದದ್ದರಿಂದ ಆ ಊರಿನವರೇ ಸೇರಿ ಒಂದು ರಕ್ಷಣಾ ಪಾರ್ಟಿಯನ್ನು ಮಾಡಿಕೊಂಡು ರಾತ್ರಿ ಹೊತ್ತು ಕಾವಲು ಕಾಯುತ್ತಾರೆ. ಈ ಪಾರ್ಟಿಗೆ ಅಲ್ಲಿರುವ ದೊಡ್ಡ ಮನುಷ್ಯರು, ಸರ್ಕಾರಿ ನೌಕರರು, ವಕೀಲರು, ಗುಮಾಸ್ತರು, ಮೊಖ್ತ್ಯಾರರು, ಸ್ಕೂಲ್ ಮಾಸ್ಟರುಗಳು, ವಿದ್ಯಾರ್ಥಿಗಳು, ಯೂರೋಪಿಯನ್ ಪಾದ್ರಿಗಳು, ಇವರೆಲ್ಲಾ ಮೆಂಬರಾಗಿ ಸೇರಿ, ಎರಡು ತಂಗಡ ಮಾಡಿಕೊಂಡಿದ್ದಾರೆ. ರಾತ್ರಿ 12 ರಿಂದ 2 ಗಂಟೆ ವರೆಗೆ ಒಂದು ತಂಡದವರೂ, 2 ರಿಂದ ಬೆಳಗಿನ 5 ಗಂಟೆ ವರೆಗೆ ಎರಡನೇ ತಂಗಡದವರೂ ಊರೆಲ್ಲಾ ಸಂಚಾರ ಮಾಡುತ್ತಾ ಪ್ರತಿ ಒಂದು ಮನೆಗೂ ಹೋಗಿ ಜನರಿಗೆ ಎಚ್ಚರಿಕೆ ಧೈರ್ಯಗಳನ್ನು ಹೇಳುತ್ತಲೂ ಬಂದಿದ್ದಾರೆ. ಆ ಡಿಸ್ಟ್ರಿಕ್ಟಿನ ಮ್ಯಾಜಿಸ್ಟ್ರೇಟರು ಇಂಥಾ ಪಾರ್ಟಿಯವರಿಗೆ ಬೇಕಾದ ಸಹಾಯವನ್ನು ಒದಗಿಸುತ್ತಾ ಬಂದಿದ್ದಾರೆ.

ಕಳೆದ 1914 ನೇ ವರುಷದಲ್ಲಿ ಮದರಾಸ್ ಆಧಿಪತ್ಯದೊಳಗೆ ಕಾಡು ಮೃಗಗಳಿಂದ 349 ಜನರು ಮೃತಪಟ್ಟರು; ಹಾವುಗಳು ಕಡಿದು 1,514 ಜನರು ಸತ್ತುಹೋದರು. ಆ ವರುಷ ಕಾಡುಮೃಗಗಳು 11,575 ಗೋಕಾಯಿಗಳನ್ನು ಕೊಂದು ತಿಂದವು; 1,712 ಗೋಕಾಯಿಗಳು ಹಾವು ಕಡಿದು ಸತ್ತವು. ಕೊಯಮುತ್ತೂರು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಕಾಡುಮೃಗಗಳಿಂದ ಅನೇಕರು ಕೊಲ್ಲಲ್ಪಟ್ಟರೆಂದೂ, ಇದಕ್ಕೆ ಆ ಡಿಸ್ಟ್ರಿಕ್ಟುಗಳ ಅಧಿಕಾರಿಗಳು ಗಮನಕೊಡಬೇಕೆಂದೂ ಮದರಾಸ್ ಗವರ್ನ್‌ಮೆಂಟಿನವರು ತಿಳಿಸಿದ್ದಾರೆ.

ಕಳೆದ 1ನೇ ತಾರೀಖಿನವರೆಗೆ ಹಿಂದು ಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ವಸೂಲಾಗಿರುವ ಚಂದಾ ಹಣಗಳೆಷ್ಟೆಂದರೆ :—

ಸಿಂಲಾ ಬ್ಯಾಂಕಿಗೆ ಪಾವತಿ ಆಗಿರುವುದು		...	ರೂ.	38,09,323-2-8
ಬಂಗಾಳಾ ಬ್ಯಾಂಕಿಗೆ	,,	....	,,	36,09,455-8-1
ಬೊಂಬಾಯಿ ಬ್ಯಾಂಕಿಗೆ	,,	.....	,,	7,84,670-8-4
ಮದರಾಸ್ ಬ್ಯಾಂಕಿಗೆ	,,	.....	,,	6,32,149-7-7
			ಜುಮ್ಲಾ ರೂ.	89,25,598-10-8

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೊಲಂಬೊ ಪಟ್ಟಣದಲ್ಲಿ ಲಕ್ಷ್ಮಣಶೆಟ್ಟಿ ಎಂಬ ವರ್ತಕನು ಬ್ರಿಟಿಷರಿಗೆ ಶತ್ರುವಾಗಿರುವ ಜರ್ಮನಿ ವರ್ತಕರ ಕಂಪನಿಗೆ 2,332 ರೂಪಾಯಿ ಪಾವತಿಮಾಡಿ ಅವರಿಂದ ಕೆಲವು ವ್ಯಾಪಾರ ಸರಕುಗಳನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟನು. ಶತ್ರುವಿನ ಕೂಡ ವ್ಯಾಪಾರ ನಡಿಸಕೂಡದೆಂದು ಪ್ರಕಟಮಾಡಿದ್ದರೂ ಈ ವರ್ತಕನು ಹುಕುಮನ್ನು ಉಲ್ಲಂಘಿಸಿದ್ದರಿಂದ ಸರ್ಕಾರದವರು ಅವನ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು. ಮ್ಯಾಜಿಸ್ಟ್ರೇಟರು ಆ ವರ್ತಕನಿಗೆ 7,500 ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದ ಕ್ಯಾನಿಂಗ್ ಟೌನ್ ಎಂಬ ವಿಭಾಗದಲ್ಲಿ ಸಾವಧಾನ ಮಲಿಕ್ ಎಂಬೊಬ್ಬ ಐಶ್ವರ್ಯವಂತನಾದ ಪ್ರಾಯಸಮರ್ಥನು ಸಣ್ಣ ವಯಸ್ಸಿನ ಗಂಡನುಳ್ಳ ಗರತಿಯನ್ನು ಎತ್ತಿಕೊಂಡುಹೋಗಿ ಒಂದು ನೆಲಮಾಳಿಗೆ ಮನೆಯೊಳಗಿಟ್ಟುಕೊಂಡನು ಅದರೊಳಗೆ ಅವನು ಅವಳಿಗೆ ಬೇಕಾಗುವ ಆಹಾರ ವಸ್ತುಗಳನ್ನೂ ಭೋಗ್ಯ ಪದಾರ್ಥಗಳನ್ನೂ ಅಣಿಮಾಡಿ ಒದಗಿಸಿದ್ದನು. ಆದರೆ ಅವನ ಶತ್ರುವಿನಿಂದ ಪೋಲೀಸಿಗೆ ವರ್ತಮಾನ ತಿಳಿದು ಅವರು ಹೋಗಿ ಆ ಹುಡುಗಿಯನ್ನು ಬಂಧನದಿಂದ ಬಿಡಿಸಿ ಕರೆದು ತಂದಿದ್ದಾರೆ. ಆ ದುಷ್ಟನ ಮೇಲೆ ಮೊಕದ್ದಮೆ ಬಂದು ವಿಚಾರಣೆ ಆಗುತ್ತಿರುವುದು.

ಮದರಾಸಿನ ಹತ್ತಿರ ಇರುವ ತಿರುವಳ್ಳೂರು ರಥೋತ್ಸವಕ್ಕೆ ಮೊನ್ನೆ ಅಮಾವಾಸ್ಯೆಯ ದಿನ ಅನೇಕರು ಹೋಗಿದ್ದರು. ಒಬ್ಬ ನಾಯುಡುವು ತನ್ನ ಹೆಂಡತಿಯನ್ನೂ ಮಗುವನ್ನೂ ಕರೆದುಕೊಂಡು ಹೋಗಿ ದೇವಸ್ಥಾನದ ಬಳಿ ಇದ್ದ ಆನೆಯನ್ನು ನೋಡಿ ಅದರ ಮಾವಟಿಗನು ಇಲ್ಲದ್ದನ್ನು ಕಂಡು ತನ್ನ ಮಗುವಿನ ಸಮೇತ ಆ ಆನೆಯ ಮೇಲೆ ಕೂತು ಅದರ ಮೇಲೆ ಸ್ವಲ್ಪ ದೂರ ಹೋದನು. ಅಷ್ಟರಲ್ಲೇ ಅದು ಅವರಿಬ್ಬರನ್ನೂ ಕೆಡವಿ ನಾಯುಡುವನ್ನು ತುಳಿತು ಕೊಂದು ಹಾಕಿತು. ಮಗುವಿಗೆ ಏನೂ ಅಪಾಯವಾಗಿರಲಿಲ್ಲ. ತಾಯಿ ಮಗುವನ್ನೆತ್ತಿಕೊಂಡು, ಗಂಡನನ್ನು ಕಳೆದುಕೊಂಡದ್ದಕ್ಕಾಗಿ ಗೋಳಾಡುತ್ತಾ ಹೋದಳು.

ಅಯೋಧ್ಯಾ ಜಿಲ್ಲೆಗೆ ಸೇರಿದ ಧಾಮವಾ ಎಂಬ ತಾಲ್ಲೂಕಿನಲ್ಲಿರುವ ಏಕೆವಾನ್ ಜಹಗೀರಿಯ ಯಜಮಾನರುಗಳಾದ ಬಿರದಬಹದೂರ್ ಸಿಂಗ್‌ರವರೂ, ಮಿತ್ರಸೇನಸಿಂಗ್‌ರವರೂ ತಮ್ಮ ಜಮೀನ್ದಾರಿಯಲ್ಲಿರುವ ಗಂಡಸರು ಈಗ ಸೈನ್ಯಕ್ಕೆ ಸೇರಿಕೊಂಡು ತರಪೇತಾಗಿ ಯುದ್ಧಕ್ಕೆ ಹೋಗುವ ಪಕ್ಷದಲ್ಲಿ ಪ್ರತಿ ಒಬ್ಬರಿಗೂ ಐವತ್ತು ಎಕರೆ ಜಮೀನು ಕೊಡುವುದಾಗಿಯೂ, ಯುದ್ಧಭೂಮಿಯಲ್ಲಿ ಕೊಲೆಯಾದರೆ ಅವರ ಮನೆ ಹಕ್ಕುದಾರರಿಗೆ ಆ ಜಮೀನು ಕೊಡಲ್ಪಡುವುದೆಂದೂ, ಗಂಡು ಸಂತತಿ ಇಲ್ಲದಿದ್ದರೆ ಅಂಥವರ ಹೆಂಡತಿಗೆ ಸಾಯುವ ತನಕ 3 ರೂಪಾಯಿ ಪೆನ್ಷನ್ ಕೊಡುತ್ತೇವೆಂದೂ ಪ್ರಕಟಮಾಡಿ ಪ್ರೋತ್ಸಾಹಪಡಿಸಿರುತ್ತಾರೆ.

ರಂಗೂನ್ ಪಟ್ಟಣದಲ್ಲಿ ಸರಾಂಗ್ ಅಬ್ದುಲ್ ರಹೀಂ ಎಂಬುವನೂ ಅವನ ಕಡೆಯ 33 ಜನಗಳೂ ಫಿಸ್ಟರ್‌ಷೀರ್ ಎಂಬ ಹಡಗಿನಲ್ಲಿ ಹನ್ನೆರಡು ತಿಂಗಳ ತನಕ ಕೆಲಸಮಾಡುವುದಾಗಿ ಒಪ್ಪಿಕೊಂಡು ಮೂರು ತಿಂಗಳ ನಂತರ ಅಂದರೆ ಕಳೆದ ತಾ. 6 ರಲ್ಲಿ ಹಡಗಿನಲ್ಲಿ ಕೆಲಸಕ್ಕೆ ಬರುವುದಿಲ್ಲವೆಂದು ನಿಂತುಬಿಟ್ಟರು. ಹಡಗಿನ ಅಧಿಪತಿಯು ಅವರ ಮೇಲೆ ಫಿರ್ಯಾದು ಮಾಡಿದನು. ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ತನಿಖೆಮಾಡಿದಾಗ ಅವರು ಕೆಲಸವನ್ನು ಬಿಟ್ಟದ್ದಕ್ಕೆ ಹೇಳಿದ ಕಾರಣಗಳು ತೃಪ್ತಿಕರವಾಗಿರಲಿಲ್ಲ ಅದಕ್ಕಾಗಿ ಅವರಿಗೆಲ್ಲಾ ತಲಾ 2½ ರೂಪಾಯಿ ಲಾಗಾಯಿತು 3½ ರೂಪಾಯಿ ವರೆಗೆ ಜುಲ್ಮಾನೆಯನ್ನೂ, ಎಂಟೆಂಟು ದಿನಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ.

ಪೂನಾ ಪಟ್ಟಣದಲ್ಲಿ ಸೆಷನ್ಸ್ ಜಡ್ಜರಾದ ಮ॥ ಬಾಲಕರಾಮ್‌ರವರು ಒಂದು ದರೋಡೆ ಗುಂಪಿನ ಕಳ್ಳರ ಮೇಲೆ ಬಂದಿದ್ದ ಮೊಕದ್ದಮೆಯನ್ನು ದರ್ಯಾಪ್ತುಮಾಡಿ ಕಳೆದ ವಾರ ಅಪರಾಧಿಗಳಲ್ಲಿ 12 ಜನರಿಗೆ ಯಾವಜ್ಜೀವವೂ ಬಂಕೋಲ್ ಶಿಕ್ಷೆಯನ್ನೂ, 4 ಮಂದಿಗೆ ತಲಾ 7 ವರುಷ ಬಂಕೋಲಿ ಸಜವನ್ನೂ, 7 ಜನರಿಗೆ ತಲಾ 3 ವರುಷ ಕಠಿಣಸಜವನ್ನೂ, 6 ಮಂದಿಗೆ ತಲಾ ಒಂದು ವರುಷವೂ, 10 ಜನರಿಗೆ ತಲಾ ಒಂದು ದಿನವೂ ಕಠಿಣ ಸಜವನ್ನೂ ವಿಧಿಸಿದ್ದಲ್ಲದೆ ಅವರೆಲ್ಲಾ ಜೈಲಿನಿಂದ ಬಿಡುಗಡೆ ಹೊಂದಿ ಬಂದ ನಂತರ ತಲಾ ಐದು ವರುಷ ಪೋಲೀಸಿನವರ ಉಸ್ತುವಾರಿಯಲ್ಲಿರಬೇಕೆಂದೂ, ಈ ಕಳ್ಳರ ಬಳಿ ಸಿಕ್ಕಿದ 15,000 ರೂಪಾಯಿನ ಬೇವಾರಸ್ ನಗಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದೂ ತೀರ್ಮಾನಮಾಡಿದರು.

ಕಳೆದ ಮಾರ್ಚಿ ತಾ. 4 ರಲ್ಲಿ ನಮ್ಮ ವೈಸ್‌ರಾಯರವರು ಕಲ್ಕತ್ತಾ ಪಟ್ಟಣದಲ್ಲಿ ಮಾಜಿ ವೈಸ್‌ರಾಯರುಗಳಾಗಿದ್ದ ಲಾರ್ಡ್ ರಿಪನ್ ಮತ್ತು ಲಾರ್ಡ್ ಮಿಂಟೋ ಪ್ರಭುಗಳ ಛಾಯಾಪ್ರತಿಮೆಗಳನ್ನು ಪೀಠಗಳ ಮೇಲೆ ನಿಲ್ಲಿಸಿ ಪ್ರತಿಷ್ಠೆ ಮಾಡಿದರು. ಈ ಉತ್ಸವದ ದಿನ ಅನೇಕ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಅಲ್ಲಿಗೆ ಕರೆಸಲಾಯಿತು. ಉತ್ಸವದ ಆವರಣದ ಹೊರಪಾರ್ಶ್ವದ ಬಾಗಿಲಲ್ಲಿ ಕಾವಲಾಗಿದ್ದ ಸಿಪಾಯಿಗಳಿಬ್ಬರು ಹಲವು ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ತಡೆದು ಅವರ ಸಾಮೋಟುಗಳನ್ನು ಶೋಧನೆಮಾಡಿದರು. ಅವರೆಲ್ಲಾ ತಮಗೆ ಇಂಥಾ ಉತ್ಸವದಲ್ಲಿ ಇಷ್ಟು ಮಟ್ಟಿನ ಅವಮಾನವಾಯಿತೆಂದು ವ್ಯಥೆಪಟ್ಟರು. ಗವರ್ನರವರು ಈ ಅಚಾತುರ್ಯದ ಪೂರ್ವೋತ್ತರವನ್ನು ತನಿಖೆಮಾಡಿಸಿ, ಆ ಸಿಪಾಯಿಗಳು ತಡೆದದ್ದು ಅಕ್ರಮವೆಂದೂ, ಇದು ತಮಗೆ ಬಹಳ ವ್ಯಸನವನ್ನುಂಟುಮಾಡಿದೆ ಎಂದೂ ಹೇಳಿ ಈಗ ಒಂದು ಇಸ್ತಿಹಾರನ್ನು ಪ್ರಕಟಮಾಡಿದ್ದಾರೆ.

ಬಂಗಾಳಕ್ಕೆ ಸೇರಿದ ಗೋಲಂದೋ ಊರಿನ ಬಳಿ ಒಂದು ಕಳ್ಳರ ಗುಂಪು ದರೋಡೆಯನ್ನು ನಡಿಸಿ ಬೆಲ್ಗಾಚಿ ಎಂಬ ಊರಿನ ಕಡೆ ಹೋದರೆಂದು ವರ್ತಮಾನ ಬಂದದ್ದರಿಂದ ಪಬ್ನ ಮತ್ತು ಫರಿದ್ಪುರ ಡಿಸ್ಟ್ರಿಕ್ಟುಗಳ ಪೋಲೀಸ್ ಹುದ್ದೇದಾರರೂ ಕಾನ್‌ಸ್ಟೇಬಲ್‌ರೂ ಅವರನ್ನು ಹಿಡಿಯಬೇಕೆಂದು ಆಯುಧಪಾಣಿಗಳಾಗಿ ಅಲ್ಲಿಗೆ ಹೋದರು. ಬೆಲ್ಗಾಚಿಯಲ್ಲಿ ಗ್ರಾಮಸ್ಥರು ಜಮಾಯಿಸಿ ಕಳ್ಳರನ್ನು ಹಿಡಿಯುವ ಪ್ರಯತ್ನಮಾಡಿದಾಗ ಕಳ್ಳರು ಅವರ ಮೇಲೆ ಪಿಸ್ತೂಲು

ಗಳನ್ನು ತೋರಿಸಿ ಕೆಲವು ತೋಟಾಗಳನ್ನು ಹೊಡೆದು ಗಾಬರಿಪಡಿಸಿ ಪೋಲೀಸಿನವರು ಬರುವಷ್ಟರೊಳಗಾಗಿ ಅವರಿಗೋಸ್ಕರ ಪದ್ಮಾ ನದಿಯಲ್ಲಿ ಸಿದ್ಧವಾಗಿದ್ದ ದೋಣಿಗಳನ್ನು ಹತ್ತಿ ತಪ್ಪಿಸಿಕೊಂಡು ಹೋದರು. ಈ ಗುಂಪಿನಲ್ಲಿ ಅನೇಕರಿರುವುದಾಗಿಯೂ, ಅವರು ಮೇಲ್ಕಂಡ ಎರಡು ಡಿಸ್ಟ್ರಿಕ್ಟುಗಳಲ್ಲೂ ಬಹು ಘೋರವಾದ ದರೋಡೆಗಳನ್ನು ಹಗಲು ಹೊತ್ತಿನಲ್ಲೇ ನಡಿಸಿರುತ್ತಾರೆಂದೂ ತಿಳಿಯುವುದು.

ವಿದೇಶದ ವೃತ್ತಾಂತಗಳು.

ಆಸ್ಟ್ರಿಯಾ ಸೈನ್ಯದ ಹುದ್ದೇದಾರರುಗಳ ಪೈಕಿ ಸೇಲ್ವರ್ಜಿಯಲ್ಲಿದ್ದ ಅರವತ್ತೈದು ಮಂದಿ ಹುದ್ದೇದಾರರನ್ನು ಅವರ ಅಲಕ್ಷ್ಯ ಕಾರ್ಯಗಳಿಗಾಗಿ ಪೆನ್‌ಷನ್ ಮೇಲೆ ಕೆಲಸದಿಂದ ತೆಗೆದು ಹಾಕಿದರೆಂದು ಪ್ರಕಟವಾಗಿದೆ.

ಟರ್ಕಿಯ ಮಾಜಿ ಸುಲ್ತಾನರನ್ನು ಇದುವರೆಗೆ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್‌ನಲ್ಲಿ ಸೆರೆಹಾಕಿ ಇಟ್ಟುಕೊಂಡಿದ್ದರು. ಈಗ ಅವರನ್ನು ಎನ್‌ವರ್ ಪಾಷಾರವರು ಸಂಗಡ ಕರೆದುಕೊಂಡು ಹೋಗಿ ಸ್ಮರ್ನಾ ನಗರದಲ್ಲಿ ಮಿ|| ರೀಸ್ ಎಂಬ ಬ್ರಿಟಿಷ್ ಪ್ರಜೆಯ ಮನೆಯಲ್ಲಿ ಮೂರು ದಿನಗಳು ಇಟ್ಟುಕೊಂಡಿದ್ದು, ಅಲ್ಲಿಂದ ಇನ್ನೆಲ್ಲಿಗೋ ಕರೆದೊಯ್ದರೆಂದು ತಿಳಿಸಲಾಗಿದೆ.

ಕ್ಯಾನಡಾ ಎಂಬ ಬ್ರಿಟಿಷ್ ಸ್ವಾಸ್ಥ್ಯಕ್ಕೆ ಸೇರಿದ ವ್ಯಾಂಕೂವರಿನಲ್ಲಿ ಹಿಂದುಸ್ಥಾನದ ಜನರು ವಾಸಮಾಡಿಕೊಂಡಿರುವ ಭಾಗದಲ್ಲಿ ಡೈನಮೈಟ್ ಮದ್ದು ಹಾರಿ ಒಬ್ಬ ಹಿಂದುವು ಮೃತನಾದನು; ಇನ್ನಿಬ್ಬರಿಗೆ ಗಾಯಗಳಾದವು. 30 ಮನೆಗಳು ಅಲುಗಿ ಜಖಂ ಆದವು. ಆ ಬೀದಿಯಲ್ಲಿ ಉದ್ದಕ್ಕೂ ಯಾವ ಮನೆಯಲ್ಲೂ ಒಂದು ಕಿಟಕಿಯ ಗಾಜಾದರೂ ಒಡೆಯದೆ ಉಳಿಯಲಿಲ್ಲ. ಅಲ್ಲಿರುವ ಹಿಂದುಗಳಲ್ಲಿ ಎರಡು ಪಂಗಡಗಳಿಗುಂಟಾದ ಪರಸ್ಪರ ದ್ವೇಷವೇ ಈ ಅನಾಹುತಕ್ಕೆ ಕಾರಣವೆಂದು ಪ್ರಕಟವಾಗಿದೆ.

ಪಶ್ಚಿಮ ರಣರಂಗದಲ್ಲಿ ಯುದ್ಧದಸಾಲು 592 ಮೈಲಿ ಉದ್ದವುಳ್ಳದ್ದಾಗಿದೆ. ಇದರಲ್ಲಿ ಬ್ರಿಟಿಷ್ ಸೈನ್ಯಗಳು 31 ಮೈಲಿ ದೂರವೂ, ಬೆಲ್ಜಿಯನ್ ಸೈನ್ಯಗಳು 17 ಮೈಲಿ ಉದ್ದಕ್ಕೂ, ಫ್ರೆಂಚರ ಸೈನ್ಯಗಳು 543 ಮೈಲಿ ಉದ್ದಕ್ಕೂ ಸಾಲುಕಟ್ಟಿ ನಿಂತು ಶತ್ರುವಿಗೆ ಯುದ್ಧ ಕೊಡುತ್ತಲಿವೆ. ಪೂರ್ವ ರಣರಂಗದಲ್ಲಾದರೋ ರಷ್ಯಾದವರ ಸೈನ್ಯಗಳು 856 ಮೈಲಿ ಉದ್ದಕ್ಕೂ, ಸರ್ವಿಯಾ ಮತ್ತು ಮಾಂಟಿನಿಗ್ರೋದವರ ಸೈನ್ಯಗಳು 218 ಮೈಲಿ ಉದ್ದಕ್ಕೂ ನಿಂತು ಯುದ್ಧಮಾಡುವವು. ಎರಡು ಕಡೆಗಳ ಯುದ್ಧಸಾಲುಗಳನ್ನೂ ಕೂಡಿಸಿದರೆ 1,667 ಮೈಲಿ ಉದಕ್ಕೆ ಸೈನ್ಯಗಳು ನಿಂತು ಯುದ್ಧ ಕಾರ್ಯಗಳನ್ನು ನಡೆಸುತ್ತಿರುವವೆಂದು ಗೊತ್ತಾಗುವುದು ಎಂಬದಾಗಿ ಮೇಟನ್ ಎಂಬ ಫ್ರೆಂಚರ ಪತ್ರಿಕೆಯು ತಿಳಿಸುತ್ತದೆ.

ನೆಪೋನಾ ಎಂಬ ನಗರದಲ್ಲಿ ವರ್ತಮಾನ ಪತ್ರಿಕೆಗಳನ್ನು ಕೂಲಿಗೆ ಮಾರಿ ಜೀವಿಸುವ ಅನಸ್ತಾಸಿಯೊ ಬೆಟ್ಟಿ ಎಂಬವನು ತನ್ನ 31 ನೇ ಮಗನ ನಾಮಕರಣವನ್ನು ಮಾಡಿದನು. ಆ ಉತ್ಸವಕಾಲದಲ್ಲಿ ಸೇರಿದ್ದ ಜನರಿಗೆ 60 ವರುಷದ ಆ ಬೆಟ್ಟಿಯು ಹೇಳಿದ್ದೇನೆಂದರೆ—ನಾನು 21 ನೇ ವಯಸ್ಸಿನಲ್ಲಿ 19 ವರುಷದ ಹುಡುಗಿಯನ್ನು ಮದುವೆಯಾದೆನು. ಅವಳು ವರುಷಕ್ಕೊಂದರಂತೆ 19 ಗಂಡು ಮಕ್ಕಳನ್ನು ಹೆತ್ತು ಕಾಲವಾದಳು. ಬಳಿಕ ನನಗೆ 40 ವರುಷ ತುಂಬುವದಕ್ಕಿಂತ ಮುಂಚೆ ಎರಡನೇ ಮದುವೆ ಮಾಡಿಕೊಂಡೆನು. ಇವಳು 12 ಮಕ್ಕಳನ್ನು ಹೆತ್ತಳು. ಈಗ 19 ಗಂಡು ಮಕ್ಕಳು ಆರೋಗ್ಯವಾಗಿಯೂ ದೃಢಕಾಯರಾಗಿಯೂ ಬದುಕಿದ್ದಾರೆ. ನನ್ನ 20 ನೇ ಮಗನು ಲಿಬಿಯಾ ಕಾಡಿನಲ್ಲಿ ಯುದ್ಧದಲ್ಲಿ ಮಡಿದುಹೋದನು. ನನ್ನ ಎಂಟು ಗಂಡು ಮಕ್ಕಳು ಮದುವೆ ಮಾಡಿಕೊಂಡು ಸುಖವಾಗಿದ್ದಾರೆ ಎಂಬುದು.

ಆಸ್ಟ್ರಿಯದ ನಾವೆಯ ಅಧಿಪತಿಗಳಾಗಿದ್ದ ಹಲವರು ಇಟಲಿಯವರ ಮೇಲೆ ಅಭಿಮಾನವುಳ್ಳವರಾಗಿದ್ದಾರೆಂದು ತಿಳಿದು ಅವರನ್ನೆಲ್ಲಾ ಕೆಲಸದಿಂದ ವಜಾಮಾಡಿಬಿಟ್ಟು ಅವರ ಸ್ಥಾನಗಳಿಗೆ ಜರ್ಮನ ಹುದ್ದೇದಾರರನ್ನು ಕರಸಿ ನೇಮಿಸಿರುತ್ತಾರೆ. ಇಟಲಿಯ ಉತ್ತರ ಭಾಗದ ಎಲ್ಲೆಕಟ್ಟಿನಲ್ಲಿರುವ ಪೋಲಾ ಮೊದಲಾದ ಪಟ್ಟಣ ಊರುಗಳಲ್ಲಿದ್ದ ಪ್ರಜೆಗಳನ್ನೆಲ್ಲಾ ಆಸ್ಟ್ರಿಯದವರು ಹೊರಡಿಸಿಬಿಟ್ಟು ಸಿರಂಗಿಗಳನ್ನು ಎತ್ತಿಕಟ್ಟಿ ಯುದ್ಧಕ್ಕೆ ಅಣಿಮಾಡಿಕೊಂಡಿದ್ದಾರೆ. ಅಲ್ಲಿದ್ದ ಅನೇಕ ಮನೆಮಠಗಳನ್ನು ಯುದ್ಧ ಕಾರ್ಯಗಳಿಗೆ ಅಡಚಣೆಯಾಗಬಹುದೆಂದು ಒಡೆದು ಕೆಡಿಸಿಬಿಟ್ಟಿದ್ದಾರೆ. ಜರ್ಮನಿಯವರ ಸಬ್‌ಮೆರೀನುಗಳು ಟ್ರಿಯಸ್ಟ್ ತೀರದಲ್ಲಿ ಇರುತ್ತವೆ. ಇದಲ್ಲದೆ ಕಾರ್ನಿಯೋಲಾ, ಕಾರಿನ್‌ಥಿಯಾ, ಬೋಸ್ನಿಯಾ ಹೆರ್ಸೆಗೋವಿನಾ ಎಂಬೀ ಕಡೆಗಳಿಂದ ಆಸ್ಟ್ರಿಯಾದವರು ಇಟಲಿಯ ಎಲ್ಲೆಕಟ್ಟಿಗೆ ಸೈನ್ಯಗಳನ್ನು ಸಾಗಿಸುತ್ತಿದ್ದಾರೆ ಎಂದು ಒಂದು ಪತ್ರಿಕೆಯು ಹೇಳುವುದು.

ಅಮೇರಿಕದಲ್ಲಿರುವ ಜರ್ಮನ ರಾಯಭಾರಿಯಾದ ಕೌಂಟ್ ಬರ್ನ್‌ಸ್ಟಾರ್ಫ್ ಎಂಬಾತನು ಅಮೇರಿಕದಲ್ಲಿ ಹುಟ್ಟಿಸಿ ಹರಡುತ್ತಿರುವ ವರ್ತಮಾನವು ಅಂದರೆ—ಬ್ರಿಟಿಷರೂ ಫ್ರೆಂಚರೂ ಕರಾರು ಮಾಡಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ ಎಂಬ ಮಾತು ಸುಳ್ಳೆಂದು ಅಮೇರಿಕದ ಸರ್ಕಾರದವರು ತಿಳಿಸಿದ್ದಾರೆ. ಆದರೆ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸಿನವರು ಜರ್ಮನಿಯವರನ್ನು ಸಂಪೂರ್ಣವಾಗಿ ಸೋಲಿಸದ ಹೊರತು ಕರಾರು ಮಾಡಿಕೊಳ್ಳುವ ಯೋಚನೆ ಮಾಡುವುದಿಲ್ಲವೆಂದು ಅಮೇರಿಕದವರಿಗೆ ಅಂತರಂಗದಲ್ಲಿ ತಿಳಿಸಿರುತ್ತಾರೆ. ಇದಲ್ಲದೆ ಆ ರಾಯಭಾರಿಯು ಇನ್ನೂ ತೋರುವುದೇನೆಂದರೆ—ಯುದ್ಧವಾಗುವುದಕ್ಕೆ ಮುಂಚೆ ನಾವು ನಾವು ಹೇಗಿದ್ದೆವೋ ಹಾಗಿರೋಣ. ಬೆಲ್ಜಿಯಮ್ ರಾಜ್ಯವನ್ನು ಬಿಟ್ಟು ಹೋಗುವೆವು. ರಷ್ಯಾದವರ ಹಡಗುಗಳಿಗೆ ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಸಂಚರಿಸುವಂತೆ ಬಿಟ್ಟುಕೊಡುತ್ತೇವೆ. ಬೆಲ್ಜಿಯಮಿಗೆ ಸೇರಿದ ಕೊಂಗೊ ಸೀಮೆಯನ್ನು ಕ್ರಯಕೊಟ್ಟು ಕೊಂಡುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ. ನಮಗೆ ಈಗಿನ ಯುದ್ಧದಲ್ಲಾಗಿರುವ ನಷ್ಟವನ್ನು ಕೊಡಬೇಕೆಂದು ನಾವೇನೂ ಕೇಳುವುದಿಲ್ಲ. ಇದಕ್ಕೆಲ್ಲಾ ಒಪ್ಪಿಕೊಂಡ ಪಕ್ಷದಲ್ಲಿ ಜರ್ಮನಿಯು ಕರಾರಿಗೆ ಸಮ್ಮತಿಸುತ್ತದೆ ಎಂದು ಹೇಳಿದರು. ಇದಕ್ಕೆ ಗ್ರೇಟ್ ಬ್ರಿಟನ್‌ನವರು ಇಂಥಾ ಸಲಹೆಗಳನ್ನು ಕುರಿತು ಪರ್ಯಾಲೋಚನೆ ಮಾಡುವುದು ವ್ಯರ್ಥಕಾಲಕ್ಷೇಪವೇ ಹೊರ್ತು ಯಾವ ಫಲವೂ ಆಗುವುದಿಲ್ಲವೆಂದು ಅಮೇರಿಕದವರಿಗೆ ಜವಾಬು ಕಳುಹಿಸಿದ್ದಾರೆ.

ಪ್ರಾಕೃತಿಕ ಭೂಗೋಳ ಪ್ರಶ್ನೋತ್ತರ.

ಕ್ರಯ 5 ಆಣೆ. ಸಿದ್ಧವಾಗಿದೆ. 10 ಕ್ಕೆ 1 ಹೆಚ್ಚು.

ನನ್ನ ಎಗಜಾಮಿನರ್ ಮಾಸ ಪತ್ರಿಕೆಗೆ ಜೂನ್ 15 ರೊಳಗೆ ಚಂದಾದಾರರಾಗತಕ್ಕವರಿಗೆ ಟಿ|| ನೋಟ್ಸಾಗಲೀ, ಟಿ|| ಪ್ರಶ್ನೋತ್ತರವಾಗಲೀ ಬಹುಮಾನ. ಚಂದಾ ರೂ. 1-4-0. ಟಿ|| ನೋಟ್ಸ್ 4 ಆಣೆ. ಟಿ|| ಪ್ರಶ್ನೋತ್ತರ ಮುದ್ರಣದಲ್ಲಿದೆ. ನಮ್ಮ ಕ್ಯಾಟಲಾಗ್ ತರಿಸಿನೋಡಿ. [94-1]

ವಿಳಾಸ:—ಸಿ. ಪುಟ್ಟಯ್ಯ, ಎಗ್ಜಾಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಕಾಫಿ ತೋಟಕ್ಕೆ ರೈಟರು ಬೇಕು.

ಕೊಡಗಿನಲ್ಲಿ 150 ಎಕರೆ ಕಾಫಿ ಎಸ್ಟೇಟಿಗೆ ಅನುಭವದಾರನಾದ ಒಬ್ಬ ಫೀಲ್ಡ್ ರೈಟರು ಬೇಕಾಗಿದೆ. ಚೆಕ್ ರೋಲ್ ಮತ್ತು ರಿಪೋರ್ಟ್ ಬುಕ್ಕುಗಳ ಲೆಕ್ಕದ ಅನುಭವ ಇರಬೇಕು. ಸಂಬಳ 35 ರೂಪಾಯಿನಿಂದ 45 ರೂಪಾಯಿ ತನಕ ಬಡ್ತಿ ಮಾಡಲಾಗುವುದು. ಕೈನಾಟಿಗೆ ಒಬ್ಬ ಆಳನ್ನು ಕೊಡಲಾಗುತ್ತೆ. ಒಳ್ಳೆಯ ಸರ್ಟಿಫಿಕೇಟುಗಳನ್ನು ಪಡೆದಿರುವವರು ಮಾತ್ರ ಅರ್ಜಿ ಬರೆದುಕೊಳ್ಳತಕ್ಕದ್ದು.

ಈ ವಿಳಾಸಕ್ಕೆ ಅರ್ಜಿ ಬರೆಯತಕ್ಕದ್ದು:—ಕಾಫಿ ಪ್ಲಾಂಟರ್,

[93-1] ಕೇರಾಫ್ "ವೃತ್ತಾಂತ ಪತ್ರಿಕೆ," ಮೈಸೂರು.

ಜುಯೆಲ್ಡ್ ಸ್ಟ್ರಾಂಗ್ ಪಾಕೆಟ್ಟು (ರಿಜಿಸ್ಟರ್ಡ್) ಲೀವರ್ ಗಡಿಯಾರ.

8 ಬಹುಮಾನಗಳ ಸಮೇತ ರೂ. 3-4-0.

6 ವರುಷದ ಗ್ಯಾರಂಟಿ ಕೊಡಲ್ಪಡುತ್ತೆ.

ಪ್ರಿಯ ಮಿತ್ರರೇ, ಈ ನಕ್ಷೆಯಲ್ಲಿ ತೋರಿಸಿರುವ ಜುಯೆಲ್ಡ್ ಸ್ಟ್ರಾಂಗ್ ಪಾಕೆಟ್ಟು ರಿಜಿಸ್ಟರ್ಡ್ ಲೀವರ್ ಗಡಿಯಾರ. 6 ರತ್ನಗಳು ಉಳ್ಳ ಕಾಂಪನ್‌ಸೇಷನ್ ಬ್ಯಾಲೆನ್ಸ್.

ಬಹು ಬಲಿಷ್ಠವಾದ ಗಡಿಯಾರ. ಈ ಗಡಿಯಾರ ನಾಜೂಕಾದ ಯಂತ್ರದಲ್ಲಿಯೂ, ಶ್ರೇಷ್ಠವಾದ ಕೆಲಸದಲ್ಲಿಯೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟಿದ್ದು. ಇದನ್ನು ಕೈಗೂ ಕಟ್ಟಿಕೊಳ್ಳಬಹುದು. ಇದು ನೋಡುವದಕ್ಕೆ ಸುಂದರವಾಗಿಯೂ, ಮುಚ್ಚಟವಾಗಿಯೂ ಇರುತ್ತೆ. ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ನಮ್ಮ ಕಂಪನಿಗೆ ಪ್ರಖ್ಯಾತ ಹೊಂದಬೇಕೆಂಬ ಉದ್ದೇಶವಾಗಿಯೂ, ಭಾರಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಗಡಿಯಾರವನ್ನು ಕೂಡಲೆ ಬರೆದು ತರಿಸಿಕೊಳ್ಳಿ.

ಬಹುಮಾನ ತಪಸೀಲು ಹ್ಯಾಗಂದರೆ—(1) ಸುಂದರವಾದ ಸರಪಣಿ, (2) ಉತ್ತರ ಮುಖಿ, (3) ಇಂಗ್ಲಿಷ್ ನಮೂನೆ ಬಾಚಣಿಗೆ, (4) ಜಪಾನ್ ಕನ್ನಡಿ, (5) ಜಪಾನ್ ಸಿಲ್ಕು ಕರವಸ್ತ್ರ, (6) ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ (ಬಹು ಸೊಗಸಾದುದು), (7) ಪರಟು ಗುಂಡಿ ಸೆಟ್, (8) ಸುವಾಸನೆಯುಳ್ಳ ಪರಿಮಳ ಸೀಸೆ (ಸೆಂಟ್).

ನಮ್ಮ ವಿಳಾಸ:—ಕೆ ರಾಮಚಂದ್ರರಾವ್,

[85-2] ನಂ. 92, ಅದಿಯಪ್ಪನಾಯ್ಕನ್ ಬೀದಿ, ಮದರಾಸು

ನಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುತ್ತದೆ. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲಿಣ್ಣೆಗೆ ಹಾಕುವ ಬೇರೆ ಕೆರೋಸಿನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[296-21] 177, ಚೈನಾಬಜಾರ್ ರೋಡ್, ಮದರಾಸ್

ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ.

ಜನರು ರೋಗನಿವಾರಣೆಗಾಗಿ ಹಣವನ್ನು ಕಳೆಯುವುದಕ್ಕಿಂತ ಮಾತ್ರೆ, ಚೂರ್ಣ, ಎಣ್ಣೆ, ಭಸ್ಮ, ಸಿಂಧೂರ, ಲೇಹ, ಘೃತ, ಶರಬತ್ತು, ಮುರಬ್ಬಾಗಳನ್ನು

ಪರರ ಸಹಾಯವಿಲ್ಲದೆ ತಯಾರಿಸಬಾರದೇಕೆ? ಊದಬತ್ತಿ, ಗಂಧದಬತ್ತಿ, ಅರಗಜ ಮುಂತಾದ ಸುಗಂಧಗಳ ಸಮೂಹವನ್ನು ಕಲ್ಪಿಸಿ ನೂರಾರು ರೂಪಾಯಿ ಲಾಭವನ್ನು ಹೊಂದಬಾರದೇಕೆ? ಇಂತಹ ಉಪಯುಕ್ತ ಪುಸ್ತಕವು ಕನ್ನಡದಲ್ಲಿ ಇಲ್ಲವೇ ಇಲ್ಲ; ಕೆಲವು ಕಲ್ಪನಾ ಪುಸ್ತಕಗಳಿಗೆ ಮೋಸಹೋಗಿರುವವರು ನಮ್ಮ ಪುಸ್ತಕದ ಯೋಗ್ಯತೆಯನ್ನು ಪರೀಕ್ಷಿಸಿ! ಕ್ರಯ ಪುಸ್ತಕ 1 ಕ್ಕೆ ರೂಪಾಯಿ. 1-8-0.

ವಿಳಾಸ:—ವೆಂಕಟೇಶ ವಿಲಾಸ ಬುಕ್ ಡಿಪೋ,

[79-1] ಅಕ್ಕಿಪೇಟೆ, ಹಲಸೂರುಪೇಟೆ, ಬೆಂಗಳೂರು ಸಿಟಿ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ,

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ಸಂಶಯವಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರೀಕ್ಷಿಸಿ. ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ

[180-29] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕ್ಷುಧಾಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನಿನ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1 ಕ್ಕೆ 3 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177, [26-16] ಚೈನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಕರ್ಣಾಟಕ ಭಾಷೋಜ್ಜೀವಿನೀ ಸಭಾ, ಬೆಂಗಳೂರು.

ಈ ತಿಂಗಳ ಮೊದಲನೆಯ ವಾರ ನಾಲ್ಕು ದಿನ ಬೆಂಗಳೂರು ಸಿಟಿ ಗವರ್ನ್‌ಮೆಂಟ್ ಹೈ ಸ್ಕೂಲ್ ಕಟ್ಟಡದಲ್ಲಿ ಕರ್ಣಾಟಕ ಭಾಷಾಭಿಮಾನಿಗಳ ಮೊದಲನೇ ಸಭೆಯು ಜರುಗಿತು. ಮೈಸೂರು ಸಂಸ್ಥಾನದ ಸರ್ಕಾರಿ ಮುಖ್ಯಾಧಿಕಾರಿಗಳಲ್ಲದೆ ವಿದ್ಯಾವಂತರಾದ ಅನೇಕ ದೇಶೀಯ ದೊಡ್ಡಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು. ಮತ್ತು ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಕರ್ಣಾಟಕ ಸೀಮೆಯಿಂದ ಮ|| ಗಳಾದ ವಿನಾಯಕರಾವ್ ಜೋಷಿಯವರು, ರಾಮಚಂದ್ರರಾವ್ ದೇಶಪಾಂಡೆಯವರು, ವೆಂಕಟರಾವ್ ಆಲೂರ ಇವರು, ವೆಂಕಟರಾವ್ ಮುಗಡಾಲ ಇವರು, ರಾಮರಾವ್ ನವಗುಂದಕರ ಇವರು, ಫಕೀರಪ್ಪ ಹಳಕಟ್ಟಿಯವರು, ತಮ್ಮಪ್ಪ ಚಿಕ್ಕೋಡಿಯವರು, ವಾಸುದೇವಾಚಾರ್ಯ ಕೆರೂರ ಇವರು, ಬಿಂದೂರಾವ್ ಮುತಾಲಿಕ ದೇಸಾಯಿಯವರು, ಕೃಷ್ಣರಾವ್ ಮುದವೇಡಕರ ಇವರು, ಡಾಕ್ಟರ್ ಉಮಚಗಿಯವರು, ಹುಯಿಲಗೋಳಕರರವರು, ಬಿ ರಾಮರಾಯರು, ಈ ಮೊದಲಾದ ಹಲವು ದೊಡ್ಡಮನುಷ್ಯರು ಬಂದು ಹಾಜರಾಗಿದ್ದರು.

ನಮ್ಮ ಮಹಾರಾಜರವರು, ಶ್ರೀಮದ್ಯುವರಾಜರವರು, ದಿವಾನರವರು, ಸರ್ದಾರ್ ಬಾಳರಾಜೆ ಅರಸಿನವರು, ಪಂಡಿತ ಎಸ್. ಕೃಷ್ಣಸ್ವಾಮಯ್ಯಂಗಾರ್ರು, ಡಾಕ್ಟರ್ ರಾಮರಾಯರು, ರಾವ್ ಬಹದೂರ್ ಮಂಗೇಶರಾಯರು, ಈ ಮುಂತಾದವರು ಈ ಸಭೆಯಿಂದ ಕನ್ನಡ ಭಾಷೆಯು ವೃದ್ಧಿಗೆ ಬರುವಂತಾಗಲೆಂಬ ಅರ್ಥಕ್ಕೆ ಪ್ರೀತಿಪೂರ್ವಕವಾದ ಕಾಗದಗಳನ್ನೂ ತಂತೀವರ್ತಮಾನಗಳನ್ನೂ ಕಳುಹಿಸಿದ್ದರು. ನಮ್ಮ ದಿವಾನರವರು ಕನ್ನಡದಲ್ಲಿ ಸಕಲ ಪ್ರಜೆಗಳಿಗೂ ಅಭಿರುಚಿಯುಂಟಾಗಿ ಕುತೂಹಲ ಹುಟ್ಟುವುದಕ್ಕೆ ಕನ್ನಡದಲ್ಲಿ ಯೋಗ್ಯವಾದ ಪುಸ್ತಕಗಳು ಈ ಸಭೆಯ ಕಾರ್ಯಗಳ ದೆಸೆಯಿಂದ ದೊರಕುವಂತಾಗಬೇಕೆಂದು ಹಾರೈಸಿ ಕಾಗದ ಬರೆದಿದ್ದರು. ಪಂಡಿತ ಎಸ್ ಕೃಷ್ಣಸ್ವಾಮಯ್ಯಂಗಾರ್ರು ಮಲಿನವಾಗುತ್ತಿರುವ ಕನ್ನಡ ಭಾಷೆಯನ್ನು ಉಜ್ಜೀವಿಸುವಂತೆ ಮಾಡಿ, ಕನ್ನಡದ ಗ್ರಂಥಗಳ ಬರವಣಿಗೆಯೂ ಪ್ರಚಾರವೂ ಹರಡುವಂತೆ ಮಾಡಬೇಕೆಂದೂ, ಕನ್ನಡದಲ್ಲಿ ಯೋಗ್ಯವಾದ ಒಂದು ನಿಘಂಟನ್ನು (ಡಿಕ್ಷನರಿ) ಪ್ರಕಟಿಸಬೇಕಾದದ್ದು ಆವಶ್ಯವೆಂದೂ ಸಭೆಗೆ ಸೂಚಿಸಿ ಕಾಗದ ಬರೆದಿದ್ದರು.

ಮ|| ನಂಜುಂಡಯ್ಯನವರ ಉಪನ್ಯಾಸ.

ಸಭೆಯ ಅಗ್ರಾಸನವನ್ನು ವಹಿಸಿದ ಮ|| ಎಚ್ ವಿ ನಂಜುಂಡಯ್ಯ, ಸಿ. ಐ. ಇ ರವರು ಕನ್ನಡ ಭಾಷೆಯ ಈಗಿನ ಸ್ಥಿತಿಯನ್ನು ಕುರಿತು ಇಂಗ್ಲಿಷಿನಲ್ಲಿ ದೀರ್ಘವಾದ ಉಪನ್ಯಾಸ ಮಾಡಿದರು. ಅದರ ಮುಖ್ಯಾಂಶಗಳೇನೆಂದರೆ:— ಕನ್ನಡವು ನಮ್ಮ ಸೀಮೆಗೆ ಪ್ರಾಮುಖ್ಯವಾದ ಭಾಷೆಯಾಗಿದೆ. ಅದು ನಮ್ಮ ರಾಜರಿಗೂ ಪ್ರಜೆಗಳಿಗೂ ಸ್ವಭಾಷೆಯಾಗಿರುವುದು. ಸರ್ಕಾರದ ರಿಕಾರ್ಡುಗಳಲ್ಲೂ ವ್ಯಾಪಾರವ್ಯವಹಾರಗಳಲ್ಲೂ ಕನ್ನಡವೇ ಪ್ರಧಾನವಾಗಿರುತ್ತದೆ. ಈ ಸೀಮೆಯಲ್ಲಿರುವ ಮುಸಲ್ಮಾನರೂ ತೆಲುಗರೂ, ತಮಿಳರೂ ಮೊದಲು ಕನ್ನಡವನ್ನು ಕಲಿಯುವರು. ಆದಕಾರಣ ಈ ಭಾಷೆಯನ್ನು ಪೋಷಿಸಿ ಅಭಿವೃದ್ಧಿಗೆ ತರುವುದು ಆವಶ್ಯಕರ್ತವ್ಯವಾಗಿದೆ. ನಮ್ಮನ್ನಾಳುವ ಅರಸರು ಪರಂಪರಾಗತವಾಗಿ ಕನ್ನಡ ಭಾಷಾಭಿವೃದ್ಧಿಗೆ ನಿರ್ದುಷ್ಟವಾದ ಸಹಾಯವನ್ನೂ ಪ್ರೋತ್ಸಾಹವನ್ನೂ ಕೊಡುತ್ತಾ ಬಂದಿರುವರು. ಆದಾಗ್ಯೂ ಕನ್ನಡ ಭಾಷಾ ಗ್ರಂಥಗಳ ಪ್ರಚಾರವು ಅಷ್ಟೇನೂ ಹೆಚ್ಚಲಿಲ್ಲ. ಹಿಂದುಸ್ಥಾನದ ಇತರ ದೇಶಭಾಷೆಗಳು ದಿನೇ ದಿನೇ ತುಂಬಾ ಅಭಿವೃದ್ಧಿಗೆ ಬಂದಿರುತ್ತವೆ. ಕಾಲಾನುಗುಣ್ಯವಾಗಿ ಯೋಗ್ಯವಾದ ಗ್ರಂಥಗಳ ರಚನೆಗೆ ಸರ್ಕಾರದವರು ಅಲ್ಪಸ್ವಲ್ಪ ಸಹಾಯ ಮಾಡಬಹುದಾಗಿದ್ದಾಗ್ಯೂ ಗ್ರಂಥಗಳನ್ನು ಬರೆಯುವುದಕ್ಕೆ ಯೋಗ್ಯತೆ ಸಾಮರ್ಥ್ಯಾದಿಗಳೂ, ಭಾಷಾ ಸೇವೆಯಲ್ಲಿ ಪ್ರೀತಿಯೂ ಉಳ್ಳ ವಿದ್ಯಾವಂತರು ಮುಂದೆ ಬಾರದಿದ್ದರೆ ಅಂಥಾ ಸಹಾಯವಿದ್ದೂ ಸಾರ್ಥಕವಾಗುವುದಿಲ್ಲ. ಕನ್ನಡವು ನಮ್ಮ ಸಂಸ್ಥಾನದಲ್ಲಿ ಮಾತ್ರವೇ ಅಲ್ಲ; ನಮ್ಮ ಸೀಮೆಯ ಸುತ್ತಲೂ ಇರುವ ಬ್ರಿಟಿಷ್ ಡಿಸ್ಟ್ರಿಕ್ಟುಗಳಲ್ಲೂ, ಹೈದರಾಬಾದ್ ಸಂಸ್ಥಾನದಲ್ಲೂ ಕನ್ನಡಿಗರ ಪ್ರಜಾಸಂಖ್ಯೆಯು ಹೇರಳವಾಗಿರುತ್ತದೆ. ಆದಕಾರಣ ಕನ್ನಡ ನಾಡಿನವರೆಲ್ಲಾ ಏಕವಾಗಿ ಈ ಭಾಷೆಯ ಶ್ರೇಯೋಭಿವೃದ್ಧಿಯನ್ನು ಬಯಸಿ ಕಾಪಾಡುವಂತಾಗಬೇಕೆಂಬುವುದೇ ಈ ಸಭೆಯ ಉದ್ದೇಶವಾಗಿದೆ. ಇದಕ್ಕೆ ಸಾಧುವೂ ಹಿತಕರವೂ ಆದ ವಿಚಾರಗಳನ್ನು ಕುರಿತು ಈ ಸಭೆಯವರು ಪರ್ಯಾಲೋಚನೆ ಮಾಡಿ ರೂಢಿಸಬೇಕಾಗಿರುವುದು.

ಸಂಸ್ಕೃತದಲ್ಲಿ ನಮಗೆ ಈಗಿನ ಕಾಲದಲ್ಲಿ ಪರಿಶ್ರಮಪಡಬೇಕಾಗಿರುವಂಥಾ ಸಮಸ್ತ ವಿಷಯಗಳೂ ಕಲೆಗಳೂ ಗೋಚರವಾಗುವುದಿಲ್ಲ. ನಾನಾ ಕಲೆಗಳಲ್ಲಿ ಗ್ರಂಥಗಳು ದೊರಕುವವಾದರೂ ಅವೆಲ್ಲಾ ಈಗಿನ ವ್ಯವಹಾರಗಳಿಗೆ ಸಲ್ಲತಕ್ಕವುಗಳಾಗಿಲ್ಲ. ಇಂಗ್ಲೀಷಿನಲ್ಲಿಯೇ ಸುಮಾರು ಐವತ್ತು ವರುಷಗಳ ಹಿಂದೆ ಬರೆಯಲ್ಪಟ್ಟಿರುವ ಶಾಸ್ತ್ರಸಂಗತಿಗಳು ಈಗ ಪ್ರಯೋಜನಕಾರಿಗಳಾಗಿಲ್ಲವೆನ್ನುವುದು ನಮಗೆಲ್ಲಾ ತಿಳಿದೇ ಇದೆ. ಇಂಗ್ಲೀಷ್ ಭಾಷೆಯೇ ನಮ್ಮ ದೇಶದಲ್ಲೆಲ್ಲಾ ಆವರಿಸಿಕೊಂಡಿದ್ದಾಗ್ಯೂ ಅದನ್ನು ಕೆಲವರು ಮಾತ್ರ ಕಲಿಯಬಹುದಾಗಿದೆ. ಅದು ಎಂದಿಗೂ ನಮ್ಮ ದೇಶದಲ್ಲಿ ಪ್ರಧಾನವಾದ ಭಾಷೆಯಾಗುವುದಿಲ್ಲ. ನಮ್ಮ ದೇಶಭಾಷೆಯಿಂದ ಸದ್ಯ ತಿಳಿಯಬಹುದಾದ ಸಂಗತಿಗಳಿಗೂ ಇಂಗ್ಲಿಷ್ ಭಾಷಾಪರಿಚಯದಿಂದುಂಟಾಗುವ ಪರಿಜ್ಞಾನಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಈಗ ಎಲ್ಲರಿಗೂ ತಿಳಿದಿದೆ.

ಆದಕಾರಣ ಈಗ ನಾವು ನಡಸಬಹುದಾದ ಕೆಲಸವ್ಯಾವದು ? ನಮ್ಮ ಸಾಮಾನ್ಯ ಪ್ರಜೆಗಳಿಗೆ ದೇಶಭಾಷೆಯಲ್ಲೇ ಇಂಗ್ಲಿಷಿನಲ್ಲಿರುವ ವಿದ್ಯಾಭಾಗಗಳನ್ನು ಬರೆದು ಒದಗಿಸುತ್ತಾ ಬರಬೇಕು. ಸಮಸ್ತ ದೇಶಗಳಲ್ಲೂ ಸ್ವಭಾಷೆಗಳು ಅಭಿವೃದ್ಧಿಹೊಂದಿರುವುದು ಹೀಗೆಯೇ. ನವನಾಗರಿಕರ ಕೆಲಸಕಾರ್ಯಗಳನ್ನೂ, ಆಲೋಚನೆಗಳನ್ನೂ, ಗ್ರಂಥಗಳಲ್ಲಡಗಿರುವ ವಿಷಯಗಳನ್ನೂ ಸ್ವಭಾಷಾಭಿಮಾನಿಗಳು ಪರಿವರ್ತನೆಮಾಡಿ ಸಾಮಾನ್ಯ ಜನರಿಗೆ ಸುಲಭವಾಗಿ ದೊರಕುವಂತೆ ಒದಗಿಸುತ್ತಾ ಬಂದಿದ್ದಾರೆ. ನಮ್ಮ ದೇಶದಲ್ಲೂ ಪಾಶ್ಚಾತ್ಯ ವಿದ್ಯಾವಿಶಾರದರಾದವರು ಆ ರೀತಿ ಭಾಷಾಂತರಗಳನ್ನು ಮಾಡಿ ಪ್ರಚುರಪಡಿಸುತ್ತಾ ಬಂದಪಕ್ಷದಲ್ಲಿ ಹತ್ತು ಹದಿನೈದು ವರುಷಗಳಲ್ಲಿ ವಿದ್ಯೆಯು ಹರಡಿಕೊಳ್ಳುತ್ತಾ ಬಂದಹಾಗೆ ಕನ್ನಡದಲ್ಲೂ ಅನೇಕರು ಇಂಗ್ಲಿಷ್ ಗ್ರಾಜುಯೇಟುಗಳಷ್ಟು (ಬಿ ಎ ಪ್ಯಾಸ್ ಮಾಡಿದವರು) ಬುದ್ಧಿಕುಶಲತೆಯನ್ನು ಪಡೆಯುತ್ತಾರೆನ್ನುವುದಕ್ಕೆ ಅನುಮಾನವಿರುವುದಿಲ್ಲ. ಶಾಸ್ತ್ರವಿಷಯಗಳನ್ನು ನಮ್ಮ ಭಾಷೆಗೆ ಪರಿವರ್ತನೆಮಾಡಿ ಬರೆಯುವಲ್ಲಿ ಅನೇಕ ಪಾಶ್ಚಾತ್ಯಪದಗಳಿಗೆ ಅನುರೂಪವಾದ ಕನ್ನಡ ಪದಗಳು ಸಿಕ್ಕದೆ ಕಷ್ಟವಾಗುವುದೇನೋ ನಿಜ. ಆದರೆ ಅಂಥಾ ಸಂದರ್ಭಗಳಲ್ಲಿ ಅಂಥಾ ಪಾಶ್ಚಾತ್ಯಪದಗಳನ್ನೇ ಆನಾಮತ್ತು ಎತ್ತಿ ಪ್ರಯೋಗಿಸಿ ಅವುಗಳ ಅರ್ಥವನ್ನು ವಿವರಿಸಿಬಿಟ್ಟರೆ ಕಾಲಕ್ರಮದಲ್ಲಿ ಅವೇ ಪದಗಳು ರೂಢಿಗೆ ಬರಲು ಅನುಮಾನವಿಲ್ಲ. ಕನ್ನಡದಲ್ಲಿ ಈಗ ಪ್ರಕಟವಾಗುವ ವಿಷಯಗಳೆಲ್ಲಾ ಬಹುತರ ಹಳೆಯವೇ ಆಗಿ ಬೇರೆಬೇರೆ ಆಕೃತಿಯನ್ನು ಹೊಂದಿರತಕ್ಕವುಗಳಾಗಿವೆ. ಗ್ರಂಥಕರ್ತರು ಕಾಲದೇಶವರ್ತಮಾನಾನುಗುಣ್ಯವಾದ ವಿಷಯಗಳನ್ನು ಕುರಿತು ಬರೆಯುವುದು ಅಪರೂಪ. ಎಲ್ಲರಿಗೂ ಮನನವಾಗಿರುವ ಸಂಗತಿಗಳನ್ನು ಪುನಃ ಪುನಃ ಮಹಾ ಶ್ರೇಷ್ಠವಾದ ಪದಸರಣಿಯಲ್ಲಿ ಬರೆದಿರುವರು. ಇನ್ನು ಕೆಲವು ಪುಸ್ತಕಗಳನ್ನು ಓದಿದರೆ ಗ್ರಂಥಕರ್ತರಿಗಿರುವ ಅಲ್ಪವಾದ ಬುದ್ಧಿವಿಕಾಸವೂ ವಿವೇಚನಾಶಕ್ತಿಯೂ ಪ್ರಕಾಶವಾಗುತ್ತದೆ. ಆದಕಾರಣ ಬರವಣಿಗೆಯು ಸಾಮಾನ್ಯ ಜನರಿಗೂ ಸುಲಭವಾಗಿ ತಿಳಿಯುವಂತೆ ಲಲಿತವಾಗಿಯೂ, ವ್ಯಾಕರಣಬದ್ಧವಾಗಿಯೂ, ಬುದ್ಧಿಕುಶಲತೆಯನ್ನು ಹೆಚ್ಚಿಸುವುದಾಗಿಯೂ ಇರಬೇಕು. ಮುಖ್ಯವಾಗಿ ನಮ್ಮಲ್ಲಿ ಕನ್ನಡ ಭಾಷೆಯನ್ನು ಭಾಷಾಸೇವೆಗೋಸ್ಕರವೇ ಕುರಿತು ಕಲಿಯತಕ್ಕವರು ಅಪರೂಪ.

ಕನ್ನಡವು ಒಂದೇ ಭಾಷೆಯಾಗಿದ್ದರೂ ಅದು ಬೇರೆಬೇರೆ ಕಡೆಯಲ್ಲಿ ಬೇರೆ ಬೇರೆ ರೂಪ ವ್ಯತ್ಯಾಸವನ್ನು ಹೊಂದಿದೆ. ಧಾರವಾಡ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ ಎಂಬೀ ರೀತಿ ಒಂದೇ ಭಾಷೆಯಲ್ಲಿ ಅನೇಕ ವ್ಯತ್ಯಾಸಗಳಿರುವುವು. ಹೈದರಾಬಾದಿನಲ್ಲಿರುವ ಕನ್ನಡಿಗರ ಭಾಷೆಯಲ್ಲಿ ಉರುದು ವಾಕ್ಯಗಳೂ ಪದಗಳೂ ವಿಶೇಷವಾಗಿರುತ್ತವೆ. ಆದರೂ ಈ ಸ್ಥಳೀಯ ವ್ಯತ್ಯಾಸಗಳನ್ನು ಯಾರಿಂದಲೂ ತಪ್ಪಿಸುವುದು ಸಾಧ್ಯವಲ್ಲ. ಈ ವ್ಯತ್ಯಾಸಗಳು ಆಡುವ ಕನ್ನಡದಲ್ಲಿ ಇದ್ದಾಗ್ಯೂ ಬಾಲಪಾಠದ ಪುಸ್ತಕಗಳಲ್ಲಿ ಅವನ್ನು ಬದಲಾಯಿಸಿ ಕೊಳ್ಳಬೇಕೆಂಬುವುದು ನಮ್ಮ ಅಭಿಮತವಲ್ಲ. ಪಾಠಶಾಲೆಯ ತರಗತಿಗಳಲ್ಲಿ ಓದುವ ಪುಸ್ತಕಗಳ ಭಾಷೆಯು ಆಯಾ ಸ್ಥಳೀಯ ವ್ಯತ್ಯಾಸಗಳುಳ್ಳದ್ದಾಗಿದ್ದರೂ ಚಿಂತೆಯಿಲ್ಲ. ಮೇಲ್ತರದ ಪುಸ್ತಕಗಳಲ್ಲಿ ಕನ್ನಡ ಭಾಷಾರಚನೆಯು ಎಲ್ಲ ಕಡೆಗಳಿಗೂ ಅನ್ವಯಿಸುವಂತಿದ್ದರೆ ಸಾಕು. ಮೇಲೆ ಹೇಳಿದಂತೆ ಪದಗಳ ಅರ್ಥ ವಿವರಣೆಯಿಂದ ಗ್ರಂಥಗಳನ್ನು ರಚಿಸಬೇಕಾಗಿದೆ. ಭಾಷಾರಚನೆಯು ಮೈಸೂರಿನ ಸಂಪ್ರದಾಯವನ್ನನುಸರಿಸುವುದೇ ಅನುಕೂಲ. ಇಲ್ಲಿ ಈ ಭಾಷೆಯು ಶುದ್ಧವಾಗಿದೆ ಎಂದು ಹೇಳಲು ಹಲವು ಕಾರಣಗಳುಂಟು. ಕಳೆಕಳಾಂತರಗಳಿಂದಲೂ ಮೈಸೂರಿನಲ್ಲಿ ವಿಶೇಷವಾಗಿ ಜೈನರೂ ಲಿಂಗಾಯತರೂ ಕನ್ನಡದಲ್ಲಿ ಸ್ತೋತ್ರಾರ್ಹವಾದ ಅಭಿರುಚಿಯನ್ನಿಟ್ಟುಕೊಂಡು ಭಾಷೆಯನ್ನು ಪೋಷಿಸಿ ಅಭಿವೃದ್ಧಿಗೆ ತಂದವರಾಗಿದ್ದಾರೆ. ಇದಲ್ಲದೆ ಮೈಸೂರು ಸಂಸ್ಥಾನದಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರವರು ಸ್ವತಃ ಪಾಂಡಿತ್ಯವನ್ನು ಸಂಪಾದಿಸಿದವರಾಗಿದ್ದು ಅನೇಕ ಗ್ರಂಥಗಳನ್ನು ಬರೆದಿಟ್ಟಿರುವರು. ಅವರು ವಿದ್ಯೆಗೆ ಆಶ್ರಯದಾತರಾಗಿಯೂ ಇದ್ದರು. ವಿದ್ಯಮಾನಗಳು ಹೀಗಿರುವಲ್ಲಿ ಮೈಸೂರಿನವರು ತಮ್ಮ ಭಾಷಾಸರಣಿಯನ್ನು ಬದಲಾಯಿಸುವ ಭಾಗದಲ್ಲಿ ಸಮ್ಮತಿಪಡಲಾರರೆಂದೂ, ಅದಕ್ಕೆ ಹೊರಗಿನವರಿಗೆ ಅವಕಾಶಕೊಡಬಾರದೆಂದೂ ಹೇಳುವುದು ಅಹಂಕಾರವೆನಿಸಿಕೊಳ್ಳುವುದಿಲ್ಲ.

ಈ ಪ್ರಕಾರ ಮ|| ನಂಜುಂಡಯ್ಯನವರು ಉಪನ್ಯಾಸ ಮಾಡಿ, ಸಭೆಯವರು ಒಂದು ಕಮಿಟಿಯನ್ನು ಮಾಡಿಕೊಂಡು ಭಾಷಾಭಿವೃದ್ಧಿಗೆ ಅವಶ್ಯವಾದ ನಿಬಂಧನೆಗಳನ್ನು ರೂಪಿಸಿ ನಿರಂತರವಾಗಿ ಕಾರ್ಯ ನಡಿಸುತ್ತಾ ಭಾಷಾ ಸೇವೆಯನ್ನೂ ಆ ಮೂಲಕ ದೇಶ ಸೇವೆಯನ್ನೂ ಮಾಡಬೇಕೆಂದು ಹಾರೈಸಿ ಕುಳಿತುಕೊಂಡರು.

ಸಭೆಯ ತೀರ್ಮಾನಗಳು.

ಈ ಸಭೆಯ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಒಂದು ಕಮಿಟಿಯು ಏರ್ಪಾಡಾಗಿದೆ, ಅದರಲ್ಲಿ ಮ|| ಎಚ್. ವಿ ನಂಜುಂಡಯ್ಯನವರು ಅಧ್ಯಕ್ಷರಾಗಿಯೂ, ಮ ಎಂ ಶಾಮರಾಯರು ಉಪಾಧ್ಯಕ್ಷರಾಗಿಯೂ, ಮ|| ಬಿ. ಕೃಷ್ಣಪ್ಪನವರು ಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟರು. ಈ ಕಮಿಟಿಗೆ ಮೈಸೂರಿನವರು 16 ಮಂದಿ, ಬೊಂಬಾಯಿನವರು 8 ಮಂದಿ, ಮದರಾಸಿನವರು 6 ಮಂದಿ, ಬಿಜಾಪುರ ಮೊದಲಾದ ಕಡೆಗಳವರು ಇಬ್ಬರು, ಹೈದರಾಬಾದಿನವರು ಇಬ್ಬರು; ಕೊಡಗಿನವರು ಒಬ್ಬರು, ಈ ರೀತಿ 35 ಮಂದಿ ಮೆಂಬರಾಗಿ ಸೇರಲ್ಪಟ್ಟರು. ಬೇರೆ ಬೇರೆ ಅವಧಿಗಳ ಮತ್ತು ದರ್ಜೆಗಳ 110 ಮೆಂಬರುಗಳು ಚಂದಾ ಕೊಡುವುದಾಗಿ ಹೇಳಿದರು. ಇದರಿಂದ ಕಮಿಟಿಯ ಕಾರ್ಯಗಳಿಗೆ 3,000 ರೂಪಾಯಿ ನಗದು ದ್ರವ್ಯ ದೊರೆಯುತ್ತೆಂಬ ಭರವಸೆಯುಂಟಾಯಿತು. ಈ ಕಮಿಟಿಯಲ್ಲಿ ತೀರ್ಮಾನವಾಗಿರುವ ವಿಷಯಗಳೇನೆಂದರೆ:—

(1) ಕನ್ನಡ ಭಾಷಾ ಪರಿಷತ್ತು ಸ್ಥಾಪಿಸಲ್ಪಡತಕ್ಕದ್ದು; ಮತ್ತು ಅದರ ಮೂಲಕ ಬೇರೆ ಬೇರೆ ಕನ್ನಡ ಸೀಮೆಗಳಲ್ಲಿ ಭಾಷಾಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಉಪಸಂಘಗಳನ್ನು ಸ್ಥಾಪಿಸಿ ಕೆಲಸ ನಡಿಸತಕ್ಕದ್ದು. ಇದಲ್ಲದೆ ಈ ಪರಿಷತ್ತಿನವರು ಅವಶ್ಯ ಕಂಡುಬಂದಾಗ ಯಾವ ಸ್ಥಳದಲ್ಲಾದರೂ ಸಭೆಯನ್ನು ನಡಿಸತಕ್ಕದ್ದು.

(2) ಮದರಾಸ್ ಮತ್ತು ಬೊಂಬಾಯಿ ಗವರ್ನ್‌ಮೆಂಟುಗಳಿಗೆ ಕನ್ನಡ ಭಾಷಾಭಿವೃದ್ಧಿಗೋಸ್ಕರ ಸಹಾಯ ಪ್ರೋತ್ಸಾಹಗಳನ್ನು ಕೊಡಬೇಕೆಂದು ಬರೆದು ಕೇಳಿಕೊಳ್ಳತಕ್ಕದ್ದು.

(3) ಮದರಾಸ್ ಮತ್ತು ಬೊಂಬಾಯಿ ಯೂನಿವರ್ಸಿಟಿಗಳಲ್ಲಿ ಕನ್ನಡ ಭಾಷೆಯನ್ನು ಸಂಸ್ಕೃತ ಮತ್ತು ಫಾರಸಿ ಭಾಷೆಗಳಂತೆ ಮುಖ್ಯ ಭಾಷೆಯಾಗಿ ಸೇರಿಸಿಕೊಳ್ಳಬೇಕೆಂದು ಆಯಾ ಯೂನಿವರ್ಸಿಟಿ ಅಧಿಕಾರಿಗಳನ್ನು ಪ್ರಾರ್ಥಿಸಬೇಕು.

(4) ಕನ್ನಡ ಭಾಷೆಯಲ್ಲಿ ಉತ್ತಮವಾದ ಕನ್ನಡ ನಿಘಂಟು (ಡಿಕ್ಷನರಿ) ಇಲ್ಲದಿರುವುದರಿಂದ ಅದನ್ನು ಬರೆದು ಪ್ರಕಟಿಸುವುದಕ್ಕೆ ಒಂದು ಕಮಿಟಿಯನ್ನು ಏರ್ಪಾಡು ಮಾಡಬೇಕು.

ಈ ಸಮ್ಮೇಲನದಲ್ಲಿ ಹಲವು ಮಂದಿ ವಿದ್ಯಾವಂತರು ಅನೇಕ ಉಪಯುಕ್ತವಾದ ಉಪನ್ಯಾಸಗಳನ್ನು ಓದಿದರು; ಹಲವರು ಭಾಷಣಗಳನ್ನು ಮಾಡಿದರು.

ಕರ್ಣಾಟಕ ಪತ್ರಿಕಾಕರ್ತರ ಕೂಟ, ಬೆಂಗಳೂರು.

ಕರ್ನಾಟಕ ಸಾಹಿತ್ಯ ಪರಿಷತ್ತಿಗಾಗಿ ಬೆಂಗಳೂರಿನಲ್ಲಿ ಅನೇಕ ಜನ ಕನ್ನಡ ಪತ್ರಿಕಾಕಾರರೂ ಮಾಸಿಕ ಪುಸ್ತಕಕಾರರೂ ಸೇರಬಹುದಾಗಿ ತಿಳಿದು ಇದೇ ಕಾಲಕ್ಕೆ ಅವರೆಲ್ಲರದೊಂದು ಸಮ್ಮೇಲನವನ್ನು ಕೂಡಿಸಬೇಕಾಗಿ ಮೈಸೂರಿನ "ಮಧುರವಾಣೀ" ಕರ್ತರಾದ ಮ|| ಹನುಮಂತರಾಯರವರು ಮೊದಲಿನಿಂದಲೂ ಪ್ರಯತ್ನವನ್ನು ಮಾಡಿದ್ದರು. ಈ ಪ್ರಯತ್ನವು ಕೊನೆಗೆ ಸಫಲವಾಗಿ ಕಳೆದ ತಾ. 7 ನೇ ದಿವಸ ಸಾಯಂಕಾಲಕ್ಕೆ ಬೆಂಗಳೂರಿನ "ಒಕ್ಕಲಿಗರ ಪತ್ರಿಕೆ"ಯ ಕಾರ್ಯಾಲಯದಲ್ಲಿ ಕನ್ನಡ ಪತ್ರಿಕಾಕಾರರ ಹಾಗೂ ಮಾಸಿಕ ಪುಸ್ತಕಕಾರರ ಸಮ್ಮೇಲನವು ಸೇರಿತು. ಅಧ್ಯಕ್ಷಸ್ಥಾನವನ್ನು ಮೈಸೂರಿನ "ಸಾಧ್ವಿ"ಯ ಸಂಪಾದಕರಾದ ಮ|| ವೆಂಕಟಕೃಷ್ಣಯ್ಯನವರು ಅಲಂಕರಿಸಿದ್ದರು. ಒಕ್ಕಲಿಗರ ಪತ್ರಿಕೆ, ಕರ್ನಾಟಕ ವೃತ್ತ, ಮಂಗಳೂರಿನ ಸ್ವದೇಶಾಭಿಮಾನಿ ಮುಂತಾದ ವರ್ತಮಾನ ಪತ್ರಕಾರರೂ, ಶಾರದಾ, ವೇದವಾಹಿನೀ, ಕಾದಂಬರೀ ಸಂಗ್ರಹ, ಲಾ ಗೆಜೆಟು, ಭಾರತೀ, ವಿದ್ಯಾದಾಯಿನೀ, ಸಚಿತ್ರ ಭಾರತ ಮುಂತಾದ ಮಾಸಿಕ ಪುಸ್ತಕಕಾರರೂ ಸಭೆಗೆ ದಯಮಾಡಿಸಿದ್ದರು. ಅಧ್ಯಕ್ಷರ ಔಪಕ್ರಮಿಕ ಭಾಷಣವಾದ ನಂತರ ಕನ್ನಡ ಪತ್ರಕರ್ತರ ಸಮ್ಮೇಲನವನ್ನು ಪ್ರತಿ ವರ್ಷ ಸಾಹಿತ್ಯ ಪರಿಷತ್ತಿನ ಅಧಿವೇಶನದೊಂದಿಗೆ ಕೂಡಿಸುವದು ಅತ್ಯಂತ ಇಷ್ಟವಾಗಿರುವದೆಂದು ನಿರ್ಣಯಿಸಲ್ಪಟ್ಟು ಆ ಬಗ್ಗೆ ಅವಶ್ಯಕವಾದ ಏರ್ಪಾಡುಗಳನ್ನು ಮಾಡುವದಕ್ಕಾಗಿ ಒಂದು ವ್ಯವಸ್ಥಾಪಕ ಸಭೆಯು ನೇಮಿಸಲ್ಪಟ್ಟಿತು. ಸಂಪಾದಕ ವರ್ಗದಲ್ಲಿ ಪರಸ್ಪರ ಸಹಾನುಭೂತಿಯೂ ಅನುರಾಗವೂ ಬೆಳೆಯುವಂತೆ ಮಾಡಬೇಕು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರಕಟವಾಗುವ ಪತ್ರಗಳಲ್ಲಿಯೂ ಮಾಸಿಕಗಳಲ್ಲಿಯೂ ಆದಷ್ಟು ಮಟ್ಟಿಗೆ ಏಕರೂಪವಾದ ಭಾಷೆಯು ಪ್ರಚಾರದಲ್ಲಿ ಬರುವಂತೆ ಪ್ರಯತ್ನಿಸಬೇಕು ಎಂಬಿವೇ ಮೊದಲಾದ ಮಹತ್ವದ ನಿರ್ಣಯಗಳು ಗೊತ್ತುಪಡಿಸಲಾದವು. ಕನ್ನಡ ಭಾಷೆಯನ್ನು ಏಕರೂಪಕ್ಕೆ ತರುವದು ಸಾಹಿತ್ಯ ಪರಿಷತ್ತಿನ ಅನೇಕ ಉದ್ದೇಶಗಳಲ್ಲಿ ಒಂದಾಗಿರುವದರಿಂದ ಆ ಪರಿಷತ್ತಿನಿಂದ ಗ್ರಾಹ್ಯವೆಂದೂ ಸಮಂಜಸವೆಂದೂ ನಿರ್ಣಯಿಸಲ್ಪಟ್ಟ ಸಾಮಾನ್ಯ ಶಬ್ದಗಳನ್ನೂ ಪ್ರಯೋಗಗಳನ್ನೂ ಕೂಡಲೇ ಪ್ರಚಾರದಲ್ಲಿ ತರುವದಕ್ಕೆ ಈ ಪತ್ರಕರ್ತರ ಸಮ್ಮೇಲನದಿಂದ ತುಂಬಾ ಅನುಕೂಲತೆಯುಂಟಾಗುವದೆಂಬದು ನಿರ್ವಿವಾದ ಸಿದ್ಧಾಂತವಾಗಿದೆ. ಆದದರಿಂದ ಕನ್ನಡ ಭಾಷೆಯ ಏಳ್ಗೆಯನ್ನೂ, ಕನ್ನಡಿಗರ ಏಕವಾಕ್ಯತೆಯನ್ನೂ ಅಂತಃಕರಣ ಪೂರ್ವಕವಾಗಿ ಬಯಸುವವರಿಗೆ ಪತ್ರಕರ್ತರ ಸಮ್ಮೇಲನವೂ ಕೂಡಿದ ಸಂಗತಿಯು ಆನಂದವನ್ನುಂಟುಮಾಡದಿರಲಾರದೆಂದು ನಾವು ಎಣಿಸುತ್ತೇವೆ. ಈ ಸಮ್ಮೇಲನದ ಮೂಲಕವಾಗಿ ಎಲ್ಲಾ ವರ್ತಮಾನ ಪತ್ರಕಾರರೂ ಮಾಸಿಕ ಪುಸ್ತಕಕಾರರೂ ತಮ್ಮ ತಮ್ಮ ಲೇಖನ ವ್ಯವಸಾಯದಲ್ಲಿ ಯೋಗ್ಯವಾದ ಸುಧಾರಣೆಯನ್ನು ಮಾಡಿಕೊಂಡು, ತಾವು ವಿಶೇಷವಾಗಿ ಲೋಕಾದರಕ್ಕೆ ಪಾತ್ರವಾಗುವದಲ್ಲದೆ ಜನಪದದಲ್ಲಿ ಸಂಪಾದಕ ವರ್ಗದ ಯೋಗ್ಯತೆಯನ್ನೂ ವರ್ಚಸ್ಸನ್ನೂ ಹೆಚ್ಚಿಸುವದಕ್ಕೆ ಪ್ರಯತ್ನ ಮಾಡುವರೆಂದು ನಾವು ದೃಢವಾಗಿ ನಂಬಿರುತ್ತೇವೆ.—ಕ. ವೃ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರ್ಯವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ನ್ಯೂನೋವು; ಕೀಲುನೋವು; ಮರವು; ನಿಶ್ಶಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-38]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುದ್ದಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೬ ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯ್ಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋತಕ (ಭಾತ), ಮೈ ನಡುಕ, ಶೀತದ ಕಫ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಶೀಘ್ರದಲ್ಲಿ ಗುಣಮಾಡುತ್ತದೆ. ... ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ... ಯಾವ ಕಾಯಿಲೆಗೂ ದೀರ್ಘಕಾಲದ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ... ಸ್ತ್ರೀಯರ ಬಹುಮೂತ್ರ, ಮುಟ್ಟಿನ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ... ಸೇವಿಸುತ್ತಿರುವವರು ಯಾವಕಾಲದಲ್ಲಿಯೂ ಸ್ತ್ರೀಗಳ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. 220 ಮಾತ್ರೆಗಳುಳ್ಳ ... ಒಂದು ಕುಪ್ಪಿ ಹಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಷ್ಟೇಜು 4 ಆಣೆ. [199-37]

(1) ಮ|| ಎ ಕೆ. ವಿಶ್ವನಾಥ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಸಿ ಎಂ. ಎ. ಸ್ಕೂಲ್, ಮಾಂಜು, ಹೋಲ ಡಿಸ್ಟ್ರಿಕ್ಟು, ಇವರು ಬರೆಯುವುದು:—"ಬಹು ದಿನಗಳಿಂದ ಮಲಬದ್ಧತೆ ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ಕೆಲವು ತಿಂಗಳು ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮನಾಭ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗೆಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."



ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೂಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು; ಆದರೆ ನಮ್ಮ ಈ ಸಾನೋಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-41] ಬೊಂಬಾಯಿ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ಸದ್ವಾಸನೆಗಳನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-35]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಪಡಿಸುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-27] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು.

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 60 ವಯಸ್ಸಿನವರೊಳಗಿರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರೆಗೆ ಕೊಡುತ್ತಾ ಬರುವದು. ಕಂಪನಿಗೆ ದಾಖಲಾಗಿ ಪಾಲಿಸಿ ಪಡೆದು ಸರೀಸು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಷ್ಟ ಸಮೇತ ನಾಮಿನಿಗೆ ಕೊಡಲಾಗುತ್ತೆ. 20 ವರುಷದವರಿಗೂ ಜೀವಂತರಾಗಿದ್ದಲ್ಲಿ 500 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಂಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿನಂತೆ ಕೊಡುತ್ತಾ ಬರುವದು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲೂ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್ರು ಹಣವು ಹಂಚಿಕೆ ರೀತಿಯೆಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿನಿಯೋಗ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಿಂಗು ಏಜಂಟ್ರು ಖುದ್ದು ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ. [292-22]

ಒಳ್ಳೆ ಚಟುವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏರು ರೂಪಾಯಿ ಅಲೋಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್ರಿಗೆ ಬರೆಯಿರಿ:—

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ರು, 166 ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

30—4—1915 ರಿಂದ 7—5—1915 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		1	0	3	1
ಮೈಸೂರು	,,	3	3	0	0
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	5	3	0	0
ಶಿವಮೊಗ್ಗ	,,	1	1	0	0
	ಒಟ್ಟು......	10	7	3	1

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣೆ ವಸಂತಋತು ನಿಜ ವೈಶಾಖ ಶುದ್ಧ ಸಪ್ತಮಿ ಶುಕ್ರವಾರದಿಂದ ನಿಜ ವೈಶಾಖ ಶುದ್ಧ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಮೇ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವೃಷಭ ಮಿಥುನ ಶುದ್ಧ
21	ಶುಕ್ರ †	ಸಪ್ತಮಿ	26-42	ಆಶ್ಲೇಷ	23-27	8
22	ಶನಿ *	ಅಷ್ಟಮಿ	26-55	ಮಘಾ	24-19	9
23	ಭಾನು ;;	ನವಮಿ	23-10	ಪುಬ್ಬಾ	24-0	10
24	ಸೋಮ ‡	ದಶಮಿ	20-11	ಉತ್ತರಾ	22-33	11
25	ಮಂಗಳ §	ಏಕಾದಶಿ	16-0	ಹಸ್ತ	20-14	12
26	ಬುಧ ,,	ದ್ವಾದಶಿ	11-1	ಚಿತ್ತ	17-7	13
27	ಗುರು ::	ತ್ರಯೋದಶಿ	5-36	ಸ್ವಾತಿ	54-16	14

† ಗಂಗಾಸಪ್ತಮಿ, ಮೃತ್ಯುಯೋಗ, ಮಳೆ ನಕ್ಷತ್ರ—ಕೃತ್ತಿಕೆ 4 ನೇ ಪಾದ. * ಸರ್ವತ್ರ ಅಷ್ಟಮೀ ತಿಥಿ. ;; ತಿಥಿದ್ವಯಂ, ವಾಕ್ಯರೀತ್ಯಾ ನವಮಿ ತಿಥಿ. ‡ ಏಕಾದಶೀ ತಿಥಿ, ವಾಕ್ಯರೀತ್ಯಾ ತಿಥಿದ್ವಯಂ, ವರದರಾಜಜಯಂತಿ, ಮಳೆ ನಕ್ಷತ್ರ—ರೋಹಿಣಿ 1 ನೇ ಪಾದ. § ಸರ್ವತ್ರ ಏಕಾದಶಿ, ಶ್ರೀರಂಗಪಟ್ಟಣದಲ್ಲಿ ನೃಸಿಂಹಸ್ವಾಮಿ ರಥ. ,, ಪ್ರದೋಷ. : ಕಂಚಿ ಗರುಡೋತ್ಸವ, ಕೂರ್ಮಜಯಂತಿ, ಸರ್ವತ್ರ ನೃಸಿಂಹಜಯಂತಿ.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಅಲೋಯನ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನ್ ಮತ್ತು ಮನೆಗಳನ್ನು ಕೊಂಡುಕೊಡುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟ್‌ಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳೂ ಸಹಾ ಬೇಕಾಗಿದೆ. ಇಷ್ಟಪಡುವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

M. L. NAGANNA,

[15-19] Managing Director, Life & Marriage Assurance Buildings, Mysore.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಜಾರಿ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಡುಗಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ಮೈಭರಣೆ 1, ತಾಂಬೂಲ ಪಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ಲವೆಂಡರ್ ಪೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಒಟ್ಟು 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,

[73-4] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

Printed and Published by the Rev. H. Gulliford. Proprietor and Manager, Wesleyan Mission Press, Mysore. 20/5/1915.

REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೬ನೇ ಇಸವಿ ಮೇ ತಾರೀಖು ೨೭ನೇ ಗುರುವಾರ. ಸಂಚಿಕೆ ೫೨

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ಸಂಪಾದಿಸಲೊಲ್ಲಳು? ಇಂತಹ ಕೇಶಸಂಪತ್ತನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೋ, ಹಾಗೆಯೇ ಮಾನಸಿಕ ಸಂಸ್ಕಾರವನ್ನು ಪಡೆದ ಪುರುಷರಿಗೂ ವಿದ್ಯಾ ರ್ಥಿಗಳಿಗೂ ಅತ್ಯಾವಶ್ಯಕವಾದ ಸಹಾಯಕವಾಗಿರುತ್ತದೆ. ಈ ತೈಲವನ್ನು ಶಿರಸ್ಸಿಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕವು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೇಶಗಳ ಬುಡಗಳು ದೃಢವಾಗಿ ಕೂದಲು ಉದುರದೆ ಬಹಳ ಕಾಲ ಕಪ್ಪಾಗಿಯೇ ಇರುತ್ತವೆ; ಅದರ ಅಪೂರ್ವವಾದ ಪರಿಮಳವು ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಇದರ ಸುಗಂಧವಾದರೋ ಮಧುರವೂ ಚಿರಸ್ಥಾಯಿಯೂ ಆಗಿರುವುದು.

ಕೇಳುವವರ ಎಣ್ಣೆಗಳನ್ನು ಕೆಲವರು ಉಪಯೋಗಿಸಿ ತಮ್ಮ ಕೂದಲನ್ನು ತಲೆಯನ್ನೂ ಹಾಳು ಮಾಡಿಕೊಳ್ಳುವರು. ಇಂತಹ ಬಾಧೆಗಳನ್ನು ತಪ್ಪಿಸುವದಕ್ಕೋಸ್ಕರ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಶ್ರೇಷ್ಠರ ಉತ್ತಮವಾದ ಪತ್ರಗಳೂ ದೊರೆತಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ವೇಗಿನಹಾಳಕರ ಬಂಧುಗಳು. ಬಸವನಕಟ್ಟೆ, ಬೆಳಗಾಂವಿ.—ತಾವು ಕಳಿಸಿದ "ಕಾಮಿನಿಯಾ" ತೈಲವು ಕೇಶವರ್ಧನಕ್ಕೂ ಚಲುವಿಕೆಗೂ ಅತ್ಯುತ್ತಮವಾದುದೆಂದು ಸಾಧಿಸಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕಳಿಸಬೇಕು. ವಿ. ಪಿ. ದ್ವಾರಾ ಕಳುಹಿಸುವದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತಿವಂತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳವಣಿಯಿಂದ ತಮಗೆ ಅಷ್ಟಲ್ಲ ನಫೆಯು ದೊರೆಯುತ್ತದೆಂದು, ತಾವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವಾದ್ದು ಇದೇ" ಎಂದು ಅವರಿಗೆ ಬಹಳ ಲಾಭ ದೊರೆಯತಕ್ಕ ಕೀಳುತರದ ಬೇರೆ ತೈಲವನ್ನು ತಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ತಾವು ಶ್ರಮಗಳಿಂದ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಬೇಕು. ಮೇತರುಬಾನ್ ಮಾಡಿದರೆ ತಾವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಬಯಸಿದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ತಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಮ್ಮ ಸುತ್ತಲು ಸ್ವರ್ಗೀಯವಾದದೊಂದು ಸುವಾಸನೆಯು ಆವರಿಸಿಕೊಳ್ಳುವುದು. ಬೇರೆ ಯಾವ ಪರಿಮಳ ದ್ರವ್ಯಕ್ಕೂ ಇಂಥಾ ಗುಣ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವರ್ಣ್ಯವೆಂದು ತಮ್ಮ ವಿನಾ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-18]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿಜಾಡಿಯ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪಗಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಇಂಗ್ಲಿಷ್—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜೀದ್, ಬೊಂಬಾಯಿ.

ಏಜೆಂಟ್, ಟಿ ಆರ್. ವರ್ಗ್, ಮಂಗಳೂರು.

ಕಾಫಿ ತೋಟಕ್ಕೆ ರೈಟರು ಬೇಕು.

ಕೊಡಗಿನಲ್ಲಿ 150 ಎಕರೆ ಕಾಫಿ ಎಸ್ಟೇಟಿಗೆ ಅನುಭವದಾರನಾದ ಒಬ್ಬ ಫೀಲ್ಡ್ ರೈಟರು ಬೇಕಾಗಿದೆ. ಚೆಕ್ ರೋಲ್ ಮತ್ತು ರಿಪೋರ್ಟ್ ಬುಕ್ಕುಗಳ ಲೆಕ್ಕದ ಅನುಭವ ಇರಬೇಕು. ಸಂಬಳ 35 ರೂಪಾಯಿಯಿಂದ 45 ರೂಪಾಯಿ ತನಕ ಬಡ್ತಿ ಮಾಡಲಾಗುವುದು. ಕೈಸಾಕಿಗೆ ಒಬ್ಬ ಆಳನ್ನು ಕೊಡಲಾಗುತ್ತೆ. ಒಳ್ಳೆಯ ಸರ್ಟಿಫಿಕೇಟುಗಳನ್ನು ಹಾಜರುಪಡಿಸುವವರು ಮಾತ್ರ ಅರ್ಜಿ ಬರೆದುಕೊಳ್ಳತಕ್ಕದ್ದು.

ಈ ವಿಳಾಸಕ್ಕೆ ಅರ್ಜಿಬರೆಯತಕ್ಕದ್ದು:— ಕಾಫಿ ಪ್ಲಾಂಟರ್,

[93-2] ಕೇರಾಫ್ "ವೃತ್ತಾಂತ ಪತ್ರಿಕೆ," ಮೈಸೂರು.

ಹೊಸ ಕಾದಂಬರಿಗಳು.

ಉತ್ತಮವಾದ ಚಿತ್ರಗಳನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಏಳ್ಗಾಗ್ರ ಖಾಣಿಕ್ಕೆ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ಕಾಲಸುಂದರಿ	0-8-0	ಕುಮುದಿನಿ	0-6-0
ರಾಧಾಮಾಧವ	0-8-0	ಸಂತಾಪಕ	0-4-0

[275-21] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದುಪರೀಕ್ಷಾ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-20]

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವಿಶೇಷ ಮನೋಹರವಾದ ವಿಧದಲ್ಲಿ ಬಹು ಶ್ಲಾಘನೀಯವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಅನುಕೂಲಕ್ಕಾಗಿ ಪರಿಶೀಲಿಸಿ ತಿದ್ದಿ ಸರಿಪಡಿಸಿರುತ್ತಾರೆ. ಇವರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ಸಾವಿರಾರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತ ನೋಡಿ. [239-16]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಹೊಸ ಭೂವಿವರಣೆ.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಟೆ|| ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೆಕ್ಕತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[13-15] ಸುಬೋಧ ಗ್ರಂಥಾಲಯ, ಮೈಸೂರು.

Price, 6 as. Price, 0-6-0.

READY FOR SALE.

ENGLISH L. S. TEXT NOTES, 1916

By H. Nagappa, B.A., & A. Srikantaiya, B.A. Copies can be had at the Student's Hall, Mysore; C. L. S. Book Depot, Mysore; General Agency, Mysore; or H. N. Rao Bros., Bangalore City. [83]

NOTICE.

Notes on The Story of Rama and Romantic Tales and Legends, the Lower Secondary English Texts for 1916, by Mr. S. V. Pichamuttu, B.A., are now available at Messrs. K. A. Chourappa and Sons, and The Mission Book Depot, Bangalore, and at The Students' Hall, Mysore. [96-1]

Price, Six annas a Copy.

MYSORE L. S. EXAMINATION, 1916.

Free! Free for this Week!! Free!!!

Full Notes on Two English Texts 0-5-0.

A Copy of Spelling Book on Small Orders, and English Papers on Large Orders given Free. English Essays and Letters 0-6-0.

Apply to—M. N. SITA RAMA RAO,

88-2 Krishnaraja Mohalla, Mysore.

ದುರ್ಗಾದಾಸ.

ಇದು ಬಂಗದೇಶದ ಪ್ರಖ್ಯಾತ ಕವಿ ದ್ವಿಜೇಂದ್ರಲಾಲರಾಯರ ನಾಟಕವನ್ನು ಅನುಸರಿಸಿ ಅವರ ಅನುಮತಿಯಿಂದ ಆರ್. ವ್ಯಾಸರಾಯರಿಂದ ಪ್ರಚುರಪಡಿಸಲ್ಪಟ್ಟಿದೆ.

ಕಥೆ ಬಹಳ ಸ್ವಾರಸ್ಯವಾಗಿದೆ. ಕ್ರಯ 12 ಆಣೆ.

ವಿಳಾಸ—ಕೆ. ಎ. ಚೌರಪ್ಪ ಅಂಡ್ ಸನ್ಸ್,

[98-1] ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

ಪ್ರಾಕೃತಿಕ ಭೂಗೋಳ ಪ್ರಶ್ನೋತ್ತರ.

ಕ್ರಯ 5 ಆಣೆ. ಸಿದ್ಧವಾಗಿದೆ. 10 ಕ್ಕೆ 1 ಹೆಚ್ಚು.

ನಮ್ಮ ಎಗ್ಸಾಮಿನರ್ ಮಾಸ ಪತ್ರಿಕೆಗೆ ಜೂನ್ 15 ರೊಳಗೆ ಚಂದಾದಾರರಾಗತಕ್ಕವರಿಗೆ ಟೆ|| ನೋಟ್ಸುಗಳೂ, ಟೆ|| ಪ್ರಶ್ನೋತ್ತರವಾಗಲೀ ಬಹುಮಾನ ಚಂದಾ ರೂ. 1-4-0 ಟೆ|| ನೋಟ್ಸು 4 ಆಣೆ, ಟೆ|| ಪ್ರಶ್ನೋತ್ತರ ಸಿದ್ಧವಾಗಿದೆ, 3 ಆಣೆ ನಮ್ಮ ಕ್ಯಾಟಲಾಗ್ ತರಿಸಿನೋಡಿ [94-2]

ಸಿ. ಪುಟ್ಟಯ್ಯ, ಮ್ಯಾನೇಜರ್, ಎಗ್ಸಾಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಮಧುರವಾಣಿ,—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬರೆಯಿರಿ. [160-45]

ಅತ್ಯುತ್ತಮ ಕಾದಂಬರಿಗಳು:—ಜಯ! ವಾಲ್ಮೀಕಿ 12 ಆ; ಅಕ್ಕತಂಗಿ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 3 ಆ; ರಂಗನ ಮದುವೆ 1 ಆ; ವಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿ 1½ ಆ; ಸಾಹಸಿಕೆ 2½ ಆ; ಸುಶೀಲೆ 6 ಆ; ಸಭಾ ಭಾಗ 1, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಂತ್ ಕಂಪೆನಿ, ಮೈಸೂರು.

ಹಿಂದೂ-ಯುನಾನಿ ವೈದ್ಯ,

ಸುಗಂಧ ಬೋಧಕ.

ಜನರು ರೋಗನಿವಾರಣೆಗಾಗಿ ಹಣವನ್ನು ಕಳೆಯುವುದಕ್ಕಿಂತ ಮಾತ್ರೆ, ಚೂರ್ಣ, ಎಣ್ಣೆ, ಧೂಪ, ಸಿಂಧೂರ, ಲೇಹ, ಘೃತ, ಪರಟಪ್ಪ, ಮುರಬ್ಬಾಗಳನ್ನು



ಪರರ ಸಹಾಯವಿಲ್ಲದೆ ತಯಾರಿಸಬಾರದೇಕೆ? ಊದುಬತ್ತಿ, ಗಂಧದೆಣ್ಣೆ, ಅತ್ತರು ಮುಂತಾದ ಸುಗಂಧಗಳ ತಯಾರಿಕೆಯನ್ನು ಕಲಿತು ನೂರಾರು ರೂಪಾಯಿ ಲಾಭವನ್ನು ಹೊಂದಬಾರದೇಕೆ? ಇಂತಹ ಉಪಯುಕ್ತ ಪುಸ್ತಕವು ಕನ್ನಡದಲ್ಲಿ ಇಲ್ಲವೇ ಇಲ್ಲ; ಕೆಲವು ಕಲ್ಪನಾ ಪುಸ್ತಕಗಳ ಮೋಸಕ್ಕೊಳಗಾಗಿರುವವರು ನಮ್ಮ ಪುಸ್ತಕದ ಯೋಗ್ಯತೆಯನ್ನು ಪರೀಕ್ಷಿಸಿ! ಕ್ರಯ ಪುಸ್ತಕ 1 ಕ್ಕೆ ರೂಪಾಯಿ 1-8-0.

ವಿಳಾಸ:—ವೆಂಕಟೇಶ ವಿಲಾಸ ಬುಕ್ ಡಿಪೋ,

[79-5] ಅಕ್ಕಿಪೇಟೆ, ಹಳೆ ತರಗುಪೇಟೆ, ಬೆಂಗಳೂರು ಸಿಟಿ.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳವಾಗಿದೆ.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಜಿಬಿಷನ್‌ಗಳಲ್ಲಿ ಸುಮಾರು 96 ಸರ್ಟಿಫಿಕೇಟುಗಳನ್ನೂ 32 ಮೆಡಲುಗಳನ್ನೂ ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರವನ್ನು ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಸುವಾಸನೆ ಸಾದು ಶೀಸೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆರ್ಯಮತವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನು ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ಭೃಂಗಾಮಲಕತೈಲ ಶೀಸಾ 1 ಕ್ಕೆ 1 ರೂ.

ಇದು ಸ್ನಾನಮಾಡುವಾಗಲೂ ರಾತ್ರಿ ಮಲಗಿಕೊಳ್ಳುವಾಗಲೂ ತಲೆಗೆ ಹಚ್ಚಿಕೊಂಡದ್ದೇ ಆದರೆ ಸಮಸ್ತ ಉಷ್ಣವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯೂ ಸಹಾ ಬರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,

[39-14] ಸುಗಂಧಕಾರಿ, ಮೈಸೂರು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ¼ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲಿನ್ನಿಗೆ ಹಾಕುವ ಬೇರೆ ಕೆರೋಸಿನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ರೋಮುಲವಾಗಿ ಬೆಳೆಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಪಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[296-32] 177, ಬೈನಾಬಜಾರ್ ರೋಡ್, ಮದರಾಸ್.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ, ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. ೪, ಕಂದಪ್ಪ

[180-30] ಮೊದಲಿ ಬೀದಿ, ತಿರುವಲ್ಲಕೇಣಿ, ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 3-6-0.

ನೀ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಗಂಗಾಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂದಸ್ವಾಮಿ

[99-51] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟೆಹರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ತುರಿ, ಉಬ್ಬಸ, ಕ್ಷಯ, ಗರ್ಭವೆಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-20]



ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಸೈತ್ಯ, ಮಾಸಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಹೊಸ ವರ್ಷದ ಪ್ರಕಟನೆ.

ಹೊಸ ತಯಾರಿ! ಸುಲಭ!! ಹೊಸ ತರಹ!!!

ಗಟ್ಟಿ ಬಣ್ಣದ ಧಡೂತಾದ ಸೀರೆಗಳು.

ಸೋಲಾಪುರದ ತರಹೆವಾರಿ ಚೆಕ್ಕುಗಳು.

ಶುದ್ಧಿ ಮಾಡಿದ ಹರ್ಸ ಹತ್ತಿಯ ತುಪ್ಪ.

ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಖರೀದಿಗಳು ದಿನೇ ದಿನೇ ಹೆಚ್ಚುತ್ತಿವೆ. ಒಟ್ಟಾಗಿ ತೆಗೆದುಕೊಳ್ಳುವವರಿಗೆ ತುಂಬಾ ಸುಲಭಕ್ರಯ. [66-10]

ತ್ವರೆಮಾಡಿ! ನಾವಕಾಶ ಮಾಡಿದರೆ ಸರಕು ಸಿಕ್ಕದು.

ಹೆಚ್ಚು ವಿಷಯ ಕಾಗದದ ಮೂಲಕ ತಿಳಿಯಬಹುದು.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್, 159, ಕಿಲಾರಿ ರೋಡು (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬೆಳ್ಳಿಯ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-36]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ಸಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತಕಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಜಾಗ್ರತೆಯಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಸೆಳವು, ಜ್ವರ, ನಿತ್ಯಜ್ವರ, ಕೃಶತ್ವಗಳನ್ನು ಗುಣಪಡಿಸುತ್ತೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [109-38]



(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಪರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಖಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮನಾಭಾಚಾರ್, ತಿರುವನಂತಪುರ, ಕಂಟ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸು) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳಾ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.



ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶಾವಂತಿಗೆ, ಕ್ಯಾದಿಗೆ, ಗುಲಾಬಿ, ವಿಚಿ ಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೆಂಪು ಗೆಣೆಗಳು 6, ಕಾರೊನೇಷನ್ ಬ್ರೂಚ್ 1, ಟಿನ್ನು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[87-2] ನಂ. 44, ನಂಬುಳಯ್ಯರ ಬೀದಿ, ಮದರಾಸು.

"JINTAN"
Pill Case
(Exact Size)

ಸೋಲ್ ಏಜೆಂಟರು—

ಎಸ್. ವೈದ್ಯಾ ಅಂಡ್ ಕಂಪೆನಿ,

ಪಿ. ಟಿ. ಮದರಾಸು.



ಜಿಂಟಾನ್

ಅತ್ಯದ್ಭುತವಾದ ಜಪಾನ್ ಮಾತ್ರೆಗಳು

ಒಂದು ಸಲ ಪರೀಕ್ಷಿಸಿ ನೋಡಿರಿ.

ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೇಸೊಪ್ಪು ಅಗಿಯುವವರು, ನಿಶಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬರಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30	ಮಾತ್ರೆಗಳ ಪೊಟ್ಟ 1 ಕ್ಕೆ	ಕ್ರಯ	0-1-6
65	,, ,, ,, ...	,,	0-3-0
185	,, ಪೊಟ್ಲ ಮತ್ತು ಸುಂದರವಾದ ಮಾತ್ರೆಗಳು ಇರುವ ಚಿಕ್ಕ ಡಬ್ಬಿ ಸಹಾ	,,	0-8-0
445	,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-4]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಸ್. ಸುಬ್ರಹ್ಮಣ್ಯಂ ಕಂಪೆನಿಯಲ್ಲಿ ಬಿಕರಿಗೆ ಇಡಲಾಗಿದೆ.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲೆ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;

2. ಬಿ. ಜಿ. ಗೋರಿಯೋ ಕಂಪನಿ, ಪಾಲೆಸ್ ಬೀದಿ,

[172-42] ಬೊಂಬಾಯಿ ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋಉಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯುಳ್ಳದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಾಪಿನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

0-30]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಮೇ ತಾ. ೨೭ ನೇ ಗುರುವಾರ.

ಸರ್ಕಾರಿ ಅಧಿಕಾರಿಗಳ ಸಂಚಾರ.

ಸರ್ಕಾರದ ಅಧಿಕಾರಿಗಳು ನಿಂತು ಪ್ರಜಾಪಾಲನೆಯ ಕಾರ್ಯಗಳನ್ನೆಲ್ಲಾ ನಡಿಸಬೇಕೆನ್ನುವುದೇ ನಮ್ಮ ದೇಶದ ಪಾಡಿಕೆಯಾಗಿದೆ; ಮತ್ತು ಪ್ರಜೆಗಳು ಈ ರೀತಿಯಾದ ರಾಜ್ಯಭಾರವನ್ನು ವಿಶೇಷವಾಗಿ ಪ್ರೀತಿಸುವವರಾಗಿದ್ದಾರೆ. ನ್ಯಾಯವಿಧಾಯಕ ಕೌನ್ಸಿಲ್ಲುಗಳಲ್ಲಿ ವ್ಯಾಸವಾಗಿ ಜಾರಿಗೆ ಬರುವಂಥಾ ಕಟ್ಟಳೆ ಕಾನೂನುಗಳು ಸಮಸ್ತವಾದ ರಾಜಕೀಯ ಕಾರ್ಯಗಳಿಗೂ ಮೂಲವಾಗಿರಬೇಕೆಂಬುವುದನ್ನೂ, ಅಂಥಾ ಕಟ್ಟಳೆ ಕಾನೂನುಗಳೇ ಪ್ರಜೆಗಳನ್ನು ಪರಿಪಾಲನೆ ಮಾಡಬೇಕೆಂಬುವುದನ್ನೂ ನಮ್ಮ ಸೀಮೆಯ ಜನಗಳು ಕಂಡಂಥವರು. ಇಂಥಾ ಅನುಭವವೇ ನಮ್ಮ ಪ್ರಜೆಗಳಿಗಿಲ್ಲ. ಅಮಲ್ದಾರರು, ಡೆಪ್ಯುಟಿ ಕಮಿಷನರು ಗ್ರಾಮಾಂತರಗಳ ಮೇಲೆ ಸಂಚಾರಮಾಡಬೇಕು; ಅವರು ಹುಕುಮುಗಳನ್ನು ಮಾಡಬೇಕು; ಅವರು ವ್ಯಾಜ್ಯಗಳನ್ನು ಪರಿಸುರಬೇಕು; ಅಂತು ಸಕಲ ಕಾರ್ಯಗಳನ್ನೂ ಸರ್ಕಾರದ ಅಧಿಕಾರಿಗಳೇ ನಡಿಸಿಕೊಂಡು ಮಾಡಬೇಕೆಂಬ ಭಾವನೆಯು ನಮ್ಮ ಜನಗಳಲ್ಲಿರುತ್ತದೆ. ಪ್ರಜೆಗಳು ಸ್ವತಂತ್ರಿಸಿ ಕೆಲಸಗಳನ್ನು ಮಾಡಿಕೊಳ್ಳುವುದಾಗಲಿ, ತಮ್ಮ ಕ್ಷೇಮಾಭಿವೃದ್ಧಿಗೆ ಸಾಧಕವಾಗುವ ವಿಚಾರಗಳನ್ನು ತಾವೇ ಹುಡುಕಿ ಮಾಡಿಕೊಳ್ಳುವುದಾಗಲಿ ಅವರಿಗೆ ಅಭ್ಯಾಸವಾಗಿಲ್ಲ. ಈಗೀಗ ಪ್ರಜೆಗಳಿಗೆ ಅಂಥಾ ಅಭ್ಯಾಸವನ್ನು ಹುಟ್ಟಿಸಬೇಕೆಂದು ನಮ್ಮ ಸರ್ಕಾರದವರು ಶಾಸನ ಸಭೆಗಳಿಂದ(?) ಸರ್ಕಾರದ ಮುಖ್ಯಾಧಿಕಾರಿಗಳು ಪಟ್ಟಣ ಊರು ಗ್ರಾಮಗಳಲ್ಲಿ ಸಂಚಾರ ಮಾಡಿ ಪ್ರಜೆಗಳನ್ನು ಸಂಧಿಸಿ ಅವರಿಗೆ ಉತ್ತೇಜನಕೊಟ್ಟು ಅವರು ಮಾಡತಕ್ಕ ಕಾರ್ಯಗಳನ್ನು ಸಾಕ್ಷಾತ್ತಾಗಿ ನೋಡಿಕೊಳ್ಳುತ್ತಾ ಬರಬೇಕಾದದ್ದು ಸರಿಯಾದದ್ದಾಗಿದೆ.

ಬಲುವರು ಅಧಿಕಾರಿಗಳಿಲ್ಲ; ಕಟ್ಟಳೆ ಕಾನೂನುಗಳ ಪ್ರಕಾರವೇ ರಾಜ್ಯಭಾರ ಕಾರ್ಯಗಳು ನಡೆಯುವವೆಂಬ ಭಾವನೆಯು ಪ್ರಜೆಗಳೊಳಗೆ ವಿವೇಕಶಾಲಿಗಳಾದವರಿಗೆ ಈಗೀಗ ಉಂಟಾಗಿರುವುದೂ, ಯಾವ ಅಧಿಕಾರಿಯಾಗಲಿ ಕಾನೂನಿಗೆ ಅನುಸಾರವಾಗಿಲ್ಲದಂಥಾ ಹುಕುಮನ್ನು ಕೊಟ್ಟರೂ, ಕಾರ್ಯಗಳನ್ನು ನಡಿಸಿದರೂ ಸುಮ್ಮನಾಗದೆ ಆಕ್ಷೇಪಣೆಮಾಡುವುದೂ ನಿಜ. ಆದರೆ ಪ್ರಜಾಸಾಮಾನ್ಯಕ್ಕೆ ಕಟ್ಟಳೆ ಕಾನೂನುಗಳೊಂದೂ ತಿಳಿಯದು; ಅನೇಕ ವರುಷಗಳಾಗುವ ತನಕ ಅವರಿಗೆ ಅಂಥಾ ತಿಳುವಳಿಕೆಯುಂಟಾದೀತೆಂದು ಊಹಿಸುವುದೂ ಕಷ್ಟ. ಈ ಕಾರಣ ಅಧಿಕಾರಿಗಳು ತಮ್ಮ ಅಧಿಕಾರಕ್ಕೊಳಪಟ್ಟ ಸ್ಥಳಗಳಲ್ಲಿ ಆಗಿಂದಾಗ್ಗೆ ಸಂಚಾರಮಾಡುತ್ತಾ ಬರಬೇಕೆನ್ನುವುದು ಅವಶ್ಯವಾಗಿದೆ. ಡಿಸ್ಟ್ರಿಕ್ಟಿನ ಅಧಿಕಾರಿಗಳು ಸಂಚಾರಮಾಡಬೇಕಾಗಿರುವುದರಲ್ಲಿ ಅರಪಾಸಿಯಾದರೂ ಅವರು ಮಾಡುತ್ತಾ ಇಲ್ಲ. ಅವರು ಗ್ರಾಮಾಂತರಗಳ ಮೇಲೆ ಪದೇ ಪದೇ ಹೋಗಿ ಬರುತ್ತಿದ್ದರೆ ಅನೇಕಾನೇಕ ವ್ಯಾಜ್ಯಕಾಜ್ಯಗಳು ಸ್ಥಳದಲ್ಲೇ ಇತ್ಯರ್ಥವಾಗಬಹುದು: ಕಾಗದ ಪತ್ರಗಳ ಓಡಾಟವೂ, ತಾಮಸವೂ ಬಹಳ ಮಟ್ಟಿಗೆ ತಪ್ಪುತ್ತದೆ. ಅಂಥಾ ಸಂಚಾರದಲ್ಲೇ ಡಿಸ್ಟ್ರಿಕ್ಟ್ ಅಧಿಕಾರಿಯು ಪ್ರಜೆಗಳ ಹಿತಕ್ಕಾಗಿ ಯಾವ ಯಾವ ಕೆಲಸ ಕಾರ್ಯಗಳು ಆಗಬೇಕಾಗಿವೆಯೋ, ಆರೋಗ್ಯ ವಿಚಾರವನ್ನೂ ವಿದ್ಯಾಪ್ರಚಾರ್ಯವನ್ನೂ ಯಾವ ರೀತಿ ಅಭಿವೃದ್ಧಿ ಪಡಿಸಿಕೊಳ್ಳಬಹುದೋ, ಅದನ್ನೆಲ್ಲಾ ಆಯಾ ಸ್ಥಳೀಯ ಪ್ರಜೆಗಳಿಗೆ ಹೇಳಿ ತೋರಿಸಿಕೊಡಬಹುದಾಗಿದೆ.

ನಮ್ಮ ದಿವಾನರವರು ಈಚೆಗೆ ಶಿವಮೊಗ್ಗ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡಿ ಬಂದರಷ್ಟೆ. ಅಗ್ಗ ಅವರಿಗೆ ತೋರಿದ ವಿಚಾರಗಳೂ, ಅಭಿಪ್ರಾಯಗಳೂ ಕೆಲವು ಮಟ್ಟಿಗೆ ಪ್ರಕಟವಾಗಿರುವವು. ಅವರು ಸ್ಕೂಲು ಕಚೇರಿ ಮೊದಲಾದವುಗಳನ್ನು ಹೋಗಿ ನೋಡಿದರು; ಅಲ್ಲಲ್ಲಿ ಪ್ರಜೆಗಳನ್ನು ಕೂಡಿಸಿ ಅವರ ಕಷ್ಟ ಕೊರತೆಗಳನ್ನು ಆಲಿಸಿ ಕೇಳಿದರು. ಬಹುಶಃ ಅವರ ಕೋರಿಕೆಗಳು ಕೆಲವು ಸಂದರ್ಭಗಳಲ್ಲಿ ಅಸಾಧ್ಯವಾದವುಗಳಾಗಿರಬಹುದು. ಆದಾಗ್ಯೂ ಅವು ಗವರ್ನ್‌ಮೆಂಟಿನವರ ಗಮನಕ್ಕೆ ತರುವುದು ಅವಶ್ಯವಾದವುಗಳೆಂದು ಕಂಡು ಬಂದಂತೆ ದಿವಾನರವರ ಬರವಣಿಗೆಯಿಂದ ಗೊತ್ತಾಗುತ್ತದೆ. ಡಿಸ್ಟ್ರಿಕ್ಟಿನ ಅಧಿಕಾರಿಗಳೂ, ಇಲಾಖೆಗಳ ಮುಖ್ಯಾಧಿಕಾರಿಗಳೂ ಈ ರೀತಿ ಯಾಕೆ ಮಾಡುವುದಿಲ್ಲವೋ ನಮಗೆ ತಿಳಿಯದೆ ಆಶ್ಚರ್ಯವಾಗಿ ಕಾಣುತ್ತದೆ. ಅವರು ಗ್ರಾಮಾಂತರಗಳ ಸ್ಥಿತಿಗತಿ ಕಷ್ಟ ಕೊರತೆಗಳನ್ನು ವಿವೇಕಿಸಿ ಪರಿಶ್ರಮಮಾಡಿಕೊಂಡು, ಗ್ರಾಮಸ್ಥರಿಗೆ ಬೇಕಾಗುವ ಸಹಾಯ ಸಂಪತ್ತುಗಳನ್ನು ಒದಗಿಸಬಹುದಾಗಿದೆ. ನಮ್ಮ ದಿವಾನರವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯು ಬಹಳ ಸ್ತೋತ್ರಾರ್ಹವಾದದ್ದಾಗಿದೆ. ಡಿಸ್ಟ್ರಿಕ್ಟ್ ಅಧಿಕಾರಿಗಳೂ ಇಲಾಖಾ ಮುಖ್ಯಾಧಿಕಾರಿಗಳೂ ಈ ರೀತಿ ತಾವು ಸಂಚಾರಮಾಡಿದ ವೃತ್ತಾಂತವನ್ನೂ, ಪ್ರಜೆಗಳ ಅಭಿಲಾಷೆ ಕುಂದು ಕೊರತೆಗಳನ್ನೂ, ಪ್ರಜೆಗಳಿಗೆ ಎಷ್ಟು ಮಟ್ಟಿಗೆ ಸಹಾಯ ಮಾಡಲಾಯಿತೆಂಬ ಅಂಶಗಳನ್ನೂ ಕುರಿತು ಆರು ತಿಂಗಳಿಗೆ ಒಂದಾವರ್ತಿಯಾದರೂ ಪ್ರಕಟಮಾಡುತ್ತಾ ಬರಬೇಕೆಂದು ಪ್ರಾರ್ಥಿಸುತ್ತೇವೆ.

ಅಧಿಕಾರಿಗಳು ಸಾರ್ಥಕವಾಗಿ ಸಂಚಾರಮಾಡುತ್ತಾ ಬಂದ ಪಕ್ಷದಲ್ಲಿ ಸ್ಥಳೀಯ ಕುಂದುಕೊರತೆಗಳು ಅನೇಕವಾಗಿ ಪರಿಹಾರವಾಗುತ್ತವೆ; ದಸರಾ ಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಚರ್ಚೆಗೆ ತರುವ ವಿಷಯಗಳ ಸಂಖ್ಯೆ ಎಷ್ಟೋ ಕಡಮೆಯಾದಾವು. ಅಂಥಾ ಸ್ಥಳೀಯ ಕುಂದುಕೊರತೆಗಳು ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ಬಹಳ ಬೇಗನೆ ಸುಲಭವಾಗಿ ಗೊತ್ತಾಗುವವು. ಇದರಿಂದ ಪ್ರತಿನಿಧಿ ಸಭೆಯ ಅಮೂಲ್ಯವಾದ ಸಮಯವು ವ್ಯರ್ಥವಾಗದೆ ಸಾರ್ಥಕವಾಗಿ ಪರಿಣಮಿಸೀತು.

ನಮ್ಮ ದಿವಾನರವರು ತಮ್ಮ ಸಂಚಾರದಲ್ಲಿ ಕಂಡ ವಿದ್ಯಮಾನಗಳನ್ನು ಪ್ರಕಟಮಾಡಿರುವುದನ್ನು ನೋಡಿ ನಾವು ಆನಂದಪಡುವೆವು. ಪ್ರಜೆಗಳ ಪ್ರಾರ್ಥನೆಗಳನ್ನು ಅವರು ಸಾವಧಾನದಿಂದ ಆಲಿಸಿ ಕೇಳಿದ್ದೂ, ಅವರ ಪ್ರಾರ್ಥನೆಗಳಿಗೆ ಮನಸ್ಸು ಕೊಟ್ಟಿರುವುದೂ ಅವರಲ್ಲಿರುವ ನೈಜವಾದ ಪ್ರಜಾವಾತ್ಸಲ್ಯವನ್ನು ಪ್ರಕಾಶಪಡಿಸುವವಲ್ಲದೆ ಇದರಿಂದ ತುಂಬಾ ಪ್ರಯೋಜನವಾದೀತೆಂದು ನಂಬುತ್ತೇವೆ. ಇತರ ಅಧಿಕಾರಿಗಳೂ ಅವರ ಮೇಲ್ಪಂಕ್ತಿಯನ್ನು ಅನುಸರಿಸುವವರಾಗಲೆಂದು ಪ್ರಾರ್ಥಿಸುವೆವು.

ಫ್ಲಾರೆನ್ಸ್ ನೈಟಿಂಗೇಲ್ ಅಮ್ಮನವರ ಚರಿತ್ರೆ.

ಈಗ ನಡೆಯುವ ಯುದ್ಧವು ಅತಿ ಘೋರವಾದದ್ದಾದರೂ ಅದರಲ್ಲಿ ಗಾಯಪಟ್ಟು ನರಳುವವರ ಪೋಷಣೆ, ಚಿಕಿತ್ಸೆ, ಪರಾಮರಿಕೆಗಳು ಅತ್ಯಂತ ಶ್ಲಾಘನೀಯತರವಾಗಿ ನಡೆಸಲ್ಪಡುತ್ತವೆ. ಒಬ್ಬ ಸಿಪಾಯಿಯು ರಣಾಂಗ್ರದಲ್ಲಿ ಗಾಯಪಟ್ಟು ಬಿದ್ದ ಕೂಡಲೆ ಸ್ವಲ್ಪವೂ ತಾಮಸವಿಲ್ಲದೆ ಅವನನ್ನು ವಾಹನದಲ್ಲಿ ಸಾಗಿಸಿ ಆಸ್ಪತ್ರೆಗೆ ಸಾಗಿಸುವ ತರವೊಂದು ನಡೆಯುತ್ತದೆ. ಅಲ್ಲಿ ಅವನನ್ನು ಏನು ಎಚ್ಚರಿಕೆಯಿಂದ ಪೋಷಿಸಿ ಕಾಪಾಡುತ್ತಾರೆ. ಪಕ್ಷವೈದ್ಯರು ಕಾಯಿಸು ಆನೆ ಕರವಾದ ಶಸ್ತ್ರವೈದ್ಯವನ್ನು ಅತಿ ಚಮತ್ಕಾರದಿಂದಲೂ ಜಾಗ್ರತೆಯಿಂದಲೂ ಪ್ರಯೋಗಿಸುತ್ತಾರೆ. ಮತ್ತು ಅಲ್ಲಿಂದ ಅವನನ್ನು ಸಾವಕಾಶವಾದಷ್ಟು ಬೇಗ ಶಾಶ್ವತವಾದ ಆಸ್ಪತ್ರೆಗೆ ಬಹು ಜೋಕೆಯಿಂದ ಒಯ್ಯುತ್ತಾರೆ. ಅಲ್ಲಿ ಅವನನ್ನು ಉಪಚರಿಸುವ ಮೊದಲನ್ನು(?) ರೋಗಿಗಳಲ್ಲಿ ಬಹು ಮಂದಿ ಬೇಗ ಗುಣಹೊಂದುತ್ತಾರೆ. ರಣರಂಗದಲ್ಲಿ ಪ್ರಾಣಹಾನಿಯು ಆಸ್ಪತ್ರೆಗೆ ಸಾಗಿಸಲ್ಪಡುವವರಲ್ಲಿ ಬದುಕುವವರೇ ಹೆಚ್ಚಾಗಿದ್ದಾರೆ. ಮೃತಪಡುವವರು ಬಹಳ ಕಡಿಮೆ. ಮತ್ತು ಲೋಕದಲ್ಲಿ ಹಿಂದೆ ನಡೆದ ಯಾವ ಯುದ್ಧದಲ್ಲಿಯಾಗಲಿ ಗಾಯಪಟ್ಟವರ ಸಂಖ್ಯೆಯನ್ನೂ ಸಾವಿಗೀಡಾಗಿ ಬಿದ್ದವರ ಸಂಖ್ಯೆಯನ್ನೂ ಈ ಯುದ್ಧದಲ್ಲಿ ಗಾಯಪಟ್ಟು ಸಾವಿಗೀಡಾಗುವವರ ಸಂಖ್ಯೆಯ ಸಂಗಡ ಹೋಲಿಸಿ ನೋಡಿದರೆ, ಹಿಂದೆ ಯಾವ ಯುದ್ಧದಲ್ಲಿಯಾದರೂ ಗಾಯಪಟ್ಟವರನ್ನು ಪರಾಮರಿಸುವದಕ್ಕೆ ಮಾಡಿದ್ದ ಏರ್ಪಾಡು ಅನುಕೂಲಗಳಿಗಿಂತ ಈಗ ನಡೆಯುವ ಯುದ್ಧದಲ್ಲಿ ಗಾಯಪಟ್ಟವರ ಉಪಚಾರಕ್ಕೆ ಮಾಡಲ್ಪಟ್ಟಿರುವ ಏರ್ಪಾಡು ಸೌಕರ್ಯ ಅನುಕೂಲಗಳು ಎಷ್ಟೋ ಉತ್ತಮೋತ್ತಮ ತರವೆಂದು ಸುಲಭವಾಗಿ ಗೋಚರವಾಗುವದು. ಗಾಯಪಟ್ಟವನನ್ನು ಆದರಿಸುವದಕ್ಕೆ ಬೇಕುಬೇಕಾದ್ದನ್ನೆಲ್ಲಾ ಅತಿತ್ವರವಾಗಿ ಒದಗಿಸುವುದನ್ನು ಗಾಯಪಟ್ಟು ಆಸ್ಪತ್ರೆಯಲ್ಲಿರುವವರು ನೋಡಿ ತಮ್ಮ ನೋವನ್ನೂ ಕಷ್ಟವನ್ನೂ ಬಹಳ ಮಟ್ಟಿಗೆ ಮರೆತು ಅತ್ಯಂತ ಆಮೋದದಿಂದ ತಮ್ಮನ್ನು ಪೋಷಿಸುತ್ತಿರುವವರನ್ನು ಕೊಂಡಾಡಿ ಮನದುಂಬುವ ರೀತಿಯಲ್ಲಿ ಅವರಿಗೆ ತಮ್ಮ ಉಪಕಾರ ಸ್ಮರಣೆಯನ್ನು ಸಲ್ಲಿಸುವದನ್ನು ನಾವು ಬಲ್ಲೆವು.

ದೃಷ್ಟಾಂತವಾಗಿ ಈಗ ಅರವತ್ತು ವರುಷಗಳಿಗೆ ಮುಂಚೆ ಬ್ರಿಟಿಷ್ ಚಕ್ರಾಧಿಪತ್ಯವವರಿಗೂ ರಷ್ಯಾ ಚಕ್ರಾಧಿಪತ್ಯಕ್ಕೂ ಘೋರವಾದ ಯುದ್ಧವು ಪ್ರಾಪ್ತವಾಗಿತ್ತು. ಆ ಯುದ್ಧದಲ್ಲಿ ಗಾಯಪಟ್ಟು ರಣರಂಗದಲ್ಲಿ ಬಿದ್ದವರ ಪಾಡನ್ನೂ ವಿಪತ್ತನ್ನೂ ಬಣ್ಣಿಸುವದಸದಳ. ಆ ಕಾಲದಲ್ಲಿ ಪ್ರಕಟನಾದ ದಿವಾಸಿನ ಸ್ರಾವ್ಯಲಿಗೆಯು(?) ಅನಾರೋಗ್ಯದ ಚಿಕಿತ್ಸಾಕ್ರಮವೂ ಅವಾಚ್ಯವಾದ ನಾಚಿಕೆಯನ್ನು ಉಂಟುಮಾಡುತ್ತವೆ. ತಕ್ಕ ಏರ್ಪಾಡನ್ನು ಮಾಡಿ ಅವಶ್ಯಕವಾದ ಸಾಮಗ್ರಿಗಳನ್ನು ಔಷಧಿಗಳನ್ನೂ ಆಹಾರವನ್ನೂ ಒದಗಿಸುವ ಯೋಚನೆಮಾಡಿದವರಾರೂ ಇಲ್ಲ. ಇಂತಹ ಪ್ರಸಂಗದಲ್ಲಿ ತಕ್ಕ ಬುದ್ಧಿವಂತರು ಮುಂದಾಲೋಚನೆಯನ್ನು ಮಾಡಿ ಮೊದಲನ್ನು ಮುಂದೆ ಬೇಕಾದ ವಸ್ತುಗಳನ್ನು ಕೂಡಿಹಾಕಿಸಿ ಸಿದ್ಧನಾಗಿಟ್ಟಿರಬೇಕಾದದು ಅತ್ಯಗತ್ಯವಾಗಿದೆ. ಆದರೆ ಆ ಬಿಕ್ಕಟ್ಟಿನಲ್ಲಿ ಗಾಯಪಟ್ಟವರನ್ನು ಔಷಧೋಪಚಾರಮಾಡುವದಕ್ಕೆ ತಕ್ಕ ವೈದ್ಯರಿಲ್ಲ. ಆಹಾರ ಉಡಿಗೆ ತೊಡಿಗೆ ಮೊದಲಾದ ಸ್ವಂತ ಉಪಚಾರ ಮಾಡುವವರೂ ಇಲ್ಲ. ಔಷಧಿಗಳೂ ಶಸ್ತ್ರವೈದ್ಯಕ್ಕೆ ಅಗತ್ಯವಾದ ಆಯುಧಗಳೂ ಇಲ್ಲ. ಇದೂ ಅಲ್ಲದೆ ಸಿಪಾಯಿಗಳು ಯುದ್ಧದಲ್ಲಿ ಹೊಂದಿದ ಗಾಯಗಳನ್ನು ಕಟ್ಟುವದಕ್ಕೆ ಬಟ್ಟೆ ಚೂರುಗಳು ತಕ್ಕಷ್ಟು ದೊರಕಲಿಲ್ಲವಂತೆ. ಈ ಕಾರಣಗಳಿಂದ ಗಾಯಪಟ್ಟವರಲ್ಲಿ ಅರ್ಧ ಸಿಪಾಯಿಗಳು ಮೃತ್ಯುವಿನ ಪಾಲಾದರು.

ಆಗಿನ ಕಾಲದ ಸ್ಥಿತಿಗೂ ಈಗಿರುವ ಉತ್ತಮಸ್ಥಿತಿಗೂ ಏನು ಕಾರಣ? ಈಗಿನ ಈ ಒಳ್ಳೆ ಏರ್ಪಾಡುಗಳು ಯಾರ ಸಾಹಸದಿಂದ ಮೊದಲು ಆರಂಭವಾಗಿ ಈಗ ಲೋಕದಲ್ಲಿ ಹಬ್ಬಿರುತ್ತವೆ? ಒಬ್ಬ ಧೈರ್ಯಶಾಲಿನಿಯಾದ ಹೆಣ್ಣುಮಗಳಿಂದ. ಅವಳ ಹೆಸರು ಫ್ಲಾರೆನ್ಸ್ ನೈಟಿಂಗೇಲ್ ಎಂಬುದು. ದೇವರ ದಯೆಯಿಂದ ಅವಳೊಬ್ಬಳ ಸಾಹಸವು ಈ ಪರಿಣಾಮಕ್ಕೆ ಕಾರಣವಾಯಿತು. ಈಕೆಯು ಯುದ್ಧದಲ್ಲಿ ಪೆಟ್ಟು ಹೊಂದಿ ತಕ್ಕ ಚಿಕಿತ್ಸೆ, ಶೈತ್ಯೋಪಚಾರಗಳಿಲ್ಲದೆ ಮೃತ್ಯುವಿಗೆ ತುತ್ತಾಗುತ್ತಿರುವವರನ್ನು ಕುರಿತು ಕೇಳಿ ಕರುಣಾಸಂಭರಿತಳಾಗಿ ಜನ್ಮಭೂಮಿಯಾದ ಇಂಗ್ಲೆಂಡ್ ದೇಶವನ್ನು ಬಿಟ್ಟು ಯುದ್ಧಭೂಮಿಗೆ ಹೋಗಿ ಅವರನ್ನು ಉಪಚರಿಸಲುಪಕ್ರಮಿಸಿದಳು. ಆಕೆಯು ಅಲ್ಲಿಗೆ ಹೋದಾಗ ನೂರು ಮಂದಿ ಗಾಯಪಟ್ಟವರ ಪೈಕಿ ನಲವತ್ತೆರಡು ಮಂದಿ ಮೃತಪಡುತ್ತಿದ್ದರು. ಅವಳು ಆ ಸ್ಥಿತಿಯಲ್ಲಿ ತನ್ನ ಕೆಲಸವನ್ನು ಆರಂಭಿಸಿ ರೋಗಿಗಳನ್ನು ಪರಾಮರಿಸ ತೊಡಗಿ ಗಾಯಪಟ್ಟವರ ಪೈಕಿ ಒಂದು ಸಾವಿರಕ್ಕೆ ಇಪ್ಪತ್ತೆರಡು ಮಂದಿ ಮಾತ್ರ ಹೊರತಾಗಿ ಉಳಿದವರೆಲ್ಲರೂ ಬದುಕಿಕೊಳ್ಳುವ ಏರ್ಪಾಡನ್ನು ಮಾಡಿ ಎದ್ದಿಗೆಳಂದಳು(?). ಮತ್ತು ಇಷ್ಟರಲ್ಲಿ ತೃಪ್ತಳಾಗದೆ ತನ್ನ ದೇಶದಲ್ಲಿದ್ದ ಸ್ತ್ರೀಸಮೂಹದಿಂದ ಬುದ್ಧಿವಂತರನ್ನು ಸೇರಿಸಿಕೊಂಡು ರೋಗೋಪದ್ರವ ಕಾಲಗಳಲ್ಲಿ ಪರಾಮರಿಸುವ ವಿದ್ಯೆಯನ್ನು ಅವರೆಲ್ಲರಿಗೂ ಬೋಧಿಸಿದಳು. ಇದರಿಂದ ಈಗ ಆಗಿರುವ ಅನುಕೂಲ್ಯವೇನಂದರೆ—ಇನ್ನು ಮುಂದೆ ಎಂದಿಗಾದರೂ ಯುದ್ಧದಲ್ಲಿ ಗಾಯ ಹೊಂದಿದವರಿಗಾಗಲಿ ಆಸ್ಪತ್ರೆಯಲ್ಲಿರುವ ರೋಗಿಗಳಿಗಾಗಲಿ ಪೋಷಕರೂ ಪರಾಮರಿಕೆಯೂ ಇಲ್ಲದೆ ಸಾಯುವದಿಲ್ಲ. ಮತ್ತು ನೈಟಿಂಗೇಲ್ ಅಮ್ಮನು ರೋಗಿಗಳಿಗೆ ಕಾರಣಗಳನ್ನು ಕಂಡುಹಿಡಿದು ಅವುಗಳನ್ನು ನಿರ್ಮೂಲಮಾಡುವ ಕೆಲಸಕ್ಕೆ ತನ್ನ ಕಾಲವನ್ನೂ ಧನವನ್ನೂ ಬುದ್ಧಿಯನ್ನೂ ಉದಾರಗುಣದಿಂದ ವ್ಯಯಮಾಡಿದಳು. ಅವಳು ಸ್ವದೇಶದವರಿಗೆ ಇಷ್ಟೊಂದು ಸೌಕರ್ಯಗಳನ್ನು ಒದಗಿಸಿಕೊಟ್ಟು ಮಹೋಪಕಾರಿಯಾಗಿರುವದರಲ್ಲಿ ತೃಪ್ತಳಾಗದೆ ಅನ್ಯದೇಶಗಳಲ್ಲಿಯೂ ಈ ತರದ ಉಪಕಾರ ಕೆಲಸಗಳನ್ನು ಹರಡುವನೆಂದು ಹೊರಟಳು. ತನಗೇನೇ ದೇಹದಲ್ಲಿ ಸ್ವಸ್ಥವಿಲ್ಲದೆ ಇದ್ದರೂ ವಿರಾಮವಿಲ್ಲದೆ ಪರರಿಗೆ ಉಪಕಾರಿಯಾಗಿ ಬದುಕುತ್ತಿದ್ದಳು. ಮತ್ತು ನಮ್ಮ ಹಿಂದೂದೇಶದ ಸಹೋದರಿಯರನ್ನು ಕಾಡುತ್ತಿರುವ ಕೊಂದರೆ ರೋಗಗಳನ್ನು ನಿವಾರಣೆಮಾಡುವದಕ್ಕೆ ಬಹಳ ಉತ್ಸಾಹಶೀಲಳಾಗಿದ್ದಳು. ಇಂತಹ ಪರೋಪಕಾರಿಯು 1910 ರಲ್ಲಿ ದೈವಾಧೀನವಾದಳು.

ನೈಟಿಂಗೇಲ್ ಅಮ್ಮನವರು ಈ ಮಹಾ ಕೆಲಸವನ್ನು ಸಾಂಗವಾಗಿ ನೆರವೇರಿಸುವದಕ್ಕೆ ಸಹಾಯಕರಾಗಿ ಇಂಗ್ಲೆಂಡಿನ ಅನೇಕ ಶ್ರೀಮಂತ ಸ್ತ್ರೀಯರು ಆಕೆಗೆ ನೆರವಾದರು. ಐಶ್ವರ್ಯವಂತರು ಯಾವ ಪ್ರತಿಫಲವನ್ನೂ ಹುಡುಕದೆ ತಮ್ಮ ದ್ರವ್ಯವನ್ನೂ ಬುದ್ಧಿ ಶಕ್ತಿಯನ್ನೂ ಈ ಸತ್ಸೇವೆಗೆ ಅರ್ಪಿಸಿದರು. ಇವರ ನೈಟಿಂಗೇಲ್ ಅಮ್ಮನೂ ದೇವರ ಮೇಲಣ ಪ್ರೀತಿಯಿಂದಲೂ ಕಷ್ಟಪಡುವ ಜನಗಳ ಮೇಲಣ ಕರುಣೆಯಿಂದಲೂ ಈ ಕೆಲಸಗಳನ್ನು ಮಾಡಿ ಈಗಿರುವ ನಮಗೆ ತಕ್ಕ ಮೇಲ್ಪಂಕ್ತಿಗಳಾಗಿ ನಮ್ಮೆಲ್ಲರನ್ನು ಈ ಪರೋಪಕಾರದ ಕೆಲಸದಲ್ಲಿ ದೇಹವನ್ನು ವ್ಯಯಮಾಡುವದಕ್ಕೆ ಪ್ರೇರಿಸುತ್ತಲಿದ್ದಾರೆ.

ಯುದ್ಧದ ಸಮಾಚಾರಗಳು.

ಇಟಲಿಯೂ ಯುದ್ಧದಲ್ಲಿ ಸೇರಿತು.

ಗ್ರೇಟ್ ಬ್ರಿಟನ್ನಲ್ಲಿ ಗವರ್ನ್‌ಮೆಂಟ್ ಬದಲಾವಣೆ.

ರಣರಂಗದಲ್ಲಿ ಯುದ್ಧಕಾರ್ಯಗಳು ನಡೆಯುವುದಕ್ಕೆ ಹವಾ ಸ್ಥಿತಿಯು ಅನುಕೂಲವಾಗಿರಲಿಲ್ಲ. ಪಶ್ಚಿಮ ರಣರಂಗದಲ್ಲಿ ವಿಶೇಷ ಕಾರ್ಯವೇನೂ ನಡೆಯಲಿಲ್ಲ. ಆದರೆ ಪೂರ್ವ ರಣರಂಗದಲ್ಲಿ ಜರ್ಮನಿಯವರು ಗೆಲಿಷಿಯದಿಂದ ರಷ್ಯಾದವರನ್ನು ಹೊರಡಿಸಬೇಕೆಂಬ ಉದ್ದೇಶದಿಂದ ಇನ್ನೂ ಕಠಿಣವಾದ ಸಾಹಸ ಪ್ರಯತ್ನಗಳನ್ನು ಮಾಡುತ್ತಿರುವರು. ಇಟಲಿಯವರ ಕಾರುಬಾರುಗಳೂ, ಗ್ರೇಟ್ ಬ್ರಿಟನ್ ಗವರ್ನ್‌ಮೆಂಟಿನ ಬದಲಾವಣೆಗಳೂ ಈ ವಾರದ ವಿಶೇಷ ವರ್ತಮಾನಗಳಾಗಿರುವವು.

ಪಶ್ಚಿಮ ರಣರಂಗದಲ್ಲಿ.

ಮಳೆ ಹೆಚ್ಚಾಗಿ ಸುರಿಯುತ್ತಿರೋಣದರಿಂದ ಕದನಗಳು ನಡೆಯುವುದಕ್ಕೆ ಅಡಚಣೆಯಾಗಿದೆ; ಆದರೂ ಸೈನಿಕರ ಕಾರುಬಾರುಗಳೇನೂ ಕಮ್ಮಿಯಾಗಿಲ್ಲ. ಕಳೆದ ವಾರದ ತಂತೀವರ್ತಮಾನಗಳು ಇಪ್ರೆಯು ಉತ್ತರಭಾಗದಲ್ಲಿ ಮೊನ್ನೆ ನಡೆದ ಘೋರಯುದ್ಧದಲ್ಲಿ ಜರ್ಮನಿಯ ಅನೇಕ ಸೈನ್ಯಗಳು ನಷ್ಟವಾದವೆಂದು ಹೇಳುತ್ತವೆ. ಅವರು ಬೆಲ್ಜಿಯಮ್ ಯುದ್ಧಭೂಮಿಯಲ್ಲಿ 2,400 ಯುದ್ಧಭಟರ ಹೆಣಗಳನ್ನು ಬಿಟ್ಟುಹೋಗಿದಾರೆ.

ಇಪ್ರೆಯ ದಕ್ಷಿಣ ಭಾಗದಲ್ಲಿ ಬ್ರಿಟಿಷ್ ಸೈನಿಕರು ಎರಡು ಮೈಲಿ ಉದ್ದಕ್ಕೂ ಮುಂದರಿಸಿಕೊಂಡು ಹೋಗಿ ಹಲವು ಮೆಷೀನ್ ಪಿರಂಗಿಗಳ ಸಮೇತ 1,000 ಜರ್ಮನ ಸೈನ್ಯವನ್ನು ಕೈಸೆರೆ ಹಿಡಿದುಕೊಂಡು ಬಂದರು. ಒಂದು ಗುಂಪಿನ ಜರ್ಮನ ಸೈನ್ಯವು ಬ್ರಿಟಿಷರಿಗೆ ಶರಣಾಗತವಾಗುವಷ್ಟರೊಳಗಾಗಿ ಹಿಂದಿನಿಂದ ಜರ್ಮನಿ ಪಿರಂಗಿಗಳು ಗುಂಡಿನ ಮಳೆ ಸುರಿಸಿದ್ದರಿಂದ ಆ ಸೈನ್ಯವೆಲ್ಲಾ ನಿರ್ನಾಮವಾಗಿ ಹೋಯಿತು.

ಅಲ್ಲಿಂದ ದಕ್ಷಿಣಕ್ಕೆ ಫ್ರೆಂಚರು ಒಂದು ಗುಡ್ಡವನ್ನು ಗೆದ್ದುಕೊಳ್ಳಬೇಕೆಂದು ಸುಮಾರು ಆರು ತಿಂಗಳಿಂದ ಸಾಹಸಪಡುತ್ತಿದ್ದು ಕಳೆದ ವಾರ ಗೆದ್ದುಕೊಂಡಿದಾರೆ. ಅಲ್ಲಿ ಅವರಿಗೆ 250 ಜರ್ಮನ ಸೈನಿಕರೂ ಒಂದು ಪಿರಂಗಿಯೂ ವಶವಾದವು. ಫ್ರೆಂಚರಿಗೆ ಈ ಗುಡ್ಡವು ಸ್ವಾಧೀನವಾದದ್ದರಿಂದ ಅವರು ಅಲ್ಲಿಂದ ಮುಂದಕ್ಕೆ ನುಗ್ಗಿ ಹೋಗಲು ಸುಗಮವಾಯಿತು.

ಜರ್ಮನಿಯವರು ಯುದ್ಧಭೂಮಿಯಲ್ಲಿ ಪ್ರಯೋಗಮಾಡಿದ ವಿಷಕರವಾದ ವಾಯುಗಳು ಅಷ್ಟೇನೂ ಕೇಡುಕಾರಿಯಾಗಿರಲಿಲ್ಲವೆಂದು ಈಚೆಗೆ ತಿಳಿದು ಬಂದಿದೆ. ಆ ವಾಯು ವ್ಯಾಪಿಸಿರುವ ಯುದ್ಧ ಭೂಮಿಯಲ್ಲಿ ಸೈನಿಕರು ತಲೆ ಮುಖಗಳಿಗೆ ಮರೆಯನ್ನು ಕಟ್ಟಿಕೊಂಡು ಯುದ್ಧ ಕಾರ್ಯಗಳನ್ನು ನಡಿಸಬಹುದಾಗಿದೆ. ಲಾರ್ಡ್ ಕಿಚನರವರು ಸೈನಿಕರಿಗೆ ಅಂಥಾ ವಾಯುವಿನ ಮಧ್ಯೆ ನಿಂತು ಯುದ್ಧಕಾರ್ಯಗಳನ್ನು ನಡಿಸಲು ಅನುಕೂಲವಾಗುವಂಥಾ ಅದೇ ತರದ ವಾಯುಗಳನ್ನು ನಮ್ಮ ಸೈನಿಕರಿಗೂ ಒದಗಿಸಬೇಕೆಂದು ಹೇಳಿದಾರೆ.

ಇಂಗ್ಲೆಂಡಿನಲ್ಲಿ ಸೌತೆಂಡ್ ಪಟ್ಟಣದ ಮೇಲ್ಗಡೆ ಜರ್ಮನಿಯ ಜೆಪ್ಲಿನ್ ಎಂಬ ವಿಮಾನಯಂತ್ರವು ಬಂದು ಸಿಡಿಮದ್ದಿನ ಗುಂಡುಗಳನ್ನು ಸುರಿಸಿತು. ಜನರಾರೂ ಸಾಯಲಿಲ್ಲ; ಆದರೂ ಆಸ್ತಿಪಾಸ್ತಿಗಳೂ ಕಟ್ಟಡಗಳೂ ತುಂಬಾ ನಷ್ಟವಾದವು. ಅದೇ ಪ್ರಕಾರ ಇನ್ನೊಂದು ವಿಮಾನಯಂತ್ರವು ಕೆಲೆ(?) ಎಂಬ ಪಟ್ಟಣದ ಮೇಲೆ ಕಾಣಿಸಿಕೊಂಡು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಇದರಿಂದ ಕೆಲವು ಮಕ್ಕಳು ಮೃತಪಟ್ಟರು. ಅಷ್ಟರಲ್ಲೇ ನಮ್ಮ ಪಕ್ಷದ ವಿಮಾನಯಂತ್ರಗಳೂ ಪಿರಂಗೀ ಗುಂಡುಗಳೂ ಅದರ ಮೇಲೆ ಬಿದ್ದದ್ದರಿಂದ ಶತ್ರುವಿನ ವಿಮಾನಯಂತ್ರವು ಮುರಿದು, ಅದರಲ್ಲಿದ್ದ 40 ಮಂದಿ ಕೈಸೆರೆ ಹಿಡಿಯಲ್ಪಟ್ಟರು.

ಈ ಘೋರ ಯುದ್ಧವನ್ನು ಕುರಿತು ಜರ್ಮನಿಯ ಒಂದು ವರ್ತಮಾನ ಪತ್ರಿಕೆಯು ಬರೆಯುವುದೇನಂದರೆ—"ಈ ನೀಚವಾದ ಯುದ್ಧದಲ್ಲಿ ಜಯಪ್ರದ ಹೊಂದುವ ಸೈನ್ಯವು ಅಪಾರವಾದ ಯಶಸ್ಸನ್ನು ಪಡೆಯುವುದು. ಈ ಕೀರ್ತಿಯು ನಮಗೆ ಲಭ್ಯವಾಗಬೆಂದು ನಾವು ಪ್ರಾರ್ಥನೆಮಾಡಿ ಅದು ನಮಗೆ ದೊರಕುವದೆಂದು ನಂಬಿಕೊಂಡಿದೇವೆ. ಆದರೂ ಅದು ನಮಗೆ ದೊರಕುವುದು ಎಷ್ಟುಮಾತ್ರಕ್ಕೂ ನಿಶ್ಚಿತವಾಗಿಲ್ಲವೆಂಬ ಭಾಗವನ್ನು ನಾವು ಮರೆಯಕೂಡದು." ಯುದ್ಧವನ್ನು ಪ್ರಾರಂಭಮಾಡಿದಾಗ ಜರ್ಮನಿಯು ಹೇಳಿದಕ್ಕೂ, ಈಗ ಅದು ಹೇಳುವುದಕ್ಕೂ ಅಗಲೇ ವ್ಯತ್ಯಾಸ ಕಾಣಬರುತ್ತಿದೆ.

ಪೂರ್ವ ರಣರಂಗದಲ್ಲಿ.

ಪಶ್ಚಿಮ ಗೆಲಿಷಿಯಾದೊಳಗೆ ರಷ್ಯಾದವರ ಮೇಲೆ ಯುದ್ಧಮಾಡುವುದಕ್ಕಾಗಿ ಜರ್ಮನಿಯವರು ಅಪಾರವಾಗಿ ಸೈನ್ಯಗಳನ್ನು ಕೂಡಿಸಿ ತಂದರು. ಇದರಿಂದ ರಷ್ಯಾದವರು ಕಾರ್ಪೇಥಿಯನ್ ಪರ್ವತಪ್ರಾಂತ್ಯವನ್ನು ತ್ಯಜಿಸಿ ಕ್ರಾಕೋ ಮಾರ್ಗದಿಂದಲೂ ಹಿಂದಕ್ಕೆ ಬಂದು ಬಿಟ್ಟರು. ರಷ್ಯಾದವರು ಸಾನ್ ಎಂಬ ನದಿಯ ಬಳಿ ತಮ್ಮ ಸೈನ್ಯವನ್ನು ತಂದು ಕೂಡಿಸುತ್ತಿದಾರೆ. ಈ ನದಿಯು ರಷ್ಯಾದವರು ಮೊನ್ನೆ ಗೆದ್ದು ಸ್ವಾಧೀನ ಪಡಿಸಿಕೊಂಡಿರುವ ಪ್ರೆಮಿಸಲ್ ಪಟ್ಟಣದ ಬಳಿ ಹರಿಯುವುದು. ಜರ್ಮನಿಯವರು ಸಾನ್ ನದಿಯನ್ನು ಒಂದು ಕಡೆ ದಾಟಿಕೊಂಡು ಹೋಗಿ ಪ್ರೆಮಿಸಲ್ ಕೋಟೆಯ ಹೊರ ಪಾರ್ಶ್ವಗಳಿಗೆ ಪಿರಂಗಿ ಗುಂಡುಗಳನ್ನು ಹೊಡೆಯುತ್ತಿದಾರೆ. ಅಲ್ಲಿ ಬಹು ಘೋರವಾದ ಕದನ ನಡೆಯುತ್ತಿದೆ. ಫಲಿತಾಂಶವೇನೆಂಬುವುದು ಇನ್ನೂ ತಿಳಿಯಲಿಲ್ಲ. ರಷ್ಯಾದವರು ಹಲವು ಮೈಲಿಗಳ ದೂರ ಹಿಮ್ಮೆಟ್ಟಿ ಹೋಗಬೇಕಾಯಿತು. ಅವರು ಜರ್ಮನಿಯವರಿಗೆ ಯುದ್ಧಕೊಟ್ಟು ಬಹು ಪರಾಕ್ರಮದಿಂದ ಕಾದಾಡಿ ಒಂದು ಕಡೆ 3,000 ಜರ್ಮನಿಯವರನ್ನು ಕೈಸೆರೆ ಹಿಡಿದುಕೊಂಡಿದಾರೆ.

ಅಲ್ಲಿಂದ ಪೂರ್ವ ದಿಕ್ಕಿನಲ್ಲಿ ಆಸ್ಟ್ರಿಯಾದವರು ರಷ್ಯಾ ಸೈನ್ಯದ ಎಡ ಪಾರ್ಶ್ವದಿಂದ ನುಗ್ಗಿ ಹಿಂದೆ ಸುತ್ತಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಅದು ಅವರಿಗೆ ಸಾಧ್ಯವಾಗದೆ ಸಂಪೂರ್ಣವಾಗಿ ಸೋತುಹೋದರು. ರಷ್ಯಾದವರು ಅವರನ್ನು 100 ಮೈಲಿ ಉದ್ದಕ್ಕೂ ಹಲವು ಮೈಲಿಗಳ ದೂರ ಹಿಮ್ಮೆಟ್ಟಿಸಿದ್ದಾರೆ. ಬುಕೊವಿನ ಎಂಬ ರಾಜಧಾನಿಯು ಮತ್ತೆ ರಷ್ಯಾದವರ ಸ್ವಾಧೀನವಾಯಿತು. ಅವರು ಆಸ್ಟ್ರಿಯಾದವರನ್ನು ಬಹು ಪರಾಕ್ರಮದಿಂದ ಹಿಮ್ಮೆಟ್ಟಿಸಿ ಓಡಿಸುತ್ತಾ ಇರುವರು. ಅನೇಕಾನೇಕ ಆಸ್ಟ್ರಿಯಾ ಸೈನಿಕರೂ ಅವರ ಪಿರಂಗಿಗಳೂ ರಷ್ಯಾದವರ ವಶವಾದವು.

ಉತ್ತರ ದಿಕ್ಕಿನಲ್ಲಿ ಬಾಲ್ಟಿಕ್ ಕಡಲಿನ ಬಳಿ ರಷ್ಯಾದವರು ಜರ್ಮನಿಯವರ ಮೇಲೆ ನುಗ್ಗಿ ಕದನಮಾಡುತ್ತಿದಾರೆಂದೂ, ರಷ್ಯಾದವರಿಗೆ ಜಯವಾಗುವಂತಿದೆಯೆಂದೂ ಹೇಳಲಾಗಿದೆ.

ಈ ರಣರಂಗದಲ್ಲಿ ಯುದ್ಧವು ಅತ್ಯಂತ ಘೋರವಾಗಿ ನಡೆಯುತ್ತಲಿದೆ. ರಷ್ಯಾ ಸೈನ್ಯಗಳು ಶತ್ರುವಿಗೆ ಸಗ್ಗದೆ ಹಿಮ್ಮೆಟ್ಟಿ ಹೋದರು. ಸುಮಾರು 50 ಪಿರಂಗಿಗಳು ಜರ್ಮನಿಯವರಿಗೆ ಸಿಕ್ಕಿರಬಹುದು. ಬಹುಶಃ ಜರ್ಮನಿಯವರು ಇತರ ಕಡೆಗಳಿಂದ ತಮ್ಮ ಸೈನ್ಯಗಳನ್ನು ಕರಸಿಕೊಂಡು ರಷ್ಯಾದವರ ಮೇಲೆ ನುಗ್ಗಿಸಿರಬೇಕೆಂದು ಕಾಣುತ್ತದೆ.

ಟರ್ಕಿ.

ಯುದ್ಧಭೂಮಿಯ ಯಾವ ರಣರಂಗದಿಂದಲೂ ವಿಶೇಷ ಕಾರ್ಯಗಳು ನಡೆದ ವರ್ತಮಾನಗಳು ಬಂದಿರುವುದು ಬಹಳ ಸ್ವಲ್ಪ.

ಡಾರ್ಡನೆಲ್ಸ್ ಜಲವರ್ಗದಲ್ಲಿ ನಮ್ಮ ಪಕ್ಷದವರು ಸಮಾನವಾಗಿ ಮುಂದರಿಸಿಕೊಂಡು ನುಗ್ಗಿ ಹೋಗುತ್ತಿರುವರು. ಆಸ್ಟ್ರೇಲಿಯಾ ಮತ್ತು ಹಿಂದುಸ್ಥಾನಗಳ ಸೈನಿಕರು ಬಹು ಪರಾಕ್ರಮದಿಂದ ಯುದ್ಧಕಾರ್ಯಗಳನ್ನು ನಡಿಸಿ ಮೇಲೆ ಬಿದ್ದು ಬಂದ ಶತ್ರುವನ್ನು ಹಿಂದಕ್ಕೆ ಓಡಿಸಿರುತ್ತಾರೆ. ಯುದ್ಧದ ಜಹಜುಗಳು ಸೈನಿಕರಿಗೆ ಬೆಂಬಲವಾಗಿ ನಿಂತು ಸಹಾಯಮಾಡುತ್ತಿರುವವು. ಹಡಗುಗಳು ಆ ಜಲಮಾರ್ಗವನ್ನು ಭೇದಿಸಿಕೊಂಡು ಹೋಗುವುದಕ್ಕೆ ಇನ್ನೂ ಕೆಲವು ಕಾಲ ಹಿಡಿದೀತೆಂದು ಹೇಳಬಹುದಾಗಿದೆ. ಆಸ್ಟ್ರೇಲಿಯಾ ಸೈನಿಕರು ಶತ್ರುವಿನ ಮೇಲೆ ಬಿದ್ದು ಬಹು ಕಷ್ಟವಾದ ಕಡೆಗಳಲ್ಲಿ ಹಲವು ವೇಳೆ ಮಹಾಶೌರ್ಯದಿಂದ ಕದನಗಳನ್ನು ನಡಿಸಿದಕಾರಣ ಅವರಲ್ಲಿ ಬಹಳ ಮಂದಿ ನಷ್ಟಹೊಂದಿದರು.

ಬ್ರಿಟಿಷರು ಮಾರ್ಮೊರಾ ಕಡಲಿನಲ್ಲಿ ಒಂದು ಸಬ್‌ಮರೀನನ್ನು ಕಳಕೊಂಡಿರಬೇಕು ಅವರಲ್ಲಿ 3 ಮಂದಿ ಹುದ್ದೇದಾರರೂ 29 ಮಂದಿ ಸೈನಿಕರೂ ಇದ್ದರು. ಈ ಪೈಕಿ 3 ಮಂದಿ ಹುದ್ದೇದಾರರನ್ನೂ 17 ಜನರನ್ನೂ ಶತ್ರುವು ಕೈಸೆರೆ ಹಿಡುಕೊಂಡರು

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಬಂದಿರುವ ವರ್ತಮಾನ ಸ್ವಲ್ಪ; ಆದರೆ ದಕ್ಷಿಣ-ಪಶ್ಚಿಮ ಆಫ್ರಿಕದಲ್ಲಿರುವ ಸಂಯುಕ್ತ ಸೈನಿಕರು ಜರ್ಮನಿಯವರ ಮೇಲೆ ರಾಜಧಾನಿಯ ಪೂರ್ವ ದಿಕ್ಕಿನಲ್ಲಿ ಕದನಮಾಡಿ ಸೋಲಿಸಿ ಅವರ ಪೈಕಿ 140 ಮಂದಿಯನ್ನೂ, ಅವರ 25 ವಾಗಿನ್‌ಗಳ ಆಹಾರ ಪದಾರ್ಥಗಳನ್ನೂ ಸ್ವಾಧೀನಪಡಿಸಿಕೊಂಡರು.

ಪಶ್ಚಿಮ ಆಫ್ರಿಕಕ್ಕೆ ಸೇರಿದ ಕ್ಯಾಮರೂನ್ಸ್ ಸೀಮೆಯಲ್ಲಿ ಫ್ರೆಂಚರು ಒಂದು ಪ್ರಾಮುಖ್ಯವಾದ ನಗರವನ್ನು ಗೆದ್ದುಕೊಂಡಿದಾರೆ. ಅವರಿಗೂ ಜರ್ಮನಿಯವರಿಗೂ ಅಲ್ಲಿ ನಡೆದ ಕದನದಲ್ಲಿ ಫ್ರೆಂಚರಿಗೆ ಬಹಳ ಸ್ವಲ್ಪವೇ ನಷ್ಟವಾಯಿತು; ಜರ್ಮನಿಯವರಲ್ಲಿ ಬಹಳ ಮಂದಿ ನಷ್ಟಪಟ್ಟಿರುತ್ತಾರೆ.

ಬ್ರಿಟಿಷ್ ಗವರ್ನ್‌ಮೆಂಟ್.

ಗ್ರೇಟ್ ಬ್ರಿಟನ್‌ನಲ್ಲಿ ರಾಜ್ಯಭಾರ ಕಾರ್ಯಗಳನ್ನು ನಡಿಸುವುದರಲ್ಲಿ ಎರಡು ಪಕ್ಷ (ಪಾರ್ಟಿ) ಗಳುಂಟೆಂದೂ, ಈಗ ಲಿಬರಲ್ ಪಾರ್ಟಿಯವರೇ ರಾಜ್ಯಭಾರವನ್ನು ವಹಿಸಿಕೊಂಡಿರಾರೆಂದೂ, ಮಿ|| ಆಸ್ಕ್ವಿತರವರು ಮಂತ್ರಿಶ್ರೇಷ್ಠರೆಂದೂ ವಾಚಕರಿಗೆ ತಿಳಿದಿರಬಹುದು. ಈ ಯುದ್ಧ ಕಾಲದಲ್ಲಿ ಎರಡು ಪಾರ್ಟಿಗಳವರೂ ಏಕಭಾವದಿಂದ ಕಾರ್ಯಗಳನ್ನು ನಿರ್ವಹಿಸುವುದು ಕ್ಷೇಮಕರವೆಂದು ಕೆಲವು ಕಾಲದಿಂದ ಚರ್ಚೆಯಾಗುತ್ತಿತ್ತು. ಯುದ್ಧವನ್ನು ನಿಲ್ಲಿಸದೆ ಮುಂದರಿಸಿ ಜಯಪ್ರದವಾಗುವ ತನಕ ನಡಿಸುತ್ತಾ ಬರಬೇಕೆಂಬ ವಿಷಯದಲ್ಲಿ ಗ್ರೇಟ್ ಬ್ರಿಟನ್ ರಾಜ್ಯಕ್ಕೆ ರಾಜ್ಯವೇ ಒಂದಾಗಿ ನಿಂತಿದೆ. ಈ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯ ಎಳ್ಳಷ್ಟೂ ಇರುವುದಿಲ್ಲ. ಇದಕ್ಕೋಸ್ಕರ ಎರಡು ಪಾರ್ಟಿಯವರು ಏಕಮತ್ಯದಿಂದ ಸೇರಿ ಕಾರ್ಯಗಳನ್ನು ನಡಿಸುತ್ತಿರುವರು. ಆದರೆ ಎಲ್ಲಾ ಜವಾಬ್ದಾರಿಯನ್ನೂ ಈಗಿನಂತೆ ಒಂದೇ ಪಾರ್ಟಿಯವರು ವಹಿಸಿಕೊಂಡಿರುವುದು ಸಹಜವಲ್ಲವೆಂತಲೂ, ಚಕ್ರಾಧಿಪತ್ಯದ ಎಲ್ಲಾ ಪಾರ್ಟಿಗಳವರೂ ಸೇರಿ ವಹಿಸಿಕೊಂಡಿರುವುದೇ ಕ್ಷೇಮಕರವೆಂತಲೂ ಕಂಡು ಬಂದಿದೆ. ಇದಕ್ಕೋಸ್ಕರ ಈಗ ಏರ್ಪಾಡುಗಳು ನಡೆಯುತ್ತಿರುವವು. ಮಂತ್ರಿಶ್ರೇಷ್ಠರಾದ ಮಿ|| ಆಸ್ಕ್ವಿತ್ ರವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಪ್ರಜಾ ಪ್ರತಿನಿಧಿಗಳಿಗೆ ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—ಗವರ್ನ್‌ಮೆಂಟಿನಲ್ಲಿ ಆಗುವ ಬದಲಾವಣೆಗಳಿಂದ ಮಿ|| ಆಸ್ಕ್ವಿತ್ ರವರ ಮಂತ್ರಿ ಸ್ಥಾನಕ್ಕಾಗಲಿ, ಸರ್ ಎಡ್ವರ್ಡ್ ಗ್ರೇ ಯವರಿಗಿರುವ ಪರರಾಜ್ಯಗಳ ಮಂತ್ರಿ ಪದವಿಗಾಗಲಿ ವ್ಯತ್ಯಾಸವುಂಟಾಗುವುದಿಲ್ಲ. ಯುದ್ಧವನ್ನು ಮುಂದರಿಸುವ ಭಾಗದಲ್ಲಿ ಯಾವ ಬದಲಾವಣೆಯೂ ಮಾಡಲ್ಪಡುವುದಿಲ್ಲ. ಆದರೆ ಈಗ ರೂಪಿಸಲ್ಪಡುವ ಗವರ್ನ್‌ಮೆಂಟು ಯುದ್ಧವು ಮುಕ್ತಾಯವಾಗುವ ತನಕವೇ ಜಾರಿಯಲ್ಲಿರುವುದು. ಈ ರೀತಿಯಾದ ಬದಲಾವಣೆಗಳನ್ನು ರೂಪಿಸುವುದಕ್ಕೆ ಕೆಲವು ಕಾಲ ಹಿಡಿಯುತ್ತದೆ ಮತ್ತು ಯಾವ ಯಾವ ಮಹನೀಯರು ನಿಂತು ಈ ಯುದ್ಧಕಾಲದಲ್ಲಿ ಗವರ್ನ್‌ಮೆಂಟನ್ನು ನಡಿಸುವರೋ ಕಾಲಕ್ರಮದಲ್ಲಿ ಪ್ರಕಟ ಮಾಡಲ್ಪಡುವುದು.

ಇತರ ವಿಷಯಗಳು.

ಲಾರ್ಡ್ ಕಿಚ್ನರ್ ರವರು ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ತಿಳಿಸಿರುವುದೇನೆಂದರೆ—ಶತ್ರುವು ಪ್ರಯೋಗಿಸುವ ವಿಷವಾಯುವಿನಿಂದ ನಮ್ಮ ಸೈನಿಕರಿಗೆ ಕೇಡುಕೇನೂ ಉಂಟಾಗದೆ ಇರುವುದಕ್ಕೋಸ್ಕರ ನಮ್ಮ ಸೈನಿಕರಿಗೂ ವಾಯುಗಳನ್ನು ಪ್ರಯೋಗಿಸುವುದಕ್ಕೆ ಒದಗಿಸಿಕೊಡಬೇಕಾಗಿದೆ. ಡಾರ್ಡನೆಲ್ಸ್ ಜಲವರ್ಗದಲ್ಲಿ ನಮ್ಮ ಪಕ್ಷದವರು ನಡಿಸಿರುವ ಕಾರ್ಯಗಳು ಸಮರ್ಪಕವಾಗಿವೆ ಎಂದು ಹೇಳಿದರು. ಹಿಂದುಸ್ಥಾನದ ಸೈನಿಕರು ಪರಾಕ್ರಮಿಗಳೆಂದೂ, ಅವರು ಮೆಸೊಪೊಟೇಮಿಯಾದಲ್ಲಿ ಟರ್ಕಿಯವರ ಮೇಲೆ ತಮ್ಮ ಶೌರ್ಯವನ್ನು ತೋರಿಸಿ ಅವರನ್ನು ಸೋಲಿಸಿರುತ್ತಾರೆಂದೂ ಹೊಗಳಿದರು. ಯುದ್ಧವನ್ನು ಮುಂದರಿಸುವುದಕ್ಕೆ ಇನ್ನೂ 3,00,000 ಸೈನಿಕರು ಬೇಕಾಗುವರೆಂದು ಲಾರ್ಡ್ ಕಿಚ್ನರವರು ಹೇಳಿದರು. ಅವರು ಕೇಳಿರುವ ಅಷ್ಟು ಸೈನ್ಯವೂ ಬೇಗನೆ ಸಿದ್ಧವಾಗಿಬಿಡುವುದಕ್ಕೆ ಸಂದೇಹವಿಲ್ಲ.

ಬ್ರಿಟಿಷ್ ಸ್ವಾಮ್ಯಗಳಿಂದಲೂ, ಹಿಂದುಸ್ಥಾನದಿಂದಲೂ ಒದಗಿಸಲ್ಪಟ್ಟಿರುವ ಸಹಾಯ ಸಂಪತ್ತುಗಳನ್ನು ಹೊಗಳಿ ವಂದನಾಪೂರ್ವಕವಾಗಿ ಕೊಂಡಾಡುವುದಕ್ಕೆ ಲಂಡನ್ ಪಟ್ಟಣದಲ್ಲಿ ದೊಡ್ಡ ಸಭೆ ನಡೆಯಿತು. ಮಿ|| ಆಸ್ಕ್ವಿತ್, ಮಿ|| ಬೊನರ್ ಲಾ ಮೊದಲಾದ ಮಹನೀಯರು ಆ ಸಹಾಯ ಸಂಪತ್ತುಗಳನ್ನು ವಿವರಿಸಿ ಬಹು ಆಡಂಬರಕರವಾದ ಭಾಷಣಗಳನ್ನು ಮಾಡಿದರು. ಮಿ|| ಆಸ್ಕ್ವಿತರವರು ನಮ್ಮ ಚಕ್ರಾಧಿಪತ್ಯದ ಪ್ರತಿ ಒಂದು ಅಂಗವೂ ಇನ್ನೊಂದು ರಾಜ್ಯದ ಅಧೀನವಾಗುವುದಕ್ಕಿಂತ ಪ್ರಾಣಕೊಡುವುದೇ ಮೇಲು ಎಂದು ಕೀರ್ತಿಯುತವೆಂಬಂತಾಗಿ ಅಭ್ಯಸಿಕೊಡಿಸಿದರು. ಯುದ್ಧವೆಂಬುದರ ಅರ್ಥವೇನೆಂಬುವುದು ಬ್ರಿಟಿಷ್ ಪ್ರಜೆಗಳಿಗೆ ಚೆನ್ನಾಗಿ ತಿಳಿದಿದೆ. ಈ ಘೋರಕೃತ್ಯದಲ್ಲಿ ಬಂಧು ಬಳಗಗಳು ಕೊಲೆಯಾಗುವರೆಂದೂ, ಗಾಯವಡೆಯುವರೆಂದೂ, ಅಪಾರವಾದ ದ್ರವ್ಯಾದಿಗಳು ನಷ್ಟವಾಗುವವೆಂದೂ ಈಗೀಗ ಅವರಿಗೆ ಪರಿಜ್ಞಾನವಾಗುತ್ತಿರುವುದು.

ಭಯಂಕರವಾದ ರೈಲ್ವೆ ಅನಾಹುತ.

ಇಂಗ್ಲೆಂಡಿಗೆ ಸೇರಿದ ಕಾರ್ಲೈಲ್ ನಗರದ ಬಳಿ ಮೂರು ರೈಲ್ ಗಾಡಿಗಳು ಬಡಿದಾಡಿ ದುಃಖಕರವಾದ ಪ್ರಾಣನಷ್ಟ ಸಂಭವಿಸಿದೆ ಆ ಪೈಕಿ ಒಂದು ರೈಲ್ ಗಾಡಿಯಲ್ಲಿ ಬ್ರಿಟಿಷ್ ಸೈನ್ಯದ 14 ಮಂದಿ ಹುದ್ದೇದಾರರೂ, 463 ಮಂದಿ ಸೈನಿಕರೂ ಹೋಗುತ್ತಿದ್ದರು. ಎರಡು ರೈಲ್ ಗಾಡಿಗಳು ಬಡಿದಾಡುತ್ತಿದ್ದಾಗ ಇನ್ನೊಂದು ರೈಲ್‌ಗಾಡಿಯು ವೇಗವಾಗಿ ಬಂದು ಅವುಗಳಿಗೆ ಬಡಿದು ಅನಾಹುತವನ್ನು ಇನ್ನೂ ಭಯಂಕರವಾಗಿ ಮಾಡಿತು. ಗಾಡಿಗಳು ಒಡೆದು ಮುರಿದು ಹೋದವು. ಬೆಂಕಿ ಹೊತ್ತಿಕೊಂಡು ಉರಿಯಲಾರಂಭವಾಯಿತು. ನೂರಾರು ಮಂದಿ ಕೊಲೆಯಾದರು, ಮತ್ತು ಗಾಯಪಟ್ಟರು. ಅನೇಕ ಮಂದಿ ಸೋಜರುಗಳು ತಮ್ಮ ಮೇಲೆ ಬಿದ್ದ ಭಾರವನ್ನು ಬಿಡಿಸಿಕೊಂಡು ಬರಲಾರದೆ ಹೋದರು. ಇನ್ನು ಕೆಲವರು ಜೀವ ಸಹಿತ ಸುಟ್ಟುಹೋದರು. ಇಬ್ಬರು ಸಿಪಾಯಿಗಳು ಒಂದು ಕಡೆ ಸಿಕ್ಕಿಕೊಂಡಿರುವಲ್ಲಿ ಉರಿಯ ಜ್ವಾಲೆಗಳು ಅವರ ಬಳಿಗೂ ವ್ಯಾಪಿಸಿ ಬಂದವು. ಅಷ್ಟರಲ್ಲಿ ಒಬ್ಬ ವೈದ್ಯನು ಬಂದು ಆ ಸಿಪಾಯಿಗಳ ಕಾಲುಗಳನ್ನು ಕಡಿದು ಅವರನ್ನು ಅಲ್ಲಿಂದ ಎಳೆದುಕೊಂಡನು. ಆ ಇಬ್ಬರಲ್ಲಿ ಒಬ್ಬನು ಮೃತಪಟ್ಟನು.

ಇಟಲಿ ರಾಜ್ಯವೂ ಯುದ್ಧವೂ.

ಇಟಲಿಯವರು ಈ ಯುದ್ಧದ ವಿಷಯದಲ್ಲಿ ಯಾವ ಅಭಿಪ್ರಾಯವುಳ್ಳವರಾಗಿರಾರೆಂಬ ವಿಷಯದಲ್ಲಿ ಹಲವು ತರ್ಕವಿತರ್ಕವಾದನಗಳು ಪ್ರಕಟವಾಗಿರುತ್ತವೆ ಇಟಲಿ, ಜರ್ಮನಿ, ಆಸ್ಟ್ರಿಯಾ, ಈ ಮೂರು ರಾಜ್ಯಗಳವರೂ ಏಕವಾಗಿ ಒಂದು ಕರಾರು ಮಾಡಿಕೊಂಡಿದ್ದರು. ಆಸ್ಟ್ರಿಯಾದವರು ಸರ್ವಿಯಾದವರ ಮೇಲೆ ಕಾರ್ಯಭಾಗ ನಡಿಸುವುದಕ್ಕಿಂತ ಮುಂಚೆ ಅವರು ಇಟಲಿಯವರ ಅಭಿಮತವನ್ನು ಕೇಳಿ ತಿಳಿಯಬೇಕೆಂಬುವುದು ಆ ಕರಾರಿನ ಒಂದು ಅಂಶವಾಗಿರುತ್ತದೆ ಅದರಂತೆ ಆಸ್ಟ್ರಿಯಾದವರು ಇಟಲಿಯವರ ಕೂಡ ಆಲೋಚನೆ ನಡಿಸದೇನೇ ಸರ್ವಿಯಾದವರ ಮೇಲೆ ಯುದ್ಧಕ್ಕೆ ಹೊರಟಿದ್ದಲ್ಲದೆ ಇಟಲಿಯವರಿಗೆ ಕಷ್ಟ ನಷ್ಟಗಳನ್ನುಂಟುಮಾಡಿದರು. ಆದ್ದರಿಂದ ಆಸ್ಟ್ರಿಯಾದವರೇ ಆ ಕರಾರನ್ನು ಭಂಗಮಾಡಿದವರಾದರು. ಇದು ಇಟಲಿಯವರ ಆಶಯಗಳಿಗೂ ಆಸ್ತಿಪಾಸ್ತಿಗಳಿಗೂ ನಷ್ಟಕರವಾಗಿ ಪರಿಣಮಿಸಿತು. ಈ ವಿಚಾರವಾಗಿ ಇಟಲಿಯವರಿಗೂ ಆಸ್ಟ್ರಿಯಾ ಮತ್ತು ಜರ್ಮನಿಯವರಿಗೂ ಕೆಲವು ಕಾಲದಿಂದ ಕಾಗದಪತ್ರಗಳು ನಡೆಯುತ್ತಾ ಬಂದವು. ಆದರೆ ಆಸ್ಟ್ರಿಯಾದವರು ಖಚಿತವಾದ ಸಮಾಧಾನಗಳನ್ನು ಹೇಳದೆ, ಬೇಕೆಂದು ಕಾಲಹರಣ ಮಾಡುತ್ತಾ ಬಂದರು.

ಮೇ ತಾ. 4 ರಲ್ಲಿ ಇಟಲಿಯವರು ಆಸ್ಟ್ರಿಯಾದವರಿಗೆ—"ನಿಮಗೂ ನಮಗೂ ನಡೆದಿರುವ ಕರಾರುಗಳೆಲ್ಲಾ ರದ್ದುಮಾಡುತ್ತೇವೆ. ಇನ್ನು ಮುಂದೆ ಆ ಕರಾರಿನಂತೆ ನಾವು ನಡೆಯುವುದಿಲ್ಲ" ಎಂಬದಾಗಿ ಹೇಳಿಕಳುಹಿಸಿದರು

ಇಟಲಿಯ ಪಾರ್ಲಿಮೆಂಟಿನವರು ಯುದ್ಧಕಾಲದಲ್ಲಿ ತಮ್ಮ ಗವರ್ನ್‌ಮೆಂಟಿಗೆ ಯಾವಯಾವ ಅಧಿಕಾರಗಳು ಬೇಕಾಗುವವೋ ಅವುಗಳನ್ನೆಲ್ಲಾ ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ. ಇದನ್ನು ಪಾರ್ಲಿಮೆಂಟಿನ ಎರಡು ಸಭೆಗಳಲ್ಲೂ ಮೆಂಬರುಗಳು ಸರ್ವಸಮ್ಮತವಾಗಿ ಒಪ್ಪಿಕೊಂಡದ್ದಾಯಿತು. ರಾಜಧಾನಿಯಾದ ರೋಮ್ ನಗರವೇ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಪ್ರಜೆಗಳು ಗುಂಪುಗುಂಪಾಗಿ ಸೇರಿ ಯುದ್ಧಕ್ಕೆ ಹೊರಡುವಂತೆ ಗವರ್ನ್‌ಮೆಂಟಿನವರನ್ನು ಒತ್ತಾಯ ಮಾಡುತ್ತಿದಾರೆ. ಇಟಲಿಯ ಉತ್ತರ ಪ್ರಾಂತ್ಯದಲ್ಲಿರುತ್ತ, ಆಡ್ರಿಯಾಟಿಕ್ ಕಡಲಿನ ಅಂಚಿನಲ್ಲಿರುವ ದ್ವೀಪಗಳಲ್ಲೂ ಯುದ್ಧ ಆಜ್ಞೆ ಸಂಭವಿಸಿದೆ ಎಂದು ಸರ್ಕಾರದವರು ಜಾಹೀರುಗಳನ್ನು ಪ್ರಕಟಮಾಡಿದಾರೆ. ಇಟಲಿಗೂ ಆಸ್ಟ್ರಿಯಾವಿಗೂ ಆಯಿದು ಠಪ್ಪೆಗಳು ನಿಂತುಹೋದವು. ಈಚಿಗೆ ಕಳೆದ ಸೋಮವಾರ ಇಟಲಿಯವರು ಆಸ್ಟ್ರಿಯಾದವರ ಮೇಲೆ ಯುದ್ಧಕ್ಕೆ ಹೊರಡುವೆವು ಪ್ರಕಟಮಾಡಿದರು. ಜರ್ಮನಿಯವರೂ ಇಟಲಿಯವರನ್ನು ತಮ್ಮ ಶತ್ರುಗಳೆಂದು ತಿಳಿಯಪಡಿಸಿದರು

ಕಡೇ ಗಳಿಗೆಯಲ್ಲಿ ಆಸ್ಟ್ರಿಯಾದವರು ಇಟಲಿಯವರ ಕೋರಿಕೆಗಳಂತೆ ನಡೆದುಕೊಳ್ಳುತ್ತೇವೆಂದು ಅವರಿಗೆ ತಿಳಿಸಲು ಸಿದ್ಧರಾಗಿದ್ದರು. ಮೇಲ್ಕಂಡ ಮೂರು ರಾಜ್ಯಗಳಿಗೂ ನಡೆದಿರುವ ಕರಾರಿನ ಅವಧಿಯು 1920 ನೇ ಇಸವಿ ವರೆಗೆ ಜಾರಿಯಲ್ಲಿರಬೇಕಾಗಿದೆ ಎಂದೂ, ಆದಕಾರಣ ಇಟಲಿಯವರು ಆ ಕರಾರಿಗೆ ಅವರವರಿಗೆ ಬದ್ಧರಾಗಿರಬೇಕೆಂದೂ, ಈಗ ಅವರು ಆ ಕರಾರನ್ನು ರದ್ದುಮಾಡಿ ಯುದ್ಧಕ್ಕೆ ಹೊರಡಬೇಡನ್ನುವುದನ್ನು ಆಸ್ಟ್ರಿಯಾದವರು ಒಪ್ಪುವುದಿಲ್ಲವೆಂದೂ ಆಸ್ಟ್ರಿಯಾದವರು ತಿಳಿಸಿದರು.

ಜರ್ಮನ್ ರಾಜಧಾನಿಯಲ್ಲಿದ್ದ ಇಟಲಿ ರಾಯಭಾರಿಯು ಅಲ್ಲಿಂದ ಹೊರಟು ಬರುವಾಗ್ಗೆ ಜರ್ಮನಿಯ ಪ್ರಜೆಗಳು ಆತನ ಮೇಲೆ ಬಿದ್ದು ಗಲಭೆ ಮಾಡಿ, ಆತನ ಟೋಪಿಯನ್ನು ಹಾರಿಸಿದರು ಟೋಪಿ ಹಾರಿಸಿದವನನ್ನು ಹಿಡಿದಿರುತ್ತಾರೆ. ಜರ್ಮನಿಯ ಪರರಾಜ್ಯಗಳ ಸೆಕ್ರೆಟರಿಯು ಇಟಲಿ ರಾಯಭಾರಿಯನ್ನು ಕಂಡು ಆತನ ಕ್ಷಮಾಪಣೆಯನ್ನು ಬೇಡಿದ್ದೂ ಆಯಿತು. ರೋಮ್ ನಗರದಲ್ಲಿದ್ದ ಜರ್ಮನಿಯ ಮತ್ತು ಆಸ್ಟ್ರಿಯದ ರಾಯಭಾರಿಗಳು ಅಪ್ಪಣೆ ಪಡೆದು ಅಲ್ಲಿಂದ ಹೊರಟುಬಂದರು. ಇಷ್ಟೆಲ್ಲಾ ಆದ ಮೇಲೆ ಇನ್ನು ಯುದ್ಧವೇ ಆಗಬೇಕು; ಅದೂ ತಕ್ಷಣವೇ ಪ್ರಾರಂಭವಾಗುವುದು

ಆಸ್ಟ್ರಿಯಾಕ್ಕೂ ಇಟಲಿಗೂ ನಡುವೆ ಇರುವ ಎಲ್ಲೆಕಟ್ಟುಗಳಲ್ಲಿ ಕೆಲವು ಸಣ್ಣ ಪುಟ್ಟ ಕದನಗಳಾದುವೆಂದು ಹೇಳಲಾಗಿದೆ. ಆದರೂ ಇನ್ನೂ ಕೆಲವು ದಿನಗಳಲ್ಲದೆ ಅಲ್ಲಿ ದೊಡ್ಡ ಕದನಗಳೇನೂ ನಡೆಯುವಂತೆ ಕಾಣುವುದಿಲ್ಲ.

ಒಳದೇಶದ ವೃತ್ತಾಂತಗಳು.

ಶ್ರೀಪ್ರಾಸನ್ನರಾಯಮಠದ ಶ್ರೀಸ್ವಾಮಿಗಳವರು ಯುದ್ಧದ ರಿಲೀಫ್ ಫಂಡಿಗೆ 307 ರೂಪಾಯಿ ಚಂದಾ ಕೊಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ನಂಜನಗೂಡಿನಲ್ಲಿ ಪೌರ್ಣಮಿ ಉತ್ಸವ ಸೇವೆಯನ್ನು ತೀರಿಸಿಕೊಂಡು ನೀಲಗಿರಿಗೆ ಚಿತ್ತೈಸುವವರಾಗಿದಾರೆ.

ಚಾಮುಂಡಿಬೆಟ್ಟದ ಮೇಲೆ ಒಂದು ಮುಸಾಫರಖಾನೆಯನ್ನು ಕಟ್ಟಬೇಕೆಂದು ಸರ್ಕಾರದವರು 10,400 ರೂಪಾಯಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಬೆಟ್ಟದಲ್ಲಿರುವ ದೇವಸ್ಥಾನದ ಸುತ್ತಲೂ ಅಲಂಕಾರವಾಗಿ ಮಾಡಿಸುವ ಕಾರ್ಯಗಳಿಗೆ ಸರ್ಕಾರದವರು 7,600 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

ರಾಜಧಾನಿಯ ಸಂಸ್ಕೃತ ಕಾಲೇಜಿನ ಸಂಸ್ಕೃತ ಭಂಡಾರವನ್ನು ವೃದ್ಧಿ ಮಾಡುವುದಕ್ಕೆ 4,000 ರೂಪಾಯಿಯನ್ನೂ, ಸಾಲಿನ ಖರ್ಚಿಗೆ 500 ರೂಪಾಯಿಯನ್ನೂ ನಮ್ಮ ಮಹಾರಾಜರವರು ಒದಗಿಸುವುದಾಗಿ ಅಪ್ಪಣೆ ಕೊಡಿಸಿರುತ್ತಾರೆ.

ಮಹಾಮಾತೃಶ್ರೀಯವರು ಸರ್ದಾರ್ ಗೋಪಾಲಕೃಷ್ಣ ಅರಸಿನವರ ಕುಮಾರಿಕೆಯನ್ನು ಲೇಟ್ ಭಕ್ಷಿ ವೀರಪ್ಪಾಜಿ ಅರಸಿನವರ ಮೊಮ್ಮಕ್ಕಳು ರಾ|| ರಾಜೇಅರಸಿನವರಿಗೆ ಕೊಡಿಸಿ ಕಳೆದ ವಾರ ಅರಮನೆಯೊಳಗೆ ವಿವಾಹವನ್ನು ನೆರವೇರಿಸಿದರು.

ಮೈಸೂರಿನಲ್ಲಿ ಮಂಗಳೂರು ಜಾತಿಯ ಹೆಂಚುಗಳನ್ನು ತಯಾರುಮಾಡುವ ವಿಷಯದಲ್ಲಿ ನಮ್ಮ ಸರ್ಕಾರದವರು ಮಿ|| ಇ. ಬರೆಸ್ಸೀಸ್ ಎಂಬ ಕಾರೀಗಾರರನ್ನು ಕಲ್ಲಿಕೋಟೆ ಕಾರ್ಖಾನೆಯಿಂದ ಕರೆಸಿಕೊಂಡು ಅಜಮಾಯಿಷಿ ಮಾಡಿಸುತ್ತಿದಾರೆ.

ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿಗಳ ಮಂದಿರದ ಕಟ್ಟಡಕ್ಕೆ 38,000 ರೂಪಾಯಿ, ಯೂರೋಪ್ಯಿಯನ್ನರು ಬಂದು ಇಳುಕೊಳ್ಳುವಂಥಾ ಕಟ್ಟಡಕ್ಕೆ 51,000 ರೂಪಾಯಿ, ಚಿಕ್ಕಬಳ್ಳಾಪುರದಲ್ಲಿ ಒಂದು ಮುಸಾಫರಖಾನೆ ಕಟ್ಟಡಕ್ಕೆ 19,500 ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ

ಕೋಲಾರ್ ಡಿಸ್ಟ್ರಿಕ್ಟ್ ಎಗ್ಜಿಭಿಷನ್‌ಗೆ ಪ್ರದರ್ಶನ ವಸ್ತುಗಳನ್ನು ಈ ತಿಂಗಳ ತಾ. 30 ರೊಳಗಾಗಿ ಕಳುಹಿಸಬಹುದೆಂದೂ, ಜೂನ್ ತಾ. 3 ರಲ್ಲಿ ಪ್ರದರ್ಶನವು ಪ್ರಾರಂಭವಾಗೋದರಿಂದ ಅರ್ಜಿಯ ಸಮೇತ ವಸ್ತುಗಳನ್ನು ಎರಡು ದಿನ ಮುಂಚಿನ ತನಕ ಕಳುಹಿಸಬಹುದೆಂದೂ ಅವಧಿಯನ್ನು ಹೆಚ್ಚಿಸಿರುತ್ತಾರೆ.

ಕಳೆದ ಭಾನುವಾರ ಬೆಂಗಳೂರು ಶಾರದಾ ಸ್ತ್ರೀಸಮಾಜ ಮಂದಿರದಲ್ಲಿ ಸೌ|| ಸರಸ್ವತಿದೇವಿಯವರು ಸತ್ಸಂಗವನ್ನು ಕುರಿತು ಉಪನ್ಯಾಸ ಮಾಡಿದರೆಂದೂ, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ಬಿ. ಬಸವಾರಾಧ್ಯರವರ ಪತ್ನಿಯವರು ಸಮಾಜಕ್ಕೆ ಕೆಲವು ಪುಸ್ತಕಗಳನ್ನು ಉಚಿತವಾಗಿ ಕೊಟ್ಟರೆಂದೂ ಒಬ್ಬ ಬಾತ್ಮಿದಾರರು ಬರೆದಿದಾರೆ.

ನಮ್ಮ ಸಂಸ್ಥಾನದಲ್ಲಿ ರೈಲ್ವೆ ಸೆಕ್ರೆಟರಿಯಾಗಿರುವ ಮಿ|| ಇ. ಎ. ಎಸ್. ಬೆಲ್‌ರವರು ಪೂರ್ವ ಬಂಗಾಳಾ ರೈಲ್ವೆಯ ಏಜೆಂಟರಾಗಿ ಬಡ್ತಿ ಹೊಂದಿ ತೆರಳುವವರಾಗಿದಾರೆ. ನಮ್ಮ ಸರ್ಕಾರದವರು ಅವರ ಸ್ಥಾನಕ್ಕೆ ಇಂಡಿಯಾ ಗವರ್ನ್‌ಮೆಂಟಿನ ರೈಲ್ವೆಗಳ ಅಕೌಂಟೆಂಟಾಗಿರುವ ಮಿ|| ಡೌಬ್ ವಿಲ್ಸನ್ ರವರನ್ನು ಕರಸಿ ನೇಮಕಮಾಡಿಕೊಳ್ಳುತ್ತಾರೆಂದು ತಿಳಿಯುವುದು.

ಕೆಂಪಿನದ ತಾಲ್ಲೂಕು ಹೊಸಕೋಟೆಯ ಮ|| ಎಚ್. ಕೃಷ್ಣರಾಯರು ಅಲ್ಲಿಂದ ಪ್ರದರ್ಶನಶಾಲೆಯನ್ನು ಶಾಶ್ವತವಾಗಿ ಕಟ್ಟಿಸುವುದಕ್ಕೆ ಸುಮಾರು 20 ಎಕರೆ ಜಮೀನನ್ನು ಕೊಡುವುದಲ್ಲದೆ ಆ ಕಟ್ಟಡದ ಖರ್ಚಿಗೂ 500 ರೂಪಾಯಿ ಒದಗಿಸುವಂತೆ ವಾಗ್ದಾನಮಾಡಿದಾರೆ. ಇದಲ್ಲದೆ ಇವರು ಒಂದು ರಾತ್ರಿ ಪಾಠಶಾಲೆಯನ್ನು ಪ್ರಾರಂಭಮಾಡಿ ನಡಿಸುತ್ತಾ ಬಂದಿರುವರು.

ಮೈಸೂರು ಲೈಫ್ ಅಶೂರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರವರಾದ ಮ|| ಎಂ. ಎಲ್. ನಾಗಣ್ಣನವರು ಕಳೆದ ವಾರ ತಮ್ಮ ಕುವರಿಯ ಕುಮಾರಿಕೆಯರಿಗೂ ವಿವಾಹವನ್ನು ಅಟ್ಟಹಾಸವಾಗಿ ಮಾಡಿದರು. ರಾಜಧಾನಿಯ ಬಹು ಮಂದಿ ವರ್ತಕರೂ ಇತರ ದೊಡ್ಡ ಮನುಷ್ಯರೂ ಹಾಜರಾಗಿದ್ದು ಈ ಸಂತೋಷ ಉತ್ಸವದಲ್ಲಿ ಸೇರಿ ವಧೂವರರುಗಳನ್ನು ಆಶೀರ್ವದಿಸಿದರು.

ಮೈಸೂರಿನ ಪುನಾಮ್‌ಚಂದ್ ಎಂಬ ವರ್ತಕರು ಎರಡು ತಿಂಗಳಲ್ಲಿ 6,000 ರೂಪಾಯಿ ಖರ್ಚುಮಾಡಿದ ಒಂದು ಪೆಟ್ಟಿಗೆಯನ್ನು ಮೈಸೂರಿನಿಂದ ಗದಗ್ಗಿಗೆ ರೈಲಿನ ಮೇಲೆ ಕಳುಹಿಸಿದ ಹಾಗೂ ಆ ಪೆಟ್ಟಿಗೆಯು ಬೆಂಗಳೂರಿನಿಂದ ಆಚೆ ಎಲ್ಲೋ ಕಳುವಾದ ಹಾಗೂ ತಿಳಿದುಬಂದದ್ದರಿಂದ ಈಗ ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿದಾರೆ.

ನಮ್ಮ ಸಂಸ್ಥಾನದಲ್ಲಿ ಗಾಜಿನ ಬಳೆ ಮಾಡುವವರ ಮಕ್ಕಳನ್ನು ಐದಾರು ಮಂದಿ ಯೌವನಸ್ಥರನ್ನು ವೇತನ ಕೊಟ್ಟು ಮದರಾಸಿಗೆ ಕಳುಹಿಸಿ ಅಲ್ಲಿ ಗಾಜು ತಯಾರಾಗುವ ಕಾರ್ಖಾನೆಗಳಲ್ಲಿ ಕೆಲವು ಕಾಲ ಇದ್ದು ಆ ಕಸುಬನ್ನು ಚೆನ್ನಾಗಿ ಕಲಿತು ಬರುವಂತೆ ಮಾಡಬೇಕೆಂದು ನಮ್ಮ ಸರ್ಕಾರದವರು ಹುಕುಂ ಕೊಟ್ಟು ಹಣವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರು ಲಾಲ್ ಬಾಗ್ ಉದ್ಯಾನವನದೊಳಗೆ ಮದ್ಯಗಳನ್ನು ಬಿಕರಿ ಮಾಡುವ ಅಂಗಡಿಯನ್ನು ಸರ್ಕಾರದವರು ವಜಾ ಮಾಡಿದ್ದಲ್ಲದೆ ಇನ್ನು ಮುಂದೆ ಸಂತೋಷಕೂಟಗಳೂ ಆಟಪಾಟ ವಿನೋದಗಳೂ ಪ್ರದರ್ಶನಗಳೂ ನಡೆಯುವಾಗ್ಗೆ ಮದ್ಯದ ಅಂಗಡಿ, ಸೂಳೆಯರ ನಾಟ್ಯ, ಜೂಜು, ಈ ಮೊದಲಾದ ನೋಟಕರ ಪರೀತ ಮನಸ್ಸುಗಳನ್ನು ಕೆಡಿಸುವ ಸಂಗತಿಗಳ್ಯಾವೂ ನಡೆಯಕೂಡದೆಂದು ಹುಕುಂ ಕೊಡಿಸಿರುತ್ತಾರೆ

ಕೋಲಾರದವರು ತಾಲ್ಲೂಕು ಹೊಸಕೋಟೆಯಲ್ಲಿ ಶ್ರೀಶಂಕರ ಜಯಂತಿಯನ್ನು ಬಹಳ ಆನಂದದಿಂದ ನಡಿಸಿ, ವಿದ್ಯಾರ್ಥಿಗಳ ವೈದಿಕ ವಿದ್ಯಾಭ್ಯಾಸವೇ ಮೊದಲಾದ ಕಾರ್ಯಗಳಿಗೆ ವಿನಿಯೋಗಿಸುವಂಥಾ ಒಂದು ಧರ್ಮದ ಫಂಡನ್ನು ಕೂಡಿಸಿದರೆಂದೂ, ಈ ಕಾರ್ಯಗಳನ್ನೆಲ್ಲಾ ಶೇಕದಾರರೂ, ಪಟೇಲ್ ಶ್ಯಾಮಸುಂದರ್‌ಗಳೂ ಮುಂದಾಳುಗಳಾಗಿ ನಿಂತು ಸಂತೋಷವಾಗಿ ನಡಿಸಿದರೆಂದೂ ಒಬ್ಬ ಬಾತ್ಮಿದಾರರು ಬರೆದಿದಾರೆ

ರಾಜಧಾನಿಯ ಸಂಗೀತ ಸಮಾಜದ ಸೆಕ್ರೆಟರಿ ಮ|| ಎಚ್. ಪಿ. ಕೃಷ್ಣರಾಯರು ಬೆಂಗಳೂರು ವಿದ್ವಾನ್ ಶ್ರೀ ಆಸ್ಥಾನಶಾಸ್ತ್ರಿಯವರನ್ನು ಕರಸಿ ಕಳೆದ ಭಾನುವಾರ ಟೌನ್ ಹಾಲಿನಲ್ಲಿ ಅವರ ಹಾಡುಗಾರಿಕೆಯನ್ನು ಮಾಡಿಸಿದರು. ಸಮಾಜದ ಮೆಂಬರುಗಳೂ ಸಂಗೀತಾಭಿಮಾನಿಗಳೂ ಬಹು ಮಂದಿ ಸೇರಿ ಮ|| ಶಾಸ್ತ್ರಿಯವರ ಹಾಡಿಕೆಯನ್ನು ಕೇಳಿ ಮೆಚ್ಚಿ ತಮ್ಮಗಳ ಸಂತೋಷಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು.

ರಾಜಧಾನಿಯಲ್ಲಿದ್ದುಕೊಂಡು ಜವಾಹಿರಿ ವ್ಯಾಪಾರಸ್ಥರಾಗಿ ಯೂರೋಪಿನ ಮುಖ್ಯ ನಗರಗಳಲ್ಲೆಲ್ಲಾ ಸಂಚಾರಮಾಡಿ ಬಂದಿರುವ ಮ|| ಎಸ್. ಸಿದ್ದೋಜಿರಾಯರು ಕಳೆದ ವಾರ ತಮ್ಮ ಕುಮಾರಿಕೆಯ ವಿವಾಹವನ್ನು ವಿಶೇಷ ಉತ್ಸವದಿಂದಲೂ ವೈಭವದಿಂದಲೂ ನೆರವೇರಿಸಿದರು. ಪ್ರತಿ ದಿನವೂ ಸೆಂಟರಿಸ್ವಲ್ಲದೆ ಸುಮಾರು 400-500 ಮಂದಿ ಬಡಬಗ್ಗರಿಗೆ ಸುಖಭೋಜನವನ್ನು ಮಾಡಿಸಿ ಸಂತೋಷಪಡಿಸಿದರು ದೊಡ್ಡ ಮನುಷ್ಯರನ್ನೂ ವರ್ತಕಮಂಡಲಿಯವರನ್ನೂ ವಿಶೇಷವಾಗಿ ಕರಸಿಕೊಂಡು ಫಲಾಹಾರ ಸಂಗೀತಾದಿಗಳಿಂದ ಆನಂದಪಡಿಸಿದರು.

ಕೊಡಗು ಸೋಮವಾರ ಪೇಟೆಯ ಬಾತ್ಮೀದಾರರಿಂದ.—ಕೆಲವು ದಿವಸಗಳಿಂದಲೂ ಸುತ್ತುಮುತ್ತಲಿನ ಗ್ರಾಮಗಳಲ್ಲಿ ಶೈತರ ದನಕರುಗಳನ್ನು ಕೊಂದು ಹಾವಳಿಮಾಡುತ್ತಿದ್ದ ಮಚ್ಚೆಕಿರುಬನೆಂಬ ಹುಲಿಯು ತಾ 13 ನೇ ಗುರುವಾರ ಬೆಳಗ್ಗೆ ಅಡವಿಯಲ್ಲಿ ಕೂಗುತ್ತಿದ್ದ ಶಬ್ದವನ್ನು ಗ್ರಾಮದ ಪೇಟೆ ಸರ್ಕಲ್ ದಯವಾಡಿದ್ದ ಸೋಮವಾರಪೇಟೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮ|| ಸಿ. ಬಿ. ಅಯ್ಯಣ್ಣನವರು ಕೇಳಿ ತುಪಾಕಿ ಸಮೇತ ಅಡವಿಯೊಳಕ್ಕೆ ನುಗ್ಗಿ ಹುಲಿಯನ್ನು ಗುಂಡಿನಿಂದ ಸುಟ್ಟು ರೈತರಿಗೆ ಆನಂದವನ್ನುಂಟುಮಾಡಿದರು. ಈ ಹುಲಿಯು 6 ಅಡಿ ಉದ್ದವಾಗಿಯೂ, 3½ ಅಡಿ ಎತ್ತರವಾಗಿಯೂ, 2 ಅಡಿ ದಪ್ಪವಾಗಿಯೂ ಇತ್ತು.

ಕಳೆದ ಶನಿವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಕನ್ನಂಬಾಡಿಗೆ ದಯಮಾಡಿ ಅನೆಕಟ್ಟೆಯ ಕಾಮಗಾರಿಯನ್ನು ಪರಾಂಬರಿಸಿದರು ಆ ಸಮಯದಲ್ಲಿ ಕೂಲೀ ಜನಗಳು ಪ್ರಭುಗಳ ದರ್ಶನಾರ್ಥವಾಗಿ ಏಕಕಾಲದಲ್ಲಿ ಕಾಲುವೆ ಮೆಟ್ಟಿನ ಮೇಲೆ ನುಗ್ಗಿ ಹತ್ತಿದರು. ನದಿಯ ಪಾತ್ರದಿಂದ ಕಟ್ಟೆಯ ತುದಿಯ ತನಕ ಸುಮಾರು 6-7 ಅಡಿ ಅಗಲಕ್ಕೆ ಬೊಂಬುಗಳನ್ನು ಹಾಸಿದಂತೆ ಜೋಡಿಸಿ ಕಟ್ಟಿದ್ದ ಆ ಮೆಟ್ಟು ಬಹಳ ಹಳೆಯದಾಗಿದ್ದದ್ದರಿಂದಲೋ, ಜನಗಳು ಹೆಚ್ಚಾಗಿ ನುಗ್ಗಿದ್ದರಿಂದಲೋ ಅದು ತಡೆಯಲಾರದೆ ಮುರಿದು ಬಿದ್ದುಹೋಯಿತು. ಅದರ ಮೇಲಿದ್ದ ಜನಗಳು ಹೊಳೆಯೊಳಕ್ಕೆ ಮುಗ್ಗರಿಸಿ ಬಿದ್ದರೆಂದೂ, ಇದರಿಂದ ಕೆಲವರಿಗೆ ಜಖಮ್ ಆದದ್ದಲ್ಲದೆ ಇನ್ನೇನು ಅನಾಹುತವಾಗಲಿಲ್ಲವೆಂದೂ ಹೇಳಲಾಗಿದೆ.

ಮೈಸೂರು ವೀರಶೈವ ವಿದ್ಯಾರ್ಥಿಮಂದಿರ.

[ಒಬ್ಬ ಬಾತ್ಮಿದಾರರಿಂದ.]

ಮೈಸೂರು ವೀರಶೈವಶಾಸ್ತ್ರಮಠದ ಸೆಕ್ರೆಟರಿ ಮ|| ಎಂ. ಪಿ. ಲಿಂಗಪ್ಪಯ್ಯನವರು ಆಶ್ರಮಕ್ಕೋಸ್ಕರ ಒಂದು ಫಂಡನ್ನು ಕೂಡಿಸುವ ಉದ್ದೇಶ್ಯ ಸಹಿತರಾಗಿ ಹೊರಟಿರುವರು ಇದರ ಸಂಬಂಧವಾಗಿ ನರಸೀಪುರದ ತಾಲ್ಲೂಕು ಮಾಡಹಳ್ಳಿ ಪಟೇಲರ ಮಕ್ಕಳ ಲಗ್ನಕಾಲದಲ್ಲಿ ಈ ತಿಂಗಳ 21 ನೇ ತಾರೀಖಿನ ದಿವಸ ವಿದ್ಯಾಭ್ಯಾಸ, ವ್ಯವಸಾಯ ಮತ್ತು ಕೈಗಾರಿಕೆಗಳು ಜನಗಳ ಏಳಿಗೆಗೆ ಹೇಗೆ ಅವಶ್ಯಕವಾದುವುಗಳೆಂಬುವುದನ್ನು ಅಲ್ಲಿ ನೆರೆದಿದ್ದ ಸುಮಾರು 500 ಜನಗಳೂ ಪರಿಷ್ಕಾರವಾಗಿ ತಿಳಿಯುವಂತೆ ಒಂದು ಗಂಟೆಯ ಕಾಲ ಉಪನ್ಯಾಸ ಮಾಡಿದರು ಇಲ್ಲಿ ಸುಮಾರು 50 ಗ್ರಾಮಗಳ ಮುಖ್ಯಸ್ಥರುಗಳು ಸೇರಿದ್ದರು. ಇವರೆಲ್ಲರೂ ಸೇರಿ ತಕ್ಷಣವೇ 357 ರೂಪಾಯಿ ಚಂದಾ ಹಾಕಿದ್ದಲ್ಲದೆ ತಮ್ಮ ಗ್ರಾಮಗಳಲ್ಲಿ ಸಾಧ್ಯವಾದ ಮಟ್ಟಿಗೂ ಇದರಿಂದ ಚಂದಾವನ್ನು ವಸೂಲು ಮಾಡಿಕೊಡುವುದಾಗಿ ವಾಗ್ದಾನಮಾಡಿರುವರೆಂದು ತಿಳಿಸಲು ನಮಗೆ ಬಹಳ ಸಂತೋಷವಾಗುತ್ತದೆ. ಇವರು ಮಾಡಿಗನಾದರು, ಕುರುಬೂರು, ಕೊತ್ತೇಗಾಲಗಳಲ್ಲಿ ತಾ 22-23 ರಲ್ಲಿ ವಿವಾಹಗಳನ್ನು ನಡೆಸಿದ ಕಾಲದಲ್ಲಿ ಬಡವಿದ್ಯಾರ್ಥಿಗಳ ಸಹಾಯಾರ್ಥವಾಗಿ ಸುಗ್ಗಿ ಕಾಲಗಳಲ್ಲಿ ರೈತರಿಂದ ಧಾನ್ಯಗಳನ್ನು ಒಟ್ಟುಗೂಡಿಸಿ ವೀರಶೈವಶಾಸ್ತ್ರಮಠಕ್ಕೆ ಕಳುಹಿಸಿಕೊಡುವ ಪ್ರಯತ್ನವನ್ನು ಮಾಡುತ್ತೇವೆಂದು ಕುರುಬೂರು ಪಟೇಲ್ ಮ|| ಮಲ್ಲಿಕಾರ್ಜುನಸ್ವಾಮಿಗಳು ತಿಳಿಸಿದ್ದು ಬಹಳ ಶ್ಲಾಘ್ಯವಾಗಿದೆ. ಮ|| ಸೋಮಯ್ಯನವರು ಲಿಂಗಪ್ಪಯ್ಯನವರಿಗೆ ಬಹಳ ಸಹಾಯಮಾಡುತ್ತಲಿರುವರು. ಮ|| ಲಿಂಗಪ್ಪಯ್ಯನವರು ತಾ. 27 ರಲ್ಲಿ ಬಿಳಿಕೆರೆಯಲ್ಲಿ ನಡೆಯುವ ಬಸವಜಯಂತಿ ಮಹೋತ್ಸವ ಕಾಲದಲ್ಲಿ ವಿದ್ಯಾಭ್ಯಾಸ ವಿಷಯವಾಗಿ ಒಂದು ಉಪನ್ಯಾಸ ಮಾಡುವವರಾಗಿದಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮೇ 13 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—(1) ಷೇರು ಮೊಬಲಗು	ರೂ. 10,00,000
,, (2) ರಿಜರ್ವ್ ಫಂಡು	,, 25,000
,, (3) ಡಿಪಾಜಿಟ್ಟುಗಳು	,, 29,36,501
,, (4) ಇತರೆ	,, 60,598
(ಆಣೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 40,22,099

ದೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 6,38,198
,, (2) ಖಾತೆ ಮತ್ತು ಇತರ ಸಾಲಗಳು	,, 25,10,352
,, (3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು	,, 4,28,755
,, (4) ಇನ್‌ವೆಸ್ಟ್‌ಮೆಂಟುಗಳು	,, 3,67,277
,, (5) ಏಜನ್ಸಿಗಳಲ್ಲಿರುವ ಮೊಬಲಗು	,, 1,45,400
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 16,029
,, (7) ಇತರೆ	,, 16,088
(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 40,22,099

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟ್ ಸಂಗ್ರಹ.

ಶೃಂಗೇರಿ ಮ್ಯುನಿಸಿಪಾಲಿಟಿಗೆ ಸೇರಿದ ಸರಹದ್ದಿನಲ್ಲಿ 1915 ನೇ ಜೂಲೈ ಲಾಗಾಯಿತು ಎರಡು ವರುಷಗಳ ತನಕ ಬಲಾತ್ಕರಿಸಿ ದೇಸೀ ಸಿಡುಬು ಹಾಕುವ ಶಾಸನವನು ಜಾರಿಯಲ್ಲಿರತಕ್ಕದ್ದು.

ಶ್ರೀಮನ್ ಮಹಾರಾಜರವರ ಗವರ್ನ್‌ಮೆಂಟಿಗೆ ಸೇರಿದ ಗವರ್ನ್‌ಮೆಂಟ್ ಮೋಟರ್ ಬೈಸಿಕಲ್‌ಗಳಿಗೆ ರಿಜಿಸ್ಟ್ರೇಷನ್ ಫೀಜು ವಜಾ ಮಾಡಲ್ಪಟ್ಟಿದೆ.

ರೆವ್|| ಡಿ. ಎ. ರೀಸ್ ಸಾಹೇಬರನ್ನು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಿಸಿದೆ.

ಬಾಲಘಾಟ್ ಚಿನ್ನದ ಗಣಿ ಕಂಪನಿಯ ಸೂಪರಿನ್‌ಟೆಂಡೆಂಟರಾದ ಮಿ|| ಎ. ಎಚ್. ಕೀನೆ ಯವರನ್ನು ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ.

ಶ್ರೀರಂಗಪಟ್ಟಣದ ತಾಲ್ಲೂಕು ಕುರುಬರಸೆಟ್ಟಿಹಳ್ಳಿಯ ಯೂನಿಯನ್ ಪಂಚಾಯತಿಯನ್ನು ವಜಾ ಮಾಡಲಾಗಿದೆ.

ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮ|| ಎಂ. ಎಸ್. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಡಾ|| ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ಯರು ರಜದಿಂದ ವಾಪಸು ಬರುವತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಸೆಂಟ್ರಲ್ ಜೈಲ್ ಛಾರ್ಜನ್ನು ವಹಿಸಿರುವ ಸರ್ಜನ್ ಮ|| ಟಿ. ಎಸ್. ನಂಜಪ್ಪನವರು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟರಾಗಿಯೂ ಇರತಕ್ಕದ್ದು.

ಅಮಲ್ದಾರ್ ಮ|| ಎಂ. ಕೇಶವಯ್ಯನವರು ರಜದಿಂದ ವಾಪಸು ಬರುವತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಮ|| ವಿ. ಗೋಪಾಲಚಾರ್ಯರು ಚಿತ್ರದುರ್ಗದ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ರೆವಿನ್ಯೂ ಸರ್ವೆ ಇಲಾಖೆಯ ಅ|| ಕಮಿಷನರ್ ಮ|| ಟಿ. ಧರ್ಮರಾಜ ಚೆಟ್ಟಿಯವರನ್ನು ಕಾವೇರಿ ರಿಜರ್ವಾಯರ್ ಕಾಮಗಾರಿಯ ಅ|| ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿ ಹಂಗಾಮಿ ನೇಮಕ ಮಾಡಿದೆ.

ಪ್ರೊ|| ಸಬ್ ರಿಜಿಸ್ಟ್ರಾರ್ ಮ|| ಸಿ. ಆರ್. ಭೀಮಸೇನರಾಯರನ್ನು 4 ನೇ ಕ್ಲಾಸ್ ಸಬ್ ರಿಜಿಸ್ಟ್ರಾರಾಗಿ ಖಾಯಂ ಮಾಡಲಾಗಿದೆ.

ಹೊನ್ನಾಳಿ ತಾಲ್ಲೂಕು ಅಮಲ್ದಾರ್ ಮ|| ಎಸ್. ಸುಂದರರಾಜಯ್ಯಂಗಾರ್ರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮೊಕದ್ದಮೆಗಳನ್ನು ಹಿಡಿದು ದರ್ಯಾಪ್ತುಮಾಡುವ ಅಧಿಕಾರ ವಹಿಸಿದೆ.

ಮ|| ವಿ. ಆರ್. ತ್ಯಾಗರಾಜ ಅಯ್ಯರವರಿಂದ ಮ|| ಟಿ. ಚೊಕ್ಕಣ್ಣನವರು ಚಿತ್ರದುರ್ಗದ ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಮೇ ತಾ. 15 ರಲ್ಲಿ ವಹಿಸಿಕೊಂಡಿರುತ್ತಾರೆ.

ಮ|| ಡಿ. ಎಂ. ನರಸಿಂಗರಾಯರಿಂದ ಮಿ|| ಪಿ. ಜಿ. ಡಿಸೌಜಾರವರು ಗವರ್ನ್‌ಮೆಂಟ್ ಸೆಕ್ರೆಟರಿ ಆಫೀಸ್ ಕೆಲಸದ ಛಾರ್ಜನ್ನು ಮೇ ತಾ. 10 ರಲ್ಲಿ ವಹಿಸಿಕೊಂಡಿದಾರೆ.

ಮೈಸೂರು ಮಹಾರಾಣಿಯವರ ಕಾಲೇಜ್ ಅ|| ಸೂಪರಿನ್‌ಟೆಂಡೆಂಟರಾದ ಶ್ರೀ ಕೆ. ಡಿ. ರುಕ್ಮಿಣಿಯಮ್ಮನವರು ಮತ್ತೊಂದು ಹುಕುಂ ಕೊಡಲ್ಪಡುವತನಕ ಆ ಕಾಲೇಜಿನ ಸೂಪರಿನ್‌ಟೆಂಡೆಂಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ತುಮಕೂರು ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರ್ ಮ|| ಸಿ. ಕೃಷ್ಣಯ್ಯಂಗಾರ್ರಿಗೆ ಮೇ ತಾ. 31 ರಿಂದ ಅಥವಾ ಅವರು ಛಾರ್ಜು ಕೊಡುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸ್ಯಾನಿಟರಿ ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರ್ ಮ|| ಸಿ. ವಿಜಯರಂಗನಾಯುಡುಯವರು ತುಮಕೂರು ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಸಬ್ ಅಸಿಸ್ಟೆಂಟ್ ಸರ್ಜನ್‌ರುಗಳ ಸ್ಥಿತಿ.

ಬಡ ಸಬ್ ಅಸಿಸ್ಟೆಂಟ್ ಸರ್ಜನರ ಸ್ಥಿತಿಯನ್ನು ಕೇಳುವವರೇ ಇಲ್ಲದಂತಿದೆ. ಎಲ್ಲಾ ಇಲಾಖೆಗಳನ್ನೂ ಕ್ರಮಪಡಿಸಿದಾರೆ. ಪ್ರತಿ ಇಲಾಖೆಯ ನೌಕರರಿಗೂ ಸಂಬಳವು ಬಡ್ತಿ ಆಗುತ್ತಾ ಇದೆ. ಈ ಬಡನೌಕರರ ಅಹವಾಲು ಕೇಳುವವರೇ ಇಲ್ಲ. ಈಗಿನ ಸೀನಿಯರ್ ಸಾಹೇಬರು ದೊಡ್ಡ ಮಹನೀಯರೂ ಆಗಿರುವದರಿಂದಲೂ, ಯುವರಾಜರೇ ಈ ಇಲಾಖೆಯ ಉಸ್ತುವಾರಿ ನೋಡುವದರಿಂದಲೂ ಇವರ ಸ್ಥಿತಿಯು ಸ್ವಲ್ಪ ಮಟ್ಟಿಗಾದರೂ ಉನ್ನತಕ್ಕೆ ಬರಬಹುದೆಂದು ಎಲ್ಲರೂ ಕೋರುತ್ತಾರೆ. ಇವರ ಅಹವಾಲುಗಳನ್ನು ಇತರ ಇಲಾಖೆಯವರು ತಿಳುಕೊಳ್ಳುವದು ಸಾಧ್ಯವಲ್ಲ. ನಾನು ಡಾಕ್ಟರುಗಳ ಜೊತೆಯಲ್ಲಿ ಹೆಚ್ಚಾಗಿ ತಿರುಗುತ್ತಾ ಇರುವದರಿಂದ ಇವರ ನಿಜಸ್ಥಿತಿಯು ನನಗೆ ತಿಳಿದಿದೆ. ಇವರಿಗೆ ಸಂಬಳ ಕಮ್ಮಿಯಾದರೆ ಇತರ ಮುನಾಫೆಯುಂಟು ಎಂದು ಅನೇಕರು ತಿಳುಕೊಳ್ಳಬಹುದು. ಮತ್ತು ಸರ್ಕಾರದವರು ಇವರಿಗೆ ಸಂಬಳ ಕಮ್ಮಿಯಾಗಿ ಕೊಡಲಿಕ್ಕೆ ಇದೇ ಒಂದು ಕಾರಣವೆಂದು ನಾನು ತಿಳಿಯುತ್ತೇನೆ. ಅವರ ಮುನಾಫೆಯು ಕನಸಿನಲ್ಲಿ ಕಂಡ ಭೋಗದಂತೆಯೂ, ಕನ್ನಡಿಯಲ್ಲಿ ಕಾಣುವ ಹಣದ ರಾಶಿಯಂತೆಯೂ ಇದೆ. ನಮ್ಮ ಜನರಂತೂ ಹಳ್ಳಿ ವೈದ್ಯರಲ್ಲಿಯೋ, ಮಳೆಯಾಳ ಪಂಡಿತರಲ್ಲಿಯೋ ಔಷಧಿ ತೆಕ್ಕೊಳ್ಳುವದೇ ಜಾಸ್ತಿ; ಅಥವಾ ಒಂದು ವೇಳೆ ತೆಕ್ಕೊಳ್ಳುವದಾದರೂ ಆಸ್ಪತ್ರೆಗೆ ಹೋಗಿ ತಕ್ಕೊಳ್ಳುತ್ತಾರೆ. ಮನೆಗೆ ಡಾಕ್ಟರನ್ನು ಕರೆದರೆ ಫೀಸು ಕೊಡಬೇಕಾಗುತ್ತದೆ. ಫೀಸು ಕೊಟ್ಟು ಮನೆಗೆ ಕರಕೊಂಡು ಹೋಗುವವರು 1,000 ಕ್ಕೆ ಒಬ್ಬನೂ ಇಲ್ಲ. ಹೀಗಾಗಿ ಮುನಾಫೆಯೆಂದರೇನು?

ಅದು ಹಾಗಿರಲಿ, ಇವರು ಮೆಟ್ರಿಕ್ಯುಲೇಷನ್ ಪಾಸಾಗಿ ಮೆಡಿಕಲ್ ಕಾಲೇಜಿನಲ್ಲಿ ನಾಲ್ಕು ವರ್ಷ ಓದಿ ಪಾಸಾಗಿ ಬಂದರೆ ತಿಂಗಳು ಒಂದಕ್ಕೆ 30 ರೂಪಾಯಿ ಸಂಬಳ ಕೊಡುತ್ತಾರೆ. ಕಡೆಗೆ ಪೆನ್ಷನ್ ಆಗುವಾಗ್ಗೆ 60 ರೂಪಾಯಿ ಆಗುತ್ತದೆ. 30 ರಿಂದ 60, ಅಲ್ಲಿಗೆ ಮುಕ್ತಾಯ! ಇವರ ಜೀವಮಾನ 60 ಕ್ಕೆ ಆಯಿತು! ಇನ್ನು ಯಾವ ಇಲಾಖೆಯಲ್ಲಿಯೂ ಇಂಥಾ ಅನ್ಯಾಯವಿಲ್ಲ. ಇಪ್ಪತ್ತು ವರ್ಷದ ಸರ್ವೀಸ್‌ದಾರರಿಗೆ 60 ರೂಪಾಯಿ ಆದರೆ ನಂತರ 10 ವರ್ಷ ಸರ್ವೀಸ್ ಮಾಡಿ ಪೆನ್ಷನ್ ಆಗುವ ವರೆಗೂ ಬೇರೆ ಬಡ್ತಿ ಇಲ್ಲವೆಂದರೆ ಏನನ್ಯಾಯ? ಇದಲ್ಲದೆ ಮೆಟ್ರಿಕ್ಯುಲೇಷನ್ ಪಾಸುಮಾಡಿ 6 ತಿಂಗಳು ಸ್ಯಾನಿಟರಿ ಕ್ಲಾಸಿನಲ್ಲಿ ಓದಿದರೆ 30-2-40 ರೂಪಾಯಿ ಸಂಬಳ, 10 ರೂಪಾಯಿ ಸೈಕಲ್ ಭತ್ತೆಯೂ ಕೊಡುತ್ತಾರೆ; ಅಥವಾ ಮೆಟ್ರಿಕ್ಯುಲೇಷನ್ ಪಾಸುಮಾಡಿ ಮೆಡಿಕಲ್ ಕಾಲೇಜು ಸೇರುವದಕ್ಕೆ ಬದಲಾಗಿ ಆರ್ಟ್ಸ್ ಕಾಲೇಜಿಗೆ ಸೇರಿ 4 ವರ್ಷ ಓದಿ ಬಿ. ಎ. ಪಾಸಾದರೆ ಮೊದಲು 25 ರೂಪಾಯಿ ಸಂಬಳ ಆದರೂ ಪೆನ್ಷನ್ ಆಗುವಾಗ್ಗೆ ಕನಿಷ್ಠ ಪಕ್ಷಕ್ಕೆ ಅಮಲ್ದಾರನಾಗುವದಕ್ಕೆ ಏನೂ ಸಂದೇಹವಿಲ್ಲ.

ವಾಚಕರೇ, ಮೆಡಿಕಲ್ ಕಾಲೇಜಿನ 4 ವರ್ಷಕ್ಕೂ ಆರ್ಟ್ಸ್ ಕಾಲೇಜಿನ ನಾಲ್ಕು ವರ್ಷಕ್ಕೂ ಸರಿಹೋಲಿಸಿನೋಡಿ! ಹತ್ತು ರೂಪಾಯಿ ಸಂಬಳದ ಗುಮಾಸ್ತನಿಗೂ ಮೈಲಿಗೆ 4 ಆಣೆ ಭತ್ತೆ ಇದೆ. ಇವರಿಗೆ ಮಾತ್ರ 2 ಆಣೆ! ಈಗ ಮೈಲಿಗೆ ಎರಡಾಣೆ ಎಂದರೆ ಗಾಡಿಯವರೇ ಸಿಕ್ಕುವದಿಲ್ಲ. ಒಬ್ಬೊಬ್ಬನಾಗಿ ಪ್ರಯಾಣ ಮಾಡುವದಾದರೆ ಒಂದು ಗಾಡಿ ಸಾಕು. ಆದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗವಾಗುವಾಗ ಅವರ ಸಾಮಾನಿಗೂ ಕುಟುಂಬಕ್ಕೂ ಒಂದು ಗಾಡಿ ಸಾಕೇ?

ಕೆಲವು ಕಡೆಗಳಲ್ಲಿ ಇವರಿಗೆ ಆಸ್ಪತ್ರೆ ಸಮೀಪ ಮನೆಗಳನ್ನು ಕಟ್ಟಿಸಿಕೊಟ್ಟಿದಾರೆ. ಇದರಿಂದ ಇವರಿಗೆ ನಷ್ಟವೇ ಹೊರತು ಬೇರೆಯಲ್ಲ. 60 ರೂಪಾಯಿ ಸಂಬಳ ಪಡೆಯುವವರು ಮಲೆನಾಡಾದರೆ 20 ರೂಪಾಯಿ ಭತ್ತೆ ಇದ್ದರೆ 60 + 20 = 80 ರೂಪಾಯಿಗೆ ಮನೆಬಾಡಿಗೆ ಎಂದು 8 ರೂಪಾಯಿ ಸಂಬಳದಿಂದ ಕಡಿಯುತ್ತಾರೆ. ಊರೊಳಗೆ 2-3 ರೂಪಾಯಿಗೆ ಬೇಕಾದ ಮನೆಗಳು ಸಿಕ್ಕುವಾಗ 8 ರೂಪಾಯಿ ಕೊಡಬೇಕೆಂದರೆ ಏನು ಅನ್ಯಾಯ? ಇದಲ್ಲದೆ 200-300 ರೂಪಾಯಿ ಸಂಬಳದ ಡಿಸ್ಟ್ರಿಕ್ಟ್ ಸರ್ಜನರಿಗೆ ಮನೆಬಾಡಿಗೆ ಇಲ್ಲ, ಅನುಕೂಲವಾದ ಬಂಗಲೆ, ಒಳ್ಳೇ ಸಂಬಳ: ಹೀಗಿದ್ದರೂ ಅವರು ಬಾಡಿಗೆ ಕೊಡಬೇಕಾದ್ದಿಲ್ಲ. ಈ ಬಡ ಸಬ್ ಅಸಿಸ್ಟೆಂಟ್ ಸರ್ಜನರು ಎಲ್ಲಿ ಪ್ಲೇಗ್, ಎಲ್ಲಿ ಕಾಲರಾ ಅಲ್ಲಿಗೆ ಜೀವದ ಆಶೆ ತೊರೆದು ಓಡಬೇಕು. ನಿಜವಾಗಿ ಸಂಸ್ಥಾನದ ಪ್ರಜೆಗಳ ರೋಗನಿವಾರಣೆಯನ್ನು ಇವರೇ ಮಾಡುವದು. 200-300 ರೂಪಾಯಿ ಸಂಬಳದ ಆಫೀಸರುಗಳು ಯಾರೂ ಹೋಗುವದಿಲ್ಲ.

ಇವರು ತಾಲ್ಲೂಕುಗಳಲ್ಲಿ ಮುನ್ಸಿಫರು, ಅ|| ಕಮಿಷನರು, ಅಮಲ್ದಾರರೇ ಮೊದಲಾದ ಆಫೀಸರ ಜೊತೆಯಲ್ಲಿ ಇದ್ದು ತಮ್ಮ ಪದವಿಯ ಗೌರವಕ್ಕಾಗಿ ಖರ್ಚುಮಾಡಬೇಕಾಗುತ್ತದೆ. ಗೌರವವೇನೋ ಅಂಥಾ ಆಫೀಸರುಗಳಂತೆ ಇಟ್ಟುಕೊಳ್ಳಬೇಕು; ಸಂಬಳ ಮಾತ್ರ 30 ರೂಪಾಯಿ! ಇಷ್ಟೆಲ್ಲಾ ಕೆಲಸವಲ್ಲದೆ ಇವರುಗಳು ಮ್ಯುನಿಸಿಪಲ್ ಮತ್ತು ತಾಲ್ಲೂಕು ಬೋರ್ಡು ಮೆಂಬರುಗಳಾಗಿಯೂ, ವಾಕ್ಸಿನ್ ಇನ್ಸ್‌ಪೆಕ್ಟರ್, ಸ್ಕೂಲ್ ಇನ್ಸ್‌ಪೆಕ್ಟರ್, ಟವನ್‌ಗಳಲ್ಲಿ ಸಿಡುಬು ಹಾಕುವದು, ಇವೆಲ್ಲಾ ಮಾಡಬೇಕು. ಹೆಚ್ಚಿಗೆ ಬರೆಯುವದರಿಂದ ಏನೂ ಪ್ರಯೋಜನವಿಲ್ಲ. 60 ವರ್ಷಗಳ ಹಿಂದೆ ರೂಪಾಯಿಗೆ 30-40 ಸೇರು ಅಕ್ಕಿ ಇದ್ದಾಗ ಇದ್ದ ಸಂಬಳವೇ ರೂಪಾಯಿಗೆ 6-8 ಸೇರು ಅಕ್ಕಿ ಧಾರಣೆಯಾಗಿರುವಾಗಲೂ ಕೊಡುವದು ಬಹಳ ಅನ್ಯಾಯ!

ಆದದರಿಂದ ಘನ ಸರ್ಕಾರದವರು ಚಿತ್ತಕ್ಕೆ ತಂದು, ಈ ಕೆಳಗೆ ಕಾಣಿಸಿದ ಅನುಕೂಲಗಳನ್ನು ಮಾಡಿಕೊಟ್ಟರೆ ಇವರ ಕಷ್ಟಗಳು ನಿವಾರಣೆಯಾಗಬಹುದು:— (1) ಸಂಬಳ 50, 60, 70, 80, 90, 100, 120 ರ ವರೆಗೆ; 5 ವರ್ಷಕ್ಕೆ ಒಂದು ಸಾರಿ ಬಡ್ತಿ. (2) ಮೈಲಿಗೆ ನಾಲ್ಕು ಆಣೆ ಭತ್ತೆ ಕೊಡುವದು (3) ಮನೆಗಳನ್ನು ಬಾಡಿಗೆ ಇಲ್ಲದೆ ಕೊಡುವದು; ಮನೆಗಳು ಕಟ್ಟದೆ ಇರುವಲ್ಲಿ ಮನೆಬಾಡಿಗೆಗೆ 5 ರೂಪಾಯಿ ಕೊಡುವದು. (4) ಕೋರ್ಟು ಕೆಲಸಕ್ಕೆ ಹೋದರೆ ದಿನ ಭತ್ತೆ ಸಂಬಳದ 10 ನೇ 3 ಪಾಲು ಮಾತ್ರ ಕೊಡುವದೆಂದರೆ 60 ರೂಪಾಯಿ ಸಂಬಳದವರಿಗೆ 6 ಆಣೆ ಕೊಟ್ಟ ಹಾಗೆ ಆಯಿತು. ವಿದ್ಯಾರ್ಥಿ ಭವನಗಳಲ್ಲಿ ಎರಡು ಊಟಕ್ಕೆ ಎಂಟು ಆಣೆ ಆಗುತ್ತದೆ. ಆದದರಿಂದ ಭತ್ತೆ ಸರಾಸರಿ ಒಂದು ರೂಪಾಯಿ ಮಾಡಬೇಕು. ಈ ಬದಲಾವಣೆಗಳು ಮಾಡಿದರೆ ಮೆಡಿಕಲ್ ಡಿಪಾರ್ಟ್‌ಮೆಂಟಿನ ಗೌರವಕಾಪಾಡಿದ ಹಾಗಾಗುತ್ತದೆ.

ಎಚ್. ಜೀ. ಟಿ.

ಕನ್ನಡ ಭಾಷಾಭಿವೃದ್ಧಿ ಸಭಾ.

[ಕೋಲಾರದ ಛಾಯರು ಮ|| ರಾಮಾಚಾರ್ಯರು ಬರೆಯುವುದು.]

ಈಗ ಕನ್ನಡ ಭಾಷಾಭಿವೃದ್ಧಿ ಪ್ರಸಕ್ತಿಯು ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಸಮಾಜದ ನೆರಳಿನಲ್ಲಿ ವಿಚಾರಕ್ಕೆ ಬಂದಿದೆ. ಈ ಸಮಾಜದ ಒಂದು ಶಾಖೆಯಾಗಿ ಕನ್ನಡ ಅಭಿವೃದ್ಧಿಗಾಗಿ ಒಂದು ಉಪಸಮಾಜವು ಏರ್ಪಟ್ಟು ನಮ್ಮ ಸಂಸ್ಥಾನದಲ್ಲಿ ನೆಲೆಗೊಳ್ಳುವ ಕಾಲಬಂದಂತೆ ತೋರುತ್ತೆ. ಈ ಸಮಾಜಕ್ಕೆ ಮೈಸೂರು ಸೀಮೆಯವರೂ ಮತ್ತು ಶ್ರೀಮನ್ ಚಕ್ರವರ್ತಿಯವರ ನಾಡುಗಳಿಂದ ಕೆಲವರೂ ಸೇರಿ ಕನ್ನಡಭಾಷೆಯನ್ನು ಸಮತ್ವಕ್ಕೆ ತರಲು ಉಪಾಯಗಳನ್ನು ಹುಡುಕಿ ಇದರ ಏಳಿಗೆಗೆ ಬೇಕಾದ ಸನ್ನಾಹಗಳನ್ನು ಕಂಡುಹಿಡಿಯತಕ್ಕದ್ದೇ ಒಂದು ಮುಖ್ಯೋದ್ದೇಶವಾಗಿ ಕಾಣುತ್ತೆ. ಕನ್ನಡ ನಾಡುಗಳಲ್ಲಿ ಭಾಷೆಯು ಒಂದೇ ರೀತಿಯಾಗಿ ಇರಬೇಕೆಂತಲೂ, ಅವುಗಳಲ್ಲಿ ಉಪಯೋಗಿಸತಕ್ಕಂಥಾ ಪದಗಳು ಒಂದೇ ಅರ್ಥವನ್ನು ಕೊಡುವಂತಿರಬೇಕೆಂತಲೂ, ವ್ಯಾಕರಣ ವೈಲಕ್ಷಣ್ಯವು ಒಂದು ರೀತಿಯಾಗಿರಬೇಕೆಂತಲೂ, ದಕ್ಷಿಣ ಕನ್ನಡ ಜಿಲ್ಲಾದಲ್ಲಿ ಬರೆದ ಒಂದು ಗ್ರಂಥವು ಬಳ್ಳಾರಿಯಲ್ಲಿಯೂ, ಬೆಂಗಳೂರಿನಲ್ಲಿಯೂ, ಬೆಳಗಾವಿನಲ್ಲಿಯೂ ಸಹಾ ಒಂದೇ ವಿಧವಾದ ಸಮ್ಮತವನ್ನು ಹೊಂದಬೇಕೆಂತಲೂ, ಅಂಥಾ ಗ್ರಂಥಗಳು ಕೇವಲ ನವೀನ ಗದ್ಯತೆಗೆ ಹಿತವಾಗಿಯೂ ಪಾಶ್ಚಿಮಾತ್ಯರ ಏಳಿಗೆಗೆ ಅನುಸಾರವಾದ ಭೌತಿಕಶಾಸ್ತ್ರವು ಕನ್ನಡಿಗರಿಗೆ ಹೃದ್ಗಮವಾಗಿ ಬರಬೇಕೆಂತಲೂ, ಭೂಲೋಕದಲ್ಲಿ ನಾಗರಿಕರ ಬುದ್ಧಿ, ಕುಶಲತೆ, ಯೋಗ್ಯತೆ, ಶೀಲ, ಧರ್ಮ, ನ್ಯಾಯಶಾಸ್ತ್ರ ವಿಷಯಗಳ ಅಭಿಪ್ರಾಯಕ್ಕೆ ವಿರೋಧವಿಲ್ಲದೆ, ಅದಕ್ಕೆಲ್ಲಾ ಅನುಗುಣವಾಗಿ ನಮ್ಮ ದೇಶದಲ್ಲಿ ಚರಿತ್ರೆ, ಕಾದಂಬರಿ, ಕಾವ್ಯ, ನಾಟಕ, ಅಲಂಕಾರ ಗ್ರಂಥಗಳನ್ನು ಹೊಸದಾಗಿ ಬರೆದು ಎಲ್ಲಾ ಜನಗಳಿಗೂ ತಿಳಿಸಬೇಕೆಂತಲೂ, ಪಾಶ್ಚಿಮಾತ್ಯರ ಮತ್ತು ಆರ್ಯರ ಪೂರ್ವಕಾಲದಿಂದ ಆಚರಿತವಾದ ನಡೆನುಡಿಗಳಿಗೆ ಅನುಕೂಲವಾದ ರೀತ್ಯಾ ಹೃದ್ಗಮವಾಗುವಂತೆ ಬೋಧಿಸಬೇಕೆಂತಲೂ, ಈ ಪ್ರಯತ್ನಕ್ಕೆ ಬೇಕಾದ ಭಾಷಾಸಹಾಯಗಳನ್ನು ನಾವು ಯಾವ ಯಾವ ರೀತಿಯಲ್ಲಿ ಯಾವ ಯಾವ ಭಾಷೆಯಿಂದ ಎಷ್ಟೆಷ್ಟರ ಮಟ್ಟಿಗೆ ಹಿದಗಿಸಿಕೊಳ್ಳಬೇಕೆಂಬುವದು ಇವೇ ಮೊದಲಾದ ವಿವರಗಳನ್ನು ಕುರಿತು ಶ್ರೀಮಾನ್ ನಂಜುಂಡಯ್ಯನವರು ಉಪನ್ಯಾಸವನ್ನು ಅರ್ಪಿಸಿದ್ದಲ್ಲದೆ ಆ ಸಮಾಜದಲ್ಲಿ ನೆರೆದಿದ್ದ ಮಹಾಜನಂಗಳು ಅನೇಕ ವಿಷಯಗಳನ್ನು ಚರ್ಚೆಮಾಡಿದ ಹಾಗೆ ಕಾಣಬರುತ್ತೆ. ಈ ವಿಷಯದಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರು ಸಹ ಉತ್ತಮವಾದ ಒಂದು ಉಪನ್ಯಾಸವನ್ನು ನಮ್ಮಗಳಿಗೆ ದಯಪಾಲಿಸಿದರು.

ಆದರೆ ಮೇಲ್ಕಂಡ ವಿಷಯಗಳನ್ನು ಕುರಿತು ಇಂಗ್ಲೀಷಿನಲ್ಲಿ ವಾಗ್ಮಿಗಳಾಗಿ ಹೆಸರು ಹೊಂದಿದ ಈ ಇಬ್ಬರು ಮಹನೀಯರು ದೇಶ ಭಾಷೆಯಾದ ಕನ್ನಡದಲ್ಲಿ ಉಪನ್ಯಾಸವನ್ನು ದಯಪಾಲಿಸಿದ್ದರೆ ಈ ಉತ್ತಮವಾದ ಪತ್ರಿಕಾ ವಾಚಕರು ಓದಿ ಸಂತೋಷಪಟ್ಟು, ತಮ್ಮ ಮಾತೃಭಾಷೆಯಲ್ಲಿ ಇಷ್ಟು ವಿಷಯಗಳನ್ನು ಕುರಿತು ಇಷ್ಟು ವಿಶದವಾಗಿ ಮಾತನಾಡತಕ್ಕ ದೇಶಾಭಿಮಾನಿಗಳೂ ಇದಾರೆಯಲ್ಲವೇ ಎಂಬ ಯೋಚನೆಯಿಂದ ಅವರಿಗೆ ಇಮ್ಮಡಿಯಾದ ಸಂತೋಷವುಂಟಾಗುವದಲ್ಲವೇ? ಆಂಗ್ಲ ಭಾಷೆಯಲ್ಲಿ ಪ್ರೌಢತೆಯನ್ನು ಹೊಂದಿದವರು ದೇಶೀಯ ಭಾಷೆಯಲ್ಲಿ ಅದೇ ರೀತಿ ಪ್ರೌಢವಾದ ವಾಗ್ಧೋರಣೆಯನ್ನು ತೋರಿಸಬಾರದಾಗಿತ್ತೋ? ಷೇಕ್ಸ್‌ಪಿಯರ್ ಕವಿಯೂ, ಮಿಲ್ಟನ್ ಕವಿಯೂ ಅವರ ಕಾಲದಲ್ಲಿ ಸ್ವಲ್ಪ ಕಮ್ಮಿ ಸ್ಥಿತಿಯಲ್ಲಿದ್ದ ಆಂಗ್ಲೇಯ ಭಾಷೆಯನ್ನು ತಮ್ಮ ಕಾವ್ಯಗಳಿಂದ ಎಷ್ಟು ಅಭಿವೃದ್ಧಿಗೆ ತಂದರೋ ಆಂಗ್ಲೇಯ ಭಾಷಾ ಚರಿತ್ರೆಯನ್ನು ಓದಿದವರಿಗೆ ತಿಳಿಯದೆ ಇರಲಾರದು. ಹೂಪರೇ ಮೊದಲಾದ ವಚನ ಕಾವ್ಯಾಧಿಕಾರರು ಆಂಗ್ಲೇಯ ಭಾಷೆಯಲ್ಲಿ ವಚನ ಕಾವ್ಯವು ಇಲ್ಲದ ಕಾಲದಲ್ಲಿ ಸ್ವಸಾಮರ್ಥ್ಯದಿಂದ ಆ ಭಾಷೆಯಲ್ಲಿ ವಚನಕಾವ್ಯವನ್ನು ನೆಲೆಗೊಳಿಸಲಿಲ್ಲವೇ? ಮಿಲ್ಟನ್ ಕವಿಯು ಬರೆದ "ಆರಿಯೋಪಜಿಟಿಕಾ" ಎಂಬ ವಚನ ಕಾವ್ಯವನ್ನು ಈಗಿನ ಇಂಗ್ಲೀಷು ವಾಚಕರು ಎಷ್ಟು ಜನ ಓದಿ ಅರ್ಥ ತಿಳಿದುಕೊಂಡು ಆನಂದಪಡುವವರಿದಾರೆ! ಭಾಷೆಯು ಸ್ವೇಚ್ಛೆಯಾಗಿ ತನಗೆ ತಾನೇ ಅಭಿವೃದ್ಧಿಹೊಂದುತ್ತಿಯೋ? ವಾಲ್ಮೀಕರಲ್ಲವೇ ಮೊದಲು ಸಂಸ್ಕೃತದಲ್ಲಿ ಛಂದೋಬದ್ಧವಾದ ಆದಿಕಾವ್ಯವನ್ನು ರಚಿಸಿದ್ದು? ಭಾಷೆಯ ದೋಷವೇನು? ಭಾಷೆಯನ್ನು ಆಡುವ ಜನಗಳ ದೋಷವಲ್ಲವೇ ಭಾಷೆಗೆ ದೋಷವನ್ನು ಕಲ್ಪಿಸತಕ್ಕದ್ದು?

ಇದು ಹಾಗೆ ಇರಲಿ. ಉಪನ್ಯಾಸಗಳಲ್ಲಿ ಸಂಸ್ಕೃತ ದೂಷಣೆ ಸ್ವಲ್ಪ, ಕನ್ನಡ ಹೀಯಾಳಿಕೆ ಸ್ವಲ್ಪ, ಪಾಶ್ಚಿಮಾತ್ಯರ ಭಾಷೆಗಳಿಗೆ ಹೆಚ್ಚು ಮರ್ಯಾದೆ, ಪಂಡಿತ ದೋಷಗ್ರಹಣ, ಇವೇ ಮುಂತಾದ ಸಂಗತಿಗಳು ಸಾಧ್ಯವಾದ ಮಟ್ಟಿಗೂ ತುಂಬಿವೆ. ನನ್ನ ಅಲ್ಪ ಬುದ್ಧಿಯಿಂದ ಹೇಳತಕ್ಕದ್ದೇನಂದರೆ ದೂಷಣೆ ಭೂಷಣೆಗಳಿಗೆ ಏನೂ ಅವಕಾಶವಿಲ್ಲ. ಕಾಲದೇಶ, ವರ್ತಮಾನ, ಸಂದರ್ಭ, ದೇಶಾಭ್ಯುದಯ, ದೇಶಕ್ಷೀಣತೆ, ಸ್ವತಂತ್ರ ಪರತಂತ್ರ, ಸ್ವಾರಾಜ್ಯ ಪರರಾಜ್ಯ, ಇವೇ ಮೊದಲಾದ ಅದ್ದನಿಡಸ್ಥಾರಗಳೇ ಮುಖ್ಯವಾಗಿ ದೇಶಾಭ್ಯುದಯ, ಜನಾಭ್ಯುದಯ, ಭಾಷಾಭ್ಯುದಯಗಳಿಗೆ ಮುಖ್ಯ ಕಾರಣವಾಗಿವೆ. ಎಲ್ಲಾ ದೂಷಣೆಗಳಿಗಿಂತಲೂ ಹಳೆಗನ್ನಡ ದೂಷಣೆಯು ಬಹಳ ವಿಚಿತ್ರವಾಗಿ ನನ್ನ ಮನಸ್ಸಿಗೆ ತೋರುತ್ತೆ. ತಮಿಳುಭಾಷೆಯನ್ನೂ ಹಳೆಗನ್ನಡ ಭಾಷೆಯನ್ನೂ ತಿಳಿದ ಮಹಾಪಂಡಿತರು ಪರೀಕ್ಷಿಸಿದರೆ ಆ ಹಳೆಗನ್ನಡ ಭಾಷೆಯನ್ನು ತಮಿಳಿನವರು ಅಭಿವೃದ್ಧಿ ಮಾಡಿದ ರೀತ್ಯಾ ಮಾಡಿದ್ದರೆ ಈಗ ತಮಿಳು ಎಷ್ಟು ಉನ್ನತ ಸ್ಥಿತಿಯಲ್ಲಿ ಇದೆಯೋ ಅದೇ ರೀತಿಯಲ್ಲಿ ನಮ್ಮ ಕನ್ನಡವೂ ಇರಬಹುದಾಗಿತ್ತೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಸಾಧಾರಣವಾಗಿ ತಮಿಳಿಗೂ ಕನ್ನಡಕ್ಕೂ ಬಹಳವಾಗಿ ಸಂಬಂಧವುಂಟು. ಈ ಸಂಬಂಧವು ಪೂರ್ವದ ಕನ್ನಡಿಗರಿಗೆ ತಮಿಳರಿಗೆ ಸಹಾ ವಿಶೇಷವಾಗಿತ್ತು. ಈಚೆಗೆ 17 ನೇ ಶತಮಾನದಲ್ಲಿ "ಹದಿಬದೆ" ಎಂಬ ಪತಿವ್ರತಾ ಧರ್ಮವನ್ನು ಬೋಧಿಸುವಂಥಾ ಒಂದು ಸುಕಾವ್ಯವನ್ನು ಒಬ್ಬ ಹೆಂಗಸು ಕಲ್ಪಿಸಿ ಇರತಕ್ಕ ವಿಷಯವು ಕನ್ನಡಿಗರಿಗೆಲ್ಲಾ ಗೊತ್ತಾಗಿರಬಹುದು. ಅಲ್ಲಿಂದ ಈಚೆಗೆ ಕನ್ನಡ ಭೇದವನ್ನು ತಿಳಿದವರು ಗಮನಕ್ಕೆ ತಾರದೇ ಇರಲಾರರು. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಅನೇಕವು ಈಗಿನ ಮೈಸೂರು ರಾಷ್ಟ್ರದ ಎಲ್ಲೆಯ ಹೊರಗೆ ಇರುವ ನಾಡುಗಳಲ್ಲಿ ರಚಿಸಲ್ಪಟ್ಟವು. ಆ ಗ್ರಂಥಗಳು ನಮ್ಮ ಮೈಸೂರು ಕನ್ನಡಿಗರಿಗೆ ಎಷ್ಟು ಹೃದ್ಗಮವಾಗಿತ್ತೆಂಬುವುದನ್ನು ನಮ್ಮ ನವೀನ ಪಂಡಿತರಿಂದ ತಿಳಿಯಬಹುದು. ಆದಕಾರಣ ನಮ್ಮ ಹಳೆಗನ್ನಡವನ್ನು ತಾತ್ಸಾರ ಮಾಡತಕ್ಕದ್ದಲ್ಲ. ಸಂಸ್ಕೃತ ಸಹಾಯವನ್ನು ನಾವು ತೆಗೆದುಹಾಕತಕ್ಕದ್ದಲ್ಲ. ನಾವು ಸಾಧ್ಯವಾದ ಮಟ್ಟಿಗೂ ಹಿಂದುಸ್ತಾನಿ, ಇಂಗ್ಲೀಷು ಮೊದಲಾದ ಪಾಶ್ಚಿಮಾತ್ಯರ ಭಾಷೆಗಳಲ್ಲಿನ ಪದಗಳನ್ನು ಬಿಡಬೇಕು. ಪದಗಳಲ್ಲಿ ಏನೂ ಇಲ್ಲ; ಪದಗಳನ್ನು ಉಪಯೋಗಿಸುವವರ (ಆ ಭಾಷಾ ಜನಾಂಗದವರ) ಬುದ್ಧಿಕುಶಲತೆ, ಅಭಿಪ್ರಾಯ, ಅನುಭವ, ಧಾರಾಳ, ಔದಾರ್ಯ, ಇವೇ ಮೊದಲಾದ ಸುಗುಣಗಳೇ ಆ ಪದಗಳಿಗೆ ಪ್ರಾಯ, ಭೃಢತ್ವ, ಅರ್ಥಪುಂಜತೆ, ಸೊಬಗು, ವೈಲಕ್ಷಣ್ಯ, ಬಾಹುಳ್ಯ ಮೊದಲಾದ ಸುಗುಣಗಳನ್ನು ಕೊಡಬೇಕಾಗಿದೆ. ಆದದರಿಂದ ಆಂಗ್ಲೇಯರ ಸಹಾಯವೂ, ವಿದ್ವಾಂಸರ ಸಹಾಯವೂ, ಪಂಡಿತರ ಸಹಾಯವೂ ಅತ್ಯಾವಶ್ಯಕ. ತಕ್ಕಷ್ಟು ತೆಗೆದುಕೊಂಡು ಹಳೆಗನ್ನಡ, ಹೊಸಗನ್ನಡ, ಸಂಸ್ಕೃತ, ವಿರಳವಾಗಿ ಪರಭಾಷೆಗಳ ಸಹಾಯದಿಂದ ನಮ್ಮ ಕನ್ನಡವೆಂಬ ಈಗ ಇರುವ ಶಿಥಿಲ ಸ್ಥಿತಿಯಿಂದ ಪ್ರಚಾರಗೊಳ್ಳದೆ ಇರುವ ಕನ್ನಡವೆಂಬ ಮಂದಿರವನ್ನು ದೇಶ ಭಾಷಾಭಿಮಾನಿಗಳಾದವರು ಲೋಕೋಪಕಾರಕ್ಕಾಗಿ ಕಟ್ಟಿಸಿ ಸ್ಥಾಯಿಯಾಗಿ ನಿಲ್ಲಿಸಬೇಕಾಗಿದೆ. ಕನ್ನಡದಲ್ಲಿ ಯಾವ ದೋಷವೂ ಇಲ್ಲ. ಇತರ ಭಾಷೆಗಳು ಒಳ್ಳೇ ಪುಣ್ಯವಂತರಾದ ಅದೃಷ್ಟವುಳ್ಳ ಉತ್ಕೃಷ್ಟವಾದ ಜನಾಂಗದವರಿಂದ ಪಾಲಿಸಲ್ಪಟ್ಟದ್ದರಿಂದ ಒಳ್ಳೇ ಸ್ಥಿತಿಯಲ್ಲಿವೆ. ಕನ್ನಡವೂ ಮೇಲೆ ಹೇಳಿದ ಸುಗುಣಗಳಿಗೆ ವ್ಯತಿರಿಕ್ತವಾದ ಗುಣಗಳುಳ್ಳ ಜನಾಂಗದವರಿಂದ ಹೀಯಾಳಿಸಲ್ಪಟ್ಟಿರುವದರಿಂದ ಈಗಿನ ದುಸ್ಥಿತಿಗೆ ಬಂದಿದೆ. ಕನ್ನಡ ಭಾಷೆಯ ವಿಷಯವಾಗಿ ಭಾಷಾಭಿಮಾನಿಗಳಾದ ಮಿ|| ಲೂಯಿಸ್ ರೈಸ್ ಅವರು ಯಾವ ವಿಧವಾಗಿ ಕೊಂಡಾಡಿದಾರೆಂಬುವದು ಮೈಸೂರು ಕನ್ನಡ ಪರೀಕ್ಷೆ ವಿದ್ಯಾರ್ಥಿಗಳಿಗೇನೇ ಗೊತ್ತಾಗಿದೆ. ದಕ್ಷಿಣ ದೇಶಗಳ ಭಾಷೆಗಳಿಗೆ ಕನ್ನಡವು ಕಡಮೆಯಾದದ್ದಲ್ಲ. ಆದರೆ ತಮಿಳುದೇಶದಂತೆ ಆ ದೇಶಭಾಷಾಭಿಮಾನಿಗಳು ಅವರ ಭಾಷೆಯನ್ನು ಪಾಲಿಸಿದಂತೆಯೂ, ಪೋಷಿಸಿದಂತೆಯೂ ಇಲ್ಲಿ ಇಲ್ಲದೆ ಇದ್ದದ್ದರಿಂದ ಕಸ್ತೂರಿಯಂಥಾ ಕನ್ನಡವು ಸ್ವಲ್ಪ ಮುಗ್ಗಿಹೋಗಿದೆ.

ತಾ ಕ.—ಈ ವಿಷಯವನ್ನು ಕುರಿತು ಇಂಗ್ಲೀಷಿನಲ್ಲಿಯೂ ಬರೆಯಬಲ್ಲೆ. ಭಾಷೆ ವಿಷಯವನ್ನು ಭಾಷೆಯಲ್ಲಿಯೇ ಬರೆಯುವದು ಉಚಿತವೆಂದು ನಂಬುತ್ತೇನೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಪುನಃ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ತುಂಗಾ ನದಿಗೆ ಸೇತುವೆ ಆಗಬೇಕು.

ಅಯ್ಯಾ,—ತೀರ್ಥಹಳ್ಳಿಗೂ, ಕುರುವಳ್ಳಿಯ ಮಾರ್ಗವಾಗಿ ಕೊಪ್ಪದ ಮಾರ್ಗದ ಎಡ ಬಲ ಗ್ರಾಮಗಳಿಗೂ ಸೇತುವೆಯು ಅತ್ಯವಶ್ಯವಾಗಿದೆ. ಈ ಸೇತುವೆ ಇಲ್ಲದೆ ಇರುವದರಿಂದ ಕೊಪ್ಪದ ವ್ಯಾಪಾರವು ಮಳೆಗಾಲದಲ್ಲಿ ಸಂಪೂರ್ಣವಾಗಿ ನಿಂತುಹೋಗುತ್ತದೆ. ತುಂಗಾ ನದಿಯು ಸ್ವಲ್ಪ ಕಡಮೆ ತೀರ್ಥಹಳ್ಳಿ ತಾಲ್ಲೂಕಿನ ಮಧ್ಯದಲ್ಲಿ ಹರಿಯುವದು. ಅರ್ಧ ಭಾಗದ ಜನರು ನದಿಯ ಈಚೆಯೂ, ಅರ್ಧ ಭಾಗದ ಜನರು ನದಿಯ ಆಚೆ ಕಡೆಯೂ ವಾಸಮಾಡುತ್ತಾ ಇರುವದರಿಂದ ಜನರ ಸಂಚಾರಕ್ಕೂ ಗಾಡಿಗಳ ಸಂಚಾರಕ್ಕೂ ಬಹಳ ಅಡಚಣೆಯಾಗಿದೆ. ತೀರ್ಥಹಳ್ಳಿಯ ಜನರು ಹೊಳೆಯ ಆಚೆಯಿಂದ ಅಡಕೆ, ಭತ್ತ ಮುಂತಾದವುಗಳನ್ನು ಸಾಗಿಸುವದಕ್ಕೂ, ತಮಗೆ ಬೇಕಾದ ಸಾಮಾನುಗಳನ್ನು ಅಲ್ಲಿಂದ

ತಮ್ಮ ಕಡೆಗೆ ಕಸಿದುಕೊಂಡುಹೋಗುವದಕ್ಕೂ ಬಹಳ ಪ್ರಯಾಸಪಡುತ್ತಾರೆ. ಇದರಲ್ಲಿಯೂ ಕೆಲವು ಗಾಡಿಗಳು ಕಾಲುಹೊಳೆಯಲ್ಲಿ ದಾಟುವದಕ್ಕೆ ಪ್ರಯತ್ನಿಸಿ ಎತ್ತುಗಳಿಗೂ ಗಾಡಿಗಳಿಗೂ ವಿಪರೀತ ನಷ್ಟ ತೊಂದರೆಗಳನ್ನು ಉಂಟುಮಾಡಿಕೊಂಡಿದಾರೆ. ಭರ್ತಿ ಗಾಡಿಗಳು ನೀರಿನಲ್ಲಿ ಸಂಚರಿಸುವಾಗ ಅವುಗಳಿಗಿರುವ ತೊಂದರೆಯನ್ನು ಹೇಳುವದು ಅಸಾಧ್ಯವಾಗಿದೆ. ಅತ್ಯವಶ್ಯವಾಗಿರುವ ಈ ಕಿರು ಸೇತುವೆಯನ್ನು ಗೌರ್ನಮೆಂಟಿನವರು ಆದಷ್ಟು ಬೇಗ ಕಟ್ಟಿಸುವ ಏರ್ಪಾಡನ್ನು ಮಾಡುವದು ಪ್ರಯೋಜನವಾಗಿದೆ.

ಒಬ್ಬ ಪ್ರಜೆ.

ಪೈಸಾ ಫಂಡಿನ ಕಮಿಟಿ.

ಅಯ್ಯಾ,—ವೃತ್ತಾಂತ ಪತ್ರಿಕೆ ಮತ್ತು ಸ್ಟಾರ್ ಪತ್ರಿಕೆಗಳಲ್ಲಿ ಯಾರೋ ಒಬ್ಬರು ಪೈಸಾ ಫಂಡ್ ಕಮಿಟಿಯ ವಿಷಯದಲ್ಲಿ ಆಗಾಗ್ಗೆ ಕೆಲವು ವಿಷಯಗಳನ್ನು ಪ್ರಕಟ ಮಾಡುತ್ತಿರುವುದು ನಮ್ಮ ದೃಷ್ಟಿಗೆ ಬಿದ್ದಿದೆ. ಇದರಲ್ಲಿ ಯಾವುದೊಂದಕ್ಕೂ ಸೇರದ ನಮ್ಮಗಳ ಹೆಸರನ್ನೆಲ್ಲಾ ಸುಮ್ಮನೇ ಸೇರಿದ್ದಂತೆ ಬರೆದು ಮನಸ್ಸು ಬಂದವರಿಗೆ ಒಂದೊಂದು ಸಾರಿ ಒಂದೊಂದು ವಿಧವಾಗಿ ವೈಸ್ ಪ್ರೆಸಿಡೆಂಟ್, ಸೆಕ್ರಟರಿ, ಲೆಕ್ಚರರ್ ಮುಂತಾಗಿ ಕೊಡುತ್ತಾ ಇದಾರೆ. ಪೈಸಾ ಫಂಡ್ ಕಮಿಟಿಯು ನೇಮಕವಾದ ವಿಷಯವೇ ನಮಗೆ ತಿಳಿಯದು. ಇಂತಹ ಒಂದು ಕಮಿಟಿಯನ್ನು ಮೈಸೂರಿನಲ್ಲಿ ನೇಮಕ ಮಾಡಿರುವದಾಗಿಯೂ, ಅದಕ್ಕೆ ನಾವುಗಳು ಸಹಾಯ ಮಾಡಬೇಕೆಂಬುದಾಗಿಯೂ ನಮ್ಮನ್ನು ಮ॥ ಜಯರಾಮಾಚಾರ್ಯರು ಬಂದು ಕೇಳಿದ್ದರು. ಆ ರೀತಿ ಮೈಸೂರಿನಲ್ಲಿ ಕಮಿಟಿಯು ಏರ್ಪಾಡು ಆಗಿರುವದೋ ಇಲ್ಲವೋ ನಮಗೆ ಗೊತ್ತಿಲ್ಲ. ಒಂದು ವೇಳೆ ಆಗಿದ್ದರೂ ನಾವಂತೂ ಇದರಲ್ಲಿ ಯಾವದಕ್ಕೂ ಸಂಬಂಧಪಟ್ಟಿಲ್ಲ. ಸರಿಯಾದ ಸ್ಥಿತಿಯಲ್ಲಿ ಸಂಘವನ್ನು ಏರ್ಪಡಿಸಿ, ಸಂಘವನ್ನು ರಿಜಿಸ್ಟರ್ ಮಾಡಿಸಿ, ಸಂಘದ ಉದ್ದೇಶಗಳನ್ನೂ ಕಾರ್ಯಗಳನ್ನೂ ನಿರ್ದೇಶಿಸಿ, ಅವು ನಮಗೆ ಸಮ್ಮತವಾಗಿದ್ದಲ್ಲಿ, ನಾವು ಸಹಾಯಕರಾಗಿ ನಿಲ್ಲುತ್ತೇವೆಂದು ಅವರಿಗೆ ತಿಳಿಸಿದ್ದೆವು. ಇಷ್ಟಾದಹ್ಟೇ ಹೊರತು ಈ ವಿಷಯದಲ್ಲಿ ಇನ್ನಾವುದೂ ಜರುಗಿಲ್ಲ. ಆದುದರಿಂದ ಪೈಸಾ ಫಂಡ್ ಎಂಬ ಕಮಿಟಿಗೆ ನಾವು ಯಾವ ರೀತಿಯಿಂದಲೂ ಸಂಬಂಧಪಟ್ಟಿಲ್ಲವಾಗಿಯೂ, ಇನ್ನು ಮುಂದೆ ನಮ್ಮಗಳ ಹೆಸರಿನಿಂದ ಆ ರೀತಿಯಲ್ಲಿ ಪ್ರಕಟಿಸಲಿಕ್ಕೆ ಅವಕಾಶ ಕೊಡಬಾರದಾಗಿಯೂ ಕೋರಿದೆ.

ದಾವಣಗೆರೆ, ನಾಡಿಗ ದತ್ತಾತ್ರಿರಾವ್, ಹರಿಹರ; ಎಂ. ಮಂಜಪ್ಪ
19-5-1915. ಹರ್ಡೇಕರ್, ಎಡಿಟರ್, ಧನುರ್ಧಾರಿ; ಎಚ್. ನಾರಾಯಣಶರ್ಮಾ; ಎಂ. ಕೆ. ರಾಘವೇಂದ್ರರಾವ್.

ಗತಿಸಿದ ಏಜಂಟ್ ರಾಮಣ್ಣನವರ ವಿಚಾರ.

ಅಯ್ಯಾ,—ಕಳೆದ 3 ನೇ ವಾರದ ವೃತ್ತಾಂತ ಪತ್ರಿಕೆಯಲ್ಲಿ ಚಾಮರಾಜನಗರದ ತಾಲ್ಲೂಕು ನಂಜದೇವನಪುರ ಗ್ರಾಮದಲ್ಲಿದ್ದ ಏಜಂಟ್ ರಾಮಣ್ಣನವರ ಮರಣವಾರ್ತೆ ಕೇಳಿ ತುಂಬಾ ವಿಷಾದಿಸುತ್ತೇನೆ. ಈಗ ಅವರ ಮರಣದಿಂದುಂಟಾಗಿರುವ ಅಸಂಭವ ತಿಳಿಸಲು ಸಂಕಟವಾಗುತ್ತೆ. ಹ್ಯಾಗೆಂದರೆ ಇವರ ಆಸ್ತಿಯು ತಕ್ಕಮಟ್ಟಿಗೆ ಆಖೈರವಾದ್ದೇ ಸರಿ, ಆದರೆ ಇವರಿಗೆ ಪುತ್ರಸಂತಾನವೇ ಇಲ್ಲದೆ ಇರುವದರಿಂದ ಇವರ ಆಸ್ತಿಗೆ ದಿಕ್ಕು ದಿವಾಣಿ ಇಲ್ಲದೆ ಅನಾಯಕತ್ವದಲ್ಲಿದೆ. ಇವರ ಧರ್ಮಪತ್ನಿಯವರು ಕೇವಲ ಸಣ್ಣ ವಯಸ್ಸಿನವರಾದಾಗ್ಯೂ ಅಷ್ಟಾಗಿ ತಿಳುವಳಿಕೆ ಸಾಲದಿದ್ದುದರಿಂದ ಸಿಕ್ಕಿದ್ದು ಸಿಕ್ಕಿದ ಹಾಗೆ, ಬಿಟ್ಟದ್ದು ಬಿಟ್ಟ ಹಾಗಿದೆ. ಆದಾಗ್ಯೂ ಅವರ ಉತ್ತರಕ್ರಿಯಾ ಕಾಲದಲ್ಲಿ ಇವರ ಹೆಸರಿನ ಮೇಲೆ ಅನೇಕ ಬಡ ಬಗ್ಗರಿಗೆ ಅನ್ನ, ವಸ್ತ್ರ ದಾನಗಳು ಸಾವಿರಾರು ರೂಪಾಯಿಗಳವರೆಗೂ ನಡೆಯಿತು. ಮಹನೀಯರ ಗುಣ ಮರಣದಲ್ಲಿ ನೋಡು ಎಂಬಂತೆ ಇವರು ಕಾಶೀಯಾತ್ರೆ ಹೋಗಿ ಅಲ್ಲೇ ಒಂದು ವರ್ಷ ಇದ್ದು ಬಂದು ಕಾಶಿ ಸಂತರ್ಪಣೆ ನಡಿಸಿ ಸರ್ವರೂ ಊಟಮಾಡಿ ತಾಂಬೂಲವಾಗುವಾಗ್ಗೆ ಅಕಸ್ಮಾತ್ತು ಪ್ರಾಣಬಿಟ್ಟಿರುತ್ತಾರೆ. ಇವರಿಗೆ ಸಂತಾನವಿಲ್ಲದಿದ್ದರೂ ಇವರ ದಾನ ಧರ್ಮಗಳೇ ಮಕ್ಕಳೆನ್ನಬಹುದು. ಆದರೆ ಹಿಂದೆ ದಾನ ಧರ್ಮ ಪರೋಪಕಾರದಲ್ಲಿ ಇವರಂತೆಯೇ ಇದ್ದ ಮ॥ ದೊಡ್ಡಂಗಡಿ ವೆಂಕಟಶೆಟ್ಟಿರಿಗೂ ಒಬ್ಬನೇ ಮಗನಿದ್ದಾಗ್ಯೂ ಅವನಿಗೂ ತಂದೆ ಸಂಗಡಲೇ ಮರಣ ಸಂಭವಿಸಲಿಲ್ಲವೇ? ಮನುಷ್ಯರಿಗೆ ಪಾಪ ಪುಣ್ಯಗಳೆರಡೇ ಜೊತೆ ಬರತಕ್ಕದ್ದಲ್ಲದೆ ಹಣಕಾಸು, ಮಹಡಿಮನೆ, ಇವ್ಯಾವೂ ಬರುವದಿಲ್ಲ. ಏನೂ ತಿಳಿಯದ ಚಿಕ್ಕವರಾದ ಇವರ ಕುಟುಂಬದ ವ್ಯಸನವನ್ನು ಆ ಸರ್ವಜ್ಞನೇ ಪರಿಹರಿಸಬೇಕು. ಹಿಂದೆ ಮಿಷನ್ ಧೊರೆಗಳು ಬಂದಾಗ್ಗೆ ಇವರ ಔದಾರ್ಯಕ್ಕೆ ತುಂಬಾ ಸಂತೋಷಪಟ್ಟು ಹೋದರು. ಈಗ ಇವರ ಬ್ಯಾಂಕಿನ ಕೆಲಸಗಳು ಸರಿಯಾಗಿಲ್ಲ. ಇವರು ಜೀವಂತರಾಗಿದ್ದಾಗ ಸಾಲಗಾರರನ್ನು ಸಲ್ಪವೂ ನೋಯಿಸದ ನಮೂಲಾತಿಯಿಂದ ಮೆಂಬರುಗಳಿಗೆ ಲಾಭ ತೋರಿಸುವುದರಲ್ಲಿ ಅಗ್ರೇಸರರಾಗಿದ್ದರು. ಇವರ ಮೇಲ್ಪಂಕ್ತಿಯನ್ನೇ ಇತರ ಬ್ಯಾಂಕು ಮತ್ತು ಸಾಹುಕಾರರು ಅನುಸರಿಸಿದರೆ ಒಳ್ಳೇದು.

ಗುಣೈಕಪಕ್ಷಪಾತಿ

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗ.—ಶಿವಮೊಗ್ಗದಿಂದ ಸಾಗರದ ಕಡೆಗೆ ಹಾಕುವ ನ್ಯಾರೋ ಗೇಜ್ ರೈಲ್ವೆಯ ಸರ್ವೆಯು ಮುಗಿದಂತೆ ಕಾಣುತ್ತೆ. ಚೀಫ್ ಇಂಜನಿಯರ ಇನ್ಸ್‌ಪೆಕ್ಷನ್ ಆದ ನಂತರ ಕಾಮಗಾರಿ ಪ್ರಾರಂಭಿಸಬಹುದು.—ತಾ. 17 ರಲ್ಲಿ ಶಿವಮೊಗ್ಗ ಸೇತುವೆ ಮೇಲೆ ಸ್ಟೇಷನ್‌ಗೆ ಹೋಗುತ್ತಿದ್ದ ಎತ್ತಿನ ಗಾಡಿ ಎದುರಿಗೆ ಮೋಟರ್ ಗಾಡಿ ಬಂದು ಎತ್ತುಗಳು ಬೆದರಿ ಗಾಡಿ ಕೆಡವಿದ್ದರಿಂದ ಗಾಡಿ ಹೊಡೆಯುತ್ತಿದ್ದವನು ಗಾಡಿ ಕೆಳಗೆ ಬಿದ್ದನು. ಪೋಲೀಸಿನವನು ಕಂಡು ಅವನನ್ನು ವಿಚಾರಿಸಿದಾಗ ಎದೆಗೆ ಪೆಟ್ಟಾಗಿದೆ ಎಂದು ಹೇಳಿದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈಗ ಆಸ್ಪತ್ರೆಯಲ್ಲಿ ಆರೋಗ್ಯವಾಗಿದಾನೆ.

ಚಿಕ್ಕಮಗಳೂರು.—ಚಿಕ್ಕಮಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ ತಾ. 13 ನೇ ಬುಧವಾರ ಮಧ್ಯಾಹ್ನ ನಾಲ್ಕು ಘಂಟೆಗೆ ಒಂದು ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ಒಬ್ಬ ಸ್ಕೂಲ್ ಬಾಲಕಿಯು ಸ್ತ್ರೀಯ ನಡತೆ ಎಂಬ ವಿಚಾರದಲ್ಲಿ ಒಂದು ಉಪನ್ಯಾಸವನ್ನು ಓದಿದಳು. ಇದಾದ ನಂತರ ಹೆಡ್ ಮಿಸ್ಟ್ರೆಸ್ ಶ್ರೀಮತಿ ಪಂಡಿತ ಎ. ಸುಂದರಮ್ಮನವರು ಸ್ತ್ರೀ ಎಂಬ ವಿಚಾರವನ್ನು ಕುರಿತು ಉಪನ್ಯಾಸ ಮಾಡಿದರು. ಬಳಿಕ ಸ್ಕೂಲ್ ಬಾಲಕಿಯರು ಹಾರ್ಮೋನಿಯಂ, ವೀಣೆ, ಇವುಗಳಿಂದ ಹಾಡುಗಳನ್ನು ಹೇಳಿ ಶ್ರೀಮನ್ ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಪೂರೈಸಿದರು. ಆ ದಿನದ ಸಮಾಜದಲ್ಲಿ ಸೇರಿದ್ದ ಸ್ತ್ರೀಮಂಡಲಿಯವರುಗಳಿಂದ ಸಮಾಜವು ದಿನೇ ದಿನೇ ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವಂತೆ ತೋರುತ್ತದೆ.

ಬೆಂಗಳೂರು ತಾ॥ ಯಲಹಂಕ.—ಈ ಊರಿನಲ್ಲಿ ಇದುವರೆಗೂ ಮಳೆ ಇಲ್ಲದೆ ಜನಗಳು ಆಕಾಶವನ್ನು ನೋಡುತ್ತಾ ಇದಾರೆ. ಬಿಸಿಲು ಹೆಚ್ಚಾಗಿದೆ.—ಈ ಊರಿನಲ್ಲಿ ವ್ಯಾಪಾರಸ್ಥರು ಅನೇಕರು ಹಳೇ ಸೇರುಗಳನ್ನೇ ಉಪಯೋಗಿಸುತ್ತಾ ಇದಾರೆ. ಸರ್ಕಾರದವರು ಹೊಸ ಸೇರುಗಳನ್ನು ಇಟ್ಟಿದ್ದಾಗ್ಯೂ ಹಳೇ ಸೇರುಗಳನ್ನೇ ಉಪಯೋಗಿಸುವದಕ್ಕೆ ಕಾರಣವೇನು? ಅದರಲ್ಲಿ ಏನೋ ಮೋಸ ಇದೆ ಎಂದು ತಿಳಿದುಬರುತ್ತೆ. ಇದನ್ನು ಸರ್ಕಾರಿ ಉದ್ಯೋಗಸ್ಥರೂ, ಪಟೇಲ್, ಶ್ಯಾನಭೋಗರೂ ನಿಗಾ ಇಟ್ಟು ಹಳೇ ಸೇರುಗಳನ್ನು ಯಾರು ಉಪಯೋಗಿಸುತ್ತಾರೋ ಅಂಥವರಿಗೆ ತಕ್ಕ ಶಿಕ್ಷೆ ವಿಧಿಸಿ ಎಲ್ಲರೂ ಹೊಸ ಸೇರುಗಳನ್ನೇ ಉಪಯೋಗಿಸುವಂತೆ ಖಂಡಿತವಾದ ಅಪ್ಪಣೆಕೊಟ್ಟರೆ ಅನೇಕ ಬಡ ಜನರಿಗೆ ತುಂಬಾ ಉಪಕಾರವಾದೀತೆನ್ನುವದಕ್ಕೆ ಸಂದೇಹವಿಲ್ಲ. ಸಂತೆಯಲ್ಲಿ ಬಹಳ ಮೋಸ ನಡೆಯುತ್ತಾ ಇದೆ ಎಂದು ಕೇಳುತ್ತೇನೆ. ಎರಡು ವಿಧವಾದ ಸೇರುಗಳನ್ನು ಇಟ್ಟುಕೊಂಡಿರುವದು ನೋಡಬಹುದು. ಜನರಿಂದ ತೆಗೆದುಕೊಳ್ಳುವದು ದೊಡ್ಡದು, ಅವರು ಜನರಿಗೆ ಕೊಡುವದು ಸಣ್ಣ ಸೇರು.

ತರೀಕೆರೆ.—ಸದ್ಯ ಹವಾ ತಕ್ಕ ಮಟ್ಟಿಗೂ ಆರೋಗ್ಯವಾಗಿದೆ. ಊರಲ್ಲಿ ಆಗಾಗ್ಗೆ ರೇಷ್ಮೆರೋಗದಿಂದ ಮರಣಗಳಾಗುತ್ತಾ ಇರುತ್ತೆ. ಮಳೆ ಮೋಡಗಳಾಡುತ್ತವೆ.—ತಾ. 22 ರ ಲಾಗಾಯ್ತು ತರೀಕೆರೆಯಿಂದ ಲಕ್ಕುವಳ್ಳಿಗೆ ಬೈಟ್ ರೈಲ್ವೆಯ ಮೇಲೆ ಜನರು ಪ್ರಯಾಣ ಮಾಡುವ ಏರ್ಪಾಡು ಮಾಡಿದಾರೆ. ಜನರು ಸುಖವಾಗಿ ಹೋಗಿ ಬರುತ್ತಿದಾರೆ. ಟಿಕೆಟ್ಟಿನ ದರ ತರೀಕೆರೆಯಿಂದ ಲಕ್ಕುವಳ್ಳಿಗೆ 6 ಆಣೆ (ಮೈಲಿ 1 ಕ್ಕೆ 6 ಪೈಸಂತೆ). ಇದರಿಂದ ಲಕ್ಕುವಳ್ಳಿ, ಎಡೆಹಳ್ಳಿ, ಕೊಪ್ಪದ ಕಡೆ ಪ್ರಯಾಣಮಾಡುವವರಿಗೆ ಅನುಕೂಲವಾಯಿತು.—ಇಲ್ಲಿನ ಸಂತೆಯಲ್ಲಿ ಜೂಜುಗಾರರು ಗ್ರಾಮಾಂತರಗಳ ಜನರ ರೊಕ್ಕವನ್ನು ಸೆಳೆಯುತ್ತಲಿರುವರು. ಸರ್ಕಾರದವರು ಈ ವಿಚಾರಕ್ಕೆ ನಿಗಾ ಕೊಟ್ಟು ನಿಲ್ಲಿಸುವದು ಪ್ರಯೋಜನಕರವಾಗಿದೆ.—ನಮ್ಮ ಅಮಲ್ದಾರ್ರವರು ಆಗಾಗ್ಗೆ ಪುರಪ್ರದರ್ಶನ ಮಾಡುವದು ಸಂತೋಷವಾಗಿದೆ. ಹಲವು ಕಡೆಯ ಗೊಬ್ಬರದ ಗುಂಡಿ ಹೇಸಿಗೆಗಳ ಸಂದುಗಳು ಇವರ ದೃಷ್ಟಿಗೆ ಬೀಳುತ್ತಾ ಇರುವದರಿಂದ ದಿನೇ ದಿನೇ ಪುರವು ಶಾಕೀಜಾ ಹೊಂದಿ ಪ್ರಜೆಗಳ ಆರೋಗ್ಯಕ್ಕೆ ತಕ್ಕ ಏರ್ಪಾಡುಗಳಾಗಬಹುದಾಗಿ ನಿರೀಕ್ಷಿಸುತ್ತೇನೆ.

ತೀರ್ಥಹಳ್ಳಿ.—ಮ॥ ಅಮಲ್ದಾರ್ ಧರ್ಮರಾಯರು ತೀರ್ಥಹಳ್ಳಿಗೆ ವರ್ಗವಾಗಿ ಬಂದು ಮೂರು ವರ್ಷಗಳ ವರೆಗೂ ಕೆಲಸಮಾಡಿ ಈಗ ತುಮಕೂರು ತಾಲ್ಲೂಕಿಗೆ ವರ್ಗವಾಗಿದಾರೆ. ಈ ಸುದ್ದಿಯನ್ನು ಈ ತಾಲ್ಲೂಕಿನ ನಿವಾಸಿಗಳು ಕೇಳಿದ ದಿನದಿಂದ ತಮ್ಮ ಪರಿತಾಪವನ್ನು ನಾನಾ ರೀತಿಯಾಗಿ ತೋರಿಸುತ್ತಾ ಬಂದಿದಾರೆ. ಮುಖ್ಯವಾಗಿ ಇವರು ಈಗಿನ ಕಾಲಸ್ಥಿತಿ ಧರ್ಮವನ್ನು ಅರಿತು ಸಕಲ ಜನರಿಗೂ ಸ್ನೇಹಿತರಾಗಿರುವದು ಉತ್ತಮವೆಂದು ತಿಳಿದು ತಮ್ಮಿಂದಾದ ಮಟ್ಟಿಗೂ ಕಾರ್ಯಭಾಗ ನಡಿಸಿ ಬಹು ಜನರ ಪ್ರೀತಿಗೆ ಪಾತ್ರರಾದರು. ಮಲೆನಾಡಿನ ರೈತಾಪಿ ಜನಗಳಿಗೆ ಭಾವಿಗಳು ಅವಶ್ಯವಾಗಿದ್ದ ಸ್ಥಳದಲ್ಲಿ ಭಾವಿಗಳನ್ನು ತೋಡಿಸಿ ಒಳ್ಳೇ ನೀರನ್ನು ಒದಗಿಸುತ್ತಿದ್ದರು. ಎಲ್ಲಾ ಹುದ್ದೇದಾರರೂ, ವರ್ತಕರೂ, ಇತರೇ ದೊಡ್ಡ ಮನುಷ್ಯರೂ ಅವರ ಅಗಲುವಿಕೆ ಎಂಬ ದುಃಖದಲ್ಲಿದ್ದಾಗ್ಯೂ ನಾನಾ ವಿಧದಲ್ಲಿ ಅವರನ್ನು ಸತ್ಕರಿಸಿದರು. ಕಡೇ ದಿನ ಮ॥ ಜವಳಿ ರಂಗರಾಯರು ತಮ್ಮ ಉಪ್ಪರಿಗೆ ಮನೆಯಲ್ಲಿ ಮ॥ ಧರ್ಮರಾಯರನ್ನು ಸತ್ಕರಿಸಿದ್ದು ಬಹು ಸನ್ಮಾನಕರವಾಗಿತ್ತು. ಸ್ವಲ್ಪ ಕಡಮೆ ಊರಿನ ಜನರನ್ನೆಲ್ಲಾ ಕರಸಿಕೊಂಡು ಫಲಾಹಾರ ತಿಂಡಿ ಮುಂತಾದ ಸಂತೋಷಗಳನ್ನು ಏರ್ಪಡಿಸಿದರು. ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಅಮಲ್ದಾರ್ರ ಶ್ರೇಯಸ್ಸನ್ನು ಜಯಧ್ವನಿಗಳಿಂದ ಹಾರೈಸಿ ಮೆರವಣಿಗೆಯೊಂದಿಗೆ ಕಳುಹಿಸಿಕೊಟ್ಟರು.

ನರಸೀಪುರ.—ಕಳೆದ ತಾ. 14 ರಲ್ಲಿ 3 ನೇ ಕೌನ್ಸಲರ್ ಮೆ॥ ಕಾಂತರಾಜೆ ಅರಸಿನವರ ಸವಾರಿಯು ಡಿಸ್ಟ್ರಿಕ್ಟ್ ಮುಖ್ಯಾಧಿಕಾರಿಗಳಿಗೆ ಈ ಊರಿಗೆ ಚಿತ್ತೈಸಿತು. ಸ್ಥಳೀಯ ಮುಖ್ಯಾಧಿಕಾರಿಗಳು ಪಟ್ಟಣದ ದೊಡ್ಡ ಬೀದಿಯನ್ನೂ ಮುಸಾಫರಿ ಬಂಗಲೆಯನ್ನೂ ಅತ್ಯಂತ ರಮಣೀಯವಾಗಿ ಅಲಂಕರಿಸಿದ್ದರು. ದೊಡ್ಡಬೀದಿಯೂ ವಿವಿಧವಾದ ತಳಿರು ತೋರಣ ಧ್ವಜಪಟ ಕಮಾನು ಪುಷ್ಪಮಾಲೆಗಳಿಂದ ಅಲಂಕೃತವಾಗಿಯೂ, ಮುಸಾಫರಿ ಬಂಗಲೆಯ ಮುಂದೆ ರಚಿಸಲ್ಪಟ್ಟ ಸುಂದರವಾದ ಮಂಟಪದಿಂದ ಬಂಗಲೆಯು ಸೊಗಯಿಸಲ್ಪಟ್ಟದ್ದಾಗಿಯೂ, ಪಟ್ಟಣವು ಜನರ ಕಣ್ಮನಗಳನ್ನು ಸೆಳೆಯುತ್ತಿದ್ದಿತು. ಈ ರೀತಿ ಏರ್ಪಾಡುಗಳನ್ನು ಮಾಡುವದರಲ್ಲಿ ಸಾಹಸಪಟ್ಟ ನಮ್ಮ ಅಮಲ್ದಾರ್ ಮೆ॥ ತಿರುನಾರಣಯ್ಯಂಗಾರ್ರ ಕಾರ್ಯವು ಅತ್ಯಂತ ಶ್ಲಾಘನೀಯವಾಗಿತ್ತು. ಕೌನ್ಸಲರವರು ಮಧ್ಯಾಹ್ನ 12½ ಗಂಟೆಗೆ ಮೋಟರಿನಲ್ಲಿ ಈ ಊರಿಗೆ ಚಿತ್ತೈಸಲು ಸ್ಥಳೀಯ ಅಧಿಕಾರಿಗಳೂ ದೊಡ್ಡಮನುಷ್ಯರೂ ವರ್ತಕಮಂಡಲಿಯವರೂ ಬಂಗಲೆಯ ಮುಂದಿನ ಮಂಟಪದಲ್ಲಿ ಕಾದಿದ್ದು ಅವರನ್ನು ಪುಷ್ಪಮಾಲ್ಯಾದಿಗಳಿಂದ ಸತ್ಕರಿಸುತ್ತಿರಲು ಅಮಲ್ದಾರ್ರವರು ಒಬ್ಬೊಬ್ಬರನ್ನೂ ಅರಸಿನವರಿಗೆ ಪರಿಚಯಮಾಡಿಸುತ್ತಾ ಬಂದರು. ಸಾಯಂಕಾಲ ಸ್ಕೂಲು, ಆಸ್ಪತ್ರೆ, ಸಬ್ ರಿಜಿಸ್ಟ್ರಾರ್ ಆಫೀಸು, ಮಾರನೇ ದಿನ ಸಬ್ ಡಿವಿಜನ್ ಮತ್ತು ತಾಲ್ಲೂಕು ಕಛೇರಿ, ಗರಲ್ಸ್ ಸ್ಕೂಲು, ರೀಡಿಂಗ್ ರೂಮ್ ವಗೈರೆ ಇನ್ಸ್‌ಪೆಕ್ಷನ್ ಆಯಿತು. ಕೆಂಪು ಹೊಳೆಯವರಿಗೂ ದಯಮಾಡಿಸಿ ಮೈಸೂರ್ ಸೀಮೆಯ ಗಡಿಯನ್ನು ಪರಾಂಬರಿಸಿ ತಾ. 13 ನೇ ಬೆಳಿಗ್ಗೆ ಈ ಸ್ಥಳವನ್ನು ಬಿಟ್ಟು ಯಳಂದೂರು ಕ್ಯಾಂಪಿಗೆ ದಯಮಾಡಿಸಿದರು. ಸ್ಥಳೀಯ ಕಾರ್‌ಬಾರುಗಳೆಲ್ಲಾ ಕೌನ್ಸಿಲರವರಿಗೆ ತೃಪ್ತಿಕರವಾಗಿದ್ದವೆಂದು ತಿಳಿದುಬರುತ್ತೆ.

ಚನ್ನರಾಯಪಟ್ಟಣ.—ಇಲ್ಲಿರುವ ಎ. ವಿ. ಸ್ಕೂಲಿನಿಂದ ಲೋ. ಸೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹೈ ಸ್ಕೂಲುಗಳಲ್ಲಿ ಓದುತ್ತಿರುವ ಬಾಲಕರಲ್ಲನೇಕರೂ, ಈ ಸ್ಕೂಲಿನ ವಿದ್ಯಾರ್ಥಿಗಳೂ ಕಲೆತು ಕಳೆದ ಗುರುವಾರದಿಂದ ಮೂರು ದಿನಗಳು ಫುಟ್ ಬಾಲ್ ಪಂದ್ಯವನ್ನಾಡಿದರು. ಶುಕ್ರವಾರ ಸಾಯಂಕಾಲ ಬಾಲಕರಿಗೂ, ಸ್ಥಳೀಯ ದೊಡ್ಡಮನುಷ್ಯರಿಗೂ ಟ್ರಾವೆಲರ್ಸ್ ಬಂಗಲೆಯ ಆಟದ ಮೈದಾನದಲ್ಲೇ ಫಲಾಹಾರಾದಿಗಳು ನಡೆದವು. ಅಮಲ್ದಾರ್ ಮ॥ ಹೈದರಲ್ಲಿ ಖಾನ್‌ರವರು, ಸಬ್ ರಿಜಿಸ್ಟ್ರಾರ್ ಮ॥ ಕೃಷ್ಣಮೂರ್ತಿ ಶಾಸ್ತ್ರಿಗಳು, ಎಕ್ಸೈಸ್ ಇನ್ಸ್‌ಪೆಕ್ಟರ್ ಮ॥ ಆನಂದರಾಯರೇ ಮೊದಲಾದ ಆಫೀಸರುಗಳು ನೆರೆದಿದ್ದರು. ಫುಟ್ ಬಾಲ್ ಪಂದ್ಯವನ್ನು ನೋಡಲಿಕ್ಕೆ ಸ್ಥಳೀಯರನೇಕರು ಬಂದಿದ್ದರಿಂದ ಆಟದ ಮೈದಾನವು ಕಿಕ್ಕಿರಿಯುತ್ತಿತ್ತು. ಸ್ಥಳೀಯ ಮಹನೀಯರು ಉದಾರಮನಸ್ಸಿನಿಂದ ಚಂದಾ ಕೊಟ್ಟು ಹೀಗೆ ಪದೇ ಪದೇ ಬಾಲಕರಿಗೆ ಉತ್ತೇಜನ ಕೊಡುತ್ತಿರುವದು ಬಹಳ ಶ್ಲಾಘನೀಯವಾದದ್ದೆಂದು ಹೆಡ್ ಮಾಸ್ಟರು ಮ॥ ಕೃಷ್ಣಸ್ವಾಮಯ್ಯಂಗಾರ್ರು ಅಮಲ್ದಾರ್ರವರಲ್ಲಿ ತಿಳಿಸಿದರು.—ಇಲ್ಲಿನ ಎ. ವಿ. ಸ್ಕೂಲ್ ಅ॥ ಮಾಸ್ಟರು ಮ॥ ಲಕ್ಷ್ಮೀನರಸಿಂಹಶಾಸ್ತ್ರಿಗಳು ಪ್ರಮೋಷನ್ನಿನಿಂದ ಹಾಸನದ ತಾಲ್ಲೂಕು ಬ್ರಾಂಚ್ ಸ್ಕೂಲ್ ಹೆಡ್ ಮಾಸ್ಟರಾಗಿ ವರ್ಗಪಟ್ಟು ಹೊರಟುಹೋದರು. ಇವರ ಜಾಗಕ್ಕೆ ಬರತಕ್ಕವರು ಯಾರೋ ತಿಳಿಯಲಿಲ್ಲ. ಈಗ ಮೂರು ವರ್ಷಗಳಿಂದ ಈ ಸ್ಕೂಲಿನಲ್ಲಿ ನಾಲ್ಕು ಕೆಲಸಗಳು ಖಾಲಿ ಇದ್ದು, ಈಗ ಐದು ಕೆಲಸಗಳು ಖಾಲಿ ಇರುವವು. ನಮ್ಮ ಸರ್ಕಾರದವರು ಈ ಸ್ಕೂಲಿನ ಕೆಲಸಗಳಿಗೆ ಸರಿಯಾದ ಖಾಯಂ ಮಾಸ್ಟರುಗಳನ್ನು ಶೀಘ್ರದಲ್ಲೇ ದಯಪಾಲಿಸಬೇಕಾಗಿದೆ.—ಇಲ್ಲಿ ಈಗ ನಾಲ್ಕೈದು ದಿನಗಳಿಂದ ಕೊಂಚ ಮಳೆ ಆಗುತ್ತಿದೆ. ಪೈರಿಗೆ ಹದವಾಗಿದ್ದರೂ ಕೆರೆ ಕಟ್ಟೆಗಳು ತುಂಬಲಿಕ್ಕೆ ಸಾಕಾಗಿಲ್ಲ.

ಚನ್ನರಾಯಪಟ್ಟಣ ತಾ॥ ಹಿಂದಲಹಳ್ಳಿ.—ಇಲ್ಲಿ ನೀರಿನ ಕಷ್ಟವನ್ನು ಹೇಳತೀರದು. ಈ ಊರಿಗೆಲ್ಲಾ ಆಧಾರವಾಗಿ ಒಂದು ಸೇದುವ ಭಾವಿಯೂ, ಒಂದು ಕೊಳವೂ, ಊರ ನೀರೆಲ್ಲಾ ತುಂಬುವ ಒಂದು ಕಟ್ಟೆಯೂ ಇರುವವು. ಈ ವರ್ಷದ ಬೇಸಗೆಯಲ್ಲಿ ಇವೆಲ್ಲವೂ ಒಣಗಿ, ಕುಡಿಯಲು ನೀರಿಲ್ಲದೆ ಬಹಳ ತೊಂದರೆಪಡಬೇಕಾಯ್ತು. ಈಗ ಸ್ವಲ್ಪ ಮಳೆ ಬಂದು ನೀರಿನ ಕ್ಷಾಮ ತಪ್ಪಿರುವುದು ರೈತರ ವ್ಯವಸಾಯಕ್ಕೆ ಉತ್ತೇಜನ ಕೊಟ್ಟಂತಾಗಿದೆ.—ನೀರಿನ ಕ್ಷಾಮ ತಪ್ಪಿಸಲು ಊರಿನ ಸಮೀಪದಲ್ಲಿ ಅರೆವಾಸಿ ಕಟ್ಟಿರುವ ಕೆರೆಯನ್ನು ಕಟ್ಟಿಸಿಕೊಡಬೇಕೆಂದು ಇಂಜನಿಯರ್ ಮತ್ತು ರೆವಿನ್ಯೂ ಇಲಾಖಾ ಆಫೀಸರುಗಳಿಗೆ ಎರಡು ವರ್ಷಗಳ ಲಾಗಾಯ್ತು ಅರ್ಜಿ ಬರೆದುಕೊಳ್ಳುತ್ತಿದ್ದಾಗ್ಯೂ ಇದುವರೆಗೂ ಯಾವ ವಿಧವಾದ ಜವಾಬೂ ಬಾರದಿರುವುದು ವಿಷಾದಕರವಾಗಿದೆ. ಈ ಕಷ್ಟವನ್ನು ನಿಮ್ಮ ಪತ್ರಿಕೆಯ ಮೂಲಕ ಅರಿಕೆ ಮಾಡಿಕೊಂಡರೆ ನಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದರೂ ಎಗ್ಸಿಕ್ಯುಟಿವ್ ಇಂಜನಿಯರಾದರೂ ಪರಾಂಬರಿಸಿ ನಮ್ಮಗಳ ಕಷ್ಟವನ್ನು ನಿವಾರಣೆ ಮಾಡುವರೆಂದು ನಂಬಿ ಈ ಮೂಲಕ ಪ್ರಾರ್ಥಿಸಿಕೊಂಡಿರುತ್ತೇವೆ.—ಈ ಗ್ರಾಮದಲ್ಲಿ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟು ಕೆಲಸಗಳು ಸಮರ್ಪಕವಾಗಿ ನಡೆಯುತ್ತಿವೆ. ಈ ಸೊಸೈಟಿಯಲ್ಲಿ 4 ಆಣೆಗೆ ಕಡಿಮೆ ಇಲ್ಲದಂತೆ ಕರೆಂಟ್ ಡಿಪಾಜಿಟ್ಟನ್ನಿಡಬೇಕೆಂದು ಬೈಲಾ ಮಾಡಿದಾರೆ. ಇಲ್ಲಿನ ಸ್ಕೂಲ್ ಮಾಸ್ಟರು ಸ್ಟುಡೆಂಟ್ಸ್ ಯೂನಿಯನ್ ಎಂಬ ಹೆಸರಿನಿಂದ ಬಾಲಕರ ಉಪಯೋಗಾರ್ಥವಾಗಿ ಒಂದು ಸಂಘವನ್ನೇರ್ಪಡಿಸಿ ಕೋ॥ ಸೊಸೈಟಿಯ ಮೆಂಬರುಗಳನ್ನೇ ಇದಕ್ಕೂ ಮೆಂಬರಾಗಿ ಮಾಡಿ ಒಂದು ಸಣ್ಣ ಸೇವಿಂಗ್ಸ್ ಬ್ಯಾಂಕನ್ನು ಏರ್ಪಡಿಸಿರುವುದು ಬಾಲಕರಿಗೆ ಉತ್ಸಾಹಕರವಾಗಿಯೂ, ಮಿತವ್ಯಯ ಬುದ್ಧಿ ಬೋಧಕವಾಗಿಯೂ ಇದೆ.—ಮ॥ ಲಕ್ಷ್ಮಣರಾಯರು ಈ ಗ್ರಾಮದಲ್ಲಿ ರಾತ್ರಿ ಪಾಠಶಾಲೆಯನ್ನು ಏರ್ಪಾಡು ಮಾಡಿ ಇಲ್ಲಿನ ಬಡ ಜನಗಳಿಗೆ ಅನುಕೂಲ ಮಾಡಿಕೊಟ್ಟದ್ದು ಸ್ತೋತ್ರಾರ್ಹವಾಗಿದೆ. ಇದಕ್ಕೆ ಗ್ರಾಂಟ್ ಸ್ಯಾಂಕ್ಷನ್ ಆದಲ್ಲಿ ಉಪಾಧ್ಯಾಯರು ಹೆಚ್ಚು ಮುತುವರ್ಜಿ ವಹಿಸಲು ಕಾರಣವಾಗುವುದು.—ಈಗ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಘೋರ ಸಂಗ್ರಾಮದ ದೆಸೆಯಿಂದ ಇಲ್ಲಿನ ಜನಗಳಿಗೆಲ್ಲಾ ಜೀವನವಾಗಿದ್ದ ಹಿಪ್ಪಲಿ ತಾಮ್ರದ ವ್ಯಾಪಾರಕ್ಕೆ ಬಹಳ ತೊಂದರೆಯಾಗಿದೆ. ಧಾರಣೆವಾಸಿಯು ಒಂದಕ್ಕೆ ಎರಡಾಗಿದೆ. ಜನಗಳೆಲ್ಲರೂ ಮುಂದಣ ಜೀವನಕ್ಕೆ ಮಾರ್ಗವಿಲ್ಲದೆ ಕಳವಳ ಪಡುವಂತಾಗಿದೆ. ಎಂದಿಗೆ ಯುದ್ಧವು ಕೊನೆಗಾಣುವುದೋ ಎಂದು ಎಲ್ಲರೂ ನಿರೀಕ್ಷಿಸುವರು.

ಕುಣಿಗಲು.—ಇಲ್ಲಿ ಸುತರಾಂ ಮಳೆಯಿಲ್ಲ. ಬಿಸಿಲಿನ ತಾಪ ಕಡಮೆಯಾಗಿಲ್ಲ. ದೊಡ್ಡಕೆರೆಯಲ್ಲಿದ್ದ ನೀರೆಲ್ಲಾ ಸಂಪೂರ್ಣವಾಗಿ ಬಸಿದುಹೋಗುವಂತಾಗಿದೆ. ಬಹು ಕೊಂಚವಾಗಿ ನಿಂತಿರತಕ್ಕ ನೀರಿನಲ್ಲಿ ಜನರು ಪ್ರತಿ ದಿನವೂ ಮೀನು ಹಿಡಿಯುತ್ತಿರುವದರಿಂದ ನೀರೆಲ್ಲಾ ಬಡಿಯಾಗುತ್ತಿದೆ. ಇವರಿಗೆ ಸರ್ಕಾರದವರ ಭಯವು ಲೇಶ ಮಾತ್ರವೂ ಇಲ್ಲ. ಇದರಿಂದ ಪರಸ್ಥಳದಿಂದ ಬರತಕ್ಕ ಪ್ರಯಾಣಿಕರಿಗೂ, ದನ ಕರುಗಳಿಗೂ ಕುಡಿಯುವದಕ್ಕೆ ನೀರು ಅನುಕೂಲವಾಗಿಲ್ಲ. ಸರ್ಕಾರದವರು ಈ ವಿಷಯ ಸ್ವಲ್ಪ ನಿಗಾ ಕೊಟ್ಟರೆ ತುಂಬಾ ಉಪಕಾರವಾಗುವದು.—ಈ ಊರಲ್ಲಿ ಆಡುಗಳನ್ನು ಸಾಕಿಕೊಂಡು ಪ್ರಯೋಜನಹೊಂದುತ್ತಿರುವವರ ವಿಷಯವನ್ನು ಕುರಿತು ಹೇಳುವದು ಅಸಾಧ್ಯ. ಇವರಿಂದ ರಸ್ತೆಯಲ್ಲಿರತಕ್ಕ ಮರಗಳೆಲ್ಲಾ ನಿಲ್ಲುವದಕ್ಕೆ ನೆರಳಿಲ್ಲದಂತಾಗಿವೆ. ಕೆಲವು ವೇಳೆ ಇವರು ಬೇರೆಯವರ ತೋಟಗಳಲ್ಲಿಯೂ, ಕಾಂಪೌಂಡುಗಳಲ್ಲಿಯೂ ನಿರ್ಭಯವಾಗಿ ಪ್ರವೇಶಮಾಡಿ ಮರಗಳ ರೆಂಬೆಗಳನ್ನು ಕತ್ತರಿಸಿ ಹಾಳುಮಾಡುತ್ತಿರುವರು. ಇವರಿಗೆ ಪೋಲೀಸಿನವರ ಭಯವು ಲೇಶಾಂಶವಾದರೂ ಇಲ್ಲ. ಸರ್ಕಾರದವರು ಒಬ್ಬಿಬ್ಬರಿಗೆ ಶಿಕ್ಷೆಮಾಡಿ ಬಂದೋಬಸ್ತು ಮಾಡಿದಲ್ಲಿ ಮುಂದೆ ಇವರ ಕಾಟವೂ, ಆಡುಗಳಿಂದ ಉಂಟಾಗುವ ಬಹು ನಷ್ಟವೂ ತಪ್ಪುವದು.—ಈ ಊರಿನ ಸಂತೆ ಇನ್ನೂ ಪೇಟೆಯಲ್ಲಿಯೇ ನಡೆಯುತ್ತಿರುವದು ಗಾಡಿಗಳ ತಿರುಗಾಟಕ್ಕೂ, ವ್ಯಾಪಾರಸ್ಥರಿಗೂ ತುಂಬಾ ಅನನುಕೂಲವೇ ಆಗಿದೆ. ನಮ್ಮ ಅಮಲ್ದಾರ್ರವರು ಸರ್ವರಿಗೂ ಅನುಕೂಲವಾದ ಕಡೆ ಸಂತೆ ನಡೆಯುವಂತೆ ತಕ್ಕ ಏರ್ಪಾಡು ಮಾಡುವರೆಂಬ ನಿರೀಕ್ಷೆಯಿದೆ.—ಇಲ್ಲಿ ಜಟ್ಕಾ ಗಾಡಿ ಹೊಡೆಯತಕ್ಕವರು ಪೇಟೆಯೊಳಕ್ಕೆ ಬಂದಾಗ ಗಾಡಿಗಳನ್ನು ನಿಧಾನವಾಗಿಯೂ ಎಚ್ಚರಿಕೆಯಾಗಿಯೂ ಹೊಡೆದುಕೊಂಡುಹೋಗುವಂತೆ ಸರ್ಕಾರದವರು ಅವರಿಗೆ ತಕ್ಕ ಎಚ್ಚರಿಕೆ ಕೊಡುವದು ಒಳ್ಳೇದು. ಕೆಲವು ದಿನಗಳ ಕೆಳಗೆ ಈ ಜಟ್ಕಾ ಗಾಡಿ ನಡಿಸತಕ್ಕವರ ಅಜಾಗ್ರತೆಯಿಂದ ಪೇಟೆಯ ರಸ್ತೆಯಲ್ಲಿ ಮಲಗಿದ್ದ ಒಂದೆರಡು ನಾಯಿಗಳು ಪ್ರಾಣ ಕಳೆದುಕೊಂಡದ್ದಾಗಿಯೂ, ಈ ವಿಷಯ ಕೆಲವು ಜನರು ಸೇರಿ ಸರ್ಕಾರಕ್ಕೆ ಫಿರ್ಯಾದು ಬರೆದುಕೊಂಡಿರುವದಾಗಿಯೂ ತಿಳಿಯಬಂದಿದೆ. ಎತ್ತಿನ ಗಾಡಿಗಳನ್ನು ಹೊಡೆದುಕೊಂಡು ಹೋಗತಕ್ಕವರು ಕೂಡ ಪೇಟೆಯೊಳಗೆ ಬಂದ ಮೇಲೆ ಕೆಳಗೆ ಇಳಿದು, ಇಲ್ಲವೇ ಮೂಕಿಯ ಮೇಲೆ ಕೂತುಕೊಂಡು ಗಾಡಿ ಹೊಡೆಯುವದಕ್ಕೆ ಬದಲಾಗಿ ಮೂಕಿಯ ಮೇಲೆ ನಿಂತುಕೊಂಡು ನಿರ್ಭಯವಾಗಿ ಗಾಡಿ ಹೊಡೆಯುತ್ತಾರೆ. ಇಂಥಾ ಮೂರ್ಖರ ವಿಷಯ ಪೋಲೀಸಿನವರು ಸ್ವಲ್ಪ ನಿಗಾ ಇಡುವದಾದರೆ ಅನೇಕ ತೊಂದರೆಗಳಿಗೆ ಅವಕಾಶವಿರಲಾರದು.

ಸಿರಾ ತಾ॥ ಬುಕ್ಕಾಪಟ್ಣ.—ಈ ಪ್ರಾಂತ್ಯ ಮಳೆ ಇಲ್ಲದೆ ತುಂಬಾ ಗಾಬರಿಯಾಗಿದೆ. ಭರಣಿ ಮಳೆ ಹುಟ್ಟಿ ಆಗಲೇ ಮೂರನೇ ಪಾದವಾಗುತ್ತಾ ಬಂತು. ಮುಂಗಾರಿಗೆ ಈ ಮಳೆ ಅತಿ ಉತ್ಕೃಷ್ಟವಾದದ್ದು. ಈ ಮಳೆ ಬಾರದ ದೆಸೆಯಿಂದ ಜನಗಳು ಆಗಲೇ ಕಳವಳಪಡುತ್ತಾರೆ. ಧಾರಣೆವಾಸಿಗಳಾದರೋ ಹೇಳತೀರದು.—ಇಲ್ಲಿ ಕುಡಿಯುವ ನೀರಿನ ಕೊರತೆ ಸರ್ಕಾರಕ್ಕೆ ತಿಳಿದು ಕಾರ್ಪೊರೇಷನ್ ಭಾವಿಯನ್ನು ಇನ್ನಷ್ಟು ಆಳಮಾಡಿಸುವ ಕೆಲಸ ಒಂದೂವರೆ ತಿಂಗಳಿಂದ ನಡೆಯುತ್ತಿದೆ. ಕಂಟ್ರಾಕ್ಟುದಾರರು ಕೇವಲ ಆತುರದಿಂದ ಕೆಲಸ ನಡಿಸುತ್ತಿದಾರೆ.—ಮ॥ ಸಿ. ಎನ್. ತಿಮ್ಮಪ್ಪಯ್ಯನವರು ಬಂದ ಲಾಗಾಯ್ತು ವಯಸ್ಕರಾದ ಹುಡುಗರಿಗೆ ನೈಟ್ ಸ್ಕೂಲ್ ಮಾಡಿ ವಿದ್ಯಾಬೋಧೆ ಮಾಡುವದಲ್ಲದೆ ಪ್ರಜಾನುರಾಗಕ್ಕೆ ಪಾತ್ರರಾಗಿ ರೂಲ್ಸ್ ಪ್ರಕಾರ ಸರ್ಕಾರದಿಂದ ಬರುವ ಸರ್ಕ್ಯುಲರ್ ವಗೈರೆಗಳನ್ನು ಎಲ್ಲರ ಅವಗಾಹನೆಗೆ ಬರುವಂತೆ ಮೀಟಿಂಗು ಮಾಡಿ ಪ್ರಚುರಕ್ಕೆ ತಂದು ಮೀಟಿಂಗುಗಳಲ್ಲಿ ಬಾಲಕರ ಏಳಿಗೆಗೋಸ್ಕರ ತಕ್ಕ ನೀತಿ, ಧರ್ಮ, ಐಕಮತ್ಯ ಮೊದಲಾದ ದೇಶೋನ್ನತವಾದವುಗಳನ್ನು ಉಪಾಧ್ಯಾಯರುಗಳಿಂದಲೂ, ವಿದ್ಯಾರ್ಥಿಗಳಿಂದಲೂ, ಗ್ರಾಮಸ್ಥರಿಂದಲೂ ಉಪನ್ಯಾಸಗಳನ್ನು ಮಾಡಿಸುತ್ತಾರೆ.—ಹಾಲಿ ಸ್ಕೂಲಿನಲ್ಲಿ 100 ಜನ ಬಾಲಕರಿಗೆ ಜಾಗವು ಚಿಕ್ಕದು. ಸ್ಕೂಲ್ ಕಟ್ಟಿಸಿಕೊಡುತ್ತೇವೆಂದು ಮ॥ ಸಾ ದೊಡ್ಡ ಮಲ್ಲಣ್ಣನವರು ವಾಗ್ದಾನ ಮಾಡಿರುತ್ತಾರೆ. ಅವರು ಮನಸ್ಸು ಮಾಡಿದರೆ ಜಾಗ್ರತೆಯೇ ನೆರವೇರುತ್ತೆ.—ಗ್ರಾಮಾಭಿವೃದ್ಧಿ ಸಂಘದ ಕೆಲಸ ಬಹು ಚೆನ್ನಾಗಿ ನಡೆಯುತ್ತಿತ್ತು. ಪ್ರತಿ ಸೋಮವಾರ ಮೀಟಿಂಗು ನಡೆದು ಸಾಯಂಕಾಲ ಗ್ರಾಮಾಭಿವೃದ್ಧಿ ವಿಚಾರ ಕುರಿತು ಉಪನ್ಯಾಸಗಳು, ಧರ್ಮೋಪದೇಶಗಳು, ವೃತ್ತಾಂತ ಪತ್ರಿಕೆಗಳ ಸಾರಾಂಶ, ಸೋಮವಾರದ ಕೆಲಸಗಳು, ಇವೆಲ್ಲವೂ ತಿಳಿಸುತ್ತಿದ್ದರು. ಕೆಲಸಗಳೂ, ಮೀಟಿಂಗುಗಳೂ ಚೆನ್ನಾಗಿ ನಡೆಯುತ್ತಾ ಇತ್ತು. ಆದರೆ ಒಂದು ಮೀಟಿಂಗಿನಲ್ಲಿ ಯಾವ ಕಾರಣದಿಂದಲೋ ಯಥಾರ್ಥವಲ್ಲದ ವಾದಿ ಬಂದು ಮೀಟಿಂಗುಗಳು ನಡೆಯದೆ ಮೀಟಿಂಗಿನ ಅಭಿವೃದ್ಧಿಗೆ ಕುಂದಕ ಉಂಟಾಗಿದೆ. ಸದರಿ ವಾದಿ ವಿಚಾರ ಇತ್ಯರ್ಥಮಾಡಿ, ಸರಿಯಾಗಿ ಮೀಟಿಂಗುಗಳು ನಡೆಯುವಂತೆ ಮಾಡುತ್ತಾರೆಂತ ನಂಬಿರುತ್ತೇನೆ.—ನಮ್ಮ ಗ್ರಾಮದ ಸೊಸೈಟಿಯ ಕೆಲಸ ಕಾರ್ಯಗಳು ಬಡಬಗ್ಗರಿಗೆ ಸಹಾಯವಾಗಿಲ್ಲ. ಬೈಲಾಕ್ಕೆ ವಿರೋಧವಾಗಿ ಕೆಲಸ ನಡೆಯುತ್ತಿದೆ. ಬಡವರು ಸಾಲ ಕೇಳಿದರೆ ಸೊಸೈಟಿಯಲ್ಲಿ ದುಡ್ಡಿಲ್ಲವೆಂತ ಹೇಳುತ್ತಾರೆ.—ನಮ್ಮ ಊರಿನ ಗರಲ್ಸ್ ಸ್ಕೂಲಿನಲ್ಲಿ ಮಾಸ್ಟರಿಗೆ ಒಂದು ಕೆಲಸವಲ್ಲ. ಸ್ಕೂಲ್ ಕೆಲಸ, ಪೋಸ್ಟಾಫೀಸು, ಸೊಸೈಟಿ ಸೆಕ್ರಟರಿ, ಹೆಂಡದ ಲೆಕ್ಕ, ಗಾಂಜಾ ಲೆಕ್ಕ, ಇಷ್ಟು ಕೆಲಸವಿದ್ದಾಗ್ಯೂ ಜನಾನುರಾಗಕ್ಕೆ ಪಾತ್ರರಾಗಿ ಪುರಸತ್ತಿಲ್ಲದೆ ಕೆಲಸ ಕಾರ್ಯಗಳು ಚೆನ್ನಾಗಿ ನೋಡಿಕೊಳ್ಳುತ್ತಾರೆ.—ಗ್ರಾಮ ಮುನ್ಸಿಫ್ ಕೋರ್ಟು ಈ ಗ್ರಾಮಕ್ಕೆ ಆಗಿರುತ್ತೆ. ಆದರೇನು ಪ್ರಯೋಜನ? ಆಯಾ ಗ್ರಾಮದ ಜೀವಾದೇ ವಿಗಳೇ 20 ರೂಪಾಯಿಗಳ ಒಳಗೆ ಇರತಕ್ಕದ್ದನ್ನು ದಾವಾ ಮಾಡಬೇಕಂತೆ. ಆಯಾ ಸಮ್ಮತಿಸಿದಾದರೂ ಸೇರಿಸ ಕೊಟ್ಟದ್ದರೆ ಚೆನ್ನಾಗಿತ್ತು. ಅವರಂತೆ ಸರ್ಕಾರದವರು ಯೋಚಿಸಿ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತೆ.—ಈ ಗ್ರಾಮ ದೊಡ್ಡದಾಗಿಯೂ, ಈ ತಾಲ್ಲೋಕಿಗೆ ಭಾರಿ ಸಮ್ಮತ್ತಾಗಿಯೂ, ಕೋರ್ಟು ಸಹ ಇರತಕ್ಕದ್ದಾಗಿಯೂ ಇದ್ದಾಗ್ಯೂ ಭೂಮಾಪನದಗಳ ಬಳಿಗೆ ಎಷ್ಟು ಜನ ಕೇಳಿಕೊಂಡಾಗ್ಯೂ ಸರ್ಕಾರದವರು ಗಮನಕ್ಕೆ ತಾರದೆ ಇರುವದು ಬಹಳ ಶೋಚನೀಯವಾಗಿದೆ. ಈಗಲಾದರೂ ಗ್ರಾಮಕ್ಕೆ ಒಳ್ಳೆ ಮಂಡಂನ್ನು ಮೊಳರೂರು ಮಾಡಿಸ್ಯಾರೆಂದು ನಂಬಿರುತ್ತೇನೆ.

ಮಧುಗಿರಿ.—ಮಧುಗಿರಿ ತಾ|| ಸಿದ್ಧಾಪುರದ ಕೆರೆ ಕೆಳಗೆ 30-40 ಜನಗಳ ಅಂದರೆ 150 ಎಕರೆಗಳ ವರಿಗೂ ಅಡಿಕೆ ತೋಟಗಳಿವೆ. ಈ ವರ್ಷಾಂತರಕ್ಕೆ ಆಗಾಗ್ಗೆ ಕೋತಿಗಳನ್ನು ಕಂದುಬಿಡುತ್ತಾರೆ. ಇಲ್ಲಿ 2-3 ಜನಗಳು ಸೇರಿ ಇದು ವರಿಗೆ 4-5 ಕೋತಿಗಳನ್ನು ಹೊಡೆದು ಅಲ್ಲಲ್ಲೇ ಹೂಳಿರುತ್ತಾರೆ. ಇಲ್ಲಿ ಮಳೆ ನಡಿಸದೆ, ಸುತ್ತುಮುತ್ತು 2-3 ಮೈಲಿಗಳಲ್ಲಿ ವಿಪರೀತ ಮಳೆ ಸುರಿದಿದೆ. ಇಲ್ಲಿ 3-4 ಜನಗಳ 10-12 ಎಕರೆ ತೋಟಗಳು ಒಣಗಿಹೋದವು.—ಈ ಊರಿನಲ್ಲಿ ಆರ್ಯವೈಶ್ಯ ಕುಡಿಪ್ರಾದಿ ಮಂಡಲಿಯವರು ಶ್ರೀರಾಮನವಮಿ ಉತ್ಸವಗಳನ್ನು ಮಂದಿರದಲ್ಲಿ ಬಹು ಸೋತ್ಸಾಹಪೂರ್ವಕವಾಗಿಯೂ ಆನಂದದಿಂದಲೂ ನಡಿಸಿದರು. ಅಲ್ಲದೆ ಗ್ರಾಮ ಇಂಪ್ರೂವ್‌ಮೆಂಟಿನಂಥಲೂ ಸರ್ಕಾರದವರ ಸಹಾಯದಿಂದಲೂ ಹಾಲಿ ಗ್ರಾಮದ ಎ. ಇ. ಸ್ಕೂಲ್ ಮಾಸ್ಟರ್ ನರಸಿಂಗರಾಯರೂ, ಶ್ಯಾ|| ಲಿಂಗಪ್ಪನವರೂ, ಮಠದ ಬಾಳಯ್ಯನವರೂ ಸಹಾ ಒಂದು ಸ್ಕೂಲನ್ನು ಹೊಸದಾಗಿ ಮಂಗಳೂರು ಹೆಂಚಿನಿಂದ ತಯಾರಾಗಿದೆ. ಸರ್ಕಾರದಿಂದ ಕೊಟ್ಟದ್ದು 223 ರೂಪಾಯಿ, ಗ್ರಾಮಸ್ಥರ 223 ರೂಪಾಯಿ ಖರ್ಚಾಯಿತು.—ಈ ಗ್ರಾಮದಲ್ಲಿ ಶ್ಯಾ|| ವಾಸುದೇವಯ್ಯನವರೂ ಚನ್ನವೀರಶೆಟ್ಟರೂ ಪ್ರಮುಖರಾಗಿ ನಿಂತು ಶ್ರೀರಾಮಮಂದಿರವನ್ನು ಗ್ರಾಮಸ್ಥರ ಸಹಾಯದಿಂದ ಕಟ್ಟಿ ಭಜನೆ ಬಹಳ ಚೆನ್ನಾಗಿ ನಡಿಸುತ್ತಾರೆ. ಶ್ರೀರಾಮರು ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಯುದ್ಧದಲ್ಲಿ ಜಯಪ್ರದವನ್ನು ಕೊಟ್ಟು, ನಮ್ಮಗಳನ್ನು ಕಾಪಾಡಬೇಕೆಂದು ಅತ್ಯಂತ ವಿಧೇಯರಾಗಿ ನಿತ್ಯವೂ ಪ್ರಾರ್ಥಿಸುತ್ತೇವೆ.

ವಿದೇಶದ ವೃತ್ತಾಂತಗಳು.

ಹಿಂದಿನ ಎರಡು ವಾರಗಳಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿನವರು ಅಮೇರಿಕಕ್ಕೆ ಸೇರಿದ ಅರ್ಜೆಂಟೈನ್ ದೇಶದಲ್ಲಿ ಎರಡೂವರೆ ಕೋಟಿ ಪೌಂಡಿನ (ಅಂದರೆ 37½ ಕೋಟಿ ರೂಪಾಯಿನ) ಗೋಧಿಯನ್ನು ಕೊಂಡು ತರಿಸಿಕೊಂಡರೆಂದು ತಿಳಿಯುತ್ತದೆ.

ಯುದ್ಧಭೂಮಿಯಲ್ಲಿ ಗಾಯಪಟ್ಟವರಿಗೂ ದಣಿವಿನಿಂದ ಶಕ್ತಿಗುಂದಿದವರಿಗೂ ವೈದ್ಯರು ಒಂದು ನವೀನ ಚಿಕಿತ್ಸೆಯನ್ನು ಮಾಡಿ ವಾಸಿಮಾಡುತ್ತಿದ್ದಾರೆ. ಅಂಥಾ ರೋಗಿಗಳಿಗೆ ವೈದ್ಯರು ಅದಾ ಮನಸ್ಸನ್ನು ಆಕರ್ಷಣಮಾಡಿ ದೇಹದ ಮೇಲಣ ಸ್ಮರಣೆಯನ್ನೇ ಕೆಲವು ಕಾಲದ ತನಕ ತಪ್ಪಿಸಿಬಿಡುವರು. ಆ ಸಮಯದಲ್ಲಿ ರೋಗಿಗಳಿಗೆ ಗಾಯಗಳ ಬಾಧೆಯಾಗಲಿ, ಆಯಾಸವಾಗಲಿ ತಪ್ಪಿಹೋಗಿ ಕಾಯಪುಷ್ಟಿಯು ಸರಿಹೋಗುವುದು. ಈಗಿನ ಸಂಗ್ರಾಮದಲ್ಲಿ ಇದೊಂದು ಹೊಸ ತರದ ಚಿಕಿತ್ಸೆ.

ಸ್ಕಾಟ್ಲೆಂಡಿನ ಒಂದಾನೊಂದು ಸ್ಥಳದ ದೇವಸ್ಥಾನದೊಳಗಿರುವ ಮದುವೆ ರೆಕಾರ್ಡು ಪುಸ್ತಕಗಳಲ್ಲಿ ಕೆಲವು ಹಾಳೆಗಳನ್ನು ಯಾರೋ ಕಿತ್ತುಹಾಕಿ ಬಿಟ್ಟರು. ಅವನ್ನು ಪತ್ತೆಮಾಡುವವರಿಗೆ 15,000 ರೂಪಾಯಿ ಬಹುಮಾನ ಸಲ್ಲುವುದೆಂದು ಪ್ರಕಟಿಸಿದಾರೆ. ಕಳೆದ 1779 ನೇ ಇಸವಿಗೂ 1783 ನೇ ಇಸವಿಗೂ ಮಧ್ಯೆ ಔರ್ಡ್ ಸ್ಮಿತ್ ಎಂಬುವನು ಮದುವೆ ಮಾಡಿಕೊಂಡ ರೆಕಾರ್ಡು ಸಿಕ್ಕಬೇಕಾಗಿದೆ. ಆ ಮನುಷ್ಯನು ಚಿಕ್ಕವಯಸ್ಸಿನಲ್ಲೇ ಹಿಂದುಸ್ಥಾನಕ್ಕೆ ಬಂದು ಟೀ ತೋಟವನ್ನು ಮಾಡಿ ಬಹಳ ಹಣವನ್ನು ಸಂಪಾದಿಸಿ ಸೀಮೆಗೆ ತಿರುಗಿಕೊಂಡು ಹೋಗಿ ಕಾಲವಾದನು. ಅವನ ಆಸ್ತಿ 12,00,000 ರೂಪಾಯಿಗೆ ಹಕ್ಕುದಾರರು ಅರ್ಜಿ ಹಾಕಿಕೊಳ್ಳಬಹುದೆಂದು ಪ್ರಸಿದ್ಧಪಡಿಸಿದಾಗ ಅನೇಕ ಜನರು ಅರ್ಜಿ ಹಾಕಿಕೊಂಡಿದ್ದಾರೆ. ಹಕ್ಕುದಾರಿಯನ್ನು ನಿರ್ಧರಿಸುವುದಕ್ಕೆ ಮೇಲ್ಕಂಡ ಮದುವೆ ರೆಕಾರ್ಡು ಸಿಕ್ಕಬೇಕಾಗಿರುತ್ತದೆ.

ಸರ್ಜನ್ ಜನರಲ್ ಗೋರ್ಗಸ್ ಎಂಬಾತನು ಅಮೇರಿಕದ ಸೈನ್ಯದಲ್ಲಿ ವೈದ್ಯನಾಗಿರುತ್ತಾನೆ. ಈತನ ಸಾಹಸ ಕಾರ್ಯದಿಂದ ಪನಮಾ ಜಲಮಾರ್ಗದ ಪ್ರದೇಶದಲ್ಲಿ ಅರಸಿನ ಜ್ವರವೂ, ಮಲೇರಿಯಾ ಜ್ವರವೂ ಸಂಪೂರ್ಣವಾಗಿ ತೊಡೆಯಲ್ಪಟ್ಟವು. ಈತನನ್ನು ರಾಕ್‌ಫೆಲರ್ ಫಂಡಿನ ಹಣದ ಖರ್ಚಿನಿಂದ ಸರ್ಬಿಯದೇಶಕ್ಕೆ ಕಳುಹಿಸಿ ಈತನ ಮೂಲಕ ಅಲ್ಲಿ ಪ್ರಬಲವಾಗಿರುವ ವಿಷಮಶೀತ ಜ್ವರದ ಹಾವಳಿಯನ್ನು ಅಡಗಿಸಬೇಕೆಂದು ಏರ್ಪಾಡಾಗಿದೆ. ಇದಕ್ಕಾಗಿ ಈ ಕೀರ್ತಿವಂತನಾದ ವೈದ್ಯನಿಗೆ ಆ ಫಂಡಿನಿಂದ ವರುಷಕ್ಕೆ ಒಂದೂವರೆ ಲಕ್ಷ ರೂಪಾಯಿನಂತೆ ಪ್ರತಿ ಫಲಕೊಡತಕ್ಕದ್ದೆಂದು ನಿಷ್ಕರ್ಷೆ ಮಾಡಿದಾರೆ. ಆತನು ಅಮೇರಿಕದಲ್ಲಿ ತನ್ನ ನೌಕರಿಯನ್ನು ಬಿಟ್ಟು, ಅಲ್ಲಿಂದ ತನ್ನ ಕೆಲವು ಸಂಗಾತಿಗಳನ್ನು ಕರೆದುಕೊಂಡು ಸರ್ಬಿಯಕ್ಕೆ ಹೋಗುವವನಾಗಿದ್ದಾನೆ. ಈತನು ತುಂಬಾ ಸಾಹಸಪಟ್ಟು ಕ್ಯೂಬಾ, ಪನಮಾ, ದಕ್ಷಿಣ ಆಫ್ರಿಕಾ ಮೊದಲಾದ ಕಡೆಗಳಲ್ಲಿ ಮೇಲ್ಕಂಡ ರೋಗಗಳ ಹುಟ್ಟನ್ನೇ ಅಡಗಿಸಿ ಯಶಸ್ಸನ್ನು ಸಂಪಾದಿಸಿಕೊಂಡಿರುವನು.

ಅಮೇರಿಕಕ್ಕೆ ಸೇರಿದ ಮೆಯಿನ್ ಡಿಸ್ಟ್ರಿಕ್ಟಿನಲ್ಲಿ ಪೋರ್ಟ್‌ಲೆಂಡ್ ಎಂಬ ಪಟ್ಟಣದೊಳಗೆ ಜರ್ಮನಿಯ ಹಿತಚಿಂತಕರು ಸೇರಿ ಒಂದು ಸಭೆಯನ್ನು ನಡಿಸಿದರು. ಹರ್ ಡರ್ನ್‌ಬರ್ಗ್ ಎಂಬಾತನು ಆ ಸಭೆಗೆ ಒಂದು ಕಾಗದವನ್ನು ಬರೆದು ತಿಳಿಸಿದ್ದೇನೆಂದರೆ—ಪ್ರಪಂಚವನ್ನು ಗೆದ್ದು ತನ್ನ ಅಧೀನ ಮಾಡಿಕೊಳ್ಳಬೇಕೆಂಬುವುದು ಜರ್ಮನಿಯ ಅಭಿಮತವಲ್ಲ. ಯುದ್ಧ ಕಾಲದಲ್ಲೂ ಇತರ ಕಾಲಗಳಲ್ಲೂ ಸಮಸ್ತ ಜನಾಂಗಗಳೂ ಸಮುದ್ರಗಳ ಮೇಲೆ ಯಾವ ಆತಂಕಗಳೂ ಇಲ್ಲದಂತೆ ಸಂಚರಿಸುವಂತೆ ಮಾಡಬೇಕೆಂಬುವುದೇ ಜರ್ಮನಿಯ ಉದ್ದೇಶ. ಈ ವಿಚಾರವನ್ನು ಸಕಲ ಜನಾಂಗಗಳೂ ಒಪ್ಪಿ ಆಚರಿಸುವಂತಾದರೆ ಸಾಕು. ಸಮುದ್ರಗಳೊಳಗೆ ಹಾತಿರುವ, ವರ್ತಮಾನಗಳು ಹೋಗಿ ಬರುವಂಥಾ ತಂತಿಗಳೂ, ಘಾಟಾಮಾರ್ಗಗಳೂ ಸಮಸ್ತ ರಾಜ್ಯಗಳಿಗೂ ಮುಕ್ತವಾಗಿ ಎಲ್ಲರಿಗೂ ಉಪಯೋಗವಾಗಬೇಕು. ಇದಕ್ಕೆ ಒಪ್ಪಿಕೊಳ್ಳುವುದಾದರೆ ಮತ್ತು ಬೆಲ್ಜಿಯಮ್‌ಗೂ ಜರ್ಮನಿಗೂ ವ್ಯಾಪಾರ ವಿಷಯದಲ್ಲಿ ಪರಸ್ಪರ ಸಂಬಂಧವನ್ನು ನೆಲೆಗೊಳಿಸುವುದಾದರೆ ಜರ್ಮನಿಯು ಬೆಲ್ಜಿಯಮ್ ದೇಶವನ್ನು ಬಿಟ್ಟುಕೊಡುವುದಕ್ಕೆ ಒಪ್ಪುವುದು ಎಂಬದಾಗಿ ಬರೆದನು.

ಗೃಹಕೃತ್ಯದ ನೋಟೀಸು.

ಮೈಸೂರು ತಾಲ್ಲೋಕು ಕಸಬ ಆಲನಹಳ್ಳಿ ಗ್ರಾಮದಲ್ಲಿರುವ ಒಕ್ಕಲಿಗರ ಜಾತಿ ಲಕ್ಕೇಗೌಡನ ಮಗ ಮುದ್ದೇಗೌಡನು ತಿಳಿಸುವದೇನಂದರೆ—ಡಿಟೋ ಆಲನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 91-94-85 ಒಟ್ಟು ವಿಸ್ತೀರ್ಣ ಎಕರೆ 15 ಗುಂಟೆ 35 ಆಕಾರ ರೂ 14-8-0 ಉಳ್ಳ ಖುಷ್ಕಿ ಜಮೀನುಗಳು ನಮ್ಮ ಪಿತ್ರಾರ್ಜಿತವಾಗಿರುತ್ತವೆ. ಇವುಗಳಿಗೆ ನಾನೊಬ್ಬ ಹಕ್ಕುದಾರನಾಗಿರುವಲ್ಲಿ ನನ್ನ ತಂದೆಯಾದ ಲಕ್ಕೇಗೌಡನೂ ನನ್ನ ತಮ್ಮನಾದ ಕರೀಗೌಡನೂ ಸಹ ಸೇರಿ ನನಗೆ ಮೋಸಮಾಡಬೇಕೆಂದು ಮೇಲ್ಕಂಡ ಜಮೀನುಗಳನ್ನೂ ಮತ್ತು ಡಿಟೋ ಗ್ರಾಮದಲ್ಲಿ ನಮ್ಮ ಪಿತ್ರಾರ್ಜಿತವಾಗಿ ಬಂದಿರುವ ಒಂದು ಮನೆ, ಎರಡು ಹುಲ್ಲು ಹಿತ್ತಲುಗಳನ್ನೂ ಸಾಕಾದ ಯಾವದೊಂದು ಕಾರಣಗಳಿಲ್ಲದೆ ಕ್ರಯ, ಭೋಗ್ಯ, ಆಧಾರ ವಗೈರೆ ಪರಾಧೀನ ಮಾಡುವ ಪ್ರಯತ್ನದಲ್ಲಿರುವದರಿಂದ ಮೇಲ್ಕಂಡ ಸ್ವತ್ತುಗಳನ್ನು ಯಾರೇ ಆಗಲಿ, ಯಾವ ವಿಧವಾಗಿ ಆಗಲಿ ನನ್ನ ಸಮ್ಮತಿ ಇಲ್ಲದೆ ನಡೆದುಕೊಂಡಲ್ಲಿ ಸದರಿ ಪರಾಧೀನವು ಊರ್ಜಿತವಾಗತಕ್ಕದ್ದಲ್ಲವೆಂತಲೂ ಮತ್ತು ಇದರಿಂದ ನನಗೆ ಸಂಭವಿಸುವ ಎಲ್ಲಾ ವಿಧವಾದ ನಷ್ಟಗಳಿಗೂ ಜವಾಬ್ದಾರರಾಗುತ್ತಾರೆಂತಲೂ ಈ ಮೂಲಕ ಪ್ರಕಟಿಸಿ ಎಚ್ಚರಿಸುತ್ತೇನೆ.

[95-1] ಲಕ್ಕೇಗೌಡನ ಮಗ ಮುದ್ದೇಗೌಡನ ರುಜು.

ತರಿಸಿ ನೋಡಿ.

ಬಾಲವ್ಯಾಕರಣ—ಲೋ. ಸೆ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾಗಿದೆ 0-6-6. 1916 ನೇ ಲೊ. ಸೆ. ಟೆಕ್ಸ್ಟಿನ ಪ್ರಶ್ನೋತ್ತರ 0-3-0. ವ್ಯಾಕರಣ ಪ್ರಶ್ನೋತ್ತರ (ಸಂಪೂರ್ಣವಾದ ಉತ್ತರಗಳಿವೆ) 0-1-0. [100-1]

ಕೆ. ಆರ್. ನಾರಾಯಣಯ್ಯ. ಕನ್ನಡ ಪಂಡಿತ ಹೈ ಸ್ಕೂಲ್, ಚಿಕ್ಕಬಳ್ಳಾಪುರ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-38] GIRLS' INDUSTRIAL SCHOOL, HASSAN.

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಈ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸುವುದು. ನಮ್ಮ ಏಜಂಟರು ಪಿ. ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಆಖೈರಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಕಡೂರು ಕೋ-ಆಪರೇಟಿವ್ ಸೊಸೈಟಿ (ಲಿಮಿಟೆಡ್).

1915 ನೇ ಏಪ್ರಿಲ್ ಆಖೈರು ವರೆಗಿನ ಜಮಾ ಖರ್ಚು.

ಮೂಲಧನ ರೂ. 30,000.

ಜಮಾ ಬಾಬುಗಳು.

(1)	ಷೇರು ಕಂತುಗಳಿಗೆ	13,326- 6-0
(2)	ಷೇರು ಫೀ ಅಡ್ಮಿಷನ್	484- 2-0
(3)	ಬಡ್ಡಿ ಮತ್ತು ಇತರೆ	2,817- 3-1
(4)	ಡಿಪಾಜಿಟ್ ಜಮಾ—	
	ಮೆಂಬರ್ 1,284- 6-9; ಇತರೆ 1,650-10-3	2,935- 1-0
	ಜುಮ್ಲಾ ರೂ.	19,562-12-1

ಖರ್ಚು ಬಾಬುಗಳು.

(1)	ಮೆಂಬರುಗಳಿಗೆ ಕೊಟ್ಟಿರುವ ಸಾಲ	18,860-12-0
(2)	ಕಂಟಿಂಜಂಟು	264- 3-9
(3)	ಸಿಬ್ಬಂದಿ	128- 5-4
(4)	ಹಾಜರಿರುವ ಸಾಮಾನು	210- 0-0
(5)	ನಗದು ಹಾಜರಿ	90- 7-0
	ಜುಮ್ಲಾ ರೂ.	19,562-12-1

ಷೇರುದಾರರುಗಳಿಗೂ ಬಾಕಿದಾರರುಗಳಿಗೂ ಅರಿಕೆ ಮಾಡಿಕೊಳ್ಳುವದು—

ತಹಲ್‌ವರೆಗೆ ಸಾಲ ಪಡೆದಿರುವವರ ಪೈಕಿ ಬಾಯಿದೆ ಮೀರಿ ನೋಟೀಸು ವಗೈರೆ ಕ್ರಮನಡಿಸಿರುವವರಲ್ಲಿ ಕೆಲವರು ತಮ್ಮ ಷೇರನ್ನೇ ಖರ್ಚುಹಾಕಿ ಜಮಾ ಮಾಡಿಕೊಳ್ಳಬೇಕಾಗಿ ತಿಳಿಸಿದಾರೆ. ಇದು ರೂಲ್ಸಿಗೆ ವಿರೋಧ. ಷೇರುದಾರರುಗಳು ಕೊಟ್ಟಿರುವ ಷೇರುಮೊಬಲಗನ್ನು ಸೇರು ಭರ್ತಿ ಆದ ಒಂದು ವರುಷದ ವರಿಗೂ ವಾಪಸು ಪಡೆಯಲು ಅವಕಾಶವಿಲ್ಲವಾದ್ದರಿಂದ ಈಗಲೂ ಬಾಕೀದಾರರುಗಳು ಬಾಕಿ ಮೊಬಲಗನ್ನು ಪಾವತಿಮಾಡಬೇಕಾಗಿ ತಿಳಿಸಿದೆ. ಇನ್ನು ಕಾಲಹರಣ ಮಾಡಿದಲ್ಲಿ ರೂಲ್ಸು ಅನುಸರಿಸಿ ಕ್ರಮನಡಿಸಬೇಕಾಗುತ್ತೆಂದು ಖಂಡಿತ ತಿಳಿಸಿದೆ.

[101-1] (ಡೈರೆಕ್ಟರುಗಳ ಅಪ್ಪಣೆ ಪ್ರಕಾರ)

23-5-1915. ಕೆ. ಪರಮೇಶ್ವರಯ್ಯ, ಆನರರಿ ಸೆಕ್ರೆಟರಿ.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-16] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.



ಮೇ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಮೇ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಮೇ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಅರ್ಧಕ್ಕೆ ಕೊಡಲ್ಪಡುತ್ತೆ. [99-5]

ವಿಳಾಸ—ವಿ. ಕೆ. ಕಂಣುಸ್ವಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

CORONATION WATCH

Half Prize Re. 1-14-0.

ಮೇ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇನ್ನು ಭಾರಿ ಕ್ರಯವುಳ್ಳ ಕೈಗಡಿಯಾರವನ್ನು ನಮ್ಮ ಕಂಪನಿ ಹೆಸರು ಪ್ರಖ್ಯಾತಿಹೊಂದುವದಕ್ಕೆ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಅರ್ಧ ಕ್ರಯ ರೂ 1-14-0 ಗೆ ಕೊಡುತ್ತೇವೆ. ಈ ಸಮಯ ಬಹು ಶ್ಲಾಘ್ಯವಾದದು. [97-1]

ನಮ್ಮ ವಿಳಾಸ:—ಕಮಲರಾಂ ಅಂಡ್ ಕಂಪನಿ, ನಂ 28, ಇರುಳಪ್ಪನ್ ಬೀದಿ, ಮದರಾಸ್.

ಇದನ್ನು ಅವಶ್ಯವಾಗಿ ನೋಡಿರಿ.

ಜುಬಿಲಿ ಸ್ಪ್ರಿಂಗ್ ಪಾಕೆಟ್ಸ್ (ರಿಜಿಸ್ಟರ್ಡ್) ವಾಚ್.

ಇದರ ಕ್ರಯ 8 ಬಹುಮಾನಗಳ ಸಮೇತ ರೂ. 3-4-0.

ಸಂತೋಷಕರವಾದ ವಾಚ್! ಸಂತೋಷಕರವಾದ ಬಹುಮಾನ!

ಸಂತೋಷಕರವಾದ ಬೆಲೆ!

5 ವರುಷದ ಗ್ಯಾರಂಟಿ ಕೊಡಲ್ಪಡುತ್ತೆ.

ಮಿತ್ರರೆ, ಈ ನಕ್ಷೆಯಲ್ಲಿ ತೋರಿಸಿರುವ ಜುಬಿಲಿ ಸ್ಪ್ರಿಂಗ್ ಪಾಕೆಟ್ಸ್ ರಿಜಿಸ್ಟರ್ಡ್ ವಾಚ್ 5 ರತ್ನಗಳು ಉಳ್ಳ ಕೇಸಿಸ್ ಬ್ಯಾಲೆನ್ಸ್, ಬಹು ಬಲಿಷ್ಠವಾದ ಗಡಿಯಾರ. ಈ ಗಡಿಯಾರ ನಾಜೂಕಾದ ಯಂತ್ರದಲ್ಲಿಯೂ, ಶ್ರೇಷ್ಠವಾದ ಎನಾಮೆಲ್ ಕೆಲಸದಲ್ಲಿಯೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟದ್ದು. ಇದನ್ನು ಕೈಗೂ ಕಟ್ಟಿಕೊಳ್ಳಬಹುದು. ಇದು ನೋಡುವದಕ್ಕೆ ಸುಂದರವಾಗಿಯೂ, ಮುಚ್ಚಟನಾಗಿಯೂ ಇರುತ್ತೆ.



ನಾವು ಪ್ರತ್ಯೇಕವಾಗಿ ತರಿಸುತ್ತೇವೆ. ನಮ್ಮ ಕಂಪನಿ ಹೊಸದಾಗಿ ಇರುವದರಿಂದ ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶವಾಗಿಯೂ, ಭಾರಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಸೊಗಸಾದ ಗಡಿಯಾರವನ್ನು ಕೂಡಲೆ ಬರೆದು ತರಿಸಿಕೊಳ್ಳಿ. ಬಹುಮಾನ ತಪಸೀಲು ಹ್ಯಾಗಂದರೆ—(1) ಸುಂದರವಾದ ಸರಪಣಿ, (2) ಉತ್ತರ ಮುಖಿ, (3) ಇಂಗ್ಲೀಷ್ ನಮೂನೆ ಬಾಚಣಿಗೆ, (4) ಜಪಾನ್ ಕನ್ನಡಿ, (5) ಜಪಾನ್ ಸಿಲ್ಕು ಕರವಸ್ತ್ರ, (6) ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ (ಬಹು ಸೊಗಸಾದುದು), (7) ಪಂಟು ಗುಂಡಿ ಸೆಟ್, (8) ಸುವಾಸನೆಯುಳ್ಳ ಪರಿಮಳ ಸೀಸೆ (ಸೆಂಟ್).

ನಮ್ಮ ವಿಳಾಸ:—ಕಮಲರಾಂ ಅಂಡು ಕಂಪನಿ,

[97-1] ನಂ. 28, ಇರುಳಪ್ಪನ್ ಬೀದಿ, ಸಾಹುಕಾರ್ ಪೇಟೆ, ಮದರಾಸು.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವವಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಶಮನಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಣೆ 6, ವೈಖರಣೆ 1, ತಾಂಬೂಲ ಪಾತ್ರ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಒಟ್ಟು 60. ನಮ್ಮ ಕಂಪನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಶಾಂತಿ ಕಂಪನಿ.

[73-5] ನಂ. 2, ಇರುಳಪ್ಪನ್ ಬೀದಿ, ಮದರಾಸ್.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದ ಕಾಳ್ಬಾದೇವಿ ರೋಡಿನಲ್ಲಿ ಕೆಲವು ಟೋಪಿಗಳ ಅಂಗಡಿಗಳಿಗೆ ಬೆಂಕಿಬಿದ್ದು ಸುಮಾರು 30,000 ರೂಪಾಯಿನ ಸರಕು ಸುಟ್ಟು ಹೋಯಿತು.

ಮದರಾಸ್ ಶಾಖೆಯ ಯುದ್ಧದ ಫಂಡಿಗೆ ಬ್ರಿಟಿಷ್ ಇಂಡಿಯಾ ಸ್ಟೀಮ್ ನ್ಯಾವಿಗೇಷನ್ ಕಂಪನಿಯವರು ಪ್ರತಿ ತಿಂಗಳಲ್ಲೂ 10,000 ರೂಪಾಯಿನಂತೆ ಚಂದಾ ಕೊಡಲೊಪ್ಪಿರುವುದಾಗಿ ಲಾರ್ಡ್ ಇಂಚ್‌ಕ್ಯಾಪ್‌ರವರು ಮದರಾಸ್ ಗವರ್ನರವರಿಗೆ ಕಾಗದ ಬರೆದಿದ್ದಾರೆ.

ನವದ್ವೀಪದ ವೈಷ್ಣವ ಸಮ್ಮೇಳನದಲ್ಲಿ ನದಿಯಾ ಪಂಡಿತ ಮಂಡಲಿಯವರು ಐದನೇ ವಾರ್ಷಿಕ ಸಭೆಯನ್ನು ನಡಿಸಿ, ಬಂಗಾಳದಲ್ಲಿ ಸಂಸ್ಕೃತ ವಿದ್ಯಾ ಪ್ರಚಾರಕ್ಕಾಗಿ ವಿಶೇಷ ಸಹಾಯಮಾಡುತ್ತಿರುವ ಕಾಸಿಂಬಜಾರ್ ಮಹಾರಾಜಾ ಮಣೀಂದ್ರ ಚಂದ್ರ ನಂದಿ ಬಹದೂರ್‌ರವರಿಗೆ "ವಿದ್ಯಾರಂಜನಾ" ಎಂಬ ಬಿರುದನ್ನು ಕೊಟ್ಟಿರುತ್ತಾರೆ.

ಮದರಾಸ್ ರೈಲ್ವೆಯಲ್ಲಿ ಮುರಾಜಿಗೂ ಬುಬ್ಬನ್‌ಗೂ ನಡುವೆ ದೊಳ್ಳಂಡ್ ಉಮಾಜಿ ಎಂಬೊಬ್ಬ ಮಾರ್ವಾಡಿಯು ರೈಲ್ ಗಾಡಿಯಲ್ಲಿ ಮಿಸೆಸ್ ದಾಸ್ ಎಂಬಾಕೆಯ ಮೇಲೆ ಮಾನಭಂಗಮಾಡಬೇಕೆಂದು ಬಿದ್ದನೆಂಬದಾಗಿ ಹೊರಿಸಿದ್ದು ಆಗ ಬೆಳ್ಗಾವದ ದಂಡಿನ ಮ್ಯಾಜಿಸ್ಟ್ರೇಟರು ಆ ಮಾರ್ವಾಡಿಗೆ 60 ರೂಪಾಯಿ ಜುಲ್ಮಾನೆ ವಿಧಿಸಿದರು.

ಸರ್ ಹಾರ್ಕೋರ್ಟ್ ಬಟ್ಲರವರು ವೈಸ್‌ರಾಯರವರ ಎಗ್ಸಿಕ್ಯುಟಿವ್ ಕೌನ್ಸಿಲ್‌ನಲ್ಲಿ ಹಿಂದುಸ್ಥಾನದ ವಿದ್ಯಾ ಇಲಾಖೆಯ ಮೆಂಬರಾಗಿದ್ದು ಸೀಮೆಗೆ ತೆರಳಿದರು. ಅವರ ಸ್ಥಾನಕ್ಕೆ ಚಕ್ರವರ್ತಿಸಾರ್ವಭೌಮರವರು ಸರ್ ಸಿ. ಶಂಕರನ್ ನಾಯರವರನ್ನು ನೇಮಕಮಾಡಿರುತ್ತಾರೆ. ಇವರು ಮದರಾಸ್ ಹೈಕೋರ್ಟಿನಲ್ಲಿ ಒಬ್ಬ ಜಡ್ಜರಾಗಿದ್ದು ಇಂಡಿಯಾ ಗವರ್ನ್‌ಮೆಂಟಿನವರ ಪ್ರೀತಿ ಸನ್ಮಾನಗಳಿಗೆ ಪಾತ್ರರಾಗಿರುವರು.

ಸರ್ ಅಲಿ ಇಮಾಮ್‌ರವರು ಈಗ ಇಂಡಿಯಾ ಗವರ್ನ್‌ಮೆಂಟಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ಕಾನೂನುಗಳ ರಚನೆಗೆ ಸಂಬಂಧಪಡುವ ವಿಚಾರಗಳನ್ನು ನೋಡಿಕೊಳ್ಳುತ್ತಿದ್ದಾರೆ. ಇವರು ತಮ್ಮ ಅಧಿಕಾರದ ಅವಧಿ ಪೂರೈಸಿದ ಬಳಿಕ ಹೈದರಾಬಾದಿಗೆ ಬಂದು ಆ ಸಂಸ್ಥಾನದ ಮಂತ್ರಿ ಪದವಿಯನ್ನು ಪಡೆಯುವರೆಂಬ ಪ್ರವಾದವುಂಟಾಗಿತ್ತು. ಈ ಸುದ್ದಿಯು ನಿಜವಲ್ಲವೆಂದೂ, ಅವರು ಬಂಕಿಪುರದಲ್ಲಿ ವಕೀಲರಾಗಿ ನಿಲ್ಲುತ್ತಾರೆಂದೂ ತಿಳಿಸಲ್ಪಟ್ಟಿದೆ.

ಮಾದಕವಸ್ತುಗಳನ್ನು ಜನಗಳು ಕನಿಕರವಿಲ್ಲದೆ ದುಡಿಸುವುದನ್ನೂ ನಾನಾ ಪ್ರಕಾರವಾಗಿ ಬಳಸಿಕೊಳ್ಳುವುದನ್ನೂ ತಪ್ಪಿಸಬೇಕೆಂದು ಕಾನೂನು ಮಾಡಲಾಗಿದೆಯಷ್ಟೆ. ಈ ಕಾನೂನಿನ ಕಲ್ಪಿತ್ತಿಯಲ್ಲಿ ಅಷ್ಟೇನೂ ಪ್ರಯೋಜನವಾಗಿಲ್ಲವೆಂದೂ ಕಂಡುಬಂದಿರೋಣದರಿಂದ ಆ ಕಾನೂನನ್ನು ಯಾವ ರೀತಿ ಬದಲಾವಣೆ ಮಾಡಬಹುದೆಂದೂ, ಸರ್ಕಾರದವರೂ ಪ್ರಜೆಗಳೂ ಕಲೆತು ಈ ಉದ್ದೇಶವನ್ನು ಯಾವ ರೀತಿ ನೆರವೇರಿಸಬಹುದೆಂದೂ ಯೋಚಿಸಿ ತಿಳಿಸಬೇಕೆಂಬದಾಗಿ ಬಂಗಾಳ ಗವರ್ನ್‌ಮೆಂಟಿನವರು ಅಪ್ಪಣೆ ಕೊಟ್ಟು ಅದಕ್ಕಾಗಿ ಒಂದು ಪಂಚಾಯತಿಯನ್ನು ನೇಮಕ ಮಾಡಿದ್ದಾರೆ.

ಬಂಗಾಳ ಗೋಪ್ಯ ಪೋಲೀಸ್ ಹುದ್ದೇದಾರನಾಗಿದ್ದ ದ್ವಿಜೇಂದ್ರ ಚಂದ್ರ ಮುಖರ್ಜಿಯು 14 ವರುಷದ ಒಬ್ಬ ಹುಡುಗಿಯನ್ನು ಗುಂಡಿನಿಂದ ಹೊಡೆದು ಕೊಂದದ್ದಕ್ಕೆ ಜಿಲ್ಲಾ ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆಯನ್ನು ವಿಧಿಸಿದರು. ಹೈಕೋರ್ಟಿನಲ್ಲಿ ಅವನ ಅಪೀಲ್ ಅರ್ಜಿಯು ವಜಾ ಆಯಿತು. ಅವನು ಒಂದು ಬೆಕ್ಕನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟ ಹಾಗೂ, ಆಚಾತುರ್ಯದಿಂದ ಗುಂಡು ಹೋಗಿ ಆ ಹುಡುಗಿಗೆ ಬಡಿಯಿತೆಂದೂ ಡಿಫೆನ್ಸು ಹೇಳಿದ್ದನು. ಈ ಕಾರಣವನ್ನು ಸೆಷನ್ಸ್ ಜಡ್ಜಿಯವರಾಗಲಿ, ಹೈಕೋರ್ಟ್ ಜಡ್ಜಿಗಳಾಗಲಿ ನಂಬಲಾರದೆಹೋದರು.

ಪಂಜಾಬ್ ಆಧಿಪತ್ಯದಲ್ಲಿ ಪ್ರಕಟವಾಗುತ್ತಿದ್ದ ಹಾಮ್‌ದಾರ್ಡ್ ಮತ್ತು ಕಾಮ್ರೇಡ್ ಎಂಬ ಎರಡು ಮಹಮ್ಮದೀಯ ಪತ್ರಿಕೆಗಳನ್ನು ಸರ್ಕಾರದವರು ಹುಕುಂ ಕೊಟ್ಟು ನಿಲ್ಲಿಸಿಬಿಟ್ಟಿದ್ದಾರೆ. ಆ ಪತ್ರಿಕೆಗಳ ಎಡಿಟರುಗಳಾಗಿದ್ದ ಮಿ|| ಮಹಮ್ಮದಲ್ಲಿಯವರೂ, ಮಿ|| ಷೌಕತ್ ಅಲ್ಲಿಯವರೂ ಮೆಹರಾಲ್ ಎಂಬ ಊರಿನಲ್ಲೇ ಇರಬೇಕೆಂದೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಪ್ಪಣೆಪಡೆಯದೆ ಅಲ್ಲಿಂದ ಹೊರಗೆ ಹೋಗಕೂಡದೆಂದೂ, ರಾಜಕೀಯ ಅಥವಾ ಸಾರ್ವಜನಿಕವಾದ ಯಾವ ಸಭೆಗಳಿಗೂ ಹೋಗಕೂಡದೆಂದೂ ಗವರ್ನ್‌ಮೆಂಟಿನವರು ಈಗ ಅವರಿಗೆ ಹುಕುಂ ಕೊಟ್ಟಿರುವರು.

ಕಲ್ಕತ್ತಾ ಪಟ್ಟಣದ ಒಂದು ದೇಶೀಯ ಹೋಟೇಲಿನಲ್ಲಿ ಕೆಲವು ಕ್ರೈಸ್ತರೂ ಮುಸಲ್ಮಾನರೂ ಕುಳಿತು ತಿಂಡಿತಿನ್ನುತ್ತಾ ಯುದ್ಧದ ವಿಚಾರವಾಗಿ ಮಾತನಾಡುವಲ್ಲಿ ಟರ್ಕಿಯವರ ಸೋಲನ್ನು ಕ್ರೈಸ್ತರು ವಿವರಿಸಿ ಹೀಯಾಳಿಸಿದನು. ಮುಸಲ್ಮಾನರು ಎದುರುವಾದಿಸಿದರು. ಹಾಗೆಯೇ ಮಾತುಗಳಿಂದ ಒಬ್ಬರೊಬ್ಬರಿಗೆ ಕೈ ಕೈ ಮಿಲಾಯಿಸಿತು. ಕಡೆಗೆ ದೊಡ್ಡ ಜಗಳವಾಗಿ ಅನೇಕರು ಸೇರಿ ದೊಂಬಿ ಆಯಿತು. ಪೋಲೀಸಿನವರು ಹೋಗಿ ಆ ಕ್ರೈಸ್ತರ ಮೇಲೆ ಫಿರ್ಯಾದುಮಾಡಿದರು. ಪಂಚಾಯಿತರ ಅಭಿಪ್ರಾಯವನ್ನು ಅಂಗೀಕರಿಸಿ ಜಡ್ಜರು ಹತ್ತು ಮಂದಿಗೂ ಕಠಿಣ ಹದಿನೆಂಟು ತಿಂಗಳಂತೆ ಕಠಿಣಸಜಾ ವಿಧಿಸಿರುತ್ತಾರೆ.

ಹರಿದ್ವಾರದಲ್ಲಿ ಕೆಲವು ದಿನಗಳ ಕೆಳಗೆ ದೊಡ್ಡ ಜಾತ್ರೆ ನಡೆದ ಸಂದರ್ಭದಲ್ಲಿ ಅನೇಕ ಯಾತ್ರಿಕರು ಅಕಾಲಮರಣವನ್ನು ಹೊಂದಿದರೆಂದು ವರ್ತಮಾನ ಹುಟ್ಟಿಕೊಂಡಿತು. ಸರ್ಕಾರದವರು ಈ ಅನಾಹುತದ ಪೂರ್ವೋತ್ತರವನ್ನು ಕುರಿತು ತನಿಖೆಮಾಡಿಸಿದರು. ಒಂದು ಇಕ್ಕಟ್ಟಾದ ಮತ್ತು ಇಳಿಜಾರಿನ ಸ್ಥಳದಲ್ಲಿ ಜನರು ನುಗ್ಗಿ ಬಿದ್ದುಬಿಟ್ಟಾರೆಂದು ಸರ್ಕಾರದವರು ಒಂದು ಕಟಕಟೆಯನ್ನು ಕಟ್ಟಿಸಿದ್ದರು. ಜನರು ಆ ಮಾರ್ಗವಾಗಿ ನುಗ್ಗಿಹೋದಾಗ ಜಾರಿ ಅಕ್ಕಕ್ಕೆ ಬಿದ್ದು 22 ಮಂದಿ ತುಳಿದಾಡಿ ಸತ್ತುಹೋದರು. ಇವರಲ್ಲಿ 9 ಮಂದಿ ಗಂಡಸರು, 13 ಮಂದಿ ಹೆಂಗಸರು. ಜಖಂ ಆಗಿದ್ದ ಇಬ್ಬರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ಮೃತಿಹೊಂದಿದನು. ಒಬ್ಬ ಹುಡುಗನ ಶವವನ್ನು ಬಂಧುಗಳು ಸಾಗಿಸಿಕೊಂಡು ಹೋದರು. ಅಂತು ಈ ಅನಾಹುತದಿಂದ 24 ಮಂದಿ ಮೃತಪಟ್ಟರು. ಇದಕ್ಕೆ ಯಾರೂ ಕಾರಣರಲ್ಲ. ಇದು ಆಕಸ್ಮಿಕವಾದ ಸಂಭವವೆಂದು ಸರ್ಕಾರದವರು ಪ್ರಕಟಪಡಿಸಿರುತ್ತಾರೆ.

ಬಂಗಾಳದಲ್ಲಿ ದೇಶಾಭ್ಯುದಯಕಾಂಕ್ಷಿಗಳಾದ ದೇಶೀಯ ಮಹನೀಯರು ಚಂದಾ ಹಣಗಳನ್ನು ಕೂಡಿಸಿ ಒಂದು ಫಂಡನ್ನು ಮಾಡಿಕೊಂಡು ಹತ್ತು ವರುಷದಿಂದಲೂ ದೇಶೀಯ ವಿದ್ಯಾವಂತರುಗಳನ್ನು ಪರದೇಶಗಳಿಗೆ ಕಳುಹಿಸಿ ಶಾಸ್ತ್ರೀಯವಾದ ಕಸಬುಗಳನ್ನೂ ಬೇರೆ ಬೇರೆ ಕಲೆಗಳನ್ನೂ ಕಲಿತುಕೊಂಡು ಬಂದು ಸ್ವಸ್ಥಾನಕ್ಕೆ ಸೇರಿಕೊಳ್ಳುತ್ತಿದ್ದಾರೆ. ಈ ಫಂಡಿನ 11 ನೇ ವರುಷದ ವಾರ್ಷಿಕ ಸಭೆಯು ಕಳೆದ ವಾರ ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಜರುಗಿತು. ಘನವೆತ್ತ ಡಾಕ್ಟರ್ ದೇವಪ್ರಸಾದ ಸರ್ವಾಧಿಕಾರಿಯವರು ಸಭೆಯ ಅಗ್ರಾಸನವನ್ನು ವಹಿಸಿದರು. ಈ ಫಂಡಿನ ಸಂಪ್ರಯೋಜನಾದಿಗಳನ್ನು ಸೆಕ್ರೆಟರಿಯವರು ವಿವರಿಸಿ ರಿಪೋರ್ಟ್ ಓದಿದರು. ಅದರಿಂದ ತಿಳಿಯುವ ಸಂಗತಿಗಳೇನೆಂದರೆ— ಈ ಫಂಡಿನಿಂದ ದ್ರವ್ಯಸಹಾಯಪಡೆದು ಅನ್ಯದೇಶಗಳಿಗೆ ಹೋಗಿರುವ ವಿದ್ಯಾರ್ಥಿಗಳಲ್ಲಿ 130 ಮಂದಿ ಕಲೆಗಳನ್ನು ಕಲಿತು ವಾಪಸು ಬಂದಿದ್ದಾರೆ. ಈ ಪೈಕಿ 100 ಜನರು ಕೆಲಸಗಳಲ್ಲಿ ಸೇರಿಕೊಂಡಿರುವರು. ಈಗ ಈ ಫಂಡಿನಿಂದ ಸಹಾಯ ಹೊಂದುವ 103 ವಿದ್ಯಾರ್ಥಿಗಳು ಪರದೇಶಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಪೈಕಿ ಇಬ್ಬರು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಕೆಲಸವನ್ನು ಕಲಿಯುವರು. ಬರುವ ವರುಷದಲ್ಲಿ ಈ ಫಂಡಿನ ಹಣದಿಂದ ಸಹಾಯಪಡೆದು 13 ಮಂದಿ ವಿದ್ಯಾರ್ಥಿಗಳು ಇಂಗ್ಲೆಂಡಿಗೂ, 7 ಜನ ಅಮೇರಿಕಕ್ಕೂ, ಒಬ್ಬನು ಜರ್ಮನಿಗೂ ಹೋಗುತ್ತಾರೆ.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

"ಜ್ವರಜಮಾತ್ರೆ" ಬಹು ಖಂಡಿತ: ಬಹು ಜಾತಿಯಿಂದ ಎಲ್ಲಾ ವಿಧ ಜ್ವರಗಳನ್ನೂ ನಿವಾರಿಸಿ ಶಾಶ್ವತ ಗುಣಕೊಟ್ಟಿದೆ. ಇದರಿಂದ ಗುಣ ಕಾಣದವರೇ ಇಲ್ಲ. 21 ಮಾತ್ರೆ ಶೀಷೆಗೆ 8 ಆಣೆ. 6 ಶೀಷೆಗೆ 2¾ ರೂ. ಇನ್ನೂ ಬಹು ಗುಣಕಾರಿ ಔಷಧಿಗಳು ನಮ್ಮಲ್ಲಿವೆ.

[262-26] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿದರು ಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ ಹುಳುತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟನೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-39]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಿಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗಗಳನ್ನೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುತ್ತಮಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-28] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು.

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 60 ವಯಸ್ಸಿನವರಿಗೂ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮೆ ಮಾಡಿ ಮಾಹೆಯಾನಾ ಒಂದು ರೂಪಾಯಿ ಚಂದಾ 15 ವರುಷದ ವರಿಗೆ ಕೊಡುತ್ತಾ ಬರುವದು. ಕಂಪನಿಗೆ ದಾಖಲಾಗಿ ಪಾಲಿಸಿ ಪಡೆದು ಸಲೀಸು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ನಫೆ ಸಮೇತ ನಾಮಿನಿಗೆ ಕೊಡಲಾಗುತ್ತೆ. 20 ವರುಷದವರೆಗೂ ಜೀವಂತರಾಗಿದ್ದಲ್ಲಿ 600 ರೂಪಾಯಿಗೆ ಜಾಸ್ತಿ ಇಲ್ಲದ ಪಾಲಿಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಬ್ರಾಂಚಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಣ್ಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿನಂತೆ ಕೊಡುತ್ತಾ ಬರುವದು. ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲೂ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅತ್ಯಾವಶ್ಯಕವಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿದಾರ್ರ ಹಣವು ಹಂಚಿಕೆ ರೀತಿಯಲ್ಲಾ ಜೀವವಿಮೆ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೊಡುವ ಮೊಬಲಗಿಗೆ ಕಾಲಕ್ಕೆ ಸರಿಯಾಗಿ ವಿಮೆ ಮೊಬಲಗು ಪಾವತಿ ಮಾಡುವದಕ್ಕೂ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜರು ಏಜೆಂಟ್ರು ಖುದ್ದು ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ. [292-23]

ಒಳ್ಳೆ ಚಟುವಟಿಕೆಯುಳ್ಳ ನಂಬಿಕಸ್ಥರಾದ ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಳು ರೂಪಾಯಿ ಅಲೋಯನ್ಸ್ ಕೊಡಲಾಗುತ್ತೆ. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್ರಿಗೆ ಬರೆಯಿರಿ:—

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜೆಂಟ್ರು, 166 ದೊಡ್ಡಪೇಟೆ, ಮೈಸೂರು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

One energetic and experienced *Secretary* for the Branch Office to be opened shortly at Bangalore, and District Agents for each and every district in the Mysore Province *on both commission and office allowance*. Secretary's allowance *Rs. 50-20-200*, and that of District Agents *Rs. 25* per mensem. Also taluk and local directors required in each and every taluk in the Province. *Security and good reference essential.* For prospectuses and other particulars please apply, with your experience in the line, to

M. L. NAGANNA,

15-20. Managing Director, Life & Marriage Assurance Buildings, Mysore.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಖರ್ಚು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[64-8]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ನೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಬೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಓರಿಯೆಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮ॥ ಎಂ. ಎಸ್. ರಂಗಾಚಾರಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎನ್. ಸಂಜೀವಯ್ಯನವರು ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[221-33] ಬ್ರಾಂಚ್ ಸೆಕ್ರೆಟರಿ, ಮದರಾಸ್.



ಅನಾಹುತಗಳು ಸಂಭವಿಸುವವು!

ಕೆಲಸಮಾಡುವ ಯಾವ ಮನುಷ್ಯನಾದರೂ, ಕೆಲಸವಿಲ್ಲದ ಅನೇಕ ಮನುಷ್ಯರಿಗ್ಲಾದರೂ ಅನಾಹುತಗಳು ಆಗುತ್ತವೆ. ಪ್ರತಿದಿನವೂ ಯಾರಿಗಾದರೂ ಸಂಭವಿಸುತ್ತೆ. ಎಂದಾದರೂ ಒಂದು ದಿನ ಅದು ನಿಮಗೂ ಆದೀತು.

ಏಲಿನಾಯ್ಸಿನ ಶಿಕಾಗೊ ನಗರದಲ್ಲಿರುವ ಮೆ॥ ಓ. ಎಫ್. ಸ್ಟ್ಯಾರ್ ಹೇಳುವದು:—"ಬಾಡಿಯಿಂದ ಇಳಿಯುತ್ತಿದ್ದಾಗ ನನ್ನ ಹೆಂಡತಿಯು ನಿಂತುಕೊಳ್ಳಲಾರದಷ್ಟು ಕಠಿಣವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೀಲು ಪೆಡಸಾಗಿ ಬಹಳ ಊದಿಕೊಂಡು, ಮೆಟ್ಟಿಲವರೆಗೆ ನೋವು ಸಹಿಸಕೂಡದಷ್ಟು ಮಟ್ಟಿಗೆ ಇತ್ತು. ಆಕೆ ಅನೇಕವಾದ ಔಷಧಿಗಳನ್ನೆಲ್ಲಾ ಉಪಯೋಗಿಸಿ, ಆ ತುತ್ತುಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂಡಳು.

ಸೆಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಕುರಿತು ಕೇಳಿ, ಅದನ್ನು ಉಪಯೋಗಿಸಬೇಕೆಂದು ನಿರ್ಧರಿಸಿಕೊಂಡೆವು. ಅದನ್ನು 3 ದಿನಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು."

ಸೀಸೆ 1ಕ್ಕೆ 1 ರೂ. ಮೇರಿಗೆ ಎಲ್ಲಾ ಔಷಧಿಗಾರರಲ್ಲಿಯೂ ಸಿಗುತ್ತೆ.

[81 4]

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ. ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಸೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಪೀಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರೆಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಪೀಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರೆಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರೆಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರೆಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟು ಪೀತಾಂಬರ ಕಂಪೆನಿ,

[63-6] ಧಾರಾನಗರ್ ಪೇಟೆ, ಕಾಶಿ.

ಪರಸ್ಥಳದ ಆರ್ಡರುಗಳು ಬರುವ ಮೇ 16 ರ ವರೆಗೆ ನಡೆಸಲ್ಪಡುತ್ತೆ.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷಿನರಿ ಕಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಲ್ಲಾಕ-ಕಾ-ಸಿಟಿಯ, 20-2-15.

ಅರ್ಧಬೆಲೆ ಮಾತ್ರ.

ಸಿರಾಕರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೋಲ್ಡ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಗಳ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಟೈಂ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕಿ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ಏಕೇಕ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡ ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,

[266-26] ಪಿ. ಓ. ಬಾಕ್ಸ್ 330, ಬೊಂಬಾಯಿ.

ಸಾತಾರದ ಪ್ರಸಿದ್ಧ ಕೋಲ್ಹಟಕರ.

ರಾಜವೈದ್ಯಕೃತ

ಮಲರೋಗ, ಫಿಟ್ಸ, ಬಾಲಗ್ರಹ, ಅಪಸ್ಮಾರ, ಹುಚ್ಚು ಹಿಡಿದಿದ್ದಿಗಿನ ಬೇನೆ, ಹಾಗೂ ಎಲ್ಲ ಪ್ರಕಾರದ ಜ್ವರ, ಅರ್ಧಾಂಗವಾಯು, ಇತ್ಯಾದಿ ನಾನಾ ತರದ ಬೇನೆ ಮುಂತಾದವುಗಳ ಮೇಲೆ ಅಸ್ಸಲ್ಲಿಯು ಗುಳಿಗೆಗಳು, ಸಣ್ಣವರ, ಹಾಗೂ ದೊಡ್ಡವರ ಎಲ್ಲ ಹೊಸ, ಹಾಗೂ ಹಳೇ ಬೇನೆಗಳ ಸಲುವಾಗಿ ನಿಶ್ಚಿಗಾಗುತ್ತವೆ. 1 ಬಾಟಲಿಯ ಬೆಲೆ 2-0-0 ಅಂಚೆಖರ್ಚು ಪ್ರತ್ಯೇಕ ಸಹಿತವಾಗಿ. ರೋಗದ ಹಣವನ್ನು ಕಳಿಸಿ, ಅಥವಾ ವಿ. ಪಿ. ಯಿಂದ ಬೇಕು. ಹೆಚ್ಚಿನ ಮಾಹಿತಿಯು ಪತ್ರವ್ಯವಹಾರದಿಂದ. [91]

ಗುಳಿಗೆಗಳು ಮಾರುವದರ ಸಲುವಾಗಿ ಊರೂರಿಗೆ ಏಜಂಟರು ಬೇಕು.

ನಮ್ಮ ವಿಳಾಸ—ಸಖಾರಾಮ ಅಪ್ಪಾಜಿ ಕೋಲ್ಹಟಕರ, ವೈದ್ಯ,

ದವಾಖಾನಾ, ಠಾಕುರದ್ವಾರ ರೋಡ, ಮುಂಬಯಿ, ನಂ. 2.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ಕಷ್ಟ ವ್ಯಾಧಿಗಳಿಗೂ ಅಮೃತತುಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಶಾಂತಪಡಿಸಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ಇದು ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಪಡಿಸುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಕ್ಷಯಕಾಸಹರ ಅವಲೇಹ—ಉಬ್ಬಸ, ಕೆಮ್ಮು, ಕ್ಷಯ ಮತ್ತು ಕ್ಷಯಂ ರೋಗ ಮುಂತಾದ ರೋಗಗಳಿಗೆ ಕೂಡ ಇದು ಅಮೃತತುಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಗಳ ದೊಡ್ಡ ಕೆಟಲಾಗು ಕೇಳಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-28] 20, ಚೀನಾಬಜಾರು ರೋಡು, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—5—1915 ರಿಂದ 7—5—1915 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		0	0	0	0
ಮೈಸೂರು	,,	26	13	0	0
ಕೋಲಾರ್	,,	1	1	0	0
ಕೋಲಾರ್ ಚಿನ್ನದ ಗಣಿಗಳು		1	1	0	0
ತುಂಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	0	0	0	0
ಶಿವಮೊಗ್ಗ	,,	5	0	0	0
	ಜುಮ್ಲಾ......	33	15	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ವಸಂತಋತೌ ನಿಜ ವೈಶಾಖ ಶುದ್ಧ ಪೌರ್ಣಮಿ ಶುಕ್ರವಾರದಿಂದ ನಿಜ ವೈಶಾಖ ಬಹುಳ ಷಷ್ಠಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಮೇ.

ತಾ.	ವಾರ		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವೈಶಾಖ ತಿಥಿ
28	ಶುಕ್ರ	†	ಪೌರ್ಣಮಿ	53-26	ವಿಶಾಖ	9-27	15
29	ಶನಿ		ಪಾಡ್ಯಮಿ	47-10	ಅನೂರಾಧ	5-16	16
30	ಭಾನು	§	ಬಿದಿಗೆ	41-12	ಜ್ಯೇಷ್ಠ	1-10	17
31	ಸೋಮ	‡	ತದಿಗೆ	35-41	ಪೂರ್ವಾಷಾಢ	53-37	18
1	ಮಂಗಳ		ಚೌತಿ	30-13	ಉತ್ತರಾಷಾಢ	50-55	19
2	ಬುಧ		ಪಂಚಮಿ	26-33	ಶ್ರವಣ	48-56	20
3	ಗುರು	*	ಷಷ್ಠಿ	23-18	ಧನಿಷ್ಠ	48-6	21

† ಶ್ರೀನೃಸಿಂಹಜಯಂತಿ, ವ್ಯಾಸಪೌರ್ಣಿಮಿ, ಅರ್ಧನಾರೀಶ್ವರ... ಮಳೆ ನಕ್ಷತ್ರ—ರೋಹಿಣಿ 2 ನೇ ಪಾದ. § ಶ್ರೀಲಕ್ಷ್ಮೀರಮಣಸ್ವಾಮಿ ... ‡ ಸಂಕಟಹರಚತುರ್ಥೀ, ಮದ್ದೂರು ನೃಸಿಂಹಸ್ವಾಮಿ ರಥ, ಕಂಟ ... ಸ್ವಾಮಿ ರಥ, ಅಗ್ನಿನಕ್ಷತ್ರ ನಿವೃತ್ತಿ, ಮಳೆ ನಕ್ಷತ್ರ—ರೋಹಿಣಿ 3 ನೇ ... * ಷಷ್ಠೀತಿಥಿ, ದಗ್ಧಯೋಗ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೂ, ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಋತು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಬಿ. ಸಿ. ಷಾ ಕಂಪನಿ, 177,

[25-17] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

Printed and Published by the Rev. H. Go... Proprietor and Manager, Wesleyan Mission Press, Mysore. 27/5/1915.

VOL-13

3-6-1915

25-5-1916

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ | ಮೈಸೂರು—ಸನ್ ೧೯೧೬ನೇ ಇಸವಿ ಜೂನ್ ತಾರೀಖು ೮ ನೇ ಗುರುವಾರ. | ಸಂಚಿಕೆ ೧

ಕಾಫಿ ತೋಟಕ್ಕೆ ರೈಟರು ಬೇಕು.

ಕೊಡಗಿನಲ್ಲಿ 150 ಎಕರೆ ಕಾಫಿ ಎಸ್ಟೇಟಿಗೆ ಅನುಭವಸ್ಥನಾದ ಒಬ್ಬ ರೈಟರು ಬೇಕಾಗಿದೆ. ಚೆಕ್ ರೋಲ್ ಮತ್ತು ಅಫೀಸ್ ಬುಕ್ಕುಗಳ ಅನುಭವ ಇರಬೇಕು. ಸಂಬಳ 35 ರೂಪಾಯಿ ... ರೂಪಾಯಿ ತನಕ ಕೊಡಲಾಗುತ್ತದೆ. ಕೈನಾಗಿನ ಒಬ್ಬ ಆಳನ್ನು ... ಒಳ್ಳೆಯ ಸರ್ಟಿಫಿಕೇಟುಗಳನ್ನು ಪಡೆದಿರುವವರು ಮಾತ್ರ ಅರ್ಜಿ ಬರೆದುಕೊಳ್ಳತಕ್ಕದ್ದು.

ಈ ವಿಳಾಸಕ್ಕೆ ಅರ್ಜಿ ಬರೆಯತಕ್ಕದ್ದು:—ಕಾಫಿ ಪ್ಲಾಂಟರ್,

] ಕೇರಾಫ್ "ವೃತ್ತಾಂತ ಪತ್ರಿಕೆ" ಮೈಸೂರು

ಸಿ. ಎಸ್. ಪುಲಕೇಶ್ಯ ಅಂಡ್ ಬ್ರದರ್ಸ್.

ರೇಷ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ನಮ್ಮಲ್ಲಿ ಉತ್ತಮವಾದ ರೇಷ್ಮೆ ವಸ್ತ್ರಗಳು, ಮಗಟಗಳು, ಅಂಚುಪಟ್ಟೆಗಳು, ಒಂಗೆ ಧರಿಸುವ ವಸ್ತ್ರಗಳು, ಸಾಧಾರಣ ಬೆಲೆಗಳು ಬಹಳ ಚೆನ್ನಾಗಿ ದೊರೆಯುತ್ತವೆ. [105-1]

ರೇಷ್ಮೆ ವಸ್ತ್ರಗಳು ದರಗಳು ಮಗಟ. ರೇಷ್ಮೆ ಶೀರೆ, ಲಿಂಗವಸ್ತ್ರ.

1 ನೇ ನಂಬರು 0-7-6, | 1 ನೇ ನಂಬರು 0-8-0

2 ,, ,, 0-7-0 ಜೋಡಿ 1 ಕ್ಕೆ | 2 ,, ,, 0-7-6

0-6-9

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡ ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ಸಿದ್ಧವಾಗಿ ... ...

...	...-0	...	...-0
ಶಾರದಾಸುಂದರಿ	0-8-0	ಕನ್ಯಾದಿನ	...-0
ರಾಘವಾನಂದ	0-8-0	ಸಂತಾವರ	...-0

75-25] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY MYSORE.

Reformed Primer 0-4-0, Macmilan's New English Reader I 0-4-0, II 0-6-0, III 0-8-5, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-11-0, Radhakrishna Iyer's Arithmetic 0-11-0, First Lessons in Geography 0-12-0, Junior Geograpy 0-12-0, ...ಚಂದ್ರಸಾರ 0-8-0, L. S. English Texts 0-10-0, Canarese Text 0-4-6, English Ntes 0-6-0, Canarese Notes 0-4-0 and 0-7-0. [8-21]

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯಾದ ಶಾಸ್ತ್ರೋಕ್ತವಾದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಳಕೆಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40. 2 ನೇ ದರ್ಜೆ ರೂ. 26. 3 ನೇ ದರ್ಜೆ ರೂ. 10.

[28-17] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

MYSORE L. S. EXAMINATION, 1916.

Free! Free for this Week!! Free!!!

Full Notes on Two English Texts 0-5-0.

A Copy of **Spelling Book** on Small Orders, and **English Papers** on Large Orders given **Free**.

English Essays and Letters 0-6-0.

Apply to—**M. N. SITA RAMA RAO,**

[38-3] **Krishnaraja Mohalla, Mysore.**

ದುರ್ಗಾದಾಸ.

ಇದು ಬಂಗದೇಶದ ಪ್ರಖ್ಯಾತ ಕವಿ ದ್ವಿಜೇಂದ್ರಲಾಲರಾಯರ ನಾಟಕವನ್ನು ಅನುಸರಿಸಿ ಅವರ ಅನುಮತಿಯಿಂದ ಆರ್. ವ್ಯಾಸರಾಯರಿಂದ ಪ್ರಕಾಶಪಡಿಸಲ್ಪಟ್ಟಿದೆ.

ಕಥೆ ಬಹಳ ಸ್ವಾರಸ್ಯವಾಗಿದೆ. ಕ್ರಯ 12 ಆಣೆ.

ವಿಳಾಸ—ಕೆ. ಎ. ಚೌರಪ್ಪ ಅಂಡ್ ಸನ್ಸ್,

[98-2] ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

NOTICE.

Notes on The Story of Rama and Romantic Tales and Legends, the Lower Secondary English Texts for 1916, by Mr. S. V. Pichamuttu, B. A., are now available at Messrs. K. A. Chourappa and Sons, Bangalore, City, and at The Students' Hall, Mysore. [96-2]

Price, Six annas a Copy.

ಮಧುರವಾಣಿ.—ಉತ್ತಮ ವರ್ಗದ ಮಾಸಪತ್ರಿಕೆ!

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ, ರಾಜಕೀಯ ವಿಷಯಗಳನ್ನೊಳಕೊಂಡಿರುವುದು. ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. [100-46]

ಅತ್ಯುತ್ತಮ ಕಾದಂಬರಿಗಳು:—ಜಯ! ಪಾಲ್ಕೀಕಿ 12 ಆ; ಅಶ್ವತ್ಥಪ್ಪನ 1½ ಆ; ಅಡವಿಯ ರಾಜ 1½ ಆ; ಕನ್ಯಾಬಲಿ 6 ಆ; ತಾರಾ 8 ಆ; ರಂಗನ ಮಹುವ 1 ಆ; ದಿಷವಿವಾಹ 4 ಆ; ಅನಾಥಪ್ರೇತ 1 ಆ; ಸನ್ಯಾಸಿ 1½ ಆ; ಸಾಹಸಿಕ 2½ ಆ; ಸುಶೀಲೆ 6 ಆ; ನಭಾ ಭಾಗ I, 8 ಆ; ವಿಲಕ್ಷಣ ದೈವಘಟನೆ 4 ಆ; ಇತ್ಯಾದಿ. ನಮ್ಮ ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರು (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಶಮನಮಾಡುವದು. ಕಣ್ಣಿನಲ್ಲಿ ಮಂಜನ್ನು ಕಳೆದು, ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನು, ಮನಸ್ಸಿಗೆ ಸಂತೋಷವನ್ನು, ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಅಹ್ಲಾದವನ್ನು ಉಂಟುಮಾಡುವದಲ್ಲದೆ ಐಪ್ಪಾಣ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಸೇವಂತಿಗೆ, ಕ್ಯಾದಿಗೆ, ಗುಲಾಬಿ, ದಿವ್ಯಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯುಳ್ಳ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಅದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಯೊಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲಿ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿ:—ಸ್ತ್ರೀಯರು ತಲೆಯಲ್ಲಿ ಇಡುವ ಕೊಂಡೆ ಕುಚ್ಚು 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಡ್ಡಿ 1, ವಾಸನೆಯುಳ್ಳ ... 1, ಕಾಂಬಿನೇಷನ್ ... 22, ಕೊಂಡೆ ಗಿಣಿಗಳು 6, ... 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,

[87-3] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾದ ... ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು! ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ... ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅವಶ್ಯವಾದ ಸಹಾಯಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ... ಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತಲೆಯ ಕೂದಲಿಗೆ ... ಎಂದಿಗೂ ... ಬಿಳಿಯಾಗುವದಿಲ್ಲ ... ರಾದ; ಅದರ ಅತಿ ದಟ್ಟವಾಗಿ ... ಸಮೃದ್ಧವಾಗುವವು. ... ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀರುತರದ ಎಣ್ಣೆಗಳನ್ನು ಕೊಂಡು ... ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಾಳುಮಾಡುವದು ... ತೈಲವು ಬರ್ಮಿಂಗ್‌ಹಾಮಿನ ... ಯೋಗ್ಯ ಪರೀಕ್ಷೆ... ಶ್ರೀಮಜ್ಞಾನ... ಕೆಯ ಮನೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಸ್ವಹಸ್ತರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ಬೇಗಿನ ... ಬಂಧುಗಳು ... ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹಿಸುವದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿನಿಂದ ತಮಗೆ ಹೆಚ್ಚು ಲಾಭ ದೊರೆಯುತ್ತದೆಂತ, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರೆಯತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ತರಿಸಿಕೊಳ್ಳಿರಿ. ವಸ್ತು ಮುಕರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಆಕರ್ಷಕವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಹನಿ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಬೇಗನೆ ಆರಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅಷ್ಟು ಬೇಗನೆ ಆರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-19]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ದೊಡ್ಡದು) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಸಾಬೂನು ... ಒಂದಕ್ಕೆ 0-12-0.

ಎಲ್ಲಾ ಪೇಟೆಗಳಲ್ಲಿ ದೊರೆಯುವದು ಅಥವಾ ನಮ್ಮ ವಿಳಾಸ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ

ಜುಮ್ಮಾಮಸ್ಜಿದ್, ಬೊಂಬಾಯಿ

... ...

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫಲೆ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು ; ಆದರೆ ನಮ್ಮ ಈ ಸಾನೊಫಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ ;

[172-43]

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವದು



ಅತ್ಯದ್ಭುತವಾದ ಜಪಾನ್ ಮಾತ್ರೆಗಳು
ಒಂದು ಸಲ ಪರೀಕ್ಷಿಸಿ ನೋಡಿರಿ.
ಅಸಮಾನವಾದದ್ದು.

ಜಿನ್‌ಟಾನ್ ಎನ್ನುವದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು; ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭ್ರಾಂತ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಉಪನ್ಯಾಸಕಾರರು. ಚುಟ್ಟಾ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಶ್ಯ ಹಾಕುವವರು, ಹೆಂಡ ಸೇವಿಸುವವರು ಉಪಯೋಗಿಸಿದಲ್ಲಿ ದುರ್ವಾಸನೆಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ಕಾಂಟಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಟ 1 ಕ್ಕೆ	....	ಕ್ರಯ	0-1-6
65 ,, ,, ,,	....	,,	0-3-0
195 ,, ಪೊಟ್ಟ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ		,,	0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	...	,,	1-2-0

[80-5]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಸ್. ಸುಬ್ರಹ್ಮಣ್ಯಂ ಕಂಪೆನಿಯಲ್ಲಿ ಬಿಕರಿಗೆ ಇಡಲಾಗಿದೆ.

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಪದಿನೈದು ಸಲ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಮಧುರವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿನಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಛಾರ್ಜು 0 3

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಛಾರ್ಜು 0 6

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಮೂಲಧನ ಐದು ಲಕ್ಷ.

ಈ ಕಂಪನಿಯ ಮುಖ್ಯ ಅನುಕೂಲಗಳು.

(1) ಈ ಕಂಪನಿಯಲ್ಲಿ 18 ವರುಷದ ಲಾಗಾಯ್ತು 50 ವಯಸ್ಸಿನವರಿಗೆ ಇರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಸಹಾ ಜೀವವಿಮಾ ಮಾಡಿ ನಾಪೆ ಯಾನಾ ಒಂದು ರೂಪಾಯಿ ಚಂದಾ 15 ವರುಷದ ವರಿಗೆ ಕೊಡುತ್ತಾ ಬರುವರು. ಕಂಪನಿಗೆ ದಾಖಲಾಗಿ ಪಾಲಿಸಿ ಪಡೆದು ಸರಿಯು ಪ್ರಿಮಿಯಂ ಪಾವತಿ ಮಾಡುತ್ತಾ ಇದ್ದು ಒಂದು ವರುಷದ ನಂತರ ಮೃತಪಟ್ಟಲ್ಲಿ 200 ರೂಪಾಯಿ ಪಟ್ಟೆ ನಮೀನ ನಾಮಿನಿಗೆ ಕೊಡಲಾಗುತ್ತೆ. 20 ವರುಷದವರಿಗೂ ಜೀವಂತರಾಗಿ ದ್ದಲ್ಲಿ 600 ರೂಪಾಯಿಗೆ ಜಾಸ್ತಿ ಇಲ್ಲದೆ ಪಾಲಿಸಿದಾರರಿಗೇನೆ ಕೊಡಲಾಗುತ್ತೆ.

(2) ಮದುವೆ ಫಂಡಿನಲ್ಲಿ ವಯಸ್ಸು ಕ್ಲಿಪ್ತವಿಲ್ಲದೆ ಎಲ್ಲಾ ಹೆಣ್ಣು ಗಂಡು ಮಕ್ಕಳು 15 ವರುಷದವರಿಗೆ ಮಾಹೆಯಾನಾ ಒಂದು ರೂಪಾಯಿನಂತೆ ಕೊಡುತ್ತಾ ಬರುವರು ಕಂಪನಿಗೆ ಸೇರಿದ 2 ವರುಷದ ಮೇಲೆ ಯಾವಾಗ ಮದುವೆ ಆದಲ್ಲೂ ಮದುವೆಗೆ ಮುಂಚಿತವಾಗಿ ಕಂಪನಿಗೆ ತಿಳಿಸಿದರೆ 250 ರೂಪಾಯಿ ಸಾಲಾ ಅಡ್ವಾನ್ಸಾಗಿ ಕೊಡಲಾಗುತ್ತೆ.

(3) ಈಗಿನ ಕಾಲದ ಇತರ ಕಂಪನಿ ಹಾಗೆ ಈ ಕಂಪನಿಯಲ್ಲಿ ಪಾಲಿಸಿ ದಾರ್‍ರ ಹಣವು ಹಂಚಿಕೆ ರೀತಿಯಲ್ಲಾ ಜೀವವಿಮಾ ರೀತಿಯಾಗಿಯೇ ಇರುತ್ತೆ. ಆದ್ದರಿಂದ ಈ ಕಂಪನಿಗೆ ಸೇರಿರುವ ಮತ್ತು ಸೇರುವ ಪಾಲಿಸಿದಾರರು ಕೇಳುವ ವೇಳೆಗೆ ಕಾಲಕ್ಕೆ ಸರಿಯಾಗಿ ವಿಮಾ ಹಣವು ಪಾವತಿ ಮಾಡುವದಕ್ಕೆ ಕಂಪನಿಯ ಡೈರೆಕ್ಟರು ಮತ್ತು ಮ್ಯಾನೇಜಿಂಗು ಏಜಂಟ್ಸು ಮುಖ್ಯ ಜವಾಬ್ದಾರರಾಗಿರುವದಲ್ಲದೆ ನಾವೂ ಸಹಾ ಪ್ರತಿ ಪಾಲಿಸಿದಾರರಿಗೂ ಜವಾಬ್ದಾರರಾಗಿರುತ್ತೇವೆ. [292-24]

ಒಳ್ಳೆ ಚಟವಟಿಕೆಯುಳ್ಳ ನಂಬಿಕಸ್ಥರಾದ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಮತ್ತು ಮಾಹೆಯಾನಾ ಏಲು ರೂಪಾಯಿ ಅಲೋಯನ್ಸ್ ಕೊಡಲಾಗುತ್ತೆ. ಪಟ್ಟಿನ ವಿಷಯಗಳಿಗೆ ಈ ಕೆಳಗಿನ ವಿಳಾಸದಾರ್‍ರಿಗೆ ಬರೆಯಿರಿ:—

ಮೆಸ್ಸರ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ಸು, 166 ದೊಡ್ಡಪೇಟೆ, ಮೈಸೂರು.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಬಾಕ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನು ಸಾಹಾ ಬಹಾವತ್ತು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಯಮೂಲಕ ಕಳುಹಿಸಿಕೊಡಿ"—ಕೆ. ರಾಮಸ್ವಾಮಿ, ಪಲ್ಲಾಸ-ಕಾ-ಟಿಬನ, 20-2-15.

ಅರ್ಧಬೆಲೆ ಮಾತ್ರ.

ಸಿರಾಕರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎಂಟು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಕ್ಕೆ ... ಸಲ ಕೀ ಕೊಡಲ್ಪಡುವ ... ಯಾರವು ... ಸಕ್ಕಲ್ ಬೆಳ್ಳಿ ಗಡಿ ... ಬಹಳ ದಿವಸ ... ದವರೆಗೂ ... ಬಾಳಿಕೆ ಬರುವವಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಹಾಗಿಲ್ಲ. ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲ ರೂ. 16-0-0. ಈಗ ನಮ್ಮ ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ... 0-0. ಗ್ಯಾರಂಟಿ 10 ವರ್ಷಗಳು. ಕೆಟಲಾಗ್ ... ಇಂಗ್ಲಿಷಿನಲ್ಲಿ, ಕ್ಯಾಟಲಾಗು ... ವಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ, ಪಿ. ಓ. ಬಾಕ್ಸ್ 330, ಬೊಂಬಾಯಿ. [M.27]

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ॥ 6,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂತಿರುವವರು ... ಅವರು ಫಾರಂ ಮುಂತಾದದ್ದಕ್ಕೆ ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಂಡರೆ ಕಳುಹಿಸುತ್ತಾರೆ. ಚೀಫ್ ಏಜಂಟ್, ಬೆಂಗಳೂರು ... —ಮ॥ ಎಂ. ಎಸ್. ರಾಜಯ್ಯನವರು ಮ॥ ವೆಂಕಟರತ್ನಂಶೆಟ್ಟರು; ಮ॥ ಎಂ. ಎಸ್. ವಂಕಟಪ್ಪನವರು [221-34] ... ಕಂಪನಿ ಏಜಂಟರು, ಮೈಸೂರು; ಅಥವಾ ಬ್ರಾಂಚ್ ಸೆಕ್ರಟರಿ, ಮದರಾಸ್.

ಹೊಸ ಭೂವಿವರಣೆ.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ ಲೋವರ್ ಸೆಕೆಂಡರಿ ಕನ್ನಡ ಟೆ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ, [13—16] ಸುಬೋಧ ಗ್ರಂಥಾಲಯ, ಮೈಸೂರು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. CAPITAL Rs. 500,000. Soundest Principles.

Free Insurance and Provident Marriage and Upanayana) Policies are a speciality. Two-in-one (Share Policy) Scheme and Property investment (Land and house purchase and investment) Schemes are a novelty.

ಆಫೀಸ್ ಆರ್ಗನೈಸರ್ ... ಬೇಕಾಗಿದೆ.

ನಮ್ಮ ಏರುಗಾಗುವದಕ್ಕೆ ವೃದ್ಧಿಯುಳ್ಳ ಮತ್ತು ಕಮಿಷನ್ ... ಕಂಪನಿಯು ಜೀವವಿಮ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳ ಮತ್ತು ... ಡಿಸ್ಟ್ರಿಕ್ಟು ... ಸಂಬಂಧಿಸಿದ ಮತ್ತು ಚಟುವಟಿಕೆಯುಳ್ಳ ಡಿಸ್ಟ್ರಿಕ್ಟು ಮತ್ತು ... ಮನೆಗಳನ್ನು ಕೊಂಡುಕೊಂಡುವ ಸಹಾ ಬೇಕಾಗಿದೆ. ... ಬ್ರಾಂಚುಗಳ ... ಲೋಕಲ್ ಡೈರೆಕ್ಟರುಗಳಾ ... ದಯವಿಟ್ಟು ಬರೆಯಿರಿ.

[15-21]

M. L. NAGANNA, Managing Director, Life & Marriage Assurance Buildings, Mysore.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ... ನಮ್ಮ ಕಂಪನಿಯು ಎರಡು ರೂಪಾಯಿಗಳ ... ಕೊಂಡ ... ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ... ರೂ. 1-10-0. ಇದು ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆ; 6 ಕ್ಕೆ 13 ಆಣೆ; ... ಮುಗಿದ ... ಮಲಾರವು. ಆದುದರಿಂದ ತ್ವರೆಮಾಡಿ! [64-9]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ... ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆ ನೋವು, ಶಿರೋಭಾರ, ಅರ್ಧತಲೆನೋವು, ... ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ... ಆರಾಮವಾಗುವವು. ಈ ಔಷಧಿಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ... ಲೋಕಪ್ರಖ್ಯಾತವಾದ ಅಮೃತಾಂಜನವನ್ನು ... ದುಬಾರಿ ಮತ್ತು ಹಲವು ಭಾಷೆಗಳಲ್ಲಿ ಸುಂದರವಾದ ಕರಪತ್ರಗಳು ... ಪ್ಯಾಕ್‌ಮಾಡುತ್ತೇವೆ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ ... ವಿ. ಪಿ. ಪ್ರತ್ಯೇಕ. ... ಮು 0-8-0. ದಂತಮಂಜನ 0-2-0. ಮೋಟಾ ತೈಲ 0-12-0. ... ಮುಲಾಮು 0-8-0. ಸುಂದರ ಮುಲಾಮು 0-8-0. ... ಕೊಡಿರಿ. ಎಲ್ಲಾ ... ವ್ಯಾಪಾರಸ್ಥರಿಗೆ ಬೇರೆ ಕಮಿಷನ್ ದೊರೆಯುವದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ. ಮತ್ತು ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕತಾಪಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ... ಶಾಸ್ತ್ರೋಕ್ತ ಪ್ರಕಾರ ... ಕಸ್ತೂರಿ ಮೊದಲಾದ ಹೆಚ್ಚು ... ಕೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ. ಧಳೀಜ್ವರ ಜ್ವರ, ಹೊಟ್ಟೆ ... ತಲೆನೋವು, ಮೈ ಕಾಲು ಸೊಡೆತ (ಭಾವು), ಮೈ ನಡುಕ, ಶೀತ ... ಕಾಸ, ಶ್ವಾಸ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು ... ಹೊಟ್ಟೆನೋವು, ಕಫ, ಜನ್ನಿ, ಅರಿಶಿನಕಾಮಾಲೆ, ಇನ್ನೂ ಅನೇಕ ರೋಗಗಳಿಗೆ ರಾಮಬಾಣ ... ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ... ಶರೀರ ... ರಕ್ತದಲ್ಲಿರುವ ದೋಷ ... ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ... ಜ್ವರ, ನಿತ್ಯಜ್ವರ, ಕ್ಷಯರೋಗಗಳನ್ನು ನಿವಾರಿಸುವುದರಲ್ಲಿ ... ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ... ಬುಡ್ಡಿಗೆ 4 ಆಣೆ. 8 ಬುಡ್ಡಿಗೆ ಒಂದು ಬುಡ್ಡಿ ಹೆಚ್ಚು. 12 ಬುಡ್ಡಿಗಳವರೆಗೆ ಪೋಸ್ಟೇಜು 4 ಆಣೆ. [190-33]

(1) ಮ॥ ಎ. ಸಿ. ಮಿತ್ರನ್, ಹೆಡ್ ಮಾಸ್ಟರ್, ... ಪ್ರಾಕ್ಟಿಕ್ ಡಾ. ಎಂ. ಆ. ಸ್ಕೂಲ್, ದಾಂಡು, ಹೌರಾ ಡಿಸ್ಟ್ರಿಕ್ಟು, ಅವರು ಬರೆಯುವುದು.—"ಬಹು ದಿನಗಳಿಂದ ... ಆಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ... ಗುಣವಾಗಲಿಲ್ಲ. ನನ್ನ ಮಿತ್ರರಾದ ಅ॥ ಸರ್ಕಾರರು ಲೋಕತಾಪಯಹರ ಕಸ್ತೂರಿ ಮಾತ್ರೆ ... ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಖಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತು ... ಮುಂದೆ ... ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು."

(2) ಮ॥ ಎಸ್. ಅನಂತಪದ್ಮನಾಭಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು, ಅವರು ಬರೆಯುವುದು.—"ನನ್ನ ತಂಗಿಯು (ಗೂರಲು ಗನೆ) ಶ್ವಾಸಕಾಸವು ... ಔಷಧಗಳಿಂದಲೂ ಗುಣವಾಗದೆ ... ನಿಮ್ಮ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರಿಗೆಲ್ಲರಿಗೂ ಈ ಮಾತ್ರೆಗಳು ... ಗುಣಪಡಿಸಿತು. ಸುಲಭ ಕ್ರಯ, ಮತ್ತು ... ನಮ್ಮ ಈ ಮಾತ್ರೆಗಳನ್ನು ಮನ್ನಿ ... ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಟ್ಟುಪೀತಾಂಬರ ಕಂಪನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ. ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಶೆರಗು, ಬೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಬೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರಿಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ, [63—7] ಧಾರಾನಗರ್ ಬೀದಿ, ಕಾಶಿ.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಜವಾದ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಣವೇ

ಅತೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಅಸೆಪಡಬೇಡಿ. ಅತೋ ಮೋಹಿನಿಯನ್ನು ಉಪಯೋಗಿಸಿ. ನಾಲ್ಕು ದಿನಗಳ ವರೆಗೆ ಇದರ ಸುವಾಸನೆ ನಿಲ್ಲುವುದು. ಇದು ಅಸದೃವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ. 2-0-0; 1 ಡ್ರಾಂ ಶೀಶೆಗೆ 0-12-0; ½ ಡ್ರಾಂ ಶೀಶೆಗೆ 0-8-0; ಅಶೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0. ಕಾದರೆಣ್ಣೆಗೆ ಹಾಕುವ ಬೇರೆ ಕಿರೋಸಿನ್ ಎಣ್ಣೆ ಕೊಡುತ್ತಾರೆ. ಜೋಕೆ! ನಮ್ಮ ದಾಗಿನುಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ಶಾಂತಿ ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕಪ್ಪಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ. ಕ್ರಯ 1 ಬಾಟ್ಲಿಗೆ 1 ರೂಪಾಯಿ; ಟಪಾಲ್ ಖರ್ಚು ಪ್ರತ್ಯೇಕ. 3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ಏಕೆಪದಸ್ಥರಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ವಾ ಭಗವಾನ್ ದಾಸ್ ... ಕಂಪನಿ, [296-23] 177, ... ರೋಡ್, ಮದರಾಸ್.

ಗೃಹಕೃತ್ಯದ ನೋಟೀಸು.

ಹುಣಸೂರು ತಾಲ್ಲೂಕು ಹಿರಿಯೂರುಪಟ್ಟಣದ ಹೋಬಳಿ ಬೆಳ್ಳಹಳ್ಳಿ ಗ್ರಾಮದಲ್ಲಿರುವ ಚನ್ನೇಗೌಡನ ಮಗ ಲಿಂಗಣ್ಣ ಉರುಫ್ ಸಣ್ಣಪ್ಪನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ಅಜ್ಜ ಬಸ್ವೇಗೌಡ, ಕೆಂಪೇಗೌಡ, ನಿಂಗೇಗೌಡ, ಮುದ್ದೇಗೌಡ, ಈ 4 ಜನಗಳೂ ಏಕೋದರರು, ವಿಭಕ್ತರು. 1 ನೇ ಬಸ್ವೇಗೌಡನಿಗೆ ನನ್ನ ತಂದೆ ಒಬ್ಬ ಮಗ. 2 ನೇ ಕೆಂಪೇಗೌಡನಿಗೆ ಮಕ್ಕಳಿಲ್ಲ. 3 ನೇ ನಿಂಗೇಗೌಡನಿಗೆ ...ಯ್ಯನೆಂಬ ಒಬ್ಬ ಮಗ ಇರುತ್ತಾನೆ. 4 ನೇ ಮುದ್ದೇಗೌಡನಿಗೆ ಮಕ್ಕಳಿಲ್ಲ. ದೇವಮ್ಮನೆಂಬ ಹೆಂಡತಿ ಇರುತ್ತಾಳೆ. ಇವಳು ತನ್ನ ಗಂಡನ ಬಾಬ್ತು 600 ರೂಪಾಯಿಯ ಚಿನ್ನ, ಬೆಳ್ಳಿ ನಗಗಳು, 300 ರೂಪಾಯಿ ಬಾಳತಕ್ಕ ಕಾಲುನಡೆ ದನಗಳು, ಸದ್ರಿ ಗ್ರಾಮದಲ್ಲಿರತಕ್ಕ ಸರ್ವೆ 20 ನೇ ನಂಬರು ಖುಷ್ಕಿ ಜಮೀನು, ಒಂದು ಮನೆ ವಗೈರೆ ಚರಸ್ಥಿರ ಸ್ವತ್ತುಗಳನ್ನು ನನಗೆ ವಿರೋಧವಾದ ಜನಗಳ ದುರ್ಬೋಧನೆಯಿಂದ ಪರಭಾರೆಮಾಡುವವಳಾಗಿರುತ್ತಾಳೆ. ಮೇಲ್ಕಂಡ ಮೃತರಿಗೆ ನಾನೂ ಚನ್ನಯ್ಯನೂ ಸಹ ಉತ್ತರಾಧಿಕಾರಿಗಳಾದ್ದರಿಂದ ಡಿಟೋ ದೇವಮ್ಮನಿಗೆ 70 ವರುಷ ವಯಸ್ಸಾಗಿ ಬುದ್ಧಿ ಸ್ಥಿಮಿತವಿಲ್ಲವಾದ್ದರಿಂದ ಇವಳಿಂದ ಯಾರೇ ಆಗಲಿ ಆಧಾರ ಕ್ರಯ ಭೋಗ್ಯ ವಗೈರೆ ಮಾಡಿಕೊಂಡರೆ ಊರ್ಜಿತವಾಗತಕ್ಕದ್ದಲ್ಲ. ಮತ್ತು ನನಗೆ ಉಂಟಾಗುವ ನಷ್ಟಕ್ಕೆ ಗುರಿಯಾಗಬೇಕಾಗುತ್ತೆ. ತಿಳಿಯುವದು. ರುಜು ಲಿಂಗಣ್ಣ ಉರುಫ್ ಸಣ್ಣಪ್ಪ.

ಬೆಳ್ಳಹಳ್ಳಿ.

[102-1]

ಗೃಹಕೃತ್ಯದ ನೋಟೀಸು.

ಮೈಸೂರು ಮಂಡಿ ಮೊಹಲ್ಲಾ ತೊಗರಿಬೀದಿಯಲ್ಲಿರುವ ಕುಂಚಿಗರ ವೇಮಣ್ಣನ ಮಗಳು ಕೆಂಚಮ್ಮ, ನನ್ನ 7 ವರುಷದ ಮೈನರ್ ಮಗ ಅಂಧಕ ತಿಮ್ಮಯ್ಯನು ಸಹಾ ತಿಳಿಯಪಡಿಸುವದೇನಂದರೆ—ಹುಣಸೂರು ತಾ|| ಬಿಲ್ಲಿಕೆರೆ ಹೋ|| ಕಂಪಲಾಪುರದಲ್ಲಿರುವ ನನ್ನ ಗಂಡ ತಿಮ್ಮಯ್ಯನ ಪಿತ್ರಾರ್ಜಿತವಾದ ಡಿಟೋ ಗ್ರಾಮದಲ್ಲಿರುವ ಸರ್ವೆ ನಂ 261-1 ನೇ ಫೋದು ಖುಷ್ಕಿ 6 ಎಕರೆ 34 ಗುಂಟೆ, ಆಕಾರ ರೂ 5-12-0 ಉಳ್ಳ ಜಮೀನು ಪೈಕಿ ಪಶ್ಚಿಮ ದಿಕ್ಕಿನಲ್ಲಿ ನನ್ನ ಗಂಡ ತಿಮ್ಮಯ್ಯನ ಜಮೀನಿಗೆ ರೂ. 3-10-7 ಪೈ ಉಳ್ಳ ಖುಷ್ಕಿ ಜಮೀನು ಒಂದು, ಡಿಟೋ ಗ್ರಾಮದಲ್ಲಿರುವ 220 ನೇ ನಂ. ಅಪ್ಪಣ್ಣಗೌಡರ ಹೆಸರಿನ ಖಾತೆ 8 ಆಣೆ ಕಂದಾಯವುಳ್ಳ ಖಾಲೀಜಾಗ ಒಂದು, ಡಿಟೋ ಗ್ರಾಮದಲ್ಲಿರುವ ಖಾತೆ 221 ನೇ ನಂ. ನನ್ನ ಗಂಡ ತಿಮ್ಮಯ್ಯನ ಹೆಸರಿನ ಪಟ್ಟಾಬಾಬತು 8 ಆಣೆ ಕಂದಾಯದ ಖಾಲೀಜಾಗ ಒಂದು, ಮೇಲ್ಕಂಡ ಜಮೀನು ಒಂದು, ನನ್ನ ಗಂಡನ ಪಿತ್ರಾರ್ಜಿತ ಮನೆ ಮಾರಿ ಈ ಎರಡು ಖಾಲೀಜಾಗ ಖರೀದಿಗೆ ತೆಗೆದುಕೊಂಡಿರುವದರಿಂದ ಸ್ವತ್ತುಗಳನ್ನು ನನ್ನ ಗಂಡನು ಬದ್ಧಿಹಾಲು ಮನುಷ್ಯನಾಗಿರುವ ಕಾರಣ ಈ ಸ್ವತ್ತುಗಳು ನನ್ನ ಗಂಡನಿಗೆ ಸಲ್ಲತಕ್ಕವಲ್ಲವಾಗಿ ಕ್ರಯ, ಆಧಾರ, ಭೋಗ್ಯ ಮುಂತಾಗಿ ಆತನಿಂದ ನಮ್ಮಗಳ ಸಮ್ಮತಿ ಇಲ್ಲದೆ ತೆಗೆದುಕೊಂಡಲ್ಲಿ ಸದರಿ ಸ್ವತ್ತುಗಳು ನಿಮಗೆ ಊರ್ಜಿತವಾಗತಕ್ಕದ್ದಲ್ಲ. ಹಾಗೆ ತೆಗೆದುಕೊಂಡಲ್ಲಿ ನನಗೂ ನನ್ನ ಮಗುವಿಗೂ ಸಂಭವಿಸುವ ವಿಶೇಷನಷ್ಟಗಳಿಗೂ ನೀವೇ ಜವಾಬ್ದಾರರಾಗುತ್ತೀರೆಂದು ಈ ಮೂಲಕ ಎಚ್ಚರಿಸಿರುತ್ತೇನೆ. ಈ ಬಳಿ ಗುರುತು ಕೆಂಚಮ್ಮನ ರುಜು.

[104-1]

ಗೃಹಕೃತ್ಯದ ನೋಟೀಸು.

ದೊಡ್ಡಬಳ್ಳಾಪುರ ತಾಲ್ಲೋಕು ಬೆಳವಂಗಲದ ಹೋಬಳಿ ಕೈವಲಗೆರೆಗೆ ಸೇರಿದ ಮಜರೆ ಕಂಡಿಪಾಳ್ಯದಲ್ಲಿರುವ ಕುಂಚಟಿ ಒಕ್ಕಲಿಗರ ಜಾತಿ ಘಾತಿ ಹುಚ್ಚೀರಯ್ಯನ 3 ನೇ ಮಗ ಪುಟ್ಟಯ್ಯನು ಸಮಸ್ತರಿಗೂ ತಿಳಿಸುವದೇನಂದರೆ—ನನ್ನ ತಂದೆ ಹುಚ್ಚೀರಯ್ಯನೂ, ನನ್ನ ಇಬ್ಬರು ಅಣ್ಣಂದಿರೂ ಮೃತಪಟ್ಟರು. ನನ್ನ ದೊಡ್ಡ ಅಣ್ಣ ಈರಪ್ಪನಿಗೆ ಗಂಡುಮಕ್ಕಳಿಲ್ಲ; ಎರಡನೇ ಅಣ್ಣ ಹನುಮಂತಯ್ಯನಿಗೆ ಇಬ್ಬರು ಗಂಡುಮಕ್ಕಳೂ, ನನಗೂ ಇಬ್ಬರು ಗಂಡುಮಕ್ಕಳೂ ಇರುತ್ತಾರೆ. ಹನುಮಂತಯ್ಯನ ಹೆಂಡತಿಯೂ ಇಬ್ಬರು ಗಂಡುಮಕ್ಕಳೂ ನನ್ನ ಪೋಷಣೆಯಲ್ಲಿ ದಾರೆ. ಮತ್ತು ನಾವು ಮೂವರೂ ಅವಿಭಕ್ತರಾಗಿರುತ್ತೇನೆ ಮೇಲ್ಕಂಡ ಕಂಡಿಗ್ರಾಮದಲ್ಲಿ ನನಗೆ ಪಿತ್ರಾರ್ಜಿತವಾದ ಸರ್ವೆ ನಂ. 46 ಮತ್ತು 49 ಖುಷ್ಕಿ ಜಮೀನು 14 ಎಕರೆ 35 ಗುಂಟೆ, ಕಂದಾಯ ರೂ. 17-8-6 ಉಂಟು. ಈ ಪೈಕಿ ಕೆಲವು ಜಮೀನನ್ನು ನನ್ನ ದೊಡ್ಡ ಅಣ್ಣನ ಹೆಂಡತಿ ಜೀವನಕ್ಕೆ ಬಿಟ್ಟಿರುತ್ತೇನೆ. ಹೀಗಿರುವಲ್ಲಿ ನನ್ನ ದೊಡ್ಡ ಅಣ್ಣನ ಹೆಂಡತಿ ಅಕ್ಕಮ್ಮನು ಮೇಲ್ಕಂಡ ಜಮೀನುಗಳನ್ನೂ ನಮ್ಮ ಮನೆಗಳನ್ನೂ ಇತರರಿಗೆ ಕ್ರಯ, ಭೋಗ್ಯ, ಆಧಾರ, ದಾನಗಳ ಮೂಲಕ ಪರಭಾರೆಮಾಡುವದಕ್ಕೆ ಯಾವ ವಿಧ ಹಕ್ಕಿಲ್ಲದವಳು. ಈ ಅಕ್ಕಮ್ಮನಿಂದ ಯಾರೇ ಆಗಲಿ ನಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ಯಾವ ವಿಧವಾಗಿಯಾಗಲೀ ಪಡೆದುಕೊಳ್ಳಕೂಡದು. ಹಾಗೇನಾದರೂ ಪಡೆದುಕೊಂಡಲ್ಲಿ ಆ ಸ್ವತ್ತು ಅವರಿಗೆ ಸ್ಥಿರಪಡುವದಿಲ್ಲ. ಮತ್ತು ಅದರಿಂದ ನನಗೆ ಸಂಭವಿಸುವ ಎಲ್ಲಾ ನಷ್ಟಕ್ಕೂ ಗುರಿಯಾಗಬೇಕಾಗುತ್ತೆಂದು ಎಚ್ಚರಿಸಿದೇನೆ.

[103-1]

ರುಜು ಪುಟ್ಟಯ್ಯ.

ವೃತ್ತಾಂತ ಪತ್ರಿಕೆ.

—:೦:—

ಸನ್ ೧೯೧೫ ನೇ ಇಸವಿ ಜೂನ್ ತಾ. ೩ ನೇ ಗುರುವಾರ.

ನಮ್ಮ ಸಂಸ್ಥಾನದ ಹಣಕಾಸುಗಳು.

ಕಂಟ್ರೋಲರವರಾದ ಮ|| ಜೆ. ಎಸ್. ಚಕ್ರವರ್ತಿಯವರು ಈ ವಾರದ ಮೈಸೂರು ಸರ್ಕಾರು ಗೆಜೆಟ್ಟಿನ ಸಂಗಡ 1913–14 ನೇ ಸಾಲಿನ ನಮ್ಮ ಸಂಸ್ಥಾನದ ಜಮಾ ಖರ್ಚಿನ ಲೆಕ್ಕಗಳ ರಿಪೋರ್ಟನ್ನು ಪ್ರಕಟಿಸಿರುತ್ತಾರೆ. ಆ ಸಾಲು ಪೂರೈಸಿ ಹನ್ನೆರಡು ತಿಂಗಳು ಕಳೆದ ಮೇಲೆ ಈ ಲೆಕ್ಕಗಳು ಪ್ರಕಟವಾಗಿರುವವು. ಸಾಲಿನ ಜಮಾ ಖರ್ಚಿನ ಖಚಿತವಾದ ರಿಪೋರ್ಟು ಪ್ರಕಟಮಾಡುವುದಕ್ಕೆ ಈ ರೀತಿ ಒಂದು ಸಂವತ್ಸರ ಹಿಡಿಯುವುದಾದರೆ ಲೆಕ್ಕಾಚಾರಗಳು ನಡೆಯುವ ಬಾಬಿನಲ್ಲಿ ಏನೋ ಅಕ್ರಮವೂ ಅಜಾಗರೂಕತೆಯೂ ಇರಬೇಕೆನ್ನುವುದು ವೇದ್ಯವಾಗುತ್ತದೆ. ಜಮಾಖರ್ಚಿನ ಲೆಕ್ಕಗಳನ್ನು ಸರಿಯಾದ ಕ್ರಮದಲ್ಲಿ ಇಟ್ಟಿದ್ದ ಪಕ್ಷಕ್ಕೆ ಮತ್ತು ಆಯಾ ಕಾಲಕ್ಕೆ ಸರಿಯಾಗಿ ರವಾನೆ ಮಾಡಿದ್ದ ಪಕ್ಷದಲ್ಲಿ ಕಂಟ್ರೋಲರವರು ಆಖೈರ್ ಲೆಕ್ಕಗಳ ರಿಪೋರ್ಟನ್ನು ಪ್ರಕಟಮಾಡುವುದಕ್ಕೆ ಸಾಲ್ ಮುಗಿದ ಎರಡು ಮೂರು ತಿಂಗಳಿಗಿಂತ ಹೆಚ್ಚಾಗಿ ಬೇಕಾಗಕೂಡದು. ಈಗಿನಂತೆ ಹನ್ನೆರಡು ತಿಂಗಳು ಗತಿಸಿಹೋದ ಮೇಲೆ ಪ್ರಕಟಮಾಡುವ ಲೆಕ್ಕಾಚಾರಗಳನ್ನು ಓದುವುದಕ್ಕೆ ಅಷ್ಟೇನೂ ಸಂತೋಷವಾಗುವುದಿಲ್ಲ.

ಹಣಕಾಸುಗಳು ವೇಗವೇಗನೆ ಹೆಚ್ಚುತ್ತಿರುವವು; ಅವುಗಳ ಲೆಕ್ಕಗಳೂ ವಿಶೇಷ ತೊಡಕಾಗುತ್ತಿರುವವು. ಇದರಿಂದ ಈಗ ಪ್ರಕಟಮಾಡಿರುವ ಬಗೆಬಗೆಯ ಲೆಕ್ಕಗಳನ್ನೆಲ್ಲಾ ಸರಿಯಾಗಿ ಅರ್ಥಮಾಡಿಕೊಳ್ಳುವುದೂ, ತಿಳಿದುಕೊಳ್ಳುವುದೂ ಸುಲಭವಾಗಿಲ್ಲ. ಆ ಸಾಲಿನ ಹುಟ್ಟುವಳಿಯ ಮುಖ್ಯ ಲೆಕ್ಕಗಳೇನೆಂದರೆ— ಬಡ್ಜೆಟ್ಟಿನಲ್ಲಿ ರಾಜಾದಾಯವು ಒಟ್ಟು 2,22,00,000 ರೂಪಾಯಿ ಆದೀತೆಂದು ಅಂದಾಜು ಕಟ್ಟಿದ್ದರು; ಆದರೆ ಈಗ ನೋಡುವಲ್ಲಿ ಬಿರಾವರ್ದಾ ಹುಟ್ಟುವಳಿ ಆಗಿರುವುದು 2,76,70,000 ರೂಪಾಯಿ; ಅಂದರೆ ಅಂದಾಜಿಗಿಂತಲೂ 57,00,000 ರೂಪಾಯಿ ಜಾಸ್ತಿ ಉತ್ಪತ್ತಿ ಆಗಿರುತ್ತದೆ. ಹೀಗೆ ಹುಟ್ಟುವಳಿ ಹೆಚ್ಚಿದ ಬಾಬುಗಳ್ಯಾವುವೆಂದರೆ, ಬೆಂಗಳೂರು ದಂಡಿನ ಹುಟ್ಟುವಳಿ ಶಿಲ್ಕು 30,00,000 ರೂಪಾಯಿ, ಫಾರೆಸ್ಟ್ ಬಾಬಿನಲ್ಲಿ 12,00,000 ರೂಪಾಯಿ, ಎಕ್ಸೈಸ್ 9,00,000 ರೂಪಾಯಿ ರೈಲ್ವೆಗಳು 3,00,000 ರೂಪಾಯಿ. ಹೀಗೆ ಹೆಚ್ಚು ಹುಟ್ಟುವಳಿ ಆದದ್ದು ನಮ್ಮ ಸಂಸ್ಥಾನಕ್ಕೆ ಹೆಚ್ಚು ಲಾಭವಾದಂತೆ ಪರಿಣಮಿಸಿದೆ. ಈ ಭಾಗದಲ್ಲಿ ನಮಗೆ ಪರಮಸಂತೋಷವುಂಟಾಗಿರುವುದು; ಆದರೆ ಒಂದು ಬಾಬಿನಲ್ಲಿ ಮಾತ್ರ ನಾವು ವಿಷಾದಪಡುತ್ತೇವೆ. ಎಕ್ಸೈಸ್ ಬಾಬಿನ ಉತ್ಪತ್ತಿಯು ಈ ರೀತಿ ಸಾಲೇ ಸಾಲ್ ಹೆಚ್ಚುತ್ತಾ ಇರುವುದು ನಮಗೆ ಸಮಾಧಾನವಾಗಿಲ್ಲ. ಹೀಗೆ ಹುಟ್ಟುವಳಿ ಹೆಚ್ಚಿದ್ದಕ್ಕೆ ಮ|| ಚಕ್ರವರ್ತಿಯವರು ಗುತ್ತಿಗೆದಾರರ ಪೋಟಾಪೋಟಿಯೂ, ಮಾದಕ ಪದಾರ್ಥಗಳು ಹೆಚ್ಚು ಬಿಕರಿ ಆದದ್ದೂ, ಹರಾಜು ಗುಟ್ಟಾಗಿ ...ಆಗುತ್ತಿದ್ದದ್ದನ್ನು ತಪ್ಪಿಸಿದ್ದೂ ಕಾರಣಗಳೆಂದು ಹೇಳುತ್ತಾರೆ. ... ಎರಡನೆಯ ಕಾರಣವೇ ವಿಶೇಷವಾದ್ದೆಂದು ನಮಗೆ ತೋರುವುದು. ಇದು ಪ್ರಜೆಗಳು ಕೆಟ್ಟು ಹಾಳಾಗುವುದಕ್ಕೆ ಸಾಧಕವಾದ ವಿಚಾರವಲ್ಲದೆ ಅನ್ಯಥಾ ಅಲ್ಲವೆಂದು ಹೇಳುತ್ತೇವೆ. ಇಂಥಾ ನಾಶಕರವಾದ ಕೇಡನ್ನು ತಪ್ಪಿಸುವುದಕ್ಕೆ ನಮ್ಮ ಸರ್ಕಾರದವರು ಇನ್ನೂ ವಿಶೇಷವಾದ ಶ್ರದ್ಧೆಯನ್ನೂ ಪ್ರಜಾ ಪ್ರೀತಿಯನ್ನೂ ವಹಿಸಬೇಕೆಂದು ... ಸುತ್ತೇವೆ.

ಬಡ್ಜೆಟು ತಯಾರುಮಾಡುವಾಗ್ಗೆ ನಮ್ಮ ಸರ್ಕಾರದವರು 1913–14 ನೇ ಸಾಲಿನಲ್ಲಿ ಒಟ್ಟು 2,78,38,000 ರೂಪಾಯಿ ಖರ್ಚಾದೀತೆಂದು ಅಂದಾಜು ಕಟ್ಟಿದ್ದರು. ಈಗ ನೋಡುವರೆ ಆ ಸಾಲಿನ ಒಟ್ಟು ಖರ್ಚು 2,40,23,000 ರೂಪಾಯಿ ಆಗಿದೆ. ಜಿಲ್ಲಾ ಇಲಾಖೆಯವರು ಖರ್ಚುಮಾಡಲೊಲ್ಲದೆ 3,33,000 ರೂಪಾಯಿ ಉಳಿಸಿಬಿಟ್ಟರು: ಮರಾಮತ್ತು ಬಾಬಿನಲ್ಲಿ 11,30,000 ರೂಪಾಯಿಯೂ, ಸೈನ್ಯದ ಬಾಬಿನಲ್ಲಿ 25,000 ರೂಪಾಯಿಯೂ, ರೈಲ್ವೆ ಬಾಬಿನಲ್ಲಿ 8,83,000 ರೂಪಾಯಿಯೂ, ಕಾವೇರಿ ವಿದ್ಯುಚ್ಛಕ್ತಿ ಬಾಬಿನಲ್ಲಿ 4,42,000 ರೂಪಾಯಿಯೂ, ಬೆಂಗಳೂರು ಟ್ರಾಮ್‌ವೇ ಬಾಬಿನಲ್ಲಿ 6,17,000 ರೂಪಾಯಿಯೂ ಸರ್ಕಾರದಿಂದ ಸ್ಯಾಂಕ್ಷನ್ ಆಗಿದ್ದರೂ ಖರ್ಚುಮಾಡಲಾರದೆ ಉಳಿಸಿಬಿಟ್ಟರು. ಇದೆಲ್ಲಾ ನ್ಯಾಯವಾದ ಉಳಿಕೆಯು ಎನಗಳಾಗಿರುವುದು. ಹಾಗೂ ನಮ್ಮ ಗವರ್ನಮೆಂಟಿಗೆ ದೇಶಾಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಹಣಕ್ಕೆ ಕೊರತೆಯೇನೂ ಇಲ್ಲವೆಂಬುವುದು ಇದರಿಂದ ವೇದ್ಯವಾಗುತ್ತದೆ. ಸಾಮಾನ್ಯವಾದ ಶಿಲ್ಕೆಯ ಖರ್ಚು ಬಡ್ಜೆಟ್ಟಿನಲ್ಲಿ ಕಾಣಿಸಿದ್ದ ಅಂದಾಜಾ ಮೊಬಲಗಿಗಿಂತ 3,00,000 ರೂಪಾಯಿ ಹೆಚ್ಚಾಯಿತು. ಬಡ್ಜೆಟ್ಟಿನ ಪಟ್ಟಿಗಳಲ್ಲಿ ಹೆಚ್ಚು ಹೆಚ್ಚಾಗಿ ಹಣಗಳನ್ನು ಬೇರೆ ಬೇರೆ ಬಾಬುಗಳಿಗೆ ಕೊಡುವುವಾಗಿ ಹಂಚಿಹಾಕುವುದು ವಿವೇಕವೆಂದು ಹೇಳಿದರೂ ಹೇಳಬಹುದು; ಆದರೆ ಅಂಥಾ ಕಾಲಗಳಲ್ಲಿ ಆಯಾ ಖಾಜನ ಸಾಧಕ ಬಾಧಕಗಳನ್ನೂ ಪೂರ್ವಾಪರಗಳನ್ನೂ ಸರಿಯಾಗಿ ಮೊದಲೇ ಸರಿಯಾ ಲೋಚಿಸದೆ ಇರೋಣದರಿಂದ ಈ ರೀತಿ ಹೆಚ್ಚು ಹಣಗಳು ವಿನಿಯೋಗವಾಗದೆ ಉಳಿದುಕೊಳ್ಳುವವೆಂದು ತೋರುತ್ತದೆ.

ಆ ಸಾಲಿನ ಬಡ್ಜೆಟ್ಟಿನ ಪ್ರಕಾರ ಖರ್ಚಿಗಿಂತಲೂ ಉತ್ಪತ್ತಿಯು 56,38,000 ರೂಪಾಯಿ ಶಿಲ್ಕಾಗಿ ಹೋಗುವುದೆಂದು ಸರ್ಕಾರದವರು ಊಹಿಸಿದ್ದರು. ಈಗಲಾದರೋ ಕಾಲಚನ್ನುವು ದಕ್ಕೆ ಪ್ರತಿಯಾಗಿ ಖರ್ಚೆಲ್ಲಾ ಕಳೆದು 30,67,000 ರೂಪಾಯಿ ಶಿಲ್ಕು ಉಳಿದಿರುತ್ತದೆ. ಈ ಶಿಲ್ಕು ಹಣದಲ್ಲಿ ಬಹು ಭಾಗವನ್ನು ನಮ್ಮ ಸರ್ಕಾರದವರು ಸಂಸ್ಥಾನದಾದ್ಯಂತ ರಸ್ತೆ ಸೇತುವೆಗಳನ್ನು ಮಾಡಿಸುವುದಕ್ಕೂ, ಪ್ರಜಾ ಆರೋಗ್ಯವನ್ನು ಕಾಪಾಡುವ ಕಾರ್ಯಗಳಿಗೂ, ಸಂಸ್ಥಾನದ ಮೂಲೆ ತಾಲೂಕುಗಳಲ್ಲಿರುವಂಥಾ ಊರುಗಳಿಗೂ ಗ್ರಾಮಗಳಿಗೂ ಕುಡಿಯುವ ನೀರನ್ನು ಒದಗಿಸುವುದಕ್ಕೂ ವಿನಿಯೋಗಿಸುವುದು ಧರ್ಮವೆಂದು ನಮಗೆ ತೋರುತ್ತದೆ.

1913 ನೇ ಜೂಲೈ ಗುರ್ರೆ ತಾರೀಖಿನಲ್ಲಿ ನಮ್ಮ ಸಂಸ್ಥಾನದ ಆಸ್ತಿಯು 1,12,15,806 ರೂಪಾಯಿ ಇದ್ದದ್ದು 1914ನೇ ಜೂನ್ ಆಖೈರಿನಲ್ಲಿ 1,01,08,057 ರೂಪಾಯಿಗೆ ಇಳಿಯಿತು. ಇಲ್ಲಿ ಕಡಮೆಯಾಗಿ ಕಾಣುವ ಸುಮಾರು 11 ಲಕ್ಷ ರೂಪಾಯನ್ನು ಸರ್ಕಾರದವರು ದೊಡ್ಡ ಆಸ್ತಿಗಳ ಮೇಲೆ ಹಾಕಿಕೊಟ್ಟಿರಬಹುದೆಂದು ಕಾಣುವುದು. ಅದಾಗ್ಯೂ ಹೀಗೆ ಕಡಮೆ ಆದದ್ದಕ್ಕೆ ಕಾರಣವನ್ನು ನಮ್ಮ ಕಂಟ್ರೋಲರವರು ಹೇಳಬೇಕಾಗಿತ್ತು. ಹುಟ್ಟುವಳಿ ಬಾಬುಗಳಲ್ಲಿ ಹೆಚ್ಚು ಉತ್ಪತ್ತಿ ಆದದ್ದಕ್ಕೆ ಅವರು ಕಾರಣಗಳನ್ನು ತಿಳಿಸಿದಾರೆ; ಆದರೆ ವರುಷಾಂತ್ಯದಲ್ಲಿ ಶಿಲ್ಕು ಹೆಚ್ಚಾಗಿದ್ದು, ಒಟ್ಟು ಆಸ್ತಿಯು ಮೊತ್ತದಲ್ಲಿ ಯಾಕೆ ಕಡಮೆಯಾಯಿತೋ ಅದು ಮಾತ್ರ ಅವರು ಹೇಳದೆ ಇದಾರೆ.

ಹಣಕಾಸಿನ ವಿಷಯದಲ್ಲಿ ನಮ್ಮ ಸರ್ಕಾರದವರಿಗೆ ಅನುಕೂಲವಾಗಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ. ಮತ್ತು ಅಂಥಾ ಹಣಗಳನ್ನು ಈ ಸೀಮೆಯ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಸಾಧಕಗಳಾದ ಕಾರ್ಯಗಳಿಗೆ ವಿನಿಯೋಗಿಸುವಂತೆ ಅವರು ವಿವೇಕಿಗಳಾಗಿಯೂ, ದೇಶವತ್ಸಲರಾಗಿಯೂ ಆಗಲೆಂದು ಪ್ರಾರ್ಥಿಸುವೆವು.

ದೇವರ ದೃಷ್ಟಿಯಲ್ಲಿ ದೊಡ್ಡವನು ಯಾರು?

ಕ್ರಿಸ್ತನು ತನ್ನ ಶಿಷ್ಯರನ್ನು ಕರೆದುಕೊಂಡು ಒಂದು ಮನೆಯಲ್ಲಿ ಪ್ರವೇಶಿಸಿ ಅಲ್ಲಿ ಕೂತುಕೊಂಡನು. ಶಿಷ್ಯರು ದಾರಿಯಲ್ಲಿ ಬರುತ್ತಿರುವಾಗ ಅವರಲ್ಲಿ ಚರ್ಚೆಹುಟ್ಟಿ ತಮ್ಮಲ್ಲಿ ಯಾರು ದೊಡ್ಡವರೆಂದು ವಾಗ್ವಾದಮಾಡಿಕೊಳ್ಳುತ್ತಿದ್ದರು. ಇವರು ಯೇಸು ಕ್ರಿಸ್ತನನ್ನು ದಾರಿಯಲ್ಲಿ ಮುಂದೆ ಬಿಟ್ಟು ಹಿಂದುಗಡೆ ಸ್ವಲ್ಪ ದೂರದಲ್ಲಿ ಯೇಸುವಿಗೆ ತಿಳಿಯದ ಹಾಗೆ ಈ ಸಂಭಾಷಣೆಮಾಡಿ ಒಬ್ಬರನ್ನೊಬ್ಬರು ಜರಿಯುತ್ತಾ ತಮ್ಮನ್ನು ತಾವು ಹೆಚ್ಚಿಸಿಕೊಳ್ಳುವದಕ್ಕೆ ಯತ್ನಿಸಿದ್ದರು. ಯೇಸು ಇದನ್ನು ತಿಳಿದು ಮನಸ್ಸಿನಲ್ಲಿ ನೊಂದುಕೊಂಡು ಅವರಿಗೆ ಮುಂದಣ ಬೋಧೆಯನ್ನು ಹೇಳಿದನು. ಏನಂದರೆ—ಯಾವನಾದರೂ ಒಬ್ಬನು ನಿಮ್ಮಲ್ಲಿ ಮೊದಲನೆಯವನೂ ಶ್ರೇಷ್ಠನು ಅನ್ನಿಸಿಕೊಳ್ಳಬೇಕೆಂದು ಅಭಿಲಾಷೆಪಟ್ಟರೆ ಅವನು ತನ್ನನ್ನು ಕುರಿತು, ನಾನು ಎಲ್ಲರಿಗಿಂತ ಕಡೆಯವನೂ ಎಲ್ಲರ ಆಳೂ ಆಗಿದ್ದೇನೆಂದು ಭಾವಿಸಿಕೊಂಡು ಅವರ ಸೇವೆಯನ್ನು ಮಾಡಲಿ ಎಂದು ಹೇಳಿದ್ದಲ್ಲದೆ ಅವರ ಮನಸ್ಸಿನಲ್ಲಿ ತನ್ನ ಮಾತುಗಳ ತಾತ್ಪರ್ಯವು ಚನ್ನಾಗಿ ನಿಲ್ಲುವಂತೆ ಅವರಿಗೆ ನಮ್ರತೆಯ ವಿಷಯದಲ್ಲಿ ಒಂದು ವಸ್ತುಪಾಠವನ್ನು ಕಲಿಸಬೇಕೆಂದು ಒಂದು ಚಿಕ್ಕ ಮಗುವನ್ನು ಕರೆದು ಅದನ್ನು ಅವರ ನಡುವೆ ಎತ್ತಿಕೊಂಡು ತನ್ನ ಎದೆಯಲ್ಲಿ ಪ್ರೀತಿಯಿಂದ ಆಲಿಂಗಿಸಿಕೊಂಡು ಅವರಿಗೆ—ನೀವು ತಿರಿಗಿ ಈ ಚಿಕ್ಕ ಮಗುವಿನಂತೆ ಆಗದೆ ಹೋದರೆ ನೀವು ಪರಲೋಕರಾಜ್ಯದಲ್ಲಿ ಸೇರುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಹೀಗಿರುವದರಿಂದ ಯಾವನು ಈ ಚಿಕ್ಕ ಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ ಅವನೇ ಪರಲೋಕರಾಜ್ಯದಲ್ಲಿ ಹೆಚ್ಚಿನವನು ಮತ್ತು ನನ್ನ ಮೇಲಣ ಪ್ರೀತಿಯಿಂದ ಇಂಥಾ ಚಿಕ್ಕ ಮಕ್ಕಳನ್ನೂ ಬಡವರನ್ನೂ ಸೇರಿಸಿಕೊಂಡು ಅವರಿಗೆ ಉಪಕಾರ ಮಾಡಿದರೆ ಅಂಥವನು ನನ್ನನ್ನು ಸೇರಿಸಿಕೊಂಡಂತಾಯಿತು. ಮತ್ತು ನನ್ನನ್ನು ಸೇರಿಸಿಕೊಂಡರೆ ನನ್ನನ್ನು ಮಾತ್ರ ಸೇರಿಸಿಕೊಂಡಹಾಗಲ್ಲ ನನ್ನನ್ನು ಕಳುಹಿಸಿಕೊಟ್ಟಿರುವ ಸಾಕ್ಷಾತ್ ದೇವರನ್ನೇ ಸೇರಿಸಿಕೊಂಡ ಹಾಗಾಯಿತು ಎಂದು ಹೇಳಿದನು.

ಮತ್ತು ಅನಾಥರನ್ನೂ ಪಾಮರರನ್ನೂ ಗತಿಗೆಟ್ಟವರನ್ನೂ ತಾತ್ಸಾರವಾದದ ... ಕುರಿತು ಆತನು ಹೇಳಿದ್ದು ಏನಂದರೆ—ಈ ಚಿಕ್ಕವರಲ್ಲಿ ಮತ್ತು ಹೀನಸ್ಥಿತಿಯಲ್ಲಿರುವವರಲ್ಲಿ ಒಬ್ಬನನ್ನಾದರೂ ಎಂದಿಗೂ ತಾತ್ಸಾರವಾದದಂತೆ ನೋಡಿಕೊಳ್ಳಿರಿ. ನಿಮಗೆ ಹ್ಯಾಗೆ ತೋರುತ್ತದೆ? ಒಬ್ಬ ಮನುಷ್ಯನಿಗೆ ನೂರು ಕುರಿಗಳು ಇದ್ದವು. ಆದರೆ ಅವುಗಳಲ್ಲಿ ಒಂದು ಎಲ್ಲಿಯೋ ತಪ್ಪಿಸಿಕೊಂಡು ಹೋಯಿತು. ಅವನು—ತೊಂಭತ್ತೊಂಭತ್ತು ಕುರಿಗಳು ... ಉಳಿದಿದೆಯಲ್ಲಾ. ನನಗೇನು ಕಡಿಮೆ ಎಂದು ನಿಶ್ಚಿಂತನಾಗಿರುತ್ತಾನೆಯೋ ... ಇಲ್ಲವಷ್ಟೆ. ಅವನು ಅರಣ್ಯದ ತೋಪುಗಳಲ್ಲಿಯೂ ಬೆಟ್ಟಗುಟ್ಟಗಳಲ್ಲಿಯೂ ... ಮುಂತಾದ ತಪ್ಪಿಸಿಕೊಂಡುಹೋದ ಕುರಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಹೋಗ... ಬಳಲುವದಿಲ್ಲವೇ? ಅದು ಸಿಕ್ಕಿದರೆ ತಪ್ಪಿಸಿಕೊಳ್ಳದಿರುವ ತೊಂಭತ್ತೊಂಭ... ಕುರಿಗಳಿಗಿಂತ ಆ ಒಂದಕ್ಕೋಸ್ಕರ ಹೆಚ್ಚಾಗಿ ಸಂತೋಷಪಡುವದಿಲ್ಲವೇ? ... ಹಾಗೆಯೇ ಈ ಚಿಕ್ಕವರಲ್ಲಿಯೂ ಪಾಪಿಗಳಲ್ಲಿಯೂ ಒಬ್ಬನು ಕೆಟ್ಟುಹೋಗುವದು ... ನಿಮ್ಮ ತಂದೆಗೆ ಎಷ್ಟೋ ವ್ಯಸನಕ್ಕೆ ಕಾರಣವಾಗುವದು. ... ನನ್ನಾದರೂ ಅ... ಅವರನ್ನು ಹುಡುಕಿ ರಕ್ಷಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಗೆ ನಿಮ್ಮ ... ಗಾಗಿ ಎಷ್ಟೋ ಸಂತೋಷವಿರುವದು. ಈ ಕೆಲಸವನ್ನು ಸೇವೆ ಮಾಡುವವರು ಸರ್ವ... ಶ್ರೇಷ್ಠವಾದ ದೊಡ್ಡಸ್ತಿಕೆಯನ್ನು ದೇವರ ಸಾನ್ನಿಧ್ಯದಲ್ಲಿ ... ಈ ಲೋಕದಲ್ಲಿ ಬಂದಿರುವದು ಅದೇ ಲಭ್ಯವಾಗುವದು. ... ಮುಂತಾದಿ ಅವರನ್ನು ನಿಯೋಜಿಸುವದಕ್ಕೂ ಉಪದೇಶವಿದೆ. ಮಗನನ್ನು ... ನನ್ನ? ಅವರ ನಿಯೋಜಿಸಿದ ಬಲಿ ಅವರ ರಕ್ಷಣೆಗೋಸ್ಕರವಾಗಿ ನನ್ನ ಪ್ರಾ... " ನೀವು ನನ್ನ ಶಿಷ್ಯರಾಗಿರಬೇಕೆಂದು ಯಾಗಿ ಅರ್ಪಿಸುವದಕ್ಕೆ ಸಿದ್ಧವಾಗಿದ್ದೇನೆ. " ...ಡಿದು ನಡೆಯಿರಿ ಎಂದು ಅಪೇಕ್ಷಿಸುವರೆ ನನ್ನ ಮೇಲ್ಪಂಕ್ತಿಯನ್ನೇ ಬೋಧಿಸಿದನು.

ಯುದ್ಧದ ಸಮಾಚಾ...ರಗಳು.

ಇಟಲಿಯವರು ಮುಂದರಿಸು...ತಾರೆ.

ಎರಡು ಬ್ರಿಟಿಷ್ ಹಡಗುಗಳು ನಷ್ಟವಾ...ದವು.

ಈ ವಾರದ ಯುದ್ಧದ ಸಮಾಚಾರಗಳು ನಮ್ಮ ಪಕ್ಷದವ... ...ಗೆ ಅಷ್ಟೇನೂ ಅನುಕೂಲವಾಗಿಲ್ಲ ಆದರೂ ಆಧೈರ್ಯಪಡುವುದಕ್ಕೆ ಕಾರಣವ... ...ನೂ ಇಲ್ಲ.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದಲ್ಲಿ ನಿಲುಗಡೆಯಿಲ್ಲದೆ ಕಡಿದಾಟಗಳಾಗುತ್ತಿ...ವೆ; ಆದರೆ ಅಷ್ಟು ಬೆಲ್ಜಿಯಮ್ ಮತ್ತು ಫ್ರಾನ್ಸಿನ ಉತ್ತರ ಪಾರ್ಶ್ವಗಳಲ್ಲಿ ... ...ದಿನಗಳು ವಿಶೇಷವಾಗಿ ನಡೆದ... ಫ್ರೆಂಚರೂ, ಬ್ರಿಟಿಷರೂ ಕ್ರಮವಾಗಿ ಮುಂದರಿ... ...ಕೊಂಡು ನುಗ್ಗುತ್ತಿರುತ್ತಾರೆ. ಫ್ರೆಂಚರು ಹದಿಮೂರು ದಿನಗಳ ತನಕ ... ...ಶತ್ರುವಿನ ಮೇಲೆ ಯುದ್ಧಮಾಡಿ ಕಡೆಗೆ ಒಂದು ಗುಡ್ಡವನ್ನು ಗೆದ್ದು ಸ್ವಾಧೀ... ...ನಪಡಿಸಿಕೊಂಡರು. ಅಲ್ಲಿ ಜರ್ಮನಿಯವರ ಕಡೆ 3,000 ಸೈನಿಕರು ಮಡಿದರು; ...000 ಮಂದಿ ಹಲವು ಪಿರಂಗಿಗಳ ಸಮೇತ ಫ್ರೆಂಚರಿಗೆ ಕೈಸೆರೆ ಸಿಕ್ಕಿದರು. ...ಒಂದು ವಾರ್ತೆಯಲ್ಲಿ ಫ್ರೆಂಚರು ಕದನವಾಡಿ 100 ಸೈನಿಕರನ್ನು ಹನ್ನೆರಡು ... ಪಿರಂಗಿಗಳ ಸಹಿತ ಹಿಡಿದುಕೊಂಡು ಬಂದಿದಾರೆ.

ಇಪ್ರೆಯಿಂದಉತ್ತರದಲ್ಲೂ ಪೂರ್ವ ದಿಕ್ಕಿನಲ್ಲೂ ನಿಲುಗಡೆ ಇಲ್ಲದೆ ಕದನಗಳಾಗುತ್ತಿವೆ. ಜರ್ಮನಿಯವರು ವಿಷವಾಯುಗಳನ್ನು ಎರಚಿ ಗೆದ್ದು ಕೊಂಡಿದ್ದ ಪ್ರದೇಶವನ್ನು ನಮ್ಮ ಪಕ್ಷದವರು ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿ ಮತ್ತೆ ಸ್ವಾಧೀನಪಡಿಸಿಕೊಂಡಿದಾರೆ. ಇಪ್ರೆಯಿಂದ ದಕ್ಷಿಣ ಭಾಗದಲ್ಲಿ ಬ್ರಿಟಿಷರು ಮುಂದಕ್ಕೆ ನುಗ್ಗಿ ಹೋಗಿ ಶತ್ರು ಸೈನಿಕರನ್ನು ಕೈಸೆರೆ ಹಿಡಿದುತಂದಿದಾರೆ. ಜರ್ಮನಿಯವರು ಪದೇಪದೇ ವಿಷವಾಯುಗಳನ್ನು ಪ್ರಯೋಗಮಾಡುತ್ತಿದ್ದಾಗ್ಯೂ ಅದಕ್ಕೆ ಪ್ರತಿಕೂಲವಾದ ಉಪಾಯಗಳನ್ನು ನಮ್ಮ ಪಕ್ಷದವರು ಪ್ರಯೋಗಿಸುತ್ತಿರುವುದರಿಂದ ಶತ್ರುವಿನ ಸಾಹಸವು ವ್ಯರ್ಥವಾಗಿರುತ್ತದೆ. ಒಂದು ವಾರ್ತೆಯಲ್ಲಿ ಶತ್ರುವು ಐದು ಮೈಲಿ ಉದ್ದಕ್ಕೂ ನಮ್ಮ ಪಕ್ಷದವರ ಮೇಲೆ ನಾಲ್ಕೂವರೆ ಗಂಟೆ ಹೊತ್ತಿನ ತನಕ ವಿಷವಾಯುಗಳನ್ನು ಸುರಿಸಿದರು. ಇನ್ನೊಂದು ವಾರ್ತೆಯಲ್ಲಿ ಅವರು ಮೂರು ಜಾತಿಯ ವಿಷವಾಯುಗಳನ್ನು ಪ್ರಯೋಗಿಸಿದರು. ಶತ್ರುವು ನಾವು ಸಮೀಪಕ್ಕೆ ಬರುವ ತನಕ ಬ್ರಿಟಿಷರು ಸುಮ್ಮನಿದ್ದರು. ಶತ್ರುವು ತಂಡತಂಡವಾಗಿ ಬೆಟ್ಟದಂತೆ ನುಗ್ಗಿ ಬಂದಾಗ ಬ್ರಿಟಿಷರು ಗುಂಡಿನ ಮಳೆಯನ್ನು ಅತ್ಯಂತ ಕಠಿಣವಾಗಿ ಸುರಿಸಿದ್ದರಿಂದ ಶತ್ರು ಸೈನಿಕರು ರಣರಂಗದ ಲ್ಲೆಲ್ಲಾ ಸತ್ತು ಗಾಯಪಟ್ಟು ಹರಡಿದಂತೆಯೂ, ಒಬ್ಬರ ಮೇಲೊಬ್ಬರು ಪೇರಿಸಿದಂತೆಯೂ ಬಿದ್ದುಕೊಂಡರು. ಪರೀಕ್ಷೆ ಮಾಡಿದಾಗ ಹೆಣಗಳು ಆರು ವರಸೆಯಾಗಿ ಉದ್ದಕ್ಕೂ ಬಿದ್ದಿದ್ದವು. ಇಪ್ರೆಯಿಂದ ದಕ್ಷಿಣಕ್ಕೆ ಬ್ರಿಟಿಷರು ಜರ್ಮನಿಯವರ ಸೈನಿಕರ ಸಾಲನ್ನು ಮೂರು ಮೈಲಿ ಉದ್ದಕ್ಕೆ ಒಡೆದು ನುಗ್ಗಿಕೊಂಡು ಹೋಗಿ, 8 ಮಂದಿ ಹುದ್ದೇದಾರರನ್ನೂ 777 ಸೈನಿಕರನ್ನೂ 10 ಮೆಷೀನ್ ಪಿರಂಗಿಗಳ ಸಮೇತ ಕೈಸೆರೆ ಹಿಡಿದುಕೊಂಡು ಬಂದಿದಾರೆ.

ಬ್ರಿಟಿಷರು ಗೆದ್ದು ಸ್ವಾಧೀನಪಡಿಸಿಕೊಂಡಿರುವ 60 ಎಂಬ ಗುಡ್ಡವೆಲ್ಲಾ ರಂಧ್ರಗಳಿಂದಲೂ, ಕಂದಕಗಳಿಂದಲೂ ಛಿದ್ರಛಿದ್ರವಾಗಿ ಮಣ್ಣಿನ ರಾಶಿಯೋಪಾದಿಯಾಗಿ ಹೋಗಿಕೊಂಡಿದೆ. ಈಗ ಈ ಗುಡ್ಡದಿಂದ ಎರಡು ಪಕ್ಷದವರಿಗೂ ಯಾವ ಪ್ರಯೋಜನವೂ ಆಗುವಂತಿಲ್ಲ.

ಒಂದು ವಾರ್ತೆಯಲ್ಲಿ ಜರ್ಮನಿಯವರು ವಿಷವಾಯುವನ್ನು ಪ್ರಯೋಗಿಸಿದ್ದರಿಂದ ಅಲ್ಲಿದ್ದ ಬ್ರಿಟಿಷ್ ಸೈನಿಕರು ನಿಶ್ಚೇತನ್ಯರಾಗಿ ಬಿದ್ದುಕೊಂಡಿದ್ದರು. ಇಂಥವರ ಮೇಲೆ ಜರ್ಮನಿ ಸೈನಿಕರು ನುಗ್ಗಿಬಂದು ಅವರನ್ನು ಸನೀನುಗಳಿಂದ ತಿವಿದು ...ಕೊಂದುಹಾಕಿರುತ್ತಾರೆಂದು ತಿಳಿ...ದುಬಂದಿದೆ.

ಇಪ್ರೆಯ ದಕ್ಷಿಣದಲ್ಲಿ ನಡೆದ ಕದನದ ಕೆಲವು ವಿವರಗಳು ದೊರಕಿವೆ. ಸಮರಾತ್ರಿಯಲ್ಲಿ ನಮ್ಮ ಪಕ್ಷದ ಫಿರಂಗಿಗಳು ಗುಂಡುಗಳ ತುಂಬಾ ಜೋರಾಗಿ ಹೊಡೆಯಲಾರಂಭಿಸಿದವು. ಬಳಿಕ ನಮ್ಮ ಪಕ್ಷದ ಕೆಲವು ಶತ್ರುವಿನ ಮೇಲೆ ನುಗ್ಗಿಹೋಗಿ ಶತ್ರುವು ಇದ್ದ ದೊಡ್ಡ ಕಂದಕವ ಸ್ವಾಧೀನಪಡಿಸಿಕೊಂಡಿತು. ಮೂರು ಗಂಟೆ ಕಳೆದ ಬಳಿಕ ನಮ್ಮ ಪಕ್ಷವು ಮತ್ತೆ ಶತ್ರುವಿನ ಮೇಲೆ ನುಗ್ಗಿಹೋಗಿ ಅವರನ್ನೆಲ್ಲಾ ಇನ್ನೂ ಹಿಂದಕ್ಕೋಡಿಸಿಬಿಟ್ಟರು. ಅನೇಕ ಸಿಪಾಯಿಗಳು ಕೈಯಲ್ಲೇ ಸಿಡಿಮದ್ದಿನ ಗುಂಡನ್ನು ಹಿಡಿದಿಟ್ಟರು. ಇವನ್ನು ಸರಿಯಾಗಿ ಗುರಿಯಿಟ್ಟು ಎಸೆದ ಪಕ್ಷದಲ್ಲಿ ಬಹಳ ಘೋರವಾದ ನಷ್ಟವನ್ನುಂಟುಮಾಡುವವು. ವೇಲ್ಸ್ ರೆಜಿಮೆಂಟಿನ ಸೈನಿಕರು ಕದನದಲ್ಲಿ ಮಧ್ಯೆ ಸೇರಿದ್ದರು. ಫಿರಂಗಿ ಗುಂಡುಗಳು ಬೀಳುವುದು ನಿಂತೊಡನೆಯೇ ಅವರು ನುಗ್ಗಿಹೋದರು. ಜರ್ಮನಿಯವರು ಭಯಂಕರವಾದ ಗುಂಡುಗಳ ಮಳೆಯನ್ನು ಸುರಿಸುತ್ತಿದ್ದರೂ ಲಕ್ಷ್ಯಮಾಡದೆ ಆ ರೆಜಿಮೆಂಟಿನ ಸಿಪಾಯಿಗಳು ನುಗ್ಗಿಹೋಗಿ ಎರಡೇ ಎರಡು ನಿಮಿಷಗಳೊಳಗಾಗಿ ಜರ್ಮನಿಯವರ ಕಂದಕಗಳನ್ನು ಆಕ್ರಮಿಸಿಕೊಂಡು ನಿಂತುಬಿಟ್ಟರು. ಹೀಗೆ ನುಗ್ಗಿ ಹೋದವರ ಪೈಕಿ ಅನೇಕರು ದಾರಿಯಲ್ಲೇ ಬಿದ್ದುಕೊಂಡರು. ಒಬ್ಬ ಸಾರ್ಜೆಂಟ್ ಮೇಜರನು ಎಳು ಸಿಡಿಮದ್ದಿನ ಗುಂಡುಗಳನ್ನು ಕೈಯಲ್ಲಿ ಹಿಡಿದು ಹಲವು ಕಂದಕಗಳೊಳಗೆ ನುಗ್ಗಿಹೋಗಿ 600 ಗಜಗಳಷ್ಟು ಕಂದಕಗಳನ್ನು ಆಕ್ರಮಿಸಿಕೊಂಡದ್ದಲ್ಲದೆ ಶತ್ರುಪಕ್ಷದವರಲ್ಲಿ 102 ಜನರನ್ನೂ 3 ಮಂದಿ ಹುದ್ದೇದಾರರನ್ನೂ ಕೈಸೆರೆ ಹಿಡಿದುಕೊಂಡನು. ಸ್ಕಾಟ್ಸ್ ಗಾರ್ಡ್ಸ್ ಎಂಬ ಒಂದು ಕಂಪನಿ ಸೈನಿಕರು ಬಹಳ ಬೇಗನೆ ಮುಂದರಿಸಿ ನುಗ್ಗಿ ಹೋದದ್ದರಿಂದ ಅವರಿಗೂ ಅವರ ಜೊತೆ ಸೈನಿಕರಿಗೂ ಸಂಬಂಧ ತಪ್ಪಿಹೋಯಿತು. ಅವರು ಏನಾದರೆಂಬುವುದು ಮೂರು ದಿನಗಳ ತನಕ ಗೊತ್ತಾಗಲಿಲ್ಲ. ಬಳಿಕ ಒಬ್ಬ ಸೈನಿಕನು ಹುಡುಕಿಕೊಂಡು ಹೋಗುವಲ್ಲಿ ಆ ಕಂಪನಿಯ ಪೈಕಿ 80 ಮಂದಿ ಮೈದಾನದಲ್ಲಿ ಮಡಿದುಬಿದ್ದುಕೊಂಡಿದ್ದರು. ಈ ಹೆಣಗಳ ಸುತ್ತಲೂ ಜರ್ಮನಿ ಸೈನಿಕರ ಹೆಣಗಳು ಸರಾಸರಿಯಾಗಿ ಬಿದ್ದಿದ್ದವು. ಆ ಕಂಪನಿಯವರು ತಮಗಿಂತಲೂ ಎಷ್ಟೋ ಹೆಚ್ಚು ಮಂದಿಯುಳ್ಳ ಶತ್ರು ಸೈನ್ಯವು ನುಗ್ಗಿ ಬಂದಾಗ್ಯೂ ಅವರು ಕಟ್ಟಕಡೆ ಮಂದಿಗೂ ಬಹು ಪರಾಕ್ರಮದಿಂದ ಯುದ್ಧಕೊಟ್ಟರು. ಸೌತ್ ಸ್ಟಾಫರ್ಡ್ಸ್ ಎಂಬ ಸೈನಿಕರು ಬವೇರಿಯಾದವರಿಗೆ ಅಭಿಮುಖರಾಗಿ ನಿಂತಿದ್ದರು. ಇವರು ರಾತ್ರಿಯೆಲ್ಲಾ "ಸ್ಟಾಫರ್ಡ್ ಸೈನಿಕರೇ, ಬನ್ನಿ, ಮುಂದಕ್ಕೆ ಬನ್ನಿ" ಎಂದು ಕೂಗುತ್ತಿದ್ದರು. ಇವರು ಅವರ ಮೇಲೆ ನುಗ್ಗಿ ಹೋದಾಗ ಬವೇರಿಯದವರೆಲ್ಲಾ ಓಡಿಹೋದರು. ಸ್ಕಾಟ್ಲೆಂಡಿನ ಒಂದು ರೆಜಿಮೆಂಟ್ ಸೈನಿಕರು ಒಂದು ಕಡೆ ಜರ್ಮನಿಯವರ ಕಂದಕಗಳನ್ನು ಗೆದ್ದುಕೊಳ್ಳುವುದಕ್ಕೆ ಒಂದು ಆಳವಾದ ಕಂದಕದಲ್ಲಿ ಈಜಿಕೊಂಡು ಹೋಗಬೇಕಾಯಿತು. ಇವರು ಅದೇ ರೀತಿ ಈಜಿಕೊಂಡು ಹೋಗುವಷ್ಟರೊಳಗಾಗಿ ಜರ್ಮನಿಯವರು ಅಲ್ಲಿ ನಿಲ್ಲದೆ ಓಡಿಹೋದರು. ಇನ್ನೊಂದು ಕಡೆ ಲಿಸ್ಟರ್ ಸೈನಿಕರು ಸಿಡಿಮದ್ದಿನ ಗುಂಡುಗಳನ್ನು ಹಾಕತಕ್ಕ ಕೆಲವರನ್ನು ಕರೆದುಕೊಂಡು ಒಂದು ಕಂದಕದೊಳಕ್ಕೆ ಹೋಗಿ 200 ಮಂದಿ ಶತ್ರುಗಳನ್ನು ಕೈಸೆರೆ ಹಿಡಿದುಕೊಂಡರು; ಇನ್ನು 200 ಮಂದಿ ಓಡಿಹೋದರು. ಹೀಗೆ ಓಡಿಹೋಗುತ್ತಿದ್ದವರ ಮೇಲೆ ಅವರ ಕಡೆಯವೇ ಗುಂಡುಗಳನ್ನು ಹಾಕಿ ಹಲವರನ್ನು ಕೊಂದುಕೊಂಡರು.

ನಮ್ಮ ಪಕ್ಷದ ಸೈನಿಕರೆಲ್ಲಾ ತುಂಬಾ ಉತ್ಸಾಹಶಾಲಿಗಳಾಗಿದ್ದಾರೆ. ಅವರು ಯುದ್ಧಭೂಮಿಯಲ್ಲಿ ಕದನಮಾಡುವ ಕೆಲಸ ಮುಗಿಸಿ ವಿರಾಮವಾಗಿದ್ದಾಗ ಫುಟ್ ಬಾಲ್ ಚೆಂಡಾಟವನ್ನು ಆಡಿಕೊಂಡು ಸಂತೋಷವಾಗಿರುವರು.

ಜರ್ಮನಿಯಲ್ಲಿರುವ ಲುಡ್ವಿಗ್ಸ್ಹಾವೆನ್ ಎಂಬ ನಗರದ ಮೇಲೆ ಫ್ರೆಂಚ ಕೆಲವು ವಿಮಾನ ಯಂತ್ರಗಳನ್ನು ಜೊತೆಮಾಡಿ ಕಳುಹಿಸಿಕೊಟ್ಟರು. ಜರ್ಮನಿಯವರು ಮಾರಕರವಾದ ವಿಷವಾಯುಗಳನ್ನು ಆ ನಗರದಲ್ಲೇ ತಯಾರು ಮಾಡುತ್ತಾರೆಂದು ತಿಳಿಯಿತು. ಫ್ರೆಂಚರ 18 ವಿಮಾನ ಯಂತ್ರಗಳು 85 ಸಿಡಿಮದ್ದಿನ ಗುಂಡುಗಳನ್ನು ತೆಗೆದುಕೊಂಡು ಹೋಗಿ, ಆ ವಿಷವಾಯುಗಳು ತಯಾರಾಗುವ ಕಾರ್ಖಾನೆಗಳ ಮೇಲೆ ಸುರಿಸಿದವು. ಇದರಿಂದ ಅಲ್ಲಿ ಮೂರು ಕಡೆಗಳಲ್ಲಿ ಅಪಾರವಾಗಿ ಹತ್ತಿಕೊಂಡ ಜ್ವಾಲೆಗಳೆದ್ದವು. ಅನಿಲದ ಹೊಗೆ ಅಪಾರವಾಗಿ ಅಂತರಿಕ್ಷಕ್ಕೆ ಹಾರಿತು. ಈ ಹೊಗೆಯ ದೆಸೆಯಿಂದ ಆ ನಗರದ ಅನೇಕರಿಗೆ ನಾನಾ ಕಷ್ಟಗಳುಂಟಾಗಿರಬೇಕೆಂದು ಊಹಿಸಲ್ಪಟ್ಟಿದೆ. ಹೋಗಿದ್ದ ವಿಮಾನ ಯಂತ್ರಗಳ ಪೈಕಿ ಒಂದು ಹೊರತು ಉಳಿದವುಗಳೆಲ್ಲಾ ವಾಪಸು ಬಂದುಬಿಟ್ಟವು.

ಜರ್ಮನಿಯ ಒಂದು ವಿಮಾನಯಂತ್ರವು ಪ್ಯಾರಿಸ್ ನಗರದ ಮೇಲೆ ಬರಬೇಕೆಂದು ಸಂಚರಿಸಿಕೊಂಡು ಬರುತ್ತಿತ್ತು. ಅದಕ್ಕೆ ಗುಂಡುಹೊಡೆದು ಅದನ್ನು ಕೆಳಕ್ಕೆ ಇಳಿಯುವಂತೆ ಮಾಡಿ, ಅದರಲ್ಲಿದ್ದ ಇಬ್ಬರನ್ನು ಕೊಂದುಬಿಟ್ಟರು.

ಜರ್ಮನಿಯ ಜೆಪ್ಪಲಿನ್ ಎಂಬ ವಿಮಾನಯಂತ್ರವು ಇಂಗ್ಲೆಂಡಿನ ಮೇಲೆ ಹಾರಿಬಂದು ಪೂರ್ವ ತೀರದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಇಬ್ಬರು ಹೆಂಗಸರು ಮೃತಪಟ್ಟರು; ಒಂದು ಮಗುವಿಗೆ ಗಾಯವಾಯಿತು. ಆದರೆ ಆಸ್ತಿಪಾಸ್ತಿಗಳು ವಿಶೇಷವಾಗಿ ನಷ್ಟವಾದವು. ಆ ಶತ್ರುವಿನ ದೊಡ್ಡ ವಿಮಾನ ಯಂತ್ರವನ್ನು ಓಡಿಸಿಕೊಂಡುಹೋದರು; ಆದರೆ ಅದು ಸಿಕ್ಕದೆ ತಪ್ಪಿಸಿಕೊಂಡು ಹೋಯಿತು

ಪೂರ್ವ ರಣರಂಗದಲ್ಲಿ.

ರಷ್ಯಾ ಯುದ್ಧಭೂಮಿಯಲ್ಲಿ ನಡೆಯುವ ಯುದ್ಧಕಾರ್ಯಗಳ ವಿಷಯವಲ್ಲಿ ಈ ವಾರ ಬರುವ ವರ್ತಮಾನಗಳು ಸರಿಯಾಗಿ ಗೊತ್ತಾಗುವುದಿಲ್ಲ. ಆದರೂ ಹಲವು ಭಾಗಗಳಲ್ಲಿ ಮಹಾ ಘೋರವಾದ ಕದನಗಳು ನಿಲುಗಡೆಯಿಲ್ಲದೆ ನಡೆಯುತ್ತಾ ಇರುವವು.

ಉತ್ತರದಲ್ಲಿ ಬಾಲ್ಟಿಕ್ ಕಡಲಿನ ಹತ್ತಿರ ರಷ್ಯಾದವರು ಅಡ್ಡಹಾಕಿಕೊಂಡು, ಜರ್ಮನಿಯವರು ಮುಂದೆ ನುಗ್ಗಿ ಬಾರದಂತೆ ತಡೆದಿರುತ್ತಾರಲ್ಲದೆ ಅವರನ್ನು ಕ್ರಮೇಣ ಹಿಮ್ಮೆಟ್ಟಿಸುತ್ತಿರುವರು. ಅಲ್ಲಿ ರಷ್ಯಾದವರು 2,000 ಜರ್ಮನಿಯವರನ್ನು ಕೈಸೆರೆ ಹಿಡಿದಿರುವಂತೆ ಹೇಳಲಾಗಿದೆ

ಪೆಮ್‌ಸೆಲ್ ನಗರದ ಹತ್ತಿರ ಬಹಳ ಕಠಿಣವಾದ ಕದನ ನಡೆಯುತ್ತಿದೆ. ಇದನ್ನು ರಷ್ಯಾದವರು ಆಸ್ಟ್ರಿಯಾದವರಿಂದ ಗೆದ್ದು ಸ್ವಾಧೀನಪಡಿಸಿಕೊಂಡಿರುವರು. ರಷ್ಯಾದವರನ್ನು ಹತಮಾಡಿಬಿಡಬೇಕೆಂದು ಜರ್ಮನಿಯವರು 12,00,000 ಸೈನ್ಯವನ್ನು ಅಲ್ಲಿಗೆ ಕಳುಹಿಸಿರುವರು. ಇಷ್ಟು ಭಾರೀ ಸೈನ್ಯವನ್ನು ಎದುರಿಸುವುದಕ್ಕೆ ರಷ್ಯಾದವರೂ ಅಗಾಧವಾದ ಸೈನ್ಯವನ್ನು ಕೂಡಿಸಿ ಕಳುಹಿಸುತ್ತಿದ್ದಾರೆ. ಜರ್ಮನಿಯವರು ತಮ್ಮ ಫಿರಂಗಿಗಳನ್ನು ಸಾಲಾಗಿ ಇಟ್ಟು, ರಷ್ಯಾ ಸೈನ್ಯಗಳ ಮಧ್ಯರಾಷ್ಟ್ರಕ್ಕೆ ಗುರಿಯಿಟ್ಟು ಗುಂಡುಗಳ ಮಳೆಯನ್ನು ಸುರಿಸಿದರು. ಅಲ್ಲಿ ರಂಧ್ರಬಿದ್ದದ್ದರಿಂದ ಜರ್ಮನಿಯವರು ನುಗ್ಗಿಹೋದರು. ರಷ್ಯಾದವರು ಅಕ್ಕಪಕ್ಕಗಳಲ್ಲಿದ್ದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆದು ಕೂಡಿಸಿಕೊಂಡು, ಈಗ ಜರ್ಮನಿಯವರ ಮೇಲೆ ಮತ್ತೆ ನುಗ್ಗಿ ಯುದ್ಧಮಾಡುತ್ತಿದ್ದಾರೆ. ಅಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾ ಸೈನಿಕರಲ್ಲಿ ರಷ್ಯಾದವರು 10,000 ಸೈನ್ಯವನ್ನು ಕೈಸೆರೆ ಹಿಡಿದುಕೊಂಡರೆಂದೂ, 6 ದೊಡ್ಡ ಫಿರಂಗಿಗಳೂ, 11 ಸಣ್ಣ ಫಿರಂಗಿಗಳೂ, ಅನೇಕ ಮೆಷೀನ್ ಫಿರಂಗಿಗಳೂ ಅವರ ವಶವಾದವೆಂದೂ ವರ್ತಮಾನ ಬಂದಿವೆ. ಜರ್ಮನಿಯವರು ತಮ್ಮ ಸೈನ್ಯಗಳನ್ನು ಇತರ ಕಡೆಗಳಿಂದ ಕರೆಸಿ ಜಮಾಯಿಸಿಕೊಂಡು ರಷ್ಯಾದವರ ಮೇಲೆ ಮತ್ತೊಂದು ಸಲ ಯುದ್ಧಮಾಡುವವರಾಗಿದ್ದಾರೆ. ಆದರೆ ಇದುವರೆಗೆ ಅವರಿಗೆ ಜಯಪ್ರದವಾಗಿರುವುದಿಲ್ಲ. ಜರ್ಮನಿಯವರು ಅಪಾರ ನಷ್ಟಪಟ್ಟರು. ಸೈನ್ಯವನ್ನು ಹೆಚ್ಚಾಗಿ ತಂದು ಜಯಹೊಂದಬೇಕೆಂದು ಅನೇಕರನ್ನು ಕೊಲಿಸಮಾಡಿಸಿ ನಷ್ಟಪಡುತ್ತಿರುವರು. ಇಲ್ಲಿನ ವರ್ತಮಾನಗಳು ಸರಿಯಾಗಿ ತಿಳಿಯುವುದಕ್ಕೆ ಇನ್ನೂ ಕೆಲವು ದಿನ ಹಿಡಿಯುತ್ತದೆ.

ಇಟಲಿ.

ಇಟಲಿ ಸೈನ್ಯಗಳು ಹಲವು ಸ್ಥಳಗಳಲ್ಲಿ ಆಸ್ಟ್ರಿಯಾ ರಾಜ್ಯದ ಎಲ್ಲೆಯೊಳಕ್ಕೆ ನುಗ್ಗಿಬಂದು, ಒಳದೇಶದಲ್ಲಿ ನುಗ್ಗಿಹೋಗುತ್ತಲಿವೆ. ಆಗಲೇ ಕೆಲವು ಮೈಲಿ ದೂರ ಹೋದದ್ದಾಯಿತು. ವಿಶೇಷ ಕಠಿಣವಾದ ಕದನಗಳೇನೂ ನಡೆಯಲಿಲ್ಲ. ಆಸ್ಟ್ರಿಯಾದವರು ತಮ್ಮ ಡೇರಾಗಳನ್ನೂ ಸಾಮಾನುಗಳನ್ನೂ ಬಿಟ್ಟು ಹಿಮ್ಮೆಟ್ಟಿ ಹೊರಟುಹೋಗಿದ್ದಾರೆ. ಇಟಲಿಯವರು ಗ್ರ್ಯಾಡೊ ಎಂಬ ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಂಡದ್ದಾಯಿತು. ಅಲ್ಲಿಂದ ಮುಂದೆ ಇಟಲಿ ಪ್ರಜೆಗಳೇ ವಿಶೇಷವಾಗಿರುವ ಟ್ರಿಯೆಸ್ಟ್ ಎಂಬ ಪಟ್ಟಣವಿದೆ. ಈಗ ಅದನ್ನು ಕುರಿತು ನುಗ್ಗಿಹೋಗುತ್ತಿರುವರು.

ಇಟಲಿಯ ದೊರೆಯೇ ಎಲ್ಲೆಕಟ್ಟಿಗೆ ಸಾಕ್ಷಾತ್ತಾಗಿ ಹೋಗಿ ಸೈನ್ಯಾಧಿಪತ್ಯವನ್ನು ವಹಿಸಿಕೊಂಡಿದ್ದಾರೆ. ಉದ್ದಕ್ಕೂ ಇಟಲಿಯ ಪ್ರಜೆಗಳೇ ಇರೋಣದರಿಂದ ಇಟಲಿಯವರು ಹೋಗಿ ಆಕ್ರಮಿಸಿಕೊಳ್ಳುವ ಸ್ಥಳಗಳಲ್ಲಿ ಜನರು ಆನಂದದಿಂದ ಅವರನ್ನು ಸಂಧಿಸುವರು; ಮತ್ತೆ ತಾವು ಇಟಲಿಯ ಪ್ರಜೆಗಳಾದೆವೆಂದು ಹರ್ಷಪಡುತ್ತಾರೆ.

ಹಡಗುಗಳ ಒಂದು ಸಣ್ಣ ಯುದ್ಧವಾಯಿತು. ಇಟಲಿಯವರು ಒಂದು ಡಿಸ್ಟ್ರಾಯರ್ ಎಂಬ ಹಡಗನ್ನು ಕಳಕೊಂಡರು. ಆದರೆ ಅದರಲ್ಲಿದ್ದ ಬಹು ಮಂದಿಯನ್ನು ಬದುಕಿಸಿದರು. ಆಸ್ಟ್ರಿಯಾದವರ ಮೂರು ಸಣ್ಣ ಹಡಗುಗಳು ಜಖಂ ಮಾಡಲ್ಪಟ್ಟವು.

ಈಗ ಇಟಲಿಯ ತೀರಪಟ್ಟಣಗಳಲ್ಲಿ ಆಸ್ಟ್ರಿಯಾ ಮತ್ತು ಜರ್ಮನಿಯವರ 80 ಹಡಗುಗಳು ಇಟಲಿಯವರ ಆಶ್ರಯದಲ್ಲಿರುತ್ತವೆ. ಅವುಗಳ ಬೆಲೆ ಸುಮಾರು 40,00,000 ಪೌಂಡುಗಳಾದೀತು. ಈಗ ಅವನ್ನೆಲ್ಲಾ ಇಟಲಿಯವರು ತಮ್ಮ ಸ್ವಂತಕ್ಕೆ ಕಿತ್ತಿಟ್ಟುಕೊಳ್ಳುತ್ತಾರೆ.

ಆಸ್ಟ್ರಿಯಾ ವಿಮಾನ ಯಂತ್ರವು ವೆನಿಸ್ ನಗರದ ಮೇಲೆ ಹೋಗಿ ಸಿಡಿಮದ್ದಿನ ಗುಂಡು ಹಾಕಿತು; ವಿಶೇಷ ನಷ್ಟವೇನೂ ಆಗಲಿಲ್ಲ.

ಇಟಲಿಯವರು ನಮ್ಮ ಪಕ್ಷದವರ ಕೂಡ ಸೇರಿಕೊಂಡರಲ್ಲಾ ಎಂದು ಜರ್ಮನಿಯವರು ಇಟಲಿಯ ಮೇಲೆ ತುಂಬಾ ಆಗ್ರಹಪಡುತ್ತಿದ್ದಾರೆ. ಇಟಲಿಯವರು ಕರಾರನ್ನು ಮೀರಿ ಶತ್ರು ಪಕ್ಷವನ್ನು ಸೇರಿಕೊಂಡರೆಂದು ಜರ್ಮನಿಯವರು ಅವರನ್ನು ದೂರಿದ್ದಾರೆ. ಜರ್ಮನಿಯು ಇದುವರೆಗೆ ವರ್ತಿಸುತ್ತಿರುವುದನ್ನು ನೋಡಿದರೆ ಅದು ಈಗ ಇಟಲಿಯನ್ನು ದೂರುವುದು ತನ್ನ ಕಾವಲಿ ತೂತಾಗಿರುವುದನ್ನು ತಿಳಿಯದೆ ನೆರೆಮನೆಯ ದೋಸೆ ತೂತೆಂದು ಆಕ್ಷೇಪಣೆ ಮಾಡಿದಂತಾಗಿದೆ.

ಇಟಲಿಯು ನಮ್ಮ ಪಕ್ಷಕ್ಕೆ ಸೇರಿಕೊಂಡದ್ದು ಸರ್ವಿಯಾವಿಗೆ ತುಂಬಾ ಸಂತೋಷವಾಯಿತು. ಬಾಲ್ಕನ್ ಸೀಮೆಯಲ್ಲಿ ಸರ್ವಿಯಾವಿನ ಹಕ್ಕು ಆಸ್ತಿಪಾಸ್ತಿಗಳನ್ನು ಇಟಲಿಯು ಚೆನ್ನಾಗಿ ಸಂರಕ್ಷಣೆ ಮಾಡಬಲ್ಲದೆಂದು ನಂಬಿಕೆಯುಂಟಾಗಿರುತ್ತದೆ

ಟರ್ಕಿ.

ನಮ್ಮ ಪಕ್ಷದವರು ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸಿಕೊಂಡು ನುಗ್ಗಿ ಹೋಗುವ ಕೆಲಸ ನಿಧಾನವಾಗಿ ನಡೆಯುತ್ತಿದೆ. ಈ ವಾರ ಬ್ರಿಟಿಷರಿಗೆ ವಿಶೇಷವಾದ ಎರಡು ನಷ್ಟ ಸಂಭವಿಸಿತು. ಕಳೆದ 1904 ನೇ ಇಸವಿಯಲ್ಲಿ ಕಟ್ಟಿದ್ದ ಟ್ರಯಂಫ್ ಎಂಬ ದೊಡ್ಡ ಯುದ್ಧದ ಜಹಜು ಒಂದು ಸಬ್ ಮೆರೀನ್ ಬಡಿದದ್ದರಿಂದ ಮುಳುಗಿಹೋಯಿತು. ಆದರೆ ಅದರಲ್ಲಿದ್ದವರನೇಕರು ಬದುಕಿ ಬಂದರು. ಆ ಬಳಿಕ ಕಳೆದ 1895 ನೇ ಇಸವಿಯಲ್ಲಿ ಕಟ್ಟಿದ್ದ ಮೆಜೆಸ್ಟಿಕ್ ಎಂಬ ಜಹಜಿಗೆ ಟಾರ್ಪೀಡೋ ಬಡಿದು ಅದು ಮುಳುಗಿಹೋಯಿತು. ಇದರಲ್ಲಿದ್ದವರ ಪೈಕಿ ಬಹು ಮಂದಿಯನ್ನೆಲ್ಲಾ ಬದುಕಿಸಿದರು. ಈ ಎರಡು ಜಹಜುಗಳೂ ಹಳೇದಾಗಿದ್ದರೂ ಮುಳುಗಿಹೋದದ್ದು ನಷ್ಟವಾಯಿತೆಂದು ಹೇಳಬಹುದು.

ಭೂಮಿಯ ಮೇಲೆ ಟರ್ಕಿಯವರು ನಮ್ಮ ಪಕ್ಷದವರ ಮೇಲೆ ನುಗ್ಗಿಬಂದು ಯುದ್ಧಮಾಡಿದರು; ಆದರೆ ಅನೇಕರನ್ನು ಕಳೆದುಕೊಂಡು ಹಿಮ್ಮೆಟ್ಟಬೇಕಾಯಿತು. ಒಪ್ಪಂದಮಾಡಿಕೊಂಡು ಸ್ವಲ್ಪ ಹೊತ್ತು ಯುದ್ಧವನ್ನು ನಿಲ್ಲಿಸಿ ಹೆಣಗಳನ್ನು ದಫನ್ ಮಾಡಿದರು. ಟರ್ಕಿಯವರ ಕಡೆ ಅಪಾರ ನಷ್ಟವಾಯಿತೆಂದು ತಿಳಿದುಬಂದಿದೆ. ಟರ್ಕಿಯವರು ತಮ್ಮ ಕಡೆ ಗಾಯಪಟ್ಟ 50,000 ಸೈನ್ಯವನ್ನು ಅಲ್ಲಿಂದ ತಮ್ಮ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ರವಾನೆ ಮಾಡಿದರೆಂದೂ, ಸಮ್ಮಾರ್ಗದಲ್ಲಿ 500 ಮಂದಿ ಟರ್ಕಿ ಸೈನ್ಯದಿಂದ ಹೊರಟು ಬಂದು ಬ್ರಿಟಿಷರಿಗೆ ಶರಣಾಗತರಾದರೆಂದೂ ಹೇಳಲಾಗಿದೆ.

ಬ್ರಿಟಿಷರ ಒಂದು ಸಬ್‌ಮೆರೀನು ಮಾರ್ಮರಾ ಕಡಲಿನೊಳಕ್ಕೆ ಪ್ರವೇಶಿಸಿ, ಮದ್ದುಗುಂಡು ಭರ್ತಿಯಾಗಿದ್ದ ಟರ್ಕಿಯವರ ಒಂದು ಜಹಜನ್ನು ಮುಳುಗಿಸಿ, ಸಾಮಾನು ತುಂಬಿದ್ದ ಇನ್ನೊಂದು ಹಡಗಿಗೆ ಟಾರ್ಪೀಡೋ ಬಡಿಸಿ ಮುಳುಗಿಸಿ, ಅಥವಾ ಇನ್ನೊಂದು ಜಹಜನ್ನು ಓಡಿಸಿಕೊಂಡು ಹೋದದ್ದರಿಂದ ಅದು ನೆಲದ ಮೇಲೆ ನಿಂತು ಕೆಟ್ಟುಹೋಯಿತು. ಆ ಸಬ್‌ಮೆರೀನು ಅಲ್ಲಿಂದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ನುಗ್ಗಿಹೋಗಿ ಅಲ್ಲಿ ತೀರದಲ್ಲಿದ್ದ ಒಂದು ಟರ್ಕಿ ಹಡಗಿಗೆ ಟಾರ್ಪೀಡೋವನ್ನು ಬಿಟ್ಟು ಬಡಿಸಿತು.

ಆಸ್ಯಾ ಮೈನರಿನಲ್ಲಿ ಟರ್ಕಿಯವರನ್ನು ಹಿಮ್ಮೆಟ್ಟಿಸಿಕೊಂಡು ಹೋಗುತ್ತಿದೆ. ರಷ್ಯಾದವರು ವಾನ್ ಎಂಬ ದೊಡ್ಡ ನಗರವನ್ನು ಗೆದ್ದು ಸ್ವಾಧೀನಮಾಡಿಕೊಂಡರು. ಅಲ್ಲಿ ಅವರಿಗೆ 26 ಫಿರಂಗಿಗಳೂ ಅಪಾರ ಮದ್ದುಗುಂಡುಗಳೂ, ದ್ರವ್ಯವೂ ಹೆಚ್ಚಾಗಿ ಸಿಕ್ಕಿರುತ್ತವೆ

ಸಮುದ್ರದ ಮೇಲೆ.

ಲಂಡನ್ ಪಟ್ಟಣದ ಹತ್ತಿರ ಶೀರ್ನೆಸ್ ತೀರದಲ್ಲಿ ಪ್ರಿನ್ಸೆಸ್ ಐರೀನ ಎಂಬ ಜಹಜು ರಿಪೇರಿ ಆಗುತ್ತಿದ್ದಾಗ ಅದರಲ್ಲಿ ಯಂತ್ರಗಳು ಸಿಡಿದು ಒಡೆದು ಹೋದವು. ಅದು ಸಮುದ್ರದಲ್ಲಿ ಮುಳುಗಿಕೊಂಡದ್ದರಿಂದ ಒಬ್ಬನ ಹೊರತು ಉಳಿದವರೆಲ್ಲಾ ನೀರಿನ ಪಾಲಾದರು. ಅದರ ಕಾರಣವೇನೋ ತೋರಲಿಲ್ಲ. ಅದು ಯುದ್ಧದ ಜಹಜಲ್ಲ. ವ್ಯಾಪಾರಸ್ಥರ ಹಡಗು. ಸರ್ಕಾರದವರು ಅದನ್ನು ತಮ್ಮ ಕೆಲಸಗಳಿಗೆ ಇಟ್ಟುಕೊಂಡಿದ್ದರು. ಅದರಲ್ಲಿ ಸುಮಾರು 200 ಜನದವರೆಗೆ ಮುಳುಗಿಹೋಗಿರಬೇಕೆಂದು ತೋರುತ್ತದೆ.

ಜರ್ಮನಿಯ ಸಬ್‌ಮೆರೀನುಗಳ ಕಾರುಬಾರು ಗ್ರೇಟ್ ಬ್ರಿಟನ್ ಸುತ್ತಲೂ ಹೆಚ್ಚಾಗಿತ್ತು. ಒಂದು ಸಬ್‌ಮೆರೀನು ಅಮೇರಿಕದ ಒಂದು ಜಹಜನ್ನು ಟಾರ್ಪೀಡೋದಿಂದ ಬಡಿಸಿ ಮುಳುಗಿಸಿತು. ಅದರಲ್ಲಿದ್ದವರು ಬದುಕಿ ಬಂದರು. ಅಮೇರಿಕದವರಿಗೆ ಸಂಭವಿಸಿರುವ ನಷ್ಟಗಳ ವಿಷಯದಲ್ಲಿ ಅವರಿಗೂ ಜರ್ಮನಿಯವರಿಗೂ ವಾಗ್ವಾದಗಳು ನಡೆಯುತ್ತಾ ಇವೆಯೇ ಹೊರತು ಇನ್ನೂ ವ್ಯವಸ್ಥೆಯಾಗಿರುವುದಿಲ್ಲ.

ಬ್ರಿಟಿಷರ ಎರಡು ಜಹಜುಗಳು ಮುಳುಗಿಸಲ್ಪಟ್ಟವು. ಅದರಲ್ಲಿದ್ದವರನ್ನು ಬದುಕಿಸಿದರು. ಎರಡು ಜಹಜುಗಳು ಬಹಳ ಸಾಹಸಪಟ್ಟು ಶತ್ರುವಿನ ಟಾರ್ಪೀಡೋವನ್ನು ತಪ್ಪಿಸಿಕೊಂಡು ಬಂದಿರುತ್ತವೆ. ಶತ್ರುವಿನ ಸಬ್‌ಮೆರೀನು ಅವರನ್ನು ಓಡಿಸಿಕೊಂಡು ಬಂದು ಒಂದಕ್ಕೆ ಟಾರ್ಪೀಡೋವನ್ನು ಹೊಡೆಯಿತು. ಅವರಡೂ ಸಿಕ್ಕದೆ ತಪ್ಪಿಸಿಕೊಂಡವು. ಒಬ್ಬನಿಗೆ ಮಾತ್ರ ಗಾಯವಾಗಿರುವುದು.

ಇತರ ವಿಷಯಗಳು.

ಇಂಗ್ಲೆಂಡಿನೊಳಗೆ ಕಾರ್ಲೈಲ್ ರೈಲ್ವೆ ಅಪಘಾತದಲ್ಲಿ ಒಟ್ಟಾಗಿ ಮೃತಪಟ್ಟವರು 158 ಮಂದಿ, ಗಾಯಗಳಾದವರು 16 ಜನರು; ಈ ಪೈಕಿ 6 ಜನರ ಹೊರತು ಉಳಿದವರೆಲ್ಲಾ ಸೈನಿಕರು. ಒಬ್ಬ ಸಿಗ್ನಲ್ ನೌಕರನ ಮರೆವಿನಿಂದ ಈ ಅನಾಹುತ ಸಂಭವಿಸಿತೆಂದು ವಿಚಾರಣೆಯಲ್ಲಿ ಗೊತ್ತಾಯಿತು. ಆ ನೌಕರನೇ ಆ ರೀತಿ ಹೇಳಿ ಒಪ್ಪಿಕೊಂಡನು.

ಗ್ರೀಸ್ ರಾಜ್ಯದ ದೊರೆಗೆ ತುಂಬಾ ಕಾಯಿಲೆಯಾಗಿದೆ. ಜರ್ಮನಿಯಿಂದ ವೈದ್ಯರು ಹೋಗಿ ಚಿಕಿತ್ಸೆಮಾಡುತ್ತಿರುವಂತೆ ತಿಳಿಯುತ್ತದೆ.

ಬ್ರಿಟಿಷ್ ಗವರ್ನ್‌ಮೆಂಟಿನಲ್ಲಿ ಹೊಸ ಮಂತ್ರಿ ಸಭೆಯು ರಚಿಸಲ್ಪಟ್ಟಿದೆ. ಲಿಬರಲ್ಸ್, ಯೂನಿಯನಿಸ್ಟ್ಸ್, ಲೇಬರ್, ಈ ಮೊದಲಾದ ಎಲ್ಲಾ ಪಾರ್ಟಿಗಳಿಂದಲೂ ಕೆಲಕೆಲವು ಪ್ರಮುಖರನ್ನು ಆರಿಸಿ ಮಂತ್ರಿ ಸಭೆಗೆ ನೇಮಕಮಾಡಿ, ಬೇರೆ ಬೇರೆ ಇಲಾಖೆಗಳನ್ನು ಹಂಚಿಹಾಕಿರುತ್ತಾರೆ. ಆ ಪೈಕಿ ಮುಖ್ಯರಾದ ಅಧಿಕಾರಿಗಳ್ಯಾರೆಂದರೆ:—ಪ್ರಧಾನ ಮಂತ್ರಿ—ಮಿ॥ ಆಸ್ಕಿತ್; ಪರರಾಜ್ಯಗಳ ಸೆಕ್ರೆಟರಿ—ಸರ್ ಎಡ್ವರ್ಡ್ ಗ್ರೇ; ನಾವೆಯ ಅಧಿಪತಿ—ಮಿ॥ ಬಾಲ್ಫರ್; ಯುದ್ಧದ ಸೆಕ್ರೆಟರಿ—ಲಾರ್ಡ್ ಕಿಚ್ನರ್; ಯುದ್ಧ ಸಾಮಗ್ರಿಗಳನ್ನು ಒದಗಿಸುವ ಮಂತ್ರಿ—ಮಿ॥ ಲ್ಲಾಯಿಡ್ ಜಾರ್ಜ್; ಹಿಂದುಸ್ಥಾನದ ಸೆಕ್ರೆಟರಿ—ಮಿ॥ ಚೇಂಬರ್‌ಲೆನ್; ಸ್ವಾಸ್ಥ್ಯಗಳ ಸೆಕ್ರೆಟರಿ—ಮಿ॥ ಬೊನರ್‌ಲಾ; ಲಾರ್ಡ್ ಪ್ರಿವಿ ಸೀಲ್—ಲಾರ್ಡ್ ಕರ್ಜನ್; ಕೌನ್ಸಿಲ್ ಪ್ರೆಸಿಡೆಂಟ್—ಲಾರ್ಡ್ ಕ್ರೂ; ಛಾನ್ಸೆಲರ್ ಆಫ್ ದಿ ಡಚಿ ಆಫ್ ಲ್ಯಾಂಕಾಸ್ಟರ್—ಮಿ॥ ವಿನ್‌ಸ್ಟನ್ ಚರ್ಚಿಲ್; ವಿದ್ಯಾ ಇಲಾಖೆಯ ಬೋರ್ಡ್ ಪ್ರೆಸಿಡೆಂಟ್—ಮಿ॥ ಹೆಂಡರ್‌ಸನ್. ಈ ಮಂತ್ರಿ ಸಭೆಯಲ್ಲಿ ಲಾರ್ಡ್ ಲ್ಯಾನ್ಸ್‌ಡೌನ್ ರವರೂ ಒಬ್ಬ ಮೆಂಬರಾಗಿ ಸೇರಿಸಲ್ಪಟ್ಟರು; ಇವರಿಗೆ ಪ್ರತ್ಯೇಕವಾದ ಯಾವ ಇಲಾಖೆಯ ಕೆಲಸವೂ ವಹಿಸಲ್ಪಟ್ಟಿಲ್ಲ. ಈ ರೀತಿ ರಚಿಸಲ್ಪಟ್ಟಿರುವ ಹೊಸ ಮಂತ್ರಿ ಸಭೆಯಲ್ಲಿ ಈಗಿನ ಯುದ್ಧವನ್ನು ಸರ್ವಸಮರ್ಪಕನಾಗಿಯೂ, ಜಯಪ್ರದವಾಗುವಂತೆಯೂ ನಡೆಸುವ ಭಾಗದಲ್ಲಿ ಬಹಳ ಸಮರ್ಥರಾದವರನ್ನೇ ಮೆಂಬರುಗಳಾಗಿ ನೇಮಿಸಿಕೊಂಡಿದ್ದಾರೆಂದು ಗೊತ್ತಾಗುತ್ತದೆ. ಎಲ್ಲಾ ಪಕ್ಷಗಳ ಪ್ರತಿನಿಧಿಗಳೂ ಈ ಸಭೆಯಲ್ಲಿ ಏಕೀಭವಿಸಿ ಕಾರ್ಯ ನಡಿಸುವುದಕ್ಕೆ ಸೇರಿರೋಣದರಿಂದ ಅವರ ಪ್ರಧಾನವಾದ ಉದ್ದೇಶವೇನೆಂದರೆ— ಈಗಿನ ಯುದ್ಧವನ್ನು ಕೂಡಿದ ಮಟ್ಟಿಗೂ ಜಾಗ್ರತೆಯಾಗಿ ಕೊನೆಮುಟ್ಟಿಸಬೇಕೆಂಬುವುದೇ.

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರ ಮಧ್ಯಾಹ್ನ ನಮ್ಮ ಮಹಾರಾಜರವರು ಮೋಟಾರಿನಲ್ಲಿ ರಾಜಧಾನಿಯಿಂದ ನೀಲಗಿರಿಗೆ ಪ್ರಯಾಣಮಾಡಿದರು.

ಈ ದಿನ ನಮ್ಮ ಚಕ್ರವರ್ತಿ ಸಾರ್ವಭೌಮರವರ ಹುಟ್ಟಿದ ಹಬ್ಬವಾದದ್ದರಿಂದ ನಮ್ಮ ಸರ್ಕಾರದವರು ಸಂಸ್ಥಾನಾದ್ಯಂತ ಪಬ್ಲಿಕ್ ರಜಾ ಕೊಟ್ಟಿದೆ ಎಂದು ಹುಕುಂ ಮಾಡಿದ್ದಾರೆ.

ಬೆಂಗಳೂರು ಡೆಪ್ಯುಟಿ ಕಮಿಷನರಾದ ಮ॥ ಕೆ. ಚಾಂಡಿಯವರು ತಮ್ಮ ಹುಡುಗನನ್ನು ನಾಯಿ ಕಡಿದದ್ದರಿಂದ ಚಿಕಿತ್ಸೆಗಾಗಿ ಕೂನೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ.

ಕಡೂರು ಡಿಸ್ಟ್ರಿಕ್ಟಿನಲ್ಲಿ 16 ಜನಗಳು ಸೇರಿ ಒಬ್ಬ ಹೆಂಗಸನ್ನು ಕರೆದುಕೊಂಡು ಹೋಗಿ ಆಕೆಯ ಒಪ್ಪಿಗೆಗೆ ವಿರೋಧವಾಗಿ ಮದುವೆಮಾಡಬೇಕೆಂದು ಪ್ರಯತ್ನಪಟ್ಟರೆಂದು ಮೊಕದ್ದಮೆ ಹುಟ್ಟಿ ಚಿಕ್ಕಮಗಳೂರಿನಲ್ಲಿ ದರ್ಯಾಫ್ತಿ ಆಗುತ್ತಿದೆ.

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಕುಲಪಲ್ಲಿಯಲ್ಲಿ ಅಗ್ನಿಗುಂಡದ ಉತ್ಸವ ನಡೆಯಿತು. ಅನೇಕರು ಬೆಂಕಿ ಕುಂಡದಲ್ಲಿ ನಡೆದಾಡಿದರು. ಸಾವಿರಾರು ಮಂದಿ ಅಗ್ನಿ ಗುಂಡದ ಸುತ್ತಲೂ ಸೇರಿ ಈ ಉತ್ಸವವನ್ನು ನೋಡಿ ಸಂತೋಷಪಟ್ಟರು.

ಈ ತಿಂಗಳು ತಾ. 24 ನೇ ಗುರುವಾರ ರಾಜಧಾನಿಯಲ್ಲಿ ಲೋಕಲ್ ಬೋರ್ಡುಗಳ ಮತ್ತು ಮ್ಯುನಿಸಿಪಾಲಿಟಿಗಳ ಕಾನ್ಫರೆನ್ಸು ಪ್ರಾರಂಭವಾಗಿ ಮೂರು ದಿನ ಜರುಗುವುದು. ದಿವಾನ್ ಬಹದೂರ್ ಮ॥ ಕೆ. ಪಿ. ಪುಟ್ಟಣ್ಣ ಶೆಟ್ಟರವರು ಸಭೆಯ ಪ್ರೆಸಿಡೆಂಟರಾಗಲು ಒಪ್ಪಿಕೊಂಡಿರುತ್ತಾರೆ.

ಜರ್ಮನಿಯವರು ನಾನಾ ಬಗೆಯ ಕ್ರೂರಕೃತ್ಯಗಳನ್ನು ಮಾಡುತ್ತಾ ಇರುವುದರಿಂದ ನಮ್ಮ ಸಂಸ್ಥಾನದಲ್ಲಿರುವ ಜರ್ಮನಿ ಪ್ರಜೆಗಳಿಗೆ ರಿಯಾಯ್ತಿ ತೋರಿಸದೆ ಅವರನ್ನೆಲ್ಲಾ ಹಿಡಿದು ಹಾಕಬೇಕೆಂದು ಬ್ರಿಟಿಷ್ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳುವುದಕ್ಕಾಗಿ ಬೆಂಗಳೂರು ದಂಡಿನಲ್ಲಿ ನಾಳೆ ಸಾಯಂಕಾಲ ಒಂದು ಮಹಾಜನ ಸಭೆ ನಡೆಯುವುದಾಗಿದೆ.

ಕಡೂರು ಡಿಸ್ಟ್ರಿಕ್ಟು ನರಸಿಂಹರಾಜಪುರದಲ್ಲಿ ಮುಂದಿನ ಜೂಲೈನಿಂದ ನಮ್ಮ ಸರ್ಕಾರದವರು ಮತ್ತೆ ಒಂದು ಮುನ್‌ಸಿಫ್ ಕೋರ್ಟನ್ನು ಏರ್ಪಾಡು ಮಾಡುತ್ತಾರೆ. ತರೀಕೆರೆ, ಕೊಪ್ಪ, ನರಸಿಂಹರಾಜಪುರ, ಈ ಮೂರು ತಾಲ್ಲೂಕುಗಳ ಸಿವಿಲ್ ಮೊಕದ್ದಮೆಗಳೂ ಈ ಹೊಸ ಕೋರ್ಟಿನಲ್ಲಿ ದಾಖಲಾಗಿ ಇತ್ಯರ್ಥವಾಗಬೇಕೆಂದು ವಿಧಾಯಕವಾಗಿದೆ.

ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಈ ಟೌನುಗಳಲ್ಲಿ ಸಣ್ಣಪುಟ್ಟ ಕ್ರಿಮಿನಲ್ ವ್ಯಾಜ್ಯಗಳನ್ನು ಹಿಡಿದು ಇತ್ಯರ್ಥಮಾಡುವುದಕ್ಕೆ ಸರ್ಕಾರದವರು ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟುಗಳನ್ನು ಏರ್ಪಾಡುಮಾಡಿ, ಸರ್ಕಾರಿ ನೌಕರರಲ್ಲದ ದೊಡ್ಡಮನುಷ್ಯರನ್ನು ಮ್ಯಾಜಿಸ್ಟ್ರೇಟರಾಗಿ ನೇಮಿಸಿ, ಈ ಕೋರ್ಟುಗಳಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದ್ದಾರೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗುವ ಪರಸ್ಥಳದವರು ಇಳುಕೊಳ್ಳುವುದಕ್ಕೆ ಒಂದು ಧರ್ಮಸತ್ರವನ್ನು ಕಟ್ಟಿಸುವುದಾಗಿಯೂ, ಅದಕ್ಕೆ ಸಮೀಪದಲ್ಲಿ ನಿವೇಶನವನ್ನು ಕೊಡಬೇಕೆಂದೂ ವೇ॥ ಪುರೋಹಿತ ರಾಘವೇಂದ್ರಾಚಾರ್ಯರು ಕೇಳಿದರು. ಸಿಟಿ ಮ್ಯುನಿಸಿಪಾಲಿಟಿಯವರು ಈ ಸತ್ರಕ್ಕೂ, ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿನಿಲಯಕ್ಕೂ, ಶ್ರೀಕಾಳಿದಾಸ್ವಾಮಿಯವರ ಕಟ್ಟಡಕ್ಕೂ ನಿವೇಶನಗಳನ್ನು ಉಚಿತವಾಗಿ ಕೊಡುವಂತೆ ಒಪ್ಪಿಕೊಂಡಿದ್ದಾರೆ.

ಒಂದೆರಡು ವಾರಗಳಿಂದಲೂ ರಾಜಧಾನಿಯಲ್ಲಿ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳು ಕೆಲಕೆಲವು ಹೊತ್ತು ಆರಿಹೋಗುತ್ತಾ ಇವೆ. ಸಂಚರಿಸುವ ಪ್ರಜೆಗಳಿಗೂ, ಮನೆಗಳಿಗೆ ಈ ದೀಪಗಳನ್ನಿಡಿಸಿಕೊಂಡಿರುವವರಿಗೂ ಇದರಿಂದ ತುಂಬಾ ಅನನುಕೂಲವಾಗಿ ಅನೇಕರು ಅಸಮಾಧಾನಪಡುತ್ತಲೂ, ಈ ಇಲಾಖೆಯ ಕಾರುಬಾರುಗಳನ್ನು ಕುರಿತು ಆಕ್ಷೇಪಣೆ ಮಾಡುತ್ತಲೂ ಇದ್ದಾರೆ. ಸರ್ಕಾರದವರು ಈ ಭಾಗವನ್ನು ಬೇಗನೆ ತನಿಖೆ ಮಾಡಿ, ಕ್ರಮಪಡಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ಲಾನ್ ಟೆನ್ನಿಸ್ ಎಂಬ ಚೆಂಡಾಟದಲ್ಲಿ ಗಟ್ಟಿಗರೆಂಬ ಹೆಸರು ಪಡೆದು ದಕ್ಷಿಣದೇಶದಲ್ಲಿ ಹಲವು ಪಂದ್ಯಗಳನ್ನು ಗೆದ್ದು ಅನೇಕ ಬಹುಮಾನಗಳನ್ನು ಸಂಪಾದನೆ ಮಾಡಿಕೊಂಡು ಬಂದಿರುವ ಮ॥ ಯು. ಡಿ. ರಂಗರಾಯರನ್ನು ಕಲ್ಕತ್ತಾ ಸಂಸ್ಥಾನಗಳ ಪೈಕಿ ಮಾನಾವದಾರ್ ಎಂಬ ಸಂಸ್ಥಾನದ ನವಾಬರವರು ತಮ್ಮ ಬಳಿಗೆ ಕರೆಸಿಕೊಂಡು, ಅವರನ್ನು ತಮ್ಮ ಸೆಕ್ರೆಟರಿಯಾಗಿ ನೇಮಕಮಾಡಿಕೊಂಡಿದ್ದಾರೆಂದೂ, ಅವರಿಗೆ 200 ರೂಪಾಯಿ ಸಂಬಳ ಕೊಡುತ್ತಾರೆಂದೂ ಕೇಳಿ ಸಂತೋಷಪಡುತ್ತೇವೆ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವವಾದ ಬಳಿಕ ಈ ತಿಂಗಳ ಕಡೇ ವಾರದಲ್ಲಿ ರಾಜಧಾನಿಯಲ್ಲಿ ಅಧಿಕಾರಿಗಳ ಮತ್ತು ದೇಶೀಯ ದೊಡ್ಡಮನುಷ್ಯರ ಕುದುರೆಗಳ ಓಟ ನಡೆಯುವಂತೆಯೂ, ಬಹುಮಾನಗಳು ಕೊಡುವಂತೆಯೂ ಏರ್ಪಾಡಾಗಿರುತ್ತದೆ. ಅದಕ್ಕೆ ಸೇರತಕ್ಕವರೆಲ್ಲಾ ಈ ತಿಂಗಳು ತಾ. 10 ರೊಳಗಾಗಿ ಸೆಕ್ರೆಟರಿ ಮ॥ ಎಂ. ಎನ್. ಬಾಳರಾಜೆ ಅರಸಿನವರಿಗೆ ಅರ್ಜಿ ಬರೆದುಕೊಳ್ಳಬಹುದು. ಅದಲ್ಲದೆ ಸ್ಕೂಲ್ ಹುಡುಗರಿಗೂ, ಹೆಣ್ಣು ಮಕ್ಕಳಿಗೂ ನಾನಾ ತರದ ಪಂದ್ಯಗಳು ನಡೆಯುವವು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಮೇ 20 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಸಾಲ:—(1) ಷೇರು ಮೊಬಲಗು	.... ರೂ.	10,00,000
,, (2) ರಿಜರ್ವ್ ಫಂಡು	.... ,,	25,000
,, (3) ಡಿಪಾಜಿಟ್ಟುಗಳು	.... ,,	28,93,267
,, (4) ಇತರೆ	.... ,,	62,473
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	39,80,740

ಜಮೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	5,77,346
,, (2) ಖಾತೆ ಮತ್ತು ಇತರ ಸಾಲಗಳು	,,	26,51,244
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	,,	4,61,835
,, (4) ಇನ್ವೆಸ್ಟ್‌ಮೆಂಟುಗಳು	,,	2,67,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	90,730
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	16,082
,, (7) ಇತರೆ	,,	16,166
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	39,80,740

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟ್ ಸಂಗ್ರಹ.

ಹೊಳೆನರಸೀಪುರದ ಮ್ಯುನಿಸಿಪಲ್ ಸಂಪದ್ವಿಸಲ್ಲಿ 1915 ನೇ ಜೂಲೈ ಲಾಗಾಯಿತು ಇನ್ನೊಂದು ವರುಷದ ತನಕ ಮಕ್ಕಳಿಗೆ ಬಲಾತ್ಕರಿಸಿ ದೇವಿಸಿಡುಬು ಹಾಕುವ ಕಾನೂನು ಜಾರಿಯಲ್ಲಿರತಕ್ಕದ್ದು.

ಗುಬ್ಬಿ ಸಬ್ ಡಿವಿಜನ್ ಆಫೀಸರ್ ಮ|| ಎಚ್. ವಿ. ರಾಮಸ್ವಾಮಿಯವರಿಗೆ ಮೇ ತಾ. 24 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ತುಮಕೂರು ಟ್ರೆಜರಿ ಅ|| ಕಮಿಷನರು ಸಬ್ ಡಿವಿಜನ್ ಭಾರ್ಜನ್ನು ವಹಿಸಿರತಕ್ಕದ್ದು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಎಚ್. ಶ್ರೀನಿವಾಸರಾಯರನ್ನು ಸಾಗರ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಹೇಮಿಸಿದೆ.

ಶ್ರೀಮನ್ ಮಹಾರಾಜರವರು ಮುಂದೆ ಹೇಳುವ ಬಡ್ತಿಗಳನ್ನು ಸ್ಯಾಂಕ್ಷನ್ ಮಾಡಿದಾರೆ.—ರಿಸಾಲ್ದಾರ್ ಮಹಮದ್ ಇಸ್ಮೈಲ್‌ರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನ ಕಾಮಂಡಾಂಟರಾಗಿರತಕ್ಕದ್ದು; ಜಮೇದಾರ್ ಸುಬ್ಬರಾವ್ ಚಿನ್ನೆಯವರನ್ನು ಟ್ರೂಪ್ ಕಮ್ಯಾಂಡರ್ 2 ನೇ ಗ್ರೇಡಿಗೂ, ಜಮೇದಾರ್ ತಿಮ್ಮಪ್ಪರಾಜೆ ಅರಸಿನವರನ್ನು 3 ನೇ ಗ್ರೇಡಿಗೂ, ದಫೇದಾರ್ ಹರಿರಾಮ್‌ರವರನ್ನು 4 ನೇ ಗ್ರೇಡಿಗೂ ಬಡ್ತಿ ಮಾಡಿದೆ.

ಶ್ರೀಮನ್ ಮಹಾರಾಜರವರು ಮ|| ಆರ್. ಎಸ್. ನಂಜರಾಜೆ ಅರಸಿನವರನ್ನೂ, ಮ|| ಕೆ. ಎಚ್. ಚಿಂಗೇರಿಯವರನ್ನೂ ಲೋಕಲ್ ಸರ್ವಿಸ್ ರೆಜಿಮೆಂಟಿನ 4 ನೇ ಗ್ರೇಡ್ ಜಮೇದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಕ ಮಾಡಿರುತ್ತಾರೆ.

ದಕ್ಷಿಣ ಸರ್ಕಲ್ ಸೂಪರಿನ್‌ಟೆಂಡಿಂಗ್ ಇಂಜನಿಯರ್ ಮ|| ಪಿ. ರಂಗಸ್ವಾಮಿ ಅಯ್ಯಂಗಾರ್ರಿಗೆ ಮೇ ತಾ. 26 ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಉತ್ತರ ಸರ್ಕಲಿನ ಸೂ|| ಇಂಜನಿಯರ್ ಮ|| ಸಿ. ಮಾಧವರಾಯರು ಆ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಗವರ್ನ್‌ಮೆಂಟ್ ಮರಾಮತ್ತು ಇಲಾಖಾ ಅ|| ಸೆಕ್ರೆಟರಿ ಮ|| ಎನ್. ಪಿ. ಸುಬ್ರಹ್ಮಣ್ಯ ಅಯ್ಯರವರಿಗೆ ಮೇ ತಾ. 24 ರಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಾವ್ ಬಹದೂರ್ ಮ|| ಕೆ. ಕೃಷ್ಣಯ್ಯಂಗಾರ್ರವರು ಹಂಗಾಮಿಯಾಗಿ ಸ್ಟೇಟ್ ರೈಲ್ವೆ ಇಂಜನಿಯರ್ ಇನ್ ಚೀಫ್ ಪದವಿಯಾಗಿಯೂ ಗವರ್ನ್‌ಮೆಂಟ್ ರೈಲ್ವೆ ಸೆಕ್ರೆಟರಿಯವರಾಗಿಯೂ ಕೆಲಸ ನೋಡತಕ್ಕದ್ದು.

ಹುಣಸೂರು ತಾಲ್ಲೂಕು ಅಮಲ್ದಾರ್ ಮ|| ಟಿ. ಟಿ. ರಾಮಚಂದ್ರರಾಯರಿಗೆ ಮೇ ತಾ. 24 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗ್ ನಡಿಸಿದರು. ಮೊದಲು ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿದ್ದರಲ್ಲಿ ಕಳೆದ ಏಪ್ರಿಲ್ ತಿಂಗಳಲ್ಲಿ ಮ್ಯುನಿಸಿಪಲ್ ಉತ್ಪತ್ತಿಯು ರೂ. 19,030-11-0 ಆಯಿತೆಂದೂ, ಖರ್ಚು ರೂ. 26,616-12-8 ಪೈ ಆಯಿತೆಂದೂ, ಜನನ 150, ಮರಣ 157 ಎಂದೂ ತಿಳಿಯಿತು. ಆಕ್ಟ್ರಾಯಿ ಉತ್ಪತ್ತಿಯು ತಿಂಗಳು ತಿಂಗಳಿಗೆ ಹೆಚ್ಚುತ್ತಾ ಬರುವುದನ್ನು ಕೇಳಿ ಮೆಂಬರುಗಳು ಹರ್ಷಪಟ್ಟರು.—ವಿದ್ಯುಚ್ಛಕ್ತಿಯ ಇಲಾಖೆಯವರು ಇಲಾಖೆಯಲ್ಲಿ ತರಿಸಿಟ್ಟುಕೊಂಡಿರುವ ಸಾಮಾನುಗಳನ್ನು ಹಾಕಿ ವಿದ್ಯುಚ್ಛಕ್ತಿ ದೀಪಗಳನ್ನು ಇಟ್ಟರೆ ಅಂಥಾ ಸಾಮಾನುಗಳಿಗೆ ನ್ಯಾಯವಾದ ಖರೀದಿಗಿಂತಲೂ ಶೇಕಡ 10½ ಯಂತೆ ಜಾಸ್ತಿ ಛಾರ್ಜು ಮಾಡುತ್ತಾರೆಂದು ತಿಳಿಯಿತು. ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು ಸಲಹೆ ಕೊಟ್ಟು ಚರ್ಚೆ ಮಾಡಿದ್ದರ ಮೇಲೆ ಇನ್ನು ಮುಂದೆ ವಿದ್ಯುಚ್ಛಕ್ತಿಯ ದೀಪಗಳನ್ನಿಡುವಂಥಾ ಸಾಮಾನುಗಳನ್ನು ಮ್ಯುನಿಸಿಪಾಲಿಟಿಯವರು ಅಗ್ಗವಾಗಿರುವ ಕಡೆಯಿಂದ ತರಿಸಿಕೊಳ್ಳತಕ್ಕದ್ದೆಂದು ಮೆಂಬರುಗಳು ಒಪ್ಪಿ ತೀರ್ಮಾನಮಾಡಿದರು.—ಬ್ರಿಟಿಷ್ ರೆಸಿಡೆಂಟ್ ಸಾಹೇಬರಿಂದ ಟೋಲ್ ಫೀಜನ್ನು ವಸೂಲ್ಮಾಡದೆ ವಿನಾಯಿತಿ ಮಾಡತಕ್ಕದ್ದೆಂದು ಮೆಂಬರುಗಳು ಏಕವಾಕ್ಯತೆಯಿಂದ ಒಪ್ಪಿಕೊಂಡರು.

ಧರ್ಮ ಕೆಲಸಕ್ಕಾಗಲಿ ಸರ್ವಜನ ಉಪಯೋಗಕ್ಕಾಗಲಿ ವಿನಿಯೋಗಿಸುವೆ ಇರುವ ಕಟ್ಟಡಗಳಿಗೆ ಮುನಿಸಿಪಲ್ ತೆರಿಗೆ ಹಾಕದೆ ವಿನಾಯಿತಿ ತೋರಿಸಕೊಡ ಬೇಕೆಂದು ಸರ್ಕಾರದವರು ತಿಳಿಸಿದಾರೆ. ಬೆಂಗಳೂರಿನಲ್ಲಿ ಮ|| ದೊಡ್ಡಣ್ಣಶೆಟ್ಟರು ಅಂಗಡಿಗಳನ್ನು ಕಟ್ಟಿ ಅದರ ಉತ್ಪತ್ತಿಯನ್ನು ಧರ್ಮಕ್ಕೆ ವಿನಿಯೋಗಿಸುವುದಾಗಿ ತಿಳಿಸಿ, ಅಂಗಡಿಗಳಿಗೆ ಮುನಿಸಿಪಲ್ ತೆರಿಗೆ ಹಾಕದೆ ವಿನಾಯಿತಿ ಮಾಡಬೇಕೆಂದು ಕೇಳಿಕೊಂಡದ್ದರ ಮೇಲೆ ಸರ್ಕಾರದವರು ಮೇಲ್ಕಂಡ ಹುಕುಂ ಕೊಟ್ಟರು. ರಾಜಧಾನಿಯಲ್ಲಿ ಛತ್ರಿನಂಜಪ್ಪನವರ ಸತ್ರ ದೇವಸ್ಥಾನಗಳ 10 ಮಳಿಗೆಗಳಿಗೆ ಮ್ಯುನಿಸಿಪಾಲಿಟಿಯವರು ವರ್ತಕರಿಂದ ತೆರಿಗೆ ವಸೂಲ್ಮಾಡಬೇಕೆಂದು ವೈಸ್ ಪ್ರೆಸಿಡೆಂಟರು ಆ ಅಂಗಡಿಗಳಿಗೆ ತೆರಿಗೆ ಹಾಕಿದರು. ಲೇಟ್ ಚೀಫ್ ಕಮಿಷನರ ಹುಕುಂ ಅನುಸರಿಸಿ ಇದುವರೆಗೆ ಯಾವದೊಂದು ತೆರಿಗೆಯನ್ನೂ ಮ್ಯುನಿಸಿಪಾಲಿಟಿಯವರು ವಸೂಲ್ಮಾಡದೆ ಬಿಟ್ಟಿದಾರೆಂದೂ, ಈಗ ಹಾಕಿರುವ ತೆರಿಗೆಯನ್ನೂ ಅದೇ ರೀತಿ ವಜಾ ಮಾಡಬೇಕೆಂದೂ ಆ ಮಳಿಗೆಗಳವರು ಬರೆದುಕೊಂಡಿದ್ದರು. ಈ ವಿಚಾರವನ್ನು ತನಿಖೆಯಿಂದ ರಿಪೋರ್ಟು ಕಳುಹಿಸಬೇಕೆಂದು ಮೆಂಬರುಗಳು ಒಪ್ಪಿ ಒಂದು ಕಮಿಟಿಯನ್ನು ನೇಮಕಮಾಡಿದರು.—ಟೌನಿನಲ್ಲಿ ನೀರಿನ ನಲ್ಲಿ ಹೊಸದಾಗಿ ಇಡುವಾಗಲೂ, ಇರುವುದನ್ನು ತೆಗೆಯುವಾಗಲೂ ನೀರಿನ ಇಲಾಖೆಯವರು ಮ್ಯುನಿಸಿಪಲ್ ಕೌನ್ಸಿಲಿನ ತೀರ್ಮಾನದಂತೆ ನಡೆದುಕೊಳ್ಳಬೇಕೆಂದು ಸರ್ಕಾರದಿಂದ ಹುಕುಂ ಬಂದಿದೆ. ಮೆಂಬರುಗಳು ಅದನ್ನು ಓದಿಸಿ ಅದಕ್ಕಾಗಿ ಸರ್ಕಾರದವರನ್ನು ವಂದನೆ ಮಾಡಬೇಕೆಂದು ರೆಸೊಲ್ಯೂಷನ್ ಮಾಡಿದರು.—ಕಲ್ಯಾಣಪುರದ ಪಟೇಲ್ ವೆಂಕಟೇಗೌಡನಿಗೆ ಕನ್ನೆಗೌಡನಕೊಪ್ಪಲಿನಲ್ಲಿ ಮೂರು ಖಾಲಿ ನಿವೇಶನಗಳನ್ನು ಪ್ರೆಸಿಡೆಂಟರಿಗೆ ಸೂಕ್ತತೋರುವ ದರದಂತೆ ಬಿಕರಿ ಮಾಡಬಹುದೆಂದು ಮೆಂಬರುಗಳು ತೀರ್ಮಾನ ಮಾಡಿದರು.—ಸೊಳ್ಳೆಗಳ ಬೆಳವಣಿಗೆಯನ್ನು ತಪ್ಪಿಸುವುದಕ್ಕೋಸ್ಕರ ಹಳ್ಳ ಕೊಳ್ಳಗಳನ್ನು ಮುಚ್ಚುತ್ತಿರುವ ಸಿಬ್ಬಂದಿಯನ್ನು ಡಿಸೆಂಬರ್ ಆಖೈರ್ ತನಕ ಇಟ್ಟುಕೊಂಡು ಆ ಕೆಲಸವನ್ನು ಪೂರೈಸಬೇಕೆಂದು ಒಪ್ಪಲಾಯಿತು.—ದೊಡ್ಡಪೇಟೆಯಲ್ಲಿರುವ ಹಳೇ ತಾಲ್ಲೂಕ್ ಕಛೇರಿ ಕಟ್ಟಡವನ್ನು ಡೆಪ್ಯುಟಿ ಕಮಿಷನರವರು ಹರಾಜು ಮೂಲಕ ವಿಕ್ರಯಿಸುತ್ತಾರೆಂದು ಸರ್ಕಾರದಿಂದ ಹುಕುಂ ಬಂದಿದೆ.

ಮ್ಯುನಿಸಿಪಲ್ ಕರ್ನಾಟಕ ಮತ್ತು ಯುನಾನಿ ಆಸ್ಪತ್ರೆಗಳ ಪಂಡಿತರುಗಳಿಗೆ ಬಡ್ತಿ ಮಾಡಬೇಕೆಂದು ಹಿಂದೆ ಮ್ಯುನಿಸಿಪಲ್ ಕೌನ್ಸಿಲ್‌ನವರು ಶಿಫಾರಸು ಮಾಡಿದ್ದರು. ಗವರ್ನ್‌ಮೆಂಟಿನವರು ಆಗ್ಗೆ ಅದನ್ನು ಸ್ಯಾಂಕ್ಷನ್ ಮಾಡಿರಲಿಲ್ಲ. ಈಚೆಗೆ ಪ್ರೆಸಿಡೆಂಟರೇ ಆ ವಿಚಾರವಾಗಿ ಸರ್ಕಾರಕ್ಕೆ ಬರೆದದ್ದರ ಮೇಲೆ ಇಬ್ಬರಿಗೆ ಬಡ್ತಿ ಕೊಡಬಹುದೆಂದು ಸ್ಯಾಂಕ್ಷನ್ ಆಗಿದೆ ಎಂದು ಪ್ರೆಸಿಡೆಂಟರು ಮೆಂಬರುಗಳಿಗೆ ತಿಳಿಸಿದರು. ರಾವ್ ಬಹದೂರ್ ಮ|| ರಂಗಯ್ಯಂಗಾರ್ರು ಈ ವಿಚಾರ ಕೌನ್ಸಿಲಿಗೆ ತಿಳಿಸಿ ಅವರ ಅನುಮತಿ ಪಡೆಯದೇನೇ ತಾವೇ ಸ್ವತಂತ್ರಿಸಿ ಸರ್ಕಾರಕ್ಕೆ ಬರೆದದ್ದು ಕ್ರಮಕ್ಕೆ ವಿರುದ್ಧವೆಂದು ಅಭಿಪ್ರಾಯಪಟ್ಟದ್ದನ್ನು ಇತರ ಮೆಂಬರುಗಳೂ ಅನುಮೋದಿಸಿದರು. ಪ್ರೆಸಿಡೆಂಟರು ಅದು ಅಕ್ರಮವೆಂದು ತಮಗೆ ತಿಳಿಯಲಿಲ್ಲವೆಂದೂ, ಇನ್ನು ಮೇಲೆ ಅಂಥಾ ಸಂಗತಿಯನ್ನು ಕೌನ್ಸಿಲಿಗೆ ಮೊದಲೇ ತಿಳಿಸುವುದಾಗಿಯೂ ಹೇಳಿದರು.—ಈದ್ಗಾ ಬಡಾವಣೆಯಲ್ಲಿರುವ ಮಿಷನ್ ಆಸ್ಪತ್ರೆಗೆ ಅದರ ಪಕ್ಕದಲ್ಲಿರುವ ಸ್ವಲ್ಪ ಖಾಲಿ ನಿವೇಶನವನ್ನು ಆಸ್ಪತ್ರೆಯೊಳಕ್ಕೆ ಸೇರಿಸಿಕೊಳ್ಳುವಂತೆ ಮುಫತ್ತಾಗಿ ಕೊಡಬಹುದೆಂದು ಒಪ್ಪಲಾಯಿತು.—ಮುಂದಿನ ಅಂದರೆ 1915–16 ನೇ ಸಾಲಿನ ಟೋಲ್ ಗೇಟುಗಳ ಹರಾಜು ಮಾಹೆಯಾನಾ 2,689 ರೂಪಾಯಿಗೆ (ಅಂದರೆ, ಹಿಂದಿನ ಸಾಲಿಗಿಂತ 539 ರೂಪಾಯಿ ಜಾಸ್ತಿ) ಕೊಡಬಹುದೆಂದು ಮೆಂಬರುಗಳು ಒಪ್ಪಿದರು.—ಈ ವರುಷ ನವೆಂಬರ್ ಆಖೈರ್‌ವರೆಗೆ ಇನ್ನೆರಡು ಖಾಲಿಹಾತ್ ಗ್ಯಾಂಗುಗಳನ್ನು ಹಂಗಾಮಿಯಾಗಿ ನೇಮಿಸಿಕೊಳ್ಳುವಂತೆ ಸ್ಯಾಂಕ್ಷನ್ ಮಾಡಲಾಯಿತು.

ವೀಳ್ಯದೆಲೆಗೆ ಹಾಕಿರುವ ಸುಂಕವನ್ನು ಅರೆವಾಸಿ ಕಡಮೆ ಮಾಡುವುದು ಸೂಕ್ತವೇ ಎಂದು ಸರ್ಕಾರದವರು ಪ್ರಶ್ನೆ ಮಾಡಿದ್ದರು. ಹೀಗೆ ಇಳಿಸುವುದಕ್ಕೆ ಮ್ಯುನಿಸಿಪಲ್ ಮೆಂಬರುಗಳಿಗೆ ಸಮ್ಮತವಾಗಿದೆ ಎಂದೂ, ಇದರಿಂದ ಸಾಲೀಯಾನಾ ಸುಮಾರು 2,500 ರೂಪಾಯಿ ನಷ್ಟವಾಗುವುದೆಂದೂ ಸರ್ಕಾರಕ್ಕೆ ತಿಳಿಸಬೇಕೆಂದು ಇತ್ಯರ್ಥವಾಯಿತು.—ಕುರನಗೆರೆ ಬಾಗಿಲಲ್ಲಿರುವ ಸುಂಕದ ಕಟ್ಟೆಯನ್ನು 2,000 ರೂಪಾಯಿ ಮುಟ್ಟಿಸಿ ಅಲಂಕಾರವಾಗಿ ಕಟ್ಟಿಸಬಹುದೆಂದೂ, ಅರ್ಧ ಮೊಬಲಗನ್ನು ಟ್ರಸ್ಟ್ ಬೋರ್ಡಿನಿಂದ ಕೊಡಬೇಕೆಂದೂ ಮೆಂಬರುಗಳು ತಿಳಿಸಿರುತ್ತಾರೆ. ಮ|| ಅಂಬಳೆ ಅಣ್ಣಯ್ಯಪಂಡಿತರವರು ಸರಿಯಾದ ನಿವೇಶನವನ್ನು ಮ್ಯುನಿಸಿಪಾಲಿಟಿಯವರು ತೋರಿಸಿಕೊಟ್ಟರೆ ಅಲ್ಲಿ ಒಂದು ಬಾಲಿಕಾ ಪಾಠಶಾಲೆಗೆ ಆಗುವಂಥಾ ಕಟ್ಟಡವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುವುದಾಗಿ ತಿಳಿಸಿದರು. ಸ್ಥಳವನ್ನು ಗೊತ್ತುಮಾಡುವುದಕ್ಕೆ ಒಂದು ಕಮಿಟಿ ಏರ್ಪಾಡಾಯಿತು.—ಖಸಾಬ್ ಖಾನೆಯ ಕಂಟ್ರಾಕ್ಟನ್ನು ಪಡೆದಿದ್ದ ನಂಜಪ್ಪರಾವ್ ಎಂಬಾತನಿಂದ ಇನ್ನೂ 275 ರೂಪಾಯಿ ಬಾಕಿ ಬರಬೇಕಾಗಿದೆ ಎಂದೂ, ಆತನಿಗೆ ಆಸ್ತಿಪಾಸ್ತಿ ಏನೂ ಇಲ್ಲವೆಂದೂ ವೈಸ್ ಪ್ರೆಸಿಡೆಂಟರು ತಿಳಿಸಿದರು. ಮ|| ರಂಗಯ್ಯಂಗಾರ್ರು ಈ ವಿಚಾರವು ಬಹಳ ಮುಖ್ಯವಾದದ್ದೆಂದೂ, ಮ್ಯುನಿಸಿಪಲ್ ಹಣ ನಷ್ಟವಾಗುವುದೆಂದೂ, ಅದರ ಪೂರ್ವೋತ್ತರವನ್ನೆಲ್ಲಾ ಸರಿಯಾಗಿ ತನಿಖೆ ಮಾಡಬೇಕಾಗಿದೆ ಎಂದೂ ಹೇಳಿದ್ದರ ಮೇಲೆ ಒಂದು ಕಮಿಟಿ ಏರ್ಪಾಡಾಯಿತು.—ಬೆಂಗಳೂರಿನಲ್ಲಿ ತೆರಿಗೆ ವಸೂಲ್ಮಾಡುವ ಶ್ಯಾನುಭೋಗರಿಗೆ ಪೆನ್ಷನ್ ಕೊಡಬಹುದೆಂದೂ, ಮೈಸೂರಿನಲ್ಲಿ ಅಂಥಾ ನೌಕರರ ಸರ್ವೀಸನ್ನು ಪೆನ್ಷನ್ ಸರ್ವೀಸಿಗೆ ಸೇರಿಸಿಕೊಳ್ಳಕೊಡದೆಂದೂ ಸರ್ಕಾರದವರು ವ್ಯವಸ್ಥೆಮಾಡಿರುವುದಕ್ಕೆ ಕಾರಣವೇನೋ ಕೇಳಿ ತಿಳಿಯಬೇಕೆಂದು ಮೆಂಬರುಗಳು ಇತ್ಯರ್ಥಮಾಡಿದರು.—ಪ್ಲೇಗ್ ಆಸ್ಪತ್ರೆಯಲ್ಲಿರುವ ಕೆಲವು ಶಿಥಿಲವಾದ ಕಟ್ಟಡಗಳನ್ನು ತೆಗೆದುಹಾಕಿ ಇನ್ನು ಕೆಲವನ್ನು ದುರಸ್ತು ಮಾಡಿಸುವುದಕ್ಕೆ 2,370 ರೂಪಾಯಿ ಖರ್ಚು ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ರಾಜಧಾನಿಯ ಪಶ್ಚಿಮಾಭಿವೃದ್ಧಿಯಲ್ಲಿ ಎಗ್ಜಿಬಿಷನ್ ಕಟ್ಟಡದ ಬಳಿ ಸುಮಾರು ಹತ್ತು ಎಕರೆ ಜಮೀನನ್ನು ಮ|| ಎಂ. ಸಿ. ಕೃಷ್ಣಸ್ವಾಮಿಯವರಿಗೆ ಅಲ್ಲಿ ಒಂದು ಕರೋಟಿಯನ್ನು (?) ಕಟ್ಟಿ ನಡಿಸುವುದಕ್ಕೆ ಕೊಡಬಹುದೆಂದು ಮೆಂಬರುಗಳು ಸಮ್ಮತಿಪಟ್ಟರು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬಂದಕ್ಕೆ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಕೆಲವು ನಂಜನಗೂಡು ವಿಷಯಗಳು.

ಅಯ್ಯಾ,—ಈ ಊರು ದೊಡ್ಡ ಯಾತ್ರಾಸ್ಥಳವಾಗಿದ್ದರೂ ಇಲ್ಲಿ ಪರಸ್ಥಳದಿಂದ ಬಂದ ಯಾತ್ರಿಕರು ಇಳಿದುಕೊಳ್ಳುವದಕ್ಕೆ ಅನುಕೂಲವಾದ ಸ್ಥಳವಿಲ್ಲ. ನಮ್ಮನ್ನಾಳುವ ಮಹಾಸ್ವಾಮಿಯವರು ಈ ದೇವಸ್ಥಾನಕ್ಕೆ ಧರ್ಮವಾಗಿ ಕೆಲವು ಹಣವನ್ನು ಕೊಟ್ಟಿರುವದಾಗಿ ವರ್ತಮಾನ ಕೇಳುತ್ತೇವೆ. ದೇವಸ್ಥಾನದ ಬಾಜು ಹಣ್ಣು ಕಾಯಿ ಅಂಗಡಿ ಲೈನು ತೆಗೆದುಕೊಂಡು ಶ್ರೀಮನ್ ಮಹಾರಾಜರಾಜೇಸಾಹೇಬ ಬಹದ್ದೂರವರು ಇಲ್ಲಿಗೆ ಯಾತ್ರೆಗಾಗಿ ಚಿತ್ತೈಸಿದ ಜ್ಞಾಪಕಾರ್ಥವಾಗಿ ಪರಸ್ಥಳಿಕರಿಗೆ ಅನುಕೂಲವಾಗುವಂತೆ ಒಂದು ಧರ್ಮಶಾಲೆಯನ್ನು ಕಟ್ಟಿಸಿದಲ್ಲಿ ಶಾಶ್ವತವಾದ ಪರೋಪಕಾರ ಧರ್ಮವಾಗಿ, ಮಹಾಸ್ವಾಮಿಯವರು ದಯಪಾಲಿಸಿರುವ ಹಣ ಸದ್ವಿನಿಯೋಗವಾದಂತೆ ಆಗುತ್ತದೆ. ಆದರೆ ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳು ಈ ಹಣದಿಂದ ಒಂದು ಲೈಬ್ರರಿಯಾಗಲಿ, ಅಥವ ಟೆನಿಸ್ ಕೋರ್ಟಾಗಲಿ ಮಾಡಬೇಕೆಂದು ತೀರ್ಮಾನಿಸಿರುತ್ತಾರೆ. ಇಂಥಾ ಕೆಲಸಗಳನ್ನು ಮ್ಯುನಿಸಿಪಲ್ ಮೆಂಬರುಗಳು ಮತ್ತು ಉಪಪತ್ತಿಯುಳ್ಳ ಗ್ರಾಮಸ್ಥರು ಸಹ ಚಂದಾ ಹಾಕಿಕೊಂಡು ಮಾಡಿಕೊಳ್ಳಬೇಕೇ ವಿನಹ ಮಹಾಸ್ವಾಮಿಯವರು ಗ್ರಾಮಕ್ಕೆ ಕೊಟ್ಟಿರುವ ಧರ್ಮದ ಹಣವನ್ನು ಇದಕ್ಕೆ ವಿನಿಯೋಗಿಸತಕ್ಕದ್ದಲ್ಲ. ಡೆಪ್ಯುಟಿ ಕಮಿಷನರ್ ಸಾಹೇಬರವರು ಈ ವಿಚಾರದಲ್ಲಿ ಸರಿಯಾದ ಏರ್ಪಾಡು ಮಾಡಬಹುದೆಂದು ನಿರೀಕ್ಷಿಸುತ್ತೇವೆ.—ಈ ಊರು ದೇವಸ್ಥಾನದಲ್ಲಿ ಪರಸ್ಥಳಿಕರು ಮಂಗಳಾರತಿ ಮಾಡಿಸಿದಲ್ಲಿ ಗೋಲಕಕ್ಕೆ 6 ಪೈ ಹಾಕಬೇಕೆಂತಲೂ, ಜಾತ್ರೆ ವಗೈರೆ ಕಾಲದಲ್ಲಿ ಒಂದು ತೆಂಗಿನಕಾಯಿನಲ್ಲಿ ಒಂದು ಹೋಳು ಕೊಡಬೇಕೆಂತಲೂ ತೀರ್ಮಾನಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ ಉತ್ಪತ್ತಿ ಕಡಮೆಯಾದಾಗ್ಯೂ ಈ ಬಾಬಿನ ಕಂಟ್ರಾಕ್ಟರುಗಳಿಂದ ಜನಗಳಿಗೆ ಉಂಟಾಗತಕ್ಕ ತೊಂದರೆ ಹೇಳತೀರದು—ಶಿವಕೋಟಕ್ಕೆ ಹಣವು ಜಾಸ್ತಿಯಾದದ್ದು ತಿನ್ನತಕ್ಕ ನೌಕರರಿಗೆ ಅನುಕೂಲವಾಯಿತೇ ವಿನಹ ಪರಸ್ಥಳಿಕರ ಸೌಕರ್ಯ ಕಡಮೆಯಾಗಿರುತ್ತೆ. ಅಮಲ್ದಾರರ ನಿಗಾ ಈ ವಿಚಾರದಲ್ಲಿ ಸ್ವಲ್ಪವೂ ಕಾಣುವದಿಲ್ಲ. ಪೂರ್ವದಲ್ಲಿ ದೇವಸ್ಥಾನದಲ್ಲಿ ನಡೆಯತಕ್ಕ ಸೋಮವಾರ ದೊಡ್ಡದಾದ ಉತ್ಸವಗಳಿಗೂ ಸಹ ಅಮಲ್ದಾರರು ಖುದ್ದು ಇದ್ದು ಶ್ರದ್ಧೆಯಿಂದ ನಡಿಸುತ್ತಿದ್ದರು. ಈಗ ಅವರು ಊರು ಹೊರಗೆ ವಾಸಮಾಡಿದ್ದೆಂದು, ಯಾವ ಉತ್ಸವಕ್ಕೂ ಬರುವದು ಅಪರೂಪ. ದೇವಸ್ಥಾನದ ಹಳೇಮುಂಟಪದ ಸಾಮಾನು ಉಪಯೋಗಿಸಿ, ಚೌಗಾವಿ ರಥಕ್ಕೆ ಬದಲಾಗಿ ಒಂದು ಮಂಟಪವನ್ನು ಕಟ್ಟಿಸಿರುತ್ತಾರೆ.

ನಂಜನಗೂಡು. ಎ. ಸುಬ್ರಮಣ್ಯಶಾಸ್ತ್ರಿ.

ಮಲೆನಾಡಿನ ಅಭಿವೃದ್ಧಿ ವಿಚಾರವು.

ಅಯ್ಯಾ,—ಎಲ್ಲಾ ಭಾಗದಲ್ಲಿಯೂ ಕೇವಲ ಹಿಂದುಳಿದಿರುವ ನಮ್ಮ ಈ ಮಲೆನಾಡು ಪ್ರಜೆಗಳನ್ನು ಅಭಿವೃದ್ಧಿಗೆ ತರಬೇಕೆಂಬ ಸದುದ್ದೇಶದಿಂದ ನಮ್ಮ ಘನ ಮೈಸೂರು ಸರ್ಕಾರದವರು ಮಾಡಿಯೂ, ಮಾಡುತ್ತಲೂ ಇರುವ ಏರ್ಪಾಡುಗಳಲ್ಲಿ ನಮ್ಮ ಒಳಹೊಕ್ಕು ನಮ್ಮಲ್ಲಿರತಕ್ಕ ಗುಣದೋಷಗಳನ್ನು ಕಂಡುಹಿಡಿದು ಆ ದೋಷಗಳನ್ನು ಹೋಗಲಾಡಿಸಿ ನಮ್ಮ ಶ್ರೇಯೋಲಾಭವನ್ನು ಸೂಚಿಸುವ ಬಗ್ಗೆ ಅನೇಕ ವಿಧವಾದ ಬೋಧೆಯನ್ನು ಕೊಡುವಂತೆ ಮಾಡಿರುವ ಡಿಸ್ಟ್ರಿಕ್ಟಿಗೆ ಒಬ್ಬೊಬ್ಬರಂತೆ ಏರ್ಪಡಿಸಿರುವ ಉಪನ್ಯಾಸಕರ ಏರ್ಪಾಡು ಬಹಳ ಶ್ಲಾಘನೀಯವಾಗಿದೆ. ಅಂಥಾ ಚತುರರನ್ನು ನಮ್ಮ ಸೌಭಾಗ್ಯ ವಿಶೇಷದಿಂದ ನಮಗೆ ದಯಪಾಲಿಸಿಕೊಟ್ಟದ್ದಕ್ಕಾಗಿ ನಮ್ಮ ಮೈಸೂರು ಸರ್ಕಾರದವರಿಗೆ ನಾವು ಬಹಳ ಕೃತಜ್ಞರಾಗಿದೇವೆ. ಅಂಥವರನ್ನು ಪದೇ ಪದೇ ಈ ಮೇಲೆ ಕಂಡ ವಿಷಯಗಳನ್ನು ಬೋಧಿಸಲು ನಮ್ಮಲ್ಲಿಗೆ ಕಳುಹಿಸುತ್ತಿರಬೇಕೆಂಬುದೇ ನಮ್ಮ ಮಲೆನಾಡು ಪ್ರಜೆಗಳ ಕೋರಿಕೆಯಾಗಿದೆ. ಹಾಗೆಯೇ ನೆನ್ನೆ ಮ|| ಹೊಸಕೋಟೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಹರಿಹರಪುರದ ಯೌವನಸ್ಥರಿಂದ ಒಂದು ಇಂಗ್ಲೀಷ್ ನೈಟ್ ಸ್ಕೂಲು ಸ್ಥಾಪಿಸಲ್ಪಟ್ಟಿತು. ಆಗ್ಗೆ ಸದರಿ ಗ್ರಾಮದ ಮತ್ತು ಆಸ್ಪಾಸ್ ಗ್ರಾಮಗಳ ಮುಖಂಡರೂ, ಅಮಲ್ದಾರ್ ಮ|| ಗರುಡಯ್ಯಂಗಾರ್ರವರೂ, ಸರ್ಕಾರಿ ನೌಕರರೂ ದಯಮಾಡಿದ್ದರು. ಆಗ್ಗೆ ಸದರಿ ಉಪನ್ಯಾಸಕರಾದ ಮ|| ಕೆ. ರಂಗಯ್ಯಂಗಾರ್ರು ವಿದ್ಯಾ ವಿಷಯವನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಪ್ರಜೆಗಳು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬುದು ತಮ್ಮ ಮುಖ್ಯಕರ್ತವ್ಯವೆಂದೂ, ಮಕ್ಕಳು ವಿದ್ಯಾವಂತರಾಗದಿದ್ದರೆ ಅವರಿಂದ ಪ್ರಪಂಚಕ್ಕೆ ಯಾವದೊಂದು ಉಪಕಾರವಾಗುವುದಕ್ಕೆ ಬದಲಾಗಿ ಕೆಡುಕಾಗುವುದರಲ್ಲಿ ಅಭ್ಯಂತರವಿಲ್ಲದಿರುವುದರಿಂದ ಮುಖ್ಯವಾಗಿ ನಮ್ಮ ಮಕ್ಕಳೂ, ಯೌವನಸ್ಥರೂ ವಿದ್ಯಾವಂತರಾಗಿಯೇ ತೀರಬೇಕೆಂದೂ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಇಂಥಾದ್ದಕ್ಕೆಲ್ಲಾ ಬಹಳ ಪ್ರೋತ್ಸಾಹಕರೂ, ನಮ್ಮ ಮಲೆನಾಡು ಪ್ರಜೆಗಳನ್ನು ಯಾವದೊಂದು ತಾರತಮ್ಯವಿಲ್ಲದೆ ಏಳಿಗೆಗೆ ತರಬೇಕೆಂಬುವದೇ ತಮ್ಮ ಮುಖ್ಯಕರ್ತವ್ಯವೆಂದು ಭಾವಿಸಿ ಅದಕ್ಕಾಗಿ ಅಹರ್ನಿಶಿ ಸರ್ವಪ್ರಯತ್ನವನ್ನೂ ವಿನಿಯೋಗಿಸುತ್ತಿರುವ ಮ|| ಹೊಸಕೋಟೆ ಕೃಷ್ಣರಾಯರ ಔದಾರ್ಯವು ಶ್ಲಾಘಿಸತಕ್ಕದ್ದಾಗಿದೆ. ಇವರ ಏರ್ಪಾಡಿನಿಂದ ಸದ್ಯದಲ್ಲೇ ಇನ್ನೊಂದು ಮ್ಯೂಜಿಯಂ, ರೈಸ್ ಮಿಲ್, ಇನ್ನು ಕೆಲವು ಕೈಗಾರಿಕೆ ಕೆಲಸಗಳು ಏರ್ಪಡಿಸಲ್ಪಟ್ಟು, ಈ ಹರಿಹರಪುರವೂ, ಇದರ ಆಸುಪಾಸು ಗ್ರಾಮಗಳ ನಿವಾಸಿಗಳೂ ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲವೆಂದು ನಂಬಿದೇನೆ.

ಹರಿಹರಪುರ. ಕೆ. ಕೆ. ವಿ.

ಶೃಂಗೇರಿ ಜಹಗೀರ್ ವಿದ್ಯಮಾನಗಳು.

ಅಯ್ಯಾ,—ಶೃಂಗೇರಿ ಜಹಗೀರ್ ಆಡಳಿತದಲ್ಲಿ ಕ್ರಮ ತಪ್ಪಿರುವುದು. ಸೇಟಲ್‌ಮೆಂಟ್‌ಗೆ ಮೊದಲಿನಿಂದಲೂ ಶೃಂಗೇರಿ ಜನಗಳ ಮೇಲೆ ಅಭಿಮಾನ ಕಡಮೆ. ಅದುಮೊದಲು ಎಷ್ಟೋ ವರ್ಷಗಳಿಂದ ಅಧಿಕಾರ ಮಾಡುತ್ತಿದ್ದರೂ ಜನಾನುರಾಗಕ್ಕೆ ಪಾತ್ರರಾಗಿಲ್ಲ. ಜನಗಳಿಗೆ ಅಸಮಾಧಾನಕರವಾದ ಕೆಲಸಗಳೇ ನಡೆಯುತ್ತಿವೆ. ಕಳೆದ ವರ್ಷ ಬ್ರಾಹ್ಮಣರು ಗದ್ದೆಯನ್ನು ಹೂಡಬಹುದೆಂತ ತಿಳಿಸಿದರು. ಕೆಲವರು ಹೂಡಿದರು. ಇದಕ್ಕೆ ಜನಗಳಲ್ಲಿ ಪಾರ್ಟಿಯಾಯಿತು. ಈಗ ಗದ್ದೆ ಹೂಡುವುದು ಸರಿಯಲ್ಲವೆಂತ ತಿಳಿಸಿದಾರೆ. ಇದರಿಂದ ಕಲಹವು ಹೆಚ್ಚಿತು. ಹೀಗೆ ಅನೇಕ ವಿಚಾರಗಳು ನಡೆದಿವೆ. ಮಠದ ಹಣಗಳು ನಾನಾ ಅನುಪಯುಕ್ತ ಕಾರ್ಯಗಳಿಗೆ ಖರ್ಚಾಗುತ್ತಲಿವೆ. ಕೆಲವನ್ನು ಮಠದ ಖರ್ಚೆಂದು ಹೇಳುವುದೇ ಕಷ್ಟ. ಬಡವರಿಗೂ ರೈತರಿಗೂ ಸುಲಭ ಬಡ್ಡಿಯಿಂದ ಸಾಲ ಕೊಡುವುದಿಲ್ಲ. ಬೇಕಾದವರಿಗೆ ಸುಲಭವಾಗಿ ಸಾಲ ದೊರಕುತ್ತದೆ. ಇದೆಲ್ಲಾ ಹೆಚ್ಚು ಕಮ್ಮಿ ಗುರುಗಳ ಅಪ್ಪಣೆಯೆಂದು ಹೇಳುತ್ತಾರೆ. ದೇವಸ್ಥಾನ ಮುಂತಾದ ನ್ಯಾಯವಾದ ಧರ್ಮ ಖರ್ಚುಗಳು ಅದಷ್ಟು ಕಡಮೆಯಾಗಿವೆ. ವ್ಯರ್ಥವಾದ ಕೆಲಸಗಳಿಗೆ ಹಣವು ಖರ್ಚಾಗುತ್ತದೆ. ಬೇಕಾದವರಿಗೆ ಸಾಲವನ್ನು ಧರ್ಮವಾಗಿ ಬಿಡುವದೂ ಉಂಟು. ಪಾಠಶಾಲೆಯಂತೂ ಬಹಳ ಹೀನಸ್ಥಿತಿಯಲ್ಲಿದೆ. ಸಂಸ್ಕೃತ ವಿದ್ಯೆಗೆ ಮುಮ್ಮಡಿ ನಾಡೇ ಊರಿಗೆ ಕ್ಷಾಮ ಹತ್ತಿದೆ. ಮಠಕ್ಕೆ ದಿಗಡು ಮಾಡುವವರಿಗೆ ಉದ್ಯೋಗವು ಸಿಗುತ್ತದೆ. ಸರ್ಕಾರಿಯಂತೆ ಪರೀಕ್ಷೆ, ವಯಸ್ಸು, ಯೋಗ್ಯತೆ ಬೇಕಾಗಿಲ್ಲವು. ಈಗಿರುವ ಡೆಪ್ಯುಟಿ ಅಮಲ್ದಾರರ ಕಾಲದಲ್ಲಿ ಪುಂಡಾಟಗಳು ಕಡಮೆಯಾಗಿವೆ. ಇವರ ಛೇರಿಯು ಚೆನ್ನಾಗಿದೆ. ಜನಾನುರಾಗಿಗಳಾಗಿದಾರೆ. ಈ ಅಮಲ್ದಾರರನ್ನು ವರ್ಗ ಮಾಡಿಸುವ ವರ್ತಮಾನವಿದೆ. ನ್ಯಾಯವನ್ನು ಹೇಳುತ್ತೇವೆಂತ ಮುಂದು ಬರುವವರಿಗೆ ನೌಕರಿ ಕೊಟ್ಟೋ, ಇನ್ನೊಂದು ವಿಧವಾಗಿಯೋ ಸ್ವಾಧೀನಕ್ಕೆ ತರುತ್ತಾರೆ. ಇನ್ನು ಕೆಲವರು ಬಡವರು; ಕೆಲವರು ಮಠದಿಂದ ಜೀವನ ಮಾಡುವವರು. ಹೀಗಾಗಿ ಯಾವದೂ ಎದುರಿಗೆ ಬರುವುದಿಲ್ಲ. ಗುರುಗಳ ಹತ್ತಿರ ಹೇಳಿಕೊಂಡರೂ ನಡೆಯುವುದಿಲ್ಲ. ಅವರು ಯಾವ ವಿಚಾರವನ್ನೂ ಮಾಡುವಂತೆ ಕಾಣುವುದಿಲ್ಲ. ಸದ್ಯದಲ್ಲಿ ಪ್ರೀಸ್ ಆಫ್ ಅಟರ್ನಿ ನಡೆಯುತ್ತೆಂತ ಹೇಳುತ್ತಾರೆ. ಇದಾದರೆ ಜನಗಳ ಕಷ್ಟವು ಇನ್ನೂ ಹೆಚ್ಚುವುದು. ಈ ವಿಚಾರವನ್ನೆಲ್ಲಾ ಘನಹೊಂದಿದ ಸರ್ಕಾರದವರು ವಿಚಾರಮಾಡಿ ಕ್ರಮಪಡಿಸುವರೆಂತ ನಿರೀಕ್ಷಿಸುತ್ತೇನೆ.

ಮಠಾಭಿಮಾನಿ.

ಸಂಜಾತ್ರಿಯಪಟ್ಟಣದ ತಾಲ್ಲೂಕಿನ ವಿದ್ಯೆ.

ಅಯ್ಯಾ,—ಈ ತಾಲ್ಲೋಕಿನಲ್ಲಿ ಗಂಡಸರು 21,672, ಹೆಂಗಸರು 18,841, ಜುಮ್ಲಾ 40,513 ಜನರಿದಾರೆ. ಇಷ್ಟು ಜನರ ಪೈಕಿ 2,570 ಗಂಡಸರೂ, 68 ಹೆಂಗಸರೂ ಮಾತ್ರ ಕನ್ನಡವನ್ನು ಓದಲು ಬರೆಯಲು ತಿಳಿದಿರುವರು. 103 ಜನ ಗಂಡಸರೂ, 6 ಹೆಂಗಸರೂ ಮಾತ್ರ ಇಂಗ್ಲಿಷ್ ಬಲ್ಲವರಾಗಿದಾರೆ. ಇವರ ಪೈಕಿ ಅನೇಕರು ಪರಸ್ಥಳದಿಂದ ಬಂದು ಸರ್ಕಾರದ ಹುದ್ದೆಯಲ್ಲಿರತಕ್ಕವರಾಗಿದಾರೆ. ಈ ತಾಲ್ಲೋಕಿನಲ್ಲಿ ದೊಡ್ಡ ಇಂಗ್ಲಿಷ್ ಪಾಠಶಾಲೆಗಳಿಲ್ಲದಿದ್ದರೂ ಗ್ರಾಮಗಳಲ್ಲಿ 18 ಲೋಕಲ್ ಫಂಡ್ ಶಾಲೆಗಳೂ, ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ (ಸೋಮವಾರ ಪೇಟೆಯಲ್ಲಿ) ಒಂದು ಗೌರ್ನಮೆಂಟ್ ಮೋಡಲ್ ಸ್ಕೂಲು ಸಹ ಇರುವವು. ಇವುಗಳಿಗೇ ನ್ಯಾಯವಾಗಿ ಹುಡುಗರು ಸೇರುವುದಿಲ್ಲ. ಇದರ ಕಾರಣವನ್ನು ತಿಳಿಸಲು ಶಕ್ಯವಲ್ಲವಾದರೂ ಕೆಲವು ಮಟ್ಟಿಗೆ ಸೂಕ್ಷ್ಮವಾಗಿ ವಿವ

ರಿಸುವೆನು. ತಂದೆ ತಾಯಿಯರು ಮಕ್ಕಳನ್ನು ಸ್ಕೂಲಿಗೆ ಕಳುಹುವುದರ ಬದಲಿಗೆ ಮನೆ ಕೆಲಸಕ್ಕೆ ಇಟ್ಟುಕೊಳ್ಳುವರು. ಕೆಲವರು ನಮ್ಮ ಮಕ್ಕಳು ವಿದ್ಯೆ ಕಲಿತು ಸರಕಾರಿ ಕೆಲಸ ಮಾಡಬೇಕ್ಯಾಡ; ಮನೆಯ ಆಸ್ತಿಯನ್ನು ನೋಡಿಕೊಂಡಿದ್ದರೆ ಸಾಕೆನ್ನುವರು. ಕೆಲವರು ಮಕ್ಕಳು ವಿದ್ಯೆ ಕಲಿಯುತ್ತಾಗಲೇ ಲಗ್ನ ಮಾಡುವುದರಿಂದ ಬೇಗನೆ ವಿದ್ಯೆಯನ್ನು ತ್ಯಜಿಸುವರು. ಹುಡುಗರು ಯಾವಾಗಲೂ ಮಡಿಕೆ ತೊಳೆಯಬೇಕಾದ್ದರಿಂದ ಅವರಿಗ್ಯಾಕೆ ವಿದ್ಯೆ ಎಂದು ಕೆಲವರು ಹೇಳುವರು. ಕೆಲವರು ಮಕ್ಕಳಿಗೆ 10-12 ವರ್ಷವಾದಬಳಿಕ್ಕೆ ವಯಸ್ಸೆಂದು ಸ್ಕೂಲಿಗೆ ಕಳುಹಿಸುವುದಿಲ್ಲ. ಅನೇಕರು ತಮ್ಮ ಮಕ್ಕಳ ಪರಸ್ಥಳಗಳಿಗೆ ಕಳುಹಿಸಿದರೆ ಏನಾದರೂ ಕಷ್ಟ ಬಂದರೆ ಯಾರೂ ಇಲ್ಲವೆಂದು ಊರಿನ ಹೊರಗೆ ಕಳುಹಿಸುವುದಿಲ್ಲ. ಇನ್ನು ಕೆಲವರು ಮಕ್ಕಳ ಬರೆಯಲಿಕ್ಕೆ ಹಾಕಿದರೆ ಸ್ಕೂಲ್ ಫೀಜು, ಊಟದ ಖರ್ಚು, ವಸ್ತ್ರ ಕ್ರಯ ಮುಂತಾದ್ದಕ್ಕೆ ಖರ್ಚಾಗುವುದರಿಂದ ತಮ್ಮ ಹಣವು ಕಮ್ಮಿಯಾಗುದು ಎಂದು ಬಚ್ಚಿಟ್ಟುಕೊಳ್ಳುವರೇ ಹೊರತು ಮಕ್ಕಳಿಗೆ ವಿದ್ಯೆ ಕಲಿಸುವುದಿಲ್ಲ. ಮತ್ತೆ ಕೆಲವರು ಮಕ್ಕಳನ್ನು ವಿದ್ಯೆ ಕಲಿಯಲಿಕ್ಕೆ ಹಾಕಿ ಅವರು ಕೇಳಿದ ಹಾಗೆ ಹಣ ಕೊಡುವುದರಿಂದ ವಿದ್ಯೆಯ ಬದಲಿಗೆ ತಿಂಡಿ ಇಲ್ಲವೇ ಬೀಡಿ, ನಶ್ಯ, ಈ ಸಮಯಗಳಲ್ಲಿ ಮಧ್ಯಪಾನ ಮುಂತಾದ ದುರ್ವ್ಯಸನಗಳನ್ನು ಅಭ್ಯಾಸದಲ್ಲಿಕೊಂಡು ವಿದ್ಯೆ ಕಲಿಯಬೇಕೆಂಬ ತರದೇವನ್ನೇ ಬಿಟ್ಟುಬಿಡುವರು. ಇಷ್ಟೇ ಅಲ್ಲ ಇವಲ್ಲ ಅನೇಕ ಕಾರಣಗಳಿದ್ದರೂ ಉದಾಹರಿಸಲು ವ್ಯಸನಪಡುತ್ತೇನೆ. ಕೊನೆಗೆ ಕಾವೇರಿಯು ಯಾವ ಪ್ರಕಾರ ಸಕಲ ನದಿಗಳಿಗಿಂತ ದೊಡ್ಡದಾಗಿ ತೋರುವದೋ ಹಾಗೆಯೇ ಈ ತಾಲೂಕು ಬಾಕಿಯೆಲ್ಲಾ ತಾಲೂಕುಗಳಿಗಿಂತಲೂ ಐಶ್ವರ್ಯದಲ್ಲಿ ಮಿಗಿಲಾಗಿದ್ದರೂ ವಿದ್ಯೆಯಲ್ಲಿ ಒಂದು ಕೋಡಿಗಿಂತ ಕಡಮೆಯಾಗಿರುವುದರಿಂದ ಮಹನೀಯರುಗಳು ಇನ್ನು ಮುಂದಾದರೂ ತಾಲೂಕಿನಲ್ಲಿ ವಿದ್ಯೆಯನ್ನು ಅಭಿವೃದ್ಧಿ ಮಾಡುತ್ತಾ ಲೋಕದಲ್ಲಿ ಕೀರ್ತಿ ಬರುವಂತೆ ಮಾಡಿಕೊಂಡಾರೆಂದು ಕೋರುವ

ಸೋಮವಾರ ಪೇಟೆ ಎಚ್. ಟಿ. ಹರಗದ ಮಠ.

ವಿದ್ಯಾರ್ಥಿಗಳ ಹಿತಚಿಂತಕ, ಸೋಲದೇವನಹಳ್ಳಿ:—ಎಲ್ಲ ಪತ್ರಿಕೆಗಳೂ ನೀವು ಬರೆದಂತೆಯೇ ಸಂಭಾವನಾಗೋಣವೆಂದು ನಿಮ್ಮ ಚಾಚಿ ಪ್ರಕಟಿಸಲಿಲ್ಲ.

ಮ॥ ಎನ್. ಬಿ ಮುತ್ತಣ್ಣ, ಬೆಂಬಳವು:—ನೀವು ಹೇಳಿದ ಕಷ್ಟಗಳನ್ನು ಕುರಿತು ಮೈಸೂರು ಸರ್ಕಾರದ ಮುಜರಾಯಿ ಇಲಾಖೆ ಕಮಿಷನರವರಿಗೆ ಬರೆದುಕೊಂಡರೆ ಅವರು ತನಿಖೆಯಿಂದ ಕ್ರಮಪಡಿಸ್ಯಾರೆ.

ಚಿಂತಾಮಣಿ ತಾಲೂಕು ಸಂತೆಕಲ್ಲಹಳ್ಳಿಯಲ್ಲಿ ರೀಡಿಂಗ್ ರೂಮ್ ಮೆಂಬರುಗಳೂ ಗ್ರಾಮಸ್ಥರೂ ಸ್ಥಳೀಯ ಅನುಕೂಲಗಳನ್ನು ಕಲ್ಪಿಸಿಕೊಳ್ಳುವುದರಲ್ಲಿ ಉತ್ಸಾಹಶಾಲಿಗಳಾಗಿ ದ್ರವ್ಯವನ್ನು ವಿನಿಯೋಗಿಸುವುದಲ್ಲದೆ ದೇಶಪತ್ರವನ್ನು ಪಡುತ್ತಿದ್ದಾರೆಂದು ನಮಗೆ ತಲುಪಿರುವ ಬಾತ್ಮಿಯನ್ನು ಓದಿ ಸಂತೋಷಪಡುತ್ತೇವೆ.

ತರೀಕೆರೆ ತಾಲೂಕಿನಲ್ಲಿ ಈ ವರುಷ ಚೈತ್ರ ಬಹುಳದಲ್ಲಿ ಒಂದು ಮದುವೆ ನಡೆಯಿತೆಂದೂ, ಮದುಮಗಳು ನಿಜಸ್ಥಿತಿಯು ಮಧ್ಯದಲ್ಲಿ ಈಚಿನವನ್ನು ಹಡೆಸಳೆಂದೂ ಕನ್ಯೆಗೆ ಜರ ದೇಹವಾಗಿ ಬಾಲೆಂಬ ಉತ್ಸವದಿಂದ ಮದುವೆ ಮಾಡಿಕೊಡುವ ಉಳಿಗೆಯಲ್ಲಿನ ಪದ್ಧತಿ ಹೆಚ್ಚಾಗಿರುವುದೇ ಇಂಥಾ ಅನಾಸ್ಥೆಕ್ಕೆ ಕಾರಣವೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಅರಸೀಕೆರೆ ತಾಲೂಕಿನಲ್ಲಿ ಮಾರನು ಹೆಂಗಸನು ಕೆರೆಗೆ ನೀರಿಗೆ ಹೋಗಿದ್ದಾಗ ಅವರಲ್ಲೇ ಪರಸ್ಪರ ಹೊಡೆದಾಟವಾಗಿ ಒಬ್ಬಳ ಬುರುಡೆ ಒಡೆದುಹೋಯಿತು; ಒಬ್ಬಳ ರಟ್ಟೆ ಮುರಿದುಹೋಯಿತು ಎಂದು ಮುಂತಾಗಿ ಒಬ್ಬ ಬಾತ್ಮಿದಾರು ಬರೆದು ಈ ಕಲಹದ ವಿವರವನ್ನು ತಿಳಿಸಿದಾನೆ. ಪೌರುಷವು ಹಂಗುವ ಈ ಇಂಥಾ ಕೃತಗಳು ನಡೆಯುವುದು ಅತಿಶಯವಲ್ಲ.

ಅರಸೀಕೆರೆ ತಾಲೂಕು ಬಾಗಡಿ ಗ್ರಾಮದ ಸ್ಕೂಲಿನಲ್ಲಿ ಗವರ್ನ್‌ಮೆಂಟ್ ಹಾರ್ಮೋನಿಯಸರು ಮಿ ಎ. ಕೆ. ವೆಂಕಟಾಚಾರ್ಯರು ತಾ 23 ರಲ್ಲಿ ಸ್ತ್ರೀಯರನ್ನು ಕೂಡಿಸಿ ಬಾಲ ಭಕ್ತರ ಪವಿತ್ರ ಸಂಸ್ಕಾರ, ಆರೋಗ್ಯ, ಸ್ವಚ್ಛತೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸಮಾಡಿದರೆಂದು ಒಬ್ಬ ಬಾತ್ಮಿದಾರರು ಬರೆದಿದ್ದಾರೆ.

ದೊಡ್ಡಬಳ್ಳಾಪುರ ಎ ವಿ. ಸ್ಕೂಲಿನಲ್ಲಿ ಒಬ್ಬ ಮಾಸ್ತರು 10 ವರುಷದ ವಿದ್ಯಾರ್ಥಿಯನ್ನು ಹೊಡೆದ ಹಾಗೂ, ಒಬ್ಬ ಚಿಕಿತ್ಸಕರು ಅವನ್ನು ಅವುಲಾಪ್ರಲ್ಲಿ ತೋರಿಸಿ ಆಸ್ಪತ್ರೆಯಲ್ಲಿ ಇಲಾಜು ಮಾಡುತ್ತಿರುವ ಹಾಗೂ ತಿಳಿಯುತ್ತೇವೆ. ಈ ಸಂಗತಿಯನ್ನು ಇನ್‌ಸ್ಪೆಕ್ಟರ್ ಜನರಲ್ ರವರಿಗೆ ಅರಿಕೆ ಮಾಡುವುದು ಒಳ್ಳೇದು —ಎಡಿ.]

ತಾಲೂಕು ವರ್ತಮಾನಗಳು.

ಮಧುಗಿರಿ.—ಇಲ್ಲಿನ ಹವ ತಕ್ಕ ಮಟ್ಟಿಗೂ ಆರೋಗ್ಯವಾಗಿರುತ್ತೆ. ಪ್ರತಿ ಸಾಯಂಕಾಲ ವಿಪರೀತ ಮೋಡಗಳು ಕಟ್ಟಿ ಜನಗಳನ್ನು ಬೆರಗು ಮಾಡುತ್ತಲಿವೆ. ಸುಕರಾಂ ಮಳೆಯೇ ಇಲ್ಲ. ಮುಂಗಾರಿಗೆ ಈ ರೋಹಿಣಿ ಮಳೆಯು ಅತ್ಯಾವಶ್ಯಕವಾದದ್ದು. 3 ನೇ ಮಳೆ ಬೀಳುವ ಭರವಸೆ ಮಳೆ ಬಾರದೆ ಇರೋಣದರಿಂದ ರೈತರೆಲ್ಲರೂ ತುಂಬಾ ಕಳವಳಪಡುತ್ತಾರೆ. ಬಿಸಿಲಿನ ತಾಪವಂತು ವಿಪರೀತವಾಗಿದೆ. ನೀರಿನ ಕಷ್ಟವನ್ನಂತು ಕೇಳತೀರದು.—ಸರ್ಕಾರದವರು ತೆಂಗಿನ ಮರದ ಬಾವಿಯನ್ನು ಅನುಕೂಲ ಪಡಿಸಿದಂತೆ ಕೋಟೆ ಬಾವಿಯನ್ನು ಆಳಮಾಡಿಸುವುದಾದರೆ ತುಂಬಾ ಉಪಕಾರವಾದೀತು.

ಶ್ರೀರಂಗಪಟ್ಟಣದ ಕಸಬಾ ಗಂಜಾಂ.—ಆಗಾಗ್ಗೆ ಹದ ಮಳೆ ಆಗುತ್ತಿದೆ. ಹವ ತಕ್ಕ ಮಟ್ಟಿಗೆ ಆರೋಗ್ಯಕರವಾಗಿದೆ. ಸೆಕೆ ಜಾಸ್ತಿ. ಭಾವಿ ನೀರಿನ ಕಷ್ಟ ಹೆಚ್ಚು. ಮ್ಯುನಿಸಿಪಲ್ ಲಾಂದ್ರೆಗಳು ಚೆನ್ನಾಗಿ ಉರಿಯುತ್ತಿಲ್ಲ. ಕಚೇರಿ ಸರಕಾರಕ್ಕೆ ಹಾಕಿಸಿಗುತ್ತಿಲ್ಲ. ಟಿವರ್ನಲ್ಲಿರುವ ಮ್ಯುನಿಸಿಪಲ್ ಮೆಂಬರೂ ಮತ್ತು ಆಫೀಸರುಗಳೂ ಇದರ ಕಡೆ ಗಮನ ಕೊಡುತ್ತಾರೆಂದು ನಿರೀಕ್ಷಿಸಬೇಕಾಗಿದೆ.—ಇಲ್ಲಿನ ಗರ್ಲ್ಸ್ ಸ್ಕೂಲಿನಲ್ಲಿ ಈ ವರ್ಷ 3 ಕ್ಕೆ 2; ಆರ್. ಸಿ. ಸ್ಕೂಲಿನಲ್ಲಿ 4 ಕ್ಕೆ 3, ಈ ಮೋರೆ ಕನ್ನಡ ಲೋ ಸೆ. ಪರೀಕ್ಷೆಯಲ್ಲಿ ತೇರ್ಗಡೆಯಾದರು.—ಈಗ 16-20 ದಿನಗಳಲ್ಲಿ ಈ ಊರಿನ ಸಾಹುಕಾರ್ ರಾ॥ ಮರಿಯಪ್ಪನವರ ಛತ್ರದಂಗಡಿಗೆ ಮಧ್ಯರಾತ್ರಿ ಕಳ್ಳ ನುಗ್ಗಿ ಛತ್ರ ತುಂಬುತ್ತಿದ್ದುದನ್ನು ಟಿವರ್ ದಫೇದಾರರು ಆಕಸ್ಮಾತ್ತಾಗಿ ಕಂಡು, ಹಿಡಿಯಲು ಪ್ರಯತ್ನಿಸಲು ಸಾಧ್ಯವಾಗದೆ ಅವನ ಬಟ್ಟೆ ಬರೆ ಮತ್ತು ಒಂಟೆತ್ತಿನ ಬಂಡಿ ಸಹ ಬಿಟ್ಟು ಓಡಿಹೋದನಂತೆ. ಈಗ ಇಬ್ಬರು ಹಿಡಿಯಲ್ಪಟ್ಟು ಠಾಣೆಯಲ್ಲಿದ್ದಾರೆ.

ಬೆಂಗಳೂರು ತಾ॥ ಜರಬಂಡೇ ಹಳ್ಳಿ.—ಈ ಗ್ರಾಮದಲ್ಲಿ ಬೆಂಗಳೂರು ದೊಡ್ಡ ಪೇಟೆಯಲ್ಲಿರುವ ಸಾಹುಕಾರ್ ಮ॥ ಬಿ. ಬಸಪ್ಪ ಶೆಟ್ಟಿಯವರು ಕಳೆದ ಎರಡು ಮೂರು ಸಂವತ್ಸರಗಳಿಂದ ಕಷ್ಟಪಟ್ಟು ಕಟ್ಟಿಸಿದ ನೂತನ ದೇವಸ್ಥಾನದ ಕೆಲಸವು ಪೂರೈಸಿ, ಕಳೆದ ತಾ. 21 ನೇ ಶುಕ್ರವಾರ ಪ್ರತಿಷ್ಠಾಪನೆಯೂ, ಸಂತರ್ಪಣೆಯೂ ಬಹಳ ವಿಜೃಂಭಣೆಯಿಂದ ನೆರವೇರಿಸಿದ್ದಲ್ಲದೆ ಸಾಯಂಕಾಲ ಮಹಾ ಮಂಗಳಾರತಿಯೂ ನಡೆಯಿತು. ಈ ಕಾಲಕ್ಕೆ ಮ॥ ಗಳಾದ ರಿಟೈರ್ಡ್ ದಿವಾನ್ ಟಿ. ಆನಂದರಾವ್, ಸಿ ಐ. ಇ ಯವರು, ಚೀಫ್ ಇನ್‌ಜನಿಯರ್ ಕೆಪ್ಟೂರ್ ಶ್ರೀನಿವಾಸರಾಯರು, ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣ ಶೆಟ್ಟರು, ಎಚ್. ರಾಮಯ್ಯನವರು ಮೊದಲಾದ ಅನೇಕ ದೊಡ್ಡ ಮನುಷ್ಯರುಗಳು ನೆರೆದಿದ್ದರು.

ಹರಿಹರ ತಾ॥ ಸಿಂಗೆರೆ.—ಈ ಗ್ರಾಮವು ನೂರು ಮನೆಗಳ ತವರು ಮನೆಯಾಗಿದೆ. ಇದಕ್ಕೆ ಸರ್ಕಾರದವರಾಗಲಿ, ಮತ್ಯಾವ ಮಹಾನುಭಾವರಾಗಲಿ ಈ ಕಷ್ಟವನ್ನು ತಪ್ಪಿಸಲಿಲ್ಲ. ಈ ಗ್ರಾಮವು 400 ಮನೆ ಮತ್ತು 2,000 ವರೆಗೆ ಪ್ರಜೆಗಳುಳ್ಳ ಯೂನಿಯನ್ ಆಗಿರುತ್ತೆ. ಇಂಥಾ ಗ್ರಾಮಕ್ಕೆ ಅನುಕೂಲವಾದ ಸರ್ಕಾರಿ ಪೋಲೀಸ್ ಕಟ್ಟಡವಿಲ್ಲ. ಮತ್ತು ಜನಗಳಿಗೆ ತರೀ ಫಸಲು ಬೆಳೆಯಲು ಕೆರೆ ಒಡೆದು ಹೋಗಿ ನೂರಾರು ವರ್ಷಗಳಾಗಿರುತ್ತೆ. ಅದು ಇನ್ನೂ ರಿಪೇರಿಗೆ ಬಂದಿಲ್ಲ. ಮತ್ತು ಸರ್ಕಾರಿ ಸ್ಕೂಲ್ ಹಳೇ ಕಟ್ಟಡದಲ್ಲಿಯೇ ಇದೆ. ಇದನ್ನು 330 ರೂಪಾಯಿಗೆ ಹರಾಜು ಮಾಡಿಸಿ ಹೊಸ ಕಟ್ಟಡಕ್ಕೆ ಶಿಫಾರಸ್ಸು ಮಾಡಿದಾರೆ.—ನಮ್ಮ ದಫೇದಾರರು ಹಳಬರಾಗಿದ್ದು ಈ ಸರಹದ್ದಿನಲ್ಲಿ ಕೆಟ್ಟ ಕೃತ್ಯಗಳು ನಡೆಯದಂತೆ ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದಾರೆ.—ಯೂನಿಯನ್ ಇದ್ದಾಗ್ಯೂ ಲಾಂದ್ರೆಗಳಿಲ್ಲದೆ ಜನಗಳು ಕತ್ತಲಲ್ಲಿ ತಿರುಗಾಡಬೇಕಾಗಿದೆ. ಸರ್ಕಾರದವರು ಇವನ್ನೆಲ್ಲಾ ಸರಿಮಾಡಿಕೊಟ್ಟಾರೆಂದು ನಿರೀಕ್ಷಿಸುತ್ತೇನೆ.

ಅರಕಲಗೂಡು.—ಈ ತಾಲೂಕಿಗೆ ಮಳೆ ಬಂದು ಒಂದು ತಿಂಗಳಾಯ್ತು. ಆಗ್ಗೆ ರೈತರೆಲ್ಲಾ ಹರ್ಷ ಮುಖದಿಂದ ಬೀಜವನ್ನು ಬಿತ್ತಿದರು. ಹುಟ್ಟಿದ ಪೈರೆಲ್ಲಾ ಬಿಸಿಲಿನಿಂದ ಸಾಯುತ್ತಾ ಇದೆ. ಇನ್ನು ಅರ್ಧ ಭಾಗ ಭೂಮಿಗೆ ಬೀಜವನ್ನೇ ಹಾಕಲಿಲ್ಲ. ಮಳೆಯನ್ನೇ ಎದುರು ನೋಡುತ್ತಿರುವಾಗ ತಾ. 26 ರಲ್ಲಿ ಒಂದು ಹದ ಮಳೆಯಾಯ್ತು. ಧಾರಣೆವಾಸಿಗಳು ದಿನ ದಿನಕ್ಕೆ ಏರುತ್ತಲೇ ಇರುತ್ತೆ.—ನಮ್ಮ ಸಂಸ್ಥಾನದ ಕೌನ್‌ಸಿಲರವರು ತಾ 18 ರಲ್ಲಿ ದಯಮಾಡಿಸಿ ಎಲ್ಲಾ ಸ್ಥಳಗಳನ್ನೂ ಪರಾಂಬರಿಸಿಕೊಂಡು ತಾ. 19 ರಲ್ಲಿ ಹೊಳೆನರಸಿಪುರದ ಮಾರ್ಗವಾಗಿ ಮೈಸೂರನ್ನು ಕುರಿತು ಪ್ರಯಾಣ ಮಾಡಿದರು.—ಕಳೆದ ತಾ. 16 ನೇ ರವಿವಾರ ಸಾಯಂಕಾಲ ಶ್ರೀ ಉತ್ತರಾದಿಮಠದ ಸ್ವಾಮಿಗಳು 3 ಆನೆಗಳೂ, 8 ಹತ್ತು ಕುದುರೆಗಳೂ, 10-20 ಗಾಡಿಗಳೂ, ನೂರಾರು ಗಂಡಸರೂ ಹೆಂಗಸರೂ ಮಕ್ಕಳ ಸಿಬ್ಬಂದಿ ಸಮೇತ ಇಲ್ಲಿಗೆ ದಯಮಾಡಿಸಿ, ಆ ರಾತ್ರಿ ಇಲ್ಲೇ ಇದ್ದು ಮರುದಿವಸ ಮಧ್ಯಾಹ್ನ ಭಿಕ್ಷೆ ತೀರಿಸಿಕೊಂಡು ಹೊಳೆನರಸಿಪುರಕ್ಕೆ ದಯಮಾಡಿಸಿದರು. ಅವರಿಗೆ ಇಲ್ಲಿ ತಾಲೂಕು ನೌಕರರುಗಳ ಹೊರತು ಬೇರೆ ಯಾರೂ ಶಿಷ್ಯರಿರಲಿಲ್ಲ.

ಶಿವಮೊಗ್ಗ.—ತಾ. 23, 24, 25, ಈ ಮೂರು ದಿನವೂ ಇಲ್ಲಿ ಒಳ್ಳೇ ಹದ ಮಳೆ ಬಂತು. ರೈತರು ಅರ್ಧಕ್ಕಿಂತ ಹೆಚ್ಚಾಗಿ ಬಿತ್ತನೆ ಕೆಲಸ ಪೂರೈಸಿರಬಹುದು. ಹಿಂದೆ ಬಿದ್ದವರಿಗೆ ಸರಿಯಾದ ಹದ ಸಿಕ್ಕದೆ ಪೇಚಾಡುತ್ತಾರೆ.—ತಾ. 24 ರಲ್ಲಿ ಬೆಂಕೀಪುರದಿಂದ ಬೆಳಗ್ಗೆ ಗಾಡಿ ಬರುವಾಗ್ಗೆ ಸಿಗ್ನಲ್ ಪೋಸ್ಟಿನ ಬಳಿ ರೈಲು ರಸ್ತೆಯ ಮೇಲೆ ನಿಂತಿದ್ದ ಹೋರಿಯು ಗಾಡಿಗೆ ಸಿಕ್ಕಿ ಎರಡು ತುಂಡಾಗಿ ಕತ್ತರಿಸಿತು. ಡ್ರೈವರ್ ಎಷ್ಟು ಸಾಹಸಪಟ್ಟಾಗ್ಯೂ ಹೋರಿಯು ಚಲಿಸದೆ ಅಲ್ಲೇ ನಿಂತದ್ದರಿಂದ ಗಾಡಿಗೆ ಸಿಕ್ಕಿ ಸತ್ತಿತು.—ಕೊಲ್ಲೂರಯ್ಯನ ಬೀದಿಯಲ್ಲಿರುವ ನಾಡಿಗ ಮ॥ ಸುಬ್ರಾಯರ ಮನೆಯಲ್ಲಿ ನಡೆದ ಉಪನಯನದಲ್ಲಿ ಸವತಿಯವರ ಜಾಬತ್ತು ಸುಮಾರು 1,000 ರೂಪಾಯಿನ ಸಗನಾಣ್ಯಗಳು ಕಳುವಾದದ್ದನ್ನು ಪೋಲೀಸ್ ಇ. ಸುಬ್ಬಣ್ಣನು ಪತ್ತೆ ಮಾಡಿದ್ದಕ್ಕೆ ಬಹಳ ಸಂತೋಷವಾಯಿತು.—ದೊಡ್ಡ ಬ್ರಾಹ್ಮರ ಕೇರಿಯ ಲಕ್ಷ್ಮೀನಾರಾಯಣ ದೇವರ ರಥೋತ್ಸವಕ್ಕಾಗಿ ಅರ್ಚಕನ ವಶ ಸರ್ಕಾರದವರು ಕೊಟ್ಟಿದ್ದ ಕೆಲವು ಒಡವೆಗಳನ್ನು ಸದರಿ ಅರ್ಚಕನು ದೇವಸ್ಥಾನದಲ್ಲಿ ಇಟ್ಟಿದ್ದನಂತಲೂ, ಆ ಪೈಕಿ ಕೆಲವು ಒಡವೆಗಳು ಕಳುವಾಗಿವೆ ಎಂತಲೂ ವದಂತಿ ಇದೆ.

ಗುಬ್ಬಿ.—ನಮ್ಮ ಅಮಲ್ದಾರ್ ಮ॥ ಸುಬ್ಬರಾಯರು ಕಳೆದ 1 ನೇ ತಾ. ಕಡಬಕ್ಕೆ ದಯಮಾಡಿಸಿದರು. 22 ನೇ ತಾ. ಬೆಳಗ್ಗೆ ಗ್ರಾಮವನ್ನು ಪ್ರವೇಶ ಮಾಡಿ ಯೂನಿಯನ್ ವಿಚಾರವನ್ನು ನೋಡಿಕೊಂಡು, ಸ್ಕೂಲುಗಳನ್ನು ತನಿಖೆ ಮಾಡಿದರು. ಗಂಗಸಟ್ಟೆಂಬ ಗ್ರಾಮದವರು ಅದೇ ದಿವಸ ಗ್ರಾಮದೇವತೆ ಪರಿಷೆಯನ್ನು ಮಾಡುತ್ತಾ ಇದ್ದರು. ಈ ದೇವತೆಯ ಪರಿಷೆಯನ್ನು ಆ ಗ್ರಾಮದ ಸುತ್ತಲೂ ಇರುವ ಏಳು ಹಳ್ಳಿ ಜನಗಳು ಮಾಡಬೇಕಾಗಿದೆ. ಮತ್ತು ಏಳು ಹಳ್ಳಿ ಜನಗಳು ಆ ದೇವತೆಗೆ ಆರತಿಯನ್ನು ಬೆಳಗುವ ಪದ್ಧತಿ ಇದೆ. ಈ ಆರತಿಯನ್ನು ಬೆಳಗುವುದರಲ್ಲಿ ನಾನು ಮುಂದು ತಾನು ಮುಂದು ಎಂಬ ವ್ಯಾಜ್ಯ ಹುಟ್ಟಿತು. ಈ ಸಮಾಚಾರವನ್ನು ಅಮಲ್ದಾರರು ಕಡಬದಲ್ಲಿ ಕೇಳಿ 22 ನೇ ತಾ ಮಧ್ಯಾಹ್ನ 4 ಗಂಟೆ ಸಮಯದಲ್ಲಿ ಗಂಗಸಟ್ಟಕ್ಕೆ ದಯಮಾಡಿ ಕಲಹವಾಡದ ಹಾಗೆ ವಿನೀತ ಹೇಳಿ ಆ ರಾತ್ರಿಯೆಲ್ಲಾ ಉಪವಾಸ ಒಂದು ಮರದ ಕೆಳಗೆ ಜಗುಲಿ ಮೇಲೆ ಒಂದು ಚಾಪೆ ಮೇಲೆ ಕೂತಿದ್ದು ಕಲಹವನ್ನು ತಪ್ಪಿಸಿ ಮಾಮೂಲಿಗೆ ವಿರೋಧವಾಗದಂತೆ ಆರತಿಯನ್ನು ಬೆಳಗಿಸಿ ಬೆಳಗ್ಗೆ ಕಡಬಕ್ಕೆ ದಯಮಾಡಿದರು. ಆ ದಿವಸ ಅವರು ದಯಮಾಡಿಸದೇ ಹೋಗಿದ್ದರೆ ಜನಗಳ ಅಂತಃಕಲಹ ಹೆಚ್ಚಿ ಬಹಳ ಅನಾಹುತಗಳು ನಡೆಯುತ್ತಿದ್ದವು. ಇವರು ದಯಮಾಡಿಸಿದ್ದರಿಂದ ಅಷ್ಟಕ್ಕೆ ಅವಕಾಶವಾಗಲಿಲ್ಲ. ಇವರ ಜೊತೆಯಲ್ಲಿ ಕಡಬದಲ್ಲಿರುವ ಎಕ್ಸಾಮಿನರ್ ಕಾರ್ ಫರೆನ್ಸ್ ಮೆಂಬರಾದ ಮ॥ ಕೆ ರಾಮಾನುಜಯ್ಯಂಗಾರರು ಹಾಜರಿದ್ದರು.

ಸಕಲೇಶಪುರ.—ಕಳೆದ ಬುಧವಾರ ಒಳ್ಳೆ ಮಳೆಯಾದ್ದರಿಂದ ಭತ್ತ ಮೊದಲಾದ ಬೆಳೆಗಳಿಗೆ ಅನುಕೂಲವಾಯಿತು. ಕಳೆದ ವಾರ ಡೆಪ್ಟಿ ಕಮಿಷನರವರು ದಯಮಾಡಿಸಿ ತಾಲೂಕು ಕಛೇರಿ ಇನ್‌ಸ್ಪೆಕ್ಷನ್ ಮಾಡಿಕೊಂಡು ಹೋದರು.—ಇಲ್ಲಿನ ಎ ವಿ ಸ್ಕೂಲಿನಲ್ಲಿ ಈ ಸಾರಿ ಲೋ. ಸೆ ಪರೀಕ್ಷೆಯಲ್ಲಿ ಇಂಗ್ಲೀಷಿನಲ್ಲಿ 5 ಕ್ಕೆ ಮೂವರೂ, ಕನ್ನಡದಲ್ಲಿ ನಾಲ್ಕು ಜನಕ್ಕೆ ಒಬ್ಬನೂ ಪಾಸ್ ಆದರು. ವ್ಯವಸಾಯದ ಇಲಾಖಾ ಮ॥ ಕೂನರ್ ರವರು ಈ ಪ್ರಾಂತ್ಯಕ್ಕೆ ದಯಮಾಡಿಸಿ ಅಸಿಸ್ಟೆಂಟ್ ಎಂಟೊಮಾಲಜಿಸ್ಟ್ ಮ॥ ಬಿ. ಸಿ. ರಾಮಕೃಷ್ಣನವರು ಈ ಪ್ರಾಂತ್ಯ ತಮ್ಮ ಸಿಬ್ಬಂದಿಯೊಡನೆ ಕಾಫಿ ಪೆಸ್ಟ್ ಎಂಬ ಗ್ರೀನ್ ಬಗ್, ಬೋರರ್ ಎಂಬ ಹುಳಗಳ ಹಾವಳಿ ಪರಿಹಾರಾರ್ಥ ಮಾಡುತ್ತಾ ಇರುವ ಕೆಲಸವನ್ನು ಇನ್‌ಸ್ಪೆಕ್ಷನ್ ಮಾಡಿಕೊಂಡು ಹೋದರು. ಮ॥ ಕೂನರ್ ಯವರು ಈ ಸಭಿ ಕೆಲಸವನ್ನೂ ಮ॥ ರಾಮಕೃಷ್ಣನವರು ಪ್ಲಾಂಟರುಗಳಲ್ಲಿ ಮಾಡಿಕೊಂಡಿರುವ ಸ್ನೇಹವನ್ನೂ ಕಂಡು ಸಂತೋಷಪಟ್ಟರು. ಸರ್ಕಾರದವರು ಇಂಡಿಯನ್ ಪ್ಲಾಂಟರುಗಳ ಅಭಿವೃದ್ಧಿಗಾಗಿ ಇಲ್ಲಿ ಒಬ್ಬ ಅ॥ ಎಂಟೊಮಾಲಜಿಸ್ಟರನ್ನೂ ಅವರ ಸಹಾಯಕ್ಕಾಗಿ ಬೇರೆ ಫೀಲ್ಡ್ ಮನ್‌ಗಳನ್ನೂ ಕೊಟ್ಟಿರುವುದನ್ನು ನೋಡುವಲ್ಲಿ ಬಹು ಜಾಗ್ರತೆಯಲ್ಲಿಯೇ ನಮ್ಮ ಇಂಡಿಯನ್ ಪ್ಲಾಂಟರಗಳೂ ಇಂಗ್ಲೀಷ್ ಪ್ಲಾಂಟರುಗಳಂತೆ ಅಭಿವೃದ್ಧಿಗೆ ಬರುವುದರಲ್ಲಿ ಅಡ್ಡಿ ಇರಲಾರದು. ಆದರೆ ಸರ್ಕಾರದವರು ಒದಗಿಸಿಕೊಟ್ಟಿರುವ ಈ ಸಕಲ ಸೌಕರ್ಯಗಳನ್ನೂ ಉಪಯೋಗಪಡಿಸಿಕೊಳ್ಳುವದರಲ್ಲಿ ಇಂಡಿಯನ್ ಪ್ಲಾಂಟರುಗಳು ಮನಃಪೂರ್ವಕವಾದ, ಶ್ರದ್ಧಾಪೂರಿತರೂ ಆಗಬೇಕಾದ್ದು ಕೇವಲ ಆವಶ್ಯಕ.

2. ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ;

[172-41]

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಮಕ್ಕಳ ಆರೋಗ್ಯ.
ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹರಳಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಉಬ್ಬಸ, ಕ್ಷಯ, ಗರ್ಭವೆಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-30]

ಮಹಾ ಸೌಭಾಗ್ಯ ಘುಂಟಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಖಾಸಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ
ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿಣವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
[247-30] 20, ಚೀನಾಬಜಾರು ರೋಡು, ಮದರಾಸು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯವದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0
ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[೬೮-೧೦]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಜೂನ್ ತಾ. ೧೦ ನೇ ಗುರುವಾರ.

ಕ್ರಿಮಿನಲ್ ನ್ಯಾಯವಿಮರ್ಶೆಯು.

ಮೈಸೂರು ಸಂಸ್ಥಾನದಲ್ಲಿ ಕ್ರಿಮಿನಲ್ ನ್ಯಾಯವಿಮರ್ಶೆಯ 1913-14 ನೇ ಸಾಲಿನ ರಿಪೋರ್ಟು ನಮಗೆ ತಲಪಿದೆ. ಈ ರಿಪೋರ್ಟು ಬಹಳ ವಿಸ್ತಾರವಾದದ್ದಾಗಿಲ್ಲ; ಅದರ ವಿಷಯದಲ್ಲಿ ಗವರ್ನಮೆಂಟಿನವರು ಬರೆದಿರುವ ಹುಕುಮು ಕೂಡ ಸಂಕ್ಷೇಪವಾಗಿಯೇ ಇರುತ್ತದೆ. ಈ ರಿಪೋರ್ಟು ಬಹಳ ಗೂಢವಾಗಿರೋಣದರಿಂದ ಮೈಸೂರು ಪೀನಲ್ ಕೋಡನ್ನು ಚೆನ್ನಾಗಿ ಓದಿ ಪರಿಶ್ರಮ ಮಾಡಿಕೊಂಡಿರುವವರಿಗೆ ಮಾತ್ರ ಈ ರಿಪೋರ್ಟು ಅರ್ಥವಾಗುವುದಲ್ಲದೆ ಆ ಕಾನೂನು ಓದಿಕಾಣದವರಿಗೆ ರಿಪೋರ್ಟು ಅರ್ಥವಾಗುವ ಹಾಗಿಲ್ಲ. ಕ್ರಿಮಿನಲ್ ನ್ಯಾಯವಿಮರ್ಶೆಯು ಪ್ರಜೆಗಳ ನೆಮ್ಮದಿ ಸುಖ ಸಂತೋಷಗಳಿಗೂ, ಸಂಸ್ಥಾನದ ಶ್ರೇಯಸ್ಸಿಗೂ ಮುಖ್ಯ ಸಾಧನವಾಗಿರೋಣದರಿಂದ ಸರ್ಕಾರದವರು ವರುಷಕ್ಕೊಂದಾವರ್ತಿ ಯಾವ ಯಾವ ಜನಗಳು ಎಂಥೆಂಥಾ ಅಪರಾಧಗಳನ್ನು ಹೆಚ್ಚಾಗಿ ಮಾಡುವರೋ, ಅಂಥಾ ಜನಗಳು ಯಾವ ಯಾವ ಭಾಗಗಳಲ್ಲಿ ವಿಶೇಷವಾಗಿ ಇರುತ್ತಾರೆಯೋ ಸ್ಪಷ್ಟವಾಗಿ ತಿಳಿಯುವಂತೆ ಪ್ರಕಟಮಾಡಬೇಕಾದದ್ದು ಅವಶ್ಯವೆಂದು ನಮಗೆ ತೋರುತ್ತದೆ. ನಮ್ಮ ಮುಂದಿರುವ ರಿಪೋರ್ಟಿನಿಂದ ಈ ವಿಚಾರಗಳು ಚೆನ್ನಾಗಿ ಗೊತ್ತಾಗದೆ ಇರೋಣದರಿಂದ ನಮ್ಮ ಸಂಸ್ಥಾನದಲ್ಲಿ ಪ್ರಜೆಗಳು ದಿನೇ ದಿನೇ ಸಭ್ಯರಾಗುತ್ತಿರುವರೋ, ಇಲ್ಲವೇ ದುಷ್ಟತನವೂ ದುಷ್ಕೃತ್ಯಗಳೂ ಹೆಚ್ಚುತ್ತಿರುವವೋ ಈ ರಿಪೋರ್ಟಿನಿಂದ ತಿಳಿದು ಹೇಳುವುದು ಸಾಧ್ಯವಾಗಿಲ್ಲ.

1913-14 ನೇ ಸಾಲಿನಲ್ಲಿ ನಮ್ಮ ಸಂಸ್ಥಾನದಲ್ಲಿ 20,084 ಅಪರಾಧಗಳು ನಡೆದವೆಂದು ತಿಳಿಯುತ್ತದೆ; ಅಂದರೆ, ಹಿಂದಿನ ಸಾಲಿಗಿಂತ 620 ಅಪರಾಧಗಳು ಹೆಚ್ಚಾದವು. ಆ ಪೈಕಿ 16,402 ಅಪರಾಧಗಳು ನಡೆದದ್ದು ನಿಜವೆಂದು ಗೊತ್ತಾಯಿತು. ಒಟ್ಟು 35,497 ಜನರು ಅಪರಾಧ ಮಾಡಿದರೆಂದು ಮೊಕದ್ದಮೆ ಮಾಡಲ್ಪಟ್ಟದ್ದರಲ್ಲಿ 6,808 ಜನರು ಮಾತ್ರ ಅಂದರೆ ಶೇಕಡ 24·65 ರಷ್ಟು ಮಂದಿಗೆ ಶಿಕ್ಷೆಯಾಗಿರುತ್ತದೆ. 24,093 ಜನರನ್ನು ಅಪರಾಧ ರುಜುವಾತಾಗಲಿಲ್ಲವೆಂದು ಅಂದರೆ ಶೇಕಡ 57·87 ರಷ್ಟು ಜನರನ್ನು ಬಿಟ್ಟುಬಿಟ್ಟರು.

ಈ ಸಂಖ್ಯೆಗಳನ್ನು ನೋಡಿದಲ್ಲಿ ಪೋಲೀಸಿನವರು ಹಿಡಿಯುವುದರಲ್ಲೋ, ನ್ಯಾಯವಿಮರ್ಶೆಯಾಗುವುದರಲ್ಲೋ, ಅಥವಾ ಇನ್ಯಾವ ಇತರ ಭಾಗಗಳಲ್ಲೋ ತೃಪ್ತಿಕರವಾಗಿ ಕಾರ್ಯಗಳು ನಡೆಯುವುದಿಲ್ಲವೆಂದು ಕಾಣುತ್ತದೆ. ದರ್ಯಾಫ್ತಿಗೆ ತರಲ್ಪಟ್ಟ ಪ್ರತಿ ನಾಲ್ಕು ಜನರಲ್ಲಿ ಒಬ್ಬನ ಮೇಲೆ ಮಾತ್ರ ತಕ್ಸೀರು ರುಜುವಾತಾಗಿರುವುದು; ಉಳಿದ ಮೂರು ಮಂದಿ ನಿರಪರಾಧಿಗಳಾಗಿರಬೇಕು, ಅಥವಾ ಅವರು ಅಪರಾಧಿಗಳೆನ್ನುವುದಕ್ಕೆ ರುಜುವಾತು ಸಾಲದೆ ಇರಬೇಕು. ಹೀಗೆ ತೃಪ್ತಿಕರವಾದ ಸಾಕ್ಷ್ಯವಿಲ್ಲದೆ ಒಟ್ಟೊಟ್ಟಾಗಿ ಪ್ರಜೆಗಳನ್ನು ಹಿಡಿದು ಕ್ರಿಮಿನಲ್ ಕೋರ್ಟುಗಳ ಮುಂದೆ ನಿಲ್ಲಿಸುವುದು ಪೋಲೀಸಿನವರ ಅಜ್ಞತೆ ಅಯೋಗ್ಯತೆಗಳನ್ನು ಪ್ರಕಾಶಪಡಿಸುವವೆಂದು ಹೇಳಬೇಕೋ, ಅಥವಾ ನ್ಯಾಯವಿಮರ್ಶೆಗೆ ನೇಮಕವಾಗಿರುವ ಮ್ಯಾಜಿಸ್ಟ್ರೇಟರುಗಳು ರುಜುವಾತುಗಳನ್ನು ವಿವೇಚನೆಮಾಡಿ ಗ್ರಹಿಸಲಾರರೆಂದು ಹೇಳಬೇಕೋ ತಿಳಿಯುವುದಿಲ್ಲ. ಈ ಲೋಪದೋಷಗಳು ಉಭಯಪಕ್ಷಗಳಲ್ಲಿ ಯಾರಿಗೆ ಸಂಬಂಧಪಟ್ಟದ್ದಾಗಲಿ ಇದರಿಂದ ನಮ್ಮ ಸಂಸ್ಥಾನದ ಆಳ್ವಿಕೆಯ ಕಾರುಬಾರುಗಳಿಗೆ ವಿಶೇಷವಾದ ಕಳಂಕ ಉಂಟಾಗಿರುವುದೆಂದೂ, ಈ ವಿಚಾರವನ್ನು ಚೆನ್ನಾಗಿ ತನಿಖೆಮಾಡಿ ಬೇಗನೆ ಕ್ರಮಪಡಿಸಬೇಕಾದದ್ದು ಪರಮಾವಶ್ಯವಾಗಿದೆಯೆಂದೂ ಸೂಚಿಸುತ್ತೇವೆ.

ಅಪೀಲ್ ಮೊಕದ್ದಮೆಗಳು ಇತ್ಯರ್ಥವಾಗುವುದು ತುಂಬಾ ಸಾವಕಾಶವಾಗುತ್ತಿದೆ. ಈ ಸಾವಕಾಶವು ಯಾತರಿಂದಾಗುವುದೋ ತಿಳಿಯಲಿಲ್ಲ. ಒಂದೊಂದು ಮೊಕದ್ದಮೆಯು ವ್ಯವಸ್ಥೆಯಾಗುವುದಕ್ಕೆ ಹಿಂದಿನ ಸಾಲಿನಲ್ಲಿ 43 ದಿನ ಹಿಡಿಯಿತು; ಈ ಸಾಲಿನಲ್ಲಾದರೋ 51½ ದಿನ ಹಿಡಿದಿರುತ್ತವೆ. ಗಂಡಸರ ಹೆಂಗಸರ ಗುಣ ಶೀಲ ಸ್ವಭಾವಗಳು ನಿರ್ಧಾರವಾಗುವಂಥಾ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪೀಲುಗಳು ಬೇಗ ಬೇಗನೆ ವ್ಯವಸ್ಥೆಯಾಗದೆ ಹೋದರೆ ಅವರುಗಳ ಮನೋವ್ಯಥೆಯು ಹೆಚ್ಚುತ್ತದೆ. ಇಂಥಾ ಅಸಂಭವಗಳುಂಟಾಗುವುದು ಕ್ಷೇಮಕರವಲ್ಲ; ಯೋಗ್ಯವೂ ಅಲ್ಲವಾದ ಕಾರಣ ನಮ್ಮ ಗವರ್ನಮೆಂಟಿನವರು ಈ ಭಾಗವನ್ನೂ ತನಿಖೆಯಿಂದ ಕ್ರಮಪಡಿಸಬೇಕಾಗಿರುತ್ತದೆ.

ನಮ್ಮ ಸಂಸ್ಥಾನದಲ್ಲಿ ಘೋರಕೃತ್ಯಗಳು ಹೆಚ್ಚುತ್ತಿರುವವೋ, ಕಡಮೆಯಾಗುತ್ತಿರುವವೋ ತಿಳಿದು ಹೇಳುವುದು ನಮ್ಮಿಂದ ಸಾಧ್ಯವಲ್ಲ. ಕಳೆದ ಸಾಲಿನಲ್ಲಿ 138 ಕೃತ್ಯಗಳು ನಡೆದಿರುವಂತೆ ರಿಪೋರ್ಟಾಯಿತು. ಈ ಪೈಕಿ 113 ಕೃತ್ಯಗಳು ನಡೆದದ್ದು ನಿಜವೆಂದು ಹೇಳಲ್ಪಟ್ಟಿದೆ. ಇವೆಲ್ಲಾ ಕೊಲೆಗಳೋ, ಅಥವಾ ಆ ಪೈಕಿ ಎಷ್ಟೆಷ್ಟು ಎಂಥೆಂಥಾ ತಕ್ಸೀರುಗಳೋ ಈ ರಿಪೋರ್ಟಿನಿಂದ ನಮಗೆ ಗೊತ್ತಾಗುವುದಿಲ್ಲ. ಈ ತಕ್ಸೀರುಗಳನ್ನು ಮಾಡಿದವರೆಂದು ದರ್ಯಾಫ್ತುಮಾಡಲ್ಪಟ್ಟ 240 ಜನರಲ್ಲಿ 66 ಜನರಿಗೆ ಮಾತ್ರ ಶಿಕ್ಷೆಯಾಗಿರುತ್ತದೆ. ಎರಡು ಮೊಕದ್ದಮೆಗಳಲ್ಲಿ ಐದು ಜನರಿಗೆ ಮರಣದಂಡನೆಯನ್ನು ವಿಧಿಸಿದರು; ಚೀಫ್ ಕೋರ್ಟಿನಲ್ಲೂ ಆ ಶಿಕ್ಷೆಯು ಖಾಯಂ ಮಾಡಲಾಯಿತು. ಈ ಬಾಬಿನಲ್ಲಿ ಇನ್ನೂ ಹೆಚ್ಚು ವಿಷಯಗಳನ್ನು ಸರ್ಕಾರದವರು ವಿವರವಾಗಿ ತಿಳಿಸಬೇಕಾದದ್ದು ಅವಶ್ಯವೆಂದು ನಮಗೆ ತೋರುತ್ತದೆ.

ನಮ್ಮ ಸಂಸ್ಥಾನದಲ್ಲಿ ತಕ್ಸೀರುಗಳಿಗೆ ಸಂಬಂಧಪಡುವ ಪರಿಪಾಲನಾ ಕ್ರಮಗಳು ಎಷ್ಟುಮಾತ್ರವೂ ತೃಪ್ತಿಕರವಾಗಿರುವಂತೆ ಕಾಣುವುದಿಲ್ಲ. ದುಷ್ಕೃತ್ಯಗಳು ನಡೆಯದಂತೆಯೂ, ನಡೆದವುಗಳು ಪತ್ತೆ ಆಗುವಂತೆಯೂ, ನಡಿಸಿದವರನ್ನು ಶಿಕ್ಷಿಸುವಂತೆಯೂ ನೋಡಿಕೊಳ್ಳುವ ಭಾಗದಲ್ಲಿ ನಮ್ಮ ಸರ್ಕಾರವು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿರುವುದೇ? ಸರ್ಕಾರವು ಅಪಾರ ಕೆಲಸ ಕಾರ್ಯಗಳನ್ನು ನಡಿಸುತ್ತಿರುವುದು; ಅದಾಗ್ಯೂ ಎಲ್ಲಾ ಕಾರ್ಯಗಳನ್ನೂ ಅದು ಪರಿಪೂರ್ಣವಾಗಿ ಮಾಡುತ್ತಿದೆ ಎಂದಾಗಲಿ, ಇದಕ್ಕಿಂತಲೂ ಹೆಚ್ಚು ಕೆಲಸಗಳು ನಡೆಯಲಾರವೆಂದಾಗಲಿ ನಮಗೆ ತೋರುವುದಿಲ್ಲ. ಸತ್ಯ, ಧರ್ಮ, ಕರ್ತವ್ಯಗಳ ಪರಿಜ್ಞಾನವು ಸಂಸ್ಥಾನಾಮಳ ಇನ್ನೂ ಚೆನ್ನಾಗಿ ಮೆರೆಯುವಂತಾಗಬೇಕೆಂದು ಹಾರೈಸುತ್ತೇವೆ.

ಮದ್ಯ, ನಾಟ್ಯ, ಜೂಜು.

ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳ ವಿನೋದಾರ್ಥವಾಗಿಯೂ, ದೇಶೋನ್ನತಿಗಾಗಿಯೂ ನಡೆಯುವಂಥಾ ಪ್ರದರ್ಶನಗಳಲ್ಲಿ ಮದ್ಯಗಳನ್ನು ವಿಕ್ರಯಮಾಡುವ ಅಂಗಡಿಗಳಿಗೂ, ಸೂಳೆಯರ ನಾಚಿಗೂ, ಜೂಜಾಟಕ್ಕೂ ಅವಕಾಶಕೊಡಕೂಡದೆಂದು ನಮ್ಮ ಗವರ್ನಮೆಂಟಿನವರು ಅಪ್ಪಣೆಕೊಟ್ಟಿರುವುದನ್ನು ನೋಡಿ ನಾವು ಆನಂದಪಟ್ಟು ಅವರನ್ನು ವಂದಿಸುವೆವು. ಬೆಂಗಳೂರಿನ ಮಹಾಜನಗಳು ನಮ್ಮ ಶ್ರೀಮನ್ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ್ದರ ಮೇಲೆ ಈ ರೀತಿ ಹುಕುಂ ಕೊಡಲಾಗಿದೆ. ದುರಭ್ಯಾಸಗಳಿಗೂ ದುರ್ನೀತಿಗೂ ಪ್ರೋತ್ಸಾಹವೂ ಉತ್ತೇಜನವೂ ಆಗತಕ್ಕಂಥಾ ಭಾಗಗಳನ್ನು ಕಲ್ಪಿಸಿದಲ್ಲಿ ಯಾವ ಪ್ರದರ್ಶನವೂ ಯಾವ ಸಂತೋಷ ಕೂಟವೂ ಸಂತೋಷಪ್ರದವಾಗಿಯೂ ಸಂಪ್ರಮಯುಕ್ತವಾಗಿಯೂ ಸಾರ್ಥಕವಾಗಿಯೂ ನೆರವೇರುವುದಿಲ್ಲವೆಂದು ಊಹಿಸಲ್ಪಡುವ ಪಕ್ಷದಲ್ಲಿ ದುರಭ್ಯಾಸ ದುರ್ನೀತಿಗಳಿಗೆ ಆಸ್ಪದಕೊಡುವುದಕ್ಕಿಂತಲೂ ಅಂಥಾ ಪ್ರದರ್ಶನಗಳನ್ನೂ ಸಂತೋಷಕೂಟಗಳನ್ನೂ ನಡಿಸದೆ ಇರುವುದೇ ಸರ್ವೋತ್ತಮವೆಂದು ಹೇಳಬಲ್ಲೆವು. ಮೈಸೂರು ಸರ್ಕಾರದವರು ಮೇಲ್ಕಂಡ ರೀತಿ ಅಪ್ಪಣೆಕೊಟ್ಟಿರುವುದು ನೀತಿಗೂ ಧರ್ಮಕ್ಕೂ ಸಾಧಕವಾಗಿದೆ. ಇನ್ನು ಮುಂದೆ ನಮ್ಮ ಸಂಸ್ಥಾನದ ಯಾವ ಸ್ಥಳದಲ್ಲೂ ಪ್ರದರ್ಶನಗಳಲ್ಲಾಗಲಿ, ಮಹಾಜನರ ಸಂತೋಷ ಕೂಟಗಳಲ್ಲಾಗಲಿ ಕುಡಿತದ ಅಂಗಡಿಗೂ, ಸೂಳೆಯರ ನಾಟ್ಯಕ್ಕೂ, ಜೂಜಾಟಕ್ಕೂ ಅವಕಾಶ ಕೊಡಲ್ಪಡುವುದಿಲ್ಲವೆಂದು ನಂಬಿ ನಿರೀಕ್ಷಿಸುತ್ತೇವೆ.

ಸರ್ ಎಂ. ವಿಶ್ವೇಶ್ವರಯ್ಯ, ಕೆ.ಸಿ.ಐ.ಇ. ಯವರು.

ಮಹಾ ಘನವಸ್ತ್ಯವಿರ ಚಕ್ರವರ್ತಿ ಸಾರ್ವಭೌಮರವರು ಈ ಸಲ ತಮ್ಮ ವರ್ಧಂತಿ ಉತ್ಸವದ ಸಂತೋಷಕಾಲದಲ್ಲಿ ತಮ್ಮ ಪ್ರೀತಿಗೂ ಮೆಚ್ಚಿಕೆಗೂ ಪಾತ್ರರಾದ ದೊಡ್ಡಮನುಷ್ಯರಿಗೆ ಬಿರುದುಗಳನ್ನು ದಯಪಾಲಿಸಿದರು. ಕಾರ್ಯದಕ್ಷರಾಗಿಯೂ ಉತ್ಸಾಹಶೀಲರಾಗಿಯೂ ಇರುವ ನಮ್ಮ ದಿವಾನರವರಿಗೆ ಕೆ. ಸಿ. ಐ. ಇ. ಎಂಬ ಮಹಾ ಘನತರವಾದ ಬಿರುದು ಬಂದಿರುತ್ತದೆ. ಇವರಿಗೆ ಈ ತರದ ಬಿರುದು ಬಂದದ್ದು ಸಕಲರಲ್ಲೂ ತೃಪ್ತಿಯನ್ನೂ ಆನಂದವನ್ನೂ ಉಂಟುಮಾಡಿರುವುದು. ಸರ್ ಎಂ. ವಿಶ್ವೇಶ್ವರಯ್ಯನವರು ನಮ್ಮ ಸಂಸ್ಥಾನಕ್ಕೆ ಚೀಫ್ ಇಂಜನಿಯರಾಗಿ ದಯಮಾಡಿದ ಆಗಾಯಿತು ಈ ಸೀಮೆಯ ಹಿತವನ್ನು ಪ್ರಧಾನವಾಗಿಟ್ಟುಕೊಂಡು ಅದನ್ನು ಸಫಲಗೊಳಿಸಬೇಕೆಂದು ನಿಲುಗಡೆಯಿಲ್ಲದಂತೆ ಜೀಸತ್ತು ದುಡಿಯುತ್ತಾ ಬಂದಿರುವರು. ಇದಲ್ಲದೆ ಅವರು ನಾನಾ ಮುಖಗಳಲ್ಲಿ ವಿಶೇಷ ಸಾಹಸಪಟ್ಟು ಕಾರ್ಯಸಾಧನೆ ಮಾಡುತ್ತಿರುವುದಕ್ಕೆ ಈಗ ಅವರಿಗೆ ದೊರಕಿರುವ ಗಣ್ಯತೆಯು ಪರಮ ಸಂತೋಷಪ್ರದವಾಗಿದೆ. ಸಾರ್ವಭೌಮ ಸರ್ಕಾರದವರು ನಮ್ಮ ದಿವಾನರವರ ಸಾಮರ್ಥ್ಯವನ್ನೂ ದೇಶವಾತ್ಸಲ್ಯವನ್ನೂ ಮೆಚ್ಚಿಕೊಂಡದ್ದಕ್ಕಾಗಿ ನಾವು ಆನಂದಪಡುತ್ತೇವೆ. ಈ ಸಂತೋಷ ಸುದ್ದಿಯು ನಮ್ಮ ವಾಚಕರಲ್ಲೆಲ್ಲಾ ಆನಂದವನ್ನುಂಟುಮಾಡೀತೆನ್ನುವುದಕ್ಕೆ ಸಂಶಯವಿಲ್ಲ.

ಯೇಸುವಿನ ಬೋಧಕೋದ್ಯೋಗ.

ಬಳಿಕ ಯೇಸು ಕಪೆರ್ನೌಮೆಂಬ ಊರಿಗೆ ಬಂದನು. ಮತ್ತು ಅಲ್ಲಿ ಸಬ್ಬತ್ ದಿನದಲ್ಲಿ ಆತನು ಸಭಾಮಂದಿರಕ್ಕೆ ಹೋಗಿ ಉಪದೇಶಮಾಡಿದನು. ಜನರು ಆತನ ಉಪದೇಶವನ್ನು ಕೇಳಿ ಆಶ್ಚರ್ಯಪಟ್ಟರು. ಯಾಕಂದರೆ ಆತನು ಅಧಿಕಾರವಿದ್ದವನಂತೆ ಅವರಿಗೆ ಉಪದೇಶಮಾಡುತ್ತಿದ್ದನು. ಮತ್ತು ಆತನ ಸುದ್ದಿಯು ಸಿರಿಯ ದೇಶದಲ್ಲೆಲ್ಲಾ ಹಬ್ಬಿದ್ದರಿಂದ ಅವರು ಮೈಯಲ್ಲಿ ನೆಟ್ಟಗಿಲ್ಲದವರನ್ನು ಅಂದರೆ ತರತರದ ರೋಗ ಬಾಧೆಗಳಿಂದ ಕಷ್ಟಪಡುವವರನ್ನೂ ದೆವ್ವ ಹಿಡಿದವರನ್ನೂ ಮೂರ್ಛಾ ರೋಗಿಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರೆತಂದರು. ಆತನು ಅವರನ್ನು ಸ್ವಸ್ಥಮಾಡಿದನು.

ಅಲ್ಲಿಂದ ಆತನು ತನ್ನ ಶಿಷ್ಯರ ಕೂಡ ಆ ಸ್ಥಳವನ್ನು ಬಿಟ್ಟು ಸಮುದ್ರದ ಬಳಿಗೆ ಬಂದನು. ಗಲಿಲಾಯದಿಂದ ಬಹು ಜನರು ಆತನ ಹಿಂದೆ ಹೋದರು. ಇದಲ್ಲದೆ ಆತನು ಇಂಥಿಂಥಾ ಮಹತ್ತು ಕೆಲಸಗಳನ್ನು ಮಾಡುತ್ತಾನೆಂದು ಕೇಳಿ ಬಹು ಜನರು ಯೂದಾಯದಿಂದಲೂ ಯೆರೂಸಲೇಮಿನಿಂದಲೂ ಇದುಮಾಯದಿಂದಲೂ ಯೋರ್ದನ್ ಹೊಳೆ ಆಚೆಯಿಂದಲೂ ತೂರ್ ಸಿದೋನ್ ಪಟ್ಟಣಗಳ ಸುತ್ತಲಿನಿಂದಲೂ ಆತನ ಬಳಿಗೆ ಬಂದರು. ಇನ್ನು ಸಮೂಹವು ಗುಂಪು ಕಟ್ಟಿಕೊಂಡು ಬಂದದ್ದರಿಂದ ಮೈ ಮೇಲೆ ಬಿದ್ದು ನೂಕ್ಯಾರೆಂದು ಆತನು ತನಗೆ ಒಂದು ದೋಣಿಯು ಸಿದ್ಧವಾಗಿರಲಿ ಎಂಬದಾಗಿ ಶಿಷ್ಯರಿಗೆ ಹೇಳಿದನು. ಯಾಕಂದರೆ ಆತನು ಅನೇಕರನ್ನು ಸ್ವಸ್ಥಮಾಡಿದ್ದರಿಂದ ರೋಗಪೀಡಿತರಾಗಿದ್ದವರೆಲ್ಲರೂ ಆತನನ್ನು ಮುಟ್ಟಬೇಕೆಂದು ಮೇಲೆ ಬೀಳುತ್ತಿದ್ದರು. ಯಾಕಂದರೆ ಆತನಿಂದ ಶಕ್ತಿಯು ಹೊರಟು ಎಲ್ಲರನ್ನು ವಾಸಿಮಾಡಿತು.

ಮತ್ತು ದೆವ್ವಗಳು ಆತನನ್ನು ಕಂಡು ಆತನ ಪಾದಕ್ಕೆ ಅಡ್ಡಬಿದ್ದು—ನೀನು ದೇವಕುಮಾರನೆಂದು ಕೂಗುತ್ತಿದ್ದವು. ಆದರೆ ಆತನು ತಾನು ಇಂಥವನೆಂದು ಯಾರಿಗೂ ತಿಳಿಸಬಾರದೆಂದು ಅವರಿಗೆ ಬಹು ಖಂಡಿತವಾಗಿ ಹೇಳಿದನು.

ಆತನು ಅವರಿಗೆ ಉಪದೇಶಮಾಡಿ ಹೇಳಿದ್ದೇನಂದರೆ—

ಆತ್ಮದಲ್ಲಿ ಬಡವರಾಗಿರುವವರು ಧನ್ಯರು. ಪರಲೋಕರಾಜ್ಯವು ಅವರದು.

ದುಃಖಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು.

ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು.

ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವದು.

ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು.

ನಿರ್ಮಲಚಿತ್ತರು ಧನ್ಯರು; ಅವರು ದೇವರನ್ನು ನೋಡುವರು.

ಸಮಾಧಾನ ಮಾಡುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು

ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಪರಲೋಕ ರಾಜ್ಯವು ಅವರದು.

ನರಹತ್ಯ ಮಾಡಬಾರದು. ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನು ಎಂದು ಶಾಸ್ತ್ರದಲ್ಲಿ ಬರೆದಿದೆಯಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯವಿಚಾರಣೆಗೆ ಗುರಿಯಾಗುವನು. ವ್ಯಭಿಚಾರ ಮಾಡಬಾರದೆಂದು ಶಾಸ್ತ್ರದಲ್ಲಿ ಕಟ್ಟಳೆಯುಂಟಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೆ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು.

ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಅಂತ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು. ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ಪ್ರಾರ್ಥನೆಮಾಡಿರಿ. ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ದುರ್ನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ. ನಿಮ್ಮನ್ನು ಪ್ರೀತಿಸುವವರನ್ನು ನೀವು ಪ್ರೀತಿಮಾಡಿದರೆ ನಿಮಗೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ? ನಿಮಗೆ ಮೇಲನ್ನು ಮಾಡುವವರಿಗೆ ಮಾತ್ರ ನೀವು ಮೇಲನ್ನು ಮಾಡಿದರೆ ಅತಿಶಯವೇನು? ನೀವು ನಿಮ್ಮ ವೈರಿಗಳನ್ನು ಪ್ರೀತಿಸಿ ಅವರಿಗೆ ಉಪಕಾರಮಾಡಿರಿ. ಹೀಗೆ ಮಾಡಿದರೆ ನಿಮಗೆ ಬಹಳ ಫಲ ಸಿಕ್ಕುವದು. ನೀವು ಪರಾತ್ಪರನ ಮಕ್ಕಳಾಗುವಿರಿ.

ಆತನು ಉಪಕಾರ ನೆನಸದವರಿಗೂ ಕೆಟ್ಟವರಿಗೂ ಉಪಕಾರಿಯಾಗಿದ್ದಾನೆ. ಆದ್ದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ.

ಬೇರೆಬೇರೆ ಕಡೆಗಳಿಂದ ನೆರೆದು ಬಂದಿದ್ದ ಸಮೂಹದ ಜನಗಳು ಯೇಸು ಮಾಡಿದ ಮಹತ್ತುಗಳನ್ನು ನೋಡಿ ಆತನ ದಿವ್ಯೋಪದೇಶವನ್ನು ಕೇಳಿ ಮಹಾ ಭಯವುಳ್ಳವರಾಗಿ ಈತನು ಯಾರಿರಬಹುದು? ಎಂದು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಹೀಗೆ ಯೋಚಿಸಿ ಅವರು ಆತನನ್ನು ಕುರಿತು ದಿವ್ಯದರ್ಶನ ಹೊಂದಿದ ಭಕ್ತರು ಪೂರ್ವದಲ್ಲಿ ಬರೆದದ್ದನ್ನು ಸ್ಮರಣೆಗೆ ತಂದುಕೊಂಡು ಈ ವಾಕ್ಯಗಳು ಈತನಲ್ಲಿಯೇ ನೆರವೇರುತ್ತವೆಯೇ ಹೊರತು ಇನ್ನಾರಿಗೂ ಸಲ್ಲತಕ್ಕವುಗಳಲ್ಲವೆಂದು ನಿಶ್ಚಯಿಸಿಕೊಂಡರು. ಆ ಪೂರ್ವ ಭಕ್ತರು ದರ್ಶನ ಹೊಂದಿ ಬರೆದ ವಾಕ್ಯಗಳಾವವಂದರೆ ದೇವರು ಹೇಳಿದ್ದು—

ಇಗೋ ನನ್ನ ಸೇವಕನು. ಈತನನ್ನು ನಾನು ಆರಿಸಿಕೊಂಡೆನು.

ಈತನು ನನಗೆ ಇಷ್ಟನು. ನನ್ನ ಪ್ರಾಣಪ್ರಿಯನು

ಈತನಲ್ಲಿ ನನ್ನ ಆತ್ಮವನ್ನು ಇರಿಸುವೆನು. ಈತನು ಸಕಲ ಜನಗಳಿಗೂ ನ್ಯಾಯವಿಧಿಯನ್ನು ಸಾರುವನು.

ಈತನು ಜಗಳವಾಡುವದಿಲ್ಲ. ಕೂಗಾಡುವದಿಲ್ಲ.

ಬೀದಿಗಳಲ್ಲಿ ಈತನ ಧ್ವನಿಯು ಯಾರಿಗೂ ಕೇಳಿಸುವದಿಲ್ಲ.

ಜಜ್ಜಿದ ದಂಟನ್ನು ನೆಮ್ಮಗುಜ್ಜು ಮಾಡನೆಯೂ

ಆರಿಹೋಗುತ್ತಿರುವ ದೀಪವನ್ನು ನಂದಿಸನೆಯೂ

ನ್ಯಾಯವನ್ನು ದಿಗ್ವಿಜಯಕ್ಕಾಗಿ ಕಳುಹಿಸಿ ಕೊಡುವನು.

ಯುದ್ಧದ ಸಮಾಚಾರಗಳು.

ರಷ್ಯಾದವರು ಹಿಮ್ಮೆಟ್ಟಿಸಲ್ಪಟ್ಟರು.

ಬ್ರಿಟಿಷರಿಗೆ ಮೆಸೊಪೊಟೇಮಿಯಾದಲ್ಲಿ ಜಯ.

ಈ ವಾರ ರಣರಂಗಗಳಿಂದ ಬಂದಿರುವ ಸಮಾಚಾರಗಳು ನಮ್ಮ ಪಕ್ಷದವರಿಗೆ ಅಷ್ಟೇನೂ ತೃಪ್ತಿಕರವಾಗಿಲ್ಲ. ಜರ್ಮನಿಯವರು ಕಳೆದ ಮಳೆಗಾಲದಲ್ಲಿ ಯುದ್ಧ ಸನ್ನಾಹಗಳನ್ನು ಬಹಳ ಚೆನ್ನಾಗಿ ಮಾಡಿಕೊಂಡಿದ್ದಂತೆ ಕಾಣುತ್ತದೆ. ಅವರು ಅಗಾಧವಾದ ಸೈನಿಕರನ್ನು ಜೊತೆಮಾಡಿಕೊಂಡು ಅವರಿಗೆಲ್ಲಾ ಅಪಾರವಾದಷ್ಟು ಯುದ್ಧ ಸಾಮಗ್ರಿಗಳನ್ನು ಒದಗಿಸಿ ಸಿದ್ಧಪಡಿಸಿಕೊಂಡಿದ್ದು, ಅಷ್ಟು ಸೈನ್ಯವನ್ನೂ ಏಕ ಕಾಲದಲ್ಲಿ ರಷ್ಯಾದವರ ಮೇಲೆ ಮುಗುಚಿ ನುಗ್ಗಿಸಿದರು. ಮಹಾ ಘೋರವಾದ ಕದನಗಳು ನಡೆದವು. ಅಪಾರವಾದ ನಷ್ಟಗಳು ಸಂಭವಿಸಿದವು. ಫಲಿತಾಂಶವೇನೋ ಇನ್ನೂ ಇತ್ಯರ್ಥವಾಗಲಿಲ್ಲ.

ಪಶ್ಚಿಮ ರಣರಂಗದಲ್ಲಿ.

ಕಳೆದ ವಾರವೆಲ್ಲಾ ಈ ಯುದ್ಧಭೂಮಿಯಲ್ಲಿ ಕೆಲವು ಕಡೆ ವಿಶೇಷವಾಗಿಯೂ, ಇನ್ನು ಕೆಲವು ಕಡೆ ಅಲ್ಪಸ್ವಲ್ಪವಾಗಿಯೂ ಕದನಗಳು ನಡೆಯುತ್ತಲೇ ಬಂದವು. ಫ್ರೆಂಚರಿಗೆ ಸ್ವಲ್ಪಮಟ್ಟಿಗೂ ಅನುಕೂಲವಾಗಿ, ಅವರು ಮುಂದಕ್ಕೆ ನುಗ್ಗಿಹೋಗಿದಾರೆ. ಆದರೆ ವಿಸ್ತಾರವೂ ಘೋರವೂ ಆದ ಯುದ್ಧವೇನೂ ನಡೆಯಲಿಲ್ಲ

ಫ್ರೆಂಚರು ಒಂದು ಕಡೆ ಜರ್ಮನಿಯವರ ಮೇಲೆ ನುಗ್ಗಿಹೋದ ಹಾಗೂ, ಅವರ ಏಟನ್ನು ತಡೆಯಲಾರದೆ ಹಿಮ್ಮೆಟ್ಟಿಹೋದೆವೆಂದೂ, ಆದರೆ ಹೀಗೆ ಹಿಮ್ಮೆಟ್ಟಿಹೋದದ್ದು ಫ್ರೆಂಚರಿಗೆ ಗೋಚರವಾಗಲಿಲ್ಲವೆಂದೂ ಜರ್ಮನಿಯವರೇ ಹೇಳಿ ಒಪ್ಪಿಕೊಂಡಿದಾರೆ. ಆದರೆ ಅಲ್ಲಿ ನಿಜವಾಗಿ ನಡೆದದ್ದೇನೆಂದರೆ—ಆ ಬಳಿ ಬಹು ಘೋರವಾದ ಕದನವಾಯಿತು. ಫ್ರೆಂಚರು ಮಹಾ ಪರಾಕ್ರಮದಿಂದ ಯುದ್ಧಮಾಡಿದ ಕಾರಣ ಅವರ ಏಟನ್ನು ತಡೆಯಲಾರದೆ ಜರ್ಮನಿಯವರು ಸೋತು ಹಿಮ್ಮೆಟ್ಟಿಹೋಗಬೇಕಾಯಿತು. ಜರ್ಮನಿಯ ಸೈನ್ಯದಲ್ಲಿ 1000 ಮಂದಿಗಿಂತಲೂ ಹೆಚ್ಚಾಗಿಯೇ ಮಡಿದುಹೋದರು; 600 ಮಂದಿಯನ್ನು ಫ್ರೆಂಚರು ಸೆರೆಹಿಡಿದುಕೊಂಡರು. ಶರಣಾಗತರಾದೆವೆಂದು ಸೂಚಿಸಿ ಜರ್ಮನಿ ಸೈನಿಕರು ಕೈಗಳನ್ನು ಮೇಲಕ್ಕೆ ಹಿಡಿದುಕೊಂಡೇ ಓಡುತ್ತಲೂ ಹಾರುತ್ತಲೂ ಬಂದು ಫ್ರೆಂಚರ ಅಧೀನರಾದರು. ಅವರಲ್ಲಿ ಈ ಸಂಗತಿ ತಮ್ಮ ಹುದ್ದೇದಾರರಿಗೆ ಗೊತ್ತಾದರೆ ತಮ್ಮನ್ನೆಲ್ಲಾ ಗುಂಡಿನಿಂದ ಹೊಡೆದು ಕೊಲ್ಲುವರೆಂಬ ಭೀತಿಯುಂಟಾಗಿದ್ದ ಕಾರಣ ಬೇಗನೆ ಬಂದು ಫ್ರೆಂಚರ ಆಶ್ರಯದಲ್ಲಿ ಸೇರಿಕೊಂಡರು. ಮೇ ತಾ. 9 ರಿಂದ ಜೂನ್ ತಾ. 1 ರ ವರೆಗೆ ಫ್ರೆಂಚರು ಶತ್ರುವಿನ ಸೈನ್ಯದಲ್ಲಿ 2,600 ಹೊಣಗಳನ್ನು

ಪ್ರಾಧೀನಮಾಡಿ, 3,100 ಸೈನ್ಯಗಳನ್ನು ಕೈಸೆರೆ ಹಿಡಿದಿರುತ್ತಾರೆ. ಫ್ರೆಂಚರ ಸೈನ್ಯ ದಲ್ಲಿ 3,200 ಮಂದಿ ನಷ್ಟವಾಗಿದ್ದರೂ ಬಹಳ ಮಂದಿಗೆ ಸ್ವಲ್ಪ ಸ್ವಲ್ಪ ಗಾಯಗ ಳಾಗಿವೆ. ಈಚೆಗೆ ಬಂದಿರುವ ಕಂಠೀವರ್ತಮಾನಗಳಿಂದ ಇನ್ನೂ ಭಯಂಕರ ವಾದ ದೊಡ್ಡ ಯುದ್ಧ ನಡೆಯಿತೆಂದೂ, ಈ ಯುದ್ಧದಲ್ಲಿ ಜರ್ಮನಿ ಸೈನಿಕರಲ್ಲಿ 3,000 ಜನರು ಮಡಿದುಹೋದರೆಂದೂ, 250 ಮಂದಿ ಫ್ರೆಂಚರಿಗೆ ಕೈಸೆರೆ ಸಿಕ್ಕಿದರೆಂದೂ ತಿಳಿಯುತ್ತದೆ.

ಬ್ರಿಟಿಷ್ ಸೈನಿಕರು ಸ್ವಲ್ಪ ದೂರ ಮುಂದರಿಸಿ ನುಗ್ಗಿಹೋಗಿರುವರು; ಅವರಿಗೂ ಕೆಲವು ಶತ್ರು ಸೈನಿಕರು ಕೈಸೆರೆ ಸಿಕ್ಕಿದಾರೆ. ಆದರೂ ಬ್ರಿಟಿಷರ ಸಾಲುಗಳಲ್ಲಿ ಅಷ್ಟೇನೂ ವಿಶೇಷ ಕದನಗಳು ನಡೆಯಲಿಲ್ಲ. ನಷ್ಟಪಟ್ಟವರ ಹೆಸ ರುಗಳ ಪಟ್ಟಿಯಲ್ಲಿ ಲ್ಯಾಂಕಷೀರ್ ಬ್ರಿಟಿಷ್ ರೆಜಿಮೆಂಟಿನ 403 ಸೈನಿಕರು ಜರ್ಮನಿಯವರು ಹಿಂದಿನ ಯುದ್ಧದಲ್ಲಿ ಹಾಕಿದ ವಿಷವಾಯುಗಳ ದೆಸೆಯಿಂದ ತುಂಬಾ ಕಾಯಿಲೆಯನ್ನನುಭವಿಸುತ್ತಿದಾರೆಂದು ಗೋಚರವಾಗುತ್ತದೆ.

ಬೊಂಬಾಯಿನ ಲೇಟ್ ಜಸ್ಟಿಸ್ ರ್‍ಯಾನಡೆಯವರ ಸಹೋದರರಾದ ಡಾಕ್ಟರ್ ರ್‍ಯಾನಡೆಯವರು ಈಗ ಫ್ರಾನ್ಸಿನಲ್ಲಿದ್ದುಕೊಂಡು ಹೇಳಿರುವುದೇನೆಂದರೆ— ಹಿಂದುಸ್ಥಾನದಿಂದ ಬಂದಿರುವ ಸೈನಿಕರನ್ನು ಸರಿಯಾಗಿ ಸಂರಕ್ಷಣೆಮಾಡುವುದಿಲ್ಲ ವೆಂಬ ಸುದ್ದಿಯನ್ನು ಕೇಳಿ, ಅದರ ನಿಜಸ್ಥಿತಿಯನ್ನು ತಿಳಿಯೋಣವೆಂದು ಹೊರಟು ಸಾವಿರಾರು ಹಿಂದುಸ್ಥಾನದ ಸೈನಿಕರ ಬಳಿಗೆ ಹೋಗಿ ಅವರ ಯೋಗಕ್ಷೇಮ ವನ್ನು ವಿಚಾರಿಸಿದೆನು. ಅವರಲ್ಲಿ ಯಾರೊಬ್ಬರೂ ಯಾವ ವಿಧವಾದ ಕಷ್ಟವನ್ನೂ ಕೊರತೆಯನ್ನೂ ಹೇಳಿಕೊಂಡದ್ದು ಕೇಳಲಿಲ್ಲ. ಯುದ್ಧ ಭೂಮಿಯಲ್ಲಿ ಎಲ್ಲಾ ಸೈನಿಕರ ಯೋಗಕ್ಷೇಮವನ್ನೂ ಸಾಧ್ಯವಾಗುವ ಮಟ್ಟಿಗೂ ಚೆನ್ನಾಗಿಯೇ ನೋಡಿ ಕೊಳ್ಳುತ್ತಿದಾರೆ. ನಮ್ಮ ಹಿಂದುಸ್ಥಾನದ ಸೈನಿಕರು ಬಹಳ ಪರಾಕ್ರಮದಿಂದ ಕದನಗಳನ್ನು ನಡಿಸಿರುವರು ಎಂದು ತಿಳಿಸಿದಾರೆ.

ಫ್ರೆಂಚರ ಇಪ್ಪತ್ತೊಂಭತ್ತು ವಿಮಾನಯಂತ್ರಗಳು ಅಂತರಿಕ್ಷ ಮಾರ್ಗದಲ್ಲಿ ಹೋಗಿ ಪ್ರಷ್ಯಾ ಯುವರಾಜನು ರಾಜ್ಯವಾಡಿಕೊಂಡಿದ್ದ ಪ್ರದೇಶದಲ್ಲಿ 178 ಸಿಡಿಮದ್ದಿನ ಗುಂಡುಗಳನ್ನೂ, ಸಾವಿರಾರು ಬಾಣಗಳನ್ನೂ ಸುರಿಸಿದವು. ಅನೇಕ ಜನರು ಕೊಲ್ಲಲ್ಪಟ್ಟರು

ಬ್ರಿಟಿಷ್ ವಿಮಾನಯಂತ್ರಗಳು ಹೋಗಿ ಬ್ರುಸೆಲ್ಸ್ ನಗರದ ಬಳಿ ಜರ್ಮ ನಿಯ ಜೆಪ್ಪೆಲಿನ್ ವಿಮಾನಯಂತ್ರಗಳ ಕಚೇರಿಯನ್ನು ನಾಶಮಾಡಿ ಬಂದವು. ಇನ್ನೊಂದು ಬ್ರಿಟಿಷ್ ವಿಮಾನಯಂತ್ರವು ಬೆಲ್ಜಿಯಮ್‌ನಲ್ಲಿ ಒಂದು ಜೆಪ್ಪೆಲಿನ್ ಎಂಬ ವಿಮಾನವನ್ನು ಹಾಳುಮಾಡಿತು. ಜರ್ಮನಿಯವರು ಬ್ರಿಟಿಷ್ ವಿಮಾನ ಯಂತ್ರಕ್ಕೆ ಹೊಡೆದು ಅದನ್ನು ಇಳಿಸಿಕೊಂಡರು. ಆದಾಗ್ಯೂ ಅದರಲ್ಲಿದ್ದ ಬ್ರಿಟಿಷ್ ಪ್ರಜೆಯು ಅವರ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡು ಬಂದಿರುತ್ತಾನೆ.

ಬ್ರಿಟಿಷ್ ಮಂತ್ರಿಶ್ರೇಷ್ಠರಾದ ಮಿ|| ಆಸ್ಕಿತ್‌ರವರು ಫ್ರಾನ್ಸಿಗೆ ಪ್ರಯಾಣ ಮಾಡಿ ಅಲ್ಲಿರುವ ಬ್ರಿಟಿಷ್ ಸೈನ್ಯಗಳನ್ನು ಪರಾಂಬರಿಸಿ ಅವರ ಯೋಗಕ್ಷೇಮ ವನ್ನು ತನಿಖೆಮಾಡಿಕೊಂಡು ಬಂದರು. ಸೈನಿಕರು ಅವರನ್ನು ಎಲ್ಲಾ ಕಡೆಗ ಳಲ್ಲೂ ವಿಶೇಷ ಉತ್ಸಾಹದಿಂದ ಎದುರುಗೊಂಡರು. ಅವರು ಯುದ್ಧಭೂಮಿಗೆ ದಯಮಾಡಿದ್ದರಿಂದ ಯುದ್ಧವೆಂಬುವುದೇನೋ ಅವರಿಗೆ ಪರಿಷ್ಕಾರವಾಗಿ ತಿಳಿ ಯುವುದಕ್ಕೂ, ಯುದ್ಧಭೂಮಿಯ ಯಥಾರ್ಥವಾದ ವಿದ್ಯಮಾನಗಳನ್ನು ಬ್ರಿಟಿಷ್ ಪ್ರಜೆಗಳಿಗೆ ಪರಿಷ್ಕಾರವಾಗಿ ವಿವರಿಸಿ ತಿಳಿಸುವುದಕ್ಕೂ ತುಂಬಾ ಸಹಾಯವಾಯಿತು.

ಪೂರ್ವ ರಣರಂಗದಲ್ಲಿ.

ಗೆಲಿಷಿಯಾ ಸೀಮೆಯಲ್ಲಿ ಸದ್ಯ ಅತ್ಯಂತ ಘೋರವಾದ ದೊಡ್ಡ ಕದನ ನಡೆಯುತ್ತಿದೆ ಜರ್ಮನಿಯವರೂ ಆಸ್ಟ್ರಿಯಾದವರೂ 12,60,000 ಸೈನ್ಯಗಳ ನ್ನು ಜಮಾಯಿಸಿ ಅಲ್ಲಿಗೆ ತಂದು ರಷ್ಯಾದವರನ್ನು ಹತಮಾಡಿಬಿಡಬೇಕೆಂದು ಮಹತ್ತರವಾದ ಸಾಹಸ ಪರಾಕ್ರಮಗಳನ್ನು ತೋರಿಸಿ ಯುದ್ಧಮಾಡುತ್ತಿರುವರು. ಅವರು ಬಹಳ ಸಣ್ಣ ಪ್ರದೇಶದಲ್ಲಿ 1,500 ಫಿರಂಗಿಗಳನ್ನು ಜಮಾಯಿಸಿ ಎತ್ತಿಕಟ್ಟಿ ಒಂದು ಗಂಟೆ ಹೊತ್ತಿನೊಳಗಾಗಿ ರಷ್ಯಾ ಸೈನಿಕರಲ್ಲಿ ಒಂದು ಭಾಗದ ಮೇಲೆ 2,00,000 ಗುಂಡುಗಳನ್ನು ಸುರಿಸಿದರು. ರಷ್ಯಾ ಸೈನಿಕರ ಸಾಲುಗಳಲ್ಲಿ ಪ್ರತಿ ಒಂದು ಗಜದುದ್ದಕ್ಕೂ 800 ಪೌಂಡುಗಳ ಭಾರವುಳ್ಳಂಥಾ ಹತ್ತು ಫಿರಂಗಿ ಗುಂಡುಗಳು ಬಿದ್ದು ಒಡೆದವು. ಈ ಘೋರವಾದ ಗುಂಡುಗಳ ಹೊಡೆತವನ್ನು ಸಹಿಸಿಕೊಂಡು ನಿಲ್ಲುವುದು ರಷ್ಯಾ ಸೈನಿಕರಿಗೆ ಸಾಧ್ಯವಾಗಲಿಲ್ಲ. ಆದದ್ದ ರಿಂದ ಅವರು ತಮ್ಮ ಸೈನ್ಯಗಳನ್ನು ಅಲ್ಲಿಂದ ಬಹಳ ದೂರ ಹಿಂದಕ್ಕೆ ಕರೆದು ಕೊಳ್ಳಬೇಕಾಯಿತು. ಇದಲ್ಲದೆ ಜರ್ಮನಿಯವರು ರಷ್ಯಾ ಸೈನಿಕರ ಮೇಲೆ ವಿಷವಾಯುಗಳನ್ನು ಸುರಿಸಿದರು. ಒಂದು ಸಂದರ್ಭದಲ್ಲಿ ಗಾಳಿಯು ಎದುರು ಬೀಸಿದ್ದರಿಂದ ಜರ್ಮನಿಯವರು ಹೊಡೆದ ವಿಷವಾಯುವು ಶತ್ರುವಿನ ಕಡೆಗೆ ಹೋಗದೆ ಹಿಂತಿರುಗಿ ಜರ್ಮನಿ ಸೈನಿಕರಿಗೇ ಬಂದು ಬಡಿಯಿತು ರಷ್ಯಾದವರು ತಮ್ಮ ಸೈನ್ಯಗಳನ್ನು ಅನೇಕ ಮೈಲಿಗಳ ದೂರ ಹಿಂದಕ್ಕೆ ಸಾಗಿಸಿಕೊಂಡು ಹೋದರು. ಮತ್ತು ಕೆಲವು ವಾರಗಳ ಹಿಂದೆ ಅವರು ಆಸ್ಟ್ರಿಯಾದವರನ್ನು ಸೋಲಿಸಿ ಗೆದ್ದು ಸ್ವಾಧೀನಪಡಿಸಿಕೊಂಡಿದ್ದ ಪೆಮಿಸೆಲ್ ಎಂಬ ಪಟ್ಟಣವನ್ನು ಬಿಟ್ಟು ಹೊರಟುಹೋಗಿದಾರೆ. ಈ ಪಟ್ಟಣದ ಕೋಟೆಗಳನ್ನೆಲ್ಲಾ ಆಸ್ಟ್ರಿಯಾ ದವರೇ ಒಡೆದುಹಾಕಿ ಹೋಗಿದ್ದರು. ಆದಕಾರಣ ಅದನ್ನು ರಷ್ಯಾದವರು ಈಗ ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಿ ಅತ್ಯಂತ ಘೋರವಾಗಿ ಕದನವಾ ಯಿತು. ಜರ್ಮನಿಯವರು ಒಂದು ಕೋಟೆಯನ್ನು ಗೆದ್ದು ಆಕ್ರಮಿಸಿಕೊಂಡರು. ಆದರೆ ರಷ್ಯಾದವರು ಅದನ್ನು ಮತ್ತೆ ಅವರಿಂದ ಕಿತ್ತುಕೊಂಡಿರುವರಲ್ಲದೆ ಯುದ್ಧದಲ್ಲಿ ಉಳಿದುಳಿದ ಸುಮಾರು 600 ಜರ್ಮನಿ ಸೈನಿಕರನ್ನು ಕೈಸೆರೆ ಹಿಡಿ ದುಕೊಂಡರು. ಅಲ್ಲಿನ ವಿದ್ಯಮಾನಗಳು ಸರಿಯಾಗಿ ಗೊತ್ತಾಗುವುದಿಲ್ಲ. ಕಂಠೀ ವರ್ತಮಾನಗಳು ಸಮಂಜಸವಾಗಿಲ್ಲದಿರೋಣದರಿಂದ ನಡೆದಿರುವ ಸಂಗತಿ ಹೀಗೇ ಸರಿ ಎಂದು ಹೇಳುವುದು ಕಷ್ಟ. ರಷ್ಯಾದವರು ಮೇ ತಾ. 28 ರಿಂದ 30 ರೊಳ ಗಾಗಿ 10,000 ಜರ್ಮನರನ್ನು ಕೈಸೆರೆ ಹಿಡಿದೆವೆಂದೂ, ಕೆಲವು ಠಾಣ್ಯಗಳಿಂದ ಜರ್ಮನಿಯವರನ್ನು ಹಿಂದಕ್ಕೆ ಓಡಿಸಿರುತ್ತೇವೆಂದೂ ಹೇಳುತ್ತಾರೆ. ರಷ್ಯಾದ ವರು ತಮ್ಮ ಸ್ಥಾನವನ್ನು ಬಿಟ್ಟು ಓಮ್ಮೆಟ್ಟಿ ಹೋಗಿರುವುದಕ್ಕೆ ಅನುಮಾನವಿಲ್ಲ. ಹಾಗೆ ಹೋಗಿದ್ದಾಗ್ಯೂ ಅವರ ಸೈನ್ಯಗಳು ಚದರಿಹೋಗದೆ ಒಟ್ಟಾಗಿಯೇ ಇರೋ ಣದರಿಂದ ಅಲ್ಲಿ ಅವರು ಅತ್ಯಂತ ಘೋರವಾಗಿ ಕದನಗಳನ್ನು ನಡಿಸುತ್ತಿದಾರೆ. ಈ ರೀತಿ ರಷ್ಯಾದವರನ್ನು ಹತಮಾಡಬೇಕೆಂದು ನುಗ್ಗಿಬಂದು ಮಹಾ ಘೋರ ವಾಗಿ ಕಡಿದಾಡಿದ್ದರಲ್ಲಿ ಜರ್ಮನಿಯವರ ಕಡೆ 3,00,000 ಸೈನ್ಯ ನಾಶವಾಯಿ ತೆಂದು ಊಹಿಸಲ್ಪಟ್ಟಿದೆ. ರಷ್ಯಾದವರು 60,000 ಸೈನಿಕರನ್ನು 40 ಫಿರಂಗಿಗಳ ಸಹಿತ ಕೈಸೆರೆ ಹಿಡಿದುಕೊಂಡೆವೆಂದು ಹೇಳುವರು. ಈ ವಿಚಾರಗಳನ್ನೆಲ್ಲಾ ನೋಡುವಲ್ಲಿ ರಷ್ಯಾದವರು ಗೆಲಿಷಿಯಾ ಸೀಮೆಯ ಒಂದು ಭಾಗವನ್ನು ತ್ಯಜಿಸಿ ಹಿಂದಕ್ಕೆ ಹೊರಟುಹೋಗಬೇಕಾಯಿತೆಂದು ಗೊತ್ತಾಗುತ್ತದೆ. ಆಸ್ಟ್ರಿಯಾ ದವರ ಸೈನ್ಯದಲ್ಲಿ 6,000 ಸಿಪಾಯಿಗಳು ರಷ್ಯಾದವರ ಒಂದು ಡಿವಿಜನ್ ಸೈನ್ಯದ ಮುಂದುಗಡೆ ಮಡಿದುಬಿದ್ದಿದ್ದರು. ಇದರಿಂದ ಅಲ್ಲಿ ನಡೆದ ಕದನವು ಎಷ್ಟು ಘೋರವಾದದ್ದಾಗಿತ್ತೋ ಊಹಿಸಿಕೊಳ್ಳಬಹುದಾಗಿದೆ.

ಯುದ್ಧಭೂಮಿಯ ಉತ್ತರ ಭಾಗದಲ್ಲಿ ಬ್ಯಾಲ್ಟಿಕ್ ಕಡಲಿನ ಹತ್ತಿರ ರಷ್ಯಾ ದವರಿಗೆ ಅಲ್ಪ ಸ್ವಲ್ಪ ಜಯವಾಗಿರುತ್ತದೆ ಅವರು ಲಿಬೌ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿ ಒಬ್ಬ ಜರ್ಮನಿ ದಳಪತಿಯನ್ನು ಅವನ ಬಳಿ ಇದ್ದ ಕೆಲವು ಉದ್ಯೋಗಸ್ಥರ ಸಮೇತ ಕೈಸೆರೆಹಿಡಿದುಕೊಂಡರು. ಆ ದಳಪತಿಗೆ ಸ್ವಲ್ಪ ಗಾಯವಾ ಗಿರುತ್ತದೆ. ಗವರ್ನರಿನ ಅಂಗರಕ್ಷಕರು ಕೊಲೆಯಾದರು, ಇಲ್ಲವೇ ಕೈಸೆರೆ ಹಿಡಿ ಯಲ್ಪಟ್ಟರು. ಈ ಪ್ರದೇಶದಲ್ಲಿ ರಷ್ಯಾದವರು ಮೇ ತಾ. 12 ರಿಂದ 24 ರ ವರೆಗೆ 209 ಮಂದಿ ಜರ್ಮನಿ ಉದ್ಯೋಗಸ್ಥರನ್ನೂ, 8,617 ಜನ ಸೈನಿಕರನ್ನೂ ಕೈಸೆರೆ ಹಿಡಿದುಕೊಂಡರು.

ಬ್ಯಾಲ್ಟಿಕ್ ಕಡಲಿನಲ್ಲಿ ಜರ್ಮನಿಯ ಮತ್ತು ರಷ್ಯಾದವರ ಜಹಜುಗಳು ಕಲೆತು ಯುದ್ಧವಾಯಿತು. ಈ ಯುದ್ಧದಲ್ಲಿ ರಷ್ಯಾದವರು ಜರ್ಮನಿಯ ಮೂರು ಯುದ್ಧದ ಜಹಜುಗಳನ್ನು ಮುಳುಗಿಸಿಯೋ ಒಡೆದುಹಾಕಿಯೋ ಇರುವರೆಂದೂ ರಷ್ಯಾದವರ ಸೈನಿಕರಿದ್ದ ಒಂದು ಜಹಜು ಮುಳುಗಿಸಲ್ಪಟ್ಟಿ ತೆಂದೂ, 23 ಮಂದಿ ಬದುಕಿಸಲ್ಪಟ್ಟರೆಂದೂ ತಿಳಿಸಲಾಗಿದೆ.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿ ಸೈನ್ಯಗಳು ಉತ್ತರ ಭಾಗದಲ್ಲೂ ಪೂರ್ವ ದಿಕ್ಕಿನಲ್ಲೂ ಮುಂದುವ ರಿದು ನುಗ್ಗಿಹೋಗುತ್ತಲಿವೆ. ಉತ್ತರ ಭಾಗದಲ್ಲಿ ಭೂಪ್ರದೇಶವು ಬೆಟ್ಟಗುಡ್ಡ ಗಳಿಂದ ತುಂಬಿ, ಅವರ ಸೈನ್ಯಗಳು ನುಗ್ಗಿಹೋಗುವುದಕ್ಕೆ ಬಹಳ ಅಡಚಣೆಯೂ ಗಿದೆ. ಆದರೂ ಅಲ್ಲಿ ಅವರು ಆಸ್ಟ್ರಿಯಾದವರ ಕೆಲವು ಗ್ರಾಮಗಳನ್ನು ಆಕ್ರ ಮಿಸಿಕೊಂಡಿರುತ್ತಾರೆ.

ಇಟಲಿಯವರು ಪೂರ್ವ ದಿಕ್ಕಿನಲ್ಲಿ ಏಡ್ರಿಯಾಟಿಕ್ ಕಡಲಿನ ಉತ್ತರ ಪ್ರಾಂ ತ್ಯದ ಮೂಲಕ ಆಸ್ಟ್ರಿಯಾದೊಳಕ್ಕೆ ನುಗ್ಗಿಹೋಗಿ ಇಸೊನ್ಜೊ ನದಿಯನ್ನು ದಾಟಿದರು. ಅಲ್ಲಿಂದಾಚೆ ಬಹಳ ಎತ್ತರವಾದ ಕೆಲವು ಗುಡ್ಡಗಳಿರುತ್ತವೆ. ಈ ಗುಡ್ಡಗಳನ್ನು ಇಟಲಿಯವರು ವಿಶೇಷ ಯುದ್ಧಮಾಡಿ ಸ್ವಾಧೀನಪಡಿಸಿಕೊಂಡರು. ಅಲ್ಲಿ ಆಸ್ಟ್ರಿಯಾದವರು ಕಂದಕಗಳನ್ನು ತೋಡಿಕೊಂಡು ಒಳ್ಳೊಳ್ಳೇ ಫಿರಂಗಿ ಗಳನ್ನು ಎತ್ತಿಕಟ್ಟಿದ್ದರು.

ಇಟಲಿಯವರ ವಿಮಾನಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಫ್ಯೂಮ ಎಂಬ ತೀರ ನಗರಕ್ಕೆ ಅಂದರೆ ಅಲ್ಲಿನ ರೈಲ್ವೆ ಸ್ಟೇಷನ್, ಪೆಟ್ರೋಲ್ ಎಣ್ಣೆಯ ಉಗ್ರಾಣ, ಯುದ್ಧದ ಸಾಮಗ್ರಿಗಳು ತುಂಬಿದ್ದ ಕಟ್ಟಡ ಮುಂತಾದ ಸ್ಥಳಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ನಷ್ಟವನ್ನುಂಟುಮಾಡಿದವು.

ಆಸ್ಟ್ರಿಯಾವಿಗೆ ಸೇರಿದ ಟ್ರೀಯೆಸ್ಟ್ ನಗರದಲ್ಲಿ ಅಧಿಕಾರಿಗಳ್ಯಾರೂ ಇಲ್ಲದ್ದರಿಂದ ಜನಗಳು ಗುಂಪೆದ್ದು ಇಟಲಿ ಪ್ರಜೆಗಳು ವಾಸಮಾಡುವಂಥಾ ಮನೆ ಮಠಗಳನ್ನು ಕಿತ್ತು ಹಾಳುಮಾಡುತ್ತಿದಾರೆಂದು ಹೇಳಲಾಗಿದೆ

ಟರ್ಕಿ.

ಗಲ್ಲಿಪೊಲಿ ಅರ್ಧ ದ್ವೀಪದಲ್ಲಿ ನಮ್ಮ ಪಕ್ಷದವರು ಕಳೆದ ಶುಕ್ರವಾರ ಎರಡಾವರ್ತಿ ಶತ್ರುವಿನ ಮೇಲೆ ನುಗ್ಗಿ ಕದನಮಾಡಿದರು. ಟರ್ಕಿ ಸೈನ್ಯಗಳನ್ನು ಹಿಮ್ಮೆಟ್ಟಿಸಿ, 400 ಜನ ಟರ್ಕಿಯವರನ್ನು ಕೈಸೆರೆ ಹಿಡಿದು, ಮೂರು ಮೈಲಿ ವಿಸ್ತಾರಕ್ಕೆ 500 ಗಜಗಳ ದೂರ ಮುಂದಕ್ಕೆ ನುಗ್ಗಿಹೋಗಿದಾರೆ. ಕೈಸೆರೆಯಾದ ವರಲ್ಲಿ ಕೆಲವು ಜರ್ಮನಿ ನಾವೆಯ ಸೈನಿಕರೂ ಸಿಕ್ಕಿಬಿದ್ದಿದಾರೆ.

ಕಾನ್‌ಸ್ಟಂಟಿನೋಪಲ್ ಎಂಬ ಟರ್ಕಿ ರಾಜಧಾನಿಯ ಬಳಿ ನಮ್ಮ ಒಂದು ಸಬ್‌ಮೆರೀನು ಕಾಣಿಸಿಕೊಂಡದ್ದು ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿದೆ. ಆ ಸಬ್‌ಮೆರೀನು ಮಾರ್ಮೋರಾ ಕಡಲಿನಲ್ಲಿದ್ದ ಜರ್ಮನಿಯ ಒಂದು ಯುದ್ಧದ ಜಹಜನ್ನು ಟಾರ್ಪಿಡೋ ಬಿಟ್ಟು ಹೊಡಿಸಿ ಮುಳುಗಿಸಿರುತ್ತದೆ.

ಗಲ್ಲಿಪೊಲಿ ಅರ್ಧದ್ವೀಪದಲ್ಲಿ ಮೊದಲನೇ ಕದನವಾದದ್ದರಲ್ಲಿ ಕೈಸೆರೆಯಾಗಿ ರುವ ಟರ್ಕಿ ಸೈನಿಕರು ಅವರ ಕಡೆ ಅಪಾರ ಸೈನ್ಯಗಳು ನಷ್ಟವಾದವೆಂದೂ, ಕೊಲೆ ಯಾದವರೂ, ಗಾಯಪಟ್ಟವರೂ, ಕೈಸೆರೆಯಾದವರೂ ಸುಮಾರು 40,000 ಮಂದಿ ಆಗಬಹುದೆಂದೂ ಹೇಳಿದರು. ಒಂದು ರೆಜಿಮೆಂಟಿನಲ್ಲಿ 3,000 ಸೈನಿಕರೊಳಗೆ 120 ಮಂದಿ ಮಾತ್ರ ಉಳುಕೊಂಡರು.

ಫ್ರೆಂಚರು ಸಮುದ್ರದೊಳಗೆ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಇಡುವುದಕ್ಕೆ ಒಂದು ಜಹಜನ್ನು ನೇಮಿಸಿ ಕಳುಹಿಸಿದ್ದರು. ಈ ಜಹಜು ಮುಳು ಗಿಸಲ್ಪಟ್ಟಿತು. ಉದ್ಯೋಗಸ್ಥರಿಬ್ಬರೂ, 64 ಜನರೂ ಬದುಕಿ ಬಂದರು.

ಮೆಸೊಪೊಟೇಮಿಯಾ ದೇಶದೊಳಗೆ ಬ್ರಿಟಿಷ್ ಸೈನಿಕರು ಮುಂದುಮುಂದಕ್ಕೆ ನುಗ್ಗಿಹೋಗುತ್ತಲಿದಾರೆ. ಭೂಮಿಯ ಮೇಲೂ, ನದಿಯ ಮೇಲೂ ಸೈನ್ಯ ಗಳು ನುಗ್ಗಿಹೋಗಿರುವವು. ತಾ. 31 ನೇ ಸೋಮವಾರ ಟರ್ಕಿ ಸೈನ್ಯಗಳು ಸೋತು ಓಡಿಹೋದವು. ಬ್ರಿಟಿಷರು ಅವರನ್ನು ಓಡಿಸಿಕೊಂಡು ಹೋಗಿದಾರೆ ಅಮಾರಾ ಸಂಸ್ಥಾನದ ಗೋರ್‌ರವರು ತಮ್ಮ 30 ಮಂದಿ ಉದ್ಯೋಗಸ್ಥರ ಮತ್ತು 700 ಸೈನಿಕರ ಸಮೇತ ಬಂದು ಬ್ರಿಟಿಷರಿಗೆ ಶರಣಾಗತರಾದರು. ಮತ್ತು ಟರ್ಕಿ ಸೈನಿಕರಲ್ಲಿ 80 ಉದ್ಯೋಗಸ್ಥರೂ, 2,000 ಸೈನಿಕರೂ ಕೈಸೆರೆ ಹಿಡಿಯಲ್ಪಟ್ಟರು. ಇದಲ್ಲದೆ ಅವರು ಇಟ್ಟುಕೊಂಡಿದ್ದ 7 ಫಿರಂಗಿಗಳೂ, 6 ಹಡಗಿನ ಫಿರಂಗಿಗಳೂ, ಹಲವು ನದೀ ಜಹಜುಗಳೂ, ಯುದ್ಧಸಾಮಗ್ರಿಗಳೂ ಬ್ರಿಟಿಷರಿಗೆ ಸಿಕ್ಕಿರುವವು. ಆ ಸೈನಿಕರಲ್ಲಿ ಜರ್ಮನಿಯವರು ಆರು ಮಂದಿ ಇದ್ದರು. ಈ ಪೈಕಿ ಮೂರು ಮಂದಿ ಕೈಸೆರೆ ಹಿಡಿಯಲ್ಪಟ್ಟರು; ಇಬ್ಬರು ಕೊಲೆಯಾದರು; ಇನ್ನೊಬ್ಬನ ಪಾಡೇನಾಯಿತೋ ತಿಳಿಯಲಿಲ್ಲ.

ಆಫ್ರಿಕಾದಲ್ಲಿ.

ಪಶ್ಚಿಮ ಆಫ್ರಿಕಾದಲ್ಲಿರುವ ಕ್ಯಾಮರೂನ್ಸ್ ಸೀಮೆಯಲ್ಲಿ ನಮ್ಮ ಪಕ್ಷ ದವರು ಒಂದು ಮುಖ್ಯವಾದ ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ನಮ್ಮ ಪಕ್ಷದವರಿಗಾದ ನಷ್ಟ ಬಹಳ ಸ್ವಲ್ಪ.

ಜರ್ಮನಿಯ ಪೂರ್ವ ಆಫ್ರಿಕಾದಲ್ಲಿರುವ ನ್ಯಾಸ್ಸ ಎಂಬ ಕೆರೆಯ ಬಳಿ ಬ್ರಿಟಿಷ್ ಸೈನ್ಯಗಳು ನುಗ್ಗಿ ಹೋಗಿ ಒಂದು ಕೋಟೆಯೊಳಗಿದ್ದ ಜರ್ಮನಿಯ ವರನ್ನು ಹೊರಕ್ಕೆ ಓಡಿಸಿ, ಕೆಲವು ಉಗ್ರಾಣಗಳನ್ನು ಸ್ವಾಧೀನಪಡಿಸಿಕೊಂಡದ್ದ ಲ್ಲದೆ, ಫಿರಂಗಿ ಏರಿಸಿದ್ದ ಒಂದು ಜಹಜನ್ನು ಮುಳುಗಿಸಿರುತ್ತಾರೆ.

ಇತರ ವಿಷಯಗಳು.

ಲೂಸಿಟೇನಿಯಾ ಜಹಜನ್ನು ಮುಳುಗಿಸಿದ್ದರಿಂದ ಉಂಟಾದ ನಷ್ಟದ ವಿಷಯದಲ್ಲಿ ಅಮೇರಿಕದವರಿಗೂ ಜರ್ಮನಿಯವರಿಗೂ ಕಾಗದ ಪತ್ರಗಳು ಇನ್ನೂ ನಡೆಯುತ್ತಿರುವವು. ಜರ್ಮನಿಯವರು ಆ ಜಹಜಿನಲ್ಲಿ ಫಿರಂಗಿಗಳನ್ನು ಎತ್ತಿಕಟ್ಟಿದ್ದರೆಂದೂ, ಸೈನಿಕರೂ ಯುದ್ಧಸಾಮಗ್ರಿಗಳೂ ಅದರಲ್ಲಿದ್ದವೆಂದೂ ಹೇಳುತ್ತಾರೆ ಇವೊಂದೂ ನಿಜವಲ್ಲ. ಅಮೇರಿಕದವರಾದರೋ ಇನ್ನು ಮುಂದೆ ಜರ್ಮನಿಯವರು ಯುದ್ಧ ಕಾರ್ಯಗಳನ್ನು ನಡಿಸುವಾಗ್ಗೆ ಪರರಾಜ್ಯಗಳವರ ವಿಷಯದಲ್ಲಿ ಅನುಸರಿಸಬೇಕಾದ ವ್ಯವಹಾರಗಳಿಗೆ ಅನುಸಾರವಾಗಿ ಕಾರ್ಯಗ ಳನ್ನು ನಡಿಸುವರೋ ಇಲ್ಲವೋ ಹೇಳಬೇಕೆಂದು ಕೇಳುತ್ತಾರೆ. ಅಮೇರಿಕದ ಪ್ರಜೆ ಗಳನ್ನು ನಿಷ್ಕಾರಣವಾಗಿ ಕೊಂದದ್ದಕ್ಕೆ ಜರ್ಮನಿಯವರು ಜವಾಬ್ದಾರಿಯನ್ನು ವಹಿಸಬೇಕಾಗದೆ ಎಂದು ತಿಳಿಸಿರುವರು. ಅಮೇರಿಕದಲ್ಲಿ ಪ್ರಜೆಗಳಿಗೆ ಜರ್ಮನಿ ಯವರ ಮೇಲೆ ವಿಶೇಷವಾದ ಆಗ್ರಹವುಂಟಾಗಿದೆ.

ಜರ್ಮನಿಯ ವಿಮಾನ ಯಂತ್ರಗಳು ಇಂಗ್ಲೆಂಡಿನ ಮೇಲೆ ಹಾರಿ ಬಂದು ಕೆಲವು ದರೋಡೆ ಕೃತ್ಯಗಳನ್ನು ನಡಿಸಿಹೋದವು. ಒಂದು ಜೆಪ್ಪೆಲಿನ್ ಎಂಬ ವಿಮಾನ ಯಂತ್ರವು ಥೇಮ್ಸ್ ನದಿಯ ಮೇಲೆ ದಾಟುಹೋಗಿ ರಾಮ್ಸ್‌ಗೇಟ್ ಮತ್ತು ಲಂಡನ್ ಪಟ್ಟಣದ ಕೆಲವು ವಿಭಾಗಗಳಲ್ಲಿ 90 ಸಿಡಿಮದ್ದಿನ ಗುಂಡುಗ ಳನ್ನು ಸುರಿಸಿತು. ಒಬ್ಬ ಗಂಡಸು, ಒಬ್ಬ ಹೆಂಗಸು, ಒಬ್ಬ ಹುಡುಗ, ಒಂದು ಕೂಸು ಕೊಲೆಯಾದರು; ಕೆಲವು ಕಡೆ ಬೆಂಕಿ ಹತ್ತಿಕೊಂಡು ಮನೆಗಳು ಸುಟ್ಟು ಹೋದವು. ಮೂರು ಕಡೆಗಳಲ್ಲಿ ಉರಿಯ ಜ್ವಾಲೆಗಳು ಬಹಳ ಹೆಚ್ಚಾಗಿದ್ದವು. ಮೇಲ್ಕಂಡ ಗಂಡಸೂ ಹೆಂಗಸೂ ತಮ್ಮ ಕೊಠಡಿಯಲ್ಲಿ ಹಾಸಿಗೆಯ ಬಳಿ ಮಂಡಿ ಊರಿಕೊಂಡಿದ್ದಂತೆಯೇ ಮೃತಪಟ್ಟಿದ್ದರು ಅವರ ಮೈ ಸುಟ್ಟ ಗಾಯಗಳಾ ಗಿತ್ತು; ಉಸಿರುಕಟ್ಟಿ ಪ್ರಾಣಹೋಗಿತ್ತು. ತನಿಖೆ ಮಾಡಿದ್ದರಲ್ಲಿ ಜರ್ಮನಿಯವರು ಅವರನ್ನು ಕೊಂದುಹಾಕಿದರೆಂದು ಇತ್ಯರ್ಥವಾಯಿತು. ಭಾರಿ ಕಟ್ಟಡಗಳ್ಯಾವೂ ಆ ಸಿಡಿಮದ್ದಿನ ಗುಂಡುಗಳಿಂದ ಕೆಡಲಿಲ್ಲ.

ಇನ್ನೊಂದು ವಿಮಾನ ಯಂತ್ರವು ಇಂಗ್ಲೆಂಡಿನ ಪೂರ್ವತೀರಕ್ಕೂ ನೈಋತ್ಯ ದಿಕ್ಕಿನ ತೀರಕ್ಕೂ ಬಂದಿದ್ದು, ಅಲ್ಲಲ್ಲಿ ಹಲವು ಸಿಡಿಮದ್ದಿನ ಗುಂಡುಗಳನ್ನು ಹಾಕಿತೆಂದೂ, ಅದರಿಂದ ವಿಶೇಷ ನಷ್ಟವೇನೂ ಆಗಲಿಲ್ಲವೆಂದೂ, ಬಹಳ ಸ್ವಲ್ಪ ಜನರು ಕಷ್ಟಕ್ಕೆ ಗುರಿಯಾದರೆಂದೂ ಹೇಳಲಾಗಿದೆ.

ಇನ್ನೊಂದು ಜೆಪ್ಪೆಲಿನ್ ವಿಮಾನ ಯಂತ್ರವು ಇಂಗ್ಲೆಂಡಿನ ಪೂರ್ವ ತೀರದ ಮೇಲೆ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಇದರಿಂದ ಎರಡು ಕಡೆ ಬೆಂಕಿಬಿದ್ದು ಉರಿಯಿದ್ದಿತು. ಪ್ರಜೆಗಳಲ್ಲಿ ಐದು ಮಂದಿ ಕೊಲೆಯಾದರು; ನಾಲ್ವತ್ತು ಜನರಿಗೆ ಗಾಯಗಳಾಗಿವೆ.

ಕಳೆದ ವಾರದಲ್ಲಿ ಜರ್ಮನಿಯ ಸಬ್‌ಮೆರೀನುಗಳ ದೆಸೆಯಿಂದ ಎಂಟು ಬ್ರಿಟಿಷ್ ಜಹಜುಗಳು ಮುಳುಗಿಸಲ್ಪಟ್ಟವು. ಕಳೆದ ವಾರ 1,383 ಹಡಗುಗಳು ಗ್ರೇಟ್ ಬ್ರಿಟನ್ ತೀರಪಟ್ಟಣಗಳಿಗೆ ಬಂದು ಹೋಗಿರುತ್ತವೆ.

ಜರ್ಮನಿಯವರ ವಿಮಾನ ಯಂತ್ರಗಳು ಇಂಗ್ಲೆಂಡಿಗೆ ಬಂದು ದರೋಡೆ ಕೃತ್ಯ ಗಳನ್ನು ನಡಿಸುತ್ತಿರುವುದನ್ನೂ, ಜರ್ಮನಿಯವರು ಲೂಸಿಟೇನಿಯಾ ಜಹಜನ್ನು ಮುಳುಗಿಸಿದ್ದನ್ನೂ ನೋಡಿ ಬ್ರಿಟಿಷ್ ಪ್ರಜೆಗಳು ಆಗ್ರಹಪಟ್ಟು ಲಂಡನ್, ಲಿವರ್‌ಪೂಲ್ ಮೊದಲಾದ ಪಟ್ಟಣಗಳಲ್ಲಿ ದೊಂಬಿಮಾಡಿ ಅಲ್ಲಲ್ಲಿರುವ ಜರ್ಮನಿ ಪ್ರಜೆಗಳ ಮೇಲೆ ದಾಂಧಲೆಗಳನ್ನು ನಡಿಸಿದರು. ಇಂಗ್ಲೆಂಡಿನಲ್ಲಿರುವ ಅನೇಕ ಜರ್ಮನರು ಜರ್ಮನಿ ಸರ್ಕಾರದವರ ಕೃತ್ಯವನ್ನು ಖಂಡನೆಮಾಡಿ ಅವರು ನಿರಪರಾಧಿಗಳಾದ ಪ್ರಜೆಗಳನ್ನು ಕೊಲ್ಲುವುದು ಯೋಗ್ಯವಲ್ಲವೆಂದು ಹೇಳಿದಾರೆ.

ಯುದ್ಧ ಸಾಮಗ್ರಿಗಳನ್ನೂ ಸೈನಿಕರಿಗೆ ಬೇಕಾಗುವ ಪದಾರ್ಥಗಳನ್ನೂ ಒದಗಿಸುವುದರ ಜವಾಬ್ದಾರಿಯನ್ನು ಮಿ|| ಲ್ಲಾಯಡ್ ಜಾರ್ಜ್‌ರವರು ವಹಿಸಿ ಕೊಂಡಿದಾರೆ. ಕಳೆದ ವಾರ ಇವರು ಒಂದೆರಡು ಕಡೆ ಭಾಷಣಮಾಡುತ್ತಾ ಹೇಳಿ ದ್ದೇನೆಂದರೆ—ಜನಗಳು ಯುದ್ಧಕ್ಕೆ ಹೋಗಲು ಹೇರಳವಾಗಿ ತಾವಾಗಿಯೇ ಬರುತ್ತಿದಾರೆ; ಆದರೆ ಇವರಿಗೆಲ್ಲಾ ಯುದ್ಧದ ಇಲಾಖೆಯವರು ಮದ್ದು ಗುಂಡು ಮೊದಲಾದವುಗಳನ್ನು ಒದಗಿಸಿಕೊಡುವುದು ಕಷ್ಟವಾಗಿದೆ. ಬೇಕಾಗುವಷ್ಟು ಮದ್ದು ಗುಂಡು ಒದಗುತ್ತಾ ಇಲ್ಲ. ಕಾರ್ಖಾನೆಗಳಲ್ಲಿ ನಿಂತು ಮದ್ದುಗುಂಡು ಗಳನ್ನು ಸಿದ್ಧಮಾಡಿಕೊಡುವಂಥಾ ಜನಗಳೂ ಕೂಡ ಯುದ್ಧದಲ್ಲಿ ಜಯವಾಗು ವುದಕ್ಕೆ ಸಹಾಯ ಮಾಡತಕ್ಕವರಾಗಿದಾರೆನ್ನುವುದಕ್ಕೆ ಸಂಶಯವಿಲ್ಲ. ಜರ್ಮನಿ ಯವರು ಅಪಾರವಾದ ಮದ್ದು ಗುಂಡನ್ನು ತಂದು ರಷ್ಯಾದವರ ಮೇಲೆ ನಿಲು ಗಡೆಯಿಲ್ಲದೆ ಸುರಿಸಿದ್ದರಿಂದಲೇ ಅವರಿಗೆ ಅಲ್ಲಿ ಜಯವಾಯಿತು. ಈ ಯುದ್ಧ ವು ಬೇಗನೆ ಮುಕ್ತಾಯವಾಗಬೇಕಾದರೆ ನಮ್ಮ ಪಕ್ಷದ ಸೈನ್ಯಗಳಿಗೆ ಅಪಾರವಾದ ಮದ್ದು ಗುಂಡು ಜಾಗ್ರತೆಯಾಗಿ ಒದಗುತ್ತಾ ಬರಬೇಕು ಎಂದು ಹೇಳಿರುತ್ತಾರೆ. ಈಚೆಗೆ ನಮ್ಮ ಪಕ್ಷದ ಸೈನ್ಯಕ್ಕೆ ಬೇಕಾಗುವ ಮದ್ದುಗುಂಡುಗಳು ಹೆಚ್ಚು ಹೆಚ್ಚಾಗಿ ಕಾರ್ಖಾನೆಗಳಲ್ಲಿ ತಯಾರಾಗಿ ಒದಗಿಸಲ್ಪಡುತ್ತಿವೆ.

ಒಳದೇಶದ ವೃತ್ತಾಂತಗಳು.

ಅಲೂರು ಸಬ್ ತಾಲ್ಲೂಕಿನಲ್ಲಿ 8,000 ರೂಪಾಯಿ ಖರ್ಚುಮಾಡಿ ಕಂಬತೀರ್ಥ ನದಿಗೆ ಸೇತುವೆ ಕಟ್ಟಿಸಬಹುದೆಂದೂ, ಸೇತುವೆ ಆದ ಮೇಲೆ ಬೈರಾ ಪುರದಲ್ಲೂ, ಕುಂದೂರಿನಲ್ಲೂ ಟೋಲ್ ಗೇಟುಗಳನ್ನು ಇಡಬೇಕೆಂದೂ ಸರ್ಕಾರ ದವರು ಸ್ಯಾಂಕ್ಷನ್ ಮಾಡಿದಾರೆ.

ಕಳೆದ ವಾರ ರಾಜಧಾನಿಯಲ್ಲಿ ಮೋಟರುಗಳಿಂದ ಇಬ್ಬರಿಗೆ ಅಪಾಯ ಸಂಭವಿಸಿತು. ಮ|| ಟಿ. ಎಸ್. ನಂಜಪ್ಪನವರು ಮೋಟರಿನಲ್ಲಿ ಹೋಗುತ್ತಿ ದ್ದಾಗ ಒಬ್ಬ ಹೆಂಗಸು ಬಿದ್ದು ಅವಳ ಕೈ ಗಾಯವಾಯಿತು. ಸಾ|| ಮೊಗಣ್ಣ ನವರ ಮೋಟರಿಗೆ ಸಿಕ್ಕಿ ಒಂದು ಮಗುವಿಗೆ ಜಖಂ ಆಯಿತು

ನಮ್ಮ ದಿವಾನ್‌ರಾದ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಕರಸಿಕೊಂಡು ಅವರಿಗೆ ಬಿರುದು ಬಂದದ್ದರ ನಿಮಿತ್ತ ಒಂದು ಸಂತೋಷಕೂಟವನ್ನು ನಡಿಸ ಬೇಕೆಂದು ರಾಜಧಾನಿಯ ಮಹಾಜನಗಳು ಏರ್ಪಾಡುಮಾಡುತ್ತಿದಾರೆ. ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು ಈ ಕಾರ್ಯಸಂಘಕ್ಕೆ ಅಧ್ಯಕ್ಷ ರಾಗಿರುವರು.

ಈ ತಿಂಗಳು 17, 18, 19 ನೇ ತಾ. ಗಳಲ್ಲಿ ಚಾಮರಾಜನಗರದೊಳಗೆ ಆ ಪ್ರಾಂತ್ಯದ ಕಸಬು ಕೈಗಾರಿಕೆ ವ್ಯವಸಾಯ ಗೋಶಾಲೆಗಳ ಪ್ರದರ್ಶನೋ ತ್ಸವವನ್ನು ನಡಿಸಬೇಕೆಂದು ಅಮಲ್ದಾರ್ ಮ|| ಕೇಶವಾಚಾರ್ರು, ಡಿ|| ಸೂಪ ರೇಂಟ್ ಮ|| ಶ್ರೀ ನರಸಿಂಹಶಾಸ್ತ್ರಿಯವರೂ ಏರ್ಪಾಡು ಮಾಡುತ್ತಿರುವಂತೆ ಪ್ರಕಟವಾಗಿದೆ.

ಕೊಡಗು ಯಡೆನಾಲ್ಕುನಾಡಿನ ಜಮೀನ್‌ದಾರರಾಗಿದ್ದುಕೊಂಡು ವೀರರಾಜ ಪೇಟೆಯಲ್ಲಿ 3,000 ರೂಪಾಯಿ ಮುಟ್ಟಿಸಿ ಒಂದು ದೊಡ್ಡ ಗಡಿಯಾರವನ್ನು ಕಟ್ಟಿಸುವುದೇ ಮೊದಲಾದ ಪ್ರಜೋಪಕಾರಕಾರ್ಯಗಳನ್ನು ಮಾಡುತ್ತಿರುವ ಮ|| ಮುಕತೀರ ಅಯ್ಯಪ್ಪನವರಿಗೆ ಸಾರ್ವಭೌಮ ಸರ್ಕಾರದವರು "ದಿವಾನ್ ಬಹ ದೂರ್" ಎಂಬ ಬಿರುದನ್ನು ದಯಪಾಲಿಸಿದರೆಂದು ತಿಳಿಸಲು ಸಂತೋಷ ಪಡುತ್ತೇವೆ.

ರಾಜಧಾನಿಯ ಟೌನ್ ಹಾಲಿನಲ್ಲಿರುವ ಲೈಬ್ರೆರಿ ಯೂನಿಯನ್ ಎಂಬ ವಾಚಕಮಂದಿರದಲ್ಲಿ ಮೆಂಬರುಗಳು ಚಂದಾ ಹಾಕಿ ಲೇಟ್ ಮ|| ಗೋಖಲೆ ಯವರ ತಸ್ವೀರನ್ನು ಉತ್ಸವಪೂರ್ವಕವಾಗಿ ಕಟ್ಟಿಸಿದರು ಸೆರ್ವನ್ಸ್ ಆಫ್ ಮಿ|| ಪಾಲ್ ಹಂಚಾ ಹುಸ್ಸೇನ್‌ರವರು ಆ ದೇಶಭಕ್ತರ ಮಹತ್ವವನ್ನು ವಿವರಿಸಿ ಉಪನ್ಯಾಸಮಾಡಿದರು. ರಾಜಧಾನಿಯಲ್ಲಿರುವ ಮ|| ಕೇಶವಯ್ಯನವರು ಈ ತಸ್ವೀರನ್ನು ಬಹಳ ಚೆನ್ನಾಗಿ ಬರೆದಿರುತ್ತಾರೆಂದು ಮೆಂಬರುಗಳೆಲ್ಲಾ ನೋಡಿ ಮೆಚ್ಚಿಕೊಂಡರು.

ರಾಜಧಾನಿಯಿಂದ ಹುಣಸೂರು ಕಡೆಗೆ ಹೋಗಿ ಬರುವ ಮೋಟರ್ ಬಿಸ್‌ ಲ್ ಗಾಡಿಯಲ್ಲಿ ದುಡ್ಡಿನಾಸೆಗೆ ಪ್ರಯಾಣಿಕರನ್ನು ಬಹಳ ಹೆಚ್ಚಾಗಿ ತುಂಬಿಸು ತ್ತಾರೆ. ಸಾಲದ್ದಕ್ಕೆ ಅಕ್ಕಪಕ್ಕಗಳಲ್ಲಿರುವ ಫುಟ್ ಬೋರ್ಡುಗಳ ಮೇಲೂ ಪ್ರಯಾಣಿಕರು ಕುಳಿತುಕೊಳ್ಳುವರು ಪೋಲೀಸ್ ಇಲಾಖೆಯವರೂ, ಮ್ಯುನಿಸಿ ಪಾಲಿಟಿಯವರೂ ಆ ಗಾಡಿಯನ್ನು ಅಜಮಾಯಿಸಿ ಮಾಡಿ ಅದರಲ್ಲಿ ಇಷ್ಟು ಜನ ರಿಗಿಂತ ಹೆಚ್ಚಾಗಿ ಕೂರಿಸಕೂಡದೆಂದು ಕಟ್ಟು ಮಾಡಿದ ಪಕ್ಷದಲ್ಲಿ ಅನಾಹುತ ಗಳಿಗೆ ಅವಕಾಶ ತಪ್ಪುವುದು.

ಚಾಮರಾಜನಗರದಲ್ಲಿ ಬ್ಯಾಂಕ್ ಏಜಂಟರಾದ ಮ|| ರಾಮಣ್ಣನವರು ಸುಖವಾಗಿದ್ದರೂ ಅವರು ಕಾಲವಾದರೆಂದು ಮುಂತಾಗಿ ನಂಜೆದೇವನಪುರದ ನಂಜಪ್ಪನೆಂಬ ಬಾತ್ಮಿದಾರನು ಬರೆದು ನಮ್ಮನ್ನು ಮೋಸಪಡಿಸಿ ನಾವು ಆ ಬಾ ತ್ಮಿಯನ್ನು ಪ್ರಕಟಿಸುವಂತೆ ಮಾಡಿದ್ದಕ್ಕಾಗಿ ನಾವು ತುಂಬಾ ವಿಷಾದಿಸಿ, ಮ|| ರಾಮಣ್ಣನವರ ಕ್ಷಮಾಪಣೆಯನ್ನು ಬೇಡುವೆವು. ಪ್ರಜೆಗಳಲ್ಲಿ ಸಹೋದರ ಪ್ರೀತಿ ಯೂ, ಸತ್ಯವಂತಿಕೆಯೂ, ಧರ್ಮಬುದ್ಧಿಯೂ ನೆಲೆಗೊಳ್ಳುವ ತನಕ ಪರಸ್ಪರ ನಂಬಿಕೆಯು ಹುಟ್ಟುವುದಿಲ್ಲ.

ರಾಜಧಾನಿಯ ಕೋಟೆಯಲ್ಲಿ ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಕಮಾಂಡಾಂಟರಾಗಿ ಯುದ್ಧ ಭೂಮಿಗೆ ಹೋಗಿರುವ ಮ|| ಚಾಮರಾಜ ಅರಸಿ ನವರ ಕುಮಾರ್ತೆಯನ್ನು ಲೇಟ್ ಬಾಳೆಅರಸಿನವರ ಕುಮಾರರಿಗೆ ಕೊಟ್ಟು ದಳ ವಾಯರ ಮನೆಯಲ್ಲಿ ಕಳೆದ ವಾರ ವಿವಾಹೋತ್ಸವವು ಜರಿಯಿತು. ಉತ್ಸವಾ ದಿಗಳೆಲ್ಲಾ ಶೋಭಾಯಮಾನವಾಗಿಯೂ ಅಟ್ಟಹಾಸದಿಂದಲೂ ನಡೆದವು.— ಸರ್ದಾರ್ ಗೋಪಾಲಕೃಷ್ಣೆ ಅರಸಿನವರ ಕುಮಾರ್ತೆಯ ವಿವಾಹವು ಅರಮನೆ ಯಲ್ಲಿ ಜರಗಿಸಲಾಯಿತಷ್ಟೆ ಅವರು ಸ್ವಗೃಹದಲ್ಲಿ ನೂತನ ವಧೂವರರ ಆರತ ಕ್ಷತೆಯನ್ನು ಬೆಳಸಿ ರಾಜಧಾನಿಯ ದೊಡ್ಡ ಮನುಷ್ಯರನ್ನು ಕರಸಿಕೊಂಡು ಸತ್ಕಾರಮಾಡಿದರು.—ಮಂಡಿ ಮೊಹಲ್ಲಾ ಮ್ಯುನಿಸಿಪಲ್ ಕೌನ್ಸಿಲರ್ ಮ|| ಮಾದಪ್ಪನವರು ತಮ್ಮ ಸಹೋದರರ ಕುಮಾರನಿಗೆ ವಿವಾಹಮಾಡಿ ವಿಶೇಷ ಅಟ್ಟ ಹಾಸದಿಂದ ಉತ್ಸವಗಳನ್ನು ನಡಿಸಿದರು. ಅರಸುಗಳೂ, ಅಧಿಕಾರಿಗಳೂ, ಎಲ್ಲಾ ಪಂಗಡಗಳ ದೊಡ್ಡ ಮನುಷ್ಯರೂ ಕರಸಲ್ಪಟ್ಟು, ಸಂಗೀತ ಹರಿಕಥೆ ಮುಂತಾದ ವುಗಳಿಂದ ಎಲ್ಲರನ್ನೂ ಸತ್ಕಾರಮಾಡಿದರು.—ಅವರು ವಿವಾಹವಾದ ಸಂತೋಷ ಕ್ಕಾಗಿ ಬಡಬಗ್ಗರಿಗೆ ಅನ್ನದಾನಾದಿಗಳನ್ನು ಮಾಡಿದರು. ಇದೇ ರೀತಿ ಜವಳಿ ಸಾಹುಕಾರ್ ಮ|| ಆರ್. ರಂಗಯ್ಯನವರ ಮನೆಯಲ್ಲೂ ವಿವಾಹದ ಉತ್ಸವ ಕಾರ್ಯಗಳು ವಿಜೃಂಭಣೆಯಾಗಿ ನಡಿಸಲ್ಪಟ್ಟವು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಮೇ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	,,	25,000
,, (3) ಡಿಪಾಜಿಟ್ಟುಗಳು	,,	29,17,820
,, (4) ಇತರೆ	,,	63,362
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,06,181
ದೇಣಿ:—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ		ರೂ. 5,72,266
,, (2) ಖಾತೆ ಮತ್ತು ಇತರ ಸಾಲಗಳು	,,	25,81,206
,, (3) ಡಿಸ್ಕೌಂಟುಮಾಡಿದ ಬಾಯಿದೆಹುಂಡಿಗಳು	,,	4,34,906
,, (4) ಇನ್ವೆಸ್ಟ್‌ಮೆಂಟುಗಳು	,,	3,67,277
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	1,15,420
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	16,205
,, (7) ಇತರೆ	,,	18,822
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,06,181

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಒಂದು ರೀಡಿಂಗ್ ರೂಮಿನ ಪ್ರಾರಂಭೋತ್ಸವ.

ಗೋರಿಬಿದನೂರು ತಾಲ್ಲೂಕು ದಾಸಿನಾಯ್ಕನ ಪಾಳ್ಯದಲ್ಲಿ ಹೊಸದಾಗಿ ರೀಡಿಂಗ್ ರೂಮ್ ಸ್ಥಾಪನೆ ಮಾಡಬೇಕೆಂದು ನಮ್ಮ ತಾಲ್ಲೂಕು ಅಮಲ್ದಾರ್ ಸ್ವಾಮಿಯವರು ಅಪ್ಪಣೆ ಕೊಡಿಸಿದ ಪ್ರಕಾರ ಅವರ ಅಧ್ಯಕ್ಷತೆಯಲ್ಲಿಯೇ ಸ್ಥಾಪನೆ ಕೆಲಸವನ್ನು ನೆರವೇರಿಸಬೇಕೆಂದು ಗ್ರಾಮಸ್ಥರೆಲ್ಲರೂ ಎದುರು ನೋಡುತ್ತ ಇದ್ದರು. ಆದರೆ ಸರ್ಕಾರಿ ಕೆಲಸಗಳ ತೊಂದರೆಯಿಂದ ಅಮಲ್ದಾರರು ಇಲ್ಲಿಗೆ ದಯಮಾಡಿಸಲು ಅನುಕೂಲವಾಗಲಿಲ್ಲ. ಅಷ್ಟರಲ್ಲೇ ವಿದ್ಯಾ ಇಲಾಖೆಯ ಅ॥ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಆರ್. ಅಳ್ವಾರಯ್ಯಂಗಾರ್ರು ದಯಮಾಡಿಸಿದ್ದ ಕಾಲದಲ್ಲಿ ಗರ್ಲ್ಸ್ ಸ್ಕೂಲ್ ಮಂದಿರದಲ್ಲಿ ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದ ಕಟ್ಟಡದಲ್ಲಿ ಸಭಿಕರೆಲ್ಲರೂ ಸೇರಿ ಸಭಿಕರ ಪ್ರಾರ್ಥನೆ ಪ್ರಕಾರ ಸದರಿ ಇನ್ಸ್‌ಪೆಕ್ಟರು ನಮ್ಮ ಅಮಲ್ದಾರರವರ ಪ್ರತಿನಿಧಿಯಾಗಿ ಅಗ್ರಾಸನವನ್ನು ವಹಿಸಿ ವಿದ್ಯಾಭ್ಯಾಸ, ಜನಗಳ ಏಕಮತ್ಯ, ಈಗ ನಡೆಯುತ್ತಿರುವ ನೈಟ್ ಸ್ಕೂಲು ಮುಂತಾದ ವಿಷಯಗಳನ್ನು ಕುರಿತು ರಸಭರಿತವಾದ ವಾಕ್ಯಗಳಿಂದ ಕೂಡಿ ಇಂಪಾಗಿರುವ ಉಪನ್ಯಾಸವನ್ನು ಮಾಡಿದರು. ಇದನ್ನು ಕೇಳಿ ಸಭಿಕರೆಲ್ಲರೂ ಆನಂದ ಪರವಶರಾದರು. ನಂತರ ನಮ್ಮ ಇಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೂ, ನಮ್ಮ ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಗಂಧ ಪುಷ್ಪ ತಾಂಬೂಲಾದಿಗಳಿಂದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು. ಅಮಲ್ದಾರ್ರವರು ಪೂರ್ಣ ಅಂಗೀಕರಿಸಿಟ್ಟು ಈ ವಾಚನಾಲಯಕ್ಕೆ ಸರ್ಕಾರಿ ಗೆಜೆಟ್ ಪತ್ರಿಕೆಗಳು ವಗೈರೆ ಕಳುಹಿಸಿಕೊಟ್ಟು ಪ್ರೋತ್ಸಾಹ ಪಡಿಸಬೇಕಾಗಿಯೂ, ಈ ವಾಚನಾಲಯವು ಯಾವದೊಂದು ತೊಂದರೆಯೂ ಉಂಟಾಗದಂತೆ ನಮ್ಮ ಗ್ರಾಮದ ಪಟೇಲ್, ಶ್ಯಾನುಭೋಗರೂ ಗ್ರಾಮಸ್ಥರೂ ಸಹಾ ಐಕಮತ್ಯದಿಂದ ಶಾಶ್ವತವಾಗಿ ನಡಿಸಿಕೊಂಡು ಬರಬೇಕೆಂದೂ ಪ್ರಾರ್ಥಿಸುತ್ತೇನೆ.

ಗ್ರಾಮವಾಸಿ

ಹೊಸ ಸ್ಕೂಲ್ ಪ್ರವೇಶೋತ್ಸವವು.

ಟಿ. ನರಸೀಪುರದ ತಾಲ್ಲೂಕು ಮೂಗೂರಿನಲ್ಲಿರುವ ಬಾಯ್ಸ್ ಸ್ಕೂಲಿಗೆ ಗೌರ್ನಮೆಂಟಿನವರಿಂದ ಒಂದು ಹೊಸ ಸ್ಕೂಲ್ ಕಟ್ಟಡವು ಸ್ಯಾಂಕ್ಷನ್ ಆಗಿ ಕಟ್ಟಡದ ಕೆಲಸವು ಪೂರೈಸಿದ್ದರಿಂದ ಕಳೆದ ಮೇ ತಿಂಗಳು 31 ನೇ ತಾ. ಸೋಮವಾರ ಸದರಿ ಸ್ಕೂಲಿನ ಪ್ರವೇಶೋತ್ಸವವು ಏರ್ಪಟ್ಟು ಸ್ಕೂಲ್ ಬಾಲಕ ಬಾಲಕಿಯರನ್ನು ಮತ್ತು ಗ್ರಾಮ ಮುಖಂಡರನ್ನು ಬಾಜಾ ಬಜಂತ್ರಿಯೊಡನೆ ಮೆರವಣಿಗೆ ಮಾಡಿಕೊಂಡು ಚಿತ್ರ ಪಟಗಳಿಂದಲೂ ಕದಳಿ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟ ಹೊಸ ಸ್ಕೂಲಿನಲ್ಲಿ ಸರ್ವರೂ ಸೇರಿ ಸಂಗೀತ, ಉಪನ್ಯಾಸಗಳು ಮುಗಿದ ಮೇಲೆ ಈ ಸ್ಕೂಲ್ ಹೆಡ್ ಮಾಸ್ಟರವರು ಸ್ಕೂಲ್ ಅಭಿವೃದ್ಧಿ ರಿಪೋರ್ಟನ್ನು ಓದಿದರು. ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ, ಈಗ ಸಂಭವಿಸಿರುವ ಯುದ್ಧವು ಬೇಗನೆ ಮುಗಿದು ಬ್ರಿಟಿಷ್ ಸಾಮ್ರಾಜ್ಯವು ಅಚಂದ್ರಾರ್ಕವಾಗಿರಲೆಂದು ಪ್ರಾರ್ಥನೆಯಾದ ನಂತರ ಇಲ್ಲಿನ ಹೋಬಳಿ ಶೇಕದಾರ್ ಮ॥ ನಾಗಪ್ಪನವರು ವಿದ್ಯಾಭಿವೃದ್ಧಿ ವಿಷಯದಲ್ಲಿಯೂ ಮಕ್ಕಳನ್ನು ಪ್ರತಿಯೊಬ್ಬರೂ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಿಕೊಳ್ಳಬೇಕೆಂಬಲೂ ನೆರೆದಿದ್ದ ಗ್ರಾಮಸ್ಥರಿಗೆ ತಿಳಿಸಿದ ವಿಷಯವು ಸ್ತೋತ್ರಾರ್ಹವಾಗಿತ್ತು. ಅನಂತರ ಮಂಗಳವಾಗಿ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ, ಬಾಲಕ ಬಾಲಕಿಯರುಗಳಿಗೆ ತಿಂಡಿಯೂ ಹಂಚಲ್ಪಟ್ಟು ಸಭೆಯು ಬರಖಾಸ್ತು ಆಯಿತು. ಸ್ಕೂಲ್ ಮಾಸ್ಟರುಗಳು ಏಕೀಭವಿಸಿ ಮುಖ್ಯವರ್ಗಯಿಂದ ಕೆಲಸಮಾಡುತ್ತಾ, ಜನಗಳಿಗೆ ವಿದ್ಯಾಭ್ಯಾಸ ವಿಷಯದಲ್ಲಿ ಪ್ರೋತ್ಸಾಹಮಾಡುವುದರಿಂದ ಸ್ಕೂಲಿಗೆ 84 ಮಂದಿ ಬಾಲಕರ ವರಿಗೂ ಜಮಾಯಿಸಿರುತ್ತಾರೆ. ಇಷ್ಟು ಬಾಲಕರುಗಳಿಗೆ ಇಬ್ಬರು ಮಾಸ್ಟರು ಪಾಠ ನಡಿಸುವುದು ಕಷ್ಟವಾದದ್ದರಿಂದ ಇಲಾಖಾ ಮೊಖ್ತೇಸರರು ಜಾಗ್ರತೆಯಾಗಿ ಇನ್ನೊಬ್ಬ ಮಾಸ್ಟರನ್ನು ನೇಮಿಸಿದರೆ ಈ ಸ್ಕೂಲು ತುಂಬಾ ಅಭಿವೃದ್ಧಿಗೆ ಬರಲು ಏನೂ ಸಂದೇಹವಿಲ್ಲ.

ಪ್ರತ್ಯಕ್ಷದರ್ಶಿ.

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಮಗಳೂರು ಮ್ಯುನಿಸಿಪಲ್ ಸರಹದ್ದಿನಲ್ಲಿ ಮಕ್ಕಳಿಗೆ ಬಲಾತ್ಕಾರದ ವಿದ್ಯೆ ಕೊಡುವ ಕಾನೂನು 1916 ನೇ ಜುಲೈ ಲಾಗಾಯ್ತು ಮೂರು ವರುಷ ಜಾರಿಯಲ್ಲಿರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮ॥ ಕೆ. ಚಾಂಡಿಯವರಿಗೆ ಮೇ ತಾ. 20 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಅ॥ ಕಮೀಷನರ್ ಮ॥ ಎಂ. ಶ್ರೀನಿವಾಸಮೂರ್ತಿಯವರು ಅವರ ಕೆಲಸದ ಭಾರವನ್ನೂ ವಹಿಸತಕ್ಕದ್ದು.

ರೆವಿನ್ಯೂ ಸರ್ವೆ ಸಬ್ ಅ॥ ಸೂಪರಿಂಟೆಂಡೆಂಟ್ ಮ॥ ವೈ. ನಂಜುಂಡಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗಾ ಹೆಂಗಸರ ಆಸ್ಪತ್ರೆಯ ಲೇಡಿ ಮೆಡಿಕಲ್ ಆಫೀಸರ್ ಮಿಸ್ ಅಯ್ಯಾಟಮ್ಮಾಳ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ವರುಷಗಳ ರಜಾ ಕೊಟ್ಟಿದೆ.

ಚಿಕ್ಕಮಗಳೂರು ಆಸ್ಪತ್ರೆಯ ಅ॥ ಸರ್ಜನ್ ಮ॥ ಟಿ. ಬಾಲಕೃಷ್ಣ ಮೊದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮುಜರಾಯಿ ಸೂಪರಿಂಟೆಂಡೆಂಟ್ ಮ॥ ಜಿ. ಅಜುನಾಮುದು ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಕಮೀಷನರ್ ಮ॥ ಸಿ. ರಂಗನಾಥರಾವ್ ಸಾಹೆಬ್ ಯವರನ್ನು ಕಳೆದ ಜನವರಿ ತಾ 24 ರಿಂದ 3 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ಎಕ್ಸೈಸ್ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಿದೆ—(1) ಮ॥ ಡಿ. ಶ್ರೀನಿವಾಸಯ್ಯಂಗಾರ್ರು ಎಕ್ಸೈಸ್ ಕಮೀಷನರವರ ಆಫೀಸಿಗೆ, (2) ಮ॥ ವೈ. ವಿ. ಕೃಷ್ಣಮೂರ್ತಿಯವರು ಹಾಸನಕ್ಕೆ, (3) ಮ॥ ಬಿ. ಶಾಮಣ್ಣನವರು ಮೈಸೂರಿಗೆ.

ಪ್ರೊ॥ ಅ॥ ಕಮೀಷನರ್ ಮ॥ ಪಿ. ಗೋವಿಂದರಾಜೆ ಅರಸಿನವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಆರ್. ಎಸ್. ನರಸಿಂಹರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ನೀರಾವರಿ ಡಿವಿಜನ್ ಅ॥ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಎಸ್. ಎ. ರಾಮಸ್ವಾಮಿ ಅಯ್ಯರವರು ಅವರ ಕೆಲಸದ ಭಾರವನ್ನೂ ವಹಿಸತಕ್ಕದ್ದು.

ಸಿಡಿಲು ಹೊಡೆದ ಅಪಾಯಗಳು.

ಒಬ್ಬನು ಕಾಲವಾದದ್ದು.

ಮಾಗಡಿ ತಾಲ್ಲೂಕು ಮಾಡಬಾಳು ಸಮ್ಮತು ಚಿಟ್ಟನಹಳ್ಳಿ ಗ್ರಾಮದ ಯಜಮಾನ ಜಾತಿ ತೋಟಿ ತಿಮ್ಮನೆಂಬವನೂ, ಖಾದರ್ ಸಾಬಿಯೂ ಸಹಾ ಕಳೆದ ತಿಂಗಳ ತಾ 30 ನೇ ಭಾನುವಾರ ಆಡುಗಳನ್ನು ಮೇಯಿಸುವುದಕ್ಕೆ ಕಾಡಿಗೆ ಹೋಗಿದ್ದರು. ಸಾಯಂಕಾಲ 5½ ಘಂಟೆ ವೇಳೆಯಲ್ಲಿ ಮಿಂಚು ಸಿಡಿಲುಗಳ ಅತ್ಯಾರ್ಭಟದಿಂದ ಮಳೆ ಬಂದಿತು. ಆಗ ತಿಮ್ಮನೂ ಖಾದರ್ ಸಾಬಿಯೂ ಸಹಾ ಓಡಿಹೋಗಿ ಒಂದು ದೊಡ್ಡ ಬೂರುಗದ ಮರದ ಕೆಳಗೆ ನಿಂತುಕೊಂಡಿದ್ದರು. ಆಗ ಸಿಡಿಲು ಹೊಡೆಯಿತು. ಅದು ಇವರಿಗೆ ತಗಲಿ ತಿಮ್ಮನು ಕೂಡಲೇ ಸತ್ತು ಬಿದ್ದನು. ಖಾದರ್ ಸಾಬಿಯು ಪ್ರಜ್ಞೆ ತಪ್ಪಿ ಬಿದ್ದುಕೊಂಡು ಒದ್ದಾಡುತ್ತಾ ಇದ್ದನು. ಕೊಂಚ ಹೊತ್ತಿನ ಮೇಲೆ ಆ ಮಾರ್ಗವಾಗಿ ಬರುತ್ತಾ ಇದ್ದ ಮಾಯಗನೆಂಬುವನು ಕಂಡು ಖಾದರ್ ಸಾಬಿಯನ್ನು ಎತ್ತಿ ಉಪಚರಿಸುತ್ತಿದ್ದನು. ಅಕ್ಕಮ್ಮನೆಂಬ ಹೆಂಗಸು ಆರ್ತಸ್ವರದಿಂದ ಬೊಬ್ಬೆಮಾಡಿದಳು. ಅನೇಕ ಜನಗಳು ಬಂದು ನೋಡಿ ಬಹು ವ್ಯಸನಪಟ್ಟರು. ಆ ಬೂರುಗ ಮರದ ಎರಡು ರೆಂಬೆಗಳಿಗೂ ಸಿಡಿಲು ಹೊಡೆದಿವೆ. ಸತ್ತುಹೋದ ತಿಮ್ಮನಿಗೆ ತಲೆಯಿಂದ ಕಾಲಿನ ವರೆಗೂ ಹಿಂಭಾಗ ಅಲ್ಲಲ್ಲಿ ಸುಟ್ಟುಹೋಗಿತ್ತು. ಖಾದರ್ ಸಾಬಿ ಎಂಬವನಿಗೆ ಮೈ ಮೇಲೆ ಕೆಲವು ಸುಟ್ಟ ಗಾಯಗಳಂತೆ ಬೊಬ್ಬೆಗಳಾಗಿವೆ. ಇವನಿಗೆ ಮಾಗಡಿಯಿಂದ ಆಸ್ಪತ್ರೆ ಡಾಕ್ಟರವರು ಬಂದು ಔಷಧೋಪಚಾರ ನಡೆಯುತ್ತ ಇದೆ. ಪ್ರಾಣಾಪಾಯವಿಲ್ಲ. ಸತ್ತುಹೋದ ತಿಮ್ಮನಿಗೆ 30 ವಯಸ್ಸು. ಸಣ್ಣ ವಯಸ್ಸಿನ ಮಗನೂ ಹೆಂಡತಿಯೂ ಇದ್ದಾಳೆ. ಇದೇ ದಿನ ಇಲ್ಲಿಗೆ ಸಮೀಪ ಚಾಲಮಂಗಲ ಗ್ರಾಮದಲ್ಲಿ ಸಿಡಿಲು ಬಡಿದು ಎಂಟು ಮೇಕೆಗಳು ಸತ್ತುಹೋದುವು. ಕೆಲವು ದಿನಗಳ ಹಿಂದೆ ಸಮೀಪ ಬಾಳೇನಹಳ್ಳಿ ಗ್ರಾಮದಲ್ಲಿ ಸಿಡಿಲು ಬಡಿದು ಒಬ್ಬ ರೈತನ ಮೂರು ಎತ್ತುಗಳು ಸತ್ತುಹೋದುವು. ಇಷ್ಟು ಸಮೀಪದಲ್ಲಿಯೇ ಈ ತಿಂಗಳಲ್ಲಿ ಸಿಡಿಲು ಬಡಿದು ಈ ರೀತಿ ಅನಾಹುತಗಳು ನಡೆದಿರುತ್ತವೆ.

ಕೆ. ಆರ್.

7 ಜನರೂ 30 ಕುರಿ ಆಡುಗಳೂ ಸತ್ತದ್ದು.

ಕೃಷ್ಣರಾಜಪೇಟೆ ಸಬ್ ತಾಲ್ಲೂಕು ಕಿಕ್ಕೇರಿ ಹೋಬಳಿ ಕ್ಯಾಸಾಪುರ ಗ್ರಾಮಕ್ಕೆ ಸುಮಾರು ಒಂದು ಫರ್ಲಾಂಗು ದೂರದಲ್ಲಿ ನಡೆದ ಅನಾಹುತವೇನೆಂದರೆ —ಇದೇ ತಿಂಗಳು 4 ತಾರೀಖು ಶುಕ್ರವಾರ ಸಾಯಂಕಾಲ ಸುಮಾರು 4-5 ಗಂಟೆ ಸಮಯದಲ್ಲಿ ಆ ಗ್ರಾಮದ ಜನರು ಕುರಿ ಆಡುಗಳನ್ನು ಮೇಯಿಸಿಕೊಂಡು ದಾರಿಯಲ್ಲಿ ಬರುತ್ತಾ ಇರುವಲ್ಲಿ ವಿಪರೀತವಾದ ಗಾಳಿ ಮಳೆ ಹುಟ್ಟಿ ಬಹಳ ಜೋರಾಗಿ ಬಂದದ್ದರಿಂದ ಅವರು ಒಂದು ಫರ್ಲಾಂಗು ದೂರದಲ್ಲಿರುವ ಕ್ಯಾಸಾಪುರ ಗ್ರಾಮಕ್ಕೆ ಸೇರಲು ಅವಕಾಶವಾಗದೆ ಒಂದು ಮರದ ಕೆಳಗೆ 12 ಜನ ಗಂಡಸರೂ ಒಬ್ಬ ಹೆಂಗಸೂ, 30-40 ಆಡು ಕುರಿಗಳನ್ನು ನಿಲ್ಲಿಸಿಕೊಂಡು ಆ ಮರದ ಕೆಳಗೆ ನಿಂತಿದ್ದರು. ಆ ಸಮಯದಲ್ಲಿ ಜೋರಾಗಿ ಗುಡುಗು ಉಂಟಾಗಿ ಸಿಡಿಲು ಬಂದು ಮೇಲ್ಕಂಡ ಜನಗಳದ್ದ ಮರದ ಮೇಲೆ ಮಹಾ ರಭಸದಿಂದ ಬಿದ್ದಿತು. ಕೂಡಲೆ 7 ಜನರ ಪೈಕಿ 5 ಜನ ಗಂಡಸರು 2 ಹೆಂಗಸರು 30 ಆಡು ಕುರಿ ಸಹಾ ಒಬ್ಬರ ಮೇಲೆ ಒಬ್ಬರು ಬಿದ್ದು ಪ್ರಾಣಬಿಟ್ಟರು. 30 ಆಡುಮರಿ ಸಹಾ ಸತ್ತುಹೋದವು. ನಂತರ ಸಾಯಂಕಾಲವಾಗುತ್ತಾ ಮಳೆ ನಿಂತ ಮೇಲೆ ಗ್ರಾಮದ ಇತರ ಜನರು ಇನ್ನೊಂದು ಮರದ ಕೆಳಗೆ ನಿಂತಿದ್ದವರು ಬಂದು ಊರಿಗೆ ಸೇರಿದರು. ಈ ಸಮಾಚಾರ ಊರಿಲ್ಲಾ ಹರಡಿ ಎಲ್ಲರೂ ಹೋಗಿ ಆ ಸ್ಥಳದಲ್ಲಿ ನೋಡಲಾಗಿ ಒಬ್ಬ ಹೆಂಗಸು ಮಾತ್ರ ಮರದ ಪೊಟ್ಟರೆಯೊಳಗೆ ಅವಿತುಕೊಂಡಿದ್ದಳು. ಅವಳನ್ನು ಆಚೆಗೆ ಎಳೆದುಹಾಕಿದರು. ಇವಳಿಗೆ ಪ್ರಾಣಾಪಾಯವೇನೂ ಆಗಲಿಲ್ಲ. ಬೆಳಗ್ಗೆ ಕೃಷ್ಣರಾಜಪೇಟೆ ತಾಲ್ಲೂಕು ಕಚೇರಿಗೆ ರಿಪೋರ್ಟು ಬಂದಿತು. ತಕ್ಷಣ ಅಮಲ್ದಾರ್ರವರು ಪೋಲೀಸು ಇನ್ಸ್‌ಪೆಕ್ಟರವರು ವಗೈರೆ ಅಧಿಕಾರಿಗಳು ಹೋಗಿ ಆ ಸ್ಥಳವನ್ನು ನೋಡಿ ಅಜಮಾಯಿಷಿಯಿಂದ ನಿಜಸ್ಥಿತಿಯನ್ನು ತಿಳಿದುಕೊಂಡು ಲಾಷ್ ಮಹಜರುಮಾಡಿ ಶವಗಳನ್ನು ದಫನ್ ಮಾಡಲು ಅಪ್ಪಣೆ ಕೊಟ್ಟು ಹೊರಟು ಬಂದರು. ಈ ಅನಾಹುತ ನಡೆದ ಸ್ಥಳವನ್ನು ನೋಡಲು ತುಂಬಾ ವ್ಯಸನವಾಗುತ್ತದೆ.

ಪ್ರಜಾರಂಜಕ

ಹಾಸನ್ ಡಿಸ್ಟ್ರಿಕ್ಟ್ ಉಪಾಧ್ಯಾಯರ ಎರಡನೇ ಸಂಘ.

ಈ ಸಭೆಯು ಕಳೆದ ವರ್ಷ ಮೇ. 22-23 ನೇ ತಾರೀಖುಗಳಲ್ಲಿ ನಡೆದುದೂ ಇದರ ವರದಿಯನ್ನೆಲ್ಲಾ ಇದೇ ಪತ್ರಿಕೆಯ ಮೂಲಕ ಪ್ರಕಟೀಕರಿಸಿದುದೂ ನಮ್ಮ ವಾಚಕರ ಜ್ಞಾಪಕದಲ್ಲಿರಬಹುದು. ಈ ವರ್ಷವೂ ಕೂಡ ಅದೇ ಪ್ರಕಾರ ಕಳೆದ ಮೇ ತಾ. 26-27 ನೇ ಶುಕ್ರವಾರ ಮತ್ತು ಶನಿವಾರಗಳಲ್ಲಿ ಈ ಹಾಸನ ನಗರದಲ್ಲಿ ನಡೆಯಿತು. ನಮ್ಮ ಸೀಮೆಯ ಸಂಪದಭ್ಯುದಯ ಸಮಾಜದ ಈ ಹಾಸನ ಡಿಸ್ಟ್ರಿಕ್ಟ್ ಶಾಖೆಯ ವಿದ್ಯಾಭ್ಯಾಸ ಕಮಿಟಿಯವರೂ ಈ ಸಭಾ ಕಾರ್ಯ ನಿರ್ವಹಣಕ್ಕಾಗಿ ನೇಮಿಸಿದ್ದ ಉಪಸಭೆಯವರೂ ಪೂರ್ವ ಭಾವಿಯೇ ಈ ಮಹಾ ಸಭೆಯ ಅನುಕೂಲತೆಗೋಸ್ಕರ ಅಗತ್ಯವಾಗಿದ್ದ ಏರ್ಪಾಡುಗಳನ್ನೆಲ್ಲಾ ಕ್ರಮಗೊಳಿಸಿದ್ದರು. ಆಯಾ ಮತಪದ್ಧತಿಗನುಸಾರವಾಗಿ ಪ್ರತ್ಯೇಕ ಪ್ರತ್ಯೇಕ ಸ್ಥಳಗಳಲ್ಲಿ ಊಟ ಉಪಚಾರಗಳಿಗೆ ತೃಪ್ತಿಕರವಾದ ಏರ್ಪಾಡಾಗಿದ್ದಿತು. ಇದಕ್ಕಾಗಿ ಮ॥ ವಿ. ಎಸ್. ರಾಜಗೋಪಾಲಾಚಾರ್ಯರು ಬಹಳವಾಗಿ ಪ್ರಯಾಸಪಟ್ಟಿರುತ್ತಾರೆ.

ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಕನ್ನಡ ಹಿಂದುಸ್ತಾನಿ ಪ್ರೈಮರೀ ಶಾಲೆಗಳ ಉಪಾಧ್ಯಾಯೋಪಾಧ್ಯಾಯಿನಿಯರು ವಿಶಿಷ್ಟರೂ ಕರೆಸಲ್ಪಟ್ಟಿದ್ದರು. ಇವರು ಸುಮಾರು 240 ಮಂದಿ ಇದ್ದರೆಂದು ತಿಳಿದು ಬಂದಿದೆ. ಈ ವರ್ಷ ಪ್ರದರ್ಶನ ವಸ್ತುಗಳು ಕಳೆದ ವರ್ಷಕ್ಕಿಂತಲೂ ಹೆಚ್ಚಾಗಿದ್ದವು.

ಸುಸಂಭ್ರಮವಾಗಿ ಕೂಡಿ ಬಂದ ಉಪಾಧ್ಯಾಯರೆಲ್ಲರೂ ಮೇ ತಾ. 26ನೇ ಶುಕ್ರವಾರ ಬೆಳಗ್ಗೆ 8 ಘಂಟೆಗೆ ತಳಿರುತೋರಣಗಳಿಂದ ಅಲಂಕೃತವಾಗಿದ್ದ ವಾಣೀವಿಲಾಸ ಶಾಲೆಯಲ್ಲಿ ಸಭೆ ಸೇರಿದರು. ನಮ್ಮ ಪ್ರಜಾಭಿಮಾನಿಗಳಾದ ಡೆಪ್ಯುಟಿ ಕಮಿಷನರ್ ಮ॥ ಬಿ. ರಾಮಸ್ವಾಮಯ್ಯನವರೂ, ಇತರ ಅಧಿಕಾರಿಗಳೂ, ಪುರಪ್ರಮುಖರೂ ನೆರೆದಿದ್ದರು. ಮ॥ ಬಿ. ರಾಮಸ್ವಾಮಯ್ಯನವರೇ ಅಗ್ರಾಸನಾಧಿಪತ್ಯವನ್ನು ವಹಿಸಿ ಸಭಾ ಕಾರ್ಯವನ್ನು ಪ್ರಾರಂಭಿಸಿ ಉಪಾಧ್ಯಾಯರಿಗೆ ಹಿತೋಕ್ತಿಗಳು ಎಂಬ ಉಪನ್ಯಾಸವನ್ನು ಮಾಡಿದರು. ಈ ಮಹನೀಯರ ಭಾಷಣವು ಉಪಾಧ್ಯಾಯರ ನಡತೆಗೆ ಒಂದು ಮೂಲ ಸೂತ್ರವೋ ಎಂಬಂತೆ ಸರ್ವಶ್ಲಾಘ್ಯವಾಗಿದ್ದಿತು. ತರುವಾಯ ಈ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರಾದ ಡಾ॥ ಆಶೀರ್ವಾದಂಯವರು ಗ್ರಾಮ ಪಾಠಶಾಲೆಗಳಲ್ಲಿಯೂ, ಮನೆಗಳಲ್ಲಿಯೂ ಆರೋಗ್ಯಕ್ಕೆ ಅನುಕೂಲವಾದ ಕಲ್ಪನೆಗಳು, ಮತ್ತು ದೇಹದಾರ್ಢ್ಯಕ್ಕೆ ಅನುಕೂಲವಾದ ಸಲಕರಣೆಗಳೂ ಎಂಬ ವಿಚಾರವನ್ನು ಕುರಿತು ಅನೇಕ ಸಂಗತಿಗಳನ್ನು ಉಪಾಧ್ಯಾಯರಿಗೋಸ್ಕರ ಇಂಗ್ಲಿಷಿನಲ್ಲಿ ಬೋಧಿಸಿದರು. ಇದೇ ಸಂಗತಿಗಳನ್ನೇ ಮ॥ ರುದ್ರಪ್ಪನವರು ಕನ್ನಡ ಭಾಷೆಯಲ್ಲಿ ಸಕಲರಿಗೂ ತಿಳಿಯುವಂತೆ ವಿವರಿಸಿದರು. ಇದಾದ ಮೇಲೆ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಕೆ. ಎನ್. ವೀರಭದ್ರಯ್ಯನವರು ವಸ್ತು ಪ್ರದರ್ಶನದ ರಿಪೋರ್ಟನ್ನು ಇಂಗ್ಲಿಷಿನಲ್ಲಿ ಓದಿದರು. ಇದನ್ನು ಯಾರೂ ಕನ್ನಡಿಸಲಿಲ್ಲ. ಕೂಡಲೇ ಸದಸ್ಯರೆಲ್ಲರೂ ಎದ್ದು ಅಧ್ಯಕ್ಷರನ್ನು ಹಿಂಬಾಲಿಸಿ ನೇತ್ರಾನಂದಕರವಾಗಿ ವಿವಿಧ ವಸ್ತುಗಳಿಂದಲಂಕೃತವಾಗಿದ್ದ ಜೂಬಿಲಿ ಹಾಲ್ ಭವನವನ್ನು ಪ್ರವೇಶಿಸಿ ಅಲ್ಲಿ ಕ್ರಮವಾಗಿ ಅಣಿಗೊಳಿಸಿದ್ದ ವಿಚಿತ್ರ ವಸ್ತುಗಳನ್ನೆಲ್ಲಾ ನೋಡಿಕೊಂಡು ಬಂದರು.

ಅದೇ ಮಧ್ಯಾಹ್ನ 2-30 ಗಂಟೆಗೆ ಸಭಾಮಂದಿರದಲ್ಲಿ ವಿಶಿಷ್ಟರೂ ಸೇರಿದರು. ಪ್ರಾರಂಭದಲ್ಲಿ ಸದರಿ ಶಾಲೆಯ ಹಿರೀಸಾವೆ ಸ್ಕೂಲ್ ಮಾಸ್ಟರ್ ಮ॥ ವೆಂಕಟರಮಣಯ್ಯನವರು ಆನೆ ಮತ್ತು ಇಲಿಗಳು ಎಂಬ ಕಥೆಯನ್ನು ಬಾಲಕರಿಗೆ ಬೋಧಿಸಿದ ಕ್ರಮವು ಶ್ಲಾಘ್ಯವಾಗಿದ್ದಿತು. ಅನಂತರ ಮ॥ ಎಚ್. ವಿ. ರಂಗಸ್ವಾಮಿಯವರು ಹಾಸನ್ ಡಿಸ್ಟ್ರಿಕ್ಟಿನ ಗ್ರಾಮಗಳಲ್ಲಿ ಉಂಟಾಗಬೇಕಾದ ಅಭಿವೃದ್ಧಿ ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಮ॥ ಕೆ. ಎಂ. ಗುರುರಾಜಾಚಾರ್ಯರು ವ್ಯವಸಾಯದ ಇಲಾಖೆಯ ಇನ್ಸ್‌ಪೆಕ್ಟರವರು ವ್ಯವಸಾಯದ ಅಭಿವೃದ್ಧಿಗೂ, ಉಪಾಧ್ಯಾಯರಿಗೂ ಇರುವ ಸಂಬಂಧವನ್ನು ಕುರಿತು ಬಹಳವಾಗಿ ತಿಳಿಸಿದರು.

ಮೇ ತಾ. 27 ನೇ ಶನಿವಾರ ಬೆಳಗ್ಗೆ 8 ಘಂಟೆಗೆ ಮತ್ತೆ ಸಭೆ ಸೇರಿತು. ಡೆಪ್ಯುಟಿ ಇನ್. ಮ॥ ವೀರಭದ್ರಯ್ಯನವರು ಕಳೆದ ಸಂವತ್ಸರದಲ್ಲಿ ನಡೆದ ಉಪಾಧ್ಯಾಯ ಸಂಘದಿಂದ ಉಂಟಾದ ಫಲಿತಾಂಶಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅನಂತರ ಉಪಾಧ್ಯಾಯರ ಪ್ರಶ್ನೋತ್ತರಗಳು ನಡೆದವು. ಇದಾದ ಮೇಲೆ ಮೈಸೂರಿನಿಂದ ಮಿಸ್ ಫಾರ್ಸನ್ಸ್ ರವರು ಇಂಗ್ಲಿಷಿನಲ್ಲಿ ಬರೆದು ಕಳುಹಿಸಿದ್ದ ಪ್ರಬಂಧದ ಕನ್ನಡ ಪರಿವರ್ತನೆಯು ಮಿ॥ ಅರ್ಥರ್ ಯವರಿಂದ ಓದಲ್ಪಟ್ಟಿತು. ಇದು ಗ್ರಾಮ ಪಾಠಶಾಲೆಗಳಲ್ಲಿ ಕಲಿಸಿಕೊಡಬೇಕಾದ ಕಿಂಡರ್‌ಗಾರ್ಟೆನ್ ಪಾಠಗಳನ್ನು ಕುರಿತ ಸರಳವಾದ ಮತ್ತು ಪ್ರಯೋಜನಕರವಾದ ಬೋಧನೆಯಾಗಿದ್ದಿತು.

ಮಧ್ಯಾಹ್ನ 3-30 ಘಂಟೆಗೆ ಪುನಃ ಕಾರ್ಯಾರಂಭವಾಗಿ ಕೊಣನೂರು ಸ್ಕೂಲ್ ಮಾಸ್ಟರ್ ಮ॥ ಶ್ರೀಕಂಠಯ್ಯನವರು ಬಾಲಕರಿಗೆ ವರ್ಗಗಳ ಪರಿಜ್ಞಾನವನ್ನುಂಟುಮಾಡುವ ವಿಧಾನವನ್ನು ಬೋಧಿಸಿ ತೋರಿಸಿದರು. ಅನಂತರ ಸರ್ಕಲ್ ಇನ್ಸ್‌ಪೆಕ್ಟರು ಮ॥ ಎಂ. ಶ್ರೀನಿವಾಸರಾಯರು ನಿರಾಮ ಕಾಲಗಳಲ್ಲಿ ಉಪಾಧ್ಯಾಯರು ಮಾಡಬಹುದಾದ ವಿವಿಧ ಯತ್ನಗಳು ಎಂಬ ವಿಷಯವನ್ನು ಕುರಿತು ದೀರ್ಘವಾದ ಸಕಲರಿಗೂ ಮನಲ್ಪಿಡಿಯುಂತಿರುವ ಸಂಗತಿಗಳನ್ನು ವಿಶದವಾಗಿ ಬೋಧಿಸಿದರು. ಆ ಮೇಲೆ ರಾಮನಾಥಪುರದ ಸ್ಕೂಲ್ ಮಾಸ್ಟರ್ ಮ॥ ಪಂಡಿತ್ ಆರ್. ಕೆ. ಕೃಷ್ಣಪ್ಪನವರು ಉಪಾಧ್ಯಾಯರು ವಿದ್ಯಾರ್ಥಿಗಳಲ್ಲಿ ಸುಗುಣ, ಸನ್ನಡತೆಗಳನ್ನು ಪ್ರಕಾಶಕ್ಕೆ ಬರುವಂತೆ ಮಾಡಬೇಕೆಂದರೆ ಯಾವ ಪ್ರಕಾರ ನಡೆದುಕೊಳ್ಳಬೇಕು ಎಂಬ ವಿಷಯವನ್ನು ಕುರಿತು ಬಹಳ ಸ್ವಾರಸ್ಯವಾದ ಮತ್ತು ಪ್ರಯೋಜನಕರಗಳಾದ ಸಂಗತಿಗಳನ್ನು ವಿವರಿಸಿ ಉಪನ್ಯಾಸ ಮಾಡಿದರು. ಈ ಉಪನ್ಯಾಸಕ್ಕೆ ವಿದ್ಯಾ ಇಲಾಖೆಯಿಂದ ಗೊತ್ತು ಮಾಡಲ್ಪಟ್ಟಿದ್ದ 10 ರೂಪಾಯಿ ಬಹುಮಾನವು ಕೊಡಲ್ಪಟ್ಟಿದೆ.

ಕೊನೆಯಲ್ಲಿ ಅಧ್ಯಕ್ಷರವರು ಈ ಪ್ರಸಿದ್ಧವಾದ ಎರಡನೇ ಉಪಾಧ್ಯಾಯ ಸಂಘದ ಕಾರ್ಯವನ್ನು ಪೂರ್ತಿಗೊಳಿಸಿ, ಈಗ ನಡೆಯುತ್ತಿರುವ ಮಹಾ ಯುದ್ಧದಲ್ಲಿ ಭಗವಂತನು ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಸಂಪೂರ್ಣವಾದ ಜಯವನ್ನೂ, ಶಾಶ್ವತವಾದ ಕೀರ್ತಿಯನ್ನೂ, ಚಿರಕಾಲೋತ್ತರವಾದ ಸಮಾಧಾನವನ್ನೂ ಅನುಗ್ರಹ ಮಾಡುವಂತೆ ಪ್ರಾರ್ಥಿಸುವುದು ಸಭಿಕರೆಲ್ಲರ ಕರ್ತವ್ಯವೆಂದು ಪ್ರಕಟಪಡಿಸಿ ಸಂಘವನ್ನು ಮುಗಿಸಿದರು. ಇದಾದ ಮೇಲೆ ಈ ಉಪಸಂಘದ ಸೆಕ್ರೆಟರಿಯವರು ಅಧ್ಯಕ್ಷರವರಿಗೂ ಇತರ ಸಭಾಕಾರ್ಯ ನಿರ್ವಾಹಕರಿಗೂ ಕೃತಜ್ಞತೆ ವಂದನೋಕ್ತಿಗಳನ್ನು ಹೇಳಿದರು. ಅಂತ್ಯದಲ್ಲಿ ಜಯಧ್ವನಿಯೊಡನೆ ಸಭಾಕಾರ್ಯವು ಮುಕ್ತಾಯವಾಯಿತು.

ಪ್ರೇಕ್ಷಕ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿ ವಿಚಾರ.

ಅಯ್ಯಾ,—300 ಮನೆಗಳಿಗೆ ಮೇಲ್ಪಟ್ಟಿರುವ ಈ ಗ್ರಾಮಕ್ಕೆ ನಾಲ್ಕು ಪ್ರದೇಶಕ್ಕೂ 12 ಮೈಲಿ ದೂರ ರಸ್ತೆ ಇರುವದಿಲ್ಲ. ಭಾರಿ ಭಾರಿ ಬೆಟ್ಟಗಳ ಮಧ್ಯೆ ಇರುತ್ತೆ. ಒಳ್ಳೇ ಪುಷ್ಕಳವಾದ ಅಡಿಕೆ, ತೆಂಗು, ಬಾಳೆ ವಗೈರೆಯಿಂದ ಉನ್ನತವಾದ ಭಾರಿ ಅಗ್ರ ಇರುತ್ತೆ. ಕೆರೆ ಆಸರೆ ಚೆನ್ನಾಗಿದೆ. ಈ ಕಾಡಿನ ಮಧ್ಯೆ ಇರುವ ಈ ಗ್ರಾಮಕ್ಕೆ ಸರ್ಕಾರಿ ಅಧಿಕಾರಿಗಳು ಬರುವುದು ಅಪರೂಪವಾಗಿತ್ತು. ಆದಕಾರಣ ಸುಮಾರು 8-10 ವರ್ಷದ ಲಾಗಾಯ್ತು ಈ ಗ್ರಾಮದಲ್ಲಿ ಖೂನಿಗಳು, ಕಳವುಗಳು, ದೊಂಬಿಗಳು ನಡೆದಿರುತ್ತವೆ. ಸರ್ಕಾರಕ್ಕೆ ಪತ್ತೆಗೆ ಅವಕಾಶವಾಗಲಿಲ್ಲ. ಬದಮಾಷರುಗಳು ಗ್ರಾಮದಲ್ಲಿ ವಾಸಮಾಡುವವರಿಗೆ ಕಷ್ಟ ನಷ್ಟಗಳು ಉಂಟಾಗಿ 8-10 ರೈತರು ಗ್ರಾಮ ಬಿಟ್ಟುಹೋದರು. ಇಲ್ಲಿ ಇದು ವರೆಗೆ ನಡೆದಿರುವ ಅನ್ಯಾಯಗಳನ್ನು ಇಷ್ಟೆಂದು ವರ್ಣಿಸಲಸಾಧ್ಯವಾಗಿರುತ್ತೆ. ಹೀಗಿರುವಲ್ಲಿ ಇದು ವರೆಗೆ 1-2 ಫಿರ್ಯಾದನ್ನು ಕೊಟ್ಟಾಗ್ಯೂ ಸರ್ಕಾರದವರು ಜಾಗ್ರತೆ ತೆಗೆದುಕೊಂಡಿರಲಿಲ್ಲ. ಈಗ ಹಾಲಿ ಕೆಲಸ ನೋಡುವ ಸತ್ಯಪ್ರಭುಗಳಾದ ಘನವನ್ನು ಹೊಂದಿದ ದಯಾಳುಚರಿತರಾದ ತಾಲ್ಲೂಕು ಅಮಲ್ದಾರ್ರವರು ಮತ್ತು ಬದ್ಲಿಯಾಗಿ ಕೆಲಸ ನೋಡುವ ಪೋಲೀಸು ಇನ್ಸ್‌ಪೆಕ್ಟರವರು ಮುಖ್ಯವಾಗಿ ದಯಮಾಡಿಸಿ ಪರಾಂಬರಿಸಿದ್ದರ ಮೇಲೆ ಕೆಲವು ಅನ್ಯಾಯಗಳು ಹೊರಪಟ್ಟು ಅವರ ಚಿತ್ತಕ್ಕೆ ವೇದ್ಯವಾದದ್ದರಿಂದ ಅದಕ್ಕೆ ಅನುಸಾರವಾದ ವಿಧಾನವನ್ನು ಸ್ವಲ್ಪ ಮಟ್ಟಿಗೆ ಜಾರಿಗೆ ತಂದರು. ಇದರಿಂದ ಈಗ ಗ್ರಾಮದಲ್ಲಿ ಯಾವ ಅನಾಹುತಗಳೂ ಇಲ್ಲದೆ ಸಂತೋಷದಿಂದ ಬಡವರೆಲ್ಲಾ ಹೊಗಳುತ್ತಾ

ಇದಾರೆ. ಇನ್ನು ಕೆಲವು ದಿವಸ ಇದೇ ಆಫೀಸರುಗಳೇ ಇದ್ದು ದುಷ್ಟ ಜನಗಳಿಗೆ ಬಂದೋಬಸ್ತು ಮಾಡಿಯಾರು ಎಂದು ಬಹಳವಾಗಿ ಹಾರೈಸುತ್ತಾ ಇದಾರೆ.

ಗುಡ್ಡದಯ್ಯ.

ಹೊಳಲಕೆರೆಯ ನೀರಿನ ವಿಚಾರ.

ಅಯ್ಯ,—ಈ ಊರಿನಲ್ಲಿ ಪಾನಕ್ಕೆ ಸುತರಾಂ ನೀರಿಲ್ಲದೆ ಜನ ಜಾನುವಾರುಗಳಿಗೆ ಉಂಟಾಗಿರುವ ವ್ಯಥೆಯನ್ನು ಹೇಳುವುದು ಕಷ್ಟವಾಗಿದೆ. ಈ ಕಷ್ಟ ನಿವಾರಣೆಗೆ ಪ್ರಜೆಗಳು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಚರ್ಚೆಗೆ ತಂದು ಈ ಊರಿನಲ್ಲಿರುವ ಇನ್ನೊಂದು ಕಲ್ಲಪ್ಪನ ಭಾವಿಗೆ ಇಂಜನ್ ಹಾಕಿಸಿ ಅದರಲ್ಲಿರುವ ಕೊಳಕು ನೀರು ಮತ್ತು ಬಹು ಕಾಲದಿಂದ ಇರುವ ಹೂಳು ಮಣ್ಣನ್ನು ತೆಗಿಸಿ ನಂತರ ಬರುವ ಉತ್ತಮವಾದ ನೀರನ್ನು ಹೊಂದಕ್ಕೆ ಬಿಟ್ಟುಕೊಳ್ಳಬಹುದೆಂದು ಗ್ರಾಮಸ್ಥರಿಂದ ಚಂದಾ ವಸೂಲ್ ಮಾಡಿ ಇಂಜನ್ ವರ್ಸ್ಕಿಗೆ ತರಿಸಬೇಕೆಂತ ಈಗ್ಗೆ 4 ತಿಂಗಳಲ್ಲಿ ತೀರ್ಮಾನ ಮಾಡಿ ಗ್ರಾಮ ನಿವಾಸಿಗಳಿಗೆ ಇಂಜನ್ ತರಿಸುತ್ತೇವೆಂಬ ಸಂತೋಷ ಹುಟ್ಟಿಸಿದರು. ಆದರೆ ಆ ಕಾಲಕ್ಕೆ ಸರಿಯಾಗಿ ಇಂಜನ್ ಬರದೆ ಈಗ ವರ್ಷಾಕಾಲದ ಸಮಯಕ್ಕೆ ಇಂಜನ್ ಕೆಲವು ಸಾಮಾನು ಮಾತ್ರ ಮೊನ್ನೆ ತಾ 29 ರಲ್ಲಿ ಬಂದಿರುತ್ತೆ. ಈ ಸಾಮಾನು ಬರಲು 60 ರೂಪಾಯಿ ರೈಲ್ವೆ ಛಾರ್ಜು ತಗಲಿರುತ್ತೆ. ವಾಗಿನಿಗೆ ಪೂರಾ ಛಾರ್ಜು ಕೊಟ್ಟ ನಂತರ ಭರ್ತಿಯೂ ಪೂರ್ತಿಯಾಗಿಯೇ ಮಾಡಿದ್ದರೆ ರೈತರಿಗೆ ಅನುಕೂಲವಾಗುತ್ತಿತ್ತು. ಈಗ ಬಂದಿರುವ ಇಂಜನ್ ಸಾಮಾನನ್ನು ಎರಡು ಎತ್ತುಗಳು ಎಳೆದುಕೊಂಡು ಬಂದಿರುವದರಿಂದ ಸುಮಾರು ಬಂಗಾಳಿ 30 ಮಣ ಆಗಬಹುದು ಒಂದು ವಾಗೀನು ಭರ್ತಿಯು 160 ಮಣವಾದದ್ದರಿಂದಲೂ, ಇದಕ್ಕೆ ಬೇಕಾದ ಸಾಮಾನುಗಳು ಇನ್ನೂ ಬಹಳ ಇರುವದರಿಂದಲೂ ಎಲ್ಲಾ ಒಂದೇ ವಾಗಿನಿಗೇನೆ ಭರ್ತಿಮಾಡಿದ್ದರೆ ಮುಂದಿನ ಛಾರ್ಜು ಉಳಿಯಬಹುದಾಗಿತ್ತು. ಆ ರೀತಿ ಮಾಡದೆ ತಂಡ ತಂಡವಾಗಿ ಕಳಿಸ್ತ ತೊಳೆದ ಸಾಮಾನುಗಳನ್ನು ರವಾನಿಸುತ್ತಾ ಮುಂದೆ ಇನ್ನೂ ಕಾಲ ಕಳೆಯುವಂತೆ ತೋರುತ್ತೆ. ಸರ್ಕಾರದವರು ಪ್ರಜಾಪರಿಪಾಲನೆ ವಿಚಾರದಲ್ಲಿ ಸಂಪೂರ್ಣ ಅನುಗ್ರಹವಿಟ್ಟು ತಡದೆ ನೀರಿಗೆ ಸೌಕರ್ಯ ಮಾಡುತ್ತಾರೆಂತ ನಂಬಿದೇವೆ. ಈ ಇಂಜನ್ನಿಂದ ನೀರಿನ ಸಹಾಯ ಆಗುವುದಕ್ಕೆ ಮುಂಚೆ ಮಳೆ ಸುರಿದು ಭಾವಿ ಕೆರೆಗಳಿಗೆ ಸಾಕಾದಷ್ಟು ನೀರು ಬಂದು ಇಂಜನ್ ಕೆಲಸ ಅನಾವಶ್ಯಕವಾದ ಪಕ್ಷದಲ್ಲಿ ಈಗ ಆಗಿರುವ ಖರ್ಚಿಗೆ ಈ ಪುರನಿವಾಸಿಗಳು ಗುರಿಯಾಗದಂತೆ ಮಾಡಲು ನಮ್ಮ ಸರ್ಕಾರದಲ್ಲಿ ವಿಜ್ಞಾಪನೆ ಮಾಡಿಕೊಳ್ಳಲು ಮ್ಯುನಿಸಿಪಲ್ ಮೆಂಬರುಗಳು ತಕ್ಕ ಪ್ರಯತ್ನ ಮಾಡುತ್ತಾರೆಂತ ನಂಬಿದೇವೆ.

ಜನೋಪಕಾರಿ.

ಜಮೀನು ದರಖಾಸ್ತು ವಿಚಾರ.

ಅಯ್ಯಾ, ಮಂಡ್ಯದ ತಾಲ್ಲೂಕು ಕಸಬಾ ಹೋಬಳಿ ಹೊಸೂರು ಎಂಬ ಗ್ರಾಮಕ್ಕೆ ಕೆರೆಯಾಗಲೀ, ತರಿ ಜಮೀನಾಗಲೀ ಇರುವುದಿಲ್ಲ. ಖುಷ್ಕಿ ಜಮೀನು ಮಾತ್ರ ಇರುತ್ತೆ. ಇದೂ ಕೂಡ ಫಲವತ್ತಾದ ಜಮೀನಲ್ಲ. ಈ ಗ್ರಾಮದಲ್ಲಿ 500-600 ಪ್ರಜಾ ಸಂಖ್ಯೆಯು ಇರುತ್ತೆ. 2-3 ಸಾವಿರ ಜಾನುವಾರು ಇರುತ್ತೆ. ಈ ಪ್ರಜಾ ಸಂಖ್ಯೆ ಎಲ್ಲಾ ಕೃಷಿಯಿಂದ ಜೀವನ ಮಾಡಬೇಕೇ ಹೊರತು ಕೈಗಾರಿಕೆಯಿಂದ ಜೀವನ ಮಾಡತಕ್ಕವರು ಈ ಗ್ರಾಮದಲ್ಲಿ ಒಬ್ಬರೂ ಇರುವುದಿಲ್ಲ. ಕೆಲವು ಜನ ರೈತರಿಗೆ ಮಾತ್ರ ಜೀವನಕ್ಕೆ ಸಾಕಾಗುವಷ್ಟು ಜಮೀನಿದ್ದು, ಮುಕ್ಕಾಲುವಾಸಿ ಜನ ರೈತರಿಗೆ ಸಾಕಾಗುವಷ್ಟು ಜಮೀನಿಲ್ಲದೆ ಹೊಟ್ಟೆಗೆ ಬಹಳ ಕುಗ್ರಾಮವಾಗಿ ಹಗಲೂ ರಾತ್ರಿ ಅಲೆಯುತ್ತ, ಕಷ್ಟವನ್ನು ತಡೆಯಲಾರದೆ ಈ ಗ್ರಾಮದ ಬಂಚರಿನಲ್ಲಿ ಸಾಗುವಳಿಗೆ ಜಮೀನನ್ನು ಕೊಡಿಸಿಕೊಡಬೇಕೆಂದು ಈಗ್ಗೆ 3-4 ವರ್ಷಗಳಲ್ಲಿ ತಾಲ್ಲೂಕಿಗೆ ದರಖಾಸ್ತು ಬರೆದುಕೊಂಡಿದ್ದ ಮೇಲೆ ನಮ್ಮ ತಾಲ್ಲೂಕಿನವರು ಬಂದು ಜಮೀನು ಅಜಮಾಯಿಷಿ ಮಾಡಿ ಗ್ರಾಮಸ್ಥರ ಮಹಜರು, ಸ್ಕೆಚ್ ವಗೈರೆ ರಿಕಾರ್ಡುಗಳನ್ನು ಮಾಡಿಕೊಂಡು ಹೋದರು. ಆ ಬಾಗಾಯ್ತು ನಿರೀಕ್ಷಣೆ ಮಾಡಿದಾಗ್ಯೂ ಜಮೀನು ಸಾಗುವಳಿಗೆ ಅಪ್ಪಣೆಯಾಗಲಿಲ್ಲ. ಈ ವಿಷಯವನ್ನು ಕುರಿತು ರೆವಿನ್ಯೂ ಕಮಿಷನರ್ ರವರಿಗೂ, ಡೆಪ್ಯುಟಿ ಕಮಿಷನರವರಿಗೂ, ಅಸಿಸ್ಟೆಂಟ್ ಕಮಿಷನರವರಿಗೂ ಅನೇಕ ಅರ್ಜಿಗಳನ್ನು ಬರೆದುಕೊಂಡಾಗ್ಯೂ ಜಮೀನು ಸಾಗುವಳಿಗೆ ದೊರೆಯಲಿಲ್ಲ. ನಮ್ಮನ್ನಾಳುವ ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರೂ, ಮಂತ್ರಿವರ್ಯರೂ ರೈತರ ಪುರೋಭಿವೃದ್ಧಿಗಾಗಿ ಅನೇಕ ಹೊಸ ಏರ್ಪಾಟುಗಳನ್ನು ಮಾಡುತ್ತಿದ್ದಾಗ್ಯೂ ಅವರ ಪ್ರಯತ್ನವು ಸಫಲವಾಗದಂತೆ ಈ ರೀತಿಯಾಗಿ ಉದಾಸೀನ ಮಾಡುತ್ತಾರೆ. ಜಮೀನು ಸಾಗುವಳಿ ಮಾಡಬೇಕೆಂಬ ಅಭಿಲಾಷೆಯಿಂದ ರೈತರು ಬರೆದುಕೊಂಡ ದರಖಾಸ್ತುಗಳು 3-4 ವರ್ಷಗಳಾದಾಗ್ಯೂ ಫೈಸಲಾಗದೆ ಹೋದರೆ ಕೃಷಿಯೇ ಮುಖ್ಯ ಜೀವನವಾಗಿಟ್ಟುಕೊಂಡಿರುವ ರೈತರುಗಳು ಜೀವನ ಮಾಡುವುದು ಹೇಗೆ? ಈ ವಿಷಯದಲ್ಲಿ ದಯವುಳ್ಳ ಸರ್ಕಾರದವರು ತಕ್ಕ ನಿಗಾ ಇಟ್ಟು ರೈತರ ದರಖಾಸ್ತುಗಳು ಬೇಗಬೇಗನೆ ಫೈಸಲಾಗುವಂತೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತಾರೆಂದು ನಂಬಿ ನಿರೀಕ್ಷಿಸುತ್ತೇನೆ.

ರೈತಾಭಿಮಾನಿ

ಪೈಸಾ ಫಂಡಿನ ಕಮಿಟಿ —ಜವಾಬು.

ಅಯ್ಯಾ,—ತಮ್ಮ ತಾ 23 ನೇ ಪತ್ರಿಕೆಯಲ್ಲಿ ನಾಡಿಗ ದತ್ತಾತ್ರೇಯರಾವ, ಹರಿಹರ; ಎಮ್ ಮಂಜಪ್ಪ ಹರ್ದೇಕರ, ಎಡಿಟರ, ಧನುರ್ಧಾರಿ; ಎಚ್. ನಾರಾಯಣಶರ್ಮಾ, ಎಮ್ ಕೆ ರಾಘವೇಂದ್ರರಾವ ಈ ನಾಲ್ಕರಿಂದ ಸಹಿಮಾಡಿದ ಒಂದು ಲೇಖವನ್ನು ನಾನು ಓದಿದೇನೆ. ಮತ್ತು ಬಹಳ ಆಶ್ಚರ್ಯವು ಆಗುತ್ತದೆ. ಯಾಕೆಂದರೆ ನಾನು ಮೈಸೂರಿನಲ್ಲಿ ಮೊದಲು ಪೈಸಾ ಫಂಡ್ ಕಮಿಟಿ ವಿಷಯವಾಗಿ ರಂಗಾಚಾರ್ ಮೆಮೋರಿಯಲ್ ಹಾಲಿನಲ್ಲಿ ಮ|| ವೆಂಕಟಕೃಷ್ಣಯ್ಯನವರ ಅಗ್ರಾಸನದಲ್ಲಿ ಲೆಕ್ಚರ ಕೊಟ್ಟು ಇದರ ಕಮಿಟಿ ಮೈಸೂರಲ್ಲಿ ಇರಬೇಕೆಂದು ಮ|| ಗಳಾದ ಎಮ್. ಎಲ್. ವರ್ಧಮಾನಯ್ಯನವರು, ಎ ವಿ. ವರದಾಚಾರ್ಯರು, ಟಿ ಎಲ್. ಉಪಾಧ್ಯಾಯರು ಮೊದಲಾದ ಗೃಹಸ್ಥರು ಕೂಡಿ ನಿರ್ಣಯಿಸಿ, ರಾವ್ ಬಹದೂರ ಮ|| ಎಮ್. ಸಿ. ರಂಗಯ್ಯಂಗಾರ್ರವರ ಸಲಹೆ ಕೇಳಿದೆವು. ಅವರು ಅಪ್ಪಣೆಕೊಡಿಸಿದ್ದು —ಸದ್ಯಕ್ಕೆ ನೀವು ಮಾಡಿದ ಕೆಲಸವು ಉತ್ತಮವು. ಆದರೆ ನೀವು ಎಲ್ಲಿ ಇರುವಿರೋ ಆ ಪ್ರದೇಶದಲ್ಲಿ ನಿಮ್ಮಿಂದ ಆದಷ್ಟು ಕೆಲಸವು ಅನ್ಯರಿಂದ ಆಗಲಿಕ್ಕಿಲ್ಲ. ಕಾರಣ ಕೆಲವು ದಿವಸ ಹೆಡ್ಡಾಫೀಸು ನಿಮ್ಮ ಸೂಪರವೀಜನಲ್ಲಿ ಇರಲಿ ಎಂದರು. ಅದರಂತೆ ಮೈಸೂರ ಮಟ್ಟಿಗೆ ಕೆಲಸ ಜರುಗಿಸುವುದಕ್ಕೆ ಟಿ. ಎಲ್. ಉಪಾಧ್ಯಾಯರಿಗೂ, ಎ. ವಿ ವರದಾಚಾರ್ಯರಿಗೂ, ಶ್ರೀಮಂತ ವರ್ಧಮಾನಯ್ಯನವರಿಗೂ ಹೇಳಿ ನಾನು ಪುನಹ ಕೊಡಗನೂರಿಗೆ ಬಂದೆ. ಕೊಡಗನೂರು ತೀರ ಹಳ್ಳಿ ಆದದ್ದರಿಂದ ಇದರ ಆಫೀಸು ದೊಡ್ಡ ಸ್ಥಳದಲ್ಲಿ ಇರಬೇಕೆಂದು ಯೋಚಿಸಿ ದಾವಣಗೆರೆಗೆ ಕಳೆದ ಏಪ್ರಿಲ್ ತಾ. 12 ನೇ ದಿವಸ ಹೋಗಿ ಸದರಿ ಮೇಲಿನ ನಾಲ್ಕು ಸದ್ಗೃಹಸ್ಥರನ್ನು ನೋಡಿದೆನು. ಕೂಡಲೆ ಅವರು ಧನುರ್ಧಾರಿ ಆಫೀಸಿನಲ್ಲಿ ಸಭೆ ಏರ್ಪಾಟು ಮಾಡಿ ದಾವಣಗೆರೆಯ ಆಫೀಸು ಇರಬೇಕೆಂದೂ, ಕಮಿಟಿಯನ್ನು ಊರ್ಜಿತಕ್ಕೆ ತರುವದಕ್ಕೆ ತಮ್ಮಲ್ಲಿಯೇ ಅನೇಕರು ಲೆಕ್ಚರರು ಆಗಬೇಕೆಂತಲೂ ನಿರ್ಣಯಿಸಿ ಸ್ವದಸ್ತೂರ ಲೇಖನವನ್ನು ಬರೆದಿದಾರೆ. ರಾಘವೇಂದ್ರರಾವ ಇವರು ಮೈಸೂರಿಗೆ ಹೋಗಿ ಟಿ. ಎಲ್. ಉಪಾಧ್ಯಾಯರನ್ನೂ, ಶ್ರೀಮಂತ ವರ್ಧಮಾನಯ್ಯನವರನ್ನೂ ಕಂಡು ಆಫೀಸು ದಾವಣಗೆರೆಯಲ್ಲಿ ಇರುವದಕ್ಕೆ ಏನೂ ಅಭ್ಯಂತರವಿಲ್ಲ ಎಂಬುವದಕ್ಕೆ ಕೇಳಲಿಕ್ಕೆ ಹೋಗಿ ಅವರಲ್ಲಿ ಅಲ್ಲಿ ಪರ್ಯಾಲೋಚಿಸಿ ನನಗೆ ಪತ್ರ ಹಾಕಿದಾರೆ. ಮತ್ತು ನಾಡಿಗ ದತ್ತಾತ್ರೇಯರಾವ ಇವರು ಕಮಿಟಿ ಪ್ರಾಸ್ಪೆಕ್ಟಸಿನ ನಕಲು ಮಾಡಿ ಎಲ್ಲರ ಸಮ್ಮತಿ ಪಡೆದು ತಾನು ಅದಕ್ಕೆ ಸೆಕ್ರೆಟರಿಯಾಗಿಯೂ, ನಾರಾಯಣಶರ್ಮಾ ಇವರು ಜಾಯಿಂಟ್ ಸೆಕ್ರೆಟರಿಯಾಗಿಯೂ, ಎಮ್. ಕೆ. ರಾಘವೇಂದ್ರರಾವ ಇವರು ವೈಸ್ ಪ್ರೆಸಿಡೆಂಟರಾಗಿಯೂ, ನಾನು ಪ್ರೆಸಿಡೆಂಟನಾಗಿಯೂ ಇರಬೇಕೆಂದು ಲೇಖನ ಮಾಡಿ ಬೆಂಗಳೂರಿಗೆ ಹೋಗಿ ಪ್ರಿಂಟು ಮಾಡುವದಕ್ಕೆ ನವರತ್ನಾ ಅಂಡ್ ಕೊ ನಲ್ಲಿ ಒಂದು ರೂಪಾಯಿ ಅಡ್ವಾನ್ಸು ಕೊಟ್ಟಿದಾರೆ. ಮುಂದೆ ಯಾವದೋ ಕಾರಣದಿಂದ ತಮ್ಮ ತಮ್ಮಲ್ಲಿಯೇ ಒಡಕು ಹುಟ್ಟಿದ್ದರಿಂದ ಅದನ್ನು ಮೋಕೂಫು ಮಾಡಿ ತಿರಿಗಿ ದಾವಣಗೆರೆಗೆ ಬಂದು ಕಳೆದ ಮೇ ತಾ. 19 ರಲ್ಲಿ ತಮ್ಮ ಪತ್ರಿಕೆಯಲ್ಲಿ "ಪೈಸಾ ಫಂಡ ಕಮಿಟಿ ನೇಮಕವಾದ ಸಮಾಚಾರವೇ ನಮಗೆ ತಿಳಿಯದು" ಎಂದು ಬಾಯಿಬಡುಕತನವನ್ನು ಮಾಡಿದ್ದು ನೋಡಿ ಬಹಳ ಆಶ್ಚರ್ಯವೂ, ವಿಷಾದವೂ ಆಗುತ್ತದೆ. ತಮಗೂ ಮತ್ತು ಸ್ವಾರ ಪತ್ರಿಕಾಕಾರರಿಗೂ ಮೊದಲು ಕೊಟ್ಟ ಬಾತಮಿದಾರನ ಬಾತಮಿಯು ಸತ್ಯವಾಗಿದೆ. ಮತ್ತು ಕರ್ನಾಟಕ ದೇಶಬಾಂಧವರು ಮೇಲಿನ ನಾಲ್ಕು ಜನ ಸಭ್ಯ ಗೃಹಸ್ಥರ ವಿಜ್ಞಾಪನೆಗೆ ಗಮನಕೊಡದೆ ದೇಶ ಕಾರ್ಯದ ಕಡೆಗೆ ತುಂಬಾ ಶ್ರದ್ಧೆ ಉಳ್ಳವರಾಗಿ ಪೈಸಾ ಕಮಿಟಿಯನ್ನು ಊರ್ಜಿತಕ್ಕೆ ತರುವರೆಂದು ನಂಬಿರುತ್ತೇನೆ. ಮತ್ತು ನಮ್ಮ ಕಮಿಟಿಯ ಏಜಂಟರು, ಬುಕ್ಕ ಸೆಲ್ಲರ ಇವರೆಲ್ಲರಿಗೆ ಎಚ್ಚರಪಡಿಸುವದೇನೆಂದರೆ—ಇನ್ನು ಮುಂದೆ ಕಮಿಟಿಯ ವಿಷಯವಾದ ಯಾವ ರಿಪೋರ್ಟುಗಳು ಮತ್ತು ಹಣದ ವಿಷಯವಾದ ಬಾಬುಗಳು, ಕರೆಸ್ಪಾಂಡೆನ್ಸುಗಳು ಮೇಲೆ ನಮೂದಿಸಿದವರ ಹೆಸರಿಗೆ ಮಾಡಕೂಡದು. ಮುಂದೆ ಅವರು ತಮ್ಮ ಕಳಂಕ ತೊಳೆಯುವದಕ್ಕೆ ಏನಾದರೂ ಬರೆಯಬಹುದು. ಅವು ಕೇವಲ ನಿರಾಧಾರಗಳಾಗಿವೆ.

ಜಯರಾಮಾಚಾರ್ಯ, ಕೊಪ್ಪರ.

ಎಚ್ ಎಂ. ಎಸ್., ಉತ್ತೇನಹಳ್ಳಿ ; ವಿದ್ಯಾಸಕ್ತ ಛಾತ್ರ, ಹರಿಯಬ್ಬೆ ; ದೇಶಪಾಂಡೆ ಕೆ. ಮಧ್ವರಾವ್, ಮೈಸೂರು ; ಗುಡದಯ್ಯ, ತಿಮ್ಮನಹಳ್ಳಿ ; ವಿದ್ಯಾಭಿಮಾನಿ, ಮೊಳಕಾಲ್ಮೂರು ; ತಾಲ್ಲೂಕ್ ಆಫೀಸ್, ಹುಣಸೂರು ; ಸರ್ವಜನ ಹಿತಚಿಂತಕ, ಕೋಣಂದೂರು ; ಲೋಕಾಭಿಮಾನಿ, ಮಾಕನಹಳ್ಳಿ :—ಈ ಬಾತ್ಮಿಗಳನ್ನು ಪ್ರಕಟಿಸಲು ಅವಕಾಶವಾಗಲಿಲ್ಲವೆಂದು ವಿಷಾದಿಸುತ್ತೇವೆ.—ಎಡಿ]

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗ.—ತಾ. 3 ನೇ ಗುರುವಾರ ರಾತ್ರಿ ಒಂದು ಹದ ಮಳೆ ಬಂತು. ಇಲ್ಲಿನ ಟ್ರೆಜರಿ ಅ|| ಕೆ|| ಪಹಿರುದ್ದೀನ್ ಮೆಕ್ಕೆ ಯವರಿಗೆ ಸಾಗರಕ್ಕೆ ವರ್ಗವಾಯಿತು. ಮ|| ಗೋಪಾಲಾಚಾರ್ಯರವರಿಗೆ ಛಾರ್ಜು ಕೊಟ್ಟರು.—ಈ ಊರಿಗೆ ಉತ್ತರಾದಿ ಶ್ರೀ ಸ್ವಾಮಿಗಳವರು ಬರುವವರಾಗಿದಾರೆ. ಶಿವಮೊಗ್ಗ ನಾರ್ಮಲ್ ಸ್ಕೂಲು ತಾ 31 ನೇ ಸೋಮವಾರದಿಂದ ಪ್ರಾರಂಭ ವಾಯಿತು.—ಅನೇಕ ನಲ್ಲಿಗಳಲ್ಲಿ ನೀರು ಇಲ್ಲ. ಬ್ರಾಹ್ಮಣರ ಕೇರಿ ಕಡೆಯೋಡಿ ರಾಮರಾಯರ ಮನೆ ಹತ್ತಿರ ಇರುವ ನಲ್ಲಿಗೆ ನೀರು ಬಿಡದ್ದರಿಂದ ಆಸ್‌ಪಾಸ್ ಜನಗಳಿಗೆ ಬಹಳ ತೊಂದರೆಯಾಗಿದೆ. ಲಗ್ನಕಾಲವಾದ್ದರಿಂದ ಅನೇಕ ಕಡೆಗಳಲ್ಲಿ ಚಪ್ಪರ ವಗೈರೆ ಹಾಕಿ ಆಯಾ ಮನೆಯವರು ಉಲ್ಲಾಸದೊಡನೆ ಮೆರವಣಿಗೆ ಮೊದಲಾದದ್ದನ್ನು ಮಾಡಿದರು.—ಗರ್ಲ್ಸ್ ಸ್ಕೂಲು ಮೊದಲು ರಾಮರಾಯರ ಮನೆಯಲ್ಲಿತ್ತು. ಕಾರಣಾಂತರದಿಂದ ಎ ವಿ ಸ್ಕೂಲಿಗೆ ವರ್ಗಾಯಿಸಿದ್ದರು. ಈಗ ಪುನಹ ಅವರ ಮನೆಯನ್ನೇ ಬಾಡಿಗೆ ಗೊತ್ತುಮಾಡಿ ಸ್ಕೂಲ್ ಮಾಡುತ್ತಾ ಇರುವುದರಿಂದ ಹತ್ತಿರುವ ಮಕ್ಕಳಿಗೆ ಉತ್ತಮವಾಯಿತು.—ಡೆಪ್ಯುಟಿ ಕಮಿಷನರ್ ಸಾಹೇಬರವರು ಹೊತ್ತಿಗೆ ಸರಿಯಾಗಿ ಕಚೇರಿಗೆ ಬಂದು ಆಫೀಸ್ ಮಾಡುತ್ತಿರುವುದು ಬಹಳ ಜನಗಳಿಗೆ ಸಂತೋಷವನ್ನುಂಟುಮಾಡಿದೆ.—ವಾಡಿಕೆಯ ಅನುಸರಿಸಿ ಈ ಊರ ಹತ್ತಿರದಲ್ಲಿರುವ ಕಿಲ ಗೆರೆಯಲ್ಲಿ ರಥೋತ್ಸವವು 2 ನೇ ತಾ. ನಡಿಸಲ್ಪಟ್ಟಿತು. ಅಮಲ್ದಾರರೇ ಆದಿಯಾಗಿ ಎಲ್ಲಾ ನೌಕರರೂ ಮುತುವರ್ಜಿಯಿಂದ ಕೆಲಸ ಮಾಡಿದರು. ಮಳೆ ಬಾಧೆ ಏನು ಆಗದೆ ಜನರಿಗೆ ಸೌಖ್ಯ ಉಂಟಾದ್ದಕ್ಕೋಸ್ಕರ ಸಂತೋಷಪಡುತ್ತೇವೆ.

ಕೋಲಾರ.—ತಾ. 1 ನೇ ಮಂಗಳವಾರ ಬೆಳಗಿನ ಜಾವ ಗ್ರಾಮದಿಂದ ಈ ಊರಿನ ಮುನ್ಸಿಫ್ ಕೋರ್ಟಿನಲ್ಲಿ ವ್ಯಾಜ್ಯದ ಸಲುವಾಗಿ ಬಂದಿದ್ದ ನಿಕ್ಕಾನು ಭೋಗನು ಈ ಊರಿನ ಹೋಟಲಿನಲ್ಲಿ ಊಟಮಾಡಿಕೊಂಡು ಕೋರ್ಟಿನ ಬಳಿಗೆ ಬಂದು, ದಾಹವಾಗುತ್ತೆಂದು ಹೇಳಿ ಯಾರಲ್ಲಿಯೋ ನೀರು ತೆಗೆದುಕೊಂಡು ಕುಡಿದು ತಲೆ ಸುತ್ತುತ್ತದೆಂದು ಹೇಳಿ ಅಲ್ಲಿಯೇ ಮಲಗಿ ಅಕಸ್ಮಾತ್ ಪ್ರಾಣಬಿಟ್ಟನು. ಈತನು ಬ್ರಾಹ್ಮಣನಾದ್ದರಿಂದ ಅದೇ ಸಾಯಂಕಾಲ ಈ ಊರಿನಲ್ಲಿಯೇ ದಹನಮಾಡಿಬಿಟ್ಟರು. ಈತನ ಅಣ್ಣನು ಸಂಗಡಲೇ ಇದ್ದನು. ಪೋಲೀಸಿನವರು ತಕ್ಕಷ್ಟು ವಿಚಾರಣೆಮಾಡಿ ದಹನಕ್ಕೆ ಅಪ್ಪಣೆಕೊಟ್ಟರು. ಸಾಧಾರಣವಾಗಿ ಅಕಸ್ಮಾತ್ ಮರಣಗಳನ್ನು ಪೋಸ್ಟ್ ಮಾರ್ಟೆಮ್ ಮೂಲಕ ಪರೀಕ್ಷಿಸಿ ದಹನ ಯಾ ದಫನ್‌ಗೆ ಅಪ್ಪಣೆಕೊಡುವದು ಪದ್ಧತಿ. ಆದರೆ ಈ ಶವವನ್ನು ಆ ರೀತಿ ಪರೀಕ್ಷಿಸಿದಂತೆ ಕಾಣುವದಿಲ್ಲ. ಕಾರಣವು ಸರ್ಕಾರಿ ಕಚೇರಿ ಮುಂದೆ ಹಾಡೆ ಹಗಲಿನಲ್ಲಿ ಆದ ಅಕಸ್ಮಾತ್ ಮರಣವಾದ್ದರಿಂದ ಪೋಸ್ಟ್ ಮಾರ್ಟೆಮ್ ಅವಶ್ಯವಿಲ್ಲವೆಂದು ಕಂಡುಬಂತೋ ಏನೋ ತಿಳಿಯದು.—ಈ ಊರಿನ ಸುತ್ತುಮುತ್ತು ಕನ್ನಡ ವಿಶೇಷ ಮಳೆಗಳಾಗುತ್ತಾ ಇದ್ದರೂ ಈ ಊರಿನಲ್ಲಿ ವಿಶೇಷ ಮಳೆಗಳು ಬೀಳಲಿಲ್ಲ.—ರೈಲ್ವೆ ಕೆಲಸ ಶ್ರೀನಿವಾಸಪುರದ ಕಡೆಗೆ ಕರಾಕುರಿಯಿಂದ ನಡಿಸಲ್ಪಡುತ್ತಾ ಇದೆ.—ಈ ಊರಿನಲ್ಲಿ ಸುತ್ತುಮುತ್ತು ತೋಟಗಳಲ್ಲಿಯೂ ಗದ್ದೆಗಳಲ್ಲಿಯೂ ಅನೇಕರು ಬೇಸಾಯಕ್ಕಾಗಿ ಭಾವಿಗಳನ್ನು ಅಗಿಸುತ್ತಾ ಇದಾರೆ. ಮಳೆಗಳು ವಿಶೇಷ ಬೀಳದೆ ಇರುವದು ಈ ಭಾವಿಗಳನ್ನು ತೆಗಿಸುವವರಿಗೆ ಅನುಕೂಲವಾಯ್ತು.—ಈ ಊರಿನಲ್ಲಿ ಪ್ಲೇಗಿನ ಹಾವಳಿ ಇಲ್ಲ, ಆದರೆ ದೊಡ್ಡಮ್ಮ ನೆಂಬ ಸಿಡುಬು ಅಲ್ಲಲ್ಲಿ ಕಲಿಮೋರಿದೆ.

ತುಮಕೂರು.—ಈ ವರಿಗೂ ಬಿಸಿಲಿನ ತಾಪ ತಪ್ಪಲಿಲ್ಲ. ಶನಿವಾರ ರಾತ್ರಿ ಸ್ವಲ್ಪ ಮಳೆ ಸುರಿಯಿತು. ಆದರೆ ಕೋಟೆಯಲ್ಲಿ ಒಂದು ಮದುವೆ ಮನೆ ಮಹಡಿಯ ಮೇಲೆ ಮಲಗಿದ್ದ ಮೂರು ಮಂದಿಗೆ ಸಿಡಿಲು ಬಡಿದು ಒಬ್ಬನು ಮೃತಪಟ್ಟನು; ಇನ್ನಿಬ್ಬರು ಆಯಾಸಹೊಂದಿ ಆಸ್ಪತ್ರೆ ಚಿಕಿತ್ಸೆಯಲ್ಲಿದಾರೆ.—ಇಲ್ಲಿನ ಟ್ರೆಜರಿ ಅ|| ಕಮಿಷನರ್ ಮ|| ನರಸಿಂಗರಾವ್ ಪೂರ್ಣಯ್ಯನವರು ವರ್ಗವಾಗಿ ಕೋಲಾರಕ್ಕೆ ದಯಮಾಡಿಸಿದರು. ಇವರು ಕೆಲಸವನ್ನು ಖಂಡಿತವಾಗಿ ಬಹು ಮುತುವರ್ಜಿಯಿಂದ ಮಾಡುತ್ತಿದ್ದರು. ಆದ್ದರಿಂದ ಇವರ ವಿಷಯದಲ್ಲಿ ಅಧಿಕಾರಿಗಳೂ ಪ್ರಜೆಗಳೂ ತುಂಬಾ ಗೌರವವನ್ನೂ ಪ್ರೀತಿಯನ್ನೂ ಇಟ್ಟುಕೊಂಡಿದಾರೆ. ಇವರ ಬದ್ಲಿಗೆ ಬಂದಿರುವ ಮ|| ಮೃತ್ಯುಂಜಯ ಅಯ್ಯರವರು ಅದೇ ರೀತಿ ನಿರ್ದಾಕ್ಷಿಣ್ಯವಾಗಿ ಕೆಲಸಮಾಡಿ ಒಳ್ಳೇ ಹೆಸರನ್ನು ಹೊಂದಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.—ತಾಲ್ಲೂಕ್ ಅಮಲ್ದಾರ್ ಮ|| ಶ್ರೀನಿವಾಸಯ್ಯಂಗಾರ್ರವರು ವರ್ಗವಾಗಿ ಹೋದದ್ದರಿಂದ ಅವರ ಸ್ಥಾನಕ್ಕೆ ಬೆಯಾಳುಗಳೂ ನಿಧಾನಸ್ಥರೂ ಆದ ಮ|| ಎಸ್. ಧರ್ಮರಾಯರು ದಯಮಾಡಿಸಿರುತ್ತಾರೆ.—ಇಲ್ಲಿನ ಸಬ್ ರಿಜಿಸ್ಟ್ರಾರ್ರವರು ಕಾಲಕ್ಕೆ ಸರಿಯಾಗಿ ಕಛೇರಿಗೆ ದಯಮಾಡಿಸಿ ತಮ್ಮ ಕೆಲಸವನ್ನು ಬಹಳ ಮುತುವರ್ಜಿಯಿಂದ ನಡಿಸುತ್ತಾ ದಸ್ತೈವಜುಗಳು ಜಾಗ್ರತೆಯಾಗಿ ಜನಗಳಿಗೆ ತಲ್ಪುವಂತೆ ತುಂಬಾ ಮುತುವರ್ಜಿ ವಹಿಸಿ ಹಿಂದಿನವರುಗಳಿಗಿಂತ ಬಹಳ ಚೆನ್ನಾಗಿ ಕೆಲಸಮಾಡುತ್ತಿರುವದರಿಂದ ಮ|| ಚಂದ್ರಶೇಖರಮೊದಲಿಯಾರ್ರನ್ನು ಬಹು ಜನರು ಕೊಂಡಾಡುತ್ತಾರೆ.—ಈಚೆಗೆ ತಮ್ಮ ಪತ್ರಿಕಾ ಮುಖೇನ ಬಹಳವಾಗಿ ಕರೆಸ್‌ಪಾಂಡೆನ್ಸ್ ನಡೆದು ಚೀಫ್ ಕೋರ್ಟಿನವರ ಗಮನಕ್ಕೂ ಬಂದು ಈ ಊರಲ್ಲಿ ಮತ್ತೊಂದು ಮುನ್ಸಿಫ್ ಕೋರ್ಟು ಬಂದದ್ದರಿಂದ ಕೆಲಸಗಳು ಬಹಳ ಚುರುಕಾಗಿ ನಡೆಯುತ್ತಾ ಬರುತ್ತಿವೆ. ಇದರಿಂದ ಜನರ ತೊಂದರೆಗಳು ಬಹಳ ಮಟ್ಟಿಗೆ ಕಡಿಮೆಯಾದಾವೆಂದು ನಿರೀಕ್ಷಿಸಲ್ಪಟ್ಟಿದೆ.

ತುಮಕೂರು ತಾ|| ಬೆಳ್ಳಾವೆ.—ಈ ಗ್ರಾಮವು ಭಾರಿ ಸಂತೆಯಿಂದ ಪ್ರಸಿದ್ಧವಾಗಿದೆ. ಈಚೆಗೆ ಈ ಸಂತೆಯು ಅನೇಕ ಕಾರಣಗಳಿಂದ ಹೀನಸ್ಥಿತಿಗೆ ಬಂದಿರುವದರಿಂದ ತುಮಕೂರಿಂದ ಬೆಳ್ಳಾವೆಯ ಮಾರ್ಗವಾಗಿ ಬೋಹಮಾರ್ಗವನ್ನು ನೆಲೆಗೊಳಿಸಿ, ವ್ಯಾಪಾರವನ್ನು ಅಭಿವೃದ್ಧಿಗೆ ತರುವ ಯೋಚನೆಯು 3-4 ವರ್ಷಗಳಿಂದ ನಡೆಯುತ್ತಾ ಇತ್ತು. ಈಗ ಈ ಯೋಚನೆಯು ಸಫಲವಾಯಿತೆಂದು ಕೇಳುವುದು ತುಂಬಾ ಸಂತೋಷಪ್ರದವಾಗಿದೆ.—ಬೆಳ್ಳಾವೆ ಎ. ಇ. ಕನ್ನಡ ಬಾಯ್ಸ್ ಸ್ಕೂಲಿನಿಂದ ಈ ವರ್ಷ ಲೋ. ಸೆ. ಪರೀಕ್ಷೆಗೆ ಹೋಗಿದ್ದ 15 ಮಂದಿಯಲ್ಲಿ 12 ಮಂದಿ ಪ್ಯಾಸಾಗಿರುವುದು ತುಂಬಾ ಶ್ಲಾಘನೀಯವಾಗಿಯೂ, ಇವರಲ್ಲಿ ಒಬ್ಬ ಪಂಚಮವಿದ್ಯಾರ್ಥಿಯು ಪ್ಯಾಸಾಗಿರುವುದು ಮತ್ತೂ ಸ್ತೋತ್ರಾರ್ಹವಾಗಿಯೂ ಇದೆ. ಈಗ ಈ ಸ್ಕೂಲಿಗಾಗಿ ಕಟ್ಟಡವು ತಯಾರಾಗಿರುವುದಲ್ಲದೆ ಈ ಸ್ಕೂಲ್ ಇಷ್ಟರಲ್ಲಿಯೇ ಎ. ವಿ. ಸ್ಕೂಲ್ ಆಗುವ ಸಂಭವವೂ ಇದೆ.—ಈ ಗ್ರಾಮದಲ್ಲಿ ಸ್ಥಾಪಿತವಾಗಿರುವ ಗ್ರಾಮ ಮುನ್ಸೀಫ್ ಕೋರ್ಟು ಮ|| ಅನಂತರಾಮಪ್ಪನವರ ಅಧ್ಯಕ್ಷತೆಯಲ್ಲಿಯೂ, ಕೋಆಪರೆಟಿವ್ ಸೊಸೈಟಿಯು ಮ|| ಗ. ವಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿಯೂ ತೃಪ್ತಿಕರವಾಗಿ ಕೆಲಸ ನಡೆಯುತ್ತಾ ಇದೆ. ವಾಚನಶಾಲೆಯು ಸಾಧಾರಣವಾಗಿ ನಡೆಯುತ್ತಾ ಇದೆ. ಗ್ರಾಮಾಭಿವೃದ್ಧಿಯ ಮತ್ತು ಗ್ರಾಮ ಪಾಕೀಜಾ ವಿಷಯದಲ್ಲಿ ಯೂನಿಯನ್ ಮೆಂಬರುಗಳೂ, ಶೇಕದಾರರೂ ಔದಾಸೀನ್ಯವನ್ನು ವಹಿಸಿರುವಂತೆ ಕಾಣುವುದು. ಇದಸ್ಥ ಅಧಿಕಾರಿಗಳು ಪ್ರತಿ ತಿಂಗಳಲ್ಲಿಯೂ ಮೀಟಿಂಗ್ ನಡಿಸಿ ಕ್ರಮಪಡಿಸಬೇಕಾಗಿದೆ. ಕೊರಟಗೆರೆ ಬಳಿ ಕಡೆಯಲ್ಪಟ್ಟಿರುವ ಗ್ಯಾಂಗ್ ಒಡ್ಡರು ಹೇಗೋ ತಪ್ಪಿಸಿಕೊಂಡು ಬಂದು ಈ ಗ್ರಾಮದಲ್ಲಿಯೂ ಅಜುಬಾಜು ಗ್ರಾಮಗಳಲ್ಲಿಯೂ ನಿರ್ಭಯವಾಗಿ ಕನ್ನಾ ಕಳವು ನಡಿಸುತ್ತಾ ಇದ್ದುದು ಈಚೆಗೆ ಸ್ವಲ್ಪ ಕಡಿಮೆಯಾಗಿದೆ. ಆದರೂ ಪೋಲೀಸ್ ಅಧಿಕಾರಿಗಳು ಗಮನಕೊಟ್ಟು ಕಳ್ಳರನ್ನು ಅಡಗಿಸಬೇಕಾಗಿದೆ.

ಶ್ರೀರಂಗಪಟ್ಟಣ.—ಈಗ್ಗೆ 15-20 ದಿವಸಗಳ ಈಚೆಗಾಯ್ತು 5-6 ಹದ ಮಳೆ ಆಗಿ ದನಕರುಗಳಿಗೆ ಹಸರು ಮೇವೂ, ಕುಡಿಯುವುದಕ್ಕೆ ನೀರೂ ಸಮೃದ್ಧಿಯಾಗಿದೆ. ಹವ ಸ್ವಲ್ಪ ಬದಲಾಯಿಸಿದೆ. ರಸ್ತೆಗಳಲ್ಲಿ ಮಳೆ ನೀರಿನಿಂದ ಮಣ್ಣು ಕೊಚ್ಚಿ ಹೋಗಿ ಚೂಪು ಕಲ್ಲುಗಳೆದ್ದು ತಿರುಗಾಡುವವರಿಗೆ ಬಹಳ ತೊಂದರೆಯಾಗುತ್ತಿದೆ. ಅಲ್ಲಲ್ಲಿ ರಿಪೇರಿ ಬಗ್ಗೆ ಚರಂಡಿಗಳನ್ನು ಕಿತ್ತುಹಾಕಿರುವುದರಿಂದ ಮಳೆ ನೀರು ಚರಂಡಿ ತುಂಬಿ ರಸ್ತೆಗಳ ಮೇಲೆ ಹರಿದು ರಸ್ತೆಗಳನ್ನು ಹಾಳುಮಾಡುತ್ತಿದೆ.—ರಾತ್ರಿ ಕಾಲದಲ್ಲಿ ಕೆಲವು ಕಡೆ ಲಾಂದ್ರಗಳಲ್ಲಿ ದೀಪವೇ ಇರುವುದಿಲ್ಲ ; ಇರುವ ಕಡೆ ಬೆಳಕು ಸಾಲದು. ಹೊಸ ಮ್ಯುನಿಸಿಪಲ್ ಓವರ್‌ಸೀಯರು ಗ್ರಾಮ ಪಾಕೀಜಾ ಮುಂತಾದ ಕೆಲಸಗಳನ್ನು ಬಹುಮಟ್ಟಿಗೆ ಚೆನ್ನಾಗಿ ನಡೆಯಲು ಏರ್ಪಾಡು ಮಾಡುತ್ತಿದೇವೆಂದು ಸಂತೋಷಪಡುತ್ತಿದಾರೆಯೇ ವಿನಾ ಕಾರ್ಯವ್ಯಾವುದೂ ನಡೆಯುತ್ತಿಲ್ಲ. ಬಡ ನೌಕರರ ಮೇಲೆ ಅವರ ಅಧಿಕಾರ ನಿರ್ವಾಹವಿಲ್ಲ.—ಮ|| ಮಲ್ಲರಾಜೆ ಅರಸಿನವರು ಇಲ್ಲಿಗೆ ಅಮಲ್ದಾರರಾಗಿ ಬಂದಲಾಗಾಯ್ತು ಸರ್ಕಾರಿ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿವೆ. ಬಡ ನೌಕರರುಗಳಿಗೆ ಆಶ್ರಯದಾತರಾಗಿರುತ್ತಾರೆ. ಇಂಥಾ ರಾಜಬಂಧುಗಳೇ ಮುಖ್ಯ ಮುಖ್ಯ ತಾಲ್ಲೂಕುಗಳಲ್ಲಿ ಇದ್ದರೆ ಆ ತಾಲ್ಲೂಕು ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ಇಲ್ಲಿಗೆ ಖಾಯಂ ಅಮಲ್ದಾರರು ಬಂದಿರುವಂತೆಯೂ, ಇವರು ಪುನಹ ಡೆಪ್ಯುಟಿ ಅಮಲ್ದಾರರಾಗಿ ಹೊರಟು ಹೋಗುತ್ತಾರೆಂತಲೂ ವರ್ತಮಾನವಿದೆ.—ದೇವಸ್ಥಾನದ ಧರ್ಮ ದರ್ಶಿಗಳನ್ನು ಸರ್ಕಾರದವರು ಏರ್ಪಾಡು ಮಾಡಿರುವುದರಿಂದ ಮುಜರಾಯಿ ಬಡ ನೌಕರರಿಗೆ ಕಷ್ಟವಾಗಿದೆ.—ಇಲ್ಲಿನ ಎ. ವಿ. ಸ್ಕೂಲಿಗೆ ಮ|| ಸಿ. ಎನ್. ಸೀತಾರಾಮ ಶಾಸ್ತ್ರಿಗಳು ಹೆಡ್ ಮಾಸ್ಟರಾಗಿ ಬಂದಲಾಗಾಯ್ತು ಸ್ಕೂಲ್ ಅಭಿವೃದ್ಧಿ ಹೊಂದುತ್ತಲೂ, ಲೋ. ಸೆ. ಫಲಿತಾಂಶ ಉತ್ತಮ ರೀತಿಯಿಂದ ಬರುತ್ತಲೂ ಇದೆ. ಇವರು ತಮ್ಮ ಅ|| ಮಾಸ್ಟರುಗಳ, ಬಾಲಕರುಗಳ, ದೊಡ್ಡ ಮನುಷ್ಯರುಗಳ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ನಮ್ಮ ದಿವಾನ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದ ಕಾಲದಲ್ಲಿ ಸ್ಕೂಲನ್ನು ಪರಾಂಬರಿಸಿ ತೃಪ್ತಿಪಟ್ಟುಕೊಂಡು ದಯಮಾಡಿಸಿರುತ್ತಾರೆ. ಈ ಸಲ ಲೋ. ಸೆ. ಪರೀಕ್ಷೆಯಲ್ಲಿ 10 ಕ್ಕೆ 7 ಮಂದಿ ತೇರ್ಗಡೆಯಾಗಿದಾರೆ.—ಈ ಊರಿಗೆ ಮ|| ಬಸವಂತ ಕಾಳೋಜಿರಾಯರು ಪೋಲೀಸ್ ಇನ್ಸ್‌ಪೆಕ್ಟರಾಗಿ ಬಂದಲಾಗಾಯ್ತು ಕಳ್ಳತನ ಜೂಜು ಸ್ವಲ್ಪ ಕಡಿಮೆಯಾಗಿದೆ; ಆದರೆ ರಾತ್ರಿ ವೇಳೆ ಹೆಂಡ ಕುಡಿದು ಜನರ ನಿದ್ದೆಗೆ ಭಂಗಪಡಿಸಿ ರಸ್ತೆಗಳಲ್ಲಿ ಅಲೆಯುತ್ತಿರುವವರನ್ನು ಹಿಡಿಸಿ ಬಂದೋಬಸ್ತು ಮಾಡಿಸ್ಯಾರೆಂದು ನಂಬಿದೆ.—ಶ್ರೀಮನ್ ಮಹಾರಾಜಾ ಲೇಟ್ ಶ್ರೀಕೃಷ್ಣರಾಜೇಂದ್ರ ಒಡೆಯರವರ ಜನ್ಮಸ್ಥಳದಲ್ಲಿ ಜ್ಞಾಪಕಾರ್ಥವಾಗಿ ಈಗ ಕಟ್ಟಿರುವ ಮಂಟಪದ ಪ್ರಾರಂಭೋತ್ಸವವನ್ನು ಬರುವ ಜುಲೈ 1 ತಾ ಗುರುವಾರ ಇಲ್ಲಿಗೆ ನಮ್ಮನ್ನಾಳುತ್ತಿರುವ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ರವರ ಸವಾರಿಯು ದಯಮಾಡಿಸಿ ನೆರವೇರಿಸುತ್ತಾರೆಂದು ಕೇಳಿ ಆನಂದ ಉಂಟಾಗಿದೆ.—ಈ ಊರು ಚರಿತ್ರಾರ್ಹವಾದ್ದರಿಂದ ಈ ಜೂನ್ 3 ತಾ. ಗುರುವಾರ ಇಲ್ಲಿಗೆ ಸೀಮೆಯಿಂದ ಬೆಂಗಳೂರಿಗೆ ಬಂದಿರುವ 400 ಜನ ಯೂರೋಪಿಯನ್ ಸೋಜರುಗಳೂ, ಹುದ್ದೇದಾರರುಗಳೂ ಬಂದು, ಊರನ್ನು ನೋಡಿಕೊಂಡು, ದರಿಯಾ ಬಾಗಿನಲ್ಲಿ ಊಟ ಉಪಚಾರ ಹೊಂದಿ, ಆ ರಾತ್ರಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

ವಿದೇಶದ ವೃತ್ತಾಂತಗಳು.

ಗ್ರೀಸ್ ದೊರೆಯವರಿಗೆ ಈಗೀಗ ಕಾಯಿಲೆ ವಾಸಿಯಾಗುತ್ತಿದೆ ಎಂದೂ, ಜ್ವರ ಬಿಟ್ಟಿರುವುದಾಗಿಯೂ ಜರ್ಮನಿಯ ಮತ್ತೂ ಆಸ್ಟ್ರಿಯದ ವೈದ್ಯರು ಪ್ರಕಟಪಡಿಸಿದಾರೆ.

ಇಂಗ್ಲೆಂಡಿಗೆ ಸೇರಿದ ಮ್ಯಾಂಚೆಸ್ಟರ್ ನಗರದೊಳಗೆ ಷಿಪ್ ಕೆನಾಲ್ ಕಂಪನಿಯ ಹತ್ತಿ ಉಗ್ರಾಣಕ್ಕೆ ಕಳೆದ ಶನಿವಾರ ಬೆಳಿಗ್ಗೆ ಬೆಂಕಿ ಬಿದ್ದು ಉಗ್ರಾಣ ವೆಲ್ಲಾ ಸುಟ್ಟುಹೋಯಿತು. ಅನೇಕ ಸಾವಿರ ಪೌಂಡುಗಳು ನಷ್ಟವಾಗಿವೆ.

ಜರ್ಮನಿಯ ಪೋಸ್ಟ್ ಇಲಾಖೆಯ ನೌಕರಮಾನೇರುಗಳ ಪೈಕಿ ಅನೇಕರು ಸೈನಿಕರಾಗಿ ಯುದ್ಧಭೂಮಿಗೆ ಹೋಗಿದಾರೆ. ರಣರಂಗದಲ್ಲಿ ಅವರೊಳಗೆ 3,456 ಮಂದಿ ಕೊಲೆಯಾದರೆಂದೂ, ಇನ್ನೂ ಅನೇಕರು ಕಾಯಿಲೆಯಾಗಿದಾರೆಂದೂ, ಹಲವರು ಗಾಯಪಟ್ಟರೆಂದೂ, ಬಹು ಮಂದಿ ಸಿಕ್ಕಿಲ್ಲವೆಂದೂ ಪೋಸ್ಟ್ ಆಫೀಸ್ ಇಲಾಖೆಯವರು ಪ್ರಕಟಿಸಿದಾರೆ.

ಜರ್ಮನಿಯವರು ಹೊಸ ತರದ ಜೆಪ್ಪೆಲಿನ್ ಎಂಬ ಭಾರೀ ವಿಮಾನಗಳು ಆರನ್ನು ಫ್ರೆಡ್ರಿಕ್‌ಷೇಫನ್ ನಗರದ ಕಾರ್ಖಾನೆಯಲ್ಲಿ ತಯಾರುಮಾಡಿರುವುದಾಗಿಯೂ, ಇವುಗಳನ್ನು ಲಂಡನ್ ಪಟ್ಟಣದ ಮೇಲೆ ಕಳುಹಿಸಿ ಅವುಗಳಿಂದ ಮಂಜು ಮುಸುಕಿಕೊಳ್ಳುವಂಥಾ ವಿಜಾತೀಯವಾದ ಸಿಡಿಮದ್ದಿನ ಗುಂಡುಗಳನ್ನು ಮೊದಲು ಹಾಕಿಸಿ ಆ ಮಂಜಿನ ಮರೆಯಲ್ಲಿ ವಿಮಾನಗಳು ವಿನಾಶ ಕೃತ್ಯಗಳನ್ನು ನಡಿಸುವ ಏರ್ಪಾಡು ನಡೆದಿದೆ ಎಂದೂ ಒಬ್ಬ ದೇಶಸಂಚಾರಿಯು ತಿಳಿಸಿರುವನು.

ಅಮೇರಿಕಾಕ್ಕೆ ಸೇರಿದ ವಾಷಿಂಗ್‌ಟನ್ ಎಂಬ ಪಟ್ಟಣದಲ್ಲಿ ಮಿ|| ಚಾರಲ್ಸ್ ವಿಲ್ಲಿಯಂ ಪೋಸ್ಟ್ ಎಂಬ ವರ್ತಕನು ಕೆಲವು ಆಹಾರ ವಸ್ತುಗಳನ್ನು ತಯಾರುಮಾಡಿ ಬಿಕರಿ ಮಾಡುತ್ತಾ ಕಳೆದ 20 ವರ್ಷಗಳಲ್ಲಿ 6,44,00,000 ರೂಪಾಯನ್ನು ಸಂಪಾದನೆ ಮಾಡಿದನೆಂದು ಆತನು ಬರೆದಿಟ್ಟಿರುವ ಮರಣಶಾಸನದಿಂದ ತಿಳಿಯುತ್ತದೆ. ಈತನಿಗೆ ಹೊಟ್ಟೆಯಲ್ಲಿ ಒಂದು ಹುಣ್ಣಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡನು. ಆದರಿಂದ ಅವನ ಮನಸ್ಸು ಬಹಳ ಕೆಟ್ಟುಹೋಗಿ ಕಡೆಗೆ ಆತ್ಮಹತ್ಯ ಮಾಡಿಕೊಂಡಿರುತ್ತಾನೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮೇ 31 ನೇ ತಾ. ವರೆಗಿನ ಬ್ಯಾಂಕಿನ ಶಿಲ್ಕ.

ಲೇಣೆ:—(1) ಷೇರು ಮೊಬಲಗು	ರೂ.	10,00,000
,, (2) ರಿಜರ್ವ್ ಫಂಡು	,,	25,000
,, (3) ಡಿಪಾಜಿಟ್ಟುಗಳು	,,	29,17,820
,, (4) ಇತರೆ	,,	63,362
(ಆನೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	40,06,181
ದೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	6,72,256
,, (2) ಖಾತೆ ಮತ್ತು ಇತರ ಸಾಲಗಳು	,,	25,81,200
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	4,34,905
,, (4) ಇನ್ವೆಸ್ಟ್ಮೆಂಟುಗಳು	,,	2,67,277
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	1,15,420
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	16,295
,, (7) ಇತರೆ	,,	18,822
(ಆನೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	40,06,181

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಒಂದು ರೀಡಿಂಗ್ ರೂಮಿನ ಪ್ರಾರಂಭೋತ್ಸವ.

ಗೋರಿಬಿದನೂರು ತಾಲ್ಲೂಕು ದಾರಿನಾಯ್ಕನ ಪಾಳ್ಯದಲ್ಲಿ ಹೊಸದಾಗಿ ರೀಡಿಂಗ್ ರೂಮ್ ಸ್ಥಾಪನೆ ಮಾಡಬೇಕೆಂದು ನಮ್ಮ ತಾಲ್ಲೂಕು ಅಮಲ್ದಾರ್ ಸ್ವಾಮಿಯವರು ಅಪ್ಪಣೆ ಕೊಡಿಸಿದ ಪ್ರಕಾರ ಅವರ ಅಧ್ಯಕ್ಷತೆಯಲ್ಲಿಯೇ ಸ್ಥಾಪನೆ ಕೆಲಸವನ್ನು ನೆರವೇರಿಸಬೇಕೆಂದು ಗ್ರಾಮಸ್ಥರೆಲ್ಲರೂ ಎದುರು ನೋಡುತ್ತಾ ಇದ್ದರು. ಆದರೆ ಸರ್ಕಾರಿ ಕೆಲಸಗಳ ತೊಂದರೆಯಿಂದ ಅಮಲ್ದಾರ್ರವರು ಇಲ್ಲಿಗೆ ದಯಮಾಡಿಸಲು ಅನುಕೂಲವಾಗಲಿಲ್ಲ. ಅಷ್ಟರಲ್ಲೇ ವಿದ್ಯಾ ಇಲಾಖೆಯ ಅ|| ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಆರ್. ಅಳ್ವಾರಯ್ಯಂಗಾರ್ರವರು ದಯಮಾಡಿಸಿದ್ದ ಕಾಲದಲ್ಲಿ ಗರ್ಲ್ಸ್ ಸ್ಕೂಲ್ ಮಂದಿರದಲ್ಲಿ ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದ ಕಟ್ಟಡದಲ್ಲಿ ಸಭಿಕರೆಲ್ಲರೂ ಸೇರಿ ಸಭಿಕರ ಪ್ರಾರ್ಥನೆ ಪ್ರಕಾರ ಸದರಿ ಇನ್ಸ್ಪೆಕ್ಟರು ನಮ್ಮ ಅಮಲ್ದಾರ್ರವರ ಪ್ರತಿನಿಧಿಯಾಗಿ ಅಗ್ರಾಸನವನ್ನು ವಹಿಸಿ ವಿದ್ಯಾಭ್ಯಾಸ, ಜನಗಳ ಏಕಮತ್ಯ, ಈಗ ನಡೆಯುತ್ತಿರುವ ಸ್ಟೇಟ್ ಸ್ಕೂಲು ಮುಂತಾದ ವಿಷಯಗಳನ್ನು ಕುರಿತು ರಸಭರಿತವಾದ ವಾಕ್ಯಗಳಿಂದ ಕೂಡಿ ಇಂಪಾಗಿರುವ ಉಪನ್ಯಾಸವನ್ನು ಮಾಡಿದರು. ಇದನ್ನು ಕೇಳಿ ಸಭಿಕರೆಲ್ಲರೂ ಆನಂದ ಪರವಶರಾದರು. ನಂತರ ನಮ್ಮ ಇಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೂ, ನಮ್ಮ ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಗಂಧ ಪುಷ್ಪ ತಾಂಬೂಲಾದಿಗಳಿಂದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು. ಅಮಲ್ದಾರ್ರವರು ಪೂರ್ಣ ಅಂತಃಕರಣವಿಟ್ಟು ಈ ವಾಚನಶಾಲೆಗೆ ಸರ್ಕಾರಿ ಗೆಜೆಟ್ ಪತ್ರಿಕೆಗಳು ವಿಗೈರೆ ತರಿಸಿಕೊಟ್ಟು ಪ್ರೋತ್ಸಾಹ ಪಡಿಸಬೇಕಾಗಿಯೂ, ಈ ವಾಚನಶಾಲೆಯು ಯಾವದೊಂದು ತೊಂದರೆಯೂ ಉಂಟಾಗದಂತೆ ನಮ್ಮ ಗ್ರಾಮದ ಪಟೇಲ್, ಶ್ಯಾನುಭೋಗರೂ ಗ್ರಾಮಸ್ಥರೂ ಸಹಾ ಏಕಮತ್ಯದಿಂದ ಶಾಶ್ವತವಾಗಿ ನಡೆಸಿಕೊಂಡು ಬರಬೇಕೆಂದೂ ಪ್ರಾರ್ಥಿಸುತ್ತೇನೆ.

ಗ್ರಾಮವಾಸಿ.

ಹೊಸ ಸ್ಕೂಲ್ ಪ್ರವೇಶೋತ್ಸವವು.

ಟಿ. ನರಸೀಪುರದ ತಾಲ್ಲೋಕು ಮೂಗೂರಿನಲ್ಲಿರುವ ಬಾಯ್ಸ್ ಸ್ಕೂಲಿಗೆ ಗೌರ್ನಮೆಂಟಿನವರಿಂದ ಒಂದು ಹೊಸ ಸ್ಕೂಲ್ ಕಟ್ಟಿಡವು ಸ್ಯಾಂಕ್ಷನ್ ಆಗಿ ಕಟ್ಟಡದ ಕೆಲಸವು ಪೂರೈಸಿದ್ದರಿಂದ ಕಳೆದ ಮೇ ತಿಂಗಳು 31 ನೇ ತಾ. ಸೋಮವಾರ ಸದರಿ ಸ್ಕೂಲಿನ ಪ್ರವೇಶೋತ್ಸವವು ಏರ್ಪಟ್ಟು ಸ್ಕೂಲ್ ಬಾಲಕ ಬಾಲಕಿಯರನ್ನೂ ಮತ್ತು ಗ್ರಾಮ ಮುಖಂಡರನ್ನೂ ಬಾಜಾ ಬಜಂತ್ರಿಯೊಡನೆ ಮೆರವಣಿಗೆ ಮಾಡಿಕೊಂಡು ಚಿತ್ರ ಪಟಗಳಿಂದಲೂ ಕದಳೀ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟ ಹೊಸ ಸ್ಕೂಲಿನಲ್ಲಿ ಸಕಲರೂ ಸೇರಿ ಸಂಗೀತ, ಉಪನ್ಯಾಸಗಳು ಮುಗಿದ ಮೇಲೆ ಈ ಸ್ಕೂಲ್ ಹೆಡ್ ಮಾಸ್ಟರವರು ಸ್ಕೂಲ್ ಅಭಿವೃದ್ಧಿ ರಿಪೋರ್ಟನ್ನು ಓದಿದರು. ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ, ಈಗ ಸಂಭವಿಸಿರುವ ಯುದ್ಧವು ಬೇಗನೆ ಮುಗಿದು ಬ್ರಿಟಿಷ್ ಸಾಮ್ರಾಜ್ಯವು ಅಬಾಧಿತವಾಗಿರಬೇಕೆಂದು ಪ್ರಾರ್ಥನೆಯಾದ ನಂತರ ಇಲ್ಲಿನ ಹೋಟೆಲ್ ಕೀಪರ್ ವಾ|| ನಾಗಪ್ಪನವರು ವಿದ್ಯಾಭಿವೃದ್ಧಿ ವಿಷಯದಲ್ಲಿಯೂ ಮಕ್ಕಳನ್ನು ಪ್ರತಿಯೊಬ್ಬರೂ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಿಕೊಳ್ಳಬೇಕೆಂತಲೂ ನೆರೆದಿದ್ದ ಗ್ರಾಮಸ್ಥರಿಗೆ ತಿಳಿಸಿದ ವಿಷಯವು ಸ್ತೋತ್ರಾರ್ಹವಾಗಿತ್ತು. ಅನಂತರ ಮಂಗಳವಾಗಿ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ, ಬಾಲಕ ಬಾಲಕಿಯರುಗಳಿಗೆ ತಿಂಡಿಯೂ ಹಂಚಲ್ಪಟ್ಟು ಸಭೆಯು ಬರಖಾಸ್ತು ಆಯಿತು. ಸ್ಕೂಲ್ ಮಾಸ್ಟರುಗಳು ಏಕೀಭವಿಸಿ ಮುತುವರ್ಜಿಯಿಂದ ಕೆಲಸಮಾಡುತ್ತಾ, ಜನಗಳಿಗೆ ವಿದ್ಯಾಭ್ಯಾಸ ವಿಷಯದಲ್ಲಿ ಪ್ರೋತ್ಸಾಹನಮಾಡುತ್ತಿದ್ದರಿಂದ ಸ್ಕೂಲಿಗೆ 84 ಮಂದಿ ಬಾಲಕರ ವರಿಗೂ ಹಾಜರಾಗುತ್ತಾರೆ. ಇಷ್ಟು ಬಾಲಕರುಗಳಿಗೆ ಇಬ್ಬರು ಮಾಸ್ಟರು ಪಾಠ ನಡೆಸುವುದು ಕಷ್ಟವಾದ್ದರಿಂದ ಇಲಾಖಾ ಮೇಲ್ಪಂಕ್ತಿಯವರು ಜಾಗ್ರತೆಯಾಗಿ ಇನ್ನೊಬ್ಬ ಮಾಸ್ಟರನ್ನು ನೇಮಿಸಿದರೆ ಈ ಸ್ಕೂಲು ತುಂಬಾ ಅಭಿವೃದ್ಧಿಗೆ ಬರಲು ಏನೂ ಸಂದೇಹವಿಲ್ಲ.

ಪ್ರತ್ಯಕ್ಷದರ್ಶಿ.

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಮಗಳೂರು ಮ್ಯುನಿಸಿಪಲ್ ಸರಹದ್ದಿನಲ್ಲಿ ಮಕ್ಕಳಿಗೆ ಬಲಾತ್ಕಾರದ ವಿದ್ಯೆಯನ್ನು ಹಾಕುವ ಕಾನೂನು 1915 ನೇ ಜುಲೈ ಒಂದನೇ ತಾರೀಖು ಮೊದಲು ಜಾರಿಯಲ್ಲಿರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ವಿ|| ಕೆ. ಚಾಂಡಿಯವರಿಗೆ ಮೇ ತಾ. 29 ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಅ|| ಕಮೀಷನರ್ ಮ|| ಎಂ. ಶ್ರೀನಿವಾಸಮೂರ್ತಿಯವರು ಅವರ ಕೆಲಸದ ಭಾರವನ್ನೂ ವಹಿಸಿರತಕ್ಕದ್ದು.

ರೆವಿನ್ಯೂ ಸರ್ವೇ ಸಬ್ ಅ|| ಸೂಪರಿಂಟೆಂಡೆಂಟ್ ಮ|| ನಂಜುಂಡಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಜೆಂಗಸರ ಆಸ್ಪತ್ರೆಯ ಲೇಡಿ ಮೆಡಿಕಲ್ ಆಫೀಸರ್ ಮಿಸ್ ಆಯ್ಯಾಟಿವ್ನಾಲ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ವರುಷಗಳ ರಜಾ ಕೊಟ್ಟಿದೆ.

ಚಿಕ್ಕಮಗಳೂರು ಆಸ್ಪತ್ರೆಯ ಅ|| ಸರ್ಜನ್ ಮ|| ಟಿ. ಬಾಲಕೃಷ್ಣ ಮೊದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮುಜರಾಯಿ ಸೂಪರಿಂಟೆಂಡೆಂಟ್ ಮ|| ಜಿ. ಅರುವಾಮುದು ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅ|| ಕಮೀಷನರ್ ಮ|| ಸಿ. ರಂಗನಾಥರಾವ್ ಸಾಹೇಬ್ ಯವರನ್ನು ಕಳೆದ ಜನವರಿ ತಾ. 24 ರಿಂದ 3 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ಎಕ್ಸೈಸ್ ಆಫೀಸರುಗಳ ನಿಗಾರ್ವರ್ಗ ಹುಕುಂ ಮಾಡಿದೆ.—(1) ಮ|| ಡಿ. ಶ್ರೀನಿವಾಸಯ್ಯಂಗಾರ್ರು ಎಕ್ಸೈಜ್ ಕಮೀಷನರ್ ರವರ ಆಫೀಸಿಗೆ, (2) ಮ|| ವೈ. ವಿ. ಕೃಷ್ಣಮೂರ್ತಿಯವರು ಹಾಸನಕ್ಕೆ, (3) ಮ|| ಬಿ. ಕಾಮಣ್ಣನವರು ಮೈಸೂರಿಗೆ.

ಪ್ರೊ|| ಅ|| ಕಮೀಷನರ್ ಮ|| ಪಿ. ಗೋಪಾಲರಾವ್ ಅರಸಿನವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರ್ ಮ|| ಆರ್. ಎಸ್. ನವರತ್ನರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ನೀರಾವರಿ ಡಿವಿಜನ್ ಅ|| ಎಗ್ಜಿಕ್ಯುಟಿವ್ ಇಂಜನಿಯರ್ ಮ|| ಎಸ್. ಎ. ರಾಮಸ್ವಾಮಿ ಅಯ್ಯರವರು ಅವರ ಕೆಲಸದ ಭಾರವನ್ನೂ ವಹಿಸತಕ್ಕದ್ದು.

ಸಿಡಿಲು ಹೊಡೆದ ಅನಾಹುತಗಳು.

ಒಬ್ಬನು ಕಾಲವಾದದ್ದು.

ಮಾಗಡಿ ತಾಲ್ಲೂಕು ಮಾಡಬಾಳು ಹೋಬಳಿ ಚಿಕ್ಕಳ್ಳಿ ಗ್ರಾಮದ ಬಳಿಗೆ ಜಾತಿ ತೋಟಿ ತಿಮ್ಮನೆಂಬವನೂ, ಬಾದರ್ ಸಾಬಿಯೂ ಸಹಾ ಕಳೆದ ತಿಂಗಳ ತಾ 30 ನೇ ಭಾನುವಾರ ಆಡುಗಳನ್ನು ಮೇಯಿಸುವುದಕ್ಕೆ ಕಾಡಿಗೆ ಹೋಗಿದ್ದರು. ಸಾಯಂಕಾಲ 6½ ಘಂಟೆ ವೇಳೆಯಲ್ಲಿ ಮಿಂಚು ಸಿಡಿಲುಗಳ ಅತ್ಯಾರ್ಭಟದಿಂದ ಮಳೆ ಬಂದಿತು. ಆಗ ತಿಮ್ಮನೂ ಬಾದರ್ ಸಾಬಿಯೂ ಸಹಾ ಓಡಿಹೋಗಿ ಒಂದು ದೊಡ್ಡ ಬೂರುಗದ ಮರದ ಕೆಳಗೆ ನಿಂತುಕೊಂಡಿದ್ದರು. ಆಗ ಸಿಡಿಲು ಹೊಡೆಯಿತು. ಅದು ಅವರಿಗೆ ತಗಲಿ ತಿಮ್ಮನು ಕೂಡಲೇ ಸತ್ತು ಬಿದ್ದನು. ಬಾದರ್ ಸಾಬಿಯು ಪ್ರಜ್ಞೆ ತಪ್ಪಿ ಬಿದ್ದುಕೊಂಡು ಒದ್ದಾಡುತ್ತಾ ಇದ್ದನು. ಕೊಂಚ ಹೊತ್ತಿನ ಮೇಲೆ ಆ ಮಾರ್ಗವಾಗಿ ಬರುತ್ತಾ ಇದ್ದ ಪನಾಯಗನೆಂಬುವನು ಕಂಡು ಬಾದರ್ ಸಾಬಿಯನ್ನು ಎತ್ತಿ ಉಪಚರಿಸುತ್ತಿದ್ದನು. ಅಕ್ಕಮ್ಮನೆಂಬ ಹೆಂಗಸು ಆರ್ತಸ್ವರದಿಂದ ಬೊಬ್ಬೆಮಾಡಿದಳು. ಅನೇಕ ಜನಗಳು ಬಂದು ನೋಡಿ ಬಹು ವ್ಯಸನಪಟ್ಟರು. ಆ ಬೂರುಗ ಮರದ ಎರಡು ರೆಂಬೆಗಳಿಗೂ ಸಿಡಿಲು ತಗಲಿದೆ. ಸತ್ತುಹೋದ ತಿಮ್ಮನಿಗೆ ತಲೆಯಿಂದ ಕಾಲಿನ ವರಿಗೂ ಹಿಂಭಾಗ ಅಲ್ಲಲ್ಲಿ ಸುಟ್ಟುಹೋಗಿತ್ತು. ಬಾದರ್ ಸಾಬಿ ಎಂಬವನಿಗೆ ಮೈ ಮೇಲೆ ಕೆಲವು ಸುಟ್ಟ ಗಾಯಗಳಂತೆ ಬೊಬ್ಬೆಗಳಾಗಿವೆ. ಇವನಿಗೆ ಮಾಗಡಿಯಿಂದ ಆಸ್ಪತ್ರೆ ಡಾಕ್ಟರವರು ಬಂದು ಔಷಧೋಪಚಾರ ನಡೆಯುತ್ತಾ ಇದೆ. ಪ್ರಾಣಭಯವಿಲ್ಲ. ಸತ್ತುಹೋದ ತಿಮ್ಮನಿಗೆ 30 ವಯಸ್ಸು. ಚಿಕ್ಕ ವಯಸ್ಸಿನ ಮಗನೂ ಹೆಂಡತಿಯೂ ಇವೆ. ಇದೇ ದಿನ ಇಲ್ಲಿಗೆ ಸಮೀಪ ದಾಸನಪುರಂಗಳ ಗ್ರಾಮದಲ್ಲಿ ಸಿಡಿಲು ಬಿದ್ದು ಎಂಟು ಮೇಕೆಗಳು ಸತ್ತುಹೋದವು. ಕೆಲವು ದಿನಗಳ ಹಿಂದೆ ಸಮೀಪ ಬಾಲೇನಹಳ್ಳಿ ಗ್ರಾಮದಲ್ಲಿ ಸಿಡಿಲು ಬಿದ್ದು ಒಬ್ಬ ರೈತನ ಮೂರು ಎತ್ತುಗಳು ಸತ್ತುಹೋದವು. ಇಷ್ಟು ಸಮೀಪದಲ್ಲಿಯೇ ಈ ತಿಂಗಳಲ್ಲಿ ಸಿಡಿಲು ಬಿದ್ದು ಈ ರೀತಿ ಅನಾಹುತಗಳು ನಡೆದಿರುತ್ತವೆ.

ಕೆ. ಆರ್.

7 ಜನರೂ 30 ಕುರಿ ಆಡುಗಳೂ ಸತ್ತದ್ದು.

ಚೆಳ್ಳಕೆರೆ ತಾಲ್ಲೂಕು ಸಬ್ ಕುಂಟಿಗಲ್ ಹೋಬಳಿ ಕ್ಯಾಸಾಪುರ ಗ್ರಾಮಕ್ಕೆ ಸುಮಾರು ಒಂದು ಫರ್ಲಾಂಗು ದೂರದಲ್ಲಿ ನಡೆದ ಅನಾಹುತವೇನೆಂದರೆ.—ಇದೇ ತಿಂಗಳು 4 ತಾರೀಖು ಶುಕ್ರವಾರ ಸಾಯಂಕಾಲ ಸುಮಾರು 4-5 ಗಂಟೆ ಸಮಯದಲ್ಲಿ ಆ ಗ್ರಾಮದ ಜನರು ಕುರಿ ಆಡುಗಳನ್ನು ಮೇಯಿಸಿಕೊಂಡು ದಾರಿಯಲ್ಲಿ ಬರುತ್ತಾ ಇರುವಲ್ಲಿ ವಿಪರೀತವಾದ ಗಾಳಿ ಮಳೆ ಹುಟ್ಟಿ ಬಹಳ ಜೋರಾಗಿ ಬಂದದ್ದರಿಂದ ಅವರು ಒಂದು ಫರ್ಲಾಂಗು ದೂರದಲ್ಲಿರುವ ಕ್ಯಾಸಾಪುರ ಗ್ರಾಮಕ್ಕೆ ಸೇರಲು ಅವಕಾಶವಾಗದೆ ಒಂದು ಮರದ ಕೆಳಗೆ 12 ಜನ ಗಂಡಸರೂ ಒಬ್ಬ ಹೆಂಗಸೂ, 30-40 ಆಡು ಕುರಿಗಳನ್ನು ಸಿಡಿಸಿಕೊಂಡು ಆ ಮರದ ಕೆಳಗೆ ನಿಂತಿದ್ದರು. ಆ ಸಮಯದಲ್ಲಿ ಜೋರಾಗಿ ಗುಡುಗು ಉಂಟಾಗಿ ಸಿಡಿಲು ಬಂದು ಮೇಲ್ಗಡೆ ಜನಗಳಿದ್ದ ಮರದ ಮೇಲೆ ಮಹಾ ರಭಸದಿಂದ ಬಿದ್ದಿತು. ಕೂಡಲೆ 7 ಜನರ ಪೈಕಿ 6 ಜನ ಗಂಡಸರು 2 ಹೆಂಗಸರು 30 ಆಡು ಕುರಿ ಸಹಾ ಒಬ್ಬರ ಮೇಲೆ ಒಬ್ಬರು ಬಿದ್ದು ಪ್ರಾಣಬಿಟ್ಟರು. 30 ಆಡುಕುರಿ ಸಹಾ ಸತ್ತುಹೋದವು. ನಂತರ ಸಾಯಂಕಾಲವಾಗುತ್ತಾ ಮಳೆ ನಿಂತ ಮೇಲೆ ಗ್ರಾಮದ ಇತರ ಜನರು ಇನ್ನೊಂದು ಮರದ ಕೆಳಗೆ ನಿಂತಿದ್ದವರು ಬಂದು ಊರಿಗೆ ಸೇರಿದರು. ಈ ಸಮಾಚಾರ ಊರೆಲ್ಲಾ ಹರಡಿ ಎಲ್ಲರೂ ಹೋಗಿ ಆ ಸ್ಥಳದಲ್ಲಿ ನೋಡಲಾಗಿ ಒಬ್ಬ ಹೆಂಗಸು ಮಾತ್ರ ಮರದ ಪೊಟ್ಟೆಯೊಳಗೆ ಅವಿತುಕೊಂಡಿದ್ದಳು. ಅವಳನ್ನು ಊರಿಗೆ ಎಳೆದುಹಾಕಿದರು. ಅವಳಿಗೆ ಪ್ರಾಣಭಯವೇನೂ ಆಗಿಲ್ಲ. ಬೇಗ್ನೆ ಚೆಳ್ಳಕೆರೆ ತಾಲ್ಲೂಕು ಕಚೇರಿಗೆ ರಿಪೋರ್ಟು ಬಂದಿತು. ತಕ್ಷಣ ಅಮಲ್ದಾರ್ರವರು ಪೋಲೀಸು ಇನ್ಸ್ಪೆಕ್ಟರವರು ವಗೈರೆ ಅಧಿಕಾರಿಗಳು ಹೋಗಿ ಆ ಸ್ಥಳವನ್ನು ನೋಡಿ ಆಪಾದಯಸಿಯಿಂದ ಪಂಚನಾಮೆಯನ್ನು ತಿಳಿದುಕೊಂಡು ಲಾಷ್ ಮಹಜರುವಾಡಿ ದರಗಳನ್ನು ದಫನ್ ಮಾಡಲು ಅಪ್ಪಣೆ ಕೊಟ್ಟು ಹೊರಟು ಬಂದರು. ಈ ಅನಾಹುತ ನಡೆದ ಸ್ಥಳವನ್ನು ನೋಡಲು ತುಂಬಾ ವ್ಯಸನವಾಗುತ್ತದೆ.

ಪ್ರಜಾರಂಜಕ.

ಹಾಸನ್ ಡಿಸ್ಟ್ರಿಕ್ಟ್ ಉಪಾಧ್ಯಾಯರ ಎರಡನೇ ಸಂಘ.

ಈ ಸಭೆಯು ಕಳೆದ ವರ್ಷ ಮೇ. 22-23 ನೇ ತಾರೀಖುಗಳಲ್ಲಿ ನಡೆದುದೂ ಇದರ ವರದಿಯನ್ನೆಲ್ಲಾ ಇದೇ ಪತ್ರಿಕೆಯ ಮೂಲಕ ಪ್ರಕಟೀಕರಿಸಿದುದೂ ನಮ್ಮ ವಾಚಕರ ಜ್ಞಾಪಕದಲ್ಲಿರಬಹುದು. ಈ ವರ್ಷವೂ ಕೂಡ ಅದೇ ಪ್ರಕಾರ ಕಳೆದ ಮೇ ತಾ. 28-29 ನೇ ಶುಕ್ರವಾರ ಮತ್ತು ಶನಿವಾರಗಳಲ್ಲಿ ಈ ಹಾಸನ ನಗರದಲ್ಲಿ ನಡೆಯಿತು. ನಮ್ಮ ಸೀನಿಯ ಸಂಪದಭ್ಯುದಯ ಸಮಾಜದ ಈ ಹಾಸನ ಡಿಸ್ಟ್ರಿಕ್ಟ್ ಶಾಖೆಯ ವಿದ್ಯಾಭ್ಯಾಸ ಕಮಿಟಿಯವರೂ ಈ ಸಭಾ ಕಾರ್ಯ ನಿರ್ವಹಣಕ್ಕಾಗಿ ನೇಮಿಸಿದ್ದ ಉಪಸಭೆಯವರೂ ಪೂರ್ವ ಭಾವಿಯೇ ಈ ಮಹಾ ಸಭೆಯ ಅನುಕೂಲತೆಗೋಸ್ಕರ ಅಗತ್ಯವಾಗಿದ್ದ ಏರ್ಪಾಡುಗಳನ್ನೆಲ್ಲಾ ಕ್ರಮದಿಂದ ಒದಗಿಸಿದ್ದರು. ಆಯಾ ಮತಪದ್ಧತಿಗನುಸಾರವಾಗಿ ಪ್ರತ್ಯೇಕ ಪ್ರತ್ಯೇಕ ಸ್ಥಳಗಳಲ್ಲಿ ಊಟ ಉಪಚಾರಗಳಿಗೆ ತೃಪ್ತಿಕರವಾದ ಏರ್ಪಾಡಾಗಿದ್ದಿತು. ಇದಕ್ಕಾಗಿ ಮ|| ವಿ. ಎಸ್. ರಾಜಗೋಪಾಲಾಚಾರ್ಯರು ಬಹಳವಾಗಿ ಪ್ರಯಾಸಪಟ್ಟಿರುತ್ತಾರೆ.

ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಕನ್ನಡ ಹಿಂದುಸ್ಥಾನಿ ಪ್ರೈಮರಿ ಶಾಲೆಗಳ ಉಪಾಧ್ಯಾಯೋಪಾಧ್ಯಾಯಿನಿಯರು ವಿಶಿಷ್ಟರೂ ಕೆಲಸವೂ ಬಲ್ಲವರು. ಇವರು ಸುಮಾರು 240 ಮಂದಿ ಇದ್ದರೆಂದು ತಿಳಿದು ಬಂದಿದೆ ಈ ವರ್ಷ ಪ್ರದರ್ಶನ ವಸ್ತುಗಳು ಕಳೆದ ವರ್ಷಕ್ಕಿಂತಲೂ ಹೆಚ್ಚಾಗಿದ್ದವು.

ಸುಮುಹೂರ್ತವಾಗಿ ಕೂಡಿ ಬಂದ ಉಪಾಧ್ಯಾಯರೆಲ್ಲರೂ ಮೇ ತಾ. 28ನೇ ಶುಕ್ರವಾರ ಬೆಳಗ್ಗೆ 8 ಘಂಟೆಗೆ ತಳಿರುತೋರಣಗಳಿಂದ ಅಲಂಕೃತವಾಗಿದ್ದ ವಾಣೀವಿಲಾಸ ಶಾಲೆಯಲ್ಲಿ ಸಭೆ ಸೇರಿದರು. ನಮ್ಮ ಪ್ರಜಾಭಿಮಾನಿಗಳಾದ ಡೆಪ್ಯುಟಿ ಕಮೀಷನರ್ ಮ|| ಬಿ. ರಾಮಸ್ವಾಮಯ್ಯನವರೂ, ಇತರ ಅಧಿಕಾರಿಗಳೂ, ಪುರಪ್ರಮುಖರೂ ನೆರೆದಿದ್ದರು. ಮ|| ಬಿ. ರಾಮಸ್ವಾಮಯ್ಯನವರೇ ಅಗ್ರಾಸನಾಧಿಪತ್ಯವನ್ನು ವಹಿಸಿ ಸಭಾ ಕಾರ್ಯವನ್ನು ಪ್ರಾರಂಭಿಸಿ ಉಪಾಧ್ಯಾಯರಿಗೆ ಹಿತೋಕ್ತಿಗಳು ಎಂಬ ಉಪನ್ಯಾಸವನ್ನು ಮಾಡಿದರು. ಈ ಮಹನೀಯರ ಭಾಷಣವು ಉಪಾಧ್ಯಾಯರ ನಡತೆಗೆ ಒಂದು ಮೂಲ ಸೂತ್ರವೋ ಎಂಬಂತೆ ಸರ್ವಶ್ಲಾಘ್ಯವಾಗಿದ್ದಿತು. ತರುವಾಯ ಈ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರಾದ ಡಾ|| ಆಶೀರ್ವಾದಂಯವರು ಗ್ರಾಮ ಪಾಠಶಾಲೆಗಳಲ್ಲಿಯೂ, ಮನೆಗಳಲ್ಲಿಯೂ ಆರೋಗ್ಯಕ್ಕೆ ಅನುಕೂಲವಾದ ಕಲ್ಪನೆಗಳು; ಮತ್ತು ದೇಹದಾರ್ಢ್ಯಕ್ಕೆ ಅನುಕೂಲವಾದ ಸಲಕರಣೆಗಳೂ ಎಂಬ ವಿಚಾರವನ್ನು ಕುರಿತು ಅನೇಕ ಸಂಗತಿಗಳನ್ನು ಉಪಾಧ್ಯಾಯರಿಗೋಸ್ಕರ ಇಂಗ್ಲಿಷಿನಲ್ಲಿ ಬೋಧಿಸಿದರು. ಇದೇ ಸಂಗತಿಗಳನ್ನೇ ವ|| ರುದ್ರಪ್ಪನವರು ಕನ್ನಡ ಭಾಷೆಯಲ್ಲಿ ಸಕಲರಿಗೂ ತಿಳಿಯುವಂತೆ ವಿವರಿಸಿದರು. ಇವರ ಮೇಲೆ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಕೆ. ಎನ್. ವೀರಭದ್ರಯ್ಯನವರು ನಮ್ಮ ಪ್ರದರ್ಶನದ ರಿಪೋರ್ಟನ್ನು ಇಂಗ್ಲಿಷಿನಲ್ಲಿ ಓದಿದರು. ಇದನ್ನು ಯಾರೂ ಕನ್ನಡಿಸಲಿಲ್ಲ. ಕೂಡಲೇ ಸದಸ್ಯರೆಲ್ಲರೂ ಎದ್ದು ಅಧ್ಯಕ್ಷರನ್ನು ಹಿಂಬಾಲಿಸಿ ನೇತ್ರಾನಂದಕರವಾಗಿ ವಿಶಿಷ್ಟ ವಸ್ತುಗಳಿಂದಲಂಕೃತವಾಗಿದ್ದ ಜುಬಿಲಿ ಹಾಲ್ ಭವನವನ್ನು ಪ್ರವೇಶಿಸಿ ಅಲ್ಲಿ ಕ್ರಮವಾಗಿ ಅನುಗೊಳಿಸಿದ್ದ ವಿಚಿತ್ರ ವಸ್ತುಗಳನ್ನೆಲ್ಲಾ ನೋಡಿಕೊಂಡು ಬಂದರು.

ಅದೇ ಮಧ್ಯಾಹ್ನ 3-30 ಗಂಟೆಗೆ ಸಭಾಮಂದಿರದಲ್ಲಿ ಪಿಶಿಷ್ಟರೂ ಸೇರಿದರು ಪ್ರಾರಂಭದಲ್ಲಿ ಮಾದರಿ ಪಾಠವು ಹಿರೀಸಾವೆ ಸ್ಕೂಲ್ ಮಾಸ್ಟರ್ ಮ|| ವೆಂಕಟರಮಣಯ್ಯನವರು ಆನೆ ಮತ್ತು ಇರುವೆ ಎಂಬ ಕಥೆಯನ್ನು ಬಾಲಕರಿಗೆ ಬೋಧಿಸಿದ ಕ್ರಮವು ಶ್ಲಾಘ್ಯವಾಗಿದ್ದಿತು. ಅನಂತರ ಮ|| ಎಚ್. ವಿ. ರಂಗಸ್ವಾಮಿಯವರು ಹಾಸನ್ ಡಿಸ್ಟ್ರಿಕ್ಟಿನ ಗ್ರಾಮಗಳಲ್ಲಿ ಉಂಟಾಗಬೇಕಾದ ಅಭಿವೃದ್ಧಿ ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಮ|| ಕೆ. ಎಂ. ಗುರುರಾಜಾಚಾರ್ಯರು ವ್ಯವಸಾಯದ ಇಲಾಖೆಯ ಇನ್ಸ್ಪೆಕ್ಟರವರು ವ್ಯವಸಾಯದ ಅಭಿವೃದ್ಧಿಗೂ, ಉಪಾಧ್ಯಾಯರಿಗೂ ಇರುವ ಸಂಬಂಧವನ್ನು ಕುರಿತು ಬಹಳವಾಗಿ ತಿಳಿಸಿದರು.

ಮೇ ತಾ. 29 ನೇ ಶನಿವಾರ ಬೆಳಗ್ಗೆ 8 ಘಂಟೆಗೆ ಮತ್ತೆ ಸಭೆ ಸೇರಿತು. ಡೆಪ್ಯುಟಿ ಇನ್. ಮ|| ವೀರಭದ್ರಯ್ಯನವರು ಕಳೆದ ಸಂವತ್ಸರದಲ್ಲಿ ನಡೆದ ಉಪಾಧ್ಯಾಯ ಸಂಘದಿಂದ ಉಂಟಾದ ಫಲಿತಾಂಶಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅನಂತರ ಉಪಾಧ್ಯಾಯರ ಪ್ರಶ್ನೋತ್ತರಗಳು ನಡೆದವು. ಇವುದ ಮೇಲೆ ಮೈಸೂರಿನಿಂದ ಮಿಸ್ ಬಾರ್ನರ್ಸ್ ರವರು ಇಂಗ್ಲಿಷಿನಲ್ಲಿ ಬರೆದು ಕಳುಹಿಸಿದ್ದ ಪ್ರಬಂಧದ ಕನ್ನಡ ಪರಿವರ್ತನೆಯು ವಿ|| ಅರ್ಥರ್ ಯವರಿಂದ ಓದಲ್ಪಟ್ಟಿತು. ಇದು ಗ್ರಾಮ ಪಾಠಶಾಲೆಗಳಲ್ಲಿ ಕಲಿಸಿಕೊಡಬೇಕಾದ ಕಿಂಡರ್ಗಾರ್ಟನ್ ಪಾಠಗಳನ್ನು ಕುರಿತ ಸರಳವಾದ ಮತ್ತು ಪ್ರಯೋಜನಕರವಾದ ಬೋಧನೆಯಾಗಿದ್ದಿತು.

ಮಧ್ಯಾಹ್ನ 3-30 ಘಂಟೆಗೆ ಪುನಃ ಕಾರ್ಯಾರಂಭವಾಗಿ ಕೆರೆಯನೂರು ಸ್ಕೂಲ್ ಮಾಸ್ಟರ್ ಮ|| ಶ್ರೀಕಂಠಯ್ಯನವರು ಬಾಲಕರಿಗೆ ವರ್ಣಗಳ ಪರಿಜ್ಞಾನವನ್ನುಂಟುಮಾಡುವ ವಿಧಾನವನ್ನು ಬೋಧಿಸಿ ತೋರಿಸಿದರು. ಅನಂತರ ಸರ್ಕಲ್ ಇನ್ಸ್ಪೆಕ್ಟರು ಮ|| ಎಂ. ಶ್ರೀನಿವಾಸರಾಯರು ನಿರಾಮ ಶಾಲೆಗಳಲ್ಲಿ ಉಪಾಧ್ಯಾಯರು ಮಾಡಬಹುದಾದ ಐಚ್ಛಿಕ ಯತ್ನಗಳು ಎಂಬ ವಿಷಯವನ್ನು ಕುರಿತು ದೀರ್ಘವಾದ ಸಕಲರಿಗೂ ಮೌಲ್ಯಪ್ರಾಯಂತಿರುವ ಸಂಗತಿಗಳನ್ನು ವಿಶದವಾಗಿ ಬೋಧಿಸಿದರು. ಆ ಮೇಲೆ ರಾಮನಾಥಪುರದ ಸ್ಕೂಲ್ ಮಾಸ್ಟರ್ ಮ|| ಪಂಡಿತ್ ಆರ್. ಕೆ. ಕೃಷ್ಣಪ್ಪನವರು ಉಪಾಧ್ಯಾಯರು ವಿದ್ಯಾರ್ಥಿಗಳಲ್ಲಿ ಸುಗುಣ, ಸನ್ನಡತೆಗಳನ್ನು ಪ್ರಕಾರಕ್ಕೆ ಬರುವಂತೆ ಮಾಡಬೇಕಾದರೆ ಯಾವ ಪ್ರಕಾರ ನಡೆದುಕೊಳ್ಳಬೇಕು ಎಂಬ ವಿಷಯವನ್ನು ಕುರಿತು ಬಹಳ ಸ್ವಾರಸ್ಯವಾದ ಮತ್ತು ಪ್ರಯೋಜನಕರಗಳಾದ ಸಂಗತಿಗಳನ್ನು ವಿವರಿಸಿ ಉಪನ್ಯಾಸ ಮಾಡಿದರು. ಈ ಉಪನ್ಯಾಸಕ್ಕೆ ವಿದ್ಯಾ ಇಲಾಖೆಯಿಂದ ಗೊತ್ತು ಮಾಡಲ್ಪಟ್ಟಿದ್ದ 10 ರೂಪಾಯಿ ಬಹುಮಾನವು ಕೊಡಲ್ಪಟ್ಟಿದೆ.

ಕೊನೆಯಲ್ಲಿ ಅಧ್ಯಕ್ಷರವರು ಈ ಪ್ರಸಿದ್ಧವಾದ ಎರಡನೇ ಉಪಾಧ್ಯಾಯ ಸಂಘದ ಕಾರ್ಯವನ್ನು ಪೂರೈಸಿಗೊಳಿಸಿ, ಈಗ ನಡೆಯುತ್ತಿರುವ ಮಹಾ ಯುದ್ಧದಲ್ಲಿ ಭಗವಂತನು ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಸಂಪೂರ್ಣವಾದ ಜಯವನ್ನೂ, ಶಾಶ್ವತವಾದ ಕೀರ್ತಿಯನ್ನೂ, ಲೋಕೋತ್ತರವಾದ ಸಮಾಧಾನವನ್ನೂ ಅನುಗ್ರಹ ಮಾಡುವಂತೆ ಪ್ರಾರ್ಥಿಸುವುದು ಸಭಿಕರೆಲ್ಲರ ಕರ್ತವ್ಯವೆಂದು ಪ್ರಕಟಪಡಿಸಿ ಸಂಭಾಷಣೆಯನ್ನು ಮುಗಿಸಿದರು. ಇದಾದ ಮೇಲೆ ಈ ಉಪಸಂಘದ ಸೆಕ್ರೆಟರಿಯವರು ಅಧ್ಯಕ್ಷರವರಿಗೂ ಇತರ ಸಭಾಕಾರ್ಯ ನಿರ್ವಾಹಕರಿಗೂ ಕೃತಜ್ಞತೆ ವಂದನೋಕ್ತಿಗಳನ್ನು ಹೇಳಿದರು. ಅಂತ್ಯದಲ್ಲಿ ಜಯಧ್ವನಿಯೊಡನೆ ಸಭಾಕಾರ್ಯವು ಮುಕ್ತಾಯವಾಯಿತು.

ಪ್ರೇಕ್ಷಕ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮೀದಾರರು ಸಹ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಾನ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ಸ್ಥಾನ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ ನೆಂಬ ಭರವಸ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿ ವಿಚಾರ.

ಅಯ್ಯಾ,—300 ಮನೆಗಳಿಗೆ ಮೇಲ್ಪಟ್ಟಿರುವ ಈ ಗ್ರಾಮಕ್ಕೆ ನಾಲ್ಕು ಪ್ರದೇಶಕ್ಕೂ 12 ಮೈಲಿ ದೂರ ರಸ್ತೆ ಇರುವುದಿಲ್ಲ. ಭಾರಿ ಭಾರಿ ಬೆಟ್ಟಗಳ ಮಧ್ಯೆ ಇರುತ್ತೆ. ಒಳ್ಳೇ ಫಲಪ್ರದವಾದ ಅಡಿಕೆ, ತೆಂಗು, ಬಾಳೆ ವಗೈರೆಯಿಂದ ಉನ್ನತವಾದ ಭಾರಿ ಅಗ್ರ ಇರುತ್ತೆ. ಕೆರೆ ಆಕರ ಚೆನ್ನಾಗಿದೆ. ಈ ಕಾಡಿನ ಮಧ್ಯೆ ಇರುವ ಈ ಗ್ರಾಮಕ್ಕೆ ಸರ್ಕಾರಿ ಆಫೀಸರವರು ಬರುವದು ಅಪರೂಪವಾಗಿತ್ತು. ಆದಕಾರಣ ಸುಮಾರು 8-10 ವರ್ಷದ ಲಾಗಾಯ್ತು ಈ ಗ್ರಾಮದಲ್ಲಿ ಖೂನಿಗಳು, ಕಳವುಗಳು, ದೊಂಬಿಗಳು ನಡೆದಿರುತ್ತವೆ. ಸರ್ಕಾರಕ್ಕೆ ಪತ್ತೆಗೆ ಅವಕಾಶವಾಗಲಿಲ್ಲ. ಬಡ್ಡೇಕಾರರುಗಳಿಂದ ಗ್ರಾಮದಲ್ಲಿ ವಾಸಮಾಡುವವರಿಗೆ ಕಷ್ಟ ನಷ್ಟಗಳು ಉಂಟಾಗಿ 8-10 ರೈತರು ಗ್ರಾಮ ಬಿಟ್ಟುಹೋದರು. ಇಲ್ಲಿ ಇದು ವರೆಗೆ ನಡೆದಿರುವ ಅನ್ಯಾಯಗಳನ್ನು ಇಷ್ಟೆಂದು ವರ್ಣಿಸಲಸಾಧ್ಯವಾಗಿರುತ್ತೆ. ಹೀಗಿರುವಲ್ಲಿ ಇದು ವರೆಗೆ 1-2 ಫಿರ್ಯಾದನ್ನು ಕೊಟ್ಟಾಗ್ಯೂ ಸರ್ಕಾರದವರು ಸ್ಥಾನ ತೆಗೆದುಕೊಂಡಿರಲಿಲ್ಲ. ಈಗ ಹಾಲಿ ಕೆಲಸ ನೋಡುವ ಸತ್ಯಪ್ರಭುಗಳಾದ ಘನವನ್ನು ಹೊಂದಿದ ದಯಾರಸಭರಿತರಾದ ತಾಲ್ಲೋಕು ಅಮಲ್ದಾರ್ರವರು ಮತ್ತು ಬದ್ಧಿಯಾಗಿ ಕೆಲಸ ನೋಡುವ ಪೋಲೀಸು ಇನ್ಸ್ಪೆಕ್ಟರವರು ಖುದ್ದಾಗಿ ದಯಮಾಡಿಸಿ ಪರಾಂಬರಿಸಿದ್ದರ ಮೇಲೆ ಕೆಲವು ಅನ್ಯಾಯಗಳು ಹೊರಪಟ್ಟು ಅವರ ಚಿತ್ತಕ್ಕೆ ವೇದ್ಯವಾದದ್ದರಿಂದ ಅದಕ್ಕೆ ಅನುಸಾರವಾದ ಖಾನೂನು ಸ್ವಲ್ಪ ಮಟ್ಟಿಗೆ ಜಾರಿಗೆ ತಂದರು. ಇದರಿಂದ ಈಗ ಗ್ರಾಮದಲ್ಲಿ ಯಾವ ಅನಾಹುತಗಳೂ ಇಲ್ಲದೆ ಸಂತೋಷದಿಂದ ಬಡವರೆಲ್ಲಾ ಹೊಗಳುತ್ತಾ

ಇದಾರೆ. ಇನ್ನು ಕೊಂಚ ದಿವಸ ಇದೇ ಆಫೀಸರುಗಳೇ ಇದ್ದು ದುಷ್ಟ ಜನಗಳಿಗೆ ಬಂದೋಬಸ್ತು ಮಾಡಿಯಾರು ಎಂದು ಬಹಳವಾಗಿ ಹಾರೈಸುತ್ತಾ ಇದಾರೆ.

ಗುಡ್ಡದಯ್ಯ.

ಹೊಳಲಕೆರೆಯ ನೀರಿನ ವಿಚಾರ.

ಅಯ್ಯಾ,—ಈ ಊರಿನಲ್ಲಿ ಪಾನಕ್ಕೆ ಸುಕರಾಂ ನೀರಿಲ್ಲದೆ ಜನ ಜಾನುವಾರುಗಳಿಗೆ ಉಂಟಾಗಿರುವ ವ್ಯಥೆಯನ್ನು ಹೇಳುವುದು ಕಷ್ಟವಾಗಿದೆ. ಈ ಕಷ್ಟ ನಿವಾರಣೆಗೆ ಪ್ರಜೆಗಳು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಚರ್ಚೆಗೆ ತಂದು ಈ ಊರಿನಲ್ಲಿರುವ ಇನ್ನೊಂದು ಕಲ್ಲಪ್ಪನ ಭಾವಿಗೆ ಇಂಜನ್ ಹಾಕಿಸಿ ಅದರಲ್ಲಿರುವ ಕೊಳಕು ನೀರು ಮತ್ತು ಬಹು ಕಾಲದಿಂದ ಇರುವ ಹೂಳು ಮಣ್ಣನ್ನು ತೆಗಿಸಿ ನಂತರ ಬರುವ ಉತ್ತಮವಾದ ನೀರನ್ನು ಹೊಂಡಕ್ಕೆ ಬಿಟ್ಟುಕೊಳ್ಳಬಹುದೆಂದು ಗ್ರಾಮಸ್ಥರಿಂದ ಚಂದಾ ವಸೂಲ್ ಮಾಡಿ ಇಂಜನ್ ವಗೈರೆ ತರಿಸಬೇಕೆಂತ ಈಗ್ಗೆ 4 ತಿಂಗಳಲ್ಲಿ ತೀರ್ಮಾನ ಮಾಡಿ ಗ್ರಾಮ ನಿವಾಸಿಗಳಿಗೆ ಇಂಜನ್ ತರಿಸುತ್ತೇವೆಂಬ ಸಂತೋಷ ಹುಟ್ಟಿಸಿದರು. ಆದರೆ ಆ ಕಾಲಕ್ಕೆ ಸರಿಯಾಗಿ ಇಂಜನ್ ಬರದೆ ಈಗ ಮಳೆಗಾಲದ [illegible] ಇಂಜನ್ ಕೆಲವು ಸಾಮಾನು ಮಾತ್ರ ನೆನ್ನೆ ತಾ 29 ರಲ್ಲಿ ಬಂದಿರುತ್ತೆ. ಈ ಸಾಮಾನು ಬರಲು 60 ರೂಪಾಯಿ ರೈಲ್ವೆ ಛಾರ್ಜು ತಗಲಿರುತ್ತೆ. ವಾಗಿನಿಗೆ ಪೂರಾ ಛಾರ್ಜು ಕೊಟ್ಟ ನಂತರ ಭರ್ತಿಯನ್ನೂ ಪೂರ್ತಿಯಾಗಿಯೇ ಮಾಡಿದ್ದರೆ ರೈತರಿಗೆ ಅನುಕೂಲವಾಗುತ್ತಿತ್ತು. ಈಗ ಬಂದಿರುವ ಇಂಜನ್ ಸಾಮಾನನ್ನು ಎರಡು ಎತ್ತುಗಳು ಎಳೆದುಕೊಂಡು ಬಂದಿರುವದರಿಂದ ಸುಮಾರು ಬಂಗಾಳಿ 30 ಮಣ ಆಗಬಹುದು ಒಂದು ವಾಗೀನು ಭರ್ತಿಯು 160 ಮಣವಾದದ್ದರಿಂದಲೂ, ಇದಕ್ಕೆ ಬೇಕಾದ ಸಾಮಾನುಗಳು ಇನ್ನೂ ಬಹಳ ಇರುವದರಿಂದಲೂ ಎಲ್ಲಾ ಒಂದೇ ವಾಗಿನಿಗೇನೆ ಭರ್ತಿಮಾಡಿದ್ದರೆ ಮುಂದಿನ ಖರ್ಚು ಉಳಿಯಬಹುದಾಗಿತ್ತು. ಆ ರೀತಿ ಮಾಡದೆ ತಂಡ ತಂಡವಾಗಿ ಕಳ್ಳಿ ತಗಳದ ಸಾಮಾನುಗಳನ್ನು ರವಾನಿಸುತ್ತಾ ಮುಂದೆ ಇನ್ನೂ ಕಾಲ ಕಳೆಯುವಂತೆ ತೋರುತ್ತೆ. ಸರ್ಕಾರದವರು ಪ್ರಜಾಪರಿಪಾಲನೆ ವಿಚಾರದಲ್ಲಿ ಸಂಪೂರ್ಣ ಅನುಗ್ರಹವಿಟ್ಟು ಕೂಡಲೆ ನೀರಿಗೆ ಸೌಕರ್ಯ ಮಾಡುತ್ತಾರೆಂತ ನಂಬಿದೇವೆ. ಈ ಇಂಜನ್ನಿಂದ ನೀರಿನ ಸಹಾಯ ಆಗುವುದಕ್ಕೆ ಮುಂಚೆ ಮಳೆ ಸುರಿದು ಭಾವಿ ಕೆರೆಗಳಿಗೆ ಸಾಕಾದಷ್ಟು ನೀರು ಬಂದು ಇಂಜನ್ ಕೆಲಸ ಅನಾವಶ್ಯಕವಾದ ಪಕ್ಷದಲ್ಲಿ ಈಗ ಆಗಿರುವ ಖರ್ಚಿಗೆ ಈ ಪುರನಿವಾಸಿಗಳು ಗುರಿಯಾಗದಂತೆ ಮಾಡಲು ನಮ್ಮ ಸರ್ಕಾರದಲ್ಲಿ ವಿಜ್ಞಾಪನೆ ಮಾಡಿಕೊಳ್ಳಲು ಮ್ಯುನಿಸಿಪಲ್ ಮೆಂಬರುಗಳು ತಕ್ಕ ಪ್ರಯತ್ನ ಮಾಡುತ್ತಾರೆಂತ ನಂಬಿದೇವೆ.

ಜನೋಪಕಾರಿ.

ಜಮೀನು ದರಖಾಸ್ತು ವಿಚಾರ.

ಅಯ್ಯಾ,—ಮಂಡ್ಯದ ತಾಲ್ಲೂಕು ಕಸಬಾ ಹೋಬಳಿ ಹೊಸೂರು ಎಂಬ ಗ್ರಾಮಕ್ಕೆ ಕೆರೆಯಾಗಲೀ, ತರಿ ಜಮೀನಾಗಲೀ ಇರುವುದಿಲ್ಲ. ಖುಷ್ಕಿ ಜಮೀನು ಮಾತ್ರ ಇರುತ್ತೆ. ಇದೂ ಕೂಡ ಫಲವತ್ತಾದ ಜಮೀನಲ್ಲ. ಈ ಗ್ರಾಮದಲ್ಲಿ 500-600 ಪ್ರಜಾ ಸಂಖ್ಯೆಯು ಇರುತ್ತೆ. 2-3 ಸಾವಿರ ಜಾನುವಾರು ಇರುತ್ತೆ. ಈ ಪ್ರಜಾ ಸಂಖ್ಯೆ ಎಲ್ಲಾ ಕೃಷಿಯಿಂದ ಜೀವನ ಮಾಡಬೇಕೇ ಹೊರತು ಕೈಗಾರಿಕೆಯಿಂದ ಜೀವನ ಮಾಡತಕ್ಕವರು ಈ ಗ್ರಾಮದಲ್ಲಿ ಒಬ್ಬರೂ ಇರುವುದಿಲ್ಲ. ಕೆಲವು ಜನ ರೈತರಿಗೆ ಮಾತ್ರ ಜೀವನಕ್ಕೆ ಸಾಕಾಗುವಷ್ಟು ಜಮೀನಿರುತ್ತೆ. ಮಿಕ್ಕಾ ಬಹಳು ಜನ ರೈತರಿಗೆ ಸಾಕಾಗುವಷ್ಟು ಜಮೀನಿಲ್ಲದೆ ಹೊಟ್ಟೆಗೆ ಬಹಳ ಕಂಗಾಲಾಗಿ ಹಗಲೂ ರಾತ್ರಿ ಅಲೆಯುತ್ತಾ, ಕಷ್ಟವನ್ನು ತಡೆಯಲಾರದೆ ಈ ಗ್ರಾಮದ ಬಂಜರಿನಲ್ಲಿ ಸಾಗುವಳಿಗೆ ಜಮೀನನ್ನು ಕೊಡಿಸಿಕೊಡಬೇಕೆಂದು ಈಗ್ಗೆ 3-4 ವರ್ಷಗಳಲ್ಲಿ ತಾಲ್ಲೂಕಿಗೆ ದರಖಾಸ್ತು ಬರೆದುಕೊಂಡದರ ಮೇಲೆ ಸಮ್ಮತಿ ಶೇಕದಾರರವರು ಬಂದು ಜಮೀನು ಅಜಮಾಯಿಷಿ ಮಾಡಿ ಗ್ರಾಮಸ್ಥರ ಮಹಜರು, ಸೈಟು, ವಗೈರೆ ರಿಕಾರ್ಡುಗಳನ್ನು ಮಾಡಿಕೊಂಡು ಹೋದರು. ಆ ಲಾಗಾಯ್ತು ನಿರೀಕ್ಷಣೆ ಮಾಡಿದಾಗ್ಯೂ ಜಮೀನು ಸಾಗುವಳಿಗೆ ಅಪ್ಪಣೆಯಾಗಲಿಲ್ಲ. ಈ ವಿಷಯವನ್ನು ಕುರಿತು ರೆವಿನ್ಯೂ ಕಮೀಷನರವರಿಗೂ, ಡೆಪ್ಯುಟಿ ಕಮಿಷನರವರಿಗೂ, ಅ॥ ಕಮಿಷನರವರಿಗೂ ಅನೇಕ ಅರ್ಜಿಗಳನ್ನು ಬರೆದುಕೊಂಡಾಗ್ಯೂ, ಜಮೀನು ಸಾಗುವಳಿಗೆ ದೊರೆಯಲಿಲ್ಲ. ನಮ್ಮನ್ನಾಳುವ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರೂ, ಮಂತ್ರಿವರ್ಯರೂ ರೈತರ ಪುರೋಭಿವೃದ್ಧಿಗಾಗಿ ಅನೇಕ ಹೊಸ ಏರ್ಪಾಟುಗಳನ್ನು ಮಾಡುತ್ತಿದ್ದಾಗ್ಯೂ ಅವರ ಪ್ರಯತ್ನವು ಸಫಲವಾಗದಂತೆ ಈ ರೀತಿಯಾಗಿ ಉದಾಸೀನ ಮಾಡುತ್ತಾರೆ. ಜಮೀನು ಸಾಗುವಳಿ ಮಾಡಬೇಕೆಂಬ ಅಭಿಲಾಷೆಯಿಂದ ರೈತರು ಬರೆದುಕೊಂಡ ದರಖಾಸ್ತುಗಳು 3-4 ವರ್ಷಗಳಾದಾಗ್ಯೂ ಫೈಸಲಾಗದೆ ಹೋದರೆ ಕೃಷಿಯೇ ಮುಖ್ಯ ಜೀವನವಾಗಿಟ್ಟುಕೊಂಡಿರುವ ರೈತರುಗಳು ಜೀವನ ಮಾಡುವುದು ಹೇಗೆ? ಈ ವಿಷಯದಲ್ಲಿ ದಯವುಳ್ಳ ಸರ್ಕಾರದವರು ತಕ್ಕ ನಿಗಾ ಇಟ್ಟು ರೈತರ ದರಖಾಸ್ತುಗಳು ಜಾಗ್ರತೆ ಫೈಸಲಾಗುವಂತೆ ತಕ್ಕ ಆಜ್ಞೆಗಳನ್ನು ಕಳುಹಿಸಿ ಕೊಡುತ್ತಾರೆಂದು ನಂಬಿ ನಿರೀಕ್ಷಿಸುತ್ತೇನೆ.

ರೈತಾಭಿಮಾನಿ

ಪೈಸಾ ಫಂಡಿನ ಕಮಿಟಿ—ಜವಾಬು.

ಅಯ್ಯಾ,—ತಮ್ಮ ತಾ 23 ನೇ ಪತ್ರಿಕೆಯಲ್ಲಿ ನಾಡಿಗ ದತ್ತಾತ್ರೇಯರಾವ, ಹರಿಹರ; ಎಮ್ ಮಂಜಪ್ಪ ಹರ್ಡೇಕರ, ಎಡಿಟರ, ಧನುರ್ಧಾರಿ; ಎಚ್. ನಾರಾಯಣಶರ್ಮಾ, ಎಮ್. ಕೆ ರಾಘವೇಂದ್ರರಾವ ಈ ನಾಲ್ವರಿಂದ ಸಹಿಮಾಡಿದ ಒಂದು ಲೇಖನವನ್ನು ನಾನು ಓದಿದೇನೆ. ಮತ್ತು ಬಹಳ ಆಶ್ಚರ್ಯವು ಆಗುತ್ತದೆ. ಯಾಕೆಂದರೆ ನಾನು ಮೈಸೂರಿನಲ್ಲಿ ಮೊದಲು ಪೈಸಾ ಫಂಡ್ ಕಮಿಟಿ ವಿಷಯವಾಗಿ ರಂಗಾಚಾರ್ ಮೆಮೋರಿಯಲ್ ಹಾಲಿನಲ್ಲಿ ಮ॥ ವೆಂಕಟಕೃಷ್ಣಯ್ಯನವರ ಅಗ್ರಾಸನದಲ್ಲಿ ಲೆಕ್ಚರ ಕೊಟ್ಟು ಇದರ ಕಮಿಟಿ ಮೈಸೂರಲ್ಲಿ ಇರಬೇಕೆಂದು ಮ॥ ಗಳಾದ ಎಸ್. ಎಲ್. ವರ್ಧಮಾನಯ್ಯನವರು, ಎ ವಿ. ವರದಾಚಾರ್ಯರು, ಟಿ ಎಲ್. ಉಪಾಧ್ಯಾಯರು ಮೊದಲಾದ ಗೃಹಸ್ಥರು ಕೂಡಿ ನಿರ್ಣಯಿಸಿ, ರಾವ್ ಬಹದೂರ ಮ॥ ಎಸ್. ಸಿ. ರಂಗಯ್ಯಂಗಾರ್ರವರ ಸಲಹೆ ಕೇಳಿದೆವು. ಅವರು ಅಪ್ಪಣೆಕೊಡಿಸಿದ್ದು—ಸದ್ಯಕ್ಕೆ ನೀವು ಮಾಡಿದ ಕೆಲಸವು ಉತ್ತಮವು. ಆದರೆ ನೀವು ಎಲ್ಲಿ ಇರುವಿರೋ ಆ ಪ್ರದೇಶದಲ್ಲಿ ನಿಮ್ಮಿಂದ ಆದಷ್ಟು ಕೆಲಸವು ಅನ್ಯರಿಂದ ಆಗಲಿಕ್ಕಿಲ್ಲ. ಆದರೂ ಕೆಲವು ದಿವಸ ಹೆಡ್ಡಾಫೀಸು ನಿಮ್ಮ ಸೂಪರವೀಜನಲ್ಲಿ ಇರಲಿ ಎಂದರು. ಅದರಂತೆ ಮೈಸೂರ ಮಟ್ಟಿಗೆ ಕೆಲಸ ಜರುಗಿಸುವುದಕ್ಕೆ ಟಿ. ಎಲ್. ಉಪಾಧ್ಯಾಯರಿಗೂ, ಎ. ವಿ. ವರದಾಚಾರ್ಯರಿಗೂ, ಶ್ರೀಮಂತ ವರ್ಧಮಾನಯ್ಯನವರಿಗೂ ಹೇಳಿ ನಾನು ಪುನಹ ಕೊಡಗನೂರಿಗೆ ಬಂದೆ. ಕೊಡಗನೂರು ತೀರ ಹಳ್ಳಿ ಆದದ್ದರಿಂದ ಇದರ ಆಫೀಸು ದೊಡ್ಡ ಸ್ಥಳದಲ್ಲಿ ಇರಬೇಕೆಂದು ಯೋಚಿಸಿ ದಾವಣಗೆರೆಗೆ ಕಳೆದ ಏಪ್ರಿಲ್ ತಾ. 13 ನೇ ದಿವಸ ಹೋಗಿ ಸದರಿ ಮೇಲಿನ ನಾಲ್ಕು ಸದ್ಗೃಹಸ್ಥರನ್ನು ನೋಡಿದೆನು. ಕೂಡಲೆ ಅವರು ಧನುರ್ಧಾರಿ ಆಫೀಸಿನಲ್ಲಿ ಸಭೆ ಏರ್ಪಾಟು ಮಾಡಿ ದಾವಣಗೆರೆಯ ಆಫೀಸು ಇರಬೇಕೆಂದೂ, ಕಮಿಟಿಯನ್ನು ಊರ್ಜಿತಕ್ಕೆ ತರುವದಕ್ಕೆ ತಮ್ಮಲ್ಲಿಯೇ ಅನೇಕರು ಲೆಕ್ಚರರು ಆಗಬೇಕೆಂತಲೂ ನಿರ್ಣಯಿಸಿ ಸ್ವದಸ್ತೂರ ಲೇಖನವನ್ನು ಬರೆದಿದಾರೆ. ರಾಘವೇಂದ್ರರಾವ ಇವರು ಮೈಸೂರಿಗೆ ಹೋಗಿ ಟಿ. ಎಲ್. ಉಪಾಧ್ಯಾಯರನ್ನೂ, ಶ್ರೀಮಂತ ವರ್ಧಮಾನಯ್ಯನವರನ್ನೂ ಕಂಡು ಆಫೀಸು ದಾವಣಗೆರೆಯಲ್ಲಿ ಇರುವದಕ್ಕೆ ಏನೂ ಅಭ್ಯಂತರವಿಲ್ಲ ಎಂಬುವದಕ್ಕೆ ಕೇಳಲಿಕ್ಕೆ ಹೋಗಿ ಅವರಲ್ಲಿ ಅಲ್ಲಿ ಪರ್ಯಾಲೋಚಿಸಿ ನನಗೆ ಪತ್ರ ಹಾಕಿದಾರೆ. ಮತ್ತು ನಾಡಿಗ ದತ್ತಾತ್ರೇಯರಾವ ಇವರು ಕಮಿಟಿ ಪ್ರಾಸಪೆಕ್ಟಸಿನ ನಕಲು ಮಾಡಿ ಎಲ್ಲರ ಸಮ್ಮತಿ ಪಡೆದು ತಾನು ಅದಕ್ಕೆ ಸೆಕ್ರೆಟರಿಯಾಗಿಯೂ, ನಾರಾಯಣಶರ್ಮಾ ಇವರು ಜಾಯಿಂಟ್ ಸೆಕ್ರೆಟರಿಯಾಗಿಯೂ, ಎಮ್. ಕೆ. ರಾಘವೇಂದ್ರರಾವ ಇವರು ವೈಸ್ ಪ್ರೆಸಿಡೆಂಟರಾಗಿಯೂ, ನಾನು ಪ್ರೆಸಿಡೆಂಟನಾಗಿಯೂ ಇರಬೇಕೆಂದು ಲೇಖನ ಮಾಡಿ ಬೆಂಗಳೂರಿಗೆ ಹೋಗಿ ಪ್ರಿಂಟು ಮಾಡುವದಕ್ಕೆ ನವರತ್ನಾ ಅಂಡ್ ಕೊ ನಲ್ಲಿ ಒಂದು ರೂಪಾಯಿ ಅಡ್ವಾನ್ಸು ಕೊಟ್ಟಿದಾರೆ. ಮುಂದೆ ಯಾವದೋ ಕಾರಣದಿಂದ ತಮ್ಮ ತಮ್ಮಲ್ಲಿಯೇ ಒಡಕು ಹುಟ್ಟಿದ್ದರಿಂದ ಅದನ್ನು ಮೋಕೂಫು ಮಾಡಿ ತಿರಿಗಿ ದಾವಣಗೆರೆಗೆ ಬಂದು ಕಳೆದ ಮೇ ತಾ. 19 ರಲ್ಲಿ ತಮ್ಮ ಪತ್ರಿಕೆಯಲ್ಲಿ "ಪೈಸಾ ಫಂಡ ಕಮಿಟಿ ನೇಮಕವಾದ ಸಮಾಚಾರವೇ ನಮಗೆ ತಿಳಿಯದು" ಎಂದು ಬಾಯಿಬಡುಕತನವನ್ನು ಮಾಡಿದ್ದು ನೋಡಿ ಬಹಳ ಆಶ್ಚರ್ಯವೂ, ವಿಷಾದವೂ ಆಗುತ್ತದೆ. ತಮಗೂ ಮತ್ತು ಸ್ವಾರ ಪತ್ರಿಕಾಕಾರರಿಗೂ ಮೊದಲು ಕೊಟ್ಟ ಬಾತಮೀದಾರನ ಬಾತಮಿಯು ನಿಶ್ಚಯವಾಗಿದೆ. ಮತ್ತು ಕರ್ನಾಟಕ ದೇಶಬಾಂಧವರು ಮೇಲಿನ ನಾಲ್ಕು ಜನ ಸಭ್ಯ ಗೃಹಸ್ಥರ ವಿಜ್ಞಾಪನೆಗೆ ಗಮನಕೊಡದೆ ದೇಶ ಕಾರ್ಯದ ಕಡೆಗೆ ತುಂಬಾ ಶ್ರದ್ಧೆ ಉಳ್ಳವರಾಗಿ ಪೈಸಾ ಕಮಿಟಿಯನ್ನು ಊರ್ಜಿತಕ್ಕೆ ತರುವರೆಂದು ನಂಬಿರುತ್ತೇನೆ. ಮತ್ತು ನಮ್ಮ ಕಮಿಟಿಯ ಏಜಂಟರು, ಬುಕ್ಕ ಸೆಲ್ಲರ ಇವರೆಲ್ಲರಿಗೆ ಎಚ್ಚರಪಡಿಸುವದೇನೆಂದರೆ—ಇನ್ನು ಮುಂದೆ ಕಮಿಟಿಯ ವಿಷಯವಾದ ಯಾವ ರಿಪೋರ್ಟುಗಳು ಮತ್ತು ಹಣದ ವಿಷಯವಾದ ಬಾಬುಗಳು, ಕರೆಸ್ಪಾಂಡೆನ್ಸುಗಳು ಮೇಲೆ ನಮೂದಿಸಿದವರ ಹೆಸರಿಗೆ ಮಾಡಕೂಡದು. ಮುಂದೆ ಅವರು ತಮ್ಮ ಕಲಂಕ ತೊಳೆಯುವದಕ್ಕೆ ಏನಾದರೂ ಬರೆಯಬಹುದು. ಅವು ಕೇವಲ ನಿರಾಧಾರಗಳಾಗಿವೆ.

ಜಯರಾಮಾಚಾರ್ಯ, ಕೊಪ್ಪರ.

ಎಚ್. ಎಂ. ಎನ್., ಉತ್ತೀನಹಳ್ಳಿ; ವಿದ್ಯಾಪಕ್ಷಪಾತಿ, ಹರಿಯಬ್ಬೆ; ದೇಶಪಾಂಡೆ ಕೆ. ಮಧ್ವರಾವ್, ಮೈಸೂರು; ಗುಡದಯ್ಯ, ತಿಮ್ಮನಹಳ್ಳಿ; ವಿದ್ಯಾಭಿಮಾನಿ, ಮೊಳಕಾಲ್ಮುರು; ತಾಲ್ಲೂಕ್ ಆಫೀಸ್, ಹುಣಸೂರು; ಸರ್ವಜನ ಹಿತಚಿಂತಕ, ಕೋಣಂದೂರು; ಲೋಕಾಭಿಮಾನಿ, ಮಾಕನಹಳ್ಳಿ:—ಈ ಬಾತ್ಮಿಗಳನ್ನು ಪ್ರಕಟಿಸಲು ಅವಕಾಶವಾಗಲಿಲ್ಲವೆಂದು ವಿಷಾದಿಸುತ್ತೇವೆ.—ಎಡಿ]

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗಾ.—ತಾ. 3 ನೇ ಗುರುವಾರ ರಾತ್ರಿ ಒಂದು ಹದ ಮಳೆ ಬಂತು.—ಇಲ್ಲಿನ ಟ್ರೆಜರಿ ಅ॥ ಕ॥ ಜಹಿರುದ್ದೀನ್ ಮೆಕ್ಕೆ ಯವರಿಗೆ ಸಾಗರಕ್ಕೆ ವರ್ಗವಾಯಿತು. ಮ॥ ಗೋಪಾಲಾಚಾರ್ಯರವರಿಗೆ ಛಾರ್ಜು ಕೊಟ್ಟರು.—ಈ ಊರಿಗೆ ಉತ್ತರಾದಿ ಶ್ರೀ ಸ್ವಾಮಿಗಳವರು ಬರುವರಾಗಿದಾರೆ.—ಶಿವಮೊಗ್ಗಾ ನಾರ್ಮಲ್ ಸ್ಕೂಲು ತಾ 31 ನೇ ಸೋಮವಾರದಿಂದ ಪ್ರಾರಂಭವಾಯಿತು.—ಅನೇಕ ನಲ್ಲಿಗಳಲ್ಲಿ ನೀರು ಇಲ್ಲ. ಬ್ರಾಹ್ಮಣರ ಕೇರಿ ಕರೋಡಿ ರಾಮರಾಯರ ಮನೆ ಹತ್ತಿರ ಇರುವ ನಲ್ಲಿಗೆ ನೀರು ಬಿಡದ್ದರಿಂದ ಆಸ್‌ಪಾಸ್ ಜನಗಳಿಗೆ ಬಹಳ ತೊಂದರೆಯಾಗಿದೆ.—ಲಗ್ನಕಾಲವಾದ್ದರಿಂದ ಅನೇಕ ಕಡೆಗಳಲ್ಲಿ ಚಪ್ಪರ ವಗೈರೆ ಹಾಕಿ ಆಯಾ ಮನೆಯವರು ಉಲ್ಲಾಸದೊಡನೆ ಮೆರವಣಿಗೆ ಮೊದಲಾದದ್ದನ್ನು ಮಾಡಿದರು.—ಗರ್ಲ್ಸ್ ಸ್ಕೂಲು ಮೊದಲು ರಾಮರಾಯರ ಮನೆಯಲ್ಲಿತ್ತು. ಕಾರಣಾಂತರದಿಂದ ಎ ವಿ. ಸ್ಕೂಲಿಗೆ ವರ್ಗಾಯಿಸಿದ್ದರು ಈಗ ಪುನಹ ಅವರ ಮನೆಯನ್ನೇ ಬಾಡಿಗೆ ಗೊತ್ತುಮಾಡಿ ಸ್ಕೂಲ್ ಮಾಡುತ್ತಾ ಇರುವುದರಿಂದ ಹತ್ತಿರಿರುವ ಮಕ್ಕಳಿಗೆ ಉತ್ತಮವಾಯಿತು.—ಡೆಪ್ಯುಟಿ ಕಮಿಷನರ್ ಸಾಹೇಬರವರು ಹೊತ್ತಿಗೆ ಸರಿಯಾಗಿ ಕಚೇರಿಗೆ ಬಂದು ಆಫೀಸ್ ಮಾಡುತ್ತಿರುವುದು ಬಹಳ ಜನಗಳಿಗೆ ಸಂತೋಷವನ್ನುಂಟುಮಾಡಿದೆ.—ಮಾಮೂಲ್ ಅನುಸರಿಸಿ ಈ ಊರ ಪತ್ತರದಲ್ಲಿರುವ ಪಿಳ್ಳಂಗೆರೆಯಲ್ಲಿ ರಥೋತ್ಸವವು 2 ನೇ ತಾ. ನಡಿಸಲ್ಪಟ್ಟಿತು. ಅಮಲ್ದಾರರೇ ಆದಿಯಾಗಿ ಎಲ್ಲಾ ನೌಕರರೂ ಮುತುವರ್ಜಿಯಿಂದ ಕೆಲಸ ಮಾಡಿದರು. ಮಳೆ ಬಾಧೆ ಏನು ಆಗದೆ ಜನರಿಗೆ ಸೌಖ್ಯ ಉಂಟಾದ್ದಕ್ಕೋಸ್ಕರ ಸಂತೋಷಪಡುತ್ತೇವೆ

ಕೋಲಾರ.—ತಾ. 1 ನೇ ಮಂಗಳವಾರ ದಳಸನೂರು ಗ್ರಾಮದಿಂದ ಈ ಊರಿನ ಮುನ್ಸಿಫ್ ಕೋರ್ಟಿನಲ್ಲಿ ವ್ಯಾಜ್ಯದ ಸಲವಾಗಿ ಬಂದಿದ್ದ ಶ್ಯಾನುಭೋಗನು ಈ ಊರಿನ ಹೋಟಲಿನಲ್ಲಿ ಊಟಮಾಡಿಕೊಂಡು ಕೋರ್ಟಿನ ಬಳಿಗೆ ಬಂದು, ದಾಹವಾಗುತ್ತೆಂದು ಹೇಳಿ ಯಾರಲ್ಲಿಯೋ ನೀರು ತೆಗೆದುಕೊಂಡು ಕುಡಿದು ತಲೆ ಸುತ್ತುತ್ತದೆಂದು ಹೇಳಿ ಅಲ್ಲಿಯೇ ಮಲಗಿ ಅಕಸ್ಮಾತ್ ಪ್ರಾಣಬಿಟ್ಟನು. ಈತನು ಬ್ರಾಹ್ಮಣನಾದ್ದರಿಂದ ಅದೇ ಸಾಯಂಕಾಲ ಈ ಊರಿನಲ್ಲಿಯೇ ದಹನಮಾಡಿಬಿಟ್ಟರು. ಈತನ ಅಣ್ಣನು ಸಂಗಡಲೇ ಇದ್ದನು. ಪೋಲೀಸಿನವರು ತಕ್ಕಷ್ಟು ವಿಚಾರಣೆಮಾಡಿ ದಹನಕ್ಕೆ ಅಪ್ಪಣೆಕೊಟ್ಟರು. ಸಾಧಾರಣವಾಗಿ ಅಕಸ್ಮಾತ್ ಮರಣಗಳನ್ನು ಪೋಸ್ಟ್ ಮಾರ್ಟಮ್ ಮೂಲಕ ಪರೀಕ್ಷಿಸಿ ದಹನ ಯಾ ದಫನ್‌ಗೆ ಅಪ್ಪಣೆಕೊಡುವದು ಪದ್ಧತಿ. ಆದರೆ ಈ ಶವವನ್ನು ಆ ರೀತಿ ಪರೀಕ್ಷಿಸಿದಂತೆ ಕಾಣುವದಿಲ್ಲ. ಕಾರಣವು ಸರ್ಕಾರಿ ಕಚೇರಿ ಮುಂದೆ ಹಾಡೆ ಹಗಲಿನಲ್ಲಿ ಆದ ಅಕಸ್ಮಾತ್ ಮರಣವಾದ್ದರಿಂದ ಪೋಸ್ಟ್ ಮಾರ್ಟಮ್ ಅವಶ್ಯವಿಲ್ಲವೆಂದು ಕಂಡುಬಂತೋ ಏನೋ ತಿಳಿಯದು.—ಈ ಊರಿನ ಸುತ್ತುಮುತ್ತು ತನ್ಮಧ್ಯೆ ವಿಶೇಷ ಮಳೆಗಳಾಗುತ್ತಾ ಇದ್ದರೂ ಈ ಊರಿನಲ್ಲಿ ವಿಶೇಷ ಮಳೆಗಳು ಬೀಳಲಿಲ್ಲ.—ರೈಲ್ವೆ ಕೆಲಸ ಶ್ರೀನಿವಾಸಪುರದ ಕಡೆಗೆ ತರಾತುರಿಯಿಂದ ನಡಿಸಲ್ಪಡುತ್ತಾ ಇವೆ.—ಈ ಊರಿನಲ್ಲಿ ಸುತ್ತುಮುತ್ತ ತೋಟಗಳಲ್ಲಿಯೂ ಗದ್ದೆಗಳಲ್ಲಿಯೂ ಅನೇಕರು ಬೇಸಾಯಕ್ಕಾಗಿ ಭಾವಿಗಳನ್ನು ಅಗೆಸುತ್ತಾ ಇದಾರೆ. ಮಳೆಗಳು ವಿಶೇಷ ಬೀಳದೆ ಇರುವದು ಈ ಭಾವಿಗಳನ್ನು ತೆಗೆಸುವವರಿಗೆ ಅನುಕೂಲವಾಯ್ತು—ಈ ಊರಿನಲ್ಲಿ ಪ್ಲೇಗಿನ ಹಾವಳಿ ಇಲ್ಲ, ಆದರೆ ದೊಡ್ಡಮ್ಮನೆಂಬ ಸಿಡುಬು ಅಲ್ಲಲ್ಲಿ ತಲೆದೋರಿದೆ

ತುಮಕೂರು.—ಈ ವರೆಗೂ ಬಿಸಿಲಿನ ತಾಪ ತಪ್ಪಲಿಲ್ಲ ಶನಿವಾರ ರಾತ್ರಿ ಸ್ವಲ್ಪ ಮಳೆ ಸುರಿಯಿತು. ಆದರೆ ಕೋಟೆಯಲ್ಲಿ ಒಂದು ಮದುವೆ ಮನೆ ಮಹಡಿಯ ಮೇಲೆ ಮಲಗಿದ್ದ ಮೂರು ಮಂದಿಗೆ ಸಿಡಿಲು ಬಡಿದು ಒಬ್ಬನು ಮೃತಪಟ್ಟನು; ಇನ್ನಿಬ್ಬರು ಆಯಾಸಹೊಂದಿ ಆಸ್ಪತ್ರೆ ಚಿಕಿತ್ಸೆಯಲ್ಲಿದಾರೆ.—ಇಲ್ಲಿನ ಟ್ರೆಜರಿ ಅ॥ ಕಮಿಷನರ್ ಮ॥ ನರಸಿಂಗರಾವ್ ಪೂರ್ಣಯ್ಯನವರು ವರ್ಗವಾಗಿ ಕೋಲಾರಕ್ಕೆ ದಯಮಾಡಿಸಿದರು. ಇವರು ಕೆಲಸವನ್ನು ಖಂಡಿತವಾಗಿ ಬಹು ಮುತುವರ್ಜಿಯಿಂದ ಮಾಡುತ್ತಿದ್ದರು. ಆದ್ದರಿಂದ ಇವರ ವಿಷಯದಲ್ಲಿ ಅಧಿಕಾರಿಗಳೂ ಪ್ರಜೆಗಳೂ ತುಂಬಾ ಗೌರವವನ್ನೂ ಪ್ರೀತಿಯನ್ನೂ ಇಟ್ಟುಕೊಂಡಿದಾರೆ. ಇವರ ಬದ್ಲಿಗೆ ಬಂದಿರುವ ಮ॥ ಮೃತ್ಯುಂಜಯ ಅಯ್ಯರವರು ಅದೇ ರೀತಿ ನಿರ್ದಾಕ್ಷಿಣ್ಯವಾಗಿ ಕೆಲಸಮಾಡಿ ಒಳ್ಳೇ ಹೆಸರನ್ನು ಹೊಂದಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.—ತಾಲ್ಲೂಕ್ ಅಮಲ್ದಾರ್ ಮ॥ ಶ್ರೀನಿವಾಸಯ್ಯಂಗಾರ್ರವರು ವರ್ಗವಾಗಿ ಹೋದದ್ದರಿಂದ ಅವರ ಸ್ಥಾನಕ್ಕೆ ದಯಾಳುಗಳೂ ನಿಧಾನಸ್ಥರೂ ಆದ ಮ॥ ಎಸ್. ಧರ್ಮರಾಯರು ದಯಮಾಡಿಸಿರುತ್ತಾರೆ.—ಇಲ್ಲಿನ ಸಬ್ ರೆಜಿಸ್ಟ್ರಾರವರು ಕಾಲಕ್ಕೆ ಸರಿಯಾಗಿ ಕಛೇರಿಗೆ ದಯಮಾಡಿಸಿ ತಮ್ಮ ಕೆಲಸವನ್ನು ಬಹಳ ಮುತುವರ್ಜಿಯಿಂದ ನಡಿಸುತ್ತಾ ದಸ್ತಾವೇಜುಗಳು ಜಾಗ್ರತೆಯಾಗಿ ಜನಗಳಿಗೆ ತಲ್ಪುವಂತೆ ತುಂಬಾ ಮುತುವರ್ಜಿ ವಹಿಸಿ ಹಿಂದಿನವರುಗಳಿಗಿಂತ ಬಹಳ ಚೆನ್ನಾಗಿ ಕೆಲಸಮಾಡುತ್ತಿರುವದರಿಂದ ಮ॥ ಚಂದ್ರಶೇಖರಮೊದಲಿಯಾರ್ರನ್ನು ಬಹು ಜನರು ಕೊಂಡಾಡುತ್ತಾರೆ.—ಈಚೆಗೆ ತಮ್ಮ ಪತ್ರಿಕಾಮುಖೇನ ಬಹಳವಾಗಿ ಕರೆಸ್‌ಪಾಂಡೆನ್ಸ್ ನಡೆದು ಚೀಫ್ ಕೋರ್ಟಿನವರ ಗಮನಕ್ಕೂ ಬಂದು ಈ ಊರಲ್ಲಿ ಮತ್ತೊಂದು ಮುನ್ಸಿಫ್ ಕೋರ್ಟು ಬಂದದ್ದರಿಂದ ಕೆಲಸಗಳು ಬಹಳ ಚುರುಕಾಗಿ ನಡೆಯುತ್ತಾ ಬರುತ್ತಿವೆ. ಇದರಿಂದ ಜನರ ತೊಂದರೆಗಳು ಬಹಳ ಮಟ್ಟಿಗೆ ಕಡಮೆಯಾದಾವೆಂದು ನಿರೀಕ್ಷಿಸಲ್ಪಟ್ಟಿದೆ.

ತುಮಕೂರು ತಾ॥ ಬೆಳ್ಳಾವೆ.—ಈ ಗ್ರಾಮವು ಭಾರಿ ಸಂತೆಯಿಂದ ಪ್ರಸಿದ್ಧವಾಗಿದೆ. ಈಚೆಗೆ ಈ ಸಂತೆಯು ಅನೇಕ ಕಾರಣಗಳಿಂದ ಹೀನಸ್ಥಿತಿಗೆ ಬಂದಿರುವದರಿಂದ ತುಮಕೂರಿಂದ ಬೆಳ್ಳಾವೆಯ ಮಾರ್ಗವಾಗಿ ಲೋಹಮಾರ್ಗವನ್ನು ನೆಲೆಗೊಳಿಸಿ, ವ್ಯಾಪಾರವನ್ನು ಅಭಿವೃದ್ಧಿಗೆ ತರುವ ಯೋಚನೆಯು 3-4 ವರ್ಷಗಳಿಂದ ನಡೆಯುತ್ತಾ ಇತ್ತು. ಈಗ ಈ ಯೋಚನೆಯು ಸಫಲವಾಯಿತೆಂದು ಕೇಳುವುದು ತುಂಬಾ ಸಂತೋಷಪ್ರದವಾಗಿದೆ.—ಬೆಳ್ಳಾವೆ ವಿ. ಇ. ಕನ್ನಡ ಬಾಯ್ಸ್ ಸ್ಕೂಲಿನಿಂದ ಈ ವರ್ಷ ಲೋ. ಸೆ. ಪರೀಕ್ಷೆಗೆ ಹೋಗಿದ್ದ 15 ಮಂದಿಯಲ್ಲಿ 13 ಮಂದಿ ಪ್ಯಾಸಾಗಿರುವುದು ತುಂಬಾ ಶ್ಲಾಘನೀಯವಾಗಿಯೂ, ಇವರಲ್ಲಿ ಒಬ್ಬ ಪಂಚಮವಿದ್ಯಾರ್ಥಿಯು ಪ್ಯಾಸಾಗಿರುವುದು ಮತ್ತೂ ಸ್ತೋತ್ರಾರ್ಹವಾಗಿಯೂ ಇದೆ. ಈಗ ಈ ಸ್ಕೂಲಿಗಾಗಿ ಕಟ್ಟಡವು ತಯಾರಾಗಿರುವುದಲ್ಲದೆ ಈ ಸ್ಕೂಲ್ ಇಷ್ಟರಲ್ಲಿಯೇ ಎ. ವಿ. ಸ್ಕೂಲ್ ಆಗುವ ಸಂಭವವೂ ಇದೆ.—ಈ ಗ್ರಾಮದಲ್ಲಿ ಸ್ಥಾಪಿತವಾಗಿರುವ ಗ್ರಾಮ ಮುನ್ಸೀಫ್ ಕೋರ್ಟು ಮ॥ ಅನಂತರಾಜಪ್ಪನವರ ಅಧ್ಯಕ್ಷತೆಯಲ್ಲಿಯೂ, ಕೋಆಪರೆಟಿವ್ ಸೊಸೈಟಿಯು ಮ॥ ಗ. ವಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿಯೂ ತೃಪ್ತಿಕರವಾಗಿ ಕೆಲಸ ನಡೆಯುತ್ತಾ ಇದೆ. ವಾಚಕಶಾಲೆಯು ಸಾಧಾರಣವಾಗಿ ನಡೆಯುತ್ತಾ ಇದೆ. ಗ್ರಾಮಾಭಿವೃದ್ಧಿಯ ಮತ್ತು ಗ್ರಾಮ ಪಾಠಶಾಲಾ ವಿಷಯದಲ್ಲಿ ಯೂನಿಯನ್ ಮೆಂಬರುಗಳೂ, ಶೇಕ್‌ದಾರರೂ ಔದಾಸೀನ್ಯವನ್ನು ವಹಿಸಿರುವಂತೆ ಕಾಣುವುದು. ಇದನ್ನು ಅಧಿಕಾರಿಗಳು ಪ್ರತಿ ತಿಂಗಳಲ್ಲಿಯೂ ಮೀಟಿಂಗ್ ನಡಿಸಿ ಕ್ರಮಪಡಿಸಬೇಕಾಗಿದೆ. ಕೊರಟಗೆರೆ ಬಳಿ ತಡೆಯಲ್ಪಟ್ಟಿರುವ ಗ್ಯಾಂಗ್ ಒಡ್ಡರು ಹೇಗೋ ತಪ್ಪಿಸಿಕೊಂಡು ಬಂದು ಈ ಗ್ರಾಮದಲ್ಲಿಯೂ ಅಜುಬಾಜು ಗ್ರಾಮಗಳಲ್ಲಿಯೂ ನಿರ್ಭಯವಾಗಿ ಕನ್ನಾ ಕಳವು ನಡಿಸುತ್ತಾ ಇದ್ದುದು ಈಚೆಗೆ ಸ್ವಲ್ಪ ಕಡಮೆಯಾಗಿದೆ. ಆದರೂ ಪೋಲೀಸ್ ಅಧಿಕಾರಿಗಳು ಗಮನಕೊಟ್ಟು ಕಳ್ಳರನ್ನು ಅಡಗಿಸಬೇಕಾಗಿದೆ.

ಶ್ರೀರಂಗಪಟ್ಟಣ.—ಈಗ್ಗೆ 16-20 ದಿವಸಗಳ ಲಾಗಾಯ್ತು 5-6 ಹದ ಮಳೆ ಆಗಿ ದನಕರುಗಳಿಗೆ ಹಸರು ಮೇವೂ, ಕುಡಿಯುವುದಕ್ಕೆ ನೀರೂ ಸಮೃದ್ಧಿಯಾಗಿದೆ. ಹವ ಸ್ವಲ್ಪ ಬದಲಾಯಿಸಿದೆ. ರಸ್ತೆಗಳಲ್ಲಿ ಮಳೆ ನೀರಿನಿಂದ ಮಣ್ಣು ಕೊಚ್ಚಿಹೋಗಿ ಬೆಣಚು ಕಲ್ಲುಗಳೆದ್ದು ತಿರುಗಾಡುವವರಿಗೆ ಬಹಳ ತೊಂದರೆಯಾಗುತ್ತಿದೆ. ಅಲ್ಲಲ್ಲಿ ರಿಪೇರಿ ಬಗ್ಗೆ ಚರಂಡಿಗಳನ್ನು ಕಿತ್ತುಹಾಕಿರುವುದರಿಂದ ಮಳೆ ನೀರು ಚರಂಡಿ ತುಂಬಿ ರಸ್ತೆಗಳ ಮೇಲೆ ಹರಿದು ರಸ್ತೆಗಳನ್ನು ಹಾಳುಮಾಡುತ್ತಿದೆ.—ರಾತ್ರಿ ಕಾಲದಲ್ಲಿ ಕೆಲವು ಕಡೆ ಲಾಂದ್ರಗಳಲ್ಲಿ ದೀಪವೇ ಇರುವುದಿಲ್ಲ; ಇರುವ ಕಡೆ ಬೆಳಕು ಸಾಲದು. ಹೊಸ ಮ್ಯುನಿಸಿಪಲ್ ಓವರ್ಸೀಯರು ಗ್ರಾಮ ಪಾಠಶಾಲಾ ಮುಂತಾದ ಕೆಲಸಗಳನ್ನು ಬಹುಮಟ್ಟಿಗೆ ಚೆನ್ನಾಗಿ ನಡೆಯಲು ಏರ್ಪಾಡು ಮಾಡುತ್ತಿದೇವೆಂದು ಸಂತೋಷಪಡುತ್ತಿದಾರೆಯೇ ವಿನಾ ಕಾರ್ಯವ್ಯಾವುದೂ ನಡೆಯುತ್ತಿಲ್ಲ ಬಡ ನೌಕರರ ಮೇಲೆ ಅವರ ಅಧಿಕಾರ ನಿರ್ವಾಹವಿಲ್ಲ.—ಮ॥ ಮಲ್ಲರಾಜೆ ಅರಸಿನವರು ಇಲ್ಲಿಗೆ ಅಮಲ್ದಾರರಾಗಿ ಬಂದ ಲಾಗಾಯ್ತು ಸರ್ಕಾರಿ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿವೆ ಬಡ ನೌಕರರುಗಳಿಗೆ ಆಶ್ರಯದಾತರಾಗಿರುತ್ತಾರೆ. ಇಂಥಾ ರಾಜಬಂಧುಗಳೇ ಮುಖ್ಯ ಮುಖ್ಯ ತಾಲ್ಲೂಕುಗಳಲ್ಲಿ ಇದ್ದರೆ ಆ ತಾಲ್ಲೂಕು ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ಇಲ್ಲಿಗೆ ಖಾಯಂ ಅಮಲ್ದಾರರು ಬಂದಿರುವಂತೆಯೂ, ಇವರು ಪುನಹ ಡೆಪ್ಯುಟಿ ಅಮಲ್ದಾರರಾಗಿ ಹೊರಟು ಹೋಗುತ್ತಾರೆಂತಲೂ ವರ್ತಮಾನವಿದೆ.—ದೇವಸ್ಥಾನದ ಧರ್ಮ ದರ್ಶಿಗಳನ್ನು ಸರ್ಕಾರದವರು ಏರ್ಪಾಡು ಮಾಡಿರುವುದರಿಂದ ಮುಜರಾಯಿ ಬಡ ನೌಕರರಿಗೆ ಕಷ್ಟವಾಗಿದೆ—ಇಲ್ಲಿನ ಎ. ವಿ. ಸ್ಕೂಲಿಗೆ ಮ॥ ಸಿ. ಎನ್. ಸೀತಾರಾಮ ಶಾಸ್ತ್ರಿಗಳು ಹೆಡ್ ಮಾಸ್ಟರಾಗಿ ಬಂದಲಾಗಾಯ್ತು ಸ್ಕೂಲ್ ಅಭಿವೃದ್ಧಿ ಹೊಂದುತ್ತಲೂ, ಲೋ. ಸೆ. ಫಲಿತಾಂಶ ಉತ್ತಮ ರೀತಿಯಿಂದ ಬರುತ್ತಲೂ ಇದೆ ಇವರು ತಮ್ಮ ಅ॥ ಮಾಸ್ಟರುಗಳ, ಬಾಲಕರುಗಳ, ದೊಡ್ಡ ಮನುಷ್ಯರುಗಳ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ನಮ್ಮ ದಿವಾನ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದ ಕಾಲದಲ್ಲಿ ಸ್ಕೂಲನ್ನು ಪರಾಂಬರಿಸಿ ತೃಪ್ತಿಪಟ್ಟುಕೊಂಡು ದಯಮಾಡಿಸಿರುತ್ತಾರೆ. ಈ ಸಲ ಲೋ. ಸೆ. ಪರೀಕ್ಷೆಯಲ್ಲಿ 10 ಕ್ಕೆ 7 ಮಂದಿ ತೇರ್ಗಡೆಯಾಗಿದಾರೆ—ಈ ಊರಿಗೆ ಮ॥ ಬಸವಂತ ಕಾಳೋಜಿರಾಯರು ಪೋಲೀಸ್ ಇನ್ಸ್‌ಪೆಕ್ಟರಾಗಿ ಬಂದ ಲಾಗಾಯ್ತು ಕಳ್ಳತನ ಜೂಜು ಸ್ವಲ್ಪ ಕಡಮೆಯಾಗಿದೆ; ಆದರೆ ರಾತ್ರಿ ವೇಳೆ ಹೆಂಡ ಕುಡಿದು ಜನರ ನಿದ್ದೆಗೆ ಭಂಗಪಡಿಸಿ ರಸ್ತೆಗಳಲ್ಲಿ ಅಲೆಯುತ್ತಿರುವವರನ್ನು ಹಿಡಿಸಿ ಬಂದೋಬಸ್ತು ಮಾಡಿಸ್ಯಾರೆಂದು ನಂಬಿದೆ—ಶ್ರೀಮನ್ ಮಹಾರಾಜಾ ಲೇಟ್ ಶ್ರೀಕೃಷ್ಣರಾಜೇಂದ್ರ ಒಡೆಯರವರ ಜನ್ಮಸ್ಥಳದಲ್ಲಿ ಜ್ಞಾಪಕಾರ್ಥವಾಗಿ ಈಗ ಕಟ್ಟಿರುವ ಮಂಟಪದ ಪ್ರಾರಂಭೋತ್ಸವವನ್ನು ಬರುವ ಜೂಲೈ 1 ತಾ ಗುರುವಾರ ಇಲ್ಲಿಗೆ ನಮ್ಮನ್ನಾಳುತ್ತಿರುವ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಸವಾರಿಯು ದಯಮಾಡಿಸಿ ನೆರವೇರಿಸುತ್ತಾರೆಂದು ಕೇಳಿ ಆನಂದ ಉಂಟಾಗಿದೆ.—ಈ ಊರು ಚರಿತ್ರಾರ್ಹವಾದ್ದರಿಂದ ಈ ಜೂನ್ 3 ತಾ. ಗುರುವಾರ ಇಲ್ಲಿಗೆ ಸೀಮೆಯಿಂದ ಬೆಂಗಳೂರಿಗೆ ಬಂದಿರುವ 400 ಜನ ಯೂರೋಪಿಯನ್ ಸೋಜರುಗಳೂ, ಹುದ್ದೆದಾರರುಗಳೂ ಬಂದು, ಊರನ್ನು ನೋಡಿಕೊಂಡು, ದರಿಯಾ ಬಾಗಿನಲ್ಲಿ ಊಟ ಉಪಚಾರ ಹೊಂದಿ, ಆ ರಾತ್ರಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

ವಿದೇಶದ ವೃತ್ತಾಂತಗಳು.

ಗ್ರೀಸ್ ದೊರೆಯವರಿಗೆ ಈಗೀಗ ಕಾಯಿಲೆ ವಾಸಿಯಾಗುತ್ತಿದೆ ಎಂದೂ, ಜ್ವರ ಬಿಟ್ಟಿರುವುದಾಗಿಯೂ ಜರ್ಮನಿಯ ಮತ್ತೂ ಆಸ್ಟ್ರಿಯದ ವೈದ್ಯರು ಪ್ರಕಟಮಾಡಿಸಿದಾರೆ.

ಇಂಗ್ಲೆಂಡಿಗೆ ಸೇರಿದ ಮ್ಯಾಂಚೆಸ್ಟರ್ ನಗರದೊಳಗೆ ಷಿಪ್ ಕೆನಾಲ್ ಕಂಪನಿಯ ಹತ್ತಿ ಉಗ್ರಾಣಕ್ಕೆ ಕಳೆದ ಶನಿವಾರ ಬೆಳಗ್ಗೆ ಬೆಂಕಿ ಬಿದ್ದು ಉಗ್ರಾಣವೆಲ್ಲಾ ಸುಟ್ಟುಹೋಯಿತು. ಅನೇಕ ಸಾವಿರ ಪೌಂಡುಗಳು ನಷ್ಟವಾಗಿವೆ.

ಜರ್ಮನಿಯ ಪೋಸ್ಟ್ ಇಲಾಖೆಯ ನೌಕರಮಾನೇರುಗಳ ಪೈಕಿ ಅನೇಕರು ಸೈನಿಕರಾಗಿ ಯುದ್ಧಭೂಮಿಗೆ ಹೋಗಿದಾರೆ ರಣರಂಗದಲ್ಲಿ ಅವರೊಳಗೆ 3,456 ಮಂದಿ ಕೊಲೆಯಾದರೆಂದೂ, ಇನ್ನೂ ಅನೇಕರು ಕಾಯಿಲೆಯಾಗಿದಾರೆಂದೂ, ಹಲವರು ಗಾಯಪಟ್ಟರೆಂದೂ, ಬಹು ಮಂದಿ ಸಿಕ್ಕಿಲ್ಲವೆಂದೂ ಪೋಸ್ಟ್ ಆಫೀಸ್ ಇಲಾಖೆಯವರು ಪ್ರಕಟಿಸಿದಾರೆ

ಜರ್ಮನಿಯವರು ಹೊಸ ತರದ ಜೆಪ್ಪಲಿನ್ ಎಂಬ ಭಾರೀ ವಿಮಾನಗಳು ಆರನ್ನು ಫ್ರೆಡ್ರಿಕ್‌ಷೇಫನ್ ನಗರದ ಕಾರ್ಖಾನೆಯಲ್ಲಿ ತಯಾರುಮಾಡಿರುವುದಾಗಿಯೂ, ಇವುಗಳನ್ನು ಲಂಡನ್ ಪಟ್ಟಣದ ಮೇಲೆ ಕಳುಹಿಸಿ ಅವುಗಳಿಂದ ಮಂಜು ಮುಸುಕಿಕೊಳ್ಳುವಂಥಾ ವಿಜಾತೀಯವಾದ ಸಿಡಿಮದ್ದಿನ ಗುಂಡುಗಳನ್ನು ಮೊದಲು ಹಾಕಿಸಿ ಆ ಮಂಜಿನ ಮರೆಯಲ್ಲಿ ವಿಮಾನಗಳು ವಿನಾಶ ಕೃತ್ಯಗಳನ್ನು ನಡಿಸುವ ಏರ್ಪಾಡು ನಡೆದಿದೆ ಎಂದೂ ಒಬ್ಬ ದೇಶಸಂಚಾರಿಯು ತಿಳಿಸಿರುವನು.

ಅಮೇರಿಕಾಕ್ಕೆ ಸೇರಿದ ವಾಸಿಂಗ್‌ಟನ್ ಎಂಬ ಪಟ್ಟಣದಲ್ಲಿ ಮಿ॥ ಚಾರ್ಲ್ಸ್ ವಿಲ್ಲಿಯಂ ಪೋಸ್ಟ್ ಎಂಬ ವರ್ತಕನು ಕೆಲವು ಆಹಾರ ವಸ್ತುಗಳನ್ನು ತಯಾರುಮಾಡಿ ಬಿಕರಿ ಮಾಡುತ್ತಾ ಕಳೆದ 20 ವರ್ಷಗಳಲ್ಲಿ 6,44,10 000 ರೂಪಾಯನ್ನು ಸಂಪಾದನೆ ಮಾಡಿದನೆಂದು ಆತನು ಬರೆದಿಟ್ಟಿರುವ ಮರಣಶಾಸನದಿಂದ ತಿಳಿಯುತ್ತದೆ. ಈತನಿಗೆ ಹೊಟ್ಟೆಯಲ್ಲಿ ಒಂದು ದುಸ್ಥಿತಿಗಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡನು. ಅದರಿಂದ ಅವನ ಮನಸ್ಸು ಬಹಳ ಕೆಟ್ಟುಹೋಗಿ ಕಡೆಗೆ ಆತ್ಮಹತ್ಯ ಮಾಡಿಕೊಂಡಿರುತ್ತಾನೆ.

ಜರ್ಮನಿ ಪಾರ್ಲಿಮೆಂಟಿನಲ್ಲಿ ಅಲ್ಸೇಸಿನ ಮೆಂಬರಾಗಿರುವ ಎಂ. ಜಾಕ್ವೆಸ್ ಪಿಯರೊಟೆಸ್ ಎಂಬಾತನು ಫ್ರೆಂಚರ ವಿಷಯದಲ್ಲಿ ಕನಿಕರಪಟ್ಟು ಮಾತನಾಡಿದ್ದರಿಂದ ಜರ್ಮನಿ ಸರ್ಕಾರದವರು ಆತನನ್ನು ಒಂದು ಕಡೆ ಬಂಧನದಲ್ಲಿ ಹಾಕಿಬಿಟ್ಟು, ಯುದ್ಧ ಮುಗಿಯುವ ತನಕ ಬಿಡಕೂಡದೆಂದು ಆಜ್ಞೆ ಮಾಡಿದ್ದಾರೆ.

ಬ್ರಿಟಿಷ್ ನಾವೆಯು ಇಲಾಖೆಯಲ್ಲಿ ಪಾರ್ಲಿಮೆಂಟ್ ಸೆಕ್ರೆಟರಿಯಾಗಿರುವ ಮಿ॥ ಟಿ. ಜೆ. ಮೆಕ್ನಮಾರಾಯವರು ಈಗಿನ ಯುದ್ಧದಲ್ಲಿ ಇದುವರೆಗೆ (ಮೇ ತಾ. 13) ಬ್ರಿಟಿಷರ 201 ವ್ಯಾಪಾರದ ಹಡಗುಗಳೇ ಮೊದಲಾದವುಗಳನ್ನು ಜರ್ಮನಿಯವರು ಮುಳುಗಿಸಿರುತ್ತಾರೆಂದೂ, ಅವುಗಳಲ್ಲಿದ್ದ ಪ್ರಯಾಣಿಕರೂ ಸೇವಕಾಳುಗಳೂ 1,556 ಜನರು ಸಮುದ್ರದ ಪಾಲಾದರೆಂದೂ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಜರ್ಮನಿಗೆ ಸೇರಿದ ಲೂಬೆಕ್ ನಗರದಲ್ಲಿ ಕೋಟ್ಯಾಧೀಶ್ವರನಾದ ಸೆನೆಟರ್ ಪೊಸ್ಸೆಗ್ ಎಂಬಾತನು ಕಳೆದ ವರುಷ ತನ್ನ ಸ್ವಂತ ಖರ್ಚಿನಿಂದ ಜೆಪ್ಪೆಲಿನ್ ಎಂಬ ಭಾರೀ ವಿಮಾನ ಯಂತ್ರವನ್ನು ಜರ್ಮನಿ ಸರ್ಕಾರಕ್ಕೆ ಮಾಡಿಸಿ ಒಪ್ಪಿಸಿದನು. ಈತನು ಗ್ರೇಟ್ ಬ್ರಿಟನ್‌ಗೆ ಲೋಹಗಳನ್ನೂ ಇತರ ಸರಕನ್ನೂ ರವಾನೆ ಮಾಡಿದನೆಂದೂ, ಅದು ರಾಜದ್ರೋಹವಾಯಿತೆಂದೂ ಹೇಳಿ ಜರ್ಮನಿಯವರು ಆತನನ್ನು ದಸ್ತಗಿರಿ ಮಾಡಿರುತ್ತಾರೆ.

ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ಸ್ವತಂತ್ರ ಪ್ರಜಾಪ್ರಭುತ್ವದಲ್ಲಿ ವಿರಕ್ಷಾಮ ಪ್ರಾಪ್ತವಾಗಿ ರಾಜಧಾನಿಯಲ್ಲಿ ಜನಗಳು ಹೊಟ್ಟೆಗಿಲ್ಲದೆ ಬಹಳ ಸಂಕಟಪಡುತ್ತಾರೆ. ಪ್ರಜೆಗಳು ಆಹಾರಕ್ಕೋಸ್ಕರ ಅನೇಕ ದಂಗೆ ಕೃತ್ಯಗಳನ್ನು ನಡೆಸಿದರು. ಅಕಪಲ್ಕೊ ನಗರದಲ್ಲಿ ಧರ್ಮಕ್ಕೆ ಆಹಾರವನ್ನು ಹಂಚುವಾಗ್ಗೆ ಒಬ್ಬರ ಮೇಲೊಬ್ಬರು ನುಗ್ಗಿ ಸಣ್ಣವರನ್ನೂ ಮಕ್ಕಳನ್ನೂ ತುಳಿದು ಕೊಂದುಬಿಟ್ಟರು. ಪ್ರಜಾಸಮೃದ್ಧಿಗೆ ಭಂಗವುಂಟಾಗದಂತೆ ಜಾಗ್ರತೆಯಿಂದ ಕಾರ್ಯಗಳನ್ನು ನಡಿಸದಿದ್ದರೆ ಸೈನ್ಯವನ್ನು ಕಳುಹಿಸುತ್ತೇವೆಂದು ಅಮೇರಿಕಾ ಸರ್ಕಾರದವರು ಮೆಕ್ಸಿಕೋದವರಿಗೆ ತಿಳಿಸಿದ್ದಾರೆ.

ಫ್ರೆಂಚರು ಮೋಟರ್ ಗಾಡಿಗಳ ತಬೇಲಿಗೆ ಗಾರೆಜ್ ಎಂಬ ಮಾತನ್ನು ಉಪಯೋಗಿಸುತ್ತಾರೆ. ಜರ್ಮನಿಗೆ ಸೇರಿದ ಒರ್ಡೆನ್‌ಬರ್ಗ್‌ದಲ್ಲಿ ಮೋಟರುಗಳ ಕಾರ್ಖಾನೆಯ ಒಂದು ಭಾಗದಲ್ಲಿ ಮೇಲ್ಗಡೆ ಗಾರೆಜ್ ಎಂಬ ಮಾತು ಬರೆದಿದ್ದ ಬೋರ್ಡನ್ನು ನೇತುಹಾಕಿದ್ದರು. ಸರ್ಕಾರದವರು ಆ ಕಾರ್ಖಾನೆಯ ಯಜಮಾನನನ್ನು ಹಿಡಿದು—ಫ್ರೆಂಚರು ನಮ್ಮ ಶತ್ರುಗಳಾಗಿರುವಾಗ ಅವರ ಭಾಷೆಯ ಈ ಪದವನ್ನು ಬೋರ್ಡಿನ ಮೇಲೆ ಯಾಕೆ ಬರೆಸಿದೆ ಎಂದು ಆಕ್ಷೇಪಣೆ ಮಾಡಿ, ಆ ಕೋಟ್ಯಾಧೀಶ್ವರನಿಗೆ 6,750 ರೂಪಾಯಿ ಜುಲ್ಮಾನೆ, ತಪ್ಪಿದರೆ ಮೂರು ದಿನ ಸಜಾ ಅನುಭವಿಸಬೇಕೆಂಬ ಶಿಕ್ಷೆಯನ್ನು ವಿಧಿಸಿದರು. ಹಾಗೆಯೇ ಬೆಲ್ಜಿಯಮ್ ರಾಜ್ಯದೊಳಗೂ ಯಾರೂ ಫ್ರೆಂಚರ ಭಾಷೆಯನ್ನು ಆಡಕೂಡದೆಂದೂ, ಆಡಿದವರಿಗೆ ನಾನಾ ಬಗೆಯ ಕಠಿಣವಾದ ಶಿಕ್ಷೆಗಳನ್ನು ವಿಧಿಸುವುದಾಗಿಯೂ ಜರ್ಮನಿ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಗ್ರೇಟ್ ಬ್ರಿಟನ್ ರಾಜ್ಯದ ಮಂತ್ರಿ ಶ್ರೇಷ್ಠರಾದ ಮಿ॥ ಅಸ್ಕಿತ್‌ರವರು ಗ್ರೇಟ್ ಬ್ರಿಟನ್‌ನಲ್ಲಿ ವಾಸಮಾಡಿಕೊಂಡಿರುವಂಥಾ ಜರ್ಮನಿ ಪ್ರಜೆಗಳ ವಿಷಯದಲ್ಲಿ ಅಪ್ಪಣೆಕೊಡಿಸುವುದೇನೆಂದರೆ—ಪ್ರಾಯಸಮರ್ಥರಾದ ಜರ್ಮನಿ ಗಂಡಸರನ್ನು ಒಂದು ಕಡೆ ಹಿಡಿದು ಸುರಕ್ಷಿತವಾಗಿ ಇಡುವುದು ಅವರಿಗೂ ನಮಗೂ ಕ್ಷೇಮಕರವಾಗಿದೆ. ಪ್ರಾಯ ಮೀರಿದವನ್ನು ಅವರ ಸ್ವಸ್ಥಳಕ್ಕೆ ಕಳುಹಿಸುವುದು ಒಳ್ಳೇದು. ಹೆಂಗಸರು ಮಕ್ಕಳನ್ನೂ ವಾಪಸು ಅವರ ಜನ್ಮಭೂಮಿಗೆ ಕಳುಹಿಸಿಕೊಡುವೆವು. ಯಾರ್ಯಾರನ್ನು ಉಳಿಸಿಟ್ಟುಕೊಳ್ಳಬಹುದೆಂದು ಗೊತ್ತುಮಾಡುವುದಕ್ಕೆ ಒಂದು ಪಂಚಾಯಿತನ್ನು ನೇಮಕಮಾಡುತ್ತೇವೆ. ಇದುವರೆಗೆ 19,000 ಜರ್ಮನಿ ಪ್ರಜೆಗಳನ್ನು ಹಿಡಿದು ಇಟ್ಟಿರುವೆವು. ಇನ್ನೂ 40,000 ಗಂಡಸರನ್ನು ಹಿಡಿದಿಟ್ಟಿಲ್ಲ. ಇಂಗ್ಲಿಷ್ ಪ್ರಜೆಗಳು ಜರ್ಮನಿ ಜನಗಳ ಮನೆ ಮಠ ಅಂಗಡಿ ಮುಂಗಟ್ಟುಗಳನ್ನು ನುಗ್ಗಿ ಕೊಳ್ಳೆಹೊಡೆಯುವುದೂ, ಸಾಮಾನುಗಳನ್ನು ಹಾಳು ಮಾಡುವುದೂ ಬಹಳ ದುಃಖಕರವಾಗಿರುತ್ತದೆ. ಆದರಿಂದ ಶತ್ರುವಿಗೆ ಯಾವ ಬಾಧಕವನ್ನೂ ಉಂಟುಮಾಡಿದಂತಾಗಲಿಲ್ಲ; ಇದಕ್ಕೆ ಪ್ರತಿಯಾಗಿ ಸಭ್ಯರೂ ನಿರಪರಾಧಿಗಳೂ ಆದ ಜನರನ್ನು ವೃಥಾ ಕಷ್ಟ ನಷ್ಟಗಳಿಗೆ ಗುರಿಪಡಿಸಿದಂತಾಗುವುದು ಎಂಬುದೇ.

ಟರ್ಕಿಗೂ ಪರ್ಷಿಯಾವಿಗೂ ಮಧ್ಯೆ ಎಲ್ಲೆಕಟ್ಟಿನಲ್ಲಿರುವ ಉರೂಮಿಯಾ ಎಂಬ ಪಟ್ಟಣದಿಂದ ಒಬ್ಬಾನೊಬ್ಬ ಅಮೇರಿಕಾ ಪಾದ್ರಿಯು ಏಪ್ರೆಲ್ ತಾ. 8 ರಲ್ಲಿ ಬರೆಯುವುದೇನೆಂದರೆ— ಟರ್ಕಿಯವರೂ ಕುರ್ದ್ ಜನರೂ ಕ್ರೈಸ್ತ ಗ್ರಾಮಗಳಿಗೆ ನುಗ್ಗಿ ಕೊಳ್ಳೆಹೊಡೆದು ಸುಟ್ಟುಹಾಕಿದ್ದಾರೆ. 1,000 ಜನರನ್ನು ಕೊಂದುಹಾಕಿದರು; 2,000 ಜನರು ರೋಗದಲ್ಲಿ ಕಾಲವಾದರು. 200 ಮಂದಿ ಟರ್ಕಿ ಸೈನಿಕರು ಕೊಲೆಗಳನ್ನು ಮಾಡುತ್ತಿದ್ದರು. ಕೊಲೆಗಳು, ಮಾನಭಂಗ ಕೃತ್ಯಗಳು, ಹೆಂಗಸರು ಮಕ್ಕಳನ್ನು ಅಪಹರಿಸಿಕೊಂಡುಹೋಗುವುದು, ಈ ಬಗೆಯ ಕೃತ್ಯಗಳು ಸಾಲ್ಮಾಸಿನಲ್ಲೂ, ಗುಲ್ಪೆರ್ಗನ್‌ನಲ್ಲೂ ನಡೆಯುತ್ತಲಿವೆ. ಟರ್ಕಿ ರಾಯಭಾರಿಯ ಹುಕುಂ ಪ್ರಕಾರ 26 ಮಂದಿ ಗೌರವಸ್ಥರನ್ನು ಸ್ಮಶಾನಕ್ಕೆ ಎತ್ತಿಕೊಂಡು ಹೋಗಿ ಅವರ ಬಂಧುಬಳಗಗಳ ಎದುರಿಗೆ ಕುರಿಗಳಂತೆ ಕಡಿದುಹಾಕಿದರು. ಒಬ್ಬ ಪಾದ್ರಿಯನ್ನೂ, ಒಬ್ಬ ಪಾದ್ರಿಯ ರಕ್ತಸಂಬಂಧಿಗಳನ್ನೂ ಶಿಲುಬೆಗೆ ಜಡಿದು ಕೊಂದು ಜೀವಸಹಿತ ಸುಟ್ಟುಹಾಕಿದ್ದಾರೆ. ಒಬ್ಬ ಬಿಷೊಪ್ಪನ್ನು ಗಲ್ಲಿಗೆ ಎತ್ತಿದರು. ಕ್ಯಾಥೊಲಿಕ್ ಮಿಷನ್ ಆಶ್ರಯದಲ್ಲಿದ್ದ 64 ಜನರನ್ನು ರಾಯಭಾರಿಯ ಎದುರಿಗೆ ನಿಲ್ಲಿಸಿ ಕೊಂದುಬಿಟ್ಟರು. ಸಾಲ್ಮಾಸಿನಲ್ಲಿ ಅನೇಕ ಕ್ರೈಸ್ತರನ್ನು ಕೈ ಕೈಗೆ ಕಟ್ಟಿಹಾಕಿ ಕಡಿದುಹಾಕಿರುತ್ತಾರೆ. ಇನ್ನು ಕೆಲವರನ್ನು ಏಣಿಗಳಿಗೆ ಕಟ್ಟಿ ಕತ್ತು ಕತ್ತರಿಸಿದರು ಎಂಬುದೇ.

ಇಂಡಿಯಾ ದೇಶದ ವೃತ್ತಾಂತಗಳು.

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೊಲಂಬೋ ಮುಂತಾದ ಪಟ್ಟಣಗಳಲ್ಲಿ ಕಳೆದ ವಾರ ಮುಸಲ್ಮಾನರಿಗೂ ಸಿಂಹಾಳೀಗಳಿಗೂ ವಿಶೇಷವಾದ ಕಲಹಗಳುಂಟಾಗಿ ಸರ್ಕಾರದವರು ದೊಂಬಿಗಳನ್ನು ಚದರಿಸುವುದಕ್ಕಾಗದೆ ಸೈನಿಕರನ್ನು ಕರಸಿ ಗುಂಡುಹೊಡೆದು ದೊಂಬಿಗಳನ್ನು ಚದರಿಸುವಂತೆ ಅಪ್ಪಣೆ ಕೊಟ್ಟಿದ್ದಲ್ಲದೆ ಯುದ್ಧಕಾಲದ ಕಾನೂನುಗಳನ್ನು ಜಾರಿಗೆ ತಂದಿದೆ ಎಂದು ಇಸ್ತಿಹಾರು ಹಾಕಿಸಿದರು. ಈ ದೊಂಬಿ ಕಲಹಗಳಲ್ಲಿ ಸುಮಾರು 60-70 ಜನರು ಮೃತಪಟ್ಟರೆಂದೂ, ನೂರಾರು ಮಂದಿಗೆ ಗಾಯಗಳಾಗಿ ಇಲಾಜು ಹೊಂದುತ್ತಿದ್ದಾರೆಂದೂ ತಿಳಿಯುವುದು.

ಪೂರ್ವ ಬಂಗಾಳಕ್ಕೆ ಸೇರಿದ ಟಿಪ್ಪಾರಾ ಸಂಸ್ಥಾನದಲ್ಲಿ ಮಳೆಯ ದೆಸೆಯಿಂದ ಪ್ರವಾಹ ಬಂದು ಪ್ರಜೆಗಳು ಊರುಬಿಟ್ಟು ರಾಜಧಾನಿಗೆ ಹೋಗಿ ಸೇರಿಕೊಂಡರು. ಮಹಾರಾಜರವರು ಅವರ ಕಷ್ಟಗಳನ್ನು ನೋಡಿ ಕನಿಕರಪಟ್ಟು ಸರ್ಕಾರಿ ಕಟ್ಟಡಗಳನ್ನು ಅವರಿಗೆ ಬಿಡಿಸಿಕೊಟ್ಟಿದ್ದಾರೆ. ಮಹಾರಾಣಿಯವರು ಹೆಂಗಸರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿರುವರು. ಆ ಪ್ರಜೆಗಳಿಗೆಲ್ಲಾ ಮಹಾರಾಜರವರು ಅನ್ನವಸ್ತ್ರಗಳನ್ನು ಕೊಡಿಸಿ ಸಂರಕ್ಷಣೆ ಮಾಡುತ್ತಿದ್ದಾರೆ. ಮಳೆಯ ದೆಸೆಯಿಂದ ಪ್ರವಾಹಗಳು ಬಂದು ಹಲವು ಗ್ರಾಮಗಳು ಮುಳುಗಿಹೋಗಿವೆ; ನಾಲ್ಕಾರು ಭಾರೀ ಸೇತುವೆಗಳೂ ಕೊಚ್ಚಿಕೊಂಡುಹೋಗಿವೆ.

ಕಳೆದ ತಾ. 3 ನೇ ಬುಧವಾರ ಕಲ್ಲಿಕೋಟೆಯ ಜಾಮೊರಿನ್ ರಾಜರು ಸಂಸ್ಥಾನದ ಆಳ್ವಿಕೆಯನ್ನು ಮದರಾಸ್ ಸರ್ಕಾರದ ಕೋರ್ಟ್ ಆಫ್ ವಾರ್ಡ್ಸ್‌ರವರಿಗೆ ವಹಿಸಿ, ಅವರು 12 ವರುಷದ ತನಕ ಸಂಸ್ಥಾನವನ್ನು ರೂಢಿಸಿ ಕ್ರಮಕ್ಕೆ ತಂದಿಟ್ಟು ಆ ಬಳಿಕ ವಾಪಸು ಕೊಡಬೇಕೆಂದು ಹೇಳಿ, ನಿವೃತ್ತಿಹೊಂದಿದರು. ಈ ರಾಜರಿಗೆ ಪಟ್ಟವಾದಾಗಲೇ 65 ವರುಷ ವಯಸ್ಸಾಗಿದ್ದು, ಸಂಸ್ಥಾನದ ಕಾರುಬಾರುಗಳನ್ನು ಕ್ರಮಪಡಿಸಿಕೊಂಡು ನಡಿಸಲು ಸಾಧ್ಯವಾಗದೆಹೋದದ್ದರಿಂದ ಅವರು ಆಳ್ವಿಕೆಯ ಭಾರವನ್ನು ಕೆಲವು ಕಾಲದ ವರೆಗೆ ಮದರಾಸ್ ಸರ್ಕಾರಕ್ಕೆ ವಹಿಸಬೇಕಾಗಿ ಬಂತೆಂದು ಒಬ್ಬ ವಾರ್ತಾದಾರರು ಮದರಾಸ್ ಪತ್ರಿಕೆಗೆ ಬರೆದಿರುತ್ತಾರೆ.



ಜೂನ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಜೂನ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜೂನ್ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಬೆಲೆಗೆ ಕೊಡಲ್ಪಡುತ್ತೆ. [111-1]

ವಿಳಾಸ—ವಿ. ಕೆ. ರಂಗಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಗೃಹಕೃತ್ಯದ ನೋಟೀಸು.

ಮೈಸೂರು ಮಂಡಿ ಮೊಹಲ್ಲಾ ತೊಗರಿಬೀದಿಯಲ್ಲಿರುವ ಕಂಚಿಗರ ದೇವಣ್ಣನ ಮಗಳು ಕೆಂಚಮ್ಮ, ನನ್ನ 7 ವರುಷದ ಮೈನರ್ ಮಗ ಅಂಧಕ ತಿಮ್ಮಯ್ಯನು ಸಹಾ ತಿಳಿಯಪಡಿಸುವವೇನೆಂದರೆ—ಹುಣಸೂರು ತಾ॥ ಚಿಲ್ಕುಂದ ಹೋ॥ ಕಂಪಲಾಪುರದಲ್ಲಿರುವ ನನ್ನ ಗಂಡ ತಿಮ್ಮಯ್ಯನ ಪಿತ್ರಾರ್ಜಿತವಾದ ಡಿಟೋ ಗ್ರಾಮದಲ್ಲಿರುವ ಸರ್ವೆ ನಂ. 261-1 ನೇ ಫ್ಲೋಡು ಖುಷ್ಕಿ 6 ಎಕರೆ 34 ಗುಂಟೆ, ಆಕಾರ ರೂ. 6-12-0 ಉಳ್ಳ ಜಮೀನು ಪೈಕಿ ಪಶ್ಚಿಮ ದಿಕ್ಕಿನಲ್ಲಿ ನನ್ನ ಗಂಡ ತಿಮ್ಮಯ್ಯನ ಜಮಾನಿಗೆ ರೂ. 3-10-7 ಪೈ ಉಳ್ಳ ಖುಷ್ಕಿ ಜಮೀನು ಒಂದು, ಡಿಟೋ ಗ್ರಾಮದಲ್ಲಿರುವ 220 ನೇ ನಂ ಅಪ್ಪಣ್ಣಗೌಡರ ಹೆಸರಿನ ಖಾತೆ 8 ಆಣೆ ಕಂದಾಯವುಳ್ಳ ಖಾಲೀಜಾಗ ಒಂದು, ಡಿಟೋ ಗ್ರಾಮದಲ್ಲಿರುವ ಖಾತೆ 221 ನೇ ನಂ. ನನ್ನ ಗಂಡ ತಿಮ್ಮಯ್ಯನ ಹೆಸರಿನ ಪಟ್ಟಾಬಾಬತು 8 ಆಣೆ ಕಂದಾಯದ ಖಾಲೀಜಾಗ ಒಂದು, ಮೇಲ್ಕಂಡ ಜಮೀನು ಒಂದು, ನನ್ನ ಗಂಡನ ಪಿತ್ರಾರ್ಜಿತ ಮನೆ ಮಾರಿ ಈ ಎರಡು ಖಾಲೀಜಾಗ ಖರೀದಿಗೆ ತೆಗೆದುಕೊಂಡಿರುವದರಿಂದ ಸ್ವತ್ತುಗಳನ್ನು ನನ್ನ ಗಂಡನು ಬದ್ಧಚಾಲು ಮನುಷ್ಯನಾಗಿರುವ ಕಾರಣ ಈ ಸ್ವತ್ತುಗಳು ನನ್ನ ಗಂಡನಿಗೆ ಸಲ್ಲತಕ್ಕದ್ದಲ್ಲವಾಗಿ ಕ್ರಯ, ಆಧಾರ, ಭೋಗ್ಯ ಮುಂತಾಗಿ ಆತನಿಂದ ನಮ್ಮಗಳ ಸಮ್ಮತಿ ಇಲ್ಲದೆ ತೆಗೆದುಕೊಂಡಲ್ಲಿ ಸದರಿ ಸ್ವತ್ತುಗಳು ನಿಮಗೆ ಊರ್ಜಿತವಾಗತಕ್ಕದ್ದಲ್ಲ. ಹಾಗೆ ತೆಗೆದುಕೊಂಡಲ್ಲಿ ನನಗೂ ನನ್ನ ಮಗುವಿಗೂ ಸಂಭವಿಸುವ ವಿಶಿಷ್ಟನಷ್ಟಗಳಿಗೂ ನೀವೇ ಜವಾಬ್ದಾರರಾಗುತ್ತೀರೆಂದು ಈ ಮೂಲಕ ಎಚ್ಚರಿಸಿರುತ್ತೇನೆ. ಈ ಬಳಿ ಗುರುತು ಕೆಂಚಮ್ಮನ ರುಜು. [104-2]

ಪಟ್ಟೆಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗನುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಶೆರಗು, ಬೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಜೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟೆಪೀತಾಂಬರ ಕಂಪೆನಿ, ಧಾರಾನಗರ್ ಬೀದಿ, ಕಾಶಿ.

[63-8]

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ, ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-30] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಸಂತೋಷಕರವಾದ ಪ್ರಕಟನೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಇದರ ಕ್ರಯ 6 ಬಹುಮಾನ ಸಹಿತ ರೂ. 2-15-0.

5 ವರುಷದ ಖಾತ್ರಿಯಾದ ಗ್ಯಾರಂಟಿ.

ಅಯ್ಯಾ,—ಪುನಃ ಇಂಜನ್ ಮಾರ್ಕು ಅಂದರೆ ಗುರುತುಳ್ಳ ಪ್ರಖ್ಯಾತಿ ಹೊಂದಿದ ಲೀವರ್ ಕೆಲಸದಲ್ಲಿ ತಯಾರಿಸಲ್ಪಟ್ಟದ್ದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಗಾರ್ಡು ದೊರೆಗಳಿಗೂ, ರೈಲ್ವೆ ಉದ್ಯೋಗಸ್ಥರಿಗೆ ಸಪ್ಲೈ ಮಾಡುತ್ತೇವೆ. ಬರೀ ಮಾತುಗಳಿಂದ ಏನು? ನಮ್ಮ ವಿಳಾಸ—



ಕಮಲರಾಂ ಅಂಡು ಕಂಪನಿ, ನಂಬರ್ 28, ತಿರುಪಳ್ಳ್ನ್ ಬೀದಿ, ಸಾಹುಕಾರ್ ಪೇಟೆ, ಮದರಾಸು.

[97-2]

ಸಂತೋಷಕರವಾದ ಪ್ರಕಟನೆ.

Ladies' Fancy Golden Wrist Watch.

ಲೇಡಿಸ್ ಗೋಲ್ಡನ್ ರಿಷ್ಟು ವಾಚು.

ಇದರ ಕ್ರಯ ನೊಗಸಾದ ಚರ್ಮದ ಪಟ್ಟಿ ಸಹಿತ ರೂ. 3-6-0.

5 ವರುಷದ ಖಾತ್ರಿಯಾದ ಗ್ಯಾರಂಟಿ



ಅಯ್ಯಾ,—ಈ ಕೈಗಡಿಯಾರ ಕೈಯಲ್ಲಿಟ್ಟುಕೊಳ್ಳುವದಕ್ಕೆ ನೊಗಸಾದದು. ಬಹು ಬಲಿಷ್ಠವಾದ ಸಾಮಾನುಗಳಿಂದಲೂ, ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಇದು ನೋಡುವದಕ್ಕೆ ಚಕ್ಕದಾಗಿಯೂ, ಮುಚ್ಚಟೆಯಾಗಿ ಇರುತ್ತೆ. ಇದು ಇಂಗ್ಲೀಷ್ ನಮೂನೆ ಕೈಗಡಿಯಾರ. ಅನೇಕ ವರುಷಗಳ ಪರ್ಯಂತರ ಬಾಳಿಕೆಬರುವಂಥಾದ್ದು. ಬರೀ ಮಾತುಗಳಿಂದ ಏನು? ನಮ್ಮ ಕಂಪೆನಿ ಹೊಸದಾಗಿರುವದರಿಂದ ಬಹಳ ಕಮ್ಮಿ ಧಾರಣೆಗೆ ಕೊಡಲ್ಪಡುತ್ತೆ.

ನಮ್ಮ ವಿಳಾಸ:— [97-2]

ಕಮಲರಾಂ ಅಂಡ್ ಕಂಪೆನಿ, ತಿರುಪಳ್ಳ್ನ ಬೀದಿ, ಮದರಾಸು.

ಲಿಟ್ಲ್ಸ್ ಓರಿಯೆಂಟಲ್ ಬಾಮ್ ಎಂಬದು.

ಹಳೇ ನೋವಿದ್ದರೂ, ಊತ ಇದ್ದರೂ, ಯಾವತರದ ಕಷ್ಟವಿದ್ದರೂ ಸ್ವಸ್ಥಮಾಡಿ, ಬಿಡುಗಡೆಯ ಆಶೀರ್ವಾದಕೊಡುತ್ತದೆ.

ಸಟ್ಟರ್‌ಕೋಲ್ಡ್ ಫೀಲ್ಡಿನ ಜೆ. ಹ್ಯೂಜೆಸ್ ಬರೆಯುವದು:—"ನನ್ನ ಹತ್ರವಿದ್ದ ಲಿಟಲ್ಸ್ ಓರಿಯಂಟಲ್ ಬಾಂ ಎಂಬದರ 1 ಸೀಸಾಯನ್ನು ನನ್ನ ಕಾಲಿಗೂ, ಮೊಣಕಾಲಿಗೂ ಹಚ್ಚಿದ 10 ನಿಮಿಷಗಳಲ್ಲಿ ನೋವು ಬಿಟ್ಟಿತು. ಮತ್ತೆರಡಾವರ್ತಿ ಉಪಯೋಗಿಸಿದೆನು—ನನಗಿದ್ದ ನೋವು ತಿರಿಗಿ ಬರಲೇ ಇಲ್ಲ. ಆ ತೈಲದಲ್ಲಿ ಸ್ವಲ್ಪ ಅಂಗೈಗೆ ಹಾಕಿಕೊಂಡು ನನ್ನ ಮಗನಗಂಟಲ್ಲ ನೋವಿಗೆ ಹಚ್ಚಿದೆನು. ಅವನಿಗೆ ಸ್ವಸ್ಥವಾಯಿತು. ಒಬ್ಬ ಹೆಂಗಸಿದ್ದಳು! ಅವಳ ಕಾಲು 1 ವರುಷದವರಿಗೆ ಬಿರಸಾಗಿತ್ತು. ಅದರಿಂದ ಅವಳು ಅಧಿಕ ನೋವನ್ನು ಅನುಭವಿಸಿದಳು. ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಲು ಸೂಚಿಸಿದೆನು. ನನ್ನಲ್ಲಿದ್ದ 1 ಸೀಸೆಯ ತೈಲವನ್ನು ಮಾತ್ರ ಆಕೆಗೆ ಕೊಟ್ಟೆನು. ಅದರಿಂದಲೇ ಆಕೆಗೆ ಕ್ಷೇಮವಾಯಿತು."

ಸೀಸೆ 1ಕ್ಕೆ 1 ರೂ. ಮೋರಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

[81-6]

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು.

ಕಳೆದ ತಾ 31 ನೇ ಸೋಮವಾರ ಬೆಳಿಗ್ಗೆ ರಾಜಧಾನಿಯ ನಗರಾಭಿವೃದ್ಧಿ ಸಂಘದ ತಿಂಗಳು ಕಟ್ಟಿಯ ಮೀಟಿಂಗು ಟೌನ್ ಹಾಲ್ ಬಂಗಲೆಯಲ್ಲಿ ಜರುಗಿತು. ಛೇರ್‌ಮೆನ್ ಮ|| ಟಿ. ಜಿ ಲಕ್ಷ್ಮೀನಾರಾಯಣರು, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮ|| ಎಂ. ಶ್ರೀನಿವಾಸರಾಯರು, ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು, ಹೆಲ್ತ್ ಆಫೀಸರ್ ಮ|| ಎ. ಕೆ ಶಾಣಿಯವರು, ಮ|| ಗಳಾದ ಎಂ ವೆಂಕಟಕೃಷ್ಣಯ್ಯನವರು, ರಾವ್ ಬಹದ್ದೂರ್ ಎಂ. ಸಿ ರಂಗಯ್ಯಂಗಾರ್ರ್ಯ, ಮ|| ಮಹಮದ್ ಜಾಫರ್ ಸಾಹೇಬರು, ರೆವ|| ಜಿ. ಡಬ್ಲ್ಯು. ಸಾಡೇ ಸಾಹೇಬರು ಹಾಜರಾಗಿದ್ದರು.

ಮ|| ವೈ. ಶ್ರೀನಿವಾಸರಾಯರು ವರುಷದಲ್ಲಿ ಕೆಲವು ತಿಂಗಳು ರಾಜಧಾನಿಯಲ್ಲಿ ಹಾಜರಿರಲು ತಮಗೆ ಅನನುಕೂಲವಾಗೋಣದರಿಂದ ಟ್ರಸ್ಟ್ ಬೋರ್ಡ್ ಮೆಂಬರ ಕೆಲಸ ತಮಗೆ ಅವಶ್ಯವಿಲ್ಲವೆಂದು ರಾಜೀನಾಮೆ ಕೊಟ್ಟರು. ಅವರ ಸ್ಥಾನಕ್ಕೆ ಇನ್ನೊಬ್ಬರನ್ನು ನೇಮಿಸಬೇಕೆಂದು ಮೆಂಬರುಗಳು ಸರ್ಕಾರಕ್ಕೆ ಬರೆಯತಕ್ಕದ್ದೆಂದು ಇತ್ಯರ್ಥಮಾಡಿದರು.—ಸರ್ಕಾರದವರು 1915-16 ನೇ ಸಾಲಿನ ಟ್ರಸ್ಟ್ ಬೋರ್ಡ್ ಬಡ್ಜೆಟ್ಟನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಮುಂದಿನ ಸಾಲಿನಲ್ಲಿ ಟ್ರಸ್ಟ್ ಬೋರ್ಡಿಗೆ ಸಾನಗಾನು ಮತ್ತು ನಿವೇಶನಗಳ ಬೆಲೆಯಿಂದ 28,000 ರೂಪಾಯಿ ಉತ್ಪತ್ತಿಯಾಗುವುದೆಂದು ತಿಳಿದು ಉಳಿದ 2,72,000 ರೂಪಾಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿರುವರು.

ಬಡ್ರಣ್ಣನವರ ಲೈನ್ ಮನೆಯ ಹಿಂಭಾಗದಲ್ಲಿ ಬಚ್ಚಲ ನೀರು ಸಾಗಿಸುವ ನಲ್ಲಿಗಳನ್ನು ಹಾಕಿಸುವುದಕ್ಕೆ ಸರ್ಕಾರದಿಂದ 5,804 ರೂಪಾಯಿಯ ಅಂದಾಜಾ ಪಟ್ಟಿ ಸ್ಯಾಂಕ್ಷನ್ ಆಗಿದೆ.—ಪ್ರೋಂಟಕೊಪ್ಪಲ ಬಡಾವಣೆಗೆ 10,44,650 ರೂಪಾಯಿ ಬೇಕಾಗುವುದೆಂದೂ, ಅಗ್ರಹಾರ ಬಡಾವಣೆಗೆ 4,94,720 ರೂಪಾಯಿ ಬೇಕಾಗುವುದೆಂದೂ ತಯಾರುಮಾಡಿದ್ದ ಅಂದಾಜಾ ಪಟ್ಟಿಗಳನ್ನು ಮೆಂಬರುಗಳು ಒಪ್ಪಿಕೊಂಡಿದ್ದಾರೆ.—ಕೃಷ್ಣವಿಲಾಸ್ ರಸ್ತೆಯಲ್ಲೂ, ದಿವಾನ್ಸ್ ರೋಡಿನಲ್ಲೂ ಸುಂದರವಾದ ಸಾಲುಮರಗಳನ್ನು ಹಾಕಿಸುವುದಕ್ಕೆ 2,210 ರೂಪಾಯಿನ ಖರ್ಚು ಪಟ್ಟಿ ಒಪ್ಪಲಾಯಿತು.—ರೈಲ್ವೆ ಸ್ಟೇಷನ್ ಕಂಪೌಂಡಿನ ಹೊರಬಾಗಿಲ ದರ ಬಾಗಿಲನ್ನು ಅಗಲವಾಗಿಯೂ ಅಲಂಕಾರವಾಗಿಯೂ ಮಾಡಿಸುವುದಕ್ಕೆ 1,300 ರೂಪಾಯಿನ ಅಂದಾಜಾ ಪಟ್ಟಿಯನ್ನು ಮೆಂಬರುಗಳು ಒಪ್ಪಿದರು.—ಜೀವನ್ನ ರಾಯನಕಟ್ಟೆ ಒಳಪ್ರದೇಶವನ್ನು ಸರಿಮಾಡಿಸುವುದಕ್ಕೆ ಮೊದಲು 700 ರೂಪಾಯಿ ಸ್ಯಾಂಕ್ಷನ್ ಆಗಿತ್ತು; ಇದು ಸಾಲದ್ದರಿಂದ ಅದಕ್ಕೆ 650 ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಲಾಯಿತು.—ಪಟ್ಟಣದ ಬಚ್ಚಲ ನೀರನ್ನು ನಲ್ಲಿಗಳ ಮೂಲಕ ಊರ ಹೊರಗೆ ದಕ್ಷಿಣ ಪಾರ್ಶ್ವದ ಮೈದಾನಕ್ಕೆ ಹಾಯಿಸಿ ಅಲ್ಲಿ ಸೂಯೆಜ್ ಫಾರಮನ್ನು (ಮಲ ಕಾಂಪೋಸ್ಟ್ ತರಕಾರಿ ಬೆಳೆಯುವ ಜಮೀನು) ಮಾಡಿರುತ್ತಾರೆ. ಅಲ್ಲಿರುವ 180 ಎಕರೆ ಜಮೀನನ್ನು ಮಾಲೀಕರಿಂದ ಕೊಂಡುಕೊಳ್ಳುವುದಕ್ಕೆ ಮೊದಲು 20,000 ರೂಪಾಯಿ ಸ್ಯಾಂಕ್ಷನ್ ಆಗಿತ್ತು; ಇದಕ್ಕೆ ಇನ್ನೂ 10,000 ರೂಪಾಯಿ ಜಾಸ್ತಿ ಬೇಕೆಂದು ಛೇರ್‌ಮನ್ ರವರು ಸೂಚಿಸಿದ್ದರಿಂದ ಮೆಂಬರುಗಳು ಅದನ್ನು ಸ್ಯಾಂಕ್ಷನ್ ಮಾಡಿದರು.—ಕಾಳಮ್ಮನಗುಡಿ ಬೀದಿಯಲ್ಲಿ ಒಂದು ಕಡೆ ಉತ್ತರದಿಂದ ದಕ್ಷಿಣಕ್ಕೆ ಒಂದು ಕನ್‌ಸರ್‌ವೆನ್ಸಿ ಗಲ್ಲಿ ಹಾಕಬೇಕಾಗಿರೋಣದರಿಂದ ಕೆಲವು ಮನೆಗಳಲ್ಲಿ ಸ್ವಲ್ಪ ಸ್ವಲ್ಪ ಭಾಗಗಳನ್ನು ಕೊಂಡುಕೊಳ್ಳಬಹುದೆಂದೂ, ನಜರಬಾದಿನಲ್ಲಿ ಛತ್ರಿ ನರಸಪ್ಪನವರಿಗೆ ಸೇರಿದ ಸುಮಾರು 10 ಎಕರೆ ಜಮೀನುಗಳನ್ನು ಅಂದರೆ ಕೈತೋಟ ಮಾಡಿಕೊಂಡಿರುವ ಭಾಗಗಳನ್ನು ತೆಗೆದುಕೊಂಡು ಮನೆ ಕಟ್ಟಿಕೊಳ್ಳುವಂಥಾ ನಿವೇಶನಗಳನ್ನು ಮಾಡಬೇಕೆಂದೂ ಮೆಂಬರುಗಳು ಒಪ್ಪಿಕೊಂಡರು.

ಟ್ರಸ್ಟ್ ಬೋರ್ಡ್ ಛೇರ್‌ಮೆನ್‌ರವರ ಮತ್ತು ಇಂಜನಿಯರವರ ಆಫೀಸುಗಳ ಕುರ್ಚಿ ಮೇಜುಗಳಿಗೆ ಬಾಸ್ನಿಸ್ ಹಾಕಿಸುವುದಕ್ಕೆ 251 ರೂಪಾಯಿನ ಖರ್ಚು ಪಟ್ಟಿ ಪ್ಯಾಸಾಯಿತು.—ಮಂಡಿ, ಕೃಷ್ಣರಾಜಮೊಹಲ್ಲೆಗಳಲ್ಲಿ ಮನೆಗಳನ್ನು ಕೊಂಡು ಒಡೆದುಹಾಕಬೇಕೆಂದು ಪಟ್ಟಿಗಳು ತಯಾರಾಗಿದ್ದವು. ಒಂದು ಕಮಿಟಿಯವರು ಅಂಥಾ ಮನೆಗಳನ್ನೆಲ್ಲಾ ಖುದ್ದಾಗಿ ಅಜಮಾಯಿಷಿ ಮಾಡಿ ಮಂಡಿಯಲ್ಲಿ 71 ಮನೆಗಳನ್ನೂ, ಕೃಷ್ಣರಾಜಮೊಹಲ್ಲೆಯಲ್ಲಿ 23 ಮನೆಗಳನ್ನೂ ಒಡೆಯಬೇಕಾದ ಅಗತ್ಯವಿಲ್ಲವೆಂದು ಸೂಚಿಸಿದ್ದರ ಮೇಲೆ ಮೆಂಬರುಗಳು ಅದರಂತೆ ಒಪ್ಪಿಕೊಂಡಿದ್ದಾರೆ. ಮಂಡಿಮೊಹಲ್ಲೆಯಲ್ಲಿ ಇನ್ನೂ 22 ಮನೆಗಳನ್ನು ಕೊಂಡು ಒಡೆದುಹಾಕಬೇಕೆಂದು ನಕ್ಷೆ ತಯಾರಾಗಿದ್ದವನ್ನು ಮೆಂಬರುಗಳು ನೋಡಿ ಪ್ಯಾಸ್‌ಮಾಡಿದರು.—ಕೋಟೆಯ ಹೊರಗಡೆ ಶಿಲೆಮೊಹಲ್ಲೆಯಲ್ಲೂ, ಕೃಷ್ಣರಾಜಮೊಹಲ್ಲೆಯಲ್ಲೂ ಮನೆಗಳನ್ನು ಒಡೆದುಹಾಕಿ ರಸ್ತೆ ಮುಂತಾದದ್ದು ಮಾಡಿಸುವುದಕ್ಕೆ ತಯಾರಾಗಿದ್ದ 1,40,000 ರೂಪಾಯಿನ ಅಂದಾಜಾ ಪಟ್ಟಿಯನ್ನು ಮೆಂಬರುಗಳು ಒಪ್ಪಿರುತ್ತಾರೆ—ನಲ್ಲಿ ಹಾಕುವ ಕಾಮಗಾರಿಯನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ 2,364 ರೂಪಾಯಿನ ಹೆಂಗಾಮಿ ಸಬ್ಬಂದಿಯನ್ನೂ, ಮನೆಗಳನ್ನು ಕೊಂಡುಕೊಂಡು ಒಡೆಯಿಸುವ ಭಾಗವನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ 88 ರೂಪಾಯಿನ ಹಂಗಾಮಿ ಸಿಬ್ಬಂದಿಯನ್ನೂ ಮೆಂಬರುಗಳು ಒಪ್ಪಿಕೊಂಡರು. ರಾವ್ ಬಹದ್ದೂರ್ ಮ|| ಎಂ. ಸಿ. ರಂಗಯ್ಯಂಗಾರ್ರ್ಯ ಮಾತ್ರ ನಲ್ಲಿಗಳ ಕಾಮಗಾರಿ ಮೇಲ್ವಿಚಾರಣೆಗೆ 10-13 ರೂಪಾಯಿ ತಲಬಿನ ನೌಕರರನ್ನು ನೇಮಿಸುವುದು ಸಾರ್ಥಕವಲ್ಲವೆಂದು ಭಿನ್ನಾಭಿಪ್ರಾಯಪಟ್ಟರು.—ಮ|| ಪುರುಷೋತ್ತಮನಂದಗಿರಿಯವರು ಎಗ್ಜಿಭಿಷನ್ ಮೈದಾನದ ಬಳಿ ನಿವೇಶನವನ್ನು ತಮಗೆ ಕೊಟ್ಟರೆ ಅಲ್ಲಿ ಮರ ಕೊಯ್ಯುವ ಕಾರ್ಖಾನೆಯನ್ನು ಇಟ್ಟು ನಡಿಸುತ್ತೇವೆಂದು ಕೇಳಿದ್ದರು. ಅವರಿಗೆ ಚಟ್ನಹಳ್ಳಿ ಉತ್ತರದ ಆಚೆ ಕಾರ್ಖಾನೆಗಳಿಗಾಗಿ ವಿಂಗಡಿಸುವ ನಿವೇಶನದಲ್ಲಿ ಸ್ಥಳ ಕೊಡಬಹುದೆಂದು ಮೆಂಬರುಗಳು ತೀರ್ಮಾನಮಾಡಿದರು.—ದೊಡ್ಡಕೆರೆಯ ಉತ್ತರ ಪಾರ್ಶ್ವದಲ್ಲಿರುವ ಬರ್ಚ್ ತೋಳದ ಸುತ್ತಲೂ ಭರ್ತಿಮಾಡಿ ಕೊಳಕ್ಕೆ ಎತ್ತರವಾದ ಗೋಡೆಗಳನ್ನು ಕಟ್ಟಿಸುವುದಕ್ಕೆ 3,940 ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಲಾಯಿತು.—ಇನ್ನು ಮುಂದೆ ಯಾವ ಮೊಹಲ್ಲೆಯಲ್ಲಿಗಲಿ ಮನೆಗಳನ್ನು ಒಡೆಯುವುದಕ್ಕೆ ಮೊದಲು ಅಂಥಾ ಮನೆಯವರಿಗೆ ಕಷ್ಟ ಸಂಕಟಗಳುಂಟಾಗದಂತೆ ಕ್ರಯದ ಹಣವನ್ನೂ ಹೊಸ ಮನೆ ಕಟ್ಟಿಕೊಳ್ಳುವುದಕ್ಕೆ ಅಡ್ವಾನ್ಸನ್ನೂ ಕೊಟ್ಟು, ಅವರು ಹೊಸ ಮನೆ ಕಟ್ಟಿಕೊಂಡು ಹೋದ ಬಳಿಕ ಹಳೇ ಮನೆಗಳನ್ನು ಒಡೆದುಹಾಕಬೇಕೆಂದೂ, ಇದರಿಂದ ಬಡಬಗ್ಗರ ಕಷ್ಟ ಸ್ವಲ್ಪ ಮಟ್ಟಿಗಾದರೂ ಕಡಮೆಯಾಗುವುದೆಂದೂ ರಾವ್ ಬಹದ್ದೂರ್ ಮ|| ಎಂ. ಸಿ. ರಂಗಯ್ಯಂಗಾರ್ರ್ಯ ಸೂಚಿಸಿದ್ದನ್ನು ಛೇರ್‌ಮೆನ್‌ರವರು ರೆಕಾರ್ಡುಮಾಡಿರುತ್ತಾರೆ.

ಅಜ್ಮೀರದ ಜೈಲಿನ ಸಬ್ ಅ|| ಸರ್ಜನ್ ಬಲವಂತಸಿಂಗ್ ಎಂಬಾತನು ರಾವ್ ಸಾಹೇಬ್ ದಿಯೋಲಿಯಾ ಎಂಬಾತನನ್ನು ಪೋಲೀಸಿನವರು ದಸ್ತಗಿರಿಮಾಡಿ ಮೊಕದ್ದಮೆ ನಡಿಸುತ್ತಿರುವಾಗ ಈತನ ವಿಷಯದಲ್ಲಿ ರಿಯಾಯಿತಿ ತೋರಿಸಬೇಕೆಂದು ಪೋಲೀಸ್ ಹುದ್ದೇದಾರನಿಗೆ ಶಿಫಾರಸು ಕಾಗದ ಬರೆದದ್ದಕ್ಕಾಗಿ ಆ ದಾಕ್ಟರಿಗೆ ಮ್ಯಾಜಿಸ್ಟ್ರೇಟರು ಆರು ವಾರಗಳ ಸಾದಾ ಸಜಾ ವಿಧಿಸಿರುತ್ತಾರೆ.

ಪಿಷಾವರ್ ಪಟ್ಟಣದ ಬ್ಯಾಂಕು ದಿವಾಳಿಯಾಯಿತು. ಅದರ ಚೀಫ್ ಮಾನೇಜರಾಗಿದ್ದ ಪರಮಾನಂದಲಾಲನು ಬ್ಯಾಂಕಿನ ಫಸ್ಲಾಸು ಬ್ಯಾಲೆನ್ಸ್ ಷೀಟುಗಳನ್ನು ಸುಳ್ಳು ಲೆಕ್ಕ ತೋರಿಸಿ ಪ್ರಕಟಿಸಿದನೆಂದು ಮೊಕದ್ದಮೆ ಆಗಿ ಆತನಿಗೆ ಮುಲ್ತಾನಿನಲ್ಲಿ ಕಳೆದ ವಾರ ಐದು ವರುಷ ಕಠಿಣ ಸಜಾವೂ, 500 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಇದೇ ತರದ ಮೊಕದ್ದಮೆಯು ಆ ಬ್ಯಾಂಕಿನ ಡೈರೆಕ್ಟರ ಮೇಲೆ ಬಂದು ಇನ್ನೂ ದರ್ಯಾಪ್ತಿ ಆಗುತ್ತಿದೆ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಬಂ ರೂ. 3-0-0.
ಜೂನ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ ಕೆ. ಕೆಂಚುರಾಮಿ
[111-11 ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಎಲ್ಲರಿಗೂ ಬೇಕಾದ ಸರಕುಗಳು.

ಸುಗಂಧ ನಸ್ಯದಪುಡಿ 9 ತೊಲೆ ಟಿನ್ 1 ಕ್ಕೆ 12 ಆ. ಸಾದಾ ನಸ್ಯದಪುಡಿ 9 ತೊ. ಟಿನ್ 1ಕ್ಕೆ 6 ಆ. ಕೇಶವರ್ಧಿನಿ ತೈಲ ಬಾಟ್ಲು 1ಕ್ಕೆ 12 ಆ. ಭಂಗಾರದ ಗಿಲ್ಟಿನ ಬಳೇಡು ಅಥವಾ ಕೆಂಪುಕಲ್ಲಿನ ಬೆಂಡೋಲೆ ಜೊತೆ 1 ಕ್ಕೆ 3 ರೂ. ತಾರೀಖು ತಿಂಗಳು ವರುಷ ಇವುಗಳಿಂದ ಕೂಡಿರುವ ಡೇಟಿಂಗು ರಬ್ಬರ್ ಸ್ಟಾಂಪು 1ಕ್ಕೆ 1-4-0 ಸ್ವಂತ ಹೆಸರಿಗೆ ರಬ್ಬರು ಸ್ಟಾಂಪು ಕನ್ನಡ ಅಥವಾ ಇಂಗ್ಲೀಷು ಭಾಷೆಯಲ್ಲಿ ತಯಾರಿಸಲ್ಪಟ್ಟು, ಬ್ರಷ್ ಪ್ಯಾಡ್ ಇಂಕಿ ಇವುಗಳು ಇನಾಮಿನ ಸಮೇತವಾಗಿ ಕ್ರಯ 3 ರೂಪಾಯಿ. [107-1]

ವಿಳಾಸ—ಎ. ಟಿ. ಎನ್. ಜಯಾಕೃಷ್ಣ ಕಂಪನಿ, ನಂ. 41, ನಾಟುಪಿಳ್ಳೆಯಾರು ಕೋವಿಲ್ ಸ್ಟ್ರೀಟು ಸಾಹುಕಾರು ಪೇಟೆ ಪೋಸ್ಟು, ಮದರಾಸ್.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಷೀನಿನ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಆರ್ಡರ್ ವಿ.ಪಿ. ಮೂಲಕ ಕಳುಹಿಸಿಕೊಡಿ"—ಕೆ. ರಾಮಸ್ವಾಮಿ, ಪಲ್ಲಾತ-ತಾ-ಟಿಬುನ, 20-2-15.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಆರೆಕ್ಸ್ಟ್ರಾಂಡನ್ನು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-28] ಪೋ. ಬಾ. ಬಾಕ್ಸ್ 330, ಮುಂಬಾಯಿ.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

One energetic and experienced *Secretary* for the Branch Office to be opened shortly at Bangalore, and District Agents for each and every district in the Mysore Province *on both commission and office allowance*. Secretary's allowance *Rs. 50-20-200*, and that of District Agents *Rs. 25* per mensem. Also taluk and local directors required in each and every taluk in the Province. *Security and good reference essential.* For prospectuses and other particulars please apply, with your experience in the line, to

M. L. NAGANNA,
15-22 Managing Director, Life & Marriage Assurance Buildings, Mysore.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾ ವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅವೇಳರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [62-12]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು, ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವ, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕಾಂಚ್ಯಾ, ಬೆಳ್ಳಿ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾವೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಆಯುಷ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ 500 ರೂಪಾಯಿಗಳನ್ನು 1915 ನೆ ಇಸವಿ ಮಾರ್ಚಿ ತಾರೀಖು 15 ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಡಬ್ಬದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ., ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತ್ವರೆಮಾಡಿರಿ! ನಮ್ಮ 1916 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 11 ಆಣೆ; 12 ಕ್ಕೆ ರೂ. 1-10-0 ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[64-10]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಠಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮುದ್ರೆ ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಕಣ್ಣು ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರಿಯಿರಿ. ವ್ಯಾಪಾರಸ್ಥರಿಗೆ ಚೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಪ್ರೋಪ್ರೈಟರ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಭಾರ), ಮೈ ನಡುಕ, ಶೀತದ ತಲೆ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಪಿತ್ತ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಶ್ಚಯವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾಂಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷ ವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಟ್ಟು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರಿಗೆ ಪೋಸ್ಟೇಜು 4 ಆಣೆ. [199-40]

(1) ಮ|| ಎ. ಸಿ. ಮಿತ್ರಗ್, ಹೆಡ್ ಮಾಸ್ಟರ್, ದಿ ಬ್ರಾಮಿಕ್ ಪಿ ಎಂ. ಇ. ಸ್ಕೂಲ್, ಮಾಂಡು, ಹೌರಾ ಡಿಸ್ಟ್ರಿಕ್ಟು, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾಥಿಕ್, ಹೋಮಿಯೋಪ್ಯಾಥಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಆ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಖಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗರ್ಭ...ಗೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸುತ್ತ ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸದವರಿಲ್ಲರೂ ಹೊಗಳುತ್ತಿದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು



ಸೋಲ್ ಏಜೆಂಟರು—

ಎಸ್. ವೈದ್ಯಾ ಅಂಡ್ ಕಂಪೆನಿ,

ಪಿ. ಟಿ. ಮದರಾಸು.

ಅತ್ಯದ್ಭುತವಾದ ಜಪಾನ್ ಮಾತ್ರೆಗಳು ಒಂದು ಸಲ ಪರೀಕ್ಷಿಸಿ ನೋಡಿರಿ. ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಟಣ 1 ಕ್ಕೆ	ಕ್ರಯ	0-1-6
65 ,, ,, ,,	,,	0-3-0
195 ,, ಪೊಟ್ಟಣ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	,,	0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-6]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎನ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ನೀವು ಪ್ರಯೋಜನಹೊಂದಿ, ಇತರರಿಗೂ ಸಹಾಯಮಾಡಿ.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಕಲಕತ್ತಾ.

ಮೂಲಧನ—ರೂಪಾಯಿ 5,00,000.

5,000 ಷೇರುದಾರರು ಮಾತ್ರ ಬೇಕಾಗಿದೆ. ಪ್ರತಿ ವರುಷವೂ ವಿಶೇಷ ಲಾಭ ಹಂಚಲ್ಪಡುತ್ತದೆ. ಷೇರ್ 1 ಕ್ಕೆ 20 ರೂಪಾಯಿ. ಅರ್ಜಿಯ ಕೂಡ ಮೊದಲು 10 ರೂಪಾಯಿ ಮಾತ್ರ ಕೊಡತಕ್ಕದ್ದು. ಮೂರು ತಿಂಗಳ ವಾಯಿದೆಯಲ್ಲಿ ಉಳಿದ 10 ರೂಪಾಯಿ ಕೊಡಬಹುದು; ಆದರೆ ಸದ್ಯಕ್ಕೆ ಇದನ್ನು ಕೇಳಬೇಕೆಂಬ ಉದ್ದೇಶವಿಲ್ಲ. ಈ ಕಂಪನಿಯು ಬಹಳ ಸುಲಭವಾದದ್ದು. ಕ್ರಮವಾದ ನಿಬಂಧನೆಗಳ ಪ್ರಕಾರ ನಡೆಯುವುದರಿಂದ ಇತರ ಪ್ರಾವಿಡೆಂಟ್ ಕಂಪನಿಗಳಿಗಿಂತಲೂ ಅತ್ಯಂತ ಸುರಕ್ಷಿತವಾಗಿರುತ್ತದೆ.

ಈ ಕಂಪನಿಯಲ್ಲಿ ಮದುವೆಯ ಮತ್ತು ಜೀವವಿಮೆಯ ಪಾಲಿಸಿಗಳನ್ನು ಪಡೆಯಬಹುದು. 15 ವರುಷ ತಿಂಗಳಿಗೆ ಒಂದು ರೂಪಾಯಿಯಂತೆ ಚಂದಾ ಕೊಡತಕ್ಕದ್ದು. ಸೇರಿದ ಒಂದು ವರುಷದ ಮೇಲೆ ಮೃತಪಟ್ಟರೆ 200 ರೂಪಾಯಿ ಅಡ್ವಾನ್ಸು ಕೊಡಲ್ಪಡುತ್ತೆ. 20 ವರುಷ ಬದುಕಿದ್ದರೆ 600 ರೂಪಾಯಿ ತನಕ ಬೋನಸ್ ದೊರಕುವುದು. [292-25]

ಸೇರಿದ ಒಂದು ವರುಷದ ಮೇಲೆ ಮದುವೆ ಆದರೆ 250 ರೂಪಾಯಿ ಸಾಲ ಕೊಡಲ್ಪಡುತ್ತೆ. ಈ ಸಾಲವನ್ನು 15 ವರುಷಗಳ ಮೇಲೆ ಶೇಕಡಾ ಮಾಸಕ್ಕೆ 5 ರೂಪಾಯಿ ಬಡ್ಡಿಯಂತೆ ವಾಪಸು ತೆಗೆದುಕೊಳ್ಳಲ್ಪಡುತ್ತದೆ.

ಈ ಕಂಪನಿಯಲ್ಲಿ ಜೀವವಿಮೆ ಮಾಡಿರುವಷ್ಟು ಹಣವನ್ನು ಸಾಲವಾಗಿಯೂ, ಇದನ್ನು ಸುಲಭ ರೀತಿ ವಾಪತಿ ಮಾಡಲೂ ಬಹುದು.

ಬೇಕಾಗಿದೆ—ಚುರುಕಾಗಿ ಸಾಮರ್ಥ್ಯದಿಂದ ಕೆಲಸಮಾಡುವ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರುಗಳು ಬೇಕು. ಸಂಬಳ ರೂ. 30 + 10, ಕಮಿಷನ್ ಸಹ ಉಂಟು. ಏಜಂಟರು ಬೇಕು; ಇವರಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುತ್ತೆ.

ಎಲ್ಲಾ ವಿಷಯಕ್ಕೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ಸ್, 166, ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—5—1915 ರಿಂದ 28—5—1915 ರ ವರಿಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	10	4	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಜುಮ್ಲಾ	12	5	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ವಸಂತಋತೌ ನಿಜ ವೈಶಾಖ ಬಹುಳ ಚತುರ್ದಶಿ ಶುಕ್ರವಾರದಿಂದ ಜ್ಯೇಷ್ಠ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜೂನ್.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ವೈಶಾಖ ಮಾಸದ ತಾರೀಖು
11	ಶುಕ್ರ ;;	ಚತುರ್ದಶಿ	38-11	ಕೃತ್ತಿಕೆ	13-38	29
12	ಶನಿ †	ಅಮಾವಾಸ್ಯೆ	43-18	ರೋಹಿಣಿ	20-16	30
13	ಭಾನು	ಪಾಡ್ಯಮಿ	48-1	ಮೃಗಶಿರ	26-34	31
14	ಸೋಮ ‡	ಬಿದಿಗೆ	51-52	ಆರಿದ್ರಾ	32-30	32
15	ಮಂಗಳ §	ತದಿಗೆ	54-46	ಪುನರ್ವಸು	37-5	1
16	ಬುಧ	ಚೌತಿ	56-25	ಪುಷ್ಯ	40-45	2
17	ಗುರು *	ಪಂಚಮಿ	56-49	ಆಶ್ಲೇಷ	43-8	3

;; ಮಳೆ ನಕ್ಷತ್ರ—ಮೃಗಶಿರ 2 ನೇ ಪಾದ.

† ಸರ್ವತ್ರ ಅಮಾವಾಸ್ಯೆ, ಅಮೃತಸಿದ್ಧಿಯೋಗ.

‡ ಚಂದ್ರೋದಯ, ಷಾಬಾನ್ ಚಂದ್ 1, ಮಳೆ ನಕ್ಷತ್ರ—ಮೃಗಶಿರ 3 ನೇ ಪಾದ.

§ ಕದಳೀಗೌರೀವ್ರತಂ, ರಂಭಾತೃತೀಯಾ, ಪಡಶೀತಿ ಪುಣ್ಯಕಾಲ.

* ಸ್ಕಂದಪಂಚಮಿ.

Printed and Published by the Rev. H. G[illegible], Proprietor and Manager, Wesleyan Mission Press, Mysore. 10/6/1915.

REGISTERED
M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ ನೇ ಇಸವಿ ಜೂನ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೩

ತರಿಸಿ ನೋಡಿ.

ಬಾಲವ್ಯಾಕರಣ—ಲೋ. ಸೆ. ತರಗತಿಯ ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾಗಿದೆ 0-6-0. 1916 ನೇ ಲೋ. ಸೆ. ಟೆಕ್ಸ್ಟಿನ ಪ್ರಶ್ನೋತ್ತರ 0-3-0. ವ್ಯಾಕರಣ ಪ್ರಶ್ನೋತ್ತರ (ಸಂಪೂರ್ಣವಾದ ಉತ್ತರಗಳಿವೆ) 0-1-6. [100-4]

ಕೆ. ಆರ್. ನರಸಿಂಹಯ್ಯ, ಕನ್ನಡ ಪಂಡಿತ ಹೈ ಸ್ಕೂಲ್, ಚಿಕ್ಕಬಳ್ಳಾಪುರ.

ದುರ್ಗಾದಾಸ.

ಇದು ಬಂಗದೇಶದ ಪ್ರಖ್ಯಾತ ಕವಿ ದ್ವಿಜೇಂದ್ರಲಾಲರಾಯರ ನಾಟಕವನ್ನು ಅನುಸರಿಸಿ ಅವರ ಅನುಮತಿಯಿಂದ ಆರ್. ವ್ಯಾಸರಾಯರಿಂದ ಪ್ರಕಟಿಸಲ್ಪಟ್ಟಿದೆ.

ಕಥೆ ಬಹಳ ಸ್ವಾರಸ್ಯವಾಗಿದೆ. ಕ್ರಯ 12 ಆಣೆ.

ವಿಳಾಸ—ಕೆ. ಎ. ಚೌರಪ್ಪ ಅಂಡ್ ಸನ್ಸ್,

[98-1] ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದೂದೇಶಚರಿತ್ರಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-23]

ಎಮ್. ಎಸ್. ಮಲ್ಲಣ್ಣ ಅಂಡ್ ಬ್ರದರ್ಸ್,

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ತಮವಾದ ರೇಶ್ಮೆ ವಸ್ತ್ರಗಳು, ಪೇಟಗಳು, ಅರಳೆಪೇಟೆ ಸೀರೆಗಳು, ಲಿಂಗ ಧರಿಸುವ ವಸ್ತ್ರಗಳು, ಸಾಧಾರಣ ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-3]

ರೇಷ್ಮೆ ವಸ್ತ್ರಗಳು	ದರಗಳು	ಪೇಟ, ರೇಶ್ಮೆ ಸೀರೆ, ಲಿಂಗವಸ್ತ್ರ.
1 ನೇ ನಂಬರು 0-7-6	ತೊಲೆ 1 ಕ್ಕೆ	1 ನೇ ನಂಬರು 0-8-0
2 ,, ,, 0-7-0		2 ,, ,, 0-7-6
0-6-9		

ಕಸ್ತೂರಿ ಗುಳಿಗೆಗಳು :—ಇದರಿಂದ ಫಿಟ್ಸ್, ಸಟಟೀನೆ, ಮೂರ್ಛೆ ಬರುವ ರೋಗ, ಹಕ್ಕ ವಾಯುಜ್ವರ ವ ಇತರ ವಾಯು ಸಂಬಂಧವಾಗಿ ಚಿಕ್ಕವರಿಗೂ ದೊಡ್ಡವರಿಗೂ ಇರುವ ರೋಗಗಳು ಎಷ್ಟು ದೀರ್ಘಕಾಲವಾಗಿದ್ದರೂ ನಿಶ್ಚಯವಾಗಿಯೂ ಗುಣವಾಗುತ್ತವೆ ಬಾಟ್ಲಿಯ ಕ್ರಯ ರೂ. 2.

ಸ್ತ್ರೀಯರ ರಕ್ತಸ್ರಾವ ವ ಇತರ ಉದರ ರೋಗಗಳಿಗೆ ಅತ್ಯುತ್ತಮವಾದ ಔಷಧ. ಬಾಟ್ಲಿಯ ಕ್ರಯ ರೂ. 2.

ರಕ್ತಶುದ್ಧಿ :—ಈ ಔಷಧದ ಸೇವನೆಯಿಂದ ದೇಹದೊಳಗಣ ಅಶುದ್ಧವಾದ ರಕ್ತವು ಶುದ್ಧವಾಗಿ ಕಾಂತಿಯನ್ನೂ ಶಕ್ತಿಯನ್ನೂ ಉಂಟುಮಾಡುತ್ತದೆ. ಬಾಟ್ಲಿಯ ಕ್ರಯ ರೂ. 1-8-0.

ಅತ್ಯಂತ ಪೌಷ್ಟಿಕ ಧಾತುಪುಷ್ಟಿಯ ಔಷಧ. ಡಬ್ಬಿಯ ಕ್ರಯ ರೂ. 2.

ನಮ್ಮ ವಿಳಾಸ—ಸಖಾರಾಮ ಅಪ್ಪಾಜಿ ಕೋಲ್ಹಟಕರ, ವೈದ್ಯ,

[93-5] ದವಾಖಾನಾ, ಠಾಕುರದ್ವಾರ ರೋಡ, ಮುಂಬಯಿ, ನಂ. 2

ಮೈಸೂರು ಸಂಸ್ಥಾನದ ಆಸ್ಥಾನ

ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯಅಯ್ಯರ್

ಇವರಿಂದ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಈ ಗ್ರಂಥವು ನಾದೋತ್ಪತ್ತಿ, ಸ್ವರೋತ್ಪತ್ತಿ, ಸಪ್ತಸ್ವರಪ್ರಸ್ತಾರ, ರಾಗಪ್ರಕರಣ, 72 ಮೇಳ ಕರ್ತರಾಗಗಳ ಚಕ್ರ, ಷಡ್ಕಾಂತರ ರಾಗಗಳು, ತಾಳಪ್ರಕರಣ, ತಾಳಪ್ರಸ್ತಾರ, ಸಪ್ತತಾಳಗಳ ಲಕ್ಷಣ, ತಾಳಸಂಜ್ಞೆ, ಮಂದ್ರ, ಮಧ್ಯ, ತಾರಕಸ್ಥಾನಗಳನ್ನು ತೋರಿಸತಕ್ಕ ಸಂಜ್ಞೆಗಳಿಂದ ಕೂಡಿದ ಸರಳೆ, ವರಸೆ, ಜಂಟಿವರಸೆ, 35 ಅಲಂಕಾರಗಳು, ಗೀತಗಳು, ಸ್ವರಜತಿಗಳು, ಆಸನಗಳು, ತಾನವರ್ಣಗಳು ಮತ್ತು ಚಿಟ್ಟೆ ಸ್ವರಗಳುಳ್ಳ ಕೀರ್ತನೆಗಳು, ಇವೇ ಮೊದಲಾದವುಗಳಿಂದ ಶೋಭಿಸುತ್ತದೆ. ವಾದ್ಯ ಮತ್ತು ಬಾಯಿಪಾಠಕ್ಕೂ ತುಂಬಾ ಅನುಕೂಲವಾಗಿರುತ್ತದೆ. ಇಂಥಾ ಸಮಯವು ಮುಂದೆ ದೊರೆಯಲಾರದು. ಡೆಮ್ಮಿ ಅಷ್ಟಪತ್ರ, 326 ಪುಟಗಳು [108-2]

ಕ್ರಯ ರೂ. 1-4-0. ಅಂಚೆ ಹಾಸಲು ಬೇರೆ.

ವಿಳಾಸ :—(1) ಎಂ. ವೆಂಕಟರಾಮಯ್ಯ, ಚಾಮರಾಜಪೇಟೆ, ಮೈಸೂರು

(2) ಎಂ. ಎಸ್. ರಾವ್, ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

A Modern General English :—issued in **Monthly Parts**. **Subscription** till next March Rs. 1¼ only. **Our Notes** and **Spelling Book** supplied as parts. Apply to

M. N. SITA RAMA RAO,

[88-5] **Krishnaraja Mohalla, Mysore.**

ಪ್ರಾರ್ಥನೆ.

ತುಮಕೂರಲ್ಲಿ ಕೆಲವರು ನಮ್ಮ ಮೇಲೆ ದ್ವೇಷವನ್ನು ಸಾಧಿಸುತ್ತಾ ಹಾಸನ, ಶಿವಮೊಗ್ಗ ವಗೈರೆ ಸ್ಥಳಗಳಲ್ಲಿ ದುಷ್ಟ ಪ್ರೇರಣೆಯಿಂದ ಜನಗಳನ್ನೇರ್ಪಡಿಸಿ ನಮ್ಮ ಮತ್ತು ನಮ್ಮ ಹೆಂಗಸರ ಮೇಲೆ ಸುಳ್ಳು ಕ್ರಿಮಿನಲ್ ಫಿರ್ಯಾದುಗಳನ್ನು ಮಾಡಿಸಿ ಕಷ್ಟ ನಷ್ಟ ಅಪಮಾನಗಳಿಗೆ ನಮ್ಮನ್ನು ಗುರಿಮಾಡಬೇಕೆಂದು ಇರುತ್ತಾರೆ. ಈ ಪ್ರೇರಣೆಗೆ ಯಾರೂ ಕಿವಿಗೊಡಬಾರದೆಂತಲೂ, ಆಯಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಇತರ ಮ್ಯಾಜಿಸ್ಟ್ರೇಟರೂ ಇಂಥಾ ಫಿರ್ಯಾದುಗಳಿಗೆ ಅವಕಾಶಕೊಡಕೂಡದೆಂತಲೂ ಪ್ರಾರ್ಥಿಸುತ್ತೇವೆ. [114-1]

ತುಮಕೂರು, ಟಿ. ಗುರುಚನ್ನಬಸವಯ್ಯ,

ತಾ. 1-6-16. ಟಿ. ಸುಬ್ಬಯ್ಯ.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ದೇವನಹಳ್ಳಿ ತಾಲ್ಲೂಕ್ಕೆ ಸೇರಿದ ಸಣ್ಣ ಅಮಾನಿಗೆ ಸೇರಿದ ಶಿರಿಪಟ್ಟಿಹಳ್ಳಿ ದಿನ್ನೆಯಲ್ಲಿರುವ ಕುಷ್ಕಿ ಸರ್ವೆ ನಂ. 229 ನೇ ಎಕರೆ 3 ಕುಂಟೆ 21 ಕ್ಕೆ ಆಕಾರ 7 ರೂಪಾಯಿಗಳುಳ್ಳ ಜಮೀನು 1, ಡಿಟ್ಟೋ ಟವನ್ನಿನಲ್ಲಿರುವ ಮನೆ ಸಹ ನಮ್ಮ ಪಿತ್ರಾರ್ಜಿತವಾದುದರಿಂದ ನನ್ನ ಚಿಕ್ಕ ತಂದೆ 50 ವರುಷದ ಹೈದರಸಾಬಿ ಅರಳು ಮರುಳಿನಿಂದ ದುರ್ಬೋಧನೆಯಿಂದ ಪರಾಧೀನನಾದುವದಾಗಿ ವರ್ತಮಾನವಿರುವದರಿಂದ ಆಧಾರ ಭೋಗ್ಯ ಕ್ರಯ ದಾನ ವಗೈರೆ ಯಾರಾದರೂ ನನ್ನ ಅನುಮತಿ ಇಲ್ಲದೆ ಮಾಡಿಕೊಂಡರೆ ಊರ್ಜಿತವಾಗಲಾರದು. ಕೊಟ್ಟ ಹಣವನ್ನು ಕಳೆದುಕೊಂಡು ನಷ್ಟಕ್ಕೆ ಗುರಿಯಾಗುತ್ತಾರೆಂದು ಈ ಮೂಲಕ ತಿಳಿಸಿರುತ್ತೇನೆ.

ಆಹಿಸಾಬಿಯವರ ಹುಸ್ಸೇನು ಸಾಬಿ ಮಗ

[116-1] ಮಲಂಗ್ ಸಾಬಿ, ದೇವನಹಳ್ಳಿ.

ಗೃಹಕೃತ್ಯದ ನೋಟೀಸು.

ಕೃಷ್ಣರಾಜಪೇಟೆ ತಾಲ್ಲೋಕು ಕಸಬಾ ಹೋಬಳಿ ಹೊಸ ಹೊಳಲಿನಲ್ಲಿರುವ ಬಿಳಿಮಗ್ಗದ ವೆಂಕಟಸ್ವಾಮಿಶೆಟ್ಟಿ ಮಗ ರಂಗಶೆಟ್ಟಿಯು ಈ ಮೂಲಕ ತಿಳಿಯಪಡಿಸುವದೇನಂದರೆ—ನಮ್ಮ ಗ್ರಾಮದಲ್ಲಿ ನನಗೆ ದ್ವೇಷಿಗಳಾದ ಕೆಲವರು ಸ್ವಬುದ್ಧಿ ಇಲ್ಲದ ನನ್ನ ಜಾಣ ತಾಯಿಯಾದ ಲಕ್ಷ್ಮಮ್ಮನಿಗೆ ದುರ್ಬೋಧನೆ ಹೇಳಿ ನನಗೆ ಆಗದಂತೆ ಮಾಡಿ ನನ್ನ ಮನೆಯಿಂದ ಕರೆದುಕೊಂಡು ಹೋಗಿ ಆಕ್ಷೇಪ್ಯತರಗಳನ್ನು ಹುಟ್ಟಿಸಿ ನನ್ನ ಸಾಲಗಾರರಿಗೆ ರಸೀತಿ ವಗೈರೆ ಆಕೆಯಿಂದ ಕೊಡಿಸುವದರ ಮೂಲಕ ನನ್ನ ಸಾಲಗಳನ್ನು ನಾನು ವಸೂಲ್ಮಾಡಿಕೊಳ್ಳದಂತೆಯೂ, ನನ್ನ ಹಣಕ್ಕೆ ಮೋಸವಾಗುವಂತೆಯೂ ಮತ್ತು ನನ್ನ ಸ್ಥಿರಚರ ಸೊತ್ತುಗಳನ್ನು ಆಕೆಯಿಂದ ಕ್ರಯಕ್ಕೆ ಬರಸಿಕೊಳ್ಳುವಂತೆಯೂ ವರ್ತಮಾನ ಕೇಳುತ್ತೇನೆ. ಹಾಗೆ ಯಾರಾದರೂ ನನಗೆ ನಷ್ಟಪಡಿಸಲು ಮಾಡಿದ್ದಾದರೆ ನಾನು ಮೆಜಾರಿಟೀಲಿ ಇರುವದರಿಂದ ಅಂಥಾ ಮೋಸದ ಕ್ರಯ ವಗೈರೆ ಪರಭಾರೆಗಳೂ ಮತ್ತು ರಸೀತಿ ವಗೈರೆಗಳೂ ಎಷ್ಟುಮಾತ್ರವೂ ಸಿದ್ಧಿಸಲಾರವು. ಅಂಥಾವರು ನನಗೆ ಉಂಟಾಗುವ ನಷ್ಟಗಳಿಗೆಲ್ಲಾ ಜವಾಬ್ದಾರರೂ ಆಗಿರುತ್ತಾರೆ, ತಿಳಿಯುವದು [113-1]

9-6-1915. ವೆಂಕಟಸ್ವಾಮಿಶೆಟ್ಟಿ ಮಗ ರಂಗಶೆಟ್ಟಿ.

ಗೃಹಕೃತ್ಯದ ನೋಟೀಸು.

ಮೈಸೂರು ಮಂಡಿ ಮೊಹಲ್ಲಾ ತೊಗರಿಬೀದಿಯಲ್ಲಿರುವ ಕುಂಚಿಗರ ದೇವಣ್ಣನ ಮಗಳು ಕೆಂಚಮ್ಮ, ನನ್ನ 7 ವರುಷದ ಮೈನರ್ ಮಗ ಅಂಧಕ ತಿಮ್ಮಯ್ಯನು ಸಹಾ ತಿಳಿಯಪಡಿಸುವದೇನಂದರೆ—ಹುಣಸೂರು ತಾ॥ ಬಿಳಿಕೆರೆ ಹೋ॥ ಕೆಂಪಲಾಪುರದಲ್ಲಿರುವ ನನ್ನ ಗಂಡ ತಿಮ್ಮಯ್ಯನ ಪಿತ್ರಾರ್ಜಿತವಾದ ಡಿಟ್ಟೋ ಗ್ರಾಮದಲ್ಲಿರುವ ಸರ್ವೆ ನಂ 261-1 ನೇ ಸ್ಥೋದು ಖುಷ್ಕಿ 5 ಎಕರೆ 34 ಗುಂಟೆ, ಆಕಾರ ರೂ 5-12-0 ಉಳ್ಳ ಜಮೀನು ಪೈಕಿ ಪಶ್ಚಿಮ ದಿಕ್ಕಿನಲ್ಲಿ ನನ್ನ ಗಂಡ ತಿಮ್ಮಯ್ಯನ ಜಮೀನಿಗೆ ರೂ. 3-10-7 ಕ್ಕೆ ಉಳ್ಳ ಖುಷ್ಕಿ ಜಮೀನು ಒಂದು, ಡಿಟ್ಟೋ ಗ್ರಾಮದಲ್ಲಿರುವ 220 ನೇ ನಂ ಅಪ್ಪಣ್ಣಗೌಡರ ಹೆಸರಿನ ಖಾತೆ 8 ಅಡಿ ಕಂದಾಯವುಳ್ಳ ಖಾಲೀಜಾಗ ಒಂದು, ಡಿಟ್ಟೋ ಗ್ರಾಮದಲ್ಲಿರುವ ಖಾತೆ 221 ನೇ ನಂ, ನನ್ನ ಗಂಡ ತಿಮ್ಮಯ್ಯನ ಹೆಸರಿನ ಪಟ್ಟಾ ಬಾಬತು 8 ಆಣೆ ಕಂದಾಯದ ಖಾಲೀಜಾಗ ಒಂದು, ನೋಟ್ಟಂದ ಜಮೀನು ಒಂದು, ನನ್ನ ಗಂಡನ ಪಿತ್ರಾರ್ಜಿತ ಮನೆ ಮಾರಿ ಈ ಎರಡು ಖಾಲೀಜಾಗ ಖರೀದಿಗೆ ತೆಗೆದುಕೊಂಡಿರುವದರಿಂದ ಸ್ವತ್ತುಗಳನ್ನು ನನ್ನ ಗಂಡನು ಬದ್ಧಬಾಲು ಮನುಷ್ಯನಾಗಿರುವ ಕಾರಣ ಈ ಸ್ವತ್ತುಗಳು ನನ್ನ ಗಂಡನಿಗೆ ಸಲ್ಲತಕ್ಕದ್ದಲ್ಲವಾಗಿ ಕ್ರಯ, ಆಧಾರ, ಭೋಗ್ಯ ಮುಂತಾಗಿ ಆತನಿಂದ ನಮ್ಮಗಳ ಸಮ್ಮತಿ ಇಲ್ಲದೆ ತೆಗೆದುಕೊಂಡಲ್ಲಿ ಸದರಿ ಸ್ವತ್ತುಗಳು ನಮಗೆ ಊರ್ಜಿತವಾಗತಕ್ಕದ್ದಲ್ಲ. ಹಾಗೆ ತೆಗೆದುಕೊಂಡಲ್ಲಿ ನನಗೂ ನನ್ನ ಮಗುವಿಗೂ ಸಂಭವಿಸುವ ವಿಶೇಷ ನಷ್ಟಗಳಿಗೂ ನೀವೇ ಜವಾಬ್ದಾರರಾಗುತ್ತೀರೆಂದು ಈ ಮೂಲಕ ಎಚ್ಚರಿಸಿರುತ್ತೇನೆ. ಈ ಬಳಿ ಗುರುತು ಕೆಂಚಮ್ಮನ ರುಜು. [104-3]

ಸ್ತ್ರೀಯರ ಶೋಷಣಾವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾದಂಥ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕಾರವಾದರೋ

ಕಾಮಿನಿಯಾ ತೈಲವೇ!
(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ಹಚ್ಚಿಕೊಂಡ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅದರ ಬದಲು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ ! ನೇಗಿನಹಾಳಕರ ಬಂಧುಗಳು. ಬಸವಕಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದ್ದೆಂದು ಸಾಧಕವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಆಹಾ ಮನೋಹರವಾದ ಸುರಭಿಯು !

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದದೆಂದು ತೃಪ್ತಿದಾಯಕವು ಅರಳದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-21]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ದಿ ಹುಬ್ಲಿ ಮಾರ್ಟ್, ಮಂಗಳೂರು.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜೆ. ಗೋರಿಯೋ ಕಂಪನಿ, ಪ್ಯಾಲೆಸ್ ಬೀದಿ, ಬೊಂಬಾಯಿ ;

[172–45]

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟತರಳಿಂದಲೂ ತಯಾರಾದ "ಬಾಲಕೇಸರಿ" ಎಂಬ ಕ್ಷುಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಉಬ್ಬಸ, ಕ್ಷಯ, ಗರ್ಭವಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲು 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235–31]

ಮಹಾ ಸೌಭಾಗ್ಯ ಶುಂಠಿ :—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಶ್ವೈತ್ಯ, ಬಾಣಂತಿ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0 ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0 ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
[247–31] 20, ಚೇನಾಬಜಾರು ರೋಡು, ಮದರಾಸು.

ಜೂನ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1–14–0.

ಇದೇ ಜಾರ್ಜ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜೂನ್ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [111-…]

ವಿಳಾಸ—ವಿ. ಕೆ. ಕೆಂಬುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವು ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ಕಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇನೆ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-42]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.



ಲೋಕಪ್ರಸಿದ್ಧನಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವು ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವಪರೀತಿ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0
ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[22-11]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಅವಶ್ಯಕವಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿ. [313-39]

ನಮ್ಮ ವಿಳಾಸ:—ಬಿ. ಎಸ್. ಸಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಕು-ಬೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ-ಸೋಂಕು ರೋಗಸ್ಥಳಗಳಲ್ಲೂ-ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ-ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವರಸೇಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನಡು ನೋವು, ಹಲ್ಲು ನೋವು, ಆಟೋಟಳಗಳು ಬಹಳ ಬೇಗನೆ ವಾಸಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟಿ.ಖ ಪ್ರತ್ಯೇಕ.

[231-31] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕಂಡರಿ ಕನ್ನಡ ಪ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಬೇಸ್ತ್ರತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,
[13-18] ಸುಬೋಧ ಗ್ರಂಥಾಲಯ, ಮೈಸೂರು.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಸೀರೆಗಳು—16, 18 ಮೊಳ ಉದ್ದ, ಎರಡು ವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಜೇಬು, ಕೆಂಪು, ಊದ, ಹಸಿರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರೆಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಜೇಬು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರೆಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರೆಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರೆಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗಸ್ಸು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ,
[63-9] ಧಾರಾನಗರ ಬೀದಿ, ಕಾಶಿ.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

"ಜ್ವರದಮಾತ್ರೆ." ಬಹು ಜಂಡಿಕ! ಬಹು ಪಾಕರಿಯಿಂದ ಎಲ್ಲಾ ವಿಧ ಜ್ವರಗಳನ್ನೂ ನಿವಾರಿಸಿ ಶಾಶ್ವತ ಗುಣಕೊಟ್ಟಿದೆ. ಇದರಿಂದ ಗುಣ ಕಾಣದವರೇ ಇಲ್ಲಾ. 24 ಮಾತ್ರೆ ಶೀಸೆಗೆ 8 ಆಣೆ. 6 ಶೀಸೆಗೆ 2½ ರೂ. ಇನ್ನೂ ಬಹು ಗುಣಕಾರಿ ಔಷಧಿಗಳು ನಮ್ಮಲ್ಲಿವೆ.

[262-28] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಸಂತೋಷಕರವಾದ ಪ್ರಕಟನೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಇದರ ಕ್ರಯ 6 ಬಹುಮಾನ ಸಹಿತ ರೂ. 2-15-0.

5 ವರುಷದ ಖಾತ್ರಿಯಾದ ಗ್ಯಾರಂಟಿ.

ಅಸ್ಸಾ—ಪುನಃ ಇಂಜನ್ ಮಾರ್ಕು ಅಂದರೆ ಗುರುತುಳ್ಳ ಪ್ರಖ್ಯಾತಿ ಹೊಂದಿದ ಲೀವರ್ ಕೆಲಸದಲ್ಲಿ ತಯಾರಿಸಲ್ಪಟ್ಟದ್ದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಗಾರ್ಡುದೊರೆಗಳಿಗೂ, ರೈಲ್ವೆ ಉದ್ಯೋಗಸ್ಥರಿಗೆ ಸಪ್ಲೈ ಮಾಡುತ್ತೇವೆ. ಬರೀ ಮಾತುಗಳಿಂದ ಏನು?



ನಮ್ಮ ವಿಳಾಸ—
ಕಮಲರಾಂ ಅಂಡು ಕಂಪನಿ,
ನಂಬರ್ 28,
[97-3] ಇರುಳಪ್ಪನ್ ಬೀದಿ, ಸಾಹುಕಾರ್ ಪೇಟೆ, ಮದರಾಸು.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಕೇಶೋಲ್ಲಾಸಿನಿ ಶೀಸಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕಳಿದಲು ಅತಿ ನುಣುಪಾಗಿಯೂ ಇರುತ್ತದೆ.

ಫಿತ್ನ ತೊಲಾ 1 ಕ್ಕೆ 1 ರೂ.

ಇದು ಅತ್ಯಂತ ಸುವಾಸನೆಯಾಗಿಯೂ ಥಳಥಳನೆ ಹೊಳೆಯುವದಾಗಿಯೂ ಇದೆ. ಗಂಡಸರ ವಿಸಿಸೆಗೂ ಹೆಂಗಸರ ಮುಂಗುರುಳಿಗೂ ಹಣೆಗೂ ಸಹಾ ಹಚ್ಚಿಕೊಳ್ಳುತ್ತಾರೆ.

ರಾಯಲ್ ಸುಗಂಧಿ ಶೀಸಾ 1 ಕ್ಕೆ 8 ಆಣೆ.

ಗಂಧದಬಿಲ್ಲೆಯನ್ನು ತೆಯ್ಯುವದಕ್ಕೆ ಕೆಲವರು ಬೇಜಾರುಪಡುತ್ತಾರೆ. ಮತ್ತು ಬಿಸಲಿನಲ್ಲಿ ಒಣಗುವದರಿಂದ ಸುವಾಸನೆಯೂ ಬಹಳ ಕಡಮೆಯಾಗಿರುತ್ತೆ ಎಂಬದಾಗಿ ಬಿಲ್ಲೆಗೆ ಹಾಕುವ ಪದಾರ್ಥವನ್ನೇ ಪುನಗುಜವಾದಿನಸಾರ ಸಹಾ ಸೇರಿಸಿ ಅಪೇಕ್ಷಿಸಿದ ಕೂಡಲೇ ಹಚ್ಚಿಕೊಳ್ಳುವಂತೆ ತಯಾರಿಸಿರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[39-17] ಸುಗಂಧಕಾರಿ, ಮೈಸೂರು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಕೀರ್ತಿವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180-33] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸರಳಬಾಲೆ	0-8-0
ತಾರಾಸುಂದರಿ	0-8-0	ಕುಮುದಿನಿ	0-8-0
ರಾಧಾಮಾಧವ	0-8-0	ಸಂತಾಪಕ	0-4-0

[275-27] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಎಲ್ಲರಿಗೂ ಬೇಕಾದ ಸರಕುಗಳು.



ಸುಗಂಧ ನಶ್ಯದಪುಡಿ 9 ತೊಲೆ ಟಿನ್ 1 ಕ್ಕೆ 12 ಆ. ಸಾದಾ ನಶ್ಯದಪುಡಿ 9 ತೊ. ಟಿನ್ 1ಕ್ಕೆ 6 ಆ. ಕೇಶವರ್ಧಿನಿ ತೈಲ ಬಾಟ್ಲಿ 1ಕ್ಕೆ 12 ಆ. ಭಂಗಾರದ ಗಿಲ್ಟಿನ ಬೀಜು ಅಥವಾ ಕೆಂಪು ಕಲ್ಲಿನ ಬೆಂಡೋಲೆ ಜೊತೆ 1 ಕ್ಕೆ 3 ರೂ. ತಾರೀಖು ತಿಂಗಳು ವರುಷ ಇವುಗಳಿಂದ ಕೂಡಿರುವ ಡೇಟಿಂಗು ರಬ್ಬರ್ ಸ್ಟಾಂಪು 1ಕ್ಕೆ 1-4-0 ಸ್ವಂತ ಹೆಸರಿಗೆ ರಬ್ಬರು ಸ್ಟಾಂಪು ಕನ್ನಡ ಅಥವಾ ಇಂಗ್ಲೀಷು ಭಾಷೆಯಲ್ಲಿ ತಯಾರಿಸಲ್ಪಟ್ಟು ಬ್ರಷ್ ಪ್ಯಾಡ್ ಇಂಕಿ ಇವುಗಳು ಇನಾಮಿನ ಸಮೇತವಾಗಿ ಕ್ರಯ 3 ರೂಪಾಯಿ. [107-2]

ವಿಳಾಸ—ಎ. ಟಿ. ಎಸ್. ಜಯಾಲಕ್ಷ್ಮೀ ಕಂಪನಿ, ನಂ. 41, ನಾಟುಪಿಳ್ಳಾರು ಕೋವಿಲ್ ಸ್ಟ್ರೀಟ್ ಸಾಹುಕಾರು ಪೇಟೆ ಪೋಸ್ಟ್, ಮದರಾಸ್.

ಇದನ್ನು ಅವಶ್ಯವಾಗಿ ನೋಡಿರಿ.

ಜುವೆಲ್ಡ್ ಸ್ಪ್ರಿಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

ಇದರ ಕ್ರಯ 8 ಬಹುಮಾನಗಳ ಸಮೇತ ರೂ. 3-4-0.

ಸಂತೋಷಕರವಾದ ವಾಚ್! ಸಂತೋಷಕರವಾದ ಬಹುಮಾನ!

ಸಂತೋಷಕರವಾದ ಬೆಲೆ!

5 ವರುಷದ ಗ್ಯಾರಂಟಿ ಕೊಡಲ್ಪಡುತ್ತೆ.

ಮಿತ್ರರೆ, ಈ ನಕ್ಷೆಯಲ್ಲಿ ತೋರಿಸಿರುವ ಜುಯೆಲ್ಡ್ ಸ್ಪ್ರಿಂಗ್ ಪಾಕೆಟ್ಟು ರಿಜಿಸ್ಟರ್ಡ್ ವಾಚ್. 5 ರತ್ನಗಳು ಉಳ್ಳ ಕೀಲೆಸ್ ಬ್ಯಾಲೆನ್ಸ್. ಬಹು ಬಲಿಷ್ಠವಾದ ಗಡಿಯಾರ ಈ ಗಡಿಯಾರ ನಾಜೂಕಾದ ಯಂತ್ರದಲ್ಲಿಯೂ, ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟದ್ದು. ಇದನ್ನು ಕೈಗೂ ಕಟ್ಟಿಕೊಳ್ಳಬಹುದು ಇದು ನೋಡುವದಕ್ಕೆ ಸುಂದರವಾಗಿಯೂ, ಮುಚ್ಚಟವಾಗಿಯೂ ಇರುತ್ತೆ. ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ ನಮ್ಮ ಕಂಪನಿ ಹೊಸದಾಗಿ ಇರುವದರಿಂದ ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶವಾಗಿಯೂ, ಭಾರಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಸೊಗಸಾದ ಗಡಿಯಾರವನ್ನು ಕೂಡಲೆ ಬರೆದು ತರಿಸಿಕೊಳ್ಳಿ. ಬಹುಮಾನ ತಪಸೀಲು ಹ್ಯಾಗೆಂದರೆ—(1) ಸುಂದರವಾದ ಸರಪಣಿ, (2) ಉತ್ತರ ಮುಖಿ, (3) ಇಂಗ್ಲಿಷ್ ನಮೂನೆ ಬಾಚಣಿಗೆ, (4) ಜರ್ಮನ್ ಕನ್ನಡಿ, (5) ಜರ್ಮನ್ ಸಿಲ್ಕು ಕರವಸ್ತ್ರ, (6) ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ (ಬಹು ಸೊಗಸಾದುದು), (7) ಪರಟು ಗುಂಡಿ ಸೆಟ್, (8) ಸುವಾಸನೆಯುಳ್ಳ ಪರಿಮಳ ಸೀಸೆ (ಸೆಂಟ್).



ನಮ್ಮ ವಿಳಾಸ:—ಕಮಲರಾಂ ಅಂಡು ಕಂಪನಿ,
[97-3] ನಂ. 28, ಇರುಳಪ್ಪನ್ ಬೀದಿ, ಸಾಹುಕಾರ್ ಪೇಟೆ, ಮದರಾಸು.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನೆಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ"—ಕೆ. ರಾಮುಸ್ವಾಮಿ, ಪಲ್ಲಾಸ-ಕಾ-ಸಿಬುನ, 20-2-16.

ಅರ್ಧಬೆಲೆ ಮಾತ್ರ.

ಸಿರಾಕರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೋಂಟಿ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು. ಆರ್ಡರುಗಳನ್ನು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-29] ಪಿ. ಓ. ಬಾಕ್ಸ್ 330, ಬೊಂಬಾಯಿ.

ನಮ್ಮ ಏಜೆಂಟರಿಗೂ ಚಂದಾದಾರರಿಗೂ.

1916-16 ನೇ ಸಾಲಿನ "ವೃತ್ತಾಂತ ಪತ್ರಿಕೆ"ಯ ಚಂದಾ ಈಗ ಕೊಡಬೇಕಾಗಿದೆ; ಇದು ಖಂಡಿತವಾಗಿಯೂ ಅಡ್ವಾನ್ಸಾಗಿಯೇ ಪಾವತಿಯಾಗತಕ್ಕದ್ದು. ಯಾರು ಹೀಗೆ ಮುಂಗಡವಾಗಿ ಚಂದಾ ಪಾವತಿ ಮಾಡುವದಿಲ್ಲವೋ ಅವರಿಗೆ ಪತ್ರಿಕೆಗಳನ್ನು ಕೊಡುವುದನ್ನು ನಿಲ್ಲಿಸಬೇಕೆಂದು ನಮ್ಮ ಎಲ್ಲಾ ಏಜೆಂಟರುಗಳಿಗೂ ಈ ಮೂಲಕ ಎಚ್ಚರಿಸುತ್ತೇವೆ.

ಮೈಸೂರು. ಎಚ್. ಗಲ್ಲಿಫೋರ್ಡ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೬ ನೇ ಇಸವಿ ಜೂನ್ ತಾ. ೧೫ ನೇ ಗುರುವಾರ.

ನಮ್ಮ ವೈಸ್‌ರಾಯ್‌ರವರ ಅಧಿಕಾರದ ಅವಧಿ.

ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್‌ರವರ ಅಧಿಕಾರದ ಅವಧಿಯು ಮುಂದಿನ ನೊವೆಂಬರಿಗೆ ಮುಕ್ತಾಯವಾಗಬೇಕಾಗಿತ್ತು. ಚಕ್ರವರ್ತಿ ಸಾರ್ವಭೌಮರಾದ ಜಾರ್ಜ್ ದೊರೆಯವರು ಈಗಿನ ಸ್ಥಿತಿಗತಿಯನ್ನು ಪರಾಂಬರಿಸಿ ಲಾರ್ಡ್ ಹಾರ್ಡಿಂಗ್‌ರವರೇ ಇನ್ನೂ ಐದು ತಿಂಗಳ ಕಾಲ ಅಂದರೆ ಮುಂದಿನ ಮಾರ್ಚಿ ಆಖೈರು ತನಕ ಹಿಂದುಸ್ಥಾನದಲ್ಲಿ ವೈಸ್‌ರಾಯರಾಗಿರತಕ್ಕದ್ದೆಂದು ಕೃಪೆಯಿಟ್ಟು ಅಪ್ಪಣೆ ದಯಪಾಲಿಸಿರುತ್ತಾರೆ. ಈ ಸಮಾಚಾರವು ನಮ್ಮ ವಾಚಕರೆಲ್ಲರಿಗೆಲ್ಲಾ ಪರಮಾನಂದವನ್ನುಂಟುಮಾಡೀತೆನ್ನುವುದಕ್ಕೆ ಸಂಶಯವಿಲ್ಲ. ಈ ಪದವಿಯ ಕಾರ್ಯಭಾರವು ಮಹತ್ತರವಾದದ್ದೆಂದೂ, ಅದರ ನಿರ್ವಾಹಕ್ಕಾಗಿ ಅವರು ಕಳೆದ ಐದು ವರುಷಗಳಿಂದ ಅಸಾಧಾರಣವಾಗಿ ಶ್ರಮಪಟ್ಟಿರುತ್ತಾರೆಂದೂ ತಿಳಿದಿದ್ದಾಗ್ಯೂ ಲಾರ್ಡ್ ಹಾರ್ಡಿಂಗ್‌ರವರು ಇನ್ನೂ ಸ್ವಲ್ಪಕಾಲ ಇಲ್ಲೇ ಇದ್ದು ಕಾರ್ಯನಿರ್ವಹಮಾಡಲು ಒಪ್ಪಿಕೊಂಡದ್ದಕ್ಕಾಗಿ ಸಕಲರೂ ಆನಂದಪಡುತ್ತಾರೆ. ಈ ಸುದ್ದಿಯು ಹಿಂದುಸ್ಥಾನದಲ್ಲೆಲ್ಲಾ ಅಪಾರವಾದ ತೃಪ್ತಿಯನ್ನೂ ಅತಿಶಯವಾದ ಸಂತೋಷವನ್ನೂ ಉಂಟುಮಾಡೀತೆಂದು ಧಾರಾಳವಾಗಿ ಹೇಳುತ್ತೇವೆ.

ಮೈಸೂರಿನಲ್ಲಿ ಪರಸ್ಪರ ಸಹಾಯ.

ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ವಿಷಯದಲ್ಲಿ ರಿಜಿಸ್ಟ್ರಾರವರು ಬರೆದಿರುವ ವಾರ್ಷಿಕ ರಿಪೋರ್ಟೂ, ಅದರ ಮೇಲೆ ಸರ್ಕಾರದವರು ಬರೆದಿರುವ ಹುಕುಮೂ ನಮಗೆ ತಲಪಿರುವುದು. ಕಳೆದ ಸಾಲಿನಲ್ಲಿ ರಿಜಿಸ್ಟ್ರಾರವರ ಸಾಹಸ ಪ್ರಯತ್ನಗಳು ಸಾರ್ಥಕವಾಗಿ ನೆರವೇರಿರುವವೆಂದು ತಿಳಿದು ಸಂತೋಷಪಡುತ್ತೇವೆ. ಪರಸ್ಪರ ಸಹಾಯವೆಂಬುವುದು ನಮ್ಮ ಸೀಮೆಯಲ್ಲಿ ಬಹಳ ಅಭಿವೃದ್ಧಿಯಾಗುತ್ತಿದೆ. ಈ ಭಾಗದಲ್ಲಿ ನಾವು ಎಷ್ಟೋ ಆನಂದಪಡುವೆವು. ಸೊಸೈಟಿಗಳ ಸಂಖ್ಯೆಯು 310 ಇದ್ದದ್ದು ಗತಸಾಲಿನಲ್ಲಿ 330 ಆಗಿರುತ್ತವೆ. ಮೆಂಬರುಗಳ ಸಂಖ್ಯೆ 24,338 ರಿಂದ 40,479 ಕ್ಕೆ ಹೆಚ್ಚಿರುವುದು. ಮೂಲಧನವಾದರೋ ಹಿಂದಿನ ಸಾಲಿನಲ್ಲಿ 12,80,338 ರೂಪಾಯಿ ಇದ್ದದ್ದು ಕಳೆದ ಸಾಲಿನಲ್ಲಿ 21,47,340 ರೂಪಾಯಿ ಆಗಿರುವುದು. ಅನೇಕ ಸೊಸೈಟಿಗಳಲ್ಲಿ ಷೇರುದಾರರಿಗೆ ಶೇಕಡ 5 ರ ಲಾಗಾಯತು 8 ರೂಪಾಯಿನ ವರೆಗೆ ಬಡ್ಡಿಯನ್ನು ಹಂಚಿರುತ್ತಾರೆ. ಸೊಸೈಟಿಗಳಿಂದ ಸಾಲ ಪಡೆದವರು ಶೇಕಡ 7½ ರಿಂದ 12 ರೂಪಾಯಿ ವರೆಗೆ ಬಡ್ಡಿ ದರವನ್ನು ಪಾವತಿಮಾಡಿರುವರು. ಕಳೆದ ವರುಷ 211 ಸೊಸೈಟಿಗಳು ಹೊಸದಾಗಿ ಏರ್ಪಾಡಾಗಿರುತ್ತವೆ; ಇದ್ದ ಸೊಸೈಟಿಗಳಲ್ಲಿ 21 ನಿಂತುಹೋದವು. ಎಲ್ಲಾ ಸೊಸೈಟಿಗಳಲ್ಲೂ ಕಳೆದ ಸಾಲಿನಲ್ಲಿ ಒಟ್ಟು 96,28,522 ರೂಪಾಯಿನ ಲೇವಾದೇವಿ ನಡೆಯಿತು; ಇದರಿಂದ ಒಟ್ಟು 1,18,604 ರೂಪಾಯಿ ಲಾಭ ಸಂಪಾದನೆಯಾಗಿರುತ್ತದೆ. ಬಡ್ಡಿ ದರವು ಕಡಮೆಯಾಗಿದ್ದದ್ದರಿಂದ ಸಾಲಪಡೆದವರಿಗೆ 1,38,000 ರೂಪಾಯಿ ತನಕ ಪ್ರಯೋಜನವಾದಂತೆ ಹೇಳಲಾಗಿದೆ.

ಈ ಪರಸ್ಪರ ಸಹಾಯ ಸಂಘಗಳಿಂದ 37,205 ಜನಗಳು 31,61,172 ರೂಪಾಯಿನ ಸಾಲಗಳನ್ನು ತೆಗೆದುಕೊಂಡರು. ಆ ಪೈಕಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚಾಗಿ ಅಂದರೆ 16,75,978 ರೂಪಾಯಿನ ಸಾಲಗಳನ್ನು ಜಮೀನನ್ನು ಹಸನು ಮಾಡಿಕೊಳ್ಳುವುದಕ್ಕೂ, ವ್ಯವಸಾಯದ ಖರ್ಚಿಗೂ, ಉಳುಮೆಯ ಎತ್ತು ಮೊದಲಾದ ಪ್ರಾಣಿಗಳನ್ನು ಕೊಂಡುಕೊಳ್ಳುವುದಕ್ಕೂ, ಹಸಿಯ ಪದಾರ್ಥಗಳು, ಮನೆಗಳು, ಜಮೀನುಗಳು ಮುಂತಾದವುಗಳನ್ನು ಕೊಂಡುಕೊಳ್ಳುವುದಕ್ಕೂ ತೆಗೆದುಕೊಂಡಿರುವಂತೆ ತಿಳಿಯಲಾಗಿದೆ. ಇದಲ್ಲದೆ ಇತರ ಕಡೆ ಹೆಚ್ಚು ಬಡ್ಡಿಯುಳ್ಳ ಸಾಲಗಳನ್ನು ತೀರಿಸುವುದಕ್ಕೂ ಮೆಂಬರುಗಳಿಗೆ ಸಾಲಕೊಡಲಾಯಿತು. ಈ ಭಾಗಗಳೆಲ್ಲಾ ವಿಶೇಷ ಸಂತೋಷಪ್ರದವಾಗಿರುವವು. ಈ ಹಣಗಳೆಲ್ಲಾ ಮೆಂಬರುಗಳು ಷೇರುಗಳನ್ನು ಕೊಂಡುಕೊಂಡು ಭರ್ತಿಮಾಡಿದ್ದಾಗಿಯೂ, ಸಾಲದ್ದಕ್ಕೆ ಸೊಸೈಟಿಗಳು ಸೆಂಟ್ರಲ್ ಬ್ಯಾಂಕುಗಳಿಂದ ಶೇಕಡಾ 7½ ರೂಪಾಯಿ ಬಡ್ಡಿಗೆ 3,39,946 ರೂಪಾಯನ್ನು ಸಾಲವಾಗಿ ತಂದುಕೊಟ್ಟಿವಾರೆಂದೂ ತಿಳಿದು ಬರುತ್ತದೆ.

ಹೋರಾಟವಾಗಲಿ ಮನಸ್ತಾಪವಾಗಲಿ ಇಲ್ಲದೆ ಸೊಸೈಟಿಗಳಲ್ಲಿ ಕೆಲಸ ಕಾರ್ಯಗಳು ನಡೆಯುವುದು ಸಾಧ್ಯವಲ್ಲ. ಕಳೆದ ಸಾಲಿನಲ್ಲಿ ಹುಟ್ಟಿದ 160 ಮೊಕದ್ದಮೆಗಳಲ್ಲಿ 15 ಮೊಕದ್ದಮೆಗಳು ಉಳಿಕೊಂಡು ವಿಚಾರಣೆಯಲ್ಲಿರುತ್ತವೆ. ಆ ಪೈಕಿ 95 ಮೊಕದ್ದಮೆಗಳನ್ನು ವಿಚಾರಣೆಯಿಂದ ವ್ಯವಸ್ಥೆಮಾಡಿದರು. 64 ಮೊಕದ್ದಮೆಗಳು ವಾಪಸು ತೆಗೆದುಕೊಳ್ಳಲ್ಪಟ್ಟವು; ಇಲ್ಲವೇ ರಾಜಿಯಾಗಿರುತ್ತವೆ. 4 ಮೊಕದ್ದಮೆಗಳನ್ನು ಪಂಚಾಯತರ ಇತ್ಯರ್ಥಕ್ಕೆ ಒಪ್ಪಿಸಿದರು. 26 ಮೊಕದ್ದಮೆಗಳು ಇನ್ನೂ ತನಿಖೆಯಲ್ಲಿದ್ದವು. ಪರಸ್ಪರಸಹಾಯವೆಂಬುವುದು ಯಥಾರ್ಥವಾಗಿ ಆಚರಣೆಗೆ ಬಂದ ಪಕ್ಷದಲ್ಲಿ ವ್ಯವಹಾರಕ್ಕೆ ಎಳ್ಳಷ್ಟೂ ಅವಕಾಶವಾಗುವುದಿಲ್ಲ. ಇಂಥಾ ವ್ಯವಹಾರವು ದಿನಕ್ರಮೇಣ ಹೆಚ್ಚೀತೆಂಬ ಶಂಕೆಯು ಕಂಡುಬರುತ್ತಿದೆಯಾದರೂ ಅದು ಕೂಡಿದ ಮಟ್ಟಿಗೂ ಕಡಮೆಯಾಗುತ್ತಾ ಬರಬೆಂದು ಹಾರೈಸುತ್ತೇವೆ.

ರಿಜಿಸ್ಟ್ರಾರವರು ತಮ್ಮ ಇಲಾಖೆಯ ಕೆಲಸಕಾರ್ಯಗಳು ತುಂಬಾ ಹೆಚ್ಚಾಗಿವೆ ಎಂದೂ, ಕೆಲಸಕ್ಕೆ ತಕ್ಕಷ್ಟು ಸಿಬ್ಬಂದಿ ಇಲ್ಲದಿರೋಣದರಿಂದ ಪ್ರತಿ ಒಂದು ಸೊಸೈಟಿಯನ್ನೂ ಸರಿಯಾಗಿ ತನಿಖೆಮಾಡಿ ಕ್ರಮಪಡಿಸಿ ನೋಡಿಕೊಳುತ್ತಾ ಬರುವುದು ಕಷ್ಟವಾಗಿದೆ ಎಂದೂ ಹೇಳುತ್ತಾರೆ. ಈ ಬಾಬೇ ನಮ್ಮ ಸೀಮೆಗೆ ಹೊಸದಾಗಿರುವ ಕಾರಣ ಇದರ ಪುರೋವೃದ್ಧಿಗಾಗಿ ಪ್ರಾರಂಭ ದೆಸೆಯಲ್ಲಿ ಸರ್ಕಾರದವರು ಅವಶ್ಯವಾದಷ್ಟು ಸಿಬ್ಬಂದಿಯನ್ನು ಒದಗಿಸಿಕೊಟ್ಟು, ಪ್ರತಿ ಒಂದು ಸೊಸೈಟಿಯ ಲೆಕ್ಕ ಪತ್ರಗಳನ್ನೂ ತನಿಖೆಮಾಡಿ ಅದರ ಕಾರುಬಾರುಗಳನ್ನು ತೃಪ್ತಿಕರವಾಗಿ ನೋಡಿಕೊಳ್ಳುತ್ತಾ ಬರುವಂತೆ ಮಾಡಬೇಕಾದದ್ದು ಅವಶ್ಯವೆಂದು ನಮಗೆ ತೋರುತ್ತದೆ. ಈ ಏರ್ಪಾಡು ನಿಜವಾಗಿಯೂ ನಮ್ಮ ಸೀಮೆಯಲ್ಲಿ ಜೀರೂರಿ ಬೆನ್ನಾಗಿ ಅಭಿವೃದ್ಧಿಗೆ ಬಂದ ಪಕ್ಷದಲ್ಲಿ ಸೊಸೈಟಿಗಳು ಸಂಪಾದನೆಮಾಡುವ ಲಾಭದಲ್ಲಿ ಅವುಗಳ ಮೇಲ್ವಿಚಾರಣೆ ಖರ್ಚಿಗೋಸ್ಕರ ಒಂದಂಶವನ್ನು ಕೊಡುವಂತೆ ಸರ್ಕಾರದವರು ವಿಧಾಯಕಮಾಡಬಹುದಾಗಿದೆ. ಈಗಾಗಲೇ ಸೊಸೈಟಿಗಳಿಂದ ಅಂಥಾ ಪ್ರತಿ ಫಲವನ್ನು ನಿರೀಕ್ಷಿಸುವುದು ಸಹಜವೆಂದು ಕಾಣುವುದಿಲ್ಲ. ಇನ್ನು ಮುಂದೆ ಸರ್ಕಾರದವರು ಮೇಲ್ವಿಚಾರಣೆಯ ಸಿಬ್ಬಂದಿ ಖರ್ಚಿನಲ್ಲಿ ಕೆಲವು ಭಾಗವನ್ನು ಸೊಸೈಟಿಗಳಿಗೆ ವಹಿಸತಕ್ಕದ್ದಾಗಿದೆ. ಅದುವರೆಗೆ ಸರ್ಕಾರದವರು ಈ ಮೇಲ್ವಿಚಾರಣೆ ಕಾರ್ಯವನ್ನು ಪ್ರೀತಿಪೂರ್ವಕವಾಗಿಯೂ ನಿದಾರ್ಕ್ಷಿಣ್ಯವಾಗಿಯೂ ನಡಿಸುವುದಕ್ಕೆ ತೃಪ್ತಿಕರವಾದ ಏರ್ಪಾಡುಮಾಡಿಡಬೇಕಾದದ್ದು ಪರಮಾವಶ್ಯಕವಾಗಿದೆ.

ಈ ಸಂದರ್ಭದಲ್ಲಿ ನಮಗೆ ಕೆಲವು ಸಂಶಯಗಳುಂಟಾಗಿ ಅವುಗಳನ್ನು ಪರಿಹರಿಸಿಕೊಳ್ಳಲು ಕುತೂಹಲಪಡುತ್ತಿದ್ದೇವೆ. ಆ ಸಂಶಯಗಳ್ಯಾವವೆಂದರೆ—ಸಾಲಬೇಕೆಂದು ಕೇಳುವವರ ಪೈಕಿ ಶೇಕಡಾ ಎಷ್ಟು ಜನರಿಗೆ ಸಾಲ ಸಿಕ್ಕುವುದು? ಸೊಸೈಟಿಯಲ್ಲಿ ಹಣ ಹೆಚ್ಚಾಗಿಲ್ಲದಿರುವ ಸಂದರ್ಭಗಳಲ್ಲಿ ಸಾಲಬೇಕೆಂದು ಹಲವು ಮೆಂಬರುಗಳು ಕೇಳಿದಾಗ ಇಂಥಿಂಥಾ ಉದ್ದೇಶಕ್ಕೇ ಸಾಲ ಕೊಡಬೇಕೆಂಬ ವಿಧಾಯಕವೇನಾದರೂ ಉಂಟೇ? ಸಾಲ ಕೊಡುವುದರಲ್ಲಿ ಪಕ್ಷಪಾತಗಳೇನಾದರೂ ನಡೆಯುವವೇ? ಸಾಲ ತೆಗೆದುಕೊಂಡವರು ಷರತ್ತಿನ ಪ್ರಕಾರ ಕಂತುಗಳನ್ನು ಕೊಟ್ಟು ಸಾಲ ತೀರಿಸುತ್ತಿದ್ದಾರೆಯೋ? ಹಾಗೆ ಕಂತುಗಳನ್ನು ಕ್ರಮವಾಗಿ ಕೊಡದೆ ತಪ್ಪುವವರು ಎಷ್ಟು ಮಂದಿ? ಸಾಲಗಳು ಸಿಕ್ಕುವುದು ಸುಲಭವಾದಲ್ಲಿಟ್ಟಿರೋಣದರಿಂದ ಜನಗಳು ಹೆಚ್ಚು ಹೆಚ್ಚಾಗಿ ಸಾಲಗಾರರಾಗುತ್ತಿದ್ದಾರೆಯೋ?

ಪರಸ್ಪರ ಸಹಾಯವೆಂಬುವುದು ಬಹಳ ಶ್ರೇಯಸ್ಕರವಾದದ್ದು. ಇದನ್ನು ಯೋಗ್ಯವಾದ ರೀತಿಯಲ್ಲಿ ಆಚರಣೆಗೆ ತಂದರೆ ಪ್ರಜೆಗಳಿಗೆ ಇದರಿಂದ ಎಷ್ಟೋ ಪ್ರಯೋಜನವಾಗುತ್ತದೆ. ಆದರೆ ಅದರ ಪ್ರಚಾರಕ್ಕೆ ಹಲವು ಅಡಚಣೆಗಳೂ ವಿಘ್ನಗಳೂ ಸಂಭವಿಸುವವು. ಅವುಗಳನ್ನು ಚೆನ್ನಾಗಿ ಮೊದಲೇ ವಿವೇಕಿಸಿ ತಿಳಿದು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾ ಬರಬೇಕು. ಜನಗಳಿಗೆ ಸಾಲ ಸಿಕ್ಕುವುದನ್ನು ಅತಿ ಸುಲಭವಾಗಿ ಮಾಡಿಟ್ಟರೆ ಅನೇಕ ಮಂದಿ ಸಾಲಮಾಡುವ ದುರಭ್ಯಾಸದಲ್ಲಿ ಬಿದ್ದು ಕೆಟ್ಟುಹೋಗುತ್ತಾರಲ್ಲದೆ ಅಂಥವರ ದೆಸೆಯಿಂದ ಸೊಸೈಟಿಗಳೂ, ಸೊಸೈಟಿಗಳ ಉದ್ದೇಶವೂ ಕೆಡುವುದಕ್ಕೆ ಅವಕಾಶವಾದೀತು.

ನೂರಹನ್ನೊಂದು ವರುಷಗಳಿಂದ ನಡೆಯುತ್ತಿರುವ ಒಂದು ಸಮಾಜ.

ಒಂದು ಸಮಾಜವುಂಟು ಅದು ಈಗ ನೂರಹನ್ನೊಂದು ವರುಷಗಳ ಹಿಂದೆ ಸ್ಥಾಪಿತವಾಗಿ ಈ ವರೆಗೂ ಸಂಪ್ರತಿ ಅಭಿವೃದ್ಧಿಯಾಗುತ್ತಾ ಬರುತ್ತಲಿದೆ. ಈ ಸಮಾಜವು ಆರಂಭವಾಗಿ ಕಳೆದ ಮೇ ತಿಂಗಳು ಐದನೆ ತಾ. ಸರಿಯಾಗಿ ನೂರ ಹನ್ನೊಂದು ವರುಷಗಳಾದ್ದರಿಂದ ಆ ಸಮಾಜದವರು ಅದರ ನೂರಹನ್ನೊಂದನೇ ವರುಷದ ವರ್ಧಂತಿಯ ಮಹೋತ್ಸವವನ್ನು ನಡಿಸಿದರು ಮತ್ತು ಆ ವರ್ಧಂತಿಯಲ್ಲಿ ಓದಿದ ರಿಪೋರ್ಟಿನಿಂದ ತಿಳಿದು ಬಂದಿರುವದೇನೆಂದರೆ—ಕಳೆದ ನೂರ ಹತ್ತು ವರುಷಗಳಲ್ಲಿ ಆ ಸಮಾಜವು ಕೆಲಸನಡಿಸುತ್ತಾ ಬಂದಿದೆ. ಆದರೆ ಈ ವರುಷದಲ್ಲಿ ಅದು ನಡಿಸಿರುವ ಕೆಲಸವು ಹಿಂದಣ ಯಾವ ವರುಷಗಳಲ್ಲಿ ನಡಿಸಿದ ಕೆಲಸಕ್ಕಿಂತ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಲಿಲ್ಲ.

ಈ ಸಮಾಜವು ಯಾವದು? ನಮ್ಮ ಸೀಮೆಯ ಜನಗಳು ಈ ಸಮಾಜವನ್ನೂ ಅದು ನಡಿಸುತ್ತಿರುವ ಕೆಲಸವನ್ನೂ ಸ್ವಲ್ಪ ಮಟ್ಟಿಗಾದರೂ ತಿಳಿದಿರಬೇಕೆಂದು ನಾವು ಅಭಿಲಾಷೆಪಡುತ್ತೇವೆ. ಇದು ಬಹಳ ಕಾಲದಿಂದ ಅಭಿವೃದ್ಧಿಹೊಂದುತ್ತಲೇ ಬಂದಿದೆ. ಕಳೆದ ವರುಷ ಇದರ ಕೆಲಸವು ನಡೆಯುವದಕ್ಕಾಗಿ 2,66,734 ಪೌಂಡುಗಳು ಅಂದರೆ ಸುಮಾರು 40 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ಆ ಸಮಾಜದವರಿಂದ ಸಂಗ್ರಹವಾಗಿ ಸುಮಾರು 40,30,000 ರೂಪಾಯಿ ವ್ಯಯವಾಗಿರುತ್ತವೆ ಮತ್ತು ಈ ಸಮಾಜಕ್ಕೆ ಸೇರಿದ ನೂರಾರು ಶಾಖೆಗಳು ಪ್ರಪಂಚದ ಸಕಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಇದ್ದುಕೊಂಡು ಕೆಲಸ ಮಾಡುತ್ತವೆ. ನಮ್ಮ ಬೆಂಗಳೂರು ಪಟ್ಟಣದಲ್ಲಿಯೂ ಈ ಸಮಾಜದ ಒಂದು ಶಾಖೆಯು ಸ್ಥಾಪನೆಯಾಗಿ ನಡಿಸಲ್ಪಡುತ್ತಲಿದೆ.

ಇದಕ್ಕೆ ಇಂಗ್ಲಿಷಿನಲ್ಲಿ ಬೈಬಲ್ ಸೊಸೈಟಿಯೆಂಬ ಹೆಸರುಂಟು. ಬೈಬಲ್ ಸೊಸೈಟಿಯೆಂದರೆ ಕ್ರೈಸ್ತರ ಸತ್ಯವೇದ ವಿಸ್ತಾರಾರ್ಥಕಸಮಾಜವೆಂದು ಅರ್ಥ. ಈ ಸಮಾಜದವರಿಗೆ ಒಂದೇ ಕೆಲಸವಿರುವದು. ಅದೇನೆಂದರೆ ಕ್ರೈಸ್ತರು ದೇವರು ಬರಿಸಿಕೊಟ್ಟನೆಂದು ನಂಬಿ ಓದುವ ಸತ್ಯವೇದವನ್ನು ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲಿ ಪರಿವರ್ತನೆಮಾಡಿ ಸಕಲ ಮನುಷ್ಯರಿಗೂ ಅದು ಸುಲಭಸಾಧ್ಯವಾಗಿ ಸಿಕ್ಕುವಂತೆ ಮಾಡುವದೊಂದೇ ಅವರ ಮುಖ್ಯ ಉದ್ದೇಶವಾಗಿದೆ.

ಈಗ ಬೈಬಲೆಂಬ ಸತ್ಯವೇದವನ್ನು ಈ ಸಮಾಜದವರು ಎಷ್ಟು ಭಾಷೆಗಳಿಗೆ ಪರಿವರ್ತನೆಮಾಡಿದ್ದಾರೆ? ಲೋಕದ ಬೇರೆ ಬೇರೆ ಕಡೆಗಳಲ್ಲಿ ಜನರು ಮಾತನಾಡುತ್ತಿರುವ 487 ಭಾಷೆಗಳಲ್ಲಿ ಸತ್ಯವೇದವು ಈಗ ಭಾಷಾಂತರವಾಗಿದೆ. ಇಷ್ಟು ಭಾಷೆಗಳಲ್ಲಿ ಇನ್ಯಾವ ಪುಸ್ತಕವೂ ಬರಿಯಲ್ಪಟ್ಟಿಲ್ಲ. ಕಳೆದ ವರುಷದಲ್ಲಿ 9 ಹೊಸ ಭಾಷೆಗಳಲ್ಲಿ ಅದನ್ನು ಈ ಸಮಾಜದವರು ತರ್ಜುಮೆಮಾಡಿಸಿದರು, ಮತ್ತು ಕಳೆದ ಒಂದು ವರುಷದಲ್ಲಿ ಒಂದು ಕೋಟಿ ಸತ್ಯವೇದದ ಪ್ರತಿಗಳು ಬೇರೆ ಬೇರೆ ಭಾಷೆಗಳಲ್ಲಿ ಖರ್ಚಾಗಿವೆ. ಅದು ಕನ್ನಡ, ತೆಲುಗು, ಅರವ, ಮಲೆಯಾಳ ಮುಂತಾದ ಯಾವ ದ್ರಾವಿಡಭಾಷೆಯಲ್ಲಾದರೂ ಸುಲಭ ಕ್ರಯಕ್ಕೆ ಮೈಸೂರು ದೇಶದ ಯಾವ ಡಿಸ್ಟ್ರಿಕ್ಟ್ ಪಟ್ಟಣದಲ್ಲಾದರೂ ದೊರಕುವದು.

ಈ ಸಮಾಜದವರು ಇದೊಂದು ಪುಸ್ತಕಕ್ಕೆ ಇಷ್ಟೊಂದು ಉನ್ನತ ಸ್ಥಾನವನ್ನು ಏರ್ಪಡಿಸಿ ಅದನ್ನು ಪ್ರಚುರಪಡಿಸುವದಕ್ಕೆ ಪ್ರತಿ ವರುಷದಲ್ಲಿಯೂ ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿ ಲೋಕದಲ್ಲಿರುವ ಎಲ್ಲಾ ಭಾಷೆಗಳಲ್ಲಿ ಅದನ್ನು ಬರಿಸಿ ಕೊಡುವದು ಏತಕ್ಕೆ? ಬೈಬಲೆಂಬ ಸತ್ಯವೇದದಲ್ಲಿ ವಿಶೇಷತ್ವವೇನು? ಈ ಸಮಾಜಕ್ಕೆ ಸಾಧಾರಣವಾದ ಜನಗಳು ಮಾತ್ರವಲ್ಲ. ಅನೇಕ ವಿದ್ವಾಂಸರೂ, ನೀತಿಶಾಸ್ತ್ರಕೋವಿದರೂ, ಕವೀಶ್ವರರೂ, ತತ್ವಜ್ಞಾನಿಗಳೂ ಮೆಂಬರುಗಳಾಗಿರುವರು. ಸತ್ಯವೇದವು ಅದ್ವಿತೀಯವಾದ ಪುಸ್ತಕವೆಂದು ಅವರು ನಂಬುತ್ತಾರೆ. ಮತ್ತು ಸತ್ಯವೇದವನ್ನು ಸಕಲ ಸ್ತ್ರೀಯರೂ ಪುರುಷರೂ ಬಾಲಕ ಬಾಲಕಿಯರೂ ಓದಬೇಕೆಂದು ಅಪೇಕ್ಷಿಸುತ್ತಾರೆ.

ಒಳ್ಳೇದು. ಸತ್ಯವೇದದಲ್ಲಿ ಏನು ಹೇಳಿದೆ? ಈ ಪ್ರಶ್ನೆಗೆ ಇಲ್ಲಿ ತಕ್ಕ ಉತ್ತರ ಹೇಳುವದು ಅಸಾಧ್ಯವಾಗಿದೆ. ವಾಚಕರು ಈ ಪುಸ್ತಕದ ಒಂದು ಪ್ರತಿಯನ್ನು ದೊರಕಿಸಿಕೊಂಡು ಸಾವಧಾನದಿಂದ ಓದಬೇಕು. ಅದರಲ್ಲಿ ಪ್ರಪಂಚದಲ್ಲಿ ಬಹು ಕಾಲದಿಂದ ಇದ್ದ ಜನಗಳ ಮತ್ತು ಅರಸುಗಳ ಪುರಾತನ ಚರಿತ್ರೆಯೂ, ಧರ್ಮಬೋಧೆಯೂ ಕಾವ್ಯಗಳೂ ನೀತಿವಾಕ್ಯಗಳೂ ಇರುತ್ತವೆ. ಮುಖ್ಯವಾಗಿ ದೇವರು ಪೂರ್ವಕಾಲದಲ್ಲಿ ಬೇರೆ ಬೇರೆ ಜನಾಂಗಗಳನ್ನು ಹ್ಯಾಗೆ ನಡಿಸಿ ಆಳುತ್ತಾ ಬಂದಿರುವನೆಂದೂ ಲೋಕದಲ್ಲಿ ವಿದ್ಯೆ, ನಾಗರಿಕತೆ, ನೀತಿ, ಹ್ಯಾಗೆ ಅಭಿವೃದ್ಧಿಹೊಂದಿದವೆಂದೂ ತಿಳಿಯುವದು ಮತ್ತು ದೇವರು ಸೃಷ್ಟಿಸಿ ಕಾಪಾಡುತ್ತಾ ಬಂದಿರುವ ಮಾನವರಿಗೆ ತನ್ನನ್ನೂ ತನ್ನ ಗುಣಲಕ್ಷಣಗಳನ್ನೂ ಕ್ರಮೇಣ ಪ್ರಕಟಮಾಡುತ್ತ ಬಂದಿರುವದು ಈ ದಿವ್ಯ ಪುಸ್ತಕದಿಂದ ಚೆನ್ನಾಗಿ ತಿಳಿಯುತ್ತದೆ. ಚರಿತ್ರೆ, ಕಾವ್ಯ, ತತ್ವಜ್ಞಾನ, ನೀತಿಬೋಧೆಗಳು ಇದರಲ್ಲಿದ್ದರೂ ಸತ್ಯವೇದದಲ್ಲಿ ಇವೆಲ್ಲಾ ಮುಖ್ಯವಾದ ಒಂದೇ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಬರೆಯಲ್ಪಟ್ಟವೆ. ಆ ಉದ್ದೇಶವೇನೆಂದರೆ—ಮನುಷ್ಯನು ತನ್ನನ್ನು ಉಂಟುಮಾಡಿ ಕಾಪಾಡುತ್ತಲಿರುವ ದೇವರನ್ನು ತಿಳಿದು ಆತನನ್ನು ನಂಬಿ ಭಕ್ತಿಪೂರ್ವಕವಾಗಿ ಆತನನ್ನು ಸೇವಿಸುವದರಿಂದ ಧನ್ಯನಾಗಬೇಕೆಂಬುವದೇ. ಇದೊಂದೇ ತಿಳುವಳಿಕೆಯನ್ನು ಹೃದಯಂಗಮವಾಗಿ ಎಲ್ಲರೂ ತಿಳಿಯಬೇಕೆಂಬ ಉದ್ದೇಶಕ್ಕಾಗಿ ಅದರಲ್ಲಿರುವದೆಲ್ಲಾ ಬರೆಯಲ್ಪಟ್ಟಿದೆ ಇಷ್ಟು ಸತ್ಯವೇದದ ಮೊದಲನೇ ಭಾಗವನ್ನು ಓದುವದರಿಂದ ತಿಳಿಯುವದು.

ಎರಡನೇ ಭಾಗದಲ್ಲಿ ದೇವರು ತನ್ನನ್ನೂ ತನ್ನ ಚಿತ್ತವನ್ನೂ ಸಂಪೂರ್ಣವಾಗಿ ಮನುಷ್ಯನಿಗೆ ಪ್ರಕಟಿಸಬೇಕೆಂದು ತಾನೇ ನರಾವತಾರವನ್ನು ಧರಿಸಿ ಈ ಲೋಕಕ್ಕೆ ಬಂದದ್ದನ್ನು ವಿವರಿಸುತ್ತದೆ. ಆತನು ಯೇಸು ಕ್ರಿಸ್ತನೆಂಬ ನಾಮಾಂಕಿತದಿಂದ ಈ ಲೋಕದಲ್ಲಿದ್ದು ಈ ಪತ್ರಿಕೆಯಲ್ಲಿ ನಾವು ಆಗಿಂದಾಗ್ಯೆ ಸ್ವಲ್ಪ ಸ್ವಲ್ಪವಾಗಿ ಬರೆಯುತ್ತಲಿರುವ ಸದ್ಬೋಧೆಯನ್ನೂ ಮನುಷ್ಯನು ದೇವರಿಗೆ ಮಾಡಬೇಕಾದ ಕರ್ತವ್ಯವನ್ನೂ ಮನುಷ್ಯರಿಗೆ ಮನುಷ್ಯರು ಪರಸ್ಪರ ಮಾಡಬೇಕಾದ ಕರ್ತವ್ಯವನ್ನು ಬೋಧಿಸಿ ತನ್ನ ನಡತೆಯಲ್ಲಿ ಆ ಬೋಧನೆಯನ್ನು ಅನುಷ್ಠಾನಪಡಿಸಿ ಕಡೆಯಲ್ಲಿ ಪಾಪಿಗಳಲ್ಲಿ ದೇವರು ತೋರಿಸಿರುವ ಪ್ರೀತಿಯಿಂದ ಆತನು ಮರಣವನ್ನೇ ಹೊಂದಿದ ಚರಿತ್ರೆಯು ಬರೆಯಲ್ಪಟ್ಟಿದೆ ವಾಚಕರು ಈ ಪುಸ್ತಕವನ್ನು ದೊರಕಿಸಿಕೊಂಡು ಓದಬೇಕು.

ಯುದ್ಧದ ಸಮಾಚಾರಗಳು.

ಫ್ರೆಂಚರು ಮುಂದರಿಸಿ ಹೋಗಿದ್ದಾರೆ.

ಅಪಾರವಾದ ಯುದ್ಧಭೂಮಿಯ ಎಲ್ಲಾ ಭಾಗಗಳಲ್ಲೂ ಕದನ ಕಾರ್ಯಗಳು ಬಹಳ ಚುರುಕಾಗಿ ನಡೆದಿರುವಂತೆ ತಂತೀ ವರ್ತಮಾನಗಳಿಂದ ಗೊತ್ತಾಗುತ್ತದೆ. ಇಟಲಿಯವರು ಯುದ್ಧಕ್ಕೆ ಪ್ರವೇಶಿಸಿ ಆಸ್ಟ್ರಿಯಾದೊಳಕ್ಕೆ ನುಗ್ಗಿ ಹೋಗಿರೋಣದರಿಂದ ಸುಮಾರು ನೂರೈವತ್ತು ಮೈಲಿಗಳ ಉದ್ದಕ್ಕೂ ಸೈನಿಕರು ನಿಂತು ಕದನಮಾಡುವಂತಾಗಿದೆ. ಜರ್ಮನಿಯವರನ್ನು ರಷ್ಯದೊಳಕ್ಕೆ ನುಗ್ಗಬಾರದೆಂತ ರಷ್ಯದವರು ಅವರನ್ನು ಅಡ್ಡಗಟ್ಟಿ ತಡೆದಿರುವಂತೆ ಕಾಣುವುದು. ಇಷ್ಟಲ್ಲದೆ ಯುದ್ಧರಂಗದ ಯಾವ ಭಾಗದಲ್ಲೂ ಜಯಾಪಜಯಗಳಾಗುವಂಥಾ ಕದನಗಳು ಅದಂತೆ ತಿಳಿಯಲಿಲ್ಲ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚರು ತಮ್ಮ ಸೈನಿಕರ ಸಾಲಿನ ಉತ್ತರ ಭಾಗದಲ್ಲಿ ಅಂದರೆ ಅವರೂ ಬ್ರಿಟಿಷರೂ ಸೇರಿದಂತಿರುವ ಕಡೆ ನಿಲುಗಡೆಯಿಲ್ಲದೆ ಕದನಮಾಡುತ್ತಲೂ, ಜರ್ಮನಿಯವರನ್ನು ಹಿಮ್ಮೆಟ್ಟಿಸುತ್ತಲೂ ಬಂದಿದ್ದಾರೆ. ಇದರಿಂದ ಜರ್ಮನಿಯವರು ಅವರ ಠಾಣ್ಯಗಳನ್ನು ತ್ಯಜಿಸಿ ಕೆಲವು ಮೈಲಿಗಳ ದೂರ ಹಿಂದಕ್ಕೆ ಹೊರಟುಹೋಗಬೇಕಾಯಿತು ಕದನಗಳು ದೊಡ್ಡ ದೊಡ್ಡ ಫಿರಂಗಿ ಗುಂಡುಗಳ ಹಾರಾಟದಲ್ಲಿ ಪರಿಣಾಮ ಹೊಂದುತ್ತಿವೆ ಈ ಗುಂಡುಗಳು ನಿಲುಗಡೆಯಿಲ್ಲದೆ ಮಳೆಯೋಪಾದಿಯಲ್ಲಿ ಶತ್ರು ಸೈನ್ಯದಲ್ಲಿ ಬಿದ್ದು ಒಡೆದು ಬಹು ಭಯಂಕರವಾದ ವಿನಾಶವನ್ನುಂಟುಮಾಡುವವು. ಫ್ರೆಂಚರು ಈ ರೀತಿ 52 ಗಂಟೆಗಳಲ್ಲಿ 5 00,000 ಗುಂಡುಗಳನ್ನು ಶತ್ರುವಿನ ಮೇಲೆ ಸುರಿಸಿದರೆಂದು ಹೇಳಲಾಗಿದೆ ಅವರು ಒಂದು ಗಂಟೆಗೆ 10,000 ಗುಂಡುಗಳನ್ನು ಫಿರಂಗಿಗಳಿಂದ ಹೊಡೆದಂತಾಯಿತು. ಅಂಥಾ ಘೋರವಾದ ಕಡೆಗಳಲ್ಲಿ ಮನುಷ್ಯಮಾತ್ರದವನು ಇದ್ದು ಬದುಕಿರುವುದೇ ಆಶ್ಚರ್ಯ. ಆದರೂ ಅನೇಕ ಗುಂಡುಗಳನ್ನು ಹೊಡೆದರೂ ಒಬ್ಬ ಸಿಪಾಯನ್ನಾಗಲಿ ಕೊಲ್ಲುವುದು ಪ್ರಯಾಸವೆಂದು ಕಾಣುತ್ತದೆ. ಯಾಕೆಂದರೆ ಸೈನಿಕರು ಭೂಮಿಯೊಳಗೆ ಹಳ್ಳಗಳನ್ನು ತೋಡಿಕೊಂಡು ಅವುಗಳೊಳಗೆ ಸೇರಿಕೊಂಡಿರುವರು.

ಫ್ರೆಂಚರು ಇನ್ನೊಂದು ದೊಡ್ಡ ಗ್ರಾಮವನ್ನು ಗೆದ್ದುಕೊಂಡರು ಇದಕ್ಕಾಗಿ ಮುಖ್ಯವಾದ ಕದನವೆಲ್ಲಾ ಇಪ್ಪತ್ತೈದೇ ನಿಮಿಷ ನಡೆಯಿತು. ಅಷ್ಟು ಸ್ವಲ್ಪ ಹೊತ್ತಿನೊಳಗಾಗಿ 3 000 ಸೈನ್ಯ ಮಡಿದುಹೋಯಿತು; ಮತ್ತು 260 ಮಂದಿ ಕೈಸೆರೆ ಸಿಕ್ಕಿದರು. ಫ್ರೆಂಚರು ಗೆದ್ದುಕೊಂಡ ಆ ಭಾರೀ ಗ್ರಾಮದಲ್ಲಿ ಜರ್ಮನಿ ಸೈನಿಕರು 1,000 ಹೆಣಗಳು ಬಿದ್ದಿದ್ದವು. 3 ಫಿರಂಗಿಗಳು 3 ಟೋರ್ಪೆಡೋಗಳೆಂಬ ಭಾರೀ ಫಿರಂಗಿಗಳು, 15 ಮೆಷೀನ್ ಫಿರಂಗಿಗಳು, ಕೈಯಿಂದ ಹೊಡೆಯುವಂಥಾ ಸಾವಿರಾರು ಸಿಡಿಮದ್ದಿನಗುಂಡುಗಳು, 8,00,000 ತೋಟಾಗಳು, ಒಂದು ಸಾವಿರ ಬಂದೂಕುಗಳು, ಇವೇ ಮೊದಲಾದ ಯುದ್ಧ ಸಾಮಗ್ರಿಗಳು ಅನೇಕವಾಗಿ ಫ್ರೆಂಚರಿಗೆ ಸಿಕ್ಕಿದವು. ಇಂಥಾ ಗ್ರಾಮವನ್ನು ಗೆದ್ದುಕೊಳ್ಳಬೇಕೆಂದು ಜರ್ಮನಿಯವರು ಹಲವು ವೇಳೆ ನುಗ್ಗಿ ಬಂದು ಫ್ರೆಂಚರ ಮೇಲೆ ಕದನ ಮಾಡಿದರು. ಆದರೂ ಫ್ರೆಂಚರನ್ನು ಹಿಮ್ಮೆಟ್ಟಿಸುವುದು ಅವರಿಗೆ ಸಾಧ್ಯವಾಗಲಿಲ್ಲ.—ಇನ್ನೊಂದು ಠಾಣ್ಯದಲ್ಲಿ ಫ್ರೆಂಚರು ಒಂದೇ ಆವರ್ತಿ ನುಗ್ಗಿ ಹೋಗಿ ಜರ್ಮನಿಯವರ ಮೂರು ಸಾಲು ಕಂದಕಗಳನ್ನು ಗೆದ್ದುಕೊಂಡಿದ್ದಾರೆ.

ಅಲ್ಲಿ ಫ್ರೆಂಚರು 100 ಮಂದಿ ಜರ್ಮನಿಯ ಸೈನಿಕರನ್ನು ಸೆರೆ ಹಿಡಿದರು. ಈ ಸೈನಿಕರು ಜರ್ಮನಿಯವರಲ್ಲಿ ಅಪಾರ ನಷ್ಟವಾಯಿತೆಂದು ಹೇಳಿದಾರೆ.

ಬ್ರಿಟಿಷರು ಸ್ವಲ್ಪ ದೂರದ ಭೂಪ್ರದೇಶವನ್ನು ಗೆದ್ದು ಆಕ್ರಮಿಸಿಕೊಂಡಿರುವರು. ಆದರೂ ಅಷ್ಟೇನೂ ಕಠಿಣವಾದ ಕದನ ನಡೆಯಲಿಲ್ಲ. ಯುದ್ಧಭೂಮಿಯಲ್ಲಿ ಜರ್ಮನಿಯವರು ಸತ್ತು ಬಿದ್ದಿದ್ದ ಒಬ್ಬ ಬ್ರಿಟಿಷ್ ಸಿಪಾಯಿಯ ದೇಹವನ್ನು ಹದಿನೇಳಾವರ್ತಿ ಸನೀನಿನಿಂದ ತಿವಿದಿದ್ದದ್ದು ಗೊತ್ತಾಯಿತು.—ಬ್ರಿಟಿಷರು ಒಂದಾವರ್ತಿ ಫಿರಂಗಿ ಗುಂಡನ್ನು ಹೊಡೆದು ಆಂತರಿಕ್ಷದಲ್ಲಿ ಹೋಗುತ್ತಿದ್ದ ಜರ್ಮನಿಯ ಎರಡು ವಿಮಾನ ಯಂತ್ರಗಳನ್ನು ಕೆಳಕ್ಕೆ ಇಳಿಸಿಬಿಟ್ಟರು. ಇನ್ನೊಂದು ಜರ್ಮನಿ ವಿಮಾನ ಯಂತ್ರದ ಮೇಲೆ ಬ್ರಿಟಿಷ್ ವಿಮಾನಕಾರನು ನುಗ್ಗಿ ಹೋಗಿ ಅದನ್ನು ಭೂಮಿಗೆ ಇಳಿಯುವಂತೆ ಮಾಡಿದನು.

ಪೂರ್ವ ರಣರಂಗದಲ್ಲಿ.

ಜರ್ಮನಿಯವರು ರಷ್ಯಾದವರನ್ನು ಹತಮಾಡಿಬಿಡಬೇಕೆಂದು ಸಂಕಲ್ಪ ಮಾಡಿಕೊಂಡು ಕಾರ್ಯಭಾಗಗಳನ್ನು ಇನ್ನೂ ನಡಿಸುತ್ತಾ ಬಂದಿದಾರೆ. ಈ ಪ್ರದೇಶದಲ್ಲಿ ನಡೆದಿರುವ ವಿದ್ಯಮಾನಗಳೆಂಬುವುದು ತಂತೀವರ್ತಮಾನಗಳಿಂದ ವಿವರವಾಗಿ ಗೊತ್ತಾಗುವುದಿಲ್ಲವಾದಾಗ್ಯೂ ರಷ್ಯಾದವರು ಹಿಮ್ಮೆಟ್ಟಿ ಹೋಗಿ ಒಂದು ಕಡೆ ಠಾಣ್ಯ ಹಾಕಿಕೊಂಡು ಶತ್ರುವು ಮುಂದಕ್ಕೆ ನುಗ್ಗಬಾರದಂತೆ ತಡೆಯನ್ನು ಕಲ್ಪಿಸಿರುತ್ತಾರೆಂಬು ಕಾಣುವುದು. ರಷ್ಯಾ ಸೈನ್ಯಾಧಿಪತಿಯು—"ನಾವು ಹಿಮ್ಮೆಟ್ಟಿ ಹೋಗುವುದು ಇನ್ನೊಂದಾವರ್ತಿ ಎಲ್ಲಾ ಸರಿಮಾಡಿಕೊಂಡು ನುಗ್ಗಿ ಬರುವುದಕ್ಕೋಸ್ಕರ ಎಂದು ತಿಳಿಯತಕ್ಕದ್ದು. ಹೆದರಬೇಕಾದದ್ದಿಲ್ಲ" ಎಂದು ಹೇಳುತ್ತಾನೆ.

ಉತ್ತರ ಭಾಗದಲ್ಲಿ ಸಮುದ್ರದ ಮೇಲೂ, ಭೂಮಿಯ ಮೇಲೂ ಕದನಗಳು ನಡೆದಿರುವವು. ಕಳೆದ ವಾರ ಒಂದು ರಷ್ಯಾ ಸಬ್‌ಮೆರೀನು ಜರ್ಮನಿಯ ಕೆಲವು ಯುದ್ಧದ ಜಹಜುಗಳನ್ನು ಜಖಮ್ ಮಾಡಿತೆಂದು ತಿಳಿಸಿದೆವಷ್ಟೆ. ಈಚೆಗೂ ಒಂದೆರಡು ಸಣ್ಣ ಸಮುದ್ರ ಯುದ್ಧಗಳು ನಡೆದಿರುವವು. ಈ ಯುದ್ಧಗಳಲ್ಲಿ ಜರ್ಮನಿಯವರ ಡಿಸ್ಟ್ರಾಯರೆಂಬ ಸಣ್ಣ ಹಡಗೂ, ಸೈನ್ಯವನ್ನು ಸಾಗಿಸುವ ಒಂದು ಜಹಜೂ ಮುಳುಗಿಸಲ್ಪಟ್ಟವು. ಜರ್ಮನಿಯ ಇನ್ನೊಂದು ಡಿಸ್ಟ್ರಾಯರೆಂಬ ಹಡಗು ಜಖಮ್ ಆಯಿತು.

ಭೂಮಿಯ ಮೇಲೆ ಬಾಲ್ಟಿಕ್ ಕಡಲಿನ ಹತ್ತಿರ ಜರ್ಮನಿಯವರು ರಷ್ಯಾದವರ ಮೇಲೆ ನುಗ್ಗಿ ಕದನಮಾಡಿದಾಗ್ಯೂ, ಆ ಕದನದಲ್ಲಿ ಸೋತು ಅನೇಕ ದೇಹಗಳನ್ನು ರಷ್ಯಾದವರ ಕಂದಕಗಳ ಬಳಿ ಬಿಟ್ಟು ಹಿಮ್ಮೆಟ್ಟಿ ಹೋದಂತೆಯೂ ತಿಳಿಯುತ್ತದೆ.

ದಕ್ಷಿಣ ಭಾಗದಲ್ಲಿ ಒಂದು ಕಡೆ ಜರ್ಮನಿಯವರು ವಿಷವಾಯುಗಳನ್ನು ರಷ್ಯಾ ಸೈನ್ಯದ ಮೇಲೆ ಬಿಟ್ಟರು. ಇದರಿಂದ ತುಂಬಾ ನಷ್ಟವೂ ನಾಶವೂ ಆಗಿರುತ್ತದೆ. ಒಬ್ಬ ಜರ್ಮನಿ ಉದ್ಯೋಗಸ್ಥನ ಬಳಿ ಒಂದು ಕಾಗದ ಸಿಕ್ಕಿತು. ಅದರಲ್ಲಿ ಬರೆದಿರುವುದೇನೆಂದರೆ—"ದೇವರ ದಯದಿಂದ ವಿಷವಾಯುವು ನಮಗೆ ಸಿಕ್ಕಿರುವುದು ಬಹಳ ಪ್ರಯೋಜನವಾಗಿದೆ. ಈ ನವೀನವಾದ ಮತ್ತೂ ಕ್ರೂರತರವಾದ ಆಯುಧದಿಂದ ನಾವು ಶತ್ರುಗಳನ್ನು ಸೋಲಿಸಿರುತ್ತೇವೆ." ಈ ವಿಷವಾಯುವು ಆ ಪ್ರದೇಶದಲ್ಲೆಲ್ಲಾ ಹರಡಿಕೊಂಡು ಯುದ್ಧ ಭಟರನ್ನೂ ಇತರ ಸಮಸ್ತ ಜೀವರಾಶಿಗಳನ್ನೂ ನಾಶಮಾಡುತ್ತದೆ. ಆ ಪ್ರದೇಶದಲ್ಲಿ ಬದುಕಿದ್ದ ಒಂದು ಕುದುರೆಯಾಗಲಿ, ಹಸುವಾಗಲಿ, ಕೋಳಿಯಾಗಲಿ ಜೀವ ಸಹಿತ ಉಳಿಯುವುದಿಲ್ಲ. ಗ್ರಾಮಸಂಕರಗಳೊಳಗಿರುವ ಸಣ್ಣ ಮಕ್ಕಳೂ ಹೆಂಗಸರೂ ಅನೇಕವಾಗಿ ಸತ್ತುಹೋದರು. ಮರಣಸಂಕಟವಾದರೋ ವಿವರಿಸಲಸಾಧ್ಯವಾಗಿದೆ. ಆ ವಿಷವಾಯುವನ್ನು ಸೇವಿಸಿದ ಮನುಷ್ಯನ ಸಂಕಟವು ಮಹಾ ತೀವ್ರವಾಗಿಯೂ, ಹಿಂಸಕರವಾಗಿಯೂ ಇರುವುದು.

ರಷ್ಯಾದವರು ಜರ್ಮನಿಯವರನ್ನು ಹಿಂದಕ್ಕೆ ಓಡಿಸುವುದಕ್ಕೆ ಪ್ರಾರಂಭಿಸಿದಾರೆ. ಒಂದು ಠಾಣ್ಯದಲ್ಲಿ ಮೂರು ದಿನ ನಿಲುಗಡೆ ಇಲ್ಲದಂಥಾ ಕದನವಾಯಿತು. ರಷ್ಯಾದವರಿಗೆ ಫಿರಂಗಿಗಳೂ, ಮೆಷೀನ್ ಫಿರಂಗಿಗಳೂ 35 ಸಿಕ್ಕಿದವು; 348 ಉದ್ಯೋಗಸ್ಥರನ್ನೂ 15,431 ಸೈನಿಕರನ್ನೂ ಸೆರೆ ಹಿಡಿದುಕೊಂಡರು. ಇವರಲ್ಲಿ ಆಸ್ಟ್ರಿಯಾದವರೂ ಜರ್ಮನಿಯವರೂ ಸೇರಿಕೊಂಡಿದಾರೆ. ಜರ್ಮನಿಯ ಪ್ರಷ್ಯನ್ ಗಾರ್ಡ್ಸ್ ಎಂಬ ಉತ್ತಮೋತ್ತಮವಾದ ಸೈನಿಕರೂ ಹಲವರು ರಷ್ಯಾದವರಿಗೆ ಸೆರೆ ಸಿಕ್ಕಿದರು. ಬಳಿಕ ಆಸ್ಟ್ರಿಯಾದವರೂ ಜರ್ಮನಿಯವರೂ ರಷ್ಯಾದವರ ಮೇಲೆ ನುಗ್ಗಿ ಕದನಮಾಡಿದರು. ಇದರಲ್ಲೂ ಅವರು ಸೋತು ಹಿಮ್ಮೆಟ್ಟಬೇಕಾಯಿತು. ಇದರಲ್ಲಿ ಬೇರೆ ಅವರು 33 ಮಂದಿ ಉದ್ಯೋಗಸ್ಥರನ್ನೂ, 490 ಸೈನಿಕರನ್ನೂ ಕಳೆದುಕೊಂಡು ಹಿಮ್ಮೆಟ್ಟಿ ಹೋದರು.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿಯ ಸೈನಿಕರು ಇಟಲಿಗೂ ಆಸ್ಟ್ರಿಯಾಗೂ ಮಧ್ಯೆ ಇರುವ ಎಲ್ಲೆಕಟ್ಟಿನ ಉದ್ದಕ್ಕೂ ಹರಡಿಕೊಂಡು ಮುಂದರಿಸಿ ನುಗ್ಗಿ ಹೋಗುತ್ತಿದಾರೆ. ಆದರೆ ಈ ಸೈನ್ಯದ ಮುಂಭಾಗದಲ್ಲಿರುವವರು ಮಾತ್ರ ಶತ್ರುವನ್ನು ಸಂಧಿಸಿ ಸಣ್ಣ ಪುಟ್ಟ ಕದನಗಳನ್ನು ನಡಿಸಿರುವರು. ಜೂನ್ ತಾ. 7 ರಿಂದ 9 ರ ವರೆಗೆ ಆಸ್ಟ್ರಿಯಾದವರ ಕಡೆ ಒಂದು ಸ್ಥಳದಲ್ಲಿ 200 ಸೈನಿಕರು ಮಡಿದರು, 400 ಮಂದಿ ಗಾಯಪಟ್ಟರು, 220 ಜನರು ಸೆರೆಯಾದರು. ಇಟಲಿ ಸೈನಿಕರು ಮೋನ್‌ಫಲ್ಕೋನೆ ಎಂಬ ಪ್ರಮುಖ ಪಟ್ಟಣದಲ್ಲಿ ಯುದ್ಧ ಸಾಮಗ್ರಿಗಳನ್ನು ಕೂಡಿಸಿಟ್ಟುಕೊಂಡಿದಾರೆ. ಈ ನಗರದಿಂದ ಟ್ರಿಯೆಸ್ಟ್ ನಗರವು ಕಾಣಬರುತ್ತದೆ. ಇದರಲ್ಲಿ ಇಟಲಿಯವರೇ ವಿಶೇಷವಾಗಿ ವಾಸಮಾಡತಕ್ಕವರಾದದ್ದರಿಂದ ಇಟಲಿಯವರು ಅದನ್ನು ಗೆದ್ದುಕೊಳ್ಳಬೇಕೆಂದು ಕುತೂಹಲ ಪಡುವರು. ಮೋನ್‌ಫಲ್ಕೋನೆ ನಗರದಲ್ಲಿ ಆಸ್ಟ್ರಿಯಾದವರು ಕಾರ್ಖಾನೆ ಇಟ್ಟು ವಿಷವಾಯುವನ್ನು ತಯಾರ್ ಮಾಡುತ್ತಾರೆಂದು ಇಟಲಿಯವರಿಗೆ ಗೋಚರವಾಯಿತು. ಕೂಡಲೇ ಇಟಲಿಯವರು ಫಿರಂಗಿಗಳನ್ನು ಎತ್ತಿಕಟ್ಟಿ ಆ ಕಾರ್ಖಾನೆಯ ಮೇಲೆ ಗುಂಡುಗಳನ್ನು ಸುರಿಸಿ ಅದನ್ನು ಸಂಪೂರ್ಣವಾಗಿ ನಾಶಮಾಡಿಬಿಟ್ಟರು.—ಆಡ್ರಿಯಾಟಿಕ್ ಕಡಲಿನಲ್ಲಿ ಬ್ರಿಟಿಷ್ ಯುದ್ಧದ ಹಡಗುಗಳು ಹೋಗಿ ಇಟಲಿಯವರಿಗೆ ಸಹಾಯಮಾಡುತ್ತಿವೆ.

ಟರ್ಕಿ.

ಪರ್ಷಿಯಾದಿಂದ ಟರ್ಕಿಯವರನ್ನು ಓಡಿಸಿದ್ದಾಯಿತೆಂದು ರಷ್ಯಾದವರು ತಿಳಿಸುತ್ತಾರೆ. ಏಷ್ಯಾ ಮೈನರಿನಲ್ಲಿಯೂ ಅನೇಕ ಟರ್ಕಿಯವರನ್ನು ನಿಲ್ಲದಂತೆ ಮಾಡಿದೆವೆಂದು ಹೇಳುವರು. ವಾನ್ ಮತ್ತು ಉರೂಮಿಯಾ ಎಂಬೀ ಎರಡು ದೊಡ್ಡ ಕೆರೆಗಳ ಮಧ್ಯೆ ಇರುವ ಪ್ರದೇಶವನ್ನೆಲ್ಲಾ ರಷ್ಯಾದವರು ಆಕ್ರಮಿಸಿಕೊಂಡಿದಾರೆ. ವಾನ್ ಎಂಬ ಸ್ಥಳದಲ್ಲಿ ಫಿರಂಗಿಗಳೂ, ಕೆಲವು ಮದ್ದು ಗುಂಡೂ, ತಿಂಡಿ ಸಾಮಾನುಗಳೂ, ಸರ್ಕಾರಿ ಖಜಾನೆಯೂ ರಷ್ಯಾದವರ ಪಾಲಾಗಿರುವವು. ಒಳ್ಳೊಳ್ಳೇ ಸೈನ್ಯಗಳನ್ನೆಲ್ಲಾ ಟರ್ಕಿಯವರು ತಮ್ಮ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲಿನ ಸಂರಕ್ಷಣಾರ್ಥವಾಗಿ ಅಲ್ಲಿಗೆ ಕರಸಿಕೊಂಡರೆಂದು ಪ್ರಕಟವಾಗಿದೆ. ಕಾನ್‌ಸ್ಟಾಂಟಿನೋಪಲಿನಲ್ಲಿರುವ ಜರ್ಮನಿ ಸಂಸಾರಗಳು ಅಲ್ಲಿಂದ ಹೊರಟುಹೋಗುತ್ತಿರುವವು. ನಮ್ಮ ಕಕ್ಷಿದವರು ಇಷ್ಟರಲ್ಲೇ ಆ ನಗರವನ್ನು ಪ್ರವೇಶ ಮಾಡುವರೆಂಬ ಶಂಕೆಯುಂಟಾಗಿದೆ.—ಡಾರ್ಡನೆಲ್ಸ್‌ನಿಂದ ಬಂದಿರುವ ಒಂದೇ ಒಂದು ವರ್ತಮಾನವೇನೆಂದರೆ, ಫ್ರೆಂಚರು ಮುಂದಕ್ಕೆ ನುಗ್ಗಿ ಹೋಗುತ್ತಿದಾರೆ; ಟರ್ಕಿಯವರ ಕಡೆ ಬಹಳ ನಷ್ಟವಾಗುತ್ತಿದೆ.—ಗಲ್ಲಿಪೋಲಿ ಅರ್ಧ ದ್ವೀಪವನ್ನು ಗೆದ್ದು ಆಕ್ರಮಿಸಿಕೊಳ್ಳುವುದು ಮಹಾ ಪ್ರಯಾಸವಾದ ಕಾರ್ಯವೆಂದೂ, ನಮ್ಮ ಕಕ್ಷಿದವರು ಅದಕ್ಕೋಸ್ಕರ ತುಂಬಾ ಕಷ್ಟಪಡುತ್ತಿದಾರೆಂದೂ ಹೇಳಬಹುದು.

ಸಮುದ್ರದ ಮೇಲೆ.

ಜರ್ಮನಿಯವರ ಸಬ್‌ಮೆರೀನುಗಳು ವಿನಾಶಕೃತ್ಯವನ್ನು ನಡಿಸುತ್ತಲೇ ಬಂದಿವೆ. ಬ್ರಿಟಿಷರ ಕೆಲವು ಹಡಗುಗಳೂ, ಪರರಾಜ್ಯಗಳಿಗೆ ಸೇರಿದ ಕೆಲವು ಜಹಜುಗಳೂ ಮುಳುಗಿಸಲ್ಪಟ್ಟಿರುವವು.

ಬ್ರಿಟಿಷರು ಜರ್ಮನಿಯ ಒಂದು "ಸಬ್‌ಮೆರೀನನ್ನು ಮುಳುಗಿಸಿ, ಆರು ಮಂದಿ ಉದ್ಯೋಗಸ್ಥರನ್ನೂ 21 ಜನರನ್ನೂ ಸೆರೆ ಹಿಡಿದು ತಂದಿದಾರೆ.

ಜರ್ಮನಿಯವರ ಸಬ್‌ಮೆರೀನು ಟಾರ್ಪೀಡೋವನ್ನು ಬಿಟ್ಟು ಹೊಡಿಸಿದ್ದರಿಂದ ಬ್ರಿಟಿಷರ ಎರಡು ಸಣ್ಣ ಯುದ್ಧದ ಹಡಗುಗಳು ಮುಳುಗಿಹೋದವು. ಅವುಗಳಲ್ಲಿದ್ದವರ ಪೈಕಿ 41 ಜನರನ್ನು ಬದುಕಿಸಿದರು.

ರಷ್ಯಾದವರು ಕಪ್ಪು ಕಡಲಿನಲ್ಲಿ ಬ್ರೆಸ್ಲೌ ಎಂಬ ಜರ್ಮನಿಯ ಯುದ್ಧದ ಹಡಗಿನ ಮೇಲೆ ನುಗ್ಗಿ ಅದನ್ನು ಬಹಳವಾಗಿ ಕೆಡಿಸಿಬಿಟ್ಟರು.

ಇತರ ವಿಷಯಗಳು.

ಬ್ರಿಟಿಷ್ ಸೈನ್ಯದಲ್ಲಿ ಕಳೆದ ಮೇ ತಿಂಗಳ ಆಖೈರು ವರೆಗೆ ಆಗಿರುವ ನಷ್ಟವೆಷ್ಟೆಂದರೆ—ಕೊಲೆಯಾದವರು ಉದ್ಯೋಗಸ್ಥರು 3,327 ಮಂದಿ, ಸೈನಿಕರು 47,106 ಮಂದಿ; ಗಾಯಪಟ್ಟವರು ಉದ್ಯೋಗಸ್ಥರೇ 6,498 ಮಂದಿ, ಸೈನಿಕರು 1,47,482 ಮಂದಿ; ಸಿಕ್ಕದೆ ಇರುವವರು ಉದ್ಯೋಗಸ್ಥರು 1,130 ಮಂದಿ, ಸೈನಿಕರು 62,617 ಮಂದಿ; ಅಂತು ಒಟ್ಟಾಗಿ 2,68,169 ಮಂದಿ ನಷ್ಟವಾಗಿರುತ್ತಾರೆ. ಜರ್ಮನಿ ಮತ್ತು ಆಸ್ಟ್ರಿಯಾದವರ ಕಡೆ ಎಷ್ಟೆಷ್ಟು ಸೈನ್ಯ ನಷ್ಟವಾದವೋ ತಿಳಿಯಲಿಲ್ಲ; ಬಹುಶಾ ಅವರ ಕಡೆ ಹತ್ತು ಹನ್ನೆರಡು ಲಕ್ಷ ಸೈನ್ಯಕ್ಕೆ ಕಡಮೆಯಿಲ್ಲದೆ ನಷ್ಟವಾಗಿರುತ್ತದೆ.

ಜರ್ಮನಿಯವರ ಕ್ರೂರ ಕೃತ್ಯಗಳನ್ನು ನೋಡಿ ಅಮೇರಿಕದ ಸಂಯುಕ್ತ ಸಂಸ್ಥಾನಗಳವರು ತುಂಬಾ ಆಗ್ರಹಪಡುತ್ತಿದಾರೆ. ಆ ಗವರ್ನ್‌ಮೆಂಟಿನವರು ಜರ್ಮನಿಯವರಿಗೆ ಕಠಿಣವಾಗಿ ಕಾಗದ ಬರೆದಿರುವರು. ಈ ಕಾಗದವು ರವಾನೆಯಾಗುವುದಕ್ಕಿಂತ ಮುಂಚೆ ಅಮೇರಿಕದ ಫಾರಿನ್ ಸೆಕ್ರೆಟರಿ ಮಿ|| ಬ್ರಯನ್ ರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಅಮೇರಿಕಕ್ಕೂ ಜರ್ಮನಿಗೂ ಶತ್ರುತ್ವವುಂಟಾಗುವಂಥಾ ಕಾರ್ಯವ್ಯಾವುದೂ ನಡೆಯುವುದರಲ್ಲಿ ಅವರಿಗೆ ಅಭಿಮತವಿಲ್ಲ. ಜರ್ಮನಿಯವರು ಪ್ರಯಾಣಸ್ಥರಿದ್ದ ಮತ್ತೂ ವ್ಯಾಪಾರದ ಹಡಗುಗಳನ್ನು ಮುಳುಗಿಸಿದ ವಿಷಯದಲ್ಲಿ ಪಂಚಾಯಿತಿಗೆ ಹಾಕಿ ಪಂಚಾಯತರ ತೀರ್ಮಾನಕ್ಕೆ ಬದ್ಧರಾಗಬೇಕೆಂದೂ, ಯುದ್ಧ ನಡೆಯುವ ಪ್ರದೇಶದಲ್ಲಿ ಪ್ರಯಾಣಿಕರು ಹೋಗುವುದು ತರವಲ್ಲವೆಂದೂ ಸೆಕ್ರೆಟರಿಯವರು ಹೇಳುತ್ತಾರೆ. ಇಂಥಾ ಅಭಿಮತವನ್ನು ಬಹುತಾ ಯಾರೂ ಸಮ್ಮತಿಸಲಾರರು. ಪ್ರೆಸಿಡೆಂಟ್ ವಿಲ್ಸನ್ ರವರು ಜರ್ಮನಿಗೆ ಯಾವ ಜಹಜಿನಲ್ಲಿರುವ ಜನರನ್ನು ಬದುಕಿಸುವುದಕ್ಕಾಗುವದಿಲ್ಲವೋ ಅಂಥಾ ಜಹಜನ್ನು ಮುಳುಗಿಸಕೂಡದೆಂದೂ, ಇದು ರಾಜ್ಯಗಳ ನೀತಿಗೆ ವಿರುದ್ಧವಾದದ್ದೆಂದೂ, ಸಮುದ್ರಗಳ ಮೇಲೆ ಸಂಚಾರ ಮಾಡುವ ಅಧಿಕಾರ ಅಮೇರಿಕದವರಿಗೆ ಇದ್ದೇ ಇರುವುದರಿಂದ ಅವರ ಪ್ರಾಣವನ್ನು ಯಾರೂ ತೆಗೆಯಕೂಡದೆಂದೂ ತಿಳಿಸಿರುತ್ತಾರೆ. ಇದಕ್ಕೆ ಜರ್ಮನಿಯವರು ಇನ್ನೂ ಜವಾಬು ಕಳುಹಿಸಿಲ್ಲ.

ಅಮೇರಿಕದಲ್ಲಿ ಕೆಲವು ಜರ್ಮನ್ ನಾವಿಕರು ಪ್ರಮಾಣವನ್ನು ಮಾಡಿ ತಾವು ಆ ದೇಶವನ್ನು ಬಿಟ್ಟು ಹೋಗುವುದಿಲ್ಲವೆಂದು ಹೇಳಿದ್ದರೂ ಆ ಪೈಕಿ ಕೆಲವು ಜರ್ಮನರು ತಮ್ಮ ಮಾತನ್ನು ಲಕ್ಷ್ಯಮಾಡದೆ ಎಲ್ಲೋ ತಪ್ಪಿಸಿಕೊಂಡು ಹೋದರು. ಆ ಪೈಕಿ ಒಬ್ಬನು ಜರ್ಮನಿ ಜಹಜಿನಲ್ಲಿ ಒಬ್ಬ ಉದ್ಯೋಗಸ್ಥನಾಗಿರುತ್ತಾನೆ. ಇವನನ್ನು ಬ್ರಿಟಿಷರು ಜಿಬ್ರಾಲ್ಟರಿನ ಹತ್ತಿರ ಹಿಡಿದಾಗ ಇವನು ಇಟಲಿಯ ಒಂದು ಹಡಗಿನಲ್ಲಿ ಕೂಲಿಯವರಂತೆ ವೇಷ ಮರಸಿಕೊಂಡಿದ್ದನು.

ಬ್ಯೂನಾಸ್ ನಗರದಲ್ಲಿ ಸರ್ಕಾರದವರು ಕೆಲವು ಪೀಪಾಯಿಗಳನ್ನು ತೆರೆದು ಪರೀಕ್ಷಿಸುವಾಗ್ಗೆ ಜರ್ಮನಿಯವರು ಆ ಪೀಪಾಯಿಗಳಲ್ಲಿ ಬೀರ್ ಎಂಬ ಮದ್ಯವನ್ನು ಭರ್ತಿಮಾಡಿ ಕಳುಹಿಸಿದೇವೆಂದು ಹೇಳಿದ್ದು ಸುಳ್ಳಾಗಿ, ವಿಷದ ವಾಯುಗಳನ್ನು ತಯಾರ್ಮಾಡತಕ್ಕ ದ್ರಾವಕಗಳು ಅವುಗಳಲ್ಲಿದ್ದವೆಂದು ಗೊತ್ತಾಯಿತು. ಅವುಗಳನ್ನೆಲ್ಲಾ ಮುಂದಕ್ಕೆ ಬಿಡದೆ ತಡೆದಿಟ್ಟುಕೊಂಡಿದಾರೆ.

ಆಸ್ಟ್ರಿಯಾ ರಾಜಧಾನಿಯಾದ ವಿಯನ್ನಾ ನಗರದಲ್ಲಿ ಭಯಂಕರವಾದ ಕ್ರಾಂತಿ ಭೇದಿ ಉಪದ್ರ ಕಾಣಿಸಿಕೊಂಡು, ಪ್ರಜೆಗಳು ಬಹಳ ಕಳವಳಪಡುತ್ತಿದಾರೆಂದು ವರ್ತಮಾನ ಬಂದಿದೆ.

ಗ್ರೇಟ್ ಬ್ರಿಟನ್‌ನಲ್ಲಿ ಕೆಲಸಮಾಡುವ ಗಂಡಸರು ಯುದ್ಧಭೂಮಿಗೆ ಹೋದರೆ ಅವರ ಕೆಲಸಗಳನ್ನು ನಾವು ಮಾಡುತ್ತೇವೆಂದು ಹೇಳಿ 78,946 ಮಂದಿ ಸ್ತ್ರೀಯರು ಒಪ್ಪಿಕೊಂಡಿದಾರೆ.

ಗ್ರೀಸ್ ದೊರೆಯು ಇನ್ನೂ ತುಂಬಾ ಕಾಯಿಲೆಯಾಗಿದಾರೆ. ಪಾರ್ಲಿಮೆಂಟಿಗೆ ಮೆಂಬರುಗಳ ಚುನಾವಣೆ ನಡೆಯುತ್ತಿರುವುದು. ಇದರಿಂದ ಹೊಸ ಮೆಂಬರುಗಳು ನೇಮಕವಾದ ಬಳಿಕ ಗ್ರೀಸ್ ರಾಜ್ಯವೂ ಈ ಯುದ್ಧದಲ್ಲಿ ಸೇರಿ, ನಮ್ಮ ಪಕ್ಷ ವಹಿಸಿ ಯುದ್ಧಮಾಡುವ ಹಾಗಾದೀತೆಂದು ತೋರುವುದು.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಪದಭಿವೃದ್ಧಿ ಸಮಾಜದ ವಾರ್ಷಿಕ ಸಭೆಯು ಮುಂದಿನ ವಾರದಿಂದ ರಾಜಧಾನಿಯಲ್ಲಿ ನಡೆಯುವುದಾಗಿದೆ.

ಬೆಂಗಳೂರು ಪ್ರಜೆಗಳು ನಮ್ಮ ದಿವಾನ್‌ರವರಿಗೆ ಕೆ. ಸಿ. ಐ. ಇ. ಎಂಬ ಬಿರುದು ಬಂದದ್ದಕ್ಕಾಗಿ ಒಂದು ಸಂತೋಷ ಕೂಟವನ್ನು ನಡಿಸಿ ತಮ್ಮ ಆನಂದವನ್ನು ಪ್ರಕಾಶಪಡಿಸಬೇಕೆಂದು ಸಿದ್ಧಯಿಸಿಕೊಂಡಿದಾರೆ.

ರಾಜಧಾನಿಯಲ್ಲಿ ತಾ. 24 ನೇ ಗುರುವಾರ ಪ್ರಾರಂಭವಾಗುವ ಲೋಕಲ್ ಬೋರ್ಡುಗಳ ಮಹಾಸಭೆಯನ್ನು ನಮ್ಮ ಶ್ರೀಮದ್ಯುವರಾಜರವರು ಅಗ್ರಾಸನವನ್ನು ಅಲಂಕರಿಸಿ ಪ್ರಾರಂಭಮಾಡುತ್ತಾರೆಂಬ ವರ್ತಮಾನವಿದೆ.

ಒಬ್ಬ ಬಾತ್ಮೀದಾರರು ಬರೆಯುವುದು—ಹೊಳೆನರಸೀಪುರ ಖೂನಿ ಕೇಸಿನ ವಿಷಯದಲ್ಲಿ ಮೂರು ಮಗ್ಗರೀರನ್ನು ದಸ್ತಗಿರಿ ಮಾಡಿ ತಂದು ಅಪರಾಧಿಗಳಲ್ಲವೆಂತ ಕಂಡುಬಂದದ್ದರಿಂದ ಬಿಟ್ಟುಬಿಟ್ಟಿರುವದಾಗಿ ತಿಳಿಯಬರುತ್ತೆ.

ತುಳವಳ್ಳಿಯಲ್ಲಿ ಲಕ್ಷ್ಮಿಬಾಯಿ ಎಂಬೊಬ್ಬ ವಿಧವೆಯು ತನ್ನ ಮನೆಯಲ್ಲಿ ಬಾಗಿಲು ಹಾಕಿಕೊಂಡು ಒಳಗೆ ನೇಣುಹಾಕಿಕೊಂಡು ಪ್ರಾಣಬಿಟ್ಟಳೆಂದೂ ಗೃಹಕೃತ್ಯದ ಮನಸ್ತಾಪವು ಇದಕ್ಕೆ ಕಾರಣವಾಯಿತೆಂದೂ ಪ್ರಕಟವಾಗಿದೆ.

ಸರ್ಕಾರದವರು ಹೈಸ್ಕೂಲ್ ಹೆಡ್ ಮಾಸ್ಟರುಗಳಾದ ಮ|| ಎಸ್. ವೆಂಕಟರಮಣಾಚಾರ್ರನ್ನು ಕೋಲಾರದಿಂದ ಚನ್ನಪಟ್ಟಣಕ್ಕೂ, ಮ|| ಆರ್. ಎ. ಕೃಷ್ಣಸ್ವಾಮಿ ಅಯ್ಯರನ್ನು ಚನ್ನಪಟ್ಟಣದಿಂದ ಹಾಸನಕ್ಕೂ ವರ್ಗಮಾಡಿರುತ್ತಾರೆ.

ಬೆಂಗಳೂರಿನಲ್ಲಿ ಗವರ್ನ್‌ಮೆಂಟ್ ಛಾಪಖಾನೆಯ ಸೂಪರಿಂಟೆಂಡೆಂಟ್ ಮಿ|| ಸಿ. ಎಚ್. ಯೇಟ್ಸ್ ಸಾಹೇಬರ ಮನೆಗೆ ಕಳೆದ ವಾರ ಕಳ್ಳರುಬಿದ್ದು ಕೆಲವು ಸಾಮಾನುಗಳನ್ನು ಅಪಹರಿಸಿಕೊಂಡು ಹೋದರು. ಪತ್ತೆ ತರದೂದು ನಡೆಯುತ್ತದೆ.

ಚಿತ್ರದುರ್ಗದಲ್ಲಿದ್ದ ಸಾಹುಕಾರ್ ಮ|| ಕಾಡಪ್ಪನವರು ಕಳೆದ ಗುರುವಾರ ರಾತ್ರಿ ಕಾಲವಾದರೆಂದು ತಿಳಿಯುವುದು. ಇವರು ಭಾರೀ ಜಮೀನುದಾರರಾಗಿಯೂ, ಗಣ್ಯ ಪ್ರಜೆಯಾಗಿಯೂ ಇದ್ದು ಅನೇಕರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದರು.

ಒಬ್ಬ ಬಾತ್ಮೀದಾರರಿಂದ—ಈಗ 15 ದಿವಸಗಳಿಂದ ಅರಸೀಕೆರೆಯಿಂದ ಹಾಸನಕ್ಕೆ ಮ|| ಬೆಂಗಳೂರು ರಾಘವಾಚಾರ್ರೆಂಬುವರು ಮೋಟರು ಗಾಡಿಯನು ಬಿಡುತ್ತಾ ಇದಾರೆ. ಪ್ರಯಾಣಿಕರಿಗೆ ಬಹಳ ಸುಖವಾಗಿದೆ. ಆರು ಮಂದಿ ಕೂತುಕೊಳ್ಳಬಹುದು.

ಶ್ರೀರಂಗಪಟ್ಟಣದಲ್ಲಿ ಲೇಟ್ ಮಹಾರಾಜಾ ಕೃಷ್ಣರಾಜ ಒಡೆಯರವರ ಜ್ಞಾಪಕಾರ್ಥವಾದ ಕಟ್ಟಡಗಳು ತಯಾರಾಗಿರುತ್ತವೆ. ಈ ಕಟ್ಟಡಗಳನ್ನು ನಮ್ಮ ಮಹಾರಾಜರವರು ಜೂಲೈ ತಿಂಗಳ 2 ನೇ ತಾ. ಶುಕ್ರವಾರ ಅಲ್ಲಿಗೆ ದಯಮಾಡಿ ಪ್ರತಿಷ್ಠೆ ಮಾಡುವಂತೆ ಏರ್ಪಾಡಾಗಿದೆ.

ಕಳೆದ ಎರಡು ವಾರಗಳಿಂದಲೂ ರಾಜಧಾನಿಯಲ್ಲಿ ಬಹು ಆನಂದಕರವಾದ ಮಳೆಗಳು ಸುರಿದವು. ಕೆರೆ ಕಟ್ಟೆಗಳು ತುಂಬಿ, ಜೀವರಾಶಿಗಳಿಗೆ ಆಹ್ಲಾದವನ್ನುಂಟುಮಾಡಿವೆ. ಕಳೆದ ಸೋಮವಾರದಿಂದ ಮೋಡವೂ, ತುಂತುರು ಮಳೆ ಗಾಳಿಗಳೂ ಹುಟ್ಟಿ ಶೀತ ಹವಾ ಪ್ರಾರಂಭವಾಗಿದೆ.

ಡೆಪ್ಯುಟಿ ಕಮಿಷನರ್ ಮ|| ಎ. ಸುಬ್ರಹ್ಮಣ್ಯ ಅಯ್ಯರವರು ತಮ್ಮ ಕುಮಾರನ ವಿವಾಹವನ್ನು ಬೆಳಸಿದ ಸಂದರ್ಭದಲ್ಲಿ ರಾಜಧಾನಿಯಲ್ಲಿರುವ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಕರಸಿಕೊಂಡು ಕಳೆದ ಭಾನುವಾರ ದಿವ್ಯವಾದ ಔತಣವನ್ನೂ, ವಿದ್ವಾನ್ ವಾಸುದೇವಾಚಾರ್ಯರ ಇಂಪಾದ ಸಂಗೀತವನ್ನೂ ಮಾಡಿಸಿ ಸಂತೋಷಪಡಿಸಿದರು.

ಬರೋಡಾ ಸಂಸ್ಥಾನದ ದಿವಾನ್‌ರವರಾದ ಮ|| ವಿ. ಪಿ. ಮಾಧವರಾಯರು ಕಳೆದ ವಾರ ಬೆಂಗಳೂರಿಗೆ ಬಂದು ಒಂದು ದಿನ ಇದ್ದು ಅಲ್ಲಿಂದ ನೀಲಗಿರಿಗೆ ತೆರಳಿದರು. ಗಾಯಕವಾಡ ಮಹಾರಾಜರವರು ದಿವಾನ್‌ರವರೊಡನೆ ನೀಲಗಿರಿಯಿಂದ ತಿರುವಾಂಕೂರು, ಕೊಚ್ಚಿ, ಕೊಲ್ಲಂಗೋಡು ಸಂಸ್ಥಾನಗಳಿಗೆ ದಯಮಾಡಿ ಆತಿಥ್ಯವನ್ನು ಸ್ವೀಕರಿಸುವವರಾಗಿದಾರೆ.

ಕಳೆದ ಗುರುವಾರ ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ರಾಜಧಾನಿಗೆ ದಯಮಾಡಿದರು. ಮಹಾಮಾತೃಶ್ರೀಯವರೇ ಮೊದಲಾದ ಅರಮನೆ ರಾಣಿವಾಸದವರು ಈ ದಿನ ನೀಲಗಿರಿಯಿಂದ ರಾಜಧಾನಿಗೆ ಚಿತ್ತೈಸುವವರಾಗಿದಾರೆ. ವರ್ಧಂತಿ ಉತ್ಸವಗಳು ಪೂರೈಸುವ ತನಕ ನಮ್ಮ ಮಹಾರಾಜರವರು ಇಲ್ಲೇ ಇರುವರೆಂದು ಕೇಳುತ್ತೇವೆ.

ನಮ್ಮ ಬ್ರಿಟಿಷ್ ರೆಸಿಡೆಂಟರವರ ಕೂಡ ಶ್ರೀಮದ್ಯುವರಾಜರವರು ಜೂಲೈ ತಿಂಗಳ ಎರಡನೇ ವಾರದಲ್ಲಿ ಹಿಮಾಲಯ ಪರ್ವತದ ತಪ್ಪಲಲ್ಲಿರುವ ಸಿಮ್ಲಾ ನಗರಕ್ಕೆ ದಯಮಾಡಿ ವೈಸ್‌ರಾಯ್ ಪ್ರಭುಗಳ ಭೇಟಿ ಮಾಡಿಕೊಂಡು ಬರುವಂತೆ ಪ್ರಕಟವಾಗಿದೆ. ಹೈದರಾಬಾದಿನ ನೈಜಾಮರವರೂ ಅದೇ ಉದ್ದೇಶದಿಂದ ಆ ಪಟ್ಟಣಕ್ಕೆ ಹೋಗಿಬರುವರು.

ಬೆಂಗಳೂರು ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲಿನ ಸೂಪರಿಂಟೆಂಡೆಂಟರಾದ ಮ|| ಎಸ್. ವಿ. ಶೆಟ್ಟರು ಕಳೆದ ಭಾನುವಾರ ವೈಶ್ಯವಿದ್ಯಾರ್ಥಿಗಳಿಗೆ ಸುಖಭೋಜನವನ್ನು ಮಾಡಿಸಿದರು. ಆ ಸಮಯದಲ್ಲಿ ಆರ್ಯವೈಶ್ಯ ಮಹಾಸಭೆಯ ಸೆಕ್ರೆಟರಿ ಮ|| ಎಸ್. ಸುಬ್ರಹ್ಮಣ್ಯಂ ಶೆಟ್ಟರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳು ಸಭೆ ಸೇರಿ ವೈಶ್ಯವಿದ್ಯಾರ್ಥಿಗಳ ಅಭಿವೃದ್ಧಿಗೆ ಒಂದು ಸಂಘವನ್ನು ಸ್ಥಾಪನೆಮಾಡಿಕೊಂಡರು.

ಬೌರಿಂಗ್‌ಪೇಟೆಯಲ್ಲಿದ್ದ ಪ್ಲೀಡರ್ ಮ|| ಜೆ. ನಾರಾಯಣರಾಯರಿಗೆ ಚಿಕ್ಕ ವಯಸ್ಸಿನಲ್ಲೇ ಮೂತ್ರರೋಗ ಕಾಣಿಸಿಕೊಂಡು ಬೆಂಗಳೂರಿನಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದರು. ಇವರಿಗೆ ನಾರುಹುಣ್ಣು ಹುಟ್ಟಿ ಕಳೆದ ವಾರ ಕಾಲವಾದರೆಂದೂ ಈ ಅಕಾಲ ಮರಣದಿಂದ ಅವರ ವೃದ್ಧ ತಂದೆ ತಾಯಿಗಳಿಗೂ ದೊಡ್ಡ ಸಂಸಾರಕ್ಕೂ ಅಪಾರವಾದ ನಷ್ಟವೂ ದುಃಖವೂ ಪ್ರಾಪ್ತವಾಯಿತೆಂದೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

ಬೆಂಗಳೂರು ಬಸವನಗುಡಿಯಲ್ಲಿದ್ದ ಮ|| ನರಸಿಂಗರಾವ್ ಹೊಂಗಳಕರ ಎಂಬ ಮಹಾರಾಷ್ಟ್ರ ಬ್ರಾಹ್ಮಣರು ಕಳೆದ ವಾರ ಕಾಲವಾದರು. ಇವರಿಗೆ ಸರ್ವೆ ಆಫೀಸಿನಲ್ಲಿ ನೌಕರಿ ಇತ್ತು. ದೊಡ್ಡ ಕುಟುಂಬಿಗಳಾದ ಇವರು ಬಹಳ ಸತ್ಯವಂತರಾಗಿಯೂ ಸಚ್ಚರಿತ್ರರಾಗಿಯೂ ಇದ್ದದ್ದಲ್ಲದೆ ಯಾವಾಗಲೂ ಸಂತೋಷಚಿತ್ತರಾಗಿ ಮಕ್ಕಳನ್ನು ಸುತ್ತಲೂ ಸೇರಿಸಿಕೊಂಡು ಅವರಿಗೆ ಕಥೆ ಪುರಾಣಗಳನ್ನೂ ಸನ್ಮಾರ್ಗವನ್ನೂ ಹೇಳಿಕೊಟ್ಟು ಸಂತೋಷಪಡಿಸುತ್ತಾ ಇದ್ದರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಕಳೆದ ಸುಮಾರು 20 ವರುಷಗಳಿಂದಲೂ ಮಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ "ಸತ್ಯದೀಪಿಕೆ" ಎಂಬ ವಾರ ಪತ್ರಿಕೆಯನ್ನು ಅದರ ಮ್ಯಾನೆಜರವರು ವ್ಯಸನಪಟ್ಟು "ಯುದ್ಧದ ದೆಸೆಯಿಂದ ಬಂದೊದಗಿದ ನಾನಾ ತರದ ತೊಂದರೆಗಳಿಂದ" ಪ್ರಕಟಿಸಲಾಗುವುದಿಲ್ಲವೆಂದು ತಿಳಿಸುತ್ತಾರೆ. ಆ ಪತ್ರಿಕೆಯು ಜರ್ಮನಿ ಪಾದ್ರಿಗಳಿಂದ ನಡಿಸಲ್ಪಡುತ್ತಾ, ದಕ್ಷಿಣ ಕನಡಾ ಜಿಲ್ಲೆಯಲ್ಲಿ ವಿಶೇಷವಾಗಿ ಪ್ರಚಾರವಾಗುತ್ತಿತ್ತು. ಅದು ನಿಂತುಹೋಗುವುದಕ್ಕೆ ಈಗಿನ ಯುದ್ಧವು ಕಾರಣವಾಯಿತಲ್ಲಾ ಎಂದು ವಿಷಾದಿಸುತ್ತೇವೆ.

ಮೈಸೂರು ವಿದ್ವಾಂಸರ ಮಂಡಲಿಗೆ ಸೇರಿದ ವೇ|| ದ್ವಿವೇದಿ ಸುಬ್ರಹ್ಮಣ್ಯಶಾಸ್ತ್ರಿಗಳನ್ನು ತಂಜಾವೂರು ಜಿಲ್ಲೆಗೆ ಸೇರಿದ ಮನ್ನಾರುಗುಡಿಗೆ ಅಲ್ಲಿನ ವೈದಿಕೋತ್ತಮರು ಕರಸಿಕೊಂಡು ಅವರ ಅಧ್ಯಕ್ಷತೆಯಲ್ಲಿ ಒಂದು ಯಾಗವನ್ನು ಮಾಡಿ, ಶಾಸ್ತ್ರಿಗಳ ಪಾಂಡಿತ್ಯವನ್ನು ಕೊಂಡಾಡಿ ನಮ್ಮ ಮಹಾರಾಜರವರ ಹುಜೂರು ಸೆಕ್ರೆಟರಿಯವರಿಗೆ ಒಂದು ಪತ್ರಿಕೆಯನ್ನು ಬರೆದಿರುತ್ತಾರೆ. ನಮ್ಮ ಶಾಸ್ತ್ರಿಗಳಿಗೆ ಈ ರೀತಿ ಪರದೇಶದಲ್ಲೂ ಕೀರ್ತಿಯುಂಟಾಗಿರುವುದು ಸಂತೋಷಪ್ರದವಾಗಿದೆ.

ಸುಮಾರು ಎರಡು ವಾರಗಳ ಹಿಂದೆ ನಮ್ಮ ಮಹಾರಾಜರವರು ರಾಜಧಾನಿಯಿಂದ ಮೋಟರಿನಲ್ಲಿ ಕನ್ನಂಬಾಡಿಗೆ ಚಿತ್ತೈಸಿ ಅಣೆಕಟ್ಟೆಯ ಕಾಮಗಾರಿಯನ್ನು ಪರಾಂಬರಿಸಿದರಷ್ಟೆ. ಆಗ್ಗೆ ಪ್ರಭುಗಳ ದರ್ಶನಾಪೇಕ್ಷೆಯಿಂದ ಅನೇಕ ಜನರು ಕಟ್ಟೆಯ ಏಣಿಯ ಮೇಲೆ ಏಕಕಾಲದಲ್ಲಿ ಹತ್ತಿದಾಗ ಆ ಏಣಿಯು ಮುರಿದು, ಸುಮಾರು 20 ಜನರು ಹೊಳೆಯೊಳಗೆ ಮಗುಚಿಕೊಂಡರೆಂದೂ, ಅವರನ್ನೆಲ್ಲಾ ನೀರಿನಿಂದೆತ್ತಿ, ಅಲ್ಪಸ್ವಲ್ಪ ಗಾಯಪಟ್ಟಿದ್ದವರಿಗೆ ಚಿಕಿತ್ಸೆ ಮಾಡಿದ್ದಾಯಿತೆಂದೂ, ಪ್ರಾಣನಷ್ಟವೇನೂ ಆಗಲಿಲ್ಲವೆಂದೂ ಸರ್ಕಾರದವರು ಪ್ರಕಟಪಡಿಸಿರುತ್ತಾರೆ.

ಸೋಸಲೆ ಮಠದ ಶ್ರೀ ವ್ಯಾಸರಾಯಸ್ವಾಮಿಗಳು ಕೆಲವು ಕಾಲದಿಂದ ಕಾಯಿಲೆಯಾಗಿದ್ದು ಕಳೆದ 6 ನೇ ತಾ. ಭಾನುವಾರ ಕಾಲಗತಿಯನ್ನೈದಿದರು. ಇವರು ಕಳೆದ 11 ವರುಷಗಳಿಂದಲೂ ಆ ಪೀಠವನ್ನು ಅಲಂಕರಿಸಿ, ತರ್ಕ ವಿದ್ಯಾಮೀಮಾಂಸಾದಿ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದವರಾಗಿದ್ದರು. ಅವಸಾನಕಾಲದಲ್ಲಿ ಶ್ರೀ ಸ್ವಾಮಿಗಳಿಗೆ ಸುಮಾರು 84 ವರುಷ ವಯಸ್ಸಾಗಿತ್ತು. ಈಗ ಆ ಪೀಠವನ್ನಲಂಕರಿಸಿರುವ ಶ್ರೀ ಸ್ವಾಮಿಗಳು ವೇದಶಾಸ್ತ್ರಕೋವಿದರಾಗಿಯೂ, ಪ್ರಜಾ ಪ್ರೀತಿ ಗೌರವಗಳನ್ನು ಪಡೆದವರಾಗಿಯೂ ಇದಾರೆಂದು ತಿಳಿಯುತ್ತೇವೆ.

ಬೆಂಗಳೂರು ಸಿಟಿಯಲ್ಲಿ ಎಲ್ಲಾ ವರ್ತಕರೂ ಸರ್ಕಾರದ ಛಾಪಾವುಳ್ಳ ಹೊಸ ಅಳತೆಯ ಮತ್ತು ತೂಕದ ಸಾಧನಗಳನ್ನೇ ಉಪಯೋಗಿಸುವಂತೆ ಹುಕುಂ ಕೊಟ್ಟು, ಅದರ ವಿಚಾರಣೆಯನ್ನು ಪೋಲೀಸಿನವರಿಗೆ ವಹಿಸಿದಾರೆ. ಹೀಗೆಯೇ ರಾಜಧಾನಿಯಲ್ಲೂ, ಎಲ್ಲಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲೂ ಹುಕುಂ ಕೊಟ್ಟು ಜಾರಿಮಾಡಿಸುವುದು ಅವಶ್ಯವಾಗಿದೆ. ಕಾಲಕ್ರಮೇಣ ತಾಲ್ಲೂಕುಗಳಿಗೂ ದೊಡ್ಡ ಸಂತೆಗಳಿಗೂ ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಹ್ಯಾಗೂ ಈ ಕಾನೂನನ್ನು ಸರ್ಕಾರದವರು ಎಷ್ಟು ಬೇಗನೆ ವಿಧಿವತ್ತಾಗಿ ಜಾರಿಗೆ ತಂದರೆ ಅಷ್ಟು ಉಪಕಾರವಾದೀತು.

ಬೆಂಗಳೂರು ಪಬ್ಲಿಕ್ ಆಸ್ಪತ್ರೆಯಲ್ಲಿದ್ದುಕೊಂಡು ಕಣ್ಣಿಗೆ ಔಷಧ ಹಾಕಿಸಿಕೊಳ್ಳುತ್ತಿದ್ದ ರಂಗೇಗೌಡ, ಚೆನ್ನರಾಯಪ್ಪಶೆಟ್ಟಿ ಎಂಬವರಿಬ್ಬರೂ ಕಳೆದ ಭಾನುವಾರ ಬೆಳಕುಹರಿಯುವುದಕ್ಕಿಂತ ಮುಂಚೆ ಕತ್ತಲಲ್ಲಿ ಆಸ್ಪತ್ರೆಯೊಳಗಿಂದ ಹಿಂತಿರುಗಿ ಬರುವಾಗ್ಗೆ ಮುಗ್ಗರಿಸಿ ಬಿದ್ದು, ಇಬ್ಬರೂ ಕಾಲವಾದರು. ಮರುದಿನ ಪೋಲೀಸ್ ಅಧಿಕಾರಿಯು ಹೋಗಿ ಲಾಷ್ ಮಹಜರು ಮಾಡಿ ಶವಗಳನ್ನು ದಫನ್ ಮಾಡಿಸಿದರು. ಆಸ್ಪತ್ರೆಯೊಳಗಿರುವ ರೋಗಿಗಳು ಸ್ವತಂತ್ರವಾಗಿ ಈ ರೀತಿ ತಮ್ಮ ಹಾಸಿಗೆಗಳನ್ನು ಬಿಟ್ಟು ಬರುವಾಗ ಮೇಲುಸ್ತುವಾರಿ ನೋಡಿಕೊಳ್ಳುವ ಏರ್ಪಾಡು ಇದೆಯೋ ಇಲ್ಲವೋ ತಿಳಿಯಲಿಲ್ಲ. ಅದರೊಳಗೂ ಕಣ್ಣಿನ ಉಪದ್ರವುಳ್ಳ ರೋಗಿಗಳ ವಿಷಯದಲ್ಲಿ ಇಂಥಾ ಬಂದೋಬಸ್ತು ಇರಬೇಕಾದದ್ದು ಅವಶ್ಯ. ಅನಾಥರೂ ಇಂಥಾ ಆಕಸ್ಮಿಕವಾದ ಮರಣಕ್ಕೆ ಗುರಿಯಾದದ್ದು ವಿಷಾದಕರವಾಗಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಮೇ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 56,000
,, (3) ಡಿಪಾಜಿಟ್ಟುಗಳು	....	,, 29,17,829
,, (4) ಇತರೆ	....	,, 63,352
(ಆನೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,06,181

ದೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 5,72,356
,, (2) ಖಾತೆ ಮತ್ತು ಇತರ ಸಾಲಗಳು	......	,, 26,81,206
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 4,34,505
,, (4) ಇನ್‌ವೆಸ್ಟ್‌ಮೆಂಟುಗಳು	....	,, 2,67,277
,, (5) ಏಜನ್ಸಿಗಳಲ್ಲಿರುವ ಮೊಬಲಗು	......	,, 1,15,420
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 16,295
,, (7) ಇತರೆ	....	,, 18,822
(ಆನೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,06,181

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟ್ ಸಂಗ್ರಹ.

ಬಲಾತ್ಕಾರದಿಂದ ಮಕ್ಕಳಿಗೆ ದೇವೀ ಹಿಡುಬು ಹಾಕುವ ಕಾನೂನು ಜೂಲೈ ೧ ಲಾಗಾಯ್ತು ಪೆರಿಯಾಪಟ್ಟಣದ ಮ್ಯುನಿಸಿಪಾಲಿಟಿಯಲ್ಲಿ ಒಂದು ವರುಷವೂ ಸೊರಬದ ಮ್ಯುನಿಸಿಪಾಲಿಟಿಯಲ್ಲಿ ಎರಡು ವರುಷವೂ ಜಾರೀ ಮಾಡಲ್ಪಡುತ್ತೆ.

ಹೊಳಲ್ಕೆರೆ ಟವನ್ನಲ್ಲಿ ಬಾಡಿಗೆ ಗಾಡಿಗಳಿಗೆ ಸಂಬಂಧಪಟ್ಟ ಕಾನೂನನ್ನು ಜಾರೀಗೆ ತರಲಾಗಿದೆ.

ಮ|| ಮಲ್ಲಪಲ್ಲಿ ವೆಂಕಟರೆಡ್ಡಿಯವರನ್ನು ಚಿಂತಾಮಣಿ ಮ್ಯುನಿಸಿಪಲ್ ಕೌನ್ಸಿಲ್ಲಿಗೂ, ಗಂಜಿಗುಂಟೆ ಶ್ಯಾನುಭೋಗ್ ಮ|| ವೆಂಕಟರಾಯರನ್ನು ಶಿಡ್ಲಘಟ್ಟದ ತಾಲ್ಲೂಕ್ ಬೋರ್ಡಿಗೂ ಮೆಂಬರಾಗಿ ನೇಮಕ ಮಾಡಿದೆ.

ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಮ|| ವೈ. ಸೀತಾರಾಮಯ್ಯನವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತಾರು ದಿನ ಜಾಸ್ತಿ ಮಾಡಿದೆ. ಈಗಿರುವ ಬದಲೀ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಬೆಂಗಳೂರು ಡೆಪ್ಯುಟಿ ಕಮಿಷನರ್ ಮಿ|| ಕೆ. ಚಾಂಡಿಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನು ಮೂರು ದಿನ ಜಾಸ್ತಿ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ|| ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪ್ರೊ|| ಅ|| ಕಮಿಷನರ್ ಮ|| ಎಂ. ವೆಂಕಟೇಶ ಅಯ್ಯಂಗಾರ್ರನ್ನು ದಿವಾನ್‌ರವರ ಆಫೀಸಿನಿಂದ ಕೋಲಾರ್ ಡೆಪ್ಯುಟಿ ಕಮಿಷನರ ಬಳಿ ಕೆಲಸಕ್ಕೆ ವರ್ಗ ಮಾಡಿದೆ.

ಮ|| ಎಂ. ನರಸಿಂಹಯ್ಯನವರು ಮೂಡಿಗೆರೆ ತಾಲ್ಲೂಕು ಅಮಲ್ದಾರರಾಗಿರುವಾಗ್ಗೆ ಅವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವೂ, ಬ್ರೀಚ್ ಆಫ್ ಕಂಟ್ರಾಕ್ಟ್ ಕಾನೂನಿಗೆ ಸಂಬಂಧಪಡುವ ಮೊಕದ್ದಮೆಗಳನ್ನು ಹಿಡಿದು ದಮಾಫ್ತಿ ಮಾಡುವ ಅಧಿಕಾರವೂ ಕೊಡಲ್ಪಟ್ಟಿದೆ.

ಕಡೂರು ಡಿವಿಜನ್ ಅ|| ಇನ್‌ಜನಿಯರು ಮ|| ಎಚ್. ಆರ್. ವೆಂಕಟಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕರ್ಣಾಟಕ ವಿದ್ಯಾವರ್ಧಕ ಸಂಘದ ಏಮಮಾಸ ಸಭೆ.

ಕಳೆದ ತಿಂಗಳ ಅಂತ್ಯಭಾಗದಲ್ಲಿ ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘದಲ್ಲಿ ವಾರ್ಷಿಕ ಬಹುಮಾನ ಸಭೆಯು ಕಮಿಷನರ್ ಮಿ|| ಲಾರೆನ್ಸ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಪ್ರೆಸಿಡೆಂಟರಾದ ಮ|| ವಿನಾಯಕ ಬಾಬಾಜಿ ಜೋಷಿಯವರು ವಾರ್ಷಿಕ ರಿಪೋರ್ಟನ್ನು ಓದಿ ಗ್ರಂಥಕರ್ತರೇ ಮೊದಲಾದ ಪಂಡಿತರಿಗೆ ನಿರ್ಣಯವಾಗಿದ್ದ ದ್ರವ್ಯರೂಪವಾದ ಬಹುಮಾನಗಳನ್ನು ಅಧ್ಯಕ್ಷರ ಹಸ್ತದಿಂದ ಕೊಡಿಸಿದರು. ಬಳಿಕ ಅಧ್ಯಕ್ಷರು ಮಾಡಿದ ಭಾಷಣದಲ್ಲಿ ಮೂರು ವಿಷಯಗಳನ್ನು ಅವರು ಒತ್ತಿ ಹೇಳಿದರು. ಅವು ಯಾವವೆಂದರೆ—

(1) ಸಂಘವು ಸ್ಥಾಪನವಾಗಿ 25 ವರ್ಷಗಳಾದಾಗ್ಯೂ ಅದರ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿರುವದಿಲ್ಲ. ಇದು ಯಾವಾಗಲು ಮುಂಬಯಿ ಸರಕಾರ, ಮೈಸೂರು ಸರಕಾರ, ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿ ಇವುಗಳ ಧರ್ಮಾರ್ಥ ಸಹಾಯದ ಮೇಲೆ ಅವಲಂಬಿಸಿಕೊಂಡು ಜೀವಧಾರಣಮಾಡಿರುತ್ತದೆ. ಇದಕ್ಕೆ ಇನ್ನೂ 5-6 ಸಾವಿರ ರೂಪಾಯಿ ಸಾಲವಿರುವದೆಂತೂ ಬಹಳ ದುಃಖದ ಸಂಗತಿಯು. ಇದಕ್ಕೆ ಧನಿಕರಾದ ಜನರು ಇನ್ನಷ್ಟು ಸಾಕಷ್ಟು ಸಹಾಯ ಮಾಡಬೊಲ್ಲರೆಂದು ಅನ್ನಬೇಕಾಗುತ್ತದೆ. ಸಂಘದ ಮುಂದಾಳುಗಳಾದರೂ ತಮ್ಮ ಸಂಘದ ಕೆಲಸವನ್ನು ಜನರಲ್ಲಿ ಸಾಕಷ್ಟು ಪ್ರಸಿದ್ಧಿಗೊಳಿಸಿ ಜನರ ಅನುರಾಗವನ್ನೂ ಆಶ್ರಯವನ್ನೂ ಹೊಂದಿಲ್ಲವೆಂದು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ಸಂಘದ ಉದ್ದೇಶವು ಬಹಳ ಸ್ತುತ್ಯವಿದ್ದು ಇದರ ಉತ್ಕರ್ಷವು ಬೇಗನೆ ಆಗಲೆಂದು ನಾನು ಮನಃಪೂರ್ವಕವಾಗಿ ಅಪೇಕ್ಷಿಸುತ್ತೇನೆ. (2) ನಾನು ಬಂದನಂತರ ಒಬ್ಬ ಗಾಯಕನು ಉರ್ದು ಭಾಷೆಯಲ್ಲಿ ಗಾಯನ ಮಾಡಿದನು. ಗಾಯಕನು ಬಹಳ ಮಧುರವಾದ ಗಾಯನ ಮಾಡಿದನೆಂಬುದರಲ್ಲಿ ಸಂಶಯವಿಲ್ಲ. ಮತ್ತು ಆ ಗಾಯನದಲ್ಲಿ ಜಾರ್ಜ ಅರಸರ ಸಾಮ್ರಾಜ್ಯಕ್ಕೆ ಯಶಸ್ಸು ಕೋರುವ ಭಾವವಿತ್ತೆಂಬುದೂ ನಿಜವು. ಆದರೆ ಕರ್ಣಾಟಕ ಸಂಘದವರು ಉರ್ದು ಪದ್ಯವನ್ನು ಹಾಡಿಸಿದ್ದಕ್ಕೆ ಬದಲಾಗಿ ಕನ್ನಡ ಪದ್ಯವನ್ನು ಹಾಡಿಸಿದ್ದರೆ ಸಂಘಕ್ಕೆ ಬಹಳ ಭೂಷಣವು ಬರುತ್ತಿತ್ತು. (3) ಪ್ರಸ್ತುತ ಯುದ್ಧದೊಳಗೆ ನಮ್ಮ ಸೈನಿಕರು ನಮಗೆ ಶಾಂತತೆಯು ಸಿಗಲೆಂದು ತಮ್ಮ ಜೀವದ ಆಹುತಿಯನ್ನು ಕೊಟ್ಟು ರಕ್ತದ ಕಾಲುವೆಯನ್ನು ಹರಿಯುತ್ತಿರುವರು. ಆದರೆ ಅವರಿಗೆ ಯತ್ಕಿಂಚಿತ್ತಾದರೂ ನೆರವಾಗುವದಕ್ಕೆ ಅಂದರೆ ಅಗಸರು, ನೀರಿನವರು (ಪಖಾಲಿ, ಧೋಬಿ, ಮೊದಲಾದವರನ್ನು ಒದಗಿಸಿ ಕೊಡುವದಕ್ಕೆ ಧಾರವಾಡ ಜಿಲ್ಲೆಯವರು ಏನೂ ಸಹಾಯ ಮಾಡಲಿಲ್ಲವೆಂದು ನೋಡಿ ನನಗೆ ದುಃಖವಾಗುತ್ತದೆ. ಧಾರವಾಡದಲ್ಲಿ 10 ಲಕ್ಷ ಜನ ಸಂಖ್ಯೆಯು ಇದ್ದು ಈಗ 6 ತಿಂಗಳಲ್ಲಿ ನಾವು ಜಾಹೀರಾತನ್ನು ಕೊಟ್ಟಾಗ್ಯೂ ಒಬ್ಬ ಅಗಸನು ಅಥವಾ ನೀರು ಹಾಕುವವನು ಯುದ್ಧಕ್ಷೇತ್ರಕ್ಕೆ ಧಾರವಾಡ ಜಿಲ್ಲೆಯಿಂದ ಹೊರಡಲಿಕ್ಕೆ ಸಿದ್ಧವಾಗದೆ ಇರುವದು ಬಹಳ ದುಃಖದ ಮಾತು.

ಮೈಸೂರು ಸರಕಾರದ ಹುಕುಮುಗಳು.

ನರಸಿಂಹರಾಜಪುರದಲ್ಲಿ ಮುನ್ಸಿಫ್ ಕೋರ್ಟು.—ಸಂಸ್ಥಾನದ ನ್ಯಾಯಸ್ಥಾನಗಳ ಇಲಾಖೆಯಲ್ಲಿ ಕೆಲವು ಸಿಬ್ಬಂದಿಯನ್ನು ಕಡಮೆ ಮಾಡಬೇಕೆಂದು ಸರ್ಕಾರದವರು ಯಡೆಹಳ್ಳಿಯ ಮುನ್ಸಿಫ್ ಕೋರ್ಟನ್ನು 1907 ನೇ ಜೂಲೈ ಲಾಗಾಯಿತು ವಜಾಮಾಡಿ, ಕೊಪ್ಪ ಮತ್ತು ತರೀಕೆರೆ ತಾಲ್ಲೂಕುಗಳ ಸಿವಿಲ್ ನ್ಯಾಯ ವಿಮರ್ಶೆಯ ಅಧಿಕಾರವನ್ನು ಚಿಕ್ಕಮಗಳೂರು ಮುನ್ಸಿಫ್ ಕೋರ್ಟಿಗೂ, ಯಡೆಹಳ್ಳಿ ಸಬ್ ತಾಲ್ಲೂಕಿನ ಸಿವಿಲ್ ನ್ಯಾಯ ವಿಮರ್ಶೆಯ ಅಧಿಕಾರವನ್ನು ಶಿವಮೊಗ್ಗಾ ಮುನ್ಸಿಫ್ ಕೋರ್ಟಿಗೂ ವಹಿಸಿದರು. ಆ ಕೋರ್ಟು ವಜಾ ಆದ ಲಾಗಾಯಿತು ಅದನ್ನು ಪುನಹ ಸ್ಥಾಪಿಸಿಕೊಡಬೇಕೆಂದು ಪ್ರಜೆಗಳು ಹೇಳಿಕೊಳ್ಳುತ್ತಲೇ ಬಂದಿದಾರೆ. 1912 ನೇ ಜೂಲೈನಲ್ಲಿ ತರೀಕೆರೆ ತಾಲ್ಲೂಕಿನ ಯುಖ್ತ್ಯಾರಿಯನ್ನು ಚಿಕ್ಕಮಗಳೂರು ಮುನ್ಸಿಫ್ ಕೋರ್ಟಿನಿಂದ ಶಿವಮೊಗ್ಗಾ ಸಬ್ ಜಡ್ಜರ ಕೋರ್ಟಿಗೆ ವಹಿಸಲಾಯಿತು. ಇದರಿಂದ ಕೊಪ್ಪದ ತಾಲ್ಲೂಕಿನವರ ಅನನುಕೂಲವು ತಪ್ಪಿದಂತಾಗಲಿಲ್ಲ. ಆದಕಾರಣ ಗವರ್ನ್‌ಮೆಂಟಿನವರು 1915 ನೇ ಜೂಲೈ ಲಾಗಾಯಿತು ನರಸಿಂಹರಾಜಪುರದಲ್ಲಿ (ಇದು ವರೆಗೆ ಯಡೆಹಳ್ಳಿ ಎಂಬ ಹೆಸರಿತ್ತು) ಒಂದು ಮುನ್ಸಿಫ್ ಕೋರ್ಟು ಸ್ಥಾಪಿಸಲ್ಪಡುವುದೆಂದು ಹುಕುಂ ಮಾಡುತ್ತಾರೆ. ಮತ್ತು ಈ ಕೋರ್ಟಿಗೆ ತರೀಕೆರೆ ಮತ್ತು ಕೊಪ್ಪ ತಾಲ್ಲೂಕುಗಳ ಮತ್ತು ನರಸಿಂಹರಾಜಪುರದ ಸಬ್ ತಾಲ್ಲೂಕಿನ ಯುಖ್ತ್ಯಾರಿಯು ವಹಿಸಲಾಗಿದೆ. ಶಿವಮೊಗ್ಗೆ, ಚಿಕ್ಕಮಗಳೂರು ಮತ್ತು ನರಸಿಂಹರಾಜಪುರಗಳ ಮುನ್ಸಿಫರುಗಳಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ. ಮತ್ತು ಮೊದಲನೇ ಎರಡು ತಾಲ್ಲೂಕುಗಳ ಅಮಲ್ದಾರರುಗಳಿಗಿರುವ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಜಾ ಮಾಡಲಾಗಿದೆ. ಇದಲ್ಲದೆ ಶಿವಮೊಗ್ಗಾ ಮುನ್ಸಿಫರಿಗಿರುವ ಒರಿಜಿನಲ್ ಸಿವಿಲ್ ಅಧಿಕಾರವನ್ನು ಶಿವಮೊಗ್ಗಾ ಸಬ್ ಜಡ್ಜರವರಿಗೆ ವರ್ಗಮಾಡಲ್ಪಟ್ಟಿದೆ. ಈ ಹುಕುಮುಗಳನ್ನು ಹಂಗಾಮಿಯಾಗಿ ಮಾಡಿರುತ್ತಾರೆ.

ಟಾಂಗಾ ಕುದುರೆಗಳು.—ಸಂಸ್ಥಾನದಲ್ಲಿ ಅಂಚೆ ಟಪ್ಪಾಲುಗಳನ್ನು ಸಾಗಿಸುವ ಮತ್ತು ಪ್ರಯಾಣಿಕರು ಹೋಗಿ ಬರುವ ಟಾಂಗಾ ಗಾಡಿ ಕುದುರೆಗಳ ಸ್ಥಿತಿಯ ವಿಷಯದಲ್ಲಿ ಕಳೆದ ಡಿಸೆಂಬರ್ ತಿಂಗಳಿಗೆ ಆಖೈರಾದ ಛಮಾಹಿ ರಿಪೋರ್ಟನ್ನು ಸರ್ಕಾರದವರು ಪರಾಂಬರಿಸಿ ರೆಕಾರ್ಡು ಮಾಡಿಕೊಂಡು ಬರೆದಿರುವುದೇನೆಂದರೆ — ಹಾಸನದ ಡಿಸ್ಟ್ರಿಕ್ಟಿನಲ್ಲಿ ಯಜಮಾನನು ಕುದುರೆಗಳನ್ನು ಬಹಳ ಕ್ರೂರವಾಗಿ ನಡಿಸಿ ದುಡಿಸಿದನೆಂದು ಎರಡು ಮೊಕದ್ದಮೆಗಳಾದವೆಂತಲೂ, ಒಂದು ಮೊಕದ್ದಮೆಯಲ್ಲಿ ಯಜಮಾನನಿಗೆ 75 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು, ಇನ್ನೊಂದು ಮೊಕದ್ದಮೆಯು ದರ್ಯಾಫ್ತಿಯಲ್ಲಿದೆ ಎಂದೂ ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲೂ ಅದೇ ತರದ ಎರಡು ಮೊಕದ್ದಮೆಗಳು ಬಂದು ಎರಡರಲ್ಲೂ ಯಜಮಾನರಿಗೆ ಶಿಕ್ಷೆ ವಿಧಿಸಲ್ಪಟ್ಟಿತೆಂದು ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ ಎಂಬುದು.

ಬೆಂಚ್ ಕೋರ್ಟುಗಳು.—ಶಿವಮೊಗ್ಗೆ, ಚಿಕ್ಕಮಗಳೂರು, ಹಾಸನ, ತುಮಕೂರು, ಈ ನಾಲ್ಕು ನಗರಗಳಲ್ಲೂ ಗೌರವ ಮ್ಯಾಜಿಸ್ಟ್ರೇಟರುಗಳ ಬೆಂಚ್ ಕೋರ್ಟುಗಳನ್ನು ಇಡಬೇಕೆಂದು ಸರ್ಕಾರದವರು ಹಂಗಾಮಿ ತರೀಖು ಸ್ಯಾಂಕ್ಷನ್ ಮಾಡಿದಾರಷ್ಟೆ. ಈ ಕೋರ್ಟುಗಳ ಸಿಬ್ಬಂದಿ ಖರ್ಚನ್ನು ಈಗ ಸ್ಯಾಂಕ್ಷನ್ ಮಾಡಿದಾರೆ. ಪ್ರತಿ ಕೋರ್ಟಿಗೂ 25 ರೂಪಾಯಿ ಸಂಬಳದ ಒಬ್ಬ ಗುಮಾಸ್ತೆಯೂ, 8 ರೂಪಾಯಿ ಸಂಬಳದ ಒಬ್ಬ ಜವಾನನೂ ನೇಮಿಸಲ್ಪಡಬೇಕೆಂದೂ, ಬೆಂಚು ಕುರ್ಚಿ ಮೊದಲಾದ ಸಾಮಾನುಗಳನ್ನು ಒದಗಿಸುವುದಕ್ಕೆ ಪ್ರತಿ ಕೋರ್ಟಿಗೂ 200 ರೂಪಾಯಿ, ಸಾದಿಲ್ವಾರು ಖರ್ಚಿಗೆ ತಿಂಗಳಿಗೆ 2 ರೂಪಾಯಿ ಖರ್ಚು ಮಾಡಬಹುದೆಂದೂ ಹುಕುಂ ಕೊಟ್ಟಿದಾರೆ.

ಪೊಲೀಸಿನವರು ದಸ್ತಗಿರಿಮಾಡಿರುವವರಿಂದ ಸಮ್ಮತಿ ಕೈಫಿಯತ್ತು ತೆಗೆದುಕೊಳ್ಳುವುದು.—ಪೊಲೀಸಿನವರು ದಸ್ತಗಿರಿಮಾಡಿ ಲಾಕಪ್ಪಿನಲ್ಲಿ ಹಾಕಿಕೊಂಡಿರುವಂಥಾ ಜನರಿಂದ ಸಮ್ಮತಿ ಕೈಫಿಯತ್ತುಗಳನ್ನು ಪೊಲೀಸ್ ಅಧಿಕಾರವುಳ್ಳ ಮ್ಯಾಜಿಸ್ಟ್ರೇಟರು ಬರೆದುಕೊಳ್ಳುವುದನ್ನು ತಪ್ಪಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಕೇಳಿಕೊಂಡರು. ಈ ವಿಚಾರವನ್ನು ಸರ್ಕಾರದವರು ಚೀಫ್ ಕೋರ್ಟಿಗೆ ಬರೆದು ಅಭಿಪ್ರಾಯವನ್ನು ತರಿಸಿಕೊಂಡು ಹುಕುಂ ಕೊಟ್ಟಿರುವುದೇನೆಂದರೆ—ತಕ್ಸೀರುದಾರರೆಂದು ಪೊಲೀಸಿನವರು ತೋರುವ ಜನರಿಂದ ಕೈಫಿಯತ್ತು ತೆಗೆದುಕೊಳ್ಳಬೇಕಾದರೆ ಪೊಲೀಸಿನವರು ಅಂಥವರನ್ನು 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ ಕೈಫಿಯತ್ತು ಬರಸುವಂತೆ ಈಗಿರುವ ಕಾನೂನನ್ನು ಬದಲಾವಣೆ ಮಾಡಬೇಕೆಂದು ಪ್ರತಿನಿಧಿಸಭೆಯಲ್ಲಿ ಸೂಚಿಸಲಾಗಿದೆ. ಆ ರೀತಿ ಕಾನೂನನ್ನು ಬದಲಾಯಿಸಬೇಕಾದದ್ದಿಲ್ಲ. ಆದರೆ ಪೊಲೀಸಿನವರು ಪತ್ತೆ ತರದೂದು ನಡಿಸುವ ತಾಲ್ಲೂಕಿನ ವಿನಾ ದಿಗರು ತಾಲ್ಲೂಕಿಗೆ ತಕ್ಸೀರುದಾರರನ್ನು ಕರೆದುಕೊಂಡು ಹೋಗಿ ಅಂಥಾ ದಿಗರು ತಾಲ್ಲೂಕಿನ ಮ್ಯಾಜಿಸ್ಟ್ರೇಟರ ಮುಂದೆ ಅವರ ಕೈಫಿಯತ್ತನ್ನು ಬರಸಬೇಕು. ಅಂಥಾ ದಿಗರು ಸ್ಥಳದಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಮ್ಯಾಜಿಸ್ಟ್ರೇಟರು ಇರುವ ಪಕ್ಷಕ್ಕೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ ತಕ್ಸೀರುದಾರರ ಕೈಫಿಯತ್ತನ್ನು ಬರಸಬೇಕು. ಈ ರೀತಿಯಾದ ನಡವಳಿಕೆಯನ್ನು ಆಚರಣೆಗೆ ತರುವ ಭಾಗದಲ್ಲಿ ಪೊಲೀಸಿನವರಿಗೆ ಅವಶ್ಯವಾದ ಹುಕುಂ ಕೊಡಬೇಕೆಂದು ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಸರ್ಕಾರದವರು ತಿಳಿಯಪಡಿಸಿರುತ್ತಾರೆ.

ರಾತ್ರಿ ಪಾಠಶಾಲೆಗಳು.—ಮೈಸೂರು ಸರ್ಕಾರದವರು ರಾತ್ರಿಕಾಲದ ಮತ್ತು ಸಾಹುಕಾರಿಯ ಪಾಠಶಾಲೆಗಳಿಗೆ ಇದುವರೆಗೂ ಇನ್ಸ್‌ಪೆಕ್ಟರುಗಳ ಪರೀಕ್ಷೆಯ ಫಲಿತಾಂಶಕ್ಕೆ ಅನುಸಾರವಾಗಿ ನಿರ್ಣಯಿಸಲ್ಪಟ್ಟು ವರ್ಷಾಂತ್ಯದಲ್ಲಿ ಪಾವತಿಯಾಗುತ್ತಿದ್ದ ಒಟ್ಟು ಸಹಾಯ ದ್ರವ್ಯಕ್ಕೆ ಪ್ರತಿಯಾಗಿ, ಮಾಹೆಯಾನಾ 3 ರೂಪಾಯಿಗಳ ಮೇರೆಗೆ ಪ್ರತಿ ತಿಂಗಳೂ ಸಹಾಯ ದ್ರವ್ಯವನ್ನು ಪಾವತಿ ಮಾಡಬಹುದೆಂದು ಮಂಜೂರು ಮಾಡಿರುತ್ತಾರೆ. ಸಾಲಿಯಾನಾ 36 ರೂಪಾಯಿಗಳಿಗಿಂತ ಹೆಚ್ಚಾದ ದ್ರವ್ಯಸಹಾಯಕ್ಕೆ ಅರ್ಹವಾಗುವಂತಹ ಪಾಠಶಾಲೆಗಳಿಗೆ, ಹೀಗೆ ಹೆಚ್ಚಾಗುವ ಮೊಬಲಗು ಸಹ ವರ್ಷದ ಅಂತ್ಯದಲ್ಲಿ ಪಾವತಿ ಮಾಡಲ್ಪಡುವದು. ಪ್ರತಿ ತಿಂಗಳಿನಲ್ಲಿಯೂ ದಿನವಹಿ ಸರಾಸರಿ ಹಾಜರಿಯು 10 ಆಗುವಷ್ಟು ಸಂಖ್ಯೆಯುಳ್ಳ ಮಾತ್ರ ಪಾಠಶಾಲೆಗಳಿಗೆ ಈ ತಿಂಗಳುಗಟ್ಟಳೆಯ ಸಹಾಯ ದ್ರವ್ಯವು ಪಾವತಿಯಾಗುವದು. ಸಾಹುಕಾರಿ ಪಾಠಶಾಲೆಗಳ ಮತ್ತು ರಾತ್ರಿಯ ಕಾಲದ ಪಾಠಶಾಲೆಗಳ ಉಪಾಧ್ಯಾಯರುಗಳು ತಮಗೆ ಮೇಲ್ಪಟ್ಟ ಇನ್ಸ್‌ಪೆಕ್ಟರುಗಳಿಗೆ ಬರೆದುಕೊಳ್ಳತಕ್ಕದ್ದು.

ಇನಾಂ ಗ್ರಾಮಗಳ ಸರ್ವೆಸೆಟ್ಲ್‌ಮೆಂಟು.—ಕಳೆದ ಕೆಲವು ವರುಷಗಳಿಂದಲೂ ಇನಾಂ ಗ್ರಾಮಗಳ ವಿಚಾರವಾಗಿ ಮೆಂಬರುಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದವರಿಗೆ ಇನಾಂದಾರರಿಗೂ, ಅಂಥಾ ಗ್ರಾಮಗಳ ರೈತರಿಗೂ ಇರುವ ಕುಂದು ಕೊರತೆಗಳನ್ನು ಪರಿಹರಿಸಿಕೊಡಬೇಕೆಂದು ಪ್ರಾರ್ಥಿಸಿ ಅರಿಕೆ ಮಾಡಿಕೊಳ್ಳುತ್ತಾ ಬಂದಿದಾರೆ. ಇನಾಂದಾರರ ಮತ್ತು ಅವರ ರೈತರ ಹಕ್ಕು ಬಾಧ್ಯತೆಗಳು ಖಂಡಿತವಾಗಿಲ್ಲವೆಂದೂ, ಬಲಾತ್ಕಾರದಿಂದ ಎಲ್ಲಾ ಇನಾಂ ಗ್ರಾಮಗಳಿಗೂ ಸರ್ವೆ ಸೆಟ್ಲ್‌ಮೆಂಟುಮಾಡಿಸಿಕೊಡಬೇಕೆಂದೂ, ಒಬ್ಬ ವ್ಯಕ್ತಿವಂತನಿಂದ ಬಾಕಿ ಬರಬೇಕಾಗಿದ್ದರೂ ರೆವಿನ್ಯೂ ಅಧಿಕಾರಿಗಳು ಗ್ರಾಮವನ್ನೇ ಹರಾಜಿಗೆ ತರುವ ಪದ್ಧತಿ ಇದೆ ಎಂದೂ ಚರ್ಚೆಯಾಯಿತು. ವ್ಯಕ್ತಿವಂತರ ಅಥವಾ ಹಿಸ್ಸೇದಾರರ ಪೈಕಿ ಮುಕ್ಕಾಲು ಭಾಗದವರು ಒಪ್ಪಿದ ಪಕ್ಷಕ್ಕೆ ಅಂಥಾ ಇನಾಂ ಗ್ರಾಮಕ್ಕೆ ಸರ್ವೆ ಸೆಟ್ಲ್‌ಮೆಂಟನ್ನು ಸರ್ಕಾರದವರು ಬಲಾತ್ಕರಿಸಿ ಮಾಡಿಸಬೇಕೆಂದು ಮೆಂಬರುಗಳು ಸಮ್ಮತಿಪಟ್ಟದ್ದರಿಂದ ಸರ್ಕಾರದವರು ಇಂಥಾ ಅಧಿಕಾರವನ್ನು ವಹಿಸುವುದಕ್ಕೆ ಒಂದು ಮುಸವಿದೆ ಕಾನೂನನ್ನು ಮಾಡಿ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಇಟ್ಟರು. ಸರ್ವೆ ಸೆಟ್ಲ್‌ಮೆಂಟು ಮಾತ್ರ ಆದ ಪಕ್ಷದಲ್ಲಿ ಇನಾಂ ಗ್ರಾಮಗಳ ಕಷ್ಟ ಕೊರತೆ ಅನನುಕೂಲಗಳೆಲ್ಲಾ ನಿವಾರಣೆಯಾಗುವುದಿಲ್ಲವೆಂದೂ, ಇನಾಂ ಗ್ರಾಮಗಳಿಗೂ ಅವುಗಳ ಶ್ರೇಯಸ್ಸಿಗೂ ಸಂಬಂಧಪಟ್ಟಿರುವ ಸಮಸ್ತ ವಿಷಯಗಳನ್ನೂ ಒಂದೇ ಸಲ ಯೋಚಿಸಿ ಇತ್ಯರ್ಥಮಾಡುವುದು ಅವಶ್ಯವೆಂದೂ ಸರ್ಕಾರದವರಿಗೆ ಕಂಡುಬಂದಿರುವ ಕಾರಣ ಅವರು ಅದಕ್ಕೋಸ್ಕರ ಒಂದು ಪಂಚಾಯತಿಯನ್ನು ನೇಮಕಮಾಡಿದಾರೆ. ಈ ಪಂಚಾಯತರು ವಿಚಾರಮಾಡತಕ್ಕ ಭಾಗಗಳ್ಯಾವವೆಂದರೆ:—(1) ಇನಾಂ ಗ್ರಾಮಗಳಿಗೆ ಬಲಾತ್ಕಾರದಿಂದ ಸರ್ವೆ ಸೆಟ್ಲ್‌ಮೆಂಟು ಮಾಡಿಸಬೇಕಾದದ್ದು ಅವಶ್ಯವೇ? ಅವಶ್ಯವಾದ ಪಕ್ಷಕ್ಕೆ ಅದನ್ನು ಯಾವ ರೀತಿ ಮಾಡಬಹುದು? (2) ಲ್ಯಾಂಡ್ ರೆವಿನ್ಯೂ ಕೋಡಿನ 236 ನೇ ಸೆಕ್ಷನನ್ನು ಯಾವ ರೀತಿ ಬದಲಾಯಿಸಬೇಕು? ಮತ್ತು ಏಳನೇ ಪ್ರಕರಣದಲ್ಲಿ (ಛಾಪ್ಟರ್) ಇನಾಂದಾರರ ಮತ್ತು ಅವರ ಒಕ್ಕಲುದಾರರ ಹಕ್ಕು ಬಾಧ್ಯತೆಗಳನ್ನು ಯಾವ ರೀತಿ ವಿವರಿಸಿ ಸ್ಪಷ್ಟಪಡಿಸಬಹುದು? (3) ಇನಾಂ ಗ್ರಾಮಗಳಿಂದ ಬರಬೇಕಾದ ಕ್ವಿಟ್‌ರೆಂಟ್ ಬಾಕಿಯನ್ನು ವಸೂಲ್ಮಾಡುವುದಕ್ಕೆ ಲ್ಯಾಂಡ್ ರೆವಿನ್ಯೂ ರೂಲ್ಸಿನ 99-(A) ನೇ ಸೆಕ್ಷನನ್ನು ಬದಲಾಯಿಸಬೇಕಾಗಿದೆಯೇ? ಬದಲಾಯಿಸಬೇಕಾಗಿದ್ದರೆ ಅಂಥಾ ಬದಲಾವಣೆಗಳ್ಯಾವವು? (4) ಇನಾಂ ಗ್ರಾಮಗಳೊಳಗೆ ಇರುವಂಥಾ ಕೆರೆ ಕಟ್ಟೆ ಕಾಲ್ವೆ (ನೀರಾವರಿಗಳು) ಗಳನ್ನು ದುರುಸ್ತು ಮಾಡಿ ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡಿರಬೇಕಾದ ಭಾಗದಲ್ಲಿ ಇನಾಮ್‌ದಾರರ ಮೇಲೂ ರೈತರ ಮೇಲೂ ಎಷ್ಟೆಷ್ಟು ಮಟ್ಟಿನ ಜವಾಬ್ದಾರಿಯನ್ನು ಹೊರಿಸಬಹುದು? (5) ಸರ್ಕಾರಿ ನೀರಾವರಿಗಳ ದೆಸೆಯಿಂದ ಇನಾಂ ಗ್ರಾಮಗಳಲ್ಲಿ ಖುಷ್ಕಿಯಿಂದ ತರಿ ಆಗುವಂಥಾ ಜಮೀನುಗಳಿಗೆ ಸರ್ಕಾರಕ್ಕೆ ಕಂಟ್ರಿಬ್ಯೂಷನ್ ಮತ್ತು ನೀರಿನ ವರಿ ವಸೂಲಾಗಲು ಯಾರನ್ನು ಜವಾಬ್ದಾರರನ್ನಾಗಿ ಮಾಡಬೇಕು? (6) ಸರ್ಕಾರದವರು ಇನಾಂ ಗ್ರಾಮಗಳನ್ನು ರೂಢಿಸುವುದಕ್ಕೆ ತೆಗೆದುಕೊಳ್ಳಬೇಕಾಗಿ ಬಂದರೆ ಅದರ ಷರತ್ತುಗಳೇನಾಗಿರಬೇಕು? (7) ಲ್ಯಾಂಡ್ ರೆವಿನ್ಯೂ ರೂಲ್ಸ್ 6 ನೇ ಪ್ರಕರಣದಲ್ಲಿ ವಿವರಿಸಿರುವ ಲೆಕ್ಕಗಳನ್ನು ಈಗ ಇನಾಂದಾರರು ಇಡಬೇಕೆಂಬ ವಿಧಿಯುಂಟು. ಇದಲ್ಲದೆ ಇನ್ನು ಬೇರೆ ಲೆಕ್ಕಗಳನ್ನಿಡಬೇಕೇ? ಇಡಬೇಕಾದರೆ ಅವು ಯಾವವು?

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ರೈತ ಪ್ರಜೆಗಳ ಕಷ್ಟ.

ಅಯ್ಯಾ,—ಚಿಕ್ಕಮಗಳೂರು ತಾಲ್ಲೂಕು ಬೆರಣಗೋಡು ಗ್ರಾಮದಲ್ಲಿ *ಕಳೆದ ತಿಂಗಳು 8 ನೇ ತಾರೀಖಿನಲ್ಲಿ ಒಂದು ಸುಗ್ಗಿಯ ಹಬ್ಬವು ನೆರವೇರಿತು.* ಚಿಕ್ಕಗೆ ಹುಡುಗಾಟ, ಇಲಿಗೆ ಪ್ರಾಣಸಂಕಟ ಎಂಬ ಗಾದೆಗನುಸಾರವಾಗಿ ನಮ್ಮ ಗ್ರಾಮದ ಜನಗಳಿಗೆ ಒಂದು ವಿಧವಾದ ಸಂಕಟವು ಆ ದಿವಸವೇ ಪ್ರಾಪ್ತವಾಯಿತು. ಈ ಬಡ ರೈತರ ಕೈಲಿ ಕಾಸಿಲ್ಲದ ಸಂಕಟ. ಪೋಲೀಸಿನವರ ಧೊಡೆದಾಟ. ಮನೆಯಲ್ಲಿ ಹೆಂಗಸರ ಗೋಳಾಟ. ಇಂತೀ ವಿಧವಾದ ಸಂಕಟಗಳು ಪ್ರಾಪ್ತವಾದವು. ಮಹಾಶಯರೇ, ಈ ನವನಾಗರೀಕ ಕಾಲದಲ್ಲಿ ಈ ಬಡ ರೈತರನ್ನು ಸಂಕಟಪಡಿಸಿ ಹೊಟ್ಟೆ ಹೊರೆಯುವುದಕ್ಕಿಂತ ಆಳವಾದ ನೀರಿನಲ್ಲಿ ಬಿದ್ದು ಸಾಯುವುದು ಲೇಸಲ್ಲವೇ? ಇಂಥಾ ಸಂಕಟವನ್ನು ತಪ್ಪಿಸಿ ಬಡರೈತರನ್ನು ಸರ್ಕಾರದವರು ಕಾಪಾಡಿಯಾರೆಂದು ನಂಬಿದೇವೆ. ಈ ಊರಿನಲ್ಲಿ ಮಳೆಗಾಲ ಪ್ರಾರಂಭವಾಗಿದೆ. ಜನಗಳೆಲ್ಲರೂ ವ್ಯವಸಾಯದಲ್ಲಿ ನಿರತರಾಗಿದಾರೆ. ಅದೇ ತಾ. 12 ರಲ್ಲಿ ವಿದ್ಯಾಭ್ಯಾಸದ ವಿಷಯವಾಗಿಯೂ ಕುಡಿಯುವ ವಿಚಾರದಲ್ಲೂ ಉಪನ್ಯಾಸಮಾಡಿ ಮ|| ಕಣಗಾಲ್ ಲಕ್ಷ್ಮೀನರಸಿಂಹಯ್ಯನವರು ಈ ಊರಿಂದ ಮುಂದಕ್ಕೆ ತೆರಳಿದರು.

ಹುಲೀಕಾನ್ ಎಸ್ಟೇಟ್. ಲಕ್ಷ್ಮೀನರಸಿಂಹ ಶಾಸ್ತ್ರಿ

ಗೋಕಾಯಿಗಳ ಕಷ್ಟ.

ಅಯ್ಯಾ,—ಚಳ್ಳಕೆರೆ ತಾಲ್ಲೂಕು ತಿಮ್ಮಪ್ಪಯ್ಯನವರ ಹಳ್ಳಿ ಪ್ರಾಂತ್ಯದಲ್ಲಿ ಈಗ 2-3 ವರುಷ ಮಳೆ ಇಲ್ಲದೆ ಜನಗಳು ದನಗಳು ಜೀವನಮಾಡುವದು ಬಹಳ ಕಷ್ಟವಾಗಿರುತ್ತದೆ. ಜನಗಳು ಹ್ಯಾಗಾದರೂ ಬದುಕ್ಯಾರು; ದನಗಳು ಯಾವ ರೀತಿ ಬದುಕಬೇಕು? ಈಚಲ ಗರಿ ಕೊಯ್ಯುವದಕ್ಕೆ ನಮ್ಮ ಅಮಲ್ದಾರ್ರು ಮಾಫಿ ಲೈಸೆನ್ಸು ಕೊಟ್ಟು ಉದ್ಧಾರಮಾಡಬೇಕು. ಅವರು ಲೈಸೆನ್ಸು ಕೊಟ್ಟರೂ ಮಧ್ಯೆ ಇರುವ ಪೊಲೀಸ್ ಜವಾನರು ಗರಿ ಕೊಯ್ಯುವ ಕುಡುಗೋಲು ಕಸುಕೊಂಡು ನಷ್ಟಪಡಿಸುವದು ಜಾಸ್ತಿಯಾಗಿದೆ. ಇದಕ್ಕೆ ಯಾವ ರೀತಿ ಮಾಡಬೇಕು? ನಮ್ಮ ಅಮಲ್ದಾರ್ರು ಗ್ರಾಮಗಳಿಗೆ ಇಸ್ತಿಹಾರು ಕೊಟ್ಟು ಬಡಜನಗಳನ್ನು ಉದ್ಧಾರ ಮಾಡಿ ಈ ಕಾಟವನ್ನು ಬಿಡಿಸಬೇಕು. ಕೈಯಲ್ಲಿ ಹಣ, ಮೈಯಲ್ಲಿ ನೆಣ ಇಲ್ಲದವರು ಯಾವ ರೀತಿ ತಲೆಯೆತ್ತುವದು? ಮತ್ತು ವಾಪಾಸು ಕಳ್ಳಿ ಕೊಯ್ಯಲು ಗ್ರಾಮಗಳಿಗೆ ಸರ್ಕಾರಿ ಹಣ ಬಂದು ಇರುತ್ತದೆ ಎಂತ ಬಡಜನಗಳು ಹೇಳುತ್ತಾರೆ. ಬಂದು ಇರುತ್ತದೆಯೋ, ಇಲ್ಲವೇ ಯಾರಾದರೂ ತಿಳಿಸಬೇಕು. ಪ್ರತಿ ಒಂದು ಮನೆಗೆ ಒಂದು ಆಳು ಬಂದು ಪ್ರತಿ ಸೋಮವಾರ ಬೆಳಗಿನ 6 ಘಂಟೆಯಿಂದ 10 ಘಂಟೆ ವರಿವಿಗೂ ಕೊಯ್ಯುತ್ತಾರೆ. ಯಾರಾದರೂ ತಿಳಿಸಿದರೆ ಬಡಜನಗಳಿಗೆ ಉಪಕಾರವಾದೀತು.

ಒಬ್ಬ ರೈತ

ಮಿಡಿಗೇಶಿ ಕೆರೆಯ ನೀರು.

ಅಯ್ಯಾ,—ಸರ್ಕಾರದವರು ಇಲ್ಲಿನ ನೀರಿನ ತೊಂದರೆಯನ್ನು ನೋಡಿ ಕನಿಕರದಿಂದ ನಮ್ಮ ಕಟ್ಟೆಯನ್ನು ದುರಸ್ತುಮಾಡಿಸಿಕೊಟ್ಟಿರುವದಕ್ಕಾಗಿ ನಾವುಗಳೆಲ್ಲರೂ ಕೃತಜ್ಞರಾಗಿರುತ್ತೇವೆ. ಈ ಕಟ್ಟೆಗೆ ಹಾಲಿ ಎರಡು ತಿಂಗಳ ನೀರು ಬಂದಿದೆ. ಈ ಗ್ರಾಮದಲ್ಲಿರುವ ಮೊದಲ್ಯಾದಿಗಳನೇಕರು ಬೇವಿನಹಣ್ಣನ್ನು ಆರಿಸಿ ತಂದು ಈ ಕಟ್ಟೆಯ ಮತ್ತು ಮನೆಗಳ ಪಕ್ಕೆಯಲ್ಲಿರುವ ವಿಶಾಲವಾದ ಬಂಡೆಗಳ ಮೇಲೆ ಕಾಲಿನಿಂದ ತುಳಿದು ಅದನ್ನೆಲ್ಲಾ ತಟ್ಟೆಗಳಲ್ಲಿ (ಗೂಡೆಗಳು) ಎತ್ತಿ ಎಲ್ಲವನ್ನು ನೀರಿನಲ್ಲಿ ತೊಳೆದು ಅದರಲ್ಲಿರುವ ವಾಸನೆಯನ್ನೆಲ್ಲಾ ನೀರಿಗೆ ಸೇರುವಂತೆ ಮಾಡಿ ಹೊಸದಾಗಿ ಬಂದಿರುವ ನೀರನ್ನೆಲ್ಲಾ ಕುಲಗೆಡಿಸುತ್ತಾರೆ. ಇಂಥ ಕೆಲಸಗಳೆಲ್ಲವೂ ಪೊಲೀಸಿನ ಮತ್ತು ಗ್ರಾಮದ ಅಧಿಕಾರಿಗಳ ಮೂಲಕ ನಿಲ್ಲಿಸಲು ಸಾಧ್ಯವೇ ಹೊರತು ಇತರರಿಗ್ಯಾರಿಗೂ ಸಾಧ್ಯವಾಗತಕ್ಕದ್ದಲ್ಲ. ಅವರು ಜನೋಪಕಾರವಾದ ಈ ಕೆಲಸವು ತಮ್ಮದೆಂದು ಭಾವಿಸಿ ಭಾವಿ ಕೆರೆಗಳಲ್ಲಿ ಕಶ್ಮಲವನ್ನು ಸೇರಿಸತಕ್ಕ ಸಣ್ಣ ಜನಗಳನ್ನೆಲ್ಲಾ ಯಾವ ಮಾರ್ಗದಿಂದಲಾದರೂ ದಾರಿಗೆ ತಂದು ನೀರು ಕೆಡದ ರೀತಿಯಲ್ಲಿಟ್ಟಿರುತ್ತಾರೆಂದು ಹಾರೈಸುತ್ತಾ ಇದೇನೆ. ಹಿಂದೆ ಇಂಥಾ ಜನೋಪಕಾರವಾದ ಕೆಲಸದಲ್ಲಿ ನಿರತರಾಗಿದ್ದ ರಾ|| ಪುಟ್ಟವೀರಭದ್ರಪ್ಪನವರ ಗುಣವು ಸ್ತೋತ್ರಾರ್ಹವಾಗಿರುತ್ತೆ.

ಕಾರ್ಯದರ್ಶಿ

ವೈದ್ಯರಿಗೆ ವಿಶ್ರಾಂತಿ ಬೇಕು.

ಅಯ್ಯಾ,—ಎಲ್ಲಾ ಡಿಪಾರ್ಟುಮೆಂಟುಗಳಿಗೂ ರಜಾ ಇರುತ್ತೆ. ಮೆಡಿಕಲ್ ಡಿಪಾರ್ಟುಮೆಂಟಿಗೆ ಮಾತ್ರ ಇಲ್ಲ. ಡಾಕ್ಟರುಗಳಿಗೆ ಭಾನುವಾರವೂ ಇಲ್ಲ. ಹುಣ್ಣಿಮೆ ಹಬ್ಬವೆಂಬುದು ಏನೂ ಇಲ್ಲ. ಇವರಿಗೆ ಆಚಾರ ಮಡಿವೆಂಬುದು ಒಂದೂ ಇರಬಾರದು. ಇದನ್ನೆಲ್ಲಾ ಕಟ್ಟಿಕೊಂಡು ಏನು ಮಾಡ್ಯಾರು? ಬೆಳಿಗ್ಗೆ 8 ರಿಂದ 11-12 ರ ವರೆಗೂ, ಸಾಯಂಕಾಲ 4 ರಿಂದ 6 ರ ವರೆಗೂ ಆಸ್ಪತ್ರೆ ಕೆಲಸ ಕಟ್ಟುಪ್ರವೆಂತಿದ್ದರೂ ಪೋಸ್ಟು ಮಾರ್ಟೆಮ್‌ಗಳೋ, ಅಕಸ್ಮಾತ್ತಾಗಿ ಕೈಕಾಲು ಮುರುಕೊಂಡೋ ಅಥವಾ ಮಾರಾಮಾರಿಯೋ ಎಷ್ಟು ಹೊತ್ತಿಗೆ ಬಂದರೂ ಇಲಾಜು ಮಾಡಬೇಕು ಪ್ರತಿ ನಿಮಿಷದಲ್ಲೂ ಡ್ಯೂಟಿಯಲ್ಲಿ ಇದ್ದೇ ತೀರಬೇಕು. ಆಸ್ಪತ್ರೆ ಮುಚ್ಚಿದೇನಂತ ಹೇಳಲಿಕ್ಕೇ ಇಲ್ಲ. ಬೆಳಿಗ್ಗೆ ಆಸ್ಪತ್ರೆಗೆ ಹೋದವರು ಮಧ್ಯಾಹ್ನ ಮನೆಗೆ ಬರುವಾಗ ಯಾರಾದರೂ ಕರೆದರೆ ಅನ್ನ ನೀರು ಬಿಟ್ಟು ಹೋಗಬೇಕು. ಮಧ್ಯ ರಾತ್ರಿಯಲ್ಲಿ ಯಾರಾದರೂ ಕೂಗಿದರೂ ಕರೆದು ವಿಚಾರಿಸಬೇಕು. ಇವರಿಗೆ ರಾತ್ರಿ ಹಗಲು ಎಂಬ ಭೇದವೇ ಇಲ್ಲ. ಎಷ್ಟು ಹೊತ್ತಿಗೆ ಅಂದರೆ ರಾತ್ರಿ ಹಗಲು, ಊಟದ ಹೊತ್ತು, ಮಲಗುವ ಹೊತ್ತು ಎಂಬ ನಿಗಾ ಕೊಡದೆ ಅಕಸ್ಮಾತ್ತಾದ ಕೇಸುಗಳನ್ನು ಇವರು ನೋಡುತ್ತಾ ಇರುವಾಗ್ಗ್ಯೂ, ಅದಲ್ಲದೆ ಬೆಳಿಗ್ಗೆ 7 ರಿಂದ 11 ರ ವರೆಗಿನ ಸಮಯ ಪ್ರಜೆಗಳಿಗಾಗಲೀ, ಸರ್ಕಾರಿ ನೌಕರರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ ಇವರೆಲ್ಲರಿಗೂ ಔಷಧಕ್ಕೆ ಅನುಕೂಲವಾಗಿರುವಾಗ್ಗೆ ಮಧ್ಯಾಹ್ನದ ಮೇಲೂ ಆಸ್ಪತ್ರೆ ತೆರೆಯಬೇಕು ಎಂಬ ನಿರ್ಬಂಧ ಯಾಕೋ ತಿಳಿಯದು. ಅನೇಕ ಡಿಸ್ಪೆನ್ಸರಿಗಳಲ್ಲಿ ಬೆಳಿಗ್ಗೆ 3 ಗಂಟೆಯು ಕೆಲಸವೇ ಇರುವದಿಲ್ಲ. ಹೀಗಿರುವಾಗ್ಗೆ ಪುನಃ ಮಧ್ಯಾಹ್ನಕ್ಕೆ ಬರುವವರು ಯಾರು? ಸಾಯಂಕಾಲ ಆಸ್ಪತ್ರೆ ತೆರೆದಿರುವದರಿಂದ ಪ್ರಜೆಗಳಿಗೆ ಏನೊಂದೂ ವಿಶೇಷ ಅನುಕೂಲ ಸೌಕರ್ಯ ಪಡಿಸಿದ್ದು ಕಾಣುವದಿಲ್ಲ. ಈ ಡಾಕ್ಟರುಗಳಿಗೆ ತೊಂದರೆ ಎಷ್ಟೋ ಅಷ್ಟೇ. ಇವರಿಗೆ ವಿಶ್ರಾಂತಿಯೇ ಇಲ್ಲ. 365 ದಿವಸವೂ ಕೆಲಸವೇ. ಇತರ ಡಿಪಾರ್ಟುಮೆಂಟಿನವರು ಈವತ್ತು ಚಕ್ರವರ್ತಿಗಳ ವರ್ಧಂತಿ, ಈವತ್ತು ಮಹಾರಾಜರವರ ವರ್ಧಂತಿ, ಈವತ್ತು ಗಣೇಶನ ಹಬ್ಬ, ದಸರಾ ಮೊದಲಾದ ದಿವಸಗಳಲ್ಲಿ ಬಹಳ ಉಲ್ಲಾಸದಿಂದಿರುವಾಗ್ಗೆ ಈ ಡಾಕ್ಟರಿಗೆ ಮಾತ್ರ ಆಫೀಸು ಇದಲ್ಲದೆ ಅಂಥಾ ದಿವಸಗಳಲ್ಲಿ ರೋಗಿಗಳೂ ಜಾಸ್ತಿ. ಕೆಲಸವೂ ಜಾಸ್ತಿ. ಯಾರೊಬ್ಬ ಮಹನೀಯನೂ ಈ ಡಿಪಾರ್ಟುಮೆಂಟಿನ ಕಷ್ಟ ಸುಖಗಳನ್ನು ವಿಚಾರಿಸದೆ ಇರುವದು ನೋಡಿದರೆ ಬಹಳ ವ್ಯಸನವಾಗುತ್ತದೆ. ಪ್ರತಿ ಒಬ್ಬನಿಗೂ ಡಾಕ್ಟರ ಸಹಾಯ ಪ್ರತಿ ನಿಮಿಷಕ್ಕೆ ಬೇಕಾದರೂ "ಉಪಾಧ್ಯಾಕ್ಷ ವೈದ್ಯಾಕ್ಷ" ಎಂಬ ನಮ್ಮ ಹಿರಿಯರ ಶಿಕ್ಷೆಕ್ಕೆ ಅನುಸಾರವಾಗಿಯೇ ನಡೆಯುತ್ತದೆ ಮೈಸೂರು ಜನರಲ್ ಆಸ್ಪತ್ರೆ, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಬೆಳಿಗ್ಗೆಯೇ ಹೊರತು ಮಧ್ಯಾಹ್ನಕ್ಕೆ ಹೊರರೋಗಿಗಳಿಗೆ ತೆರೆಯುವದೇ ಇಲ್ಲ. ಹೀಗಿರುತ್ತಾ ಇತರ ಡಿಸ್ಟ್ರಿಕ್ಟು ಆಸ್ಪತ್ರೆಗಳಲ್ಲಿಯೂ, ಡಿಸ್ಪೆನ್ಸರಿಗಳಲ್ಲಿಯೂ ಈ ರೀತಿ ನಡೆದರೆ ಪ್ರಜೆಗಳಿಗೆ ಏನು ತೊಂದರೆ? ಒಂದು ವೇಳೆ ಈಗಲೇ ಆಷ್ಟಕ್ಕೆ ಅವಕಾಶವಾಗದಿದ್ದರೂ ಜನರಲ್ ಹಾಲಿಡೇ ದಿವಸಗಳಲ್ಲಿಯಾದರೂ ಮಧ್ಯಾಹ್ನ ರಜಾ ಕೊಡುವದಕ್ಕೆ ಏನೂ ಅಡ್ಡಿ ತೋರುವದಿಲ್ಲ. ಈ ಕಾನೂನು ಬೊಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸುತ್ತಾ ಇದಾರೆ. ಬಹುಶಃ ಮಂಜೂರಾಗುತ್ತದೆ. ನಮ್ಮ ಘನ ಸರ್ಕಾರದವರೂ ಇದನ್ನು ಚಿತ್ತಕ್ಕೆ ತಂದು ಮೆಡಿಕಲ್ ಡಿಪಾರ್ಟುಮೆಂಟಿನ ಕಷ್ಟವನ್ನು ನಿವಾರಣೆ ಮಾಡಬೇಕಾಗಿ ಪ್ರಾರ್ಥನೆ.

ಎಚ್. ಜಿ. ಬಿ

ಬವರಿಂಗ್‌ಪೇಟೆ ಬಾತ್ಮಿ ಪ್ರತ್ಯಕ್ಷದರ್ಶಿ, ಮೈಸೂರು:—ನಿಮ್ಮಗಳ ಹೆಸರು ವಿಳಾಸಗಳನ್ನು ತಿಳಿಸಿಲ್ಲ.

ಡಿ. ರಾಂತಮುಬ್ಬಿಗೌಡರು, ದೋಣೆಗಾಲ್.—ನಿಮ್ಮ ಬಾತ್ಮಿ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ

ಕೃಷ್ಣಪ್ಪ, ಮಾದನಹಳ್ಳಿ:—ನಿಮ್ಮ ಕಷ್ಟ ನಷ್ಟಗಳನ್ನು ಅಮಲ್ದಾರರಿಗೂ, ಪೋಲೀಸ್ ಇನ್‌ಸ್ಪೆಕ್ಟರಿಗೂ ತಿಳಿಸಿದರೆ ಅವರು ತನಿಖೆಮಾಡಿ ಸಂಪಡಿಸುತ್ತಾರೆ.

ಯಗಟಿ ದೇವನಕೋಟೆ ಆಸ್ಪತ್ರೆಯು ಕಾರುಬಾರುಗಳ ವಿಷಯವಾಗಿ ಮತ್ತೆ ಆಕ್ಷೇಪಣೆಯುಳ್ಳ ಬಾತ್ಮಿ ನಮಗೆ ತಲುಪಿದೆ ಇದೇ ವಿಚಾರವನ್ನು ಕುರಿತು ಸಿವಿಲ್ ಸರ್ಜನ್‌ರು ಅಲ್ಲಿಗೆ ಹೋಗಿ ತನಿಖೆಮಾಡಿದಾಗ ಪ್ರಜೆಗಳ ಮುಖಂಡರು ತಮ್ಮ ಇಂಗಿತವನ್ನು ಅರಿಕೆಮಾಡಬಹುದಾಗಿತ್ತು. ಈ ಬಾತ್ಮಿಯನ್ನು ನಾವು ಪ್ರಕಟಿಸಲಾರೆವು. ಬಾತ್ಮಿದಾರರು ಸಿವಿಲ್ ಸರ್ಜನ್‌ರಿಗೂ, ಸೀನಿಯರ್ ಸರ್ಜನ್‌ರಿಗೂ ಬರೆದುಕೊಳ್ಳಬಹುದು. —ಎಡಿ.]

ತಾಲ್ಲೂಕು ವರ್ತಮಾನಗಳು.

ನೆಲಮಂಗಲ.—ನೆಲಮಂಗಲದ ತಾ|| ಕೊಪ್ಪದ ಬೇಗೂರು ಕನ್ನಡ ಬಾಯ್ಸ್ ಸ್ಕೂಲಿನಿಂದ ಈ ವರ್ಷ 8 ಮಂದಿ ಕನ್ನಡ ಲೋ. ಸೆ ಪರೀಕ್ಷೆಗೆ ಹೋಗಿದ್ದವರ ಪೈಕಿ 7 ಮಂದಿ ಉತ್ತೀರ್ಣರಾಗಿರುವದು ಬಹಳ ಸ್ತೋತ್ರಾರ್ಹವಾಗಿರುತ್ತದೆ. ಈಗ ನಮ್ಮ ಸರ್ಕಾರದವರು ಒಂದು ಗರ್ಲ್ಸ್ ಸ್ಕೂಲನ್ನು ಪ್ರತ್ಯೇಕವಾಗಿ ಈ ಊರಿನಲ್ಲಿ ಸ್ಥಾಪಿಸಿರುತ್ತಾರೆ.—ಇದೇ ಮಾಹೆ 11 ನೇ ತಾ ಶುಕ್ರವಾರ ಸಾಯಂಕಾಲ 4 ಗಂಟೆ ಲಾಗಾಯಿತು 5|| ತನಕ ಬಿರುಗಾಳಿ, ಗುಡುಗು, ಮಿಂಚು, ಆನೆಕಲ್ಲು ಮತ್ತು ಸಿಡಿಲುಗಳಿಂದ ಕೂಡಿದ ಅತಿಶಯವಾದ ಮಳೆಯು ಬಿದ್ದು ಕೆರೆ ಕುಂಟೆಗಳಿಗೆ ಅರ್ಧಪಾಲು ನೀರು ಬಂದಿರುವುದರಿಂದ ನೀರಿನ ಶ್ರಮವು ತಪ್ಪಿ, ಎಲ್ಲರಿಗೂ ಸಂತೋಷವಾಗಿರುತ್ತದೆ.

ಗುಬ್ಬಿ.—ಗುಬ್ಬಿ ತಾಲ್ಲೂಕು ಸಂಪಿಗೆ ಗ್ರಾಮದಲ್ಲಿ ಕಳೆದ 26 ನೇ ತಾ. ರಥೋತ್ಸವವಾಯಿತು ಈ ರಥೋತ್ಸವಕ್ಕೆ ಸಾವಿರ ಪ್ರಜೆಗಳವರೆಗೂ ಸೇರಿದ್ದರು. ಗ್ರಾಮವೇನೋ ದೊಡ್ಡದು. ರಥೋತ್ಸವಕ್ಕೆ ಬಂದಿದ್ದ ಜನಗಳು ಕುಡಿಯುವುದಕ್ಕೂ ಸ್ನಾನಕ್ಕೂ ನೀರಿಲ್ಲದೆ ಬಹಳ ಕಷ್ಟಪಡುತ್ತಿದ್ದರು. ಇದೇ ಸಮಯದಲ್ಲಿ ಗುಬ್ಬಿ ತಾಲ್ಲೂಕು ಅಮಲ್ದಾರರು ಮ|| ಎಸ್. ಸುಬ್ಬರಾಯರು ಎಕನಾಮಿಕ್ ಕಾನ್ಫರೆನ್ಸ್ ಮೆಂಬರು ಮ|| ಕೆ. ರಾಮಾನುಜಯ್ಯಂಗಾರ್ರನ್ನು ಜೊತೆಯಲ್ಲಿ ಕರೆದುಕೊಂಡು ಸಂಪಿಗೆ ಗ್ರಾಮಕ್ಕೆ ದಯಮಾಡಿಸಿದ್ದರು. ಜನಗಳು ನೀರಿಗಾಗಿ ಕಷ್ಟಪಡುವುದನ್ನು ನೋಡಿ ಸತ್ಯಪ್ರಭುಗಳಾಗಿಯೂ ಪ್ರಜೆಗಳಲ್ಲಿ ದಯಾಪರವುಳ್ಳವರಾಗಿಯೂ ಇರುವ ಅಮಲ್ದಾರ್ರು ಆ ಗ್ರಾಮದ ಜನಗಳನ್ನು ಸೇರಿಸಿ ಅವರಿಗೆ ಉಪನ್ಯಾಸ ಮಾಡಿ ಭಾವಿ ಕಟ್ಟಿಸುವದಕ್ಕೋಸ್ಕರ ಆ ಕೂಡ್ಲೆ 200 ರೂಪಾಯಿ ಚಂದಾ ವಸೂಲ್ ಮಾಡಿದರು. ಇದರ ಜೊತೆಗೆ ಗೌರ್ನಮೆಂಟಿನಿಂದ 200 ರೂಪಾಯಿ ಕೊಟ್ಟು ಒಂದು ಭಾವಿಯನ್ನು ಮಾಡಿಸುವದಕ್ಕೆ ಏರ್ಪಾಡು ಮಾಡಿದಾರೆ ನಮ್ಮ ಅಮಲ್ದಾರ್ರು ಗ್ರಾಮಾಂತರಗಳಲ್ಲಿ ಸಂಚಾರ ಮಾಡುತ್ತಾ ಜನಗಳಿಗೆ ಒಳ್ಳೇ ಬೋಧೆಯನ್ನು ಮಾಡುತ್ತಾ ಇದಾರೆ ಇವರೇ ದೀರ್ಘಕಾಲ ಈ ತಾಲ್ಲೂಕಿನಲ್ಲಿದ್ದರೆ ಈ ತಾಲ್ಲೂಕು ಅಭಿವೃದ್ಧಿಸ್ಥಿತಿಗೆ ಬರುವುದರಲ್ಲಿ ಏನೂ ಸಂಶಯವಿಲ್ಲ.

ತರೀಕೆರೆ.—ಒಳ್ಳೇಹದ ಮಳೆಯಾಗಿ ರೈತರು ಜಮೀನುಗಳನ್ನು ಹದನು ಮಾಡುತ್ತಾ ಇದಾರೆ. ಹಲವು ವೇಳೆ ಬಿಸಿಲಿನ ತಾಪವೂ, ಸೆಕೆಯೂ ಸಹಿಸಲಾಗದು.—ಕಳೆದ ವಾರ ಉತ್ತರಾದಿ ಮಠದ ಶ್ರೀ ಸ್ವಾಮಿಗಳು ಇಲ್ಲಿಗೆ ಸಕಲ ಬಿರುದುಗಳೊಡನೆ ದಯಮಾಡೀಲು, ಇಲ್ಲಿನ ಶಿಷ್ಯರು ಸನ್ಮಾನದಿಂದ ಅವರನ್ನು ಸತ್ಕರಿಸಿದರು ಸ್ವಾಮಿಯವರು ಬೆಂಕಿಪುರದ ಕಡೆ ಚಿತ್ತೈಸೋಣವಾಯಿತು.—ಇಲ್ಲಿನ ಸಂತೆಯಲ್ಲಿ ನಡೆಯುತ್ತಿದ್ದ ಜೂಜಿನ ದಾಂಧಲೆ ಬಹಳ ಮಟ್ಟಿಗೆ ನಿಂತು ಹೋದಂತೆ ತೋರುತ್ತೆ. ಈ ಊರಿನ ಹೆಂಡದ ವಠಾರದ ಹಿಂಭಾಗದಲ್ಲಿ ಇಪ್ಪತ್ತು ಮೂವತ್ತು ಜನಗಳವರಿಗೂ ಗುಂಪು ಸೇರಿ, ಹೆಡ್ ಎಂಬ ಕಾಸಿಗೆ ಕನ್ನು ಚಿಮ್ಮುವ ಆಟವನ್ನು ಆಡುತ್ತಾ, ಒಬ್ಬೊಬ್ಬರು ದಿನಕ್ಕೆ 10-20 ರೂಪಾಯಿ ನಷ್ಟಮಾಡಿಕೊಳ್ಳುತ್ತಿರುವದಾಗಿಯೂ, ಇದನ್ನು ಪೋಲೀಸಿನವರು ಕಂಡರೂ ಕಾಣದವರಂತೆ ಇದಾರೆಂತಲೂ ತಿಳಿದುಬರುತ್ತೆ. ಈ ಆಟದಿಂದ ಅನೇಕ ಕುಟುಂಬದವರು ತಮ್ಮ ಸಂಪಾದನೆಯನ್ನು ಹೋಗಲಾಡಿಸಿಕೊಂಡು ಕಷ್ಟ ನಷ್ಟಗಳಿಗೆ ಗುರಿಯಾಗುತ್ತಿರುವದು ವ್ಯಸನವಾಗಿದೆ. ನಮ್ಮ ಅಮಲ್ದಾರ್ರು ಈ ವಿಚಾರಕ್ಕೆ ತಕ್ಕ ನಿಗಾ ಕೊಟ್ಟು ಬಂದೋಬಸ್ತು ಮಾಡಿಸುವರಾಗಿ ನಿರೀಕ್ಷಿಸುತ್ತೇನೆ.—ಎರಡು ವಾರಗಳ ಹಿಂದೆ ಇಲ್ಲಿಗೆ 5 ಮೈಲಿ ದೂರ ಗ್ರಾಮವಾದ ಬೀಲೇನಹಳ್ಳಿಯಲ್ಲಿ ಇಲಿಗಳು ಸತ್ತು ತಾ. 6 ರಲ್ಲಿ ಮೂರು ಪ್ಲೇಗ್ ಕೇಸುಗಳು ಕಾಣಿಸಿಕೊಂಡವು. ಈ ಪೈಕಿ ಎರಡು ಮರಣಗಳು; ಮತ್ತೊಂದು ಹೊಸ ಕೇಸಾಗಿರುವದಾಗಿ ತಿಳಿದುಬರುತ್ತೆ. ನಮ್ಮ ಡೆಪುಟಿ ಕಮೀಷನರವರ ಸವಾರಿ ಚಿತ್ತೈಸಿರುತ್ತೆ. ಕೌನ್ಸಿಲರವರ ಸವಾರಿ ಬರುವದಾಗಿ ಗೊತ್ತಾಗುತ್ತೆ.

ಬೇಲೂರು.—ಈ ತಾಲ್ಲೂಕು ಅಮಲ್ದಾರ್ರಾದ ಮ|| ಕೆ. ಲಿಂಗೋಪಂತ್ ಬಾದಾಮಿಯವರು 6 ವಾರಗಳ ರಜಾ ಪಡೆದು ಹೋಗಿರುವುದರಿಂದ ಆಲೂರ್ ಸಬ್ ತಾಲ್ಲೂಕ್ ಡೆಪ್ಟಿ ಅಮಲ್ದಾರ್ ಮ|| ನಾರಣಯ್ಯರವರು ದಯಮಾಡಿಸಿ ಛಾರ್ಜು ವಹಿಸಿರುತ್ತಾರೆ.—ಈ ಮಾಹೆ 7 ನೇ ತಾ. ಸೋಮವಾರ ನಮ್ಮ ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರ್ ಮ|| ನಾರಣಯ್ಯಂಗಾರ್ರವರು ದಯಮಾಡಿಸಿ ಇಲ್ಲಿನ ಸಂಘವನ್ನು ಇನ್‌ಸ್ಪೆಕ್ಟ್ ಮಾಡಿ ಸಾಯಂಕಾಲ ಕಾರೊನೇಷನ್ ಹಾಲ್‌ನಲ್ಲಿ ಜನರಲ್ ಮೀಟಿಂಗ್ ನಡಿಸಿ ಮಾರು ದಿನ ಹಾಸನದ ಪ್ರಾಂತ್ಯ ದಯಮಾಡಿದರು.—ಈ ಊರು ಪೇಟೆಯಲ್ಲಿ ಹಾಲಿ ಪೋಸ್ಟ್ ಆಫೀಸು ಇಟ್ಟಿರುವ ಪ್ರದೇಶವು ಇದರ ಎಡ ಭಾಗದಲ್ಲಿ ಸರಾಬ್ ದುಕಾನೂ, ಬಲ ಭಾಗದಲ್ಲಿ ಸಾರಾಯಿ ದುಕಾನೂ ಇರುವುದಲ್ಲದೆ ಸದಾ ಕಾಲಗಳಲ್ಲಿಯೂ ಈ ಗಿರಾಕಿಗಳ ಗುಂಪು ಇದ್ದೇ ಇರುವುದು. ಮತ್ತು ಇವರ ಮಧ್ಯೆ ಪೋಸ್ಟ್ ಆಫೀಸಿಗೆ ಹೋಗಿ ಬರತಕ್ಕ ಸಭ್ಯ ಪ್ರಜೆಗಳಿಗೆ ತುಂಬಾ ಜುಗುಪ್ಸೆಯೂ, ಅವಮಾನವೂ ಉಂಟಾಗುತ್ತೆ, ಹೆಂಗಸರಿಗೆ ಹೋಗಿಬರಲು ತುಂಬಾ ಅಡಚಣೆಯಾಗಿದೆ ಇದೂ ಅಲ್ಲದೆ ಪೋಸ್ಟ್ ಆಫೀಸು ಎಲ್ಲಾ ವಿಷಯಗಳಲ್ಲೂ ಹೆಚ್ಚಾದ ಜವಾಬ್ದಾರಿಯನ್ನು ಹೊಂದಿರುವಾಗ ಇಂಥಾ ಪ್ರದೇಶದಲ್ಲಿ ಈ ದುಕಾನುಗಳನ್ನಿಟ್ಟಿರುವುದರಿಂದ ಸಂದರ್ಭಾನುಸಾರ ಹೆಚ್ಚಾದ ತೊಂದರೆಗೆ ಅವಕಾಶವಾಗುವದರಲ್ಲೂ ಸಂದೇಹವಿಲ್ಲ ಈ ವಿಷಯವನ್ನು ನಮ್ಮ ಪೋಸ್ಟ್ ಇಲಾಖಾ ಆಫೀಸರುಗಳು ಮುಖ್ಯವಾಗಿ ತಮ್ಮ ಗಮನಕ್ಕೆ ತಂದುಕೊಂಡು ಇದನ್ನು ಅನುಕೂಲವಾದ ಕಡೆಗೆ ವರ್ಗಾಯಿಸುವರೆಂದು ಕೋರುತ್ತೇನೆ.

ಶಿವಮೊಗ್ಗ.—ಈ ಪ್ರಾಂತ್ಯ ಮಳೆಯು ಆಗಾಗ್ಗೆ ಬರುತ್ತಿರುವುದರಿಂದ ರೈತರ ಬಿತ್ತನೆಯು ಕೆಲಸ ವಗೈರೆ ಪೂರೈಸಲು ಅನುಕೂಲವಾಗಿದೆ.—ಶಿವಮೊಗ್ಗಾ ತಾಲ್ಲೂಕು ಹೊಳೆಹೊನ್ನೂರಿನಲ್ಲಿ ಸಾರಾಯಿದ ಪಾಪಯ್ಯ ಎಂಬುವನನ್ನು ಅವನ ಮನೆಯಲ್ಲಿ ಕೊಂದು ನೇತುಹಾಕಿದ್ದರೆಂಬ ಖೂನಿ ಮೊಕದಮೆ ವಿಷಯದಲ್ಲಿ ಕುರುಬರ ಮಾದ ವಗೈರೆಯನ್ನು ದಸ್ತಗಿರಿಮಾಡಿ ಚಾರ್ಜ್ ಮೇಲೆ ಬಿಟ್ಟಿರುತ್ತಾರೆ. ಒಬ್ಬ ಮಹಮ್ಮದೀಯನು ಕೊತ್ವಾಲ್ ಕಟ್ಟೆಯ ಎದುರಿನ ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ಹಳ್ಳಿ ಹೆಂಗಸಿನ ಮೇಲೆ ಸೈಕಲ್ ನುಗ್ಗಿಸಿದ್ದರಿಂದ ಅವಳು ಬಿದ್ದು ಕಾಲಿಗೆ ಸ್ವಲ್ಪ ಪೆಟ್ಟಾಯಿತು.—ಹವಾ ಆರೋಗ್ಯಕರವಾಗಿದೆ ಈ ವರುಷ ಮಾವಿನ ಫಸಲು ಜಾಸ್ತಿಯಾದದ್ದರಿಂದ ಕಸಿಹಣ್ಣು ಸುಲಭ ಕ್ರಯಕ್ಕೆ ದೊರೆಯುತ್ತದೆ ಊರಲ್ಲಿ ಕೆಮ್ಮುಜ್ವರವೂ ಇದೆ. ಊರಲ್ಲಿ ಕೆಣ್ಣುಬೇನೆ—ಮಿ|| ಜಹರುದೀನ್‌ಮೆಳ್ಳಿಯವರಿಗೆ ಟೌನ್ ಹಾಲಿನಲ್ಲಿ ನೌಕರರು ಸೇರಿ ಟೀಪಾರ್ಟಿ ಮಾಡಿ ಹಾರ ತಾಂಬೂಲಾದಿಗಳನ್ನು ಕೊಟ್ಟರು.—ಮ|| ಸಿ ವೆಂಕಟರಾಯರು ಬಿಕಾಯಿಂ ಡೆಪ್ಟಿ ಕಮಿಷನರ್ ಮಿ|| ಮೆಥಾಲ್ ಸಾಹೇಬರವರಿಗೆ ಛಾರ್ಜು ಕೊಟ್ಟು ಬೆಂಗಳೂರಿಗೆ ಹೋದರು.—ಶ್ರೀ ಉತ್ತರಾದಿ ಸ್ವಾಮಿಗಳವರು ಬಂದದ್ದರಿಂದ ಊರಲ್ಲಿ ಅನೇಕ ಬ್ರಾಹ್ಮಣರ ಮನೆಗಳಲ್ಲಿ ಪಾದಪೂಜೆ ಮುದ್ರಾಧಾರಣೆ ಮುಂತಾದದ್ದನ್ನು ಮಾಡಿದರು. ಇವರು ಇನ್ನು 4-5 ದಿವಸ ಇರುತ್ತಾರೆಂದು ಹೇಳುತ್ತಾರೆ.—ಅ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರವರು ಶಿಕಾರಿಪುರದ ಕಡೆ ಸರ್ಕೀಟು ಹೋಗಿದ್ದು ನೆನ್ನೆ ವಾಪಸು ಬರುವಾಗ ಕುದುರೆ ಸವಾರಿ ಮಾಡಿಕೊಂಡು ಬರುತ್ತಿದ್ದರು. ಕುದುರೆ ಅಕಸ್ಮಾತ್ತಾಗಿ ಬೆದರಿ ಕೆಳಗೆ ಬಿದ್ದರು. ಹಣೆಯ ಹತ್ತಿರ ಸ್ವಲ್ಪ ಗಾಯವಾಗಿದೆ. ಸಿವಿಲ್ ಸರ್ಜನ್ ರವರು ಚಿಕಿತ್ಸೆ ಮಾಡುತ್ತಾರೆ. ವಿಶೇಷ ಪೆಟ್ಟಾಗದೆ ಇದ್ದದ್ದಕ್ಕೆ ಸಂತೋಷಪಡುತ್ತೇವೆ

ಚಾಮರಾಜನಗರ.—ಚಾಮರಾಜನಗರದ ಎ.ವಿ ಸ್ಕೂಲಿನಿಂದ ಈ ವರ್ಷದ ಕನ್ನಡ ಲೋ. ಸೆ. ಪರೀಕ್ಷೆಗೆ 10 ಹುಡುಗರೂ ಇಂಗ್ಲೀಷ್ ಲೋ. ಸೆ. ಗೆ 6 ಹುಡುಗರೂ ಹೋಗಿದ್ದರು. ಇವರ ಪೈಕಿ ಕನ್ನಡದಲ್ಲಿ ಒಂಭತ್ತು ಹುಡುಗರು ತೇರ್ಗಡೆ ಹೊಂದಿರುವದಲ್ಲದೆ 3 ಮಂದಿ 1 ನೇ ತರಗತಿಯಲ್ಲಿ ಬಂದಿರುತ್ತಾರೆ. ಇಂಗ್ಲೀಷ್ ಲೋ. ಸೆ. ಪರೀಕ್ಷೆಯಲ್ಲಿ 6 ಕ್ಕೆ 5 ಹುಡುಗರು ತೇರ್ಗಡೆಯಾಗಿರುವರು. ಇಷ್ಟು ಚೆನ್ನಾಗಿ ತೇರ್ಗಡೆಯಾಗಿರುವುದಕ್ಕೆ ಈ ಸ್ಕೂಲಿನಲ್ಲಿ ಸರಿಯಾದ ಉಪಾಧ್ಯಾಯರುಗಳಿರುವುದೂ, ಎಲ್ಲರೂ ಸೋದರಭಾವದಿಂದ ಕೆಲಸಮಾಡುತ್ತಿರುವುದೂ ಕಾರಣವಾಗಿರುತ್ತೆ.—ಹಾಲಿ ಈ ಊರಿನಲ್ಲಿ ಬಂದಿರುವ ಡಾಕ್ಟರು ಪಾಪಯ್ಯನಾಯ್ಡು ಯವರು ಜನಗಳ ವಿಶ್ವಾಸಕ್ಕೆ ಪಾತ್ರರಾಗಿ ಬಂದ ರೋಗಿಗಳಿಗೆ ಪ್ರೀತಿಯಿಂದ ಔಷಧಿಯನ್ನು ಕೊಡುವುದಲ್ಲದೆ ಯಾವ ವೇಳೆಯಲ್ಲಾದರೂ ಯಾರು ಅಪೇಕ್ಷಿಸಿದರೂ ದುಡ್ಡಿನ ಮೇಲಿನ ಆಸೆ ಇಲ್ಲದೆ ಮನೆಗೆ ಬಂದು ಸಹಾಯ ಮಾಡುತ್ತಾ ಇರುವುದು ಬಹಳ ಸ್ತೋತ್ರಾರ್ಹವಾಗಿದೆ.—ಕಾಲ ಸ್ಥಿತಿಯು ಬಹಳ ಕೆಟ್ಟುಹೋಗಿತ್ತು. ಈಚೆಗೆ 10-12 ದಿನಗಳಿಂದ 5-6 ಹದ ಮಳೆ ಚೆನ್ನಾಗಿ ಆದುದರಿಂದ ಪೈರುಗಳಿಗೆಲ್ಲಾ ಅನುಕೂಲವಾಗಿ ರೈತರು ಸಂತೋಷಚಿತ್ತರಾಗಿರುವರು. ಕೆರೆ ಕಟ್ಟೆಗಳಿಗೆಲ್ಲಾ ನೀರು ಸಮೃದ್ಧಿಯಾಗಿ ಬಂದಿರುವುದು.—ಈ ಮಾಹೆ ತಾ. 17 ಕ್ಕೆ ಪ್ರಾರಂಭವಾಗಿ ನಡೆಯಬೇಕಾಗಿರುವ ದನಗಳ ಪ್ರದರ್ಶನ ಮತ್ತು ಕೈಗಾರಿಕೆ, ವಿದ್ಯಾಭ್ಯಾಸ, ವ್ಯವಸಾಯ ಸಂಬಂಧವಾದ ಪ್ರದರ್ಶನದ ಕೆಲಸ ಕಾರ್ಯಗಳು ನಮ್ಮ ಜನಾನುರಾಗಿಗಳಾದ ಅಮಲ್ದಾರ್ ಮ|| ಕೆ. ಕೇಶವಾಚಾರ್ಯರವರ ಮುತುವರ್ಜಿಯಿಂದ ಸಮರ್ಪಕವಾಗಿ ನಡೆಯುತ್ತಲಿವೆ. ಇದನ್ನು ನೋಡುವುದಕ್ಕೆ ಹೊರಗಿನಿಂದ ಬಹು ಜನಗಳು ಬರಬಹುದಾಗಿ ನಿರೀಕ್ಷಿಸಲ್ಪಟ್ಟಿದೆ.—ಕನ್‌ಸರ್ವೇಟರ್ ಮ|| ಎಂ. ಜಿ ರಾಮರಾಯರು 11 ನೇ ತಾ. ಗುಂಡ್ಲುಪೇಟೆ ಕಡೆಯಿಂದ ಈ ಊರಿಗೆ ದಯಮಾಡಿ ಈ ರೇಂಜ್ ಇನ್‌ಸ್ಪೆಕ್ಟ್ ಮಾಡಿಕೊಂಡು ಇಲ್ಲಿನ ರೇಂಜ್ ಆಫೀಸರ್ ಮ|| ವಿಶ್ವೇಶ್ವರಯ್ಯನವರ ಕೆಲಸ ಕಾರ್ಯಗಳ ವಿಚಾರದಲ್ಲಿ ಬಹಳ ತೃಪ್ತಿಪಟ್ಟು ಇರುವುದಾಗಿ ತಿಳಿಯಬರುತ್ತದೆ.

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಹಾಸುಬಾಲಿಲ್ ಡಕಾಯಿತಿ ಮೊಕದ್ದಮೆಯಲ್ಲಿ ಸ್ಪೆಷಲ್ ಕೋರ್ಟಿನ ಜಡ್ಜರು ಒಂಭತ್ತು ಮಂದಿ ಅಪರಾಧಿಗಳಿಗೆ ತಲಾ ಏಳು ವರುಷ ಕಠಿಣ ಸಜಾ ವಿಧಿಸಿ, ಉಳಿದ 37 ಮಂದಿಯನ್ನು ಖುಲಾಸ್ ಮಾಡಿರುತ್ತಾರೆ.

∴

ಕೈಸರಿಹಿಂದ್ ಎಂಬ ಹಡಗಿನಲ್ಲಿ ದೇವಘಡಬೇರಿಯ ಮಹಾರಾಜರವರು ಈ ತಾ. 22 ರಲ್ಲಿ ಲಂಡನ್ ಪಟ್ಟಣದಿಂದ ಹೊರಟು ಕಳೆದ ಶುಕ್ರವಾರ ಬೊಂಬಾಯಿ ಪಟ್ಟಣವನ್ನು ತಲುಪಿದರು ಈ ಹಡಗಿನಲ್ಲಿ ಹನ್ನೆರಡು ಜನ ಜರ್ಮನಿಯವರನ್ನು ಕೈಸೆರೆ ಹಿಡಿದು ತಂದಿದಾರೆ.

ಉತ್ತರ ಆರ್ಕಾಟು ಜಿಲ್ಲೆಯಲ್ಲೆಲ್ಲಾ ಐಶ್ವರ್ಯವಂತನೆಂದೂ ಧರ್ಮಿಷ್ಠನೆಂದೂ ಹೆಸರು ಪಡೆದಿರುವ ಮ|| ಮುರುಗಪ್ಪಚೆಟ್ಟಿ ಎಂಬಾತನು ಕಡಲೂರಿನಲ್ಲಿರುವ ಇರುಮಲ್ಲಿ ಪುಲಿಯೂರ್ ದೇವಸ್ಥಾನದ ವಿಗ್ರಹಕ್ಕೆ ಸುಮಾರು ಒಂದು ಲಕ್ಷ ರೂಪಾಯಿನ ಕಂಠೀಸರವನ್ನು ಉಚಿತವಾಗಿ ಒಪ್ಪಿಸಿ ದೀಪಾರಾಧನೆ ಮೊದಲಾದದ್ದನ್ನು ಮಾಡಿಸಿದನು. ಆಗ್ಗೆ ಅನೇಕ ಸಹಸ್ರ ಜನರು ಇಲ್ಲಿ ಸೇರಿದ್ದರೆಂದು ಪ್ರಕಟವಾಗಿದೆ.

∴

ಕಳೆದ ಜೂನ್ ತಾ. 5 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 6,179 ಜನರಿಗೆ ಹೊಸದಾಗಿ ಪ್ಲೇಗ್ ತಗಲಿತು; ಈ ರೋಗದಲ್ಲಿ 6,275 ಮರಣಗಳಾಗಿರುತ್ತವೆ. ಇದರ ವಿವರ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 216, ಮದರಾಸ್ 1, ಬಂಗಾಳಾ 2, ಬೇಹಾರ್ ಮತ್ತು ಒರಿಸ್ಸಾ 32, ಸಂಯುಕ್ತ ಅಧಿಪತ್ಯಗಳು 88, ಪಂಜಾಬ್ 4,692, ಬರ್ಮಾ 121, ಮಧ್ಯ ಪ್ರಾಂತ್ಯಗಳು 3.

∴

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಾಕರ್‌ಗಂಜ್ ಡಿಸ್ಟ್ರಿಕ್ಟಿನಲ್ಲಿ ಕಳೆದ ಶುಕ್ರವಾರ ರಾತ್ರಿ ಹಲವು ಮಂದಿ ದರೋಡೆಕೋರರು ಗಾಜಿಪುರವೆಂಬ ಗ್ರಾಮಕ್ಕೆ ನುಗ್ಗಿ, ಗ್ಯಾಸ್ ದೀಪ ಪಿಸ್ತೂಲು ಮದ್ದು ಗುಂಡುಗಳ ಸಮೇತ ಒಂದು ಭಾರಿ ಅಂಗಡಿಯನ್ನು ಒಡೆದು ಒಳಕ್ಕೆ ನುಗ್ಗಿ ಸುಮಾರು 50 000 ರೂಪಾಯಿನ ನಗ ನಾಣ್ಯಗಳನ್ನು ಅಪಹರಿಸಿಕೊಂಡುಹೋದರೆಂದೂ, ಜನಗಳು ಸೇರಿ ಅವರನ್ನು ಹಿಡಿಯಲಾರದೆ ಸುಮ್ಮನೆ ನೋಡುತ್ತಿದ್ದರೆಂದೂ ಪ್ರಕಟವಾಗಿದೆ.

∴

ಕಾಶೀ ಪಟ್ಟಣದಲ್ಲಿ ಬ್ರಾಹ್ಮಣ ಸಮಾಜ ಸಂರಕ್ಷಣ ಸಭಾ ಎಂಬ ಸಭೆಯವರು ಕಳೆದ ಸೋಮವಾರ ಸಭೆ ಸೇರಿ ತರ್ಕ, ಉಪನಿಷತ್ತು, ವ್ಯಾಕರಣ, ಜ್ಯೋತಿಷ್ಯ, ಆಯುರ್ವೇದ, ಈ ಮೊದಲಾದ ಶಾಸ್ತ್ರಗಳಲ್ಲಿ ಬಹು ವಿಶೇಷವಾದ ಪರೀಕ್ಷೆಗಳನ್ನು ಇಟ್ಟು ನಡೀಬೇಕೆಂದೂ, ತೇರ್ಗಡೆಹೊಂದುವ ಪಂಡಿತರಿಗೆ ಬೆಳ್ಳಿ ಭಂಗಾರಗಳ ಬಹು ಬೆಲೆಯುಳ್ಳ ಪದಕಗಳನ್ನು ಬಹುಮಾನ ಕೊಡಬೇಕೆಂದೂ ತೀರ್ಮಾನ ಮಾಡಿದರು ಮಹಾರಾಜರುಗಳೂ, ಭಾರಿ ಜಮೀನ್‌ದಾರರೂ ಈ ಪದಕಗಳನ್ನೂ ವೇತನಗಳನ್ನೂ ಕೊಡುವಂತೆ ಒಪ್ಪಿಕೊಂಡಿದಾರೆ.

∴

ಯುದ್ಧಭೂಮಿಯಲ್ಲಿ ಗಾಯಪಟ್ಟವರನ್ನೂ ಕಾಯಿಲೆಬಿದ್ದವರನ್ನೂ ಉಪಚರಿಸಿ ಆಸ್ಪತ್ರೆಗೆ ಸಾಗಿಸುವುದಕ್ಕೆ ಮೋಟರ್ ಆಂಬ್ಯುಲೆನ್ಸ್ ಗಾಡಿಗಳನ್ನು ಒದಗಿಸುವುದಕ್ಕಾಗಿ ಶಕ್ತರಾದ ಐದು ಮಂದಿ ರಾಜರುಗಳು ಎರಡು ಲಕ್ಷ ರೂಪಾಯಿ ಒದಗಿಸಿದರು. ಈಚೆಗೆ ಈ ಫಂಡಿಗೆ ಯಾರ್ಯಾರು ಎಷ್ಟೆಷ್ಟು ಚಂದಾ ಕೊಟ್ಟಿದಾರೆಂದರೆ—ಇಂಡೋರ್ ಮಹಾರಾಜಾ ಹೋಲ್ಕರರು 20,000 ರೂಪಾಯಿ, ಸಿರೋಹಿ ಮಹಾರಾಜರು 10,000, ಭರತಪುರದ ಮಹಾರಾಜರು 5,000, ಪೂಂಚ್ ರಾಜರು 20,000, ದಾತಿಯಾ ಮಹಾರಾಜರು ಒಂದು ಮೋಟರ್ ಗಾಡಿ; ಹಿಂದುಸ್ಥಾನದಲ್ಲಿ ಸೆಂಟ್ ಜಾನ್ ಆಂಬ್ಯುಲೆನ್ಸ್ ಸಂಘದವರು ಇದು ವರೆಗೆ 7,50,000 ರೂಪಾಯಿನ ಸರಕುಗಳನ್ನು ಹಿಂದುಸ್ಥಾನದಲ್ಲಿ ಕೂಡಿಸಿ ಯುದ್ಧಭೂಮಿಯಲ್ಲಿರುವ ಆಸ್ಪತ್ರೆಗಳಿಗೆ ಕಳುಹಿಸಿಕೊಟ್ಟಿದಾರೆ.

∴

ಪಂಜಾಬ್ ಅಧಿಪತ್ಯದಲ್ಲಿ ಡಕಾಯಿತಿಗಳನ್ನು ನಡಿಸಿ ತಲೆತಪ್ಪಿಸಿಕೊಂಡಿರುವ 23 ಜನರನ್ನು ಪತ್ತೆ ಮಾಡಿದವರಿಗೆ 23,000 ರೂಪಾಯಿ ಬಹುಮಾನ ಕೊಡುತ್ತೇವೆಂದು ಪೋಲೀಸ್ ಇಲಾಖೆಯವರು ಪ್ರಕಟಮಾಡಿದಾರೆ. ಚಂದ್ರನಗರದ ರಾಷ್ ಬಿಹಾರಿ ಬೋಸ್ ಎಂಬವನನ್ನು ಹಿಡಿದುಕೊಡುವವರಿಗೆ 7,500 ರೂಪಾಯಿನ ಬಹುಮಾನ ದೊರಕುವುದು. ಝಾಂಗ್ ಮತ್ತು ಮುಜಫರ್‌ಘಡದಲ್ಲಿ ಡಕಾಯಿತಿಮಾಡಿದ ಆರು ಮಂದಿಯನ್ನು ಹಿಡಿದುಕೊಡುವವರಿಗೆ ತಲಾ 2,000 ರೂಪಾಯಿ ಸಿಕ್ಕುವುದು. ಮೊಹ್ರಾನಾಸಿಖಾಕ್ ಎಂಬುವನು ಜರ್ಮನಿ ಚಕ್ರವರ್ತಿಯೆಂದೂ, ಬಹವಲಖಾನ್ ಎಂಬವನು ಟರ್ಕಿ ಸುಲ್ತಾನನೆಂದೂ ಹೇಳುತ್ತಾ ಜನಗಳನ್ನು ಮೋಸಪಡಿಸಿ ತಲೆತಪ್ಪಿಸಿಕೊಂಡಿರುತ್ತಾರೆ. ಇವರನ್ನು ಪತ್ತೆ ಮಾಡಿಕೊಡುವವರಿಗೆ 2,000 ರೂಪಾಯಿ ಬಹುಮಾನಕೊಡುವಂತೆ ಇಷ್ತಿಹಾರು ಹಾಕಲಾಗಿದೆ.

∴

ಪಂಜಾಬ್ ಹಿಂದೂ ಸಭೆಯ ಕೆಲವು ಮುಖಂಡರು ಲೆಫ್ಟಿನೆಂಟ್ ಗವರ್ನರವರನ್ನು ಕಂಡು, ಪಂಜಾಬಿನಲ್ಲಿ ಹಿಂದೂ ಪ್ರಜೆಗಳ ನೆಮ್ಮದಿಗೆ ಭಂಗವುಂಟಾಗಿರುವುದನ್ನು ಪರಿಹರಿಸಿಕೊಡಬೇಕೆಂದು ಕೇಳಿಕೊಂಡದ್ದರ ಮೇಲೆ ಅವರು ಪ್ರತ್ಯುತ್ತರ ದಯಪಾಲಿಸಿದ್ದೇನೆಂದರೆ—ಮುಲ್ತಾನ್, ಮುಜಫರ್‌ಘಡ ಮತ್ತು ಝಾಂಗ್ ಡಿಸ್ಟ್ರಿಕ್ಟಿನಲ್ಲಿ ಅನೇಕ ಡಕಾಯಿತಿಗಳು ನಡೆದಿರುವುದು ನಿಜ ಇದುವರೆಗೆ ಸರ್ಕಾರದವರು 420 ಮಂದಿ ದುಷ್ಟರನ್ನು ಹಿಡಿದು ಪೂರಾ ಶಿಕ್ಷೆ ವಿಧಿಸಿರುತ್ತಾರೆ. ಆ ಮೂರು ಡಿಸ್ಟ್ರಿಕ್ಟುಗಳಲ್ಲೂ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸಲಾಗಿದೆ ದುಷ್ಟರೆಂದು ತಿಳಿದ ಪ್ರಜೆಗಳಿಂದ ಜಾಮೀನ್ ತೆಗೆದುಕೊಳ್ಳುತ್ತಲೂ, ಯೋಗ್ಯರೂ ಗೌರವಸ್ಥರೂ ಮುಖಂಡರೂ ಆದ ದೊಡ್ಡಮನುಷ್ಯರಿಗೆ ಆತ್ಮ ಸಂರಕ್ಷಣಾರ್ಥವಾಗಿ ಪಿಸ್ತೂಲುಗಳನ್ನಿಟ್ಟುಕೊಳ್ಳಲು ಹೆಚ್ಚಾಗಿ ಲೈಸೆನ್ಸುಗಳನ್ನು ಕೊಡಿಸುತ್ತಲೂ ಬಂದಿದೇವೆ. ಈ ದುಷ್ಟ ಕಾರ್ಯಗಳಿಗೆ ಪ್ರೋತ್ಸಾಹಪಡಿಸಿದವರನ್ನು ದೂರ ಪ್ರದೇಶಗಳಿಗೆ ಕಳುಹಿಸಿರುವೆವು. ಸ್ಥಳೀಯ ಅಧಿಕಾರಿಗಳ ಲೋಪ ದೋಷಗಳನ್ನು ತನಿಖೆ ಮಾಡಿಸಿ ಅಂಥವರಿಗೆ ತಕ್ಕ ಹಾಗೆ ಶಿಕ್ಷೆ ಮಾಡುತ್ತೇವೆ. ತಪ್ಪಿಸಿಕೊಂಡುಹೋಗಿರುವವರನ್ನು ಹಿಡಿದುಕೊಡುವವರಿಗೆ ಧಾರಾಳವಾದ ಬಹುಮಾನಗಳು ಸಿಕ್ಕುವವೆಂದು ಪ್ರಕಟಿಸಿದೇವೆ. ನೆಮ್ಮದಿಗೆ ಭಂಗವುಂಟಾಗಿರುವ ಗ್ರಾಮ ಊರುಗಳಿಗೆ ಶಿಕ್ಷಾರ್ಥವಾದ ಪೋಲೀಸನ್ನು ನೇಮಿಸಬೇಕೆಂದು ಚರ್ಚೆ ನಡೆಯುತ್ತಿದೆ. ಆದಕಾರಣ ಇನ್ನು ಮುಂದೆ ಪ್ರಜಾ ನೆಮ್ಮದಿಗೆ ಭಂಗವುಂಟಾದೀತೆಂಬುವುದು ತುಂಬಾ ಅಸಂಭವವಾದೀತೆಂಬ ನಿರೀಕ್ಷೆಯುಂಟು.

∴

ಜಪಾನ್‌ನವರು ಈಗಿನ ಯುದ್ಧ ಪ್ರಾರಂಭವಾದ ಈಚೆಗೆ ತಮ್ಮ ಕಾರ್ಖಾನೆಗಳಲ್ಲಿ ತಯಾರಾಗುವ ಸರಕುಗಳನ್ನು ಬಹಳ ಹೆಚ್ಚಾಗಿ ಹಿಂದುಸ್ಥಾನಕ್ಕೆ ತಂದು ಬಿಕರಿಮಾಡಿ ಲಾಭ ಸಂಪಾದನೆಮಾಡುತ್ತಿದಾರೆ. ಜರ್ಮನಿ ಆಸ್ಟ್ರಿಯಾ ಮೊದಲಾದ ಯೂರೋಪಿಯನ್ ರಾಜ್ಯಗಳಿಂದ ಬಂದು ಬಹಳ ಸುಲಭ ಕ್ರಯಕ್ಕೆ ನಮ್ಮ ರಾಷ್ಟ್ರದಲ್ಲಿ ಬಿಕರಿಯಾಗುತ್ತಿದ್ದಂಥಾ ಮಾಲುಗಳನ್ನೆಲ್ಲಾ ಈಗ ಜಪಾನ್‌ನವರು ತಂದು ಒದಗಿಸುತ್ತಿದಾರೆ. ಹೀಗೆ ಜಪಾನ್‌ನಿಂದ ದೀಪದಕಡ್ಡಿ, ಗಾಜಿನ ಸಾಮಾನು, ಹೆಣೆದ ಕೈ ಕಾಲು ಚೀಲಗಳು ಮುಂತಾದವು, ರೇಷ್ಮೆ ಸಣಗು, ಚೀಣಾ ಜವಳಿಯೇ ಮುಂತಾದವು ವಿಶೇಷವಾಗಿ ಹಿಂದುಸ್ಥಾನಕ್ಕೆ ಬರುತ್ತಲಿವೆ. ಪ್ರಪಂಚದ ಎಲ್ಲಾ ಕಡೆಗಳಿಂದಲೂ ಕಳೆದ ಏಪ್ರಿಲ್ ತಿಂಗಳಲ್ಲಿ 15,33,336 ರೂಪಾಯಿನ ದೀಪದಕಡ್ಡಿಗಳು ಬಂದದ್ದರಲ್ಲಿ ಮುಕ್ಕಾಲು ಭಾಗ ಅಂದರೆ 9,94,472 ರೂಪಾಯಿನದು ಜಪಾನ್‌ನಿಂದ ಬಂದದ್ದಾಗಿದೆ ಗಾಜಿನ ಸಾಮಾನು ಒಟ್ಟು 6,04,631 ರೂಪಾಯಿನದು ಹಿಂದುಸ್ಥಾನಕ್ಕೆ ಬಂತು; ಇದರಲ್ಲಿ ಜಪಾನ್‌ನವರದು 3,24,817 ರೂಪಾಯಿನದಾಗಿದೆ ಬಟ್ಟೆ (ಹೆಣೆದ) ಬರೆಗಳು 2,11,662 ರೂಪಾಯಿನಷ್ಟು ಹಿಂದುಸ್ಥಾನಕ್ಕೆ ಬಂದಿರುವುದರಲ್ಲಿ ಜಪಾನ್‌ನವರು ಕಳುಹಿಸಿರುವುದು 1,43,777 ರೂಪಾಯಿನಷ್ಟಾಗಿರುತ್ತದೆ. ಆದಕಾರಣ ಹಿಂದುಸ್ಥಾನದವರು ಈ ಯುದ್ಧದಿಂದ ಪ್ರಯೋಜನ ಹೊಂದಲಾರದೆ ಜಪಾನ್‌ನವರಿಗೆ ವಿಶೇಷ ಲಾಭವಾಗುವಂತೆ ಮಾಡಿರುತ್ತಾರೆಂದು ಉತ್ತರ ದೇಶದ ಪತ್ರಿಕೆಯು ತಿಳಿಸುವುದು.

ಒಳದೇಶದ ವೃತ್ತಾಂತಗಳು.

ವಿದ್ಯುಚ್ಛಕ್ತಿಯ ದೀಪಗಳು ಕಳೆದ ಸುಮಾರು ಎರಡು ವಾರಗಳಿಂದ ರಾಜಧಾನಿಯಲ್ಲೂ ಬೆಂಗಳೂರು ಸಿಟಿ, ದಂಡು ಮತ್ತು ಕೋಲಾರದ ಚಿನ್ನದಗಣಿಗಳಲ್ಲೂ ಹತ್ತದೆ ರಾತ್ರಿಹೊತ್ತು ಪ್ರಜೆಗಳಿಗೆ ತುಂಬಾ ಅನನುಕೂಲವೂ ಜುಗುಪ್ಸೆಯೂ ಉಂಟಾಯಿತಷ್ಟೆ. ಇದಕ್ಕೆ ನಮ್ಮ ಸರ್ಕಾರದವರು ಗುಡುಗು ಮಿಂಚು ಸಿಡಿಲು ಬರುವಾಗ ಬಂದದ್ದರಿಂದ ಅನನುಕೂಲವಾಯಿತೆಂದು ಸಮಾಧಾನವನ್ನು ಪ್ರಕಟಿಸಿದ್ದಾರೆ. ಆದರೆ ಈ ವಿದ್ಯುಚ್ಛಕ್ತಿ ಇಲಾಖೆಯ ಕಾರುಬಾರುಗಳೂ ಅದರ ಮೇಲ್ವಿಚಾರಣೆಯೂ ತೃಪ್ತಿಕರವಾಗಿಲ್ಲದಿರೋಣದರಿಂದ ಆಕ್ಷೇಪಣೆ ಹೆಚ್ಚಾಗುವುದಕ್ಕೆ ಅವಕಾಶವಾಗಿದೆಯೆಂದೂ, ದಿವಾನ್‌ರವರು ಕನಿಕರ ಮಾಡಿ ಕ್ರಮಪಡಿಸಬೇಕೆಂದೂ ಮದರಾಸ್ ಪತ್ರಿಕೆಯು ಬರೆಯುತ್ತದೆ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಗಳ ನಿಮಿತ್ತ ಸಂಸ್ಥಾನದ ಅಧಿಕಾರಿಗಳು ಈ ವಾರ ರಾಜಧಾನಿಗೆ ಬರುವವರಾಗಿದ್ದಾರೆ. ಅವರುಗಳ ವಾಸಕ್ಕೂ ಭೋಜನಾದಿಗಳಿಗೂ ಮ॥ ಬಿ. ನಾರಾಯಣ ಸ್ವಾಮಯ್ಯಂಗಾರ್ರು ತಕ್ಕ ಸೌಕರ್ಯಗಳನ್ನು ಒದಗಿಸುತ್ತಿರುವರು. ಯೂರೋಪ್ಯಿಯನ್ ಅತಿಥಿಗಳು ಹೊರಗಿನಿಂದ ಯಾರೂ ಕರೆಸಲ್ಪಡುವುದಿಲ್ಲ. ಅರಮನೆಯಲ್ಲಿ ಪದ್ಧತಿಯ ಪ್ರಕಾರ ಐದು ದಿನ ದರ್ಬಾರುಗಳೂ, ತಾ. 23 ನೇ ಬುಧವಾರ ಶ್ರೀಮನ್ ಮಹಾರಾಜರವರ ಮೆರವಣಿಗೆಯೂ ಜರುಗುವವು. ಬೆಟ್ಟದ ತಪ್ಪಲಲ್ಲಿರುವ ಚಾಮುಂಡಿ ರೇಸ್ ಕೋರ್ಸಿನ ಮೈದಾನದಲ್ಲಿ ದೇಶೀಯ ಅಧಿಕಾರಿಗಳ ಮತ್ತು ದೊಡ್ಡ ಮನುಷ್ಯರ ಕುದುರೆಗಳ ಜೂಜು ನಡೆದು ಬಹುಮಾನಗಳು ಕೊಡಲ್ಪಡುತ್ತವೆ.

ಮೈಸೂರು ಸರ್ಕಾರದವರು ಇನಾಂ ಗ್ರಾಮಗಳ ಪಂಚಾಯತಿಗೆ ರೆವಿನ್ಯೂ ಕಮಿಷನರ್ ಮ॥ ಕೆ. ದೊರೆಸ್ವಾಮಿ ಅಯ್ಯರ್, ಸರ್ವೆ ಸೂಪರಿಂಟೆಂಡೆಂಟ್ ಮಿ॥ ಡಿ. ಕೆ. ಡುರಾಷಾ, ಮೈಸೂರು ಡೆಪ್ಟಿ ಕಮಿಷನರ್ ಮ॥ ಎ. ಸುಬ್ರಹ್ಮಣ್ಯ ಅಯ್ಯರ್, ಡೆಪ್ಟಿ ಸೆಕ್ರೆಟರಿ ಮಿ॥ ಪಿ. ಜೆ. ಡಿಸೋಜಾ, ರಿಟೈರ್ಡ್ ಡೆಪ್ಟಿ ಕಮಿಷನರ್ ಮ॥ ಕೆ. ಶ್ರೀನಿವಾಸರಾವ್, ನ್ಯಾಯವಿಧಾಯಕ ಸಭೆಯ ಮೆಂಬರ್ ಮ॥ ಕರಣಿಕ ಕೃಷ್ಣಮೂರ್ತಿರಾವ್, ಬೆಂಗಳೂರು ಅಡ್ವೊಕೇಟ್ ಮ॥ ಡಿ. ವೆಂಕಟರಾಮಯ್ಯ, ಮೈಸೂರು ಅಡ್ವೊಕೇಟ್ ಮ॥ ಎ. ರಾಮಯ್ಯ, ಶ್ರೀರಂಗಪಟ್ಟಣದ ಪ್ಲೀಡರ್ ಮ॥ ಬಿ. ನರಸಿಂಗರಾಯರು, ಈ ಏಳು ಮಂದಿಯನ್ನು ಮೆಂಬರುಗಳಾಗಿ ನೇಮಕ ಮಾಡಿರುತ್ತಾರೆ. ಇವರು ತನಿಖೆ ಮಾಡಿ ರಿಪೋರ್ಟು ಬರೆಯಬೇಕಾದ ವಿಷಯಗಳನ್ನು ಇನ್ನೊಂದು ಕಡೆ ಸೂಚಿಸಿರುವೆವು.

ಇನ್ ಜೆನ್ ಇಟ್ಟು ವ್ಯವಸಾಯಮಾಡುವುದು.

ಚಿಂತಾಮಣಿ ತಾಲ್ಲೂಕು ಹಿರೇಕಟ್ಟಿಗೇನಹಳ್ಳಿಯಲ್ಲಿರುವ ಮ. ವೇ. ಸೀತಾರಾಮಯ್ಯನವರು ಬಿದಗೂರಿಕೆ ಗ್ರಾಮದ ಕೆರೆಯ ಕೆಳಗಿನ ಅವರ ಭಾವಿಗೆ ಆರು ಕುದುರೇ ಬಲವುಳ್ಳ ಒಂದು ಇನ್ ಜನ್ ಮತ್ತು ನೀರನ್ನು ಎಳೆಯುವ ಒಂದು ಪಂಪನ್ನು ತರಿಸಿ ಹಾಕಿರುತ್ತಾರೆ. ಇದೇ ತಿಂಗಳು 10 ನೇ ತಾ. ಕೋಲಾರದ ಡೆಪ್ಯುಟಿ ಕಮಿಷನರ್ ಮಿ॥ ಸಿ. ಎಫ್. ಬೌರಿಂಗ್ ಸಾಹೇಬರವರೂ ಮತ್ತು ಇಂಡಸ್ಟ್ರೀಸ್ ಸೂಪ್ರೆಂಟರು ಮ॥ ಎಸ್. ರಾಘವೇಂದ್ರರಾಯರು, ಎಕನಾಮಿಕ್ ಕಾನ್ ಫರೆನ್ಸ್ ಸೂಪರೆಂಟರು ಮ॥ ಎಫ್. ಎಸ್. ರಾಘವಾಚಾರ್ಯರು, ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರು ಮ॥ ತಿರುಮಲಾಚಾರ್ಯರು, ಅಮಲ್ದಾರ್ ಮ॥ ಜಿ. ರಾಮಚಂದ್ರಪ್ಪನವರು ಮತ್ತು ಅನೇಕ ಸರ್ಕಾರಿ ಉದ್ಯೋಗಸ್ಥರೂ, ಸ್ಥಳೀಯ ಪರಸ್ಥಳೀಯ ದೊಡ್ಡ ಮನುಷ್ಯರೂ, ಅನೇಕ ಕೃಷೀವಲಜನಗಳೂ ಮ॥ ಸೀತಾರಾಮಯ್ಯನವರು ತಮ್ಮ ಭಾವಿ ಬಳಿ ತೋರಣಗಳಿಂದ ಅಲಂಕರಿಸಿದ್ದ ಚಪ್ಪರದಲ್ಲಿ ಸಭೆ ಸೇರಿದರು. ಡೆಪ್ಯುಟಿ ಕಮಿಷನರ್ ಸಾಹೇಬರವರು ಎನ್ ಜನ್ ಬಳಗೆ ದಯಮಾಡಿ ಅದನ್ನು ಸ್ವಹಸ್ತದಿಂದ ಪ್ರಾರಂಭಮಾಡಿದರು. ಅನಂತರ ಸಭೆಯವರ ಪ್ರಾರ್ಥನೆಯಿಂದ ಅಗ್ರಾಸನಾಧಿಪತ್ಯವನ್ನು ವಹಿಸಿದರು. ಚಿಂತಾಮಣಿ ಸ್ಕೂಲ್ ಹೆಡ್ ಮಾಸ್ಟರ್ ಮ॥ ಕೃಷ್ಣರಾಯರು ಎನ್ ಜನ್ ನಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಬಳಿಕ ಡೆಪ್ಟಿ ಕಮಿಷನರ್‌ರು ಬಹಳ ಸ್ವಾರಸ್ಯವಾಗಿ ಎನ್ ಜನ್ ನಿಂದ ಉಂಟಾಗುವ ಪ್ರಯೋಜನ ಮತ್ತು ಸರ್ಕಾರದವರು ಜನರಿಗೆ ಮಾಡಿರುವ ಸಹಾಯ, ಈ ವಿಷಯವಾಗಿ ಉಪನ್ಯಾಸಮಾಡಿದರು. ಸಭೆಯವರಿಗೆಲ್ಲಾ ಹಾರ ತುರಾಯಿ, ಗಂಧ ಪುಷ್ಪ, ತಾಂಬೂಲಗಳನ್ನು ಹಂಚಿ, ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃ ಪ್ರಾರ್ಥನೆಗಳನ್ನು ಮಾಡುತ್ತಾ ಸಭೆಯನ್ನು ಮುಕ್ತಾಯಮಾಡಿದರು.

ಕೆ ವಿ ಎಸ್.

ಇಂಡಿಯಾದೇಶದ ವೃತ್ತಾಂತಗಳು.

ಪೂನಾ ಜಿಲ್ಲೆಗೆ ಸೇರಿದ ಯೇವತವೆಂಬ ಗ್ರಾಮದಲ್ಲಿ ಗೋಕಾಯಿಗಳನ್ನು ಕೊಲ್ಲುವುದು ಬಹಳ ಹೆಚ್ಚಿದ್ದರಿಂದ ಆ ಗ್ರಾಮದಲ್ಲೂ ಆ ಸುತ್ತುಮುತ್ತಿನಲ್ಲೂ ಪ್ರಜೆಗಳು ಪಾಷಾಣವನ್ನು ತಮ್ಮ ಬಳಿ ಇಟ್ಟುಕೊಂಡಿರಕೂಡದೆಂದು ಸರ್ಕಾರದವರು ಸಾರಿಸಿ ಕಠಿಣವಾದ ರೂಲನ್ನು ಜಾರಿಗೆ ತಂದಿದ್ದಾರೆ.

ಸರ್ ತಾರಕನಾಥ ಪಲಿತ್ ಎಂಬ ದೊಡ್ಡ ಮನುಷ್ಯನು ಬಂಗಾಳದಲ್ಲಿ ವಕೀಲನಾಗಿದ್ದು ಬಹಳ ಐಶ್ವರ್ಯವನ್ನು ಸಂಪಾದನೆ ಮಾಡಿ, ತನ್ನ ಆಸ್ತಿಯಿಂದ ಶಾಸ್ತ್ರ ಮತ್ತು ಕಸಬುಗಳ ವಿದ್ಯಾಭಿವೃದ್ಧಿಗೆ 16 ಲಕ್ಷ ರೂಪಾಯಿ ವಿನಿಯೋಗಿಸಬೇಕೆಂದು ಮರಣ ಶಾಸನವನ್ನು ಬರೆದಿಟ್ಟು ಕಾಲವಾದನು. ಬ್ಯಾರಿಸ್ಟರಾಗಿರುವ ಆತನ ಕುಮಾರನಾದ ಮಿ॥ ಜಿ ಪಲಿತ್ ಎಂಬಾತನು ತನ್ನ ತಂದೆ ಬರೆದಿರುವ ಧರ್ಮ ಕಾರ್ಯವನ್ನು ನಡೆಸಕೂಡದೆಂದೂ, ಆ ಹಣವೆಲ್ಲಾ ತನಗೆ ಬರಬೇಕೆಂದೂ ದಾವಾ ತಂದಿರುತ್ತಾನೆ.

ಉತ್ತರ ದೇಶಕ್ಕೆ ಸೇರಿದ ಮಧುರಾ ನಗರದಲ್ಲಿ ಇಬ್ಬರು ಸೇರಿ ಒಬ್ಬ ಹೆಂಗಸಿಗೆ ಆಶೋತ್ತರಗಳನ್ನು ಹೇಳಿ ನಂಬಿಸಿ ಅವಳನ್ನೂ, ಅವಳ ಇಬ್ಬರು ಮಕ್ಕಳನ್ನೂ ಎಲ್ಲಿಗೋ ಕರೆದುಕೊಂಡುಹೋಗಿ ಅವರ ಮೈಮೇಲಿದ್ದ ಸುಮಾರು 200 ರೂಪಾಯಿನ ನಗಗಳನ್ನು ಕಸುಕೊಂಡು, ಮೂರು ಮಂದಿಯನ್ನು ಒಂದು ಭಾವಿಗೆ ಎತ್ತಿಹಾಕಿಬಿಟ್ಟರು. ಆ ತಾಯಿಯು ಬದುಕಿ ಬಂದಳು. ಪತ್ತೇದಾರಿ ನಡೆಸಿದಾಗ ಆ ಶತ್ರುಗಳಿಬ್ಬರೂ ಸಿಕ್ಕಿ ಅವರಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಅಲ್ಲಹಾಬಾದ್ ಹೈ ಕೋರ್ಟಿನವರು ಆ ಶಿಕ್ಷೆಯನ್ನೇ ಖಾಯಂ ಮಾಡಿರುತ್ತಾರೆ.

ಗೋದಾವರಿ ಜಿಲ್ಲೆಗೆ ಸೇರಿದ ಉಂದೂರು ಜಮೀನ್‌ದಾರನಿಗೂ ಪಿಟ್ಟಾಪುರದ ರಾಜರಿಗೂ ಏನೋ ಮನಸ್ತಾಪವಿತ್ತು. ಆ ಜಮೀನ್‌ದಾರನು ರಾಜರ ಮಕ್ಕಳನ್ನು ವಿಷಹಾಕಿ ಕೊಲ್ಲಿಸಬೇಕೆಂದು ಪ್ರಯತ್ನಪಟ್ಟಂತೆ ಮೊಕದ್ದಮೆ ಬಂದು ಮದರಾಸ್ ಹೈ ಕೋರ್ಟಿನಲ್ಲಿ ದರ್ಯಾಫ್ತಿ ಆಗುತ್ತಿದೆ. ಆ ಜಮೀನ್‌ದಾರನು ರಾಜರ ಮನೆಯಲ್ಲಿ ಅವರ ಮಕ್ಕಳನ್ನು ನೋಡಿಕೊಳ್ಳುವ ಮೂರು ಮಂದಿ ಹೆಂಗಸರನ್ನು ಒಳಹಾಕಿಕೊಂಡು ಅವರ ಮೂಲಕ ವಿಷವನ್ನು ಕೊಟ್ಟು ಮಕ್ಕಳಿಗೆ ತಿನ್ನಿಸುವ ಪ್ರಯತ್ನ ಮಾಡಿದನಂತೆ. ಆ ಪೈಕಿ ಒಬ್ಬ ದಾದಿಯು ಸರ್ಕಾರಿ ಸಾಕ್ಷಿಯಾಗಿ (ಅಪ್ರೂವರ್) ನಿಂತು ಆ ಜಮೀನ್‌ದಾರನು ವಿಷದ ಸೀಸೆಯನ್ನು ತಂದುಕೊಟ್ಟನೆಂದು ಮುಂತಾಗಿ ನುಡಿದಿರುತ್ತಾಳೆ.

ಪೂರ್ವ ಬಂಗಾಳದಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ಸರ್ಕಾರದವರು ದ್ವಿಜೇಂದ್ರ ಚಂದ್ರ ಮುಖರ್ಜಿ ಎಂಬೊಬ್ಬ ಗುಪ್ತ ಪೋಲೀಸ್ ಹುದ್ದೇದಾರನನ್ನು ಅಲ್ಲಿಗೆ ವರ್ಗಮಾಡಿದ್ದಾಗ ಅವನು ಸೇನಹತಿ ಎಂಬ ಊರಿನಲ್ಲಿ ಒಬ್ಬ ಬ್ರಾಹ್ಮಣ ಯುವತಿಯನ್ನು ಗುಂಡಿನಿಂದ ಹೊಡೆದು ಕೊಂದದ್ದಕ್ಕೆ ಅವನಿಗೆ ಮರಣದಂಡನೆ ವಿಧಿಸಲ್ಪಟ್ಟಿತಷ್ಟೆ. ದ್ವಿಜೇಂದ್ರನ ಹೆಂಡತಿಯು ಬಂಗಾಳದ ಗವರ್ನರವರಿಗೆ ತನ್ನ ಪತಿಗೆ ಕ್ಷಮಾಪಣೆ ಮಾಡಿ ತನ್ನ ಮಾಂಗಲ್ಯವನ್ನು ಕಾಪಾಡಿಕೊಡಬೇಕೆಂದು ಮನವಿ ಅರ್ಜಿಯನ್ನು ಬರೆದುಕೊಂಡಳು. ಗವರ್ನರವರು ಕನಿಕರಪಟ್ಟು, ಅವನಿಗೆ ವಿಧಿಸಲ್ಪಟ್ಟಿದ್ದ ಮರಣ ದಂಡನೆಯನ್ನು ಮನ್ನಿಸಿ, ಅವನು ಜೀವಾಂತ್ಯದ ಬಂದೀಖಾನೆ ಶಿಕ್ಷೆ ಅನುಭವಿಸಲಿ ಎಂದು ಹುಕುಂ ಮಾಡಿದ್ದಾರೆ.

ವಿದೇಶದ ವೃತ್ತಾಂತಗಳು.

ಜರ್ಮನಿಯವರು ರಷ್ಯಾರಾಜ್ಯದ ಬ್ಯಾಂಕು, ಗಣಿ, ಕಾರ್ಖಾನೆ, ಕಂಪನಿ ಮೊದಲಾದವುಗಳಲ್ಲಿ 32,50,00,000 ರೂಪಾಯಿಯನ್ನು ಬಡ್ಡಿಗೆ ಹಾಕಿಕೊಂಡಿದ್ದಾರೆಂದು ಜರ್ಮನ ಪತ್ರಿಕೆಯು ತಿಳಿಸಿರುತ್ತದೆ.

ಉತ್ತರ ಕಡಲಿನಲ್ಲಿ ಜರ್ಮನಿಗೆ ಸೇರಿದ ಹೆಲಿಗೋಲ್ಯಾಂಡ್ ಎಂಬ ಸಣ್ಣ ದ್ವೀಪದ ಮೇಲೆ ಬ್ರಿಟಿಷರು ನುಗ್ಗಿ ಬರುತ್ತಾರೆಂದು ಹೆದರಿ ಜರ್ಮನಿಯವರು ಆ ದ್ವೀಪದಲ್ಲಿರುವ ಪ್ರಜೆಗಳನ್ನು ಹೊರಡಿಸಿ ದೊಡ್ಡ ಕಟ್ಟಡಗಳನ್ನು ಒಡೆದುಹಾಕಿಸಿರುವಂತೆ ಪ್ರಕಟವಾಗಿದೆ.

ಟರ್ಕಿಯವರು ತಮ್ಮ ಸೈನ್ಯಕ್ಕೆ ಮದ್ದು ಗುಂಡುಗಳನ್ನು ಯುದ್ಧಭೂಮಿಗೆ ಸಾಗಿಸುವುದಕ್ಕೆ ಗಾಡಿಗಳು ಇಲ್ಲದೆ ಬಲ್ಗೇರಿಯಾ ಮಾರ್ಗವಾಗಿ ಸರಕು ಭರ್ತಿಯಾಗಿ ಹೋಗುತ್ತಿದ್ದ ರೈಲ್ ಗಾಡಿಗಳನ್ನು ಹಿಡಿದಿಟ್ಟುಕೊಂಡರು. ಬಲ್ಗೇರಿಯಾ ಸರ್ಕಾರದವರು ಈ ವಿಷಯವಾಗಿ ಟರ್ಕಿ ಗವರ್ನಮೆಂಟಿಗೆ ಬರೆದು ಆಕ್ಷೇಪಣೆ ಮಾಡಿದ್ದಾರೆ.

ಬೆಲ್ಜಿಯಮ್‌ನಲ್ಲಿ ಜರ್ಮನಿಯವರು ಅಂತ್ವಾರ್ಪ್ ನಗರವನ್ನು ಆಕ್ರಮಿಸಿಕೊಂಡು ಅಲ್ಲಿ ಮದ್ದು ಗುಂಡು ತಯಾರಾಗುವ ಕಾರ್ಖಾನೆ ಇಟ್ಟಿದ್ದರು. ಒಂದು ಕಾರ್ಖಾನೆಯಲ್ಲಿ ಮದ್ದು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಅನಾಹುತವಾದದ್ದರಲ್ಲಿ 7 ಮಂದಿ ಹುದ್ದೇದಾರರೂ 13 ಮಂದಿ ಸೈನಿಕರೂ ತತ್‌ಕ್ಷಣ ಮೃತಪಟ್ಟರು; 30 ಜನರಿಗೆ ಗಾಯಗಳಾದವು.

ಲಂಡನ್ ಪಟ್ಟಣದೊಳಗೆ ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ತಯಾರ್ ಮಾಡುವುದಕ್ಕೋಸ್ಕರ ಸರ್ಕಾರದವರು ನೂರಕ್ಕಿಂತಲೂ ಹೆಚ್ಚಾಗಿಯೇ ಹೊಸ ಕಾರ್ಖಾನೆಗಳನ್ನು ಇಡಬೇಕೆಂದು ಏರ್ಪಾಡು ಮಾಡಿದ್ದಾರೆ. ಈ ಯುದ್ಧಕಾಲದಲ್ಲಿ ಸರ್ಕಾರದವರು ನೇಮಿಸುವ ಕೆಲಸಗಳನ್ನು ಮಾಡಲು ಸಿದ್ಧರಾಗಿದ್ದೇವೆಂದು 78,940 ಮಂದಿ ಸ್ತ್ರೀಯರು ಒಪ್ಪಿಕೊಂಡಿರುತ್ತಾರೆ.

ಕಪೂರ್ಥಲದ ಮಹಾರಾಜರವರ ಬಹು ವಿಶೇಷವಾದ ಕಾಗದ ಪತ್ರಗಳಿದ್ದ ಕೈಪೆಟ್ಟಿಗೆಯನ್ನು ಅವರು ಸೀಮೆಗೆ ಹೋಗಿದ್ದಾಗ ಒಂದು ಹೊಟೇಲಿನಲ್ಲಿ ಯಾರೋ ಕದ್ದುಬಿಟ್ಟಿದ್ದರು. ಅಮೇರಿಕಕ್ಕೆ ಸೇರಿದ ಸಾಲ್ಟ್ ಲೇಕ್ ಸಿಟಿ ಎಂಬ ನಗರದಲ್ಲಿ ಪೋಲೀಸಿನವರು ಲೋರೆನ್ಸ್ ವಾನ್ ಆರ್ನಾಪ್ ಎಂಬೊಬ್ಬ ಜರ್ಮನಿ ಪ್ರಜೆಯನ್ನು ದಸ್ತಗಿರಿ ಮಾಡಿದಾಗ ಅವನ ಬಳಿ ಆ ಕಾಗದ ಪತ್ರಗಳು ಸಿಕ್ಕಿದವು.

ಅಥೆನ್ಸ್ ಪಟ್ಟಣದ ಒಂದು ತಂತೀ ವರ್ತಮಾನ ತಿಳಿಸುವುದೇನೆಂದರೆ—ಟರ್ಕಿ ರಾಜಧಾನಿಯಲ್ಲಿ ಸೈನಿಕರೊಳಗೆ ವಿಷಮ ಶೀತ ಜ್ವರವು ಹರಡಿಕೊಳ್ಳುತ್ತಿದೆ ಎಂದೂ, ಎಷ್ಟೋ ಮೈನರಿನ ಪ್ರಜೆಗಳೂ ಈ ರೋಗದಲ್ಲಿ ನರಳುತ್ತಿದ್ದಾರೆಂದೂ, ನಿನ್ನೆಯೇ 75 ಮಂದಿ ಮೃತಪಟ್ಟರೆಂದೂ, ಕಲ್ಲಿದ್ದಲೂ ರೊಟ್ಟಿಯೂ ದೊರಕುವುದು ಬಹಳ ಕಷ್ಟವೆಂದೂ ಅಲ್ಲಿಂದ ಬರತಕ್ಕ ಜನಗಳು ಹೇಳುತ್ತಾರೆ.

ರಾಬರ್ಟ್ ರೋಸೆಂಥಾಲ್ ಎಂಬವನು ಇಂಗ್ಲೆಂಡಿಗೆ ಬಂದ ಕೆಲವು ದಿನಗಳೊಳಗಾಗಿ ಇಂಗ್ಲೆಂಡಿನಿಂದ ಪ್ರಯಾಣಮಾಡಿದನು. ಸರ್ಕಾರದವರಿಗೆ ಅವನ ನಡವಳಿಕೆಯಲ್ಲಿ ಅನುಮಾನ ಉಂಟಾಗಿ ಅವನನ್ನು ಹಿಡಿದು ತನಿಖೆಮಾಡಿದಾಗ ಅವನು ಜರ್ಮನಿಯ ಹಡಗಿನ ಸೈನ್ಯದ ಇಲಾಖೆಯವರು ತನ್ನನ್ನು ಇಂಗ್ಲೆಂಡಿಗೆ ಅಲ್ಲಿನ ಸಮಾಚಾರಗಳನ್ನು ತಿಳಿದುಬರುವಂತೆ ಕಳುಹಿಸಿಕೊಟ್ಟರು ಎಂದು ಹೇಳಿ ಒಪ್ಪಿಕೊಂಡನು. ಸರ್ಕಾರದವರು ಅವನನ್ನು ಗೂಢಚಾರನೆಂದು ಹಿಡಿದಿಟ್ಟುಕೊಂಡಿದ್ದಾರೆ.

ಸೋಫಿಯಾ ಪೋಮಂಪ್ ಎಂಬೊಬ್ಬ ಜರ್ಮನಿ ಹೆಂಗಸು ಫ್ರಾನ್ಸಿಗೆ ಸೇರಿದ ರೂಯೆನ್ ಪಟ್ಟಣದಲ್ಲಿ ಗೂಢಚಾರಳಾಗಿ ತಿರುಗಿ ಬ್ರಿಟಿಷ್ ಸೈನಿಕರ ವಿಚಾರವನ್ನು ಕುರಿತು ಕೇಳಿ ತಿಳಿದುಕೊಳ್ಳುತ್ತಿದ್ದು ಸಿಕ್ಕಿಬಿದ್ದು ನಾಲ್ಕು ತಿಂಗಳ ಸಜಾ ಶಿಕ್ಷೆಗೆ ಗುರಿಯಾದಳು. ಅವಳನ್ನು ವಿಚಾರಿಸಿದಾಗ ಅವಳು ಒಬ್ಬ ಇಂಗ್ಲಿಷ್ ಸಿಪಾಯಿ ತನ್ನನ್ನು ಮದುವೆಮಾಡಿಕೊಳ್ಳುವುದಾಗಿ ಒಪ್ಪಿದ್ದು ನಂತರ ತನ್ನನ್ನು ತ್ಯಜಿಸಿ ಹೊರಟು ಹೋದನೆಂದೂ, ಇಂಗ್ಲಿಷ್ ಸೈನ್ಯದಲ್ಲಿ ಅವನು ಎಲ್ಲಿದ್ದಾನೆಯೋ ಹುಡುಕೋಣವೆಂದು ವಿಚಾರಿಸುತ್ತಿದ್ದೆನೆಂದೂ ಹೇಳಿದಳು.

ಇಂಗ್ಲೆಂಡಿಗೆ ಸೇರಿದ ನ್ಯೂಕ್ಯಾಸಲ್ ಎಂಬ ಪಟ್ಟಣದಲ್ಲಿ ಮಾರ್ಗರೆಟ್ ಹೆಂಡರ್‌ಸನ್ ಸ್ಮಿತ್ ಎಂಬ ಸಣ್ಣ ಪ್ರಾಯದವಳು ಬ್ರಿಟಿಷರ ಯುದ್ಧ ಕಾರ್ಯಗಳನ್ನೂ, ಅವರ ನಡವಳಿಕೆಗಳನ್ನೂ ತಿಳಿದು ಕಾರಲ್ ಸ್ಮಿತ್ ಎಂಬವನಿಗೆ ವರ್ತಮಾನಕೊಡುತ್ತಿದ್ದಳು. ಅವಳನ್ನು ಹಿಡಿದು ಪ್ರಶ್ನೆಮಾಡಿದಾಗ ಕಾರಲ್ ಸ್ಮಿತ್ ಎಂಬವನ ಪೂರ್ವೋತ್ತರವೇನೂ ಹೇಳದೆ, ತನ್ನಲ್ಲಿರುವ ಗುಟ್ಟನ್ನು ತಾನು ಯಾರಿಗೂ ಹೇಳುವುದಿಲ್ಲವೆಂದು ತಿಳಿಸಿದಳು. ಸರ್ಕಾರದವರು ಅವಳನ್ನು ಹಿಡಿದು ಬಂಧನದಲ್ಲಿ ಹಾಕಿಕೊಂಡು ಪತ್ತೆ ತರದೂದು ನಡಿಸುತ್ತಿದ್ದಾರೆ.

ಡಾರ್ಡನೆಲ್ಸ್ ಜಲಸಂಧಿಯನ್ನು ನಮ್ಮ ಪಕ್ಷದವರು ಭೇದಿಸಿಕೊಂಡು ಟರ್ಕಿ ರಾಜಧಾನಿಗೆ ಬಂದುಬಿಡುತ್ತಾರೆಂದು ಜರ್ಮನಿಯವರಿಗೆ ಭೀತಿಯುಂಟಾಗಿ ಅವರು ಟರ್ಕಿ ಸುಲ್ತಾನರನ್ನು ಯಾತ್ರೆಗೋಸ್ಕರ ಎಂಬ ಕಾರಣವನ್ನು ಹುಟ್ಟಿಸಿಕೊಂಡು ರಾಜಧಾನಿಯನ್ನು ಬಿಟ್ಟು ಕೋನಿಯಾ ಎಂಬ ಪಟ್ಟಣಕ್ಕೆ ಹೋಗಿ ಸೇರಿಕೊಳ್ಳುವಂತೆ ಹೇಳಿದರೆಂದೂ, ಸುಲ್ತಾನರು ಅದಕ್ಕೆ ಒಪ್ಪದೆ ತಮ್ಮ ಯುವರಾಜರು ಕೋನಿಯಾಗೆ ಹೋಗಲಿ ಎಂದು ಸೂಚಿಸಿದರೆಂದೂ, ಕಾನ್‌ಸ್ಟಂಟಿನೋಪಲ್ ರಾಜಧಾನಿಯಲ್ಲಿರುವ ಜರ್ಮನ ಪ್ರಜೆಗಳು ಸಂಸಾರ ಸಮೇತ ಅಲ್ಲಿಂದ ಹೊರಟುಹೋಗುತ್ತಿರುವುದಾಗಿಯೂ ಒಂದು ತಂತೀವರ್ತಮಾನವು ತಿಳಿಸುತ್ತದೆ.

ನೆಫಲೀ, ಮುಲ್ಲರ್, ಹಾನ್ ಎಂಬೀ ಮೂರು ಮಂದಿ ಜರ್ಮನರೂ ತಾವು ಅಮೇರಿಕದವರೆಂದು ಹೇಳಿ ಅಮೇರಿಕದಿಂದ ಅರೇಬಿಕ್ ಎಂಬ ಹಡಗಿನಲ್ಲಿ ಇಂಗ್ಲೆಂಡಿಗೆ ಸೇರಿದ ಲಿವರ್‌ಪೂಲ್ ನಗರಕ್ಕೆ ಬಂದಿಳಿದು ಇಂಗ್ಲೆಂಡಿನ ಭೂಸೈನ್ಯ ಸಮುದ್ರ ಸೈನ್ಯಗಳ ರಚನೆ ಚಲನೆ ಮುಂತಾದ ವಿಷಯಗಳನ್ನು ತಿಳಿದು, ಬಿಳಿ ಕಾಣದಂಥಾ ಶಾಯಿಯಲ್ಲಿ ಬರೆದು ಜರ್ಮನಿಗೆ ಕಳುಹಿಸುತ್ತಿದ್ದರು. ಇಂಗ್ಲೆಂಡಿನವರು ಅವರ ಒಂದೆರಡು ಕಾಗದಗಳನ್ನು ತಡೆದು ನೋಡಿದಾಗ ಅದು ಬರೀ ಕಾಗದವಾಗಿತ್ತು. ಅದಕ್ಕೆ ದ್ರಾವಕವನ್ನು ಸವರಿ ಬೆಂಕಿ ಕಾವು ತೋರಿಸಿದಾಗ ಅದರಲ್ಲಿ ಬರೆದಿದ್ದ ಸಂಗತಿಗಳೆಲ್ಲಾ ಚೆನ್ನಾಗಿ ಓದಿಕೊಳ್ಳುವುದಕ್ಕೆ ಅನುಕೂಲವಾಯಿತು. ಆ ಮೂರು ಮಂದಿಯನ್ನೂ ಗೂಢಚಾರರೆಂದು ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿ ವಿಚಾರಣೆ ನಡೆಸುತ್ತಿದ್ದಾರೆ.

ಗ್ರೀಸ್ ರಾಜ್ಯದ ಒಂದು ಪತ್ರಿಕೆಯಲ್ಲಿ ಜರ್ಮನಿ ಚಕ್ರವರ್ತಿಯು ತನ್ನ ತಂಗಿಗೆ (ಅಂದರೆ, ಗ್ರೀಸ್ ರಾಣಿ) ಮುಂದೆ ಹೇಳುವ ರೀತಿ ಒಂದು ಕಾಗದ ಬರೆದಿರುವಂತೆ ಪ್ರಕಟವಾಗಿದೆ. ಆ ಕಾಗದದ ಅಭಿಪ್ರಾಯವೇನೆಂದರೆ—ಯುದ್ಧಭೂಮಿಯ ಎಲ್ಲಾ ಕಡೆಗಳಲ್ಲೂ ನಮಗೆ (ಜರ್ಮನಿಯವರಿಗೆ) ಅನುಕೂಲವಾಗಿದ್ದು, ಮುಂದರಿಸಿ ನುಗ್ಗಿ ಹೋಗುತ್ತಿದ್ದೇವೆ. ಪೂರ್ವ ರಣರಂಗದಲ್ಲಿ ರಷ್ಯದವರು 70,000 ಹುದ್ದೇದಾರರ ಸಮೇತ 7,00,000 ಸೈನ್ಯವನ್ನು ಕಳಕೊಂಡರು. ಪಶ್ಚಿಮ ರಣರಂಗದಲ್ಲಿ ಕೆಲವು ಕಡೆ ಫ್ರೆಂಚರಿಗೆ ಅಲ್ಪ ಸ್ವಲ್ಪ ಜಯವಾಗಿರುತ್ತದೆ ; ಆದರೆ ಅವಕ್ಕೋಸ್ಕರ ಫ್ರೆಂಚರು ಅನೇಕ ಸೈನ್ಯಗಳನ್ನು ಕಳೆದುಕೊಂಡರು. ಅವರು ಇಂಥಾ ಜಯಪ್ರದಗಳನ್ನೇ ಹೊಂದುತ್ತಾ ಬರುವುದು ನಮಗೆ ತುಂಬಾ ಅನುಕೂಲ. ಕಡೆಯಲ್ಲಿ ನಮಗೆ ಜಯವಾಗುವುದೇನೋ ಖಂಡಿತ. ನನ್ನ ಮೇಲೆ ಕತ್ತಿ ಕಟ್ಟುವವರು ನಾಶವಾಗಲಿ! ಟೀನೊಳಿಗೆ (ಅಂದರೆ, ಗ್ರೀಸ್ ದೊರೆ) ನನ್ನ ಸಂತೋಷವನ್ನು ತಿಳಿಸು ಎಂಬುದೇ.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-10] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[201-4] 1 GIRLS' INDUSTRIAL SCHOOL, HASSAN.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2-6-0.

ಜೂನ್ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ ಕೆ. ಕಂಣುಸ್ವಾಮಿ

[111-2] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಶೀಘ್ರ ಪ್ರಯೋಜನಹೊಂದಿ, ಇತರರಿಗೂ ಸಹಾಯಮಾಡಿ.

ಭಾರತ ಪ್ರಾವಿಡೆಂಟ್ ಮತ್ತು ಬ್ಯಾಂಕಿಗ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಕಲಕತ್ತಾ.

ಮೂಲಧನ—ರೂಪಾಯಿ 5,00,000.

5,000 ಷೇರುದಾರರು ಮಾತ್ರ ಬೇಕಾಗಿದೆ. ಪ್ರತಿ ವರುಷವೂ ವಿಶೇಷ ಲಾಭ ಹಂಚಲ್ಪಡುತ್ತದೆ. ಷೇರ್ 1 ಕ್ಕೆ 20 ರೂಪಾಯಿ. ಅರ್ಜಿಯ ಕೂಡ ಮೊದಲು 10 ರೂಪಾಯಿ ಮಾತ್ರ ಕೊಡತಕ್ಕದ್ದು. ಮೂರು ತಿಂಗಳ ವಾಯಿದೆಯಲ್ಲಿ ಉಳಿದ 10 ರೂಪಾಯಿ ಕೊಡಬಹುದು; ಆದರೆ ಸದ್ಯಕ್ಕೆ ಇದನ್ನು ಕೇಳಬೇಕೆಂಬ ಉದ್ದೇಶವಿಲ್ಲ. ಈ ಕಂಪನಿಯು ಬಹಳ ಸುಲಭವಾದದ್ದು. ಕ್ರಮವಾದ ನಿಬಂಧನೆಗಳ ಪ್ರಕಾರ ನಡೆಯುವುದರಿಂದ ಇತರ ಪ್ರಾವಿಡೆಂಟ್ ಕಂಪನಿಗಳಿಗಿಂತಲೂ ಅತ್ಯಂತ ಸುರಕ್ಷಿತವಾಗಿರುತ್ತದೆ.

ಈ ಕಂಪನಿಯಲ್ಲಿ ಮದುವೆಯ ಮತ್ತು ಜೀವವಿಮೆಯ ಪಾಲಿಸಿಗಳನ್ನು ಪಡೆಯಬಹುದು. 15 ವರುಷ ತಿಂಗಳಿಗೆ ಒಂದು ರೂಪಾಯಿನಂತೆ ಚಂದಾ ಕೊಡತಕ್ಕದ್ದು. ಸೇರಿದ ಒಂದು ವರುಷದ ಮೇಲೆ ಮೃತಪಟ್ಟರೆ 300 ರೂಪಾಯಿ ಅಡ್ವಾನ್ಸು ಕೊಡಲ್ಪಡುತ್ತೆ. 20 ವರುಷ ಬದುಕಿದ್ದರೆ 600 ರೂಪಾಯಿ ನಗದ್ ಬೋನಸ್ ದೊರಕುವುದು. [293-26]

ಸೇರಿದ ಒಂದು ವರುಷದ ಮೇಲೆ ಮದುವೆ ಆದರೆ 250 ರೂಪಾಯಿ ಸಾಲ ಕೊಡಲ್ಪಡುತ್ತೆ. ಈ ಸಾಲವನ್ನು 15 ವರುಷಗಳ ಮೇಲೆ ಶೇಕಡಾ ವರುಷಕ್ಕೆ 6 ರೂಪಾಯಿ ಬಡ್ಡಿಯಂತೆ ವಾಪಸು ತೆಗೆದುಕೊಳ್ಳಲ್ಪಡುತ್ತದೆ.

ಈ ಕಂಪನಿಯಲ್ಲಿ ಜೀವವಿಮೆ ಮಾಡಿರುವಷ್ಟು ಹಣವನ್ನು ಸಾಲಪಡೆಯಲೂ, ಇದನ್ನು ಸುಲಭ ರೀತಿ ವಾಪತಿಮಾಡಲೂ ಬಹುದು.

ಬೇಕಾಗಿದೆ—ಚುರುಕಾಗಿ ಸಾಮರ್ಥ್ಯದಿಂದ ಕೆಲಸಮಾಡುವ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರುಗಳು ಬೇಕು. ಸಂಬಳ ರೂ. 30+10, ಕಮಿಷನ್ ಸಹ ಉಂಟು. ಏಜಂಟರು ಬೇಕು; ಇವರಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುತ್ತೆ.

ಎಲ್ಲಾ ವಿಷಯಕ್ಕೂ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಮೆಸ್ಸರ್ಸ್ ವೆಂಕಟಾಚಲಂ ಅಂಡ್ ಸನ್ಸ್, ದಕ್ಷಿಣ ಇಂಡಿಯಾ ಚೀಫ್ ಏಜಂಟ್ರು, 166, ದೊಡ್ಡಪೇಟೆ, ಮೈಸೂರು.

ನಮ್ಮ ಪುಸ್ತಕ ಭಂಡಾರವು.

“ಪ್ರಬಂಧ ಮುಕ್ತಾವಳಿ.”—ಈ ಪುಸ್ತಕವು ಕನ್ನಡವನ್ನು ಅಭ್ಯಾಸಮಾಡುವ ಬಾಲಕ ಬಾಲಕಿಯರಿಗೆ ಬಹಳ ಅನುಕೂಲವಾಗಿದೆ. ಇದರಲ್ಲಿ ವಾಕ್ಯಗಳ ಕಲ್ಪನೆ, ವಿಭಜನೆ, ಸಂಕಲನಗಳನ್ನೂ, ವಸ್ತುಪಾಠ, ಶುದ್ಧಾಶುದ್ಧ ವಾಕ್ಯಗಳೂ, ಕಥೆಗಳನ್ನೂ, ಕಾಗದಗಳನ್ನೂ, ಪ್ರಬಂಧಗಳನ್ನೂ, ಬರೆಯುವ ಕ್ರಮಗಳನ್ನೂ, ದಂಡಾನ್ವಯ ವಿಧಾನವನ್ನೂ, ಬಹಳ ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ಸ್ವಾರಸ್ಯವಾಗಿ ಬರೆದಿರುತ್ತಾರೆ. ಪ್ರಶ್ನೆಭಾಗವೂ ಅಲ್ಲಲ್ಲಿ ಕೊಡಲ್ಪಟ್ಟು ಅಭ್ಯಾಸಕ್ಕೆ ಸಹಾಯಕವಾಗಿರುವುದು. ಕಥೆಗಳು ಮಕ್ಕಳಿಗೆ ಓದುವುದಕ್ಕೂ ಎಷ್ಟೋ ಸಂತೋಷವನ್ನೂ ಉತ್ಸಾಹವನ್ನೂ ಉಂಟುಮಾಡತಕ್ಕವುಗಳಾಗಿವೆ. ಬೆಂಗಳೂರು ನಗರ್ತರ ಪೇಟೆಯಲ್ಲಿರುವ ಮ॥ ಕೆ. ಬಿ. ಹನುಮಂತರಾಯರು ಈ ಪುಸ್ತಕವನ್ನು ರಚಿಸಿರುವರು. ಇದರ ಕ್ರಯ 12 ಆಣೆ.

“ವಸಂತ ಕೋಕಿಲೆ.”—ಇದು ಊಹೆಯಿಂದ ಬರೆದ ಕಥೆ. ಇದರಲ್ಲಿ ಅಲ್ಪವಾದ ಅಭಿಪ್ರಾಯಗಳೂ, ಯುಕ್ತಿಗೆ ಯಂತ್ರ ಮಂತ್ರಗಳ ಮೂಲಕ ಕಾರ್ಯಸಾಧನೆ ಮಾಡಿಕೊಳ್ಳಬಹುದೆಂಬುವುದೂ ಕಥಾರೂಪದಲ್ಲಿ ಹೇಳಲ್ಪಟ್ಟಿವೆ. ಇಂಥಾ ಕಥೆಗಳನ್ನು ಓದೋಣದರಿಂದ ಯಾವ ಹಿತವೂ ಶ್ರೇಷ್ಠಾಭಿಪ್ರಾಯವೂ ಉಂಟಾಗಲಾರದೆಂದು ನೆನೆಸುತ್ತೇವೆ. ಬಳ್ಳಾರಿಯ ವಾಣೀ ಮಂದಿರ ಬುಕ್ ಡಿಪೋದವರು ಇದಕ್ಕೆ ಇಟ್ಟಿರುವ ಬೆಲೆ ರೂ. 1-8-0 ಹೆಚ್ಚಾಗಿದೆ ಎಂದು ತೋರುವುದು.

“ಸಂಗೀತ ಸಮಯ ಸಾರ.”—ಸಂಗೀತದಿಂದ ಹುಟ್ಟುವ ಆನಂದವೂ, ಉತ್ಸಾಹವೂ, ಮನಶ್ಶಾಂತಿಯೂ ವಿಶೇಷ. ಇಂಥಾ ಸಂಗೀತವನ್ನು ಶಾಸ್ತ್ರವತ್ತಾಗಿ ಅಭ್ಯಾಸ ಮಾಡಿರುವ ವಿದ್ವಾಂಸರಿಗೆ ನಮ್ಮ ಮೈಸೂರು ಸಂಸ್ಥಾನವು ವಿಶೇಷ ಆಶ್ರಯವನ್ನು ಕೊಟ್ಟಿರುತ್ತದೆ. ಪೂರ್ವದಿಂದಲೂ ನಮ್ಮ ಮಹಾರಾಜರವರ ಆಸ್ಥಾನದಲ್ಲಿ ಸಂಗೀತ ವಿದ್ವಾಂಸರಿಗೆ ಆದರಣೆಯುಂಟು. ಇಂಥಾ ಶ್ರೇಷ್ಠ ವಿದ್ಯೆಯು ಬೆಲೆಯಾಗದೆ ಅಭಿವೃದ್ಧಿಗೆ ಬಂದು, ಸಕಲ ಪ್ರಜೆಗಳಲ್ಲೂ ಹರಡಿಕೊಳ್ಳುವಂತಾಗಬೇಕೆಂದು ನಮ್ಮ ಸರ್ಕಾರದವರು ಪಾಠಶಾಲೆಗಳಲ್ಲಿ ಸಂಗೀತವನ್ನು ಒಂದು ಪಾಠವಾಗಿಟ್ಟು ಕಲಿಸುವುದಕ್ಕೆ ಏರ್ಪಾಡು ಮಾಡಿದಾರೆ. ಗಾನವಿದ್ಯೆಯನ್ನು ಕನ್ನಡಿಗರು ಶಾಸ್ತ್ರವತ್ತಾಗಿ ಕಲಿಯಲು ಅನುಕೂಲವಾದ ಗ್ರಂಥವ್ಯಾವುದೂ ಪ್ರಕಟವಾಗಿರಲಿಲ್ಲ. ಈ ಲೋಪವನ್ನು ನಮ್ಮ ಆಸ್ಥಾನ ವೈಣಿಕ ವಿದ್ವಾಂಸರಾದ ಮ॥ ಎಸ್. ಸುಬ್ರಹ್ಮಣ್ಯ ಅಯ್ಯರವರು ಸುಲಭ ಮಾರ್ಗದಲ್ಲಿ ವಿದ್ಯಾರ್ಥಿಗಳು ಕಲಿಯಲನುಕೂಲಿಸುವಂತೆ ಕನ್ನಡದಲ್ಲಿ ಈ ಪುಸ್ತಕವನ್ನು ರಚಿಸಿರುತ್ತಾರೆ. ಇದರಲ್ಲಿ ಸಂಗೀತದ ಎಲ್ಲಾ ಭಾಗಗಳನ್ನೂ ಕ್ರಮವಾಗಿಯೂ, ವಿಸ್ತಾರವಾಗಿಯೂ, ಸುಲಭ ಗ್ರಾಹ್ಯವಾಗಿಯೂ ಬರೆದಿರುವರು. ಇದರಲ್ಲಿ ನಮ್ಮ ಶ್ರೀಮನ್ ಮಹಾರಾಜರವರ ಮತ್ತು ಗ್ರಂಥಕರ್ತರ ಸುಂದರವಾದ ತಸ್ವೀರುಗಳೂ, ಅರಮನೆ ದರ್ಬಾರ್ ಭಕ್ಷಿ ಮ॥ ಎಚ್. ಲಿಂಗರಾಜೇ ಅರಸಿನವರು ಬರೆದಿರುವ ಅವತರಣಿಕೆಯೂ ಅಡಕವಾಗಿರುತ್ತವೆ. ಗ್ರಂಥಕರ್ತರ ಶಿಷ್ಯ ಮ॥ ಎಂ. ವೆಂಕಟರಾಮಯ್ಯನವರು ಇದನ್ನು ಮುದ್ರಿಸಿ ಪ್ರಚಾರ ಮಾಡಿರುತ್ತಾರೆ. ಇದರ ಕ್ರಯ ರೂ. 1-4-0.

“ಮ॥ ಜಿ. ಕೆ. ಗೋಖಲೆಯವರ ಚರಿತ್ರೆ.”—ದೇಶಭಕ್ತಾಗ್ರಣಿಗಳಾಗಿದ್ದು ಕಾಲಗತಿಯನ್ನೈದಿದ ಮ॥ ಗೋಪಾಲಕೃಷ್ಣ ಗೋಖಲೆಯವರ ಸಂಕ್ಷಿಪ್ತ ಚರಿತ್ರೆಯನ್ನು ಬೆಂಗಳೂರು ದೇಶ ಸೇವಾ ಸಂಘದವರು ಸುಲಭ ಕನ್ನಡದಲ್ಲಿ ರಚಿಸಿ ಪ್ರಕಟಪಡಿಸಿದಾರೆ. ಇದನ್ನು ಓದುವದರಿಂದ ಸಾಮಾನ್ಯ ಪ್ರಜೆಗಳು ಮ॥ ಗೋಖಲೆಯವರ ಸ್ವಭಾವ ಗುಣ ಲಕ್ಷಣಗಳನ್ನೂ ಅವರ ಕಾರ್ಯಗಳನ್ನೂ ಸ್ವಲ್ಪಮಟ್ಟಿಗಾದರೂ ಗ್ರಹಿಸಿ ಪ್ರಯೋಜನಹೊಂದಬಹುದು. ಇದರ ಕ್ರಯ 6 ಕಾಸು. ಇದರಿಂದ ಬರುವ ಲಾಭವನ್ನು ಬೆಂಗಳೂರಿನಲ್ಲಿ ಕಟ್ಟುವ “ಗೋಖಲೆ ಮಂದಿರ”ಕ್ಕಾಗಿ ವಿನಿಯೋಗಿಸುತ್ತಾರೆ.

ಸುಂದರಕಾಂಡಾರ್ಥಬೋಧಿನೀ.—ಇದು ಬಿಡಿಸಂಚಿಕೆಗಳಲ್ಲಿ ಬೆಂಗಳೂರು ಶಾರದಾವಿಲಾಸ ಪ್ರೆಸ್ಸಿನಲ್ಲಿ ಪ್ರಕಟವಾಗುತ್ತಿದೆ. ಸಾಹಿತ್ಯ ವಿದ್ವಾಂಸರಾದ ಪಂಡಿತ ವೇ॥ ಸಾಲಿಗ್ರಾಮದ ನಾರಾಯಣಶಾಸ್ತ್ರಿಗಳು ವಾಲ್ಮೀಕಿ ರಾಮಾಯಣದ ಸುಂದರಕಾಂಡವನ್ನು ಪ್ರತಿಪದ ಟೀಕು, ಪದಚ್ಛೇದ, ಅನ್ವಯ, ತಾತ್ಪರ್ಯಸಹಿತವಾಗಿ ಬರೆಯುವುದನ್ನು ಬೆಂಗಳೂರು ಮ॥ ಸಿ. ಎಸ್. ಭಾಸ್ಕರರಾವ್ ಅಂಡ್ ಬ್ರದರ್ಸ್ ಎಂಬ ಕಂಪನಿಯವರು ಪ್ರಚುರಪಡಿಸುತ್ತಿದಾರೆ. ಇದರ ಬೆಲೆ ಸಂಚಿಕೆಗೆ 6 ಆಣೆ. ಮೈಸೂರು ಹಳೆ ಅಗ್ರಹಾರದಲ್ಲಿರುವ ಮ॥ ಜಿ. ಎಸ್. ವೆಂಕಟರಮಣಮೂರ್ತಿಗಳೂ ಏಜಂಟರಾಗಿ ಈ ಸಂಚಿಕೆಗಳನ್ನು ಹಂಚುತ್ತಿರುವರು. ರಾಮಾಯಣವನ್ನು ಅರ್ಥಸಹಿತ ಓದಿ ತಿಳಿದುಕೊಳ್ಳತಕ್ಕವರು ಈ ಸುಲಭ ಕ್ರಯದ ಸಂಚಿಕೆಗಳನ್ನು ಕೊಂಡುಕೊಂಡು, ಗ್ರಂಥ ಪ್ರಚಾರಕ್ಕೆ ಸಹಾಯಮಾಡಬಹುದು. ಅರ್ಥವು ಸುಲಭವಾದ ತಿಳಿಗನ್ನಡದಲ್ಲಿ ಬರೆಯಲ್ಪಟ್ಟಿದೆ.

ಮುಂದೆ ಹೇಳುವ ಪುಸ್ತಕಗಳು ನಮಗೆ ತಲುಪಿರುತ್ತವೆ.—ಮೈಸೂರು ಮ॥ ಎಚ್. ನಾಗಪ್ಪನವರೂ ಮ॥ ಎ. ಶ್ರೀಕಂಠಯ್ಯನವರೂ ಸೇರಿ ರಚಿಸಿರುವ ಇಂಗ್ಲಿಷ್ ಲೋ. ಸೆ. ಟೆಕ್ಸ್ಟಿನ ನೋಟ್ಸು, ಕ್ರಯ 6 ಆಣೆ; ಮೈಸೂರು ಮ॥ ಎ. ರಂಗಸ್ವಾಮಯ್ಯಂಗಾರ್ರು ರಚಿಸಿರುವ ಇಂಗ್ಲಿಷ್ ಲೋ. ಸೆ. ಟೆಕ್ಸ್ಟ್ ನೋಟ್ಸು, ಕ್ರಯ 6 ಆಣೆ, ಮೈಸೂರು ಮ॥ ಎನ್. ಆರ್. ವೆಂಕಟಸುಬ್ಬಾಚಾರ್ಯರು ರಚಿಸಿರುವ ಕನ್ನಡ ಲೋ. ಸೆ. ಟೆಕ್ಸ್ಟ್ ನೋಟ್ಸು ಕ್ರಯ 7 ಆಣೆ.

ಸಿಂಧು ಹೈದರಾಬಾದ್ ಪಟ್ಟಣದಲ್ಲಿ ಸಿಂಗರ್ ಹೊಲಿಯುವ ಯಂತ್ರಗಳ ಕಂಪನಿ ಏಜಂಟಾಗಿದ್ದ 22 ವಯಸ್ಸಿನ ದಾವೆ ಎಂಬ ಪಾರ್ಸಿ ಯೌವನಸ್ಥನು ನೇಣುಹಾಕಿಕೊಂಡು ಪ್ರಾಣಬಿಟ್ಟನು. ಈತನು ಹೆಂಡತಿ ಸತ್ತ ಮೇಲೆ ಬದುಕಿರುವುದು ಸಾಧ್ಯವಲ್ಲ ಎಂಬದಾಗಿ ಒಂದು ಚೀಟಿ ಬರೆದಿಟ್ಟಿದ್ದನು.

ಲಾಹೋರ್ ಪಟ್ಟಣದಲ್ಲಿ ಒಬ್ಬ ವಿದ್ಯಾರ್ಥಿಯು ಪಂಜಾಬ್ ಯೂನಿವರ್ಸಿಟಿ ವಿದ್ಯಾಸಂಘದ ಅ॥ ರೆಜಿಸ್ಟ್ರಾರ್ ರಾಯಬಹದೂರ್ ಪಿ. ಎನ್. ದತ್ತರವರಿಗೆ ಒಂದು ಕಾಗದವನ್ನು ಬರೆದು 500 ರೂಪಾಯಿ ಕಳುಹಿಸಿಕೊಟ್ಟು, ಎಫ್. ಎ. ಪರೀಕ್ಷೆಯಲ್ಲಿ ತನಗೆ ಸಹಾಯ ಮಾಡಬೇಕೆಂದು ಕೇಳಿಕೊಂಡನು. ಆ ವಿದ್ಯಾಸಂಘದವರು ಆ ವಿದ್ಯಾರ್ಥಿಯನ್ನು ಪ್ರಶ್ನೆಮಾಡಿದಾಗ ಅವನು ತನ್ನ ಅಪರಾಧವನ್ನು ಹೇಳಿ ಒಪ್ಪಿಕೊಂಡನು. ಸಂಘದವರು ಅವನನ್ನು ಇನ್ನು ಮುಂದೆ ಯಾವ ಪರೀಕ್ಷೆಗೂ ಸೇರಿಸಕೂಡದೆಂದೂ, ಅವನ ಮೇಲೆ ಮೊಕದ್ದಮೆ ಮಾಡಬೇಕಾದದ್ದಿಲ್ಲವೆಂದೂ ಇತ್ಯರ್ಥಮಾಡಿದರು.

ಭೂಪಾಲದಲ್ಲಿ ಕಳೆದ ಡಿಸೆಂಬರಿನಲ್ಲಿ ದೊಡ್ಡ ದೊಂಬಿ ಕಲಹ ಹುಟ್ಟಿ ನಾನಾ ಅನರ್ಥಗಳು ನಡೆದವು. ಬೋರಾ ಜನರೆಲ್ಲಾ ತಮ್ಮ ಮನೆ ಮಠಗಳನ್ನೂ ವ್ಯಾಪಾರಾದಿಗಳನ್ನೂ ಬಿಟ್ಟು ಸಂಸಾರ ಸಮೇತ ಹೊರಟುಹೋದರು. ಈಗ ಅಲ್ಲಿ ಪ್ರಜಾ ನೆಮ್ಮದಿಯು ನೆಲೆಗೊಂಡಿರುವುದನ್ನು ಕೇಳಿ ಅವರೆಲ್ಲಾ ವಾಪಸು ಬರುತ್ತಿದಾರೆ. ದಿನವಹಿ 150-200 ಸಂಸಾರಗಳು ಭೂಪಾಲಕ್ಕೆ ಬಂದು ನೆಲಸುತ್ತಿರುವವು. ಅವರ ಮುಖಂಡರು ಮಹಾರಾಜರವರನ್ನು ಕಂಡು ಅವರಿಂದ ಅಭಯವನ್ನು ಪಡೆದುಕೊಂಡು, ಮುಸಲ್ಮಾನ್ ಪ್ರಜೆಗಳ ಸ್ನೇಹವನ್ನು ಬೆಳಸಿ ಮೊದಲಿನಂತೆ ವ್ಯಾಪಾರಾದಿ ಕೆಲಸಗಳನ್ನು ನಡಿಸುತ್ತಿರುವರು.

ಯುದ್ಧದ ರಿಲೀಫ್ ಫಂಡಿಗಾಗಿ ಹಿಂದೂಸ್ಥಾನದಲ್ಲಿ ಕೂಡಿಸಲ್ಪಟ್ಟಿರುವ ಚಂದಾ ಹಣಗಳನ್ನು ಮುಂದೆ ಹೇಳುವ ಬ್ಯಾಂಕುಗಳಿಗೆ ಆಯಾ ಅಧಿಪತ್ಯದವರು ರವಾನಿಸಿರುತ್ತಾರೆ:—

ಸಿಂಲಾ ಅಲಯನ್ಸ್ ಬ್ಯಾಂಕಿಗೆ	....	ರೂ. 41,38,225-10- 1
ಬಂಗಾಳಾ ಬ್ಯಾಂಕಿಗೆ	,,	36,72,704-10- 5
ಬೊಂಬಾಯಿ ಬ್ಯಾಂಕಿಗೆ	,,	7,80,665- 4-10
ಮದರಾಸ್ ಬ್ಯಾಂಕಿಗೆ	,,	6,36,640-14-10
ಜುಮ್ಲಾ ರೂಪಾಯಿ		92,31,236- 8- 2

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!



ಅಮೃತಾಂಜನ ರಿಜಿಸ್ಟರ್ಡ್

[64-11]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಹುಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ಸ್ನೋ 0-12-0. ಶುದ್ಧ ಮುಲಾಮು 0-3-0. ಬಾಲಾಮೃತ 0-8-0. ಸುಂದರಿ ಮುಲಾಮು 0-8-0. ಏಜಂಟರಾಗಿ ಬರೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚಿನ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಉರಿ, ಸಂದುಗಳ ನೋವು, ಮೈ ಕಾಲು ಊದಿಕ (ಬಾವು), ಮೈ ನವೆ, ಶೀತಕಾಡುತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕಸ್ತೂರಿ ಮಾತ್ರೆವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಜಾಗಿಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ಋತುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಬುದ್ಧಿಮಾಂದ್ಯ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸಣ್ಣಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 8 ಆಣೆ. 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-41]



(1) ಮ॥ ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಸರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟು, ಇವರು ಬರೆಯುವುದು:—“ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ॥ ಸಜ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ಕೆಲ ದಿವಸ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಬಾಯಿರುಚಿ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಸಿಫಾರಸು ಮಾಡುವೆನು.” (2) ಮ॥ ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು, ಇವರು ಬರೆಯುವುದು:—“ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನನ್ನ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದಾರೆ.”

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು
ಒಂದು ಸಲ ಪರೀಕ್ಷಿಸಿ ನೋಡಿರಿ.
ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನರಿಗೆ ಅತ್ಯವಶ್ಯಕವು. ಚುಟ್ಟಾ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30	ಮಾತ್ರೆಗಳ ಪೊಟ್ಟಣ 1 ಕ್ಕೆ	ಕ್ರಯ	0-1-6
65	,, ,, ,, ...	,,	0-3-0
195	,, ಪೊಟ್ಟಣ ಮತ್ತು ಸುಂದರವಾದ ಮಾತ್ರೆಗಳು ಇರುವ ಚಿಕ್ಕ ಡಬ್ಬಿ ಸಹಾ	,,	0-8-0
445	,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-7]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎನ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ಓರಿಯಂಟಲ್ ಗ॰॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,80,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[231-36] ಬ್ರಾಂಚ್ ಸೆಕ್ರೆಟರಿ, ಮದರಾಸ್

ಹೊಸ ವಿಷಯ.

ಶಾಸ್ತ್ರರೀತಿ ಶುದ್ಧಿಮಾಡಿದ ಹತ್ತಿಯ ತುಪ್ಪ. ಹೊಟ್ಟು ತೆಗೆದು ತಯಾರಿಸಿದ ಹತ್ತಿಯ ಬೀಜದ ಹಿಂಡಿ.

ಜುಂಜನ್ನು ಯಂತ್ರದಿಂದ ತೆಗೆದು ತಯಾರಿಸಿದ ನಿಷ್ಕಲ್ಮಷವಾದ ಹತ್ತಿಯ ಬೀಜದ ಹೊಟ್ಟು. ಇವುಗಳು ಇಲ್ಲಿಂದ ಮುಂದೆ ನಮ್ಮಲ್ಲಿ ದೊರೆಯುವಂತೆಯೇ ಖಾತರಿಯಾಗಿ, ಅರಸೀಕೆರೆ ಕೋಆಪರೆಟಿವ್ ಸೊಸೈಟಿ ಸೆಕ್ರೆಟರಿಗಳಾದ ಶೇಕ್ ಷಫ್ ಶಿರಸ್ತೇದಾರ್ ಮ॥ ಎಂ. ಜೀವಣ್ಣರಾಯರಲ್ಲಿ ಸುಲಭಕ್ರಯಕ್ಕೆ ದೊರೆಯುವವು.

ಕಡೂರು, ಬೀರೂರು, ಹಾಸನ, ಬೇಲೂರು, ತಿಪ್ಟೂರು, ಹೊಳೆನರಸೀಪುರ, ಬಾಣಾವಾರ, ಈ ಪ್ರಾಂತ ಗ್ರಾಮಗಿರಾಕಿಗಳು ಅರಸೀಕೆರೆಯಿಂದಲೇ ಹತ್ತಿಯ ತುಪ್ಪ, ಹಿಂಡಿ, ಹೊಟ್ಟುಗಳನ್ನು ತರಿಸಿಕೊಳ್ಳುವದರಲ್ಲಿ ಹೆಚ್ಚು ಖರ್ಚು ಉಳಿದು, ದರ ಸುಲಭವಾಗಿ, ಫಾಯಿದೆ ಹೆಚ್ಚುವುದು. [51-13]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್

159, ಕಿಲಾರಿ ರೋಡ್ (ಕುಂಬಾರಗರ ಪೇಟೆ), ಬೆಂಗಳೂರು ಸಿಟಿ

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಕಳೆದ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸಿರುತ್ತದೆ. ನಮ್ಮ ಏಜಂಟರು ಪಿ. ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜೆಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಆಖೈರಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ. 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬಿಳೀ ಕೆರೋಸೀನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬಿಳೀ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತ ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[296-26] 177, ಟೈನಾಬಜಾರ್ ರೋಡ್, ಮದರಾಸ್

ನಿಮ್ಮ ಜೀವಮಾನದ ಅರ್ಧ ಭಾಗವೆಲ್ಲಾ ನೀವು ವಾಯುವಿನಿಂದ ಕಷ್ಟಪಟ್ಟು, ಮುಖ್ಯ ವೈದ್ಯರಿಂದಲೂ ಆಸ್ಪತ್ರೆಯಿಂದಲೂ ಪ್ರಯೋಜನ ಹೊಂದದೆ ನಿರೀಕ್ಷೆ ಹೀನರಾಗಿದ್ದರೂ, ನಿಮ್ಮ ವಾಯುನೋವು ವಾಸಿಯಾಗಬಹುದು.

ಟಿಟಿಲ್ಸ್ ಓರಿಯಂಟಲ್ ಬಾಂ ಎಂಬುದು ತಕ್ಷಣ ಬಿಡುಗಡೆಯನ್ನು ಕೊಟ್ಟು, ನೋವನ್ನು ಹೊರಡಿಸಿ, ಕಡತುಕೊಂಡಿರುವ ಕೀಲುಗಳನ್ನೂ ನರಗಳನ್ನೂ ನಿಮ್ಮ ಪ್ರಾಯಕಾಲದಲ್ಲಿದ್ದಂತೆ ಮಾಡುವುದು.

ನವಲ್ಗಾಂಜ್‌ಷೈರಿನ ಬೋನಾರ್ ಬ್ರಿಡ್ಜಿನಲ್ಲಿರುವ ಮೆ॥ ಇ. ಗ್ರೇ ಬರೆಯುವದು:—"ವಾಯುವಿನ ಬಾಧೆಯಿಂದ ನಾನು ಬಹು ಸಂಕಟಪಡುತ್ತಿದ್ದೆನು. ಲೋಕದಲ್ಲಿ ನನ್ನಂಥವನು ಇನ್ನೊಬ್ಬನಿಲ್ಲವೆಂದು ನೆನಸಿದೆನು. ಅನೇಕ ವೈದ್ಯರಿಗೂ ಔಷಧಿಗಳಿಗೂ ಬಹಳ ಹಣ ಖರ್ಚು ಮಾಡಿದೆನು. ಆದರೂ ಪ್ರಯೋಜನವಾಗಲಿಲ್ಲ. ಹೇಳಕೂಡದಷ್ಟು ನೋವನ್ನು ಅನುಭವಿಸಿದೆನು. ನನ್ನ ಕಾಲುಗಳು ವಾಯುವಿನಿಂದ ನಡಿಯಲಾರದಿದ್ದೆನು. ನಾನು ಹತ್ತಿಪ್ಪರೆ ಹೆಣ್ಣಾಗಿತ್ತೆಂದು ನೆನಸಿದೆನು. 1 ಸೀಸೆಯ ಟಿಟಿಲ್ಸ್ ಓರಿಯಂಟಲ್ ಬಾಮನ್ನು ಉಪಯೋಗಿಸಿದ 3 ಗಂಟೆಗಳಲ್ಲಿ ಗುಣ ಕಂಡುಬಂತು. ಮರುದಿನ ನಡಿಯಲಾಯಿತು. ಆಗ್ಯೆ ನಾನು ನಡೆದು ಅನೇಕ ವಾರಗಳಾಗಿದ್ದವು. ಈಗ ಪೂರ್ಣ ಕ್ಷೇಮವೆಂದು ತಿಳಿದು ಸಂತೋಷಿಸುತ್ತೇನೆ."

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

28—5—1915 ರಿಂದ 4—6—1915 ರ ವರೆಗೆ.

ಸ್ಥಳ		ಪ್ಲೇಗ್ ಸಾಂಕ್ರಾಮಿಕ	ಪ್ಲೇಗ್ ಮೃತ್ಯು	ಕಾಲರಾ ಸಾಂಕ್ರಾಮಿಕ	ಕಾಲರಾ ಮೃತ್ಯು
		ಹರಡಿದ್ದು	ಸತ್ತದ್ದು	ಹರಡಿದ್ದು	ಸತ್ತದ್ದು
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	1	1	0	0
ಬೆಂಗಳೂರು	ಡಿಸ್ಟ್ರಿಕ್ಟು	1	1	3	3
ಮೈಸೂರು	,,	30	23	0	0
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು	ಡಿಸ್ಟ್ರಿಕ್ಟು	0	0	0	0
ಹಾಸನ	..	1	1	0	0
ಚಿತ್ರದುರ್ಗ	..	0	0	0	0
ಕಡೂರ್	..	0	0	0	0
[illegible]	..	0	0	0	0
	ಒಟ್ಟು	33	26	3	3

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣ ವಸಂತಋತು ಜ್ಯೇಷ್ಠ ಶುದ್ಧ ಷಷ್ಠಿ ಶುಕ್ರವಾರದಿಂದ ಜ್ಯೇಷ್ಠ ಶುದ್ಧ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜೂನ್

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವಿಷ್ಣು ಮಾಸ ತಾರೀಖು
18	ಶುಕ್ರ ;;	ಷಷ್ಠಿ	55-54	ಮಖಾ	44-6	4
19	ಶನಿ	ಸಪ್ತಮಿ	53-33	ಪುಬ್ಬಾ	44-10	5
20	ಭಾನು	ಅಷ್ಟಮಿ	50-18	ಉತ್ತರಾ	43-0	6
21	ಸೋಮ ‡	ನವಮಿ	45-57	ಹಸ್ತ	40-48	7
22	ಮಂಗಳ §	ದಶಮಿ	40-55	ಚಿತ್ತ	37-43	8
23	ಬುಧ †	ಏಕಾದಶಿ	35-15	ಸ್ವಾತಿ	34-10	9
24	ಗುರು *	ದ್ವಾದಶಿ	29-12	ವಿಶಾಖ	30-11	10

;; ಮಳೆ ನಕ್ಷತ್ರ—ಮೃಗಶಿರ 4 ನೇ ಪಾದ ‡ ಮಳೆ ನಕ್ಷತ್ರ—ಆರಿದ್ರಾ 1 ನೇ ಪಾದ § ದಶಹರ ದಶಮಿ. † ಸರ್ವತ್ರ ನಿರ್ಜಲೈಕಾದಶಿ, ಪಾಸ್‌ವರ್ಧಂತಿ. * ಕಟಕಾಯನಂ, ರಾಮಲಕ್ಷ್ಮಣದ್ವಾದಶಿ, ಪ್ರದೋಷ

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಅಸೋಸಿಯೇಟ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೋಕಿನಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಏಜಂಟರುಗಳು ಮತ್ತು ಬ್ರಿಟಿಷ್ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನು ಮತ್ತು ಮನೆಗಳನ್ನು ಕೊಂಡುಕೊಡುವ ಮತ್ತು ಅವುಗಳ ಮೇಲೆ ಸಾಲ ಕೊಡುವ ಡಿಪಾರ್ಟುಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳೂ ಸಹಾ ಬೇಕಾಗಿದೆ. ಇಷ್ಟವುಳ್ಳವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರಿಯಿರಿ.

M. L. NAGANNA,

[15-23] Managing Director, Life & Marriage Assurance Buildings, Mysore.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುವಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರೆಲ್ಲರ ಬಳಿಗೆ ಇಟ್ಟಿದ್ದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು— ಬಿ. ಸಿ. ಷಾ ಕಂಪನಿ, 177,

[25-20] ಟೈನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

Printed and Published by the Rev. H. Gulliford, Proprietor and Manager, Wesleyan Mission Press, Mysore. 17/6/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—೧೯೧೫ ನೇ ಇಸವಿ ಜೂನ್ ತಾರೀಖು ೨೪ ನೇ ಗುರುವಾರ. ಸಂಚಿಕೆ ೪

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ಕಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ, ಹಾಗೆಯೇ ಮನಃಶಾಂತಿಯನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಶೈತ್ಯವು ಹೆಚ್ಚಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಬಾಲಕರು ಇದನ್ನು ತೊಡೆಯು ಕೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರ ಗ್ರಾಹಕರ ಉತ್ತಮೋತ್ತಮವಾದ ಪ್ರಶಸ್ತಿಪತ್ರಗಳೂ ದೊರಕಿವೆ

—ಅವುಗಳಲ್ಲಿ ಒಂದನ್ನೇ ನೋಡಿರಿ! ನೀಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ಮರ್ಯಾದೆಹೀನರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ಖಾಸೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕದೇ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಓಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚಿಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಆಹ್ಲಾದಿಕೆಯು ಅರಳಿಕೊಂಡಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಯೇಗಿಸ ಇರಲಿ. ಈ ಓಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-22]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿಸಾದಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಓಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜಂಟ್, ಬಿ ಲೂಕ್ ಮಾರ್ಕ್, ಮಂಗಳೂರು.

ಎಮ್. ಎಸ್. ಮಲಕಣ್ಣಾ ಅಂಡ್ ಬ್ರದರ್ಸ್,

ರೇಶ್ಮೆ ಜವುಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ತಮವಾದ ರೇಶ್ಮೆ ಪಟ್ಟೆಗಳು, ಮೊಗಟೆಗಳು, ಅರಳಿಪೇಟೆ ಶೀರೆಗಳು, ಲಿಂಗ ಧರಿಸುವ ವಸ್ತ್ರಗಳು, ಸಾಧಾರಣ ಶೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-4]

ರೇಷ್ಮೆ ವಸ್ತ್ರಗಳು	ದರಗಳು	ಮೊಗಟೆ, ರೇಶ್ಮೆ ಶೀರೆ, ಲಿಂಗವಸ್ತ್ರ.
1 ನೇ ನಂಬರು 0-7-6	ತೊಲೆ 1 ಕ್ಕೆ	1 ನೇ ನಂಬರು 0-8-0
2 ,, ,, 0-7-0		2 ,, ,, 0-7-6
0-6-9		

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಓಂದುಕಾಚಾಶ್ರಿಸಾರ 0-8-0, L. S. English Texts 0-10-0, Canarese Text 0-4-0, English Notes 0-6-0, Canarese Notes 0-4-0 and 0-7-0. [8-24]

ಕಸ್ತೂರಿ ಗುಳಿಗೆಗಳು:— ಇದರಿಂದ ಫಿಟ್ಸ್, ಸೆಟಿಟೀಸ್, ಮೂರ್ಛೆ ಬರುವ ರೋಗ, ಸರ್ವ ವಾಯುಜನ್ಯ ವ ಇತರ ವಾಯು ಸಂಬಂಧವಾಗಿ ಚಿಕ್ಕವರಿಗೂ ದೊಡ್ಡವರಿಗೂ ಇರುವ ರೋಗಗಳು ಎಷ್ಟು ದೀರ್ಘಕಾಲವಾಗಿದ್ದರೂ ನಿಶ್ಚಯವಾಗಿಯೂ ಗುಣವಾಗುತ್ತವೆ ಬಾಟ್ಲಿಯ ಕ್ರಯ ರೂ. 2.

ಸ್ತ್ರೀಯರ ರಕ್ತಸ್ರಾವ ವ ಇತರ ಉದರ ರೋಗಗಳಿಗೆ ಅತ್ಯುತ್ತಮವಾದ ಔಷಧ. ಬಾಟ್ಲಿಯ ಕ್ರಯ ರೂ. 2

ರಕ್ತಶುದ್ಧಿ:— ಈ ಔಷಧದ ಸೇವನೆಯಿಂದ ದೇಹದೊಳಗಿನ ಅಶುದ್ಧವಾದ ರಕ್ತವು ಶುದ್ಧವಾಗಿ ಕಾಂತಿಯನ್ನೂ ಶಕ್ತಿಯನ್ನೂ ಉಂಟುಮಾಡುತ್ತದೆ. ಬಾಟ್ಲಿಯ ಕ್ರಯ ರೂ. 1-8-0.

ಅತ್ಯಂತ ಪೌಷ್ಟಿಕ ಧಾತುಪುಷ್ಟಿಯ ಔಷಧ. ಡಬ್ಬಿಯ ಕ್ರಯ ರೂ. 2.

ನಮ್ಮ ವಿಳಾಸ—ಸಖಾರಾಮ ಅಪ್ಪಾಜಿ ಕೋಲ್ಹಟಕರ, ವೈದ್ಯ, [92-6] ದವಾಖಾನಾ, ಠಾಕುರದ್ವಾರ ರೋಡ, ಮುಂಬಯಿ. ನಂ. 3

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಅದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [239-17]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಮೈಸೂರು ಸಂಸ್ಥಾನದ ಆಸ್ಥಾನ

ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯ ಅಯ್ಯರ್

ಅವರಿಂದ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಈ ಗ್ರಂಥವು ನಾದೋತ್ಪತ್ತಿ, ಶ್ರುತ್ಯೋತ್ಪತ್ತಿ, ಸಪ್ತಸ್ವರಪ್ರಸ್ತಾರ, ರಾಗ ಪ್ರಕರಣ, 72 ಮೇಳ ಕರ್ತೃರಾಗಗಳ ಚಕ್ರ, ಪಕ್ಷಾಂತರ ರಾಗಗಳು, ತಾಳ ಪ್ರಕರಣ, ತಾಳಪ್ರಸ್ತಾರ, ಸಪ್ತತಾಳಗಳ ಲಕ್ಷಣ, ತಾಳಸಂಜ್ಞೆ, ಮಂದ್ರ, ಮಧ್ಯ, ತಾರಕಸ್ಥಾನಗಳನ್ನು ತೋರಿಸತಕ್ಕ ಸಂಜ್ಞೆಗಳಿಂದ ಕೂಡಿದ ಸರಳೆ, ವರಸೆ, ಜಂಟಿ ವರಸೆ, 35 ಅಲಂಕಾರಗಳು, ಗೀತಗಳು, ಸ್ವರಜತಿಗಳು, ತಾನಗಳು, ತಾನವರ್ಣಗಳು ಮತ್ತು ಚಿಟ್ಟಿ ಸ್ವರಗಳುಳ್ಳ ಕೀರ್ತನೆಗಳು, ಇವೇ ಮೊದಲಾದವುಗಳಿಂದ ಶೋಭಿಸುತ್ತದೆ. ವಾದ್ಯ ಮತ್ತು ಬಾಯಿಪಾಠಕ್ಕೂ ತುಂಬಾ ಅನುಕೂಲವಾಗಿರುತ್ತದೆ. ಇಂಥಾ ಸಮಯವು ಮುಂದೆ ದೊರೆಯಲಾರದು. ಡೆಮ್ಮಿ ಅಷ್ಟಪತ್ರ, 326 ಪುಟಗಳು. [108-3]

ಕ್ರಯ ರೂ. 1-4-0. ಅಂಚೆ ಹಾಸಲು ಬೇರೆ.

ವಿಳಾಸ:—(1) ಎಂ. ವೆಂಕಟರಾಮಯ್ಯ, ಚಾಮರಾಜಪೇಟೆ, ಮೈಸೂರು.
(2) ಎಂ. ಎಸ್. ರಾವ್. ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

A Modern General English:—issued in **Monthly Parts**. **Subscription** till next March Rs. 1¼ only. **Our Notes** and **Spelling Book** supplied as parts. Apply to

M. N. SITA RAMA RAO.
[88-6] **Krishnaraja Mohalla, Mysore.**

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ವಿಕರಿಗೆ ಸಿದ್ಧವಾಗಿವೆ ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-20] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ದಾರಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[201-42] GIRLS' INDUSTRIAL SCHOOL, HASSAN.

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಕಳೆದ ತಿಂಗಳ ಅಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸಿರುತ್ತದೆ. ನಮ್ಮ ಏಜಂಟರು ಪಿ. ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜೆಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನು ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ತಿಂಗಳ ಅಖೈರಿಗೆ ಸರಿಯಾಗಿ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಪ್ರಾರ್ಥನೆ.

ತುಮಕೂರಲ್ಲಿ ಕೆಲವರು ನಮ್ಮ ಮೇಲೆ ದ್ವೇಷವನ್ನು ಸಾಧಿಸುತ್ತಾ ಹಾಸನ, ಶಿವಮೊಗ್ಗೆ ವಗೈರೆ ಸ್ಥಳಗಳಲ್ಲಿ ದುಷ್ಪ್ರೇರಣೆಯಿಂದ ಜನಗಳನ್ನೇರ್ಪಡಿಸಿ ನಮ್ಮ ಮತ್ತು ನಮ್ಮ ಹೆಂಗಸರ ಮೇಲೆ ಸುಳ್ಳು ಕ್ರಿಮಿನಲ್ ಫಿರ್ಯಾದುಗಳನ್ನು ಮಾಡಿಸಿ ಕಷ್ಟ ನಷ್ಟ ಅವಮಾನಗಳಿಗೆ ನಮ್ಮನ್ನು ಗುರಿಮಾಡಬೇಕೆಂದು ಇರುತ್ತಾರೆ. ಈ ಪ್ರೇರಣೆಗೆ ಯಾರೂ ಕಿವಿಗೊಡಬಾರದೆಂತಲೂ, ಆಯಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಇತರ ಮ್ಯಾಜಿಸ್ಟ್ರೇಟರೂ ಇಂಥಾ ಫಿರ್ಯಾದುಗಳಿಗೆ ಅವಕಾಶಕೊಡಕೂಡದೆಂತಲೂ ಪ್ರಾರ್ಥಿಸುತ್ತೇವೆ. [114-2]

ತುಮಕೂರು, ಟಿ. ಗುರುಚನ್ನಬಸವಯ್ಯ,
ತಾ. 1-6-15. ಟಿ. ಗುಬ್ಬಯ್ಯ.

ನಕ್ಲಿಗಳಿಂದ ಮೋಸಹೋಗದಿರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಲಿಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ವರೆಗೆ ಇದರ ಸುವಾಸನೆ ನಿಲ್ಲುವದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ¼ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲಿಣ್ಣೆಗೆ ಹಾಕುವ ಬೇರೆ ಕೆರೋಸಿನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಾಕರ ಕೂದಲೆಣ್ಣೆ

ಇದಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ಸರಕುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,
[296-25] 177, ಮಿಂಟ್‌ಸ್ಟ್ರೀಟ್ ರೋಡ್, ಮದರಾಸ್.

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ......	0-8-0	ಸರಳಬಾಲೆ	0-8-0
ತಾರಾಸುಂದರಿ......	0-8-0	ಕುಮುದಿನಿ	0-6-0
ರಾಧಾಮಾಧವ......	0-8-0	ಸಂಜಾವಳಿ	0-4-0

[275–28] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಧ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3–8–0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ... ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ಸಾಧ್ಯವಾದ ಯಂತ್ರ ಸಾಧನಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು, ಖಾತ್ರಿಯಾದದ್ದು, ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಶರಂಪರ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ
[180–34] ಮೊದಲಿ ಬೀದಿ, ತಿರುವಲ್ಲಕೇಣಿ, ಮದರಾಸು.

ಪಕ್ಷವಾಯುವಿನವರೂ ಸ್ವಸ್ಥವಾಗುತ್ತಾರೆ

ಬದುಕಿದ್ದರೂ ಅರ್ಧ ಸತ್ತಿರುವ ಪಕ್ಷವಾಯುವಿನವರನ್ನು ಕಂಡರೆ ವ್ಯಸನವಾಗುತ್ತೆ. ಈ ಭಯಂಕರವಾದ ರೋಗದಿಂದ ಕಷ್ಟಪಡುತ್ತಿರುವ ಮಗನಾದರೂ ಮಗಳಾದರೂ ನಿಮಗಿದ್ದಾರೋ? ಇಂಥಾ ಕಷ್ಟದಿಂದಲೂ ಯತ್ನವಿಲ್ಲದಿರುವಿಕೆಯಿಂದಲೂ ಬಿಡುಗಡೆಯಾಗಲು ಮರಣವನ್ನು ಅಪೇಕ್ಷಿಸುವ ಸ್ನೇಹಿತರ್ಯಾರಾದರೂ ನಿಮಗಿದ್ದಾರೋ?

ಲಂಡನ್ ನಗರದ ಮಿನ್ಸ್ಟರ್ ಬೀದಿಯಲ್ಲಿರುವ ಮಿ॥ ಆ. ಜೆ. ಓರ್ಟನ್‌ರವರು ಬರೆಯುವುದು:—"ನನ್ನ ಮಗಳ ಪಕ್ಷವಾಯುವನ್ನು ಗೆಟ್ಟಿಗರಾದ ಆರುಮಂದಿ ವೈದ್ಯರು ನೋಡಿ ಔಷಧಿಕೊಟ್ಟರು. ಆದರೆ ಆಕೆಗೆ ಯಾರೊಬ್ಬರಿಂದಲಾದರೂ ಏನೂ ಪ್ರಯೋಜನವಾಗಲಿಲ್ಲ. ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿದಾಗಿನಿಂದ ತುಂಬಾ ಬದಲಾವಣೆ ಯಾಯಿತು. ಆಕೆಯು ಇದಕ್ಕೆ ಮುಂಚೆ ಅನುಭವಿಸದಂಥಾ ಹೊಸ ಜೀವವೂ ಹೊಸ ಬಲವೂ ತನಗೆ ಬಂದಂತೆ ವರ್ಣಿಸುತ್ತಾಳೆ. ಬೇಗ ಆಕೆಯು ಪೂರ್ಣ ಸ್ವಸ್ಥಳಾಗುವಳೆಂದು ನಿಸ್ಸಂದೇಹವಾಗಿ ತಿಳಿದಿದ್ದೇನೆ."

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

[81-8]

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಪ್ರತ್ಯೇಕ ... ದಾಖಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಐನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಇಲ್ಲದುಹೋದಾವು. ಆದುದರಿಂದ ತ್ವರೆಮಾಡಿರಿ!

[64-12]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ... ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ... ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕಳ್ಳ ಔಷಧಗಳನ್ನು ಪಡಕೊಳ್ಳದೇ ಇರಿ. ... ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖುಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-6-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್. ಮುಂಬಯಿ, ಮತ್ತು 7 ಜಹಂಗೀರ್ ಸ್ಟ್ರೀಟ್, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಸೆಳೆತ (ಛಾರ), ಮೈ ನಡುಕ, ... ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ವಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಸಂದುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳು ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-42]

(1) ಮ॥ ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಹೆಚ್ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟು, ಇವರು ಬರೆಯುವುದು —"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಆ ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ॥ ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟು ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನನ್ನ ಕಡೆ ಉಪಯೋಗಿಸದವರಿಲ್ಲವೂ ಹೊಗಳುತ್ತಾರೆ,

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು
ಒಂದು ಸಲ ಪರೀಕ್ಷಿಸಿ ನೋಡಿರಿ.
ಅಸಮಾನವಾದದ್ದು.

ಜಿನ್‌ಟಾನ್ ಎನ್ನುವದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದವು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಟಣ 1 ಕ್ಕೆ	ಕ್ರಯ	0-1-6
65 ,, ,, ,, ...	,,	0-3-0
195 ,, ಪೊಟ್ಟಣ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	,,	0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-8]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಸ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3-0-0.

ಜೂನ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆ ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಬುಸಾಮಿ

[111-3] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು: ತಲೆನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋದಕದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-43]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್. ಪಿ. ೬. ಬಾಕ್ಸ್ ೨೦, ಬೊಂಬಾಯಿ—ಅವರಲ್ಲಿ ದೊರೆಯುವುವು.

ಮಕ್ಕಳ ಆರೋಗ್ಯ.
ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಉಬ್ಬಸ, ಕ್ಷಯ, ಗರ್ಭವೆಟ್ಟು ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-32]

ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಶ್ವಾಸಕಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 3-0-0 ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿ ಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0. ಶ್ವಾಸಕುಠಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದ ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247-32] 20, ಚೀನಾಬಜಾರು ರೋಡು, ಮದರಾಸು.

ಪಂಡಿತ್ ಗರಳಪುರಿಯ 100 ವರ್ಷದ ಅನುಭವ ಔಷಧಿಗಳು.

"ಜ್ವರದೆಮಾತ್ರೆ." ಬಹು ಕುಂಠಿತ! ಬಹು ಜಾತಿಯಿಂದ ಎಲ್ಲಾ ವಿಧ ಜ್ವರಗಳನ್ನೂ ನಿವಾರಿಸಿ ಶಾಶ್ವತ ಗುಣಕೊಟ್ಟಿದೆ. ಇದರಿಂದ ಗುಣ ಕಾಣದವರೇ ಇಲ್ಲ. 24 ಮಾತ್ರೆ ಶೀಸೆಗೆ 8 ಆಣೆ, 6 ಶೀಸೆಗೆ 2½ ರೂ. ಇನ್ನೂ ಬಹು ಗುಣಕಾರಿ ಔಷಧಿಗಳು ನಮ್ಮಲ್ಲಿವೆ.

[262-29] ನಮ್ಮ ವಿಳಾಸ:—ಓರಿಯಂಟಲ್ ಫಾರ್ಮಸಿ, ಮೈಸೂರು.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಂಗರು, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[221-37] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-30] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0. ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[೨೭-12]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ನಮ್ಮ ಏಜೆಂಟರಿಗೂ ಚಂದಾದಾರರಿಗೂ.

1915-16 ನೇ ಸಾಲಿನ "ವೃತ್ತಾಂತ ಪತ್ರಿಕೆ"ಯ ಚಂದಾ ಈಗ ಕೊಡಬೇಕಾಗಿದೆ; ಇದು ಖಂಡಿತವಾಗಿಯೂ ಅಡ್ವಾನ್ಸಾಗಿಯೇ ಪಾವತಿಯಾಗತಕ್ಕದ್ದು. ಯಾರು ಹೀಗೆ ಮುಂಗಡವಾಗಿ ಚಂದಾ ಪಾವತಿ ಮಾಡುವುದಿಲ್ಲವೋ ಅವರಿಗೆ ಪತ್ರಿಕೆಗಳನ್ನು ಕೊಡುವುದನ್ನು ನಿಲ್ಲಿಸಬೇಕೆಂದು ನಮ್ಮ ಎಲ್ಲಾ ಏಜೆಂಟರುಗಳಿಗೂ ಈ ಮೂಲಕ ಎಚ್ಚರಿಸುತ್ತೇವೆ.

ಮೈಸೂರು. ಎಚ್. ಗಲ್ಲಿಫೋರ್ಡ್.

ವೃತ್ತಾಂತ ಪತ್ರಿಕೆ.

—:o:—

೧೯೧೫ ನೇ ಇಸವಿ ಜೂನ್ ತಾ. ೨೪ ನೇ ಗುರುವಾರ.

ವರ್ಧಂತಿಯ ಉತ್ಸವಗಳು.

ನೆನ್ನೆ ನಮ್ಮ ಮಹಾರಾಜಾ ಸರ್ ಶ್ರೀಕೃಷ್ಣರಾಜ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ರವರ ವರ್ಧಂತಿ ಕಟ್ಟಳೆಯ ಉತ್ಸವಗಳು ರಾಜಧಾನಿಯಲ್ಲಿ ಕೋಲಾಹಲವಾಗಿ ನೆರವೇರಿದವೆಂದು ತಿಳಿಸಲು ಆನಂದಪಡುತ್ತೇವೆ. ಈ ವಾರ್ತೆಯು ಈ ಸೀಮೆಯ ಸಕಲ ಪ್ರಜೆಗಳಿಗೂ ಅತಿಶಯವಾದ ಸಂತೋಷವನ್ನೂ ಸಂಭ್ರಮವನ್ನೂ ಉಂಟುಮಾಡಿರುವುದಕ್ಕೆ ಸಂಶಯವಿಲ್ಲ. ನಮ್ಮ ಶ್ರೀಮನ್ಮಹಾರಾಜರವರು ಉಲ್ಲಾಸಯುಕ್ತವಾದ ಆರೋಗ್ಯವನ್ನು [redacted]ತ್ತಾ ಸಂಸ್ಥಾನದ ಶ್ರೇಯೋಭಿವೃದ್ಧಿಗಾಗಿ ಸಮರ್ಥತೆಯಿಂದ ಕಾರ್ಯಗಳನ್ನು ನಡಸುತ್ತಾ ಬಂದಿರುವುದನ್ನು ನೋಡಿ ಸಕಲ ಪ್ರಜೆಗಳ ಕೂಡ ನಾವೂ ಪರಮಾನಂದ ಪಡುತ್ತೇವೆ. ಪ್ರಭುಗಳು ಅನೇಕಾನೇಕ ಸಂವತ್ಸರಗಳ ತನಕ ಭಾಗ್ಯಶಾಲಿಗಳಾಗಿ ಬಾಳುತ್ತಾ ಇಂಥಾ ಪ್ರಜೆಗಳನ್ನು ಪರಿಪಾಲಿಸುತ್ತಾ ಬರುವಂತಾಗಲೆಂದು ಪ್ರಾರ್ಥಿಸುತ್ತೇವೆ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಗಳು ಆರಂಭವಾಗುವುದಕ್ಕೆ ಮುಂಚೆ ಕೆಲವು ದಿನಗಳೂ ಆ ಬಳಿಕ ಕೆಲವು ಕಾಲದ ತನಕ ರಾಜಧಾನಿಯಲ್ಲಿ ಹಲವು ಕೂಟಗಳೂ ಸಮಾಜಗಳೂ ನಡೆಯುತ್ತವೆ. ನಮ್ಮ ಸಂಸ್ಥಾನಕ್ಕೆ ಶ್ರೇಯಸ್ಸನ್ನುಂಟುಮಾಡಬೇಕೆಂಬುವುದೇ ಈ ಸಭೆಗಳ ಉದ್ದೇಶವಾಗಿರುತ್ತದೆ. ಈ ವರುಷ ಅಂಥಾ ಸಭೆಗಳು ಸ್ವಲ್ಪ ಪಡಾಗಿ ನಡೆಯುವವು. ಅವುಗಳಲ್ಲಿ ಎದುರುವಾದಿಸುವ ಅಥವಾ ವಿರೋಧವನ್ನೆಣಿಸುವ ಭಾಗ ಕಡಮೆಯಾಗುತ್ತಿರುವುದು. ಯುದ್ಧವೆಂಬ ಮಂಜು ಸಕಲಕಾರ್ಯಗಳನ್ನೂ ಆವರಿಸಿಕೊಂಡಿರೋಣದರಿಂದ ಈ ಉತ್ಸವಗಳಲ್ಲಿ ಬಹು ಭಾಗಗಳನ್ನು ಕಡಮೆ ಮಾಡಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಮನಸ್ಸಿಗೆ ವಿಶ್ರಾಂತಿಯನ್ನೂ ಉಲ್ಲಾಸವನ್ನೂ ಉಂಟುಮಾಡುವ ವಿಚಾರಗಳು ಜರುಗುವುದು ಒಳ್ಳೇದು. ಈ ಸಭೆಗಳ ಮುಖ್ಯ ಉದ್ದೇಶವು ನಮ್ಮ ಸಂಸ್ಥಾನಕ್ಕೆ ಹಿತವಾಗಬೇಕೆಂಬುವುದಾದ್ದರಿಂದ ಈ ವಿಷಯದಲ್ಲಿ ನಾವು ಸಂತೋಷಪಡುತ್ತೇವೆ.

ಸಂಪದಭಿವೃದ್ಧಿ ಸಮಾಜದ ಐದನೇ ವಾರ್ಷಿಕ ಸಭೆಯು ಮೊನ್ನೆ ಸೋಮವಾರ ಪ್ರಾರಂಭವಾಗಿ ನಡೆಯುತ್ತಿರುವುದು. ಈ ಸಮಾಜದವರು ನಮಗೆ ಕಳುಹಿಸಿಕೊಟ್ಟಿರುವ ರಿಪೋರ್ಟುಗಳನ್ನು ಓದಿ ನೋಡಿದೆವು. ಅಷ್ಟೇನೂ ಉತ್ಸಾಹವಾಗಲಿ, ಸಂತೋಷವಾಗಲಿ ಉಂಟಾಗುವಂಥಾ ಕಾರ್ಯಗಳು ನಡೆದವೆ ಎಂದು ನಮಗೆ ಕಂಡುಬರುವುದಿಲ್ಲ. ಸಕಲ ಪ್ರಜೆಗಳೂ ತಿಳಿಯಬಹುದಾದ ವಿಷಯಗಳು ಈ ಸಭೆಯಲ್ಲಿ ಹೊರಪಡುವುದನ್ನು ನಿರೀಕ್ಷಿಸಿಕೊಂಡಿದ್ದೇವೆ. ಪ್ರಜೆಗಳೆಲ್ಲಾ ತಿಳಿಯಬಹುದಾದ ವಿಚಾರಗಳಾಗಲಿ, ತಿಳಿಯಬಾರದ ಸಂಗತಿಗಳೇನೋ ಅಡಗಿಸುವುದು ಬಹಳ ಪ್ರಯಾಸವಾಗಿದೆ. ಈ ಸಭೆಯ ಶಾಖೆಗಳು ನಡಸುವ ಕೆಲಸಕಾರ್ಯಗಳು ಬಹಳ ಗೋಪ್ಯವಾಗಿರಬೇಕಂತೆ. ಆದಾಗ್ಯೂ ಎಲ್ಲರಿಗೂ ಅವರು ಮಾಡುವ ಕೆಲಸಗಳು ಸಾಮಾನ್ಯವಾಗಿ ತಿಳಿದಿರುವವೆಂದು ಹೇಳಬಹುದು. ಗವರ್ನ್‌ಮೆಂಟಿನವರು ಮಾಡುವ ಕಾರ್ಯಗಳು ಸಮಂಜಸವಾಗಿರಬೇಕು; ಅಂದರೆ, ಈ ಕೂಟಗಳೆಲ್ಲಾ ಗೋಪ್ಯವಾಗಿ ನಡೆಯಬೇಕು, ಇಲ್ಲವೇ ಎಲ್ಲವೂ ಬಹಿರಂಗವಾಗಿ ನಡೆಯಬೇಕು. ನಮಗೆ ತಲುಪಿರುವ ಕೆಲವು ಕಾಗದ ಪತ್ರಗಳ ಮೇಲೆ "ಗುಟ್ಟಾದದ್ದು" ಎಂದು ಗುರುತುಮಾಡಲ್ಪಟ್ಟಿದೆ; ಇನ್ನು ಕೆಲವನ್ನು ನೋಡಿದರೆ ಅವುಗಳಲ್ಲಿ ಗೋಪ್ಯವಾಗಿಟ್ಟಿರಬೇಕಾದ ವಿಚಾರಗಳೇನೂ ಕಾಣುವುದಿಲ್ಲ. ಆದಕಾರಣ ಗವರ್ನ್‌ಮೆಂಟಿನವರು ಈ ತಾರತಮ್ಯವನ್ನು ವರ್ಜ ಮಾಡಬೇಕು; ಹಾಗಿಲ್ಲದಿದ್ದರೆ ಎಲ್ಲವನ್ನೂ ಏಕರೂಪವಾಗಿ ಮಾಡಬೇಕು.

ಸಂಸ್ಥಾನದ ಮುನಿಸಿಪಾಲಿಟಿಗಳ ಮತ್ತೂ ಲೋಕಲ್ ಬೋರ್ಡುಗಳ ಸಮಾಜವು ಕಳೆದ ಗುರುವಾರ ತಪ್ಪಿ ತಾ. ೨೧ನೇ ಸೋಮವಾರ ಬೆಳಗ್ಗೆ ದಿವಾನ್ ಬಹದ್ದೂರ್ ಕೃಷ್ಣಯ್ಯಂಗಾರ್ ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ ಮೂರು ದಿನ ನಡೆಯುವುದು. ಲೋಕಲ್ ಸ್ವಕೀಯಾಧಿಕಾರವನ್ನು ಪಾಲಾಯಿಸುವ ವಿಷಯದಲ್ಲಿ ಪ್ರಜಾಪಕ್ಷದ ಮೆಂಬರುಗಳ ಅಭಿಮತವೇನೆಂಬುವುದು ಈ ಸಭೆಯಲ್ಲಿ ಹೊರಪಡುತ್ತದೆ. ಮತ್ತು ಪ್ರಜಾಪ್ರತಿನಿಧಿಗಳು ನಮ್ಮ ಸೀಮೆಯ ಗ್ರಾಮ ಊರುಗಳ ಆರೋಗ್ಯವೇ ಮೊದಲಾದ ವಿಚಾರಗಳನ್ನು ಕ್ರಮಪಡಿಸುವುದಕ್ಕೆ ಎಷ್ಟು ಮಟ್ಟಿಗೆ ಸಮಯವನ್ನೂ ಸಾಮರ್ಥ್ಯವನ್ನೂ ಉಪಯೋಗಿಸಬಲ್ಲರೆಂಬುವುದೂ ಈ ಸಭೆಯಿಂದ ವೇದ್ಯವಾದೀತು. ಗೌರವವೂ ಸನ್ಮಾನವೂ ಉಂಟಾಗಬೇಕೆಂಬುವ ಆಶೆ ನಮ್ಮ ಜನಗಳಲ್ಲಿ ವಿಶೇಷವಾಗಿರುತ್ತದೆ. ಪೂಜ್ಯವಾದ ಸ್ಥಾನಬೇಕೆಂದು ಕುತೂಹಲಪಡುವರು. ಆದರೆ ಅಂಥಾ ಸ್ಥಾನವನ್ನಲಂಕರಿಸುವುದಕ್ಕೆ ಸ್ವಪ್ರಯೋಜನವನ್ನು ತ್ಯಜಿಸಿ ಆ ಸ್ಥಾನಕ್ಕೆ ಅರ್ಹವಾದ ಕರ್ತವ್ಯಕಾರ್ಯಗಳನ್ನು ಯಥಾರ್ಥವಾಗಿ ನಡಿಸಬೇಕಾದದ್ದೇ ನಮ್ಮ ಧರ್ಮವಲ್ಲವೆ? ಅದರಿಂದ ನಮಗೆ ಪದವಿಯೂ, ಶ್ಲಾಘನೆಯೂ, ಸನ್ಮಾನವೂ ಬರಲೆಂದು ನಿರೀಕ್ಷಿಸುವುದು ಯೋಗ್ಯವಲ್ಲ. ನಮ್ಮ ಗ್ರಾಮವನ್ನು ಆರೋಗ್ಯಜನಕವಾಗಿಯೂ, ನಿರ್ಮಲವಾಗಿಯೂ, ಸಂತೋಷಕರವಾಗಿಯೂ ಮಾಡುವುದರಲ್ಲಿ ನಾವುಗಳು ನಮ್ಮ ಕೈಲಾಗುವ ಮಟ್ಟಿಗೂ ಸಾಹಸಪ್ರಯತ್ನಗಳನ್ನು ನಡಿಸಿದ ಪಕ್ಷದಲ್ಲಿ ಪ್ರಜೆಗಳು ಸುಖವಾಗಿಯೂ, ಆರೋಗ್ಯವಾಗಿಯೂ, ಬುದ್ಧಿಶಾಲಿಗಳಾಗಿಯೂ ಇರುವುದೇ ಅದರ ಪ್ರತಿಫಲವೆಂದು ನಾವು ಎಣಿಸಬೇಕು. ಈ ಸಭೆ ನಡೆಯುವುದು ಎಷ್ಟೋ ಹಿತಕರವಾದದ್ದು. ಇದರ ಕಾರ್ಯಗಳ ದೆಸೆಯಿಂದ ಗವರ್ನ್‌ಮೆಂಟಿಗೂ ಪ್ರಜೆಗಳಿಗೂ ತುಂಬಾ ಸಹಾಯವಾದೀತೆಂದು ನಂಬಿ ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ನ್ಯಾಯವಿಧಾಯಕ ಸಭೆಯೂ ತಾ. ೨೮ನೇ ಸೋಮವಾರ ಮಧ್ಯಾಹ್ನ ನಡೆಯುವುದು. ಈ ಸಭೆಯ ಮೆಂಬರುಗಳಿಗೆ ಸುಖಾಗಮನವನ್ನು ಬಯಸಿ, ಅವರು ಮಾಡುವ ಚರ್ಚೆಗಳಿಂದಲೂ, ರಚಿಸುವ ಕಾನೂನುಗಳಿಂದಲೂ ನಮ್ಮ ಸಂಸ್ಥಾನಕ್ಕೆ ವಿಶೇಷ ಶ್ರೇಯಸ್ಸುಂಟಾದೀತೆಂದು ನಾವು ಹಾರೈಸುತ್ತೇವೆ.

ಫಲಜ್ಯೋತಿಷ.

ಗ್ರಹಗಳ ಸ್ಥಾನಗಳನ್ನು ಗೊತ್ತುಮಾಡೋಣದರಿಂದ ಮುಂದೆ ನಡೆಯತಕ್ಕ ಕಾರ್ಯಗಳನ್ನು ತಿಳಿಸಬಲ್ಲೆವೆಂದು ಹೇಳಿಕೊಳ್ಳುವವರು ಸಾವಿರಾರು ಮಂದಿ ಇರುತ್ತಾರೆ. ಹತ್ತಾರು ಸಾವಿರ ಮಂದಿ ಇವರು ಹೇಳುವುದನ್ನು ನಂಬಿಕೊಂಡು ಗ್ರಹಗಳು ತಮ್ಮ ವಿಧಿಯನ್ನು ಗೊತ್ತುಮಾಡುತ್ತವೆಂದು ನೆನಸುತ್ತಾರೆ. ಇದು ಕುರುಡು ನಂಬಿಕೆ. ಏಕೆಂದರೆ ಗ್ರಹರಾಶಿನಕ್ಷತ್ರಗಳಿಗೂ ಮನುಷ್ಯರಿಗೂ ಇಂಥಾ ಸಂಬಂಧಗಳು ಇರುತ್ತವೆ; ಇಂಥಿಂಥಾ ಕಾರಣದಿಂದಲೇ ಅವು ಮನುಷ್ಯರಿಗೆ ಮೇಲನ್ನಾಗಲಿ ಕೇಡನ್ನಾಗಲಿ ಮಾಡಬಲ್ಲವು ಎಂದು ಯಾರಾದರೂ ತಿಳಿಸಲಾರರು. ಯಾರಾದರು ಚೆನ್ನಾಗಿ ಪರೀಕ್ಷೆಮಾಡಿ ನೋಡಿದರೆ, ಜೋಯಿಸರು ಹೇಳುವ ಕಾಲಜ್ಞಾನದ ನುಡಿಗಳೆಲ್ಲಾ ಬರೀ ಊಹೆಗಳು; ಹೊರತು ಕಾರ್ಯತಃ ಸಿದ್ಧಿಗೆ ಬರುವಂಥವುಗಳಲ್ಲವೆಂಬುದು ಬಹು ಬೇಗ ನಂಬಿಕೆಯಾಗುವುದು.

ಈಗ ನಡೆಯುತ್ತಲಿರುವ ಯುದ್ಧವು ಪ್ರಾರಂಭವಾದ ಕಾಲದಲ್ಲಿ ಈ ಜೋಯಿಸರುಗಳು ಯುದ್ಧದ ಫಲಾಫಲಗಳನ್ನು ಮುಂತಿಳಿಸುವುದರಲ್ಲಿ ತುಂಬಾ ಆಸಕ್ತರಾಗಿದ್ದರು. ಅವರು ಆಗ ಹೇಳಿದ ಕಾಲಜ್ಞಾನದ ನುಡಿಗಳನ್ನು ಈಗ ನಡೆದಿರುವ ಕಾರ್ಯಗಳು ಸುಳ್ಳಾಗಮಾಡಿರುತ್ತವೆಂಬುದನ್ನು ನಾವು ತೋರಿಸಿಕೊಡಬಲ್ಲೆವು. ಈ ಕೆಳಗೆ ಹೇಳಿರುವ ವಿಷಯಗಳು ಕಳೆದ ಆಗಸ್ಟ್ ತಿಂಗಳ ಪ್ರಾರಂಭದಲ್ಲಿ ಪ್ರಕಟಿಸಲ್ಪಟ್ಟವುಗಳು. ಇದಕ್ಕೂ ನಿಜಾಂಶಕ್ಕೂ ಎಷ್ಟು ದೂರವಿದೆಯೆಂಬುದನ್ನು ಯಾರಾದರೂ ಈಗ ಮನದಟ್ಟುಮಾಡಿಕೊಳ್ಳಬಹುದು.

ಆಗಸ್ಟ್ 29-30—ಘೋರವಾದ ಯುದ್ಧ.

ಈ ದಿನಗಳಲ್ಲಿ ಯುದ್ಧವು ನಡೆದುದೇನೋ ವಾಸ್ತವ. ಆದರೆ ಇದನ್ನು ಯಾರಾದರೂ ಊಹಿಸಿ ಹೇಳಬಹುದಾಗಿತ್ತು.

ಸೆಪ್ಟೆಂಬರ್ 2—ಬ್ರಿಟಿಷರವರಿಗೆ ವಿಶೇಷವಾದ ಜಯ.

ಆ ದಿನ ದೊಡ್ಡ ಯುದ್ಧವು ನಡೆಯಲೇ ಇಲ್ಲ.

ಸೆಪ್ಟೆಂಬರ್ 7—ಮತ್ತೊಂದು ಘೋರವಾದ ಯುದ್ಧ.

ಆ ದಿನವೂ ಅದರ ಹಿಂದಿನ ದಿನವೂ ಘೋರವಾದ ಯುದ್ಧಗಳು ನಡೆದುವು. ಆದರೆ ಇದನ್ನು ಸುಲಭವಾಗಿ ಊಹಿಸಿ ಹೇಳಬಹುದಾಗಿದ್ದಿತು.

ಸೆಪ್ಟೆಂಬರ್ 14—ಜರ್ಮನಿಯ ಯುವರಾಜನಿಗೆ ಅಪಾಯ.

ಇದನ್ನು ಸ್ಪಷ್ಟಪಡಿಸತಕ್ಕ ಕಾರ್ಯವು ಸಂಭವಿಸಲೇ ಇಲ್ಲ.

ಸೆಪ್ಟೆಂಬರ್ 15.—ಇಟಲಿ ಇಂಗ್ಲೆಂಡಿನ ಸಂಗಡ ಸೇರಿಕೊಳ್ಳುತ್ತದೆ.

ಇಟಲಿ ಈಗತಾನೇ ಇಂಗ್ಲೆಂಡಿನ ಸಂಗಡ ಸೇರಿಕೊಂಡಿದೆ.

ಸೆಪ್ಟೆಂಬರ್ 19-23—ದೀರ್ಘಯುದ್ಧ.

ಯುದ್ಧವು ಪ್ರಾರಂಭವಾದ ಲಾಗಾಯತು ಪ್ರತಿದಿನವೂ ಹೇಗೋ ಹಾಗೆಯೇ ಆ ದಿನಗಳಲ್ಲೂ ಯುದ್ಧವು ನಡೆಯಿತು.

ಅಕ್ಟೋಬರ್ 9—ಸಮಾಧಾನದ ಯೋಚನೆ.

ಈ ವರೆಗೂ ಸಮಾಧಾನದ ಯೋಚನೆಯನ್ನು ಮಾಡಿರುವುದಿಲ್ಲ.

ಅಕ್ಟೋಬರ್ 16—ಬ್ರಿಟಿಷ್ ನಾವಿಕರಿಗೆ ಅದ್ವಿತೀಯವಾದ ಜಯ.

ಈ ದಿನ ಸಮುದ್ರದ ಯುದ್ಧವು ನಡೆಯಲೇ ಇಲ್ಲ.

ನೊವೆಂಬರ್ 16, 17—ಇಂಗ್ಲೆಂಡಿಗೆ ದೊಡ್ಡ ಜಯ.

ಈ ದಿನಗಳಲ್ಲಿ ವಿಶೇಷ ಕಾರ್ಯಗಳೇನೂ ನಡೆಯಲಿಲ್ಲ.

ಡಿಸೆಂಬರ್ 3—ಮತ್ತೊಂದು ಪ್ರಾಮುಖ್ಯವಾದ ಯುದ್ಧ.

ಆ ದಿನದಲ್ಲಿ ಪ್ರಾಮುಖ್ಯವಾದ ಯಾವ ಕಾರ್ಯವಾದರೂ ಸಂಭವಿಸಲಿಲ್ಲ.

ಜನುವರಿ 3—ಸಮಾಧಾನದ ಆಲೋಚನೆ.

ಸಮಾಧಾನದ ಯಾವ ಆಲೋಚನೆಯನ್ನಾದರೂ ಮಾಡಲಿಲ್ಲ.

ಜನುವರಿ 19—ಸಮಾಧಾನವನ್ನು ಉಂಟುಮಾಡುವ ಸಂಘ.

ಇಂಥ ಯಾವ ಸಂಘವಾದರೂ ಈ ವರೆಗೂ ನಡೆದಿರುವುದಿಲ್ಲ.

ಜನುವರಿ 26—ವಿರೋಧಭಾವಗಳು ಇಲ್ಲದೆ ಹೋಗುವವು.

ಯುದ್ಧವು ಈವರೆಗೂ ಕೊನೆಗಾಣದಿರುವುದಿಲ್ಲ.

ಮಾರ್ಚಿ—ಯೂರೋಪಿನಲ್ಲಿ ಸಮಾಧಾನವು ನೆಲೆಗೊಳ್ಳುವುದು.

ಈಗಲಾದರೂ ಸಮಾಧಾನವು ನೆಲೆಗೊಂಡಿಲ್ಲವಾದುದರಿಂದ ವಿಷಾದಪಡಬೇಕಾಗಿದೆ.

ಜೋಯಿಸರ ಮಾತುಗಳು ಎಷ್ಟು ಸುಳ್ಳಾಗಿರುತ್ತವೆಯೆಂಬುದನ್ನು ಮೇಲೆ ತಿಳಿಸಿರುವ ವಿಷಯಗಳು ವ್ಯಕ್ತಪಡಿಸುತ್ತವೆ. ಅವರ ಊಹೆಗಳಲ್ಲಿ ಒಂದೆರಡು ಮಾತ್ರ ಸುಮಾರಾಗಿ ನಿಜವೆಂದು ಹೇಳಬಹುದು. ಆದರೆ ಹೆಚ್ಚಿನ ಭಾಗವು ಕೇವಲ ತಪ್ಪಾಗಿರುತ್ತವೆ. ಅವರು ಹೇಳಿರುವ ಸಂಗತಿಗಳೇ ಬೇರೆ; ನಡೆದಿರುವ ಕಾರ್ಯಗಳೇ ಬೇರೆ. ಈ ಜೋಯಿಸನು ಹೇಗೋ ನಿಜವಾದ ಸಂಗತಿಗಳಿಗಿಂತಲೂ ನಿಜವಲ್ಲದ ಸಂಗತಿಗಳನ್ನು ಹೆಚ್ಚಾಗಿ ಮುಂತಿಳಿಸಿರುತ್ತಾನೆ. ಇವನ ಮಾತುಗಳು ಸಂಪೂರ್ಣವಾಗಿ ನಂಬಿಕೆಗೆ ಅರ್ಹವಾದುವುಗಳಲ್ಲ.

ಒಬ್ಬ ಜೋಯಿಸನು ಮುಂತಿಳಿಸಿದ ಸಂಗತಿಗಳೆಲ್ಲವೂ ಕೇವಲ ಸುಳ್ಳಾಗಿ ಪರಿಣಮಿಸಿರುವುದನ್ನು ಇಲ್ಲಿ ನಾವು ಎತ್ತಿ ತೋರಿಸಿರುತ್ತೇವೆ. ಜೋಯಿಸರು ಹೇಳುವ ಮಾತುಗಳನ್ನು ನಾವು ತುಂಬಾ ಜಾಗರೂಕತೆಯಿಂದ ಪರಿಶೋಧಿಸಿ ನೋಡಿದರೆ, ಹತ್ತು ಮಂದಿಯಲ್ಲಿ ಒಂಭತ್ತು ಮಂದಿ ಹೇಳುವ ಮಾತುಗಳು ಇದರಂತೆ ಬರೀ ಸುಳ್ಳಾಗಿಯೇ ಇರುವುವು. ನಡೆಯತಕ್ಕ ಕಾರ್ಯಗಳು ಅವರು ಹೇಳಿದ ಮಾತಿಗೆ ಸರಿಯಾಗುವುದಿಲ್ಲ. ಹೀಗಿದ್ದರೂ ಅನೇಕಾನೇಕ ಮಂದಿ ಈ ಜೋಯಿಸರು ಹೇಳುವ ಮಾತುಗಳನ್ನೇ ನಂಬಿಕೊಂಡು, ಯಾವ ಆಧಾರವೂ ಇಲ್ಲದೆ ತಮಗೆ ದುರ್ದೆಸೆಯು ಪ್ರಾಪ್ತಿಸುವುದೆಂದು ವ್ಯಾಕುಲಪಡುವರು ಅಥವಾ ತಮಗೆ ಸುದೆಸೆಯು ಲಭ್ಯವಾಗುವುದೆಂದು ಆಶಾಕಿಯಿಂದ ಕಾದಿರುವರು.

ಮುಂದೆ ನಮಗೆ ಏನೇನು ಸಂಭವಿಸಲಿಕ್ಕಿದೆಯೆಂಬುದು ಯಾರಿಗೂ ತಿಳಿದಿರುವುದಿಲ್ಲ. ನಮ್ಮನ್ನು ಪವಿತ್ರರನ್ನಾಗಿಯೂ ಒಳ್ಳೆಯವರನ್ನಾಗಿಯೂ ಪರೋಪಕಾರಿಗಳನ್ನಾಗಿಯೂ ಮಾಡಿಕೊಳ್ಳುವುದಕ್ಕಾಗಲಿ ಅಥವಾ ಅಪವಿತ್ರರನ್ನಾಗಿಯೂ ದುಷ್ಟರನ್ನಾಗಿಯೂ ಸ್ವಾರ್ಥಪರರನ್ನಾಗಿಯೂ ಮಾಡಿಕೊಳ್ಳುವುದಕ್ಕಾಗಲಿ ಬಹು ಮಟ್ಟಿಗೆ ನಾವೇ ಶಕ್ತರಾಗಿರುತ್ತೇವೆ. ಇದು ಗ್ರಹಗಳಿಂದಾಗಲಿ ಜೋಯಿಸರಿಂದಾಗಲಿ ಆಗುವುದಿಲ್ಲ; ನಮ್ಮಿಂದಲೇ ಆಗತಕ್ಕದ್ದು. ನಾವು ಮೊದಲು ದೇವರನ್ನು ತಿಳಿಯಬೇಕು. ಆತನು ನಮ್ಮನ್ನು ಪ್ರೀತಿಸುವಂಥಾ ನಮ್ಮನ್ನು ಪಾಪದಿಂದಲೂ ಸ್ವಾರ್ಥತೆಯಿಂದಲೂ ಬಿಡುಗಡೆಮಾಡಬೇಕೆಂದಪೇಕ್ಷಿಸುವಂಥಾ ಪರಮತಂದೆಯಾಗಿದ್ದಾನೆಂದು ಯೇಸು ಕ್ರಿಸ್ತನು ತಿಳಿಸಿರುತ್ತಾನೆ. ನಾವು ದೇವರನ್ನು ತಿಳಿದು ಆತನನ್ನು ನಂಬಿ, ಆತನ ಆಜ್ಞೆಗಳನ್ನು ಅನುಸರಿಸಿ ಕೈಕೊಳ್ಳಬೇಕು. ಆಗ ದೇವರು ನಮ್ಮನ್ನು ಕಾಪಾಡಿ, ನಮಗೆ ಬೇಕಾಗಿರುವುವುಗಳನ್ನೆಲ್ಲಾ ದಯಪಾಲಿಸುವನೆಂಬ ದೃಢನಂಬಿಕೆಯು ನಮಗಿರುವುದು. ಆಗ್ಗೆ ನಾವು ಜೋಯಿಸರ ಮಾತಿಗೆ ಭಯಪಡಲಗತ್ಯವಿರುವುದಿಲ್ಲ. ನಮ್ಮ ಪರಮತಂದೆಯು ನಮ್ಮನ್ನು ಸುರಕ್ಷಿತವಾಗಿ ಕಾಪಾಡುತ್ತಾನೆಂಬುದು ನಮಗೆ ತಿಳಿದಿರುವುದು.

ಯುದ್ಧದ ಸಮಾಚಾರಗಳು.

ಮಹಾ ಘೋರವಾದ ಕದನವು.

ಈ ವಾರದ ತಂತಿವರ್ತಮಾನಗಳಿಂದ ಯುದ್ಧಭೂಮಿಯ ಹಲವು ಠಾಣ್ಯಗಳಲ್ಲಿ ಮಹಾ ಘೋರವಾದ ಕದನಗಳು ನಡೆದು, ಸೈನಿಕರು ಸಾವಿರಗಟ್ಟಲೆ ಮಡಿದುಹೋಗಿಯೂ ಗಾಯಪಟ್ಟೂ ಇದ್ದಾಗ್ಯೂ ಯಾವ ಕದನದಲ್ಲೂ ಜಯ ಸಾಯಿತೆಂಬ ಖಚಿತವಾದ ಫಲಿತಾಂಶವು ಕಂಡುಬಂದಿಲ್ಲವೆಂಬುವುದು ವೇದ್ಯವಾಗುತ್ತದೆ. ಸೈನ್ಯಗಳು ಹಿಮ್ಮೆಟ್ಟಿಹೋಗಿರುವುದೇನೋ ನಿಜವಾದರೂ ಅವು ಹತವಾಗಿರುವುದಿಲ್ಲ; ಮತ್ತೆ ಸಿದ್ಧವಾಗಿ ಯುದ್ಧಕ್ಕೆ ಬರಲು ಸಮರ್ಥವಾಗಿರುವವು.

ಪಶ್ಚಿಮ ರಣರಂಗದಲ್ಲಿ.

ಸೈನ್ಯಗಳ ಸಾಲಿನ ಉದ್ದಕ್ಕೂ ಅನೇಕ ಠಾಣ್ಯಗಳಲ್ಲಿ ಕದನಗಳು ನಡೆದಿರುವವು. ಬೆಲ್ಜಿಯಮ್‌ನೊಳಗೆ ಬೆಲ್ಜಿಯನ್ ಸೈನಿಕರು ಜರ್ಮನಿಯವರನ್ನು ಹಿಮ್ಮೆಟ್ಟಿಸಿದರೆಂದು ತಿಳಿಯುತ್ತದೆ.

ಅವರ ಪಕ್ಕದಲ್ಲಿರುವ ಬ್ರಿಟಿಷ್ ಸೈನ್ಯಗಳು ಎರಡು ಠಾಣ್ಯಗಳಲ್ಲಿ ಶತ್ರುವಿನ ಮೇಲೆ ನುಗ್ಗಿ ಕದನ ಮಾಡಿದವು. ಒಂದು ಠಾಣ್ಯದಲ್ಲಿ ಅವರು ಜರ್ಮನಿಯವರನ್ನು ಹಿಮ್ಮೆಟ್ಟಿಸಿ ಒಂದು ಮೈಲಿ ಉದ್ದಕ್ಕೆ ಜರ್ಮನಿಯವರ ಕಂದಕಗಳನ್ನು ಸ್ವಾಧೀನಪಡಿಸಿಕೊಂಡರು, ಆದರೆ ಪುನಃ ಆ ಕಂದಕಗಳನ್ನು ಜರ್ಮನಿಯವರು ಗೆದ್ದುಕೊಂಡರು. ಇನ್ನೊಂದು ಠಾಣ್ಯದಲ್ಲಿ ಅವರು ಜರ್ಮನಿಯವರನ್ನು ಸೋಲಿಸಿ ಅವರ 1,250 ಗಜಗಳ ಕಂದಕಗಳನ್ನು ಹಿಡಿದುಕೊಂಡಿರುತ್ತಾರಲ್ಲದೆ 213 ಸೈನಿಕರನ್ನು ಕೈಸೆರೆಯುಹಿಡಿದಿರುವರು. ಮತ್ತು ಜರ್ಮನಿಯವರ 3 ಮೆಷೀನ್ ಪಿರಂಗಿಗಳನ್ನು, ವಿಷವಾಯು (ಗ್ಯಾಸ್) ತುಂಬಿದ ಒಂದು ಪೀಪಾಯಿಯೂ ಬ್ರಿಟಿಷರ ವಶವಾದವು. ಈ ಕಂದಕಗಳನ್ನು ಗೆದ್ದುಕೊಳ್ಳಬೇಕೆಂದು ಜರ್ಮನಿಯವರು ಸಾಹಸಪಟ್ಟರು; ಆದರೆ ಅದು ಅವರಿಗೆ ಸಾಧ್ಯವಾಗದೆ ಬಹಳ ಸೈನ್ಯವನ್ನು ಕಳೆದುಕೊಂಡು ಹಿಂದಿಟ್ಟು ಹೋಗಬೇಕಾಯಿತು.

ಅಲ್ಲಿಂದ ಸ್ವಲ್ಪ ದಕ್ಷಿಣಕ್ಕೆ ಫ್ರೆಂಚ್ ಸೈನಿಕರು ಶತ್ರುವಿನ ಮೇಲೆ 3,00,000 ಸಿಡಿಮದ್ದಿನ ಗುಂಡುಗಳ ಮಳೆ ಸುರಿಸಿ ಅತ್ಯಂತ ರೌದ್ರವಾಗಿ ನುಗ್ಗಿಹೋದರು. ಜರ್ಮನಿಯವರ ಕಡೆ ತನ್ನೊಂದು ಡಿವಿಷನ್ ಅಂದರೆ ಸುಮಾರು 2,75,000 ಸೈನಿಕರು ಇರುತ್ತಾರೆಂದು ಗೊತ್ತಾದಾಗ್ಯೂ ಫ್ರೆಂಚರು ಧೈರ್ಯಗುಂದದೆ ಬಹು ಪರಾಕ್ರಮದಿಂದ ಅವರ ಮೇಲೆ ನುಗ್ಗಿ ಕದನಮಾಡಿದರು. ಜರ್ಮನಿಯವರ ಕಡೆ ಅಪಾರ ಸೈನ್ಯ ನಷ್ಟವಾಯಿತು. 600 ಯುದ್ಧಭಟರನ್ನು ಫ್ರೆಂಚರು ಕೈಸೆರೆ ಹಿಡಿದುಕೊಂಡರು. ಫ್ರೆಂಚರ ಕಡೆಯೂ ಬಹಳ ನಷ್ಟವಾಗಿದೆ. ಆದಾಗ್ಯೂ ಇವರು ಬಹು ಪರಾಕ್ರಮದಿಂದಲೂ ಶ್ಲಾಘನೀಯವಾಗಿಯೂ ಕದನಮಾಡುವರು. ಜರ್ಮನಿಯವರು ಫ್ರೆಂಚರ ಉತ್ತಮೋತ್ತಮವಾದ ಸೈನ್ಯವನ್ನು ತಮ್ಮ ಮೇಲೆ ಯುದ್ಧಕ್ಕೆ ಕಳುಹಿಸಿದ್ದರೆಂದು ಹೇಳಿದಾರೆ.

ಕೈಸೆರೆ ಹಿಡಿಯಲ್ಪಟ್ಟಿರುವ ಜರ್ಮನಿ ಸೈನಿಕರು ಹೇಳಿದ್ದೇನೆಂದರೆ—ಬೆವೇರಿಯಾ ಯುವರಾಜರವರ ಕೈಕೆಳಗಿದ್ದ ಜರ್ಮನಿಯ ಸೈನ್ಯವು ನಾಶಹೊಂದಿತು. ಈ ನಷ್ಟವನ್ನು ಭರ್ತಿಮಾಡಬೇಕೆಂದು ನಮ್ಮನ್ನು ಕಳುಹಿಸಿಕೊಟ್ಟರು. ನಾವು ಬಂದದ್ದರಿಂದ ನಷ್ಟ ಇನ್ನೂ ಹೆಚ್ಚಾಯಿತು. ಫ್ರೆಂಚರಿಗೆ ಮುಂದರಿಸಿ ನುಗ್ಗಿ ಬರುವುದಕ್ಕೆ ಯಾಕೆ ಅವಕಾಶ ಕೊಟ್ಟಿರೆಂಬುವುದನ್ನು ಕಠಿಣ ಮಾಡುವುದಕ್ಕಾಗಿ ಜರ್ಮನಿಯ ಚಕ್ರವರ್ತಿಯವರು ಖುದ್ದಾಗಿ ಬರುತ್ತಾರೆ. ಈ ಸುದ್ದಿಯನ್ನು ಕೇಳಿ ಚಕ್ರವರ್ತಿಯವರೆದುರಿಗೆ ನಿಲ್ಲುವುದಕ್ಕಿಂತ ಸಾಯುವುದೇ ಲೇಸೆಂದು ಕೆಲವು ಜರ್ಮನಿ ಉದ್ಯೋಗಸ್ಥರು ಆತ್ಮಹತ್ಯ ಮಾಡಿಕೊಂಡರು ಎಂಬೀ ರೀತಿ ತಿಳಿಸುತ್ತಾರೆ.

ಅಲ್ಲಿಂದ ಇನ್ನೂ ದಕ್ಷಿಣಕ್ಕೆ ಆಲ್ಸೇಸಿನಲ್ಲಿ ಮತ್ತೆ ಫ್ರೆಂಚರು ಮುಂದರಿಸಿ ನುಗ್ಗಿಹೋಗುತ್ತಿರುವರು. ಅವರು ಒಂದು ಗುಡ್ಡವನ್ನು ಗೆದ್ದು ಸ್ವಾಧೀನಪಡಿಸಿಕೊಂಡದ್ದಲ್ಲದೆ 300 ಜರ್ಮನಿ ಯುದ್ಧಭಟರನ್ನು ಕೈಸೆರೆ ಹಿಡಿದು ತಂದರು. ಮತ್ತೂ ಅಲ್ಲಿ ಬಹಳ ಯುದ್ಧ ಸಾಮಗ್ರಿಗಳು ಫ್ರೆಂಚರಿಗೆ ಸಿಕ್ಕಿರುತ್ತವೆ.

ಜರ್ಮನಿಯವರ ಸೈನ್ಯದಲ್ಲಿ ಅನೇಕೊಂದು ಯುದ್ಧಭಟರು ಕೊಲೆಯಾಗುತ್ತಿದ್ದಾಗ್ಯೂ ಗಾಯಪಡುತ್ತಿದ್ದಾಗ್ಯೂ ನಮ್ಮ ಪಕ್ಷದವರು ನುಗ್ಗಿಹೋಗುವುದರಲ್ಲಿ ಇಷ್ಟು ತಡೇಕೆ ಎಂದು ನೆ ಶಂಕೆಪಡಬಹುದು. ಜರ್ಮನಿಯ ಸೈನ್ಯದಲ್ಲಿ ಒಟ್ಟಾಗಿ ಸುಮಾರು 60-70 ಲಕ್ಷ ಯುದ್ಧಭಟರಿರುತ್ತಾರೆ. ಇಷ್ಟೊಂದು ಲಕ್ಷಗಟ್ಟಲೆ ಇರುವ ಸೈನ್ಯದಲ್ಲಿ ಕೆಲವು ಸಾವಿರ ಸೈನ್ಯಗಳು ನಷ್ಟವಾದ ಮಾತ್ರಕ್ಕೇ ಆ ಸೈನ್ಯದ ಬಲವು ಕುಗ್ಗುವುದಿಲ್ಲ. ಮಿಸ್ಟರ್ ಬೆಲ್ಲೊಕ್ ಎಂಬ ಪ್ರಾಜ್ಞನು ಜರ್ಮನಿ ಸೈನ್ಯದಲ್ಲಿ ದಿನ ಒಂದಕ್ಕೆ ಹತ್ತು ಸಾವಿರದಂತೆ ಯುದ್ಧಭಟರು ಲಯವಾಗುತ್ತಿದ್ದಾರೆಂದು ಹೇಳುತ್ತಾನೆ. ಹಾಗಾದರೆ ಒಂದು ತಿಂಗಳಿಗೆ 3,00,000 ಸೈನ್ಯ ನಷ್ಟವಾದಂತಾಯಿತು. ಈ ರೀತಿ ಇನ್ನೂ ಎರಡು ವರುಷ ಕದನಗಳು ನಡೆಯುತ್ತಾ ಬಂದ ಪಕ್ಷದಲ್ಲಿ ಶತ್ರುವಿನ ಸೈನ್ಯವು ಹಾಳಾದೀತೆಂದು ಹೇಳಬಹುದು. ಜಯಪ್ರದವೆಂಬುದನ್ನು ಒಂದೆರಡು ದಿನಗಳಲ್ಲಿ ಸಂಪಾದಿಸಲಾಗದು. ಅನೇಕ ಕಾಲ ನಾವು ತಾಳುತ್ತೆ ಪಟ್ಟುಕೊಳ್ಳದೆ ನೋಡುತ್ತಾ ಬರಬೇಕಾಗಿದೆ. ಇನ್ನೂ ಅನೇಕ ಘೋರವಾದ ಕದನಗಳು ನಡೆಯಲ್ಲದೆ ಈ ಯುದ್ಧವು ಕೊನೆಮುಟ್ಟುವ ಹಾಗಿಲ್ಲ.

ಜರ್ಮನಿಯ ಜೆಪ್ಪೆಲಿನ್ ಎಂಬ ಎರಡು ಭಾರಿ ವಿಮಾನಗಳು ಇಂಗ್ಲೆಂಡಿನ ಈಶಾನ್ಯಭಾಗದಲ್ಲಿ ಕಾಣಿಸಿಕೊಂಡವು. ಮೊದಲನೇ ವಿಮಾನವು ಹಾಕಿದ ಸಿಡಿಮದ್ದಿನ ಗುಂಡುಗಳಿಂದ 5 ಮಂದಿ ಗಂಡಸರೂ, 13 ಮಂದಿ ಹೆಂಗಸರೂ, 6 ಮಂದಿ ಮಕ್ಕಳೂ ಮೃತಪಟ್ಟರು; 40 ಜನರಿಗೆ ಗಾಯಗಳಾದವು. ಎರಡನೆ ಜೆಪ್ಪೆಲಿನ್ ದೆಸೆಯಿಂದ ಒಬ್ಬ ಪೋಲೀಸಿನವನ ಸಮೇತ 40 ಮರಣಗಳಾದವು, 40 ಮಂದಿಗೆ ಗಾಯಗಳಾಗಿವೆ.

ಇದಕ್ಕೆ ಪ್ರತಿಯಾಗಿ ಫ್ರೆಂಚರ 23 ವಿಮಾನ ಯಂತ್ರಗಳು ಬಾಡೆನ್‌ನಲ್ಲಿ ರೈನ್ ನದಿಯ ಬಳಿ ಇರುವ ಕಾರ್ಲ್ಸ್‌ರೂಹೆ ಎಂಬ ನಗರದ ಮೇಲೆ ಹೋಗಿ ಕೋಟೆಯ ಮೇಲೂ, ರೈಲ್ವೆ ಸ್ಟೇಷನ್ ಮೊದಲಾದವುಗಳ ಮೇಲೂ 130 ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಇದರಿಂದ 23 ಜನರಿಗೆ ಪ್ರಾಣಹೋಯಿತು; 73 ಜನರಿಗೆ ಗಾಯಗಳಾಗಿವೆ. ಎರಡು ವಿನಾ ಉಳಿದ ವಿಮಾನಗಳೆಲ್ಲಾ ಸುರಕ್ಷಿತವಾಗಿ ವಾಪಸು ಬಂದವು. ಜರ್ಮನಿ ಚಕ್ರವರ್ತಿಯವರು ತಂತಿವರ್ತಮಾನ ಕೊಟ್ಟಿರುವುದೇನೆಂದರೆ—"ಕಾರ್ಲ್ಸ್‌ರೂಹೆಯು ನನ್ನ ಪ್ರಿಯ ನಗರ. ಅದಕ್ಕೆ ದುಷ್ಟತನದಿಂದ ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದು ನನಗೆ ತುಂಬಾ ಆಗ್ರಹವುಂಟಾಗಿದೆ. ನಿರಪರಾಧಿಗಳಾದ ನನ್ನ ಸಭ್ಯ ಪ್ರಜೆಗಳ ಮೇಲೆ ಇಂಥಾ ಕ್ರೂರಕೃತ್ಯವನ್ನು ನಡಿಸಿರುವುದು ನನಗೆ ಅಪಾರ ಸಂಕಟವನ್ನುಂಟುಮಾಡಿದೆ" ಎಂದು ತಿಳಿಸಿದಾರೆ. ಆದರೆ ಜರ್ಮನಿಯ ವಿಮಾನಕಾರರು ಬಂದು ಇಂಗ್ಲೆಂಡಿನಲ್ಲಿ ನಿರಪರಾಧಿಗಳಾದ ಗಂಡಸರು, ಹೆಂಗಸರು, ಮಕ್ಕಳುಗಳನ್ನು ಸಾವಿರಾರು ಮಂದಿ ಕೊಂದು ಹೋಗಿರುವುದನ್ನು ಆ ಚಕ್ರವರ್ತಿಯವರು ಜ್ಞಾಪಿಸಿಕೊಳ್ಳಬಾರದೇ?

ಒಂದು ದೊಡ್ಡ ಜೆಪ್ಪೆಲಿನ್ ವಿಮಾನ ಯಂತ್ರವನ್ನು ನಾಶಮಾಡಿ "ವಿಕ್ಟೋರಿಯಾ ಕ್ರಾಸ್" ಎಂಬ ಪರಾಕ್ರಮದ ಬಿರುದನ್ನು ಸಂಪಾದಿಸಿಕೊಂಡ ಲೆಫ್ಟಿನೆಂಟ್ ವಾರ್ನೆಫೋರ್ಡ್ ಎಂಬ ಬ್ರಿಟಿಷ್ ಹುದ್ದೇದಾರನು ಫ್ರಾನ್ಸ್ ನಗರದಲ್ಲಿ ಒಂದು ವಿಮಾನ ಯಂತ್ರವನ್ನು ಸರಿಮಾಡುತ್ತಿದ್ದಾಗ ಅವನೂ ಅವನ ಸಂಗಡಿಗನೂ 800 ಅಡಿ ಮೇಲಿನಿಂದ ಭೂಮಿಗೆ ಬಿದ್ದು ಮೃತಪಟ್ಟರು. ಇವರ ದೇಹ ಚೂರುಚೂರಾಗಿ ಹೋದವು.

ಪೂರ್ವ ರಣರಂಗದಲ್ಲಿ.

ಗೆಲಿಸಿಯಾದಲ್ಲಿ ಘೋರವಾದ ಕದನವು ಕಳೆದ ವಾರವೆಲ್ಲಾ ನಿಲುಗಡೆಯಿಲ್ಲದೆ ನಡೆಯುತ್ತಾ ಬಂದಿರುವುದು. ಕೆಲವು ಠಾಣ್ಯಗಳಲ್ಲಿ ಬಹು ತೀವ್ರವಾದ ಕದನಗಳಾಗಿವೆ. ಆ ಪ್ರಾಂತ್ಯದಲ್ಲಿ ಜರ್ಮನ್ ಮತ್ತು ಆಸ್ಟ್ರಿಯಾ ಸೈನ್ಯಗಳು ಸುಮಾರು ನಾಲ್ವತ್ತು ಲಕ್ಷದ ವರೆಗೆ ಇದ್ದು ರಷ್ಯಾದವರ ಮೇಲೆ ಯುದ್ಧಮಾಡುತ್ತಿವೆಯೆಂತ ಹೇಳಲಾಗಿದೆ. ಈ ಸೈನ್ಯವು ರಷ್ಯಾದವರನ್ನು ಸಂಪೂರ್ಣವಾಗಿ ಹತಮಾಡಿ ಸೋಲಿಸಬೇಕೆಂದು ಸಾಹಸಪಡುತ್ತಿದೆ. ಈ ಸೈನಿಕರು ತಮ್ಮ ಪ್ರಾಣದ ಮೇಲೆ ಆಶೆಯನ್ನು ತೊರೆದು ಗುಂಪುಗುಂಪಾಗಿ ಹೋಗಿ ರಷ್ಯಾದವರ ಮೇಲೆ ಬಿದ್ದು ಕಾದಾಡಿ ಅವರನ್ನು ಹಿಮ್ಮೆಟ್ಟಿಸುತ್ತಿರುವರು. ಜರ್ಮನಿಯ ಸೈನ್ಯವು ಅಪಾರವಾಗಿರುವುದನ್ನು ಕಂಡು ರಷ್ಯಾದವರು ಕೆಲವು ಕಡೆ ತಮ್ಮ ಠಾಣ್ಯಗಳನ್ನು ಬಿಟ್ಟು ಬಹಳ ದೂರಕ್ಕೆ ಹಿಮ್ಮೆಟ್ಟಿ ಹೋದರು. ಆದಾಗ್ಯೂ ಯಾವ ಠಾಣ್ಯದಲ್ಲೂ ರಷ್ಯಾದವರ ಸೈನ್ಯವು ಸಂಪೂರ್ಣವಾಗಿ ಹತವಾಗಲಿಲ್ಲವೆಂದು ಹೇಳಬಹುದು. ಒಂದು ಠಾಣ್ಯದಲ್ಲಿ ಜರ್ಮನಿಯವರು ಜೂನ್ ತಾ 13ಲ್ಲಿ 16,000 ರಷ್ಯ ಸೈನಿಕರನ್ನು ಕೈಸೆರೆ ಹಿಡಿದುಕೊಂಡರೆಂದು ಹೇಳಲ್ಪಟ್ಟಿದೆ. ಅಲ್ಲದೆ ಆಸ್ಟ್ರಿಯದವರು ಜೂನ್ ತಾ. 14-15 ರಲ್ಲಿ 8,740 ಸೈನಿಕರನ್ನು 202 ಮಂದಿ ಹುದ್ದೇದಾರರ ಸಮೇತ ಕೈಸೆರೆ ಹಿಡಿದಿರುತ್ತೇವೆಂದೂ, ಶತ್ರುವಿನ 6 ಪಿರಂಗಿ 21 ಮೆಷೀನ್ ಪಿರಂಗಿಗಳೂ ಅವರ ವಶವಾಗಿರುತ್ತವೆಂದೂ ತಿಳಿಸಿರುತ್ತಾರೆ.

ರಷ್ಯಾದವರು ಹಿಮ್ಮೆಟ್ಟಿ ಹೋಗುತ್ತಾ ಇದ್ದರೂ ಅವರಿಗೆ ಸ್ವಲ್ಪವೂ ಅಪಾಯವುಂಟಾಗಿಲ್ಲ; ಅವರ ವೀರ್ಯ ಪರಾಕ್ರಮಗಳು ಕುಂದಲಿಲ್ಲ. ಅವರ ಸೈನ್ಯ ಒಟ್ಟಾಗಿ ಹಾಗೇ ಇರುವವು. ಶತ್ರುವಿನ ಕಡೆಯಾದರೋ ಅಪಾರ ನಷ್ಟವಾಗುತ್ತಿದೆ. ಮೇ ತಾ. 28 ರಿಂದ ಜೂನ್ ತಾ. 15 ರ ವರೆಗೆ ಒಂದು ಕಡೆಯಲ್ಲಿ ರಷ್ಯದವರು 16,000 ಸೈನಿಕರನ್ನೂ, 800 ಮಂದಿ ಹುದ್ದೇದಾರರನ್ನೂ, 34 ಪಿರಂಗಿಗಳ ಮತ್ತೂ 100 ಮೆಷೀನ್ ಪಿರಂಗಿಗಳ ಸಮೇತ ಕೈಸೆರೆ ಹಿಡಿದಿರುತ್ತಾರೆ. ಇನ್ನೊಂದು ಠಾಣ್ಯದಲ್ಲಿ ಜರ್ಮನಿಯವರು ಒಂದು ತಿಂಗಳಲ್ಲಿ 120 ರಿಂದ 150 ಸಾವಿರ ಸೈನ್ಯದ ಜನರ ಕಳೆದುಕೊಂಡಿರುವರು.

ಜರ್ಮನಿಯವರು ಯುದ್ಧದ ನೀತಿಯನ್ನು ಮೀರಿ ಅಯೋಗ್ಯವಾದ ಕೃತ್ಯಗಳನ್ನು ನಡಿಸಲಾರಂಭಿಸಿದ್ದಾರೆ. ಒಂದು ಠಾಣ್ಯದಲ್ಲಿ ಅವರು ಬಿಳಿಯ ಬಾವುಟವನ್ನು ಎತ್ತಿ ಹಿಡಿದರು. ಇದರಿಂದ ಅವರು ಶರಣಾಗತರಾಗುತ್ತಾರೆಂದು ಅರ್ಥವಾಯಿತು. ಅವರನ್ನು ಕರೆತರಬೇಕೆಂದು ರಷ್ಯಾದವರು ಅವರ ಬಳಿಗೆ ಹೋದಾಗ ಜರ್ಮನಿಯವರು ರಷ್ಯಾದವರ ಮೇಲೆ ಗುಂಡಿನ ಮಳೆ ಸುರಿಸಿದರು. ಆಗ ರಷ್ಯಾದವರು ರೋಷದಿಂದ ನುಗ್ಗಿ ಕತ್ತಿಯಿಂದ ತಿವಿದು ಶತ್ರು ಸೈನ್ಯವನ್ನೆಲ್ಲಾ ನಾಶಮಾಡಿಬಿಟ್ಟರು.

ಘೋರವಾದ ಕದನಗಳು ಇನ್ನೂ ಕೆಲವು ಕಾಲ ನಡೆಯುತ್ತಲೇ ಬರುವುದೆಂದು ನಿರೀಕ್ಷಿಸಬೇಕಾಗಿದೆ. ಅಲ್ಲಿ ಯುದ್ಧದ ಸಾಲು ಬಹಳ ದೂರದ ತನಕ ವಿಸ್ತರಿಸಿರುವುದರಿಂದ ಶತ್ರುಗಳು ಎದುರುಬದುರಾಗಿ ಕಂದಕಗಳನ್ನು ತೋಡಿ ನಿಂತು ಕಾದಾಡಿ ನಿಲ್ಲುವುದು ಸಾಧ್ಯವಲ್ಲ. ಹಾಗೇ ಬಯಲಿನಲ್ಲೇ ಯಾವುದಾದರೊಂದು ಪಕ್ಷದವರು ನಿತ್ರಾಣವಾಗುವ ತನಕ ದೀರ್ಘವಾದ ಮತ್ತು ಅತ್ಯಂತ ಘೋರವಾದ ಕದನಗಳು ನಡೆಯುತ್ತಲೇ ಬರಬೇಕಾಗಿರುತ್ತದೆ.

ಆರ್ಕೇಂಜಲ್ ಎಂಬ ತೀರಪಟ್ಟಣಕ್ಕೆ ರಷ್ಯಾದವರ ಹಡಗುಗಳಾಗಲಿ ಜಹಜುಗಳಾಗಲಿ ಹೋಗಿಬರುವುದಕ್ಕಾಗದಂತೆ ಜರ್ಮನಿಯವರು ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಬಿಳಿಯ ಕಡಲಿನಲ್ಲಿ ರಷ್ಯಾ ಉತ್ತರ ಸಮುದ್ರದ ತನಕ ಇಟ್ಟಿರುತ್ತಾರೆಂದು ಪ್ರಕಟವಾಗಿದೆ.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿಯ ಸೈನಿಕರು ಬಿಡದೆ ಕ್ರಮವಾಗಿ ನುಗ್ಗಿ ಹೋಗುತ್ತಿದ್ದರೂ, ಅವರ ಜಯವು ಸುಲಭವಾದದ್ದಲ್ಲವೆಂದು ತಿಳಿದಿರುತ್ತಾರೆ. ಉತ್ತರ ದಿಕ್ಕಿನಲ್ಲಿ ಪರ್ವತ ಪ್ರಾಂತ್ಯವೇ ತುಂಬಿರುವುದು. ಆದರೂ ಬೆಟ್ಟಗುಡ್ಡಗಳಲ್ಲೇ ಹುಟ್ಟಿ ಬೆಳೆದಿರುವಂಥಾ ಸೈನಿಕರು ಸಾಹಸಪಟ್ಟು ಪರ್ವತಗಳನ್ನು ದಾಟಿಕೊಂಡು ಮುಂದೆ ಹೋಗುತ್ತಿದ್ದಾರೆ. ಇಟಲಿಯ ಸೈನ್ಯವು ದಕ್ಷಿಣದ ಅಂದರೆ ಇಸೋನ್ಜೊ ಕಣಿವೆಯಲ್ಲೇ ಮುಖ್ಯವಾದ ಕದನ ನಡೆಯತಕ್ಕದ್ದಾಗಿರುವುದು. ಈ ಕಣಿವೆಯ ರಕ್ಷಣೆಗಾಗಿ ಆಸ್ಟ್ರಿಯದವರು ವಿಶೇಷ ಸನ್ನಾಹವಾಗಿ ಸೈನ್ಯಗಳನ್ನಿಟ್ಟಿದ್ದಾರೆ. ಅಲ್ಲಿ ಅವರು ಕಲ್ಲುಗಳನ್ನೇ ಪೇರಿಸಿ ಗಾರೆಹಾಕಿ ಕಂದಕಗಳನ್ನು ಕಟ್ಟಿ, ಪಿರಂಗಿಗಳನ್ನು ಗುಹೆಗಳಲ್ಲಿ ಅಡಗಿಸಿಟ್ಟಿರುವರು. ಇಟಲಿಯವರು ನದಿಯ ಬಲಗಡೆ ದಡದ ಬಳಿಗೆ ಬಂದು, ಬಹುಶಾ ಕೆಲವು ಕಡೆಗಳಲ್ಲಿ ನದಿಯನ್ನು ದಾಟಿಯೂ ಇರಬಹುದು.

ಒಂದು ಪರ್ವತವನ್ನು ಗೆದ್ದು ಸ್ವಾಧೀನಪಡಿಸಿಕೊಳ್ಳಬೇಕೆಂದು ಇಟಲಿಯವರು ಬಹಳ ಯುದ್ಧಮಾಡಿ ಕಡೆಗೆ ಅದನ್ನು ಗೆದ್ದು ಆಕ್ರಮಿಸಿಕೊಂಡರು. ಅದನ್ನು ಅವರಿಗೆ ಬಿಟ್ಟುಕೊಡಬಾರದೆಂದು 1,000 ಜನಗಳ ಸೈನಿಕರು ಎದುರು ನಿಂತು ಕದನಮಾಡಿದರು. ಇಟಲಿಯವರು ಕೊನೆಗೆ ಕಾಡಿನಲ್ಲಿ ಶತ್ರುವಿಗೆ ತಿಳಿಯದಂತೆ ಹೋಗಿ ಬೆಟ್ಟದ ಸುತ್ತಲೂ ಸುತ್ತಿಕೊಂಡು ಹೋಗುತ್ತಾ ಸಮೀಪಕ್ಕೆ ಬಂದ ಕೂಡಲೇ ಶತ್ರುವಿನ ಮೇಲೆ ಗುಂಡುಗಳ ಮಳೆ ಸುರಿಸಿದರು. ಅಂಗೆಯ ವರಿಗೆ ಗಾಬರಿ ಹುಟ್ಟಿ ಚೆಲ್ಲಾಪಿಲ್ಲಿ ಓಡಿಹೋಗುತ್ತಿದ್ದರು. ಅಷ್ಟರಲ್ಲೇ ಇಟಲಿಯವರು ಅವರನ್ನೆಲ್ಲಾ ಬಳಸಿ ಸುತ್ತಿಕೊಂಡು ಪ್ರತಿ ಒಬ್ಬ ಸೈನಿಕನನ್ನೂ ಸೆರೆಹಾಕಿದರು; ಇಲ್ಲವೇ ಕೈಸೆರೆ ಹಿಡಿದುಕೊಂಡರು.

ಆಸ್ಟ್ರಿಯಾದವರು ಗೊರಿಜ್ಜಿಯಾ ಎಂಬ ನಗರದೊಳಗಿಂದ ಇಟಲಿಯವರ ಮೇಲೆ ಬೀಳುವುದಕ್ಕೆ ನುಗ್ಗಿ ಬಂದರು. ಇಟಲಿಯವರು ಅವರನ್ನು ಸೋಲಿಸಿ 300 ಮಂದಿಯನ್ನು ನಷ್ಟಪಡಿಸಿದ್ದರಿಂದ ಆವರೆಲ್ಲಾ ಹಿಮ್ಮೆಟ್ಟಿ ಹೋಗಬೇಕಾಯಿತು.

ಆಸ್ಟ್ರಿಯಾದವರು ಸರ್ಬಿಯಾ ಎಲ್ಲೆ ಕಟ್ಟಿನಲ್ಲಿ ಇಟ್ಟಿರುವ ಸೈನ್ಯವನ್ನು ಇಟಲಿಯವರ ಮೇಲೆ ಕಳುಹಿಸುವುದಕ್ಕಾಗಿ ಅಲ್ಲಿಂದ ತೆರಸಿಕೊಳ್ಳುತ್ತಿದ್ದಾರೆಂದು ತಿಳಿದಿದೆ. ಇದುವರೆಗೆ ಸರ್ಬಿಯಾದವರಿಗೆ ಸ್ವಲ್ಪ ವಿಶ್ರಾಂತಿ ದೊರಕಿತ್ತು; ಈಗ ಅವರು ತಮ್ಮ ಕಷ್ಟಗಳನ್ನೆಲ್ಲಾ ಪರಿಹರಿಸಿಕೊಂಡು ಆಸ್ಟ್ರಿಯಾದೊಳಕ್ಕೆ ನುಗ್ಗಲು ಅನುಕೂಲವಾಗುತ್ತದೆ.

ಇಟಲಿಯವರ ಬಹಳ ಒಳ್ಳೇ ಸಬ್‌ಮೆರೀನು ಮುಳುಗಿಸಲ್ಪಟ್ಟಿತು. ಇಟಲಿಯವರ ಸಬ್‌ಮೆರೀನೂ, ಆಸ್ಟ್ರಿಯಾದವರ ಸಬ್‌ಮೆರೀನೂ ಪರಸ್ಪರ ಗೋಚರವಿಲ್ಲದೆ ಒಂದೇ ಕಡೆ ಸಮೀಪದಲ್ಲಿದ್ದಂತೆ ತೋರುತ್ತದೆ. ಇಟಲಿಯ ಸಬ್‌ಮೆರೀನು ನುಗ್ಗಿ ಹೋಯಿತು. ಕೂಡಲೇ ಅದಕ್ಕೆ ಶತ್ರುವಿನ ಟಾರ್ಪೆಡೋ ಬಡಿದುದರಿಂದ ಅದು ಮುಳುಗಿಹೋಯಿತು. ಒಬ್ಬ ಹುದ್ದೇದಾರನನ್ನೂ ನಾಲ್ಕು ಜನರನ್ನೂ ಆಸ್ಟ್ರಿಯಾದವರು ಬದುಕಿಸಿ ಕೈಸೆರೆ ಹಿಡಿದುಕೊಂಡರು.

ಟರ್ಕಿ.

ಜೂನ್ ತಾ. 12 ರಲ್ಲಿ ಟರ್ಕಿಯ ಸೈನ್ಯಗಳು ನುಗ್ಗಿ ಬಂದು ಕದನಮಾಡಿ ನಮ್ಮ ಪಕ್ಷದವರನ್ನು ಸೋಲಿಸಿ ಮೂವತ್ತು ಗಜ ದೂರ ಓಡಿಸಿದರು. ಕೂಡಲೆ ನಮ್ಮ ಪಕ್ಷದವರು ಅವರ ಮೇಲೆ ಬಿದ್ದು ಕದನಮಾಡಿ ಅವರನ್ನು ಹಿಂದಕ್ಕೆ ಓಡಿಸಿದರು. ಯುದ್ಧಭೂಮಿಯ ಕಂದಕಗಳಲ್ಲಿ ಟರ್ಕಿಯವರು 300 ಹೆಣಗಳನ್ನು ಬಿಟ್ಟು ಓಡಿಹೋದರು. ಜೂನ್ ತಾ. 16 ರಲ್ಲಿ ಜರ್ಮನಿಯ ಹುದ್ದೇದಾರನು ಟರ್ಕಿ ಸೈನ್ಯವನ್ನು ನಮ್ಮ ಪಕ್ಷದವರ ಮೇಲೆ ನುಗ್ಗಿಸಿದನು. ಆದರೆ ಆ ಸೈನಿಕರು ನಮ್ಮ ಪಕ್ಷದವರಿದ್ದ ಕಂದಕಗಳಿಗೆ ಬರುವಷ್ಟರಲ್ಲೇ ಎಲ್ಲರೂ ಗುಂಡೇಟುಬಿದ್ದು ಸತ್ತುಹೋದರು.—ಟರ್ಕಿಯವರ ಕಡೆ 1,60,000 ಸೈನ್ಯ ನಷ್ಟವಾಗಿರುವಂತೆ ಪ್ರಕಟವಾಗಿದೆ.

ಬ್ರಿಟಿಷರ ಒಂದು ಸಬ್‌ಮೆರೀನು ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಟಾರ್ಪೆಡೋವನ್ನು ಬಿಟ್ಟು ಹೊಡಿಸಿ ಸೈನ್ಯವನ್ನು ಸಾಗಿಸುತ್ತಿದ್ದ ಟರ್ಕಿಯ ಮೂರು ಜಹಜುಗಳನ್ನು ಮುಳುಗಿಸಿರುತ್ತದೆ.—ಗ್ರೀಕ್ ಜಹಜುಗಳು ಟರ್ಕಿಯವರಿಗೋಸ್ಕರ ಪೆಟ್ರೋಲನ್ನೂ ಮದ್ದುಗುಂಡನ್ನೂ ಸಾಗಿಸಿಕೊಂಡು ಹೋಗುತ್ತಿದ್ದವು. ಆ ಪೈಕಿ ಒಂದು ಜಹಜನ್ನು ನಮ್ಮ ಪಕ್ಷದವರು ಮುಳುಗಿಸಿದರು. ಈಗ ಹೋಗಿಬರುವ ಹಡಗುಗಳನ್ನೆಲ್ಲಾ ಶೋಧನೆಮಾಡುವ ಏರ್ಪಾಡು ಇಟ್ಟಿದಾರೆ.—ಬ್ರೆಸ್ಲಾ ಎಂಬ ಟರ್ಕಿಯವರ ಯುದ್ಧದ ಹಡಗಿಗೆ ಕಪ್ಪುಕಡಲಿನಲ್ಲಿ ಮತ್ತೆ ಏಟುಬಿದ್ದು ಜಖಮ್ ಆಗಿರುತ್ತದೆ. ಅಲ್ಲೇ ಟರ್ಕಿಯವರ ಎರಡು ಟಾರ್ಪೆಡೋ ಹಡಗುಗಳು ಮುಳುಗಿಸಲ್ಪಟ್ಟವು.

ರಾಜಧಾನಿಯಾದ ಕಾನ್‌ಸ್ಟಂಟಿನೋಪಲ್ ನಗರದಲ್ಲಿ ಬೆಂಕಿಬಿದ್ದು 500 ಮನೆಗಳೂ ಒಂದು ಭಾರೀ ಸಾಮಾನು ಉಗ್ರಾಣವೂ ಉರಿದು ಬಹಳ ನಷ್ಟವಾಗಿರುತ್ತದೆ.

ಆಫ್ರಿಕಾದಲ್ಲಿ.

ಪಶ್ಚಿಮ ಆಫ್ರಿಕಾದಲ್ಲಿ ಕ್ಯಾಮರೂನ್ಸ್ ಸೀಮೆಯ ಉತ್ತರದಲ್ಲಿರುವ ಒಂದು ಪ್ರಾಮುಖ್ಯವಾದ ಪಟ್ಟಣವು ಕದನವೇನೂ ಇಲ್ಲದೇನೇ ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರಿಗೆ ವಶವಾಯಿತು. ಇದರಿಂದ ಆ ಸೈನ್ಯದಲ್ಲಿ ಬಹು ಭಾಗವನ್ನು ಅಲ್ಲಿಂದ ದಕ್ಷಿಣಕಡೆಗೆ ಕಳುಹಿಸಿಕೊಳ್ಳುವುದಕ್ಕೆ ಅನುಕೂಲವಾಯಿತು.—ಕಳೆದ ಮೂರು ತಿಂಗಳಿಂದಲೂ ಪೂರ್ವ ಆಫ್ರಿಕಾದಲ್ಲಿ ಕೆಲವು ಯುದ್ಧಗಳು ನಡೆದಿರುತ್ತವೆ. ಆದರೂ ಇವುಗಳಲ್ಲಿ ವಿಶೇಷವಾದ ಕಾರ್ಯವೇನೂ ನಡೆಯಲಿಲ್ಲವೆಂದು ತಿಳಿಯುವುದು.

ಇತರ ವಿಷಯಗಳು.

ಪ್ರಷ್ಯಾ ಸೈನಿಕರಲ್ಲಿ 14,09,489 ಮಂದಿ ನಷ್ಟವಾಗಿರುವಂತೆ ಅವರು ಪ್ರಕಟಿಸಿದಾರೆ. ಜರ್ಮನಿಯ ಇತರ ಅಧಿಪತ್ಯಗಳ ನಷ್ಟಗಳನ್ನೂ ಕೂಡಿಸಿದ ಪಕ್ಷದಲ್ಲಿ ಇದಕ್ಕಿಂತ ಎರಡಷ್ಟಾದರೂ ನಷ್ಟವಾಗಿರಬೇಕೆಂದು ಗೊತ್ತಾಗುವುದು.

ಯುದ್ಧವು ಪ್ರಾರಂಭವಾದಾರಭ್ಯ ಬ್ರಿಟಿಷರ ನಾವೆಯ ಸೈನ್ಯಗಳಲ್ಲಿ 519 ಹುದ್ದೇದಾರರೂ, 7,690 ಸೈನಿಕರೂ ಕೊಲೆಯಾದರು; 181 ಹುದ್ದೇದಾರರೂ, 2,262 ಮಂದಿ ಸೈನಿಕರೂ ಗಾಯಪಟ್ಟಿದಾರೆ; 74 ಮಂದಿ ಹುದ್ದೇದಾರರೂ, 2,785 ಜನ ಸೈನಿಕರೂ ಸಿಕ್ಕಿ ಇಲ್ಲ. ಅಂತು ಒಟ್ಟು 13,647 ಮಂದಿ ನಷ್ಟವಾಗಿದಾರೆ.

ಕೆನಡಾ ಸ್ವಾಸ್ಥ್ಯದಲ್ಲಿ 1,60,000 ಫೌಜೂ, ಆಸ್ಟ್ರೇಲಿಯಾದಲ್ಲಿ 90,000 ಸೈನ್ಯವೂ ತಯಾರಾಗಿ ಸಿದ್ಧವಾಗಿರುತ್ತದೆ.

ಬ್ರಿಟಿಷ್ ಗವರ್ನ್‌ಮೆಂಟಿನವರು ಇನ್ನೂ 25,00,00,000 ಪೌಂಡನ್ನು ಸಾಲತೆಗೆದುಕೊಳ್ಳಬಹುದೆಂದು ಪಾರ್ಲಿಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ. ಮಂತ್ರಿ ಶ್ರೇಷ್ಠರಾದ ಮಿ॥ ಆಸ್ಕ್ವಿತ್‌ರವರು ಈ ಯುದ್ಧಕ್ಕೆ ಬ್ರಿಟನ್ *ನವರಿಗೆ ದಿನ ಒಂದಕ್ಕೆ 30,00,000 ಪೌಂಡು ಪ್ರಕಾರ ಖರ್ಚಾಗುತ್ತಿದೆ ಎಂದು* ಹೇಳಿದರು. ಬ್ರಿಟಿಷ್ ಚಕ್ರಾಧಿಪತ್ಯವೆಲ್ಲಾ ಖರ್ಚು ಎಷ್ಟಾದರೂ ಲಕ್ಷ್ಯಮಾಡದೆ ಈ ಯುದ್ಧವನ್ನು ಸಾರ್ಥಕವಾಗಿ ಮುಗಿಸಿ ಜಯಪ್ರದವನ್ನು ಹೊಂದುವುದೇ ಸಿದ್ಧವೆಂದು ಸಂಕಲ್ಪಮಾಡಿಕೊಂಡಿರುವುದು.

ಬ್ರಿಟನ್ನಿನಲ್ಲಿ ಗೋಧಿಯ ಧಾರಣೆ ಬೇಗಬೇಗನೆ ಇಳಿಯುತ್ತಿರುವುದರಿಂದ ಪ್ರಜೆಗಳಿಗೆ ರೊಟ್ಟಿಯ ಕ್ರಯ ಅಗ್ಗವಾಗುವುದು.

ಗ್ಲಾಸ್ಗೋ ನಗರದ ವರ್ತಕರಿಬ್ಬರು ಹಾಲೆಂಡಿನ ಮೂಲಕ ಜರ್ಮನಿಗೆ ಕಬ್ಬಿಣದ ತುಕ್ಕನ್ನು ಕಳುಹಿಸಿದರೆಂದು ಅವರನ್ನು ಹಿಡಿದು ವಿಚಾರಣೆ ಮಾಡಿ ಅವರಿಗೆ 6 ತಿಂಗಳ ಕೈದನ್ನೂ 2,000 ಪೌಂಡು ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ನವಾನಗರ ಸಂಸ್ಥಾನದ ಮಹಾರಾಜರಾದ ರಂಜಿತ್‌ಸಿಂಗ್ ರವರು ಲಂಡನ್ ಪಟ್ಟಣಕ್ಕೆ ಬಹಳ ಸಮೀಪದಲ್ಲಿರುವ ಒಂದು ಬಂಗಲೆಯನ್ನು ಗಾಯಪಟ್ಟ ಹುದ್ದೇದಾರರ ಚಿಕಿತ್ಸೆಗಾಗಿ ಒಪ್ಪಿಸಿರುತ್ತಾರೆ. ಈ ಆಸ್ಪತ್ರೆಯ ಖರ್ಚನ್ನು ಇವರೂ, ಕಾಶ್ಮೀರದ ಮಹಾರಾಜರವರೂ, ಪಾಟಿಯಾಲಾ ಮಹಾರಾಜರವರೂ ವಹಿಸಿಕೊಂಡು ಕೊಡುವುದಾಗಿ ಒಪ್ಪಿಕೊಂಡಿದಾರೆ.

ಗ್ರೀಸ್ ರಾಜ್ಯದ ದೊರೆಯವರ ಖಾಯಿಲೆ ವಾಸಿಯಾಗುತ್ತಿದೆ. ಆ ದೇಶದಲ್ಲಿ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆ ಹೊಸದಾಗಿ ನಡೆದಿದೆ. ಇದರಿಂದ ಗ್ರೀಸ್ ಪ್ರಜೆಗಳು ಯುದ್ಧಾಪೇಕ್ಷಿಗಳಾಗಿದಾರೆಂದು ಗೊತ್ತಾಯಿತು. ಜೂಲೈ ತಾ 20 ಕ್ಕೆ ಮುಂಚೆ ಯಾವುದನ್ನೂ ತೀರ್ಮಾನ ಮಾಡುವುದಿಲ್ಲವೆಂದು ಪ್ರಕಟಿಸಲಾಗಿದೆ.

ಜರ್ಮನಿಯವರು ಆಕ್ರಮಿಸಿಕೊಂಡಿರುವ ಭಾಗಗಳಲ್ಲಿ ಬೆಲ್ಜಿಯಮ್ ಪ್ರಜೆಗಳನ್ನು ಬಲಾತ್ಕರಿಸಿ ಅವರಿಂದ ಮದ್ದುಗುಂಡುಗಳನ್ನೂ, ಮುಳ್ಳುಗಳು ಹಾಕಿದ ಕಂಬಿಗಳನ್ನೂ, ಇತರ ಸಾಮಾನುಗಳನ್ನು ತಯಾರುಮಾಡಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟಿದಾರೆ. ಈ ಸಾಮಾನುಗಳನ್ನೆಲ್ಲಾ ಅವರು ಬೆಲ್ಜಿಯಮ್ ಸೈನಿಕರನ್ನು ಕೊಲ್ಲುವುದಕ್ಕಾಗಿಯೇ ವಿನಿಯೋಗಮಾಡುವರು. ಆ ರೀತಿ ಕೆಲಸಮಾಡಿಕೊಡದೆ ತಪ್ಪಿನವರನ್ನು ಆ ವಿರುವ ಗ್ರಾಮ ಊರುಗಳಿಗೆ ಜುಲ್ಮಾನೆ ವಿಧಿಸಿ, ಪ್ರಜೆಗಳ ಮುಖಂಡರನ್ನು ಹಿಡಿದು ಜರ್ಮನಿಗೆ ರವಾನೆ ಮಾಡುವರು.

ಜರ್ಮನಿಯ ಸಬ್‌ಮೆರೀನುಗಳು ಕಳೆದ ವಾರ ಕೆಲವು ಸಣ್ಣ ಜಹಜುಗಳನ್ನೂ ಕೆಲವು ಜಹಜುಗಳನ್ನೂ ಮುಳುಗಿಸಿರುವವು.

ಸ್ವದೇಶದ ವೃತ್ತಾಂತಗಳು.

ಈ ವಾರ ನಮಗೆ ಬಂದಿರುವ ಹಲವು ವಾರ್ತೆಗಳನ್ನು ಪ್ರಕಟಿಸಲು ಸ್ಥಳ ಸಂಕೋಚವಾಯಿತೆಂದು ತಿಳಿಸಲು ವಿಷಾದಿಸುತ್ತೇವೆ.

ಮೈಸೂರು ಬ್ಯಾಂಕಿನ ಚೀಫ್ ಅಕೌಂಟೆಂಟರಾದ ಮ॥ ಪಿ. ಸುಬ್ಬರಾಯರು ಇಂಗ್ಲೆಂಡಿಗೆ ನಮ್ಮ ಸರ್ಕಾರದಿಂದ ವೇತನ ಪಡೆದು ಹೋಗಿ ಬರುವವರಾಗಿದಾರೆ.

ಬರೋಡಾ ಸಂಸ್ಥಾನದಿಂದ ಡಾಕ್ಟರ್ ಪಲ್ಪುಯವರು ವಾಪಸು ಬಂದು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಕೆಲಸದ ಛಾರ್ಜನ್ನು ಕಳೆದ ವಾರ ವಹಿಸಿಕೊಳ್ಳುವವರಾಗಿದ್ದರು.

ನಾಳೆ ಶನಿವಾರ ರಾತ್ರಿ ಮುಖ್ಯರಾದ ಅಧಿಕಾರಿಗಳಿಗೆಲ್ಲಾ ಅರಮನೆಯಲ್ಲಿ ವರ್ಧಂತಿ ಕಟ್ಟೆಯ ಔತಣ ಜರುಗುತ್ತದೆ. ಭಾನುವಾರ ದಿವಾನ್ ರವರು ಅಧಿಕಾರಗಳಿಗೂ ದೊಡ್ಡ ಮನುಷ್ಯರಿಗೂ ಔತಣವನ್ನು ಮಾಡುವರು.

ರಾಜಧಾನಿಯ ಜೈನ ಬೋರ್ಡಿಂಗ್ ಹೋಮ್ ವಿದ್ಯಾರ್ಥಿಗಳು ಕಳೆದ ಗುರುವಾರ ರಾತ್ರಿ ಪ್ರತಿಷ್ಠಾಪನಾ ಉತ್ಸವವನ್ನು ನಡಿಸಿ, ಬಹು ಜನ ದೊಡ್ಡ ಮನುಷ್ಯರನ್ನು ಕರಿಸಿಕೊಂಡು ಸಂಗೀತಾದಿಗಳನ್ನು ನಡಿಸಿ ಸಂತೋಷಪಡಿಸಿದರು.

ವರ್ಧಂತಿ ಕಟ್ಟೆಯ ನಿಮಿತ್ತ ಬರೋಡೆಯ ರಾಜವರ್ಗದವರೂ, ನಮ್ಮ ಬ್ರಿಟಿಷ್ ರಸಿಡೆಂಟರೂ, ಹಲವು ಮಂದಿ ದೇಶೀಯ ದೊಡ್ಡ ಮನುಷ್ಯರೂ ರಾಜಧಾನಿಗೆ ದಯಮಾಡಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ.

ಮುಂದಿನ ನವಂಬರ್ ತಿಂಗಳಿಗೆ ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನ್‌ಗಿರಿಯ ಅವಧಿಯು ಪೂರೈಸುತ್ತದೆ. ನಮ್ಮ ಮಹಾರಾಜರವರು ಇನ್ನೆರಡು ವರುಷಗಳ ತನಕ ಇವರೇ ದಿವಾನ್‌ರಾಗಿರಬೇಕೆಂದು ಅವರ ಅವಧಿಯನ್ನು ಹೆಚ್ಚಿಸಿರುತ್ತಾರೆಂದು ಕೇಳಿ ಸಂತೋಷಪಡುತ್ತೇವೆ.

ಕಳೆದ 13 ನೇ ತಾ. ಭಾನುವಾರ ತುಮಕೂರು ಡೆಪ್ಯುಟಿ ಕಮಿಷನರ್ ಮ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ರು ತುಮಕೂರಿನಲ್ಲಿ ಒಂದು ಟೌನ್ ಹಾಲ್ ಬಂಗಲೆಯನ್ನು ಕಟ್ಟುವುದಕ್ಕೆ ಅಸ್ತಿಭಾರಶಿಲೆಯನ್ನು ಹಾಕಿದರು. ಇದಕ್ಕಾಗಿ ಆ ದಿನ ಒಂದು ಸಂತೋಷಕೂಟವು ಜರುಗಿ ಪ್ರಜೆಗಳು ಹರ್ಷಪಟ್ಟರು.

ಶ್ರೀರಂಗಪಟ್ಟಣದಲ್ಲಿ ಶ್ರೀಮನ್ ಮಹಾರಾಜರವರು ಜೂಲೈ ತಾ. 1 ನೇ ಗುರುವಾರ ಸಾಯಂಕಾಲ ಚಿಕ್ಕೈಸಿ ಮೆಮೋರಿಯಲ್ ಮಂಟಪವನ್ನು ಪ್ರತಿಷ್ಠೆ ಮಾಡುವರು. ಶ್ರೀರಂಗಪಟ್ಟಣದ ಪ್ರಜೆಗಳು ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ದಿವ್ಯವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸುವಂತೆ ಏರ್ಪಾಡಾಗಿರುತ್ತದೆ.

ಶ್ರೀಮನ್ ಮಹಾರಾಜರವರು ನೆನ್ನೆ ಬೆಳಗ್ಗೆ ಅರಮನೆ ಅಂಬಾವಿಲಾಸದಲ್ಲಿ ತಮ್ಮ 34 ನೇ ವರುಷದ ವರ್ಧಂತಿ ಕಟ್ಟೆಯ ದರ್ಬಾರನ್ನು ನಡಿಸಿದರು. ಅಧಿಕಾರಿಗಳೂ ದೊಡ್ಡ ಮನುಷ್ಯರೂ ಮುಜರೆ ಮಾಡಿ ನಜರುಗಳನ್ನೊಪ್ಪಿಸಿದರು. ಸಾಯಂಕಾಲ ಮಹಾರಾಜರವರು ಅಶ್ವಾರೂಢರಾಗಿ ಮೆರವಣಿಗೆಯಲ್ಲಿ ಅರಮನೆಯಿಂದ ದೊಡ್ಡಪೇಟೆಯ ಮಾರ್ಗವಾಗಿ ರೆಸಿಡೆನ್ಸಿ ಬಂಗಲೆಗೆ ಚಿಕ್ಕೈಸಿ ಸೈನ್ಯಗಳ ಕವಾತನ್ನು ಪರಾಂಬರಿಸಿ ರಾತ್ರಿ ದೀಪೋತ್ಸವದ ಮಧ್ಯೆ ಅರಮನೆಗೆ ದಯಮಾಡಿದರು. ಮುಂದಿನ ಭಾನುವಾರದ ತನಕ ಅರಮನೆಯಲ್ಲಿ ವರ್ಧಂತಿ ಕಟ್ಟೆಯ ಅರತಕ್ಷತೆ ದರ್ಬಾರುಗಳು ನಡೆಯುವವು.

ತಾಲ್ಲೂಕು ವರ್ತಮಾನಗಳು.

ಮುಣಸೂರು ತಾಲೂಕು.—ಈ ಪ್ರಾಂತ್ಯ 20-25 ದಿನಸಗಳಿಂದಲು ಮಳೆ ವಿಪರೀತ ನಡೆಯುತ್ತಿದೆ. ದನಕರುಗಳಿಗೆ ಮೇವು, ಸುಮಾರು ಎರಡು ವರುಷದಿಂದಲು ನೀರಿಲ್ಲದೆ ಇದ್ದ ಕೆರೆಗಳು ತುಂಬಿ ಖುಲಾಸಾದುತ್ತಿರುವುವು. ಹೊಲಗಳಲ್ಲಿ ಬೆಳೆ ನಿಂತಲು ಹೇಳುವುದಕ್ಕೆ ಅಸಾಧ್ಯವಾಗಿದೆ. ಈ ವರುಷದಂಥಾ ಮಳೆಗಾಲವೂ, ಈ ವರುಷದಂಥಾ ಬೆಳಸೂ ಕಳೆದ 2-3 ವರ್ಷಗಳಿಂದಲೂ ನಾವು ನೋಡಿರಲಿಲ್ಲ. ದೇವರ ದಯದಿಂದ ಇದೇ ಮೇರೆಗೆ ಇಲ್ಲಿಂದ ಮುಂದೆಯೂ ಮಳೆಗಾಲ ನಡಿಸಿಕೊಟ್ಟರೆ ಪ್ರಜೆಗಳಿಗಾಗತಕ್ಕ ಬಡತನ ತಕ್ಕ ಮಟ್ಟಿಗೆ ಪರಿಹಾರವಾಗಿ ಏಳಿಗೆಗೆ ಬರಲು ಅನುಕೂಲವಾಗುತ್ತ.—ಆದರೆ ಕೆಲವು ಹಳ್ಳಿಗಳಲ್ಲಿ ಪ್ಲೇಗು ಮತ್ತು ಸಿಡುಬು ವ್ಯಾಧಿಗಳು ತಲೆದೋರಿ ಜನಗಳಿಗೆ ತುಂಬಾ ತೊಂದರೆಕೊಟ್ಟಿದೆ. ಹುಣಸೂರು ಗ್ರಾಮದಲ್ಲಿ ಪ್ಲೇಗು ತಲೆದೋರಿ 3-4 ಜನಗಳು ಕಾಲವಾದರು. ಈಗ ಷೆಡ್ಡುಗಳಲ್ಲಿ ವಾಸಮಾಡುತ್ತಾರೆ. ಈ ಮಳೆಗಾಲದಲ್ಲಿ ಷೆಡ್ಡುಗಳಲ್ಲಿ ವಾಸಮಾಡುವುದು ಬಹಳ ಶ್ರಮ. ಷೆಡ್ಡುಗಳಲ್ಲಿ ವಾಸಮಾಡುವವರ ದನಕರುಗಳ ಪಾಡಂತೂ ಹೇಳಕೂಡದು. ಷೆಡ್ಡುಗಳಲ್ಲು ಸಹ 1-2 ಕ್ಕೆ ಖಾಯಿಲೆ ಇದೆ.

ಗೋರಿಬಿದನೂರು ತಾ॥ ಸುಬ್ಬೇನಹಳ್ಳಿ.—ಈ ಪ್ರಾಂತ್ಯ ಮಳೆ ಸುಮಾರಾಗಿ ಬಿದ್ದಿರುವ ಕಾರಣ ರೈತರು ವ್ಯವಸಾಯ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಹೋದ ವರ್ಷವೂ ಬೆಳೆಗಳು ಅನುಕೂಲವಾಗಿ ಆಗಲಿಲ್ಲ. ಭಾರಿ ಕಂದಾಯ ಕೊಡುವ ರೈತರೆಲ್ಲಾ ಕಂದಾಯ ತೆರಲಾರದೆ ತೊಂದರೆಪಡುವ ಕಾಲ ಬಂದಿರುತ್ತ.—ಸರ್ಕಾರದವರು ಈಚೆಗೆ ವ್ಯವಸಾಯದ ಇಲಾಖೆಯನ್ನು ಏರ್ಪಡಿಸಿ ಬೇಸಾಯಗಾರರಿಗೆ ಶಾಸ್ತ್ರೀಯ ವ್ಯವಸಾಯದ ಪ್ರಯೋಜನವನ್ನು ತಿಳಿಸುತ್ತಿದ್ದಾಗ್ಯೂ, ಈ ಪ್ರಾಂತ್ಯದವರಿಗೆ ಅದರ ಸಂಗತಿಯನ್ನು ತಿಳಿದುಕೊಳ್ಳುವಷ್ಟು ಆಸಕ್ತಿ ಇಲ್ಲವಾಗಿದೆ. ಇಂಥವರನ್ನು ನಾಗರಿಕತೆಗೆ ತಂದು ಸಂಪದಭಿವೃದ್ಧಿಕರವಾಗಿ ಮಾಡಬೇಕಾದರೆ ಗಟ್ಟಿರಾಗಿರುವ ಹಲ ಕೆಲವು ಮಂದಿ ಮುಂದುವರಿಯಬೇಕಾಗಿರುತ್ತ. ಇಲ್ಲಿನ ಭಾರೀ ಜಮಾನ್ ದಾರರಾಗಿಯೂ, ಪಟೇಲರಾಗಿಯೂ ಇರುವ ಮ॥ ಲಕ್ಷ್ಮಣ ರೆಡ್ಡಿಯವರು ಮುತುವರ್ಜಿ ವಹಿಸಿ ಹೊಸ ತರಹಾ ವ್ಯವಸಾಯವನ್ನು ರೂಢಿಗೆ ತರುತ್ತಿರುವದಲ್ಲದೆ ಗ್ರಾಮಾಭಿವೃದ್ಧಿಕರವಾದ ಕೆರೆ ಕೆರೆ ನೀರಿನ ಭಾವಿಗಳು, ಛತ್ರಗಳು, ವಿದ್ಯಾಶಾಲೆಗಳು, ಇವುಗಳ ಸ್ಥಾಪನಾ ಕಾರ್ಯವನ್ನು ಮಾಡಿರುತ್ತಾರೆ. ಸರ್ಕಾರದ ಉದ್ದೇಶವನ್ನು ಸಾರ್ಥಕಪಡಿಸುವದರಲ್ಲಿ ಇಲ್ಲಿಯ ಮುಖಂಡರು ಇವರ ಸಹಕಾರಿಗಳಾಗಲೆಂದು ಪ್ರಾರ್ಥಿಸುತ್ತೇನೆ.

ನಂದಿಗಿರಿ.—ಬಿಸಿಲಿನ ತಾಪವು ಬಹುಮಟ್ಟಿಗೆ ಕಡಮೆಯಾಗಿದೆ. ಜನಗಳಿಗೆ ಸಂತೋಷವಾಗಿದೆ. ಈ ಮೆ ತಾ. 11 ನೇ ಶುಕ್ರವಾರ ಸಾಯಂಕಾಲ ಉತ್ತರ ದಿಕ್ಕಿನಿಂದ ಕೆಂಪಾಗಿ ಕಪ್ಪಾದ ಮೋಡಗಳೊಡನೆ ಬಿರಿತು ಪ್ರಳಯವಾಗುತ್ತೋ ಎನ್ನುವಷ್ಟರ ಮಟ್ಟಿಗೆ ಭಯಂಕರವಾಯಿತು. ಕೊಂಚ ಹೊತ್ತಾದ ನಂತರ ವಿಪರೀತವಾದ ಗುಡುಗು ಮಿಂಚಿನಿಂದ ಮಳೆಯು ಪ್ರಾರಂಭವಾಗಿ ಕೆರೆ ಕುಂಟೆಗಳಿಗೆ ಸುಮಾರು ಒಂದು ತಿಂಗಳಿನ ಮಟ್ಟಿಗೆ ನೀರು ಬಂದಿತು. ಅಂದಿನಿಂದ ಆಗಾಗ್ಗೆ ಕೊಂಚ ಮಳೆ ಆಗಿ ರೈತರೆಲ್ಲರೂ ಬಹು ಸಂತೋಷದಿಂದ ಬಿತ್ತನೆ ಕೆಲಸವನ್ನು ಪ್ರಾರಂಭಿಸಿರುತ್ತಾರೆ. ಇನ್ನೂ ವಿಶೇಷ ಮಳೆ ಬರತಕ್ಕ ಸೂಚನೆ ತೋರುತ್ತಲಿದೆ.—ಧಾರಣಿವಾಸಿಗಳು ಸ್ವಲ್ಪ ಮಟ್ಟಿಗೆ ಬಡವರಿಗೆ ಅನುಕೂಲವಾದ ಸ್ಥಿತಿಯಲ್ಲಿವೆ. ರಾಗಿ 18 ಸೇರು, ಅಕ್ಕಿ 8 ಸೇರು, ಬೇಳೆ 5½ ಸೇರು ಮಾರುತ್ತೆ. ಹಲಸಿನ ಮತ್ತು ಮಾವಿನ ಹಣ್ಣು ಇಲ್ಲಿ ವಿಶೇಷವಾಗಿರುವುದರಿಂದ ಕೊಳೆತುಹೋಗತಕ್ಕವುಗಳನ್ನು ಮಾರಿ ಆರೋಗ್ಯಕ್ಕೆ ಕುಂದುಕವುಂಟಾಗದಂತೆ ಸರ್ಕಾರದವರು ಗಮನಕೊಡಬೇಕಾಗಿದೆ.—ವಿದ್ಯಾ ಇಲಾಖೆಯ ಸರ್ಕಲ್ ಇನ್ಸ್‌ಪೆಕ್ಟರು ಕಳೆದ ಭಾನುವಾರ ಇಲ್ಲಿನ ಗ್ರಾ॥ ಸ್ಕೂಲುಗಳನ್ನು ಇನ್ಸ್‌ಪೆಕ್ಷನ್ ಮಾಡಿಕೊಂಡು ತಾ. 6 ನೇ ಮಂಗಳವಾರ ಬೆಳಗ್ಗೆ ಮಿಡ್ಲ್ ಸ್ಕೂಲ್ ತನಿಖೆ ತೀರಿಸಿಕೊಂಡು ಬಡವರ ಮಕ್ಕಳಿಗೆ ಗ್ರಾ॥ ಸ್ಕಾಲರ್‌ಷಿಪ್ ಸಹಾಯಮಾಡುತ್ತೇವೆಂತಲೂ, ಇಲ್ಲಿ ಒಂದು ಹೋಮ್ ಸ್ಕೂಲು ಸ್ಥಾಪಿಸುವುದಾದರೆ ಅವಶ್ಯ ಗ್ರ್ಯಾಂಟ್ ಕೊಡುತ್ತೇವೆಂತಲೂ ಹೇಳಿ ತೆರಳಿದರು.

ಅರಸೀಕೆರೆ.—ಕಳೆದ ಎರಡು ವಾರಗಳಿಂದ ಒಳ್ಳೇ ಹದ ಮಳೆಯಾಗಿ ಕೆರೆ ಕುಂಟೆಗಳಿಗೆ ನೀರು ಬಂದಿದೆ.—ದನ ಕರುಗಳಿಗೆ ಮೇವು ಸಿಕ್ಕಿತು. ರೈತರು *ಜಮೀನುಗಳನ್ನು ಹಸನುಮಾಡಿ ಬಿತ್ತನೆ ಕೆಲಸ ಪ್ರಾರಂಭಿಸಿದಾರೆ.*—ಇಲ್ಲಿಗೆ ನಾಲ್ಕು ಮೈಲಿ ದೂರದಲ್ಲಿರುವ ಬೆಂಡೆಕೆರೆ ಗ್ರಾಮದ ಸ್ಕೂಲ್ ಮಾಸ್ಟರ್ ಶ್ರೀರಂಗಪ್ಪನು ಕಳೆದ ಆರು ತಿಂಗಳಿಂದ ಕೆಲಸಮಾಡಿ ಗ್ರಾಮಸ್ಥರಿಗೆ ನಂಬಿಕೆ ಹುಟ್ಟಿಸಿ ವಾಚಕಮಂದಿರವನ್ನು ಸಹಾ ಸ್ಥಾಪಿಸಿದ್ದನು. ಈಚೆಗೆ ಆತನು ಒಂದು ಮದುವೆಗೆ ಹೋಗಿ ಬರುತ್ತೇನೆಂದು ಹೇಳಿ ಗ್ರಾಮದ ಪಟೇಲ್ ಹೊನ್ನೇಗೌಡರ ಮಕ್ಕಳಲ್ಲು, ಆಚಾರಿ ಮೈಲಾರಯ್ಯನ ಮಗನಲ್ಲೂ ಇದ್ದ ಚಿನ್ನಾರದ ಕೈ ಸರಿಗೆಗಳನ್ನೂ ತೆಗೆದುಕೊಂಡು ಚಿತ್ರದುರ್ಗದ ಕಡೆ ಹೋದನೆಂತಲೂ, ಸ್ಕೂಲ್ ಇನ್ಸ್‌ಪೆಕ್ಟರ್ ಬಂದಿದ್ದಾಗ ಈ ಸಂಗತಿಯನ್ನು ಕೇಳಿ ಬಹಳ ವ್ಯಸನಪಟ್ಟು ತೆರಳಿದರೆಂತಲೂ, ಗ್ರಾಮಸ್ಥರು ಆತನ ವಿಷಯದಲ್ಲಿ ಪೊಲೀಸಿಗೆ ತಿಳಿಸಿ ಪತ್ತೆ ಹಚ್ಚುವ ನಡಿಸುತ್ತಿದಾರೆಂತಲೂ ವರ್ತಮಾನವಿದೆ.—ಕಳ್ಳರ ಕಾಟ ಹೆಚ್ಚಾಗಿದೆ. ಕಳೆದ ಗುರುವಾರ ರಾತ್ರಿ ಮಿ॥ ಜೇಂಸ್ ವರ್ಡ್‌ವರ್ತ್‌ರ ಮನೆಯಲ್ಲಿ ಸುಮಾರು 3 ಘಂಟೆಯಲ್ಲಿ ಕೆಲವರು ಅವರ ಮನೆಯ ತಟ್ಟಿಯನ್ನು ಬಿಟ್ಟು ಒಳಗಿರುವ ನಾಲ್ಕು ಪೆಟ್ಟಿಗೆಗಳನ್ನು ಹೊರಗೆ ತಂದು ಅದರಲ್ಲಿರುವ ಸಾಮಾನುಗಳನ್ನು ತೆಗೆದುಕೊಂಡು ಪೆಟ್ಟಿಗೆಗಳನ್ನು ಬೇಲಿ ಆಚೆ ಹಾಕಿ ಹೋಗಿರುತ್ತಾರೆ. ಈ ವಿಷಯ ಪೋಲೀಸಿಗೆ ರಿಪೋರ್ಟ್ ಆಗಿದೆ.—ಕಳೆದ ಬುಧವಾರ ಮತ್ತು ಗುರುವಾರ ಮೂರು ಡಿಸ್ಟ್ರಿಕ್ಟ್‌ಗಳ ಡೆಪ್ಯುಟಿ ಕಮಿಷನರುಗಳೂ, ಮೆಡಿಕಲ್ ಆಫೀಸರುಗಳೂ ದಯಮಾಡಿಸಿ ಮಲೆನಾಡಿನ ಇಂಪ್ರೂವ್‌ಮೆಂಟ್ ವಿಷಯವಾಗಿ ಒಂದೆರಡು ಘಂಟೆ ಹೊತ್ತು ಮೀಟಿಂಗ್ ನಡಿಸಿ ವಾಪಸು ತೆರಳಿದರು. ಫಲಿತಾಂಶಗಳು ಏನೂ ಈ ವರೆಗೂ ತಿಳಿಯಲಿಲ್ಲ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಜೂನ್ 10 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಕೊಡೆ:—(1)	ಷೇರು ಮೊಬಲಗು	ರೂ. 10,00,000
,, (2)	ರಿಜರ್ವ್ ಫಂಡು	,, 26,000
,, (3)	ಡಿಪಾಜಿಟ್ಟುಗಳು	,, 29,18,168
,, (4)	ಇತರೆ	,, 64,918
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,08,076

ಬೇಕೆ:—(1)	ಕೈಯುಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 6,64,905
,, (2)	ಬಾಕಿ ಮತ್ತು ಇತರ ಸಾಲಗಳು	,, 24,64,164
,, (3)	ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,, 4,30,968
,, (4)	ಇನ್‌ವೆಸ್ಟ್‌ಮೆಂಟುಗಳು	,, 2,70,777
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 1,42,265
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 16,500
,, (7)	ಇತರೆ	,, 19,497
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,08,076

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟಿನ ಸಂಗ್ರಹ.

ಅ|| ಕಂಟ್ರೋಲರ್ ಮ|| ಟಿ. ಲಕ್ಷ್ಮೀನರಸಿಂಹರಾಯರಿಗೆ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೂಡಿಗೆರೆ ಅ|| ಸರ್ಜನ್ ಮ|| ಬಿ. ಎಸ್. ಸಿದ್ದಪ್ಪನವರಿಗೆ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗವರ್ನಮೆಂಟ್ ಅ|| ಸೆಕ್ರೆಟರಿ ಮ|| ಎ. ವಿ. ರಾಮನಾಥನ್‌ರವರಿಗೆ ಜೂಲೈ ತಾ. 2 ರಿಂದ ಅಥವಾ ಅವರು ಉಪಯೋಗಿಸಿಕೊಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ ಮೊಹಿದೀನ್ ಷರೀಫ್ ಸಿರಾಪುರದಿಂದ ಅರಕಲಗೂಡಿಗೆ, ಮ|| ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್ರು ಅರಕಲಗೂಡಿನಿಂದ ನಾಗಮಂಗಲಕ್ಕೆ, ಮ|| ಬಿ. ಎಸ್. ರಾಜಗೋಪಾಲಾಚಾರ್ರು ಹಾಸನದಿಂದ ಸಿರಾಪುರಕ್ಕೆ, ಮ|| ಕೆ. ಕೆ. ವೆಂಕಟಸ್ವಾಮಿ ಅಯ್ಯರು ಸೊರಬದಿಂದ ಹಾಸನಕ್ಕೆ, ಮಿ|| ಸಯ್ಯದ್ ಯಾಕೂಬ್ ಬೆಂಗಳೂರಿನಿಂದ ಮೂಡಿಗೆರೆಗೆ, ಮ|| ಟಿ. ಹನುಮಂತರಾಯರು ಬೆಂಗಳೂರಿಗೆ, ಮ|| ಸಿ. ಕೃಷ್ಣಮೂರ್ತಿನಾಯ್ಡು ಬೌರಿಂಗ್‌ಪೇಟೆಗೆ.

ಮುಂದೆ ಹೇಳುವ ಹೈಸ್ಕೂಲ್ ಹೆಡ್ ಮಾಸ್ಟರುಗಳ ವರ್ಗಿ ಹುಕುಂ ಮಾಡಿದೆ—ಮ|| ಎಸ್. ವೆಂಕಟರಮಣಾಚಾರ್ರು ಕೋಲಾರದಿಂದ ಚನ್ನಪಟ್ಟಣಕ್ಕೆ, ಮ|| ಆರ್. ವಿ. ಕೃಷ್ಣಸ್ವಾಮಿ ಅಯ್ಯರವರು ಚನ್ನಪಟ್ಟಣದಿಂದ ಹಾಸನಕ್ಕೆ.

ಮಿ|| ಸಿ. ಡಿ. ಡೋನ್ ವಿಲ್ಸನ್‌ರವರನ್ನು ಇನ್‌ಜನಿಯರ್ ಇನ್ ಚೀಫ್‌ರಾಗಿಯೂ, ರೈಲ್ವೆ ಏಜೆಂಟರಾಗಿಯೂ ನೇಮಕಮಾಡಿಕೊಂಡಿದೆ.

ರಾವ್ ಬಹದೂರ್ ಕೆ. ಕೃಷ್ಣಯ್ಯಂಗಾರ್ರು ರೈಲ್ವೆ ಸೆಕ್ರೆಟರಿಯಾಗಿಯೂ ನೇಮಿಸಲ್ಪಟ್ಟಿದಾರೆ.

ಅ|| ಕಂಟ್ರೋಲರ್ ಮ|| ಟಿ. ಲಕ್ಷ್ಮೀನರಸಿಂಹರಾಯರನ್ನು ರೈಲ್ವೆ ಬಾಬಿನ ಅಂಡರ್ ಸೆಕ್ರೆಟರಿಯಾಗಿ ನೇಮಿಸಿದೆ.

ರೈಲ್ವೆ ಸೆಕ್ರೆಟೇರಿಯಟ್ ಆಫೀಸ್ ಮ್ಯಾನೇಜರ್ ಮ. ಪಿ. ರಾಮಮೂರ್ತಿರಾಯರನ್ನು ರೈಲ್ವೆ ಬಾಬಿನ ಅ|| ಸೆಕ್ರೆಟರಿಯಾಗಿ ನೇಮಿಸಿದೆ.

ಮೈಸೂರು ಸರ್ಕಾರಿ ಹುಕುಮುಗಳು.

ಯೂನಿಯನ್‌ಗಳಲ್ಲಿ ಅಂಗಡಿ ತೆರಿಗೆ.—ಸನ್ 1902 ನೇ ಇಸವಿಯ ಲೋಕಲ್ ಬೋರ್ಡು ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡಿದ 1915 ನೇ ಇಸವಿಯ ರೆಗ್ಯುಲೇಷನ್ ಪ್ರಕಾರ ಯೂನಿಯನ್ನುಗಳಲ್ಲಿ ಅಂಗಡಿ ತೆರಿಗೆಯನ್ನು ವಸೂಲ್ಮಾಡುವದಕ್ಕೆ ಅಧಿಕಾರವಿರುತ್ತದೆ. ಯೂನಿಯನ್ನುಗಳಲ್ಲಿ 1915 ನೆಯ ಜೂಲೈ ಗುರ್ರಿ ಲಾಗಾಯಿತು ಅಂಗಡಿ ತೆರಿಗೆಯನ್ನು 1915 ನೆಯ ಇಸವಿಯ ರೆಗ್ಯುಲೇಷನಿನಲ್ಲಿ ನಮೂದಿಸಲ್ಪಟ್ಟ ದರಗಳ ಮೇರೆಗೆ ವಸೂಲ್ಮಾಡಲು ತಕ್ಕ ನಡವಳಿಕೆಯನ್ನು ನಾನಾ ಡಿಸ್ಟ್ರಿಕ್ಟ್ ಬೋರ್ಡಿನವರು ಶೀಘ್ರದಲ್ಲಿಯೇ ನಡಿಸಬೇಕೆಂದು ಅವರುಗಳನ್ನು ಕೋರಿಯದೆ. ಈ ತೆರಿಗೆಯನ್ನು ಧರಾಯಿಸುವದಕ್ಕೆ ಮಾಡಲ್‌ಥರಾ ನಿಬಂಧನೆಗಳನ್ನು ಆಧಾರವಾಗಿ ಇಟ್ಟುಕೊಳ್ಳಬಹುದು. ತೆರಿಗೆಯನ್ನು ತೆರತಕ್ಕ ವಿಷಯದಲ್ಲಿ ಯಾರಿಗಾದರೂ ವಿನಾಯಿತಿಗಳನ್ನು ತೋರಿಸುವದು ಆವಶ್ಯಕವಾದರೆ ಅಂಥವುಗಳನ್ನು ಸರ್ಕಾರದವರ ಹುಕುಂ ಬಗ್ಗೆ ಕಳುಹಿಸಬೇಕು. ಈ ವಿಷಯದಲ್ಲಿ ತೆಗೆದುಕೊಂಡ ನಡವಳಿಕೆಯನ್ನು ಸರ್ಕಾರದವರಿಗೆ 1916 ನೇ ಆಗಸ್ಟ್ 15 ನೆಯ ತಾರೀಖಿನೊಳಗಾಗಿ ರಿಪೋರ್ಟು ಮಾಡತಕ್ಕದ್ದು.

ಗ್ರಾಮ ಫಂಡು.—ವಿಲೇಜ್ ಕಾಮನ್ ಫಂಡನ್ನು ಏರ್ಪಡಿಸುವ ವಿಷಯದಲ್ಲಿ ಮಧುಗಿರಿ ತಾಲ್ಲೂಕಿನ ಗ್ರಾಮ ಕಮಿಟಿಯವರು 1915 ನೇ ಮಾರ್ಚಿ 4 ನೇ ತಾರೀಖಿನಲ್ಲಿ ಮೀಟಿಂಗು ಸೇರಿ ನಡಿಸಿದ ನಡವಳಿಕೆಯನ್ನು ತುಮಕೂರು ಡೆಪ್ಯುಟಿ ಕಮಿಷನರವರು ಬರೆದಿರುವುದೇನಂದರೆ—ಗ್ರಾಮ ಫಂಡನ್ನು ಏರ್ಪಡಿಸುವ ವಿಷಯವನ್ನು ಚರ್ಚಿಸಲಾಯಿತು. ಮದುವೆ ಕಾಲಗಳಲ್ಲಿಯೂ, ಸಂಘ ಮತ್ತು ಮತ ಸಂಬಂಧವಾದ ಕೂಟಗಳು ಸೇರುವ ಕಾಲದಲ್ಲಿಯೂ, ಸುಗ್ಗಿ ಕಾಲದಲ್ಲಿಯೂ ದ್ರವ್ಯ ಸಹಾಯವನ್ನು ಮಾಡುವದರ ಮೂಲಕ ತಮ್ಮ ಕೈಲಾದಷ್ಟು ಹಣವನ್ನು ಜಮಾಯಿಸಬೇಕೆಂದು ಕಾನ್‌ಫರೆನ್ಸಿಗೆ ಬಂದಿದ್ದ ಡೆಲಿಗೇಟುಗಳಿಗೆ ತಾಲ್ಲೂಕು ಅಮಲ್ದಾರರು ಬೋಧಿಸಿದರು. ಅಲ್ಲಿ ಹಾಜರಿದ್ದ ಡೆಲಿಗೇಟುಗಳೆಲ್ಲರೂ ಇದನ್ನು ಏಕವಾಕ್ಯದಿಂದ ಒಪ್ಪಿದರು; ಗ್ರಾಮದಲ್ಲಿ ಹತ್ತು ಜನರ ಉಪಯೋಗಕ್ಕಾಗಿ ಬಿಟ್ಟಿರುವ ಯಾವುದಾದರೂ ಜಮೀನಿನ ಫಸಲಿನ ಹರಾಜಿನ ಹುಟ್ಟುವಳಿಯನ್ನೂ ಮತ್ತು ಸಾಲವನ್ನು ಕೊಡತಕ್ಕವರು ಸಾಲಗಾರರೂ ಡನೆ ತಮ್ಮ ಬಾಕಿಯನ್ನು ಫೈಸಲ್ಮಾಡಿಕೊಳ್ಳುವ ಕಾಲದಲ್ಲಿ ಕೊಡಬಹುದಾದ ಮೊಬಲಗನ್ನೂ ಸಹ ಗ್ರಾಮ ಫಂಡಿಗೆ ಕೊಡಬಹುದೆಂದು ಸಲಹೆ ಕೊಟ್ಟುದನ್ನು ಎಲ್ಲರೂ ಒಪ್ಪಿದರು. ಈ ರೀತಿ ವಸೂಲ್ಮಾಡಲ್ಪಟ್ಟ ಹಣವನ್ನು ಕಮಿಟಿಯ ಅಧ್ಯಕ್ಷರ ಹೆಸರಿನಲ್ಲಿ ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿ, ಪ್ಯಾಸ್ ಬುಕ್ಕನ್ನು ಅಮಲ್ದಾರರ ವಶದಲ್ಲಿ ಇಟ್ಟರೆ ಸೇವಿಂಗ್ಸ್ ಬ್ಯಾಂಕಿನಿಂದ ವಾಪಸು ತೆಗೆದುಕೊಳ್ಳುವದನ್ನು ಅಮಲ್ದಾರರು ತನಿಖೆ ಮಾಡುವವರಿಗೂ ಅಧೀನದಲ್ಲಿಟ್ಟುಕೊಳ್ಳುವದಕ್ಕೂ ಅನುಕೂಲವಾಗುತ್ತೆಂಬಲೂ ಸಹ ತೀರ್ಮಾನ ಮಾಡಲಾಯಿತು. ಇದರ ಮೇಲೆ ಸರ್ಕಾರದವರು ಹುಕುಂ ಮಾಡಿರುವುದೇನೆಂದರೆ—ಗ್ರಾಮದ ಫಂಡಿಗಾಗಿ ವಸೂಲ್ಮಾಡಲ್ಪಟ್ಟ ಹಣವನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಕಮಿಟಿಯ ಅಧ್ಯಕ್ಷರ ಹೆಸರಿನಲ್ಲಿ ಇಡಬೇಕೆಂದು ಡೆಲಿಗೇಟುಗಳು ಕೊಟ್ಟ ಸಲಹೆಯನ್ನು ಸರ್ಕಾರದವರು ಒಪ್ಪಿರುತ್ತಾರೆ. ಬ್ಯಾಂಕಿನಿಂದ ವಾಪಸು ತೆಗೆದುಕೊಳ್ಳುವದನ್ನು ತನಿಖೆ ಮಾಡಿ ಅದನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವದಕ್ಕೆ ಅನುಕೂಲವಾಗುವುದಕ್ಕಾಗಿ ಪ್ಯಾಸ್ ಬುಕ್ಕನ್ನು ಅಮಲ್ದಾರರ ವಶದಲ್ಲಿಡತಕ್ಕದ್ದು. ಗ್ರಾಮದ ಹತ್ತು ಜನರ ಉಪಯೋಗಕ್ಕಾಗಿ ಬೇಕಾಗಿರುವ ಯಾವುದಾದರೂ ಕೆಲಸಕ್ಕಾಗಿ ಈ ಫಂಡನ್ನು ಉಪಯೋಗಿಸುವ ವಿಷಯದಲ್ಲಿ ಗ್ರಾಮಸ್ಥರೆಲ್ಲರೂ ಮೀಟಿಂಗು ಸೇರಿ ಅವರ ಅಂಗೀಕಾರ ಪಡೆದು ಆ ರೀತಿ ಉಪಯೋಗಿಸಿಕೊಳ್ಳಬಹುದೆಂಬ ಸಂಗತಿಯನ್ನು ಎಲ್ಲಾ ಗ್ರಾಮ ಕಮಿಟಿಗಳವರಿಗೆ ತಿಳುವಳಿಕೆ ಕೊಡಬೇಕೆಂದು ಡೆಪ್ಯುಟಿ ಕಮಿಷನರುಗಳನ್ನು ಕೋರಿ ಇದೆ. ಯಾವ ಕಾಲದಲ್ಲಿ ಅಧ್ಯಕ್ಷರಾಗಿರತಕ್ಕವರ ವಿನಾ ಇತರರಿಗೆ ಹಣ ಪಾವತಿ ಆಗುವ ಸಂಭವವನ್ನು ತಪ್ಪಿಸುವುದಕ್ಕಾಗಿ ಗ್ರಾಮ ಕಮಿಟಿಗಳ ಅಧ್ಯಕ್ಷರ ಬದಲಾವಣೆಗಳನ್ನು ಟ್ರೆಜರಿ ಆಫೀಸರುಗಳಿಗೆ ಕ್ರಮವಾಗಿ ತಿಳಿಸುವ ಏರ್ಪಾಟನ್ನು ಡೆಪ್ಯುಟಿ ಕಮಿಷನರುಗಳು ಮಾಡತಕ್ಕದ್ದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗ್ ನಡಿಸಿದರು. ಕಳೆದ ಮೇ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಿ ಪಾಸಾದವು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ 24,167 ರೂಪಾಯಿ ಜಮಾ, 19,062 ರೂಪಾಯಿ ಖರ್ಚು ಆಯಿತು. ಜನನ 189; ಮರಣ—ಪ್ಲೇಗ್ (ಹೊರಗಿನ ಕಾಯಿಲೆಗಳು) 2, ಸಿಡುಬು 8, ಜ್ವರ 13, ಇತರ ಕಾರಣಗಳು 125, ಜುಮ್ಲಾ 148. ಆಡಿಟರುಗಳ ರಿಪೋರ್ಟಿನ ಸಾರಾಂಶವೇನೆಂದರೆ—ಅಬ್ಕಾರಿಯ ಬಾಬಿನ ಉತ್ಪತ್ತಿಯು ಸುಮಾರು 2,000 ರೂಪಾಯಿಗೆ ಹೆಚ್ಚಿದೆ. ಮೊಹತರ್ಫಾ ವಸೂಲಾತಿ 1,900 ರೂಪಾಯಿ ಕಡಿಮೆಯಾಯಿತು. ಇನ್ನೂ 30,000 ರೂಪಾಯಿ ಈ ಬಾಬಿನಲ್ಲಿ ಬಾಕಿ ಉಳಿದಿದೆ. ಮೈಸೂರು ಪಟ್ಟಣದಲ್ಲೆಲ್ಲಾ 282 ಬೈಸಿಕಲ್‌ಗಳು ಮಾತ್ರ ಇರುವುದಾಗಿ ಲೆಕ್ಕಗಳು ತಿಳಿಸುವವು. ಊರಿನಲ್ಲಿ ಅದರ ಹತ್ತರಷ್ಟಾದರೂ ಬೈಸಿಕಲ್ ಇರುವುದಕ್ಕೆ ಸಂಶಯ ಕಾಣುವುದಿಲ್ಲ. ಈ ಭಾಗಗಳನ್ನು ಕ್ರಮಪಡಿಸಬೇಕು ಎಂಬೀ ರೀತಿ ಬರೆದಿದ್ದರು. ಮೊಹತರ್ಫಾ ವಸೂಲಾತಿಯನ್ನೂ, ಬೈಸಿಕಲ್‌ಗಳ ಲೆಕ್ಕವನ್ನೂ ಈಗ ಕ್ರಮಪಡಿಸುತ್ತಿದೇವೆಂದೂ, ಇನ್ನು ಒಂದೆರಡು ತಿಂಗಳೊಳಗಾಗಿ ಎಲ್ಲಾ ಕ್ರಮಪಡುವುದೆಂದೂ ವೈಸ್ ಪ್ರೆಸಿಡೆಂಟರು ಸಮಾಧಾನ ಹೇಳಿದರು.

ಸಕ್ಕರೆಯ ಮೇಲೆ ಪಾವತಿ ಮಾಡಲ್ಪಟ್ಟ ಅಬ್ಕಾರಿಯ ಸುಂಕವನ್ನು ವರ್ತಕರು ವಾಪಸು ಪಡೆಯುವುದಕ್ಕೆ ಮೂರು ತಿಂಗಳ ವಾಯಿದೆ ಕೊಡಬಹುದೆಂದು ತೀರ್ಮಾನವಾಯಿತು.—1914-15 ನೇ ಸಾಲಿನ ನೀರಿನ ಕಂದಾಯವನ್ನು ಅಂಗಡಿಗಳಿಂದ ವಸೂಲ್ಮಾಡುವುದು ಸಾಧ್ಯವಲ್ಲವೆಂದು ಸರ್ಕಾರಕ್ಕೆ ಅರಿಕೆಮಾಡುವಂತೆ ಒಪ್ಪಿದರು.—ಮೈಸೂರಿಗೆ ಕುಡಿಯುವ ನೀರು ಸರಬರಾಯಿ ಆಗುವ ನೀರಿನ ಯಂತ್ರಗಳಿಗೆ ಉಪಯೋಗಿಸುವಂಥಾ ವಿದ್ಯುಚ್ಛಕ್ತಿಗೆ ಯೂನಿಟ್ 1 ಕ್ಕೆ 6 ಪೈಸಂತೆ ಕ್ರಯವನ್ನು ಕೊಡತಕ್ಕದ್ದೆಂದು ಸರ್ಕಾರದವರು ವಿಧಿಸಿರುತ್ತಾರೆ.—ಅನಾಥಾಲಯದ ಕಟ್ಟಡಕ್ಕೆ ಪ್ರತಿಯಾಗಿ ಸುಬ್ರಾಯನ ಕೆರೆ ಪೂರ್ವ ಪಾರ್ಶ್ವದಲಿರುವ 8,394 ಚದರ ಗಜ ಖಾಲಿನಿವೇಶನವನ್ನು ಅನಾಥಾಲಯಕ್ಕೆ ಕೊಡಬೇಕೆಂದು ಸರ್ಕಾರದವರು ಹುಕುಂಕೊಟ್ಟಿದಾರೆ.—ಟೌನ್ ಪ್ಲಾನಿಂಗ್ ಪ್ರದರ್ಶನಕ್ಕಾಗಿ ಮೈಸೂರು ಬೆಂಗಳೂರು ಮ್ಯುನಿಸಿಪಾಲಿಟಿಗಳಿಂದ ಕಳುಹಿಸಲ್ಪಟ್ಟಿದ್ದ ಮೆಂಬರುಗಳಿಗೆ ಹೋಗಬರ 1 ನೇ ಕ್ಲಾಸ್ ರೈಲ್ ಛಾರ್ಜು ಮತ್ತು ದಿನಕ್ಕೆ 5 ರೂಪಾಯಿ ಭತ್ಯ ಕೊಡತಕ್ಕದ್ದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು.—ಶ್ರೀರಂಗಪಟ್ಟಣದ ಕಡೆ ಸೀರನಗೆರೆ ಉಕ್ಕಡವನ್ನು ಅಲಂಕಾರವಾಗಿ ಕಟ್ಟುವುದಕ್ಕೆ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲವಾದ್ದರಿಂದ ಅದನ್ನು ಟ್ರಸ್ಟ್ ಬೋರ್ಡಿನವರು ಕಟ್ಟಿಸಿಕೊಡಬೇಕೆಂದು ಇಚ್ಛೆಪಡಲಾಯಿತು.—ಚಾಮರಾಜಮೊಹಲ್ಲಾ ಬಜಾರ್ ಲೈನಿನಲ್ಲಿ ಮನೆಗಳ ಮುಂದೆ ಒಂದು ಪಾರ್ಶ್ವದ ಖಾಲಿ ನಿವೇಶನವನ್ನು ಆಯಾ ಮನೆಯವರಿಗೆ ಕೊಡಕೊಡದೆಂದು ತೀರ್ಮಾನವಾಯಿತು.—ತಿಂಗಳಿಗೆ 4,000 ಗ್ಯಾಲನ್‌ಗೆ ಮೀರದಂತೆ ಯಾವ ಮನೆಯವರು ನೀರು ಉಪಯೋಗಿಸಿಕೊಳ್ಳುವುದಿಲ್ಲವೋ ಅಂಥಾ ಮನೆಗಳವರಿಂದ ವಾಟರ್ ಬಾಡಿಗೆ (ತಿಂಗಳಿಗೆ 4 ಆಣೆ) ವಸೂಲ್ಮಾಡದೆ ಮಾಫಿ ಬಿಡಲಾಗುತ್ತೆಂದು ಸರ್ಕಾರದವರು ಹುಕುಂಕೊಟ್ಟಿದಾರೆ.—ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ಪ್ರದರ್ಶನೋತ್ಸವವು ಈ ಸಲ ನಡಿಸಲ್ಪಡುವುದಿಲ್ಲ ವಾದಕಾರಣ ಅದಕ್ಕೆ ಪ್ರತಿಯಾಗಿ ಸ್ಕೂಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನಾನಾ ಆಟದ ಪಂದ್ಯಗಳನ್ನು ಕಲ್ಪಿಸಿ ಬಹುಮಾನಗಳನ್ನು ಕೊಡುವಂತೆ ಇಚ್ಛೆಪಡಲಾಗಿದೆ. ಇದರ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ 200 ರೂಪಾಯಿ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಲೇಟ್ ಭಕ್ಷಿ ನರಸಪ್ಪನವರ ದೇವಸ್ಥಾನದ ಮಳಿಗೆಗಳಿಗೆ ಮ್ಯುನಿಸಿಪಲ್ ಕಂದಾಯ ಹಾಕಿ ವಸೂಲ್ಮಾಡಬೇಕೇ ಬೇಡವೇ ಎಂಬ ವಿಷಯವನ್ನು ಇತ್ಯರ್ಥಮಾಡುವುದಕ್ಕೆ ಮೂರು ಮೆಂಬರುಗಳು ನೇಮಕವಾಗಿದ್ದರು. ಆ ಪೈಕಿ ಒಬ್ಬರು ಸೇರಲಿಲ್ಲ. ಸೇರಿದ ಇಬ್ಬರಲ್ಲೂ ಭಿನ್ನಾಭಿಪ್ರಾಯಗಳುಂಟಾದವು. ಆದಕಾರಣ ಈ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಯವರಿಗೆ ತಿಳಿಸಿ ಅವರ ಅಭಿಮತವನ್ನು ತಿಳಿಯಬೇಕೆಂದು ಇತ್ಯರ್ಥಮಾಡಿದರು.—ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಕಾನ್‌ಫರೆನ್ಸಿನ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ 500 ರೂಪಾಯಿಗಳು ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಮಳವಳ್ಳಿಯ ಸಂಪದಭಿವೃದ್ಧಿ.

ಅಯ್ಯಾ,—ಈ ಕಾಲದಲ್ಲಿ ಪರದೇಶೀಯ ಸರಕುಗಳೂ, ಕೈಗಾರಿಕೆಗಳೂ ಹಿಂದೂ ದೇಶದ ವ್ಯಾಪಾರಕ್ಕೆ ಮತ್ತು ಸಂಪದಭಿವೃದ್ಧಿಗೆ ಘಾತಕವುಗಳಾಗಿರುವದಿಲ್ಲ. ಹೀಗಿರುವಲ್ಲಿ ಬೆಂಗಳೂರು ಸಿಟಿ ಏಜನ್ಸಿಗೆ ಸಂಬಂಧಪಟ್ಟ ಮ|| ಕೆ. ಆರ್. ಚಕ್ರವರ್ತಿ ಅಯ್ಯಂಗಾರ್ರು ಮೈಸೂರು ಸ್ಟೀಮ್ ಟ್ರಾಂವೇ ಕಂಪನಿಗೆ ಷೇರುಗಳನ್ನು ಕೂಡಿಸುವ ಏಜಂಟರಾಗಿ ಅವಕ್ಕಾಗಿ ಬಹು ಮುತುವರ್ಜಿ ವಹಿಸಿ ಕಷ್ಟಪಡುತ್ತಾ ಇದಾರಲ್ಲದೆ, ಇದರ ಜೊತೆಯಲ್ಲಿ ಚಿಕ್ಕವರೂ ದೊಡ್ಡವರೂ ಯಾವದಾದರೊಂದು ಕೈಕಸಬಿನಿಂದ ಜೀವನ ಮಾಡಬಹುದಾದ ವಿಷಯವನ್ನು ಕುರಿತು ಮೈಸೂರಿನ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸಂಚರಿಸಿ ಸಂತೋಷದಿಂದಲೂ ಆದರ ಸತ್ಕಾರದಿಂದಲೂ ಉಪನ್ಯಾಸಗಳನ್ನು ಕೊಡುತ್ತಲೂ, ಅನುಭವ ಸ್ಥಾಪಿತ ದೃಷ್ಟಾಂತಗಳಿಂದ ತೋರಿಸುತ್ತಲೂ ಕಲಿಸುತ್ತಲೂ ಬರುತ್ತಿದಾರೆ.

ಈ ಮಹನೀಯರು ಮಳವಳ್ಳಿಗೆ ದಯಮಾಡಿಸಿ ಗ|| ಸ್ಕೂಲ್ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಕೆಲವು ದೃಷ್ಟಾಂತಗಳಿಂದ ಕಸಬುಗಳನ್ನು ಮಾಡುವ ವಿಧಾನವನ್ನು ತೋರಿಸಿಕೊಟ್ಟಿದ್ದಲ್ಲದೆ ತಾ. 14-15 ರಲ್ಲಿ ಇಲ್ಲಿನ ಕ್ರೈಸ್ತ ಮಿಷನ್ ಆರಾಧನಾ ಶಾಲೆಯಲ್ಲಿ ಅನಾಥ ಹುಡುಗರಿಗೂ ಹೊರಗಿನವರ ಪೈಕಿ ಪಂಚಮರೇ ಮೊದಲಾದವರಲ್ಲಿ ಸ್ಕೂಲ್ ಹುಡುಗರು ಮೊದಲುಗೊಂಡು ದೊಡ್ಡವರ ವರೆಗೆ ಅನೇಕರಿಗೂ ಬಹು ಪ್ರಾಮುಖ್ಯವಾದ ಎರಡು ಉಪನ್ಯಾಸಗಳನ್ನು ಕೊಟ್ಟು, ಕೈಗಾರಿಕೆಯ ವಿಧಾನವನ್ನು ದೃಷ್ಟಾಂತಗಳಿಂದ ಪ್ರದರ್ಶಿಸಿದರು. ಮೊದಲನೇ ಕೂಟದಲ್ಲಿ "ಮೈಸೂರು ಎಕನಾಮಿಕ್ ಕಾನ್‌ಫರೆನ್ಸ್" ಗೆ ಸಂಬಂಧಪಟ್ಟ ಮೈಸೂರು ಡಿಸ್ಟ್ರಿಕ್ಟಿನ ಸೂ|| ಮ|| ಶ್ರೀನರಸಿಂಹಶಾಸ್ತ್ರಿಯವರು ಅಗ್ರಸ್ಥರಾಗಿದ್ದರು. ನಮ್ಮ ಅಮಲ್ದಾರರೂ, ಡಾಕ್ಟರೂ, ಘನ ಪೇಷಂಟ್ ನಾತೇಬರೂ, ಧೊರೆಸಾನಿಯವರೂ ಇನ್ನೂ ಅನೇಕರೂ ಹಾಜರಿದ್ದು ಪ್ರೋತ್ಸಾಹಿಸಿದರು. ಇಂಥಾ ದೇಶೀಯ ದೊಡ್ಡಮನುಷ್ಯರು ಎಲ್ಲೆಲ್ಲೂ ಸಂಚರಿಸಿ, ದಾರಿದ್ರ್ಯ ಸ್ಥಿತಿಯಲ್ಲಿ ವ್ಯಾಕುಲ ಪಡುತ್ತಿರುವ ಮೈಸೂರಿನ ಪ್ರಜೆಗಳ ಬುದ್ಧಿ ಸಾಮರ್ಥ್ಯಾದಿಗಳನ್ನು ಹುರಿದುಂಬಿಸುತ್ತಾ ಬರೋಣದರಿಂದ ಉತ್ತರೋತ್ತರ ದ್ರವ್ಯಾಭಿವೃದ್ಧಿಯು ಏಳಿಸುತ್ತಾ ಬರುವದೆಂಬುವದಕ್ಕೆ ಸಂಶಯವಿಲ್ಲ, ಫೌಂಟನ್ ಪೆನ್‌ಗೆ ಯೋಗ್ಯವಾದ ಕೆಮಿಕಲ್ ಶಾಯಿ, ಬೂಟ್ ಪಾಲಿಷ್, ಚರ್ಮ ಹದಮಾಡುವುದು, ಇತ್ಯಾದಿ ವಿಧಾನವನ್ನು ತೋರಿಸಿದರು.

ಬಹು ಘನತರವಾದ ಕೆ. ಸಿ. ಐ. ಇ. ಎಂಬ ಬಿರುದನ್ನು ಸಂಪಾದಿಸಿಕೊಂಡ ನಮ್ಮ ಕುಲೀನ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಜಾಗೃತವನರು ಬಹು ವಿರಳ. ಈ ಮಹನೀಯರು ಈ ಸಂಸ್ಥಾನದ ಉದ್ಯೋಗವನ್ನು ವಹಿಸಿಕೊಂಡ ಲಾಗಾಯ್ತು ಹಿಂದೆ ಯಾವಾಗ್ಯೂ ಇಲ್ಲದ ರೀತಿಯಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರಾದಿಗಳ ವಿಷಯದಲ್ಲಿ ಬಹು ಮುತುವರ್ಜಿ ವಹಿಸಿ ಪ್ರಜೆಗಳಿಗೆ ಮಾಡುತ್ತಿರುವ ಉಪಕಾರದಲ್ಲಿ ಅವರ ಗುಪ್ತ ಬುದ್ಧಿ ಸಾಮರ್ಥ್ಯಾದಿಗಳು ಪ್ರಕಾಶಿಸುತ್ತಿರುವದು ಪ್ರತ್ಯಕ್ಷವಾಗಿದೆ. ವ್ಯವಸಾಯ, ಬಾಗಾಯಿತು ಮತ್ತು ವಿದ್ಯಾಭಿವೃದ್ಧಿ ಯಾವತ್ತು ಸಮಾಂತರ ಮುಂದರಿಯುತ್ತಿರಬೇಕೆನ್ನುವದೇ ಅವರ ದೊಡ್ಡ ಅಭಿಲಾಷೆ. ಇಂಥಾ ಅನುಕೂಲ್ಯ ಪ್ರೋತ್ಸಾಹಾದಿಗಳ ಕಾಲವು ಪುನ್ಯೋದಯನೊಂದರಿತು, ಹೆಚ್ಚು ಸಂಪಾದನೆ ಇಲ್ಲದೆ ದಾರಿದ್ರ್ಯಾವಸ್ಥೆಯಲ್ಲಿರುವ ಎಲ್ಲಾ ಪ್ರಜೆಗಳೂ ಯಾಕೆ ಸುಲಭದಲ್ಲಿ ಸಂಪಾದನೆಗೆ ಆಧಾರವಾದ ಈ ಕೈಕಸಬುಗಳನ್ನು ಕಲಿತು ಸುಖಜೀವನ ಪಡೆಯಬಾರದು.

ಮಳವಳ್ಳಿ. ಜೆ. ಬಿ. ಗೇಬ್ರಿಯೇಲ್.

ಪೋಸ್ಟ್ ಇಲಾಖೆಯ ಮೇಲಣ ಆಕ್ಷೇಪಣೆ

ಅಯ್ಯಾ,—ಈ ಹಾಸನ ತಾಲ್ಲೂಕು ದುದ್ದದ ಹೋಬಳಿ ಹೆರಗು ಎಂಬ ಗ್ರಾಮವು ಏಳುನೂರು ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಇದರ ಸುತ್ತುಮುತ್ತು ಮೂರು ಮೈಲಿ ಫಾಸಲೆಯೊಳಗಾಗಿ 30 ಗ್ರಾಮಗಳಿಗೆ ಮೇಲ್ಪಟ್ಟು ಸುಮಾರು ಹತ್ತು ಸಾವಿರ ಪ್ರಜೆ ಇರುವ ಪ್ರದೇಶವಾಗಿದೆ. ಇಲ್ಲಿಗೆ ಆರು ಮೈಲಿ ದೂರದಲ್ಲಿರುವ ಗ್ರಾಮದಿಂದ ಅಥವಾ ಐದು ಮೈಲಿ ದೂರದಲ್ಲಿರುವ ಚಿಕ್ಕಕಡ್ಲೂರಿನಿಂದ ಪೋಸ್ಟು ಬರಬೇಕಾಗಿದೆ. ಆ ಪೋಸ್ಟು ಆಫೀಸುಗಳ ಪೈಕಿ ಚಿಕ್ಕಕಡ್ಲೂರಿನಲ್ಲಿ ಪೋಸ್ಟು ಮ್ಯಾನ್ ಇಲ್ಲ. ಗ್ರಾಮದಲ್ಲಿರುವ ಪೋಸ್ಟು ಮ್ಯಾನಿಗೆ ಆತನ ಶಕ್ತಿಗೂ ಕಾಲಕ್ಕೂ ಮೀರಿದಷ್ಟು ಕೆಲಸವಿದೆ. ಅವನು ನಮ್ಮ ಗ್ರಾಮಗಳಿಗೆ ಬಂದು ನಮ್ಮ ಕಾಗದಗಳನ್ನು ತಲುಪಿಸುವದಕ್ಕೆ ಒಂದೆರಡು ವಾರಗಳ ವರೆಗೂ ಸಾವಕಾಶವಾಗಿರುವದು ನಮ್ಮ ಅನುಭವದಲ್ಲಿದೆ. ಎಂಟು ಹತ್ತು ದಿವಸಗಳಿಗೆ ಮುಂಚೆ ಇತರ ಸ್ಥಳಗಳಿಂದ ಬರೆದ ಲಗ್ನ ಪತ್ರಿಕೆಗಳು ಆ ಮದುವೆಯಾದ ಒಂದೆರಡು ದಿನಗಳ ಮೇಲೆ ಬಂದು ತಲುಪಿವೆ. ಮರಣಶಯ್ಯೆಯಲ್ಲಿ ಮಲಗಿದಾರೆ, ಬೇಗನೆ ಬರಬೇಕೆಂದು ಬರೆದ ಕಾಗದಗಳು ಮರಣಾನಂತರ ಅವರಿಗೆ ನಡೆಯತಕ್ಕ ಉತ್ತರ ಕೆಲಸಗಳೆಲ್ಲಾ ಪೂರೈಯಾದನಂತರ ತಲುಪಿವೆ. ಇಂತಹ ಉದಾಹರಣೆಗಳನ್ನು ಹೆಚ್ಚಾಗಿ ಕೊಡಬಹುದು. ನಮ್ಮ ಪೋಸ್ಟು ಇಲಾಖೆಯವರು ಈ ವಿಚಾರ ತಮ್ಮ ಚಿತ್ತಕ್ಕೆ ತಂದುಕೊಂಡು ಈ ಗ್ರಾಮಕ್ಕೆ ಒಂದು ಬ್ರಾಂಚು ಆಫೀಸನ್ನು ಸ್ಥಾಪಿಸಿಕೊಟ್ಟರೆ ಹತ್ತುಸಾವಿರ ಪ್ರಜೆಗಳಿಗೆ ತುಂಬಾ ಉಪಕಾರವಾಗುತ್ತೆ. ಮತ್ತು ಒಂದು ಕಾರ್ಡು ಒಂದು ಕವರು, ಬೇಕಾದರೂ, ರಿಜಿಸ್ಟರು, ಮನಿಯಾರ್ಡರು ಮಾಡಬೇಕಾದರೂ ವೃದ್ಧರಾದವರು, ಸ್ತ್ರೀಯರು, ಹುಡುಗರು ಸಹಾ ಆರು ಮೈಲಿ ಹೋಗಬೇಕಾದ ಕಷ್ಟವನ್ನು ನಮ್ಮ ಸರ್ಕಾರದವರು ತಪ್ಪಿಸಿದ ಉಪಕಾರಕ್ಕೆ ಭಾಗಿಗಳಾಗುತ್ತಾರೆ. ದಯವಿಟ್ಟು ಈ ಸಂಗತಿಯನ್ನು ಇಂಗ್ಲಿಷಿನಲ್ಲಿ ಸಹ ತರ್ಜುಮೆಮಾಡಿ ಪೋಸ್ಟು ಆಫೀಸುಗಳ ಡೈರೆಕ್ಟರವರಿಗೆ ಸಹಾ ತಿಳಿಯುವಂತೆ ನಮ್ಮ ಪತ್ರಿಕಾಕರ್ತರು ಉಪಕಾರಮಾಡಿದರೆ ತುಂಬಾ ಕೃತಜ್ಞರಾಗಿರುತ್ತೇವೆ.

ತಿರುನಾರಣಯ್ಯಂಗಾರ್ ಮುಂತಾದವರು

[ಆ ಗ್ರಾಮಗಳ ಮುಖಂಡರು ಒಂದು ಕಡೆ ಸೇರಿ ಈ ತಮ್ಮ ಅನನುಕೂಲವನ್ನು ಕುರಿತು ನಮ್ಮ ಸರ್ಕಾರಕ್ಕೂ, ಪೋಸ್ಟ್ ಇಲಾಖೆಯ ಸೂಪರಿಂಟೆಂಡೆಂಟರಿಗೂ ಅರ್ಜಿಗಳನ್ನು ಬರೆದುಕೊಳ್ಳುವುದು ಇನ್ನೂ ಒಳ್ಳೇದು.—ಎಡಿ.]

ಸ್ಕೂಲ್ ಮಾಸ್ತರುಗಳ ಬಡ್ತಿ ವಿಚಾರ

ಅಯ್ಯಾ,—ನಮ್ಮ ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೊಸದಾಗಿ ಸ್ಕೇಲ್‌ಗಳಂತ ಮಾಡಿದರು. ಅದು ಈಗ ಹ್ಯಾಗೆ ಆಗಿರುತ್ತೆಂದರೆ ಕೆಳಪಟ್ಟ ಆಫೀಸರುಗಳು ಸೋಮಾರಿಗಳಾಗಿ ಕೆಲಸಮಾಡದೆ ಪೋಲಿಯಾಗಿ ಓಡಾಡಿಕೊಂಡಿರುವ ಅನೇಕ ಮಂದಿ ಮಾಸ್ತರುಗಳಿಗೆ ಹತ್ತರಿಂದ ಹದಿನೈದು, ಹದಿನೈದರಿಂದ ಇಪ್ಪತ್ತು, ಇಪ್ಪತ್ತೈದು, ಈ ಮೇರೆಗೆ ಮನಸ್ಸು ಬಂದ ಹಾಗೆ ಸಿಫಾರಸು ಮಾಡಿ ಬಡ್ತಿಮಾಡಿಸಿಬಿಟ್ಟರು. ಇದರಿಂದ ನಮ್ಮ ಮಹಾರಾಜರವರ ಮಿಟಾನೆ ಬರೀದಾಯಿತೇ ಹೊರತು ನ್ಯಾಯವೂ ಸಾರ್ಥಕವೂ ಆಗಲಿಲ್ಲ. ಯೋಗ್ಯರಾಗಿ ವಿದ್ಯಾವಂತರಾಗಿ ಸರಿಯಾಗಿ ಕೆಲಸ ಮಾಡುತ್ತಿರುವ ಮಾಸ್ತರುಗಳ ಹೆಸರೇ ಅವರ ಜ್ಞಾಪಕಕ್ಕೆ ಬಾರದೆಹೋಯಿತು; ಅಥವಾ ಬಂದರೂ ಅಲ್ಪ ಫಲವಾಯಿತೇ ಹೊರತು ಸಂಪೂರ್ಣ ಫಲವಾಗಲಿಲ್ಲ. ಇದನ್ನೆಲ್ಲಾ ಮೇಲಿನವರು ನ್ಯಾಯವಾದ ವಿಚಾರವಿಲ್ಲದೆ ಪಕ್ಷಪಾತವಾಗಿ ಮಾಡಿದ ಶಿಫಾರಸೇ ಮುಖ್ಯವಾದುದೆಂದು ನ್ಯಾಯಾನ್ಯಾಯವಿಲ್ಲದೆ ಮಂಜೂರುಮಾಡಿಹಾಕಿದರು. ಈಗಲೂ ಅದ ಮಾಯಿಸಿಮಾಡಿದರೆ ಈ ಬರವಣಿಗೆ ನಿಜ ಸುಳ್ಳು ಎಂಬುದು ಗೊತ್ತಾಗುತ್ತೆ. ಇದನ್ನೆಲ್ಲಾ ನೋಡಿದರೆ ಸತ್ಯವಾದ ರಾಜ್ಯಭಾರಕ್ಕೆ ನ್ಯಾಯವಾದ ಬಡವರ ಗೋಳಾಟವು ಇಂಥಾ ಅಧಿಕಾರಿಗಳಿಂದ ತಪ್ಪದೆ ಇರಲಾರದು. ಈ ಅತ್ಯಂತ ವ್ಯಸನಕರವಾದ ವಿಷಯ ತಮ್ಮ ಪತ್ರಿಕೆಯಿಂದ ನಮ್ಮ ಶ್ರೀಮನ್ ಮಹಾರಾಜರವರಿಗೆ ಅರಿಕೆಯಾಗಿ ಈ ಅನ್ಯಾಯ ಕ್ರಮಪಡುವಂತೆ ಮಾಡುವರೆಂಬುದಾಗಿ ಖಂಡಿತವಾಗಿ ನಂಬಿರುತ್ತೇನೆ.

ದೇವನಹಳ್ಳಿ. ಸತ್ಯವಾದಿ.

II

ಅಯ್ಯಾ,—ಮಾಸ್ತರುಗಳ ಪ್ರಮೋಷನ್ ವಿಚಾರದಲ್ಲಿ ಈಗ ಟ್ರೈನಿಂಗ್ ಪ್ಯಾಸ್ ಮಾಡಿದ ಅನೇಕ ಜನ ಮಾಸ್ತರುಗಳು ಹಿಂದೆ ಟ್ರೈನಿಂಗ್ ಪ್ಯಾಸ್ ಮಾಡಿದವರಿಗೆ 2 ರೂಪಾಯಿ ಬಡ್ತಿ ಕೊಟ್ಟಿದಾರೆ. ಅನೇಕ ಜನ ಮಾಸ್ತರುಗಳಿಗೆ 7-8 ವರ್ಷ ಸರ್ವೀಸ್ ನಡೆದು ಟ್ರೈನಿಂಗ್ ಪ್ಯಾಸ್ ಇಲ್ಲದೆ ಇರುತ್ತಾರೆ. ಇಂಥಾವರಲ್ಲಿ ಕೆಲವರಿಗೆ 2 ರೂಪಾಯಿ ಬಡ್ತಿ ಕೊಟ್ಟಿರುತ್ತಾರೆ. ಇದು ನೋಡಿದರೆ ಬಹಳ ಆಶ್ಚರ್ಯವಾಗಿರುತ್ತೆ. ಟ್ರೈನಿಂಗ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆ ಯಾವದೂ ಇಲ್ಲದೆ ಬಡ್ತಿ ಕೊಟ್ಟಿರುವ ಮಾಸ್ತರುಗಳು ಮಾಡಿರುವ ಉಪಕಾರವೇನು? ಅವರ ಸರಿಸಮಾನರಾಗಿ ಸರ್ವೀಸ್ ಮಾಡಿರುವ ಮಾಸ್ತರುಗಳು ಮಾಡಿರುವ ಅಪಕಾರವೇನು? ಟ್ರೈನಿಂಗ್ ಕ್ಲಾಸ್ ಪ್ರಾರಂಭವಾಗುವುದಕ್ಕೆ ಮುಂಚೆ ಸ್ಕೂಲ್ ಮಾಸ್ತರ ಕೆಲಸಕ್ಕೆ ಸೇರಿ ಸರ್ವೀಸ್ ಮಾಡಿದವರಲ್ಲಿ ಟ್ರೈನಿಂಗ್ ಕ್ಲಾಸ್ ಶುರು ಆದಾಗ ಚುನಾಯಿಸಿದ್ದ ಪಕ್ಷದಲ್ಲಿ ಅವರೆಲ್ಲರೂ ಪ್ಯಾಸ್ ಮಾಡುತ್ತಲೇ ಇದ್ದರು. ಈಗಲೂ ಅಂಥವರನ್ನು ಚುನಾಯಿಸದೇ 2-3 ವರ್ಷದ ಕೆಳಗೆ ಸ್ಕೂಲ್ ಕೆಲಸಕ್ಕೆ ಸೇರಿದವರಿಗೆ ಬಡ್ತಿ ಕೊಡುವುದಕ್ಕೆ ಅವರುಗಳನ್ನು ಟ್ರೈನಿಂಗ್ ಕಾಲೇಜಿಗೆ ಚುನಾಯಿಸಿಯೂ ಇರುತ್ತಾರೆ. ಈ ರೀತಿ ಪಕ್ಷಪಾತಮಾಡಿರುವದು ಬಹಳ ವ್ಯಸನಕರವಾಗಿದೆ. ಆದ್ದರಿಂದ ಸತ್ಯಪ್ರಿಯರಾದ ವಿದ್ಯಾಭ್ಯಾಸದ ಇಲಾಖೆಯವರು ಈ ವಿಷಯವನ್ನು ಮನಸ್ಸಿಗೆ ತಂದು ಈ ಅವಿವೇಕವನ್ನು ತಪ್ಪಿಸಿ ಮೈಸೂರು ದೇಶದ ಎಲ್ಲಾ ವಿಲೇಜ್ ಮಾಸ್ತರುಗಳಿಗೂ ಒಂದೇ ಸಮನಾಗಿ ಬಡ್ತಿ ಕೊಟ್ಟು ಕಾಪಾಡುತ್ತಾರೆಂತ ನಂಬಿರುತ್ತೇನೆ.

ಹಿತಚಿಂತಕ.

III

ಅಯ್ಯಾ,—ನಮ್ಮ ಮಹಾರಾಜಾ ಸರ್ಕಾರದವರು ಬಡ ಹೋಬಳಿ ಸ್ಕೂಲ್ ಮಾಸ್ತರುಗಳ ಸಂಬಳ ಕಮ್ಮಿ ಎಂದು ಕಳೆದ ಸಾಲಿನಲ್ಲಿ ಪ್ರತಿ ಒಬ್ಬರಿಗೂ 1 ರೂಪಾಯಿಗೆ ಕಮ್ಮಿ ಇಲ್ಲದಂತೆ ಇರಬೇಕೆಂದು ಹಣ ಸ್ಯಾಂಕ್ಷನ್ ಮಾಡಿ

ಆದರೆ ಈ ಸಾಲಿನಲ್ಲಿ ಮೈಸೂರು, ಬೆಂಗಳೂರು ಪ್ರಾಂತ್ಯಗಳಲ್ಲಿ ಪ್ರತಿ ಬಿ. ಎ. ಬಾಯ್ಸ್ ಸ್ಕೂಲಿನಲ್ಲಿಯೂ ಸಹ 12 ರೂಪಾಯಿನಂತೆ ಸಂಬಳ ಕೊಡುತ್ತಿದ್ದಾರೆ. ಮತ್ತು ಈ ಡಿಸ್ಟ್ರಿಕ್ಟಿನಲ್ಲಿ ಕೆಲವರಿಗೆ ಮಾತ್ರ 12 ರೂಪಾಯಿನಂತೆಯೂ, ಉಳಿದವರಿಗೆ 10 ರೂಪಾಯಿನಂತೆಯೂ ಪಾವತಿ ಆಗುತ್ತಿದೆ. ಆದರೆ ಈ 10 ರೂಪಾಯಿನವರು ಮಾತ್ರ ಏನು ಪಾಪಮಾಡಿದರೋ ಗೊತ್ತಿಲ್ಲ. ಆದರೂ 10 ರೂಪಾಯಿನ ನೌಕರರು ಕೆಲವರೇ ಇರುವದರಿಂದಲೂ, ಅವರುಗಳ ಸಂಕಟವನ್ನು ನೋಡುವದು ಬಹಳ ಕಷ್ಟವಾಗಿರುವದರಿಂದಲೂ ಸರ್ಕಾರದವರು ಆ ಬಡ ನೌಕರರಿಗೂ 12 ರೂಪಾಯಿ ಮಾಡಿಕೊಟ್ಟು ಸಂತೋಷನ್ನುಂಟುಮಾಡಿ ಕೀರ್ತಿ ಪಡೆಯಲೆಂದು ಪ್ರಾರ್ಥಿಸುತ್ತೇವೆ

ಹೋಬಳೀ ಮಾಸ್ತರ ಹಿತಚಿಂತಕ.

ಮೈಸೂರು ಸಂಪದಭ್ಯುದಯ ಸಮಾಜ.

ಕಳೆದ ಸೋಮವಾರ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೇಲ್ಕಂಡ ಸಭೆಯ ಆರನೇ ವಾರ್ಷಿಕ ಸಮಾಜವು ನಮ್ಮ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯ, ಕೆ. ಸಿ. ಐ. ಇ. ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಅವರ ಬಲಪಾರ್ಶ್ವದಲ್ಲಿ ನಮ್ಮ ಶ್ರೀಮದ್ಯುವರಾಜರವರೂ, ಇವರ ಬಲಗಡೆ ಬರೋಡೆಯ ರಾಜಕುಮಾರರೂ, ಎಡಪಾರ್ಶ್ವದಲ್ಲಿ ಕೌನ್ಸಲರುಗಳಾದ ಮ॥ ಎಚ್. ವಿ. ನಂಜುಂಡಯ್ಯ, ಸಿ. ಐ ಇ. ಯವರೂ, ಎಂ. ಕಾಂತರಾಜೆ ಅರಸ್, ಸಿ. ಎಸ್. ಐ. ರವರೂ, ಹಿಂಭಾಗದಲ್ಲಿ ನಮ್ಮ ರೆವಿನ್ಯೂ ಕಮಿಷನರ್ ಮ॥ ಕೆ. ದೊರಸಾಮಿ ಅಯ್ಯರವರೂ, ಬರೋಡೆಯ ಇಬ್ಬರು ಅಧಿಕಾರಿಗಳೂ ಕುಳಿತಿದ್ದರು. ಕೆಳ ಪಾರ್ಶ್ವದಲ್ಲಿ ಇಲಾಖೆಗಳ ಅಧಿಕಾರಿಗಳೂ, ಡೆಪ್ಯುಟಿ ಕಮಿಷನರುಗಳೂ, ಸುಮಾರು 40 ಮಂದಿ ಮೆಂಬರುಗಳೂ, ಒಂದು ಕಡೆ ಸೆಕ್ರೆಟರಿಗಳೂ, ಇನ್ನೊಂದು ಕಡೆ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೂ, ಹತ್ತಾರು ಮಂದಿ ಪ್ರೇಕ್ಷಕರೂ ಕುಳಿತಿದ್ದರು. ದಿವಾನ್‌ರವರು ಯುವರಾಜರವರ ಅನುಜ್ಞೆಯನ್ನು ಪಡೆದು ಸಭೆಯನ್ನು ಪ್ರಾರಂಭಿಸಿ ಉಪನ್ಯಾಸ ಮಾಡಿದರು. ಅವರ ಭಾಷಣದ ಮುಖ್ಯಾಂಶಗಳೇನೆಂದರೆ—

"ಮೈಸೂರು ಸಂಪದಭ್ಯುದಯ ಸಮಾಜದ ಈ ಆರನೆಯ ಸಭೆಗೆ ತಮ್ಮಗಳನ್ನು ಬರಮಾಡಿಕೊಳ್ಳುವ ಗೌರವವು ನಮ್ಮದಾಗಿರುತ್ತದೆ. ಈ ಸಭೆಯು ಸ್ಥಾಪಿತವಾದ ಕಾಲದಿಂದ ಇಂದಿಗೆ ನಾಲ್ಕು ವರ್ಷ ತುಂಬಿತು. ಈ ಕಾಲದಲ್ಲಿ ನಡೆದಿರುವ ಕಾರ್ಯವನ್ನು ಯೋಚಿಸಿ ನೋಡುವಲ್ಲಿ, ಅದು ತಕ್ಕ ಮಟ್ಟಿಗೆ ತೃಪ್ತಿಕರವಾಗಿ ನಡೆದಿದೆಯೆಂದು ನಾವು ಧಾರಾಳವಾಗಿ ಭಾವಿಸಬಹುದಾಗಿದೆ. ಹೀಗೆ ಇದುವರೆಗೆ ಸರಿಯಾದ ಅಸ್ತಿವಾರವು ಬಿದ್ದು, ನಾನಾ ಮಾರ್ಗಗಳಲ್ಲಿ ಬೇಕಾದ ಸಲಕರಣೆಗಳನ್ನು ಒದಗಿಸಿರುವದರಿಂದ ಮುಂದಿನ ಕಾರ್ಯಗಳು ಇನ್ನೂ ಚೆನ್ನಾಗಿ ನಡೆಯಬಹುದೆಂದು ನಂಬಬಹುದಾಗಿದೆ. ನಾವುಗಳು ಮಾಡಿರುವ ಏರ್ಪಾಟಿಗೆ ಸಂಬಂಧಪಟ್ಟ ಅಭಿಪ್ರಾಯಗಳೂ ಕಾರ್ಯಕ್ರಮಗಳೂ, ನಮ್ಮ ಜನಗಳ ಸಂಪ್ರದಾಯಗಳಿಗೂ ಸ್ವಭಾವಕ್ಕೂ ಹೊಸವುಗಳಾಗಿ ಇದ್ದರೂ, ಅವು ಕ್ರಮವಾಗಿ ತಪ್ಪದೆ ಅವರಲ್ಲಿ ರೂಢಿಗೆ ಬರುತ್ತಲಿವೆ; ಇದಲ್ಲದೆ ಈ ಸಂಸ್ಥಾನದ ಅನೇಕ ಪ್ರದೇಶಗಳ ಜನಗಳಲ್ಲಿ, ವಿಷಯಗಳನ್ನು ವಿಚಾರಮಾಡಬೇಕೆಂಬ ಬುದ್ಧಿಯೂ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸೆಯೂ ಹುಟ್ಟಿವೆ. ಇವು ಸಂತೋಷಕರವಾದ ಚಿಹ್ನೆಗಳೇ ಸರಿ. ನಾವು ಮಾಡಹೊರಡಿರುವ ಅರ್ಥಾಭ್ಯುದಯದ ಕೆಲಸವು ಮೆಲ್ಲಮೆಲ್ಲಗೆ ವೃದ್ಧಿಹೊಂದತಕ್ಕದಾಗಿದೆ. ಈ ಕೆಲಸದಲ್ಲಿ ಪ್ರಜೆಗಳು ಎಷ್ಟರ ಮಟ್ಟಿಗೆ ಸಹಾಯಕರಾಗಿ ಬರುತ್ತಾರೋ ಅಷ್ಟರ ಮಟ್ಟಿಗೆ ಅಭಿವೃದ್ಧಿಯುಂಟಾಗುತ್ತದೆ . . . . .

ಈ ವರ್ಷದಲ್ಲಿ ನಡೆದ ಕೆಲಸವನ್ನು ಒಟ್ಟುಗೂಡಿಸಿ ನೋಡುವಲ್ಲಿ ರೇಷ್ಮೆ ವ್ಯವಸಾಯದ ಕೆಲಸವು ಏಕಪ್ರಕಾರವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂತ ಹೇಳಬಹುದು. ವಿದ್ಯಾಭಿವೃದ್ಧಿಯು ತೃಪ್ತಿಕರವಾಗಿದೆ. ಯುದ್ಧಪ್ರಯುಕ್ತ ಸ್ಥಿತಿಗತಿಗಳು ಬದಲಾಯಿಸಿದ್ದರಿಂದಲೂ, ಸರಿಯಾದ ಯಂತ್ರಗಳನ್ನು ತರಿಸಿಕೊಳ್ಳುವುದಕ್ಕೆ ತೊಂದರೆಯಾದುದರಿಂದಲೂ, ಹಣ ದೊರೆಯುವುದು ದುರ್ಲಭವಾದುದರಿಂದಲೂ, ಅಭಿವೃದ್ಧಿ ಕಾರ್ಯಕ್ಕೆ ಸ್ವಲ್ಪ ಮಟ್ಟಿಗೆ ಕುಂದಕ ಉಂಟಾಗಿದ್ದರೂ ಯಂತ್ರಸಾಧನಗಳನ್ನು ಉಪಯೋಗಿಸುವ ವಿಷಯದಲ್ಲಿಯೂ, ಜನಗಳಿಗೆ ಸರಬಹುದಾದಂಥ ಏರ್ಪಾಡುಗಳ ವಿಷಯದಲ್ಲಿ ಸಲಹೆ ಕೊಡುವುದರಲ್ಲಿಯೂ ಸಹ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ತಕ್ಕ ಮಟ್ಟಿಗೆ ಕೆಲಸಗಳು ನಡೆದು ಇರುತ್ತವೆ. ಆದರೆ ಯುದ್ಧ ಪೂರೈಸಿದ ಕೂಡಲೆ ಸ್ಥಿತಿಗತಿಗಳು ಪುನಃ ಉತ್ತಮ ಸ್ಥಿತಿಗೆ ಬಂದಾಗ, ಈಗ ತಯಾರುಮಾಡಿರುವ ಏರ್ಪಾಡುಗಳೂ, ನಡಿಸಬಿಟ್ಟ ಪರೀಕ್ಷೆಗಳ ಫಲಿತಾಂಶಗಳೂ ಉಪಯೋಗವಾಗುವವೆಂದು ನಂಬಲಾಗಿದೆ.

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರುಗಳನ್ನು ನೇಮಿಸಿರುವುದರಿಂದಲೂ, ಅರ್ಥಸಾಧಕ ಪತ್ರಿಕೆಯನ್ನು ಪ್ರಾಯಿಸ್ಟಾಡುತ್ತಿರುವುದರಿಂದಲೂ, ಮೊದಲೇ ಸಮಾಜದಿಸಿರುವ ಮೇರೆಗೆ ಅನೇಕ ಪ್ರೋಗ್ರೆಸ್ ರಿಪೋರ್ಟುಗಳನ್ನು ಏರ್ಪಡಿಸಿರುವುದರಿಂದಲೂ ಸಹ, ಸಂಪದಭ್ಯುದಯ ವಿಷಯದಲ್ಲಿ ತಕ್ಕ ಮಟ್ಟಿಗೆ ಜನಗಳಲ್ಲಿ ಆಸಕ್ತಿಯೂ ಮುಖವರ್ಜಿಯೂ ಹೆಚ್ಚಿರುತ್ತದೆ. ಈ ರೀತಿ ಕುತೂಹಲದಿಂದ ಕೈಗೊಂಡಿರುವ ಕೆಲಸಗಳನ್ನು ಸ್ಥಿರಪಡಿಸಿ ಪೂರೈಸಬೇಕಾಗಿರುತ್ತದೆ. ಈ ಕೆಲಸವು ತಕ್ಕ ಮಟ್ಟಿಗೆ ನಡೆಯುತ್ತಲಿವೆ . . . . .

ಕಮಿಟಿಗಳ ಮುಖಾಂತರ ಕೆಲಸಗಳನ್ನು ನಡಿಸುವ ಪದ್ಧತಿಯು ನಮ್ಮ ಅಧಿಕಾರಿಗಳಿಗೂ ಮತ್ತು ಮುಖಂಡರಾದ ನಮ್ಮ ದೇಶದ ಜನರಿಗೂ ಸ್ವಲ್ಪ ಮಟ್ಟಿಗೆ ನವೀನವಾದ ಪದ್ಧತಿಯಾಗಿ ಕಾಣುತ್ತದೆ. ಆದರೆ ಈ ಪದ್ಧತಿಯು ಅವರಲ್ಲಿ ಬಳಕೆಗೆ ಬರುತ್ತಿದೆ. ಈಚೀಚಿನ ವರೆಗೆ ಮೆಂಬರುಗಳ ಪೈಕಿ ಅನೇಕರು ಆಕ್ಷೇಪಣೆ ಮಾಡುವ ಕೆಲಸವನ್ನು ಮಾತ್ರ ಮಾಡುತ್ತಿದ್ದಂತೆ ತಿಳಿಯಬರುತ್ತದೆ. ವಿಷಯಗಳನ್ನು ಮುಂದಾಗಿ ತಿಳಿದುಕೊಂಡು ಪರಿಶೀಲನೆ ಮಾಡುತ್ತಿರಲಿಲ್ಲ. ಸಾಮಾನ್ಯವಾಗಿ ಅಧ್ಯಕ್ಷರೂ ಸೆಕ್ರೆಟರಿಯವರೇ ವಿಶೇಷವಾಗಿ ಕೆಲಸವನ್ನು ಮಾಡುತ್ತಿದ್ದರು. ಮೆಂಬರುಗಳು ಕೆಲಸದಲ್ಲಿ ಕುಂದು ಕೊರತೆಗಳನ್ನು ಹುಡುಕಿ ತಮಗೆ ತೋರಿದ ಅಭಿಪ್ರಾಯಗಳನ್ನು ತಿಳಿಸುವುದಕ್ಕೋಸ್ಕರ ಮೀಟಿಂಗಿಗೆ ಹಾಜರಾಗುತ್ತಿದ್ದರು; ಮತ್ತು ಯಾವುದಾದರೂ ಹೊಸ ಅಭಿಪ್ರಾಯವನ್ನು ಯಾರಾದರೂ ತಿಳಿಸಿದಾಗ ಅದನ್ನು ಖಂಡಿಸುವುದಕ್ಕೆ ಸಿದ್ಧರಾಗುತ್ತಿದ್ದರು. ಜನರು ಅಪೇಕ್ಷಿಸುತ್ತಿದ್ದಂತೆ ಫಲಿತಾಂಶಗಳು ವಿಶೇಷವಾಗಿ ಉಂಟಾಗದೆ ಇರುವುದಕ್ಕೆ ಈ ಪದ್ಧತಿಯೇ ಮುಖ್ಯ ಕಾರಣವೆಂದು ಕಾಣುತ್ತದೆ. ಈ ಮನೋಭಾವವು ಕಾಲಕ್ರಮೇಣ ಬದಲಾಯಿಸುವುದರಿಂದ ಇದಕ್ಕಾಗಿ ನಾವು ಅಧೈರ್ಯಪಡಬೇಕಾದುದಿಲ್ಲ. ಮೆಂಬರುಗಳು ತಮ್ಮ ಭಾಗಕ್ಕೆ ಬಂದ ವಿಷಯಗಳನ್ನು ನಡಿಸುವುದರಲ್ಲಿ ಕೆಲಸ ಮಾಡತಕ್ಕವರಾಗಿಯೂ, ಇತರ ಮೆಂಬರುಗಳು ನಡಿಸುವ ಕಾರ್ಯಗಳ ವಿಷಯದಲ್ಲಿ ತಕ್ಕ ಸಲಹೆ ಅಥವಾ ಅಭಿಪ್ರಾಯ ಕೊಡುವವರಾಗಿಯೂ ಇರಬೇಕು. ಈ ರೀತಿ ಸ್ವತಃ ಕೆಲಸ ಮಾಡುವುದು, ಇತರರಿಗೆ ಸಲಹೆ ಕೊಡುವುದು, ಈ ಎರಡೂ ತಮ್ಮ ಕರ್ತವ್ಯವೆಂದು ಭಾವಿಸಿ ಮೆಂಬರುಗಳು ಕೆಲಸದಲ್ಲಿ ಕಾರ್ಯತಃ ಭಾಗಿಗಳಾಗಿರಬೇಕೆಂದು ನಾವು ಮನಃಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ಇದೇ ರೀತಿಯಾದ ಮನೋಭಾವದಿಂದ ಕೆಲಸ ನಡಿಸುತ್ತಾ ಬಂದರೆ ಮೆಂಬರುಗಳು ತಮ್ಮ ಸ್ಥಾನಗಳಿಗೆ ಗೌರವವನ್ನು ತಂದೇ ಇರಲಾರರು. ಅಂತಹ ಸೂಚನೆಗಳು ಸ್ವಲ್ಪ ಮಟ್ಟಿಗೆ ಕಂಡುಬರುತ್ತಲಿವೆ. . . . . .

ವ್ಯವಸಾಯವನ್ನೂ, ವ್ಯಾಪಾರವನ್ನೂ, ವಿದ್ಯಾಭ್ಯಾಸವನ್ನೂ ಅಭಿವೃದ್ಧಿಗೊಳಿಸುವುದಕ್ಕಾಗಿ ಈಗ ಈ ಸಂಸ್ಥಾನದಲ್ಲಿ ಸ್ವತಂತ್ರವಾದ ಅಸೋಸಿಯೇಷನ್‌ಗಳೂ, ಸೊಸೈಟಿಗಳೂ ಅನೇಕವಿರುತ್ತವೆ ಆದರೆ ಇವುಗಳು ಅದೇ ವಿಷಯದಲ್ಲಿ ಇತರ ಸಂಘದವರು ಮಾಡುತ್ತಿರುವ ಕಾರ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಯಥಾನುಕೂಲವಾಗಿ ಕೆಲಸಗಳನ್ನು ಮಾಡುತ್ತಿರುವಂತೆ ಕಾಣುತ್ತದೆ. ಇವುಗಳೆಲ್ಲ ಒಂದೇ ಮಹಾಸಂಘಕ್ಕೆ ಸೇರಿ ಪರಸ್ಪರ ಸಹಾಯದಿಂದ ಕೆಲಸ ಮಾಡುವಂತೆ ಪ್ರೇರಿಸಬೇಕೆಂಬುವುದೇ ನಮ್ಮ ಆಶಯವಾಗಿರಬೇಕು. . . . . .

59 ಲಕ್ಷ ಪ್ರಜೆಗಳುಳ್ಳ ಈ ಸಂಸ್ಥಾನದ ಜಮೀನ್ ಉತ್ಪತ್ತಿಯ ಒಟ್ಟು ಮೊಬಲಗು ಸುಮಾರು 14 ಕೋಟಿ ರೂಪಾಯಿಗಳೆಂದು ಪರಿಗಣಿಸಲಾಗಿದೆ. ಇದರಿಂದ ತಲೆ ಒಂದಕ್ಕೆ ಒಟ್ಟು ವರಮಾನವು 24 ರೂಪಾಯಿ ಆದ ಹಾಗೆ ಆಯಿತು. ನಮ್ಮಲ್ಲಿ ಕೈಗಾರಿಕೆಯಿಂದ ತಯಾರಾಗುವ ಸಾಮಾನುಗಳ ಉತ್ಪತ್ತಿಯೂ, ಇತರ ಕಸಬುದಾರಿ ಕೆಲಸಗಳ ಉತ್ಪತ್ತಿಯೂ ಸೇರಿ ಸುಮಾರು ಇನ್ನೂ 4 ಕೋಟಿ ರೂಪಾಯಿಗಳಾಗುತ್ತದೆ ಎಂದು ಬೆಲೆ ಕಟ್ಟಲಾಗಿದೆ. ಈ ರೀತಿ ಸಂಸ್ಥಾನದ ಒಟ್ಟು ಉತ್ಪತ್ತಿಯು 18 ಕೋಟಿ ರೂಪಾಯಿಗಳಾಗಿರುತ್ತದೆ; ಎಂದರೆ, ತಲೆಯೊಂದಕ್ಕೆ 31 ರೂಪಾಯಿ ಸಂಪಾದಿಸಿದ ಹಾಗಾಯಿತು. ಯೂರೋಪ್ ದೇಶಗಳಲ್ಲಿ ಈ ಬಾಬುಗಳಿಂದ ಬರುವ ಉತ್ಪತ್ತಿಯ ದರವು ತಲೆಯೊಂದಕ್ಕೆ 300 ರೂಪಾಯಿಯಿಂದ 600 ರೂಪಾಯಿವರೆಗೆ ಆಗುವುದಾಗಿ ಅಂದಾಜು ಮಾಡಲಾಗಿದೆ . . . . . .

ನಮ್ಮ ದೇಶದಲ್ಲಿ ತಲೆಯೊಂದಕ್ಕೆ ಬರುವ ವರಮಾನವು ಸರಿಸುಮಾರಾಗಿ ಯೂರೋಪ್ ದೇಶಗಳಲ್ಲಿ ಸದರಿ ಬಾಬುಗಳಿಂದ ತಲೆಯೊಂದಕ್ಕೆ ಬರುವ ವರಮಾನದ 20ನೇ ಒಂದು ಭಾಗಕ್ಕೆ ಕಡಮೆ ಇಲ್ಲದೆಯೂ, 10ನೇ ಒಂದು ಭಾಗಕ್ಕೆ ಹೆಚ್ಚಿಲ್ಲದೆಯೂ ಇರುವ ವರಮಾನವಾಗಿರುತ್ತದೆ. ಆದುದರಿಂದ ಈ ಭಾಗವನ್ನು ವೃದ್ಧಿಗೊಳಿಸುವುದು ಅವಶ್ಯಕವೂ ಆಗಿರುತ್ತದೆ, ಸಾಧ್ಯವೂ ಆಗಿರುತ್ತದೆ ಎಂದು ಇದರಿಂದ ಕೇವಲ ಸಾಮಾನ್ಯವಾಗಿ ಆಲೋಚಿಸುವವರಿಗೂ ಕಂಡುಬರುವುದು. ಈಗಿನ ಉತ್ಪತ್ತಿಯನ್ನು ನಾವು ಮಸಲ ಶೇಕಡ 50 ರಷ್ಟು ಹೆಚ್ಚಿಸಿದರೆ ಒಟ್ಟು ಉತ್ಪತ್ತಿಯ ಬೆಲೆಯು 18 ಕೋಟಿಯಿಂದ 27 ಕೋಟಿಗೆ ಹೆಚ್ಚುತ್ತದೆ. ಇದರಿಂದ ಸರಾಸರಿ ಪ್ರಜೆಗಳಲ್ಲಿ ಪ್ರತಿಯೊಬ್ಬನ ಸಂಪಾದನ ಶಕ್ತಿಯು 31 ರೂಪಾಯಿಯಿಂದ 48 ರೂಪಾಯಿಗೆ ಏರುತ್ತದೆ. ಸರಾಸರಿ ವರಮಾನವು ಇಷ್ಟರಮಟ್ಟಿಗೆ ಹೆಚ್ಚಿದರೆ ನಮ್ಮ ಜನಗಳು ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಳ್ಳಲು ಶಕ್ತರಾಗುವರು. ಅಲ್ಲದೆ ಇನ್ನೂ ಜನಗಳ ಬದುಕು ಉತ್ತಮಸ್ಥಿತಿಗೆ ಬರುವುದು. . . .

ಈ ಸಂಸ್ಥಾನದ ಉತ್ಪತ್ತಿಯನ್ನು ಸ್ವಲ್ಪಮಟ್ಟಿಗೆ ಈ ಕೆಳಗೆ ಹೇಳಿರುವ ರೀತಿಯಲ್ಲಿ ಇನ್ನೂ 9 ಕೋಟಿಯ ವರೆಗೆ ಹೆಚ್ಚಿಸಲು ಪ್ರಯತ್ನಪಡಬಹುದಾಗಿರುತ್ತದೆ.

ಸಾಗುವಳಿ ಜಮೀನ್ ವಿಸ್ತೀರ್ಣವನ್ನು ಹೆಚ್ಚಿಸುವುದರಿಂದಲೂ, ಫಲವತ್ತಾಗಿ ಬೇಸಾಯ ಮಾಡುವುದರಿಂದಲೂ, ಈಗಿನ ವ್ಯವಸಾಯದ ವಿಧಾನಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ನಡಿಸುವುದರಿಂದಲೂ	1 ಕೋಟಿ
ನೀರಾವರಿ ಕೆಲಸಗಳನ್ನು ಹೆಚ್ಚಿಸುವುದರಿಂದ	2 ಕೋಟಿ
ಕೈಗಾರಿಕೆಗಳನ್ನೂ ವ್ಯಾಪಾರವನ್ನೂ ವೃದ್ಧಿಗೊಳಿಸುವುದರಿಂದ	3 ಕೋಟಿ
ಜನಗಳಿಗೆ ತಿಳವಳಿಕೆ ಕೊಟ್ಟು ಕೌಶಲ್ಯವನ್ನೂ ಉದ್ಯೋಗಶೀಲರಾಗಿರುವ ಪದ್ಧತಿಗಳನ್ನೂ ಗೊತ್ತುಮಾಡಿಕೊಡುವುದರಿಂದ	2 ಕೋಟಿ
ಇತರ ಎಲ್ಲಾ ವಿಧಗಳಿಂದ	1 ಕೋಟಿ

ನಮ್ಮ ದೇಶವು ಮುಖ್ಯವಾಗಿ ವ್ಯವಸಾಯದ ದೇಶವಾಗಿರುತ್ತದೆ ಧಾನ್ಯವನ್ನೂ ಕಚ್ಚಾ ಪದಾರ್ಥಗಳನ್ನೂ ಮಾರತಕ್ಕ ಬರೀ ವ್ಯವಸಾಯವೇ ಆಧಾರವಾಗಿವುಳ್ಳ ದೇಶವು ಯಾವಾಗಲೂ ದರಿದ್ರಾವಸ್ಥೆಯಲ್ಲಿಯೇ ಇರುವುದು. ನೀವು ಈ ಸಂಸ್ಥಾನದಲ್ಲಿಯೇ ವ್ಯವಸಾಯಕ್ಕೆ ಬೇಕಾದ ನೇಗಲನ್ನೂ ಅಥವಾ ಕಾಲುವೆ ಉಪರಿಸುವ ಯಂತ್ರವನ್ನೂ ತಯಾರ್ ಮಾಡಿದರೆ ನಿಮಗೆ ಬೇಕಾದ ಯಂತ್ರವು ದೊರೆಯುವುದಲ್ಲದೆ, ಅನ್ಯಥಾ ದೇಶಾಂತರಗಳಿಗೆ ನೀವು ಕಳುಹಿಸಬೇಕಾದ ಹಣವನ್ನು ನೀವೇ ಉಳಿಸಿಕೊಳ್ಳಬಹುದು ನಮ್ಮ ಜಂಗ್ಲಿ ಸಾಮಾನುಗಳಿಂದ ಕುರ್ಚಿಗಳನ್ನೂ ಬೆಂಚುಗಳನ್ನೂ ದಿವಾನ್‌ಖಾನೆಗೆ ಬೇಕಾದ ಸಾಮಾನುಗಳನ್ನೂ ನೀವು ತಯಾರುಮಾಡುವುದಾದರೆ, ನಿಮಗೆ ಸೌದೆ ಬಿಕರಿಯಿಂದ ಎಷ್ಟು ಉತ್ಪತ್ತಿಯಾಗುತ್ತಿದೆಯೋ ಅದಕ್ಕಿಂತ ತುಂಬಾ ಹೆಚ್ಚಾಗಿ ಹಣಬರುವದು.

ಆದುದರಿಂದ ವ್ಯವಸಾಯ ಕಾರ್ಯವೂ ಸಾಮಾನು ತಯಾರಿ ಕೆಲಸವೂ ಒಂದರೊಡನೆ ಒಂದು ಸಮವಾಗಿ ನಡೆಯಬೇಕು. ಕೈಗಾರಿಕೆ ಕೆಲಸಗಳಿಗೂ ವ್ಯಾಪಾರಪ್ರವರ್ತನೆಗಳಿಗೂ ಅನುಕೂಲವಾದ ಸ್ಥಿತಿಗಳನ್ನು ಕ್ರಮೇಣ ಕಲ್ಪಿಸಬೇಕಾಗಿರುತ್ತದೆ ಸಂಚಾರಕ್ಕೆ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ವಿಶೇಷ ಗಮನ ಕೊಡಬೇಕಾಗಿರುತ್ತದೆ. ರೈಲ್ ಮಾರ್ಗಗಳನ್ನೂ ರಸ್ತೆಗಳನ್ನೂ ಹೆಚ್ಚಿಸಬೇಕಲ್ಲದೆ ಹಳ್ಳಿಗಳಿಗೆ ಮಧ್ಯೆ ಇರುವ ಬಂಡಿಬಾಟುಗಳನ್ನೂ ಸರಿಯಾದ ಸ್ಥಿತಿಯಲ್ಲಿ ಕಾಪಾಡಬೇಕು ಈ ಕಾಲಕ್ಕೆ ತಕ್ಕಹಾಗೆ ಹೋಟೆಲೋ ಅಥವಾ ಛತ್ರವೋ ಯಾವ ಊರಲ್ಲಿಯೇ ಆಗಲಿ ಯಾವ ಗ್ರಾಮದಲ್ಲಿಯೇ ಆಗಲಿ ಇಲ್ಲದೇ ಇರಕೂಡದು. ನಮ್ಮ ಪಟ್ಟಣಗಳಲ್ಲಿರುವ ಪ್ರಜಾಸಂಖ್ಯೆಯು ಒಟ್ಟು ಪ್ರಜಾಸಂಖ್ಯೆಯ ಹತ್ತರಲ್ಲೊಂದು ಭಾಗಕ್ಕಿಂತ ಕಡಮೆಯಾಗಿರುವುದರಿಂದ ಕೈಗಾರಿಕೆ ಕೆಲಸಗಳಿಗೆ ಬೇಕಾಗುವಷ್ಟು ಜನಗಳಿರುವುದಿಲ್ಲವಾಗಿ, ಈ ಸಂಖ್ಯೆಯನ್ನು ಕನಿಷ್ಠಪಕ್ಷ ಇನ್ನೂ ಎರಡರಷ್ಟಾದರೂ ಹೆಚ್ಚಿಸಬೇಕು ಟವನುಗಳಲ್ಲಿ ಬಡಾವಣೆ ಏರ್ಪಾಟುಗಳನ್ನು ಮಾಡಬೇಕು ಮತ್ತು ಮುಂದೆ ಬರತಕ್ಕಂಥವರಿಗಾಗಿ ಕಾರ್ಖಾನೆಗಳಿಗೋಸ್ಕರವೂ ಮತ್ತು ಅವುಗಳಿಗೆ ಸಂಬಂಧಪಟ್ಟ ಜನಗಳ ವಾಸಕ್ಕೋಸ್ಕರವೂ ಸ್ಥಳಗಳನ್ನು ಏರ್ಪಡಿಸಬೇಕು ವ್ಯವಸಾಯದ ಉತ್ಪತ್ತಿಗಳಿಗಾಗಿಯೂ, ವ್ಯಾಪಾರದ ಸಾಮಾನುಗಳಿಗಾಗಿಯೂ, ಕೈಗಾರಿಕೆ ಯಂತ್ರ ಮೊದಲಾದವುಗಳನ್ನು ಉಪಯೋಗಿಸತಕ್ಕ ರೀತಿಯನ್ನು ತೋರಿಸುವುದಕ್ಕಾಗಿಯೂ ಪ್ರತಿಯೊಂದು ಟವನಿನಲ್ಲಿ ಒಂದೊಂದು ಪ್ರದರ್ಶನಶಾಲೆ ಇರಬೇಕು ಒಂದು ಪುಸ್ತಕಭಂಡಾರ, ಒಂದು ವಾಚಕಾಲಯ, ಸಂಗತಿಗಳನ್ನು ತಿಳಿದುಕೊಳ್ಳುವದಕ್ಕೆ ಒಂದು ಬೀರು ಯಾನೆ ಸಂಘ ಇವುಗಳು ಅತ್ಯವಶ್ಯಕವಾಗಿರಬೇಕು. ಯಾವ ಟವನಿನಲ್ಲಿಯೂ ಆರು ಬಗೆಯ ಕೈಗಾರಿಕೆ ಕೆಲಸಗಳು ನಡೆಯದೆ ಇರಕೂಡದು. ಯಾವ ಗ್ರಾಮದಲ್ಲಿಯೂ ಒಂದು ಅಥವಾ ಇನ್ನೂ ಹೆಚ್ಚು ತರಹೇ ಹಳ್ಳಿಗಾಡಿನ ಕೈಗಾರಿಕೆಯ ಕೆಲಸಗಳು ನಡೆಯದೇ ಇರಕೂಡದು. . . . . .

ತಮ್ಮ ಪ್ರಜೆಗಳಲ್ಲಿ ಅಭಿವೃದ್ಧಿ ಹೊಂದಬೇಕೆಂಬ ಸ್ವಭಾವವಾದ ಆಸಕ್ತಿ ತಲೆದೋರುವುದಕ್ಕೆ ನ್ಯಾಯವಾದ ರೀತಿಯಲ್ಲಿ ಅವಕಾಶಕೊಡಬೇಕೆಂತಲೂ, ಅವರು ಮುಂದಕ್ಕೆ ಏಳಿಗೆಗೆ ಬರುವಂತೆ ಮಾಡಿಕೊಳ್ಳುವುದಕ್ಕೆ ಬೇಕಾದ ಸೌಕರ್ಯವನ್ನು ಅವರಿಗೆ ಒದಗಿಸಿಕೊಡಬೇಕೆಂತಲೂ ಶ್ರೀಮನ್ ಮಹಾರಾಜರವರು ಕುತೂಹಲವುಳ್ಳವರಾಗಿರುತ್ತಾರೆ ಈ ಉದ್ದೇಶದಿಂದಲೇ ಶ್ರೀಮನ್ ಮಹಾರಾಜರವರು ಈ ಕಾನ್ಫರೆನ್ಸನ್ನು ಸ್ಥಾಪಿಸುವುದಕ್ಕೆ ಅನುಗ್ರಹಿಸಿದರು. ಪ್ರಜೆಗಳಿಗೆ ಸರಿಯಾಗಿ ಶಿಕ್ಷಣಕೊಡಬೇಕೆಂಬುವುದು, ಬದುಕಿನಲ್ಲಿ ಅವರ ಈಗಿನ ಸ್ಥಿತಿಯನ್ನು ಉತ್ತಮಸ್ಥಿತಿಗೆ ತರಬೇಕೆಂಬುವುದು, ಅವರು ಮುಂದೆ ಭಾಗ್ಯವಂತರಾಗುವುದಕ್ಕೆ ಸಹಾಯಮಾಡಬೇಕೆಂಬುದು, ನಮ್ಮಲ್ಲಿ ಸ್ಕೂಲುಗಳನ್ನು ಹೆಚ್ಚಿಸುವುದು, ಜಮೀನುಗಳನ್ನು ಉತ್ತಮ ರೀತಿಯಲ್ಲಿ ಬೇಸಾಯಕ್ಕೆ ತರುವಂತೆ ಮಾಡುವುದು, ಕಾರ್ಖಾನೆಗಳನ್ನು ಕಲ್ಪಿಸುವುದು, ವ್ಯಾಪಾರವನ್ನು ವೃದ್ಧಿಗೊಳಿಸುವುದು, ಇವುಗಳೇ ಈ ಸಭೆಯ ಮುಖ್ಯೋದ್ದೇಶಗಳಾಗಿರುತ್ತವೆ. ಇದರ ಮೇಲೆ ನಮಗೆ ಮುಂದೆ ಒಳ್ಳೇಕಾಲ ಪ್ರಾಪ್ತವಾಗುವುದೆಂಬ ಭರವಸೆಯೂ ಈ ಸಭೆಯಿಂದ ಉಂಟಾಗುತ್ತದೆ. ಆದುದರಿಂದ ಮೈಸೂರು ದೇಶದ ನಿಜವಾದ ಹಿತಚಿಂತಕರೆಲ್ಲರೂ ಈ ಸಭೆಗೆ ಆದರಪೂರ್ವಕವಾಗಿ ಅವಲಂಬವನ್ನು ಕೊಡಬೇಕೆಂದು ನಾವು ಕೋರುತ್ತೇವೆ.

ಬಳಿಕ ಮ॥ ಸಿ. ಕೃಷ್ಣರಾಯರು ವಿದ್ಯಾಶಾಖೆಯ ಕಮಿಟಿಯವರು ಕಳೆದ ಸಾಲಿನಲ್ಲಿ ನಡಿಸಿರುವ ಕಾರ್ಯಗಳನ್ನು ವಿವರಿಸಿ ಒಂದು ರಿಪೋರ್ಟನ್ನು ಓದಿದರು. ತರುವಾಯ ಮ॥ ಕೆ ಸುಬ್ಬರಾಯರು ವ್ಯವಸಾಯ ಶಾಖೆಯ ರಿಪೋರ್ಟನ್ನೂ, ಕಡೆಯಲ್ಲಿ ಮ॥ ಸಿ. ರಂಗನಾಥರಾವ್ ಸಾಹೇಬ್‌ರವರು ಕಸಬುಗಳ ಶಾಖೆಯ ರಿಪೋರ್ಟನ್ನೂ ಓದಿಹೇಳಿದರು.

ದಿವಾನ್‌ರವರು ಈ ರಿಪೋರ್ಟುಗಳ ವಿಷಯದಲ್ಲಿ ಮೆಂಬರುಗಳೇನಾದರೂ ಮಾತನಾಡಬೇಕೆಂದು ಅಪೇಕ್ಷಿಸಿದ್ದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದೆಂದು ಸೂಚಿಸಿದರು; ಅದಕ್ಕೆ ಮ॥ ಎಂ. ವೆಂಕಟಕೃಷ್ಣಯ್ಯನವರು ಹೇಳಿದ ಅಭಿಪ್ರಾಯಗಳೇನೆಂದರೆ—ದಿವಾನ್‌ರವರ ಭಾಷಣವನ್ನೂ, ಸೆಕ್ರೆಟರಿಗಳ ರಿಪೋರ್ಟುಗಳನ್ನೂ ಕೇಳುವಾಗ್ಗೆ ನಾವುಗಳೆಲ್ಲಾ ಲಂಡನ್, ಟೋಕಿಯೋ, ಬರ್ಲಿನ್, ನ್ಯೂಯಾರ್ಕ್ ನಗರಗಳಲ್ಲಿರುತ್ತೇವೇನೋ ಎಂಬ ಭ್ರಾಂತಿಯುಂಟಾಗಿತ್ತು. ಈಗ ನಾವು ಮೈಸೂರಿನಲ್ಲಿಯೇ ಇದೇವೆಂದು ನಿಶ್ಚಯವಾಗಿದೆ. ನಮ್ಮ ಸಂಸ್ಥಾನವು ಈ ಸಮಾಜದ ಕಾರ್ಯಗಳಿಂದ ನಾನಾ ಮುಖಗಳಲ್ಲಿ ಅಭಿವೃದ್ಧಿ ಹೊಂದುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಎಲ್ಲಾ ಕಡೆಗಳಲ್ಲೂ ಹಳ್ಳಿಗಳಲ್ಲೂ ಕೂಡ ಜನಗಳು ಕಣ್ಣುತೆರೆದು ಅಭಿವೃದ್ಧಿಕಾರ್ಯಗಳನ್ನು ಕುರಿತು ಚಿಂತಿಸುತ್ತಾ, ಆಸಕ್ತಿಯಿಂದ ಕೆಲಸಗಳನ್ನು ನಡಿಸುತ್ತಾ ಬಂದಿದ್ದಾರೆ. ನಾನಾ ಮುಖಗಳಲ್ಲಿ ಬದಲಾವಣೆಗಳುಂಟಾಗಿರುತ್ತವೆ. ಇನ್ನು ಮುಂದೆ ತನುಮನಧನಗಳನ್ನು ವ್ಯರ್ಥವಾಗಿ ಕಳೆಯದಂತೆ ನಾವುಗಳೆಲ್ಲಾ ನೋಡಿಕೊಳ್ಳಬೇಕು. ನಮ್ಮ ಯೋಗ್ಯತೆ ಮೀರಿ ಖರ್ಚುಮಾಡುವುದನ್ನು ನಿಲ್ಲಿಸಬೇಕು. ಪ್ರಾರಂಭದೆಸೆಯು ಕಳೆದಿದೆ. ಇನ್ನು ಮುಂದಾದರೂ ವ್ಯರ್ಥವಾಗಿ ಕಾಲವನ್ನಾಗಲಿ, ದ್ರವ್ಯವನ್ನಾಗಲಿ ಕಳೆಯದಂತೆ ನೋಡಿಕೊಳ್ಳಬೇಕು. ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರಾರಂಭದಲ್ಲಿ ನಾವು ಬಹಳ ಹಣ ಖರ್ಚು ಮಾಡಿದ್ದು ಈಗ ನಾವು ಅದರ ಫಲವನ್ನು ನೋಡಿ ಸಂತೋಷಪಡುವ ಹಾಗಾಗಿದೆ. ಇದೇ ರೀತಿ ಈ ಸಮಾಜದ ಕಾರ್ಯಗಳಿಗೂ ಇದುವರೆಗೆ ಅಪಾರ ಹಣ ಖರ್ಚಾಗಿರುವುದು. ಮುಂದೆ ಇದನ್ನು ಕಡಮೆ ಮಾಡಬಹುದಾಗಿದೆ. ಈ ಸಮಾಜದ ಕಾರ್ಯಗಳ ವಿಷಯದಲ್ಲಿ ಇದುವರೆಗೆ ಎಲ್ಲರೂ ಸಂಶಯಪಡುತ್ತಿದ್ದರು. ಈಗ ಇದರಿಂದ ಪ್ರಯೋಜನವಾಗಿದೆ ಎಂದು ನಾವೆಲ್ಲಾ ಒಪ್ಪಿಕೊಂಡು, ದಿವಾನ್‌ರವರು ಹೇಳುವಂತೆ ಮುಂದಿನ ಸಾಲಿನಲ್ಲಿ ನಮ್ಮ ಸೀಮೆಯ ಪ್ರಜೆಗಳ ವರಮಾನವು 9 ಕೋಟಿ ರೂಪಾಯಿ ಹೆಚ್ಚಾದೀತೆಂದು ನಂಬಿ ನಿರೀಕ್ಷಿಸುತ್ತೇವೆ. ಇಂಥಾ ದೂರಾಲೋಚನೆಯಿಂದ ಈ ಸಮಾಜವನ್ನು ಸ್ಥಾಪಿಸಿಕೊಟ್ಟದ್ದಕ್ಕಾಗಿ ನಾವುಗಳೂ, ಸಕಲ ಪ್ರಜೆಗಳೂ ನಮ್ಮ ಶ್ರೀಮನ್ ಮಹಾರಾಜರವರಿಗೆ ಅಪರಿಮಿತವಾಗಿ ಕೃತಜ್ಞರಾಗಿರುತ್ತೇವೆ.

ಮ॥ ಬಿ. ವೆಂಕಟರಾಮಯ್ಯನವರೂ, ಮ॥ ಚಂಗಯ್ಯಶೆಟ್ಟರೂ, ಮ॥ ಕೆ. ರಾಮಾನುಜಯ್ಯಂಗಾರರೂ, ಮ॥ ಬಸವಯ್ಯನವರೂ, ಮ॥ ಸಿ. ಶ್ರೀನಿವಾಸರಾಯರೂ ಪ್ರೈಮರಿ ವಿದ್ಯಾಭ್ಯಾಸವೂ, ಸ್ಕೂಲ್ ಫೈನಲ್ ಮತ್ತು ಇಂಟರ್ ಮೀಡಿಯೆಟ್ ಪರೀಕ್ಷೆಗಳ ಫಲಿತಾಂಶಗಳೂ ತೃಪ್ತಿಕರವಾಗಿಲ್ಲವೆಂದೂ, ಸ್ಟಾಂಡರ್ಡನ್ನು ಹೆಚ್ಚಿಸಿ ವಿದ್ಯಾರ್ಥಿಗಳ ಉತ್ಸಾಹವನ್ನು ಹಾಳುಮಾಡಿ ತಂದೆತಾಯಿಗಳ ಕಷ್ಟನಷ್ಟಗಳನ್ನು ಹೆಚ್ಚಿಸುತ್ತಿದ್ದಾರೆಂದೂ, ಬಲಾತ್ಕಾರದ ವಿದ್ಯಾಭ್ಯಾಸವು ಜಾರಿಗೆ ಇನ್ನೂ ಬಂದಿಲ್ಲವೆಂದೂ, ಸರಿಯಾದ ಉಪಾಧ್ಯಾಯರನ್ನು ಪ್ರಥಮಶಿಕ್ಷಣಕ್ಕೆ ನೇಮಿಸದೆ ಇರೋಣದರಿಂದ ಹುಡುಗರ ವಿದ್ಯಾಭ್ಯಾಸದ ತಳಹದಿಯೇ ಕೆಡುತ್ತಿದೆ ಎಂದೂ ಆಕ್ಷೇಪಣೆಮಾಡಿದರು. ಪ್ಯಾಸಾಗುವವರ ಸಂಖ್ಯೆಯನ್ನು ವೃಥಾ ಹೆಚ್ಚಿಸಿದರೆ ಬಂಗಾಳದಂತೆ ವಿದ್ಯೆಗೆ ಪ್ರಾಧಾನ್ಯವುಂಟಾಗುವುದಿಲ್ಲವೆಂದು ಮ॥ ಜೆ ಎಸ್. ಚಕ್ರವರ್ತಿಯವರು ತಿಳಿಸಿದರು. ಮ॥ ಎಂ. ರಾಮರಾಯರು ಪ್ಯಾಸ್‌ಮಾಡಿಸುವ ಅಧಿಕಾರವು ಮದರಾಸ್ ಯೂನಿವರ್ಸಿಟಿಗೆ ಸೇರಿರುವುದರಿಂದ ನಾವು ಅವರು ಹೇಳುವಂತೆ ಕೇಳಬೇಕಾಗಿ ಬಂದಿದೆ ಎಂದು ಹೇಳಿದರು.

ಕಸಬು ಕೈಗಾರಿಕೆಗಳ ವಿಷಯದಲ್ಲಿ ಸಮಾಜದವರು ನಡಿಸಿರುವ ಕಾರ್ಯಗಳನ್ನು ಕುರಿತು ಕೆಲವು ಮೆಂಬರುಗಳು ಆಕ್ಷೇಪಣೆ ಮಾಡಿದರು. ಮ॥ ಕೆ. ಪಿ. ಪುಟ್ಟಣ್ಣಶೆಟ್ಟರು ಯುದ್ಧದ ದೆಸೆಯಿಂದ ವ್ಯಾಪಾರವೂ ಲೇವಾದೇವಿಯೂ ರೇಷ್ಮೆ ಕಸಬೂ ತುಂಬಾ ಹೀನಸ್ಥಿತಿಗೆ ಬಂದಿದೆ ಎಂದೂ, ಸಣ್ಣ ಕಸಬುಗಳನ್ನು ಪ್ರಾರಂಭಿಸಬೇಕೆಂದೂ, ಹಣ್ಣುಹಂಪಲನ್ನು ಬೆಳೆಯುವುದರಿಂದ ವಿಶೇಷ ಲಾಭವುಂಟಾದ ಕಾರಣ ರೈತರಿಗೆ ಈ ಭಾಗದಲ್ಲಿ ಸರ್ಕಾರದವರು ಸಹಾಯ ಪ್ರೋತ್ಸಾಹಗಳನ್ನು ಒದಗಿಸಬೇಕೆಂದೂ ಹೇಳಿದರು. ಮ॥ ಸಿ. ಶ್ರೀನಿವಾಸರಾಯರು ರೇಷ್ಮೆ ಕಸಬಿನ ನಿಪುಣನನ್ನು ಕರಸಿದ್ದರಿಂದ ಆತನು ನಮ್ಮ ದೇಶೀಯರಿಗೆ ಹೊಸ ವಿಷಯಗಳೇನೂ ಹೇಳಿಕೊಡಲಿಲ್ಲವೆಂದೂ, ಕಸಬಿನ ಗುಟ್ಟುಗಳನ್ನು ತಿಳಿಸಿ ಕಲಿಸಿಕೊಡತಕ್ಕವರನ್ನು ಕರಸಿ ನೇಮಿಸಿದರೆ ಪ್ರಯೋಜನವಾದೀತೆಂದೂ ಸೂಚಿಸಿದರು. ಮ॥ ಎ. ಚಾಟರ್ಟನ್ ರವರು ರೇಷ್ಮೆ ಕಸಬು ತಮ್ಮ ಮೇಲ್ವಿಚಾರಣೆಯಲ್ಲಿದ್ದಾಗ ಚೆನ್ನಾಗಿದ್ದು, ಈಚೆಗೆ 18 ತಿಂಗಳಿಂದ ಹೀನಸ್ಥಿತಿಗೆ ಬಂದಿರುವುದೆಂದು ಸೂಚಿಸಿದ್ದಕ್ಕೆ ಪ್ರತಿಯಾಗಿ ಮಿ॥ ಅಬ್ದುಲ್ ಖುದ್ದೂಸ್ ರವರು ಈಗ ಈ ಕಸಬು ಎಷ್ಟೋ ಚೆನ್ನಾಗಿ ನಡೆಯುತ್ತಿದೆ ಎಂದೂ, ಮೊದಲು ಕೆಟ್ಟುಹೋಗಿತ್ತೆಂದೂ ಜವಾಬು ಹೇಳಿ, ತಯಾರಾಗಿದ್ದ ರಂಗುಮಾರು ರೇಷ್ಮೆ ದಾರದ ಲಡಿಗಳನ್ನೂ, ರೇಷ್ಮೆ ಬಟ್ಟೆಯನ್ನೂ ಸಭೆಯಲ್ಲಿ ಹಾಜರು ಮಾಡಿ ತೋರಿಸಿದರು. ಸೆಕ್ರೆಟರಿ ಮ॥ ಕೆ. ಸುಬ್ಬರಾಯರು ರೇಷ್ಮೆಯ ಪರಿಶ್ರಾರ್ಥವಾದ ಫಾರಂಗಳಿಗೆ ಪ್ರಾರಂಭದೆಸೆಯಲ್ಲಿ ಸ್ವಲ್ಪ ಹೆಚ್ಚು ಹಣ ಖರ್ಚಾಗಿದೆಯಾದರೂ ಅದೆಲ್ಲಾ ವ್ಯರ್ಥವಾದ ಖರ್ಚೆಂದು ಹೇಳಲಾಗದೆಂದೂ, ಈ ಕಸಬನ್ನು ಇನ್ನು ಮುಂದೆ ಅಭಿವೃದ್ಧಿಗೆ ಬರುವಂತೆ ಮಾಡಬಹುದೆಂದೂ ಹೇಳಿದರು.

ಒಳಕ ವಿಷಯಗಳ ಚರ್ಚೆ ಪ್ರಾರಂಭವಾಗಿ ಸ್ವಲ್ಪ [illegible] ನಡೆದ್ದ ಮೇಲೆ ಮೊದಲನೇ ದಿನದ ಸಭೆ ಮುಕ್ತಾಯವಾ[illegible]

ಸರ್ ವ್ಯಾಲೆಂಟೈನ್ ಚಿರೋಲ್ ಎಂಬ ಪ್ರಸಿದ್ಧ ಬಾತ್ಮೀದಾರನು ಸುಮಾರು ಐದು ವರುಷಗಳ ಹಿಂದೆ ಸೀಮೆಯಿಂದ ಹಿಂದುಸ್ಥಾನಕ್ಕೆ ಬಂದು ಈ ದೇಶದಲ್ಲೆಲ್ಲಾ ಸಂಚಾರಮಾಡಿ, ಪ್ರಜೆಗಳಲ್ಲಿ ಆಗ್ಗೆ ಗವರ್ನ್‌ಮೆಂಟಿನವರ ಮೇಲೆ ಉಂಟಾಗಿದ್ದ ರಾಜಕೀಯ ವಿಷಯವಾದ ಅಸಮಾಧಾನಕ್ಕೆ ಕಾರಣಾದಿಗಳನ್ನು ವಿಚಾರಿಸಿಕೊಂಡು ಸೀಮೆಗೆ ವಾಪಸು ಹೋಗಿ ಈ ವಿಷಯವನ್ನು ಕುರಿತು ಲಂಡನ್ ಟೈಮ್ಸ್ ಎಂಬ ಪತ್ರಿಕೆಯೊಳಗೆ 8-10 ಬಾತ್ಮಿಗಳನ್ನು ಬರೆದು, ಅವುಗಳನ್ನೆಲ್ಲಾ ಸೇರಿಸಿ ಒಂದು ಪುಸ್ತಕರೂಪದಲ್ಲಿ ಪ್ರಕಟಮಾಡಿದನು. ಆಗ್ಗೆ ಪೂನಾ ಪಟ್ಟಣದ ಮ॥ ಬಾಲಗಂಗಾಧರ ತಿಲಕರವರು ಬರ್ಮಾದಲ್ಲಿ ಸಜಾ ಶಿಕ್ಷೆಯನ್ನನುಭವಿಸುತ್ತಿದ್ದರು. ಈಗ ಅವರಿಗೆ ಬಿಡುಗಡೆಯಾಗಿದ್ದು, ಅವರು ಆ ಪುಸ್ತಕದ ಬರವಣಿಗೆಯನ್ನು ನೋಡಿ ಅದರಲ್ಲಿ ಆ ಬಾತ್ಮೀದಾರನು ತಮಗೆ ಅಪಮಾನಕರವಾದ ಸಂಗತಿಗಳನ್ನು ಬರೆದಿರುತ್ತಾನೆಂದೂ ಆತನು ತಕ್ಕ ಹಾಗೆ ಕ್ಷಮಾಪಣೆ ಬೇಡದಿದ್ದರೆ ಆತನ ಮೇಲೆ ಮಾನನಷ್ಟದ ಮೊಕದ್ದಮೆ ತರುತ್ತೇವೆಂದೂ ಇಂಗ್ಲೆಂಡಿನಲ್ಲಿರುವ ಆತನಿಗೆ ಲಾಯರ್ ಮೂಲಕ ನೋಟೀಸ್ ಕೊಡಿಸಿದ್ದಾರೆ.

* * *

ಹಿಂದುಸ್ಥಾನದಲ್ಲಿ ಯಾತ್ರೆ ತೀರ್ಥಕ್ಷೇತ್ರಗಳೂ, ಅವುಗಳಿಗೆ ಹೋಗಿಬರತಕ್ಕ ಪ್ರಜೆಗಳೂ ಬಹಳ ಹೆಚ್ಚು. ಅಂಥಾ ಸ್ಥಳಗಳಲ್ಲಿ ಜನಗಳು ಸೇರುವಾಗ್ಗೆ ಅವರಿಗೆ ನಾನಾ ಕಷ್ಟನಷ್ಟಗಳು ಸಂಭವಿಸುವುದೇನೂ ಆಶ್ಚರ್ಯವಲ್ಲ. ಅದಕ್ಕಾಗಿ ಪ್ರಯಾಣಿಕರ ಸಹಾಯ ಸಂಘ ಎಂಬ ಪರಹಿತ ಸಂಘವು ಏರ್ಪಡಾಗಿ, ಈ ಸಂಘಕ್ಕೆ ಅನೇಕ ದೇಶ ಹಿತೈಷಿಗಳು ಮೆಂಬರುಗಳಾಗಿ ಸೇರಿಕೊಂಡು ದೇಶಸೇವಕರೆಂಬ ಹೆಸರಿಟ್ಟುಕೊಂಡಿದ್ದಾರೆ. ಈ ಸಂಘದ ಮೆಂಬರುಗಳು ಯಾರಿಂದಲೂ ಯಾವುದೊಂದು ಪ್ರತಿಫಲವನ್ನೂ ಅಪೇಕ್ಷಿಸದೆ ಯಾತ್ರಾಸ್ಥಳಗಳಿಗೆ ಮೊದಲೇ ಹೋಗಿ ಪರಸ್ಥಳಗಳಿಂದ ಬರತಕ್ಕ ಯಾತ್ರಿಕರಿಗೆ ಅಪ್ತಬಂಧುಗಳಾಗಿದ್ದು ಅವರಿಗೆ ಬೇಕಾಗುವ ಸಹಾಯವನ್ನೆಲ್ಲಾ ಮಾಡಿ ವಾಪಸು ಕಳುಹಿಸುವರು. ದಕ್ಷಿಣ ದೇಶದಲ್ಲಿ ಇನ್ನು ಮುಂದೆ ಹಲವು ಜಾತ್ರೆಗಳೂ ಉತ್ಸವಾದಿಗಳೂ ನಡೆಯೋಣದರಿಂದ ಈ ದೇಶ ಸೇವಕರು ಮುಂದೆ ಹೇಳುವ ಸ್ಥಳಗಳಿಗೆ ಹೊರಡುವವರಾಗಿದ್ದಾರೆ —ಮಧುರೆ, ಅಳಗರಕೋವಿಲು, ತಿರುಪುರಂಕುಂದ್ರಂ, ರಾಮೇಶ್ವರ, ಧನುಷ್ಕೋಟಿ, ತಿರುಚ್ಚೆಂದೂರು, ಪಳ್ನಿ, ಶ್ರೀರಂಗ, ಕುಂಭಕೋಣ, ಚಿದಂಬರ, ತಿರುವಣ್ಣಾಮಲಾಯಿ; ಉಡುಪಿ, ತಿರುಪತಿ, ಕಾಳಹಸ್ತಿ, ನಾಗೂರು, ವೇಳಂಗಣ್ಣಿ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜೂನ್ 10 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 26,000
,, (3) ಡಿಪಾಜಿಟ್ಟುಗಳು	....	,, 29,18,168
,, (4) ಇತರೆ	....	,, 64,918
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,08,076
ದೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 6,64,905
,, (2) ಖಾತೆ ಮತ್ತು ಇತರ ಸಾಲಗಳು		,, 24,54,164
,, (3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು		,, 4,30,968
,, (4) ಇನ್‌ವೆಸ್ಟ್‌ಮೆಂಟುಗಳು	... ...	,, 2,79,777
,, (5) ಏಜೆನ್ಸಿಗಳಲ್ಲಿರುವ ಮೊಬಲಗು	.	,, 1,42,265
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	....	,, 16,500
,, (7) ಇತರೆ	....	,, 19,497
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 40,08,076

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟ್ ಸಂಗ್ರಹ.

ಅ|| ಕಂಟ್ರೋಲರ್ ಮ|| ಟಿ. ಲಕ್ಷ್ಮೀನರಸಿಂಹರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಧುಗಿರೆ ಅ|| ಸರ್ಜನ್ ಮ|| ಟಿ. ಎಸ್. ಸಿದ್ದಪ್ಪನವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗವರ್ನಮೆಂಟ್ ಅ|| ಸೆಕ್ರೆಟರಿ ಮ|| ಎ. ವಿ. ರಾಮನಾಥನ್‌ರವರಿಗೆ ಜೂಲೈ ತಾ. 2 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ. ಮೊಹಿದೀನ್ ಷರೀಫ್ ಶಿಕಾರಿಪುರದಿಂದ ಅರಕಲಗೂಡಿಗೆ, ಮ|| ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್ರ್ರು ಅರಕಲಗೂಡಿನಿಂದ ನಾಗಮಂಗಲಕ್ಕೆ, ಮ|| ವಿ. ಎಸ್. ರಾಜಗೋಪಾಲಾಚಾರ್ರು ಹಾಸನದಿಂದ ಶಿಕಾರಿಪುರಕ್ಕೆ, ಮ|| ಕೆ. ಕೆ. ವೆಂಕಟಸ್ವಾಮಿ ಅಯ್ಯರು ಸೊರಬದಿಂದ ಹಾಸನಕ್ಕೆ, ಮಿ|| ಸಯ್ಯದ್ ಯಾಕೂಬ್ ಬೆಂಗಳೂರಿನಿಂದ ಮಧುಗಿರೆಗೆ, ಮ|| ಟಿ. ಹನುಮಂತರಾಯರು ಬೆಂಗಳೂರಿಗೆ, ಮ|| ಸಿ. ಕೃಷ್ಣಮೂರ್ತಿನಾಯ್ಡು ಬೌರಿಂಗ್‌ಪೇಟೆಗೆ.

ಮುಂದೆ ಹೇಳುವ ಹೈಸ್ಕೂಲ್ ಹೆಡ್ ಮಾಸ್ಟರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮ|| ಎಸ್. ವೆಂಕಟರಮಣಾಚಾರ್ರು ಕೋಲಾರದಿಂದ ಚನ್ನಪಟ್ಟಣಕ್ಕೆ, ಮ|| ಆರ್. ವಿ. ಕೃಷ್ಣಸ್ವಾಮಿ ಅಯ್ಯರವರು ಚನ್ನಪಟ್ಟಣದಿಂದ ಹಾಸನಕ್ಕೆ.

ಮಿ|| ಸಿ. ಡಿ. ಡೋವ್ ವಿಲ್ಸನ್‌ರವರನ್ನು ಇನ್‌ಜನಿಯರ್ ಇನ್‌ಚೀಫ್ ರಾಗಿಯೂ, ರೈಲ್ವೆ ಏಜೆಂಟರಾಗಿಯೂ ನೇಮಕಮಾಡಿಕೊಂಡಿದೆ.

ರಾವ್ ಬಹದೂರ್ ಕೆ. ಕೃಷ್ಣಯ್ಯಂಗಾರ್ರು ರೈಲ್ವೆ ಸೆಕ್ರೆಟರಿಯಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಅ|| ಕಂಟ್ರೋಲರ್ ಮ|| ಟಿ. ಲಕ್ಷ್ಮೀನರಸಿಂಹರಾಯರನ್ನು ರೈಲ್ವೆ ಬಾಬಿನ ಅಂಡರ್ ಸೆಕ್ರೆಟರಿಯಾಗಿ ನೇಮಿಸಿದೆ.

ರೈಲ್ವೆ ಸೆಕ್ರೆಟೇರಿಯಟ್ ಆಫೀಸ್ ಮ್ಯಾನೇಜರ್ ಮ|| ಪಿ. ರಾಮಮೂರ್ತಿ ರಾಯರನ್ನು ರೈಲ್ವೆ ಬಾಬಿನ ಅ|| ಸೆಕ್ರೆಟರಿಯಾಗಿ ನೇಮಿಸಿದೆ.

ಮೈಸೂರು ಸರ್ಕಾರಿ ಹುಕುಮುಗಳು.

ಯೂನಿಯನ್‌ಗಳಲ್ಲಿ ಅಂಗಡಿ ತೆರಿಗೆ.—ಸನ್ 1902 ನೇ ಇಸವಿಯ ಲೋಕಲ್ ಬೋರ್ಡು ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡಿದ 1915 ನೇ ಇಸವಿಯ ರೆಗ್ಯುಲೇಷನ್ ಪ್ರಕಾರ ಯೂನಿಯನ್ನುಗಳಲ್ಲಿ ಅಂಗಡಿ ತೆರಿಗೆಯನ್ನು ವಸೂಲ್ಮಾಡುವದಕ್ಕೆ ಅಧಿಕಾರವಿರುತ್ತದೆ. ಯೂನಿಯನ್ನುಗಳಲ್ಲಿ 1916 ನೆಯ ಜೂಲೈ ಗುರ್ರೆ ಲಾಗಾಯಿತು ಅಂಗಡಿ ತೆರಿಗೆಯನ್ನು 1915 ನೆಯ ಇಸವಿಯ ರೆಗ್ಯುಲೇಷನಿನಲ್ಲಿ ನಮೂದಿಸಲ್ಪಟ್ಟ ದರಗಳ ಮೇರೆಗೆ ವಸೂಲ್ಮಾಡಲು ತಕ್ಕ ನಡವಳಿಕೆಯನ್ನು ನಾನಾ ಡಿಸ್ಟ್ರಿಕ್ಟ್ ಬೋರ್ಡಿನವರು ಶೀಘ್ರದಲ್ಲಿಯೇ ನಡಿಸಬೇಕೆಂದು ಅವರುಗಳನ್ನು ಕೋರಿಯದೆ ಈ ತೆರಿಗೆಯನ್ನು ಠರಾಯಿಸುವದಕ್ಕೆ ಮೊಹತರಫಾ ನಿಬಂಧನೆಗಳನ್ನು ಆಧಾರವಾಗಿ ಇಟ್ಟುಕೊಳ್ಳಬಹುದು. ತೆರಿಗೆಯನ್ನು ತರತಕ್ಕ ವಿಷಯದಲ್ಲಿ ಯಾರಿಗಾದರೂ ವಿನಾಯಿತಿಗಳನ್ನು ತೋರಿಸುವದು ಅವಶ್ಯಕವಾದರೆ ಅಂಥವುಗಳನ್ನು ಸರ್ಕಾರದವರ ಹುಕುಂ ಬಗ್ಗೆ ಕಳುಹಿಸಬೇಕು. ಈ ವಿಷಯದಲ್ಲಿ ತೆಗೆದುಕೊಂಡ ನಡವಳಿಕೆಯನ್ನು ಸರ್ಕಾರದವರಿಗೆ 1916 ನೇ ಆಗಸ್ಟ್ 15 ನೆಯ ತಾರೀಖಿನೊಳಗಾಗಿ ರಿಪೋರ್ಟು ಮಾಡತಕ್ಕದ್ದು.

ಗ್ರಾಮ ಫಂಡು.—ವಿಲೇಜ್ ಕಾಮನ್ ಫಂಡನ್ನು ಏರ್ಪಡಿಸುವ ವಿಷಯದಲ್ಲಿ ಮದ್ದಗಿರಿ ತಾಲ್ಲೂಕಿನ ಗ್ರಾಮ ಕಮಿಟಿಯವರು 1916 ನೇ ಮಾರ್ಚಿ 4 ನೇ ತಾರೀಖಿನಲ್ಲಿ ಮೀಟಿಂಗು ಸೇರಿ ನಡಿಸಿದ ನಡವಳಿಕೆಯನ್ನು ತುಮಕೂರು ಡೆಪ್ಯುಟಿ ಕಮಿಷನರವರು ಬರೆದಿರುವುದೇನೆಂದರೆ—ಗ್ರಾಮ ಫಂಡನ್ನು ಏರ್ಪಡಿಸುವ ವಿಷಯವನ್ನು ಚರ್ಚಿಸಲಾಯಿತು. ಮದುವೆ ಕಾಲಗಳಲ್ಲಿಯೂ, ಸಂಘ ಮತ್ತು ಮಠ ಸಂಬಂಧವಾದ ಕೂಟಗಳು ಸೇರುವ ಕಾಲದಲ್ಲಿಯೂ, ಸುಗ್ಗಿ ಕಾಲದಲ್ಲಿಯೂ ದ್ರವ್ಯ ಸಹಾಯವನ್ನು ಮಾಡುವದರ ಮೂಲಕ ತಮ್ಮ ಕೈಲಾದಷ್ಟು ಹಣವನ್ನು ಜಮಾಯಿಸಬೇಕೆಂದು ಕಾನ್‌ಫರೆನ್ಸಿಗೆ ಬಂದಿದ್ದ ಡೆಲಿಗೇಟುಗಳಿಗೆ ತಾಲ್ಲೂಕು ಅಮಲ್ದಾರರು ಬೋಧಿಸಿದರು. ಅಲ್ಲಿ ಹಾಜರಿದ್ದ ಡೆಲಿಗೇಟುಗಳೆಲ್ಲರೂ ಅದನ್ನು ಏಕವಾಕ್ಯದಿಂದ ಒಪ್ಪಿದರು; ಗ್ರಾಮದಲ್ಲಿ ಹಸ್ತು ಜನರ ಉಪಯೋಗಕ್ಕಾಗಿ ಬಿಟ್ಟಿರುವ ಯಾವುದಾದರೂ ಜಮೀನಿನ ಫಸಲಿನ ಹರಾಜಿನ ಹುಟ್ಟುವಳಿಯನ್ನೂ ಮತ್ತು ಸಾಲವನ್ನು ಕೊಡತಕ್ಕವರು ಸಾಲಗಾರರೊಡನೆ ತಮ್ಮ ಬಾಕಿಯನ್ನು ಫೈಸಲ್ಮಾಡಿಕೊಳ್ಳುವ ಕಾಲದಲ್ಲಿ ಕೊಡಬಹುದಾದ ಮೊಬಲಗನ್ನೂ ಸಹ ಗ್ರಾಮ ಫಂಡಿಗೆ ಕೊಡಬಹುದೆಂದು ಸಲಹೆ ಕೊಟ್ಟುದನ್ನು ಎಲ್ಲರೂ ಒಪ್ಪಿದರು. ಈ ರೀತಿ ವಸೂಲ್ಮಾಡಲ್ಪಟ್ಟ ಹಣವನ್ನು ಕಮಿಟಿಯ ಅಧ್ಯಕ್ಷರ ಹೆಸರಿನಲ್ಲಿ ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿ, ಪಾಸ್ ಬುಕ್ಕನ್ನು ಅಮಲ್ದಾರರ ವಶದಲ್ಲಿ ಇಟ್ಟರೆ ಸೇವಿಂಗ್ಸ್ ಬ್ಯಾಂಕಿನಿಂದ ವಾಪಸು ತೆಗೆದುಕೊಳ್ಳುವದನ್ನು ಅಮಲ್ದಾರರು ತನಿಖೆ ಮಾಡುವವಕ್ಕೂ ಅಧೀನವಲ್ಲಿಟ್ಟುಕೊಳ್ಳುವದಕ್ಕೂ ಅನುಕೂಲವಾಗುತ್ತೆಂತಲೂ ಸಹ ತೀರ್ಮಾನ ಮಾಡಲಾಯಿತು. ಇದರ ಮೇಲೆ ಸರ್ಕಾರದವರು ಹುಕುಂ ಮಾಡಿರುವುದೇನೆಂದರೆ—ಗ್ರಾಮದ ಫಂಡಿಗಾಗಿ ವಸೂಲ್ಮಾಡಲ್ಪಟ್ಟ ಹಣವನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಕಮಿಟಿಯ ಅಧ್ಯಕ್ಷರ ಹೆಸರಿನಲ್ಲಿ ಇಡಬೇಕೆಂದು ಡೆಲಿಗೇಟುಗಳು ಕೊಟ್ಟ ಸಲಹೆಯನ್ನು ಸರ್ಕಾರದವರು ಒಪ್ಪಿರುತ್ತಾರೆ. ಬ್ಯಾಂಕಿನಿಂದ ವಾಪಸು ತೆಗೆದುಕೊಳ್ಳುವದನ್ನು ತನಿಖೆ ಮಾಡಿ ಅದನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುವುದಕ್ಕಾಗಿ ಪಾಸ್ ಬುಕ್ಕನ್ನು ಅಮಲ್ದಾರರ ವಶದಲ್ಲಿಡತಕ್ಕದ್ದು. ಗ್ರಾಮದ ಹಸ್ತು ಜನರ ಉಪಯೋಗಕ್ಕಾಗಿ ಬೇಕಾಗಿರುವ ಯಾವುದಾದರೂ ಕೆಲಸಕ್ಕಾಗಿ ಈ ಫಂಡನ್ನು ಉಪಯೋಗಿಸುವ ವಿಷಯದಲ್ಲಿ ಗ್ರಾಮಸ್ಥರೆಲ್ಲರೂ ಮೀಟಿಂಗು ಸೇರಿ ಅವರ ಅಂಗೀಕಾರ ಪಡೆದು ಆ ರೀತಿ ಉಪಯೋಗಿಸಿಕೊಳ್ಳಬಹುದೆಂಬ ಸಂಗತಿಯನ್ನು ಎಲ್ಲಾ ಗ್ರಾಮ ಕಮಿಟಿಗಳವರಿಗೆ ತಿಳಿಸತಕ್ಕದ್ದೆಂದು ಡೆಪ್ಯುಟಿ ಕಮಿಷನರುಗಳನ್ನು ಕೋರಿ ಇದೆ. ಯಾವ ಕಾಲದಲ್ಲಿ ಅಧ್ಯಕ್ಷರಾಗಿರತಕ್ಕವರ ವಿನಾ ಇತರರಿಗೆ ಹಣ ಪಾವತಿ ಆಗುವ ಸಂಭವವನ್ನು ತಪ್ಪಿಸುವುದಕ್ಕಾಗಿ ಗ್ರಾಮ ಕಮಿಟಿಗಳ ಅಧ್ಯಕ್ಷರ ಬದಲಾವಣೆಗಳನ್ನು ಟ್ರೆಜರಿ ಆಫೀಸರುಗಳಿಗೆ ಕ್ರಮವಾಗಿ ತಿಳಿಸುವ ಏರ್ಪಾಟನ್ನು ಡೆಪ್ಯುಟಿ ಕಮಿಷನರುಗಳು ಮಾಡತಕ್ಕದ್ದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗ್ ನಡಿಸಿದರು. ಕಳೆದ ಮೇ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಿ ಪಾಸಾದವು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ 24,157 ರೂಪಾಯಿ ಜಮಾ, 12,062 ರೂಪಾಯಿ ಖರ್ಚು ಆಯಿತು. ಜನನ 189; ಮರಣ—ಪ್ಲೇಗ್ (ಹೊರಗಿನ ಕಾಯಿಲೆಗಳು) 2, ಸಿಡುಬು 8, ಜ್ವರ 13, ಇತರ ಕಾರಣಗಳು 125, ಜುಮ್ಲಾ 148. ಆಡಿಟರುಗಳ ರಿಪೋರ್ಟಿನ ಸಾರಾಂಶವೇನೆಂದರೆ—ಆಕ್ಟ್ರಾಯ್ ಬಾಬಿನ ಉತ್ಪತ್ತಿಯು ಸುಮಾರು 2,000 ರೂಪಾಯಿಗೆ ಹೆಚ್ಚಿದೆ. ಮೊಹತರ್ಫಾ ವಸೂಲಾತಿ 1,000 ರೂಪಾಯಿ ಕಡಮೆಯಾಯಿತು. ಇನ್ನೂ 30,000 ರೂಪಾಯಿ ಈ ಬಾಬಿನಲ್ಲಿ ಬಾಕಿ ಉಳಿದಿದೆ. ಮೈಸೂರು ಪಟ್ಟಣದಲ್ಲೆಲ್ಲಾ 282 ಬೈಸಿಕಲ್‌ಗಳು ಮಾತ್ರ ಇರುವುದಾಗಿ ಲೆಕ್ಕಗಳು ತಿಳಿಸುವವು. ಊರಿನಲ್ಲಿ ಅದರ ಹತ್ತರಷ್ಟಾದರೂ ಬೈಸಿಕಲ್ ಇರುವದಕ್ಕೆ ಸಂಶಯ ಕಾಣುವದಿಲ್ಲ ಈ ಭಾಗಗಳನ್ನು ಕ್ರಮಪಡಿಸಬೇಕು ಎಂಬೀ ರೀತಿ ಬರೆದಿದ್ದರು. ಮೊಹತರ್ಫಾ ವಸೂಲಾತಿಯನ್ನೂ ಬೈಸಿಕಲ್‌ಗಳ ಲೆಕ್ಕವನ್ನೂ ಈಗ ಕ್ರಮಪಡಿಸುತ್ತಿದೇವೆಂದೂ, ಇನ್ನು ಒಂದೆರಡು ತಿಂಗಳೊಳಗಾಗಿ ಎಲ್ಲಾ ಕ್ರಮಪಡುವುದೆಂದೂ ವೈಸ್ ಪ್ರೆಸಿಡೆಂಟರು ಸಮಾಧಾನ ಹೇಳಿದರು.

ಸಕ್ಕರೆಯ ಮೇಲೆ ಪಾವತಿ ಮಾಡಲ್ಪಟ್ಟ ಆಕ್ಟ್ರಾಯ್ ಸುಂಕವನ್ನು ವರ್ತಕರು ವಾಪಸು ಪಡೆಯುವುದಕ್ಕೆ ಮೂರು ತಿಂಗಳ ವಾಯಿದೆ ಕೊಡಬಹುದೆಂದು ತೀರ್ಮಾನವಾಯಿತು.—1914-15 ನೇ ಸಾಲಿನ ನೀರಿನ ಕಂದಾಯವನ್ನು ಅಂಗಡಿಗಳಿಂದ ವಸೂಲ್ಮಾಡುವುದು ಸಾಧ್ಯವಲ್ಲವೆಂದು ಸರ್ಕಾರಕ್ಕೆ ಅರಿಕೆಮಾಡುವಂತೆ ಒಪ್ಪಿದರು.—ಮೈಸೂರಿಗೆ ಕುಡಿಯುವ ನೀರು ಸರಬರಾಯಿ ಆಗುವ ನೀರಿನ ಯಂತ್ರಗಳಿಗೆ ಉಪಯೋಗಿಸುವಂಥಾ ವಿದ್ಯುಚ್ಛಕ್ತಿಗೆ ಯೂನಿಟ್ 1 ಕ್ಕೆ 6 ಪೈಸಂತೆ ಕ್ರಯವನ್ನು ಕೊಡತಕ್ಕದ್ದೆಂದು ಸರ್ಕಾರದವರು ವಿಧಿಸಿರುತ್ತಾರೆ.—ಅನಾಥಾಲಯದ ಕಟ್ಟಡಕ್ಕೆ ಪ್ರತಿಯಾಗಿ ಸುಬ್ರಾಯನ ಕೆರೆ ಪೂರ್ವಪಾರ್ಶ್ವದಲ್ಲಿರುವ 8,394 ಚದರ ಗಜ ಖಾಲಿನಿವೇಶನವನ್ನು ಅನಾಥಾಲಯಕ್ಕೆ ಕೊಡಬೇಕೆಂದು ಸರ್ಕಾರದವರು ಹುಕುಂಕೊಟ್ಟಿದ್ದಾರೆ.—ಟೌನ್ ಪ್ಲಾನಿಂಗ್ ಪ್ರದರ್ಶನಕ್ಕಾಗಿ ಮೈಸೂರು ಬೆಂಗಳೂರು ಮ್ಯುನಿಸಿಪಾಲಿಟಿಗಳಿಂದ ಕಳುಹಿಸಲ್ಪಟ್ಟಿದ್ದ ಮೆಂಬರುಗಳಿಗೆ ಹೋಗಬರ 1 ನೇ ಕ್ಲಾಸ್ ರೈಲ್ ಛಾರ್ಜು ಮತ್ತು ದಿನಕ್ಕೆ 5 ರೂಪಾಯಿ ಭತ್ಯ ಕೊಡತಕ್ಕದ್ದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು.—ಶ್ರೀರಂಗಪಟ್ಟಣದ ಕಡೆ ಸೀರನಗೆರೆ ಉಕ್ಕಡವನ್ನು ಅಲಂಕಾರವಾಗಿ ಕಟ್ಟುವುದಕ್ಕೆ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲವಾದದ್ದರಿಂದ ಅದನ್ನು ಟ್ರಸ್ಟ್ ಬೋರ್ಡಿನವರು ಕಟ್ಟಿಸಿಕೊಡಬೇಕೆಂದು ಇತ್ಯರ್ಥವಾಡಲಾಯಿತು.—ಬಾಮುರಾಜಮೊಹಲ್ಲಾ ಬಜಾರ್ ಲೈನಿನಲ್ಲಿ ಮನೆಗಳ ಮುಂದೆ ಒಂದು ಪಾರ್ಶ್ವದ ಖಾಲಿ ನಿವೇಶನವನ್ನು ಆಯಾ ಮನೆಯವರಿಗೆ ಕೊಡತಕ್ಕದೆಂದು ತೀರ್ಮಾನವಾಯಿತು.—ತಿಂಗಳಿಗೆ 4,000 ಗ್ಯಾಲನ್‌ಗೆ ಮೀರದಂತೆ ಯಾವ ಮನೆಯವರು ನೀರು ಉಪಯೋಗಿಸಿಕೊಳ್ಳುವುದಿಲ್ಲವೋ ಅಂಥಾ ಮನೆಗಳವರಿಂದ ಮೀಟರ್ ಬಾಡಿಗೆ (ತಿಂಗಳಿಗೆ 4 ಅಣೆ) ವಸೂಲ್ಮಾಡದೆ ಮಾಫಿ ಬಿಡಲಾಗುತ್ತೆಂದು ಸರ್ಕಾರದವರು ಹುಕುಂಕೊಟ್ಟಿದ್ದಾರೆ.—ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯಲ್ಲಿ ಪ್ರದರ್ಶನೋತ್ಸವವು ಈ ಸಲ ನಡಿಸಲ್ಪಡುವುದಿಲ್ಲವಾದಕಾರಣ ಅದಕ್ಕೆ ಪ್ರತಿಯಾಗಿ ಸ್ಕೂಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನಾನಾ ಆಟದ ಪಂದ್ಯಗಳನ್ನು ಕಲ್ಪಿಸಿ ಬಹುಮಾನಗಳನ್ನು ಕೊಡುವಂತೆ ಇತ್ಯರ್ಥವಾಗಿದೆ. ಇದರ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ 200 ರೂಪಾಯಿ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಲೇಟ್ ಭಕ್ಷಿ ನರಸಪ್ಪನವರ ದೇವಸ್ಥಾನದ ಮಳಿಗೆಗಳಿಗೆ ಮ್ಯುನಿಸಿಪಲ್ ಕಂದಾಯ ಹಾಕಿ ವಸೂಲ್ಮಾಡಬೇಕೇ ಬೇಡವೇ ಎಂಬ ವಿಷಯವನ್ನು ಇತ್ಯರ್ಥಮಾಡುವುದಕ್ಕೆ ಮೂರು ಮೆಂಬರುಗಳು ನೇಮಕವಾಗಿದ್ದರು. ಆ ಪೈಕಿ ಒಬ್ಬರು ಸೇರಲಿಲ್ಲ. ಸೇರಿದ ಇಬ್ಬರಲ್ಲೂ ಭಿನ್ನಾಭಿಪ್ರಾಯಗಳುಂಟಾದವು. ಆದಕಾರಣ ಈ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಯವರಿಗೆ ತಿಳಿಸಿ ಅವರ ಅಭಿಮತವನ್ನು ತಿಳಿಯಬೇಕೆಂದು ಇತ್ಯರ್ಥಮಾಡಿದರು.—ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಕಾನ್‌ಫರೆನ್ಸಿನ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ 500 ರೂಪಾಯಿಗಳು ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಮಳವಳ್ಳಿಯ ಸಂಪದಭಿವೃದ್ಧಿ.

ಅಯ್ಯಾ,—ಈ ಕಾಲದಲ್ಲಿ ಪರದೇಶೀಯ ಸರಕುಗಳೂ, ಕೈಗಾರಿಕೆಗಳೂ ಹಿಂದೂ ದೇಶದ ವ್ಯಾಪಾರಕ್ಕೆ ಮತ್ತು ಸಂಪದಭಿವೃದ್ಧಿಗೆ ಸಾಕಾದವುಗಳಾಗಿರುವದಿಲ್ಲ. ಹೀಗಿರುವಲ್ಲಿ ಬೆಂಗಳೂರು ಸಿಟಿ ಏಜನ್ಸಿಗೆ ಸಂಬಂಧಪಟ್ಟ ಮ|| ಕೆ. ಆರ್. ಚಕ್ರವರ್ತಿ ಅಯ್ಯಂಗಾರ್ರು ಮೈಸೂರು ಸ್ಟೀಮ್ ಟ್ರಾಂವೇ ಕಂಪನಿಗೆ ಷೇರುಗಳನ್ನು ಕೊಡಿಸುವ ಏಜೆಂಟರಾಗಿ ಅದಕ್ಕಾಗಿ ಬಹು ಮುತುವರ್ಜಿ ವಹಿಸಿ ಕಷ್ಟಪಡುತ್ತಾ ಇದಾರಲ್ಲದೆ, ಇದರ ಜೊತೆಯಲ್ಲಿ ಚಿಕ್ಕವರೂ ದೊಡ್ಡವರೂ ಯಾವದಾದರೊಂದು ಕೈಕಸಬಿನಿಂದ ಜೀವನ ಮಾಡಬಹುದಾದ ವಿಷಯವನ್ನು ಕುರಿತು ಮೈಸೂರಿನ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸಂಚರಿಸಿ ಸಂತೋಷದಿಂದಲೂ ಆದರ ಸತ್ಕಾರದಿಂದಲೂ ಉಪನ್ಯಾಸಗಳನ್ನು ಕೊಡುತ್ತಲೂ, ಅನುಭವ ಸ್ಥಾಪಿತ ದೃಷ್ಟಾಂತಗಳಿಂದ ತೋರಿಸುತ್ತಲೂ ಕಲಿಸುತ್ತಲೂ ಬರುತ್ತಿದ್ದಾರೆ.

ಈ ಮಹನೀಯರು ಮಳವಳ್ಳಿಗೆ ದಯಮಾಡಿಸಿ ಗ|| ಸ್ಕೂಲ್ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಕೆಲವು ದೃಷ್ಟಾಂತಗಳಿಂದ ಕಸಬುಗಳನ್ನು ಮಾಡುವ ವಿಧಾನವನ್ನು ತೋರಿಸಿಕೊಟ್ಟದ್ದಲ್ಲದೆ ತಾ. 14-15 ರಲ್ಲಿ ಇಲ್ಲಿನ ಕ್ರೈಸ್ತ ಮಿಷನ್ ಆರಾಧನಾ ಶಾಲೆಯಲ್ಲಿ ಅನಾಥ ಹುಡುಗರಿಗೂ ಹೊರಗಿನವರ ಪೈಕಿ ಪಂಚಮರೇ ಮೊದಲಾದವರಲ್ಲಿ ಸ್ಕೂಲ್ ಹುಡುಗರು ಮೊದಲುಗೊಂಡು ದೊಡ್ಡವರವರೆಗೆ ಅನೇಕರಿಗೂ ಬಹು ಪ್ರಾಮುಖ್ಯವಾದ ಎರಡು ಉಪನ್ಯಾಸಗಳನ್ನು ಕೊಟ್ಟು, ಕೈಗಾರಿಕೆಯ ವಿಧಾನವನ್ನು ದೃಷ್ಟಾಂತಗಳಿಂದ ಪ್ರದರ್ಶಿಸಿದರು. ಮೊದಲನೇ ಕೂಟದಲ್ಲಿ "ಮೈಸೂರು ಎಕನಾಮಿಕ್ ಕಾನ್‌ಫರೆನ್ಸ್" ಗೆ ಸಂಬಂಧಪಟ್ಟ ಮೈಸೂರು ಡಿಸ್ಟ್ರಿಕ್ಟಿನ ಸೊ|| ಮ|| ಶ್ರೀನರಸಿಂಹಶಾಸ್ತ್ರಿಯವರು ಅಗ್ರಸ್ಥರಾಗಿದ್ದರು. ನಮ್ಮ ಅಮಲ್ದಾರರೂ, ಡಾಕ್ಟರೂ, ಫಸ್ಟ್ ಪೇಷಂಟ್ ಸಾಹೇಬರೂ, ಧೊರೆಸಾನಿಯವರೂ ಇನ್ನೂ ಅನೇಕರೂ ಹಾಜರಿದ್ದು ಪ್ರೋತ್ಸಾಹಿಸಿದರು. ಇಂಥಾ ದೇಶೀಯ ದೊಡ್ಡ ಮನುಷ್ಯರು ಎಲ್ಲೆಲ್ಲೂ ಸಂಚರಿಸಿ, ನಿದ್ರಿತ ಸ್ಥಿತಿಯಲ್ಲಿ ದ್ದಾಕಷ್ಟು ವಸ್ತ್ರದಂತಿರುವ ಮೈಸೂರಿನ ಪ್ರಜೆಗಳ ಬುದ್ಧಿ ಸಾಮರ್ಥ್ಯಾದಿಗಳನ್ನು ಹುರಿದುಂಬಿಸುತ್ತಾ ಬರೋಣದರಿಂದ ಉತ್ತರೋತ್ತರ ದ್ರವ್ಯಾಭಿವೃದ್ಧಿಯು ಏಳಿಗೆಯು ಬರುವದೆಂಬುವದಕ್ಕೆ ಸಂಶಯವಿಲ್ಲ. ಫೌಂಟನ್ ಪೆನ್‌ಗೆ ಯೋಗ್ಯವಾದ ಕೆಮಿಕಲ್ ಇಂಕು, ಬೂಟ್ ಪಾಲಿಷ್, ಚರ್ಮ ಹದಮಾಡುವದು, ಇತ್ಯಾದಿ ವಿಧಾನವನ್ನು ತೋರಿಸಿದರು.

ಬಹು ಘನತರವಾದ ಸಿ. ಸಿ. ಐ. ಇ. ಎಂಬ ಬಿರುದನ್ನು ಸಂಪಾದಿಸಿಕೊಂಡ ನಮ್ಮ ಕುಲೀನ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಹಾಗಿರುವವರು ಬಹು ವಿರಳ. ಈ ಮಹನೀಯರು ಈ ಸಂಸ್ಥಾನದ ಉದ್ಯೋಗವನ್ನು ವಹಿಸಿಕೊಂಡ ಲಾಗಾಯಿತು ಹಿಂದೆ ಯಾವಾಗ್ಯೂ ಇಲ್ಲದ ರೀತಿಯಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರಾದಿಗಳ ವಿಷಯದಲ್ಲಿ ಬಹು ಮುತುವರ್ಜಿ ವಹಿಸಿ ಪ್ರಜೆಗಳಿಗೆ ಮಾಡುತ್ತಿರುವ ಉಪಕಾರದಲ್ಲಿ ಅವರ ಗುಪ್ತ ಬುದ್ಧಿ ಸಾಮರ್ಥ್ಯಾದಿಗಳು ಪ್ರಕಾಶಿಸುತ್ತಿರುವದು ಪ್ರತ್ಯಕ್ಷವಾಗಿದೆ. ವ್ಯವಸಾಯ, ಬಾಗಾಯಿತು ಮತ್ತು ವಿದ್ಯಾಭಿವೃದ್ಧಿ ಯಾವತ್ತು ಸಮಾಂತರ ಮುಂದರಿಯುತ್ತಿರಬೇಕೆನ್ನುವದೇ ಅವರ ದೊಡ್ಡ ಅಭಿಲಾಷೆ. ಇಂಥಾ ಅನುಕೂಲ್ಯ ಪ್ರೋತ್ಸಾಹಾದಿಗಳ ಕಾಲವು ಪುನಃ ಉದಯವೆಂದರಿತು, ಹೆಚ್ಚು ಸಂಪಾದನೆ ಇಲ್ಲದೆ ದರಿದ್ರಾವಸ್ಥೆಯಲ್ಲಿರುವ ಎಲ್ಲಾ ಪ್ರಜೆಗಳೂ ಯಾಕೆ ಸುಲಭದಲ್ಲಿ ಸಂಪಾದನೆಗೆ ಆಧಾರವಾದ ಈ ಕೈಕಸಬುಗಳನ್ನು ಕಲಿತು ಸುಖಜೀವನ ಪಡೆಯಬಾರದು.

ಮಳವಳ್ಳಿ. ಜಿ. ಬಿ. ಗೇಬ್ರಿಯೇಲ್.

ಪೋಸ್ಟ್ ಇಲಾಖೆಯ ಮೇಲಣ ಆಕ್ಷೇಪಣೆ

ಅಯ್ಯಾ,—ಈ ಹಾಸನ ತಾಲ್ಲೂಕು ದುದ್ದದ ಹೋಬಳಿ ಹೆರಗು ಎಂಬ ಗ್ರಾಮವು ಐನೂರು ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಇದರ ಸುತ್ತುಮುತ್ತು ಮೂರು ಮೈಲಿ ಫಾಸಲೆಯೊಳಗಾಗಿ 20 ಗ್ರಾಮಗಳಿಗೆ ಮೇಲ್ಪಟ್ಟು ಸುಮಾರು ಹತ್ತುಸಾವಿರ ಪ್ರಜೆ ಇರುವ ಪ್ರದೇಶವಾಗಿದೆ. ಇಲ್ಲಿಗೆ ಆರು ಮೈಲಿ ದೂರದಲ್ಲಿ ಇರುವ ಗ್ರಾಮದಿಂದ ಅಥವಾ ಐದು ಮೈಲಿ ದೂರದಲ್ಲಿರುವ ಚಿಕ್ಕಕಡೂರಿನಿಂದ ಪೋಸ್ಟು ಬರಬೇಕಾಗಿದೆ. ಆ ಪೋಸ್ಟು ಆಫೀಸುಗಳ ಪೈಕಿ ಚಿಕ್ಕಕಡೂರಿನಲ್ಲಿ ಪೋಸ್ಟುಮ್ಯಾನ್ ಇಲ್ಲ. ಗ್ರಾಮದಲ್ಲಿರುವ ಪೋಸ್ಟು ಮ್ಯಾನಿಗೆ ಆತನ ಶಕ್ತಿಗೂ ಕಾಲಕ್ಕೂ ಮೀರಿದಷ್ಟು ಕೆಲಸವಿದೆ. ಆದನು ನಮ್ಮ ಗ್ರಾಮಗಳಿಗೆ ಬಂದು ನಮ್ಮ ಕಾಗದಗಳನ್ನು ತಲುಪಿಸುವದಕ್ಕೆ ಒಂದೆರಡು ವಾರಗಳ ವರೆಗೂ ಅವಕಾಶವಾಗಿರುವದು ನಮ್ಮ ಅನುಭವದಲ್ಲಿದೆ. ಎಂಟು ಹತ್ತು ದಿವಸಗಳಿಗೆ ಮುಂಚೆ ಇತರ ಸ್ಥಳಗಳಿಂದ ಬರೆದ ಲಗ್ನ ಪತ್ರಿಕೆಗಳು ಆ ಮದುವೆಯಾದ ಒಂದೆರಡು ದಿನಗಳ ಮೇಲೆ ಬಂದು ತಲಪಿವೆ. ಮರಣಶಯ್ಯೆಯಲ್ಲಿ ಮಲಗಿದ್ದಾರೆ, ಬೇಗನೆ ಬರಬೇಕೆಂದು ಬರೆದ ಕಾಗದಗಳು ಮರಣಾನಂತರ ಅವರಿಗೆ ನಡೆಯತಕ್ಕ ಉತ್ತರ ಕೆಲಸಗಳೆಲ್ಲಾ ಪೂರೈಸಿದನಂತರ ತಲಪಿವೆ. ಇಂತಹ ಉದಾಹರಣೆಗಳನ್ನು ಹೆಚ್ಚಾಗಿ ಕೊಡಬಹುದು. ನಮ್ಮ ಪೋಸ್ಟು ಇಲಾಖೆಯವರು ಈ ವಿಚಾರ ತಮ್ಮ ಚಿತ್ತಕ್ಕೆ ತಂದುಕೊಂಡು ಈ ಗ್ರಾಮಕ್ಕೆ ಒಂದು ಬ್ರಾಂಚು ಆಫೀಸನ್ನು ಸ್ಥಾಪಿಸಿಕೊಟ್ಟರೆ ಹತ್ತುಸಾವಿರ ಪ್ರಜೆಗಳಿಗೆ ತುಂಬಾ ಉಪಕಾರವಾಗುತ್ತೆ. ಮತ್ತು ಒಂದು ಕಾರ್ಡು ಒಂದು ಕವರು, ಬೇಕಾದರೂ. ರಿಜಿಸ್ಟರು, ಮನಿಯಾರ್ಡರು ಮಾಡಬೇಕಾದರೂ ವೃದ್ಧರಾದವರು, ಸ್ತ್ರೀಯರು, ಹುಡುಗರು ಸಹಾ ಆರು ಮೈಲಿ ಹೋಗಬೇಕಾದ ಕಷ್ಟವನ್ನು ನಮ್ಮ ಸರ್ಕಾರದವರು ತಪ್ಪಿಸಿದ ಉಪಕಾರಕ್ಕೆ ಭಾಗಿಗಳಾಗುತ್ತಾರೆ. ದಯವಿಟ್ಟು ಈ ಸಂಗತಿಯನ್ನು ಇಂಗ್ಲೀಷಿನಲ್ಲಿ ಸಹ ತರ್ಜುಮೆಮಾಡಿ ಪೋಸ್ಟು ಆಫೀಸುಗಳ ಡೈರೆಕ್ಟರವರಿಗೆ ಸಹಾ ತಿಳಿಯುವಂತೆ ನಮ್ಮ ಪತ್ರಿಕಾಕರ್ತರು ಉಪಕಾರಮಾಡಿದರೆ ತುಂಬಾ ಕೃತಜ್ಞರಾಗಿರುತ್ತೇನೆ.

ತಿರುನಾರಣಯ್ಯಂಗಾರ್ ಮುಂತಾದವರು

[ಆ ಗ್ರಾಮಗಳ ಮುಖಂಡರು ಒಂದು ಕಡೆ ಸೇರಿ ಈ ತಮ್ಮ ಅನನುಕೂಲವನ್ನು ಕುರಿತು ನಮ್ಮ ಸರ್ಕಾರಕ್ಕೂ, ಪೋಸ್ಟ್ ಇಲಾಖೆಯ ಸೂಪರಿಂಟೆಂಡೆಂಟರಿಗೂ ಅರ್ಜಿಗಳನ್ನು ಬರೆದುಕೊಳ್ಳುವುದು ಇನ್ನೂ ಒಳ್ಳೇದು —ಎಡಿ.]

ಸ್ಕೂಲ್ ಮಾಸ್ಟರುಗಳ ಬಡ್ತಿ ವಿಚಾರ

ಅಯ್ಯಾ,—ನಮ್ಮ ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೊಸದಾಗಿ ಸ್ಕೇಲ್‌ಗಳೆಂತ ಮಾಡಿದರು. ಅದು ಈಗ ಹ್ಯಾಗೆ ಆಗಿರುತ್ತೆಂದರೆ ಕೆಳಪಟ್ಟ ಆಫೀಸರುಗಳು ಸೋಮಾರಿಗಳಾಗಿ ಕೆಲಸಮಾಡದೆ ಪೋಲಿಯಾಗಿ ಓಡಾಡಿಕೊಂಡಿರುವ ಅನೇಕ ಮಂದಿ ಮಾಸ್ಟರುಗಳಿಗೆ ಹತ್ತರಿಂದ ಹದಿನೈದು, ಹದಿನೈದರಿಂದ ಇಪ್ಪತ್ತು, ಇಪ್ಪತ್ತೈದು, ಈ ಮೇರೆಗೆ ಮನಸ್ಸು ಬಂದ ಹಾಗೆ ಸಿಫಾರ್ಸು ಮಾಡಿ ಬಡ್ತಿ ಮಾಡಿಸಿಬಿಟ್ಟರು. ಇದರಿಂದ ನಮ್ಮ ಮಹಾರಾಜರವರ ಖಜಾನೆ ಬರೀದಾಯಿತೇ ಹೊರತು ನ್ಯಾಯವೂ ಸಾರ್ಥಕವೂ ಆಗಲಿಲ್ಲ. ಯೋಗ್ಯರಾಗಿ ವಿದ್ಯಾವಂತರಾಗಿ ಸರಿಯಾಗಿ ಕೆಲಸ ಮಾಡುತ್ತಿರುವ ಮಾಸ್ಟರುಗಳ ಹೆಸರೇ ಅವರ ಜ್ಞಾಪಕಕ್ಕೆ ಬಾರದೆಹೋಯಿತು; ಅಥವಾ ಬಂದರೂ ಅಲ್ಪ ಫಲವಾಯಿತೇ ಹೊರತು ಸಂಪೂರ್ಣ ಫಲವಾಗಲಿಲ್ಲ. ಇದನ್ನೆಲ್ಲಾ ಮೇಲಿನವರು ನ್ಯಾಯವಾದ ವಿಚಾರವಲ್ಲದೆ ಪಕ್ಷಪಾತವಾಗಿ ಮಾಡಿದ ಶಿಫಾರಸೇ ಮುಖ್ಯವಾದುದೆಂದು ನ್ಯಾಯಾನ್ಯಾಯವಿಲ್ಲದೆ ಮಂಜೂರುಮಾಡಿಯಾಕಿದರು. ಈಗಲೂ ಅದ ಮಾಯಿಸಿಮಾಡಿದರೆ ಈ ಬರವಣಿಗೆ ನಿಜ ಸುಳ್ಳು ಎಂಬುದು ಗೊತ್ತಾಗುತ್ತೆ. ಇದನ್ನೆಲ್ಲಾ ನೋಡಿದರೆ ಸತ್ಯವಾದ ರಾಜ್ಯಭಾರಕ್ಕೆ ನ್ಯಾಯವಾದ ಬಡವರ ಗೋಳಾಟವು ಇಂಥಾ ಅಧಿಕಾರಿಗಳಿಂದ ಕಟ್ಟರೆ ಇರಲಾರದು. ಈ ಅತ್ಯಂತ ವ್ಯಸನಕರವಾದ ವಿಷಯ ತಮ್ಮ ಪತ್ರಿಕೆಯಿಂದ ನಮ್ಮ ಶ್ರೀಮನ್ ಮಹಾರಾಜರವರಿಗೆ ಅರಿಕೆಯಾಗಿ ಈ ಅನ್ಯಾಯ ಕ್ರಮಪಡುವಂತೆ ಮಾಡುವರೆಂಬದಾಗಿ ಖಂಡಿತವಾಗಿ ನಂಬಿರುತ್ತೇನೆ

ದೇವನಹಳ್ಳಿ. ಸತ್ಯವಾದಿ.

II

ಅಯ್ಯಾ,—ಮಾಸ್ಟರುಗಳ ಪ್ರಮೋಷನ್ ವಿಚಾರದಲ್ಲಿ ಈಗ ಟ್ರೈನಿಂಗ್ ಪ್ಯಾಸ್ ಮಾಡಿದ ಅನೇಕ ಜನ ಮಾಸ್ಟರುಗಳು ಹಿಂದೆ ಟ್ರೈನಿಂಗ್ ಪ್ಯಾಸ್ ಮಾಡಿದವರಿಗೆ 2 ರೂಪಾಯಿ ಬಡ್ತಿ ಕೊಟ್ಟಿದ್ದಾರೆ. ಅನೇಕ ಜನ ಮಾಸ್ಟರುಗಳಿಗೆ 7-8 ವರ್ಷ ಸರ್ವಿಸ್ ನಡೆದು ಟ್ರೈನಿಂಗ್ ಕ್ಲಾಸ್ ಇಲ್ಲದೆ ಇರುತ್ತಾರೆ. ಇಂಥಾವರಲ್ಲಿ ಕೆಲವರಿಗೆ 2 ರೂಪಾಯಿ ಬಡ್ತಿ ಕೊಟ್ಟಿರುತ್ತಾರೆ. ಇದು ನೋಡಿದರೆ ಬಹಳ ಆಶ್ಚರ್ಯವಾಗಿರುತ್ತೆ. ಟ್ರೈನಿಂಗ್ ಮತ್ತು ಲೋವರ್ ಸೆಕಂಡರಿ ಪರೀಕ್ಷೆ ಯಾವದೂ ಇಲ್ಲದೆ ಬಡ್ತಿ ಕೊಟ್ಟಿರುವ ಮಾಸ್ಟರುಗಳು ಮಾಡಿರುವ ಉಪಕಾರವೇನು? ಅವರ ಸಮಸಮಾನರಾಗಿ ಸರ್ವಿಸ್ ಮಾಡಿರುವ ಮಾಸ್ಟರುಗಳು ಮಾಡಿರುವ ಅಪಕಾರವೇನು! ಟ್ರೈನಿಂಗ್ ಕ್ಲಾಸ್ ಪ್ರಾರಂಭವಾಗುವುದಕ್ಕೆ ಮುಂಚೆ ಸ್ಕೂಲ್ ಮಾಸ್ಟರ್ ಕೆಲಸಕ್ಕೆ ಸೇರಿ ಸರ್ವಿಸ್ ಮಾಡಿದವರು ಟ್ರೈನಿಂಗ್ ಕ್ಲಾಸ್ ಶುರು ಆದಾಗ ಚುನಾಯಿಸಿದ್ದ ಪಕ್ಷದಲ್ಲಿ ಅವರೆಲ್ಲರೂ ಪ್ಯಾಸ್ ಮಾಡುತ್ತಲೇ ಇದ್ದರು. ಈಗಲೂ ಅಂಥವರನ್ನು ಚುನಾಯಿಸದೇಲೂ 2-3 ವರ್ಷದ ಕೆಳಗೆ ಸ್ಕೂಲ್ ಕೆಲಸಕ್ಕೆ ಸೇರಿದವರಿಗೆ ಬಡ್ತಿ ಕೊಡುವುದಕ್ಕೂ ಅವರುಗಳನ್ನು ಟ್ರೈನಿಂಗ್ ಕಾಲೇಜಿಗೆ ಚುನಾಯಿಸಿಯೂ ಇರುತ್ತಾರೆ. ಈ ರೀತಿ ಪಕ್ಷಪಾತಮಾಡಿರುವದು ಬಹಳ ವ್ಯಸನಕರವಾಗಿದೆ. ಆದ್ದರಿಂದ ಸತ್ಯಪ್ರಿಯರಾದ ವಿದ್ಯಾಭ್ಯಾಸದ ಇಲಾಖೆಯವರು ಈ ವಿಷಯವನ್ನು ಮನಸ್ಸಿಗೆ ತಂದು ಈ ಅವಿವೇಕವನ್ನು ತಪ್ಪಿಸಿ ಮೈಸೂರು ದೇಶದ ಎಲ್ಲಾ ವಿಲೇಜ್ ಮಾಸ್ಟರುಗಳಿಗೂ ಒಂದೇ ಸಮನಾಗಿ ಬಡ್ತಿ ಕೊಟ್ಟು ಕಾಪಾಡುತ್ತಾರೆಂತ ನಂಬಿರುತ್ತೇನೆ.

ಹಿತಚಿಂತಕ.

III

ಅಯ್ಯಾ,—ನಮ್ಮ ಮಹಾರಾಜರ ಸರ್ಕಾರದವರು ಬಡ ಹಳ್ಳಿಯ ಸ್ಕೂಲ್ ಮಾಸ್ಟರುಗಳ ಸಂಬಳ ಕಮ್ಮಿ ಎಂದು ಕಳೆದ ಸಾಲಿನಲ್ಲಿ ಪ್ರತಿ ಒಬ್ಬರಿಗೂ 2 ರೂಪಾಯಿಗೆ ಕಮ್ಮಿ ಇಲ್ಲದಂತೆ ಇರಬೇಕೆಂದು ಹುಕುಂ ಸ್ಯಾಂಕ್ಷನ್ ಮಾಡಿ

ಆದರೆ ಈ ಸಾಲಿನಲ್ಲಿ ಮೈಸೂರು, ಬೆಂಗಳೂರು ಪ್ರಾಂತ್ಯಗಳಲ್ಲಿ ಪ್ರತಿ ಬಿ. ಎ. ಬಾಯ್ಸ್ ಸ್ಕೂಲಿನಲ್ಲಿಯೂ ಸಹ 12 ರೂಪಾಯಿನಂತೆ ಸಲಬು ಕೊಡುತ್ತಿದ್ದಾರೆ. ಮತ್ತು ಈ ಡಿಸ್ಟ್ರಿಕ್ಟಿನಲ್ಲಿ ಕೆಲವರಿಗೆ ಮಾತ್ರ 12 ರೂಪಾಯಿನಂತೆಯೂ, ಉಳಿದವರಿಗೆ 10 ರೂಪಾಯಿನಂತೆಯೂ ಪಾವತಿ ಆಗುತ್ತಿದೆ. ಆದರೆ ಈ 10 ರೂಪಾಯಿನವರು ಮಾತ್ರ ಏನು ಪಾಪಮಾಡಿದರೋ ಗೊತ್ತಿಲ್ಲ. ಆದರೂ 10 ರೂಪಾಯಿನ ನೌಕರರು ಕೆಲವರೇ ಇರುವದರಿಂದಲೂ, ಅವರುಗಳ ಸಂಕಟವನ್ನು ನೋಡುವದು ಬಹಳ ಕಷ್ಟವಾಗಿರುವದರಿಂದಲೂ ಸರ್ಕಾರದವರು ಆ ಬಡ ನೌಕರರಿಗೂ 12 ರೂಪಾಯಿ ಮಾಡಿಕೊಟ್ಟು ಸಂತೋಷವನ್ನುಂಟುಮಾಡಿ ಕೀರ್ತಿ ಪಡೆಯಲೆಂದು ಪ್ರಾರ್ಥಿಸುತ್ತೇವೆ

ಕೋಲಾರ ಮಾಸ್ಟರ ಹಿತಚಿಂತಕ.

ಮೈಸೂರು ಸಂಪದಭ್ಯುದಯ ಸಮಾಜ.

ಕಳೆದ ಸೋಮವಾರ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೇಲ್ಕಂಡ ಸಭೆಯ ಆರನೇ ವಾರ್ಷಿಕ ಸಮಾಜವು ನಮ್ಮ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯ, ಕೆ. ಸಿ. ಐ. ಇ. ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಅವರ ಬಲಪಾರ್ಶ್ವದಲ್ಲಿ ನಮ್ಮ ಶ್ರೀಮದ್ಯುವರಾಜರವರೂ, ಇವರ ಬಲಗಡೆ ಬರೋಡೆಯ ರಾಜಕುಮಾರರೂ, ಎಡಪಾರ್ಶ್ವದಲ್ಲಿ ಕೌನ್ಸಿಲರುಗಳಾದ ಮ|| ಎಚ್. ವಿ. ನಂಜುಂಡಯ್ಯ, ಸಿ. ಐ. ಇ. ಯವರೂ, ಎಂ. ಕಾಂತರಾಜೆ ಅರಸ್, ಸಿ. ಎಸ್. ಐ. ರವರೂ, ಹಿಂಭಾಗದಲ್ಲಿ ನಮ್ಮ ರೆವಿನ್ಯೂ ಕಮಿಷನರ್ ಮ|| ಕೆ. ದೊರಸಾಮಿ ಅಯ್ಯರವರೂ, ಬರೋಡೆಯ ಇಬ್ಬರು ಅಧಿಕಾರಿಗಳೂ ಕೂತಿದ್ದರು. ಕೆಳ ಪಾರ್ಶ್ವದಲ್ಲಿ ಇಲಾಖೆಗಳ ಅಧಿಕಾರಿಗಳೂ, ಡೆಪ್ಯುಟಿ ಕಮಿಷನರುಗಳೂ, ಸುಮಾರು 40 ಮಂದಿ ಮೆಂಬರುಗಳೂ, ಒಂದು ಕಡೆ ಸೆಕ್ರೆಟರಿಗಳೂ, ಇನ್ನೊಂದು ಕಡೆ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೂ, ಹತ್ತಾರು ಮಂದಿ ಪ್ರೇಕ್ಷಕರೂ ಕೂತಿದ್ದರು. ದಿವಾನ್‌ರವರು ಯುವರಾಜರವರ ಅನುಜ್ಞೆಯನ್ನು ಪಡೆದು ಸಭೆಯನ್ನು ಪ್ರಾರಂಭಿಸಿ ಉಪನ್ಯಾಸ ಮಾಡಿದರು. ಅವರ ಭಾಷಣದ ಮುಖ್ಯಾಂಶಗಳೇನೆಂದರೆ—

ಮೈಸೂರು ಸಂಪದಭ್ಯುದಯ ಸಮಾಜದ ಈ ಆರನೆಯ ಸಭೆಗೆ ತಮ್ಮಗಳನ್ನು ಬರಮಾಡಿಕೊಳ್ಳುವ ಗೌರವವು ನಮ್ಮದಾಗಿರುತ್ತದೆ. ಈ ಸಭೆಯು ಸ್ಥಾಪಿತವಾದ ಕಾಲದಿಂದ ಇಂದಿಗೆ ನಾಲ್ಕು ವರ್ಷ ತುಂಬಿತು. ಈ ಕಾಲದಲ್ಲಿ ನಡೆದಿರುವ ಕಾರ್ಯವನ್ನು ಯೋಚಿಸಿ ನೋಡುವಲ್ಲಿ, ಅದು ತಕ್ಕ ಮಟ್ಟಿಗೆ ತೃಪ್ತಿಕರವಾಗಿ ನಡೆದಿದೆಯೆಂದು ನಾವು ಧಾರಾಳವಾಗಿ ಭಾವಿಸಬಹುದಾಗಿದೆ. ಹೀಗೆ ಇದುವರೆಗೆ ಸರಿಯಾದ ಅಸ್ತಿವಾರವು ಬಿದ್ದು, ನಾನಾ ಮಾರ್ಗಗಳಲ್ಲಿ ಬೇಕಾದ ಸಲಕರಣೆಗಳನ್ನು ಒದಗಿಸಿರುವದರಿಂದ ಮುಂದಿನ ಕಾರ್ಯಗಳು ಇನ್ನೂ ಚೆನ್ನಾಗಿ ನಡೆಯಬಹುದೆಂದು ನಂಬಬಹುದಾಗಿದೆ. ನಾವುಗಳು ಮಾಡಿರುವ ಏರ್ಪಾಟಿಗೆ ಸಂಬಂಧಪಟ್ಟ ಅಭಿಪ್ರಾಯಗಳೂ ಕಾರ್ಯಕ್ರಮಗಳೂ, ನಮ್ಮ ಜನಗಳ ಸಂಪ್ರದಾಯಗಳಿಗೂ ಸ್ವಭಾವಕ್ಕೂ ಹೊಸವುಗಳಾಗಿ ಇದ್ದರೂ, ಅವು ಕ್ರಮವಾಗಿ ತಪ್ಪದೆ ಅವರಲ್ಲಿ ರೂಢಿಗೆ ಬರುತ್ತಲಿವೆ; ಇದಲ್ಲದೆ ಈ ಸಂಸ್ಥಾನದ ಅನೇಕ ಪ್ರದೇಶಗಳ ಜನಗಳಲ್ಲಿ, ವಿಷಯಗಳನ್ನು ವಿಚಾರಮಾಡಬೇಕೆಂಬ ಬುದ್ಧಿಯೂ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಶೆಯೂ ಹುಟ್ಟಿವೆ. ಇವು ಸಂತೋಷಕರವಾದ ಚಿಹ್ನೆಗಳೇ ಸರಿ. ನಾವು ಮಾಡತೊಡಗಿರುವ ಅರ್ಥಾಭ್ಯುದಯದ ಕೆಲಸವು ಮೆಲ್ಲಮೆಲ್ಲಗೆ ವೃದ್ಧಿಹೊಂದತಕ್ಕದಾಗಿದೆ. ಈ ಕೆಲಸದಲ್ಲಿ ಪ್ರಜೆಗಳು ಎಷ್ಟರ ಮಟ್ಟಿಗೆ ಸಹಾಯಕರಾಗಿ ಬರುತ್ತಾರೋ ಅಷ್ಟರ ಮಟ್ಟಿಗೆ ಅಭಿವೃದ್ಧಿಯುಂಟಾಗುತ್ತದೆ . . . . . .

ಈ ವರ್ಷದಲ್ಲಿ ನಡೆದ ಕೆಲಸವನ್ನು ಒಟ್ಟುಗೂಡಿಸಿ ನೋಡುವಲ್ಲಿ ರೇಷ್ಮೆ ವ್ಯವಸಾಯದ ಕೆಲಸವು ವಿಶೇಷಪ್ರಕಾರವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂತ ಹೇಳಬಹುದು. ವಿದ್ಯಾಭಿವೃದ್ಧಿಯು ತೃಪ್ತಿಕರವಾಗಿದೆ. ಯುದ್ಧಪ್ರಯುಕ್ತ ಸ್ಥಿತಿಗತಿಗಳು ಬದಲಾಯಿಸಿದ್ದರಿಂದಲೂ, ಸರಿಯಾದ ಯಂತ್ರಗಳನ್ನು ತರಿಸಿಕೊಳ್ಳುವುದಕ್ಕೆ ತೊಂದರೆಯಾದುದರಿಂದಲೂ, ಹಣ ದೊರೆಯುವುದು ದುರ್ಲಭವಾದುದರಿಂದಲೂ, ಅಭಿವೃದ್ಧಿ ಕಾರ್ಯಕ್ಕೆ ಸ್ವಲ್ಪ ಮಟ್ಟಿಗೆ ಕುಂದಕ ಉಂಟಾಗಿದ್ದರೂ ಯಂತ್ರಸಾಧನಗಳನ್ನು ಉಪಯೋಗಿಸುವ ವಿಷಯದಲ್ಲಿಯೂ, ಆಚರಣೆಗೆ ತರಬಹುದಾದಂಥ ಏರ್ಪಾಡುಗಳ ವಿಷಯದಲ್ಲಿ ಸಲಹೆ ಕೊಡುವುದರಲ್ಲಿಯೂ ಸಹ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ತಕ್ಕ ಮಟ್ಟಿಗೆ ಕೆಲಸಗಳು ನಡೆದು ಇರುತ್ತವೆ. ಆದರೆ ಯುದ್ಧ ಪೂರೈಸಿದ ಕೂಡಲೆ ಸ್ಥಿತಿಗತಿಗಳು ಪುನಃ ಉತ್ತಮ ಸ್ಥಿತಿಗೆ ಬಂದಾಗ, ಈಗ ತಯಾರಾಗುತ್ತಿರುವ ಏರ್ಪಾಡುಗಳೂ, ನಡೆಸಲ್ಪಟ್ಟ ಪರೀಕ್ಷೆಗಳ ಫಲಿತಾಂಶಗಳೂ ಉಪಯೋಗವಾಗುವವೆಂದು ನಂಬಲಾಗಿದೆ.

ಡಿಸ್ಟ್ರಿಕ್ಟ್ ಸೂಪರಿನ್‌ಟೆಂಡೆಂಟರುಗಳನ್ನು ನೇಮಿಸಿರುವುದರಿಂದಲೂ, ಅರ್ಥಸಾಧಕ ಪತ್ರಿಕೆಯನ್ನು ಪ್ರಕಟಿಸುತ್ತಿರುವುದರಿಂದಲೂ, ಮೊದಲೇ ನಮೂದಿಸಿರುವ ಮೇರೆಗೆ ಅನೇಕ ಪ್ರೋಗ್ರೆಸ್ ಕಮಿಟಿಗಳನ್ನು ಏರ್ಪಡಿಸಿರುವುದರಿಂದಲೂ ಸಹ, ಸಂಪದಭ್ಯುದಯ ವಿಷಯದಲ್ಲಿ ತಕ್ಕ ಮಟ್ಟಿಗೆ ಜನಗಳಲ್ಲಿ ಆಸಕ್ತಿಯೂ ಮುಖವರ್ಜಿಯೂ ಹೆಚ್ಚಿರುತ್ತದೆ. ಈ ರೀತಿ ಕುತೂಹಲದಿಂದ ಕೈಗೊಂಡಿರುವ ಕೆಲಸಗಳನ್ನು ಸ್ಥಿರಪಡಿಸಿ ಪೂರೈಸಬೇಕಾಗಿರುತ್ತದೆ. ಈ ಕೆಲಸವು ತಕ್ಕ ಮಟ್ಟಿಗೆ ನಡೆಯುತ್ತಲಿದೆ . . . . . .

ಕಮಿಟಿಗಳ ಮೂಲಾಂತರ ಕೆಲಸಗಳನ್ನು ನಡಿಸುವ ಪದ್ಧತಿಯು ನಮ್ಮ ಆಫೀಸರುಗಳಿಗೂ ಮತ್ತು ಮುಖಂಡರಾದ ನಮ್ಮ ದೇಶದ ಜನರಿಗೂ ಸ್ವಲ್ಪ ಮಟ್ಟಿಗೆ ನವೀನವಾದ ಪದ್ಧತಿಯಾಗಿ ಕಾಣುತ್ತದೆ. ಆದರೆ ಈ ಪದ್ಧತಿಯು ಅವರಲ್ಲಿ ಬಳಕೆಗೆ ಬರುತ್ತಿದೆ. ಈಚೀಚಿನ ವರೆಗೆ ಮೆಂಬರುಗಳ ಪೈಕಿ ಅನೇಕರು ಆಕ್ಷೇಪಣೆ ಮಾಡುವ ಕೆಲಸವನ್ನು ಮಾತ್ರ ಮಾಡುತ್ತಿದ್ದಂತೆ ತಿಳಿಯಬರುತ್ತದೆ. ವಿಷಯಗಳನ್ನು ಮುಂದಾಗಿ ತಿಳಿದುಕೊಂಡು ಪರಿಶೀಲನೆ ಮಾಡುತ್ತಿರಲಿಲ್ಲ. ಸಾಮಾನ್ಯವಾಗಿ ಅಧ್ಯಕ್ಷರೂ ಸೆಕ್ರೆಟರಿಯವರೇ ವಿಶೇಷವಾಗಿ ಕೆಲಸವನ್ನು ಮಾಡುತ್ತಿದ್ದರು. ಮೆಂಬರುಗಳು ಕೆಲಸದಲ್ಲಿ ಕುಂದು ಕೊರತೆಗಳನ್ನು ಹುಡುಕಿ ತಮಗೆ ತೋರಿದ ಅಭಿಪ್ರಾಯಗಳನ್ನು ತಿಳಿಸುವುದಕ್ಕೋಸ್ಕರ ಮೀಟಿಂಗಿಗೆ ಹಾಜರಾಗುತ್ತಿದ್ದರು; ಮತ್ತು ಯಾವುದಾದರೂ ಹೊಸ ಅಭಿಪ್ರಾಯವನ್ನು ಯಾರಾದರೂ ತಿಳಿಸಿದಾಗ ಅದನ್ನು ಖಂಡಿಸುವುದಕ್ಕೆ ಸಿದ್ಧರಾಗುತ್ತಿದ್ದರು. ಜನರು ಅಪೇಕ್ಷಿಸುತ್ತಿದ್ದಂತೆ ಫಲಿತಾಂಶಗಳು ವಿಶೇಷವಾಗಿ ಉಂಟಾಗದೆ ಇರುವುದಕ್ಕೆ ಈ ಪದ್ಧತಿಯೇ ಮುಖ್ಯ ಕಾರಣವೆಂದು ಕಾಣುತ್ತದೆ. ಈ ಮನೋಭಾವವು ಕಾಲಕ್ರಮೇಣ ಬದಲಾಯಿಸುವುದರಿಂದ ಇದಕ್ಕಾಗಿ ನಾವು ಆಶ್ಚರ್ಯಪಡಬೇಕಾದುದಿಲ್ಲ. ಮೆಂಬರುಗಳು ತಮ್ಮ ಭಾಗಕ್ಕೆ ಬಂದ ವಿಷಯಗಳನ್ನು ನಡಿಸುವುದರಲ್ಲಿ ಕೆಲಸ ಮಾಡತಕ್ಕವರಾಗಿಯೂ, ಇತರ ಮೆಂಬರುಗಳು ನಡಿಸುವ ಕಾರ್ಯಗಳ ವಿಷಯದಲ್ಲಿ ತಕ್ಕ ಸಲಹೆ ಅಥವಾ ಅಭಿಪ್ರಾಯ ಕೊಡುವವರಾಗಿಯೂ ಇರಬೇಕು. ಈ ರೀತಿ ಸ್ವತಃ ಕೆಲಸ ಮಾಡುವುದು, ಇತರರಿಗೆ ಸಲಹೆ ಕೊಡುವುದು, ಈ ಎರಡೂ ತಮ್ಮ ಕರ್ತವ್ಯವೆಂದು ಭಾವಿಸಿ ಮೆಂಬರುಗಳು ಕೆಲಸದಲ್ಲಿ ಕಾರ್ಯತಃ ಭಾಗಿಗಳಾಗಿರಬೇಕೆಂದು ನಾವು ಮನಃಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ಇದೇ ರೀತಿಯಾದ ಮನೋಭಾವದಿಂದ ಕೆಲಸ ನಡಿಸುತ್ತಾ ಬಂದರೆ ಮೆಂಬರುಗಳು ತಮ್ಮ ಸ್ಥಾನಗಳಿಗೆ ಗೌರವವನ್ನು ತಂದೇ ತರಲಾರರು. ಅಂತಹ ಸೂಚನೆಗಳು ಸ್ವಲ್ಪ ಮಟ್ಟಿಗೆ ಕಂಡುಬರುತ್ತಲಿವೆ. . . . . . .

ವ್ಯವಸಾಯವನ್ನೂ, ವ್ಯಾಪಾರವನ್ನೂ, ವಿದ್ಯಾಭ್ಯಾಸವನ್ನೂ ಅಭಿವೃದ್ಧಿಗೊಳಿಸುವುದಕ್ಕಾಗಿ ಈಗ ಈ ಸಂಸ್ಥಾನದಲ್ಲಿ ಸ್ವತಂತ್ರವಾದ ಅಸೋಸಿಯೇಷನ್‌ಗಳೂ, ಸೊಸೈಟಿಗಳೂ ಅನೇಕವಿರುತ್ತವೆ ಆದರೆ ಇವುಗಳು ಅದೇ ವಿಷಯದಲ್ಲಿ ಇತರ ಸಂಘದವರು ಮಾಡುತ್ತಿರುವ ಕಾರ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಯಥಾಸಾವಕಾಶವಾಗಿ ಕೆಲಸಗಳನ್ನು ಮಾಡುತ್ತಿರುವಂತೆ ಕಾಣುತ್ತದೆ. ಇವುಗಳೆಲ್ಲ ಒಂದೇ ಮಹಾಸಂಘಕ್ಕೆ ಸೇರಿ ಪರಸ್ಪರ ಸಹಾಯದಿಂದ ಕೆಲಸ ಮಾಡುವಂತೆ ಪ್ರೇರಿಸಬೇಕೆಂಬುವುದೇ ನಮ್ಮ ಆಶಯವಾಗಿರಬೇಕು. . . . . . .

59 ಲಕ್ಷ ಪ್ರಜೆಗಳುಳ್ಳ ಈ ಸಂಸ್ಥಾನದ ಜಮೀನ್ ಉತ್ಪತ್ತಿಯ ಒಟ್ಟು ಬೆಲೆಬಾಳುವುದು ಸುಮಾರು 14 ಕೋಟಿ ರೂಪಾಯಿಗಳೆಂದು ಪರಿಗಣಿಸಲಾಗಿದೆ. ಇದರಿಂದ ತಲೆ ಒಂದಕ್ಕೆ ಒಟ್ಟು ವರಮಾನವು 24 ರೂಪಾಯಿ ಆದ ಹಾಗೆ ಆಯಿತು. ನಮ್ಮಲ್ಲಿ ಕೈಗಾರಿಕೆಯಿಂದ ತಯಾರಾಗುವ ಸಾಮಾನುಗಳ ಉತ್ಪತ್ತಿಯೂ, ಇತರ ಕಸುಬುದಾರಿ ಕೆಲಸಗಳ ಉತ್ಪತ್ತಿಯೂ ಸೇರಿ ಸುಮಾರು ಇನ್ನೂ 4 ಕೋಟಿ ರೂಪಾಯಿಗಳಾಗುತ್ತದೆ ಎಂದು ಬೆಲೆ ಕಟ್ಟಲಾಗಿದೆ. ಈ ರೀತಿ ಸಂಸ್ಥಾನದ ಒಟ್ಟು ಉತ್ಪತ್ತಿಯು 18 ಕೋಟಿ ರೂಪಾಯಿಗಳಾಗಿರುತ್ತದೆ; ಎಂದರೆ, ತಲೆಯೊಂದಕ್ಕೆ 31 ರೂಪಾಯಿ ಸಂಪಾದಿಸಿದ ಹಾಗಾಯಿತು. ಯೂರೋಪ್ ದೇಶಗಳಲ್ಲಿ ಈ ಬಾಬುಗಳಿಂದ ಬರುವ ಉತ್ಪತ್ತಿಯ ದರವು ತಲೆಯೊಂದಕ್ಕೆ 300 ರೂಪಾಯಿಯಿಂದ 600 ರೂಪಾಯಿವರೆಗೆ ಆಗುವುದಾಗಿ ಅಂದಾಜು ಮಾಡಲಾಗಿದೆ . . . . . .

ನಮ್ಮ ದೇಶದಲ್ಲಿ ತಲೆಯೊಂದಕ್ಕೆ ಬರುವ ವರಮಾನವು ಸರಾಸರಿಯಾಗಿ ಯೂರೋಪ್ ದೇಶಗಳಲ್ಲಿ ಸದರಿ ಬಾಬುಗಳಿಂದ ತಲೆಯೊಂದಕ್ಕೆ ಬರುವ ವರಮಾನದ 20ನೇ ಒಂದು ಭಾಗಕ್ಕೆ ಕಡಮೆ ಇಲ್ಲದೆಯೂ, 10ನೇ ಒಂದು ಭಾಗಕ್ಕೆ ಹೆಚ್ಚಿಲ್ಲದೆಯೂ ಇರುವ ವರಮಾನವಾಗಿರುತ್ತದೆ. ಆದುದರಿಂದ ಈ ಭಾಗವನ್ನು ವೃದ್ಧಿಗೊಳಿಸುವುದು ಅವಶ್ಯಕವೂ ಆಗಿರುತ್ತದೆ, ಸಾಧ್ಯವೂ ಆಗಿರುತ್ತದೆ ಎಂದು ಇದರಿಂದ ಕೇವಲ ಸಾಮಾನ್ಯವಾಗಿ ಆಲೋಚಿಸುವವರಿಗೂ ಕಂಡುಬರುವುದು. ಈಗಿನ ಉತ್ಪತ್ತಿಯನ್ನು ನಾವು ಸುಮಾರು ಶೇಕಡ 50 ರಷ್ಟು ಹೆಚ್ಚಿಸಿದರೆ ಒಟ್ಟು ಉತ್ಪತ್ತಿಯ ಬೆಲೆಯು 18 ಕೋಟಿಯಿಂದ 27 ಕೋಟಿಗೆ ಹೆಚ್ಚುತ್ತದೆ. ಇದರಿಂದ ಸರಾಸರಿ ಪ್ರಜೆಗಳಲ್ಲಿ ಪ್ರತಿಯೊಬ್ಬನ ಸಂಪಾದನ ಶಕ್ತಿಯು 31 ರೂಪಾಯಿಯಿಂದ 46 ರೂಪಾಯಿಗೆ ಏರುತ್ತದೆ. ಸರಾಸರಿ ವರಮಾನವು ಇಷ್ಟರಮಟ್ಟಿಗೆ ಹೆಚ್ಚಿದರೆ ನಮ್ಮ ಜನಗಳು ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಳ್ಳಲು ಶಕ್ತರಾಗುವರು. ಅಲ್ಲದೆ ಇನ್ನೂ ಜನಗಳ ಬದುಕು ಉತ್ತಮಸ್ಥಿತಿಗೆ ಬರುವುದು. . . .

ಈ ಸಂಸ್ಥಾನದ ಉತ್ಪತ್ತಿಯನ್ನು ಸ್ವಲ್ಪಮಟ್ಟಿಗೆ ಈ ಕೆಳಗೆ ಹೇಳಿರುವ ರೀತಿಯಲ್ಲಿ ಇನ್ನೂ 9 ಕೋಟಿಯ ವರೆಗೆ ಹೆಚ್ಚಿಸಲು ಪ್ರಯತ್ನಪಡಬಹುದಾಗಿರುತ್ತದೆ.

ಸಾಗುವಳಿ ಜಮೀನ್ ವಿಸ್ತೀರ್ಣವನ್ನು ಹೆಚ್ಚಿಸುವುದರಿಂದಲೂ, ಫಲವತ್ತಾಗಿ ಬೇಸಾಯ ಮಾಡುವುದರಿಂದಲೂ, ಈಗಿನ ವ್ಯವಸಾಯದ ವಿಧಾನಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ನಡಿಸುವುದರಿಂದಲೂ	1 ಕೋಟಿ
ನೀರಾವರಿ ಕೆಲಸಗಳನ್ನು ಹೆಚ್ಚಿಸುವುದರಿಂದ	2 ಕೋಟಿ
ಕೈಗಾರಿಕೆಗಳನ್ನೂ, ವ್ಯಾಪಾರವನ್ನೂ ವೃದ್ಧಿಗೊಳಿಸುವುದರಿಂದ	3 ಕೋಟಿ
ಜನಗಳಿಗೆ ತಿಳುವಳಿಕೆ ಕೊಟ್ಟು ಕೌಶಲ್ಯವನ್ನೂ ಉದ್ಯೋಗಶೀಲರಾಗಿರುವ ಪದ್ಧತಿಗಳನ್ನೂ ಗೊತ್ತುಮಾಡಿಕೊಡುವುದರಿಂದ	2 ಕೋಟಿ
ಇತರ ಎಲ್ಲಾ ವಿಧಗಳಿಂದ	1 ಕೋಟಿ

ನಮ್ಮ ದೇಶವು ಮುಖ್ಯವಾಗಿ ವ್ಯವಸಾಯದ ದೇಶವಾಗಿರುತ್ತದೆ ಧಾನ್ಯವನ್ನೂ ಕಚ್ಚಾ ಪದಾರ್ಥಗಳನ್ನೂ ಮಾರತಕ್ಕ ಬರೀ ವ್ಯವಸಾಯವೇ ಆಧಾರವಾಗಿವುಳ್ಳ ದೇಶವು ಯಾವಾಗಲೂ ದರಿದ್ರಾವಸ್ಥೆಯಲ್ಲಿಯೇ ಇರುವುದು ನೀವು ಈ ಸಂಸ್ಥಾನದಲ್ಲಿಯೇ ವ್ಯವಸಾಯಕ್ಕೆ ಬೇಕಾದ ನೇಗಲನ್ನೂ ಅಥವಾ ಕಾಳು ಉದುರಿಸುವ ಯಂತ್ರವನ್ನೂ ತಯಾರ್ ಮಾಡಿದರೆ ನಿಮಗೆ ಬೇಕಾದ ಯಂತ್ರವು ದೊರೆಯುವುದಲ್ಲದೆ, ಅನ್ಯಥಾ ದೇಶಾಂತರಗಳಿಗೆ ನೀವು ಕಳುಹಿಸಬೇಕಾದ ಹಣವನ್ನು ನೀವೇ ಉಳಿಸಿಕೊಳ್ಳಬಹುದು ನಿಮ್ಮ ಜಂಗ್ಲಿ ಸಾಮಾನುಗಳಿಂದ ಕುರ್ಚಿಗಳನ್ನೂ ಬೆಂಚುಗಳನ್ನೂ ದಿವಾನ್‌ಖಾನೆಗೆ ಬೇಕಾದ ಸಾಮಾನುಗಳನ್ನೂ ನೀವು ತಯಾರುಮಾಡುವುದಾದರೆ, ನಿಮಗೆ ನೌಡೆ ಬಿಕರಿಯಿಂದ ಎಷ್ಟು ಉತ್ಪತ್ತಿಯಾಗುತ್ತಿದೆಯೋ ಅದಕ್ಕಿಂತ ತುಂಬಾ ಹೆಚ್ಚಾಗಿ ಹಣಬರುವದು.

ಆದುದರಿಂದ ವ್ಯವಸಾಯ ಕಾರ್ಯವೂ ಸಾಮಾನು ತಯಾರಿ ಕೆಲಸವೂ ಒಂದರೊಡನೆ ಒಂದು ಸಮವಾಗಿ ನಡೆಯಬೇಕು. ಕೈಗಾರಿಕೆ ಕೆಲಸಗಳಿಗೂ ವ್ಯಾಪಾರಪ್ರವರ್ತನೆಗಳಿಗೂ ಅನುಕೂಲವಾದ ಸ್ಥಿತಿಗಳನ್ನು ಕ್ರಮೇಣ ಕಲ್ಪಿಸಬೇಕಾಗುತ್ತವೆ ಸಂಚಾರಕ್ಕೆ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ವಿಶೇಷ ನಿಗಾ ಕೊಡಬೇಕಾಗಿರುತ್ತದೆ. ರೈಲ್ ಮಾರ್ಗಗಳನ್ನೂ ರಸ್ತೆಗಳನ್ನೂ ಹೆಚ್ಚಿಸಬೇಕಲ್ಲದೆ ಹಳ್ಳಿಗಳಿಗೆ ಮಾರ್ಗ. ಇರುವ ಬಂಡಿಜಾಡುಗಳನ್ನೂ ಸರಿಯಾದ ಸ್ಥಿತಿಯಲ್ಲಿ ಕಾಪಾಡಬೇಕು. ಈ ಕಾಲಕ್ಕೆ ತಕ್ಕಹಾಗೆ ಹೋಟೆಲೋ ಅಥವಾ ಛತ್ರವೋ ಯಾವ ಊರಲ್ಲಿಯೋ ಆಗಲಿ ಯಾವ ಗ್ರಾಮದಲ್ಲಿಯೇ ಆಗಲಿ ಇಲ್ಲದೇ ಇರಕೂಡದು. ನಮ್ಮ ಪಟ್ಟಣಗಳಲ್ಲಿರುವ ಪ್ರಜಾಸಂಖ್ಯೆಯು ಒಟ್ಟು ಪ್ರಜಾಸಂಖ್ಯೆಯ ಪತ್ತರ ಹೊಂದು ಭಾಗಕ್ಕಿಂತ ಕಡಮೆಯಾಗಿರುವುದರಿಂದ ಕೈಗಾರಿಕೆ ಕೆಲಸಗಳಿಗೆ ಬೇಕಾಗುವಷ್ಟು ಜನಗಳಿರುವುದಿಲ್ಲವಾಗಿ, ಈ ಸಂಖ್ಯೆಯನ್ನು ಕನಿಷ್ಠಪಕ್ಷ ಇನ್ನೂ ಎರಡರಷ್ಟಾದರೂ ಹೆಚ್ಚಿಸಬೇಕು ಟವನುಗಳಲ್ಲಿ ಬಡಾವಣೆ ಏರ್ಪಾಟುಗಳನ್ನು ಮಾಡಬೇಕು ಮತ್ತು ಮುಂದೆ ಬರತಕ್ಕಂಥ ಪಂಗಾಗಿ ಕಾರ್ಖಾನೆಗಳಿಗೋಸ್ಕರವೂ ಮತ್ತು ಅವುಗಳಿಗೆ ಸಂಬಂಧಪಟ್ಟ ಜನಗಳ ವಾಸಕ್ಕೋಸ್ಕರವೂ ಸ್ಥಳಗಳನ್ನು ಏರ್ಪಡಿಸಬೇಕು ವ್ಯವಸಾಯದ ಉತ್ಪತ್ತಿಗಳಿಗಾಗಿಯೂ, ವ್ಯಾಪಾರದ ಸಾಮಾನುಗಳಿಗಾಗಿಯೂ, ಕೈಗಾರಿಕೆ ಯಂತ್ರ ಮೊದಲಾದವುಗಳನ್ನು ಉಪಯೋಗಿಸತಕ್ಕ ರೀತಿಯನ್ನು ತೋರಿಸುವುದಕ್ಕಾಗಿಯೂ ಪ್ರತಿಯೊಂದು ಟವನಿನಲ್ಲಿ ಒಂದೊಂದು ಪ್ರದರ್ಶನಶಾಲೆ ಇರಬೇಕು ಒಂದು ಪುಸ್ತಕಭಂಡಾರ, ಒಂದು ವಾಚಕಾಲಯ, ಸಂಗತಿಗಳನ್ನು ತಿಳಿದುಕೊಳ್ಳುವದಕ್ಕೆ ಒಂದು ಬೀರು ಯಾನೆ ಸಂಘ ಇವುಗಳು ಅತ್ಯವಶ್ಯಕವಾಗಿರಬೇಕು. ಯಾವ ಟವನಿನಲ್ಲಿಯೂ ಆರು ಬಗೆಯ ಕೈಗಾರಿಕೆ ಕೆಲಸಗಳು ನಡೆಯದೆ ಇರಕೂಡದು. ಯಾವ ಗ್ರಾಮದಲ್ಲಿಯೂ ಒಂದು ಅಥವಾ ಇನ್ನೂ ಹೆಚ್ಚು ತರಹೇ ಹಳ್ಳಿಗಾಡಿನ ಕೈಗಾರಿಕೆಯ ಕೆಲಸಗಳು ನಡೆಯದೇ ಇರಕೂಡದು. . . . . .

ತಮ್ಮ ಪ್ರಜೆಗಳಲ್ಲಿ ಅಭಿವೃದ್ಧಿ ಹೊಂದಬೇಕೆಂಬ ಸ್ವಭಾವವಾದ ಆಸಕ್ತಿ ತಲೆದೋರುವುದಕ್ಕೆ ನ್ಯಾಯವಾದ ರೀತಿಯಲ್ಲಿ ಅವಕಾಶಕೊಡಬೇಕೆಂತಲೂ, ಅವರು ಮುಂದಕ್ಕೆ ಏಳಿಗೆಗೆ ಬರುವಂತೆ ಮಾಡಿಕೊಳ್ಳುವುದಕ್ಕೆ ಬೇಕಾದ ಸೌಕರ್ಯವನ್ನು ಅವರಿಗೆ ಒದಗಿಸಿಕೊಡಬೇಕೆಂತಲೂ ಶ್ರೀಮನ್ ಮಹಾರಾಜರವರು ಕುತೂಹಲವುಳ್ಳವರಾಗಿರುತ್ತಾರೆ ಈ ಉದ್ದೇಶದಿಂದಲೇ ಶ್ರೀಮನ್ ಮಹಾರಾಜರವರು ಈ ಕಾನ್‌ಫರೆನ್ಸನ್ನು ಸ್ಥಾಪಿಸುವುದಕ್ಕೆ ಅನುಗ್ರಹಿಸಿದರು. ಪ್ರಜೆಗಳಿಗೆ ಸರಿಯಾಗಿ ಶಿಕ್ಷಣಕೊಡಬೇಕೆಂಬುವುದು, ಬದುಕಿನಲ್ಲಿ ಅವರ ಈಗಿನ ಸ್ಥಿತಿಯನ್ನು ಉತ್ತಮಸ್ಥಿತಿಗೆ ತರಬೇಕೆಂಬುವುದು, ಅವರು ಮುಂದೆ ಭಾಗ್ಯವಂತರಾಗುವುದಕ್ಕೆ ಸಹಾಯಮಾಡಬೇಕೆಂಬುವುದು, ನಮ್ಮಲ್ಲಿ ಸ್ಕೂಲುಗಳನ್ನು ಹೆಚ್ಚಿಸುವುದು, ಜಮೀನುಗಳನ್ನು ಉತ್ತಮ ರೀತಿಯಲ್ಲಿ ಬೇಸಾಯಕ್ಕೆ ತರುವಂತೆ ಮಾಡುವುದು, ಕಾರ್ಖಾನೆಗಳನ್ನು ಕಲ್ಪಿಸುವುದು, ವ್ಯಾಪಾರವನ್ನು ವೃದ್ಧಿಗೊಳಿಸುವುದು, ಇವುಗಳೇ ಈ ಸಭೆಯ ಮುಖ್ಯೋದ್ದೇಶಗಳಾಗಿರುತ್ತವೆ, ಇದರ ಮೇಲೆ ನಮಗೆ ಮುಂದೆ ಒಳ್ಳೇಕಾಲ ಪ್ರಾಪ್ತವಾಗುವುದೆಂಬ ಭರವಸೆಯೂ ಈ ಸಭೆಯಿಂದ ಉಂಟಾಗುತ್ತದೆ. ಆದುದರಿಂದ ಮೈಸೂರು ದೇಶದ ನಿಜವಾದ ಹಿತಚಿಂತಕರೆಲ್ಲರೂ ಈ ಸಭೆಗೆ ಆದರಪೂರ್ವಕವಾಗಿ ಅವಲಂಬವನ್ನು ಕೊಡಬೇಕೆಂದು ನಾವು ಕೋರುತ್ತೇವೆ.

ಬಳಿಕ ಮ|| ಸಿ. ಕೃಷ್ಣರಾಯರು ವಿದ್ಯಾಶಾಖೆಯ ಕಮಿಟಿಯವರು ಕಳೆದ ಸಾಲಿನಲ್ಲಿ ನಡಿಸಿರುವ ಕಾರ್ಯಗಳನ್ನು ವಿವರಿಸಿ ಒಂದು ರಿಪೋರ್ಟನ್ನು ಓದಿದರು. ತರುವಾಯ ಮ|| ಕೆ. ಸುಬ್ಬರಾಯರು ವ್ಯವಸಾಯ ಶಾಖೆಯ ರಿಪೋರ್ಟನ್ನೂ, ಕಡೆಯಲ್ಲಿ ಮ|| ಸಿ. ರಂಗನಾಥರಾವ್ ಸಾಹೇಬ್‌ರವರು ಕಸಬುಗಳ ಶಾಖೆಯ ರಿಪೋರ್ಟನ್ನೂ ಓದಿ ಹೇಳಿದರು.

ದಿವಾನ್‌ರವರು ಈ ರಿಪೋರ್ಟುಗಳ ವಿಷಯದಲ್ಲಿ ಮೆಂಬರುಗಳೇನಾದರೂ ಮಾತನಾಡಬೇಕೆಂದು ಅಪೇಕ್ಷೆಪಟ್ಟಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದೆಂದು ಸೂಚಿಸಿದರು ; ಆದಕ್ಕೆ ಮ|| ಎಂ. ವೆಂಕಟಕೃಷ್ಣಯ್ಯನವರು ಹೇಳಿದ ಅಭಿಪ್ರಾಯಗಳೇನೆಂದರೆ—ದಿವಾನ್‌ರವರ ಭಾಷಣವನ್ನೂ, ಸೆಕ್ರೆಟರಿಗಳ ರಿಪೋರ್ಟುಗಳನ್ನೂ ಕೇಳುವಾಗ್ಗೆ ನಾವುಗಳೆಲ್ಲಾ ಲಂಡನ್, ಟೋಕಿಯೋ, ಬರ್ಲಿನ್, ನ್ಯೂಯಾರ್ಕ್ ನಗರಗಳಲ್ಲಿರುತ್ತೇವೇನೋ ಎಂಬ ಭ್ರಾಂತಿಯುಂಟಾಗಿತ್ತು. ಈಗ ನಾವು ಮೈಸೂರಿನಲ್ಲಿಯೇ ಇದೇವೆಂದು ನಿಶ್ಚಿತವಾಗಿದೆ. ನಮ್ಮ ಸಂಸ್ಥಾನವು ಈ ಸಮಾಜದ ಕಾರ್ಯಗಳಿಂದ ನಾನಾ ಮುಖಗಳಲ್ಲಿ ಅಭಿವೃದ್ಧಿಹೊಂದುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಎಲ್ಲಾ ಕಡೆಗಳಲ್ಲೂ ಹಳ್ಳಿಗಳಲ್ಲೂ ಕೂಡ ಜನಗಳು ಕಣ್ಣುತೆರೆದು ಅಭಿವೃದ್ಧಿಕಾರ್ಯಗಳನ್ನು ಕುರಿತು ಚಿಂತಿಸುತ್ತಾ, ಆಸಕ್ತಿಯಿಂದ ಕೆಲಸಗಳನ್ನು ನಡಿಸುತ್ತಾ ಬಂದಿದ್ದಾರೆ. ನಾನಾ ಮುಖಗಳಲ್ಲಿ ಬದಲಾವಣೆಗಳುಂಟಾಗಿರುತ್ತವೆ. ಇನ್ನು ಮುಂದೆ ತಮ್ಮ ಧನಗಳನ್ನು ವ್ಯರ್ಥವಾಗಿ ಕಳೆಯದಂತೆ ನಾವುಗಳೆಲ್ಲಾ ನೋಡಿಕೊಳ್ಳಬೇಕು. ನಮ್ಮ ಯೋಗ್ಯತೆ ಮೀರಿ ಖರ್ಚುಮಾಡುವುದನ್ನು ನಿಲ್ಲಿಸಬೇಕು. ಪ್ರಾರಂಭದೆಸೆಯು ಕಳೆದಿದೆ. ಇನ್ನು ಮುಂದಾದರೂ ವ್ಯರ್ಥವಾಗಿ ಕಾಲವನ್ನಾಗಲಿ, ದ್ರವ್ಯವನ್ನಾಗಲಿ ಕಳೆಯದಂತೆ ನೋಡಿಕೊಳ್ಳಬೇಕು. ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರಾರಂಭದಲ್ಲಿ ನಾವು ಬಹಳ ಹಣ ಖರ್ಚು ಮಾಡಿದ್ದು ಈಗ ನಾವು ಅದರ ಫಲವನ್ನು ನೋಡಿ ಸಂತೋಷಪಡುವ ಹಾಗಾಗಿದೆ. ಇದೇ ರೀತಿ ಈ ಸಮಾಜದ ಕಾರ್ಯಗಳಿಗೂ ಇದುವರೆಗೆ ಅಪಾರ ಹಣ ಖರ್ಚಾಗಿರುವುದು. ಮುಂದೆ ಇದನ್ನು ಕಡಮೆ ಮಾಡಬಹುದಾಗಿದೆ. ಈ ಸಮಾಜದ ಕಾರ್ಯಗಳ ವಿಷಯದಲ್ಲಿ ಇದುವರೆಗೆ ಎಲ್ಲರೂ ಸಂಶಯಪಡುತ್ತಿದ್ದರು. ಈಗ ಇದರಿಂದ ಪ್ರಯೋಜನವಾಗಿದೆ ಎಂದು ನಾವೆಲ್ಲಾ ಒಪ್ಪಿಕೊಂಡು, ದಿವಾನ್‌ರವರು ಹೇಳುವಂತೆ ಮುಂದಿನ ಸಾಲಿನಲ್ಲಿ ನಮ್ಮ ಸೀಮೆಯ ಪ್ರಜೆಗಳ ವರಮಾನವು 9 ಕೋಟಿ ರೂಪಾಯಿ ಹೆಚ್ಚಾದೀತೆಂದು ನಂಬಿ ನಿರೀಕ್ಷಿಸುತ್ತೇವೆ. ಇಂಥಾ ದೂರಾಲೋಚನೆಯಿಂದ ಈ ಸಮಾಜವನ್ನು ಸ್ಥಾಪಿಸಿಕೊಟ್ಟದ್ದಕ್ಕಾಗಿ ನಾವುಗಳೂ, ಸಕಲ ಪ್ರಜೆಗಳೂ ನಮ್ಮ ಶ್ರೀಮನ್ ಮಹಾರಾಜರವರಿಗೆ ಅಪರಿಮಿತವಾಗಿ ಕೃತಜ್ಞರಾಗಿರುತ್ತೇವೆ.

ಮ|| ಡಿ. ವೆಂಕಟರಾಮಯ್ಯನವರೂ, ಮ|| ಚಂಗಯ್ಯಶೆಟ್ಟರೂ, ಮ|| ಕೆ. ರಾಮಾನುಜಯ್ಯಂಗಾರ್ರೂ, ಮ|| ಬಸವಯ್ಯನವರೂ, ಮ|| ಸಿ. ಶ್ರೀನಿವಾಸರಾಯರೂ ಪ್ರೈಮರಿ ವಿದ್ಯಾಭ್ಯಾಸವೂ, ಸ್ಕೂಲ್ ಫೈನಲ್ ಮತ್ತು ಇಂಟರ್ ಮಿಡಿಯೆಟ್ ಪರೀಕ್ಷೆಗಳ ಫಲಿತಾಂಶಗಳೂ ತೃಪ್ತಿಕರವಾಗಿಲ್ಲವೆಂದೂ, ಸ್ಟಾಂಡರ್ಡನ್ನು ಹೆಚ್ಚಿಸಿ ವಿದ್ಯಾರ್ಥಿಗಳ ಉತ್ಸಾಹವನ್ನು ಹಾಳುಮಾಡಿ ತಂದೆತಾಯಿಗಳ ಕಷ್ಟನಷ್ಟಗಳನ್ನು ಹೆಚ್ಚಿಸುತ್ತಿದ್ದಾರೆಂದೂ, ಬಲಾತ್ಕಾರದ ವಿದ್ಯಾಭ್ಯಾಸವು ಜಾರಿಗೆ ಇನ್ನೂ ಬಂದಿಲ್ಲವೆಂದೂ, ಸರಿಯಾದ ಉಪಾಧ್ಯಾಯರನ್ನು ಪ್ರಥಮಶಿಕ್ಷಣಕ್ಕೆ ನೇಮಿಸದೆ ಇರೋಇದರಿಂದ ಹುಡುಗರ ವಿದ್ಯಾಭ್ಯಾಸದ ತಳಹದಿಯೇ ಕೆಡುತ್ತಿದೆ ಎಂದೂ ಆಕ್ಷೇಪಣೆಮಾಡಿದರು. ಪ್ಯಾಸಾಗುವವರ ಸಂಖ್ಯೆಯನ್ನು ವೃಥಾ ಹೆಚ್ಚಿಸಿದರೆ ಬಂಗಾರವಾದಂತೆ ವಿದ್ಯೆಗೆ ಪ್ರಾಧಾನ್ಯವುಂಟಾಗುವುದಿಲ್ಲವೆಂದು ಮ|| ಜೆ. ಎಸ್. ಚಕ್ರವರ್ತಿಯವರು ತಿಳಿಸಿದರು. ಮ|| ಎಂ. ಶಾಮರಾಯರು ಪ್ಯಾಸ್‌ಮಾಡಿಸುವ ಅಧಿಕಾರವು ಮದರಾಸ್ ಯೂನಿವರ್ಸಿಟಿಗೆ ಸೇರಿರುವುದರಿಂದ ನಾವು ಅವರು ಹೇಳುವಂತೆ ಕೇಳಬೇಕಾಗಿ ಬಂದಿದೆ ಎಂದು ಹೇಳಿದರು.

ಕಸಬು ಕೈಗಾರಿಕೆಗಳ ವಿಷಯದಲ್ಲಿ ಸಮಾಜದವರು ನಡಿಸಿರುವ ಕಾರ್ಯಗಳನ್ನು ಕುರಿತು ಕೆಲವು ಮೆಂಬರುಗಳು ಆಕ್ಷೇಪಣೆ ಮಾಡಿದರು. ಮ|| ಕೆ. ವಿ. ಪುಟ್ಟಣ್ಣಶೆಟ್ಟರು ಯುದ್ಧದ ದೆಸೆಯಿಂದ ವ್ಯಾಪಾರವು ಲೇವಾದೇವಿಯೂ ರೇಷ್ಮೆ ಕಸಬೂ ತುಂಬಾ ಹೀನಸ್ಥಿತಿಗೆ ಬಂದಿವೆ ಎಂದೂ, ಸಣ್ಣ ಕಸಬುಗಳನ್ನು ಪ್ರಾರಂಭಿಸಬೇಕೆಂದೂ, ಹಣ್ಣುಹಂಪಲನ್ನು ಬೆಳೆಯುವುದರಿಂದ ವಿಶೇಷ ಲಾಭವುಂಟಾದ ಕಾರಣ ರೈತರಿಗೆ ಈ ಭಾಗದಲ್ಲಿ ಸರ್ಕಾರದವರು ಸಹಾಯ ಪ್ರೋತ್ಸಾಹಗಳನ್ನು ಒದಗಿಸಬೇಕೆಂದೂ ಹೇಳಿದರು. ಮ|| ಸಿ. ಶ್ರೀನಿವಾಸರಾಯರು ರೇಷ್ಮೆ ಕಸಬಿನ ನಿಪುಣನನ್ನು ಕರಸಿದ್ದರಿಂದ ಆತನು ನಮ್ಮ ದೇಶೀಯರಿಗೆ ಹೊಸ ವಿಷಯಗಳೇನೂ ಹೇಳಿಕೊಡಲಿಲ್ಲವೆಂದೂ, ಕಸಬಿನ ಗುಟ್ಟುಗಳನ್ನು ತಿಳಿಸಿ ಕಲಿಸಿಕೊಡತಕ್ಕವರನ್ನು ಕರಸಿ ನೇಮಿಸಿದರೆ ಪ್ರಯೋಜನವಾದೀತೆಂದೂ ಸೂಚಿಸಿದರು. ಮ|| ಎ. ಚಾಟರ್‌ಟನ್ ರವರು ರೇಷ್ಮೆ ಕಸಬು ತಮ್ಮ ಮೇಲ್ವಿಚಾರಣೆಯಲ್ಲಿದ್ದಾಗ ಚೆನ್ನಾಗಿದ್ದು, ಈಚೆಗೆ 18 ತಿಂಗಳಿಂದ ಹೀನಸ್ಥಿತಿಗೆ ಬಂದಿರುವುದೆಂದು ಸೂಚಿಸಿದ್ದಕ್ಕೆ ಪ್ರತಿಯಾಗಿ ಮಿ|| ಅಬ್ದುಲ್ ಮುದ್ದೂಸ್ ರವರು ಈಗ ಈ ಕಸಬು ಎಷ್ಟೋ ಚೆನ್ನಾಗಿ ನಡೆಯುತ್ತಿದೆ ಎಂದೂ, ಮೊದಲು ಕೆಟ್ಟುಹೋಗಿತ್ತೆಂದೂ ಜವಾಬು ಹೇಳಿ, ತಯಾರಾಗಿದ್ದ ರಂಗುವಾರು ರೇಷ್ಮೆ ದಾರದ ಲಡಿಗಳನ್ನೂ, ರೇಷ್ಮೆ ಬಟ್ಟೆಯನ್ನೂ ಸಭೆಯಲ್ಲಿ ಹಾಜರು ಮಾಡಿ ತೋರಿಸಿದರು. ಸೆಕ್ರೆಟರಿ ಮ|| ಕೆ. ಸುಬ್ಬರಾಯರು ರೇಷ್ಮೆಯ ಪರೀಕ್ಷಾರ್ಥವಾದ ಫಾರಂಗಳಿಗೆ ಪ್ರಾರಂಭದೆಸೆಯಲ್ಲಿ ಸ್ವಲ್ಪ ಹೆಚ್ಚು ಹಣ ಖರ್ಚಾಗಿದ್ದಾದರೂ ಅವೆಲ್ಲಾ ವ್ಯರ್ಥವಾದ ಖರ್ಚೆಂದು ಹೇಳಲಾಗದೆಂದೂ, ಈ ಕಸಬನ್ನು ಇನ್ನು ಮುಂದೆ ಅಭಿವೃದ್ಧಿಗೆ ಬರುವಂತೆ ಮಾಡಬಹುದೆಂದೂ ಹೇಳಿದರು.

ಬಳಿಕ ವಿಷಯಗಳ ಚರ್ಚೆ ಪ್ರಾರಂಭವಾಗಿ ಸ್ವಲ್ಪ ದೂರ ನಡೆದ ಮೇಲೆ ಮೊದಲನೇ ದಿನದ ಸಭೆ ಮುಕ್ತಾಯವಾಯಿತು

ಸರ್ ವ್ಯಾಲೆಂಟೈನ್ ಚಿರೋಲ್ ಎಂಬ ಪ್ರಸಿದ್ಧ ಬಾತ್ಮೀದಾರನು ಸುಮಾರು ಐದು ವರುಷಗಳ ಹಿಂದೆ ಸೀಮೆಯಿಂದ ಹಿಂದುಸ್ಥಾನಕ್ಕೆ ಬಂದು ಈ ದೇಶದ ಪ್ರಾಂತ್ಯಗಳನ್ನೆಲ್ಲಾ ಸಂಚಾರಮಾಡಿ, ಪ್ರಜೆಗಳಲ್ಲಿ ಆಗ್ಗೆ ಗವರ್ನಮೆಂಟಿನವರ ಮೇಲೆ ಉಂಟಾಗಿದ್ದ ರಾಜಕೀಯ ವಿಷಯವಾದ ಅಸಮಾಧಾನಕ್ಕೆ ಕಾರಣಾದಿಗಳನ್ನು ವಿಚಾರಿಸಿಕೊಂಡು ಸೀಮೆಗೆ ವಾಪಸು ಹೋಗಿ ಈ ವಿಷಯವನ್ನು ಕುರಿತು ಲಂಡನ್ ಟೈಮ್ಸ್ ಎಂಬ ಪತ್ರಿಕೆಯೊಳಗೆ 8-10 ಬಾತ್ಮಿಗಳನ್ನು ಬರೆದು, ಅವುಗಳನ್ನೆಲ್ಲಾ ಸೇರಿಸಿ ಒಂದು ಪುಸ್ತಕರೂಪದಲ್ಲಿ ಪ್ರಕಟಮಾಡಿದನು. ಆಗ್ಗೆ ಪೂನಾ ಪಟ್ಟಣದ ಮ|| ಬಾಲಗಂಗಾಧರ ತಿಲಕರವರು ಬರ್ಮಾದಲ್ಲಿ ಸಜಾ ಶಿಕ್ಷೆಯನ್ನನುಭವಿಸುತ್ತಿದ್ದರು. ಈಗ ಅವರಿಗೆ ಬಿಡುಗಡೆಯಾಗಿದ್ದು, ಅವರು ಆ ಪುಸ್ತಕದ ಬರವಣಿಗೆಯನ್ನು ನೋಡಿ ಅದರಲ್ಲಿ ಆ ಬಾತ್ಮಿದಾರನು ತಮಗೆ ಅಪಮಾನಕರವಾದ ಸಂಗತಿಗಳನ್ನು ಬರೆದಿರುತ್ತಾನೆಂದೂ ಆತನು ತಕ್ಕ ಹಾಗೆ ಕ್ಷಮಾಪಣೆ ಬೇಡದಿದ್ದರೆ ಆತನ ಮೇಲೆ ಮಾನನಷ್ಟದ ಮೊಕದ್ದಮೆ ತರುತ್ತೇವೆಂದೂ ಇಂಗ್ಲೆಂಡಿನಲ್ಲಿರುವ ಆತನಿಗೆ ಲಾಯರ್ ಮೂಲಕ ನೋಟಿಸ್ ಕೊಡಿಸಿದ್ದಾರೆ.

* * *

ಹಿಂದುಸ್ಥಾನದಲ್ಲಿ ಯಾತ್ರೆ ತೀರ್ಥಕ್ಷೇತ್ರಗಳೂ, ಅವುಗಳಿಗೆ ಹೋಗಿಬರತಕ್ಕ ಪ್ರಜೆಗಳೂ ಬಹಳ ಹೆಚ್ಚು. ಅಂಥಾ ಸ್ಥಳಗಳಲ್ಲಿ ಜನಗಳು ಸೇರುವಾಗ್ಗೆ ಅವರಿಗೆ ನಾನಾ ಕಷ್ಟನಷ್ಟಗಳು ಸಂಭವಿಸುವುದೇನೂ ಅಪರೂಪವಲ್ಲ. ಇದಕ್ಕಾಗಿ ಪ್ರಯಾಣಿಕರ ಸಹಾಯ ಸಂಘ ಎಂಬ ಪರಹಿತ ಸಂಘವು ಏರ್ಪಟ್ಟಾಗಿ, ಈ ಸಂಘಕ್ಕೆ ಅನೇಕ ದೇಶ ಹಿತೈಷಿಗಳು ಮೆಂಬರುಗಳಾಗಿ ಸೇರಿಕೊಂಡು ದೇಶಸೇವಕರೆಂಬ ಹೆಸರಿಟ್ಟುಕೊಂಡಿದ್ದಾರೆ. ಈ ಸಂಘದ ಮೆಂಬರುಗಳು ಯಾರಿಂದಲೂ ಯಾವುದೊಂದು ಪ್ರತಿಫಲವನ್ನೂ ಅಪೇಕ್ಷಿಸದೆ ಯಾತ್ರಾಸ್ಥಳಗಳಿಗೆ ಮೊದಲೇ ಹೋಗಿ ಪರಸ್ಥಳಗಳಿಂದ ಬರತಕ್ಕ ಯಾತ್ರಿಕರಿಗೆ ಆಪ್ತಬಂಧುಗಳಾಗಿದ್ದು ಅವರಿಗೆ ಬೇಕಾಗುವ ಸಹಾಯವನ್ನೆಲ್ಲಾ ಮಾಡಿ ವಾಪಸು ಕಳುಹಿಸುವರು. ದಕ್ಷಿಣ ದೇಶದಲ್ಲಿ ಇನ್ನು ಮುಂದೆ ಹಲವು ಜಾತ್ರೆಗಳೂ ಉತ್ಸವಾದಿಗಳೂ ನಡೆಯೋಣದರಿಂದ ಈ ದೇಶ ಸೇವಕರು ಮುಂದೆ ಹೇಳುವ ಸ್ಥಳಗಳಿಗೆ ಹೊರಡುವವರಾಗಿದ್ದಾರೆ —ಮಧುರೆ, ಅಳಗರಕೋವಿಲು, ತಿರುಪ್ಪರಂಕುಂಡ್ರಂ, ರಾಮೇಶ್ವರ, ಧನುಷ್ಕೋಟಿ, ತಿರುಚ್ಚೆಂದೂರು, ಪಳ್ನಿ, ಶ್ರೀರಂಗ, ಕುಂಭಕೋಣ, ಚಿದಂಬರ, ತಿರುವಣ್ಣಾಮಲಾಯಿ ; ಉಡುಪಿ, ತಿರುಪತಿ, ಕಾಳಹಸ್ತಿ, ನಾಗೂರು, ವೇಳಂಗಣ್ಣಿ.

ಒಂದು ಸ್ಕೂಲಿನ ಒಳ್ಳೇ ಸ್ಥಿತಿ.

ತುಮಕೂರು ತಾಲ್ಲೂಕು ಗೂಳೂರು ವೆಸ್ಲಿಯನ್ ಮಿಷನ್ ಬಾಯ್ಸ್ ಸ್ಕೂಲ್ ಈ ಗ್ರಾಮವು ಭಾರೀ ಹೋಬಳಿಯಾಗಿಯೂ, ಸುಮಾರು 400-500 ಮನೆ 2-3 ಸಾವಿರ ಪ್ರಜಾ ಸಂಖ್ಯೆಗಳೂ ಮೇಲ್ಪಟ್ಟು ಬೇರೆಬೇರೆ ಜನಾಂಗವುಳ್ಳ ಯೂನಿಯನ್ ಗ್ರಾಮವಾಗಿಯೂ ಇರುತ್ತೆ. ಇಲ್ಲಿನ ವೆಸ್ಲಿಯನ್ ಮಿಷನ್ ಬಾಯ್ಸ್ ಸ್ಕೂಲ್ ಸ್ಥಾಪಿತವಾಗಿ ಸುಮಾರು 50-60 ವರ್ಷಗಳಿಗೆ ಮೇಲ್ಪಟ್ಟಿದ್ದರೂ ಹಿಂದಿದ್ದ ಉಪಾಧ್ಯಾಯರ ಕಾಲದಲ್ಲಿ ಲೋವರ್ ಸೆಕೆಂಡರೀ ತರಗತಿ ಸಹ ಇಲ್ಲದೆ ಬಹು ಮಂದಿ ವಿದ್ಯಾರ್ಥಿಗಳು ಪರಸ್ಥಳಗಳಿಗೆ ಹೋಗಿ ವ್ಯಾಸಂಗಮಾಡಬೇಕಾದ ಸಂಭವವಿತ್ತು. ಹೀಗಿರುವಲ್ಲಿ 1906 ನೇ ಇಸ್ವಿಯಲ್ಲಿ ಮ|| ಶ. ತಿಮ್ಮಪ್ಪರಾಯಪ್ಪನವರು ಈ ಸ್ಕೂಲಿಗೆ ಹೆಡ್ ಮಾಸ್ಟರಾಗಿ ಬಂದರು. ಇವರು ಬಂದ ಕೊಂಚಕಾಲದಲ್ಲಿಯೇ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಮಟ್ಟಿಗೆ ಹೆಚ್ಚಿರುವುದರಲ್ಲದೆ ಅಂದಿನಿಂದ ಇವರು ಪ್ರತಿ ವರ್ಷದಲ್ಲಿಯೂ ಲೋವರ್ ಸೆಕೆಂಡರೀ ಪರೀಕ್ಷೆಗೆ ಕಳುಹಿಸಿಕೊಟ್ಟ ವಿದ್ಯಾರ್ಥಿಗಳೆಲ್ಲರೂ ಉತ್ತೀರ್ಣರಾಗಿ ಬರುತ್ತಿರುವುದು ತುಂಬಾ ಆಶ್ಚರ್ಯವಾಗಿರುವುದಲ್ಲದೆ ಸುತ್ತುಮುತ್ತಲಿನ ಗ್ರಾಮಗಳಿಂದಲೂ ಬಹು ಮಂದಿ ವಿದ್ಯಾರ್ಥಿಗಳು ಈ ಸ್ಕೂಲಿಗೆ ಬಂದು ಸೇರುತ್ತಿರುವುದು ತುಂಬಾ ಸ್ತೋತ್ರಾರ್ಹವಾಗಿದೆ ಇದರಂತೆಯೇ ಈ ವರುಷವೂ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದ 6 ಮಂದಿ ವಿದ್ಯಾರ್ಥಿಗಳೂ ಪಾಸಾಗಿ ಒಬ್ಬನು ಮೊದಲನೆ ತರಗತಿಯಲ್ಲಿ ಉತ್ತೀರ್ಣನಾಗಿರುವುದು ತುಂಬಾ ಶ್ಲಾಘನೀಯವಾಗಿದೆ. ಇದಲ್ಲದೆ ವಿದ್ಯಾರ್ಥಿಗಳನ್ನು ಒಲಿಸಿಕೊಂಡು, ತಮ್ಮ ವಿದ್ಯಾಭ್ಯಾಸದ ಕೆಲಸಕ್ಕೆ ಅನುಕೂಲರನ್ನಾಗಿಮಾಡಿಕೊಳ್ಳತಕ್ಕ ಸಾಮರ್ಥ್ಯವೂ, ಸಹಜವಾದ ಅನುರಾಗವೂ, ನಿಷ್ಪಕ್ಷಪಾತವಾದ ಬೋಧನೆಯೂ, ವಿದ್ಯಾರ್ಥಿಗಳಲ್ಲಿ ಪುತ್ರನಿರ್ವಿಶೇಷವಾದ ಪ್ರೇಮವೂ ಉಪಾಧ್ಯಾಯರಲ್ಲಿ ಇದ್ದ ಹೊರತು ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ ತಾದಾತ್ಮ್ಯ ಉಂಟಾಗಲಾರದು ಈ ಗುಣಗಳೆಲ್ಲವೂ ಈ ಹೆಡ್ ಮಾಸ್ಟರವರಲ್ಲಿ ರೂಢಮೂಲವಾಗಿರುವುದರಿಂದಲೇ ಇವರಲ್ಲಿ ಅನೇಕರು ವಿದ್ಯಾಭ್ಯಾಸಮಾಡಿ ಮಹತ್ಪ್ರಯೋಜನವನ್ನು ಪಡೆದಿರುವರು.

ಜಿ. ವಿ. ಎಸ್.

ಇಂಡಿಯಾ ದೇಶದ ವೃತ್ತಾಂತಗಳು.

ವೆಂಟಕೋಟಾ ಎಂಬ ಹಡಗಿನಲ್ಲಿ ಯುದ್ಧಭೂಮಿಯಿಂದ 116 ಮಂದಿ ಯೂರೋಪಿಯನ್ ಮತ್ತು ಹಿಂದುಸ್ಥಾನದ ಗಾಯಪಟ್ಟ ಸೈನಿಕರು ಕಳೆದ ವಾರ ಬೊಂಬಾಯಿಗೆ ಬಂದಿಳಿದರು.

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಿಕ್ತಿಲಾದಲ್ಲಿ ಮಾಂಗ್‌ಮಿ ಎಂಬೊಬ್ಬ ಬರ್ಮಾ ಸಬ್ ಇನ್‌ಸ್ಪೆಕ್ಟರು ಲಂಚ ತೆಗೆದುಕೊಂಡನೆಂದು ಅವನಿಗೆ ಎರಡು ವರುಷ ಬಂಕೋಲ್ ಶಿಕ್ಷೆ ವಿಧಿಸಲ್ಪಟ್ಟಿತು.

ಹಿಂದುಸ್ಥಾನದ ಸಾರ್ವಜನಿಕ (ನ್ಯಾಷನಲ್ ಕಾಂಗ್ರೆಸ್) ರಾಜಕೀಯ ಮಹಾಸಭೆಯನ್ನು ಈ ಸಲ ಡಿಸೆಂಬರಿನಲ್ಲಿ ಬೊಂಬಾಯಿ ಪಟ್ಟಣದಲ್ಲಿ ನಡೆಯುವಂತೆ ತೀರ್ಮಾನವಾಗಿ ಅದಕ್ಕಾಗಿ ಏರ್ಪಾಡುಗಳು ನಡೆಯುತ್ತಿರುವವು.

ಹಿಂದುಸ್ಥಾನದ ಕೂಲಿ ಆಳುಗಳಿಗೆ ವಸೋಪನಿವೇಶದಲ್ಲಿ ಜೀವನ ಸಿಕ್ಕುವುದು ತುಂಬಾ ಪ್ರಯಾಸವಾಗಿದೆಯೆಂದೂ, ಅಲ್ಲಿ ಪ್ಲಾಂಟರುಗಳು ಯುದ್ಧದ ದೆಸೆಯಿಂದ ವ್ಯವಸಾಯ ಕಾರ್ಯಗಳನ್ನು ಬಹಳಮಟ್ಟಿಗೆ ಕಡಿತ ಮಾಡಿರುವರೆಂದೂ ಸರಕಾರದವರು ಪ್ರಕಟಿಸಿರುತ್ತಾರೆ

ಜೋಧಪುರದ ಮಹಾರಾಜರವರು ಯುದ್ಧಭೂಮಿಯಿಂದ ಕಳೆದ ವಾರ ಬೊಂಬಾಯಿಗೆ ಬಂದಿಳಿದರು. ಬೊಂಬಾಯಿಯ ಅನೇಕ ದೊಡ್ಡ ಮನುಷ್ಯರೂ, ಮಹಾರಾಜರವರ ಅನೇಕ ಪ್ರಜೆಗಳೂ ಅಪೋಲೊಬಂದರದಲ್ಲಿ ಕಾದಿದ್ದು ಅವರನ್ನು ಅತ್ಯಂತ ಆನಂದದಿಂದ ಎದುರುಗೊಂಡರು.

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿರುವ ಅಟ್ಟಾಕ್ ಡಿಸ್ಟ್ರಿಕ್ಟಿನಲ್ಲಿ ಒಂದು ಕಂಪನಿಯು ಪ್ರಾರಂಭವಾಗಿ ಭೂಮಿಯನ್ನು ಕೊರೆದು ಸೀಮೆಯೆಣ್ಣೆ (ದೀಪದ ಎಣ್ಣೆ) ಯನ್ನು ತೆಗೆಯಬೇಕೆಂದು ಪ್ರಯಾಸಪಡುತ್ತಿದಾರೆ. ಕೆಲವು ಕಡೆ ಎಣ್ಣೆ ಸಿಕ್ಕುತ್ತೆಂಬ ಈಗ ನಡೆದಿರುವ ಪ್ರಯತ್ನಗಳಲ್ಲಿ ಕಂಡುಬಂದಿರುವುದು.

ಪೊಂಚ್ ಸಂಸ್ಥಾನದ ರಾಜರವರು ಹಿಂದುಸ್ಥಾನದ ಸೈನಿಕರಿಗೆ ಯುದ್ಧಭೂಮಿಯಲ್ಲಿ ಉಪಯೋಗವಾಗುವಂಥಾ ಮೋಟರ್ ಅಂಬ್ಯುಲೆನ್ಸನ್ನು ಸಿದ್ಧಪಡಿಸಿ ಒದಗಿಸುವುದಕ್ಕೆಂದು 20,000 ರೂಪಾಯಿ ಕೊಟ್ಟಿದ್ದನ್ನು ಇಂಡಿಯಾ ಗವರ್ನ್‌ಮೆಂಟಿನವರು ಅಂಗೀಕರಿಸಿ ಆ ರಾಜರ ಔದಾರ್ಯವನ್ನು ಸಂತೋಷದಿಂದ ವಂದಿಸಿದಾರೆ.

ಪಂಜಾಬ್ ಅಧಿಕಾರದಲ್ಲಿರುವ ತಮಾಷೆ ಬಂಗಲೆ (ಮ್ಯೂಜಿಯಂ) ಗಳ ಅಧ್ಯಕ್ಷರುಗಳೆಲ್ಲಾ ಮುಂದಿನ ಡಿಸೆಂಬರಿನಲ್ಲಿ ಲಾಹೋರ್ ಪಟ್ಟಣದೊಳಗೆ ಸಭೆ ಸೇರಿ, ಆ ಪ್ರದರ್ಶನಶಾಲೆಗಳನ್ನು ಅಭಿವೃದ್ಧಿಪಡಿಸುವ ಮಾರ್ಗಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಈ ಮಹಾ ಸಭೆಯ ಖರ್ಚಿಗೆ ಸರ್ಕಾರದವರೂ ಕೆಲವು ದ್ರವ್ಯವನ್ನು ಒದಗಿಸುವುದಾಗಿ ತಿಳಿಸಿರುವರು.

ಜರ್ಮನಿಯ ಬ್ಯಾರನ್ ವಾನ್ ಟೋರಿಯೇ ಎಂಬ ಒಬ್ಬ ದೊಡ್ಡ ವಂಶೀಕನು ಬ್ರಿಟಿಷ್ ಸರ್ಕಾರದವರಿಗೆ ಪ್ರಮಾಣ ಮಾಡಿಕೊಟ್ಟು ರಂಗೂನ್ ಪಟ್ಟಣದಲ್ಲಿ ವಿಸ್ತಾರವಾದ ರಬ್ಬರ್ ತೋಟಗಳನ್ನು ಮಾಡಿಕೊಂಡಿದ್ದನು. ಇಂಡಿಯಾ ಗವರ್ನ್‌ಮೆಂಟಿನವರು ಆತನನ್ನು ಅಹಮದ್‌ನಗರದಲ್ಲಿ ಇಡಬೇಕೆಂದು ಕಲ್ಕತ್ತೆಯ ಮಾರ್ಗವಾಗಿ ಕರೆದುಕೊಂಡು ಬರುತ್ತಿದಾರೆ.

ಬೊಂಬಾಯಿ ಪಟ್ಟಣದಲ್ಲಿ ಲೌಜಿ ಪೆಸ್ತೊನ್‌ಜಿ ಮೋತಿವಾಲಾ ಎಂಬೊಬ್ಬ ಪಾರಸೀ ಯುವಕನು ಪೋಸ್ಟ್ ಆಫೀಸಿನಲ್ಲಿ ನೌಕರನಾಗಿದ್ದು 4,000 ರೂಪಾಯಿನ ಛೆಕ್ಕು ಇದ್ದ ರೆಜಿಸ್ಟರ್ ಲಕೋಟೆಯನ್ನು ಅಪಹರಿಸಿ, ಆ ಛೆಕ್ಕನ್ನು ಒಬ್ಬ ಹುಡುಗನ ಕೈಗೆ ಕೊಟ್ಟು ಬ್ಯಾಂಕಿಗೆ ಕಳುಹಿಸಿದನು. ಬ್ಯಾಂಕಿನವರು ಅದರ ರೂಪಾಯನ್ನು ಒಪ್ಪದೆ ಹಿಂತಿರುಗಿಸಲಿಲ್ಲ. ಬಳಿಕ ಆ ನೌಕರನನ್ನು ಹಿಡಿದು ಮೊಕದ್ದಮೆ ಮಾಡಿದಾರೆ.

ಕಳೆದ ತಾ. 12 ಕ್ಕೆ ಅಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು 2,482 ಜನರಿಗೆ ಪ್ಲೇಗ್ ಉಪದ್ರ ತಗಲಿ, 2,183 ಮರಣಗಳಾಗಿರುತ್ತವೆ. ಬೇರೆ ಬೇರೆ ಅಧಿಪತ್ಯಗಳಲ್ಲಾದ ಮರಣಗಳೆಷ್ಟೆಂದರೆ—ಬೊಂಬಾಯಿ 215, ಬೀಹಾರ್ ಮತ್ತು ಒರಿಸ್ಸಾ 15, ಸಂಯುಕ್ತ ಅಧಿಪತ್ಯಗಳು 38, ಪಂಜಾಬ್ 1,818, ಬರ್ಮಾ 41. ಮದರಾಸ್, ಬಂಗಾಳಾ, ಮಧ್ಯಪ್ರಾಂತ್ಯಗಳಲ್ಲಿ ಪ್ಲೇಗ್ ಮರಣವೇನೂ ಆಗಲಿಲ್ಲ.

ಕಲ್ಕತ್ತಾ ಪಟ್ಟಣದಲ್ಲಿರುವ ಮೌಲ್ವಿ ಲಿಯಾಕತ್‌ಹುಸ್ಸೇನ್ ಎಂಬ ಮಹಮದೀಯನಿಗೆ ಪೊಲೀಸ್ ಕಮಿಷನರವರು ನೋಟೀಸ್ ಕೊಟ್ಟು ಈ ತಿಂಗಳ 24 ನೇ ತಾರೀಖಿನಿಂದ ಒಂದು ವರುಷ ಕಾಲ ಯಾವ ಸ್ಥಳದಲ್ಲೂ ಉಪನ್ಯಾಸಗಳನ್ನು ಮಾಡಕೂಡದೆಂದು ನಿರ್ಬಂಧ ಪಡಿಸಿದಾರೆ. ಹೋದ ವರುಷವೂ ಇದೇ ರೀತಿ ನುಸಿಮ್ ಕೊಟ್ಟು ಆತನ ಮೇಲೆ ವಾಗ್ಬಂಧನೆಯನ್ನು ಮಾಡಿದ್ದರು. ಆತನು ಮಾಡುವ ಉಪನ್ಯಾಸಗಳ ದೆಸೆಯಿಂದ ಪ್ರಜೆಗಳು ದುಷ್ಕಾರ್ಯಗಳನ್ನು ಮಾಡುವಂತಾದೀತೆಂದೂ, ಸರ್ಕಾರದವರ ಮೇಲೆ ತಿರುಗಿ ಬೀಳುವರೆಂದೂ ಸಂಶಯವುಂಟಾಗಿರುತ್ತದೆ.

ಅಮೃತಸಾರ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ಒಂದು ಘೋರವಾದ ದರೋಡೆಯು ನಡೆದಿರುವಂತೆ ತಿಳಿದುಬಂದಿದೆ ಕಳೆದ ಶನಿವಾರ 40 ಮಂದಿ ಆಯುಧಪಾಣಿಗಳಾದ ಕಳ್ಳರು ಅಮೃತಸಾರ-ಪಾಕ್‌ಡಿಯಾಲಾ ರೈಲ್ವೆ ಲೈನಿನಲ್ಲಿ ರೈಲ್ವೆ ಸೇತುವೆ ಮೇಲಿಹ ಮಿಲ್ಟೇರಿ ಠಾಣ್ಯಕ್ಕೆ ಮುತ್ತಿಗೆ ಹಾಕಿ, ಅಲ್ಲಿದ್ದ ಸಂತ್ರಿಯನ್ನು ಕೊಂದು, ಸಂತ್ರಿಗಳಿಬ್ಬರನ್ನು ಹೊಡೆದು ಗಾಯಮಾಡಿದರು. ಹವಿಲ್ದಾರನು ಏನಾದನೋ ತಿಳಿಯಲಿಲ್ಲ. ಕಳ್ಳರು ಆರು ಬಂದೂಕುಗಳನ್ನೂ, ಎರಡು ಸನೀನುಗಳನ್ನೂ, 23 ತೋಟಾಗಳನ್ನೂ ಎತ್ತಿಕೊಂಡು ಹೋದರು. ಈಚೆಗೆ ಇವರಲ್ಲಿ ಕೆಲವರು ಸಿಕ್ಕಿಬಿದ್ದಿದಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮೈಮನ್‌ಸಿಂಗ್, ಸಿಲ್ಹಟ್, ಕೇಚಾರ್, ಈ ಮೊದಲಾದ ಪೂರ್ವ ಡಿಸ್ಟ್ರಿಕ್ಟುಗಳಲ್ಲಿ ಕಳೆದ ಎರಡು ವಾರಗಳಿಂದ ಅತಿಸ್ಥಿರವಾಗಿ ಅಪಾರ ಮಳೆ ಸುರಿದು ರಸ್ತೆಗಳು, ರೈಲ್ ಮಾರ್ಗಗಳು, ಅನೇಕ ಕಟ್ಟಡಗಳು, ತಂತೀ ಕಂಭಗಳು, ಬಡಬಗ್ಗರ ಮನೆಗಳು, ಸೇತುವೆಗಳು, ಅನೇಕವಾಗಿ ಕೊಚ್ಚಿಹೋದದ್ದಲ್ಲದೆ ಪ್ರವಾಹಗಳು ಜಮೀನುಗಳ ಮೇಲೆ ಹೊರಳಿ ಅನೇಕ ಸಾವಿರ ರೂಪಾಯಿನ ಬೆಳೆಗಳು ನಾಶವಾದವು. ರಾತ್ರಿಹೊತ್ತು ರೈಲ್ ಗಾಡಿ ಬಿಡುವುದನ್ನು ಸದ್ಯ ನಿಲ್ಲಿಸಿರುತ್ತಾರೆ. ಇದುವರೆಗೆ ಪ್ರಾಣನಷ್ಟವೇನೂ ಆಗಲಿಲ್ಲವೆಂದು ತಿಳಿಸಲಾಗಿದೆ.

ವಿದೇಶದ ವೃತ್ತಾಂತಗಳು.

ಹಿಂದಿನ ವಾರ ಲಂಡನ್ ಪಟ್ಟಣದಲ್ಲಿ ಒಂದು ಕಾರ್ಖಾನೆಗೆ ಬೆಂಕಿಬಿದ್ದು 300 ಮಿಲಿಟರಿ ಮೋಟರ್ ಗಾಡಿಗಳೂ, 100 ಅಂಬ್ಯುಲೆನ್ಸ್ ಮೋಟರುಗಳೂ ಉರಿದುಹೋದವು.

ಲಿವರ್‌ಪೂಲ್ ಪಟ್ಟಣದ ಒಂದು ಉಗ್ರಾಣದಲ್ಲಿ ಅಪಾರವಾದ ಹತ್ತಿ ಬಟ್ಟೆಗಳನ್ನೂ ಹತ್ತಿಯ ಗಟ್ಟಾಗಳನ್ನೂ ಭರ್ತಿ ಮಾಡಿದ್ದರು. ಆ ಉಗ್ರಾಣಕ್ಕೆ ಬೆಂಕಿ ಬಿದ್ದು ಹನ್ನೆರಡು ಗಂಟೆಗಳ ತನಕ ಎಲ್ಲಾ ಉರಿದುಹೋಗಿ ಹಾನಿಯಾಗಿ ಅನೇಕ ಸಾವಿರ ದ್ರವ್ಯ ನಷ್ಟವಾಗಿರುತ್ತದೆ.

ಇಂಗ್ಲೆಂಡಿನಲ್ಲಿ ಮದ್ಯಗಳ ಬಿಕರಿ ಮುಂತಾದ್ದನ್ನು ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವುದಕ್ಕೂ, ಯಾವಾಗ ಎಲ್ಲೆಲ್ಲಿ ಬಿಕರಿ ಮಾಡಬೇಕೋ, ಅದ್ದಿ ಮಾಡಬೇಕೋ ಎಂಬುವುದನ್ನು ಕ್ರಮಪಡಿಸುವುದಕ್ಕೂ ಸರ್ಕಾರದವರು ಒಂದು ಪಂಚಾಯತಿಯನ್ನು ನೇಮಕ ಮಾಡಿದಾರೆ.

ಯುದ್ಧದ ದೆಸೆಯಿಂದ ದಕ್ಷಿಣ ಆಫ್ರಿಕಾದಲ್ಲಿ ವಜ್ರಗಳನ್ನು ಗಣಿಗಳಿಂದ ತೆಗೆಯುವ ಕಸಬು ಹೀನಸ್ಥಿತಿಗೆ ಬಂದಿದೆ ಯುದ್ಧಕ್ಕೆ ಮೊದಲು 1,13,89,600 ಪೌಂಡುಗಳ ಬೆಲೆಯಾಗುವಷ್ಟು ವಜ್ರಗಳನ್ನು ಗಣಿಗಳಿಂದ ತೆಗೆಯುತ್ತಿದ್ದರು; ಈಗ 54,87,200 ಪೌಂಡುಗಳಷ್ಟಕ್ಕೆ ಇಳಿಯಿತು.

ಗ್ರೇಟ್ ಬ್ರಿಟನ್ನಲ್ಲಿ ಹಡಗುಗಳನ್ನು ಕಟ್ಟುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂಥಾ ಜನರು ಎಷ್ಟು ಕೂಲಿ ಸಂಪಾದನೆಮಾಡುವರೆಂದು ಪರಿಶೋಧನೆ ಮಾಡಿದಾಗ ವಾರ ಒಂದಕ್ಕೆ 75 ರೂಪಾಯಿ ಲಾಗಾಯಿತು 200 ರೂಪಾಯಿ ತನಕ ಸಂಪಾದಿಸುವರೆಂದು ಸರ್ಕಾರದವರಿಗೆ ತಿಳಿದುಬಂದಿದೆ.

ಲಂಡನ್ ಪಟ್ಟಣದಲ್ಲಿ ಡನ್‌ರೋಬಿನ್ ಕ್ಯಾಸಲ್ ಎಂಬ ಬಂಗಲೆಗೆ ಬೆಂಕಿಬಿದ್ದು ಒಂದು ಭಾಗವೆಲ್ಲಾ ಸುಟ್ಟುಹೋಯಿತು. ಬಹಳ ಪ್ರಾಚೀನ ಸರಕುಗಳೂ, ಅನೇಕ ಬೆಲೆಯುಳ್ಳ ಪಟ್ಟರುಗಳೂ ಹಾಳಾದವು. ಬೆಂಕಿಯನ್ನು ಆರಿಸುವುದಕ್ಕಾಗಿ ಕಷ್ಟಪಟ್ಟ ನಾಲ್ಕಾರು ಜನಗಳಿಗೆ ಸುಟ್ಟ ಗಾಯಗಳಾಗಿರುತ್ತವೆ.

ಲೀಬೌ ಎಂಬ ನಗರವನ್ನು ಪ್ರವೇಶಿಸಿದ ಜರ್ಮನಿಯವರು ಅಲ್ಲಿದ್ದ ಒಂದು ನಾಟಕಶಾಲೆಯನ್ನು ಹಾಳುಮಾಡಿ, ನಾಟಕದ ಕಂಪನಿ ಜನಗಳನ್ನೂ ಮ್ಯಾನೇಜರನ್ನೂ ಕ್ರೂರವಾದ ಶಿಕ್ಷೆಗೆ ಗುರಿಪಡಿಸಿದರು ಜರ್ಮನಿಯವರನ್ನು ಅಲ್ಲಗಳೆಯುವ ನಾಟಕವನ್ನು ಆ ಕಂಪನಿಯವರು ಆಡಿದ್ದೇ ಇದಕ್ಕೆ ಕಾರಣವಾಯಿತು.

ಜರ್ಮನಿಯವರು ಫಿರಂಗಿಗಳಿಗೆ ಬೇಕಾಗುವ ಹತ್ತಿ ಸಿಕ್ಕದೆ ಗಿಡ ಮರಗಳ ಬೋಕಿಯನ್ನು ಉಪಯೋಗಿಸುತ್ತಿದಾರೆಂದೂ, ಚಿಂದಿ ಬಟ್ಟೆಗಳನ್ನೆಲ್ಲಾ ಕೂಡಿಸಿ ಕಳುಹಿಸಬೇಕೆಂದು ಇಸ್ತಿಹಾರು ಕೊಟ್ಟದಾರೆಂದೂ ಸರ್ ವಿಲ್ಲಿಯಂ ರಾಮ್ಸೆಯವರು ಇಂಗ್ಲೆಂಡಿನಲ್ಲಿ ಹೇಳಿ, ಹತ್ತಿಯನ್ನು ಯಾರೂ ಶತ್ರುವಿನ ಸೀಮೆಗೆ ಕಳುಹಿಸದಂತೆ ತಡೆಯಬೇಕೆಂದು ಸೂಚಿಸಿದಾರೆ.

ಸರ್ ಚಾರಲ್ಸ್ ಲೇಸಿ ಯವರು ಇಂಗ್ಲೆಂಡಿಗೆ ಸೇರಿದ ಎಕ್ಸ್‌ಮೌತ್ ಎಂಬಲ್ಲಿ ಕಾಲವಾದರು. ಇವರಿಗೆ ಅವಸಾನ ಕಾಲದಲ್ಲಿ 101 ವರ್ಷ ವಯಸ್ಸಾಗಿತ್ತು. ಕಳೆದ 65 ವರುಷಗಳಿಂದಲೂ ಇವರು ಸರ್ಕಾರದ ಪೆನ್ಷನ್ ಪಡೆಯುತ್ತಾ ಬಹಳ ಆರೋಗ್ಯವಾಗಿದ್ದರು. ಇವರ ಹಿರಿಯರು ಕೂಡ 80, 90, 100 ವರುಷಗಳ ತನಕ ಬದುಕಿದ್ದರು.

ಇಂಗ್ಲೆಂಡಿಗೆ ಸೇರಿದ ಕೇಂಬ್ರಿಜ್ ವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಾಗಿದ್ದ ಯೌವನಸ್ಥರಲ್ಲಿ 8,860 ಜನರು ಸೈನ್ಯಕ್ಕೆ ಸೇರಿಕೊಂಡು ಯುದ್ಧಭೂಮಿಗೆ ಹೋದರು. ಕಳೆದ ಮೇ ತಾ. 11 ರ ವರೆಗೆ ಆ ವಿದ್ಯಾರ್ಥಿಗಳ ಪೈಕಿ ಯುದ್ಧಭೂಮಿಯಲ್ಲಿ 228 ಮಂದಿ ಮೃತಪಟ್ಟರು, ಗಾಯಪಟ್ಟವರು 256 ಜನರು, 66 ಮಂದಿ ಶತ್ರುವಿಗೆ ಕೈಸೆರೆ ಸಿಕ್ಕಿರುತ್ತಾರೆ. 35 ಮಂದಿ ಪರಾಕ್ರಮಕಾರ್ಯಗಳನ್ನು ನಡಿಸಿ ಬಿರುದುಗಳನ್ನೂ ಬಹುಮಾನಗಳನ್ನೂ ಪಡೆದಿರುವರು.

ಗ್ರೇಟ್ ಬ್ರಿಟನ್ನಲ್ಲಿ ಬ್ರಿಟಿಷರು ಹಿಡಿದು ತಂದು ಕೈಸೆರೆ ಹಾಕಿಕೊಂಡಿರುವ ಜರ್ಮನಿ ಸೈನಿಕರ ಪೈಕಿ ದರ್ಜೆಯಲ್ಲಿ ಕ್ಯಾಪ್ಟನ್ ಗಿಂತ ಕಡಮೆಯಾದವರಿಗೆಲ್ಲಾ ತಿಂಗಳಿಗೆ ತಲಾ 90 ರೂಪಾಯಿನಂತೆಯೂ, ಇತರರಿಗೆ ತಲಾ 31 ರೂಪಾಯಿನಂತೆಯೂ ಜೀವನಾಂಶವನ್ನು ಕೊಡುತ್ತಾರೆ. ಅತ್ತಲಾಗಿ ಜರ್ಮನಿಯವರು ಕೈಸೆರೆ ಹಿಡಿದುಕೊಂಡು ಹೋಗಿರುವ ಬ್ರಿಟಿಷ್ ಸೈನಿಕರ ಪೈಕಿ ಹುದ್ದೇದಾರರಿಗೆ ತಿಂಗಳಿಗೆ 75 ರೂಪಾಯನ್ನೂ, ಇತರರಿಗೆ ತಲಾ 45 ರೂಪಾಯನ್ನೂ ಜೀವನಾಂಶ ಕೊಡುವರು.

ಜರ್ಮನಿಯವರು ಫ್ರಾನ್ಸಿನ ಪೂರ್ವಭಾಗದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡು ಅಲ್ಲಿರುವ ಫ್ರೆಂಚ್ ಪ್ರಜೆಗಳನ್ನು ದೇಶಭ್ರಷ್ಟರನ್ನಾಗಿ ಮಾಡಿಬಿಟ್ಟರು. ಹೀಗೆ ಕಷ್ಟನಷ್ಟಗಳಿಗೆ ಗುರಿಯಾದ ಸುಮಾರು 60,000 ಗಂಡಸರು—ಹೆಂಗಸರು ಮಕ್ಕಳೇ ವಿಶೇಷ, ಮಾರ್ಚಿ ತಾ. 6 ರಿಂದ ಮೇ ತಾರೀಖಿನೊಳಗೆ 130 ರೈಲ್ ಗಾಡಿಗಳಲ್ಲಿ ಸ್ವಿಟ್ಜರ್ಲೆಂಡಿನ ಮೂಲಕ ಪ್ರಯಾಣ ಮಾಡಿ ಫ್ರಾನ್ಸಿಗೆ ಬಂದಿರುತ್ತಾರೆ. ಸ್ವಿಸ್ ಪ್ರಜೆಗಳು ಅವರಿಗೆ ದಾರಿಯಲ್ಲಿ ಪ್ರೀತಿಯನ್ನು ತೋರಿಸಿ ಸೌಕರ್ಯಗಳನ್ನು ಒದಗಿಸಿ ಸಾಗಕಳುಹಿಸಿದರು.

ಕಳೆದ ಮೇ ತಿಂಗಳು ತಾ. 18 ರಲ್ಲಿ ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಒಂದು ನವೀನವಾದ ವಿವಾಹವು ನಡೆಯಿತು ಬ್ಯಾರಿಸ್ಟರಾದ ಒಬ್ಬ ಫ್ರೆಂಚ್ ಪ್ರಜೆಯು ಸೈನ್ಯದಲ್ಲಿ ಸೇರಿ ಯುದ್ಧಭೂಮಿಗೆ ಹೋದನು; ಅವನು ಒಬ್ಬ ಯುವತಿಯನ್ನು ಮದುವೆ ಮಾಡಿಕೊಳ್ಳಬೇಕೆಂದು ಗೊತ್ತುಮಾಡಿಕೊಂಡಿದ್ದನು ಅವನಿಲ್ಲದಿದ್ದರೂ ಅವನ ಸ್ನೇಹಿತನೊಬ್ಬ ಅವನ ಸ್ಥಾನದಲ್ಲಿ ನಿಂತು ಅವನಿಗೆ ಬದಲಾಗಿ ಆ ಯುವತಿಯನ್ನು ಮದುವೆ ಮಾಡಿಕೊಂಡನು. ಇದರಿಂದ ಆ ಬ್ಯಾರಿಸ್ಟರು ಆ ಯುವತಿಯನ್ನು ಮದುವೆ ಮಾಡಿಕೊಂಡಂತಾಯಿತು. ಇಂಥಾ ಮದುವೆಗಳು ನಡೆಯಬಹುದೆಂದು ಫ್ರೆಂಚ್ ಸರ್ಕಾರದವರು ಒಂದು ಕಾನೂನ್ ಮಾಡಿ ಜಾರಿಗೆ ತಂದು 2-3 ತಿಂಗಳಾಯಿತು.

ಮಾಸಪತ್ರಿಕೆ.

ವಿಕಟವಿನೋದಿನಿ.

ಹಾಸ್ಯರಸಪ್ರಧಾನವಾದ ಮತ್ತು ಸಿ... ರವಾದ ಹಾಸ್ಯೋಕ್ತಿಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ. 1 ವರ್ಷದ ಚಂದಾ ಅಂಚೆ ಹಾಸಲು ಸೇರಿ ರೂ. 1-0-0.

ಮ್ಯಾನೇಜರ್, ವಿಕಟವಿನೋದಿನಿ ಆಫೀಸ್, ಅರಳೇಪೇಟೆ, ಬೆಂಗಳೂರು ಸಿಟಿ.

[120-1]

S. U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !



ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು. ಶಾಲು, ಪೇಟಾ ಕಾಶ್ಮೀರ್ ಶಾಲು ದುಪಟ್ಟಿ, ಮಗುಟ, ಕೊನಾರದ್ ಸೀರೆ, ಅಲಪೇಟ ಸೀರೆ. ಜಗನ್ನಾಥಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [119-1]

ವಿಳಾಸ.—ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

In the Matter of the Indian Companies Act VII of 1913 and of the National Insurance and Banking Company, Ltd., Amritsar, in Liquidation.

Notice is here by given that at Meetings of the Company held at the registered Offices, Amritsar, on the 13th June, 1915, the following Extraordinary Resolutions were passed:

"That it has been proved to the satisfaction of this Meeting that the Company cannot by reason of its liabilities continue its business and that it is advisable to wind up the same and accordingly that the Company be wound up voluntarily under Section 203 (3) of the Indian Companies Act, 1913." 121

"That Messrs. E. D. Dignasse and F. E. Bangham, Chartered Accountants, Lahore, be and they are hereby appointed jointly and severally Liquidators for the purpose of this winding up."

Bharat Buildings, Lahore, 18th June, 1915.

E. D. Dignasse,
F. E. Bangham,
Liquidators.

In the Matter of the Indian Companies Act, 1913 and of the National Insurance and Banking Co., Ltd., Amritsar, in Liquidation.

First Meeting of Creditors.

Notice is hereby given that a Meeting of the Creditors of the above-named Company will be held at the Assembly Rooms, Bharat Buildings, Lahore, at twelve Noon on Monday 5th July, 1915, pursuant to Section 209 of the above-named Act.

Bharat Buildings, Lahore, 18th June, 1915.

E. D. Dignasse.
F. E. Bangham.
Liquidators.

ಚಿಕ್ಕಮಗಳೂರಿನ ಸಂತೋಷ ವಾರ್ತೆಗಳು.

ಈ ವರ್ಷ ಕಾಫಿ ಫಸಲು ಬಹಳ ಶ್ಲಾಘ್ಯವಾಗಿರುವದರಿಂದ ಕಾಫಿ ತೋಟದ ಕೆಲಸವು ತರಾತುರಿಯಿಂದ ನಡೆಯುತ್ತಿದೆ. ಮಳೆಗಾಲವು ಈ ವರ್ಷವೆಲ್ಲಾ ಹೀಗೆಯೇ ಕ್ರಮವಾಗಿ ನಡೆಯುತ್ತಾ ಬಂದರೆ ಈ ವರ್ಷವನ್ನು ರಾಕ್ಷಸವೆನ್ನುವದಕ್ಕೆ ಬದಲಾಗಿ ಆನಂದವೆಂದು ಕರೆದರೆ ತಪ್ಪಾಗಲಾರದು.—ಈ ಊರಿನಲ್ಲಿ ಕಾಫಿ ಪ್ಲಾಂಟರ್ ಮತ್ತು ಸಾಹುಕಾರರೂ ಆದ ಮ|| ಬಿ. ಎಲ್. ಹನುಮಂತಪ್ಪನವರು ಈ ಟೌನ್ ಮತ್ತು ಅಂಬಳೆ ಗ್ರಾಮಗಳಿಗೆ ಬೇಕಾಗಿರುವ ಅಕ್ಕಿ ತಯಾರಿಸುವ ಮತ್ತು ಎಲ್ಲಾ ತರದ ಹಿಟ್ಟು ಮಾಡುವ ಯಂತ್ರವನ್ನು ತರಿಸಲು ಎಕನಾಮಿಕ್ ಕಾನ್‌ಫರೆನ್ಸ್‌ನವರನ್ನು ಕೇಳಿರುತ್ತಾರೆಂದು ತಿಳಿಯಬರುತ್ತೆ. ಅವರು ಎಷ್ಟು ಜಾಗ್ರತೆ ಇದಕ್ಕೆ ಸಹಾಯವಾಗಿದರೆ ಜನಗಳಿಗೆ ಅಷ್ಟು ಅನುಕೂಲ ಉಂಟಾಗುತ್ತೆ. ಮ|| ಬಿ. ಎಲ್. ಹನುಮಂತಪ್ಪನವರು ಬರುವ ದಸರಾ ಮೀಟಿಂಗಿಗೆ ರಿಪ್ರಜೆಂಟೇಟಿವ್ ಅಸೆಂಬ್ಲಿ ಮೆಂಬರಾಗಲು ಅಪ್ಲಿಕೇಷನ್ ಹಾಕಿರುವಂತೆ ಕೇಳುತ್ತೇನೆ. ಇವರು ಅನೇಕ ಸಂದರ್ಭಗಳಲ್ಲಿ ಅನೇಕ ವಿಷಯಗಳಲ್ಲಿ ಪ್ರಜೆಗಳ ಹಿತಕ್ಕಾಗಿ ಸ್ವಪ್ರಯೋಜನದ ಮೇಲೆ ದೃಷ್ಟಿ ಇಡದೆ ಸಾಧಿಸಿರುವದರಿಂದ ಇಂಥವರು ಚುನಾಯಿಸಲ್ಪಟ್ಟಗೆ ಜನೋಪಕಾರವಾದೀತೆಂದು ನಿರೀಕ್ಷಿಸಬಹುದು ಇವರು ಜನೋಪಕಾರ ದೃಷ್ಟಿ ಉಳ್ಳವರೆಂಬುವದಕ್ಕೆ ದೃಷ್ಟಾಂತವಾಗಿ ಮಹಾ ಜನಗಳ ಸಹಾಯವನ್ನು ಪಡೆದು ಒಂದು ಫ್ರೀ ರೀಡಿಂಗ್ ರೂಮನ್ನೂ, ನೈಟ್ ಸ್ಕೂಲನ್ನೂ ಏರ್ಪಡಿಸುವರೆಂದು ಅವರು ಮಾಡುತ್ತಿರುವ ತರದೂದಿನಿಂದ ತಿಳಿಯಬರುತ್ತೆ. ಮತ್ತು ಇವರೂ ಇನ್ನೂ ಅನೇಕ ವರ್ತಕರೂ ಸೇರಿ ಜವಳಿ ಅಂಗಡಿ ಸಾಹುಕಾರ್ ಮ|| ವೀರಭದ್ರಪ್ಪನವರ ಮುಖಾಂತರ “ಟ್ರೇಡಿಂಗ್ ಅಸೋಸಿಯೇಷನ್” ಎಂಬ ಸಂಘವನ್ನು ಏರ್ಪಡಿಸಿರುವದು ಜನಗಳಿಗೆ ಬಹು ಅನುಕೂಲವಾಗಿರುತ್ತದೆ.—ಈಗ್ಗೆ ಮೂರು ತಿಂಗಳಾಗಿಯುತ್ತು ಕಡೂರಿಂದ ಇಲ್ಲಿಗೆ ಮೋಟರ್ ಸರ್ವಿಸ್ ಕಂಪೆನಿ ಪ್ರೊಪ್ರೈಟರ್ ಮ|| ಮಹಾಬಲ ಜೋಯಿಸರು ಮೋಟರ್ ಸರ್ವಿಸ್ಸನ್ನು ನಡಿಸುತ್ತಿರುವದರಿಂದ ಪ್ರತಿ ದಿನವೂ ರೈಲಿಗೆ ಹೋಗತಕ್ಕ ಪ್ರಯಾಣಿಕರಿಗೆ ಸೌಖ್ಯವೂ, ಜೋಯಿಸರಿಗೆ ಆದಾಯವೂ ಉಂಟಾಗಿದೆ.

ಈ ಸ್ಥಳಕ್ಕೆ ಹೊಸದಾಗಿ ಬಂದಿರುವ ಮುನ್ಸಿಫ್ ಅಬ್ದುಲ್ ಗನಿ ಯವರು ಬಹಳ ಗುಣಾಢ್ಯರೂ, ನ್ಯಾಯಪರರೂ ಎಂದು ಜನಗಳೂ ಮತ್ತು ಲಾಯರುಗಳೂ ಅಭಿಪ್ರಾಯಪಡುತ್ತಿದಾರೆ.—ಈ ಟೌನ್‌ನಲ್ಲಿರುವ ಮೈಸೂರು ಬ್ಯಾಂಕಿನ ಏಜಂಟರು ಮ|| ಬಿ. ರಂಗಯ್ಯಂಗಾರ್ರು ಬ್ಯಾಂಕ್ ಕೆಲಸವನ್ನು ಚಟುವಟಿಕೆ ಮತ್ತು ನಂಬಿಕೆಯಿಂದ ನಡಿಸುತ್ತಿರುವದು ಜನಗಳ ಮನಸ್ಸನ್ನು ಆಕರ್ಷಿಸುತ್ತಿದೆ.—ಜೂಲೈ ಗುರ್‍ರ್ರಿ ಲಾಗಾಯಿತು ಈ ಟೌನ್‌ನಲ್ಲಿರುವ ದೊಡ್ಡ ಮನುಷ್ಯರಲ್ಲಿ ಐದು ಜನಗಳನ್ನು ಬೆಂಚ್ ಮ್ಯಾಜಿಸ್ಟ್ರೇಟರಾಗಿ ಏರ್ಪಡಿಸಿರುವದು ಜನಗಳಿಗೆ ಬಹಳ ಸೌಕರ್ಯವನ್ನುಂಟುಮಾಡಿದಂತಾಯಿತು.—ಈ ಟೌನ್ ಬಸವನಹಳ್ಳಿ ಬಡಾವಣೆಯಲ್ಲಿ ತಾಲ್ಲೂಕು ಕಛೇರಿ ಸ್ಕೂಲ್ ಮುಂತಾದ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಸಿರುವದರಿಂದ ಆ ಪಾರ್ಶ್ವದಲ್ಲಿರುವ ಕಟ್ಟಡಗಳಿಗೆ ಪ್ರಾಮುಖ್ಯವೂ, ಬಂಗ್ಲೆ ಮುಂತಾದದ್ದನ್ನು ಕಟ್ಟಲು ಅನೇಕ ನಿವೇಶನಗಳಿಗೆ ದರಖಾಸ್ತು ಬರುತ್ತಿರುವದರಿಂದ ಮ್ಯುನಿಸಿಪಾಲಿಟಿಯವರ ಸರಿಯಾದ ಏರ್ಪಾಡಿನಿಂದ ಆ ಬಡಾವಣೆಯು ತೃಪ್ತಿಯನ್ನುಂಟುಮಾಡುವದರಲ್ಲಿ ಸಂದೇಹವಿಲ್ಲ.—ಇಲ್ಲಿ ಹೊಸದಾಗಿ ಕಟ್ಟುತ್ತಿರುವ ಸುಮಾರು 50 ಸಾವಿರ ರೂಪಾಯಿಗಳು ಖರ್ಚಾಗತಕ್ಕುದಾದ ವೀರಶೈವ ಸ್ಟೂಡೆಂಟ್ಸ್ ಹೋಂ ಮ|| ಸಿ. ಶ್ರೀನಿವಾಸರಾಯರ ಉತ್ಸಾಹದಿಂದ ಪೂರೈಸುತ್ತಾ ಬಂತು.—ಮಹಮ್ಮದೀಯ ಬಾಲಕರಿಗೆ ಒಂದು ಸ್ಟೂಡೆಂಟ್ಸ್ ಹೋಂಗಾಗಿ ಒಂದು ಬಂಗಲೆಯನ್ನು ಅಡ್ವೊಕೇಟ್ ಮ|| ಅಬ್ದುಲ್ ರಹೀಂ ಸಾಹೇಬರು 8 ಸಾವಿರ ರೂಪಾಯಿಗೆ ಕೊಂಡುಕೊಂಡರು. ಆ ಬಾಲಕರಿಗೆ ಬಹಳ ಸಹಾಯವಾಯಿತು.—ಈ ಡಿಸ್ಟ್ರಿಕ್ಟಿನ ನರಸಿಂಹರಾಜಪುರದಲ್ಲಿ ಬರುವ ಗುರ್‍ರ್ರಿ ಲಾಗಾಯಿತು ಮುಂಚಿನಂತೆ ಮುನ್ಸಿಫ್ ಕೋರ್ಟು ಆಗುವುದು ಅತ್ತ ಕಡೆ ಕಕ್ಷಿಗಾರರಿಗೆ ಅನುಕೂಲವೂ, ಇಲ್ಲಿನ ಲಾಯರುಗಳಿಗೆ ಕೊರತೆಯೂ ಉಂಟಾಯಿತು.—ಇಲ್ಲಿನ ಕೋಆಪರೆಟಿವ್ ಸೊಸೈಟಿಯು ಸಕಲ ವಿಷಯಗಳಲ್ಲಿಯೂ ಬಹು ಸಮರ್ಪಕವಾಗಿ ಚಟುವಟಿಕೆಯಿಂದ ಕೆಲಸ ನಡಿಸುತ್ತಾ ಜನಗಳಿಗೆ ಬಹಳ ಸಹಕಾರಿಯಾಗಿರುತ್ತೆ.—ಇಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಮ|| ಗಳಾದ ಬಿ. ಎಲ್. ಹನುಮಂತಪ್ಪನವರು, ಅಡ್ವೊಕೇಟ್ ಯು. ಎಸ್. ಶಿವರಾಯರು, ಮತ್ತು ಲಾಯರ್ ಹೆಚ್. ಪಿ. ರಾಮಸ್ವಾಮಯ್ಯಂಗಾರ್ರು ಮುಂತಾದವರಿಂದ ಪ್ರಾರಂಭಿಸಲ್ಪಟ್ಟ ಈ ಚಿಕ್ಕಮಗಳೂರು ಮುಜಿಸಿಪಲ್ ತಾಲ್ಲೂಕು ಫೆಡರಲ್ ಬ್ಯಾಂಕ್ ಯೂನಿಯನ್ ಎಂಬ ಬ್ಯಾಂಕು ಅಭಿವೃದ್ಧಿಗೆ ಬಂದು, ಷೇರ್ ಖರ್ಚಾಗುತ್ತಾ ಇರುವದು ಬಹಳ ಸಂತೋಷ ಸೂಚಕವಾಗಿದೆ.—ಸರ್ಕಾರದಿಂದ ಈ ಟೌನ್ ಎ. ವಿ. ಸ್ಕೂಲಿನಲ್ಲಿ ನೈಟ್ ಸ್ಕೂಲ್ ಒಂದು ನೆನ್ನೆ ತಾರೀಖು ಲಾಗಾಯಿತು ಸ್ಥಾಪಿಸಲ್ಪಟ್ಟದ್ದು ಸ್ವಲ್ಪ ವಿದ್ಯೆ ಕಲಿತವರಿಗೂ, ಅವಿದ್ಯಾವಂತರಾದ ವಯಸ್ಸಾದವರಿಗೆಲ್ಲಾ ವಿದ್ಯೆ ಬರಲೂ ಅನುಕೂಲವಾಗಿ ಅವರಿಗೆ ಇರುವ ಅಂಧತೆಯನ್ನು ಹೋಗಲಾಡಿಸುವಂತೆ ಮಾಡಿದ ಸರ್ಕಾರದವರ ಉಪಾಯವು ಪ್ರೋತ್ಸಾಹವಾಗಿದೆ.—ಬರುವ ಜೂಲೈ ಗುರ್‍ರ್ರಿ ಲಾಗಾಯಿತು ಶಿವಮೊಗ್ಗೆಯಲ್ಲಿದ್ದ ಪೋಸ್ಟಲ್ ಸೂಪರಿಂಟೆಂಡೆಂಟ್ ಸಾಹೇಬರ ಹೆಡ್‌ಕ್ವಾಟರ್ಸನ್ನು ಈ ಟೌನ್‌ಗೆ ವರ್ಗಾಯಿಸುತ್ತಾರೆಂಬುವದೂ ಸಹಾ ಈ ಟೌನಿನ ಭಾಗ್ಯೋದಯವೇ ಸರಿ.

ಸ್ವದೇಶಾಭಿಮಾನಿ.

ಭೂತಾನ್ ಸೀಮೆಯಲ್ಲಿ ನಾಣ್ಯ ದೊರಕುವುದು ಕಷ್ಟ. ವ್ಯಾಪಾರಗಳು ಮಾಮೂಲಿಗೆ ಸಾಮಾನು ಪ್ರತಿಯಾಗಿ ಕೊಟ್ಟೇ ನಡೆಯುತ್ತವೆ. ದ್ರವ್ಯವಿಲ್ಲದ ಕಾರಣ ಭೂತಾನ ಸಂಸ್ಥಾನದವರು ಯುದ್ಧದ ರಿಲೀಫ್ ಫಂಡಿಗೆ ಒಂದು ಲಕ್ಷ ಪಾಷು ಮಾತ್ರ ಕಳುಹಿಸಲು ಸಾಧ್ಯವಾಯಿತು.

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಅಪಾರ ಮಳೆ ಸುರಿದು ಕಳೆದ ಮಂಗಳವಾರ ರಾತ್ರಿ 8 ಗಂಟೆ ಸಮಯದಲ್ಲಿ ಎರಡು ಅಂತಸ್ತುಗಳ ಒಂದು ದೊಡ್ಡ ಮನೆಯು ಕುಸಿದು ಬಿದ್ದುಹೋಯಿತು. ಅದರಲ್ಲಿದ್ದ ನಾಲ್ಕು ಬಂಗಾಳಿಗಳು ಅದರೊಳಗೆ ಸಿಕ್ಕಿಕೊಂಡು ಇಬ್ಬರು ಮೃತಪಟ್ಟರು; ಇನ್ನಿಬ್ಬರಿಗೆ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾರೆ.

ಕಲ್ಕತ್ತಾ ಪಟ್ಟಣದ ಹತ್ತಿರ ಸರ್ ರವೀಂದ್ರನಾಥ ಟಾಗೋರ್ ಎಂಬ ಮಹಾ ಕವಿಯೂ ಪರೋಪಕಾರಿಯೂ ಬೋಲಪುರದಲ್ಲಿ ಒಂದು ವಿದ್ಯಾಶಾಲೆಯನ್ನಿಟ್ಟು ನಡಿಸುತ್ತಿದಾರೆ. ಈ ಸ್ಕೂಲಿನಲ್ಲಿ ಸೇರಿ ವಿದ್ಯೆಕಲಿಯುವಷ್ಟು ಶಕ್ತರಲ್ಲದಂಥಾ ಬಾಲಕರಿಗೋಸ್ಕರ ಒಂದು ಕೂಲಿಬಿಡಾರಿ ಪಾಠಶಾಲೆಯನ್ನು ಪ್ರಾರಂಭಿಸಬೇಕೆಂದಿರುವರು. ಅವರು ಈಗ ಡಾರ್ಜಿಲಿಂಗ್ ನಗರಕ್ಕೆ ಹೋಗಿರುವುದಾಗಿಯೂ, ಇಷ್ಟರಲ್ಲೇ ಅವರು ಅಲ್ಲಿಂದ ಜಪಾನ್ ರಾಜ್ಯಕ್ಕೂ ಹೋಗಿಬರಬೇಕೆಂದಿರುವುದಾಗಿಯೂ ತಿಳಿದುಬಂದಿದೆ.

ಯುದ್ಧದ ರಿಲೀಫ್ ಫಂಡಿಗಾಗಿ ಹಿಂದುಸ್ಥಾನದಲ್ಲಿ ವಸೂಲ್ಮಾಡಲ್ಪಟ್ಟ ಚಂದಾ ಹಣಗಳನ್ನು ಕೆಳಗೆ ಹೇಳುವ ಬ್ಯಾಂಕುಗಳಿಗೆ ಜೂನ್ ತಾ. 5 ರ ವರೆಗೆ ಆಯಾ ಅಧಿಪತ್ಯದವರು ಪಾವತಿಮಾಡಿರುತ್ತಾರೆ:—

ಸಿಂಲಾ ಅಲಯನ್ಸ್ ಬ್ಯಾಂಕಿಗೆ	ರೂ. 41,39,155-11- 7
ಬಂಗಾಳಾ ಬ್ಯಾಂಕಿಗೆ	,, 37,25,276- 0- 7
ಬೊಂಬಾಯಿ ಬ್ಯಾಂಕಿಗೆ	,, 7,86,665- 4-10
ಮದರಾಸ್ ಬ್ಯಾಂಕಿಗೆ	,, 6,37,206- 7- 3
ಜುಮ್ಲಾ ರೂಪಾಯಿ	92,88,303- 8- 3

ಹವಳದ ಬಳ್ಳಿ ಶೀರೆ.

ಬಹಳ ಸೊಗಸಾದದ್ದು! 16 ಮೊಳ!! ಬಾಳಿಕೆಬರುವದು!!!

ಈ ಶೀರೆಗಳು ಬಿಳೀ ಮಲ್ಲಿನಲ್ಲಿ ಕಪ್ಪು, ಕೆಂಪು ಕೂಡಿದ ಚಾಕೊಲೇಟ್ ರಂಗಿನಂತೆ ಹವಳದ ಬಳ್ಳಿಗಳು ಹಾಕಲ್ಪಟ್ಟು, ಸುತ್ತಲೂ ಸಣ್ಣ ಅಂಚು ಕಟ್ಟಲ್ಪಟ್ಟಿದೆ. ಇಂಥಾ ಹೊಸ ನಮೂನೆಯು ಇದುವರೆಗೂ ತಯಾರಾಗಲಿಲ್ಲ. ಈ ಕಾಲಕ್ಕೆ ಬಹಳ ಉಪಯೋಗವಾದದ್ದು. ಇದನ್ನು ಪ್ರತಿ ಒಬ್ಬ ಸ್ತ್ರೀಯೂ ತರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇವೆ.

ಕ್ರಯ ರೂಪಾಯಿ 2-4-0

ವಿ. ಪಿ. ಛಾರ್ಜ 0-6-0

ನಮ್ಮ ವಿಳಾಸ—ಸಿ. ಕನಕ ಸಭಾಪತಿ,

[116-1] ಪಾರ್ಕ್ ಟೌನ್, ಮದರಾಸ್.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 3 ಬಹುಮಾನಗಳ ಸಮೇತ ರೂ. 2-12-0 ಮಾತ್ರ.

ಐದು ವರುಷಗಳ ಗ್ಯಾರೆಂಟಿ.



ಧನವಂತರೇ, ಇದು ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದ ಸುಂದರವಾದ ವಾಚ್. ಬಲಿಷ್ಠವುಳ್ಳ ಚಕ್ರಗಳುಳ್ಳದ್ದು. ಮಣ್ಣು ಧೂಳು ಸೇರದ್ದು. ಒಳಗೆ ಗ್ಲಾಸ್ ಡೋಮ್ ಅಂದರೆ ಗ್ಲಾಸ್ ಮುಚ್ಚಳವುಳ್ಳದ್ದು. ರಮಣೀಯವಾದ ಅಂಕಿತವುಳ್ಳದ್ದು. ಗಂಭೀರವಾದ ಗಂಟೆ ಮತ್ತು ಮಿನಿಟ್‌ಗಳುಳ್ಳದ್ದು. ಸಮ್ಮತವಿಲ್ಲದಲ್ಲಿ ಹಣ ವಾಪಸು ಮಾಡಲ್ಪಡುತ್ತೆ.

(1) ಸುಂದರವಾದ ನಾಣ್ಯವುಳ್ಳ ವಾಚ್ ಪೆಟ್ಟಿಗೆ, (2) ಇಂಪಾದ ವಾಚ್ ಸರಪಣಿ, (3) ನಾಣ್ಯವುಳ್ಳ ಹಸನಾದ ಬನಿಯನ್—ಈ ಮೂರರ ಸಮೇತ ವಾಚ್ ಕ್ರಯ ರೂ. 2-12-0 ಮಾತ್ರ. [117-1]

ವಿಳಾಸ:—ಜಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂ. 7, ಕೋಮಾ ವೆಂಕಟಾಚಲಯ್ಯರ್ ಬೀದಿ, ಮದರಾಸ್.

ಊದಬತ್ತಿಗಳು

ಬಾಲಗ್ರಹಧೂಪ ಟಿನ್ 1 ಕ್ಕೆ 8 ಆಣೆ.

ಮಕ್ಕಳಿಗೆ ಬರತಕ್ಕ ಬಾಲಗ್ರಹಕ್ಕೆ ಈ ಧೂಪವನ್ನು ಹಾಕಿದ ಕೂಡಲೇ ಬಾಲಗ್ರಹ ಚೇಷ್ಟೆಯು ಖಂಡಿತವಾಗಿಯೂ ಗುಣವಾಗುತ್ತೆ.

ಸುವಾಸನೆ ಸಾದು ತೊಲೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ವೇದವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನೂ ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ಭೃಂಗಾಮಲಕತೈಲ ಶೀಸಾ 1 ಕ್ಕೆ 1 ರೂ.

ಇದು ಸ್ನಾನಮಾಡುವಾಗಲೂ ರಾತ್ರಿ ಮಲಗಿಕೊಳ್ಳುವಾಗಲೂ ತಲೆಗೆ ಹಚ್ಚಿಕೊಂಡದ್ದೇ ಆದರೆ ಸಮಸ್ತ ಉಷ್ಣವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯೂ ಸಹಾ ಬರುತ್ತೆ.

ವಿಳಾಸ.—ಕಿ. ಎಲ್. ಉಪಾಧ್ಯಾಯ,

[39-18] ಸುಗಂಧಕಾರಿ, ಮೈಸೂರು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬೆಳ್ಳಿಯ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚೆನ್ನಾಗಿಯೂ ಕಪ್ಪಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-40]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

One energetic and experienced *Secretary* for the Branch Office to be opened shortly at Bangalore, and District Agents for each and every district in the Mysore Province *on both commission and office allowance*. Secretary's allowance *Rs. 50-20-200*, and that of District Agents *Rs. 25* per mensem. Also taluk and local directors required in each and every taluk in the Province. *Security and good reference essential.* For prospectuses and other particulars please apply, with your experience in the line, to

M. L. NAGANNA,

15-24 Managing Director, Life & Marriage Assurance Buildings, Mysore.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)



ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಶೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಟಿ. ಸಿ. ಪಾ ಕಂಪನಿ, 177,

[26–21] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.



ಜೂನ್ ಮಹೋತ್ಸವದ
ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಜೂನ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜೂನ್ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [111-3]

ವಿಳಾಸ—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಎಲ್ಲರಿಗೂ ಬೇಕಾದ ಸರಕುಗಳು.

ಸುಗಂಧ ನಸ್ಯದಪುಡಿ 9 ತೊಲೆ ಟಿನ್ 1 ಕ್ಕೆ 12 ಆ. ಸಾದಾ ನಸ್ಯದಪುಡಿ 9 ತೊ. ಟಿನ್ 1ಕ್ಕೆ 6 ಆ. ಕೇಶವರ್ಧಿನಿ ತೈಲ ಬಾಟ್ಲು 1ಕ್ಕೆ 12 ಆ. ಭಂಗಾರದ ಗಿಲ್ಟಿನ ಬಿಳೀದು ಅಥವಾ ಕೆಂಪು ಕಲ್ಲಿನ ಬೆಂಡೋಲೆ ಜೊತೆ 1 ಕ್ಕೆ 3 ರೂ. ತಾರೀಖು ತಿಂಗಳು ವರುಷ ಇವುಗಳಿಂದ ಕೂಡಿರುವ ಡೇಟಿಂಗು ರಬ್ಬರ್ ಸ್ಟಾಂಪು 1ಕ್ಕೆ 1-4-0 ಸ್ವಂತ ಹೆಸರಿಗೆ ರಬ್ಬರು ಸ್ಟಾಂಪು ಕನ್ನಡ ಅಥವಾ ಇಂಗ್ಲೀಷು ಭಾಷೆಯಲ್ಲಿ ತಯಾರಿಸಲ್ಪಟ್ಟು ಬ್ರಷ್ ಪ್ಯಾಡ್ ಇಂಕಿ ಇವುಗಳು ಇನಾಮಿನ ಸಮೇತವಾಗಿ ಕ್ರಯ 3 ರೂಪಾಯಿ. [107-3]

ವಿಳಾಸ—ಎ. ಟಿ. ಎನ್. ಜಯಾಕ್ಷೀ ಕಂಪನಿ, ನಂ. 41, ನಾಟುಪಿಳ್ಳಾರು ಕೋಯಿಲ್ ಸ್ಟ್ರೀಟ್ ಸಾಹುಕಾರು ಪೇಟೆ ಪೋಸ್ಟು, ಮದರಾಸ್.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಶೆರಗು, ಬೇಲು, ಕೆಂಪು, ಊದ, ಎಲೆಪಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರೆಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಬೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರೆಗೆ.

ಪೇಟಾಗಳು—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರೆಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರೆಗೆ. ಜಪಮಾಲೆಗಳು—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ,
[63-10] ಧಾರಾನಗರ್ ಬೀದಿ, ಕಾಶಿ.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕಾಂಟು 10 ಕ್ಕೆ 1.

1916 ನೆಯ
ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕಾಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[13-19] ಸುಬೋಧ ಗ್ರಂಥಾಲಯ, ಮೈಸೂರು.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಹಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ"—ಕೆ. ರಾಮಸ್ವಾಮಿ, ಬಲ್ಲಾಳ-ಕಾ-ಸಿಬಿನ, 20-2-15.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಕಳ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಸಮಯದಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗಿರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು. ಕೆಟ್ಲಾಗನ್ನು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-30] ಪಿ.ಒ. ಬಾಕ್ಸ್ 330, ಬೊಂಬಾಯಿ.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರ

ಈಸಾನೋಫಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತ.

ಕ್ವಿನೈನ್ ಜ್ವರವನ್ನು ಅಡಗಿಸುವುದು; ಆದರೆ ಈ ಈಸಾನೋಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;

2. ಬಿ. ಜಿ. ಗೋರಿಯೋ ಕಂಪನಿ, ಪ್ಯಾಲೆಸ್ ಬೀದಿ,
[172-46] ಬೊಂಬಾಯಿ;

ಇವಲ್ಲದೆ

ಔಷಧ ಮಾರಾಟದ ಎಲ್ಲಾ ಶಾಪಿನಲ್ಲೂ ಸಿಕ್ಕುವುದು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—6—1915 ರಿಂದ 11—6—1915 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ [illegible]
ಬೆಂಗಳೂರು ಪಟ್ಟಣ	0	0	6	[illegible]
ಮೈಸೂರು ,,	0	0	0	[illegible]
ಬೆಂಗಳೂರು ಡಿಸ್ಟ್ರಿಕ್ಟು	1	1	0	[illegible]
ಮೈಸೂರು ,,	19	16	0	[illegible]
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಜುಮ್ಲಾ	20	17	0	[illegible]

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಜ್ಯೇಷ್ಠ ಶುದ್ಧ ತ್ರಯೋದಶಿ ಶುಕ್ರವಾರದಿಂದ ಕೃಷ್ಣ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜೂನ್ ಮತ್ತು ಜುಲೈ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
25	ಶುಕ್ರ *	ತ್ರಯೋದಶಿ	23-1	ಅನೂರಾಧ	26-0	[illegible]
26	ಶನಿ §	ಚತುರ್ದಶಿ	16 50	ಜ್ಯೇಷ್ಠ	21-50	[illegible]
27	ಭಾನು	ಪೌರ್ಣಮಿ	10-49	ಮೂಲ	17-53	[illegible]
28	ಸೋಮ ‡	ಪಾಡ್ಯಮಿ	5-15	ಪೂರ್ವಾಷಾಢ	14-22	[illegible]
29	ಮಂಗಳ	ಬಿದಿಗೆ	0-16	ಉತ್ತರ	55-18	[illegible]
30	ಬುಧ †	ಚೌತಿ	52-11	ಶ್ರವಣ	9-19	[illegible]
1	ಗುರು	ಪಂಚಮಿ	49-57	ಧನಿಷ್ಠ	8-10	[illegible]

* ತಿಥಿದ್ವಯಂ, ಮಳೆ ನಕ್ಷತ್ರ—ಆರಿದ್ರಾ 2 ನೇ ಪಾದ. § [illegible] ತಿಥಿ. ‡ ಮಳೆ ನಕ್ಷತ್ರ—ಆರಿದ್ರಾ 3 ನೇ ಪಾದ. † ಸಂಕಟಹರ ಚತುರ್ಥಿ.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾ"ವನ್ನು ಸೇವಿಸಿ! ಸೇವಿಸಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಟಾಗಿದ್ದ, ಶಾಖವಿದ್ದ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ಪದಾರ್ಥವೋ ಎಂಬುವದು ತಿಳಿಯಬರುತ್ತದೆ. [52-13]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೋಧಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಪರಿಶ್ರಮಶಕ್ತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ, ಬೆಳ್ಳಿ ನುತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯ ವರೆಗೂ ಸುಖಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾದ ಡಬ್ಬಿ 1 ಕ್ಕೆ ರೂ. 3-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದೊಂದಿಗೆ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಢಿಲ್ಲಿ ವೈದ್ಯರು, 5. ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Printed and Published by the Rev. H. Gou[illegible] Proprietor and Manager, Wesleyan Mission [illegible] Mysore. 24/6/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸೆ ೧೯೧೫ ನೇ ಇಸವಿ ಜೂಲೈ ತಾರೀಖು ೧ ನೇ ಗುರುವಾರ. ಸಂಚಿಕೆ ೫

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದೂಚರಿತ್ರಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-25]

ಕಸ್ತೂರಿ ಗುಳಿಗೆಗಳು :—ಇದರಿಂದ ಫಿಟ್ಸ್, ಸಟಿಬೇನೆ, ಮೂರ್ಛೆ ಬರುವ ರೋಗ, ಹರ್ಷವಾಯುಜ್ವರ ವ ಇತರ ವಾಯು ಸಂಬಂಧವಾಗಿ ಚಿಕ್ಕವರಿಗೂ ದೊಡ್ಡವರಿಗೂ ಇರುವ ರೋಗಗಳು ಎಷ್ಟು ದೀರ್ಘಕಾಲವಾಗಿದ್ದರೂ ನಿಶ್ಚಯವಾಗಿಯೂ ಗುಣಮಾಡುತ್ತವೆ. ಬಾಟ್ಲಿಯ ಕ್ರಯ ರೂ. 2.

ಸ್ತ್ರೀಯರ ರಕ್ತಸ್ರಾವ ವ ಇತರ ಉದರ ರೋಗಗಳಿಗೆ ಅತ್ಯುತ್ತಮವಾದ ಔಷಧ. ಬಾಟ್ಲಿಯ ಕ್ರಯ ರೂ. 2.

ರಕ್ತಶುದ್ಧಿ :— ಈ ಔಷಧದ ಸೇವನೆಯಿಂದ ದೇಹದೊಳಗಣ ಅಶುದ್ಧವಾದ ರಕ್ತವು ಶುದ್ಧವಾಗಿ ಕಾಂತಿಯನ್ನೂ ಶಕ್ತಿಯನ್ನೂ ಉಂಟುಮಾಡುತ್ತದೆ. ಬಾಟ್ಲಿಯ ಕ್ರಯ ರೂ. 1-8-0.

ಅತ್ಯಂತ ಪೌಷ್ಟಿಕ ಧಾತುಪುಷ್ಟಿಯ ಔಷಧ. ಡಬ್ಬಿಯ ಕ್ರಯ ರೂ. 2.

ನಮ್ಮ ವಿಳಾಸ—ಸಖಾರಾಮ ಅರ್ಜಾಜ ಕೋಲ್ಹಟಕರ, ವೈದ್ಯ,
[92-7] ದವಾಖಾನಾ, ಠಾಕೂರದ್ವಾರ ರೋಡ, ಮುಂಬಯಿ, ನಂ. 2.

ಮೈಸೂರು ಸಂಸ್ಥಾನದ ಅಸ್ಥಾನ
ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯಅಯ್ಯರ್
ಇವರಿಂದ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಈ ಗ್ರಂಥವು ನಾದೋತ್ಪತ್ತಿ, ಶ್ರುತಿ, ಸಪ್ತಸ್ವರಸ್ಥಾನ, ರಾಗ ಪ್ರಕರಣ, 72 ಮೇಳ ಕರ್ತರಾಗಗಳ ಚಕ್ರ, ಸಪ್ತಾಂತರ ರಾಗಗಳು, ತಾಳ ಪ್ರಕರಣ, ತಾಳಪ್ರಸ್ತಾರ, ಸಪ್ತತಾಳಗಳ ಲಕ್ಷಣ, ತಾಳಸಂಜ್ಞೆ, ಮಂದ್ರ, ಮಧ್ಯ, ತಾರಸ್ಥಾನಗಳನ್ನು ತೋರಿಸತಕ್ಕ ಸಂಜ್ಞೆಗಳಿಂದ ಕೂಡಿದ ಸರಳಿ, ವರಸೆ, ಜಂಟಿ ವರಸೆ, 35 ಅಲಂಕಾರಗಳು, ಗೀತಗಳು, ಸ್ವರಜತಿಗಳು, ತಾನಗಳು, ತಾನವರ್ಣಗಳು ಮತ್ತು ಚಿಟ್ಟೆ ಸ್ವರಗಳುಳ್ಳ ಕೀರ್ತನೆಗಳು, ಇವೇ ಮೊದಲಾದವುಗಳಿಂದ ಶೋಭಿಸುತ್ತದೆ. ವಾದ್ಯ ಮತ್ತು ಬಾಯಿಪಾಠಕ್ಕೂ ತುಂಬಾ ಅನುಕೂಲವಾಗಿರುತ್ತದೆ ಇಂಥಾ ಸಮಯವು ಮುಂದೆ ದೊರೆಯಲಾರದು. ಡಿಮ್ಮಿ ಅಷ್ಟಪತ್ರ, 326 ಪುಟಗಳು [108-4]

ಕ್ರಯ ರೂ. 1-4-0. ಅಂಚೆ ಹಾಸಲು ಬೇರೆ.

ವಿಳಾಸ :—(1) ಎಂ. ವೆಂಕಟರಾಮಯ್ಯ, ಚಾಮರಾಜಪೇಟೆ, ಮೈಸೂರು.
(2) ಎಂ. ಎಸ್. ರಾವ್. ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಹೊಸ ಭೂವಿವರಣೆ.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ
ಲೋವರ್ ಸೆಕೆಂಡರಿ ಕನ್ನಡ ಟೆ|| ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 6 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[13-20] ಸುಬೋಧ ಗ್ರಂಥಾಲಯ, ಮೈಸೂರು.

A Modern General English:—issued in **Monthly Parts. Subscription** till next March Rs. 1¼ only. **Our Notes** and **Spelling Book** supplied as parts. Apply to

M. N. SITA RAMA RAO.
[88-7] **Krishnaraja Mohalla, Mysore.**

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-43] GIRLS' INDUSTRIAL SCHOOL, HASSAN.

ಎಮ್. ಎಸ್. ಮಲಕಣ್ಣ ಅಂಡ್ ಬ್ರದರ್ಸ್,

ರೇಶ್ಮೆ ಜವುಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ತಮವಾದ ರೇಶ್ಮೆ ವಸ್ತ್ರಗಳು, ಮೊಗಟಗಳು, ಅರಳೆಪೇಟೆ ಸೀರೆಗಳು, ಲಿಂಗ ಧರಿಸುವ ವಸ್ತ್ರಗಳು, ಸಾಧಾರಣ ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-5]

ರೇಶ್ಮೆ ವಸ್ತ್ರಗಳು	ದರಗಳು	ಮೊಗಟ, ರೇಶ್ಮೆ ಸೀರೆ, ಲಿಂಗವಸ್ತ್ರ.
1 ನೇ ನಂಬರು 0-7-6	ತೊಲೆ 1 ಕ್ಕೆ	1 ನೇ ನಂಬರು 0-8-0
2 ,, ,, 0-7-0		2 ,, ,, 0-7-6
0-6-9		

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ವಿಫಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ	0-8-0	ಸಂಕಲ್ಪಾತಿ ..	0-8-0
ಮಾಧವಸುಂದರಿ	0-8-0	ಕುಮುದಿನಿ ...	0-6-0
ರಾಘವಮಾಧವಿ	0-8-0	ಸಂಕ್ಷೇಪಕ ...	0-4-0

[275-20] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ವಾರಪತ್ರಿಕೆ.

ವಿಕಟವಿನೋದಿನಿ.

ಹಾಸ್ಯರಸಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಕ್ತಿಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ವಾರಪತ್ರಿಕೆ.

1 ವರ್ಷದ ಚಂದಾ ಅಂಚೆ ಹಾಸಲು ಸೇರಿ ರೂ. 1-0-0.

ಮ್ಯಾನೇಜರ್, ವಿಕಟವಿನೋದಿನಿ ಆಫೀಸ್,
[120-2] ಅರಳೇಪೇಟೆ, ಬೆಂಗಳೂರು ಸಿಟಿ.

S. U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಕೊನ್ನಾರ್ಡ್ ಸೀರೆ, ಅರಳೆಪೇಟೆ ಸೀರೆ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [119-2]

ವಿಳಾಸ.—ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಶೋಭಿಸುವ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲಳು ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ.

ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಹಣೆಯು ತಣ್ಣಗಾಗಿ, ಮನಸ್ಸು ಉತ್ಸಾಹದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ನಿಮಿತ್ತದಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಪುರಸ್ಕಾರ ಉತ್ತಮೋತ್ತಮವಾದ ಮಾನಪತ್ರಗಳೂ ದೊರತಿವೆ

ಅವುಗಳಲ್ಲಿ ಒಂದನ್ನು ನೋಡಿರಿ। ಸೇಗಿನಹಾಳಕರ ಬಂಧುಗಳು. ಬಸವರಾಜ, ಬೆಳಗಾಂವ—ತಾವು ಕೆಲ ದಿನಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-23]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾದರಿಯು) ಸೀಸೆ 1 ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಸಾಬೂಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಕೆ ಅನಂತ ಪಾರ್ಕ್, ಮಂಗಳೂರು.

ಹವಳದ ಬಳ್ಳಿ ಶೀರೆ.

ಬಹಳ ಸೊಗಸಾದದ್ದು ! 16 ಮೊಳ!! ಬಾಳಿಕೆಬರುವದು !!!

ಈ ಶೀರೆಗಳು ಬಿಳೀ ಮಲ್ಲಿನಲ್ಲಿ ಕಪ್ಪು, ಕೆಂಪು ಕೂಡಿದ ಚಾಕೊಲೇಟ್ ರಂಗಿನಂತೆ ಹವಳದ ಬಳ್ಳಿಗಳು ಹಾಕಲ್ಪಟ್ಟು, ಸುತ್ತಲೂ ಸಣ್ಣ ಅಂಚು ಕಟ್ಟಲ್ಪಟ್ಟಿದೆ. ಇಂಥಾ ಹೊಸ ನಮೂನೆಯು ಇದುವರೆಗೂ ತಯಾರಾಗಲಿಲ್ಲ. ಈ ಕಾಲಕ್ಕೆ ಬಹಳ ಉಪಯೋಗವಾದದ್ದು. ಇದನ್ನು ಪ್ರತಿ ಒಬ್ಬ ಸ್ತ್ರೀಯೂ ತರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇನೆ.

ಕ್ರಯ ರೂಪಾಯಿ 2-4-0

ವಿ. ಪಿ. ಛಾರ್ಜು 0-5-0

ನಮ್ಮ ವಿಳಾಸ,—ಸಿ. ಕನಕ ಸಭಾಪತಿ,

[116-2] ಪಾರ್ಕ್ ಟೌನ್, ಮದರಾಸ್.

ಮೋಸಹೋಗುವೆವೆಂಬ ಭೀತಿಯಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ :—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನು ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಕಲ್ಯಾಣ-ಕಾ-ಸಿಟಿಯನ, 20-2-15.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಟಿ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,

[260—31] ಪಿ.ಒ. ಬಾಕ್ಸ್ 330, ಬೊಂಬಾಯಿ.

ಮಧುರೆ ಜುನ್ನದಿ ಅಂಚಿನ ಸೀರೆ ಅವ್ವಲ್ ದರ್ಜೆ ರೂ. 3—0—0.

ಜೂಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ಸೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೆ. ಕಂಥುಸಾಮಿ

[111-4] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದಿರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ಹಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉದುಗುಣಿತ್ರ. ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-44]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಫೋಸ್ಟರ್. ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಟ್ಟಹರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಉಬ್ಬಸ, ಕ್ಷಯ, ಹೊಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235—33]

ಮಹಾ ಸೌಭಾಗ್ಯ ಶುಂಠಿ :—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಶ್ವಾಸಕಾಸ, ಬಾಣಂತಿಕಜ್ಜಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಿಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0, ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಜಾಮನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹದ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0 ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿಣವಾದ ಜ್ವರಗಳನ್ನು ಕೂಡ ನಿವೃತ್ತಿಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ ಡಬ್ಬಿ ಕ್ರಯ ರೂ. 1-8-0 ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[247—33] 20, ಚೇನಾಬಜಾರು ರೋಡು, ಮದರಾಸು

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವು ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-35]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000
ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ವರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಹಿಮ, ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ಸಂಪತ್ತಯ್ಯನವರು ಅಥವಾ ಮಿ॥ ವೆಂಕಟೇಶಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-38] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 3 ಬಹುಮಾನಗಳ ಸಮೇತ ರೂ. 2-12-0 ಮಾತ್ರ. ಐದು ವರುಷಗಳ ಗ್ಯಾರೆಂಟಿ.

ಘನವಂತರೇ, ಇದು ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದ ಸುಂದರವಾದ ವಾಚ್. ಬಲಿಷ್ಠವುಳ್ಳ ಚಕ್ರಗಳುಳ್ಳದ್ದು. ಮಣ್ಣು ಧೂಳು ಸೇರದು. ಒಳಗೆ ಗ್ಲಾಸ್ ಡೋಮ್ ಅಂದರೆ ಗ್ಲಾಸ್ ಮುಚ್ಚಳವುಳ್ಳದ್ದು. ರವುಚೆಯವಾದ ಅಂಕೆತವುಳ್ಳದ್ದು. ಗಂಭೀರವಾದ ಗಂಟೆ ಮತ್ತು ಮಿನಿಟುಗಳುಳ್ಳದ್ದು. ಸಮ್ಮತವಿಲ್ಲದಲ್ಲಿ ಹಣ ವಾಪಸು ಮಾಡಲ್ಪಡುತ್ತೆ.

(1) ಸುಂದರವಾದ ನಾಣ್ಯವುಳ್ಳ ವಾಚ್ ಪೆಟ್ಟಿಗೆ, (2) ಇಂಪಾದ ವಾಚ್ ಸರಪಣಿ, (3) ನಾಣ್ಯವುಳ್ಳ ಹಸನಾದ ಬನಿಯನ್—ಈ ಮೂರರ ಸಮೇತ ವಾಚ್ ಕ್ರಯ ರೂ. 2-12-0 ಮಾತ್ರ. [117-2]

ವಿಳಾಸ:—ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ, ನಂ. 7, ಕೋಣಿ ವೆಂಕಟಾಚಲಯ್ಯರ್ ಬೀದಿ, ಮದರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀ ಕರ ಕಸ್ತೂರಿ ಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಕು-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವದು.

ಛಳಿ ಮಳೆಗಾಲಗಳಲ್ಲೂ-ಸೋಂಕು ರೋಗಸ್ಥಳಗಳಲ್ಲೂ-ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ-ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ಸೆಗಡಿ, ಮಲಬಂಧ, ಅಜೀರ್ಣ ಭೇದಿ, ವರಸೇ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ತಲೆ ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ಖಾತರಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅನ್ಯಾನವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟಿ.ಖ ಪ್ರತ್ಯೇಕ.

[231 31] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಇನಾಂ ಸಾವಿರಾನುಗಳು 50. ಇನಾಂ ಸಾವಿರಾನುಗಳು 50.

ಅನೇಕ ಯೋಗ್ಯತೆ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾವಿರಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-9-0 ಮಾತ್ರ. ಯಾವ ಸ್ತ್ರೀಗಳಿಗೆ ತಲೆ ಕೂದಲು

ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವದು ಬಜಾರಿನಲ್ಲಿ ದೊರೆಯುವ ಕೆಲಸದವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಇದರ ಪರಿಮಳ ವಾಸನೆ ಹೇಳುವದಕ್ಕೆ ಅರಿಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಮೆದುಳನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿನ 6, ಮೈಭರಣ 1, ಅದ್ದಾ 1, ತಾಂಬೂಲಮಾತ್ರೆ 30, ದಂತದ ಬಾಚಣಿಗೆ 1, ಕೊಗಸದ ರಾಜ ರಾಣಿ ಕಾರನೇಷನ್ ಪೆಟ್ಟಿಗೆ 1, ರಬ್ಬರ್ ಫೋಸ್ಟುಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಆರು ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನು ಇಲ್ಲದಂತೆ ಟೈಂಪೀಸು 1 ನ್ನು ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:—ಧೈರ್ಯಲಕ್ಷ್ಮಿ ಅಂಡು ಕಂಪನಿ,

[123-1] ನಂ. 3, ಇರುಳಪ್ಪನ್ ಬೀದಿ, ಮದರಾಸು.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಳಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-21] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಕುಂತಲಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮತೇತ್ವವು ಗುಣ

ಗಳಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರಿಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ಸದ್ವಾಸನೆಯುಳ್ಳ ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-41]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗೆದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಜೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಜೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ,

[63-11] ಧಾರಾನಗರ್ ಬೀದಿ, ಕಾಶಿ.

ನಕ್ಕಳಗಳಿಂದ ಮೋಸಹೋಗೀರಿ, ಜೋಕೆ!

ಈಗಿನ ಕಾಲದಲ್ಲಿ ಸಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಛಂಗಾರ ಮತ್ತು ಬೆಳ್ಳಿಯ ಪದಕಗಳು ದೊರೆತಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಳಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-6-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೀಳ ಕೆರೋಸೀನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೀಳ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಡ್ತೇವೆ. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವನ್ನು ಈಗ ಮೂರು ಛಂಗಾರದ ಪದಕಗಳು ಬಂದಿವೆ.

ವಿಳಾಸ—ಪಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[206-26] 177, ಟೈನಾಬಜಾರ್ ರೋಡ್, ಮದರಾಸ್.

ನಂಬಿರಿ-ಖಂಡಿತ-ನಂಬಿರಿ

ಜ್ವರದ ಮಾತ್ರೆ. ಬಹು ಶ್ರೇಷ್ಠ ಮೂಲಿಕೆಗಳಿಂದ ತಯಾರಿಸಿದೆ. ಸರ್ವ ಜ್ವರಗಳಿಗೂ, ಖಾತರಿ ಗುಣಕಾರಿ. ಶ್ರೇಷ್ಠ ಹೆಸರು ಬಂದಿದೆ.

24 ಮಾತ್ರೆ ಶೀಸೆಗೆ 9 ಆ., 6 ಕ್ಕೆ 3½ ರೂ.

ಮುಖರಂಜನ್ ಮಾತ್ರೆ: ಜನೀಜನಾಶಕ್ಕೆಯೊಂದು ರತ್ನ. ಬಾಯಿ ದುರ್ಗಂಧ ತಪ್ಪಿಸಿ, ಸುವಾಸನೆಯಾಗಿ, ಜೀರ್ಣಶಕ್ತಿ ಹೆಚ್ಚಿಸಿ, ಶರೀರಾರೋಗ್ಯವೃದ್ಧಿಮಾಡಿ, ಗಂಟಲುನೋವು, ಕೆಮ್ಮು, ಗೊಗ್ಗರುಧ್ವನಿ, ತಲೆಸುತ್ತು, ಹೊಟ್ಟೆ ನೋವು, ವಾಕರಿಕೆ, ಮಲಬದ್ಧ, ಅಜೀರ್ಣಾದಿಗಳನ್ನು ನಿವಾರಿಸಿ ಮನೋಲ್ಲಾಸ ಮಾಡುತ್ತೆ. ಉಪಾಧ್ಯಾಯರು, ಲಾಯರು, ವಿದ್ಯಾರ್ಥಿಗಳು, ಉಪನ್ಯಾಸಕರು, ಸಂಗೀತಗಾರರು, ನಾಟಕದವರು, ಪ್ರಯಾಣಿಕರು ಮುಂತಾದವರಿಗೆ ಅತ್ಯುಪಕಾರಿ. 160 ಮಾತ್ರೆ ಶೀಸೆಗೆ 4 ಆ., 6 ಕ್ಕೆ 1 ರೂ. ಬಾಲ ಸಂಜೀವನಿ 4 ಆ., ಸರಳ ಭೇದಿ ಪಿಲ್ಸ್ 8 ಆ., ಕೆಮ್ಮಿನ ಮಾತ್ರೆ 8 ಆ.

[262-30] ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ಖರಾರಾದ ಕಾಲವನ್ನು ತೋರಿಸುವುದೇ

ವಾಚುಗಳ ಮೊದಲನೇ ಕರ್ತವ್ಯ; ಬಾಳಿಕೆ ಬರುವುದು ಎರಡನೇ ಕರ್ತವ್ಯ. ಇಲ್ಲಿ ತೋರಿಸಿರುವ ಗಡಿಯಾರವು ಇವೆರಡು ಲಕ್ಷಣಗಳನ್ನೂ ಪಡೆದಿರುತ್ತದೆ.

ಸ್ಪೆಷಲ್ ಏರ್ಪಾಡು! ಒಂದು ತಿಂಗಳಿಗೆ ಮಾತ್ರ



ಸ್ಪೆಷಲ್ ಏರ್ಪಾಡು! ಒಂದು ತಿಂಗಳಿಗೆ ಮಾತ್ರ

1. ರಾಸ್ಕೋಪ್ ಸಿಸ್ಟಂ ಲೀವರ್ ವಾಚ್	ರೂ.	1-14-0
2. ರೈಲ್ವೆ ಲೀವರ್ ರೆಗ್ಯುಲೇಟರ್	,,	2-4-0
3. ರೈಲ್ವೆ ಗಾರ್ಡ್ ಲೀವರ್	,,	2-6-0
4. ಟಾಂಬೆ ಮೇಲ್ ರೆಗ್ಯುಲೇಟರ್	,,	2-8-0
5. ಸುಂದರವಾದ ಕೈಗೆ ಕಟ್ಟಿಕೊಳ್ಳುವ ಸ್ಟ್ರಾಪ್ ಸಮೇತವಾದ ಬಲಿಷ್ಠ ಗಡಿಯಾರ	,,	3-8-0

ಈ ಗಡಿಯಾರಗಳ ಜೊತೆಗೆ ಸುಂದರವಾದ ಒಂದೊಂದು ಸರಪಣಿಯನ್ನು ಬಹುಮಾನವಾಗಿ ಕೊಡುವೆವು. [124-1]

ವಿಳಾಸ—ಟಿ. ಜಿ. ಎಲ್. ಕೃಷ್ಣ ಮತ್ತು ಕಂಪನಿ, 3-3, ಪೋಲೀಸ್ ಕಮಿಷನರ್ ಆಫೀಸ್ ರೋಡ್, ಎಗ್ಮೋರ್, ಮದರಾಸು.

ದರ್ಬಾರ್ ಸೋಪ್.

[ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್] ಕೇಶನಾಶಿನಿ.

ಕೆರತಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆರತ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಪಡಿಸಕ್ಕ ಸಾಧನಗಳಲ್ಲಿ

ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರದಲ್ಲೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಧನಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಹಿಡಿಯುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ವಿಳಾಸ:—ವಿ. ಎ. ಎಸ್. ಪಾಣಿ,

[123-1] ನಂ. 3, ಇರುಳಪ್ಪನ್ ಬೀದಿ, ಮದರಾಸು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಅಸಿಸ್ಟೆಂಟ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ನಡಿಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೋಕಿನಲ್ಲಿ ಸಂಬಳಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನ್ ಮತ್ತು ಮನೆಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟಮೆಂಟಿನ ಕಾರ್ಯಗಳನ್ನು ನಡಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಸೈಕ್ರೆಟರಿಗಳೂ ಸಹಾ ಬೇಕಾಗಿದೆ. ಇಷ್ಟವುಳ್ಳವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರಿಯಿರಿ.

M. L. NAGANNA,

[15-25] Managing Director, Life & Marriage Assurance Buildings, Mysore.

ವೃತ್ತಾಂತ ಪತ್ರಿಕೆ.

—:O:—

ಸನ್ ೧೯೧೫ನೇ ಇಸವಿ ಜುಲೈ ತಾ. ೧ನೇ ಗುರುವಾರ.

ಮೈಸೂರು ಸಂಪದಭ್ಯುದಯ ಸಮಾಜ.

ಈ ಮಹಾಸಭೆಯು ಇನ್ನೊಂದಾವರ್ತಿ ರಾಜಧಾನಿಯಲ್ಲಿ ಕೂಡಿ ವಿಷಯಗಳನ್ನು ಚರ್ಚೆಮಾಡಿದ್ದಾಯಿತು; ಇದು ಇನ್ನೊಂದು ವರುಷದ ತನಕ ಸೇರುವುದಾಗಿಲ್ಲ. ಪ್ರೆಸಿಡೆಂಟರು ಸಭೆಯಲ್ಲಿ ಮಾಡಿದ ಭಾಷಣದ ಕೆಲವು ಭಾಗಗಳನ್ನು ಎತ್ತಿ ಕಳೆದ ವಾರ ಪ್ರಕಟಿಸಿದೆವು. ಅವರು ಆ ಭಾಷಣದಲ್ಲಿ ಕಳೆದ ವರುಷ ನಡೆದಿರುವ ಕಾರ್ಯಗಳನ್ನು ವಿವರಿಸಿ ತಮ್ಮ ಅಭಿಮತವನ್ನು ಪ್ರಕಾಶಪಡಿಸಿರುತ್ತಾರೆ. ಆ ಭಾಷಣದಿಂದ ನಮ್ಮ ದಿವಾನ್‌ರವರಲ್ಲಿ ಈ ಸಂಸ್ಥಾನವನ್ನು ಅಭಿವೃದ್ಧಿಗೆ ತರಬೇಕೆಂಬ ಚಿಂತೆಯೂ ಉತ್ಸಾಹವೂ ಬಹಳ ಅಪಾರವಾಗಿರುವದನ್ನುವುದೂ, ಸಮಸ್ತ ಜಾತಿ ಕುಲಗೋತ್ರಗಳ ಪ್ರಜೆಗಳೂ ಏಕೀಭವಿಸಿ ಈ ಒಂದೇ ಉದ್ದೇಶದಿಂದ ಕಾರ್ಯಸಾಧನೆಮಾಡಬೇಕೆಂದು ಅವರು ತವಕಪಡುವುದೂ ವೇದ್ಯವಾಗುತ್ತವೆ.

ಬಹುಕಾಲದಿಂದಲೂ ನಮ್ಮ ಪ್ರಜೆಗಳು ಯಾವ ಅಭಿವೃದ್ಧಿ ಕಾರ್ಯಕ್ಕೂ ಪ್ರಭುವೂ ಆತನ ಅಂಗಗಳಾದ ಅಧಿಕಾರಿಗಳೂ ಮುಖ್ಯಕಾರಣರೆಂದು ತಿಳಿದು, ಅವರುಗಳ ಕೈಯನ್ನೇ ಕಾಯುವುದು ವಾಡಿಕೆಯಾಗಿ ಬಂದಿರುತ್ತದೆ. ಅವರುಗಳು ಕೈಹಾಕದೆ ಇರುವಂಥಾ ಕೆಲಸಕಾರ್ಯಗಳನ್ನು ಅವರು ಸಹಾಯಗೊಡದೆ ಅಟಂಕಪಡಿಸುತ್ತಾ ಬಂದ ಪದ್ಧತಿಯೇ ಅದಕ್ಕೆ ಕಾರಣವಾಯಿತು. ಅವರುಗಳು ಆತ್ಮಾವಲಂಬನೆಯನ್ನು ಕಂಡರೆ ಸಮಾಧಾನಪಡುತ್ತಿರಲಿಲ್ಲ. ಸಹಜವಾದ ಹಕ್ಕು ಬಾಧ್ಯತೆಗಳನ್ನು ಹಿಡಿದು ಹೋರಾಡತಕ್ಕ ಪ್ರಜೆಗಳು ಗವರ್ನ್‌ಮೆಂಟ್ ಅಧಿಕಾರಿಗಳ ಮೆಚ್ಚಿಕೆ ಪ್ರೀತಿ ಸನ್ಮಾನಗಳಿಗೆ ಬಾಹಿರರಾಗುತ್ತಿದ್ದರು. ಈಗ ಅಂಥಾ ಕಾಲ ಮರೆಯಾಗುತ್ತಾ ಬಂದಿದೆ. ಎಲ್ಲಾ ಕಡೆಗಳಲ್ಲೂ ನವೀನವಾದ ತಿಳುವಳಿಕೆಯು ಹುಟ್ಟಿ ಹಬ್ಬುತ್ತಿರುವುದು. ಇಂಥಾ ಬದಲಾವಣೆಯು ಪ್ರಭುವಿನಲ್ಲಿ ಉದ್ಭವವಾಗಿರುವುದೇ ಇದಕ್ಕೆ ಕಾರಣವಾಗಿದೆ. ಆದರೆ ಸರ್ಕಾರದ ಸಮಸ್ತ ಅಧಿಕಾರಿಗಳಲ್ಲೂ ಅಂಥಾ ತಿಳುವಳಿಕೆಯು ವ್ಯಾಪಿಸಿಯಾಗಿರುವುದೇ ಎಂದು ಸಂಶಯಪಡುತ್ತೇವೆ. ಹ್ಯಾಗೂ ಪ್ರಜೆಗಳ ಶ್ರೇಯಸ್ಸಿಗೆ ಹಿ[illegible]ಂದು ನಿಶ್ಚಯಿಸಲ್ಪಡತಕ್ಕ ವಿಚಾರಗಳನ್ನು ಗವರ್ನ್‌ಮೆಂಟಿನವರು ಪ್ರೀತಿಯಿಂದ ಲಾಲಿಸಿ, ಅಂಥವುಗಳಿಗೆ ಸಹಾಯ ಪ್ರೋತ್ಸಾಹಾದಿಗಳನ್ನು ಒದಗಿಸಲು ಸಿದ್ಧರಾಗಿರುತ್ತಾರೆಂಬ ಭಾಗವು ಈಗೀಗ ಸ್ಪಷ್ಟವಾಗಿ ಗೋಚರಕ್ಕೆ ಬರುತ್ತಿದೆ.

ನಮ್ಮ ಸೀಮೆಯ ಪ್ರಜೆಗಳು ಇನ್ನೂ ಪೂರ್ವಾಚಾರಗಳಲ್ಲೇ ವಿಶೇಷ ಅಭಿರುಚಿಯುಳ್ಳವರಾಗಿದಾರೆಂದೂ, ಬದಲಾವಣೆಯನ್ನು ರೂಢಿಸುವುದು ಬಹಳ ನಿಧಾನವಾಗುತ್ತದೆಂದೂ ನಮ್ಮ ದಿವಾನ್‌ರವರು ತಿಳಿದುಕೊಂಡಿದಾರೆ. ಇನ್ನೂ ಅನೇಕ ಕಾಲದ ತನಕ ಪ್ರಜೆಗಳಿಗೆ ವಿದ್ಯೆಯನ್ನೂ ವಿವೇಕವನ್ನೂ ಕಲಿಸುತ್ತಾ ಬರಬೇಕಾಗಿದೆ. ಬುದ್ಧಿ ವಿವೇಕಾದಿಗಳನ್ನು ಪ್ರಯೋಗಿಸಿ ಕಾರ್ಯಗಳನ್ನು ಮಾಡತಕ್ಕವರ ಸಂಖ್ಯೆಯು ಇನ್ನೂ ಹೇರಳವಾಗಬೇಕು. ಪ್ರಜೆಗಳಲ್ಲಿ ಕಾರ್ಯಾಸಕ್ತತೆಯನ್ನು ಹುಟ್ಟಿಸುವ ಭಾಗದಲ್ಲಿ ಸರ್ವಪ್ರಯತ್ನವನ್ನೂ ಮಾಡಬೇಕು. ಆದರೆ ಬಹು ಜನರ ಸಮ್ಮತಿಯನ್ನು ಪಡೆಯದೆ ಇರುವಂಥಾ ನವೀನವಾದ ಕೆಲಸವನ್ನು ಪ್ರಾರಂಭಿಸಬೇಕೆಂದು ಕುತೂಹಲ ಪಡುವ ಪುರುಷನಿಗೆ ಭಯ ಭಕ್ತಿ ಭರವಸೆಗಳನ್ನುಳ್ಳ ಸಹಾಯಕಾರಿಗಳು ದೊರಕುವುದು ಪ್ರಯಾಸವಾಗಿದೆ. ಸಂಬಳ ತೆಗೆದುಕೊಂಡು ಕೆಲಸ ಮಾಡತಕ್ಕವರು ತಮ್ಮ ಸಂಬಳಕ್ಕೆ ಅನುರೂಪವಾದಷ್ಟು ಕಾರ್ಯವನ್ನಾದರೂ ಮಾಡದೆ ಅಲ್ಪಸ್ವಲ್ಪ ಮಾಡತಕ್ಕವರಾಗಿದಾರಲ್ಲದೆ ಹಿಡಿದ ಕಾರ್ಯವನ್ನು ಸಾರ್ಥಕವಾಗಿ ಪೂರ್ತಿಮಾಡುವುದರಲ್ಲಿ ಸಾಹಸಪಡುವವರಾಗಿಲ್ಲ. ಸಂಬಳವನ್ನಪೇಕ್ಷಿಸದೆ ಕೆಲಸ ಮಾಡತಕ್ಕವರು ಸ್ಕೂಲ್ ಕಮಿಟಿ, ಗ್ರಾಮ ಕಮಿಟಿ, ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳಲ್ಲಿ ಮೆಂಬರ ಸ್ಥಾನಗಳನ್ನು ಅಲಂಕರಿಸಲು ಸಮ್ಮತಿಸುತ್ತಾರೆ; ಆಯಾ ಸ್ಥಾನಗಳಲ್ಲಿದ್ದುಕೊಂಡು ಮಾಡಬೇಕಾದ ಕಾರ್ಯಗಳನ್ನು ಮುತುವರ್ಜಿ ವಹಿಸಿ ನಡಿಸಲು ಸಮಯವನ್ನಾಗಲಿ ಬುದ್ಧಿಶಕ್ತಿಯನ್ನಾಗಲಿ ವಿನಿಯೋಗಿಸುವುದಿಲ್ಲ. ಇವರು ಈ ರೀತಿ ಮಾಡೋಣದರಿಂದ ಅಧಿಕಾರಿಯ ಕೆಲಸಗಳು ಹೆಚ್ಚುವವು; ಇದರಿಂದ ಅಧಿಕಾರಿಗೆ ಎಲ್ಲಾ ಅಧಿಕಾರವೂ ಸೇರಿಹೋಗುತ್ತದೆ. ಸ್ಥಳೀಯ ಸ್ವಾರಾಜ್ಯವು ಸಾರ್ಥಕ ಹೊಂದಬೇಕಾದಲ್ಲಿ ಕಮಿಟಿಗಳಿಗೆ ನೇಮಕವಾಗುವಂಥಾ ಜನಗಳು ತಮ್ಮ ಕರ್ತವ್ಯಗಳನ್ನು ಮಾಡಿಯೇ ತೀರಬೇಕು. ಅವರ ಸ್ಥಾನವೇನೋ ಗೌರವಯುಕ್ತವಾದದ್ದಾದರೂ ಅವರು ಅದರಲ್ಲಿ ಘನತೆಗಾಗಿ ಮೆಂಬರಾಗಿದೇವೆಂದು ಇಟ್ಟುಕೊಳ್ಳಲೇ ಬಾರದು; ಆ ಸ್ಥಾನಕ್ಕೆ ತಕ್ಕ ಜವಾಬ್ದಾರಿಯೂ, ಜವಾಬ್ದಾರಿಗೆ ತಕ್ಕ ಕೆಲಸ ಕಾರ್ಯಗಳೂ ಇದ್ದೇ ಇರುವವೆಂದು ತಿಳಿಯತಕ್ಕವರಾಗಬೇಕು. ಕೋರಮಿಗೆ ಬೇಕಾಗುವಷ್ಟು ಮೆಂಬರುಗಳು ಹಾಜರಾಗದೆ ಎಷ್ಟೋ ಕಮಿಟಿಗಳು ನಿಲ್ಲಿಸಲ್ಪಡುವವು. ಹಾಜರಾದವರ ಸಮಯ ಹಾಳಾಗುತ್ತದೆ; ಕೆಲಸ ಸಾಗುವುದಿಲ್ಲ; ಕೆಲಸ ನಿರ್ಬಂಧವಾಗದೆ ಅಧಿಕಾರಿಯ ಕೈಕಟ್ಟಿಹೋಗುವುದು. ಆದಕಾರಣ ಜನಗಳಲ್ಲಿ ಕರ್ತವ್ಯದ ಮೇಲೆ ವಿಶೇಷವಾದ ಭಕ್ತಿಯೂ ಪ್ರೀತಿಯೂ ಉಂಟಾಗುವ ತನಕ ನಮ್ಮ ದೇಶಕ್ಕಾಗಲಿ ನಮ್ಮ ಪ್ರಜೆಗಳಿಗಾಗಲಿ ಸೌಭಾಗ್ಯವು ಲಭ್ಯವಾಗುವುದಿಲ್ಲ. ನಿಲುಗಡೆ ಇಲ್ಲದಂಥಾ ದೀರ್ಘವಾದ ಉಪನ್ಯಾಸಗಳನ್ನೂ ಭಾಷಣಗಳನ್ನೂ ಬೇಕಾದಷ್ಟು ಮಾಡಬಹುದು; ಅದಕ್ಕೆ ತಕ್ಕಂತೆ ನಡೆಯದಿದ್ದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಈ ಸಂದರ್ಭದಲ್ಲಿ ಪ್ರಾಪ್ತವಾಗುವ ಒಂದು ದೊಡ್ಡ ಕೇಡನ್ನು ಸೂಚಿಸಲಪೇಕ್ಷಿಸುತ್ತೇವೆ. ಒಡಬಿರುಸಾಗಿಯೂ, ವಾಗಾಡಂಬರದಿಂದಲೂ, ನಿಲುಗಡೆ ಇಲ್ಲದೇನೂ ಭಾಷಣ ಮಾಡುವಂಥವರು "ನನ್ನಿಂದ ಎಷ್ಟೋ ಉಪಕಾರವಾಗಿದೆ" ಎಂದು ಭ್ರಮಿಸುವರು; ಆದರೆ ಅವರಿಂದ ಯಾವ ಭಾಗದಲ್ಲೂ ಎಳ್ಳಷ್ಟೂ ಉಪಕಾರವಾಗುವುದಿಲ್ಲ.

ಸಂಪದಭ್ಯುದಯಸಮಾಜದವರು ಐದು ವರುಷಗಳಿಂದ ಪ್ರಜಾಮುಖಂಡರ ಕೂಡ ಕಲೆತು ಪರ್ಯಾಲೋಚನೆಮಾಡಿದ್ದು ಸಾಕಾಗಿದೆ ಎಂದು ನಮಗೆ ತೋರುತ್ತದೆ. ಈ ಸಮಾಜದಿಂದ ಈಗ ಆಗಿರುವುದಕ್ಕಿಂತ ಇನ್ನೇನೂ ಹೆಚ್ಚು ಕೆಲಸಗಳು ನಡೆಯಲಾರವು. ಒಂದು ವೇಳೆ ಕಮಿಟಿಗಳಿದ್ದು ಚರ್ಚೆಗಳನ್ನು ನಡಿಸಿದರೂ ನಡಿಸಲಿ; ಆದರೆ ಈ ಕಮಿಟಿಗಳೂ ಸರ್ಕಾರದ ಖಾಯಂ ಇಲಾಖೆಗಳೂ ಏಕವಾಗಿ ಕಾರ್ಯಗಳನ್ನು ನಡಿಸದೆ ಪ್ರತ್ಯೇಕ ಪ್ರತ್ಯೇಕವಾಗಿರೋಣದರಿಂದ ಅಷ್ಟೇನೂ ಹಿತವಾಗಲಾರದೆಂದು ನೆನಸುತ್ತೇವೆ.

ದೇವರ ಸ್ನೇಹವನ್ನು ಪಡೆಯುವದಕ್ಕಾಗಿ ಇಹಲೋಕದ ಭೋಗವನ್ನು ತ್ಯಜಿಸಿದವನು.

ಬಹಳ ಪೂರ್ವಕಾಲಕ್ಕೆ ಮುಂಚೆ, ಸುಮಾರು ಆರ್ಯರು ಹಿಂದೂದೇಶವನ್ನು ಮೊದಲು ಪ್ರವೇಶಿಸಿದಾಗ ಮೆಸೊಪೊಟೇಮಿಯ ದೇಶದಲ್ಲಿ ಅಬ್ರಹಾಮನೆಂಬ ಒಬ್ಬ ಯೌವನಸ್ಥನಿದ್ದನು. ಇವನೂ ಇವನ ತಂದೆತಾಯಿಗಳೂ ಅಣ್ಣತಮ್ಮಂದಿರೂ ಅಕ್ಕತಂಗಿಯರೂ ಒಂದೇ ಕುಟುಂಬವಾಗಿ ವಾಸಮಾಡುತ್ತಿದ್ದರು. ಇವನ ತಂದೆಯು ಪುಷ್ಕಳವಾದ ಸ್ಥಿರಆಸ್ತಿಯನ್ನೂ ಚರಸೊತ್ತನ್ನೂ ಸಂಪಾದಿಸಿದ್ದನು. ಇವರ ಮನೆಯಲ್ಲಿರುವವರೆಲ್ಲರಿಗೆ ಊಟಉಪಚಾರ, ಉಡಿಗೆತೊಡಿಗೆಗಳಿಗೆ ಏನೂ ಕಡಿಮೆ ಇರಲಿಲ್ಲ. ಬದುಕನ್ನು ರಕ್ಷಿಸಿ ಪಿತ್ರಾರ್ಜಿತವನ್ನು ಹೆಚ್ಚಿಸುವದಕ್ಕೆ ಒಳ್ಳೇ ಅವಕಾಶವಿದ್ದಿತು. ಅಬ್ರಹಾಮನು ಬುದ್ಧಿಶಾಲಿಯೂ ಆಲೋಚನಾಪರನೂ ಆಗಿದ್ದನು. ಅವನ ಸಂಬಂಧಿಗಳೂ ನೆರೆಹೊರೆಯವರೂ ಸ್ಥಿರಾಸ್ತಿಯೆಂದು ಭಾವಿಸಿ ನಂಬಿದ್ದ ತೋಟ, ಹೊಲ, ಗದ್ದೆಗಳು ಅವನಿಗೆ ಸ್ಥಿರಾಸ್ತಿಯಾಗಿ ತೋರಲಿಲ್ಲ. ಚರಾಸ್ತಿಯೆಂದು ಅವನ ತಂದೆತಾಯಿಗಳು ಸೇರಿಸಿಟ್ಟಿದ್ದ ಬೆಳ್ಳಿ ಭಂಗಾರವು ಅವನ ಮನಸ್ಸಿಗೆ ತೃಪ್ತಿಯನ್ನೂ ನೆಮ್ಮದಿಯನ್ನೂ ಉಂಟುಮಾಡಲಿಲ್ಲ. ನನ್ನನ್ನು ಈ ಲೋಕಕ್ಕೆ ಯಾರು ಕಳುಹಿಸಿದನು? ಆತನಿಗೂ ನನಗೂ ಸಂಬಂಧವೇನು? ಆತನ ದರ್ಶನವು ನನಗೆ ಆಗುವದು ಹ್ಯಾಗೆ? ಈ ಮುಂತಾದ ಪಾರಮಾರ್ಥಿಕ ಪ್ರಶ್ನೆಗಳು ಅವನ ಮನಸ್ಸನ್ನು ಹೊಕ್ಕು ಇವುಗಳನ್ನೇ ವಿಚಾರಿಸಲಾರಂಭಿಸಿದನು. ಮತ್ತು ಈ ಪ್ರಶ್ನೆಗಳಿಗೆ ತಕ್ಕ ಪ್ರತ್ಯುತ್ತರವು ನನಗೆ ದೊರಕುವ ವರೆಗೂ ನಾನು ತೃಪ್ತನಾಗಲಾರೆನೆಂದು ನಿಶ್ಚಯಿಸಿಕೊಂಡು ದೇವರ ಧ್ಯಾನದಲ್ಲಿ ನಿರತನಾಗಿರುವಲ್ಲಿ ದೇವರು ಅವನಿಗೆ ಪ್ರಸನ್ನನಾಗಿ ಹೇಳಿದ್ದೇನಂದರೆ—ಎಲೈ ಅಬ್ರಹಾಮನೇ ನೀನು ನಿನ್ನ ದೇಶದೊಳಗಿಂದಲೂ ಬಂಧುಗಳ ಬಳಿಯಿಂದಲೂ ನಿನ್ನ ತಂದೆಯ ಮನೆಯೊಳಗಿಂದಲೂ ಹೊರಟು ನಾನು ನಿನಗೆ ತೋರಿಸುವ ದೇಶಕ್ಕೆ ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗಿ ಹೆಚ್ಚಿಸಿ ನಿನ್ನನ್ನು ಆಶೀರ್ವದಿಸಿ ಉದ್ಧರಿಸುವೆನು ಎಂದು ಹೇಳಿದನು. ಅಬ್ರಹಾಮನು ಈ ಮಾತನ್ನು ಕೇಳಿ ಸ್ವಲ್ಪವೂ ಸಂದೇಹಪಡದೆ ತನಗಿದ್ದ ಪಿತ್ರಾರ್ಜಿತ, ಬಂಧುಮಿತ್ರರೇ ಮುಂತಾದ್ದೆಲ್ಲವನ್ನೂ ತ್ಯಜಿಸಿ ದೇವರು ತನ್ನನ್ನು ಕಳುಹಿಸಿದ ದೇಶಕ್ಕೆ ಆತನ ಮಾತನ್ನು ನಂಬಿ ಹೋದನು. ಇದಕ್ಕೆ ಪ್ರತಿಯಾಗಿ ದೇವರು ಅಬ್ರಹಾಮನಿಗೆ ಆ ಪರದೇಶದಲ್ಲಿ ಪುನಃ ದರ್ಶನವನ್ನು ಕೊಟ್ಟು ಅವನನ್ನು ತನ್ನ ಸ್ನೇಹದಿಂದ ತೃಪ್ತಿಪಡಿಸಿದನು. ಮತ್ತು ದೇವರು ಅವನಿಗೆ ನೀನು ನನ್ನ ಮಾತನ್ನು ನಂಬಿ ನಿನ್ನ ತಂದೆಯ ಪಿತ್ರಾರ್ಜಿತವೆಲ್ಲವನ್ನೂ ಬಿಟ್ಟು ನನ್ನ ಹಿಂದೆ ಬಂದದ್ದರಿಂದ ಇನ್ನು ಮುಂದೆ ನಿನ್ನ ಹಾಗೆ ನನ್ನನ್ನು ನಂಬುವವರಿಗೆ ನೀನು ತಂದೆಯೆನ್ನಿಸಿಕೊಂಡು ನನಗೆ ಸ್ನೇಹಿತನಾಗಿರು ಎಂದು ಅವನನ್ನು ಆಶೀರ್ವದಿಸಿದನು. ಕಾನಾನ್ ಅಥವಾ ಪಾಲೆಸ್ತೀನ್ ದೇಶಕ್ಕೆ ಬಂದು ನೆಲಸಿದ ಇಸ್ರಾಯೇಲ್ ಜನಗಳ ಮೂಲಪಿತನೇ ಈ ಅಬ್ರಹಾಮನು.

ಇಹಲೋಕದ ಬಾಳು ಆಸ್ತಿಸೊತ್ತುಗಳು ದೇವರ ಅನುಗ್ರಹದಿಂದ ನಮಗೆ ಲಭಿಸುತ್ತವೆ. ಆದರೆ ಇಹಲೋಕದ ಜೀವನವಾದರೂ ಆಸ್ತಿ ಸೊತ್ತುಗಳಾದರೂ ಜೀವಾತ್ಮನಿಗೆ ಸ್ಥಿರವಾದ ತೃಪ್ತಿಯನ್ನು ಕೊಡಲಾರವು. ಮನುಷ್ಯನಲ್ಲಿ ನಿತ್ಯವಾಗಿ ಬದುಕುವ ಜೀವಾತ್ಮವುಂಟು. ಆ ಆತ್ಮನಿಗೆ ದೃಶ್ಯವಾದ ಸಮಸ್ತ ಆಸ್ತಿ ಸೊತ್ತುಗಳೂ ನೆರಳಿನಂತೆ ಅನಿತ್ಯವಾಗಿಯೂ ನಾಶವಾಗುವವುಗಳಾಗಿಯೂ ವಿಕಾರಕ್ಕೊಳಪಟ್ಟವುಗಳಾಗಿಯೂ ಇರುತ್ತವೆ. ಆದರೆ ನೆರಳು ನಿಜವಸ್ತುವಿನ ಆಕಾರವನ್ನೂ ರೂಪವನ್ನೂ ಲಕ್ಷಣಗಳನ್ನೂ ಸೂಚಿಸುತ್ತವೆ. ಹಾಗೆಯೇ ಈ ಲೋಕವೂ ಅದರೊಳಗಿರುವ ಸಕಲವೂ ದೇವರ ಮತ್ತು ಆತನ ಲೋಕದ ಛಾಯೆಗಳಾಗಿರುತ್ತವೆ. ಸೂರ್ಯ ಚಂದ್ರ ಗಾಳಿ ಮಳೆ ಭೂಮಿಯೂ ಅದರಲ್ಲಿ ಹುಟ್ಟುವಳಿಯಾಗುವ ಫಲಪುಷ್ಪಗಳೂ ದೇವರನ್ನು ನಮಗೆ ಪ್ರಕಟಿಸುತ್ತವೆ. ಆತನ ಮಹಿಮೆಯೂ ಜ್ಞಾನವೂ ಪ್ರೀತಿಯೂ ಈ ವಸ್ತುಗಳಿಂದ ನಮಗೆ ಪ್ರಕಟವಾಗುತ್ತವೆ. ರಾಮನು ಚಿಕ್ಕ ಮಗುವಾಗಿದ್ದಾಗ ಚಂದ್ರನನ್ನು ನೋಡಿ—ನನಗೆ ಅದನ್ನು ಕೊಡಿರಿ ಎಂದು ಅಳಲಾರಂಭಿಸಿದನಂತೆ. ಅವನನ್ನು ಸಮಾಧಾನಪಡಿಸುವದಕ್ಕೆ ಏನೇನು ಕೊಟ್ಟಾಗ್ಯೂ, ಅವನು ಒಪ್ಪದೆ ನನಗೆ ಆ ಚಂದ್ರನೇ ಬೇಕು; ನನಗೆ ಅದನ್ನು ಕೊಡಿರಿ ಎಂದು ಹಟಹಿಡಿದ ಮಗುವನ್ನು ಬುದ್ಧಿವಂತನಾದ ಮಂತ್ರಿಯು ಸಮಾಧಾನಪಡಿಸುವದಕ್ಕೆ ಒಂದು ಬಟ್ಟಲಲ್ಲಿ ನೀರನ್ನು ಹೊಯಿದು ಚಂದ್ರನ ಬೆಳಕಿನಲ್ಲಿಟ್ಟಾಗ ಅದರಲ್ಲಿ ಪ್ರತಿಬಿಂಬಿಸಿದ ಚಂದ್ರನ ಛಾಯೆಯನ್ನು ನೋಡಿ ಸಮಾಧಾನಹೊಂದಿದನೆಂದು ಹೇಳುತ್ತಾರೆ.

ಇದರಂತೆ ದೇವರನ್ನು ಇಹಲೋಕದ ವಸ್ತುಗಳಿಂದ ಸ್ವಲ್ಪಮಟ್ಟಿಗೆ ನಾವು ಅರಿತರೂ ಅವುಗಳನ್ನೇ ಸಂಪಾದಿಸಿ ನಿತ್ಯವಾಗಿ ಅವುಗಳಲ್ಲೇ ಮಗ್ನರಾಗಿ ತೃಪ್ತಿಹೊಂದಿ ಇರುವೆವೆಂದು ನೆನಸುವದು ಅಜ್ಞಾನವಾಗಿದೆ. ಈ ಲೋಕವೂ ಅದರಲ್ಲಿರುವ ಸಕಲ ಚರಾಚರಗಳೂ ನಮ್ಮನ್ನು ತಕ್ಕಮಟ್ಟಿಗೆ ತೃಪ್ತಿಗೊಳಿಸಿ ಸಂತೋಷಪಡಿಸುತ್ತವೆ. ಆದರೆ ಯಾರಿಂದ ಇದೆಲ್ಲವೂ ಹೊರಟು ಬಂದು ನಿಂತಿದೆಯೋ ಯಾರಲ್ಲಿ ಇದೆಲ್ಲವೂ ಲೀನವಾಗಿದೆಯೋ ಆ ದೇವರು ನಮಗೆ ಇನ್ನೆಷ್ಟು ಸಂತೋಷವನ್ನೂ ತೃಪ್ತಿಯನ್ನೂ ಕೊಡಬಲ್ಲವನಾಗಿರುವನು? ಆತನನ್ನು ಪ್ರತಿಯೊಬ್ಬನೂ ಆಶ್ರಯಿಸಿ ಧನ್ಯನಾಗಬೇಕು.

ಆದರೆ ದೇವರು ಅಬ್ರಹಾಮನನ್ನು ಕರೆದು ತನ್ನ ಸ್ನೇಹಿತನನ್ನು ಮಾಡಿಕೊಂಡನು. ನಮ್ಮನ್ನು ಆತನು ಕರೆದು ನನ್ನ ಸ್ನೇಹಿತರಾಗಿರಿ ಎಂದು ಹೇಳುತ್ತಾನೋ? ಎಂದು ವಾಚಕರು ಕೇಳುವರು. ಇದಕ್ಕೆ ಪ್ರತ್ಯುತ್ತರವೇನಂದರೆ— ದೇವರು ಯಾರಿಗೂ ಈ ಲೋಕದಲ್ಲಿ ಸಂಪೂರ್ಣವಾದ ತೃಪ್ತಿಯನ್ನೂ ಆನಂದವನ್ನೂ ಕೊಡದೆ ಜೀವಾತ್ಮಗಳಾಗಿರುವ ಎಲ್ಲಾ ಮನುಷ್ಯರೂ ತನ್ನನ್ನೇ ಹುಡುಕಬೇಕೆಂದು ಆ ಮೂಲಕ ಪ್ರೇರಿಸುತ್ತಾನೆ. ಲೋಕದಲ್ಲಿ ಆಸ್ತಿಯೂ ಅಧಿಕಾರವೂ ಕೀರ್ತಿಯೂ ಯೌವನವೂ ಆರೋಗ್ಯವೂ ದೀರ್ಘಾಯುಸ್ಸೂ ಯಾರಿಗೆ ನೆಲೆಯಾಗಿವೆ? ಯಾರಿಗೆ ವಿಚ್ಛಿತ್ತಿ ಇಲ್ಲದ ಪರಮಾನಂದವನ್ನುಂಟುಮಾಡಿವೆ? ದೇವರೊಬ್ಬನಲ್ಲಿಯೇ ಮನುಷ್ಯರೆಲ್ಲರೂ ಬಯಸಿ ಹಂಬಲಿಸುತ್ತಿರುವ ಪರಮಾನಂದವು ದೊರಕುವದು. ಸೂರ್ಯನು ಉದಯಿಸಿ ಉಷ್ಣವಾದ ಗಾಳಿ ಬೀಸಿ ಹೂವನ್ನು ಬಾಡಿಸಲು ಆ ಹೂವು ಉದುರಿ ಅದರ ಮುಖದ ಸೊಗಸು ಕೆಡುತ್ತದೆ. ಮೋಸಹೋಗಬೇಡಿರಿ, ಒಳ್ಳೇದಾಗಿರುವ ಸಮಸ್ತ ದಾನವೂ ಸಂಪೂರ್ಣವಾಗಿರುವ ಸಮಸ್ತ ವರವೂ ಮೇಲಣಿಂದ ಉಂಟಾಗಿ ಬೆಳಕುಗಳಿಗೆ ಮೂಲಕಾರಣನಾದವನಿಂದ ಇಳಿದು ಬರುತ್ತವೆ. ಆತನಲ್ಲಿ ವಿಕಾರವೂ ಗ್ರಹದ ನೆರಳೂ ಉಂಟಾಗುವದಕ್ಕೆ ಅವಕಾಶವಿಲ್ಲ. ಆತನೇ ನಿಜವಸ್ತುವಾದ ದೇವರು.

ಯುದ್ಧದ ಸಮಾಚಾರಗಳು.

ಫ್ರೆಂಚರಿಗಾದ ಜಯಪ್ರದಗಳು.

ರಷ್ಯಾದವರು ಇನ್ನೂ ಹಿಮ್ಮೆಟ್ಟಿಹೋಗುವುದು.

ಕಳೆದ ವಾರ ಬಂದಿರುವ ತಂತೀವರ್ತಮಾನಗಳಿಂದ ರಣರಂಗದ ಅನೇಕ ಠಾಣ್ಯಗಳಲ್ಲಿ ಕದನಗಳು ಅಪಾರವಾಗಿ ನಡೆದಿರುವವೆಂದೂ, ಒಂದು ವೇಳೆ ಒಂದು ಪಕ್ಷದವರಿಗೂ, ಇನ್ನೊಂದು ವೇಳೆ ಎದುರುಪಕ್ಷದವರಿಗೂ ಜಯಾಪಜಯಗಳು ಆಗಿರುವವೆಂದೂ, ಆದರೆ ಇದುವರೆಗೆ ಯಾವ ಕಡೆಯವರಿಗೂ ನಿಶ್ಚಿತವಾದ ಫಲಿತಾಂಶಗಳುಂಟಾಗಿಲ್ಲವೆಂದೂ ಗೊತ್ತಾಗುತ್ತದೆ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚರು ತಮ್ಮ ಸೈನ್ಯಗಳ ದೀರ್ಘಸಾಲಿನ ಉದ್ದಕ್ಕೂ ಎರಡು ಮೂರು ಠಾಣ್ಯಗಳಲ್ಲಿ ಚಟುವಟಿಕೆಯಾಗಿ ಯುದ್ಧಕಾರ್ಯಗಳನ್ನು ನಡಿಸಿದ್ದರಲ್ಲಿ ಅವರು ಪ್ರತಿ ಒಂದು ಕಡೆಯೂ ಜಯಹೊಂದಿ ಅಲ್ಪಸ್ವಲ್ಪ ಮುಂದರಿಸಿ ನುಗ್ಗಿಹೋಗಿರುತ್ತಾರೆ. ಉತ್ತರ ಪಾರ್ಶ್ವದಲ್ಲಿ ಬಹು ಕಠಿಣವಾದ ಕದನ ನಡೆಯಿತು; ಅದು ಇನ್ನೂ ನಡೆಯುತ್ತಿರುವುದು. ಜರ್ಮನಿಯವರು ಕಟ್ಟಿಕೊಂಡಿರುವ ಕೆಲವು ಕೋಟೆಗಳನ್ನು ಫ್ರೆಂಚರು ಅವರಿಂದ ಕಿತ್ತುಕೊಳ್ಳಬೇಕೆಂದು ಸಾಹಸಪಡುತ್ತಿರುವರು. ಕೆಲವು ಕಡೆ ಜರ್ಮನಿಯವರು ಬಹು ವಿಶೇಷವಾದ ಪರಾಕ್ರಮದಿಂದ ಕಾದಿದರು; ಆದರೂ ಇನ್ನು ಕೆಲವೆಡೆಗಳಲ್ಲಿ ಅವರ ಪರಾಕ್ರಮವು ಕುಂದಿಹೋಯಿತು. ಒಂದು ಠಾಣ್ಯದಲ್ಲಿ 25 ಮಂದಿ ಫ್ರೆಂಚ್ ಸೈನಿಕರನ್ನು ಎದುರಿಸಲಾರದೆ 300 ಮಂದಿ ಜರ್ಮನಿಯವರು ಓಡಿಹೋದರು. ಇನ್ನೊಂದು ಕಡೆ ಜರ್ಮನಿಯವರು ಹಿಂದಿನಿಂದ 900 ಪ್ರಷ್ಯಾ ಸೈನಿಕರನ್ನು ಮುಂದಕ್ಕೆ ಕರೆದುತಂದು ಯುದ್ಧ ಮಾಡಿ ಎಂದು ಬಿಟ್ಟರು. ಇವರು ಫ್ರೆಂಚರ ಮೇಲೆ ನುಗ್ಗಿ ಯುದ್ಧ ಮಾಡಲಾರದೆ ಅವರಿಗೆ ಶರಣಾಗತರಾಗಿ ಕೈಸೆರೆಯಾದರು. ಈ ಭಾಗದಲ್ಲಿ ನಡೆದಿರುವ ಯುದ್ಧಕಾರ್ಯಗಳ ಫಲಿತಾಂಶವೇನಾಯಿತೆಂದರೆ—ಫ್ರೆಂಚರು ಅಲ್ಪಸ್ವಲ್ಪ ಮುಂದರಿಸಿ ನುಗ್ಗಿಹೋಗಿರುತ್ತಾರೆ; ಮತ್ತು ಜರ್ಮನಿಯವರು ಅವರನ್ನು ಹಿಮ್ಮೆಟ್ಟಿಸಬೇಕೆಂದು ಎಷ್ಟಾವರ್ತಿ ನುಗ್ಗಿಬಂದು ಸಾಹಸಪಟ್ಟು ಕದನ ಮಾಡಿದರೂ ಅವರು ಜರ್ಮನಿಯವರಿಗೆ ಸ್ವಲ್ಪಕೊಡದೆ ತಮ್ಮ ಠಾಣ್ಯಗಳನ್ನು ಕಾಪಾಡಿಕೊಂಡಿರುವರು. ಜರ್ಮನಿಯವರು ಆಸ್ಪತ್ರೆಗಳ ಮೇಲೂ, ಗಾಯಪಟ್ಟವರ ಮೇಲೂ ಗುಂಡುಗಳನ್ನು ಹಾಕಿದರು; ಇದರಿಂದ ಹಲವರು ಕೊಲೆಯಾದರು. ಆ ಠಾಣ್ಯದ ಬಳಿ ವಿಮಾನಕಾರರು ಜರ್ಮನಿಯವರ ವಿಮಾನ ಯಂತ್ರಗಳಿದ್ದ ತಬೇಲಿಗೆ ಗುಂಡುಗಳನ್ನು ಸುರಿಸಿ, ನಾಲ್ಕು ತಬೇಲಿಗಳನ್ನು ನಾಶಮಾಡಿದರು; ಎರಡು ವಿಮಾನ ಯಂತ್ರಗಳೂ, ಒಂದು ಆಕಾಶ ಬುಟ್ಟಿಯೂ ಹಾಳುಮಾಡಲ್ಪಟ್ಟವು.

ಅಲ್ಲಿಂದ ದಕ್ಷಿಣಕ್ಕೆ ಯುದ್ಧಸಾಲಿನ ಎರಡು ಮೂರು ಠಾಣ್ಯಗಳಲ್ಲಿ ಘೋರವಾದ ಕದನಗಳು ನಡೆದಿರುತ್ತದೆ. ಆಲ್ಸೇಸಿನಲ್ಲಿ ಫ್ರೆಂಚ್ ಸೈನ್ಯಗಳು ವಿಶೇಷವಾಗಿ ಮುಂದರಿಸಿ ನುಗ್ಗಿಹೋಗಿರುವವು. ಅವರು ಜರ್ಮನಿ ಯುದ್ಧಭಟರಲ್ಲಿ 25 ಮಂದಿ ಹುದ್ದೇದಾರರನ್ನೂ 691 ಸೈನಿಕರನ್ನೂ ಕೈಸೆರೆ ಹಿಡಿದಿರುತ್ತಾರೆ. ಜರ್ಮನಿಯ ಸೈನಿಕರು ಕೆಲವು ವೇಳೆ ವಿಷವಾಯುಗಳನ್ನು ಹರಡುವಂಥಾ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು.

ಬೆಲ್ಜಿಯಮ್ ಸೈನಿಕರು ತಮ್ಮ ಸಾಲಿನಲ್ಲಿ ಜರ್ಮನಿಯವರ ಒಂದು ಕಂದಕವನ್ನು ಗೆದ್ದುಕೊಂಡರು. ಆದರೂ ಬೆಲ್ಜಿಯಮ್ ಉತ್ತರಭಾಗದಲ್ಲಿ ವಿಶೇಷ ಕಡಿದಾಟಗಳೇನೂ ಆಗಿಲ್ಲ.

ಬ್ರಿಟಿಷ್ ಸೈನ್ಯಗಳಿರುವ ಸಾಲಿನಲ್ಲಿ ಕೆಲವು ಕಡೆ ಕಠಿಣವಾದ ಕದನಗಳಾಗಿರುತ್ತವೆ. ಈ ಕದನಗಳು ಇಪ್ರೆಯ ಪೂರ್ವಭಾಗದಲ್ಲಿ ನಡೆದಿರುವವು. ಫಿರಂಗಿ ಗುಂಡುಗಳ ಮಳೆ ಸುರಿಸಲ್ಪಟ್ಟದ್ದರಿಂದ ಶತ್ರುವಿನ ಮುಂಭಾಗದಲ್ಲಿದ್ದ ಮುಳ್ಳು ತಂತಿಗಳ ತಡೆಗಳೆಲ್ಲಾ ನಾಶವಾದವು, ಬಳಿಕ ಫಿರಂಗಿ ಗುಂಡುಗಳನ್ನು ಶತ್ರುವಿನ ಕಂದಕಗಳಿಗೆ ಗುರಿಕಟ್ಟಿ ಹೊಡೆಯಲಾಯಿತು. ಇದಾದ ಬಳಿಕ ಬೆಳಕು ಹರಿಯುವುದಕ್ಕೆ ಮೊದಲೇ ಬ್ರಿಟಿಷ್ ಸೈನಿಕರು ಶತ್ರುಗಳ ಮೇಲೆ ನುಗ್ಗಿ ಹೋಗಿ ಕೆಲವು ನಿಮಿಷಗಳೊಳಗಾಗಿ ಶತ್ರುವನ್ನೆಲ್ಲಾ ಹೊರಡಿಸಿ ಅವರ ಕಂದಕಗಳನ್ನು ಆಕ್ರಮಿಸಿಕೊಂಡರು. ಜರ್ಮನಿಯವರು ಗಾಬರಿಬಿದ್ದು ಚೆಲ್ಲಾಪಿಲ್ಲಿಯಾದರು. ಕೆಲವರು ಬಂದೂಕುಗಳನ್ನು ನೆಲದ ಮೇಲೆ ಬಿಸಾಟು ಪ್ರಾಣವನ್ನು ಕಾಪಾಡಬೇಕೆಂದು ಬೇಡಿಕೊಂಡರು. ಬ್ರಿಟಿಷರು ಅವರ ಕಂದಕಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡು ಅವುಗಳನ್ನೆಲ್ಲಾ ಬಲಪಡಿಸಿಕೊಂಡಿರುತ್ತಾರೆ.

ಅಂತು ಪಶ್ಚಿಮ ರಣರಂಗದಲ್ಲಿ ನಮ್ಮ ಪಕ್ಷದವರು ಕ್ರಮವಾಗಿ ಮುಂದರಿಸಿ ಸ್ವಲ್ಪ ಸ್ವಲ್ಪವಾಗಿ ನುಗ್ಗಿ ಹೋಗುತ್ತಾ ಬಂದಿದಾರೆ. ವಿಶೇಷ ಭೂಪ್ರದೇಶವನ್ನು ಇನ್ನೂ ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದ ಯುದ್ಧಸಾಲಿನ ವಿದ್ಯಮಾನಗಳು ವಿಶದವಾಗಿ ಗೊತ್ತಾಗುವುದಿಲ್ಲ. ಉತ್ತರ ಭಾಗದಲ್ಲಿ ಕದನಗಳಾಗಿರುತ್ತವೆ. ರಷ್ಯಾದವರು ಅಲ್ಲಿ ತಮಗೆ ಅನುಕೂಲವಾಗಿರುತ್ತದೆಂದು ಹೇಳುವರು. ಅಲ್ಲಿ ಕದನಗಳೇನೋ ಮಹಾ ಘೋರವಾಗಿ ನಡೆದಿರುವವು. ಜರ್ಮನಿಯವರು ಕೆಲವು ಕಾಲಕ್ಕೆ ಮುಂಚೆ ರಷ್ಯಾದವರಿಂದ ಗೆದ್ದುಕೊಂಡಿರುವ ಲಿಬೌ ಎಂಬ ರಷ್ಯಾ ತೀರಪಟ್ಟಣವನ್ನು ಕವಾಟ ಕೊತ್ತಲಗಳನ್ನು ಕಟ್ಟಿ ಬಲಪಡಿಸಿಕೊಳ್ಳುತ್ತಿದಾರೆ.

ಯುದ್ಧಸಾಲಿನ ಮಧ್ಯಪ್ರದೇಶದಲ್ಲಿ ಅಷ್ಟೇನೂ ವಿಶೇಷ ಕದನಗಳು ನಡೆದಿಲ್ಲ. ಆದರೆ ಆ ಸಾಲಿನ ದಕ್ಷಿಣ ಭಾಗದಲ್ಲಿ ಕೆಲವು ವಾರಗಳಿಂದಲೂ ಅತ್ಯಂತ ಘೋರವಾದ ಯುದ್ಧಗಳು ನಿಲುಗಡೆಯಿಲ್ಲದೆ ನಡೆಯುತ್ತಾ ಬಂದಿರುವವು. ಈ ಯುದ್ಧಸಾಲಿನ ಒಂದು ಭಾಗದಲ್ಲಿ ಜರ್ಮನಿಯವರು ಅಪಾರವಾದ ಸೈನ್ಯಗಳನ್ನು ತಂದು ನುಗ್ಗಿಸಿದ್ದರಿಂದ ಅಲ್ಲಿದ್ದ ರಷ್ಯಾ ಸೈನ್ಯಗಳು ಹಿಂದಕ್ಕೆ ಹೊರಟುಹೋದವು. ಈ ಕಾರಣದಿಂದ ಅವರು ಲೆಂಬರ್ಗ್ ನಗರವನ್ನು ತ್ಯಜಿಸಿ ಹೋಗಬೇಕಾಯಿತು. ಇದನ್ನು ರಷ್ಯಾದವರು ಆಸ್ಟ್ರಿಯಾದವರಿಂದ ಕೆಲವು ತಿಂಗಳ ಹಿಂದೆ ಕಿತ್ತು ತಮ್ಮ ಸ್ವಾಧೀನಪಡಿಸಿಕೊಂಡಿದ್ದರು. ಹಿಮ್ಮೆಟ್ಟಿ ಹೋಗುವಲ್ಲಿ ರಷ್ಯಾ ಸೈನ್ಯಗಳು ಗಾಬರಿಬಿದ್ದು ಚೆಲ್ಲಾಪಿಲ್ಲಿಯಾಗಿ ಹೋಗಲಿಲ್ಲ. ಅವರು ಸಾವಕಾಶವಾಗಿ ತಮ್ಮ ಯುದ್ಧ ಸಾಮಗ್ರಿಗಳನ್ನೆಲ್ಲಾ ಸಾಗಿಸಿಕೊಂಡು, ಉಳಿದಿದ್ದ ಎಷ್ಟೋ ಮೊದಲಾದವುಗಳನ್ನು ಸುಟ್ಟು ಹಾಕಿ ಹೊರಟುಹೋದರು. ಜರ್ಮನಿಯವರೂ ಆಸ್ಟ್ರಿಯಾದವರೂ ಆ ನಗರದೊಳಕ್ಕೆ ಹೋದಾಗ ಅದರಲ್ಲಿ ಯಾರೂ ಇರಲಿಲ್ಲ. ಬರೀ ಪಟ್ಟಣವನ್ನು ಅವರು ಗೆದ್ದಂತಾಯಿತು. ಜರ್ಮನಿಯವರು ಯುದ್ಧಭೂಮಿಗೆ 40,00,000 ಸೈನ್ಯವನ್ನು ತಂದದ್ದರಿಂದ ಅಷ್ಟೊಂದು ಸೈನ್ಯವನ್ನು ಎದುರಿಸಿ ಯುದ್ಧಮಾಡುವುದು ತರವಲ್ಲವೆಂದು ಹಿಮ್ಮೆಟ್ಟಿಹೋದೆವು ಎಂದು ರಷ್ಯಾದವರು ಹೇಳುತ್ತಾರೆ. ಅಲ್ಲಿಂದ ದಕ್ಷಿಣಕ್ಕೂ ಪಶ್ಚಿಮಭಾಗದಲ್ಲೂ ರಷ್ಯಾದವರು ಆಸ್ಟ್ರಿಯಾದವರನ್ನು ಯುದ್ಧದಲ್ಲಿ ಸೋಲಿಸಿದೆವೆಂದು ಹೇಳಿದಾರೆ. ರಷ್ಯಾದವರು ಒಂದು ನದಿಯನ್ನು ದಾಟಿ ಹಿಮ್ಮೆಟ್ಟಿಹೋಗಿ ಶತ್ರುವನ್ನು ಎದುರುನೋಡುತ್ತಿದ್ದರು. ಶತ್ರುವು ಆ ನದಿಯನ್ನು ದಾಟಿಕೊಂಡು ಹೋದಾಗ ಅಲ್ಲಿನ

ಪ್ರವೇಶವು ಬಹಳ ಕಷ್ಟಕರವಾಗಿತ್ತು. ಆ ಸಮಯದಲ್ಲಿ ರಷ್ಯಾದವರು ಶತ್ರುವಿನ ಮೇಲೆಬಿದ್ದು ಕದನಮಾಡಿ ನದಿಯಿಂದ ಆಚೆಗೆ ಹೊರಡಿಸಿ ಬಿಟ್ಟರು. ಅಲ್ಲಿ ರಷ್ಯಾದವರು ಕೆಲವು ಸಾವಿರ ಸೈನಿಕರನ್ನೂ ಅನೇಕ ಫಿರಂಗಿಗಳನ್ನೂ ಶತ್ರುವಿನಿಂದ ಕಿತ್ತುಕೊಂಡರೆಂದು ಹೇಳುತ್ತಾರೆ; ಮತ್ತು ಜರ್ಮನಿಯವರು ಮುಂದರಿಸಿ ನುಗ್ಗಿಬಾರದಂತೆ ಅವರನ್ನು ತಡೆದುಬಿಟ್ಟಿದೇವೆಂದೂ ಹೇಳಿದಾರೆ.

ಈ ರಣರಂಗದ ವಿದ್ಯಮಾನಗಳು ಸ್ಪಷ್ಟವಾಗಿ ತಿಳಿಯುವುದಿಲ್ಲ. ಜರ್ಮನಿ ಮತ್ತು ಆಸ್ಟ್ರಿಯಾದವರು ತಮಗೆ ಜಯವಾಗಿದೆಯೆಂದು ಹೇಳುತ್ತಾರೆ; ಆಸ್ಟ್ರಿ ಆಗಿ ರಷ್ಯಾದವರು ತಮಗೆ ಜಯವಾಗಿದೆಯೆಂದು ಹೇಳುವರು. ರಷ್ಯಾದವರೇ ಹಿಮ್ಮೆಟ್ಟಿಹೋಗಿದಾರೆನ್ನುವುದಕ್ಕೆ ಸಂದೇಹವಿಲ್ಲ. ಆದರೂ ಅವರ ಯುದ್ಧಸಾಲು ಮುರಿಯಲ್ಪಡಲಿಲ್ಲ; ಅವರ ಸೈನ್ಯಗಳು ಶತ್ರುವಿನ ಪಾಲಾಗಿಯೂ ಇಲ್ಲ. ಇನ್ನು ಮೇಲೆ ರಷ್ಯಾದವರು ಬಹಳವಾಗಿ ಹೊಸ ಸೈನ್ಯಗಳನ್ನು ಕೂಡಿಸಿಕೊಂಡು ಬಂದು ಶತ್ರುವಿನ ಮೇಲೆ ನುಗ್ಗಿ ಕದನಮಾಡುವವರಾಗಿದಾರೆಂದು ಕಾಣುವುದು.

ಈಚೆಗೆ ಬಂದಿರುವ ತಂತೀವರ್ತಮಾನಗಳಿಂದ ಒಂದು ಕಾಣ್ಯದ ಹೊರ್ತು ಇತರ ಕಡೆಗಳಲ್ಲಿ ಜರ್ಮನಿಯವರು ಮುಂದೆ ನುಗ್ಗಿಹೋಗದಂತೆ ತಡೆಯಲ್ಪಟ್ಟಿರುವಂತೆ ಕಾಣುತ್ತದೆ. ಗೆಲಿಷಿಯಾದಲ್ಲಿ ಕಳೆದ ವಿಚಾರಗಳಿಂದ ರಷ್ಯಾದವರು 30,000 ಸೈನ್ಯವನ್ನೂ, 300 ಮೆಷೀನ್ ಫಿರಂಗಿಗಳನ್ನೂ, 50 ಫಿರಂಗಿಗಳನ್ನೂ ಕಿತ್ತು ಸ್ವಾಧೀನಪಡಿಸಿಕೊಂಡರೆಂದು ಹೇಳುತ್ತಾರೆ. ಆಸ್ಟ್ರಿಯಾದವರು ಒಂದು ಠಾಣ್ಯದಲ್ಲಿ ಹಿಮ್ಮೆಟ್ಟಿಹೋದೆವೆಂದು ಹೇಳಿ ಒಪ್ಪಿಕೊಂಡಿದ್ದಾರೆ. ಕದನವು ನಡೆಯುತ್ತಲೇ ಇದೆ.

ಇಟಲಿ ಮತ್ತು ಆಸ್ಟ್ರಿಯಾ.

ತಂತೀವರ್ತಮಾನಗಳು ವಿದ್ಯಮಾನಗಳನ್ನು ಸರಿಯಾಗಿ ವಿವರಿಸಿ ಹೇಳುವುದಿಲ್ಲ. ಪೂರ್ವ ಪಾರ್ಶ್ವದಲ್ಲಿರುವ ಇಟಲಿ ಸೈನ್ಯಗಳು ಆಸ್ಟ್ರಿಯಾದವರ ಮುಖಸ್ಥಳಗಳ ಮೇಲೆ ನುಗ್ಗಿ ಹೋಗಿರುವಂತೆ ಕಾಣುವುದು. ಅಲ್ಲಿ ಆಸ್ಟ್ರಿಯಾದವರು ಬಹಳ ಚೆನ್ನಾಗಿ ಬಲಪಡಿಸಿಕೊಂಡು ಹೆಚ್ಚಾದ ಸೈನ್ಯವನ್ನಿಟ್ಟುಕೊಂಡಿದಾರೆ. ಆಸ್ಟ್ರಿಯಾದವರು ಕಲ್ಲುಬಂಡೆಗಳನ್ನು ಕೊರೆದು ಕಂದಕಗಳನ್ನು ಮಾಡಿಕೊಂಡಿರುತ್ತಾರಲ್ಲದೆ ತಮ್ಮ ಫಿರಂಗಿಗಳನ್ನು ಗುಹೆಗಳಲ್ಲಿ ಸುರಕ್ಷಿತವಾಗಿ ಅಡಗಿಸಿಟ್ಟು, ಸುರಂಗಮಾರ್ಗಗಳನ್ನು ಮಾಡಿಕೊಂಡು ಕಂದಕಗಳಿಗೆ ಹೋಗಿ ಬರುವಂತೆ ಅನುಕೂಲಮಾಡಿಕೊಂಡಿರುವರು. ಇಟಲಿ ಸೈನಿಕರು ನುಗ್ಗಿ ಯುದ್ಧಮಾಡಲು ಬಹಳ ವಿಶೇಷವಾದ ಅಡಚಣೆಗಳನ್ನು ಕಲ್ಪಿಸಿಕೊಂಡಿದಾರೆ. ಆದಾಗ್ಯೂ ಇಟಲಿಯವರು ಆಸ್ಟ್ರಿಯಾದವರ ಮೇಲೆ ನುಗ್ಗಿ ಮಹಾ ಪರಾಕ್ರಮದಿಂದ ಮುಂದರಿಸಿ ನಿಧಾನವಾಗಿ ಹೋಗುತ್ತಿರುವರು. ಇಟಲಿಯವರ ಕಡೆ ಬಹಳ ನಷ್ಟವಾಯಿತೆಂದು ಹೇಳಲಾಗಿದೆ; ಆದರೆ ಸಂಖ್ಯೆಗಳನ್ನು ತಿಳಿಸಿರುವುದಿಲ್ಲ. ಆಸ್ಟ್ರಿಯಾದವರು ರಾತ್ರಿಹೊತ್ತಿನಲ್ಲೇ ನುಗ್ಗಿ ಬಂದು ಇಟಲಿಯವರ ಮೇಲೆ ಬೀಳುತ್ತಾರೆ. ಆದರೂ ಇಟಲಿಯವರು ಅನೇಕರನ್ನು ಕೊಂದುಹಾಕಿ ಹಿಮ್ಮೆಟ್ಟಿಸುತ್ತಾ ಬಂದಿದಾರೆ. ಇಟಲಿಯವರು ಅಲ್ಲಿ ಶತ್ರುವಿನ ಸಾಲನ್ನು ಛೇದಿಸಿಕೊಂಡು ಮುಂದೆ ನುಗ್ಗಿಹೋಗುವುದಕ್ಕೆ ಇನ್ನೂ ಕೆಲವು ವಾರಗಳಾಗಬಹುದೆಂದು ತೋರುವುದು. ಅವರು ಈಗಾಗಲೇ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ಪ್ರದೇಶದಲ್ಲಿ ಆಸ್ಟ್ರಿಯಾದವರ ಮದ್ದುಗುಂಡುಗಳು ತಯಾರಾಗುವ ಕಾರ್ಖಾನೆಯನ್ನು ಕೆಡಿಸಿದರು. ಆಸ್ಟ್ರಿಯಾ ಸೈನ್ಯದಲ್ಲಿರುವ ಕೆಲವು ಯುದ್ಧಭಟರು ಇಟಲಿಯವರ ಮೇಲೆ ಯುದ್ಧಮಾಡುವುದಕ್ಕೆ ಒಪ್ಪದೆಹೋದಕಾರಣ ಅಂಥವರನ್ನು ಅಲ್ಲಿಂದ ರಷ್ಯಾದವರ ಮೇಲೆ ಯುದ್ಧಕ್ಕೆ ಕಳುಹಿಸಿದರು. ಈ ಸೈನಿಕರಲ್ಲಿ ಕೈಸೆರೆ ಹಿಡಿಯಲ್ಪಟ್ಟವರಲ್ಲಿ ಜರ್ಮನಿಯವರೂ ಸಿಕ್ಕಿದ್ದರಿಂದ ಅವರೂ ಆಸ್ಟ್ರಿಯಾದವರಿಗೆ ಅಲ್ಲಿ ಸಹಾಯಕ್ಕೆ ಬಂದಿದಾರೆನ್ನುವುದು ಗೊತ್ತಾಗುತ್ತದೆ.

ಇಟಲಿಯ ಸಮುದ್ರ ಸೈನ್ಯವು ಆಡ್ರಿಯಾಟಿಕ್ ಕಡಲಿನ ಉಸ್ತುವಾರಿಯನ್ನು ಪ್ರಾರಂಭದಿಂದ ವಹಿಸಿಕೊಂಡಿರುತ್ತದೆ. ಅಲ್ಲಿದ್ದ ಆಸ್ಟ್ರಿಯಾ ಯುದ್ಧದ ಹಡಗುಗಳನ್ನು ಹೊರಕ್ಕೆ ಬಿಡದಂತೆ ಫ್ರೆಂಚ್ ಯುದ್ಧದ ಹಡಗುಗಳು ತಡೆದಿದ್ದವು. ಈಗ ಈ ಕಾರ್ಯವನ್ನು ಇಟಲಿಯ ನಾವೆಯು ನೋಡಿಕೊಳ್ಳುವುದು. ಆಸ್ಟ್ರಿಯಾದವರ ನಾವೆಯು ದೊಡ್ಡದಲ್ಲ; ಕೆಲವು ಹಡಗುಗಳು ಮಾತ್ರ ಇರೋಣದಿಂದ ಇಟಲಿಯ ನಾವೆಯು ಅವನ್ನು ಹೊರಕ್ಕೆ ಬಿಡದಂತೆ ನೋಡಿಕೊಳ್ಳಬಲ್ಲದು. ಸಬ್‌ಮೆರೀನುಗಳಿಗೆ ಬೇಕಾಗುವಂಥಾ ಎಣ್ಣೆ ಮೊದಲಾದ ಸರಕು ಭರ್ತಿಯಾಗಿ ಹೋಗುತ್ತಿದ್ದ ಒಂದು ಹಡಗನ್ನು ಇಟಲಿಯವರು ಹಿಡಿದು ಸ್ವಾಧೀನಪಡಿಸಿಕೊಂಡಿದಾರೆ. ಆದಾಗ್ಯೂ ಇಟಲಿಯವರ ಕಾರ್ಯಭಾರವು ಅಷ್ಟೇನೂ ಸುಲಭವಾದುದೆಂದು ಹೇಳಲಾಗುವುದಿಲ್ಲ.

ಟರ್ಕಿ.

ಟರ್ಕಿಯ ಮೇಲೆ ನಡೆಯುವ ಯುದ್ಧದ ವೃತ್ತಾಂತವು ಹೆಚ್ಚಾಗಿ ತಿಳಿದು ಬಂದಿಲ್ಲ. ಗಲ್ಲಿಪೊಲಿ ಅರ್ಧ ದ್ವೀಪದ ಮೇಲೆ ಘೋರವಾದ ಯುದ್ಧ ನಡೆಯುತ್ತಿದೆ. ಫ್ರೆಂಚರು ಮುಂದರಿಸಿ ನುಗ್ಗಿಹೋಗುತ್ತಿದಾರೆಂದು ತಿಳಿಯುವುದು. ಬ್ರಿಟಿಷರ ಐದು ಸಬ್‌ಮೆರೀನುಗಳು ಮಾರ್ಮೊರಾ ಕಡಲಿನೊಳಕ್ಕೆ ನುಗ್ಗಿಹೋಗಿ ಕಾನ್ಸ್ಟಾಂಟಿನೋಪಲ್‌ನಿಂದ ಹಡಗುಗಳು ಬಾರದಂತೆ ಅಡ್ಡಿಮಾಡಿರುವವು.

ಟರ್ಕಿ ಸುಲ್ತಾನರಿಗೆ ಶರೀರದಲ್ಲಿ ಏನೋ ಬಾಯಿಲೆ ಸಂಭವಿಸಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆಂದು ವರ್ತಮಾನಬಂದಿದೆ.

ಆಫ್ರಿಕಾದಲ್ಲಿ.

ಜನರಲ್ ಬೋಥಾರವರ ಸೈನ್ಯದಲ್ಲಿ ಮದ್ದುಗುಂಡು ಮೊದಲಾದ ಸಲಕರಣೆಗಳು ಹೆಚ್ಚಾಗಿ ಒದಗಲಿಲ್ಲವಾದದ್ದರಿಂದ ಅವರು ಮುಂದರಿಸಿ ನುಗ್ಗಿಹೋಗಲು ಸ್ವಲ್ಪ ಅಡಚಣೆಯಾಯಿತು. ಈಚೆಗೆ ಮದ್ದುಗುಂಡನ್ನು ಹೆಚ್ಚಾಗಿ ಕಳುಹಿಸಿಕೊಟ್ಟರು. ಈಗ ಅವರು ಇದುವರೆಗೆ ಸ್ವಾಧೀನವಾಗದೆ ಇರುವ ಜರ್ಮನರ ಸ್ಥಳಗಳನ್ನು ಕುರಿತು ನುಗ್ಗಿಹೋಗುತ್ತಿದಾರೆ. ರೈಲ್ವೆ ಮಾರ್ಗದಲ್ಲಿ ಅವರು ಒಂದು ವಿಶೇಷವಾದ ಸ್ಥಳವನ್ನು ಸ್ವಾಧೀನಪಡಿಸಿಕೊಂಡರು.

ಮಧ್ಯ ಆಫ್ರಿಕಾದಲ್ಲಿರುವ ಬೆಲ್ಜಿಯಮ್ ಸೈನಿಕರು ಒಂದು ಸ್ಥಳವನ್ನು ಜರ್ಮನಿಯವರಿಂದ ಕಿತ್ತುಕೊಂಡಿರುತ್ತಾರೆ.

ದಂಗೆ ಎದ್ದಿದ್ದು ಸಿಕ್ಕಿಬಿದ್ದ ಡಿವೆಟ್ ಎಂಬ ದಳಪತಿಯನ್ನು ವಿಚಾರಣೆ ಮಾಡಿದ್ದಾಯಿತು. ರಾಜದ್ರೋಹವು ಅತನ ಮೇಲೆ ರುಜುವಾತಾಯಿತು. ಆತನಿಗೆ ಆರು ವರುಷದ ಸಜವನ್ನೂ, 30,000 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದಾರೆ.

ಇತರ ವಿಷಯಗಳು.

ಮೆಸೊಪೊಟೇಮಿಯಾದಲ್ಲಿ ಹಿಂದುಸ್ಥಾನದ ಸೈನ್ಯಗಳು ಇನ್ನೂ ಕೊಂಡು ಟರ್ಕಿಯವರ ಮೇಲೆ ಯುದ್ಧಕಾರ್ಯಗಳನ್ನು ನಡಿಸುತ್ತಿರುವವು. ಅಲ್ಲಿ ಗಾಯಪಡುವ ನಮ್ಮ ಸೈನಿಕರಿಗೆ ವೈದ್ಯೋಪಚಾರಮಾಡುವುದಕ್ಕಾಗಿ ಕೆಲವು ಬಂಗಾಳಿಗಳು ಸೇರಿ ಅಂಬ್ಯುಲೆನ್ಸ್ ಕೋರಿಗೆ ಸಿದ್ಧರಾಗಿರುವರು. ಕೆಲವು ದಿನಗಳ ಹಿಂದೆ ಇವರನ್ನು ವಿಶೇಷ ಉತ್ಸಾಹಪೂರ್ವಕವಾಗಿ ಪ್ರಯಾಣಮಾಡಿಸಿ ಅಲ್ಲಿಗೆ ಕಳುಹಿಸಿದ್ದಾಯಿತು. ಅವರಲ್ಲಿ ವೈದ್ಯರು 9 ಮಂದಿಯೂ, ಇತರರು 66 ಮಂದಿಯೂ ಇರುತ್ತಾರೆ. ಇವರ ಸೇವಾವೃತ್ತಿಗೆ ಬೇರೆ ಜನರು ಯೋಗಿರುವರು. ಯುದ್ಧಭೂಮಿಯಲ್ಲಿ ಕಾಯಿಲೆಯಾಗುವವರಿಗೂ ಗಾಯಪಡುವವರಿಗೂ ವಿಶೇಷ ಸಹಾಯವಾದೀತೆನ್ನುವುದಕ್ಕೆ ಸಂಶಯವಿಲ್ಲ.

ಇಂಗ್ಲೆಂಡಿನ ಕಾರ್ಖಾನೆಗಳಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರುಮಾಡಿ ಒದಗಿಸುತ್ತಾರಷ್ಟೆ. ಅಂಥಾ ಕೆಲಸಗಳನ್ನು ಮಾಡುವುದಕ್ಕೆ ಹಿಂದುಸ್ಥಾನದಿಂದ ಹಲವು ಕೆಲಸಗಾರರನ್ನು ಕೂಡಿಸಿ ಇಂಗ್ಲೆಂಡಿಗೆ ಕಳುಹಿಸಬೇಕೆಂದು ಕೆಲವರು ಯೋಚಿಸಿ ಸನ್ನಾಹಮಾಡುತ್ತಿದಾರೆ.

ಇಂಗ್ಲೆಂಡಿನ ಮಹಾರಾಜ್ಞೀರವರು ಬ್ರೈಟನ್ ನಗರದ ಆಸ್ಪತ್ರೆಗೆ ಚಿತ್ತೈಸಿ ಗಾಯಪಟ್ಟು ಚಿಕಿತ್ಸೆ ಹೊಂದುತ್ತಿರುವ ಹಿಂದುಸ್ಥಾನದ ಸೈನಿಕರನ್ನು ಪರಾಂಬರಿಸಿ, ಅವರ ವೈದ್ಯೋಪಚಾರಗಳಿಗೆ ಮಾಡಿರುವ ಏರ್ಪಾಡುಗಳನ್ನೆಲ್ಲಾ ಬಹಳ ವಿಶ್ವಾಸದಿಂದ ತನಿಖೆಮಾಡಿದರು. ಮಹಾರಾಜ್ಞೀರವರು ಹಿಂದುಸ್ಥಾನದ ಸೈನಿಕರಿಗೋಸ್ಕರ ಮಾಡಿದ್ದ ಅಡಿಗೆಯಲ್ಲಿ ಸ್ವಲ್ಪಸ್ವಲ್ಪವನ್ನು ತೆಗೆದುಕೊಂಡು ರುಚಿನೋಡಿ ಎಲ್ಲಾ ತೃಪ್ತಿಕರವಾಗಿದೆ ಎಂದು ಸಂತೋಷಪಟ್ಟರು.

ಕಳೆದ ವಾರ ಬ್ರಿಟಿಷರ ಒಂದು ಯುದ್ಧದ ಹಡಗಿಗೆ ಟಾರ್ಪಿಡೋ ಬಡಿದು ಸ್ವಲ್ಪ ಹಾಯಾ ಆಯಿತು. ಅದರ ಮೇಲೆ ಆ ಹಡಗು ಪರಸಹಾಯವೇನೂ ಕೋರದೆ ತೀರಪಟ್ಟಣಕ್ಕೆ ಬಂದುಬಿಟ್ಟಿತು. ಅದರಲ್ಲಿ ಯಾರಿಗೂ ಅಪಾಯವೇನೂ ಆಗಲಿಲ್ಲ.

ಕಳೆದ ವಾರ 1,469 ಹಡಗುಗಳು ಬ್ರಿಟಿಷ್ ತೀರಪಟ್ಟಣಗಳಿಗೆ ಬಂದು ಹೋಗಿರುತ್ತವೆ. ಆ ಪೈಕಿ ಮೂರನ್ನು ಜರ್ಮನಿಯವರ ಸಬ್‌ಮೆರೀನುಗಳು ಮುಳುಗಿಸಿದವು. ಇದಲ್ಲದೆ ಬ್ರಿಟಿಷರ ಹಲವು ಅಂಬಿಗರ ದೋಣಿಗಳನ್ನೂ ಮುಳುಗಿಸಿರುತ್ತವೆ.

ಅಮೇರಿಕದಿಂದ ಬರುತ್ತಿದ್ದ ಒಂದು ಭಾರೀ ಬ್ರಿಟಿಷ್ ಹಡಗನ್ನು ಶತ್ರುವಿನ ಸಬ್‌ಮೆರೀನು ಓಡಿಸಿಕೊಂಡು ಬಂದಿತು. ತಪ್ಪಿಸಿಕೊಂಡು ಹೋಗುವುದು ಸಾಧ್ಯವಲ್ಲವೆಂದು ತಿಳಿದಾಗ ಆ ಹಡಗು ಸಬ್‌ಮೆರೀನನ್ನು ಅಮುಕಿಬಿಡಬೇಕೆಂದು ಪ್ರಯತ್ನಪಟ್ಟಿತು. ಅದು ಒತ್ತಿಸಿ ಅಮುಕಿದಾಗ ಸಬ್‌ಮೆರೀನು ಮುಳುಗಿದ್ದು ಮತ್ತೆ ತಲೆ ಎತ್ತಲೇ ಇಲ್ಲ.

ಜರ್ಮನಿಯ ಒಂದು ಸಬ್‌ಮೆರೀನು ಇಂಗ್ಲೆಂಡಿಗೆ ಹೋಗುತ್ತಿದ್ದ ಒಂದು ನಾರ್ವೆ ಹಡಗನ್ನು ತಡೆದು, ಅದನ್ನು ಮುಳುಗಿಸದೆ ಅದರಲ್ಲಿದ್ದ ಆಹಾರ ಪದಾರ್ಥಗಳನ್ನೆಲ್ಲಾ ಸಮುದ್ರಕ್ಕೆ ಎತ್ತಿ ಸುರಿಸಿ, ತೊಲೆಗಳನ್ನು ಮಾತ್ರ ಸಾಗಿಸಿಕೊಂಡು ಹೋಗುವಂತೆ ಬಿಟ್ಟುಬಿಟ್ಟಿತು.

ಜರ್ಮನಿಯ ಒಬ್ಬ ಗೂಢಚಾರನನ್ನು ಇಂಗ್ಲೆಂಡಿನಲ್ಲಿ ಮರಣದಂಡನೆಗೆ ಗುರಿಮಾಡಿ, ಲಂಡನ್ ಟವರಿನಲ್ಲಿ ಗುಂಡಿನಿಂದ ಹೊಡೆದು ಕೊಂದುಬಿಟ್ಟರು. ಇನ್ನೊಬ್ಬ ಗೂಢಚಾರನನ್ನು ಮಿಲಿಟರಿ ಕೋರ್ಟಿನಲ್ಲಿ ದರ್ಯಾಪ್ತಿಮಾಡುತ್ತಿದಾರೆ.

ಜರ್ಮನಿ ಮತ್ತು ಆಸ್ಟ್ರಿಯಾದವರು ಕಾರ್ಖಾನೆಗಳಲ್ಲಿ ದಿನಕ್ಕೆ 2,50,000 ದಂತೆ ಗುಂಡುಗಳನ್ನು ತಯಾರುಮಾಡುತ್ತಿರುವರು. ಬ್ರಿಟನ್ ಮತ್ತು ಫ್ರಾನ್ಸಿನವರೂ ದಿನಕ್ಕೆ ಅಷ್ಟನ್ನು ತಯಾರುಮಾಡಿಕೊಳ್ಳಬೇಕಾಗಿದೆ. ಇಂಗ್ಲೆಂಡಿನಲ್ಲಿ ಗುಂಡುಗಳನ್ನು ಮಾಡುವುದಕ್ಕೂ, ಬ್ಯಾಂಕುಗಳಲ್ಲೂ, ರೈಲ್ವೆಗಳಲ್ಲೂ, ಟ್ರಾಮ್‌ವೇಗಳಲ್ಲೂ, ಅಂಗಡಿಮುಂಗಟ್ಟುಗಳಲ್ಲೂ ಹೆಂಗಸರನ್ನು ಸೇರಿಸಿಕೊಂಡು ಅವರಿಂದ ಕೆಲಸಗಳನ್ನು ಮಾಡಿಸುತ್ತಿದಾರೆ.

ಲುಕ್ಸೆಂಬರ್ಗಿನಲ್ಲಿ ಪ್ರಜೆಗಳಿಗೆ ತಿನ್ನುವುದಕ್ಕಿಲ್ಲದೆ ಕಷ್ಟಪಡುತ್ತಿದಾರೆಂದೂ, ಸ್ವಿಟ್ಸರ್ಲೆಂಡಿನ ಪ್ರಜೆಗಳು ಅವರಿಗೆ ಸಹಾಯಮಾಡುತ್ತಿರುವರೆಂದೂ ಪ್ರಕಟವಾಗಿದೆ.

ಜರ್ಮನಿಯ ಕೆಲವು ವಿಭಾಗಗಳಲ್ಲಿ ಮಳೆ ಆಗದೆ ಪೈರುಪಚ್ಚೆಗಳು ಕೆಟ್ಟು ಹೋಗಿರುವವೆಂದು ಹೇಳಲಾಗಿದೆ.

ಇಂಗ್ಲೆಂಡಿನಲ್ಲಿ 100,00,00,000 ಪೌಂಡುಗಳನ್ನು ಗವರ್ನಮೆಂಟಿನವರು ಕೂಡಿಸುವುದಕ್ಕೆ ಒಂದು ನವೀನವಾದ ಏರ್ಪಾಡು ಮಾಡಿರುತ್ತಾರೆ. ಗ್ರೇಟ್ ಬ್ರಿಟನ್ ಗವರ್ನಮೆಂಟಿನವರ ಸಾಲವನ್ನೆಲ್ಲಾ ಯುದ್ಧದ ಸಾಲವಾಗಿ ಬದಲಾವಣೆ ಮಾಡಲ್ಪಡುತ್ತದೆ. ಈ ಏರ್ಪಾಡು ಪ್ರಜೆಗಳಲ್ಲಿ ವಿಶೇಷವಾದ ಉತ್ಸಾಹವನ್ನುಂಟುಮಾಡಿರುವುದು, ಗವರ್ನಮೆಂಟಿಗೆ ಬೇಕಾಗುವ ಹಣವೆಲ್ಲಾ ಸ್ವಲ್ಪವೂ ಕಷ್ಟವಿಲ್ಲದೇನೇ ಒದಗುವುದೆಂದು ತಿಳಿಸಲ್ಪಟ್ಟಿದೆ.

ಜರ್ಮನಿಯ ಒಂದು ಸಬ್‌ಮೆರೀನು ಜರ್ಮನಿ ತೀರದಲ್ಲಿ ಒಡೆದು ಹೋಗಿ ಮೂರು ಮಂದಿ ವಿನಾ ಉಳಿದವರೆಲ್ಲಾ ಸಮುದ್ರದ ಪಾಲಾದರು.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ತಲುಪಿರುವ ಹಲವು ಬಾತ್ಮಿಗಳನ್ನು ಪ್ರಕಟಿಸಲು ಸ್ಥಳ ಸಂಕೋಚವಾಯಿತೆಂದು ತಿಳಿಸಲು ವಿಷಾದಿಸುತ್ತೇವೆ

ದಿವಾನ್‌ರೂ ಕೌನ್ಸಿಲ್ ಮೆಂಬರುಗಳೂ ಮುಂದಿನ ಭಾನುವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಕಳೆದ ವಾರವೆಲ್ಲಾ ಮೋಡ ಮುಸುಕಿಕೊಂಡು ಬಿರುಗಾಳಿ ಬೀಸುತ್ತಾ ಜೋರಾದ ಮಳೆಯೂ ತುಂತುರು ಮಳೆಯೂ ಆಗಾಗ್ಗೆ ಸುರಿಯುತ್ತಾ ಬಂದಿತು. ಜನಾರೋಗ್ಯವು ಆಹ್ಲಾದಕರವಾಗಿದೆ.

ಲಿಮ್ಡಿ ಸಂಸ್ಥಾನದ ರಾಜರವರು ತಮ್ಮ ಕುಮಾರರ ಸಮೇತ ಕಳೆದ ಭಾನುವಾರ ರಾಜಧಾನಿಗೆ ದಯಮಾಡಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ. ಗೌರವಾರ್ಥವಾದ 9 ತೋಪುಗಳು ಹಾರಿಸಲ್ಪಟ್ಟವು.

"ಶಿವಮೊಗ್ಗಾ ವೃತ್ತಾಂತ" ಎಂಬ ಹೊಸ ವಾರ ಪತ್ರಿಕೆಯು ಮೊದಲನೇ ಸಂಚಿಕೆ ನಮಗೆ ತಲುಪಿದೆ. ನಮ್ಮ ದಿವಾನ್‌ರವರು ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಒಂದೊಂದು ಪತ್ರಿಕೆ ಇರಬೇಕೆಂದು ಕುತೂಹಲಪಡುವಂತೆ ಶಿವಮೊಗ್ಗೆಯು ಸಾರ್ಥಕಪಡಿಸಿರುವುದನ್ನು ನೋಡಿ ಸಂತೋಷಪಟ್ಟು, ಇದು ಚಿರಕಾಲ ದೇಶಾಭಿವೃದ್ಧಿಗೆ ಸಹಕಾರಿಯಾಗಿರಬೇಕೆಂದು ಹಾರೈಸುತ್ತೇವೆ.

ಈ ಸಲ ವರ್ಧಂತಿ ಉತ್ಸವದ ದರ್ಬಾರಿನಲ್ಲಿ ಶ್ರೀಮನ್ ಮಹಾರಾಜರವರು ಮೈಸೂರು ಲಾ ಅಸೋಸಿಯೇಷನ್ ಪ್ರಾರ್ಥನೆಯ ಮೇಲೆ ಗವರ್ನಮೆಂಟಿನವರ ಶಿಫಾರಸನ್ನು ಅಂಗೀಕರಿಸಿ ರಾಜಧಾನಿಯ ಅಡ್ವೊಕೇಟರುಗಳ ಪೈಕಿ ಮ॥ಗಳಾದ ಎಂ. ಎಲ್ ನರಸಿಂಹಯ್ಯಂಗಾರರ್‍ರು, ಎಂ. ಡಿ. ನಾರಾಯಣಯ್ಯಂಗಾರ್‍ರು, ಎಚ್. ನರಸಿಂಗರಾಯರು, ಕೆ. ಚಂದ್ರಶೇಖರಯ್ಯನವರು, ವಿ. ರಾಘವಾಚಾರ್‍ರು, ಬಿ. ಆರ್. ಕೃಷ್ಣಮಾಚಾರ್‍ರು, ಈ ಆರು ಮಂದಿಗೂ ಖಾಸಾಪಾರಗಳನ್ನು ಹಾಕಿಸಿದ್ದು ಸಂತೋಷಪ್ರದವಾಗಿದೆ.

ಈ ಸಲ ನಮ್ಮ ಮಹಾರಾಜರವರ ವರ್ಧಂತಿ ಉತ್ಸವಕಾಲದಲ್ಲಿ ಹೈದರಾಬಾದ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರೂ, ಪುದುಕೋಟೆ ಸಂಸ್ಥಾನದ ಮಹಾರಾಜರವರ ಸಹೋದರರಾದ ದೊರೆ ರಾಜರವರೂ, ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರ ಕುಮಾರರೂ, ಮದರಾಸ್ ಹೈ ಕೋರ್ಟು ಜಡ್ಜರಾಗಿದ್ದು ಇಂಡಿಯಾ ಗವರ್ನಮೆಂಟಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನೇಮಕವಾಗಿರುವ ಸರ್ ಸಿ ಶಂಕರನ್ ನಾಯರವರೂ ರಾಜಧಾನಿಗೆ ಬಂದಿದ್ದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿದರು.

ಸಂಪದಭಿವೃದ್ಧಿ ಸಮಾಜದ ಆರನೇ ಸಭೆಯು ಕಳೆದ ಶನಿವಾರ ಸಾಯಂಕಾಲ ಪೂರೈಸಿತು. ಇನ್ನು ಮುಂದೆ ಐದು ವರುಷಗಳ ತನಕ ಪ್ರತಿ ಸಾಲಿನಲ್ಲೂ ಕೆಸಬು ಕೈಗಾರಿಕೆಗಳನ್ನು ಪ್ರಾರಂಭಿಸಿ ನಡೆಸುವುದಕ್ಕಾಗಿ ಶ್ರೀಮನ್ ಮಹಾರಾಜರವರು ಐದು ಲಕ್ಷ ರೂಪಾಯಿನಂತೆ ರಾಜಾದಾಯದಲ್ಲಿ ವಿನಿಯೋಗಿಸಲು ತೀರ್ಮಾನ ಮಾಡಿರುತ್ತಾರೆಂದು ದಿವಾನ್‌ರವರು ಈ ಸಭೆಯ ಅಂತ್ಯದಲ್ಲಿ ಅಪ್ಪಣೆಕೊಡಿಸಿದರು. ಸಭಿಕರೆಲ್ಲಾ ಶ್ರೀಮನ್ ಮಹಾರಾಜರವರ ಪ್ರಜಾ ವಾತ್ಸಲ್ಯವನ್ನೂ ದೇಶಾಭ್ಯುದಯ ಕಾಂಕ್ಷೆಯನ್ನೂ ನೋಡಿ ಪರಮಾನಂದಪಟ್ಟು ಜಯಧ್ವನಿಯನ್ನು ಮಾಡಿದರು.

ವರ್ಧಂತಿ ಉತ್ಸವದ ಔತಣವು ದಿವಾನ್‌ರೇ ಮೊದಲಾದ ದೊಡ್ಡ ಅಧಿಕಾರಿಗಳಿಗೆ ಕಳೆದ ಶನಿವಾರ ಅರಮನೆಯಲ್ಲಿ ಜರುಗಿತು. ಕಳೆದ ಸೋಮವಾರ ದಿವಾನ್‌ರವರು ಯೂರೋಪಿಯನ್ ದೊಡ್ಡ ಮನುಷ್ಯರಿಗೆ ತಮ್ಮ ಬಂಗಲೆಯಲ್ಲಿ ವರ್ಧಂತಿ ಉತ್ಸವದ ಔತಣವನ್ನೂ ವೈಣಿಕ ವಿದ್ವಾನ್ ವೆಂಕಟಗಿರಿಯಪ್ಪನವರ ವೀಣಾಗಾನವನ್ನೂ ಮಾಡಿಸಿದರು. ಮಂಗಳವಾರ ಸಾಯಂಕಾಲ ರಾಜಧಾನಿಯ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಔತಣವನ್ನು ಮಾಡಿಸಿದರು. ಸಂಗೀತವು ಆದ ಮೇಲೆ ಮ॥ ಅಂಬಳೆ ಅಣ್ಣಯ್ಯ ಪಂಡಿತರು ಪ್ರಜೆಗಳ ಪರವಾಗಿ ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಸರ್ ವಿಶ್ವೇಶ್ವರಯ್ಯನವರ ಶ್ರೇಯಸ್ಸನ್ನೂ ಬಯಸಿ ಆಹ್ಲಾದಕರವಾದ ಭಾಷಣಮಾಡಿದರು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಅ॥ ಸೆಕ್ರೆಟರಿ ಮ॥ ಜಿ. ಕೆ. ರುದ್ರಾರ್ಯರು ಬರೆಯುವುದು.—ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯಿಂದ ಸ್ಕಾಲರ್‌ಷಿಪ್ ಪಡೆಯಲಪೇಕ್ಷಿಸುವ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದೆ ಪ್ರೌಢವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದಿರುವ ವೀರಶೈವ ವಿದ್ಯಾರ್ಥಿಗಳು ಫಂಡ್ ಸಭೆಗೆ ಧನ ಸಹಾಯ ಮಾಡಿರುವ ತಮ್ಮ ಸ್ಥಳೀಯ ದೊಡ್ಡ ಮನುಷ್ಯರ ಮತ್ತು ಸ್ಕೂಲ್ ಯಾ ಕಾಲೇಜಿನ ಹೆಡ್ ಮಾಸ್ಟರ ಸರ್ಟಿಫಿಕೇಟ್‌ಗಳ ಕೂಡ ಅಪ್ಲಿಕೇಷನ್‌ಗಳನ್ನು 1915 ನೇ ಜುಲೈ ತಾ. 15 ರೊಳಗೆ ಕಳುಹಿಸತಕ್ಕದ್ದು. ಅಪ್ಲಿಕೇಷನ್‌ನಲ್ಲಿ ವಿದ್ಯಾರ್ಥಿ ಹೆಸರು, ವಯಸ್ಸು, ವಾಸಸ್ಥಳ, ತಂದೆ ಯಾ ಪೋಷಕರ ಹೆಸರು, ಇವರ ವಾರ್ಷಿಕ ಉತ್ಪತ್ತಿ, ಕಸಬು, ಅಭ್ಯಾಸಮಾಡುವ ಸ್ಕೂಲ್ ತರಗತಿ ವಗೈರೆ ನಮೂದಿಸತಕ್ಕದ್ದು.

ವರ್ಧಂತಿ ಉತ್ಸವದ ಪಂದ್ಯಗಳಲ್ಲಿ ಗೆದ್ದವರಿಗೆ ಬಹುಮಾನಗಳ ವಿನಿಯೋಗ.

ಈ ಸಲ ನಮ್ಮ ಮಹಾರಾಜರವರು ಯುದ್ಧದ ನಿಮಿತ್ತ ವರ್ಧಂತಿ ಉತ್ಸವದಲ್ಲಿ ರಾಜಧಾನಿಗೆ ಯೂರೋಪಿಯನ್ ಅತಿಥಿಗಳನ್ನು ಕರೆಸಲಿಲ್ಲ; ಕುದುರೆ ಜೂಜುಗಳು ನಿಲ್ಲಿಸಲ್ಪಟ್ಟವು. ಮೈಸೂರು ಸಂಸ್ಥಾನದ ದೇಶೀಯ ಅಧಿಕಾರಿಗಳಿಗೂ ಇತರ ಪ್ರಜೆಗಳಿಗೂ ನಾನಾ ಬಗೆಯ ಪಂದ್ಯಗಳನ್ನು ಕಲ್ಪಿಸಿ ನಡಿಸಿದರು. ಇವುಗಳಲ್ಲಿ ಗೆದ್ದವರಿಗೆಲ್ಲಾ ಕಳೆದ ಭಾನುವಾರ ಸಾಯಂಕಾಲ ಶ್ರೀಮದ್ಯುವರಾಜರವರು ದಯಮಾಡಿ ಬಹುಮಾನಗಳನ್ನು ಕೊಡಿಸಿದರು. ಬಹುಮಾನಗಳನ್ನು ಪಡೆದ ಅಧಿಕಾರಿಗಳೂ ಇತರರೂ ಯಾರೆಂದರೆ—

ಕ್ರಾಸ್ ಕಂಟ್ರಿ ಸವಾರಿ.—ಮಿ॥ ಪೈದರಲ್ಲಿಖಾನ್ 250 ರೂ. ಮತ್ತು 100 ರೂ. ಬಟ್ಲು, ಮ॥ ವೇದಾಂತದೇಶಿಗಂ ಅಯ್ಯಂಗಾರ್ 100 ರೂ. ಮತ್ತು 50 ರೂ. ಬಟ್ಲು, ಮ॥ ಡಿ. ಶ್ರೀನಿವಾಸರಾವ್ 70 ರೂ. ಮತ್ತು 30 ರೂ. ಬಟ್ಲು, ಮ॥ ಎಚ್. ವಿ. ವಿಶ್ವೇಶ್ವರಯ್ಯ 250 ರೂ. ಮತ್ತು 100 ರೂ. ಬಟ್ಲು, ಮ॥ ಸಿ. ರಂಗರಾವ್ 100 ರೂ. ಮತ್ತು 50 ರೂ. ಬಟ್ಲು, ಮ॥ ಆರ್. ಕೃಷ್ಣಮೂರ್ತಿನಾಯ್ಡು 70 ರೂ. ಮತ್ತು 30 ರೂ. ಬಟ್ಲು, ಮ॥ ಕಾಳೆಗೌಡ 20 ರೂ.

ಟಾಂಗಾಗಳ ಜೂಜು.—ಮಿ॥ ಡೋಂಗ್ರೆ 49 ರೂ., ಮಿ॥ ಇಸೂಫ್‌ಖಾನ್ 25 ರೂ., ಮ॥ ದಶರಥ್ 15 ರೂ.; ಕುದುರೆಗಳ ಜೂಜು.—ಮಿ॥ ಡೋಂಗ್ರೆ 49 ರೂ., ಮಿ॥ ಇಸೂಫ್‌ಖಾನ್ 25 ರೂ., ಮ॥ ನಂಜರಾಜೆಅರ್ಸ್ 15 ರೂ.; ಸ್ಪೆಷಲ್ ಜೂಜು.—ಮ॥ ರಂಗರಾವ್ 25 ರೂ., ಮ॥ ಕಾಳೆಗೌಡ 20 ರೂ., ಮಿ॥ ಸಯ್ಯದ್ ಮಸೂದ್ 15 ರೂ.; ದೇಶೀಯ ಸಿವಿಲ್ ಅಧಿಕಾರಿಗಳಲ್ಲಿ — ಮ॥ ಎಂ. ಎಸ್. ರಾಮಚಂದ್ರರಾವ್ 100 ರೂ. ಮತ್ತು 50 ರೂ. ಬಟ್ಲು, ಮ॥ ವೇದಾಂತದೇಶಿಗಂ ಅಯ್ಯಂಗಾರ್ 70 ರೂ. ಮತ್ತು 30 ರೂ. ಬಟ್ಲು, ಮಿ॥ ಡಿ. ಕೆ. ತಾರಾಪಾ 40 ರೂ. ಮತ್ತು 20 ರೂ. ಬಟ್ಲು, ಮ॥ ಎ. ಸುಬ್ರಹ್ಮಣ್ಯ ಅಯ್ಯರ್ 15 ರೂ.; ಕುದುರೆಗಳಿಗೆ.—ಮಿ॥ ಇಸೂಫ್‌ಖಾನ್ 70 ರೂ. ಮತ್ತು 30 ರೂ. ಬಟ್ಲು, ಮ॥ ಬಿ. ಪಿ. ಸಿದ್ದರಾಜೆಅರ್ಸ್ 40 ರೂ. ಮತ್ತು 20 ರೂ. ಬಟ್ಲು, ಮ॥ ಹನುಮಂತರಾವ್ 30 ರೂ. ಮತ್ತು 10 ರೂ. ಬಟ್ಲು.

ದೇಶೀಯ ಸಿವಿಲ್ ಅಧಿಕಾರಿಗಳ ಕುದುರೆಗಳಿಗೆ.—ಮ॥ ಎ. ವೇದಾಂತ ದೇಶಿಗಂ ಅಯ್ಯಂಗಾರ್ 100 ರೂ. ಮತ್ತು 50 ರೂ. ಬಟ್ಲು, ಮಿ॥ ಮಹಮದ್ ಓಬೆದುಲ್ಲಾ 60 ರೂ. ಮತ್ತು 30 ರೂ. ಬಟ್ಲು, ಮ॥ ಡಿ. ಕೆ. ರಾಮರಾವ್ 25 ರೂ. ಮತ್ತು 15 ರೂ. ಬಟ್ಲು; ಅಧಿಕಾರಿಗಳಲ್ಲದವರ ಕುದುರೆಗಳಿಗೆ.—ಮ॥ ಎ. ಸಿ. ಲಿಂಗರಾಜೆ ಅರ್ಸ್ 100 ರೂ. ಮತ್ತು 50 ರೂ. ಬಟ್ಲು, ಮ॥ ಕೆ. ಸುಬ್ಬರಾವ್ 60 ರೂ. ಮತ್ತು 30 ರೂ. ಬಟ್ಲು, ಮ॥ ಲಕ್ಷ್ಮಣಸಿಂಗ್‌ಜಿ 25 ರೂ. ಮತ್ತು 15 ರೂ. ಬಟ್ಲು.

ಅಧಿಕಾರಿಗಳ ಕುದುರೆ ಜೂಜು.—ಮಿ॥ ಡಿ. ಕೆ. ತಾರಾಪಾ 150 ರೂ. ಮತ್ತು 50 ರೂ. ಬಟ್ಲು, ಮ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ 70 ರೂ. ಮತ್ತು 30 ರೂ. ಬಟ್ಲು, ಮ॥ ಡಿ. ಶ್ರೀನಿವಾಸರಾವ್ 30 ರೂ. ಮತ್ತು 20 ರೂ. ಬಟ್ಲು, ಮ॥ ತ್ಯಾಗರಾಜ ಅಯರ್ ರೂ. 20; ಅಧಿಕಾರಿಗಳಲ್ಲದವರ ಕುದುರೆ ಜೂಜು.—ಮ॥ ಲಕ್ಷ್ಮಣಸಿಂಗ್‌ಜಿ 150 ರೂ. ಮತ್ತು 50 ರೂ. ಬಟ್ಲು, ಮ॥ ಎ. ಸಿ. ಲಿಂಗರಾಜೆ ಅರ್ಸ್ 70 ರೂ. ಮತ್ತು 30 ರೂ. ಬಟ್ಲು, ಮ॥ ಎಚ್. ವಿ. ವಿಶ್ವೇಶ್ವರಯ್ಯ 30 ರೂ. ಮತ್ತು 20 ರೂ. ಬಟ್ಲು, ಮ॥ ಚಂದ್ರಶೇಖರಂ 20 ರೂ.

ಪೇಪರ್ ಚೇಸ್ ಪಂದ್ಯ.—ಮ॥ ಎಸ್. ಗೋಪಾಲರಾವ್ 50 ರೂ., ಮ॥ ಹನುಮಂತರಾವ್ 30 ರೂ., ಮಿ॥ ಇಸೂಫ್ ಖಾನ್ 20 ರೂ.

ತಾಲ್ಲೋಕು ವರ್ತಮಾನಗಳು.

ತರೀಕೆರೆ ತಾ॥ ಲಿಂಗದಹಳ್ಳಿ.—ಈ ಗ್ರಾಮಕ್ಕೆ ತಾ. 16 ರಲ್ಲಿ ಕಡೂರು ಡಿಸ್ಟ್ರಿಕ್ಟು ಲೆಕ್ಚರರಾದ ಮ॥ ಬಿ. ಕೆ ಶಿಂಗಯ್ಯಂಗಾರ್‍ರು ದಯಮಾಡಿ ಇಲ್ಲಿನ ಎ. ಇ. ಸ್ಕೂಲಿನಲ್ಲಿ ಗ್ರಾಮದ ಮುಖಂಡರು ಮತ್ತು ರೈತಾಬಿ ಜನಗಳನ್ನು ಕೂಡಿಸಿ ಸ್ತ್ರೀ ವಿದ್ಯಾಭ್ಯಾಸ, ಕೈಗಾರಿಕೆ, ಕೋ. ಸೊಸೈಟಿ, ಅನ್ಯೋನ್ಯ ವಿಶ್ವಾಸಗಳ ವಿಷಯವಾಗಿ ಹೃದಯಂಗಮವಾಗುವಂತೆ ಉಪನ್ಯಾಸ ಮಾಡಿದರು. ಸ್ಕೂಲ್ ಹೆಡ್ ಮಾಸ್ಟರ್ ಮ॥ ಬಿ. ರಾಮಪ್ಪನವರು ಈ ಗ್ರಾಮಕ್ಕೆ ಬಂದ ಮೇಲೆ ಸ್ಕೂಲು ಅತ್ಯಂತ ಉತ್ತಮಸ್ಥಿತಿಗೆ ಬಂದಿರುವದಲ್ಲದೆ ಪ್ರತಿ ವರ್ಷವೂ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಬಾಲಕರು ತೇರ್ಗಡೆಯಾಗುತ್ತಿರುವದಲ್ಲದೆ 1915 ರಲ್ಲಿ ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಗಳು ಇಬ್ಬರೂ ತೇರ್ಗಡೆ ಹೊಂದಿರುವದಕ್ಕೆ ಬ್ರಾಹ್ಮಣೇತರ ಹುಡುಗರೂ ಪಾಸಾಗಿರುವ ಸಂಗತಿಗೆ ಸಮಸ್ತರೂ ಸಂತೋಷಪಟ್ಟು ಅವುಲಿಪ್ತ್ರವರು ಬಾಲಕರಿಗೆ ಕಳುಹಿಸಿಕೊಟ್ಟ ಹಣ್ಣುಹಂಪಲುಗಳನ್ನು ಹಂಚಿಸಿ ಬಾಲಕಬಾಲಕಿಯರಿಂದ ಪ್ರೀಯಃಪ್ರಾರ್ಥನೆಗಳನ್ನು ಮಾಡಿಸಿದ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಮೊಳಕಾಲ್ಮೂರು.—ಈ ಪ್ರಾಂತ್ಯ 10-15 ದಿನಗಳ ಕೆಳಗೆ ಸ್ವಲ್ಪ ಮಳೆಯಾಗಿತ್ತು. ಈಚೆಗೆ ಬರೀ ಮೋಡಗಳು ಮಾತ್ರ ಆಗಿ ಸ್ವಲ್ಪ ಸ್ವಲ್ಪ ಸೋನೆ ಮಳೆ ಸುರಿಯುತ್ತಿದೆ. ದೊಡ್ಡ ಮಳೆ ಬಗಲಿಲ್ಲ. ಸೂರ್ಯನ ದರ್ಶನವೇ ಇಲ್ಲದಂತಾಗಿದೆ. ದವಸದ ಧಾರಣೆ ಅಕ್ಕಿ 7 ಸೇರು, ರಾಗಿ 16 ಸೇರು, ಜೋಳ 15 ಸೇರು, ಈ ರೀತಿ ಇವೆ.—ಈ ಗ್ರಾಮದಲ್ಲಿ ಅನೇಕ ಜನಗಳು ನೆಯ್ಗೆ ಕೆಲಸದಲ್ಲಿ ಜೀವನ ಮಾಡತಕ್ಕವರಾಗಿದಾರೆ. ಆದರೆ ಈಗ ನೀಲಿ ಮತ್ತು ಬಣ್ಣದ ಧಾರಣೆ ತುಂಬಾ ಹೆಚ್ಚಿರುವುದರಿಂದ ಜನಗಳಿಗೆ ಕೆಲಸ ನಡಿಸಲು ಬಹಳ ತೊಂದರೆಯಾಗಿದೆ.—ಈ ಊರಿನಲ್ಲಿ ರಾತ್ರಿಹೊತ್ತು ದೊಡ್ಡ ರಸ್ತೆಗಳಲ್ಲಿ ಮಾತ್ರ ಲಾಂದ್ರಾದೀಪ ಹಚ್ಚುತ್ತಾರೆ. ಇತರ ಕಡೆಗಳಲ್ಲಿ ಹಚ್ಚುವುದೇ ಇಲ್ಲ. ಇದರಿಂದ ಜನಗಳಿಗೆ ಕತ್ತಲಲ್ಲಿ ಓಡಾಡುವುದು ಬಹಳ ಕಷ್ಟವಾಗಿದೆ. ಮ್ಯುನಿಸಿಪಾಲಿಟಿಯವರು ಈ ವಿಚಾರಕ್ಕೆ ಗಮನತಂದುಕೊಂಡು ದೀಪಗಳನ್ನು ಎಲ್ಲಾ ಕಡೆಯಲ್ಲಿಯೂ ಹಚ್ಚಿದರೆ ಜನಗಳಿಗೆ ಬಹಳ ಉಪಕಾರವಾಗುತ್ತೆ.—ಈ ಊರಿನಲ್ಲಿ ಲೋ. ಸೆ. ಪರೀಕ್ಷೆಗೆ ಹೋದ 9 ಜನರ ಪೈಕಿ ಏಳು ಜನ ಪಾಸಾಗಿರುವುದರಿಂದ ಬಹಳ ಸಂತೋಷವಾಗಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜೂನ್ 17 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣೆ:—(1) ಷೇರು ಮೊಬಲಗು	.... ರೂ.	10,00,000
,, (2) ರಿಜರ್ವ್ ಫಂಡು	.... ,,	26,000
,, (3) ಡಿಪಾಜಿಟ್ಟುಗಳು	.... ,,	29,49,232
,, (4) ಇತರೆ	.... ,,	64,172
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	40,39,404

ಲೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	7,10,376
,, (2) ಖಾತೆ ಮತ್ತು ಇತರ ಸಾಲಗಳು	,,	23,77,541
,, (3) ಡಿಸ್ಕೌಂಟುಮಾಡಿದವಾಯಿದೆ ಹುಂಡಿಗಳು	,,	4,40,321
,, (4) ಇನ್‌ವೆಸ್ಟ್‌ಮೆಂಟುಗಳು	,,	2,79,777
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	1,94,318
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	10,463
,, (7) ಇತರೆ	,,	19,678
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	40,39,404

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಉಪಾಧ್ಯಾಯರ ಸಂಘ, ಚಾಮರಾಜನಗರ.

ಚಾಮರಾಜನಗರದಲ್ಲಿ ಈ ಮಾಸ 17, 18, 19 ನೇ ತಾ. ಗಳಲ್ಲಿ ನಡೆದ ವ್ಯವಸಾಯ, ಕೈಗಾರಿಕೆ ಮತ್ತು ವಿದ್ಯಾಭ್ಯಾಸದ ಕಾನ್ಫರೆನ್ಸುಗಳ ಸಂದರ್ಭದಲ್ಲಿ ಈ ತಾಲ್ಲೋಕಾಮುಳೆ ನಾನಾ ಸ್ಕೂಲುಗಳ ಸಂದರ್ಭದಲ್ಲಿ ಉಪಾಧ್ಯಾಯರುಗಳು ಬಂದಿದ್ದರು. ಈ ಅವಕಾಶವನ್ನು ತೆಗೆದುಕೊಂಡು ನಮ್ಮ ಡೆಪ್ಯುಟಿ ಇನ್ಸ್‌ಪೆಕ್ಟರವರಾದ ಮ|| ಎಂ. ನಾರಾಯಣರಾಯರು ಮತ್ತು ಅ|| ಡೆ|| ಇನ್|| ಮ|| ವೆಂಕಟರಾಮಯ್ಯನವರು ಈ ತಾಲ್ಲೂಕಿನ ಉಪಾಧ್ಯಾಯರುಗಳಲ್ಲಿ ಏಕಮತ್ಯವನ್ನು ಉಂಟುಮಾಡುವುದಕ್ಕೂ, ಆಗಾಗ್ಗೆ ಸೇರಿ ಪರಸ್ಪರ ಅಭಿಪ್ರಾಯಗಳನ್ನೂ ತಮ್ಮ ತಮ್ಮ ಅನುಭವಗಳನ್ನೂ ಒಬ್ಬರಿಗೊಬ್ಬರು ತಿಳಿಸುವುದಕ್ಕೂ, ಪಾಠಕ್ರಮದಲ್ಲಿ ಉಪಾಧ್ಯಾಯರೂ ನವೀನ ಪದ್ಧತಿಗಳನ್ನು ತಿಳಿದುಕೊಂಡು ಆಚರಣೆಗೆ ತರುವುದಕ್ಕೂ ಸಹಕಾರಿಯಾದಂಥಾ ಒಂದು ಸಂಘವನ್ನು ಏರ್ಪಡಿಸಬೇಕೆಂದು ಪ್ರಯತ್ನಿಸಿ ಇದಕ್ಕಾಗಿ 19 ನೇ ತಾ. ಸಾಯಂಕಾಲ ಎ. ವಿ. ಸ್ಕೂಲ್ ಹಾಲಿನಲ್ಲಿ ಒಂದು ಸಭೆಯನ್ನು ಸೇರಿಸಿದರು. ಈ ಸಭೆಯಲ್ಲಿ ನಮ್ಮ ಡೆಪ್ಯುಟಿ ಇನ್ಸ್‌ಪೆಕ್ಟರವರು ಇಂಥಾ ಸಂಘದಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಕುರಿತು ಒಂದು ಉಪನ್ಯಾಸವನ್ನು ಕೊಟ್ಟರು. ಇದೇ ವಿಷಯವನ್ನು ಕುರಿತು ಮ|| ವೆಂಕಟರಾಮಯ್ಯನವರೂ ಸಹಾ ಸೇರಿದ್ದ ಉಪಾಧ್ಯಾಯರ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಮಾತನಾಡಿದರು. ಇವಾದ ನಂತರ ಇಂಥಾ ಸಂಘವು ಒಂದು ಇಲ್ಲಿ ಏರ್ಪಾಡು ಆಗಬೇಕೆಂದು ಸೇರಿದ್ದ 40 ಜನ ಉಪಾಧ್ಯಾಯರೂ ಸಮ್ಮತಿಸಿದರು. ಈ ಸಂಘದ ತೀರ್ಮಾನಗಳನ್ನು ಎಲ್ಲಾ ಉಪಾಧ್ಯಾಯರುಗಳ ತಿಳುವಳಿಕೆಗೋಸ್ಕರ ಇಲ್ಲಿ ಪ್ರಕಟಿಸಿದೆ. ಈ ತಾಲ್ಲೂಕಿಗೆ ಸೇರಿದ ಆ ದಿವಸ ಬಾರದಿದ್ದ ಉಪಾಧ್ಯಾಯರುಗಳು ಈ ಸಂಘಕ್ಕೆ ಸೇರಿ ಅದರ ಪ್ರಯೋಜನಗಳನ್ನು ಹೊಂದಬೇಕೆಂದು ಪ್ರಾರ್ಥಿಸುತ್ತೇನೆ.

ಇದು ಉಪಾಧ್ಯಾಯರ ಸಂಘ, ಚಾಮರಾಜನಗರ, ಎಂದು ಕರೆಯಲ್ಪಡತಕ್ಕದ್ದು. ಇದರ ಹೆಡ್‌ಕ್ವಾರ್ಟರು ಚಾಮರಾಜನಗರದಲ್ಲಿರತಕ್ಕದ್ದು. ಈ ಸಂಘಕ್ಕೆ ಚಾಮರಾಜನಗರದ ತಾಲ್ಲೂಕಿನಲ್ಲಿರುವ ಸರ್ಕಾರಿ ಮತ್ತು ಗ್ರಾಂಟ್ ಸ್ಕೂಲ್ ಮಾಸ್ಟರುಗಳೂ, ಗರಲ್ಸ್ ಸ್ಕೂಲ್ ಮಿಸ್ಟ್ರೆಸ್‌ಗಳೂ ಮೆಂಬರಾಗಿ ಸೇರಬೇಕು. ಈ ಸಂಘದ ಮೆಂಬರುಗಳ ಉಪಯೋಗಕ್ಕಾಗಿ ಒಂದು ಸರ್ಕ್ಯುಲೇಟಿಂಗ್ ಲೈಬ್ರರಿಯನ್ನು ಸ್ಥಾಪಿಸಬೇಕು. ಈ ಸಂಘದ ವೆಚ್ಚಕ್ಕಾಗಿಯೂ, ಲೈಬ್ರರಿಗೆ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೂ ಪ್ರತಿಯೊಬ್ಬ ಮೆಂಬರೂ ವರ್ಷಕ್ಕೆ ಒಂದು ರೂಪಾಯಿ ಚಂದಾ ಮೊಬಲಗನ್ನು ಒಂದೇ ಕಂತಿನಲ್ಲಾಗಲಿ, ಎರಡು ನಾಲ್ಕು ಕಂತಿನಲ್ಲಾಗಲಿ ಸಂಘದ ಟ್ರೆಜರರ್ ವಶಕ್ಕೆ ಪಾವತಿ ಮಾಡಬೇಕು. ಸಂಘದ ಮೆಂಬರುಗಳು ಪ್ರತಿ ಮಾಹೆ ಕಡೇ ಭಾನುವಾರ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಾಗಲಿ, ಅಥವಾ ಅಪೇಕ್ಷಿಸುವ ಇತರ ದೊಡ್ಡ ಗ್ರಾಮಗಳಲ್ಲಾಗಲಿ ಸೇರಬೇಕು. ಇದರ ಕಾರ್ಯ ನಿರ್ವಾಹಕ್ಕೋಸ್ಕರ ಈ ಕೆಳಗೆ ಕಂಡ ದೊಡ್ಡ ಮನುಷ್ಯರು ಉದ್ದೇದಾರರಾಗಿ ಚುನಾಯಿಸಲ್ಪಟ್ಟಿದಾರೆ:—ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಇನ್ಸ್‌ಪೆಕ್ಟರವರು ಪ್ರಸಿಡೆಂಟರು, 3 ನೇ ರೇಂಜು ಡೆಪ್ಯುಟಿ ಅ|| ಇನ್ಸ್‌ಪೆಕ್ಟರು ವೈಸ್ ಪ್ರೆಸಿಡೆಂಟರು, ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಮ|| ಕೆ. ಮಾಧವರಾಯರು ಸೆಕ್ರೆಟರಿ, ಅ|| ಮಾಸ್ಟರು ಮ|| ಹೆಚ್. ವೆಂಕಟರಾಯರು ಟ್ರೆಜರರ್, ಈ ರೀತಿ ನೇಮಕವಾಗಿರುತ್ತಾರೆ. ಮತ್ತು ಹದಿಮೂರು ಮಂದಿ ಸ್ಕೂಲ್ ಮಾಸ್ಟರುಗಳು ಕಮಿಟಿ ಮೆಂಬರುಗಳಾಗಿ ನೇಮಿಸಲ್ಪಟ್ಟಿದಾರೆ.

ಈ ಸಭೆಯು 2 ನೇ ಮೀಟಿಂಗು 1916 ನೇ ಜುಲೈ ತಾ. 25 ರಲ್ಲಿ ಚಾಮರಾಜನಗರದಲ್ಲಿ ಸೇರಬೇಕೆಂದು ತೀರ್ಮಾನವಾಗಿದೆ. ಆದುದರಿಂದ ಈ ತಾಲ್ಲೂಕಿನಲ್ಲಿರುವ ಈಗ ಹಾಲಿ ಮೆಂಬರಾಗದೇ ಇರುವ ಸ್ಕೂಲ್ ಮಾಸ್ಟರುಗಳು (ಸರ್ಕಾರಿ ಮತ್ತು ಗ್ರಾಂಟ್) ತಮ್ಮ ತಮ್ಮ ಹೆಸರುಗಳನ್ನು ಈ ಕೆಳಗೆ ರುಜು ಮಾಡಿರುವವರ ಹೆಸರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ.

ಚಾಮರಾಜನಗರ. ಕೆ. ಮಾಧವರಾವ್, ಸೆಕ್ರೆಟರಿ.

ಮೈಸೂರು ಗೆಜೆಟ್ ಸಂಗ್ರಹ.

ಬಲಾತ್ಕಾರಿಸಿ ಸಿಡುಬು ಹಾಕುವ ಕಾನೂನನ್ನು ಹೊಳಲ್ಕೆರೆ ಮ್ಯುನಿಸಿಪಾಲಿಟಿಯಲ್ಲಿ ಎರಡು ವರುಷಗಳ ವರಿಗೂ, ಚಿತ್ರದುರ್ಗ ಟೌನ್‌ನಲ್ಲಿ ಒಂದು ವರುಷದ ವರಿಗೂ, ಕೊಪ್ಪ ಮ್ಯುನಿಸಿಪಾಲಿಟಿಯಲ್ಲಿ ಒಂದು ವರುಷದ ವರಿಗೂ, ಮೂಡಿಗೆರೆ ಮ್ಯುನಿಸಿಪಾಲಿಟಿಯಲ್ಲಿ ಎರಡು ವರುಷಗಳ ವರಿಗೂ ಜಾರಿಗೆ ತರಲ್ಪಡತಕ್ಕದ್ದು.

ಚನ್ನಪಟ್ಟಣ ಟೌನ್‌ನಲ್ಲಿ ಓಟರುಗಳ ಪಟ್ಟಿ ತಯಾರಾಗುತ್ತಿರೋದರಿಂದ ಸೆಪ್ಟೆಂಬರ್ ಆಖೈರು ವರೆಗೆ ಈಗಿರುವ ಮ್ಯುನಿಸಿಪಲ್ ಕೌನ್ಸಿಲ್ಲು ಬದಲಾಯಿಸಲ್ಪಡುವುದಿಲ್ಲ.

ಜವಳಿ ವರ್ತಕರು ಮಿ|| ಹಯಾತ್ ಸಾಹೇಬರನ್ನು ಮಾಗಡಿ ಮ್ಯುನಿಸಿಪಲ್ ಬೋರ್ಡಿಗೂ, ಮ|| ಗಂಜಾಮ್ ಬಾಳಯ್ಯ ಬಿನ್ ಬಾಲದಾಸಯ್ಯನವರನ್ನು ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಕೌನ್ಸಿಲ್‌ಗೂ ಮೆಂಬರುಗಳಾಗಿ ನೇಮಿಸಿದೆ.

ನಗರ ತಾಲ್ಲೂಕು ರಾಮಚಂದ್ರಪುರ ಮಠದ ಶ್ರೀರಾಮಚಂದ್ರ ಭಾರತಿ ಸ್ವಾಮಿಗಳವರು ಬಂದೂಕು, ಕತ್ತಿ, ಭಲ್ಲೆ ಮೊದಲಾದ 17 ಆಯುಧಗಳನ್ನು ಇಟ್ಟುಕೊಳ್ಳಲು ಸರ್ಕಾರದವರು ಅವರಿಗೆ ವಿನಾಯಿತಿ ಮಾಡಿದಾರೆ.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಲೋಕಲ್ ಸೆಸ್ ವಸೂಲಾಗುವಂಥಾ ಎಕ್ಸೈಸ್ ಕಂದಾಯದ ಮೇಲೂ ಮುಂದಿನ ಸಾಲಿನಿಂದ (ಅಂದರೆ 1915 ನೇ ಜೂಲೈ ಲಾಗಾಯತು) ರೈಲ್ವೆ ಸೆಸ್ಸನ್ನು ಪ್ರತ್ಯೇಕವಾಗಿ ವಸೂಲ್ಮಾಡಲ್ಪಡುತ್ತದೆ. ಲೋಕಲ್ ಸೆಸ್ ಕೊಡದೆ ಇರುವಂಥಾ ದುಕಾನ್ ಬಾಡಿಗೆಗಳ ಮೇಲೆ ರೈಲ್ವೆ ಸೆಸ್ಸು ವಸೂಲ್ಮಾಡತಕ್ಕದ್ದಿಲ್ಲ.

ಶಿವಮೊಗ್ಗ ಫಾರೆಸ್ಟ್ ಸಬ್ ಡಿವಿಜನ್ ಆಫೀಸಿಗೆ ವರ್ಗವಾಗಿರುವ ಸಬ್ ಅ|| ಕನ್ಸರ್ವೇಟರ್ ಮಿ|| ಸಿ. ಎಚ್. ಈಗಲ್ಸ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಅವರ ಕೆಲಸದ ಭಾರವನ್ನೂ ವಹಿಸಿರತಕ್ಕದ್ದು.

ಕಡೂರು ಸಬ್ ಡಿವಿಜನ್ ಅ|| ಕಮಿಷನರ್ ಮ|| ಬಿ. ಟಿ. ಕೇಶವಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕಡೂರು ಡಿಸ್ಟ್ರಿಕ್ಟಿನ ಟ್ರೆಜರಿ ಅ|| ಕಮಿಷನರು ಸಬ್ ಡಿವಿಜನ್ ಭಾರವನ್ನು ವಹಿಸಿರತಕ್ಕದ್ದು.

ಪಾವಗಡದ ಅಮಲ್ದಾರ್ ಮ|| ವಿ. ಗೋಪಾಲರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹನ್ನೆರಡು ದಿನ ಜಾಸ್ತಿ ಮಾಡಿದೆ.

ಆಕ್ಟಿಂಗ್ ಚೀಫ್ ಸೂಪರಿಂಟೆಂಡೆಂಟ್ ಮ|| ಎಸ್. ರಾಮಸ್ವಾಮಿ ಅಯ್ಯಂಗಾರ್ರಿಗೆ ಒಂಭತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರ ಆಫೀಸ್ ಅಸಿಸ್ಟೆಂಟ್ ಮ|| ಎಂ. ಲಕ್ಷ್ಮಣಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು 2 ನೇ ಮುನ್ಸಿಫ್ ಮ|| ಎಸ್. ವೆಂಕಟಕೃಷ್ಣಯ್ಯನವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚೀಫ್ ಕೋರ್ಟ್ ಆಕ್ಟಿಂಗ್ ಡೆಪ್ಯುಟಿ ರಿಜಿಸ್ಟ್ರಾರ್ ಮ|| ಎಸ್. ಎ. ವೈದ್ಯೇಶ್ವರ ಅಯ್ಯರವರು ಮೈಸೂರು 2 ನೇ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಅ|| ಕಮಿಷನರ್ ಮ|| ಟಿ. ಗೋವಿಂದರಾಯರನ್ನು ಏಪ್ರಿಲ್ ತಾ. 1 ರಿಂದ 3 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಹೆಲ್ತ್ ಆಫೀಸರ್ ಮ|| ವಿ. ಎಲ್. ಮಾಂಕರವರನ್ನು ಕೋಲಾರದಿಂದ ಬೆಂಗಳೂರು ಪಬ್ಲಿಕ್ ಹೆಲ್ತ್ ಇನ್ಸ್‌ಟಿಟ್ಯೂಟಿಗೆ ವರ್ಗಮಾಡಿದೆ. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರೇ ಕೋಲಾರ್ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ ಕೆಲಸಗಳನ್ನೂ ಮಾಡತಕ್ಕದ್ದು.

ತುರುವೇಕೆರೆ ವಿಲೇಜು ಇಂಪ್ರೂವ್‌ಮೆಂಟ್ ಕಮಿಟಿ ಕಾನ್ಫರೆನ್ಸು.

ತುರುವೇಕೆರೆ ಸಬ್ ತಾಲ್ಲೂಕಿನ ವಿಲೇಜು ಇಂಪ್ರೂವ್‌ಮೆಂಟ್ ಕಮಿಟಿಯ ಅಧ್ಯಕ್ಷರುಗಳೂ, ಸಂಘದ ಪ್ರತಿನಿಧಿಗಳೂ ತಾ. 17 ರಲ್ಲಿ ಡೆಪ್ಯುಟಿ ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ವಿಲೇಜು ಇಂಪ್ರೂವ್‌ಮೆಂಟ್ ಕಮಿಟಿಯ ಕಾನ್ಫರೆನ್ಸನ್ನು ತುರುವೇಕೆರೆ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡೆಯಿಸಿದರು. ಈ ಸಂಘಕ್ಕೆ ಗುಬ್ಬಿ ಸಬ್ ಡಿವಿಜನ್ ಆಫೀಸರವರೂ, ಎಕ್ಸಿಕ್ಯುಟಿವ್ ಸೂಪರಿಂಟೆಂಡೆಂಟರವರೂ, ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರವರೂ, ಪುರಪ್ರಮುಖರೂ ಅಲ್ಲದೆ ಈ ಕಮಿಟಿಯ 200 ಜನ ಡೆಲಿಗೇಟುಗಳೂ ಸಭಾಸದರಾಗಿದ್ದರು. ಡೆಪ್ಯುಟಿ ಅಮಲ್ದಾರರು ವಿ. ಇ. ಕಮಿಟಿಯ ರಿಪೋರ್ಟನ್ನು ಓದಿದರು. ಇದರಿಂದ ಈ ಸಬ್ ತಾಲ್ಲೂಕಿನಲ್ಲಿ 76 ವಿ. ಇ. ಕಮಿಟಿಗಳು ಸ್ಥಾಪಿತವಾಗಿರುವುದಾಗಿಯೂ, ಪ್ರತಿಯೊಂದು ಕಮಿಟಿಯೂ ತೃಪ್ತಿಕರವಾಗಿ ಕೆಲಸಮಾಡಿರುವುದಾಗಿಯೂ, ಈ ಸಬ್ ತಾಲ್ಲೂಕಿನಲ್ಲಿ ನಡೆದಿರುವ ಒಟ್ಟು 1,200 ರೂಪಾಯಿಗಳ ಕೆಲಸದಲ್ಲಿ ಅರ್ಧ ಮೊಬಲಗನ್ನು ಆಯಾ ಗ್ರಾಮಸ್ಥರೂ, ಅರ್ಧ ಮೊಬಲಗನ್ನು ಸರ್ಕಾರದವರೂ ಕೊಟ್ಟು ಕೆಲಸ ನಡಿಸಿರುವದಾಗಿಯೂ, ಇದೂ ಅಲ್ಲದೆ ಗ್ರಾಮಸ್ಥರು ಗ್ರಾಮ ಪಾಠಶಾಲಾ ವಗೈರೆ 450 ರೂಪಾಯಿನ ಕೆಲಸವನ್ನು ತಾವು ತಾವೇ ಸ್ವತಃ ಮಾಡಿರುವುದಾಗಿಯೂ ವ್ಯಕ್ತಪಟ್ಟಿತು. ಅನಂತರ ಬೇರೆ ಬೇರೆ ಕಮಿಟಿಗಳ ಅಧ್ಯಕ್ಷರುಗಳು ಆಯಾ ಸಂಘದ ರಿಪೋರ್ಟುಗಳನ್ನು ಓದಿದರು. ಇವುಗಳನ್ನು ನೋಡಿದ್ದರಲ್ಲಿ ಈ ಡಿಸ್ಟ್ರಿಕ್ಟ್‌ನಲ್ಲಿ ಈ ಸಬ್ ತಾಲ್ಲೂಕು ಈ ವಿಷಯದಲ್ಲಿ ಅಗ್ರಸ್ಥಾನವನ್ನು ಹೊಂದಿದೆ ಎಂದು ಹೇಳಲು ಯಾವ ಅಭ್ಯಂತರವೂ ತೋರುವುದಿಲ್ಲ. ವಿದ್ಯೆ, ವ್ಯವಸಾಯ, ಪರಸ್ಪರ ಸಂಘಗಳ ಸಹಾಯದ ವಿಷಯದಲ್ಲಿ ಅತ್ಯಂತ ಸ್ವಾರಸ್ಯವಾದ ಉಪನ್ಯಾಸಗಳು ಮ|| ಗಳಾದ ಕೆ. ಕೇಶವಾಚಾರ್, ವಿ. ರಾಮಚಂದ್ರರಾವ್, ವಿ. ನಾರಣಪ್ಪ, ಇವರುಗಳಿಂದ ನಡೆಯಿಸಲ್ಪಟ್ಟವು. ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರವರು ಆರೋಗ್ಯದ ವಿಷಯವಾಗಿ ಯುಕ್ತಿಯುಕ್ತವಾದ ಉಪನ್ಯಾಸವನ್ನು ಕೊಟ್ಟರು. ಅನಂತರ ಈ ಕಮಿಟಿಯ ವಿಷಯದಲ್ಲಿ ಯಾವ ಯಾವ ಬದಲಾವಣೆಗಳು ಆವಶ್ಯಕವೆಂಬ ಚರ್ಚೆ ನಡೆಯಿತು. ಸಭಾಧ್ಯಕ್ಷರಾದ ಡೆಪ್ಯುಟಿ ಕಮಿಷನರವರು ವಿ. ಇ. ಕಮಿಟಿಯಿಂದ ಆಗುವ ಪ್ರಯೋಜನವನ್ನೂ, ಇದನ್ನು ಯಾವ ರೀತಿ ನಡಿಸಿಕೊಂಡು ಬರಬೇಕೆಂಬುದನ್ನೂ, ಇದರಿಂದ ಮುಂದೆ ಪ್ರಜೆಗಳು ತಮ್ಮ ತಮ್ಮ ಕೆಲಸಗಳನ್ನು ತಾವು ತಾವೇ ಮಾಡಿಕೊಳ್ಳುವಷ್ಟು ಸಾಮರ್ಥ್ಯವನ್ನು ಪಡೆಯುವರೆಂಬುದನ್ನೂ, ಇನ್ನೂ ಅನೇಕ ವಿಷಯಗಳನ್ನು ಒಳಗೊಂಡಿರುವ ಉದ್ದವಾದ ಮತ್ತು ತಿಳುವಳಿಕೆ ರೂಪವಾದ ಭಾಷಣವನ್ನು ದಯಪಾಲಿಸಿದರು. ಅಲ್ಲದೆ ಈ ಕಮಿಟಿಯ ವಿಷಯದಲ್ಲಿ ಡೆಪ್ಯುಟಿ ಅಮಲ್ದಾರ್ರು ಹೆಚ್ಚು ಶ್ರದ್ಧೆಯನ್ನು ವಹಿಸಿ ಪ್ರಜಾ ಏಳಿಗೆಗೆ ಕಾರಣಭೂತರಾದ ಸಂಗತಿಯನ್ನು ತಿಳಿಸಿದರು. ನಂತರ ಹಾರ ತುರಾಯಿಗಳು ಸಭಾಧ್ಯಕ್ಷರಿಗೂ, ಸಭಾಸದರಿಗೂ ವಿನಿಯೋಗಿಸುವುದರ ಮೂಲಕ ಈ ಸಭೆಯು ಮುಕ್ತಾಯವಾಯಿತು. ಮೊದಲೇ ಏರ್ಪಡಿಸಿದ್ದಂತೆ ಟವನ್ ಹಾಲ್ ಮುಂಭಾಗದಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಬೊಂಬೆ ಆಟವೂ, ಟವನ್ ಹಾಲಿನಲ್ಲಿ ಅಲ್ಪಾಹಾರವೂ ನಡೆದವು.

ವಿ. ನ.

ಪರಸ್ಪರಸಹಾಯ ಸಂಘದ ಕೂಟ, ಚನ್ನರಾಯಪಟ್ಟಣ.

ಕಳೆದ ತಾ. 13 ರಲ್ಲಿ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಸಾಹೇಬರು ಇಲ್ಲಿಗೆ ದಯಮಾಡಿಸಿದರು. ತಾಲ್ಲೂಕ್ ಆನರರಿ ಸೂಪರ್‌ವೈಸರ್ ಮ|| ಎ. ಎನ್. ಲಕ್ಷ್ಮೀನಾರಾಯಣರಾಯರು ಶ್ರೀನಿವಾಸಪುರದ ನದೀ ಸಮೀಪಕ್ಕೆ ಹೋಗಿದ್ದು ಸಾಹೇಬರನ್ನೆದುರುಗೊಂಡು ಶ್ರೀನಿವಾಸಪುರದ ಬಳಿ ಬರುತ್ತಿದ್ದಾಗ್ಗೆ ರಿಟೈರ್ಡ್ ಅಮಲ್ದಾರ್ ಮ|| ಜಿ. ತಿರುನಾರಣಯ್ಯಂಗಾರ್ರು ಸಾಹೇಬರನ್ನು ಎದುರುಗೊಂಡು ತಮ್ಮ ಆಫೀಸಿಗೆ ಪ್ರಾರ್ಥಿಸಿ ಕರೆದುಕೊಂಡು ಹೋಗಿ ಪರಸ್ಪರಸಹಾಯ ಸಂಘಗಳ ಸಂಬಂಧವಾದ ಅನೇಕ ಪ್ರಸ್ತಾಪನೆಗಳಾದ ಬಳಿಕ ಆ ಊರು ಸೊಸೈಟಿಯ ಆದೇಶಗಳನ್ನೆಲ್ಲಾ ಅರಿಕೆ ಮಾಡಿದ್ದಾಯಿತು. ಮತ್ತು ಏಳೂ ಚಿಲ್ಲರೆ ಸಾವಿರ ರೂಪಾಯಿಗಳನ್ನು ಸಂಘಕ್ಕೆ ಜಾಸ್ತಿ ಸಾಲ ಕೊಡಿಸಬೇಕೆಂದು ಕೇಳಿಕೊಂಡರು. ರಿಜಿಸ್ಟ್ರಾರ್ ಸಾಹೇಬರು ಸದುತ್ತರವನ್ನು ದಯಪಾಲಿಸಿದ ನಂತರ ಸಂಘದ ಶಿಲ್ಕು ಹವಾಲಿಯನ್ನೂ, ಲೆಕ್ಕ ಪತ್ರಗಳ ತಂಡೆಯನ್ನೂ ತನಿಖೆ ಮಾಡಿದರು. ಬಳಿಕ ಅಲ್ಪಾಹಾರವನ್ನು ಸ್ವೀಕರಿಸಬೇಕೆಂದು ಅಮಲ್ದಾರ್ರು ಪ್ರಾರ್ಥಿಸಿದ್ದನ್ನಂಗೀಕರಿಸಿ ರಿಜಿಸ್ಟ್ರಾರ್ ಸಾಹೇಬರು ಚನ್ನರಾಯಪಟ್ಟಣಕ್ಕೆ ದಯಮಾಡಿಸಿದರು. ಅಮಲ್ದಾರ್ ಮಿ|| ಹೈದರಲ್ಲಿಖಾನ್ ಸಾಹೇಬರೂ, ಸಬ್ ರಿಜಿಸ್ಟ್ರಾರ್ ಮ|| ಸಿ. ಕೃಷ್ಣಮೂರ್ತಿಶಾಸ್ತ್ರಿಗಳೂ, ಸೊಸೈಟಿಗಳ ಇನ್ಸ್‌ಪೆಕ್ಟರ್ ಮ|| ಎಂ. ಎಸ್. ತೂರಪ್ಪನವರೂ, ಪಟ್ಟಣದ ಇತರ ದೊಡ್ಡ ಮನುಷ್ಯರುಗಳೂ ರಿಜಿಸ್ಟ್ರಾರ್ ಸಾಹೇಬರ ಸುಸ್ವಾಗತವನ್ನು ಬಯಸುತ್ತಿದ್ದು ಎದುರುಗೊಂಡು ಸಾಹೇಬರಲ್ಲಿ ಸ್ಥಳ ವಿದ್ಯಮಾನಗಳನ್ನು ಅರಿಕೆ ಮಾಡಿದರು. ಆ ದಿನ ಮಧ್ಯಾಹ್ನ 4 ಗಂಟೆಗೆ ಮೀಟಿಂಗಿಗೆ ಷುರುವಾಯಿತು. ಮೀಟಿಂಗಿಗೆ ಬಾಗೂರು, ಜಿನ್ನೇನಹಳ್ಳಿ ಎರಡು ವಿನಹಾ ಬಾಕಿ ಸಂಘದ ಪ್ರತಿನಿಧಿಗಳೆಲ್ಲಾ ದಯಮಾಡಿಸಿದ್ದರು. ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್‌ರೂ, ಅಮಲ್ದಾರರೂ, ಸಬ್ ರಿಜಿಸ್ಟ್ರಾರ್ರು, ಮ|| ಮೂಡಿಗೆರೆ ವೆಂಕಟರಾಮಯ್ಯನವರು, ಮ|| ಜಿ. ತಿರುನಾರಣಯ್ಯಂಗಾರ್ರು, ಮ|| ಸುಬ್ಬಣ್ಣಶೆಟ್ಟರು, ಮ|| ನಾರಸೀದೇವರಯ್ಯನವರು, ಲಾಯರ್ ಮ|| ಲಕ್ಷ್ಮೀನಾರಾಯಣರಾಯರು, ಮುಂತಾದ ದೊಡ್ಡ ಮನುಷ್ಯರುಗಳೆಲ್ಲರೂ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿ ರಿಜಿಸ್ಟ್ರಾರ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಆ ದಿವಸ ಯೂನಿಯನ್ ಸ್ಥಾಪನೆಯಾಯಿತು. 18 ಜನ ದೊಡ್ಡ ಮನುಷ್ಯರು ಷೇರುದಾರರಾದರು. ದಿವ್ಯವಾದ ಫಲಾಹಾರಗಳಾದ ಬಳಿಕ ಕಸಬಾ ಶ್ರೀಚಂದ್ರಶೇಖರಸ್ವಾಮಿ ಪರಸ್ಪರಸಹಾಯ ಸಂಘದ ಮೀಟಿಂಗು ನಡೆದು ಹಾಲಿ ಸಂಘವು ಲಿಮಿಟೆಡ್ ಆಗಿ ಆಡರು ಬಂದಿರುವ ಭಾಗದಲ್ಲಿ ಚರ್ಚೆ ನಡೆದು ಕೊನೆಗೆ ಲಿಮಿಟೆಡ್ ಆಗಿರಬೇಕೆಂದು ತೀರ್ಮಾನವಾಯ್ತು. 5 ರೂಪಾಯಿನ ಷೇರುಗಳಿದ್ದದ್ದು 25 ರೂಪಾಯಿನ 50 ತಿಂಗಳಲ್ಲಿ ಭರ್ತಿಯಾಗುವ ಷೇರುಗಳಾಗಬೇಕೆಂತಲೂ ಪ್ರತಿ 8 ಆಣೆಗಳಿಗೂ ನಫೆ ಸೇರಿಸಬೇಕೆಂತಲೂ ತೀರ್ಮಾನವಾಯಿತು. ಈ ಏರ್ಪಾಡು ಮಾಡಿಕೊಟ್ಟಿದ್ದು ಬಹು ಶ್ಲಾಘನೀಯವೂ, ಬಡಬಗ್ಗರು ಅಲ್ಪಸ್ವಲ್ಪವಾಗಿ ಉದ್ಧಕ್ಕೂ ಗಳಿಸುತ್ತಿರುವುದಕ್ಕೆ ಅವಕಾಶವೂ ಆಯಿತು. ಬಳಿಕ ಇತರ ಸೊಸೈಟಿಗಳ ವಿಷಯದಲ್ಲಿ ಚರ್ಚೆಗಳು ನಡೆಯಿತು. ಸಭಿಕರ ಪೈಕಿ ಎಲ್ಲಾ ಪ್ರಶ್ನಿಕರ್ತರುಗಳಿಗೂ ಬಹು ಸಧಾನವಾಗಿಯೂ, ವಿರಳವಾಗಿಯೂ, ಅತ್ಯುತ್ತಮವಾದ ಸಲಹೆಗಳನ್ನು ರಿಜಿಸ್ಟ್ರಾರ್ ಸಾಹೇಬರು ದಯಪಾಲಿಸಿದರು. ಮ|| ಕೃಷ್ಣಮೂರ್ತಿಶಾಸ್ತ್ರಿಗಳು ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನರ್ಪಿಸಿದರು. ಮ|| ಲಾಯರು ಲಕ್ಷ್ಮೀನಾರಾಯಣರಾಯರು ಚಕ್ರವರ್ತಿಗಳವರಿಗೂ, ಶ್ರೀಮನ್ ಮಹಾರಾಜ ಯುವರಾಜರವರಿಗೂ ಶ್ರೇಯಸ್ಸನ್ನು ಬಯಸಿದರು. ಸಭೆಯಲ್ಲಿ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಮಾರನೇ ಬೆಳಿಗ್ಗೆಯೂ ರಿಜಿಸ್ಟ್ರಾರ್ ಸಾಹೇಬರು ಇದ್ದು ಕೆಲವು ದೊಡ್ಡ ಮನುಷ್ಯರಿಗೆ ಸಲಹೆಗಳನ್ನು ಸೂಚಿಸಿದರು. ಈ ಸಂದರ್ಭದಲ್ಲಿ ಬೇರೆ ತಾಲ್ಲೂಕಿನ ಸಂಘದ ವಿಷಯ ಪ್ರಸ್ತಾಪ ಬಂದಾಗ್ಗೆ ಈ ತಾಲ್ಲೂಕಿನ ಸಂಘಗಳನ್ನೂ ಉತ್ತಮ ಸ್ಥಿತಿಗೆ ತರಬಹುದೆಂದು ಅಮಲ್ದಾರ್ರವರು ಹೇಳಿದರು. ಈ ಅಮಲ್ದಾರರೇ ಇನ್ನೂ ಕೆಲವು ಕಾಲ ಇಲ್ಲಿ ಇದ್ದರೆ ಇಲ್ಲಿನ ಸಂಘಗಳು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ವಾಚಕ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಗಳು.

ರಾಜಧಾನಿಯಲ್ಲಿ.

ನಮ್ಮ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರವರ ಮೂವತ್ತೆರಡನೇ ವರ್ಷದ ಉತ್ಸವಗಳು ಕಳೆದ ಬುಧವಾರದಿಂದ ರಾಜಧಾನಿಯಲ್ಲಿ ಪ್ರಾರಂಭವಾಗಿ ಕೋಲಾಹಲದಿಂದ ನೆರವೇರಿಸಲ್ಪಟ್ಟವು. ಆ ದಿನ ಬೆಳಿಗ್ಗೆ ಕೋಟೆ ಕೊತ್ತಲದಿಂದ 32 ತೋಪುಗಳು ಹಾರಿಸಲ್ಪಟ್ಟವು. ಪದ್ಧತಿಯ ಪ್ರಕಾರ ಶ್ರೀಮನ್ ಮಹಾರಾಜರವರು ಸುಮಾರು 10½ ಗಂಟೆಗೆ ಅಂಬಾವಿಲಾಸಕ್ಕೆ ಚಿತ್ತೈಸಿ ಶ್ರೀ ಪರಕಾಲಸ್ವಾಮಿಗಳ ಪಾದಪೂಜಾದಿಗಳನ್ನು ಬೆಳಸಿ ದರ್ಬಾರ್ ನಡಿಸಿದರು. ವೈದಿಕಮಂಡಲಿಯವರೂ, ರಾಜಸಿಂಡೆಯವರೂ, ದಿವಾನ್‌ರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ, ಎಲ್ಲಾ ಕೋಮುಗಳ ಮತ್ತು ಕಸಬುಗಳ ದೊಡ್ಡ ಮನುಷ್ಯರೂ ದರ್ಬಾರಿನಲ್ಲಿ ಹಾಜರಾಗಿದ್ದರು. ರಾಜಪುರೋಹಿತರ ಮುಖೇನ ಶ್ರೀಮನ್ ಮಹಾರಾಜರವರು ದಶದಾನ ಫಲದಾನಾದಿಗಳನ್ನು ಬೆಳಸಿದರು. ಮಠಗಳಿಂದಲೂ ದೇವಸ್ಥಾನಗಳಿಂದಲೂ ಆಶೀರ್ವಾದ ಪೂರ್ವಕವಾದ ಬಿಲ್ಲತ್ತುಗಳೂ ಫಲಮಂತ್ರಾಕ್ಷತೆಗಳೂ ಒಪ್ಪಿಸಲ್ಪಟ್ಟ ತರುವಾಯ ವೈದಿಕಮಂಡಲಿಯವರು ಫಲಗಳನ್ನೊಪ್ಪಿಸಿ ಮಂತ್ರಾಕ್ಷತೆಗಳನ್ನು ಎರಚಿ ಆಶೀರ್ವಚನಗಳನ್ನು ಕರೆದರು. ಲೌಕಿಕಮರ್ಯಾದೆಯವರ ಮುಜರೆಗಳು ಬೆಳೆದವು. ಕೆಳಗಡೆ ಮೈದಾನದಲ್ಲಿ ಮನೋಹರವಾಗಿ ವಾದ್ಯಗಳು ಘೋಷಿಸುತ್ತಿದ್ದವು. ಸುಮಾರು 12 ಗಂಟೆಗೆ ಬೆಳಗಿನ ದರ್ಬಾರು ಮುಕ್ತಾಯವಾಯಿತು. ದೇವಸ್ಥಾನ, ಮಸೀತಿ ಮೊದಲಾದವುಗಳಲ್ಲಿ ವಿಶೇಷವಾದ ಪ್ರಾರ್ಥನೆಗಳು ಬೆಳೆದು ಶ್ರೀಮನ್ ಮಹಾರಾಜರವರ ಶ್ರೇಯಸ್ಸು ಬಯಸಲ್ಪಟ್ಟಿತು. ಸಾಯಂಕಾಲ 5 ಗಂಟೆಗೆ ಶ್ರೀಮನ್ ಮಹಾರಾಜರವರು ಅಶ್ವಾರೂಢರಾಗಿ ಚತುರಂಗಬಲ ಸಮೇತ ಮೆರವಣಿಗೆ ಹೊರಟು ದೊಡ್ಡಪೇಟೆಯ ಮಾರ್ಗವಾಗಿ ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ದಯಮಾಡಿದರು. ಉದ್ದಕ್ಕೂ ಪ್ರಜೆಗಳು ಸಾವಿರಗಟ್ಟಲೆಯಾಗಿ ನಿಂತು ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿ ಜಯಘೋಷವನ್ನು ಮಾಡುತ್ತಿದ್ದರು. ಶ್ರೀಮದ್ಯುವರಾಜರವರೂ ಬರೋಡಾ ಸಂಸ್ಥಾನದ ರಾಜಕುಮಾರರೂ ಅಶ್ವಾರೂಢರಾಗಿ ಶ್ರೀಮನ್ ಮಹಾರಾಜರವರ ಎಡಪಾರ್ಶ್ವ ದಯಮಾಡಿದರು. ಮುಖ್ಯ ಸಂಘಗಳಲ್ಲೂ ಗಣ್ಯ ವರ್ತಕರೂ ದೊಡ್ಡ ಮನುಷ್ಯರೂ ಹಾರ ತುರಾಯಿಗಳನ್ನು ಅವರಿಗೆಲ್ಲಾ ಒಪ್ಪಿಸಿದರು. ಸೆಂಟ್ರಲ್ ಪೋಲೀಸ್ ಸ್ಟೇಷನ್ ಬಳಿ ಹಾಕಿದ್ದ ವಿಸ್ತಾರವಾದ ಪೆಂಡಾಲಿನಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರೂ ಕೌನ್ಸಿಲರುಗಳೂ ಇದಿರ್ಗೊಂಡು ಹಾರ ತುರಾಯಿಗಳನ್ನು ಒಪ್ಪಿಸಿದರು. ಶ್ರೀಮನ್ ಮಹಾರಾಜರವರು ಬಂಗಲೆಯ ಮೈದಾನದಲ್ಲಿ ಸೈನ್ಯಗಳ ಕವಾತನ್ನು ಪರಾಂಬರಿಸಿದ ಮೇಲೆ ಸೈನಿಕರೆಲ್ಲಾ ಸಾಲುಸಾಲಾಗಿ ಎದುರಿಗೆ ನಿಂತು 21 ತೋಪುಗಳಾಗುತ್ತಿರುವಲ್ಲಿ ಮೂರಾವರ್ತಿ ಸುರುಟುಗಳನ್ನು ಹಾರಿಸಿ, ಶ್ರೀಮನ್ ಮಹಾರಾಜರವರಿಗೆ ಶ್ರೇಯಸ್ಸನ್ನು ಬಯಸಿ ಉಚ್ಚಧ್ವನಿಯಿಂದ ಜಯಘೋಷಮಾಡಿದರು. ಬಳಿಕ ಮಹಾರಾಜರವರು ಮೆರವಣಿಗೆಯಲ್ಲಿ ವಾಪಸು ಅರಮನೆಗೆ ದಯಮಾಡಿ, ಅವಸರದ ದರ್ಬಾರ್ ನಡಿಸಿದಾಗ ದಿವಾನ್‌ರೇ ಮೊದಲಾದ ಮುಖ್ಯಾಧಿಕಾರಿಗಳು ನಜರುಗಳನ್ನು ಒಪ್ಪಿಸಿದರು. ಆ ದಿನ ರಾತ್ರಿ ಮೆರವಣಿಗೆಯು ಉದ್ದಕ್ಕೂ ಕರೆಂಟ್ ವಾಕಿನೊಳಗೂ, ಸುತ್ತಮುತ್ತಣ ಭಾರೀ ಕಟ್ಟಡಗಳ ಮೇಲೂ, ಅರಮನೆಯ ಮುಂಭಾಗ ಮತ್ತು ಮೇಲ್ಗಡೆಯೂ ಮಾಡಿದ್ದ ದೀಪೋತ್ಸವವು ಅತ್ಯಂತ ನೇತ್ರಾನಂದಕರವಾಗಿತ್ತು. ಮಾರನೇ ದಿನದಿಂದ ಭಾನುವಾರದವರೆಗೆ ನಿತ್ಯನ ಸಾಯಂಕಾಲ ಶ್ರೀಮನ್ ಮಹಾರಾಜರವರು ಅಂಬಾವಿಲಾಸಕ್ಕೆ ಚಿತ್ತೈಸಿ ಆಡಕತ್ತರಿ ದರ್ಬಾರುಗಳನ್ನು ನಡಿಸಿದರು.

ದೊಡ್ಡಬಳ್ಳಾಪುರ.

ಈ ಊರು ಎ. ವಿ. ಸ್ಕೂಲು ಹೆಡ್ ಮಾಸ್ಟರ್ ಮ|| ಕೊಂಗಾಡಯ್ಯಪ್ಪನವರು ಟೌನ್‌ನಲ್ಲಿ ಇರುವ ಎಲ್ಲಾ ಸ್ಕೂಲುಗಳ ಬಾಲಕರನ್ನೂ ಬಾಲಕಿಯರನ್ನೂ ಎ. ವಿ. ಸ್ಕೂಲಿಗೆ ತಾ. 23 ನೇ ಬುಧವಾರ 3 ಗಂಟೆಗೆ ಬರಮಾಡಿಕೊಂಡು ಹುಡುಗರಿಗೆ ಮೊದಲು ಪಂದ್ಯಗಳನ್ನು ಇಟ್ಟರು. ಅವುಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯ್ತು. ನಂತರ ಬಾಲಕರು, ಬಾಲಕಿಯರು, ಸ್ಕೂಲ್ ಮಾಸ್ಟರುಗಳು, ಮುನ್ಸೀಫರು, ಸಬ್ ರಿಜಿಸ್ಟ್ರಾರ್ರವರು, ಟವನಿನ ದೊಡ್ಡ ಮನುಷ್ಯರು ಎಲ್ಲರೂ ಸ್ಕೂಲ್ ಹಾಲಿನಲ್ಲಿ ಸೇರಿದರು. ಮುನ್ಸೀಫರು ಅಗ್ರಾಸನವನ್ನು ಅಲಂಕರಿಸಿದರು. ಸಬ್ ರಿಜಿಸ್ಟ್ರಾರ್ರವರ ಕುಮಾರ್ತೆಯೂ ಹೆಡ್ ಗುಮಾಸ್ತರ ಕುಮಾರ್ತೆಯರ ಹಾರ್ಮೋನಿಯಂ ಮೇಲೆ ತುಂಬಾ ಸ್ವಾರಸ್ಯವಾಗಿ ಗಾನಮಾಡಿದರು. ಅನಂತರ ಮುನ್ಸೀಫರು ಶ್ರೀಮನ್ ಮಹಾರಾಜರವರ ಗುಣಾತಿಶಯಗಳನ್ನು ಬಾಲಕ ಬಾಲಕಿಯರಿಗೆ ತಿಳಿಸಿ ಅವರಿಂದ ತಿಳಿಯಬೇಕಾದ ನೀತಿಯನ್ನು ಸಹ ಹೇಳಿದರು. ಬಳಿಕ ಹೂವು ಗಂಧ ತಾಂಬೂಲ ದೊಡ್ಡಮನುಷ್ಯರಿಗೂ ಬಾಲಕಿಯರಿಗೂ, ಕೊಬರಿ ಸಕ್ಕರೆಯು ಸರ್ವರಿಗೂ ಹಂಚಲಾಯ್ತು. ಚಕ್ರವರ್ತಿ ಸಾರ್ವಭೌಮರಿಗೂ, ಶ್ರೀಮನ್ ಮಹಾರಾಜರಿಗೂ ಮಂಗಳವನ್ನು ಹಾಡಿ, ಜಗದೀಶ್ವರನು ಶ್ರೀಮನ್ ಮಹಾರಾಜರಿಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂದು ಸರ್ವರೂ ಜಯಘೋಷವನ್ನು ಮಾಡುವದರಲ್ಲಿ ಸಭೆಯು ಮುಕ್ತಾಯವಾಯ್ತು. ಈ ಕಾರ್ಯದಲ್ಲಿ ನಮ್ಮ ಹೆಡ್ ಮಾಸ್ಟರವರೂ ಮ|| ವಾಸುದೇವರಾಯರೇ ಮೊದಲಾಗಿ ಎಲ್ಲಾ ಮಾಸ್ಟರುಗಳೂ ತುಂಬಾ ಮುತುವರ್ಜಿಯನ್ನು ವಹಿಸಿದ್ದಕ್ಕಾಗಿ ತುಂಬಾ ಸಂತೋಷಪಡುತ್ತೇನೆ.

ಮೊಳಕಾಲ್ಮೂರು

ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವು ಎ ವಿ ಸ್ಕೂಲು ಬಳಿ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಗ್ರಾಮದ ಎಲ್ಲಾ ಸರ್ಕಾರಿ ಉದ್ಯೋಗಸ್ಥರೂ, ದೊಡ್ಡ ಮನುಷ್ಯರುಗಳೂ, ಇನ್ನೂ ಅನೇಕ ಜನಗಳೂ ಸೇರಿದರು ಹುಡುಗರನ್ನು ಓಡಿಸುವುದೇ ಮೊದಲಾದ ಆಟಪಾಟಗಳನ್ನು ಬೆಳಿಗ್ಗೆ 10 ಗಂಟೆಯವರೆಗೆ ನಡಿಸಿದ್ದಾಯಿತು ನಂತರ ಸ್ಕೂಲಿನಲ್ಲಿ ಗರಲ್ಸ್ ಸ್ಕೂಲ್ ಬಾಲಕಿಯರು ಮತ್ತು ಮಿಡಲ್ ಸ್ಕೂಲು ಹುಡುಗರೂ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು ಅನಂತರ ಸ್ಕೂಲು ಹುಡುಗರಿಗೆ ಇನಾಮು ಪುಸ್ತಕಗಳನ್ನೂ ಮತ್ತು ಆಟಗಳಲ್ಲಿ ಗೆದ್ದವರಿಗೆ ಇನಾಮುಗಳನ್ನೂ ಕೊಟ್ಟರು ಹುಡುಗರಿಗೆ ಮಿಠಾಯಿಗಳನ್ನೂ ಎಲ್ಲರಿಗೂ ಪಾನ್ ಸುಪಾರಿಗಳನ್ನೂ ಹಂಚಿದರು ಅನಂತರ ಸಭೆ ಬರಖಾಸ್ತಾಯಿತು ಇಲ್ಲಿ ದೊಡ್ಡ ಮನುಷ್ಯರೆಲ್ಲರೂ ಸೇರಿ ಚಂದಾ ಹಾಕಿ ಬಡಬಗ್ಗರಿಗೆ ಅನ್ನದಾನವನ್ನೂ ಕೆಲವರಿಗೆ ಬಟ್ಟೆ ದಾನಗಳನ್ನೂ ಕೊಟ್ಟರು ಮತ್ತು ದೇವರ ಉತ್ಸವವನ್ನು ನಡಿಸಿದರು ಮತ್ತು ಹೆಡ್ಮಾಸ್ಟರವರು ಎ ವಿ ಸ್ಕೂಲ್ ಬಾಲಕರಿಂದ ಶ್ರೀಮನ್ ಮಹಾರಾಜಾ ಟವನ್ ಹಾಲಿನಲ್ಲಿ ಇಂಗ್ಲೀಷಿನಲ್ಲಿ ಶಾಕುಂತಲ ನಾಟಕದ ಒಂದು ಭಾಗವನ್ನು ಬಹಳ ಚೆನ್ನಾಗಿ ಆಡಿಸಿದರು ಗ್ರಾಮದ ಅನೇಕ ದೊಡ್ಡ ಮನುಷ್ಯರೂ ಅಧಿಕಾರಸ್ಥರೂ ಎಲ್ಲರೂ ಬಂದು ನೋಡಿದರು ಹೆಡ್ ಮಾಸ್ಟರು ಮತ್ತು ಇತರೇ ಮಾಸ್ಟರುಗಳು ಮುತುವರ್ಜಿ ವಹಿಸಿ ಇಷ್ಟರಮಟ್ಟಿಗೆ ಉತ್ಸವವನ್ನು ನೆರವೇರಿಸಿ ಇಂಗ್ಲೀಷು ನಾಟಕವನ್ನು ಆಡಿಸಿದ್ದು ಬಹಳ ಶ್ಲಾಘನೀಯವಾಗಿದೆ

ಚಿಕ್ಕಬಳ್ಳಾಪುರದ ತಾಲ್ಲೂಕು ಕೇಶವರ

ಕಳೆದ ೨೩ ನೇ ತಾ ಶ್ರೀಮನ್ ಮಹಾರಾಜರವರ ವರ್ಷವರ್ಧಂತಿಯ ಉತ್ಸವವು ಈ ಊರಿನ ಎ ವಿ ಸ್ಕೂಲಿನಲ್ಲಿ ಅತ್ಯಂತ ವೈಭವದಿಂದ ನಡಿಸಲ್ಪಟ್ಟಿತು ಆ ದಿನ ಸ್ಕೂಲನ್ನು ನಾನಾವಿಧವಾದ ಹೂವು ತಳಿರುತೋರಣಗಳಿಂದ ನೇತ್ರಾನಂದಕರವಾಗಿ ಅಲಂಕರಿಸಿ ದಿವ್ಯವಾದ ವಸ್ತ್ರವನ್ನು ಹಾಕಿದ್ದರು ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಮಧ್ಯದಲ್ಲಿಟ್ಟಿದ್ದರು ಸ್ಕೂಲು ಕಮಿಟಿ ಮೆಂಬರುಗಳೂ, ಪಟೇಲ್ ಶಾನುಭೋಗರುಗಳೂ, ಈ ಗ್ರಾಮದ ಮತ್ತು ಇತರ ದೊಡ್ಡ ಮನುಷ್ಯರೂ, ಸ್ಕೂಲು ಬಾಲಕರು ಎಲ್ಲರೂ ಸೇರಿ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನು ಉಚಿತವಾದ ಮರ್ಯಾದೆಗಳಿಂದ ಊರಿನಲ್ಲಿ ಮೆರವಣಿಗೆ ಮಾಡಿಸಿಕೊಂಡು ಬಂದರು ಬಾಲಕಿಯರು ಶ್ರೀಮನ್ ಮಹಾರಾಜರವರ ಭಾವಚಿತ್ರಕ್ಕೆ ಆರತಿ ಎತ್ತಿದರು ಸ್ಕೂಲು ಬಾಲಕರೆಲ್ಲರೂ ಸ್ಕೂಲು ಮುಂಭಾಗದಲ್ಲಿ ಸಾಲುಕಟ್ಟಿ ನಿಂತುಕೊಂಡು ರಾಯಲ್ ಸೆಲ್ಯೂಟ್ ಮಾಡಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ನಡಿಸಿದರು ೩ ಗಂಟೆಗೆ ಸರಿಯಾಗಿ ಸ್ಕೂಲಿನಲ್ಲಿ ಸಭೆ ಸೇರಿತು ಸಭೆಯ ಅಗ್ರಾಸನಾಧಿಪತ್ಯವನ್ನು ಈ ಊರ ಜೋಡಿದಾರ್ ಮ। ವೆಂಕಟಪ್ಪನವರು ವಹಿಸಿದರು ಸ್ಕೂಲ್ ಮಾಸ್ಟರ್ ಮ॥ ಎಸ್ ನಾರಾಯಣರಾಯರು ರಾಜಭಕ್ತಿಯನ್ನು ಮತ್ತು ವಿದ್ಯಾಭ್ಯಾಸದ ಅವಶ್ಯಕತೆಯನ್ನೂ ಕುರಿತು ಸಾರಸ್ಯವಾದ ಒಂದು ಉಪನ್ಯಾಸ ಮಾಡಿದರು ಇದನ್ನು ಕೇಳಿ ಅನೇಕರು ಸಂತೋಷಪಟ್ಟು ವಿದ್ಯಾಭಿವೃದ್ಧಿಗಾಗಿ ತಾವು ಬೇಕಾದ ಸಹಾಯವಮಾಡುವುದಾಗಿ ಹೇಳಿದರು ಅನಂತರ ಸಭಿಕರೆಲ್ಲರಿಗೂ ಹೂವು ಕೊಟ್ಟು ಸ್ಕೂಲು ಬಾಲಕರು ಮೊದಲುಗೊಂಡು ಎಲ್ಲರಿಗೂ ಆಹಾರವನ್ನು ಹಂಚಿ ಶ್ರೀಮನ್ ಮಹಾರಾಜರವರಿಗೆ ದೇವರು ದೀರ್ಘಾಯುಷ್ಯವನ್ನು ಉಂಟುಮಾಡಲಿ ಎಂದು ಎಲ್ಲರೂ ಜಯಧ್ವನಿಯನ್ನು ಮಾಡುತ್ತಾ, ಸಭೆಯು ಮುಕ್ತಾಯಕ್ಕೆ ಬಂತು

ಚಿಂತಾಮಣಿ

ಕಳೆದ ತಾ ೨೩ ನೇ ಬುಧವಾರ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬರವರ ವರ್ಧಂತಿ ಉತ್ಸವವು ಬಹು ಸಂಭ್ರಮದಿಂದ ಜರುಗಿತು ಎ ವಿ ಸ್ಕೂಲ್ ಹಾಲಿನಲ್ಲಿ ಹೆಡ್ ಮಾಸ್ಟರವರೂ, ಇತರ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಸಭೆ ಸೇರಿದ್ದರು ಶ್ರೀಮನ್ ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃಪ್ರಾರ್ಥನೆಯನ್ನು ಗಾನರೂಪದಲ್ಲಿ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ವಿದ್ಯಾರ್ಥಿಗಳು ಹಾಡಿದರು ಹೆಡ್ ಮಾಸ್ಟರ್ ಮ। ಎ ಕೃಷ್ಣರಾಯರು ರಾಜಭಕ್ತಿಯನ್ನು ಕುರಿತು ಸಾರಸ್ಯವಾದ ಉಪನ್ಯಾಸ ಮಾಡಿದ್ದಲ್ಲದೆ ಬ್ರಿಟಿಷ್ ಸಾರ್ವಭೌಮರವರಿಗೂ, ನಮ್ಮ ಪ್ರಭುಗಳಿಗೂ ಆಯುರಾರೋಗ್ಯಾದಿಗಳನ್ನು ಜಗದೀಶ್ವರನು ದಯಪಾಲಿಸಲೆಂದು ಪ್ರಾರ್ಥಿಸಿ ಸಭೆಯನ್ನು ಜಯಘೋಷಗಳೊಡನೆ ಮುಕ್ತಾಯ ಮಾಡಿದರು ನಮ್ಮ ಅಮಲ್ದಾರ್ ಮ। ಜಿ ನಾರಾಯಣಪ್ಪನವರೂ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಸಿರಾಜುದ್ದೀನ್ ಸಾಹೇಬರೂ ಟೆನ್ನಿಸ್ ಕ್ಲಬ್ಬಿನಲ್ಲಿ ಪಂದ್ಯಗಳನ್ನು ನಡಿಸಿ ಗೆದ್ದವರಿಗೆ ಬಹುಮಾನಗಳನ್ನು ದಯಪಾಲಿಸಿದರು ರಾತ್ರಿ ಗರಲ್ಸ್ ಸ್ಕೂಲ್ ಹಾಲಿನಲ್ಲಿ ಮೈಸೂರಿನಿಂದ ದಯಮಾಡಿಸಿದ್ದ ಮ॥ ವೆಂಕಟೇಶಯ್ಯನವರ ಸಂಗೀತವಾಗಿ ಅವರಿಗೆ ಮರ್ಯಾದೆ ನಡಿಸಿದರು ನಮ್ಮ ಅಮಲ್ದಾರರವರು ಘನವನ್ನು ಹೊಂದಿದ ಶ್ರೀಮನ್ ಮಹಾರಾಜ ಸಾಹೇಬರವರ ವರ್ಧಂತಿ ಉತ್ಸವವು ನಮ್ಮ ಊರಿನಲ್ಲಿ ವಿಶೇಷ ರಾಜಭಕ್ತಿಯಿಂದ ನಡೆಯುತ್ತಿರಲಿ, ಜಗದೀಶ್ವರನು ನಮ್ಮ ಮಹಾರಾಜರವರಿಗೂ, ಅವರ ಕುಟುಂಬವರ್ಗಕ್ಕೂ ಆನಂದವನ್ನು ಉಂಟುಮಾಡಲಿ ಎಂತಲೂ ಬಹು ಸಾರಸ್ಯವಾಗಿ ಉಪನ್ಯಾಸ ಮಾಡಿ ಜಯಘೋಷಗಳೊಡನೆ ಸಭೆಯನ್ನು ಮುಕ್ತಾಯ ಮಾಡಿದರು ಎ ವಿ ಸ್ಕೂಲ್ ವಿದ್ಯಾರ್ಥಿಗಳು ಕ್ರಿಕೆಟ್ ಮ್ಯಾಚನ್ನು ಆಡಿದರು ಎಲ್ಲಾ ದೇವಸ್ಥಾನಗಳಲ್ಲೂ ಪೂಜೆಗಳೂ, ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ ನಡೆದವು

ಮೈಸೂರು ಮುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ಮೊದಲನೇ ಮಹಾಸಭೆ

ರಾಜಧಾನಿಯ ಟೌನ್ ಹಾಲಿನಲ್ಲಿ ಈ ಮಹಾಸಭೆಯು ಕಳೆದ ಸೋಮವಾರ ಬೆಳಿಗ್ಗೆ ಪ್ರಾರಂಭವಾಯಿತು ಸಭಾ ಮಂದಿರವನ್ನು ರಾಜಯೋಗ್ಯವಾದ ರೀತಿಯಲ್ಲಿ ಅಲಂಕರಿಸಿ ಸಿದ್ಧಪಡಿಸಿದ್ದರು ವರ್ಧಂತಿ ಕಟ್ಟಲೆಯ ಉತ್ಸವಗಳ ನಿಮಿತ್ತ ದಯಮಾಡಿದ್ದ ಸಮಸ್ತ ಅಧಿಕಾರಿಗಳೂ, ಇಲಾಖೆಗಳ ಮುಖ್ಯಾಧಿಕಾರಿಗಳೂ, ಸೆಕ್ರೆಟರಿಗಳೂ ಸಭೆಯಲ್ಲಿ ಹಾಜರಾಗಿದ್ದರು ಸಂಸ್ಥಾನಾವಳಿಯ ಎಲ್ಲಾ ಮ್ಯುನಿಸಿಪಾಲಿಟಿಗಳ ಮತ್ತು ಲೋಕಲ್ ಬೋರ್ಡುಗಳ ಪ್ರತಿನಿಧಿಗಳು ಸುಮಾರು 60 ಮಂದಿಯ ತನಕ ಬಂದಿದ್ದರು ಪ್ಲಾಟ್‌ಫಾರಮಿನ ಮೇಲೆ ಘನವನ್ನೈದಿದ ಸರ್ ಶಂಕರನ್ನಾಯರವರು, ದಿವಾನ್‌ರವರು, ಕೌನ್ಸಿಲರುಗಳು, ರಾಜಪಿಂಡೆಯವರೇ ಮೊದಲಾದವರು ಕುಳಿತಿದ್ದರು ಶ್ರೀಮದ್ಯುವರಾಜರವರು ಅಗ್ರಸ್ಥಾನವನ್ನಲಂಕರಿಸಿದರು ಇವರ ಪಕ್ಕಗಳಲ್ಲಿ ಟಿಪ್ಪ ಸಂಸ್ಥಾನದ ರಾಜರೂ, ಇವರ ಕುಮಾರರೂ, ಬರೋಡಾ ಮಹಾರಾಜರವರ ಕುಮಾರರೂ, ಪುದುಕೋಟೆಯ ರಾಜರ ಸಹೋದರರಾದ ಘನವನ್ನೈದಿದ ದೊರೈ ರಾಜರವರೂ ಕುಳಿತರು

ಪ್ರಾರಂಭ ವಾಕ್ಯಗಳು

ರಿಸೆಪ್‌ಷನ್ ಕಮಿಟಿ ಚೇರ್‌ಮನ್‌ರಾದ ಮ॥ ಟಿ ಜಿ ಲಕ್ಷ್ಮೀನರಾಯರು ಶ್ರೀಮದ್ಯುವರಾಜರವರಿಗೆ ಸಭೆಯವರವಾಗಿ ಸುಸ್ವಾಗತವನ್ನು ಬಯಸಿ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ಮ್ಯುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಪೂರ್ವೋತ್ತರವನ್ನು ಕಥನಮಾಡಿ, ಅವುಗಳ ಕರ್ತವ್ಯವನ್ನೂ ಸರ್ಕಾರದವರು ಮಾಡುತ್ತಿರುವ ಸಹಾಯ ಪ್ರೋತ್ಸಾಹಾದಿಗಳನ್ನೂ ವಿವರಿಸಿ, ಹೇಳಿದ್ದೇನೆಂದರೆ—

ಈ ಕಾನ್‌ಫರೆನ್ಸಿನಿಂದ ಪ್ರಯೋಜನವೇನೆಂಬದಾಗಿ ಪ್ರಶ್ನೆಯು ಮಾಡಲ್ಪಡಬಹುದು ಪ್ರಜೆಗಳ ಕ್ಷೇಮಕ್ಕೆ ಸಾಧಕವಾದ ಕೆಲಸಗಳ ವಿಚಾರವಾಗಿ ವಿಧವಿಧವಾದ ಅನುಭವವನ್ನುಂಟಾಗಿರುವ ಅನೇಕ ಮಂದಿ ಸೇರಿ ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ ಮಾಡತಕ್ಕ ಏರ್ಪಾಡುಗಳು ಬಹಳ ತೃಪ್ತಿಕರವಾಗಿ ಪರಿಣಮಿಸುತ್ತೆಂಬ ವಿಷಯದಲ್ಲಿ ಅನುಮಾನವಿಲ್ಲ ಅಂಥಾ ಬಹುಮಂದಿಗಳ ಯೋಚನೆಗೆ ಈ ಸಭೆಯು ಆಕರವಾಗಿರುತ್ತದೆ ಸಂಸ್ಥಾನದಲ್ಲಿ ಮುಖ್ಯವಾದ ಎಲ್ಲಾ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರತಿನಿಧಿಗಳಿಂದ ಕೂಡಿರುವ ಈ ಸಭೆಯ ಅಭಿಪ್ರಾಯಕ್ಕೆ ಸರ್ಕಾರದವರೂ ತಕ್ಕ ಗಣನೆಯನ್ನು ಕೊಡುವ ದಕ್ಕೂ ಅನುಕೂಲಿಸುತ್ತೆ ಅಲ್ಲದೆ ಈ ಸಭೆಯಿಂದ ಇತರ ಪ್ರಯೋಜನಗಳೂ ಉಂಟು ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳಿಗೆ ಸಂಬಂಧಪಟ್ಟ ರೆಗ್ಯುಲೇಷನ್ ಮತ್ತು ರೂಲ್ಸು ಆಚರಣೆಗೆ ತರುವದರಲ್ಲಿ ಇರತಕ್ಕ ಬಾಧಕಗಳನ್ನು ಈ ವಿಷಯದಲ್ಲಿ ಪರಿಶ್ರಮವುಳ್ಳ ನಾವುಗಳು ಈ ಸಭೆಯಲ್ಲಿ ಸೇರಿ ಪರಸ್ಪರ ಪರ್ಯಾಲೋಚನೆ ಮತ್ತು ಚರ್ಚೆ ಮಾಡೋಣದರ ಮೂಲಕ ಬಾಧಕ ನಿವಾರಣೆಗೆ ಅವಕಾಶವಾಗುತ್ತದೆ—ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡ್ ಕೆಲಸಗಳು ಎಲ್ಲೆಲ್ಲಿ ಹೇಗಿರುತ್ತವೆ ಎಂಬುವದನ್ನು ನೋಡಿಯೂ ತಿಳಿದೂ ಅವುಗಳಲ್ಲಿ ಯಾವುದನ್ನು ತಮ್ಮ ತಮ್ಮ ಸ್ಥಳಗಳಲ್ಲಿ ಆಚರಣೆಗೆ ತಂದುಕೊಳ್ಳಬಹುದೋ ಅದನ್ನು ಗೊತ್ತುಮಾಡಿಕೊಳ್ಳುವದಕ್ಕೂ ಅದರಂತೆ ಕೆಲಸವನ್ನು ಜರುಗಿಸುವದಕ್ಕೂ ಈ ಕಾನ್‌ಫರೆನ್ಸಿನಿಂದ ಸಹಾಯವಾಗುತ್ತೆ ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿ ಏರ್ಪಾಡುಗಳು ಹೇರಳವಾಗಿರುವವು ಈ ಏರ್ಪಾಡುಗಳ ಪರಿಶೀಲನೆಯಿಂದ ಅವುಗಳಲ್ಲಿ ಯಾವವು ಸಮರ್ಪಕವಾಗಿರುತ್ತವೆಯೋ ಅವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಚಿಕ್ಕ ಊರುಗಳಲ್ಲಿಯೂ ಗ್ರಾಮಗಳಲ್ಲಿಯೂ ಏರ್ಪಾಡು ಮಾಡಿಕೊಳ್ಳಲು ಅನುಕೂಲವುಂಟಾಗುತ್ತದೆ ಈ ಸಭೆಗೆ ದೊಡ್ಡ ಅಧಿಕಾರಿಗಳು, ಇಂಜನಿಯರುಗಳು, ಕುಶಲ ವಿದ್ಯಾನಿಪುಣರು, ಭಾರಿ ವರ್ತಕರು, ಲೋಕವ್ಯವಹಾರಜ್ಞರು, ಅನೇಕರು ಸೇರಿರುವರು ಈ ಕಾನ್‌ಫರೆನ್ಸಿನಲ್ಲಿ ನಡೆಯತಕ್ಕ ಸಂಭಾಷಣೆ ಮತ್ತು ಚರ್ಚೆಗಳಲ್ಲಿ ಸೇರುವುದರಿಂದ ಪ್ರತಿನಿಧಿಗಳಿಗೆ ಯಾವಯಾವ ರೀತಿಯಲ್ಲಿ ತಮ್ಮ ಊರುಗಳನ್ನೂ ಗ್ರಾಮಗಳನ್ನೂ ಅಭಿವೃದ್ಧಿಪಡಿಸಬಹುದೋ ಆ ವಿಷಯ ತಿಳುವಳಿಕೆಗೆ ಬರಬಹುದು ಇದೂ ಅಲ್ಲದೆ ಈ ಮ್ಯುನಿಸಿಪಲ್ ಕೌನ್ಸಿಲ್ ಮತ್ತು ಲೋಕಲ್ ಬೋರ್ಡುಗಳ ಆಡಳಿತಕ್ಕೆ ಸಂಬಂಧಪಟ್ಟ ಕೆಲವು ವಿಶೇಷಾಂಶಗಳನ್ನು ಸದ್ಯದಲ್ಲಿ ಪರ್ಯಾಲೋಚಿಸಿ ಆ ಬಗ್ಗೆ ತಕ್ಕ ಏರ್ಪಾಡುಗಳನ್ನು ನಿರ್ದೇಶಿಸುವ ಕಾರ್ಯವೂ ಈ ಮಹಾಸಭೆಗೆ ಸೇರಿರುತ್ತದೆ ಸ್ಥಳೀಯ ಸಂಘಗಳು ಕಾರ್ಯ ನಿರ್ವಹಿಸುವದರಲ್ಲಿ ಚತುರತೆ ಮತ್ತು ವಿಚಕ್ಷಣೆಯನ್ನು ವೃದ್ಧಿಪಡಿಸುವದು ಮತ್ತು ಈ ಬೋರ್ಡುಗಳ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೆ ಉಪಾಯಗಳನ್ನು ಕಂಡುಹಿಡಿಯುವದು, ಪುರರಚನಾಕ್ರಮ ಮತ್ತು ಪುರಾಭಿವೃದ್ಧಿ, ಆರೋಗ್ಯಭಾಗ್ಯಕ್ಕೆ ಅನುಕೂಲವಾದ ಏರ್ಪಾಡುಗಳನ್ನು ಮಾಡುವದು ಶುದ್ಧವಾದ ನೀರನ್ನು ಒದಗಿಸುವುದು, ವಿಸರ್ಜಿಸಲ್ಪಟ್ಟ ಜಲಮಲಗಳನ್ನೂ ಕಚರಾ ವಗೈರೆಯನ್ನೂ ಊರಿಂದಾಚೆಗೆ ಸಾಗಿಸಿ ಊರನ್ನು ಶುಚಿಯಾಗಿ ಇಟ್ಟುಕೊಳ್ಳುವ ವಿಧಾನ, ಸ್ಥಳ ಸಂಕೋಚವಾಗಿರುವ ಮನೆಗಳಲ್ಲಿ ಹೆಚ್ಚು ಮಂದಿ ವಾಸಿಸುವದಕ್ಕೆ ಅವಕಾಶ ಕೊಡದಿರುವುದು ಒತ್ತಾದ ಪ್ರದೇಶಗಳನ್ನು ಇಕ್ಕಟ್ಟಿಲ್ಲದಂತೆ ಮಾಡುವುದು, ಈ ಸಂದರ್ಭಗಳಲ್ಲಿ ಮನೆಯನ್ನು ಕಳೆದುಕೊಂಡವರು ಬೇರೆ ವಾಸದ ಮನೆಗಳನ್ನು ಹೊಂದುವುದಕ್ಕೆ ಆಗಬೇಕಾದ ಸೌಕರ್ಯಗಳನ್ನು ಕಲ್ಪಿಸುವುದು, ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ರಸ್ತೆ ಮುಂತಾದವುಗಳನ್ನು ಅಭಿವೃದ್ಧಿಗೆ ತರುವದು, ಫೀಡರ್ ರೋಡುಗಳನ್ನು ಬಹಾಲಿಸುವುದು, ಟ್ರಾಂವೇಗಳನ್ನು ಹಾಕುವುದು, ಮೋಟರ್ ಸರ್ವೀಸ್ ವಗೈರೆ ಏರ್ಪಾಡು ಮಾಡುವುದು, ಇವೇ ಮುಂತಾದ ಪ್ರಜಾನುಕೂಲ ಸಾಧಕವಾದ ಕೆಲಸಗಳನ್ನು ತಾವುಗಳು ಯೋಚಿಸತಕ್ಕವುಗಳಾಗಿರುತ್ತವೆ ಈ ವಿಷಯಗಳು ಒಂದೊಂದೂ ಪ್ರಜಾಕ್ಷೇಮಲಾಭಕ್ಕೆ ಅತ್ಯಂತ ಉಪಯುಕ್ತವಾದವುಗಳು ಇವುಗಳನ್ನು ಕುರಿತು ಸಮಂಜಸವಾಗಿ ಕಾಣುವ ಏರ್ಪಾಡುಗಳನೇಕವನ್ನು ಸೂಚಿಸುವುದೂ ಈ ಮಹಾಸಭೆಯ ಆಲೋಚನೆಗೆ ಸೇರಿದ ಅಂಶಗಳಾಗಿವೆ॰

ಎಂಬ ರೀತಿ ಭಾಷಣಮಾಡಿ ಕಡೆಯಲ್ಲಿ ಈ ಮಹಾಸಭೆಗಾಗಿ ಬಂದಿರುವ ಪ್ರತಿನಿಧಿಗಳಿಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪರವಾಗಿ ಸುಸ್ವಾಗತವನ್ನು ಬಯಸಿದರು

ಯುವರಾಜರ ಭಾಷಣವು

ಬಳಿಕ ಶ್ರೀಮದ್ಯುವರಾಜರವರು ಉತ್ತೇಜಕವೂ ಹಿತಕರವೂ ಆದ ಭಾಷಣ ಮಾಡಿ ಮಹಾಸಭೆಯನ್ನು ಪ್ರಾರಂಭಮಾಡಿದರು ಅವರ ಭಾಷಣದ ಮುಖ್ಯಾಭಿಪ್ರಾಯವೇನೆಂದರೆ

ಮೈಸೂರು ಲೋಕಲ್ ಬೋರ್ಡ ಮತ್ತು ಮ್ಯುನಿಸಿಪಲ್ ಕಾನ್‌ಫರೆನ್ಸನ್ನು ಈ ದಿನ ಪ್ರಾರಂಭಮಾಡುವ ಕಾರ್ಯಭಾರವನ್ನು ನಮಗೆ ವಹಿಸಿದ್ದಕ್ಕಾಗಿ ನಿಮ್ಮಗಳನ್ನು ಮನಃಪೂರ್ವಕವಾಗಿ ವಂದಿಸುತ್ತೇವೆ ಇಂಥಾ ಸಭೆಯು ಹಿಂದುಸ್ಥಾನದಲ್ಲಿ ನಡೆಯುವುದು ಇದೇ ಪ್ರಥಮವೆಂದು ನಾವು ನಂಬಿದ್ದೇವೆ ಈ ಕಾರ್ಯವನ್ನು ನೆರವೇರಿಸುವ ಭಾಗದಲ್ಲಿ ಸಾಹಸಪಟ್ಟ ದೊಡ್ಡ ಮನುಷ್ಯರು ವಂದನೀಯರಾಗಿರುವರು ಈ ಸಂಸ್ಥಾನದಲ್ಲೆಲ್ಲಾ ಪ್ರಥಮ ಸ್ಥಾನವನ್ನು ಪಡೆದಿರುವಂಥಾ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರೇ ಮುಂದಾಳಾಗಿ ನಿಂತು ಈ ಮಹಾಸಭೆಯ ಕಾರ್ಯಗಳನ್ನು ನಡಿಸುತ್ತಿರೆನ್ನುವುದು ತುಂಬಾ ಸಮಾಚೀನವಾಗಿರುತ್ತದೆ ಈ ಕಾರ್ಯದಲ್ಲಿ ಅವರಿಗಿಂತಲೂ ಹೆಚ್ಚಾದ ಯೋಗ್ಯತಾಸಿದ್ಧಿಯನ್ನು ಪಡೆದಿರುವವರು ಬೇರೆ ಬೇರೆಯವರು ಸಿಕ್ಕಲಾರರೆಂದು ಖಂಡಿತವಾಗಿ ಹೇಳಬಲ್ಲೆವು ಮ॥ ಪುಟ್ಟಣ್ಣಶೆಟ್ಟರವರು ನಾನಾ ಮುಖಗಳಲ್ಲಿ ಚಟುವಟಿಕೆಯಾಗಿ ಕಾರ್ಯಗಳನ್ನು ಮಾಡತಕ್ಕವರು, ಕೈಯಿಟ್ಟ ಕೆಲಸಗಳನ್ನೆಲ್ಲಾ ಮನಃಪೂರ್ವಕವಾಗಿಯೂ ಉತ್ಸಾಹದಿಂದಲೂ ನಡಿಸತಕ್ಕವರು ಹಾಗೆ ಅವರು ಸಂಸ್ಥಾನಕ್ಕೆ ಬಹಳ ಅಮೂಲ್ಯವಾದ ಸೇವೆಯನ್ನು ಮಾಡುತ್ತಾ ಬಂದಿದಾರೆ

ಈ ಕಾನ್‌ಫರೆನ್ಸಿನ ಕಾರ್ಯ ಗೌರವವನ್ನು ಕುರಿತು ನಾನು ವಿಶೇಷವಾಗಿ ಹೇಳಬೇಕಾದದ್ದೇನೂ ಇಲ್ಲ ಸ್ಥಳೀಯ ಸ್ವಾರಾಜ್ಯದ ವಿಷಯದಲ್ಲಿ ಎರಡು ಸ್ಪೆಷಲ್ ಕಮಿಟಿಗಳು ಈಚೆಗಷ್ಟೇ ವಿಮರ್ಶೆಮಾಡಿ ಮಾರ್ಗವನ್ನು ತೋರಿಸಿಕೊಟ್ಟಿರುವವು ಈ ಕಾನ್‌ಫರೆನ್ಸಿನ ಪ್ರತಿನಿಧಿಗಳು ಆ ಕಮಿಟಿಗಳು ಬರೆದಿಟ್ಟಿರುವ ಸಿಫಾರಸುಗಳನ್ನು ಕುರಿತು ಪರ್ಯಾಲೋಚನೆ ಮಾಡುತ್ತಾರೆಂದು ಎಣಿಸುವೆವು ನೀವುಗಳು ಸ್ಥಳೀಯ ಸಂಘಗಳನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಖಂಡಿತವಾದ ಸಲಹೆಗಳನ್ನು ರೂಪಿಸಿ ಗವರ್ನ್‌ಮೆಂಟಿಗೆ ಅರಿಕೆ ಮಾಡುವಿರೆಂದೂ, ಅವುಗಳ ಮೂಲಕ ಆ ಸಂಘಗಳ ಬೇರುಗಳು ಸ್ಥಿರವಾಗಿಯೂ ವಿಸ್ತಾರವಾಗಿಯೂ ತೃಪ್ತಿಕರವಾಗಿಯೂ ಹರಡಿಕೊಳ್ಳುವಂತಾದೀತೆಂದೂ ನಂಬಿ ನಿರೀಕ್ಷಿಸುತ್ತೇವೆ ಈ ಸಂಘಗಳ ಕಟ್ಟುಪಾಡು, ಅವುಗಳ ಕೆಲಸ ಕಾರ್ಯಗಳು, ಅವುಗಳ ಹುಟ್ಟುವಳಿ ಖರ್ಚುಗಳು, ಈ ಮೊದಲಾದ ವಿಚಾರಗಳನ್ನೆಲ್ಲಾ ಕುರಿತು ಕಾನ್‌ಫರೆನ್ಸಿನ ಪ್ರತಿನಿಧಿಗಳು ಚರ್ಚಿಸಬೇಕಾಗಿ ಬರುತ್ತದೆ ನೀವುಗಳು ಈ ವಿಚಾರಗಳನ್ನು ಸಮಾಧಾನವಾಗಿಯೂ, ಹಿತವಾಗಿಯೂ, ಸನ್ನತಿಯಿಂದಲೂ ಪರ್ಯಾಲೋಚಿಸುವಿರೆಂದು ಹೇಳಬಲ್ಲೆವು ಬ್ರಿಟಿಷ್ ಇಂಡಿಯಾದಲ್ಲೂ ಇದೇ ರೀತಿಯಾದ ಶಿಸ್ತು ನಡೆಯಬೇಕೆಂದು ಈ ಸಮಯಲ್ಲೇ ಅಲ್ಲೂ ಪ್ರಯತ್ನಗಳು ಪ್ರಾರಂಭವಾಗಿರುವುದು ಗಣ್ಯವಾದದ್ದಾಗಿದೆ

ಶ್ರೀಮನ್ ಮಹಾರಾಜರವರ ಗವರ್ನ್‌ಮೆಂಟಿನವರು ಸ್ಪೆಷಲ್ ಕಮಿಟಿಗಳಿಂದ ಸಿಫಾರಸಾಗಿರುವ ವಿಚಾರಗಳನ್ನು ಬೇಗನೆ ಇತ್ಯರ್ಥಮಾಡಬೇಕೆಂಬ ಕುತೂಹಲವುಳ್ಳವರಾಗಿದಾರೆ ಆದಕಾರಣ ನಿಮ್ಮ ತೀರ್ಮಾನಗಳಿಂದ ಆ ವಿಚಾರಗಳು ಶೀಘ್ರವಾಗಿ ಇತ್ಯರ್ಥವಾಗಲು ತುಂಬಾ ಸಹಾಯವಾದೀತೆಂದು ನಂಬುತ್ತೇವೆ

ಈಗ ನಿಮ್ಮ ಕಾನ್‌ಫರೆನ್ಸಿನ ಕಾರ್ಯಗಳು ಸಾಂಗವಾಗಿಯೂ ಸಾರ್ಥಕವಾಗಿಯೂ, ನೆರವೇರಲೆಂದು ಕೋರಿ ಸಭೆಯನ್ನು ಪ್ರಾರಂಭಿಸುವೆವು

ಬಳಿಕ ರಾವ್ ಬಹದೂರ್ ಮ॥ ಎಂ ಸಿ ರಂಗಯ್ಯಂಗಾರ್ರು, ದಿವಾನ್ ಬಹದೂರ್ ಮ॥ ಕೆ ಪಿ ಪುಟ್ಟಣ್ಣಶೆಟ್ಟರವರನ್ನು ಕಾನ್‌ಫರೆನ್ಸಿನ ಪ್ರೆಸಿಡೆಂಟರಾಗಿರಬೇಕೆಂದು ಸೂಚಿಸಿ, ಅವರು ಸರ್ಕಾರಿ ನೌಕರಿಯಿಂದ ನಿವೃತ್ತರಾದ ಬಳಿಕ ಸ್ವಸೌಖ್ಯವನ್ನು ತ್ಯಜಿಸಿ ಪ್ರಜೆಗಳ ಹಿತಕ್ಕಾಗಿ ನಾನಾ ಉಪಕಾರ ಕಾರ್ಯಗಳನ್ನು ಮಾಡುತ್ತಿದಾರೆಂದೂ, ಅವರ ಗುಣವೂ ಅನುಭವವೂ ಶ್ಲಾಘ್ಯವಾದ ಕಾರಣ ಇಂಥವರನ್ನು ಅಧ್ಯಕ್ಷಸ್ಥಾನದಲ್ಲಿಟ್ಟುಕೊಂಡು ನಡಿಸುವ ಕಾರ್ಯಗಳು ಸಾರ್ಥಕವಾಗುವವೆಂದೂ, ಅವರು ಈ ಸ್ಥಾನವನ್ನು ಒಪ್ಪಿಕೊಂಡಿರುವುದು ಸಭೆಯ ಭಾಗ್ಯೋದಯವೆಂದೂ ಹೇಳಿದರು ಬೆಂಗಳೂರು ಅಡ್ವೊಕೇಟ್ ಮ॥ ಡಿ ವೆಂಕಟರಾಮಯ್ಯನವರು ಈ ಸಲಹೆಯನ್ನು ಪುಷ್ಟೀಕರಿಸಿ ಮ॥ ಪುಟ್ಟಣ್ಣಶೆಟ್ಟರವರು ಪ್ರಜಾಪಕ್ಷದ ಪ್ರತಿನಿಧಿಗಳಲ್ಲಿ ತಿಲಕಪ್ರಾಯರಾಗಿದ್ದು ಅನೇಕ ದೇಶೋನ್ನತಿಯ ಕಾರ್ಯಗಳಲ್ಲಿ ಪ್ರವೇಶಿಸಿ ಅವುಗಳ ಸಾರ್ಥಕತೆಗೆ ತಮ್ಮ ತನುಮನಗಳನ್ನು ವಿನಿಯೋಗಿಸುತ್ತಿದಾರೆಂದೂ, ಇಂಥವರನ್ನು ಅಗ್ರಸ್ಥಾನದಲ್ಲಿಟ್ಟುಕೊಂಡು ಈ ಸಭೆಯನ್ನು ನಡಿಸುವುದು ಫಲದಾಯಕವಾದೀತೆನ್ನುವುದಕ್ಕೆ ಸಂಶಯವಿಲ್ಲವೆಂದೂ ಭಾಷಣಮಾಡಿದರು ಸಭಿಕರೆಲ್ಲಾ ಏಕವಾಕ್ಯತೆಯಿಂದ ಈ ಸಲಹೆಯನ್ನು ಜಯಧ್ವನಿಯಿಂದ ಒಪ್ಪಿಕೊಂಡರು

ಪ್ರೆಸಿಡೆಂಟರ ಭಾಷಣ

ದಿವಾನ್ ಬಹದೂರ್ ಮ॥ ಕೆ ಪಿ ಪುಟ್ಟಣ್ಣಶೆಟ್ಟರವರು ಮಹಾಸಭೆಯ ಅಗ್ರಸ್ಥಾನವನ್ನು ಅಲಂಕರಿಸಿ, ಪ್ರತಿನಿಧಿಗಳನ್ನೂ ಸಭಿಕರನ್ನೂ ಕುರಿತು ದೀರ್ಘವಾದ ಭಾಷಣವನ್ನು ಮಾಡಿ, ಈ ಕಾನ್‌ಫರೆನ್ಸಿನ ಉತ್ಪತ್ತಿ, ಅದರಲ್ಲಿ ಚರ್ಚಿಸಲ್ಪಡತಕ್ಕ ವಿಷಯ ಭಾಗಗಳು, ಮ್ಯುನಿಸಿಪಲ್ ಬೋರ್ಡುಗಳ ಆದಿ ಮತ್ತು ಈಗಿನ ಸ್ಥಿತಿ, ಅಭಿವೃದ್ಧಿ ಮಾಡಬೇಕಾದ ಭಾಗಗಳು, ಆಕ್ಟ್ರಾಯಿ ಮತ್ತು ತೆರಿಗೆಗಳು, ನಗರ ಮ್ಯುನಿಸಿಪಾಲಿಟಿಗಳು, ಕಾನೂನಿನ ಲೋಪದೋಷಗಳು, ಪ್ರಥಮ ವಿದ್ಯಾಭ್ಯಾಸ, ಲೋಕಲ್ ಬೋರ್ಡುಗಳು, ಪುರರಚನೆ, ಅನಾರೋಗ್ಯಕರವಾದ ಪದ್ಧತಿಗಳು, ಗ್ರಾಮಸಭೆಗಳು, ಈ ಮೊದಲಾದ ವಿಚಾರಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿ ಕಡೆಯಲ್ಲಿ ಹೇಳಿದ್ದೇನೆಂದರೆ—

“ಸರ್ಕಾರಿ ಉದ್ಯೋಗಸ್ಥರಲ್ಲದೆ ಇರುವ ದೊಡ್ಡ ಮನುಷ್ಯರು ತಮ್ಮ ತಮ್ಮ ಸ್ಥಳಗಳ ಕಾರ್ಯನಿರ್ವಹಣೆ ವಿಷಯಗಳಲ್ಲಿ ಮತ್ತು ಇತರ ಜನಸಮುದಾಯದಾಭಿವೃದ್ಧಿಗೆ ಸಂಬಂಧವಾದ ವಿಷಯಗಳಲ್ಲಿಯೂ ಪ್ರವರ್ತಿಸುವಂತೆ ಆಗಿರೋಣದರಿಂದ ಅವರುಗಳ ಗೌರವಾರ್ಹತೆಯು ದಿನೇದಿನೇ ಹೆಚ್ಚುತ್ತಿದೆ ಪ್ರತಿಯೊಬ್ಬ ಮನುಷ್ಯನಲ್ಲಿಯೂ ತನ್ನ ದೇಶದ ಏಳಿಗೆಯೇ ತನ್ನ ಸ್ವಂತ ಏಳಿಗೆಯೆಂಬುವ ಭಾವ ಉದಯಿಸಿರುವದು ಎಲ್ಲಾ ಕಡೆಯಲ್ಲಿಯೂ ಕಂಡುಬರುತ್ತಾ ಇದೆ ಸರ್ಕಾರಿ ಉದ್ಯೋಗಸ್ಥರು ಮತ್ತು ಇತರರು ಸಹಾ ಕಮಿಟಿ ಮೀಟಿಂಗುಗಳು ಮುಂತಾದವುಗಳಲ್ಲಿ ಪದೇಪದೇ ಸೇರುವದರಿಂದಲೂ ಜನಗಳ ಶ್ರೇಯೋಭಿವೃದ್ಧಿಗೆ ಕಾರಣವಾಗಿದೆ ಎಲ್ಲೆಲ್ಲಿ ನೋಡಿದರೂ ಹಳ್ಳಿಗಾಡುಗಳಲ್ಲಿ ಸಹಾ ನೂತನವಾಗಿ ಚಟುವಟಿಕೆಯೂ, ದೇಶಾಭಿವೃದ್ಧಿ ಮಾಡಬೇಕೆಂಬ ಕುತೂಹಲವೂ ಹುಟ್ಟಿ ಹರಡುತ್ತಿರುವುದು ಇಂಥಾ ಅಪೂರ್ವವೂ ಮತ್ತು ಉತ್ತಮವಾದ ನವಯೋಚನಾ ಸ್ಥಿತಿಯಿಂದ ಸಂಪೂರ್ಣ ಫಲವನ್ನು ಸಾಧಿಸುವದಕ್ಕಾಗಿ ಪ್ರಜಾಪ್ರತಿನಿಧಿಗಳಾದ ನಾವುಗಳೆಲ್ಲರೂ ಶ್ರಮಿಸಬೇಕಾದದ್ದು ನಮ್ಮ ಕರ್ತವ್ಯವಾಗಿದೆ ಈ ಪರಿಷತ್ತು ಶ್ರೀಮನ್ ಮಹಾರಾಜರವರ ಸರ್ಕಾರದ ಆಶ್ರಯದಲ್ಲಿಯೇ ನೆರೆದಿರುವದರಿಂದ ನಮ್ಮ ಸ್ಥಳೀಯ ಸ್ವಾರಾಜ್ಯಾಭಿವೃದ್ಧಿ ಮುಂತಾದವುಗಳ ವಿಷಯದಲ್ಲಿ ಸದರಿ ಸರ್ಕಾರದವರ ಅನುಗ್ರಹವೂ, ಸಹಾಯವೂ ನಮಗೆ ದೊರೆಯುವದರಲ್ಲಿ ಕೊರತೆ ಇರಲಾರದೆಂದು ದೃಢವಾಗಿ ನಂಬಬಹುದಾಗಿದೆ—ಕೇವಲ ಸಾಮಾನ್ಯನೇ ಆಗಲಿ ದೊಡ್ಡ ಪದವಿಯಲ್ಲಿರುವವನೇ ಆಗಲಿ ಪ್ರತಿಯೊಬ್ಬ ಮನುಷ್ಯನಲ್ಲಿಯೂ ತಾನು ವಾಸವಾಗಿರುವ ಗ್ರಾಮ ಅಥವಾ ನಗರಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳಲ್ಲಿ ಆಸಕ್ತನಾಗಿದ್ದು, ಅಂತಹ ಪ್ರದೇಶಗಳ ಕಾರ್ಯನಿರ್ವಹಣೆಯಲ್ಲಿ ತಾನು ಪಾಲುಗಾರನಾಗಿದ್ದು, ಅದರ ಭಾರವನ್ನು ತಾನೂ ವಹಿಸಬೇಕೆಂಬ ಆಶೆಯು ನೆಲೆಗೊಂಡು ಇರಬೇಕಾದದ್ದು ಮುಖ್ಯವಾದದ್ದು ಇದೇ ಸ್ಥಳೀಯ ಸ್ವಾರಾಜ್ಯದ ಮುಖ್ಯ ಸಾರಾಂಶವು ಮತ, ಆಚಾರ ಮುಂತಾದವುಗಳ ವಿಷಯದಲ್ಲಿ ಜನಗಳಲ್ಲಿ ಎಷ್ಟು ವಿಧವಾದ ಭಿನ್ನಾಭಿಪ್ರಾಯಗಳು ಇದ್ದಾಗ್ಯೂ ಸ್ಥಳೀಯ ಕಾರ್ಯನಿರ್ವಹಣೆಯಲ್ಲಿ ಎಲ್ಲರೂ ಏಕೀಭವಿಸಿ ಪ್ರವರ್ತಿಸಬೇಕು ಕೌನ್ಸಿಲ್ಲುಗಳು ಮತ್ತು ಕಮಿಟಿಗಳು ಅಭಿವೃದ್ಧಿಯಾಗುವದಕ್ಕೂ ಅಥವಾ ಕ್ಷೀಣಿಸುವುದಕ್ಕೂ ಅವುಗಳ ಮೆಂಬರುಗಳಾಗಿರುವವರೇ ಕಾರಣಭೂತರಾಗಿರುತ್ತಾರೆಂಬುವದು ಹೇಳುವದೇ ಅನಾವಶ್ಯಕ ಒಂದು ಮ್ಯುನಿಸಿಪಾಲಿಟಿಯಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯದೆ ಕೆಟ್ಟುಹೋಗುತ್ತಾ ಇದ್ದರೆ ಅದು ಆ ಪ್ರದೇಶದ ಜನಗಳಿಗೆ ಸ್ಥಳೀಯ ಕಾರ್ಯಗಳಲ್ಲಿ ಶ್ರದ್ಧೆಯಿಲ್ಲವೆಂಬುವದನ್ನು ಸ್ಪಷ್ಟವಾಗಿ ಸೂಚಿಸುತ್ತದೆ ಅವರಿಗೆ ಶ್ರದ್ಧೆ ಯಾವಾಗ ಹುಟ್ಟುತ್ತದೆಯೋ ಆ ಕ್ಷಣವೇ ಲೋಪಗಳೆಲ್ಲಾ ತೊಲಗುವುದಕ್ಕೆ ಆರಂಭವಾಗುವುದು ಮ್ಯುನಿಸಿಪಲ್ ಕೌನ್ಸಿಲ್‌ಗಳಲ್ಲಿ ಮತ್ತು ಕಮಿಟಿಗಳಲ್ಲಿ ಕೆಲಸಮಾಡಲು ಒಪ್ಪುವಂಥಾವರು ಪ್ರತಿಯೊಂದು ಮೀಟಿಂಗಿಗೂ ಬಂದು, ಅಲ್ಲಿನ ಆಲೋಚನೆಗಳಲ್ಲಿಯೂ ಕೆಲಸ ಕಾರ್ಯಗಳಲ್ಲಿಯೂ ಶ್ರದ್ಧೆಯನ್ನು ತೋರಿಸಿ, ತಮ್ಮ ಕೈಲಾದ ಮಟ್ಟಿಗೂ ಜನಸಮುದಾಯದ ಕಾರ್ಯವನ್ನು ಒಂದು ದೇವತಾಕಾರ್ಯದಂತೆ ಭಾವಿಸಿ ಮಾಡುತ್ತೇವೆಂದು ದೃಢಸಂಕಲ್ಪ ಮಾಡಿಕೊಳ್ಳಬೇಕು ಪ್ರತಿಯೊಬ್ಬ ಮನುಷ್ಯನೂ ಪ್ರಜೆಗಳ ಕ್ಷೇಮಸಿದ್ಧಿಗಾಗಿ ಯಾವದಾದರೂ ಒಂದು ಪ್ರಯತ್ನವನ್ನು ಅದು ಎಷ್ಟೇ ಅಲ್ಪವಾಗಿದ್ದಾಗ್ಯೂ ಮಾಡಲಾರಂಭಿಸಿದರೆ ಅದು ಸಮುದಾಯಾಭಿವೃದ್ಧಿಯನ್ನುಂಟುಮಾಡುವದು ಸಾಧಾರಣವಾಗಿ ಒಬ್ಬ ಮನುಷ್ಯನಿಗೆ ತನ್ನ ದೇಹದ ಮೇಲೆ ಇರುವಷ್ಟು ಪ್ರೀತಿಯು ತನ್ನ ಮನೆ ಮೇಲೆಯೂ ಸಹ ಇರುವದು ಸಹಜವಾಗಿದೆ ಆತನಿಗೆ ತನ್ನ ಮನೆ, ತನ್ನ ಗ್ರಾಮ ಎಂಬುವ ಮಮತೆಯಿಂದ ಆತನ ಮನಸ್ಸೆಲ್ಲವು ಅವುಗಳ ಮೇಲೆಯೇ ಇರುವುದು ಆದ್ದರಿಂದ ಮನೆ ಮತ್ತು ಗ್ರಾಮಶುದ್ಧಿ ಮತ್ತು ಅಲಂಕಾರಕ್ಕೋಸ್ಕರ ತನ್ನ ವಿರಾಮಕಾಲದಲ್ಲಿ ಸ್ವಲ್ಪವಾದರೂ ಉಪಯೋಗಿಸುವಂತೆ ಪ್ರೋತ್ಸಾಹ ಕೊಟ್ಟರೆ ಆತನಿಗೆ ಸ್ವಾಭಿವೃದ್ಧಿಯಲ್ಲಿ ಶ್ರದ್ಧೆಯು ಅಂಕುರಿಸಿ ಕ್ರಮೇಣ ಹೆಚ್ಚುವಂತೆ ಮಾಡಿದಂತಾಗುವುದು ಎಲ್ಲಾ ಭಾಗಗಳಿಗೂ ಸರ್ಕಾರದವರ ಸಹಾಯವನ್ನು ಅಪೇಕ್ಷಿಸದೆ ಸಾಧ್ಯವಾದ ಮಟ್ಟಿಗೂ ನಮ್ಮ ಕೆಲಸಗಳನ್ನು ನಾವೇ ನಿರ್ವಹಿಸಿಕೊಳ್ಳುವ ಶಕ್ತಿಯನ್ನು ಸಂಪಾದಿಸಿಕೊಳ್ಳದೆ ಇದ್ದರೆ ನಾವು ನಿಜವಾದ ಸ್ಥಳೀಯ ಸ್ವಾರಾಜ್ಯಕ್ಕೆ ಅರ್ಹರಾಗಲಾರೆವು ಆರೋಗ್ಯಾಭಿವೃದ್ಧಿಯೇ ಮುಂತಾದ ದೊಡ್ಡ ಕೆಲಸಗಳಿಗಾಗಿ ಬೇಕಾದರೆ ಸರ್ಕಾರದವರಿಂದ ಉಚಿತ ಸಹಾಯವನ್ನು ಅಪೇಕ್ಷಿಸಬಹುದೇ ಹೊರತು ಆಯಾ ಊರಿನ ದಿನಚರ್ಯಗಳಿಗೆ ಸಾಕಾಗುವಷ್ಟು ದ್ರವ್ಯ ಆಯಾ ಸ್ಥಳಗಳಲ್ಲಿಯೇ ಉತ್ಪತ್ತಿಯಾಗುವಂತೆ ಮಾಡಿಕೊಳ್ಳಬೇಕು ಸ್ಥಳೀಯ ಸ್ವಾರಾಜ್ಯಕ್ಕೆ ಸ್ವಸಹಾಯವೆಂಬುವದೇ ಮುಖ್ಯವಾದ ಆಸ್ತಿಭಾರವೆಂದು ತಿಳಿಯಬೇಕು ಪರೋಪಕಾರಾರ್ಥವಾಗಿ ಮಾಡುವ ಕೆಲಸಗಳೆಲ್ಲಾ ಐಹಿಕ ಸಾಧನೆಗಳೇ ಅಲ್ಲದೆ ಆಮುಷ್ಮಿಕ ಸಾಧನಗಳಾಗಿಯೂ ಪರಿಣಮಿಸುವವೆಂದು ಋಷಿಪ್ರೋಕ್ತವಾಗಿ ಹೇಳಲ್ಪಟ್ಟಿದೆ ನಾವು ಜನೋಪಕಾರಕ್ಕಾಗಿ ಮಾಡಿದ ಕೆಲಸವೆಲ್ಲವು ಭಗವದಾರಾಧನೆಗೆ ಸಾದೃಶ್ಯವಾಗಿರುವುದು” ಎಂಬುದೇ.

ತರುವಾಯ ಸಭೆಯಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳನ್ನು ನಿರ್ಧರಿಸುವುದಕ್ಕೆ ಒಂದು ಕಮಿಟಿಯು ನೇಮಕವಾಯಿತು ಮ। ಹಯವದನರಾಯರು ಗ್ರಾಮಾಂತರಗಳ ಕಟ್ಟುಪಾಡು, ಅವುಗಳ ಪುರೋಭಿವೃದ್ಧಿಗಳನ್ನು ಕುರಿತು ದೀರ್ಘವಾದ ಭಾಷಣವನ್ನು ಮಾಡಿದರು

ಶ್ರೀಮದ್ಯುವರಾಜರವರಿಗೂ ಪ್ಲಾಟ್‌ಫಾರಮಿನಲ್ಲಿದ್ದ ಮಹನೀಯರಿಗೂ ಹಾರ ತುರಾಯಿಗಳನ್ನು ಸಮರ್ಪಿಸಿ, ಮೊದಲನೇ ದಿನದ ಸಭೆಯನ್ನು ಮುಕ್ತಾಯಮಾಡಿದರು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ದೊಡ್ಡಬಳ್ಳಾಪುರದ ವಿಷಯಗಳು.

ಅಯ್ಯಾ,—ಅಲ್ಪ ಸ್ವಲ್ಪ ಮಳೆ ಆಯಿತು. ಪೋಲೀ ನಾಯಿಗಳ ಅವಾಂತ್ರ ಕಮ್ಮಿ ಆಗಿರುತ್ತೆ. ಮ್ಯುನಿಸಿಪಲ್ ಲಾಂದ್ರಗಳ ಕಂಟ್ರಾಕ್ಟರು ಬೇರೆಯವರಾದ ಕಾರಣ ಲಾಂದ್ರಗಳು ಚೆನ್ನಾಗಿ ಉರಿಯುತ್ತಾ ಬಂದಿವೆ. ಕೆಲವು ಪೋಲೀ ಹುಡುಗರು ರಸ್ತೆಗಳಲ್ಲಿ ನಿಂತು ಪ್ರಜಾ ನೆಮ್ಮದಿಗೆ ಭಂಗ ಮಾಡುತ್ತಿದ್ದರು. ತಾಲ್ಲೂಕ್ ಮ್ಯಾಜಿಸ್ಟ್ರೇಟರು ಕೆಲವರನ್ನು ಶಿಕ್ಷಿಸಿದ ಕಾರಣ ಪಟಿಂಗರ ಹಾವಳಿ ಕಮ್ಮಿ ಆಯಿತು. ಡ್ರಿಲ್ ಮಾಸ್ಟರು ಮುರ್ಸಿಸಿಫರ ಮಗನನ್ನು ಹೊಡೆದದ್ದಕ್ಕೆ ಸರ್ಕಲ್ ಇನ್ಸ್‌ಪೆಕ್ಟರು ದಯಮಾಡಿ ವಿಚಾರಣೆಯಿಂದ ಸಸ್ಪೆಂಡ್ ಮಾಡಿದಂತೆ ತಿಳಿದು ಬರುತ್ತೆ. ರೂಲ್ ದೊಣ್ಣೆಯಿಂದ ಕ್ರೂರವಾಗಿ ದಿಕ್ಕಿಲ್ಲದ ಹುಡುಗನನ್ನು ಹೊಡೆದ ಮಾಸ್ಟರಿಗೆ ಏನು ಶಿಕ್ಷೆ ವಿಧಿಸೋಣಾಗುತ್ತೋ ನೋಡಬೇಕು. ಇನ್ನೂ ಈ ಸ್ಕೂಲು ವಿಚಾರ ಅಭಿವೃದ್ಧಿಗೆ ಬಂತಕ್ಕ ಏರ್ಪಾಟುಗಳು ಸರ್ಕಲ್ ಇನ್ಸ್‌ಪೆಕ್ಟರು ಕ್ರಮಪಡಿಸಿ ಕೀರ್ತಿಹೊಂದುವರೆಂದು ಬೇಡುವರು. ಹಿತೈಷಿ.

ಮಿಷನ್ ಸ್ಕೂಲುಗಳ ಮಾಸ್ಟರುಗಳ ಕಷ್ಟ.

ಅಯ್ಯಾ,—ಗೌರ್ನಮೆಂಟ್ ಸ್ಕೂಲ್ ಮಾಸ್ಟರುಗಳ ಕಷ್ಟ ತಕ್ಕಮಟ್ಟಿಗೆ ನಿವಾರಣೆಯಾದಂತೆ ಇದೆ. ಹ್ಯಾಗಂದರೆ ದಯಾಳುಗಳಾದ ನಮ್ಮ ಗೌರ್ನಮೆಂಟಿನವರು ಈ ದುರ್ಭಿಕ್ಷಕಾಲವನ್ನು ನೋಡಿ ಎಲ್ಲಾ ಮಾಸ್ಟರುಗಳಿಗೂ 12, 16, 20, ಈ ಮೇರೆಗೆ ಸಂಬಳಗಳನ್ನು ಬಡತಿಮಾಡಿ ಮಾಸ್ಟರುಗಳಿಗೆಲ್ಲಾ ಸಂತೋಷವನ್ನುಂಟುಮಾಡಿದಾರೆ. ಮಿಷನ್ ಸ್ಕೂಲ್ ಮಾಸ್ಟರುಗಳಿಗೆ 6, 7, 8, 9, 10, ಈ ಮೇರೆಗೆ ಸಂಬಳಗಳನ್ನು ತೆಗೆದುಕೊಂಡು ಹ್ಯಾಗೆ ಕೆಲಸ ಮಾಡಬಹುದು? ಇವರು ಕೊಡತಕ್ಕದ್ದು ಗಂಡ ಹೆಂಡತಿಯರಿಗೆ ಸಾಲದ್ದಾಗಿರುತ್ತೆ. ಇವರ ಜತೆಗೆ ಮಕ್ಕಳುಗಳು ಇದ್ದರೆ ಹ್ಯಾಗೆ ಜೀವನ ನಡೆಯುತ್ತೆ? ಇವಲ್ಲದೆ ಈ ಮಾಸ್ಟರುಗಳು ಬಹಳ ಶ್ರದ್ಧೆಯಿಂದ ಕೆಲಸ ಮಾಡಬೇಕಾಗಿರುತ್ತೆ. ಯಾಕೆಂದರೆ ಮಿಷನ್ ಮತ್ತು ಗೌರ್ನಮೆಂಟಿನ ಪರೀಕ್ಷಕರ ಮನಸ್ಸು ಸಮಾಧಾನಪಡಿಸಬೇಕಾಗಿರುತ್ತೆ. ಮತ್ತು ಉಪದೇಶಿಗಳೆಂಬ ಇನ್ಸ್‌ಪೆಕ್ಟರು ಸಮೀಪದಲ್ಲೇ ಇರುತ್ತಾರೆ. ರಜಾ ವಿಷಯದಲ್ಲಿ ಗೌರ್ನಮೆಂಟಿನವರಂತೆ ಕೊಡುವುದಿಲ್ಲ. ಇಂಥಾ ಕಷ್ಟಗಳನ್ನು ನೋಡಿ ನಮಗೆ ಸಂಬಳ ಜಾಸ್ತಿಮಾಡಿ ಎಂತು ಕೇಳಿದರೆ ನಮ್ಮಲ್ಲಿ ಹಣವಿಲ್ಲ ಎಂದು ಹೇಳುತ್ತಾರೆ. ಈ ಸಂಗತಿಗಳೆಲ್ಲಾ ಪ್ರಜಾಪಾಲಕರಾದ ಗೌರ್ನಮೆಂಟಿನವರಿಗೆ ತಿಳಿಯದೆ ಇಲ್ಲ. ಮಿಷನ್ ಸ್ಕೂಲ್‌ಗಳು ವಿದ್ಯಾಭಿವೃದ್ಧಿಯಲ್ಲಿ ಗೌರ್ನಮೆಂಟ್ ಸ್ಕೂಲುಗಳಿಗಿಂತ ಕಮ್ಮಿಯಿಲ್ಲ. ಮಿಷನ್ ಸಂಘದವರು ಪ್ರಜೆಗಳಿಗೆ ವಿದ್ಯಾದಾನ ಮಾಡುವುದು ಯಾತಕ್ಕೆಂದರೆ ಒಂದನೇದು ಜನರು ದೇವರ ಭಯ ಭಕ್ತಿಯಲ್ಲಿ ಬೆಳೆದು ನಡೆಯಲಿ ಎಂಬದಾಗಿಯೂ, ಎರಡನೇದು ಪ್ರಜಾಪಾಲಕರಿಗೆ ವಿಧೇಯರಾಗಿರಲಿ ಎಂಬದಾಗಿಯೂ ದಾನ ಮಾಡುತ್ತಾರೆಯೋ ಹೊರತು ಸ್ವಪ್ರಯೋಜನಕ್ಕಲ್ಲ. ಪ್ರಜೆಗಳು ವಿದ್ಯಾಭಿವೃದ್ಧಿ ಹೊಂದಿದರೆ ಗೌರ್ನಮೆಂಟಿನವರಿಗೆ ಪ್ರಯೋಜನವೇ ಹೊರತು ಇನ್ನಿಲ್ಲ. ಈ ಸಂಗತಿಗಳನ್ನೆಲ್ಲಾ ನಮ್ಮ ಪ್ರಭುಗಳಾದ ಗೌರ್ನಮೆಂಟಿನವರು ತಮ್ಮ ಘನವಾದ ಚಿತ್ತಕ್ಕೆ ತಂದು ಮಿಷನ್ ಸ್ಕೂಲುಗಳಿಗೆ ಗ್ರಾಂಟ್ ಜಾಸ್ತಿಮಾಡಿ ಈ ಮಾಸ್ಟರುಗಳ ಕಷ್ಟವನ್ನು ನಿವಾರಣೆ ಮಾಡುತ್ತಾರೆಂದು ದೃಢವಾಗಿ ನಂಬುತ್ತೇನೆ. ಮಾಸ್ಟರುಗಳ ಹಿತಚಿಂತಕ.

ಮಿಷನ್ ಸ್ಕೂಲಿನ ಮೇಲೆ ಆಕ್ಷೇಪ.

ಅಯ್ಯಾ,—ಗೋರಿಬಿದನೂರು ತಾ|| ಮಂಚೇನಹಳ್ಳಿಗೆ ಮೊನ್ನೆ ತಾ. 30 ನೇ ಭಾನುವಾರ ನಮ್ಮ ಅಮಲ್ದಾರರು ಮ|| ಕೃಷ್ಣಸ್ವಾಮಿರಾಯರು ಈ ಊರಿಗೆ ಬಂದಿದ್ದರು. ಕೆಲವು ಜನರೊಂದಿಗೆ ಊರೊಳಗೆ ಗ್ರಾಮದೊಳಗೆ ಪ್ರವೇಶಿಸಿ ಲಂಡನ್ ಮಿಷನ್ ಗರ್ಲ್ಸ್ ಸ್ಕೂಲಿನ ಮುಂದೆ ಬಂದಾಗ ಮಾಸ್ಟರವರ ಕುಟುಂಬದಲ್ಲಿ ಕ್ರೈಸ್ತ ದೇವಾರಾಧನೆಯು ನಡೆಯುತ್ತಿತ್ತು. ಆಗಲವರು ಸ್ಕೂಲಿನ ಮುಂದೆ ರಸ್ತೆಯಲ್ಲಿ ಗುಂಪಿನ ಮಧ್ಯದಲ್ಲಿ ನಿಂತು, ಕ್ರೈಸ್ತತ್ವವನ್ನು ದೂಷಿಸುತ್ತಾ ಮಿಷನ್ ಸ್ಕೂಲುಗಳನ್ನು ಹೀನೈಸುತ್ತಾ ಮಿಷನ್ ಸ್ಕೂಲುಗಳಿಗೆ ಬಾಲಕಿಯರನ್ನು ಕಳುಹಿಸಬೇಡಾರಿ, ಅವರು ಎಂಜಲು ಹಾಕಿ ಪಾಠ ಕಲಿಸುತ್ತಾರೆ, ಬಾಯಿಯಿಂದ ಎಂಜಲು ತೆಗೆದು ಬಾಲಕಿಯರನ್ನು ಮುಟ್ಟುತ್ತಾರೆ. ಇವರಿಗೆ ಊರು ಮಧ್ಯೆ ಯಾತಕ್ಕೆ ಸ್ಥಳ ಕೊಟ್ಟರಿ ಎಂಬಿತ್ಯಾದಿ ಅನೇಕ ಮಾತುಗಳಿಂದ ಮುಕ್ಕಾಲು ಗಂಟೆಯ ವರಿವಿಗೂ (ಆರಾಧನೆಯಲ್ಲಿ ಸಹಾ ಗಲಿಬಿಲಿ ಉಂಟಾಗುವ ರೀತಿಯಿಂದ) ಜನರನ್ನೆಲ್ಲಾ ಉಪದೇಶಿಸಿ ಖಂಡಿತವಾಗಿ ಮಿಷನ್ ಸ್ಕೂಲುಗಳಿಗೆ ಬಾಲಕಿಯರನ್ನು ಕಳುಹಿಸಬೇಡಾರೆಂದು ಗದರಿಸಿ ಹೇಳಿ ನಾನಾ ಅನರ್ಥಗಳಿಗೆ ಕಾರಣವಾಗುವಂತೆ ಮಾಡಿರುತ್ತಾರೆ. ಮಿಷನ್ ಸ್ಕೂಲುಗಳಿಗೆಲ್ಲಾ ಮಹಾ ಅವಮಾನವಾಗಿರುತ್ತಾರೆ. ಕ್ರೈಸ್ತತ್ವವನ್ನೂ ಕ್ರೈಸ್ತ ಆರಾಧನೆಯನ್ನೂ ಹೀನೈಸಿರುತ್ತಾರೆ. ಹೀಗೆ ಪಬ್ಲಿಕ್ ರಸ್ತೆಯಲ್ಲಿ ಪಬ್ಲಿಕ್ಕಾಗಿ ದೂಷಣೆ ಮಾಡಿರುತ್ತಾರೆ. ಈ ಸಂಗತಿಯನ್ನು ನಮ್ಮ ಸ್ಕೂಲ್ ಸೂಪರಿಂಟೆಂಡೆಂಟರಿಗೆ ತಿಳಿಸಿರುತ್ತೇನೆ. ಒಬ್ಬ ಸರ್ಕಾರಿ ಅಧಿಕಾರಿ ಕಾನೂನಿಗೆ ವಿರೋಧವಾಗಿ ನಡೆದು ಮತದ್ವೇಷಿಯಾಗಿ ಮಾತಾಡಿದ್ದು, ಜನರೊಳಗೆ ಮತದ್ವೇಷ ಹುಟ್ಟಿಸಿದ್ದು ಬಹು ವ್ಯಸನಕರವಾದ ಕಾರ್ಯವಾಗಿದೆ. ಹಿಂದಿನ ಕಾಲದ ಅಮಲ್ದಾರರು ಸ್ಕೂಲಿಗೆ ಬಂದು ಸ್ಕೂಲನ್ನು ನೋಡಿ ಒಳ್ಳೇ ಬರವಣಿಗೆ ಬರೆದಿರುತ್ತಾರೆ. ಈ ಅಮಲ್ದಾರರು ಈ ತಾಲ್ಲೂಕಿಗೆ ಬಂದು 2 ವರ್ಷಗಳಾದರೂ ಒಂದಾವರ್ತಿ ಆದರೂ ಸ್ಕೂಲಿಗೆ ಬಾರದೆ ಮೊನ್ನೆ ಈ ರೀತಿಯಾಗಿ ಮಾಡಿರುತ್ತಾರೆ.

ಜೆ. ಆರ್. ಎಲ್ಲಿಸ್.

[ನಮ್ಮ ಅಧಿಕಾರಿಗಳ ವರ್ತನವು ಈ ಬಾತ್ಮಿಯಲ್ಲಿ ವಿವರಿಸಿರುವ ರೀತಿ ಇರಬೇಕೆಂಬುವುದು ಮೈಸೂರು ಗವರ್ನ್‌ಮೆಂಟಿನವರ ಅಭಿಮತವಲ್ಲವೆಂದು ಖಂಡಿತವಾಗಿ ಹೇಳಬಲ್ಲೆವು.—ಎಡಿ.]

ತಾಲ್ಲೂಕು ವರ್ತಮಾನಗಳು.

ಕುಣಿಗಲ್ ತಾ|| ನಾಗಸಂದ್ರ.—ಈಗ್ಗೆ 8-10 ದಿನಗಳಿಂದಲೂ ಮೋಡ ಕವಿದು ಸೂರ್ಯರಶ್ಮಿ ಇಲ್ಲದಂತೆ ಶೀತಗಾಳಿ ಬೀಸುತ್ತಾ ಜನಗಳ ಆರೋಗ್ಯಕ್ಕೆ ಕುಂದಕವನ್ನುಂಟುಮಾಡಿದ್ದರೂ ವಿಶೇಷ ಮಳೆಯಾಗಿ ಕೆರೆ ಕಟ್ಟೆ ಬಾವಿಗಳೆಲ್ಲಾ ತುಂಬಿ ಮೆರೆಯುತ್ತಿರುವುದು.—ಕಳೆದ ತಿಂಗಳಲ್ಲಿ ಈ ಗ್ರಾಮದ ಶ್ರೀರಂಗನಾಥ ಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು.—ಈ ಗ್ರಾಮದಲ್ಲಿರುವ ಎ. ವಿ. ಬಾಯ್ಸ್ ಸ್ಕೂಲ್ ಮೊದಲಿಗಿಂತಲೂ ಅಭಿವೃದ್ಧಿ ಹೊಂದುತ್ತಾ, ದಿನ ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಲಿದೆ. ಹಾಲಿ ವರ್ಗವಾಗಿ ಬಂದಿರುವ ಉಪಾಧ್ಯಾಯರು ತುಂಬಾ ಮುತುವರ್ಜಿಯಿಂದ ಕೆಲಸಮಾಡುತ್ತಲಿರುವುದರಿಂದ ಸರ್ಕಾರದವರು ಇವರ ಸಹಾಯಕ್ಕೆ ಮತ್ತೊಬ್ಬ ಉಪಾಧ್ಯಾಯರನ್ನು ಕೊಟ್ಟು ಸ್ಕೂಲನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಶಿವಪೆಟ್ಟಿಗ್ಗ.—ಡೆಪ್ಯುಟಿ ಕಮಿಷನರ್ ಸಾಹೇಬರವರು ಮೈಸೂರಿಗೆ ದಯಮಾಡಿಸಿದಾರೆ. ಮ|| ವೆಂಕಟನಾರಣಪ್ಪನವರಿಗೆ ತಿಪ್ಟೂರು ತಾಲ್ಲೂಕು ಹೊನ್ನವಳ್ಳಿ ಕಂದಾಚಾರದ ಮ|| ಸೀತಾರಾಮಯ್ಯನವರ ಮಗಳು ಚಿ|| ಸೌ|| ಶಾರದಮ್ಮನನ್ನು ಕೊಟ್ಟು ವಿವಾಹವಾಗುವುದೆಂದು ಕೇಳಿ ಸಂತೋಷಪಡುತ್ತೇವೆ.—ಎ. ವಿ. ಸ್ಕೂಲ್ ಮೈದಾನದಲ್ಲಿ ಮಳೆ ಬಂದದ್ದರಿಂದ ಹರಳು ಮುಳ್ಳುಗಿಡ ಬೆಳೆದಿದೆ. ಮತ್ತು ಕಳ್ಳಸು ಬಹಳ ಅನಾರೋಗ್ಯಸ್ಥಿತಿಯಲ್ಲಿದೆ. ಮೇಲ್ಪಟ್ಟ ಅಧಿಕಾರಿಗಳು ತಕ್ಕ ನಿಗಾ ಕೊಟ್ಟಲ್ಲಿ ಬಾಲಕರ ಆರೋಗ್ಯವನ್ನು ಕಾಪಾಡಿಕೊಟ್ಟಂತೆ ಆಗುತ್ತೆ.—ಈ ಊರಲ್ಲಿ ಅನೇಕರು ಎಳೆಯಲಾರದ ಎತ್ತುಗಳನ್ನು ಗಾಡಿಗೆ ಹೂಡುತ್ತಿದಾರೆ. ಸರಕಾರದವರು ನಿಗಾ ಕೊಟ್ಟಲ್ಲಿ ಮೂಗು ಪ್ರಾಣಿಗಳು ಬದುಕುವವು.—ಈ ಪ್ರಾಂತ್ಯ 5-6 ದಿವಸದಿಂದ ಮೋಡವಾಡುತ್ತಾ ತುಂತುರು ಮಳೆ ಬರುತ್ತಾ ಇದೆ. ತುಂಗಾ ನದಿಯಲ್ಲಿ ಪ್ರವಾಹವು ಸ್ವಲ್ಪ ಬಂದಿದೆ.—ಇಲ್ಲಿ ನಾರ್ಮಲ್ ಸ್ಕೂಲ್ ಟ್ರೈನಿಂಗಿಗೆ ಬಂದಿರುವ ಉಪಾಧ್ಯಾಯರಿಗೆ ಸ್ಥಳವಾಸವಿಲ್ಲದೆ ಬಹಳ ಪೇಚಾಡುತ್ತಾರೆ. ಅಲ್ಲದೆ ಮೇ ತಿಂಗಳ ಕಲಲು ಬಾರದ್ದರಿಂದ ಖರ್ಚಿಗೆ ಬಹಳ ತೊಂದರೆ ಎಂಬದಾಗಿ ಗುಣಗುಟ್ಟುತ್ತಾರೆ.—ಬಂಡಿ ಮೋಟು ಪಕ್ಕದಲ್ಲಿರುವ ಕಳ್ಳಸಿನಲ್ಲಿ 3-4 ತಿಂಗಳಿಂದ ಕಕ್ಕಲವನ್ನು ಸಾಗಿಸಿದಂತೆ ಕಾಣುವುದಿಲ್ಲ. ಹೀಗೆ ಗಲೀಜಾಗಿರತಕ್ಕ ಸಂದಿಗೊಂದಿಗಳನ್ನು ನೋಡಿ ಶುಚಿಮಾಡುತ್ತಾ ಬಂದಲ್ಲಿ ಊರು ಚೊಕ್ಕಟವಾಗಿರುವುದಿಲ್ಲವೇ? ನಲ್ಲಿಗಳ ಸಮೀಪ ಜನಗಳು ಗಲೀಜು ಬಟ್ಟೆ ವಗೈರೆ ಒಗೆದು ಮುಸುರೆ ಪಾತ್ರೆಗಳನ್ನು ಬೆಳಗಿ ಕೆಡಿಸುತ್ತಾರೆ. ಇದನ್ನು ತಪ್ಪಿಸಬಾರದೇ?—ಜನವರಿಯಿಂದಲೂ ಕೆಂಪಲ್ಸರಿ ಸ್ಕೂಲ್ ಮಾಡುವ ಏರ್ಪಾಡು ನಡೆಯುತ್ತಲೇ ಇದೆ. ಯಾವಾಗ ಪ್ರಾರಂಭವಾಗುತ್ತೆಯೋ ತಿಳಿಯದು.

ಅರಕಲಗೂಡು.—ಈ ಊರಿನಲ್ಲಿ ಒಂದು ವಾರದಿಂದಲೂ ಮಳೆಯಿಂದ ಬಿಸಿಲಿನ ತಾಪ ಮರೆತುಹೋದಂತೆ ಇದೆ. ರಾತ್ರಿ ಹಗಲೂ ಬಿಡುವಿಲ್ಲದೆ ಸೋನೆ ಹಿಡಿದಿದೆ. ಇದರಿಂದ ಪೈರುಗಳಿಗೆ ಸ್ವಲ್ಪ ಕುಂದಕವುಂಟು.—ಇಲ್ಲಿಯ ಅಮಲ್ದಾರರು ಮ|| ಜಿ. ಎಸ್. ರಾಮಸ್ವಾಮಯ್ಯಂಗಾರ್ರಿಗೆ ನಾಗಮಂಗಲಕ್ಕೆ ವರ್ಗವಾಗಿದೆ ಎಂಬ ಸಂಗತಿ ಪ್ರಜೆಗಳೆಲ್ಲಾ ಕೇಳಿ ಬಹಳ ವ್ಯಥೆಪಟ್ಟರು. ಇಂಥಾ ಮೃದುಹೃದಯರಾದ ಧರ್ಮರಾಯತಂತಿರುವ ಧಣಿಯನ್ನು ಕಳೆದುಕೊಂಡದ್ದು ಬಹಳ ವ್ಯಸನವಾದ ಸಂಗತಿಯಾಗಿದೆ. ಶಿಕಾರಿಪುರದಿಂದ ಮಿ|| ಬೇಲೂರು ಮೊಹಿದೀನ್ ಶರೀಫ್ ಎನ್ನುವವರು ಬರುತ್ತಾರೆಂದು ತಿಳಿಯಿತು. ಮುಂದೆ ಬರತಕ್ಕ ಮಹನೀಯರು ಪ್ರಜೆಗಳ ಅನುರಾಗಕ್ಕೆ ಒಳಪಟ್ಟು ರೈತರ ಪಕ್ಷವಾಗಿ ಸುಖವನ್ನು ಕೋರುತ್ತಾರೆಂದು ನಂಬಲಾಗಿದೆ.—ಈ ಊರಿಗೆ ಹಾಸನದಿಂದ ಬರುವ ಟಪ್ಪಾಲು ಈಗ 4-5 ದಿನಗಳಿಂದ ಬರೀ ಡಿಸ್ಟ್ರಿಕ್ಟಿನ ಟಪ್ಪಾಲು ಮಾತ್ರ ಬಂದು, ದಿನ ಬಿಟ್ಟು ದಿನ ಬೆಂಗಳೂರು ಕಾಗದಗಳು ನಮಗೆ ತಲುಪುತ್ತಲಿವೆ. ವಿಚಾರಿಸುವಲ್ಲಿ ಹಾಸನಕ್ಕೆ ಟಾಂಗಾ ಗಾಡಿಯು ವಾಮೂಲಿನಂತೆ ಬೆಳಿಗ್ಗೆ 9 ಗಂಟೆಗೆ ಬರುವುದಕ್ಕೆ ಬದಲಾಗಿ ಮಧ್ಯಾಹ್ನ 12 ಗಂಟೆಗೆ, 2 ಗಂಟೆಗೆ, 4 ಗಂಟೆಗೆ ಬರುವುದರಿಂದ ಆಯಾ ದಿವಸವೇ ಕಾಗದಗಳು ಬರಲು ಅವಕಾಶವಿಲ್ಲವೆಂದು ತಿಳಿಯಿತು. ಈ ರೀತಿಯಾದ ಅನನುಕೂಲಗಳು ಉಂಟಾಗಿ ಸಕಾಲಕ್ಕೆ ವ್ಯಾಪಾರಸ್ಥರಿಗೆ ಟಪ್ಪಾಲು ಕಾಗದಗಳು ದೊರಕದಿದ್ದರೆ ಎಷ್ಟು ತೊಂದರೆಯಾಗುವುದು? ಇದೇ ರೀತಿ ಪ್ರತಿ ತಾಲ್ಲೂಕಿನಲ್ಲೂ ಆಗಿದೆ ಎಂದು ಜನಗಳು ಹೇಳುತ್ತಾರೆ. ಸರ್ಕಾರದವರು ಈ ವಿಚಾರವನ್ನು ನಿಗಾಕ್ಕೆ ತಂದು ಪ್ರಜೆಗಳಿಗೆ ಸೌಕರ್ಯವನ್ನುಂಟುಮಾಡಬೇಕು.

ಫ್ರೆಂಚ್‌ರಾಕ್ಸ್.—ಹವ ಶೀತವಾಗಿದೆ. ಆಗಾಗ್ಗೆ ತುಂತುರು ಮಳೆ ಬೀಳುತ್ತಿದೆ. ಕೆರೆ ಮುಕ್ಕಾಲು ಪಾಲು ತುಂಬಿರುತ್ತದೆ. ಪೇಟೆಯಲ್ಲೂ, ಸಂತೆಯಲ್ಲೂ ಧಾರಣೆ ಏಕರೀತಿಯಾಗಿದೆ—ಇಲ್ಲಿಂದ ಶ್ರೀರಂಗಪಟ್ಟಣಕ್ಕೆ 3 ತಿಂಗಳ ಬದಲಿ ಹೋಗಿದ್ದ ಅಮಲ್ದಾರ್ ಮ|| ಮಲ್ಲರಾಜೆಅರಸಿನವರು ಪುನಃ ಇಲ್ಲಿಗೆ ಬಂದು ಛಾರ್ಜ ತೆಗೆದುಕೊಂಡರು. ಈ ಸ್ಥಳದಲ್ಲಿ ದಲ್ಲಿ ಮ|| ಅರಸಿನವರು ಪ್ರಜಾನುಕೂಲವಾದ ಏರ್ಪಾಡುಗಳನ್ನು ಮಾಡುತ್ತಿರುವದರಿಂದ ಪುನಃ ಅವರು ಈ ಸ್ಥಳಕ್ಕೆ ದಯಮಾಡಿಸಿದ್ದು ಎಲ್ಲರಿಗೂ ಸಂತೋಷಕರವಾಗಿದೆ.—ಇಲ್ಲಿಗೆ 7 ಮೈಲು ದೂರದಲ್ಲಿರುವ ಹಳೇಬೀಡು ಎಂಬ ಗ್ರಾಮದಲ್ಲಿ ನರಸಿಂಹನೆಂಬುವವನು ತನ್ನ ಹೆಂಡತಿ ನರಸಿಯನ್ನು ಕೊಂದು ತಾನೂ ನೇಣುಹಾಕಿಕೊಂಡನಂತೆ. ಹೆಣಗಳನ್ನು ಡಾಕ್ಟರ್ ಅಜಮಾಯಿಷಿಗಾಗಿ ಇಲ್ಲಿಗೆ ತಂದಿದ್ದರು—ಮೂರು ವಾರದ ಕೆಳಗೆ ಇಲ್ಲಿನ ಸಂತೇ ಬೀದಿಯಲ್ಲಿ ಒಂದು ತೆಂಗಿನ ಮರಕ್ಕೆ ಸಿಡಿಲು ಬಿದ್ದು ಮರದ ಬುಡದ ಹತ್ತಿರ ಕಟ್ಟಿದ್ದ ಸುಮಾರು 80 ರೂಪಾಯಿನ ಎತ್ತು ಸತ್ತುಹೋಯಿತು.—ಇಲ್ಲಿನ ವೆಸ್ಲಿಯನ್ ಮಿಷನ್ ಎ. ವಿ. ಸ್ಕೂಲಿನಲ್ಲಿ ಈ ವರ್ಷ ಲೋ. ಸೆ. ಪರೀಕ್ಷೆಯಲ್ಲಿ 3 ಹುಡುಗರಿಗೆ ಇಬ್ಬರು ಪಾಸಾದದ್ದು ಸಂತೋಷಕರವಾಗಿದೆ—ಶ್ರೀರಂಗಪಟ್ಟಣದ ಗಂಜಾಮದಲ್ಲಿ ಗೌರ್ನಮೆಂಟ್ ಸ್ಕೂಲಿನ ಉಪಾಧ್ಯಾಯರಿಗೆಲ್ಲಾ ಟ್ರಾನ್ಸ್‌ಫರ್ ಆದದ್ದೂ, ಹೆಡ್ ಮಾಸ್ಟರ್ ಮ|| ಅಪ್ರಮೇಯಶಾಸ್ತ್ರಿಗಳು ತುಂಬಾ ಮುತುವರ್ಜಿ ವಹಿಸಿ ಸ್ಕೂಲ್ ಕೆಲಸ ನಡಿಸುತ್ತಿರುವುದೂ, ರೀಡಿಂಗ್ ರೂಮ್ ಉತ್ತಮಸ್ಥಿತಿಯಲ್ಲಿರುವುದೂ ಎಲ್ಲರಿಗೂ ಸಂತೋಷವಾಗಿದೆ. ಹೆಡ್ ಮಾಸ್ಟರ್ ಮ|| ಅಪ್ರಮೇಯಶಾಸ್ತ್ರಿಗಳು ಉಚಿತವಾಗಿ ದನಗಳ ಚಿಕಿತ್ಸೆ ಮಾಡುತ್ತಿರುವುದರಿಂದ ಜನಗಳು ಇವರನ್ನು ಕೊಂಡಾಡುತ್ತಾರೆ.

ಇಂಡಿಯಾದೇಶದ ವೃತ್ತಾಂತಗಳು.

ಪರ್ಷಿಯಾಕ್ಕೆ ಸೇರಿದ ಇಸ್ಫಹಾನ್‌ನಲ್ಲಿ ರಷ್ಯಾ ರಾಯಭಾರಿಯೂ ರಷ್ಯಾ ಬ್ಯಾಂಕಿನ ಮ್ಯಾನೇಜರಾಗಿಯೂ ಇದ್ದ ಎಂ. ಅಲೆಕ್ಸಾಂಡರ್ ಕಾವೇರ್ ಎಂಬಾತನನ್ನು ಪರ್ಷಿಯಾದವರು ಸಮರಾತ್ರಿಯಲ್ಲಿ ಕೊಲೆಮಾಡಿದರು. ಆತನ ಸಂಗಡಿದ್ದ ಎಂ. ಪ್ಯಾಕ್ಸೆ ಎಂಬಾತನನ್ನು ಏನೂ ಮಾಡಲಿಲ್ಲ. ಈ ಕೊಲೆಯು ಜರ್ಮನಿಯವರ ಚಿತಾವಣೆಯಿಂದ ನಡೆದಿರಬೇಕೆಂದು ಊಹಿಸಲ್ಪಟ್ಟಿದೆ.

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಹಿಂದುಸ್ಥಾನದಿಂದ ಹೋಗುವಂಥಾ ಪ್ರಜೆಗಳಿಗೆ ಆ ಸ್ವಾಸ್ಥ್ಯದಲ್ಲಿ ಸರ್ಕಾರದವರು ನಿರ್ಬಂಧಗಳನ್ನು ಕಲ್ಪಿಸಿ ಕಷ್ಟ ಮನೋವ್ಯಥೆಗಳಿಗೆ ಗುರಿಮಾಡುತ್ತಿರುವುದನ್ನು ಸರಿಪಡಿಸಿ ಕೊಡಬೇಕೆಂದು ಪಂಜಾಬ್ ಪ್ರಜಾ ಸಂಘದವರು ಸಂಯುಕ್ತ ಅಧಿಕಾರಿಗಳ ಲೆಫ್ಟಿನೆಂಟ್ ಗವರ್ನರವರಿಗೆ ಮನವಿ ಅರ್ಜಿಯನ್ನು ಕೊಟ್ಟಿದಾರೆ. ಆ ಸರ್ಕಾರದವರು ಈ ಅರ್ಜಿಯನ್ನು ಇಂಡಿಯಾ ಗವರ್ನ್‌ಮೆಂಟಿಗೆ ಕಳುಹಿಸಿರುವುದಾಗಿಯೂ, ಗವರ್ನ್‌ಮೆಂಟಿನವರು ಕೆನಡಾ ಗವರ್ನ್‌ಮೆಂಟಿನವರ ಕೂಡ ಈ ವಿಚಾರವಾಗಿ ಕಾಗದ ಪತ್ರಗಳನ್ನು ನಡಿಸುತ್ತಿದಾರೆಂದೂ, ಇನ್ನು ಕೆಲವು ಕಾಲದಲ್ಲೇ ಹಿಂದುಸ್ಥಾನದವರಿಗೆ ಹಿತವಾಗುವ ರೀತಿ ವ್ಯವಸ್ಥೆಯಾದೀತೆಂದೂ ಜವಾಬು ಕೊಟ್ಟಿರುವರು.

ಬೊಂಬಾಯಿನಲ್ಲಿ ಪ್ರಕಟವಾಗುವ ಜಾಮ ಜಾಂಷೆದ್ ಎಂಬ ಪಾರ್ಸಿ ಪತ್ರಿಕೆಯಲ್ಲಿ ಪಾರ್ಸಿ ಜನಗಳ ಒಂದಾನೊಂದು ಕರ್ಮದ ವಿಷಯದಲ್ಲಿ ಆ ಜನರಿಗೆ ಅವಮಾನಕರವಾದ ಸಂಗತಿಗಳನ್ನು ಪ್ರಕಟಿಸಿದರೆಂದು ಮೊಕದ್ದಮೆ ಬಂದು ಅದರ ಎಡಿಟರಿಗೆ 200 ರೂಪಾಯಿ, ಪ್ರೊಪ್ರೈಟರಿಗೆ 100 ರೂಪಾಯಿ ಜುಲ್ಮಾನೆ ಆಯಿತು. ಈ ರೀತಿ ಶಿಕ್ಷೆ ವಿಧಿಸಲ್ಪಟ್ಟಾಗ ಆ ಪತ್ರಿಕೆಯವರು ಬಹಳ ಉಪಕಾರ ಮಾಡಿದವರೆಂದೂ, ಆ ಜುಲ್ಮಾನೆ ಹಣವನ್ನು ತಾವು ಕೊಡುತ್ತೇವೆಂದೂ ಕೆಲವು ಜನ ಪಾರ್ಸಿಗಳು ಹೇಳಿದರು. ಈ ಸಂದರ್ಭದಲ್ಲಿ ಕೋರ್ಟಿನೊಳಗೆ ಜನಗಳ ದೊಂಬಿ ಹೆಚ್ಚಾಯಿತು. ಪೋಲೀಸಿನವರು ಇಬ್ಬರನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಇವರಿಗೂ ತಲಾ 10 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು.

ಅಮೃತಸರದ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಷೇರುದಾರರುಗಳು ಕಳೆದ ತಾ. 13 ರಲ್ಲಿ ಲಾಹೋರಿನಲ್ಲಿ ಒಂದು ಜನರಲ್ ಮೀಟಿಂಗ್ ಮಾಡಿ ಕಂಪನಿಯ ಲೇವಾದೇವಿಯನ್ನು ನಿಲ್ಲಿಸಬೇಕೆಂದೂ, ಲೆಕ್ಕಾಚಾರಗಳನ್ನೆಲ್ಲಾ ಖೈದು ಮಾಡಿ ಲೇಣೆ ದೇಣೆಗಳನ್ನು ತನಿಖೆಯಿಂದ ವ್ಯವಸ್ಥೆ ಮಾಡಬೇಕೆಂದೂ ಇತ್ಯರ್ಥ ಮಾಡಿ, ಲೆಕ್ಕಾಚಾರ ಬಲ್ಲಂಥ ಇಬ್ಬರನ್ನು ಲಿಕ್ವಿಡೇಟರಾಗಿ ನೇಮಿಸಿದರು. ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಮೂರು ಮಂದಿ ಷೇರುದಾರರೂ ಇಬ್ಬರು ಲೇಣೇದಾರರೂ ಒಂದು ಕಮಿಟಿಯಾಗಿ ನೇಮಿಸಲ್ಪಟ್ಟಿದಾರೆ. ಮೈಸೂರು ಸಂಸ್ಥಾನದಲ್ಲೂ ಈ ಕಂಪನಿಗೆ ಕೆಲವರು ಹಣ ಹಾಕಿರುತ್ತಾರೆಂದೂ, ಈ ಹಣವನ್ನು ಕಳೆದುಕೊಳ್ಳಬೇಕಾದ ಸಂಭವವುಂಟಾಯಿತೆಂದೂ ತಿಳಿದು ವಿಷಾದಿಸುತ್ತೇನೆ.

ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಲೈನಿನಲ್ಲಿ ಕಳೆದ ಏಪ್ರೈಲ್ ತಾ. 6 ರಲ್ಲಿ ಆಲಂದಿ ಸ್ಟೇಷನ್ನೊಳಗೆ ರೈಲ್ವೆ ನೌಕರರ ಅಜಾಗರೂಕತೆಯಿಂದ ಎರಡು ರೈಲ್ ಗಾಡಿಗಳು ಬಡಿದಾಡಿ ತುಂಬಾ ನಷ್ಟವಾಯಿತು. ಈ ವಿಚಾರವನ್ನು ಪೂನಾಪಟ್ಟಣದ ಮ್ಯಾಜಿಸ್ಟ್ರೇಟರು ದರ್ಯಾಫ್ತಿಮಾಡಿ, ಕಳೆದ ವಾರ ಅ|| ಸ್ಟೇಷನ್ ಮಾಸ್ಟರ್ ಗಣೇಶ ನರಸಿಂಗ್ ವೈದ್ಯನಿಗೆ ನಾಲ್ಕು ತಿಂಗಳ ಸಾದಾ ಸಜವನ್ನೂ, ಗನು ತುಕಾರಾಮ್ ಎಂಬವನಿಗೆ ಎರಡು ತಿಂಗಳ ಸಾದಾ ಸಜವನ್ನೂ ವಿಧಿಸಿರುತ್ತಾರೆ. ರೈಲ್ ಗಾಡಿ ನಡಿಸುತ್ತಿದ್ದ ಜಾರ್ಜ್ ವಾಲ್ಷ್ ಎಂಬವನ ಮೇಲೂ ಮೊಕದ್ದಮೆ ಆಯಿತು. ಆದರೆ ಇವನು ಎರಡು ವಾರಗಳ ಹಿಂದೆ ಆತ್ಮಹತ್ಯಮಾಡಿಕೊಂಡು ಕಾಲವಾದನು. ಈ ರೈಲ್ವೆ ಅಪಾಯದಲ್ಲಿ ಪ್ರಯಾಣಿಕರ್ಯಾರಿಗೂ ಅಪಾಯವೇನೂ ಸಂಭವಿಸಲಿಲ್ಲ. ರೈಲ್ವೆ ಇಂಜನ್‌ಗಳೂ, ಕೆಲವು ವಾಗನ್ ಗಾಡಿಗಳೂ ಕೆಟ್ಟುಹೋದವು.

ಹಿಂದುಸ್ಥಾನದಲ್ಲಿ ನೆಯ್ಗೆಯವರು (ರಂಗಾರಿಯವರು) ನೂಲಿಗೆ ಹಾಕತಕ್ಕ ಬಣ್ಣಗಳನ್ನು ಬೇರೆ ಬೇರೆ ಜಾತಿಯ ಗಿಡಮೂಲಿಕೆಗಳಿಂದಲೂ ಇತರ ಪದಾರ್ಥಗಳಿಂದಲೂ ತಯಾರುಮಾಡಿಕೊಳ್ಳುತ್ತಿದ್ದರು. ಈಚೆಗೆ ಈ ರಂಗುಗಳು ಜರ್ಮನಿಯಿಂದ ಬಂದು ಬಹಳ ಅಗ್ಗವಾಗಿ ಬಿಕರಿ ಆಗುತ್ತಿದ್ದವು. ಇದರಿಂದ ಸ್ವದೇಶಿ ರಂಗುಗಳು ಕಳೆಯಿತ್ತವೆ ಅವುಗಳ ತಯಾರಿಯೇ ನಿಂತುಹೋಯಿತು ಎಲ್ಲರೂ ಜರ್ಮನಿಯ ರಂಗುಗಳನ್ನು ಕೊಂಡು ಉಪಯೋಗಿಸುತ್ತಾ ಬಂದರು. ಈ ಜರ್ಮನಿಯವರು ನಮ್ಮ ಶತ್ರುಗಳಾಗಿ ಅವರ ದೇಶದಿಂದ ರಂಗುಗಳನ್ನು ಯಾರೂ ತರಿಸಕೂಡದೆಂಬ ನಿರ್ಬಂಧವುಂಟಾಗಿದೆ. ಇದರಿಂದ ನಮ್ಮ ದೇಶದಲ್ಲಿ ರಂಗುಗಳು ಸಿಕ್ಕದೆ ನೆಯ್ಗೆ ಕಸಬು ಬಹಳ ಹೀನಸ್ಥಿತಿಗೆ ಬರುವಂತಾಗಿದೆ. ಈ ರಂಗು ಬೊಂಬಾಯಿನಲ್ಲಿ ಪೌಂಡಿಗೆ ಸಾಮಾನ್ಯವಾಗಿ 10 ಆಣೆಗೆ ಬಿಕರಿ ಆಗುತ್ತಿದ್ದದ್ದು ಈಗ 11-12 ರೂಪಾಯಿಗೆ ಹೆಚ್ಚಿಹೋಗಿರುವುದು. ಬೊಂಬಾಯಿ ಸರ್ಕಾರದವರು ಈ ವಿದ್ಯಮಾನಗಳನ್ನೆಲ್ಲಾ ತಿಳಿಸಿ, ಸ್ವದೇಶೀ ರಂಗುಗಳನ್ನು ತಯಾರುಮಾಡತಕ್ಕವರು ಅಭಿವೃದ್ಧಿಗೆ ಬರಲು ಇದೇ ಅನುಕೂಲವಾದ ಸಮಯವೆಂದು ಸೂಚಿಸಿರುತ್ತಾರೆ. ಸ್ಥಳಾಂತರಗಳಲ್ಲಿ ರಂಗುಗಳನ್ನು ಮಾಡಬಲ್ಲಂಥಾ ಕಸಬುದಾರರು ಸೇರಿ ತಲಾ ಅಲ್ಪ ಸ್ವಲ್ಪ ಹಣ ಹಾಕಿಕೊಂಡು ಈ ಕಸಬನ್ನು ನಡಿಸಿದರೆ ಬಹಳ ಬೇಗನೆ ದ್ರವ್ಯ ಸಂಪಾದನೆಯಾಗುವುದಕ್ಕೂ, ರಂಗುಗಳು ಒದಗುವುದಕ್ಕೂ ತುಂಬಾ ಅವಕಾಶವಿದೆ.

ವಿದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದ ಸೀಲ್ದಾ ರೈಲ್ವೆ ಸ್ಟೇಷನ್ನಿಂದ ಎರಡು ಮೈಲಿ ದೂರದಲ್ಲಿ ಕೆನಾಲ್ ಜಂಕ್ಷನ್ ಸ್ಟೇಷನ್ನಲ್ಲಿ ಕಳೆದ ಮಂಗಳವಾರ ಮಧ್ಯಾಹ್ನ ಪೂರ್ವ ಬಂಗಾಳದಿಂದ ಬಂದಿದ್ದ ನಾಲ್ಕು ಮಂದಿ ಮಹಮದಿಯರು ರೈಲ್ವೆ ಸೇತುವೆಯ ಮೇಲೆ ಹಾದುಹೋಗುತ್ತಿದ್ದರು. ಆಗ ಸೀಲ್ದಾ ಸ್ಟೇಷನ್ ಕಡೆಯಿಂದ ಪ್ಯಾಸೆಂಜರ್ ಗಾಡಿಯು ಬಂದುಬಿಟ್ಟಿತು. ಆ ನಾಲ್ಕು ಜನರಿಗೂ ಗಾಬರಿಯುಂಟಾಗಿ ಲೈನ್ ಬಿಟ್ಟು ನಿಂತುಕೊಳ್ಳಲು ಆಗಲಿಲ್ಲ. ಆ ಪೈಕಿ ಇಬ್ಬರು ರೈಲ್ ಗಾಡಿಗೆ ಸಿಕ್ಕಿ ಹತರಾದರು. ಇನ್ನಿಬ್ಬರಿಗೂ ಘೋರ ಗಾಯವಾಯಿತು. ಆಸ್ಪತ್ರೆಯಲ್ಲಿ ಒಬ್ಬನು ಮರುದಿನ ಸತ್ತುಹೋದನು.

ಕಲ್ಕತ್ತಾ ಪಟ್ಟಣದ ಬಳಿ ಶ್ರೀರಾಮಪುರದಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಜಿ. ಎನ್. ಮಿತ್ರನೆಂಬುವನು ಜಹಾದ್ ರಹೀಮ್ ಎಂಬೊಬ್ಬ ಚಕ್ಕಳ ವ್ಯಾಪಾರಿಯ ಅಂಗಡಿಗೆ ಹೋಗಿ ಅವನ ಬಳಿ ಇದ್ದ ಬಂದೂಕನ್ನು ತಾನು ಕೊಂಡು ಅಜಮಾಯಿಷಿ ಮಾಡಿದ ಮೇಲೆ ಅವನು ಛಾಕರಿಗೆ ಇಟ್ಟುಕೊಂಡಿದ್ದ ಇಬ್ಬರು ಆಳುಗಳನ್ನು ಕೆಲಸದಿಂದ ತೆಗೆದುಹಾಕಬೇಕೆಂದು ತಿಳಿಸಿದಾಗ ಆ ವರ್ತಕನು ಪೋಲೀಸಿನವನ ಮಾತನ್ನು ಕೇಳಲಿಲ್ಲ. ಅದರ ಮೇಲೆ ಆ ಇನ್ಸ್‌ಪೆಕ್ಟರನು ಆ ವರ್ತಕನ ಮನೆಯನ್ನು ಶೋಧನೆ ಮಾಡಿ, ಅವನನ್ನು ಹಿಡಿದುಕೊಂಡು ಹೋಗಿ ಬಂಧನದಲ್ಲಿ ಹಾಕಿ ಹಿಂಸೆಪಡಿಸಿದನೆಂದು ಪೋಲೀಸಿನವನ ಮೇಲೆ ಮೊಕದ್ದಮೆ ಈಗ ವಿಚಾರಣೆಯಲ್ಲಿದೆ.

ಯುದ್ಧಭೂಮಿಯಲ್ಲಿ ಗಾಯಪಡುವ ಹಿಂದುಸ್ಥಾನದ ಸೈನಿಕರಿಗೋಸ್ಕರ ಬ್ರಿಟಿಷ್ ಸರ್ಕಾರದವರು ಬ್ರೈಟನ್ ನಗರದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಇಟ್ಟಿದಾರೆ. ಅಲ್ಲಿ ಡಾಕ್ಟರಾಗಿರುವ ಕರ್ನಲ್ ಸಿ. ಜೆ. ಬ್ರೈಯರ್ ಎಂಬವರು ಆ ಆಸ್ಪತ್ರೆಯನ್ನು ಕುರಿತು ಬರೆಯುವುದೇನೆಂದರೆ—ಇಲ್ಲಿ ಐದು ಆಸ್ಪತ್ರೆಗಳಿವೆ. ಇವುಗಳಲ್ಲಿ 4,000 ರೋಗಿಗಳನ್ನು ಇಟ್ಟು ಏಕಕಾಲದಲ್ಲಿ ಚಿಕಿತ್ಸೆ ಮಾಡಲವಕಾಶವಿದೆ. ಹಿಂದುಸ್ಥಾನದ ಸೈನಿಕರಲ್ಲಿ ರೋಗಿಗಳಿಗೂ ಗಾಯಪಟ್ಟವರಿಗೂ ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಳು ಅತ್ಯಂತ ಪ್ರೀತಿಯಿಂದಲೂ ವಿಶದವಾಗಿಯೂ ನಡೆಯುತ್ತವೆ. ಇವಕ್ಕಾಗಿ ಬಹಳ ನಿಪುಣರಾದ ವೈದ್ಯರುಗಳನ್ನು ನೇಮಕ ಮಾಡಿದಾರೆ. ಇಲ್ಲಿ ನಡೆಯುವ ಚಿಕಿತ್ಸೆಗಳ ದೆಸೆಯಿಂದ ಸಾವಿರಾರು ಸೈನಿಕರು ವಾಸಿಯಾಗಿ ಮತ್ತೆ ಯುದ್ಧಭೂಮಿಗೆ ಹೋಗಿರುವರು ಎಂಬುದು.

ಆಸ್ಟ್ರಿಯಾದಲ್ಲಿ ಪ್ರಜೆಗಳ ಪೈಕಿ ಗಣ್ಯರಾದವರು ಕೂಡ ಸರ್ಕಾರಕ್ಕೆ ದ್ರೋಹವನ್ನೂ ಮೋಸವನ್ನೂ ಮಾಡುತ್ತಿದಾರೆಂದು ತಿಳಿಯುತ್ತದೆ. ಸೈನ್ಯಕ್ಕೆ ಕುದುರೆಗಳು ಬೇಕೆಂದು ಸರ್ಕಾರದವರು ಕೇಳಿದಾಗ ದೊಡ್ಡ ಮನುಷ್ಯರು ಗ್ರಾಮಾಂತರಗಳಲ್ಲಿರುವ ಒಳ್ಳೊಳ್ಳೇ ಕುದುರೆಗಳನ್ನು ಅಧಿಕಾರಿಗೆ ತೋರಿಸಿ ಅವುಗಳ ಕ್ರಯವನ್ನು ತೆಗೆದುಕೊಂಡು, ಕುದುರೆಗಳನ್ನು ಒಪ್ಪಿಸುವ ಕಾಲದಲ್ಲಿ ಕೆಟ್ಟ ಹೀನವಾದ ಕುದುರೆಗಳನ್ನು ಒಪ್ಪಿಸಿದರು. ಒಬ್ಬನ ಬಳಿ ಇದ್ದ ನಾಲ್ವತ್ತು ಕುದುರೆಗಳನ್ನು ಅವನು ಅಧಿಕಾರಿಯ ಒಳಸಂಚಿನಿಂದ ಹನ್ನೆರಡಾವರ್ತಿ ಹಾಜರ್ಮಾಡಿ ಕ್ರಯವನ್ನು ತೆಗೆದುಕೊಂಡು, ಕೆಟ್ಟ ಕುದುರೆಗಳನ್ನು ಒಪ್ಪಿಸಿದನು. ಇಂಥಾ ಮೋಸದ ವ್ಯಾಪಾರವು ಕೆಲವು ತಿಂಗಳಿಂದ ನಡೆದುಬಂದಿದೆ. ಆಸ್ಟ್ರಿಯಾ ಸರ್ಕಾರದವರು ಅವರನ್ನು ಹಿಡಿದು ತಲಾ ಹದಿನೈದು ವರುಷಗಳ ಸಜಾ ಶಿಕ್ಷೆಯನ್ನು ವಿಧಿಸಿದರೆಂದು ಪ್ರಕಟವಾಗಿದೆ.

ಕ್ರಯಕ್ಕೆ ಅಥವಾ ಬಾಡಿಗೆಗೆ.

ಈದಿಗಾ ಬಡಾವಣೆ ಜನಾನಾ ಬಂಗ್ಲಿ ಹತ್ತಿರ 1 ನೇ ನಂಬರು 4 ಸ್ವೀಟುಗಳುಳ್ಳ ದೊಡ್ಡ ಮನೆ ಬಾಡಿಗೆಗಾದರೂ ಕ್ರಯಕ್ಕಾದರೂ ದೊರೆಯುತ್ತೆ. ಈಗ 10 ರೂಪಾಯಿ ಬಾಡಿಗೆ ಬರುತ್ತಿದೆ. ಇದರ ವಿಷಯವಾಗಿ ಚರ್ಚ್ ರೋಡ್ 20 ನೇ ನಂಬರ್ ಮನೆಯಲ್ಲಿ ವಿಚಾರಿಸಿರಿ.

ತರೀ ಜಮೀನು ಕ್ರಯಕ್ಕೆ ಸಿಕ್ಕುತ್ತೆ.

ಶ್ರೀರಂಗಪಟ್ಟಣದ ತಾಲ್ಲೋಕು ಪಾಲಹಳ್ಳಿ ಗ್ರಾಮದ ಒಂದು ಫರ್ಲಾಂಗಿನೊಳಗೆ ಒಂಭತ್ತು ಎಕರೆ ತರೀ ಜಮೀನು ಕ್ರಯಕ್ಕೆ ದೊರೆಯುವುದು. ಈ ಕ್ಷೆಯುಳ್ಳವರು ಜಾಸ್ತಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

[125-1] ಎಸ್. ಕೇರ್ ಆಫ್, ವೃತ್ತಾಂತ ಪತ್ರಿಕೆ, ಮೈಸೂರು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು.

ಕಳೆದ ತಾ. 26 ನೇ ಶನಿವಾರ ಬೆಳಗ್ಗೆ ರಾಜಧಾನಿಯ ಪುರಾಭಿವೃದ್ಧಿ ಸಂಘದ ತಿಂಗಳುಗಟ್ಲೆಯ ಮೀಟಿಂಗು ಛೇರ್‌ಮೆನ್ ಮ|| ಟಿ. ಜಿ. ಲಕ್ಷ್ಮೀನಾರಾಯಣರ ಅಧ್ಯಕ್ಷತೆಯಲ್ಲಿ ಟೌನ್ ಹಾಲ್ ಬಂಗಲೆಯಲ್ಲಿ ನಡೆಯಿತು. ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಡಾಕ್ಟರ್ ಎಂ. ಶ್ರೀನಿವಾಸರಾಯರು, ಹೆಲ್ತ್ ಆಫೀಸರ್ ಮ|| ಎ. ಕೆ. ಪಾಣಿಯವರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು, ರೆವ್|| ಡಬ್ಲ್ಯು. ಸಾಡೇಸಾಹೇಬರು, ಮ|| ಗಳಾದ ರಾವ್ ಬಹದೂರ್ ಎಂ. ಸಿ. ರಂಗಯ್ಯಂಗಾರ್ರು, ಎಂ. ವೆಂಕಟಕೃಷ್ಣಯ್ಯನವರು, ಮಿ|| ಮಹಮದ್ ಜಾಫರ್ ಸಾಹೇಬರು ಹಾಜರಾಗಿದ್ದರು. ಮ|| ವೈ. ಶ್ರೀನಿವಾಸರಾಯರು ತಮ್ಮ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರ ಮೇಲೆ ಸರ್ಕಾರದವರು ಮಹಾರಾಜರವರ ಪ್ರೈವೆಟ್ ಸೆಕ್ರಿಟರಿ ಮಿ|| ಆರ್. ಎಚ್. ಕ್ಯಾಂಬೆಲ್ ರವರನ್ನು ಬೋರ್ಡಿನ ಮೆಂಬರಾಗಿ ನೇಮಿಸಿರುತ್ತಾರೆಂದು ಛೇರ್‌ಮೆನ್ ರವರು ತಿಳಿಸಿದರು.

ಕೋಟೆಯ ಪೂರ್ವ ಪಾರ್ಶ್ವದ ಕೋಟೆ ಗೋಡೆಯನ್ನು ಒಡೆಯುವುದಕ್ಕೆ 5,292 ರೂಪಾಯಿ, ದೊಡ್ಡಕೆರೆಯಲ್ಲಿ ಜನಗಳು ಇಳಿದು ಸ್ನಾನಾದಿಗಳನ್ನು ಮಾಡುವ ಭಾಗದಲ್ಲಿ ಕಲ್ಲುಕಟ್ಟಿ ಸುತ್ತಲೂ ಕಂಬಿಗಳನ್ನು ಹಾಕುವುದಕ್ಕೆ 1,300 ರೂಪಾಯಿ, ಭಕ್ಷಿ ಬಸಪ್ಪಾಜಿ ಅರಸಿನವರ ಮಾವಿನ ತೋಟದ ಬಡಾವಣೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ನಿವೇಶನಗಳನ್ನು ವಿಂಗಡಿಸಿ ರಸ್ತೆಗಳನ್ನೂ ಕನ್ಸರ್ವೆನ್ಸಿ ಗಲ್ಲಿಗಳನ್ನೂ ಮಾಡಿ ಬಚ್ಚಲ ರೊಚ್ಚು ಸಾಗುವುದಕ್ಕೆ ನಲ್ಲಿಗಳನ್ನು ಹಾಕಿ ಎಲ್ಲಾ ಕ್ರಮಪಡಿಸುವುದಕ್ಕೆ 12,046 ರೂಪಾಯಿ, ಸಯ್ಯಾಜಿರಾವ್ ರಸ್ತೆಯ ಉಭಯಪಾರ್ಶ್ವಗಳಲ್ಲೂ ಜನರು ತಿರುಗಾಡುವಂಥಾ ಫುಟ್‌ಪ್ಯಾತ್ ಎಂಬ ಸಣ್ಣ ರಸ್ತೆಗಳನ್ನು ಹಾಕುವುದಕ್ಕೆ 1,500 ರೂಪಾಯಿ, ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಬಚ್ಚಲ ರೊಚ್ಚು ಸಾಗುವುದಕ್ಕೆ ನಲ್ಲಿಗಳನ್ನು ಹಾಕಿ ಕಾಮಗಾರಿ ಮಾಡುವುದಕ್ಕೆ 2,678 ರೂಪಾಯಿ, ಕಾರಂಜಿಕೆರೆಯ ಕಾಮಗಾರಿಗೆ 11,362 ರೂಪಾಯಿ, ಸೂಯೆಜ್ ಫಾರಮಿಗೆ ನೀರನ್ನು ಹಂಚಿಕೊಡುವುದಕ್ಕೂ ಪರಿಶ್ರಾಂತವಾದ ಫಾರಮನ್ನು ಮಾಡಿಸುವುದಕ್ಕೂ 11,480 ರೂಪಾಯಿ—ಈ ಅಂದಾಜು ಪಟ್ಟಿಗಳನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ.

ರಘುನಾಥಪುರದ ಅಗ್ರಹಾರದಲ್ಲಿ ಮ|| ಎಂ. ಎ. ಕೃಷ್ಣಯ್ಯಂಗಾರ್ರ ಬಾಬತು 93 ನೇ ಡೋರ್ ನಂಬರುಳ್ಳ ನಿವೇಶನವನ್ನು ಕೊಂಡುಕೊಳ್ಳುವುದಕ್ಕೆ ಬಸ್ತಿಹಾರು ಹಾಕಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ರಘುನಾಥಪುರದ ರಸ್ತೆ ಮುಂಭಾಗದಲ್ಲಿರುವ ಬಸ್ತಿ ದೇವಸ್ಥಾನಕ್ಕೆ ಅದರ ಪಕ್ಕದಲ್ಲಿರುವ ಕಾಲವನ್ನು ಮತ್ತು ದೇವಿ ಆರಿಯನ್ನು ಇವರ ಬಾಬತು ಮನೆಗಳನ್ನು ಕೊಂಡು ಬಿಟ್ಟುಕೊಡಬಹುದೆಂದು ಹಿಂದೆ ತೀರ್ಮಾನವಾಗಿತ್ತು. ಈಚೆಗೆ ಮ್ಯುನಿಸಿಪಲ್ ಕೌನ್ಸಿಲ್‌ನವರು ಆ ಮನೆಗಳನ್ನು ಒಡೆದುಹಾಕಿ ಕಂಪೆನಿಯ ಎ. ವಿ. ಸ್ಕೂಲ್ ಆವರಣಕ್ಕೆ ಸೇರಿಸಿಕೊಡಬೇಕೆಂದು ಇಚ್ಛೆಪಟ್ಟಿದ್ದರು. ಟ್ರಸ್ಟ್ ಬೋರ್ಡ್ ಮೆಂಬರುಗಳು ಆ ಮನೆಗಳನ್ನು ಒಡೆದುಹಾಕಿ ಆ ಸ್ಕೂಲಿಗೆ ಮುಫತ್ತಾಗಿ ಕೊಡುವುದೇ ಉತ್ತಮವೆಂದು ಒಪ್ಪಿ ತೀರ್ಮಾನವಾಗಿದೆ.—ಮಂಡಿಮೊಹಲ್ಲಾ ಲಾಯಲಾಗೇರಿಯಲ್ಲಿ ಇಂತಹ ಎರಡು ನಿವೇಶನಗಳನ್ನು ಸುಟ್ಟಮ್ಮ ಲಂಬಾಕಗೆ ಬಿಕರಿಮಾಡಬಹುದೆಂದೂ, ಅದರ ಬಳಿ ಇರುವ ಇನ್ನೊಂದು ಮನೆ ನಿವೇಶನವನ್ನು ಹರಾಜು ಮೂಲಕ ವಿಕ್ರಯಮಾಡಬೇಕೆಂದೂ ಇಚ್ಛೆಯಾಗಿದೆ.—ಕೃಷ್ಣರಾಜಮೊಹಲ್ಲಾ ಸುಣ್ಣದಕೇರಿಯಲ್ಲಿ ನಾಲ್ಕು ಮನೆಗಳನ್ನು ಟ್ರಸ್ಟ್ ಬೋರ್ಡಿನಿಂದ ಕೊಂಡುಕೊಳ್ಳಬಹುದೆಂದು ಒಪ್ಪಲಾಯಿತು.—ಟ್ರಸ್ಟ್ ಬೋರ್ಡಿನ ಇಂಜನಿಯರ್ ಆಫೀಸು ಮಾಡಿರುವ ಕಟ್ಟಡಕ್ಕೆ ಬೋರ್ಡಿನವರು ಸರ್ಕಾರಕ್ಕೆ ತಿಂಗಳಿಗೆ 35 ರೂಪಾಯಿ ಬಾಡಿಗೆ ಕೊಡುವುದು ಸಾಲದೆಂದೂ, 58-3-0 ಕೊಡಬೇಕೆಂದೂ ಕಂಟ್ರೋಲರವರು ಬರೆದಿದ್ದರು. ಎಂಟು ಆಣೆ ಜಾಸ್ತಿ ಬಾಡಿಗೆ ಕೊಡಬಹುದೆಂದು ಒಪ್ಪಲಾಯಿತು.—ಬಟ್ಟಹಳ್ಳಿ ಬಡಾವಣೆಯಲ್ಲಿ ಬಚ್ಚಲ ನಲ್ಲಿಗಳನ್ನು ಹಾಕಿಸುವುದು, ರಸ್ತೆಗಳನ್ನು ಹಾಕಿ ಸರಿಪಡಿಸುವುದು, ನೀರಿನ ನಲ್ಲಿಗಳನ್ನು ಹಾಕುವುದು, ಚಿನ್ನೆಹುರದನಹಳ್ಳಿ ನಾಲೆಯನ್ನು ತಿರುಗಿಸುವುದು, ಈಗಿರುವ ನಾಲೆಯನ್ನು ಮುಚ್ಚುವುದು—ಈ ಕಾಮಗಾರಿಗೆ 1,11,000 ರೂಪಾಯಿ ಬೇಕಾಗುವುದೆಂದು ತಯಾರಾಗಿದ್ದ ಅಂದಾಜು ಪಟ್ಟಿಯನ್ನು ಮೆಂಬರುಗಳು ಪ್ಯಾಸ್‌ಮಾಡಿದರು.

ಕೃಷ್ಣರಾಜ ಬಾಲಿಕಾ ಪಾಠಶಾಲೆಯ ಉಪಾಧ್ಯಾಯಿನಿ ಸೌ|| ಎಸ್. ರುಕ್ಮಿಣಿಯಮ್ಮನವರಿಗೆ ವೀವರ್ಸ್ ಲೈನಲ್ಲಿ ಹೊಸಮನೆ ಕಟ್ಟಿಕೊಳ್ಳುವುದಕ್ಕೆ 1,200 ರೂಪಾಯಿ, ಮಹಾಲಕ್ಷ್ಮಿ ಟ್ರೇಡಿಂಗ್ ಕಂಪನಿ ಮ್ಯಾನೇಜರ್ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ವೀವರ್ಸ್ ಲೈನ್‌ನಲ್ಲಿ ಕಟ್ಟುತ್ತಿರುವ ಮನೆಯ ಕಾಮಗಾರಿಯನ್ನು ಪೂರ್ತಿಮಾಡುವುದಕ್ಕೆ 600 ರೂಪಾಯಿ, ಶ್ರೀ ಕೃಷ್ಣ ವೀವಿಂಗ್ ಫ್ಯಾಕ್ಟರಿ ಮ್ಯಾನೇಜರ್ ಬಿ. ಕೃಷ್ಣಯ್ಯಂಗಾರ್ರಿಗೆ ವೀವರ್ಸ್ ಲೈನ್‌ನಲ್ಲಿ ಅವರ ಮನೆಯ ಕಾಮಗಾರಿಯನ್ನು ಮುಗಿಸುವುದಕ್ಕೆ 500 ರೂಪಾಯಿ, ಫುಟ್ಟಸ್ವಾಮಿ ಅಚಾರಿಗೆ ಮಂಡಿ ಮೊಹಲ್ಲೆಯಲ್ಲಿ ಕಟ್ಟುತ್ತಿರುವ ಮನೆಯ ಕಾಮಗಾರಿಯನ್ನು ಮುಗಿಸುವುದಕ್ಕೆ 500 ರೂಪಾಯಿ, ಈ ರೀತಿ ಟ್ರಸ್ಟ್ ಬೋರ್ಡಿನಿಂದ ಸಾಲಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಕೃಷ್ಣರಾಜ ಮೊಹಲ್ಲೆಯಲ್ಲಿ ಡೋರ್ ನಂಬರ್ 10 ನೇ ಮನೆಯನ್ನು ಟ್ರಸ್ಟ್ ಬೋರ್ಡಿಗೆ ಕೊಂಡುಕೊಳ್ಳಬಹುದೆಂದೂ, ಕಿವಾನಿ ದರ್ವಾಜಾ ರಸ್ತೆಯಲ್ಲಿ ಮಿ|| ಅಬ್ಬುಸೇಟರ ಬಂಗಲೆಗೆ ಪೂರ್ವದಿಕ್ಕಿನಲ್ಲಿರುವ ಖಾಲಿ ನಿವೇಶನವನ್ನು ಅಡಮಾಯಿಸಿಮಾಡಿ ಇತರರಿಗೆ ಬಿಕರಿ ಮಾಡತಕ್ಕದ್ದೆಂದೂ ಇಚ್ಛೆಯಾಯಿತು.

ಜಲಪುರಿ ಬಡಾವಣೆಯಲ್ಲಿ ಸುಮಾರು 5-6 ವರುಷಗಳ ಹಿಂದೆ ಟ್ರಸ್ಟ್ ಬೋರ್ಡಿನಿಂದ ಕಟ್ಟಿಸಿದ ಮನೆಗಳ ಪೈಕಿ ಬಿಕರಿ ಆಗದೆ ಉಳಿದಿರುವ 13 ಮನೆಗಳನ್ನು ಪಬ್ಲಿಕ್ ಹರಾಜು ಮೂಲಕ ಬಿಕರಿ ಮಾಡಬಹುದೆಂದು ಮೆಂಬರುಗಳು ಒಪ್ಪಿದರು.—ವೀವರ್ಸ್ ಲೈನ್ ಬಳಿ ಶ್ರೀ ವ್ಯಾಸರಾಯ ಮಠಕ್ಕೆ ಕೊಟ್ಟಿರುವ ನಿವೇಶನದ ಬಳಿ ಇರುವ ಇನ್ನೊಂದು ನಿವೇಶನವನ್ನೂ ಅದೇ ಮಠಕ್ಕೆ ಗಜಕ್ಕೆ 1 ಆಣೆಯಂತೆ ಬಿಕರಿ ಮಾಡಬೇಕೆಂದೂ, ಮಠದವರು ಒಂದು ವರುಷದೊಳಗೆ ಕಟ್ಟಡವನ್ನು ಪೂರೈಸುವಂತೆ ಮುಚ್ಚಳಿಕೆ ತೆಗೆದುಕೊಳ್ಳಬೇಕೆಂದೂ ಮೆಂಬರುಗಳು ಒಪ್ಪಿಕೊಂಡರು.—ಚಾಮರಾಜ ರಸ್ತೆಯ ದಕ್ಷಿಣಕ್ಕಿರುವ ಭಾಗಕ್ಕೆಲ್ಲಾ ಬಚ್ಚಲ ನಲ್ಲಿಗಳನ್ನು ಹಾಕಿಸಿ ಕಾಮಗಾರಿ ಮಾಡುವುದಕ್ಕೆ ಒಂದೂಕಾಲು ಲಕ್ಷ ರೂಪಾಯಿ ಸಾಲದೆಂದೂ, 1,65,000 ರೂಪಾಯಿ ಬೇಕಾಗುವುದೆಂದೂ ತಯಾರಾಗಿದ್ದ ಅಂದಾಜು ಪಟ್ಟಿಯನ್ನು ಪ್ಯಾಸ್‌ಮಾಡಿದರು.—ಕರ್ಜನ್ ಪಾರ್ಕಿನಲ್ಲಿ ಮೆಸಾನಿಕ್ ಲಾಡ್ಜಿನ ಕಟ್ಟಡದ ದಕ್ಷಿಣಕ್ಕೆ ಪೂರ್ವ ಪಶ್ಚಿಮವಾಗಿ 50 ಅಡಿ ವಿಸ್ತಾರವಾದ ರಸ್ತೆಯನ್ನು ಕೂಡಲೇ ಮಾಡಿಸಬೇಕೆಂದೂ, ಇದಕ್ಕೆ ಸುಮಾರು 3,000 ರೂಪಾಯಿ ಖರ್ಚಾಗುವುದೆಂದೂ ಅಂದಾಜು ಪಟ್ಟಿ ತಯಾರಾಗಿದ್ದದ್ದನ್ನು ಮೆಂಬರುಗಳು ಒಪ್ಪಿಕೊಂಡು ಪ್ಯಾಸ್‌ಮಾಡಿರುತ್ತಾರೆ.

ಕಳೆದ ವಾರ ಬಂಗಾಳಾ ಅಧಿಪತ್ಯಕ್ಕೆ ಸೇರಿದ ಟಿಪ್ಪಾರಾ ಡಿಸ್ಟ್ರಿಕ್ಟಿನಲ್ಲಿ ಒಂದು ಡಕಾಯಿತಿ ನಡೆದಂತೆ ಸಂತೀವರ್ತಮಾನ ಬಂದಿದೆ. ಸುಮಾರು 24 ಜನರು ನೆಮಕಪಾಡಗಳನ್ನು ಹಾಕಿಕೊಂಡು ಆಯುಧಪಾಣಿಗಳಾಗಿ ಒಬ್ಬ ಬಂಗಾಳ ವರ್ತಕನ ಮನೆಗೆ ನುಗ್ಗಿ ಕೊಳ್ಳೆಹೊಡೆದರು. ಗ್ರಾಮಸ್ಥರು ಗುಂಪು ಕೂಡಿಬಂದಾಗ್ಯೂ ಕಳ್ಳರು ಗಾಬರಿಪಡಿಸಿದ್ದರಿಂದ ಹೆದರಿ ಏನೂ ಮಾಡಲಾರದೆ ಸುಮ್ಮನಿದ್ದರು. ಕಳ್ಳರು ಕಬ್ಬಿಣದ ಪೆಟ್ಟಿಗೆಯನ್ನು ಒಡೆದು ನಗದು 5,000 ರೂಪಾಯಿಯನ್ನೂ, ಚಿನ್ನಬಂಗಾರದ ಒಡವೆಗಳನ್ನೂ, ಕರೆನ್ಸಿ ನೋಟುಗಳನ್ನೂ ಅಪಹರಿಸಿಕೊಂಡು ಹೋಗಿದಾರೆ.

ಎಲ್ಲರಿಗೂ ಬೇಕಾದ ಸರಕುಗಳು.

ಸುಗಂಧ ನಶ್ಯದಪುಡಿ 9 ತೊಲೆ ಟಿನ್ 1 ಕ್ಕೆ 12 ಆ. ಸಾದಾ ನಶ್ಯದಪುಡಿ 9 ತೊ. ಟಿನ್ 1 ಕ್ಕೆ 6 ಆ. ಕೇಶವರ್ಧಿನಿ ತೈಲ ಬಾಟ್ಲು 1 ಕ್ಕೆ 12 ಆ. ಬಂಗಾರದ ಗಿಲ್ಟಿನ ಬಳೇಡು ಅಥವಾ ಕೆಂಪು ಕಲ್ಲಿನ ಬೆಂಡೋಲೆ ಜೊತೆ 1 ಕ್ಕೆ 3 ರೂ. ತಾರೀಖು ತಿಂಗಳು ವರುಷ ಇವುಗಳಿಂದ ಕೂಡಿರುವ ಡೇಟಿಂಗು ರಬ್ಬರ್ ಸ್ಟ್ಯಾಂಪು 1 ಕ್ಕೆ 1-4-0 ಸ್ವಂತ ಹೆಸರಿಗೆ ರಬ್ಬರು ಸ್ಟ್ಯಾಂಪು ಕನ್ನಡ ಅಥವಾ ಇಂಗ್ಲೀಷು ಭಾಷೆಯಲ್ಲಿ ತಯಾರಿಸಲ್ಪಟ್ಟು ಬ್ರಷ್ ಪ್ಯಾಡ್ ಇಂಕಿ ಇವುಗಳು ಇನಾಮಿನ ಸಮೇತವಾಗಿ ಕ್ರಯ 3 ರೂಪಾಯಿ. [107-4]

ವಿಳಾಸ—ಎ. ಟಿ. ಎನ್. ಜಯಲಕ್ಷ್ಮೀ ಕಂಪನಿ, ನಂ. 41, ನಾಟುಪಿಳ್ಳಯಾರು ಕೋವಿಲ್ ಸ್ಟ್ರೀಟ್ ಸಾಹುಕಾರುಪೇಟೆ ಪೋಸ್ಟ್, ಮದರಾಸ್.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಧ್ಯವಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ಸಾಧ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನವೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಶೀಲ್: (1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು. [180—35]



ಜೂನ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0

ಇದೇ ಜೂನ್ ಹುಟ್ಟಿದ ಮಹೋತ್ಸವ ಈ ಭಾರೀ ಕ್ರಯದ ಕೈ ಗಡಿಯಾರ ಜೂನ್ ಒಳಗೆ ತರಿಸಿಕೊಳ್ಳುವವರಿಗೆ 1-14-0 ಆಣೆಗೆ ಕೊಡಲ್ಪಡುತ್ತೆ. [11

ವಿಳಾಸ—ಎ. ಕೆ. ಕಂಬುಸಾ ಅಂಡ್ ಕಂಪನಿ, 24, ವಿನಾಯ ಮೇಸ್ತ್ರಿ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು; ಆದರೆ ಈ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎ ಬಾಟ್ಲು ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ

ಬಿಕರಿಯಾಗುವ ಸ್ಥಳಗಳು

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ದಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ

[172—47] ಬೊಂಬಾಯಿ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್,

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗದು. ಈ ಸೆಶಿನ್‌ತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿ

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿನ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅವಕಾಶವುಂಟಾಗುವುದಿಲ್ಲವು.
4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವು
7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೆಶಿನ್‌ತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯದಿ

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರ
95 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಜಿ. ಸಿ. ಷಾ ಕಂಪನಿ, 1

[25—22] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟ

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ವಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಈ ಜನವರಿ ೧೫ನೇ ತಾರೀಖು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[64-13]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರಶ್ಶೂಲ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಮಾತ್ರಯಿಂದ ನಿಲ್ಲುವವು. ಕಳಪೆ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರೀಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯುಳ್ಳ ಪ್ಯಾಕೆಟ. ದೊರೆಯುತ್ತವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಬುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚಾಲೂ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಪ್ರೊಪ್ರೈಟರ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆ ನನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಪಥ್ಯ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಸೆಳೆತ (ವಾತ), ಮೈ ನಡುಕ, ಶೀತದ ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಬುದ್ಧಿ ಮಾಂಸ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಬುತುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-43]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಸರ ಎಂ. ಇ. ಸ್ಕೂಲ್, ಮಾಂಬು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು —"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾತಿಕ್, ಹೋಮಿಯೋಪ್ಯಾತಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಜನರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಸಿಫಾರಸು ಮಾಡುವೆನು." (2) ಮ|| ಎಸ್ ಅನಂತಪದ್ಮಾಚಾರ್, ತಿರುವನಂತಪುರ, ಕಂಚಿ ಡಿಸ್ಟ್ರಿಕ್ಟ್ ಇವರು ಬರೆಯುವುದು - "ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸೆ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನನ್ನ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲೆಕ್ಕವಿಲ್ಲದಷ್ಟು ಮಂದಿ ಗುಣ ಹೊಂದಿರುತ್ತಾರೆ.

ಕುಂಟ[illegible] ಬಿಯಿತು. ವಾಯುವಿನಿಂದ ಹಾಸಿಗೆಯಲ್ಲಿ ಬಿದ್ದು, ಮಂಸಿಗೆ ಗುರಿಯಾದವರನೇಕರು ಸ್ವಸ್ಥರಾಗಿ ಎದ್ದಿದ್ದಾರೆ. ವೈದ್ಯರಿಂದಲೂ ಆಸ್ಪತ್ರೆಗಳಿಂದಲೂ ಇನ್ನು ವಾಸಿಯಾಗುವದಿಲ್ಲವೆಂದು ಹೇಳಲ್ಪಟ್ಟವರು ಲಿಟಲ್ಸ್ ಓರಿಯೆಂಟಲ್ ಬಾಂ ಎಂಬುದನ್ನು ಉಪಯೋಗಿಸಿ, ತಕ್ಷಣ ಕ್ಷೇಮ ಹೊಂದಿರುತ್ತಾರೆ. ಬರ್ಮಿಂಹ್ಯಾಂ ನಗರದ ನ್ಯೂಹಾಲ್ ಸ್ಟ್ರೀಟಿನಲ್ಲಿರುವ ಮಿ। ಸೂಮರ್ ಎಂಬವರು ಬರೆಯುವುದು:— "ಸುಮಾರು 3 ವರುಷಗಳ ಹಿಂದೆ ನನ್ನ ಕೆಲಸಕ್ಕೆ ಹೋಗಲಾರದಷ್ಟು ಕಠಿಣವಾಯು ನನ್ನ ಎಡ ಮೊಣಕಾಲಿನಲ್ಲಿ ಒದಗಿತು. ವೈದ್ಯರಿಗೂ ಹೇಲೆ ಮಿಶ್ರಣಗಳಿಗೂ ಬಹಳ ಖರ್ಚಾಯಿತು. ಆದರೂ ಏನೂ ಪ್ರಯೋಜನವಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸೆಂದು ಒಬ್ಬ ಸ್ನೇಹಿತರು ಹೇಳಿದ್ದನ್ನು ಕೇಳಿ, 1 ಸೀಸೆಯ ತೈಲವನ್ನು ಕೊಂಡುಕೊಂಡೆನು. ಅದನ್ನು ಉಪಯೋಗಿಸಿದ 3 ದಿನಗಳಲ್ಲಿ ನೋವು ಪೂರ್ಣ ಬಿಟ್ಟಿತು. ಇದರಿಂದ ನನ್ನಲ್ಲಿ ಆಶ್ಚರ್ಯವೂ ಕೃತಜ್ಞತೆಯೂ ಉಂಟಾದವು. [illegible] ಅದು ತಿರಿಗಿ ಕಾಣಿಸಲಿಲ್ಲ."

ಸೀಸೆ 1ಕ್ಕೆ 1 ರೂ. ಮೇಲಿನ ಔಷಧಗಳು ಪೇಟೆಗಳಲ್ಲಿಯೂ ಸಿಗುತ್ತೆ.

[81-9]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—6—1915 ರಿಂದ 11—6—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	0	0	0	0
ಮೈಸೂರು ,,	4	3	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	7	2	0	0
ಶಿವಮೊಗ್ಗಾ ,,	13	11	0	0
ಒಟ್ಟು.	24	16	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಜ್ಯೇಷ್ಠ ಬಹುಳ ಷಷ್ಠಿ ಶುಕ್ರವಾರದಿಂದ ಜ್ಯೇಷ್ಠ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜುಲೈ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಿಥುನ ಮಾಸ ತೇದಿ
2	ಶುಕ್ರ *	ಷಷ್ಠಿ	48-51	ಶತಭಿಷ	8-4	18
3	ಶನಿ †	ಸಪ್ತಮಿ	48-57	ಪೂಭಾದ್ರ	9-7	19
4	ಭಾನು	ಅಷ್ಟಮಿ	50-23	ಉಭಾದ್ರ	11-29	20
5	ಸೋಮ ‡	ನವಮಿ	53-1	ರೇವತಿ	15-4	21
6	ಮಂಗಳ §	ದಶಮಿ	56-51	ಅಶ್ವಿನಿ	19-48	22
7	ಬುಧ -	ಏಕಾದಶಿ	60-0	ಭರಣಿ	25-28	23
8	ಗುರು ;;	ಏಕಾದಶಿ	1-41	ಕೃತ್ತಿಕೆ	31-46	24

* ಮಳೆ ನಕ್ಷತ್ರ—ಆರಿದ್ರಾ, 4 ನೇ ಪಾದ. † ಭಾನುಸಪ್ತಮಿ ವರ್ಧಂತಿ. ‡ ಮಳೆ ನಕ್ಷತ್ರ—ಪುನರ್ವಸು 1 ನೇ ಪಾದ. § ಅಮೃತಸಿದ್ಧಿ ಯೋಗ. ;; ಸರ್ವತ್ರ ಸಾರ್ವೈಕಾದಶಿ.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು ಒಂದು ಸಲ ಪರೀಕ್ಷಿಸಿ ನೋಡಿರಿ. ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಆಲಸ್ಯ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೇಸೊಪ್ಪು ಅಗಿಯುವವರು, ನಿಶಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಲ 1 ಕ್ಕೆ	ಕ್ರಯ	0-1-6
65 ,, ,, ,,	,,	0-3-0
195 ,, ಪೊಟ್ಲ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	,,	0-8-0
415 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-9]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎನ್. ಸುಬ್ರಹ್ಮಣ್ಯಂ ಕಂಪೆನಿಯಲ್ಲಿ ವಿಕರಿಗೆ ಇಡಲಾಗಿದೆ.

Printed and Published by the Rev. H. Gulliford, Proprietor and Manager, Wesleyan Mission Press, Mysore. 1/7/1915.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

...ಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ನೇ ಇಸವಿ ಜೂಲೈ ತಾರೀಖು ೬ನೇ ಗುರುವಾರ. ಸಂಚಿಕೆ ೬

...ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಕೀಲಿವೆಯುಂದ ಶೋಭಿತವಾದ ...ಣಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶ ...ಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ...ವೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾ...

...ರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಕೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಕೂದಲನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ...ಸ್ಕೃತ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ ನೇಗಿನಹಾಳಕರ ಬಂಧುಗಳು. ಬಸವನ..., ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲ ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನ...ಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ...ನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; ...ಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ...ದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ಸಫಾಯೇ ದೊರಕುತ್ತದೆಂದು, ...ವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ...ವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ...ವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ...ಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ... ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳ...ಷ್ಟಿ ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ...ಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

...ಟೊ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯ...ವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ...ವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ...ವೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ...ವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ...ವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ...ವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗ...ಳ್ಳಿ ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಒಂದೇ ...ದು ಸೀಸೆಯನ್ನು ತರಿಸಿಕೊಳ್ಳಿರಿ. [18-24]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿಸಾದಿಯಂ) ಸೀಸೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ...ಕ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಬಿ ಉಲ್ಲಾ ಮಾರ್ಟ್, ಮಂಗಳೂರು.

ಎಮ್. ಎಸ್. ಮಲಕಣ್ಣಾ ಅಂಡ್ ಬ್ರದರ್ಸ್,

ರೇಶ್ಮೆ ಜವುಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ತಮವಾದ ರೇಶ್ಮೆ ವಸ್ತ್ರಗಳು, ಮೊಗುಟಗಳು, ಅರಳಿಪೇಟೆ ಶೀರೆಗಳು, ಲಿಂಗ ಧರಿಸುವ ವಸ್ತ್ರಗಳು, ಸಾಧಾರಣ ಶೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [106-6]

ರೇಶ್ಮೆ ವಸ್ತ್ರಗಳು	ದರಗಳು	ಮೊಗುಟ, ರೇಶ್ಮೆ ಶೀರೆ, ಲಿಂಗವಸ್ತ್ರ.
1 ನೇ ನಂಬರು 0-7-6		1 ನೇ ನಂಬರು 0-8-0
2 ,, ,, 0-7-0	ತೊಲೆ 1 ಕ್ಕೆ	2 ,, ,, 0-7-6
0-6-9		

ಕಸ್ತೂರಿ ಗುಳಿಗೆಗಳು :—ಇದರಿಂದ ಫಿಟ್ಸ್, ಸಟಟೀಸ, ಮೂರ್ಛೆ ಬರುವ ರೋಗ, ಪಕ್ಷವಾಯುಜ್ವರ ವ ಇತರ ವಾಯು ಸಂಬಂಧವಾಗಿ ಚಿಕ್ಕವರಿಗೂ ದೊಡ್ಡವರಿಗೂ ಇರುವ ರೋಗಗಳು ಎಷ್ಟು ದೀರ್ಘಕಾಲವಾಗಿದ್ದರೂ ನಿಶ್ಚಯವಾಗಿಯೂ ಗುಣವಾಗುತ್ತವೆ. ಬಾಟ್ಲಿಯ ಕ್ರಯ ರೂ. 2.

ಸ್ತ್ರೀಯರ ರಕ್ತಸ್ರಾವ ವ ಇತರ ಉದರ ರೋಗಗಳಿಗೆ ಅತ್ಯುತ್ತಮವಾದ ಔಷಧ. ಬಾಟ್ಲಿಯ ಕ್ರಯ ರೂ. 2.

ರಕ್ತಶುದ್ಧಿ :— ಈ ಔಷಧದ ಸೇವನೆಯಿಂದ ದೇಹದೊಳಗಣ ಅಶುದ್ಧವಾದ ರಕ್ತವು ಶುದ್ಧವಾಗಿ ಕಾಂತಿಯನ್ನೂ ಶಕ್ತಿಯನ್ನೂ ಉಂಟುಮಾಡುತ್ತದೆ. ಬಾಟ್ಲಿಯ ಕ್ರಯ ರೂ. 1-8-0.

ಅತ್ಯಂತ ಪೌಷ್ಟಿಕ ಧಾತುಪುಷ್ಟಿಯ ಔಷಧ. ಡಬ್ಬಿಯ ಕ್ರಯ ರೂ. 2.

ನಮ್ಮ ವಿಳಾಸ—ಸಖಾರಾಮ ಅಪ್ಪಾಜಿ ಕೋಲ್ಹಟಕರ, ವೈದ್ಯ,
[92-8] ದವಾಖಾನಾ, ಠಾಕುರದ್ವಾರ ರೋಡ, ಮುಂಬಯಿ, ನಂ. 2.

ಹೊಸ ಭೂವಿವರಣೆ.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಯು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗ 1 ನೆಯ ಭಾಗವು ಸಿದ್ಧವಾಗಿದೆ. ಇದರಲ್ಲಿ 1. ಪ್ರಾಕೃತಿಕ ಭೂಗೋಳಶಾಸ್ತ್ರ, 2. ಭೂಪಟ ಬರೆಯುವುದು, 3. ಮೈಸೂರು ಸಂಸ್ಥಾನ, 4. ಇಂಡಿಯಾ, ಇವುಗಳೆಲ್ಲಾ ಸೇರಿವೆ.

ಇದು ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ಪದ್ಧತಿಗಳೊಡನೆ ರಚಿಸಲ್ಪಟ್ಟಿದೆ. 400 ಪುಟ. ಕ್ರಯ 10 ಆಣೆ. ಡಿಸ್ಕೌಂಟು 10 ಕ್ಕೆ 1.

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ|| ನೋಟ್ಸು.

ಸಿದ್ಧವಾಗಿದೆ. ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[13-21] ಸುಬೋಧ ಗ್ರಂಥಾಲಯ, ಮೈಸೂರು.

ನಕ್ಲಿಗಳಿಂದ ಮೋಸಹೋದಿರಿ, ಜೋಕೆ!
ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ
ಮತ್ತು ಪ್ರಾಚೀನವಾದ ಪರಿಮಳ ದ್ರಾವಕವು

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಲಿಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಶುದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ¼ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0.

ಕೂದಲೆಣ್ಣೆಗೆ ಹಾಕುವ ಬೀ ಕೆರೋಸೀನ್ ಎಣ್ಣೆ ಕೊಟ್ಟಾರು,
ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಸಾ ಭಗವಾನ್‌ದಾಸ್ ಚುನಿಲಾಲ್ ಕಂಪನಿ,
[296-27] 177, ಚೈನಾಬಜಾರ್ ರೋಡ್, ಮದರಾಸ್.

ಕ್ರಯಕ್ಕೆ ಅಥವಾ ಬಾಡಿಗೆಗೆ.

ಎದಿಗಾ ಬಡಾವಣೆ ಜನಾನಾ ಬಂಗ್ಲೆ ಹತ್ತರ 1 ನೇ ನಂಬರು 4 ಸೈಟುಗಳುಳ್ಳ ದೊಡ್ಡ ಮನೆ ಬಾಡಿಗೆಗಾದರೂ ಕ್ರಯಕ್ಕಾದರೂ ದೊರೆಯುತ್ತೆ. ಈಗ 10 ರೂಪಾಯಿ ಬಾಡಿಗೆ ಬರುತ್ತಿದೆ. ಇದರ ವಿಷಯವಾಗಿ ಚಟ್ಟೀ ರೋಡ್ 20 ನೇ ನಂಬರ್ ಮನೆಯಲ್ಲಿ ವಿಚಾರಿಸಿ. [122-2]

A Modern General English:—issued in **Monthly Parts**. **Subscription** till next March Rs. 1¼ only. **Our Notes** and **Spelling Book** supplied as parts. Apply to

M. N. SITA RAMA RAO.
[88-8] **Krishnaraja Mohalla, Mysore.**

ಹೊಸ ಕಾದಂಬರಿಗಳು.

ಉತ್ತಮವಾದ ನೀತಿಯನ್ನೊಳಗೊಂಡು ಚಮತ್ಕಾರವಾದ ಕಥಾಸಂದರ್ಭದಿಂದ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿವೆ! ಬೆಲೆ ಸುಲಭ. ನಿರ್ಭಾಗ್ಯ ಚಾಣಕ್ಯ 6 ಆಣೆ.

ಆನಂದಸುಂದರಿ ...	0-8-0	ಸರಳಹೊಲಿ	0-8-0
ತಾರಾಸುಂದರಿ ...	0-8-0	ಕೌಮುದಿನಿ	3-6-0
ರಾಧಾಮಾಧವ ...	0-8-0	ಸಂತಾಪಕ	0-4-0

[275-30] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದೂಚರಿತ್ರಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-26]

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-18]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಮಕ್ಕಳ ಆರೋಗ್ಯ.
ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಟ್ಟಿಹರಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಹುರಿ, ಉಬ್ಬಸ, ಕ್ಷಯ, ಗರ್ಭವಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ, ಅಂಚೆ ವೆಚ್ಚ ಬೇರೆ. [235-34]

ಮಹಾ ಸೌಭಾಗ್ಯ ಶುಂಠಿ :—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಶ್ವೇತ್ಯ, ಕಾಸಶ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ. ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 6,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂತಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಪ್ರಾಸ್ಪೆಕ್ಟಸ್ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ. ಎಸ್. ರೇವಣ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[221-30] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಸೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಬೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 35 ಮೊದಲುಗೊಂಡು ರೂ. 100 ವರೆಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಬೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರೆಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರೆಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರೆಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ,

[63-12] ಧಾರಾನಗರ್ ಬೀದಿ, ಕಾಶಿ.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ಸರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚು 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[26-22] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

S. U. N. & Co.,

BENARES CITY, U. P.

ಸೊಗಸಾದ ಸರಕುಗಳು! ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯುದು ಸಿಗುವ ಉತ್ತಮವಾದ ಬನಾರಸ್ ರೇಷ್ಮೆ ಸೀರೆಗಳು, ಕಣ, ಪೇಟಾ, ಜಾಕೆಟ್, ದುಪ್ಪಟ್ಟ, ಮಗುಟ, ಕೊನಾರ್ಡ್ ಸೀರೆ, ಕಪೇಟಿ ಸೀರೆ, ಜಗನ್ನಾಥಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಉಚಿತವಾಗಿ ಕಳುಹಿಸಲಾಗುತ್ತದೆ. [1

ವಿಳಾಸ.—ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ನಂಬಿರಿ-ಖಂಡಿತ-ನಂಬಿರಿ



ಜ್ವರದ ಮಾತ್ರೆ. ಬಹು ಶ್ರೇಷ್ಠ ಮೂಲಿಕೆಗಳಿಂದ ತಯಾರಿಸಿದೆ. ಸರ್ವ ಜ್ವರಗಳಿಗೂ, ಖಾತರಿ ಗುಣಕಾರಿ. ಶ್ರೇಷ್ಠ ಹೆಸರು ಬಂದಿದೆ.

24 ಮಾತ್ರೆ ಸೀಸೆಗೆ 8 ಆ, 6 ಕ್ಕೆ 2½ ರೂ.

ಮುಖರಂಜಕ ಮಾತ್ರೆ: ಜನೋಪಕಾರಕ್ಕೊಂದು ರತ್ನ. ಬಾಯಿ ದುರ್ಗಂಧ ತಪ್ಪಿಸಿ, ಸುವಾಸನೆಯಾಗಿ, ಜೀರ್ಣಶಕ್ತಿ ಹೆಚ್ಚಿಸಿ, ಶರೀರಾಭಿವೃದ್ಧಿ ಮಾಡಿ; ಗಂಟಲು ನೋವು, ಕೆಮ್ಮು, ಗೊಗ್ಗರಧ್ವನಿ, ತಲೆಶೂಲೆ, ಹೊಟ್ಟೆ ಶೂಲೆ, ವಾಕರಿಕೆ, ಮಲಬದ್ಧ, ಅತಿಸಾರಾದಿಗಳನ್ನು ನಿವಾರಿಸಿ ಮನೋಲ್ಲಾಸ ಮಾಡುತ್ತೆ. ಉಪಾಧ್ಯಾಯರು, ಲಾಯರು, ವಿದ್ಯಾರ್ಥಿಗಳು, ಉಪನ್ಯಾಸಕರು, ಸಂಗೀತಗಾರರು, ನಾಟಕದವರು, ಪ್ರಯಾಣಿಕರು ಮುಂತಾದವರಿಗೆ ಅತ್ಯುಪಕಾರಿ. 150 ಮಾತ್ರೆ ಸೀಸೆಗೆ 4 ಆ., 5 ಕ್ಕೆ 1 ರೂ. ಬಾಲಸಂಜೀವಿನಿ 4 ಆ., ಸರಳ ಭೇದಿ ಪವಡ್ಸ 8 ಆ, ಕೆಮ್ಮಿನ ಮಾತ್ರೆ 8 ಆ.

[126-2] ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-32] ವಿಳಾಸ :...ಸದ್ವೈದ್ಯಶಾಲಾ, ನಂಜನಗೂಡು.

ಇನಾಂ ಸಾಮಾನುಗಳು 50. ಇನಾಂ ಸಾಮಾನುಗಳು 50

ಅನೇಕ ಯೋಗ್ಯತೆ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಯರಿಗೆ ತಲೆ ಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳ್ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯದೆ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಇದರ ಪರಿಮಳ ವಾಸನೆ ಹೇಳುವದಕ್ಕೆ

ಒರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಪರಿಹಾರಮಾಡುವದು. ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನು, ಮನಸ್ಸಿಗೆ ಸಂತೋಷವನ್ನು, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ... ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿ ... ಇನಾಂ ಸಾಮಾನುಗಳ ತಪಶೀಲು:—ಸ್ತ್ರೀಯರು ಧರಿಸಿಕೊಳ್ಳುವ ... 6, ವೈಭರಣ 1, ಅದ್ದಾ 1, ತಾಂಬೂಲಪಾತ್ರೆ 30, ದಂತದ ಬಾಚಣಿಗೆ 1, ... ಪೆಟ್ಟಿಗೆ 1, ... 6 ... ಅತ್ತರುಬಿಲ್ಲೆ 1 ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ... ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನುಗಳ ಜೊತೆ ... 1 ನ್ನು ಇನಾಮಾಗಿ ಕಳುಹಿಸುತ್ತೇವೆ

ನಮ್ಮ ವಿಳಾಸ:—ಲಕ್ಷ್ಮೀ ಅಂಡು ಕಂಪನಿ,

[123-2] ನಂ. ೩, ... ಬೀದಿ, ಮದರಾಸು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್) **ಶಕುಂತಲಾ** ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆದು ಒರಟಾಗಿರುವ ಕೂದಲು ಮೃದುವಾಗುವದು. ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರುವ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಹೊಡಡನ್ನು ಪರಿಹಾರ ಮಾಡುವದು ... ವನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ... ರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ... ಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿ ... ಸಂಪಿಗೆ, ಇರುವಂತಿಗೆ, ಸೇವಂತಿಗೆ, ಕ್ಯಾದಿಗೆ, ಗುಲಾಬಿ, ಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾ ... ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಇದರ ವಾಸನೆ ತೋರುವ ... ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮುಕ್ಕರು ಎಲ್ಲರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜವಳ್ಳರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪಾತ್ರೆ 22, ಕೊಂಡೆ ಗಿಣಿಗಳು 6, ಫಾಷನೇಬಲ್ ಬ್ರೂಚ್ 1, ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[87-5] ನಂ. 44, ನಂಬುಳಯ್ಯರ ಬೀದಿ, ಮದರಾಸ್.

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಆಹಾರವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದು ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಕುರುಳು ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [10

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.

ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.

ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.

ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು

ಸಾಲಾಮಿಸ್ರೀ ಮುರಬ್ಬಾವು—ಕಾಂಚಿಪ್ರಿ, ಬೆಳ್ಳಿ ಮತ್ತು ಧಂಗಾರ ಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವ ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಮುಪ್ಪಿನ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ... ... ಕೊಡದೆ ... ಸರಕಾರದ ಮೂಲಕ ನಮ್ಮಿಂದ ಪಡೆಯಬಹುದು. 15 ... ಮುರಬ್ಬಾವಿನ ಡಬ್ಬಿ 1 ಕ್ಕೆ ರೂ 2-0-0. ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅವ ... ಪತ್ರಿಕೆ ... ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5. ಅವೆನ್ಯೂ ರೋಡ್, ಬೆಂಗಳೂರು ಸಿ

ಶ್ರೀಮಧ್ವ ಪ್ರಬಂಧಮಾಲಾ.

ವಾರ್ಷಿಕ ಚಂದಾ ರೂಪಾಯಿ 3 ಮಾತ್ರ.

ಎಂಬ ನಾಮದಿಂದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಪತ್ರಿಕ್ಕ ಮಾಲಾ ಹರಿಕಥಾಮೃತಸಾರ ಉಪನಿಷತ್ತುಗಳಿಗೆ ಕನ್ನಡ ವ್ಯಾಖ್ಯಾನವನ್ನು ನಬೇಕೆಂಬ ಉದ್ದೇಶ್ಯವುಳ್ಳವರಾಗಿ ಪ್ರಥಮತಃ ಮಹಾಭಾರತ ತಾತ್ಪರ್ಯ ರ್ಣಯವನ್ನು ಈ 1916ನೆ ಸಂ॥ ಮೇ ತಿಂಗಳಿನಿಂದ ಪ್ರಾರಂಭಮಾಡಿ ಮಾಸ ಕಾ ರೂಪವಾಗಿ ಚಂದಾದಾರರಿಗೆ ಕಳುಹಿಸಿ ಕೊಡುತ್ತೇವೆ ಸ್ವಲ್ಪ ಪ್ರತಿಗ ಛಾಪಿಸುತ್ತೇವಾದಕಾರಣ ಗ್ರಂಥಾಪೇಕ್ಷಿಗಳು ಈ ಪತ್ರಿಕಾಕ್ಕೆ ಚಂದಾದಾರ ಲು ತ್ವರೆಪಡತಕ್ಕದ್ದು. ಇದು ಮಹತ್ಕಾರ್ಯವಾಗಿರುವದರಿಂದ ಪ್ರತಿಮ ವಲಂಬಿಯೂ ಶಕ್ತ್ಯಂದ ಸಾಧ್ಯವಾದವರಿಗೆ ಈ ಪತ್ರಿಕಾಕ್ಕೆ ಪ್ರೋತ್ಸಾ ಹಿಟ್ಟು ಸಾಂಗವಾಗಿಯು ಸಂಪೂರ್ಣವಾಗಿಯು ಮುಗಿಸಿ ಪತ್ರಸ್ಯಮಹತ್ ಭಾಗಿಗಳಾಗಬೇಕೆಂತ ಪ್ರಾರ್ಥಿಸುತ್ತೇವೆ.—ಅಡ್ವಾನ್ಸ್‌ಮುಂಗಡ ರೂ. 1.

ವಿಳಾಸ:—ಮಧ್ವ ಪ್ರಬಂಧಮಾಲಾ ಆಫೀಸ್,

[127-1] ಆಲಂಗಾತ್ತಾಪಿಳ್ಳೆ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ನಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ!" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನನಗೆ ಮೈ

(೧೨ ಆಣೆ ಬುಡ್ಡಿ ಪರಿಮಾಣ)

ವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಡೆಯಲ್ಪಟ್ಟು ವಿಷವಾಗಿ ಗುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂ ನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಪಲ್ಲನೆಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ ಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಬೇ ಬಟ್ಟಬಿಟ್ಟನೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತ ಯಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-45]

೩ ೮ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಳು ಎಂದರೆ ೮ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೩ ರಷ್ಟು ಹೆಚ್ಚು ಮಾತ್ರೆ ವೆ. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ , ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಹವಳದ ಬಳ್ಳಿ ಶೀರೆ.

ಬಹಳ ಸೊಗಸಾದದ್ದು! 16 ಮೊಳ!! ಬಾಳಿಕೆಬರುವದು!!!

ಈ ಶೀರೆಗಳು ಬಳೀ ಮಲ್ಲಿನಲ್ಲಿ ಕಪ್ಪು, ಕೆಂಪು ಕೂಡಿದ ಚಾಕೊಲೇಟ್ ರಂಗಿನಂತೆ ಹವಳದ ಬಳ್ಳಿಗಳು ಹಾಕಲ್ಪಟ್ಟು, ಸುತ್ತಲೂ ಸಣ್ಣ ಅಂಚು ಕಟ್ಟಲ್ಪಟ್ಟಿದೆ. ಇಂಥಾ ಹೊಸ ನಮೂನೆಯು ಇದುವರಿಗೂ ತಯಾರಾಗಲಿಲ್ಲ. ಈ ಕಾಲಕ್ಕೆ ಬಹಳ ಉಪಯೋಗವಾದದ್ದು. ಇವನ್ನು ಪ್ರತಿ ಒಬ್ಬ ಸ್ತ್ರೀಯೂ ಕರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇನೆ.

ಕ್ರಯ ರೂಪಾಯಿ 2-4-0

ವಿ. ಪಿ. ಛಾರ್ಜು 0-5-0

ನಮ್ಮ ವಿಳಾಸ.—ಸಿ. ಕೇಸವ ಸಭಾಪತಿ,

[116-3] ಜಾರ್ಜ್ ಟೌನ್, ಮದರಾಸ್.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನೆಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಮಾನು ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ"—ಕೆ ರಾಮಸ್ವಾಮಿ, ಪಲ್ಲಾಸ-ಕಾ-ಪಟ್ಟಣ, 20-2-16.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-2] ಪಿ.ಓ. ಬಾಕ್ಸ್ 330, ಬೊಂಬಾಯಿ.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 3 ಬಹುಮಾನಗಳ ಸಮೇತ ರೂ. 2-12-0 ಮಾತ್ರ.

ಐದು ವರುಷಗಳ ಗ್ಯಾರೆಂಟಿ.



ಘನವಂತರೇ, ಇದು ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದ ಸುಂದರವಾದ ವಾಚ್, ಬಲಿಷ್ಠವುಳ್ಳ ಚಕ್ರಗಳುಳ್ಳದ್ದು. ಮತ್ತು ಧೂಳು ಸೇರದ್ದು. ಒಳಗೆ ಗ್ಲಾಸ್ ಡೋಮ್ ಅಂದರೆ ಗ್ಲಾಸ್ ಮುಚ್ಚಳವುಳ್ಳದ್ದು, ರಮಣೀಯವಾದ ಅಂಕಿತವುಳ್ಳದ್ದು ಗಂಭೀರವಾದ ಗಂಟೆ ಮತ್ತು ಮಿನಿಟ್‌ಗಳುಳ್ಳದ್ದು. ನಮ್ಮ ಕಮಿಲ್ಲದಲ್ಲಿ ಹಣಾ ವಾಪಸು ಮಾಡಲ್ಪಡುತ್ತೆ.

(1) ಸುಂದರವಾದ ನಾಣ್ಯವುಳ್ಳ ವಾಚ್ ಪೆಟ್ಟಿಗೆ, (2) ಇಂಪಾದ ವಾಚ್ ಸರಪಣಿ, (3) ನಾಣ್ಯವುಳ್ಳ ಹೊಸನಾದ ಬನಿಯನ್—ಈ ಮೂರರ ಸಮೇತ ವಾಚ್ ಕ್ರಯ ರೂ. 2-12-0 ಮಾತ್ರ. [117-3]

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂ. 7, ಕೋಪ್‌ವೆಂಕಟಾಚಲಯ್ಯರ್ ಬೀದಿ, ಮದರಾಸ್.

ದಬಾರ್ ಸೋಪ್.

[ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್] ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು

ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ವಿಳಾಸ:—ವಿ. ಎ. ಎಸ್. ಪಾಣಿ,

[123-2] ನಂ. 3, ಇರುಳಪ್ಪನಬೀದಿ, ಮದರಾಸು.

ಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುವಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವುದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ವಾಸನೆಯೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾರೆವು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

36]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ಏಜೆಂಟರುಗಳು ಬೇಕು.

ಇದರಿಂದ ಕರ್ನಾಟಕ ದೇಶಾಭಿಮಾನಿಗಳಿಗೆಲ್ಲರಿಗೂ ತಿಳಿಯಪಡಿಸುವದೇನೆಂದರೆ—ಪ್ರತಿ 1 ಡಿಸ್ಟ್ರಿಕ್ಟು ತಾಲ್ಲೂಕು ಹೋಬಳಿಗಳಲ್ಲೂ ನಮ್ಮ ಕಂಪನಿಗೆ ಏಜಂಟರುಗಳು ಬೇಕಾಗಿರುತ್ತೆ. ಏಜಂಟರುಗಳಿಗೆ ತಿಂಗಳಿಗೆ 15-0-0 ಮತ್ತು ಕವಿಷನ್ 100 ರೂಪಾಯಿಗೆ ಕಮ್ಮಿ ಇಲ್ಲದೆ ಕೊಡಲ್ಪಡುತ್ತೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಜಾಗ್ರತೆ ದರಖಾಸ್ತು ಕಳುಹಿಸಿ. [118-1]

ವಿಳಾಸ—ಮ್ಯಾನೇಜರ್, ಭಾರತಿ ಏಜನ್ಸಿ, ಪಾರ್ಕ್ ಟವನ್, ಮದರಾಸು

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಜೂಲೈ ತಾ. ೮ ನೇ ಗುರುವಾರ.

1915-16 ನೇ ಸಾಲಿನ ಮೈಸೂರು ಬಡ್ಜೆಟ್ಟು.

ಕಳೆದ 28 ನೇ ತಾ. ರಾಜಧಾನಿಯಲ್ಲಿ ನಡೆದ ನ್ಯಾಯವಿಧಾಯಕ ಕೌನ್ಸಿಲ್ ಸಭೆಯಲ್ಲಿ ಖಜಾನಾ ಭಕ್ಷಿಯವರಾದ ಮ|| ಜೆ. ಎಸ್. ಚಕ್ರವರ್ತಿಯವರು 1914-15 ನೇ ಸಾಲಿನ ಶೋಧನೀಯ ಜಮಾಖರ್ಚುಗಳನ್ನೂ, 1915-16 ನೇ ಸಾಲಿನ ಅಂದಾಜಾ ಹುಟ್ಟುವಳಿ ಖರ್ಚುಗಳನ್ನೂ ನಿವೇದಿಸಿದರು. 1914-15 ನೇ ಸಾಲಿನ ಶೋಧನೀಯ ಜಮಾಖರ್ಚುಗಳ ಲೆಕ್ಕಗಳಿಂದ ಆ ಸಾಲಿನಲ್ಲಿ ಹುಟ್ಟುವಳಿಯು 6,95,000 ರೂಪಾಯಿ ಕಡಮೆಯಾಯಿತೆಂದೂ ಯುದ್ಧದ ದೆಸೆಯಿಂದ ಶ್ರೀಗಂಧವು ಬಿಕರಿ ಮಾಡಲಾಗದೆ ಫಾರೆಸ್ಟ್ ಬಾಬಿನಲ್ಲೇ ಉತ್ಪತ್ತಿ ಬಹಳ ಕಡಮೆಯಾಯಿತೆಂದೂ, ತಿಳಿಯುವುದು. ಆ ಸಾಲಿನ ಖರ್ಚು ಬಾಬಿನಲ್ಲಿ 42,69,000 ರೂಪಾಯಿ ಹೆಚ್ಚಾಯಿತು. ಯಾಕೆಂದರೆ ಶ್ರೀಮನ್ ಮಹಾರಾಜರವರು ಯುದ್ಧದ ಖರ್ಚಿಗೂ, ಯುದ್ಧದ ರಿಲೀಫ್ ಫಂಡಿಗೂ 52,00,000 ರೂಪಾಯನ್ನು ಚಂದಾ ಪಾವತಿ ಮಾಡಿರುತ್ತಾರೆ. ಭಾರೀ ಕಾಮಗಾರಿಗಳಿಗೆ ಬಡ್ಜೆಟ್ಟಿನಲ್ಲಿ ಕಾಣಿಸಿದಂತೆ ತೆಗೆದಿಟ್ಟ ಹಣವೆಲ್ಲಾ ಖರ್ಚಾಗದೆ ಅದರಲ್ಲಿ 8,21,000 ರೂಪಾಯಿ ಉಳುಕೊಂಡಿತು. ಜಮಾಖರ್ಚನ್ನೆಲ್ಲಾ ಒಟ್ಟು ಕೂಡಿಸಿ ನೋಡುವಲ್ಲಿ ಸರ್ಕಾರದವರು ಆ ಸಾಲಿನ ಹುಟ್ಟುವಳಿಗಿಂತಲೂ 73,54,000 ರೂಪಾಯಿ ಹೆಚ್ಚಾಗಿ ಖರ್ಚಾದೀತೆಂದು ಅಂದಾಜು ಕಟ್ಟಿದ್ದರು. ಈ ಒಟ್ಟು ಖರ್ಚಿನಲ್ಲಿ ಹುಟ್ಟುವಳಿಗಿಂತ 1,14,97,000 ರೂಪಾಯಿ ಹೆಚ್ಚಾಗಿರುತ್ತದೆ. ಈ ಹೆಚ್ಚು ಖರ್ಚನ್ನು ಸಂಸ್ಥಾನದ ಶಿಲ್ಕು ಹಣದಿಂದ ಕೊಡುವರು. ಮೇಲ್ಕಂಡ ಯುದ್ಧದ ಫಂಡುಗಳಿಗೆ ಇಷ್ಟು ಧಾರಾಳವಾಗಿ ಸಂಸ್ಥಾನದ ಹಣವನ್ನು ತೆಗೆದು ಪಾವತಿಮಾಡಿದ್ದಾಗ್ಯೂ ಸಂಸ್ಥಾನದ ಆಯತಿಗೆ ಕೊರತೆಯುಂಟಾಗಲಿಲ್ಲವೆಂದು ಸಂತೋಷಪಡಬೇಕಾಗಿದೆ.

ಚಾಲ್ತಿ ಅಂದರೆ 1915-16 ನೇ ಸಾಲಿನಲ್ಲಿ ಖಜಾನಾ ಭಕ್ಷಿಯವರು 2,74,02,000 ರೂಪಾಯಿ ಹುಟ್ಟುವಳಿ ಆಗಬಹುದೆಂದೂ, 2,73,70,000 ರೂಪಾಯಿ ಖರ್ಚಾಗಿ 32,000 ರೂಪಾಯಿ ಶಿಲ್ಕು ಉಳಿಯಬಹುದೆಂದೂ ಅಂದಾಜು ಕಟ್ಟಿದಾರೆ. ಇದಲ್ಲದೆ ವಿಶೇಷವಾದ ಕಾಮಗಾರಿ ಮುಂತಾದದ್ದಕ್ಕೆ 66,35,000 ರೂಪಾಯಿ ಬೇಕೆಂದು ಹೇಳುವರು. ಈ ಹೆಚ್ಚು ಖರ್ಚಿಗೆ ಹಿಂದಿನ ವರುಷಗಳ ಶಿಲ್ಕು ಹಣಗಳನ್ನು ಅಂದರೆ ಈಗ ಆಸ್ತಿಯಾಗಿರುವ ದ್ರವ್ಯವನ್ನು ಉಪಯೋಗಿಸಿಕೊಳ್ಳಬೇಕಾಗಿರುವುದು. ಎಕ್ಸೈಸ್ ಬಾಬಿನ ಹುಟ್ಟುವಳಿಯಲ್ಲಿ 5,00,000 ರೂಪಾಯೂ, ಆಸ್ತಿಯ ಮೇಲಣ ಬಡ್ಡಿಯಲ್ಲಿ 6,36,000 ರೂಪಾಯೂ, ಕಡಮೆಯಾದೀತೆಂದು ಊಹಿಸಿದಾರೆ. ನಮ್ಮ ಸಂಸ್ಥಾನ ಆಸ್ತಿಯು 2,58,66,000 ರೂಪಾಯೆಂದು ಕಾಣುತ್ತದೆ. ಇದರಿಂದ ಎಂಟು ಲಕ್ಷ ರೂಪಾಯಿಗಿಂತ ಹೆಚ್ಚು ಬಡ್ಡಿ ಉತ್ಪತ್ತಿಯಾಗಬೇಕು. ಈಗ ಹಾಜರು ಮಾಡಿರುವ ಅಂದಾಜಾ ಪಟ್ಟಿಯಲ್ಲಿ 9,82,000 ರೂಪಾಯಿ ಬಡ್ಡಿ ಉತ್ಪತ್ತಿಯಾಗುವುದೆಂದೂ, ಬಡ್ಡಿ ಕೊಡಬೇಕಾಗುವುದು 8,37,000 ರೂಪಾಯೆಂದೂ ತಿಳಿಸಲಾಗಿದೆ.

ಎಕ್ಸೈಸ್ ಬಾಬಿನಲ್ಲಿ ನಷ್ಟವೇನೂ ಆಗಲಾರದೆಂದು ಯೋಚಿಸುತ್ತೇವೆ. ಯಾಕೆಂದರೆ ಈ ಸಂಸ್ಥಾನದಲ್ಲಿ ಶೇಂದಿ, ಸರಾಬು, ಮ್ರಾದಕಗಳನ್ನು ಕುಡಿಯುವ ಅಭ್ಯಾಸವು ಹೆಚ್ಚಾಗುತ್ತಿರೋಣದುಂದ ಈ ದುರಭ್ಯಾಸವನ್ನು ಜನಗಳು ತ್ಯಜಿಸಿ ಬಿಟ್ಟುಬಿಡುವವರಾಗಿದಾರೆಂದು ನಮಗೆ ತೋರುವುದಿಲ್ಲ. ಖಜಾನಾ ಭಕ್ಷಿಯವರು ಎಕ್ಸೈಸ್ ಬಾಬಿನಲ್ಲಿ 1913-14 ನೇ ಸಾಲಿನ ಹುಟ್ಟುವಳಿಗಿಂತ 1914-15 ನೇ ಸಾಲಿನ ಹುಟ್ಟುವಳಿಯು 9,00,000 ರೂ. ಹೆಚ್ಚಾಗಿದೆಯಾದರೂ ಇದು ಮದ್ಯಗಳನ್ನು ಹೆಚ್ಚಾಗಿ ಕುಡಿದದ್ದರಿಂದ ಹೆಚ್ಚಾಗಲಿಲ್ಲವೆಂದೂ, ಜಾಸ್ತಿ ತೆರಿಗೆಯಿಂದಲೂ ಇಜಾರೆದಾರರ ಪೋಟಾಪೋಟಿಯಿಂದಲೂ ಇಷ್ಟು ಹೆಚ್ಚಾಯಿತೆಂದೂ ಹೇಳುತ್ತಾರೆ. ಅವರು ಈ ರೀತಿ ಹೇಳಲು ಅವರಿಗೆ ಸರಿಯಾದ ಲೆಕ್ಕಗಳು ಒದಗಿಸಲ್ಪಟ್ಟವೆಂದೂ, ಮದ್ಯಗಳು ಬಿಕರಿ ಆದದ್ದು ಕಡಮೆಯಾಯಿತೆಂದೂ ನಂಬಿ ನಿರೀಕ್ಷಿಸುತ್ತೇವೆ.

ಖರ್ಚುಬಾಬುಗಳ ಪೈಕಿ ಸಂಸ್ಥಾನದಲ್ಲಿ ವಿದ್ಯೆಯನ್ನು ಹರಡುವುದಕ್ಕೆ ಹೆಚ್ಚು ಹಣವನ್ನು ಅಂದರೆ 4,21,000 ರೂಪಾಯನ್ನು ಹಿಂದಿನ ಸಾಲಿಗಿಂತ ಹೆಚ್ಚಾಗಿ ವಿನಿಯೋಗಮಾಡುತ್ತಾರೆಂದು ತಿಳಿದು ಆನಂದಪಡುವೆವು. ಶಿಕ್ಷಣವು ಕ್ರಮವಾಗಿಯೂ ಸಾರ್ಥಕವಾಗಿಯೂ ನಡೆಯುವಂತೆ ಮಾಡುವರೆಂದೂ, ಬರೀ ಪಾಠಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದರಲ್ಲೇ ತೃಪ್ತಿಪಟ್ಟುಕೊಳ್ಳಲಾರರೆಂದೂ ನಿರೀಕ್ಷಿಸುತ್ತೇವೆ. ಸಂಸ್ಥಾನಾಮಳ ಜಟುವಟಿಕೆಯಾಗಿ ವಿದ್ಯೆಯನ್ನು ಹರಡುವಂಥಾ ಪಾಠಶಾಲೆಗಳು ಆಗಬೇಕು. ಸರ್ಕಾರಿ ಪಾಠಶಾಲೆಗಳಲ್ಲಿ ಅವಶ್ಯವಾದ ಸಾಮಾನುಗಳು ಸಾಲದೆಂದೂ, ಕೆಲವು ಕಡೆ ಉಪಾಧ್ಯಾಯರು ಕುಳಿತುಕೊಳ್ಳುವುದಕ್ಕೆ ಕಾಲ್ಮಣೆಯೊಂದಿರುವುದಲ್ಲದೆ ಇತರ ಸಾಮಾನುಗಳ್ಯಾವೂ ಇಲ್ಲವೆಂದೂ ಕೇಳಿಬಲ್ಲೆವು; ಭೂಪಟಗಳಿಲ್ಲ, ಕಪ್ಪು ಹಲಿಗೆಗಳಿಲ್ಲ, ಪುಸ್ತಕಗಳಿಲ್ಲ, ಕುರ್ಚಿ ಮೇಜುಗಳಿಲ್ಲ. ಇಂಥಾ ಸ್ಕೂಲುಗಳು ಎಷ್ಟಿದ್ದರೂ, ಎಷ್ಟು ಹೆಚ್ಚಿದರೂ ಉಪಾಧ್ಯಾಯನು ಸರ್ವನಿಪುಣನಾಗಿದ್ದ ಹೊರತು ಪ್ರಯೋಜನವೂ ಸ್ವಲ್ಪವೇ.

ಶ್ರೀಮದ್ಮಹಾರಾಜರವರಿಗೆ ರಾಜಾದಾಯದಿಂದ ಸಲ್ಲುತ್ತಿದ್ದ ಸಾಲಿಯಾನಾ ಒಂದು ಲಕ್ಷ ರೂಪಾಯನ್ನು ಒಂದೂವರೆ ಲಕ್ಷಕ್ಕೆ ಹೆಚ್ಚಿಸಿರುತ್ತಾರೆ. ಬೇರೆಬೇರೆ ಇಲಾಖೆಗಳಿಗೂ ಹೆಚ್ಚು ಹಣವನ್ನು ಕೊಡುವಂತೆ ಕಾಣಿಸಲಾಗಿದೆ. ಇದರಿಂದ ಇಲಾಖೆಗಳಲ್ಲಿ ಕೆಲಸಕಾರ್ಯಗಳು ಕಟ್ಟುನಿಟ್ಟಾಗಿಯೂ, ಚಟುವಟಿಕೆಯಿಂದಲೂ ನಡೆಯುವಹಾಗಾದೀತೆಂದು ನಿರೀಕ್ಷಿಸುತ್ತೇವೆ. ರೈಲ್ವೆ ಬಡಾವಣೆಯ ಕಾಮಗಾರಿಗಳಿಗೆ 33,35,000 ರೂಪಾಯಿ ತೆಗೆದಿಡಲಾಗಿದೆ. ಮೈಸೂರು-ಅರಸಿಕೆರೆ ರೈಲ್ ರಸ್ತೆಯು ಬೇಗನೆ ತಯಾರಾಗಿ 1916 ನೇ ಏಪ್ರಿಲ್ ತಿಂಗಳಲ್ಲಿ ಗಾಡಿಗಳನ್ನು ಬಿಡಬಹುದೆಂದು ತಿಳಿಸಲ್ಪಟ್ಟಿರುವುದು. ಈ ರೈಲ್ವೆ ಹಣದಲ್ಲಿ 5,00,000 ರೂಪಾಯನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲೂ, 1,50,000 ರೂಪಾಯನ್ನು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆಗೂ ವಿನಿಯೋಗಮಾಡುತ್ತಾರೆ.

ಕನ್ನಂಬಾಡಿ ರೆಜರ್ವಾಯರ್ ಕಾಮಗಾರಿಗೆ ಚಾಲ್ತಿ ಸಾಲಿನಲ್ಲಿ 25 ಲಕ್ಷ ರೂಪಾಯಿ ಖರ್ಚುಮಾಡುವಂತೆ ತೆಗೆದಿಟ್ಟಿದಾರೆ. ಈ ಕಾಮಗಾರಿಯೆಲ್ಲಾ 81 ಲಕ್ಷ ರೂಪಾಯಿಗೆ ಪೂರೈಸುವುದೆಂದು ಮೊದಲು ಅಂದಾಜು ಕಟ್ಟಿದ್ದರು; ಈಗ ನೋಡುವಲ್ಲಿ 106 ಲಕ್ಷ ರೂಪಾಯಿ ಬೇಕಾಗುವುದೆಂದು ಕಂಡು ಬಂದಿದೆ. ಇದಕ್ಕೆ ಕೂಲಿಯ ದರವೇ ಮುಂತಾದ ಖರ್ಚು ಹೆಚ್ಚಾದದ್ದೇ ಕಾರಣವೆಂದು ಹೇಳಲಾಗಿದೆ. ಕೂಲಿಯ ದರವಲ್ಲದೆ ಇತರ ಕಾರಣಗಳ್ಯಾವವೋ ತಿಳಿಸಬೇಕಾದದ್ದು ಅವಶ್ಯ; ಯಾಕಂದರೆ 25 ಲಕ್ಷ ರೂಪಾಯಿ ಹೆಚ್ಚಾಗಿ ಖರ್ಚಾಗಬೇಕಾದ ಬಾಬುಗಳ್ಯಾವವೋ ತಿಳಿಯುವುದಿಲ್ಲ. ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಗೆ ಎರಡು ಲಕ್ಷ ರೂಪಾಯಿ ಖರ್ಚಾಗುವುದು.

ಚಾಲ್ತಿಸಾಲಿನಲ್ಲಿ ನಡೆಯತಕ್ಕ ಮುಖ್ಯವಾದ ಕಾಮಗಾರಿಗಳ್ಯಾವವೆಂದರೆ—ಅರಮನೆಗೆ ಸಂಬಂಧಪಡುವ ಕಟ್ಟಡಗಳಿಗೆ ರೂ. 1,25,000; ಮೈಸೂರು ಜನರಲ್ ಆಸ್ಪತ್ರೆಗೆ ರೂ. 90,000; ಮೈಸೂರು ಪಟ್ಟಣಕ್ಕೆ ನೀರನ್ನು ಒದಗಿಸುವ ಕಾಮಗಾರಿಗೆ ರೂ. 90,000; ಬೆಂಗಳೂರಿನಲ್ಲಿ ಪಬ್ಲಿಕ್ ಆಫೀಸ್ ಕಟ್ಟಡಗಳಿಗೆ ರೂ. 30,000; ಬೆಂಗಳೂರು ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೆ ರೂ. 23,500; ಮೈಸೂರಿನಲ್ಲಿ ಆಗಂತುಕರು ಇಳಿಯುವ ಕಟ್ಟಡಕ್ಕೆ ರೂ. 25,000; ಪ್ರಜಾಪ್ರತಿನಿಧಿಗಳಿಗೆ ವಸತಿಯಾದ ಕಟ್ಟಡಕ್ಕೆ ರೂ. 20,000; ಮೈಸೂರಿನಲ್ಲಿ ಟ್ರಾವೆಲರ್ಸ್ ಬಂಗಲೆ ರೂ. 20,000; ಲೇಟ್ ಮಹಾರಾಜರವರ ಪ್ರತಿಮೆಯನ್ನು ನಿಲ್ಲಿಸುವ ಕಟ್ಟಡಕ್ಕೆ ರೂ. 40,000; ಕಾನಕಾನಹಳ್ಳಿ ತಾಲ್ಲೂಕಿನ ಕೆರೆಗೆ ರೂ. 50,000; ಹುಣಸೂರು ತಾಲ್ಲೂಕಿನ ಕೆರೆಗೆ ರೂ. 25,000; ಹೆಗ್ಗಡದೇವನಕೋಟೆ ತಾಲ್ಲೂಕಿನ ಕೆರೆಗೆ ರೂ. 25,000—ಈ ರೀತಿ ಕಾಮಗಾರಿಗಳು ನಡೆಯುವವು.

ಬಡ್ಜೆಟ್ಟಿನಲ್ಲಿ ಕಾಣಿಸಿರುವ ಕಾಮಗಾರಿಗಳನ್ನೆಲ್ಲಾ ನಡಿಸುವುದಕ್ಕೆ ನಮ್ಮ ಸರ್ಕಾರದವರು ಸಂಸ್ಥಾನದ ಆಸ್ತಿಯಲ್ಲಿ 81,98,000 ರೂಪಾಯಿನ ಪತ್ರಗಳನ್ನು ಬಿಕರಿಮಾಡಿ ಹಣವನ್ನು ಒದಗಿಸಬೇಕಾಗಿರುತ್ತದೆ. ಆಸ್ತಿಯನ್ನು ಈ ರೀತಿ ಸಂಸ್ಥಾನಕ್ಕೆ ಶ್ರೇಯಸ್ಸನ್ನುಂಟುಮಾಡುವ ಕೆಲಸಕಾರ್ಯಗಳಿಗೆ ವಿನಿಯೋಗಿಸುವುದು ಅವಶ್ಯವೆಂದು ನಾವು ಒಪ್ಪಿಕೊಳ್ಳುವೆವು. ಆದರೆ ಕೆಲವು ವಿಚಾರಗಳಲ್ಲಿ ಹಣಗಳು ಅಪಾರವಾಗಿ ಬೇಗ ಬೇಗನೆ ಖರ್ಚಾಗುತ್ತಿರುವುದನ್ನು ನೋಡಿ ಈ ರೀತಿಯಾದ ಖರ್ಚುಗಳಿಗೆ ತಕ್ಕ ಪ್ರಯೋಜನವುಂಟಾಗಿದೆಯೆಂದು ಸಂಶಯಪಡುತ್ತೇವೆ.

ದೇವರು ನೇಮಿಸಿದ ಯಜ್ಞಪಶುವು.

ವೇದಗಳ ಕಾಲದ ಆರ್ಯರೂ ಪಾಲೆಸ್ತೈನ್ ಸೀಮೆಯಲ್ಲಿ ವಾಸಮಾಡುತ್ತಾ ಆರ್ಯರ ಸಮಕಾಲಿಕರಾಗಿದ್ದ ಯೆಹೂದ್ಯರೂ ಮತ್ತು ಪ್ರಪಂಚದ ವಿವಿಧಕಡೆಗಳಲ್ಲಿ ವಾಸಮಾಡುತ್ತಲಿದ್ದ ಬಗೆಬಗೆಯ ಜನಾಂಗದವರೂ ದೇವರಿಗೆ ಬಲಿಗಳನ್ನು ಅರ್ಪಿಸುತ್ತಿದ್ದರಷ್ಟೆ. ನವನಾಗರಿಕತೆಯಿಂದ ಪರಿವೇಷ್ಟಿತರಾದ ನಮಗೆ ನಿರುಪಾಧಿಕವಾಗಿಯೂ ನಿರ್ದೋಷಿಯಾಗಿಯೂ ಇರುವ ಒಂದು ಪಶುವನ್ನಾಗಲಿ ಕುದುರೆ, ಅಥವಾ ಕುರಿ ಮೇಕೆಗಳನ್ನಾಗಲಿ ಹಿಡಿದು ದೇವರ ಗುಡಿಯ ಮುಂದೆ ಕಡಿದು ದೇವರಿಗೆ ಯಜ್ಞವನ್ನು ಅರ್ಪಿಸಿದೆನೆಂದು ತೃಪ್ತಿಪಡುವದು ಬುದ್ಧಿಹೀನವಾಗಿಯೂ ಕೇವಲ ಕ್ರೌರ್ಯವಾಗಿಯೂ ವ್ಯಸನಾಸ್ಪದವಾಗಿಯೂ ಇದೆ. ಆದರೆ ಪೂರ್ವಿಕರಲ್ಲಿ ರೂಢಿಯಾಗಿದ್ದ ಈ ಪದ್ಧತಿಯನ್ನೇ ದೇವರು ತನ್ನ ವಿಷಯವಾದ ಸತ್ಯೋಪದೇಶವನ್ನು ಪ್ರಕಟಿಸುವದಕ್ಕೆ ಒಂದು ಯತ್ನವಾಗಿ ಸ್ವೀಕರಿಸಿ ಪ್ರಯೋಗಿಸಿದನು. ಹೇಗಂದರೆ—ಬಲಿಗಳನ್ನು ಅರ್ಪಿಸಿದವರ ಮುಖ್ಯಾಭಿಪ್ರಾಯವೇನು? ಯಾವ ಉದ್ದೇಶದಿಂದ ಅವರು ಈ ಮೂಗುಜೀವಿಗಳನ್ನು ಅರ್ಪಿಸಿದರು? ಹೀಗೆ ವಿಚಾರಿಸಲಾಗಿ ತಿಳಿದುಬರುವದೇನಂದರೆ—ಬಲಿ ಅರ್ಪಿಸಿದವರು ಅರ್ಪಿತವಾದ ಪಶುವಿನ ದೇಹವನ್ನು ತೆಗೆದುಕೊಂಡು ಅದರಿಂದ ಅರ್ಚಕನ ಮುಖಾಂತರವಾಗಿಯೋ ಅಥವಾ ಸ್ವತಃ ತಾನೆಯೋ ಒಂದು ಔತಣವನ್ನು ಸಿದ್ಧಮಾಡುವನು. ಈ ಔತಣವು ದೇವರಿಗೂ ಯಜ್ಞವನ್ನು ಅರ್ಪಿಸುವ ಆತನ ಪ್ರಜೆಗಳಿಗೂ ಮದುವಾದದ್ದು. ಆದ್ದರಿಂದ ಅವರು ದೇವರಿಗೆ ಅರ್ಪಿತವಾದ ಬಲಿಯ ಔತಣದಲ್ಲಿ ದೇವರ ಸಂಗಡ ತಾವೂ ಕಲೆತು ಸಹಭೋಜನಕ್ಕೆ ಒಂದೇ ಪಂಕ್ತಿಯಲ್ಲಿ ಕೂತು ಊಟಮಾಡುತ್ತೇವೆಂದು ಭಾವಿಸಿದರು. ಮತ್ತು ದೇವರು ತಮ್ಮ ಔತಣವನ್ನು ಸ್ವೀಕರಿಸಿದ್ದರಿಂದ ಆತನು ತಮ್ಮ ಸಂಗಡ ಅನ್ಯೋನ್ಯವಾಗುವದಕ್ಕೆ ದಯವಿಟ್ಟು ಬಂದನು. ಮತ್ತು ದೇವರೂ ಆತನನ್ನು ಆರಾಧಿಸುವದಕ್ಕೆ ಬಂದ ಆ ಜನಗಳೂ ಉಭಯತ್ರರೂ ಏಕೀಭವಿಸಿ ಒಂದೇ ಪಶುವಿನ ದೇಹದಿಂದ ಸಿದ್ಧವಾದ ಊಟವನ್ನು ಸಮಪಂಕ್ತಿಯಲ್ಲಿ ಊಟಮಾಡಿದೆವೆಂಬ ಭಾವನೆಯಿಂದ ಆತನಲ್ಲಿಯೂ ತಮ್ಮಲ್ಲಿಯೂ ಒಂದೇ ಮದುವಾದ ಜೀವವಿದೆಯೆಂದು ಊಹಿಸಿದರು. ಹೀಗೆ ತಮ್ಮ ಸಂಗಡ ಔತಣಕ್ಕೆ ಬಂದು ಊಟಮಾಡಿದ ದೇವರಿಗೂ ತಮಗೂ ಪರಸ್ಪರ ಅನ್ಯೋನ್ಯವುಂಟಾಯಿತು. ಋಷಿಗಳು ಪಶುಗಳನ್ನು ಕೊಯ್ದು ಊಟಕ್ಕೆ ಇಂದ್ರ, ಅಗ್ನಿ, ಯಮ, ಸೋಮ ಮುಂತಾದ ದೇವರುಗಳನ್ನು ಕರೆದರೆಂದು ವೇದಗಳಲ್ಲಿ ಪದೇಪದೇ ಹೇಳಿರುತ್ತದೆ. ಮತ್ತು ಪಾಲೆಸ್ತೈನ್ ದೇಶದಲ್ಲಿ ವಾಸಮಾಡಿದ ಇಸ್ರಾಯೇಲ ಜನಾಂಗದವರ ಮತಗ್ರಂಥಗಳಲ್ಲಿಯೂ ಈ ಅಭಿಪ್ರಾಯಕ್ಕೆ ಪುಷ್ಕಳವಾದ ಆಧಾರಗಳಿರುತ್ತವೆ. ನೋಹನೆಂಬ ಭಕ್ತನು ಪಶುಗಳನ್ನೂ ಪಕ್ಷಿಗಳನ್ನೂ ದಹನಬಲಿಗಳಾಗಿ ಅರ್ಪಿಸಲು ದೇವರು ಅದರ ಸು... ಯನ್ನು ಆಘ್ರಾಣಿಸಿದನು. ಮತ್ತು ಯಾಜಕನು ಬಲಿಪೀಠದಲ್ಲಿಟ್ಟು ... ಮಾಡಿದ್ದು ದಹನವಾಗಿ ದೇವರಿಗೆ ಆಹಾರವಾಗಿದೆ. ದೇವರಿಗೆ ರೊಟ್ಟಿ... ಅರ್ಪಿಸುವ ಯಾಜಕನು ಪರಿಶುದ್ಧನಾಗಿರಬೇಕು. ಇತ್ಯಾದಿ ಉದಾಹರ... ಅನೇಕವುಂಟು. ದೇವರ ಸಂಗಡ ಭಕ್ತನು ಅನ್ಯೋನ್ಯನಾಗಿರಬೇಕೆಂಬ ... ನೆಯಿಂದಲೇ ಇದನ್ನೆಲ್ಲಾ ಮಾಡುತ್ತಿದ್ದರು.

ಮತ್ತು ಪ್ರಾಣಿಯ ರಕ್ತನೇ ಅದರ ಜೀವಕ್ಕೆ ಆಧಾರವಾಗಿದೆಯೆಂಬ ... ಪ್ರಾಯವು ಕ್ರಮೇಣ ಹೊರಪಡುತ್ತಾ ಬಂದದ್ದರಿಂದ ರಕ್ತದಲ್ಲಿ ವಿಶೇಷ ಸತ್ವವೂ ಕಾರ್ಯಸಾಧಕತ್ವವೂ ಇದೆಯೆಂಬ ನಂಬಿಕೆ ರೂಢಿಗೆ ಬ... ಯಜ್ಞಗಳ ವಿಷಯವಾಗಿ ಪೂರ್ವಿಕರಲ್ಲಿದ್ದ ಅಭಿಪ್ರಾಯವು ಇದೇ. ಅದಕ್ಕೆ ... ತೆಗಳು ಚಪಲಚಿತ್ತರೂ ಕೆಲವು ವೇಳೆ ದುಷ್ಟತರೂ ಆದ್ದರಿಂದ ಅವ... ತನ್ನು ಸಮಪಂಕ್ತಿಗೆ ಒಲಿಸಿಕೊಳ್ಳುವದು ಸುಲಭಸಾಧ್ಯವಾಗದೆ ಅವರಿಗೆ ಒಳ... ಕೊಡಬೇಕಾದ ವಸ್ತುಗಳನ್ನು ರುಚಿಯಾಗಿ ಸಕ್ರಮವಾಡಬೇಕೆಂಬ ಅಭಿಪ್ರಾಯವು ... ರಲ್ಲಿ ವಾಡಿಕೆಯಾಗಿದ್ದಿತು.

ಆದರೆ ನಿಜದೇವರು ಚಪಲಚಿತ್ತನೂ ಅಲ್ಲ; ದುಷ್ಟತನೂ ... ಆತನು ನೀತಿವಂತನು; ಕೇವಲ ಪರಿಶುದ್ಧನು. ಆತನು ಮನುಷ್ಯರನ್ನು ... ಅವರನ್ನು ದೂರೀಕರಿಸಿದ್ದು ಚಪಲಚಿತ್ತದಿಂದಲ್ಲ. ಅವರ ಪಾಪವನ್ನು ... ದಿದ್ದರಿಂದಲೇ ಆತನು ಅವರನ್ನು ಅಸಹ್ಯಪಟ್ಟು ದೂರ ಇರಿಸಿದನು. ಆದ್ದ... ಅವರು ನಿಜದೇವರನ್ನು ಒಲಿಸಿಕೊಳ್ಳುವದಕ್ಕೆ ಕೊಬ್ಬಿದ ಪಶುಗಳನ್ನು ... ಕೊಡುವದು ಅಗತ್ಯವಿಲ್ಲ. ಪಾಪಕ್ಕಾಗಿ ಪೂರ್ಣಹೃದಯದಿಂದ ಪಶ್ಚಾತ್ತಾಪಪಟ್ಟು ದೇವರಿಗೆ ತಮ್ಮನ್ನು ಪುನಃ ಪ್ರತಿಷ್ಠೆಮಾಡಿಕೊಂಡು ಪಾಪರಹಿ... ನಡೆಯಬೇಕು. ಹೀಗೆ ಪವಿತ್ರನಾದ ದೇವರಿಗೂ ಪಾಪಿಗಳಾದ ತಮಗೂ ... ನ್ಯವುಂಟಾಗುವದೇ ಹೊರತು ಅನ್ಯಥಾ ಆಗಲರಿಯದು.

ಮತ್ತು ಕ್ರಮೇಣ ಔತಣದ ಸುದ್ದಿಯೇ ಮರೆತುಹೋಗಿ ದೇ... ಪಾಪಿಯಾದ ಮನುಷ್ಯನಿಗೂ ಮದುವಾದ ಜೀವನವೂ ಅನ್ಯೋನ್ಯವೂ ... ಕೆಂದು ಬಯಸಿದರು. ದೇವರಿಗೂ ಪಾಪಿಗಳಿಗೂ ಒಂದು ಒಡಂಬಡಿ... ಬೇಕು. ಈ ಒಡಂಬಡಿಕೆಗೆ ರಕ್ತಪ್ರೋಕ್ಷಣೆಯು ಗುರುತೂ ಮುದ್ರೆಯೂ ... ಯಾಕಂದರೆ ಜೀವಕ್ಕೆ ರಕ್ತವೇ ಆಧಾರ.

ಕ್ರೈಸ್ತರ ಸತ್ಯವೇದದ ಹೊಸ ಒಡಂಬಡಿಕೆಯೆಂಬ ಭಾಗದಲ್ಲಿ ಈ ... ಪ್ರಾಯದ ಆಧಾರದ ಮೇಲೆ—ಕ್ರಿಸ್ತನ ರಕ್ತದ ಪ್ರೋಕ್ಷಣೆಯಿಂದಲೇ ದೇ... ಮನುಷ್ಯರಿಗೂ ನಡೆದ ಒಡಂಬಡಿಕೆಯು ಮಂಜೂರಾಗಿ ನಿರ್ಧಾರವಾದ... ಎಂದು ಆತನ ಪ್ರೇಷಿತರು ಸಿದ್ಧಾಂತಮಾಡಿದ್ದಾರೆ.

ಆದರೆ ರಕ್ತವು ಜೀವಕ್ಕೆ ಆಧಾರವಾಗಿದೆ. ರಕ್ತವನ್ನು ಅರ್ಪಿ... ಅಥವಾ ಪ್ರೋಕ್ಷಿಸುವದಂದರೆ ರಕ್ತದಿಂದ ಪೋಷಿತವಾಗಿ ಬದುಕುತ್ತಿರುವ... ವನ್ನು ಅರ್ಪಿಸುವದೆಂಬರ್ಥ ಬರುತ್ತದೆ. ವಧೆಮಾಡಿದ ಪ್ರಾಣಿಯ ... ಯಾವದಕ್ಕೂ ಪ್ರಯೋಜನವಿಲ್ಲದೆ ಚೆಲ್ಲಿಹೋಗುತ್ತದಯಷ್ಟೆ. ಆದರೆ ... ದೊಂದು ಪ್ರಾಣಿಯ ರಕ್ತವು ಚೆಲ್ಲಲ್ಪಡುವದಕ್ಕಿಂತ ಆ ಪ್ರಾಣಿಯ ಜೀ... ಅದರ ಪೋಷಣೆಗೂ ಸಹಕಾರಿಯಾಗಿ ಅದೇ ರಕ್ತವು ಇರುವದು ಪ್ರಯೋ... ಗಿದೆ. ಇದರಿಂದ ಕ್ರಿಸ್ತನ ಜೀವಮಾನವು ಅಂದರೆ—ಆತನು ಲೋಕದಲ್ಲಿ... ರವೆತ್ತಿ ಸಿಲುಬೆಯ ಮೇಲೆ ಪ್ರಾಣವನ್ನು ಬಿಡುವರೆಗೂ ಆತನ ಜೀವನವೂ... ಯೂ ಮಾತುಗಳೂ ಗುಣವೂ ಎಲ್ಲಾ ದೇವರಿಗೆ ಒಂದೇ ವಿಾಸಲಾದ ಯಜ್ಞ... ಇದನ್ನು ಸೂಚಿಸಿ ಒಬ್ಬ ಭಕ್ತನು ಗೀತರೂಪವಾಗಿ ರಚಿಸಿ ಹಾಡಿದ್ದೇನಂ... ದೇವರೇ ಯಜ್ಞದ ಮೇಲೆಯೂ ನೈವೇದ್ಯದ ಮೇಲೆಯೂ ನಿನಗೆ ಇಷ್ಟವಿ... ಹೋರಿಗಳ ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ... ವಾಗಿದೆ. ಆದರೆ ನನಗೆ ದೇಹವನ್ನು ಸಿದ್ಧಮಾಡಿಕೊಟ್ಟಿದ್ದೀ. ಹೋಮ... ಗಳು ನಿನಗೆ ಸಂತೋಷವನ್ನು ಕೊಡುವದಿಲ್ಲ. ನಿನ್ನ ಚಿತ್ತವನ್ನು ಈ ದೇ... ರುವ ನಾನು ನೆರವೇರಿಸುವದೇ ನಿನಗೆ ಸಂತೋಷವನ್ನುಂಟುಮಾಡಿ ... ಪೂರ್ಣವಾಗಿ ಮೆಚ್ಚಿಸುವದು ಎಂಬುವದೇ. ಕ್ರಿಸ್ತನು ದೇವರ ಚಿತ್ತವನ... ನೇರಿಸುವದಕ್ಕೆ ಆತನ ಆದ್ಯಂತ ಜೀವಮಾನವಾದತ್ತನ್ನೂ ಪ್ರಮುಖವಾ... ವನ್ನು ಮೆಚ್ಚಿಸಿದನು. ಆತನ ವಿಧೇಯತ್ವವು ಸರ್ವಸಂಪೂರ್ಣವಾದದ್ದು... ಬಿಡದೆ ತಂದೆಯ ಚಿತ್ತವನ್ನು ನೆರವೇರಿಸಿದ್ದು.

ಇದೀಗ ದೇವರು ಮೊದಲಿನಿಂದ ಮನುಷ್ಯರಲ್ಲಿ ನಿರೀಕ್ಷಿಸುತ್ತಿದ್ದ ನಿಜ... ಪೂರ್ವಿಕರು ಅನೇಕಯುಗಗಳಿಂದ ಅರ್ಪಿಸಿದ ಯಜ್ಞಗಳು ಇದರ ಸೂಚ... ದವು. ನಿಜವನ್ನು ಪ್ರತ್ಯಕ್ಷವಾದಾಗ ಛಾಯೆ ಮಾತ್ರದ ಪಶಬಲಿಗಳು ಪ್ರಯೋ... ಜನವಿಲ್ಲ. ಯಾರು ಈಗ ದೇವರನ್ನು ಪೂರ್ಣವಾಗಿ ಮೆಚ್ಚಿಸಿದ ಈ ಯಜ್ಞಪ... ಕ್ರಿಸ್ತನನ್ನು ಆಶ್ರಯಿಸುವರೋ ಅವರಿಗೆ ಕ್ರಿಸ್ತನು ಅರ್ಪಿಸಿದ ಪವಿತ್ರವಾ... ಎಂಬ ಯಜ್ಞವನ್ನು ತಮ್ಮ ಜೀವಮಾನದ ನಡತೆಯಲ್ಲಿ ಅರ್ಪಿಸುವದಕ್ಕೆ ಸಹಾಯವು ದೊರಕುತ್ತದೆ. ಯಾಕಂದರೆ ಕ್ರಿಸ್ತನು ಮಾನವರ ಪ್ರತಿನಿಧಿ... ನನ್ನು ಮರೆಹೊಕ್ಕು ಆಶ್ರಯಿಸುವವರಿಗೆ ಆರ್ಯರು ಅಭಿಲಾಷೆಪಟ್ಟು ಬ... ದೇವರ ಅನ್ಯೋನ್ಯವೂ ಸಹವಾಸವೂ ದೊರೆಯುತ್ತವೆ. ಪಾಪಪರಿಹಾರವೂ ಪ್ರತ್ಯಕ್ಷವೂ ಅವರಿಗೆ ದೊರೆಯುತ್ತವೆ.

ಯುದ್ಧದ ಸಮಾಚಾರಗಳು

ರಷ್ಯಾದವರು ಇನ್ನೂ ಹಿಮ್ಮೆಟ್ಟುತ್ತಿದಾ...

ಈ ವಾರದ ಯುದ್ಧ ವಾರ್ತೆಗಳು ನಾನಾ ಬಗೆಯಾಗಿರುವವು; ಆ ಪೈಕಿ ಯಾವುದೊಂದೂ ಗಾಬರಿಪಡಿಸುವಂಥಾದ್ದಲ್ಲ. ಯುದ್ಧಭೂ... ಅನೇಕ ಠಾಣ್ಯಗಳಲ್ಲಿ ಕದನಗಳು ನಡೆದಿರುವವು; ಆದರೆ ಯಾವ ... ವಿಶೇಷವಾದ ಪ್ರಯೋಜನವೇನೂ ಆಗಿರುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ದೊಡ್ಡ ದೊಡ್ಡ ಪಿರಂಗಿಗಳನ್ನಿಟ್ಟು ಅನೇಕವಾಗಿ ಗುಂಡುಗಳ ಮ... ಸಲ್ಪಟ್ಟಿದೆ. ಫ್ರೆಂಚರು ಗೆದ್ದುಕೊಂಡಿರುವ ಠಾಣ್ಯವನ್ನು ಅವರಿಂದ ... ಳ್ಳಬೇಕೆಂದು ಜರ್ಮನಿಯವರು ನುಗ್ಗಿ ಹೋಗಿ ಸಾಹಸಪಟ್ಟರು; ಆದ... ಪ್ರಯತ್ನವು ವ್ಯರ್ಥವಾಯಿತು. ಜರ್ಮನಿಯವರು ಫ್ರೆಂಚ್ ಸೈನಿಕರ ... ವಿಷವಾಯುಗಳ ಗುಂಡುಗಳನ್ನು ಸುರಿಸಿದರು. ಆದರೂ ಅವರು ತಮ್ಮ ... ಗಳನ್ನು ಶತ್ರುವಿಗೆ ಬಿಟ್ಟುಕೊಡಲಿಲ್ಲ. ಅನೇಕ ಠಾಣ್ಯಗಳಲ್ಲಿ ಜರ್ಮನಿ... ಮೇಲೆ ಬಿದ್ದು ಕದನವಾಡಿದರು; ಒಂದು ಕಡೆಯಲ್ಲೂ ಅವರಿಗೆ ಪ್ರಯೋ... ವಾಗಲಿಲ್ಲ.

ಆರ್ರಸ್ ಸುತ್ತುಮುತ್ತಿನ ಪ್ರದೇಶದಲ್ಲಿ ಕೆಲವು ವಾರಗಳಿಂದಲೂ ... ಗಳು ನಿಲುಗಡೆ ಇಲ್ಲದೆ ನಡೆಯುತ್ತಾ ಬಂದಿವೆ. ಆ ರಣರಂಗದಲ್ಲಿ ಕದ... 10,000 ಹೆಣಗಳು ಬಿದ್ದಿರುವವೆಂದೂ, ಅನೇಕ ಹೆಣಗಳನ್ನು ಮಣ್ಣುಮಾ... ದಕ್ಕೂ ಅವಕಾಶವಾಗಿಲ್ಲವೆಂದೂ ಒಬ್ಬ ಬಾತ್ಮಿದಾರನು ತಿಳಿಸುತ್ತಾನೆ.

ಜರ್ಮನಿಯವರು ಈ ಪ್ರಾಂತ್ಯಕ್ಕೆ ಅಪಾರ ಸೈನ್ಯಗಳನ್ನು ತಂದು ... ವರ್ತಮಾನವಿದೆ.

ಪೂರ್ವ ರಣರಂಗದಲ್ಲಿ.

ಜರ್ಮನಿಯವರು ರಷ್ಯಾದವರ ಮೇಲೆ ನುಗ್ಗಿಹೋಗುತ್ತಿರುವುದು ... ಕಡಮೆಯಾಗಲಿಲ್ಲ. ಕೆಲವು ಠಾಣ್ಯಗಳಲ್ಲಿ ರಷ್ಯಾದವರು ಇನ್ನೂ ... ಹೋಗುತ್ತಲೇ ಇದಾರೆ. ಹೀಗೆ ಹೋಗುವಲ್ಲಿ ಅವರು ಹೆಜ್ಜೆ ಹೆಜ್ಜೆ... ವಿನ ಮೇಲೆ ಕದನ ಮಾಡುತ್ತಾ, ಶತ್ರು ಸೈನಿಕರಲ್ಲಿ ಅನೇಕರನ್ನು ...

ನಷ್ಟಪಡಿಸುತ್ತಾ ಇರುವರು. ಯುದ್ಧಶಾಲಿನ ದಕ್ಷಿಣಭಾಗದಲ್ಲೇ ವಿಶೇಷವಾದ ಕದನಗಳಾಗುತ್ತಿವೆ ರಷ್ಯಾ ಸೈನಿಕರ ಲೈನಿನಲ್ಲಿ ಎಡಗಡೆ ಅವರು ತಮ್ಮ ರಾಜ್ಯವನ್ನು ಕಾಪಾಡಿಕೊಂಡಿರುವುದಲ್ಲದೆ ಶತ್ರುವಿನ ಕಡೆ 2,000 ಸೈನಿಕರನ್ನೂ, ಕೆಲವು ಮಷೀನ್ ಫಿರಂಗಿಗಳನ್ನೂ ಕಿತ್ತು ವಶಪಡಿಸಿಕೊಂಡಿದಾರೆ. ರಷ್ಯಾದವರು ಹಿಮ್ಮೆಟ್ಟಿ ಹೋಗುತ್ತಿದ್ದಾಗ್ಯೂ ಕಳೆದ ಹದಿನೈದು ದಿನಗಳಲ್ಲಿ ಅವರು ಶತ್ರುಸೈನ್ಯದಲ್ಲಿ 15,000 ಯುದ್ಧಭಟರನ್ನೂ, 31 ಮಷೀನ್ ಫಿರಂಗಿಗಳನ್ನೂ ಸ್ವಾಧೀನಪಡಿಸಿಕೊಂಡಿದಾರೆ. ಈಗ ರಷ್ಯಾದವರ ಕಡೆ ಅಷ್ಟೇನೂ ವಿಶೇಷ ನಷ್ಟವಾಗಲಿಲ್ಲ. ಅವರ ಜರ್ಮನಿ ಮತ್ತು ಆಸ್ಟ್ರಿಯಾ ಸೈನಿಕರಲ್ಲಿ ವಿನಹ 10,000 ಯುದ್ಧಭಟರಂತೆ ನಷ್ಟಪಟ್ಟಿದಾರೆ.

ಬ್ಯಾಲ್ಟಿಕ್ ಕಡಲಿನಲ್ಲಿ ವಿಂಡಾ ಎಂಬ ತೀರಪಟ್ಟಣಕ್ಕೆ ಜರ್ಮನಿಯವರು ಫಿರಂಗಿ ಗುಂಡುಗಳನ್ನು ಹೊಡೆದು ಜಹಜಿನಿಂದ ಸೈನ್ಯವನ್ನು ಇಳಿಸಬೇಕೆಂದು ಸಾಹಸಪಟ್ಟರು. ಅದು ತಪ್ಪಿ ಹೋಯಿತು. ಅವರು ವಿಶೇಷ ನಷ್ಟವೇನೂ ಮಾಡಲಾರದೆಹೋದರು. ಜರ್ಮನಿಯ ಡಿಸ್ಟ್ರಾಯರೆಂಬ ಹಡಗು ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು ಉಳಿದ ಜಹಜುಗಳು ಹಿಂದಕ್ಕೆ ಹೊರಟುಹೋಗಬೇಕಾಯಿತು.

ಬ್ಯಾಲ್ಟಿಕ್ ಕಡಲಿನಲ್ಲಿ ಒಂದು ಸಣ್ಣ ಜಹಜುಗಳ ಯುದ್ಧವಾಯಿತು. ಸಮುದ್ರದೊಳಗೆ ಸಿಡಿಮದ್ದಿನ ಗುಂಡುಗಳನ್ನು ಇಡುವಂಥಾ ಜರ್ಮನಿಯ ಒಂದು ಜಹಜನ್ನು ರಷ್ಯಾ ಯುದ್ಧದ ಜಹಜು ಓಡಿಸಿಕೊಂಡುಹೋಯಿತು. ಆ ಜರ್ಮನಿಯ ಜಹಜು ಗೊತ್ಲ್ಯಾಂಡ್ ಎಂಬ ಸ್ವೀಡನ್‌ಗೆ ಸೇರಿದ ದ್ವೀಪದ ತೀರಕ್ಕೆ ಹೋಗಿ ಸೇರಿಕೊಳ್ಳಬೇಕಾಯಿತು. ಅದರಲ್ಲಿದ್ದವರ ಪೈಕಿ 21 ಜನರು ಕೊಲೆಯಾದರು; 27 ಮಂದಿ ಗಾಯಪಟ್ಟರು ರಷ್ಯಾ ಯುದ್ಧದ ಜಹಜುಗಳು ಜರ್ಮನಿಯ ಕೆಲವು ಹಡಗುಗಳನ್ನು ಸಂಧಿಸಿ ಅವುಗಳ ಮೇಲೆ ನುಗ್ಗಿ ಯುದ್ಧಮಾಡಿದವು. ಜರ್ಮನಿಯವರು ನಿಂತು ಯುದ್ಧಮಾಡದೆ ಹಿಮ್ಮೆಟ್ಟಿಹೋದರು. ರಷ್ಯಾದವರು ಶತ್ರುವನ್ನು ಬೆನ್ನುಹತ್ತಿ ಸ್ವಲ್ಪ ದೂರ ಓಡಿಸಿಕೊಂಡುಹೋಗಿ ಬಂದುಬಿಟ್ಟರು. ರಷ್ಯಾದವರ ಕಡೆ ಆದ ನಷ್ಟವು ಬಹಳ ಸ್ವಲ್ಪ.

ಡೊಯಿಚ್‌ಲ್ಯಾಂಡ್ ಎಂಬ ಜರ್ಮನಿ ಯುದ್ಧದ ಜಹಜು ಡಾಂಜಿಂಗ್ ತೀರಪಟ್ಟಣದಲ್ಲಿ ಒಡೆದು ಹಾಳಾಯಿತು. ರಷ್ಯಾದವರ ಒಂದು ಡಿಸ್ಟ್ರಾಯರೆಂಬ ಹಡಗು ಜರ್ಮನಿಯ ಒಂದು ಸಬ್‌ಮೆರೀನನ್ನು ಒತ್ತಿ ಅಮುಕಿದ್ದರಿಂದ ಅದು ಮುಳುಗಿದ್ದು ಮತ್ತೆ ಸಮುದ್ರದ ಮೇಲೆ ತಲೆಯೆತ್ತಲೇ ಇಲ್ಲ.

ರಷ್ಯಾ ರಾಜ್ಯದಲ್ಲಿ ಎಲ್ಲಾ ಪಂಗಡಗಳ ಮುಖಂಡರೂ ಇರುವಂತೆ ಗವರ್ನ್‌ಮೆಂಟನ್ನು ಬದಲಾವಣೆ ಮಾಡಿಕೊಂಡಿದಾರೆ. ರಷ್ಯಾ ರಾಜ್ಯಕ್ಕೆ ರಾಜ್ಯವೇ ಯುದ್ಧವನ್ನು ಮುಂದರಿಸಬೇಕೆಂದು ನಿಂತಿದೆ. ಚಕ್ರವರ್ತಿಯವರು ಒಂದು ಇಸ್ತಿಹಾರನ್ನು ಕೊಟ್ಟು ಸಕಲ ಪ್ರಜೆಗಳೂ ಏಕವಾಗಿರೋಣದರಿಂದ ಈ ದೀರ್ಘವಾದ ಯುದ್ಧದಲ್ಲಿ ರಷ್ಯಾವಿಗೆ ಅತ್ಯಂತ ಪ್ರಕಾಶಮಾನವಾದ ಜಯಪ್ರದವು ಉಂಟು ಇದೆ ಎಂಬದಾಗಿ ಸಾರಿಸಿರುತ್ತಾರೆ.

ಇಟಲಿ ಮತ್ತು ಆಸ್ಟ್ರಿಯಾ.

ಮಳೆ ಸುರಿಯುವುದು ವಿಶೇಷವಾದಕಾರಣ ಈ ಭಾಗದಲ್ಲಿ ಯುದ್ಧಕಾರ್ಯಗಳಿಗೆ ತುಂಬಾ ಅಡಚಣೆಯುಂಟಾಗಿದೆ. ಆದರೆ ಇಟಲಿ ಸೈನಿಕರು ಕಷ್ಟಗಳೊಂದನ್ನೂ ಲಕ್ಷ್ಯಮಾಡದೆ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಿರುವರು. ಪೂರ್ವ ಎಲ್ಲೆಕಟ್ಟಿನಲ್ಲಿರುವ ಗೋರಿಷ್ಯ ಎಂಬ ಮುಖ್ಯವಾದ ನಗರಕ್ಕೆ 7 ಮೈಲಿ ಸಮೀಪದವರೆಗೆ ಇಟಲಿಯವರು ಹೋಗಿರುತ್ತಾರೆ. ಕೆಲವು ಠಾಣ್ಯಗಳಲ್ಲಿ ಫಿರಂಗಿ ಗುಂಡುಗಳ ಹಾರಾಟವೇ ವಿಶೇಷವಾಗಿತ್ತು. ಒಂದು ಠಾಣ್ಯದಲ್ಲಿ ಆಸ್ಟ್ರಿಯಾದವರು ಇಟಲಿಯವರ ಮೇಲೆ ನುಗ್ಗಿ ಯುದ್ಧ ಮಾಡಿ ಸೋತು 100 ಹೆಣಗಳನ್ನು ಯುದ್ಧ ಭೂಮಿಯಲ್ಲಿ ಬಿಟ್ಟು ವಾಪಸು ಹೋದರು. ಈಚೆಗೆ ಆಸ್ಟ್ರಿಯಾದವರು ಹೊಸ ಸೈನ್ಯಗಳನ್ನು ಕರಸಿಕೊಂಡಿದಾರೆಂದು ಹೇಳಲಾಗಿದೆ.

ಆಸ್ಟ್ರಿಯಾದ ಒಂದು ಸಬ್‌ಮೆರೀನಿನ ದೆಸೆಯಿಂದ ಇಟಲಿಯ ಒಂದು ಟಾರ್ಪೀಡೋವು ಮುಳುಗಿಹೋಗಿರುವುದು.

ಮೊಂಫಲ್ಕೋನೆ ಎಂಬ ತೀರಪಟ್ಟಣದಲ್ಲಿ ಇಟಲಿಯವರು ಶತ್ರುವಿನ ಅನೇಕ ಹಡಗುಗಳನ್ನೂ, ಯುದ್ಧದ ಜಹಜುಗಳನ್ನೂ ಹಿಡಿದು ಸ್ವಾಧೀನಪಡಿಸಿಕೊಂಡಿರುವಂತೆ ಹೇಳಲಾಗಿದೆ.

ಇಟಲಿ ರಾಯಭಾರಿಯು ಕಾನ್‌ಸ್ಟಾಂಟಿನೋಪಲ್‌ನಿಂದಲೂ, ಟರ್ಕಿ ರಾಯಭಾರಿಯು ರೋಮ್ ನಗರದಿಂದಲೂ ವಾಪಸು ಹೋಗಿರುತ್ತಾರೆ.

ಮಾಂಟನೀಗ್ರೋದವರು ಆಡ್ರಿಯಾಟಿಕ್ ಕಡಲಿನ ಪೂರ್ವತೀರದಲ್ಲಿ ಆಲ್ಬೇನಿಯಾ ಸೀಮೆಯ ಕೆಲವು ಪ್ರಾಂತ್ಯವನ್ನು ಆಕ್ರಮಿಸಿಕೊಂಡಿರುತ್ತಾರೆ. ಅಲ್ಲಿ ಆಸ್ಟ್ರಿಯಾದವರು ಸೇರಿಕೊಂಡು ಪಿತೂರಿಮಾಡುತ್ತಿದ್ದರು. ಈಗ ಮಾಂಟನೀಗ್ರೋದವರು ಈ ಪಟ್ಟಣಗಳನ್ನು ಆಕ್ರಮಿಸಿಕೊಂಡದ್ದರಿಂದ ಅವರು ಸರ್ಬಿಯಾದವರಿಗೆ ಬೆಂಬಲಕೊಡಲು ತುಂಬಾ ಅನುಕೂಲವಾಯಿತು.

ಟರ್ಕಿ.

ಡಾರ್ಡನೆಲ್ಸ್ ಬಳಿ ಗಲ್ಲಿಪೋಲಿ ಅರ್ಧದ್ವೀಪದಲ್ಲಿ ನಮ್ಮ ಪಕ್ಷದವರು ಸ್ವಲ್ಪಮಟ್ಟಿಗೆ ಮುಂದರಿಸಿ ನುಗ್ಗಿ ಹೋಗಿದಾರೆ ಬ್ರಿಟಿಷ್ ಸೈನ್ಯಗಳು ಟರ್ಕಿಯವರ ಐದು ಕಂದಕಗಳನ್ನು ಗೆದ್ದು ಸ್ವಾಧೀನಪಡಿಸಿಕೊಳ್ಳಬೇಕಾಯಿತು. ಮೊದಲು ಬಹು ರಭಸವಾದ ಗುಂಡುಗಳ ಮಳೆ ಸುರಿಸಿ ಮಾರ್ಗವನ್ನು ಬಿಡಿಸಿಕೊಂಡರು. ಒಂದು ಬ್ರಿಟಿಷ್ ರೆಜಿಮೆಂಟ್ ಮುಂದರಿಸಿ ನುಗ್ಗಿಹೋಗಿ ಶತ್ರುವಿನ ಮೊದಲನೇ ಮೂರು ಕಂದಕಗಳನ್ನು ಆಕ್ರಮಿಸಿಕೊಂಡಿತು; ಬಳಿಕ ಎರಡನೆಯ ರೆಜಿಮೆಂಟು ನುಗ್ಗಿ ಹೋಗಿ ಅಲ್ಲಿಂದ ಮುಂದಿದ್ದ ಎರಡು ಕಂದಕಗಳನ್ನು ಗೆದ್ದುಕೊಂಡಿತು. ತರುವಾಯ ಮೂರನೇ ರೆಜಿಮೆಂಟಿಗೆ ಉಳಿದ ಎರಡು ಕಂದಕಗಳು ಸ್ವಾಧೀನವಾದವು. ಇಷ್ಟಕ್ಕೆ ಗೂರ್ಖಾ ಸಿಪಾಯಿಗಳಿಗೆ ತೃಪ್ತಿಯುಂಟಾಗಲಿಲ್ಲ. ಅವರು ಅಲ್ಲಿಂದ ಮುಂದೆ ಎತ್ತರವಾದ ಪ್ರದೇಶಕ್ಕೆ ನುಗ್ಗಿ ಹೋಗಿ ಆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು, ಶತ್ರುವು ಎಷ್ಟಾವರ್ತಿ ಕಿತ್ತುಕೊಳ್ಳಬೇಕೆಂದು ನುಗ್ಗಿ ಬಂದರೂ ಬಿಟ್ಟುಕೊಡದೆ ಕಾಪಾಡಿಕೊಂಡಿದಾರೆ. ಈ ಅರ್ಧದ್ವೀಪವನ್ನು ಗೆಲ್ಲುವುದಕ್ಕೆ ನಮ್ಮ ಪಕ್ಷದವರು ಕಠಿಣವಾದ ಹಲವು ಕದನಗಳನ್ನು ನಡಿಸಬೇಕಾಗಿದೆ.

ಟರ್ಕಿಯವರು ಕಂದಕಗಳನ್ನು ಬಿಡಿಸಿಕೊಳ್ಳಬೇಕೆಂದು ಮತ್ತೆ ನುಗ್ಗಿ ಕದನಮಾಡಿದರು. ಆದರೆ ಅವರು ಸೋತು ಬಹಳ ಸೈನ್ಯವನ್ನು ಕಳಕೊಂಡು ಹಿಂದಕ್ಕೆ ಹೋಗಬೇಕಾಯಿತು. ಫ್ರೆಂಚ್ ಸೈನಿಕರು ನುಗ್ಗಿಹೋಗಿ ಕೆಲವು ಮುಖ್ಯ ಸ್ಥಾನಗಳನ್ನು ಆಕ್ರಮಿಸಿಕೊಂಡಿದಾರೆ. ಡಾರ್ಡನೆಲ್ಸ್ ಜಲಮಾರ್ಗದಲ್ಲಿರುವ ನಮ್ಮ ಹಡಗುಗಳು ಅವರಿಗೆ ಬಹಳವಾಗಿ ಸಹಾಯಮಾಡಿದವು.

ಬ್ರಿಟಿಷ್ ಯುದ್ಧದ ಜಹಜು ಹೋಗಿ ಏಷ್ಯಾ ಮೈನರಿನ ತೀರಕ್ಕೆ ಫಿರಂಗಿ ಗುಂಡುಗಳನ್ನು ಹಾಕಿತು. ಇದರಿಂದ ಅಲ್ಲಿ ಶತ್ರುವು ಇಟ್ಟುಕೊಂಡಿದ್ದ ಕೆಲವು ಯುದ್ಧಸಾಮಗ್ರಿಗಳು ನಾಶವಾಗಿರುತ್ತವೆ.

ಕಪ್ಪು ಕಡಲಿನಲ್ಲಿ ರಷ್ಯಾದವರ ಒಂದು ಸಬ್‌ಮೆರೀನು ಟರ್ಕಿಯವರ ಎರಡು ಜಹಜುಗಳನ್ನೂ, ಕಲ್ಲಿದ್ದಲು ಮತ್ತು ಆಹಾರ ಸಾಮಗ್ರಿಗಳು ಭರ್ತಿಯಾಗಿದ್ದ ಒಂದು ಹಡಗನ್ನೂ ಮುಳುಗಿಸಿದ್ದಲ್ಲದೆ ಸಮುದ್ರ ತೀರದಲ್ಲಿದ್ದ ಇನ್ನೊಂದು ಜಹಜನ್ನು ಒಡೆದುಹಾಕಿತು.

ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಫ್ರೆಂಚ್ ದಳಪತಿಗೆ ಘೋರ ಗಾಯವಾಗಿರುತ್ತದೆ. ಆತನ ಕೆಲಸಕ್ಕೆ ಇನ್ನೊಬ್ಬನು ನೇಮಕವಾದನು.

ಆಫ್ರಿಕಾದಲ್ಲಿ.

ಜರ್ಮನಿಯ ದಕ್ಷಿಣ—ಪಶ್ಚಿಮ ಆಫ್ರಿಕಾದಲ್ಲಿ ಜನರಲ್ ಬೋಥಾರವರು ಮುಂದರಿಸಿ ನುಗ್ಗಿಹೋಗುತ್ತಿದಾರೆ. ದಾರಿಯ ಉದ್ದಕ್ಕೂ ಸಿಕ್ಕಿದ ಹಲವು ನಗರಗಳನ್ನೂ ಗ್ರಾಮಗಳನ್ನೂ ಅವರು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಮಧ್ಯ ಆಫ್ರಿಕಾದಲ್ಲಿ ಬ್ರಿಟಿಷ್ ಸೈನಿಕರು ನುಗ್ಗಿಹೋಗಿ ಜರ್ಮನಿಯವರ ಒಂದು ಕೋಟೆಯನ್ನು ಹಾಳುಮಾಡಿದರು. ಒಂದು ತಂತೀವರ್ತಮಾನದ ಠಾಣ್ಯವನ್ನೂ, ಕೆಲವು ದೋಣಿಗಳನ್ನೂ ನಾಶಪಡಿಸಿರುತ್ತಾರೆ. ಇದಲ್ಲದೆ ಅವರಿಗೆ ಒಂದು ಫಿರಂಗಿ, 2 ಮೆಷೀನ್ ಫಿರಂಗಿಗಳು, ಅನೇಕ ಬಂದೂಕುಗಳು, ಈ ಮೊದಲಾದ ಯುದ್ಧಸಾಮಗ್ರಿಗಳು ಅಲ್ಲಿ ಸಿಕ್ಕಿರುವವು.

ಇತರ ವಿಷಯಗಳು.

ಈ ಯುದ್ಧಕ್ಕೆ ಅಪಾರವಾದ ದ್ರವ್ಯ ಖರ್ಚಾಗುತ್ತದೆ ಎಂದು ಗ್ರೇಟ್ ಬ್ರಿಟನ್‌ನಲ್ಲಿ ಎಲ್ಲರಿಗೂ ವೇದ್ಯವಾಗುತ್ತಿದೆ. ಒಂದು ವರುಷದ ಖರ್ಚು ನೂರ ಕೋಟಿ ಪೌಂಡುಗಳಾಗಿವೆ. ಪ್ರಧಾನಿಗಳಾದ ಮಿ|| ಆಸ್ಕ್ವಿತ್‌ರವರೂ, ಮಿ|| ಬೊನರ್ ಲಾರವರೂ ಭಾಷಣಗಳನ್ನು ಮಾಡಿ, ಸಮಸ್ತ ಪ್ರಜೆಗಳೂ ದುಂದುಗಾರಿಕೆ ವನ್ನು ಬಿಟ್ಟು ಮಿತವ್ಯಯಮಾಡಬೇಕೆಂದೂ, ಹಣವನ್ನು ಉಳಿಸಿ ಯುದ್ಧದ ಖರ್ಚಿಗೆ ಒದಗಿಸಬೇಕೆಂದೂ ತಿಳಿಯಪಡಿಸಿದರು. ಗ್ರೇಟ್ ಬ್ರಿಟನ್‌ನಲ್ಲಿ ಪ್ರಜೆಗಳು ಖರ್ಚು ಕಳೆದು ವರುಷಕ್ಕೆ 30—40 ಕೋಟಿ ಪೌಂಡುಗಳಷ್ಟು ದ್ರವ್ಯವನ್ನು ಕೂಡಿಸಿಡುತ್ತಾರೆ. ಈ ಯುದ್ಧಕ್ಕೆ ಇದಕ್ಕಿಂತ ಎರಡರಷ್ಟು ದ್ರವ್ಯಬೇಕಾಗುವುದು. ಈಗಲಾದರೋ ಯುದ್ಧದ ದೆಸೆಯಿಂದ ವ್ಯಾಪಾರಾದಿಗಳು ಕುಂದಿಹೋಗಿರುವವು ಹೊರಗಿನಿಂದ ಬರತಕ್ಕ ಸರಕುಗಳಿಗೆ ಪ್ರಜೆಗಳು ಹೆಚ್ಚು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಆದಕಾರಣ ಯುದ್ಧದ ಖರ್ಚಿಗೆ ಹಣ ಒದಗುವುದಕ್ಕೋಸ್ಕರ ಗ್ರೇಟ್ ಬ್ರಿಟನ್ ಪ್ರಜೆಗಳು ಹೊರಗಣ ಪದಾರ್ಥಗಳನ್ನು ಕೊಂಡುಕೊಳ್ಳಬಾರದು. ಇಲ್ಲವಾದರೆ ದ್ರವ್ಯವು ಪರದೇಶಗಳಿಗೆ ಹೋಗಿಬಿಡುತ್ತದೆ. ಈ ಯುದ್ಧವನ್ನು ಕಡೇ ವರೆಗೆ ನಡಿಸಿಯೇ ತೀರಬೇಕೆಂದು ಸಕಲರೂ ಸಂಕಲ್ಪ ಮಾಡಿಕೊಂಡಿರುವುದರಿಂದ ಅದರ ಖರ್ಚಿಗೆ ಬೇಕಾಗುವ ಹಣವನ್ನು ಒದಗಿಸುವುದಕ್ಕೆ ಸಿದ್ಧರಾಗಿದಾರೆ. ಕಡೆಯ ಬಿಡಿಕಾಸು ಖರ್ಚಾಗುವ ವರೆಗೂ, ಕಡೆಯ ಸೈನಿಕನು ಮಡಿಯುವ ವರೆಗೂ, ಕಡೆಯ ರಕ್ತದ ತೊಟ್ಟು ಭೂಮಿಯ ಮೇಲೆ ಬೀಳುವ ವರೆಗೂ ಯುದ್ಧವನ್ನು ನಡಿಸುತ್ತೇವೆನ್ನುವುದೇ ನಮ್ಮ ಸಂಕಲ್ಪ ಎಂದು ಮಿ|| ಆಸ್ಕ್ವಿತ್‌ರವರು ಹೇಳಿದರು.

ಯುದ್ಧ ಸಾಮಗ್ರಿಗಳನ್ನು ತಯಾರುಮಾಡಿಕೊಳ್ಳುವುದಕ್ಕೆ ಗ್ರೇಟ್ ಬ್ರಿಟನ್ ದೇಶದಲ್ಲಿ ಅವಶ್ಯವಾದ ಏರ್ಪಾಟುಗಳನ್ನು ಮಾಡಿದ್ದಾಯಿತು. ಕಾರ್ಖಾನೆಗಳಲ್ಲಿ ಇತರ ಸಾಮಾನುಗಳ ತಯಾರಿಯು ನಿಲ್ಲಿಸಲ್ಪಟ್ಟಿದೆ. ಪ್ರತಿ ಒಬ್ಬ ಮನುಷನೂ ಯುದ್ಧ ಸಾಮಗ್ರಿಗಳನ್ನು ತಯಾರುಮಾಡಿ ಒದಗಿಸುವುದರಲ್ಲಿ ಸಹಾಯಮಾಡಬೇಕು. ಕೆಲಸ ಮಾಡುವುದಕ್ಕೆ ಗಂಡಸರು ಒದಗುವುದು ಕಷ್ಟವಾದದ್ದರಿಂದ ಸಾವಿರಾರು ಹೆಂಗಸರು ಹೋಗಿ ಗಂಡಸರ ಕೆಲಸಗಳನ್ನು ಮಾಡುತ್ತಿದಾರೆ. ಗಂಡಸರಾದರೋ ಸೈನ್ಯಕ್ಕೆ ಸೇರಿಕೊಂಡಿರುವರು. ಅವರಿಗೆ ಯುದ್ಧ ಮಾಡುವುದಕ್ಕೆ ಬೇಕಾಗುವ ಸಿಡಿಮದ್ದು ಗುಂಡು ಮೊದಲಾದವನ್ನು ಹೆಂಗಸರು ತಯಾರುಮಾಡಿಕೊಡುತ್ತಾರೆ. ಕೈಯಿಟ್ಟ ಈ ಯುದ್ಧವೆಂಬ ಮಹಾಕಾರ್ಯವು ಸಾಮಾನ್ಯವಾದದ್ದಲ್ಲವೆಂದು ಸಮಸ್ತ ಪ್ರಜೆಗಳಿಗೂ ಗೋಚರವಾಗಿರುತ್ತದೆ. ಜರ್ಮನಿಯವರಾದರೋ ಹಲವು ವರುಷಗಳಿಂದಲೂ ಯುದ್ಧಕ್ಕೆ ಸಿದ್ಧಪಡಿಸಿಕೊಳ್ಳುತ್ತಾ ಬಂದಿರುವಕಾರಣ ಅವರು ಎಲ್ಲಾ ಭಾಗಗಳಲ್ಲೂ ಸನ್ನದ್ಧರಾಗಿದಾರೆ. ಉಳಿದ ಯಾವ ರಾಜ್ಯದವರೂ ಯುದ್ಧ ಸನ್ನದ್ಧರಾಗಿರಲಿಲ್ಲ. ಇವರಿಗೆಲ್ಲಾ ಈಗಿನ ಯುದ್ಧದ ಮಹತ್ವವು ಈಗೀಗ ವೇದ್ಯವಾಗುತ್ತಿದೆ. ದೇಶಕ್ಕೆ ದೇಶವೇ ಉತ್ಸಾಹ ಭರಿತವಾದದ್ದಾಗಿರುವುದು.

ಆಸ್ಟ್ರಿಯಾದಲ್ಲಿ ಕಾಲಕ್ಕೆ ಸರಿಯಾದ ಮಳೆಗಳು ಸುರಿಯದೆ ದವಸ ಧಾನ್ಯಾದಿಗಳ ಬೆಳೆ ಬಹಳ ಮಟ್ಟಿಗೆ ಕೆಟ್ಟುಹೋಯಿತು.

ಕಳೆದ ವಾರ ಜರ್ಮನಿಯ ಸಬ್‌ಮೆರೀನುಗಳ ಹಾವಳಿ ಹೆಚ್ಚಾಯಿತು. ಸಕ್ಕರೆ, ಧಾನ್ಯಾದಿಗಳು ಭರ್ತಿಯಾಗಿ ಇಂಗ್ಲೆಂಡಿಗೆ ಬರುತ್ತಿದ್ದ ಹಲವು ಹಡಗುಗಳನ್ನು ಶತ್ರುವು ಮುಳುಗಿಸಿಬಿಟ್ಟನು. ಬ್ರಿಟಿಷರ ಮೂರು ಹಡಗುಗಳೂ, ನೊರ್ವೇಯವರ ಮೂರು ಹಡಗುಗಳೂ, ಇಟಲಿಯವರ ಒಂದು ಹಡಗೂ ಮುಳುಗಿಹೋದವು. ಅವುಗಳಲ್ಲಿದ್ದ ಜನಗಳನ್ನು ಕೂಡಿದ ಮಟ್ಟಿಗೂ ಬದುಕಿಸಿದರು. ಒಂದು ಹಡಗಿನಲ್ಲಿ ಮಾತ್ರ ಅನೇಕರು ಮುಳುಗಿಹೋದರು; ಈ ಪೈಕಿ ಹಲವರು ಅಮೇರಿಕದ ಪ್ರಜೆಗಳು. ಸಬ್‌ಮೆರೀನುಗಳಲ್ಲಿ ಫಿರಂಗಿಗಳನ್ನು ಇಟ್ಟುಕೊಂಡು, ಕಂಡ ಹಡಗುಗಳಿಗೆಲ್ಲಾ ಗುಂಡುಗಳನ್ನು ಹೊಡೆದು ಒಳಗಿರುವ ಜನಗಳನ್ನು ಕೊಲ್ಲುತ್ತಲೂ, ಟಾರ್ಪೀಡೋಗಳನ್ನು ಬಿಟ್ಟು ಹೊಡಿಸಿ ಹಡಗುಗಳನ್ನು ಮುಳುಗಿಸುತ್ತಲೂ ಬಂದಿದಾರೆ.

ಬ್ರಿಟಿಷರ ಡಿಸ್ಟ್ರಾಯರೆಂಬೊಂದು ಹಡಗು ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡನ್ನು ಬಡಿದು ಚೂರಾಯಿತು. ಅದರಲ್ಲಿದ್ದವರ ಪೈಕಿ 14 ಮಂದಿ ಸಿಕ್ಕಿ ಇಲ್ಲ. ಈ ಹಡಗು ಹಳೆಯದು; ಇದನ್ನು ಸಮುದ್ರ ತೀರಪಟ್ಟಣಕ್ಕೆ ಎಳೆದು ತಂದಿರುತ್ತಾರೆ.

ಅಮೇರಿಕದ ಪ್ರಜೆಯಾಗಿರುವ ಒಬ್ಬ ಜರ್ಮನಿಯವನು ಅಮೇರಿಕದ ವಾಷಿಂಗ್‌ಟನ್ ಎಂಬ ಮಹಾನಗರದಲ್ಲಿ ಪಿಸ್ತೂಲಿನಿಂದ ಗುಂಡುಹೊಡೆದು ಮಿ|| ಮೋರ್ಗನ್ ಎಂಬ ಕೋಟ್ಯಾಧೀಶ್ವರನನ್ನು ಗಾಯಪಡಿಸಿದನು. ಗ್ರೇಟ್ ಬ್ರಿಟನ್‌ಗೆ ಆತನು ಸಹಾಯಮಾಡುತ್ತಿದ್ದದ್ದೇ ಈ ಕ್ರೌರ್ಯಕೃತ್ಯಕ್ಕೆ ಕಾರಣವಾಗಿದೆ. ಇದಲ್ಲದೆ ಅದೇ ರಾತ್ರಿಯು ಅಮೇರಿಕದ ವಾಷಿಂಗ್‌ಟನ್ ಎಂಬ ದಿವ್ಯ ಮಹಾನಗರದಲ್ಲಿ ಪಾರ್ಲಿಮೆಂಟ್ ಸಭೆಯಾದ ಕೆಪಿಟಾಲ್ ಎಂಬ ದಿವ್ಯವಾದ ಕಟ್ಟಡಕ್ಕೆ ಸಿಡಿಮದ್ದಿನ ಗುಂಡು ಹಾಕಿದ್ದರಿಂದ ಆ ಕಟ್ಟಡದ ಒಂದು ಭಾಗವು ಒಡೆದು ಹಾಳಾಯಿತು ಈ ಕ್ರೂರಕೃತ್ಯದಿಂದ ಅಮೇರಿಕದವರ ಆಕ್ರೋಶವು ಜರ್ಮನಿಯವರ ಮೇಲೆ ಇನ್ನೂ ಹೆಚ್ಚಾಗುತ್ತದೆ.

ಒಳದೇಶದ ವೃತ್ತಾಂತಗಳು.

ಆನೇಕಲ್ ತಾ|| ಸರ್ಜಾಪುರದಲ್ಲೂ, ದೇವನಹಳ್ಳಿ ತಾ|| ವಡಿಗೇನಹಳ್ಳಿಯಲ್ಲೂ ಇಂಗ್ಲೀಷ್ ಆಸ್ಪತ್ರೆಗಳನ್ನು ಇಡಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತೀರ್ಮಾನವಾಗಿದೆ.

ಕಳೆದ ಭಾನುವಾರ ಮಧ್ಯಾಹ್ನ ನಮ್ಮ ದಿವಾನ್‌ರವರು ಮೋಟಾರಿನಲ್ಲೂ, ಮೊದಲನೇ ಕೌನ್ಸಲರವರು ಶನಿವಾರ ಮೆಯಿಲ್ ಗಾಡಿಯಲ್ಲೂ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡಿದರು.

ಚಿಕ್ಕಬಳ್ಳಾಪುರದಲ್ಲಿ ಗೋರಕ್ಷಣೆಯಗಳ ರೋಗಚಿಕಿತ್ಸೆಗೆ ಒಂದು ಆಸ್ಪತ್ರೆಯನ್ನು ಇಡಿಸಿಕೊಟ್ಟರೆ ಅದರ ನಿರ್ವಹಣೆಯ ಖರ್ಚನ್ನು ಕೊಡುತ್ತೇವೆಂದು ಕೋಲಾರ್ ಡಿ|| ಬೋರ್ಡಿನವರು ಒಪ್ಪಿ ಗವರ್ನ್‌ಮೆಂಟಿನವರನ್ನು ಕೇಳಿಕೊಂಡಿದಾರೆ.

ಕೋಲಾರದ ಡಿಸ್ಟ್ರಿಕ್ಟ್ ಬೋರ್ಡಿನವರು ಚಿಕ್ಕಬಳ್ಳಾಪುರಕ್ಕೆ ರೈಲನ್ನು ಬಡಾವಣೆಮಾಡುವುದಕ್ಕಾಗಿ ಹಣ ಸಾಲದೆಂದು ತಿಳಿಸಿದ್ದರ ಮೇಲೆ ಸರ್ಕಾರದವರು ಎರಡು ಲಕ್ಷ ರೂಪಾಯಿ ಸಾಲ ಕೊಡುವುದಾಗಿ ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.

ಕಳೆದ ಶುಕ್ರವಾರ ಬರೋಡಾ ಸಂಸ್ಥಾನದ ರಾಜಕುಮಾರರು ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡುತ್ತಿರುವಲ್ಲಿ ಬಿಡದಿಯ ಹತ್ತಿರ ಅವರಿದ್ದ ಮೋಟರಿಗೆ ಏನೋ ಅಪಾಯ ಸಂಭವಿಸಿ, ಅವರಿಗೂ ಮೋಟರ್ ನಡಿಸುತ್ತಿದ್ದವನಿಗೂ ಅಲ್ಪಸ್ವಲ್ಪ ಗಾಯವಾಯಿತೆಂದು ಪ್ರಕಟವಾಗಿದೆ.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಆನೇಕಲ್ ತಾಲೂಕಿನಲ್ಲಿ ಹೊಸಹಳ್ಳಿ ಪುಟ್ಟಪ್ಪ ರೂ. 2, ಹಾರೋಹಳ್ಳಿ ಗೋವಿಂದಪ್ಪ ರೂ. 1, ಹಾರೋಹಳ್ಳಿ ಗ್ರಾಮಸ್ಥರು ರೂ. 2, ಹೊಸಹಳ್ಳಿ ಗ್ರಾಮಸ್ಥರು ರೂ. 3, ಈ ರೀತಿ 8 ರೂಪಾಯಿ ಚಂದಾ ಕೊಟ್ಟಿದಾರೆಂದು ಅಮಲ್ದಾರರು ತಿಳಿಸುತ್ತಾರೆ.

ಚಿತ್ರದುರ್ಗ ತಾಲೋಕು ಭರಮಸಾಗರಕ್ಕೆ ಡೆಪ್ಯುಟಿ ಇನ್‌ಸ್ಪೆಕ್ಟರು ಹೋಗಿ ಸ್ಕೂಲ್ ಹುಡುಗರಿಗೆ ಬಹುಮಾನಗಳನ್ನು ಕೊಟ್ಟರೆಂದೂ, ಆ ಕಾಲದಲ್ಲಿ ಒಂದು ಇಂಗ್ಲಿಷ್ ಸ್ಕೂಲನ್ನು ಇಡುವುದಕ್ಕೆ 90 ರೂಪಾಯಿ ಚಂದಾ ವಸೂಲ್ಮಾಡಿ ಹಾಜರು ಮಾಡುತ್ತೇವೆಂದು ಪ್ರಜಾಮುಖಂಡರು ಒಪ್ಪಿಕೊಂಡರೆಂದೂ ತಿಳಿದು ಬಂದಿದೆ.

ಕಳೆದ ಗುರುವಾರ ಮಧ್ಯಾಹ್ನ ಶ್ರೀರಂಗಪಟ್ಟಣದಲ್ಲಿ ಗಂಗಾಧರೇಶ್ವರ ದೇವಸ್ಥಾನದ ಮುಂದೆ ಇದ್ದ ರಥದ ಚಕ್ರಗಳ ಬಳಿ ಕೆಲವು ಹುಡುಗರು ಆಡುತ್ತಾ ಒಂದು ಚಕ್ರವನ್ನು ಅಲ್ಲಾಡಿಸಿ ತಳ್ಳುತ್ತಿದ್ದಾಗ ಅದು ದೂರಿಯಿಂದ ಕಳಚಿಕೊಂಡು ಬಿದ್ದು 8-9 ವರುಷದ ಒಬ್ಬ ಹುಡುಗನು ಆಕಸ್ಮಿಕ ಮರಣಕ್ಕೆ ಗುರಿಯಾದನು.

ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ಸಭೆಯ ಕಾರ್ಯಗಳು ಕಳೆದ ಗುರುವಾರ ಪೂರೈಸಿದವು. ಬುಧವಾರ ಸಾಯಂಕಾಲ ಮೈಸೂರು ಮ್ಯುನಿಸಿಪಲ್ ಕೌನ್ಸಲರುಗಳು ಒಂದು ಸಂತೋಷಕೂಟವನ್ನು ಟೌನ್ ಹಾಲ್ ಬಂಗಲೆಯಲ್ಲಿ ನಡಿಸಿ ಅತಿಥಿಗಳನ್ನು ಸತ್ಕರಿಸಿದರು. ದಿವಾನ್‌ರೂ, ಕೌನ್ಸಿಲ್ ಮೆಂಬರುಗಳೇ ಮುಂತಾದವರೂ ಅನೇಕ ದೊಡ್ಡಮನುಷ್ಯರೂ ದಯಮಾಡಿದ್ದರು.

ಮಂಜರಾಬಾದು ತಾಲೂಕು ಅರೆಕೆರೆ ಗ್ರಾಮದಲ್ಲಿ ಹೊಸ ಸ್ಕೂಲ್ ಮನೆಯ ಪ್ರವೇಶೋತ್ಸವವು ಕಳೆದ ತಿಂಗಳು ಬಹಳ ಉತ್ಸವದಿಂದ ಪ್ರಾರಂಭ ಮಾಡಲ್ಪಟ್ಟಿತೆಂದೂ, ಡೆಪ್ಯುಟಿ ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರು ಅಗ್ರಾಸನವನ್ನು ವಹಿಸಿ ಬೆಳ್ಳಿ ಬೀಗದ ಕೈಯಿಂದ ಸ್ಕೂಲ್ ಬಾಗಿಲನ್ನು ತೆರೆದು ಪ್ರಜೆಗಳಿಗೆ ಹಿತೋಕ್ತಿಗಳನ್ನು ಹೇಳಿ ಸಂತೋಷಪಡಿಸಿದರೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಅರಕಲಗೂಡು ತಾಲೂಕು ಹೆಬ್ಬಾಲೆ ಗ್ರಾಮದಲ್ಲಿರುವ ಹುಲ್ಲಂಗಾಲದ ಶ್ಯಾ|| ವೆಂಕಟಸುಬ್ಬಯ್ಯನವರೂ ಇವರ ತಮ್ಮ ವೆಂಕಟರಾಮಯ್ಯನವರೂ ಶ್ಯಾ|| ಸೂರ್ಯನಾರಣಪ್ಪನವರ ಮೇಲೂ ಇವರ ಮಗ ಸುಬ್ಬಯ್ಯನವರ ಮೇಲೂ 860 ರೂಪಾಯಿನ ಸ್ವಷ್ಟನೆ ದಸ್ತೈವಜು ಮಾಡಿದರೆಂದು ಫಿರ್ಯಾದು ಆಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ನಡೆಯುತ್ತಿದೆ ಎಂದೂ, ಇದುವರೆಗೆ 22 ಹೀರಿಂಗುಗಳಾದವೆಂದೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಶ್ರೀಮನ್ ಮಹಾರಾಜರವರು ಮ|| ಪುಟ್ಟಯ್ಯಾಜಿ ಅರಸಿನವರ ಕುಮಾರರಾದ ಮ|| ಎಂ. ಪಿ. ಸುಬ್ರಹ್ಮಣ್ಯರಾಜೇ ಅರಸಿನವರಿಗೆ ಅ|| ಕಮಿಷನರ್ ಮ|| ಸಿ. ದೇವರಾಜೆ ಅರಸಿನವರ ಜ್ಯೇಷ್ಠಪುತ್ರಿಯನ್ನು ಕೊಡಿಸಿ ಕಳೆದ ಗುರುವಾರ ಅರಮನೆಯಲ್ಲಿ ವಿವಾಹ ಮಹೋತ್ಸವವನ್ನು ಮಾಡಿಸಿದರು.—ಕಳೆದ ವಾರ ಶ್ರೀಮನ್ ಮಹಾರಾಜರವರು ಸರ್ದಾರ್ ಎಂ. ಗೋಪಾಲಕೃಷ್ಣ ಅರಸಿನವರ ಮನೆಗೂ, ಮ|| ಎ. ವಿ. ಸುಬ್ರಹ್ಮಣ್ಯರಾಜೆ ಅರಸಿನವರ ಮನೆಗೂ ಚಿತ್ತೈಸಿ ಅವರುಗಳ ಆತಿಥ್ಯವನ್ನು ಸ್ವೀಕರಿಸಿದರು.

ನಮ್ಮ ಬ್ರಿಟಿಷ್ ರೆಸಿಡೆಂಟರವರೂ, ಶ್ರೀಮದ್ಯುವರಾಜರವರೂ ಈ ದಿನ ವೈಸ್‌ರಾಯರವರ ಭೇಟಿಗಾಗಿ ಸಿಮ್ಲಾ ಪಟ್ಟಣವನ್ನು ಕುರಿತು ಪ್ರಯಾಣಮಾಡಿರುವರು. ದಿವಾನ್‌ರವರು ತಮ್ಮ ಪ್ರೈವೆಟ್ ಸೆಕ್ರೆಟರಿಯವರ ಕೂಡ ನೆನ್ನೆ ಸಿಮ್ಲಾವಿಗೆ ತೆರಳಿದರು. ವೈಸ್‌ರಾಯರವರು ಮುಂದಿನ ಬುಧವಾರ ದರ್ಬಾರ್ ನಡಿಸಿ ಬಿರುದುಗಳನ್ನು ಸಾಕ್ಷಾತ್ತಾಗಿ ದಯಪಾಲಿಸುವರೆಂದೂ, ನಮ್ಮ ಯುವರಾಜರವರೂ ದಿವಾನ್‌ರವರೂ ಈ ತಿಂಗಳ 23 ನೇ ತಾ. ವಾಪಸು ಬರುವರೆಂದೂ ಕೇಳುತ್ತೇವೆ. ಈ ಕಾಲದಲ್ಲಿ ಮ|| ಎಚ್. ವಿ. ನಂಜುಂಡಯ್ಯ, ಸಿ ಐ ಇ. ರವರು ಸಂಸ್ಥಾನದ ದಿವಾನ್‌ಗಿರಿಯನ್ನು ವಹಿಸಿರುವರು.

ಮೈಸೂರು ಗೆಜೆಟ್ ಸಂಗ್ರಹ.

ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮಿ|| ಆರ್. ಎಚ್. ಕ್ಯಾಂಬೆಲ್ ರವರನ್ನು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮಿ|| ಲಿಂಗೋಪಂತ್ ಬಾಬಾಮಿಯವರು ರಜದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನದ ತಾಲೂಕ್ ಅಮಲ್ದಾರರು ಆಲೂರು ಸಬ್ ತಾಲೂಕಿನ ಛಾರ್ಜನ್ನೂ ವಹಿಸಿರತಕ್ಕದ್ದು.

ಅ|| ಕಮಿಷನರ್ ಮ|| ಕೆ. ವೈಲಾರ್‌ರಾಯರಿಗೆ ಕೊಟ್ಟಿರುವ ಪ್ರಿವಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಕಡೂರು ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಮಿ|| ಎಂ. ಜೆ. ಸಾಮ್ಯುಯಲ್‌ರವರಿಗೆ ಕೊಟ್ಟಿರುವ ರಜವನ್ನು ಇನ್ನು ಮೂರು ತಿಂಗಳು ಜಾಸ್ತಿ ಮಾಡಿದೆ.

ಮ ||ಎಂ. ಜಿ. ರಾಮರಾಯರನ್ನು ಜೂಲೈ ತಾ. 1 ರಿಂದ ಫಾರೆಸ್ಟ್ ಕನ್ಸರ್ವೆಟರಾಗಿ ಖಾಯಂ ಮಾಡಿದೆ.

ಶ್ರೀರಂಗಪಟ್ಟಣದ ತಾಲೂಕು ಅಮಲ್ದಾರ್ ಮ|| ಕೆ. ವೇದಾಂತಯ್ಯಂಗಾರ್ರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಅಮಲ್ದಾರ್ ಮಿ|| ಇ. ಎಚ್ ಹಾಪ್ಸನ್ ರವರನ್ನು ಶಿಡ್ಲಘಟ್ಟದಿಂದ ಹೊಸದುರ್ಗಕ್ಕೂ, ಮ|| ಕೆ. ಶ್ರೀನಿವಾಸರಾಯರನ್ನು ಹೊಸದುರ್ಗದಿಂದ ಶಿಡ್ಲಘಟ್ಟಕ್ಕೂ ವರ್ಗಮಾಡಿದೆ.

ಸೀನಿಯರ್ ಅ|| ಕೆಮಿಸ್ಟ್ ಮ|| ಎನ್. ಸಂಪತ್ತಯ್ಯಂಗಾರ್ರಿಗೆ ಕೊಟ್ಟಿರುವ ಪ್ರಿವಲೆಜ್ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿಮಾಡಿದೆ

ಮುಂದೆ ಹೇಳುವವರನ್ನು ಒಂದು ವರುಷ ಗ್ರಾಮ ಮುನ್ಸಿಫರಾಗಿ ನೇಮಕಮಾಡಿದೆ—ಹೊಳೆಹೊನ್ನೂರಿಗೆ ಮ|| ಜಹಗೀರ್‌ದಾರ್ ಶಂಕರಪ್ಪನವರು, ಆನವಟ್ಟಿಗೆ ಮ|| ಶ್ಯಾನುಭೋಗ್ ಗೋಪಾಲರಾಯರು, ಹುಮಚಕ್ಕೆ ಮಠದ ಏಜಂಟ್ ಮ|| ಕುಬೇರಪ್ಪನವರು, ಮೇಗರವಳ್ಳಿಗೆ ಮ|| ಪಟೇಲ್ ರಾಮಣ್ಣ ಹೆಗ್ಗಡೆಯವರು.

ಪೂರ್ವ ಬಂಗಾಳಕ್ಕೆ ಸೇರಿದ ಟಿಪ್ಪಾರಾ, ನೋಕಹಾಲಿ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಅಪಾರ ಮಳೆ ಸುರಿದು ನದಿ ಹೊಳೆಗಳಲ್ಲಿ ಪ್ರವಾಹ ಬಂದು ನೂರಾರು ಗ್ರಾಮಗಳು ಕೊಚ್ಚಿಹೋಗಿ ಪ್ರಜೆಗಳು ಜೀವನಕ್ಕಿಲ್ಲದೆ ಬಹಳ ಸಂಕಟಪಡುತ್ತಿದಾರೆ. ಗವರ್ನ್‌ಮೆಂಟಿನವರು ಪ್ರಜೆಗಳ ಕಷ್ಟ ನಿವಾರಣೆಗೋಸ್ಕರ ಒಂದು ಧರ್ಮ ಫಂಡನ್ನು ಪ್ರಾರಂಭಿಸಿ ಬಂಗಾಳದಲ್ಲಿ ಚಂದಾ ಕೂಡಿಸುತ್ತಿರುವುದಲ್ಲದೆ ಸರ್ಕಾರದಿಂದಲೂ ಹಣವನ್ನು ಧರ್ಮಾರ್ಥವಾಗಿಯೂ ತಕಾವಿ ಸಾಲಗಳಾಗಿಯೂ ಸ್ಯಾಂಕ್ಷನ್ ಮಾಡಿದಾರೆ. ಇದಲ್ಲದೆ ಮನೆಮಠಗಳನ್ನು ಕಟ್ಟಿಕೊಳ್ಳುವುದಕ್ಕೆ ಜನಗಳಿಗೆ ಬಂಗಲೆ ಸಾಮಾನುಗಳನ್ನು ಕೊಡಿಸುತ್ತಿರುವರು. ಇಷ್ಟಾದರೂ ಆ ಪ್ರಾಂತ್ಯ ಕಷ್ಟಕ್ಕೆ ಸಿಕ್ಕಿದ ಪ್ರಜೆಗಳ ಪೈಕಿ ಟಿಪ್ಪಾರಾದೊಳಗೆ ಹಾಲ್ಪರು ಹೊಟ್ಟೆಗಿಲ್ಲದೆ ಪ್ರಾಣಬಿಟ್ಟಂತೆ ತಿಳಿಯುವುದು.

ಚಿತ್ರದುರ್ಗ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿ ಸಂಘ.

ಬೇಸಗೆ ಬಿಸಿಲಿಗೋಸ್ಕರ ಈ ಮೂರು ತಿಂಗಳಿಂದಲೂ ಮೀಟಿಂಗುಗಳು ನಡೆದಿರಲಿಲ್ಲ. ಈ ಜುಲೈ 4 ನೇ ತಾ. ಭಾನುವಾರ ಸ್ಪೆಷಲ್ ಮೀಟಿಂಗು ನಡೆಸಲ್ಪಡುವದು. ಈ ಕಾಲದಲ್ಲಿ ಸಂಘದ ವಾರ್ಷಿಕ ರಿಪೋರ್ಟನ್ನು ಓದುವದಲ್ಲದೆ ಮುಂದಿನ ವರ್ಷದ ಕಾರ್ಯಗಳನ್ನೆಲ್ಲಾ ಗೊತ್ತುಮಾಡಿರಬೇಕೆಂದು ಏರ್ಪಾಡಾಗಿರುತ್ತೆ. ಸಂಘದ ಪ್ರೆಸಿಡೆಂಟರಾಗಿರುವ ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಎಂ. ಕೆ. ತಿರುಮಲಾಚಾರ್ರು ರಿಟೈರ್ ಆಗುವರಾದ್ದರಿಂದ ಸಭೆಯ ಪರವಾಗಿ ಕೃತಜ್ಞತೆ ಹೇಳುವದಲ್ಲದೆ ಈ ಸಭೆಗೆ ಅವರು ಮಾಡಿರುವ ಸಹಾಯಕ್ಕಾಗಿ ಕೃತಜ್ಞತೆಯನ್ನು ಸೂಚಿಸುವದು ಕರ್ತವ್ಯವು. ಈ ಡಿಸ್ಟ್ರಿಕ್ಟಿನ ಬ್ರಾಂಚ್ ಸಂಘದ ಎಲ್ಲಾ ಮೆಂಬರುಗಳೂ ಆ ಕಾಲಕ್ಕೆ ದಯಮಾಡಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಕಾರ್ಯವನ್ನು ನೆರವೇರಿಸಬೇಕೆಂದು ಪ್ರಾರ್ಥಿಸುತ್ತೇನೆ

ವೀಣಾ ಭಕ್ತಪ್ಪ, ಜಾಯಿಂಟ್ ಸೆಕ್ರೆಟರಿ.

ನರಸರಾಜ ರೀಡಿಂಗ್ ರೂಮ್ ಸ್ಥಾಪನೆ.

ಕಳೆದ ತಾ 18 ನೇ ಶುಕ್ರವಾರ ತೀರ್ಥಹಳ್ಳಿ ತಾಲ್ಲೂಕು ಕುಂದವಳ್ಳಿಯಲ್ಲಿ ವಾಚಕಶಾಲೆಯನ್ನು ಸ್ಥಾಪಿಸಬೇಕೆಂದು ಈ ಗ್ರಾಮದ ಗ್ರಾಮಾಭಿವೃದ್ಧಿ ಸಂಘದವರು ಮತ್ತು ಪರಸ್ಪರ ಸಹಾಯ ಸಂಘದವರು ನಿಶ್ಚಯಿಸಿಕೊಂಡಿದ್ದರು ಈ ಕಾರ್ಯವನ್ನು ನೆರವೇರಿಸುವದಕ್ಕೆ ಇಲ್ಲಿಗೆ ಸರ್ಕೀಟು ಬಂದಿದ್ದ ಮ|| ಅಬ್ದುಲ್ ವಜೀದ್ ಸಾಹೇಬರವರನ್ನು ಅಪೇಕ್ಷಿಸಿದವು ಅಮಲ್ದಾರ್ ಮ|| ಶ್ರೀನಿವಾಸಯ್ಯಂಗಾರ್ರು ಕೂಡಾ ದಯಮಾಡಿಸಿ ಗ್ರಾಮಸ್ಥರ ಕೋರಿಕೆಯಂತೆ ಕುಂದವಳ್ಳಿ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿ ಸೆ|| ಪೋಲೀಸ್ ಸಾ|| ಅಬ್ದುಲ್ ವಜೀದ್ ರವರ ಅಗ್ರಾಸನಾಧಿಪತ್ಯದಲ್ಲಿ ನರಸರಾಜ ರೀಡಿಂಗ್ ರೂಮ್ ಸ್ಥಾಪಿತವಾಯಿತು. ಮೈಸೂರು ಸಂಸ್ಥಾನದಿಂದಲೂ, ಹೊರಗಿನಿಂದಲೂ ಹರಿಸಲ್ಪಟ್ಟ ಕರ್ನಾಟಕ ಪತ್ರಿಕೆಗಳು ಮೇಜಿನ ಮೇಲೆ ಇಡಲ್ಪಟ್ಟಿತ್ತು. ರೀಡಿಂಗ್ ರೂಮ್ ಈ ಗ್ರಾಮದಲ್ಲಿರುವದರಿಂದ ಉಂಟಾಗತಕ್ಕ ಅನೇಕ ಪ್ರಯೋಜನಗಳನ್ನು ಅಮಲ್ದಾರ್ರವರು ಉಪನ್ಯಾಸ ಮಾಡಿದರು. ಗಂಧ ಹೂವು ಹಂಚಲ್ಪಟ್ಟಿತು. ಸಭೆ ಮುಕ್ತಾಯವಾಯಿತು.

ಗೋಕಲೆ ಹಿಂದೂ ಸೆಕೆಂಡರಿ ಸ್ಕೂಲು, ದಾವಣಗೆರೆ.

ಮ|| ಗುಡಿಗಲ್ಲು ಎಚ್. ನರಸಿಂಗರಾಯರಿಂದಲೂ, ಬೇಲೂರು ಮ|| ಮಹಾದೇವಯ್ಯನವರಿಂದಲೂ ಸ್ಥಾಪಿತವಾಗಿರುವ ಈ ಸ್ಕೂಲಿನಲ್ಲಿ ತಾ|| 18 ನೇ ಶುಕ್ರವಾರ ಅಮಲ್ದಾರ್ ಮ|| ಹನುಮಂತರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಆ ಕಾಲದಲ್ಲಿ ಸ್ಕೂಲ್ ಹುಡುಗರಿಂದಲೂ, ಉಪಾಧ್ಯಾಯರಿಂದಲೂ ಉಪನ್ಯಾಸ ಮತ್ತು ರಿಪೋರ್ಟು ಓದಲ್ಪಟ್ಟವು. ತರುವಾಯ ಧನುರ್ಧಾರಿ ಪತ್ರಿಕೆಯ ಎಡಿಟರ್ ಮ|| ಮಂಜಪ್ಪನವರು ಮಾಡಿದ ಭಾಷಣದ ಮುಖ್ಯ ಅಭಿಪ್ರಾಯವೇನೆಂದರೆ—ಸರ್ಕಾರದವರ ಸಹಾಯವಿಲ್ಲದ ಈ ಸ್ಕೂಲು 60 ಜನ ಬಾಲಕರಿಂದಲೂ, 4 ಜನ ಉಪಾಧ್ಯಾಯರಿಂದಲೂ ಕೂಡಿರುವುದೆಂದು ತಿಳಿಯುತ್ತೇನೆ ಗ|| ಸ್ಕೂಲುಗಳು ಇರುವ ಈ ಸ್ಥಳದಲ್ಲಿ ಈ ಸ್ಕೂಲು ಇಷ್ಟೊಂದು ಅಭಿವೃದ್ಧಿ ಸ್ಥಿತಿಗೆ ಬಂದಿರುವುದನ್ನು ನೋಡಿದರೆ ಇಲ್ಲಿಯ ಮಾಸ್ತರುಗಳ ಶ್ರದ್ಧೆಯೇ ಮುಖ್ಯ ಕಾರಣವೆಂದು ನನಗೆ ತೋರುತ್ತೆ. ಇವರು ಕಳೆದ ವರ್ಷ ಗ|| ಎ. ವಿ. ಸ್ಕೂಲಿನಲ್ಲಿ ಓದುತ್ತಿದ್ದ ಕೇವಲ ಬಡ ಹುಡುಗನನ್ನು ಒಂದೇ ವರ್ಷದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಲೋ. ಸೆ. ಪರೀಕ್ಷೆಯಲ್ಲಿ ಪ್ಯಾಸು ಮಾಡಿಸಿರುತ್ತಾರೆ. ಈ ರೀತಿಯಾಗಿ ಪ್ಯಾಸು ಮಾಡಿಸಿರುವುದು ಈ ನಮ್ಮ ದಾವಣಗೆರೆಗೆ ಸ್ಕೂಲು ಬಂದು 40 ವರ್ಷಕ್ಕೆ ಇದೇ ಮೊದಲಾಗಿರುತ್ತೆ. ಗೋಕಲೆಯವರ ಜ್ಞಾಪಕಾರ್ಥವಾದ ಈ ಸ್ಕೂಲು ಅವರ ಯಶಸ್ಸಿನಂತೆ ತುಂಬಾ ಅಭಿವೃದ್ಧಿಸ್ಥಿತಿಯನ್ನು ಹೊಂದಲೆಂದು ಹಾರೈಸುತ್ತೇನೆ ಎಂದು ಹೇಳಿದ ತರುವಾಯ ಅಧ್ಯಕ್ಷರು ಸರ್ವ ವಿಷಯದಲ್ಲೂ ಸ್ತೋತ್ರಾರ್ಹವಾಗಿರುವ ಈ ಸ್ಕೂಲನ್ನು ನೋಡಿ ಬಹಳ ಸಂತೋಷಪಡುತ್ತೇನೆ. ಎಂದು ಸೂಚಿಸಿ ಹುಡುಗರಿಗೆ ಇನಾಮು ಕೊಟ್ಟ ಮೇಲೆ ಸಭಿಕರಿಗೆ ಹಾರ ತುರಾಯಿ ತಾಂಬೂಲ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು. ಈ ಸ್ಕೂಲಿನ ಹೆಡ್ಮಾಸ್ಟರಾದ ಮ|| ಗುಡಿಗಲ್ಲು ಎಚ್. ನರಸಿಂಗರಾಯರು ಬಡವರಾದ 18 ಹುಡುಗರಿಗೆ ಸ್ಕೂಲು ಫೀ ಮಾಫ್ ಮಾಡಿರುವುದಲ್ಲದೆ ಅವರಲ್ಲಿ 6 ಹುಡುಗರಿಗೆ ಅನ್ನೋದಕಗಳನ್ನು ಸಹ ಕಲ್ಪಿಸಿಕೊಟ್ಟು ಅತ್ಯಂತ ಮೆಹನತ್ತಿನಿಂದ ವಿದ್ಯಾದಾನವನ್ನು ಮಾಡುತ್ತಿರುವರು ಇದಕ್ಕೆ ಮುಂಚೆ ರಾವ್ ಬಹದ್ದೂರ್ ಮ|| ಶಾಮರಾಯರವರು ಮತ್ತು ಸರ್ಕಲ್ ಇನ್ಸ್ಪೆಕ್ಟರವರೂ ಬಂದು ಈ ಸ್ಕೂಲನ್ನು ಪರಾಂಬರಿಸಿಕೊಂಡು ಸಂತೋಷಪಟ್ಟು ಒಳ್ಳೇ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ.—ಈ ದಾವಣಗೆರೆ ಪ್ರಾಂತ್ಯದಲ್ಲಿ ಸುಮಾರು 10-15 ದಿನಗಳಿಂದ ಮೂರು ನಾಲ್ಕು ಒಳ್ಳೇ ಹದ ಮಳೆಗಳಾಗಿ ರೈತರಿಗೆ ಉಳುವುದಕ್ಕೆ ಅನುಕೂಲವಾಯ್ತು. ಕೆಲವು ಕಡೆ ಬಿತ್ತನೆಯು ಸಹ ಆಗಿದೆ ಇನ್ನು ಬಿತ್ತುವವರಿಗೆ ಅನುಕೂಲವಾದ ಜಿನುಗು ಮಳೆಯು ಈ ಪ್ರಾಂತ್ಯದಲ್ಲೆಲ್ಲಾ ಸುರಿಯುತ್ತಿರೋಣದರಿಂದ ಸರ್ವರಿಗೂ ತುಂಬಾ ಸಂತೋಷವಾಗಿದೆ. ಇಂಥ ಅತ್ಯಂತ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸ್ಕೂಲಿಗೆ ನಮ್ಮ ದಯಾಳು ಸರ್ಕಾರದವರು ಪ್ರೋತ್ಸಾಹವನ್ನು ಕೊಡದೆ ಇರಲಾರರೆಂದು ನಂಬಿದ್ದೇವೆ.

ಪಿ. ಟಿ. ಟಿ.

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಗಳು.

ಬೆಂಗಳೂರು ತಾಲ್ಲೂಕು ಶಾಕೋಳ್ ಗ್ರಾಮ.

ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್ ರವರ ವರ್ಧಂತಿ ಮಹೋತ್ಸವದ ನಿಮಿತ್ತ ಸ್ಕೂಲ್ ಮಾಸ್ಟರ್ ಮ|| ಟಿ. ನರಸಪ್ಪನವರು ಸ್ಕೂಲನ್ನು ಮನೋಹರವಾಗಿ ಅಲಂಕರಿಸಿ ಬಾಲಕರಿಂದ ಕಿಂಡರ್‌ಗಾರ್ಟನ್ ಆಟಗಳು, ಡ್ರಿಲ್ ವಗೈರೆ ಮಾಡಿಸಿ ಈ ಗ್ರಾಮದ ಮತ್ತು ಆಜುಬಾಜು ಗ್ರಾಮಗಳ ಮುಖ್ಯ ಜನಗಳನ್ನೆಲ್ಲಾ ಸ್ಕೂಲಿನಲ್ಲಿ ಸಭೆ ಸೇರಿಸಿದರು. ಬೆಂಗಳೂರು ಸ್ಕೂಲುಗಳ ಅ|| ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಟಿ. ಅನಂತಸುಬ್ಬರಾಯರು ಅಗ್ರಾಸನವನ್ನು ವಹಿಸಿದರು. ಭಜನೆ ಕೂಟದವರು ಸಂಗೀತದಿಂದ ಸರ್ವರನ್ನೂ ಆನಂದಪಡಿಸಿದರು ಅನಂತರ ಸ್ಕೂಲ್ ಮಾಸ್ಟರ್ ಟಿ. ನರಸಪ್ಪನವರು ವಿದ್ಯಾಭ್ಯಾಸದ ವಿಷಯವಾಗಿಯೂ, ನೀತಿಮಾರ್ಗದ ವಿಷಯವಾಗಿಯೂ, ಇಂಗ್ಲೀಷ್ ರಾಜ್ಯಭಾರದಿಂದ ನಮಗುಂಟಾಗಿರುವ ಸೌಕರ್ಯಗಳ ವಿಷಯವಾಗಿಯೂ ಉಪನ್ಯಾಸ ಮಾಡಿದರು ಬಳಿಕ ಮ|| ಅನಂತಸುಬ್ಬರಾಯರು ಈ ಸ್ಥಳದಲ್ಲಿ ಒಂದು ನೈಟ್ ಸ್ಕೂಲ್ ಮತ್ತು ಸೊಸೈಟಿ ಸಹ ಆಗಬೇಕೆಂದೂ, ಇದರಿಂದ ಜನಗಳೆಲ್ಲರೂ ಏಕಮತ್ಯದಿಂದ ಗುಣಗ್ರಾಹಿಗಳಾಗಿ ವಿದ್ಯಾವಂತರಾಗಿ ರಾಜಭಕ್ತಿ ವಿಶ್ವಾಸಗಳಲ್ಲಿ ನಿರತರಾಗಿರಬೇಕೆಂದೂ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಲು ಸಭಾ ಜನಗಳೆಲ್ಲಾ ಬಹಳ ಸಂತೋಷಪಟ್ಟರು. ಬಾಲಕ ಬಾಲಕಿಯರು ಶ್ರೀಮನ್ಮಹಾರಾಜರವರ ಮತ್ತು ಶ್ರೀಮದಿಂಡಿಯಾ ಚಕ್ರವರ್ತಿಯವರ ಶ್ರೇಯೋಭಿವೃದ್ಧಿಯ ಹಾಡುಗಳನ್ನು ಗಾನಮಾಡಿದರು. ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.

ಹುಣಸೂರು.

33 ನೇ ತಾ ನಮ್ಮ ಶ್ರೀಮನ್ಮಹಾರಾಜ ಸಾಹೇಬ್ ಬಹದ್ದೂರ್ ಜಿ. ಸಿ. ಎಸ್. ಐ ಯವರ 32 ನೇ ವರ್ಧಂತ್ಯುತ್ಸವದ ನಿಮಿತ್ತ ಆ ದಿನ ಅಮಲ್ದಾರರಾದಿಯಾಗಿ ಅಧಿಕಾರಿಗಳೂ, ಟವುನಿನ ಹಲವು ದೊಡ್ಡ ಮನುಷ್ಯರೂ ಲಂಕೃತವಾದ ಎ. ವಿ ಸ್ಕೂಲ್ ಹಾಲ್‌ನಲ್ಲಿ ಸಭೆ ಸೇರಿ ಬಾಲಕ ಬಾಲಕಿಯರನ್ನೆಲ್ಲಾ ಬರಮಾಡಿಕೊಂಡು, ಸದಸ್ಯರ ಅನುಮತಿಯಂತೆ ಅಡ್ವೊಕೇಟ್ ಮ|| ಎ. ರಾಮಣ್ಣನವರನ್ನು ಚೇರ್‌ಮೆನ್ನರಾಗಿ ಮಾಡಿದರು. ಪ್ರಥಮತಃ ಸ್ಕೂಲ್ ಬಾಲಕಿಯರು ಬ್ರಿಟಿಷ್ ಮತ್ತು ಮೈಸೂರು ಸಲಾಂ ಬಾಜಾ ಹಾಡಿದರು. ಸ್ಕೂಲ್ ಹೆಡ್ ಮಾಸ್ಟರು ಮಹಾರಾಜರವರು ತಮ್ಮ ಸಚಿವರೇ ಆದಿಯಾದ ಮಹನೀಯರುಗಳೊಡನೆ ನಮ್ಮ ಮೈಸೂರು ಸೀಮೆಯ ಜನರ ಪುರೋಭಿವೃದ್ಧಿಗಾಗಿ ಹಿತಚಿಂತನೆಯುಳ್ಳವರಾಗಿ ಶ್ಲಾಘ್ಯಕರವಾದ ಏರ್ಪಾಡುಗಳನ್ನು ಮಾಡುತ್ತಿರುವುದು ನಮ್ಮಗಳ ಭಾಗ್ಯೋದಯವೆಂದು ತಿಳಿಸಿದರು. ತರುವಾಯ ಚೇರ್‌ಮೆನ್ನರವರು ಅದನ್ನು ಅನುಮೋದಿಸಿ ಇನ್ನೂ ಉತ್ಕೃಷ್ಟವಾದ ಸ್ವಾರಸ್ಯವೂ ಆದ ಬುದ್ಧಿವಾದಗಳನ್ನು ಹುಡುಗರಿಗೂ ಹುಡುಗಿಯರಿಗೂ ತಿಳಿಸಿದ್ದು ಮಾತ್ರವಲ್ಲದೆ ಸ್ವಾಮಿಭಕ್ತಿಯಲ್ಲಿ ಮುಂದಾಳುಗಳಾಗಿರುವ ಮೈಸೂರು ಸೀಮೆಯ ಪ್ರಜೆಗಳ ಗುಣವನ್ನು ಕೊಂಡಾಡಿದರು. ಉಭಯತ್ರರೂ ಈಗ ಯೂರೋಪಿನಲ್ಲಿ ನಡೆಯುತ್ತಿರುವ ಘೋರವಾದ ಸಮರವು ಜಾಗ್ರತೆ ನಿಂತು ಸಮಾಧಾನವು ನೆಲೆಗೊಳ್ಳಲೆಂದು ಸರ್ವರೂ ಪ್ರಾರ್ಥಿಸತಕ್ಕದ್ದೆಂದು ಕೋರಿದರು. ಇನ್ನೊಂದಾವೃತ್ತಿ ಬಾಲೆಯರು ಸಲಾಂ ಬಾಜಾ ಹಾಡಿದ ತರುವಾಯ ಸದಸ್ಯರಿಗೆ ಗಂಧ ತಾಂಬೂಲವೂ, ಬಾಲಕ ಬಾಲಕಿಯರಿಗೆ ತಿಂಡಿಯೂ ಹಂಚೋಣವಾಗಿ ಮೂರು ಬಾರಿ ಜಯಘೋಷಮಾಡುತ್ತಾ ಸಭೆಯು ಮುಕ್ತಾಯವಾಯಿತು.

ಶಿಕಾರಿಪುರ.

ಶ್ರೀಮನ್ಮಹಾರಾಜರವರ ವರ್ಧಂತಿ ದಿನವಾದ ತಾ. 23ರಲ್ಲಿ ಇಲ್ಲಿನ ಆರ್ಯಬಾಲಿಕಾ ಪಾಠಶಾಲೆಯಲ್ಲಿ ವೇ|| ಶ್ರೀನಿವಾಸದೀಕ್ಷಿತರ ಏರ್ಪಾಡಿನಂತೆ ಉತ್ಸವದ ಸಭೆಯು ಅಮಲ್ದಾರ್ರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ವೇ|| ದೀಕ್ಷಿತರವರು ಸಭೆಗೆ ಬಂದ ಮಹನೀಯರಿಗೆಲ್ಲಾ ಸ್ವಾಗತ ಬಯಸಿದರು. ಸಭಾಧ್ಯಕ್ಷರು ಶ್ರೀಮನ್ ಮಹಾರಾಜರವರು ಪ್ರಜಾಹಿತ ಚಿಂತನೆ ವಿಷಯದಲ್ಲಿ ಅಪಾರವಾದ ಶ್ರಮವನ್ನು ವಹಿಸಿರುತ್ತಾರೆಂಬ ಅರ್ಥಗರ್ಭಿತ ಉಪನ್ಯಾಸ ಮಾಡಿದರು. ಬಳಿಕ ಮ|| ಎಸ್ ವೆಂಕಟಾಚಾರ್ರು ಮಹಾಸ್ವಾಮಿಯವರ ಗುಣಕಥನವನ್ನು ಮಾಡಿದರು. ಸಂಗೀತ ನಡೆದು ಬ್ರಾಹ್ಮಣರಿಂದ ಶ್ರೀಮನ್ ಮಹಾರಾಜ ಸಕುಟುಂಬ ವರ್ಗದವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ತಾಂಬೂಲಾದಿಗಳನ್ನು ಕೊಟ್ಟು ಸಭೆ ಮುಗಿಸಲಾಯಿತು.—ಬಳಿಕ 9 ಘಂಟೆಗೆ ಆರ್ಯಬಾಲಿಕಾ ಪಾಠಶಾಲೆ ಕಟ್ಟಡದಲ್ಲಿ ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರಾದ ಶ್ರೀಮಾನ್ ಸರ್ ಎಂ ವಿಶ್ವೇಶ್ವರಯ್ಯನವರಿಗೆ ಬ್ರಿಟಿಷ್ ಸಾರ್ವಭೌಮರಿಂದ ಕೆ. ಸಿ. ಐ. ಇ. ಎಂಬ ಬಿರುದು ಬಂದದ್ದಕ್ಕಾಗಿ ಈ ಟವನ್ ಪ್ರಜೆಗಳಿಗುಂಟಾದ ಸಂತೋಷವನ್ನು ಪ್ರಕಾಶಪಡಿಸುವದಕ್ಕಾಗಿ ತಮ್ಮಗಳನ್ನು ಸ್ವಾಗತ ಮಾಡುತ್ತೇನೆ ವೇ|| ದೀಕ್ಷಿತರವರು ತಿಳಿಸಿದರು. ಸಭಾಧ್ಯಕ್ಷರಾದ ಅಮಲ್ದಾರ್ರವರು ಸಚಿವಶ್ರೇಷ್ಠರ ಗುಣಕಥನಮಾಡಿ ಅವರಿಂದ ಆಚಂದ್ರಾರ್ಕ ಸ್ಥಾಯಿಯಾದ ಪ್ರಯೋಜನವನ್ನು ಹೊಂದುತ್ತಿರುವೆವೆಂದು ಹೇಳಿದರು. ವೇ|| ದೀಕ್ಷಿತರು ಆರ್ಯಬಾಲಿಕಾ ಪಾಠಶಾಲೆಯು ಗೌರ್ನಮೆಂಟ್ ಸ್ಕೂಲ್ ಮಾಡಿರುವದಾಗಿ ಸರ್ಕಾರದಿಂದ ಬಂದ ಆರ್ಡರನ್ನು ಓದಿ ಹೇಳಿದರು. ಸಭಿಕರು ಆನಂದಪಟ್ಟು ಜಯಘೋಷ ಮಾಡಿದರು. ವೇ|| ದೀಕ್ಷಿತರು ಈ ಪಾಠಶಾಲಾ ಸ್ಥಾಪಕರಾದ ಆಗಿನ ಅಮಲ್ದಾರ್ ಮಿ|| ಗುಲಾಂ ಮಹಮದ್ ಮೆಕ್ಕಿಯವರಿಗೂ, ಇದರ ಪೋಷಕರಾದ ರಿಟೈರ್ಡ್ ಡೆಪ್ಯುಟಿ ಕಮೀಷನರ್ ಮ|| ಎಂ. ನಾರಾಯಣರಾಯರಿಗೂ ವಂದನೆಗಳನ್ನು ತಿಳಿಸಿದ್ದಲ್ಲದೆ ಈಚೆಗೆ ದಯಮಾಡಿಸಿದ ಅಧಿಕಾರಿಗಳು ತೋರಿಸಿದ ದಯಾರಸಕ್ಕಾಗಿ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು. ಅನಂತರ ಸಭಾಧ್ಯಕ್ಷರು ದಿವಾನ್ ಸಾಹೇಬರವರಿಗೆ ಬಿರುದು ಬಂದದ್ದು ತುಂಬಾ ಸಂತೋಷಪ್ರದವಾದದ್ದೆಂಬ ಅಭಿಪ್ರಾಯವುಳ್ಳ ಉಪನ್ಯಾಸ ಮಾಡಿದರು ವರ್ಧಂತಿ ಉತ್ಸವದ ನಿಮಿತ್ತ ಶ್ರೀಮನ್ ಮಹಾರಾಜರವರಿಗೂ, ಮತ್ತು ಕೆ ಸಿ. ಐ. ಇ. ಬಿರುದು ಬಂದದ್ದಕ್ಕಾಗಿ ನಮ್ಮ ದಿವಾನ್ ಸಾಹೇಬರಿಗೂ ನೆರೆದಿದ್ದ ಸಭಿಕರಿಗುಂಟಾದ ಆನಂದವನ್ನು ವ್ಯಕ್ತಪಡಿಸುವದಕ್ಕಾಗಿ ಪ್ರತ್ಯೇಕವಾದ ಟೆಲಿಗ್ರಾಂ ಕೊಡಬೇಕೆಂದು ತೀರ್ಮಾನವಾಯಿತು. ಈ ಸ್ಕೂಲ್ ಬಾಲಕಿಯರಿಗೆ ಬಹುಮಾನ ಕೊಡಲು ದಿವಾನ್ ಸಾಹೇಬರವರು ದಯಪಾಲಿಸಿದ್ದ ಮೊಬಲಗಿನಿಂದಲೂ ಇಂಪೀರಿಯಲ್ ಸರ್ವೆಂಟ್ ಮ|| ಸುಬ್ಬಸ್ವಾಮಿ ಅಯ್ಯರವರು ಕೊಟ್ಟ ಮೊಬಲಗಿನಿಂದಲೂ ಬಾಲಕ ಬಾಲಕಿಯರುಗಳಿಗೆ ತಿಂಡಿ ಕೊಡಲ್ಪಟ್ಟಿತು. ನೆರೆದಿದ್ದ ಸಭಿಕರಿಗೆ ತಾಂಬೂಲಾದಿಗಳು ಕೊಟ್ಟ ನಂತರ ಸಭಿಕರು ಶ್ರೀಮನ್ ಮಹಾರಾಜರವರಿಗೂ, ಶ್ರೀಮಾನ್ ದಿವಾನ್ ಸಾಹೇಬರಿಗೂ ಮೂರು ಸಾರಿ ಜಯಘೋಷ ಮಾಡಿ ಮೀಟಿಂಗು ಬರಖಾಸ್ತು ಮಾಡಲ್ಪಟ್ಟಿತು.

ಶ್ರೀರಂಗಪಟ್ಟಣದಲ್ಲಿ ನೂತನ ಮಂಟಪವು.

ಶ್ರೀಮನ್ಮಹಾರಾಜರವರು ಪ್ರತಿಷ್ಠೆ ಮಾಡಿದ್ದು.

ಕಳೆದ ಗುರುವಾರ ಸಾಯಂಕಾಲ ನಮ್ಮ ಮಹಾರಾಜರವರು ಲೇಟ್ ಮುಮ್ಮಡಿ ಕೃಷ್ಣರಾಜ ಒಡೆಯರವರ ಜನ್ಮಸ್ಥಳದಲ್ಲಿ ಒಂದು ಮಂಟಪವನ್ನು ಕಟ್ಟಿಸಿರುವುದನ್ನು ಅತ್ಯಂತ ವಿಜೃಂಭಣೆಯಿಂದ ಪ್ರತಿಷ್ಠೆ ಮಾಡಿದರು ಶ್ರೀಮನ್ಯುವರಾಜರವರೂ, ಅರಮನೆಯ ರಾಣೀವಾಸದವರೂ, ರಾಜಪಿಂಡೆಯವರೂ, ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಸರ್ದಾರರೂ, ಲೇಡಿಗಳೂ, ಆಸ್ಥಾನ ವೈದಿಕ ಮಂಡಲಿಯವರೂ, ದಿವಾನ್‌ರು ಕೌನ್ಸಿಲರುಗಳೇ ಮೊದಲಾದ ಸರ್ಕಾರಿ ಮುಖ್ಯಾಧಿಕಾರಿಗಳೂ ರಾಜಧಾನಿಯ ಹಲವು ಮಂದಿ ದೊಡ್ಡಮನುಷ್ಯರೂ, ಶ್ರೀರಂಗಪಟ್ಟಣ ಗಂಜಾಮುಗಳ ಮುಖ್ಯ ಪ್ರಜೆಗಳೂ ಆ ದಿನ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಗುಡಾರದಲ್ಲಿ ಸೇರಿದ್ದರು. ಆಸ್ಥಾನ ಕವಿಶಿರೋಮಣಿಗಳಾದ ಮೂವರು ಪಂಡಿತರು ಸಂಸ್ಕೃತ ಮತ್ತು ಕನ್ನಡದಲ್ಲಿ ಕವನಗಳನ್ನು ಮಾಡಿ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಓದಿ ಅರಿಕೆ ಮಾಡಿದರು ಗಂಜಾಮಿನ ಮೀರ್ ಸಾಹೇಬರು ಹಿಂದುಸ್ತಾನಿಯಲ್ಲಿ ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಅರಮನೆಯ ಕಂಟ್ರೋಲರವರಾದ ಮ|| ಬಿ ರಾಮಕೃಷ್ಣರಾಯರು ಆ ಮಂಟಪದ ವಿಷಯದಲ್ಲಿ ಅರಿಕೆ ಮಾಡಿದ್ದೇನೆಂದರೆ—

"......... ಮಹಾಸ್ವಾಮಿಯವರ ಆಜ್ಞಾನುಸಾರವಾಗಿ ಖಾಸ್ ಪಿತಾಮಹರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ ಯವರ ಜನ್ಮಸ್ಥಳವನ್ನು ಹಿಂದಿನ ದಾಖಲೆ ನೋಡಿಸಿದ್ದರ ಮೂಲಕ ನಿರ್ದೇಶಮಾಡಿದ ಈ ಸ್ಥಳದಲ್ಲಿ ಈ ಮಂಟಪ ಕಟ್ಟಿದ್ದಾಗಿದೆ ಈ ಅಂಶವೂ ಮತ್ತು ಈ ಮಂಟಪಸ್ಥಾಪನೋತ್ಸವಾಭಿವಾಗಿ ಮಹಾಸ್ವಾಮಿಯವರು ಇಲ್ಲಿಗೆ ಕೃಪೆಯಿಂದ ಚಿತ್ತೈಸಿರುವದೂ ಈ ಪೂರ್ವ ರಾಜಧಾನಿಯ ಚರಿತ್ರಪ್ರಸಿದ್ಧವಾದ ಸಂಗತಿಗಳನ್ನು ಎಲ್ಲರ ಮನಸ್ಸಿಗೂ ಜ್ಞಾಪಿಸುವಂತೆ ಮಾಡುವುದಲ್ಲದೆ ಕೇವಲ ಶುಭಸೂಚಕವಾಗಿರುತ್ತೆ —ಈ ಮಂಟಪದ ಸುತ್ತುಮುತ್ತಲೂ ಇರುವ ಪ್ರದೇಶವು ಅಖಂಡ ಪೃಥ್ವೀ ಸಾಮ್ರಾಜ್ಯವನ್ನನುಭವಿಸಿದ ಮಹಾಸ್ವಾಮಿಯವರ ಹಿರಿಯರ ವಿಶಾಲ ರಾಜಭವನವಿದ್ದ ಸ್ಥಳವೆನ್ನುವದು ಖಾವಂದರವರ ಚಿತ್ತಕ್ಕೆ ವೇದ್ಯವೇ ಇದೆ. ಇದರ ಪಂಚಾಂಗಭಿತ್ತಿ ಕಲ್ಲಿನ ಕಟ್ಟಡದ ಹಳೇ ಕುರೀಕಲ್ಲು ಕೋಟೆಯ ಕಲಾದಿಯು ಈ ಸಮೀಪದಲ್ಲೀಗಲೂ ದೃಷ್ಟಿಗೋಚರವಾಗಿರುವುದು ಇದರ ಬಳಿಯಲ್ಲಿಯೇ ಖಾಸ್ ಕುಲದೇವತೆ ಜಗಜ್ಜನನಿ ಶ್ರೀಚಾಮುಂಡೇಶ್ವರೀ ಸ್ಮರಣಪೂರ್ವಕ ನಿರ್ಮಿಸಿದ ಎಳಂತಸ್ತಿನ ಶುಕ್ರವಾರ ಸೆಟ್ಟಿಯ ದೌಲತ್ತಿಗೆ ಸ್ಥಾನಭೂತವಾಗಿ ವಿರಾಜಿಸುತ್ತಲಿದ್ದಂತೆ ತಿಳಿಯಬರುತ್ತೆ. ಈಗ್ಗೆ ಸುಮಾರು ಮೂರು ಶತಮಾನಗಳ ಕೆಳಗೆ ಖಾವಂದರವರ ವಂಶದ ಮೂಲಪುರುಷರು ಯದುಮಹಾರಾಯರಿಂದೀಚೆಗೆ 9 ನೆಯವರಾದ ರಾಜಒಡೆಯರವರು ತಮ್ಮ ಪ್ರಜ್ಞಾಶಕ್ತಿ ಕೌಶಲದಿಂದ ಆಗಿನ ವಿಜಯನಗರ ಸಂಸ್ಥಾನದ ಕಡೆಯ ದೊರೆಗೆ ಬದಲಾಗಿ ತಾವು ಪ್ರತಿಷ್ಠಿತ ರಾಜ್ಯಪದವಿಯನ್ನು ಪಡೆದು ಸಿಂಹಾಸನಾಧಿಪತಿಗಳೆನಿಸಿ, ಯಶಸ್ಸಾಂದ್ರರಾದ ಪ್ರಾಂತ್ಯವು ಇದೇ ಆ ರಾಜವರೇಣ್ಯರೇ ಶುಕ್ರವಾರ ಸೆಟ್ಟಿಯನ್ನು ನಿರ್ಮಿಸಿದವರು. ಅಂದಿನಿಂದಿಂದಿಗೂ ಮಹಾಸ್ವಾಮಿಯವರ ರಾಜವಂಶ ಸಂತತಿಯಲ್ಲಿ ಸಿಂಹಾಸನಾಧಿಪತ್ಯವು ಅವಿಚ್ಛಿನ್ನಪರಂಪರೆಯಾಗಿ ನಡೆದು ಬರುತ್ತಲಿದೆ. ದೈವಭಕ್ತಿ, ಧೈರ್ಯ, ಸ್ಥೈರ್ಯ, ಔದಾರ್ಯಾದಿ ಗುಣಸಂಪನ್ನರಾದ ಆ ಮಹೀಪಾಲರು ವಿಘ್ನಪರಂಪರೆಗಳನ್ನು ನಿಗ್ರಹಿಸಿ ಇಲ್ಲಿ ರಾಜ್ಯ ಸಂಸ್ಥಾಪನೆಯಂ ಮಾಡಿ 39 ವರುಷ ಪ್ರಜಾಪಾಲನೆಯಂ ಗೈದರು —ಅನಂತರ ಈ ವಂಶದಲ್ಲಿ ಈ ಪ್ರದೇಶದಲ್ಲಿ ಜನ್ಮಿಸಿ ವಿಖ್ಯಾತರಾದ ವೀರಾಗ್ರಣಿ ಕಂಠೀರವ ನರಸರಾಜ ಒಡೆಯರವರು ಮಾಗಡೀ ಸೀಮೆಯ ಅಧಿಪತಿ ಕೆಂಪೇಗೌಡ, ಮಧುರೆ ರಾಷ್ಟ್ರದ ನಾಯಕ, ಮುಂತಾದ ಪ್ರಬಲ ಶತ್ರುಗಳನ್ನು ಗೆಲ್ಲುದೇ ಅಲ್ಲದೆ, ಆ ಕಾಲದಲ್ಲಿ ಪೆಸರ್ಗೊಂಡಿದ್ದ ಬಿಜಾಪುರ ಸಂಸ್ಥಾನದ ದಳನಾಯಕ ರಣದುಲ್ಲಾಖಾನನು ಈ ರಾಜಧಾನಿಯ ಮೇಲೆ ದಂಡೆತ್ತಿ ಬಂದಾಗ ಅವನನ್ನು ಜಯಿಸಿ ರಣಧೀರರೆಂಬ ನಾಮಾಂಕಿತದಿಂದ ವಿರಾಜಮಾನರಾದರು ಈ ದೇಶದಲ್ಲಿ ಟಂಕಸಾಲೆಯನ್ನೇರ್ಪಡಿಸಿದ ಈ ಮಹಾರಾಜರವರ ಹೆಸರಿನಲ್ಲಿ ಕಂಠೀರಾಯ ವರಹ ಮತ್ತು ಕಂಠೀರಾಯ ಹಣವೆಂಬ ಚಿನ್ನದ ನಾಣ್ಯ ಚಲಾವಣೆಗೆ ಬಂದಿರುತ್ತೆ.—ಈಪರಿಯಾಗಿ ರಾಜ್ಯವಿಜಯೋತ್ಸಾಹಗಳು ದಿನೇದಿನೇ ಅಭಿವೃದ್ಧಿಯನ್ನೈದುತಿರಲು, ಈ ವಂಶದಲ್ಲಿ ಕ್ರಿ. ಶ.1672–1704 ವರೆಗೆ ಆಳಿದ ಚಿಕ್ಕದೇವರಾಜ ಒಡೆಯರವರು ಸ್ವಸಾಹಸಸಾಮರ್ಥ್ಯ ವಿಶೇಷದಿಂದ ಮಹಾರಾಷ್ಟ್ರರ ಹಾವಳಿಗವಕಾಶಕೊಡದೆ ದೇಶಕೋಶಗಳನ್ನು ನಾನಾ ಮುಖವಾಗಿ ಅಭಿವೃದ್ಧಿಗೊಳಿಸಿ ಸೀಮೆಯನ್ನು ಮಹೋನ್ನತಸ್ಥಿತಿಗೆ ತಂದು ಜನರ ಸುಖಸಂಪತ್ತಿಗೂ ಸೀಮೆಯ ಏಳಿಗೆಗೂ ಸಾಧಕಗಳಾದ ನಿಯಮಗಳನ್ನೇರ್ಪಡಿಸಿ ಕೀರ್ತಿಸಾಂದ್ರರಾದರು. ಶ್ರೀರಂಗಪಟ್ಟಣದ ಪ್ರಾಂತ್ಯ ದಂಡೆತ್ತಿ ಬಂದ ಮಹಾರಾಷ್ಟ್ರರನ್ನು ಈ ರಾಜವರೇಣ್ಯರು ಜಯಿಸಿದಾಗ ಪ್ರಖ್ಯಾತವಾದ ಬೆಂಗಳೂರು ನಗರವು ಇವರ ರಾಜ್ಯಾಧಿಪತ್ಯಕ್ಕೆ ಸೇರಿತು —ಪ್ರಜಾಕ್ಷೇಮೈಕಚಿಂತಕರಾದ ಇಮ್ಮಡಿ ಕೃಷ್ಣರಾಜ ಒಡೆಯರವರು ಕ್ರಿ ಶ. 18 ನೆಯ ಶತಾಬ್ದದಲ್ಲಿ ಹೈದರನಾಯಕನಿಗೆ ಮಾಡಿದ ಮಹೋಪಕಾರವು ಚರಿತ್ರಪ್ರಸಿದ್ಧವಾಗಿದೆ —ಪುರಾತನ ಪ್ರತಿಷ್ಠೆಗೆ ಸೇರಿದ ಶ್ರೀ ಗಂಗಾಧರೇಶ್ವರಸ್ವಾಮಿ, ಶ್ರೀರಂಗನಾಥಸ್ವಾಮಿಗಳ ದೇವಾಲಯಗಳಿಂದ ಶೋಭಿತವಾಗಿ ಗೌತಮಋಷಿಯ ತಪಸ್ಸಿಗೆ ಸ್ಥಾನಭೂತವಾದೀ ಕಾವೇರಿ ಪ್ರದೇಶವು ಸುಮಾರು ಮತ್ತು ಶತಮಾನಗಳಿಂದಲೂ ದಕ್ಷಿಣದೇಶಪ್ರಾಂತ್ಯ ಖ್ಯಾತಿಗೊಂಡಿರುವುದರಲ್ಲಿ ಆಗ್ಗೆ ಮಹಾಸ್ವಾಮಿಯವರ ರಾಜಾನ್ವಯಕ್ಕೆ ಸೇರಿದ ಭೂಭುಜರ ಶೌರ್ಯೌದಾರ್ಯಾದಿಗಳಿಗೆ ಹೇತುಭೂತವಾಗಿ ನೆಲೆಗೊಂಡ ಗಾಂಭೀರ್ಯ ಇದರ ಮಹೋನ್ನತದಶಾವಸ್ಥೆಯನ್ನು ಸೂಚಿಸುವುದಾಗಿದೆ ಸುಮಾರು ಹತ್ತಾವರ್ತಿ ಪ್ರಬಲಶತ್ರುಸಮೂಹಗಳು ಈ ನಗರವನ್ನು ಮುತ್ತಿದ್ದವಲ್ಲಿ, ಮೂಲರಾಜರ್ಷಿ ಮಹಾರಾಜರ ನೌಕರಿ ಮಂಡಲಿಗೆ ಸೇರಿದ್ದ ಮುಸಲ್ಮಾನ ಪ್ರಾಬಲ್ಯದ ಕಾಲದಲ್ಲಿ, ನಂತ 7 ಸಾವು ಖಾವಂದರವರ ರಾಜವಂಶ ಸಂಭೂತರಾದ ನೃಪಾಲಮೌಳಿಗಳ ಶಕ್ತಿಪರಾಕ್ರಮದಿಂದಲೇ ಅಪಜಯವಾಗಿ ರಾಜ್ಯವು ಸುರಕ್ಷಿತವಾಯಿತೆಂಬುವುದು ಪ್ರಖ್ಯಾತವಾಗಿರುತ್ತೆ.—ಈಚೆಗೆ ಈ ಸೀಮೆಯ ಆಧುನಿಕ ವೈಭವಕ್ಕೆ ಹೇತುಭೂತರಾದ ಖಾವಂದರವರ ಪಿತಾಮಹರ ಜನ್ಮಸ್ಥಳವೆನಿಸಿ ಈ ನಗರವು ಖ್ಯಾತಿಗೊಂಡಿದೆ ಅವರ ವಿವೇಕ, ಚತುರತೆ, ಅವರ ನಿಷ್ಕಲಮನೋವೃತ್ತಿ, ಅವರ ದೈವಭಕ್ತಿ, ಪ್ರಜಾರಂಜನೆ, ಅವರು ಆಂಗ್ಲೇಯರಾಜಪ್ರತಿನಿಧಿಶಿರೋಮಣಿಗಳೊಂದಿಗೆ ಬೆಳೆಯಿಸಿದ ಪ್ರಥಮಮೈತ್ರಿ, ಅವರ ಸೌಶೀಲ್ಯ ಔದಾರ್ಯಗಳು, ಅವರಿಂದ ವಿದ್ಯಾಭಿವೃದ್ಧಿಗೆ ಉಂಟಾದ ಪ್ರೋತ್ಸಾಹ, ಅವರ ದಾನಧಾರಾಪ್ರವಾಹ, ಇವುಗಳ ದೆಸೆಯಿಂದ ಅವರ ಕೀರ್ತಿಯು ಆಚಂದ್ರಾರ್ಕಸ್ಥಾಯಿಯಾಗಿರುತ್ತೆ.—ಪ್ರಕೃತದಲ್ಲಿ, ಈ ಮಂಟಪವು ಅವರ ಜನ್ಮಸ್ಥಳದಲ್ಲಿ ಸ್ಥಾಪಿತವಾಗಿ ದೇವತಾ ಕೈಂಕರ್ಯಕ್ಕೆ ಸಾಧಕವಾಗುವಂತೆ ಖಾವಂದರವರು ಏರ್ಪಾಟು ಮಾಡಿರುವುದು ಪರಮ ಶ್ರೇಯಸ್ಕರವಾಗಿರುವುದಲ್ಲದೆ ಇದರಿಂದ ಮಹಾಸ್ವಾಮಿಯವರ ಪೂರ್ವಿಕರು ಸುಮಾರು ಎರಡು ಶತಮಾನಗಳ ಪರ್ಯಂತರವೂ ದೇಶಕೋಶಾಭಿವೃದ್ಧಿಯಂಗೈದು ಪ್ರಜಾಸೌಖ್ಯ ಜನಕರಾಗಿದ್ದುದನ್ನೆಲ್ಲಾ ಸರ್ವರಿಗೂ ನೆನಪಿಗೆ ತರಲು ಸಹಕಾರಿಯಾಗಿದೆ"

ಬಳಿಕ ಶ್ರೀರಂಗಪಟ್ಟಣ ಮತ್ತು ಗಂಜಾಂ ಪ್ರಜೆಗಳ ಪರವಾಗಿ ಮ|| ಬಿ ನರಸಿಂಗರಾಯರು ಓದಿ ಒಪ್ಪಿಸಿದ ವಿಜ್ಞಾಪನೆ ಪತ್ರಿಕೆಯ ಸಾರಾಂಶವೇನೆಂದರೆ—

"......... ಬಹು ಪುರಾತನವಾದ ಈ ಪಟ್ಟಣವು .... ಪುಣ್ಯಕ್ಷೇತ್ರವೆಂದು ಪ್ರಸಿದ್ಧಿಯಾಗಿರುವದಲ್ಲದೆ ಮಹಾಸ್ವಾಮಿಯವರ ಪೂರ್ವಿಕರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ ರಾಜಧಾನಿಯಾಗಿದ್ದು ಚರಿತ್ರೆಯಲ್ಲಿ ಬಹಳ ಪ್ರಖ್ಯಾತಿಯನ್ನು ಸಂಪಾದಿಸಿರುತ್ತದೆ. ಇದರ ಮೇಲೆ ಮಹಾಸ್ವಾಮಿಯವರ ತಾತಂದಿರು ಕೀರ್ತಿಶೇಷರಾದ ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀಕೃಷ್ಣರಾಜಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ರವರ ಜನ್ಮಭೂಮಿಯೆಂಬ ಪ್ರಾಶಸ್ತ್ಯದಿಂದ ಸಂಸ್ಥಾನದ ಪ್ರಜೆಗಳೆಲ್ಲರಿಗೂ ಗೌರವಸ್ಥಾನವಾಗಿರುತ್ತದೆ. ಆ ಪ್ರಭುಗಳವರ ಜನನಸ್ಥಳವಾದ ಈ ಕೋಟೆಯ ಸಮೀಪದಲ್ಲಿ ಆ ಮಹಾಸ್ವಾಮಿಯವರ ಜ್ಞಾಪಕಾರ್ಥವಾಗಿ ಒಂದು ಮಂದಿರವು ಸ್ಥಾಪನೆಯಾಗಬೇಕೆಂಬ ಅಭಿಲಾಷೆಯು ಈ ನಗರದ ನಿವಾಸಿಗಳಲ್ಲಿ ಬಹುಕಾಲದಿಂದ ಪ್ರಬಲವಾಗಿತ್ತು. ಇದನ್ನು ನೆರವೇರಿಸಬೇಕೆಂಬ ಉದ್ದೇಶವು ಮಹಾಸ್ವಾಮಿಯವರಾದ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ರವರ ದಿವ್ಯಚಿತ್ತದಲ್ಲಿ ಇತ್ತೆಂಬುವದನ್ನು ನಾವುಗಳು ಕೇಳಬಲ್ಲೆವು 1888 ನೇ ಇಸವಿಯಲ್ಲಿ ಮಹಾಸ್ವಾಮಿಯವರ ಯಜಮಾನರವರೂ, ಸ್ವರ್ಗಸ್ಥರೂ ಆದ ಶ್ರೀಚಾಮರಾಜೇಂದ್ರಒಡೆಯರ್ ಬಹದ್ದೂರ್, ಜಿ ಸಿ ಎಸ್. ಐ. ರವರ ಖಾಸ್ ಸವಾರಿಯು ಶ್ರೀರಂಗಪಟ್ಟಣಕ್ಕೆ ಚಿತ್ತೈಸಿದ್ದಾಗ್ಗೆ ಆ ಮಹಾಸನ್ನಿಧಾನದಲ್ಲಿ ಇಲ್ಲಿಯ ಪ್ರಜೆಗಳು ವಿನಯಪೂರ್ವಕವಾಗಿ ಅರಿಕೆಮಾಡಿಕೊಂಡದ್ದರ ಮೇಲೆ ಆ ಮಹಾಪ್ರಭುಗಳು ಪರಮಕೃಪೆಯಿಂದ ಪ್ರಜೆಗಳ ಇಷ್ಟಾರ್ಥವನ್ನು ಸಲ್ಲಿಸಿಕೊಡುವದಾಗಿಯೂ, ಈ ದ್ವೀಪದ ಸರ್ವವಿಧವಾದ ಕ್ಷೇಮಲಾಭಗಳನ್ನು ಗಮನದಲ್ಲಿಟ್ಟು ಅಭಿವೃದ್ಧಿಸ್ಥಿತಿಗೆ ತರುವದಾಗಿಯೂ ಅಪ್ಪಣೆಯನ್ನು ದಯಪಾಲಿಸಿದರು ಮಹಾಸ್ವಾಮಿಯವರ ಕೀರ್ತಿಶೇಷರಾದ ಹಿರಿಯರ ಉದ್ದೇಶ ಮತ್ತು ವಾಗ್ದಾನಗಳನ್ನು ಪ್ರಜೆಗಳ ಮತಾಚಾರ, ದೈವಭಕ್ತಿ, ರಾಜಭಕ್ತಿ, ಇವುಗಳಿಗೆ ಅನುಗುಣವಾದ ರೀತಿಯಲ್ಲಿ ನೆರವೇರಿಸತಕ್ಕವರಾದ ಪ್ರಜಾವತ್ಸಲರಾದ ಮಹಾಸ್ವಾಮಿಯವರಿಗೆ ಕೈಕೊಂಡಿರು ಮಹಾಸ್ವಾಮಿಯವರು ಈ ಜ್ಞಾಪಕಮಂದಿರವನ್ನು ಸ್ಥಾಪಿಸಿಕೊಟ್ಟದ್ದಲ್ಲದೆ ಬಹು ವಿಶ್ವಾಸದಿಂದ ಇಷ್ಟು ದೂರ ಪಾದವನ್ನು ಬೆಳಸಿ, ಈ ಮಂದಿರದ ಪ್ರಥಮಪ್ರವೇಶದ ಉತ್ಸವಸಂರಂಭವನ್ನು ನಡಿಸಿಕೊಟ್ಟದ್ದಕ್ಕೆ ನಾವುಗಳು ನಿರಂತರ ಕೃತಜ್ಞರಾಗಿರುತ್ತೇವೆ. ಈ ಮಹಾಪಟ್ಟಣವು ಪೂರ್ವದಲ್ಲಿ ಬಹು ಜನಾಂಗಗಳನ್ನೊಳಗೊಂಡು ಸಕಲೈಶ್ವರ್ಯದಿಂದ ತುಂಬಿ ತುಳುಕುತ್ತಿದ್ದದ್ದು ಈಚೆಗೆ ದಿನಕ್ರಮೇಣ ಪ್ರಜಾಸಂಖ್ಯೆಯಲ್ಲಿಯೂ, ಕ್ಷೇಮಸಂಪತ್ತುಗಳಲ್ಲಿಯೂ ಖಿಲವಾಗುತ್ತಾ ಬರುತ್ತಿರುವ ಸಂಗತಿಯನ್ನು ದಿವ್ಯಚಿತ್ತದಲ್ಲಿ ಅರಿಕೆಮಾಡಿಕೊಳ್ಳುತ್ತೇವೆ ಇದಕ್ಕೆ ಕಾರಣಗಳನ್ನು ಸಾಧ್ಯವಾದಷ್ಟು ಕ್ಷಿಪ್ರದಲ್ಲಿ ವಿಚಾರಮಾಡಿಸಿ, ಪುರೋಭಿವೃದ್ಧಿಯನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಈ ಪಟ್ಟಣಕ್ಕೆ ಸಕಲ ಭಾಗಗಳಲ್ಲಿಯೂ ಸೌಕರ್ಯಗಳನ್ನು ದಯಪಾಲಿಸಲು, ಈ ದಿವಸ ಮಹಾಸ್ವಾಮಿಯವರು ಚಿತ್ತೈಸಿ ನಡಿಸಿರುವ ಈ ಮಹೋತ್ಸವವೇ ಪ್ರಥಮ ಸೂಚನೆಯೆಂದು ದೃಢವಾಗಿ ನಂಬಿ ಆಹ್ಲಾದಪಡುತ್ತೇವೆ. ...."

ಮೇಲ್ಕಂಡ ಇಂಗ್ಲಿಷ್, ಹಿಂದುಸ್ಥಾನಿ, ಮತ್ತು ಕನ್ನಡ ವಿಜ್ಞಾಪನ ಪತ್ರಿಕೆಗಳ ಶ್ರೇಷ್ಠವಾದ ಪ್ರತಿಗಳನ್ನು ಚಿತ್ರಕೆಲಸ ಮಾಡಿದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಈ ಕೈಪೆಟ್ಟಿಗೆಯ ನಾಲ್ಕು ಮುಖಗಳಲ್ಲೂ ಶ್ರೀಚಾಮುಂಡೇಶ್ವರಿ, ಶ್ರೀಮಹಾಲಕ್ಷ್ಮಿ, ಸರಸ್ವತಿ, ಶ್ರೀರಂಗಪಟ್ಟಣದಲ್ಲಿರುವ ವೆಲ್ಲೆಸ್ಲಿ ಸೇತುವೆ,

ಕಾವೇರಿ ನದಿಗಳ ಶಕ್ತಿಗಳೂ, ಕೈಪೆಟ್ಟಿಗೆಯ ಮೇಲ್ಭಾಗದಲ್ಲಿ ಶ್ರೀರಂಗನಾಥ ಸ್ವಾಮಿಯ ದಿವ್ಯವಿಗ್ರಹವೂ ಕೆತ್ತಿ ಬಹು ಶೋಭಾಯಮಾನವಾಗಿ ಮಾಡಲ್ಪಟ್ಟಿತ್ತು.

ಶ್ರೀಮನ್ ಮಹಾರಾಜರವರು ಆದರಾತಿಶಯದಿಂದ ಎಲ್ಲವನ್ನೂ ಆಲಿಸಿ ಕೇಳಿ, ಮಂಟಪವನ್ನು ಪ್ರತಿಷ್ಠೆಮಾಡುವಲ್ಲಿ ಸಭಿಕರನ್ನು ಕುರಿತು ಪ್ರತ್ಯುತ್ತರವಾಗಿ ಅಪ್ಪಣೆಕೊಡಿಸಿದ ವಾಕ್ಯಗಳೇನೆಂದರೆ:—

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಸುಲಭವಾದ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೆ ಸೊಪ್ಪು ಅಗಿಯುವವರು, ನಿಶಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಿಕ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಟ 1 ಕ್ಕೆ	.....	ಕ್ರಯ	0-1-6
65 ,, ,, ,,	.....	,,	0-3-0
193 ,, ಪೊಟ್ಟ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	.....	,,	0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	.....	,,	1-0-0

[80-11]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎನ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಬಂ ರೂ. 3-0-0.

ಜೂಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರುಮಾಲನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ:—

ಎ. ಕೆ. ಕಂಬುಸಾಮಿ

[111-6] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 16 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲುದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕಮಿಸ್ಯಾನ್, ಬೆಂಗಳೂರು ;

2. ಬಿ. ಜೆ. ಗೋರಿಯೋ ಕಂಪನಿ, ನಾಲೆಸ್ ಬೀದಿ,

[172-40] ಬೊಂಬಾಯಿ ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-35]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡುವದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಇನಾಂ ಸಾಮಾನು 60 ಇನಾಂ ಸಾಮಾನು 60

ವನಮಾಲಿಕ ಪುಷ್ಪಕೂದಲು ಬೆಳೆಯುವ ಪರಿಮಳ ತೈಲವು.

ಇದರ ಬೆಲೆ 60 ಸಾಮಾನುಗಳ ಸಹಿತ

ಒಂದು ಟಿನ್ನಿಗೆ 14 ಆಣೆ.

ಅಯ್ಯಾ,—ಯಾವ ಸ್ತ್ರೀಗಳಿಗೆ ತಲೆಯ ಕೂದಲು ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುತಕ್ಕ ಕೀಳುತರದ ಎಣ್ಣೆಗಳನ್ನು

ಕೊಂಡು ಕೊಂಡು ಉಪಯೋಗಿಸಿ, ಸ ಮ್ಮ ಹಣವನ್ನೂ ತಲೆಯನ್ನು ಹಾಳು ಮಾಡಿ ಕೊಳ್ಳಬೇಡಿ. ಈ ಎಣ್ಣೆಯನ್ನು ಪ್ರತಿದಿನವೂ ಕೂದಲಿಗೆ ಹಚ್ಚಿಕೊಂಡು ಬಾಚಿ ಕೊಳ್ಳುತ್ತಾ ಬಂದರೆ, ಬೆಳೆಯದೆ ಇರುವ ಕೂದಲು ಕೂಡಾ ಬೆಳೆಯುವದು. ಇದರ ಗುಣವಾಸನೆಯನ್ನು ಹೇಳುವದಕ್ಕೆ ಸಾಧ್ಯವಿಲ್ಲ. ಈ ಎಣ್ಣೆಯನ್ನು ಬಹಳ ದಿನಕ ಪ್ರಯತ್ನಮಾಡಿ ಸಕಲ ಜನರಿಗೆ ಬಹಳ ಕಮ್ಮಿ ಧಾರಣೆಗೆ ಕೊಡುತ್ತೇವೆ. ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ಸಾವಿರಗಟ್ಟಲೆ ಖರ್ಚು ಆಗುತ್ತಿದೆ. ನೀವು ಎಷ್ಟೋ ಕಂಪನಿಗಳಲ್ಲಿ ಪರಿಮಳ ತೈಲವನ್ನು ಕೊಂಡುಕೊಂಡಿರಬಹುದು. ಆದರೆ ಒಂದು ಸಲ ನಮ್ಮ ಹತ್ತಿರ ತರಿಸಿ ನೋಡಿದರೆ ಅದಕ್ಕೂ ನಮ್ಮ ವಸ್ತುವಿಗೂ ಇರುವ ವ್ಯತ್ಯಾಸವನ್ನು ನೀವೇ ತಿಳಿದುಕೊಳ್ಳಬಹುದು. ಬರೀ ಮಾತುಗಳಿಂದೇನು ? ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣುಗಳಿಗೆ ತಂಪುಕೊಡುವುದು. [132-1]

ಇನಾಂ ಸಾಮಾನುಗಳ ವಿವರ.

ಕೊಂಡೆಗಣಿಗಳು 6, ತಾಂಬೂಲ ಪಾತ್ರೆಗಳು 40, ಗಂಧದಬಟ್ಟಿ 1, ಶಾರೂ ನೇಷನ್ ಪೆಟ್ಟಿಗೆ 1, ದಂತದಬಾಚಣಿಗೆ 1, ಕುಂಕುಮಭರಣಿ 1, ಕಾಟಿಕೆ ಭರಣಿ 1, ಕನ್ನಡಿ 1, ರವಿವರ್ಮ ಫೋಟೋಕಾರ್ಡುಗಳು 6, ಅತ್ತರು ಬಿಲ್ಲೆ 1, ಬ್ರೂಚ್ 1.

ನಮ್ಮ ವಿಳಾಸ:—ಎಮ್. ರಾಮಸ್ವಾಮಿನಾಯುಡು,

ನಂ. 10, ಪಿಡಾರಿಯಾರ್ ಕೋವಿಲ್ ಬೀದಿ, ಮದರಾಸು.

ಜೂಲೈ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಜೂಲೈ ಹಬ್ಬದ ಮಹೋತ್ಸವಕ್ಕಾಗಿ ಈ ಧಾರೀ ಕ್ರಯದ ಕೈ ಗಡಿಯಾರವನ್ನು ಜೂಲೈ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [111-6]

ವಿಳಾಸ—ಎ. ಕೆ. ಕಂಬುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಒಳ್ಳೇ ಸಮಯ! ಒಳ್ಳೇ ಲಾಭ!

ಈ ಸಮಯ ಬಿಟ್ಟರೆ ಮರುಸಮಯ ಸಿಕ್ಕುವದಿಲ್ಲ.

ವಿಚಿತ್ರ ಜಪಾನ್ ಮ್ಯಾಜಿಕ್ ಬಾಕ್ಸು.

ಅಯ್ಯಾ,—ಈ ಮ್ಯಾಜಿಕ್ ಬಾಕ್ಸು ನೂತನವಾಗಿ ಜಪಾನ್‌ಯಿಂದ ವ್ಯಾಪಾರಕ್ಕಾಗಿ ನಮಗೆ ಬಂದಿರುತ್ತೆ. ಇಂಥಾ ಮ್ಯಾಜಿಕ್ ಬಾಕ್ಸು ಬೇರೆ ಕಂಪನಿಯಲ್ಲಿ ಸಿಕ್ಕುವದು ದುರ್ಲಭ. ಈ ಬಾಕ್ಸಿನಲ್ಲಿ ಸಾವಿರಾರು ರೂಪಾಯಿಗಳು ಹಾಕಿ ಜೇಬಿನಲ್ಲಿ ಮಡಗಿದರೇನೂ ಹಣ ಹೋಗುವದು ಕಷ್ಟ. ಹೇಗೆಂದರೆ ಹಣ ಮಡಗಿದರೂ ಅಥವಾ ಬೇರೆ ಯಾರಾದರೂ ತೆಗೆದು ನೋಡಿದ ಪಕ್ಷದಲ್ಲಿ ಹಣ ಅವರ ಕಣ್ಣಿಗೇ ಸಿಕ್ಕುವದು ಕಷ್ಟ. ಹಣ ಮಡಗಿದವರು ನೋಡಲಾದರೆ ಅವರ ಕೈಗೆ ಸಿಕ್ಕುತ್ತದೆ. ಈ ಪೆಟ್ಟಿಗೆ ಪ್ರತಿ ಒಬ್ಬ ಮನುಷ್ಯರ ಬಳಿಯಲ್ಲೂ ಇರತಕ್ಕದ್ದು ಅಗತ್ಯ. ಜಾಗ್ರತೆಯಿಂದ ತರಿಸಿಕೊಳ್ಳಿರಿ. ಇದರ ಕ್ರಯ 1 ಕ್ಕೆ ರೂ. 1-0-0.

ವಿಳಾಸ:—ಟಿ. ಎಂ. ರಾಮಚಂದ್ರರಾವ್,

[133-1] 19-8 ದೇವಿಡ್‌ಸನ್ ಬೀದಿ, ಬ್ರಾಂಡ್‌ವೇ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಕಣ್ಣಿನಲ್ಲಿ ಥಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಚಳಿ; ಎದೆ ಹಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-46]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨-೦-೦; ಅಥವಾ ೬ ಬುಡ್ಡಿಗಳಿಗೆ ರೂ. ೧೦-೮-೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೬ ಬಾಕ್ಸ್ ೨೦, ಬೊಂಬಾಯಿ—ಅವರಲ್ಲಿ ದೊರೆಯುವುದು.

ಮೈಯರ್ಸ್ ಹ್ಯಾಂಡ್ ಪವರ್ ಪಂಪುಗಳು.



10 ರಿಂದ 50 ಅಡಿ ಆಳದ ಭಾವಿಗೆ, ಗಂಟೆಗೆ 500 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

10 ರಿಂದ 70 ಅಡಿ ಆಳದ ಭಾವಿಗೆ, ಗಂಟೆಗೆ 350 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

ಟ್ಯಾಂಕ್ ಪಂಪು, 20 ಅಡಿ ಆಳದಿಂದ ಗಂಟೆಗೆ 1,500 ಗ್ಯಾಲನ್ (2 ಅಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 65

ಮರಾಠ.—ಹೆಚ್ಚು ವಿಷಯಗಳನ್ನು ಕೆಳಗಿನ ವಿಳಾಸದಾರರಿಂದ ತಿಳಿಯ ಬಹುದು :—

ಎಲ್. ಶೇಷಾದ್ರಿ,

31, 3ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ.



ಅಗ್ಗ, ಸುಲಭ, ಬೇಗ ಕೆಡುವದಿಲ್ಲ. ಬೆಂಗಳೂರಲ್ಲಿ ಎಂಟು ತಿಂಗಳಿಂದ ಉಪಯೋಗದಲ್ಲಿವೆ.

ಮನೆಗಳಿಗೂ ಕೈತೋಟಗಳಿಗೂ ಬಹಳ ಅನುಕೂಲ.

11 ವಯಸ್ಸಿನವರು 70 ಅಡಿ ಆಳದಿಂದ ಯಾತೇಚ್ಛವಾಗಿ ನೀರನ್ನೆತ್ತಬಹುದು. [138-1]

1914 ನೇ ಮೈಸೂರು ಎಗ್ಜಿಭಿಷನ್ನಿನಲ್ಲಿ ಚಿನ್ನದ ಮೆಡಲನ್ನು ಪಡೆದಿರುತ್ತದೆ.

ನಮೂನೆ.—ಇಲ್ಲಿನ ಚಿತ್ರದಂತೆ.

ಮೈಸೂರು ರೈಲ್ವೆ ಇಲಾಖೆ.

ನಮ್ಮ ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದಲ್ಲಿ ರೈಲ್ವೆ ರಸ್ತೆಗಳನ್ನು ಒಡಾವಣೆಮಾಡುವುದಕ್ಕೆ ಒಂದು ಪ್ರತ್ಯೇಕವಾದ ಇಲಾಖೆಯನ್ನು 1912 ನೇ ಜೂಲೈ ಲಾಗಾಯತು ರಚಿಸಿರುತ್ತಾರೆ. ಈಗ ಈ ಇಲಾಖೆಯ ಕೆಲಸಕಾರ್ಯಗಳನ್ನು ವ್ಯವಸ್ಥಿತವಾಗಿಯೂ ಲಾಭಕರವಾಗಿಯೂ ನಡೆಯುವಂತೆ ಮಾಡಬೇಕೆಂದು ಒಂದು ಹೊಸ ಏರ್ಪಾಟನ್ನು ಮಾಡಿ ಕಳೆದ ಜೂನ್ ತಾ. 12 ರಿಂದ ಜಾರಿಗೆ ತಂದಿರುತ್ತಾರೆ —

ಇಂಡಿಯಾ ಗವರ್ನಮೆಂಟ್ ಸರ್ವೀಸಿನಲ್ಲಿದ್ದ ಮಿ॥ ಸಿ. ಡಿ. ಡೇವಿಡ್‌ಸನ್‌ರವರನ್ನು ಮೈಸೂರು ರೈಲ್ವೆ ಇಲಾಖೆಯ ಇನ್ಸ್‌ಪೆಕ್ಟರ್ ಜನ್ ಚೀಫ್‌ರವರಾಗಿಯೂ, ರೈಲ್ವೆ ಏಜೆಂಟರಾಗಿಯೂ ನೇಮಿಸಿರುತ್ತಾರೆ. ರಾವ್ ಬಹದೂರ್ ಕೆ. ಕೃಷ್ಣಯ್ಯಂಗಾರ್ರನ್ನು ಅವರ ಇತರ ಕೆಲಸಗಳೊಂದಿಗೆ ರೈಲ್ವೆ ಇಲಾಖೆಯಲ್ಲಿ ಗವರ್ನಮೆಂಟಿನ ಸೆಕ್ರೆಟರಿಯಾಗಿ ನೇಮಿಸಲಾಗಿದೆ. ಮಿ॥ ಟಿ. ಲಕ್ಷ್ಮಿನರಸಿಂಹರಾಯರನ್ನು ರೈಲ್ವೆ ಇಲಾಖೆಯಲ್ಲಿ ಗವರ್ನಮೆಂಟಿನ ಅಂಡರ್ ಸೆಕ್ರೆಟರಿಯಾಗಿ ನೇಮಿಸಿದ್ದಾರೆ. ಮಿ॥ ಪಿ. ರಾಮಮೂರ್ತಿರಾಯರಿಗೆ ಸಂಬಳವಲ್ಲದೆ ಮಾಹೆಯಾನಾ 50 ರೂಪಾಯಿ ಅಲೋಯನ್ಸು ಕೊಟ್ಟು, ರೈಲ್ವೆ ಇಲಾಖೆಯಲ್ಲಿ ಗವರ್ನಮೆಂಟಿನ ಅ॥ ಸೆಕ್ರೆಟರಿ ಮಾಡಿದ್ದಾರೆ.

ಇದಲ್ಲದೆ ಮೈಸೂರು ರೈಲ್ವೆ ಬಾಬಿನ ನಿರ್ವಹಣೆಯನ್ನೂ, ಅದರ ಹಣಕಾಸಿನ ವಿಚಾರವನ್ನೂ, ಅದರ ಸಿಬ್ಬಂದಿ ಮತ್ತು ಮೇಲ್ವಿಚಾರಣೆಯನ್ನೂ, ರೈಲ್ವೆ ಒಡಾವಣೆಯನ್ನೂ ಕುರಿತು ಸಮಾಲೋಚನೆ ಮಾಡಿ, ಸಾಧ್ಯವಾದಷ್ಟು ಕಲ್ಯಾಣಕರವೂ ಶ್ರೇಯಸ್ಕರವೂ ಆದ ಭಾಗಗಳನ್ನು ಸೂಚಿಸುವುದಕ್ಕಾಗಿ ಒಂದು ಕಮಿಟಿಯನ್ನು ಸರ್ಕಾರದವರು ನೇಮಿಸಿದ್ದಾರೆ. ಈ ಕಮಿಟಿಯಲ್ಲಿ ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ, ರಾವ್ ಬಹದೂರ್ ಕೆ. ಕೃಷ್ಣಯ್ಯಂಗಾರರೂ, ಮಿ॥ ಎಂ. ಎನ್. ಕೃಷ್ಣರಾಯರೂ ಮೆಂಬರುಗಳು. ಮೇಲ್ಕಂಡ ರೈಲ್ವೆ ಸೆಕ್ರೆಟರಿಯವರು ಈ ಕಮಿಟಿಯವರ ತೀರ್ಮಾನ ಮತ್ತು ಅಭಿಪ್ರಾಯಗಳನ್ನು ತಿಳಿದು ಗವರ್ನಮೆಂಟಿಗೆ ತಿಳಿಸತಕ್ಕದ್ದೆಂದು ನಿರ್ಧರಿಸಲಾಗಿದೆ.

ವೃತ್ತಾಂತ ಪತ್ರಿಕೆ.

೫೯ ೧೯೧೫ ನೇ ಇಸವಿ ಜೂಲೈ ತಾ. ೧೫ ನೇ ಗುರುವಾರ.

ಮೈಸೂರು ಇಂಜನಿಯರ್ ಇಲಾಖೆ.

ಮೈಸೂರು ಸಂಸ್ಥಾನದ ಎಲ್ಲಾ ಇಲಾಖೆಗಳಿಗಿಂತಲೂ ಇಂಜನಿಯರ್ ಇಲಾಖೆಯಲ್ಲೇ ಅಪಾರವಾದ ಹಣ ಖರ್ಚಾಗುತ್ತದೆ. ಪ್ರಜೆಗಳ ಸೌಕರ್ಯವೂ ಭಾಗ್ಯೋದಯವೂ ಬಹುಮಟ್ಟಿಗೆ ಈ ಇಲಾಖೆಯ ಕಾರ್ಯಗಳಿಂದ ಪರಿಣಾಮ ಹೊಂದಬೇಕಾಗಿರುವದು. ಕಳೆದ 1913-14 ನೇ ಸಾಲಿನ ವಾರ್ಷಿಕ ರಿಪೋರ್ಟನ್ನು ಈಗ ಅಂದರೆ ಒಂದು ವರುಷವಾದ ಮೇಲೆ ಪ್ರಕಟಿಸಿರುತ್ತಾರೆ. ಇದಕಾರಣ ಈ ರಿಪೋರ್ಟಿನ ಸ್ವಾರಸ್ಯವು ಬಹಳ ಮಟ್ಟಿಗೆ ಕಡಮೆಯಾಗಿರುವದೆಂದು ಹೇಳಬಹುದು. ಸಾಲ್ ಆಖೈರಾದ ಮೇಲೆ ಕಡೇ ಪಕ್ಷ ಆರು ತಿಂಗಳೊಳಗಾದರೂ ಯಾವ ಇಲಾಖೆಯು ರಿಪೋರ್ಟನ್ನು ಪ್ರಕಟಮಾಡುವದಿಲ್ಲವೋ ಅಂಥಾ ಇಲಾಖೆಯ ಮುಖ್ಯಾಧಿಕಾರಿಯನ್ನು ಬದಲಾಯಿಸುವದೇ ಮೇಲು.

ಈ ರಿಪೋರ್ಟನ್ನು ಓದಿನೋಡುತ್ತಾ ಬರುವಲ್ಲಿ ಈ ಇಲಾಖೆಗೆ ಕಾಮಗಾರಿ ಮುಂತಾದವುಗಳನ್ನು ಸಾಧ್ಯವಾಗುವ ಮಟ್ಟಿಗೂ ಸಾವಕಾಶವಾಗಿ ನಡಿಸುವದರಲ್ಲಿ ವಿಶೇಷ ಅಭಿಲಾಷೆ ಇರುವಂತೆ ಗೊತ್ತಾಗುತ್ತದೆ. ಮಸಲಾ, ಒಂದು ಕಟ್ಟಡವನ್ನು ಕಟ್ಟಬೇಕಾದರೆ ನಮ್ಮ ಇಂಜನಿಯರ್ ಇಲಾಖೆಯು ಅದಕ್ಕೆ ಬೇಕಾಗುವ ವಿಚಾರಗಳನ್ನೆಲ್ಲಾ ಒಂದೇ ಸಲ ಗೊತ್ತುಮಾಡಿ ಅಂದಾಜು ಪಟ್ಟಿ ತಯಾರುಮಾಡಿ ಅದರಂತೆ ಕಾಮಗಾರಿ ಮಾಡಿಸಿ ಪೂರೈಸಿಬಿಡುವಂತೆ ಕಾಣುವದಿಲ್ಲ; ಕಾಮಗಾರಿಯು ವರುಷದಿಂದ ವರುಷಕ್ಕೆ ನಡೆಯುತ್ತಾ ಬರುವಂತೆ ಮಾಡುವರು. "ಕಟ್ಟಡವು ಕಾರ್ಯತಃ ಮುಗಿದು ಎರಡು ವರುಷಗಳಾಗಿವೆ" ಎಂಬ ಮಾತುಗಳನ್ನು ಈ ರಿಪೋರ್ಟಿನಲ್ಲಿ ಓದಬಹುದು. ಹಾಗಾದರೆ ಯಾಕೆ ಅಂಥಾ ಕಟ್ಟಡವು ಇನ್ನೂ ಈ ಇಲಾಖೆಯ ಕೈಬಿಟ್ಟು ಹೋಗಬಾರದೋ ತಿಳಿಯುವದಿಲ್ಲ. ಇನ್ನು ಕೆಲವು ಬಾಬುಗಳ ಕಾಮಗಾರಿಯನ್ನು ನೋಡಿದರೆ ಕೆಲಸ ಪೂರೈಸಿತೆಂದಾಗಲಿ, ಇನ್ನೂ ಬಾಕಿ ಇದೆ ಎಂದಾಗಲಿ ಹೇಳುವದು ಕಷ್ಟವಾಗಿದೆ. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಮಾರಿಕಣಿವೆ ತಲಾವಿನ ವಿಷಯದಲ್ಲಿ ಅದರ ಕೆಲಸಗಳೆಲ್ಲಾ ಕಾರ್ಯತಃ ಪೂರೈಸಿ ನಾಲ್ಕು ವರುಷಗಳಾದವೆಂದು ಹೇಳಲಾಗಿದೆ. ಅದರ ಕಾಮಗಾರಿ ಲೆಕ್ಕಗಳನ್ನೆಲ್ಲಾ ಎತ್ತುವದಕ್ಕೆ ಮುಂಚೆ ಕಳೆದ ಸಾಲಿನಲ್ಲಿ ಅದರ ವ್ಯವಸಾಯದ ನಾಲೆಗಳನ್ನು ಸುಧಾರಿಸುವದಕ್ಕೆ ಕೆಲವು ಚಿಲ್ಲರೆ ಕಾಮಗಾರಿಗಳು ನಡೆಯಬೇಕಾಯಿತು. ಈಗ ಅವೆಲ್ಲಾ ಮುಗಿದು ಆಖೈರಾ ಲೆಕ್ಕಗಳನ್ನು ಎತ್ತಿದರೋ ಇನ್ನೂ ಇಲ್ಲವೋ ಗೊತ್ತಾಗುವದಿಲ್ಲ. ಇದುವರೆಗೆ ಈ ಭಾರೀ ಕೆರೆಯ ಕಾಮಗಾರಿಗೆ 36,49,316 ರೂಪಾಯಿ ಖರ್ಚಾಗಿ, ಅದರ ರೆವಿನ್ಯೂ ಹುಟ್ಟುವಳಿ 45,645 ರೂಪಾಯಿ ಆಯಿತೆಂದು, ಅಂದರೆ ಶೇಕಡಾ ರೂ. 1-1-0 ಬಡ್ಡಿ ಉತ್ಪತ್ತಿಯಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ಈ ಕೆರೆಯ ಕಾಮಗಾರಿಯನ್ನು ಪ್ರಾರಂಭಿಸಿದಾಗ್ಗೆ ಇದರಿಂದ ಹುಟ್ಟುವಳಿ ಏನೂ ಬಾರದಿದ್ದರೂ ಆ ಪ್ರಾಂತ್ಯದಲ್ಲಿ ನೀರಿಗೆ ವಸತಿ ಆದೀತೆಂಬ ಅಭಿಪ್ರಾಯವಿದ್ದಿತು. ಆದರೂ ಇನ್ನು ಮುಂದೆ ವರುಷಗಳು ಕಳೆದ ಹಾಗೆ ಅದರ ಹುಟ್ಟುವಳಿಯೂ ಹೆಚ್ಚುತ್ತಾ ಬರಬಹುದೆಂದು ತೋರುತ್ತದೆ. ಎಷ್ಟೇ ಉತ್ಪತ್ತಿ ಆದಾಗ್ಯೂ ಅದರಿಂದ ನಮ್ಮ ಸರ್ಕಾರಕ್ಕೆ ವಿಶೇಷ ಲಾಭವಾದೀತೆಂದು ಕಾಣುವದಿಲ್ಲ. ಮಳೆ ಸುರಿದದ್ದು ಸ್ವಲ್ಪವಾದದ್ದರಿಂದ ಕೆರೆಗೆ ಬಂದ ಹೊಸ ನೀರಿಗಿಂತ ಕೆರೆಯ ನೀರು ಹೆಚ್ಚಾಗಿ ಉಪಯೋಗಮಾಡಲಾಯಿತು. ಇದಕಾರಣ ಕೆರೆಯಲ್ಲಿ ನೀರು ಕಡಮೆಯಾಗಿರುತ್ತದೆ.

ಕನ್ನಂಬಾಡಿಯಲ್ಲಿ ಕಾವೇರೀ ತಲಾವಿನ ಕಾಮಗಾರಿಗೆ ಆ ಸಾಲಿನಲ್ಲಿ 21 ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚು ಮಾಡಲಾಯಿತು. ಮತ್ತು ಮುಂದೆ ಹೇಳುವ ಕಾಮಗಾರಿಗಳು ಆ ಸಾಲಿನಲ್ಲಿ ಪೂರೈಸಿದವೆಂದು ಕಾಣುತ್ತದೆ:—ಬೆಂಗಳೂರು ಗವರ್ನಮೆಂಟ್ ಹೈ ಸ್ಕೂಲು ರೂ. 1,51,590; ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ರೂ. 2,81,513; ಶಿವಮೊಗ್ಗಾ ಸಂದಲ್ ಕೋಠಿ ರೂ. 11,910; ಮೈಸೂರು ಛತ್ರ(?)ಮನೆ 11,42,325; ಬೆಂಗಳೂರು ಸರ್ಕಾರಿ ಛಾಪಖಾನೆ ರೂ. 23,315, ಶಿವಮೊಗ್ಗಾ ತಾಳಗುಪ್ಪೆ-ಅರಳಗೋಡು ಕುದುರೆ ರಸ್ತೆ ರೂ. 25,084; ಬೆಂಗಳೂರು ಹಳೇ ಸಿಲ್ಲೇದಾರಿ ಟ್ರೈನ್ ಗಾಡಿಗಳ ಮತ್ತು ಕುದುರೆಗಳ ಷೆಡ್ಡುಗಳು ರೂ. 21,381; ಬೆಂಗಳೂರು ಬಾರ್ ಸಿಪಾಯಿಗಳ ಮನೆಗಳು ಮತ್ತು ಮುದ್ದೇದಾರರ ಮನೆಗಳು ರೂ. 27,608; ಹಾಸನದ ಡಿಸ್ಟ್ರಿಕ್ಟ್ ಬಸಲೆ ಘಾಟಿಯ ದುರಸ್ತು ರೂ. 1,19,591. ಇವಲ್ಲದೆ ಇನ್ನೂ ಅನೇಕ ಕಟ್ಟಡಗಳ ಮತ್ತು ಕಾಮಗಾರಿಗಳ ಕೆಲಸಗಳು ನಡೆಯುತ್ತಾ ಕೆಲಕೆಲವು ಮಟ್ಟಿಗೆ ಪೂರೈಸುತ್ತಾ ಬಂದಿವೆ.

ಸಣ್ಣ ಕೆರೆಗಳನ್ನು ದುರಸ್ತು ಮಾಡಿ ಅಬಾದಿಗೆ ತರುವ ಕೆಲಸವು ಈ ಇಲಾಖೆಯ ಕೈಯಿಂದಾಗಲಿ, ಇನ್ಯಾವ ಇತರ ಇಲಾಖೆಯ ಕೈಯಿಂದಾಗಲಿ ಸಾಧ್ಯವಲ್ಲವೆಂದು ಕಾಣುತ್ತದೆ. ಇದಕ್ಕೆ ಹಣವೇನೋ ಕೊಟ್ಟವಾಗಿವೆ; ಬೇರೆ ಬೇರೆ ಸಲಹೆಗಳು ಒದಗಿಸಲ್ಪಟ್ಟಿವೆ. ಆದರೆ ರೈತರಿಂದಲಾಗಲಿ ಇತರರಿಂದಲಾಗಲಿ ಈ ಕೆಲಸವನ್ನು ಮಾಡಿಸುವದಕ್ಕೆ ಯಾರಿಂದಲೂ ಆಗತಕ್ಕದ್ದೆಂದು ತೋರುವದಿಲ್ಲ. ಈ ಪ್ರಾಮುಖ್ಯವಾದ ಕಾರ್ಯವನ್ನು ವಹಿಸಿಕೊಂಡಿರುವವರೋ, ಇಲ್ಲವೇ ಇಂಥವರ ಮೇಲ್ವಿಚಾರಕರೋ ಆಲಸ್ಯವಂತರಾಗಿಯೂ ಕರ್ತವ್ಯಜ್ಞಾನ ಶೂನ್ಯರಾಗಿಯೂ ಇರಬೇಕೆಂದು ಊಹಿಸಲಾಸ್ಪದವಾಗಿದೆ. ರೈತ ಪ್ರಜೆಗಳು ತಮ್ಮ ಗ್ರಾಮಗಳಲ್ಲೂ ಸುತ್ತುಮುತ್ತಿನಲ್ಲೂ ತಮಗೂ ತಮ್ಮ ಗೋಕಾಯಿಗಳಿಗೂ ತಮ್ಮ ಜಮೀನು ಸಾಗುವಳಿಗೂ ನೀರನ್ನು ಒದಗಿಸಿಕೊಳ್ಳಬೇಕೆಂದು ವಿಶೇಷವಾಗಿ ಕುತೂಹಲ ಪಡತಕ್ಕವರಾಗಿದ್ದಾರೆನ್ನುವದಕ್ಕೆ ಸಂಶಯವಿರಲಾರದು. ಬಹುಶಾ ಇಂಜನಿಯರ್ ಇಲಾಖೆಗೂ ರೆವಿನ್ಯೂ ಇಲಾಖೆಗೂ ಈ ವಿಚಾರದಲ್ಲಿ ಪರಸ್ಪರ ಐಕಮತ್ಯವಿಲ್ಲದಿರೋಣದರಿಂದ ಒಂದು ಇಲಾಖೆಯ ಏರ್ಪಾಡು ಇನ್ನೊಂದು ಇಲಾಖೆಗೆ ಸಮಂಜಸವಾಗದೆ ಇರಬಹುದು. ಹ್ಯಾಗೂ ನಮ್ಮ ಸಂಸ್ಥಾನದ ಸಣ್ಣ ಕೆರೆಗಳ ಕಾಮಗಾರಿಯು ಜಾಗ್ರತೆಯಿಂದಲೂ, ತೃಪ್ತಿಕರವಾಗಿಯೂ ನಡೆಯುತ್ತಾ ಇಲ್ಲವೆಂದು ತಿಳಿದು ವಿಷಾದಪಡಬೇಕಾಗಿದೆ.

ಈಗ ನಮ್ಮ ಗವರ್ನಮೆಂಟಿನವರು ಸಂಸ್ಥಾನದಲ್ಲಿ ಪ್ರಾರಂಭಿಸಿ ನಡಿಸುತ್ತಾ ಬಂದಿರುವ ಕಾಮಗಾರಿಗಳೆಲ್ಲಾ ಅಂದರೆ ರೈಲ್ವೆ, ಭಾರಿ ಕೆರೆಗಳು, ಸೇತುವೆಗಳು, ಕಟ್ಟಡಗಳು ಪೂರೈಸಿದ ಮೇಲೆ ಇವುಗಳ ದೆಸೆಯಿಂದ ಪ್ರಜೆಗಳಿಗೆ ವಿಶೇಷ ಸೌಕರ್ಯಗಳೂ, ಸಂಸ್ಥಾನಕ್ಕೆ ಅಪಾರವಾದ ಶ್ರೇಯಸ್ಸೂ ಲಭಿಸುವವೆಂದು ಧಾರಾಳವಾಗಿ ಹೇಳುತ್ತೇವೆ. ಆಗ್ಗೆ ಮೈಸೂರು ಸೀಮೆಯು ಸಂತೋಷದಿಂದ ಉಬ್ಬಿ ಅಹಂಕಾರಪಟ್ಟು ಕೊಳ್ಳಬಹುದು.

ಈ ರಿಪೋರ್ಟಿನ ಕಡೇ ಭಾಗದಲ್ಲಿ ಎಗ್ಸಿಕ್ಯೂಟಿವ್ ಇಂಜನಿಯರ್ ಮ|| ಎಫ್. ಎ. ಸ್ಟೀಲ್ ಎಂಬವರಿಗೂ, ಅ|| ಇಂಜನಿಯರ್ ಮ|| ಎಂ. ಎ. ಅನಂತಾಚಾರ್ ಎಂಬವರಿಗೂ ವಹಿಸಲ್ಪಟ್ಟಿದ್ದ ಕಾಮಗಾರಿಗಳಲ್ಲೂ, ಲೆಕ್ಕಗಳಲ್ಲಿ ಏನೋ ಅಕ್ರಮಗಳು ಕಂಡು ಬಂದದ್ದರಿಂದ ಅವರಿಬ್ಬರನ್ನೂ ಕೆಲಸದಿಂದ ಬಿಡಿಸಲಾಯಿತು ಎಂದು ಕಾಣಿಸಿರುತ್ತಾರೆ. ಆ ಅಕ್ರಮಗಳೇನೆಂಬುವದನ್ನು ಮಾತ್ರ ಹೊರಪಡಿಸಿರುವದಿಲ್ಲ.

ನರಕಕೂಪ.

ಪ್ರಪಂಚದ ಕೆಲವೆಡೆಗಳಲ್ಲಿ ಅಗ್ನಿಪರ್ವತಗಳಿರುತ್ತವೆಯಷ್ಟೆ. ಇಂತಹ ಅಗ್ನಿಪರ್ವತಗಳನ್ನು ನೋಡಿ ಬಂದವರು ನಮ್ಮ ಸೀಮೆಯಲ್ಲಿ ಪ್ರಾಯಶಃ ಬಹಳ ಮಂದಿಯಿಲ್ಲ. ಆದರೆ ಹೋಗಿ ಅವುಗಳನ್ನು ನೋಡಿ ಬಂದವರು ಅಂತಹ ಭಯಂಕರವಾದ ಸ್ಥಳಗಳನ್ನು ಕುರಿತು ಬರೆದಿರುವ ವರ್ಣನೆಗಳನ್ನು ಅನೇಕರು ಓದಿಯೂ ಕೇಳಿಯೂ ಇರುವರು. ಅಗ್ನಿಪರ್ವತಗಳ ಸಮೀಪಕ್ಕೆ ಹೋಗುವದು ಸದಾ ಸಾಧ್ಯವಾದ ಕೆಲಸವಲ್ಲ. ಆದರೆ ಕೆಲವು ಸಮಯಗಳಲ್ಲಿ ಅದರ ರೌದ್ರಾಕಾರವು ಸ್ವಲ್ಪ ತಗ್ಗಿರುತ್ತದೆ. ಅಂತಹ ಸಮಯದಲ್ಲಿ ಮಾತ್ರ ಆ ಜ್ವಾಲಾಮುಖಿಯ ಬಾಯಿಯ ಹತ್ತಿರಕ್ಕೆ ಹೋಗುವದು ಸಾಧ್ಯವಾಗುತ್ತದೆ. ವಿಸೂವಿಯಸ್ ಎಂಬ ಅಗ್ನಿಪರ್ವತವು ಇಟಲೀದೇಶದ ನೇಪಲ್ಸಿಗೆ ಸಮೀಪವಾಗಿದೆ. ಇದನ್ನು ಹೋಗಿ ನೋಡಿಬಂದ ಒಬ್ಬ ಪ್ರಯಾಣಿಕನು ಅದನ್ನು ವರ್ಣಿಸಿ ಬರೆದಿರುವದೇನೆಂದರೆ,—ನಾನು ಈ ಲೋಕದಲ್ಲಿ ಆ ಅಗ್ನಿಗೊಂಡದಷ್ಟು ಭಯಂಕರವಾದ ವಸ್ತುವನ್ನು ಇನ್ನೆಲ್ಲಿಯೂ ನೋಡಲಿಲ್ಲ. ಅದನ್ನು ನೋಡಿದಾಗ ನನ್ನ ದೇಹವೆಲ್ಲಾ ಸ್ವಾಧೀನ ತಪ್ಪಿ ಕಂಪಾಯಮಾನವಾಯಿತು. ಆ ಸ್ಥಳದಲ್ಲಿ ಬಹಳ ಕಾಲವಿದ್ದು ಅದನ್ನು ಪರೀಕ್ಷಿಸಿ ಅದರ ಸ್ವಭಾವವನ್ನು ಅನುಭವದಿಂದ ತಿಳಿದಿದ್ದವನು ನನ್ನ ಕೈಯನ್ನು ಭದ್ರವಾಗಿ ಹಿಡುಕೊಂಡು ಒಂದೇಕ್ಷಣ ಹೊತ್ತು ಈ ಪ್ರತ್ಯಕ್ಷ ನರಕಕೂಪದ ಪಾತಾಳವನ್ನು ನೋಡುವದಕ್ಕೆ ನನ್ನನ್ನು ಅದರ ಅಂಚಿನ ಹತ್ತಿರ ಬಿಟ್ಟನು. ಆಗ ಅದು ತಕ್ಕಮಟ್ಟಿಗೆ ಶಾಂತವಾಗಿದ್ದು ಹೊರಗಡೆ ಜ್ವಾಲೆಯು ಕಾಣಬರುತ್ತಿರಲಿಲ್ಲ. ಆದರೆ ಒಳಗಡೆ ಅದರ ಊರಿಯುತ್ತಿರುವ ಗರ್ಜನೆ, ಹೊಗೆ, ಕೆಂಡದ ಹಾಗೆ ಕಾದಕಲ್ಲುಗಳು, ಧೂಳು, ಕರಗಿ ನೀರಿನಂತೆ ಹರಿಯುವ ಲಾವ ಇವುಗಳ ಉರಿಯುಂಟಾದ ಕಣ್ಣನ್ನು ಕುಕ್ಕುವ ಸಿಂಚಿನಂತಹ ಕಾಂತಿಯು, ಇವೆಲ್ಲಾ ತಲೆತಿರುಗಿ ಬುದ್ಧಿವಿಭ್ರಮವಾಗಿ ನೆಲಕ್ಕೆ ಬಿದ್ದುಬಿಡುವ ಹಾಗೆ ಮಾಡುವದಕ್ಕೆ ಸಾಕಾಗಿವೆ ಎಂಬುವದೇ.

ಇಷ್ಟು ಭೀಕರವಾದ ನೋಟವು ಇನ್ನೆಲ್ಲಿಯೂ ಇಲ್ಲವೆನ್ನಬಹುದು. ಆದರೆ ಲೋಕದಲ್ಲಿ ಹುಟ್ಟಿ ಬಾಳುವ ಪ್ರತಿಯೊಬ್ಬ ಪುರುಷನ ಮತ್ತು ಸ್ತ್ರೀಯ ಹೃದಯವೂ ಇಂತಹ ನರಕಕೂಪವೇ ಆಗಿದೆಯೆಂದು ಹೇಳಿದರೆ ವಾಚಕರಿಗೆ ಅನುಮಾನವುಂಟಾಗಬಹುದು. ನಮ್ಮ ದೇಹದೊಳಗೆ ಇಂತಹ ಬೆಂಕಿಯ ಜ್ವಾಲೆ, ಹೊಗೆ, ಸಿಂಹದಂತಹ ಗರ್ಜನೆಗಳು ಉಂಟೋ? ನೋಡೋಣ. ಈಗ ಯೂರೋಪ್ ಖಂಡದಲ್ಲಿ ಯುದ್ಧವು ಅತಿ ಭೀಕರವಾಗಿ ನಡೆಯುತ್ತಿದೆಯಲ್ಲವೇ, ಮನುಷ್ಯನು ತನ್ನ ಸಹೋದರನಾದ ಮನುಷ್ಯನನ್ನು ಎದುರಿಸಿ ಅವನನ್ನು ತನ್ನ ಹಗೆಯೆಂದು ಭಾವಿಸಿ ಕೋಪದಿಂದ ಸುಟ್ಟು ಕೆಡಹುವನು; ಕತ್ತಿಯಿಂದ ಇರಿದು ಸಂಹರಿಸುತ್ತಿರುವನು; ಬಾಂಬುಗಳನ್ನು ಹಾಕಿ ಅಥವಾ ವಿಷಕರವಾದ ಗಾಳಿಯನ್ನು ಬಿಟ್ಟು ಸಾವಿರಾರು ಜನಗಳನ್ನು ಹತಮಾಡುತ್ತಿರುವನು. ಇದು ಮನುಷ್ಯನ ಹೃದಯದೊಳಗಿರುವ ನರಕಕೂಪದ ಫಲಗಳಲ್ಲವೆ? ಹೃದಯದಲ್ಲಿ ದುರಾಸೆಯೂ ಗರ್ವವೂ ಹೊಟ್ಟೆಕಿಚ್ಚೂ, ಕೋಪಗಳೂ ಉಕ್ಕಿ ಈ ಉಗ್ರಕರವಾದ ಪ್ರಳಯವನ್ನು ಲೋಕದ ಮೇಲೆ ತಂದುಬಿಟ್ಟವೆ.

ನಮ್ಮ ಹೃದಯಗಳು ಭಯಂಕರವಾದ ನರಕಕೂಪಗಳಾಗಿವೆಯೆಂದು ತಿಳಿಯುವದಕ್ಕೆ ಅಷ್ಟು ದೂರ ಹೋಗಬೇಕಾದ ಕೆಲಸವಿಲ್ಲ; ನಮ್ಮ ನಮ್ಮ ಹೃದಯಗಳನ್ನು ನಾವಿದ್ದಲ್ಲಿಯೇ ಕೂತುಕೊಂಡು ಪರೀಕ್ಷೆಮಾಡಿದರೆ ನಿಜಸ್ಥಿತಿಯು ವೇದ್ಯವಾಗುವದು. ಉದಾಹರಣೆಗಾಗಿ ನಮ್ಮ ಶರೀರದ ಯಾವದಾದರೂ ಒಂದು ಅಂಗವನ್ನೂ ಅದರಿಂದ ತೋರುವ ಕ್ರಿಯೆಗಳ ದುಷ್ಫಲಗಳನ್ನೂ ನಿಮಿಷ ಮಾತ್ರ ಮನನಮಾಡಿಕೊಳ್ಳಿರಿ. ನಾಲಿಗೆಯಿದೆಯಲ್ಲವೇ? ನಾವು ಅದನ್ನು ಪ್ರಯೋಗಿಸಿ ಮಾತಾಡುತ್ತೇವೆ. ನಾಲಿಗೆಯಿಂದ ಹೊರಡುವ ನನ್ನ ಮಾತುಗಳು ಸತತವೂ ನನಗೆ ಪ್ರಯೋಜನಕಾರಿಗಳಾಗಿಯೂ ನಮ್ಮ ಸುತ್ತಮುತ್ತಲೂ ಇರುವ ನಮ್ಮ ಸಹೋದರ ಸಹೋದರಿಯರಿಗೆ ಹಿತಕಾರಿಗಳಾಗಿಯೂ ಇದ್ದವೋ? ಮಾತಿನಿಂದ ತಿಳುವಳಿಕೆ ಇಲ್ಲದವರಿಗೆ ತಿಳುವಳಿಕೆಯನ್ನೂ ದುಃಖದಲ್ಲಿರುವವರಿಗೆ ಆದರಣೆಯನ್ನೂ ದೇವರಿಗೆ ಸ್ತುತಿಯನ್ನೂ ಹೇಳುವದಕ್ಕೆ ಅನುಕೂಲವಾಗುತ್ತದೆ. ಆದರೆ ನಮ್ಮ ಮಾತುಗಳು ಈ ಸತ್ಫಲಗಳನ್ನು ಫಲಿಸುವದಕ್ಕೆ ಪ್ರಯೋಗವಾಗಿ ನಮ್ಮ ನಾಲಿಗೆಯು ಸಾರ್ಥಕವನ್ನು ಹೊಂದಿತೇ?

ಚಾಡಿ, ಕ್ಷುದ್ರ, ಸುಳ್ಳು, ನಿಂದೆ, ಅವಾಚ್ಯವಾದ ಬೈಗಳು, ಶಾಪ ಇತ್ಯಾದಿಗಳು ಹೊರಟು ನಮ್ಮನ್ನು ಮಲಿನವಾಡಿ, ಇತರರ ಮನಸ್ಸನ್ನು ಕೆಡಿಸಿ ಕಹಿಯಿಂದ ತುಂಬಿಸಿ, ಸಂದೇಹಕ್ಕೂ ಜಗಳಕ್ಕೂ, ಹೊಡೆದಾಟಕ್ಕೂ ತೀರಲಾರದ ವಿರೋಧಕ್ಕೂ ಕಾರಣಗಳಾಗಲಿಲ್ಲವೇ? ಸಮಯವರಿತು ಆಡದ ಒಂದೇ ಒಂದು ಸಂದೇಹದ ಮಾತು ಅಥವಾ ಚಾಡಿಯು ಅನೇಕಾನೇಕರ ಜೀವಾಂತ್ಯದ ವರೆಗೆ ವಿರೋಧಕ್ಕೂ ಕೆಲವು ಸಂದರ್ಭಗಳಲ್ಲಿ ಒಂದೇ ಮಾತು ಭ್ರಾತೃಹತ್ಯಕ್ಕೂ ಕಾರಣವಾಗಿವೆ. ನಾಲಿಗೆಯು ಚಿಕ್ಕ ಅಂಗವಾಗಿದ್ದರೂ ದೊಡ್ಡ ಕೆಡಕುಗಳನ್ನು ಮಾಡುತ್ತದೆ. ಬೆಂಕಿ ಸಣ್ಣದಾಗಿದ್ದಾಗ್ಯೂ ದೊಡ್ಡ ಅಡವಿಯನ್ನಾದರೂ ಸುಡುತ್ತದಲ್ಲವೇ? ನಮ್ಮ ಅಂಗಗಳಲ್ಲಿ ನಾಲಿಗೆಯು ಅಧರ್ಮಮಯವಾದ ಲೋಕವಾಗಿದೆ. ಅದು ದೇಹವನ್ನೆಲ್ಲಾ ಮೈಲಿಗೆಮಾಡುತ್ತದೆ. ನರಕದಿಂದ ಬೆಂಕಿ ಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿ ಹಚ್ಚುತ್ತದೆ. ಮನುಷ್ಯನು ಎಲ್ಲಾ ಜಾತಿಯ ಮೃಗಗಳನ್ನು ಹತೋಟಿಗೆ ತಂದಿರುವನು. ನಾಲಿಗೆಯನ್ನು ಯಾವನೂ ಹತೋಟಿಗೆ ತರಲಾರನು. ಅದು ಸುಮ್ಮನಿರಲಾರದ ಕೇಡು, ಮರಣಕರವಾದ ವಿಷದಿಂದ ತುಂಬಿದೆ.

ಒಂದು ಅಂಗದಿಂದ ಇಷ್ಟೊಂದು ನಾಶನವು ಸಾಧ್ಯವಾದರೆ ದೇಹದ ಎಲ್ಲಾ ಅವಯವಗಳಿಂದ ಪ್ರಾಪ್ತಿಸುವ ವಿಪತ್ತು ಇನ್ನೆಷ್ಟಿರಬೇಕು. ಆದರೆ ಎಲ್ಲಾ ಅವಯವಗಳಿಗೆ ಹೃದಯವು ಕರ್ತನಾಗಿಯೂ ಅವಯವಗಳನ್ನು ನಡಿಸುವ ನಾಯಕನಾಗಿಯೂ ಇರುತ್ತದೆ. ಹೃದಯವೇ ಸಕಲ ದುಷ್ಕೃತ್ಯಗಳ ಮೂಲ. ಹೃದಯದೊಳಗಿನಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಸೆ, ಕೆಡಕುತನ, ಮೋಸ, ಬಂಡತನ, ಹೊಟ್ಟೆಕಿಚ್ಚು, ಬೈಗಳು, ಸೊಕ್ಕು, ಬುದ್ಧಿಗೇಡಿತನ ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಡುವಂಥವುಗಳಾಗಿ ಮನುಷ್ಯನನ್ನು ಹೊಲೆಮಾಡುತ್ತವೆಯೆಂದು ಕ್ರಿಸ್ತನು ಹೇಳಿದನು. ಹೃದಯವು ಎಲ್ಲಾದಕ್ಕಿಂತ ಕಪಟವುಳ್ಳದ್ದು, ಮಹಾ ಕೆಟ್ಟದ್ದು. ಅದನ್ನು ತಿಳಿಯುವವನ್ಯಾರು? ಇದನ್ನು ಆಲೋಚಿಸಿ ಅಕಟಾ ನಮ್ಮ ಗತಿಯೇನು? ಎಂದು ಪ್ರಲಾಪಿಸುವದು ತಕ್ಕದ್ದಾಗಿದೆ.

ಆದರೆ ಮನುಷ್ಯನಿಗೆ ಅಸಾಧ್ಯವಾದದ್ದು ದೇವರಿಗೆ ಸಾಧ್ಯವಾಗಿದೆ. ಆತನು ನಮಗಸಾಧ್ಯವಾದ ನಮ್ಮ ಹೃದಯಗಳನ್ನು ತೊಳೆದು ಶುದ್ಧಿಮಾಡಬಲ್ಲನು. ಆದ್ದರಿಂದ ಯಾರು ಹೃದಯಶುದ್ಧಿಯನ್ನು ಹೊಂದಬೇಕೆಂದು ಅಭಿಲಾಷಿಸುತ್ತಾರೋ ಅವರು ದೇವರ ಪರಿಶುದ್ಧಾತ್ಮನನ್ನು ಮರೆಹೊಕ್ಕು—ಶುದ್ಧವಾದ ಹೃದಯವನ್ನು ನನ್ನಲ್ಲಿ ಸೃಷ್ಟಿಸು, ದೇವರೇ, ಎಂದು ಬೇಡಲಿ. ಆತನು ವಾಗ್ದತ್ತ ಮಾಡಿರುವದೇನಂದರೆ, ನಿಮಗೆ ಹೊಸ ಹೃದಯವನ್ನು ಕೊಟ್ಟು ಹೊಸ ಆತ್ಮವನ್ನು ನಿಮ್ಮೊಳಗಿಡುವೆನು. ಕಠಿಣ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುಹೃದಯವನ್ನು ನಿಮಗೆ ಕೊಡುವೆನು ಮತ್ತು ನನ್ನ ಆತ್ಮವನ್ನು ನಿಮ್ಮೊಳಗಿಟ್ಟು ನೀವು ನನ್ನ ನೇಮಗಳಲ್ಲಿ ನಡೆಯುವ ಹಾಗೆ ಮಾಡುವೆನು. ವಾಚಕರೇ, ಆತನನ್ನು ಆಶ್ರಯಿಸಿರಿ.

ಯುದ್ಧದ ಸಮಾಚಾರಗಳು.

ದಕ್ಷಿಣ ಆಫ್ರಿಕಾದಲ್ಲಿ ಜರ್ಮನಿಯವರು ಶರಣಾಗತರಾದರು.

ರಷ್ಯಾದಲ್ಲಿ ಘೋರವಾದ ಕದನ.

ದಕ್ಷಿಣ ಆಫ್ರಿಕಾದಲ್ಲಿ ಜರ್ಮನಿಯವರು ಒಟ್ಟಾಗಿ ಶರಣಾಗತರಾದರು; ಜರ್ಮನಿಯ ದಕ್ಷಿಣ-ಪಶ್ಚಿಮ ಆಫ್ರಿಕಾದಲ್ಲಿ ಯುದ್ಧಕಾರ್ಯಗಳು ತೃಪ್ತಿಕರವಾಗಿ ಕೊನೆಗಂಡವು(?). ಇದೇ ಈ ವಾರದ ಯುದ್ಧ ವಾರ್ತೆಯಲ್ಲೆಲ್ಲಾ ವಿಶೇಷ ಪ್ರಧಾನವಾದ ಸುದ್ದಿ. ಇದಕ್ಕಾಗಿ ಜನರಲ್ ಬೋಥಾರವರು ನಡಿಸಿರುವ ಕಾರ್ಯಗಳು ಸ್ತೋತ್ರಾರ್ಹವಾಗಿರುತ್ತವೆ. ಅವರಿಗೂ ಅವರ ಕೈಕೆಳಗಿರುವ ಸೈನಿಕರಿಗೂ ವಂದನಾ ಪೂರ್ವಕವಾದ ಸಂತೋಷ ವಾರ್ತೆಗಳು ಎಲ್ಲಾ ಕಡೆಗಳಿಂದಲೂ ಹೋಗಿ ತಲಪುತ್ತಿರುವವು. ಅವರನ್ನು ಅವರಾಗ್ಯ(?) ಕೊಂಡಾಡುವದು ಅತಿಶಯವಲ್ಲ. ಜರ್ಮನಿಯವರೂ ಆಸ್ಟ್ರಿಯಾದವರೂ ಮುಂದುಮುಂದಕ್ಕೆ ನುಗ್ಗಿಹೋಗುತ್ತಿದ್ದದನ್ನು ರಷ್ಯಾದವರು ತಡೆದಿರುತ್ತಾರಲ್ಲದೆ ಇವರು ಶತ್ರುವಿನ ಮೇಲೆ ನುಗ್ಗಿ ಯುದ್ಧಮಾಡಿ ಅನೇಕ ಸೈನಿಕರನ್ನು ಕೈಸೆರೆ ಹಿಡಿದಿರುವರು.

ಪಶ್ಚಿಮ ರಣರಂಗದಲ್ಲಿ.

ಬಹು ದೂರದ ತನಕ ವ್ಯಾಪಿಸಿರುವ ಯುದ್ಧ ಸಾಲಿನ ಉದ್ದಕ್ಕೂ ಅನೇಕ ಠಾಣ್ಯಗಳಲ್ಲಿ ಕದನಗಳು ನಡೆದಿರುತ್ತವೆ. ಸಾಮಾನ್ಯವಾಗಿ ಈ ಕದನಗಳಲ್ಲಿ ನಮ್ಮ ಪಕ್ಷದವರಿಗೆ ಅನುಕೂಲವಾಯಿತೆಂದು ಹೇಳಬಹುದಾಗಿದೆ. ಬೆಲ್ಜಿಯಮ್‌ನಲ್ಲಿ ಜರ್ಮನಿಯವರು ಒಂದು ಮೆಷೀನ್ ಪಿರಂಗಿಯನ್ನೂ, ಮೂರು ಮೋರ್ಟರುಗಳೆಂಬ ಭಾರಿ ಪಿರಂಗಿಗಳನ್ನೂ ಯುದ್ಧರಂಗದಲ್ಲಿ ಬಿಟ್ಟು ಹಿಮ್ಮೆಟ್ಟಿಹೋಗಬೇಕಾಯಿತು. ಬ್ರಿಟಿಷರು ಸ್ವಲ್ಪ ದೂರ ನುಗ್ಗಿಹೋಗಿ 80 ಮಂದಿ ಶತ್ರು ಸೈನಿಕರನ್ನು ಹಿಡಿದಿರುತ್ತಾರೆ. ಆರ್‍ರಾಸ್ಸಿನ ಸುತ್ತುಮುತ್ತಲೂ ಫ್ರೆಂಚರಿಗೆ ಸೋತುಬಿಟ್ಟಿರುವ ಪ್ರದೇಶವನ್ನು ಗೆದ್ದುಕೊಳ್ಳಬೇಕೆಂದು ಜರ್ಮನಿಯವರು ಮತ್ತೆ ಮತ್ತೆ ಒಟ್ಟೊಟ್ಟಾಗಿ ನುಗ್ಗಿಬಂದು ಘೋರವಾಗಿ ಕದನಮಾಡಿದರು. ಆದರೆ ಅವರ ಸಾಹಸವೆಲ್ಲಾ ನಿರರ್ಥಕವಾಯಿತು. ಅಲ್ಲಿಂದ ದಕ್ಷಿಣ ಭಾಗದಲ್ಲಿ ಜರ್ಮನಿಯ ಯುವರಾಜರು 45,000 ಸೈನ್ಯವನ್ನು ತಂದು ಒಂದು ಠಾಣ್ಯದಲ್ಲಿ 2½ ಮೈಲಿ ಉದ್ದಕ್ಕೆ ನಿಲ್ಲಿಸಿಕೊಂಡು ಅವರಿಂದ ವಿಷವಾಯುಗಳನ್ನು ಕಾರುವಂಥಾ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ಅಲ್ಲಿ ಜರ್ಮನ ಸೈನಿಕರು 10,000 ಯುದ್ಧಭಟರನ್ನು ಬಲಿ ಕೊಟ್ಟು ಫ್ರೆಂಚರ ಕೆಲವು ಕಂದಕಗಳನ್ನು ಸ್ವಾಧೀನಪಡಿಸಿಕೊಂಡರು. ಫ್ರೆಂಚರ ಕಡೆಯಾದರೋ 5,000 ಮಂದಿಗಿಂತ ಹೆಚ್ಚೇನೂ ನಷ್ಟವಾಗಲಿಲ್ಲ. ಅಲ್ಲಿಂದ ಇನ್ನೂ ದಕ್ಷಿಣ ಭಾಗದಲ್ಲಿ ಜರ್ಮನ ಸೈನಿಕರು ಬೆಂಕಿಯ ದ್ರಾವಕಗಳನ್ನು ಸುರಿಸಿದರು; ಅಲ್ಲಿಯೂ ಫ್ರೆಂಚರು ಸ್ವಲ್ಪ ಮಟ್ಟಿಗೆ ಹಿಮ್ಮೆಟ್ಟಿ ಬಂದರು. ಆದಾಗ್ಯೂ ಅಲ್ಲಿಂದ ಸ್ವಲ್ಪ ದಕ್ಷಿಣ ಪ್ರಾಂತ್ಯದಲ್ಲಿ ಫ್ರೆಂಚರು ಕದನಮಾಡಿ 660 ಗಜಗಳ ಉದ್ದವಾಗಿದ್ದ ಶತ್ರು ಸೈನ್ಯವನ್ನು ಸೋಲಿಸಿ 10 ಮುಖ್ಯೋದ್ಯೋಗಸ್ಥರನ್ನೂ, 769 ಮಂದಿ ಸೈನಿಕರನ್ನೂ, ಹಲವು ಭಾರೀ ಪಿರಂಗಿಗಳನ್ನೂ ಕೈಸೆರೆಹಿಡಿದು ತಂದರು.

ಜರ್ಮನಿಯವರು ತಮ್ಮ ಸೈನ್ಯಗಳನ್ನು ಪೂರ್ವ ರಣರಂಗದಿಂದ ಪಶ್ಚಿಮ ರಣರಂಗಕ್ಕೆ ಬಹಳವಾಗಿ ಸಾಗಿಸಿಕೊಂಡು ಬರುವಂತೆ ಕಾಣುತ್ತದೆ. ಅವರು ಹೀಗೆ ಹೊಸ ಸೈನ್ಯಗಳನ್ನು ಹೆಚ್ಚು ಹೆಚ್ಚಾಗಿ ತರುತ್ತಿದ್ದಾಗ್ಯೂ ಕಳೆದ ವಾರ ನಡೆದಿರುವ ಕದನಗಳಲ್ಲಿ ನಮ್ಮ ಪಕ್ಷದವರಿಗೇ ಅನುಕೂಲವಾಗಿರುತ್ತದೆ.

ಫ್ರೆಂಚರ ಒಂದು ಸಣ್ಣ ಯುದ್ಧದ ಹಡಗು ಬೊಲೋನ್ ತೀರಪಟ್ಟಣದ ಹೊರಪಾರ್ಶ್ವದಲ್ಲಿದ್ದ ಜರ್ಮನಿಯವರ ಒಂದು ಸಬ್‌ಮೆರೀನ್ ಎಂಬ ಹಡಗಿಗೆ ಗುಂಡುಗಳನ್ನು ಹೊಡೆಯಿತು. ಸಬ್‌ಮೆರೀನು ಮುಳುಗಿಹೋಯಿತು; ಅದು ಮುಳುಗಿದ ಸ್ಥಳದಲ್ಲಿ ಎಣ್ಣೆಯು ಬಹಳವಾಗಿ ನೀರಿನ ಮೇಲೆ ಕಾಣಿಸಿಕೊಂಡಿತು.

ಕಳೆದ ಮೇ ತಿಂಗಳ 31 ನೇ ತಾರೀಖಿನವರೆಗೆ ಫ್ರೆಂಚರ ಕಡೆ ನಷ್ಟವಾಗಿರುವಂತೆ ತಿಳಿಯುವ ಸೈನ್ಯ ಎಷ್ಟೆಂದರೆ—ಕೊಲೆಯಾದವರು 4,00,000, ಗಾಯಪಟ್ಟವರು 7,00,000, ಕೈಸೆರೆಯಾದವರು 3,00,000. ಒಟ್ಟು 14,00,000 ಸೈನ್ಯ ನಷ್ಟವಾಗಿರಬಹುದೆಂದು ಹೇಳಲಾಗಿದೆ.

ಪೂರ್ವ ರಣರಂಗದಲ್ಲಿ.

ಜರ್ಮನಿ ಮತ್ತು ಆಸ್ಟ್ರಿಯಾದವರು ಅಪಾರವಾದ ಸೈನ್ಯವನ್ನು ತಂದದ್ದರಿಂದ ಗೆಲಿಷಿಯಾದಲ್ಲಿ ರಷ್ಯಾದವರು ಅವರನ್ನು ಎದುರಿಸದೆ ಕೆಲವು ವಾರಗಳಿಂದ ಹಿಮ್ಮೆಟ್ಟಿಹೋಗುತ್ತಿದ್ದರೆಂದು ತಿಳಿಸಿರುತ್ತೇವೆ. ಈಗ ಇದು ನಿಂತುಹೋಗಿದೆ. ರಷ್ಯಾದವರು ಹೊಸದಾಗಿ ಸೈನ್ಯಗಳನ್ನು ತಂದುಕೊಂಡರು. ಶತ್ರುವು ಮುಂದಕ್ಕೆ ನುಗ್ಗಿಹೋಗದಂತೆ ರಷ್ಯಾದವರು ಅವರ ಮೇಲೆ ನುಗ್ಗಿ ತಡೆದಿರುವದು ಮಾತ್ರವೇ ಅಲ್ಲದೆ ಅವರನ್ನು ಹಿಮ್ಮೆಟ್ಟಿಸಿ ಓಡಿಸುತ್ತಲೂ ಇದ್ದಾರೆ. ಮೊದಲನೇ ಯುದ್ಧದಲ್ಲಿ ರಷ್ಯಾದವರು 2,000 ಸೈನಿಕರನ್ನು ಕೈಸೆರೆ ಹಿಡಿದುಕೊಂಡರು. ಮಹಾ ಘೋರವಾದ ಕದನ ನಡೆದದ್ದರಲ್ಲಿ 2,000 ಆಸ್ಟ್ರಿಯಾ ಸೈನಿಕರು ರಣರಂಗದಲ್ಲಿ ಕೊಲೆಯಾಗಿ ಬಿದ್ದಿದ್ದರು. ಯುದ್ಧವು ನಿಲ್ಲದೆ ಹಲವು ದಿನಗಳ ತನಕ ನಿಲುಗಡೆಯಿಲ್ಲದೆ ನಡೆಯುತ್ತಲೇ ಬಂದಿರುವದು. ಅಗ್ಗೆ ರಷ್ಯಾದವರಿಗೆ 15,000 ಸೈನಿಕರು ಕೈಸೆರೆ ಸಿಕ್ಕಿರುತ್ತಾರೆ; ಇದಲ್ಲದೆ ಶತ್ರುವು ಅಲ್ಲಿಯೆ

ಸ್ಕೃಟ್ಟುಹೋಗುವಂತೆಯೂ ಆಗಿರುತ್ತದೆ. ಅಲ್ಲಿ ರಷ್ಯಾದವರಿಗೆ ಅನೇಕ ಷೀಲ್ಡ್ ಪಿರಂಗಿಗಳೂ ಸಿಕ್ಕಿರುವವು. ಜರ್ಮನಿಯವರು ವಿಷವಾಯುಗಳನ್ನು ಬಿಸಿದರು. ರಷ್ಯಾದವರು ಲಕ್ಷ್ಯಮಾಡದೆ ಜರ್ಮನಿಯವರನ್ನು ಸೋಲಿಸಿ ಕೆಲರನ್ನು ಕೊಂದು ನಷ್ಟಪಡಿಸಿ ಉಳಿದವರನ್ನು ಹಿಂದಕ್ಕೆ ಹೋಗುವಂತೆ ಮಾಡಿದರು. ಇಲ್ಲಿಗೆ ಜರ್ಮನಿಯವರೂ ಆಸ್ಟ್ರಿಯಾದವರೂ ಮುಂದಕ್ಕೆ ಹೋಗದಂತೆ ಅಡ್ಡಿ ಆಯಿತು. ಈ ಕದನವು ನಡೆದದ್ದು ರಷ್ಯಾ ಸೀಮೆ ಯಲ್ಲೇ; ಆದಾಗ್ಯೂ ಗೆಲಿಷಿಯಾದಲ್ಲಿ ಇನ್ನೂ ವಿಶೇಷ ಪ್ರಾಂತ್ಯವು ರಷ್ಯಾದವರ ಸ್ವಾಧೀನದಲ್ಲೇ ಇರುತ್ತದೆ.—ರಷ್ಯಾದವರ ವಿಮಾನ ಯಂತ್ರಗಳ ಕಾರುಬಾರು ಕಳೆದ ವಾರ ಹೆಚ್ಚಾಗಿತ್ತು. ಅವು ಒಂದು ರೈಲ್ವೆ ಸ್ಟೇಷನ್‌ಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದ್ದರಲ್ಲಿ ಐದು ಟ್ರೈಯಿನುಗಳು ಹತ್ತಿಕೊಂಡವು; 30,000 ಸಿಡಿಮದ್ದಿನ ಗುಂಡುಗಳು ಹತ್ತಿ ಉರಿದು ನಷ್ಟವಾಗಿರುತ್ತವೆ.

ಬಾಲ್ಟಿಕ್ ಕಡಲಿನಲ್ಲಿ ನಡೆದ ಸಮುದ್ರ ಯುದ್ಧದ ವಿವರಗಳು ಈ ವಾರ ಸ್ಪಷ್ಟವಾಗಿ ತಿಳಿದುಬಂದಿವೆ. ಈ ಸಮುದ್ರ ಯುದ್ಧವು ಮಂಜು ಅಧಿಕವಾಗಿ ಮುಚ್ಚಿಕೊಂಡಿದ್ದಾಗ ನಡೆಯಿತು. ಅದರಲ್ಲಿ ಹಡಗುಗಳು ಕಾಣುವುದೇ ಕಷ್ಟ ಪ್ರಯಾಸ. ಜರ್ಮನಿಯವರ ಒಂದು ಯುದ್ಧದ ಜಹಜು ಓಡಿಹೋಗಿ ಗಾಟ್ಲಾಂಡ್ ದ್ವೀಪದ ಮೇಲೆ ನಿಂತುಬಿಟ್ಟಿತು; ತೀರದಿಂದ ಮೂರು ಮೈಲಿ ಸಮುದ್ರದೊಳಗೆ ರಷ್ಯಾದವರ ಗುಂಡುಗಳು ಹೋಗಿ ಬಿದ್ದ ವಿಷಯದಲ್ಲಿ ರಷ್ಯಾದವರು ಸ್ವೀಡನ್ ರಾಜ್ಯದ ಕ್ಷಮಾಪಣೆ ಬೇಡಿದರು. ಆದರೆ ಮಂಜು ಮುಚ್ಚಿಕೊಂಡಿದ್ದದ್ದರಿಂದ ತೀರವು ಎಷ್ಟು ದೂರದಲ್ಲಿದೆ ಎಂಬುವೇ ಅವರಿಗೆ ಕಾಣದೆ ಹೋಯಿತು. ಈ ಸಮುದ್ರಯುದ್ಧದಲ್ಲಿ ಜರ್ಮನಿಯ ಒಂದು ಯುದ್ಧದ ಜಹಜಿನ ಪಿರಂಗಿಗಳ ಬಾಯಿ ಕಟ್ಟಿಹೋಯಿತು ಬಳಿಕ ಅದರಲ್ಲಿ ಬೆಂಕಿಹುಟ್ಟಿ ಉರಿಯಲಾರಂಭಿಸಿತು ರಷ್ಯಾದವರ ಕಡೆ 14 ಮಂದಿಗೆ ಮಾತ್ರ ಗಾಯಗಳಾದುವು.—ದೊಯಿಚ್‌ಲಾಂಡ್ ಎಂಬ ಜರ್ಮನಿಯ ಯುದ್ಧದ ಜಹಜನ್ನು ಮುಳುಗಿಸಿದ ಸಬ್‌ಮೆರೀನು ಬ್ರಿಟಿಷರದೆಂದು ಗೊತ್ತಾಗಿದೆ.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿಯವರು ಅನೇಕ ಸ್ಥಳಗಳಲ್ಲಿ ಸೈನ್ಯಗಳನ್ನು ಕೂಡಿಸುತ್ತಲೂ, ಮುಂದರಿಸಿ ನುಗ್ಗಿಹೋಗುತ್ತಲೂ ಇದ್ದಾರೆ. ಇವರನ್ನು ನುಗ್ಗಿಬಾರದಂತೆ ತಡೆಯಬೇಕೆಂದು ಆಸ್ಟ್ರಿಯಾದವರು ಬಹಳವಾಗಿ ಸನ್ನಾಹ ಮಾಡಿಕೊಂಡು ಸಾಹಸ ಮಾಡುತ್ತಿರುವರು. ಇವರ ಪ್ರಯತ್ನವು ಇದು ವರೆಗೆ ಸಾರ್ಥಕವಾಗಲಿಲ್ಲ. ಆಸ್ಟ್ರಿಯಾದವರು ಇಟಲಿಯವರ ಮೇಲೆ ಬಿದ್ದು ಕದನಮಾಡಿದರೂ ಸೋತು ಹಿಂದಕ್ಕೆ ಬರುತ್ತಿದ್ದಾರೆ. ಒಂದು ಠಾಣ್ಯದಲ್ಲಿ ಇಟಲಿಯವರು 500 ಸೈನಿಕರನ್ನು ಸೆರೆ ಹಿಡಿದುಕೊಂಡರು; ಇನ್ನೊಂದು ಕಡೆ 1,400 ಸೈನ್ಯವನ್ನೂ, 2 ಪಿರಂಗಿಗಳನ್ನೂ, ಅಪಾರ ಬಂದೂಕು ಮದ್ದು ಗುಂಡುಗಳನ್ನೂ ಆಸ್ಟ್ರಿಯಾದವರಿಂದ ಕಿತ್ತು ಸ್ವಾಧೀನಮಾಡಿಕೊಂಡಿದ್ದಾರೆ.

ಇಟಲಿಯವರನ್ನು ಸೋಲಿಸುವುದಕ್ಕೆ ಆಸ್ಟ್ರಿಯಾದವರು ಕೃತ್ರಿಮ ಮಾಡ ಲಾರಂಭಿಸಿದರು. ಆಸ್ಟ್ರಿಯಾ ಸೈನ್ಯದಲ್ಲಿ ಕೆಲವು ಯುದ್ಧಭಟರು ಶರಣಾಗತ ರಾಗುತ್ತೇವೆಂದು ತೋರ್ಪಡಿಸಿಕೊಂಡು ಕೈಗಳನ್ನು ಮೇಲಕ್ಕೆತ್ತಿ ಉದ್ದಕ್ಕೆ ನಮಸ್ಕಾರ ಮಾಡುವಂತೆ ಬಿದ್ದುಕೊಳ್ಳುವರು. ಇಟಲಿಯವರು ಆ ಚಿಹ್ನೆಯನ್ನು ನೋಡಿ ಮುಂದೆ ಬಂದಾಗ ಬಿದ್ದುಕೊಂಡಿರುವವರ ಹಿಂಭಾಗದಲ್ಲಿರುವ ಆಸ್ಟ್ರಿಯಾ ಸೈನಿಕರು ಗುಂಡುಗಳನ್ನು ಹೊಡೆದು ಕೊಲ್ಲುವರು. ಈಗ ಇಟಲಿಯವರು ಈ ಮೋಸವನ್ನು ತಿಳಿದುಕೊಂಡಿರೋಣದರಿಂದ ಅವರ ಕೃತ್ರಿಮಕ್ಕೆ ಸಿಗ್ಗುವವರಾಗಿಲ್ಲ.

ಇಟಲಿಯವರ ಒಂದು ಯುದ್ಧದ ಜಹಜಿಗೆ ಅಡ್ರಿಯಾಟಿಕ್ ಕಡಲಿನಲ್ಲಿ ಟಾರ್ಪಿಡೋ ಬಡಿದು ಮುಳುಗಿಹೋಯಿತು. ಅದರಲ್ಲಿದ್ದವರ ಪೈಕಿ ಅನೇಕರು ಬದುಕಿ ಬಂದಿದ್ದಾರೆ. ಇಟಲಿಯವರ ವಿಮಾನಯಂತ್ರಗಳು ಹೋಗಿ ಟ್ರಿಯೆಸ್ಟ್ ನಗರದಲ್ಲಿರುವ ಆಯುಧಶಾಲೆಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬಂದವು.

ದಕ್ಷಿಣ ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಿಂದ ಬಂದಿರುವ ವರ್ತಮಾನವು ಬಹಳ ಸಂಭ್ರಮ ಯುಕ್ತವಾದದು. ಜನರಲ್ ಬೋಥಾರವರು ಸೈನ್ಯ ಸಮೇತ ಜರ್ಮನರ ಕೃಷ್ಣಗಳ ಮೇಲೆ ಹೊರಟು ಸಿಕ್ಕಿದ ಜರ್ಮನಿಯವರನ್ನು ಕೈಸೆರೆ ಹಿಡಿಯುತ್ತಾ, ಉಳಿದವರನ್ನು ರೈಲ್ ಮಾರ್ಗಗಳಿಂದ ದೂರಕ್ಕೆ ಓಡಿಸುತ್ತಾ ಬಂದರು. ಕೆಲವು ದಿವಸಗಳ ಹಿಂದೆ ಅವರ ಸೈನ್ಯವು 16 ಗಂಟೆ ಹೊತ್ತಿನಲ್ಲಿ 42 ಮೈಲಿ ದೂರ ನುಗ್ಗಿಹೋಗಿ 750 ಮಂದಿ ಜರ್ಮನಿಯವರನ್ನೂ ಅವರ ಭಾರಿ ಪಿರಂಗಿಗಳನ್ನೂ ಸುತ್ತುಹಾಕಿಕೊಂಡು ಕೈಸೆರೆ ಹಿಡಿದಿರುತ್ತಾರೆ. ಜನರಲ್ ಬೋಥಾರವರು ಶತ್ರುವಿಗೆ ಸ್ವಲ್ಪ ವ್ಯವಧಾನವನ್ನು ಕೊಟ್ಟು ಅಷ್ಟರೊಳಗೆ ಶರಣಾಗತರಾಗಬೇಕೆಂದು ತಿಳಿಸಿದರು. ಜರ್ಮನಿಯವರೆಲ್ಲಾ ಸೊಲ್ಲೆತ್ತದೆ ಶರಣಾಗತರಾದರು. ಅವರಲ್ಲಿ 204 ಹುದ್ದೇದಾರರೂ, 3,166 ಮಂದಿ ಸೈನಿಕರೂ ಇದ್ದರು; ಇದಲ್ಲದೆ ಅವರ ಬಳಿ 37 ದೊಡ್ಡ ಪಿರಂಗಿಗಳೂ, 23 ಮೆಷೀನ್ ಪಿರಂಗಿಗಳೂ ಇದ್ದವು. ಇಷ್ಟನ್ನೆಲ್ಲಾ ಸ್ವಾಧೀನಪಡಿಸಿಕೊಂಡ ಮೇಲೆ ಜನರಲ್ ಬೋಥಾರವರು ಶರಣಾಗತರಾದವರಲ್ಲಿ ಹುದ್ದೇದಾರರಿಗೆ ಅವರ ಆಯುಧಗಳನ್ನು ಇಟ್ಟುಕೊಂಡು ಬೇಕಾದ ಸ್ಥಳದಲ್ಲಿ ವಾಸಮಾಡಬಹುದೆಂದು ರಿಯಾಯಿತಿ ತೋರಿಸಿದರು. ಸೈನಿಕರಿಗೂ ಅವರವರ ಆಯುಧಗಳನ್ನು ಮಾತ್ರ ಕೊಟ್ಟು ಬಂಧನದಲ್ಲಿಟ್ಟು, ಅವರ ಬಳಿ ಇದ್ದ ಮದ್ದುಗುಂಡನ್ನು ತೆತ್ತುಕೊಂಡರು. ಸೈನಿಕರಾಗಬೇಕಾಗಿದ್ದ ರಿಜರ್ವ್ ಜರ್ಮನರ ಬಳಿ ಇದ್ದ ಆಯುಧಗಳನ್ನೆಲ್ಲಾ ತೆಗೆದುಕೊಂಡು, ರುಜು ಮಾಡಿಸಿಕೊಂಡು ಅವರವರ ಮನೆಗಳಿಗೆ ಕಳುಹಿಸಿದರು.

ಆ ಸೀಮೆಯು ಬಹಳ ಕಠಿಣವಾಗಿದ್ದರೂ ಜನರಲ್ ಬೋಥಾರವರು ಬಹಳ ಸಾಹಸಪಟ್ಟು ಇಷ್ಟು ಬೇಗನೆ ಯುದ್ಧಕಾರ್ಯಗಳನ್ನು ಸಾರ್ಥಕವಾಗಿ ಮುಗಿಸಿದ್ದನ್ನು ನೋಡಿ ಆನಂದಪಟ್ಟು ಅವರಿಗೆ ಎಲ್ಲಾ ಕಡೆಗಳಿಂದಲೂ ವಂದನಾಪೂರ್ವಕವಾದ ತಂತೀವರ್ತಮಾನಗಳು ಕಳುಹಿಸಲ್ಪಡುತ್ತಿರುವವು. ದಕ್ಷಿಣ ಆಫ್ರಿಕದ ಈ ಸಹಾಯವು ಅತ್ಯಂತ ಶ್ಲಾಘ್ಯವಾದದ್ದಾಗಿದೆ. ದಕ್ಷಿಣ ಆಫ್ರಿಕಾ ಸರ್ಕಾರದವರು ಅಲ್ಲಿದ್ದ ಬ್ರಿಟಿಷ್ ಸೈನ್ಯಗಳನ್ನೆಲ್ಲಾ ಫ್ರಾನ್ಸಿಗೆ ಕಳುಹಿಸಿಬಿಟ್ಟರು. ಬಳಿಕ ಜರ್ಮನಿಯವರು ಪಿತೂರಿಮಾಡಿ ದಕ್ಷಿಣ ಆಫ್ರಿಕಾದಲ್ಲಿ ದಂಗೆಯನ್ನೆಬ್ಬಿಸಿದರು. ಸರ್ಕಾರದವರು ಈ ದಂಗೆಕೋರರ ಕೂಡ ಹೋರಾಡಿ ಕೆಲವು ಕಾಲದ ಮೇಲೆ ಅವರನ್ನು ಅಡಗಿಸಿಬಿಟ್ಟರು. ಇಷ್ಟೆಲ್ಲಾ ಆದ ಮೇಲೆ ಅವರು ಅಲ್ಲಿರುವ ಜರ್ಮನಿ ಸ್ವಾಸ್ಥ್ಯಗಳ ಮೇಲೆ ಸೈನ್ಯವನ್ನು ಕಳುಹಿಸಿದರು. ಆ ಸೈನಿಕರು ಬಹಳ ಚಟುವಟಿಕೆಯಿಂದಲೂ ಪರಾಕ್ರಮದಿಂದಲೂ ನುಗ್ಗಿ ಯುದ್ಧಮಾಡುತ್ತಾ ಬಂದದ್ದರಿಂದ ಜನರಲ್ ಬೋಥಾರವರಿಗೆ ಮೈಸೂರು ದೇಶಕ್ಕಿಂತ ಸುಮಾರು ಹತ್ತರಷ್ಟು ದೊಡ್ಡ ದೇಶಕ್ಕೆ ದೇಶವೇ ಈಗ ಸ್ವಾಧೀನವಾಗಿರುತ್ತದೆ. ಅದರಲ್ಲಿ ಅನೇಕ ಭಾಗವೆಲ್ಲಾ ಬೆಂಗಾಡು ಸೀಮೆಯಾಗಿದ್ದರೂ ಕೆಲವು ಫಲವತ್ತಾದ ಪ್ರದೇಶಗಳಿರುವವು. ಈ ರೀತಿ ಜರ್ಮನಿಯವರು ದಕ್ಷಿಣ ಆಫ್ರಿಕದ ಸ್ವಾಸ್ಥ್ಯವನ್ನು ಕಳೆದುಕೊಂಡರು.

ದಕ್ಷಿಣ ಆಫ್ರಿಕದವರು ಇನ್ನೂ ಸಹಾಯಮಾಡುವವರಾಗಿದ್ದಾರೆ. ಅವರು ಸಮೀಪದಲ್ಲಿದ್ದ ಶತ್ರುವನ್ನು ಅಡಗಿಸಿ ದೇಶವನ್ನು ಸ್ವಾಧೀನಪಡಿಸಿಕೊಂಡಿರುವುದಲ್ಲದೆ ಅಲ್ಲಿಂದ ಯೂರೋಪಿನಲ್ಲಿ ಜರ್ಮನಿಯವರ ಮೇಲೆ ಯುದ್ಧಮಾಡುವುದಕ್ಕೆ ಕೆಲವು ಸೈನಿಕರನ್ನು ಕೂಡಿಸಿ ಕಳುಹಿಸುವುದಾಗಿ ಒಪ್ಪಿಕೊಂಡಿದ್ದಾರೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಆ ರೀತಿ ಮಾಡಬಹುದೆಂದು ಅವರ ಸಹಾಯವನ್ನು ಅಂಗೀಕರಿಸಿಕೊಂಡರು. ಇಷ್ಟರಲ್ಲೇ ದಕ್ಷಿಣ ಆಫ್ರಿಕಾ ಸೈನಿಕರು ಬ್ರಿಟಿಷ್, ಹಿಂದೂಸ್ಥಾನ್, ಫ್ರೆಂಚ್ ಸೈನಿಕರ ಕೂಡ ನಿಂತು ಜರ್ಮನಿಯವರ ಮೇಲೆ ಕದನ ಮಾಡುವುದನ್ನು ಓದುವೆವು.—ಈ ಸುದ್ದಿಯು ಹಿಂದುಸ್ಥಾನದಲ್ಲೆಲ್ಲಾ ಪರಮಾನಂದವನ್ನುಂಟುಮಾಡಿದೆ.—ಜನರಲ್ ಬೋಥಾರವರ ಜಯಪ್ರದವನ್ನು ಕೊಂಡಾಡುವುದಕ್ಕಾಗಿ ಹಿಂದುಸ್ಥಾನದ ಅನೇಕ ಮಹಾ ಪಟ್ಟಣಗಳಲ್ಲಿ ಕಳೆದ ಸೋಮವಾರ ಬಾವುಟಗಳನ್ನು ಎತ್ತಿಕಟ್ಟಿದ್ದರು. ಈ ಪ್ರಕಾರ ಒಂದು ದೇಶದಲ್ಲಿ ಯುದ್ಧಕಾರ್ಯಗಳು ಮುಕ್ತಾಯವಾದವೆಂದು ಆನಂದಪಡುತ್ತೇವೆ.

ಟರ್ಕಿ.

ಗಲ್ಲಿಪೋಲಿ ಅರ್ಧದ್ವೀಪದಲ್ಲಿ ಟರ್ಕಿಯವರು ಬಹಳ ಪರಾಕ್ರಮದಿಂದ ಕದನ ಮಾಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಅವರು ಬ್ರಿಟಿಷರ ಮೇಲೆ ನುಗ್ಗಿ ಯುದ್ಧ ಮಾಡಿದ್ದರಲ್ಲಿ 2,000 ಅವರು ಸೈನಿಕರ ಹೆಣಗಳನ್ನು ಬಿಟ್ಟು ಹಿಂದಕ್ಕೆ ಹೋದರು. ಜೂಲೈ ತಾ. 5 ರಲ್ಲಿ ಅವರು ಮತ್ತೆ 5,000 ಗುಂಡುಗಳ ಮಳೆ ಸುರಿಸಿ ಬ್ರಿಟಿಷರ ಮೇಲೆ ನುಗ್ಗಿದರು ಆದರೆ ಅವರ ಕಡೆ ಇನ್ನಷ್ಟು ಸೈನ್ಯ ನಷ್ಟವಾಯಿತೇ ಹೊರತು ಅವರಿಂದ ಇನ್ನೇನೂ ಮಾಡಲಾಗಲಿಲ್ಲ. ಬ್ರಿಟಿಷ್ ದಳಪತಿಯಾದ ಸರ್ ಇಯಾನ್ ಹಮಿಲ್ಟನ್‌ರವರು ಜೂನ್ ತಾ. 28 ರಿಂದ ಜೂಲೈ 2 ರ ವರೆಗೆ ಟರ್ಕಿ ಸೈನಿಕರಲ್ಲಿ 5,000 ಕೊಲೆಯಾಗಿ 15,000 ಸೈನ್ಯ ಗಾಯಪಟ್ಟಿರಬಹುದೆಂದು ಹೇಳಿದ್ದಾರೆ. ಬ್ರಿಟಿಷರಿಗೆ ಅಲ್ಲಿ 516 ಬಂದೂಕುಗಳೂ, 1,28,400 ತೋಟಾಗಳೂ, 100 ಸಿಡಿಮದ್ದಿನ ಗುಂಡುಗಳೂ, ಇನ್ನೂ ಅನೇಕ ಯುದ್ಧ ಸಾಮಗ್ರಿಗಳೂ ಸಿಕ್ಕಿರುತ್ತವೆ. ಜನರಲ್ ವಾನ್ ಸಾಂಡರ್ಸ್ ಎಂಬ ಜರ್ಮನಿ ದಳಪತಿಯು ಗಾಯಪಟ್ಟನೆಂದೂ, ಈಗ ಎನ್ವರ್ ಪಾಷಾ ಟರ್ಕಿ ದಳಪತಿಯಾದರೆಂದೂ ವರ್ತಮಾನವಿದೆ.

ಮಾರ್ಮೊರಾ ಕಡಲಿನಲ್ಲಿ ಬ್ರಿಟಿಷ್ ಸಬ್‌ಮೆರೀನುಗಳು ಶತ್ರು ಸೈನಿಕರನ್ನು ಸಾಗಿಸುವ ಜಹಜುಗಳನ್ನೇ ಹಿಡಿದು ಮುಳುಗಿಸುತ್ತವೆ. ಸಭ್ಯಪ್ರಜೆಗಳು ಪ್ರಯಾಣ ಮಾಡುವ ಹಡಗುಗಳ ತಂಟೆಗೆ ಹೋಗುವುದಿಲ್ಲ. ಸಭ್ಯಪ್ರಜೆಗಳಿದ್ದ ಒಂದು ಹಡಗು ಕೆಲವು ದಿನಗಳ ಕೆಳಗೆ ಬ್ರಿಟಿಷ್ ಸಬ್‌ಮೆರೀನನ್ನು ಕಂಡಿತು. ಪ್ರಜೆಗಳೆಲ್ಲಾ ಹೆದರಿ ಗಾಬರಿಬಿದ್ದರು. ಆದರೆ ಸಬ್‌ಮೆರೀನು ಅದನ್ನು ಏನೂ ಮಾಡದೆ ಬಿಟ್ಟುಬಿಟ್ಟಿತು.—ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಒಂದು ಬ್ರಿಟಿಷ್ ಜಹಜಿಗೆ ಟಾರ್ಪಿಡೋ ಬಡಿದು ಮುಳುಗಿಹೋಯಿತು. ಅದರಲ್ಲಿದ್ದವರು ಬದುಕಿ ಬಂದರು. ಆರು ಜನರು ಮಾತ್ರ ಸಿಕ್ಕ ಇಲ್ಲ.

ಬ್ರಿಟಿಷರು ಯೂಫ್ರೆಟೀಸ್ ನದಿಯ ಮೇಲ್ಭಾಗಕ್ಕೆ ನುಗ್ಗಿ ಹೋಗುತ್ತಿದ್ದಾರೆ. ಟರ್ಕಿಯವರಲ್ಲಿ ವಿಶೇಷ ನಷ್ಟವನ್ನುಂಟುಮಾಡಿ ಅವರನ್ನು ಸುಕೇಷ್-ಷಯೂಖ್ ಎಂಬ ತೀರಪಟ್ಟಣದಿಂದ ಓಡಿಸಿಬಿಟ್ಟರು. ಅಲ್ಲಿ ಬ್ರಿಟಿಷರಿಗೆ ಆರು ಪಿರಂಗಿಗಳು ಸಿಕ್ಕಿರುತ್ತವೆ. ಬ್ರಿಟಿಷ್ ಸೈನಿಕರಲ್ಲಿ 70-80 ಮಂದಿ ನಷ್ಟಪಟ್ಟರು.

ಬಾಗ್ದಾದಲ್ಲಿ ಮುಸಲ್ಮಾನರ ಧರ್ಮಸ್ಥಳಗಳ ಮೌಲ್ವಿಗಳೆಂದು ತಿಳಿದಂಥಾ 28 ಮಂದಿಯನ್ನು ಬ್ರಿಟಿಷರು ಕೈಸೆರೆಯಿಂದ ಬಿಡುಗಡೆ ಮಾಡಿದರು ಇವರಲ್ಲಿ ಇಬ್ಬರು ಇಮಾಮರು. ಇದರಿಂದ ಬ್ರಿಟಿಷರು ಪ್ರಜೆಗಳ ಮೇಲಲ್ಲ, ಟರ್ಕಿ ಸೈನಿಕರ ಮೇಲೆ ಯುದ್ಧಮಾಡುತ್ತಾರೆಂಬುವುದನ್ನು ಸ್ಪಷ್ಟವಾಗಿ ತೋರಿಸಿರುತ್ತಾರೆ.

ಇತರ ವಿಷಯಗಳು.

ಶತ್ರುಪಕ್ಷದಲ್ಲಿ ಏಪ್ರಿಲ್ 25ರ ವರೆಗೆ ಕೆಳಗೆ ಹೇಳುವಷ್ಟು ಸೈನ್ಯ ನಷ್ಟವಾಗಿರಬಹುದೆಂದು ಒಬ್ಬ ಬಾತ್ಮೀದಾರನು ಹೇಳುವನು.—

	ಕೊಲೆ	ಗಾಯ	ಕೈಸೆರೆ
ಜರ್ಮನರು	16,38,000	18,80,000	4,90,000
ಆಸ್ಟ್ರಿಯಾದವರು	8,70,000	8,85,000	8,10,000
ಟರ್ಕಿಯವರು	1,10,000	1,40,000	95,000

ಹಿಂದೆ ಯಾವ ಯುದ್ಧದಲ್ಲೂ 69,16,000 ಸೈನ್ಯಗಳು ನಷ್ಟವಾದದಿಲ್ಲ.

ಬ್ರಿಟಿಷ್ ಸೈನಿಕರಲ್ಲಿ ಗಾಯಪಟ್ಟವರ ಪೈಕಿ 782 ಮಂದಿಗೆ ಮಾತ್ರ ಬೇರೆ ಅಂಗಗಳನ್ನು ಜೋಡಿಸಬೇಕಾಯಿತೆಂದು ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ತಿಳಿಸಲ್ಪಟ್ಟಿದೆ.—ಜರ್ಮನಿಯ ಬಳಿ ಮುಳುಗಿಸಲ್ಪಟ್ಟ ಜರ್ಮನಿ ಸಬ್‌ಮೆರೀನನ್ನು ಅವರು ಹುಡುಕಿ ತೆಗೆದರು ಅದು 36 ಗಂಟೆಗಳ ತನಕ ಸಮುದ್ರದೊಳಗೆ ಮುಳುಗಿತ್ತಾದರೂ ಒಬ್ಬ ವಿನಾ ಉಳಿದವರೆಲ್ಲಾ ಬದುಕಿದ್ದರೆಂದು ತಿಳಿಯುವುದು.—ಇಟಲಿ ತೀರಪಟ್ಟಣಗಳಲ್ಲಿ ತಡೆದಿಟ್ಟುಕೊಂಡಿದ್ದ ಜರ್ಮನಿ ಹಡಗುಗಳನ್ನು ಇಟಲಿಯವರು ಶೋಧನೆ ಮಾಡಿದರು. ಜೂಲೈ ತಿಂಗಳಲ್ಲಿ ನೇಪಲ್ಸ್ ತೀರಕ್ಕೆ ಹೋಗಿ ಸಂತ ಜರ್ಮನಿ ಹಡಗಿನೊಳಗೆ ಏನೇನು ಸಿಕ್ಕಿತೆಂದರೆ—5,00,000 ಪಿಸ್ತೂಲುಗಳು, 1,00,000 ಬಂದೂಕುಗಳು, ತೋಟಾಗಳು ತಯಾರಾಗಿದ್ದ 2,00,000 ಪೆಟ್ಟಿಗೆಗಳು, 4 ವಿಮಾನ ಯಂತ್ರಗಳು, 1,000 ಸಿಡಿಮದ್ದಿನ ಗುಂಡುಗಳು, 14 ದೊಡ್ಡ ಪಿರಂಗಿಗಳು, ತಂತಿಗಳಿಲ್ಲದ ವರ್ತಮಾನಗಳನ್ನು ಕೊಟ್ಟು ತರಿಸುವ ಯಂತ್ರಸಾಧನಗಳು ಎರಡು; ಇಷ್ಟೆಲ್ಲಾ ಜರ್ಮನಿಯವರು ಪೂರ್ವ ನಿಗ್ರಹಕ್ಕೆ ರವಾನೆಮಾಡಿದ್ದರು. ಇದರಿಂದ ಯುದ್ಧ ಸಂಭವಿಸುತ್ತದೆಂದು ಜರ್ಮನಿಗೆ ಮೊದಲೇ ತಿಳಿದಿತ್ತೆಂದು ಸ್ಪಷ್ಟವಾಗುತ್ತದೆ.—ಕ್ಯಾನಡಾ ಎಂಬ ಬ್ರಿಟಿಷ್ ಸ್ವಾಸ್ಥ್ಯದಲ್ಲಿ ಯುದ್ಧ ಸಾಮಗ್ರಿಗಳು ತಯಾರಾಗುತ್ತಿದ್ದ ಒಂದು ಕಾರ್ಖಾನೆಯೊಳಗೆ ಮದ್ದು ಹತ್ತಿಕೊಂಡು ಅನಾಹುತವಾಗಿ ಏಳು ಮಂದಿ ಮೃತಪಟ್ಟರು. ಆ ಕಾರ್ಖಾನೆಯಲ್ಲಿ ಮೊದಲು ಜರ್ಮನಿಯವನಾಗಿದ್ದ ಒಬ್ಬ ಮನುಷ್ಯನು ಸೇರಿದ್ದು, ಅವನಿಂದ ಈ ಅಕೃತ್ಯ ನಡೆದಿರುವಂತೆ ಊಹಿಸಲಾಗಿದೆ.—ಲಂಡನ್ ಪಟ್ಟಣದ ಬಳಿ ಹೌನ್ಸ್ಲೋ ಎಂಬ ಊರಿನ ಮದ್ದಿನ ಕಾರ್ಖಾನೆಯೊಳಗೆ ಮದ್ದು ಸಿಡಿದು ಅನಾಹುತವಾಯಿತು. ಒಬ್ಬ ಮಾತ್ರ ಸತ್ತುಹೋದನು. ನಷ್ಟವೇನೋ ಅಪಾರವಾಯಿತು.—ಜರ್ಮನಿ ರಾಜಧಾನಿಯಾದ ಬೆರ್ಲಿನ್ ನಗರದ ಬಳಿ ರಸವರ್ಗಗಳು ತಯಾರಾಗುತ್ತಿದ್ದ ಒಂದು ಕಾರ್ಖಾನೆಗೆ ಬೆಂಕಿಬಿದ್ದು ಬಹಳ ನಷ್ಟವಾಗಿರುತ್ತದೆ.—ಈಜಿಪ್ಟಿನ ಹೊಸ ಸುಲ್ತಾನನನ್ನು ಕೊಲ್ಲಬೇಕೆಂದು ಕಳೆದ ವಾರ ಮತ್ತೆ ಪ್ರಯತ್ನಪಟ್ಟರು. ಅವರು ಸಾರೋಟಿನಲ್ಲಿ ಹೋಗುತ್ತಿದ್ದಾಗ ಗಾಡಿಯೊಳಕ್ಕೆ ಸಿಡಿಮದ್ದಿನ ಗುಂಡು ಎಸೆದರು. ಆದರೆ ಅದು ಗಾಡಿಯೊಳಗೆ ಬೀಳಲಿಲ್ಲ; ಕುದುರೆಗಳ ಕಾಲ ಬಳಿ ಬಿದ್ದರೂ ಒಡೆಯಲಿಲ್ಲ. ಅದನ್ನು ಹಾಕಿದ ಕೃತ್ರಿಮಿಯು ತಪ್ಪಿಸಿಕೊಂಡುಹೋದನು. ಸುಲ್ತಾನರು ಪದ್ಧತಿಯ ಪ್ರಕಾರ ಗಾಳಿಸವಾರಿ ಹೋಗಿಬಂದರು.

ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಜನರಲ್ ಗುರಾನ್ ಎಂಬ ಫ್ರೆಂಚ್ ದಳಪತಿಗೆ ವಿಶೇಷ ಗಾಯವಾಗಿರುತ್ತದೆ. ಆತನ ಬಲ ತೋಳು ಕತ್ತರಿಸಿಹೋಗಿದೆ. ಬಲ ತೊಡೆಯ ಹಿಂಭಾಗವು ಒಡೆದುಹೋಗಿದೆ. ಎಡಗಾಲು ಮುರಿದುಹೋಗಿರುವುದು. ಈತನನ್ನು ಪಾರಿಸ್ ನಗರಕ್ಕೆ ಸಾಗಿಸಿದರು. ಗಾಯಪಟ್ಟ ಫ್ರೆಂಚ್ ಸೈನಿಕರನ್ನು ಹೋಗಿ ನೋಡುತ್ತಿದ್ದಾಗ ಆ ದಳಪತಿಗೆ ಗಾಯಗಳಾದವು.

ಲಾರ್ಡ್ ಕಿಚ್ನರವರು ಲಂಡನ್ ಪಟ್ಟಣದಲ್ಲಿ ಜನರು ಇನ್ನೂ ಹೆಚ್ಚಾಗಿ ಸೈನ್ಯಕ್ಕೆ ಸೇರಿಕೊಳ್ಳಬೇಕೆಂದು ಒತ್ತಿಹೇಳಿದರು. ಭಯಂಕರವಾದ ಯುದ್ಧದಲ್ಲಿ ಕೈಹಾಕಿರುವ ಕಾರಣ ಜನರು ಬಂದು ಸೈನ್ಯಕ್ಕೆ ಸೇರಿ ಶರಪೇತಾಗಬೇಕು. ಮೊದಲು 10 ತಿಂಗಳ ಕೆಳಗೆ ಸೈನಿಕರಿಗೆಲ್ಲಾ ಬೇಕಾಗುವಷ್ಟು ಮದ್ದುಗುಂಡನ್ನು ಒದಗಿಸುವುದು ಕಷ್ಟವಾಗಿತ್ತು. ಈಗ ಮದ್ದುಗುಂಡನ್ನು ಎಷ್ಟು ಬೇಕಾದರೂ ಒದಗಿಸಬಲ್ಲೆವು. ಸೇರಿದವರನ್ನು ಬೇಗಬೇಗನೆ ತಯಾರ್ಮಾಡಿ ಯುದ್ಧಭೂಮಿಗೆ ಹೋಗಲು ಸಿದ್ಧಪಡಿಸುವೆವು. ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ, ಕ್ಯಾನಡ, ಹಿಂದುಸ್ಥಾನ, ಈ ಬ್ರಿಟಿಷ್ ರಾಜ್ಯಾಂಗಗಳು ಒದಗಿಸಿರುವ ಸ್ತೋತ್ರಾರ್ಹವಾದ ಸಹಾಯವನ್ನು ವಿವರಿಸಿ, ಲಾರ್ಡ್ ಕಿಚ್ನರವರು ಕೊಂಡಾಡಿ, ಪ್ರತಿ ಒಬ್ಬ ಪ್ರಜೆಯೂ ಚಕ್ರಾಧಿಪತ್ಯಕ್ಕೆ ಸಹಾಯಮಾಡಬೇಕಾಗಿದೆ ಎಂದು ಹೇಳಿದರು.

ಗ್ರೇಟ್ ಬ್ರಿಟನ್ನಲ್ಲಿ ಸೈನ್ಯಕ್ಕೆ ಬೇಕಾಗುವ ಮದ್ದು ಗುಂಡು ಮೊದಲಾದ ಯುದ್ಧ ಸಾಮಗ್ರಿಗಳನ್ನು ತಯಾರ್ಮಾಡಿ ಕೊಡುವುದಕ್ಕೋಸ್ಕರ ಸರ್ಕಾರದವರು 1,00,000 ಹೆಚ್ಚು ಜನರನ್ನು ನೇಮಕಮಾಡಿದ್ದಾರೆ. ಇದರಿಂದ ಯುದ್ಧ ಸಾಮಗ್ರಿಯು ಬೇಕಾದಷ್ಟು ಒದಗುವುದಕ್ಕೆ ಸಂಶಯವಿಲ್ಲ.—ಹೊಸ ಯುದ್ಧದ ಸಾಲಕ್ಕೆ 70 ಕೋಟಿ ಪೌಂಡು ಕೊಡಿಸಲ್ಪಟ್ಟಿದೆ; ಆದಕಾರಣ ಬ್ರಿಟಿಷ್ ಸರ್ಕಾರದವರು ಅಪೇಕ್ಷಿಸುವ 100 ಕೋಟಿ ಪೌಂಡುಗಳ ಸಾಲ ಬೇಗನೆ ಕೊಡಿಸಲ್ಪಡುವುದಕ್ಕೆ ಅನುಮಾನವಿಲ್ಲ.—ಅಮೇರಿಕದಲ್ಲಿ ಜರ್ಮನಿಯವರು ತಂತಿಗಳಿಲ್ಲದೆ ವರ್ತಮಾನಗಳನ್ನು ಕೊಟ್ಟು ತರಿಸುವ ಸ್ಟೇಷನ್ ಮಾಡಿಕೊಂಡು ಯುದ್ಧ ಕಾಲದ ಧರ್ಮಕ್ಕೆ ವಿರುದ್ಧವಾಗಿ ಅದನ್ನು ಉಪಯೋಗಿಸುತ್ತಿದ್ದರು. ಆದಕಾರಣ ಅಮೇರಿಕದ ಸರ್ಕಾರದವರು ಆ ಸ್ಟೇಷನನ್ನು ಜರ್ಮನಿಯವರ ಸ್ವಾಧೀನವನ್ನು ತಪ್ಪಿಸಿ ತಮ್ಮ ವಿಚಾರಣೆಯಲ್ಲಿಟ್ಟುಕೊಂಡಿದ್ದಾರೆ.—ಮಿ|| ಆಸ್ಕ್ವಿತ್‌ರವರೂ, ಲಾರ್ಡ್ ಕಿಚ್ನರವರೂ ಫ್ರಾನ್ಸಿಗೆ ಹೋಗಿ ಬ್ರಿಟಿಷ್ ದಳಪತಿಯಾದ ಸರ್ ಜಾನ್ ಫ್ರೆಂಚ್‌ರವರ ಜೊತೆಯಲ್ಲಿ ಸೈನಿಕರನ್ನೂ ಅವರ ಸ್ಥಿತಿಯನ್ನೂ ಯುದ್ಧಕಾರ್ಯಗಳ ಲಕ್ಷಣಗಳನ್ನೂ ತನಿಖೆ ಮಾಡಿಕೊಂಡು ಬಂದರು. ಅದೇ ಸಮಯದಲ್ಲಿ ಅವರು ಬೆಲ್ಜಿಯಮ್ ದೊರೆಯವರನ್ನೂ ಭೇಟಿ ಮಾಡಿದರು.

ಮಾಂಟಿನೇಗ್ರೋದವರು ಅಲ್ಬೇನಿಯಾದಲ್ಲಿದ್ದ ಆಸ್ಟ್ರಿಯಾದವರನ್ನು ಹಿಡಿದು ಬಂಧನದಲ್ಲಿ ಹಾಕಿಕೊಂಡರು.—ಗೆಲಿಷಿಯಾದಲ್ಲಿದ್ದ ಸುಮಾರು 6,000 ಇಟಲಿಯವರನ್ನು ಆಸ್ಟ್ರಿಯಾದವರು ಬಲಾತ್ಕಾರದಿಂದ ತಮ್ಮ ಕಡೆ ನಿಂತು ರಷ್ಯಾದವರ ಮೇಲೆ ಯುದ್ಧಮಾಡಬೇಕೆಂದು ಬಾತಾವಣೆ ಮಾಡುತ್ತಿದ್ದದ್ದನ್ನು ಕಂಡು ರಷ್ಯಾದವರು ಆ ಇಟಲಿಯವರನ್ನೆಲ್ಲಾ ತಮ್ಮ ಸ್ವಾಧೀನಕ್ಕೆ ತಂದುಕೊಂಡು, ಈಗ ಅವರನ್ನು ವಾಪಸು ಇಟಲಿಗೆ ಕಳುಹಿಸುವುದರಲ್ಲಿದ್ದಾರೆ.—ಬುಡಪೆಸ್ತಿನಲ್ಲೂ ಹಂಗೆರಿಯಲ್ಲೂ ರಾಜ್ಯಭೇದಿ ಉಪದ್ರವು ಹುಟ್ಟಿ ಹಬ್ಬುತ್ತಿದೆ.—ಜರ್ಮನಿಯ ಸಬ್‌ಮೆರೀನುಗಳ ಹಾವಳಿ ಈ ವಾರ ಕಡಮೆಯಾಯಿತು. ಒಂದು ಬ್ರಿಟಿಷ್ ಹಡಗನ್ನು ಮಾತ್ರ ಮುಳುಗಿಸಿದವು. ಇದರಲ್ಲಿದ್ದವರು ಬದುಕಿ ಬಂದಿದ್ದಾರೆ.—ಅಮೇರಿಕದವರು ಪ್ರಶ್ನೆ ಮಾಡಿದ್ದಕ್ಕೆ ಜರ್ಮನಿಯವರು ಜವಾಬು ಕೊಡುವುದರಲ್ಲಿ ಲೂಸಿಟೇನಿಯಾ ಎಂಬ ಜಹಜನ್ನು 120 ಅಮೇರಿಕದವರ ಸಮೇತ ಮುಳುಗಿಸಿದ್ದು ನ್ಯಾಯವೇ ಆಗಿದೆ ಎಂದು ಸಾಧಿಸಿರುತ್ತಾರೆ. ಜರ್ಮನಿಯವರು ಹೇಳುವುದೇನೆಂದರೆ—ಗ್ರೇಟ್ ಬ್ರಿಟನ್ನವರು ಆಮದು ರಫ್ತನ್ನು ಅಡ್ಡಿ ಮಾಡಿರುತ್ತಾರೆ. ಲೂಸಿಟೇನಿಯದಲ್ಲಿ ಮದ್ದು ಗುಂಡು ಮುಂತಾದ ಯುದ್ಧಸಾಮಗ್ರಿಗಳಿದ್ದವು. ಇವುಗಳಿಂದ ಅನೇಕ ಸ್ತ್ರೀಯರು ಗಂಡಂದಿರನ್ನೂ, ಮಕ್ಕಳು ತಂದೆಗಳನ್ನೂ ಕಳೆದುಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು. ಜಹಜಿನ ಮೇಲೆ ಅದು ಅಮೇರಿಕಕ್ಕೆ ಸೇರಿದ್ದೆಂದು ಸ್ಪಷ್ಟವಾಗಿ ಗೊತ್ತಾಗುವಂಥಾ ಗುರುತೇನಾದರೂ ಇದ್ದ ಪಕ್ಷದಲ್ಲಿ ಅಂಥಾ ಜಹಜನ್ನು ಮುಳುಗಿಸುವುದಿಲ್ಲ. ಯುದ್ಧದಲ್ಲಿ ಸೇರಿಯದವರ ಹಡಗುಗಳಲ್ಲಿ ಅಮೇರಿಕದವರು ಪ್ರಯಾಣ ಮಾಡಬಹುದು. ಇಂಥಾ ಹಡಗುಗಳು ಸಿಕ್ಕದೆಹೋಗುವ ಪಕ್ಷದಲ್ಲಿ ಶತ್ರುವಿನ ಹಡಗುಗಳಲ್ಲಿ ಸಂಚರಿಸಬಹುದು ಎಂಬದಾಗಿ ಜವಾಬು ಕೊಟ್ಟಿದ್ದಾರೆ. ಯುದ್ಧ ಕಾಲದಲ್ಲಿ ಅನುಸರಿಸಬೇಕಾದ ಧರ್ಮಗಳನ್ನು ಗೌರವಿಸಿ ಕಾಪಾಡಬೇಕೆಂದೂ, ಸಭ್ಯ ಪ್ರಜೆಗಳನ್ನು ಕೊಲ್ಲಕೂಡದೆಂದೂ ಅಮೇರಿಕದವರು ಕೇಳಿದ್ದಕ್ಕೆ ಜರ್ಮನಿಯವರು ತೃಪ್ತಿಕರವಾದ ಪ್ರತ್ಯುತ್ತರವನ್ನು ಕೊಡಲಿಲ್ಲವೆಂಬುವುದು ಅವರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ.—ಜರ್ಮನಿ ಚಕ್ರವರ್ತಿ ಕೈಸರರವರು ಬೆರ್ಲಿನ್ ನಗರದಲ್ಲಿ ಭಾಷಣ ಮಾಡುತ್ತಾ ಈ ಯುದ್ಧವು ಅಕ್ಟೋಬರಿನಲ್ಲಿ ಮುಕ್ತಾಯವಾಗುವುದೆಂದು ಹೇಳಿದರಂತೆ; ಮತ್ತು ಜರ್ಮನಿಯವರಿಗೇ ಜಯಪ್ರದವಾಗುತ್ತೆಂಬ ನಂಬಿಕೆಯನ್ನೂ ಉತ್ಸಾಹವನ್ನೂ ಹುಟ್ಟಿಸಿದ್ದಾರೆ. ಯುದ್ಧವು ಅಕ್ಟೋಬರಿನಲ್ಲಿ ಮುಗಿಯಬೇಕಾದರೆ ಜರ್ಮನಿಗೆ ಜಯವಾಗುವುದಿಲ್ಲವೆಂಬ ಸಂಗತಿ ಕೈಸರರಿಗೆ ಗೊತ್ತೇ ಇದೆ. ಅಕ್ಟೋಬರಿನಾಚೆಗೆ ಮಳೆಗಾಲ ಪ್ರಾರಂಭವಾಗೋಣದರಿಂದ ಯುದ್ಧವು ಇನ್ನೂ ನಡೆಯುತ್ತಾ ಬಂದಲ್ಲಿ ಜರ್ಮನಿಯು ಮುಂದರಿಸಲಾರದೆಂದು ಅಲ್ಲಿನ ಪ್ರಜೆಗಳೆಲ್ಲಾ ಗಾಬರಿಪಟ್ಟಿರೆಂದು ಕೈಸರರವರು ಹೀಗೆ ಆ ರೀತಿ ಹೇಳಿರಬೇಕೆಂದು ತೋರುತ್ತದೆ.

ಟರ್ಕಿಯವರು ಪಿರಂಗಿಗಳನ್ನು ತಂದು ಏಡೆನ್ ಪ್ರಾಂತ್ಯದ ಮೇಲೆ ನುಗ್ಗುವಂತೆ ಕಾಣುತ್ತದೆ. ಲಾಹೇಜ್ ಸುಲ್ತಾನರ ಬೆಂಬಲಕ್ಕಾಗಿ ಏಡೆನ್ನಿಂದ ಕೆಲವು ಸೈನ್ಯ ಕಳುಹಿಸಲ್ಪಟ್ಟಿತ್ತು. ಇವರು ಟರ್ಕಿಯವರನ್ನು ಸಂಧಿಸಿ ಕದನ ಮಾಡಿ ನೀರಿನ ವಸತಿ ಇಲ್ಲದ್ದರಿಂದ ಅಲ್ಲಿಂದ ವಾಪಸು ಬಂದುಬಿಟ್ಟರು. ನಮ್ಮ ಕಡೆ ಆದ ನಷ್ಟದಲ್ಲಿ ಮೂರು ಮಂದಿ ಬ್ರಿಟಿಷ್ ಹುದ್ದೇದಾರರಿಗೆ ಗಾಯಗಳಾಗಿವೆ ಟರ್ಕಿ ಸೈನ್ಯದಲ್ಲಿ ಒಬ್ಬ ಹುದ್ದೇದಾರನನ್ನೂ 13 ಮಂದಿ ಸಿಪಾಯರನ್ನೂ ಕೈಸೆರೆ ಹಿಡಿದುತಂದಿದ್ದಾರೆ.

ಮಲೆನಾಡು ಪ್ರಜೆಗಳೂ, ಸ್ತ್ರೀ ವಿದ್ಯಾಭ್ಯಾಸವೂ.

ಸರ್ಕಾರದವರು ಮಲೆನಾಡು ಪ್ರಜೆಗಳು ಕೇವಲ ಹಿಂದುಳಿದವರಾದ್ದರಿಂದಲೂ, ಇವರನ್ನು ಹೆಚ್ಚಾದ ಉನ್ನತ ಸ್ಥಿತಿಗೆ ತರಬೇಕಾದ ಕಾರ್ಯಗಳಲ್ಲಿ ಮೊದಲನೆಯದಾದ ವಿದ್ಯಾಭ್ಯಾಸವನ್ನು ಹೆಚ್ಚಿಸಬೇಕೆಂದೂ, ಪೂರ್ವಕ್ಕಿಂತಲೂ ಈಗ ನಮ್ಮ ಘನ ಸರ್ಕಾರದವರು ಪ್ರತಿ ಗ್ರಾಮದಲ್ಲಿಯೂ ಸ್ಕೂಲುಗಳನ್ನು ಸ್ಥಾಪಿಸಿ, ವಿದ್ಯಾಭ್ಯಾಸ ಮಾಡಲೇಬೇಕೆಂದು ಬಲತ್ಕಾರದ ರೂಲಸು ಕೆಲವು ಕಡೆ ಜಾರೀಗೆ ತಂದೂ, ಉಳಿದ ಕಡೆಗಳಲ್ಲಿ ಜಾರೀಗೆ ತರುತ್ತಲೂ ಇದ್ದಾರೆ. ಆದರೆ ಮೈಸೂರು ದೇಶದ ಪೈಕಿ ಮಲೆನಾಡಿನವರು ಮಾತ್ರ ಇದನ್ನು ಗ್ರಾಹ್ಯ ಮಾಡಿಕೊಳ್ಳದೆ ಕೆಲವರು ತಮ್ಮ ಬಾಲಕಿಯರನ್ನು ಸ್ಕೂಲಿಗೆ ಕಳುಹಿಸಲು ಇರಾದೆ ಇಲ್ಲದವರಾಗಿದ್ದಾರೆ ನಾನು ಕೆಲವರನ್ನು ವಿಚಾರಿಸಿದ್ದರಲ್ಲಿ—ಬಾಲಕಿಯರನ್ನು ಸ್ಕೂಲಿಗೆ ಕಳುಹಿಸಿ, ಅವರು ವಿದ್ಯಾಭ್ಯಾಸಂಗ ಮಾಡಿದರೆ ಮನೆವಾರ್ತೆ ಕೆಲಸಗಳು ಮಾಡುವುದಿಲ್ಲವೆಂತಲೂ, ಗಂಡಸೇ ವಿದ್ಯೆ ಕಲಿಯಬೇಕೇ ಹೊರತು ಹೆಂಗಸರಿಗೆ ವಿದ್ಯೆ ಯಾತಕ್ಕೆ ಎಂಬದೊಂದು ತಪ್ಪು ತಿಳುವಳಿಕೆಯನ್ನು ಹೇಳಿದರು. ಸ್ತ್ರೀಯರು ವಿದ್ಯಾವತಿಯರಾದರೆ ತಮ್ಮಗಳ ವಿದ್ಯಾಚತುರತೆಯಿಂದ ತಾವು ಯಾವ ರೀತಿ ಒಳ್ಳೆಯ ನಡತೆಗಳನ್ನು ಆಚರಿಸಬೇಕು, ತಾವು ಏನೇನು ದೇಶೋನ್ನತಿಗೆ ಬೇಕಾದ ಸಾಧನಗಳನ್ನು ಮಾಡಬೇಕು, ತಾವುಗಳು ಆರೋಗ್ಯವಾಗಿರಬೇಕಾದರೆ ಯಾವ ರೀತಿ ಇರಬೇಕು, ತಾವುಗಳು ತಮ್ಮ ಪತಿಗಳಿಗೆ ಎಷ್ಟರಮಟ್ಟಿಗೆ ಆದರಣೆ ಮಾಡಬೇಕೆಂಬುದನ್ನೂ, ಪೂರ್ವದಲ್ಲಿ ದೇವತೆಯರಲ್ಲಿ ಶ್ರೇಷ್ಠರಾದ ಸೌಭದ್ರೆ, ಸೀತೆ, ಇವರುಗಳು ಯಾವ ಯಾವ ರೀತಿಯಿರುತ್ತಿದ್ದರೆಂಬುದನ್ನೂ ಅವರುಗಳ ಇತಿಹಾಸಗಳನ್ನು ಓದಿ ತಿಳುಕೊಂಡು ಅವರಂತೆ ಆಚರಿಸುವದಿಲ್ಲವೇ? ಅವಿದ್ಯಾವತಿಯರಾಗಿರುವವರ ಮನಸ್ಸು ದುರ್ವ್ಯಾಪಾರಕ್ಕೆ ಕೈಹಾಕಿದರೆ ಅದನ್ನು ಅವರು ಯಾವುದರಿಂದ ಸರಿಪಡಿಸಿಕೊಳ್ಳಬಹುದು? ಮೈದಾನ ಸೀಮೆಯಲ್ಲಿ ಪ್ರೌಢ ವಿದ್ಯಾಭ್ಯಾಸಮಾಡಿ ಸ್ತ್ರೀಯರಲ್ಲೆಲ್ಲಾ ಅತಿ ಪ್ರಖ್ಯಾತಿ ಪಡೆದು ಇರುವದಿಲ್ಲವೇ? ಫ್ರಾನ್ಸ್, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ವಿದ್ಯಾವತಿಯರಾದ ಸ್ತ್ರೀಯರು ತಮ್ಮ ಗಂಡಂದಿರು ಯುದ್ಧಕ್ಕೆ ಹೋದಾಗ ತಾವುಗಳೂ ಸ್ವಲ್ಪವೂ ವಿಶ್ರಾಂತಿಯಿಲ್ಲದೆ ಕೆಲಸಮಾಡಿ ಚಕ್ರಾಧಿಪತ್ಯಕ್ಕೆ ನಷ್ಟನಕ ಉಂಟಾಗಬಾರದೆಂಬ ಉತ್ಸಾಹದಿಂದ ಸೈನಿಕರಿಗೆ ಬೇಕಾಗುವ ಕಾಲಚೀಲಗಳು ಮೊದಲಾದ ಡ್ರೆಸ್ಸುಗಳೇ ಮುಂತಾದವುಗಳನ್ನು ತಯಾರಿಸಿಕೊಡುತ್ತಾ ಇರುವುದು ಸಂತೋಷಕರವಾದದ್ದಲ್ಲವೇ? ಅವರು ಅವಿದ್ಯಾವತಿಯರಾಗಿದ್ದರೆ ಇದರಲ್ಲಿ ಪ್ರವರ್ತಿಸುತ್ತಿದ್ದರೇ? ಲೋಕದಲ್ಲಿ ಹೆಂಗಸರೂ, ಗಂಡಸರೂ ಸಹ ವಿದ್ಯಾವಂತರಾಗಿದ್ದು ಪ್ರಪಂಚ ವ್ಯಾಪಾರಗಳಿಗೆ ಬೇಕಾದ ಶ್ಲಾಘನೀಯ ಅಂಶಗಳನ್ನು ಮಾಡುವುದಕ್ಕೆ ಅಷ್ಟವೃಕ್ಷವರುಗಳಾಗಿ ಅಂದರೆ ಸರ್ವದಾ ತಾವುಗಳು ಮಾಡಬೇಕಾದ ಕೆಲಸಗಳಲ್ಲಿ ನಿರತರಾಗಿ ಇದ್ದರೆ ದೇಶವೂ ಉನ್ನತಸ್ಥಿತಿಗೆ ಬರುತ್ತದೆ. ಅವಿದ್ಯಾವತಿಯರಾಗಿದ್ದರೆ ಅಷ್ಟೇ ಹೀನಸ್ಥಿತಿಗೆ ಬರುತ್ತೆಂಬುವುದು ಸುಳ್ಳೇ? ಈ ಸಂಗತಿಗಳಲ್ಲಿ ಮಲೆನಾಡು ಪ್ರಜೆಗಳಿಗೆ ಸೌಲಭ್ಯ ಉಂಟಾಗಬೇಕಾದರೆ ನಮ್ಮ ಘನ ಸರ್ಕಾರದವರು ಮಲೆನಾಡು ಪ್ರದೇಶಕ್ಕೆ ಬಲಾತ್ಕಾರದ ವಿದ್ಯಾಭ್ಯಾಸಕ್ರಮವನ್ನು ಜಾರೀಗೆ ತರಬೇಕು. ಆಗ್ಗೆ ಸರ್ವರೂ ತಮ್ಮ ತಮ್ಮ ಬಾಲಕ ಬಾಲಕಿಯರಿಗೆ ವಿದ್ಯೆ ಕಲಿಸಿ ಹೆಚ್ಚಾದ ಸೌಲಭ್ಯ ಉಂಟುಮಾಡಿಕೊಳ್ಳುತ್ತಾರೆಂಬುವುದು ನಿಸ್ಸಂದೇಹವಾಗಿದೆ.

ಕಂಚಿಕೋಟೆ ವೆಂಕಟಗಿರಿಯಪ್ಪ.

ಶ್ರೀಮನ್ ಯುವರಾಜರವರಿಂದ ದಯಪಾಲಿಸಲ್ಪಟ್ಟ ಬಹುಮಾನ.

ಮಲೆನಾಡು ಪ್ರಾಂತ್ಯ ಶ್ರೀಮನ್ ಯುವರಾಜರವರು ಸಕೀರ್‍ಟು ದಯ ಮಾಡಿಸಿದ ವೇಳೆ ವಿಶೇಷ ಪ್ರವ ಮಹಿಸಿದ್ದಕ್ಕಾಗಿ ಮ|| ನಗರದ ಸಿ ನರಸಿಂಹ ಯ್ಯನವರಿಗೆ ಕೊಡುವ ಉದ್ದಿಶ್ಯ ತಮ್ಮ ಸ್ವಂತ ಭಾವಚಿತ್ರವನ್ನು ನಗರ ತಾಲ್ಲೋಕಿಗೆ ಕಳುಹಿಸಿಕೊಟ್ಟಿದ್ದನ್ನು ತಾ ೬ ನೇ ಸೋಮವಾರ ಮಧ್ಯಾಹ್ನ 4 ಗಂಟೆ ಸಮಯ ತಾಲ್ಲೋಕು ಕಛೇರಿಯಲ್ಲಿ ಈ ತಾಲ್ಲೋಕಿನ ಪ್ರಮುಖರ ನ್ನೆಲ್ಲಾ ಬರಮಾಡಿಕೊಂಡು ಸಭೆ ಸೇರಿಸಿ ಡಿಸ್ಟ್ರಿಕ್ಟಿನಿಂದ ಬಂದ ಆರ್ಡರು ಓದಿ ಹೇಳಿ ಅಮಲ್ದಾರ್ ಮ|| ಮೊಹಿಯುದ್ದೀನ್ ಷರೀಫರವರಿಂದ ಯುವರಾ ಜರವರ ಭಾವಚಿತ್ರವು ಮ|| ಸಿ. ನರಸಿಂಹಯ್ಯನವರಿಗೆ ಕೊಡಲ್ಪಟ್ಟಿತು. ಸಭಿಕ ರೆಲ್ಲರೂ ಸದರಿ ಚಿತ್ರವನ್ನು ನೋಡಿ ಸಂತೋಷಪಟ್ಟರು. ಮ|| ಸಿ. ನರಸಿಂಹ ಯ್ಯನವರು ಎದ್ದು ನಿಂತು ಶ್ರೀಮನ್ ಯುವರಾಜರವರ ಗುಣಕಥನ ಮತ್ತು ಪ್ರಜಾವಾತ್ಸಲ್ಯಾದಿ ಗುಣಗಳನ್ನು ವರ್ಣಿಸಿ ಶ್ರೀಮನ್ ಮಹಾರಾಜರವರಿಗೂ ಶ್ರೀಮನ್ ಯುವರಾಜರವರಿಗೂ ವಂದಿಸಿ ಭಾವಚಿತ್ರವನ್ನು ಅಂಗೀಕರಿಸಿದರು

ಪ್ರತ್ಯಕ್ಷದರ್ಶಿ.

ಮೈಸೂರು ಗೆಜೆಟ್ ಸಂಗ್ರಹ.

ಕೆಳಗೆ ಹೇಳುವವರು ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರು ಗಳಾಗಿ ನೇಮಿಸಲ್ಪಟ್ಟಿರುತ್ತಾರೆ:—ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಮ|| ಸಿ. ಶ್ರೀಕಂಠೇಶ್ವರ ಅಯ್ಯರವರು, ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ರಾವ್ ಬಹದೂರ್ ಮ|| ಎಂ ಶಾಮರಾಯರು, ಗವರ್ನ್‌ಮೆಂಟ್ ಅಡ್ವೊಕೇಟ್ ಮ|| ಸಿ. ಎಸ್. ದೊರೆಸ್ವಾಮಿ ಅಯ್ಯರವರು ಮೈಸೂರು ಅಡ್ವೊಕೇಟ್ ಮ|| ಎಚ್. ನರಸಿಂಗರಾಯರು, ಬೆಂಗಳೂರು ಅಡ್ವೊಕೇಟ್ ಮ|| ಬಿ. ವಿ. ರಾಮಸ್ವಾಮಿ ಶೆಟ್ಟರು.

ಸೊರಬದ ತಾಲ್ಲೋಕ್ ಶಿರಸ್ತೆದಾರರನ್ನು ಸೊರಬದ ಮ್ಯುನಿಸಿಪಲ್ ಬೋ ರ್ಡ್ ಮೆಂಬರಾಗಿಯೂ, ಪಟೇಲ್ ಮ|| ಹಾಲಪ್ಪನವರನ್ನು ಚೆನ್ನಗಿರಿ ಮ್ಯುನಿಸಿ ಪಲ್ ಬೋರ್ಡ್ ಮೆಂಬರಾಗಿಯೂ, ವರ್ತಕ ಮ|| ಮುದ್ದನಂಜುಂಡಶೆಟ್ಟರನ್ನು ನೆಲಮಂಗಲದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿಯೂ ನೇಮಕಮಾಡಿದೆ.

ತುಮಕೂರು ಹೋಬಳಿಗೆ ಸೇರಿದ ಹನುಮೇನಹಳ್ಳಿ ಎಂಬ ಸರ್ಕಾರಿ ಗ್ರಾಮವನ್ನು ಹೊನ್ನೆ ಸಹಳ್ಳಿಗೆ ಸೇರಿಸಲಾಗಿದೆ.

ತುಮಕೂರು ಡೆಪ್ಯುಟಿ ಕಮಿಷನರ್ ಮ||ಕೆ. ಆರ್. ಶ್ರೀನಿವಾಸಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಖಜಾನೆಯ ಅ|| ಕಮಿಷನರ್ ಮ|| ಎ ಮೃತ್ಯುಂಜಯ ಅಯ್ಯ ರವರು ಡೆಪ್ಯುಟಿ ಕಮಿಷನರ ಆಫೀಸ್ ಭಾರವನ್ನು ವಹಿಸತಕ್ಕದ್ದು.

ಗವರ್ನ್‌ಮೆಂಟ್ ಡೆಪ್ಯುಟಿ ಸೆಕ್ರೆಟರಿ ಮ|| ಪಿ. ಜಿ. ಡಿಸೋಜಾರವರಿಗೆ ಕೊಟ್ಟಿ ರುವ ಪ್ರಿವಿಲೇಜ್ ರಜವನ್ನು ರದ್ದುಮಾಡಿದೆ.

ಸಂತೆಬೆನ್ನೂರಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮ|| ಜಿ ಆರ್. ಪದ್ಮನಾಭ ರಾಯರನ್ನು ಕಾವೇರಿ ರಿಜರ್ವಾಯರಿಗಾಗಿ ಜಮೀನ್ ಕೊಂಡುಕೊಳ್ಳುವ ಕೆಲ ಸದಲ್ಲಿ ಮೈಸೂರು ತಾಲ್ಲೂಕಿಗೆ ಅಮಲ್ದಾರ್ರವರ ಅಸಿಸ್ಟೆಂಟಾಗಿ ವರ್ಗಮಾಡಿದೆ

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಆಫೀಸಿನ 1 ನೇ ಡಿವಿಜನ್ ಕ್ಲಾರ್ಕ್ ಮ|| ಎ. ಮಾಕಳಪ್ಪನವರು ಹರಿಹರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮ ಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮ|| ಎಚ್ ಶ್ರೀನಿವಾಸರಾಯರು ಚೆನ್ನಗಿರಿ ತಾಲ್ಲೂಕು ಅಮಲ್ದಾರ್ ಮತ್ತು 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಬೆಂಗಳೂರು ತಾಲ್ಲೂಕು ಅಮಲ್ದಾರ್ ಮ|| ಟಿ ಹನುಮಂತರಾಯರಿಗೆ 2ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಕೊಟ್ಟಿದೆ

ಮುಂದೆ ಹೇಳುವ ಬದಲಾವಣೆ, ವರ್ಗಾವರ್ಗಿಗಳನ್ನು ಹುಕುಂ ಮಾಡ ಲಾಗಿದೆ:—ಮ|| ಪಿ. ಜಿ ಡಿಸೋಜಾರವರು ಎಕನಾಮಿಕ್ ಕಾನ್‌ಫರೆನ್ಸಿನ ಸೆಕ್ರೆಟರಿಯಾಗಿರತಕ್ಕದ್ದು; ಮ|| ವಿ. ಆರ್. ತ್ಯಾಗರಾಜ ಅಯ್ಯರವರು ಗವ ರ್ನ್‌ಮೆಂಟಿನ ರೆವಿನ್ಯೂ ಸೆಕ್ರೆಟರಿಯಾಗಿರತಕ್ಕದ್ದು

ಚಿತ್ರದುರ್ಗಕ್ಕೆ ಡೆಪ್ಯುಟಿ ಕಮಿಷನರಾಗಿ ವರ್ಗಮಾಡಲ್ಪಟ್ಟಿರುವ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರಿಗೆ ಜೂಲೈ ತಾ. 11 ರಿಂದ ಒಂದು ತಿಂಗಳ ಪ್ರಿವಿ ಲೇಜ್ ರಜಾ ಕೊಟ್ಟಿದೆ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರ್ ಮ|| ಸಿ ವೆಂಕಟರಾಯರು ಚಿತ್ರದುರ್ಗದ ಡೆಪ್ಯುಟಿ ಕಮಿಷನರಾಗಿ ಬದಲಿ ನೋಡ ತಕ್ಕದ್ದು.

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗಿಯನ್ನು ಹುಕುಂ ಮಾಡ ಲಾಗಿದೆ:—ಮ|| ಸಯ್ಯದ್ ಮೊಹಿಯುದ್ದೀನ್ ಷರೀಫರನ್ನು ನಗರದಿಂದ ಸಾಗ ರಕ್ಕೆ; ಮ|| ಬಿ ಟಿ. ಸೀತಾರಾಮಯ್ಯನವರನ್ನು ಸಾಗರದಿಂದ ಮಧುಗಿರಿಗೆ; ಮ|| ಕೆ ಕೆ. ವೆಂಕಟಸ್ವಾಮಿ ಅಯ್ಯರವರನ್ನು ಸೊರಬದಿಂದ ಚಿಕ್ಕಮಗಳೂರಿಗೆ; ಮ|| ಎಂ ರಂಗನಾಥರಾಯರನ್ನು ಚಿಕ್ಕಮಗಳೂರಿನಿಂದ ಪಿರಿಯಾಪಟ್ಟಣಕ್ಕೆ

ಕಡೂರು ಡಿಸ್ಟ್ರಿಕ್ಟ್ ರೆವಿನ್ಯೂ ಹೆಡ್ ಮುನ್ಷಿ ಮ|| ಸಿ. ಎನ್. ಗರು ಡಯ್ಯಂಗಾರ್‍ರವರು ಚೆನ್ನಗಿರಿ ಜಗಳೂರಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಗಸ್ಟ್ ಅಂತ್ಯದ ವರೆಗೆ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ ಕೆಲಸಮಾಡತಕ್ಕದ್ದು.

ಕೆಳಗೆ ಹೇಳುವ ಎಗ್ಸಿಕ್ಯುಟಿವ್ ಇಂಜನಿಯರುಗಳ ವರ್ಗಾವರ್ಗಿ ಹುಕುಂ ಮಾಡಲಾಗಿದೆ:—ಮ|| ಜೆ ಇ. ಎ. ಡಿಕ್ರೂಸ್ ಯವರನ್ನು ಬೆಂಗಳೂರಿನಿಂದ ಸ್ಯಾನಿಟರಿ ಡಿವಿಜನ್‌ಗೆ; ಮ|| ಸಿ. ವಿಜಯರಂಗಂನಾಯ್ಡು ಯವರನ್ನು ಸ್ಯಾನಿಟರಿಯಿಂದ ಬೆಂಗಳೂರು ಡಿವಿಜನ್‌ಗೆ.

ಮ|| ಕೆ ಸುಬ್ಬರಾಯರು ಎಕನಾಮಿಕ್ ಕಾನ್‌ಫರೆನ್ಸಿನ ಮತ್ತು ಗವರ್ನ್‌ಮೆಂಟಿನ ಅ|| ಸೆಕ್ರೆಟರಿಯಾಗಿರತಕ್ಕದ್ದು.

ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮ|| ಎನ್. ರಾಮರಾಯರು ಎಕನಾ ಮಿಕ್ ಕಾನ್‌ಫರೆನ್ಸಿನ ವ್ಯವಸಾಯ ಶಾಖೆಯ ಸೆಕ್ರೆಟರಿಯಾಗಿರತಕ್ಕದ್ದು.

ಚೆನ್ನಗಿರಿ ತಾಲ್ಲೂಕು ಅಮಲ್ದಾರ್ ಮ|| ಕೆ ನಾರಾಯಣ ಅಯ್ಯರವರಿಗೆ ಜೂಲೈ ತಾ. 6 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೆದಾ ರ್ ಮ|| ಎಚ್ ಶ್ರೀನಿವಾಸರಾಯರು ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಮ|| ಟಿ ವೆಂಕಟರಾಮಯ್ಯ ನವರಿಗೆ ಐದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು. ಸ್ಪೆಷಲ್ ಡ್ಯೂಟಿ ಡೆಪ್ಯುಟಿ ಅಮಲ್ದಾರ್ ಮ|| ಎ ರಾಮರಾಯರು ತಾಲ್ಲೂಕ್ ಭಾರವನ್ನು ವಹಿಸಿದ್ದರು.

ಕನ್ನಂಬಾಡಿ ಕಟ್ಟೆಯು.

ನಮ್ಮ ದಿವಾನ್‌ರಾದ ಸರ್ ವಿಶ್ವೇಶ್ವರಯ್ಯನವರು ಕಾವೇರಿ ನದಿಗೆ ಅಡ್ಡ ಲಾಗಿ ಕನ್ನಂಬಾಡಿಯಲ್ಲಿ ಪ್ರಾರಂಭಮಾಡಿ ಕಟ್ಟಿಸುತ್ತಿರುವ ಆಣೆಕಟ್ಟೆಯ ಕಾಮಗಾರಿಯು ಸಾಧ್ಯವಾಗುವ ಮಟ್ಟಿಗೂ ಬೇಗಬೇಗನೆ ನಡೆಯುತ್ತಿದೆ ಅಲ್ಲಿ ಹೋಗಿ ಒಂದಾವರ್ತಿ ನೋಡಿದ ಪಕ್ಷದಲ್ಲಿ ಈ ಕಾಮಗಾರಿಯು ಅಗಾಧವಾದ ದ್ದೆಂದೂ, ಅಲ್ಲಿ ನಿಂತು ಕೆಲಸ ಮಾಡಿಸುತ್ತಿರುವ ಇಂಜನಿಯರುಗಳ ಸಾಹಸವು ಸಾರ್ಥಕವಾಗುತ್ತದೆಯೆಂದೂ ಗೊತ್ತಾಗುತ್ತದೆ.

ಆಣೆಕಟ್ಟೆಯ ತಳಹದಿಯೆಲ್ಲಾ ಉದ್ದಕ್ಕೂ ಬಹಳ ಚೆನ್ನಾಗಿಯೂ ಘಟ್ಟಿ ಯಾಗಿಯೂ ಹಾಕಿದ್ದಾಯಿತು. ಆಣೆಕಟ್ಟೆಯಲ್ಲಿ ಅನೇಕ ಭಾಗ ನದಿಯ ಮಟ್ಟದಿಂದ ಐವತ್ತು ಅಡಿ ಎತ್ತರಕ್ಕೆ ಎದ್ದಿರುತ್ತದೆ. ಈ ಆಣೆಕಟ್ಟೆಯ ದಕ್ಷಿಣ ಪಾರ್ಶ್ವದಲ್ಲಿ ನದಿಯ ನೀರು ನುಗ್ಗಿಹೋಗುವುದಕ್ಕೆ ಎಂಟು ಭಾರೀ ತೂಬು (ಬಾಯಿ) ಗಳನ್ನು ಇಟ್ಟಿದಾರೆ. ಈ ತೂಬುಗಳು ತಯಾರಾಗಿ ಬಹು ಅಗಲವಾಗಿಯೂ ಎತ್ತರವಾಗಿಯೂ ಇರುವವು. ಈ ತೂಬುಗಳ ಮೇಲೂ ಆಣೆಯ ಕಟ್ಟಡವು ಎಬ್ಬಿಸಲ್ಪಟ್ಟಿದೆ ತೂಬುಗಳ ಬಾಯಿ ಬೇಕಾದಾಗ ಮುಚ್ಚು ವುದಕ್ಕೂ ಬೇಕಾದಾಗ ತೆರೆಯುವುದಕ್ಕೂ ಬಲವಾದ ಕಬ್ಬಿಣದ ಬಾಗಿಲುಗಳನ್ನು ನಿಲ್ಲಿಸಿರುವರು. ಬಾಗಿಲನ್ನು ಇಳಿಸಿದ ಪಕ್ಷದಲ್ಲಿ ಅದರ ಹಿಂಭಾಗದಲ್ಲಿ ನೀರು ಒಡ್ಡು ಕೆರೆಯೋಪಾದಿಯಲ್ಲಿ ನಿಂತುಬಿಡುತ್ತದೆ ಬಾಲ್ತಿ ಸಾಲಿನ ಬೇಸಗೆ ಕಾಲ ದಲ್ಲಿ ಶಿವಸಮುದ್ರದಲ್ಲಿ ನಿಲುಗಡೆಯಿಲ್ಲದೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡು ವುದಕ್ಕೆ ಎಷ್ಟು ನೀರು ನಿಲ್ಲಬೇಕೋ ಅಷ್ಟನ್ನು ತಡೆದು ನಿಲ್ಲಿಸಿಕೊಳ್ಳುವುದಕ್ಕೆ ಅವಶ್ಯವಾದ ಏರ್ಪಾಡೆಲ್ಲಾ ಈಗಾಗಲೇ ಮಾಡಿದ್ದಾಗಿದೆ.

ಇಂಜನಿಯರುಗಳು ಆರೇಳು ಮಂದಿ ಅಲ್ಲೇ ಇದ್ದು ಸಾವಿರಾರು ಕೂಲಿ ಆಳುಗಳನ್ನಿಟ್ಟುಕೊಂಡು ಈ ಅಗಾಧವಾದ ಕಾಮಗಾರಿಯನ್ನು ಮಾಡಿಸುತ್ತಾ ಬಂದಿದಾರೆ. ಜನಗಳು ಈ ಕಟ್ಟೆಯಲ್ಲಿ ಸೇರಿ ಕೆಲಸ ಮಾಡುತ್ತಿರುವುದನ್ನು ನೋಡಿದರೆ ಒಂದು ಬೆಲ್ಲದ ಚೂರಿಗೆ ಸಾವಿರಾರು ಇರುವೆಗಳು ಮುತ್ತಿಕೊಂಡಿರು ವಂತೆ ಕಾಣುವುದು. ಈ ಕಟ್ಟೆಯಲ್ಲಿ ಪ್ರತಿ ಒಂದು ಚದರ ಗಜದಲ್ಲೂ ಒಬ್ಬ ಗಂಡಾಳೋ ಹೆಣ್ಣಾಳೋ ಗಾರೆ ಸುರಿಯುವುದೋ, ನೀರು ಹೊತ್ತು ತಂದು ಕೊಡುವುದೋ, ಕಟ್ಟಡಕ್ಕೆ ಹಾಕುವ ಕೆತ್ತಲ್ಪಟ್ಟ ಕಲ್ಲುಗಳನ್ನು ಉರುಳಿಸು ತ್ತಲೋ ಇದಾರೆ ಕಾಮಗಾರಿಯನ್ನು ನೋಡಿದರೆ ಎಲ್ಲಾ ಅತ್ಯಂತ ವ್ಯವಸ್ಥಿತ ವಾದದ್ದಾಗಿರುವುದು. ಒಂದು ಸೂಜಿ ಹಿಡಿಯುವಷ್ಟಾದರೂ ಸ್ಥಳ ಎಲ್ಲೂ ಬಿಟ್ಟಿ ರುವುದಿಲ್ಲ; ಯಾವ ಕಲ್ಲನ್ನು ಎಲ್ಲಿ ಹೇಗೆ ಹಾಕಿ ಕಟ್ಟಬೇಕೋ ಹಾಗೆ ಹಾಕಿ ಕಟ್ಟಲ್ಪಡುತ್ತಿದೆ. ಗಟ್ಟಿ ಕಲ್ಲಿನಿಂದಲೂ ಉತ್ಕೃಷ್ಟವಾದ ಗಾರೆಯಿಂದಲೂ ಎಷ್ಟು ಬಲವಾಗಿ ಕಟ್ಟಬಹುದೋ ಅಷ್ಟು ಗಟ್ಟಿಮಾಡಿ ಕಟ್ಟುತ್ತಿದಾರೆ.

ಕಲ್ಲುಗಳನ್ನು ಬಂಡೆಗಳಿಂದ ಒಡೆದು ತೆಗೆಯುವುದಕ್ಕೂ, ಸುಮಾರು ಒಂದೆರಡು ಮೈಲಿ ದೂರದಿಂದ ಕಂಬಿಗಳ ಮೇಲೆ ಹಾಕಿರುವ ರೈಲ್ ಗಾಡಿಗಳ ಮೇಲೂ, ಎತ್ತಿನ ಗಾಡಿಗಳಲ್ಲೂ ಚಕ್ರಮಾಡಿ ಕಟ್ಟೆಯ ಬಳಿಗೆ ಸಾಗಿಸಿ ತರುವು ದಕ್ಕೂ, ಈ ಪ್ರಕಾರ ತಂದ ಕಲ್ಲು ತುಂಡುಗಳನ್ನು ಬೇಕುಬೇಕಾದ ಆಕೃತಿಗೆ ಕುಟ್ಟಿ ಸಿದ್ಧಪಡಿಸುವುದಕ್ಕೂ ಬಗೆಬಗೆಯ ಕಲ್ಲು ಕೆಲಸಗಾರರು ನೂರಾರು ಮಂದಿ ಇರುತ್ತಾರೆ. ಅನೇಕ ಜನರು ಆರೇಳು ದೊಡ್ಡ ಕಬ್ಬಿಣದ ಪಾತ್ರೆಗಳೊ ಳಕ್ಕೆ ಸುಣ್ಣ, ಜಲ್ಲಿಗೆ ಚೂರುಗಳನ್ನು ಸುರಿಯುತ್ತಲೂ, ವಿದ್ಯುಚ್ಛಕ್ತಿಯ ಸಹಾ ಯದಿಂದ ಅರೆದು ಉತ್ಕೃಷ್ಟವಾದ ಗಾರೆಯನ್ನು ತಯಾರುಮಾಡಿ, ರೈಲ್ ಗಾಡಿ ಗಳಿಗೆ ತುಂಬಿ ಆಣೆಕಟ್ಟೆಯ ಬಳಿಗೆ ಕಂಬಿಗಳ ಮೇಲೆ ಬಹು ವೇಗವಾಗಿ ಸಾಗಿ ಸುತ್ತಲೂ ಇದಾರೆ. ತೂಬುಗಳ ಮೇಲೆ ಕಲ್ಲುಗಳನ್ನು ಅಲಂಕಾರವಾಗಿಟ್ಟು ಕಟ್ಟುವುದಕ್ಕೆ ಒಂದು ಯಂತ್ರವನ್ನಿಟ್ಟು ಅದರಿಂದ ಕ್ರಮಕ್ರಮವಾಗಿ ಕಲ್ಲುಗಳನ್ನು ಕೊರೆಯಿಸಿ ಸಿದ್ಧಮಾಡಿಕೊಳ್ಳುತ್ತಿರುವರು

ನದಿಯ ದಕ್ಷಿಣೋತ್ತರ ದಡಗಳಲ್ಲಿ ಸಾವಿರಾರು ಕೂಲಿ ಜನಗಳಿಗೆ ವಾಸಕ್ಕೆ ತಕ್ಕ ವಸತಿಗಳನ್ನು ಕಲ್ಪಿಸುವುದೂ, ಅವರಿಗೆಲ್ಲಾ ಆರೋಗ್ಯಕರವಾದ ನೀರನ್ನು ಒದಗಿಸುವುದೂ, ಅವರ ಆಹಾರಪದಾರ್ಥಗಳಿಗೆ ಅನುಕೂಲ ಮಾಡಿಕೊಡುವುದೂ, ಅವರಲ್ಲಿ ಸೌಖ್ಯದಿಗೆ ಭಂಗವುಂಟಾಗದಂತೆ ಕಾವಲಿಟ್ಟು ನೋಡಿಕೊಳ್ಳುವುದೂ ಎಷ್ಟು ಮಾತ್ರಕ್ಕೂ ಸುಲಭವಲ್ಲ; ಆ ಜನಗಳಾದರೋ ಒಂದು ಕುಲಗೋತ್ರ ದವರಲ್ಲ. ನಾನಾ ಜಾತಿ ಕುಲಗೋತ್ರಗಳವರು ಅಲ್ಲಿ ಸೇರಿಕೊಂಡಿದಾರೆ, ಅವರು ಸಾಲುಸಾಲಾಗಿ ಗುಡಿಸಲುಗಳನ್ನು ಹಾಕಿಕೊಂಡಿರುವರು; ಈ ಗುಡಿಸ ಲುಗಳು ಕೂಡಿದ ಮಟ್ಟಿನೂ ಕೊಳಕಿಲ್ಲದೆ ಇರುವವು. ಆ ಜನಗಳಾದರೋ ಕಷ್ಟಕರವಾದ ಕೆಲಸಗಳನ್ನು ಮಾಡುತ್ತಿದ್ದಾಗ್ಯೂ ಉಲ್ಲಾಸದಿಂದಿದಾರೆ. ಆ ಪ್ರಾಂತ್ಯವೇನೋ ಅಷ್ಟು ಆರೋಗ್ಯಜನಕವಾದದ್ದಲ್ಲ; ಕೂಲಿ ಆಳುಗಳು ಕಾಯಿಲೆಬೀಳುವುದು, ಹೊಸಬರನ್ನು ಕೆಲಸಕ್ಕೆ ತಂದು ನೇಮಿಸುತ್ತಿರುವುದು, ಮಳೆಯ ಕಾಟ, ಈ ಕಾರಣಗಳ ದೆಸೆಯಿಂದ ಆಣೆಕಟ್ಟೆಯ ಕಾಮಗಾರಿಯು ಬೇಗಬೇಗನೆ ನಡೆಯುವುದು ಕಷ್ಟವಾಗಿದೆ.

ಈ ಆಣೆಕಟ್ಟೆಯೂ, ಅದರ ಎಡ ಬಲ ಕೋಡುಗಳೂ ಒಂದು ಮೈಲಿಗಿಂ ತಲೂ ಉದ್ದವಾಗಿಯೂ, ಸುಮಾರು ನೂರು ಅಡಿ ಎತ್ತರವಾಗಿಯೂ, ಸರಾಸರಿ ಐವತ್ತು ಅಡಿ ದಪ್ಪವಾಗಿಯೂ ಆಗಿರುವುದನ್ನೂ, ಅದಕ್ಕೆಲ್ಲಾ ಅನೇಕ ಲಕ್ಷ ಕಲ್ಲು ಗುಂಡುಗಳನ್ನು ಬಂಡೆಗಳಿಂದ ಒಡೆದು ಸಾಗಿಸಿ ತಂದು ಕೈಯಿಂದಲೇ ಹಾಕಿರುವುದನ್ನೂ ನೋಡಿದರೆ ಈ ಕಾಮಗಾರಿಯ ಮಹತ್ವವು ಅಲ್ಪಸ್ವಲ್ಪ ಗೋಚರವಾದೀತು. ಇಂಥಾ ಕಾಮಗಾರಿಯನ್ನು ಉಪಕ್ರಮಿಸಿದವರ ಮತ್ತು ಅದನ್ನು ಚಟುವಟಿಕೆಯಾಗಿ ನಡಿಸುತ್ತಿರುವವರ ಬುದ್ಧಿಕುಶಲತೆ ಸಾಹಸ ಸಾಮ ರ್ಥ್ಯಾದಿಗಳು ಕೊಂಡಾಡತಕ್ಕವುಗಳಾಗಿವೆ. ಈಗ ಈ ಕಾಮಗಾರಿಯಲ್ಲಿ ಕಷ್ಟ ವಾದ ಭಾಗಗಳು ಪೂರೈಸಿರುತ್ತವೆ. ಆಣೆಕಟ್ಟೆಯು ನದಿಯ ಅಗಲಕ್ಕೂ ಒಂದು ದಡದಿಂದ ಇನ್ನೊಂದು ದಡದವರೆಗೆ ಅದ್ಭುತವಾದ ಗೋಡೆಯೋಪಾದಿಯಲ್ಲಿ ಎದ್ದಿರುತ್ತದೆ. ಈಗ ಕೂಲಿ ಆಳುಗಳು ಕಲ್ಲುಗಳನ್ನು ಹೊತ್ತು ತಂದು ಹಾಕಿ ಈ ಗೋಡೆಯ ಎತ್ತರವನ್ನು ಕ್ರಮೇಣ ಹೆಚ್ಚಿಸುತ್ತಾ ಬರಬೇಕಾಗಿದೆ ಇಷ್ಟಲ್ಲ ಆದ ಬಳಿಕ ನದಿಯ ಮೇಲ್ಭಾಗದಲ್ಲಿ ಅಂದರೆ ಈ ಭಾರಿ ಗೋಡೆಯ ಹಿಂದೆ ಅಲ್ಪಸ್ವಲ್ಪ ವಿಸ್ತಾರವೂ ಆದ ದೊಡ್ಡ ಕೆರೆಯು ತನಗೆ ನಿರ್ಮಾಣವಾಗುವುದು ಈ ನೀರಿನಿಂದ ಕೋಲಾರದ ಚಿನ್ನದ ಗಣಿಗಳಲ್ಲಿ ಚಿನ್ನವನ್ನು ತೆಗೆಯುವುದಕ್ಕೂ ಕೋಲಾರ, ಬೆಂಗಳೂರು ಮೈಸೂರು ನಗರಗಳಿಗೆ ದೀಪಗಳನ್ನು ಹಚ್ಚುವುದಕ್ಕೂ ಶಿವಸಮು ದ್ರದಲ್ಲಿ ಅಪಾರವಾದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿಕೊಳ್ಳ ಬಹುದು; ಮತ್ತು ಈ ನೀರನ್ನು ನಾಲೆಗಳ ಮೂಲಕ ಸಾಗಿಸಿಕೊಂಡು ಹೋಗಿ ವಿಸ್ತಾರವಾದ ಜಮೀನುಗಳಿಗೆ ಹಾಯಿಸಿ ಕಬ್ಬು ಭತ್ತ ಮೊದಲಾದ ಬೆಳೆಗಳನ್ನು ಈಗ್ಗಿಂತಲೂ ಎಷ್ಟೋ ಹೇರಳವಾಗಿ ಬೆಳೆದುಕೊಳ್ಳಬಹುದು. ಈ ಕೆರೆಯ ದೆಸೆ ಯಿಂದ ಅನೇಕ ಸಾವಿರ ಎಕರೆಗಳ ಜಮೀನುಗಳು ಮುಳುಗಿಹೋಗುವುದೆ ನೋ ನಿಜ. ಆದಾಗ್ಯೂ ಈ ಕೆರೆಯಿಂದ ಎಷ್ಟೋ ಸಾವಿರ ಎಕರೆಗಳು ತರೀ ಜಮೀನಾ ಗುವವು. ನೀರು ಸರ್ವಕಾಲದಲ್ಲೂ ಸಾರೋದ್ಧಾರವಾಗಿಯೂ ಒದಗುತ್ತಾ ಬರೋಣವೆಂದ ಜಮೀನುಗಳು ಬಹಳ ಹುಲುಸಾಗಿ ಧಾನ್ಯಾದಿಗಳು ಅಪಾರ ವಾಗಿ ಬೆಳೆಯಾಗುವವು.

ಇಂಥಾ ಅದ್ಭುತವಾದ ಕಾಮಗಾರಿಯನ್ನು ನಮ್ಮ ದೇಶದವರು ಕೈಗೆ ತ್ತು ಹಿಡಿದು ಇಷ್ಟರಮಟ್ಟಿಗೆ ಸಾರ್ಥಕವಾಗಿ ನಡೆಸಿರುತ್ತಾರಲ್ಲಾ ಎಂದು ನಮಗೆ ಆಶ್ಚ ರ್ಯವೂ ಆನಂದವೂ ಉಂಟಾಗಿದೆ ಮುಂದೆಯೂ ಇದೇ ರೀತಿ ಮುತುವರ್ಜಿ ಯಾಗಿ ಈ ಕಾಮಗಾರಿಯನ್ನು ನಡಿಸುತ್ತಾ ಬರುವರೆಂದೂ, ಇನ್ನೆರಡು ಮೂರು ವರುಷಗಳೊಳಗಾಗಿ ಈ ತಲಾವಿನ ಮೊದಲನೇ ಭಾಗದ ಕಾಮಗಾರಿಯೆಲ್ಲಾ ಪೂರೈಸುವುದೆಂದೂ ನಂಬಿ ನಿರೀಕ್ಷಿಸುತ್ತೇವೆ ಇದರಿಂದ ನಮ್ಮ ದಿವಾನ್‌ರವರ ಮತ್ತು ಅವರ ಕೈಕೆಳಗಿನ ಇಂಜನಿಯರುಗಳ ಬುದ್ಧಿ ಕುಶಲತೆಯನ್ನೂ ಅವರ ಸಾಹಸ ಪ್ರಯತ್ನವನ್ನೂ ಈ ಆಣೆಕಟ್ಟೆಯು ಶಾಶ್ವತವಾಗಿ ಹೊಗಳುತ್ತಾ ಬರು ವಂತಾಗುವುದರಲ್ಲಿ ಸಂಶಯವಿಲ್ಲ. ಮತ್ತು ಈ ಕೆರೆಯ ನೀರು ನಾಲೆಗಳಲ್ಲಿ ಹೋಗಿ ಅಪಾರವಾದ ಜಮೀನುಗಳಲ್ಲಿ ಬಿದ್ದು ಅಪರಿಮಿತವಾದ ಬೆಳೆಯನ್ನು ಉತ್ಪತ್ತಿಮಾಡಿ ರೈತರಿಗೂ ಇತರ ಪ್ರಜೆಗಳಿಗೂ ಐಶ್ವರ್ಯ ಸುಖ ಸಂಪತ್ತು ಗಳನ್ನು ಕೊಟ್ಟು ದೇಶೋನ್ನತಿಯನ್ನು ನೆಲೆಗೊಳಿಸುವುದೆಂದು ತಿಳಿದು ಸಂತೋಷ ಪಡುತ್ತೇವೆ

ಮೈಸೂರು ನ್ಯಾಯ ವಿಧಾಯಕ ಸಭೆ.

ಮೆಂಬರುಗಳ ಪ್ರಶ್ನೆಗಳೂ, ಸರ್ಕಾರದವರ ಉತ್ತರಗಳೂ.

ಕಳೆದ ಜೂನ್ ತಾ 28 ನೇ ಸೋಮವಾರ ರಾಜಧಾನಿಯಲ್ಲಿ ನಡೆದ ನ್ಯಾಯ ವಿಧಾಯಕ ಕೌನ್ಸಿಲ್ ಮೀಟಿಂಗಿನಲ್ಲಿ ಪ್ರಜಾ ಪಕ್ಷದ ಮೆಂಬರುಗಳು ಕೇಳಿದ ಪ್ರಶ್ನೆಗಳೂ, ಸರ್ಕಾರದ ಅಧಿಕಾರಿಗಳು ಹೇಳಿದ ಸಮಾಧಾನಗಳೂ ಏನೆಂದರೆ:—

ಮ|| ಎಂ. ಬಂಗಯ್ಯಶೆಟ್ಟರು ಕೇಳಿದ ಪ್ರಶ್ನೆ.—(1) ಬೆಂಗಳೂರಿನಲ್ಲಿರುವ ಶಾಸ್ತ್ರಶೋಧನಾ ವಿದ್ಯಾಶಾಲೆಯಲ್ಲಿ ಎಷ್ಟು ಮಂದಿ ಮೈಸೂರು ವಿದ್ಯಾರ್ಥಿಗಳು ಯಾವ ರೀತಿ ಅಭಿವೃದ್ಧಿ ಹೊಂದಿದಾರೆ ? ಉತ್ತರ.—ಮ|| ಡಿ ವಿ ಅಯ್ಯನವರು 3 ವರುಷ ತಪಶೀಲಾಗಿ ಕೋಲಾರ್ ಚಿನ್ನದಗಣಿಯಲ್ಲಿ ವಿದ್ಯುಚ್ಛಕ್ತಿಯ ಇಂಜನಿಯರಾಗಿದಾರೆ; ಮ|| ಆರ್. ಶಂಕರರಾವ್ ಬಾದಾಮಿಯವರು 3 ವರುಷ ತಪಶೀಲಾಗಿ ಮೈಸೂರು ರಸಾಯನಶಾಸ್ತ್ರ ಶೋಧಕರಾಗಿದಾರೆ; ಮ|| ಎಸ್. ಗರಳಪುರಿ ಶಾಸ್ತ್ರಿಯವರು ಎರಡು ವರುಷ ತಪಶೀಲಾಗಿ ಮೋಂಬತ್ತಿ ತಯಾರಿಯನ್ನು ಇಂಗ್ಲೆಂಡಿನಲ್ಲಿ ಕಲಿಯುತ್ತಿದಾರೆ; ಮ|| ಎಸ್. ಎಚ್. ರಾಮಸ್ವಾಮಿಯವರು 2 ವರುಷ ತಪಶೀಲಾಗಿ ಅಮೇರಿಕಕ್ಕೆ ಹೋಗಿ ತಪಶೀಲಾಗುತ್ತಿದಾರೆ; ಮ|| ಎಂ. ಬಿ. ಲಕ್ಷ್ಮಿ ನಾರಾಯಣರವರು ಇನ್ನೂ ಇಲ್ಲೇ ತಪಶೀಲಾಗುತ್ತಿರುವರು.

(2) ಬೆಂಗಳೂರಿನಲ್ಲಿ ಮೈಸೂರು ಟ್ಯಾನರಿ ಎಂಬ ಚರ್ಮದ ಕಾರ್ಖಾನೆ ಯಿಂದ ಕೊಳಕು ನೀರನ್ನು ಕಾಲುವೆಗೆ ಬಿಟ್ಟು ಪ್ರಜೆಗಳ ಆರೋಗ್ಯವನ್ನು ಕೆಡಿಸು ತ್ತಿದಾರೆ; ಆ ದುರ್ವಾಸನೆಯನ್ನು ತಪ್ಪಿಸುವುದಕ್ಕೆ ಏರ್ಪಾಡೇನಾದರೂ ನಡೆ ದೆಯೇ ? ಉತ್ತರ.—ಆ ಕೊಳಕು ನೀರನ್ನು ದೂರ ಸಾಗಿಸುವುದಕ್ಕೆ ಸರ್ಕಾರದ ವರು 17,680 ರೂಪಾಯಿ ಸ್ಯಾಂಕ್ಷನ್ ಮಾಡಿ ನಲ್ಲಿಗಳನ್ನು ಹಾಕಿಸುತ್ತಿದಾರೆ. ಕಾರ್ಖಾನೆಯವರು ಕೊಳಕು ನೀರನ್ನು ಬಿಡದಂತೆ ಆಜ್ಞೆಮಾಡಲ್ಪಟ್ಟಿದೆ. ಆ ನೀರನ್ನು ಸರ್ವೇ ಗಿಡಗಳ ತೋಟಕ್ಕೆ ಬಿಡುವ ಏರ್ಪಾಡು ಮಾಡಿದಾರೆ. ಈ ಏರ್ಪಾಡು ತೃಪ್ತಿಕರವಾಗಿರುವ ವಿಷಯದಲ್ಲಿ ತನಿಖೆಮಾಡುವಂತೆ ಸರ್ಕಾರದವ ರು ಒಂದು ಕಮಿಟಿಯನ್ನು ಗೊತ್ತುಮಾಡಿರುವರು.

ಮ|| ಬಿ ನರಸಿಂಗರಾಯರು ಕೇಳಿದ ಪ್ರಶ್ನೆ.—(1) ಇನಾಂದಾರರ ಮತ್ತು ಅವರ ರೈತರ ಹಕ್ಕು ಬಾಧ್ಯತೆಗಳನ್ನು ತನಿಖೆಮಾಡಿ ನಿರ್ಣಯಿಸುವುದಕ್ಕೆ ಸರ್ಕಾರ ದಿಂದ ಕಮಿಟಿ ಏರ್ಪಾಡು ಮಾಡಲಾಗಿದೆಯೇ ? ಉತ್ತರ.—ಒಂದು ಕಮಿಟಿ ಯನ್ನು ಮಾಡಿದೆ; ಅದಕ್ಕೆ ನಾಲ್ಕು ಮಂದಿ ಅಧಿಕಾರಿಗಳನ್ನೂ, ಐದು ಮಂದಿ ಪ್ರಜಾಪಕ್ಷದ ದೊಡ್ಡ ಮನುಷ್ಯರನ್ನೂ ಮೆಂಬರುಗಳಾಗಿ ನೇಮಿಸಿರುತ್ತೆ.

(2) ಮಿತಿಮೀರಿ ಕುಡಿಯುವುದನ್ನು ಕಡಮೆ ಮಾಡಲು ಸರ್ಕಾರದವರು ಏನಾದರೂ ತರದೂದು ಮಾಡಿದಾರೆಯೇ ? ಉತ್ತರ.—ದುಕಾನುಗಳನ್ನು ಕೂಡಿ ದ ಮಟ್ಟಿಗೂ ಕಡಮೆ ಮಾಡಬೇಕೆಂಬುವುದೇ ಸರ್ಕಾರದ ಉದ್ದೇಶ. ಕಳೆದ 1904-05 ನೇ ಸಾಲಿನಿಂದೀಚೆಗೆ 875 ದುಕಾನುಗಳು ವಜಾ ಆಗಿರುತ್ತವೆ. ಮತ್ತು ದುಕಾನುಗಳನ್ನು ಮುಚ್ಚುವ ಭಾಗದಲ್ಲೂ, ಹೊಸದಾಗಿ ಇಡುವಾಗಲೂ ಸ್ಥಳೀಯ ಸಂಘಗಳ ಅಭಿಪ್ರಾಯವನ್ನು ಕೇಳಿ ತಿಳಿಯುತ್ತೇವೆ ಮದ್ಯಪಾನವನ್ನು ಇನ್ನೂ ಕಡಮೆ ಮಾಡುವ ವಿಷಯದಲ್ಲಿ ಪ್ರಜೆಗಳ ಸಹಾಯವನ್ನು ಪಡೆಯುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಮ|| ಕವಣಿಕ ಕೃಷ್ಣರಾಯರು ಕೇಳಿದ ಪ್ರಶ್ನೆ.—ಸಂಸ್ಥಾನದ ಎಲ್ಲಾ ಜಿಲ್ಲಾಪೇಟೆಗಳಲ್ಲೂ ಕಳೆದ ಹನ್ನೆರಡು ವರುಷಗಳಲ್ಲಿ ಸರ್ಕಾರದವರು ಅಧಿಕಾರಿಗಳ ಸಂಬಳಕ್ಕೆ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದಾರೆ ? ಉತ್ತರ.—

1902-03	ರೂ 4,45,851	1908-09	ರೂ 6,24,331
1903-04	,, 4,91,285	1909-10	,, 6,22,628
1904-05	,, 4,87,949	1910-11	,, 6,71,380
1905-06	,, 4,94,099	1911-12	,, 6,65,079
1906-07	,, 5,38,295	1912-13	,, 6,11,961
1907-08	,, 6,66,370	1913-14	,, 6,58,300

ಮ|| ಎಂ. ವೆಂಕಟಕೃಷ್ಣಯ್ಯನವರು ಕೇಳಿದ್ದು.—(1) ಕಳೆದ ಮೂರು ವರುಷಗಳಲ್ಲಿ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಎಷ್ಟು ದರಖಾಸ್ತುಗಳು ಬಂದವು; ಎಷ್ಟು ವ್ಯವಸ್ಥೆ ಮಾಡಲ್ಪಟ್ಟವು ? ಎಷ್ಟು ಜಮೀನು ರೈತರಿಗೆ ವ್ಯವಸಾಯಕ್ಕೆ ಕೊಡೋಣಾಯಿತು ?

ಉತ್ತರ —	1911-12	1912-1913	1913-1914
ದರಖಾಸ್ತುಗಳು ಬಂದವು	9,224	12,145	10,10
ವ್ಯವಸ್ಥೆಯ ದರಖಾಸ್ತುಗಳು	10,479	11,376	9,820
ವ್ಯವಸಾಯಕ್ಕೆ ಪಡೆದ ಜಮೀನು	67,161	84,403	63,952

(3) ಪಲ್ಲಂಗೆರೆಯಲ್ಲಿ ನಡೆದ ಕೊಲೆಯ ಕಥೆಯೇನು ? ಉತ್ತರ.—ಕಳೆದ ಮಾರ್ಚಿ ತಾ. 3 ರಲ್ಲಿ ಕೋಲಾರದ ಟ್ರೆಜರಿ ಅ|| ಕಮಿಷನರಿಗೆ ಬಂದ ಹೇಳಿ ಲ್ಲದ ಅರ್ಜಿಯನ್ನು ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಿಗೆ ಕೊಟ್ಟರು. ಅ ದರಲ್ಲಿ ಫೆಬ್ರವರಿ ತಾ 6 ರಲ್ಲಿ ವೆಂಕಟಪ್ಪ, ವೆಂಕಟರಮಣ, ಬಿ ನಾರದಪ್ಪ, ವೆಂ ಕಟೇಶಯ್ಯ, ಪಟೇಲ್ ಮುನಿಸ್ವಾಮಿ ಎಂಬೀ ಐದು ಮಂದಿಯೂ ಸೇರಿ ಪಲ್ಲಂಗೆರೆ ಯ ತುಲಸಿರಾಮಸಿಂಗನನ್ನು ಕೊಂದರೆಂದು ಬರೆದಿತ್ತು. ಪೋಲೀಸ್ ಸೂಪರಿಂಟೆಂ ಡೆಂಟರು ಊರಲ್ಲಿಲ್ಲವಾದಕಾರಣ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಟ್ರೆಜರಿ ಅ|| ಕಮಿಷನರನ್ನು ಕರೆದುಕೊಂಡು ಪಲ್ಲಂಗೆರೆಗೆ ಹೋಗಿ ತನಿಖೆ ಮಾಡಿದಾಗ ತುಲಸಿರಾಮಸಿಂಗನು ಗ್ರಾಮದಲ್ಲಿರಲಿಲ್ಲ. ಅವನು ಎಲ್ಲಿ ಹೋದನೋ ಎಂದು ಅವನ ಬಂಧುಗಳು ಶೋಧಿಸುತ್ತಿದ್ದರು ಆ ಗ್ರಾಮದ ಹತ್ತಿರ ತಲೆಯಿಲ್ಲದ ಮುಂಡ ಬಿದ್ದಿತ್ತೆಂದು ಜನರೆಲ್ಲಾ ಆಡಿಕೊಳ್ಳುತ್ತಿದ್ದರು. ಅರ್ಜಿಯಲ್ಲಿ ಕಂಡ ವರು ಏನೋ ಅಪರಾಧ ನಡಿಸಿರುತ್ತಾರೆಂಬ ಸಂಶಯವಿರುವಂತೆ ಗೊತ್ತಾದ್ದ ರಿಂದ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ದಸ್ತಗಿರಿ ಮಾಡಿಸಿ ಲಾಕಪ್ಪಿ ನಲ್ಲಿ ಅವರ ಮೇಲೆ ಅನುಮಾನವೇನೂ ಇಲ್ಲವೆಂದು ಕಂಡಾಗ ಅವರನ್ನು ಜಾಮೀನಿನ ಮೇಲೆ ಬಿಡಿಸಿದರು, ಇದಾದ ನಂತರ ತುಲಸಿರಾಮದಾಸನೇ ಹೊರಟು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾದನು ನಿರಪರಾಧಿಗಳನ್ನು ದಸ್ತಗಿರಿ ಮಾಡಿದ್ದರ ವಿಷಯದಲ್ಲಿ ಸರ್ಕಾರದವರು ತನಿಖೆಮಾಡುತ್ತಿದಾರೆ.

(3) ಮಧುಗಿರಿ ಪೇಟೆ ಜನಗಳ ದಾಂಧಲೆಯಿಂದ ಕಣ್ಣಿಗಾಲದ ಗ್ರಾಮ ಸ್ಥರಿಗೆ ನಷ್ಟವಾಯಿತಷ್ಟೆ. ಅದಕ್ಕೆ ಪರಿಹಾರವೇನಾದರೂ ಅವರಿಗೆ ಕೊಡಲಾ ಗಿದೆಯೇ ? ಉತ್ತರ.—ಪರಿಹಾರ ಕೊಡಬೇಕೆಂದು ಯಾರೂ ಕೆಲಸಕ್ಕೆ ಅರ್ಜಿ ಯನ್ನೂ ಕೊಟ್ಟಿದ್ದು ಇಲ್ಲ

ಮ|| ಕೆ ಪಂಚರತ್ನಾರ್ಯಯರಾಯರು ಕೇಳಿದ್ದು.—ಬ್ರಿಟಿಷ್ ಇಂಡಿಯಾ ದಿಂದ ಕೊಲೆಗಾರರು ನಮ್ಮ ಸೀಮೆಗೆ ಬಂದರೆ ಅಲ್ಲಿನ ವಾರಂಟುಗಳ ಮೇಲೆ ಅಂಥವರನ್ನು ನಮ್ಮ ಪೋಲೀಸಿನವರು ಹಿಡಿದು ಕಳುಹಿಸುತ್ತಾರೆ ಹಾಗೆಯೇ ನಮ್ಮ ವಾರಂಟುಗಳಿಗೂ ಮರ್ಯಾದೆ ಕೊಟ್ಟು ಬ್ರಿಟಿಷ್ ಇಂಡಿಯಾಕ್ಕೆ ಹೋದ ಕೊಲೆಗಾರರನ್ನು ಹಿಡಿದು ತರುವುದಕ್ಕೆ ನಮ್ಮ ಸೀಮೆಯ ವಾರಂಟುಗಳನ್ನು ಬ್ರಿಟಿಷ್ ಇಂಡಿಯಾದವರು ಜಾರಿಮಾಡುವಂತೆ ಇಂಡಿಯಾ ಗವರ್ನ್‌ಮೆಂಟಿಗೆ ಕೇಳಿ ಮಾಡಿ ಆ ರೀತಿ ಏರ್ಪಾಡು ಮಾಡಬಾರದೇ ? ಉತ್ತರ.—ಚೀಫ್ ಕಮಿಷನರ 1879 ನೇ ಇಸವಿ ಜನವರಿ ತಾ. 21 ರ ಹುಕುಮಿನಂತೆ ಜಾರಿ ಮಾಡುತ್ತಿದೇವೆ. ಇಂಡಿಯಾ ಗವರ್ನ್‌ಮೆಂಟಿಗೆ ಬರೆಯುವ ವಿಚಾರ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಮ್ಮ ಬಿ. ಕೆ ಗರುಡಾಚಾರ್ಯರು ಕೇಳಿದ್ದು.—ಅ|| ಕಮಿಷನರ ದರ್ಜೆ ಯಲ್ಲಿ ಎಷ್ಟು ನೌಕರಿಗಳು ಖಾಲಿ ಇವೆ ಅ|| ಕಮಿಷನರರಾಗಿ ಬದಲಿ ನೋಡು ದುವವರ ಪೈಕಿ ಕೆಲವರನ್ನು ಮಾತ್ರ ಖಾಯಂ ಮಾಡುವ ಸಂಭವವಿರುವಾಗ ಸಿವಿಲ್ ಸರ್ವಿಸ್ ಪರೀಕ್ಷೆ ನಡೆಸಬೇಕಾದ ಅಗತ್ಯವೇನು ? ಖಾಲಿ

ಖಾಯಂ ನೌಕರಿಗಳಿಗೆ ಈಗ ಬದಲಿ ನೋಡುವವರನ್ನೇ ನೇಮಿಸಿದ ಪಕ್ಷದಲ್ಲಿ ಇವರು ಕೆಲಸಗಳನ್ನು ಚಟುವಟಿಕೆಯಾಗಿ ಮಾಡುವುದಕ್ಕೆ ತುಂಬಾ ಅನುಕೂಲ ವಾಗುವುದಿಲ್ಲವೇ? ಕೀಳು ದರ್ಜೆಯವರಿಗೆ ಇದರಿಂದ ತೃಪ್ತಿಯೂ ಪ್ರೋತ್ಸಾಹವೂ ಆದೀತಲ್ಲವೇ? ಉತ್ತರ.—ಅ|| ಕಮಿಷನರ್ ರ ದರ್ಜೆಯಲ್ಲಿ ಐದು ನೌಕರಿಗಳು ಖಾಲಿ ಇವೆ. ಚಿಕ್ಕವರಾಗಿಯೂ ಚಟುವಟಿಕೆಯಾಗಿಯೂ ಇರುವ ವಿದ್ಯಾವಂತರನ್ನು ಮೇಲಿನ ಅಧಿಕಾರ ಸ್ಥಾನಗಳಿಗೆ ಬರುವಂತೆ ಮಾಡಿಕೊಳ್ಳುವುದಕ್ಕಾಗಿ ಕಳೆದ 1913ನೇ ಜನವರಿಯಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪಂಕ್ತಿಯನ್ನು ಇಟ್ಟು ನಡಿಸಬೇಕೆಂದೂ, ಕೆಲವರನ್ನು ಪಂಕ್ತಿ ಇಲ್ಲದೇನೇ ಸೇರಿಸಬೇಕೆಂದೂ ಗೊತ್ತುಮಾಡಲಾಗಿದೆ. ಇದಕ್ಕೋಸ್ಕರಲೇ ಈ ವರುಷ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಇಡಬೇಕೆಂದು ತೀರ್ಮಾನ ಮಾಡಲಾಯಿತು.

ಮ|| ಬಿ. ವೆಂಕಟರಾಮಣ್ಣನವರು ಕೇಳಿದ್ದು.—1914-15ನೇ ಸಾಲಿನಲ್ಲಿ ಮಳೆಗಾಲವು ತೃಪ್ತಿಕರವಾಗಿಲ್ಲದ ಕಾರಣ ಸರ್ಕಾರದವರು ಕಂದಾಯವನ್ನು ರಿಮಿಷನ್ ಮಾಡುವುದಕ್ಕಾಗಲಿ, ಸಾವಕಾಶವಾಗಿ ವಸೂಲ್ಮಾಡುವುದಕ್ಕಾಗಲಿ ಏರ್ಪಾಡು ಮಾಡಿದ್ದಾರೆಯೇ? ಉತ್ತರ.—ತುಂಕೂರು ಡೆಪ್ಯುಟಿ ಕಮಿಷನರ್ ರು ಶಿಫಾರಸು ಮಾಡಿದ್ದರ ಮೇಲೆ ಪಾವಗಡದ ತಾಲ್ಲೂಕು ಸಹಗಲ್ಲು, ಮುಗದಲಬೆಟ್ಟದ ಹೋಬಳಿಗಳಲ್ಲೂ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೋರನಕಣಿವೆ ಕರೆ ಕೆಳಗಿನ ತರಿ ಮತ್ತು ಬಾಗಾಯತು ಕಂದಾಯಗಳನ್ನು ಸದ್ಯಕ್ಕೆ ಅರವಾಸಿ ಮಾತ್ರ ವಸೂಲ್ಮಾಡಬೇಕೆಂದೂ, ಉಳಿದ ಅರ್ಧ ಕಂದಾಯದ ವಿಷಯದಲ್ಲಿ ಸರ್ಕಾರದವರು ಪರ್ಯಾಲೋಚನೆ ಮಾಡುವರೆಂದೂ ಹುಕುಂ ಕೊಡಲಾಗಿದೆ. ಸಂಸ್ಥಾನದ ಇತರ ಭಾಗಗಳಲ್ಲಿ ಆ ರೀತಿಯಾದ ರಿಯಾಯತಿ ತೋರಿಸಬೇಕಾದ ಅಗತ್ಯ ಕಂಡುಬರಲಿಲ್ಲ. ಈ ವರುಷ ಮುಂಗಾರು ಮಳೆ ಸರಿಯಾಗಿ ನಡಿಸಿರುತ್ತದೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ರೈತರ ಕೆಲವು ಕಷ್ಟಗಳು.

ಅರಸೀ... ಹಿರಿಯೂರ್ ಪೇಟೆ ತಾಲ್ಲೂಕು ದಾಸ್ಯಪೂಸಾಸ್ವರಹಳ್ಳಿಯು 15 ಮನೆಗಳುಳ್ಳ ಗ್ರಾಮ. ಈ ಊರಿಗೆ ಕೆರೆ ಇಲ್ಲ. ಜನಗಳು ಕಾಡುವುದಕ್ಕೆ ಸರ್ಕಾರದವರು ಸ್ವಲ್ಪ ಭೂಮಿಯನ್ನು ತೆಗೆದಿದ್ದಾರೆ. ಅದರಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುತ್ತೆ; ಬಿಸಿಲು ಕಾಲದಲ್ಲಿ ನೀರಿರುವುದಿಲ್ಲ. ಜನಗಳು ತ್ಯಾಗಾವರದ ಕಂದು ಕುಡಿಯುತ್ತಾರೆ; ದನಗಳು ಬದುಕುವದು ಹ್ಯಾಗೆ?—ಈ ಊರಿಗೆ ಸಂತೆ 10-12 ಮೈಲಿಗಳ ದೂರವಾಗಿಯೂ ಕಾಡು ಪ್ರದೇಶದಿಂದ ಹೋಗುವದಕ್ಕೆ ಸಂದರ್ಭಗೇನೇ ಕಷ್ಟ; ಹೆಂಗಸರೂ, ಮುದುಕರೂ ಹ್ಯಾಗೆ ಹೋಗುವರು? ಈ ಗ್ರಾಮಕ್ಕೆ ದೇವಸ್ಥಾನವೇ ಇಲ್ಲ. ಒಂದು ಪಾಳು ದೇವಸ್ಥಾನವಿದೆ. ಸರ್ಕಾರದವರು ಅದನ್ನು ಕುಮ್ಮಕಿನಿಂದ ಕಟ್ಟಿಸಿದರೆ ಒಳ್ಳೇದಾಗಿದೆ.—ಈಚೆಗೆ ಸರ್ಕಾರದವರು ಒಂದು ಸ್ಕೂಲ್ ಏರ್ಪಡಿಸಿದ್ದಾರೆ. ಸ್ಕೂಲ್ ಮಾಸ್ಟರ್ ಆರ್. ಶ್ರೀನಿವಾಸಯ್ಯನವರು ಒಳ್ಳೆ ಶ್ರದ್ಧೆಯಿಂದ ಹುಡುಗರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ. ಸ್ಕೂಲಿನಲ್ಲಿ 47 ಮಂದಿ ಹುಡುಗರು ಓದುತ್ತಿದ್ದಾರೆ.—ಈ ಗ್ರಾಮವು ಕಾಡಿನಲ್ಲಿರುವುದರಿಂದ ಫಾರೆಸ್ಟಿನವರು ಕೂಲಿಯನ್ನು ಕೊಡದೆ ಪುಗಸಟ್ಟೆಯಾಗಿ ಫಾರೆಸ್ಟ್ ಬ್ಲಾಕ್ ಗಾರ್ಡುಗಳಿಂದ ನಮ್ಮಗಳಿಗೆ ತೊಂದರೆಕೊಟ್ಟು ಕೆಲಸ ಮಾಡಿಸುತ್ತಾರೆ ಮತ್ತು ವಾರಕ್ಕೆ ಒಂದಾವರ್ತಿ ಅರ್ಧ ದಿವಸ ಕಮಿಟಿ ಕೆಲಸಗಳನ್ನು ಮಾಡಿಸಿ ತೊಂದರೆಗೊಳಿಸುತ್ತಾರೆ. ಹೀಗಾದರೆ ಬಡ ರೈತರು ಬದುಕುವ ಬಗೆ ಹ್ಯಾಗೆ? ಈ ತೊಂದರೆಗಳನ್ನು ತಪ್ಪಿಸಿ ಬಡ ರೈತರಿಗೆ ಉಪಕಾರಮಾಡುವರೆಂದು ಪ್ರಾರ್ಥಿಸುತ್ತೇನೆ.

ದೇಶಾಭಿಮಾನಿ.

ಸ್ಕೂಲ್ ಮಾಸ್ಟರುಗಳ ಬಡ್ತಿಯಲ್ಲಿ ಪಕ್ಷಪಾತವಂತೆ.

ಅರಸೀ...—ನಮ್ಮ ದಿವಾನರವರು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬಹಳ ಉತ್ತೇಜನಕೊಟ್ಟು ಉಪಾಧ್ಯಾಯರಿಗೆಲ್ಲಾ ಬಡ್ತಿ ಕೊಡುವ ವಗೈರೆ ವಿಚಾರದಾಗ ಕಿಗಾಗಿ ಬಹಳ ಹಣವನ್ನು ಗವರ್ನ್ಮೆಂಟಿನಿಂದ ಕೊಡಿಸಿರತಕ್ಕದ್ದು ಸರಿಯಷ್ಟೆ. ಆ ಬಡ್ತಿ ವಿಚಾರವು ಇಲ್ಲಿಗೆ ಪೂರೈಸಿತು. ಹೀಗೆಂದರೆ ಇನ್ಸ್‌ಪೆಕ್ಟಿಂಗ್ ಆಫೀಸರವರ ಸಮೀಪ ಸಂಬಂಧಿಗಳಾದವರಿಗೆ ಮೊದಲು, ಶಿಫಾರಸು ತಂದವರನ್ನು ತಂದವರಿಗೆ ನಂತರ, ಬಾಬರಹಟು ಹೋಗಿ ಅಡ್ಡ ಬಿದ್ದವರಿಗೂ ಸಂತೋಷಪಡಿಸಿದವರಿಗೂ ಆ ಮೇಲೆ, ಈ ನೀತಿ ಗ್ರೇಡ್ ವಿಲೆ ಮಾಡಿರತಕ್ಕದ್ದು ಪ್ರಾವಿನ್ಸಿನಲ್ಲಾ ಬಹಳ ಆಶ್ಚರ್ಯಕರವಾಗಿದೆ. ಬಾಕಿ ಬಡಪಾಯಿಗಳ ಮತ್ತು ಬ್ರಾಹ್ಮಣೇತರರ ಸ್ಥಿತಿಯನ್ನು ವಿಚಾರಿಸುವವರು ಯಾರು? ಪಾಪ, ಅವರಿಗ್ಯಾಕೆ ಗ್ರೇಡು! ಈ ಬಡಪಾಯಿಗಳು ಯಾತಕ್ಕೆ ಮೇಲ್ಪಟ್ಟ ಆಫೀಸರ ಕಣ್ಣಿಗೆ ಬೀಳಲಿಲ್ಲವೋ ತಿಳಿಯದು. ಇನ್ನು ಅನೇಕ ತರವಾದ ಅನ್ಯಾಯಗಳು ನಡೆದಿರುತ್ತವೆ. ಅವುಗಳನ್ನು ವಿವರಿಸಲಸಾಧ್ಯ. ಆದರೂ ಕೆಲವು ಸಂಗತಿಗಳು ಅಂದರೆ ಗ್ರೇಡು ಕೊಟ್ಟದ್ದರಲ್ಲಿ ಪಕ್ಷಪಾತಗಳು ನಡೆದಿರುವ ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟವಾಗಿಯೇ ಇದೆ. ಇದಕ್ಕೋಸ್ಕರವೇ ನಮ್ಮ ಸರ್ಕಾರದವರು ಇಷ್ಟೊಂದು ಹಣವನ್ನು ಸ್ಯಾಂಕ್ಷನ್ ಮಾಡಿಸಿದ್ದು! ಯೋಚನೆಯಿಲ್ಲಾ ಕಾಣುವಂತೆ ಈ ವಿದ್ಯಾಭ್ಯಾಸದ ಅಧಿಕಾರಿಗಳು ಅನ್ಯಾಯ ಮಾಡುತ್ತಿರುವಾಗ್ಗೆ ಕಾಣದ ಹಾಗೆ ಮಾಡತಕ್ಕದ್ದು ಎಷ್ಟುಮಟ್ಟಿಗೋ? ಇದನ್ನೆಲ್ಲಾ ಸರ್ಕಾರದವರು ನೋಡದೆ ಕಣ್ಣು ಮುಚ್ಚಿದ್ದಾರೆಯೋ? ಸೀನಃ ಧರ್ಮ ಸರ್ಕಾರದವರು ಕಣ್ಣು ತೆರೆಯುವಂತೆ ಮಾಡಿ ಅನೇಕ ಹೊಟ್ಟೆಗಿಲ್ಲದ ಬಡ ಉಪಾಧ್ಯಾಯರುಗಳು ಅಭಿವೃದ್ಧಿಗೆ ಬರಲು ಮಾರ್ಗವನ್ನು ಕಲ್ಪಿಸಿಕೊಟ್ಟಾರೆಂದು ನಂಬಿರುತ್ತೇವೆ.

ದೇಶಾಭಿಮಾನಿ.

ವಿದ್ಯಾ ಇಲಾಖೆಯ ಅಕ್ರಮವಂತೆ.

ಅರಸೀ...—ಮೈಸೂರು ತಾಲ್ಲೂಕಿನಲ್ಲಿ ಒಂದು ಗ್ರಾಮಕ್ಕೆ ಕಳೆದ ಡಿಸೆಂಬರ್ ತಿಂಗಳಲ್ಲಿ ಪ್ಲೇಗ್ ಪ್ರಾಪ್ತವಾಗಿತ್ತು. ಆ ಗ್ರಾಮಸ್ಥರು ಸ್ಕೂಲ್ ಮಾಡುವದಕ್ಕೆ ಪ್ರತ್ಯೇಕವಾದ ಸ್ಥಳವನ್ನು ಕಲ್ಪಿಸಿಕೊಡಲನುಕೂಲವಿಲ್ಲವೆಂದು ಬರೆದುಕೊಟ್ಟಿದ್ದಲ್ಲದೆ ಬಾಲಕರನ್ನು ಸಹ ಪಟ್ಟಣಗಳಿಗೆ ಕಳುಹಿಸಿದ್ದರು. ಈ ವಿಷಯಗಳನ್ನು ಆ ಗ್ರಾಮದ ಮಾಸ್ತರು ಇನ್ಸ್‌ಪೆಕ್ಟರಿಗೆ ರಿಪೋರ್ಟು ಮಾಡಿದ್ದರ ಮೇಲೆ ಟೀಚರು ಆಫೀಸಿನಲ್ಲೇ ಡ್ಯೂಟಿ ಮಾಡುವಂತೆ ಹುಕುಂ ಪಡೆದು ಆಫೀಸಿಗೆ ಹಾಜರಾಗಿ ಹಗಲೆಲ್ಲಾ ದುಡಿಯುತ್ತಿದ್ದರೂ ಮೇಲಿನವರ ಗಮನಕ್ಕೆ ಬರದೆ ಹೋಯಿತು. ಈ ಮಧ್ಯೆ ಕೌನ್ಸಿಲರ್ ಸಾಹೇಬರು ಗ್ರಾಮಕ್ಕೆ ಹೋಗಿದ್ದಾಗ ಕೆಲವು ಪುಂಡು ಜನಗಳು ಚಾಡಿ ಹೇಳಿದ್ದರ ಮೇಲೆ ವಿಚಾರಣೆ ಇಲ್ಲದೆ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರಿಗೆ ಬರೆದದ್ದರಿಂದ ಇದ್ದಕ್ಕಿದ್ದಹಾಗೇ ಸಂಬಳವನ್ನೇ ತಡೆದುಬಿಟ್ಟರು. ಈ ಜುಜುಬಿ ಸಂಬಳ ದೊಡ್ಡ ಸಂಸಾರಕ್ಕೆ 15 ದಿನಗಳಿಗೆ ಸಾಲದಿದ್ದರೂ 3-4 ತಿಂಗಳಿಂದ ಸಂಬಳವಿಲ್ಲದಿದ್ದರೆ ಪಂಕ್ತಿಯಲ್ಲಿ ಆತ್ಮಹತ್ಯವೇ ಮಾಡಿಕೊಳ್ಳಬೇಕಾಗುವುದು? ಅಥವಾ ಕಳ್ಳಕೆಲಸ ಮಾಡಲು ಪ್ರೇರಿಸಿದಂತೆ ಆಯಿತು. ಸರ್ವಿಸ್ ರೆಗ್ಯುಲೇಷನ್ ಆಫೀಸರಿಗೊಂದು, ಬಡ ನೌಕರರಿಗೊಂದು ಇರಬಹುದಾಗಿ ಕಾಣುತ್ತದೆ. ಎ. ವಿ. ಸ್ಕೂಲ್ ಮಾಸ್ತರುಗಳಿಗಿಂತಲೂ ನಾಲ್ಕರಷ್ಟು ದುಡಿದು ಕೆಲಸ ಮಾಡುತ್ತಾ ಇದ್ದರೂ ನಾನಾ ತರದಲ್ಲಿ [illegible]ದ್ದರೆ ಗ್ರಾಮಾಭಿವೃದ್ಧಿಯಾಗುವುದು ಹ್ಯಾಗೆ? ಮಾಸ್ತರುಗಳು ಹೆಚ್ಚು ಕೆಲಸ ಮಾಡಲು ಉತ್ಸಾಹವುಂಟಾಗುವುದು ಹ್ಯಾಗೆ? ಈ ನ್ಯೂನತೆಗಳೆಲ್ಲಾ ತಿದ್ದಲ್ಪಡುತ್ತೇ ಇಲ್ಲವೋ ಎಂಬ ಶಂಕೆಯುಂಟಾಗಿದೆ. ಆದ್ದರಿಂದ ಈ ವಿಚಾರ ದೊಡ್ಡವರ ದೃಷ್ಟಿಗೆ ಗೋಚರವಾಗಿ ಬಡ ನೌಕರರ ಸಂಕಟವು ಹೋಗಲಾಡಿಸಲ್ಪಡಬಹುದೆಂದು ನಂಬಿ ನಿರೀಕ್ಷಿಸುವ

ದೇಶಿಕ.

ಜಯರಾಮಾಚಾರ್ಯರೂ ಮತ್ತು ಅವರ ಪೈಸಾ ಫಂಡ್ ಕಮಿಟಿ.

ಅಯ್ಯಾ,—ತಮ್ಮ ಪತ್ರಿಕೆಯ ಮೇ 23 ನೆಯ ತಾ. ಸಂಚಿಕೆಯಲ್ಲಿ ಮ|| ನಾಡಿಗ ದತ್ತಾತ್ರೇಯರಾಯರವರೇ ಮೊದಲಾದ ನಾವು ನಾಲ್ಕು ಜನಗಳು ಸೇರಿ ಪೈಸಾ ಫಂಡಿನ ವಿಷಯವಾಗಿ ಪ್ರಕಟಿಸಿದ ಸಂಗತಿಯನ್ನು ಕುರಿತು ಜಯರಾಮಾಚಾರ್ಯ ಕೊಪ್ಪಳ ಎಂಬುವರು ತಮ್ಮ ಪತ್ರಿಕೆಯ ಜೂನ್ ತಿಂಗಳ 10 ನೇ ತಾ. ಸಂಚಿಕೆಯಲ್ಲಿ ಒಂದು ಲೇಖನವನ್ನು ಪ್ರಕಟಿಸಿರುವರಷ್ಟೆ. ಅದರಲ್ಲಿ ಜಯರಾಮಾಚಾರ್ಯರು ಒಬ್ಬೊಬ್ಬರಿಗೆ ಒಂದೊಂದು ಕಾರಣಗಳನ್ನು ತೋರಿಸಿ ನಾವು ಪೈಸಾ ಫಂಡಿಗೆ ಸಂಬಂಧಪಟ್ಟವರೆಂದು ಪ್ರತಿಪಾದಿಸಿರುತ್ತಾರೆ. ಅದ ಪ್ರಯುಕ್ತ ಆಯಾಯ ವಿಷಯಗಳಲ್ಲಿ ಅವರವರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾಗಿದೆ. ಇದು ಸಾರ್ವಜನಿಕ ವಿಷಯವಾಗಿರುವುದರಿಂದಲೂ ಮತ್ತು ಇದರಲ್ಲಿ ಜಯರಾಮಾಚಾರ್ಯರು ನನ್ನ ವಿಷಯವಾಗಿ ಜನಗಳಲ್ಲಿ ಮರಭಿಪ್ರಾಯವುಂಟಾಗುವಂತೆ ಸುಳ್ಳು ಸಂಗತಿಯನ್ನು ಪ್ರಕಟಿಸಿರುವದರಿಂದಲೂ ಅವರ ಲೇಖನದಲ್ಲಿರುವ ಮಿಥ್ಯಾಂಶಗಳನ್ನು ವ್ಯಕ್ತಗೊಳಿಸುವುದು ಅವಶ್ಯಕವಾಗಿದೆ.

ಜಯರಾಮಾಚಾರ್ಯರು ತಮ್ಮ ಲೇಖನದಲ್ಲಿ ಹೇಳುವಂತೆ ದಾವಣಗೆರೆಯ ಆಫೀಸು ಇರಬೇಕೆಂತಲೂ, ಅದನ್ನು ಊರ್ಜಿತಕ್ಕೆ ತರುವುದಕ್ಕೆ ನಾನು ಲೆಕ್ಚರರ್ ಆಗಿ ಇರುತ್ತೇನೆಂತಲೂ ಸ್ವದೇಶಸ್ಥರು ಬರೆದ ಲೇಖನವಿದ್ದರೆ ಅದನ್ನು ಸಂಪೂರ್ಣವಾಗಿ ಪ್ರಕಟಿಸಬೇಕೆಂದು ಸೂಚಿಸಿದೆ. ಆಚಾರ್ಯರು ತಮ್ಮ ಲೇಖನದಲ್ಲಿ ತಮಗೂ ಮತ್ತು ಸ್ಟಾರ್ ಪತ್ರಿಕಾಕಾರರಿಗೂ ಮೊದಲು ಕೊಟ್ಟ ಬಾಹವಿವಾದರನ ಬಾತಮಿಯು ಸಿದ್ಧವಾಗಿದೆ ಎಂದು ಹೇಳಿದಾರಷ್ಟೆ. ಅದರಿಂದ ಈ ಮೊದಲು ಪ್ರಕಟವಾದ ಅನೇಕ ಸುಳ್ಳು ಸಂಗತಿಗಳೂ ನಿಜವಾದವುಗಳೆಂದು ಜನಗಳು ತಿಳಿದುಕೊಳ್ಳಲು ತುಂಬಾ ಅವಕಾಶವಾಯಿತು. ಅದ ಪ್ರಯುಕ್ತ ಆ ಬಾಹವಿವಾದರನ ಬಾತಮಿಯಲ್ಲಿರತಕ್ಕ ಸುಳ್ಳು ಸಂಗತಿಗಳಲ್ಲಿ ಕೆಲವನ್ನು ಮಾತ್ರ ಪ್ರಕೃತ ವ್ಯಕ್ತಪಡಿಸಬೇಕಾಗಿದೆ. ತಮ್ಮ ಪತ್ರಿಕೆಯ ಏಪ್ರಿಲ್ 28 ನೆಯ ತಾರೀಖಿನ ಸಂಚಿಕೆಯಲ್ಲಿ ದಾವಣಗೆರೆ ಪೈಸಾ ಫಂಡ್ ಎಂಬ ಶಿರೋಲೇಖನದಿಂದ ಯಾವ ಹೆಸರೂ ಇಲ್ಲದೆ ಒಂದು ಲೇಖನವು ಪ್ರಕಟವಾಗಿದೆ. ಅದರಲ್ಲಿ ಜಯರಾಮಾಚಾರ್ಯರು ಇಲ್ಲಿಗೆ ಬಂದಿದ್ದು ಅನೇಕ ವ್ಯಾಖ್ಯಾನಗಳನ್ನು ಮಾಡುತ್ತಲಿದ್ದಾರೆಂತಲೂ, ಅವರ ಸಂಗಡ ಬಂದಿದ್ದ ಶಿಷ್ಯರಲ್ಲಿ 4-5 ವರ್ಷದ ಹುಡುಗರು, ಚಿಕ್ಕ ಚಿಕ್ಕ ಬಾಲಕಿಯರು ಅಸ್ಖಲಿತವಾಗಿ ಉಪನ್ಯಾಸ ಮಾಡುತ್ತಾರೆಂತಲೂ ಪ್ರಕಟವಾಗಿದೆ. ಈ ಕೇವಲ ಸುಳ್ಳು ಸಂಗತಿಗಳನ್ನು ಕೊಟ್ಟ ಅನಾಮಧೇಯರಾದ ಬಾಹವಿವಾದರರಾಗಲೀ, ಇವು ಸತ್ಯವಾದವುಗಳೆಂದು ಜನಗಳಿಗೆ ನಂಬಿಕೆಯುಂಟಾಗುವಂತೆ ಬರೆದಿರುವ ಜಯರಾಮಾಚಾರ್ಯರಾಗಲೀ ದಾವಣಗೆರೆಯಲ್ಲಿ ಯಾವ ಯಾವ ದಿವಸ ಯಾವ ಯಾವ ಸ್ಥಳಗಳಲ್ಲಿ ಯಾರ ಯಾರ ಅಧ್ಯಕ್ಷತೆಯಲ್ಲಿ, ಯಾವ ಯಾವ ವಿಷಯಗಳ ಸಂಬಂಧವಾಗಿ ಉಪನ್ಯಾಸಗಳು ಜರುಗಿದವೆಂಬುದನ್ನೂ, ಪತ್ರಿಕೆಯಲ್ಲಿ ಪ್ರಕಟವಾದ ಬಾಲಕಬಾಲಕಿಯರಾರು? ಅವರು ಯಾವಾಗ, ಎಲ್ಲಿ, ಯಾರ ಮುಂದೆ, ಯಾವ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು? ಎಂಬಂಶಗಳನ್ನೂ ಪ್ರಕಟಿಸಿ ತಮ್ಮ ಬಾತಮಿಯನ್ನು ದೃಢೀಕರಿಸಿಕೊಳ್ಳಬೇಕು. ಈ ವಿಷಯವೇ ಮೈಸೂರು ಸ್ಟಾರ್ ಪತ್ರಿಕೆಯ ಮೇ ತಿಂಗಳು 2 ನೇ ತಾ. ಸಂಚಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿ "ಒಬ್ಬ ಅಭಿಮಾನಿ" ಎಂಬ ಹೆಸರಿನಿಂದ ಪ್ರಕಟವಾಗಿದೆ. ಆ ಅಭಿಮಾನಿಗಳು ತಮ್ಮ ನಿಜವಾದ ನಾಮಧೇಯವನ್ನು ತೋರಪಡಿಸಲಿ. ಡಿಸ್ಟ್ರಿಕ್ಟಿಗೆ 10-12 ಜನರು ಉಪನ್ಯಾಸಕರಾಗಿ ಹೋಗಬೇಕೆಂದು ನಿರ್ಣಯಿಸಿದಾರೆಂದು ಅಭಿಮಾನಿಗಳು ಬರೆದಿರುವರಷ್ಟೆ. ಅವರಲ್ಲಿ ನಾಲ್ಕರಂತೂ ತಾವು ಇದಕ್ಕೆ ಸಂಬಂಧಪಿಲ್ಲವೆಂದು ಪ್ರಕಟಿಸಿದಾರೆ. ಉಳಿದ 6-8 ಜನಗಳಾರು? ಅವರಲ್ಲಿ ವಿರೂಪಾಕ್ಷಶಾಸ್ತ್ರಿ ಬಿ. ಎ., ಪಂಚಾಕ್ಷರಯ್ಯ ಕೊಡ್ಲೂರು ಎಂಬುವರು ಎಲ್ಲಿದಾರೆ? ಇವನ್ನು ಅಭಿಮಾನಿಗಳು ಪ್ರಕಟಿಸಿ ತಾವು ಸುಳ್ಳು ಬರೆದಿಲ್ಲವೆಂಬುದನ್ನು ದೃಢೀಕರಿಸಬೇಕಾಗಿದೆ. ಇನ್ನೊಂದು ಲೇಖನವು ಮೈಸೂರು ಸ್ಟಾರ್ ಪತ್ರಿಕೆಯ ಮೇ 16 ನೇ ತಾ. ಸಂಚಿಕೆಯಲ್ಲಿ ಪ್ರೇಕ್ಷಕ ಎಂಬ ಹೆಸರಿನಿಂದ ಪ್ರಕಟವಾಗಿದೆ. ಅದರಲ್ಲಿ ದತ್ತಾತ್ರೇಯರಾವ ಜಾಧವ ಎಂಬುವರು ಶ್ರೀ ಗಾಂಧಿಯವರು ಬೊಂಬಾಯಿಗೆ ದಯಮಾಡಿಸುತ್ತಾರೆಂದು ಬೆಂಗಳೂರಿಂದ ಕಮಿಟಿ ಅಧ್ಯಕ್ಷರಿಗೆ ಎಂದರೆ ಜಯರಾಮಾಚಾರ್ಯರಿಗೆ ತಂತೀ ಕೊಟ್ಟರೆಂದು ಪ್ರಕಟವಾಗಿದೆ. ಇವರ ಪೂರ್ವೋತ್ತರವನ್ನು ಸ್ಥಿರಪಡಿಸಲಿ.—ಈ ವಿಷಯಗಳನ್ನು ದೃಢೀಕರಿಸದಿದ್ದರೆ ಜಯರಾಮಾಚಾರ್ಯರಿಗೆ ಜನಗಳಲ್ಲಿ ವಿಶೇಷವಾದ ಪ್ರತಿಷ್ಠೆಯುಂಟಾಗಲೆಂದು ಈ ಪ್ರಕಾರ ಅನೇಕ ಸುಳ್ಳು ಸಂಗತಿಗಳನ್ನು ಯಾರೋ ಒಬ್ಬರು ತಮ್ಮ ಹೆಸರು ಮರೆಮಾಡಿ ಪ್ರಕಟಿಸುತ್ತಿರುವರೆಂದು ತಿಳಿಯಬೇಕಾಗಿದೆ.

ಎಂ. ಮಹಿಪತಿ ಹರ್ದೇಕರ್,

ದಾವಣಗೆರೆ ಎಡಿಟರ್, ಧನುರ್ಧಾರಿ.

ನಗರ ತಾಲ್ಲೂಕು ಹುಲಿಕಲ್ಲು ಘಟ್ಟದ ಆಸ್ಪತ್ರೆ ಸ್ಟೇಷನ್ ವಿಚಾರವಾದ ಬಾತ್ಮಿಯನ್ನು ಶಿವಮೊಗ್ಗಾ ಡೆಪ್ಯುಟಿ ಕಮಿಷನರವರಿಗೆ ಕಳುಹಿಸಿದೇವೆ.

ನಂಜನಗೂಡಿನಲ್ಲಿ ಕಳೆದ ವಾರ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯು ತೃಪ್ತಿಕರವಾಗಿ ನಡೆಯಲಿಲ್ಲವೆಂಬ ಅರ್ಥಕ್ಕೆ ನಮಗೊಂದು ಬಾತ್ಮಿ ಬರೆದುಬಂದಿದೆ.

ಸಿ. ಎನ್. ಶೇಷಾದ್ರಿಚರ್ಮ, ಚಿತ್ರದುರ್ಗ.—ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಪ್ರತ್ಯಕ್ಷದರ್ಶಿ, ಸುಂಕಸಾಲೆ.—ಗ್ರಾಮದ ಮುಖಂಡರು ಸೇರಿ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಬರೆದುಕೊಂಡರೆ ಅನುಕೂಲವಾಗುವುದು.

ಗೋವಿಂದನವರು ಅಮಲ್ದಾರರು ಮಂಚೇನಹಳ್ಳಿಯಲ್ಲಿ ಕ್ರೈಸ್ತರನ್ನು ಅಲ್ಲಿಗೆಳೆದು ದಂಡನೆ ಮಾಡಿದ್ದು ನಿರಾಧಾರವಾದದ್ದೆಂಬ ಅರ್ಥಕ್ಕೆ ಚಿಕ್ಕಬಳ್ಳಾಪುರದಿಂದ ನಮಗೊಂದು ಬಾತ್ಮಿ ಬರೆದುಬಂದಿದೆ. ಅಮಲ್ದಾರರು ಮತ್ತೆ ಆ ರೀತಿ ವರ್ತಿಸಲಾರರೆಂದು ನಂಬುತ್ತೇವಾಗಿ ಈ ಬಾತ್ಮಿಯನ್ನು ಪ್ರಕಟಿಸುವುದರಲ್ಲಿ ಫಲವೇನೂ ಕಾಣುವುದಿಲ್ಲ.

ಕೆಲವು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಮಾಜಿಸ್ಟ್ರರನ್ನು ಕುರಿತು ಇರುತ್ತಾರೆಂದು ಮುಂತಾಗಿ ತಿಪಟೂರಿನಿಂದ ನಮಗೊಂದು ಬಾತ್ಮಿ ಬಂದಿದೆ. ಮೊಕದ್ದಮೆಗಳು ಇತ್ಯರ್ಥವಾಗುವುದಕ್ಕಿಂತ ಮುಂಚೆ ಅಂದರೆ ಪಯಸಲ್ಸ್ ಆಗುತ್ತಿರುವಲ್ಲಿ ಯಾವ ಪಕ್ಷವನ್ನಾಗಲಿ ವಹಿಸಿ ಬರೆಯುವುದೂ, ಪ್ರಕಟಿಸುವುದೂ ಕಾನೂನಿಗೆ ವಿರೋಧವಾದೀತಾಗಿ ಪ್ರಕಟಿಸಲಾರೆವು. —ಎಡಿ.]

ತಾಲ್ಲೂಕು ವರ್ತಮಾನಗಳು.

ಚಿಂತಾಮಣಿ.—ಹವಾ ಚೆನ್ನಾಗಿದೆ. ಮಳೆ ಮಾತ್ರ ಇಲ್ಲ. ಪೈರುಗಳು ಒಣಗುವದಕ್ಕೆ ಉಪಕ್ರಮವಾಗಿದೆ. ಕ್ಷಾಮ ಪ್ರಾಪ್ತವಾಗುತ್ತಿನ್ನುವದಕ್ಕೆ ಸಂಶಯವಿಲ್ಲ. ಆದರೆ ಇಂಥ ಕಾಲದಲ್ಲಿ ಅಕ್ಕಪಕ್ಕ ತಾಲ್ಲೂಕುಗಳಲ್ಲಿ ನಡೆಯುತ್ತಾ ಇರುವಂತೆ ಈ ತಾಲ್ಲೂಕು ಮತ್ತು ಟವನ್ನಲ್ಲಿ ಕಳ್ಳರ ಅಪಾಂತ್ರಗಳಿಗೆ ಅವಕಾಶವಿಲ್ಲದ ಹಾಗೆ ಪೋಲೀಸು ಗಸ್ತು ಸರಿಯಾಗಿ ನಡಿಸಲ್ಪಡುತ್ತೆ. ಇದಕ್ಕಾಗಿ ಹಾಲಿ ಪೋಲೀಸ್ ಇನ್ಸ್‌ಪೆಕ್ಟರು ಮ|| ಸಿರಾಜುದ್ದೀನ್ ಸಾಹೇಬರು ತುಂಬಾ ಶ್ರದ್ಧೆಯನ್ನು ವಹಿಸಿರುತ್ತಾರೆ. ತಾಲೂಕ್ಕನುಗುಣವಾಗಿ ಸ್ಯಾನಿಟೇಷನ್ ಏರ್ಪಾಟುಗಳು ತೃಪ್ತಿಕರವಾಗಿವೆ.—ಈ ಗ್ರಾಮದಲ್ಲಿ ಹಾಲಿ ಗೌ|| ಎ. ವಿ. ಸ್ಕೂಲು ಇರುವದು ಸರಿಯಷ್ಟೆ. ಸುಮಾರು ಒಂದು ವರ್ಷದ ಕೆಳಗೆ ಈ ಊರಿಗೆ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರು ದಯಮಾಡಿಸಿದ್ದಾಗ ಒಂದು ವ್ಯಾಪಾರದ ಕ್ಲಾಸನ್ನು ಏರ್ಪಡಿಸುವಂತೆ ಅಪ್ಪಣೆ ಆಗಿತ್ತು. ಈ ವಿಚಾರವಾಗಿ ಈಚೆಗೆ ನಮ್ಮ ಕೋಲಾರ್ ಡಿಸ್ಟ್ರಿಕ್ಟಿನ ಎಜುಕೇಷನಲ್ ಸೂಪರಿಂಟೆಂಡೆಂಟಾದ ಮ|| ಎಫ್. ಎಸ್. ರಘುನಾಥಾಚಾರ್ಯರು ಸಹ ಅಪ್ಪಣೆಕೊಡಿಸಿರುತ್ತಾರೆ. ಈ ಗ್ರಾಮದಲ್ಲಿ ವರ್ತಕ ಮಂಡಲಿಯವರ ಉಪಯೋಗಾರ್ಥವಾಗಿ ನಮ್ಮ ಘನ ಸರ್ಕಾರದವರು ಶೀಘ್ರದಲ್ಲಿ ಏರ್ಪಾಟನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.—ದೇಶದ ಜನಗಳಿಗೆ ಸುಖವನ್ನುಂಟುಮಾಡಲು ಮತ್ತು ಹಾಲಿ ಸಂಭವಿಸಿರುವ ಕ್ಷಾಮಕಾಲದಲ್ಲಿ ಬಡವಾಯಿಗಳಿಗೆ ಜೀವನವನ್ನು ಕಲ್ಪಿಸಲು ಸಹ ಪ್ರಯತ್ನಪಟ್ಟಿರುವ ಕೋಲಾರ ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಾಮಗಾರಿ ಜರುಗಿಸಲು ಕಾರಣಭೂತರಾದ ಮ|| ಕೆ. ಶ್ರೀಕಂಠೇಶ್ವರ ಅಯ್ಯರವರನ್ನು ಎಷ್ಟು ಹೊಗಳಿದರೂ ಸಾಲದಾಗಿದೆ. ಕೆಲಸವು ಚುರುಕಾಗಿ ನಡೆಸಲ್ಪಡುತ್ತಾ ಇದೆ.

ಮಂಡ್ಯ.—ಒಂದು ಮನೆಗೆ ಕಳ್ಳರು ನುಗ್ಗಿ ಪುಸ್ತಕಗಳೂ ಅನವಶ್ಯಕ ವಸ್ತುಗಳೂ ಹೊರತಾಗಿ ಎಲ್ಲವುಗಳನ್ನು ಒಂದೂ ಬಿಡದೆ ದೋಚಿಕೊಂಡುಹೋದರು. ಈ ಬಡವನ ದುಃಖವನ್ನೂ ಕಷ್ಟವನ್ನೂ ನೋಡಲಾರದೆ ಅಮಲ್ದಾರರೂ ಇತರ ನೌಕರಮಾನ್ಯರುಗಳೂ ಆತನಿಗೆ ಸ್ವಲ್ಪಸ್ವಲ್ಪ ಸಹಾಯಮಾಡಿ ಬಟ್ಟೆಬರೆಗಳನ್ನೂ ಪಾತ್ರೆಗಳನ್ನೂ ಜೊತೆಯಾಗಿ ಕೊಂಡುಕೊಟ್ಟರು.—ಸಂತೆಗಳಲ್ಲಿ ಬಹಳ ಮೋಸಗಳು ನಡೆಯುತ್ತಿರುವುದರಿಂದ ಆಗಾಗ್ಗೆ ಪೋ. ಇನ್ಸ್‌ಪೆಕ್ಟರವರು ಮುದ್ದಾಂ ಬಂದು ತನಿಖೆ ಮಾಡುತ್ತಿರುವುದು ಸರ್ವರಿಗೂ ತುಂಬಾ ಸಂತೋಷವನ್ನುಂಟು ಮಾಡುತ್ತಲಿದೆ. ಆದರೆ ಸರ್ಕಾರದವರು ಹಾಕೇ ಜಾರಿಯಲ್ಲಿ ತಂದಿರತಕ್ಕ ತೂಕ, ಅಳತೆ ಮೊದಲಾದವುಗಳಲ್ಲಿ ವ್ಯತ್ಯಾಸವು ಕಂಡುಬಂದರೆ ಅವುಗಳನ್ನು ಯಾರು ಕೇಳಬೇಕೋ ತಿಳಿಯದು.—ಕಳೆದ ಸೋಮವಾರ ನಮ್ಮ ಅಮಲ್ದಾರ್ ಮ|| ಬಸವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ರಿಪ್ರಸೆಂಟೆಟಿವ್ ಅಸೆಂಬ್ಲಿ ಮೆಂಬರುಗಳ ಚುನಾವಣೆಯು ಒಂದು ಸಭೆಯು ನಡೆಯಿತು. ತಾ. ಆನೇ ಶುಕ್ರವಾರ ಮೈಸೂರು ವೆಸ್ಲಿಯನ್ ಹೈಸ್ಕೂಲ್ ಪ್ರಿನ್ಸಿಪಲ್‌ರಾದ ರೆವ್. ಎಚ್. ಸ್ಪೆನ್ಸರ್ ಯವರು ಇಲ್ಲಿನ ಎ. ವಿ. ಸ್ಕೂಲ್, ಗರಲ್ಸ್ ಸ್ಕೂಲ್, ಪಂಚಮ ಸ್ಕೂಲ್, ಒಂದು ಪ್ರೈವೇಟ್ ಸ್ಕೂಲ್, ಈ ನಾಲ್ಕನ್ನೂ ತನಿಖೆ ಮಾಡಿಕೊಂಡು ವಾಪಸ್ ಮೈಸೂರಿಗೆ ತೆರಳಿದರು.—ಈ ಊರು ಮಧ್ಯೆ ಹೈ ರೋಡ್ ಇರುವುದರಿಂದ ಮೋಟರ್ ಮತ್ತು ಬೈಸಿಕಲ್ ಮುಂತಾದವುಗಳನ್ನು ವೇಗವಾಗಿ ಬಿಡದಂತೆ ಸರ್ಕಾರದವರು ರೂಲಸು ಮಾಡಿದರೆ ಅನುಕೂಲ. ಮತ್ತು ಹೈ ರೋಡು ಪಕ್ಕದಲ್ಲಿ ಮುನಿಸಿಪಾಲಿಟಿಯೂ ಸರ್ಕಾರವೂ ವ್ಯಾಜ್ಯವಿರುವ ಜಾಗಪಡಿಯು ಬಿದ್ದು ನೋಡುವುದಕ್ಕೆ ತುಂಬಾ ಅಸಹ್ಯವಾಗಿದೆ. ರಾಜರೂ, ದೊರೆಗಳೂ, ಅಧಿಕಾರಿಗಳೂ, ದೇಶ ವಿದೇಶಗಳ ದೊಡ್ಡ ಮನುಷ್ಯರೂ ಪ್ರಯಾಣಮಾಡುವಾಗ್ಗೆ ಈ ಅಸಹ್ಯವಾದ ಭಾಗವನ್ನು ಕಾಣದೆ ಮುಂದಕ್ಕೆ ಹೋಗಲಾಗುವದಿಲ್ಲ. ಆದ್ದರಿಂದ ಈ ಸ್ಥಳದ ವಿಷಯದಲ್ಲಿ ಸರ್ಕಾರದವರು ಬೇಗನೆ ಇತ್ಯರ್ಥಮಾಡುವರೆಂದು ಹಾರೈಸಲಾಗಿದೆ.

ಬೇಲೂರು.—ಈಗ್ಗೆ 8–10 ದಿವಸಗಳಿಂದಲೂ ರಾತ್ರಿ ಹಗಲೂ ಸಹ ಎಡೆಬಿಡದೆ ಮಳೆ ಸುರಿಯುತ್ತಾ ಎಲ್ಲಾ ಕೆರೆ ಕಟ್ಟೆಗಳೂ ತುಂಬಿಕೊಂಡಿವೆ. ಮತ್ತು ಈ ತಾಲ್ಲೂಕ್ ಸುತ್ತುಮುತ್ತಲೂ ಪೈರುಪಚ್ಚೆಗಳೂ ಚೆನ್ನಾಗಿರುವುದರಿಂದ ಹುಲುಸಾಗಿ ರೈತರು ಸಂತೋಷಯುಕ್ತರಾಗಿರುತ್ತಾರೆ.—ಈ ಟವನ್ ಮ್ಯುನಿಸಿಪಾಲಿಟಿ ರಸ್ತೆಗಳಲ್ಲಿ ಕೆಲವು ಮಳೆಯ ದೆಸೆಯಿಂದ ತುಂಬಾ ರೊಚ್ಚಿದ್ದು ಸಂಚರಿಸುವದೇ ಅಸಾಧ್ಯವಾಗಿದೆ. ಮತ್ತು ಈ ಊರಿನ ಪ್ರಜೆಗಳಿಗೆ ಪಾನಕ್ಕೆ ಮುಖ್ಯಾಧಾರವಾಗಿರುವ ವಿಷ್ಣುಸಮುದ್ರಕ್ಕೆ ಟವನ್ ಕೆಲವು ಭಾಗದ ಗ್ರಾಮಸಾರವೆಲ್ಲಾ ಮಳೆಯ ನೀರೊಡನೆ ಕಟಿಹ ಪ್ರವಾಹದಂತೆ ಹೋಗಿ ಸೇರಿ ನೀರನ್ನೆಲ್ಲಾ ಕೊಳಕು ಮಾಡುತ್ತಾ ಇದ್ದರೂ ಇದು ಇನ್ನೂ ನಮ್ಮ ವೈಸ್ ಪ್ರೆಸಿಡೆಂಟರವರ ಅವಗಾಹನೆಗೆ ಬಂದಂತೆ ಕಾಣುವುದಿಲ್ಲ. ಯತ್ನವಿಲ್ಲದೆ ಈ ಕೊಳಕು ನೀರನ್ನೇ ಪ್ರಜೆಗಳು ಬಳಸಬೇಕಾಗಿರುತ್ತೆ. ಈ ದೆಸೆಯಿಂದ ಪ್ರಜೆಗಳು ಎಷ್ಟರ ಮಟ್ಟಿನ ಆರೋಗ್ಯ ದೃಢಕಾಯರಾಗಿರುತ್ತಾರೆಂದು ಹೇಳಲಾರೆ. ಇದೂ ಅಲ್ಲದೆ ಕೆಲವು ಹೈ ರೋಡುಗಳ ಅಕ್ಕಪಕ್ಕಗಳ ಚರಂಡಿಗಳಲ್ಲಿ ಅನೇಕ ಗಿಡಗೆಂಡೆಗಳು ಬೆಳೆದು ಮುಚ್ಚಿದ್ದರೂ ಅವು ಹಾಗೇ ಅಭಿವೃದ್ಧಿಯಾಗುತ್ತಾ ಇವೆಯೋ ಹೊರತು ಅವುಗಳನ್ನು ನಿರ್ಮೂಲಮಾಡಲು ಗಮನ ಕೊಟ್ಟಿರುವಂತೆ ತೋರುವುದಿಲ್ಲ. ಇಷ್ಟಕ್ಕೂ ಮೂಲಕಾರಣವನ್ನು ಯೋಚಿಸಿದರೆ ವೈಸ್ ಪ್ರೆಸಿಡೆಂಟರವರಿಗೆ ಇತರ ಅನೇಕ ಕಾರ್ಯಗೌರವಗಳ ದೆಸೆಯಿಂದ ಈ ಟವನ್ ಪಾಕೀಜಾ ವಿಷಯದಲ್ಲಿ ಆಗಾಗ್ಗೆ ಟವನ್ನಲ್ಲಿ ಸಂಚರಿಸಿ ಇನ್ಸ್‌ಪೆಕ್ಷನ್ ಮಾಡಲು ಅವಕಾಶವಿಲ್ಲದಿರುವಿಕೆಯೇ ಮುಖ್ಯ ಕಾರಣವೆಂದು ಯೋಚಿಸಬೇಕಾಗಿದೆ. ಇದಕ್ಕೆ ಬದಲಾಗಿ ಅನೇಕ ಕಡೆಗಳಲ್ಲಿ ನಡೆದು ಬರುವಂತೆ ಈ ಕಾರ್ಯಭಾರವನ್ನು ಮೆಂಬರುಗಳಿಗೇ ಪೂರ್ಣವಾಗಿ ವಹಿಸಿಕೊಟ್ಟು ಸಮಯ ದೊರೆತಾಗ ಇನ್ಸ್‌ಪೆಕ್ಷನ್ ಮಾಡುತ್ತಿದ್ದರೆ ಈ ಕಾರ್ಯಗಳು ಪಿಚಕ್ಷಣೆಯಾಗಿ ನಡೆದು ತನ್ಮೂಲಕ ಆರೋಗ್ಯಕರವಾದ ಪ್ರಜೋಪಯುಕ್ತ ಕಾರ್ಯಗಳೂ ನಡೆಯುವುದರಲ್ಲಿ ಸಂದೇಹವಿಲ್ಲ.—ನಮ್ಮ ಸರ್ಕಾರದವರು ಕೀಳು ಜಾತಿಯವರ ಶ್ರೇಯೋಭಿವೃದ್ಧಿಯನ್ನು ಬಯಸಿ ಈ ಊರಿಗೆ ಹೊಸದಾಗಿ ಪಂಚಮ ಸ್ಕೂಲನ್ನು ಸ್ಯಾಂಕ್ಷನ್ ಮಾಡಿದ್ದುದು ಈ ಮಾಹೆ ತಾ. 8 ನೇ ಗುರುವಾರ ಇದರ ಪ್ರಾರಂಭೋತ್ಸವಕ್ಕೆ ಪೇಟೆ ಕನ್ನಡ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಯ. ನಾರಾಯಣರಾಯರು ಮುಂದಾಳಾಗಿ ನಿಂತು ಈ ಸ್ಥಳದ ಪ್ರಮುಖ ದೊಡ್ಡ ಮನುಷ್ಯರನ್ನೂ, ಸರ್ಕಾರಿ ಆಫೀಸರುಗಳನ್ನೂ ಬರಮಾಡಿಕೊಂಡು ದೊಡ್ಡ ಹೊಲಗೇರಿಯಲ್ಲಿ ಸ್ಕೂಲನ್ನು ಸ್ಥಾಪಿಸಿದರು. ಅನಂತರ ಕೀಳುಜಾತಿಯವರ ಅಭಿವೃದ್ಧಿ ವಿಷಯವನ್ನು ಕುರಿತು ಇಲ್ಲಿನ ನೇಟಿವ್ ವೈದ್ಯರೂ ಮ್ಯುನಿಸಿಪಲ್ ಮೆಂಬರೂ ಆದ ಮ|| ಆರ್. ಸುಬ್ಬಪ್ಪನವರು ಉಪನ್ಯಾಸ ಮಾಡಿದ ಮೇಲೆ ಆ ದಿವಸ ಸೇರಿದ್ದ ಪಂಚಮರ ಬಾಲಕ ಬಾಲಕಿಯರಿಗೆಲ್ಲಾ ಸಂತೋಷಾರ್ಥವಾಗಿ ತಿಂಡಿಯು ಹಂಚಲ್ಪಟ್ಟಿತು. ಆ ದಿವಸ ಸ್ಕೂಲ್ ಕಾರ್ಯಕ್ಕೆ ಪ್ರಾರಂಭವಾಯಿತು. ಈ ರೀತಿ ಕೀಳು ಜಾತಿಯವರ ಶ್ರೇಯೋಭಿವೃದ್ಧಿಗೆ ಪ್ರೋತ್ಸಾಹ ಕೊಡುತ್ತಿರುವದು ಸ್ತೋತ್ರಾರ್ಹವಾಗಿದೆ.—ಈಗ ಸುಮಾರು ಒಂದು ತಿಂಗಳಿಂದಲೂ ಈ ಊರು ಪೋಸ್ಟ್ ಆಫೀಸಿಗೆ ಹಾಸನದಿಂದ ಬರತಕ್ಕ ಮೇಲ್ ಅಂಚೆಯು ಸಾಯಂಕಾಲ 6 ಘಂಟೆಗೆ ಬರತಕ್ಕದ್ದು ರಾತ್ರಿ 8 ಘಂಟೆಗೆ ಬರುತ್ತಾ ಇರುವುದೂ ಪ್ರತಿ ದಿವಸ ಪೂರ್ವಾ ಬೊಂಬೈ, ಬೆಂಗಳೂರುಗಳ ಮೇಯಿಲ್ ಸಹ ಬಾರದೆ ಇವು ಎರಡು ದಿವಸಕ್ಕೊಮ್ಮೆ ಬರುತ್ತಾ ತುಂಬಾ ಅಕ್ರಮಾವಸ್ಥೆಯಲ್ಲಿರುವುದರಿಂದ ಅನೇಕ ಅಗತ್ಯಕಾರ್ಯಗಳಿಗೆ ತುಂಬಾ ತೊಂದರೆಯಾಗಿದೆ. ಈ ಅಕ್ರಮಕ್ಕೆ ಕಾರಣ ವಿಚಾರಮಾಡಿದ್ದರಲ್ಲಿ ಹಾಸನಕ್ಕೆ ಅರಸೀಕೆರೆಯಿಂದ ಬರತಕ್ಕ ಮೇಯಿಲ್ ಸರಿಯಾದ ಕಾಲಕ್ಕೆ ಬರುವುದಿಲ್ಲವೆಂತ ತಿಳಿದು ಬಂದಿರುತ್ತೆ. ಆದ್ದರಿಂದ ಇದನ್ನು ಪೋಸ್ಟಲ್ ಡಿಪಾರ್ಟ್‌ಮೆಂಟಿನವರು ಮುಖ್ಯವಾಗಿ ತಮ್ಮ ಗಮನಕ್ಕೆ ತಂದುಕೊಂಡು ಈ ಅಕ್ರಮವನ್ನು ತಪ್ಪಿಸಿಕೊಡುತ್ತಾರೆಂದು ಕೋರುತ್ತೇನೆ.

ಒಳದೇಶದ ವೃತ್ತಾಂತಗಳು.

ಕಾಲವಿಾರಿ ತಲಪಿದ ಕೆಲವು ಬಾತ್ಮಿಗಳನ್ನು ಈ ವಾರ ಪ್ರಕಟಿಸಲು ಸ್ಥಳ ಸಂಕೋಚವಾಯಿತೆಂದು ತಿಳಿಸಲು ವಿಷಾದಿಸುತ್ತೇವೆ.

ಬೆಂಗಳೂರಿನಲ್ಲಿ ಷೇಕ್ ಮಹದೀನ್ ಎಂಬುವವನು ಒಂದಾಣೆ ಬಾಬತು ನಿಕ್ಕಲ್ ನಾಣ್ಯಗಳನ್ನು ತಯಾರುಮಾಡುತ್ತಾನೆಂಬ ಮೊಕದ್ದಮೆ ಹುಟ್ಟಿ ವಿಚಾರಣೆಯಾಗುತ್ತಿದೆ.

ಶ್ರೀಮನ್ ಮಹಾರಾಜರವರು ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯಿಂದ ಮೋಟರಿನಲ್ಲಿ ಬೆಂಗಳೂರಿಗೆ ದಯಮಾಡಿದ್ದು ಮಾರನೇ ಸಾಯಂಕಾಲವೇ ವಾಪಸು ಚಿತ್ತೈಸಿದರು.

ಮೈಸೂರು ಮಹಾರಾಣೀ ಕಾಲೇಜಿನಲ್ಲಿ ಉಪಾಧ್ಯಾಯಿನಿಯಾಗಿರುವ ಸೌ|| ಶ್ರೀರಂಗಮ್ಮ, ಬಿ. ಎ. ಯವರನ್ನು ಬೆಂಗಳೂರು ಬಾಲಿಕಾ ಪಾಠಶಾಲೆಯ ಸೂಪರಿಂಟೆಂಡೆಂಟರಾಗಿ ನೇಮಕಮಾಡಿದಾರೆ.

ನಮ್ಮ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ತಾ. 17ನೇ ಶನಿವಾರ ಸಾಯಂಕಾಲ ರಾಜಧಾನಿಯಿಂದ ಮೋಟರಿನಲ್ಲಿ ಮೇಲುಕೋಟೆಗೆ ಚಿತ್ತೈಸಿ ಭಾನುವಾರ ದೇವರ ಸೇವೆ ಮುಂತಾದವನ್ನು ತೀರಿಸಿಕೊಂಡು ಸಾಯಂಕಾಲ ಅಲ್ಲಿಂದ ವಾಪಸು ರಾಜಧಾನಿಗೆ ದಯಮಾಡುವರು.

ಅರಮನೆಯ ಬಾಡಿ ಸಿಪಾಯಿಗಳಲ್ಲಿ ಸುಮಾರು 50 ವರುಷಗಳ ಸರ್ವಿಸ್ ಮಾಡಿ ಈಗ ತಾನೇ ಕೆಲಸದಿಂದ ನಿವೃತ್ತಿಹೊಂದಿದ ಮೇಜರ್ ಮೋಹನ್ ಲಾಲ್ ರವರಿಗೆ ಕಳೆದ ಭಾನುವಾರ ಆ ಇಲಾಖೆಯವರು ಸೇರಿ ಔತಣೋತ್ಸವವನ್ನು ನಡಿಸಿ ಅವರ ಗುಣಕಥನವನ್ನು ಮಾಡಿ ಅವರಲ್ಲಿ ತಮಗಿದ್ದ ಪ್ರೀತಿಯನ್ನು ಪ್ರಕಾಶಪಡಿಸಿದರು. ಕಡೆಯಲ್ಲಿ ಅವರನ್ನು ಉತ್ಸವಪೂರ್ವಕವಾಗಿ ಕಚೇರಿಯಿಂದ ಮನೆಗೆ ಕರೆದುಕೊಂಡುಹೋಗಿ ಬಿಟ್ಟರು. ಇಂಥಾ ಕೂಟಗಳಿಂದ ಅನ್ಯೋನ್ಯ ಪ್ರೀತಿ ಗೌರವಗಳು ಹುಟ್ಟಿ ಹಬ್ಬಲು ಸಂದೇಹವಿಲ್ಲ.

ಬನಾರಸ್ (ಕಾಶಿ) ನಲ್ಲಿರುವ ಮ|| ಎಸ್. ಯು. ಎನ್. ಕಂಪನಿಯವರು ಈ ವರುಷ ಲಗ್ನ ಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ಬೂಟಾ ಸೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು, ಪಮೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ ದುರುಪ್ಪಾಕ್ಷಿ ಸೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ಅವರು ಅವನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆಂದೂ, ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದೆಂದೂ ತಿಳಿಸುತ್ತಾರೆ.

ಮೈಸೂರು ಬ್ಯಾಂಕು ಪ್ರಕಟಿಸಿರುವುದೇನೆಂದರೆ:—ಈ ಬ್ಯಾಂಕಿನ ಲೇವಾದೇವಿಯಿಂದ ಕಳೆದ ಜೂನ್ 30 ಕ್ಕೆ ಆಖೈರಾದ ಛಮಾಹಿಯಲ್ಲಿ ಖರ್ಚು ಕಳೆದು ರೂ. 65,255-4-4 ಮ್ಮ ಲಾಭ ಅಂದರೆ ಬ್ಯಾಂಕಿಗೆ ವಸೂಲಾಗಿರುವ ಮೂಲಧನದ ಮೇಲೆ ಶೇಕಡಾ 13 ರೂಪಾಯಿನಂತೆ ಬಡ್ಡಿ ಹುಟ್ಟುವಳಿ ಆಗಿದೆ. ಕಳೆದ ವರುಷ ಅದೇ ಛಮಾಹಿಗೆ 31,000 ರೂಪಾಯಿಯೂ, ಡಿಸೆಂಬರಿಗೆ ಆಖೈರಾದ ಛಮಾಹಿಯಲ್ಲಿ 45,000 ರೂಪಾಯಿಯೂ ನಿವ್ವಳ ಹುಟ್ಟುವಳಿ ಆಗಿತ್ತು. ಇದರಿಂದ ಈ ಬ್ಯಾಂಕಿನ ಪ್ರಯೋಜನವು ದಿನಕ್ರಮೇಣ ಹರಡುತ್ತಾ ವೃದ್ಧಿಯಾಗುತ್ತಿದೆ ಎಂದು ವೇದ್ಯವಾಗುತ್ತದೆ.

ಹುಣಸೂರಿನ ಒಬ್ಬ ಬಾತ್ಮಿದಾರರು ಬರೆಯುವುದು:—ಈ ಊರಿನಲ್ಲಿರುವ ಅ. ಇಂಜನಿಯರ್ ಮ|| ಬಿ. ಗರುಡಾಚಾರ್ಯರವರ ಉದಾರಗುಣವು ಬಹಳ ಸ್ತೋತ್ರಾರ್ಹವಾಗಿದೆ. ಇವರು ಅನೇಕ ಧರ್ಮದ ಮದುವೆಗಳನ್ನು ಮಾಡಿಸಿರುತ್ತಾರೆ. ತಮ್ಮ ಕೈಕೆಳಗಿನ ನೌಕರರನ್ನೂ, ಕಂಟ್ರಾಕ್ಟುದಾರರುಗಳನ್ನೂ, ಆಳುಕಾಳುಗಳನ್ನೂ ಬಹು ಪ್ರೀತಿಯಿಂದ ಕಾಪಾಡುತ್ತಾ, ಕಂಟ್ರಾಕ್ಟುದಾರರಿಗೆ ಯಾವ ತೊಂದರೆಯೂ ಕೊಡದೆ ಸಕಾಲಗಳಲ್ಲಿ ಬಿಲ್ ವಗೈರೆ ಸ್ಯಾಂಕ್ಷನ್ ಮಾಡಿಸಿ ಬಡವರಾದ ಅನೇಕ ಕಂಟ್ರಾಕ್ಟುದಾರರನ್ನು ಕಾಪಾಡಿಕೊಂಡು ಬರುತ್ತಾರೆ. ಇಂಥಾ ಮಹನೀಯರು ಇಲ್ಲಿರುವದರಿಂದ ಸರಕಾರಕ್ಕೆ ಫಾಯಿದೆಯೂ, ಬಡ ಕಾಮದಾರರುಗಳಿಗೆ ಸೌಖ್ಯವೂ ಉಂಟಾಗಿರುತ್ತದೆ.

ಮೈಸೂರು ಸೇಂಟ್ ಜಾನ್ ಆಂಬುಲೆನ್ಸ್ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಯುದ್ಧದ ರಿಲೀಫ್ ಫಂಡಿಗೆ ವಸೂಲಾಗಿರುವ 13 ನೇ ಚಂದಾ ಪಟ್ಟಿಯನ್ನು ನಮಗೆ ಕಳುಹಿಸಿದಾರೆ. ಈ ಚಂದಾ ವಿವರವೇನೆಂದರೆ:—ಮೈಸೂರು ಸೀಮೆಯ ಪೊಲೀಸ್ ಇಲಾಖೆಯ ಹುದ್ದೇದಾರರೂ ಇತರರೂ ತಾವಾಗಿಯೇ ಕೊಟ್ಟಿರುವುದು, ಇನ್ಸ್‌ಪೆಕ್ಟರ್ ಜನರಲ್‌ರವರ ಮೂಲಕ ರೂ. 1,000; ಚಿಕ್ಕನಾಯಕನಹಳ್ಳಿ ಪ್ರಜೆಗಳು ರೂ. 34-14-0; ಮಿಸೆಸ್ ವೆಂಗ್ರಾನ್, ಮೈಸೂರು ರೂ. 30; ಹರಿಹರ ಸಬ್ ತಾಲ್ಲೂಕು ಉಕ್ಕಡಗಾತ್ರಿ ಗ್ರಾಮಸ್ಥರು ರೂ. 20-1-0; ಮಿಸೆಸ್ ಥಾಮ್ಸನ್ ಮತ್ತು ಮಿಸೆಸ್ ಸ್ಪೆನ್ಸರ್, ಮೈಸೂರು ರೂ. 16, ಎನ್. ಎನ್., ಜಾಗಿ ಮತ್ತು ಜಾಲ್ಲಿ ಚಂದಾ ರೂ. 30. ಜುಮಲಾ ರೂ. 1,130-15-0, ಹಿಂದೆ ವಸೂಲಾಗಿರುವ ಹಣ ರೂ. 8,800-15-6. ಅಂತು ಇದುವರೆಗೆ ಈ ಫಂಡಿಗೆ ವಸೂಲಾಗಿರುವ ಒಟ್ಟು ಮೊಬಲಗು ರೂ. 9,930-14-6.

ಕೃಷ್ಣರಾಜಪೇಟೆಯ ವರ್ತಮಾನದಿಂದ ಕಳೆದ 11 ನೇ ತಾ. ರಾತ್ರಿ ಸೆಂಟ್ರಲ್ ರೈಲ್ವೆ ಸ್ಟೇಷನ್ ಕಡೆಯಿಂದ ಕೃಷ್ಣರಾಜಪೇಟೆ ಮಾರ್ಗವಾಗಿ ಪ್ರಯಾಣಮಾಡುತ್ತಿದ್ದ ಕೃಷ್ಣರಾಜಪೇಟೆಯ ಎಚ್. ಕೃಷ್ಣರಾವ್‌ಗಳು ಮತ್ತು ಅವರ ಜೊತೆಯಲ್ಲಿದ್ದ 3-4 ಗಾಡಿ ಜನಗಳನ್ನು ಹೊಳೆ ನರಸೀಪುರ ಸ್ಟೇಷನ್ ಪಕ್ಕದ ಸ್ಟೋರ್ ರೋಡಿನಲ್ಲಿ ಸುಮಾರು 20-25 ಮಂದಿ ದರೋಡೆ ಗುಂಪಿನವರು ಅಡ್ಡಕಟ್ಟಿ ಹೊಡೆದು ಗಾಡಿಗಳ ಒಡವೆಗಳನ್ನೆಲ್ಲಾ ದೋಚಿಕೊಂಡರು. ಕೃಷ್ಣರಾವ್‌ಗಳಿಗೂ, ಇನ್ನೂ 3-4 ಮಂದಿಗೂ ಬಲವಾದ ಗಾಯಗಳಾಗಿವೆ. ಸಮೀಪದಲ್ಲಿ ಪೊಲೀಸ್ ಸ್ಟೇಷನ್ ಇದ್ದರೂ ಇಂಥಾ ಘೋರವಾದ ವ್ಯಾಪಾರವು ನಡೆದಿರುವುದನ್ನು ನೋಡಿದರೆ ಆಶ್ಚರ್ಯವೂ, ವ್ಯಸನವೂ ಪಡಬೇಕಾಗಿದೆ. ಪ್ರಜಾರಕ್ಷಣೆ ಪ್ರಧಾನವಾದ ಮಹಾಕೃಷ್ಣರಾಜ್ಯದಲ್ಲಿ ಈ ಕಟಿನ ಸಂಭವವಾಯಿತೆಂದು ವಿಷಾದಪಡುತ್ತಾ, ಅವರು ಬೇಗನೆ ಆರೋಗ್ಯಹೊಂದಲೆಂದು ಹಾರೈಸುತ್ತೇವೆ. ಮೇಲ್ಕಂಡ ಸಂಭವದಲ್ಲಿ ಅಪರಾಧಿಗಳು ಅನೇಕರು ಸಿಕ್ಕಿದ್ದಾರೆಂದು ತಿಳಿದೂ ಪೊಲೀಸಿನ ಸ್ವಾಧೀನದಲ್ಲಿ ಬಲವಾದ ವಿಚಾರಣೆಗೆ ಅಧಿಕಾರಿಗಳು ಪಡಿಸಿಟ್ಟು ಆರಂಭಿಸುವರೆಂದು ನಂಬಿಕೆ ಸಲ್ಲುತ್ತದೆ.

ಗೋರಿಬಿದನೂರು ತಾಲ್ಲೂಕು ಉಪಾಧ್ಯಾಯರ ಸಂಘ.

ಈ ಸಂಘವು ತಾ 27ರಲ್ಲಿ ಈ ತಾಲ್ಲೂಕು ಹೊಸೂರಲ್ಲಿ ಸೇರಿತ್ತು. ಬಂದಿದ್ದ ಉಪಾಧ್ಯಾಯರುಗಳಿಗೆಲ್ಲಾ ಊಟ ಉಪಚಾರಗಳಿಗೆ ತಕ್ಕ ಏರ್ಪಾಟು ಶ್ಲಾಘ್ಯವಾದ ರೀತಿಯಲ್ಲಿ ಇಲ್ಲಿನ ಗ್ರಾಮಸ್ಥರಿಂದ ನಡಿಸಲ್ಪಟ್ಟಿತು. 11 ಗಂಟೆಗೆ ಭೋಜನವೂ ಗಂಧ ಪುಷ್ಪ ತಾಂಬೂಲಗಳೂ ಆದ ಅನಂತರ ಗೌ|| ಬಾಯ್ಸ್ ಸ್ಕೂಲಿನಲ್ಲಿ ಎಲ್ಲರೂ ಸೇರಿದರು. ಸಂಘದ ಪಟ್ಟಿಯ ಪ್ರಕಾರ ದೇವರ ಪ್ರಾರ್ಥನೆ ಮೊದಲಾದುವು ನೆರವೇರಿದ ನಂತರ ಸಭಿಕರ ಪ್ರಾರ್ಥನೆಯಂತೆ ಗೋರಿಬಿದನೂರು ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಎಂ. ವೆಂಕಟನರಸಯ್ಯನವರು ಅಗ್ರಾಸನವನ್ನು ಅಲಂಕರಿಸಿದರು. ಮಕ್ಕಳಿಗೆ ಅಕ್ಷರಗಳನ್ನು ಕಲಿಸುವ ಪಾಠಪ್ರದರ್ಶನಕ್ಕೆ ಒಪ್ಪಿಕೊಂಡಿದ್ದ ಅ|| ಇನ್ಸ್‌ಪೆಕ್ಟರ್ ಮ|| ಆರ್. ಅಪ್ಪುರಯ್ಯಂಗಾರ್ಯರವರು ಯಾವ ಕಾರಣದಿಂದಲೋ ದಯಮಾಡಿಸಿರಲಿಲ್ಲ. ಇನ್ನು ಕೆಲವು ಉಪನ್ಯಾಸಗಳಿಗೂ ಪಾಠಪ್ರದರ್ಶನಗಳಿಗೂ ನಿಯುಕ್ತರಾಗಿದ್ದ ಉಪಾಧ್ಯಾಯರುಗಳೂ ಬಂದಿರಲಿಲ್ಲ. ಸಭಾ ಪ್ರೆಸಿಡೆಂಟರ ಅಪ್ಪಣೆಯಂತೆ ಕುರುಡಿ ಸ್ಕೂಲ್ ಮಾಸ್ಟರ್ ಮ|| ಬಿ. ಪದ್ಮನಾಭಯ್ಯನವರು ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಉಪನ್ಯಾಸ ಮಾಡಿದರು. ಆ ಮೇಲೆ ಹೊಸೂರು ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರಾದ ಮ|| ಜಿ. ಸಿದ್ದಪ್ಪನವರು ಕಾರ್ಡ್ ಬೋರ್ಡಿನ ಕೆಲಸದ ವಿಷಯದಲ್ಲಿ ಒಂದು ಉಪನ್ಯಾಸ ಮಾಡಿ ಅನಂತರ 5ನೇ ತರಗತಿಯ ಬಾಲಕರಿಂದ ರಟ್ಟಿನ ಕೆಲಸದ ಕೆಲವು ಮಾದರಿಗಳನ್ನು ಮಾಡಿ ತೋರಿಸಿದರು. ಅನಂತರ ಸಂಘದ ಅಭಿವೃದ್ಧಿಯ ವಿಷಯದಲ್ಲಿ ಸಭಾ ಪ್ರೆಸಿಡೆಂಟರು ಹಲವು ವಿಷಯಗಳನ್ನು ಸೂಚಿಸಿ, ಮುಂದಣ ಮೀಟಿಂಗಿನಲ್ಲಿ ನಡೆಯಬೇಕಾದ ಕಾರ್ಯಗಳನ್ನು ಚರ್ಚಿಸಿ ತೀರ್ಮಾನ ಮಾಡಿದರು. ಹೀಗೆ ಅಂದಿನ ಸಭೆಯು ಸಾಯಂಕಾಲ 6 ಗಂಟೆಗೆ ಮುಕ್ತಾಯವಾಯಿತು. ಅಷ್ಟು ಹೊತ್ತಿಗೆ ಇಲ್ಲಿನ ಶೇಕ್ದಾರ್ ಮ|| ಸಿ. ರಾಘವೇಂದ್ರರಾಯರ ಮನೆಯಲ್ಲಿ ಅಲ್ಪಾಹಾರದ ಏರ್ಪಾಟು ನಡೆದಿತ್ತು. ಎಲ್ಲರೂ ಅಲ್ಲಿಗೆ ದಯಮಾಡಿ ಕಾಫಿ ಟಿಫನ್ ಸ್ವೀಕರಿಸಿ, ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಮಾಡಿದರು.

ಎಚ್. ಶೇಷಗಿರಿರಾವ್, ಹೊಸೂರು.

ತಾಲ್ಲೂಕು ವರ್ತಮಾನಗಳು.

ಹುಣಸೂರು ತಾ|| ಹುಲ್ಲಹಳ್ಳಿಗ್ರಾಮ.—ಈ ಗ್ರಾಮದಲ್ಲಿ 3-4 ತಿಂಗಳಿಂದಲೂ ಸರಕಾರದಿಂದ ಕೊಟ್ಟಿರುವ ಸ್ಕೂಲು ಸ್ಥಾಪಿತವಾಗಿ ಹುಡುಗರು ಅಭಿವೃದ್ಧಿಹೊಂದುತ್ತಿರುವುದು ನಮಗೆ ಬಹಳ ಸಂತೋಷಕರವಾಗಿದೆ. ಇದನ್ನು ದಯಪಾಲಿಸಿದ ನಮ್ಮ ಸರಕಾರದವರನ್ನು ಎಷ್ಟು ಕೊಂಡಾಡಿದರೂ ತೀರದು.—ಈಗ 20 ದಿವಸಗಳಿಂದಲೂ ಇಲ್ಲಿ ಪ್ಲೇಗು ಗಲಾಟೆಯಿಂದ ಊರುಬಿಟ್ಟು ಷೆಡ್ಡಿಗೆ ಹೋಗಿರುತ್ತಾರೆ. ಇದರಲ್ಲೂ ಷೆಡ್ಡಿನಲ್ಲೇ ಈ ಮಾಸ್ತರು ಗುಂಡಪ್ಪನೆಂಬುವರು ತುಂಬಾ ಮುತುವರ್ಜಿ ವಹಿಸಿ ಕೆಲಸಮಾಡುತ್ತಿದಾರೆ.

ಹೆಗ್ಗಡದೇವನಕೋಟೆ.—ಇಲ್ಲಿ ಸುಮಾರು ನಾಲ್ಕೈದು ದಿನಗಳಿಂದ ಮಳೆ ನಿಂತು ಬಿಸಿಲು ಕಾಯುತ್ತಿರುವುದರಿಂದ ವ್ಯವಸಾಯ ಕೆಲಸಮಾಡಲು ಅನುಕೂಲವಾಗಿರುತ್ತದೆ. ಈ ವರುಷದಷ್ಟು ಒಳ್ಳೆಯ ಪೈರು ಸುಮಾರು 4-5 ವರುಷಗಳಿಂದ ಆಗಿರಲಿಲ್ಲ ಎಂಬದಾಗಿ ರೈತರು ತುಂಬಾ ಸಂತೋಷಪಡುತ್ತಾರೆ.—ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಇಲಿಗಳು ಸಾಯುತ್ತಿರುವದಾಗಿಯೂ, ಆಗಲೇ ಕೆಲವು ಪ್ಲೇಗುಮರಣಗಳು ಆಗಿರುವವೆಂತಲೂ ವರ್ತಮಾನವಾಗಿದೆ. ಇದು ಮಲೆನಾಡು ಪ್ರಾಂತ್ಯವಾಗಿರುವದರಿಂದ ಊರನ್ನೆಲ್ಲಾ ಕಾಡುಗಿಡಗಳು ಆವರಿಸಿಕೊಂಡಿವೆ. ಆಗಲೇ ಊರಿನಲ್ಲಿ ಮಲೇರಿಯಾ ಜ್ವರವು ಪ್ರಾರಂಭವಾಗಿ ಜನರು ಆಸ್ಪತ್ರೆಗೆ ಓಡಾಡುತ್ತಲಿರುತ್ತಾರೆ. ಇಲ್ಲಿನ ಡಾಕ್ಟರು ಜನಗಳ ಮೇಲಿಗೋಸ್ಕರವಾಗಿ ಬೆಳಗ್ಗೆ ಮತ್ತು ಸಾಯಂಕಾಲ ಸ್ವಲ್ಪವಾದರೂ ವಿರಾಮವಿಲ್ಲದೆ ಬರತಕ್ಕ ರೋಗಿಗಳನ್ನು ತಕ್ಕ ರೀತಿಯಲ್ಲಿ ಉಪಚರಿಸುವದನ್ನು ನೋಡಿ ಸಂತೋಷಪಡಬೇಕಾಗಿರುತ್ತದೆ.

ಕಳಸ.—ಕಳಸದ ಮಾವಿನಕೆರೆ ಗ್ರಾಮದ ಶ್ರೀ ವೀರನಾರಾಯಣಸ್ವಾಮಿ ದೇವಸ್ಥಾನದಲ್ಲಿ ತಾ. 1ರಲ್ಲಿ ಗ್ರಾಮಸಮಾಜದ ಮೆಂಬರುಗಳು ಮತ್ತು ಗ್ರಾಮಸ್ಥರು ಅನೇಕರು ಸೇರಿ ಕಳಸದಲ್ಲಿ ಲೋವರ್ ಸೆಕೆಂಡ್ರಿ ಪ್ಯಾಸಾದ ಉಪೇಂದ್ರ ಕಾಮತಿಯವರನ್ನು ಬಾಲಕಬಾಲಕಿಯರಿಗೆ ವಿದ್ಯಾಭ್ಯಾಸ ಮಾಡಿಸುವ ಉಪಾಧ್ಯಾಯರಾಗಿ ನೇಮಿಸಿ ಆ ಬಗ್ಗೆ ತೀರ್ಮಾನವಾಗಿತ್ತು. ಆ ದಿವಸ ಒಟ್ಟು ಬಾಲಕರ ಸಂಖ್ಯೆ 17 ಹಾಜರಿತ್ತು. ತಾ. 7ರಲ್ಲಿ ವಿಲೇಜ್ ಮುನ್ಸಿಫ್ ಕೋರ್ಟಿಗೆ ಗ್ರಾಮಸಮಾಜದ ಮೆಂಬರುಗಳು ಹಾಜರಾಗಿ ಮೀಟಿಂಗ್ ನಡೆಯಿತು. ಪುನಹ ಸ್ಕೂಲ್ ವಿಚಾರದಲ್ಲಿ ತಾ. 8ರಲ್ಲಿ ಮೆಂಬರುಗಳು ಮತ್ತು ರೈತರು ಸೇರಿ ಸ್ಕೂಲನ್ನು ಇನ್ಸ್‌ಪೆಕ್ಷನ್ ಮಾಡಿದ್ದರಲ್ಲಿ 18 ಮಂದಿ ಬಾಲಕಬಾಲಕಿಯರ ಸಂಖ್ಯೆ ಇತ್ತು. ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಬಹುದಾಗಿಯೂ ಇಂಥಾ ಹಳ್ಳಿ ಪಟ್ಟಣಕ್ಕೆ ಬಾಲಕರು ವಿದ್ಯಾಹೀನರಾಗಿ ಪಶುವಿಗೆ ಸಮಾನರಾಗತಕ್ಕದ್ದನ್ನು ಘನಸರಕಾರದವರು ದಯಾರಸ ಭರಿತರಾಗಿ ಪ್ರಜಾಪಾಲನೆ ಮಾಡುವ ವಿಶ್ವಾಸವಿಟ್ಟು ನಮ್ಮಗಳ ಬಾಲಕರುಗಳನ್ನು ವಿದ್ಯೆ ಕಲಿಯುವದಕ್ಕೆ ತುಂಬಾ ಅನುಕೂಲವಾದ ಸ್ಕೂಲ್ ಇಟ್ಟುಕೊಟ್ಟ ಬಗ್ಗೆ ಶ್ರೀ ಭಗವಂತನು ನಿರಂತರವಾದ ಸುಖವನ್ನು ಅನುಗ್ರಹಿಸಲೆಂದು ಭಕ್ತಿ ಪೂರ್ವಕವಾಗಿ ಬೇಡಿ ದೇವಸ್ಥಾನದಲ್ಲಿ ಕೂಡಿದ ಜನರು ಮಂಗಳ ವಾದ್ಯಗಳನ್ನು ಮಾಡಿ ಮಂಗಳಾರತಿ ಆದನಂತರ ಪ್ರಸಾದ ವಿಂಗಡಿಸಲಾಯಿತು. ಬಾಲಕರ ತಂದೆ ವಗೈರೆ ಪೋಷಕರು ವಿದ್ಯಾರ್ಥಿಗಳನ್ನು ಸಂತೋಷದಿಂದ ಸ್ಕೂಲಿಗೆ ಕಳಿಸಿಕೊಟ್ಟರು. ಇಂಥಾ ಕೆಲಸ ಗ್ರಾಮದಲ್ಲಿ ನಡೆದಿರತಕ್ಕ ಬಗ್ಗೆ ಎಲ್ಲಾ ಆಫೀಸರರು ಮತ್ತು ಇನ್ಸ್‌ಪೆಕ್ಟರು ತುಂಬಾ ಸಂತೋಷಪಟ್ಟು ಅಭಿವೃದ್ಧಿಗೊಳಿಸಿಕೊಟ್ಟು ನಮ್ಮನ್ನು ಸಂತೋಷಪಡಿಸಬೇಕೆಂತ ಪ್ರಾರ್ಥಿಸುತ್ತೇವೆ.

ತೀರ್ಥಹಳ್ಳಿ ಟವನ್ ಕುರುವಳ್ಳಿ.—ಇಲ್ಲಿ ನೂತನ ವಿ. ಇ. ಸ್ಕೂಲ್ ಕಟ್ಟಡದ ಪ್ರಾರಂಭೋತ್ಸವವು ನಮ್ಮ ಶ್ರೀಮನ್ ಯುವರಾಜರವರಿಂದ ನೆರವೇರಿಸಲ್ಪಟ್ಟಿರುವುದು ವಿದ್ಯಾಭಿವೃದ್ಧಿಗೆ ಆಕರವಾಗಿದೆ. ಈ ಕಟ್ಟಡದ ಬಗ್ಗೆ ಸರಕಾರದವರು 1,000 ರೂಪಾಯಿ ಗ್ರ್ಯಾಂಟ್ ಸ್ಯಾಂಕ್ಷನ್ ಮಾಡಿದರು. ಗ್ರಾಮಸ್ಥರಿಂದ ಕೆಲವು ಚಂದಾ ಹಣವನ್ನು ಕೂಡಿಸಿ ತಮ್ಮ ಕೈಯಿಂದ ಹೆಚ್ಚಿನ ಹಣವನ್ನು ಖರ್ಚುಮಾಡಿ 3,000 ರೂಪಾಯಿ ಮುಟ್ಟಿಸಿ ಸ್ಕೂಲನ್ನು ಕಟ್ಟಿಸುವುದರಲ್ಲಿ ಮ|| ಆಗುಂಬೆ ರಾಮರಾಯರು ತುಂಬಾ ಸಹಾಸ ಪಟ್ಟಿರುತ್ತಾರೆ. ಕಟ್ಟಡವು ಮನೋಹರವಾಗಿದೆ. ಹಾಲಿ ಈ ಸ್ಕೂಲಿನಲ್ಲಿ 65 ಜನ ಬಾಲಕ ಬಾಲಕಿಯರು ವ್ಯಾಸಂಗ ಮಾಡುತ್ತಾರೆ. ಒಬ್ಬರೇ ಉಪಾಧ್ಯಾಯರು ಈ ಸ್ಕೂಲಿಗೆ ಏರ್ಪಟ್ಟಿರುತ್ತಾರೆ. ಗ್ರಾಮಸ್ಥರು ಕಟ್ಟಡಕ್ಕೆ ಚಂದಾ ಕೊಟ್ಟಿದ್ದಲ್ಲದೆ ಕೆಲವು ಮಾಪು, ಗಡಿಯಾರ, ಫರ್ನಿಚರ್ ವಗೈರೆ ಸಾಮಾನು ಧರ್ಮವಾಗಿ ಕೊಟ್ಟಿರುತ್ತಾರೆ. ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಸವಾರಿ ಇಲ್ಲಿಗೆ ದಯಮಾಡಿಸಿದಾಗ್ಗೆ ಗ್ರಾಮಸ್ಥರು ದೊಡ್ಡ ಅರಿಕೆ ಮಾಡಿಕೊಂಡಿದರಲ್ಲಿ ಸ್ಕೂಲಿಗೆ ಇಂಗ್ಲಿಷ್ ಟೀಚರ್, ಇನ್ನೊಬ್ಬ ಕನ್ನಡ ಉಪಾಧ್ಯಾಯರು ಮತ್ತು ಕಿಂಡರ್‌ಗಾರ್ಟನ್ ಸಾಮಾನು, ಮ್ಯಾಪುಗಳು, ಸ್ಕೂಲ್ ಪುಸ್ತಕಗಳು, ಫರ್ನಿಚರ್ ವಗೈರೆ ಅವಶ್ಯಕವಾಗಿ ಬೇಕೆಂದು ಕೇಳಿಕೊಂಡದ್ದಕ್ಕೆ ಈ ಸ್ಕೂಲಿನ ಘನತೆಗೂ, ಯೋಗ್ಯತೆಗೂ, ಈ ಕಟ್ಟಡದ ಪ್ರಾರಂಭೋತ್ಸವಕ್ಕೂ ಈ ಕೋರಿಕೆಗಳು ಕೇಳುವುದು ಯುಕ್ತವಾಗಿದೆ; ಸ್ಯಾಂಕ್ಷನ್ ಮಾಡುತ್ತೇನೆ ಎಂದು ಅಪ್ಪಣೆ ಕೊಡಿಸಿ ಮೂರು ತಿಂಗಳು ಆದರೂ, ಪುನಃಪುನಃ ಈ ವಿಷಯಗಳನ್ನು ಇಲಾಖಾ ಅಧಿಕಾರಿಗಳಿಗೆ ಅರಿಕೆ ಮಾಡಿಕೊಂಡಾಗ್ಯೂ ಏನೂ ನಡೆಯದೆ ಇರುವುದು ಶೋಚನೀಯವಾಗಿದೆ. ಈ ಸ್ಕೂಲಿನ ಅಭಿವೃದ್ಧಿಗೆ ಈಗಿರುವ ಉಪಾಧ್ಯಾಯರು ಮ|| ಎನ್. ವೆಂಕಟೇಶರಾಯರ ಪ್ರಯತ್ನವೇ ಮುಖ್ಯ ಕಾರಣವಾಗಿದೆ.—ಈ ಕುರುವಳ್ಳಿಯಲ್ಲಿ ಒಂದು ತಿಂಗಳೀಚೆಗೆ ನರಸಿಂಹರಾಜ ರೀಡಿಂಗ್ ರೂಮ್ ಮತ್ತು ಕೋಆಪರೇಟಿವ್ ಸೊಸೈಟಿ ಇವೆರಡೂ ಸ್ಥಾಪನೆಯಾದದ್ದು ಪ್ರಜೆಗಳ ಏಳಿಗೆಗೆ ಅನುಕೂಲವಾಗುತ್ತೆಂತ ನಿರೀಕ್ಷಿಸಲ್ಪಟ್ಟಿದೆ. ಹೀಗೆ ಗ್ರಾಮಾಭಿವೃದ್ಧಿ, ಪ್ರಜಾಸಮೃದ್ಧಿ, ಮುಂತಾದ ಜೀರ್ಣೋದ್ಧಾರಕ್ಕಾಗಿ ಸ್ವಾರ್ಥತೆಯಿಲ್ಲದೆ ಸ್ವಪ್ರಯತ್ನ ಸ್ವಂತ ಹಣ ವೆಚ್ಚ ಇವುಗಳಿಂದ ಪ್ರಯತ್ನ ಮಾಡಿ ಕೆಲಸ ನಡಿಸಿಯೂ, ನಡಿಸುತ್ತಲೂ, ಪ್ರಜೆಗಳಲ್ಲಿಯೂ ಸರಕಾರದಲ್ಲಿಯೂ ವಿಶ್ವಾಸವನ್ನು ಸಂಪಾದಿಸಿಯೂ ಇರುವ ಸಾಹುಕಾರ್ ಮ|| ಆಗುಂಬೆ ರಾಮರಾಯರ ನಿರ್ದುಷ್ಟವಾದ ಉದ್ದೇಶವು ಶ್ಲಾಘನೀಯವಾಗಿದೆ.

ಮೇಲುಕೋಟೆ.—ಈಗ್ಗೆ 16-20 ದಿನಗಳಿಂದ 5-6 ಹದ[illegible] ಆಗಿದೆ. ಕೆರೆಗಳಿಗೆ ನೀರೂ, ಕುಡಿಯುವುದಕ್ಕೆ ನೀರೂ ಸಮೃದ್ಧಿಯಾಗಿದೆ. ಹವಾ ಸ್ವಲ್ಪ ಬದಲಾಯಿಸಿ ಹಿತವೂ ಆರೋಗ್ಯಪ್ರದವಾಗಿಯೂ ಇದೆ. ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳ ಗಮನವು ಬಹಳ ಸ್ತೋತ್ರಾರ್ಹವಾಗಿರುತ್ತೆ.—ಅಂಗಡಿ ಬೀದಿ ಚರಂಡಿಗಳಿಗೆ ಪ್ರತಿ ವರ್ಷವೂ ರೂ. 200 ರಂತೆ ಇದುವರೆವಿಗೆ ಸುಮಾರು 2,000 ರೂ. ವರಿವಿಗೆ ಖರ್ಚು ಮಾಡಿರುತ್ತಾರೆ. ಈ ಚರಂಡಿಗಳು ಸುಮಾರು 100 ಗಜ ಇರಬಹುದು. ಆದರೂ ಕೆಲಸಗಳು ಸಮರ್ಪಕವಾಗಿಲ್ಲ. ಊರ ನೀರೆಲ್ಲಾ ಬರತಕ್ಕ ದೊಡ್ಡ ಚರಂಡಿಯಲ್ಲಿ ಕಟ್ಟಿದರೆ ಎಷ್ಟು ಫಲಕಾರಿಯಾಗುವುದನ್ನು ನೋಡಿದವರೇ ಊಹಿಸಬೇಕು. ನಮ್ಮ ಡೆಪ್ಯುಟಿ ಅಮಲ್ದಾರ್ ಮ|| ಪ ಲ್ಲರಾಜೆ ಅರಸಿನವರು ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುತ್ತಾರೆ. ಮ್ಯುನಿಸಿಪಾಲಿಟಿಯು ಸ್ವಲ್ಪವೂ ಸಮರ್ಪಕವಾಗಿಲ್ಲವೆಂಬುವದು ಇಲ್ಲಿಗೆ ಬರುವ ಯಾತ್ರಿಕರಿಗೆ ಮಂದಟ್ಟಾಗಿರಬಹುದು.—ದೇವರ ದರ್ಶನಾರ್ಥವಾಗಿ ಶ್ರೀಮನ್ಮಹಾರಾಜರವರು ಪರಿವಾರ ಸಮೇತ ಇಲ್ಲಿಗೆ ಮಾಹೆ ತಾ. 17 ಕ್ಕೆ ದಯಮಾಡುತ್ತಾರೆ. ಅದಕ್ಕಾಗಿ ನಮ್ಮ ಡೆಪ್ಯುಟಿ ಕಮಿಷನರವರು ಇಲ್ಲಿಗೆ 7 ನೇ ತಾ ದಯಮಾಡಿಸಿ, ಸ್ಥಳವಿದ್ಯಮಾನಗಳನ್ನು ವಿಚಾರಿಸಿ ತಕ್ಕ ಏರ್ಪಾಡುಗಳನ್ನು ಮಾಡಿಸಿ ತೆರಳಿದರು. ಮರುದಿನ ರಾತ್ರಿ ಅವರು ದೇವರ ಸೇವೆಗೆ ಬಂದಿದ್ದರು. 9 ಮಂದಿ ಸ್ಥಾನಿಕರಿಗೆ ಬದಲಾಗಿ 18 ಮಂದಿಯೂ, 3 ಮಂದಿ ಅಧ್ಯಾಪಕರಿಗೆ ಬದಲಾಗಿ 30 ಮಂದಿಯೂ, ಎಲ್ಲಾ ಧರ್ಮದರ್ಶಿಗಳೂ, ಉಭಯವರ್ಗದವರೂ ಹಾಜರಾಗಿದ್ದರು. ಪ್ರತಿ ದಿವಸವೂ ಈ ರೀತಿ ಯಾಕೆ ಬರಬಾರದೋ ತಿಳಿಯಲಿಲ್ಲ.—ಶ್ರೀಯದುಗಿರಿ ಸದಾನಂದವರ್ಧಿನಿ ಸಭೆಯವರಿಂದ ಈ ಸಲ ದಸರಾ ಪ್ರತಿನಿಧಿ ಸಭೆಗೆ ಶ್ರೀರಂಗಪಟ್ಟಣದ ಮ|| ಎಂ. ಡಿ. ನರಸಿಂಹಾಚಾರ್ಯರು ಮೆಂಬರಾಗಿ ಚುನಾಯಿಸಲ್ಪಟ್ಟರು. ಇವರು ಪರಸ್ಥಳದವರಾದಾಗ್ಯೂ ಈ ಊರಿಗೆ ಬೇಕಾದ ವಿಷಯಗಳನ್ನು ಚರ್ಚಿಸುತ್ತಾರೆಂದೂ, ಅಂತರಂಗವಾಗಿ ಸಬ್‌ಜೆಕ್ಟುಗಳನ್ನು ಕಳುಹಿಸಿದೆ ಪ್ರಜೆಗಳ ಸಮ್ಮತಿ ಕೇಳಿ ನಡಿಸುತ್ತಾರೆಂದೂ ಊಹಿಸಬಹುದಾಗಿದೆ. ಇಲ್ಲಿನ ನೇಯಿಗೆ ಸೊಸೈಟಿಯವರು ಶ್ರೀಮನ್ಮಹಾರಾಜರವರು ದಯಮಾಡಿದ ಕಾಲದಲ್ಲಿ ಮಹಾಸ್ವಾಮಿಯವರಿಗೆ ಸುಖಾಗಮನವನ್ನು ಬಯಸುವದಕ್ಕೆ ಚಪ್ಪರ ವಗೈರೆ ಅಲಂಕಾರಗಳನ್ನು ಮಾಡುವಂತೆ ತಿಳಿದುಬರುತ್ತೆ. ನಮ್ಮ ಶ್ರೀಮನ್ಮಹಾರಾಜರವರು ಶ್ರೀಕೃಷ್ಣರಾಜೇಂದ್ರ ಒಡೆಯರವರು ಬಹದ್ದೂರವರ ಸವಾರಿ ಇಲ್ಲಿಗೆ ದಯಮಾಡಿರುವುದು ಇಲ್ಲಿನ ಪ್ರಜೆಗಳ ಭಾಗ್ಯೋದಯವೆಂದು ನಾವೆಲ್ಲರೂ ಬಹಳ ಸಂತೋಷಪಡುತ್ತಿದಾರೆ.

THE PEOPLE'S BANK, Ltd., TIRTHAHALLI

ದಿ ಪೀಪಲ್ಸ್ ಬ್ಯಾಂಕ್, ಲಿಮಿಟೆಡ್, ತೀರ್ಥಹಳ್ಳಿ.

ನೋಟೀಸ್.

ಪಂಜರ ನಂಬರ.	ಹಿಸ್ಸೆಗಳ ರಿಜಿಸ್ಟರ್ ನಂಬರ.	ಹಿಸ್ಸೆಗಳ ಸಂಖ್ಯೆ
1	4800 ರಿಂದ 4809	10
2	4810 ರಿಂದ 4819	10
3	4820 ರಿಂದ 4829	10
4	4835 ರಿಂದ 4844	10
5	4845 ರಿಂದ 4849	5

ಈ ನಂಬರುಗಳುಳ್ಳ ನಲವತ್ತೈದು ಷೇರುಗಳು ಈ ಬ್ಯಾಂಕಿನ ನಿಬಂಧನೆಗಳ ನಂಬರ 17 ನೇ ಕಲಂ ಅನುಸರಿಸಿ ರದ್ದುಮಾಡಲ್ಪಟ್ಟಿವೆ. [141-]

ತೀರ್ಥಹಳ್ಳಿ, (ಬೋರ್ಡಿನವರ ಅಪ್ಪಣೆ ಪ್ರಕಾರ)

5-7-1915. ಎಂ. ಎಸ್. ಬಸಪ್ಪ,

ಮ್ಯಾನೇಜಿಂಗ್ ಡೈರೆಕ್ಟರ್.

ರಬ್ಬರು ಮುದ್ರೆಗಳು!



ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಜೊತೆಗೆ ತೋಡಿನ ಪೆಟ್ಟಿಗೆ, ಬ್ರಷ್ ಪಾಡ್ ಮತ್ತು ಇಂಕ್ ಬಾಟ್ಲಿ ಸಹ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ತಮಗೆ ಬೇಕಾದವುಗಳನ್ನು ಹುಟ್ಟಿಗಳಿಂದ ಬರೆಯಬೇಕು.

ನಮ್ಮ ವಿಳಾಸ:—ರಾಂಚಾಕ್ ಏಜನ್ಸಿ,

[140-1] ಸಾಹುಕಾರ್‌ಪೇಟೆ, ಮದರಾಸು

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನೆಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದದ್ದಾಗಿದೆ. ಗಡಿಯಾರವನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೇಲಾಗಿ ಬಹಳ ಚನ್ನಾಗಿಯೂ ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ." ಕೆ. ರಾಮಸ್ವಾಮಿ, ಪಲ್ಲಿಕೊಂಡಾ-ಸಿಟಿಯ, 20-3-15.

ಅರ್ಧಬೆಲೆ ಮಾತ್ರ.

ಎರಡನೇ ಸಾರಿ ನಮ್ಮ ಖಾಯಂ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಅದ್ದರಿಂದ ಬೇಗನೆ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗು[illegible] ಆಟದ ಗಡಿಯಾರಗಳನ್ನು ಕೊಂಡು [illegible] ಮೋಸಹೋದವರಿಗೆ ಇದೊಂದು [illegible] ಕ್ರಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ವಾಚು [illegible] ಯಾವತ್ತು ಮಜಬೂತಾಗಿಯೂ ಬಹಳ ಬಾಳಿಕೆ ಬರುವದಾಗಿಯೂ ಇದೆ. [illegible] ವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸ ಇರುವದಿಲ್ಲ. ಮತ್ತು ಕೆಡುವ ಸಂಭವ ಬಹಳ ಕಾಲದ ವರೆಗೆ ಇರುವದಿಲ್ಲ. [illegible] ಸಲ ಕೀ ಕೊಟ್ಟಲ್ಲಿ ಎಂಟು ದಿವಸ[illegible] ಪುನಃ ಕೊಡಬೇಕಾದ ಅವಶ್ಯವಿಲ್ಲ. [illegible] ದಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು [illegible] ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ [illegible] ಆಗಲು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡ್ ಬರೆಯ[illegible]

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-33] ಪಿ. ಓ. ಬಾಕ್ಸ್ 330, ಬೊಂಬಾ[illegible]

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

19-5 ನೇ ಇಸವಿ ಜೂನ್ 24 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ	(1) ಷೇರು ಮೊಬಲಗು	ರೂ. 10,00,000
,,	(2) ರಿಜರ್ವ್ ಫಂಡು	,, 26,000
,,	(3) ಡಿಪಾಜಿಟ್ಟುಗಳು	,, 29,63 363
,,	(4) ಇತರೆ	,, 60,653
	(ಆನೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 40,45,016

ದೇಣೆ:	(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 7,80,836
,,	(2) ಖಾತೆ ಮತ್ತು ಇತರ ಸಾಲಗಳು	,, 23,42 423
,,	(3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,, 4,17,566
,,	(4) ಇನ್ವೆಸ್ಟ್‌ಮೆಂಟುಗಳು	,, 2,79,777
,,	(5) ಏಜೆನ್ಸಿಗಳಲ್ಲಿರುವ ಮೊಬಲಗು	,, 1,87,894
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 16,535
,,	(7) ಇತರೆ	,, 19 984
	(ಆನೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 40,45,016

ಡಬ್ಲಿಯು. ಪಿ. ರೋಸ್, ಮ್ಯಾನೇಜರ್.

ತಾಲ್ಲೂಕು ವರ್ತಮಾನಗಳು.

ಫ್ರೆಂಚ್‌ರಾಕ್ಸ್.—ಸುಮಾರು 3 ವಾರಗಳಿಂದಲೂ ಮೋಡ ಮುಚ್ಚಿಕೊಂಡು ತುಂತುರು ಮಳೆ ಬೀಳುತ್ತಲೇ ಇದೆ. ಹವ ತಂಪಾಗಿದೆ ರೋಗಾದಿಗಳೇನೂ ಇಲ್ಲ ಜೋಳದ ಪೈರು ಚೆನ್ನಾಗಿದೆ.—ನಮ್ಮ ಸರ್ಕಾರದವರು ಈ ಸಬ್ ತಾಲ್ಲೂಕಿನಿಂದ ದೇವರಾ ಪ್ರಜಾಪ್ರತಿನಿಧಿ ಸಭೆಗೆ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸಿಕೊಡುವಂತೆ ಈಗ ಹೊಸ ಹಕ್ಕು ಕೊಟ್ಟಿರುವದು ತುಂಬಾ ಸಂತೋಷಕರವಾಗಿದೆ. ಈ ವಿಷಯಕ್ಕೆ ಹೋಗಲು ಅರ್ಹರಾದವರನ್ನು ಚುನಾಯಿಸುವದೇ ಮುಖ್ಯ. ಸಭೆಯಲ್ಲಿ ಮಾತನಾಡಲು ತಕ್ಕಷ್ಟು ವಿದ್ಯೆ, ತಿಳುವಳಿಕೆ, ಧೈರ್ಯ ಮತ್ತು ಪ್ರಜೆಗಳ ಕಷ್ಟ ಸುಖಗಳನ್ನು ತಿಳಿದು ಮಾತನಾಡುವದಕ್ಕೆ ಯೋಗ್ಯತೆ ಇಲ್ಲದವರನ್ನು ಚುನಾಯಿಸಿ ಕಳುಹಿಸಿಬಿಟ್ಟರೆ ಸರ್ಕಾರದವರ ಘನವಾದ ಉದ್ದೇಶವು ನೆರವೇರದಂತಾಗುವದಿಲ್ಲ. ಆದ್ದರಿಂದ ನಮ್ಮ ಊರಿನ ಮುಖ್ಯ ಪ್ರಜೆಗಳು ದಾಕ್ಷಿಣ್ಯವಿಲ್ಲದೆ ಚುನಾಯಿಸಿದರೆ ಈ ಸಬ್ ತಾಲ್ಲೂಕ್ ಒಳ್ಳೇ ಸ್ಥಿತಿಗೆ ಬರುವದರಲ್ಲಿ ಸಂಶಯವಿಲ್ಲ. ಅಲ್ಲದೆ ಈ ಸಬ್ ತಾಲೂಕಿನಿಂದ ಅಸೆಂಬ್ಲಿ ವಿಷಯಗಿಗೆ ಒಬ್ಬರನ್ನು ಚುನಾಯಿಸುವಂತಾಗಬೇಕೆಂದು ಈ ಊರಿನ ಜನರು ಸರ್ಕಾರ ದವರಿಗೆ ಬರೆದು ಹುಕುಂ ತರಿಸಿಕೊಂಡದ್ದಕ್ಕೆ ಸಾರ್ಥಕವಾಗುವದು.

ಚಿತ್ರದುರ್ಗ.—ಟವರ್ನಲ್ಲಿ ಈಗ್ಗೆ 6 ತಿಂಗಳ ಈಚೆಗೆ ಕೆರೆ, ಭಾವಿಗಳೆಲ್ಲಾ ಬತ್ತಿಹೋಗಿ ನೀರಿನ ವಿಚಾರದಲ್ಲಿ ಜನಗಳು ಅನುಭವಿಸಿದ ತೊಂದರೆ ವರ್ಣಿಸಲು ಸಾಧ್ಯವಿಲ್ಲ. ಸರ್ಕಾರದವರು ಪ್ರಜೆಗಳ ಅನುಕೂಲತೆಗಾಗಿ ಬಹಳ ಶ್ರಮವಹಿಸಿದರು. ಈಚೆಗೆ ಸ್ವಲ್ಪಮಟ್ಟಿಗೆ ಮಳೆ ಆಗಿ ದನಗಳಿಗೆ ಅಲ್ಪಸ್ವಲ್ಪ ಮೇವು, ಮತ್ತು ನೀರಿಗೆ ಅನುಕೂಲವಾಗಿರುತ್ತೆ. ಆದರೆ ಇದುವರೆಗೆ ಕೆರೆಗೆ ಮಾತ್ರ ನೀರು ಬಂದಿಲ್ಲ.—ತಾ. 14 ನೇ ರಾತ್ರಿ ಹೊಸಪೇಟೆಯ ರಾಜೋಟಿಯ್ಯನವರ ಮನೆಯಲ್ಲಿ ಕಳುವಾಗಿರುತ್ತೆ ಪತ್ತೆ ತನಿಖೆ ನಡೆಯುತ್ತಾ ಇದೆ.—ಈ ಟವರ್ಗೆ ಸೇರಿದಕಸ್ಬಾ ಠಾಣೆಯನ್ನು ನಗುಡಿ, ಕರುವಿನಕಟ್ಟೆ, ಗಲ್ಲಿಗಳಲ್ಲಿಯೂ, ಹೊರ ಪೇಟೆ ಬುರುಜನ ಹಟ್ಟಿ ಗಲ್ಲಿಯ ಲಾಂದ್ರಗಳು ಸರಿಯಾಗಿಲ್ಲ. ರಸ್ತೆ ಮತ್ತು ಚರಂಡಿಗಳು ಸುತರಾಂ ಸರಿಯಾಗಿಲ್ಲ. ಮ್ಯುನಿಸಿಪಾಲಿಟಿಯವರ ಗಮನವು ಕೊಡಲ್ಪಡಬಹುದಾಗಿ ನಂಬಿರುತ್ತೆ. ಈ ಗಲ್ಲಿಗಳ ಚರಂಡಿಗಳಲ್ಲಿ ಕೆಲವು ಕಡೆ ದುರ್ವಾಸನೆ ಸಹಿಸಲು ಅಸಾಧ್ಯವಾಗಿರುತ್ತೆ. ಇಲ್ಲಿನ ಮನೆಗಳು ಬೆಟ್ಟಸಾಲಿಗೆ ಲಗತ್ತು ಇರುವ ಪ್ರದೇಶದಲ್ಲಿ ಜನಗಳು ಹೇಸಿಗೆಮಾಡುತ್ತಾರೆ ಇದಲ್ಲದೆ ಈಗಿನ ನೀರಿನ ತೊಂದರೆಯಲ್ಲಿ ಟವರ್ ಪ್ರಜೆಗಳಿಗೆ ನೀರಿನ ಅನುಕೂಲತೆಗೆ ಮುಖ್ಯವಾಗಿದ್ದ ಬುರುಜನಹಟ್ಟಿ ಸಿಹಿನೀರು ಹೊಂಡ ಮತ್ತು ಸಂತೆಹೊಂಡಕ್ಕೆ ನೀರು ಬರುವ ಕಂದಕದಲ್ಲಿಯೂ ಜನಗಳು ಮನಸ್ಸಿಗೆ ಗಲೀಜು ಮಾಡುತ್ತಾರೆ. ಇದಕ್ಕೂ ಸಹ ಮ್ಯುನಿಸಿಪಾಲಿಟಿಯವರು ಗಮನಕೊಟ್ಟು ಬಂದೋಬಸ್ತುಮಾಡಿಸಿದಲ್ಲಿ ಪ್ರಜೆಗಳಿಗೆ ಬಹಳ ಉಪಕಾರವಾಗುತ್ತೆ.

ಮಂಡ್ಯ.—ಸಕಾಲದಲ್ಲಿ ಮಳೆಗಳಾದದ್ದರಿಂದ ಈ ಸಾರಿ ರೈತರ ಸಂತೋಷಕ್ಕೆ ಪಾರವೇ ಇಲ್ಲದಂತಾಗಿದೆ. ಹವಾ ಆರೋಗ್ಯದಲ್ಲಿ ಉಂಟು.—ಈ ಊರಲ್ಲಿ ಆಗಾಗ್ಗೆ ಕಳ್ಳತನಗಳು ನಡೆಯುತ್ತಲೇ ಇರುವುದರಿಂದ ರಾತ್ರಿಯ ಪೋಲೀಸ್ ಬೀಟುಗಳಲ್ಲಿ ಏನೋ ಲೋಪವಿರುವಂತೆ ತೋರುತ್ತದೆ. ಕಳೆದ ತಿಂಗಳ 2 ನೇ ವಾರ 3-4 ಕಡೆ ಕಳ್ಳತನ ಅನಾಂತ್ರವಾದರೂ ಆ ರಾತ್ರಿ ಪೋಲೀಸ್ ಡ್ಯೂಟಿ ಏರ್ಪಟ್ಟಿತ್ತೋ ಇಲ್ಲವೋ ಸಂಶಯವಾಗಿದೆ. ಒಂದು ಮನೆಯನ್ನು ಹೊಕ್ಕ ಕಳ್ಳರು ಮೂವರು ಸದರಿ ಮನೆಯವನನ್ನು ತುಂಬಾ ಜಖಂ ಮಾಡಿ ಓಡಿಹೋದರು. ಪೋಲೀಸ್ ಇನ್ಸ್‌ಪೆಕ್ಟರು ಊರಲ್ಲಿರಲಿಲ್ಲವಾದ್ದರಿಂದ ಜಮೇದಾರರೇ ತನಿಖೆ ಮಾಡಿ ಸದರಿ ಮನುಷ್ಯನ ಫಿರ್ಯಾದನ್ನು ತಕ್ಕೊಂಡು ಮರುದಿನ ಊರಲ್ಲಿ ಕಳ್ಳನೂ ವ್ಯಾಪಾರಸ್ಥನೂ ಆದ ಪಿಲ್ಲಯ್ಯನನ್ನು ಕಚೇರಿಗೆ ಕರೆಯಿಸಿಕೊಂಡು ನಂತರ ಖೈದಿನಲ್ಲಿರಿಸಿರುವುದನ್ನು ಕೇಳಿ ಊರಿನವರೆಲ್ಲಾ ವ್ಯಸನಪಟ್ಟರು. ಆದರೇನು? ಫಿರ್ಯಾದಿಯು ಫಿರ್ಯಾದಿಯತ್ತನ ಮೇರೆ ಅಪರಾಧಿಯ ಮೇಲೆ ಎಳ್ಳಷ್ಟೂ ತಪ್ಪು ಸಾಬೀತ್ ಆಗಲಿಲ್ಲವಾದ್ದರಿಂದ ಖುಲಾಸ್ ಆಯಿತು.—ತಾಲ್ಲೂಕ್ ಕಚೇರಿಯ ಕೆಲಸಗಳು ಈ ಅಮಲ್ದಾರರ ಕಾಲದಲ್ಲಿ ಬಹು ಸಮರ್ಪಕವಾಗಿ ನಡೆಯುತ್ತಲಿವೆ. ಹಳೇ ಮೊಕದ್ದಮೆಗಳೆಲ್ಲಾ ಬೇಗ ಬೇಗನೇ ಫೈಸಲಾಗುತ್ತಾ ರೈತರಿಗೆ ತುಂಬಾ ಅನುಕೂಲವಾಗಿದೆ.—ಡಾಕ್ಟರ ಮತ್ತು ಮಿಡ್‌ವೈಫರ ಕೆಲಸಗಳು ಯಾವಾಗಲೂ ರೋಗಿಗಳ ಶುಶ್ರೂಷೆಯಲ್ಲಿರುವುದರಿಂದ ಅವರು ಎಲ್ಲರ ವಿಶ್ವಾಸಕ್ಕೂ ಪಾತ್ರರಾಗಿದ್ದಾರೆ. ಗವರ್ನ್‌ಮೆಂಟಿನವರ ಗಮನವು ಎಲ್ಲಾ ಡಿಪಾರ್ಟ್‌ಮೆಂಟುಗಳ ಮೇಲಿಟ್ಟಿರುವಂತೆ ಈ ಮೆಡಿಕಲ್ ಡಿಪಾರ್ಟ್‌ಮೆಂಟಿನವರ ಮೇಲೂ ಇಟ್ಟು ತಕ್ಕ ರಿಯಾಯಿತಿಗಳನ್ನು ಇವರಿಗೆ ತೋರಿಸುವುದು ಮನೋಹರವಾದನಿಸುತ್ತದೆ.—ಕಳೆದ ಸೋಮವಾರ ರಾತ್ರಿ ಕೋಟೆಯಲ್ಲಿ 3-4 ಮನೆಗಳಿಗೆ ಕಳ್ಳರು ನುಗ್ಗಿ ಒಂದು ಮನೆಯವರ ಬೆಳ್ಳಿ ಸೊತ್ತುಗಳನ್ನೂ ದೋಚಿಕೊಂಡುಹೋದರು. ಇನ್ನೊಂದು ಮನೆಯಲ್ಲಿ ಸ್ವಲ್ಪ ಸಾಮಾನುಗಳು ಹೋದವು. ಮೂರನೇ ಮನೆಗೆ ನುಗ್ಗಿದಾಗ್ಗೆ ಮನೆಯವರು ಎಚ್ಚರವಾದರು. ಇದರಿಂದ ಇಲ್ಲಿನ ರಾತ್ರಿ ಪೋಲೀಸ್ ಏರ್ಪಾಡು ಎಷ್ಟು ಮಾತ್ರಕ್ಕೂ ಸರಿಯಾಗಿಲ್ಲವೆಂದು ಗೊತ್ತಾಗುತ್ತದೆ. ಶ್ರೀ|| ಇನ್|| ಮ|| ದಿವಾಕರನಾಯಕರವರು ಈ ವಿಷಯದಲ್ಲಿ ತಕ್ಕ ಏರ್ಪಾಡನ್ನು ಮಾಡಿ ಪ್ರಜಾ ನೆಮ್ಮದಿಯನ್ನು ಕಾಪಾಡುವರೆಂದು ಹಾರೈಸಲಾಗಿದೆ. ಈ ವರೆಗೂ ಅನೇಕ ಸಾರಿ ಕಳ್ಳತನಗಳು ನಡೆದಾಗ್ಯೂ ಯಾವ ಪತ್ತೆ ತನಿಖೆಯೂ ನಡೆದಂತಿಲ್ಲ. ಸ್ಥಳವಂದಿಗರಾದ ಅನೇಕ ಸಭ್ಯರ ಮೇಲೆ ಗುಮಾನಿ ಇಡುವುದು ಅವರ ಮಾನಹಾನಿಗೆ ಕಾರಣವಾಗಿರುತ್ತೆ.

ಭಾವಾನಗರದ ಮಹಾರಾಜರವರು ಯುದ್ಧಭೂಮಿಯಲ್ಲಿರುವ ಹಿಂದೂ ಸೈನಿಕರಿಗೋಸ್ಕರ 300 ಪ್ರತಿಗಳ ರಾಮಾಯಣವನ್ನು ಕಳುಹಿಸಿದಾರೆ.

ಕಲ್ಕತ್ತೆಯಲ್ಲಿ ಬಾಬು ಚಕ್ರೇಶಚಂದ್ರ ಜಜ್ರಾ ಎಂಬ ಹೈಕೋರ್ಟ್ ವಕೀಲನು ಸ್ತ್ರೀಯರು ಪ್ರಯಾಣಮಾಡುವಂಥಾ ರೈಲ್ ಗಾಡಿಯಲ್ಲಿ ಕೂತುಕೊಂಡನೆಂದು ಆತನಿಗೆ 30 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟದೆ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಖು-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು

ಛಳಿ ಮಳೆಗಾಲಗಳಲ್ಲೂ—ಸೋಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ಮರಳೀಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ಖಾತರಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

30 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟ.ಖ ಪ್ರತ್ಯೇಕ.

[231 33] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ದರ್ಬಾರ್ ಸೋಪ್.

[ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್] ಕೇಶನಾಶಿನಿ.

ಕೆಡಿಸಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ

ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ವಿಳಾಸ:—ವಿ. ಎ. ಎಸ್. ಪಾಣಿ,

[123—3] ನಂ. 3, ಇರುಳಪ್ಪನಪೇಟೆ, ಮದರಾಸು.

ಹವಳದ ಬಳ್ಳಿ ಶೀರೆ.

ಬಹಳ ಸೊಗಸಾದದ್ದು! 16 ಮೊಳ!! ಬಾಳಿಕೆಬರುವದು!!!

ಈ ಶೀರೆಗಳ. ಬೇರೆ ಮಲ್ಲಿನಲ್ಲಿ ಕಪ್ಪು, ಕೆಂಪು ಕೂಡಿದ ಚಾಕೊಲೇಟ್ ರಂಗಿನಂತೆ ಹವಳದ ಬಳ್ಳಿಗಳು ಹಾಕಲ್ಪಟ್ಟು, ಸುತ್ತಲೂ ಸಣ್ಣ ಅಂಚು ಕಟ್ಟಲ್ಪಟ್ಟಿದೆ. ಇಂಥಾ ಶೀರೆ ನಮೂನೆಯು ಇದುವರೆಗೂ ತಯಾರಾಗಲಿಲ್ಲ. ಈ ಕಾಲಕ್ಕೆ ಬಹಳ ಉಪಯೋಗವಾದದ್ದು. ಇದನ್ನು ಪ್ರತಿ ಒಬ್ಬ ಸ್ತ್ರೀಯೂ ಧರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇನೆ.

ಕ್ರಯ ರೂಪಾಯಿ 3-4-0

ವಿ. ಪಿ. ಛಾರ್ಜ್ 0-5-0

ನಮ್ಮ ವಿಳಾಸ.—ಎ. ಕನಕ ಸಭಾಪತಿ,

[116-4] ಪಾರ್ಕ್ ಟೌನ್, ಮದರಾಸ್.

ನಡುವಿನ ನೋವು.

ಹಾಸಿಗೆಯಲ್ಲಿ ನೋವಿನಿಂದ ಹೊರಳಾಡುತ್ತಾ ಇದ್ದು, ಕೆಲಸಮಾಡಲಾರದಂಥಾ ರೀತಿಯಲ್ಲಿ ಎದ್ದು, ಸಂತೋಷವಿಲ್ಲದವರಾಗಿದ್ದೀರೋ? ಹಾಗಿದ್ದರೆ ಬಹಳ ನಡುವಿನನೋವು ನಿಮಗುಂಟು. ಉದಾಸೀನ ಮಾಡಲಾಗದು. ಹಲ್ಲು ತಿಂಗಿ ಸಹಿಸಬಾರದು." ಲಿಟಲ್‌ಸ್ ಓರಿಯಂಟಲ್ ಬಾಂ ಎಂಬದನ್ನು ಉಜ್ಜುವದರಿಂದ ಅದನ್ನು ನಿಲ್ಲಿಸಬೇಕು.

ವಿಸ್ಕಾನ್ಸಿನಿನ ಮ್ಯಾಚೋರಿನಲ್ಲಿರುವ ಮಿ|| ಸಿ. ಸಕ್ಸ್‌ನರ್ ಬರೆಯುವುದು:—"ಮೂರು ತಿಂಗಳು ನಡುನೋವಿನಿಂದ ನಾನು ಬಹು ಹಿಂಸೆಪಟ್ಟು ಯಾವ ಕೆಲಸಕ್ಕೂ ಅಯೋಗ್ಯನಾಗಿ ಹಾಸಿಗೆಯಲ್ಲಿಯೇ ಬಿದ್ದಿದ್ದೆನು.

ಲಿಟಲ್‌ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಬೇಕೆಂಬ ಶಿಫಾರಸ್ಸಾಯಿತು. ಅದರಂತೆಯೇ ಮಾಡಿ ಅದರ ಫಲಿತಾಂಶವನ್ನು ಕಂಡು ಆಶ್ಚರ್ಯಪಟ್ಟೆನು—6 ಸೀಸೆಗಳ ತೈಲವನ್ನು ಉಪಯೋಗಿಸಿ ಈಗ ಚೆನ್ನಾಗಿ ನಿದ್ದೆ ಮಾಡುತ್ತೇನೆ. ಕೆಲಸಕ್ಕೆ ಹೋಗುತ್ತೇನೆ."

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

[81-11]

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಸ್ಟರ್ಡ್)



ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮಿದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
96 ,, ,, ,, 4 ,,	200 ,, ಟಿನ್ ,, 9 ,,	100 ,, ಸೀಸೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಟಿ. ಸಿ. ತಾ ಕಂಪನಿ, 177,

[26—24] ಚೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಪಟ್ಟಣ.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 3 ಬಹುಮಾನಗಳ ಸಮೇತ ರೂ. 2-12-0 ಮಾತ್ರ.

ಐದು ವರುಷಗಳ ಗ್ಯಾರೆಂಟಿ.



ಧನವಂತರೇ, ಇದು ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದ ಸುಂದರವಾದ ವಾಚ್. ಬಲಿಷ್ಟವುಳ್ಳ ಚಕ್ರಗಳುಳ್ಳದ್ದು. ಮತ್ತು ಧೂಳು ಸೇರದ್ದು. ಒಳಗೆ ಗ್ಲಾಸ್ ಡೋಮ್ ಅಂದರೆ ಗ್ಲಾಸ್ ಮುಚ್ಚಳವುಳ್ಳದ್ದು. ರಮಣೀಯವಾದ ಅಂಕೆಗಳುಳ್ಳದ್ದು. ಗಂಭೀರವಾದ ಗಂಟೆ ಮತ್ತು ಮಿನಿಟ್‌ಗಳುಳ್ಳದ್ದು. ಸಮ್ಮತವಿಲ್ಲದಲ್ಲಿ ಹಣಾ ವಾಪಸು ಮಾಡಲ್ಪಡುತ್ತೆ.

(1) ಸುಂದರವಾದ ನಾಣ್ಯವುಳ್ಳ ವಾಚ್ ಪೆಟ್ಟಿಗೆ, (2) ಅಂದವಾದ ವಾಚ್ ಸರಪಣಿ, (3) ನಾಣ್ಯವುಳ್ಳ ಹಸನಾದ ಬನಿಯನ್—ಈ ಮೂರರ ಸಮೇತ ವಾಚ್ ಕ್ರಯ ರೂ. 2-12-0 ಮಾತ್ರ. [117-4]

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂ. 7, ಕೋವ್‌ವೆಂಕಟಾಚಲಯ್ಯರ್ ಬೀದಿ, ಮದರಾಸ್.

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹರಳಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಜುರಿ, ಉಬ್ಬಸ, ಕ್ಷಯ, ಗರ್ಭವೆಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-35]

ಮಹಾ ಸೌಭಾಗ್ಯ ಕುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಜಾಸಕ್ಯಾಸ, ಬಾಣಂತಿಸನ್ನಿ, ಸೂತಿಕಾಜ್ವರವೆ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಕನ್ನಡ ವಾರಪತ್ರಿಕೆ.

"ವಿಕಟ ವಿನೋದಿನಿ."

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಕ್ತಿ (ಜೋಕ್ಸ್) ಗಳಿಂದ ಕೂಡಿರುವ ಪತ್ರಿಕೆಯು ಆದ ವಾರಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ವೆಚ್ಚ ಸೇರಿ ರೂ 1 ಮಾತ್ರ. ನಮ್ಮ ವಿಳಾಸ— "ವಿಕಟ ವಿನೋದಿನಿ" ಆಫೀಸ್, ಅರಳೆಪೇಟೆ, ಬೆಂಗಳೂರು ಸಿಟಿ. [131-1]

ಇನಾಂ ಸಾಮಾನುಗಳು 50. ಇನಾಂ ಸಾಮಾನುಗಳು 50.

ಅನೇಕ ಯೋಗ್ಯತೆ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಯರಿಗೆ ತಲೆ ಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯುವ ಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವ್ನು ಹಾಳು ಮಾಡುವದಕ್ಕಿಂತ ನಮ್ಮ ಉಂಮ ತೈಲವನ್ನು ಉಪಯೋಗಿಸಿ. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಅಲ್ಲದೆ ದೇಹದಲ್ಲಿರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪುಕೊಡುವದು ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನು, ಮನಸ್ಸಿಗೆ ಸಂತೋಷವನ್ನು, ಕೂದಲಿಗೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೆಂಪುಗಳು 6, ವೈಭಂಗ 1, ಅದ್ದಾ 1, ತಾಂಬೂಲಪತ್ರ 30, ದಂತದ ಬಾಚಣಿಗೆ 1, ಕಿರುಗಸಾದ ನಾಣ್ಯದ ರಾಣಿ ಕಾರನೇಷನ್ ಪೆಟ್ಟಿಗೆ 1, ಬಂಗಾರ ಪೋಣಿಸಿದ ಉಂಗುರ 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಆರು ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಇನಾಂ ಸಾಮಾನು ಇಲ್ಲದಂತೆ ಟೈಂಪೀಸು 1 ನ್ನು ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:—ಧೈರ್ಯಲಕ್ಷ್ಮಿ ಅಂಡು ಕಂಪೆನಿ,

ನಂ 3, ಇರುಳಪ್ಪನ್ ಬೀದಿ, ಮದರಾಸು. [123-3]

ನಂಬಿರಿ-ಖಂಡಿತ-ನಂಬಿರಿ



ಜ್ವರದ ಮಾತ್ರೆ. ಬಹು ಶ್ರೇಷ್ಠ ಮೂಲಿಕೆಗಳಿಂದ ತಯಾರಿಸಿದೆ. ಸರ್ವ ಜ್ವರಗಳಿಗೂ, ಪಾಪರಿ ಗುಣವು ಶ್ರೇಷ್ಠ ಹೆಸರು ಬಂದಿದೆ. 30 ಮಾತ್ರೆ ಸೀಸೆಗೆ 8 ಆ, 6 ಕ್ಕೆ 2½ ರೂ.

ಮುಖರಂಜಕ ಮಾತ್ರೆ: ಇನೇಕ ರಕ್ತಾಭಿವೃದ್ಧಿ ರಕ್ತ, ಬಾಯಿ ದುರ್ಗಂಧ ತಪ್ಪಿಸಿ, ಸುವಾಸನೆಯುಳ್ಳ ಜೀರ್ಣಶಕ್ತಿ ಹೆಚ್ಚಿಸಿ, ಶಾರೀರಾಭಿವೃದ್ಧಿ ಮಾಡಿ, ಬಾಯಿಹುಣ್ಣು, ಕೆರತ, ಗೊಗ್ಗರದ್ವನಿ, ತಲೆಶೂಲೆ, ಹೊಟ್ಟೆಶೂಲೆ, ವೋಟಲಿಕೆ, ಮಲಬದ್ಧ, ಅತಿಸಾರ ನಿವಾರಿಸಿ ಮನೋಲ್ಲಾಸ ಮಾಡುತ್ತೆ. ಉಪಾಧ್ಯಾಯರು, ವಿದ್ಯಾರ್ಥಿಗಳು, ಉಪನ್ಯಾಸಕರು, ಸಂಗೀತಗಾರರು, ನಾಟಕದವರು, ಪ್ರಯಾಣಿಕರು ಮುಂತಾದವರಿಗೆ ಅತ್ಯುಪಕಾರಿ. 160 ಮಾತ್ರೆ ಸೀಸೆಗೆ 4 ಆ., 6 ಕ್ಕೆ 1 ರೂ. ಸಂಜೀವಿನಿ 4 ಆ., ಸರಳ ಭೇದಿ ಪಿಲ್ಸ್ 8 ಆ, ಕೆಮ್ಮಿನ ಮಾತ್ರೆ 8 ಆ. [126-3]

ವಿಳಾಸ—ಪಂಡಿತ್ ಎಸ್. ಗರಳಪುರಿ, ಮೈಸೂರು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಪದಕಗಳನ್ನೂ, ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕ ದೊಡ್ಡ ಮನುಷ್ಯರೂ ಇದರ ಉತ್ತಮತ್ವವನ್ನು ಕುರಿತು ಶ್ಲಾಘಿಸಿರುವರು. ಈ ತೈಲವು ತಲೆಯನ್ನು ತಣ್ಣಗೆಯೂ ಸ್ವಚ್ಛವಾಗಿಯೂ ಇಡುವುದಲ್ಲದೆ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸ್ವಪ್ನಭಂಗವನ್ನು ಪರಿಹರಿಸಿ ಇದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಹಿತಕರವೂ ಸುವಾಸಿತವೂ ಆಗಿದ್ದು ನರಗಳ ಕ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುತ್ತದೆ. ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-43]

ನಮ್ಮ ವಿಳಾಸ:—ಬಿ. ಎಸ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

25 6—1916 ರಿಂದ 2 - 7—1916 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ಹಿಡಿದದ್ದು.	ಸತ್ತದ್ದು.	ಹಿಡಿದದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ		0	0	6	5
ಮೈಸೂರು	,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು		0	0	4	3
ಮೈಸೂರು	,,	22	15	0	0
ಕೋಲಾರ್	,,	1	1	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	9	6	0	0
ಚಿತ್ರದುರ್ಗ	,,	0	0	0	0
ಕಡೂರ್	,,	0	0	0	0
ಶಿವಮೊಗ್ಗಾ	,,	9	6	0	0
	ಜುಮ್ಲಾ	42	28	4	3

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣ ಗ್ರೀಷ್ಮಋತು ಆಷಾಢ ಶುದ್ಧ ಚೌತಿ ಶುಕ್ರವಾರದಿಂದ ಆಷಾಢ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜೂಲೈ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
16	ಶುಕ್ರ *	ಚೌತಿ	24-12	ಮಘಾ	3 18	1
17	ಶನಿ †	ಪಂಚಮಿ	22 5	ಪುಬ್ಬಾ	3 31	2
18	ಭಾನು ::	ಷಷ್ಠಿ	18-52	ಉತ್ತರಾ	2 32	3
19	ಸೋಮ	ಸಪ್ತಮಿ	14-44	ಹಸ್ತ	0-38	4
20	ಮಂಗಳ §	ಅಷ್ಟಮಿ	9 49	ಸ್ವಾತಿ	54-45	5
21	ಬುಧ ;;	ನವಮಿ	4-17	ವಿಶಾ	54-17	6
22	ಗುರು ‡	ಏಕಾದಶಿ	52-15	ಅನೂ	46-30	7

* ಚತುರ್ಥೀ ತಿಥಿ, ಅಧಿಶುಕ್ರವಾರ, ದೇವರಾಜ ಅರಸಿನವರ ಪುಣ್ಯತಿಥಿ ವರ್ಧಂತಿ, ದಕ್ಷಿಣಾಯನಪುಣ್ಯಕಾಲ, ಮಳೆ ನಕ್ಷತ್ರ—ಪುನರ್ವಸು 4 ವಾದ. † ತಿಥಿದ್ವಯಂ. :: ಸಪ್ತಮಿ ತಿಥಿ § ಮಳೆ ನಕ್ಷತ್ರ – ಪುಷ್ಯ 1 ವಾದ. ;; ಕೆಂಪನಂಜಮ್ಮಣ್ಣಿಯವರ ವರ್ಧಂತಿ. ‡ ಸ್ಮಾರ್ತ ಪ್ರಥಮ ಏಕಾದಶಿ, ಗೋಪದ್ಮವ್ರತಂ.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಆರ್ಗನೈಸರ್ಸ್ ಮತ್ತು ಕಮಿಷನ್ ಮೇಲೆ ಕೆಲಸವು ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ಜರುಗಿಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೋಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೋಕಿನಲ್ಲಿಯೂ ಜಮೀನ್ ಮತ್ತು ಮನೆಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳ ಮೇಲೆ ಸಾಲಾ ಕೊಡುವ ಡಿಪಾರ್ಟಮೆಂಟಿನ ಕಾರ್ಯಗಳನ್ನು ಜರುಗಿಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳೂ ಸಹಾ ಬೇಕಾಗಿದೆ. ಇಷ್ಟವುಳ್ಳವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

M. L. NAGANNA,

[15-27] Managing Director, Life & Marriage Assurance Buildings, Mysore.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) **ಶಕುಂತಳ** ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು ಬರಟಾಗಿರುವ ಕೂದಲು ಮೃದುವಾಗುವದು. ನೀರಿಳಿತ ತಣ್ಣನೆ ಕೆಡ್ಡಾಗಿ ಧರಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು ತಲೆಯಲ್ಲಿ ಹೇನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚೆ ಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ತ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಾಜಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೆಂಪಿನಹೂವು 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪತ್ರ 22, ಕೆಂಪಿನ ಗಿಡಗಳು 6, ರಾಣಿಯೇಷನ್ ಬ್ರೂಚ್ 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[87-6] ನಂ. 44, ನಂಬುಳಯ್ಯರ ಬೀದಿ, ಮದರಾಸು.

Printed and Published by the Rev. H. Gulliford, Proprietor and Manager, Wesleyan Mission Press, Mysore. 15/7/1916.

REGISTERED
M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸ೯ ೧೯೧೫ ನೇ ಇಸವಿ ಜೂಲೈ ತಾರೀಖು ೨೨ ನೇ ಗುರುವಾರ. ಸಂಚಿಕೆ ೮

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-24] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡವಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಅನುಕೂಲವಾಗುವಂತೆ ಪರಿಶೀಲನೆಮಾಡಿ ತಿದ್ದಿ ಒಂದಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [230-10]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಸೋಲಾಪುರದ ಚಕ್ಕುಗಳೂ, ಸೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಿಗೆ ಮಹೇಶ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಸೀರೆಗಳೂ ಇತರರಲ್ಲಿ ದೊರೆಯುವದಕ್ಕಿಂತ ಸುಲಭಕ್ರಯಕ್ಕೆ ಬೇಲುಗಟ್ಟೆಯೂ, ಚಿಲ್ಲರೆಯಾಗಿಯೂ ದೊರೆಯುವವು.

ಬೇಲುಗಟ್ಟೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ದರೀ ಬಿಗೆ ದೊರೆಯುವವು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [55-16]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 150, ಕಿಲಾರಿ ರೋಡು (ಕುಂಬಾರಪೇಟೆ) ಬೆಂಗಳೂರು ಸಿಟಿ.

1,000 ವಾಚುಗಳ ಮಾರಾಟ.

"ಬೊಂಬೇ ಮೈಲ್ ಲೀವರ್ ವಾಚ್.

ಗ್ರಾಹಕರೇ,—ಈ ಮೇಲೆ ಕಾಣಿಸಿದ ವಾಚು ಅತೀ ಮನೋಹರವಾಗಿ ಶಿಲ್ಪಿಶಾಸ್ತ್ರಕ್ಕೆ ಅನುಸಾರವಾಗಿ ನಿಕ್ಕಲ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಪ್ರಪಂಚದಲ್ಲಿ



ಲ್ಲೆಲ್ಲಾ ಇದು ಶ್ರೇಷ್ಠತೆಯನ್ನು ತಿಳಿಯಬೇಕೆಂಬುದಾಗಿ ಅತೀ ಸುಲಭ ಕ್ರಯಕ್ಕೆ ಮಾರುವದನ್ನು ಇಟ್ಟಿರುತ್ತೇವೆ. ನಮ್ಮ ಕ್ರಯದ ವಾಚುಗಳು ನೀವು ತರಿಸಿಯೂ ಇತರರಲ್ಲಿ ನೋಡಿಯೂ ಇರಬಹುದು. ಆದರೆ ಮೇಲೆ ಕಾಣಿಸಿದ "ಬೊಂಬೇ ಲೀವರ್ ವಾಚು" ಎಂಬದು ಶೀಘ್ರವಾಗಿ ದೊರೆಯದ ವಾಚಲ್ಲ. ಇದು ಹೆಸರಿಂದ ಕೆಂಪೆನಿಯಲ್ಲಿ ತಯಾರಿಸಲ್ಪಟ್ಟು ಶ್ರೇಷ್ಠವಾದ ಮತ್ತು ಬಲಿಷ್ಠವಾದಲೀವರ್ ಕೆಲಸವಾಗಿದೆ. ನೋಡುವರಿಗೆ ಗಂಭೀರವಾಗಿಯೂ ಸಮಯಾನುಸಾರ ಶೇರಿಗೆ ಬಿದ್ದಾಗ್ಯೂ ನಿಲ್ಲದೆ ನಡೆಯುತ್ತದೆ. ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡೆಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವದಿಲ್ಲ. ವಾಚು 1 ರ ಬೆಲೆ ರೂ. 2-4-0. ಪೋಸ್ಟೇಜ್ ಮತ್ತು ವಿ. ಪಿ. ಆಣೆ 4 ಅಧಿಕವಾದ. [130-3]

(2) ವಾಚಿನ್ನೊನ್ನು ಶೀಲಿ ಕೇಳುವ ವಾಚು 1 ಕ್ಕೆ ರೂ. 7-12-0.

ನಮ್ಮ ವಿಳಾಸ :—ದಿ ಊಲ್ನ್ ಮಾರ್ಟ್,
ನಂ. ೧, ಮಂಗಳೂರು, ದಕ್ಷಿಣ ಕನ್ನಡಾ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಸರದಾರರಿಗೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-46] GIRLS' INDUSTRIAL SCHOOL, HASSAN.

ಎಮ್. ಎಸ್. ಮಲಕಣ್ಣ ಅಂಡ್ ಬ್ರದರ್ಸ್,

ರೇಷ್ಮೆ ಜವುಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ಪನ್ನವಾದ ರೇಷ್ಮೆ ವಸ್ತ್ರಗಳು, ಪೇಟುಗಳು, ಅಂಚಿಪೇಟಿ ಸೀರೆಗಳು, ಎಲ್ಲಾ ಥರದ ವಸ್ತ್ರಗಳು, ಸಾಧಾರಣ ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ [105-8]

ರೇಷ್ಮೆ ವಸ್ತ್ರಗಳು	ದರಗಳು	ಪೇಟುಗಟೆ, ರೇಷ್ಮೆ ಸೀರೆ, ಲಿಂಗವಸ್ತ್ರ.
1 ನೇ ನಂಬರು 0-7-6		1 ನೇ ನಂಬರು 0-8-0
2 ,, ,, 0-7-0 ತೊಲೆ 1 ಕ್ಕೆ 0-6-0		2 ,, ,, 0-7-6

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ಸಮೀಪಭಾಗದ ಭೂವಿವರಣೆ 0–5–0
2. ಪ್ರಾಕೃತಿಕ ಭೂಗೋಳ ಶಾಸ್ತ್ರ 0–6–0
   ಮೇಲೆ ಕಂಡ ಎರಡೂ ಸೇರಿ 0–10–0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿವೆ)

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಟಿಪ್ಪಣಿ ನೋಟ್ಸು.

ಕ್ರಯ 7 ಆಣೆ. ಡಿಸ್ಕಾಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಲ್. ಆರ್. ವೆಂಕಟಸುಬ್ಬಾಚಾರ್ಯ,
[31-23] ಸುಬೋಧ ಗ್ರಂಥಾಲಯ, ಮೈಸೂರು.

'ಸಂಗೀತ ಪಾರಿಜಾತ'

ಹೊಸ ಮುದ್ರಣ ! ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ತುಂಬಿದೆ ! ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮೀಶನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[275-32] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ :—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಶೀನರಿ ಗಟ್ಟಿ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇವೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ"—ಕೆ. ರಾಮಸ್ವಾಮಿ, ಸಬ್ ಇ-ಕಾ-ಸಬ್ ಇನ್ಸ್, 20-2-15.

ಅರ್ಧಬೆಲೆ ಮಾತ್ರ.

ಸರಾಸರಿಯಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ದರವನ್ನು ಕಡಿಮೆ ಮಾಡಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಚಿ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶೆಪಡುವಿರಿ ಇದೊಂದು ಉತ್ತಮ ಸಮಯ! ಈ ಎಂಟು ದಿನದಲ್ಲಿ ಒಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿನ ಬಾಳಿಕೆ ಬರುವದಾಗಿಯೂ ಇದೆ ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರೆಯಬೇಕು.

ನಮ್ಮ ವಿಳಾಸ :—ದಿ ಮಾರುತಿ ಏಜೆನ್ಸಿ,
[266-34] ಪಿ. ಓ. ಬಾಕ್ಸ್ 330, ಬೊಂಬಾಯಿ.

ಮೈಯರ್ಸ್ ಹ್ಯಾಂಡ್ ಪವರ್ ಪಂಪುಗಳು.

ಭಾವಿಯ ಪಂಪು.

10 ರಿಂದ 50 ಅಡಿ ಆಳದ ಭಾವಿಗೆ, ಗಂಟೆಗೆ 500 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

10 ರಿಂದ 70 ಅಡಿ ಆಳದ ಭಾವಿಗೆ, ಗಂಟೆಗೆ 350 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

ಟ್ಯಾಂಕ್ ಪಂಪು, 20 ಅಡಿ ಆಳದಿಂದ ಗಂಟೆಗೆ 1,500 ಗ್ಯಾಲನ್ (2 ಅಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 65

ಷರಾ.—ಹೆಚ್ಚು ವಿಷಯಗಳನ್ನು ಕೆಳಗಿನ ವಿಳಾಸದಾರರಿಂದ ತಿಳಿಯಬಹುದು :—

ಎಲ್. ಶೇಷಾದ್ರಿ,
34, III ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಗ್ಗ, ಸುಲಭ, ಬೇಗ ಕೆಡುವದಿಲ್ಲ. ಬೆಂಗಳೂರಲ್ಲಿ ಎಂಟು ತಿಂಗಳಿಂದ ಉಪಯೋಗದಲ್ಲಿ[redacted] ಮನೆಗಳಿಗೂ ಕೈತೋಟಗಳಿಗೂ ಬಹಳ ಅನುಕೂಲ.

14 ವಯಸ್ಸಿನವರು 70 ಅಡಿ ಆಳದಿಂದ ಯಾತದಷ್ಟು ನೀರನ್ನೆತ್ತಬಹುದು. [138-2]

1914 ನೆಯ ಮೈಸೂರು ಎಗ್ಸಿಬಿಷನ್ನಿನಲ್ಲಿ ಚಿನ್ನದ ಮೆಡಲನ್ನು ಪಡೆದಿರುತ್ತದೆ.

ನಮೂನೆ.— ಅಸ್ಸಿನ ಚಿತ್ರದಂತೆ.



ಕೆರೆಯ ಪಂಪು.

ಮಕ್ಕಳ ಆರೋಗ್ಯ.

ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಿಸರಕಿನಿಂದಲೂ ತಯಾರಾದ "ಬಾಲಶೇಖರಿ" ಎಂಬ ಕೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಹುರಿ, ಉಬ್ಬಸ, ಕ್ಷಯ, ಗರ್ಭವಟ್ಟೆ ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ನುಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಹಲ್ಲು ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-36]



ಮಹಾ ಸೌಭಾಗ್ಯ ಶುಂಠಿ:—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಮೈಕೈ, ಜಾಡ್ಯಾಸ, ಬಾಣಂತಿಶೂಲ, ಸೂತಿಕಾಶೂಲ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವುದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಪಟ್ಟೆ ಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಸೀರೆಗಳು, ಕಣಗಳು, ಮಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗೆದುಕೊಳ್ಳುತ್ತೇವೆ.

ಪೀತಾಂಬರ ಸೀರೆಗಳು—16, 18 ಮೊಳ ಉದ್ದ, ಎರಡೂವರೆ ಮೊಳ ಅಗಲ, ರೇಷ್ಮೆ ಒಡಲು, ಕಲಾಪತ್ತಿನ ಸೆರಗು, ಬೇಲು, ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಬೇಲು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟ್ಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟೆ ಪೀತಾಂಬರ ಕಂಪೆನಿ,

[63-14] ಧಾರಾನಗರ್ ಬೀದಿ, ಕಾಶಿ.

ಹುಚ್ಚು ಹಿಡಿಸತಕ್ಕ ತಲೆ ನೋವುಗಳು.

ಲಿಟಲ್ಸ್ ಓರಿಯೆಂಟಲ್ ಬಾಂ ಎಂಬ ತೈಲವನ್ನು ಉಪಯೋಗಿಸುವುದರಿಂದ ತಲೆನೋವು, ತಲೆಸೂಲೆತ, ಕಣ್ಣುಬ್ಬಿನ ನೋವು, ಪಿತ್ತ ನೋವು, ತಿವಿತ, ಕಣತಲೆ ನೋವು ಕೆನ್ನೆಗಳನೋವು, ತಲೆಯಲ್ಲಿರುವ ನಾನಾ ಜಾತಿಯ ತಿವಿತಗಳೂ, ಅನೇಕ ರೀತಿಯಲ್ಲಿ ಬಾಧಿಪಡಿಸುವ ನೋವುಗಳೆಲ್ಲವೂ ಒಡನೇ ಸ್ವಸ್ಥವಾಗುತ್ತವೆ. ನ್ಯೂಜೆರ್ಸಿ ನ್ಯೂಗ್ರೆಯಿನ ಮಿ|| ಜೆ. ವಿಲ್ಕಾಕ್ಸ್ ಬರೆಯುವುದು:—"ತಲೆಯಲ್ಲಿದ್ದ ಕಠಿಣನೋವುಗಳೆಲ್ಲವೂ, ನನ್ನನ್ನು ಹುಚ್ಚನಂತೆ ಮಾಡಿದ್ದ ಭಯಂಕರ ನೋವುಗಳೆಲ್ಲವೂ, ಲಿಟಲ್ಸ್ ಓರಿಯೆಂಟಲ್ ಬಾಂ ಎಂಬ ತೈಲವನ್ನು ನನ್ನ ಹಣೆಯ ಮೇಲೆಯೂ ಕಣತಲೆಯ ಮೇಲೆಯೂ ಉಪಯೋಗಿಸಿದ್ದರಿಂದ ಒಡನೇ ಅದ್ಭುತರೀತಿಯಲ್ಲಿ ವಾಸಿಯಾಯಿತು."

ಸೀಸೆ 1 ಕ್ಕೆ 1 ರೂ. ಮೇಲಿಗೆ ಔಷಧಿಗಾರರೆಲ್ಲರಲ್ಲಿಯೂ ಸಿಗುತ್ತೆ.

[81-12]

ಕಸ್ತೂರಿ ಗುಳಿಗೆಗಳು:—ಇದರಿಂದ ಫಿಟ್ಸ್, ಸನ್ನಿಪಾತ, ಮೂರ್ಛೆ ಬರುವ ರೋಗ, ಹರ್ಷವಾಯು, ಜ್ವರ ವ ಇತರ ವಾಯು ಸಂಬಂಧವಾಗಿ ಚಿಕ್ಕವರಿಗೂ ದೊಡ್ಡವರಿಗೂ ಇರುವ ರೋಗಗಳು ಎಷ್ಟು ದೀರ್ಘಕಾಲವಾಗಿದ್ದರೂ ನಿಶ್ಚಯವಾಗಿಯೂ ಗುಣವಾಡುತ್ತವೆ. ಬಾಟ್ಲಿಯ ಕ್ರಯ ರೂ. 2.

ಸ್ತ್ರೀಯರ ರಕ್ತಸ್ರಾವ ವ ಇತರ ಉದರ ರೋಗಗಳಿಗೆ ಅತ್ಯುತ್ತಮವಾದ ಔಷಧ. ಬಾಟ್ಲಿಯ ಕ್ರಯ ರೂ. 2.

ರಕ್ತಶುದ್ಧಿ:—ಈ ಔಷಧದ ಸೇವನೆಯಿಂದ ದೇಹದೊಳಗಣ ಅಶುದ್ಧವಾದ ರಕ್ತವು ಶುದ್ಧವಾಗಿ ತಾಂತಿಯನ್ನು, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿಯ ಕ್ರಯ ರೂ. 1-8-0.

ಅತ್ಯಂತ ಪೌಷ್ಟಿಕ ಧಾತುಪುಷ್ಟಿಯ ಔಷಧ. ಡಬ್ಬಿಯ ಕ್ರಯ ರೂ. 2.

ನಮ್ಮ ವಿಳಾಸ—ಸಖಾರಾಮ ಅಪ್ಪಾಜಿ ಕೊಲ್ಹಟಕರ, ವೈದ್ಯ,

[92-9] ದನಾಬಜಾರ, ಠಾಕುರದ್ವಾರ ರೋಡ, ಮುಂಬಯಿ, ನಂ. 2.

ನಂಬಿರಿ-ಖಂಡಿತ-ನಂಬಿರಿ

ಜ್ವರದ ಮಾತ್ರೆ. ಬಹು ಶ್ರೇಷ್ಠ ಮೂಲಿಕೆಗಳಿಂದ ತಯಾರಿಸಿದೆ. ಸರ್ವ ಜ್ವರಗಳಿಗೂ, ಖಾತರಿ ಗುಣ. ಶ್ರೇಷ್ಠ ಹೆಸರು ಬಂದಿದೆ.

24 ಮಾತ್ರೆ ಶೀಸೆಗೆ 8 ಆ., 6 ಕ್ಕೆ 2½ ರೂ.

ಮುಖರಂಜಕ ಮಾತ್ರೆ: ಜಠರೋಪಶಾಂತಿ, ರಕ್ತ. ಬಾಯಿ ದುರ್ಗಂಧ ತಪ್ಪಿಸಿ, ಸುವಾಸನೆ, ಜೀರ್ಣಶಕ್ತಿ ಹೆಚ್ಚಿಸಿ, ಶಾರೀರಾಭಿವೃದ್ಧಿ ಮಾಡಿ, ಉಬ್ಬಸ, ಕೆಮ್ಮು, ಕೆಂಗು, ಗೊಗ್ಗರಧ್ವನಿ, ತಲೆಶೂಲೆ, ಶೂಲೆ, ವೋಕರಿಕೆ, ಮಲಬದ್ಧ, ಅತಿಸಾರಾದಿ ನಿವಾರಿಸಿ ಮನೋಲ್ಲಾಸ ಮಾಡುತ್ತೆ. ಉಪಾಧ್ಯಾಯರು, ವಿದ್ಯಾರ್ಥಿಗಳು, ಉಪನ್ಯಾಸಕರು, ಸಂಗೀತಗಾರರು, ನಾಟಕದವರು, ಪ್ರಯಾಣಿಕರು ಮುಂತಾದವರಿಗೆ ಅತ್ಯುಪಕಾರಿ. 160 ಮಾತ್ರೆ ಶೀಸೆಗೆ 4 ಆ., 5 ಕ್ಕೆ 1 ರೂ. ಸಂಜೀವಿನಿ 4 ಆ., ಸರಳ ಭೇದಿ ಪಿಲ್ಸ್ 8 ಆ., ಶೆಮ್ಮಿನ ಮಾತ್ರೆ 8 ಆ.

[126-4] ವಿಳಾಸ.—ಪಂಡಿತ್ ಎಸ್. ಗರಕಪುರಿ, ಮೈಸೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿ

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯಸೂವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದು ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇ

45 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ 200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ 80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ! 550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, 4 ,, 200 ,, ಟಿನ್ ,, 9 ,, 100 ,, ಸೀಸೆ ,, 4½ ,, 1200 ,, ,, 2

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದ್ದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ಟಿ. ಸಿ. ಷಾ ಕಂಪೆನಿ,

[25-25] ಬೇಹಾ ಬಜಾರ್, ಮೈಸೂರು ಸೀಮೆಗೆ ಏಜಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟ

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಮುರಬ್ಬಾಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಪಡುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉಳುಕಿ ಕಾವಲಿಗಳ್ಲ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರೀಯ ಅಥವಾ ಬೇರೆ ತರಹದ್ದೇ ಎಂಬುವುದು ತಿಳಿದುಬರುತ್ತದೆ. [10

ಸಾಲಾಮಿಸ್ರೀ ಮುರಬ್ಬಾವು—ಸ್ವಪ್ನದಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಕೆಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ನಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವ, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕಾಂತಿಯು, ಬಲ ಮತ್ತು ಧಂಗಾದಿಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಕರವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟ ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಕೃದೆ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವ

500 ರೂಪಾಯಿಗಳು ಬಹುಮಾನ ಕೊಡುವ

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದಸಂಗಡ ಕಳುಹ

ಏಜಂಟರು—ಡಿ. ಸೈಯದ್ ಇಸ್ಹಾಕ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5. ಅವೆನ್ಯೂ ರೋಡ್, ಬೆಂಗಳೂರು

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದೂಚರಿತ್ರೆಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-28]

ರಬ್ಬರು ಮುದ್ರೆಗಳು!

ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ತೋಡಿನ ಪೆಟ್ಟಿಗೆ, ಬ್ರಷ್ ಪ್ಯಾಡ್ ಮತ್ತು ಇಂಕಿ ಬಾಟ್ಲು ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ ಬರೆಯುವವರು ಹೆಸರು ಮುಂತಾದವುಗಳನ್ನು ಪುಟ್ಟಕ್ಷರಗಳಿಂದ ಬರೆಯಬೇಕು.

[140-2]

ನಮ್ಮ ವಿಳಾಸ:—ರಾಂಭಾಕ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ಹೊಸ ನಮೂನೆ ಗಡಿಯಾರ! ಎಂದಿಗೂ ನೋಡಿರಲಾರಿರಿ!!

ಅಯ್ಯಾ!—ಈ ಹೊಸ ಗಡಿಯಾರವು ಇಂಗ್ಲೀಸ್ ನಮೂನೆಯಾಗಿದೆ. ಇದುವರೆಗೂ ಅಂತಹ ಹೊಸ ಗಡಿಯಾರವು ಹೊರಕ್ಕೆ ಬರಲಿಲ್ಲ; ರಾಸ್‌ಕೋಪ್ ರೈಲ್ವೆ ರೆಗ್ಯುಲೆಟರ್ ಮತ್ತು ಬೊಂಬಾಯಿ ಮೆಯಿಲ್ ರೆಗ್ಯುಲೇಟರ್ ಗಡಿಯಾರಗಳಲ್ಲವನ್ನು ಇದು ಮೀರಿಸುತ್ತದೆ.



ಇದು ಬಹಳ ಬಲವಾದ ಲೀವರ್ ಸಾಮಾನುಗಳಿಂದ ತಯಾರು ಮಾಡಿಸಲ್ಪಟ್ಟಿದೆ. ಈ ಗಡಿಯಾರವನ್ನು ಭಾರಿ ಭಾರಿ ಉದ್ಯೋಗಸ್ಥರೆಲ್ಲರೂ ಕೊಂಡುಕೊಳ್ಳುತ್ತಲಿದಾರೆ. ಈ ಗಡಿಯಾರವನ್ನು ಕೊಳ್ಳಬೇಕೆಂದು ಅಪೇಕ್ಷಿಸುವವರು ಮತ್ಯಾವ ಗಡಿಯಾರವನ್ನೂ ಕೊಂಡುಕೊಳ್ಳಲಾರರು. ಇದರ ಡೈಲಿನ ಮೇಲೆ "ಎಲ್ಗ್ಯಾ ಸ್ವಿಸ್ ಮೇಡ್" ಎಂದು ಬರೆದಿರುತ್ತದೆ. ಈ ಗಡಿಯಾರದ ಬೆಲೆ ನಾಲ್ಕು ಇನಾಂ ಸಾಮಾನುಗಳ ಸಹಿತ ರೂ. 4-0-0. ಇನಾಂ ಸಾಮಾನುಗಳ ತಪಸೀಲ್—1 ಸೊಗಸಾದ ಸರಪಣಿ, 2 "ಫೌಂಟನ್‌ಪೆನ್", 3 ಕನ್ನಡಕ, 4 ಸೆಂಟ್‌ಬುಡ್ಡಿ. ಇದೇ ಮಾದರಿ ಸ್ವಲ್ಪ ಸಣ್ಣದಾದ ವಾಚು (ಗಡಿಯಾರ) ಇದರ ಹೆಸರು "ಇಕ್ವೆಟರ್ ವಾಚ್" ಇದರ ಬೆಲೆ ರೂಪಾಯಿ 3. [144-1]

ನಮ್ಮ ವಿಳಾಸ—ಕೆವುಲಾರಾಂ ಅಂಡ್ ಕಂಪನಿ, ನಂ. 28, ತಿರುಕಪ್ಪನ ಬೀದಿ, ಸಾಹುಕಾರ್‌ಪೇಟೆ, ಮದರಾಸ್.

S. U. N. & Co.,
BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬುಟಾ ಶೀರೆ, ಪೇಟ, ಮಗುಟ, ದುಪಟಿಲು, ಕಣಗಳು, ಕೋಟು ಸಿಲ್ಕುಗಾಮಗಳು ಪಟೀರ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕಾಶ್ಮೀರ್ ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-5]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಂಬಾ, ಕಾಶಿ.

ಪ್ರಸಿದ್ಧವಾದ
ಮೊಳಕಾಲ್ಮುರು ರೇಷ್ಮೆ ವಸ್ತ್ರಗಳು.

ಬೆಲೆ ಸುಲಭ! ಬಣ್ಣ ಗ್ಯಾರಂಟಿ! ಸರಕು ನಾಜೂಕು!!!

ನಮ್ಮ ಸ್ವಂತ ಮಗ್ಗಗಳಲ್ಲಿ ತಯ್ಯಾರಾಗುವ ಮಾಲುಗಳು.

ನಮ್ಮ ಮಾಲುಗಳಿಗೆ ಅನೇಕ ಎಗ್ಜಿಭಿಷನ್‌ಗಳಲ್ಲಿ ಮೆಡಲುಗಳೂ ಸರ್ಟಿಫಿಕೇಟುಗಳೂ ಬಂದಿವೆ. (1) ರೇಷ್ಮೆಯ ವಸ್ತ್ರಗಳು ¼, ½, 1, 2 ಅಂಗುಲ ಬೌತ ಮಾಸೆಗಳುಳ್ಳ 3, 4, 5, 6 ಮೊಳಗಳು ಉದ್ದ 2, 2½, 3 ಮೊಳ ಅಗಲಗಳುಳ್ಳ ವಸ್ತ್ರಗಳು ಮತ್ತು ರುದ್ರಗಂಟೆ, ಮಂಗಳಗಿರಿ, ಸಾದಾ ವಸ್ತ್ರಗಳು ಬಹಳ ನಮೂದಾಗಿ ಹುರಿ ರೇಷ್ಮೆಯಲ್ಲಿ ತಯಾರಾಗುತ್ತವೆ. (2) ರೇಷ್ಮೆಯ ಸೀರೆಗಳು:—ಅರಳೀಪೇಟೆ, ಧರ್ಮಾವರ, ತರಹೇವಾರಿ, ಹಸುರು, ಅಂಚುಳ್ಳ, ಸರಿಗೆ ಬಣ್ಣದ ಸೀರೆಗಳು ಬಹಳ ನಾಜೂಕಿನಿಂದ ತಯಾರಾಗುತ್ತವೆ. (3) ಮಗಟಗಳು:—ರುದ್ರಾಕ್ಷಿ ಅಂಚು, ಸಾಲು ಕಣ್ಣು, ಸರಿಗೆ ಅಂಚು, ಇವೇ ಮೊದಲಾದ ಅಂಚುಗಳಲ್ಲಿ ಬಹಳ ನಮೂನೆಯಾಗಿ ತಯಾರಾಗುತ್ತವೆ. (4) ಲಿಂಗವಸ್ತ್ರ, ಮತ್ತು ಶೈವವಸ್ತ್ರಗಳು:—ತರಹೇವಾರಿ ಕೈವಸ್ತ್ರಗಳು ತಯ್ಯಾರಾಗುತ್ತವೆ. ಲಿಂಗದ ವಸ್ತ್ರಗಳು ಬಹಳ ಚೆನ್ನಾಗಿ ತಯ್ಯಾರಾಗುತ್ತವೆ. (5) ನವಕಟ್ಟುಗಳು:—5, 6, 7 ಮೊಳದ ಉದ್ದ ಇರುತ್ತವೆ.

ಮೇಲ್ಕಂಡ ಸರಕುಗಳು ಅಪೇಕ್ಷಿಸುವವರು ವಿ. ಪಿ. ಮೂಲಕವಾಗಿಯೂ ಸರಿ, ಯಾ ಮುಂಗಡವಾಗಿ ಹಣ ಕಳುಹಿಸಿಯಾಗಲಿ ತರಿಸಿಕೊಳ್ಳಬಹುದು.

ವಿಳಾಸ:—ಕೆ. ತಿಪ್ಪಣ್ಣ, ನಾಗಪ್ಪ, ರೇಷ್ಮೆ ವಸ್ತ್ರ ವ್ಯಾಪಾರಸ್ಥರು, ಮೊಳಕಾಲ್ಮುರು, ಚಿತ್ರದುರ್ಗ ಡಿಸ್ಟ್ರಿಕ್ಟು. [92-1]

ಕನ್ನಡ ಮಾಸಪತ್ರಿಕೆ.

"ವಿಕಟ ವಿನೋದಿನಿ."

ಹಾಸ್ಯರಸ ಪ್ರಧಾನವಾದ ಮತ್ತು ಚಿತ್ರಕರವಾದ ಹಾಸ್ಯೋಕ್ತಿಗಳಿಂದ ಕೂಡಿರುವ ಪಟಚಿತ್ರವು ವಿಚಿತ್ರವು ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ. ನಮ್ಮ ವಿಳಾಸ—

[181-2] "ವಿಕಟ ವಿನೋದಿನಿ" ಆಫೀಸ್, ಅರಳೇಪೇಟೆ, ಬೆಂಗಳೂರು ಸಿಟಿ.

ಹವಳದ ಬಣ್ಣ ಶೀರೆ ಅನ್ವಲ್ ರಹಿಂ ರೂಪಾಯಿ 3-3-0.

ಬಹಳ ಸೊಗಸಾದದ್ದು. 16 ಮೊಳ. ಬಾಳಿಕೆ ಬರುತ್ತೆ.

ಈ ಶೀರೆ ಉಡುವುದಕ್ಕೆ ಧರಿಸುವುದಕ್ಕೂ, ನೋಡುವುದಕ್ಕೆ ನಯವಾಗಿಯೂ ಇದೆ. ಈ ಶೀರೆಗಳು ಬಿಳೀ ಮಲ್ಲಿ ನಲ್ಲಿ ಕಪ್ಪು ಕೆಂಪು ಕೂಡಿದ ಚಾಕಲೆಟ್ ರೋಜಾ ಹುವ್ವಿನ ರಂಗಿನಂತೆ ಈ ವಳದ ಬಣ್ಣಗಳು ಹಾಕಲ್ಪಟ್ಟು ಸುತ್ತಲು ಸಣ್ಣ ಅಂಚು ಕಟ್ಟಲ್ಪಟ್ಟಿದೆ. ಇಂಥಾ ಹೊಸ ನಮೂನೆಯ ಶೀರೆಯು ಇದುವರೆಗೂ ತಯಾರು ಆಗಲಿಲ್ಲ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ತರಿಸಿಕೊಂಡು ಅಲಂಕಾರ ಭೂಷಿತರಾಗಿರಬೇಕೆಂದು ನಂಬುತ್ತೇವೆ.



[130-2] ನಮ್ಮ ವಿಳಾಸ—ಉಮೇಶಂಕರ್ ಟೋಕಲ್, 84, ಮಿಂಟ್ ಸ್ಟ್ರೀಟ್, ಸಾಹುಕಾರ್‌ಪೇಟೆ, ಮದರಾಸ್.

ಬಹುಮಾನ! ಮುಫತ್ತು!

ವಾಚಿನ ಕೂಡ 10 ಇನಾಮುಗಳು.

ನಾವು ಕಳುಹಿಸುವ ವಾಚುಗಳು ಅತ್ಯಂತ ನಂಬಿಕೆಯುಳ್ಳ ಕಾಲವನ್ನು ತೋರಿಸುತ್ತವೆ. ಇವುಗಳನ್ನು ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಒಂದೊಂದು



ಭಟ್ಟಿಯಾದ ವಾಚಿನ ಕೂಡ ಸೊಗಸಾದ 10 ಬಹುಮಾನಗಳನ್ನು ಬಿಟ್ಟಿ ಕೊಡುವೆವು. ಬಹುಮಾನಗಳ ವಿವರ:—ಒಂದು ವಾಚ್ ಕೇಸು, ಒಂದು ಸರಪಣಿ, ಒಂದು ಉಂಗುರ ಮುಚಿ, ಮೂರು ಕೈವಸ್ತ್ರಗಳು, ಉತ್ತಮ ತರದ ಕೂದಲೆಣ್ಣೆಯುಳ್ಳ ಎರಡು ಸೀಸೆಗಳು, ಒಂದು ಬಾಚಣಿಗೆ, ಒಂದು ಕೈಗನ್ನಡಿ. ಮೂರು ವಾಚುಗಳನ್ನು ಒಂದೇ ಸಲ ತರಿಸಿಕೊಂಡರೆ ಪೋಸ್ಟೇಜ್ ಮಾಫಿ; ಆರು ವಾಚು ಒಂದೇ ಸಲ ತರಿಸಿದವರಿಗೆ ಒಂದು ವಾಚು ಇನಾಂ. [124-2]

ವಾಚುಗಳ ಕ್ರಯಗಳು:—

1. ರೈಲ್ವೆ ರೆಗ್ಯುಲೇಟರ್, ಬಹುಮಾನಗಳ ಸಹಿತ	......	ರೂ. 3-0-0
2. ಬಾಂಬೆ ಮೆಯಿಲ್, ,,	......	,, 3-4-0
3. ರಂಗೂನ್ ಮೆಯಿಲ್, ,,	......	,, 3-4-0
4. ಇನ್‌ವೆಂಟರ್, ,,	......	,, 3-4-0
5. ಕೈಗೆ ಕಟ್ಟಿಕೊಳ್ಳುವ ಸ್ಟ್ರಾಪ್ ಸಹಿತವಾದ ಚಿಣ್ಣ ವಾಚ್, ಬಹುಮಾನಗಳಿಲ್ಲದೆ	......	,, 3-8-0
6. ರಾಸ್ಕೋಪ್ ವಾಚ್, ಬಹುಮಾನಗಳಿಲ್ಲದೆ	......	,, 1-14-0

ವಿಳಾಸ—ಬಿ. ಜಿ. ಎಲ್. ಕೃಷ್ಣ ಮತ್ತು ಕಂಪನಿ, 3-2, ಪೊಲೀಸ್ ಕಮಿಷನರ್ ಆಫೀಸ್ ರೋಡ್, ಎಗ್ಮೋರ್, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾನ್ನು ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾಗದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಥರುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಆಗುವುದು; ಬಡಿದ ಬಾಯಾರಿಕೆ; ಚಳಿ; ಎದೆ ಕಲ್ಲಾಗುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ಜ್ವರ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ನ್ಯೂಬಾವು, ಉರುಮೂತ್ರ, ಮೂತ್ರಕೋಶದ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾನ್ನು ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-47]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೧—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಪೋಸ್ಟ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಹವಳದ ಬಣ್ಣ ಶೀರೆ.

ಬಹಳ ಸೊಗಸಾದದ್ದು! 16 ಮೊಳ!! ಬಾಳಿಕೆಬರುವದು!!!

ಈ ಶೀರೆಗಳು ಬಿಳೀ ಮಲ್ಲಿ ನಲ್ಲಿ ಕಪ್ಪು, ಕೆಂಪು ಕೂಡಿದ ಚಾಕಲೇಟ್ ರಂಗಿನಂತೆ ಹವಳದ ಬಣ್ಣಗಳು ಹಾಕಲ್ಪಟ್ಟು, ಸುತ್ತಲೂ ಸಣ್ಣ ಅಂಚು ಕಟ್ಟಲ್ಪಟ್ಟಿದೆ. ಇಂಥಾ ಹೊಸ ನಮೂನೆಯು ಇದುವರೆಗೂ ತಯಾರಾಗಲಿಲ್ಲ. ಈ ಕಾಲಕ್ಕೆ ಬಹಳ ಉಪಯೋಗವಾದದ್ದು. ಇದನ್ನು ಪ್ರತಿ ಒಬ್ಬ ಸ್ತ್ರೀಯೂ ತರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇವೆ.

ಕ್ರಯ ಜತೆಯು 3-4-0
ವಿ. ಪಿ. ಛಾರ್ಜು 0-5-0

ನಮ್ಮ ವಿಳಾಸ—ಕೆ. ಕನಕ ಸಭಾಪತಿ,

[116-5] ಪಾರ್ಕ್ ಟೌನ್, ಮದರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಹಿರಿಯರವರೆಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯವಶ್ಯಕವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಗಳೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸನಿಹದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-34] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಸಂತೋಷಕರವಾದ ಬಹುಮಾನದ ಪ್ರಕಟನೆ.

ಜುಯೆಲ್ಡ್ ಸ್ಪ್ರಾಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

8 ಬಹುಮಾನಗಳ ಸಹಿತ ರೂ. 3-4-0 ಮಾತ್ರ.

6 ವರುಷದ ವಾಕ್ರಿಯಾದ ಗ್ಯಾರಂಟಿ ಕೊಡಲ್ಪಡುತ್ತೆ.

ಪ್ರಿಯ ಮಿತ್ರರೇ, ಈ ಚಿತ್ರದಲ್ಲಿ ತೋರಿಸಿರುವ ಜುಯೆಲ್ಡ್ ಸ್ಪ್ರಾಂಗ್ ಪಾಕೆಟ್ಟು ರಿಜಿಸ್ಟರ್ಡ್ ವಾಚ್. 5 ರತ್ನಗಳು ಉಳ್ಳ ಓಪನ್ ಫೇಸ್ ಕಂಪೆನ್ಸೇಷನ್ ಬ್ಯಾಲೆನ್ಸ್. ಬಹು ಬಲಿಷ್ಠವಾದ ಗಡಿಯಾರ. ಬಲಿಷ್ಠವಾದ ಸಾಮಾನುಗಳಿಂದಲೂ, ನಾಜೂಕಾದ ಯಂತ್ರದಲ್ಲಿಯೂ, ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ ತಯಾರಿಸಲ್ಪಟ್ಟದ್ದು. ಇದು ನೋಡುವದಕ್ಕೆ ಚಿಕ್ಕದಾಗಿಯೂ, ಮುಚ್ಚಳವಿಲ್ಲದಾಗಿಯೂ ಇರುತ್ತೆ. ನಾವು ಪ್ರತ್ಯೇಕವಾಗಿ ಇದನ್ನು ಪರಿಶೋಧಿಸಿರುತ್ತೇವೆ. ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥದ್ದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ನಮ್ಮ ಕಂಪನಿ ಹೊಸದಾಗಿ ಇರುವದರಿಂದ ಭಾರಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಗಡಿಯಾರವನ್ನು ತರಿಸಿ ನೋಡಿದರೆ ಎಲ್ಲರೂ ಮೋಹಿಸುವರು. ಬರೀ ವಾಚಿನಿಂದ ಏನು? ಈ ಗಡಿಯಾರವನ್ನು ಕೊಳ್ಳೆ ಬರೆದು ತರಿಸಿಕೊಳ್ಳಿ. ಬಹುಮಾನದ ವಿವರಗಳು ಹ್ಯಾಗೆಂದರೆ—(1) ಸುಂದರವಾದ ಸರಪಣಿ, (2) ಉತ್ತರಮುಚಿ, (3) ಇಂಗ್ಲೀಷು ನಮೂನೆ ಚಾಕು ಡಿಗೆ, (4) ಜರ್ಮನ್ ಕನ್ನಡಿ, (5) ಜರ್ಮನ್ ಕನ್ನಡಕ, (6) ಸೊಗಸಾದ ಪೆಟ್ಟಿಗೆ, (7) ಹರಳುಗಳಿಂದ ಸೆಟ್, (8) ಸುವಾಸನೆಯುಳ್ಳ ಪರಿಮಳ ಸೀಸೆ.



ನಮ್ಮ ವಿಳಾಸ:—ಉಮೇಶಂಕರ್ ಟೋಕಲ್,

[130-2] 84, ಮಿಂಟು ಸ್ಟ್ರೀಟು, ಸಾಹುಕಾರ್‌ಪೇಟೆ, ಮದರಾಸು.

ಹುಚ್ಚುನಾಯಿ ಕಡಿದವರೂ, ಆಸ್ಪತ್ರೆ ಚಿಕಿತ್ಸೆಯೂ.

ಹುಚ್ಚು ಹಿಡಿದಿರಬಹುದಾದ ನಾಯಿಗಳಿಂದಲಾಗಲೀ ಇತರ ಪ್ರಾಣಿಗಳಿಂದಲಾಗಲೀ ಕಡಿಯಲ್ಪಟ್ಟ ಜನಗಳ ವಿಷಯದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬ ಸಂಗತಿಯನ್ನು ಕುರಿತು ಕೂನೂರಿನಲ್ಲಿರುವ ದಕ್ಷಿಣ ಇಂಡಿಯಾ ಪ್ಯಾಸ್ಟ್ಯೂರ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರವರು ಸಾದರಪಡಿಸಿರುವ ಇದರಡಿ ಕಂಡ ನಿಯಮಗಳನ್ನು ಮೈಸೂರು ಸರ್ಕಾರದವರು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿರುತ್ತಾರೆ:—

(1) ಸಂಶಯವಿಲ್ಲದ ಯಾವುದಾದರೂ ನಾಯಿಯು ಆದನ್ನು ಕೆಣಕದಿದ್ದರೂ ಬಂದು ಕಡಿದರೆ ಹಾಗೆ ಕಡಿಸಿಕೊಂಡವನು ಸಾವಕಾಶ ಮಾಡದೆ ಚಿಕಿತ್ಸೆಗಾಗಿ ಕೂನೂರಿಗೆ ಹೋಗಬೇಕು; ಏಕೆಂದರೆ ಅಂಥಾ ನಾಯಿಯು ಪ್ರಾಯಶಃ ಹುಚ್ಚುನಾಯಿಯಾಗಿರುವುದೆಂತ ಅನುಭವದಿಂದ ಗೊತ್ತಾಗುತ್ತದೆ. (2) ತಿಳಿದಿದ್ದಾಗಿಯೂ, ಹಿಡಿಯಲಿಕ್ಕಾಗುವುದಾಗಿಯೂ ಇರುವ ನಾಯಿಯಿಂದ ಯಾರಾದರೂ ಕಚ್ಚಲ್ಪಟ್ಟಾಗ ಆ ನಾಯಿಯನ್ನು ಕೊಲ್ಲಬಾರದು; ಆದರೆ ಭದ್ರವಾಗಿ ಒಂದು ಕಡೆ ಕಟ್ಟಿಹಾಕಬೇಕು. ಕಡಿದ ಹತ್ತು ದಿನಗಳ ಮೇಲೆಯೂ ಅದು ಬದುಕಿ ಚೆನ್ನಾಗಿದ್ದರೆ ಕಡಿಸಿಕೊಂಡವನು ಚಿಕಿತ್ಸೆಗಾಗಿ ಹೋಗಬೇಕಾದುದಿಲ್ಲ. ಹಾಗಿಲ್ಲದೆ ಆ ನಾಯಿಯು ಹತ್ತು ದಿನಗಳೊಳಗಾಗಿ ರೋಗಗ್ರಸ್ತವಾಗಿ ಸತ್ತರೆ ಕಡಿಸಿಕೊಂಡವನು ಚಿಕಿತ್ಸೆಗಾಗಿ ಹೋಗಬೇಕು. ವಾಕ್ಟು ಮೊದಲೇ ತಿಳಿಸಿರುವ ರೀತಿಯಲ್ಲಿ ಆ ನಾಯಿಯ ಮಿದುಳಿನ ಕೆಲವು ಭಾಗವನ್ನು ಕಾಪಾಡಿ ಮೊಹರುಬಿಡಿ ಗೋಸ್ಕರ ಸಂಗಡ ತೆಗೆದುಕೊಂಡು ಹೋಗಬೇಕು. (3) ಚರ್ಮಕ್ಕೆ ಗಾಯ ತಗಲದೆ ನಾಯಿಯಿಂದ ನೆಕ್ಕಲ್ಪಟ್ಟವರು ಚಿಕಿತ್ಸೆಗಾಗಿ ಹೋಗಬೇಕಾದುದಿಲ್ಲ. (4) ಹುಚ್ಚು ಪ್ರಾಣಿಗಳನ್ನು ಸುಮ್ಮನೆ ಸ್ಪರ್ಶಮಾತ್ರ ಮಾಡಿದವರಾಗಿ ಹೊಸ ಗಾಯಗಳೇನೂ ಇಲ್ಲದವರು ಚಿಕಿತ್ಸೆಗೆ ಹೋಗಬೇಕಾದುದಿಲ್ಲ.

ವೃತ್ತಾಂತ ಪತ್ರಿಕೆ.

ಸನ್ ೧೯೧೫ ನೇ ಇಸವಿ ಜುಲೈ ತಾ. ೨೨ ನೇ ಗುರುವಾರ.

ಮ್ಯುನಿಸಿಪಲ್ ಗವರ್ನಮೆಂಟು.

ಆಳ್ವಿಕೆಯ ಕಾರುಬಾರುಗಳಲ್ಲಿ ಹೆಚ್ಚು ಅಧಿಕಾರವನ್ನು ಪಡೆಯಬೇಕೆಂಬ ಕುತೂಹಲವು ಈಗೀಗ ನಮ್ಮ ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ವಿಶೇಷವಾಗಿ ಹರಡಿಕೊಳ್ಳುತ್ತಾ ಬಂದಿದೆ. ನಮ್ಮ ಮೈಸೂರು ಗವರ್ನಮೆಂಟಿನವರು ಸ್ಥಳೀಯ ಕಾರುಬಾರುಗಳನ್ನು ನಡಿಸುವುದರಲ್ಲಿ ಪ್ರಜೆಗಳಿಗೆ ಹೆಚ್ಚಾದ ಸ್ವಾತಂತ್ರ್ಯಗಳನ್ನು ವಹಿಸಬೇಕೆಂಬ ಅಭಿಲಾಷೆಪಡುತ್ತಿರುವಂತೆ ಕಾಣುವುದು. ಕಳೆದ ತಿಂಗಳಲ್ಲಿ ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡು ಗಳ ಮಹಾಸಭೆಯು ರಾಜಧಾನಿಯಲ್ಲಿ ನಡಿಸಲಾಯಿತು. ಸಂಸ್ಥಾನಾದ್ಯಂತದಿಂದ ಬಂದಿದ್ದ ಪ್ರತಿನಿಧಿಗಳು ಈ ಮಹಾಸಭೆಯಲ್ಲಿ ಹಲವು ವಿಚಾರಗಳನ್ನು ಕುರಿತು ಚರ್ಚೆಮಾಡಿ, ಗವರ್ನಮೆಂಟಿನವರು ಮ್ಯುನಿಸಿಪಾಲಿಟಿಗಳಿಗೂ ಲೋಕಲ್ ಬೋರ್ಡುಗಳಿಗೂ ಇನ್ನೂ ವಿಶೇಷವಾದ ಸ್ವಾತಂತ್ರ್ಯಗಳನ್ನು ವಹಿಸಿಕೊಡಬೇಕೆಂದು ಕೇಳಿರುತ್ತಾರೆ. ಬಹುರ್ಜಾಪನಲ್ಲಿ ಈ ಸಂಘಗಳಿಗೆ ಹೆಚ್ಚಾದ ಸ್ವಾತಂತ್ರ್ಯವನ್ನು ವಹಿಸಬೇಕೆಂದು ಆ ಮಹಾ ಸಭೆಯವರು ಸೂಚಿಸಿರುವರು. ಸ್ಥಳೀಯ ಆರೋಗ್ಯ ವಿಚಾರ, ಒಳ್ಳೆಯ ನೀರನ್ನು ಒದಗಿಸುವುದು, ದೀಪ ಹಚ್ಚುವುದು, ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿಟ್ಟು ಕಾಪಾಡುವುದು, ಕೆರೆ ಕಟ್ಟೆ ಕೊಳಗಳ ನೀರು ಕೆಡದಂತೆ ನೋಡಿ ಕ್ರಮಪಡಿಸುವುದು, ಸಣ್ಣ ಮಕ್ಕಳಿಗೆ ಬಾಲ್ಯ ವಿದ್ಯೆಯನ್ನು ಕ್ರಮಪಡಿಸಿ ನಡಿಸುವುದು—ಈ ಭಾಗಗಳನ್ನೆಲ್ಲಾ ಆಯಾ ಮ್ಯುನಿಸಿಪಾಲಿಟಿಗೂ ಲೋಕಲ್ ಬೋರ್ಡಿಗೂ ಯೋಗ್ಯತೆಯೂ ಸಾಮರ್ಥ್ಯವೂ ಉಂಟಾಗಿದೆ ಎಂದು ಗೊತ್ತಾದ ಹಾಗೆಲ್ಲಾ ವಹಿಸುತ್ತಾ ಬರಬೇಕಾದದ್ದೇ ನ್ಯಾಯವಾಗಿದೆ.

ಸ್ಥಳೀಯ ಕಾರ್ಯಗಳು ಸಾಮಾನ್ಯವಾದವುಗಳಲ್ಲ. ಅವುಗಳಿಗೆ ವಿಶೇಷವಾದ ಸಮಯವನ್ನೂ ಸಾಮರ್ಥ್ಯವನ್ನೂ ವಿನಿಯೋಗಿಸುವುದಕ್ಕೆ ಸಿದ್ಧರಾಗಿರುವವರು ಅನೇಕ ಮಂದಿ ಬೇಕಾಗುವರು. ಅಂಥವರು ವಿದ್ಯಾವಂತರಾಗಿಯೂ, ಅನುಭವಸ್ಥರಾಗಿಯೂ ಇರಬೇಕು. ಮತ್ತೂ ಅವರಿಗೆ ತಮ್ಮ ಊರಿನ, ಸೀಮೆಯ ಮುತ್ತಿನ ಕುಂದು ಕೊರತೆಗಳು ಮಾತ್ರ ತಿಳಿದಿರುವುದೇ ವಿಶೇಷವಲ್ಲ; ನಮ್ಮ ಸಂಸ್ಥಾನದ ಮತ್ತೂ ಬ್ರಿಟಿಷ್ ಹಿಂದುಸ್ಥಾನದ ವಿದ್ಯಮಾನಗಳನ್ನೂ ಅವರು ಪರಿಶ್ರಮ ಮಾಡಿಕೊಂಡವರಾಗಿರಬೇಕು. ಮ್ಯುನಿಸಿಪಾಲಿಟಿಯಲ್ಲೂ ಲೋಕಲ್ ಬೋರ್ಡುಗಳಲ್ಲೂ ಮೆಂಬರಾಗತಕ್ಕವರು ನಮ್ಮ ಸಂಸ್ಥಾನದಲ್ಲೂ ಬ್ರಿಟಿಷ್ ಹಿಂದುಸ್ಥಾನದಲ್ಲೂ ಸಂಚಾರಮಾಡಿ, ಇತರ ಕಡೆಗಳಲ್ಲಿ ನಡಿಸುವ ಪ್ರಜಾ ಸೌಕರ್ಯ ಕಾರ್ಯಗಳನ್ನೂ ಅವುಗಳ ಲಕ್ಷಣಗಳನ್ನೂ ಕಣ್ಣಾರ ನೋಡಿ ಮುಂದಟ್ಟು ಮಾಡಿಕೊಂಡವರಾಗಿಯೂ ಇರಬೇಕು. ಯಾವುದಾದರೊಂದು ಒದಬಾವಣೆಯನ್ನು ರೂಢಿಸಬೇಕೆಂದಾಗ ಪ್ರಜೆಗಳು ವಿರೋಧವಾಗಿ ನಿಲ್ಲದಂತೆ ಮೆಂಬರಾಗತಕ್ಕವರು ಜನರ ಶೀಲಸ್ವಭಾವಗಳನ್ನೂ ಅವರ ಪದ್ಧತಿ ಆಚಾರ ವ್ಯವಹಾರಗಳನ್ನೂ ಚೆನ್ನಾಗಿ ಅರಿತವರಾಗಿರಬೇಕು. ಕೌನ್ಸಿಲ್ ಮತ್ತು ಬೋರ್ಡುಗಳಲ್ಲಿ ಚರ್ಚೆ ಮಾಡಲ್ಪಡುವ ಕೆಲಸಕಾರ್ಯಗಳನ್ನು ಮುತುವರ್ಜಿಯಿಂದ ನಡಿಸುವವರಾಗಬೇಕು. ಆಯಾ ಕೆಲಸ ಕಾರ್ಯಗಳನ್ನು ನೋಡಿ ಅವುಗಳ ಸ್ವಭಾವವನ್ನು ತಿಳಿದು ಆಯಾ ಸ್ಥಳದ ನಿವಾಸಿಗಳಿಗೂ ಸಲ್ಲತಕ್ಕವುಗಳೆಂಬುದನ್ನು ಚರ್ಚೆ ಮಾಡಲು ಚತುರರಾಗಿಯೂ ಸಮರ್ಥರಾಗಿಯೂ ಇರಬೇಕು. ಮ್ಯುನಿಸಿಪಲ್ ಕೌನ್ಸಿಲರ ಅಥವಾ ಬೋರ್ಡ್ ಮೆಂಬರ ಪದವಿಯು ಗೌರವವಾದದ್ದು; ಅದನ್ನು ಹ್ಯಾಗಾದರೂ ಸಂಪಾದಿಸಿಕೊಂಡರೆ ಸರಿ ಎಂಬ ಕುತೂಹಲವುಳ್ಳವರು ಅನೇಕರುಂಟೆಂದು ಹೇಳಬಲ್ಲೆವು. ಇಂಥಾ ಪದವಿಯ ಕುತೂಹಲವುಳ್ಳವರಿಗೆ ಆ ಪದವಿಯಲ್ಲಿದ್ದು ಮಾಡಬೇಕಾಗುವ ಕೆಲಸಕಾರ್ಯಗಳು ತಿಳಿದಿಲ್ಲ; ಒಂದು ವೇಳೆ ತಿಳಿದಿದ್ದರೂ ಮಾಡುವುದಕ್ಕೆ ಸಿದ್ಧರಾಗಿಲ್ಲ.

ಮ್ಯುನಿಸಿಪಾಲಿಟಿಗಳಿಗೂ ಲೋಕಲ್ ಬೋರ್ಡುಗಳಿಗೂ ಪ್ರಜೆಗಳು ಮೆಂಬರುಗಳನ್ನು ಚುನಾವಣೆಮಾಡುವ ಕಾಲ ಇಷ್ಟರಲ್ಲೇ ಬಂದಿರುವುದಾಗಿದೆ. ಪ್ರಜೆಗಳು ದಾಕ್ಷಿಣ್ಯಕ್ಕೆ ಕಟ್ಟುಬೀಳದೆ ಯೋಗ್ಯರೂ ಸಮರ್ಥರೂ ಆದವರನ್ನೇ ಚುನಾಯಿಸಬೇಕು. ಆ ಪದವಿಗೋಸ್ಕರವೇ ಮೆಂಬರಾಗಬೇಕೆಂಬುವರನ್ನು ಎಷ್ಟು ಮಾತ್ರಕ್ಕೂ ಚುನಾಯಿಸಕೂಡದು. ಓಟುಕೊಡಿ ಎಂದು ಕೇಳುವುದಕ್ಕೆ ಬಂದಾಗ ನಮ್ಮ ಊರಿಗೂ, ಅಥವಾ ನಮ್ಮ ತಾಲ್ಲೂಕಿಗೂ, ಇಲ್ಲವೇ ನಮ್ಮ ಡಿಸ್ಟ್ರಿಕ್ಟಿಗೂ ಯಾವ ಯಾವ ಕೆಲಸವನ್ನು ನಡಿಸಿಕೊಡಬಲ್ಲಿರಿ ಎಂದೂ, ಕೌನ್ಸಿಲ್ಲಿನ ಬೋರ್ಡಿನ ಮತ್ತೂ ಕಮಿಟಿಗಳ ಮೀಟಿಂಗುಗಳಿಗೆ ತಪ್ಪದೆ ಹೋಗಿ ಕೆಲಸ ಕಾರ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಮಾಡುತ್ತೀರೋ ಎಂದೂ, ಆಯಾ ಸ್ಥಳಗಳನ್ನು ಸಾಕ್ಷಾತ್ತಾಗಿ ಹೋಗಿ ನೋಡಿ ಅಲ್ಲಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಗಳನ್ನು ಸಾರ್ಥಕವಾಗಿ ನಡೆಯುವಂತೆ ಮಾಡುತ್ತೀರಾ ಎಂದೂ, ನೀವು ತೆರಿಗೆ ಸುಂಕಗಳನ್ನು ಸಕಾಲದಲ್ಲಿ ಸಲ್ಲಿಸುವುದಲ್ಲದೆ ಮ್ಯುನಿಸಿಪಾಲಿಟಿಯ ಅಥವಾ ಲೋಕಲ್ ಬೋರ್ಡಿನ ಹಣಕಾಸು ಮಿತವಾಗಿಯೂ, ವಿವೇಕದಿಂದಲೂ, ಸಾರ್ಥಕವಾಗಿಯೂ ವಿನಿಯೋಗವಾಗುವಂತೆ ದರ್ಪವಿಟ್ಟು ನೋಡಿಕೊಳ್ಳಬಲ್ಲಿರಾ ಎಂದೂ, ನಿಮ್ಮ ಸ್ವಂತ ಸುಖಸಂತೋಷಗಳನ್ನು ಬಿಟ್ಟು ಮ್ಯುನಿಸಿಪಲ್ ಅಥವಾ ಲೋಕಲ್ ಬೋರ್ಡಿನ ಕೆಲಸಕಾರ್ಯಗಳನ್ನು ಮಾಡಲು ಒಪ್ಪುವಿರಾ ಎಂದೂ ಓಟರುಗಳು ಕೇಳಿ, ಅವರುಗಳ ಸಮ್ಮತಿಯನ್ನು ಪಡೆದು ಓಟುಗಳನ್ನು ಕೊಡಬೇಕೆಂದು ಸೂಚಿಸುತ್ತೇವೆ. ಈ ಪ್ರಕಾರ ಅವರು ಸ್ಥಳೀಯ ಕಾರ್ಯಗಳನ್ನು ನಡಿಸುವುದರಲ್ಲಿ ಉತ್ಸಾಹಪಡುತ್ತಾ ಬಂದಪಕ್ಷದಲ್ಲಿ ಪಟ್ಟಣ ಊರು ಗ್ರಾಮಗಳು ಎಷ್ಟೋ ಹಿತಕರವಾಗಿ ಅಭಿವೃದ್ಧಿಗೆ ಬರುತ್ತವೆ. ಸ್ವಪ್ರತಿಷ್ಠೆಯನ್ನೂ ಸ್ವಪ್ರಯೋಜನವನ್ನೂ ಮುಂದಿಟ್ಟುಕೊಂಡಿರತಕ್ಕವರನ್ನೂ, ಪೌರ ಕಾರ್ಯಗಳಲ್ಲಿ ಮುತುವರ್ಜಿಯಾಗಲಿ ಉತ್ಸಾಹವಾಗಲಿ ಇಲ್ಲದವರನ್ನೂ ಮೆಂಬರುಗಳಾಗಿ ಚುನಾವಣೆಮಾಡುವುದು ವ್ಯರ್ಥವೇ ಸರಿ. ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ಮೆಂಬರಾಗತಕ್ಕವರು ನಿಸ್ಪೃಹರಾಗಿಯೂ, ದೇಶಪಕ್ಷಪಾತರಾಗಿಯೂ, ವಿವೇಕ ವ್ಯವಧಾನಗಳನ್ನು ಪಡೆದವರಾಗಿಯೂ ಇರಬೇಕಾದದ್ದು ಪರಮಾವಶ್ಯಕ. ಮೈಸೂರು ಪಟ್ಟಣದಲ್ಲೂ ಸಂಸ್ಥಾನದ ಇತರ ಕಡೆಗಳಲ್ಲೂ ಮೆಂಬರುಗಳ ಚುನಾವಣೆಯು ಇಷ್ಟರಲ್ಲೇ ನಡೆಯಬೇಕಾಗಿರೋಣದರಿಂದ ಪ್ರಜೆಗಳು ಚೆನ್ನಾಗಿ ವಿವೇಚನೆ ಮಾಡಿ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾ ದೊಡ್ಡ ಮನುಷ್ಯರಿಗೇ ತಮ್ಮ ಓಟುಗಳನ್ನು ಕೊಟ್ಟು ಅಂಥವರನ್ನೇ ತಮ್ಮ ಪ್ರತಿನಿಧಿಗಳಾಗಿ ಮಾಡಿಕೊಂಡಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಪ್ರತಿಬಿಂಬ.

ಒಂದಾನೊಂದು ದಿನ ರಾತ್ರಿ ಸುಮಾರು ಒಂಬತ್ತು ಗಂಟೆ ಸಮಯದಲ್ಲಿ ಊರ ಜನಗಳೆಲ್ಲರೂ ಊಟಮಾಡಿ ಮನೆಗಳ ಹೊರಗೆ ಜಗಲಿಯ ಮೇಲೆ ವೀಳ್ಯ ಆಗಿಯುತ್ತಾ ಸಾವಕಾಶವಾಗಿ ಕೂತುಕೊಂಡು ವಿನೋದಪಡುತ್ತಿದ್ದರು. ಕೆಲವರು ಕಾಲ, ಹವಾ ವಿಷಯಗಳಲ್ಲಿಯೂ ಮತ್ತೆ ಕೆಲವರು ಗೃಹಕೃತ್ಯ, ವ್ಯವಸಾಯ ವಿಷಯಗಳಲ್ಲಿಯೂ ರಮ್ಯವಾಗಿ ಸಲ್ಲಾಪಮಾಡುತ್ತಿದ್ದರು. ಯಾಕೆಂದರೆ ಚಂದ್ರನು ಪೌರ್ಣಮಿ ವಿಹಾರದಿಂದ ತೇಜೋಮಯನಾಗಿ ಪ್ರಕಾಶಿಸುತ್ತಲಿದ್ದನು. ಹುಡುಗರು ಗುಂಪುಕಟ್ಟಿಕೊಂಡು ಬೀದಿಗಳಲ್ಲಿ ಕಣ್ಣುಮುಚ್ಚಾಲೆ, ಚೆಂಡು, ಗುಮ್ಮಗಾಟಗಳನ್ನು ಆಡುತ್ತಾ ನಗುವ, ಹಾಸ್ಯಮಾಡುವ, ಅರ್ಥವಿಲ್ಲದ ಧ್ವನಿಗಳಿಂದ ಕೂಗುತ್ತಾ ಕೊಂಡು ಆಡುತ್ತಲಿದ್ದ [illegible] ಖಳ್ಳೆತಂಗಿಯುರನ್ನೂ ಸಂತೋಷಪಡಿಸುತ್ತಲಿದ್ದರು. ಆಗ ಆಕಾಶವು ಬಿಳಿದಾದ ಮೋಡಗಳಿಂದ ಆಚ್ಛಾದಿತವಾಗಿದ್ದಿತು. ಹೀಗಿರುವಾಗ ಅಕಸ್ಮಾತ್ತಾಗಿ ಆಕಾಶದಲ್ಲಿ ಚಂದ್ರನ ಬಿಂಬವು ಕ್ರಮೇಣ ಅದೃಶ್ಯವಾಗುತ್ತಾ ಸ್ವಲ್ಪ ಹೊತ್ತಿನೊಳಗಾಗಿ ಇಡೀ ಚಂದ್ರನು ಆಕಾಶದಲ್ಲಿ ಮಾಯವಾಗಿ ಕಣ್ಮರೆಯಾಯಿತು. ಹುಡುಗರು ಆಟಗಳನ್ನು ಬಿಟ್ಟು ಬೆರಗಾಗಿ ಮೇಲಣ ಆಕಾಶವನ್ನೂ ಸುತ್ತಮುತ್ತಲೂ ಕವಿದಿರುವ ಅಂಧಕಾರವನ್ನೂ ನೋಡುತ್ತಾ ನಿಂತರು. ಹೆಂಗಸರೂ ಗಂಡಸರೂ ಏನೋ ಸೋಜಿಗವೆಂದು ಮನೆಗಳ ಮೇಲೆ ಏರಿ ಕೂಗುತ್ತಾ ಸುತ್ತ [illegible] ಈ ವಿವರವನ್ನು ಓದಿ ಇದು ಚಂದ್ರಗ್ರಹಣವೆಂದು ಸುಲಭವಾಗಿ ಊಹಿಸುವರು.

ಚಂದ್ರನು ಸೂರ್ಯನ ಹಾಗೆ ಸ್ವತಃ ಪ್ರಕಾಶವುಳ್ಳವನಲ್ಲ. ಆದರೂ ಅದು ರಾತ್ರೀ ವೇಳೆಯಲ್ಲಿ ಪ್ರಕಾಶಿಸತಕ್ಕನು. ಬೆಳಕನ್ನು ಭೂಮಿಯ ಮೇಲೆ ಪ್ರಸರಿಸಮಾಡುತ್ತಾನೆ. ಕಾರಣವೇನೆಂದರೆ ಚಂದ್ರನು ತನ್ನ ಸ್ಪಷ್ಟ ಭಾಗವನ್ನು ಸೂರ್ಯನ ಕಡೆಗೆ ಒಡ್ಡುವದರಿಂದ ಅದರ ಪ್ರಭೆಯು ಚಂದ್ರನಲ್ಲಿ ಬೀಳುತ್ತದೆ. ಚಂದ್ರನು ಸೂರ್ಯನಿಂದ ತನ್ನ ಸ್ಪಷ್ಟದ ಮೇಲೆ ಬಿದ್ದ ಕಿರಣಗಳನ್ನು ಪ್ರತಿಬಿಂಬಿಸಿ ಆ ಬೆಳಕನ್ನು ಭೂಮಿಗೆ ಕಳುಹಿಸುವದು ಇದೇ ಚಂದ್ರನ ಪ್ರಕಾಶಕ್ಕೆ ಆಧಾರ. ನಾವು ಮುಕುರದಲ್ಲಿ ಮುಖವನ್ನು ತೋರ್ಪಡಿಸಿದರೆ ನಮ್ಮ ಮುಖ ಅದರಲ್ಲಿ ಪ್ರತಿಬಿಂಬಿಸಿ ಪುನಃ ನಮ್ಮ ಮುಖವು ನಮಗೆ ಕಾಣಿಸುವದಷ್ಟೆ. ಹಾಗೆಯೇ ಚಂದ್ರನ ಪ್ರಕಾಶವು ಸೂರ್ಯ ರಶ್ಮಿಗಳಿಂದ ಪಡೆದು ಪ್ರತಿಬಿಂಬಿಸಿದ್ದೇ ವಿನಾ ಸ್ವಾಭಾವಿಕವಾಗಿ ಚಂದ್ರನಿಗೇನೇ ಪ್ರಕಾಶವಿಲ್ಲ.

ಬಹಳ ಪ್ರಾಚೀನಕಾಲದಲ್ಲಿ ಮೋಶೆಯೆಂಬ ಒಬ್ಬ ಮಹಾತ್ಮನಿದ್ದನು. ಈತನು ಇಸ್ರಾಯೇಲ್ ಜನಾಂಗವನ್ನು ಐಗುಪ್ತ ದೇಶದಿಂದ ಆರಣ್ಯವಾರ್ಗವಾಗಿ ಪಾಲೆಸ್ಟೈನ್ ದೇಶಕ್ಕೆ ಕರೆತಂದನು. ಮತ್ತು ಅವನು ಆ ಜನಾಂಗದವರಲ್ಲಿ ಬಹು ಪ್ರಾಜ್ಞನಾಗಿ ಎಣಿಕೆಯಾಗಿರುವ ಧರ್ಮಶಾಸ್ತ್ರವನ್ನು ಅವರಿಗೆ ಬರೆದು ಕೊಟ್ಟನು. ಅವನು ಆ ಧರ್ಮಶಾಸ್ತ್ರದ ಮೂಲತತ್ವಗಳನ್ನು ಸಾಕ್ಷಾತ್ ದೇವರ ಉಪದೇಶದಿಂದಲೇ ಪಡೆದನೆಂದು ಆ ಗ್ರಂಥದಲ್ಲಿ ಹೇಳಿದೆ. ದೇವರು ಅವನನ್ನು ಒಂದು ಬೆಟ್ಟಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವನಿಗೆ ಪ್ರಸನ್ನನಾಗಿ ತನ್ನ ಮಹಿಮಾತೀತವಾದ ರೂಪವನ್ನು ತೋರಿಸಿ ಅವನಿಗೆ ಈ ಧರ್ಮಶಾಸ್ತ್ರವನ್ನು ಬೋಧಿಸಿದನು. ಅವನು ಅಲ್ಲಿಂದ ಇಳಿದು ಆ ಜನಗಳ ಎದುರಿಗೆ ಬಂದು ನಿಂತಾಗ ಅವರು ಅವನ ಮುಖವನ್ನು ನೋಡುವುದಕ್ಕೆ ಆಗಲಾರದೆ ಇದ್ದಿತಂತೆ. ಯಾಕೆಂದರೆ ದೇವರು ಅವನ ಸಂಗಡ ಪ್ರತ್ಯಕ್ಷವಾಗಿ ಇದ್ದು ಮಾತನಾಡಿದ್ದರಿಂದ ದೇವರ ಮಹಿಮೆಯು ಮೋಶೆಯ ಮುಖದ ಮೇಲೆಯೂ ಪ್ರತಿಬಿಂಬಿಸುತ್ತಿದ್ದಿತು. ಆ ಜನಗಳು ಮೋಶೆಯ ಮುಖದಲ್ಲಿ ಪ್ರತಿಬಿಂಬಿಸುತ್ತಿದ್ದ ದೇವರ ಮಹಿಮೆಯನ್ನು ನೋಡಲಾರದೆ ಹಿಮ್ಮೆಟ್ಟಿದರು. ಅವನು ಅದನ್ನು ತಿಳಿದು ತನ್ನ ಮುಖದ ಮೇಲೆ ಮುಸುಕನ್ನು ಹಾಕಿಕೊಳ್ಳುತ್ತಿದ್ದನೆಂದು ಆ ಧರ್ಮಶಾಸ್ತ್ರದಲ್ಲಿ ಉಕ್ತವಾಗಿದೆ.

ಯಥಾದೇವ ತಥಾಭಕ್ತ ಎಂಬ ಗಾದೆಯು ಈ ಸತ್ಯವನ್ನು ಸೂಚಿಸುವದು. ನಾವು ಲೋಕದಲ್ಲಿ ಯಾರ ಸಂಗಡ ಇದ್ದು ಯಾರನ್ನು ಅನುಸರಿಸಿ ನಡೆಯುತ್ತೇವೆಯೋ ಯಾರ ರೂಪವೂ ಯಾರ ಅವಭಾವಗಳೂ ನಮ್ಮ ದೃಷ್ಟಿಗೆ ಸದಾ ಬೀಳುತ್ತಿರುತ್ತವೆಯೋ ಅವರಂತೆ ನಾವೂ ಕ್ರಮೇಣ ವ್ಯಾಪಿಸುತ್ತಲಿರುವೆವು. ಯಾರ ಆಲೋಚನೆಯನ್ನು ನಾವು ಕೇಳಿ ಯಾರ ನಡತೆಯನ್ನು ನೋಡಿ ನಾವು ನಡೆಯುತ್ತೇವೆಯೋ ಅವರಂತೆ ಕಡೆಗೆ ನಾವೂ ಆಗುತ್ತೇವೆ. ಇದು ನಿಜವಾದರೆ ನಾವು ಯಾವ ಸಹವಾಸವನ್ನು ಮಾಡಿ ಯಾರ ಆಲೋಚನೆ, ಬುದ್ಧಿ ನಡವಳಿಕೆಗಳನ್ನು ಅನುಸರಿಸಬೇಕೋ ಅವರನ್ನು ಎಚ್ಚರಿಕೆಯಿಂದ ಆರಿಸಿಕೊಳ್ಳಬೇಕಲ್ಲವೇ?

ಯಥಾದೇವ ತಥಾಭಕ್ತ, ದೇವರಂತೆ ಭಕ್ತನಿರಬೇಕಾದರೆ ದೇವರನ್ನು ಭಕ್ತನು ಸಾಕ್ಷಾತ್ತಾದರೆ ನೋಡಿ, ಆತನ ಆಲೋಚನೆಯನ್ನು ಕೇಳಿ ಆತನ ನಡತೆಯನ್ನೇ ಭಕ್ತನು ಅನುಕರಿಸುತ್ತಿರಬೇಕು. ದೇವರ ಸನ್ನಿಧಾನದಲ್ಲಿದ್ದು ಆತನ ಸ್ನೇಹವನ್ನು ಬೆಳಸಿ ಆತನ ಹಾಗಿರುವದಕ್ಕೆ ಯತ್ನಿಸಬೇಕು. ವಾಚಕರು ಈ ಅಭಿಪ್ರಾಯವನ್ನು ಅನುಮೋದಿಸಿದರೂ ದೇವರ ಸನ್ನಿಧಾನವು ನಮಗೆ ಲಭ್ಯವಾಗುವದು ಹೇಗೆ? ಆತನ ಆಲೋಚನೆಯೂ ಉಪದೇಶವೂ ಅದೃಶ್ಯವಾಗಿರುವ ಆತನ ನಡತೆಯೂ ನಮಗೆ ಗೋಚರವಾಗುವದು ಸಾಧ್ಯವೇ? ಎಂದು ಸ್ವಾಭಾವಿಕವಾಗಿ ಪ್ರಶ್ನಿಸುವರು. ಇದು ಬಹು ಪ್ರಾಮುಖ್ಯವಾದ ಪ್ರಶ್ನೆಯೆಂದು ನಾವು ಹೇಳಬೇಕಾದದ್ದಿಲ್ಲ. ಇದಕ್ಕೆ ನಮಗೆ ತಿಳಿದುಬಂದು, ನಾವು ಸತ್ಯವೆಂದು ನಂಬಿ ಅನುಸರಿಸುತ್ತಿರುವ ಒಂದೇ ಪ್ರತ್ಯುತ್ತರವನ್ನು ಇಲ್ಲಿ ಸಂಕ್ಷೇಪವಾಗಿ ಹೇಳುತ್ತೇವೆ.

ಯೇಸು ಕ್ರಿಸ್ತನು ತನ್ನನ್ನು ಕುರಿತು ಹೇಳಿದ್ದೇನಂದರೆ—ದೇವರನ್ನು ಯಾವನಾದರೂ ಎಂದೂ ಕಂಡದ್ದಿಲ್ಲ. ಆದರೆ ತಂದೆಯ ಎದೆಯಲ್ಲಿರುವ ಒಬ್ಬನೇ ಮಗನು ಆತನನ್ನು ತಿಳಿಯಪಡಿಸಿದನು. ಮೇಲಣಿಂದ ಬರುವವನು ಎಲ್ಲರ ಮೇಲೆ ಇದ್ದಾನೆ. ದೇವರು ಯಾರನ್ನು ಕಳುಹಿಸಿದನೋ ಅವನು ದೇವರ ಮಾತುಗಳನ್ನೇ ಆಡುತ್ತಾನೆ. ತಂದೆಯು ಮಗನನ್ನು ಪ್ರೀತಿಸಿ ಎಲ್ಲವನ್ನೂ ಆತನ ಕೈಯಲ್ಲಿ ಕೊಟ್ಟಿದ್ದಾನೆ. ಮಗನನ್ನು ನಂಬುವವನಿಗೆ ನಿತ್ಯವಾದ ಜೀವವೂ ಇರುತ್ತದೆ. ಮಗನನ್ನು ನಂಬದವನು ನಿತ್ಯಜೀವವನ್ನು ಕಾಣುವದೇ ಇಲ್ಲ ಎಂಬುವದೇ. ಮತ್ತು ಒಂದು ದಿನ ಒಬ್ಬ ಶಿಷ್ಯನು ನಮಗೆ ದೇವರನ್ನು ತೋರಿಸೆಂದು ಕ್ರಿಸ್ತನನ್ನು ಕೇಳಿದಕ್ಕೆ ಆತನು—ಶಿಷ್ಯನೇ, ನಾನು ಇಷ್ಟು ದಿವಸ ನಿನ್ನ ಸಂಗಡ ಇದ್ದರೂ ನನ್ನನ್ನು ನೀನು ತಿಳಿಯಲಿಲ್ಲವೇ? ನನ್ನನ್ನು ನೋಡಿದವನು ತಂದೆಯಾದ ದೇವರನ್ನು ನೋಡಿದ್ದಾನೆ. ನಾನು ದೇವರಲ್ಲಿದ್ದೇನೆ, ದೇವರು ನನ್ನಲ್ಲಿದ್ದಾನೆ ಎಂದು ಉಪದೇಶಿಸಿದನು. ಅರ್ಥವೇನಂದರೆ ಯೇಸು ಕ್ರಿಸ್ತನು ದೇವರ ಪ್ರಭಾವದ ಪ್ರಕಾಶವೂ ದೇವರ ತತ್ವದ ಮೂರ್ತಿಯೂ ಆಗಿದ್ದಾನೆ. ಆತನು ಅದೃಶ್ಯನಾದ ದೇವರ ಸ್ವರೂಪನಾಗಿದ್ದಾನೆ.

ಹೀಗಿದ್ದರೂ ಆತನನ್ನು ನಮ್ಮ ದೃಷ್ಟಿಗೆ ಕಾಣದ ಹಾಗೆ ಮಾಡುವದೊಂದು ವಸ್ತುವಿದೆ. ಚಂದ್ರನ ಬೆಳಕು ಆ ರಾತ್ರಿ ಕಾಣದ ಹಾಗಾಗುವದಕ್ಕೆ ಚಂದ್ರನಿಗೂ ಸೂರ್ಯನಿಗೂ ಮಧ್ಯೆ ಭೂಮಿಯು ಬಂದು ಸೂರ್ಯನ ಕಿರಣಗಳು ಚಂದ್ರನ ಮೇಲೆ ಬೀಳದಂತೆ ಅಡ್ಡಿಮಾಡಿದ್ದರಿಂದಲೇ ಚಂದ್ರ ಪ್ರಕಾಶವಿಲ್ಲದೆ ಮೊಬ್ಬಾಯಿತು. ಇದನ್ನು ಗ್ರಹಣವೆಂದು ಕರೆಯುತ್ತೇವೆ. ಕ್ರಿಸ್ತನ ನಿಜ ಸ್ವಭಾವವೂ ಸ್ವರೂಪವೂ ಆತನು ದೇವರೇ ಆಗಿದ್ದಾನೆಂಬ ತಿಳಿದು ಆತನನ್ನು ನಾವು ಅನುಸರಿಸಿ ಬೆಳಕನ್ನೂ ಜ್ಞಾನವನ್ನೂ ಹೊಂದದಂತೆ ನಮ್ಮ ಮನಸ್ಸನ್ನು ಮುಚ್ಚುವಂಥದು ಯಾವದು? ಪಾಪವೇ. ಪಾಪವು ನಮ್ಮ ಮನಸ್ಸನ್ನೂ ಹೃದಯವನ್ನೂ ಯೇಸು ಕ್ರಿಸ್ತನಿಂದ ಪ್ರತ್ಯೇಕಿಸಿ ನಾವು ಆತನನ್ನು ನೋಡಿ ಅನುಸರಿಸದ ಹಾಗೆ ಮಾಡುತ್ತದೆ. ಪಾಪವನ್ನು ಸರ್ವಸಂಪೂರ್ಣವಾಗಿ ತ್ಯಜಿಸಿ ಯೇಸು ಸ್ವಾಮಿಯನ್ನು ಯಾರು ಆಶ್ರಯಿಸುತ್ತಾರೋ ಅವರು ಇಹಲೋಕದ ಕತ್ತಲಲ್ಲಿ ಜ್ಞಾನವೆಂಬ ದೇವರ ಪ್ರಭೆಯ ಬೆಳಕನ್ನು ಹೊಂದುವರು. ಮತ್ತು ಯೇಸು ಕ್ರಿಸ್ತನ ಹಾಗೆ ಸುಜ್ಞಾನದಿಂದಲೂ ಸನ್ನಡತೆಯಿಂದಲೂ ವಿರಾಜಿಸುವರು.

ಯುದ್ಧದ ಸಮಾಚಾರಗಳು.

ವಿಶ್ರಾಂತಿಯ ವಾರ.

ರಣರಂಗಗಳ ಎಲ್ಲಾ ಕಡೆಗಳಲ್ಲೂ ಕದನಗಳು ಜೋರಾಗಿ ನಡೆದದ್ದಾಗ್ಯೂ ಕಳೆದ ವಾರ ಅಷ್ಟೇನೂ ವಿಶೇಷವಾದ ಸಂಗತಿಗಳು ಸಂಭವಿಸಿರುವುದಿಲ್ಲ. ಕಳೆದ ವಾರ ಬಂದಿರುವ ತಂತೀವರ್ತಮಾನಗಳನ್ನು ಕೂಡಿಸಿ ನೋಡಿದಲ್ಲಿ ಕದನಗಳೊಳಗೆ ನಮ್ಮ ಪಕ್ಷದವರಿಗೇ ಅನುಕೂಲವಾಗಿ, ಇವರೇ ಕ್ರಮೇಣ ಮುಂದಿರಿಸಿ ನುಗ್ಗಿ ಹೋಗುತಿದ್ದಾರೆಂದು ಗೊತ್ತಾಗುತ್ತದೆ.

ಪಶ್ಚಿಮ ರಣರಂಗದಲ್ಲಿ.

ಜರ್ಮನಿಯವರು ಫ್ರೆಂಚ್ ಸೈನಿಕರ ಸಾಲುಗಳನ್ನು ಮುರಿಯಬೇಕೆಂದು ಹಲವು ವೇಳೆ ನುಗ್ಗಿ ಬಂದು ಅವರ ಮೇಲೆ ಬಿದ್ದು ಕದನಮಾಡಿದರು. ಆದರೆ ಈ ಕದನಗಳಲ್ಲಿ ಅವರು ಬಹಳ ಸೈನ್ಯಗಳನ್ನು ಕಳೆದುಕೊಂಡು ಹಿಮ್ಮೆಟ್ಟಿ ಹೋಗಬೇಕಾಯಿತಲ್ಲದೆ ಫ್ರೆಂಚರನ್ನು ಅವರು ಹಿಮ್ಮೆಟ್ಟಿಸಲಾಗಲಿಲ್ಲ. ಜರ್ಮನಿಯ ಯುವರಾಜನು ಒಂದು ಸೈನ್ಯವನ್ನು ತಂದು ಫ್ರೆಂಚರ ಮೇಲೆ ನುಗ್ಗಿದನು. ಆದರೆ ಆತನು ಕೂಡಾ ಅನೇಕ ಸೈನ್ಯವನ್ನು ಕಳೆದುಕೊಂಡು ಹಿಮ್ಮೆಟ್ಟಿದನು. ಇದರಲ್ಲಿ ತಮಗೇನೋ ಜಯವಾಯಿತೆಂದು ಜರ್ಮನಿಯವರು ತಿಳಿಸುತ್ತಿದ್ದಾರೆ. ವಿಷಗಾಳಿಗಳನ್ನು ಬಿಡುವ ಎಂಬ ತಮಗೆ ವಿಶೇಷ ಪ್ರಯೋಜನವಾಯಿತೆಂದು ಹೇಳುತ್ತಾರಲ್ಲದೆ ಫ್ರೆಂಚರು ಅವರ ಮೇಲೆ ನುಗ್ಗಿ ಅವರನ್ನು ಹಿಮ್ಮೆಟ್ಟಿಸಿದ್ದು ಎಣಿಕೆಗೆ ತಂದುಕೊಳ್ಳಲಿಲ್ಲ. ಫ್ರೆಂಚರ ಕಡೆ ಹಿನ್ನಡೆಗಳೇನೂ ಆಗಲಿಲ್ಲ. ಒಂದೆರಡು ಕಡೆಗಳಲ್ಲಿ ಫ್ರೆಂಚರು ಶತ್ರು ಸೈನಿಕರನ್ನು ಸೆರೆ ಹಿಡಿದು ಇರುತ್ತಾರೆ. ಅಂತು ಪ್ರಕಟನೆಗೆ ಯೋಗ್ಯವಾದಂಥಾ ವಿಶೇಷ ಕಾರ್ಯಗಳೇನೂ ನಡೆದಿಲ್ಲ.

ಫ್ರೆಂಚ್ ಮತ್ತು ಬ್ರಿಟಿಷ್ ವಿಮಾನಯಂತ್ರಗಳು ವಿಶೇಷ ಕಾರ್ಯಗಳನ್ನು ನಡಿಸಿರುತ್ತವೆ. ಒಂದು ಕಡೆ 35 ವಿಮಾನಯಂತ್ರಗಳು ಒಟ್ಟುಗೂಡಿ, ಜರ್ಮನಿಯವರ ಉಪಯೋಗದಲ್ಲಿದ್ದ ರೈಲ್ ರಸ್ತೆಯ ಮೇಲೆ 171 ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಇನ್ನೊಂದು ಕಡೆಯಲ್ಲಿ 20 ವಿಮಾನಯಂತ್ರಗಳು ರೈಲ್ ರಸ್ತೆಗಳು ಕೂಡುವ ಜಂಕ್ಷನ್ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ವಿಮಾನಯಂತ್ರಗಳು ಜರ್ಮನಿಯವರ ಭಾರೀ ಫಿರಂಗಿಗಳು ತಯಾರಾಗುವಂಥಾ ಎಸ್ಸೆನ್ ಎಂಬ ನಗರದ ಕಾರ್ಖಾನೆಯ ಮೇಲೆ ಹೋಗಿಬಂದವಲ್ಲದೆ ಸಿಡಿಮದ್ದಿನ ಗುಂಡುಗಳನ್ನು ಹಾಕಬೇಕೆಂದು ಹೋಗಿಲ್ಲ. ಬ್ರಿಟಿಷರ ವಿಮಾನಯಂತ್ರಗಳು ಹೋಗಿ ಬೆಲ್ಜಿಯಮ್‌ನಲ್ಲಿ ಹಲವು ಸ್ಥಳಗಳ ಮೇಲೆ ಗುಂಡುಗಳನ್ನು ಹಾಕಿರುತ್ತವೆ. ಜರ್ಮನಿಯ ಹಡಗಿನೊಂದಿದ್ದ ಒಂದು ಮನೆಯ ಮೇಲೆ ಒಂದು ಸಿಡಿಮದ್ದಿನ ಗುಂಡು ಬಿದ್ದಿತು. ಜೀಬ್ರುಗ್ಗೆ ಎಂಬ ಸಮುದ್ರತೀರ ನಗರದ ರೇವಿನ ಮೇಲೆ ಒಂದು ಗುಂಡು ಬಿದ್ದಿತು.

ಇಪ್ರೆಯ ಬಳಿ ಆದ ಕದನದಲ್ಲಿ ಜರ್ಮನಿಯವರು ಮೊದಲು ವಿಷವಾಯುಗಳನ್ನು ಪ್ರಯೋಗಮಾಡಿದಾಗ ಬ್ರಿಟಿಷ್ ಸೈನಿಕರು ಯುದ್ಧಕಾರ್ಯಗಳನ್ನು ನಡಿಸಲಾರದಂತೆ ಬಹಳ ಬಾಧೆಯಾಯಿತೆಂದೂ, ಈಗ ಅಂಥಾ ವಾಯುಗಳ ತೀಕ್ಷ್ಣವನ್ನು ಹರಿಸುತ್ತವಕ್ಕೆ ತಕ್ಕ ಪ್ರತೀಕಾರಗಳನ್ನು ಮಾಡುತ್ತಿದೇವೆಂದೂ ಬ್ರಿಟಿಷ್ ಸೇನಾಪತಿಯಾದ ಸರ್ ಜಾನ್ ಫ್ರೆಂಚ್‌ರವರು ಯುದ್ಧಭೂಮಿಯಿಂದ ಬರೆದು ತಿಳಿಸಿದಾರೆ.

ಈಚೆಗೆ ಬ್ರಿಟಿಷ್ ಸೈನ್ಯಗಳನ್ನು ಅಪಾರವಾಗಿ ಫ್ರಾನ್ಸಿಗೆ ಕಳುಹಿಸಿಕೊಟ್ಟಿದಾರೆ. ಇದರಿಂದ ನಮ್ಮ ಪಕ್ಷದವರು ಇಷ್ಟರಲ್ಲೇ ಮುಂದರಿಸಿ ನುಗ್ಗಿ ಹೋಗುವರೆಂದು ಕಾಣುತ್ತದೆ.

ಪೂರ್ವ ರಣರಂಗದಲ್ಲಿ.

ಯುದ್ಧಸಾಲಿನ ದಕ್ಷಿಣಭಾಗದಲ್ಲಿ ಜರ್ಮನಿಯವರೂ ಆಸ್ಟ್ರಿಯಾದವರೂ ಸೇರಿ ನುಗ್ಗಿ ಹೋಗುತ್ತಿದ್ದರಷ್ಟೆ. ಅವರ ಶೌರ್ಯವೆಲ್ಲಾ ವ್ಯರ್ಥವಾದಂತೆ ಕಾಣುತ್ತದೆ. ರಷ್ಯಾದವರು ಒಂದು ರಾಜ್ಯದಲ್ಲಿ ಆಸ್ಟ್ರಿಯಾದವರ ಮೇಲೆ ನುಗ್ಗಿ ಕದನಮಾಡಿ ಸೋಲಿಸಿದ್ದಲ್ಲದೆ ಜುಲೈ ತಾ 4 ರಿಂದ 11 ರ ವರೆಗೆ 22,761 ಸೈನಿಕರನ್ನು ಸೆರೆ ಹಿಡಿದುಬಿಟ್ಟರು. ಆಸ್ಟ್ರಿಯಾದವರ ಕಡೆ ಆಗಿರುವ ನಷ್ಟವು ಅಪಾರವೆಂದು ಪತ್ರಿಕೆಗಳು ಹೇಳುತ್ತವೆ. ಅವರ ಸೈನ್ಯದಲ್ಲಿ 13,000 ಯುದ್ಧಭಟರು 27 ಗಂಟೆ ಹೊತ್ತಿನಲ್ಲಿ ಕೊಲೆಯಾದರೆಂದು ಒಬ್ಬ ವಾರ್ತಾದಾರನೂ, ಆಸ್ಟ್ರಿಯಾದವರು ಒಟ್ಟಾಗಿ 45,000 ಸೈನ್ಯವನ್ನು ಕಳೆದುಕೊಂಡರೆಂದು ಇನ್ನೊಬ್ಬ ವಾರ್ತಾದಾರನೂ ತಿಳಿಸುತ್ತಾರೆ. ಜರ್ಮನಿಯ ಒಬ್ಬ ದಳಪತಿಯು ಕೊಟ್ಟಿರುವ ಹುಕುಮಿನ ಕಾಗದ ಸಿಕ್ಕಿದೆ. ಅದರಲ್ಲಿ ಜರ್ಮನಿಯವರು ರಷ್ಯಾದವರನ್ನು ಸೋಲಿಸಿ ಗಲಿಸಿಯಾ ಸೀಮೆಯಿಂದ ಹಿಂದಕ್ಕೆ ಒಂದು ತಿಂಗಳಲ್ಲಿ ಓಡಿಸಿದ್ದಾಯಿತೆಂದೂ, ಇನ್ನು ಕೆಲವು ದಿನಗಳೊಳಗಾಗಿಯೇ ಅವರು ಕೀಫ್ ನಗರವನ್ನು ತಲಪುವವರಾಗಿದಾರೆಂದೂ ಬರೆದಿರುತ್ತಾನೆ. ಈಗ ಜರ್ಮನಿಯವರು ಉತ್ತರದಿಕ್ಕಿನಿಂದ ಬಂದು ವಾರ್ಸಾ ನಗರವನ್ನು ಮುತ್ತಿಗೆ ಹಾಕುವರೆಂದು ಕಾಣುತ್ತದೆ. ಇದಕ್ಕಾಗಿ ಅವರು ಸೈನ್ಯವನ್ನು ಅಪಾರವಾಗಿ ಕೂಡಿಸುತ್ತಿದಾರೆ. ಇವರು ರಷ್ಯಾದವರ ಮೇಲೆ ನುಗ್ಗಿದ್ದರಿಂದ ರಷ್ಯಾದವರು ಹಿಮ್ಮೆಟ್ಟಿ ಸುರಕ್ಷಿತವಾದ ಠಾಣ್ಯಗಳಿಗೆ ಹೋಗುತ್ತಿರುವರು.—ಅಲ್ಲಿಂದ ಉತ್ತರಕ್ಕೆ ಜರ್ಮನಿಯವರು ಬ್ಯಾಲ್ಟಿಕ್ ಕಡಲಿನ ಬಳಿ ಮುತ್ತಿಗೆ ಹಾಕಿಕೊಂಡಿದಾರೆ. ಆದರೆ ಅಲ್ಲಿ ಇದುವರೆಗೆ ಅವರಿಗೆ ಯಾವ ಅನುಕೂಲವೂ ಆಗಿರುವುದಿಲ್ಲ. ಅಲ್ಲಿ ಯುದ್ಧದ ಸಾಲು 1,000 ಮೈಲಿ ಉದ್ದಕ್ಕೆ ಹರಡಿಕೊಂಡಿರುವುದು. ಒಂದು ರಾಜ್ಯದಲ್ಲಿ ಜರ್ಮನಿಯವರಿಗೆ ಅನುಕೂಲವಾಗುವುದೂ, ಇನ್ನೊಂದು ಕಡೆ ರಷ್ಯಾದವರು ಗೆಲ್ಲುವುದೂ ಆಶ್ಚರ್ಯವೇನಿಕಲ್ಲ.

ಇಟಲಿ ಮತ್ತು ಆಸ್ಟ್ರಿಯಾ.

ಈ ವಾರ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪ. ಆಸ್ಟ್ರಿಯಾದವರು ಇಟಲಿಯವರನ್ನು ಹಿಮ್ಮೆಟ್ಟಿಸಬೇಕೆಂದು ಸಾಹಸಪಟ್ಟರು. ಇದು ಅವರಿಂದ ಸಾಧ್ಯವಾಗಲಿಲ್ಲ. ಅವರು ಸೋತು ಬಂದರು. ಇಟಲಿಯವರು ಟ್ರಿಯೆಸ್ಟ್ ನಗರದಿಂದ ಒಂದು ದಿನದ ಪ್ರಯಾಣದಷ್ಟು ಸಮೀಪದಲ್ಲಿರುತ್ತಾರೆ. ಅವರು ಆ

ನಗರವನ್ನು ಗೆದ್ದುಕೊಳ್ಳುವುದಕ್ಕಿಂತ ಮುಂಚೆ ಅದರ ಮೇಲ್ಭಾಗದಲ್ಲಿರುವ ಗುಡ್ಡಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಸಾಹಸಪಡುತ್ತಿದ್ದಾರೆ. ಈ ಗುಡ್ಡಗಳನ್ನು ಆಸ್ಟ್ರಿಯಾದವರಿಂದ ಕಿತ್ತುಕೊಂಡ ಮೇಲೆ ಇಟಲಿಯವರು ಟ್ರಿಯೆಸ್ಟ್ ನಗರವನ್ನೂ ಅದರ ತೀರದಲ್ಲಿರುವ ಆಸ್ಟ್ರಿಯಾದವರ ಹಡಗುಗಳನ್ನೂ ಸ್ವಾಧೀನಪಡಿಸಿಕೊಳ್ಳುವುದೇನೂ ಕಷ್ಟವಾಗುವುದಿಲ್ಲ.

ಪರರಾಜ್ಯದ ಒಂದು ಹಡಗು ಜರ್ಮನಿಯ ಸಬ್‌ಮೆರೀನಿಗೆ ಸಾಮಾನುಗಳನ್ನು ತಲುಪಿಸಬೇಕೆಂದು ತೆಗೆದುಕೊಂಡುಹೋಗುತ್ತಿತ್ತು. ಇಟಲಿಯವರು ಅದನ್ನು ಮೆಡಿಟರೇನಿಯನ್ ಕಡಲಿನಲ್ಲಿ ಕಂಡು ತಾವೇ ಅದರಲ್ಲಿ ಕುಳಿತು ನಡೆಸಿಕೊಂಡು ಸಬ್‌ಮೆರೀನಿನ ಬಳಿಗೆ ಹೋಗಿ ಅದು ಶರಣಾಗತವಾಗುವಂತೆ ಮಾಡಿಕೊಂಡರು.

ಈಚೆಗೆ ಆಸ್ಟ್ರಿಯಾದ ಒಂದು ಸಬ್‌ಮೆರೀನಿನ ದೆಸೆಯಿಂದ ಇಟಲಿಯ ಒಂದು ಸಬ್‌ಮೆರೀನು ಮುಳುಗಿ ನಷ್ಟವಾಯಿತು. ಸಮುದ್ರದಲ್ಲಿ ಒಬ್ಬನು ಮುಳುಗಿ ಶೋಧಿಸುತ್ತಿದ್ದಾಗ ಆಸ್ಟ್ರಿಯಾದ ಸಬ್‌ಮೆರೀನೂ ಮುಳುಗಿಹೋದದ್ದು ಖಚಿತವಾಯಿತು.

ಟರ್ಕಿ.

ಡಾರ್ಡನೆಲ್ಸಿನ ಬಳಿ ಇನ್ನೂ ಕೆಲವು ಕದನಗಳು ನಡೆದಿರುತ್ತವೆ. ನಮ್ಮ ಪಕ್ಷದವರು ಮೊದಲಿದ್ದ ಠಾಣ್ಯಗಳಿಂದ ಇನ್ನೂ ಸ್ವಲ್ಪ ಮುಂದಕ್ಕೆ ನುಗ್ಗಿಹೋಗಿದ್ದಾರೆ. ಇವರಿಗೆ ೪೦೦ ಮಂದಿ ಶತ್ರುಸೈನಿಕರು ಕೈಸೆರೆ ಸಿಕ್ಕಿದರು. ಅವರು ಹಾದುಹೋಗಬೇಕಾಗಿರುವುದೆಲ್ಲಾ ಎಂಟು ಮೈಲಿ ದೂರ. ಈ ಹಾದಿಯುದ್ದಕ್ಕೂ ಬಹಳ ಬಲವಾದ ಕೋಟೆಗಳನ್ನು ಕಟ್ಟಿ ಫಿರಂಗಿಗಳನ್ನು ಇಟ್ಟು ಸಂರಕ್ಷಣೆಮಾಡಿಕೊಂಡಿದ್ದಾರೆ.

ಸರ್ವ ಸೇನಾಪತಿಯಾದ ಸರ್ ಇಯನ್ ಹಮಿಲ್ಟನ್‌ರವರು ಹಿಂದುಸ್ಥಾನಕ್ಕೆ ಒಂದು ಪತ್ರಿಕೆಯನ್ನು ಬರೆದು ಕಳುಹಿಸಿರುವರು. ಇದರಲ್ಲಿ ಕಳೆದ ತಿಂಗಳು 4 ನೇ ಸಿಖ್ ಸೈನಿಕರು ಬಹಳ ಪರಾಕ್ರಮದಿಂದ ಕಾದಾಡಿದರೆಂದೂ, ಆ ಯುದ್ಧಪ್ರವೇಶವು ಅತ್ಯಂತ ಕಠಿಣವಾಗಿದ್ದರೂ ಸಿಖ್ ಸೈನಿಕರು ಕ್ಷಣಮಾತ್ರವಾದರೂ ಹಿಂದುಮುಂದು ನೋಡದೆ, ಅವರಲ್ಲಿ ಅನೇಕರು ಮಡಿದುಹೋಗುತ್ತಿದ್ದರೂ ಲಕ್ಷ್ಯಮಾಡದೆ, ಶತ್ರುವಿನ ಮೇಲೆ ನುಗ್ಗಿ ಕದನಮಾಡಿದರೆಂದೂ ಹೊಗಳಿರುತ್ತಾರೆ. ಈ ಕದನದಲ್ಲಿ ಸಿಖ್ ಸೈನ್ಯದಲ್ಲಿ 16 ಮಂದಿ ಬ್ರಿಟಿಷ್ ಮತ್ತು 14 ಮಂದಿ ಹಿಂದುಸ್ಥಾನದ ಉದ್ಯೋಗಸ್ಥರೂ 514 ಯುದ್ಧಭಟರೂ ಇದ್ದರು. ಯುದ್ಧವಾದ ತರುವಾಯ ಉಳಿದ ಸೈನ್ಯವನ್ನೆಲ್ಲಾ ಕೂಡಿಸಿ ಲೆಕ್ಕಮಾಡಿ ನೋಡುವಲ್ಲಿ 3 ಮಂದಿ ಬ್ರಿಟಿಷ್ ಮತ್ತು 3 ಮಂದಿ ಹಿಂದುಸ್ಥಾನದ ಉದ್ಯೋಗಸ್ಥರೂ 134 ಮಂದಿ ಯುದ್ಧಭಟರೂ ಗಾಯಪಡದೆ ಉಳಿದವರೆಂದು ತಿಳಿಯಿತು. ಕದನ ಪ್ರಸಂಗದಲ್ಲಿ ಮಹಾ ಪರಾಕ್ರಮಿಗಳೆಂಬ ಯಶಸ್ಸನ್ನು ನಮ್ಮ ಸಿಖ್ ಸೈನಿಕರು ಸಂಪಾದಿಸಿಕೊಂಡಿದ್ದಾರೆ.

ಡಾರ್ಡನೆಲ್ಸ್ ಜಲಮಾರ್ಗವು ಶೀಘ್ರವಾಗಿ ನಮ್ಮ ಪಕ್ಷದವರ ವಶವಾಗುತ್ತದೆಂದು ಜರ್ಮನಿಯವರಿಗೆ ಗೊತ್ತಾಗಿದೆ ಎಂದೂ, ಇದರಿಂದ ಜರ್ಮನಿಯವರು ಕಾನ್‌ಸ್ಟಾಂಟಿನೋಪಲ್ ನಗರವನ್ನು ಬಿಟ್ಟು ಹೊರಟುಹೋಗುತ್ತಿದ್ದಾರೆಂದೂ, ಟರ್ಕಿಯವರು ಕರಾರು ಮಾಡಿಕೊಳ್ಳಬೇಕೆಂಬ ಅಭಿಪ್ರಾಯದಿಂದ ತಮ್ಮ ಕಡೆಯ ಪ್ರತಿನಿಧಿಗಳನ್ನು ಸ್ವಿಟ್ಜರ್ಲೆಂಡಿಗೆ ಕಳುಹಿಸಿರುತ್ತಾರೆಂದೂ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಆದರೆ ಈ ವರ್ತಮಾನಗಳಲ್ಲಿ ಅಷ್ಟೇನೂ ನಿಜವಿರುವಂತೆ ಕಾಣುವುದಿಲ್ಲ.

ಆಫ್ರಿಕಾದಲ್ಲಿ.

ಕೆಲವು ತಿಂಗಳುಗಳ ಹಿಂದೆ ಜರ್ಮನಿಯ ಒಂದು ಯುದ್ಧದ ಹಡಗು ಹೋಗಿ ಪೂರ್ವ ಆಫ್ರಿಕದ ಒಂದಾನೊಂದು ನದಿಯ ಮುಖದಲ್ಲಿ ಸೇರಿಕೊಂಡಿತು. ದೊಡ್ಡ ಯುದ್ಧದ ಹಡಗುಗಳು ಸಮುದ್ರದ ಕಡೆಯಿಂದ ನದಿಯ ಮೇಲಕ್ಕೆ ಹತ್ತಿಹೋಗುವುದು ಸಾಧ್ಯವಲ್ಲ—ಆದಕಾರಣ ಎರಡು ನದೀ ದೋಣಿಗಳನ್ನು ಕಳುಹಿಸಿದರು. ಇವು ಹೋಗಿ ಜುಲೈ ತಾ. 4 ಮತ್ತು 11 ರಲ್ಲಿ ಜರ್ಮನಿಯ ಹಡಗನ್ನು ಸಂಧಿಸಿ ಅದನ್ನು ನಾಶಮಾಡಿದವು. ನದಿಯು ಜಂಗಲಿನ ಮಧ್ಯೆ ಹರಿಯುತ್ತಿದ್ದ ಕಾರಣ ದಡದಿಂದ ಆ ಹಡಗು ಕಾಣುತ್ತಿರಲಿಲ್ಲ. ವಿಮಾನಯಂತ್ರಗಳು ಹೋಗಿ ಅದು ಅಡಗಿದ್ದ ಸ್ಥಳವನ್ನು ಗೊತ್ತುಮಾಡಿ ತಿಳಿಸಿದಂತೆ ಆ ಕಡೆ ಫಿರಂಗಿಗಳನ್ನು ಹೊಡೆದವು. ಶತ್ರುವಿನ ಹಡಗು ಗುಂಡು ಹೊಡೆದು ಜವಾಬು ಕೊಟ್ಟಿತು. ಕೆಲವು ಗುಂಡುಗಳು ಬಿದ್ದು ಒಂದು ದೋಣಿಗೆ ಹಾನಿಯೂ ಆಯಿತು. ಸ್ವಲ್ಪ ಹೊತ್ತಿನೊಳಗಾಗಿ ಒಂದು ವಿನಾ ಉಳಿದ ಫಿರಂಗಿಗಳ ಬಾಯಿ ಕಟ್ಟಿಹೋಯಿತು. ಎರಡನೇ ಸಲ ಮೇಲ್ಗಡೆ ದೋಣಿಗಳು ಗುಂಡುಗಳನ್ನು ಸುರಿಸಿ ಆ ಶತ್ರು ಹಡಗನ್ನು ಸಂಪೂರ್ಣವಾಗಿ ನಾಶಮಾಡಿದವು. ಅದರಲ್ಲಿ ಬೆಂಕಿಯುಟ್ಟಿ ಹತ್ತಿಕೊಂಡು ಉರಿಯಿತು. ಬ್ರಿಟಿಷರ ಕಡೆ ನಾಲ್ವರು ಕೊಲೆಯಾದರು; ಆರು ಮಂದಿಗೆ ಗಾಯಗಳಾಗಿವೆ.

ಜನರಲ್ ಬೋಥಾರವರು ಕರೆದುಕೊಂಡುಹೋಗಿದ್ದ ಸೈನಿಕರಲ್ಲಿ ಕೆಲವರು ವಾಪಸು ದಕ್ಷಿಣ ಆಫ್ರಿಕಾ ರಾಜಧಾನಿಯಾದ ಕೇಪ್ ಟೌನ್ ನಗರಕ್ಕೆ ಬಂದು ಸೇರಿದರು. ಅಲ್ಲಿನವರು ಇವರನ್ನು ಮಹಾ ವಿಜಯೋತ್ಸವದಿಂದ ಎದುರುಗೊಂಡು ಸತ್ಕರಿಸಿರುತ್ತಾರೆ. ಗ್ರೇಟ್ ಬ್ರಿಟನ್‌ನಲ್ಲಿ ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಗಳಲ್ಲಿ ಜನರಲ್ ಬೋಥಾರವರೂ ದಕ್ಷಿಣ ಆಫ್ರಿಕದ ಸೈನಿಕರೂ ಜರ್ಮನಿಯವರನ್ನು ಸೋಲಿಸಿದ ವಿಚಾರವನ್ನು ಕುರಿತು ಅತ್ಯಂತ ಆನಂದಕರವಾದ ಭಾಷಣಗಳನ್ನು ಮಾಡಿ ಅವರನ್ನು ಕೊಂಡಾಡಿದರು. ಹಿಂದುಸ್ಥಾನದ ವೈಸ್‌ರಾಯರವರು ಹಿಂದುಸ್ಥಾನದವರಿಗುಂಟಾದ ಆನಂದವನ್ನು ಜನರಲ್ ಬೋಥಾರವರಿಗೆ ತಂತೀ ವರ್ತಮಾನ ಕೊಟ್ಟು ತಿಳಿಸಿದ್ದಕ್ಕೆ ಜನರಲ್ ಬೋಥಾರವರು ತಮ್ಮ ಮನಃಪೂರ್ವಕವಾದ ಪ್ರತಿವಂದನೆಗಳನ್ನು ತಿಳಿಸಿ ತಂತೀವರ್ತಮಾನ ಕಳುಹಿಸಿದ್ದಾರೆ.

ಬೋಅರ್ ಯುದ್ಧಭಟರು ನಮ್ಮ ಪಕ್ಷದವರ ಕೂಡ ನಿಂತು ಜರ್ಮನಿಯವರ ಮೇಲೆ ಯುದ್ಧಮಾಡುವುದಕ್ಕೆ ದಕ್ಷಿಣ ಆಫ್ರಿಕಾದಿಂದ ಯೂರೋಪ್ಪಿಗೆ ಬರುತ್ತಾರೆಂಬುದನ್ನು ಕೇಳಿ ಹಲವರು ಸಂತೋಷಪಡುತ್ತಿರುವರು.

ಪಶ್ಚಿಮ ಆಫ್ರಿಕಾದಲ್ಲಿ ಜರ್ಮನಿಯವರಿಗೆ ಸೇರಿದ ಕ್ಯಾಮರೂನ್ಸ್ ಸೀಮೆಯೊಳಗೆ ಒಂದು ಪ್ರಾಮುಖ್ಯವಾದ ನಗರವನ್ನು ನಮ್ಮ ಪಕ್ಷದವರು ಸ್ವಾಧೀನಪಡಿಸಿಕೊಂಡಿದ್ದಾರೆ.

ಇತರ ವಿಷಯಗಳು.

ಬ್ರಿಟಿಷ್ ಗವರ್ನ್‌ಮೆಂಟಿನ ಯುದ್ಧದ ಸಾಲಕ್ಕೆ ಆಗಲೇ ಅರವತ್ತು ಕೋಟಿ ಪೌಂಡು ಒದಗಿಸಲ್ಪಟ್ಟಿರುತ್ತದೆ. ಇದರಿಂದ ಸದ್ಯದಲ್ಲಿ ಯುದ್ಧದ ಖರ್ಚಿಗೆ ಬೇಕಾಗುವಷ್ಟು ಹಣಕ್ಕಿಂತಲೂ ಹೆಚ್ಚಾಗಿಯೇ ಕೂಡಿದಂತಾಗಿದೆ. ಬಡ ಪ್ರಜೆಗಳು ಪೋಸ್ಟ್ ಆಫೀಸುಗಳ ಮೂಲಕ ಅಲ್ಪ ಸ್ವಲ್ಪವಾಗಿ ಕೊಟ್ಟಿರುವ ಹಣಗಳೇ ಎರಡೂವರೆ ಕೋಟಿ ಪೌಂಡುಗಳಾಗಿರುವವು.

ಜರ್ಮನಿಯಲ್ಲಿ ಹಣಕಾಸು ಒದಗುವುದು ಬಹಳ ಕಷ್ಟಕ್ಕೆ ಬಂದಿದೆ ಎಂದು ಹೇಳುವರು. ಯುದ್ಧವು ಇನ್ನೊಂದು ವರುಷ ನಡೆಯುವುದಾದರೆ ಅದರ ಖರ್ಚಿಗೆ ಹಣವನ್ನು ಒದಗಿಸುವುದು ಸಾಧ್ಯವಲ್ಲವೆಂದು ಜರ್ಮನಿಯ ಭಾರೀ ಹಣಗಾರರು ಹೇಳಿದ್ದಾರೆ. ಈ ಕಾರಣಕ್ಕಾಗಿಯೇ ಜರ್ಮನ ಚಕ್ರವರ್ತಿಯವರು ಯುದ್ಧವನ್ನು ಮುಂದಿನ ಅಕ್ಟೋಬರಿನಲ್ಲಿ ಮುಕ್ತಾಯವಾಗುವಂತೆ ಮಾಡುತ್ತೇವೆಂದು ತಿಳಿಸಿದ್ದು.

ಜರ್ಮನಿಯವರಿಗೂ ಅಮೇರಿಕದವರಿಗೂ ಪರಸ್ಪರ ನಂಬಿಕೆ ವಿಶ್ವಾಸಗಳು ಕೆಟ್ಟುಹೋಗುವಂತೆ ಕಾಣುವುದು. ಜರ್ಮನಿಯವರು ಕೊಟ್ಟ ಜವಾಬು ಅಮೇರಿಕದವರಿಗೆ ಸಮಾಧಾನಕರವಾಗದೆ, ಮತ್ತೊಂದು ಸಲ ಕಾಗದ ಬರೆಯುವ ಪ್ರಯತ್ನ ನಡೆದಿದೆ. ಅಮೇರಿಕದ ಒಂದು ಹಡಗನ್ನು ಮುಳುಗಿಸಿದ್ದು ತಪ್ಪೆಂದು ಜರ್ಮನಿಯವರು ಒಪ್ಪಿಕೊಂಡು ಅದಕ್ಕೆ ಪರಿಹಾರ ದ್ರವ್ಯವನ್ನು ಕೊಡುವುದಾಗಿ ತಿಳಿಸಿದ್ದಾರೆ. ಜರ್ಮನಿಯ ಸಬ್‌ಮೆರೀನು ಅಮೇರಿಕದ ಹಡಗನ್ನು ತನ್ನ ಮುಂದೆ ನಿಲ್ಲಿಸಿಕೊಂಡು ಇದರ ಮರೆಯಲ್ಲಿ ರಷ್ಯಾದವರ ಒಂದು ಹಡಗನ್ನು ಮುಳುಗಿಸಿರುತ್ತದೆಂದು ಅಮೇರಿಕದವರು ಆಕ್ಷೇಪಣೆಮಾಡಿ, ಈ ಕೃತ್ಯದ ವಿಷಯದಲ್ಲಿ ಜರ್ಮನಿಯವರ ಮೇಲೆ ಆಗ್ರಹವನ್ನು ಪ್ರಕಾಶಪಡಿಸಿರುತ್ತಾರೆ.

ಲೂಸಿಟೇನಿಯಾ ಹಡಗನ್ನು ಜರ್ಮನಿಯವರು ಮುಳುಗಿಸಿದ್ದರ ವಿಷಯದಲ್ಲಿ ಲಾರ್ಡ್ ಮರ್ಸಿಯವರು ಕ್ರಮವಾಗಿ ತನಿಖೆಮಾಡಿ ತಮ್ಮ ತೀರ್ಮಾನವನ್ನು ಪ್ರಕಟಿಸಿರುತ್ತಾರೆ. ಈ ಹಡಗಿನಲ್ಲಿ ಅನೇಕ ಅಮೇರಿಕದವರ ಸಮೇತ ಸಾವಿರಕ್ಕಿಂತಲೂ ಹೆಚ್ಚು ಜನರು ಜರ್ಮನಿಯವರ ಘಾತುಕಕೃತ್ಯದಿಂದ ಮುಳುಗಿ ಸತ್ತುಹೋದರು. ಮೇಲ್ಕಂಡ ತೀರ್ಮಾನದ ಮುಖ್ಯಾಂಶಗಳೇನೆಂದರೆ ಜರ್ಮನಿಯವರು ಆ ಹಡಗಿಗೆ ಎಚ್ಚರಿಕೆಯನ್ನೇ ಹೇಳಲಿಲ್ಲ; ಅವರು ಹಡಗನ್ನೂ ಅದರೊಳಗಿದ್ದವರನ್ನೂ ಮುಳುಗಿಸಿಬಿಡಬೇಕೆಂದು ಸಂಕಲ್ಪಮಾಡಿಕೊಂಡಿದ್ದರು. ಅದರೊಳಗೆ ಅವಶ್ಯವಾದ ಗುಂಡುಹೊಡೆಯುವುದಕ್ಕೆ ಫಿರಂಗಿಗಳನ್ನು ಇಟ್ಟುಕೊಂಡಿರಲಿಲ್ಲ. ಬಂದೂಕುಗಳಿಗೆ ಉಪಯೋಗವಾಗುವಂಥಾ ತೋಟಾಗಳು ಭರ್ತಿಯಾದ ಕೆಲವು ಪೆಟ್ಟಿಗೆಗಳನ್ನು ಇತರ ಸಾಮಾನಿನಂತೆ ಆ ಹಡಗು ಸಾಗಿಸಿಕೊಂಡು ಬರುತ್ತಿತ್ತು. ಇದು ಆಕ್ಷೇಪಣೆಗೆ ಅರ್ಹವಾದ ಅಂಶವಲ್ಲ.—ಅಮೇರಿಕದ ತೀರಪಟ್ಟಣಗಳಿಂದ ಗ್ರೇಟ್ ಬ್ರಿಟನ್‌ಗೆ ಬರತಕ್ಕ ಹಡಗುಗಳಲ್ಲಿ ಅಲ್ಲಿರುವ ಜರ್ಮನಿಯವರು ಸಿಡಿಮದ್ದಿನ ಗುಂಡುಗಳನ್ನು ಇಡುತ್ತಾರೆನ್ನುವುದು ದೃಷ್ಟಾಂತಕ್ಕೆ ಬಂದಿದೆ.

ಈಚೆಗೆ ಜರ್ಮನಿಯ ಸಬ್‌ಮೆರೀನುಗಳು ಹಡಗುಗಳನ್ನು ಮುಳುಗಿಸಿರುವುದಿಲ್ಲ. ಕಳೆದ ವಾರದ ರಿಪೋರ್ಟಿನಿಂದ ನೋರ್ವೆ ರಾಜ್ಯಕ್ಕೆ ಸೇರಿದ ಒಂದು ಹಡಗು ಮಾತ್ರ ಮುಳುಗಿಹೋದಂತೆ ತಿಳಿಯುವುದು.

ಲಂಡನ್ ಪಟ್ಟಣದಲ್ಲಿ ಜರ್ಮನಿಯ ಒಬ್ಬ ಗೂಢಚಾರನನ್ನು ಹಿಡಿದು ಪರೀಕ್ಷೆಮಾಡಿ ಗುಂಡಿನಿಂದ ಹೊಡೆದು ಕೊಂದುಹಾಕಿದರು.

ಆಸ್ಟ್ರೇಲಿಯಾದವರು ಇನ್ನೂ ಹೆಚ್ಚಾಗಿ ಸೈನ್ಯಗಳನ್ನು ಜತೆಮಾಡಿ ಯುದ್ಧಭೂಮಿಗೆ ಕಳುಹಿಸುತ್ತಿದ್ದಾರೆ. ಸರ್ ರಾಬರ್ಟ್ ಬೋರ್ಡನ್ ಎಂಬ ಕೆನಡಾ ರಾಜತಂತ್ರಜ್ಞನು ಲಂಡನ್ ಪಟ್ಟಣಕ್ಕೆ ಬಂದಿರುತ್ತಾನೆ. ಮಹಾ ಗೋಪ್ಯವಾಗಿ ನಡೆಯುವ ಬ್ರಿಟಿಷ್ ಕ್ಯಾಬಿನೆಟ್ ಎಂಬ ಮಂತ್ರಿ ಸಭೆಯ ಮೀಟಿಂಗು ನಡೆದಾಗ ಈತನಿಗೆ ಅವಕಾಶ ಕೊಟ್ಟಿದ್ದರು. ಬ್ರಿಟಿಷ್ ಚರಿತ್ರೆಯಲ್ಲಿ ಇದು ಅಪೂರ್ವವಾದದ್ದಾಗಿದೆ. ಇದು ವರೆಗೆ ಹೊರಗಿನವರ್ಯಾರಿಗೂ ಆ ಮಂತ್ರಿ ಸಭೆಗೆ ಹೋಗಲು ಅವಕಾಶ ಕೊಟ್ಟದ್ದೇ ಇಲ್ಲ.

ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರಾದ ಮಿ॥ ಛೇಂಬರ್ಲೇನ್‌ರವರು ಇಂಗ್ಲೆಂಡಿನ ದಕ್ಷಿಣ ತೀರದಲ್ಲಿರುವ ಬ್ರೈಟನ್ ನಗರಕ್ಕೆ ಹೋಗಿದ್ದು, ಅಲ್ಲಿ ಗಾಯಪಟ್ಟ ಹಿಂದುಸ್ಥಾನದ ಸೈನಿಕರ ಆಸ್ಪತ್ರೆಯನ್ನು ತನಿಖೆ ಮಾಡಿ, ಅವರಿಗೆ ಅಲ್ಲಿ ನಡೆಯುವ ಶೈತ್ಯೋಪಚಾರಗಳನ್ನೂ ಚಿಕಿತ್ಸೆ ಆರೈಕೆಗಳನ್ನೂ ಪರಾಂಬರಿಸಿದರು. ಬ್ರೈಟನ್ ಪಟ್ಟಣದ ಪ್ರಜೆಗಳು ನಮ್ಮ ರಾಷ್ಟ್ರದ ಈ ಗಾಯಪಟ್ಟ ಯುದ್ಧಭಟರಿಗೆ ಸುಖ ಸಂತೋಷಗಳನ್ನು ಕಲ್ಪಿಸುವುದರಲ್ಲಿ ವಿಶೇಷ ಉತ್ಸಾಹವುಳ್ಳವರಾಗಿದ್ದಾರೆ.

ಕಳೆದ ಶನಿವಾರ ಹತ್ತಾರು ಸಹಸ್ರ ಸ್ತ್ರೀಯರು ಲಂಡನ್ ಪಟ್ಟಣದ ರಾಜಬೀದಿಯಲ್ಲಿ ಗುಂಪುಗುಂಪಾಗಿ ಸೇರಿ ಸಂಚರಿಸುತ್ತಾ ಅವರಲ್ಲಿ ಪ್ರಮುಖರಾದ ಕೆಲವರು ಹೋಗಿ ಮಿ॥ ಲ್ಲಾಯಡ್ ಜಾರ್ಜ್‌ರವರನ್ನು ಕಂಡು, ಯುದ್ಧಸಾಮಗ್ರಿಗಳೇ ಮೊದಲಾದವು ತಯಾರಾಗುವ ಕಾರ್ಖಾನೆಗಳಲ್ಲಿ ಹೆಂಗಸರಿಗೆ ಕೆಲಸ ಕೊಡಿಸಬೇಕೆಂದು ಕೇಳಿಕೊಂಡರು. ಆ ಮಂತ್ರಿಯು—ಗವರ್ನ್‌ಮೆಂಟಿನವರು ಹೆಂಗಸರ ಸಹಾಯವನ್ನು ಬೇಡವೆನ್ನುವುದಿಲ್ಲ; ಅವರು ಸಹಾಯಮಾಡಿದ್ದರೆ ಜಯಪ್ರದವು ಸಿದಾವಕ್ಕೆ ಬೀಳುವುದು ಎಂದು ತಿಳಿಸಿದ್ದಾರೆ. ಶತ್ರುವನ್ನು ಹತಮಾಡಿ ಜಯಪ್ರದಹೊಂದುವುದು ಮಹತ್ತರವಾದ ಕಾರ್ಯವೆಂದೂ, ಅದಕ್ಕಾಗಿ ಅಪರಿಮಿತವಾದ ಸನ್ನಾಹಗಳು ಆಗಬೇಕೆಂದೂ ಬ್ರಿಟಿಷ್ ಪ್ರಜೆಗಳಿಗೆಲ್ಲಾ ಈಗ ತಾರ್ಕಣೆಗೆ ಬಂದಿರುತ್ತದೆ.

ಗ್ರೀಸ್ ರಾಜ್ಯದಲ್ಲಿ ಮೊದಲು ಮಂತ್ರಿಯಾಗಿದ್ದ ಎಂ. ವೆನಿಜೆಲೋಸ್ ಎಂಬಾತನು ಇದುವರೆಗೆ ವಿಶ್ರಾಂತಿಯನ್ನನುಭವಿಸುತ್ತಿದ್ದನು. ಈಗ ಈತನು ತನ್ನ ಪಕ್ಷದವರ ಮುಂದಾಳಾಗಿ ನಿಂತು ಕೆಲಸ ಮಾಡಲಾರಂಭಿಸಿರುತ್ತಾನೆ. ಗ್ರೀಸ್ ರಾಜ್ಯವು ಈ ಯುದ್ಧದಲ್ಲಿ ಬೆರೆಯಬೇಕೆಂದು ಈತನು ಹೇಳಿರುವನು.

ಗವರ್ನ್‌ಮೆಂಟಿನ ಕೆಲವು ರಿಪೋರ್ಟುಗಳು.

ಕೊಡಗಿನ ಫಾರೆಸ್ಟುಗಳು.—ಕೊಡಗು ಸೀಮೆಯ ವಿಶೇಷ ಭಾಗವೆಲ್ಲಾ ಅಂದರೆ 3,33,802 ಎಕರೆ ಅಥವಾ 520 ಚದರಮೈಲಿಗಳು ಕಾಡಾಗಿ ಸಂರಕ್ಷಿಸಲ್ಪಟ್ಟಿದೆ. ಈ ಬಾಬಿನಲ್ಲಿ ಕಳೆದ ವರುಷ 3,38,079 ರೂಪಾಯಿ ಹುಟ್ಟುವಳಿ ಆಯಿತು; ಕಾಡುಗಳ ಸಂರಕ್ಷಣೆಯೇ ಮುಂತಾದ ಕಾರ್ಯಗಳಿಗೂ ಸಿಬ್ಬಂದಿಗೂ 1,84,583 ರೂಪಾಯಿ ಖರ್ಚಾಗಿ, 1,53,436 ರೂಪಾಯಿ ನಿವ್ವಳ ಉತ್ಪತ್ತಿ ಆಗಿರುವುದು. ಲಾಂಟಾನಾ ಗಿಡಗಳನ್ನು ಕಿತ್ತು ನಿರ್ಮೂಲಮಾಡುವುದಕ್ಕೂ, ಹಾದಿಗಳನ್ನು ಮಾಡಿ ಒಳ್ಳೇ ಸ್ಥಿತಿಯಲ್ಲಿಡುವುದಕ್ಕೂ, ಕಾಡಿನಲ್ಲಿ ಕೆಲಸಮಾಡ ತಕ್ಕವರಿಗೋಸ್ಕರ ಕಟ್ಟಡಗಳನ್ನು ಒದಗಿಸುವುದಕ್ಕೂ ಬಹಳ ಹಣವನ್ನು ಖರ್ಚು ಮಾಡಿದ್ದಾರೆ. ಅಂತು ಕಳೆದ ವರುಷ ಫಾರೆಸ್ಟ್ ಇಲಾಖೆಗಳೂ ಕೆಲಸಕಾರ್ಯಗಳೂ ಬಹಳ ತೃಪ್ತಿಕರವಾಗಿ ನಡೆದಿರುವವೆಂದು ಹೇಳಬಹುದಾಗಿದೆ.

ಮೈಸೂರು ಗವರ್ನ್‌ಮೆಂಟ್ ಸೇವಿಂಗ್ಸ್ ಬ್ಯಾಂಕುಗಳು.—ಪ್ರಜೆಗಳು ತಮ್ಮ ಸಂಪಾದನೆಯಲ್ಲಿ ಸ್ವಲ್ಪಸ್ವಲ್ಪವಾಗಿ ಕೂಡಿಡುತ್ತಾ ಬರುವುದಕ್ಕೆ ಸಹಾಯವಾಗಲೆಂದು ನಮ್ಮ ಸರ್ಕಾರದವರು ಈ ಬ್ಯಾಂಕುಗಳನ್ನಿಟ್ಟು ಸೌಲಭ್ಯಗಳನ್ನು ಕಲ್ಪಿಸುತ್ತಾರೆ. ಆದರೆ ಅದರಿಂದ ಪ್ರಯೋಜನ ಹೊಂದುತ್ತಿರುವ ಪ್ರಜೆಗಳ ಸಂಖ್ಯೆಯು ಬಹಳ ಕಡಮೆಯಾಗಿರುವುದು. ಸಂಸ್ಥಾನಾವಳಿಯಲ್ಲಿ ಒಟ್ಟು 28,440 ಜನರು ಮಾತ್ರವೇ ಈ ಬ್ಯಾಂಕುಗಳಲ್ಲಿ ಹಣ ಹಾಕಿದ್ದಾರೆ. ಇವರಲ್ಲೂ ಸುಮಾರು ಅರ್ಧ ಪಾಲಿನವರು ಅಂದರೆ 13,541 ಜನರು ಲೇವಾದೇವಿ ಮಾಡುತ್ತಿಲ್ಲ. ಈ ಬ್ಯಾಂಕುಗಳಲ್ಲಿ ಜನರು ಒಟ್ಟು 77,67,392 ರೂಪಾಯಿ ಹಾಕಿಕೊಂಡಿದ್ದಾರೆ. ಕಳೆದ ವರುಷ ಸೇವಿಂಗ್ಸ್ ಬ್ಯಾಂಕುಗಳಿಗೆ ಹಾಕಿದ ಹಣಕ್ಕಿಂತಲೂ 2,01,302 ರೂಪಾಯಿ ಹೆಚ್ಚಾಗಿ ಅಂದರೆ 36,21,705 ರೂಪಾಯಿಯನ್ನು ವಾಪಸು ಪಡೆದುಕೊಂಡಿರುತ್ತಾರೆ. ಇದಕ್ಕೆ ಕಾಲಸ್ಥಿತಿಯು ಚೆನ್ನಾಗಿರಲಿಲ್ಲವೆಂದೂ, ಸೇವಿಂಗ್ಸ್ ಬ್ಯಾಂಕುಗಳಿಂದ ಹಣವನ್ನು ವಾಪಸು ತೆಗೆದುಕೊಂಡು ಮೈಸೂರು ಬ್ಯಾಂಕಿಗೂ, ಕೋಆಪರೆಟಿವ್ ಸೊಸೈಟಿಗೂ ಕೊಡಲಾಯಿತೆಂದೂ ಕಾರಣ ಹೇಳಲಾಗಿದೆ. ಹ್ಯಾಗೂ ಈ ಬ್ಯಾಂಕುಗಳಿಗೆ ಇನ್ನೂ ಅನೇಕಾನೇಕ ಪ್ರಜೆಗಳು ತಮ್ಮ ಹಣಗಳನ್ನು ಹಾಕುವಂತಾಗಬೇಕೆಂದೂ, ಇದರಿಂದ ಅವರಿಗೆ ಕಷ್ಟಕಾಲದಲ್ಲಿ ತುಂಬಾ ಸಹಾಯವಾಗುವುದೆಂದೂ ಸೂಚಿಸಲಪೇಕ್ಷಿಸುತ್ತೇವೆ.

ಗವರ್ನ್‌ಮೆಂಟ್ ಉದ್ಯಾನವನಗಳೂ ಪಾರ್ಕುಗಳೂ.—ಈ ಇಲಾಖೆಯ ವಾರ್ಷಿಕ ರಿಪೋರ್ಟಿನಿಂದ ಮಳೆಯು ಸರಿಯಾಗಿ ನಡಿಸದೆಹೋದರೂ ಕೆಲಸ ಕಾರ್ಯಗಳು ಚೆನ್ನಾಗಿ ನಡೆದಿರುವವೆಂದು ತಿಳಿಯುತ್ತದೆ. ಬೆಂಗಳೂರು ಲಾಲ್ ಬಾಗ್ ಎಂಬ ಉದ್ಯಾನವನದಲ್ಲಿ ಬಿದ್ದ ಮಳೆ ಬಹಳ ಸ್ವಲ್ಪವೆಂದು ಹೇಳಲಾಗಿದೆ. **ಪ್ರಜೆಗಳಿಗೆ ತರಕಾರಿ ಹೂವು ಹಣ್ಣುಹಂಪಲುಗಳ ಮೇಲೆ ಅಭಿರುಚಿಯು ಹೆಚ್ಚುತ್ತಾ ಬಂದಿರುತ್ತದೆ. ಸರ್ಕಾರದ ಉದ್ಯಾನವನಗಳಲ್ಲೂ ಪಾರ್ಕುಗಳಲ್ಲೂ ಅವನ್ನು ಬೆಳೆದು ಒದಗಿಸಬಹುದೆಂದು ಸೂಚಿಸಲಾಗಿದೆ. ಈ ಇಲಾಖೆಯಲ್ಲಿ 74,477 ರೂಪಾಯಿ ಖರ್ಚಾಗಿರುವುದೆಂದೂ, 10,116 ರೂಪಾಯಿ ಹುಟ್ಟುವಳಿ ಆಯಿತೆಂದೂ ತಿಳಿಸಲ್ಪಟ್ಟಿದೆ. ಹುಟ್ಟುವಳಿಯನ್ನು ಹೆಚ್ಚಿಸುವ ಭಾಗದಲ್ಲಿ ಪ್ರೊಫೆಸರ್ ಗೆಡ್ಡಿಸ್ ರವರ ಅಭಿಪ್ರಾಯವನ್ನು ಅನುಸರಿಸಿ ಪ್ರಯತ್ನಪಟ್ಟು** ತರಕಾರಿ ಹಣ್ಣು ಹಂಪಲುಗಳನ್ನು ಬೆಳಸುತ್ತಾ ಬರಬೇಕು. ಆದರೆ ಅನೇಕ ಉದ್ಯಾನವನಗಳೂ ಪಾರ್ಕುಗಳೂ ಅಲಂಕಾರಕ್ಕಾಗಿ ಇಟ್ಟು ಕಾಪಾಡಲ್ಪಡಬೇಕಾಗಿರೋಣದರಿಂದ ಇವುಗಳಿಂದ ಹುಟ್ಟುವಳಿಯನ್ನು ತೋರಿಸುವುದು ಸಾಧ್ಯವಲ್ಲ. ಪ್ರಜೆಗಳು ತಮ್ಮ ಮನೆ ಅಂಗಳ ಹಿತ್ತಲು ಮುಂತಾದ ಕಡೆಗಳಲ್ಲಿ ತರಕಾರಿ ಹೂವು ಹಣ್ಣು ಹಂಪಲುಗಳನ್ನು ಬೆಳೆಸಿಕೊಳ್ಳುವಂತೆ ಅವರಲ್ಲಿ ಅಭಿರುಚಿಯುಂಟಾಗಬೇಕೆಂದು ಸರ್ಕಾರದವರು ಕುತೂಹಲಪಟ್ಟು, ಸಸಿಗಳನ್ನೂ ಬೀಜಗಳನ್ನೂ ಸುಲಭವಾಗಿ ತರಿಸಿಕೊಳ್ಳುವುದಕ್ಕೆ ಅನುಕೂಲಪಡಿಸಿದ್ದಾರೆ. ಪ್ರಜೆಗಳು ತಮ್ಮ ಮನೆಗಳಲ್ಲೂ ಅಕ್ಕಪಕ್ಕಗಳಲ್ಲೂ ಸಣ್ಣ ಉದ್ಯಾನವನಗಳನ್ನೂ ತರಕಾರಿ ತೋಟಗಳನ್ನೂ ಮಾಡಿಕೊಂಡು ವ್ಯವಸಾಯ ಮಾಡುತ್ತಾ ಬರುವುದಾದರೆ ಅವರ ದೇಹಶಕ್ತಿಯು ಪುಷ್ಟಿಯಾಗುವುದೆಂದೂ ಇದರಿಂದ ಇತರ ಪ್ರಯೋಜನಗಳೂ ಲಭಿಸುವವೆಂದೂ ಧಾರಾಳವಾಗಿ ಹೇಳುತ್ತೇವೆ.

ಮೈಸೂರು ರೈಲ್ವೆ ಇಲಾಖೆ.—ಈ ಇಲಾಖೆಯ ರಿಪೋರ್ಟು ಬಹಳ ಸಂಕ್ಷೇಪವಾದದ್ದಾಗಿದೆ. ಪ್ರಕಟಿಸಲ್ಪಡಬೇಕಾದ ಸಂಗತಿಗಳು ಇದರಲ್ಲಿ ಕಾಣಬರುವುದಿಲ್ಲ. ಮೂಲಧನದ ಅಂದರೆ ರೈಲ್ವೆ ಆಸ್ತಿಯನ್ನು ಹೆಚ್ಚಿಸುವುದಕ್ಕೆ 4,76,800 ರೂಪಾಯಿ ಖರ್ಚಾಗಿರುವುದೆಂದು ಹೇಳಲಾಗಿದೆ; ಇದು ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ವಿನಿಯೋಗವಾಯಿತೋ ಈ ರಿಪೋರ್ಟಿನಲ್ಲಿ ಕಾಣಸಿಲ್ಲ. ಈಗ 411 ಮೈಲಿ ರೈಲ್ ರಸ್ತೆಗಳಿರುವವು. ಕಳೆದ ಸಾಲಿನಲ್ಲಾದ ಹುಟ್ಟುವಳಿ 39,19,031 ರೂಪಾಯಿ; ಖರ್ಚು 22,37,319 ರೂಪಾಯಿ. ರೈಲ್ವೆ ಆಸ್ತಿಯ ಹಣಕ್ಕೆ ಶೇಕಡಾ 6.53 ರಂತೆ ಬಡ್ಡಿಯು ಉತ್ಪತ್ತಿ ಆಗಿರುವುದು.—ಕೋಲಾರ್-ಬೌರಿಂಗ್‌ಪೇಟೆ ರೈಲ್ ರಸ್ತೆಯು ಸಿದ್ಧವಾಗಿ 1913 ನೇ ಡಿಸೆಂಬರ್ ತಾ. 15 ರಿಂದ ಗಾಡಿಗಳನ್ನು ಬಿಡುತ್ತಿದ್ದಾರೆ. ಈ ರೈಲ್ ರಸ್ತೆ ಸುಮಾರು ಹನ್ನೊಂದು ಮೈಲಿ ಆಗುವುದು. ಕಳೆದ ಸರ್ಕಾರಿ ಸಾಲ್ ಆಖೈರಿಗೆ ಅಂದರೆ 6½ ತಿಂಗಳಿಗೆ 1,668 ರೂಪಾಯಿ ಹುಟ್ಟುವಳಿ ಆಯಿತು. ಈ ರೈಲ್ ಹಾಕುವುದರ ಒಟ್ಟು ಖರ್ಚು 3,46,939 ರೂಪಾಯಿ.—ಮೈಸೂರು-ಅರಸೀಕೆರೆ ಲೈನೂ, ಬೆಂಗಳೂರು-ಚಿಕ್ಕಬಳ್ಳಾಪುರ ಲೈನೂ, ತರೀಕೆರೆ-ಯಡೆಹಳ್ಳಿ ಲೈನೂ ಕಾಮಗಾರಿಯಾಗುತ್ತಿರುವವು. ಸರ್ಕಾರದವರ ಪರ್ಯಾಲೋಚನೆಯಲ್ಲಿರುವ ರೈಲ್ವೆ ಕಾಮಗಾರಿಗಳ್ಯಾವುವೆಂದರೆ—(1) ಕೋಲಾರ್-ಚಿಕ್ಕಬಳ್ಳಾಪುರ, (2) ಬೆಂಗಳೂರು-ಹೊಸೂರು, (3) ಕಡೂರು-ಚಿಕ್ಕಮಗಳೂರು, (4) ಚಿಕ್ಕಮಗಳೂರು-ಹಾಸನ. ಹಾಸನದಿಂದ ಮಂಗಳೂರಿಗೆ ಲೈನ್ ಹಾಕುವ ವಿಚಾರವಾಗಿಯೂ, ನಂಜನಗೂಡಿನಿಂದ ಈರೋಡಿಗೆ ಲೈನ್ ಹಾಕುವ ವಿಷಯದಲ್ಲೂ ಮೈಸೂರು ಗವರ್ನ್‌ಮೆಂಟಿಗೂ ಇಂಡಿಯಾ ಗವರ್ನ್‌ಮೆಂಟಿಗೂ ಕಾಗದ ಪತ್ರಗಳು ನಡೆಯುತ್ತಲಿವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಆಗಸ್ಟ್ ತಾ. 16 ರಿಂದ ಪ್ರಾರಂಭವಾಗಿ ನಾಲ್ಕು ದಿನ ನಡೆಯುವುದು.

ಮುಂದಿನ ತಿಂಗಳು 21 ನೇ ತಾರೀಖಿನಲ್ಲಿ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಫಲಪುಷ್ಪಗಳ ಎರಡನೇ ಪ್ರದರ್ಶನವು ಜರುಗುವುದಾಗಿದೆ. ನಮ್ಮ ಶ್ರೀಮನ್ ಮಹಾರಾಜರವರು ದಯಮಾಡಿ ಈ ಪ್ರದರ್ಶನವನ್ನು ಪ್ರಾರಂಭ ಮಾಡುವರೆಂದು ಕೇಳುತ್ತೇವೆ.

ಮಂಡ್ಯದ ತಾಲ್ಲೂಕು ಮಾಗಾನಹಳ್ಳಿ ಗ್ರಾಮದಲ್ಲೂ ಅಜೂಬಾಜು ಹಳ್ಳಿಗಳಲ್ಲೂ ಮೂರು ಮಂದಿ ಅನೇಕ ದನಗಳಿಗೆ ವಿಷಹಾಕಿ ಕೊಲ್ಲುತ್ತಿದ್ದದ್ದು ಪ್ರಜೆಗಳು ಪತ್ತೆಮಾಡಿ ಅವರನ್ನು ಹಿಡಿದು ಕಳೆದ ಗುರುವಾರ ಪೋಲೀಸಿಗೆ ಒಪ್ಪಿಸಿರುತ್ತಾರೆಂದು ತಿಳಿದುಬಂದಿದೆ.

ಮೈಸೂರು ಬ್ಯಾಂಕಿನಲ್ಲಿ ಜೂನ್ 30 ಕ್ಕೆ ಆಖೈರಾದ ಛಮಾಹಿಗೆ ಶೇಕಡಾ 6 ರಂತೆ ಬಡ್ಡಿ ಬಟವಾಡೆ ಮಾಡಲು 30,000 ರೂಪಾಯನ್ನೂ, ರಿಜರ್ವ್ ಫಂಡಿಗೆ 25,000 ರೂಪಾಯನ್ನೂ ವಿನಿಯೋಗಿಸಿ, ರೂ. 10,309-5-3 ಫೈಯನ್ನು ಬಾಕಿ ಲೆಕ್ಕದಲ್ಲಿಟ್ಟುಕೊಂಡಿದ್ದಾರೆ.

ಒಬ್ಬ ಬಾತ್ಮೀದಾರರಿಂದ.—ಅವನೀಮಠದ ಶ್ರೀಸ್ವಾಮಿಗಳವರು ಶಿಡ್ಲಘಟ್ಟಕ್ಕೆ ತಾ. 7 ರಲ್ಲಿ ದಯಮಾಡಿಸಿದರು. ಅಮಲ್ದಾರರು ಮುಂತಾಗಿ ಎಲ್ಲಾ ಅಧಿಕಾರಿಗಳೂ ಊರಿನ ಮುಖಂಡರೂ ಎದುರುಗೊಂಡು ಮರ್ಯಾದೆಯಿಂದ ಬರಮಾಡಿಕೊಂಡರು. ಸುಲ್ತಾನ್‌ಪೇಟೆ ಸತ್ಯವಾದಿ ಸುಬ್ಬರಾಯರು ಬಹಳ ಮುತುವರ್ಜಿ ವಹಿಸಿ ಒಂದು ದಿನದ ಭಿಕ್ಷೆಯನ್ನು ತಮ್ಮ ಸ್ವಂತ ಖರ್ಚಿನಿಂದಲೇ ಮಾಡಿದರು.

ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ರಾಜಧಾನಿಯಿಂದ ಮೇಲುಕೋಟೆಗೆ ದಯಮಾಡಿ ಕಳೆದ ಭಾನುವಾರ ಮಧ್ಯಾಹ್ನ ಮಹಾಮಾತೃಶ್ರೀಯವರ ಸಮೇತ ಮೋಟರಿನಲ್ಲಿ ಅಲ್ಲಿಂದ ಹೊರಟು ಅತ್ತಿಗುಪ್ಪೆ ಕುಣಿಗಲ ಮೇಲೆ ಬೆಂಗಳೂರಿಗೆ ಚಿತ್ತೈಸಿದರು. ಮಹಾರಾಣಿಯವರು ಪರಿವಾರ ಸಮೇತ ಮೇಲುಕೋಟೆಯಿಂದ ಭಾನುವಾರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿದರು.

ಕಳೆದ ಬುಧವಾರ ರಾಜಧಾನಿಯ ಕ್ರೈಸ್ತರಲ್ಲಿ ಪ್ರಮುಖರಾದ ಮಿ॥ ಮೈಲಾಪೂರ್ ತಿರುವೆಂಗಡಂರವರು ತಮ್ಮ ಕುಮಾರಿಯ ವಿವಾಹವನ್ನು ಬಹು ವಿಜೃಂಭಣೆಯಿಂದ ನಡಿಸಿದರು. ಅನೇಕ ದೇಶೀಯ ಕ್ರೈಸ್ತರೂ ಹಿಂದೂ ದೊಡ್ಡ ಮನುಷ್ಯರೂ ವಿವಾಹಕ್ಕೆ ದಯಮಾಡಿಸಿ ನೂತನ ವಧೂವರರನ್ನು ಆಶೀರ್ವದಿಸಿದರು. ಈ ವಿವಾಹದ ನಿಮಿತ್ತ ಅವರು ನೂರಾರು ಜನರನ್ನು ಕರಸಿಕೊಂಡು ಸುಖಭೋಜನವನ್ನು ಮಾಡಿಸಿದರು.

ಯುದ್ಧಭೂಮಿಯಿಂದ ಗಾಯಪಟ್ಟ ಹಿಂದುಸ್ಥಾನದ ಸೈನಿಕರನ್ನು ಕರೆದು ತಂದು ಆಸ್ಪತ್ರೆಗಳಲ್ಲಿಟ್ಟು ಚಿಕಿತ್ಸೆ ಆರೈಕೆಗಳನ್ನು ಮಾಡುವುದಕ್ಕೆ ಮದರಾಸ್ ಅಧಿಪತ್ಯಕ್ಕೆ ತಿಂಗಳೊಂದಕ್ಕೆ 1,25,000 ರೂಪಾಯಿ ಖರ್ಚಾಗುವುದೆಂದೂ, ಇದಕ್ಕಾಗಿ ಪ್ರತಿ ತಿಂಗಳಲ್ಲೂ ಕೆಲವು ಹಣವನ್ನು ಚಂದಾ ಮೂಲಕ ಕೂಡಿಸಿ ಕಳುಹಿಸುತ್ತಾ ಬರಬೇಕೆಂದೂ ಮದರಾಸ್ ಸರ್ಕಾರದವರು ಮೈಸೂರು ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಬರೆದು ಕೇಳಿರುತ್ತಾರೆ.

ರಾಜಧಾನಿಯ ಟ್ರೈನಿಂಗ್ ಕಾಲೇಜಿನಲ್ಲಿ ನಡೆಯುವ ಕಿಂಡರ್ ಗಾರ್ಟನ್ ತರಗತಿಗಳ ಮಕ್ಕಳಿಗೆ ಪ್ರಾಣಿಗಳನ್ನು ಸಾಕ್ಷಾತ್ತಾಗಿ ತೋರಿಸುವುದಕ್ಕೆ ಅವಕಾಶವಿರಲಿಲ್ಲ. ಶ್ರೀಮನ್ ಮಹಾರಾಜರವರು ಈ ಕೊರತೆಯನ್ನು ನೀಗಲಾಡಿಸುವುದಕ್ಕಾಗಿ ಖಾಸ್‌ಬಂಗಲೆಯ ಮೃಗಾಲಯಕ್ಕೆ ಆ ಮಕ್ಕಳನ್ನು ತಿಂಗಳಿಗೊಂದುಸಲ ಕಡೇ ಶನಿವಾರ ಕರೆದುಕೊಂಡು ಹೋಗಿ ಮೃಗಾದಿಗಳನ್ನು ತೋರಿಸಬಹುದೆಂದು ಕೃಪೆಯಿಟ್ಟು ಅಪ್ಪಣೆಕೊಡಿಸಿರುತ್ತಾರೆ.

ಪಿ. ನಂಜುಂಡರಾಯರ ಮಗ ಪಿ. ವೆಂಕಟರಾವ್ ಎಂಬ ವಿದ್ಯಾರ್ಥಿಯು ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದ್ದು ಚನ್ನಪಟ್ಟಣದ ಸೆಂಟರಿನಲ್ಲಿ ತನಗೆ ಬದಲಾಗಿ ತನ್ನ ಸಹೋದರನನ್ನು ಪರೀಕ್ಷೆಗೆ ಕೂಡಿಸಿದ್ದರಿಂದ ಅವನನ್ನು ಈ ಸಂಸ್ಥಾನದ ಯಾವ ಪರೀಕ್ಷೆಗೂ ಸೇರಿಸುವುದಿಲ್ಲವೆಂದೂ, ಮುಂದೆ ಹೇಳುವ ಮೂವರು ವಿದ್ಯಾರ್ಥಿಗಳನ್ನು 1916 ನೇ ಲೋ. ಸೆ. ಪರೀಕ್ಷೆಗೆ ಸೇರಿಸಕೂಡದೆಂದೂ ಶಿಕ್ಷಿಸಿರುತ್ತಾರೆ. ಚನ್ನಪಟ್ಟಣದ ಮಹಮ್ಮದ್ ಖಾದರ್ ಸಾಹೇಬರ ಮಗ ಟಿ. ಅಬ್ದುಲ್ ರಹಿಮಾನ್, ಚನ್ನಪಟ್ಟಣದ ಫಜಲ್ ಖಾನ್‌ರ ಮಗನು ಅಲಿ ಸಾಹೇಬ್, ಹೊಸಕೋಟೆ ತಾಲ್ಲೂಕು ಶಿವನಾಪುರದ ಸುಬ್ಬರಾಯಪ್ಪನವರ ಮಗ ಕೆ. ಎಸ್. ರಾಮರಾವ್.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಜೂಲೈ 9 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಹಣಗಳು	.... ರೂ.	10,00,000
,, (2) ರಿಜರ್ವ್ ಫಂಡು	.... ,,	25,000
,, (3) ಡಿಪಾಜಿಟ್ಟುಗಳು	.. .. ,,	30,48,308
,, (4) ಇತರೆ	.... ,,	70,250
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	41,43,558

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ ರೂ.		9,53,659
,, (2) ಸಾಲ ಮತ್ತು ಇತರ ಸಾಲಗಳು	...... ,,	23,15,633
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,92,800
,, (4) ಇನ್ವೆಸ್ಟ್‌ಮೆಂಟುಗಳು	...... ,,	2,94,216
,, (5) ಬ್ರಾಂಚಿಗಳಲ್ಲಿರುವ ಹಣಗಳು	...... ,,	1,67,832
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	...... ,,	14,586
,, (7) ಇತರೆ	.... ,,	5,022
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	41,43,558

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘ.

ಈ ಸಂಘದ ಎಲ್ಲಾ ಮೆಂಬರುಗಳು ಸೇರಿ 6 ನೇ ವಾರ್ಷಿಕೋತ್ಸವವನ್ನು ಈ ಜೂಲೈ ತಾ. 3 ನೇ ಶನಿವಾರ ಚಿತ್ರದುರ್ಗದ ಎ. ವಿ. ಸ್ಕೂಲ್ ಹಾಲಿನಲ್ಲಿ ನಡೆಸಿದರು. ಎ. ವಿ. ಸ್ಕೂಲ್ ಕಟ್ಟಡವು ಚಿತ್ರಪಟಗಳಿಂದಲೂ, ಕದಳೀ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಮಧ್ಯಾಹ್ನ 3 ಗಂಟೆಗೆ ಆಫೀಸರುಗಳು ಹೈ ಸ್ಕೂಲು ಎ. ವಿ. ಸ್ಕೂಲು, ವಿಲೇಜ್ ಸ್ಕೂಲು ಉಪಾಧ್ಯಾಯರುಗಳು ಸುಮಾರು 80 ಜನಗಳ ವರೆವಿಗೂ ಸೇರಿದರು. ಮ|| ಲಕ್ಷ್ಮೀಪತಯ್ಯ, ಬಿ.ಎ. ಯವರು ಅಗ್ರಾಸನಾಧಿಪತ್ಯವನ್ನು ವಹಿಸಿದರು. ವಿದ್ವಾನ್ ಮ|| ವೆಂಕಟೇಶ ಶಾಸ್ತ್ರಿಗಳವರ ಗಾನವೂ, ದೇವರ ಪ್ರಾರ್ಥನೆಯೂ ನಡೆದ ಮೇಲೆ ಸಂಘದ ಸೆಕ್ರೆಟರಿಯವರಿಂದ ಕಳೆದ ವರ್ಷದ ರಿಪೋರ್ಟು ಓದಲ್ಪಟ್ಟಿತು. ಅದರಲ್ಲಿ ಕಂಡ ಮುಖ್ಯಾಂಶಗಳು—ಬ್ರಾಂಚ್ ಸಂಘಗಳು ಏರ್ಪಟ್ಟಿದ್ದು, ಸಂಘದಿಂದುಂಟಾಗುವ ಉಪಯೋಗಗಳು, ಕಮಿಟಿ ಮೆಂಬರುಗಳು ಕೊಟ್ಟಿರುವ ಉಪನ್ಯಾಸಗಳು, ಪ್ರಾಕ್ಟಿಕಲ್ ಕ್ಲಾಸುಗಳೂ, ರಾತ್ರಿ ಪಾಠಶಾಲೆಗಳು, ರೀಡಿಂಗ್ ರೂಮುಗಳು, ಫಂಡಿನ ವಿಷಯ, ಮುಂದಿನ ವರ್ಷದ ಕೆಲಸದ ಪಟ್ಟಿ, ಈ ಮೊದಲಾದವು. ಈ ಸಂಘದ ಪ್ರೆಸಿಡೆಂಟರಾಗಿದ್ದ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಎಂ. ಕೆ. ತಿರುಮಲಾಚಾರ್ಯರು ರಿಟೈರಾಗಿರುವವರಿಂದ ಅವರು ಈಗ 6 ವರ್ಷಗಳಿಂದಲೂ ಈ ಸಂಘಕ್ಕೆ ಮಾಡಿರುವ ಅಮೋಘವಾದ ಪ್ರಯೋಜನಗಳನ್ನು ತಿಳಿಸಿ ಸಂಘದ ಪರವಾಗಿ ವಂದನೆಗಳನ್ನು ಸಮರ್ಪಿಸಿದರು. ತರುವಾಯ ಅಗ್ರಾಸನಾಧಿಪತಿಗಳ ಭಾಷಣವು ನಡೆಯಿತು. ಸಾಯಂಕಾಲ 7 ಗಂಟೆಯಿಂದ ಪ್ರಸಿದ್ಧರಾದ ಮ|| ರಾಮಸ್ವಾಮಯ್ಯನವರ ಹರಿಕಥೆಯು ನಡೆದು ಸರ್ವರಿಗೂ ನೀತಿಯ ಕಥೆಗಳು ತಿಳಿಸಲ್ಪಟ್ಟವು. ಸರ್ವರೂ ಆನಂದಭರಿತರಾದರು. ಚೇರ್ಮನ್‌ರವರಿಗೆ ವಂದನೆಗಳನ್ನು ಹೇಳಿದ ತರುವಾಯ ಎಲ್ಲರೂ ಶುಭವಾದನಗಳನ್ನು ಹೇಳುತ್ತಾ ತೆರಳಿದರು.

ಮಾರನೇ ಭಾನುವಾರ ಪೆನ್‌ಷನನ್ನು ಹೊಂದಿ ರಿಟೈರ್ಡ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಎಂ. ಕೆ. ತಿರುಮಲಾಚಾರ್ಯರಿಗೆ ಚಿತ್ರದುರ್ಗದಲ್ಲಿರುವ ಮಹಾಜನಗಳು ಎಂಟರ್‌ಟೇನ್‌ಮೆಂಟು ಕೊಟ್ಟರು. ಭಾನುವಾರ ಮಧ್ಯಾಹ್ನ $4\frac{1}{2}$ ಘಂಟೆಯಿಂದ $5\frac{1}{2}$ ಘಂಟೆವರೆಗೆ ಟೀ ಪಾರ್ಟಿ ನಡೆಯಿತು. ಎಲ್ಲಾ ಆಫೀಸರುಗಳೂ ಲಾಯರುಗಳೂ ಊರಲ್ಲಿರುವ ವರ್ತಕರು ಮತ್ತು ಸ್ಕೂಲ್ ಮಾಸ್ಟರುಗಳೂ ಸೇರಿದ್ದರು. ಸ್ವಲ್ಪ ಹೊತ್ತು ಸಂಗೀತ ಕಛೇರಿಯು ನಡೆದು ಸರ್ವರೂ ಆನಂದಭರಿತರಾದರು. ತರುವಾಯ ಇದಕ್ಕಾಗಿ ಏರ್ಪಾಡಾಗಿದ್ದ ಕಮಿಟಿಯ ಸೆಕ್ರೆಟರಿಯವರು ಮ|| ತಿರುಮಲಾಚಾರ್ಯರುಗಳೂ ಕಥನಮಾಡಿ ಇದಕ್ಕಾಗಿ ಅವರ ಹೆಸರಿನ ಮೇಲೆ ಒಂದು ಫಂಡು ಏರ್ಪಾಡಾಗಿದೆ ಎಂದೂ, ಅದರ ಬಡ್ಡಿಯಲ್ಲಿ ಸಂಸ್ಕೃತವನ್ನು ತೆಗೆದುಕೊಂಡು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ಯಾಸಾದ ಈ ಡಿಸ್ಟ್ರಿಕ್ಟ್ ವಿದ್ಯಾರ್ಥಿಗೆ ಒಂದು ಬಹುಮಾನವನ್ನು ಕೊಡಬೇಕೆಂದೂ ಹೇಳಿದರು. ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಪಂಡಿತರುಗಳು ಶುಭವಾದನಗಳನ್ನು ಹೇಳಿದರು. ಸರ್ವರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಅಗ್ರಾಸನಾಧಿಪತಿಗಳಿಗೆ ವಂದನೆಗಳು ಸಮರ್ಪಿಸಲ್ಪಟ್ಟವು. ಸರ್ವರೂ ಜಯಧ್ವನಿಮಾಡುತ್ತಾ ತೆರಳಿದರು.

ವೀಣಾ ಚಿಕ್ಕಪ್ಪ, ಜಾಯಿಂಟ್ ಸೆಕ್ರೆಟರಿ.

ಮೈಸೂರು ಗೆಜೆಟ್ ಸಂಗ್ರಹ.

ಬಲಾತ್ಕರಿಸಿ ದೇವೀ ತಿದುಬು ಹಾಕುವ ಕಾನೂನನ್ನು ಇದೇ ಜೂಲೈ ತಾ 15 ರಿಂದ ಬೀರೂರು, ತರೀಕೆರೆ, ಕಡೂರು ಮ್ಯುನಿಸಿಪಾಲಿಟಿಗಳಲ್ಲಿ ಮೂರು ವರುಷ ಕಾಲವೂ, ನರಸಿಂಹರಾಜಪುರದಲ್ಲಿ ಒಂದು ವರುಷವೂ ಜಾರಿಗೆ ತರಲಾಗಿದೆ.

ಮುಳ್ಳುಕಟ್ಟೆ ಮ|| ಗೌಡೆಗೌಡರನ್ನು ನಾಗಮಂಗಲದ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ.

ಅರಮನೆ ಮುಜರಾಯಿ ಭಕ್ಷಿ ಮ|| ಎಚ್. ಲಿಂಗರಾಜೇ ಅರಸಿನವರನ್ನು ಮೈಸೂರು ಸಂಸ್ಕೃತ ಪಾಠಶಾಲೆಯ ಮ್ಯಾನೇಜಿಂಗ್ ಕಮಿಟಿಯ ಮೆಂಬರಾಗಿ ನೇಮಕಮಾಡಿದೆ.

ಶಿವಮೊಗ್ಗೆಯ ಆಕ್ಟಿಂಗ್ ಮುನ್‌ಸಿಫ್ ಮ|| ಎಚ್. ಎಂ. ಕೃಷ್ಣಸ್ವಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವಮೊಗ್ಗ ಡಿಸ್ಟ್ರಿಕ್ಟ್ ಕೋರ್ಟ್ ಹೆಡ್ ಮುನ್‌ಷಿ ಮ|| ಎಸ್. ರಾಮಚಂದ್ರ ಶಾಸ್ತ್ರಿಯವರು ಶಿವಮೊಗ್ಗ ಮುನ್‌ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಸಾಗರದ ಮುನ್‌ಸಿಫ್ ಮ|| ವಿ ರಾಘವಾಚಾರ್ಯರಿಗೆ ಆಗಸ್ಟ್ ತಾ. 1 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮ|| ಎಸ್. ರಾಮಚಂದ್ರಶಾಸ್ತ್ರಿಯವರು ಸಾಗರದ ಮುನ್‌ಸಿಫರಾಗಿ ಬದಲಿ ನೋಡತಕ್ಕದ್ದು.

ಗವರ್ನ್‌ಮೆಂಟ್ ಡೆಪ್ಯುಟಿ ಸೆಕ್ರೆಟರಿ ಮ|| ಪಿ ಜಿ. ಡಿಸೋಜಾಯವರಿಗೆ ಜೂಲೈ ತಾ. 7 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮ|| ಸಿ. ವೆಂಕಟರಾಯರು ಬೇರೆ ಕೆಲಸದ ಮೇಲಿರುವಾಗ್ಗೆ ಬೆಂಗಳೂರು ಟ್ರೆಜರಿ ಅ|| ಕಮೀಷನರ್ ಮ|| ಎಂ ಶ್ರೀನಿವಾಸಮೂರ್ತಿಯವರು ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರಾಗಿಯೂ, ಪ್ರೊ|| ಅ|| ಕಮಿಷನರ್ ಮ|| ಪಿ ಗೋಪಾಲರಾಜೇಅರಸಿನವರು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾಗಿಯೂ ಇರತಕ್ಕದ್ದು.

ಚೀಫ್ ಕೋರ್ಟ್ ಅ|| ಡೆಪ್ಯುಟಿ ರೆಜಿಸ್ಟ್ರಾರ್ ಮ|| ಎಸ್. ಎ. ವೈದ್ಯೇಶ್ವರ ಅಯ್ಯರವರನ್ನು ಜೂಲೈ ತಾ. 1 ರಿಂದ ನರಸಿಂಹರಾಜಪುರದ ಮುನ್‌ಸಿಫರಾಗಿ ಬದಲಿ ನೇಮಕಮಾಡಿದೆ

ಶಿವಮೊಗ್ಗಾ ಅ|| ಮುನ್‌ಸಿಫ್ ಮ|| ಎಚ್. ಎಂ. ಕೃಷ್ಣಸ್ವಾಮಿಯವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗೀ ಹುಕುಂ ಮಾಡಲ್ಪಟ್ಟಿದೆ—ಮ|| ಕೆ. ಕೆ. ವೆಂಕಟಸ್ವಾಮಿಯವರು ಸೊರಬದಿಂದ ಗುಬ್ಬಿಗೆ; ಮ|| ಟಿ. ಸ್ವಾಮಿನಾಥಶಾಸ್ತ್ರಿಯವರು ಗುಬ್ಬಿಯಿಂದ ಸೊರಬಕ್ಕೆ.

ಅ|| ಇನ್‌ಜನಿಯರ್ ಮ|| ಎಂ. ಜಿ. ರಂಗಯ್ಯನವರನ್ನು ಒಂದು ವರುಷ ತಾತ್ಕಾಲಿಕವಾಗಿ ದಿವಾನರ ಆಫೀಸಿಗೆ ವರ್ಗಮಾಡಿದೆ

ಎಗ್ಸಿಕ್ಯುಟಿವ್ ಇನ್‌ಜನಿಯರ್ ಮ|| ಬಿ. ಸಿ ಶ್ರೀನಿವಾಸಯ್ಯಂಗಾರ್ರನ್ನು ಯಡತೊರೆ ಡಿವಿಜನ್‌ನಿಂದ ಚೀಫ್ ಇನ್‌ಜನಿಯರವರ ಆಫೀಸ್ ಸ್ಪೆಷಲ್ ಅಸಿಸ್ಟೆಂಟಾಗಿ ನೇಮಿಸಿ ವರ್ಗಮಾಡಿದೆ.

ಅ|| ಇನ್‌ಜನಿಯರ್ ಮ|| ಕೆ. ವಿ. ದೇಶಿಕಾಚಾರ್ಯರು ಯಡತೊರೆ ಡಿವಿಜನ್ ಎಗ್ಸಿಕ್ಯುಟಿವ್ ಇನ್‌ಜನಿಯರಾಗಿ ನೇಮಿಸಲ್ಪಟ್ಟಿದ್ದಾರೆ.

ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಸಬ್ ಅ|| ಇನ್‌ಜನಿಯರ್ ಮ|| ಬಿ. ಕೃಷ್ಣರಾಯರನ್ನು ಡೆಪ್ಯುಟಿ ಚೀಫ್ ಇನ್‌ಜನಿಯರವರ ಪರ್ಸನಲ್ ಅಸಿಸ್ಟೆಂಟಾಗಿ ನೇಮಿಸಿ ವರ್ಗಮಾಡಿದೆ.

ಮೇಲುಕೋಟೆಗೆ ಶ್ರೀಮನ್ ಮಹಾರಾಜರವರು ದಯಮಾಡಿಸಿದ್ದು.

ಈ ಮಾಹೆ 17 ನೇ ತಾ. ಶನಿವಾರ ಇಲ್ಲಿಯ ಟ್ರಾವೆಲರ್ಸ್ ಬಂಗ್ಲೆ ಬಳಿ ಧ್ವಜಪತಾಕೆಗಳಿಂದಲೂ, ತಳಿರು ತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ನಮ್ಮ ಡೆಪ್ಯುಟಿ ಕಮಿಷನರ್ ಆದಿಯಾಗಿ ಸಮಸ್ತ ಲೌಕಿಕ ಮಹನೀಯರೂ, ಶ್ರೀಮಾನ್ ಪಂಡಿತರತ್ನಂ ಕೃಷ್ಣಯ್ಯಂಗಾರ್ಯರೇ ಮೊದಲಾದ ಅನೇಕ ವಿದ್ವನ್ಮಂಡಲಿಯವರೂ, ಪುರಪ್ರಮುಖರೂ, ವರ್ತಕರೇ ಮುಂತಾದ ಸ್ಥಳ ಪರಸ್ಥಳದ ಮಹನೀಯರೂ ಕೋಲಾಹಲಧ್ವನಿಯಿಂದ ಸಾಯಂಕಾಲ $5\frac{1}{2}$ ಘಂಟೆಗೆ ಸರಿಯಾಗಿ ನೆರೆದಿದ್ದರು. ಆ ಕಾಲದಲ್ಲಿ ಶ್ರೀಯವರ ದೇವಸ್ಥಾನದಿಂದ ಸಕಲ ಬಿರುದಾವಳಿಗಳೊಡನೆ ಮರ್ಯಾದೆಯು ಬಂದಿತ್ತು. ರಸ್ತೆಯ ಉದ್ದಕ್ಕೂ ಉಭಯ ಪಾರ್ಶ್ವಗಳಲ್ಲೂ ಸುತ್ತುಮುತ್ತಲಿನ ಗ್ರಾಮಾಂತರಗಳ ರೈತಪ್ರಜೆಗಳು ಮಹಾಸ್ವಾಮಿಯವರ ಸಂದರ್ಶನಕ್ಕಾಗಿ ಕಿಕ್ಕಿರಿಯುವಂತೆ ನೆರೆದಿದ್ದರು.—ಸಾಯಂಕಾಲ $6\frac{1}{2}$ ಘಂಟೆಗೆ ಸರಿಯಾಗಿ ಅರಮನೆ ರಾಣೀವಾಸದವರ ಸಮೇತ ಶ್ರೀಮನ್ ಮಹಾರಾಜರವರ ಸವಾರಿಯು ಚಿತ್ತೈಸಿತು. ಆಗ ವಿದ್ವನ್ಮಂಡಲಿಯವರು ಫಲಮಂತ್ರಾಕ್ಷತೆಗಳನ್ನು ಒಪ್ಪಿಸಿದರು. ಲೌಕಿಕರೆಲ್ಲರೂ ಸುಸ್ವಾಗತವನ್ನು ಬಯಸಿದರು. ಅಲ್ಲಿ ನೆರೆದಿದ್ದವರೆಲ್ಲರೂ ಕಲಕಲ ಧ್ವನಿಯನ್ನು ಮಾಡುತ್ತಿರೆ ಮಹಾಸ್ವಾಮಿಯವರು ಮುಂದಕ್ಕೆ ದಯಮಾಡಿ ನೇಯಿಗೆ ಸೊಸೈಟಿಯವರಿಂದ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ಸ್ವಲ್ಪಕಾಲ ನಿಂತು, ಸಂಘದ ಮೆಂಬರುಗಳಿಂದ ಅರ್ಪಿಸಲ್ಪಟ್ಟ ಮರ್ಯಾದೆಗಳನ್ನು ಸ್ವೀಕರಿಸಿ, ಸಂಘದ ವಿಷಯವನ್ನು ವಿಚಾರಿಸಿಕೊಂಡು ನಮ್ಮ ದಿ|| ಕೆ|| ಸಾಹೇಬರ ಅಪ್ಪಣೆಯಂತೆ ನಮ್ಮ ಡೆಪ್ಯುಟಿ ಅಮಲ್ದಾರ್ ಮ|| ಮಲ್ಲರಾಜೆ ಅರಸಿನವರಿಂದ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಎ. ವಿ. ಸ್ಕೂಲ್ ಕಟ್ಟಡಕ್ಕೆ $9\frac{3}{4}$ ಘಂಟೆಗೆ ಸರಿಯಾಗಿ ದಯಮಾಡಿದರು. ಮಳೆಯು ಜನರಿಗೆ ಸ್ವಲ್ಪ ಅನುಕೂಲವನ್ನುಂಟುಮಾಡಿತು.

ತಾ. 18 ನೇ ಭಾನುವಾರ ಮಹಾಸ್ವಾಮಿಯವರು ಪ್ರಾತಃಕಾಲ ದೇವರ ಪೂಜೆ ವಗೈರೆ ಕಾರ್ಯಗಳನ್ನು ಮುಗಿಸಿಕೊಂಡು, ಶ್ರೀಯೋಗಾನರಸಿಂಹಸ್ವಾಮಿಯವರ ದರ್ಶನವನ್ನು ಮಾಡಿ ಆನಂದದಿಂದ ಶ್ರೀ ಪರಕಾಲಸ್ವಾಮಿಗಳವರ ಶ್ರೀಮಠಕ್ಕೆ ದಯಮಾಡಿಸಿದರು. ಅನಂತರ 10 ಘಂಟೆಗೆ ಅಲ್ಲಿಂದ ಹೊರಟು ನಾಡುಗೌಡರಿಂದ ಬಹಳ ಅಂದವಾಗಿ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ಚಿತ್ತೈಸಿ ಮರ್ಯಾದೆಗಳನ್ನು ಸ್ವೀಕರಿಸಿ ಅನಂತರ ವರ್ತಕರಿಂದ ಅಲಂಕರಿಸಲ್ಪಟ್ಟಿದ್ದ ಚಪ್ಪರವನ್ನು ಪರಾಂಬರಿಸಿ ಮುಂದೆ ಶ್ರೀಯವರ ದೇವಸ್ಥಾನಕ್ಕೆ ರಾಜಬೀದಿಯಲ್ಲಿ ಸವಾರಿಯು ಚಿತ್ತೈಸಿತು. ಶ್ರೀಯವರ ದೇವಸ್ಥಾನದಲ್ಲಿ ಶ್ರೀ ನಾರಾಯಣಸ್ವಾಮಿ, ಶ್ರೀ ಸಂಪತ್ಕುಮಾರಸ್ವಾಮಿ, ಶ್ರೀಯದುಗಿರಿನಾಯಕಮ್ಮನವರು, ಶ್ರೀ ರಾಮಾನುಜಾಚಾರ್ಯರವರು ಇವರುಗಳನ್ನು ಸಂದರ್ಶನಮಾಡಿ ಅಮೂಲ್ಯವಾದ ವಸ್ತ್ರಾದಿಗಳನ್ನು ಸಮರ್ಪಿಸಿದರು ಶ್ರೀಮನ್ ಮಹಾರಾಜರವರಿಗೆ ಅತಿಶಯವಾದ ಸಂತೋಷವುಂಟಾಯಿತು. ಅನಂತರ ವೈದಿಕ ಮಹನೀಯರು ಸ್ವಸ್ತಿವಚನವನ್ನು ಮಾಡುತ್ತಿರಲು, ಸವಾರಿಯು ಸಂಸ್ಕೃತ ಕಾಲೇಜಿಗೆ ಚಿತ್ತೈಸಿತು. ಅಲ್ಲಿ ಶ್ರೀಮಾನ್ ಪಂಡಿತರತ್ನಂ ಕೃಷ್ಣಯ್ಯಂಗಾರ್ಯರವರು ಅತಿ ಶ್ಲಾಘ್ಯವಾದ ರಸವತ್ತಾದ ಮಂಗಳ ಶ್ಲೋಕಗಳನ್ನು ಹೇಳಿದರು. ಇತರ ವಿದ್ವಾಂಸರೂ ಮಂಗಳ ಶ್ಲೋಕಗಳನ್ನು ಪಠಿಸಿದರು. ಅಲ್ಲಿದ್ದ ಸರಸ್ವತೀ ಭಂಡಾರವನ್ನು ಪರಾಂಬರಿಸಿ ಸದುತ್ತರಗಳನ್ನು ದಯಪಾಲಿಸಿ ಶ್ರೀಯತಿರಾಜ ಮಠಕ್ಕೆ ದಯಮಾಡಿ ಯತಿರಾಜಸ್ವಾಮಿಗಳ ದರ್ಶನ ಮಾಡಿ ಸಮಸ್ತ ಪರಿವಾರದೊಡನೆ 12 ಘಂಟೆಗೆ ಬಿಡಾರಕ್ಕೆ ದಯಮಾಡಿಸಿದರು. ಶ್ರೀ ಸಂಪತ್ಕುಮಾರಸ್ವಾಮಿಯವರನ್ನು ಶ್ರೀ ಕಲ್ಯಾಣಿ ತೀರ್ಥಕ್ಕೆ ಬಿಜಯಮಾಡಿಸಿ ಅಲ್ಲಿ ಮಹಾನಿವೇದನವಾಗಿ ತ್ರಿಮತಸ್ಥ ಬ್ರಾಹ್ಮಣರಿಗೂ ಸಮಾರಾಧನೆಯೂ, ಭೂರಿದಕ್ಷಿಣೆಯೂ ಶ್ರೀಮನ್ ಮಹಾರಾಜರವರಿಗೂ, ರಾಣಿವಾಸದವರಿಗೂ ಸಹ ಆಶೀರ್ವಾದವೂ ಆದನಂತರ ಸಮಸ್ತರೂ ತಾಂಬೂಲಗಳನ್ನು ಪಡೆದು ನಮ್ಮ ಮಹಾಸ್ವಾಮಿಯವರಲ್ಲಿರತಕ್ಕ ಪ್ರಜಾವಾತ್ಸಲ್ಯ, ಸೌಲಭ್ಯ, ದೇವಬ್ರಾಹ್ಮಣ ಭಕ್ತಿಯೇ ಮೊದಲಾದ ಗುಣಕಥನಗಳನ್ನು ಮಾಡುತ್ತಾ ಬಹಳ ಸಂಭ್ರಮದಿಂದ ತೆರಳಿದರು. ಶ್ರೀಮನ್ ಮಹಾರಾಜರವರು ಪರಿವಾರ ಸಮೇತ 3 ಘಂಟೆಗೆ ಇಲ್ಲಿಂದ ಮೋಟರಿನಲ್ಲಿ ವಾಪಸು ತೆರಳಿದರು.

ನಮ್ಮ ಸಬ್ ಡಿವಿಜನ್ ಆಫೀಸರ್ ಮ|| ಕೃಷ್ಣಸಾಮಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸಮಾರಾಧನೆಯು ಬಹಳ ವಿಚಕ್ಷಣೆಯಿಂದಲೂ, ವಿಶೇಷ ಸಂಭ್ರಮದಿಂದಲೂ ನಡೆಯಿತು ಇವರ ನಿಷ್ಪಕ್ಷಪಾತತ್ವ ಮತ್ತು ಶ್ರಮವು ಸ್ತುತ್ಯವಾದುದಾಗಿದೆ. ಡೆಪ್ಯುಟಿ ಅಮಲ್ದಾರ್ ಮ|| ಮಲ್ಲರಾಜೆ ಅರಸಿನವರು ಮಹಾಸ್ವಾಮಿಯವರಿಗಾಗಿ ಮಾಡಿದ್ದ ಏರ್ಪಾಡುಗಳೆಲ್ಲವೂ ಬಹಳ ಸಮರ್ಪಕವಾಗಿದ್ದವು. ಪರ್ವತಾಗ್ರದಲ್ಲಿದ್ದುಕೊಂಡು ಮಹಾಸ್ವಾಮಿಯವರ ಶ್ರೇಯಃಪ್ರಾರ್ಥನೆಯನ್ನು ಪ್ರತಿಕ್ಷಣದಲ್ಲೂ ಮಾಡುತ್ತಿರುವ ಇಲ್ಲಿನ ಪ್ರಜೆಗಳ ಮೇಲೆ ನಮ್ಮ ಮಹಾಸ್ವಾಮಿಯವರ ಅನುಪಮ ಪೂರಿತವಾದ ಕಟಾಕ್ಷವು ಉಂಟಾದದ್ದಕ್ಕಾಗಿ ಇಲ್ಲಿನವರೆಲ್ಲರೂ ಆನಂದಪಡುತ್ತಿರುವರಲ್ಲದೆ ಮಹಾಸ್ವಾಮಿಯವರ ಸವಾರಿಯು ಆಗಾಗ್ಗೆ ಇಲ್ಲಿಗೆ ದಯಮಾಡುವಂತೆ ಆಗಬೇಕೆಂದು ಅನವರತವೂ ಪ್ರಾರ್ಥಿಸುತ್ತಿದ್ದಾರೆ.

ಪ್ರತ್ಯಕ್ಷದರ್ಶಿ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದ್ದರಿಂದ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಕರೆಸ್‌ಪಾಂಡೆನ್ಸ್.

ಉಪಾಧ್ಯಾಯರ ಬದಲಾವಣೆ.

ಅಯ್ಯಾ,—ತುಮಕೂರು ಎ. ವಿ. ಸ್ಕೂಲಿನಲ್ಲಿರುವ ಮ|| ಅಬ್ದುಲ್ ಹಾಫಿಜ್ ಎಂಬ ಮಹಮ್ಮದನ್ ಟೀಚರು ಎಷ್ಟೇ ವಿರಳವಾಗಿ ಅನ್ಯಭಾಷೆಯಾದ ಕನ್ನಡವನ್ನು ಬೋಧಿಸಿದರೂ ಹಿಂದೂ ಬಾಲಕರಿಗೆ ಹಿಂದೂ ಟೀಚರು ಬೋಧಿಸಿದಷ್ಟು ಫಲವಾಗಲಾರದು. ಇದರಂತೆಯೇ ಇಲ್ಲಿನ ಎ. ಎಚ್. ಸ್ಕೂಲಿನಲ್ಲಿರುವ ಮ|| ಎ. ಸುಬ್ರಾಯಪ್ಪನೆಂಬ ಇಂಗ್ಲಿಷ್ ಮಾಸ್ಟರು ಮುಸಲ್ಮಾನ್ ಬಾಲಕರಿಗೆ ಎಷ್ಟೇ ಚೆನ್ನಾಗಿ ಬೋಧಿಸಿದರೂ ಮಹಮ್ಮದನ್ ಟೀಚರು ಹೇಳಿದಷ್ಟು ಫಲವಾಗಲಾರದು. ಇವರಿಬ್ಬರನ್ನೂ ಒಂದು ಸ್ಕೂಲಿನಿಂದ ಮತ್ತೊಂದು ಸ್ಕೂಲಿಗೆ ಬದಲಾಯಿಸುವ ವಿಚಾರದಲ್ಲಿ ಇನ್‌ಸ್ಪೆಕ್ಟರ್ ಜನರಲ್‌ರವರು ಇಲ್ಲಿಗೆ ಬಂದಿದ್ದಾಗ್ಗೆ ಅನೇಕ ವೇಳೆ ಸೂಚಿಸಿದ್ದಾಗ್ಯೂ ಇದುವರೆಗೂ ಹುಕುಂ ಕೊಡಲಿಲ್ಲ. ಈಗಲಾದರೂ ಈ ಬದಲಾವಣೆ ಮಾಡಿಕೊಡಬೇಕೆಂದು ಬೇಡುತ್ತೇನೆ. ಇದರಿಂದ ಆಯಾ ಬಾಲಕರ ಅಭಿವೃದ್ಧಿಯು ಹೆಚ್ಚುದೆಂತಾಗುವದು.

ಸೀತಾರಾಮಯ್ಯ, ಪ್ಲೀಡರ್, ವಗೈರೆ ಮೊದಲಾದ ಕೆಲವು ಹಿಂದೂ ಮುಖಂಡರುಗಳ ರುಜುಮಾಡಲ್ಪಟ್ಟಿದೆ.

ರೈಲ್ವೆಗಳ ಬಡಾವಣೆ.

ಅಯ್ಯಾ,—ಘನವನ್ನು ಹೊಂದಿದ ನಮ್ಮ ಮೈಸೂರು ಗವರ್ನ್‌ಮೆಂಟಿನವರು ದೇಶವನ್ನು ಅಭಿವೃದ್ಧಿಸ್ಥಿತಿಗೆ ತರಲು ಬದ್ಧಕಂಕಣರಾಗಿ ತತ್ಸಹಕಾರಿಯಾದ ಅನೇಕ ಇಲಾಖೆಗಳನ್ನು ಸ್ಥಾಪಿಸಿ ದೇಶಸೇವಾ ನಿರತರಾದ ಅಧಿಕಾರಿಗಳನ್ನು ನೇಮಿಸಿರುತ್ತಾರೆ. ಇಂಥವುಗಳಲ್ಲಿ ಸಾರ್ವಕಾಲದಲ್ಲಿಯೂ ಪ್ರಜೆಗಳ ಉಪಯೋಗಕ್ಕೆ ಅನುಕೂಲವಾದವುಗಳಲ್ಲಿ ರೈಲ್ವೆಯು ಅಗ್ರಸ್ಥಾನವನ್ನು ಹೊಂದಿರುತ್ತೆ. ಇದಕ್ಕಾಗಿ ಎಷ್ಟೋ ದ್ರವ್ಯವನ್ನು ಖರ್ಚುಮಾಡಿ ರೈಲ್ವೆ ರಸ್ತೆಗಳನ್ನು ಹಾಕಿಸುತ್ತಿರುವರು. ಆಗಲೇ ಲೈಟು ರೈಲ್ವೆ ಕೆಲಸವು ತೃಪ್ತಿಕರವಾಗಿಯೂ ಜಾಗ್ರತೆಯಾಗಿಯೂ ನಡೆದು ಪ್ರಜೆಗಳ ಪ್ರಯಾಣಕ್ಕೆ ಅನುಕೂಲಿಸಿರುತ್ತೆ. ಅರಸೀಕೆರೆಯಿಂದ ಮೈಸೂರಿಗೆ ಹಾಕುತ್ತಿರುವ ರೈಲ್ವೆ ರಸ್ತೆಯೂ ಬಹಳ ಜಾಗ್ರತೆಯಾಗಿ ಪೂರೈಸಲು ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿರುತ್ತವೆ. ಈಗ ತರಿಸಿರತಕ್ಕ ರೈಲ್ವೆ ಕಂಬಿಗಳು ಮಜಬೂತಾಗಿಯೂ ಭಾರವಾಗಿಯೂ ಇರುತ್ತವೆ. ಬೆಂಗಳೂರಿಗೆ ಬಂದಿರತಕ್ಕ ನಾಲ್ಕು ಹೊಸ ಎಂಜನ್‌ಗಳು ಬಹಳ ದೊಡ್ಡದಾಗಿಯೂ ಅತಿ ವೇಗವಾಗಿ ಗಮಿಸತಕ್ಕವುಗಳಾಗಿಯೂ ಕೇವಲ ನವೀನ ರೀತಿಯಿಂದ ಇಂಗ್ಲೆಂಡಿನಲ್ಲಿ ತಯಾರು ಮಾಡಲ್ಪಟ್ಟವುಗಳಾಗಿಯೂ ಇರುತ್ತವೆ. ವರ್ಕ್‌ಷಾಪು ಕೆಲಸವೂ ಕೇವಲ ಉತ್ಕೃಷ್ಟ ಸ್ಥಿತಿಯಲ್ಲಿರುತ್ತೆ. ಬೇಕಾಗುವ ನೌಕರರುಗಳನ್ನು ರೈಲ್ವೆ ಕೆಲಸದಲ್ಲಿ ತಯಾರುಮಾಡಲು ಟ್ರೇನಿಂಗ್ ಸ್ಕೂಲ್ ಸಹ ಏರ್ಪಟ್ಟಿರುತ್ತೆ. ಮುಂದೆ ಎಷ್ಟರ ಮಟ್ಟಿನ ಅಭಿವೃದ್ಧಿ ಸ್ಥಿತಿಗೆ ಬರಬಹುದೆಂಬುವದು ಈಗಿನದರಲ್ಲಿಯೇ ಸ್ಪಷ್ಟವಾಗಿ ತಿಳಿದುಬಂದಿದೆ. ಇವುಗಳಿಗೆ ಸಹಕಾರಿಗಳಾಗಿ ರೈಲ್ವೆ ಕೆಲಸದಲ್ಲಿ ಚೆನ್ನಾಗಿ ಮಾಹಿತ್ಯನ್ನು ಪಡೆದು ದೇಶಸೇವಾ ನಿರತರಾದ ಅನೇಕ ಮೈಸೂರು ದೇಶೀಯರು ಪ್ರತ್ಯೇಕ ಸಂಸ್ಥಾನದಲ್ಲಿ ಕೆಲಸ ನಡೆಸುತ್ತಿರುವ ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ಕಂಪನಿಯಲ್ಲಿ ಇರುತ್ತಾರೆ ನಮ್ಮ ಘನವನ್ನು ಹೊಂದಿದ ಸರ್ಕಾರದವರು ಅಂಥವರುಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಲು ಕೊಟ್ಟು ಆಚಂದ್ರಾರ್ಕವಾದ ಕೀರ್ತಿಯನ್ನು ಹೊಂದುವರೆಂದು ನಂಬಿರುತ್ತೆ. ಖಾಲಿ ಕೆಲಸದಲ್ಲಿರತಕ್ಕವರನ್ನು ಕೆಲಸಕ್ಕೆ ತೆಗೆದುಕೊಳ್ಳುವದರಿಂದ ಕೆಲಸವು ತೃಪ್ತಿಕರವಾಗಿ ನಡೆಯಲು ಏನೂ ಸಂದೇಹ ಇರುವದಿಲ್ಲ.

ದೇಶಾಭಿಮಾನಿ

ಮಿಷನ್ ಸ್ಕೂಲ್ ಮಾಸ್ಟರುಗಳ ಸಂಬಳಗಳು.

ಅಯ್ಯಾ,—ತಮ್ಮ ಘನವಾದ ಪತ್ರಿಕೆಯಲ್ಲಿ ಮಿಷನ್ ಸ್ಕೂಲ್ ಉಪಾಧ್ಯಾಯರ ಕಷ್ಟವನ್ನು ಆಗಾಗ್ಗೆ ಸೂಚಿಸುತ್ತಾ ಬರುತ್ತೀರಿ. ಅವರ ಕಷ್ಟವನ್ನು ಗವರ್ನ್‌ಮೆಂಟಿನವರಾಗಲಿ, ಮಿಷನ್ ಅಧಿಕಾರಿಗಳಾಗಲಿ ಮನಸ್ಸಿಗೆ ತಂದುಕೊಂಡು ಇದುವರೆವಿಗೂ ಸಂಬಳವನ್ನು ಹೆಚ್ಚಿಸಲಿಲ್ಲ. ಈ ದುರ್ಭಿಕ್ಷ ಕಾಲದಲ್ಲಿಯೂ 6-7-8-9-10 ರೂಪಾಯಿ ಸಂಬಳನ್ನೇ ಕೊಡುತ್ತಾರೆ. ದರಿದ್ರಾವಸ್ಥೆಯಲ್ಲಿರುವ ಸಂಬಳದಿಂದ ಹ್ಯಾಗೆ ಜೀವನ ಮಾಡುತ್ತಾರೆ? ಸಾಧಾರಣ ಒಬ್ಬ ಮನುಷ್ಯನ ಊಟದ ಖರ್ಚು ದಿವಸಕ್ಕೆ ಎಷ್ಟು ಆಗಬಹುದು? ಸಾವೇ ಯೋಚಿಸಿ ತಿಳಿಸಬೇಕು. ಪತ್ರಿಕೆಯಲ್ಲಿ ಪ್ರಕಟಿಸುವಂಥಾ ಬಾತ್ಮಿಗಳನ್ನು ಇದುವರೆವಿಗೂ ಎಲ್ಲಾ ವಿಷಯಗಳನ್ನೂ ಗವರ್ನ್‌ಮೆಂಟಿನವರು ಮನಸ್ಸಿಗೆ ತಂದುಕೊಂಡು ಕ್ರಮಪಡಿಸುತ್ತಾ ಬಂದರು. ಆದರೆ ಮಿಷನ್ ಸ್ಕೂಲ್‌ಗಳ ಉಪಾಧ್ಯಾಯರ ದುರಾದೃಷ್ಟದಿಂದ ಯಾರಾದರೂ ಮನಸ್ಸಿಗೆ ತಂದುಕೊಂಡು ಸಂಬಳವನ್ನು ಹೆಚ್ಚಿಸಿ ಅವರ ಕಷ್ಟವನ್ನು ಪರಿಹರಿಸಿ, ಹೊಟ್ಟೆ ತುಂಬ ಊಟಮಾಡುವಂತೆ ಮಾಡಿ ಧರ್ಮವನ್ನು ಯಾರೂ ಕಟ್ಟಿಕೊಳ್ಳಲಿಲ್ಲ. ಇವರು ನಮ್ಮ ಮಹಾರಾಜರುಗಳ ಪ್ರಜೆಗಳಲ್ಲವೇ? ಇವರು ಗವರ್ನ್‌ಮೆಂಟ್ ಉಪಾಧ್ಯಾಯರಂತೆ ಕಷ್ಟಪಡುವದಿಲ್ಲವೇ? ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಇಡುವುದು ಮೈಸೂರು ಸರ್ಕಾರಕ್ಕೆ ಬಹಳ ಅನ್ಯಾಯವಲ್ಲವೇ? ನಮ್ಮ ಸರಕಾರದವರು ವಿದ್ಯಾಭ್ಯಾಸಕ್ಕಾಗಿ ಬಹು ಹಣವನ್ನು ಖರ್ಚು ಮಾಡುತ್ತಾರೆ. ಇದರಲ್ಲಿ ಮಿಷನ್ ಸ್ಕೂಲ್‌ಗಳಿಗೂ ಗ್ರಾಂಟನ್ನು ಹೆಚ್ಚಿಸಿ, ಹೊಟ್ಟೆಗಿಲ್ಲದ ಬಡ ಉಪಾಧ್ಯಾಯರ ಮೇಲೆ ದಯವಿಟ್ಟು ನಮ್ಮ ಮಹಾರಾಜರವರೂ, ಯುವರಾಜರವರೂ, ದಿವಾನ್ ಸಾಹೇಬರವರೂ, ಇನ್. ಜನರಲ್ ಸಾಹೇಬರವರೂ, ಮಿಷನ್ ಅಧಿಕಾರಿಗಳೂ ಕೂಡ ಗಮನಕ್ಕೆ ತಂದು ಕಾಪಾಡುವಂತೆ ಪ್ರಜಾಪ್ರತಿನಿಧಿಯ ಸಭೆಯಲ್ಲಿ ಮೆಂಬರುಗಳು ಯಾರಾದರೂ ಚರ್ಚಿಸಿ ಇವರ ಕಷ್ಟವನ್ನು ಪರಿಹರಿಸಿ ಕೀರ್ತಿಯನ್ನು ಸಂಪಾದಿಸಬೇಕೆಂದು ಈ ಮೂಲಕವಾಗಿ ಅರಿಕೆ ಮಾಡಿಕೊಂಡಿದೇನೆ.

ಬಡಮಾಸ್ಟರುಗಳ ಹಿತಚಿಂತಕ.

ಶೃಂಗೇರಿ ಜಹಗೀರ್ ವಿದ್ಯಮಾನಗಳು—ಜವಾಬು.

ಅಯ್ಯಾ,—ಮಠಾಭಿಮಾನಿಗಳೆಂದು ಹೇಳಿಕೊಳ್ಳುವ ಒಬ್ಬರು ತಮ್ಮ ಕಳೆದ ಜೂನ್ 3 ರಲ್ಲಿ ಶೃಂಗೇರಿ ಜಹಗೀರು ವಿದ್ಯಮಾನಗಳೆಂಬ ಒಂದು ಲೇಖನವನ್ನು ಬರೆದಿರುವರು. ಮಠಾಭಿಮಾನಿಗಳೆಂಬವರು ಮಠವೆಂದರೇನು? ಮಠದ ಗೌರವವೆಂತಹದು? ಮಠದ ಆವಶ್ಯಕತೆಯು ಎಷ್ಟು ವಿಶೇಷವಾದದ್ದು? ಮಠದ ಕರ್ತವ್ಯವು ಎಷ್ಟು ಗುರುತರವಾದದ್ದು? ಎಂಬ ವಿಚಾರಗಳ ಲವಲೇಶಗಂಧವಿಲ್ಲದವರಂತೆ ತೋರಿಬರುವರು. ಕನ್ನಡಿಗರು ಅರ್ಥವೂ, ವಿಮರ್ಶೆಯೂ ಇಲ್ಲದ ಲೇಖನಗಳಿಂದ ವಿಷಯ ವಿಮರ್ಶೆಯನ್ನು ಮಾಡುವಂತಹವರೆಂದು ನಾವು ತಿಳಿದಿಲ್ಲ......

(1) ಮಠದ ಕಟ್ಟಡಗಳ ವಿಚಾರದಲ್ಲಿ ಹಲವು ಆಕ್ಷೇಪಣೆಗಳಿರುವವೆಂದು ತೋರುತ್ತೆ. ಇದನ್ನು ಪೂರ್ವದಲ್ಲಿದ್ದ ಕಟ್ಟಡಗಳನ್ನು ಅರಿಯದೇಲೂ, ಶೃಂಗೇರಿಗೆ ಬಂದು ಈಗಿನ ಸ್ಥಿತಿಯನ್ನು ಪರಿಚಯಮಾಡಿಕೊಳ್ಳದೇಲೂ ಇರುವವರು ತಿಳಿದುಕೊಳ್ಳುವದು ದುಸ್ತರ. ಪೂರ್ವದ ಕಟ್ಟಡಗಳು ಸಮಸ್ತ ಕಡೆಯಲ್ಲಿಯೂ ಕತ್ತಲಾಗಿಯೂ, ಸರ್ಪಗಳಿಂದ ಭಯಂಕರವಾದುದಾಗಿಯೂ, ಶಿಥಿಲವಾಗಿಯೂ ಇದ್ದವು. ಅದೂ ಶಿಥಿಲವಾಗಿ ಅಂತ್ಯಾವಸ್ಥೆಯಲ್ಲಿದ್ದಿತು. ಮಠಕ್ಕೆ ಇದ್ದ ಸಮಸ್ತ ಸಾಲಗಳೂ ತೀರಿದ ನಂತರ ಆ ಕಟ್ಟಡಗಳನ್ನೆಲ್ಲಾ ಅಂದವಾಗಿಯೂ, ದೊಡ್ಡದಾಗಿಯೂ, ಶಾಶ್ವತ ಶಿಲಾಮಯವಾಗಿಯೂ ಕಟ್ಟಿಸುವದರಲ್ಲಿ ದೋಷವೇನೂ ತೀರಿಯುವಿಲ್ಲ.

(2) ಪಾಠಶಾಲೆಯ ವಿಚಾರ.—ಇದು ಅತ್ಯಂತ ಆಶ್ಚರ್ಯಕರವಾದ ಸಂಗತಿಯೇ ಸರಿ. ಪಚಂಟರು ಎಂತಹ ಪಂಡಿತರುಗಳನ್ನು ಶ್ರೀಮಠಕ್ಕೆ ಸಂಪಾದಿಸಿರುವರೆಂಬದನ್ನು ವಾಚಕರಿಗೆ ತಿಳಿಸುವ ಅವಶ್ಯವಿದೆ ಈ ಸಲ ಕಾಲಡಿಯಲ್ಲಿ ಒಂದು ವಿದ್ವತ್ಪರಿಷತ್ತು ಸೇರಿತ್ತೆಂದು ವಾಚಕರಿಗೆ ತಿಳಿದ ಸಂಗತಿಯೇ ಆಗಿದೆ. ಅಷ್ಟು ಮಂದಿ ವಿದ್ವಾಂಸರುಗಳಲ್ಲಿ ಶ್ರೀಮಠದ ಪಂಡಿತರನ್ನು ಸರಿಹೋಲಿಸುವ ಒಬ್ಬ ಪಂಡಿತನನ್ನೂ ನಾವು ಕಾಣೆವು. ವೇ|| ಗಳಾದ ವಿರೂಪಾಕ್ಷಶಾಸ್ತ್ರಿಗಳು, ಕುಣಿಗಲ ರಾಮಶಾಸ್ತ್ರಿಗಳು, ಸುಬ್ರಹ್ಮಣ್ಯಶಾಸ್ತ್ರಿಗಳು, ವೈದ್ಯನಾಥಶಾಸ್ತ್ರಿಗಳು,

ಜಿ. ರಾಮಸ್ವಾಮಿಶಾಸ್ತ್ರಿಗಳು, ಇಂತಹ ಪಂಡಿತರ ಕೀರ್ತಿ ತ್ರಿಲೋಕಶಾಸ್ತ್ರಿಗಳವರ ವಿದ್ಯಾಭಿಮಾನಿತೆಯಿಂದ ಪ್ರಜ್ವಲಿಸುತ್ತಿದೆ ಎಂದ ಮೇಲೆ ನಮ್ಮ ಏಜಂಟರವರ ಮೇಲಿನ ವಿದ್ಯಾ ವಿಷಯವಾದ ದೂಷಣೆಯು ಯಾವ ಆಧಾರದ ಮೇಲೆ ನಿಲ್ಲಬೇಕು? ಇಂತಹ ಮೂರು ಮಂದಿ ಶಾಸ್ತ್ರಾಧ್ಯಾಪಕರಿಂದಲೂ, ಕ್ರಮಾಧ್ಯಾಪಕರಾದ ಹಲವು ಮಂದಿ ವೇದಾಧ್ಯಾಪಕರಿಂದಲೂ, ಸಾಹಿತ್ಯ ವಿದ್ಯಾಪಾರಂಗತರಿಂದಲೂ ಪರಿಶೋಭಿತವಾದ ಪಾಠಶಾಲೆಯು ಪ್ರಕಾಶಿಸುತ್ತಿರುವ ಈ ಊರಿನಲ್ಲಿ ಸಂಸ್ಕೃತ ವಿದ್ಯೆಗೆ ಯಾವ ಕ್ಷಾಮ ಬಂದಿರುವದೋ ತಿಳಿಯದು.

(3) ಆಚಾರ ವಿಚಾರ.—ಬ್ರಾಹ್ಮಣರು ನಿಂದ್ಯ ಕರ್ಮಗಳನ್ನು ಮಾಡಿ ಅನಾರ್ಯರಾಗಿ ಹೋಗುವದಕ್ಕಿಂತ ಸ್ವತಂತ್ರದಿಂದ ವ್ಯವಸಾಯಮಾಡಿ ವರ್ಚಸ್ಸನ್ನು ಕಾಪಾಡಿಕೊಳ್ಳುವದು ಬಹು ಸಮ್ಮತವೆಂದು ಹಲವು ಮಂದಿ ಬ್ರಾಹ್ಮಣರ ಪ್ರಾರ್ಥನೆಯಂತೆ ಶಾಸ್ತ್ರಾಧಾರದ ಮೇಲೆ ಬ್ರಾಹ್ಮಣರು ವ್ಯವಸಾಯಮಾಡಲು ಆಚಾರ ವಿಚಾರ ಅಧಿಕಾರ ಸ್ಥಾನದಿಂದ ಅಪ್ಪಣೆಯು ದೊರೆತದ್ದು ಸಹ. ಆದರೆ ಮೌಢ್ಯದಿಂದ ಜನಗಳಲ್ಲಿ ವ್ಯಾಕ್ಷ್ಯ ಉಂಟಾಗಿ ಜನಗಳ ಕ್ಷೋಬೆಯುಂಟಾದದ್ದರಿಂದ ಪ್ರಕೃತದಲ್ಲಿ ಶಾಂತತೆಯನ್ನು ಉಂಟುಮಾಡುವ ಸಲುವಾಗಿ ಅದಕ್ಕೆ ತಕ್ಕ ಅಪ್ಪಣೆಯನ್ನು ಏಜಂಟರು ದಯಪಾಲಿಸಿರುತ್ತಾರೆ. ಬ್ರಾಹ್ಮಣಧರ್ಮದಲ್ಲಿ ಶಾಂತತೆಯು ಮೊದಲನೆಯದು. ಅದೇ ನಾಶವಾಗುವದಾದರೆ ಅವರ ವರ್ಚಸ್ಸು ಉಳಿಯುವದಿಲ್ಲ. ಈ ಶಾಂತತೆಯು ಭಂಗದಿಂದಲೇ ಧರ್ಮದ ಉತ್ಕೃಷ್ಟಿಯನ್ನು ವಿರಿದ್ದ ನಮ್ಮ ಭಾರತಭೂಮಿಗೆ ಒಂದುಬಾರಿ ಅಧಃಪತನವು ಸಂಭವಿಸಿತು. ಇಂತಹ ಶಾಂತತೆಯ ರಕ್ಷಣೆಯ ಸಲುವಾಗಿ ಏರ್ಪಾಡುಮಾಡಿದ್ದು. ಶಾಸ್ತ್ರಾಧಾರದ ಮೇಲೆ ಬ್ರಾಹ್ಮಣರಿಗೆ ಆತ್ಮಾವಲಂಬನೆಯಿಂದ ಜೀವಿಸಲು ಅಪ್ಪಣೆ ಕೊಟ್ಟದ್ದು. ಇವೆರಡರಲ್ಲಿ ಯಾವದು ದೋಷವೋ ಗೊತ್ತಾಗಲಿಲ್ಲ.

(4) ಮಠದಿಂದ ರೈತರಿಗೆ ಸಹಾಯ.—ಹಲವು ಮಂದಿ ಚಿಲ್ಲರೆ ಇನಾಂದಾರರು ರೈತರಿಗೆ ಯಾವ ವಿಧವಾಗಿಯೂ ಸಹಾಯಮಾಡದೆ ಅಜ್ಞರಾದ ರೈತಾಪಿ ಜನಗಳನ್ನು ಹಿಂಸಿಸಿ ಹೆಚ್ಚು ಕಂದಾಯಗಳನ್ನು ತೆಗೆದುಕೊಳ್ಳುವದಲ್ಲದೆ ಈಗ್ಗೆ 7 ವರ್ಷಗಳ ಹಿಂದೆ ಸರ್ವೆ ಆಗಿಲ್ಲದ ಇದ್ದದರಿಂದ ರೈತನು ಕಷ್ಟಪಟ್ಟು ವ್ಯವಸಾಯ ಮಾಡಿ ಆಬಾದು ಮಾಡಿರುವ ಜಮೀನುಗಳೇ ತಮ್ಮವೆಂದು ಅನ್ಯಾಯವಾಗಿ ಹೆದರಿಸುತ್ತಾ ರೈತರನ್ನು ಪೀಡಿಸುತ್ತಿದ್ದರು. ಇಂತಹ ಕಷ್ಟವನ್ನು ತಪ್ಪಿಸಿ ಸಾರ್ವಜನಿಕವಾಗಿ ಸರ್ವೆ ಮಾಡಿಸಿ ಈ ಸಂಬಂಧವಾದ ವಿಶಿಷ್ಟ ಲೆಕ್ಕಗಳನ್ನು ಕ್ರಮಪಡಿಸುವದರ ಮೂಲಕ ರೈತಸಾಮಾನ್ಯವನ್ನೇ ಕಾಪಾಡಿದರೆಂಬ ವಿಷಯ ನಿರ್ವಿವಾದವಾದದ್ದು. ಇದಲ್ಲದೆ ಮಠದಿಂದ ದ್ರವ್ಯಸಹಾಯಹೊಂದಿರುವ ಭಾರಿ ಜಮೀನುದಾರರು ಹೇರಳವಾಗಿರುವರು.......

(5) ಮಠದ ನೌಕರಿಗಳನ್ನು ಕೊಡುವ ವಿಚಾರ.—ವಂಶಾನುಕ್ರಮದಿಂದ ಮಠದಿಂದಲೇ ಜೀವಿಸುವವರಿಗೆ ಸರ್ಕಾರದಂತೆ ಪರೀಕ್ಷೆಗಳ ಯೋಗ್ಯತೆಯ ಮೇಲೆಯೇ ಕೆಲಸಗಳನ್ನು ಕೊಡಬೇಕೆಂದು ನಿರ್ಣಯಿಸುವದು ಎಂತಹ ಮಾತು? ಗುಮಾಸ್ತನಾಗಿ ಕನ್ನಡದಲ್ಲಿ ಕಾಗದಪತ್ರಗಳನ್ನು ನಡಿಸಿಕೊಂಡಿರಲು ಯಾವ ಯೂನಿವರ್ಸಿಟಿಯ ದೊಡ್ಡ ದೊಡ್ಡ ಪತ್ರಗಳು ಅವಶ್ಯವದೆ? ನ್ಯಾಯವನ್ನು ಹೇಳಲು ಮುಂದೆ ಬರುವವರಿಗೇನೇ ಕೆಲಸ ಕೊಡುತ್ತಾರೆಂದು ಬರೆದಿರುತ್ತಾರೆ. ಇದು ತಪ್ಪಾದದ್ದೇ? ನ್ಯಾಯಸ್ಥರಿಗೆ ಕೆಲಸವನ್ನು ಕೊಟ್ಟರೆ ನ್ಯಾಯವು ಇನ್ನೂ ಹೆಚ್ಚುವದಿಲ್ಲವೇ?

(6) "ಶ್ರೀ ಶ್ರೀ ಮಹಾಸ್ವಾಮಿಗಳವರಲ್ಲಿ ಹೇಳಿಕೊಂಡರೂ ನಡೆಯುವದಿಲ್ಲ" ಎಂಬ ಮಾತಿನ ಅರ್ಥವೇನು? ಯಾವ ವಿಚಾರವನ್ನು ಯಾರು ಯುಕ್ತವಾಗಿ ಅವರಲ್ಲಿ ವಿಜ್ಞಾಪನೆಮಾಡಿ, ಅವರು ಯಾವದನ್ನು ನಡಿಸಿಕೊಟ್ಟಿಲ್ಲ? ಪವರ್ ಆಫ್ ಅಟಾರ್ನಿಯನ್ನು ಕೊಡುವದರ ಅವಶ್ಯಕತೆಯು ಏಜಂಟರಿಗೆ ವಿಶೇಷವಾಗಿಲ್ಲ. ಯಾಕೆಂದರೆ ಅವರ ದಕ್ಷತೆಯನ್ನೂ ನಿಸ್ಪೃಹತ್ವವನ್ನೂ ನೋಡಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರೂ, ನಮ್ಮ ಮಹಾ ಪ್ರಭುಗಳಾದ ಶ್ರೀಮನ್ಮಹಾರಾಜರವರೂ ವಿಶೇಷದಿಂದ ನಮ್ಮ ಏಜಂಟರ ಅಧಿಕಾರಕ್ಕೆ ಉತ್ತೇಜನ ಕೊಡುತ್ತಿರುವಾಗ "ಪವರ್ ಆಫ್ ಅಟಾರ್ನಿ" ಯಲ್ಲಿ ಅಂತಹ ಮಹತ್ವವೇನಿದೆ? ಡೆಪ್ಯುಟಿ ಅಮಲ್ದಾರರ ಬದಲಾವಣೆಯನ್ನು ಕುರಿತು ವಿಶೇಷ ವಿಮರ್ಶಿಸುವದಿಲ್ಲ. ಯಾಕೆಂದರೆ ಇವರ ಜನಾನುರಾಗವನ್ನೂ, ದಕ್ಷತೆಯನ್ನೂ ವಿವರಿಸುವದನ್ನು ರೈತರ ಪಾಲಿಗೆ ಬಿಟ್ಟದೇವೆ. ಹಲವು ನೂತನತೆಗಳು ಇರಬಹುದು. ಇವರ ಗುಣಾವಗುಣಗಳನ್ನು ನಮ್ಮ ಏಜಂಟರು ಚೆನ್ನಾಗಿ ಅರಿತಿರುವರೆಂದು ತೋರುತ್ತೆ. ಇವರನ್ನು ಬದಲಾಯಿಸುವದಕ್ಕೂ, ಇಟ್ಟುಕೊಳ್ಳುವದಕ್ಕೂ ಏಜಂಟರು ಸಮರ್ಥರಾಗಿದಾರೆಂದು ನಂಬುತ್ತೇವೆ ಈ ಮೂಲಕ ತಮ್ಮಗಳ ಮುಂದೆ ಶ್ರೀಮಠದ ವಿದ್ಯಮಾನಗಳನ್ನು ಬಿಚ್ಚಿಟ್ಟು, ವಿಮರ್ಶೆಯನ್ನು ತಮ್ಮಗಳಿಗೆ ಬಿಟ್ಟು ನಾವು ವಿರಮಿಸುವೆವು.

ಎಸ್. ಆರ್. ರಾವ್, ಶೃಂಗೇರಿ.

[ಸ್ಥಳವಿಲ್ಲದೆ ಈ ಬಾತ್ಮಿಯಲ್ಲಿ ಕೆಲವು ಭಾಗವನ್ನು ಬಿಡಬೇಕಾಯಿತು.—ಎಡಿ.]

ಡಿ. ಪಿ. ನಂಜುಂಡಯ್ಯ, ದೊಡ್ಡಬಳ್ಳಾಪುರ; ಹಿತೈಷಿ, ದೊಡ್ಡಬಳ್ಳಾಪುರ; ಹಿತಚಿಂತಕ, ಹರಿಹರ; ದೈವಭಕ್ತ, ಶಿವಗಂಗೆ; ಎಚ್. ಎಸ್. ಆರ್., ಬೆಟ್ಟದಹಲಸೂರು:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಪ್ರತ್ಯಕ್ಷದರ್ಶಿ, ಬೆಂಕಿಪುರ; ಸಿ. ಜಿ. ಎಚ್., ಮುಳಬಾಗಲು—ಈ ಬಾತ್ಮಿಗಳಲ್ಲಿ ಕಂಡ ಉತ್ಸವಗಳು ನಡೆದು ಬಹಳ ದಿನಗಳಾಗಿಹೋದವು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಪೋಸ್ಟಿಗೆ ಸೇರಿದ ತಿಮ್ಮನಹಳ್ಳಿ ಫಿರಕಾಕ್ಕೆ ನೇಮಕವಾಗಿರುವ ಇಬ್ಬರು ವಿಲೇಜ ಪೋಸ್ಟ್‌ಮನ್‌ಗಳ ಪೈಕಿ ಒಬ್ಬನು ಕಾಗದ ಪತ್ರಗಳನ್ನು ಸಕಾಲಕ್ಕೆ ಬಟವಡೆಮಾಡುವುದಿಲ್ಲವೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಗ್ರಾಮಗಳ ಮುಖ್ಯಸ್ಥರು ಪೋಸ್ಟ್ ಸೂಪರೆಂಟರಿಗೆ ತಿಳಿಸಿದರೆ ಅವರು ತನಿಖೆಯಿಂದ ಕ್ರಮಪಡಿಸ್ಯಾರು. —ಎಡಿ.]

ತಾಲ್ಲೂಕು ವರ್ತಮಾನಗಳು.

ನಂಜನಗೂಡು.—ಈಚೆಗೆ ಮಳೆ ಇಲ್ಲದೆ ಬಿಸಿಲಿನ ತಾಪವು ಹೆಚ್ಚಾಗಿದೆ. ಪೈರುಗಳು ಒಣಗುವದಕ್ಕೆ ಉಪಕ್ರಮವಾಗಿದೆ. ಇಂಥಾ ಕಷ್ಟಕಾಲದಲ್ಲಿ ಕಳ್ಳರ ಅವಾಂತ್ರ ಶುರುವಾಗಿದೆ. ಇಲ್ಲಿ ತಾ. 14 ನೇ ರಾತ್ರಿ ಮುನ್ಸಿಫರ ಮನೆಗೆ ಕಳ್ಳರು ಬಿದ್ದು ಕೆಲವು ಪಾತ್ರೆಗಳನ್ನೂ ನಗದು ಹಣವನ್ನೂ ಕಳುವುಮಾಡಿದರು. ನಮ್ಮ ಅಮಲ್ದಾರರು ಖುದ್ದು ಹೋಗಿ ಪೋಲೀಸಿನವರಿಂದ ತನಿಖೆಗೆ ಏರ್ಪಾಡು ಮಾಡಿದರು. ನಮ್ಮ ಅಮಲ್ದಾರರು ಪ್ರಜಾಪ್ರತಿನಿಧಿ ಸಭೆ ಮೆಂಬರುಗಳ ಚುನಾವಣೆಯನ್ನು ಬಹಳ ತೃಪ್ತಿಕರವಾಗಿ ಮಾಡಿರುತ್ತಾರೆ ಇವರು ಬಂದಾಗಿನಿಂದ ಕೆಲಸಗಳನ್ನು ಬಹಳ ಜಾಗ್ರತೆಯಾಗಿಯೂ, ನಿಷ್ಪಕ್ಷಪಾತವಾಗಿಯೂ ನಡಿಸುತ್ತಾ ಬಂದಿದಾರೆ.

ಮಧುಗಿರಿ.—ಈಚೆಗೆ ಕೆಲವು ದಿನಗಳಿಂದ ಮಳೆಯು ಇಲ್ಲದೆ ಪೈರುಗಳು ಒಣಗುತ್ತಿದ್ದವು. ಈಗ್ಗೆ 3 ದಿನಗಳಲ್ಲಿ ಮಳೆ ಸುರಿದು ತಾಲ್ಲೂಕಿನವರೆಲ್ಲರೂ ಸಂತೋಷಭರಿತರಾಗಿರುತ್ತಾರೆ.—ಈಗ್ಗೆ 3 ವರುಷಗಳಿಂದ ಇಲ್ಲಿ ಅಮಲ್ದಾರರಾಗಿ ಒಳ್ಳೇ ಹೆಸರು ಪಡೆದಿದ್ದ ಮ|| ಗಂಗಾಧರಪ್ಪನವರು ವರ್ಗವಾಗಿ ಹೋದರು. ಇವರಿಗೆ ಬದಲಾಗಿ ಮ|| ಬಿ. ಟಿ. ಸೀತಾರಾಮಯ್ಯನವರು ದಯಮಾಡಿರುತ್ತಾರೆ. ಪೌರಜನರು ಇವರನ್ನು ಗೌರವಿಸಿ ಎದುರುಗೊಂಡು ಪುರಪ್ರವೇಶ ಮಾಡಿಸಿದರು. ಇದು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಭಾರಿಯಾದ ಮತ್ತು ಮುಖ್ಯವಾದ ತಾಲ್ಲೂಕಾಗಿ ಇರುತ್ತದೆ. ಕಸಬಾದಲ್ಲಿ ಲಾಯರುಗಳೂ ಅನೇಕ ದೊಡ್ಡ ವರ್ತಕರೂ ಇರುವರು. ಇಲ್ಲಿಗೆ ಬರತಕ್ಕ ನೌಕರರು ಲಾಯರುಗಳಿಗೂ ಮತ್ತು ಧೈರ್ಯವಂತರಾದ ವರ್ತಕರಿಗೂ ಸರಿಯಾಗಿದ್ದರೆ ಮಾತ್ರ ತಮ್ಮ ಕರ್ತವ್ಯವು ನೆರವೇರಿಕೆಂತಲೂ, ತಮಗೆ ಬೇರೆ ವಿಧವಾಗಿ ಯಾವದೊಂದು ಕೊಂಚರೂ ಅವಕಾಶವಿಲ್ಲವೆಂತಲೂ ಭಾವಿಸದೆ ಪ್ರಜೆಗಳ ಕ್ಷೇಮಚಿಂತನೆಯಿಂದ ಜನಾನುರಾಗವನ್ನು ಸಂಪಾದಿಸುವದೇ ಮುಖ್ಯವೆಂದು ಇಟ್ಟುಕೊಂಡಿರಬೇಕಾಗಿದೆ.

ಶಿವಮೊಗ್ಗಾ.—ನೆನ್ನೆ ಒಂದು ಹದ ಮಳೆ ಬಂತು. ಆದರೆ ಮಲೆನಾಡಿನಲ್ಲಿ ಮಳೆಯಿಲ್ಲದ್ದರಿಂದ ನದಿಯು ಬಹಳ ಇಳಿದಿದೆ.—ಸಬ್ ಜಡ್ಜರು ರಜಾ ಹೋಗಿದಾರೆ. ಮುನ್ಸಿಫರು ರಜಾ ಹೋದವರು ಇನ್ನೂ ಬಂದಿಲ್ಲ.—ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ರಾಮಚಂದ್ರರಾಯರ ಜವಜಿಗೆ ಚಳ್ಳಕೆರೆಯಿಂದ ಮ|| ಶಾಮಣ್ಣನೆಂಬುವರು ಬಂದು ಛಾರ್ಜು ವಹಿಸಿದರು.—ನೆನ್ನೆಯೂ ಈವತ್ತೂ ಡಿ|| ಆಫೀಸಿನಲ್ಲಿ ಡೆಪ್ಯು ಕ|| ಸಾಹೇಬರೂ, ಅಮಲ್ದಾರ್ರುಗಳೂ, ಕೆಲವು ದೊಡ್ಡ ಮನುಷ್ಯರೂ ಸೇರಿ ಏನೋ ಮೀಟಿಂಗ್ ಮಾಡುತ್ತಾ ಇದಾರೆ.—ಪೇಟೆ ಚೌಕದಿಂದ ಉಪ್ಪಾರಕೇರಿಗೆ ಬರುವ ರಸ್ತೆ ಬಹಳ ಗುಂಡಿಗಳು ಬಿದ್ದು ತಿರುಗಾಡಲು ಗಾಡಿ ಬೈಸಿಕಲ್‌ಗಳಿಗೆ ಬಹಳ ತೊಂದರೆಯಾಗಿತ್ತು. ಜಾಗ್ರತೆ ರಿಪೇರಿ ಆದಲ್ಲಿ ಬಹಳ ಉಪಕಾರ.—ಈ ಊರಲ್ಲಿ ಬ್ಯಾಂಡ್ ವಾದ್ಯದಲ್ಲಿ ಗಟ್ಟಿಗನೆನಿಸಿಕೊಂಡ ಕೃಷ್ಣಪ್ಪನೆಂಬುವನಿಗೆ ಪ್ರತಿ ಶನಿವಾರ ಸಾಯಂಕಾಲದ ಹೊತ್ತು ಒಂದು ಘಂಟೆ ಕಾಲ ಮನೋಹರವಾಗಿ ಓಲಗಮಾಡಲು ಸರ್ಕಾರದವರು ಗೊತ್ತು ಮಾಡಿರುತ್ತಾರೆ. ಈ ಏರ್ಪಾಡು ಜನರಂಜಕವಾಗಿರುವುದು.

ಅರಸಿಕೆರೆ.—ಇಲ್ಲಿ ಮಳೆ ವಿಶೇಷವಾಗಿ ಬಂದದ್ದರಿಂದ ರೈತರು ಸಂಭ್ರಮದಿಂದ ರಾಗಿ ಮುಂತಾದುವುಗಳನ್ನು ಬಿತ್ತಿದಾರೆ. ಪೈರುಗಳು ಎಲ್ಲಾ ಕಡೆಯೂ ಚೆನ್ನಾಗಿವೆ. ಹವಾ ಆರೋಗ್ಯಕರವಾಗಿದೆ.—ಮೂರು ವರ್ಷಗಳಿಂದ ಇಲ್ಲಿ ಡಾಕ್ಟರಾಗಿದ್ದ ಮೇ|| ದೀನ ದಯಾಳು ಸಿಂಗ್ ಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಿರುತ್ತಾರೆ ಇವರು ಎಲ್ಲರನ್ನೂ ಒಂದೇ ವಿಧವಾಗಿ ಪ್ರೀತಿಸಿ ರೋಗಿಗಳಿಗೆ ಬಹು ಒಳ್ಳೇ ಔಷಧಗಳನ್ನು ಕೊಡುತ್ತಿದ್ದರು. ಇವರು ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದರಿಂದ ಇವರು ವರ್ಗವಾದದ್ದಕ್ಕೆ ಎಲ್ಲರೂ ವ್ಯಸನ ಪಡುತ್ತಾರೆ. ಇವರಿಗೆ ಬದಲಾಗಿ ಬಾಣಾವಾರದಿಂದ ಬಂದಿರುವ ಡಾಕ್ಟರು ಸಹಾ ಇಲ್ಲಿನವರಲ್ಲಿ ವಿಶ್ವಾಸ ಪ್ರೀತಿಯುಳ್ಳವರಾಗಿರುವರೆಂದು ನಂಬುತ್ತೇವೆ. ಇಲ್ಲಿನವರಲ್ಲಿ ಕೆಲವರು ಮ|| ದೀನ ದಯಾಳು ಸಿಂಗ್‌ರನ್ನು ಔತನಾದಿಗಳಿಂದ ಸತ್ಕರಿಸಿದರು. ಒಂದೆರಡು ದಿನಗಳಲ್ಲೇ ಇವರು ಬೆಂಗಳೂರಿಗೆ ಪ್ರಯಾಣಮಾಡುವವರಾಗಿದಾರೆ.—ಇಲ್ಲಿಗೆ ಒಂದುವರೆ ಮೈಲಿ ದೂರದಲ್ಲಿರುವ ಶ್ರೀ ಅಮರಗಿರಿ ತಿರುಪತಿ ರಥೋತ್ಸವವು ಈ ತಿಂಗಳು 17 ರಿಂದ 30 ನೇ ತಾ. ವರಿಗೂ ನಡೆಯುವದರಿಂದ ಪ್ರಜೆಗಳು ನಾನಾ ಕಡೆಯಿಂದ ಬರುವಂತೆ ಆಹ್ವಾನ ಪತ್ರಿಕೆಗಳನ್ನು ನಮ್ಮ ಅಮಲ್ದಾರರು ಕಳುಹಿಸಿರುತ್ತಾರೆ.

ಮದ್ದೂರು.—ಕಳೆದ 12 ನೇ ತಾ. ಸೋಮವಾರ ಇಲ್ಲಿನ ಗ್ರಾಂಟ್ ಇನ್ ಏಯಿಡ್ ಸ್ಕೂಲಿನಲ್ಲಿ ಈ ಊರಿನ ದೊಡ್ಡ ಮನುಷ್ಯರ ಅಪೇಕ್ಷೆಯಂತೆ ಮ|| ಚಕ್ರವರ್ತಿಯ್ಯಂಗಾರ್ರು ಕೆಲವು ಕೈಗಾರಿಕೆಗಳನ್ನು ಮಾಡುವ ರೀತಿಯನ್ನು ಅಲ್ಲಿ ಸೇರಿದ್ದವರಿಗೆ ಚೆನ್ನಾಗಿ ಗೊತ್ತಾಗುವಂತೆ ತಿಳಿಯಪಡಿಸಿದ್ದರಲ್ಲಿ ತೆಂಗಿನ ನಾರಿನಿಂದ ಮಾಡಬಹುದಾದ ಪದಾರ್ಥಗಳನ್ನೂ, ತೆಂಗಿನ ನಾರಿನಲ್ಲಿ ದೊರೆಯುವ ರಸದಿಂದ ಆಗಬಹುದಾದ ಬಣ್ಣಗಳ ವಿಷಯವಾಗಿಯೂ, ಹಾಲಿನಲ್ಲಿ ತಯಾರುಮಾಡಬಹುದಾದ ಕೇಸೀನ್ ಎಂಬ ದಂತವನ್ನು ಹೋಲುವ ಪದಾರ್ಥವನ್ನು ಮಾಡುವ ರೀತಿಯನ್ನೂ, ಸ್ಲೇಟು ಬಳಪಗಳನ್ನೂ, ತೆಂಗಿನ ಚಿಪ್ಪಿನಲ್ಲಿ ಗುಂಡಿಗಳನ್ನೂ, ಎಮ್ಮೆ ಸಗಣಿಯಲ್ಲಿ ಬಟ್ಟೆಗಳನ್ನು ಬೆಳ್ಳಗೆ ಮಾಡುವ ರೀತಿಯನ್ನೂ ಹೇಳಿದರು. ಅನಂತರ ಗೋಸಂರಕ್ಷಣೆಯಿಂದ ಆಗತಕ್ಕ ಉಪಯೋಗಗಳನ್ನೂ ತಿಳಿಸಿ, ತಾವು ಏಜಂಟರಾಗಿರುವ ಮೈಸೂರ್ ಸ್ಟೀಂ ಟ್ರಾಂವೇ ಕಂಪನಿಯ ವಿಷಯವಾಗಿ ಉಪನ್ಯಾಸ ಮಾಡಿ ಅಲ್ಲಿ ಸೇರಿದ್ದವರ ಮನಸ್ಸಿನಲ್ಲಿದ್ದ ಸಂಶಯಗಳನ್ನೆಲ್ಲಾ ಹೋಗಲಾಡಿಸಿ ಅವರೆಲ್ಲರೂ ಷೇರುಗಳನ್ನು ತೆಗೆದುಕೊಳ್ಳುವಂತೆ ಒಡಂಬಡಿಸಿದರು. ಇವರು ದೇಶದ ಅಭ್ಯುದಯಕ್ಕಾಗಿ ಮಾಡುತ್ತಿರುವ ಮುಕುಮರ್ಜಿಯು ಎಂದಿಗೂ ವ್ಯರ್ಥವಾಗಲಾರದೆಂದು ನಂಬುತ್ತೇನೆ.

ದೊಡ್ಡಬಳ್ಳಾಪುರ.—ಕಳೆದ ಮಾರ್ಚಿ ತಿಂಗಳಲ್ಲಿ ಪ್ರಾರಂಭವಾದ ಪ್ಲೇಗ್ ರೋಗವು ಈ ವರಿಗೂ ನಿಂತಿಲ್ಲ. ಊರಲ್ಲಿರುವ ಜನರಲ್ಲಿ ಬಹಳ ಮಂದಿ ಕಳೆದ ಮಾರ್ಚಿ ತಿಂಗಳಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಂಡದ್ದರಿಂದ ಅನೇಕರಿಗೆ ಈ ಅಂಟು ಜಾಡ್ಯ ತಗಲಲಿಲ್ಲ. ಆದರೆ ಇಲಿಗಳು ಮಾತ್ರ ಅಂದಿನಿಂದ ಅಲ್ಲಲ್ಲಿ ಸಾಯುತ್ತಾ ಇರುವದರಿಂದ ಜನರು ಮನೆಗಳನ್ನು ಬದಲಾಯಿಸುತ್ತಿದ್ದರು. ಈಗ ದೇವಾಂಗದವರ ಬೀದಿ, ಬ್ರಾಹ್ಮಣರ ಕೇರಿ, ಬೆಂಗಳೂರುಬಾಗಲು, ಈ ಕಡೆ ಅನೇಕರಿಗೆ ಈ ರೋಗ ತಗಲಿ ಜಗಲೇ ಒಂದೆರಡು ಮರಣಗಳೂ ಆಗಿವೆ. ಜನರು ಕೂಡಲೆ ಹುಷಾರಾಗಿ ಸೂರುಗಟ್ಟಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುತ್ತಿರುವುದು ಬಹಳ ಒಳ್ಳೇದು. ಬರುವ ಮೂರು ತಿಂಗಳೂ ಮಳೆಗಾಲವಾದ್ದರಿಂದ ಜನರು ಊರ ಆಚೆ ಮೈದಾನುಗಳಲ್ಲಿ ಗುಡಿಸಲು ಕಟ್ಟಿ ಜೀವಿಸಲಾರರು. ಅದ್ದರಿಂದ ಪ್ರತಿದಿನ ಜನರು ಗುಂಪು ಗುಂಪಾಗಿ ಪ್ಲೇಗ್ ಶಿಡುಬು ಹಾಕಿಸಿಕೊಂಡು ಮನೆಗಳನ್ನು ಶುಚಿಮಾಡಿಕೊಂಡು ಊರಲ್ಲೇ ವಾಸಮಾಡುವವರಾಗಿರುತ್ತಾರೆ. ಇದರ ಫಲಿತಾಂಶವೇನೆಂಬುದನ್ನೂ, ಈ ಅವಾಂತ್ರ ಯಾವಾಗ ನಿಲ್ಲುವದೆಂಬುದನ್ನೂ ಮುಂದೆ ನೋಡಬೇಕಾಗಿದೆ.—ಮ|| ಕೊಂಗಾಡಿಯಪ್ಪನವರು ಯಾವಾಗಲೂ ತುಂಬಾ ಮುತುವರ್ಜಿಯಿಂದ ಜನರಿಗೆ ಕೂಡಲೆ ಇನಾಕ್ಯುಲೇಷನ್ ಮಾಡಿಸುವದರಿಂದ ಈ ಗ್ರಾಮದವರು ಅವರಿಗೆ ವಂದನೆಗಳನ್ನು ತಿಳಿಸಬೇಕಾಗಿದೆ.—ತುಂತುರು ಮಳೆ ಪ್ರಾರಂಭಿಸಿದೆ, ಬಿಸಲಿನ ಧಗೆ ಕಮ್ಮಿ ಆಯಿತು. ಕಂಚಿನಾ ಸ್ಕೂಲುಗಳು ತೃಪ್ತಿಕರವಾದ ಸ್ಥಿತಿಯಲ್ಲಿಲ್ಲ.

ಫ್ರೆಂಚ್ ರಾಕ್ಸ್.—ಕಳೆದ ಶನಿವಾರ ಸಾಯಂಕಾಲ ಶ್ರೀಮನ್ಮಹಾರಾಜರವರ ಸವಾರಿಯು ಮೇಲ್ಕೋಟೆಗೆ ಮೋಟಾರಿನಲ್ಲಿ ದಯಮಾಡಿಸುವಾಗ್ಗೆ ಇಲ್ಲಿನ ಮ್ಯುನಿಸಿಪಲ್ ಮೆಂಬರ್ ಮ|| ನರೇಶ ಮೊದಲಿಯಾರ್ರು ಮುಂದಾಳಾಗಿ ನಿಂತು ಉತ್ಸಾಹದ ಬಳಿ ಅಲಂಕಾರವಾದ ಚಪ್ಪರವನ್ನು ಹಾಕಿಸಿ ಮಹಾಸ್ವಾಮಿಯವರಿಗೆ ಹಾರಾ ತುರಾಯಿಗಳನ್ನು ಒಪ್ಪಿಸಿದರು. ಸ್ಕೂಲುಗಳ ಬಾಲಕ ಬಾಲಕಿಯರೂ, ಊರಿನ ಪ್ರಮುಖರೂ ಹಾಜರಾಗಿದ್ದರು. ಮಿಷನ್ ಗರ್ಲ್ಸ್ ಸ್ಕೂಲ್ ಬಾಲಕಿಯರು "ರಾಜರಂ ರಕ್ಷಿಸು" ಎಂಬ ಸಂಗೀತವನ್ನು ಹಾರ್ಮೋನಿಯಂ ವಾದ್ಯದೊಂದಿಗೆ ಇಂಪಾಗಿ ಹಾಡಿದರು. ಸವಾರಿಯು ಮುಂದಕ್ಕೆ ತೆರಳಿದ ಮೇಲೆ ಸ್ಕೂಲ್ ಮಕ್ಕಳಿಗೆಲ್ಲಾ ತಿಂಡಿಕೊಟ್ಟು ಸಂತೋಷಪಡಿಸಿದರು ಬೌರದಲಸ್ಸ್. ವರ್ತಕರು ಬಹಳ ಅಲಂಕಾರವಾದ ಚಪ್ಪರವನ್ನು ಹಾಕಿ ಮಹಾಸ್ವಾಮಿಯವರನ್ನು ಎದುರುಗೊಂಡು ಹಾರಾ ತುರಾಯಿ ಒಪ್ಪಿಸಿದರು.—ಕಳೆದ ಭಾನುವಾರ ಮಧ್ಯರಾತ್ರಿಯಲ್ಲಿ ಇಲ್ಲಿಂದ ಪಾಂಡವಪುರ ಸಂತೆಗೆ ಹೋಗುತ್ತಿದ್ದ 4-5 ಗಾಡಿಯವರನ್ನು ಫ್ರೆಂಚ್ ರಾಕ್ಸಿಗೆ ಸುಮಾರು 3 ಮೈಲಿ ದೂರದಲ್ಲಿರುವ ದಾಂಬನಹಳ್ಳಿ ಸಮೀಪ ಕಳ್ಳರು ಹೊಡೆದು ಸಮಾರು 300 ರೂಪಾಯಿ ತನಕ ಸುಲುಕೊಂಡು ಹೋದರು ಗಾಡಿಯಲ್ಲಿ ಒಬ್ಬೊಬ್ಬರಿಗೆ ಹೆಚ್ಚಾಗಿ ಪೆಟ್ಟುಗಳೂ ಬಿದ್ದಿವೆ ಈ ಕೃತ್ಯ ನಡೆದ ಸ್ಥಳದಲ್ಲಿ ಕಾವಲಿಡುವದು ಒಳ್ಳೇದು.—ಊರಿನಲ್ಲಿ ಮ್ಯುನಿಸಿಪಲ್ ಏರ್ಪಾಡು ಸ್ವಲ್ಪವೂ ತೃಪ್ತಿಕರವಾಗಿಲ್ಲ. ಈಗ ಮಳೆಗಾಲವಾಗಿರುವದರಿಂದ ಸಂದುಗೊಂದುಗಳೆಲ್ಲಾ ತುಂಬಾ ಗಲೀಜಾಗಿವೆ ಸ್ಯಾನಿಟೇಷನ್ ಇಲಾಖೆಯವರು ಇದಕ್ಕೆ ಗಮನ ಕೊಡುವದು ಒಳ್ಳೇದು.

ಹುಣಸೂರು.—ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮಾಂತರಗಳಿಗೆ ಅಂದರೆ ಒಡ್ಡರ ಗುಡಿ, ಕರಿಮುದ್ದನಹಳ್ಳಿ, ಹನಗೋಡು, ಮರದೂರು, ಚಿಕ್ಕ ಕೆರೆಯೂರು, ಬೆಂಕಿಪುರ, ಈ ಗ್ರಾಮಗಳಿಗೆ ಬಿಳಿಕೆರೆಯಿಂದ ಹೋಗತಕ್ಕ ದಾರಿಯಲ್ಲಿ ಹಳ್ಳಕೆರೆ ಬಸವನ ಕಟ್ಟೆಯ ದಾರಿಯಲ್ಲಿ ತಾ. 3 ನೇ ಶನಿವಾರ ಬಿಳಿಕೆರೆ ಸಂತೆಗೆ ಹೋಗಿ ಬರುವಾಗ ಸುಮಾರು 4 ಘಂಟೆ ಸಮಯದಲ್ಲಿ ಇಬ್ಬರು ಹೆಂಗಸರನ್ನು ಯಾರೋ ದುರಾತ್ಮರು ಅವರ ಮೇಲೆ ಬಿದ್ದು ಆವರಲ್ಲಿದ್ದ ಒಡವೆಗಳನ್ನು ಅಪಹರಿಸಿ ಅವರಲ್ಲಿ ಅತ್ಯಾಚಾರ ನಡಿಸುವಷ್ಟರಲ್ಲಿ ಆ ಹೆಂಗಸು ಬಾಯಿ ಬಡಿದುಕೊಳ್ಳಲು ದೂರದಲ್ಲಿ ಬರುತ್ತಿದ್ದ ಇಬ್ಬರು ಗಂಡಸರು ಈ ಶಬ್ದವನ್ನು ಕೇಳಿ ಓಡಿ ಬರುವಷ್ಟರಲ್ಲಿ ಆ ದುರಾತ್ಮರು ಓಡಿಹೋದರಂತೆ. ಆ ಇಬ್ಬರು ಹೆಂಗಸರು ತಮ್ಮಲ್ಲಿದ್ದ ಒಡವೆ ವಸ್ತುಗಳನ್ನು ಕಳೆದುಕೊಂಡು ಗೋಳಾಡುತ್ತಾ ತಮ್ಮ ಗ್ರಾಮಗಳಿಗೆ ಬಂದು ಸೇರಿ ಹೇಳಿದ್ದೇನೆಂದರೆ—ನಮ್ಮ ಒಡವೆಗಳನ್ನು ಅಪಹರಿಸಿ ನಮ್ಮಲ್ಲಿ ಅತ್ಯಾಚಾರ ನಡಿಸಲು ಪ್ರಯತ್ನ ಪಡುತ್ತಿದ್ದ ದುಷ್ಟರು ಲಿಂಗಧಾರಿಗಳಾಗಿದ್ದರೆಂದು ಹೇಳಿದರಂತೆ. ಈ ದಾರಿಯಲ್ಲಿ ಪದೇ ಪದೇ ಹೀಗೆ ಚೋರತನ ನಡೆಯುತ್ತಲೇ ಇದೆ. ಮತ್ತು ಈ ದಾರಿಗೆ ಸಮೀಪದಲ್ಲೇ ಸುಮಾರು 4-5 ಫರಲಂಗ್ ದೂರದಲ್ಲಿ ಹಳ್ಳಕೆರೆ ಪಟ್ಟಿಮಳ್ಳಿ ಇದೆ. ಸುಮಾರು ಒಂದು ಮೈಲು ದೂರದಲ್ಲಿ ಪೂರ್ವಕ್ಕೆ ಹೊಸಹಳ್ಳಿ ಗ್ರಾಮ ಇದೆ. ಈ ದಾರಿಗೆ ಇಷ್ಟು ಗ್ರಾಮಗಳಿದ್ದರೂ ಇಂಥಾ ದುರ್ಘಟನೆಗಳು ನಡೆಯುವದು ಅತಿ ಆಶ್ಚರ್ಯಕರವಾಗಿದೆ. ಈ ದಾರಿಯಲ್ಲಿ ತಿರುಗುವವರೆಲ್ಲರೂ ಬಹಳ ಎಚ್ಚರಿಕೆಯಿಂದ ಇರಬೇಕಾಗಿ ಈ ಮೂಲಕ ತಿಳಿಸುತ್ತೇವೆ.

ಮಳವಳ್ಳಿ.—ಮೈಸೂರ್ ಸ್ಟೀಂಟ್ರಾಂವೆ ಕಂಪನಿಯ ಏಜಂಟರಾಗಿ ಇಲ್ಲಿಗೆ ದಯಮಾಡಿಸಿದ್ದ ಮ|| ಕೆ. ಆರ್. ಚಕ್ರವರ್ತಿಯವರು ಇಲ್ಲಿ ಜನಗಳಿಗೆ ಉಂಟುಮಾಡಿದ ಸಂಪದಭ್ಯುದಯಕ್ಕೆ ಸಹಕಾರಿಯಾದ ಕಾರ್ಯಗಳು ಇಲ್ಲಿನ ಜನಗಳು ಎಂದಿಗೂ ನೆನಪಿನಲ್ಲಿಡತಕ್ಕವುಗಳಾಗಿವೆ ಇಲ್ಲಿನ ಕೊಲಗೇರಿಯಲ್ಲಿ ಪಂಚಮ ಬಾಲಿಕೆಯರಿಗಾಗಿ ಒಂದು ಬಾಲಿಕಾ ಪಾಠಶಾಲೆಯನ್ನು ಏರ್ಪಡಿಸಲಿಕ್ಕೆ ಕೊಲಗೇರಿಯ ಮುಖಂಡರಿಂದ ಒಂದು ಅರ್ಜಿಯನ್ನು ಬರಸಿದರು. ಅದಕ್ಕನುಸಾರವಾಗಿ ಕಳೆದ ಜೂನ್ ತಿಂಗಳ ಆಖೈರಿನಲ್ಲಿ ಇಲ್ಲಿಗೆ ದಯಮಾಡಿಸಿದ್ದ ಸರ್ಕಲ್ ಇನ್ಸ್‌ಪೆಕ್ಟರು ಜೂಲೈ ಮೊದಲನೇ ತಾ. ನಿಂದ ಬಾಲಿಕೆಯರ ಪಾಠಶಾಲೆಯನ್ನು ಇಟ್ಟುಕೊಳ್ಳಬಹುದೆಂದು ಅಪ್ಪಣೆ ಮಾಡಿದ್ದರ ಮೇಲೆ ಈಗ ಸದರಿ ಸ್ಕೂಲು ನಡಿಯುತ್ತಿರುವುದು. ಮತ್ತು ಕೆಲವು ಕಾಲ ಮಾತ್ರ ನಡೆದು ನಿಂತುಹೋಗಿದ್ದ ಪಂಚಮ ವಯಸ್ಕರ ನೈಟ್ ಸ್ಕೂಲು ಮತ್ತೆ ನಡೆಯುವಂತೆ ಏರ್ಪಾಡುಮಾಡಿದರು. ಬೆಸ್ತಗೇರಿ ಜನಗಳನ್ನೂ, ಇತರ ಜನಗಳನ್ನೂ ಪ್ರೋತ್ಸಾಹಗೊಳಿಸಿ ಇಲ್ಲಿನ ಪೇಟೆ ಕನ್ನಡ ಸ್ಕೂಲಿನಲ್ಲಿ ವಯಸ್ಕರಿಗಾಗಿ ಒಂದು ನೈಟ್ ಸ್ಕೂಲು ಸ್ಥಾಪನೆಯಾಗಲಿಕ್ಕೆ ತಕ್ಕ ಪ್ರಯತ್ನಗಳನ್ನು ಇವರು ಮಾಡಿದ್ದರ ಮೇಲೆ ಇಲ್ಲಿನ ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಮ|| ನಂಜುಂಡಶಾಸ್ತ್ರಿಗಳು ಕಷ್ಟಪಟ್ಟು ಜನಗಳನ್ನು ಸೇರಿಸಿ ತಾ. 8 ನೇ ಗುರುವಾರ ಆ ನೈಟ್ ಸ್ಕೂಲನ್ನು ಏರ್ಪಡಿಸಿದರು. ಆ ಕಾಲದಲ್ಲಿ ಸದರಿ ಮಹನೀಯರು ಮಾಡಿದ ಹಾಸ್ಯರಸಯುಕ್ತವಾದ ಉಪನ್ಯಾಸವು ಎಂದಿಗೂ ಮರೆಯತಕ್ಕದ್ದಲ್ಲ. ಇವರ ಪ್ರಯತ್ನಗಳು ನಮ್ಮ ಅಮಲ್ದಾರ್ ಮ|| ವೆಂಕಟನರಸಯ್ಯನವರ ಪರೋಪಕಾರ ಸ್ವಭಾವದಿಂದ ಫಲಕಾರಿಗಳಾದವು.

ಚಿಕ್ಕಮಗಳೂರು.—ಇದೇ ಟೌನ್ ಪೇಟೆ ಮಧ್ಯದಲ್ಲಿರುವ ವೆಸ್ಲಿಯನ್ ಮಿಷನ್ ಬ್ರಾಂಚ್ ಗರ್ಲ್ಸ್ ಸ್ಕೂಲಿನಲ್ಲಿ ಈ ತಿಂಗಳು ತಾ. 1 ರಲ್ಲಿ ಸಾಹುಕಾರ್ ಮತ್ತು ಕಾಫಿ ಪ್ಲಾಂಟರ್ ಮ|| ಬಿ. ಎನ್. ಹನುಮಂತಪ್ಪನವರಿಂದ ಒಂದು ರಾತ್ರಿ ಪಾಠಶಾಲೆಯು ಹೊಸದಾಗಿ ಸ್ಥಾಪಿಸಲ್ಪಟ್ಟಿತು. ಹಗಲಿನಲ್ಲಿ ಪಾಠಶಾಲೆಗೆ ಹೋಗುವುದಕ್ಕೆ ಅನುಕೂಲವಾಗಿ ಜೀವನಕ್ಕೆ ಬೇರೆ ಬೇರೆ ಕೆಲಸಗಳನ್ನು ಮಾಡಿಕೊಂಡು ವಿದ್ಯೆಯನ್ನೂ ಅಭ್ಯಾಸಮಾಡಲು ಅನುಕೂಲವಾಗುವಂತೆ 15 ವರ್ಷಕ್ಕೆ ಮೇಲ್ಪಟ್ಟ ವಿದ್ಯಾವಿಹೀನರಾದವರಿಗೂ ಮತ್ತು ಸ್ವಲ್ಪ ವಿದ್ಯೆ ತಿಳಿದಂಥವರಿಗೂ ಈ ಸಂಸ್ಥಾನದ ಎಲ್ಲಾ ಕಡೆಯಲ್ಲಿಯೂ ಅಲ್ಲಲ್ಲಿ ನೈಟ್ ಸ್ಕೂಲುಗಳನ್ನು ಸ್ಥಾಪಿಸುತ್ತಲಿರುವಂತೆ ರಾಜಭಕ್ತಿಯುಳ್ಳರಾಗಿಯೂ ಪರೋಪಕಾರಿಗಳಾಗಿಯೂ ಇರುವ ನಮ್ಮ ಮ|| ಹನುಮಂತಪ್ಪನವರು ತೆಗೆದುಕೊಳ್ಳುತ್ತಲಿರುವ ಶ್ರಮವೂ ಮತ್ತು ಉತ್ಸಾಹವೂ ಶ್ಲಾಘನೀಯವಾಗಿವೆ. ಪರೋಪಕಾರಿಗಳಾದ ನಮ್ಮ ಮಿಷನ್‌ನವರು ಕಟ್ಟಡವನ್ನು ದಯಪಾಲಿಸಿರುವುದೂ, ಮಿಷನ್ ಸ್ಕೂಲುಗಳ ಉಪಾಧ್ಯಾಯರುಗಳು ಸಧ್ಯಕ್ಕೆ ಉಚಿತವಾಗಿ ಕೆಲಸಮಾಡುವುದಕ್ಕೆ ಒಪ್ಪಿಕೊಂಡಿರುವುದೂ ಸ್ತೋತ್ರಾರ್ಹವಾಗಿದೆ ಸ್ಕೂಲು ಸ್ಥಾಪಿಸುವಾಗ ನೂರಾರು ಮಂದಿ ಸೇರಿದ್ದರು. ಮ|| ಹನುಮಂತಪ್ಪನವರಿಂದ ವಿದ್ಯಾ ವಿಷಯವಾದ ಉಪನ್ಯಾಸವು ನಡೆದು ಆ ದಿವಸವೇ 25 ಮಂದಿ ವಿದ್ಯಾರ್ಥಿಗಳು ಸೇರಿದರು. ಈಗ 35 ಮಂದಿಯ ವರಿಗೂ ವಿದ್ಯಾಭ್ಯಾಸ ಮಾಡುತ್ತಲಿದಾರೆ. ಈಚೆಗೆ ಡೆಪ್ಯುಟಿ ಇನ್ಸ್‌ಪೆಕ್ಟರವರೂ, ಅಡ್ವೊಕೇಟ್ ಮ|| ಶಿವರಾಯರೂ ಪರೀಕ್ಷಿಸಿ ಸಂತೋಷಪಟ್ಟರು. ಮತ್ತು ರೆವ್. ಸ್ಲೇಟರ್ ದೊರೆಯವರು ದಯಮಾಡಿಸಿ ವಿದ್ಯೆಯನ್ನು ಕ್ರಮವಾಗಿ ಅಭ್ಯಾಸಮಾಡಬೇಕೆಂದೂ, ಸಮಯ ಸಿಕ್ಕಿದಾಗಲೆಲ್ಲಾ ಶ್ರಮಪಡುತ್ತಿರಬೇಕೆಂದೂ ಅಪ್ಪಣೆಕೊಡಿಸಿದರು. ಇಲ್ಲಿ ತಕ್ಕ ಮಟ್ಟಿಗೆ ಇಂಗ್ಲಿಷನ್ನೂ ಕನ್ನಡವನ್ನೂ ಬೋಧಿಸುವುದಕ್ಕೆ ಏರ್ಪಾಟುಮಾಡಿರುತ್ತದೆ. ಈ ವಿಷಯದಲ್ಲಿ ನಮ್ಮ ಘನ ಸರ್ಕಾರದವರೂ, ಪ್ರಜಾಹಿತಚಿಂತಕರಾಗಿಯೂ ವಿದ್ಯಾಭಿಮಾನಿಗಳಾಗಿಯೂ ಇರುವ ಸಮಸ್ತರೂ ಸಹಾಯಕರಾಗಿ ಪ್ರೋತ್ಸಾಹಗೊಳಿಸುವರೆಂದು ಪ್ರಾರ್ಥಿಸಲ್ಪಟ್ಟಿದೆ.

ಕುಂಸಿ.—ಶಿವಮೊಗ್ಗದಿಂದ ಸಾಗರ ತೀರ್ಥಹಳ್ಳಿಗೆ ಹಾಕಬೇಕೆಂದಿರುವ ಡಿಸ್ಟ್ರಿಕ್ಟ್ ಫಂಡ್ ರೈಲ್ವೆಯು ಈ ಟವನ್ನಿಗೆ 3 ಮೈಲಿ ಫಾಸಲೆಯಲ್ಲಿ ಹೋಗುತ್ತೆ. ಇದರಿಂದ ಟೌನ್ ಅಭಿವೃದ್ಧಿಗೆ ಪ್ರಯೋಜನವಿಲ್ಲವೆಂತಲೂ, ಇಲ್ಲಿಗೆ ಒಂದು ಮೈಲಿ ಫಾಸಲೆಯಲ್ಲಿರುವ ದುರ್ಗಾ ದೇವಸ್ಥಾನದ ಮೈದಾನಿನಲ್ಲಿ ಹಾದುಹೋಗುವಂತೆ ಮಾಡುವುದರಿಂದ ಗೌರ್ನಮೆಂಟಿಗೆ ಯಾವ ಹೆಚ್ಚು ಖರ್ಚೂ ಇಲ್ಲದೆ ಟೌನ್ ಪುರೋಭಿವೃದ್ಧಿಗೆ ಬಹಳ ಅನುಕೂಲಪಡಿಸಿದಂತೆ ಆಗುತ್ತೆಂದೂ ಇಲ್ಲಿಯ ಪ್ರಜೆಗಳು ಕೇಳಿಕೊಳ್ಳುತಲೇ ಬಂದಿದಾರೆ. ಇದರ ಫಲಿತಾಂಶವು ಇದು ವರಿಗೂ ಗೊತ್ತಾಗಿರುವುದಿಲ್ಲ. ಈ ರೈಲು ಮಲೆನಾಡು ಪ್ರಜೆಗಳ ಅಭಿವೃದ್ಧಿಗೋಸ್ಕರ ಹಾಕತಕ್ಕದ್ದಾಗಿದೆ. ಹೀಗಿರುತ್ತಾ ಗ್ರಾಮಗಳಿಗೆ ದೂರವಾಗಿ ಜಂಗ್ಲಿಯಲ್ಲಿ ಹಾಕುವುದರಿಂದ ಪ್ರಜೆಗಳಿಗೂ ಸರಕಾರಕ್ಕೂ ಯಾವ ವಿಧವಾದ ಫಲವೂ ಆಗುವುದಿಲ್ಲ. ಒಂದು ವೇಳೆ ಟವನ್ನಿಗೆ ಸಮೀಪ ರೈಲ್ ಹಾಕುವುದರಿಂದ ಹೆಚ್ಚು ಖರ್ಚು ತಗಲಿದರೂ ಜನಗಳಿಗೆ ಪ್ರಯೋಜನವಾಗುವುದರಿಂದ ಅಂಥಾ ಖರ್ಚಿಗೆ ಲಕ್ಷ್ಯಸಲೂ ಬಾರದು ಇಲ್ಲಿಯ ಜನಗಳೂ ಕೂಡ ಈ ರೈಲ್ವೆಗಾಗಿ ಭಾರಿ ಷೇರು ಕೊಡುತ್ತೇವೆಂದು ಸಾರ್ವಜನಿಕ ಸಭೆಯ ಪ್ರಕಾರ ಈ ಮೊದಲೇ ಕೆಲವು ಜನರ ಮೊಬಲಗೂ ವಸೂಲಾಗಿದೆ. ಬಾಕಿಯವರು ಹಾಲಿ ರೈಲು ದೂರ ಫಾಸಲೆಯಲ್ಲಿ ಹೋಗುತ್ತೆಂಬದರ ಮೇಲೆ ಮೊಬಲಗು ಕೊಡದೆ ನಿಲ್ಲಿಸಿಕೊಂಡು ಬಹಳ ಅಸಮಾಧಾನವುಳ್ಳವರಾಗಿರುತ್ತಾರೆ. ನಮ್ಮ ಡೆಪ್ಯುಟಿ ಕಮಿಷನರವರು ಈ ವಿಷಯ ಪರ್ಯಾಲೋಚಿಸಿ, ಇಲ್ಲಿನ ಪ್ರಜೆಗಳಿಗೆ ಅನುಕೂಲವಾಗುವಂತೆ ಸಹಾಯ ಮಾಡ್ತಾರೆಂದು ನಂಬಿದೇವೆ.—ಈ ಸಬ್ ತಾಲ್ಲೂಕಿಗೆ ಸೇರಿದ ಹಾರನಹಳ್ಳಿಯಲ್ಲಿ ಟ್ರಾಫಿಕ್ ಇಡಲು ಏರ್ಪಾಡಾಗಿ ಮೊಬಲಗು ಮಂಜೂರಾಗಿರುವಂತೆ ಕೇಳುತ್ತೇನೆ.—ಇಲ್ಲಿನ ಡೆಪ್ಯುಟಿ ಅಮಲ್ದಾರರು ನೋಡುವವರಿಗೆ ಬಹು ನಿಧಾನಿಗಳೆಂದು ತೋರಿದರೂ ಕೆಲಸದಲ್ಲಿ ಅತಿ ಚುರುಕಾಗಿರುತ್ತಾರೆ.—ಈ ಪ್ರಾಂತ್ಯ ಮಳೆ ಇಲ್ಲದೆ ಪೈರುಗಳಿಗೆ ಹುಳ ಮತ್ತು ಹುಲ್ಲು ಹತ್ತಿ ಒಣಗುತ್ತಾ ಬಂದಿವೆ ಜನಗಳು ಬಹಳ ಘಾಬರಿಯಾಗಿದ್ದಾರೆ.—ಈ ಟೌನ್ ಪ್ರಜೆಗಳ ಪೈಕಿ ಮುಕ್ಕಾಲು ಜನರು ಹಿರೇಕೆರೆ ಎಂಬ ಕಲಾವಿನ ನೀರನ್ನು ಪಾನಕ್ಕೆ ಉಪಯೋಗಿಸುತ್ತಾರೆ ಈ ಕೆರೆಯಲ್ಲಿ ಫಾರೆಸ್ಟ್ ಇಲಾಖೆಯು ಆನೆಯನ್ನು ಪ್ರತಿ ದಿನವೂ ಬಿಡುವುದರಿಂದ ಅದರ ಮಲಮೂತ್ರ ವಿಸರ್ಜನೆಯಿಂದಲೂ, ತುಳಿದಾಟದಿಂದಲೂ ನೀರು ಬಹಳವಾಗಿ ಕೆಟ್ಟುಹೋಗಿದೆ. ಅಂಟು ಜಾಡ್ಯವು ಬರುವುದಕ್ಕೂ ಸಾಕಾಗಿದೆ.—ಇಲ್ಲಿಯ ಮುಸಾಫರಖಾನೆಯಲ್ಲಿ ಫಾರೆಸ್ಟ್ ಆಫೀಸರು ವಾಸವಾಗಿರುತ್ತಾ, 3 ತಿಂಗಳ ಮೇಲಾಯಿತು. ಪರಸ್ಥಳದವರ ವಾಸಕ್ಕೆ ಬೇರೆ ಸ್ಥಳವಿಲ್ಲದ್ದರಿಂದ ತೊಂದರೆಯಾಗಿದೆ ಈಗಲಾದರೂ ನಮ್ಮ ಡೆಪ್ಯುಟಿ ಅಮಲ್ದಾರರು ಮುಸಾಫರಖಾನೆಯು ಏರ್ಪಟ್ಟ ಉದ್ದೇಶವನ್ನು ಸಾರ್ಥಕಮಾಡುತ್ತಾರೆಂದು ನಂಬಿದೇನೆ.

ನಂಜನಗೂಡು ತಾಲ್ಲೂಕು ಸಂಪದಭಿವೃದ್ಧಿ ಕಿಶೋರ್ಯಗಳು.

ಈ ಡಿಸ್ಟ್ರಿಕ್ಟ್ ಎಕನಾಮಿಕ್ ಕಾನ್ಫರೆನ್ಸ್ ಸೂಪರಿಂಟೆಂಡೆಂಟ್ ಮ|| ಶ್ರೀ ನರಸಿಂಹಶಾಸ್ತ್ರಿಗಳವರು ಈ ತಾಲ್ಲೂಕಿಗೆ ದಯಮಾಡಿಸಿ ಅನೇಕ ಸಂಪದಭ್ಯುದಯದ ಕೆಲಸಗಳನ್ನು ಮಾಡಲೆತ್ನಿಸಿರುವರು. ಇವರು ಈ ತಾಲ್ಲೂಕಿನಲ್ಲಿರುವ ಗ್ರಾಮಗಳ ಪೈಕಿ ಸಾವಿರ ಪ್ರಜೆಗಳಿಗೆ ಮೇಲ್ಪಟ್ಟ ಗ್ರಾಮಗಳಲ್ಲೆಲ್ಲಾ ಸಂಚರಿಸುತ್ತಾ ಅಲ್ಲಿನ ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ ಮೊದಲಾದ ವಿಷಯಗಳಲ್ಲಿನ ಲೋಪಗಳನ್ನು ಕಂಡುಹಿಡಿದು ರೈತರಿಗೆ ತಕ್ಕ ಬುದ್ಧಿವಾದವನ್ನು ಹೇಳುತ್ತಿರುವರು. ಈ ಮೂರು ಬಾಬುಗಳಿಗೆ ಸಂಬಂಧಪಟ್ಟ ತಮ್ಮ ತಮ್ಮ ಅಹವಾಲುಗಳನ್ನು ರೈತರು ತಾವಾಗಿಯೇ ಅವರಲ್ಲಿ ತಿಳಿಸುತ್ತಾ ಅವರು ಕೊಡುವ ಸಲಹೆಗಳಂತೆ ಜಾರಿಗೆ ತರುತ್ತಾ ಇರುವರು. ಸ್ಕೂಲುಗಳಿಗೆ ಕಟ್ಟಡವಿಲ್ಲದ ಊರುಗಳಲ್ಲಿ ಕಟ್ಟಡಗಳನ್ನು ಕಟ್ಟಿಸುವದಕ್ಕೂ, ವರ್ತಮಾನ ಪತ್ರಿಕೆಗಳನ್ನು ಓದುವದರಿಂದ ಉಂಟಾಗುವ ಪ್ರಯೋಜನವನ್ನೇ ಅರಿಯದವರಿಗೆ ಅವುಗಳ ಪ್ರಯೋಜನವನ್ನು ಬೋಧಿಸುತ್ತಾ ಅಲ್ಲಲ್ಲಿ ವಾಚನಶಾಲೆಗಳನ್ನು ಸ್ಥಾಪಿಸುತ್ತಿರುವರು.

ಇವರು ಹದಿನಾರೆಂಟು ಗ್ರಾಮಕ್ಕೆ ದಯಮಾಡಿಸಿ ಅಲ್ಲಿನ ಮುಖಂಡ ಜನರನ್ನೆಲ್ಲಾ ಸೇರಿಸಿ ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಉಪನ್ಯಾಸಮಾಡಿ ಅಲ್ಲಿ ಹೊಸದಾಗಿ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಲು ಏರ್ಪಾಟುಮಾಡಿದರು. ಆ ಗ್ರಾಮದಲ್ಲಿ ಮಾತುಬಲ್ಲರಾಗಿರುವ ಮ|| ಶ್ಯಾನುಭೋಗ ಚಂದ್ರಶೇಖರಯ್ಯನವರಿಗೆ ತಿಳುವಳಿಕೆಕೊಟ್ಟು ಅವರಿಂದ 300 ರೂಪಾಯಿ ಲಾಗೋಡಿನಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸಲಿಕ್ಕೆ ಏರ್ಪಾಟು ಮಾಡಿದರು. ಈ ವಾಚನಶಾಲೆಗೆ ವರ್ತಮಾನ ಪತ್ರಿಕೆಗಳನ್ನು ತರಿಸುವದಕ್ಕಾಗಿ ಕೆಲವರಿಂದ ಚಂದಾ ಕೊಡಿಸಿ, ಇದರ ಆಡಳಿತವನ್ನು ತೃಪ್ತಿಕರವಾಗಿ ನಡಿಸಲು ಈ ಗ್ರಾಮಾಭಿವೃದ್ಧಿ ಸಮಾಜದವರಿಗೆ ತಿಳುವಳಿಕೆಯನ್ನು ಕೊಟ್ಟರು. ಈ ಗ್ರಾಮದಲ್ಲಿನ ಪ್ರಾಯಸ್ಥರಿಗೆ ವಿದ್ಯಾಭ್ಯಾಸವನ್ನು ಮಾಡಿಸಲು ರಾತ್ರಿ ಸ್ಕೂಲು ಒಂದನ್ನು ಸ್ಥಾಪಿಸಿದರು.—ಈ ಗ್ರಾಮದಲ್ಲಿ ನಾಲೆ ಆಸರೆಯಿಂದ ಆರು ತಿಂಗಳು ಮಟ್ಟಿಗೆ ನೀರು ಸರಬರಾಯಿ ಆಗುತ್ತಿದ್ದ ಜಮೀನುಗಳಲ್ಲಿ ಭಾವಿಗಳನ್ನು ತೋಡಿ ಯಾತ ಹಾಕಿ ನೀರನ್ನು ಎತ್ತುವ ಮೂಲಕ ಭಾರೀ ವರಮಾನ ಬರಬಹುದಾದ ಕಬ್ಬು, ಆಲುಗೆಡ್ಡೆ, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿ ಫಸಲುಗಳನ್ನು ಹಾಕಲು ರೈತರಿಗೆ ಪ್ರೋತ್ಸಾಹಪಡಿಸಿದ್ದರ ಮೇಲೆ ಕೆಲವರು ಆ ರೀತಿ ನಡೆಯುವದಾಗಿ ಒಪ್ಪಿಕೊಂಡರು.—ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಅಲ್ಪಸ್ವಲ್ಪವಾಗಿ ನಡೆಯುತ್ತಿರುವ ರೇಷ್ಮೆ ಕಸುಬನ್ನು ಅಭಿವೃದ್ಧಿಪಡಿಸಲು ಯತ್ನಿಸಿ ಆ ಕಸುಬುದಾರರಿಗೆ ಹಿಪ್ಪುನೇರಳೆ ಮಗ್ಗಗಳಿಂದ ಉಂಟಾಗುವ ಪ್ರಯೋಜನವನ್ನು ಬೋಧಿಸುತ್ತಿದ್ದಾರೆ.—ನಮ್ಮ ಸಬ್ ಡಿವಿಜನ್ ಆಫೀಸರು ಮ|| ಎನ್. ಸುಬ್ಬರಾಯರೊಡನೆ ಕಲೆತು ಇವರು ಪ್ರತಿ ಗ್ರಾಮಕ್ಕೆ ಹೋಗಿ ಅಲ್ಲಿ ವ್ಯರ್ಥವಾಗಿ ಹರಿದುಹೋಗುತ್ತಿರುವ ಎಷ್ಟೋ ಹೊಳೆಯ ಮತ್ತು ನದಿಯ ನೀರನ್ನು ಅಜಮಾಯಿಷಿ ಮಾಡಿ, ಬಹಳ ವರುಷಗಳ ಕೆಳಗೆ ಅವಕ್ಕೆ ಅಡ್ಡವಾಗಿ ಕಟ್ಟಲ್ಪಟ್ಟು ಈಚೆಗೆ ಶಿಥಿಲವಾಗಿ ಹೋಗಿರುವ ಅಣೆಯನ್ನು ಬಂದೋಬಸ್ತು ಮಾಡಿಸಿ ಅದರಿಂದ ಸಿಕ್ಕಬಹುದಾದ ನೀರನ್ನು ಜಲಯಂತ್ರ ಸ್ಥಾಪನೆ ಮೂಲಕ ಮೇಲಕ್ಕೆ ಎತ್ತಿಸಿ ಅದರ ದಡದಲ್ಲಿರುವ ಸುಮಾರು 80 ಎಕರೆ ಜಮೀನಿನಲ್ಲಿ ಕಬ್ಬು ಸಾಗುವಳಿ ಮಾಡಿಸಲಿಕ್ಕೆ ಆ ಜಮೀನಿನ ಮಾಲೀಕರಾದ ಮ|| ಪುರುಷೋತ್ತಮನಾಯಕರಿಗಿರಿ ಗೋಪಿನಾಯಿಯವರನ್ನು ಪ್ರೋತ್ಸಾಹಪಡಿಸಿ ಸದರಿ ಜಮೀನನ್ನು ಸರ್ವೆಮಾಡಿಸುತ್ತಲಿದ್ದಾರೆ.

ಒಂದೆರಡು ವರುಷಗಳು ಕ್ಷಾಮ ಪ್ರಾಪ್ತವಾದಾಗ್ಯೂ ರೈತರು ಜೀವನಕ್ಕೆ ಇಲ್ಲದೆ ಕಡುಕಷ್ಟಗಳನ್ನು ಅನುಭವಿಸದೆ ಇರಲಿಕ್ಕೂ, ಬಡ ರೈತರು ಸಾಧಾರಣವಾಗಿ ಲಭ್ಯವಿರುವ ದವಸವು ಮುಗಿದುಹೋದ ಕೂಡಲೆ ಜೀವನಕ್ಕಾಗಿ ದುಬಾರಿ ಬಡ್ಡಿ ತೆತ್ತು ದವಸವನ್ನು ಸಾಲವಾಗಿ ತರುತ್ತಲಿರುವದನ್ನು ಹೋಗಲಾಡಿಸಿ ಅವರಿಗೆ ಬೇಕಾದಾಗ ಸುಲಭ ಬಡ್ಡಿಗೆ ಬೇಕಾದಷ್ಟು ದವಸ ಸಿರಾಯಸವಾಗಿ ಸಿಗುವಂತೆ ಮಾಡಲಿಕ್ಕೂ, ರೈತರಲ್ಲಿ ಪರಸ್ಪರ ಸಹಾಯ, ಮಿತವ್ಯಯ ಬುದ್ಧಿಗಳನ್ನುಂಟುಮಾಡಲಿಕ್ಕೂ ಅನುಕೂಲವಾಗುವಂತೆ ಮ|| ಶಾಸ್ತ್ರಿಗಳು ದವಸದ ಬ್ಯಾಂಕುಗಳನ್ನು ಏರ್ಪಡಿಸುತ್ತಲಿರುವರು. ಇವುಗಳ ಪ್ರಯೋಜನವನ್ನು ರೈತರು ಗ್ರಹಿಸಿ ಈ ಬ್ಯಾಂಕುಗಳಲ್ಲಿ ಷೇರುಗಳನ್ನು ಪಡೆಯುತ್ತಲಿರುವರು. ಷೇರುಗಳು ದಾಖ್ಲಾನ ಮಾಡಿರುವನ್ನು ದವಸವು ಬರುವ ಸುಗ್ಗಿಯಲ್ಲಿ ವಸೂಲಾದ ಕೂಡಲೆ ಈ ಬ್ಯಾಂಕುಗಳು ಪರಸ್ಪರಸಹಾಯ ಸಂಘಗಳ ಕಾನೂನ್ ಅನುಸರಿಸಿ ರಿಜಿಸ್ಟರ್ ಮಾಡಲ್ಪಡುವವೆಂದು ತಿಳಿಯುತ್ತೇನೆ.—ನಂಜನಗೂಡಿಗೆ 3 ಮೈಲಿ ದೂರದಲ್ಲಿರುವ ಅರಳನಕೆರೆ ಎಂಬ ಸ್ಥಳದಲ್ಲಿ ಹೆಂಚುಗಳ ತಯಾರಿಗೆ ಉಪಯುಕ್ತವಾದ ಜೇಡಿ ಮಣ್ಣು ದೊರೆಯುವದೆಂದು ಕಂಡುಬಂದು ಅದನ್ನು ಸಂಗ್ರಹಿಸಿ ಅಜಮಾಯಿಷಿ ಮಾಡಿಸಿದ್ದರ ಮೇಲೆ ಅದರಿಂದ ಉತ್ತಮವಾದ ಹೆಂಚುಗಳು ಮಾಡಲ್ಪಟ್ಟು ಇಂಥ ಹೆಂಚು ತಯಾರಿ ಕಾರ್ಖಾನೆಯೊಂದನ್ನು ಸ್ಥಾಪಿಸಲು ನಂಜನಗೂಡಿನಲ್ಲಿ ಈ ತಾಲ್ಲೂಕಿನ ಪ್ರಮುಖರ ಮೀಟಿಂಗು ನಡೆಯಿತು. ಮೆಂಬರುಗಳು ಕಾರ್ಖಾನೆ ಇಡಲು ಬೇಕಾದಷ್ಟು ಹಣವನ್ನು ಷೇರುಗಳ ಮೂಲಕ ಕೊಡಲೊಪ್ಪಿದರು. ಈ ಸ್ಥಳದಲ್ಲಿ ದೊರೆಯುವ ಇಂಥಾ ಉತ್ತಮವಾದ ಜೇಡಿಯು ಸರಬರಾಯಿ ಎಷ್ಟು ವರುಷಗಳ ವರಿವಿಗೆ ನಡೆಯಬಹುದೆಂಬುವದನ್ನು ಕಂಡು ಹಿಡಿಯಲು ಹಾಲಿ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರೂ, ಈ ಕೈಗಾರಿಕೆಯಲ್ಲಿ ಅನುಭವಶಾಲಿಗಳಾದ ಮ|| ಬರೋಸ್‌ಯವರೂ ಉದ್ಯುಕ್ತರಾಗಿರುವರು. ಪ್ರತ್ಯಕ್ಷದರ್ಶಿ.

ತಾಲ್ಲೂಕು ವರ್ತಮಾನಗಳು.

ಯಡತೊರೆ.—ಈ ಊರು ಎಲ್ಲಾ ಭಾಗದಲ್ಲೂ ಬಹಳ ಹಿಂದಾಗಿದ್ದು ಹಾಲೀ ಪೂರ್ವಸ್ಥಿತಿಗೆ ಬರಲು ಪ್ರಾರಂಭವಾಗಿರುತ್ತೆ. ಇಲ್ಲಿ ಟೌನ್ ಕೋರ್ಟ್ ಏರ್ಪಾಡಾಗಿ ಸರ್ಕಾರಿ ಅಧಿಕಾರಿಗಳೂ ಪ್ರಜಾ ಪ್ರಮುಖರೂ ಒಟ್ಟಿಗೆ ಸೇರಲು ಅವಕಾಶವಿದೆ.—ಯಡತೊರೆ ಜಮೀನ್‌ದಾರರೂ ದೊಡ್ಡ ಮನುಷ್ಯರೂ ಆದ ಮ|| ವೆಂಕೋಜಿರಾಯರು ಜನೋಪಯೋಗಕ್ಕೋಸ್ಕರ ಒಂದು ಸೊಗಸಾದ ರೀಡಿಂಗ್ ರೂಮನ್ನು ಕಟ್ಟಿಸಿಕೊಡಲು ಒಪ್ಪಿ ಈಗಾಗಲೇ ಮುಕ್ಕಾಲು ಪಾಲು ಕಟ್ಟಡ ಆಗಿದೆ. ಈ ದೊಡ್ಡ ಮನುಷ್ಯರು ಯಾವ ಕೆಲಸಕ್ಕೂ ಧಾರಾಳವಾಗಿ ಸಹಾಯ ಮಾಡುತ್ತಾರೆ.—ಪ್ರಜಾಪ್ರತಿನಿಧಿ ಸಭೆ ಮೆಂಬರಾಗಿ ಚುನಾವಣೆಯಾಗಿರುವ ಜಮೀನ್‌ದಾರ್ ಮ|| ಬಿ. ಸಿದ್ಧಲಿಂಗಶೆಟ್ಟರವರು ಇಲ್ಲಿ ಒಂದು ಪುಸ್ತಕಾಲಯವನ್ನು ಸ್ಥಾಪಿಸಲು ನೂರೈವತ್ತು ರೂಪಾಯಿ ಕೊಟ್ಟಿರುತ್ತಾರೆ. ಇವರ ಪ್ರೋತ್ಸಾಹ ಶಾಶ್ವತವಾಗಿರಲೆಂದು ಕೋರುತ್ತಾರೆ. ಇನ್ನೂ ಕೆಲವು ದೊಡ್ಡ ಮನುಷ್ಯರು ವಾಚನಶಾಲೆ ಮತ್ತು ಪುಸ್ತಕಾಲಯಕ್ಕೆ ಅವಶ್ಯವಾದ ಸಾಮಾನುಗಳನ್ನು ಸಹಾಯ ಮಾಡುವದರಲ್ಲಿದ್ದಾರೆ. ಮುಂದೆ ಇವರ ಹೆಸರನ್ನು ತಿಳಿಸಲು ಆತುರವುಳ್ಳವನಾಗಿದೇನೆ.—ಮಂಚನಹಳ್ಳಿ ಗ್ರಾಮಾಭಿವೃದ್ಧಿ ಕೆಲಸಗಳು ಕೈಗಾರಿಕೆ, ವ್ಯಾಪಾರ, ವ್ಯವಸಾಯಾಭಿವೃದ್ಧಿ ಕೆಲಸಗಳೆಲ್ಲಾ ಕ್ರಮವಾಗಿ ನಡೆಯುತ್ತಿವೆ. ಸೊಸೈಟಿ ಮಾತ್ರ ಪೂರ್ವದಂತೆ ಇಲ್ಲ. ಇದಕ್ಕೆ ಆ ಇಲಾಖೆಯ ಅಧಿಕಾರಿಗಳೇ ಕಾರಣವೆಂದು ತಿಳಿಯಬರುತ್ತೆ.—ಈ ತಾಲ್ಲೂಕು ಡೆಪ್ಟಿ ಅಮಲ್ದಾರ್ ಮ|| ಎನ್. ಶ್ರೀನಿವಾಸಮೂರ್ತಿಯವರು ಸೊಸೈಟಿಗಳನ್ನು ತನಿಖೆಮಾಡಿ ಪ್ರೋತ್ಸಾಹಿಸುತ್ತಿದ್ದಾರೆ. ಮಂಚನಹಳ್ಳಿ ಸೊಸೈಟಿ ವಿಚಾರದಲ್ಲಿ ಪೂರ್ವದಂತೆ ಅಭಿವೃದ್ಧಿಸ್ಥಿತಿಗೆ ತರಬೇಕೆಂದು ಪ್ರೋತ್ಸಾಹಿಸುತ್ತಾರೆ.

ತಿಪ್ಪೂರು.—ಈ ಊರಿನಲ್ಲಿ ಮಳೆಯಿಲ್ಲದೆ ಮುಂಗಾರೆಲ್ಲಾ ಬಾಡಿ ಬರಗಾಲವನ್ನು ಸೂಚಿಸುತ್ತಾ ಇತ್ತು. ಒಂದೆರಡು ಹದ ಮಳೆ ಆದ ದೆಸೆಯಿಂದ ಟೌನಿನ ಮಗ್ಗುಲಲ್ಲಿರುವ ಕೆರೆಗೆ ಅಲ್ಪ ಸ್ವಲ್ಪ ನೀರು ಬಂದಿದೆ. ಈ ಊರಿನಲ್ಲಿ ಮೊದಲೇ ನೀರಿಗೆ ಕಷ್ಟವೆಂಬುದು ಸರ್ಕಾರದವರಿಗೆ ಅನುಭವವಾಗಿದೆ. ಇದರಲ್ಲೂ ಕೆರೆಗೆ ಬಂದಿರುವ ಈ ನೀರಾದರೂ ಗೋಕಾಯಿಗಳಿಗೆ ಆಶ್ರಯವಾಗಿದ್ದೀಕೆಂದು ಯೋಚಿಸುವುದಾದರೆ ಕೆರೆಯ ಅಂಗಳವನ್ನೆಲ್ಲಾ ಹೇಸಿಕೆಮಾಡಿ ಕೆಡಿಸಿರುವದರಿಂದ ನೀರು ತುಂಬಾ ಅಶುಚಿಯಾಗಿ ಗೋಕಾಯಿಗಳಿಗೂ ಟೌನಿಗೂ ತುಂಬಾ ಅನಾರೋಗ್ಯಕ್ಕೆ ಕಾರಣ ಉಂಟಾಗಿದೆ.—ಈ ಊರು ದೊಡ್ಡ ವ್ಯಾಪಾರಸ್ಥಳವಾಗಿಯೂ ತಾಲ್ಲೂಕು ಹೆಡ್‌ಕ್ವಾರ್ಟರಾಗಿಯೂ ಅಮಲ್ದಾರ್ರು, ಪೊ|| ಇನ್ಸ್‌ಪೆಕ್ಟರು, ಸ್ಯಾ|| ಇನ್ಸ್‌ಪೆಕ್ಟರು ಮುಂತಾದ ಅಧಿಕಾರಿಗಳು ಇರತಕ್ಕದ್ದಾಗಿಯೂ ಇದೆ. ಆದರೂ ಟೌನ್ ಮಗ್ಗುಲಲ್ಲಿನ ಕೆರೆಯು ಹೇಸಿಕೆ ಮಯವಾಗಿರುವುದು ತುಂಬಾ ಆಶ್ಚರ್ಯ. ಸರ್ಕಾರದವರು ಸಲ್ಲಿ ಹಾಕಬೇಕೆಂದು ಏರ್ಪಾಡುಮಾಡಿದ್ದರು. ಈಗ ಅದರ ವಿಷಯವೇ ಇಲ್ಲದಂತಾಗಿದೆ.—ಲೇಟ್ ಸೋಸಲೆ ವೆಂಕಟಸ್ವಾಮಿಶೆಟ್ಟರ ಮಕ್ಕಳು ವೆಂಕಟಕೃಷ್ಣಪ್ಪನವರು ಇಲ್ಲಿನ ವರ್ತಕಮಂಡಲಿಯವರ ಸಹಾಯದಿಂದ ಗೋಕಾಯಿಗಳಿಗೆ ನೀರಿನ ಆಸರೆಯನ್ನು ಕಲ್ಪಿಸಿರುವುದು ತುಂಬಾ ಸ್ತೋತ್ರಾರ್ಹವಾಗಿದೆ.—ಟೌನಿನ ಮಧ್ಯದಲ್ಲೇ ತಾ. 17 ನೇ ಶನಿವಾರ ರಾತ್ರಿ ಸಿದ್ದವೀರಪ್ಪನವರ ಅಂಗಡಿಗೂ ಮತ್ತು ಮುಸಲ್ಮಾನರ ಅಂಗಡಿಗೂ ಕಳ್ಳರು ನುಗ್ಗಿ ಕೆಲವು ರೂಪಾಯನ್ನು ಅಪಹರಿಸಿದರು. ಪೋಲೀಸಿನವರು ಉಸ್ತುವಾಗಿ ಇಟ್ಟು ಬಂದೋಬಸ್ತು ಮಾಡುವರೆಂದು ನಿರೀಕ್ಷಿಸಲಾಗಿದೆ.

ಮಂಡ್ಯದ ತಾ|| ಕಟ್ಟಗೆರೆ.—ಈ ಗ್ರಾಮವು ಮಂಡ್ಯಕ್ಕೆ ಸುಮಾರು 6 ಮೈಲಿ ದೂರದಲ್ಲಿದೆ. ಇದು ಪ್ರೊಫೆಸರ್ ಎಂ. ಡಿ. ಕೃಷ್ಣಯ್ಯಂಗಾರ್ರವರ ಖಾಯಂ ಗುತ್ತಿಗೆ ಗ್ರಾಮ. ಇಲ್ಲಿ 60 ಮನೆಗಳು ಇರುವದಲ್ಲದೆ ಸಮೀಪದಲ್ಲಿ 2-3 ಗ್ರಾಮಗಳಿರುವವು. ಮ|| ಕೃಷ್ಣಯ್ಯಂಗಾರ್ರು ಈ ಗ್ರಾಮವನ್ನು ಬಹು ದಿವಸಗಳಿಂದಲೂ ಆಬಾದಿಗೆ ತರುತ್ತಲಿರುವರು. ನೆಲಗಡ್ಲೆ ಮತ್ತು ಉರಲಗಡ್ಡೆಗಳ ಬೆಳೆಯನ್ನು ವಿಶೇಷ ರೀತಿಗೆ ತಂದಿದ್ದಾರೆ. ಸದರಿ ಗ್ರಾಮದಲ್ಲಿರುವ ಕೆರೆಯ ವಿಚಾರದಲ್ಲಿ ತಮ್ಮ ಸ್ವಂತ ಲಾಗುವಾಗಿನಿಂದ ಸುಮಾರು 2 ಸಾವಿರ ರೂಪಾಯಿ ತನಕ ಖರ್ಚುಮಾಡಿ ಸರಿಪಡಿಸಿಕೊಳ್ಳುತ್ತೇನೆಂದು ಸರ್ಕಾರಕ್ಕೆ ಅನೇಕ ದಫೆ ಅರ್ಜಿಗಳನ್ನು ಬರೆದುಕೊಂಡರೂ ಮತ್ತು ಅನೇಕ ಆಫೀಸರುಗಳು ಬಂದು ನೋಡಿಕೊಂಡು ಹೋದಾಗ್ಯೂ ಈ ವರಿವಿಗೂ ಅಪ್ಪಣೆ ದೊರೆಯಲಿಲ್ಲ. ಇದು ಗ್ರಾಮದ ಏಳಿಗೆಗೆ ಕುಂದಕವಾಗಿರುತ್ತದೆ. ಈ ಕೆರೆಯು ಸರಿಯಾದ ಸ್ಥಿತಿಯಲ್ಲಿದ್ದರೆ ವ್ಯವಸಾಯವು ಮತ್ತೂ ಅಭಿವೃದ್ಧಿಗೆ ಬರಲು ಅವಕಾಶವಾದೀತು.—ಇಲ್ಲಿ ಪರಸ್ಪರ ಸಹಾಯಕ ಸಂಘ ಏರ್ಪಡುವಂತೆ ತಾ. 17-18 ರಲ್ಲಿ ಗೊತ್ತುಮಾಡಿದರು. ಅಲ್ಲಿಗೆ ಮಂಡ್ಯ ತಾಲ್ಲೂಕು ಅಮಲ್ದಾರ್ ಮ|| ಬಸವರಾಜೇ ಅರಸಿನವರೂ, ಸಬ್ ರಿಜಿಸ್ಟ್ರಾರ್ರೂ, ನಾಕ್ರರೂ, ಇನ್ಸ್‌ಪೆಕ್ಟರೂ, ವಕೀಲರೇ ಮುಂತಾದವರು ಹೋಗಿದ್ದರು. ಗ್ರಾಮದವರು ಇವರುಗಳನ್ನು ತಕ್ಕ ಸನ್ಮಾನಗಳೊಡನೆ ಬರಮಾಡಿಕೊಂಡರು. ಮ|| ಕೃಷ್ಣಯ್ಯಂಗಾರ್ರ ಇಷ್ಟದಂತೆ ಪರಸ್ಪರ ಸಹಾಯಕ ಸಂಘವು ಸ್ಥಾಪನೆಯಾಯಿತು. ಈ ಸಂಘದಲ್ಲಿ ಅವರ 10 ವರುಷದ ಕುಮಾರನು ಯಕ್ಷಿಣಿ ನೋಡಲಾದ ಚಮತ್ಕಾರ ವಿದ್ಯೆಗಳನ್ನು ಸಭಿಕರಿಗೆ ಪ್ರದರ್ಶನಮಾಡಿ ಸಂತೋಷವನ್ನೂ ಆಶ್ಚರ್ಯವನ್ನೂ ಉಂಟುಮಾಡಿದನು. ಪರಸ್ಥಳಗಳಿಂದ ಬಂದಿದ್ದವರಿಗೆಲ್ಲಾ ಭೋಜನಕ್ಕೆ ತಕ್ಕ ಏರ್ಪಾಡು ಮಾಡಿದ್ದರು. ಹೀಗೆ ತಮ್ಮ ವಶಕ್ಕೆ ಬಂದಿರುವ ಈ ಗ್ರಾಮವನ್ನು ಉತ್ತಮಸ್ಥಿತಿಗೆ ತರಲು ಮ|| ಕೃಷ್ಣಯ್ಯಂಗಾರ್ರು ಪಡುತ್ತಿರುವ ಪ್ರಯತ್ನಗಳು ಸಾರ್ಥಕತೆಯೊಂದಲೆಂದು ಹಾರೈಸುತ್ತೇನೆ.

ಪಿಡ್ಲಘಟ್ಟ.—ಈ ಪ್ರಾಂತ್ಯದೊಳಗಿನ ಬತ್ತದ ಕೆಲಸಗಳು ಪೂರೈಸುತ್ತವೆ. ಮಳೆ ಮಾತ್ರ ಬಾರದೆ ರೈತರು ಭಯಪಡುತ್ತಿದ್ದಾರೆ. ಕೆರೆಗಳಿಗೆ ನೀರು ಬಾರದೆ ಕಾರ್ ಫಸಲು ಈ ವರ್ಷವೂ ನಡೆಯುವಂತೆ ತೋರುವದಿಲ್ಲ. ಬಡಬಗ್ಗರ ಜೀವನೋಪಾಯ ಕಷ್ಟಕರವಾಗಿದೆ. ನಮ್ಮ ಅಮಲ್ದಾರ್ ಮಿ|| ಥಾಮಸ್ ಸಾಹೇಬರು ಹೊಸದುರ್ಗಕ್ಕೆ ವರ್ಗವಾಗಿರುವುದರಿಂದ ಊರಿನ ಮುಖಂಡರು ಅವರನ್ನು ಸ್ಟೇಷನ್ನಿಗೆ ಬರಮಾಡಿಕೊಂಡು ತಮ್ಮಗಳ ದುಃಖವನ್ನು ವ್ಯಕ್ತಪಡಿಸಿದರು. ಇವರ ಸ್ಥಾನಕ್ಕೆ ಬಂದಿರುವ ಮ|| ಕೆ. ಶ್ರೀನಿವಾಸರಾಯರು ಮೊದಲಿನವರಂತೆಯೇ ಪ್ರಜಾಹಿತೈಷಿಗಳಾಗಿ ಕಾಪಾಡುವರೆಂದು ನಂಬಿರುತ್ತೇವೆ.—ಇಲ್ಲಿನ ಶಿರ್ವ ಸ್ಯಾನಿಟರಿ ಇನ್ಸ್‌ಪೆಕ್ಟರು ರಜಾದ ಮೇಲೆ ಹೋಗಿ 4-5 ತಿಂಗಳಾದರೂ ಬರಲಿಲ್ಲ. ಬೇರೆಯವರನ್ನು ಸರ್ಕಾರದವರು ನೇಮಿಸಲೂ ಇಲ್ಲ. ತಾಲ್ಲೂಕ್ ಸ್ಯಾನಿಟರಿ ಇನ್ಸ್‌ಪೆಕ್ಟರೇ ತಮ್ಮ ಕೆಲಸ ಜೊತೆಗೆ ಈ ಕೆಲಸವನ್ನು ಮಾಡುತ್ತಿದ್ದಾರೆ. ಮ್ಯುನಿಸಿಪಲ್ ರಸ್ತೆ ಕೆಲಸಗಳು ಜೂನ್ ತಿಂಗಳ ವರಿಗೂ ಸ್ಥಗಿತವಾದ ಆಖೈರಿನಲ್ಲಿ ಅವಸರವಾಗಿ ಮುಗಿಸಲ್ಪಟ್ಟಿರುವ ಕಾರಣ ಮಳೆಯಿಲ್ಲದೆ ಒಣ ನೆಲದ ಮೇಲೆ ಗ್ರಾವಲ್ ಬಿಛಾವಣೆ ಮಾಡಿರುವದರಿಂದ ಜನರು ತಿರುಗಾಡುವದಕ್ಕೆ ಹಿಂಸೆಯಾಗಿದೆ. ಅದನ್ನು ದುರಸ್ತು ಮಾಡಿಸಿ ಜನಗಳ ತೊಂದರೆಯನ್ನು ತಪ್ಪಿಸಬೇಕಾಗಿದೆ.—ಇಲ್ಲಿನ ಕೋಆಪರೆಟಿವ್ ಸೊಸೈಟಿಯು ಈ ಡಿಸ್ಟ್ರಿಕ್ಟಿನಲ್ಲಿ ಮುಖ್ಯವಾದುವೆಂದು ಹೇಳಿಸಿಕೊಂಡಿರುತ್ತದೆ. ಆದರೆ 2 ವರ್ಷಗಳಿಂದಲೂ ಜನರಲ್ ಮೀಟಿಂಗಿನಲ್ಲಿ ಬಡ್ಡಿಯನ್ನು ಶೇ. 12 ರಿಂದ 9 ರೂ. ಗೆ ಇಳಿಸುವ ರಿತ್ಯಾ ತೀರ್ಮಾನವಾಗಿದ್ದರೂ ಈವರಿಗೂ ಜಾರಿಗೆ ಮಾತ್ರ ಬರಲಿಲ್ಲ. ಇದಕ್ಕೆ ಕಮಿಟಿಯವರು ಸಗಾ ಕೊಡದೆ ಇರುವದು ಮೆಂಬರುಗಳಲ್ಲಿ ಅಸಮಾಧಾನ ಹುಟ್ಟಲು ಕಾರಣವಾಗಿದೆ. ಶೀಘ್ರದಲ್ಲಿ ಕ್ರಮಪಡಿಸುವರೆಂದು ನಂಬಿರುತ್ತೇವೆ.—ಸೊಸೈಟಿಗಳ ಇನ್ಸ್‌ಪೆಕ್ಟರ್ ಮ|| ರಾಜಾರಾಯರು ಈ ತಾಲ್ಲೂಕಿನಲ್ಲಿ ಹೊಸದಾಗಿ 5 ಸೊಸೈಟಿಗಳನ್ನು ಸ್ಥಾಪಿಸಿ ಜನಗಳ ಅನುರಾಗಕ್ಕೆ ಪಾತ್ರರಾಗಿರುತ್ತಾರೆ.—ರೈಲ್ವೆ ಕಾಮಗಾರಿಯು ಕೋಲಾರ್ ಮಾರ್ಗವಾಗಿ ನಡೆಯುತ್ತದೆ. ಮೇಷರಿ ಕೆಲಸಗಳು ಮಾತ್ರ ನಡೆಯದೆ ನಿಂತಿರುತ್ತವೆ. ಇದಕ್ಕೆ ಕೆಲಸಗಳು ಕಮ್ಮಿ ಹಾಕಿರುವದೇ ಕಾರಣವೆಂದು ಹೇಳುವರು. ಹಾಲಿ ನಮ್ಮ ಊರು ಅಮ್ಮನಕೆರೆ ಅಂಗಟ್ಟು ಮೊದಲಾದ ಸ್ವಲ್ಪ ಮಾತ್ರ ಕೆಲಸವಾಗಿ ನಿಲ್ಲಿಸಿರುತ್ತಾರೆ. ಕೆರೆಗೆ ನೀರು ಬಂದಲ್ಲಿ ತುಂಬಾ ಅನನುಕೂಲವಾಗಿ ನಷ್ಟಕ್ಕೆ ಕಾರಣವಾದೀತು. ಈ ಸಬ್ ಡಿವಿಜನ್ ನ ಇನ್‌ಚಾರ್ಜ್ ಮ|| ಎನ್. ಮುತ್ತುಸ್ವಾಮಿ ಅಯ್ಯರವರು ಕೆರೆಗಳ ವಿಚಾರವಾಗಿ ಕ್ರಮಪಡಿಸಲು ಸಿಫಾರಸು ಮಾಡಿದಲ್ಲಿ ಈ ಮೇಷರಿಗಳು ಶೀಘ್ರದಲ್ಲಿ ಪೂರೈಸಿ ಇವರ ಶಿಫಾರಸು ಸಾರ್ಥಕವಾಗುತ್ತೆ. ಇಲ್ಲವಾದಗೆ ನೀರು ನಿಲ್ಲುವದನ್ನು ಈ ಊರಿನಲ್ಲಿ ನೋಡಬೇಕಾದರೆ ವರ್ಷಗಳ ಅವಧಿ ಬೇಕೆಂದು ಕಾಣುತ್ತೆ. ಶೀಘ್ರದಲ್ಲೇ ಈ ಕೆಲಸವು ಪೂರೈಸುವದೆಂದು ನಿರೀಕ್ಷಿಸುವೆವು.

ದಯವಿಟ್ಟು ನಿಮ್ಮ ಮಿತ್ರಮಂಡಲಿಗೆ ತೋರಿಸಿರಿ.

ಸುರಕ್ಷಿತವಾಗಿ ಸ್ವಲ್ಪ ಹಣವನ್ನು ಹಾಕಿ ವಿಶೇಷ ಲಾಭವನ್ನು ಪಡೆಯಿರಿ!

ಕೇವಲ ತಿಂಗಳಿಗೆ 1 ರೂಪಾಯಿ ಒಡ್ಡಿ ಒಂದು ಪ್ರಕಾರ ಸಾಲವನ್ನು ಪಡೆಯುವುದಕ್ಕೆ ಅರ್ಹತೆಯನ್ನು ಹೊಂದಿ!!

ಯಾವ ಬಗೆ ಮಾನವಾಗದೆ ಕೊಡದೆ ನಿಮ್ಮ ಜೀವ ವಿಮೆಯನ್ನು ಮಾಡಿ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯವನ್ನು ಮಾಡಿ!!!

ಮೈಸೂರು ದೇಶದ ಜನಗಳಿಗೋಸ್ಕರ ಮೈಸೂರಲ್ಲಿ ಸ್ಥಾಪಿತವಾಗಿರುವ

ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪನಿಯವರು

ಮೈಸೂರು ದೇಶದಲ್ಲಿ ಮೊದಲನೇ ಸಾರಿ ಜಾರಿಗೆ ತಂದಿರುವ

ಅತ್ಯಾಶ್ಚರ್ಯಕರವಾದ ಮತ್ತು ನವೀನವಾದ ಒಂದರಲ್ಲಿ ಎರಡು ಅಥವಾ ಷೇರು ಜೀವವಿಮೆ ಎಂಬ ಏರ್ಪಾಡನ್ನು ಕೇಳಲಿಲ್ಲವೇ?

ಇಲ್ಲದಿದ್ದರೆ ಅದನ್ನು ತಪ್ಪಿಲ್ಲದಾಗಿ ವಿವರಿಸಿರುವ ಪ್ರಕಟನ ಪತ್ರಿಕೆ, ದರಖಾಸ್ತು ಫಾರಂ ಮತ್ತು ಇತರ ಅವಶ್ಯಕವಾಗಿ ತಿಳಿಯತಕ್ಕ ವಿಷಯಗಳಿಗೋಸ್ಕರ ತಕ್ಷಣವೇ ಬರೆಯಿರಿ. ಮತ್ತು

ಈವರೆವಿಗೂ ಜೀವವಿಮೆ ಪ್ರಪಂಚಕ್ಕೆ ತಿಳಿಯದ ಈ ಕೆಳಗೆ ವಿವರಿಸಿರುವ ವಿಶೇಷಕರವಾದ ಪ್ರಯೋಜನಗಳನ್ನು ಹೊಂದಿರಿ.

ನೀವು ಮಾಡಬೇಕಾದ್ದೇನಂದರೆ ಕಂಪನಿಯ ಹತ್ತು ಷೇರುಗಳಿಗೆ ದರಖಾಸ್ತು ಕೊಟ್ಟು ದರಖಾಸ್ತಿನೊಂದಿಗೆ 10 ರೂಪಾಯಿ (5 ರೂಪಾಯಿ ಷೇರಿಗೋಸ್ಕರವೂ ಮತ್ತು 5 ರೂಪಾಯಿ ಪ್ರಿಮಿಯಂಗೋಸ್ಕರವೂ) ಮತ್ತು ಷೇರುಗಳು ದಾಖಲಾದ ಮೇಲೆ 5 ರೂಪಾಯಿ ಮಾತ್ರವೆ ನೀವು ಕೊಡಬೇಕಾದದು. ಇವಾದ ಮೇಲೆ ಬಾಕಿ 40 ರೂಪಾಯಿಗಳನ್ನು ನಾಲ್ಕು ಕಂತುಗಳಲ್ಲಿ ಅಂದರೆ ಮೂರು ತಿಂಗಳಿಗೊಂದಾವರ್ತಿ 10 ರೂಪಾಯಿಗಳ ಪ್ರಕಾರ ಕೊಡಬಹುದು, ಅಥವಾ

ನಿಮ್ಮ ಕೈಯಿಂದ ಕೊಡದೆ ಮೇಲ್ಕಂಡ 40 ರೂಪಾಯಿಗಳನ್ನು ನಮ್ಮ ವಾರ್ಷಿ ಜೀವವಿಮೆ ಏರ್ಪಾಡಿನ ಪ್ರಕಾರ ಜಮಾ ಆಗುವ ಹಾಗೆ ಹ್ಯಾಗೆ ಮಾಡಬೇಕೋ ಎಂಬ ವಿಷಯವನ್ನು ನಮ್ಮಲ್ಲಿ ಕೇಳಿ ತಿಳಿದುಕೊಳ್ಳಿ.

ವಿಶೇಷಕರವಾದ ಪ್ರಯೋಜನಗಳು.

1. ಸುರಕ್ಷಿತವಾದ ಹಣದ ಭದ್ರತೆ:—ಕಂಪನಿಯ ಮೂಲಧನವು ಐದು ಲಕ್ಷ ರೂಪಾಯಿಗಳು. ಇದು ಷೇರು 1 ಕ್ಕೆ 10 ರೂಪಾಯಿನ ಪ್ರಕಾರ 50,000 ಷೇರುಗಳಾಗಿ ವಿಭಾಗಿಸಲ್ಪಟ್ಟಿರುತ್ತೆ. ಪ್ರತಿ ಒಂದು ಷೇರಿಗೂ 5 ರೂಪಾಯಿನಂತೆ 50,000 ಷೇರುಗಳ ಮೇಲೆ (ಪ್ರೀಮಿಯಂ ಪಹಾ ಜಾತಿ) ವಸೂಲಾಗುವ 2½ ಲಕ್ಷ ರೂಪಾಯಿಗಳ ಪೈಕಿ, 2 ಲಕ್ಷ ರೂಪಾಯಿಗಳಿಗೆ ವರ್ಷ ಒಂದಕ್ಕೆ ಶೇಕಡಾ 3½ ರೂಪಾಯಿಗಳ ಪ್ರಕಾರ ಬಡ್ಡಿ ಬರಲುಳ್ಳ ಇಂಡಿಯಾ ಗೌರ್ನಮೆಂಟ್ ಸೆಕ್ಯೂರಿಟಿಗಳನ್ನು ಕೊಂಡುಕೊಂಡು 1912 ನೇ ಇಸ್ವಿಯ ಜೀವವಿಮೆ ಕಾನೂನಿನ ಪ್ರಕಾರ ಇಂಡಿಯನ ಗೌರ್ನಮೆಂಟ್ ಕಂಟ್ರೋಲರ್ ಜನರಲ್ ರವರಲ್ಲಿ ಡಿಪಾಜಿಟ್ ಇಡಲ್ಪಡುತ್ತೆ. ಉಳಿದ 50,000 ರೂಪಾಯಿ ಚಿಲ್ಲರೆಗಳು ಮೈಸೂರು ಪಟ್ಟಣದಲ್ಲಿ ಒಂದು ಕಟ್ಟಡವನ್ನು ಕಟ್ಟಿಸುವುದಕ್ಕೆ ಉಪಯೋಗಿಸಲ್ಪಡುತ್ತೆ.

2. ನಫಾ:—ಈ ಕಂಪನಿಯಲ್ಲಿ ಬಹಳ ಅಭಿವೃದ್ಧಿ ಹೊಂದುತ್ತಲಿರುವ ಜೀವವಿಮೆ, ಪ್ರಾವಿಡೆಂಟ್ ಫಂಡು ಮತ್ತು ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ ಎಂಬ ಮೂರು ಡಿಪಾರ್ಟ್‌ಮೆಂಟುಗಳು ಈಗಲೇ ಇರುತ್ತವೆ. ಮತ್ತು ಇನ್ನೊಂದು ಬಹಳ ಪ್ರಯೋಜನಕರವಾದ ಫ್ರೀ ಡಿಪಾಜಿಟ್ ಎಂಬ ಡಿಪಾರ್ಟ್‌ಮೆಂಟು ಜಾರಿಯಲ್ಲಿ ತರಲ್ಪಡುತ್ತೆ. ಈ ಡಿಪಾರ್ಟ್‌ಮೆಂಟುಗಳಲ್ಲೆಲ್ಲಾ ಸಂಪಾದಿಸಲ್ಪಡುವ ವಿಶೇಷ ನಫೆಯು ಷೇರುದಾರರುಗಳಿಗೆ ಪ್ರತಿ ವರ್ಷವೂ ಅವರ ಮಾಮೂಲು ಪರ್ಯಾಯವಾಗಿ ಹಂಚಲ್ಪಡುತ್ತೆ.

3. ಜೀವವಿಮೆ ಪ್ರಯೋಜನ:—ಪ್ರತಿಯೊಬ್ಬ ಷೇರು ಜೀವವಿಮೆದಾರನಿಗೆ ಯಾವ ಚಂದಾವೂ ಇಲ್ಲದೆ ಮತ್ತು ಡಾಕ್ಟರ್ ಪರೀಕ್ಷೆಯೇ ಆಗಲಿ ಮತ್ತು ಜಾತಿ, ಮತ, ವಯಸ್ಸು, ಗಂಡಸು ಅಥವಾ ಹೆಂಗಸು ಎಂಬ ಯಾವ ನಿರ್ಬಂಧವೇ ಆಗಲಿ ಯಾವದೂ ಇಲ್ಲದೆ ಒಂದು ಜೀವವಿಮೆ ಪತ್ರವು (Whole Life Policy) ಕೊಡಲ್ಪಡುವದು. ಇದರಿಂದ ಷೇರು ಜೀವವಿಮೆದಾರನ ಮರಣಾನಂತರ ಅವರ ವಾರಸ್ದಾರರು 100 ರೂಪಾಯಿನ ಲಾಗಾಯತು 500 ರೂಪಾಯಿನ ವರಿಗೆ ಬೋನಸ್ಸನ್ನು ಹೊಂದಲು ಅರ್ಹರಾಗುತ್ತಾರೆ. ಹೀಗೆ ಕೊಡತಕ್ಕ ಬೋನಸ್ಸಿಗಾಗಿ ಇಂಡಿಯನ ಗೌರ್ನಮೆಂಟಿನಲ್ಲಿ ಡಿಪಾಜಿಟ್ ಇಡತಕ್ಕ 2 ಲಕ್ಷ ರೂಪಾಯಿನ ಗೌರ್ನಮೆಂಟ್ ಸೆಕ್ಯೂರಿಟಿಗಳ ಮೇಲೆ ಪ್ರತಿ ವರ್ಷವೂ ಬರತಕ್ಕ ಬಡ್ಡಿ 7,000 ರೂಪಾಯಿಗಳು ಉಪಯೋಗಿಸಲ್ಪಡುತ್ತವೆ.

4. ಸಾಲ:—ಷೇರು ಜೀವವಿಮೆದಾರರಿಗೆ ಅವರುಗಳ ಷೇರುಗಳ ಮೇಲೂ ಸ್ಥಿರಸ್ವತ್ತುಗಳ ಮೇಲೂ ಶೇಕಡಾ ಸಾಲಿಯಾನ 6 ರೂಪಾಯಿ ಬಡ್ಡಿಯ ಪ್ರಕಾರ ಸಾಲ ಕೊಡಲ್ಪಡುವುದು.

5. ಉಚಿತ ವಿದ್ಯಾಭ್ಯಾಸ:—ಮೇಲ್ಕಂಡ ಕಂಪನಿಯ ಕಟ್ಟಡವು ಬಡವಿದ್ಯಾರ್ಥಿಗಳಿಗೆ ಮುಫತ್ತಾಗಿ ವಾಸಿಸುವುದಕ್ಕೆ ಉಪಯೋಗಿಸಲ್ಪಡುತ್ತದೆ. ಕಂಪನಿಯ ಇತರ ಡಿಪಾರ್ಟ್‌ಮೆಂಟುಗಳಲ್ಲಿ ಸಂಪಾದಿಸುವ ನಫೆ ಮತ್ತು ಬಡ್ಡಿಯಲ್ಲಿ ಇಟೇ ಬಡವಿದ್ಯಾರ್ಥಿಗಳಿಗೆ ಮುಫತ್ತಾಗಿ ಅನ್ನವಸ್ತ್ರ ಕೊಡುವ ಏರ್ಪಾಡೂ ಸಹ ಮಾಡಲ್ಪಡುತ್ತದೆ. ಇಂಥಾ ಸಂದರ್ಭದಲ್ಲಿ ಕಂಪನಿಯ ಷೇರುದಾರರ ಪೈಕಿ ರಿಕ್ತರಾದವರ ಮಕ್ಕಳಿಗೆ ಈ ಬಡವಿದ್ಯಾರ್ಥಿನಿಲಯಕ್ಕೆ ಸೇರಿಸುವಾಗ ಪ್ರಥಮಾವಕಾಶವು ಕೊಡಲ್ಪಡುವುದು.

[15-28]

ಬೇಕಾಗಿದೆ.

ಮೈಸೂರು ದೇಶದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಜೀವವಿಮೆ ಮತ್ತು ಪ್ರಾವಿಡೆಂಟು (ಮದುವೆ ಮತ್ತು ಉಪನಯನ) ಕಾರ್ಯಗಳನ್ನು ಜರುಗಿಸುವುದಕ್ಕೆ ಇಂಗ್ಲೀಷು ಮತ್ತು ಕನ್ನಡ ಭಾಷೆಗಳ ಪರಿಚಯವುಳ್ಳ ಒಬ್ಬ ಏಜಂಟು ಮತ್ತು ಷೇರುಗಳನ್ನು ಖರ್ಚುಮಾಡುವುದಕ್ಕೂ, ಜಮೀನು ಮತ್ತು ಮನೆಗಳನ್ನು ಕೊಂಡು ಕೊಡುವ ಏರ್ಪಾಡುಗಳನ್ನು ಜರುಗಿಸುವುದಕ್ಕೂ ಸಹ ಕನ್ನಡ ಭಾಷೆಯನ್ನು ಚೆನ್ನಾಗಿ ಬಲ್ಲಂಥ ಲೋಕಲ್ ಡೈರೆಕ್ಟರುಗಳು ಧಾರಾಳವಾದ ಕಮಿಷನ್ನಿನ ಮೇಲೆ ಬೇಕಾಗಿದೆ.

ಪ್ರಕಟನ ಪತ್ರಿಕೆಗಳಿಗೂ ಮತ್ತು ನಿಬಂಧನೆಗಳಿಗೂ ನಿಮ್ಮ ಹಿಂದಿನ ಅನುಭವಗಳೊಡನೆ ಈ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಾದ

ಮಿ|| ಎಮ್. ಎಲ್. ನಾಗಣ್ಣನವರಿಗೆ ಬರೆಯಿರಿ.

ತಾಲ್ಲೋಕು ವರ್ತಮಾನಗಳು.

ಸೊರಬದ ತಾ|| ಉಳವಿ.—ತಾ. 23 ನೇ ಬುಧವಾರದ ದಿವಸ ಮಧ್ಯಾಹ್ನ ಈ ಗ್ರಾಮದ ಸ್ಕೂಲ್ ಕಟ್ಟಡದಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಸ್ಕೂಲ್ ಕಟ್ಟಡವು ಬಾವುಟಾದಿಗಳಿಂದಲೂ ತಳಿರು ತೋರಣಾದಿಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಗ್ರಾಮದ ಮುಖ್ಯಸ್ಥರೂ ಸರ್ಕಾರಿ ನೌಕರರೂ ಸೇರಿದ್ದರು. ಮ|| ಎಸ್. ವೆಂಕಟರಾಮಯ್ಯನವರು ಮೈಸೂರು ಸಂಸ್ಥಾನದ ಪೂರ್ವಸ್ಥಿತಿಯನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದ್ದಲ್ಲದೆ, ರಾಜ ಭಕ್ತಿಯನ್ನು ಬಾಲಕರಿಂದ ಗೀತಾದಿಗಳನ್ನು ಹೇಳಿಸುವುದರ ಮೂಲಕ ವ್ಯಕ್ತಪಡಿಸಿದರು. ಇವರು ಸ್ವಲ್ಪ ದಿವಸಗಳ ಹಿಂದೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಿಂದ ಬಂದರು. ಈ ಸ್ಕೂಲನ್ನು ಈಗ ಅಭಿವೃದ್ಧಿಗೆ ತರುತ್ತಿದಾರೆ.

ಶಿವಮೊಗ್ಗ.—ಹವಾ ಆರೋಗ್ಯವಾಗಿದೆ. ಡೆಪ್ಯುಟಿ ಕಮಿಷನರ್ ಸಾಹೇಬರವರು ಮೈಸೂರಿಂದ ಬಂದರು. ಅ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರಿಗೆ ಹುಷಾರಾಗಿ ಕೆಲಸದ ಮೇಲೆ ಹಾಜರಾದ್ದಕ್ಕೆ ಸಂತೋಷಪಡುತ್ತೇವೆ.—ಸೆಷನ್ಸ್ ಜಡ್ಜರು ಶನಿವಾರ ಸಾಯಂಕಾಲ ಚಿಕ್ಕಮಗಳೂರು ಸೆಷನ್ಸ್ ವಿಚಾರಣೆ ಬಗ್ಗೆ ದಯಮಾಡಿಸಿದರು.—ಗಾಡಿ ಸುಂಕದ ವಸೂಲಿಯನ್ನು ಸೇತುವೆ ಹತ್ತಿರ ಮಾಡುತ್ತಿದ್ದದ್ದನ್ನು ಈ ತಿಂಗಳಿಂದ ಇರಸಾಪುರದ ಆಚೆ ಕಟ್ಟಿರುವ ಹೊಸಕಟ್ಟಡದಲ್ಲಿ ಪ್ರಾರಂಭಿಸಿದರು. ಆದರೆ ಸೇತುವೆ ಹತ್ತಿರ 1-2-3 ನೇ ತಾ. ಸರಿಯಾದ ಏರ್ಪಾಡು ಇಲ್ಲದ್ದರಿಂದ ಅನೇಕ ಗಾಡಿಗಳು ಸುಂಕ ಕೊಡದೆ ಊರೊಳಗೆ ಹೋದದ್ದನ್ನು ಕೇಳಿದೆವು.—ಎ. ವಿ. ಸ್ಕೂಲ್ ಹೆಡ್ ಮಾಸ್ಟರಾಗಿದ್ದ ರಾಜಶ್ರೀ ಬೆನ್ನೂರ ಮ|| ರಾಮಚಂದ್ರರಾಯರು ಕಾಹಿಲೆಯಿಂದ ಇದ್ದರು. ಅವರ ತಮ್ಮಂದಿರು ಮ|| ಎಸ್. ಆರ್. ಬಾಲಕೃಷ್ಣರಾಯರು ಎಷ್ಟು ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಿಲ್ಲದೆ ಗುರುವಾರ ಮಧ್ಯಾಹ್ನ ಕಾಲವಾದರೆಂದು ತಿಳಿಸಲು ವ್ಯಸನಪಡುತ್ತೇವೆ. ಇವರು ಬಹಳ ದಯಾವಂತರಾದ ಮಾಸ್ಟರಾಗಿದ್ದರು.—ಇಲ್ಲಿನ ಡಿಸ್ಟ್ರಿಕ್ಟ್ ಶಿರಸ್ತೇ ಕೆಲಸಕ್ಕೆ ಕಳ್ಳೂರಕಟ್ಟೆ ಅಮಲ್ದಾರ್ ಮ|| ರಾಮಚಂದ್ರರಾಯರು ಬಂದು ಛಾರ್ಜ್ ವಹಿಸಿರುತ್ತಾರೆ.—ಹೋದ ವಾರ ಎ. ವಿ. ಸ್ಕೂಲ್ ಕಕ್ಕಸು ಶುಚಿ ಇಲ್ಲವೆಂತ ತಿಳಿಸಿತ್ತಷ್ಟೆ. ಮೇಲ್ಪಟ್ಟ ಆಫೀಸರು ಈಚೆಗೆ ನಿಗಾ ತೆಗೆದುಕೊಂಡು ಕ್ರಮವಾಗಿ ಶುಚಿಮಾಡುವ ಏರ್ಪಾಟು ಮಾಡಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

ದೊಡ್ಡಬಳ್ಳಾಪುರ.—ಕಳೆದ ವಾರ ಡಾಕ್ಟರ್ ಮುತ್ತುಸ್ವಾಮಿದಾಸ್ ಯವರು ಎ. ವಿ. ಸ್ಕೂಲಿನಲ್ಲಿ ಅನೇಕ ಮಂದಿ ಸ್ವಾನುಭೋಗ ಪಟೇಲರು ಮುಂತಾದ ಗ್ರಾಮಸ್ಥರಿಗೂ ಇತರರಿಗೂ ಅತ್ಯಂತ ಪ್ರಯೋಜನವಾದ ಆರೋಗ್ಯ ವಿಷಯಗಳನ್ನು ಕುರಿತು ಅಂದರೆ ಸುಟ್ಟಗಾಯ, ನೀರೊಳಗೆ ಮುಳುಗಿದ್ದವರಿಗೆ ಶ್ವಾಸ ಬರಮಾಡುವಿಕೆ, ನೇಣುಹಾಕಿಕೊಂಡವರು, ಮರದಿಂದ ಬಿದ್ದವರು, ಕತ್ತಿಯಿಂದ ಆದ ಗಾಯಗಳು, ಬಾಯಿಂದಲೂ ಮೂಗಿನಿಂದಲೂ ರಕ್ತ ಸೋರುವಿಕೆ, ಕೆಟ್ಟದಾಗಿ ತಿಂದು ಹೊಟ್ಟೆ ಉಬ್ಬರಿಸಿಕೊಳ್ಳುವದು, ಕಣ್ಣಿಗೆ ರಾಗಿಹೊಟ್ಟು ಮುಂತಾದ ಕಲ್ಮಲ ಸೇರುವಾಗ ಮಾಡುವ ಚಿಕಿತ್ಸೆ, ಸಿಡುಬು ಎಬ್ಬಿಸುವದರ ಪ್ರಯೋಜನ, ಪ್ಲೇಗ್ ಕಾಲದಲ್ಲಿ ನಡೆದುಕೊಳ್ಳುವ ರೀತಿ, ಹೆರಿಗೆ ಕಾಲದಲ್ಲಿ ಸರ್ಕಾರಿ ಸೂಲಗಿತ್ತಿಯಿಂದ ಆಗುವ ಸಹಾಯ, ಮನೆಗಳನ್ನು ಶುಚಿಯಾಗಿಡುವದು ಶುದ್ಧಜಲದ ಪ್ರಯೋಜನ, ಆಸ್ಪತ್ರೆಗಳಲ್ಲಿ ಆಗುವ ಉಪಕಾರಗಳು, ಚೇಳು ಮಂಡರಕಪ್ಪೆ ಹಾವು ಕಚ್ಚಿದವರಿಗೆ ಕೂಡಲೆ ಮಾಡತಕ್ಕ ಇಲಾಜುಗಳು, ಈ ಮುಂತಾದ ಅನೇಕ ಕಷ್ಟಗಳಿಗೆ ತಕ್ಕ ಚಿಕಿತ್ಸೆಗಳನ್ನು ಸುಲಭೋಪಾಯದಲ್ಲಿ ಮಾಡಿ ಜೀವಿಸುವಂತೆ ಸುಮಾರು ಮೂರು ಘಂಟೆ ಕಾಲಕ್ಕೆ ಕಮ್ಮಿ ಇಲ್ಲದಂತೆ ಚೆನ್ನಾಗಿ ವಿವರಿಸಿದರು. ಅಲ್ಲಿ ಕೂಡಿದ್ದ ವಿದ್ಯಾವಂತರೂ, ಅವಿದ್ಯಾವಂತರೂ ಈ ಡಾಕ್ಟರವರ ಉಪನ್ಯಾಸವನ್ನು ಬಹು ಚೆನ್ನಾಗಿ ತಿಳಿದು ಅತ್ಯಂತ ಕೃತಜ್ಞತೆಯಿಂದ ಅವರನ್ನು ವಂದಿಸಿದರು.—ಕಳೆದ ಶುಕ್ರವಾರ ರಾತ್ರಿ ಹೆಡ್ ಮಾಸ್ಟರ್ ಮ|| ಡಿ. ಕೊಂಗಾಡಿಯಪ್ಪನವರ ಮನೆಯಲ್ಲಿ ಅವರಾಪ್ತ ನಂಜುಂಡಪ್ಪನವರ ಜವಳಿ ಅಂಗಡಿಯಲ್ಲಿರುವ ಚಿಕ್ಕಣ್ಣನವರ ಕುಮಾರರ ಪ್ರಸ್ತದ ನಿಮಿತ್ತ ಯಲಹಂಕದ ವೆಂಕಣ್ಣದಾಸರು ಮಾಡಿದ ಹರಿಕಥೆಯು ಅಲ್ಲಿ ಸೇರಿದ್ದ ಸುಮಾರು 300 ಮಂದಿಗೂ ಅತ್ಯಂತ ಆಹ್ಲಾದವನ್ನುಂಟುಮಾಡಿತು. ಮ|| ಚಿಕ್ಕಣ್ಣನವರು ಲೌಕಿಕ ವೈದಿಕ ಮಹಾಜನಗಳಿಗೂ ಇತರರಿಗೂ ಗಂಧ ಪುಷ್ಪ ತಾಂಬೂಲ ಫಲಾದಿಗಳನ್ನು ಕೊಟ್ಟು ಮುನ್ಸಿಫರೇ ಮೊದಲಾಗಿ ಸರ್ವರನ್ನೂ ಮರ್ಯಾದೆಯಿಂದ ಕಳುಹಿಸಿಕೊಟ್ಟರು.—ಈ ಊರಿಗೆ ಮೋಟರ್ ಗಾಡಿಗಳೂ ಬೈಸಿಕಲ್‌ಗಳೂ ಬರುವಾಗ್ಗೆ ಕೆಲವು ಹಳ್ಳಿ ಹೊಸ ಎತ್ತುಗಳು ಬೆದರಿ ಗಾಡಿಗಳನ್ನು ಕೆಡಾಬಟ್ಟೆ ಎಳೆದುಕೊಂಡು ಒಳಗೆ ಕೂತವರಿಗೆ ಅಪಾಯಮಾಡುವದುಂಟು. ಇಂಥಾ ಕಾಲದಲ್ಲಿ ಪೋಲೀಸಿನವರು ಶ್ರದ್ಧೆಯಿಂದ ಒಂದೆರಡಾವರ್ತಿ ಅಂಥಾ ಗಾಡಿಗಳ ಕಡೆಗೆ ತಮ್ಮ ಗಮನವನ್ನು ಕೊಟ್ಟದ್ದಕ್ಕಾಗಿ ಸಂತೋಷಪಡಬೇಕಾಗಿದೆ. ಮೇನ್ ರೋಡಿನಲ್ಲಿ ಮೋಟರ್ ಬರುವಾಗ ಪೋಲೀಸಿನವರ ದೃಷ್ಟಿ ಅತ್ತಕಡೆ ಇರುವದು ತುಂಬಾ ಪ್ರಯೋಜನ.—ಕಳೆದ ರಾತ್ರಿ ಮೇನ್ ರೋಡಿನಲ್ಲಿ ಹಳೇ ಕಛೇರಿ ಹತ್ತಿರ ಇರುವ ಮ್ಯುನಿಸಿಪಲ್ ಲಾಂದ್ರದಲ್ಲಿ ಬೆಳಕಿಲ್ಲದೆ ಕತ್ತಲೆಯಾಗಿದ್ದದ್ದರಿಂದ ಅನೇಕಾನೇಕರಿಗೆ ತುಂಬಾ ಕಷ್ಟವಾಯಿತು. ಇದನ್ನು ನಮ್ಮ ಅಮಲ್ದಾರ್ರವರು ವಿಚಾರಿಸುವರೆಂತ ನಂಬಬೇಕಾಗಿದೆ.—ಈ ಊರಲ್ಲಿರುವ ಕೆಲವು ದೊಡ್ಡಮನುಷ್ಯರು ತಮ್ಮಗಳ ಮನೆಗಳಲ್ಲಿ ನಡೆದ ವಿವಾಹಕಾಲದಲ್ಲಿ ದುಂದು ಖರ್ಚು ಮಾಡಿದ್ದಲ್ಲದೆ ವೇಶ್ಯಾಂಗನೆಯರಿಗೆ ಬಹಳ ದ್ರವ್ಯ ಕೊಟ್ಟು ಅವರನ್ನು ಬೇರೆ ಕಡೆಗಳಿಂದ ಕರಸಿ ಅವರಿಗೆ ಪ್ರೋತ್ಸಾಹ ಕೊಡುತ್ತಿರುವದೂ, ಇದು ಪೂರ್ವ ಪದ್ಧತಿಯಾಗಿದ್ದರೂ ಈಗಿನ ಕಾಲದ ಅನೇಕ ಸತ್ಪುರುಷರು ಅಂಥಾ ದುಂದು ವೆಚ್ಚವನ್ನಾಗಲೀ ವೇಶ್ಯಾಂಗನೆಯರ ಕುಣಿತ ಹಾಡಿಕೆಗಳನ್ನಾಗಲೀ ಮೆಚ್ಚುವದಿಲ್ಲ. ಪರಂತು ನಮ್ಮ ಹಿಂದೂ ದೇಶವು ಏಳಿಗೆಗೆ ಬರಬೇಕಾದರೆ ಈ ವಿಧವಾದ ದುಷ್ಪದ್ಧತಿಗಳನ್ನು ಖಂಡಿತವಾಗಿ ಬಿಡಬೇಕಾಗಿದೆ.—ಕಳೆದ ವಾರ ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರಾದ ಡಾಕ್ಟರ್ ಮುತ್ತುಸ್ವಾಮಿದಾಸ್ ಯವರು ಎ. ವಿ. ಸ್ಕೂಲಿನಲ್ಲಿ ಸುಮಾರು 300 ಮಂದಿ ಗ್ರಾಮಸ್ಥರಿಗೆ ಅತ್ಯಂತ ಪ್ರಯೋಜನಕರವಾದ ವಿಷಯಗಳನ್ನು ಕುರಿತು 3 ಗಂಟೆ ಹೊತ್ತು ಉಪನ್ಯಾಸ ಮಾಡಿದರು. ಸೇರಿದ್ದವರು ಬಹಳವಾಗಿ ಮೆಚ್ಚಿಕೊಂಡು ಈ ಉಪನ್ಯಾಸಗಳನ್ನು ತಮಗೆ ಛಾಪಿಸಿಕೊಡಬೇಕೆಂದು ಕೇಳಿಕೊಂಡರು.

ಯುದ್ಧಭೂಮಿಯಲ್ಲಿ ಉಪಯೋಗಿಸುವಂಥಾ ಪಿರಂಗಿಗಳನ್ನೂ ಮದ್ದುಗುಂಡನ್ನೂ ತಯಾರುಮಾಡಿಸಿಕೊಳ್ಳುವುದಕ್ಕಾಗಿ ಸಂಯುಕ್ತ ಆಧಿಪತ್ಯಗಳ ಪ್ರಜೆಗಳು ಬ್ರಿಟಿಷ್ ಯುದ್ಧದ ಇಲಾಖೆಗೆ 15,00,000 ರೂಪಾಯಿಗಳನ್ನು ಚಂದಾ ಕೊಡಿಸಿ ಕಳುಹಿಸುವಂತೆ ಮಹಾಜನರು ತೀರ್ಮಾನಮಾಡಿದಾರೆ.

* * *

ಸಿಲೋನ್ (ಲಂಕಾ) ದ್ವೀಪದಲ್ಲಿ ಕೆಲವು ದಿನಗಳ ಹಿಂದೆ ಸ್ವದೇಶಿಗಳಿಗೂ ಮುಸಲ್ಮಾನರಿಗೂ ದ್ವೇಷಾಸೂಯೆಗಳುಂಟಾಗಿ ಅನೇಕ ದಾಂಧಲೆ ಕೃತ್ಯಗಳು ನಡೆದು, ಸರ್ಕಾರದ ಸೈನ್ಯ ಬಂದು ದಂಗೆಯನ್ನು ಅಡಗಿಸಿತಷ್ಟೆ. ಆ ದಂಗೆಯಲ್ಲಿ ಮುಖಂಡರಾಗಿದ್ದ ಆರು ಮಂದಿಗೆ ಮರಣದಂಡನೆಯನ್ನು ವಿಧಿಸಿದರು. ಎಂಟು ಮಂದಿಗೆ ಎರಡು ವರುಷಗಳ ಆಗಾಯಿತ್ತು 14 ವರುಷಗಳ ವರೆಗೆ ಕೈದು ಸಜಾ ವಿಧಿಸಲ್ಪಟ್ಟಿತು. ನೂರಾರು ಮಂದಿಯಿಂದ ನೇಕಟಾಲಿನ ಜಾಮೀನ್ ತೆಗೆದುಕೊಂಡು ಬಿಟ್ಟಿದಾರೆ.

ತ್ವರೆಮಾಡಿರಿ! ನಮ್ಮ 1916 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

[64-16]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ಕಿವಿ ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗೊಂಟಿದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕಪಟಿ ಔಷಧಗಳನ್ನು ಜಾಗ್ರತೆಯಿಂದ ಪರೀಕ್ಷಿಸಿ ಕೊಳ್ಳಬೇಕು. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಟಾರಿ ತೈಲ 0-12-0. ಸಿದ್ಧ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಜಾಸ್ತಿ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸ್ಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ರೋಗಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಊದಿಕೆ (ಭಾರ), ಮೈ ನವೆ, ಶೀತಾಂಶಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ವೆಗಡಿ, ಅಶಕ್ತಿ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕ್ಷಿಪ್ರ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಬುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಬಿಳುಪುಸೆರಗು, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-46]



(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಪರ ಎಂ. ಇ. ಸ್ಕೂಲ್, ಮೌಂಟು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾಥಿಕ್, ಹೋಮಿಯೋಪ್ಯಾಥಿಕ್, ಕವಿರಾಜ್ ಸಂಬಂಧವಾದ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸಜ್ಜನರು ರೋಗಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣವಾಗಿ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತು ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮನಾಭಚಾರ್, ತಿರುವನಂತಪುರ, ಕೆಂಟ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಎಷ್ಟೋ ಔಷಧಗಳಿಂದಲೂ ಗುಣವಾಗದೆ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸ) ಶ್ವಾಸಕಾಸವು ನಿಮ್ಮ ರೋಗಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆಗಳು ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನಮ್ಮ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು ಒಂದು ಸಲ ಪರೀಕ್ಷಿಸಿ ನೋಡಿರಿ. ಅಸಮಾನವಾದದ್ದು.

ಜಿನ್‌ಟಾನ್ ಎನ್ನುವದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೇಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಿಕ ಬಾಯೊರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30	ಮಾತ್ರೆಗಳ ಪೊಟ್ಟಣ 1 ಕ್ಕೆ	ಕ್ರಯ	0-1-6
85	,, ,, ,, ...	,,	0-3-0
195	,, ಪೊಟ್ಟಣ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	,,	0-8-0
445	,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-12]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಸ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3-0-0.

ಜೂಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಬುಸಾಮಿ

[111-7] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶಶೋಭೆಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ?

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ಶಮನವಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ತಲೆಗೂದಲುಗಳು ಇದನ್ನು ಕೂಡಿಯೇ ಕೂಡಿದ ಬಳಿಕ ಎಂದಿಗೂ ಜಾರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೇಳುತಕದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವ ದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಮಾರ್ಗಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅಷ್ಟು ನಫೆಯೇ ದೊರೆಯದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರೆಕತಕ್ಕ ಕೇಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಬೋಧ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುವರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟೋ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಲೇಶ್ಯೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉತ್ತಮವಾದಿಕೆಯು ಆವರಿಸಿಬಿಡುತ್ತದೆ. ಬೇರೆ ಯಾವ ಸರಿಯಾದ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-26]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಧ್ಯಮ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ವಗಿಯರದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜಂಟ್, ಪಿ ಉರ್ಬ್ ಮಾರ್ಟಿ, ಮಂಗಳೂರು.



ಜೂಲೈ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಜೂಲೈ ಪಟ್ಟದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜೂಲೈ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಅಣೆಗೆ ಕೊಡಲ್ಪಡುತ್ತೆ. [111-7]

ವಿಳಾಸ—ವಿ. ಕೆ. ಕಂಬುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವ್ವನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಿಡ್ಲಿ, ಚೀಫ್ ಏಜಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟೇಶಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-41] ಬ್ರಾಂಚ್ ಸೆಕ್ರೆಟರಿ, ಮದರಾಸ್

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-36]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟ್ಲಾಗನ್ನು ಬಿಟ್ಟಿ ಕಳಿಸುತ್ತೇವೆ. ಧಾರ್ಜಿಲ್ಲದ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು; ಆದರೆ ನಮ್ಮ ಈ ಸಾನೊಫಲೆಯು 16 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;

2. ಬಿ. ಜೆ. ಗೋರಿಯೋ ಕಂಪನಿ, ವಾಲೇಸ್ ಬೀದಿ,

[172-50] ಬೊಂಬಾಯಿ;

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ಕುಂತಲಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬೆಳ್ಳಿಯ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ಸಿದ್ಧಾಭ್ಯಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕುದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-44]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ಒಳ್ಳೇ ಸಮಯ! ಒಳ್ಳೇ ಲಾಭ!

ಈ ಸಮಯ ಬಿಟ್ಟರೆ ಮರುಸಮಯ ಸಿಕ್ಕುವದಿಲ್ಲ.

ವಿಚಿತ್ರ ಜಪಾನ್ ಮ್ಯಾಜಿಕ್ ಬಾಕ್ಸ್.

ಅಯ್ಯಾ,—ಈ ಮ್ಯಾಜಿಕ್ ಬಾಕ್ಸು ನೂತನವಾಗಿ ಜಪಾನ್‌ಯಿಂದ ನೈರಕ್ಕಾಗಿ ನಮಗೆ ಬಂದಿರುತ್ತೆ. ಇಂಥಾ ಮ್ಯಾಜಿಕ್ ಬಾಕ್ಸು ಬೇರೆ ಕಂಪನಿಯಲ್ಲಿ ಸಿಕ್ಕುವದು ದುರ್ಲಭ. ಈ ಬಾಕ್ಸಿನಲ್ಲಿ ಸಾವಿರಾರು ರೂಪಾಯಿಗಳು ಹಾಕಿ ಜೋಬಿನಲ್ಲಿ ಮಡಗಿದರೇನೂ ಹಣ ಹೋಗುವದು ಕಷ್ಟ. ಹೇಗೆಂದರೆ ಹಣ ಮಡಗಿದರೂ ಅಥವಾ ಬೇರೆ ಯಾರಾದರೂ ತೆಗೆದು ನೋಡಿದ ಪಕ್ಷದಲ್ಲಿ ಹಣ ಅವರ ಕಣ್ಣಿಗೇ ಸಿಕ್ಕುವದು ಕಷ್ಟ. ಹಣ ಮಡಗಿದವರು ನೋಡಬೇಕಾದರೆ ಅವರ ಕೈಗೆ ಸಿಕ್ಕುತ್ತದೆ. ಈ ಪೆಟ್ಟಿಗೆ ಪ್ರತಿ ಒಬ್ಬ ಮನುಷ್ಯರ ಬಳಿಯಲ್ಲೂ ಇರತಕ್ಕದ್ದು ಅಗತ್ಯ. ಜಾಗ್ರತೆಯಿಂದ ತರಿಸಿಕೊಳ್ಳಿರಿ. ಇದರ ಕ್ರಯ 1 ಕ್ಕೆ ರೂ. 1-0-0.

ವಿಳಾಸ:—ಟಿ. ಎಂ. ರಾಮಚಂದ್ರರಾವ್,

[133-2] 19-8 ದೇವಿಡ್ಸನ್ ಬೀದಿ, ಬ್ರಾಂಡ್‌ವೇ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

2—7—1915 ರಿಂದ 9—7—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	6	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	1	0
ಮೈಸೂರು ,,	14	11	0	0
ಕೋಲಾರ್ ,,	0	1	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
ಒಟ್ಟು.....	14	12	1	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಆಷಾಢ ಶುದ್ಧ ದ್ವಾದಶಿ ಶುಕ್ರವಾರದಿಂದ ಆಷಾಢ ಬಹುಳ ಪಾಡ್ಯ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಜೂಲೈ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕರ್ನಾಟಕ ತೇದಿ
23	ಶುಕ್ರ *	ದ್ವಾದಶಿ	46-18	ಜ್ಯೇಷ್ಠ	43-16	8
24	ಶನಿ †	ತ್ರಯೋದಶಿ	39-56	ಮೂಲ	38-9	9
25	ಭಾನು	ಚತುರ್ದಶಿ	34-19	ಪೂರ್ವಾಷಾ	34-32	10
26	ಸೋಮ ::	ಪೌರ್ಣಮಿ	29-10	ಉತ್ತರಾಷಾ	30-53	11
27	ಮಂಗಳ §	ಪಾಡ್ಯಮಿ	24-56	ಶ್ರವಣ	29-8	12
28	ಬುಧ ;;	ಬಿದಿಗೆ	21-42	ಧನಿಷ್ಠ	27-41	13
29	ಗುರು ‡	ತದಿಗೆ	19-12	ಶತಭಿಷ	27-19	14

* ಸ್ಮಾರ್ತರ ಪ್ರಥಮೈಕಾದಶಿ, ಹರಿವಾಸರ, ಶಯನದ್ವಾದಶಿ, ಅಡಕುಕ್ರವಾರ. † ಶನಿಪ್ರದೋಷ. :: ವ್ಯಾಸಪೂರ್ಣಿಮೆ, ಮೃತ್ಯುಯೋಗ. § ಮಳೆ ನಕ್ಷತ್ರ—ಪುಷ್ಯ 3 ನೇ ಪಾದ. ;; ತಿಥಿದ್ವಯಂ, ಮೇಲುಕೋಟೆಯಲ್ಲಿ ಮಹಾಭಿಷೇಕ ಮತ್ತು ಕಲ್ಯಾಣೋತ್ಸವ. ‡ ಚತುರ್ಥೀ ತಿಥಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 22/7/1915.

REGISTERED
M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—೧೯೧೬ನೇ ಇಸವಿ ಜೂಲೈ ತಾರೀಖು ೨೮ ನೇ ಗುರುವಾರ. ಸಂಚಿಕೆ ೯

ಕನ್ನಡ ವಾರಪತ್ರಿಕೆ.

"ವಿಕಟ ವಿನೋದಿನಿ."

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಕ್ತಿ ಚಿತ್ರಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ವಾರಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ 1 ಮಾತ್ರ. ನಮ್ಮ ವಿಳಾಸ—

[131-3] "ವಿಕಟ ವಿನೋದಿನಿ" ಆಫೀಸ್, ಅರಳೇಪೇಟೆ, ಬೆಂಗಳೂರು ಸಿಟಿ.

THE GENERAL AGENCY, MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಕಂದಾಚಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-29]

ಉತ್ತಮವಾದ ಪುಸ್ತಕಗಳು.

135-2

(1) "ಪ್ರಹ್ಲಾದ" ಪತ್ರದಾರಿಯ ಕಥೆ ಈಗತಾನೆ ಅಚ್ಚಾಗಿದೆ. ಪ್ರಾರಂಭಿಸಿದರೆ ಮುಗಿಸುವವರೆಗೂ ನಡುವೆ ನಿಲ್ಲಿಸಲು ಮನಸ್ಸೇ ಬರುವದಿಲ್ಲ. 12 ಆಣೆ. (2) "ಜನಕ ಸಾಮ್ರಾಜ್ಯ" ಅತ್ಯಾಶ್ಚರ್ಯಕರವಾದ ವಿಷಯ ತಿಳಿವಳಿಕೆ ನಾಟಕ ಈಗ ಹೆಚ್ಚುತ್ತಿವೆ. 6 ಆಣೆ. (3) "ಉತ್ತಮ ದಂಪತಿಗಳು" ವಿಷಯವಾದ ವಿಚಿತ್ರ ಕಥೆ. 4 ಆಣೆ. (4) "ಉಮಾಶ್ರೀ" ಮನೋಹರವಾದ ಬಂಗಾಳಿ ನಾವಲ್ 2½ ಆಣೆ (5) ಮೊ. ಸ. ಪ. ಖುಲ್ಲಾ ಉತ್ತರ ಬರೆವ ವಿಧಾನ 1 ಆಣೆ. ಅಂಚೆ ವೆಚ್ಚ ಬೇರೆ. ಬೆಂಗಳೂರು ದೊಡ್ಡಪೇಟೆಯಲ್ಲಿ (1) ಎಸ್. ಸುಬ್ಬರಾವ್ ಬುಕ್‌ಸೆಲರ್, (2) ಎ. ಎಚ್. ಕೆ. ಡಿಪೋ, (3) ಕೆ. ಬೌರಪ್ಪ ಎಂಡ್ ಕೊ; ಮೈಸೂರಿನಲ್ಲಿ (4) ಜಿ. ಕೃಷ್ಣಶಾಸ್ತ್ರಿ ಶಿವರಾಂಪೇಟೆ, (5) ಜನರಲ್ ಏಜನ್ಸಿ, (6) ಸಿ. ಎಲ್. ಎಸ್ ಡಿಪೋ.

'ಸಂಗೀತ ಪಾರಿಜಾತ'

ಹೊಸ ಮುದ್ರಣ! ಹೆಂಗಸರಿಗೆ ಅತ್ಯಾವಶ್ಯಕವಾದುದು!!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ಕೂಡಿದೆ! ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ! ಇದು ವರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[215-33] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

ಎಮ್. ಎಸ್. ಮಲಕಣ್ಣ ಅಂಡ್ ಬ್ರದರ್ಸ್,

ರೇಶ್ಮೆ ಜವುಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ತಮವಾದ ರೇಶ್ಮೆ ವಸ್ತ್ರಗಳು, ಮೊಗುಟಗಳು, ಅರಳೇಪೇಟೆ ಸೀರೆಗಳು, ಪಂಚೆ ಧರಿಸುವ ವಸ್ತ್ರಗಳು, ಸಾಧಾರಣ ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-9]

ರೇಶ್ಮೆ ವಸ್ತ್ರಗಳು	ದರಗಳು	ಮೊಗುಟ, ರೇಶ್ಮೆ ಸೀರೆ, ಪಂಚೆವಸ್ತ್ರ.
1 ನೇ ನಂಬರು 0-7-6		1 ನೇ ನಂಬರು 0-8-0
2 ,, ,, 0-7-0	ತೊಲೆ 1 ಕ್ಕೆ	2 ,, ,, 0-7-6
0-6-9		

ಸೋಲಾಪುರದ ಚೆಕ್ಕುಗಳೂ, ಸೀರೆಗಳೂ.

"ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರಕಿದೆ.

ವರ್ತಕರಲ್ಲಿ ಹನ್ನೇಕ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಸೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಬೇಲುಗಟ್ಟಿಯೂ, ಚಿಲ್ಲರೆಯಾಗಿಯೂ ದೊರೆಯುವುವು.

ಬೇಲುಗಟ್ಟಲೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಖರೀದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [55-17]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 159, ಕಿಲಾರಿ ರೋಡು (ಕುಂಚಿಗರಪೇಟೆ) ಬೆಂಗಳೂರು ಸಿಟಿ.

ಇಲ್ಲಿ ನೋಡಿ: ಅಭಿನವ! ಅಕ್ಷರಾಂಜಲಿ!!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವನ್ನು ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟೇಜ್ 4 ಆಣೆ. ಅಡ್ರಸ್—ಅಕ್ಷರಾಲಯ, ಮೈಸೂರು. [147-1]

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England).

First Valuation Result:—The total liabilities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or

142-1 K. S. Tirupathi, F. C. I., Secretary, Opposite Minto Hospital, Bangalore City.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿವರಗಳೊಡನೆ ರಚಿಸಲ್ಪಟ್ಟಿವೆ.

1.	ಮಹಾ ಖಂಡದ ಭೂವಿವರಣೆ	0–5–0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0–6–0
	ಮೇಲೆ ಕಂಡ ಎರಡೂ ಸೇರಿ	0–10–0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

'916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ|| ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಶೇಷ್ಮಿತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[31–24] ಸುಬೋಧ ಗ್ರಂಥಾಲಯ, ಮೈಸೂರು.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಷೀನಿನ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ"—ಕೆ ರಾಮಸ್ವಾಮಿ, ಪಲ್ಲಾ ಸ-ಶಾ-ಸ್ಟುನ, 20-2-16.

ಅರ್ಧಬೆಲೆ ಮಾತ್ರ.

ಸರಸರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಟೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿನಸ ಬಾಳಿಕೆ ಬರುವದಾಗಿಯೂ ಇದೆ. ಸಮಯವರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕಿ ಕೊಟ್ಟಲ್ಲಿ ಎಂಟು ದಿವಸದವರಿಗೆ ಪುನಃ ಕೊಡಬೇಕಾದ ಅವಶ್ಯಕವಿಲ್ಲ. ಮೊದಲಿನ ಬೆಲೆ ರೂ. 16-0-0. ಅನ್ನು ಸ್ವಲ್ಪ ಕಾಲದವರಿಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕೆರ್ಸ್ಕಾಂಡನ್ನು ಇಂಗ್ಲಿಷಿನಲ್ಲಿ, ಸ್ಪಷ್ಟವಾಗಿ ಬರೆದು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266–35] ಪಿ.ಓ. ಬಾಕ್ಸ್ 330, ಬೊಂಬಾಯಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾದ ಕಪ್ಪು ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬಿಸಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವುದರಿಂದ ಬೆಳೆದು ಎಂದಿಗೂ ಉದುರದೆ ಬಲವಾಗುವುವು; ಅದರ ಪರಿಮಳವು ಹಿತವಾಗಿ ಸುಗಂಧವಾಗಿರುತ್ತದೆ.



ಕೀಳುತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಕೂದಲನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ನಾವು ಕೆಲ ದಿನಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿಂದ ತಮಗೆ ಅಕ್ಕಲ್ಪ ಸಫಲಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕುವಂತಹ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಮರೆಯಬೇಡಿ. ನೀವು ವಂಚಕರ ಬಲೆಯಲ್ಲಿ ಸಿಲುಕದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಓಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾಗಿದೆ. ಇದರಲ್ಲಿ ಮದಿರೆಯು (ಆಲ್ಕೊಹೋಲ್) ಸಂಪೂರ್ಣವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ವಾತಾವರಣ ಆರಂಭವಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವೂ ಹೀಗೆ ಇರಲಿ. ಈ ಓಟೋ-ದಿಲ್ ಬಹಾರಿನ ಗಂಧವು ಅಲ್ಲದೆ ಇದರ ಕಣ್ಣು ಏಸಿ, ಮನಸ್ಸನ್ನು ತನ್ನ ರಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-27]

ಸಣ್ಣ ಸೀಸೆಯು ಬೆಲೆ ರೂ. 0-8-0. ಒಂದು ಡ್ರಾಮಿನ (ಬಿಡಿಯಾ) ಸೀಸೆ 1ಕ್ಕೆ 0-12-0. ಅರ್ಧ ಡಜನ್ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಓಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜಂಟ್, ಬಿ ಅಂಡ್ ವಾರ್ನ್, ಮಂಗಳೂರು.

ರಬ್ಬರು ಮುದ್ರೆಗಳು!

ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ಕೋತಿನ ಪೆಟ್ಟಿಗೆ, ಬ್ರಸ್ ಪ್ಯಾಡ್ ಮತ್ತು ಇಂಕಿ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಹೆಸರು ಮುಂತಾದವುಗಳನ್ನು ಹುಟ್ಟಕ್ಷರಗಳಿಂದ ಬರೆಯಬೇಕು.

[140-3]

ನಮ್ಮ ವಿಳಾಸ :—ರಾಂಭಾನ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧನೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ಕಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-48]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲಿ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲಿಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;

2. ಡಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ ;

[172-51]

ಇದಲ್ಲದೆ

ಔಷಧ ಮಾರಾಟದ ಎಲ್ಲಾ ಷಾಪಿನಲ್ಲೂ ಸಿಕ್ಕುವುದು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಅದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ ; 6 ಕ್ಕೆ 13 ಆಣೆ ; 12 ಕ್ಕೆ ರೂ. 1-10-0. ಅವು ಜನವರಿ ಆಖೈರು ವರೆಗೆ ಮಾತ್ರ ಸಿಕ್ಕುವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ !

ಅಮೃತಾಂಜನ ರಿಜಿಸ್ಟರ್ಡ್ [64-17]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗೊಂಟಿದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಾಲ ಮುತು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಜಿರೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಸೆಳೆತ (ಭಾರ), ಮೈ ನಡುಕ, ಹಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಶೀಘ್ರವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ಸಹ್ಟುಜ್ವರ, ಕೈಶಕ್ಯಗಳನ್ನು ಗುಣಪಡಿಸುವುದು. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳ ಕುಪ್ಪಿಗೆ 4 ಆಣೆ: 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-47]

(1) ಮ|| ಎ. ಸಿ. ಮಿತ್ತರ್, ಹೆಡ್ ಮಾಸ್ಟರ್, ದಿ ಬ್ರಾಂಚ್ ಪರ ಎಂ. ಇ. ಸ್ಕೂಲ್, ಮಾಂಜು, ಹೌರಾ ಡಿಸ್ಟ್ರಿಕ್ಟ್, ಇವರು ಬರೆಯುವುದು.—"ಬಹು ದಿನಗಳಿಂದ ಮಲಬದ್ಧವು ನನ್ನನ್ನು ಬಾಧಿಸುತ್ತಿದ್ದಿತು. ಅಲೋಪ್ಯಾಥಿಕ್, ಹೋಮಿಯೋಪ್ಯಾಥಿಕ್, ಕವಿರಾಜ್ ಸಂಬಂಧ ಅನೇಕ ಔಷಧಗಳನ್ನು ಬಹು ಕಾಲ ಉಪಯೋಗಿಸಿಯೂ ಫಲವಾಗಲಿಲ್ಲ. ನನ್ನ ಮಿತ್ರರಾದ ಅ|| ಸರ್ಕಾರು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವಂತೆ ಹೇಳಿದರು. ಬಳಿಕ ತರಿಸಿ ನಿತ್ಯವೂ ಉಪಯೋಗಿಸುತ್ತಾ ಬಂದುದರಲ್ಲಿ ನನ್ನ ಕಾಯಿಲೆ ಎಲ್ಲವೂ ಸಂಪೂರ್ಣ ಗುಣವಾಯಿತೆಂದು ಸಂತೋಷದಿಂದ ನಿಮಗೆ ತಿಳಿಸುವೆನು. ಅಗ್ನಿಮಾಂದ್ಯ ಮತ್ತೂ ಮಲಬದ್ಧತೆಗಳಿರುವ ಪ್ರತಿ ಒಬ್ಬರೂ ಈ ಮಾತ್ರೆಗಳನ್ನು ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡುವೆನು." (2) ಮ|| ಎಸ್. ಅನಂತಪದ್ಮಾಚಾರ್, ತಿರುವನಂತಪುರ, ಕೇಂಟೆ ಡಿಸ್ಟ್ರಿಕ್ಟ್ ಇವರು ಬರೆಯುವುದು —"ಎಷ್ಟೋ ಔಷಧಗಳಿಂದಲೂ ಗುಣವಾಗದ 12 ವರ್ಷಗಳಿಂದ ಪೀಡಿಸುತ್ತಿದ್ದ ನನ್ನ ತಂಗಿಯ (ಗೂರಲು ಗಸ) ಶ್ವಾಸಕಾಸವು ನಿಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಎರಡು ತಿಂಗಳು ಬಿಡದೇ ಉಪಯೋಗಿಸಿದುದರಲ್ಲಿ ಸಂಪೂರ್ಣವಾಗಿ ಗುಣವಾಯಿತು. ನನ್ನ ಸ್ನೇಹಿತರನೇಕರಿಗೂ ಈ ಮಾತ್ರೆ ನಾನಾ ರೋಗಗಳನ್ನು ಗುಣಪಡಿಸಿತು. ಸುಲಭ ಕ್ರಯ, ಮಹತ್ತರವಾದ ಗುಣವುಳ್ಳ ತಮ್ಮ ಈ ಮಾತ್ರೆಗಳನ್ನು ನನ್ನ ಕಡೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ."

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು



ಸೋಲ್ ಏಜೆಂಟರು—

ಎಸ್. ವೈದ್ಯಾ ಅಂಡ್ ಕಂಪೆನಿ,

ಪಿ. ಟಿ. ಮದರಾಸು.

ಅತ್ಯದ್ಭುತವಾದ ಜಪಾನ್ ಮಾತ್ರೆಗಳು

ಒಂದು ಸಲ ಪರೀಕ್ಷಿಸಿ ನೋಡಿರಿ.

ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಿಶಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಿಕ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಲ 1 ಕ್ಕೆ	....	ಕ್ರಯ 0-1-6
65 ,, ,, ,,	....	,, 0-3-0
195 ,, ಪೊಟ್ಲ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ		,, 0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	......	,, 1-0-0

[60-13]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಸ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.



ಜುಲೈ ಮಹೋತ್ಸವದ ಕೈಗಡಿಯಾರ,

ಅರ್ಧ ಕ್ರಯ ರೂ. 1-14-0.

ಆನೇ ಜುಲೈ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [111-8]

ವಿಳಾಸ—ಎ. ಕೆ. ಕಣ್ಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಸತ್ಯವೂ ಅಗ್ಗವೂ ಆದ ಅಂಗಡಿ.

ಸುಲಭ ಕ್ರಯದ ಮಾರಾಟ 6-8-1915 ರ ವರೆಗೆ.

ಚಿನ್ನದಂಥಾ ಸಮಯ ! ಮತ್ತೆ ಒದಗದು ! ಸಮಾನವಿಲ್ಲ !

ಸಮಯ ವಿಪರೀತ ! ಮತ್ತೆ ಈ ಸಮಯ ಒದಗದು !

ರೆಡಿಮೇಡ್ ತಯಾರಿ ಕೋಟು ಅಥವಾ ಸರಜ್ ಕೋಟು.

ಎಲ್ಲಾ ಸೈಜನವು, ಸರ್ವೋತ್ತಮವಾಗಿಯೂ, ಬಲವಾಗಿಯೂ, ಅಂದವಾಗಿಯೂ, ಬಾಳಿಕೆ ಬರತಕ್ಕದ್ದಾಗಿಯೂ ಇದೆ. ಇಂಗ್ಲಿಷ್ ಕಟ್ಟಿಂಗ್, ನಾಲ್ಕು ಜೇಬುಗಳು, ಕಾಲರ್ ಸಹ; ಮೂರು ವರುಷ ಗ್ಯಾರಂಟಿ. ಆಗಸ್ಟ್ ತಾ. ೬ ರ ವರೆಗೆ ಕ್ರಯವನ್ನು ೬ ರೂಪಾಯಿಗೆ (ಪೋಸ್ಟೇಜ್ ಸೇರಿ) ಇಳಿಸಿದೇವೆ ಒಂದು ಕೋಟನ್ನು ಕೊಂಡುಕೊಳ್ಳುವವರಿಗೆ ಅದರ ಕೂಡ ನಮ್ಮ ಬಲಿಷ್ಟ ಲೀವರ್ ವಾಚ್ ಒಂದನ್ನೂ ಒಂದು ಸುಂದರವಾದ ಸರಪಣಿಯನ್ನೂ ಇನಾಮಾಗಿ ಕೊಡುತ್ತೇವೆ. ಒಪ್ಪದಿದ್ದರೆ ಹಣ ವಾಪಸ್ ಮಾಡುವೆವು. ಅರ್ಧ ಹಣ ಅಡ್ವಾನ್ಸು ಬರಲೇ ಬೇಕು; ಇನ್ನರ್ಧಕ್ಕೆ ವಿ ಪಿ ಮಾಡುತ್ತೇವೆ [140-1]

ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ನಮ್ಮ ವಿಳಾಸ :—ಎಂ. ಎ. ಘಟಾಲಾ ಕಂಪನಿ,

ಚಿತ್ತೂರು, ಉತ್ತರ ಆರ್ಕಾಟು.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹುಡುಗಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗುಣ 6, ವೈಥರಣೆ 1, ತಾಂಬೂಲಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡ್ಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪೆನಿ,

[149-1] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಅಗ್ಗದಲ್ಲಿ ಸೀಮೆಯೆಣ್ಣೆ ಪಡೆಯಿರಿ.

ನಮ್ಮಲ್ಲಿ ಅತ್ಯುತ್ತಮವಾದ ಬಿಳೀ ಸೀಮೆಯೆಣ್ಣೆ ಭರ್ತಿಯಾದ ಕೋತಿ ಮಾರ್ಕ್ ದೊಡ್ಡ ಟಿನ್ನಿಗೆ 3 ರೂ. 6 ಪೈಗೆ ಕೂಪನ್ ಮೂಲಕ ದೊರೆಯುತ್ತೆ. ಅಪೇಕ್ಷೆಯುಳ್ಳವರು 3 ರೂ. 6 ಪೈ ರವಾನಿಸಿ. [143-1]

ವಿಳಾಸ :—ಜಿ. ಎಸ್. ವೆಂಕಟನಾರಾಯಣಮೂರ್ತಿ, ಹಳೇ ಅಗ್ರಹಾರ, ಮೈಸೂರು.

☞ *Please Circulate this among your Friends and Relatives.*

Make a small and safe investment and earn enormous profits! **Be entitled to Loan at 6% per annum!!** **Insure without premium & aid free Education!!**

Have you not heard of the most Wonderful Scheme

CALLED TWO-IN-ONE (SHARE POLICY) SCHEME

BROUGHT FORWARD FOR THE FIRST TIME IN THE MYSORE PROVINCE BY

THE MYSORE GOVERNMENT SECURITY LIFE & MARRIAGE ASSURANCE CO., LTD., MYSORE.

For the Benefit of the Mysorians?

If not, write for the detailed prospectus, application form and necessary information at once and avail of the undermentioned

Extraordinary Benefits Hitherto Unknown to the Insurance World.

What all you have to do is to apply for ten shares of the Company and pay only Rs. 10 - (Rs. 5 - towards share amount and Rs. 5 - towards premium) with the application and Rs. 5 - on allotment. After this, you can pay the balance Rs. 40 by four quarterly instalments in course of one year *i.e.*, at Rs. 10 - in every three months or ask us to show you **The Way How You Can Get the Same Adjusted Without Touching your Pocket Under Our Novel Free Share Policy System.**

The Extraordinary Benefits Are

1. **Safest Investment.** The company's Capital is Rs. 5,00,000, divided into 50,000 shares of Rs. 10 each. Out of Rs. 2,50,000 to be collected on the 50,000 shares excluding premium at Rs. 5 per share, **Government of India 3½ pronotes** will be purchased to the face value of **two Lakhs of rupees** and lodged **with the Comptroller General to the Government of India as per Insurance act 1912** and the balance Rs. 50,000 and odd will be utilized in constructing **a building** in the town of Mysore.

2. **Profits.** The company has already got three progressive departments *viz.*, Insurance, Provident Fund and Property Investment and will have another most advantageous department *viz.*, Free Deposit. Out of the enormous profits earned in all these departments, dividends will be distributed among share holders every year for generations.

3. **Insurance Benefits. A whole life policy** will be granted to each share policy holder **free of premium** and without **any medical examination** or restriction of caste, creed, sex, or age by which his heirs will be entitled to a bonus of from Rs. 100 - to Rs. 500 - out of Rs. 7,000 - being interest accrued every year on two lakhs of rupees invested in the Government securities.

4. **Loans** are granted to share policy holders at 6% interest per annum on security of their shares and immovable properties.

5. **Free Education.** The above mentioned Company's building will be utilized in giving **free accomodation** to the **poor students** and provision is also made to give them **free boarding and clothing** out of the interest and profits earned in various departments of the Company. In this connection, prior chance will be given to the Children of our poor share holders when being admitted into the poor Student's Home.

An Appeal to the Public.

We beg to bring to the kind notice of the general public that it is needless to say that this Company is started with the main object of (1) putting a dead stop to the export of money from the Mysore Province, and importing money from outside the Mysore Province by introducing Life Insurance, Provident (Marriage and Upanayana) and free deposit businesses throughout India, Burma, and Ceylon and (2) utilizing the said moneys for the benefit of the Mysorians in advancing loans under our Land and House Purchase and Investment Schemes and giving free education to the poor and middle class people. So, it is hoped that every really patriotic and sympathetic gentleman will appreciate the various schemes of the company and avail of the advantages offered, as this indigenous concern has got every right to claim the patronage of every official and non-official gentleman in the State.

Mr. M. L. NAGANNAH,

[15-29] **Managing Director, Life and Marriage Assurance Building, Mysore.**

ತಾಲ್ಲೋಕು ವರ್ತಮಾನಗಳು.

ಮೇಲುಕೋಟೆ.—ಶ್ರೀಮನ್ ಮಹಾರಾಜರವರು ಇಲ್ಲಿಗೆ ದಯಮಾಡಿಸಿದ್ದ ಕಾಲದಲ್ಲಿ ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲಿನವರು ಹಿಡಿಯಲ್ಲಿ ನರಸಿಂಹದೇವರ ವಿಗ್ರಹವನ್ನು ಕೆತ್ತಿದ ಒಂದು ಕೋಲನ್ನೂ, ಸದಾನಂದವರ್ಧಿನಿ ಸಭೆಯವರು ಮೇಲುಕೋಟೆ ವಿವರಣವೆಂಬ ಪುಸ್ತಕವನ್ನೂ ಅವರಿಗೆ ಸಮರ್ಪಿಸಿದರು. ಅವರು ಇಲ್ಲಿನ ಬಾಲಕ ಬಾಲಕಿಯರಿಗಾಗಿ 100 ರೂಪಾಯಿ ಬಹುಮಾನವಾಗಿ ದಯಪಾಲಿಸಿರುತ್ತಾರೆ. ಈ ಹಣಬಲಗನ್ನು ನಮ್ಮ ಡೆಪ್ಟಿ ಅಮಲ್ದಾರ್ ಮ|| ಮಲ್ಲರಾಜೆ ಅರಸಿನವರು ವಿಚಕ್ಷಣೆಯಿಂದ ವಿನಿಯೋಗವಾಗುವಂತೆ ಏರ್ಪಾಡು ಮಾಡುತ್ತಾರೆಂದು ನಂಬಿರುವೆವು.—ಇಲ್ಲಿನ ಸಂಸ್ಕೃತ ಕಾಲೇಜ್ ಮಹಾವಿದ್ವಾನ್ ತರ್ಕತೀರ್ಥ ಶ್ರೀಮನ್ ಲಕ್ಷ್ಮೀತಾತಾಚಾರ್ಯರನ್ನು ಅರಮನೆಯ ಮಹಾವಿದ್ವತ್ಸಭೆಗೂ, ಶ್ರೀಮನ್ ವಿದ್ವಾನ್ ಪುರೋಹಿತ ತಿರುನಾರಣಯ್ಯಂಗಾರ್ಯರನ್ನು ವಿದ್ವತ್ಸಭೆಗೂ ಶ್ರೀಮನ್ ಮಹಾರಾಜರವರು ಸೇರಿಸಿದ್ದು ಊರಿನ ಪ್ರಜೆಗಳಿಗೆಲ್ಲಾ ಬಹಳ ಸಂತೋಷವಾಗಿದೆ. ಅರಮನೆಯ ರಾಣೀವಾಸದವರಿಗೆ ದೇವರ ಸೇವೆ ಮಾಡಿಸುವದಕ್ಕಾಗಿ ವೇಲೂರಿನ ವಯಸ್ಸಾದ ಅರ್ಚಕರು ಬಂದಿದ್ದರು ಇವರು ಆ ದಿವಸ ಕಾಣಿಕೆ ಏನೂ ಬರಲಿಲ್ಲವೆಂದು ಹೇಳಿ ಮಾರನೇ ದಿವಸ 180 ರೂಪಾಯಿ ಮುಜರಾಯಿ ಸೆಕ್ರೆಟರಿಯವರ ವಶಕ್ಕೆ ಒಪ್ಪಿಸಿದರಂತೆ. ಪೋಸ್ಟಲ್ ಸೂಪರೇಂಟರು ಇಲ್ಲಿಗೆ ಬಂದು ತನಿಖೆ ಮಾಡಿಕೊಂಡು ಹೋದರು.—ಮಳೆಯು ಸಕಾಲಕ್ಕೆ ಆಗುತ್ತಲಿದೆ.—ಇಲ್ಲಿಗೆ ರಿಟೈರ್ಡ್ ಡೆಪ್ಟಿ ಇನ್ಸ್‌ಪೆಕ್ಟರ್ ಮ|| ಬಿ. ತಿಮುಮಲಾಚಾರ್ಯರು ದಯಮಾಡಿರುತ್ತಾರೆ. ಇವರು ಇಲ್ಲಿರತಕ್ಕ ಇಲಾಖೆಗಳ ನ್ಯೂನಾತಿರಿಕ್ತಗಳನ್ನು ವಿಶದವಾಗಿ ಸರ್ಕಾರಕ್ಕೆ ತಿಳಿಸುವರೆಂದು ಪ್ರಜೆಗಳೆಲ್ಲರೂ ನಿರೀಕ್ಷಿಸುವರು.

ಚನ್ನರಾಯಪಟ್ಟಣ.—ಇಲ್ಲಿ ಒಂದು ಉಪಾಧ್ಯಾಯರ ಸಂಘವನ್ನು ಸ್ಥಾಪಿಸಿ ಆರು ತಿಂಗಳಾಯಿತು. ಮೀಟಿಂಗಿನಲ್ಲಿ ನಡೆಯಿಸುವ ಪಾಠನಿದರ್ಶನಕ್ಕೆ ಸುತ್ತುಮುತ್ತಲೂ ಇರುವ ವಿ. ಇ. ಸ್ಕೂಲ್ ಮಾಸ್ಟರುಗಳೂ ಬರುತ್ತಿದ್ದರು. ಈಚೆಗೆ ಎರಡು ತಿಂಗಳಿಂದ ಯಾಕೋ ಸ್ಕೂಲ್ ಮಾಸ್ಟರುಗಳು ಬರುವುದು ವಿರಳವಾಗಿದೆ. ಈ ವಾರ ನಡೆದ ಮೀಟಿಂಗಿನಲ್ಲಿ ಮಿಡ್ಲ್ ಗರಲ್ಸ್ ಹೆಡ್ ಮಾಸ್ಟರ್ ಮ|| ನರಸಿಂಹಯ್ಯನವರು ಎ. ವಿ. 1 ನೇ ತರಗತಿಯ ಹುಡುಗರಿಗೆ ಮೈಸೂರು ಚರಿತ್ರೆಯ ಪಾಠವನ್ನು ಬಹಳ ಸುಗಮವಾಗಿ ಬೋಧಿಸಿದರು. ಅನಂತರ ಈ ಸಂಘದ ಪ್ರೆಸಿಡೆಂಟರಾದ ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಮ|| ಕೃಷ್ಣಸ್ವಾಮಯ್ಯಂಗಾರ್ಯರು ತಮ್ಮಿಂದಲೇ ಸ್ಥಾಪಿತವಾದ ಈ ಸಂಘದ ಕೆಲಸಗಳು ಸಕಾಲದಲ್ಲಿ ನಡೆಯುತ್ತಿದ್ದರೂ ಸಂಘವು ಸಾಕಾದಷ್ಟು ಪುರೋವೃದ್ಧಿಯನ್ನು ಪಡೆಯಲಿಲ್ಲವೆಂದೂ, ಕನ್ನಡ 4-5 ನೇ ತರಗತಿಗಳಿಗೆ ಪಾಠ ಹೇಳುವುದಕ್ಕಿಂತಲೂ ಮಕ್ಕಳ ವರ್ಗಗಳಿಗೆ ಪಾಠ ಹೇಳುವುದು ಕಷ್ಟವಾದ್ದರಿಂದ ನಾರ್ಮಲ್ ಸ್ಕೂಲಿನಲ್ಲಿ ಟ್ರೇನಿಂಗ್ ತರಗತಿಯಲ್ಲಿ ಓದಿ ಬಂದಿರುವ ಈ ಸಂಘದ ಮೆಂಬರುಗಳು ಸಣ್ಣ ತರಗತಿಗಳಿಗೆ ಪಾಠನಿದರ್ಶನಗಳನ್ನು ಮಾಡುವುದರ ಮೂಲಕ ಸಂಘವನ್ನು ಅಭಿವೃದ್ಧಿಗೆ ತರಬೇಕೆಂದೂ ಹೇಳಿದರು. ಅಲ್ಲದೆ ಪಾಠನಿದರ್ಶನವನ್ನು ಮಾಡುವವರು ತಾವು ಸರ್ವಜ್ಞರೆಂದಾಗಿ ಇತರರೆಲ್ಲರಿಗೂ ಪಾಠಕ್ರಮದಲ್ಲಿ ಬಹಳ ವಿಷಯಗಳನ್ನು ತಿಳಿಸುವೆವೆಂಬ ಅಹಂಕಾರವನ್ನು ದೂರ ತೊಲಗಿಸಬೇಕೆಂದೂ, ಪ್ರೇಕ್ಷಕರು ಪಾಠನಿದರ್ಶನವನ್ನು ಮನಸ್ಸಿಟ್ಟು ಪರಿಶೀಲಿಸಿ ತಮಗೆ ತಿಳಿಯಬರುವ ಹೊಸ ವಿಷಯಗಳನ್ನು ತಿಳಿದುಕೊಂಡು ತಾವೂ ಅದರಂತೆ ಪಾಠ ಕ್ರಮವನ್ನಿಡಬೇಕೆಂದೂ, ಇವೆರಡು ವಿಷಯಗಳಿಗೂ ಗಮನಕೊಡದೆ ಇದ್ದಲ್ಲಿ ಈ ಸಂಘದ ಉದ್ದೇಶವೇ ನೆರವೇರದೆ ಸಂಘವು ತಾನಾಗಿಯೇ ನಿಂತುಹೋಗುವುದೆಂದೂ ಹೇಳಿದರು. ಈ ಸಂಘವನ್ನು ಸ್ಥಾಪಿಸಿ ಇದರ ಪುರೋವೃದ್ಧಿಯನ್ನು ಬಯಸುತ್ತಿರುವ ನಮ್ಮ ಹೆಡ್ ಮಾಸ್ಟರು ಬೇಜಾರುಪಟ್ಟು ಸಂಘವು ನಾಮಾವಶೇಷವಾಗುವುದಕ್ಕೆ ಅವಕಾಶಕೊಡದೆ ಸಂಘವು ಅಭಿವೃದ್ಧಿಗೆ ಬರುವಂತಹ ಏರ್ಪಾಡುಗಳನ್ನೆಲ್ಲಾ ಶೀಘ್ರದಲ್ಲಿ ಮಾಡುವರೆಂತಲೂ, ಇವರಿಗೆ ಬೇಕಾದ ಸಹಾಯವನ್ನು ನಮ್ಮ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮ|| ವೀರಭದ್ರಯ್ಯನವರು ಒದಗಿಸಿಕೊಡುವರೆಂದೂ ನಂಬಿದೇವೆ.—ದಯಾಳುಗಳಾದ ಸರ್ಕಾರದವರು ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಏರ್ಪಾಡು ಮಾಡಿದ್ದ ನೈಟ್ ಸ್ಕೂಲಿಗೆ ಮಾಹೆಯಾನಾ 14 ರೂಪಾಯಿ ಗ್ರಾಂಟು ಮಂಜೂರು ಮಾಡಿರುವುದಕ್ಕಾಗಿ ಬಹಳ ಕೃತಜ್ಞರಾಗಿದೇವೆ.—ಅಮಲ್ದಾರ್ ಮಿ|| ಹೃದಲಿಯಾನ್ ಸಾಹೇಬರವರು ತಮ್ಮ ಮಗನ ವರ್ಷ ವರ್ಧಂತಿ ಮಹೋತ್ಸವವನ್ನು ತಾ. 15 ರಲ್ಲಿ ಬಹು ವಿಜೃಂಭಣೆಯಿಂದ ನಡಿಸಿದರು. ತಾಲ್ಲೋಕಿನ ಎಲ್ಲಾ ಗ್ರಾಮಗಳಿಂದಲೂ ಜನರು ಬಂದು ಅಮಲ್ದಾರ್ರ ಮನೆಯ ಮುಂದೆ ಕಾಗದದ ಹೂವು ಮೊದಲಾದುವುಗಳಿಂದ ನೇತ್ರಾನಂದವನ್ನುಂಟುಮಾಡುವಂತೆ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ನೆರೆದಿದ್ದರು ಒಬ್ಬ ಮಹಮ್ಮದೀಯ ಸಂಗೀತ ವಿದ್ವಾಂಸರ ಹಾಡುಗಾರಿಕೆಯಾದ ನಂತರ ಫಲ ತಾಂಬೂಲಗಳು ಹಂಚಲ್ಪಟ್ಟವು. ರಾತ್ರಿ 8 ಘಂಟೆಯಲ್ಲಿ ಹಲಗಸ್ತು ಮೊದಲು ಪೇಟೆಯಲ್ಲಿ ಹೊರಟು ಕೋಟೆಯಲ್ಲಿ ಕೊಳದ ಬೀದಿಗೆ ಬಂದು ಗಣೇಶನ ಗುಡಿಯ ಮಾರ್ಗವಾಗಿ ಅಗ್ರಹಾರದ ಬೀದಿಯನ್ನು ಹಾದು ಮರಳಿ ಪೇಟೆಗೆ ಹೋಯಿತು. ನಮ್ಮ ಅಮಲ್ದಾರ್ರು ಜನರ ಪ್ರೀತಿಗೆ ಪೂರ್ಣಪಾತ್ರರಾಗಿರುವುದು ಬಹಳ ಸಂತೋಷವಾಗಿದೆ.

ವೃತ್ತಾಂತ ಪತ್ರಿಕೆ.

:o:

೧೯೧೫ ನೇ ಇಸವಿ ಜೂಲೈ ತಾ. ೨೯ ನೇ ಗುರುವಾರ.

ಮೈಸೂರು ರೆವಿನ್ಯೂ ಆಡಳಿತಗಳು.

ಮೈಸೂರು ಸಂಸ್ಥಾನದ ರೆವಿನ್ಯೂ ಇಲಾಖೆಯ ಆಡಳಿತಗಳ 1913-14 ನೇ ಸಾಲಿನ ರಿಪೋರ್ಟನ್ನು ರೆವಿನ್ಯೂ ಕಮಿಷನರ್‌ರವರು ಬರೆದು 1914 ನೇ ಸೆಪ್ಟಂಬರ್ ತಾ. 30 ರಲ್ಲಿ ಗವರ್ನ್‌ಮೆಂಟಿಗೆ ಕಳುಹಿಸಿದರು. ಗವರ್ನ್‌ಮೆಂಟಿನವರು ಅದನ್ನು ಐದು ತಿಂಗಳ ತನಕ ತಮ್ಮ ಬಳಿ ಇಟ್ಟುಕೊಂಡಿದ್ದು ಅದರ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು 1915 ನೇ ಫೆಬ್ರುವರಿ ತಾ. 26 ರಲ್ಲಿ ಬರೆದಿರುತ್ತಾರೆ. ಬಳಿಕ ಈ ರಿಪೋರ್ಟು ಸರ್ಕಾರದ ಮುಕುಮಿನ ಸಮೇತ ಅಚ್ಚಾಗಿ ಪ್ರಕಟವಾಗುವುದರಲ್ಲಿ ಇನ್ನು ಕೆಲವು ತಿಂಗಳು ಕಳೆದುಹೋಯಿತು. ಇದರಿಂದ ನಮ್ಮ ಸಂಸ್ಥಾನದಲ್ಲಿ ನಿತ್ಯಗಟ್ಟಳೆ ನಡೆಯಬೇಕಾದ ಸಾಮಾನ್ಯ ಕೆಲಸ ಕಾರ್ಯಗಳು ಅಲಕ್ಷ್ಯಕ್ಕೆ ಬೀಳುತ್ತಿರುವಂತೆ ಕಾಣುತ್ತದೆ. ಎಲ್ಲರಿಗೂ ತಿಳಿದಿರುವ ಪ್ರಕಾರ ರೆವಿನ್ಯೂ ಇಲಾಖೆಯ ಕಾರುಬಾರುಗಳು ಸಂಸ್ಥಾನದ ಸಮಸ್ತ ಇಲಾಖೆಗಳಿಗಿಂತಲೂ ಅತ್ಯಂತ ಪ್ರಾಮುಖ್ಯವಾಗಿರುತ್ತವೆ. ನಮ್ಮ ಗವರ್ನ್‌ಮೆಂಟಿನವರು ಈ ಇಲಾಖೆಯ ರಿಪೋರ್ಟನ್ನೇ ಐದು ತಿಂಗಳ ತನಕ ನೋಡದೆಹೋದರೆ ಅವರು ಸಂಸ್ಥಾನದ ನಿತ್ಯಗಟ್ಟಳೆಯ ಕೆಲಸಕಾರ್ಯಗಳಿಗೆ ಗಮನಕೊಡುವುದು ಕಡಮೆಯಾಗಿದೆ ಎಂದೂ, ಅವರು ಕಲ್ಪಿಸಿಕೊಂಡಿರುವ ವಿಶೇಷ ಕಾರ್ಯಗಳೇ ಅವರ ಮನಸ್ಸನ್ನೆಲ್ಲಾ ಸೆಳೆದುಬಿಟ್ಟಿರುವವೆಂದೂ ವೇದ್ಯವಾಗುತ್ತದೆ. ರೆವಿನ್ಯೂ ಇಲಾಖೆಯ ಈ ರಿಪೋರ್ಟು ಈಗ ಹಳೇದಾಯಿತು; ಆದರೂ ಅದರಲ್ಲಿ ಕೆಲವು ಸ್ವಾರಸ್ಯವಾದ ವಿಷಯಗಳುಂಟು. ಅಂಥಾ ಕೆಲವು ಸಂಗತಿಗಳನ್ನು ಕುರಿತು ಪ್ರಸ್ತಾಪ ಮಾಡಲಪೇಕ್ಷಿಸುತ್ತೇವೆ.

ಕಳೆದ 1913-14 ನೇ ಸಾಲಿನಲ್ಲಿ ಆದ ಮಳೆಗಳು ಕಡಮೆ; ಹೊಲ ಗದ್ದೆ ತೋಟಗಳಲ್ಲಿ ಬೆಳೆಯೂ, ಫಸಲೂ ಬಹಳ ಮಟ್ಟಿಗೆ ಕಡಮೆಯಾದವು; ಜಮೀನ್ ಕಂದಾಯ ಬಾಕಿಗಳು ಕೂಡಿದ ಮಟ್ಟಿಗೂ ತೃಪ್ತಿಕರವಾಗಿ ವಸೂಲಾಗಿರುತ್ತವೆ. ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರುಗಳು ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡಬೇಕಾದಷ್ಟು ಮಾಡಿರುವುದಿಲ್ಲವೆಂದು ಗೊತ್ತಾಗುತ್ತದೆ. ಅಧಿಕಾರಿಗಳು ಕಚೇರಿಯಲ್ಲಿ ಕುಳಿತು ಮಾಡಬೇಕಾಗಿರುವ ಕೆಲಸ ಕಾರ್ಯಗಳು ಬಹಳ ಹೆಚ್ಚಾಗಿರುವವೆಂದು ಗೊಣಗುಟ್ಟುತ್ತಾರೆ. ಅವರು ವಿಶೇಷವಾಗಿ ಸಂಚಾರ ಮಾಡಿದ ಪಕ್ಷದಲ್ಲಿ ಕಾಗದ ಪತ್ರಗಳನ್ನು ಆಯಾ ಸ್ಥಳಗಳಲ್ಲೇ ಇತ್ಯರ್ಥ ಮಾಡಬಹುದು; ಅಗ್ಗ ಈಗಿನಷ್ಟು ಕಾಗದದ ಕಟ್ಟುಗಳು ಕಚೇರಿಗಳಲ್ಲಿ ಇಲ್ಲದಂತಾದೀತು. ನಮ್ಮ ಪ್ರಜೆಗಳಾದರೋ ಅಧಿಕಾರಿಗಳನ್ನು ಮೊಖ್ತಾ ಕಂಡು ಅಲ್ಲಲ್ಲೇ ತಮ್ಮ ಕುಂದು ಕೊರತೆಗಳನ್ನು ಅರಿಕೆಮಾಡಿ ಸರಿಪಡಿಸಿಕೊಳ್ಳಬೇಕೆಂದು ಕುತೂಹಲಪಡುತ್ತಾರೆ. ಅಧಿಕಾರಿಗಳು ಸಂಚಾರ ಮಾಡುವುದು ಕಡಮೆ. ಸಂಚಾರ ಕಾಲದಲ್ಲಿ ಪ್ರಜೆಗಳು ಅರಿಕೆ ಮಾಡಿಕೊಂಡ ಅಂಶಗಳನ್ನು ಅಧಿಕಾರಿಯು ಅಲ್ಲಲ್ಲೇ ಇತ್ಯರ್ಥ ಪಡಿಸದೆ ಅರ್ಜಿ ಬರೆದುಕೊಂಡರೆ ವ್ಯವಸ್ಥೆ ಮಾಡುವೆನೆಂದು ಹೇಳಿ ಬರುವುದೂ, ಅರ್ಜಿಗಳನ್ನು ಕಟ್ಟಿಗೆ ದಾಖಲ್ ಮಾಡಿಕೊಳ್ಳುವುದೂ, ಪ್ರಜೆಗಳು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಕಚೇರಿಗೆ ಅಲೆಯುವುದರಲ್ಲಿ ನಾನಾ ಕಷ್ಟ ನಷ್ಟ ಸಂಕಟಗಳಿಗೆ ಗುರಿಯಾಗುವುದೂ ದಿನಕ್ರಮೇಣ ಕಡಮೆಯಾಗುವುದಕ್ಕೆ ಬದಲು ಹೆಚ್ಚುತ್ತಾ ಬಂದಿದೆ. ಆದಕಾರಣ ಹಾಗೆ ಸಂಚಾರ ಮಾಡದೆ ತಪ್ಪಿದಂಥಾ ಅಧಿಕಾರಿಗಳನ್ನು ಸರ್ಕಾರದವರು ಕೇಳಿ ಕಾರಣವೇನೆಂಬುವುದನ್ನು ತಿಳಿಸಿಕೊಳ್ಳುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಸರ್ಕಾರದವರು ಮುತುವರ್ಜಿಯಿಂದ ತನಿಖೆಮಾಡಬೇಕಾದ ವಿಷಯ ಇನ್ನೊಂದಿದೆ. ಆ ವಿಚಾರವಾಗಿ ಮ|| ಎಂ. ವೆಂಕಟಕೃಷ್ಣಯ್ಯನವರು ಮೊನ್ನೆ ರಾಜಧಾನಿಯಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೆ ಕೇಳಿದರೆಂದು ಸಂತೋಷಪಡುತ್ತೇವೆ. ಜಮಾಸಿಗಾಗಿ ಬರುವ ದರಖಾಸ್ತುಗಳು ವ್ಯವಸ್ಥೆ ಆಗುವುದು ಬಹಳ ತಾಮಸಕ್ಕೆ ಬೀಳುತ್ತಿರುವುದೇ ಆ ವಿಷಯ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಅಂಥಾ 430 ಅರ್ಜಿಗಳು ಮೂರು ವರುಷಕ್ಕಿಂತ ಹೆಚ್ಚಾಗಿಯೂ, 606 ಅರ್ಜಿಗಳು ಎರಡು ವರುಷಕ್ಕೆ ಮೇಲ್ಪಟ್ಟೂ ವ್ಯವಸ್ಥೆ ಆಗದೆ ಉಳಿದಿವೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ 452 ದರಖಾಸ್ತು ಅರ್ಜಿಗಳು ಮೂರು ವರುಷಕ್ಕೆ ಮೇಲ್ಪಟ್ಟೂ, 816 ಅರ್ಜಿಗಳು ಎರಡು ವರುಷಕ್ಕೆ ಮೇಲ್ಪಟ್ಟೂ ಇತ್ಯರ್ಥವಿಲ್ಲದೆ ಬಾಕಿಯಾಗಿವೆ. ಹೀಗೆ ನಾವಕಾಶವಾಗೋಣದರಿಂದ ಸರ್ಕಾರಕ್ಕೆ ಬಹಳ ನಷ್ಟ; ರೈತರಿಗೂ ತುಂಬಾ ಅನನುಕೂಲ. ಈ ಕಾರಣದಿಂದ ಗವರ್ನ್‌ಮೆಂಟಿನವರು ಇನ್ನೂ ವಿಶೇಷವಾದ ಗಮನಕೊಟ್ಟು ಈ ವಿಚಾರವನ್ನು ಕ್ರಮಪಡಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮಾರಕಣಿವೆ ತಲಾಪಿನ ಕೆಳಗೆ ಜಮೀನುಗಳಿಂದ ಹುಟ್ಟುವಳಿ ಆಗುವ ರಾಜಾದಾಯವು ಕ್ರಮೇಣ ಕಡಮೆಯಾಗುತ್ತಿರುವುದನ್ನು ನೋಡಿದರೆ ನಮಗೆ ವಿಷಾದವಾಗುವುದು. "ಜೊಂಡು ಮುಂತಾದದ್ದು ಹಬ್ಬಿಕೊಂಡು 4,620 ಎಕರೆ 11 ಗುಂಟೆ ಜಮೀನು ಪಾಳುಬಿದ್ದಿದೆ" ಎಂದು ಹೇಳಿರುವ ಮಾತನ್ನು ಓದಿದರೆ ಸಂಕಟವಾಗುತ್ತದೆ. ಬೇಕಾದಷ್ಟು ನೀರೂ, ಜಮೀನೂ ಇದೆ; ವ್ಯವಸಾಯ ಮಾಡುವವರಿಲ್ಲ. ಇನ್ನು ಸ್ವಲ್ಪ ಮುಂದೆ ಓದುವಾಗ "ಮಿ|| ಅಮನುಲ್ಲಾಸಾಬರಿಂದಲೂ, ದಕ್ಷಿಣ ಇಂಡಿಯಾ ಕಸಬುಗಳ ಕಂಪನಿಯಿಂದಲೂ ಬರಬೇಕಾಗಿರುವ ರೂ. 37,018-12-0 ವಸೂಲಾಗುವಂತೆ ಕಾಣುವುದಿಲ್ಲ" ಎಂದು ತಿಳಿಯುವುದು. ಈ ವಿಚಾರಗಳನ್ನೆಲ್ಲಾ ನೋಡಿದರೆ ಸರ್ಕಾರದವರು ಮುತುವರ್ಜಿ ವಹಿಸಿ ಒಳ್ಳೇ ತನಿಖೆ ಇಟ್ಟು ನೋಡಿಕೊಳ್ಳಬೇಕಾದ ಅಂಶ ಪ್ರಾಮುಖ್ಯವಾದದ್ದೆಂದು ಹೇಳಬಹುದಾಗಿದೆ.

ವ್ಯವಸಾಯದ ಬ್ಯಾಂಕುಗಳ ವಿಚಾರವಾಗಿ ಬರೆಯಲ್ಪಟ್ಟಿರುವ ಸಂಗತಿಗಳನ್ನು ಓದುವುದಕ್ಕೆ ವ್ಯಾಕುಲವಾಗುತ್ತದೆ. ಈ ಬ್ಯಾಂಕುಗಳಿಗೆ ನಮ್ಮ ಗವರ್ನ್‌ಮೆಂಟಿನವರು ಹಣಹಾಕಿ ಅನೇಕ ಲಕ್ಷ ರೂಪಾಯಿಗಳನ್ನು ಕಳೆದುಕೊಂಡರು. ಎಷ್ಟು ಹಣ ಈ ಬ್ಯಾಂಕುಗಳಿಂದ ಮುಳುಗಿಹೋಯಿತೋ, ಹಣ ಯಾರ ವಶದಲ್ಲಿದೆಯೋ ತಿಳಿಯುವುದಿಲ್ಲ. ನ್ಯಾಯವಿಧಾಯಕ ಸಭೆಯ ಮೆಂಬರುಗಳಲ್ಲಿ ಯಾರಾದರೂ ಸರ್ಕಾರದವರನ್ನು ಕೇಳುವುದು ಒಳ್ಳೇದೆಂದು ನಮಗೆ ತೋರುತ್ತದೆ.

ಸಣ್ಣ ನೌಕರರುಗಳನ್ನು ಕೆಲಸದಿಂದ ತೆಗೆದುಹಾಕಿದ್ದೂ, ಸಸ್ಪೆಂಡ್ ಮಾಡಿದ್ದೂ, ಅವರಿಗೆ ಜುಲ್ಮಾನೆ ಹಾಕಿದ್ದೂ ಹಿಂದಿನ ವರುಷಕ್ಕಿಂತ ಕಡಮೆ ಎಂದು ತಿಳಿದು ಸಂತೋಷಪಡುತ್ತೇವೆ. ಆದರೆ ಈ ಸಾಲಿನಲ್ಲಿ 929 ಮಂದಿ ಶ್ಯಾನುಭೋಗರಿಗೂ, 1,742 ಜನ ಪಟೇಲರಿಗೂ ಶಿಕ್ಷೆ ಮಾಡಲಾಯಿತೆಂದು ತಿಳಿದು ಬರುತ್ತದೆ. ಆರು ಮಂದಿ ಶ್ಯಾನುಭೋಗರನ್ನೂ ಏಳು ಜನ ಪಟೇಲರನ್ನೂ ಕೆಲಸದಿಂದ ವಜಾ ಮಾಡಿದಾರೆ. ಹ್ಯಾಗೂ ಎಲ್ಲಾ ದರ್ಜೆಯ ನೌಕರಮಾನೇರುಗಳಲ್ಲೂ ವಿಶೇಷವಾದ ಚಟುವಟಿಕೆಯನ್ನೂ ಸತ್ಯಸಂಧತೆಯನ್ನೂ ಕಂಡರಾದೀತೆಂದು ಹಾರೈಸುತ್ತೇವೆ.

ಗ್ರಾಮಾಂತರಗಳಲ್ಲಿ ಆರೋಗ್ಯ ವಿಚಾರಗಳನ್ನು ಕ್ರಮಪಡಿಸುವುದರಲ್ಲಿ ಪ್ರಜೆಗಳು ಸರ್ಕಾರದವರಿಗೆ ವಿಶೇಷವಾಗಿ ಸಹಾಯ ಮಾಡುತ್ತಿದಾರೆಂದೂ, ಕೆಲವು ಗ್ರಾಮಗಳಲ್ಲಿ ಹೊಸ ರಸ್ತೆಗಳನ್ನು ಹಾಕಿಕೊಂಡಿದಾರೆಂದೂ ತಿಳಿದು ಸಂತೋಷಪಡುವೆವು. ಪ್ರಜೆಗಳು ಗ್ರಾಮಾಂತರಗಳಲ್ಲಿ ಸುಖವಾಗಿಯೂ ಆರೋಗ್ಯದಿಂದಲೂ ಜೀವಿಸುವುದಕ್ಕೆ ಅವರು ಇನ್ನೂ ವಿಶೇಷವಾದ ಪ್ರಯತ್ನಗಳನ್ನು ಮಾಡಬೇಕಾಗಿದೆ. ಕೆಲವು ಸ್ಥಳಗಳಲ್ಲಿ ಒಳ್ಳೇ ಕುಡಿಯುವ ನೀರನ್ನು ಒದಗಿಸುವುದಕ್ಕೆ ಏರ್ಪಾಡುಗಳು ಆಗುತ್ತಿರುವವು. ಆದರೆ ಬೇರೆ ಬೇರೆ ಇಲಾಖೆಗಳವರು ಬಹಳ ತಾಮಸವಾಗಿ ಕೆಲಸಗಳನ್ನು ಮಾಡೋಣದರಿಂದ ಇಂಥಾ ಪ್ರಾಮುಖ್ಯವಾದ ಕಾರ್ಯಗಳು ಬೇಗನೆ ಕೈಗೂಡುವವೆಂದು ಹೇಳುವುದು ಪ್ರಯಾಸ. ಈ ಮಧ್ಯೆ ಪ್ರಜೆಗಳು ನಷ್ಟ ಕಷ್ಟಗಳನ್ನು ಅನುಭವಿಸಿಕೊಂಡು ಬರಬೇಕಾಗಿದೆ. ಕೆಲವು ಗ್ರಾಮಗಳಲ್ಲಿ ಪ್ರಜೆಗಳು ಸರ್ಕಾರದಿಂದ ದೊರಕುವ ದ್ರವ್ಯಸಹಾಯವನ್ನು ಪಡೆದು ನಾನಾ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಳ್ಳುತ್ತಿರುವುದು ಸಂತೋಷಪ್ರದವಾಗಿದೆ. ಈ ಭಾಗದಲ್ಲೂ ಇನ್ನೂ ಬಹಳ ಸಾಹಸ ಪ್ರಯತ್ನಗಳು ನಡೆಯಬೇಕಾಗಿರುವವು.

ಈ ರೆವಿನ್ಯೂ ರಿಪೋರ್ಟಿನಲ್ಲಿ ಇನ್ನೂ ಅನೇಕ ಸ್ವಾರಸ್ಯವಾದ ವಿಷಯಗಳು ಇರುತ್ತವೆ. ನಮ್ಮ ಸಂಸ್ಥಾನದ ಪುರೋಭಿವೃದ್ಧಿಯಲ್ಲಿ ಮನಸ್ಸೂ ಉತ್ಸಾಹವೂ ಉಳ್ಳವರೆಲ್ಲಾ—ಅದರಲ್ಲೂ ನ್ಯಾಯವಿಧಾಯಕ ಸಭೆಯ ಮತ್ತು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ವಿಶೇಷವಾಗಿ—ಈ ರಿಪೋರ್ಟನ್ನು ಚೆನ್ನಾಗಿ ಓದಿ ಗ್ರಹಿಸಿಕೊಳ್ಳುವವರಾಗಲೆಂದು ಹಾರೈಸುತ್ತೇವೆ.

ಅದೃಶ್ಯವಾದವುಗಳನ್ನು ನೋಡುವ ದೃಷ್ಟಿ.

ಅಮೆರಿಕಾ ಖಂಡದಲ್ಲಿ ಕೆಂಟುಕಿ ಎಂಬುದೊಂದು ತಾಲ್ಲೋಕು ಉಂಟು. ಅದರಲ್ಲಿ ಅನೇಕ ವಿಸ್ತಾರವಾದ ಗುಹೆಗಳುಂಟು. ಆ ಗುಹೆಗಳಲ್ಲಿ ಕೆಲವು ಕಡೆ ಸರೋವರಗಳಿರುತ್ತವೆ. ಆ ಸರೋವರಗಳು ಗುಹೆಗಳಲ್ಲಿ ಇರುವದರಿಂದ ಸೂರ್ಯನ ರಶ್ಮಿಯು ಆ ಸರೋವರಗಳ ಮೇಲೆ ಎಂದೂ ಬೀಳುವದಿಲ್ಲ. ಆ ಸರೋವರಗಳಲ್ಲಿರುವ ಮತ್ಸ್ಯಗಳಿಗೆ ನೇತ್ರಗಳುಂಟು. ಆದರೆ ಅವುಗಳಿಗೆ ದೃಷ್ಟಿಯು ಲೇಶವೂ ಇಲ್ಲ. ಕಾರಣವೇನೆಂದರೆ ಆ ಸರೋವರದ ಮೇಲೆ ಬೆಳಕು ಎಂದೂ ಪ್ರಕಾಶಿಸುವದಿಲ್ಲ. ಆದಕಾರಣ ಆ ಮೀನುಗಳಿಗೆ ದೃಷ್ಟಿಯು ಉಪಯೋಗಕ್ಕೆ ಬರಲಿಲ್ಲ. ಯಾವ ವಸ್ತುವಾದರೂ ಅಥವಾ ಶಕ್ತಿಯಾದರೂ ಬುದ್ಧಿಯಾದರೂ ನಮಗಿದ್ದರೆ ಅದು ಪ್ರಯೋಗಿಸಲ್ಪಡಬೇಕು. ಅದನ್ನು ನಾವು ಬೆಳಸಬೇಕು. ಅದರಿಂದ ಪ್ರಯೋಜನವನ್ನು ಹೊಂದಬೇಕೆಂದು ಅದನ್ನು ದೇವರು ನಮಗೆ ಕೊಟ್ಟಿದ್ದಾನೆ. ಆದರೆ ಅದನ್ನು ಪ್ರಯೋಗಿಸದಿದ್ದರೆ ಆ ವರವು ನಮಗೆ ಇಲ್ಲದೆ ಹೋಗುವದು. ಆ ಮೀನುಗಳು ಮೊದಲು ಚೆನ್ನಾಗಿ ನೋಡುವವುಗಳಾಗಿದ್ದವು. ಆ ಗವಿಗಳಲ್ಲಿ ಬೆಳಕು ಇಲ್ಲದ ಕಾರಣ ಅವು ತಮ್ಮ ಕಣ್ಣುಗಳನ್ನು ಪ್ರಯೋಗಿಸಲಿಲ್ಲ. ಆದ್ದರಿಂದ ಅವುಗಳ ದೃಷ್ಟಿಯು ಮಾಂದ್ಯವಾಗಿ ಕಡೆಗೆ ಮೊಬ್ಬಾಗಿ ಕಟ್ಟಕಡೆಗೆ ದೃಷ್ಟಿಯೇ ಇಲ್ಲದೆ ಹೋಯಿತು.

ಹಾಗೆಯೇ ದೇವರನ್ನೂ ಆತನ ರಾಜ್ಯವನ್ನೂ ಆತನ ನೀತಿಯನ್ನೂ ಪ್ರೀತಿಯನ್ನೂ ನೋಡುವದಕ್ಕೆ ಎಲ್ಲಾ ಮನುಷ್ಯರಲ್ಲಿ ಒಂದು ನೇತ್ರವುಂಟು. ಆ ನೇತ್ರಕ್ಕೆ ಕೆಲವರು ಮನೋನೇತ್ರವೆಂದು ಹೆಸರಿಡುತ್ತಾರೆ. ಮತ್ತೆ ಕೆಲವರು ಆ ನೇತ್ರಕ್ಕೆ ಭಕ್ತಿ ಅಥವಾ ದೇವರನ್ನು ನಂಬುವ ನಂಬಿಕೆಯೆಂದು ಹೇಳುತ್ತಾರೆ. ಅಂತೂ ಅದಿಲ್ಲದಿದ್ದರೆ ದೇವರನ್ನು ನೋಡುವದಕ್ಕೆ ಆಗುವದಿಲ್ಲ. ಆತನ ಶಬ್ದವನ್ನು ಕೇಳುವದಕ್ಕೆ ಆಗುವದಿಲ್ಲ. ಕಣ್ಣಿನಿಂದ ದೃಶ್ಯವಾದ ವಸ್ತುಗಳನ್ನು ನೋಡಿ ಅವು ಇದಾವೆ ಎಂದು ನಾವು ತಿಳಿಯುತ್ತೇವೆ. ಆದರೆ ಕಣ್ಣಿಗೆ ಅದೃಶ್ಯವಾದ ವಸ್ತುಗಳುಂಟು. ಯಾವವೆಂದರೆ ಪರಲೋಕ, ದೇವರು, ನೀತಿಯನ್ನು ಅನುಸರಿಸಿ ನಡೆಯುವದರಿಂದ ಅನುಭವಕ್ಕೆ ಬರುವ ಮನೋತೃಪ್ತಿ ಇವುಗಳನ್ನು ತಿಳಿಯುವದಕ್ಕೆ ಪಂಚೇಂದ್ರಿಯಗಳಲ್ಲಿ ಯಾವವೂ ಸಹಾಯವಾಗುವದಿಲ್ಲ. ಪಾರಮಾರ್ಥಿಕ ವಸ್ತುಗಳನ್ನು ಕಣ್ಣು ಕಾಣಲಿಲ್ಲ; ಕಿವಿ ಕೇಳಲಿಲ್ಲ. ಅವು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು ಎಂದು ಒಬ್ಬ ಪ್ರೇಷಿತನು ಹೇಳಿದ್ದಾನೆ. ಮತ್ತು ಆತನು ಇನ್ನೂ ಹೇಳುವದೇನಂದರೆ—ಆತ್ಮನು ಎಲ್ಲಾ ವಿಷಯಗಳನ್ನೂ ದೇವರ ಅಗಾಧವಾದ ವಿಷಯಗಳನ್ನೂ ಕೂಡ ಪರಿಶೋಧಿಸುವವನಾಗಿದ್ದಾನೆ. ದೃಷ್ಟಾಂತವಾಗಿ ಮನುಷ್ಯನ ಒಳಗಿನ ಸಂಗತಿಗಳು ಅವನಲ್ಲಿರುವ ಮಾನುಷ ಜೀವಾತ್ಮಕ್ಕೆ ಹೊರತು ಮತ್ತಾರಿಗೂ ತಿಳಿಯದು. ಹಾಗೆಯೇ ದೇವರ ಆತ್ಮನೇ ಹೊರತು ಬೇರೆ ಯಾರೂ ದೇವರ ಸಂಗತಿಗಳನ್ನು ಗ್ರಹಿಸುವದಿಲ್ಲ. ನಾವು ಪ್ರಾಪಂಚಿಕ ಭಾವದಿಂದ ಪಾರಮಾರ್ಥಿಕ ಸಂಗತಿಗಳನ್ನು ತಿಳಿಯುವದಕ್ಕಾಗುವದಿಲ್ಲ.

ಈ ಪ್ರಪಂಚದ ನಿಬಂಧನೆಗಳಿಗನುಸಾರವಾಗಿ ನಡೆದುಕೊಳ್ಳುವವರು ಸುಖವನ್ನು ಹ್ಯಾಗೆ ಹೊಂದುತ್ತಾರೋ ಹಾಗೆಯೇ ದೇವರ ರಾಜ್ಯದ ಆಜ್ಞೆಮೇರೆಗೆ ನಡೆಯುವವರು ಪರಮಸುಖವನ್ನು ಹೊಂದುತ್ತಾರೆ. ಪ್ರಪಂಚವಿದೆಯೆಂದೂ ಅದರಲ್ಲಿರುವ ಸಕಲ ವಸ್ತುಗಳೂ ಇರುವದು ನಿಜವೆಂದೂ ಪಂಚೇಂದ್ರಿಯಗಳ ಸಹಾಯದಿಂದ ಅನುಮಾನವಿಲ್ಲದೆ ನಮಗೆ ಗೊತ್ತಾಗುತ್ತದೆ. ಹಾಗೆಯೇ ನಂಬಿಕೆ ಅಥವಾ ಭಕ್ತಿ ಎಂಬ ಮನೋನೇತ್ರಗಳ ಸಹಾಯದಿಂದ ದೇವರು ಇದ್ದಾನೆ; ಆತನೇ ತನ್ನ ಸಕಲ ಭಕ್ತರನ್ನು ಆಳಿ ರಕ್ಷಿಸುವವನಾಗಿದ್ದಾನೆಂದು ಭಕ್ತರು ಸಂದೇಹವಿಲ್ಲದೆ ತಿಳಿಯುತ್ತಾರೆ. ಕುರುಡನು ಪ್ರಪಂಚವೂ ಸೂರ್ಯನೂ ಚಂದ್ರನೂ ಇದಾರೆ ಅನ್ನುತ್ತೀರಿ; ಅದೆಲ್ಲಾ ಬರೀ ಸುಳ್ಳು; ಕಲ್ಪನೆಮಾತು ಎಂದು ಹೇಳಿದರೆ ಅದನ್ನು ಪ್ರತಿದಿನವೂ ನೋಡಿ ಅನುಭವಿಸುತ್ತಿರುವವರು ನಗುವದಿಲ್ಲವೇ? ದೃಷ್ಟಿಯಿಲ್ಲದವರು ಪ್ರಪಂಚವನ್ನು ನೋಡಲಾರರು. ಭಕ್ತಿ ಇಲ್ಲದವರು ದೇವರನ್ನೂ ಆತನ ರಾಜ್ಯವನ್ನೂ ನೋಡಲಾರರು.

ಆದರೆ ಭಕ್ತಿಯು ಒಂದು ಕೋಮಲತರವಾದ ಬಳ್ಳಿಯಂತೆ ಇದೆ. ಕಣ್ಣು ಬಹು ಸೂಕ್ಷ್ಮವಾದ ವಸ್ತುವಲ್ಲವೇ? ಅದನ್ನು ನಾವು ಭದ್ರವಾಗಿ ಕಾಪಾಡಿಕೊಳ್ಳಬೇಕು. ಇಲ್ಲದೆ ಇದ್ದರೆ ದೃಷ್ಟಿಯು ಮೊಬ್ಬಾಗಿ ಕಡೆಗೆ ಇಲ್ಲದೇ ಹೋದೀತು. ಅಲ್ಪ ಸ್ವಲ್ಪ ಧೂಳು ಕಣ್ಣಿನಲ್ಲಿ ಬಿದ್ದರೆ ನಮಗೆ ಬಾಧೆಯುಂಟಾಗಿ ಆ ಧೂಳು ಕಣ್ಣಿನಿಂದ ಬಂದ ಹೊರತು ನೋವು ನಿಲ್ಲುವದಿಲ್ಲ. ಭಕ್ತಿಯನ್ನು ಬಹು ಜಾಗ್ರತೆಯಿಂದ ನಮ್ಮ ಹೃದಯದಲ್ಲಿ ಬೆಳಸಿ ಅಭಿವೃದ್ಧಿ ಮಾಡಬೇಕಾಗಿದೆ. ಅದನ್ನು ಕೆಡಿಸುವದು ಯಾವದೆಂದು ವಿಚಾರಿಸಬೇಕು. ಸಕಲ ವಿಧವಾದ ಪಾಪವು ಭಕ್ತಿಯನ್ನು ಕೆಡಿಸಿ ನಷ್ಟಪಡಿಸುವ ವಿರೋಧಿಯಾಗಿರುತ್ತವೆ. ಆದರೆ ಕಣ್ಣು ಮುಂತಾದ ಅಂಗಗಳಿಗೆ ವಿರೋಧವಾದ ವಸ್ತುವು ನಮ್ಮ ಅದನ್ನು ನೋಯಿಸಿ ಕೆಡಿಸುತ್ತಿದ್ದರೆ ನಾವು ಕೂಡಲೆ ಅದಕ್ಕೆ ತಕ್ಕ ಪರಿಹಾರವನ್ನು ಹುಡುಕುತ್ತೇವೆ. ನೋವು ಈ ಕಾರಣದಿಂದ ನಮಗೆ ಸಹಾಯಮಾಡಿ ಎಚ್ಚರಿಕೆಯನ್ನು ಕೊಡುವ ದೂತನೋಪಾದಿಯಲ್ಲಿದೆ. ಕಣ್ಣಿಗೆ ಏನು ಹೊಕ್ಕರೂ ನಮಗೆ ಅದು ಗೋಚರವಾಗದಿದ್ದರೆ ಕಣ್ಣು ಕೆಟ್ಟುಹೋಗುವದು. ಆದರೆ ನೋವು ನಮ್ಮನ್ನು ಹುಷಾರು ಪಡಿಸಿ—ಏನೋ ವಿರೋಧವಾದ ವಸ್ತುವು ಕಣ್ಣಿನಲ್ಲಿ ಸೇರಿರುವದರಿಂದ ಬಾಧೆಯುಂಟಾಗಿದೆ, ಬೇಗ ಆ ವಿರೋಧ ವಸ್ತುವನ್ನು ಆಚಗೆ ತೆಗೆದುಹಾಕುವ ಯತ್ನವನ್ನು ಮಾಡು ಎಂದು ನಮಗೆ ಹೇಳುವ ದೂತನಾಗಿದೆ.

ನಾವು ಪಾಪವನ್ನು ಮಾಡುವದರಿಂದ ಮನೋದೃಷ್ಟಿಯು ಮೊಬ್ಬಾಗಿ ಹೋಗುತ್ತದೆ. ದ್ರವ್ಯಾಶೆಯಿಂದ ಪೀಡಿತನಾಗಿ ವಂಚನೆ, ಯುಕ್ತಿ, ಪಿತ್ತಲಾಟಗಳನ್ನು ಸಾಧಿಸಿ ಲಂಚಗಳನ್ನು ತೆಗೆದುಕೊಂಬುವವನಲ್ಲಿ ದೇವರ ಭಕ್ತಿಯು ಬೆಳೆದು ಬಲವಾದೀತೇ? ವಿಷಯಲಂಪಟನಾಗಿ ತಿರಿಯುವವನಲ್ಲಿ ಮನಶ್ಶುದ್ಧಿಯು ನೆಲೆಯಾಗಿರುವದೇ? ಕೋಪ ದ್ವೇಷ ಅಸೂಯೆಗಳಿಗೆ ಎಡೆಕೊಟ್ಟವನ ಹೃದಯದಲ್ಲಿ ಶಾಂತಿಯು ವಾಸಮಾಡುವದು ಸುಲಭವೇ? ಈ ವಿಧವಾದ ಪಾಪಗಳು ಮನಸ್ಸನ್ನು ಹೊಗುವಾಗ ಮನೋನೇತ್ರಕ್ಕೆ ನೋವಾಗುತ್ತದೋ? ಆ ನೋವನ್ನು ನಮಗೆ ಗೋಚರಪಡಿಸಿ ಪಾಪ ನಿನ್ನ ಒಳಹೊಕ್ಕ ಭಕ್ತಿಯನ್ನು ಕೆಡಿಸುತ್ತಲಿದೆಯೆಂದು ಹೇಳುವ ದೂತನು ಯಾರೂ ಇಲ್ಲವೇ? ಇದ್ದಾನೆ, ಮನಸ್ಸಾಕ್ಷಿಯು ನಾವು ಪಾಪಕ್ಕೆ ಇಂಬುಗೊಡುವದನ್ನು ನೋಡಿ ಮನಸ್ಸಿನಲ್ಲಿ ಅಸಂತೋಷವನ್ನುಂಟುಮಾಡುತ್ತದೆ. ಗಾಬರಿಯೂ ಭಯವೂ ಉಂಟಾಗುತ್ತವೆ. ಆದರೆ ಮನುಷ್ಯನು ಈ ದೂತನ ಮಾತನ್ನು ಲಕ್ಷಿಸದೆ ಪಾಪವನ್ನು ಇನ್ನೂ ಮಾಡುತ್ತಾನೆ. ಕಡೆಗೆ ಆ ಮನೋನೇತ್ರವೇ ನಾಶವಾಗುತ್ತದೆ. ಇದು ಬಹಳ ವ್ಯಸನಕರವಾದ ಸ್ಥಿತಿ. ಆದ್ದರಿಂದ ಮನಸ್ಸಾಕ್ಷಿಯು ನಮ್ಮಲ್ಲಿ ಪಾಪದ ವಿಷಯವಾಗಿ ಅಸಂತೋಷವನ್ನುಂಟುಮಾಡುವಾಗ ಕೂಡಲೆ ಅದಕ್ಕೆ ಲಕ್ಷ್ಯಕೊಟ್ಟು ಪಾಪವನ್ನು ತ್ಯಜಿಸಬೇಕು. ಹೀಗೆ ಭಕ್ತಿಯನ್ನು ಹೃದಯದಲ್ಲಿ ಬೆಳಸುವವನು ದೇವರನ್ನು ದೃಷ್ಟಿಸುವ ದೃಷ್ಟಿಯನ್ನು ಕಾಪಾಡಿಕೊಳ್ಳುವನು.

ಯುದ್ಧದ ಸಮಾಚಾರಗಳು.

ವಾರ್ಸಾ ಸುತ್ತೂ ಘೋರವಾದ ಕದನ.

ಇಟಲಿಯವರು ಮುಂದರಿಸಿದ್ದು.

ಕಳೆದ ವಾರ ಬಂದಿರುವ ಯುದ್ಧವಾರ್ತೆಗಳಲ್ಲೆಲ್ಲಾ ಪೂರ್ವರಣರಂಗದ ವರ್ತಮಾನಗಳೇ ಮುಖ್ಯವಾಗಿರುತ್ತವೆ. ಅಲ್ಲಿ ಜರ್ಮನಿಯವರೂ ಆಸ್ಟ್ರಿಯಾದವರೂ ವಾರ್ಸಾ ನಗರವನ್ನು ರಷ್ಯಾದವರಿಂದ ಕಿತ್ತುಕೊಳ್ಳಬೇಕೆಂದು ಪ್ರಾಣದ ಮೇಲೆ ಎಳ್ಳಷ್ಟು ಅಂಗೀಕಾರವೆ ಅತ್ಯಂತ ಘೋರವಾಗಿ ಕದನ ಮಾಡುತ್ತಿದಾರೆ. ಇದುವರೆಗೂ ಅವರ ಸಾಹಸವೆಲ್ಲಾ ವ್ಯರ್ಥವಾಗಿರುವುದು.

ಪಶ್ಚಿಮ ರಣರಂಗದಲ್ಲಿ.

ಬ್ರಿಟಿಷ್ ಸೈನ್ಯಗಳಿರುವ ಯುದ್ಧಸಾಲಿನಲ್ಲಿ ಕಳೆದ ವಾರ ಬಹು ಮಟ್ಟಿಗೂ ಶಾಂತವಾಗಿದ್ದಿತು. ಒಂದು ಪಾಣ್ಯದಲ್ಲಿ ಬ್ರಿಟಿಷರು ನುಗ್ಗಿಹೋಗಿ ಜರ್ಮನಿ ಸೈನಿಕರಿದ್ದ ಕಂ[illegible]ಪ್ಪು ಕಂದಕಗಳನ್ನು ಸ್ವಾಧೀನಪಡಿಸಿಕೊಂಡದ್ದಲ್ಲದೆ ಅವರಲ್ಲಿ ಇಬ್ಬರು ಹುದ್ದೇದಾರರ ಸಮೇತ ಹದಿನೇಳು ಮಂದಿಯನ್ನೂ ನಾಲ್ಕು ಮೆಷೀನ್ ಪಿರಂಗಿಗಳನ್ನೂ ಕೈಸೆರೆ ಹಿಡಿದು ಕಿತ್ತುಕೊಂಡು ಬಂದರು. ಬ್ರಿಟಿಷರ ಎದುರು ಪಾರ್ಶ್ವದಲ್ಲಿ ಈಗ ಸ್ಯಾಕ್ಸನ್ ಬೆಟಾಲ್ಯನ ಕೆಲವು ಸೈನಿಕರು ಕಾಣಿಸಿಕೊಂಡಿದಾರೆ. ಇವರು ಪ್ರಷ್ಯಾದವರಲ್ಲವೆಂಬ ಸಂಗತಿಯನ್ನು ಬ್ರಿಟಿಷರಿಗೆ ತಿಳಿಸುವುದರಲ್ಲಿ ಕುತೂಹಲವುಳ್ಳವರಾಗಿದಾರೆ.

ಫ್ರೆಂಚ್ ಸೈನ್ಯಗಳಿರುವ ಸಾಲಿನಲ್ಲಿ ಕಳೆದ ವಾರ ಸಾಮಾನ್ಯವಾಗಿ ಶಾಂತವಾಗಿತ್ತೆಂದು ಕಾಣುತ್ತದೆ. ಒಂದು ಪಾಣ್ಯದಲ್ಲಿ ಮಾತ್ರ ಬಹಳ ಘೋರವಾದ ಕದನವಾಯಿತು. ಜರ್ಮನಿಯವರು ಒಂಭತ್ತು ಸಲ ಫ್ರೆಂಚರ ಸಾಲುಗಳನ್ನು ಒಡೆಯಬೇಕೆಂದು ನುಗ್ಗಿ ಬಂದು ಕದನಮಾಡಿದರು. ಫ್ರೆಂಚರು ಅವರಲ್ಲಿ ಅಪಾರ ನಷ್ಟವನ್ನುಂಟುಮಾಡಿ ಹಿಂದಕ್ಕೆ ಓಡಿಸಿರುತ್ತಾರೆ. ಆಲ್ಸೇಸಿನಲ್ಲಿ ಫ್ರೆಂಚ್ ಸೈನಿಕರು ಮುಂದು ಮುಂದಕ್ಕೆ ನುಗ್ಗಿಹೋಗುತ್ತಲೇ ಇರುವರು. ಅಲ್ಲಿ ಅನೇಕ ವೇಳೆ ಜರ್ಮನಿಯವರು ಮೇಲೆ ಬಿದ್ದು ನುಗ್ಗಿ ಕದನ ಮಾಡಿದಾಗ್ಯೂ ಅವರನ್ನು ಹಿಮ್ಮೆಟ್ಟಿಸಿದರು.

ಒಂದು ಪಾಣ್ಯದಲ್ಲಿ ಫ್ರೆಂಚರು ಜಯಪ್ರದರಾಗಿ ಜರ್ಮನಿಯವರ ಸ್ವಾಧೀನದಲ್ಲಿದ್ದ ಒಂದು ಬಲವಾದ ಕೋಟೆಯನ್ನು ಕಿತ್ತು ಸ್ವಾಧೀನಪಡಿಸಿಕೊಂಡರು. ಮತ್ತು ಅಲ್ಲಿದ್ದ ಜರ್ಮನಿ ಸೈನಿಕರಲ್ಲಿ 11 ಜನ ಹುದ್ದೇದಾರರು, 825 ಜನ ಸೈನಿಕರು (ಇವರಲ್ಲಿ 70 ಮಂದಿ ಗಾಯಪಟ್ಟವರು), ಆರು ಮೆಷೀನ್ ಪಿರಂಗಿಗಳ ಸಮೇತ ಕೈಸೆರೆಯಾಗಿರುತ್ತಾರೆ. ಅವರ ಕಂದಕಗಳನ್ನು ಫ್ರೆಂಚರು ಆಕ್ರಮಿಸಿಕೊಂಡಾಗ ಅವುಗಳ ತುಂಬಾ ಜರ್ಮನಿ ಸೈನಿಕರ ಹೆಣಗಳು ಬಿದ್ದಿದ್ದವು.

ಜರ್ಮನಿಯವರು ರೀಮ್ಸ್ ನಗರದೊಳಕ್ಕೆ ಗುಂಡುಗಳನ್ನು ಸುರಿಸಿದರು. ಇದರಿಂದ ಅಲ್ಲಿರುವ ಕೆಲವು ಸಭ್ಯ ಪ್ರಜೆಗಳು ಅಕಾಲಮರಣವನ್ನು ಹೊಂದಿದರು.

ನಮ್ಮ ಪಕ್ಷದವರು ವಿಮಾನ ಯಂತ್ರಗಳನ್ನು ಕಳುಹಿಸಿ ಶತ್ರುವಿನ ಬಹು ನಷ್ಟವನ್ನುಂಟುಮಾಡಿದಾರೆ. ಈ ವಿಮಾನ ಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು ಹಾಕಿ ಕೆಲವು ರೈಲ್ವೆ ಸ್ಟೇಷನ್‌ಗಳನ್ನೂ ರೈಲ್ ರಸ್ತೆಗಳನ್ನೂ ಹಾಳುಮಾಡಿದವು. ಒಂದು ಸಂದರ್ಭದಲ್ಲಿ 31 ವಿಮಾನ ಯಂತ್ರಗಳು ಏಕಾ

ಹೋಗಿದ್ದವು. ಜರ್ಮನಿಯವರ ಕೆಲವು ವಿಮಾನ ಯಂತ್ರಗಳನ್ನು ನಾಶ ಮಾಡಿರುತ್ತಾರೆ.

ಅಂತು ಪಶ್ಚಿಮ ರಣರಂಗದಲ್ಲಿ ವಿಶೇಷ ಕಾರ್ಯಗಳು ಹೆಚ್ಚಾಗಿ ನಡೆಯಲಿಲ್ಲವೆಂದು ಹೇಳಬೇಕಾಗಿದೆ.

ಪೂರ್ವ ರಣರಂಗದಲ್ಲಿ.

ಕಳೆದ ವಾರವೆಲ್ಲಾ ಪೂರ್ವ ರಣರಂಗದ ವಿಸ್ತಾರವಾದ ಪ್ರದೇಶದಲ್ಲಿ ಬಹು ಘೋರವಾದ ಕದನಗಳು ನಡೆದಿರುತ್ತವೆ. ಯುದ್ಧ ನಡೆಯುವ ಸೈನ್ಯಗಳ ಸಾಲು ಸುಮಾರಾಗಿ 1,000 ಮೈಲಿ ಉದ್ದವಾಗುವುದು; ಅಂದರೆ ಮೈಸೂರಿನಿಂದ ಕಲ್ಕತ್ತಾ ಪಟ್ಟಣದ ತನಕ ಸೈನ್ಯಗಳು ನಿಂತಿರುವಹಾಗಾಯಿತು. ವಿಶೇಷವಾಗಿ ನಾಲ್ಕು ಠಾಣ್ಯಗಳಲ್ಲಿ ನಡೆದ ಕದನಗಳೇ ಅತ್ಯಂತ ಘೋರವಾದವುಗಳು. ಶತ್ರು ಪರಪಕ್ಷಗಳ ಸೈನ್ಯಗಳು ಹಿಂದಕ್ಕೂ ಮುಂದಕ್ಕೂ ಓಲಾಡುತ್ತಿರುವವು. ಉತ್ತರ ಪಾರ್ಶ್ವದಲ್ಲಿ ಜರ್ಮನಿಯವರು ರೀಗಾ ನಗರದ ಕಡೆ ಮುಂದರಿಸಿ ನುಗ್ಗಿ ಹೋಗಿದಾರೆ. ಆದರೆ ರಷ್ಯಾದವರು ಅವರನ್ನು ನುಗ್ಗಿಬರದಂತೆ ತಡೆದಿರುತ್ತೇವೆಂದು ತಿಳಿಸುವರು.

ವಾರ್ಸಾ ನಗರದ ಉತ್ತರ, ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ನಡೆದಿರುವ ಕದನಗಳು ಪ್ರಾಮುಖ್ಯವಾಗಿರುತ್ತವೆ. ಜರ್ಮನಿಯವರೂ ಆಸ್ಟ್ರಿಯಾದವರೂ ತಮ್ಮ ಸೈನ್ಯಗಳನ್ನೆಲ್ಲಾ ಒಟ್ಟಾಗಿ ಜೊತೆಮಾಡಿ ತಂದಿದಾರೆ. ರಷ್ಯಾದವರನ್ನು ಓಡಿಸಿ ವಾರ್ಸಾ ನಗರವನ್ನು ಗೆದ್ದುಕೊಳ್ಳುವುದಕ್ಕೆ ಜರ್ಮನಿಯ ಮತ್ತು ಆಸ್ಟ್ರಿಯಾದ ಸೈನ್ಯವು ಇಪ್ಪತ್ತು ಲಕ್ಷದ ತನಕ ಅಲ್ಲಿ ಜಮಾಯಿಸಿ ಯುದ್ಧ ಮಾಡುತ್ತಿರುವುದು. ಪೋಲೆಂಡ್ ಸೀಮೆಯಲ್ಲಿ ವಾರ್ಸಾ ನಗರವು ಪ್ರಧಾನವಾದ ಸ್ಥಾನಿದೆ. ಇದು ವರೆಗೆ ಅಲ್ಲಿ ಕದನಗಳು ನಡೆದಿರುವುದನ್ನು ನೋಡಿದರೆ ರಷ್ಯಾದವರು ಶತ್ರು ಸೈನಿಕರಿಗೆ ಅವಕಾಶಕೊಡದೆ ಅವರನ್ನು ತಡೆದಿದಾರೆಂದೂ, ಕೆಲವು ವೇಳೆ ಹಿಮ್ಮೆಟ್ಟಿಸಿರುವಂತೆಯೂ ಗೊತ್ತಾಗುತ್ತದೆ. ಇದಲ್ಲದೆ ಕೆಲವು ಕದನಗಳ ಮಧ್ಯದಲ್ಲಿ ರಷ್ಯಾದವರು 2,000, 1,500, 1,000 ಸೈನಿಕರನ್ನು ಮೂರು ವೇಳೆ ಕೈಸೆರೆಹಿಡಿದುಕೊಂಡಿದಾರೆ. ಕದನವು ಅತ್ಯಂತ ಘೋರವಾಗಿ ನಡೆಯುತ್ತಿರುವುದೆಂದೂ, ರಷ್ಯಾ ಸೈನಿಕರಲ್ಲಿ 1,500 ಯುದ್ಧಭಟರನ್ನು ಕೈಸೆರೆಹಿಡಿದಿರುತ್ತೇವೆಂದೂ ಜರ್ಮನಿಯವರು ಒಪ್ಪಿ ಹೇಳಿರುತ್ತಾರೆ. ವಾರ್ಸಾ ನಗರದ ಉತ್ತರ, ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ಬಲವಾದ ಕೋಟೆ ಕೊತ್ತಲಗಳಿರುತ್ತವೆ. ಜರ್ಮನಿಯವರು ಇವುಗಳನ್ನು ವಶಪಡಿಸಿಕೊಂಡಲ್ಲದೆ ವಾರ್ಸಾ ನಗರಕ್ಕೆ ನುಗ್ಗಿ ಹೋಗುವ ಹಾಗಿಲ್ಲ. ವಾರ್ಸಾ ನಗರದಲ್ಲಿ ಕೋಟೆ ಕೊತ್ತಲಗಳೇನೂ ಇರುವುದಿಲ್ಲ. ಇದು ವರೆಗೆ ಜರ್ಮನಿಯವರೂ ಆಸ್ಟ್ರಿಯಾದವರೂ ಒಂದೆರಡು ಕಡೆಗಳ ಹೊರತು ಇತರ ಯಾವ ಭಾಗದಲ್ಲೂ ಆ ಕೋಟೆಗಳ ಸಮೀಪಕ್ಕೆ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ. ಮತ್ತು ಆ ಕೋಟೆಗಳ ಪೈಕಿ ಒಂದಾದರೂ ಅವರಿಗೆ ಸಿಕ್ಕಿರುವುದಿಲ್ಲ. ರಷ್ಯಾದವರಾದರೋ ಅತ್ಯಂತ ರೋಷಾವೇಶದಿಂದಲೂ ಪರಾಕ್ರಮವಾಗಿಯೂ ಕದನಮಾಡುತ್ತಿದಾರೆ. ಜರ್ಮನಿಯವರು ನುಗ್ಗಿ ಬರುತ್ತಿರುವುದನ್ನು ತಿಳಿದು ರಷ್ಯಾ ಜನಾಂಗದಲ್ಲೆಲ್ಲಾ ವಿಶೇಷ ಕಳವಳವುಂಟಾಗಿದೆ. ಕಳೆದ ವಾರ ಪ್ರಜೆಗಳು ದೇವಾಲಯಗಳಲ್ಲಿ 24 ಗಂಟೆಗಳ ಹೊತ್ತು ಕಾಕ್ರಿಯುವಂತೆ ಸೇರಿ ಪ್ರಾರ್ಥನಾದಿಗಳನ್ನು ಮಾಡಿದರು. ರಷ್ಯಾದವರಿಗೆ ಧೈರ್ಯವೇನೂ ಉಂಟಾಗಿಲ್ಲ; ತಮಗೆ ಜಯವಾಗುವುದೆಂದೂ, ತಮ್ಮ ಸೈನಿಕರು ವಾರ್ಸಾ ನಗರವನ್ನು ಜರ್ಮನಿಯವರಿಗೆ ಸೋಲತಕ್ಕವರಲ್ಲವೆಂದೂ ನಂಬಿಕೊಂಡಿದಾರೆ. ಅತ್ತಲಾಗಿ ಜರ್ಮನಿ ಚಕ್ರವರ್ತಿಯವರು ಶತ್ರು ಸಮೀಪ ಆ ಪ್ರಾಂತದಲ್ಲೇ ಬಂದಿರುತ್ತಾರೆಂದೂ, ಜರ್ಮನಿ ಸೈನಿಕರು ಆ ನಗರವನ್ನು ಗೆದ್ದ ಕೂಡಲೇ ಜಯಭೇರಿ ಹೊಡಿಸಿಕೊಂಡು ದಂಪತಿಗಳು ನಗರ ಪ್ರವೇಶ ಮಾಡಬೇಕೆಂದು ಕಾದಿರುವುದಾಗಿಯೂ ವರ್ತಮಾನವಿದೆ. ಆ ಚಕ್ರವರ್ತಿಯ ಆಸೆಯಿಂದ ಅನೇಕ ವೇಳೆ ಕೈಗೂಡದೆಹೋಯಿತು. ಅದು ವ್ಯರ್ಥವಾಗಲೆಂದು ನಂಬಿದ್ದೇವೆ.

ಅಂತರಿಕ್ಷದಲ್ಲಿ ರಷ್ಯಾ ಮತ್ತು ಜರ್ಮನಿ ವಿಮಾನ ಯಂತ್ರಗಳು ಕಲೆತು ಕಾದಾಟವಾಗಿರುತ್ತದೆ. ಇದರಲ್ಲಿ ಜರ್ಮನಿಯವರಿಗೆ ಸೋಲಾಗಿ ಓಡಿಹೋದರು.

ಜರ್ಮನಿಯವರು ಆ ನಗರವನ್ನು ಗೆದ್ದುಕೊಳ್ಳುವಷ್ಟು ಸಮರ್ಥರು ಹೌದೋ ಅಲ್ಲವೋ ಇನ್ನೆಲ್ಲಾ 10-14 ದಿನಗಳೊಳಗಾಗಿ ಗೊತ್ತಾಗಬೇಕು. ಒಂದು ವೇಳೆ ಅವರು ಆ ನಗರವನ್ನು ಗೆದ್ದುಕೊಂಡಾಗ್ಯೂ ಅದರಿಂದ ಅವರು ರಷ್ಯಾ ಚಕ್ರಾಧಿಪತ್ಯದೊಳಕ್ಕೆ ಬಹಳ ದೂರವೇನೂ ಹೋದಂತಾಗುವುದಿಲ್ಲ. ಅಲ್ಲಿಗೂ ಮಾಸ್ಕೋ ನಗರಕ್ಕೂ ರಾಜಧಾನಿಯಾದ ಪಿಟ್ರೊಗ್ರಾಡ್ ಪಟ್ಟಣಕ್ಕೂ ಬಹಳ ದೂರವಿದೆ.

ಇಟಲಿ ಮತ್ತು ಆಸ್ಟ್ರಿಯಾ.

ಆಸ್ಟ್ರಿಯಾದವರು ಇಸೊನ್ಜೊ ನದಿಯ ಪಡಪ ಮೇಲೆ ಉದ್ದಕ್ಕೂ ಬಹಳ ಬಲವಾದ ಕೋಟೆಕೊತ್ತಲಗಳನ್ನು ಕಟ್ಟಿಕೊಂಡು ಫಿರಂಗಿಗಳನ್ನೂ ಸೈನ್ಯವನ್ನೂ ಇಟ್ಟಿರೋಣದರಿಂದ ಇಟಲಿಯವರು ಆ ಕೋಟೆಗಳನ್ನೂ ಸೈನ್ಯದಲನ್ನೂ ಭೇದಿಸಿಕೊಂಡು ನುಗ್ಗಿಹೋಗುವುದೇನೂ ಸುಲಭವಾಗಿಲ್ಲ. ಆದರೆ ಅವರು ಬಹಳ ಪರಾಕ್ರಮದಿಂದಲೂ ಉಪಾಯಾಂತರಗಳಿಂದಲೂ ನುಗ್ಗಿ ಕದನಮಾಡುತ್ತಿದಾರೆ. ಪ್ರತಿ ದಿನವೂ ವಿರಾಮವಿಲ್ಲದೆ ಕದನವಾಗುತ್ತಿದೆ. ಆಸ್ಟ್ರಿಯಾದವರು ಪದೇ ಪದೇ ನುಗ್ಗಿ ಮೇಲೆ ಬಿದ್ದು ಘೋರವಾಗಿ ಕದನಮಾಡುತ್ತಿದ್ದಾಗ್ಯೂ, ಇಟಲಿಯವರು ಜಗ್ಗದೆ ಕ್ರಮ ಕ್ರಮವಾಗಿ ನುಗ್ಗಿಹೋಗುತ್ತಲೇ ಇದಾರೆ. ಒಂದು ದಿನ ಇಟಲಿಯವರು 2,000 ಸೈನಿಕರನ್ನೂ, 6 ಮೆಷೀನ್ ಫಿರಂಗಿಗಳು ಮತ್ತು 1,500 ಬಂದೂಕುಗಳನ್ನೂ ಸೆರೆ ಹಿಡಿದು ತಕ್ಕೊಂಡು ಬಂದರು; ಇನ್ನೊಂದು ದಿನ ಅವರು ಮುಂದಕ್ಕೆ ನುಗ್ಗಿಹೋಗಿ ಶತ್ರು ಸೈನ್ಯದಲ್ಲಿ 600 ಮಂದಿಯನ್ನು ಹಿಡಿದು ತಂದರು; ಆ ಬಳಿಕ ಆಸ್ಟ್ರಿಯಾದವರ ಇನ್ನು ಕೆಲವು ಕಂದಕಗಳನ್ನು ಸ್ವಾಧೀನಪಡಿಸಿಕೊಂಡು, 1,500 ಸೈನಿಕರನ್ನೂ ಕೈಸೆರೆ ಹಿಡಿದಿರುತ್ತಾರೆ. ಈ ಪೈಕಿ ಹುದ್ದೇದಾರರೇ 76 ಮಂದಿ. ಯುದ್ಧಭೂಮಿಯಲ್ಲಾದರೋ ಆಸ್ಟ್ರಿಯಾ ಸೈನಿಕರ ಹೆಣಗಳು ಹರಡಿದಂತೆ ಬಿದ್ದಿದ್ದವು. ಯುದ್ಧವು ಪ್ರಾರಂಭವಾದಾರಭ್ಯ ಇಟಲಿಯವರು 20,000 ಆಸ್ಟ್ರಿಯಾ ಯುದ್ಧಭಟರನ್ನು ಹಿಡಿದು ತಂದಿರುತ್ತಾರೆ. ಅವರ ಕಡೆ ಆದ ನಷ್ಟವು ಅಪಾರವಾದದ್ದನ್ನು ನೋಡಿ ಅವರು ಹೊಸದಾಗಿ ಬೇರೆ ಸೈನಿಕರನ್ನು ಜೊತೆಮಾಡಿ ಯುದ್ಧಭೂಮಿಗೆ ಕಳುಹಿಸಬೇಕಾಯಿತು.

ಈ ಯುದ್ಧದ ವಿಷಯದಲ್ಲಿ ಇಟಲಿಯವರು ತುಂಬಾ ಉತ್ಸಾಹಶಾಲಿಗಳಾಗಿದಾರೆ. ಗರಿಬಾಲ್ಡಿ ಎಂಬ ಪ್ರಖ್ಯಾತಿ ಪುರುಷನ ಸೈನ್ಯದಲ್ಲಿದ್ದು ಈಗ 76 ವರುಷ ವಯಸ್ಸಾಗಿ ಶಸ್ತ್ರಕೋವಿದನಾದ ಒಬ್ಬ ಮುದುಕನು ಕೂಡ ತಾನು ಯುದ್ಧಕ್ಕೆ ಹೋಗುತ್ತೇನೆಂದು ಕೇಳಿಕೊಂಡು ಹೋಗಿರುತ್ತಾನೆ. ಇಟಲಿಯವರು ಆಸ್ಟ್ರಿಯಾದವರ ಕಂದಕಗಳನ್ನು ಒಡೆದು ನುಗ್ಗಿದಾಗ ಮೇಲ್ಕಂಡ ಮುದುಕನು ಆ ಕಂದಕದ ಮೇಲೆ ನಿಂತುಕೊಂಡು ಜಯಧ್ವನಿಮಾಡುತ್ತಿದ್ದನು. ಆವರೆ ಅಷ್ಟರೊಳಗೇ ಆತನ ಎದೆಗೆ ಗುಂಡಿನೇಟು ಬಿದ್ದು ಮಡಿದುಹೋದನು.

ಇಟಲಿಯವರು ಕದನಮಾಡುವುದರಲ್ಲಿ ತುಂಬಾ ಚತುರತೆಯನ್ನು ತೋರಿಸುತ್ತಿದಾರೆ. ಸೂರ್ಯಾಸ್ತಮಯವಾದ ಮೇಲೆ ಅವರ ಸೈನಿಕರು ನುಗ್ಗಿ ಹೋಗಿ ಶತ್ರು ಸೈನಿಕರು ತಮ್ಮ ಮುಂಭಾಗದಲ್ಲಿ ಕಟ್ಟಿಕೊಂಡಿರುವ ಮುಳ್ಳು ತಂತಿಗಳನ್ನು ಕತ್ತರಿಸಿಹಾಕಿ, ಕೈಯಲ್ಲಿ ಹಿಡಿದು ಎಸೆಯುವಂಥಾ ಸಿಡಿಮದ್ದಿನ ಗುಂಡುಗಳನ್ನು ಹಿಡಿದು ಶತ್ರುವಿನ ಕಂದಕಗಳ ಮೇಲೆ ನುಗ್ಗಿ ಹೋಗುವರು. ಇವರ ಹಿಂದೆ ಕಾಲ್ಬಲದ ಸೈನಿಕರು ನುಗ್ಗಿ ಹೋಗುತ್ತಾರೆ. ಇವರೆಲ್ಲಾ ಶತ್ರುವಿನ ಗುಂಡಾಗಲಿ, ಸಿಡಿಮದ್ದಾಗಲಿ ತಮಗೆ ತಗಲದಂತೆ ಪ್ರತಿ ಒಬ್ಬರೂ ಮಣ್ಣು ಭರ್ತಿಯಾದ ಚೀಲಗಳನ್ನು ತಮ್ಮ ಬೆನ್ನಿನ ಮೇಲೆ ಹೊತ್ತುಕೊಂಡುಹೋಗಿ ಯುದ್ಧಸಾಲಿಗೆ ಹೋದಕೂಡಲೇ ಆ ಚೀಲಗಳನ್ನು ಮುಂದೆ ಮರೆಯಾಗಿ ನಿಲ್ಲಿಸಿಕೊಂಡು ಅದರ ಹಿಂಭಾಗದಲ್ಲಿ ನಿಂತು ಶತ್ರುವಿನ ಮೇಲೆ ಗುಂಡುಗಳ ಮಳೆ ಸುರಿಸಿ ನುಗ್ಗಿ ಕದನಮಾಡುತ್ತಾರೆ. ಈ ರೀತಿಯಾದ ಯುದ್ಧಕಾರ್ಯಗಳನ್ನು ನಡಿಸಿ ಅವರು ಶತ್ರುವಿನ ಐದು ಮೈಲಿಗಳಷ್ಟು ಕಂದಕಗಳನ್ನು ಗೆದ್ದುಕೊಂಡಿದಾರೆ.

ಈ ಮಧ್ಯೆ ಇಟಲಿಯವರ ಜಹಜುಗಳು ಸುಮ್ಮನಿರದೆ ಅವೂ ಕಾರ್ಯಭಾಗವನ್ನು ನಡಿಸುತ್ತಿರುವವು. ಅವುಗಳ ದೆಸೆಯಿಂದ ಆಸ್ಟ್ರಿಯಾ ತೀರದಲ್ಲೂ ದ್ವೀಪಗಳ ಮೇಲೂ ಇರುವ ಟೆಲಿಗ್ರಾಫ್ ಸ್ಟೇಷನ್‌ಗಳು ನಾಶಮಾಡಲ್ಪಟ್ಟವು. ಹೀಗೆ ನಾಶಮಾಡಿ ಹಿಂದಕ್ಕೆ ಬರುವಾಗ್ಗೆ ಇಟಲಿಯವರ ಗರಿಬಾಲ್ಡಿ ಎಂಬ ಜಹಜಿಗೆ ಟಾರ್ಪೀಡೋ ಬಡಿದು ಅದು ಮುಳುಗಿಹೋಯಿತು. ಈ ಜಹಜು 1901 ರಲ್ಲಿ ತಯಾರಾದದ್ದಾಗಿದ್ದು ಹಳೆಯದಾಗಿತ್ತು. ಅದರಲ್ಲಿದ್ದವರ ಪೈಕಿ ಬಹಳ ಜನರು ಬದುಕಿಬಂದರು.

ಇಟಲಿಯವರ ವಿಮಾನ ಯಂತ್ರಗಳು ಹೋಗಿ ಆಸ್ಟ್ರಿಯಾದವರ ರೈಲ್ವೆ ಸ್ಟೇಷನ್‌ಗಳಿಗೂ, ಹಡಗು ಮುಂತಾದವುಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ನಷ್ಟಪಡಿಸಿರುತ್ತವೆ.

ಇಟಲಿಯವರು ಮುಂದರಿಸಿ ನುಗ್ಗಿಹೋಗುವುದು ನಿಧಾನವಾಗಿದ್ದರೂ ಅವರು ಕ್ರಮಕ್ರಮವಾಗಿ ಹೋಗುತ್ತಿದಾರೆ. ಆಸ್ಟ್ರಿಯಾದವರು ಬಹಳವಾಗಿ ನಷ್ಟಪಡುತ್ತಿರುವರು.

ಟರ್ಕಿ.

ಈ ವಾರದಲ್ಲಿ ವಿಶೇಷ ಕಾರ್ಯಗಳೇನೂ ನಡೆದಿಲ್ಲ. ರಷ್ಯಾದವರು ಕಪ್ಪು ಕಡಲಿನಲ್ಲಿ ಟರ್ಕಿಯ 57 ವ್ಯಾಪಾರದ ಹಡಗುಗಳನ್ನು ಮುಳುಗಿಸಿರುತ್ತಾರೆ. ಆ ಹಡಗುಗಳಲ್ಲಿ ಟರ್ಕಿಯವರು ಸಾಮಾನು ಮುಂತಾದವುಗಳನ್ನು ಭರ್ತಿಮಾಡಿ ಆಸ್ಯಾ ಮೈನರಿಗೆ ಕಳುಹಿಸುತ್ತಿದ್ದರು.

ಬ್ರಿಟಿಷರ ಇನ್ನೊಂದು ಸಬ್‌ಮೆರೀನ್ ಎಂಬ ಹಡಗು ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದ ತನಕ ನುಗ್ಗಿ ಹೋಗಿ ಎರಡು ಜಹಜುಗಳನ್ನೂ, ಎರಡು ಹಡಗುಗಳನ್ನೂ ಮುಳುಗಿಸಿದ್ದಲ್ಲದೆ ಅಲ್ಲಿನ ರೇವುಕಟ್ಟವನ್ನು ಕೆಡಿಸಿತೆಂದು ವರ್ತಮಾನ ಬಂದಿದೆ.

ಗಲ್ಲಿಪೋಲಿಯಲ್ಲಿ ನಮ್ಮ ಪಕ್ಷದವರು ಸ್ವಲ್ಪ ಮಟ್ಟಿಗೆ ನುಗ್ಗಿಹೋಗಿದಾರೆಂದೂ, ಅಲ್ಲಿ ಟರ್ಕಿಯ ಸೈನಿಕರಿಂದ ಕೆಲವು ಕಂದಕಗಳನ್ನು ಕಿತ್ತುಕೊಂಡರೆಂದೂ ತಿಳಿಸಲ್ಪಟ್ಟಿದೆ.

ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸಿಕೊಂಡು ಹೋಗುವ ಯುದ್ಧಕಾರ್ಯದಲ್ಲಿ ಬ್ರಿಟಿಷರ ಕಡೆ ಮೇ ತಿಂಗಳ ಅಂತ್ಯದವರೆಗೆ ಆಗಿರುವ ನಷ್ಟವೆಷ್ಟೆಂದರೆ—ಹುದ್ದೇದಾರರಲ್ಲಿ 541 ಮಂದಿ ಕೊಲೆಯಾದರು, 1,267 ಮಂದಿ ಗಾಯಪಟ್ಟರು, 135 ಮಂದಿ ಸಿಕ್ಕಿ ಇಲ್ಲ; ಸೈನಿಕರಲ್ಲಿ 7,643 ಜನ ಮೃತಪಟ್ಟರು, 25,667 ಜನರಿಗೆ ಗಾಯಗಳಾಗಿವೆ, 7,401 ಜನರು ಸಿಕ್ಕಿ ಇಲ್ಲ.

ಏಡೆನ್ ಎಂಬ ತೀರಪಟ್ಟಣದ ಬಳಿ ಒಂದು ಸಣ್ಣ ಕದನವಾಯಿತು. ಟರ್ಕಿ ಸೈನಿಕರು ನುಗ್ಗಿ ಬಂದರು ಅಷ್ಟರಲ್ಲೇ ಬ್ರಿಟಿಷ್ ಸೈನ್ಯಗಳು ಹೋಗಿ ಅವರನ್ನು ಸೋಲಿಸಿ ಹಿಂದಕ್ಕೆ ಓಡಿಸಿ ಬಂದರು.

ಬ್ರಿಟಿಷ್ ಸೈನ್ಯಗಳು ಯೂಫ್ರೆಟಿಸ್ ನದಿಯ ಮೇಲಕ್ಕೆ ನುಗ್ಗಿ ಹೋಗಿ ಟರ್ಕಿಯರ ಮೇಲೆ ಮುತ್ತಿಗೆ ಹಾಕಿದರು. ಅಲ್ಲಿಗೆ ಹೊಸದಾಗಿ ಟರ್ಕಿಯವರು ಸೈನ್ಯವನ್ನು ಕಳುಹಿಸಿಕೊಟ್ಟಿದ್ದರು. ಬ್ರಿಟಿಷ್ ಸೈನಿಕರು ನುಗ್ಗಿ ಶತ್ರುವಿನ ಠಾಣ್ಯವನ್ನು ಭೇದಿಸಿ ಸ್ವಾಧೀನಪಡಿಸಿಕೊಂಡದ್ದಲ್ಲದೆ ನೂರಾರು ಮಂದಿಯನ್ನು ಕೈಸೆರೆ ಹಿಡಿದುಕೊಂಡರು. ಟರ್ಕಿಯವರು ಪರಾಕ್ರಮದಿಂದ ಕದನಮಾಡಿದರು ಅವರ 500 ಹೆಣಗಳು ಯುದ್ಧ ಭೂಮಿಯಲ್ಲಿ ಬಿದ್ದಿದ್ದವು. ಬ್ರಿಟಿಷ್ ಸೈನಿಕರಲ್ಲಿ 300-400 ಮಂದಿ ನಷ್ಟಪಟ್ಟರು.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಕದನ ನಡೆದ ಸುದ್ದಿಯೇನೂ ಬಂದಿರುವುದಿಲ್ಲ. ಜನರಲ್ ಬೋಥಾರವರು ಕೇಪ್ ಟೌನ್ ನಗರಕ್ಕೆ ವಾಪಸು ಬಂದರು. ಅಲ್ಲಿ ಅವರಿಗೆ ಸನ್ಮಾನಗಳು ನಡೆದು ಒಂದು ಕತ್ತಿಯು ಬಹುಮಾನವಾಗಿ ಕೊಡಲ್ಪಟ್ಟಿತು. ಅವರು ತಮ್ಮ ಕೈಕೆಳಗಿದ್ದ ಸೈನಿಕರು ಸೀರಿಗಾಗಿ ಪಟ್ಟ ಕಷ್ಟವನ್ನು ವಿವರಿಸಿದನು.

ಟ್ರಾನ್ಸ್‌ವಾಲಿನ ಕಲ್ಲಿದ್ದಲ ಧಣಿಗಳು ಗ್ರೇಟ್ ಬ್ರಿಟನ್ನಿಗೆ ಒಂದು ಲಕ್ಷ ಟನ್ನುಗಳ ಕಲ್ಲಿದ್ದಲನ್ನು ಕಳುಹಿಸಿಕೊಟ್ಟಿದಾರೆ.

ದಂಗೆ ಎದ್ದಿದ್ದ ಕೆಂಪ್ ಎಂಬ ಮುಖಂಡನನ್ನು ದರ್ಯಾಪ್ತಿ ಮಾಡಿದ್ದರಲ್ಲಿ ಅವನ ಮೇಲೆ ರಾಜದ್ರೋಹದ ಅಪರಾಧ ರುಜುವಾತಾದದ್ದರಿಂದ ಅವನಿಗೆ ಏಳು ವರುಷ ಸಜಾವೂ 15,000 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಅಮೇರಿಕ ಮತ್ತು ಜರ್ಮನಿ.

ಜರ್ಮನಿಯ ಮೇಲೆ ಅಮೇರಿಕದವರಿಗೆ ದಿನಕ್ರಮೇಣ ಆಗ್ರಹವು ಹೆಚ್ಚುತ್ತಾ ಬಂದಿದೆ. ಆದರೂ ಜರ್ಮನಿಯ ಪಕ್ಷವರ್ತಿಗಳ್ಯಾರೋ ಅಮೇರಿಕದವರ ಕೈಯನ್ನು ತಡೆಯುವಂತೆ ಕಾಣುವುದು. ಅಮೇರಿಕದಲ್ಲಿ ಯುದ್ಧಸಾಮಗ್ರಿಗಳು ತಯಾರಾಗುವಂಥಾ ಕಾರ್ಖಾನೆಗಳಲ್ಲಿ ಕೆಲಸಗಾರರು ಹಟಹಿಡಿದು ನಿಂತುಬಿಡುತ್ತಾರೆಂದೂ ಅಮೇರಿಕದ ಯುದ್ಧದ ಜಹಜುಗಳಲ್ಲಿ ಬೆಂಕಿಬಿದ್ದು ನಷ್ಟವಾಗುತ್ತಿದೆಯೆಂದೂ, ಪ್ರಕಟವಾಗಿದೆ. ಇದರಿಂದ ಅಮೇರಿಕದವರು ನ್ಯಾಯವೂ ಧರ್ಮವೂ ಆದದ್ದನ್ನು ಮಾಡಿಯೇ ಮಾಡಲು ಅವರಿಗೆ ಉತ್ತೇಜನವಾಗುತ್ತದೆ.

ಅಮೇರಿಕದವರು ಜರ್ಮನಿಗೆ ಇನ್ನೊಂದು ಕಾಗದವನ್ನು ಬರೆದು ಕಳುಹಿಸಿದಾರೆ. ಜರ್ಮನಿಯವರು ಕೊಟ್ಟ ಜವಾಬು ಬಹಳ ಅಸಮಾಧಾನಕರವಾಗಿದೆ ಎಂದೂ, ಅಮೇರಿಕದವರು ಮಾಡಿದ್ದ ಆಕ್ಷೇಪಣೆಗೆ ಸರಿಯಾದ ಉತ್ತರವೇ ಬರಲಿಲ್ಲವೆಂದೂ, ಯುದ್ಧದ ವಿಷಯದಲ್ಲಿ ಜರ್ಮನಿಯವರು ನಡಿಸುತ್ತಿರುವ ಕಾರ್ಯಗಳು ಧರ್ಮವಿರುದ್ಧವಾಗಿರುವವೆಂದೂ ಅಮೇರಿಕದವರು ಆಕ್ಷೇಪಣೆ ಮಾಡಿರುತ್ತಾರೆ. ಇದಲ್ಲದೆ ಅಮೇರಿಕದ ಅಭಿಮತವೇನೆಂದರೆ - ಜರ್ಮನಿಯು ನೀತಿಗೂ ಧರ್ಮಕ್ಕೂ ವಿರುದ್ಧವಾಗಿ ಯುದ್ಧಕಾರ್ಯಗಳನ್ನು ನಡಿಸುತ್ತಾ ಬಂದಿದೆ. ಆ ನೀತಿ ಧರ್ಮಗಳನ್ನು ಕೆಲವು ಕಾಲದ ಮಟ್ಟಿಗೆ ಒತ್ತಟ್ಟಿಗಿಟ್ಟು ಅಕೃತ್ಯಗಳನ್ನು ಮಾಡುತ್ತಿದ್ದರೂ ಅಮೇರಿಕದವರು ಅದನ್ನು ಒಪ್ಪಿಕೊಂಡು ಸುಮ್ಮನಿರಬೇಕೆನ್ನುತ್ತಾರೆ. ವ್ಯಾಪಾರದ ಹಡಗುಗಳನ್ನು ಜರ್ಮನಿಯವರು ತಮ್ಮ ಸಬ್‌ಮೆರೀನುಗಳಿಂದ ಮುಳುಗಿಸುವುದಕ್ಕೆ ಮುಂಚೆ ಅವುಗಳಲ್ಲಿರತಕ್ಕವರು ಬದುಕಿಕೊಳ್ಳುವಂತೆ, ಮೊದಲೇ ಎಚ್ಚರಿಕೆ ಕೊಡುತ್ತೇವೆಂದು ಜರ್ಮನಿಯವರು ಹೇಳುವ ಮಾತನ್ನು ಅಮೇರಿಕದವರು ಸಂತೋಷದಿಂದ ಒಪ್ಪಿಕೊಳ್ಳುವರು. ಆದರೆ ಈ ಧರ್ಮಕ್ಕೆ ತಾವು ಮಾತ್ರ ಕಟ್ಟುಬಿದ್ದಿಲ್ಲವೆಂದು ಜರ್ಮನಿಯವರು ಕಾರ್ಯತಃ ತೋರಿಸುತ್ತಿರುವುದು ತುಂಬಾ ವಿಷಾದಕರವಾಗಿರುತ್ತೆ. ಬ್ರಿಟಿಷರ ವರ್ತನವ ವಿಷಯದಲ್ಲಿ ಜರ್ಮನಿಯವರು ಯಾವ ರೀತಿಯಾದರೂ ಅಭಿಪ್ರಾಯಪಟ್ಟುಕೊಳ್ಳಲಿ. ಅಧರ್ಮವಾಗಿಯೂ, ಕ್ರೂರತನದಿಂದಲೂ ಜರ್ಮನಿಯು ಕಾರ್ಯಗಳನ್ನು ನಡಿಸುವುದು ಎಷ್ಟು ಮಾತ್ರಕ್ಕೂ ನ್ಯಾಯವೆನಿಸುವುದಿಲ್ಲ. ಇಂಥಾ ಕೃತ್ಯಗಳಿಗೆ ತಟಸ್ಥರಾಗಿರುವ ರಾಜ್ಯಗಳ ಪ್ರಜೆಗಳು ಸಿಕ್ಕಿ ಪ್ರಾಣ ಕಳಕೊಳ್ಳುವಂತೆ ಮಾಡಿದರೆ ಅದು ವಿಶೇಷವಾದ ಅಪರಾಧವಾದೀತು. ಅಮೇರಿಕದವರು ತಮ್ಮ ಸಹಜವಾದ ಹಕ್ಕು ಬಾಧ್ಯತೆಗಳನ್ನು ಬಿಟ್ಟುಕೊಡಲಾರರು. ಜರ್ಮನಿಯವರು ಲೂಸಿಟೇನಿಯವನ್ನು ಮುಳುಗಿಸಿದ್ದು ದೊಡ್ಡ ತಪ್ಪೆಂದು ಒಪ್ಪಿಕೊಳ್ಳಬೇಕಾಗಿದೆ. ಕೆಲವು ಹಡಗುಗಳನ್ನು ಮುಳುಗಿಸುವುದಿಲ್ಲವೆಂದು ಜರ್ಮನಿಯವರು ಹೇಳುವ ಮಾತನ್ನು ಅಮೇರಿಕದವರು ಎಷ್ಟು ಮಾತ್ರವೂ ಅಂಗೀಕಾರ ಮಾಡುವುದಿಲ್ಲ ಎಂಬುದೇ. ಈ ಎರಡನೇ ಕಾಗದಕ್ಕೆ ಜರ್ಮನಿಯವರು ಯಾವ ಜವಾಬು ಕೊಟ್ಟಾರೋ ನೋಡಬೇಕು.

ಇತರ ವಿಷಯಗಳು.

ಆಸ್ಟ್ರಿಯಾ ಹಂಗೇರಿಯಲ್ಲಿ ವಾಂತಿಭೇದಿ ಉಪದ್ರವು ಪ್ರಾರಂಭವಾಗಿ ದಿನ ಒಂದಕ್ಕೆ 1,000 ಜನರಂತೆ ಸಾಯುತ್ತಿದಾರೆಂದು ವರ್ತಮಾನವಿದೆ.

ಆಸ್ಟ್ರೇಲಿಯಾ ಎಂಬ ಬ್ರಿಟಿಷ್ ಸ್ವಾಸ್ಥ್ಯದಲ್ಲಿ ಹದಿನೈದು ದಿನಗಳೊಳಗೆ 13,809 ಜನಗಳು ತಾವಾಗಿಯೇ ಬಂದು ಸೈನ್ಯಕ್ಕೆ ಸೇರಿಕೊಂಡು ಯುದ್ಧಕ್ಕೆ ಹೊರಡಲು ತರಪೇತಾಗುತ್ತಿದಾರೆ.

ಲಾರ್ಡ್ ಕಿಚ್ನರವರು ಬ್ರೈಟನ್ ಪಟ್ಟಣಕ್ಕೆ ಹೋಗಿದ್ದು ಅಲ್ಲಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆಹೊಂದುತ್ತಿರುವ ಹಿಂದುಸ್ಥಾನದ ಗಾಯಪಟ್ಟ ಸೈನಿಕರ ಯೋಗಕ್ಷೇಮವನ್ನು ತನಿಖೆಮಾಡಿಕೊಂಡು ಬಂದರು.

ಬ್ರಿಟಿಷ್ ಮಂತ್ರಿಯವರಾದ ಮಿ|| ಆಸ್ಕಿತ್‌ರವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಟರ್ಕಿಯವರು ಮಹಮದೀಯ ಯಾತ್ರಿಕರಿಗೆ ಕಷ್ಟ ನಷ್ಟಗಳನ್ನುಂಟುಮಾಡದಿದ್ದರೆ ಬ್ರಿಟಿಷರು ಮಹಮದೀಯ ಯಾತ್ರಾಸ್ಥಾನಗಳ ತಂಟೆಗೆ ಹೋಗುವುದಿಲ್ಲವೆಂಬದಾಗಿ ತಿಳಿಯಪಡಿಸಿದರು. ಈ ಭರವಸೆಯುಳ್ಳ ಮಾತು ಹಿಂದುಸ್ಥಾನದಲ್ಲೆಲ್ಲಾ ವಿಶೇಷವಾದ ಸಂತೋಷವನ್ನೂ ಸಮಾಧಾನವನ್ನೂ ಉಂಟುಮಾಡಿರುತ್ತದೆ.

ಜರ್ಮನಿಯವರ ಸಬ್‌ಮೆರೀನುಗಳು ಉತ್ತರ ಕಡಲಿನಲ್ಲಿ ರಷ್ಯಾದವರ ಒಂದು ಜಹಜನ್ನೂ, ಫ್ರೆಂಚರ ಒಂದು ಜಹಜನ್ನೂ, ಆರು ಸಣ್ಣ ಹಡಗುಗಳನ್ನೂ ಮುಳುಗಿಸಿರುತ್ತವೆ. ಒಂದು ಹಡಗಿನಲ್ಲಿದ್ದ ಒಂಭತ್ತು ಮಂದಿಯೂ ಸಮುದ್ರದ ಪಾಲಾದರು. ಯುದ್ಧದ ಪ್ರಾರಂಭದಿಂದ ಜರ್ಮನಿಯವರು ಪರರಾಜ್ಯಗಳ ಅಂದರೆ ಈ ಯುದ್ಧದಲ್ಲಿ ಬೆರೆಯದೆ ಇರುವ ಜನಗಳ 95 ಜಹಜುಗಳನ್ನೂ ಹಡಗುಗಳನ್ನೂ ಮುಳುಗಿಸಿರುತ್ತಾರೆಂದು ತಿಳಿಯುವುದು.

ಹಿಂದುಸ್ಥಾನದ ಸೈನಿಕರಲ್ಲಿ ಪರಾಕ್ರಮಿಗಳಾದ ಕೆಲವನ್ನು ಚುನಾಯಿಸಿ ನಮ್ಮ ಚಕ್ರವರ್ತಿ ಸಾರ್ವಭೌಮರವರ ಅಂಗರಕ್ಷಕರಾಗಿ ನೇಮಿಸಬೇಕೆಂದೂ ಈ ಸೈನಿಕರಿಗೆ ಇಂಡಿಯನ್ ಗಾರ್ಡ್ಸ್ ಎಂಬ ಹೆಸರಿಡಬೇಕೆಂದೂ ಸೂಚಿಸಲ್ಪಟ್ಟಿದೆ. ಈ ವಿಚಾರವನ್ನು ಬ್ರಿಟಿಷ್ ಗವರನ್‌ಮೆಂಟಿನವರು ಚೆನ್ನಾಗಿ ಪರ್ಯಾಲೋಚಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ.—ಸಿಂಧಿಯಾ ಮಹಾರಾಜರವರು ಮದ್ದು ಗುಂಡನ್ನು ತಯಾರುಮಾಡಿಕೊಳ್ಳುವ ಖರ್ಚಿಗಾಗಿ ಮಿ|| ಲ್ಲಾಯಡ್ ಜಾರ್ಜ್‌ರವರಿಗೆ 90,000 ರೂಪಾಯನ್ನು ಕಳುಹಿಸಿಕೊಟ್ಟರು. ಆ ಮಂತ್ರಿಯು ಈ ದ್ರವ್ಯವನ್ನು ಸ್ವೀಕರಿಸಿ ಮಹಾರಾಜರವರನ್ನು ವಂದಿಸಿರುತ್ತಾರೆ.—ಬೊಂಬಾಯಿ ಪಟ್ಟಣದಲ್ಲಿರುವ ಸರ್ ಸೆಸೂನ್ ಡೇವಿಡ್ ಬಾರೊನೆಟ್, ಸರ್ ಷಾಪೂರ್‌ಜಿ ಭಾರೂಚಾ ಎಂಬೀ ಲಕ್ಷಾಧೀಶ್ವರರಿಬ್ಬರು ಎರಡು ವಿಮಾನ ಯಂತ್ರಗಳನ್ನು ಅವುಗಳಲ್ಲಿರಬೇಕಾದ ಸಮಸ್ತ ಯುದ್ಧ ಸಾಮಗ್ರಿಗಳ ಸಮೇತ ಒದಗಿಸುತ್ತೇವೆಂದು ಒಪ್ಪಿಕೊಂಡಿದಾರೆಂದು ಬೊಂಬಾಯಿನ ಗವರ್ನರವರು ಬಹಳ ಸಂತೋಷಪಟ್ಟು ಪ್ರಕಟಮಾಡಿರುತ್ತಾರೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಬರ್ಮಿಂಗ್‌ಹಂ ಪಟ್ಟಣಕ್ಕೆ ಚಿತ್ತೈಸಿ, ಮದ್ದು ಗುಂಡು ಮೊದಲಾದ ಯುದ್ಧ ಸಾಮಗ್ರಿಗಳು ತಯಾರಾಗುವ ಕಾರ್ಖಾನೆಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು ಕೆಲಸಗಾರರ ಕೂಡ ಮಾತನಾಡಿಕೊಂಡು ಬಂದರು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಮೂರು ದಿನಗಳಿಂದಲೂ ಮೋಡ ಮುಚ್ಚಿಕೊಂಡು ಆಗಾಗ್ಗೆ ಮಳೆ ಸುರಿಯುತ್ತಲೂ, ಬಿರುಗಾಳಿ ಬೀಸುತ್ತಲೂ ಇದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಮುಂದಿನ ಸೆಪ್ಟಂಬರ್ ತಾ. 3 ನೇ ಶುಕ್ರವಾರದಿಂದ ಪ್ರಾರಂಭವಾಗುವುದೆಂದು ಪ್ರಕಟವಾಗಿದೆ.

ರಾಜಧಾನಿಯ ಮ್ಯುನಿಸಿಪಾಲಿಟಿಯಲ್ಲಿ ಪ್ರಜಾ ಪಕ್ಷದ ಮೆಂಬರಾಗಿದ್ದ ಮು|| ಜಹಗೀರ್‌ದಾರ್ ಮಾದಪ್ಪನವರು ಕೆಲವು ದಿನಗಳಿಂದ ಕಾಯಿಲೆ ಇದ್ದು ಕಳೆದ ಶನಿವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೊನ್ನೆ ಮಂಗಳವಾರ ಬೆಳಗ್ಗೆ ರಾಜಧಾನಿಯ ರೈಲ್ವೆ ಸ್ಟೇಷನ್ ರಸ್ತೆಯಲ್ಲಿ ಒಬ್ಬ ಹುಡುಗನು ಮೋಟರ್ ಗಾಡಿಗೆ ಸಿಕ್ಕಿ ಗಾಯಪಟ್ಟು ತೀರಿಹೋದನೆಂದೂ, ಪೋಲೀಸಿನವರು ವಿಚಾರಣೆ ಮಾಡುತ್ತಿದಾರೆಂದೂ ಕೇಳುತ್ತೇವೆ.

ಚಿಕ್ಕ ಜಾಜೂರಿನಿಂದ ಚಿತ್ರದುರ್ಗಕ್ಕೆ ರೈಲ್ ರಸ್ತೆ ಹಾಕಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿರೋಣದರಿಂದ ಆ ಡಿಸ್ಟ್ರಿಕ್ಟಿನ ಅಮಲ್ದಾರರುಗಳು ತಾಲ್ಲೂಕುಗಳಲ್ಲಿ ಹಣ ಕೂಡಿಸುವ ತರಪೂದು ನಡಿಸುತ್ತಿದಾರೆ.

ಕೊಟ್ಟೂರಿನಿಂದ ಹರಿಹರಕ್ಕೆ ರೈಲ್ ರಸ್ತೆ ಹಾಕುವ ವಿಚಾರದಲ್ಲಿ ಪ್ರಥಮ ಸರ್ವೆ ಕೆಲಸಗಳನ್ನು ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರು ನಡಿಸುತ್ತಾರೆ. ನಮ್ಮ ಸರ್ಕಾರದವರು ಈ ಕಂಪನಿಗೆ ಅಪ್ಪಣೆಯನ್ನು ಕೊಟ್ಟಿರುವರು.

ಸಿಂಲಾ ಪಟ್ಟಣಕ್ಕೆ ದಯಮಾಡಿದ್ದ ನಮ್ಮ ಬ್ರಿಟಿಷ್ ರೆಸಿಡೆಂಟರವರೂ, ದಿವಾನ್‌ರವರೂ ಕಳೆದ ವಾರ ಬೆಂಗಳೂರಿಗೆ ಬಂದರು. ಶ್ರೀಮದ್ಯುವರಾಜರವರು ಬೊಂಬಾಯಿಗೆ ದಯಮಾಡಿದ್ದು ಈ ವಾರ ರಾಜಧಾನಿಗೆ ವಾಪಸು ಚಿತ್ತೈಸುವರೆಂದು ಕೇಳುತ್ತೇವೆ.

ಇಂದೋರ್ ಸಂಸ್ಥಾನದ ಮಹಾರಾಣಿಯವರು ಹಿಂದಿನ ವಾರ ಬೆಂಗಳೂರಿಗೆ ದಯಮಾಡಿದ್ದಾಗ್ಗೆ ಅಲ್ಲಿನ ವಿಕ್ಟೋರಿಯಾ ಆಸ್ಪತ್ರೆಯನ್ನು ಹೋಗಿ ನೋಡಿಕೊಂಡು ಬಂದು ಆ ಆಸ್ಪತ್ರೆಗೆ 1,000 ರೂಪಾಯನ್ನು ಉಚಿತವಾಗಿ ಕಳುಹಿಸಿಕೊಟ್ಟರೆಂದು ತಿಳಿಯುತ್ತದೆ.

ರಾಜಧಾನಿಯಲ್ಲಿರುವ ಸಾಹುಕಾರ್ ಮು|| ವರ್ಧಮಾನಯ್ಯನವರ ಮಾತೃಶ್ರೀಯವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಉತ್ತರಕ್ರಿಯಾದಿಗಳನ್ನು ಅವರು ಈ ವಾರ ತುಂಬಾ ಉದಾರವಾಗಿ ನಡಿಸಿದರು. ಇದಕ್ಕಾಗಿ ಪರಸ್ಥಳಗಳಿಂದಲೂ ಅನೇಕರು ಬಂದಿದ್ದರು.

ಕಳೆದ ವಾರ ಬರೋಡೆಯ ಗಾಯಕವಾಡಿ ಮಹಾರಾಜರವರು ಬೆಂಗಳೂರಿಗೆ ದಯಮಾಡಿಸಿದ್ದ ಸಂದರ್ಭದಲ್ಲಿ ಸಂಸ್ಕೃತ ವಿದ್ಯಾವರ್ಧಕ ಸಂಘವನ್ನು ಪ್ರಾರಂಭ ಮಾಡಿದರು. ಮತ್ತು ಅವರು ಬೆಂಗಳೂರಿನಲ್ಲಿ ದಿವಾನ್‌ರವರ ಕಚೇರಿಗೆ ದಯಮಾಡಿ ಇಲಾಖೆಗಳನ್ನೂ, ಅಲ್ಲಿ ನಡೆಯುವ ಕೆಲಸಕಾರ್ಯಗಳನ್ನೂ ಪರಾಂಬರಿಸಿದರು.

ಅರಳೆಪೇಟೆಯಲ್ಲಿರುವ ಜನರಲ್ ಹಿಂದೂ ವೈದ್ಯಶಾಲೆಯ ಪಂಡಿತರಾದ ಮು|| ಸುಬ್ರಹ್ಮಣ್ಯಯ್ಯನವರು ಇಪ್ಪತ್ತು ಬಡ ವಿದ್ಯಾರ್ಥಿಗಳಿಗೆ ಭೋಜನಕ್ಕೂ ಅನುಕೂಲ ಮಾಡಿಕೊಟ್ಟು ಹಿಂದೂ ವೈದ್ಯವನ್ನು ಕಲಿಸಿಕೊಡುತ್ತೇವೆಂದೂ, ಇಂಗ್ಲಿಷ್ ಮತ್ತು ಸಂಸ್ಕೃತದಲ್ಲಿ ಸ್ವಲ್ಪ ಪರಿಶ್ರಮವಿರತಕ್ಕವರು ಬರಬಹುದೆಂದೂ ತಿಳಿಸುತ್ತಾರೆ.

ಪರಹಿತಕಾರ್ಯಗಳನ್ನು ಮಾಡುವಂತೆ ಪ್ರಜೆಗಳಲ್ಲಿ ಪ್ರೀತಿ ಉತ್ಸಾಹಗಳನ್ನು ಉಂಟುಮಾಡುವುದಕ್ಕಾಗಿ ನಮ್ಮ ಶ್ರೀಮದ್ಯುವರಾಜರವರು ಬೆಂಗಳೂರಿನಲ್ಲಿ ಒಂದು ಸಂಘವನ್ನು ಕಲ್ಪಿಸಿ ತಾವೇ ಅದರ ಅಧ್ಯಕ್ಷಪದವಿಯನ್ನು ಅಂಗೀಕರಿಸಿರುತ್ತಾರೆ. ಈ ಸಂಘದವರು ಆ ಉದ್ದೇಶಕ್ಕಾಗಿ ಒಂದು ಪಾಠಶಾಲೆಯನ್ನು ಪ್ರಾರಂಭಿಸಿ ಜನರಿಗೆ ಸತ್ಕಾರ್ಯಪ್ರವರ್ತನೆಯನ್ನು ಕಲಿಸಿಕೊಡುವರೆಂದು ಪ್ರಕಟವಾಗಿದೆ.

ಯಳಂದೂರು ಜಹಗೀರ್ ರೈತರ ಹೀನಸ್ಥಿತಿ.

ಇಲ್ಲಿನ ರೈತರಿಗೆ ಉಂಟಾಗಿರುವ ಕಷ್ಟಗಳನ್ನು ಅನೇಕರು ಅರಿತಿರಲಾರರು. ಇವರ ದುರವಸ್ಥೆಗೆ ಇಲ್ಲಿನ ಕೆರೆ ಕಾಲುವೆಗಳು ನೂರಾರು ವರುಷಗಳಿಂದ ನಾದುರಸ್ತಾಗಿ ಮೆಕ್ಕಲಿನಿಂದ ಹೂತುಹೋಗಿ ಎಷ್ಟು ಸಾರಿ ಕೆರೆ ತುಂಬಿದರೂ ಒಂದು ಬೆಳೆಗೆ ನೀರು ಸಾಲದೆ ಹೋಗುವದರಿಂದ ಪ್ರತಿ ವರುಷವೂ ಕರೆ ಬೆಳಸು ಮಾಡಿದರೆ ಕೆರೆಯಲ್ಲಿ ನೀರಿಲ್ಲದೆ ಕೆಡುತ್ತಲೂ ಖುಷ್ಕಿ, ಬೆಳಸು ಮಾಡಿದರೆ ಜಮೀನಿನಲ್ಲಿ ನೀರು ನಿಂತು ಕೆಡುತ್ತಲೂ ಪ್ರತಿ ವರುಷದಲ್ಲಿಯೂ ನಷ್ಟ ಹೊಂದುತ್ತಿರುವದೂ ಮತ್ತು ಇದರ ಮೇಲೆ ಸರ್ವೆ ಸೆಟ್ಲಮೆಂಟು ವಸೂಲಿ ಖುಷ್ಕಿ ಎಕರೆ ಒಂದಕ್ಕೆ ರೂ. 2-4-0 ಯಂತೆಯೂ, ತರಿ ಎಕರೆ ಒಂದಕ್ಕೆ ರೂ. 7-8-0 ಯಂತೆಯೂ, ಬಾಗಾಯಿತು ಎಕರೆಗೆ 12 ರೂಪಾಯಿನಂತೆಯೂ ಕಾವೇರಿ ನಾಲಾ ಚ್ಯಾನಲಿನಂತೆ ಕರಾರುಮಾಡಿರುವದೂ ಮುಖ್ಯಕಾರಣಗಳಾಗಿವೆ. ಗತಿಸಿದ ಜಹಗೀರುದಾರ್ರವರು ಕಾವು ಅಂಬಳೆ, ಯಳಂದೂರು, ಎರಿಯೂರು ಮತ್ತು ಮದ್ದೂರು ಕೆರೆಗಳ ನೀರು ಸರಬರಾಯಿಗಾಗಿ ಹೊನ್ನುಹೊಳೆಗೆ ಅಣೆ ಕಟ್ಟು ಕಟ್ಟಿಸಿ ಕೆರೆ ಕಾಲುವೆಗಳನ್ನೆಲ್ಲಾ ಸರಿಯಾದ ಸ್ಥಿತಿಗೆ ತಂದು ಸಮೃದ್ಧಿಯಾಗಿ ಅಣೆ ಮೂಲಕ ನೀರು ಸರಬರಾಯಿ ಹೊಂದುತ್ತಿರುವ ಅಗರದ ಕೆರೆ ಕೆಳಗಿನ ಜಮೀನುಗಳ ಸ್ಥಿತಿಗೆ ತರುವದಾಗಿ ಸರಕಾರದಲ್ಲಿ ಒಪ್ಪಿದ್ದಾಗಿಯೂ, ಅದರ ಮೇಲೆ ಸರಕಾರದವರು 1896 ನೇ ಇಸವಿಯಲ್ಲಿ ಸೆಟ್ಲಮೆಂಟು ಆರ್ಡರು ಮಾಡಿದ್ದಾಗಿಯೂ ತಿಳಿಯಬರುತ್ತದೆ. ಇದೂ ಅಲ್ಲದೆ ಅಣೆಯನ್ನು ಕಟ್ಟಲು ಸರ್ಕಾರಿ ಸರಹದ್ದಿನಲ್ಲಿ ಸ್ಥಳವನ್ನು ಕೊಡುವದಾಗಿ ದಯಾಳುಗಳಾದ ಮೈಸೂರು ಸರ್ಕಾರದವರು ಒಪ್ಪಿರುವಂತೆ ಸಹ ಕೇಳುತ್ತೇವೆ. ಈಗ ಸರ್ವೆ ಆಗಿ 20 ವರುಷಗಳಾಗುತ್ತ ಬಂತು. ಕೆರೆ ಕಾಲುವೆಗಳ ದುರಸ್ತು ವಿಚಾರದಲ್ಲಿಯಾಗಲಿ ಅಥವ ಸರ್ಕಾರದಲ್ಲಿ ಒಪ್ಪಿರುವದಾಗಿ ಹೇಳುವ ಕಲ್ಲು ಅಣೆಯನ್ನು ಕಟ್ಟುವ ವಿಷಯದಲ್ಲಾಗಲಿ ಸ್ವಲ್ಪವೂ ಜಹಗೀರುದಾರ್ರವರು ಗಮನವನ್ನು ಕೊಡಲಿಲ್ಲ. ಇಷ್ಟರಲ್ಲಿ ಎರಿಯೂರು ಕೆರೆಗೆ ಹೊನ್ನುಹೊಳೆಯಿಂದ ಬರುವ ಕಾಲುವೆಯು ಒಡೆದು ಹೋಗಿ ಸುಮಾರು 15 ವರುಷಗಳಾಯಿತು. ರೈತರೇ ಅನೇಕ ಸಲ ಕಾಂಗಾರಿಯನ್ನು ಮಾಡಿದರು. ಆದಾಗ್ಯೂ ನಿಲ್ಲಲಿಲ್ಲ. ಕೆರೆಗೆ ನೀರು ಬರದೆ ಬೆಳೆಗಳು ಕೆಡುತ್ತ ಇವೆ. ಕೆರೆ ಕಾಲುವೆಗಳು ಒಡೆದುಹೋಗಿ ತರಿ ಬೆಳಸು ಮಾಡುವದಕ್ಕಾಗದೆ ಇದ್ದರೆ ರಿಪೇರಿ ಕೆಲಸಗಳು ಪೂರೈಸಿ ನಾಲಾ ಕಲಾವೆಗಳು ಸರಿಯಾದ ಸ್ಥಿತಿಗೆ ಬರುವವರೆಗೂ ಸರ್ಕಾರಿ ಗ್ರಾಮಗಳಲ್ಲಿ ಬೆಂಗಾರು ಕಂದಾಯವನ್ನು ಹಾಕುವ ವಾಡಿಕೆ ಇದೆ. ಅದೊಂದೂ ಇಲ್ಲಿ ಜಾರಿಯಲ್ಲಿ ಇಲ್ಲ. ಕಂದಾಯವನ್ನು ಮಾತ್ರ ಬಹಳ ಬಿಂಡಿತವಾಗಿ ಲ್ಯಾಂಡ್ ರೆವಿನ್ಯೂ ಕೋಡಿನ ರೂಲಸುಗಳೆಲ್ಲವೂ ಜಾರಿಯಲ್ಲಿ ತಂದು ವಸೂಲುಮಾಡುತ್ತಾರೆ. ಇದರಿಂದ ಮಾಸಕ್ಕೆ ಹವರಿ ಕಂದಾಯವನ್ನು ಕೊಟ್ಟು, ಎಂದಿಗಾದರೂ ಕೆರೆ ಕಾಲುವೆಗಳ ರಿಪೇರಿಯಾಗಿ ನಮ್ಮ ಕಷ್ಟಗಳು ಪರಿಹಾರವಾದೀತೋ ಏನೋ ಎಂದು ಜಮೀನುಗಳನ್ನು ಉಳಿಸಿಕೊಳ್ಳುತ್ತ ಇದೇವೆ. ಅನೇಕ ವರುಷಗಳಿಂದಲೂ ಜಹಗೀರುದಾರ್ರವರಿಗೆ ಅರ್ಜಿಗಳನ್ನು ಹಾಕಿಕೊಂಡದ್ದಾಯಿತು; ರೂಬರೂಟು ಹೇಳಿಕೊಂಡದ್ದಾಯಿತು. ಉಪಯೋಗವೇನೂ ಆಗಲಿಲ್ಲ ಇದರ ಮೇಲೆ ಶ್ರೀಮನ್ ಮಹಾರಾಜರವರ ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟಿದ್ದಾಯಿತು. ಅದರ ಮೇಲೆ ನಂಜನಗೂಡು ಸಬ್ ಡಿವಿಜನ್ ಸಾಹೇಬರವರು ಇಲ್ಲಿನ ಸ್ಥಿತಿಯನ್ನು ನೋಡಿಕೊಂಡು ದಯಮಾಡಿದರು. ಇದುವರೆಗೂ ಏನೂ ವ್ಯವಸ್ಥೆಯಾಗಲಿಲ್ಲ. ಈಗಲಾದರೂ ಸರ್ಕಾರದವರು ತಮ್ಮ ಘನವಾದ ಚಿತ್ತದಲ್ಲಿ ಈ ಯಳಂದೂರು ತಾಲೂಕಿನ ಬಡರೈತರ ಅರಿಕೆಯನ್ನು ತಂದುಕೊಂಡು ಜಾಗ್ರತೆಯಾಗಿ ಕೆರೆ ಕಾಲುವೆಗಳ ರಿಪೇರಿಯು ನಡೆಯುವಂತೆಯೂ, ಅದುವರಿಗೂ ಮೇಲೆ ಹೇಳಿದ ನಾಲ್ಕು ಕೆರೆ ಬೈಲುಗಳಲ್ಲಿಯೂ ಬೆಂಗಾರು ಕಂದಾಯ ವಸೂಲುಮಾಡುವಂತೆಯೂ ಜಹಗೀರದಾರ್ರವರಿಗೆ ಆರ್ಡರು ಮಾಡಿದರೆ ಇಲ್ಲಿನ ರೈತರ ಕಷ್ಟ ಪರಿಹಾರವಾದೀತು. ನಮ್ಮ ನೆರೆಯವರಾದ ಮೈಸೂರು ಸರ್ಕಾರಿ ಗ್ರಾಮಗಳಲ್ಲಿ ವಾಸಮಾಡುವ ರೈತರು ಸಂಪದಭ್ಯುದಯ ಸಂಘದಿಂದ ಉಂಟಾಗುತ್ತಿರುವ ಫಲಗಳನ್ನು ಅನುಭವಿಸುತ್ತಿರುವಾಗ ನಾವು ಕೇವಲ ಜೀವನಕ್ಕೆ ಇಲ್ಲದೆ ತೊಂದರೆಪಡುತ್ತಿರುವದಲ್ಲದೆ, ದುಬಾರಿ ಕಂದಾಯವೆಂಬ ಭಾರವನ್ನು ಹೊತ್ತುಕೊಂಡು ಅನೇಕ ವಿಧವಾದ ಕಷ್ಟಗಳನ್ನು ಅನುಭವಿಸುತ್ತಾ ಇದೇವೆ

ಜಹಗೀರಿಯ ರೈತ.

ಮೈಸೂರು ಸಿಟಿ ಮ್ಯುನಿಸಿಪಲ್ ಮೀಟಿಂಗು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಲರುಗಳು ಕಳೆದ ಶನಿವಾರ ಬೆಳಿಗೆ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಿಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಜೂನ್ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳಿಂದ ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ. 30,267-8-0 ಪೈ ಉತ್ಪತ್ತಿಯೂ, ರೂ 44,262-15-10 ಪೈ ಖರ್ಚು ಆಯಿತೆಂದೂ, ಜನನ 179, ಮರಣ 129 ಆಯಿತೆಂದೂ ತಿಳಿಯಿತು. 5 ವರುಷದೊಳಗಿನ ಮಕ್ಕಳು 46 ಮಂದಿ ತೀರಿಹೋದರು. ಕ್ಷಯದಲ್ಲಿ 10, ಕೋಥೆಯಲ್ಲಿ 12, ಮಲೇರಿಯಾದಲ್ಲಿ 7 ಮರಣಗಳಾಗಿವೆ. 60 ನಾಯಿಗಳನ್ನು ಕೊಂದುಹಾಕಿದರು ಮಿಸ್ ಪಾರ್ಸನ್ ರವರು ತಮ್ಮ ಸಾಕಿದ ನಾಯಿಗೆ ವಿಷಹಾಕಿ ಕೊಂದರೆಂದೂ, ಮ್ಯುನಿಸಿಪಾಲಿಟಿಯ ಮೇಲೆ ಅದಕ್ಕಾಗಿ ಫಿರ್ಯಾದು ಮಾಡುವುದಾಗಿಯೂ ತಿಳಿಸಿದ ಹಾಗೂ, ವಿಚಾರಿಸಿದ್ದರಲ್ಲಿ ಮ್ಯುನಿಸಿಪಾಲಿಟಿಯವರು ವಿಷಹಾಕಲಿಲ್ಲವೆಂದು ಗೊತ್ತಾಯಿತೆಂದೂ ಪ್ರೆಸಿಡೆಂಟರು ತಿಳಿಸಿ, ನಾಯಿಗಳನ್ನು ಕೊಲ್ಲುವುದಕ್ಕೆ ಮದರಾಸಿನಲ್ಲಿ ಆಚರಣೆಯಲ್ಲಿರುವ ಪದ್ಧತಿಯನ್ನು ಇಲ್ಲೂ ರೂಢಿಗೆ ತರಬೇಕೆಂದು ಸೂಚಿಸಿದರು ಆಡಿಟರ ರಿಪೋರ್ಟಿನಿಂದ ಮೊಹತರ್ಫಾ ವಸೂಲಿಯು ಸುಮಾರು 700 ರೂಪಾಯಿ ಕಡಮೆ ಆಗಿದೆ ಎಂದೂ, ಸರಾಫರು ರೂಲಸಿನಂತೆ ಜಾಮೀನ್ ಕೊಟ್ಟಿಲ್ಲವೆಂದೂ ತಿಳಿಯಿತು. ಜೂನ್ ತಿಂಗಳಲ್ಲಿ 8¾ ಅಂಗುಲ ಮಳೆ ಆಗಿದೆ. ಮ್ಯುನಿಸಿಪಲ್ ಕೌನ್ಸಲರ್ ಮ॥ ತಿರುವೆಂಗಡಂ ಮೊದಲಿಯಾರ್ರವರು ಮಗುವಿಗೆ ದೇವೀತಿಡುಬು ಹಾಕಿದ ಮೇಲೆ ತಿಡುಬು ಎರವೆ ಭೇದಿ ಹುಟ್ಟಿ ಮಿಷನ್ ಆಸ್ಪತ್ರೆಯಲ್ಲಿ ಸತ್ತುಹೋಯಿತೆಂದೂ, ತಿಡುಬು ಹಾಕಿದ ನೌಕರನು ಮಕ್ಕಳ ಸ್ಥಿತಿಯನ್ನು ಮತ್ತೆ ವಿಚಾರಿಸದೆಹೋದದ್ದು ತಪ್ಪೆಂದೂ ಆಕ್ಷೇಪಣೆ ಮಾಡಲಾಯಿತು ಮೆಂಬರುಗಳು ಈ ಭಾಗದಲ್ಲಿ ಹೆಲ್ತ್ ಆಫೀಸರು ಸರಿಯಾದ ಮೇಲ್ವಿಚಾರಣೆ ಇಡಬೇಕೆಂದು ತಿಳಿಸಿದರು.

ಭಕ್ಷಿನರಸಪ್ಪನವರ ದೇವಸ್ಥಾನಕ್ಕೆ ಸೇರಿದ 11 ಅಂಗಡಿಗಳಿಗೂ ಸನ್ನದು ಅನುಸರಿಸಿ ಮ್ಯುನಿಸಿಪಲ್ ತೆರಿಗೆಯನ್ನು ವಸೂಲ್ಮಾಡತಕ್ಕದ್ದಲ್ಲವೆಂದು ತೀರ್ಮಾನವಾಯಿತು.—ಅಂಗಡಿಗಳ ಬಾಡಿಗೆ ದರದ ಮೇಲೆ ಶೇಕಡಾ 1 ರೂಪಾಯಿನಂತೆ ನೀರಿನ ತೆರಿಗೆ ವಸೂಲ್ಮಾಡಬೇಕೆಂದು ತೀರ್ಮಾನವಾಗಿ ಗವರ್ನ್‌ಮೆಂಟ್ ಸ್ಯಾಂಕ್ಷನ್ ಬಗ್ಗೆ ಕಳುಹಿಸಲಾಯಿತು.—ಪಟ್ಟಣದೊಳಗೆ ಮೋಟರ್ ಗಾಡಿ ಮತ್ತು ಸೈಕಲ್‌ಗಳನ್ನು ಗಂಟೆಗೆ 10 ಮೈಲಿಗಿಂತ ವೇಗವಾಗಿ ಓಡಿಸಕೂಡದೆಂದೂ, ಕೆಲವು ಗೊತ್ತಾದ ಮುಖ್ಯ ರಸ್ತೆಗಳಲ್ಲಿ ಗಂಟೆಗೆ 6 ಮೈಲಿಯಂತೆ ನಿಧಾನವಾಗಿ ಬಿಟ್ಟುಕೊಂಡು ಹೋಗಬೇಕೆಂದೂ, ವಿರೋಧವರಿಗೆ 50 ರೂಪಾಯಿ ಜುಲ್ಮಾನೆಯಾಗುವುದೆಂದೂ ಮಾಡಿದ್ದ ರೂಲಸನ್ನು ಸರ್ಕಾರದ ಸ್ಯಾಂಕ್ಷನ್ ಬಗ್ಗೆ ಕಳುಹಿಸಿರುತ್ತಾರೆ.—ದೊಡ್ಡಪೇಟೆಯಲ್ಲಿರುವ ಹಳೇ ತಾಲ್ಲೂಕ್ ಕಛೇರಿ ಕಟ್ಟಡವನ್ನು ಹರಾಜು ಮೂಲಕ ವಿಕ್ರಯಿಸಬಹುದೆಂದು ಮೊದಲು ತೀರ್ಮಾನವಾಗಿತ್ತು ಈಚೆಗೆ ಸೆಂಟ್ರಲ್ ಪೊಲೀಸ್ ಸ್ಟೇಷನ್‌ಗೆ ಸ್ಥಳ ಸಾಲದೆಂದು ತಿಳಿದದ್ದರ ಮೇಲೆ ಆ ಕಟ್ಟಡವನ್ನು ಹರಾಜು ಹಾಕದೆ ಉಳಿಸಬೇಕೆಂದು ಸರ್ಕಾರದ ಹುಕುಂ ಕೊಟ್ಟಿದಾರೆ.—ಶವಗಳನ್ನು ಹೂಳುವುದಕ್ಕೆ ಊರ ಹೊರಗೆ ಜಮೀನುಗಳನ್ನು ಕೊಂಡುಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಯವರು ಮೊದಲು 3,000 ಚಿಲ್ಲರೆ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು. ಇದು ಸಾಲದೆ ಹೋದದ್ದರಿಂದ ಇನ್ನೂ 912 ಚಿಲ್ಲರೆ ರೂಪಾಯಿ ಖರ್ಚು ಮಾಡಬಹುದೆಂದು ಮೆಂಬರುಗಳು ಒಪ್ಪಿರುತ್ತಾರೆ—ಮಿಷನ್ ಆಸ್ಪತ್ರೆಯ ಬಳಿ ಇರುವ ಖಾಲಿ ನಿವೇಶನವನ್ನು ಆಸ್ಪತ್ರೆಗೆ ಸೇರಿಸಿಕೊಳ್ಳುವುದಕ್ಕೆ ಮುಫತ್ತಾಗಿ ಕೊಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು. ಅಲ್ಲಿರುವ ಮರಗಳನ್ನು ಹರಾಜು ಹಾಕದೆ ಆಸ್ಪತ್ರೆಯೊಳಕ್ಕೆ ಸೇರಿಸಿಕೊಳ್ಳುವಂತೆ ತಿಳಿಸಬೇಕೆಂದು ಅಭ್ಯರ್ಥವಾಯಿತು.—ಜೀವಣ್ಣರಾಯನ ಕಟ್ಟೆಯ ಹಿಂಭಾಗದಲ್ಲಿ ಕ್ಲಾಕ್ ಚಕ್ರವನ್ನು ಪ್ರಯಾಣಿಕರಿಗಾಗಿ ಕಟ್ಟಬಹುದೆಂದೂ, ಅದರ ಪ್ಲಾನ್ ಅಂದಾಜು ಪಟ್ಟಿಗಳನ್ನು ಮ್ಯಾನೇಜಿಂಗ್ ಕಮಿಟಿಗೆ ತಿಳಿಸಬೇಕೆಂದೂ ತೀರ್ಮಾನವಾಗಿದೆ.

ಸರ್ಕಾರದವರು ಪುರಾಭಿವೃದ್ಧಿ ಸಂಘದ ಕಾರ್ಯಗಳಿಗೆ 3,50,000 ರೂಪಾಯನ್ನು ಸ್ಯಾಂಕ್ಷನ್ ಮಾಡಿ, ಆ ಪೈಕಿ 25,000 ರೂಪಾಯನ್ನು ಸರ್ಕಾರದವರು ಸೂಚಿಸುವ ಕೆಲಸಗಳಿಗೆ ವಿನಿಯೋಗಿಸಬೇಕೆಂದು ತಿಳಿಸಿದಾರೆ. ಇದಲ್ಲದೆ ಈ ಹಣದಲ್ಲಿ ಚಾಲ್ತಿ ಸಾಲಿನಲ್ಲಿ ನಡಸಬೇಕಾಗಿರುವ ಅಭಿವೃದ್ಧಿ ಕೆಲಸಗಳನ್ನು ಸೂಚಿಸಿರುವರು. ಅವು ಯಾವವೆಂದರೆ—ದೇವರಾಜ ಮಾರ್ಕೆಟ್ಟಿನೊರಗಡೆ ಹೊಸ ರೀತಿಯಲ್ಲಿ ಅಂಗಡಿ ಮುಂಗಟ್ಟುಗಳನ್ನು ಅಂದವಾಗಿಯೂ, ಅಚ್ಚುಕಟ್ಟಾಗಿಯೂ ಕಟ್ಟುವುದಕ್ಕೆ 54,000 ರೂಪಾಯಿ; ಮಾರ್ಕೆಟ್ಟಿನ ಹೊರಪಾರ್ಶ್ವದಲ್ಲಿ ಚೌಕವನ್ನು ದೊಡ್ಡದಾಗಿಯೂ, ಅಲಂಕಾರವಾಗಿಯೂ ಮಾಡಿಸುವುದಕ್ಕೆ 4,50,000; ರಸ್ತೆಗಳ ಎರಡು ಕಡೆಗಳಲ್ಲೂ ಅಂದವಾದ ಸಾಲುಗಿಡಗನ್ನು ಹಾಕಿಸುವುದಕ್ಕೆ 5,000 ರೂಪಾಯಿ; ದೊಡ್ಡಕೆರೆ ಏರಿ ಹಿಂದೆ ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿ ಅಂದವಾದ ಚೌಕವನ್ನು ಕಲ್ಪಿಸುವುದಕ್ಕೆ 4,000 ರೂಪಾಯಿ; ಮಿ॥ ಪಾಲಂಜಿ ಸೇಟರ ಮನೆ ಪಕ್ಕದಲ್ಲಿ ಒಂದು ಚೌಕವನ್ನು ಮಾಡುವುದಕ್ಕೆ 6,000 ರೂಪಾಯಿ; ಬಡಬಗ್ಗರಿಗೆ ಬಡಾವಣೆಗಳಲ್ಲಿ ಅನುಕೂಲವಾದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ 30,000 ರೂಪಾಯಿ; ಮ್ಯುನಿಸಿಪಲ್ ಆಫೀಸನ್ನು ಸಂಸ್ಕೃತ ಕಾಲೇಜಿಗೂ ಕುಂಬಾರಗರ ಸ್ಕೂಲಿಗೂ ನಡುವೆ ಕಟ್ಟುವುದಕ್ಕೆ 3,30,000 ರೂಪಾಯಿ—ಈ ಪ್ರಕಾರ ಸ್ಯಾಂಕ್ಷನ್ ಆಗಿದೆ. ಈ ಪೈಕಿ ಮ್ಯುನಿಸಿಪಲ್ ಆಫೀಸಿಗೆ ಖರ್ಚಾಗುವ ಹಣದಲ್ಲಿ ಮೂರನೇ ಒಂದು ಭಾಗವನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳಬೇಕೆಂದೂ ಮಾರ್ಕೆಟ್ಟಿನ ಅಭಿವೃದ್ಧಿ ಕಾರ್ಯಗಳ ಖರ್ಚನ್ನೂ ಅದರಲ್ಲಿ ಹುಟ್ಟುವಳಿ ಆಗುವ ಹಣಗಳನ್ನೂ ಪ್ರತ್ಯೇಕವಾಗಿ ಮೂರು ವರುಷದ ತನಕ ಲೆಕ್ಕವಿಟ್ಟಿರಬೇಕೆಂದೂ, ಇದರಲ್ಲಿ ಯಾವ ಅಂಶವನ್ನು ಮ್ಯುನಿಸಿಪಾಲಿಟಿಗೆ ವಹಿಸಬಹುದೆಂಬ ವಿಷಯದಲ್ಲಿ ಮುಂದೆ ಹುಕುಂಮಾಡಲ್ಪಡುವುದೆಂದೂ ಸರ್ಕಾರದವರು ತಿಳಿಸಿದ್ದರು. ಈ ಭಾಗವನ್ನು ಮೆಂಬರುಗಳು ಚರ್ಚೆಮಾಡಿ ಮ್ಯುನಿಸಿಪಾಲಿಟಿಯು ಬಡಸ್ಥಿತಿಯಲ್ಲಿರೋಣದರಿಂದಲೂ, ಸರ್ಕಾರದವರು ಕೃಪೆಯಿಟ್ಟು ಅಭಿವೃದ್ಧಿ ಕಾರ್ಯಗಳನ್ನು ತಾವೇ ಮಾಡಿಸುತ್ತಾ ಬಂದಿರೋಣದರಿಂದಲೂ ಮಾರ್ಕೆಟ್ಟಿನ ಅಭಿವೃದ್ಧಿಗಾಗಿ ಖರ್ಚಾಗುವ ಹಣವನ್ನು ಮ್ಯುನಿಸಿಪಾಲಿಟಿಯ ತಲೆ ಮೇಲೆ ಹೊರಿಸದಂತೆ ಸರ್ಕಾರದವರನ್ನು ಕೇಳಿಕೊಳ್ಳುವಂತೆ ತೀರ್ಮಾನಮಾಡಿರುತ್ತಾರೆ.

ಚಟ್ಟಹಳ್ಳಿ ಸ್ಕೂಲ್ ಮನೆಯನ್ನು ಬಿಕರಿಮಾಡಿ, ಬೇರೆ ಸ್ಥಳದಲ್ಲಿ ಮಕ್ಕಳಿಗೆ ಆಡುವುದಕ್ಕೂ ಮೈದಾನವಿರುವಂಥಾ ಪ್ರದೇಶದಲ್ಲಿ ಆ ಸ್ಕೂಲನ್ನು ಕಟ್ಟಬೇಕೆಂದು ಮ॥ ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ಸ್ಕೂಲ್ ಕಮಿಟಿಯವರ ಪರ್ಯಾಲೋಚನೆಗೆ ತೆಗೆದಿಟ್ಟರು.—ದಸರಾದಲ್ಲಿ ವಿದ್ಯಾರ್ಥಿಗಳಿಗೆ ಜಿಂಮಾಸ್ಟಿಕ್ ಆಟಗಳನ್ನಾಡಿಸಿ ಬಹುಮಾನಗಳನ್ನು ಕೊಡುವುದಕ್ಕೆ 200 ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಲಾಯಿತು.—ಮ॥ ನಂಜುಂಡರಾಜೆ ಅರಸಿನವರ ಬಂಗಲೆ ಉತ್ತರ ಪಾರ್ಶ್ವದಲ್ಲೂ, ಮ॥ ಬಸವರಾಜೆ ಅರಸಿನವರ ಬಂಗಲೆ ಪೂರ್ವ ಪಾರ್ಶ್ವದಲ್ಲೂ ಇರುವ ತ್ರಿಕೋಣಾಕಾರದ 2 ಖಾಲಿ ನಿವೇಶನಗಳನ್ನು ಅಂದವಾದ ಮನೆಗಳನ್ನು ಕಟ್ಟುವುದಕ್ಕೆ ಹರಾಜು ಮೂಲಕ ವಿಕ್ರಯಿಸಬೇಕೆಂದು ಇತ್ಯರ್ಥಮಾಡಿದರು.—ರೈಲ್ವೆ ಸ್ಟೇಷನ್ ರಸ್ತೆಯಿಂದ ಬಳಗೊಳಕ್ಕೆ ಹೋಗುವ ರಸ್ತೆಯ ತಿರುವನ್ನು ತಪ್ಪಿಸುವುದಕ್ಕೆ ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರು ಒಪ್ಪಿರುವಂತೆ ಕಾಮಗಾರಿ ಮಾಡಿಸಿ ಹೊಸ ರಸ್ತೆಯನ್ನು ಹಾಕಬೇಕೆಂದು ಮೆಂಬರುಗಳು ಒಪ್ಪಿಕೊಂಡರು.—ಜನರಲ್ ಆಸ್ಪತ್ರೆಯ ಉತ್ತರಕ್ಕೆ ಜನಾನಾ ಮಿಷನ್ ಸ್ಕೂಲಿನ ಹಿಂಭಾಗದಲ್ಲಿ ಎರಡು ಬಂಗಲೆ ನಿವೇಶನಗಳನ್ನು ವಿಂಗಡಿಸಿ ಹರಾಜು ಮೂಲಕ ವಿಕ್ರಯಿಸಬಹುದೆಂದು ತೀರ್ಮಾನವಾಯಿತು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಖಾತ್ರಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಖಾತ್ರಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಖಾತ್ರಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಗರಲ್ಸ್ ಸ್ಕೂಲ್ ಸಂಗೀತದ ಮಾಸ್ಟರುಗಳು

ಅಯ್ಯಾ,—ಮೈಸೂರು ಗೌ॥ ವಿದ್ಯಾಭ್ಯಾಸದ ಇಲಾಖಾ ಎ. ವಿ. ಸ್ಕೂಲ್, ಗರಲ್ಸ್ ಸ್ಕೂಲ್ ಮತ್ತು ಹೋಬಳಿ ಸ್ಕೂಲ್ ಮಾಸ್ಟರುಗಳ ಕಷ್ಟವನ್ನು ತಿಳಿದು ಸರ್ಕಾರದವರು ಇವರುಗಳಿಗೆ ಗ್ರೇಡ್ ಮತ್ತು ಪ್ರಮೋಷನ್‌ಗಾಗಿ ದ್ರವ್ಯ ಸಹಾಯ ಮಾಡಿರುವುದರಿಂದ ಮಾಸ್ಟರುಗಳು ಸಂತೋಷಚಿತ್ತರಾಗಿ ಸ್ಕೂಲ್ ಕೆಲಸಗಳನ್ನು ಇನ್ನೂ ಬಹಳ ಮುತುವರ್ಜಿಯಿಂದ ಮಾಡುತ್ತಾ ಪ್ರಭುಗಳ ಶ್ರೇಯಃಪ್ರಾರ್ಥನೆಯನ್ನು ನಿರಂತರದಲ್ಲಿಯೂ ಮಾಡುತ್ತಲಿದಾರೆ. ಆದರೆ ಗರಲ್ಸ್ ಸ್ಕೂಲುಗಳ ಸಂಗೀತದ ಮಾಸ್ಟರುಗಳಿಗೆ ಮಾತ್ರ ಸದರಿ ಇಲಾಖೆಯವರು ಯಾವ ಪ್ರೋತ್ಸಾಹವನ್ನೂ ಮಾಡದೆ ಇರುವರು. ಸರ್ಕಾರದ ನೌಕರಿಯಲ್ಲಿ ಸಿಕ್ಕಿ ಜೀವನಕ್ಕೆ ಸಾಲದೆ ಸಂಕಟಪಡುತ್ತಿರುವ ಈ ಮಾಸ್ಟರುಗಳಿಗಿಂತಲೂ ಮನೆ ಮನೆಗಳಲ್ಲಿ ಸಂಗೀತದ ಪ್ರೈವೆಟ್ ಪಾಠಗಳಿಂದ ಜೀವಿಸುವ ಇತರ ಸಂಗೀತಗಾರರು ಹೆಚ್ಚು ಸಂಪಾದನೆಯಿಂದ ಸಂತೋಷಚಿತ್ತರಾಗಿರುತ್ತಾರೆಂಬುದು ಸಕಲರಿಗೂ ತಿಳಿದಿದ್ದಾಗ್ಯೂ ಈ ವಿಷಯದಲ್ಲಿ ಬಾಲಕಿಯರ ಪುರೋಭಿವೃದ್ಧಿಗೆ ಮುಖ್ಯಕರವಾಗಿರುವ ಈ ಭಾಗದಲ್ಲಿ ಕೆಲವರಿಗೆ ಕೇವಲ ಉದಾಸೀನತೆ ಇರುವುದರಿಂದಲೇ ಈ ಮಾಸ್ಟರುಗಳ ಅಭಿವೃದ್ಧಿಗೆ ಕಾರಣವುಂಟಾಗಲಿಲ್ಲವೆಂದು ತೋರುತ್ತದೆ. ಇವರಂತೆಯೇ ಅಂದರೆ ಇವರ ದರ್ಜೆಯಲ್ಲಿರತಕ್ಕ ಕೆಲವು ಸಂಗೀತದ ಮಾಸ್ಟರುಗಳಿಗೆ ಮಾತ್ರ ಯಾವ ಕಾರಣದಿಂದಲೋ ಪ್ರಮೋಷನ್ ಕೊಟ್ಟು ಉಳಿದವರಿಗೆ ಏನೂ ಇಲ್ಲದಿರುವುದು ಶೋಚನೀಯವಾಗಿದೆ. ಸರ್ಕಾರದವರು ಪಕ್ಷಪಾತವಿಲ್ಲದಂತೆ ಪ್ರೋತ್ಸಾಹಿಸಬೇಕೆಂಬ ಉದ್ದೇಶದಿಂದ ಮಾಡಿರತಕ್ಕ ಸಹಾಯದಂತೆ ಈ ಇಲಾಖೆಯವರು ದಯವಿಟ್ಟು ಈ ಮಾಸ್ಟರುಗಳ ವಿಚಾರದಲ್ಲಿ ಸರಿಯಾಲೋಚನೆಯಿಂದ ಇತರರಂತೆಯೇ ಇವರಿಗೂ ಪ್ರಮೋಷನ್ ಮಾಡಿ ಪ್ರೋತ್ಸಾಹಿಸಬೇಕೆಂದು ಹಾರೈಸುವ

ಒಬ್ಬ ಸ್ಕೂಲ್ ಮಾಸ್ಟರ್.

ಇಂಗ್ಲಿಷ್ ಅಭ್ಯಾಸದ ನಿರ್ಬಂಧ.

ಅಯ್ಯಾ,—ಈ ಸಂಸ್ಥಾನದ ಎಲ್ಲಾ ಎ. ವಿ ಸ್ಕೂಲುಗಳಲ್ಲಿಯೂ ಕನ್ನಡ 1 ನೇ ತರಗತಿಯಲ್ಲಿ ಪ್ಯಾಸಾದ ಒಡನೆಯೇ ಇಂಗ್ಲಿಷ್ ಅಭ್ಯಾಸದ ನಿರ್ಬಂಧವನ್ನು ಇಟ್ಟಿರುವರು. ಇದರಿಂದ ಅನೇಕ ಬಡಬಗ್ಗರಿಗೆ ತುಂಬಾ ಅನುಕೂಲವಾಗಿರುವ ವಿಚಾರದಲ್ಲಿ ಹೋದ ವರ್ಷ ದಸರಾ ಮೀಟಿಂಗಿನಲ್ಲಿ ಅನೇಕ ಮೆಂಬರುಗಳು—ಎ. ವಿ. ಸ್ಕೂಲುಗಳಲ್ಲಿ ಕನ್ನಡದ ಹೆಚ್ಚಿಗೆ ಕ್ಲಾಸುಗಳನ್ನಿಟ್ಟು, ಕನ್ನಡ ಲೋವರ್ ಸೆಕೆಂಡರಿ ಶಿಕ್ಷಣಕ್ಕೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂತ ಅರಿಕೆ ಮಾಡಿಕೊಂಡದ್ದರ ಮೇಲೆ ಮುಂದಿನ ವರ್ಷದಿಂದ ಕನ್ನಡವನ್ನು ಐಚ್ಛಿಕವನ್ನಾಗಿ ಮಾಡಲಾಗುವುದು ಎಂತ ಸರ್ಕಾರದವರು ಉತ್ತರ ದಯಪಾಲಿಸಿರುವರು ಇಷ್ಟು ದಿವಸಗಳಾದರೂ ಈ ಸಂಬಂಧವಾದ ರೂಲು ಜಾರಿಗೆ ಬಾರದೆ ಇರುವದರಿಂದ ಪುನಃ ಇಲ್ಲಿನ ಅನೇಕ ಪ್ರಜೆಗಳು ಇದರ ಅವಶ್ಯಕತೆಯನ್ನು ಕುರಿತು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರಕ್ಕೂ, ದಿವಾನ್ ಸಾಹೇಬರವರಿಗೂ ರೆಜಿಸ್ಟರ್ ಮೂಲಕ ಅರ್ಜಿ ಗುಜರಾಯಿಸಿಕೊಳ್ಳಬೇಕಾಗಿ ಬಂತು. ಈ ವಿಚಾರದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ಬೇಗನೆ ಈ ರೂಲನ್ನು ಜಾರಿಗೆ ಕೊಟ್ಟು ಕನ್ನಡಕ್ಕೆ ಅನುಕೂಲಮಾಡಿ ಬಡಪ್ರಜೆಗಳ ಕೊರತೆಯನ್ನು ತಪ್ಪಿಸುತ್ತಾರೆಂದು ಹಾರೈಸುತ್ತಿರುವರು.

ದೇವನಹಳ್ಳಿ. ಹಿತಚಿಂತಕ.

ಬಡ ಸ್ಕೂಲ್ ಮಾಸ್ಟರುಗಳ ಪ್ರಮೋಷನ್.

ಅಯ್ಯಾ,—ಈ ಬಡಸ್ಕೂಲ್ ಮಾಸ್ಟರುಗಳ ಸಂಕಟವನ್ನು ನೋಡಲಾರದೆ ನಮ್ಮ ಮಹಾರಾಜಾ ಸರ್ಕಾರದವರು ಇವರುಗಳ ಕಷ್ಟವನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಬ ಉದ್ದೇಶದಿಂದ ವಿದ್ಯಾ ಇಲಾಖೆಗೆ ಯಾವ ಪ್ರಭುಗಳವರ ಕಾಲದಲ್ಲಿಯೂ ಕೊಡದಷ್ಟು ಹಣವನ್ನು ಉದಾರ ಹೃದಯದಿಂದ ದಯಪಾಲಿಸಿರುತ್ತಾರೆ. ಇಲಾಖೆಯವರು ಈ ಹಣದಲ್ಲಿ ಬಡ ಸ್ಕೂಲ್ ಮಾಸ್ಟರುಗಳ ಗೋಳಾಟವನ್ನು ಸಂಪೂರ್ಣವಾಗಿ ನಿಲ್ಲಿಸಿದ ಹಾಗೆ ಕಾಣಲಿಲ್ಲ. ಅನೇಕ ಜನ ಸ್ಕೂಲ್ ಮಾಸ್ಟರುಗಳಿಗೆ 10 ರಿಂದ 12-15-25 ರೂಪಾಯಿವರಿಗೆ ಬಡ್ತಿ ಕೊಟ್ಟು, ಇನ್ನು ಕೆಲವರನ್ನು ಬಡ್ತಿ ಇಲ್ಲದೆ 10 ರೂಪಾಯಿನಲ್ಲೇ ಇಟ್ಟಿರುತ್ತಾರೆ. ಇವರು ಈ ಇಲಾಖೆಯಲ್ಲಿ ಅಲ್ಪ ಸ್ವಲ್ಪ ಜನಗಳೇ ಉಳಿದಿರಬಹುದು. ಈ ಬಡಪಾಯಿಗಳು ಮಾಡಿದ ಅಪರಾಧವೇನೋ ಗೊತ್ತಾಗಲಿಲ್ಲ. ಈ ರೀತಿ ಕೆಲವರಿಗೆ ಕೊಡದೆ ಇರುವುದು ನೋಡಿದರೆ ಇದು ತುಂಬಾ ವ್ಯಸನಕರವಾಗಿದೆ. ಹಿಂದೆ ಮಿ॥ ಭಾಭಾಸಾಹೇಬರವರು ಈ ಬಡ ಸ್ಕೂಲ್ ಮಾಸ್ಟರುಗಳ ವಿಚಾರದಲ್ಲಿ ಎಲ್ಲರನ್ನೂ ಒಂದೇ ಸಮನಾಗಿ ಕಂಡು ಪ್ರತಿ ಒಬ್ಬ ಮಾಸ್ಟರಿಗೂ 10 ರೂಪಾಯಿಗೆ ಕಡಮೆ ಇಲ್ಲದಂತೆ ಮಾಡಿದರು. ಈ ಮಹನೀಯರು ಮಾಡಿದ ಉಪಕಾರವು ಚಿರಸ್ಮರಣೀಯವಾಗಿರುವುದು. ಇವರು ಆ ರೀತಿ ಮಾಡದೇ ಹೋಗಿದ್ದರೆ ಈ ದುರ್ಭಿಕ್ಷಕಾಲದಲ್ಲಿ ಈಗ ಬಡ್ತಿಯಾಗದೆ ಇರುವ ಬಡಪಾಯಿಗಳ ಗತಿಯೇನು? ಇವರು ಸಂಸಾರ ರಹಿತರಾಗಿ ಒಬ್ಬೊಂಟಿಗರಾಗಿದಾರೆಯೇ! ಈ ಇಲಾಖೆಯಲ್ಲಿ ಕೆಲವರು ನಗುವುದು, ಕೆಲವರು ಅಳುವುದು ಎಂದರೆ ನೋಡುವವರ ಮನಸ್ಸಿಗೆ ಎಷ್ಟು ಅಸಮಾಧಾನವು? ಈ ಬಡಪಾಯಿಗಳಿಗುಂಟಾಗಿರುವ ಸಂಕಟವನ್ನು ಹೇಳತೀರದು. ಇಲಾಖಾ ಆಫೀಸರವರಲ್ಲಿ ಹೋದರೆ "ಹೋಗಿ—ಹೋಗಿ—ಹೊರಟುಹೋಗಿ" ಎಂಬ ಶಬ್ದವೇ ಹೊರತು ಮತ್ತೆ ಬೇರೆ ಇಲ್ಲ. ಈ ವಿಷಯದಲ್ಲಿ ನಮ್ಮ ಮಹಾರಾಜಾ ಸರ್ಕಾರದವರೇ ಚೆನ್ನಾಗಿ ಪರ್ಯಾಲೋಚಿಸಿ, ಬಡ್ತಿ ಇಲ್ಲದೆ ಸಂಕಟಪಡುತ್ತಿರುವ ಬಡಪಾಯಿಗಳಿಗೆ 12 ರೂಪಾಯಿಗಾದರೂ ಬಡ್ತಿ ಕೊಟ್ಟು ಇವರಿಗುಂಟಾಗಿರುವ ಸಂಕಟವನ್ನು ತಪ್ಪಿಸಿಕೊಟ್ಟರೆ ಸಂತೋಷಚಿತ್ತದಿಂದ ಸರ್ಕಾರಿ ಡ್ಯೂಟಿಯನ್ನು ಮಾಡಿಕೊಂಡು ಬರಲು ಯಾವ ಅಭ್ಯಂತರವೂ ಇರಲಾರದೆಂದು ನಂಬಿದೇನೆ.

ಒಬ್ಬ ಹಿತಚಿಂತಕ.

ಸಬ್ ಅಸಿಸ್ಟೆಂಟ್ ಸರ್ಜನರ ಫೀಸು.

ಅಯ್ಯಾ,—ಪ್ರತಿ ಒಂದು ವಿಷಯದಲ್ಲೂ ಇವರಿಗೆ ಗೋಳೇ ಆಗಿಯದೆ. ತಲಬನ್ನು ಬಡ್ತಿ ಕೊಟ್ಟು, ಸರ್ಕಾರದವರು ಇವರ ಗೌರವ ಕಾಪಾಡುತ್ತಾರೆಯೇ? ಅದೂ ಇಲ್ಲ. ಪ್ರಜೆಗಳಿಂದ ಗೌರವ ಪಡೆಯುವ ಸೌಕರ್ಯವನ್ನಾದರು ಕಲ್ಪಿಸಿದಾರೆಯೇ? ಅದೂ ಇಲ್ಲ. ಡಿಸ್ಪೆನ್ಸರಿ ಛಾರ್ಜಿಗೆ ಕಳುಹಿಸಿದಾಗ ಸಬ್ ಅಸಿಸ್ಟೆಂಟ್ ಸರ್ಜನ್‌ರವರಿಗೆ ಕನಿಷ್ಠಪಕ್ಷಕ್ಕೆ 30 ರೂಪಾಯನ್ನು ಕೊಟ್ಟರೆ ಈ ತಲಬನ್ನು ನೋಡಿಯಾದರೂ ಜನರು ಮರ್ಯಾದೆ ಕೊಟ್ಟಾರು. ಡಾಕ್ಟರಿಗೆ 30 ರೂಪಾಯಿ ಸಂಬಳವಂತೆ! ಕೇಳುವದಕ್ಕೂ ಹೇಳುವದಕ್ಕೂ ಕೂಡಾ ನಾಚಿಕೆ. ಇನ್ನೂ ಮೂರು ಹೊತ್ತು ಕಷ್ಟಪಟ್ಟ ಆ ಸಬ್ ಅಸಿಸ್ಟೆಂಟ್ ಸರ್ಜನಿಗೆ ನಾಚಿಕೆಯಾಗಲಿಕ್ಕಿಲ್ಲ. ರಾತ್ರಿ ಹಗಲು ಎಂಬುದು ನೋಡದೆ ಎಷ್ಟು ಹೊತ್ತು ಜನರು ಬಂದು ಕೇಳುತ್ತಾರೋ ಅಷ್ಟು ಹೊತ್ತಿಗೆ ಔಷಧ ಕೊಡುತ್ತಾ ಇರಬೇಕು. ಹೀಗಿರುವಾಗ ಇವರಿಗೆ ಗೌರವ ಎಲ್ಲಿಂದ ಬಂದೀತು? ಬಿಲ್ಕುಲ್ ಇಲ್ಲ. ಕಷ್ಟಪಟ್ಟರೆ ಮುನಾಫೆ ಇದೆಯೇ? ವಿಜಿಟ್ ಛಾರ್ಜಿನಲ್ಲಿ ಎಷ್ಟು ಸಿಕ್ಕಬಹುದೋ ಅದೇ ಮುನಾಫೆ ಬಡವರು ವಿಸಿಟ್ ಚಾರ್ಜು ಏನು ಕೊಟ್ಟಾರು? ಇವರು ಏನು ತಕೊಳ್ಳುತಾರು? ಭಾರಿ ತಲಬು ಪಡೆಯುವ ಆಫೀಸರುಗಳಿಗೆ ಕೊಡುವ ವಿಸಿಟ್‌ಗಳಿಗೆ ಛಾರ್ಜು ಮಾಡಕೂಡದೆಂದು ಸರ್ಕಾರದವರೇ ರೂಲ್ಸುಗಳನ್ನು ಮಾಡಿರುತ್ತಾರೆ. ಬಡವರಿಗೆ ಕೊಡುವವಕ್ಕೆ ಅನುಕೂಲವಿಲ್ಲ. ದೊಡ್ಡವರು ಕೊಡುವದು ಬೇಡ. ಇಂಥಾ ಸಂದರ್ಭಗಳಲ್ಲಿ ಇವರಿಗೆ ಮುನಾಫೆಯೆಂದರೇನು? ಅಕ್ರಮವಾಗಿ ಇತರ ಇಲಾಖೆಯ ಸಾಧಾರಣ ನೌಕರರಿಗೆ ಸಿಕ್ಕುವಷ್ಟು ಮುನಾಫೆಯು ಕ್ರಮವಾಗಿ ರಾತ್ರಿಹಗಲೂ ಕಷ್ಟಪಟ್ಟರೂ ಪ್ರಾಣಗಳನ್ನು ಉಳಿಸಿದರೂ ಈ ಬಡ ಡಾಕ್ಟರುಗಳಿಗೆ ಸಿಕ್ಕುವದಿಲ್ಲ ಹೋಗಲಿ. ತಮ್ಮ ಪ್ರಾಣವನ್ನು ಕಾಪಾಡಿದರು ಎಂಬ ಕೃತಜ್ಞತೆಯಾದರೂ ಈ ಜನಕೆ ಇದೆಯೋ? ಅದು ಮೊದಲೇ ಇಲ್ಲ. "ಉಪಾಧ್ಯಾಯಸ್ಯ ವೈದ್ಯಸ್ಯ ಕಾರ್ಯಾಂತೇ ಅಪ್ರಯೋಜಕಃ" ಎಂಬ ಶ್ಲೋಕವನ್ನು ನಮ್ಮ ಪೂರ್ವಿಕರು ಅನುಭವದಿಂದ ಬರೆದಿದಾರೆ. ಒಂದು ಟವನ್ನಲ್ಲಿ ತಿಂಗಳು ಒಂದಕ್ಕೆ 4-5 ವಿಸಿಟ್‌ಗಳು ಸಿಕ್ಕೀತು. ಒಂದು ವಿಸಿಟ್‌ಗೆ 2 ರೂಪಾಯಿ ಎಂದರೂ 10 ರೂಪಾಯಿ ಜಾಸ್ತಿ ಇಲ್ಲ. ಇವರಿಗೆ ಇದೇ ಮುನಾಫೆ. ಬೇಕಾದಷ್ಟು ತಲಬು ಪಡೆಯುವ ಆಫೀಸರುಗಳಿಗೆ ಒಂದಕ್ಕೆ ಎರಡರಷ್ಟು ಛಾರ್ಜು ಮಾಡಬೇಕಾದದ್ದು ನ್ಯಾಯ. ಸರ್ಕಾರಿ ನೌಕರರು ವಿಜಿಟಿಗೆ ಫೀಸು ಕೊಡಬೇಕಂತೆ' ನೂರಾರು ರೂಪಾಯಿ ತಿನ್ನುವ ಆಫೀಸರಿಗೆ ಫ್ರೀ ವಿಜಿಟು ಕೊಡಬೇಕಂತೆ! ಇದು ಶುದ್ಧ ಅನ್ಯಾಯ! ನೂರು ರೂಪಾಯಿಗಿಂತ ಕಮ್ಮಿ ತಲಬಿನ ನೌಕರರಿಗೆ 2 ರೂಪಾಯಿ, 100 ಕ್ಕೂ ಜಾಸ್ತಿ ತಲಬಿನ ಆಫೀಸರಿಗೆ ಕನಿಷ್ಠಪಕ್ಷಕ್ಕೆ 3 ರೂಪಾಯಿ ಎಂತ ಫೀಸನ್ನು ಏರ್ಪಾಡುಮಾಡಿ ಈ ಬಡ ನೌಕರರಿಗೆ ಗೌರವಕೊಡಿಸುವ ವಿಚಾರ ಸರ್ಕಾರದ ಘನ ಚಿತ್ತಕ್ಕೆ ಬರಲಿ ಎಂದು ಕೋರುತ್ತೇವೆ.

ಎಚ್. ಜಿ. ಬಿ.

ಹೊಸದುರ್ಗದ ಕೋಆಪರೆಟಿವ್ ಸೊಸೈಟಿಯಲ್ಲಿ ಎರಡು ವರುಷಗಳಿಂದ ಬಡ್ತಿ ಹಂಚಲಿಲ್ಲವೆಂದೂ, ಲೇವಾದೇವಿ ನಡೆಯುವುದೂ ನಿಂತುಹೋಗಿ

ಇದೆ ಎಂದೂ ಒಬ್ಬ ಮೆಂಬರು ಬರೆಯುತ್ತಾರೆ. ಇತರ ಮೆಂಬರುಗಳು ಸೇರಿ ಸೊಸೈಟಿ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟುಕೊಳ್ಳಬಹುದಾಗಿದೆ.

ಕೋಲಾರದ ಸ್ಕೂಲ್‌ಗಳ ಇನ್‌ಸ್ಪೆಕ್ಟರ ಆಫೀಸಿನ ವಿಷಯದಲ್ಲಿ ನಮಗೊಂದು ಆಕ್ಷೇಪಣೆಯುಳ್ಳ ಬಾತ್ಮಿ ಬಂದಿದೆ. ಬಾತ್ಮಿದಾರರು ಆ ವಿಚಾರವನ್ನು ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಬರೆದು ತಿಳಿಸುವುದು ಉತ್ತಮ.

ಜಿ. ಎಸ್., ಬೆಂಗಳೂರು ಚಾಮರಾಜಪೇಟೆ; ಆಚಳಿ ತಿಪ್ಪಯ್ಯ, ಕಲ್ಯಾಣ್ದುರು:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

—ಎಡಿ.]

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈ ಪ್ರಾಂತ್ಯ ಕೆಲಂತ ದಿನಗಳಿಂದ ಮಳೆ ಬಾರದೆ ಪೈರುಗಳೆಲ್ಲಾ ಒಣಗುತ್ತಾ ಇತ್ತು. ಈಗ 4-5 ದಿನಗಳಿಂದ ಮೋಡಗಟ್ಟಿ ತುಂತುರು ಮಳೆ ಬರುತ್ತಾ ಇದೆ. ಆದರೆ ಟವಣ್ ಪ್ರಜೆಗಳಿಗೆ ನೀರಿನ ಬಂಡಾಟ ತಪ್ಪಲಿಲ್ಲ. ಕೆರೆಗೆ ನೀರು ಬಂದಿಲ್ಲ. ಪ್ರಜಾ ಆರೋಗ್ಯವು ಚೆನ್ನಾಗಿದೆ. ಪ್ರತಿ ಒಂದು ಪದಾರ್ಥದ ಬೆಲೆ ತಗ್ಗದೆ ಬಡಜನರು ಜೀವಿಸುವದು ತುಂಬಾ ಕಷ್ಟವಾಗಿರುತ್ತದೆ.—ಕೆಲವು ದಿವಸದ ಕೆಳಗೆ ಇಲ್ಲಿಯ ಎ. ವಿ. ಸ್ಕೂಲಿನಲ್ಲಿದ್ದ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯ ಕ್ಲಾಸನ್ನು ತೆಗೆದುಹಾಕಿ ಇಂಗ್ಲಿಷಿನಲ್ಲಿ ಇಡಿಸಿರುತ್ತಾರೆ. ಆ ತರುವಾಯ ಕಸಬ ಟೌನ್ ಬಡಜನಗಳು ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿಸಲು ಶಕ್ತಿ ಸಾಲದೆ ತುಂಬಾ ಪೇಚಾಡುತ್ತಾ ಇದ್ದರು. ಈಗ ಟೌನಿಗೆ ಸೇರಿದ ಬುರ್ಜನಹಟ್ಟಿ ಬ್ರಾಂಚು ಸ್ಕೂಲಿನಲ್ಲಿ ಲೋವರ್ ಸೆಕೆಂಡರಿ ತರಗತಿ ವರೆಗೆ ಇಡಿಸಿ, ಗರಲ್ಸ್ ಸ್ಕೂಲನ್ನು ಸ್ಥಾಪಿಸಿದರು. ಹಾಲಿ ಹೆಡ್ ಮಾಸ್ಟರಾಗಿರುವ ಮ|| ಪಿ. ವೆಂಕಟಾಚಲಯ್ಯನವರು ಹುಡುಗರನ್ನು ಚುನಾಯಿಸಿಕೊಂಡು ಸ್ಕೂಲ್ ಅಭಿವೃದ್ಧಿಗೆ ತಂದರು. ಮತ್ತು ವಿದ್ಯಾರ್ಥಿಗಳಿಗೆ ತುಂಬಾ ಮುತುವರ್ಜಿಯಿಂದ ವಿದ್ಯೆಯನ್ನು ಕಷ್ಟಪಟ್ಟು ಹೇಳುತ್ತಾರೆ.

ಅರಕಲಗೂಡು ತಾ|| ಬಸವಾಪಟ್ಟಣ.—ತಾ. 19 ರಲ್ಲಿ ಸರ್ಕಾರದ ಹುಕುಂ ಮೇರೆ ಈ ಗ್ರಾಮದ ಪಟೇಲ್ ಮ|| ವಿಷಕಂಠೇಗೌಡರನ್ನು ಗ್ರಾಮ ಮುನ್‌ಸಿಫರನ್ನಾಗಿಯೂ, ಮ|| ಎಂ. ಗೋವಿಂದರಾವ್, ಬಿ.ಎ., ಬಿ.ಎಲ್. ರವರು, ಹಂತದ ತ್ಯಾ|| ನಾರಣಪ್ಪನವರು, ಹಂತದ ಪಟೇಲ್ ತಮ್ಮಯ್ಯನವರು, ಸಾಹುಕಾರ್ ಕುಂ. ಮಲ್ಲಣ್ಣನವರು, ರಾಚಪ್ಪಶೆಟ್ಟರು, ಬಿ. ಪುಟ್ಟಸ್ವಾಮಿ ಶೆಟ್ಟರು, ಬಿ. ಕೆ ಸುಬ್ರಾಯರು ಈ 7 ಜನ ಬೆಂಚು ಮೆಂಬರುಗಳಾಗಿಯೂ ಆರ್ಡರ್ ಬಂದಿರುವದಾಗಿ ಪಟೇಲ್ ವಿಷಕಂಠೇಗೌಡರು ಹೇಳಿ ಈ ದಿವಸ ಕೋರ್ಟನ್ನು ಈ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಪ್ರಾರಂಭಿಸಿ, ಈ ಗ್ರಾಮದ ಬೀರ್ ಮಗ್ಗದ ದಾಸಶೆಟ್ಟಿಯು ಇದೇ ಊರು ಕಪ್ಪಡಿಶೆಟ್ಟಿಯ ಮೇಲೆ ತಂದ ದಾವಾ ಒಂದನ್ನು ಓದಿದರು. ಮುಂದಲ ಕ್ರಮ ನಡಿಸಲು ಇವರಿಗೆ ಸರ್ಕಾರದಿಂದ ಈ ಸಂಬಂಧವಾದ ರೆಗ್ಯುಲೇಷನ್ ವಗೈರೆ ಬಂದ ನಂತರ ಫೈಸಲ್ ಮಾಡಲ್ಪಡುತ್ತೆಂದು ವಗೈರೆ ಹೇಳಿ ಹಾಸನ್ ಡೆಪ್ಯುಟಿ ಕಮಿಷನರವರಿಗೆ ರಿಪೋರ್ಟು ಸಹಾ ಮಾಡಿದರು. ಆದರೆ ಸರ್ಕಾರದವರು ಈ ವಿಚಾರದಲ್ಲಿ ಜನಗಳಿಗೆ ಸರಿಯಾಗಿ ತಿಳುವಳಿಕೆ ಕೊಡುವದಕ್ಕಾಗಿ ಮೇಲ್ಪಟ್ಟ ಆಫೀಸರವರು ದಯಮಾಡಿಸಿ ಉಪನ್ಯಾಸಮಾಡಬೇಕಾಗಿ ಏರ್ಪಡಿಸುವದು ತುಂಬಾ ಅನುಕೂಲವಾಗಿರುತ್ತೆ.—ಈ ಗ್ರಾಮದಲ್ಲಿರುವ ವಿ. ಇ. ಸ್ಕೂಲಿನಲ್ಲಿ ರಾತ್ರಿಕಾಲ ಪಾಠ ಹೇಳುವದಕ್ಕೆ ಸರ್ಕಾರದವರು ಅಪ್ಪಣೆಮಾಡಿರುವದು ತುಂಬಾ ಸಂತೋಷಕರವಾಗಿರುತ್ತೆ.

ಗೌರೀಬಿದನೂರು ತಾ|| ಮಂಚೇನಹಳ್ಳಿ.—ಈ ಪ್ರಾಂತ್ಯ ಮೊದಲು ಬಿತ್ತನೇ ಕಾಲಕ್ಕೆ ಮಾತ್ರ ಸರಿಯಾಗಿ ಮಳೆ ಬಿದ್ದು ನಂತರ ಪೈರುಗಳು ಮೊಳೆಯುವುದಕ್ಕೂ ಅವಕಾಶವಿಲ್ಲದಂತೆ ಸ್ವಲ್ಪವೂ ಮಳೆಯು ಆಗದೆ ಜನಗಳಿಗೆ ಭಯವುಂಟಾಗುತ್ತಿತ್ತು. ಆದರೆ ಪುನಃ ಮಳೆ ಪ್ರಾರಂಭವಾಗಿ ಪ್ರತಿ ವಾರ ದಲ್ಲೂ ಬರುತ್ತಿರುವುದರಿಂದ ರೈತರು ಬಹಳ ಉತ್ಸಾಹದಿಂದ ವ್ಯವಸಾಯದ ಕೆಲಸಗಳನ್ನು ಮಾಡುತ್ತಲಿದಾರೆ.—ಈ ಟವರ್‌ನಲ್ಲಿ ಆಗಾಗ್ಗೆ ಕಳ್ಳರ ಅವಾಂತ್ರವು ತಲೆದೋರುತ್ತಲೇ ಇದೆ. ನಮ್ಮ ಪೋಲೀಸ್ ಜಮಾದಾರ್ರು ಮಾಡುವ ಮೇಹನತ್ತಿನಿಂದ ದುಷ್ಟರಿಗೆ ಅವಕಾಶ ದೊರೆಯಲಾರದೆಂದು ಊಹಿಸುತ್ತೇನೆ. ಇವರು ಬಂದಾರಭ್ಯ ಸಂತೆಯಲ್ಲಿ ಕಮ್ಮಿ ಸೇರು ಬಟ್ಟುಗಳ ವಿಷಯದಲ್ಲಿ ತುಂಬಾ ನಿಗಾ ಕೊಟ್ಟು ನೋಡುತ್ತಲಿರುವುದರಿಂದ ಅಕ್ರಮಗಳಿಗೆ ಅವಕಾಶವಿಲ್ಲವಾಗಿದೆ.—ಮೊನ್ನೆ ಎಕನಾಮಿಕ್ ಸೂಪರಿಂಟೆಂಡರು ಬಂದು ಈ ಗ್ರಾಮದ ದೊಡ್ಡಮನುಷ್ಯರುಗಳನ್ನೆಲ್ಲಾ ಬರಮಾಡಿಕೊಂಡು, ಕಬ್ಬಿನ ಯಂತ್ರದಿಂದಾಗುವ ಪ್ರಯೋಜನವನ್ನು ತಿಳಿಯಪಡಿಸಿ, ಸದರಿ ಯಂತ್ರವನ್ನು ತರಿಸುವುದಕ್ಕಾಗಿ ಚಂದಾ ಕೊಡಿಸಬೇಕೆಂಬದಾಗಿ ಹೇಳಿ ಮುಂದಕ್ಕೆ ತೆರಳಿದರು.—ಈ ಊರು ಇಷ್ಟು ದೊಡ್ಡದಾಗಿದ್ದಾಗ್ಯೂ ಒಂದು ಕೋಆಪರೆಟಿವ್ ಸೊಸೈಟಿ ಇಲ್ಲದೆ ಬಡವರಿಗೆ ದುಡ್ಡು ಒದಗುವದು ಕಷ್ಟವಾಗಿದೆ.—ಕಳೆದ ತಾ. 20 ನೇ ಮಂಗಳವಾರ ಇಲ್ಲಿ ನಡೆದ ಅನಾಹುತವನ್ನು ಸ್ಮರಿಸಿಕೊಂಡರೆ ಬಹಳ ಭಯವಾಗುತ್ತದೆ. ಇಲ್ಲಿನ ಲಂಡನ್ ಮಿಷನ್ ಗರಲ್ಸ್ ಸ್ಕೂಲ್ ವಿದ್ಯಾರ್ಥಿನಿಯಾಗಿದ್ದ ಕೃಷ್ಣಮ್ಮನೆಂಬ 11 ವರ್ಷದ ಬಾಲಕಿಯು ಬೆಳಗ್ಗೆ 10½ ಗಂಟೆಗೆ ಸ್ಕೂಲಿನಿಂದ ಮನೆಗೆ ಹೋಗಿ ತನ್ನ ಅಕ್ಕನೊಂದಿಗೆ ನೀರು ಸೇದುತ್ತಿರುವಾಗ್ಗೆ ಬಾವಿಯ ಉಭಯಪಾರ್ಶ್ವಗಳಲ್ಲಿದ್ದ ನಲುವು ಕಲ್ಲುಗಳೂ, ಮೇಲಿನ ಬಂಡೆಯೂ ಅವರುಗಳ ಮೇಲೆ ಬಿದ್ದು, ಕೃಷ್ಣಮ್ಮನು ½ ಗಂಟೆಯಲ್ಲಿಯೇ ಮೃತಪಟ್ಟಳು. ಅವಳ ಅಕ್ಕನಿಗೆ ಬಲದ ಮೊಣಕೈ ಮುರಿದುಹೋಯಿತು. ಸ್ಕೂಲ್ ಹೆಡ್ ಮಾಸ್ಟರ್ ಮ|| ಎಲ್ಲಿಸ್ ಅಯ್ಯನವರೂ ಅವರ ಕುಟುಂಬವೂ ಮುರಿದ ಮೊಣಕೈಯನ್ನು ಸರಿಯಾಗಿ ಕೂಡಿಸಿ ತಕ್ಕ ಔಷಧವನ್ನು ಹಾಕಿ ದಬ್ಬೆಗಳಿಂದ ಸುತ್ತಿ ಮಾಡಿದ ಉಪಚಾರವನ್ನು ಎಷ್ಟು ಶ್ಲಾಘಿಸಿದಾಗ್ಯೂ ಸಾಲದು. ಮಾರನೇ ದಿನ ಆಕೆಯನ್ನು ಚಿಕ್ಕಬಳ್ಳಾಪುರದ ಮಿಷನ್ ಆಸ್ಪತ್ರೆಗೆ ಸಾಗಿಸಿದರು. ಆ ದಿನ ಆ ಬಾಲಕಿಯರ ತಂದೆಯು ಊರಲ್ಲಿರಲಿಲ್ಲ. ಶ್ಯಾನುಭೋಗ್ ಮ|| ಸುಬ್ಬಯ್ಯನವರು ಶ್ರದ್ಧೆ ವಹಿಸಿ ಮಾಡಿದ ಸೌಕರ್ಯವು ಸ್ಮರಿಸತಕ್ಕದ್ದಾಗಿವೆ.

ಚಿಂತಾಮಣಿ.—ಈಚೆಗೆ ಇಲ್ಲಿ ಮಳೆ ಪ್ರಾರಂಭವಾಗಿ ಕೆಲವು ಕೆರೆಗಳಿಗೆ ನೀರು ಬಂದಿರುವದರಿಂದ ಸಾಗುವಳಿಗೆ ಅನುಕೂಲವಾಗಿದೆ.—ದಿವ್ಯಜ್ಞಾನ ಸಮಾಜದ ಮೆಂಬರುಗಳು ಎಂದಿನಂತೆ ಶ್ರೀರಾಘವ ಮಂದಿರದಲ್ಲಿ ಮೀಟಿಂಗುಗಳನ್ನು ನಡಿಸುತ್ತಾ ಇರುವರು. ಇಲ್ಲಿಗೆ ಈಚೆಗೆ ಬ್ರಾಂಚು ಇನ್‌ಸ್ಪೆಕ್ಟರುಗಳಾದ ಮ|| ನರಹರಿಶಾಸ್ತ್ರಿಗಳೂ, ಟಿ. ರಾಮಚಂದ್ರರಾಯರೂ ದಯಮಾಡಿಸಿ ಉಪನ್ಯಾಸಗಳನ್ನೂ ಹರಿಕಥೆಗಳನ್ನೂ ಮಾಡಿ ಬಹಳ ಜನಗಳ ಮನಸ್ಸಿಗೆ ತೃಪ್ತಿಯನ್ನು ಉಂಟುಮಾಡಿರುತ್ತಾರೆ.—ಈ ತಾಲ್ಲೂಕು ಅಮಲ್ದಾರ್ ಮ|| ಶಾಂತವೀರಪ್ಪನವರು ಇಲ್ಲಿಂದ ವರ್ಗವಟ್ಟದ್ದರಿಂದ ಈ ತಾಲ್ಲೂಕು ಜನಗಳಲ್ಲಿ ಬಹಳ ವ್ಯಸನವನ್ನುಂಟುಮಾಡಿದೆ. ಇವರು ರೈತರ ಪಕ್ಷವಾಗಿದ್ದರು. ಮತ್ತು ಬಡ ಜನಗಳ ವಿಚಾರಣೆಯಲ್ಲಿ ತುಂಬಾ ಮುತುವರ್ಜಿ ವಹಿಸಿದ್ದರು. ಅಲ್ಲದೆ ಇಂಗ್ಲಿಷು, ಕನ್ನಡ ಸ್ಕೂಲು ಮತ್ತು ಗರಲ್ಸ್ ಸ್ಕೂಲುಗಳ ಮೇಲೆ ಬಹಳ ವಿಚಕ್ಷಣೆಯುಳ್ಳವರಾಗಿದ್ದರು. ಮತ್ತು ಇಲ್ಲಿ ನೈಟ್ ಸ್ಕೂಲನ್ನು ಏರ್ಪಡಿಸಿದ ನಂತರ ಇವರು ವಾರಕ್ಕೆ ಒಂದು ದಿನ ನೈಟ್ ಸ್ಕೂಲ್ ವಿದ್ಯಾರ್ಥಿಗಳಿಗೆ ತಾವೇ ಪಾಠ ಹೇಳುತ್ತಿದ್ದುದೂ ಬಹು ಸ್ತೋತ್ರಾರ್ಹವಾಗಿದೆ. ಇವರು ರೀಡಿಂಗ್ ರೂಮು ವಿಚಾರವಾಗಿ ಬಹಳ ಕೆಲಸ ಮಾಡಿರುತ್ತಾರೆ. ಇವರು ತುಂಬಾ ಸೋಷಿಯಲ್ ಆಗಿ ಇದ್ದುದರಿಂದ ಜನಗಳ ಮತ್ತು ಇತರ ಉದ್ಯೋಗಸ್ಥರ ಮನಸ್ಸಿಗೆ ಅವರ ಅಗಲಿಕೆಯು ಅಸಮಾಧಾನವಾಗಿದೆ. ಇಲ್ಲಿಂದ ಹೊರಡುವುದಕ್ಕೆ ಸುಮಾರು 5-6 ದಿನಗಳ ಮುಂಚೆ ಮೊದಲುಗೊಂಡು, ಟೀ ಪಾರ್ಟಿಗಳೂ, ಪಿಕ್‌ನಿಕ್ ಪಾರ್ಟಿಗಳೂ, ಅಟ್‌ಹೋಂ, ಎಂಟರ್‌ಟೈನುಮೆಂಟುಗಳೂ ಸಹ ಪ್ರತಿ ದಿನವೂ ಬೆಳಗ್ಗೆ ಸಾಯಂಕಾಲ ನಡಿಸಲ್ಪಟ್ಟುವು. ಹೊರಟ ದಿನ ಗೌ|| ಎ. ವಿ. ಸ್ಕೂಲಿನಲ್ಲಿ ದೊಡ್ಡ ಸಭೆ ನೆರದಿತ್ತು. ವರ್ತಕ ಮಂಡಲಿಯವರೂ, ಹೊಸದಾಗಿ ಇಲ್ಲಿಗೆ ವರ್ಗವಟ್ಟು ದಯಮಾಡಿರತಕ್ಕ ಅಮಲ್ದಾರ್ ಮ|| ಲಿಂಗೋಪಂತ್ ಬಾಪಿಯವರೂ, ಇತರ ಉದ್ಯೋಗಸ್ಥರೂ ಹಾಜರಾಗಿದ್ದರು. ಮ|| ಶಾಂತವೀರಪ್ಪನವರ ಗುಣಕಥನವನ್ನು ಮಾಡಿದ ನಂತರ ಕೆಲವು ಮಹನೀಯರು ಇವರ ವಿಚಾರ ಉಪನ್ಯಾಸಗಳನ್ನು ಮಾಡಿದರು. ಹಾರಾ ತುರಾಯಿಗಳು ವಿನಿಯೋಗಿಸಲ್ಪಟ್ಟುವು. ಪಾನ್‌ಸುಪಾರಿ ಹಂಚಿದ ನಂತರ ಮೀಟಿಂಗು ಬರಖಾಸ್ತಾಯಿತು.—ಈ ಊರಿಗೆ ವರ್ಗವಟ್ಟು ಬಂದಿರುವ ಡಾ|| ಸಿ ಎಸ್. ನಾರಾಯಣಶೆಟ್ಟರು ತುಂಬಾ ಮುತುವರ್ಜಿಯಿಂದ ಕೆಲಸಗಳನ್ನು ಮಾಡುತ್ತಾರೆ. ಇವರು ಇಲ್ಲಿಗೆ ದಯಮಾಡಿ 4 ತಿಂಗಳು ಆಗಿದ್ದರೂ ಇಲ್ಲಿನ ಜನರಲ್ಲಿ ಪ್ರೀತಿಯನ್ನು ತೋರಿಸಿ ಒಳ್ಳೇ ಹೆಸರನ್ನು ಪಡೆದಿರುತ್ತಾರೆ. ಇವರಿಂದ ಇನ್ನೂ ಹೆಚ್ಚು ಪ್ರಯೋಜನಗಳನ್ನು ಇಲ್ಲಿನ ಜನರು ಹೊಂದುತ್ತಾರೆನ್ನುವದಕ್ಕೆ ಸಂದೇಹವಿಲ್ಲ.—ಹಾಲಿ ಬೆಂಗಳೂರಲ್ಲಿ ವಾಸ ಮಾಡಿಕೊಂಡಿರುವ ಮ|| ಕಾರುಮಾಕುಲ ದೊಡ್ಡ ತಿಮ್ಮರಾಜಯ್ಯನವರು ಇಲ್ಲಿಗೆ ಬಂದು ದೇವಸ್ಥಾನದ ಮುಂಭಾಗದಲ್ಲಿ ಸ್ಥಾಪಿಸಲ್ಪಟ್ಟಿರುವ ಭಜನೇ ಮಂದಿರದಲ್ಲಿ ರಾಮೋತ್ಸವವನ್ನು ನಡಿಸುವದಕ್ಕೆ ಉಪಕ್ರಮಿಸಿರುತ್ತಾರೆ. ಉತ್ಸವಗಳೂ ಹರಿಕಥೆಗಳೂ ವಿಜೃಂಭಣೆಯಾಗಿ ನಡೆಯುತ್ತಿರುವವು.

ಚನ್ನರಾಯಪಟ್ಟಣದ ತಾ|| ಹಿಂಡಲಹಳ್ಳಿ.—ಇಲ್ಲಿನ ವಿ. ಇ. ಸ್ಕೂಲು ದಿನೇ ದಿನೇ ಅಭಿವೃದ್ಧಿಗೆ ಬರುತ್ತಿದೆ. ಸ್ಕೂಲಿನಲ್ಲಿ 50 ಹುಡುಗರು ದಾಖಲಾಗಿರುವರು. ಇವರಿಗೆಲ್ಲಾ ಒಬ್ಬ ಉಪಾಧ್ಯಾಯರೇ ಪಾಠಹೇಳುವುದು ಅಸಾಧ್ಯ. ಆದ್ದರಿಂದ ಸ್ಕೂಲ್ ಪಾಠಗಳು ಸರಿಯಾಗಿ ನಡೆಯಲು ಅವಕಾಶವಿಲ್ಲವಾಗಿದೆ. ಈ ವಿಷಯವು ನಮ್ಮ ಡಿ|| ನ ಸ್ಕೂಲ್‌ಗಳ ಇನ್‌ಸ್ಪೆಕ್ಟರವರ ಗಮನಕ್ಕೆ ಬಂದಿದ್ದಾಗ್ಯೂ ಈ ವಿಷಯದಲ್ಲಿ ಯಾವ ಏರ್ಪಾಡನ್ನೂ ಮಾಡದಿರುವುದು ಶೋಚನೀಯವಾಗಿದೆ. ಕಳೆದ ಮೇ ತಿಂಗಳಲ್ಲಿ ನಡೆದ ಡಿಸ್ಟ್ರಿಕ್ಟ್ ವಿದ್ಯಾಭ್ಯಾಸ ಪ್ರದರ್ಶನದಲ್ಲಿ ಈ ಸ್ಕೂಲಿಗೆ ಅನೇಕ ಬಹುಮಾನಗಳು ದೊರಕಿ ಇಲ್ಲಿನ ಮಾಸ್ತರಿಗೆ ಕೆಲಸದಲ್ಲಿ ಉತ್ತೇಜನ ಕೊಟ್ಟಿದೆ.—ಇದೇ ತಿಂಗಳು 18 ನೇ ತಾ. ಇಲ್ಲಿನ ಕೋಆಪರೆಟಿವ್ ಸೊಸೈಟಿಯ ಜನರಲ್ ಮೀಟಿಂಗು ನಡೆಯಿತು. ಆಗ್ಗೆ ಗ್ರಾಮದ ಮತ್ತು ಇದಕ್ಕೆ ಸೇರಿರುವ ಇತರ ಗ್ರಾಮಗಳ ಮುಖಂಡರುಗಳು ಬಂದಿದ್ದರು. ಚನ್ನರಾಯಪಟ್ಟಣದ ಸಬ್ ರೆಜಿಸ್ಟ್ರಾರ್ ಮ|| ಕೃಷ್ಣಮೂರ್ತಿ ಶಾಸ್ತ್ರಿಗಳವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕೋಆಪರೆಟಿವ್ ಸೊಸೈಟಿಗಳ ವಿಷಯವಾಗಿ ಒಂದು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಇದರಲ್ಲಿ ಅವರು ರಾಗಿಯನ್ನು ಸೇರಿಸಿ ರಾಗಿ ಇಲ್ಲದಿದ್ದಾಗ ಬಡವರಿಗೆ ಕೊಟ್ಟು ಸುಗ್ಗಿಯಲ್ಲಿ ಬಡ್ಡಿ ಸಹಿತ ತೆಗೆದುಕೊಳ್ಳುವಂತೆಯೂ, ಪ್ರತಿ ಗ್ರಾಮದ ಸೊಸೈಟಿಯವರೂ ಇದನ್ನು ಆಚರಣೆಗೆ ತಂದಲ್ಲಿ ಸಂಪತ್ತು ಶೀಘ್ರದಲ್ಲಿಯೇ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲವೆಂತಲೂ ತಿಳಿಸಿದರು. ಇದು ಬಹಳ ಶ್ಲಾಘನೀಯವಾದ ವಿಷಯ. ನಂತರ ಸೊಸೈಟಿಯ ರಿಪೋರ್ಟನ್ನು ಸೆಕ್ರೆಟರಿಯವರು ಓದಿದರು. ಇದರಲ್ಲಿ ಇವರು ಈ ಸೊಸೈಟಿಯು ಸ್ಥಾಪಿತ 2 ತಿಂಗಳು ಮಾತ್ರ ಆದಾಗ್ಯೂ ಕೆಲಸವು ತೃಪ್ತಿಕರವಾಗಿ ನಡೆದಿದೆ ಎಂದೂ, ಈ ಕಾಲದಲ್ಲಿ ರೂ. 2,292-12-10 ಪೈ ಜಮಾ ಖರ್ಚು ನಡೆದಿರುವುದೆಂದೂ, 81 ರೂಪಾಯಿ ರಿಜರ್ವ್ ಫಂಡಿಗೆ ಸೇರಿಸಲ್ಪಟ್ಟಿದೆ ಎಂದೂ, ಖರ್ಚು ಕಳೆದು 20 ರೂ. ಲಾಭವು ಷೇರುದಾರರಿಗೆ ಹಂಚಲು ಸಿದ್ಧವಾಗಿದೆ ಎಂದೂ ತಿಳಿಸಿ, ಇದು ಈ ಸೊಸೈಟಿಯ ಪ್ರಥಮ ವರ್ಷವಾದ್ದರಿಂದ ಇದರ ಒಟ್ಟು ಲಾಭವನ್ನೇ ಆಗಲೀ, ಅದರ ಒಂದು ಭಾಗವನ್ನೇ ಆಗಲೀ ಯುದ್ಧದ ರಿಲೀಫ್ ಫಂಡಿಗೆ ಕೊಡಬೇಕೆಂದು ಸೂಚಿಸಿದ್ದರ ಮೇರೆ ಲಾಭದ ಕಾಲು ಭಾಗ ಉಪಯೋಗಿಸಬಹುದೆಂದು ತೀರ್ಮಾನವಾಯಿತು. ನಂತರ ಇಲ್ಲಿನ ಸಾಹುಕಾರರಾದ ಮ|| ಎಂ. ನಂಜಪ್ಪನವರು ಈ ಗ್ರಾಮವು ಅಭಿವೃದ್ಧಿಗೆ ಬರಬೇಕಾದರೆ ಮಾಡಬೇಕಾದ ಕೆಲಸಗಳನ್ನೂ, ಇಲ್ಲಿನವರಿಗೆ ಜೀವನವಾದ ಹಿಪ್ಪೆ ವ್ಯಾಪಾರವು ಅಭಿವೃದ್ಧಿಗೆ ಬರಲು ಮಾಡಬೇಕಾಗಿರುವ ಕೆಲಸಗಳನ್ನೂ ಕುರಿತು ಉಪನ್ಯಾಸವನ್ನು ಓದಿದರು. ಇವರು ಇಲ್ಲಿನ ಧನಿಕರಲ್ಲಿ ಒಬ್ಬರಾಗಿ ಇಂಥಾ ಉಪನ್ಯಾಸದಲ್ಲಿ ಉದ್ಯುಕ್ತರಾದುದು ಇತರರಿಗೆ ಮೇಲ್ಪಂಕ್ತಿಯಾಗಿದೆ. ಸ್ಕೂಲ್ ಮಾಸ್ಟರು ಗ್ರಾಮಾಭಿವೃದ್ಧಿ ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು. ಇದರಲ್ಲಿ ಇವರು ಈ ಗ್ರಾಮಗಳಲ್ಲಿ ಆಚರಣೆಯಲ್ಲಿರುವ ಕ್ರಮವನ್ನೂ, ಅದನ್ನು ತಿದ್ದಿ ಸರಿಪಡಿಸಿಕೊಳ್ಳಬೇಕಾದ ವಿಷಯವನ್ನೂ ಹೃದಯಂಗಮವಾಗುವಂತೆ ವಿವರಿಸಿದರು. ಚನ್ನರಾಯಪಟ್ಟಣದ ಸೂಪರ್‌ವೈಜರು ಮ|| ಲಕ್ಷ್ಮೀನಾರಾಯಣರಾಯರು ಗ್ರಾಮವಾಸಿಗಳು ಮುಖ್ಯವಾಗಿ ಆಚರಣೆಗೆ ತರಬೇಕಾದ ಕೆಲವು ವಿಷಯಗಳನ್ನು ಸೂಚಿಸಿದರು. ಅಗ್ರಾಸನಾಧಿಪತಿಗಳು ತಮ್ಮ ಭಾಷಣದಲ್ಲಿ ಈ ಗ್ರಾಮವು ಹೆಸರಿಗೆ ಹಳ್ಳಿ ಎನಿಸಿಕೊಂಡಿರುವುದಾಗಿಯೂ, ಎಲ್ಲರೂ ಇದೇ ರೀತಿ ಏಕಮತ್ಯದಿಂದ ಕೆಲಸ ಮಾಡಿದರೆ ಶೀಘ್ರದಲ್ಲಿಯೇ ಉತ್ತಮ ಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲವೆಂದೂ ಸೂಚಿಸಿದರು. ಕಡೆಯಲ್ಲಿ ಶ್ರೀಮನ್ ಮಹಾರಾಜ ಯುವರಾಜರವರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟು ಸಭೆಯು ಬರಖಾಸ್ತಾಯಿತು.

ಹಿಂದೂಸ್ಥಾನದ ವೃತ್ತಾಂತಗಳು.

ಯುದ್ಧದ ಇಂಪೀರಿಯಲ್ ರಿಲೀಫ್ ಫಂಡಿಗೆ ಹಿಂದೂಸ್ಥಾನದಲ್ಲಿ ಇದುವರೆಗೆ 99,50,000 ರೂಪಾಯಿ ಚಂದಾ ವಸೂಲಾಗಿರುವುದು.

ಸಿಲೋನ್ (ಲಂಕಾ) ದ್ವೀಪದಲ್ಲಿ ದಂಗೇ ಕೃತ್ಯಗಳನ್ನು ನಡಿಸಿದ ಮೂರು ಮಂದಿ ಸಿಂಹಾಳಗಳನ್ನು ಮಿಲ್ಟೇರಿ ಕೋರ್ಟಿನಲ್ಲಿ ವಿಚಾರಣೆಮಾಡಿ ಮರಣದಂಡನೆ ವಿಧಿಸಿ ಬಂದಿಖಾನೆಯಲ್ಲಿ ಗಲ್ಲಿಗೆ ಹಾಕಿಸಿಬಿಟ್ಟರು.

ಕಳೆದ ಮಕ್ರ್ವಾರಕ್ಕೆ ಆಖೈರಾದ ವಾರದಲ್ಲಿ ಹಿಂದೂಸ್ಥಾನದಲ್ಲಿ ಪ್ಲೇಗ್ ಉಪದ್ರದಿಂದ 441 ಮರಣಗಳು ಮಾತ್ರ ಆದವು. ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ 251, ಮೈಸೂರು ಸಂಸ್ಥಾನದಲ್ಲಿ 23 ಮರಣಗಳಾಗಿವೆ.

ಅಹಮದ್ ನಗರದಲ್ಲಿ ಸಬ್ ಜಡ್ಜಿಯಾಗಿದ್ದ ಗೋವಿಂದ ಬಲವಂತ ಲಾಖಾತೆ ಎಂಬಾತನು ಲಂಚ ತೆಗೆದುಕೊಂಡನೆಂದು ಮೊಕದ್ದಮೆ ಹುಟ್ಟಿ, ಅಲ್ಲಿನ ಮ್ಯಾಜಿಸ್ಟ್ರೇಟ್ ಮಿ|| ಗ್ಯಾರೆಟ್ ರವರು ವಿಚಾರಣೆ ಮಾಡುತ್ತಿದಾರೆ.

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೊಲಂಬೋ, ಅವಿಸಾವೆಲ್ಲಾ, ಕಲುತಾರ, ಗಂಗಾಪೋಲಾ, ಸೀವಾರ ಇಲಿಯ ಎಂಬೀ ಪ್ರಾಂತ್ಯಗಳಲ್ಲಿ ಅಪೂರ್ವವಾದ ಮಳೆಗಳು ಸುರಿದು ಸಾವಿರಾರು ಬಡಬಗ್ಗರ ಮನೆ ಮಠಗಳೂ, ಲಕ್ಷಾಂತರ ರೂಪಾಯಿನ ಬೆಳೆಗಳೂ ಪ್ರವಾಹದಲ್ಲಿ ಕೊಚ್ಚಿಹೋಗಿವೆ.

ದಕ್ಷಿಣ ಮಲಬಾರಿಗೆ ಸೇರಿದ ತಸ್ಸೂರು ರೈಲ್ವೆ ಸ್ಟೇಷನ್‌ನಿಂದ ಐದು ಮೈಲಿ ದೂರದಲ್ಲಿರುವ ಒಂದು ಗ್ರಾಮಕ್ಕೆ ಆಯುಧಪಾಣಿಗಳಾದ ಮಾಪಿಳ್ಳೆಗಳು ನುಗ್ಗಿ ಒಬ್ಬ ಸಾಹುಕಾರನನ್ನು ಹಿಂಸಿಸಿ, ಅವನ ಪೆಟ್ಟಿಯಲ್ಲಿದ್ದ ನಗೆ ನಾಣ್ಯಗಳನ್ನೂ ನಗದು 6,000 ರೂಪಾಯನ್ನೂ ಅಪಹರಿಸಿಕೊಂಡು ಹೋದರು.

ಬಾಕರ್‌ಗಂಜ್ ಡಿಸ್ಟ್ರಿಕ್ಟಿಗೆ ಸೇರಿದ ಫಾಜಿಪುರಬಂದರಿನಲ್ಲಿ ದರೋಡೆಯನ್ನು ನಡಿಸಿ ತಲೆತಪ್ಪಿಸಿಕೊಂಡಿರುವ ಅಪರಾಧಿಗಳನ್ನು ಹಿಡಿಯುವುದಕ್ಕೆ ವರ್ತಮಾನವನ್ನು ತಿಳಿಸತಕ್ಕವರಿಗೆ 5,000 ರೂಪಾಯಿ ಬಹುಮಾನ ಕೊಡುತ್ತೇವೆಂದು ಬಂಗಾಳಾ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ರವರು ಪ್ರಕಟ ಮಾಡಿರುತ್ತಾರೆ.

ಕಟಕ್ಕಿನಲ್ಲಿ ಸ್ಟಾರ್ ಆಫ್ ಉತ್ಕಲ್ ಎಂಬ ಇಂಗ್ಲಿಷ್ ಪತ್ರಿಕೆಯು ಕಳೆದ 1905 ನೇ ಇಸವಿಯಿಂದ ಪ್ರಕಟವಾಗುತ್ತಿತ್ತು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು 2,000 ರೂಪಾಯಿ ಠೇವಣಿ ಕಟ್ಟಿ ಪತ್ರಿಕೆ ನಡಿಸಬಹುದೆಂದು ಪತ್ರಿಕೆಯ ಸಂಪಾದಕರಿಗೆ ನೋಟಿಸ್ ಕೊಟ್ಟದ್ದರ ಮೇಲೆ ಆ ಸಂಪಾದಕರು ಪತ್ರಿಕಾ ಪ್ರಚಾರವನ್ನೇ ನಿಲ್ಲಿಸಿಬಿಟ್ಟರು.

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಅಧಿಪತ್ಯದಲ್ಲಿ ಅಪೂರ್ವವಾದ ಪ್ರವಾಹಗಳ ದೆಸೆಯಿಂದ ಮನೆಗಳೂ ಭೂಮಿಗಳೂ ಕೊಚ್ಚಿಹೋಗಿ ಪ್ರಜೆಗಳು ಕ್ಷಾಮದಲ್ಲಿ ಬಿದ್ದು ನರಳುತ್ತಿದಾರೆ. ಸರ್ಕಾರದವರೂ ಧರ್ಮಿಷ್ಠರೂ ಸಾವಿರಾರು ರೂಪಾಯನ್ನು ಧರ್ಮಕೊಟ್ಟು ಪ್ರಜೆಗಳನ್ನು ಸಾಕುತ್ತಿದಾರೆ. ಹಿಂದೂಸ್ಥಾನದ ಕ್ಷಾಮನಿವಾರಣೆಯ ಫಂಡಿನಿಂದಲೂ ದ್ರವ್ಯಸಹಾಯಮಾಡಬೇಕೆಂದು ಪ್ರಾರ್ಥಿಸಲ್ಪಟ್ಟಿದೆ.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಭಾವನಗರದ ಮಹಾರಾಜರವರು ಹೊಸ ಯುದ್ಧದ ಸಾಲದ ಪತ್ರಗಳಿಗೆ 2,10,000 ರೂಪಾಯನ್ನು ಪಾವತಿಮಾಡಿದರು. ತಮ್ಮ ಸಂಸ್ಥಾನದಲ್ಲಿ ರೈಲ್ವೆ ಕಾರ್ಖಾನೆಯೊಳಗೆ ಯುದ್ಧದ ಸಾಮಗ್ರಿಗಳನ್ನು ತಯಾರ್ಮಾಡಿಸಿಕೊಳ್ಳಬಹುದೆಂದು ಗವರ್ನ್‌ಮೆಂಟಿಗೆ ಬರೆದು ತಿಳಿಸಿರುತ್ತಾರೆ. ಪನ್ನಾ ಸಂಸ್ಥಾನದ ಮಹಾರಾಜರವರು ಇಂಗ್ಲಿಷ್ ಯುದ್ಧದ ಸಾಲಕ್ಕೆ 90,000 ರೂಪಾಯನ್ನು ಒದಗಿಸಿದರು.

ಬೊಂಬಾಯಿಯಲ್ಲಿ ದಿವಾಳಿಯಾದ ಕ್ರೆಡಿಟ್ ಬ್ಯಾಂಕಿನ ಲೆಕ್ಕಗಳನ್ನು ತನಿಖೆ ಮಾಡಿ ಎಲ್ಲಾ ಸರಿಯಾಗಿದೆ ಎಂದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟ ಆಡಿಟರುಗಳು ಷೇರುದಾರರಿಗೆ ಬ್ಯಾಂಕಿನ ನಿಜಸ್ಥಿತಿಯನ್ನು ತಿಳಿಸದೆ ಮೋಸಪಡಿಸಿದರೆಂದೂ, ಆದ್ದರಿಂದ ಆಡಿಟರುಗಳು 1,77,930 ರೂಪಾಯಿ ಕೊಡಬೇಕೆಂದೂ ದಾವಾ ಆಯಿತು. ಆಡಿಟರುಗಳು ಇಬ್ಬರೂ ತಲಾ 5,000 ರೂಪಾಯಿನಂತೆ ಕೊಡಲು ಒಪ್ಪಿ ಮೊಕದ್ದಮೆಯನ್ನು ರಾಜಿಮಾಡಿಕೊಂಡರು.

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಕಾಕೋರಿ ಡಿಸ್ಟ್ರಿಕ್ಟಿನಲ್ಲಿ ಎರಡು ಗ್ರಾಮಗಳಲ್ಲಿ ದರೋಡೆಗಳು ನಡೆದಾಗ್ಗೆ ಗ್ರಾಮಸ್ಥರೆಲ್ಲಾ ಗುಂಪುಸೇರಿ, ಕಳ್ಳರನ್ನು ಬಹು ಪರಾಕ್ರಮದಿಂದ ಹಿಡಿದು ಅವರಿಗೆಲ್ಲಾ ಶಿಕ್ಷೆಯಾಗುವಂತೆ ಮಾಡಿದರು. ಪ್ರತಿಯೊಬ್ಬ ಅಪರಾಧಿಗೂ ಏಳು ವರುಷ ಸಜಾ ಆಯಿತು. ಸರ್ಕಾರದವರು ಆ ಮೂರು ಗ್ರಾಮಗಳ ಜನಗಳ ಧೈರ್ಯವನ್ನೂ, ಅವರು ಸರ್ಕಾರಕ್ಕೆ ಮಾಡಿದ ಸಹಾಯವನ್ನೂ ಮೆಚ್ಚಿ ಅವರಿಗೆಲ್ಲಾ ಒಂದು ವರುಷದ ಕಂದಾಯವನ್ನು ಅಂದರೆ 1,560 ರೂಪಾಯಿ ಮಾಫ್ ಮಾಡಿರುತ್ತಾರೆ.

ದೆಹಲಿ ನಗರದ ಮ್ಯಾಜಿಸ್ಟ್ರೇಟ್ ಕೋರ್ಟಿನ ಹೊರಗಡೆ ಮೆಟ್ಟಿನ ಮೇಲೆ ನಿಂತಿದ್ದ ಒಬ್ಬ ವರ್ತಕನ ಜೇಬಿನಿಂದ ಒಬ್ಬ ಕಳ್ಳನು ದುಡ್ಡು ಕಳುತ್ತಿದ್ದದ್ದನ್ನು ಮೇಲ್ಗಡೆ ನಿಂತಿದ್ದ ಪೋಲೀಸ್ ಕಮಿಷನರರೂ, ಒಬ್ಬ ಪೋಲೀಸಿನವನೂ ಕಂಡು ಜಾಗ್ರತೆಯಾಗಿ ಇಳಿದುಬಂದು ವರ್ತಕನನ್ನು ನಿನ್ನ ಬಳಿ ಇದ್ದ ದುಡ್ಡು ಎಷ್ಟು ಎಂದು ಕೇಳಿದಾಗ ಅವನು ರೂ. 3-3-3 ಪೈ ಇತ್ತೆಂದನು. ಕಳ್ಳನ ಮೈಯೆಲ್ಲಾ ಶೋಧನೆಮಾಡಿದರೂ ಒಂದು ಕಾಸೂ ಸಿಕ್ಕಲಿಲ್ಲ. ಎರಡು ರೂಪಾಯಿ ಕಳುವಾಗಿತ್ತು. ಪೋಲೀಸ್ ಕಮಿಷನರು ಆ ಕಳ್ಳನನ್ನು ಆಸ್ಪತ್ರೆಗೆ ಒಯ್ದು ಎಕ್ಸ್‌ರೇ ಎಂಬ ಯಂತ್ರ ಸಹಾಯದಿಂದ ಅವನ ದೇಹವನ್ನೆಲ್ಲಾ ಪರೀಕ್ಷೆ ಮಾಡಿಸಿದಾಗ ಕಳ್ಳನ ಹೊಟ್ಟೆಯೊಳಗಿದ್ದ ಎರಡು ರೂಪಾಯಿ ಕಂಡಿತು.

ಕಾಲಾಬಾಗ್ ಸಂಸ್ಥಾನದ ಖಾನ್ ಬಹದೂರ್ ಅಟಾಮಹಮದ್ ಖಾನ್ ರವರು ಯುದ್ಧ ಕಾರ್ಯದಲ್ಲಿ ಉಪಯೋಗವಾಗುವಂಥಾ ಕುದುರೆಗಳನ್ನು ಕೊಂಡುಕೊಳ್ಳುವುದಕ್ಕೆ ಇಂಡಿಯಾ ಗವರ್ನ್‌ಮೆಂಟಿನವರಿಗೆ 35,000 ರೂಪಾಯನ್ನು ಕಳುಹಿಸಿದರು.—ಸಹಾರನಪುರ ಡಿಸ್ಟ್ರಿಕ್ಟಿನ ಜಹಾನಾಬಾದ್ ನಗರದಲ್ಲಿರುವ ಕ್ಯಾಪ್ಟನ್ ನವಾಬ್ ಮಲಿಕ್ ಮಹಮದ್ ಮುಬಾರಿಕ್ ಖಾನ್ ತಿವಾನಾಯವರು ಒಂದು ಸ್ಕ್ವಾಡ್ರನ್ ಕುದುರೆ ಸೇನಾ ಸೈನಿಕರ ಒಂದು ವರುಷದ ಸಂಬಳವನ್ನು ಅಂದರೆ ತಿಂಗಳಿಗೆ 3,300 ರೂಪಾಯನ್ನು ಒಂದು ವರುಷದ ವರೆಗೆ ವಹಿಸಿಕೊಂಡು ಕೊಡುತ್ತ ಬರುವೆನೆಂದು ಒಪ್ಪಿಕೊಂಡರು. ವೈಸ್‌ರಾಯರವರು ಅಂಗೀಕರಿಸಿ ಇವರಿಬ್ಬರ ರಾಜಭಕ್ತಿಯನ್ನೂ ಔದಾರ್ಯವನ್ನೂ ಕೊಂಡಾಡಿದರು.

ಕಳೆದ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಪಂಜಾಬ್ ಅಧಿಪತ್ಯದ ಕೆಲವು ಪ್ರದೇಶಗಳಲ್ಲಿ ಅನೇಕ ಕೊಲೆಗಳೂ, ದರೋಡೆಗಳೂ, ಲೂಟಿಗಳೂ ನಡೆದವಷ್ಟೆ. ಈ ದುಷ್ಕೃತ್ಯಗಳನ್ನು ನಡಿಸಿದ ಅಪರಾಧಿಗಳನ್ನು ಹಿಡಿದು ಒಂದೊಂದು ಗುಂಪಾಗಿ ವಿಚಾರಣೆಮಾಡಿ ಶಿಕ್ಷೆಗಳನ್ನು ವಿಧಿಸುತ್ತಿದಾರೆ. ಕಳೆದ ತಿಂಗಳ 10 ನೇ ತಾರೀಖಿಗೆ ಆಖೈರಾದ ವಾರದ ರಿಪೋರ್ಟನ್ನು ಪಂಜಾಬ್ ಸರ್ಕಾರದವರು ಪ್ರಕಟಮಾಡಿರುತ್ತಾರೆ. ಈ ರಿಪೋರ್ಟಿನ ಸಾರಾಂಶವೇನೆಂದರೆ 4,175 ಮಂದಿಯನ್ನು ಹಿಡಿದು ದರೋಡೆ ಮೊದಲಾದ ಕ್ರೂರಕೃತ್ಯಗಳನ್ನು ನಡಿಸಿದವರೆಂದು ಅವರ ಮೇಲೆ ಮೊಕದ್ದಮೆ ಮಾಡಿದ್ದರಲ್ಲಿ ಮ್ಯಾಜಿಸ್ಟ್ರೇಟರು 3,134 ಜನರನ್ನು ಖುಲಾಸ್‌ಮಾಡಿ, 680 ಜನರಿಗೆ ಶಿಕ್ಷೆ ವಿಧಿಸಿದರು. ಉಳಿದ 351 ಮಂದಿಯ ವಿಚಾರಣೆ ಮುಗಿಯಲಿಲ್ಲ.

ಕಲ್ಕತ್ತಾ ಪಟ್ಟಣದಲ್ಲಿ ಮನ್ಮಥನಾಥ ಚಕ್ರವರ್ತಿ ಎಂಬವನು ಕೆಲವು ಜನರನ್ನು ತನ್ನ ಕೈಕೆಳಗಿಟ್ಟುಕೊಂಡು ಸುಮಾರು ಐದು ವರುಷಗಳಿಂದಲೂ ತಿಳಿಯದ ಯಾತ್ರಿಕರಿಗೆ ಸುಳ್ಳು ಟಿಕೇಟುಗಳನ್ನು ಬಿಕರಿಮಾಡಿ ಹಣ ಸಂಪಾದನೆ ಮಾಡಿಕೊಳ್ಳುತ್ತಿದ್ದನು. ಕಳೆದ ವಾರ ಹೌರಾ ಪಟ್ಟಣದಲ್ಲಿ ಅವನು ಇಪ್ಪತ್ತು ಜನರಿಗೆ ಹೌರಾ ಪಟ್ಟಣದ ರೈಲ್ವೆ ಸ್ಟೇಷನ್‌ನಲ್ಲಿ ಜಗನ್ನಾಥಕ್ಕೆ ಹೋಗುವ ರೈಲ್ವೆ ಟಿಕೇಟುಗಳನ್ನು ಮಾರಿ ತಾನೂ ಅದೇ ಗಾಡಿಯಲ್ಲಿ ಹತ್ತಿ ಪ್ರಯಾಣ ಮಾಡುತ್ತಿದ್ದನು. ಖಾರಗ್‌ಪುರದ ಸ್ಟೇಷನ್‌ನಲ್ಲಿ ರೈಲಿನ ನೌಕರನು ಟಿಕೇಟುಗಳನ್ನು ಪರೀಕ್ಷೆಮಾಡಿದಾಗ ಆ 20 ಜನರ ಟಿಕೇಟುಗಳೂ ಮೋಸದವುಗಳೆಂದು ತಿಳಿಯಿತು. ಅವರನ್ನು ಈ ಟಿಕೇಟುಗಳನ್ನು ಯಾರು ಕೊಟ್ಟರೆಂದು ಕೇಳಿದಾಗ ಟಿಕೇಟು ಬಿಕರಿಮಾಡಿದವನು 1 ನೇ ತರಗತಿ ಗಾಡಿಯಲ್ಲಿ ಕುಳಿತಿದಾನೆಂದು ಹೇಳಿದರು. ಅದರ ಮೇಲೆ ಮನ್ಮಥನಾಥನು ಸಿಕ್ಕಿಬಿದ್ದನು. ಪೋಲೀಸಿನವರು ಮುಂದಿನ ಕೆಲಸ ನಡಿಸುತ್ತಿದಾರೆ.

ಪೂರ್ವ ಬಂಗಾಳಕ್ಕೆ ಸೇರಿದ ಸತಾಕ್ಷಿರಾ ಪುರದಲ್ಲಿ ನಂದಿನಿ ಎಂಬ ಕಾರ್ಖಾನೆಗೆ ಒಬ್ಬ ಪೋಲೀಸ್ ಉದ್ಯೋಗಸ್ಥನು ಹೋಗಿ ಒಬ್ಬ ಕೂಲಿಯವನನ್ನು ದಸ್ತಗಿರಿ ಮಾಡಬೇಕೆಂದು ತಿಳಿಸಿದಾಗ ಆ ಕಾರ್ಖಾನೆಯ ಯಜಮಾನನಾದ ಮಿ|| ಘೋಷ್ ಎಂಬುವನು ಪೋಲೀಸಿನವನನ್ನು ಹೊಡೆದು ಅವನ ನ್ಯಾಯವಾದ ಕೆಲಸಕ್ಕೆ ಅಡಚಣೆಯನ್ನು ಕಲ್ಪಿಸಿದ್ದರಿಂದ ಆ ಯಜಮಾನನಿಗೆ ಕೋರ್ಟು ಬರಖಾಸ್ತಾಗುವವರೆಗೆ ಸಜ ಮತ್ತು 1,000 ರೂಪಾಯಿ ಜುಲ್ಮಾನೆ ಎಂಬೀ ಶಿಕ್ಷೆ ವಿಧಿಸಲ್ಪಟ್ಟಿತು.

• • •

ಪೂರ್ವ ಬಂಗಾಳಾಕ್ಕೆ ಸೇರಿದ ಮೈಮನ್‌ಸಿಂಗ್‌ನಿಂದ ಮುಕ್ತಾಗಾಚಾ ಎಂಬ ಸ್ಥಳಕ್ಕೆ ಹೋಗಿಬರುವ ಮಾರ್ಗವು ಪ್ರಯಾಣಿಕರಿಗೆ ಸುರಕ್ಷಿತವಾಗಿಲ್ಲದ್ದರಿಂದ ಬಂಗಾಳಾ ಗವರ್ನ್‌ಮೆಂಟಿನವರು ಸ್ಥಳೀಯ ಮುಖಂಡ ಪ್ರಜೆಗಳನ್ನು ಸ್ಪೆಷಲ್ ಪೋಲೀಸಿನವರಂತೆ ಸೇರಿಸಿಕೊಂಡು ಇವರು ಆರು ತಿಂಗಳ ತನಕ ಆ ರಸ್ತೆಯನ್ನು ಕಾವಲಿದ್ದು ನೋಡಿಕೊಳ್ಳಬೇಕೆಂದು ಹುಕುಂ ಮಾಡಿರುತ್ತಾರೆ. ಆ ಮಾರ್ಗದಲ್ಲಿ ಹಲವು ದರೋಡೆಗಳೂ ಕ್ರೂರಕೃತ್ಯಗಳೂ ನಡೆದಿರುತ್ತವೆ.

ಮೈಸೂರು ಗೆಜೆಟ್ ಸಂಗ್ರಹ.

ಬಲಾತ್ಕಾರದ ಬೇವಿ ಶಿಡುಬು ಹಾಕುವ ಕಾನೂನು ಚಳ್ಳಕೆರೆ ಮ್ಯುನಿಸಿಪಾಲಿಟಿಯಲ್ಲಿ ಇದೇ ಆಗಸ್ಟ್ ಒಂದಾಯಿತು ಮೂರು ವರುಷ ಜಾರಿಯಲ್ಲಿ ತರಲ್ಪಟ್ಟಿದೆ.

ದೊಡ್ಡಗೋಪೆನಹಳ್ಳಿ ಜಹಗೀರ್‌ದಾರ್ ಮ|| ಶಿವಪ್ಪನವರನ್ನು ಶಿವಮೊಗ್ಗಾ ತಾಲ್ಲೂಕ್ ಬೋರ್ಡಿಗೂ, ರೆವ್|| ಆರ್. ಡಬ್ಲ್ಯು. ಬೂಟ್‌ರವರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡಿಗೂ ಮೆಂಬರಾಗಿ ನೇಮಕಮಾಡಿದೆ.

ಮೈಸೂರು ಮಹಾರಾಣಿಯವರ ಆಸ್ಪತ್ರೆಯ ಹೆಸರನ್ನು ವಾಣೀವಿಲಾಸ ಆಸ್ಪತ್ರೆ ಎಂದು ಬದಲಾಯಿಸಿದೆ.

ಬೇಲೂರ್ ತಾಲ್ಲೂಕು ಅಮಲ್ದಾರ್ ಮ|| ಲಿಂಗೋಪಂತ್ ಬಾದಾಮಿಯವರಿಗೆ ಕೊಟ್ಟಿದ್ದ ಆರು ವಾರಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ವಾರ ಜಾಸ್ತಿಮಾಡಿದೆ.

ರಜದ ಮೇಲಿರುವ ಅಮಲ್ದಾರ್ ಮ|| ಸಿ. ಕೃಷ್ಣಮನಾಯುಡುಮವರನ್ನು ತುಮಕೂರಿಗೆ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ವರ್ಗಮಾಡಿದೆ.

ಅ|| ಕಮಿಷನರ್ ಮ|| ಆರ್. ನಾರಾಯಣಯ್ಯರಯವರನ್ನು ಕಳೆದ ಮಾರ್ಚ್ ತಾ. 31 ರಿಂದ 2 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಕಂಟ್ರೋಲರವರ ಆಫೀಸ್ ಎಗ್ಸಾಮಿನರ್ ಮ|| ಟಿ. ಸುಬ್ಬರಾಮಯ್ಯನವರನ್ನು ಹಂಗಾಮಿಯಾಗಿ ಅ|| ಕಂಟ್ರೋಲರಾಗಿ ನೇಮಿಸಿದೆ.

ಮುಂದೆ ಹೇಳುವ ಅಮಲ್ದಾರ್ರ ವರ್ಗಾವರ್ಗಿ ಹುಕುಂ ಮಾಡಿದೆ— ಮ|| ಕೆ. ಲಿಂಗೋಪಂತ್ ಬಾದಾಮಿಯವರು ಬೇಲೂರಿನಿಂದ ಚಿಂತಾಮಣಿಗೆ; ಮ|| ಜಿ. ರಾಂತವೀರಪ್ಪನವರು ಪೋಲಿಸ್ ಇಲಾಖೆಗೆ ವಾಪಸು ಹೋಗತಕ್ಕದ್ದು; ಎಕ್ಸೈಸ್ ಆಫೀಸರಾಗಿ ಬದಲಿ ನೇಮಿಸಲ್ಪಟ್ಟಿರುವ ಮಿ|| ಅಬ್ದುಲ್ ಹಕೀಮ್‌ರವರು ಬೇಲೂರು ತಾಲ್ಲೂಕಿನ ಅಮಲ್ದಾರ್ರಾಗಿರತಕ್ಕದ್ದು.

ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಮಿ|| ಸಯ್ಯದ್ ಯಾಕೂಬ್‌ರವರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತುಮಾಡುವ ಅಧಿಕಾರ ವಹಿಸಿದೆ.

ಡೆಪ್ಯುಟಿ ಕಮಿಷನರ್ ಮ|| ವಿ. ಆರ್. ತ್ಯಾಗರಾಜ ಅಯ್ಯರವರಿಂದ ಸೀನಿಯರ್ ಅ|| ಕಮಿಷನರ್ ಮ|| ಸಿ. ವೆಂಕಟರಾಯರು ಜೂಲೈ ತಾ. 14 ರಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಮತ್ತು ಟ್ರೆಜರಿ ಛಾರ್ಜನ್ನು ವಹಿಸಿಕೊಂಡಿದಾರೆ.

ಮ|| ಡಿ. ಎಂ. ನರಸಿಂಗರಾಯರಿಂದ ಗವರ್ನ್‌ಮೆಂಟ್ ರೆವಿನ್ಯೂ ಸೆಕ್ರೆಟರಿ ಕೆಲಸದ ಛಾರ್ಜನ್ನು ಮ|| ವಿ. ಆರ್. ತ್ಯಾಗರಾಜ ಅಯ್ಯರವರು ಜೂಲೈ ತಾ. 19 ರಲ್ಲಿ ವಹಿಸಿಕೊಂಡಿದಾರೆ.

ಮ|| ಸಿ. ಎಸ್. ಬಾಲಸುಂದರಂ ಅಯ್ಯರವರಿಂದ ಎಕನಾಮಿಕ್ ಕಾನ್ಫರೆನ್ಸಿನ ಸೆಕ್ರೆಟರಿ ಕೆಲಸದ ಛಾರ್ಜನ್ನು ಮ|| ಡಿ. ಎಂ. ನರಸಿಂಗರಾಯರು ಜೂಲೈ ತಾ. 19 ರಲ್ಲಿ ವಹಿಸಿಕೊಂಡಿದಾರೆ.

ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಎಂ. ಎ. ನಾರಾಯಣಯ್ಯಂಗಾರ್‍ರಿಗೆ ಅವರು ಉಪಯೋಗಿಸಿಕೊಳ್ಳುವ ಕಾರೀಖಿನಿಂದ ಆಗಸ್ಟ್ ತಾ. 21 ರ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ. ಮ|| ಆರ್. ರಂಗರಾಯರು ತಮ್ಮ ಕೆಲಸಗಳೊಂದಿಗೆ ರಿಜಿಸ್ಟ್ರಾರ್ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ತುಮಕೂರು ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಎಸ್. ಗೋವಿಂದರಾಯರಿಗೆ ಮೂರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು. ಮ|| ಬಿ. ರಾಮಯ್ಯನವರು ಅವರ ಕೆಲಸದ ಛಾರ್ಜನ್ನು ವಹಿಸಿದ್ದರು.

ಶ್ರೀ ರುಕ್ಮಿಣಮ್ಮನವರನ್ನು ಮೈಸೂರು ಮಹಾರಾಣಿ ಕಾಲೇಜಿನ ಸೂಪರಿಂಟೆಂಡೆಂಟರಾಗಿ ನೇಮಿಸಿದ್ದರಿಂದ ಶ್ರೀ ಶ್ರೀರಂಗಮ್ಮನವರು 200-20-300 ರೂಪಾಯಿ ತಲಬಿನ ದರ್ಜೆಯಲ್ಲೀ ಅ|| ಸೂಪರಿಂಟೆಂಡೆಂಟರಾಗಿ ನೇಮಕ ಮಾಡಲ್ಪಟ್ಟಿದಾರೆ.

ಶ್ರೀ ಕೆ. ಸುಬ್ಬಮ್ಮನವರನ್ನು 150 ರೂಪಾಯಿನ ದರ್ಜೆಯಿಂದ 200-20-300 ರೂಪಾಯಿ ತಲಬಿನ ದರ್ಜೆಗೆ ಬಡ್ತಿಮಾಡಿ, ಶ್ರೀ ಶ್ರೀರಂಗಮ್ಮನವರ ಕೆಲಸಕ್ಕೆ ಹಂಗಾಮಿ ನೇಮಕಮಾಡಿದೆ.

ಮ|| ಬಿ. ವೆಂಕೋಬರಾಯರನ್ನು ಮೈಸೂರು ಸ್ಟೇಟ್ ರೈಲ್ವೆ ಟ್ರಾಫಿಕ್ ಮ್ಯಾನೇಜರ್ ಮತ್ತು ಚೀಫ್ ಸ್ಟೋರ್ ಕೀಪರಾಗಿ ನೇಮಕಮಾಡಿದೆ.

ಮೂಡಿಗೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮ|| ಎಂ. ನರಸಿಂಹಯ್ಯನವರಿಗೆ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಶಿವಮೊಗ್ಗಾ.—ಶಿಕ್ಷಕಟ್ಟೆಗೆ ಹವಾ ಆರೋಗ್ಯವಾಗಿದೆ. ಗೋಪಿಶೆಟ್ಟಿ ಕೊಪ್ಪದಲ್ಲಿ ಪ್ಲೇಗ್ ಎಂಥ ವರ್ತಮಾನವಿದೆ.—ರಸ್ತೆಯ ರಿಪೇರಿ ಮಾಡಲು ಈ ಟವರ್ ಕೇರಿಗಳಲ್ಲಿ ಕೆಲವರು ಕಲ್ಲುಗಳನ್ನು ಹೇರಿ ಹಾಕಿದಾರೆ. ಈ ಮಳೆಗಾಲದಲ್ಲಿ ರಿಪೇರಿ ಆದರೆ ಬಹಳ ಒಳ್ಳೇದಾಗುತ್ತದೆ.—ತಾ. 19 ನೇ ಸೋಮವಾರ ರಾತ್ರಿ ಸುಮಾರು 3 ಘಂಟೆ ಹೊತ್ತಿನಲ್ಲಿ ದೊಡ್ಡ ಬ್ರಾಹ್ಮಣರ ಕೇರಿ ಕಲ್ಲು ಮಠದ ಎದುರಿಗೆ ನಲ್ಲಿ ಒತ್ತಿನ ಮನೆಗೆ ಬೆಂಕಿಬಿತ್ತು. ಆ ರಾತ್ರಿ ಆದ್ದರಿಂದ ಜನಗಳು ಎಚ್ಚರಿಕೆ ಇರಲಿಲ್ಲ. ಒಳಗಿನ ಅಟ್ಟ ಒಲೆಯಿಂದ ಹೊತ್ತಿಕೊಂಡು 3ರ ಯಿತು. ಮನೆಯವರು ಗಲಾಟೆ ಮಾಡುವ ಶಬ್ದವನ್ನು ಕೇಳಿ ಕರಗಿದರು. ಜನಗಳು ಸೇರಿ ಬೆಂಕಿ ಆರಿಸಿದರು. ಆ ಮನೆಗೆ ಮಾತ್ರ ಅಪಾಯವಾಯಿತು. ಜಾಡು ಮನೆಗಳು ಅಪಾಯದಿಂದ ತಪ್ಪಿದ್ದಕ್ಕೆ ಸಂತೋಷಪಡುತ್ತೇವೆ.—ನರಸಿಂಹರಾಜಪುರದಲ್ಲಿ ಹೊಸ ಮುನ್ಸಿಫ್ ಕೋರ್ಟ್ ಆದ್ದರಿಂದ ಇಲ್ಲಿನ ಪ್ಲೀಡರ್ ಮ|| ನಾಡಿಗ ವೆಂಕಟಗಿರಿರಾಯರು ಆ ಊರಲ್ಲಿ ಇರಲು ಹೋದರು. ಇವರ ಮನೆಯವರು ಹೋಗುವುದಕ್ಕೆ ಸೀಗೆಹಟ್ಟಿ ಕುಸುಬರ ಗಾಡಿ ಗೊತ್ತುಮಾಡಿದರು. ಬಾಡಿಗೆಯಲ್ಲಿ ತಕರಾರು ಬಂದು ಸಾಮಾನು ತುಂಬಿದ ಗಾಡಿ 24 ಘಂಟೆ ನಡು ರಸ್ತೆಯಲ್ಲಿ ನಿಂತಿತ್ತು. ಗಾಡಿ ತೆಗೆಯಬೇಕಾಗಿ ಪೋಲೀಸಿನವರು ಗಾಡಿಯವನಿಗೆ ಹೇಳಿದರು. ತೆಗೆಯಲಿಲ್ಲ, ನಂತರ ಪೋಲೀಸಿನವರು ಕರೆದರೆ ಬರಲಿಲ್ಲ. ನಂತರ ಜವಾನರಿಂದ ಉಪಾಯದಿಂದ ಗಾಡಿಯವನನ್ನು ಕರಸಿ ಕೇಸ್ ಮಾಡಿ ವಿಚಾರಣೆಗೆ ಟವರ್ ಮ್ಯಾಜಿಸ್ಟ್ರೇಟರಲ್ಲಿ ಹಾಜರು ಮಾಡಿದರು. ಇವರ ಮೇಲೆ ಪೋಲೀಸಿನವರಿಗೆ ಇಕ್ಕಾಡ ಮತ್ತು ರಸ್ತೆಯಲ್ಲಿ 24 ಘಂಟೆ ಗಾಡಿ ಬಿಟ್ಟಿದ್ದ ಕ್ಕೆ ಗ್ಯರ ಬಹಳ ವಿಚಾರದಿಂದ ಹತ್ತು ರೂಪಾಯಿ ಜುಲ್ಮಾನೆ ವಿಧಿಸಿದರು.

ಗೃಹಕೃತ್ಯದ ನೋಟೀಸು.

ದೇವನಹಳ್ಳಿ ತಾಲ್ಲೂಕು ದೊಡ್ಡಸಂತೆ ಗ್ರಾಮದಲ್ಲಿರುವ ಒಕ್ಕಲಿಗರ ಜಾತಿ ಕೃಷ್ಣಪ್ಪನ ಹೆಂಡತಿ ಅಕ್ಕಯ್ಯಮ್ಮ ತಿಳಿಯಪಡಿಸುವದೇನೆಂದರೆ—ನನ್ನ ಗಂಡ ಮೃತಿಯಾಗಿ ಆರೇಳು ವರುಷಗಳಾಯಿತು. ನನ್ನ ಮಗ ಅಪ್ಪಯ್ಯನು ಕಳೆದ ಎರಡು ವರುಷಗಳಿಂದಲೂ ನನಗೆ ಅನ್ನ ಬಟ್ಟೆ ಕೊಡದೆ ಬೇರೆ ಇರುತ್ತಾನೆ. ನನ್ನ ಗಂಡ ಸಂಪಾದಿಸಿದ್ದ 3 ನೇ ನಂಬರು ಮನೆಯನ್ನು ಇದೇ ಗ್ರಾಮದಲ್ಲಿರುವ ಬಾಂಬಾಳದ ಗೋವಿಂದಪ್ಪನವರಿಗೆ 50 ರೂಪಾಯಿಗೆ ಭೋಗ್ಯಮಾಡಿ ಜೀವನ ಮಾಡುತ್ತಿದೇನೆ. ನನ್ನ ಮಗ ಅಪ್ಪಯ್ಯನಿಂದ ಸದರಿ ಮನೆಯನ್ನು ಯಾರಾದರೂ ಆಧಾರ ಭೋಗ್ಯ ಮಾಡಿಕೊಂಡರೆ ನಷ್ಟಕ್ಕೆ ಗುರಿಯಾಗುತ್ತಾರೆ.

[148-1] ಅಕ್ಕಯ್ಯಮ್ಮನ ರುಜು.

ಗೃಹಕೃತ್ಯದ ನೋಟೀಸು.

ಹೆಗ್ಗಡದೇವನಕೋಟೆ ತಾ|| ಕಸಬಾ ಹೋಬಳಿ ಮಟಕೇರಿಯಲ್ಲಿರುವ ಹೊನ್ನೇಗೌಡನ ಮಗ ಹೊನ್ನೇಗೌಡನು ತಿಳಿಯಪಡಿಸುವದೇನಂದರೆ—ನನ್ನ ಬಾಸಾ ತಂದೆ ಅಪ್ಪಾಜಿಗೌಡ್ನ ಮಗ ಹೊನ್ನೇಗೌಡನು ಮಟಕೇರಿಯಲ್ಲಿರುತ್ತಾನೆ. ಇವನಿಗೆ ಈ ಗ್ರಾಮದಲ್ಲಿ ಸ್ವಂತ ಮನೆಗಳು ಮತ್ತು ಸರ್ವೆ ೨, ೫೪, ೫೪, ೧೮-೧ ನೇ ನಂಬರು ಮುಸ್ಕೀ ಜಮೀನುಗಳೂ, ಬೆಳಗನಹಳ್ಳಿ ಗ್ರಾಮದಲ್ಲಿ ಸರ್ವೆ ೭೭, ೭೮-೧, ೭೮-೨ ನೇ ನಂಬರು ತರಿ ಜಮೀನುಗಳೂ ಇವೆ. ಇವು ಪಿತರಾರ್ಜಿತವಾದ ಆಸ್ತಿಗಳು. ನನ್ನ ತಂದೆ ಮೇಲ್ಕಂಡ ಅಪ್ಪಾಜಿಗೌಡ್ನ ಮಗ ಹೊನ್ನೇಗೌಡನು ಏಕಗೃಹಕೃತ್ಯದಲ್ಲೇ ಇದ್ದುಕೊಂಡು ಇತರರ ದುರ್ಬೋಧನೆಯಿಂದಲೂ, ೭೭ ವರುಷವಾಗಿ ಬುದ್ಧಿ ಸ್ಥಿಮಿತವಿಲ್ಲದ್ದರಿಂದಲೂ ಮೇಲ್ಕಂಡ ಆಸ್ತಿಗಳನ್ನು ಪರಾಧೀನ ಮಾಡಬೇಕೆಂಬ ಇರಾದೆಯುಳ್ಳವನಾಗಿರುತ್ತಾನೆ. ಸದರಿ ಆಸ್ತಿಗಳನ್ನು ನನ್ನ ಸಮ್ಮತಿ ರುಜುವಿಲ್ಲದೆ ಯಾರಾದರೂ ಯಾವ ವಿಧವಾಗಿಯೂ ಅನುಭೋಗ ಪಡೆದಲ್ಲಿ ಅದು ಊರ್ಜಿತವಾಗದೆ ನಷ್ಟಕ್ಕೆಲ್ಲಾ ಗುರಿಯಾಗುತ್ತಾರೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

[152-1]

ತಾ. ೨೮-೭-೧೯೧೫. ಹೊನ್ನೇಗೌಡನ ರುಜು

ಜುಯಲ್ಡ್ ಸ್ಪ್ರಿಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

ಇದರ ಕ್ರಯ 14 ಬಹುಮಾನಗಳ ಸಮೇತ ರೂ. 3-1-0.

ಈ ಪಕ್ಕೆಯಲ್ಲಿ ತೋರಿಸಿರುವುದು ಜುಯಲ್ಡ್ ಸ್ಪ್ರಿಂಗ್ ಪಾಕೆಟ್ ರಜಿಸ್ಟರ್ಡ್ ವಾಚು 5 ರತ್ನಗಳುಳ್ಳ ಕೀಲೆಸ್ ಮ್ಯಾಲೆಬಲ್. ಬಹು ಬಲವಾದ



ಗಡಿಯಾರ. ಈ ಗಡಿಯಾರ ಸಣ್ಣವಾದ ಯಂತ್ರದಲ್ಲಿ ಯೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟದ್ದು. ಇದು ನೋಡುವುದಕ್ಕೆ ಸುಂದರವಾಗಿಯೂ, ಮುಟ್ಟುವುದಕ್ಕೆ ಗಟ್ಟಿಯಾಗಿಯೂ ಇರುತ್ತದೆ. ನಮ್ಮ ಕಂಪೆನಿ ಹೊಸದಾಗಿ ಸ್ಥಾಪಿಸಿರುವದರಿಂದ ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶದಿಂದ ಇಷ್ಟು ಕಡಿಮೆ ಕ್ರಯಕ್ಕೆ ಬಹು ಬಹುಮಾನಗಳನ್ನು ಹಾಕಿರುತ್ತೇವೆ. ಈ ಸಮಯವನ್ನು ಕಳೆಯದೆ ಜಾಗ್ರತೆಯಾಗಿ ಈಗಲೇ ಬರೆದು ತರಿಸಿಕೊಳ್ಳಿ. ಈ ಗಡಿಯಾರವು 5 ವರ್ಷಗಳ ಪರ್ಯಂತರ ನಿಲ್ಲದೇ ನಡೆಯತಕ್ಕದ್ದೆಂದು ಗ್ಯಾರಂಟಿ. ಬಹುಮಾನಗಳ ಪಟ್ಟಿ:— 1 ಸುಂದರವಾದ ಸರಪಣಿ, 2 ಉಂಗುರಗಳು, 3 ಇಂಗ್ಲೀಷ್ ಮಾದರಿ ಚಾಕು, 4 ಜರ್ಮನ್ ಕನ್ನಡಿ, 5 ಕರವಸ್ತ್ರ, 6 ಹೊಸದಾದ ಪ್ಲೇಟ್ ಕೆಲಸ ಮಾಡಿದ ವಾಚ್ ಪೆಟ್ಟಿಗೆ, 7 ಪಿನ್ ಗಳು, 8 ಸುವಾಸನೆಯುಳ್ಳ ಪರಿಮಳ ತೈಲ (ಸೆಂಟ್), 9 ಆರು ಕಲ್ಪ ಗಳು

[144-2]

ನಮ್ಮ ವಿಳಾಸ:—ಶಿವರಾಂ ಅಂಡ್ ಕಂಪನಿ, ನಂ. 28, ಅಂಗಪ್ಪನ ಬೀದಿ, ಸಾಹುಕಾರ್‌ಪೇಟೆ, ಮದರಾಸ್.

ಮೈಸೂರು ಸಂಸ್ಥಾನದ ಆಸ್ಥಾನ ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯ ಐಯ್ಯರ್ ಇವರಿಂದ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಕ್ರಯ ೧—೪—೦. ಅಂಚೆ ಹಾಸಲು ಬೇರೆ

ಪುಸ್ತಕ ದೊರೆಯುವ ಸ್ಥಳಗಳು:—

(1) ಎಂ. ವೆಂಕಟರಾಮಯ್ಯ, ಗ್ರಂಥಪ್ರಚಾರಕ, ಚಾಮರಾಜಪೇಟೆ, ಮೈಸೂರು (2) ದಿ ಜನರಲ್ ಏಜೆನ್ಸಿ ಮೈಸೂರು [161-1] (3) ಎಂ ಎಸ್. ರಾವ್. ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 8 ಆಣೆ.

ವಾಚಕ ಮಹಾಶಯರೇ, ಇದು ಎಲೆಕ್ಟ್ರಿಕ್ ಚಿನ್ನದಿಂದಲೂ ಮತ್ತು ಗಟ್ಟಿ ಗೆಜೆ ಗಳಿಂದಲೂ ತಂಜಾವೂರು ಕೆಲಸಗಾರರಿಂದ ತಯಾರಿಸಿ ಸುಂದರವಾದ



ಕುಸುಮಗಳನ್ನಿಟ್ಟು ರೇಷ್ಮೆ ದಾರದಿಂದ ಬಹು ಸೊಗಸಾಗಿ ಕಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಅಂಥಿಂಥಾ ಗಿಲ್ಟಲ್ಲ. ಘನವಂತರು ಕೂಡ ಇದನ್ನು ಕೊಂಡುಕೊಳ್ಳುತ್ತಿದಾರೆ. ಇದು ಸ್ತ್ರೀಯರೂ ಹುಡುಗಿಯರೂ ಕೊರಳಲ್ಲಿ ಧರಿಸಿಕೊಳ್ಳುವುದಕ್ಕೆ ಲಾಯಖಾದದ್ದು. ಇದಕ್ಕೆ ಪಡಿಯರು ಬೇಕು. ಸಂಬಳ ತಿಂಗಳಿಗೆ ರೂ. 16. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ. ರಿಸ್ ಕೋಸ್ ಸ್ಟ್ರಾಂಗ್ ಗಡಿಯಾರ ರೂ. 1-14-0; 5 ಶಿರಸ್ಸುಳ್ಳ ಗೆಜೆ ಕಟ್ಟದ ನಾಗರ 12 ಆ.; ಕಾಷ್ಟ ನೇಷನ್ ಕೈ ಗಡಿಯಾರ ರೂ 1-14-0.

ನಮ್ಮ ವಿಳಾಸ:—ಮ್ಯಾನೇಜರ್, ಕೆ. ರಾಮಚಂದ್ರರಾವ್ ಅಂಡ್ ಕೋ.,

[137-1] ನಂ. 16, ತಿರುಪಳ್ಳಿ ಬೀದಿ, ಸಾಹುಕಾರ್ ಪೇಟೆ, ಮದರಾಸು

ತುಮಕೂರು 1 ನೇ ಮುನ್ಸಿಫ್ ಕೋರ್ಟಿನಲ್ಲಿ

1914 15 ನೇ ಇಸವಿ O. S. ನಂ. 671

ವಾದಿಗಳು.—ಕುಣಿಗಲು ತಾ|| ಎಡಿಯೂರು ಸಮ್ಮತು ಕಪ್ಪಗುಣಿಯಲ್ಲಿರುವ ಒಕ್ಕಲಿಗರ ಜಾತಿ (1) ಕರಿಯೇಗೌಡನ ಮಗ ಪಾಟೀಲ್ ಲಕ್ಕಣ್ಣ ಗೌಡ ವಗೈರೆ ಆರು ಜನಗಳು

ಪ್ರತಿವಾದಿಗಳು:—ಡಿಟ್ಟೋ ಸಮ್ಮತು ನೇರಳೆಮರಿಪುರದಲ್ಲಿರುವ (1) ಅಬ್ಬುಲ್ಲಾ ಸಾಬಿ ಮಗ ಗೌಸ್ಸು ಸಾಬಿ ವಗೈರೆ 5 ಜನಗಳು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಕುಣಿಗಲು ತಾ|| ಎಡಿಯೂರು ಸ|| ಕಪ್ಪಗುಣಿ ಗ್ರಾಮದಲ್ಲಿರುವ ಮ|| ನಮ್ಮ ಚೌಡಮ್ಮ ಮತ್ತು ಅಂಜನೇಯ ದೇವರುಗಳ ದೀಪಾರಾಧನೆ ಉತ್ಸವ ಗಳಿಗಾಗಿ ಸರ್ವೆ 18 ನೇ ನಂಬರು ಜಮೀನಿನಲ್ಲಿರುವ ತೋಟಗಳು ಮರಗಳು ಫಸಲು ಪ್ರತಿವಾದಿಗಳು ಅಕ್ರಮವಾಗಿ ತೆಗೆದುಕೊಂಡುಹೋಗಿರುವುದರಿಂದ ಆ ದೇವಭಕ್ತಿಯುಗಳು ಮಾತ್ರ ಡಿಟ್ಟೋ ಫಸಲನ್ನು ತೆಗೆದುಕೊಳ್ಳಲು ಹಕ್ಕುದಾರರೆಂತಲೂ ಫಸಲು ಹಣವನ್ನು ಕೊಡಿಸಬೇಕೆಂದು ವಾದಿಗಳು ಈ ಕೋರ್ಟಿನ ದಾವಾ ದಾಖಲು ಮಾಡಿರುತ್ತಾರೆ. ಈ ಮೊಕದ್ದಮೆಗೆ ಆಕ್ಷೇಪಣೆ ಉಳ್ಳವರು ತಾ|| 9-8-1915 ನೇ ದಿ. 11 ಗಂಟೆ ಈ ಕೋರ್ಟು ಮುಖಾಂತರ ಹಾಜರಾಗತಕ್ಕದ್ದು. [150-1]

Tumkur, B. RANGA IYENGAR.
15-7-1915. First Munsif



ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದಾರೆ. ನಿಮಿಷಮಾತ್ರವೇ ಹಾಕಿದರೆ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವುದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇರಾದಂತೆ ಗುಣಕಾರಿಯಲ್ಲದಿದ್ದರೆ ಯಾವಾಗಲಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ಖರೀದಿ ಹಣವನ್ನು ಅವರಿಗೆ ವಾಪಸ್ ಕಳುಹಿಸುತ್ತೇವೆ. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0 ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0 ಟಪಾಲು ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

[149-1] ನಮ್ಮ ವಿಳಾಸ-ವಿ. ಎ. ಎಸ್. ಪಾಲ್. ನಂ. 2. ಇರುಳಪ್ಪನ ಬೀದಿ, ಮದರಾಸ್

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ತಣ್ಣಗಾಗಿ ಉಜ್ಜ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ಶಿಲ್ಪಕನ್ನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರುವ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ನೋವನ್ನು ಪರಿಹರಿಸುವದು. ಕಣ್ಣಲ್ಲಿ ಮಬ್ಬನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನು ಕೊಡುವುದಲ್ಲದೆ ಉಲ್ಲಾಸವನ್ನು ಒದಗಿಸುವ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಪತ್ರೆ, ಲವಂಗ, ಇರುವಂತಿಗೆ, ಸ್ಯಾನಂತಿಗೆ, ಕ್ಯಾದಿಗೆ, ಗುಲಾಬಿ, ಮಲ್ಲಿಗೆ, ಸಂಪಿಗೆ, ಪಚ್ಚೆ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯೂ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಇದರ ವಾಸನೆ ಹೋಗದು. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮುಕ್ಕಳು ಎಲ್ಲರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿ:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜರ್ಮನ್ ಸಿಲ್ವರ್ ಉಂಗುರ ಧರಣೆ 1, ಅತ್ತರು ಬಾಟ್ಲಿ 1, ವಾಸನೆಯುಳ್ಳ ಸೋಪು 1, ತಾಂಬೂಲವಸ್ತ್ರ 22, ಕೊಂಡೆ ಗುಂಡುಗಳು 6, ಕಾರೊನೇಷನ್ ಬ್ರೂಚ್ 1, ಜಡೆ ಕಟ್ಟು 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

[87-7]

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ, ನಂ. 44, ನಂಬುಳಯ್ಯರ ಬೀದಿ, ಮದರಾಸು

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜೂಲೈ 16 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣೆ:—(1)	ಷೇರು ಮೊಬಲಗು	ರೂ. 1,000,000
,, (2)	ರಿಜರ್ವ್ ಫಂಡು	,, 25,000
,, (3)	ಡಿಪಾಜಿಟ್ಟುಗಳು ...	,, 3,233,946
,, (4)	ಇತರೆ	,, 70,797
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 4,329,743

ಲೇಣೆ:—(1)	ಕೈಯುಲ್ಲು, ಬ್ಯಾಂಕುಗಳಲ್ಲಿರುವ ಹಣ	ರೂ. 702,104
,, (2)	ಖಾತೆ ಮತ್ತು ಇತರ ಸಾಲಗಳು	,, 2,931,697
,, (3)	ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,, 377,092
,, (4)	ಇನ್‌ವೆಸ್ಟ್‌ಮೆಂಟುಗಳು	,, 296,124
,, (5)	ಏಜೆನ್ಸಿಗಳಲ್ಲಿರುವ ಮೊಬಲಗು ...	,, 2,784
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು ...	,, 14,612
,, (7)	ಇತರೆ	,, 5,330
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 4,329,743

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ತಾಲ್ಲೂಕು ವರ್ತಮಾನಗಳು.

ಹಂಪರ.—ಇಲ್ಲಿ ಕೆಲವು ದಿನಗಳಿಗೆ ಮುಂಚೆ ಮಳೆ ಚೆನ್ನಾಗಿ ಆಗಿ ಈಗ ಸಂಪೂರ್ಣವಾಗಿ ನಿಂತಿರುವದರಿಂದ ಈ ಬಿತ್ತನೆ ಕಾಲದಲ್ಲಿ ಮಳೆ ಇಲ್ಲದ್ದರಿಂದ ರೈತರು ತುಂಬಾ ವ್ಯಸನಾಕ್ರಾಂತರಾಗಿದ್ದಾರೆ.—ಬ್ಯಾಡಿಗೆ, ಹಾವೇರಿ ಕಡೆಗಳಲ್ಲಿ ಪ್ಲೇಗ್ ಜೋರಾಗಿರೋಣದರಿಂದ ಆ ಕಡೆಯವರು ಈ ಊರಿಗೆ ಬರುತ್ತಾ ಇದ್ದಾರೆ ಸರ್ಕಾರದವರು ಈ ಜನಗಳ ವಿಷಯ ತುಂಬಾ ನಿಗಾ ಇಟ್ಟಿರುವದು ಒಳ್ಳೇದು.—ನಮ್ಮ ಅಮಲ್ದಾರರು ಕನ್ನಂಬಾಡಿಗೆ ವರ್ಗವಾದದ್ದು ಜನಗಳಿಗೆ ತುಂಬಾ ವಿಷಾದವನ್ನುಂಟುಮಾಡಿದೆ. ಇವರು ತುಂಬಾ ಸಭ್ಯರೂ, ಪ್ರಜೆಗಳಿಗೆ ತುಂಬಾ ಉಪಕಾರ ಪರರೂ ಆಗಿದ್ದರೆಂದು ಸಕಲರೂ ಹೇಳುತ್ತಾರೆ.—ನೇಯಿಗೆ ಕೆಲಸಮಾಡುವ ಸಾಹುಕಾರ್ ಮ॥ ಗಳಾದ ಕಟಾರಿ ಗಂಗಪ್ಪ, ಲದವ ಶಂಕರಪ್ಪ, ರಾಮಾಡೆ ವಿರೂಪಾಕ್ಷಪ್ಪ, ಸೋಳಂಕಿ ಫಕೀರಪ್ಪ, ಮಾರವಾಡಿ ಸಾಹುಕಾರ್ರು ಸೇರಿ ನೇಯಿಗೆಮಾಡುವ ಕೂಲಿ ಜನಗಳನ್ನು ಸೇರಿಸಿ ಯುದ್ಧದ ದೆಸೆಯಿಂದ ನೂಲು ಬಹಳ ರೇಟ್ಟು ಬಹಳ ಬಿಟಾರಿಯಾಗಿದೆ. ನಮಗಳಿಗೆ ವ್ಯಾಪಾರದಲ್ಲಿ ಲಾಭವಿಲ್ಲ ನೀವುಗಳು ಹುಂಜ ಒಂದಕ್ಕೆ ಒಂದು ರೂಪಾಯಿ ಪ್ರಕಾರ ಕೂಲಿ ಕಮ್ಮಿ ಮಾಡಿ ನೇಯಬೇಕು ಎಂದು ಮಿಟಿಂಗ್ ನಡಿಸಿ ಹೇಳಿದರು. ಬಡ ಜನಗಳು ತಮ್ಮ ಹೊಟ್ಟೆ ತುಂಬುವದಿಲ್ಲವೆಂದು ಹೇಳಿ ಸುಮಾರು 300 ಜನಗಳು ರಾಣಿಬೆನ್ನೂರು ಕಡೆ ಹೋಗಲು ಏರ್ಪಾಡುಮಾಡಿಕೊಂಡದ್ದೇ ತುಂಬಾ ವಿಷಾದವನ್ನು ಉಂಟುಮಾಡಿತು ಅಲ್ಲಿನ ಸಾಹುಕಾರರು ಭಾರಟಕ್ಕೆಯುವರು ನಾವು ಹಿಂದಲ್ಲಿ ಕೊಡುತ್ತಿದ್ದ ಕೂಲಿಯನ್ನು ಕೊಡುತ್ತೇವೆ ಎಂಬದಾಗಿ ಹೇಳಿ ಮಗ್ಗಗಳನ್ನು ಜೋಡಿಸುವಣೆಮಾಡುತ್ತಿದ್ದಾರೆಂದು ವರ್ತಮಾನವಿದೆ. ನಮ್ಮ ಊರಿನ ಸಾಹುಕಾರರು ಇವರನ್ನು ಬಿಟ್ಟದ್ದಕ್ಕೆ ವಿಷಾದಿಸುತ್ತೇವೆ.

ಚಿಕ್ಕನಾಯಕನಹಳ್ಳಿ ತಾ॥ ತಿಮ್ಮನಹಳ್ಳಿ.—ಈ ಪ್ರಾಂತ್ಯ ಮಳೆ ಬಂದು 15-20 ದಿವಸಗಳಾಯಿತು. ಅನೇಕ ರೈತರಲ್ಲಿ ಹೊಲಗಳನ್ನು ಬಿತ್ತಿರುವರು. ಲ್ಲದ.—ತಾ. 20 ರಲ್ಲಿ ಕೋಆಪರೆಟಿವ್ ಸೊಸೈಟಿಗಳ ಇನ್‌ಸ್ಪೆಕ್ಟರು ಈ ಗ್ರಾಮದಲ್ಲಿ ಒಂದು ಸಂಘವನ್ನು ಏರ್ಪಡಿಸಿ ತೆರಳಿದರು. ಈಗಾಗಲೇ ಐದು ರೂಪಾಯಿಗಳ 300 ಷೇರುಗಳು ಭರ್ತಿಯಾಗಿವೆ. ಮತ್ತು ಸುಮಾರು 500 ರೂಪಾಯಿ ಜಮಾ ಬಂದು ಹಣವೆಲ್ಲಾ ಅನೇಕರಿಗೆ ಸಾಲವಾಗಿ ಕೊಡಲ್ಪಟ್ಟಿರುತ್ತೆ. 1,700 ಷೇರುಗಳು ಭರ್ತಿ ಆಗತಕ್ಕದ್ದಿದೆ. ಉತ್ತರೋತ್ತರ ಅಭಿವೃದ್ಧಿ ಹೊಂದುವುದರಲ್ಲೇನೂ ಸಂದೇಹವಿಲ್ಲ.—ಈ ಗ್ರಾಮದಲ್ಲಿ ಸುಮಾರು 300 ಮನೆಗಳ ವರೆಗೂ ಇರುತ್ತೆ. ನಮ್ಮ ಸರ್ಕಾರದವರು ಈಗ್ಗೆ 2 ವರ್ಷಗಳ ಹಿಂದೆ ಇಲ್ಲಿಗೆ ಗ್ರಾಮ ಪಾಠಶಾಲೆಯನ್ನು ದಯಪಾಲಿಸಿದರು. ಸ್ಕೂಲು ಮನೆ ಸಾಲದು ಬಾಲಕರ ಸಂಖ್ಯೆ ಸುಮಾರು 65. ಹೊಸ ಸ್ಕೂಲು ಮನೆ ಕಟ್ಟಿಸಿಕೊಡುವಾಗ್ಗೆ ಗ್ರಾಮಸ್ಥರಿಂದ ವಸೂಲ್ಮಾಡಲ್ಪಟ್ಟ 300 ರೂಪಾಯಿ ಚಂದಾ ಹಣವು ತಾಲ್ಲೂಕು ಟ್ರಿಜರಿಯಲ್ಲಿ ಡಿಪಾಜಿಟ್ಟು ಮಾಡಲ್ಪಟ್ಟಿದೆ. ಸರ್ಕಾರದವರು ಕೂಡಲೇ ಹೊಸ ಕಟ್ಟಡವನ್ನು ಏರ್ಪಡಿಸಿ ಕೊಡುವರೆಂದು ನಂಬಿರುತ್ತೇವೆ ಈ ಸ್ಕೂಲು ಸ್ಥಾಪನೆ ಮಾಡಿದಂದಿನಿಂದಲೂ ಶ್ರದ್ಧೆಯಿಂದಲೂ, ಸಹೋದರಭಾವದಿಂದಲೂ ಕೆಲಸ ಮಾಡುತ್ತಿರುವ ಮ॥ ಸಿ. ಕರಿಯಪ್ಪನವರ ಪ್ರೋತ್ಸಾಹವು ಸ್ತೋತ್ರಾರ್ಹವಾಗಿದೆ. ಇವರಂತೆಯೇ ಕಷ್ಟಪಟ್ಟು ಕೆಲಸಮಾಡುವ ಮತ್ತೊಬ್ಬ ಉಪಾಧ್ಯಾಯರನ್ನು ದಯಪಾಲಿಸಿದಲ್ಲಿ 4-5 ನೇ ತರಗತಿ ಇಟ್ಟು ಸ್ಕೂಲನ್ನು ತುಂಬಾ ಅಭಿವೃದ್ಧಿಗೆ ತಂದಾರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಧರಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-47] GIRLS' INDUSTRIAL SCHOOL, HASSAN.

ಕುಂತಲಾನಂದ ತೈಲವು.

ಹಿಂದೂಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮನಃಕ್ಲೇಶ ಕ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-45]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮ॥ ಎಂ. ಎಸ್. ರಿಚರ್ಡ್, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್

[221-42]

"ಈ ವಾಯುವಿನಿಂದ ನಾನ, ಮನಸ್ಸಿನ ಹೊಂದುವೆನು, ಈ ಕಠಿಣ ನೋವನ್ನು ನಿಲ್ಲಿಸುವೆನು, ನಾನು ಆರೋಗ್ಯಹೊಂದಿ ಬಲಿಷ್ಠನಾಗಿ, ಕೆಲಸಮಾಡಿ ಜೀವದಲ್ಲಿ ಸಂತೋಷಪಡುವೆನೆಂದ... ಕುಪಡ್ಡು ಜೀತ ... ನ್ನು ನಿಸಿಗಿದ್ದರೆ," ಗ್ಲಾಸ್ಗೋ ನಗರದ ದಾಲಿಜ್ ಸ್ಟ್ರೀಟ್‌ನಲ್ಲಿ ವಾಸಮಾಡುವ ಮೊ ಪಿ. ಟೆರ್ರಿ ಫೋರೆಯವರು ಸ್ವಂತ ... ನ್ನು ಕುರಿತು ಓದು.

"ಐದು ವರುಷಗಳ ಕಾಲ ... ವಾಯುವಿನಿಂದ ಹೇಳಲಾಗದ ಸಂಕಟಪಟ್ಟೆನು. ನನಗೆ ತಿಳಿದ ಔಷಧವನ್ನೆಲ್ಲಾ ಉಪಯೋಗಿಸಿದೆನು. ಉತ್ತಮ ವೈದ್ಯರ ಆಲೋಚನೆಗಾಗಿಯೂ ಔಷಧಗಳಿಗಾಗಿಯೂ 150 ರೂಪಾಯಿಗಳನ್ನು ಖರ್ಚುಮಾಡಿದೆನು. ರಾತ್ರೀ ರಿಂದ ನಿದ್ರೆಯೇ ಬರುತ್ತಿರಲಿಲ್ಲ. ಕೀಲುಗಳ ನೋವು ... ಗಳನ್ನು ಕಟ್ಟುತ್ತಿದ್ದ... ರಿಂದ ಆ ತತ್ಕಾಲಕ್ಕೆ ಸ್ವಲ್ಪ ಮೇಲಾಗಿ ಕಾಣುವದು. ಕಡೆಗೆ ಏಟಲಿನ್... ಸಾಯಿ ತೈಲವು ನನ್ನನ್ನು ಸಂಪೂರ್ಣವಾಗಿ ವಾಸಿಮಾಡಿತು. ಐದು ವರುಷಗಳಲ್ಲಿ ... ವೂ ನನಗೆ ಮೇಲು ಮಾಡಲಿಲ್ಲ."

ದೇಶದ ನಾರುವವರೆಲ್ಲರಲ್ಲಿಯೂ ... 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತೆ.

[81-13]

ನಾಟಿಯುಳ್ಳದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-37]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತ ಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟ್ಲಾಗನ್ನು ಬಿಟ್ಟಿ ಕಳಿಸುವೆವು. ಛಾರ್ಜಿಲ್ಲದೆ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,
೨೦, ಚೀನಾ ಬಜಾರ್ ರೋಡ್, ಮದರಾಸು.

1,000 ವಾಚುಗಳ ಮಾರಾಟ.

"ಬೊಂಬೇ ಮೈಲ್ ಲೀವರ್" ವಾಚ್.

ಗ್ರಾಹಕರೇ,—ಈ ಮೇಲೆ ಕಾಣಿಸಿದ ವಾಚು ಅತೀ ಮನೋಹರವಾಗಿ ಸೆಕೆಂಡಹೆಂಡ್ ಇಪ್ಪು ನೂತನ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಪ್ರಪಂಚದಲ್ಲೆಲ್ಲಾ ಇದರ ಶ್ರೇಷ್ಠತೆಯನ್ನು ತಿಳಿಯಬೇಕೆಂಬದಾಗಿ ಅತೀ ಸುಲಭ ಖರೀದಿಯನ್ನು ಇಟ್ಟಿರುತ್ತೇವೆ. ಕಮ್ಮಿ ಕ್ರಯದ ವಾಚುಗಳು ನೀವು ತರಿಸಿಯೂ ಇತರರಲ್ಲಿ ನೋಡಿಯೂ ಇರಬಹುದು. ಆದರೆ ಮೇಲೆ ಕಾಣಿಸಿದ "ಬೊಂಬೇ ಲೀವರ್ ವಾಚು" ಎಂಬದು ಕೀಳುತರದ ವಾಚಲ್ಲ. ಇದು ಹೆಸರಾದ ಕಂಪೆನಿಯಲ್ಲಿ ತಯಾರಿಸಲಟ್ಟು ಶ್ರೇಷ್ಠವಾದ ಮತ್ತು ಬಲಿಷ್ಠವಾದ ಲೀವರ್ ಕೆಲಸವಾಗಿದೆ. ನೋಡುವರೆ ಗಂಭೀರವಾಗಿಯೂ ಸಮಯಾನುಸಾರ ಕೆಳಗೆ ಬಿದ್ದಾಗ್ಯೂ ನಿಲ್ಲದೆ ನಡಿಯುತ್ತದೆ ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡೆಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವುದಿಲ್ಲ. ವಾಚು 1 ರ ಬೆಲೆ ರೂ. 3-4-0. ಪೇಕಿಂಗ ಮತ್ತು ಟಿ. ಪಿ ಆಣೆ 4 ಅಧಿಕವಾದ. [139-3]



(2) ಬಾರಕ್ಕೊಮ್ಮೆ ಕೀಲಿ ಕೊಡುವ ವಾಚು 1 ಕ್ಕೆ ರೂ 7-12-0.

ನಮ್ಮ ವಿಳಾಸ:—ದಿ ಊರ್ಲ್ಡ್ ಮಾರ್ಟ್,
ನಂ. ೧, ಮಂಗಳೂರು, ದಕ್ಷಿಣ ಕನ್ನಡಾ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	100 ,, ಶೀಶೆ ,, 4½ ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರೆಲ್ಲರಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ದಿ. ಸಿ. ಷಾ ಕಂಪನಿ, 177, [25-26] ಬೀಡಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಕಸ್ತೂರಿ ಗುಳಿಗೆಗಳು :—ಇದರಿಂದ ಫಿಟ್ಸ್, ಸೆಟಬೇನೆ, ಮೂರ್ಛೆ ಬರುವ ರೋಗ, ಹರ್ಷವಾಯುಜ್ವರ ವ ಇತರ ವಾಯು ಸಂಬಂಧವಾಗಿ ಚಿಕ್ಕವರಿಗೂ ದೊಡ್ಡವರಿಗೂ ಇರುವ ರೋಗಗಳು ಎಷ್ಟು ದೀರ್ಘಕಾಲವಾಗಿದ್ದರೂ ನಿಶ್ಚಯವಾಗಿಯೂ ಗುಣವಾಗುತ್ತವೆ. ಬಾಟ್ಲಿಯ ಕ್ರಯ ರೂ. 2.

ಸ್ತ್ರೀಯರ ರಕ್ತಸ್ರಾವ ವ ಇತರ ಉದರ ರೋಗಗಳಿಗೆ ಅತ್ಯುತ್ತಮವಾದ ಔಷಧ. ಬಾಟ್ಲಿಯ ಕ್ರಯ ರೂ. 2.

ರಕ್ತಶುದ್ಧಿ :— ಈ ಔಷಧದ ಸೇವನೆಯಿಂದ ದೇಹದೊಳಗಣ ಅಶುದ್ಧವಾದ ರಕ್ತವು ಶುದ್ಧವಾಗಿ ಕಾಂತಿಯನ್ನೂ ಶಕ್ತಿಯನ್ನೂ ಉಂಟುಮಾಡುತ್ತದೆ. ಬಾಟ್ಲಿಯ ಕ್ರಯ ರೂ. 1-8-0.

ಅತ್ಯಂತ ಪೌಷ್ಟಿಕ ಧಾತುಪುಷ್ಟಿಯ ಔಷಧ. ಡಬ್ಬಿಯ ಕ್ರಯ ರೂ. 2.

ನಮ್ಮ ವಿಳಾಸ—ಸಖಾರಾಮ ಅಪ್ಪಾಜಿ ಕೊಲ್ಹಟಕರ, ವೈದ್ಯ,
[93-10] ದವಾಖಾನಾ, ಠಾಕೂರದ್ವಾರ ರೋಡ, ಮುಂಬಯಿ, ನಂ. 2.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ಖೂಟಾ ಸೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕ್ ಥಾನುಗಳು ಪವೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ಟು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-6]
ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ-ಸೊಂಕು ರೋಗಸ್ಥಳಗಳಲ್ಲೂ-ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ-ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವರಸೇ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ಖಾತರಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟ.ಖ ಪ್ರತ್ಯೇಕ.
[231-35] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಹವಳದ ಬಳ್ಳಿ ಶೀರೆ.

ಬಹಳ ಸೊಗಸಾದದ್ದು! 16 ಮೊಳ!! ಬಾಳಿಕೆಬರುವದು!!!

ಈ ಸೀರೆಗಳು ಬಿಳೀ ಮಲ್ಲಿನಲ್ಲಿ ಕಪ್ಪು, ಕೆಂಪು ಕೂಡಿದ ಚಾಕೊಲೇಟ್ ರಂಗಿನಂತೆ ಹವಳದ ಬಳ್ಳಿಗಳು ಹಾಕಲ್ಪಟ್ಟು, ಸುತ್ತಲೂ ಸಣ್ಣ ಅಂಚು ಕಟ್ಟಲ್ಪಟ್ಟದೆ. ಇಂಥಾ ಹೊಸ ನಮೂನೆಯು ಇದುವರೆಗೂ ತಯಾರಾಗಲಿಲ್ಲ. ಈ ಕಾಲಕ್ಕೆ ಬಹಳ ಉಪಯೋಗವಾದದ್ದು. ಇದನ್ನು ಪ್ರತಿ ಒಬ್ಬ ಸ್ತ್ರೀಯೂ ತರಿಸಿಕೊಂಡು ಅಲಂಕಾರ ಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇನೆ.

ಕ್ರಯ ರೂಪಾಯಿ 2-4-0
ವಿ. ಪಿ. ಛಾರ್ಜು 0-6-0

ನಮ್ಮ ವಿಳಾಸ.—ಸಿ. ಕನಕ ಸಭಾಪತಿ,
[110-6] ನಾರ್ತ್ ಟೌನ್, ಮದರಾಸ್.

ಮಕ್ಕಳ ಆರೋಗ್ಯ.
ತಂದೆ ತಾಯಿಗಳ ಐಶ್ವರ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಹಾಳಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವು ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕಾರು, ಉಬ್ಬಸ, ಕ್ಷಯ, ಗರ್ಭವೆಟ್ಟು ಮುಂತಾದ ಅನೇಕ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-37]

ಮಹಾ ಸೌಭಾಗ್ಯ ಶುಂಠಿ :—ಬಾಣಂತಿಯರಿಗೆ ಉಂಟಾಗುವ ಸೂತಿಕಾವಾಯು, ಸೂತಿಕಾಕ್ಷಯ, ಗ್ರಹಣಿ, ಪೈತ್ಯ, ಖಾಸಕ್ವಾಸ, ಬಾಣಂತಿಸನ್ನಿ, ಸೂತಿಕಾಗುಲ್ಮ ಮುಂತಾದ ವ್ಯಾಧಿಗಳು ಗುಣವಾಗಿ ದೇಹವು ವಜ್ರಕಾಯವಾಗುವದಲ್ಲದೆ ಮುಂದೆ ಯಾವ ರೋಗಗಳಿಗೂ ಅವಕಾಶ ಉಂಟಾಗುವುದಿಲ್ಲ.

ಸೇರು 1 ಕ್ಕೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಶ್ರೇಷ್ಠವಾದ ರೇಷ್ಮೆಯ ಶೀರೆಗಳು, ಕಣಗಳು, ಮುಗುಟಗಳು, ಪೇಟಾಗಳು, ವಸ್ತ್ರಗಳು, ರುದ್ರಾಕ್ಷಿಗಳು, ಕಸ್ತೂರಿ.

ಪ್ರಿಯವಿಲ್ಲದ ಸರಕು ವಾಪಸು ತೆಗದುಕೊಳ್ಳುತ್ತೇವೆ.

ಪೀತಾಂಬರ ಶೀರೆಗಳು—16, 18 ಮೊಳ ಉದ್ದ, ಎರಡೂ ... ಕೆಂಪು, ಊದ, ಎಲೆಹಸುರು, ಮೊದಲಾದ ರಂಗುಗಳ ಬೆಲೆ ರೂ. 25 ಮೊದಲುಗೊಂಡು ರೂ. 100 ವರಿಗೆ.

ಪೀತಾಂಬರ ಕಣಗಳು—ಮೇಲ್ಕಂಡ ಪ್ರಕಾರ ಜೇಬು ಒಡಲು ಕಣ 1 ಕ್ಕೆ ರೂ. 2 ಮೊದಲು ಬೆಲೆ ರೂ. 10 ವರಿಗೆ.

ಪೇಟಾಗಳು.—ನಾನಾ ವಿಧವಾದ ಪೇಟಾಗಳು, ಬಿಳುಪು, ಕೆಂಪು ಮುಂತಾದ ರಂಗುಗಳು. ಬೆಲೆ ರೂ. 25 ಮೊದಲು ರೂ. 100 ವರಿಗೆ.

ರುದ್ರಾಕ್ಷಿಗಳು 32 ಮಣಿಗಳ ಕಂಠೀಗಳು ಆಣೆ 8 ಮೊದಲು ಆಣೆ 10 ವರಿಗೆ. ಜಪಮಾಲೆಗಳು.—ಆಣೆ 6 ಮೊದಲು ರೂ. 10 ವರೆಗೆ. ಅಪೇಕ್ಷಿಸಿದವರಿಗೆ ನಮ್ಮ ಕ್ಯಾಟಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ—ಮ್ಯಾನೇಜರು, ಪಟ್ಟುಪೀತಾಂಬರ ಕಂಪೆನಿ,
[63-15] ಧಾರಾನಗರ್ ಬೀದಿ, ಕಾಶಿ.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈ... ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಕ್ರಯ—1,000 ಹೆಂಚಿ... ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.
[28-25] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈ...

ನಂಬಿರಿ-ಖಂಡಿತ-ನಂಬಿರಿ



ಜ್ವರದ ಮಾತ್ರೆ. ಬಹು ಶ್ರೇಷ್ಠ ಮೂಲಿ... ತಯಾರಿಸಿದೆ. ಸರ್ವ ಜ್ವರಗಳಿಗೂ, ಖಾತರಿ ಗು... ಶ್ರೇಷ್ಠ ಹೆಸರು ಬಂದಿದೆ.

24 ಮಾತ್ರೆ ಶೀಷೆಗೆ 8 ಆ, 6 ಕ್ಕೆ 2¾ ರೂ.

ಮುಖರಂಜನ ಮಾತ್ರೆ: ಜನೋಪಕಾರಕ್ಕೆ... ಪತ್ನಿ ಬಾಯಿ ದುರ್ಗಂಧ ತಪ್ಪಿಸಿ, ಸುವಾಸನೆ... ಜೀರ್ಣಶಕ್ತಿ ಹೆಚ್ಚಿಸಿ, ಶರೀರಾಭಿವೃದ್ಧಿ ಮಾಡಿ... ಬುನೋವು, ಕೆರತ, ಗೊಗ್ಗರಧ್ವನಿ, ತಲೆಸುತ್ತು, ... ರೂಳಿ, ವೋಕರಿಕೆ, ಮಲಬದ್ಧ, ಅತಿಸಾರ... ನಿವಾರಿಸಿ ಮನೋಲ್ಲಾಸ ಮಾಡುತ್ತೆ. ಉಪಾಧ್ಯಾ... ಅಪಿಯರು, ವಿದ್ಯಾರ್ಥಿಗಳು, ಉಪನ್ಯಾಸಕರು, ... ಗಾರರು, ನಾಟಕದವರು, ಪ್ರಯಾಣಿಕರು ಮ... ವರಿಗೆ ಅತ್ಯುಪಕಾರಿ. 150 ಮಾತ್ರೆ ಶೀಷೆಗೆ 4 ಆ., 6 ಕ್ಕೆ 1 ರೂ. ಸಂಜೀವಿನಿ 4 ಆ., ಸರಳ ಭೇದಿ ಪವಲ್ಸ್ 8 ಆ, ಕೆಮ್ಮಿನ ಮಾತ್ರೆ 8 ...
[126-5] ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈ...

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ನಮೂನೆ ರೂ. 3-...

ದಯಮಾಡಿ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ... ವನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉದು... ಧಡೂತಿಯಾಗಿಯು... ಟಿಕ್ಕ ನಯವಾ... ಬೆಲೆ ಸುಲಭವಾ... ಇದೆ. ಬಣ್ಣ ಹೊ... ಸೀರೆಯ ಉದ್ದ ... ರ. ಸುಂದರವಾ... ಗು. ಒಂದನ್ನು ಪರೀಕ್ಷಿಸಿ. ವಿಳಾ...

ವಿ. ಕೆ. ಕಂಪ...
[111-8] ಅಂಡ್ ಕಂಪನಿ. 24 ವಿನಾಯಕ ಮೇಸ್ತ್ರೀ ಬೀದಿ, ಮದ...

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—7—1915 ರಿಂದ 17—7—1915 ರ ವರೆಗೆ

ಸ್ಥಳ	ತಗಲಿದ್ದು.	ಸತ್ತದ್ದು.	ತಗಲಿದ್ದು.
ಬೆಂಗಳೂರು ಪಟ್ಟಣ	0	0	6
ಮೈಸೂರು ..	0	0	0
ಬೆಂಗಳೂರು ಡಿಸ್ಟ್ರಿಕ್ಟು	6	2	1
ಮೈಸೂರು ..	16	3	0
ಕೋಲಾರ್	0	0	0
ಕೋಲಾರ್ ಚಿನ್ನದ ಗಣಿಗಳು	0	0	0
ತುಮಕೂರು ಡಿಸ್ಟ್ರಿಕ್ಟು	0	0	0
ಹಾಸನ	0	0	0
ಚಿತ್ರದುರ್ಗ	0	0	0
ಕಡೂರ್	1	1	0
ಶಿಮೊಗ	0	0	0
ಒಟ್ಟು	23	16	1

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉ... ಯಣೆ ಗ್ರೀಷ್ಮಋತೌ ಆಷಾಢ ಬಹುಳ ಚೌತಿ ಶುಕ್ರವಾರದಿಂದ ಆಷಾಢ ... ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಜೂಲೈ, ಮತ್ತು ಆಗಸ್ಟು.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ
30	ಶುಕ್ರ *	ಚೌತಿ	18-2	ಪೂಭಾ	28-7
31	ಶನಿ †	ಪಂಚಮಿ	18-4	ಉತ್ತ್ರಭಾ	30-8
1	ಭಾನು ‡	ಷಷ್ಠಿ	19-21	ರೇವತಿ	33-28
2	ಸೋಮ ::	ಸಪ್ತಮಿ	21-56	ಅಶ್ವಿನಿ	37-55
3	ಮಂಗಳ §	ಅಷ್ಟಮಿ	25-59	ಭರಣಿ	43-21
4	ಬುಧ	ನವಮಿ	30-7	ಕೃತ್ತಿಕೆ	49-35
5	ಗುರು	ದಶಮಿ	35-11	ರೋಹಿಣಿ	56-12

* ಸರ್ವತ್ರ ಪಂಚಮಿ ತಿಥಿ, ಅದಿಶುಕ್ರವಾರ, ಮಳೆ ನಕ್ಷತ್ರ—ಪುಷ್ಯ... ಪಾದ. † ಟೀಕಾಚಾರ್ರ ಪುಣ್ಯದಿನ, ಮೇಲುಕೋಟೆಯಲ್ಲಿ ಕೃಷ್ಣರಾಜ... ಉತ್ಸವ. ‡ ಸಪ್ತಮೀ ತಿಥಿ, ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ. :: ... ತಿಥಿ, ಪದಿನಟ್ಟಾಂಪೆರುಕ್. § ಅಷ್ಟಮೀ ತಿಥಿ, ಮೇಲುಕೋಟೆಯಲ್ಲಿ ... ರಾಜಮುಡೀ ರಥ, ಮಳೆ ನಕ್ಷತ್ರ—ಆಶ್ಲೇಷ 1 ನೇ ಪಾದ.

ಮೈಯರ್ಸ್ ಹ್ಯಾಂಡ್ ಪವರ್ ಪಂಪುಗಳು.

ಭಾವಿಯ ಪಂಪು

10 ರಿಂದ 50 ಅಡಿ ಆಳದ ಭಾವಿಗೆ, ಗಂಟೆಗೆ 500 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

10 ರಿಂದ 70 ಅಡಿ ಆಳದ ಭಾವಿಗೆ, ಗಂಟೆಗೆ 350 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

ಟ್ಯಾಂಕ್ ಪಂಪು, 20 ಅಡಿ ಆಳದಿಂದ ಗಂಟೆಗೆ 1,500 ಗ್ಯಾಲನ್ (2 ಅಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 65

ಷರಾ.—ಹೆಚ್ಚು ವಿಷಯಗಳನ್ನು ಕೆಳಗಿನ ವಿಳಾಸದಾರರಿಂದ ತಿಳಿಯ ಬಹುದು :—

ಎಲ್. ಶೇಷಾದ್ರಿ,
34, III ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಗ್ಗ, ಸುಲಭ, ಬೇಗ ಕೆಡುವದಿಲ್ಲ. ಬೆಂಗಳೂರಲ್ಲಿ ಎಂಟು ತಿಂಗಳಿಂದ ಉಪಯೋಗದಲ್ಲಿವೆ.

ಮನೆಗಳಿಗೂ ಕೈತೋಟಗಳಿಗೂ ಬಹಳ ಅನುಕೂಲ

11 ವಯಸ್ಸಿನವರು 70 ಅಡಿ ಆಳದಿಂದ ಯಾತದಷ್ಟು ನೀರನ್ನೆತ್ತಬಹುದು. [138-3]

1911 ನೆಯ ಮೈಸೂರು ಎಗ್ಸಿಭಿಷನ್ನಿನಲ್ಲಿ ಚಿನ್ನದ ಮೆಡಲನ್ನು ಪಡೆದಿರುತ್ತದೆ.

ನಮೂನೆ.—ಇಲ್ಲಿನ ಚಿತ್ರದಂತೆ



ಕೆರೆಯ ಪಂಪು.

Printed and Published by the Rev. H. Goull... Proprietor and Manager. Wesleyan Mission Pr... Mysore. 29/7/1915.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—೧೯೧೫ ನೇ ಇಸವಿ ಆಗಸ್ಟ್ ತಾರೀಖು ೫ ನೇ ಗುರುವಾರ. ಸಂಚಿಕೆ ೧೦

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನು ತಿಳಿಸುವ 615 ಪೇಜು ಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ 2-4-0; ರಫ್ ಪ್ರತಿಗೆ ರೂ. 1-12-0. [158-1]

ಪ್ರಕಾಶಕ — ಎಂ. ಎ. ಪಂಡಿತಾರಾಧ್ಯರು, ಮೈಸೂರು.

ಮೈಸೂರು ಸಂಸ್ಥಾನದ ಆಸ್ಥಾನ ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯಯ್ಯರವರಿಂದ ಕನ್ನಡದಲ್ಲಿ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಇದಕ್ಕೆ ಮೈಸೂರು ಸರ್ಕಾರದ ಪ್ರೋತ್ಸಾಹ ದೊರಕಿದೆ. [151-2]

ಕ್ರಯ ೧ ೪-೦. ಅಂಚೆ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳಗಳು :—(1) ಎಂ. ವೆಂಕಟರಾಮಯ್ಯ, ಗ್ರಂಥ ಪ್ರಚಾರಕ, ಚಾಮರಾಜಪೇಟೆ, ಮೈಸೂರು. (2) ದಿ ಜನರಲ್ ಏಜೆನ್ಸಿ, ಮೈಸೂರು. (3) ಎಂ. ಎಸ್. ರಾವ್ ಕಂಪೆನಿ ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ವಿಶೇಷ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸಂಪಾದಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುವುದು. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [239-20]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ॥ ಎಂ. ಎಸ್. ರಜನಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-43] ಬ್ರಾಂಚ್ ಸೆಕ್ರೆಟರಿ, ಮದರಾಸ್

ಪ್ರಸಿದ್ಧವಾದ
ಮೊಳಕಾಲ್ಮೂರು ರೇಷ್ಮೆ ವಸ್ತ್ರಗಳು.

ಬೆಲೆ ಸುಲಭ ! ಬಣ್ಣ ಗ್ಯಾರಂಟಿ !! ಸನಗು ನಾಜೂಕು !!!

ನಮ್ಮ ಸ್ವಂತ ಮಗ್ಗಗಳಲ್ಲಿ ತಯ್ಯಾರಾಗುವ ಮಾಲುಗಳು.

ನಮ್ಮ ಮಾಲುಗಳಿಗೆ ಅನೇಕ ಎಗ್ಸಿಭಿಷನ್‌ಗಳಲ್ಲಿ ಮೆಡಲುಗಳೂ ಸರ್ಟಿಫಿಕೇಟುಗಳೂ ಬಂದಿವೆ. (1) ರೇಷ್ಮೆಯ ವಸ್ತ್ರಗಳು ¼, ½, 1, 2 ಅಂಗುಲ ಬೌಳಿಸೆಗಳುಳ್ಳ 3, 4, 5, 6 ಮೊಳಗಳು ಉದ್ದ 2, 2½, 3 ಮೊಳ ಅಗಲಗಳುಳ್ಳ ವಸ್ತ್ರಗಳು ಮತ್ತು ರುದ್ರಗಂಟಿ, ಮಂಗಳಗಿರಿ, ಸಾದಾ ವಸ್ತ್ರಗಳು ಬಹಳ ನಯಸರವಾಗಿ ಹುರಿ ರೇಷ್ಮೆಯಲ್ಲಿ ತಯಾರಾಗುತ್ತವೆ. (2) ರೇಷ್ಮೆಯ ಸೀರೆಗಳು :—ಆಳೇಪೇಟೆ ಧರ್ಮಾವರ, ಕರಹೇವಾರಿ, ಹಸರು, ಅಂಚುಸೆರ, ಸವರನ್ ಬಣ್ಣದ ಸೀರೆಗಳು ಬಹಳ ವಿಶೇಷ್ಯವಾಗಿ ತಯಾರಾಗುತ್ತವೆ. (3) ಮಗುಟಗಳು :—ಪತ್ರಿಕ್ಕೆ ಅಂಚು, ನವಿಲು ಕಣ್ಣು, ಸರಸಳೆ ಅಂಚು, ಇವೇ ಮೊದಲಾದ ಅಂಚುಗಳಲ್ಲಿ ಬಹಳ ನಯಸರವಾಗಿ ತಯಾರಾಗುತ್ತವೆ. (4) ಲಿಂಗವಸ್ತ್ರ, ಮತ್ತು ಕೈವಸ್ತ್ರಗಳು:—ಕರಹೇವಾರಿ ಕೈವಸ್ತ್ರಗಳು ತಯ್ಯಾರಾಗುತ್ತವೆ. ಲಿಂಗದ ವಸ್ತ್ರಗಳು, ಬಹಳ ಚೆನ್ನಾಗಿ ತಯ್ಯಾರಾಗುತ್ತವೆ (5) ನಡಕಟ್ಟುಗಳು:—5, 6, 7 ಮೊಳದ ಉದ್ದ ಇರುತ್ತವೆ.

ಮೇಲ್ಕಂಡ ಸನಗುಗಳು ಅಪೇಕ್ಷಿಸಿದವರು ವಿ. ಪಿ. ಮೂಲಕವಾಗಿಯಾಗಲಿ, ಯಾ ಮುಂಗಡವಾಗಿ ಹಣ ಕಳುಹಿಸಿಯಾಗಲಿ ತರಿಸಿಕೊಳ್ಳಬಹುದು.

ವಿಳಾಸ:—ಕೆ. ಸಿದ್ದಪ್ಪ, ನರಸಪ್ಪ, ರೇಷ್ಮೆ ಜವಳಿ ವ್ಯಾಪಾರಸ್ಥರು,
2-21 ಮೊಳಕಾಲ್ಮೂರು, ಚಿತ್ರದುರ್ಗ ಡಿಸ್ಟ್ರಿಕ್ಟ್.

ಕಟ್ಟಡಕ್ಕೆ ಹೊದಿಸುವ ಹೆಂಚುಗಳು.

ಮಂಗಳೂರು ತರಹಾ ಗಟ್ಟಿಯೂ ಶಾಶ್ವತವೂ ಆದ ಹೆಂಚುಗಳು ಮೈಸೂರು ಟೈಲ್ ಫ್ಯಾಕ್ಟರಿಯಲ್ಲಿ ಬಿಕರಿಗೆ ಸಿದ್ಧವಾಗಿವೆ ಕ್ರಯ—1,000 ಹೆಂಚಿಗೆ 1 ನೇ ದರ್ಜೆ ರೂ. 40, 2 ನೇ ದರ್ಜೆ ರೂ. 25, 3 ನೇ ದರ್ಜೆ ರೂ. 10.

[28-26] ವಿಳಾಸ—ಮ್ಯಾನೇಜರ್, ಮೈಸೂರು ಟೈಲ್ ಫ್ಯಾಕ್ಟರಿ, ಮೈಸೂರು.

ಕನ್ನಡ ವಾರಪತ್ರಿಕೆ.

"ವಿಕಟ ವಿನೋದಿನಿ."

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಕ್ತಿಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ವಾರಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ 1 ಮಾತ್ರ. ನಮ್ಮ ವಿಳಾಸ—

[131-4] "ವಿಕಟ ವಿನೋದಿನಿ" ಆಫೀಸ್, ಅರಳೆಪೇಟೆ, ಬೆಂಗಳೂರು ಸಿಟಿ.

THE GENERAL AGENCY,
MYSORE.

Reformed Primer 0-4-0, Macmillan's New English Reader I 0-4-0, II 0-6-0, III 0-8-0, IV 0-12-0, Hyde's Grammar I 0-12-6, II 0-12-6, Complete 1-4-0, West's Grammar 0-10-0, Radhakrishna Iyer's Arithmetic 0-11-0, First Lessons in Geography 0-12-0, Junior Geography 0-12-0, ಹಿಂದೂಚರಿತ್ರಸಾರ 0-8-0, L. S. English Texts 0-10-0, Canarese Text 0-4-6, English Notes 0-6-0, Canarese Notes 0-4-0 and 0-7-0. [8-30]

ಎಮ್. ಎಸ್. ಮಲಕಣ್ಣ ಅಂಡ್ ಬ್ರದರ್ಸ್,

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ನಮ್ಮಲ್ಲಿ ಉತ್ತಮವಾದ ರೇಶ್ಮೆ ವಸ್ತ್ರಗಳು, ಮೊಗುಟಗಳು, ಆಳೇಪೇಟೆ ಸೀರೆಗಳು, ಲಿಂಗ ಧರಿಸುವ ವಸ್ತ್ರಗಳು, ಸಾಧಾರಣ ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-10]

ರೇಶ್ಮೆ ವಸ್ತ್ರಗಳು	ದರಗಳು	ಮೊಗುಟ, ರೇಶ್ಮೆ ಸೀರೆ, ಲಿಂಗವಸ್ತ್ರ.
1 ನೇ ನಂಬರು 0-7-6		1 ನೇ ನಂಬರು 0 8-0
2 ,, ,, 0-7-0	ತೊಲೆ 1 ಕ್ಕೆ	2 ,, ,, 0-7-6
0-6-9		

'ಸಂಗೀತ ಪಾರಿಜಾತ'

ಹೊಸ ಮುದ್ರಣ ! ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ತುಂಬಿದೆ ! ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[275-34] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ಪಶ್ಚಿಮ ಖಂಡದ ಭೂವಿವರಣೆ	0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	0-6-0
ಮೇಲೆ ಕಂಡ ಎರಡೂ ಸೇರಿ	0-10-0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ
ಲೋವರ್ ಸೆಕೆಂಡರಿ ಕನ್ನಡ ಟೆ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಶೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[31-25] ಸುಬೋಧ ಗ್ರಂಥಾಲಯ, ಮೈಸೂರು.

ಇಲ್ಲಿ ನೋಡಿ : ಅಭಿನವ! ಅಕ್ಷರಾಂಜಲಿ !!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವನ್ನು ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟೇಜ್ 4 ಆಣೆ. ಅಡ್ರೆಸ್—ಅಕ್ಷರಾಲಯ, ಮೈಸೂರು. [147-2]

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England).

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or

[142 2] K. S. Tirupathi, F. C. I., Secretary,
Opposite Minto Hospital, Bangalore City.

ಸೋಲಾಪುರದ ಚಕ್ಕುಗಳೂ, ಶೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹರ್ಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಶೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಹೋಲುಗಟ್ಟೆಯೂ, ಚಿಲ್ಲರೆ ಯಾಗಿಯೂ ದೊರೆಯುವುವು.

ಹೋಲುಗಟ್ಟೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಬರೀ ದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [55-18]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್,
159, ಕಿಲಾರಿ ರೋಡು (ಕುಂಚಿಗರಪೇಟೆ) ಬೆಂಗಳೂರು ಸಿಟಿ.

1,000 ವಾಚುಗಳ ಮಾರಾಟ.

"ಬೊಂಬೇ ಮೈಲ್ ಲೀವರ್" ವಾಚ್.

ಗ್ರಾಹಕರೇ,—ಈ ಮೇಲೆ ಕಾಣಿಸಿದ ವಾಚು ಅತೀ ಮನೋಹರವಾಗಿ ಸೆಕೆಂಡಹೆಂಡ್ ಇದ್ದು ನೂತನ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಪ್ರಸಂಚದಲ್ಲೆಲ್ಲಾ ಇದರ ಶ್ರೇಷ್ಠತೆಯನ್ನು ತಿಳಿಯಬೇಕೆಂಬದಾಗಿ ಅತೀ ಸುಲಭ ಕ್ರಯದಲ್ಲಿ ಮಾರುತ್ತಿರುತ್ತೇವೆ. ಕಮ್ಮಿ ಕ್ರಯದ ವಾಚುಗಳು ನೀವು ತರಿಸಿಯೂ ಇತರರಲ್ಲಿ ನೋಡಿಯೂ ಇರಬಹುದು. ಆದರೆ ಮೇಲೆ ಕಾಣಿಸಿದ "ಬೊಂಬೇ ಲೀವರ್ ವಾಚು" ಎಂಬದು ಕೀಳುತರದ ವಾಚಲ್ಲ. ಇದು ಹೆಸರಾದ ಕಂಪೆನಿಯಲ್ಲಿ ತಯಾರಿಸಲ್ಪಟ್ಟು ಶ್ರೇಷ್ಠವಾದ ಮತ್ತು ಬಲಿಷ್ಠವಾದ ಲೀವರ್ ಕೇಸವಾಗಿದೆ. ನೋಡುವರೆ ಗಂಭೀರವಾಗಿಯೂ ಸಮಯಾನುಸಾರ ಕೆಳಗೆ ಬಿದ್ದಾಗ್ಯೂ ನಿಲ್ಲದೆ ನಡಿಯುತ್ತದೆ. ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡಿಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವುದಿಲ್ಲ. ವಾಚು 1 ರ ಬೆಲೆ ರೂ. 2-4-0. ಪೇಕಿಂಗ ಮತ್ತು ಬಿ. ಪಿ. ಆಣೆ 4 ಅಲಾಯದ. [139-4]



(2) ವಾರಕ್ಕೊಮ್ಮೆ ಕೀಲಿ ಕೊಡುವ ವಾಚು 1 ಕ್ಕೆ ರೂ. 7-12-0.

ನಮ್ಮ ವಿಳಾಸ:—ದಿ ಬೂಲ್ ಮಾರ್ಟ್,
ನಂ. ೧, ಮಂಗಳೂರು, ದಕ್ಷಿಣ ಕನ್ನಡಾ.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ಬೂಟಾ ಸೀರೆ, ಪೇಟ, ಮುಗುಟ, ರುಮಾಲು, ಶಲಗಳು, ಕೋಟು ಸಿಲ್ಕುಥಾನುಗಳು ಜವೇರಿ ಬದಲ್, ಇತ್ತೀರ್ ಸಾದಾ ಜರಿ ಶಾಲುಗಳು, ಕೋನಾರ್ಕು ರುದ್ರಾಕ್ಷಿ ಸೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-7]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಮುಶುಲ್ ಬೇರೆ,

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ತಾರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಮುಶುಲ್ ಮುಫತ್ತು.

[231-36] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ದಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡತಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ಸಮೀಪವಾಸ್ತವೇ ಹಾಕಿ ಸಾಕು ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರು ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಸ್ವಲ್ಪಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲು ಕೂಲಿ ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡುತ್ತೇವೆ ಬೇಗನೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

[149-2] ನಮ್ಮ ವಿಳಾಸ—ವಿ. ಎ. ಎಸ್. ಪಾಣಿ, ನಂ. ೩, ಇರುಳಪ್ಪನ ಬೀದಿ, ಮದರಾಸು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿ ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆದು ಒರಟಾಗಿರುವ ಕೂದಲು ಮೃದುವಾಗುವದು. ತಣ್ಣನೆಯ ಕನ್ನಾಗಿ ಥಳಥಳಿಸುವದು. ದೇಹದಲ್ಲಿ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪು ಕೊಡುವದು. ಮೆದುಳಿನ ಮದವನ್ನು ಸರಿಮಾಡುವದು ... ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯ ... ಕೆಲಸಕ್ಕೆ ಉಲ್ಲಾಸವನ್ನು ... ಆಹ್ಲಾದವನ್ನು ಉಂಟುಮಾಡುವದಲ್ಲದೆ ... ಅಂಬರ್, ಕೇಸರ್, ಪಚ್ಚ ಕರ್ಪೂರ ಮತ್ತು ... ಸಂಪಿಗೆ, ಇರುವಂತಿಗೆ, ... ಗುಲಾಬಿ, ... ದವನ, ಮರುಗ, ಇವೇ ಮೊದಲಾದ ಪುಷ್ಪಗಳ ವಾಸನೆಯು ... ಈ ಒಳ್ಳೆ ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊ... ಮೂರನಾಲ್ಕು ದಿನಗಳ ವರೆಗೂ ಇದರ ವಾಸನೆ ಹೋಗದು. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಎಲ್ಲರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿಯು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜತೆ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಯಂತ್ರ 22, ಕೊಂಡೆ ಗಿಣಗಳು 6, ಕಾರೊನೇಷನ್ ಬ್ರೂಚ್ 1, ... ಪೆಟ್ಟಿ 1. ಈ ತರಹ 36 ಇನಾಂ ಕೊಡಲ್ಪಡುತ್ತ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[87-8] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳ ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವನಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ರೋಗಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವು ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವ ... ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾರೆವು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-27]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್



ಪಂಡಿತ್ ಎಸ್. ಗರಳಪುರಿ, ಮೈಸೂರು.

ಪ್ರಸಿದ್ಧ ಮಹೌಷಧಿಗಳು.

ಜ್ವರದ ಮಾತ್ರೆ 8 ಆ. ಶೀತ್ಮಿನ ಮಾತ್ರೆ 8 ಆ. ಅಜೀರ್ಣದ ಮಾತ್ರೆ 12 ಆ. ಬಾಲಸಂಜೀವಿನಿ 5 ಕ್ಕೆ 1 ರೂ. ಸರಳಭೇದಿ 8 ಆ. ಆಮಶಂಕೆ ಮಾತ್ರೆ 8 ಆ. ಟಾನಿಕ್ ಮಾತ್ರೆ 1 ರೂ. ಶುಕ್ರ್ರವರ್ಧಕ ಮಾತ್ರೆ 5 ತೀಸಿಗೆ 1 ರೂ. ಕಾಲರಾ ಮಾತ್ರೆ 1 ರೂ. ಉಬ್ಬಸದ ಮಾತ್ರೆ 12 ಆ. ಬಾಧಾನಿವಾರಿಣಿ 5 ಡಬ್ಬಿಗೆ 1 ರೂಪಾಯಿ. ಹುಳುಕಡ್ಡಿ ಮುಲಾಮು 6 ಆಣೆ. ಮುಖರಂಜಕ ಮಾತ್ರೆ 4 ಆಣೆ., 5 ಕ್ಕೆ 1 ರೂಪಾಯಿ. [126-6]

ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ.

ಮಧುರೆ ಬಸ್ತ್ರ ಅಂಚಿನ ಸೀರೆ ಅಸ್ಸಲ್ ರುಮಾಲ್ ರೂ. 3-0-0. ಅಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಉಚಿತವಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಘನವಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೀರೆಗಳು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ:—

ವಿ. ಕೆ. ಕಂಪೆನಿ—

[1-0] ಲಾವ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಮೋಸಹೋಗುವೆವೆಂಬ ಭಯವಿಲ್ಲ.

• ಹಾನು ಬ್ಯಾಂಕ್ಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ಹಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಸಂತೆಯಲ್ಲಿ ತೋರಿಸುವವರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮುಳ್ಳಿನ ಕಾಜು ಬಹಳ ಸುಂದರವಾಗಿಯೂ ಬಹಳ ದಿನಕ್ಕೆ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ವಾಚ್ ವಿ.ಪಿ. ಮೂಲಕ ಕಳುಹಿಸಿಕೊಡಿ.—ಕೆ. ರಾಮಸ್ವಾಮಿ, ಸಬ್ ಇನ್‌ಸ್ಪೆಕ್ಟರ್, 20-2-15.

ಅರ್ಧಬೆಲೆ ಮಾತ್ರ.

ಪರಿಶಕರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಅದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೋಡೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಟೈಂ ಗಡಿಯಾರವು ಸುಂದರವಾಗಿಯೂ ಬಹಳ ದಿನ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿನಗಳವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬೇಕಾದರೆ ರಿಪ್ಲೈ ಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,

[266-36] ಪಿ.ಬಿ. ಬಾಕ್ಸ್ 330, ಬೊಂಬಾಯಿ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಜೂನ್ 23 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬಾಕಿ:—(1) ಷೇರು ಹೊಣೆಗಳು	......	ರೂ. 1,000,000
„ (2) ರಿಜರ್ವ್ ಫಂಡು	......	„ 50,000
„ (3) ಡಿಪಾಜಿಟ್ಟುಗಳು	......	„ 3,254,893
„ (4) ಇತರ	......	„ 16,685
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 4,321,577

ದೇಣಿ:—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ	ರೂ.	978,634
„ (2) ಖಾತೆ ಮತ್ತು ಇತರ ಸಾಲಗಳು	...... „	2,948,955
„ (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	„	373,976
„ (4) ಇನ್‌ವೆಸ್ಟ್‌ಮೆಂಟುಗಳು	...... „	294,068
„ (5) ಏಜೆನ್ಸಿಗಳಲ್ಲಿರುವ ಹೊಣೆಗಳು	...... „	5,909
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	...... „	14,629
„ (7) ಇತರೆ	...... „	5,407
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 4,321,577

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.—

ಮೈಯರ್ಸ್ ಹ್ಯಾಂಡ್ ಪವರ್ ಪಂಪುಗಳು.



10 ರಿಂದ 50 ಅಡಿ ಆಳದ ಭಾವಿಗೆ, ಗಂಟೆಗೆ 500 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

10 ರಿಂದ 70 ಅಡಿ ಆಳದ ಭಾವಿಗೆ, ಗಂಟೆಗೆ 350 ಗ್ಯಾಲನ್ (ಒಂದಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 60

ಟ್ಯಾಂಕ್ ಪಂಪು, 20 ಅಡಿ ಆಳದಿಂದ ಗಂಟೆಗೆ 1,500 ಗ್ಯಾಲನ್ (2 ಅಂಗುಲ ದಪ್ಪ) ನೀರು ಬರುವುದಕ್ಕೆ ... ... ಬೆಲೆ ರೂ. 65

ಷರಾ.—ಹೆಚ್ಚು ವಿಷಯಗಳನ್ನು ಕೆಳಗಿನ ವಿಳಾಸದಾರರಿಂದ ತಿಳಿಯ ಬಹುದು:—

ಎಲ್. ಶೇಷಾದ್ರಿ,

34, III ಪೇಟೆ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬಾವಿಯ ಪಂಪು.

ಅಗ್ಗ, ಸುಲಭ, ಬೇಗ ಕೆಡುವದಿಲ್ಲ. ಬೆಂಗಳೂರಲ್ಲಿ ಎಂಟು ತಿಂಗಳಿಂದ ಉಪಯೋಗದಲ್ಲಿವೆ.

ಮನೆಗಳಿಗೂ ಕೈತೋಟಗಳಿಗೂ ಬಹಳ ಅನುಕೂಲ.

14 ವಯಸ್ಸಿನವರು 70 ಅಡಿ ಆಳದಿಂದ ಎಷ್ಟಾದರೂ ನೀರನ್ನೆತ್ತಬಹುದು. [138-4]

1914 ನೆಯ ಮೈಸೂರು ಎಗ್ಜಿಬಿಷನ್ನಿನಲ್ಲಿ ಚಿನ್ನದ ಮೆಡಲನ್ನು ಪಡೆದಿರುತ್ತದೆ.

ನಮೂನೆ.—ಇಲ್ಲಿನ ಚಿತ್ರದಂತೆ.



ಕೆರೆಯ ಪಂಪು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಹೆಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೆಹೆಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವದಲ್ಲದೆ ತಲೆಯನೋವು, ತಲೆತಿರುಗುವದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಗುಣಪಡಿಸುವದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವಾಗುವದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ, ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವದಲ್ಲದೆ ಕೆಮ್ಮುಗಳನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವದು.

5. ಬಾಲಕರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಯು ಅತ್ಯಾವಶ್ಯಕವಾಗಿರುವವು.

6. ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಜಾಗ್ರತೆಯಿಂದ ನಿವಾರಣೆಯನ್ನು ಮಾಡುವದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವದು.

ಆದಕಾರಣ ಇಂತಹ ಗುಣಕಾರಿಯಾದ ಸೆಹೆಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	80 ಮಾತ್ರೆಗಳ ಟಿನ್ 1 ಕ್ಕೆ 4 ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 2 ರೂ.
„ „ „ 4 „	300 „ ಟಿನ್ „ 9 „	100 „ ಸೀಶೆ „ 4½ „	1300 „ „ „ 3 „

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ತೀರುವುದು ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕ್ರಯಕ್ಕೆ ಇಟ್ಟಿದೇವೆ. ವಿಳಾಸಗಳು.—

ಜನರಲ್ ಏಜಂಟರು—ಸೆಹೆಂತಾನ್ ಡಿಪೋ, ಬೊಂಬಾಯಿ. 2. ಮದರಾಸ್ ಏಜಂಟರು—ದಿ. ಸಿ. ಷಾ ಕಂಪನಿ, 177,

[28-27] ಮೀನಾ ಬಜಾರ್. ಮೈಸೂರು ಸೀಮೆಗೆ ಏಜಂಟರು—ಮು|| ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಗಿರುವ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸದಿರುವಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲೀಸ ಉಪಕರಣವಾವದೆಂದರೆ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯವಾಗಿ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಕದ ಬೇಗೆಯು ತಪ್ಪಿ ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವ ಕೆಲವು ದಿವಸಗಳಲ್ಲಿ ಕಪ್ಪಾಗಿ ದಟ್ಟವಾಗಿ ಬೆಳೆಯುತ್ತವೆ. ಇದರ ಸುಗಂಧವಂತೂ ಮಧುರವೂ ಮನೋಹರವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯ ಶ್ರೇಷ್ಠತೆಯು ಬೆನಿಯಿಂದ ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲದೆ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ಸಿಗಿನಪಾಲಕರ ಬಂಧುಗಳು. ಬಸವನಗುಡಿ, ಬೆಂಗಳೂರು—ಇವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಮಾರ್ಗಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರೆಯುತ್ತದೆಂದು, ತಾವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರೆಯತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ, ನಮ್ಮ ಮೊಹರುಚಾಪ್ ನೋಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟೊ-ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹಾಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದಂತೆಂದು ಭ್ರಮೆಯಾಗುವಂತೆ ಪರಿಮಳವುಂಟಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೇ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಎಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-28]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾಧ್ಯಮ) ಸೀಸೆ 1 ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಸಾಬೂನುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ಬಿ ಆಲ್ಬರ್ಟ್ ವಾರ್ಸ್, ಮಂಗಳೂರು.

ಗಾಡಿ ಕುದುರೆ ಕ್ರಯಕ್ಕೆ ಸಿದ್ಧವಾಗಿವೆ.

ಸಾಧುವಾದ ಕೆಂಪು ವರ್ಣದ ಪೋನಿ ಮತ್ತು ಒಂದು ಜಟಕಾಬಂಡಿ ಸಹಾ ಕ್ರಯಕ್ಕೆ ಕೊಡುತ್ತೆ. ಮೈಸೂರು ಇಲವಾಲದ ರಸ್ತೆ ಶ್ರೀಕಂಠವಿಲಾಸದಲ್ಲಿರುವ ಅಡ್ವೋಕೇಟ್ ಮ|| ಎ. ರಾಮಣ್ಣನವರಲ್ಲಿ ವಿಚಾರಿಸಿ [159-1]

FOR SALE

One 4½ H. P. Singer 2 Speed Gear Motor Cycle with acetylene lamp, horn and tool bags in good running order. For price and particulars apply to

[153-1] **Messrs. PETRI-HAY, and SON, Hunsur.**

ನಮ್ಮ ಬೆಂಗಳೂರು ಚಂದಾದಾರರಿಗೆ.

ನಮ್ಮ ಪತ್ರಿಕೆಯ ಬೆಂಗಳೂರು ಏಜಂಟರಿಗೆ ಸ್ವಲ್ಪ ದೇಹಾಲಸ್ಯವಾಗಿರುವ ಕಾರಣ ಕಳೆದ ಎರಡು ಮೂರು ವಾರಗಳಲ್ಲಿ ಚಂದಾದಾರರಿಗೆ ಪತ್ರಿಕೆಗಳ ಬಟವಾಡೆಯು ತೃಪ್ತಿಕರವಾಗಿಯೂ ಕ್ರಮವಾಗಿಯೂ ನಡೆಯದೆ ತಪ್ಪಿಹೋಗಿತ್ತು. ನಮ್ಮ ಏಜಂಟರು ಕೆಲಸದ ಮೇಲೆ ಬಂದಿದ್ದಾರೆ ಇನ್ನು ಮುಂದೆ ಚಂದಾದಾರರಿಗೆ ಕ್ರಮವಾಗಿ ಪತ್ರಿಕೆಗಳು ಜಾರಿಯಾಗುವವೆಂದು ನಂಬುತ್ತೇವೆ.

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಗೃಹಕೃತ್ಯದ ನೋಟೀಸು.

ನಂಜನಗೂಡು ಕಸಬಾ ವಾಸಸ್ಥಳವಾದ ವಿಶ್ವನಾಥಾಗಳ ಹೆಂಡತಿ ನರಸಮ್ಮನು ಪರರ ದುರ್ಬೋಧನೆಯಿಂದ ಈ ಕೆಳಗಿನ ಸ್ಥಿರ ಸ್ವತ್ತುಗಳನ್ನು ಪರಭಾರೆ ಮಾಡುವಂತೆ ಕೇಳುತ್ತೇನೆ. ಈಕೆಗೆ ಮಕ್ಕಳಿಲ್ಲ. ನಾನೇ ಉತ್ತರವಾರಸ್ದಾರನು ನನ್ನ ಸಮ್ಮತಿ ರುಜುವಿಲ್ಲದೆ ಈಕೆಯಿಂದ ಕಸಬಾ ಸರ್ವೆ 145, 603, 731, 732, 1146 ನಂ., ಮರಳೂರು 40 ನಂ., ಹೆಜ್ಜಿಗೆ 36, 46 ನಂ., ಈ ಜಮೀನುಗಳು, ಟವನ್‌ನಲ್ಲಿರುವ ಮನೆ, ಇವುಗಳನ್ನು ಯಾರೇ ಆಗಲಿ ಕ್ರಯದಾನ ಆಧಾರ ಭೋಗ್ಯ ವಗೈರೆ ಮಾಡಿಕೊಂಡಲ್ಲಿ ಊರ್ಜಿತವಾಗದೆ ನನಗೆ ಉಂಟಾಗತಕ್ಕ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುತ್ತೆಂದು ಎಚ್ಚರಿಸಿರುತ್ತೇನೆ.

[154-1] ನಾಗೇಶ್ವರ ಕೇಶವಭಟ್ಟರ ಮಗ ವೆಂಕಟಕೃಷ್ಣಭಟ್ಟ.

ವೃತ್ತಾಂತ ಪತ್ರಿಕೆ.

—:o:—

ಸರ್ ೧೯೧೫ ನೇ ಇಸವಿ ಆಗಸ್ಟ್ ತಾ. ೫ ನೇ ಗುರುವಾರ.

ಯುದ್ಧವು.

ಗ್ರೇಟ್ ಬ್ರಿಟನ್ ರಾಜ್ಯವು ಜರ್ಮನಿಯ ಮೇಲೆ ಯುದ್ಧ ಮಾಡುವುದಕ್ಕಾರಂಭಿಸಿ ನೆನ್ನೆಗೆ ಒಂದು ವರುಷವಾಯಿತು. ಈ ವರುಷವು ಪ್ರಪಂಚದ ಚರಿತ್ರೆಯಲ್ಲಿ—ಅದರಲ್ಲೂ ಬ್ರಿಟಿಷ್ ಚಕ್ರಾಧಿಪತ್ಯದ ಚರಿತ್ರೆಯಲ್ಲಿ, ಮಹಾ ಅಲ್ಲೋಲಕಲ್ಲೋಲವನ್ನುಂಟುಮಾಡಿರುತ್ತದೆ. ಚಕ್ರಾಧಿಪತ್ಯದ ಸಮಸ್ತ ವಿಭಾಗಗಳೂ ಅಂಗಗಳೂ ಏಕವಾಗಿ ಈ ಯುದ್ಧವನ್ನು ಜಯಪ್ರದವಾಗುವ ತನಕ ನಡಿಸುತ್ತಾ ಬರಬೇಕೆಂದು ಸಂಕಲ್ಪಮಾಡಿಕೊಂಡಿರುವವು. ಸತ್ಯ ಧರ್ಮ ಪ್ರಜಾಸ್ವಾತಂತ್ರ್ಯಾದಿಗಳನ್ನು ನೆಲೆಗೊಳಿಸಿ ಪರಿಪಾಲಿಸಿ ಮಾಡಬೇಕೆಂಬ ಪರಮ ಶ್ರೇಷ್ಠವಾದ ಸಂಕಲ್ಪದಿಂದ ಹಿಂದುಸ್ಥಾನ, ಆಸ್ಟ್ರೇಲಿಯ, ನ್ಯೂಜೀಲೆಂಡ್, ದಕ್ಷಿಣ ಆಫ್ರಿಕ, ಕೆನಡ, ಇವೇ ಮೊದಲಾದ ಬ್ರಿಟಿಷ್ ರಾಜ್ಯಾಂಗಗಳಿಂದ ಲಕ್ಷಾಂತರ ಜನರು ಧನುರ್ಧಾರಿಗಳಾಗಿ ರಣರಂಗಕ್ಕೆ ಹೋಗಿರುತ್ತಾರೆ.

ನೆನ್ನೆ ದಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಮೈಸೂರು ಸಂಸ್ಥಾನದಲ್ಲೂ ಕೂಡ ಸಮಸ್ತ ಪ್ರಜೆಗಳೂ ಸೇರಿ ಸಭೆಗಳನ್ನು ನಡಿಸಿ ಯುದ್ಧದಲ್ಲಿ ಜಯಪ್ರದವಾಗುವ ತನಕ ಶಕ್ತಿಯನ್ನು ಒಕ್ಕಟ್ಟಿನಲ್ಲಿ ಹಾಕಬೇಕೆಂದು ಏಕವಾಕ್ಯತೆಯಿಂದಲೂ ಒಮ್ಮನಸ್ಸಿನಿಂದಲೂ ಏಕೋತ್ಸಾಹದಿಂದಲೂ ನಿಶ್ಚಯಿಸಿರುತ್ತಾರೆ. ಈ ಸಂಕಲ್ಪವು ಕೈಗೂಡುವುದು ನಿಧಾನವಾಗಬಹುದು, ಮಹಾ ಪ್ರಯಾಸವೂ ಆದೀತು; ಆದು ಸಿದ್ಧಿಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ನಮ್ಮ ಉದ್ದೇಶವು ಸತ್ಯವೂ ಧರ್ಮವೂ ಆದದ್ದಾದ ಕಾರಣ ನಮಗೆ ಜಯಪ್ರದವಾಗುವುದೇ ನಿಶ್ಚಿತ. ನಾವು ಇಂಥಾ ಸ್ಥಿರಚಿತ್ತದಿಂದಲೂ ಪರಮಭಕ್ತಿಯಿಂದಲೂ ಈ ಯುದ್ಧವು ಬೇಗನೆ ಕೊನೆಮುಟ್ಟಲೆಂದು ಪ್ರಾರ್ಥಿಸುತ್ತಾ ಬರೋಣ.

ಮ್ಯುನಿಸಿಪಾಲಿಟಿ ಮುಂತಾದವುಗಳಿಗೆ ಮೆಂಬರುಗಳನ್ನು ಚುನಾವಣೆ ಮಾಡುವುದು.

ಮ್ಯುನಿಸಿಪಲ್ ಕೌನ್ಸಿಲ್‌ಗಳಿಗೂ, ಲೋಕಲ್ ಬೋರ್ಡುಗಳಿಗೂ, ನ್ಯಾಯವಿಧಾಯಕ ಸಭೆಗೂ, ಪ್ರಜಾಪ್ರತಿನಿಧಿ ಸಭೆಗೂ, ಪ್ರಜಾಪಕ್ಷದ ಮೆಂಬರುಗಳನ್ನು ಪ್ರಜೆಗಳೇ ಚುನಾವಣೆ ಮಾಡಿ ಕಳುಹಿಸಬಹುದೆಂದು ನಮ್ಮ ಸರ್ಕಾರದವರು ಸ್ವಾತಂತ್ರ್ಯವನ್ನು ವಹಿಸಿರುತ್ತಾರೆ. ಇದಕ್ಕಾಗಿ ನಾವು ಸರ್ಕಾರದವರಿಗೆ ಪ್ರಜೆಗಳ ಕೃತಜ್ಞತೆಯನ್ನು ಸಲ್ಲಿಸುವೆವು. ಯಾಕೆಂದರೆ ಇಂಥಾ ಸ್ವಾತಂತ್ರ್ಯವನ್ನು ಪ್ರಜೆಗಳು ಪಡೆದಿರುವುದರಿಂದ ಸಂಸ್ಥಾನದ ಆಳ್ವಿಕೆಯ ಕಾರುಬಾರುಗಳಲ್ಲಿ ಅವರಿಗೆ ವಿಶೇಷ ಉತ್ಸಾಹವೂ ಮುತುವರ್ಜಿಯೂ ಉಂಟೆಂಬುವುದು ವೇದ್ಯವಾಗುತ್ತದೆ. ಪ್ರಜೆಗಳಿಗೆ ದೊರೆತಿರುವ ಈ ಹಕ್ಕು ಸಾಮಾನ್ಯವಾದದ್ದಲ್ಲ; ಎಷ್ಟೋ ಘನತರವಾದದ್ದೆಂದು ಭಾವಿಸಬೇಕು. ಅದು ಅಲ್ಪವಾದದ್ದೆಂದಾಗಲಿ, ನಿಕೃಷ್ಟವಾದದ್ದೆಂದಾಗಲಿ ಎಷ್ಟು ಮಾತ್ರಕ್ಕೂ ಎಣಿಸತಕ್ಕದ್ದಲ್ಲ. ಪಟ್ಟಣಗಳ, ತಾಲ್ಲೂಕು ಮತ್ತೂ ಡಿಸ್ಟ್ರಿಕ್ಟುಗಳ ಸ್ಥಳೀಯ ಕೆಲಸಕಾರ್ಯಗಳ ಜವಾಬ್ದಾರಿಯನ್ನು ಸರ್ಕಾರದವರು ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಗೆ ವಹಿಸಿರುತ್ತಾರೆ. ಪ್ರಜೆಗಳು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸುವುದಕ್ಕೆ ಸರಿಯಾದ ಯೋಗ್ಯತಾ ಸಿದ್ಧಿಯನ್ನು ಪಡೆದಿರುವಂಥಾ ಪ್ರತಿನಿಧಿಗಳನ್ನು ಓಟುಕೊಟ್ಟು ನೇಮಿಸಿಕೊಳ್ಳದೆ ಹೋಗೋಣದರಿಂದ ಪಟ್ಟಣದ, ತಾಲ್ಲೂಕಿನ ಮತ್ತೂ ಡಿಸ್ಟ್ರಿಕ್ಟಿನ ಕೆಲಸಗಳು ತೃಪ್ತಿಕರವಾಗಿಯೂ ಪ್ರಯೋಜನಕರವಾಗಿಯೂ ನಡೆಯದೆ ಹೋದರೆ ಅದಕ್ಕೆ ಪ್ರತಿನಿಧಿಗಳನ್ನು ಚುನಾಯಿಸಿಕೊಂಡ ಪ್ರಜೆಗಳೇ ಹೊಣೆಗಾರರಾಗುತ್ತಾರೆ. ಅಂಥಾ ದುರ್ದೆಸೆಗೆ ಸರ್ಕಾರದವರಾಗಲಿ ಇತರರಾಗಲಿ ಜವಾಬ್ದಾರರಲ್ಲ. ತಾವು ಚುನಾಯಿಸಿದವರು ಸರಿಯಾಗಿ ಕೆಲಸಗಳನ್ನು ನಡಿಸುತ್ತಾರೆಯೋ ಇಲ್ಲವೋ ಎಂದು ನೋಡಿಕೊಳ್ಳುತ್ತಾ ಇದ್ದು, ಕೆಲಸಮಾಡದೆ ಹೋದವರನ್ನು ಚುನಾವಣೆಯ ಕಾಲದಲ್ಲಿ ಮತ್ತೆ ತಮ್ಮ ಪ್ರತಿನಿಧಿಯಾಗಿ ಬಾರದಂತೆ ನಿಂದಿತಮಾಡಿಕೊಂಡು, ಅಂಥವರಿಗೆ ಓಟುಗಳನ್ನು ಕೊಡಲೇ ಬಾರದು.

ಓಟ್ ಕೊಡುವ ಪ್ರತಿ ಒಬ್ಬ ಮನುಷ್ಯನೂ ತನ್ನ ಊರು ಮತ್ತು ಡಿಸ್ಟ್ರಿಕ್ಟಿನ ಶ್ರೇಯಸ್ಸನ್ನು ಬಯಸತಕ್ಕವನಾಗಿರಬೇಕು. ಊರು ಅಥವಾ ಡಿಸ್ಟ್ರಿಕ್ಟಿನ ಕೊರತೆಗಳನ್ನೂ, ಪ್ರಜೆಗಳು ಆರೋಗ್ಯವಾಗಿಯೂ ಸಂತೋಷದಿಂದಲೂ ನೆಮ್ಮದಿಯಾಗಿಯೂ ಬದುಕುವುದಕ್ಕೆ ಆಗಬೇಕಾದ ಕಾರ್ಯಗಳನ್ನೂ ತಿಳಿದವನಾಗಿರಬೇಕು. ಇಷ್ಟೇ ಸಾಲದು; ಅವನು ತನ್ನ ಪ್ರತಿನಿಧಿಗೆ ಇಂಥಾ ಹೊಸ ಏರ್ಪಾಡಾಗಬೇಕೆಂದೂ, ಇಂಥಾ ಕೊರತೆ ಅಥವಾ ಕಷ್ಟ ನಿವಾರಣೆಯಾಗಬೇಕೆಂದೂ ಆಗಾಗ್ಗೆ ತಿಳಿಸಿ, ಪ್ರತಿನಿಧಿಯ ಮೂಲಕ ಕೌನ್ಸಿಲ್ ಅಥವಾ ಬೋರ್ಡ್ ಮೀಟಿಂಗುಗಳಲ್ಲಿ ಸೂಚಿಸುವಂತೆ ಮಾಡಬೇಕು. ಪ್ರತಿನಿಧಿಯಾಗಬೇಕೆಂಬ ಮನುಷ್ಯನು ಬಂದು—ನನಗೆ ಓಟು ಕೊಡಿ ಎಂದು ಕೇಳುವಾಗ ಓಟರುಗಳು ದಾಕ್ಷಿಣ್ಯಕ್ಕೆ ಕಟ್ಟುಬೀಳದೆ ಮುಂದೆ ಹೇಳುವ ರೀತಿಯಲ್ಲಿ ಪ್ರಶ್ನೆಗಳನ್ನು ಹಾಕಿ ಆತನಿಂದ ಸಮಾಧಾನವನ್ನು ಪಡೆಯಬೇಕು. ಪಟ್ಟಣವು ಆರೋಗ್ಯಕರವಾಗುವ ಭಾಗದಲ್ಲಿ ನೀವು ಮಾಡಿದ ಕಾರ್ಯಗಳ್ಯಾವವು? ಸಮಸ್ತ ಪ್ರಜೆಗಳಿಗೂ ಒಳ್ಳೇ ಕುಡಿಯುವ ನೀರು ಒದಗುವಂತೆ ಮಾಡಿರುತ್ತೀರೋ? ಬೀದಿ, ಸಂದಿಗೊಂದಿ, ಚರಂಡಿ, ಚರಂಡಿ ಮೊದಲಾದವುಗಳನ್ನು ಚೊಕ್ಕಟವಾಗಿ ಇಡುವಂತೆ ಏರ್ಪಡಿಸಿದ್ದೀರಾ? ಬೀದಿಗಳಲ್ಲಿ ದೀಪಗಳು ಚೆನ್ನಾಗಿ ಉರಿಯುವಂತೆ ಮಾಡಿಸಿರುತ್ತೀರೋ? ನಮ್ಮ ಮಕ್ಕಳು ಓದು ಕಲಿಯುವುದಕ್ಕೆ ಪಾಠಶಾಲೆಗಳನ್ನು ಇಡಿಸಿದಿರಾ? ಕೌನ್ಸಿಲ್ಲಿನ ಅಥವಾ ಬೋರ್ಡಿನ ಪ್ರತಿ ಒಂದು ಮೀಟಿಂಗಿಗೂ ಹಾಜರಾಗಿ, ಕಮಿಟಿಗಳಲ್ಲಿ ಚರ್ಚೆಗಳನ್ನು ನಡಿಸಿರುತ್ತೀರಾ? ನಾವು ಕೊಡುವ ತೆರಿಗೆ ಮತ್ತು ಸುಂಕಗಳು ವಿವೇಕವಾಗಿಯೂ, ಮಿತವಾಗಿಯೂ ಖರ್ಚಾಗುವಂತೆ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವಿರಾ? ಇತ್ಯಾದಿ ಪ್ರಶ್ನೆಗಳನ್ನು ನಿರ್ದಾಕ್ಷಿಣ್ಯವಾಗಿ ಕೇಳಬೇಕು. ಇವುಗಳಿಗೆ ಆ ಮನುಷ್ಯನು ತೃಪ್ತಿಕರವಾದ ಸಮಾಧಾನವನ್ನು ಹೇಳಲಾರದೆ ಹೋದರೆ ಅಂಥವನು ಕೌನ್ಸಿಲ್ಲಿನಲ್ಲಾಗಲಿ, ಬೋರ್ಡಿನಲ್ಲಾಗಲಿ ಇದ್ದೂ ನಿಷ್ಪ್ರಯೋಜನ. ಗೌರವಕ್ಕೆ ತಾನೂ ಒಬ್ಬ ಮೆಂಬರಾಗಬೇಕೆಂದು ಆತನಿಗೆ ಕುತೂಹಲವಿರಬಹುದು; ಪಟ್ಟಣಕ್ಕಾಗಲಿ ಡಿಸ್ಟ್ರಿಕ್ಟಿಗಾಗಲಿ ಅಂಥವನಿಂದ ಯಾವ ಉಪಕಾರವೂ ಆಗಲಾರದು.

ಓಟು ಕೊಡಿ ಎಂದು ಬರತಕ್ಕವರನ್ನು ಟವನಿನ ಅಥವಾ ಡಿಸ್ಟ್ರಿಕ್ಟಿನ ಸ್ಥಳೀಯ ಕಾರುಬಾರುಗಳ ವಿಷಯದಲ್ಲಿ ಪ್ರಶ್ನೆ ಮಾಡಿ, ಅವರಿಗಿರುವ ತಿಳುವಳಿಕೆಯನ್ನೂ ಅನುಭವವನ್ನೂ ಸಾಮರ್ಥ್ಯವನ್ನೂ ಅರಿಯಬೇಕು. ಚುನಾವಣೆಯ ಕಾಲದಲ್ಲಿ ಓಟರುಗಳೇ ಸಹಜವಾದ ಅಧಿಕಾರಿಗಳು; ಮೆಂಬರಾಗಬೇಕೆಂಬುವರು ಅವರ ಅಡಿಯಾಳುಗಳು. ಓಟರುಗಳು ಅವರಿಗೆ ತಮ್ಮ ಅಭಿಮತವನ್ನು ತಿಳಿಯಪಡಿಸದೆ ಹೋದರೆ ಆಳ್ವಿಕೆಯ ಕೆಲಸಕಾರ್ಯಗಳು ಹಾಳಾಗುವುದಕ್ಕೂ ಅಥವಾ ಬೇಕಾಬಿಟ್ಟಿಯಾಗಿ ನಡೆಯುವುದಕ್ಕೂ ಓಟರುಗಳೇ ಕಾರಣರಾಗುತ್ತಾರೆಂದು ಖಚಿತಮಾಡಿಕೊಳ್ಳಬಹುದಾಗಿದೆ.

ಆಳ್ವಿಕೆಯ ಕೆಲಸಕಾರ್ಯಗಳನ್ನು ನಡಿಸುವಂಥಾ ಪ್ರತಿನಿಧಿಗಳು ಹೆಚ್ಚಿದ ಹಾಗೆಲ್ಲಾ ಆಳ್ವಿಕೆಯಲ್ಲಿ ಪ್ರಜೆಗಳ ಅಭಿಮತವೇ ಹೆಚ್ಚಾಗುವುದು. ಅಂಥಾ ಪ್ರತಿನಿಧಿಗಳ ಕೆಲಸಕಾರ್ಯಗಳು ಸರ್ವಸಮ್ಮತವಾಗಿ ನಡೆಯದೇ ಹೋದರೆ ಸರ್ಕಾರದವರ ಮೇಲೆ ತಪ್ಪು ಹಾಕುವುದು ನಿಷ್ಪ್ರಯೋಜನ; ಅಂಥಾ ಅಯೋಗ್ಯರಾದ ಮೆಂಬರುಗಳನ್ನು ಪ್ರತಿನಿಧಿಯಾಗಿ ಕಳುಹಿಸಿದವರಲ್ಲಾ ಎಂದು ಪ್ರಜೆಗಳು ತಮ್ಮನ್ನೇ ದೂಷಿಸಿಕೊಳ್ಳಬೇಕಾಗುವುದು. ಆದಕಾರಣ ಪ್ರಜೆಗಳು ಕಡೆಯಲ್ಲಿ ಪಶ್ಚಾತ್ತಾಪಪಡುವಂತೆ ಮಾಡಿಕೊಳ್ಳದೆ ಮ್ಯುನಿಸಿಪಲ್ ಕೌನ್ಸಿಲ್ಲಿಗೂ, ಲೋಕಲ್ ಬೋರ್ಡಿಗೂ, ನ್ಯಾಯವಿಧಾಯಕ ಸಭೆಗೂ, ಪ್ರಜಾಪ್ರತಿನಿಧಿ ಸಭೆಗೂ ಯೋಗ್ಯರಾಗಿಯೂ ವಿದ್ಯಾವಂತರಾಗಿಯೂ ಕೆಲಸಕಾರ್ಯಗಳನ್ನು ನಡಿಸಬಲ್ಲವರಾಗಿಯೂ ದೇಶಭಕ್ತರಾಗಿಯೂ ಇರುವಂಥಾ ದೊಡ್ಡ ಮನುಷ್ಯರನ್ನೇ ಚುನಾವಣೆ ಮಾಡಿಕೊಳ್ಳುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಸರ್ವರಿಗೂ ಹುಟ್ಟುವಾದ ಹಕ್ಕನ್ನು ಕೆಲವರು ಮಾತ್ರ ಅನುಭವಿಸುವದೇಕೆ?

ದೇವರು ಸಕಲ ಮನುಷ್ಯರ ತಂದೆಯಾಗಿದ್ದಾನೆಂದು ನಾವು ಪದೇ ಪದೇ ಹೇಳುತ್ತಿರುತ್ತೇವೆ ಸಕಲ ಮನುಷ್ಯರೂ ದೇವರು ತಮ್ಮ ತಂದೆಯಾಗಿದ್ದಾನೆಂದು ಸಂದೇಹವಿಲ್ಲದೆ ಒಪ್ಪುವರೆಂದು ನಾವು ನಂಬುತ್ತೇವೆ. ಹೀಗಿರುವದರಿಂದ ಎಲ್ಲಾ ಜನಗಳೂ ದೇವರ ಮಕ್ಕಳೆಂದು ತಿಳಿದು ಆತನ ಮಕ್ಕಳ ಪದವಿಯನ್ನು ಅನುಭವಿಸುವದು ಸಾಧ್ಯವಾಗಿದೆ. ಆದರೆ ಎಲ್ಲಾ ಜನಗಳೂ ದೇವರ ಮಕ್ಕಳ ಪದವಿಯ ಹಕ್ಕನ್ನು ರೂಢಿಸುವದಿಲ್ಲ, ಅನುಭವಿಸುತ್ತಲಿಲ್ಲವೆಂಬುವದು ಪ್ರತ್ಯಕ್ಷವಾಗಿದೆ. ದೇವರ ಮಕ್ಕಳಿಗೆ ಸದಾ ತೃಪ್ತಿಯೂ ನೆಮ್ಮದಿಯೂ ಸಂತೋಷವೂ ಸಮಾಧಾನವೂ ಪರಿಪೂರ್ಣವಾಗಿರಬೇಕಲ್ಲವೇ? ದೇವರ ಮಕ್ಕಳು ಕೊರತೆ, ದುಃಖ, ವ್ಯಸನ, ರೋಗ ಮುಂತಾದ ಪಾಪದ ಫಲಗಳನ್ನು ಅನುಭವಿಸುತ್ತಿರಬಹುದೇ? ಮತ್ತು ಲೋಕದಲ್ಲಿ ಅನೇಕರು ಪ್ರೀತಿ, ಕರುಣೆ, ನೀತಿ, ಪವಿತ್ರಸ್ವಭಾವ, ಭಕ್ತಿ ಮುಂತಾದ ದೇವರ ಮಕ್ಕಳ ಸದ್ಗುಣದಿಂದ ಅಲಂಕೃತರಾಗಿ ಶೋಭಿಸದೆ, ಭೇದ, ಮತ್ಸರ, ಕ್ರೋಧ, ತಂತ್ರ, ಜಗಳ, ಕಾಮಾತುರ, ಕುಟಿಲತನ, ಲೋಭಗಳೆಂಬ ದೆವ್ವಗಳಿಂದ ಪೀಡಿತರಾಗಿ ತಮ್ಮ ಸಹೋದರರಾದ ಮನುಷ್ಯರನ್ನು ವಂಚಿಸುತ್ತಾ ಕೆಡಿಸುತ್ತಾ ಅವರನ್ನು ಕೆಡಿಸುವದರಲ್ಲಿ ತಾವೂ ಕೆಡುತ್ತಾ ಇರುವದು ಪ್ರತ್ಯಕ್ಷಪ್ರಮಾಣವಾಗಿದೆಯಷ್ಟೆ. ಸಾಕ್ಷಾತ್ ದೇವರನ್ನು ತಂದೆಯಾಗಿ ಪಡೆದು ಆತನ ಮಕ್ಕಳೇ ಆಗಿರುವ ಬಾಧ್ಯತೆಯು ಮನುಷ್ಯರಿಗೆ ಇರಲಾಗಿ ಈ ಪದವಿಯನ್ನು ಕೋಟ್ಯಂತರ ಪುರುಷ ಸ್ತ್ರೀಯರು ಅನು... ದುರಾತ್ಮನ ಕೈಗೆ ಸಿಕ್ಕಿ ಅವನ ಖೈದಿಗಳಾಗಿ ಕೆಟ್ಟುಹೋಗುತ್ತಿರುವದು ... ಇದು ಸರ್ವರಿಗೂ ಮುಖ್ಯಪ್ರಶ್ನೆಯಲ್ಲವೇ?

ಈ ವಿಚಾರದಲ್ಲಿ ದೇವರು ನಮ್ಮ ತಂದೆಯಾಗಿದ್ದಾನೆಂದು ... ಹೇಳುತ್ತೇವಷ್ಟೆ. ಹಾಗಂದರೆ ಏನು? ಎಂದು ಸ್ಪಷ್ಟವಾಗಿ ತಿಳಿಯುವದು ... ಅಗತ್ಯವಾಗಿದೆ. ದೇವರು ನಮ್ಮ ತಂದೆಯಾಗಿದ್ದಾನೆಂದು ಹ್ಯಾಗೆ ತಿಳಿಯುತ್ತ... ಎಂದು ಪ್ರಶ್ನೆಮಾಡಿದರೆ ಕೆಲವರು—ಓಹೋ!, ಇದರ ವಿಷಯ ನೀವು ನಮ್ಮ... ಕೇಳಬೇಕಾದ ಅಗತ್ಯವಿಲ್ಲ. ಆತನು ನಮ್ಮನ್ನು ನಿರ್ಮಾಣಮಾಡಿದ್ದಾನೆ. ನಮ್ಮ... ನಿತ್ಯವೂ ಕಾಪಾಡುತ್ತಾನೆ. ಆತನು ಉಂಟುಮಾಡಿದ ಸೂರ್ಯನಿಂದ ... ಬೆಳಕೂ ಬಿಸಿಲೂ ಪ್ರಪಂಚದಲ್ಲಿ ಲಭ್ಯವಾಗುತ್ತೆ. ಆತನ ಭೂಮಿಯ... ನಾವು ವಾಸಮಾಡುತ್ತೇವೆ. ಭೂಮಿಯು ಸಕಲ ವಿಧವಾದ ಪೈರುಗಳನ್ನು ... ಪುಷ್ಪಗಳನ್ನೂ ಫಲಿಸುತ್ತದೆ. ಜೀವಾಧಾರವಾಗಿರುವ ಮಳೆಯನ್ನು ಕಾಲ... ಆತನೇ ಕಳುಹಿಸುತ್ತಿರುತ್ತಾನೆ. ಆತನು ವರುಷಂಪ್ರತಿ ಈ ಉಪಕಾರ... ಮಾಡುತ್ತಲಿದ್ದಾನೆ. ಆತನು ನಮ್ಮ ತಂದೆಯಲ್ಲವೇ ಎಂದು ಕೇಳುವರು...

ಇವರ ಅಭಿಪ್ರಾಯವು ವಾಸ್ತವವಾದುದೇ ಸರಿ. ದೇವರು ನಮ್ಮನ್ನು ಸೃ... ಪರಿಪಾಲನೆಮಾಡುತ್ತಲಿರುವದರಿಂದ ನಾವು ಆತನನ್ನು ತಂದೆಯೆಂದು ... ಆತನಿಗೆ ಕೃತಜ್ಞರಾಗಿ ಇರುವದು ನ್ಯಾಯ. ಆದರೆ ದೇವರು ನಮ್ಮನ್ನು ಮಾತ್ರವಲ್ಲ ಸಮಸ್ತ ಸ್ಥಾವರ ಜಂಗಮ ವಸ್ತುಗಳನ್ನೂ ಉಂಟುಮಾಡಿದ್ದಾನೆ. ಸೂರ್ಯ ಚಂದ್ರ ನಕ್ಷತ್ರಗಳನ್ನೂ ಆತನು ಸೃಷ್ಟಿಸಿ ಕಾಲಕ್ರಮವಾಗಿ ಅವು ತಮ್ಮ ... ನಡೆಯುವಂತೆ ಮಾಡುತ್ತಾನೆ. ಪ್ರಪಂಚದಲ್ಲಿ ಸಸ್ಯಾದಿಗಳನ್ನೂ, ಮೃಗ, ... ಕೀಟಗಳನ್ನೂ ಸೃಷ್ಟಿಸಿ ಪರಾಮರಿಸುತ್ತಾನೆ. ಆದರೆ ದೇವರು ಅವುಗಳನ್ನು ಮಕ್ಕಳೆಂದು ಕರೆಯುವದಿಲ್ಲ. ಅದು ಅವುಗಳಿಗೆ ಅಸಂಗತವಾದ ... ಸಸ್ಯಾದಿಗಳೂ ತಿರ್ಯಗ್ಜಂತುಗಳೂ ಮೃಗ ಪಕ್ಷಿಗಳೂ ದೇವರು ತಮ್ಮ ತಂದೆ ... ತಿಳಿಯಲಿಲ್ಲ. ಆತನನ್ನು ತಿಳಿಯುವ ಶಕ್ತಿ ಅವುಗಳಿಗೆ ಇಲ್ಲ.

ಮನುಷ್ಯನು ಮಾತ್ರ ತಾನು ಯಾರು? ದೇವರು ಯಾರು? ಧರ್ಮವ್ಯಾವದು ಅಧರ್ಮವ್ಯಾವದು? ಎಂದು ಆಲೋಚಿಸಿ ತಿಳುಕೊಳ್ಳುವ ಶಕ್ತ... ಳ್ಳವನಾಗಿ ನಿರ್ಮಿಸಲ್ಪಟ್ಟಿದ್ದಾನೆ. ಮತ್ತು ದೇವರನ್ನು ತಂದೆಯೆಂದೂ ತ... ಆತನ ಮಗನೆಂದೂ ತಿಳಿದು ಆತನನ್ನು ಭಕ್ತಿಯಿಂದಲೂ ಪ್ರೀತಿಯಿಂ... ಸೇವಿಸಿ ವಿಧೇಯನಾಗಿರುವದಕ್ಕೆ ಮನುಷ್ಯನಿಗೆ ಸ್ವತಂತ್ರವುಂಟು. ಧರ್ಮ... ಅಧರ್ಮವನ್ನೂ ತಿಳಿದು ಅಧರ್ಮವನ್ನು ತ್ಯಜಿಸುವದಕ್ಕೂ ಧರ್ಮ... ಕೈಕೊಳ್ಳುವದಕ್ಕೂ ಅವನು ಸ್ವತಂತ್ರನಾಗಿದ್ದಾನೆ. ಇದೀಗ ಬೇರೆ ಸೃಷ್ಟಿ... ಅವನಿಗೂ ಇರುವ ಮುಖ್ಯವ್ಯತ್ಯಾಸ. ದೇವರಿಗೆ ತಿಳುವಳಿಕೆಯೂ ಸ್ವತಂ... ಚಿತ್ತವೂ ಉಂಟು. ಮತ್ತು ದೇವರು ತನಗಿರುವ ಈ ಉತ್ಕೃಷ್ಟವಾದ... ಮನುಷ್ಯನಿಗೂ ಇರಬೇಕೆಂದು ಚಿತ್ತೈಸಿ ತನಗಿದ್ದ ದಿವ್ಯಲಕ್ಷಣಗಳನ್ನೇ ಮ... ನಿಗೆ ದಯಪಾಲಿಸಿದನು. ಸತ್ಯವೇದದಲ್ಲಿ—ದೇವರು ಮನುಷ್ಯನನ್ನು ಹೋಲಿಕೆಯಲ್ಲಿ ಉಂಟುಮಾಡಿದನು ಎಂದು ಹೇಳಿದೆ ಇದರ ಅರ್ಥವು... ದೇವರು ಮನುಷ್ಯನನ್ನು ತನ್ನ ರೂಪದಲ್ಲಿ ಉಂಟುಮಾಡಿದನು ಅಂದರೆ... ದೇವರು ರೂಪ ಬಣ್ಣ ಮೂಗು ಮುಖಗಳುಳ್ಳ ಸ್ಥೂಲವಸ್ತುವಲ್ಲ. ... ಆತ್ಮಸ್ವರೂಪಿಯಾಗಿದ್ದಾನೆ. ತಿಳುವಳಿಕೆ, ಸ್ವತಂತ್ರ, ಚಿತ್ತ ಈ ಲಕ್ಷಣ... ಪರಮಾತ್ಮನಾದ ದೇವರಲ್ಲಿ ಸ್ವಾಭಾವಿಕವಾಗಿವೆ. ಆತನ ಸ್ವಭಾವದಲ್ಲಿ ... ಷ್ಯನು ನಿರ್ಮಾಣವಾಗಿರುವದರಿಂದ ಈ ಲಕ್ಷಣಗಳೂ ಮನುಷ್ಯನಲ್ಲಿ ಸ್ವಾ... ಕವಾಗಿ ಬಂದಿವೆ. ಮನುಷ್ಯರು ದೇವರ ಮಕ್ಕಳಾಗಿದ್ದಾರೆಂಬುವದರಲ್ಲಿ ... ರ್ಥವೇನಂದರೆ—ತಂದೆಯ ಸ್ವಭಾವ, ಲಕ್ಷಣಗಳು ಮಕ್ಕಳಿಗೆ ವಂಶ... ಪರ್ಯವಾಗಿ ಬರುವ ಮೇರೆಗೆ ಸಕಲ ಮನುಷ್ಯರಿಗೆ ದೇವರಿಂದ ತಿಳು... ಚಿತ್ತ, ಸ್ವತಂತ್ರವೆಂಬ ಲಕ್ಷಣಗಳು ಕೊಡಲ್ಪಟ್ಟಿರುತ್ತವೆ.

ಆದರೆ ಮನುಷ್ಯರು ದೇವರಿಂದ ಪಿತ್ರಾರ್ಜಿತವಾಗಿ ಹೊಂದಿದ ತಿಳು... ಯನ್ನೂ ಸ್ವತಂತ್ರವನ್ನೂ ಬಳಸಿ ಅವುಗಳ ಸಹಾಯದಿಂದ ಧರ್ಮವನ್ನೇ ... ಅಧರ್ಮವನ್ನು ಸಂಪೂರ್ಣವಾಗಿ ತ್ಯಜಿಸಿ ದೂರೀಕರಿಸುವದು ಅವರ ಕ... ವಾಗಿದೆ ದೇವರು ಹೀಗೆಯೇ ಸತತವೂ ನಡಿಸುತ್ತಿದ್ದಾನೆ. ಆತನ ಮಕ್ಕ... ಇರಬೇಕೆಂದು ಅಪೇಕ್ಷಿಸುವವರೆಲ್ಲರೂ ಹಾಗೆಯೇ ನಡಿಸುತ್ತಿರಬೇಕು. ... ಮಾಡದೆ ಅಧರ್ಮವನ್ನು ನಡಿಸಿ ಧರ್ಮಕ್ಕೆ ಯಾರು ಭಂಗವನ್ನುಂಟುಮಾಡು... ರೆಯೋ ಅವರು ಅವಿಚ್ಛಿನ್ನವಾಗಿ ಧರ್ಮವನ್ನೇ ನಡಿಸುತ್ತಿರುವವರು ದೇ... ಮಕ್ಕಳಾಗಿರಲಾರರು. ಬುದ್ಧಿ, ಸ್ವತಂತ್ರ, ಚಿತ್ತ, ಧರ್ಮಾಧರ್ಮಜ್ಞಾನಗಳಿಲ್ಲದೆ ಪಶುವು ಮನುಷ್ಯನಾಗಿರುವದು ಅಸಾಧ್ಯವಷ್ಟೆ. ತದ್ರೀತಿ ಅಧ... ವನ್ನು ಆಚರಿಸಿ ಧರ್ಮವನ್ನು ಕೆಡಿಸುವವನು ಸತತವೂ ಧರ್ಮಾಚರಿ... ದೇವರ ಮಗನಾಗಿರಲಾರನು ಮನುಷ್ಯರನ್ನು ಕಾಡಿ, ಕ್ಲೇಶಪಡಿಸುತ್ತ... ಭೇದ, ಶಕ್ತಿ, ಮತ್ಸರ, ಕ್ರೋಧ, ಕಾಮಾತುರ, ಲೋಭ, ಕುಟಿಲತನ, ಹಾ... ಕೊಲೆ ಮುಂತಾದ ಸಕಲ ಪಾಪಗಳಿಗೆ ಅಧರ್ಮಾಚರಣೆಯೇ ಕಾರಣಭೂತವಾ...

ಸಕಲ ಪುರುಷ ಸ್ತ್ರೀಯರೂ ಅಧರ್ಮಪ್ರವರ್ತಕರಾಗಿ ಕೆಟ್ಟುಹೋಗು... ವದನ್ನು ದೇವರು ನೋಡಿ ಮಾನವಜಾತಿಯನ್ನು ರಕ್ಷಿಸಬೇಕೆಂದು ಸ... ಮಾಡಿದನು. ಆತನು ಈ ಸಂಕಲ್ಪವನ್ನು ಸಿದ್ಧಿಗೆತರುವದಕ್ಕೆ ಯೇಸು ... ನೆಂಬ ಹೆಸರನ್ನು ಧರಿಸಿಕೊಂಡು ಈ ಪ್ರಪಂಚದಲ್ಲಿ ಮನುಷ್ಯನಾಗಿ ಜ... ಧರ್ಮಕ್ಕೆ ಸ್ವಲ್ಪವೂ ಲೋಪಬರದಂತೆ ನಡೆದು ಮನುಷ್ಯರಿಗೆ ಧರ್ಮಪ್ರವ... ರಾಗಿರುವದಕ್ಕೆ ಪ್ರೇರಣೆಯನ್ನು ಕೊಟ್ಟನು ಅಧರ್ಮವು ಅವರ ಮೊದಲು ... ಕಲಿಪುರುಷನೂ ಆತನನ್ನು ಎಷ್ಟೇ ಕಾಡಿದರೂ ಆತನು ಅಧರ್ಮಕ್ಕೊಳಗಾ... ಇಲ್ಲ. ಆತನು ತನ್ನನ್ನೂ ತನ್ನ ನಿಷ್ಕಳಂಕವಾದ ಜೀವಮಾನವನ್ನೂ ಮನು... ಪರವಾಗಿ ಅವರನ್ನು ದೇವರ ಮಕ್ಕಳ ಸ್ವತಂತ್ರಕ್ಕೂ ಬಾಧ್ಯತೆಗೂ ಪುನಃ ... ವದಕ್ಕೆ ಪ್ರಯೋಗಿಸಿದನು. ಈಗ ಯಾರ್ಯಾರು ಆತನನ್ನು ನಂಬಿ ಆತ... ಆಶ್ರಯಿಸುತ್ತಾರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರವನ್ನು ಆ... ಕೊಡುತ್ತಾನೆ.

ಯುದ್ಧದ ಸಮಾಚಾರಗಳು.

ರಷ್ಯದಲ್ಲಿ ಘೋರವಾದ ಕದನಗಳು.

ಜರ್ಮನಿಯವರು ಮುಂದಕ್ಕೆ ನುಗ್ಗಿ ಹೋಗುತ್ತಾರೆ.

ಈ ವಾರದ ಯುದ್ಧದ ವರ್ತಮಾನಗಳಲ್ಲೆಲ್ಲಾ ಪೂರ್ವ ರಣರಂಗ... ವಾರ್ಸಾ ನಗರದ ಸುತ್ತಲೂ ನಡೆಯುವ ಕದನಗಳೇ ಪ್ರಾಮುಖ್ಯವಾಗಿ... ಅಲ್ಲಿ ರಷ್ಯಾದವರು ಘೋರ ಯುದ್ಧವನ್ನು ಮಾಡುತ್ತಾ ಜರ್ಮನಿಯ... ಮುಂದೆ ಬರದಂತೆ ತಡೆದಿರುವರು ಆದಾಗ್ಯೂ, ರಷ್ಯಾದವರು ವಿಸ್ತಾರ... ಪ್ರದೇಶದಲ್ಲಿರುವ ತಮ್ಮ ಸೈನ್ಯಗಳನ್ನು ಒಟ್ಟಿಗೆ ಸೇರಿಸಿಕೊಂಡು ತಮ್ಮ ... ನಾಲುಗಳನ್ನು ಕಡಮೆ ಮಾಡಿಕೊಳ್ಳುವವರಾಗಿದ್ದಾರೆಂದೂ, ವಾರ್ಸಾ ನಗರ... ತ್ಯಜಿಸಿ ಬಿಟ್ಟುಹೋಗುವರೆಂದೂ ಕಾಣುತ್ತದೆ.

ಪಶ್ಚಿಮ ರಣರಂಗದಲ್ಲಿ.

ಕಳೆದ ವಾರ ಬೆಲ್ಜಿಯಮ್‌ನೊಳಗಾಗಲಿ ಫ್ರಾನ್ಸಿನಲ್ಲಾಗಲಿ ಕದ... ನಡೆದಿರುವುದು ಬಹಳ ಸ್ವಲ್ಪ. ಸೈನಿಕರು ಭೂಮಿಗಳೊಳಗೆ ಸುರಂಗ... ಹಾಕುವುದು, ಫಿರಂಗಿ ಗುಂಡುಗಳ ಮಳೆ ಸುರಿಸುವುದು, ಅವೇ ... ಕಾಲ್ಬಲದವರು ಮೇಲೆ ನುಗ್ಗಿ ಕಾದಾಡಿದ್ದು ಅಪರೂಪ. ಆದರೆ ಸೈನ್ಯ... ದಕ್ಷಿಣ ಭಾಗದಲ್ಲಿ ಫ್ರೆಂಚರು ಮುಂದರಿಸಿ ನುಗ್ಗಿಹೋಗಿ ಕೋಟೆ ... ಗಳಿಂದ ಬಲಪಡಿಸಿಕೊಂಡಿದ್ದ ಶತ್ರುವಿನ ಕೆಲವು ಗುಡ್ಡಗಳನ್ನು ಸ್ವಾಧೀ...

ಕೊಂಡರು. ಇದಲ್ಲದೆ ಅವರಿಗೆ 100 ಮಂದಿ ಜರ್ಮನಿಯವರು ಕೈಸೆರೆಯೂ ಸಿಕ್ಕಿದರು. ಫ್ರೆಂಚರು ಗೆದ್ದುಕೊಂಡಿರುವ ಕೆಲವು ಪ್ರದೇಶಗಳನ್ನು ಶೋಧನೆ ಮಾಡಿದಾಗ ಒಂದು ಸ್ಥಳದಲ್ಲಿ ಶತ್ರುವಿನ ಕಡೆ ಸೈನಿಕರ 400 ಹೆಣಗಳು ಸಿಕ್ಕಿದವು. ಇನ್ನೊಂದು ಸ್ಥಳದಲ್ಲಿ ನೂರಾರು ಹೆಣಗಳು ಬಿದ್ದಿದ್ದವು. ಮೆಷೀನ್ ಫಿರಂಗಿಗಳೂ, ಬಂದೂಕುಗಳೂ ಅನೇಕವಾಗಿ ಫ್ರೆಂಚರಿಗೆ ಸಿಕ್ಕಿರುತ್ತವೆ — ಜರ್ಮನಿಯವರ ಒಂದು ವಿಮಾನಯಂತ್ರವನ್ನು ಹಾಳುಮಾಡಿದ್ದಾಯಿತು. ಫ್ರೆಂಚರ ವಿಮಾನಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು ಶತ್ರುವಿನ ಸ್ಥಳಗಳ ಮೇಲೆ ಹಾಕುತ್ತಾ ಬಂದಿವೆ. ಆದರೂ ಕಳೆದ ವಾರ ವಿಶೇಷವಾದ ಕದನಗಳೇನೂ ಆಗಿಲ್ಲ.

ಪೂರ್ವ ರಣರಂಗದಲ್ಲಿ.

ರಷ್ಯಾ ಸೈನ್ಯಗಳು ಹಿಮ್ಮೆಟ್ಟಿ ಹೋದದ್ದರಿಂದ ಅವರ ಸಾಲು ಕಿರಿದಾಯಿತು. ಮೊದಲು ಯುದ್ಧ ಸಾಲು 1,000 ಮೈಲಿ ಉದ್ದವಾಗಿತ್ತು. ಈಗ 700 ಮೈಲಿ ಉದ್ದವಾಗಿದೆ. ಆದರೆ ಆ ಪೈಕಿ 600 ಮೈಲಿಗಳ ಉದ್ದಕ್ಕೂ ಕದನಗಳು ನಡೆದವು. ಈ ಕದನಗಳಲ್ಲಿ ಕೆಲವು ಮಹಾ ಘೋರವಾಗಿದ್ದವು. ಅವನ್ನು ವಿವರಿಸಿ ತಿಳಿಸುವುದು ಬಹಳ ಪ್ರಯಾಸ. ವಾರ್ಸಾ ನಗರವು ಮಧ್ಯಬಿಂದು. ಇದರ ಉತ್ತರ, ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಜರ್ಮನಿಯವರು ಅಪಾರವಾದ ಸೈನ್ಯಗಳನ್ನು ತಂದಿಟ್ಟುಕೊಂಡು ರಷ್ಯಾ ಸೈನಿಕರ ಸಾಲುಗಳನ್ನು ಒಡೆದು ನುಗ್ಗಿ ಹೋಗಿ ವಾರ್ಸಾ ನಗರವನ್ನು ಗೆದ್ದುಕೊಳ್ಳಬೇಕೆಂದು ಬಹಳ ಸಾಹಸಪಡುತ್ತಿದ್ದಾರೆ. ಉತ್ತರ ಮತ್ತು ದಕ್ಷಿಣ ಭಾಗಗಳಲ್ಲೇ ಘೋರವಾದ ಕದನಗಳು ನಡೆದಿರುವವು. ಎರಡು ಪಕ್ಷದವರೂ ತಮಗೆ ಜಯವಾಯಿತೆಂದು ಹೇಳಿಕೊಂಡಿದ್ದಾರೆ. ಈ ಮಾತು ನಿಜವಾಗಿದ್ದರೂ ಇರಬಹುದು. ಜರ್ಮನಿಯವರಾದರೋ ಮುಂದರಿಸಿ ನುಗ್ಗಿ ಹೋಗಲು ಆಗಲಿಲ್ಲವೆಂದು ಹೇಳಿ ಒಪ್ಪಿಕೊಂಡಿದ್ದಾರೆ. ಎರಡು ಕಡೆಯವರೂ ಸೈನಿಕರನ್ನು ಕೈಸೆರೆ ಹಿಡಿದಿರುವಂತೆ ತಿಳಿಸುತ್ತಾರೆ. ಇವು 1,600 ಕ್ಕಿಂತ ಹೆಚ್ಚಾಗಿರಲಾರದು. ಅಲ್ಲಿ ಹವಾಸ್ಥಿತಿಯು ಚೆನ್ನಾಗಿಲ್ಲ; ಬಿಸಿಲ ಬೇಗೆಯಿಂದ ಸೆಕೆ ಹೆಚ್ಚಾಗಿದೆ. ಬಿಸಿಲಿನ ಏಟು ಬಡಿದು ಅನೇಕ ಸೈನಿಕರು ಸೊಕ್ಕಿಬಿದ್ದರು. ಎರಡು ಕಡೆಗಳಲ್ಲೂ ಅಪಾರ ಸೈನ್ಯ ನಷ್ಟವಾಗಿರಬೇಕೆಂಬುವುದಕ್ಕೆ ಅನುಮಾನವಿಲ್ಲ. ಅದರಲ್ಲೂ ಜರ್ಮನಿಯವರ ಕಡೆ ಅಪಾರ ನಷ್ಟ ಸಂಭವಿಸಿರುತ್ತದೆ.

ಈಚೆಗೆ ಬಂದಿರುವ ತಂತೀ ವರ್ತಮಾನಗಳಿಂದ ಜರ್ಮನಿಯವರು ಆ ನಗರಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಮುಂದರಿಸಿಕೊಂಡು ನುಗ್ಗಿ ಹೋಗುತ್ತಿದ್ದಾರೆಂದು ಗೊತ್ತಾಗುವುದು. ಇದರಿಂದ ರಷ್ಯಾದವರು ಹಿಮ್ಮೆಟ್ಟಿ ಹೋಗದೆ ಮಾರ್ಗವೇ ಕಾಣುವುದಿಲ್ಲ. ಅವರು ವಾರ್ಸಾವನ್ನು ಬಿಟ್ಟು ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆದುಕೊಂಡು ಹೋಗಿ ನೇರವಾಗಿ ಕೂಡಿಸಿ ನಿಲ್ಲಿಸಲು ಸಾಧ್ಯವಾಯಿತು. ಅವರು ವಾರ್ಸಾವನ್ನು ಬಿಟ್ಟುಹೋದರೆಂದು ತಂತೀ ವರ್ತಮಾನವು ಹೇಳುವುದಿಲ್ಲ. ಕೆಲವು ದಿನಗಳಲ್ಲೇ ಅವರು ಅದನ್ನು ತ್ಯಜಿಸಿದರೆಂಬ ಸುದ್ದಿಯನ್ನು ಓದುತ್ತೇವೆಂದು ಊಹಿಸಬಹುದಾಗಿದೆ. ಆ ನಗರವನ್ನು ಕೋಟೆ ಕೊತ್ತಳಗಳಿಂದ ಭದ್ರಪಡಿಸಿಕೊಂಡಿಲ್ಲವಾದಕಾರಣ ರಷ್ಯಾದವರು ಅದನ್ನು ಶತ್ರುವಿಗೆ ಬಿಟ್ಟುಕೊಡಬಹುದು. ಇದು ನಮ್ಮ ಪಕ್ಷದವರಿಗೆ ದೊಡ್ಡ ನಷ್ಟವೇ ಸರಿ. ಆದಾಗ್ಯೂ ಅಲ್ಲಿರುವ ರಷ್ಯಾ ಸೈನಿಕರನ್ನು ತಡೆದು ನಿಲ್ಲಿಸುವುದಕ್ಕೋಸ್ಕರ ಜರ್ಮನಿಯವರು ಅಲ್ಲಿ ಬಹಳ ಸೈನ್ಯವನ್ನು ಇಡಬೇಕಾಗಿ ಬಂದೀತು.

ಜರ್ಮನಿಯವರು ಕಳುಹಿಸುವ ವಿಷವಾಯುಗಳಿಂದ ಕಷ್ಟ ನಷ್ಟಗಳೇನೂ ಆಗದಂತೆ ರಷ್ಯಾದವರು ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿದಿದ್ದಾರೆ. ಅವರು ತಮ್ಮ ಮುಂಭಾಗದಲ್ಲಿ ಒಂದು ಚರಂಡಿಯನ್ನು ತೋಡಿಟ್ಟುಕೊಂಡಿದ್ದು, ಜರ್ಮನಿ ಸೈನ್ಯದ ಕಡೆಯಿಂದ ವಿಷವಾಯುವು ನುಗ್ಗಿ ಬರುತ್ತಿರುವುದನ್ನು ನೋಡಿದ ಒಡನೆಯೇ ಆ ಚರಂಡಿಗೆ ಕೆರೊಸೀನ್ ಎಂಬ ದೀಪದ ಎಣ್ಣೆಯನ್ನು ಸುರಿದು ಉದ್ದಕ್ಕೂ ಬೆಂಕಿಹಾಕುತ್ತಾರೆ. ಈ ಸೀಮೆಯೆಣ್ಣೆ ಹತ್ತಿಕೊಂಡು ಗಾಳಿ ಬೀಸುವುದರ ಮಾರ್ಗವನ್ನು ತಲ್ಲಟ ಮಾಡುತ್ತದೆ. ಬೀಸುತ್ತಿದ್ದ ಗಾಳಿ ಇನ್ನೊಂದು ಮುಖಕ್ಕೆ ತಿರುಗುವುದರಿಂದ ಅದು ಆ ವಿಷವಾಯುವನ್ನು ಇನ್ನೊಂದು ಕಡೆಗೆ ಹೊಡೆದುಕೊಂಡುಹೋಗುವಂತೆ ಮಾಡುತ್ತದೆ. ಇದನ್ನು ನೋಡಿ ಜರ್ಮನಿಯವರು ವಿಷವಾಯುವನ್ನು ಬಿಡುವುದೇ ನಿಲ್ಲಿಸಿದರು.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿಯವರು ತಮ್ಮ ಮುಂದಿರುವ ದೇಶವು ಬಹಳ ಕಠಿಣವಾಗಿದ್ದಾಗ್ಯೂ ಕಷ್ಟವನ್ನು ಸೈರಿಸಿಕೊಂಡು ಮುಂದೆ ನುಗ್ಗಿ ಹೋಗುತ್ತಿದ್ದಾರೆ. ಅವರು ಒಂದು ಕಡೆ 600 ಫಿರಂಗಿಗಳನ್ನು ಜಮಾಯಿಸಿಕೊಂಡು ಕೆಲವು ಗಂಟೆಗಳ ಹೊತ್ತು ಶತ್ರುವಿನ ಮೇಲೆ ಗುಂಡುಗಳ ಮಳೆಯನ್ನು ಸುರಿಸಿದರು. ಬಳಿಕ ಕಾಲ್ಬಲದವರು ನುಗ್ಗಿ ಹೋಗಿ ಆಸ್ಟ್ರಿಯಾ ಸೈನಿಕರಿದ್ದ ಕಂದಕಗಳಿಗೆ ಮುತ್ತಿಗೆ ಹಾಕಿದರು. ಈ ರೀತಿ ಇಟಲಿಯವರು ಬಹಳ ಮಟ್ಟಿಗೆ ನುಗ್ಗಿ ಹೋಗಿರುತ್ತಾರಲ್ಲದೆ 3,200 ಆಸ್ಟ್ರಿಯಾ ಸೈನಿಕರನ್ನು (ಇವರಲ್ಲಿ 102 ಮಂದಿ ಹುದ್ದೇದಾರರು) ಕೈಸೆರೆ ಹಿಡಿದುಕೊಂಡರು. ಮತ್ತು ಫಿರಂಗಿಗಳು, ಮೊರ್ಟಾರುಗಳೆಂಬ ಭಾರಿ ಫಿರಂಗಿಗಳು, ಬಂದೂಕುಗಳು, ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳು ಅಪಾರವಾಗಿ ಇಟಲಿಯವರಿಗೆ ಸಿಕ್ಕಿರುತ್ತವೆ. ಅವರು ಹೀಗೆ ನುಗ್ಗಿ ಹೋದ ಮೇಲೆ ಅಲ್ಲೊಂದು ಕದನವಾಯಿತು. ಜುಲೈ ತಾ. 27 ರಲ್ಲೂ ಮಾರನೇ ದಿನವೂ ಇಟಲಿಯವರು ಮತ್ತೆ 1,485 ಸೈನಿಕರನ್ನು ಕೈಸೆರೆ ಹಿಡಿದುಕೊಂಡು ಬಂದರು. ತಾ. 30 ರಲ್ಲಿ ತಿರಿಗಿ 124 ಸೈನಿಕರನ್ನು 638 ಬಂದೂಕುಗಳ ಸಮೇತ ಕೈಸೆರೆ ಹಿಡಿದಿರುತ್ತಾರೆ.—ಇಸೊನ್ಜೊ ನದಿಯ ದಡದಲ್ಲಿರುವ ಟ್ರಿಯೆಸ್ಟ್ ನಗರದ ಮಾರ್ಗದಲ್ಲೇ ವಿಶೇಷವಾದ ಕದನಗಳು ನಡೆಯುತ್ತಿವೆ. ಉತ್ತರ ಪಾರ್ಶ್ವದಲ್ಲಿ ಆಸ್ಟ್ರಿಯಾದವರ ಕೋಟೆಗಳಿಗೆ ಫಿರಂಗಿ ಗುಂಡುಗಳನ್ನು ಹಾಕುತ್ತಿದ್ದಾರೆ. ಅದೇ ಪ್ರಾಂತ್ಯದಲ್ಲಿ ಇಟಲಿಯವರ ಕಡೆ ಪ್ರಸಿದ್ಧನಾಗಿದ್ದ ಒಬ್ಬ ದಳಪತಿಯು ಕೊಲೆಯಾದನು.

ಇಟಲಿಯವರು ದಿನವೂ ಶತ್ರು ಸೈನ್ಯದಲ್ಲಿ ಅನೇಕರನ್ನು ಕೈಸೆರೆ ಹಿಡಿಯುತ್ತಲೂ, ಬಹಳ ಯುದ್ಧ ಸಾಮಗ್ರಿಗಳನ್ನು ಕಿತ್ತು ಸ್ವಾಧೀನಪಡಿಸಿಕೊಳ್ಳುತ್ತಲೂ ಬಂದಿದ್ದಾರೆ. ಆಸ್ಟ್ರಿಯಾದವರು ಟ್ರಿಯೆಸ್ಟ್ ಪಟ್ಟಣವನ್ನು ತ್ಯಜಿಸಿ ಬಿಟ್ಟುಹೋಗಲು ಸನ್ನಾಹ ಮಾಡುತ್ತಿದ್ದಾರೆಂದೂ, ಆಗಲೇ ಅಲ್ಲಿಂದ ತಮ್ಮ ಯುದ್ಧ ಸಾಮಗ್ರಿಗಳನ್ನು ಸಾಗಿಸುತ್ತಿದ್ದಾರೆಂದೂ ಪ್ರಕಟವಾಗಿದೆ.

ಫ್ರೆಂಚರೂ ಇಟಲಿಯವರೂ ಸೇರಿ ಆಡ್ರಿಯಾಟಿಕ್ ಕಡಲಿನಲ್ಲಿ ಆಸ್ಟ್ರಿಯಾದವರಿಗೆ ಸೇರಿದ ಕೆಲವು ದ್ವೀಪಗಳನ್ನು ಸ್ವಾಧೀನಪಡಿಸಿಕೊಂಡರು. ಆಸ್ಟ್ರಿಯಾದವರು ಅವನ್ನು ಅವರಿಂದ ಬಿಡಿಸಿಕೊಳ್ಳಬೇಕೆಂದು ಸಾಹಸಪಟ್ಟು ಸೋತುಹೋದರು. ಆ ಪೈಕಿ ಒಂದು ದ್ವೀಪದಿಂದ ಆಸ್ಟ್ರಿಯಾದವರು ತಮ್ಮ ಸಬ್‌ಮೆರೀನುಗಳಿಗೆ ಬೇಕಾದ ಸಾಮಾನುಗಳನ್ನು ತರುತ್ತಿದ್ದರು.

ಟರ್ಕಿ.

ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಟರ್ಕಿಯವರು ನಮ್ಮ ಪಕ್ಷದವರ ಮೇಲೆ ನುಗ್ಗಿ ಯುದ್ಧಮಾಡಿದರು. ಇದರಲ್ಲಿ ಅವರು ಸೋತು ಕಂದಕಗಳ ಮುಂಭಾಗದಲ್ಲಿ 49 ಹೆಣಗಳನ್ನು ಬಿಟ್ಟುಹೋದರು; ಇತರ ಕಡೆಗಳಲ್ಲೂ ಹೆಣಗಳು ಬಿದ್ದಿದ್ದವು. ಅವರು ನುಗ್ಗಿ ಯುದ್ಧಮಾಡಿದ್ದೆಲ್ಲಾ 20 ನಿಮಿಷಗಳಲ್ಲಿ ಮುಗಿದುಹೋಯಿತು. ಫ್ರೆಂಚರು ಮುಂದಕ್ಕೆ ನುಗ್ಗಿ ಹೋದರು. ವಿಮಾನಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು ಹಾಕಿ ಟರ್ಕಿಯವರ ಸರಕುಗಳಿದ್ದ ಉಗ್ರಾಣಗಳನ್ನು ಸುಟ್ಟರು. ಪೆಟ್ರೋಲ್ ಎಂಬ ದ್ರಾವಕವು ಸುರಿದುಹೋಯಿತು.

ರಷ್ಯಾದವರು ಕಪ್ಪು ಕಡಲಿನಲ್ಲಿ ಒಂದು ದೊಡ್ಡ ಯುದ್ಧದ ಹಡಗನ್ನು ತಂದಿಟ್ಟಿದ್ದಾರೆ. ರಷ್ಯಾದವರ ಕೆಲವು ಸಣ್ಣ ಯುದ್ಧದ ಹಡಗುಗಳು ಕಪ್ಪು ಕಡಲಿನ ತೀರದಲ್ಲಿರುವ ಟರ್ಕಿಯ ಎರಡು ತೀರ ಪಟ್ಟಣಗಳಿಗೆ ಗುಂಡುಗಳನ್ನು ಹೊಡೆದವು. ಅಲ್ಲಿದ್ದ 150 ವ್ಯಾಪಾರದ ಹಡಗುಗಳು ಮುಳುಗಿಸಲ್ಪಟ್ಟವೆ. ಇದಲ್ಲದೆ ಬಾಸ್ಫರಸ್ ತೀರಪಟ್ಟಣದ ಹತ್ತಿರ ರಷ್ಯಾ ಜಹಜುಗಳು ಟರ್ಕಿಯವರ ಒಂದು ಜಹಜನ್ನೂ, 47 ವ್ಯಾಪಾರದ ಹಡಗುಗಳನ್ನೂ ಮುಳುಗಿಸಿರುತ್ತವೆ.

ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಸೌದೆಗೂ ಕಲ್ಲಿದ್ದಲಿಗೂ ಕ್ಷಾಮ ಬಂದಿದೆ ಎಂದೂ, ಸೈನ್ಯಕ್ಕೆ ಮದ್ದು ಗುಂಡು ಒದಗದೆ ಹೋಗಿದೆ ಎಂದೂ ಹೇಳಲಾಗಿದೆ. ರೊಮೇನಿಯಾದವರು ತಮ್ಮ ರಾಜ್ಯದ ಮೂಲಕ ಯಾವ ಪದಾರ್ಥವನ್ನೂ ಟರ್ಕಿಗೆ ಹೋಗಗೊಡುವುದಿಲ್ಲ. ಮತ್ತು ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಟರ್ಕಿ ಮತ್ತು ಜರ್ಮನಿ ಸೈನಿಕರು ಪರಸ್ಪರ ಜಗಳ ಕದನಗಳನ್ನು ಮಾಡುತ್ತಿದ್ದಾರೆಂದು ಪ್ರಕಟವಾಗಿದೆ. ಈ ರೀತಿ ಕದನವಾದದ್ದರಲ್ಲಿ 10 ಮಂದಿ ಜರ್ಮನಿಯವರು ಕೊಲೆಯಾದರೆಂದೂ, 14 ಮಂದಿಗೆ ಗಾಯಗಳಾದವೆಂದೂ ತಿಳಿಯುವುದು.

ಪರ್ಷಿಯಾ ಖಾರಿಯಲ್ಲಿ ಮೊನ್ನೆ ನಡೆದ ಯುದ್ಧದಲ್ಲಿ ಟರ್ಕಿಯವರ ಕಡೆ 2,500 ಮಂದಿ ನಷ್ಟಪಟ್ಟರು. ಈ ಪೈಕಿ 41 ಜನ ಹುದ್ದೇದಾರರೂ, 690 ಜನ ಸೈನಿಕರೂ ಬ್ರಿಟಿಷರಿಗೆ ಕೈಸೆರೆ ಸಿಕ್ಕಿದ್ದಾರೆ. ಇದಲ್ಲದೆ ಬ್ರಿಟಿಷರಿಗೆ 12 ಫಿರಂಗಿಗಳೂ, ಒಂದು ಭಾರಿ ಫಿರಂಗಿಯೂ, 7 ಮೆಷೀನ್ ಫಿರಂಗಿಗಳೂ, ಬಹಳ ಯುದ್ಧಸಾಮಗ್ರಿಗಳೂ ದೊರಕಿದವು.

ಏಡನ್ ಸುತ್ತುಮುತ್ತು ಶಾಂತವಾಗಿದೆ. ಅಲ್ಲಿ ಈಗ ಬಿಸಿಲ ಬೇಗೆ ಹೆಚ್ಚು. ಇದರಿಂದ ಯುದ್ಧಕಾರ್ಯಗಳು ನಡೆಯುವುದು ಬಹಳ ಕಷ್ಟ.

ಕಳೆದ ಏಪ್ರಿಲ್ ತಾ. 25 ರಲ್ಲಿ ನಮ್ಮ ಪಕ್ಷದ ಸೈನ್ಯಗಳು ಹೋಗಿ ಗಲ್ಲಿಪೋಲಿ ಅರ್ಧ ದ್ವೀಪದ ಮೇಲೆ ಇಳಿದ ವೃತ್ತಾಂತವನ್ನು ಸರ್ ಇಯನ್ ಹಮಿಲ್ಟನ್ ರವರು ಬರೆದು ಇರುತ್ತಾರೆ. ಅದೀಗ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಸರ್ ಇಯನ್ ಹಮಿಲ್ಟನ್ ರವರು ಮಾರ್ಚಿ ತಾ. 13 ರಲ್ಲಿ ಲಂಡನ್ ಪಟ್ಟಣದಿಂದ ಹೊರಟು ಮಾರ್ಚಿ ತಾ. 17 ರಲ್ಲಿ ಡಾರ್ಡನೆಲ್ಸ್ ಜಲಮಾರ್ಗದ ತೀರಪಟ್ಟಣವನ್ನು ತಲಪಿದರು. ಅಲ್ಲಿ ತಮ್ಮ ಸೈನ್ಯಗಳು ಇಳಿಯುವುದಕ್ಕೆ ಸರಿಯಾದ ತೀರಸ್ಥಳವ್ಯಾವುದೆಂದು ಹುಡುಕಿದರು. ಅದರ ಮೇಲೆ ಅವರು ಸೈನ್ಯವನ್ನೆಲ್ಲಾ ಕ್ರಮಪಡಿಸಿಕೊಳ್ಳುವುದಕ್ಕಾಗಿ ಅಲ್ಲಿಂದ ಈಜಿಪ್ಟಿಗೆ ಸಾಗಿಸಿಕೊಂಡುಹೋದರು. ಇದೆಲ್ಲಾ ಆಗಿ ಕಡೆಗೆ ಸೈನ್ಯವು ಏಪ್ರಿಲ್ ತಾ. 23 ರಲ್ಲಿ ಆ ಜಲಮಾರ್ಗದ ಬಳಿಗೆ ಬಂತು. ಮರುದಿನವನ್ನು ಎಲ್ಲಾ ಸಿದ್ಧಪಡಿಸಿಕೊಳ್ಳುವುದರಲ್ಲಿ ಕಳೆದರು. ತಾ. 25 ರಂದು ಸೈನ್ಯವನ್ನು ಜಹಜುಗಳಿಂದ ತೀರಕ್ಕೆ ಇಳಿಸಲಾರಂಭಿಸಿದರು. ಮಾರ್ಗಗಳಿಗೆಲ್ಲಾ ಶತ್ರುವು ಫಿರಂಗಿಗಳನ್ನು ಏರಿಸಿಟ್ಟಿದ್ದದ್ದರಿಂದ ಬ್ರಿಟಿಷ್ ಸೈನ್ಯವನ್ನು ತೀರದಲ್ಲಿ ಇಳಿಸುವುದು ಬಹಳ ಪ್ರಯಾಸವಾಯಿತು. ಮೊದಲು ಸೈನ್ಯವನ್ನು ಇಳಿಸುವುದು ಅಸಾಧ್ಯವೆಂದು ಕಂಡಿತು. ಆದರೂ ಸೈನಿಕರ ಪರಾಕ್ರಮವೂ ಜತಮನಸ್ಸೂ ಕಂದಿ ಕುಂದಲಿಲ್ಲ. ನೂರಾರು ಮಂದಿ ಕೊಲೆಯಾದರೂ, ಗಾಯಪಟ್ಟು ಬಿದ್ದುಕೊಂಡರೂ ಅವರು ಹಿಮ್ಮೆಟ್ಟದೆ ಅಧೈರ್ಯಗೊಳ್ಳದೆ ಬೇರೆ ಬೇರೆ ಸ್ಥಳಗಳಲ್ಲಿ ತೀರವನ್ನು ಕ್ರಮವಾಗಿ ಹತ್ತಿಬಿಟ್ಟರು. ಅಲ್ಲಿ ಗುಡ್ಡಗಳನ್ನು ಹತ್ತಿ ಇಳಿದು ಅಲ್ಲಿಂದ ಟರ್ಕಿಯವರನ್ನು ಹಿಂದಕ್ಕೆ ಓಡಿಸಿದರು. ಟರ್ಕಿಯವರು ಬಹಳ ಪರಾಕ್ರಮದಿಂದ ಕದನಮಾಡಿದರು. ಆದರೆ ಅವರು ನಮ್ಮ ಪಕ್ಷದವರ ಎದುರಿಗೆ ನಿಲ್ಲಲಾರದೆ ಕ್ರಮೇಣ ಹಿಂದು ಹಿಂದಕ್ಕೆ ದೊಬ್ಬಲ್ಪಟ್ಟದ್ದರಿಂದ, ಆ ಅರ್ಧ ದ್ವೀಪದ ದಕ್ಷಿಣ ಪ್ರದೇಶವು ನಮ್ಮ ಪಕ್ಷದವರ ವಶವಾಯಿತು. ಅಲ್ಲಿ ಸಂಭವಿಸಿದ ನಷ್ಟವನ್ನು ನೋಡುವಲ್ಲಿ ಆ ಕದನವೂ ಹೋರಾಟವೂ ಮಹಾ ಘೋರವಾಗಿತ್ತೆಂದು ತಿಳಿಯುತ್ತದೆ. 177 ಹುದ್ದೇದಾರರೂ, 1,990 ಸೈನಿಕರೂ ಕೊಲೆಯಾದರು; 412 ಹುದ್ದೇದಾರರಿಗೂ, 7,807 ಸೈನಿಕರಿಗೂ ಗಾಯಗಳಾದವು; 13 ಹುದ್ದೇದಾರರೂ, 3,580 ಸೈನಿಕರೂ ಸಿಕ್ಕಿ ಇಲ್ಲ. ಅಷ್ಟು ಕಷ್ಟವಾದ ಸಮಯ ಸಂದರ್ಭದಲ್ಲಿ ಈ ರೀತಿ ಪರಾಕ್ರಮವನ್ನು ತೋರಿಸಿ ಜಯಪ್ರದವನ್ನು ಹೊಂದಿದ್ದನ್ನು ಹಿಂದೆ ಯಾವ ಕಾಲದಲ್ಲೂ ಕಂಡು ಕೇಳಿದ್ದಿಲ್ಲ.

ಸೆರ್ಬಿಯಾ.

ಈಗ ಸೆರ್ಬಿಯಾ ರಾಜ್ಯದ ಸೈನಿಕರು ಮತ್ತೆ ಯುದ್ಧಕ್ಕೆ ಹೊರಡಲು ಸಿದ್ಧರಾಗಿದ್ದಾರೆಂದು ತಿಳಿಯುತ್ತದೆ. ಅವರಲ್ಲಿ 2,50,000 ಸೈನ್ಯವಿರುವುದು. ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣದ ಕೋಟೆಕೊತ್ತಲಗಳ ಸಂರಕ್ಷಣೆಗೆ ಸೆರ್ಬಿಯದವರ 36 ಫಿರಂಗಿಗಳನ್ನೂ, ಬ್ರಿಟಿಷರ 12 ಫಿರಂಗಿಗಳನ್ನೂ, ಫ್ರೆಂಚರ 12 ಫಿರಂಗಿಗಳನ್ನೂ, ರಷ್ಯಾದವರ 12 ಫಿರಂಗಿಗಳನ್ನೂ ಎತ್ತಿಕಟ್ಟಿ ಬಲಪಡಿಸಿಕೊಂಡಿದ್ದಾರೆ.

ಆಫ್ರಿಕಾದಲ್ಲಿ.

ಪಶ್ಚಿಮ ಆಫ್ರಿಕದಲ್ಲಿರುವ ಕ್ಯಾಮರೂನ್ಸ್ ಸೀಮೆಯಲ್ಲಿ ಫ್ರೆಂಚರು ಹೋಗಿ ಒಂದು ಪ್ರಾಮುಖ್ಯವಾದ ನಗರವನ್ನು ಸ್ವಾಧೀನಪಡಿಸಿಕೊಂಡರು. ಅಲ್ಲಿ ಜರ್ಮನಿಯವರ ಕೈಕೆಳಗಿದ್ದ ದೇಶೀಯ ಸೈನ್ಯದವರು ಜರ್ಮನಿಯವರ ಮೇಲೆ ತಿರುಗಿಬಿದ್ದಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಒಟ್ಟು 849 ಸೈನಿಕರು ನಷ್ಟವಾದರು. ಇವರಲ್ಲಿ ಅರ್ಧ ಬ್ರಿಟಿಷ್ ಸೈನಿಕರೆಂದೂ ಇನ್ನರ್ಧ ಬೋಅರರೆಂದೂ ತಿಳಿಯುವುದು. ಈ ಎರಡು ಗುಂಪುಗಳಿಂದ 127 ಮಂದಿ ಹುದ್ದೇದಾರರು ಕೊಲೆಯಾದರು. ಬೋಅರರಲ್ಲಿ 296 ಮಂದಿಯೂ, ಬ್ರಿಟಿಷರಲ್ಲಿ 299 ಮಂದಿಯೂ ಗಾಯಪಟ್ಟಿದ್ದಾರೆ. ಒಟ್ಟು 50,000 ಸೈನ್ಯ ಜರ್ಮನಿಯವರ ಮೇಲೆ ಹೊರಟಿತ್ತು; ಈ ಪೈಕಿ ಬ್ರಿಟಿಷ್ ಸೈನ್ಯ 27,600.

ಜರ್ಮನಿಯವರು ಬರೆದಿಟ್ಟುಕೊಂಡಿದ್ದ ಭೂಪಟ (ಮ್ಯಾಪ್) ಗಳು ಸಿಕ್ಕಿರುವುದಾಗಿಯೂ, ಅವುಗಳಲ್ಲಿ ಭೂಮಧ್ಯ ರೇಖೆ (ಈಕ್ವೇಟರ್) ಗೆ ದಕ್ಷಿಣದಲ್ಲಿರುವ ಪ್ರಾಂತ್ಯಗಳನ್ನೆಲ್ಲಾ "ದೊಡ್ಡ ಜರ್ಮನಿ" ಎಂದೂ, ಒಂದು ಸಣ್ಣ ಪ್ರದೇಶವನ್ನು ಮಾತ್ರ "ಬೋಅರ್ ಪ್ರಾಂತ್ಯ" ಎಂದೂ ಕಾಣಿಸಿರುವುದಾಗಿಯೂ ಜನರಲ್ ಬೋಥಾರವರು ತಿಳಿಸಿದ್ದಾರೆ. ದೇಶೀಯ ಪ್ರಜೆಗಳ ಸಂರಕ್ಷಣಾರ್ಥವಾಗಿ ಜರ್ಮನಿಯವರನ್ನು ದಕ್ಷಿಣ ಆಫ್ರಿಕಕ್ಕೆ ಮತ್ತೆ ಕಾಲಿಡದಂತೆ ಮಾಡಬೇಕಾದದ್ದು ಅವಶ್ಯ. ಯಾಕೆಂದರೆ ದೇಶೀಯ ಪ್ರಜೆಗಳಲ್ಲಿ 21,000 ಜನರನ್ನು ಕೊಂದುಹಾಕಿರುತ್ತೇವೆಂದು ಜರ್ಮನಿಯವರೇ ಹೇಳಿದ್ದಾರೆ. ಯೂರೋಪ್ ಖಂಡದಲ್ಲಿ ಜರ್ಮನಿಯವರ ಪ್ರತಾಪವನ್ನು ಸಂಪೂರ್ಣವಾಗಿ ಅಡಗಿಸಬೇಕೆಂಬ ವಿಷಯದಲ್ಲಿ ದಕ್ಷಿಣ ಆಫ್ರಿಕದವರು ಬಹಳ ಉತ್ಸಾಹಶಾಲಿಗಳಾಗಿದ್ದಾರೆ.—ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರ ಮೇಲೆ ದಂಗೆಯನ್ನೆಬ್ಬಿಸಿದ ಪಕ್ಷದಲ್ಲಿ ಅಲ್ಲಿನವರಿಗೆ ಸ್ವಾರಾಜ್ಯವನ್ನು ವಹಿಸುತ್ತೇವೆಂದು ಜರ್ಮನಿ ಚಕ್ರವರ್ತಿಯು ವಾಗ್ದಾನಮಾಡಿದ್ದಂತೆ ಹೇಳಲಾಗಿದೆ.

ಇತರ ವಿಷಯಗಳು.

ಜರ್ಮನಿಯವರು ಅಮೇರಿಕಕ್ಕೆ ಸೇರಿದ ಇನ್ನೊಂದು ಜಹಜನ್ನು ಮುಳುಗಿಸಿದರು. ಇದರಿಂದ ಅಮೇರಿಕದವರ ಕೋಪವು ಇನ್ನಷ್ಟು ಹೆಚ್ಚಾಗಿದೆ. ಅಮೇರಿಕದ ಮಾಜಿ ಪ್ರೆಸಿಡೆಂಟರಾದ ಮಿ॥ ರೂಸ್ವೆಲ್ಟ್‌ರವರು ಅದು ಅಮೇರಿಕದವರನ್ನು ರೇಗಿಸುವಂಥಾ ಕೃತ್ಯವೆಂದು ಹೇಳಿದ್ದಾರೆ. ಅಮೇರಿಕದವರು ತಮ್ಮ ಭೂಸೈನ್ಯವನ್ನೂ, ಸಮುದ್ರ ಸೈನ್ಯವನ್ನೂ ಹೆಚ್ಚು ಮಾಡುತ್ತಿರುವರು.

ಇದುವರೆಗೆ ಬ್ರಿಟಿಷರ ಕಡೆ ಆಗಿರುವ ನಷ್ಟವನ್ನು ಪ್ರಕಟಿಸಿದಾರೆ. ಒಟ್ಟಾಗಿ ಸಮುದ್ರ ಸೈನ್ಯದಲ್ಲಿ 9,106 ಸೈನಿಕರೂ, ಭೂ ಸೈನ್ಯದಲ್ಲಿ 3,21,889 ಮಂದಿಯೂ ನಷ್ಟವಾದರು. ಕೊಲೆಯಾದವರು—ಸಮುದ್ರ ಸೈನಿಕರಲ್ಲಿ ಹುದ್ದೇದಾರರು 499, ಸೈನಿಕರು 7,430; ಭೂ ಸೈನ್ಯದಲ್ಲಿ ಹುದ್ದೇದಾರರು 4,000, ಸೈನಿಕರು 57,384. ಈ ಒಟ್ಟು ನಷ್ಟವಾದವರಲ್ಲಿ 11,254 ಮಂದಿ ಹುದ್ದೇದಾರರು; 2,55,619 ಮಂದಿ ಸೈನಿಕರು, ಇವರೆಲ್ಲಾ ಬೆಲ್ಜಿಯಮ್ ಮತ್ತು ಫ್ರಾನ್ಸಿನಲ್ಲಿ ನಷ್ಟಪಟ್ಟವರು. ಡಾರ್ಡನೆಲ್ಸ್ ಜಲಮಾರ್ಗದಲ್ಲಿ ನಷ್ಟವಾದವರು—ಹುದ್ದೇದಾರರು 2,144 ಮಂದಿ, ಸೈನಿಕರು 47,094 ಮಂದಿ. ಗಾಯಪಟ್ಟು ಬಂದವರಲ್ಲಿ 100 ಕ್ಕೆ 60 ರಂತೆ ವಾಸಿಯಾಗಿ ಪುನಹ ಯುದ್ಧಭೂಮಿಗೆ ಹೋಗಿರುತ್ತಾರೆ.

ಹೌಸ್ ಆಫ್ ಕಾಮನ್ಸ್ ಎಂಬ ಬ್ರಿಟಿಷ್ ಪಾರ್ಲಿಮೆಂಟು ಬರಖಾಸ್ತಾಯಿತು. ಆ ಸಮಯದಲ್ಲಿ ಮಂತ್ರಿ ಶ್ರೇಷ್ಠರಾದ ಮಿ॥ ಆಸ್ಕಿತ್‌ರವರು ಮೆಂಬರುಗಳನ್ನು ಕುರಿತು ಒಂದು ಭಾಷಣವನ್ನು ಮಾಡಿ ಹೇಳಿದ ಮುಖ್ಯಾಂಶಗಳೇನೆಂದರೆ—ಕಳೆದ ಏಳು ವಾರಗಳಿಂದಲೂ ರಷ್ಯಾದವರು ಬಹಳ ಪರಾಕ್ರಮದಿಂದ ಕದನಮಾಡಿ ಶತ್ರುವನ್ನು ತಡೆದುಕೊಂಡು ಬಂದರು. ಇಟಲಿಯವರು ದಿನ ಕ್ರಮೇಣ ಆಸ್ಟ್ರಿಯಾ ಸೀಮೆಯೊಳಕ್ಕೆ ನುಗ್ಗಿ ಹೋಗುತ್ತಾ ಇದ್ದಾರೆ. ಇವರು ಇಷ್ಟರಲ್ಲೇ ತಮ್ಮ ಇಷ್ಟಾರ್ಥವನ್ನು ಕೈಗೂಡಿಸಿಕೊಳ್ಳುವರು. ಡಾರ್ಡನೆಲ್ಸ್ ಜಲಮಾರ್ಗದಲ್ಲಿ ನಮ್ಮ ಪಕ್ಷದವರಿಗೆ ಅನುಕೂಲವಾಗುತ್ತಿದೆ ಎನ್ನುವುದಕ್ಕೆ ಅನುಮಾನವಿಲ್ಲ. ಕೆಲವು ಹಡಗುಗಳು ಮುಳುಗಿಸಲ್ಪಟ್ಟದ್ದಾಗ್ಯೂ ನಮ್ಮ ಜಹಜಿನ ಸೈನ್ಯವು ಮೊದಲಿಗಿಂತಲೂ ಬಹಳ ಬಲವಾಗಿರುವುದು. ಜರ್ಮನಿಯವರ ಸಬ್‌ಮೆರೀನುಗಳು ನಮ್ಮ ವ್ಯಾಪಾರದ ಹಡಗುಗಳಿಗೆ ವಿಶೇಷ ಅಡ್ಡಿಯಾಗಿಲ್ಲ. ಮೊದಲಿಗಿಂತಲೂ ಜನರು ಹೆಚ್ಚು ಹೆಚ್ಚಾಗಿ ಬಂದು ನಮ್ಮ ಸೈನ್ಯಕ್ಕೆ ಸೇರುತ್ತಿದ್ದಾರೆ. ಯುದ್ಧ ಪ್ರಾರಂಭವಾಗಿ ಒಂದು ವರುಷವಾಗುತ್ತಾ ಬಂತು. ನಮ್ಮ ಜಹಜುಗಳು ಸಮುದ್ರಗಳ ಮೇಲೆ ಶತ್ರುವಿನ ಒಂದು ಜಹಜಾದರೂ ಇಲ್ಲದಂತೆ ನಾಶಮಾಡಿ ಉಸ್ತುವಾರಿ ನೋಡಿಕೊಳ್ಳುತ್ತಿರುವವು; ಮತ್ತು ಶತ್ರುವಿನ ಸೈನ್ಯವನ್ನು ಬ್ರಿಟನ್‌ಗೆ ಕಾಲಿಡದಂತೆ ಸಂರಕ್ಷಣೆಮಾಡುತ್ತಾ ಬಂದಿರುವವು. ಬ್ರಿಟಿಷರಿಗೂ ಫ್ರೆಂಚರಿಗೂ ಇರುವ ಪರಸ್ಪರ ಪ್ರೀತಿವಿಶ್ವಾಸಗಳೂ ಸ್ನೇಹವೂ ಮೊದಲಿಗಿಂತ ತುಂಬಾ ವೃದ್ಧಿ ಹೊಂದಿರುತ್ತವೆ. ಯುದ್ಧದ ಖರ್ಚು ಅಪಾರವಾಗುತ್ತಿರುವುದು. ಈ ಖರ್ಚಿಗೆ ಇನ್ನೂ ಬಹಳ ಹಣವನ್ನು ಒದಗಿಸಬೇಕಾಗುವುದು ಎಂಬುದೇ.

ಮಿ॥ ಲಾಯಡ್ ಜಾರ್ಜ್‌ರವರು ಒಂದು ಕಡೆ ಉಪನ್ಯಾಸಮಾಡುತ್ತಾ ಹೇಳಿದ್ದೇನೆಂದರೆ—ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ತಯಾರುಮಾಡುವ ಕೆಲಸಗಾರರು ಮೊದಲಿಗಿಂತ ಈಗ 40,000 ಹೆಚ್ಚಿರುತ್ತಾರೆ. 1,00,000 ಜನರು ಕೆಲಸಕ್ಕೆ ಬರುತ್ತೇವೆಂದು ಹೇಳಿ ಒಪ್ಪಿಕೊಂಡಿರುವರು. ಗುಂಡುಗಳನ್ನು ಈಗ 16 ದೇಶಿಯ ಕಾರ್ಖಾನೆಗಳವರೇ ವಹಿಸಿಕೊಂಡು ತಯಾರುಮಾಡಿಸುತ್ತಿದ್ದಾರೆ. ಅವುಗಳನ್ನೆಲ್ಲಾ ಜಮಾಯಿಸಿ ಇಡುವುದಕ್ಕೆ ಭಾರಿಯಾದ ಹತ್ತು ಕಟ್ಟಡಗಳನ್ನು ಸಿದ್ಧಪಡಿಸುತ್ತೇವೆ. ಕಾರ್ಖಾನೆಯ ಕೆಲಸಗಳಲ್ಲಿ ಚತುರರಾಗಿದ್ದ ಅನೇಕ ಬ್ರಿಟಿಷ್ ಪ್ರಜೆಗಳು ಸೈನ್ಯಕ್ಕೆ ಸೇರಿಕೊಂಡು ಯುದ್ಧಭೂಮಿಗೆ ಹೋಗಿರುತ್ತಾರೆ. ಅಂಥಾ ಸಾವಿರಾರು ಮಂದಿಯನ್ನು ಸೈನ್ಯದಿಂದ ಬಿಡಿಸಿ ಕರೆದುಕೊಂಡು ಬಂದು ಕಾರ್ಖಾನೆಗಳಲ್ಲಿ ಗುಂಡು ಮುಂತಾದ ಯುದ್ಧಸಾಮಗ್ರಿಗಳನ್ನು ತಯಾರುಮಾಡಿಸುತ್ತಿದೇವೆ. ಇದರಿಂದ ನಮ್ಮ ಪಕ್ಷದ ಸೈನ್ಯಗಳಿಗೆ ಬೇಕಾಗುವ ಯುದ್ಧಸಾಮಗ್ರಿಗಳು ಅಪಾರವಾಗಿ ಒದಗುವವು. ನಮ್ಮ ಜಯಪ್ರದವು ಖಚಿತವಾಗುವುದೆಂದೂ ಧಾರಾಳವಾಗಿ ಹೇಳಬಹುದು ಎಂಬುದೇ.

ಕಳೆದ ವಾರ ಜರ್ಮನಿಯ ಸಬ್‌ಮೆರೀನುಗಳ ಹಾವಳಿಯಿಂದ ಬ್ರಿಟಿಷರ ಮೂರು ಜಹಜುಗಳೂ, 17 ಬೆಸ್ತರ ದೋಣಿಗಳೂ ಮುಳುಗಿಸಲ್ಪಟ್ಟವು.

ಗ್ರೇಟ್ ಬ್ರಿಟನ್‌ನಲ್ಲಿ ಜರ್ಮನಿಯ ಹತ್ತು ಮಂದಿ ಗೂಢಚಾರರನ್ನು ಹಿಡಿದರು. ಅವರು ಅಲ್ಲಿಗೆ ಬಂದು ಮೂರು ವಾರಗಳಾಗಿದ್ದವು. ಆ ಪೈಕಿ ಇಬ್ಬರ ಮೇಲೆ ಅಪರಾಧ ರುಜುವಾತಾದದ್ದರಿಂದ ಅವರನ್ನು ಗಲ್ಲಿಗೆ ಹಾಕಿದರು.

ಗ್ರೇಟ್ ಬ್ರಿಟನ್‌ನಲ್ಲಿರುವ 14,000 ಜರ್ಮನಿ ಮತ್ತು ಆಸ್ಟ್ರಿಯಾ ಜನಗಳು ತಮ್ಮನ್ನು ಬ್ರಿಟಿಷ್ ಸರ್ಕಾರದವರು ಹಿಡಿದು ಬಂಧನದಲ್ಲಿ ಹಾಕಕೂಡದೆಂದೂ, ತಮ್ಮನ್ನು ವಿನಾಯಿತಿ ಮಾಡಬೇಕೆಂದೂ ಕೇಳಿಕೊಂಡರು. 6,192 ಜನರಿಗೆ ವಿನಾಯಿತಿ ಕೊಡಲಾಯಿತು; ಉಳಿದವರ ವಿಚಾರದಲ್ಲಿ ತನಿಖೆಮಾಡುತ್ತಿದ್ದಾರೆ. 6,302 ಜನರನ್ನು ವಾಪಸು ಜರ್ಮನಿಗೆ ರವಾನೆ ಮಾಡಿದರು.

ಆಸ್ಟ್ರಿಯಾದವರು ಹಿಡಿದಿಟ್ಟುಕೊಂಡಿರುವ ಬ್ರಿಟಿಷ್ ಜನರ ವಿಷಯದಲ್ಲಿ ಕ್ರೂರತನವನ್ನು ತೋರಿಸದೆ ಪ್ರೀತಿಯಿಂದ ಕಾಪಾಡುತ್ತಿದ್ದಾರೆ. ಆದಕಾರಣ ಬ್ರಿಟಿಷರು ಕೈಸೆರೆಹಿಡಿದಿರುವ ಆಸ್ಟ್ರಿಯಾ ಜನರನ್ನು ಅದೇ ರೀತಿ ಪ್ರೀತಿಯಿಂದಲೂ ಆದರಣೆಯಿಂದಲೂ ಕಾಪಾಡುತ್ತಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ತಲಪಿರುವ ಕೆಲವು ವಾರ್ತೆಗಳನ್ನು ಪ್ರಕಟಿಸಲು ಸ್ಥಳ ಸಂಕೋಚವಾಯಿತೆಂದು ತಿಳಿಸಲು ವಿಷಾದಿಸುತ್ತೇವೆ.

ಕಳೆದ ವಾರ ಬೆಂಗಳೂರಿನ ಕೋಟೆಯ ಬಳಿ ಮೋಟಾರು ಹರಿದು ಒಬ್ಬ ಹುಡುಗನು ಮೃತಪಟ್ಟನು. ಇನ್ನೊಂದು ಮೋಟರಿನ ದೆಸೆಯಿಂದ ಬೌರಿಂಗ್‌ಪೇಟೆ ಬಳಿ ಕ್ಯಾಪ್ಟನ್ ಪ್ಲಮರವರ ಪತ್ನಿಯ ಕತ್ತಿನ ಮೂಳೆ ಜಖಂ ಆಯಿತು.

ಶ್ರೀಮದ್ಯುವರಾಜರವರು ಕಳೆದ ವಾರ ಪೂನೆಯಲ್ಲಿರುವ ಸೇವಾ ಸದನಕ್ಕೆ ದಯಮಾಡಿ ಅಲ್ಲಿ 150 ಹಿಂದೂ ಸ್ತ್ರೀಯರು ಪರಹಿತಕಾರ್ಯಗಳನ್ನು ಕಲಿಯುತ್ತಿರುವುದನ್ನು ಪರಾಂಬರಿಸಿ ಮಂಗಳವಾರ ಬೆಂಗಳೂರಿಗೆ ಚಿತ್ತೈಸಿದರು.

ಶ್ರೀಮನ್ ಮಹಾರಾಜರವರು ರಾಜಧಾನಿಯ ನಜರಬಾದ್ ಮೊಹಲ್ಲೆಯಲ್ಲಿ ಮ್ಯುನಿಸಿಪಲ್ ಓವರ್‌ಸಿಯರಾಗಿರುವ ಮ॥ ಲಿಂಗಣ್ಣನು ಬಹಳ ಚೆನ್ನಾಗಿಯೂ ಮುತುವರ್ಜಿಯಿಂದಲೂ ನೌಕರಿ ಮಾಡುತ್ತಿದ್ದಾನೆಂದು ಪರಾಂಬರಿಸಿ ಮೆಚ್ಚಿಕೊಂಡು ಆತನಿಗೆ ಬಹುಮಾನವನ್ನು ದಯಪಾಲಿಸಿದರು.

ನಂಜನಗೂಡಿನಲ್ಲಿ ಪೋಲೀಸಿನವರು ಒಬ್ಬ ಖೈದಿಯನ್ನು ಹಿಂಸೆಪಡಿಸಿ ಕೊಂದುಹಾಕಿದರೆಂಬ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜರು ಪೋಲೀಸ್ ದಫೇದಾರನಿಗೆ ಎರಡು ವರುಷ ಕಠಿಣ ಸಜವನ್ನೂ, ಒಬ್ಬ ಕಾನ್‌ಸ್ಟೆಬಲಿಗೆ ಟೂಪ್ ಸಜವನ್ನೂ ವಿಧಿಸಿ, ಇನ್ನಿಬ್ಬರನ್ನು ಖುಲಾಸ್ ಮಾಡಿದರೆಂದು ಕೇಳುತ್ತೇವೆ.

ಈ ದಿನ ಶ್ರೀಮನ್ ಮಹಾರಾಜರವರು ಅರಮನೆಯ ರಾಣಿವಾಸದವರ ಸಮೇತ ಮೋಟರುಗಳಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವವರಾಗಿದ್ದಾರೆ. ನೆನ್ನೆ ಅರಮನೆಯ ರಾಣಿವಾಸದವರು ಕನ್ನಂಬಾಡಿಗೆ ಹೋಗಿ ಅಲ್ಲಿ ಅಣೆಕಟ್ಟೆಯ ಕಾಮಗಾರಿ ಮುಂತಾದದ್ದನ್ನು ಪರಾಂಬರಿಸಿಕೊಂಡು ಬರುವವರಾಗಿದ್ದರು.

ರಾಜಧಾನಿಯ ಅಡ್ವೊಕೇಟ್ ಮ॥ ಎಚ್. ನರಸಿಂಗರಾಯರನ್ನು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ಸರ್ಕಾರದವರು ನೇಮಿಸಿದ್ದಕ್ಕಾಗಿ ಇಲ್ಲಿನ ಲಾಯರ್ ಸಂಘದವರು ಕಳೆದ ಭಾನುವಾರ ಒಂದು ಟೀ ಪಾರ್ಟಿ ಎಂಬ ಸಂತೋಷ ಕೂಟವನ್ನು ನಡಿಸಿ, ಮ॥ ಸೀಪಣ್ಣನವರ ವೀಣಾಗಾನವಾದ ಬಳಿಕ ಸಬ್ ಜಡ್ಜ್ ಮ॥ ಬಿ. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಮ॥ ನರಸಿಂಗರಾಯರ ಗುಣಕಥನವನ್ನು ಮಾಡಿದರು. ರಾವ್ ಬಹದೂರ್ ರಂಗಯ್ಯಂಗಾರ್ರು ಮ॥ ನರಸಿಂಗರಾಯರ ಸದ್ಗುಣ, ಸಚ್ಚರಿತ್ರ, ವಿದ್ಯಾಸಾಮರ್ಥ್ಯಗಳನ್ನು ವಿವರಿಸಿ ಲಾಯರ್ ಸಂಘದ ಸಂತೋಷವನ್ನು ಪ್ರಕಾಶಪಡಿಸಿದರು. ಈ ಕೂಟದಲ್ಲಿ ಬಹು ಮಂದಿ ಲಾಯರುಗಳೂ, ಜಡ್ಜಿಗಳೂ, ಮ್ಯಾಜಿಸ್ಟ್ರೇಟರುಗಳೂ, ಶ್ರೀರಂಗಪಟ್ಟಣದ ನಂಜನಗೂಡಿನ ಲಾಯರುಗಳೂ ಬಂದಿದ್ದರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಸಭೆ ಸೇರಿ ತಿಂಗಳುಗಟ್ಟಲೆಯ ಮೀಟಿಂಗನ್ನು ನಡಿಸಿದರು. ಆ ಮೀಟಿಂಗಿನಲ್ಲಿ ತೀರ್ಮಾನವಾದಂತೆ ಪ್ರಕಟವಾಗಿರುವ ವಿಷಯಗಳೇನೆಂದರೆ,—

ಬೆಂಗಳೂರು ವೀರಶೈವ ಮಂಡಲಿಯವರು ಅವರ ಜನಗಳಿಗೆ ಬಿಟ್ಟಿರುವ ಸಮಾಧಿ ಭೂಮಿಯು ಮುಗಿದು ಹೋದದ್ದರಿಂದ ಮ|| ಬುಳ್ಳಪ್ಪನವರು ಮೈಸೂರು ರೋಡಿನಲ್ಲಿರುವ ತಮ್ಮ ಜಮೀನನ್ನು ಸಮಾಧಿಗಾಗಿ ಉಚಿತವಾಗಿ ಕೊಡುವಂತೆ ಒಪ್ಪಿರುತ್ತಾರೆಂದೂ, ಆ ಜಮೀನಿನಲ್ಲಿ ಸಮಾಧಿಮಾಡಿಕೊಳ್ಳುವುದಕ್ಕೆ ಅವಕಾಶವಾಗಬೇಕೆಂದೂ ಕೇಳಿದ್ದರು. ಹೆಲ್ತ್ ಆಫೀಸರು ಅಲ್ಲಿ ಸಮಾಧಿ ಮಾಡುವುದರಲ್ಲಿ ಅಭ್ಯಂತರವೇನೂ ಇಲ್ಲವೆಂದು ಹೇಳಿದ್ದರ ಮೇಲೆ ಮೆಂಬರುಗಳೆಲ್ಲಾ ಆಗಬಹುದೆಂದು ಒಪ್ಪಿಕೊಂಡರು.—ಹಳೇ ಪಯೊನಿಯರ್ ಚೇರಿ ಭಾಗದಲ್ಲಿರುವ ಜನಗಳು ಆ ಭಾಗಕ್ಕೆ ಸೀತಾಪತಿ ಅಗ್ರಹಾರವೆಂಬ ಹೆಸರಿಟ್ಟುಕೊಳ್ಳಬಹುದೇ ಎಂದು ಕೇಳಿದರು. ಇಂಪ್ರೂವ್‌ಮೆಂಟ್ ಕಮಿಟಿಯವರು ಶಿಫಾರಸು ಮಾಡಿದ್ದಂತೆ ಆ ಭಾಗಕ್ಕೆ ಮೆಂಬರುಗಳು ಕೃಷ್ಣರಾಜ ಅಗ್ರಹಾರವೆಂಬ ಹೆಸರಿಟ್ಟರು.—ಮಲೇರಿಯಾ ರೋಗವನ್ನು ಅಡಗಿಸುವ ಕಾರ್ಯಗಳಿಗೆ ಪ್ರಾಲ್ತಿ ಸಾಲಿನಲ್ಲಿ 1,000 ರೂಪಾಯಿ ಬೇಕಾಗುವುದೆಂದು ಸೂಚಿಸಲ್ಪಟ್ಟದ್ದಕ್ಕೆ ರೆವ್. ಡಿ. ಎ. ರೀಸ್ ಸಾಹೇಬರು ಈ ಕಾರ್ಯಗಳು ಇನ್ನೂ ಎಷ್ಟು ದಿನ ನಡೆಯುವವೆಂದು ಪ್ರಶ್ನೆಮಾಡಿದರು. ಹೆಲ್ತ್ ಆಫೀಸರು ಕೆಲಸಗಳು ಇನ್ನೂ ಬಾಕಿ ಇವೆ ಎಂದು ತಿಳಿಸಿದ್ದರ ಮೇಲೆ ಹಣ ಖರ್ಚುಮಾಡಬಹುದೆಂದು ಒಪ್ಪಲಾಯಿತು.—ಹೊಗೆಸೊಪ್ಪನ್ನು ರೂಪಾಂತರಮಾಡಿ ಶಸ್ತ್ರಮಾಡುವಾಗ್ಗೆ ಅದಕ್ಕೆ ಹಾಕುವ ಲೈಸೆನ್ಸಿನ ಸುಂಕದಲ್ಲಿ ಶೇಕಡ 87½ ರಷ್ಟು ಕಡಿಮೆ ಮಾಡುವುದು ಉತ್ತಮವೆಂದು ಮೆಂಬರುಗಳು ತೀರ್ಮಾನಮಾಡಿದರು.—ತಾಲೂಕ್ ಕಚೇರಿ ರಸ್ತೆಯಲ್ಲಿರುವ ಚಿಟ್ಟಿ ಹಲಸೂರು ಬಸಣ್ಣನವರ ಬಾಬತು ಮೂರು ಮನೆಗಳಲ್ಲಿ ಸ್ವಲ್ಪ ಸ್ವಲ್ಪ ಭಾಗವನ್ನು ಕೊಂಡು ಒಡೆಯಬೇಕೆಂದು ಗೊತ್ತಾಗಿತ್ತು. ಮಾಲೀಕರು ಆ ಮನೆಗಳನ್ನೆಲ್ಲಾ ಕೊಟ್ಟುಬಿಡುತ್ತೇನೆಂದೂ, ತೆಗೆದುಕೊಳ್ಳುವುದು ಉತ್ತಮವೆಂದೂ ಕೇಳಿದ್ದರು. ಮೆಂಬರುಗಳು ಅದರಂತೆ ಮೂರು ಮನೆಗಳನ್ನೂ ಮ್ಯುನಿಸಿಪಾಲಿಟಿಗೆ ಕೊಂಡುಕೊಳ್ಳತಕ್ಕದ್ದೆಂದು ಇತ್ಯರ್ಥಮಾಡಿದರು.—ತಿಂಡಿ ಮತ್ತು ಆಹಾರ ಪದಾರ್ಥಗಳನ್ನು ಅಜಮಾಯಿಷಿಮಾಡುವ ಇನ್ಸ್‌ಪೆಕ್ಟರ ಕೆಲಸ ತಾತ್ಕಾಲಿಕವಾಗಿದ್ದದ್ದನ್ನು ಖಾಯಂ ಮಾಡಬೇಕೆಂದು ಸೂಚಿಸಲಾಯಿತು. ಹೆಲ್ತ್ ಆಫೀಸರು ಇನ್ಸ್‌ಪೆಕ್ಟರು ನಡಿಸುವ ಕೆಲಸಗಳನ್ನು ವಿವರಿಸಿದರು. ಮೆಂಬರುಗಳು ಚರ್ಚೆಮಾಡಿ ಆ ನೌಕರರನ್ನು ಇನ್ನೊಂದು ವರುಷ ಇಟ್ಟುಕೊಳ್ಳಬಹುದೆಂದು ಒಪ್ಪಿಕೊಂಡರು.—ಹೊಗೆಸೊಪ್ಪಿನ ಸುಂಕವನ್ನು ಮಣಕ್ಕೆ 3 ರಿಂದ 4 ರೂಪಾಯಿಗೆ ಜಾಸ್ತಿಮಾಡಬೇಕೆಂದೂ, ಇದರಿಂದ ಸಣ್ಣವರು ಬೀಡಿ ಸೇದುವುದು ಕಡಿಮೆಯಾಗಬಹುದೆಂದೂ ಮ|| ವೆಂಕಟರಂಗಯ್ಯಂಗಾರ್ರು ಸೂಚಿಸಿದರು. ಇದು ಅವಶ್ಯವಿಲ್ಲವೆಂದು ಇತ್ಯರ್ಥವಾಯಿತು.

ಉಪಾಧ್ಯಾಯರ ಸಂಘಗಳ ಮೀಟಿಂಗು.

ಚಾಮರಾಜನಗರ.

ಈ ಸಂಘದ ಮೊದಲನೇ ಮೀಟಿಂಗು ಜುಲೈ ಮಾಹೆ 25 ನೇ ತಾ. ಭಾನುವಾರ 2 ರಿಂದ 6 ಗಂಟೆವರೆಗೆ ಎ. ವಿ. ಸ್ಕೂಲು ಹಾಲ್‌ನಲ್ಲಿ ನಡೆಯಿತು. ಗ್ರಾಮಾಂತರಗಳಿಂದ 60 ಜನ ಉಪಾಧ್ಯಾಯರುಗಳು ಬಂದಿದ್ದರು. ಮೂರು ತಿಂಗಳವರೆಗೆ ಸಂಘದವರು ಮಾಡಬೇಕಾದ ಕೆಲಸಗಳನ್ನು ಗೊತ್ತುಮಾಡಿದ ನಂತರ ಕಸಬಾ ಗರ್ಲ್ಸ್ ಸ್ಕೂಲ್ ಅ|| ಮಾಸ್ಟರ್ ಸುಬ್ರಹ್ಮಣ್ಯಯ್ಯನವರೂ ಉಪನ್ಯಾಸ ಮಾಡಿದರು. ಆ ಮೇಲೆ ಗುಣಸಂಧಿಯ ವಿಚಾರವಾಗಿ ಬಹಳ ಸ್ವಾರಸ್ಯಕರವಾದ ಪಾಠಕ್ರಮವನ್ನು ನಡಿಸಿದರು. ಇದು ವ್ಯಾಕರಣವನ್ನು ಬೋಧಿಸುವದರಲ್ಲಿ ಒಂದು ನವೀನ ಪದ್ಧತಿಯಾಗಿತ್ತು. ಬಂದಿದ್ದ ಮಾಸ್ಟರುಗಳೆಲ್ಲರೂ ಬಹಳ ಉತ್ಸಾಹಶಾಲಿಗಳಾಗಿ ಇರುವದರಿಂದ ಸಂಘವು ಅಭಿವೃದ್ಧಿಗೆ ಬರುವದರಲ್ಲಿ ಸಂಶಯವಿಲ್ಲ. ಈ ಸಂಘದ ಮುಂದಿನ ಮೀಟಿಂಗು ಆಗಸ್ಟು ತಾ. 29 ನೇ ಭಾನುವಾರ ಚಾಮರಾಜನಗರದಲ್ಲಿ ಮಧ್ಯಾಹ್ನ 1½ ಘಂಟೆಯಿಂದ 3½ ಘಂಟೆವರೆಗೆ ನಡೆಯುವದು. ಅಗ್ಗೆ ನಡೆಯಬೇಕೆಂದು ನಿಷ್ಕರ್ಷೆಯಾಗಿರುವ ಕಾರ್ಯಗಳ್ಯಾವವೆಂದರೆ—(1) ಭೂಗೋಳಪಾಠದಿಂದ ಆಗತಕ್ಕ ಪ್ರಯೋಜನಗಳ ಉಪನ್ಯಾಸ (ರಾಮಸಮುದ್ರದ ವಿ. ಇ. ಸ್ಕೂಲ್ ಹೆಡ್ ಮಾಸ್ಟರ್ ಮ|| ಶ್ರೀನಿವಾಸ ಚಕ್ರವರ್ತಿಗಳಿಂದ), (2) ಮಳೆ ವಿಚಾರವಾಗಿ ಪಾಠಕರು (ಎ. ವಿ. ಸ್ಕೂಲ್ ಅ|| ಮಾಸ್ಟರ್ ಮ|| ಸಂಪತ್ತಯ್ಯಂಗಾರ್ರಿಂದ), (3) ಪಾಠಪರೀಕ್ಷೆ, (4) ಉಪಾಧ್ಯಾಯರುಗಳ ಸ್ವಂತ ಅನುಭವಗಳ ವಿಚಾರವಾದ ಸಂಭಾಷಣೆ. ಉಪಾಧ್ಯಾಯರುಗಳೆಲ್ಲರೂ ದಯವಿಟ್ಟು ಸಕಾಲದಲ್ಲಿ ದಯಮಾಡಿಬೇಕಾಗಿ ಪ್ರಾರ್ಥನೆ.

ಕೆ. ಮಾಧವರಾವ್, ಸೆಕ್ರಟರಿ.

ನಂಜನಗೂಡು.

ಇದೇ ತಾ. 1 ನೇ ಭಾನುವಾರ ಮಧ್ಯಾಹ್ನತ್ತರ 3 ಗಂಟೆಗೆ ಸರಿಯಾಗಿ ನಂಜನಗೂಡು ತಾಲೂಕಿನ ಉಪಾಧ್ಯಾಯರ ಸಂಘವು ದೇವರಾಯ ಕಟ್ಟಡದ ಮಹಡಿಯ ಮೇಲೆ ನಡೆಯಲು ಪ್ರಾರಂಭವಾಯಿತು. ಆ ಸಭೆಗೆ ಅಧ್ಯಕ್ಷರಾಗಿ ಮ|| ಎಂ. ನಾರಾಯಣರಾವ್, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್, ಮ|| ಎಂ. ವೆಂಕಟರಾಮಯ್ಯನವರೂ ದಯಮಾಡಿಸಿದ್ದರು. ನಂಜನಗೂಡು ಕನ್ನಡ ಹೈಸ್ಕೂಲ್ ಟೀಚರ್ ಮ|| ಎಸ್. ಗುಂಡಪ್ಪನವರು ಉಪಾಧ್ಯಾಯ ಸಂಘದ ಆವಶ್ಯಕತೆ ಎಂಬ ವಿಚಾರದಲ್ಲಿ ಉತ್ತಮವಾದ ಉಪನ್ಯಾಸವನ್ನು ಮಾಡಿದರು. ಅದರಲ್ಲಿ ಪ್ರತಿ ಒಬ್ಬ ಉಪಾಧ್ಯಾಯರೂ ಬಂದು ಸೇರುವ ಸಂಭವದಲ್ಲಿ ಪರಸ್ಪರ ವಿಶ್ವಾಸ ಬೆಳೆಯುವುದಾಗಿಯೂ, ಒಬ್ಬರಿಗೆ ತಿಳಿದ ವಿಷಯವು ಇನ್ನೊಬ್ಬರಿಗೆ ವರ್ಗವಾಗಿ ಹೊಸ ವಿಷಯಗಳು ತಿಳಿದುಕೊಳ್ಳಲು ಸಹಾಯವಾಗುವುದಾಗಿಯೂ, ಒಂದು ಕ್ರಮವಾಗಿ ಬಾಲಕರ ವಿದ್ಯೆಯ ಕೆಲಸವು ನಡೆಯಲು ಸಹಾಯವಾಗುವದಾಗಿಯೂ, ಅನೇಕ ವಿಷಯಗಳು ಸಂಘದಲ್ಲಿ ಚರ್ಚಿಸಲ್ಪಡುವುದರಿಂದ ಬಾಧಕಗಳು ನಿರ್ಣಯಿಸಿಕೊಳ್ಳಲು ಸಹಾಯವಾಗುವುದಾಗಿಯೂ ತಿಳಿಸಿದರು. ಆ ಮೇಲೆ ಮೆಂಬರುಗಳ ಪಟ್ಟಿಯು ಬರೆಯಲ್ಪಟ್ಟು ಈ ಸಂಘಕ್ಕೆ ಸಂಬಂಧಪಟ್ಟ ಕೆಲವು ನಿಯಮಗಳೂ ರಚಿಸಲ್ಪಟ್ಟವು. ಪುನಃ ಈ ತಿಂಗಳು ತಾ. 29 ರಲ್ಲಿ ಈ ಸಂಘವು ಸೇರಬೇಕೆಂದು ನಿರ್ಣಯವಾಯಿತು. ಕನ್ನಡ ಹೈಸ್ಕೂಲ್ ಹೆಡ್ ಮಾಸ್ಟರು ಮ|| ವಿ. ಸಿ. ಗುಂಡಪ್ಪನವರು ವಾಯುವು ವಸ್ತುವೆಂಬುದಕ್ಕೂ, ಅದಕ್ಕೆ ತೂಕವಿದೆ ಎಂಬುದಕ್ಕೂ, ಅದಕ್ಕೆ ಒತ್ತಡವಿದೆ ಎಂಬುದಕ್ಕೂ ತಕ್ಕ ನಿದರ್ಶನಗಳನ್ನು ಮಾಡಿ ತೋರಿಸಿದರು. ಸುಮಾರು 40 ಜನ ಉಪಾಧ್ಯಾಯರು ಸೇರಿದ್ದರು. ಸಭೆಯು 6 ಗಂಟೆಗೆ ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಮ|| ಟಿ. ರಾಯಲು ಚೆಟ್ಟಿಯವರಿಗೆ ಒಂದನೇ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಹಿಂದುಸ್ಥಾನಿ ಸ್ಕೂಲ್ ಹೆಡ್ ಮಾಸ್ಟರ್ ಮಿ|| ಸೈಯದ್ ಬುರಾಹ ಶ್ರೀಕ್ ಸಾಹೇಬರನ್ನು ದೊಡ್ಡಬಳ್ಳಾಪುರದ ಮ್ಯುನಿಸಿಪಲ್ ಕೌನ್ಸಿಲ್ಲಗೂ, ಮ|| ಮುನಿಸ್ವಾಮಯ್ಯನವರನ್ನೂ ಮ|| ಸೀರಂ ವೆಂಕಟಪ್ಪನವರನ್ನೂ ಸರ್ಜಾಪುರದ ಮ್ಯುನಿಸಿಪಲ್ ಬೋರ್ಡಿಗೂ, ಮ|| ಹುಚ್ಚಪ್ಪನವರನ್ನು ಮತ್ತು ನೆಲಮಂಗಲದ ಮ್ಯುನಿಸಿಪಲ್ ಬೋರ್ಡಿಗೂ ಮೆಂಬರಾಗಿ ನೇಮಿಸಿದೆ.

ಮೈಸೂರು 2 ನೇ ಮುನ್ಸಿಫ್ ಮ|| ಎಸ್. ವೆಂಕಟಕೃಷ್ಣಯ್ಯನವರಿಗೆ ಕೊಟ್ಟಿದ್ದ ಪ್ರಿವಿಲೇಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ.

ಮೈಸೂರು ಸೆಷನ್ಸ್ ಕೋರ್ಟ್ ಶಿರಸ್ತೇದಾರ್ ಮ|| ಎಚ್. ಬಿ. ಶ್ರೀನಿವಾಸಯ್ಯಂಗಾರ್ರು ನೂರು ದಿನಗಳೂ, ಅಡ್ವೊಕೇಟ್ ಮ|| ಎಂ. ಡಿ. ತಿರುಮಲಾಚಾರ್ರು ಜೂನ್ ತಾ. 28 ರಿಂದಲೂ 2 ನೇ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರು ಸಿಟಿ ಪೋಲೀಸ್ ಅ|| ಸೂಪರಿಂಟೆಂಡೆಂಟ್ ಮಿ|| ಮಹಮುದ್ ಜಾಫರ್ ಮೇತ್ರಿಯವರಿಗೆ ಕೊಟ್ಟಿದ್ದ ಆರು ವಾರಗಳ ಪ್ರಿವಿಲೇಜ್ ರಜವನ್ನು ಇನ್ನೂ ಆರು ವಾರ ಜಾಸ್ತಿ ಮಾಡಿದೆ.

ಮಿಲಿಟರಿ ಸೆಕ್ರಟರಿ ಲೆಫ್ಟಿನೆಂಟ್ ಕರ್ನಲ್ ಎ. ಎ. ಜೋನ್ಸ್ ರವರಿಗೆ ಜುಲೈ ತಾ. 23 ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮ|| ಸಿ. ವೆಂಕಟರಾಯರೂ, ಮ|| ಆರ್. ಪುಟ್ಟಣ್ಣನವರೂ ಅವರ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಆನರರಿ ಸರ್ಜನ್ ಮಿ|| ಎಫ್. ಫ್ಲೇಟ್‌ಚರ್‌ರವರಿಗೆ ಜುಲೈ ತಾ. 20 ರಿಂದ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಸ್ಪೆಷಲ್ ರೆವಿನ್ಯು ಆಫೀಸರ್ ಮ|| ಆರ್. ನಾರಾಯಣಸ್ವಾಮಿರಾಯರಿಗೆ ಜುಲೈ ತಾ. 20 ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮ|| ಎಚ್. ಟಿ. ಗೋಪಾಲಯ್ಯಂಗಾರ್ರನ್ನು ಚೀಫ್ ಕೋರ್ಟ್ ರೆಜಿಸ್ಟ್ರಾರಾಗಿ ಖಾಯಂ ಮಾಡಿದೆ.

ಅ|| ಸರ್ಜನ್ ಮ|| ವಿ. ಮುತ್ತುಸ್ವಾಮಿದಾಸ್ ರವರನ್ನು ಮಾರ್ಚಿ ತಾ. 30 ರ ಲಾಗಾಯಿತು 1 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಮ|| ಡಬ್ಲ್ಯು. ಶ್ರೀನಿವಾಸಯ್ಯಂಗಾರ್ರನ್ನೂ, ಮ|| ಟಿ. ವಿ. ಕೃಷ್ಣಸ್ವಾಮಿ ಮೊದಲಿಯಾರ್ರನ್ನೂ 3 ನೇ ಕ್ಲಾಸ್ ಸರ್ಜನ್‌ರಾಗಿ ಬಡ್ತಿಮಾಡಿದೆ.

ಮ|| ಆನಂದರಾವ್ ಎಸ್. ಸಿಸಿರಿಯವರನ್ನು ಶಿವಮೊಗ್ಗ ಸಬ್ ಡಿವಿಜನ್‌ಗೂ, ಮ|| ಎಸ್. ಎಚ್. ಅಪ್ಪಣ್ಣಯ್ಯಂಗಾರ್ರನ್ನು ಶಿವಮೊಗ್ಗ ಮಲೆನಾಡು ಅಭಿವೃದ್ಧಿ ಕಾರ್ಯಗಳಿಗೂ ವರ್ಗಮಾಡಿದೆ.

ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ವೈ. ಸೀತಾರಾಮಯ್ಯನವರಿಗೆ ಕೊಟ್ಟಿರುವ 2 ತಿಂಗಳು 26 ದಿನಗಳ ಪ್ರಿವಿಲೇಜ್ ರಜವನ್ನು 4 ದಿನ ಜಾಸ್ತಿ ಮಾಡಿ, ಅದರ ಜೊತೆಗೆ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ದಿವಾನ್‌ರವರ ಆಫೀಸ್ 1 ನೇ ಡಿವಿಜನ್ ಕ್ಲಾರ್ಕ್ ಮ|| ಆರ್. ಸಾಂಬಯ್ಯನವರನ್ನು ಎರಡು ವರುಷ ಶೃಂಗೇರಿ ಜಹಗೀರಿಯಲ್ಲಿ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿಕೊಳ್ಳುವುದಕ್ಕೆ ಜಹಗೀರಿಗೆ ಕೊಟ್ಟಿದೆ.

ಕಾವೇರಿ ಪಲಾಸ್ ಕಾಮಗಾರಿ ಸ್ಪೆಷಲ್ ಲ್ಯಾಂಡ್ ಆಕ್ವಿಜಿಷನ್ ಆಫೀಸರ ಕೈಕೆಳಗೆ ನೇಮಕವಾಗಿರುವ ಮ|| ವಿ. ರಾಮರಾಯರನ್ನು ಏಪ್ರಿಲ್ ತಾ. 10 ರಿಂದ ಡೆಪ್ಯುಟಿ ಅಮಲ್ದಾರರಾಗಿ ಖಾಯಂಮಾಡಿದೆ.

ಮ|| ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ರನ್ನು 175 ರೂಪಾಯಿ ಸಂಬಳದ ಮೇಲೆ ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಚರಿತ್ರೆ ಬೋಧಕರಾಗಿ ಎರಡು ವರುಷ ಸಂಗಾಮಿಯಾಗಿ ನೇಮಿಸಿದೆ.

ಮೈಸೂರು ಟ್ರಸ್ಟ್ ಬೋರ್ಡ್ ಮೀಟಿಂಗು.

ಕಳೆದ ತಾ. 26 ನೇ ಸೋಮವಾರ ಬೆಳಿಗ್ಗೆ ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು ಚೇರ್‌ಮನ್ ಮ|| ಟಿ. ಜಿ. ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮಿ|| ಕ್ಯಾಂಪೆಲ್ ಸಾಹೇಬರು, ಮಿ|| ಸಾಡೆ ಸಾಹೇಬರು, ಮಿ|| ಮಹಮುದ್ ಜಾಫರ್ ಸಾಹೇಬರು, ಮ|| ಗೌಡರ ರಾವ್ ಬಹದ್ದೂರ್ ರಂಗಯ್ಯಂಗಾರ್ರು, ಜಿ. ನಾರಾಯಣರಾಯರು, ಎ. ಕೆ. ಪಾಂಡೆಯವರು ಹಾಜರಾಗಿದ್ದರು. ಮೀಟಿಂಗಿನಲ್ಲಿ ತೀರ್ಮಾನವಾಗಿರುವ ಮುಖ್ಯವಾದ ವಿಷಯಗಳ್ಯಾವವೆಂದರೆ—

ಕವಾಸಿ ದರವಾಜಾ ಎದುರಿಗೆ ಮಿ|| ಅಬ್ಬಾ ಸೇಟರು ತಮ್ಮ ಬಂಗಲೆಗಳ ಮಧ್ಯೆ ಇರುವ ಗಲ್ಲಿಯನ್ನೂ, ಪಕ್ಕದಲ್ಲಿರುವ ಖಾಲಿ ನಿವೇಶನವನ್ನೂ ತಮಗೆ ಕೊಡಿಸಬೇಕೆಂದು ಕೇಳಿದ್ದರು. ಮೆಂಬರುಗಳು ಖುದ್ದಾಗಿ ಸ್ಥಳ ಅಜಮಾಯಿಷಿಯಿಂದ ಇತ್ಯರ್ಥಮಾಡೋಣವೆಂದು ಅಭಿಪ್ರಾಯಪಟ್ಟರು.—ಮ|| ಅಯ್ಯಾಸಾಮಿ ಮೊದಲಿಯಾರ್ರು ಖಾಲಿ ನಿವೇಶನವನ್ನು ಟ್ರಸ್ಟ್ ಬೋರ್ಡಿಗೆ ಕೊಂಡು ಕೊಂಡದ್ದಕ್ಕೆ ಅವರ ಕ್ರಯಪತ್ರವನ್ನು ತರಿಸಿಕೊಂಡು ಚೀಫ್ ಕೋರ್ಟ್ ಜಡ್ಜ್‌ಮೆಂಟ್ ಸಮೇತ ಮೆಂಬರುಗಳಿಗೆ ಕಳುಹಿಸಿಕೊಟ್ಟಲ್ಲಿ ಮ|| ಮೊದಲಿಯಾರ್ರಿಗೆ ಎಷ್ಟು ಪಾವತಿಮಾಡಬೇಕೆಂಬ ವಿಚಾರ ಇತ್ಯರ್ಥಮಾಡಬಹುದೆಂದು ಮೆಂಬರುಗಳು ಗೊತ್ತುಮಾಡಿದರು.—ಬೇರೆ ಬೇರೆ ಪ್ಲಾನ್ (ನಕ್ಷೆಗಳನ್ನು) ಭದ್ರವಾಗಿ ಇಡುವುದಕ್ಕೆ ಆಫೀಸಿಗೆ ಎರಡು ದೊಡ್ಡ ಬೀರುಗಳನ್ನು 300 ರೂಪಾಯಿಗೆ ಮಾಡಿಸಿಕೊಳ್ಳಬಹುದೆಂದೂ, ಒಂದು ಟೈಪ್ ರೈಟರನ್ನು ಕೊಂಡು ತರಿಸಿಕೊಳ್ಳಬಹುದೆಂದೂ ಮೆಂಬರುಗಳು ಒಪ್ಪಿದರು.—ಚೆನ್ನಯ್ಯನಪಾಳ್ಯ ಸಾಲಿಗೆ ಹೆಚ್ಚು ಕಟ್ಟುವುದಕ್ಕೆ ಚರಂಡಿ ಹಾಕುವುದನ್ನು ಹಣ ಸಹಿತ ಖರ್ಚುಮಾಡಬಹುದೆಂದೂ, ಹೊಸ ಮನೆಗಳನ್ನು ಕಟ್ಟುವುದಕ್ಕೆ ಸಾಲಬೇಕೆಂದು ಕೇಳಿದ 4-5 ಅರ್ಜಿದಾರರಿಗೆ ಸಾಲ ಕೊಡಬಹುದೆಂದೂ, ಈ ಬಾಬಿಗೆ 40,000 ರೂಪಾಯಿ ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಬರೆಯಬೇಕೆಂದೂ ಮೆಂಬರುಗಳು ಒಪ್ಪಿಕೊಂಡರು.—ಚಾಮರಾಜ ಮೊಹಲ್ಲದಲ್ಲಿ ಪೀಪಲ್ಸ್ ಲೈನಿಗೂ ಆಸ್ಪತ್ರೆಗೂ ನಡುವೆ ಇರುವ ಖಾಲಿ ನಿವೇಶನವನ್ನು ಮನೆಕಟ್ಟುವುದಕ್ಕೆ ವಿಂಗಡಿಸಿ ಬೇಕಾದವರಿಗೆ ಕೊಡಬಹುದೆಂದು ಮೆಂಬರುಗಳು ಸಮ್ಮತಿಸಿದ್ದರು.

ಪಟ್ಟಣದ ಬೇರೆ ಬೇರೆ ಮೊಹಲ್ಲೆಗಳಲ್ಲಿ ಆರೋಗ್ಯಕ್ಕೂ ಕಟರಾ ಸಾಗುವುದಕ್ಕೂ ಅವಶ್ಯವಾದ ಕೆಲವು ಕಟ್ಟಡಗಳನ್ನೂ ನಿವೇಶನಗಳನ್ನೂ ಟ್ರಸ್ಟ್ ಬೋರ್ಡಿಗೆ ಕೊಂಡುಕೊಳ್ಳಬಹುದೆಂದು ಒಪ್ಪಲಾಯಿತು.—ಲಷ್ಕರ್ ಮೊಹಲ್ಲಿಯಲ್ಲಿ ಕೆಲವು ಮನೆಗಳನ್ನು ಮಾತ್ರ ಟ್ರಸ್ಟ್ ಬೋರ್ಡಿಗೆ ತೆಗೆದುಕೊಂಡು ಒಡೆಯಹಾಕಬೇಕೆಂದು ಗೊತ್ತಾಗಿದೆ. ಉಳಿದ ಮನೆಗಳವರು ತಮ್ಮ ಜನಗಳೆಲ್ಲಾ ಬೇರೇ ಕಡೆ ಹೋಗೋಣವೆಂದರೆ ತಮಗೆ ಪ್ರತ್ಯೇಕವಾಗಿರಲು ಅನನುಕೂಲವಾಗುತ್ತೆಂದೂ, ತಮ್ಮ ಮನೆಗಳನ್ನೂ ಟ್ರಸ್ಟ್ ಬೋರ್ಡಿಗೆ ಕೊಂಡುಕೊಳ್ಳಬೇಕೆಂದೂ ಕೇಳಿಕೊಂಡಿದ್ದರು. ಅಂಥವರ ಮನೆಗಳನ್ನು ಕೊಂಡುಕೊಳ್ಳಬಹುದೆಂದು ಮೆಂಬರುಗಳು ಒಪ್ಪಿ ತೀರ್ಮಾನಮಾಡಿದಾರೆ.—ಸರಕಾರಿ ಮಹಡಿ ಪಕ್ಕಿ ಮತ್ತು ಪಕ್ಕದಲ್ಲಿ ಒಂದು ಮನೆಯನ್ನು ಕೊಂಡುಕೊಂಡು ಒಡೆದು ಗಲ್ಲಿ ಮಾಡಬೇಕೆಂದು ಇತ್ಯರ್ಥವಾಯಿತು.—ಲಷ್ಕರ್ ಮೊಹಲ್ಲದ ಕೆರೆ ಬಚ್ಚಲುಗಳನ್ನು ದುರಸ್ತು ಮಾಡಿಸುವುದಕ್ಕೆ 3,000 ರೂಪಾಯಿ ಖರ್ಚುಮಾಡಬಹುದೆಂದು ಒಪ್ಪಲಾಯಿತು.—ಕೆಲವು ಕಟರಾ ಸಾಗುವ ಗಲ್ಲಿಗಳಿಗೆ ಮನೆಗಳ ಮಾಲೀಕರು ಹಣಕೊಟ್ಟಿದ್ದು, ಟ್ರಸ್ಟ್ ಬೋರ್ಡಿನಿಂದ ನಲ್ಲಿಗಳನ್ನು ಹಾಕುವುದಕ್ಕೆ ಅವಕಾಶಕೊಡುವುದಿಲ್ಲವೆಂದು ಚೇರ್‌ಮನ್ ರವರು ತಿಳಿಸಿದ್ದಕ್ಕೆ ಅಂಥಾ ಗಲ್ಲಿಗಳನ್ನು ಟ್ರಸ್ಟ್ ಬೋರ್ಡಿಗೆ ಕೊಂಡುಕೊಳ್ಳಬೇಕಾದದ್ದು ಅವಶ್ಯವೆಂದು ಮೆಂಬರುಗಳು ಒಪ್ಪಿ ತೀರ್ಮಾನ ಮಾಡಿರುತ್ತಾರೆ. ನಂಜರಾಜ ಬಹದ್ದೂರ್ ಛತ್ರದ ಹತ್ತಿರ ಛತ್ರಿವಿಲಾಸದ ಎದುರಿಗಿರುವ ಖಾಲಿ ನಿವೇಶನವು ಸರ್ಕಾರಕ್ಕೆ ಸೇರಿರುವುದರಿಂದ ಅದನ್ನು ಟ್ರಸ್ಟ್ ಬೋರ್ಡಿಗೆ ಅವರಿಂದ ಪಡೆದುಕೊಳ್ಳಬೇಕೆಂದೂ, ಸೀತಾವಿಲಾಸ್ ಛತ್ರದ ಹಿಂಭಾಗದಲ್ಲಿರುವ ನಾಲ್ಕು ಖಾಲಿ ನಿವೇಶನಗಳನ್ನು ಹರಾಜು ಹಾಕಿ ಮನೆ ಕಟ್ಟುವವರಿಗೆ ಕೊಡಬಹುದೆಂದೂ ಇತ್ಯರ್ಥವಾಯಿತು.

ಲಕ್ಷ್ಮೀಪುರದ ದಕ್ಷಿಣಕ್ಕೆ ವೈಸ್‌ರಾಯಿ ರಸ್ತೆಯ ಪಕ್ಕದಲ್ಲಿರುವ ವಿಸ್ತಾರವಾದ ಖಾಲಿ ನಿವೇಶನವನ್ನು ಅರಮನೆ ನೌಕರರುಗಳಿಗಾಗಿ ತೆಗೆದಿಡಲ್ಪಟ್ಟಿತ್ತು. ಈಚೆಗೆ ಅದು ಅವರಿಗೆ ಬೇಕಾಗುವುದಿಲ್ಲವೆಂದು ತಿಳಿದ ಕಾರಣ ಆ ನಿವೇಶನವನ್ನು ಸಣ್ಣ ಕಟ್ಟಡಗಳನ್ನು ಕಟ್ಟಿಕೊಳ್ಳುವವರಿಗೆ ಸ್ಥಳವನ್ನು ವಿಂಗಡಿಸಿ ಕೊಡಬಹುದೆಂದು ಮೆಂಬರುಗಳು ತೀರ್ಮಾನ ಮಾಡಿದಾರೆ.—ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಖಾಲಿ ನಿವೇಶನವನ್ನು ಕನ್ನಂಬಾಡಿ ಪಟೇಲರಿಗೆ ಮ|| ಎಲ್. ಕೃಷ್ಣರಾಯರ ಸಭಾಪತಿ ಅನುಸರಿಸಿ ಕೊಡಬಹುದೆಂದೂ, ಜನರಲ್ ಆಸ್ಪತ್ರೆ ಬಳಿ ಜನಾನಾ ಮಿಷನ್ ಸ್ಕೂಲಿನ ಪಕ್ಕದಲ್ಲಿರುವ ನಿವೇಶನವು ವಿದ್ಯಾಭ್ಯಾಸ ಇಲಾಖೆಯವರಿಗೆ ಬೇಡವಾದ ಪಕ್ಷಕ್ಕೆ ಹರಾಜು ಮೂಲಕ ವಿಕ್ರಯಮಾಡಬಹುದೆಂದೂ ಒಪ್ಪಲಾಯಿತು.—ಮಿ|| ಮಿರ್ ಹಂಜಾ ಹುಸೇನ್ ರವರ ಮನೆ ಹಿಂಭಾಗದಲ್ಲಿ ತುಂಬಾ ಅನಾರೋಗ್ಯಕರವಾದ ಸ್ಥಿತಿಯಲ್ಲಿರುವ ಪೂರ್ಣಯ್ಯನವರ ನಾಲೆಯನ್ನು ಮುಚ್ಚಿಬಿಡುವುದಕ್ಕೆ 95,000 ರೂಪಾಯಿ ಬೇಕಾಗಿದೆ ಎಂದೂ, ಪ್ರತಿ ವರುಷವೂ 5,000 ರೂಪಾಯಿಯಂತೆ ಖರ್ಚುಮಾಡಿ ಅದನ್ನು ಸ್ವಲ್ಪ ಸ್ವಲ್ಪವಾಗಿ ಮುಚ್ಚಿಸುತ್ತಾ ಬರಬೇಕಾದದ್ದು ಅವಶ್ಯವೆಂದೂ ಮೆಂಬರುಗಳು ಒಪ್ಪಿ ತೀರ್ಮಾನ ಮಾಡಿದರು.

ಮೈಸೂರು ನ್ಯಾಯವಿಧಾಯಕ ಸಭೆ.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ಜುಲೈ 27 ನೇ ತಾ. ಸಭೆಯ ಮೆಂಬರು ಶ್ರೀರಂಗಪಟ್ಟಣದ ಪ್ಲೀಡರ್ ಮ|| ಬಿ. ನರಸಿಂಗರಾಯರು 1915-16 ನೇ ಇಸವಿಯ ಮೈಸೂರು ಸಂಸ್ಥಾನದ ಬಜೆಟ್ಟಿನ ವಿಷಯದಲ್ಲಿ ಮಾಡಿದ ಉಪನ್ಯಾಸದ ಸಾರಾಂಶವೇನೆಂದರೆ—(1) ಕಳೆದ ವರುಷ ಆಗಸ್ಟ್ ತಿಂಗಳಿನಲ್ಲಿ 50 ಲಕ್ಷ ರೂಪಾಯಿ ನಮ್ಮ ಶ್ರೀಮನ್ ಮಹಾರಾಜರವರು ಯುದ್ಧದ ಖರ್ಚಿಗಾಗಿಯೂ, ರಿಲೀಫ್ ಫಂಡಿಗಾಗಿಯೂ ಕೊಟ್ಟಿದ್ದಾಗಿರುತ್ತೆ. ಈ ಪ್ರವ್ಯವನ್ನು ಇಂಥಾ ಸಂದರ್ಭದಲ್ಲಿ ದಯಪಾಲಿಸಿದ್ದಕ್ಕಾಗಿ ನಮ್ಮ ಸಂಸ್ಥಾನದ ಪ್ರಜೆಗಳೆಲ್ಲರೂ ತುಂಬಾ ಸಂತೋಷಪಡುತ್ತಿದಾರೆ. ಈ ಮಹಾಯುದ್ಧವು ಬ್ರಿಟಿಷ್ ಸರ್ಕಾರದವರಿಗೆ ಜಯವನ್ನುಂಟುಮಾಡಿ ದೇಶಕ್ಕೆ ಕ್ಷೇಮವಾಗಬೇಕೆಂದು ಸರ್ವದಾ ಪ್ರಾರ್ಥಿಸುತ್ತೇನೆ.—(2) ಸಂಸ್ಥಾನದ ಖರ್ಚು ಆದಾಯಕ್ಕಿಂತಲೂ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗಿರುವಂತೆ ಕಾಣಬರುತ್ತದೆ. ಹಾಲಿ ಚರ್ಚೆಯಲ್ಲಿರುವ ಬಜೆಟ್ಟನ್ನು ನೋಡಿದ್ದರಲ್ಲಿ ಖರ್ಚು ಜಾತಾ 33,000 ರೂಪಾಯಿ ಮಾತ್ರ ಉಳಿಯುವಂತೆ ಕಾಣುವುದು. ಕೋಲಾರದ ಮೈನಿಂಗ್ ಉತ್ಪತ್ತಿಯನ್ನೂ, ಕಾವೇರಿ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನೂ ವಜಾ ಮಾಡಿದಲ್ಲಿ 21 ಲಕ್ಷ ರೂಪಾಯಿ ಸಾಲದೆ ಹೋಗುವುದು. ಇದಕ್ಕೆ ಸಂಸ್ಥಾನದ ಎಲ್ಲಾ ಬಾಬುಗಳಲ್ಲಿಯೂ ಖರ್ಚು ಜಾಸ್ತಿಯಾಗಿರುವುದೇ ಮುಖ್ಯ ಕಾರಣವಾಗಿ ತೋರುತ್ತೆ. 1903-04 ನೇ ವರುಷದ ಲಾಗಾಯ್ತು 1913-14 ನೇ ವರುಷದ ಆಖೈರುವರೆಗೆ 12 ವರುಷಗಳ ಮುಖ್ಯವಾದ ಬಾಬುಗಳ ಉತ್ಪತ್ತಿ ಮತ್ತು ಖರ್ಚನ್ನು ನೋಡಿದಲ್ಲಿ ಸರಾಸರಿ ಸಾಲು ಒಂದಕ್ಕೆ ಶೇಕಡಾ 2 ಚಿಲ್ಲರೆ ರೂಪಾಯಿಯಂತೆ ಉತ್ಪತ್ತಿ ಆಗುತ್ತಿರುವುದಾಗಿಯೂ, ಶೇಕಡಾ ಸಾಲೀಯಾನಾ 3 ಚಿಲ್ಲರೆ ರೂಪಾಯಿಯಂತೆ ಖರ್ಚು ಆಗುತ್ತಿರುವುದಾಗಿಯೂ ಕಂಡುಬರುತ್ತೆ. 1915-1916 ನೇ ಸಾಲಿನ ಬಜೆಟ್ಟಿನಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಎಂದು 11,28,000 ರೂಪಾಯಿ ಖರ್ಚು ಆ ಬಾಬಾ ಆಗಿರುತ್ತೆ. 1913-14 ನೇ ಸಾಲಿನಲ್ಲಿ ಈ ಬಾಬಿಗೆ 9,16,000 ರೂಪಾಯಿ ಮಾತ್ರ ಖರ್ಚಾಗಿದೆ. 1913-14 ನೇ ಸಾಲಿಗೂ 1915-16 ನೇ ಸಾಲಿಗೆ ಶೇಕಡಾ 23 ಚಿಲ್ಲರೆ ರೂಪಾಯಿ ಈ ಒಂದು ಬಾಬಿನಲ್ಲೇ ಜಾಸ್ತಿ ಖರ್ಚಿಗೆ ಏರ್ಪಾಟಾಗಿದೆ. ಈಗಿನ ನಮ್ಮ ಸಂಸ್ಥಾನದ ಧನಸಂಬಂಧ ಸ್ಥಿತಿಯನ್ನು ಆಲೋಚನೆಗೆ ತೆಗೆದುಕೊಂಡಲ್ಲಿ ಖರ್ಚು ದುಬಾರಿ ಎಂದು ತೋರುತ್ತೆ. ಆದಕಾರಣ ಸಾಧ್ಯವಾದ ಮಟ್ಟಿಗೆ ಖರ್ಚನ್ನು ಕಡಿಮೆ ಮಾಡತಕ್ಕದ್ದು ಅವಶ್ಯ. ಇದನ್ನು ಸಂಶೋಧಿಸಲು ಒಂದು ರಿಟ್ರೆಂಚ್‌ಮೆಂಟ್ ಕಮಿಟಿ ಅಂದರೆ ಸಾರ್ವಜನಿಕ ಮತ್ತು ಸರ್ಕಾರಿ ಆಫೀಸರುಗಳು ಮಾತ್ರ [illegible] ಇಂತಹ ಒಂದು ಕಮಿಟಿಯನ್ನು ನೇಮಿಸತಕ್ಕದ್ದು ಅತ್ಯವಶ್ಯಕವಾಗಿ ತೋರುತ್ತದೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿ ಇಂಡಿಯಾದವರು ಮಾತ್ರವಲ್ಲ. ಜಪಾನ್, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮುಖ್ಯ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮನೆತನದ ವೈದ್ಯರ ಸಮಯವನ್ನು ಕಾದು ಮೊರೆಯಿಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾತವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಹೊಟ್ಟೆನೋವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿ ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸು ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನವು ಪ್ರತಿ ಸೀಸೆಯೊಡನೆಯೂ ಇರುವುದು. 200 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲು ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0, 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್ ವ್ಹಿ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ವಿ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯುರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಳೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ಇಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮಿ॥ ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಸಾಳ್ವದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿದು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾ

[199-49] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು



ಸೋಲ್ ಏಜೆಂಟರು—

ಎಸ್. ವೈದ್ಯಾ ಅಂಡ್ ಕಂಪೆನಿ,

ಪಿ. ಟಿ. ಮದರಾಸು.

ಅತ್ಯದ್ಭುತವಾದ ಜಪಾನ್ ಮಾತ್ರೆಗಳು

ಒಂದು ಸಲ ಪರೀಕ್ಷಿಸಿ ನೋಡಿರಿ.

ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇವು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಆತಿಸಾರ, ವಿಕಾರಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದವು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನರಿಗೆ ಅತ್ಯುಪಕಾರಿ. ಚುಟ್ಟ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಿಶಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವವು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಳಿಕ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30	ಮಾತ್ರೆಗಳ ಪೊಟ್ಟ 1 ಕ್ಕೆ	ಕ್ರಯ	0-1-6
65	,, ,, ,,	,,	0-3-0
105	,, ಪೊಟ್ಟ ಮತ್ತು ಸುಂದರವಾದ ಮಾತ್ರೆಗಳು ಇರುವ ಚಿಕ್ಕ ಡಬ್ಬಿ ಸಹಾ	,,	0-8-0
445	,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	,,	1-0-0

[80-15]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎನ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

[149-3] ನಮ್ಮ ವಿಳಾಸ ವಿ. ಎ. ಎಸ್. ಪಾಣಿ. ನಂ. ೩, ಇರುಳಪ್ಪನ ಬೀದಿ, ಮದರಾಸು.

ಪಂಡಿತ್ ಎಸ್. ಗರಳಪುರಿ, ಮೈಸೂರು.

ಪ್ರಸಿದ್ಧ ಮಹೌಷಧಿಗಳು.

ಜ್ವರದ ಮಾತ್ರೆ 8 ಆ. ಕೆಮ್ಮಿನ ಮಾತ್ರೆ 8 ಆ. ಅಜೀರ್ಣದ ಮಾತ್ರೆ 12 ಆ. ಬಾಲಸಂಜೀವಿನಿ 6 ಕ್ಕೆ 1 ರೂ. ಸರಳಭೇದಿ 8 ಆ. ಅಮಶಂಕೆ ಮಾತ್ರೆ 8 ಆ. ಟಾನಿಕ್ ಪಿಲ್ಸ್ 1 ರೂ. ಕಸ್ತೂರಿಮಾತ್ರೆ 5 ಸೀಸೆಗೆ 1 ರೂ. ಕಾಲರಾ ಮಾತ್ರೆ 1 ರೂ. ಉಬ್ಬಸದ ಮಾತ್ರೆ 12 ಆ. ಬಾಧಾನಿವಾರಿಣಿ 6 ಡಬ್ಬಿಗೆ 1 ರೂಪಾಯಿ. ಹುಳುಕಡ್ಡಿ ಮುಲಾಮು 6 ಆಣೆ. ಮುಖರಂಜಕ ಮಾತ್ರೆ 4 ಆಣೆ., 5 ಕ್ಕೆ 1 ರೂಪಾಯಿ. [126-7]

ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ.

1,000 ವಾಚುಗಳ ಮಾರಾಟ.

“ ಬೊಂಬೇ ಮೈಲ್ ಲೀವರ್ ವಾಚ್.

ಗ್ರಾಹಕರೇ,—ಈ ಮೇಲೆ ಕಾಣಿಸಿದ ವಾಚು ಅತೀ ಮನೋಹರವಾಗಿ ಸೆಕೆಂಡಹೆಂಡ್ ಇದ್ದು ನೂತನ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಪ್ರಪಂಚದಲ್ಲೆಲ್ಲಾ ಇದರ ಶ್ರೇಷ್ಠತೆಯನ್ನು ತಿಳಿಯಬೇಕೆಂಬದಾಗಿ ಅತೀ ಸುಲಭ ಕಿರೀದಿಯನ್ನು ಇಟ್ಟಿರುತ್ತೇವೆ. ಕಮ್ಮಿ ಕ್ರಯದ ವಾಚುಗಳು ನೀವು ತರಿಸಿಯೂ ಇತರರಲ್ಲಿ ನೋಡಿಯೂ ಇರಬಹುದು. ಆದರೆ ಮೇಲೆ ಕಾಣಿಸಿದ “ಬೊಂಬೇ ಲೀವರ್ ವಾಚು” ಎಂಬದು ಕೀಳು ತರದ ವಾಚಲ್ಲ. ಇದು ಹೆಸರಾದ ಕಂಪೆನಿಯಲ್ಲಿ ತಯಾರಿಸಲ್ಪಟ್ಟು ಶ್ರೇಷ್ಠವಾದ ಮತ್ತು ಬಲಿಷ್ಠವಾದ ಲೀವರ್ ಕೆಲಸವಾಗಿದೆ. ನೋಡುವರೆ ಗಂಭೀರವಾಗಿಯೂ ಸಮಯಾನುಸಾರ ಕೆಳಗೆ ಬಿದ್ದಾಗ್ಯೂ ನಿಲ್ಲದೆ ನಡಿಯುತ್ತದೆ. ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡಿಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವುದಿಲ್ಲ. ವಾಚು 1 ರ ಬೆಲೆ ರೂ. 2-4-0. ಪೇಕಿಂಗ ಮತ್ತು ಟಿ. ಪಿ. ಆಣೆ 4 ಅಲಾಯದ. [139-5]



(2) ವಾರಕ್ಕೊಮ್ಮೆ ಕೀಲಿ ಕೊಡುವ ವಾಚು 1 ಕ್ಕೆ ರೂ. 7-12-0.

ನಮ್ಮ ವಿಳಾಸ:—ದಿ ಗೋಲ್ಡ್ ಮಾರ್ಟ್,

ನಂ. ೧, ಮಂಗಳೂರು, ದಕ್ಷಿಣ ಕನ್ನಡಾ.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು ಒರಟಾಗಿರುವ ಕೂದಲು ಮೃದುವಾಗುವದು. ನೀಲಿ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಅಧಿಕವಾದ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕನ್ನಡಿಯಲ್ಲಿ ನೋಡುವವರಿಗೆ ತಲೆಯ, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜನ್ಯಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ಮರುಗ, ದವನ, ಪುರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಡಮರ್ಗ, ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 23, ಕೊಂಡೆ ಗಿಣಿಗಳು 6, ಕಾನೋನೇಷನ್ ಬ್ರೂಚ್ 1, ಜವಾಜು ಪಿಲ್ಲು 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಲ್. ಎಮ್. ಸ್ವಾಮಿ ಅಂಡ್ ಕಂಪೆನಿ,

[156-1] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

10-28]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

FOR SALE

One 4½ H. P. Singer 2 Speed Gear Motor Cycle with acetylene lamp, horn and tool bags in good running order. For price and particulars apply to

[153-2] **Messrs. PETRI-HAY, and SON, Hunsur.**

ಗೃಹಕೃತ್ಯದ ನೋಟೀಸು.

ನಂಜನಗೂಡು ಕಸಬಾ ವಾಸಸ್ಥಳವಾದ ವಿಶ್ವನಾಥಾನಿಗಳ ಹೆಂಡತಿ ನರಸಮ್ಮನು ಪರರ ದುರ್ಬೋಧನೆಯಿಂದ ಈ ಕೆಳಗಿನ ಸ್ಥಿರ ಸ್ವತ್ತುಗಳನ್ನು ಪರಭಾರೆ ಮಾಡುವಂತೆ ಕೇಳುತ್ತಾಳೆ. ಈಕೆಗೆ ಮಕ್ಕಳಿಲ್ಲ. ನಾನೇ ಉತ್ತರವಾದಿಗಾರನು. ನನ್ನ ಸಮ್ಮತಿ ಇಲ್ಲದೆ ಈಕೆಯಿಂದ ಕಸಬಾ ಸರ್ವೆ 145, 803, 731, 732, 1140 ನಂ., ಮುದಳೂರು 46 ನಂ., ಹೆಜ್ಜಿಗೆ 36, 46 ನಂ., ಈ ಜಮೀನುಗಳು, ಟವನ್ನಲ್ಲಿರುವ ಮನೆ, ಇವುಗಳನ್ನು ಯಾರೇ ಆಗಲಿ ಕ್ರಯ ದಾನ ಆಧಾರ ಭೋಗ್ಯ ವಗೈರೆ ಮಾಡಿಕೊಂಡಲ್ಲಿ ಊರ್ಜಿತವಾಗದೆ ನನಗೆ ಉಂಟಾಗತಕ್ಕ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುತ್ತೆಂದು ಎಚ್ಚರಿಸಿರುತ್ತೇನೆ.

[154-3] ನಾಗೇಶ್ವರ ದೀಕ್ಷಿತರ ಮಗ ವೆಂಕಟಕೃಷ್ಣಭಟ್ಟ.

ಉತ್ತಮವಾದ ಪುಸ್ತಕಗಳು.

[135-3]

(1) "ಪ್ರಫುಲ್ಲ" ಶಕ್ತದಾರಿಯ ಕಥೆ ಈಗತಾನೆ ಅಚ್ಚಾಗಿದೆ ಪ್ರಾರಂಭಿಸಿದರೆ ಮುಗಿಸುವವರೆಗೂ ನಡುವೆ ನಿಲ್ಲಿಸಲು ಮನಸ್ಸೇ ಬರುವದಿಲ್ಲ 12 ಆಣೆ. (2) "ಜಪಾನ್ ಸಾಮ್ರಾಜ್ಯ" ಆಶ್ಚರ್ಯಕರವಾದ ವಿಷಯ ತಿಳಿವಳಿಕೆ ನಾಗರಿಕತೆ ಹೆಚ್ಚುತ್ತವೆ. 6 ಆಣೆ. (3) "ಉತ್ತಮ ದಂಪತಿಗಳ" ವಿಷಯವಾದ ವಿಚಿತ್ರ ಕಥೆ. 4 ಆಣೆ. (4) "ಉನ್ಮತ್ತ" ಮನೋಹರವಾದ ಬಂಗಾಳಿ ನಾವಲ್ 3½ ಆಣೆ. (5) ಲೊ. ಸೆ. ಪ. ಯಲ್ಲಿ ಉತ್ತರ ಬರೆವ ವಿಧಾನ 1 ಆಣೆ. ಅಂಚೆ ವೆಚ್ಚ ಬೇರೆ. ಬೆಂಗಳೂರು ದೊಡ್ಡಪೇಟೆಯಲ್ಲಿ (1) ಎಂ. ಸುಬ್ಬರಾವ್ ಬುಕ್‌ಸೆಲರ್, (2) ಎ. ಎಸ್. ಕೆ. ಡಿಪೊ, (3) ಕೆ. ಚೌಡಪ್ಪ ಎಂಡ್ ಕೊ; ಮೈಸೂರಿನಲ್ಲಿ (4) ಜಿ. ಕೃಷ್ಣಶಾಸ್ತ್ರಿ ಶಿವರಾಂಪೇಟೆ, (5) ಜನರಲ್ ಏಜನ್ಸಿ, (6) ಸಿ ಎಲ್. ಎಸ್. ಡಿಪೊ.

ವೃತ್ತಾಂತ ಪತ್ರಿಕೆ.

—:o:—

೧೯೧೫ ನೇ ಇಸವಿ ಆಗಸ್ಟ್ ತಾ. ೧೨ ನೇ ಗುರುವಾರ.

ಹನ್ನೆರಡು ತಿಂಗಳ ಯುದ್ಧಕಾರ್ಯಗಳು.

ಪ್ರಪಂಚದ ಚರಿತ್ರೆಯಲ್ಲೇ ಕಾಣದಂಥಾ ಈಗಿನ ಘೋರ ಯುದ್ಧವು ಪ್ರಾರಂಭವಾಗಿ ಹನ್ನೆರಡು ತಿಂಗಳು ಕಳೆದು ಹೋಯಿತು. ಈ ಒಂದು ವರುಷದಲ್ಲಿ ನಡೆದಿರುವ ಕಾರ್ಯಗಳೇನೇನೆಂದು ಸ್ವಲ್ಪ ಯೋಚಿಸಿ ನೋಡತಕ್ಕದ್ದಾಗಿದೆ. ಬೆಲ್ಜಿಯಮ್ ರಾಜ್ಯದ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರುತ್ತೇವೆಂದು ಬ್ರಿಟಿಷರೂ ಜರ್ಮನಿಯವರೂ ಒಪ್ಪಿಕೊಂಡು ಕರಾರಿಗೆ ರುಜು ಹಾಕಿದ್ದರು. ಜರ್ಮನಿಯವರು ಆ ಒಪ್ಪಂದವನ್ನು ಲಕ್ಷ್ಯಮಾಡದೆ ಮಾತಿಗೆ ತಪ್ಪಿ ಬೆಲ್ಜಿಯಮ್ ರಾಜ್ಯಕ್ಕೆ ತಮ್ಮ ಸೈನ್ಯವನ್ನು ನುಗ್ಗಿಸಿದರು. ಬ್ರಿಟಿಷರಾದರೋ ಜರ್ಮನಿಯವರ ದುರಾಗತ ಕೃತ್ಯವನ್ನು ನೋಡಿ ಬೆಲ್ಜಿಯಮಿನ ಸ್ವತಂತ್ರಾಧಿಕಾರಕ್ಕೆ ಲೋಪ ಬರಕೂಡದೆಂದು ಪ್ರತಿಭಟಿಸಿ, ದುಷ್ಟರನ್ನು ನಿಗ್ರಹಿಸಿ ಸತ್ಯಧರ್ಮಗಳನ್ನು ಕಾಪಾಡುವುದಕ್ಕಾಗಿ ಜರ್ಮನಿಯವರ ಮೇಲೆ ಯುದ್ಧಕ್ಕೆ ಹೊರಡಬೇಕಾಯಿತು. 1914 ನೇ ಆಗಸ್ಟು ತಾ. 4 ರಲ್ಲಿ ಜರ್ಮನಿ ಸೈನ್ಯವನ್ನು ಬೆಲ್ಜಿಯಮಿಗೆ ಕಳುಹಿಸುವುದಾದರೆ ಬೆಲ್ಜಿಯಮಿನ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೋಸ್ಕರ ಬೆಲ್ಜಿಯಮಿಗೆ ಸಹಾಯಮಾಡುತ್ತೇವೆ ಎಂಬದಾಗಿ ಗ್ರೇಟ್ ಬ್ರಿಟನ್ನಿನವರು ಜರ್ಮನಿಯವರಿಗೆ ತಿಳಿಸಿದರು. ಜರ್ಮನಿಯವರು ಬೆಲ್ಜಿಯಮನ್ನು ಪ್ರವೇಶ ಮಾಡಿದರು; ಇದರ ಮೇಲೆ ನಾವು ಯುದ್ಧದಲ್ಲಿ ಸೇರಬೇಕಾಯಿತು.

ಪ್ರಾರಂಭದಲ್ಲಿ ಆಸ್ಟ್ರಿಯಾದವರಿಗೂ ಸೆರ್ವಿಯಾದವರಿಗೂ ಮನಸ್ತಾಪವುಂಟಾದದ್ದರಿಂದ ಅವರವರಿಗೆ ಕದನ ಹುಟ್ಟಿತು. ರಷ್ಯಾದವರು ಸೆರ್ವಿಯಾದವರಿಗೆ ಮನೋಕರಾಗಿದ್ದಲ್ಲದೆ ಅವರಿಗೆ ಬೆಂಬಲವಾಗಿಯೂ ಬಂದು ನಿಂತರು. ಅತ್ತಲಾಗಿ ಜರ್ಮನಿಯವರು ಆಸ್ಟ್ರಿಯಾದವರಿಗೆ ಸಹಾಯಮಾಡುತ್ತಿದ್ದರು. ಫ್ರೆಂಚರು ರಷ್ಯಾದವರ ಕೂಡ ಕರಾರುಮಾಡಿಕೊಂಡು ಅವರ ಸ್ನೇಹಿತರಾಗಿದ್ದದ್ದರಿಂದ ಫ್ರೆಂಚರು ರಷ್ಯಾದವರ ಪಕ್ಷವನ್ನು ವಹಿಸಿ ಯುದ್ಧಕ್ಕೆ ಹೊರಟರು. ಮೊದಲು ಒಂದು ಪಕ್ಷದಲ್ಲಿ ಜರ್ಮನಿಯವರೂ, ಆಸ್ಟ್ರಿಯಾದವರೂ; ಎದುರುಪಕ್ಷದಲ್ಲಿ ಸೆರ್ವಿಯ, ರಷ್ಯ, ಫ್ರಾನ್ಸ್, ಬೆಲ್ಜಿಯಮ್, ಗ್ರೇಟ್ ಬ್ರಿಟನ್ ರಾಜ್ಯಗಳೂ ನಿಂತು ಯುದ್ಧಮಾಡಲಾರಂಭಿಸಿದರು. ಬಳಿಕ ಮಾಂಟಿನೀಗ್ರೊ ಎಂಬ ಸಣ್ಣ ಸಂಸ್ಥಾನವು ಸೆರ್ವಿಯಾ ಸಹಾಯಕ್ಕೆ ಬಂದಿತು. ಜಪಾನಿನವರು ಚೀಣಾದಲ್ಲಿದ್ದ ಜರ್ಮನಿಯವರ ಸ್ವಾಸ್ಥ್ಯಗಳ ಮೇಲೆ ನುಗ್ಗಿದರು ಈಚೆಗೆ ಟರ್ಕಿಯು ಜರ್ಮನಿ ಮತ್ತು ಆಸ್ಟ್ರಿಯಾದವರ ಕೂಡ ಸೇರಿಕೊಂಡಿತು. ಇದಾದ ಕೆಲವು ಕಾಲದ ಮೇಲೆ ಇಟಲಿಯು ನಮ್ಮ ಪಕ್ಷವನ್ನು ವಹಿಸಿತು. ಇದಕಾರಣ ಒಂದು ಕಡೆ ಗ್ರೇಟ್ ಬ್ರಿಟನ್, ಫ್ರಾನ್ಸ್, ಬೆಲ್ಜಿಯಮ್, ರಷ್ಯಾ, ಇಟಲಿ, ಸೆರ್ವಿಯ, ಮಾಂಟಿನೀಗ್ರೊ, ಜಪಾನ್ ರಾಜ್ಯಗಳು ಒಂದಾದವು. ಇನ್ನೊಂದು ಕಡೆ ಅಂದರೆ ನಮ್ಮ ಶತ್ರುಪಕ್ಷದಲ್ಲಿ ಜರ್ಮನಿ, ಆಸ್ಟ್ರಿಯಾ, ಹಂಗೆರಿ, ಟರ್ಕಿ ರಾಜ್ಯಗಳು ಏಕವಾಗಿರುತ್ತವೆ. ಈ ರಾಜ್ಯಗಳೆಲ್ಲಾ ಯುದ್ಧಕ್ಕೆ ಎಷ್ಟೆಷ್ಟು ಸೈನ್ಯಗಳನ್ನು ಜೊತೆ ಮಾಡಿ ಕಳುಹಿಸಿಕೊಟ್ಟಿರೋ ಲೆಕ್ಕಿಸುವುದು ಸಾಧ್ಯವಲ್ಲ; ಅವು ಹ್ಯಾಗೂ ಸುಮಾರು ಎರಡು ಕೋಟಿ ಸೈನ್ಯಕ್ಕಿಂತ ಕಡಮೆಯಲ್ಲವೆಂದು ಹೇಳಬಹುದು. ಇಷ್ಟು ಅಪರಿಮಿತವಾದ ಸೈನ್ಯಗಳು ಯುದ್ಧಕ್ಕೆ ಹೊರಟಿರುವುದು ಈ ಪ್ರಪಂಚದ ಚರಿತ್ರೆಯಲ್ಲೇ ಅಪೂರ್ವವಾಗಿರುತ್ತದೆ.

ಕದನಗಳು ಎಲ್ಲೆಲ್ಲಿ ನಡೆದವು? ಇದು ವರೆಗೆ ಆಗಿರುವ ಫಲಿತಾಂಶಗಳೇನು? ಎಂದು ಕೇಳಬಹುದು. ಈ ಪ್ರಶ್ನೆಗಳಿಗೆ ಸಮಾಧಾನವನ್ನು ಕೂಡಿದ ಮಟ್ಟಿಗೂ ಸಂಕ್ಷೇಪವಾಗಿ ಹೇಳುತ್ತೇವೆ. ಮೊದಲು ಸಮುದ್ರದ ಮೇಲೆ ನಡೆದಿರುವ ಕಾರ್ಯಗಳನ್ನು ನೋಡೋಣ. ಜರ್ಮನಿ, ಆಸ್ಟ್ರಿಯಾ, ಟರ್ಕಿ ರಾಜ್ಯಗಳವರು ಅನೇಕ ಯುದ್ಧದ ಹಡಗುಗಳನ್ನು ಇಟ್ಟುಕೊಂಡಿದಾರೆ; ಬ್ರಿಟನ್, ಫ್ರಾನ್ಸ್, ರಷ್ಯಾ, ಇಟಲಿ, ಜಪಾನ್, ಈ ರಾಜ್ಯಗಳವೂ ಯುದ್ಧದ ಹಡಗುಗಳಿರುತ್ತವೆ. ದೊಡ್ಡ ಸಮುದ್ರ ಯುದ್ಧಗಳೇನೂ ನಡೆಯಲಿಲ್ಲ; ಯಾಕೆಂದರೆ ಜರ್ಮನಿಯವರು ತಮ್ಮ ಹಡಗುಗಳನ್ನು ತಮ್ಮ ರಾಜ್ಯದ ತೀರಪಟ್ಟಣಗಳಲ್ಲೇ ಇಟ್ಟುಕೊಂಡಿದಾರೆ. ಆದರೂ ಅನೇಕ ಕಡೆಗಳಲ್ಲಿ ಸಣ್ಣ ಪುಟ್ಟ ಸಮುದ್ರ ಕದನಗಳು ನಡೆದಿರುವವು. ಜಪಾನಿನವರು ಬಹಳ ಬೇಗನೆ ನುಗ್ಗಿ ಹೋಗಿ ಚೀಣಾದಲ್ಲಿದ್ದ ಜರ್ಮನಿ ಹಡಗುಗಳಿಗೆ ಮುತ್ತಿಗೆ ಹಾಕಿ ಅವು ಹೊರಕ್ಕೆ ಬಾರದಂತೆ ಅಡ್ಡಿ ಮಾಡಿಬಿಟ್ಟರು. ಫ್ರೆಂಚರ ಸಾಹಸ ಕಾರ್ಯಗಳಿಂದ ಆಸ್ಟ್ರಿಯಾದವರ ಹಡಗುಗಳು ಅವರ ತೀರಪಟ್ಟಣಗಳಲ್ಲೇ ನಿಂತುಬಿಡಬೇಕಾಯಿತು. ಜರ್ಮನಿಯವರ ಹಲವು ಹಡಗುಗಳು ವಾಪಸು ಜರ್ಮನಿಗೆ ಬರಲಾರದಂತೆ ಅಲ್ಲಲ್ಲೇ ತಡೆಯಲ್ಪಟ್ಟವು. ಇವು ಆಯಾ ಪ್ರದೇಶಗಳಲ್ಲೇ ಸಂಚಾರ ಮಾಡುತ್ತಾ ಸಮುದ್ರದ ಮೇಲೆ ಕಂಡ ಹಲವು ವ್ಯಾಪಾರದ ಹಡಗುಗಳನ್ನು ಮುಳುಗಿಸುತ್ತಾ ಬಂದದ್ದರಿಂದ ನಮ್ಮ ಪಕ್ಷದವರು ಶತ್ರುವಿನ ಆ ಹಡಗುಗಳನ್ನೆಲ್ಲಾ ಒಂದೊಂದಾಗಿ ಹಿಡಿದು ನಾಶಮಾಡಿಬಿಟ್ಟರು. ಎಮ್ಡೆನ್ ಎಂಬ ಶತ್ರುವಿನ ಹಡಗು ಕೆಲವು ತಿಂಗಳ ತನಕ ತಪ್ಪಿಸಿಕೊಂಡು ಸಮುದ್ರದ ಮೇಲೆ ಸಂಚಾರ ಮಾಡುತ್ತಾ ಮದರಾಸಿನ ಹತ್ತಿರಕ್ಕೆ ಬಂದದ್ದಲ್ಲದೆ ಕೆಲವು ವ್ಯಾಪಾರದ ಹಡಗುಗಳನ್ನು ಮುಳುಗಿಸಿತು. ಇದರೆ ಅದನ್ನೂ ಕಡೆಗೆ ಹಿಡಿದು ನಾಶಮಾಡಿದ್ದಾಗಿದೆ. ದಕ್ಷಿಣ ಅಮೇರಿಕದ ಬಳಿ ಕೆಲವು ಸಣ್ಣ ಸಮುದ್ರ ಯುದ್ಧಗಳಾದವು. ಒಂದು ಯುದ್ಧದಲ್ಲಿ ಬ್ರಿಟಿಷರು ಕೆಲವು ಹಡಗುಗಳನ್ನು ಕಳೆದುಕೊಂಡರು; ಇನ್ನೊಂದರಲ್ಲಿ ಜರ್ಮನಿಯವರು ಸಂಪೂರ್ಣವಾಗಿ ಸೋಲಿಸಲ್ಪಟ್ಟರು. ಬ್ರಿಟಿಷರಿಗೂ ಜರ್ಮನಿಯವರಿಗೂ ಕೆಲವು ಸಣ್ಣ ಕದನಗಳಾದವು; ಪ್ರತಿ ಒಂದರಲ್ಲೂ ಜರ್ಮನಿಯವರು ಸೋತು ಹೋದರು. ಸಮುದ್ರದೊಳಗೆ ಇಡಲ್ಪಟ್ಟಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಒಡೆದು ಕೆಲವು ಬ್ರಿಟಿಷ್ ಹಡಗುಗಳು ಮುಳುಗಿಹೋದವು. ಬ್ಯಾಲ್ಟಿಕ್ ಕಡಲಿನಲ್ಲಿ ರಷ್ಯಾ ಮತ್ತು ಜರ್ಮನಿ ಹಡಗುಗಳಿಗೆ ಸಣ್ಣ ಕದನಗಳಾಗುತ್ತಾ ಬಂದವೆ; ಇದರಲ್ಲಿ ಜರ್ಮನಿಯವರು ಕೆಲವು ಹಡಗುಗಳನ್ನು ಕಳೆದುಕೊಂಡರು. ಕಪ್ಪು ಕಡಲಿನಲ್ಲಿ ರಷ್ಯಾದವರ ಹಡಗುಗಳಿಗೂ ಟರ್ಕಿಯವರ ಹಡಗುಗಳಿಗೂ ಕೆಲವು ಯುದ್ಧಗಳು ನಡೆದು ರಷ್ಯಾದವರೇ ಆ ಕಡಲನ್ನೆಲ್ಲಾ ಆವರಿಸಿಕೊಂಡಿದಾರೆ. ಸಮುದ್ರದ ಮೇಲೆ ನಡೆದ ಯುದ್ಧ ಕಾರ್ಯಗಳ ಪರಿಣಾಮವೇನಾಗಿದೆ ಎಂದರೆ—ಜರ್ಮನಿಯವರ ಹಡಗು ಒಂದಾದರೂ ಯಾವ ಸಮುದ್ರದಲ್ಲೂ ಇರುವುದಿಲ್ಲ; ಅವರ ಹಡಗುಗಳು ತಮ್ಮ ಸ್ವಂತ ಸಮುದ್ರತೀರದಲ್ಲಿ ಮಾತ್ರ ಸೇರಿಕೊಂಡಿರುತ್ತವೆ. ಆಸ್ಟ್ರಿಯಾ ಹಡಗುಗಳು ಅವುಗಳ ಸ್ಥಾನವನ್ನು ಬಿಟ್ಟು ಹೊರಗೆ ಬರದಂತಾಗಿದೆ. ಟರ್ಕಿಯ ಹಡಗುಗಳು ಕೂಡಾ ಕಾನ್ಸ್ಟಾಂಟಿನೋಪಲ್ ನಗರದ ತೀರದ ಬಳಿಯಲ್ಲೇ ಸೇರಿಕೊಂಡಿರುವವು. ಈ ಪ್ರಕಾರ ಸಮುದ್ರದ ಮೇಲೆ ಎಲ್ಲಾ ಕಡೆಗಳಲ್ಲೂ ನಮ್ಮ ಪಕ್ಷದವರೇ ಸರ್ವ ಸ್ವತಂತ್ರರಾಗಿರುವರು; ಇವರ ಹಡಗುಗಳು ನಿರಾತಂಕವಾಗಿ ಎಲ್ಲಾ ಕಡೆಗಳಲ್ಲೂ ಸಂಚಾರ ಮಾಡುವಂತಾಗಿದೆ. ಹಡಗುಗಳು ಹಿಂದುಸ್ಥಾನ, ಆಸ್ಟ್ರೇಲಿಯ, ಕೆನಡ, ಈ ಮೊದಲಾದ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಸೈನ್ಯಗಳನ್ನು ಸ್ವಲ್ಪವೂ ನಷ್ಟವಾಗದಂತೆ ಯುದ್ಧಭೂಮಿಗೆ ಸಾಗಿಸಿಕೊಂಡುಹೋಗಿ ತಲುಪಿಸಿರುತ್ತವೆ.

ಗ್ರೇಟ್ ಬ್ರಿಟನ್ ದ್ವೀಪದ ಸುತ್ತಲೂ ಜರ್ಮನಿಯವರು ಸಬ್‌ಮೆರೀನ್ ಎಂಬ ಹಡಗುಗಳನ್ನು ತಂದು ಸಮುದ್ರದೊಳಗಿಟ್ಟು ಪರದೇಶಗಳಿಗೆ ಗ್ರೇಟ್ ಬ್ರಿಟನ್ನಿಂದ ವ್ಯಾಪಾರದ ಸರಕುಗಳೇನೂ ಹಡಗುಗಳಲ್ಲಿ ಹೋಗದಂತೆಯೂ, ಹೊರಗಿನಿಂದ ಗ್ರೇಟ್ ಬ್ರಿಟನ್ ಒಳಕ್ಕೆ ಸರಕುಗಳು ಬಾರದಂತೆಯೂ ತಡೆಯಬೇಕೆಂದು ಸಾಹಸ ಪಡುತ್ತಿದಾರೆ. ಅಂಥಾ ಹಲವು ವ್ಯಾಪಾರದ ಹಡಗುಗಳನ್ನು ಅವರು ತಮ್ಮ ಸಬ್‌ಮೆರೀನುಗಳ ಮೂಲಕ ಮುಳುಗಿಸಿಯೂ ಇರುತ್ತಾರೆ. ಆದರೂ ಗ್ರೇಟ್ ಬ್ರಿಟನ್ ವ್ಯಾಪಾರವನ್ನು ಅವರು ವಿಶೇಷವಾಗಿ ತಡೆಯಲು ಅವರಿಂದ ಸಾಧ್ಯವಾಗಿರುವುದಿಲ್ಲ. ಜರ್ಮನಿಯವರು ಲೂಸಿಟೇನಿಯ ಎಂಬ ಜಹಜನ್ನು ಮುಳುಗಿಸಿದ್ದು ಮಹಾ ಕ್ರೂರವಾದ ಘಾತುಕ ಕೃತ್ಯ; ಅದರಲ್ಲಿ ನಿರಪರಾಧಿಗಳಾದ ಸಾವಿರಾರು ಮಂದಿ ಗಂಡಸರೂ ಹೆಂಗಸರೂ ಅರಿಯದ ಮಕ್ಕಳೂ ಅನ್ಯಾಯವಾಗಿ ಸಮುದ್ರದ ಪಾಲಾದರು. ಇದು ಕ್ರೂರವಾದ ಕೊಲೆಯೇ ಹೊರತು ಇದನ್ನು ಯುದ್ಧವೆಂದು ಯಾರೂ ಹೇಳರು. ಈ ಕೃತ್ಯವು ಅಮೇರಿಕದವರಿಗೆ ಜರ್ಮನಿಯವರ ಮೇಲೆ ಬಹಳ ಆಕ್ರೋಶವನ್ನುಂಟುಮಾಡಿದೆ; ಅದರಲ್ಲಿ ಮೃತಪಟ್ಟವರನೇಕರು ಅಮೇರಿಕದವರಾಗಿದ್ದರು. ಈ ವಿಚಾರದಲ್ಲಿ ಅಮೇರಿಕದವರಿಗೂ ಜರ್ಮನಿಯವರಿಗೂ ಕಾಗದ ಪತ್ರಗಳು ಅಂದಿನಿಂದ ನಡೆಯುತ್ತಿರುವವು. ಅಂತು ಬ್ಯಾಲ್ಟಿಕ್ ಕಡಲೊಂದು ಹೊರತು ಯಾವ ಸಮುದ್ರದಲ್ಲಾಗಲಿ ಸಾಗರದಲ್ಲಾಗಲಿ ಜರ್ಮನಿಯ ಜಹಜು ಕಾಣದಂತಾಗಿದೆ. ಎಲ್ಲಾ ಕಡೆಗಳಲ್ಲೂ ನಮ್ಮ ಪಕ್ಷದವರೇ ಸರ್ವಸ್ವತಂತ್ರಗಳಾಗಿದಾರೆ. ಆದರೂ ಜರ್ಮನಿಯವರು ತಮ್ಮ ಜಹಜುಗಳನ್ನು ತಮ್ಮ ತೀರಪಟ್ಟಣಗಳಿಂದ ಹೊರಕ್ಕೆ ತಂದು ದೊಡ್ಡ ಸಮುದ್ರ ಯುದ್ಧವನ್ನು ಮಾಡಬಹುದು. ಅಂಥಾ ಸಮಯ ಒದಗಿದಾಗ್ಯೂ ಬ್ರಿಟಿಷರು ಶತ್ರುವನ್ನು ಎದುರಿಸಿ ಯುದ್ಧಮಾಡುವುದಕ್ಕೆ ಸರ್ವಸನ್ನಾಹಗಳನ್ನೂ ಮಾಡಿಕೊಂಡು ಸಿದ್ಧರಾಗಿದಾರೆ. ನಮ್ಮ ಪಕ್ಷದವರು ಸಮಸ್ತ ಸಮುದ್ರಗಳ ಮೇಲೂ ಕಾವಲಿಟ್ಟು ನೋಡಿಕೊಳ್ಳುತ್ತಿರುವುದರಿಂದಲೇ ನಮ್ಮ ಹಿಂದುಸ್ಥಾನವು ಸುರಕ್ಷಿತವಾ[ಗಿದೆ].

ಇನ್ನು ಈ ಯುದ್ಧದಲ್ಲಿ ಆದಿಯಿಂದಲೂ ಭೂಮಿಯ ಮೇಲೆ ನಡೆದಿರುವ ಕದನಗಳನ್ನೂ ಅವುಗಳ ಪರಿಣಾಮವನ್ನೂ ಸಂಕ್ಷೇಪಿಸಿ ಮುಂದಿನ ವಾರ ಪ್ರಕಟಿಸಬೇಕೆಂದಿದೇವೆ.

ಯುದ್ಧದಲ್ಲಿ ನಾವು ಹೇಗೆ ಸಹಾಯ ಮಾಡಬಹುದು?

ಕೆಲವು ದಿನಗಳ ಹಿಂದೆ ನಮ್ಮ ರಾಷ್ಟ್ರದಲ್ಲಿ ಅಲ್ಲಲ್ಲಿ ಪ್ರಜೆಗಳು ಸೇರಿ ಸಭೆಗಳನ್ನು ನಡಿಸಿ ಈಗಿನ ಯುದ್ಧವನ್ನು ಜಯಪ್ರದವಾಗುವ ತನಕ ನಡಿಸಬೇಕೆಂದೂ, ಅದಕ್ಕೆ ಬೇಕಾದ ಸಹಾಯ ಸಂಪತ್ತುಗಳನ್ನು ಒದಗಿಸುವುದಾಗಿಯೂ ಸಂಕಲ್ಪ ಮಾಡಿಕೊಂಡಿರುತ್ತಾರೆ. ಮೈಸೂರು ಸಂಸ್ಥಾನದಲ್ಲಿರುವ ನಾವು ಬ್ರಿಟಿಷರ ಸಮುದ್ರಸೇನೆಯ ದೆಸೆಯಿಂದ ಯಾವ ವಿಧವಾದ ತೊಂದರೆಗಳೂ ಇಲ್ಲದೆ ನೆಮ್ಮದಿಯಾಗಿಯೂ ಸುಖದಿಂದಲೂ ಇರುತ್ತೇವೆ. ನಮ್ಮ ಸಂಸ್ಥಾನವೂ ನಮ್ಮ ಸಹೋದರ ವರ್ಗವೂ ... ಹಲವು ಜನಗಳು ಶತ್ರುವಿನ ಮೇಲೆ ಕಾದಾಡುವುದಕ್ಕೆ ಯುದ್ಧಭೂಮಿಗೆ ಹೋಗಿರುತ್ತಾರೆ. ಮತ್ತು ಅವರು ಈಗಲೇ ಬಹು ತಾಣದಲ್ಲಿ ಶತ್ರುವನ್ನು ಸಂಧಿಸಿ ಕದನವೂ ಮಾಡಿದರು. ಅವರಲ್ಲಿ ಕೆಲವರು ಪ್ರಾಣಕೊಟ್ಟರು, ಕೆಲವರು ಗಾಯಪಟ್ಟು ನರಳುತ್ತಿದಾರೆ, ಅನೇಕರಿಗೆ ಇತರ ವಿಧವಾದ ನಾನಾ ಕಷ್ಟಗಳುಂಟಾಗಿವೆ. ಇವರಿಗೆ ನಮ್ಮ ಕೈಲಾಗುವಷ್ಟು ಸಹಾಯ ಮಾಡಬೇಕಾದದ್ದು ನಮ್ಮ ಧರ್ಮ. ಯಾವ ರೀತಿಯಲ್ಲಿ ಎಂದು ಕೇಳಬಹುದು. ಸೆಂಟ್ ಜಾನ್ ಆಂಬ್ಯುಲೆನ್ಸ್ ಸಂಘದ ಮೂಲಕ ಅನ್ನ ಬಟ್ಟೆಬರೆಗಳನ್ನೂ ಹಿತವಾಗುವಂಥಾ ಪದಾರ್ಥಗಳನ್ನೂ ಕಳುಹಿಸಬಹುದು. ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರು ಈ ಸಂಘದ ಕಾರ್ಯದರ್ಶಿಯಾಗಿದಾರೆ. ಅವರು ಇದುವರೆಗೆ 10,000 ರೂಪಾಯಿಗಿಂತಲೂ ಹೆಚ್ಚಾಗಿ ದ್ರವ್ಯವನ್ನೂ, ಹಲವು ಪೆಟ್ಟಿಗೆ ತುಂಬುವಷ್ಟು ಬಟ್ಟೆಬರೆ ಮೊದಲಾದ ಪದಾರ್ಥಗಳನ್ನೂ ಸಂಘದ ಮೂಲಕ ಕೂಡಿಸಿ ಸೈನಿಕರಿಗೆ ಕಳುಹಿಸಿಕೊಟ್ಟಿದಾರೆ. ಈ ಫಂಡಿಗೆ ಇನ್ನೂ ಬಹಳ ದ್ರವ್ಯವೂ ಪದಾರ್ಥಗಳೂ ಬೇಕಾಗಿರುತ್ತವೆ.

ಮದರಾಸ್ ಆಧಿಪತ್ಯದವರು ಮಾಡಿರುವ ಸಹಾಯವನ್ನು ನೋಡಿ. ಅಲ್ಲಿನ ಪ್ರಜೆಗಳು ಚಂದಾ ಹಾಕಿ ಒಂದು ಹಡಗನ್ನು ಕೊಂಡುಕೊಂಡರು. ಅದರೊಳಗೆ ಆಸ್ಪತ್ರೆಯಂತೆ ಅನುಕೂಲಮಾಡಿ ಗಾಯಪಟ್ಟ ಸೈನಿಕರನ್ನು ಆರೈಕೆ ಮಾಡುತ್ತಾ ಯುದ್ಧಭೂಮಿಯಿಂದ ವಾಪಸು ಕರೆತರುವಂತೆ ಮಾಡಿದಾರೆ. ಈ ಹಡಗು ಹಲವು ಸಲ ಫ್ರಾನ್ಸ್ ಆಫ್ರಿಕಾಗಳಿಗೂ, ಫಾರಿಸ್ ಕಾಲುವೆಗೂ ಹೋಗಿದ್ದು ಅಲ್ಲಲ್ಲಿ ಕಾಯಿಲೆಬಿದ್ದ ಮತ್ತು ಗಾಯಪಟ್ಟ ಹಿಂದುಸ್ಥಾನದ ನೂರಾರು ಮಂದಿ ಸೈನಿಕರನ್ನು ವಾಪಸು ಕರೆದುಕೊಂಡುಬಂದಿರುತ್ತದೆ. ಈ ಆಸ್ಪತ್ರೆ ಹಡಗಿಗೆ ಪ್ರತಿ ತಿಂಗಳಿಗೂ 1,25,000 ರೂಪಾಯಿ ಖರ್ಚಾಗುತ್ತಿದೆ. ಈ ಫಂಡಿನ ಬೆಳವಳಿಗೆಗೆ ದ್ರವ್ಯ ಸಹಾಯ ಮಾಡೋಣ.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡು ಬೇರೆ ಇದೆ. ಈ ಫಂಡಿಗೆ ಇದು ವರೆಗೆ ಸುಮಾರು 98,23,000 ರೂಪಾಯಿ ಚಂದಾ ಕೂಡಿರುವುದು. ಈ ಹಣದಿಂದ ಗಾಯಪಟ್ಟ ಸೈನಿಕರನ್ನೂ, ಅವರ ಸಂಸಾರಗಳನ್ನೂ, ಯುದ್ಧಭೂಮಿಗೆ ಹೋಗಿರುವ ಸೈನಿಕರ ಹೆಂಡಿರು ಮಕ್ಕಳುಗಳನ್ನೂ ಸಾಕಿ ಸಂರಕ್ಷಣೆ ಮಾಡುತ್ತಾರೆ. ಈ ಧರ್ಮ ಫಂಡಿಗೆ ದ್ರವ್ಯ ಸಹಾಯ ಮಾಡೋಣ.

ಬೆಲ್ಜಿಯಮ್ ದೇಶದಲ್ಲಿ ಬಡಬಗ್ಗರಾದ ಪ್ರಜೆಗಳು ತಮ್ಮ ಸರ್ವಸ್ವವನ್ನೂ ಕಳಕೊಂಡರು; ಲಕ್ಷಾಂತರ ಪ್ರಜೆಗಳು ಧರ್ಮ ಫಂಡುಗಳ ಹಣದಿಂದ ಜೀವನ ಮಾಡುತ್ತಿದಾರೆ. ಅವರು ಧರ್ಮಾತ್ಮರ ಕೈಯನ್ನೇ ಕಾಯುತ್ತಿರುವರು. ಅವರು ಮತ್ತೆ ತಮ್ಮ ದೇಶಕ್ಕೂ ತಮ್ಮ ಮನೆಮಠಗಳಿಗೂ ವಾಪಸು ಹೋಗುವ ತನಕ ಅವರ ಜೀವನಕ್ಕೆ ದ್ರವ್ಯ ಸಹಾಯವಾಗಬೇಕಾಗಿದೆ. ಇದಲ್ಲದೆ ಸೆರ್ವಿಯಾ ರಾಜ್ಯದ ಪ್ರಜೆಗಳೂ ಕಷ್ಟನಷ್ಟಗಳಿಗೆ ಗುರಿಯಾಗಿ ಬಹಳ ನವೆದು ಹೋಗಿದಾರೆ. ಇವರೂ ಧರ್ಮಸ್ಥರ ಸಹಾಯಕ್ಕೆ ಸತ್ಪಾತ್ರರಾಗಿರುವರು.

ಮತ್ತು ನಮ್ಮ ಹಿಂದುಸ್ಥಾನದ ಸೈನ್ಯಕ್ಕೆ ಕಾಯಕಷ್ಟ ಪಡುವಂಥಾ ಅನೇಕ ಜನಗಳು ಮುಂದೆ ಬಂದು ಸೇರಿಕೊಳ್ಳಬೇಕಾಗಿದೆ. ಅನೇಕ ಸೈನಿಕರು ಕೊಲೆಯಾದರು, ಅಲ್ಲದೆ ಗಾಯಪಟ್ಟರು. ಇವರುಗಳ ಸ್ಥಾನಗಳಿಗೆ ಹೊಸ ಜನಗಳು ಬೇಕಾಗಿದಾರೆ. ನಮ್ಮ ದೇಶದಲ್ಲಿ ಪರಾಕ್ರಮಶಾಲಿಗಳಾದವರು ಸೈನ್ಯಕ್ಕೆ ಸೇರಿಕೊಂಡು ತರಪೇತಾಗಿ ಯುದ್ಧಭೂಮಿಯಲ್ಲಿ ನಿಂತು ಶತ್ರುವಿನ ಮೇಲೆ ತಮ್ಮ ಪೌರುಷವನ್ನು ತೋರಿಸುವುದರಿಂದ ಅಪಾರವಾದ ಸಹಾಯಮಾಡಬಹುದಾಗಿದೆ. ಇದು ಮಿಕ್ಕ ಎಲ್ಲಾ ಸಹಾಯಗಳಿಗಿಂತಲೂ ಎಷ್ಟೋ ಘನತರವೂ ಶ್ರೇಯಸ್ಕರವೂ ಆದದ್ದಾಗಿದೆ. ಹಿಂದುಸ್ಥಾನದವರು ಹತ್ತು ಲಕ್ಷ ಸೈನ್ಯವನ್ನು ಕೂಡಿಸಿ ತರಪೇತುಮಾಡಿ ಯುದ್ಧಭೂಮಿಗೆ ಕಳುಹಿಸಿಕೊಟ್ಟಪಕ್ಷದಲ್ಲಿ ಈ ಯುದ್ಧವು ಬಹಳ ಬೇಗನೆ ಕೊನೆಮುಟ್ಟೀತು.

ಹಿಂದುಸ್ಥಾನದವರಾದ ನಾವುಗಳು ಈಗಿನ ಯುದ್ಧದಲ್ಲಿ ಸಹಾಯಮಾಡಬಹುದಾದ ಮಾರ್ಗಗಳು ಇವೇ. ಯಾರಾದರೂ ಚಂದಾ ಹಣವನ್ನು ಕಳುಹಿಸಿಕೊಟ್ಟಲ್ಲಿ ನಾವು ಸಂತೋಷದಿಂದ ಸ್ವೀಕರಿಸಿ ಆಯಾ ಫಂಡುಗಳ ಸೆಕ್ರೆಟರಿಗಳಿಗೆ ರವಾನೆಮಾಡುತ್ತೇವೆ. ನಾವುಗಳೆಲ್ಲಾ ಈ ಪ್ರಕಾರ ಏಕೋದ್ದೇಶದಿಂದ ಕಾರ್ಯಭಾಗಗಳನ್ನು ನಡಿಸಿ ಸಹಾಯಮಾಡುತ್ತಲೂ, ದೇವರ ವರಪ್ರಸಾದಗಳನ್ನು ಬೇಡುತ್ತಲೂ ಬಂದ ಪಕ್ಷದಲ್ಲಿ ಈ ಯುದ್ಧವು ಪರಿಣಾಮ ಹೊಂದಿ ನಮಗೆ ಜಯವಾಗುವುದಕ್ಕೆ ಸಂಶಯವಿಲ್ಲ.

ಯುದ್ಧದ ಸಮಾಚಾರಗಳು.

ವಾರ್ಸಾ ನಗರ ಜರ್ಮನಿಗೆ ವಶವಾಯಿತು.

ಈ ವಾರದ ಯುದ್ಧವಾರ್ತೆಗಳಲ್ಲೆಲ್ಲಾ ವಾರ್ಸಾ ಪಟ್ಟಣವು ಜರ್ಮನಿಯವರ ವಶವಾದದ್ದೇ ವಿಶೇಷವಾದದ್ದು. ಇದು ಹೋದದ್ದು ರಷ್ಯಾದವರಿಗೆ ದೊಡ್ಡ ನಷ್ಟ; ಆದರಿಂದ ಜರ್ಮನಿಯವರಿಗೆ ವಿಜಯವಾಯಿತು. ಆದಾಗ್ಯೂ ರಣರಂಗದ ಇತರ ಭಾಗಗಳಲ್ಲಿ ವಿದ್ಯಮಾನಗಳು ಅನುಕೂಲವಾಗಿರುತ್ತವೆ.

ಪಶ್ಚಿಮ ರಣರಂಗದಲ್ಲಿ.

ಬೆಲ್ಜಿಯಮ್‌ನಲ್ಲೂ ಫ್ರಾನ್ಸಿನಲ್ಲೂ ವಿಶೇಷವಾದ ಯುದ್ಧಕಾರ್ಯಗಳು ನಡೆದಿರುವುದು ಬಹಳ ಸ್ವಲ್ಪ. ಜರ್ಮನಿಯವರು ಒಂದು ತರಹಾ ಬೆಂಕಿಯ ಆಯುಧವನ್ನು ಪ್ರಯೋಗಿಸಿ ಬ್ರಿಟಿಷ್ ಸೈನ್ಯಗಳ ಸಾಲನ್ನು ಒಡೆದು ನುಗ್ಗಬೇಕೆಂದು ಪ್ರಯತ್ನಪಟ್ಟರು. ಜೀರ್‌ಕೊಳವೆಯಲ್ಲಿ ಒಂದು ತರಹಾ ದ್ರಾವಕವನ್ನು ತುಂಬಿ ತಿರುವಿದರೆ ಸೀರಿನೋಪಾದಿಯಲ್ಲಿರುವ ಆ ದ್ರಾವಕವು ಹೋಗಿ ಯಾವ ಪದಾರ್ಥಕ್ಕೆ ತಗಲುತ್ತದೆಯೋ ಆ ಪದಾರ್ಥವು ಭಗ್ಗನೆ ಹತ್ತಿಕೊಳ್ಳುವುದು. ಇಂಥಾ ಉಪಾಯವೂ ಜರ್ಮನಿಯವರಿಗೆ ಸಹಾಯವಾಗಲಿಲ್ಲ. ಈ ರಣರಂಗದಲ್ಲಿ ನಡೆದ ಯುದ್ಧಕಾರ್ಯಗಳು ಬಹಳ ಸ್ವಲ್ಪ. ಒಂದೆರಡು ಕಡೆಗಳಲ್ಲಿ ಫ್ರೆಂಚರು ಕೆಲವು ಜರ್ಮನರನ್ನು ಕೈಸೆರೆ ಹಿಡಿದುತಂದರು.

ಒಂದು ಠಾಣ್ಯದಲ್ಲಿ ಫ್ರೆಂಚರಿಗೆ 900 ಶತ್ರು ಸೈನಿಕರು ಕೈಸೆರೆ ಸಿಕ್ಕಿದರು; 100 ಮಂದಿಗಿಂತಲೂ ಹೆಚ್ಚಾಗಿಯೇ ಕೊಂದುಹಾಕಿದರು. ಈ ಕದನದಲ್ಲಿ ಫ್ರೆಂಚರ ಕಡೆ ನಾಲ್ವರು ಮಾತ್ರ ಕೊಲೆಯಾಗಿ, 25 ಮಂದಿಗೆ ಗಾಯಗಳಾದವು.

ಫ್ರೆಂಚರು ಆಕ್ರಮಿಸಿಕೊಂಡಿದ್ದ ಒಂದು ಗುಡ್ಡವನ್ನು ಅವರಿಂದ ಕಿತ್ತುಕೊಳ್ಳಬೇಕೆಂದು ಜರ್ಮನಿಯವರು ಬಹಳ ರೋಷಾವೇಶದಿಂದ ನುಗ್ಗಿ ಕದನ ಮಾಡಿದರು. ಫ್ರೆಂಚರು ಅವರಿಗೆ ಅವಕಾಶಕೊಡದೆ ಹಿಂದಕ್ಕೆ ಓಡಿಸಿಬಿಟ್ಟರು. ಅಲ್ಲಿ ಒಂದು ಕಂದಕದ ಮುಂಭಾಗದಲ್ಲಿ ಜರ್ಮನ ಸೈನಿಕರ 100 ಹೆಣಗಳು ಮುಳ್ಳು ತಂತಿಗಳಿಗೆ ಸಿಕ್ಕಿಕೊಂಡಿದ್ದುವು.

ಜರ್ಮನಿಯವರು ಇನ್ನು ಬೇರೆ ಹತ್ತು ಲಕ್ಷ ಸೈನ್ಯವನ್ನು ಕೂಡಿಸುತ್ತಿದ್ದಾರೆ. ಎಲ್ಲಾ 17-18 ವಯಸ್ಸಿನ ಹುಡುಗರನ್ನೂ ಸೇರಿಸಬೇಕೆಂದು ತಿಳಿಸಿರುವರು. ಇದಲ್ಲದೆ 50 ವರುಷದ ವರೆಗೆ ವಯಸ್ಸಾಗಿರತಕ್ಕವರನ್ನೂ ಸೈನ್ಯಕ್ಕೆ ಸೇರಿಸಿಕೊಳ್ಳುವಂತೆ ಹುಕುಂ ಕೊಟ್ಟಿದ್ದಾರೆ. ಜರ್ಮನಿ ಗವರ್ನ್‌ಮೆಂಟಿನವರು ಮೂರು ಕೋಟಿ ಪ್ರಜೆಗಳನ್ನು ಸರ್ಕಾರದ ಪೋಷಣೆಯಲ್ಲಿಟ್ಟುಕೊಂಡು ಅವರಿಗೆಲ್ಲಾ ಆಹಾರಸಾಮಗ್ರಿಗಳನ್ನು ಕಟ್ಟುನಿಟ್ಟಾಗಿ ನಡಿಸುತ್ತಿರುವರು. ಯಾಕೆಂದರೆ ಆಹಾರಸಾಮಗ್ರಿಗಳು ಕಡಮೆಯಾಗಿರುವ ಭೀತಿಯೇ ಅವರಿಗೆ ಹೆಚ್ಚು.

ಕಳೆದ ಜುಲೈ ತಾ. 27 ರಲ್ಲಿ ಒಂದು ಬ್ರಿಟಿಷ್ ಸಬ್‌ಮೆರೀನು ಜರ್ಮನ ತೀರದಲ್ಲಿ ಜರ್ಮನಿಯವರ ಡಿಸ್ಟ್ರಾಯರೆಂಬ ಒಂದು ಯುದ್ಧದ ಹಡಗನ್ನು ಮುಳುಗಿಸಿರುತ್ತದೆ.

ಪೂರ್ವ ರಣರಂಗದಲ್ಲಿ.

ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾದವರನ್ನು ಕೆಲವು ವಾರಗಳಿಂದ ಕ್ರಮ ಕ್ರಮವಾಗಿ ಹಿಮ್ಮೆಟ್ಟಿಸುತ್ತಲಿದ್ದಾರೆ. ಅವರಿಗೆ ಬಹಳ ಉತ್ತಮವಾದ ಆಯುಧವೂ ಯುದ್ಧಸಾಮಗ್ರಿಗಳುಂಟು; ಇಂಥವರ ಮೇಲೆ ರಷ್ಯಾದವರು ನುಗ್ಗಿ ಸ್ವಲ್ಪವೂ ಅಧೈರ್ಯಪಡದೆ ಮಹಾ ಪರಾಕ್ರಮದಿಂದ ಯುದ್ಧಕಾರ್ಯಗಳನ್ನು ನಡಿಸಿ, ಜರ್ಮನಿಯ ಸೈನ್ಯದಲ್ಲಿ ಅಪಾರವಾದ ನಷ್ಟವನ್ನುಂಟುಮಾಡಿದರು. ರಷ್ಯಾದವರು ಕಳೆದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಜರ್ಮನಿ ಸೈನ್ಯದಲ್ಲಿ 2,70,000 ಮಂದಿ ಯುದ್ಧಭಟರನ್ನು ನಷ್ಟಪಡಿಸಿದರೆಂದು ಹೇಳಲಾಗಿದೆ. ಜರ್ಮನಿಯ ಉತ್ತಮೋತ್ತಮವಾದ ಸೈನ್ಯದಲ್ಲಿ ಐದಕ್ಕೆ ಎರಡು ಮಂದಿಯಂತೆ ನಷ್ಟವಾಗಿರುವುದು. ಈಗ ರಷ್ಯಾದವರು ಹಿಮ್ಮೆಟ್ಟಿಸಲ್ಪಟ್ಟಿದ್ದಾಗ್ಯೂ ಅದು ಜರ್ಮನಿಯವರಿಗೆ ಸುಲಭವಾಗಲಿಲ್ಲ; ಅವರಲ್ಲಿ ಅನೇಕರನ್ನು ಕಳೆದುಕೊಳ್ಳಬೇಕಾಯಿತು.

ವಾರ್ಸಾ ಪಟ್ಟಣವನ್ನು ಸಂರಕ್ಷಿಸತಕ್ಕ ಕೋಟೆಗಳು ಸುಮಾರು ಹದಿನೇಳು ಇದ್ದುವು. ಇವು ಪಟ್ಟಣದಿಂದ ಹೊರಗಡೆ ಐದು ಮೈಲಿ ಹಿಡಿದು ಹತ್ತು ಮೈಲಿ ದೂರದಲ್ಲಿದ್ದುವು. ಇವುಗಳ ಮೇಲೆ 1,400 ಫಿರಂಗಿಗಳನ್ನು ಏರಿಸಿಟ್ಟಿದ್ದರು. ಕೋಟೆಗಳ ಕಟ್ಟಡ ರಚನೆಯು ಅಷ್ಟೇನೂ ಬಲವಾದದ್ದಲ್ಲ. ಈಗಿನ ಕಾಲದ ಭಾರೀ ಫಿರಂಗಿ ಗುಂಡುಗಳಿಗೆ ಅವು ನಿಲ್ಲತಕ್ಕವುಗಳಾಗಿರಲಿಲ್ಲ. ರಷ್ಯಾದವರಾದರೋ ಆ ಪಟ್ಟಣಕ್ಕೆ ಶತ್ರುವಿನ ಗುಂಡುಗಳ ಏಟು ಬೀಳದಂತೆ ಕಾಪಾಡಿಕೊಳ್ಳಬೇಕೆಂಬ ಕುತೂಹಲವುಳ್ಳವರಾಗಿದ್ದರು. ಆದರೆ ಜರ್ಮನಿ ಮತ್ತು ಆಸ್ಟ್ರಿಯಾ ಸೈನಿಕರನ್ನು ಪಟ್ಟಣದಿಂದ ಬಹಳ ದೂರದಲ್ಲೇ ತಡೆದು ಯುದ್ಧ ಕೊಡುವುದು ಸಾಧ್ಯವಲ್ಲವೆಂದು ಗೊತ್ತಾದಾಗ ರಷ್ಯಾದವರು ಆ ಪಟ್ಟಣವನ್ನೇ ತ್ಯಜಿಸಿ ಹೊರಟುಹೋಗುವುದು ಉತ್ತಮವೆಂದು ತೀರ್ಮಾನ ಮಾಡಿದರು. ಅವರು ಆ ನಗರದಲ್ಲಿದ್ದ ತಮ್ಮ ಫಿರಂಗಿ ಮದ್ದು ಗುಂಡು ಮೊದಲಾದ ಸಮಸ್ತ ಪದಾರ್ಥಗಳನ್ನೂ ಹೊರಕ್ಕೆ ಸಾಗಿಸಿಕೊಂಡು ಹೋದ ಮೇಲೆ ನದಿಯ ಸೇತುವೆಗಳನ್ನೆಲ್ಲಾ ಒಡೆದು ನಾಶಮಾಡಿಬಿಟ್ಟು, ತಮ್ಮ ಸೈನ್ಯಗಳನ್ನು ಅಲ್ಲಿಂದ ಹಿಂದಕ್ಕೆ ಸ್ವಲ್ಪ ದೂರದಲ್ಲಿ ಹೋಗಿ ನಿಲ್ಲುವಂತೆ ಹುಕುಂ ಕೊಟ್ಟುಬಿಟ್ಟರು. ಇಷ್ಟಾಗುವುದಕ್ಕೆ ಜರ್ಮನಿಯವರೂ ಆಸ್ಟ್ರಿಯಾದವರೂ ಮೂರು ತಿಂಗಳು ಘೋರವಾದ ಕದನಗಳನ್ನು ಮಾಡುತ್ತಾ ಬರಬೇಕಾಯಿತು. ಇಷ್ಟಾದರೂ ಅವರಿಗೆ ರಷ್ಯಾ ಸೈನ್ಯಗಳೇನೂ ಸಿಕ್ಕಲೇ ಇಲ್ಲ. ವಾರ್ಸಾ ಪಟ್ಟಣವನ್ನು ಗೆದ್ದೆವೆಂಬ ಸುದ್ದಿಯು ಬರ್ಲಿನ್ ರಾಜಧಾನಿಯಲ್ಲಿ ತಿಳಿದಾಗ ಜರ್ಮನಿ ಪ್ರಜೆಗಳು ಕೋಲಾಹಲದಿಂದ ಸಂತೋಷೋತ್ಸವಗಳನ್ನು ಮಾಡಿದರು. ಆದರೆ ಆ ಪಟ್ಟಣದಲ್ಲಿ ದ್ರವ್ಯವಾಗಲಿ ರಷ್ಯಾಸೈನಿಕರಾಗಲಿ ಸಿಕ್ಕಲಿಲ್ಲವೆಂದು ತಿಳಿದಾಗ ಪ್ರಜೆಗಳಿಗೆ ಬಹಳ ನಿರಾಸೆಯುಂಟಾಯಿತು. ರಷ್ಯಾದವರು ಹಿಮ್ಮೆಟ್ಟಿ ಹೋಗುವುದಕ್ಕೆ ಮೊದಲೇ ತಮ್ಮ ಮದ್ದು ಗುಂಡನ್ನೂ ಸೈನ್ಯಗಳನ್ನೂ ಸಾಗಿಸಿಕೊಂಡು ಹೋಗಿದ್ದರು. ನಮಗೆ ತಿಳಿದ ಮಟ್ಟಿಗೂ ಜರ್ಮನಿಯವರು ಕಳೆದ 5ನೇ ತಾ. ಗುರುವಾರ ವಾರ್ಸಾ ಪಟ್ಟಣವನ್ನು ಆಕ್ರಮಿಸಿಕೊಂಡರೆಂದು ತೋರುತ್ತದೆ. ತಂತೀವರ್ತಮಾನಗಳು ಉಭಯ ಪಕ್ಷಗಳಲ್ಲೂ ಎಷ್ಟೆಷ್ಟು ನಷ್ಟವಾಯಿತೋ ತಿಳಿಸುವುದಿಲ್ಲ; ಹೇಗೂ ಆಗಿ ಬಹಳ ನಷ್ಟವಾಯಿತೆಂದು ಹೇಳುವವು. ವಾರ್ಸಾ ಪಟ್ಟಣವನ್ನು ರಷ್ಯಾದವರು ಬಿಟ್ಟು ಹೊರಟುಹೋಗಬಹುದೆಂದು ಸುಮಾರು ಹತ್ತು ದಿನಗಳಿಂದ ತಿಳಿಸಿದ್ದುವು; ಈಗ ಆ ಮಾತು ನಿಜವಾಗಿ ಪರಿಣಮಿಸಿರುತ್ತದೆ. ಈ ಜಯವು ಜರ್ಮನಿಯವರಿಗೂ ಆಸ್ಟ್ರಿಯಾದವರಿಗೂ ಆನಂದವನ್ನುಂಟುಮಾಡುವುದು ಸಹಜವೆ ಸರಿ. ಆದರೆ ಅವರನ್ನು ಸಂಪೂರ್ಣವಾಗಿ ಸೋಲಿಸುವ ತನಕ ಯುದ್ಧವನ್ನು ನಡಿಸುತ್ತಾ ಬರುತ್ತೇವೆಂದು ರಷ್ಯಾದವರು ಸಂಕಲ್ಪಮಾಡಿಕೊಂಡಿರುವರು.

ರಷ್ಯಾದವರು ವಾರ್ಸಾ ಪಟ್ಟಣವನ್ನು ತ್ಯಜಿಸಿಹೋಗುವುದಕ್ಕೆ ಮೊದಲೇ ಅಲ್ಲಿದ್ದ ಅನೇಕ ಪ್ರಜೆಗಳು ಹೊರಟುಹೋದರು. ಹಣ, ಲೋಹ, ಟೆಲಿಗ್ರಾಫ್ ತಂತಿ, ಘಂಟೆ, ಯಂತ್ರ ಮೊದಲಾದವುಗಳನ್ನೆಲ್ಲಾ ಪಟ್ಟಣದಿಂದ ಸಾಗಿಸಿಬಿಟ್ಟರು. ಕಾರ್ಖಾನೆಗಳನ್ನು ಒಡೆದುಹಾಕಿದ್ದರು. ಜುಲೈ ತಾ 21 ರಲ್ಲೇ ವಾರ್ಸಾ ಪಟ್ಟಣವು ಬರಿದಾಗಿತ್ತೆಂದು ಒಬ್ಬ ಬಾತ್ಮೀದಾರನು ಹೇಳುತ್ತಾನೆ. ಅಲ್ಲಿ ಕುಡಿಯುವ ನೀರಿನ ಏರ್ಪಾಡಿಲ್ಲ. ಪಸ್ತೀರು ಮೊದಲಾದ ಚಿತ್ರವಸ್ತುಗಳನ್ನೆಲ್ಲಾ ಮಾಸ್ಕೋ ನಗರಕ್ಕೆ ಸಾಗಿಸಿಬಿಟ್ಟರು. ಶತ್ರುವಿಗೆ ಉಪಯೋಗವಾಗಬಹುದಾದ ಯಾವ ಪದಾರ್ಥವನ್ನೂ ಬಿಟ್ಟಿಲ್ಲ; ಅನೇಕ ಕಟ್ಟಡಗಳನ್ನು ಕೂಡ ಕೆಡು ಹಾಳು ಕೆಡಹಿದರು.

ಯುದ್ಧವು ಮಹಾ ಘೋರವಾಗಿ ಈಗಲೂ ನಡೆಯುತ್ತಲೇ ಇರುವುದು. ರಷ್ಯಾ ಸೈನಿಕರನ್ನು ಸೋಲಿಸುವುದಕ್ಕೆ ಜರ್ಮನಿಯವರು ಇನ್ನೂ ಬಹಳ ಶ್ರಮಪಡಬೇಕು. ಈಗ ಅವರು ರೀಗ ಎಂಬ ತೀರಪಟ್ಟಣವನ್ನು ಆಕ್ರಮಿಸಿಕೊಳ್ಳಬೇಕೆಂದು ಸಾಹಸ ಪಡುತ್ತಿರುವುದರಿಂದ ರಷ್ಯಾದವರು ಆ ನಗರವನ್ನು ಖಾಲಿಮಾಡಿ ಹೊರಟುಹೋಗುವ ಸನ್ನಾಹದಲ್ಲಿದ್ದಾರೆ.

ಈಗ ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾ ರಾಜ್ಯದೊಳಕ್ಕೆ ನುಗ್ಗಿ ಹೋಗುವ ಭಾಗದಲ್ಲಿ ಏನುಮಾಡುತ್ತಾರೋ ನೋಡಬೇಕು. ಮಾಸ್ಕೋ, ಪೆಟ್ರೊಗ್ರಾಡ್ ಎಂಬೀ ಮುಖ್ಯ ನಗರಗಳು ಬಹಳ ದೂರದಲ್ಲಿರುತ್ತವೆ. ಅಲ್ಲಿಗೆ ಹೋಗುವುದಕ್ಕೆ ಜರ್ಮನಿಯವರು ಅನೇಕ ತಿಂಗಳಕಾಲ ಶ್ರಮಪಡಬೇಕಾಗುವುದು.

ರಷ್ಯಾದವರ ವಿಮಾನ ಯಂತ್ರಗಳು ವಿಶೇಷ ಕಾರ್ಯಗಳನ್ನು ನಡಿಸಿರುತ್ತವೆ. ಒಂದು ವಿಮಾನ ಯಂತ್ರದ ದೆಸೆಯಿಂದ ಜರ್ಮನಿಯ ಒಂದು ಫಿರಂಗಿ ಹಡಗು ಓಡಿಹೋಗಿ ಬಾಲ್ಟಿಕ್ ಕಡಲಿನ ತೀರದಲ್ಲಿ ನೆಲದ ಮೇಲೆ ಹರಿದು ನಿಂತುಬಿಟ್ಟಿತು. ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ಹಡಗು ಬಾಲ್ಟಿಕ್ ಕಡಲಿನಲ್ಲಿ ಜರ್ಮನಿ ಸೈನಿಕರನ್ನು ಸಾಗಿಸಿಕೊಂಡು ಹೋಗುತ್ತಿದ್ದ ಹಡಗನ್ನು ಓಡಿಸಿಕೊಂಡುಹೋಗಿ ಮುಳುಗಿಸಿರುತ್ತದೆ.

ದಕ್ಷಿಣ ರಣರಂಗದಲ್ಲಿ.

ಇಟಲಿಯವರು ಆಸ್ಟ್ರಿಯಾದವರ ಮೇಲೆ ಯುದ್ಧಕಾರ್ಯಗಳನ್ನು ನಡಿಸುತ್ತಾ ಕ್ರಮವಾಗಿ ಮುಂದರಿಸಿ ನುಗ್ಗಿಹೋಗುತ್ತಿದ್ದಾರೆ. ಒಂದು ದಿನ ಅವರು ಶತ್ರು ಸೈನ್ಯದಲ್ಲಿ 368 ಮಂದಿಯನ್ನೂ, ಇನ್ನೊಂದು ದಿನ 150 ಯುದ್ಧ ಭಟರನ್ನೂ, ಮತ್ತೊಂದು ದಿನ 345 ಮಂದಿಯನ್ನೂ, ನಾಲ್ಕನೆಯ ದಿನ 160 ಮಂದಿಯನ್ನೂ ಕೈಸೆರೆ ಹಿಡಿದುಕೊಂಡು ಹೋದರು. ಇದಲ್ಲದೆ ಅವರು ಆಸ್ಟ್ರಿಯಾದವರನ್ನು ಪದೇ ಪದೇ ಸೋಲಿಸಿ ಹಿಂದಕ್ಕೆ ಓಡಿಸುತ್ತಿದ್ದಾರೆ. ಈ ರಣರಂಗದ ಪೂರ್ವಭಾಗದಲ್ಲಿ ಇಟಲಿಯವರು 380 ಮಂದಿ ಹುದ್ದೆದಾರರನ್ನೂ, 17,000 ಸೈನಿಕರನ್ನೂ ಕೈಸೆರೆ ಹಿಡಿದರು.

ಇಟಲಿಯವರ ವಿಮಾನ ಯಂತ್ರಗಳು ಚಟುವಟಿಕೆಯಾಗಿ ಕಾರ್ಯಗಳನ್ನು ನಡಿಸುತ್ತಾ ಬಂದು ಆಸ್ಟ್ರಿಯಾದವರ ರೈಲ್ವೆಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಹಾಳುಮಾಡಿರುತ್ತವೆ. ಇದರಿಂದ ಆಸ್ಟ್ರಿಯಾ ಸೈನ್ಯಗಳು ಸಾಗಿಹೋಗುವುದಕ್ಕೆ ತುಂಬಾ ಅಡಚಣೆಯಾಯಿತು.

ಟರ್ಕಿಯಲ್ಲಿ.

ಗಲ್ಲಿಪೊಲಿ ಅರ್ಧ ದ್ವೀಪದಲ್ಲಿ ಬ್ರಿಟಿಷರು ಟರ್ಕಿಯವರ ಇನ್ನೂ ಕೆಲವು ಕಂದಕಗಳನ್ನು ಕಿತ್ತು ಸ್ವಾಧೀನಪಡಿಸಿಕೊಂಡು ತಮ್ಮ ಸ್ಥಾನಗಳನ್ನು ಬಲಪಡಿಸಿಕೊಂಡಿದ್ದಾರೆ. ಟರ್ಕಿಯವರು ಆ ಕಂದಕಗಳನ್ನು ಕಿತ್ತುಕೊಳ್ಳುವ ಪ್ರಯತ್ನವೇನೂ ಮಾಡಲಿಲ್ಲ.

ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ಹಡಗು ಮತ್ತೆ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಸಮೀಪಕ್ಕೆ ಹೋಗಿ ಒಂದು ಜಹಜನ್ನು ಮುಳುಗಿಸಿ, ರೈಲ್ ರಸ್ತೆಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ, ಮದ್ದು ತಯಾರಿಸುವ ಒಂದು ಕಾರ್ಖಾನೆಯನ್ನು ನಾಶಪಡಿಸಿರುತ್ತದೆ. ಟರ್ಕಿ ಸುಲ್ತಾನರು ಏನೋ ಕಾಯಿಲೆಯಿಂದ ಮಲಗಿದ್ದಾರೆಂದು ವರ್ತಮಾನವಿದೆ.

ಗಲ್ಲಿಪೊಲಿಯಲ್ಲಿರುವ ಫ್ರೆಂಚ್ ಸೈನ್ಯಗಳನ್ನು ನಡಿಸುವುದಕ್ಕೆ ಫ್ರೆಂಚ್ ಸರ್ಕಾರದವರು ಹೊಸ ದಳಪತಿಯನ್ನು ಅಲ್ಲಿಗೆ ಕಳುಹಿಸಿರುತ್ತಾರೆ. ಈ ಯುದ್ಧದಲ್ಲಿ ವೇರ್ಡುನ್ ಎಂಬ ಫ್ರೆಂಚರ ಕೋಟೆಗೆ ಜರ್ಮನಿಯವರು ಮುತ್ತಿಗೆ ಹಾಕಿದ್ದಾಗ ಈತನೇ ಆ ಕೋಟೆಯೊಳಗಿದ್ದು ಅದನ್ನು ಮಹಾ ಪರಾಕ್ರಮದಿಂದ ಕಾಪಾಡಿಕೊಂಡ ದಳಪತಿಯು. ಈತನ ಹೆಸರು ಪ್ರಖ್ಯಾತಿಗೆ ಬಂದಿದೆ.

ರಷ್ಯಾದವರ ಒಂದು ಸಣ್ಣ ಯುದ್ಧದ ಜಹಜು ಕಪ್ಪು ಕಡಲಿನಲ್ಲಿ ಶತ್ರುವಿಗೆ ನಷ್ಟವನ್ನುಂಟುಮಾಡುತ್ತಲಿದೆ. ಈ ಜಹಜು ಟರ್ಕಿಯವರ ಪ್ರಯಾಣದ 450 ಹಡಗುಗಳನ್ನೂ, ಹಡಗುಗಳ ಕಾರ್ಖಾನೆ ಇರುವಂಥಾ ನಾಲ್ಕು ಸ್ಥಳಗಳನ್ನೂ ಹಾಳುಮಾಡಿತು.

ಬ್ರಿಟಿಷರು ಫರಾತ್ ಏರಿಯಲ್ಲಿ ಮುಂದರಿಸಿ ನುಗ್ಗಿಹೋಗುತ್ತಿದ್ದಾರೆ. ಬಾಸ್ರಾ ಎಂಬ ನಗರವು ಆಗಲೇ ಬ್ರಿಟಿಷರ ವಶವಾಗಿ ಅವರ ಆಳ್ವಿಕೆಯಲ್ಲಿದೆ. ಅಲ್ಲಿನ ಆಳ್ವಿಕೆಯ ಕೆಲಸ ಕಾರ್ಯಗಳನ್ನು ನಡಿಸುವುದಕ್ಕೆ ಬ್ರಿಟಿಷ್ ಗವರ್ನ್‌ಮೆಂಟಿನವರು ಹಿಂದುಸ್ಥಾನದಿಂದ ಅಧಿಕಾರಿಗಳನ್ನು ಆರಿಸಿ ಅಲ್ಲಿಗೆ ಕಳುಹಿಸುತ್ತಲಿದ್ದಾರೆ.

ಇತರ ವಿಷಯಗಳು.

ಆಫ್ರಿಕಾದ ಯಾವ ಪ್ರದೇಶದಲ್ಲೂ ಈ ವಾರ ಕದನಗಳು ನಡೆದ ವೃತ್ತಾಂತವೇನೂ ಬಂದಿರುವುದಿಲ್ಲ. ಜನರಲ್ ಬೋಥಾರವರು ಒಂದು ಕಡೆ ಭಾಷಣ ಮಾಡುವಾಗ್ಗೆ ಜರ್ಮನಿಗೆ ಸೇರಿದ ದಕ್ಷಿಣ ಪಶ್ಚಿಮ ಆಫ್ರಿಕಾವನ್ನು ಮತ್ತೆ ಜರ್ಮನಿಯವರಿಗೆ ಬಿಟ್ಟುಕೊಡಲೇ ಕೂಡದೆಂದೂ, ತಮ್ಮ ಕಷ್ಟಗಳೆಲ್ಲಾ ಜರ್ಮನಿಯವರಿಂದಲೇ ಪ್ರಾಪ್ತವಾದವೆಂದೂ, ಜರ್ಮನಿಯವರು ಅಲ್ಲಿಗೆ ಮತ್ತೆ ಬರುವುದಾದರೆ ತಮ್ಮ ಕಷ್ಟಗಳು ಬಹಳವಾಗಿ ಹೆಚ್ಚುವವೆಂದೂ ಹೇಳಿದ್ದಾರೆ.

ಮೆಸೊಪೊಟೇಮಿಯಾದಲ್ಲಿ ಹಿಂದುಸ್ಥಾನದ ಸೈನಿಕರು ಪರಾಕ್ರಮಯುಕ್ತವಾದ ಕಾರ್ಯಗಳನ್ನು ನಡಿಸಿದ್ದಕ್ಕಾಗಿ ಅವರಲ್ಲಿ ಇಪ್ಪತ್ತೊಂದು ಮಂದಿಗೆ ಶೌರ್ಯದ ಬಿರುದುಗಳು ಕೊಡಲ್ಪಟ್ಟಿರುವಂತೆ ವರ್ತಮಾನ ಪತ್ರಿಕೆಗಳು ತಿಳಿಸುವವು. ಆ ಪೈಕಿ ಕೆಲವರು ಕೊಲೆಯಾದದ್ದು ಬಹಳ ವ್ಯಸನವನ್ನುಂಟುಮಾಡಿದೆ; ಆದರೂ ಅವರುಗಳ ಹೆಂಡಿರುಗಳಿಗೆಲ್ಲಾ ವಿಶೇಷತರವಾದ ಪೆನ್ಷನ್‌ಗಳು ಕೊಡಲ್ಪಡುವವು.

ಈ ವಾರ ಜರ್ಮನಿಯವರ ಸಬ್‌ಮೆರೀನ್ ಎಂಬ ಹಡಗುಗಳ ದೆಸೆಯಿಂದ ಗ್ರೇಟ್ ಬ್ರಿಟನ್ ದ್ವೀಪದ ಸುತ್ತಿನಲ್ಲಿ ಸಾಮಾನು ಭರ್ತಿಯಾಗಿದ್ದ ಆರು ಬ್ರಿಟಿಷ್ ಜಹಜುಗಳೂ, ಮೀನುಗಳನ್ನು ಹಿಡಿಯುತ್ತಿದ್ದ 10 ಸಣ್ಣ ಹಡಗುಗಳೂ ಮುಳುಗಿಹೋದವು. ಜರ್ಮನಿಯ ಒಂದು ಸಬ್‌ಮೆರೀನು ಮೊದಲನೇ ಸಲ ಪ್ರಯಾಣಮಾಡುವಲ್ಲಿ ಬಂಡೆಗೆ ಬಡಿದು ನಾಶವಾಯಿತು. ಅದರಲ್ಲಿದ್ದವರ ಪೈಕಿ ಹನ್ನೆರಡು ಮಂದಿ ನೀರಿನಪಾಲಾದರು.

ಯುದ್ಧವು ಪ್ರಾರಂಭವಾದ ಆಗಸ್ಟ್ ತಾ. 4 ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಸಭೆಗಳು ನಡಿಸಲ್ಪಟ್ಟುವು. ಎಲ್ಲಾ ವಿಭಾಗಗಳಲ್ಲೂ ಬ್ರಿಟಿಷ್ ಪ್ರಜೆಗಳು ಈ ಯುದ್ಧವನ್ನು ನಮ್ಮ ಶತ್ರುಗಳು ಸಂಪೂರ್ಣವಾಗಿ ಸೋತು ಹೋಗುವ ತನಕ ನಡಿಸಿಯೇ ತೀರಬೇಕೆಂಬದಾಗಿ ಏಕವಾಕ್ಯತೆಯಿಂದ ನಿಷ್ಕರ್ಷಿಸಿಕೊಂಡಿರುತ್ತಾರೆ. ಹಿಂದುಸ್ಥಾನದಲ್ಲೂ ನೂರಾರು ಸ್ಥಳಗಳಲ್ಲಿ ಮಹಾಸಭೆಗಳು ನಡೆದವು. ಆಸ್ಟ್ರೇಲಿಯಾ ದ್ವೀಪದಲ್ಲೂ ನ್ಯೂಜೀಲೆಂಡ್, ಕೆನಡ ಮೊದಲಾದ ಕಡೆಗಳಲ್ಲೂ ಪ್ರಜೆಗಳು ಸೇರಿ ನಿಷ್ಕರ್ಷೆಗಳನ್ನು ಮಾಡಿದರು. ಎಲ್ಲಾ ಪ್ರದೇಶಗಳ ಸಮಸ್ತ ಪ್ರಜೆಗಳೂ ನಮ್ಮ ಪಕ್ಷದವರಿಗೆ ಜಯಪ್ರದವಾಗುವ ತನಕ ತಮ್ಮ ಕೈಲಾಗುವ ಮಟ್ಟಿಗೂ ಸಹಾಯಮಾಡುತ್ತಾ ಬರುವೆವೆಂದು ಸಂಕಲ್ಪಮಾಡಿಕೊಂಡಿದ್ದಾರೆ.

ರಷ್ಯಾ ರಾಜ್ಯದ ಪಾರ್ಲಿಮೆಂಟ್ ಮೆಂಬರುಗಳು ಸಭೆ ಸೇರಿ ರಷ್ಯಾದವರು ಯುದ್ಧವನ್ನು ನಡಿಸುತ್ತಾ ಬರತಕ್ಕದ್ದೆಂದು ತೀರ್ಮಾನ ಮಾಡಿಕೊಂಡರು. ಪೋಲೆಂಡ್ ಅಧಿಪತ್ಯದ ಪ್ರಜೆಗಳು ತಮ್ಮ ರಾಜಧಾನಿಯಾದ ವಾರ್ಸಾ ಪಟ್ಟಣವು ಶತ್ರುವಿನ ವಶವಾದದ್ದಕ್ಕೆ ಮರುಗಿ ತಮ್ಮ ಕೈಲಾಗುವ ಮಟ್ಟಿಗೂ ರಷ್ಯಾದವರಿಗೆ ಸಹಾಯ ಮಾಡುತ್ತಾ ಬರುವೆವೆಂದು ತಿಳಿಸಿದ್ದಾರೆ. ಈ ಯುದ್ಧದ ದೆಸೆಯಿಂದ ರಷ್ಯಾದಲ್ಲಿ ಪಕ್ಷ ಪರಪಕ್ಷಗಳೂ ಭಿನ್ನಾಭಿಪ್ರಾಯಗಳೂ ತೊಲಗಿಹೋದವು. ಸಮಸ್ತ ಪಂಗಡದವರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ನಮ್ಮ ಪಕ್ಷದವರಲ್ಲಿ ಒಬ್ಬರಿಗೊಬ್ಬರು ವರ್ತಮಾನಗಳನ್ನು ಕಳುಹಿಸಿ ಆಯವಾಗುವ ತನಕ ಒಬ್ಬರನ್ನೊಬ್ಬರು ಅಗಲದೆ ಎಲ್ಲರೂ ಏಕವಾಗಿ ಕಾರ್ಯಸಾಧನೆ ಮಾಡುತ್ತಾ ಬರುವೆವು ಎಂಬದಾಗಿ ತಿಳಿಸಿದ್ದಾರೆ.

ಜರ್ಮನಿ ಚಕ್ರವರ್ತಿಯವರು ಈಗ ಗೆದ್ದುಕೊಂಡಿರುವ ಪೋಲೆಂಡ್ ಅಧಿಪತ್ಯವನ್ನು ಒಂದು ರಾಜ್ಯವಾಗಿ ಮಾಡಿಟ್ಟು ಅಲ್ಲಿಗೆ ಆಸ್ಟ್ರಿಯದ ಆರ್ಚ್ ಡ್ಯೂಕ್ ಚಾರಲ್ಸ್ ಸ್ಟೀಫನ್ ಎಂಬ ರಾಜಕುಮಾರನನ್ನು ದೊರೆಯಾಗಿ ನೇಮಕಮಾಡಬೇಕೆಂದಿರುವಂತೆ ಪ್ರಕಟವಾಗಿದೆ. ಆದರೆ ಪೋಲೆಂಡ್ ಸೀಮೆಯು ಅವರ ಕೈಯಲ್ಲಿ ಸ್ಥಿರವಾಗಿ ಇರುವುದನ್ನು ಅವರು ಮೊದಲು ಖಚಿತಮಾಡಿಕೊಳ್ಳಬೇಕಾಗಿದೆ.

ಫ್ರಾನ್ಸಿನಲ್ಲಿ ಜರ್ಮನಿಯವರು ನಡಿಸಿರುವ ಕ್ರೌರ್ಯಕೃತ್ಯಗಳನ್ನು ವಿವರಿಸಿ ಫ್ರೆಂಚ್ ಗವರ್ನ್‌ಮೆಂಟಿನವರು ಒಂದು ರಿಪೋರ್ಟನ್ನು ಪ್ರಕಟಿಸಿದ್ದಾರೆ. ಜರ್ಮನಿಯವರು ಫ್ರೆಂಚ್ ಸೈನಿಕರನ್ನೂ ಸಭ್ಯಪ್ರಜೆಗಳನ್ನೂ ಹಿಡಿದು ತಮ್ಮ ಸೈನಿಕರ ಮುಂಭಾಗದಲ್ಲಿ ನಿಲ್ಲಿಸಿಕೊಂಡು ಗುಂಡಿನೇಟುಗಳು ಅವರಿಗೆ ಬಡಿಯುವಂತೆ ಮಾಡಿ ತಾವು ಅವರ ಹಿಂಭಾಗದಲ್ಲಿದ್ದರೆಂದು ಸಿದ್ಧಾಂತಮಾಡಲ್ಪಟ್ಟಿದೆ. ಇದಲ್ಲದೆ ಅವರು ಕೈಸೆರೆ ಹಿಡಿದ ಸೈನಿಕರನ್ನು ಕೊಂದುಹಾಕಿದರೆಂದೂ, ಗಾಯಪಟ್ಟು ಬಿದ್ದಿದ್ದವರನ್ನು ಸನೀನುಗಳಿಂದ ತಿವಿದು ಪ್ರಾಣ ತೆಗೆದರೆಂದೂ, ಫ್ರೆಂಚ್ ವೈದ್ಯರಿಗೂ, ಉಪಚರಿಸುವ ನರ್ಸ್ ಎಂಬ ಹೆಂಗಸರಿಗೂ ಗುಂಡುಗಳನ್ನು ಹೊಡೆದರೆಂದೂ ಗೊತ್ತಾಗಿದೆ. ಒಬ್ಬ ಫ್ರೆಂಚ್ ಡಾಕ್ಟರು ತನ್ನ ಅನುಭವವನ್ನು ಹೇಳಿದ್ದಾನೆ. ಅದೇನೆಂದರೆ—"ನಾನು ಒಂದು ಮನೆಯನ್ನು ಆಸ್ಪತ್ರೆ ಮಾಡಿಕೊಂಡು ಅದರಲ್ಲಿ 60 ರಿಂದ 80 ಮಂದಿಯ ವರೆಗೆ ಗಾಯಪಟ್ಟ ಫ್ರೆಂಚ್ ಸೈನಿಕರನ್ನು ಇಟ್ಟುಕೊಂಡು ಉಪಚರಿಸುತ್ತಿದ್ದೆನು. ಮರುದಿನ ಜರ್ಮನಿಯವರು ಬಂದು ಆಸ್ಪತ್ರೆಯೊಳಕ್ಕೆ ನುಗ್ಗಿ ನನ್ನನ್ನು ಗುಂಡಿನಿಂದ ಹೊಡೆದು ಗಾಯಗೊಳಿಸಿ ಆಸ್ಪತ್ರೆಗೆ ಬೆಂಕಿಹಾಕಿದರು. ಗಾಯಪಟ್ಟ ಕೆಲವು ಸೈನಿಕರು ಕಿಟಕಿಗಳಿಂದ ಹಾರಿ ತಪ್ಪಿಸಿಕೊಂಡರು. ಅಂಥವರನ್ನು ಜರ್ಮನಿಯವರು ಗುಂಡಿನಿಂದ ಹೊಡೆದು ಕೆಡವಿ ಪರಿಹಾಸ್ಯಮಾಡಿದರು. ಅನೇಕ ಸೇವಕರನ್ನು ಹಿಡಿದು ಉರಿಯೊಳಕ್ಕೆ ದೊಬ್ಬಿದರು. ನಾನು ಕಿಟಕಿಯಿಂದ ಹಾರಿ ಕಾಲು ಮುರುಕೊಂಡು ನಡೆಯಲಾರದೆ ತೆವಳಿಕೊಂಡು ಹೋಗಿ ಒಂದು ನೆಲಮನೆಯೊಳಗೆ ಸೇರಿಕೊಂಡಿದ್ದೆನು. ಜರ್ಮನಿಯವರು ಅಲ್ಲಿಗೂ ಬಂದು ಮರುದಿನ ನನ್ನನ್ನು ಕೈಸೆರೆ ಹಿಡಿದುಬಿಟ್ಟರು. ಆಗ ಜರ್ಮನಿಯವರು ನೂರಕ್ಕಿಂತಲೂ ಹೆಚ್ಚಾಗಿಯೇ ಗಾಯಪಟ್ಟ ಸೈನಿಕರನ್ನು ಕೊಂದುಹಾಕಿರಬೇಕೆಂದು ನೆನಸುತ್ತೇನೆ" ಎಂಬುದು. ಹೀಗೆಯೇ ಇನ್ನು ಕೆಲವು ಜನರು ರಕ್ತವು ಗಾಯಪಟ್ಟ ಫ್ರೆಂಚ್ ಸೈನಿಕರನ್ನು ಹುಲ್ಲು ಮೆದೆಗಳ ಮೇಲೆ ಮಲಗಿಸಿ ಬೆಂಕಿಹಾಕಿ ಸುಟ್ಟಿರುತ್ತಾರೆಂದು ಹೇಳಿದ್ದಾರೆ. ಇದರಿಂದ ಜರ್ಮನಿಯವರು ಎಲ್ಲೆಲ್ಲೂ ಕ್ರೌರ್ಯಕೃತ್ಯಗಳನ್ನೇ ಮಾಡುತ್ತಾ ಬಂದಿರುವುದು ವೇದ್ಯವಾಗುತ್ತದೆ.

ಒಳದೇಶದ ವೃತ್ತಾಂತಗಳು.

ಅರಮನೆಯ ಗಜಶಾಲೆಯಲ್ಲಿದ್ದ ಒಂದು ಭಾರೀ ಬರ್ಮಾ ಗಂಡಾನೆಯು ಕಾಯಿಲೆಯಾಗಿ ಸತ್ತುಹೋಯಿತು.

∴

ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಚಾತುರ್ಮಾಸ್ಯಕ್ಕಾಗಿ ಕಳೆದ ವಾರ ಬೆಂಗಳೂರಿಗೆ ಬಂದು ಚೀಫ್ ಇಂಜನಿಯರವರ ಬಂಗಲೆಯಲ್ಲಿ ಇಳುಕೊಂಡಿದ್ದಾರೆ.

∴

ರಾಜಧಾನಿಯ ಹಳೇ ಅಗ್ರಹಾರದಲ್ಲಿದ್ದ ಸುಮಾರು 32 ವಯಸ್ಸಿನ ಶ್ರೀಕಂಠಶಾಸ್ತ್ರಿ ಎಂಬೊಬ್ಬ ಬಡ ದ್ರಾವಿಡ ಬ್ರಾಹ್ಮನು ದೊಡ್ಡ ಕೆರೆಯಲ್ಲಿ ಕಾಲು ಜಾರಿ ಬಿದ್ದು ಸತ್ತುಹೋದನು.

∴

ದಾವಣಗೆರೆಯಲ್ಲಿ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಆನರರಿಯಾಗಿಗಳಾಗಿದ್ದ ಮ|| ಬಸಪ್ಪನವರು ಕಾಲವಾಗಿ ಅನೇಕರು ವಿಷಾದಪಡುತ್ತಿದ್ದಾರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

∴

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಅಳತೆ ಮತ್ತು ತೂಕಗಳಿಗೆ ಒತ್ತುತ್ತಿದ್ದ ಸರ್ಕಾರದ ಮೊಹರನ್ನು ಷೇಕ್ ಹೈದರ್ ಎಂಬವನು ದುರುಪಯೋಗ ಮಾಡಿದ್ದಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ತಿಂಗಳ ಕಠಿಣಸಜಾ ವಿಧಿಸಿದರು.

∴

ಒಬ್ಬ ಬಾತ್ಮೀದಾರರಿಂದ—ಬೆಂಗಳೂರು ಹಳೇ ಚಾಮರಾಜಪೇಟೆಯಲ್ಲಿ ರಾಮನ ಉತ್ಸವವನ್ನು ಮಾಡುವ ವಿಷಯದಲ್ಲಿ ವ್ಯಾಜ್ಯಹುಟ್ಟಿ ಆರು ತಿಂಗಳಿಂದ ಚರ್ಚೆ ನಡೆದು ಮರ್ಸಿಫ್ ಕೋರ್ಟಿನಲ್ಲಿ ತೀರ್ಮಾನವಾದಂತೆ ಮ|| ಅಮ್ಮಿ ಚನ್ನಪ್ಪನವರು ಲೈಸೆನ್ಸು ಪಡೆದು ಕಳೆದ ವಾರ ಆ ಉತ್ಸವವನ್ನು ಬಹಳ ಸಂತೋಷದಿಂದಲೂ, ಅಟ್ಟಹಾಸವಾಗಿಯೂ ನಡಿಸಿದರು.

∴

ಅರಮನೆಯ ಬಿಡದಿಯಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸಮಾಡುತ್ತಿರುವಂಥಾ ಅಲ್ಪ ಸಂಬಳದ ಸುಮಾರು 400 ಮಂದಿ ಸೇವಕಾಳಿಗಳಿಗೆ ಎರಡು ಹೊತ್ತೂ ಅರಮನೆ ಖರ್ಚಿನಿಂದ ಭೋಜನ ಮಾಡಿಸುತ್ತಿದ್ದರು. ಇದು ಬಹು ಕಾಲದಿಂದ ನಡೆದು ಬರುತ್ತಿತ್ತು. ಮೊನ್ನೆ ಮಂಗಳವಾರದಿಂದ ಆ ಪೈಕಿ ಸುಮಾರು 200 ಜನಗಳಿಗೆ ಊಟವನ್ನು ತಪ್ಪಿಸಿಬಿಟ್ಟಿದ್ದರಿಂದ ಅವರು ಜೀವನಕ್ಕೆ ಬಹಳ ಕಷ್ಟವಾಗಿದೆಯೆಂದು ಸಂಕಟಪಡುತ್ತಾ ಅದಕ್ಕೆ ಪ್ರತಿಯಾಗಿ ಸಂಬಳವನ್ನು ಅಲ್ಪಸ್ವಲ್ಪ ಹೆಚ್ಚಿಸಿಕೊಟ್ಟರಾದೀತೆಂದು ಕೋರುತ್ತಾರೆ.

∴

ಬಾಗೆಪಲ್ಲಿ ತಾಲ್ಲೂಕು ಗೂಳೂರು ಹೋಬಳಿ ಭೈರಾಗಾದೆಮ್ಮನ ಘಾಟಿ ಜಂಗಲಿನಲ್ಲಿ ಥೋಬಿನಂಜ ವಗೈರೇರನ್ನು ಕಳ್ಳರು ಕಳೆದ ಜೂಲೈ ತಾ. 21 ರಲ್ಲಿ ಹಿಡಿದು ಹೊಡೆದು ಅವರ ಬಳಿ ಇದ್ದ ಸುಮಾರು 160 ರೂಪಾಯಿನ ಮಾಲನ್ನು ಎತ್ತಿಕೊಂಡು ಹೋಗವಷ್ಟರಲ್ಲೇ ಆ ಪ್ರಾಂತ್ಯ ದೇವಿ ಹಾಕಲು ಹೋಗುತ್ತಿದ್ದ ವ್ಯಾಕ್ಸಿನೇಟರ್ ಮ|| ಕೃಷ್ಣಪ್ಪನವರು ಕಳ್ಳರನ್ನು ಬೆದರಿಸಿದ್ದರಿಂದ ಅವರು ಮಾಲನ್ನೆಲ್ಲಾ ಬಿಟ್ಟು ಓಡಿಹೋದರೆಂದೂ, ಬಳಿಕ ಮ|| ಕೃಷ್ಣಪ್ಪನವರು ಏಟುತಿಂದಿದ್ದವರನ್ನು ಉಪಚರಿಸಿ ಕರೆದುತಂದರೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

∴

ಕಳೆದ ವಾರ ಚಿತ್ರದುರ್ಗದ ಟೌನ್‌ನಲ್ಲಿ ಘೋರವಾದ ಎರಡು ಹಗಲು ದರೋಡೆಗಳು ನಡೆದವು. ಒಂದು ಮನೆಯಲ್ಲಿ ಒಬ್ಬನನ್ನು ಹೊಡೆದು ಗಾಯಪಡಿಸಿ ಆಸ್ತಿಯನ್ನು ಹೊತ್ತುಕೊಂಡು ಹೋದರು. ಇನ್ನೊಂದು ಮನೆಯಲ್ಲಿ ಯಜಮಾನನು ಆಸ್ತಿಯನ್ನು ಕಳ್ಳರಿಗೆ ಒಪ್ಪಿಸಿ ಬದುಕಿಕೊಂಡನು. ಜನಗಳು ಸೇರಿದರೂ ಹೆದರಿ ಕಳ್ಳರನ್ನು ಹಿಡಿಯಲಾರದೆ ಹೋದರು. ಇತ್ತಲಾಗಿ ಹುಣಸೂರು ದಾರಿಯಲ್ಲಿ ಕಳ್ಳರು ಗಾಡಿಗಳನ್ನು ಅಡ್ಡಗಟ್ಟಿ ಪ್ರಯಾಣಿಕರನ್ನು ಹೊಡೆದು ಸುಲುಕೊಂಡರು. ಇನ್ನೊಂದು ಕಡೆ ಅಂದರೆ ಬಂಗೋಳದ ಪಂಪಿಂಗ್ ಸ್ಟೇಷನ್‌ಗೂ ಬಳಗೊಳಕ್ಕೂ ನಡುವೆ ಕನ್ನಂಬಾಡಿ ರಸ್ತೆಯಲ್ಲಿ ಕಳ್ಳರು ಸೇರಿಕೊಂಡು ಅವೇಳೆಯಲ್ಲಿ ಸಂಚಾರ ಮಾಡುವವರ ಮೇಲೆ ಬೀಳುತ್ತಾರೆ. ಹೀಗೆ ಮುಖ್ಯವಾದ ರಸ್ತೆಗಳೂ ಪಟ್ಟಣಗಳೂ ಪ್ರಯಾಣಿಕರಿಗೆ ವಾಸಕ್ಕೂ ಸುರಕ್ಷಿತವಾಗಿಲ್ಲದೆ ಹೋದರೆ ಪೋಲೀಸ್ ಕಾವಲಾಗಲಿ, ಸರ್ಕಾರದ ಬಿಗಿಯಾಗಲಿ ಇದ್ದೂ ಫಲ ಕಾಣುವುದಿಲ್ಲ.

ಮೈಸೂರು ಕೋಆಪರೇಟಿವ್ ಬ್ಯಾಂಕು.

ಪೋಲ್ಯಾಂಡ ಬ್ಯಾಂಕಿನ 4 ನೇ ವಾರ್ಷಿಕ ಜನರಲ್ ಮೀಟಿಂಗು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ತಾ. 8 ನೇ ಭಾನುವಾರ ಪ್ರಾತಃಕಾಲ ಬಹು ವಿಜೃಂಭಣೆಯಿಂದ ನಡೆಯಿತು. ಇದರಲ್ಲಿ ಬ್ಯಾಂಕಿನ ಮೆಂಬರುಗಳು 200 ಜನಗಳೂ, ವಿಜಿಟರುಗಳು 36 ಜನಗಳೂ ಸಹಾ ಹಾಜರಿದ್ದರು. ಮ|| ಎಚ್. ನಂಜುಂಡರಾಜೇ ಅರಸಿನವರು (ಪ್ರೆಸಿಡೆಂಟ್), ಮಿ|| ಮಹಮದ್ ಜಾಫರ್ ಸಾಹೇಬರವರು (ವೈಸ್ ಪ್ರೆಸಿಡೆಂಟ್) ಅಗ್ರಾಸನವನ್ನು ಅಲಂಕರಿಸಿದ್ದರು. ಆ ದಿನ ಮೀಟಿಂಗಿನಲ್ಲಿ ಆದ ತೀರ್ಮಾನಗಳು ಯಾವವೆಂದರೆ— (1) ಲಾಂಗ್ ಟರ್ಮ್ ಬಾಬಿನಲ್ಲಿ ಬಡ್ಡಿಯನ್ನು ಅಡ್ವಾನ್ಸಾಗಿಯೇ ಬ್ಯಾಂಕಿಗೆ ಪಾವತಿಮಾಡತಕ್ಕದ್ದು; ವಾಯಿದೆಗೆ ಮುಂಚಿತವಾಗಿಯೇ ಅಸಲು ಪೂರ್ತಿ ಮೊಬಲಗನ್ನು ಕೊಟ್ಟ ಪಕ್ಷದಲ್ಲಿ ಬಾಕೀ ದಿನಗಳಿಗಾಗುವ ಸರಾಸರಿ ಬಡ್ಡಿಯಲ್ಲಿ ಅರ್ಧ ಭಾಗ ಮಾತ್ರವೇ ಮೆಂಬರುಗಳಿಗೆ ವಾಪಸು ಸಲ್ಲುತ್ತಿತ್ತು. ಇನ್ನು ಮುಂದೆ ಪೂರ್ತಿ ಬಡ್ಡಿಯನ್ನು ವಾಪಸು ಕೊಡಬೇಕೆಂದು ತೀರ್ಮಾನಿಸಲಾಯಿತು. (2) ಬ್ಯಾಂಕಿನ ಮೆಂಬರುಗಳ ಉಪಯೋಗಕ್ಕೋಸ್ಕರ ಹೊಸದಾಗಿ ಪ್ರಾವಿಡೆಂಟ್ ಫಂಡ್ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂದು ತೀರ್ಮಾನಿಸಲಾಯಿತು. (3) ಮೆಂಬರುಗಳು ಸಲಹೆ ಕೊಟ್ಟ ಪ್ರಕಾರ ಡೈರೆಕ್ಟರುಗಳು ಈ ಕೆಳಗೆ ಕಂಡ ರಿಯಾಯಿತಿಯನ್ನು ಎಲ್ಲರಿಗೂ ಕೊಡಬಹುದೆಂದು ತೀರ್ಮಾನಿಸಿದ ವಿಷಯವನ್ನು ಜನರಲ್ ಬಾಡಿಯವರಿಗೆ ತಿಳಿಸಿರುತ್ತಾರೆ.—(ಅ) ಜಾಯಿಂಟ್ ಲಾಂಗ್ ಟರ್ಮ್ ಬಡ್ಡಿ ದರವನ್ನು ಎರಡು ಕಾಸಿನಿಂದ ಒಂದೂಮುಕ್ಕಾಲು ಕಾಸಿಗೆ ಕಡಮೆ ಮಾಡುವದು; (ಆ) ಮೆಂಬರುಗಳಿಗೆ ಐವತ್ತು ರೂಪಾಯಿಗೆ ಮೀರದಂತೆ ಆಸಾಮಿ ಧಡೂತಿ ಮೇಲೆಯೇ ಸಾಲಾ ಕೊಡುವುದು; (ಇ) ಬಡ್ಡಿ ಲೆಕ್ಕಾಚಾರ ಮಾಡುವಾಗ ವಿಷಮ ಸಂಖ್ಯೆಗೂ ಬಡ್ಡಿ ತೆಗೆದುಕೊಳ್ಳುವದು. ಡೈರೆಕ್ಟರುಗಳ ತೀರ್ಮಾನದ ಪ್ರಕಾರ ಸೆಕ್ರೆಟರಿಯವರು ಈ ಬ್ಯಾಂಕ್ ಆಫೀಸನ್ನು ದೊಡ್ಡಪೇಟೆಯಲ್ಲಿರುವ ಮ|| ಅನಿರಾಜಯ್ಯನವರ ಮನೆ ಮಹಡಿಯಿಂದ ಸಯ್ಯಾಜಿರಾವ್ ರೋಡಿನಲ್ಲಿ ಮಾರ್ಕೆಟ್ ಪೂರ್ವ ಭಾಗದ ಗೇಟ್ ಎದುರಿಗೆ ಇರುವ ಮ|| ಎಮ್. ಸೆಟ್ಟಿಜಿರಾಯರ ಮನೆ ಮಹಡಿಗೆ ಈ ಮಾಹೆ ಆಖೈರು ನೊಳಗಾಗಿಯೇ ವರ್ಗಾಯಿಸಬೇಕೆಂದು ತೀರ್ಮಾನಿಸಿರುವ ವಿಷಯವನ್ನು ಎಲ್ಲರಿಗೂ ತಿಳಿಸಿದರು.

ಈ ಮೀಟಿಂಗು ನಡೆದ ನಂತರ ಚಕ್ರವರ್ತಿ ಸಾರ್ವಭೌಮರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಂತೋಷಾರ್ಥವಾಗಿ ಎಲ್ಲರಿಗೂ ಹಾಗ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ಅಲ್ಲಿಗೆ ಸಭೆ ಮುಕ್ತಾಯವಾಯಿತು

ಬೇತಮಂಗಲದ ನೂತನ ಸ್ಕೂಲ್ ಪ್ರವೇಶೋತ್ಸವ.

ಈ ಮಹೋತ್ಸವಕಾಲದಲ್ಲಿ ಹೊಸ ಕಟ್ಟಡವು ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟಿತ್ತು. ಗ್ರಾಮದ ಹಿಂದೂ ಮಹಮ್ಮದೀಯ ಅನೇಕ ವಿದ್ಯಾಭಿಮಾನಿಗಳಾದ ಮಹನೀಯರು ಸಭೆಯನ್ನಲಂಕರಿಸಿದರು. ಇಲ್ಲಿನ ಮೈನಿಂಗ್ ಸ್ಪೆಷಲ್ ಸೂಪರಿಂಟೆಂಡೆಂಟ್ ಮ|| ಪಿ. ಎಸ್. ರಾಘವಾಚಾರ್ಯ ಛೇರ್ ಮೆನ್ ರಾಗಿಯೂ, ಡಾಕ್ಟರ್ ಪಿ ವಿ ಬಲರಾಮ್‌ಪಿಳ್ಳೆಯವರೂ, ಮ|| ಗಳಾದ ಪ್ರೊ. ಜಿ. ಸುಂದರರಾಯರೂ, ಕೆಂ. ಬಿ. ಗುಂಡೂರಾಯರೂ, ಪೇಷ್ಕರ್ ಜಿ. ಹೈದರ್ ಬೇಗ್ ಸಾಹೇಬರೂ, ಡ್ರೈವರು ಗಿರಿಧರರಾಯರೂ, ಎ. ಆ. ಇನ್ಸ್‌ಪೆಕ್ಟರ್ ವೆಂಕೋಬರಾಯರೂ ಮುಂತಾದ ಅನೇಕ ದೊಡ್ಡ ಮನುಷ್ಯರು ನೆರೆದಿದ್ದರು. ಉತ್ಸವ ಪ್ರಾರಂಭದಲ್ಲಿ ಹಿಂದೂ ಮತರೀತ್ಯಾ ಸರಸ್ವತಿ ಪೂಜೆ ಜರುಗಿದ ಮೇಲೆ ಹಿಂದೂ ಮಹಮ್ಮದೀಯರ ಬಾಲಕರುಗಳಿಂದ ದೇವರ ಸ್ತೋತ್ರವು ಮಂಗಳವಾದ್ಯಗಳ ಸಮೇತ ನಡೆದವು. ಹುಡುಗರಿಗೆ ಆಟಪಾಟಗಳು ನಡಿಸಿದ ನಂತರ ಮ|| ಟಿ. ಶ್ರೀನಿವಾಸರಾಯರೂ, ಮಿ|| ಹೈದರ್ ಖಾನ್ ಸಾಹೇಬರೂ ಸ್ಕೂಲುಗಳ ರಿಪೋರ್ಟು ಓದಲಾಯ್ತು. ಕಾಲೋಚಿತವಾದ ಉಪನ್ಯಾಸವು ನಡೆದ ತರುವಾಯ ಈ ಹೊಸ ಕಟ್ಟಡಕ್ಕೆ ಸಹಾಯಮಾಡಿದ ಬೌರಿಂಗ್‌ಪೇಟೆಯ ಹಿಂದಿನ ಅಮಲ್ದಾರ್ ಮ|| ಎಫ್. ಎಸ್. ರಾಘವಾಚಾರ್ಯ ಪ್ರೋತ್ಸಾಹದ ಮೇಲೆ ಇಲ್ಲಿನ ಶ್ಯಾ. ಮ|| ವೆಂಕಟರಮಣಯ್ಯನವರು ನಿವೇಶನವನ್ನು ಧರ್ಮಾರ್ಥವಾಗಿ ಸರ್ಕಾರಕ್ಕೆ ಬಿಟ್ಟುಕೊಟ್ಟದ್ದರ ವಿಷಯದಲ್ಲಿಯೂ, ಇನ್ನೂ ಮುಖ್ಯ ಸಹಾಯಭೂತರಾದ ಕೋಲಾರ್ ಡಿ|| ಡೆ|| ಇನ್ಸ್‌ಪೆಕ್ಟರ್ ಮ|| ಬಿ. ತಿರುಮಲಾಚಾರ್ರ್ಯ, ಅ|| ಡೆ|| ಇನ್ಸ್‌ಪೆಕ್ಟರ್ ಮ|| ಮಾಧವರಾಯರೂ ಇವರುಗಳ ಗುಣಕಥನವು ನಡೆದದ್ದನ್ನು ಕೇಳಿ ಸಭಾ ಸದರೆಲ್ಲರೂ ಸಂತೋಷಿಸಿದ್ದಲ್ಲದೆ ಗ್ರಾಮಸ್ಥರೂ ತುಂಬಾ ಕೃತಜ್ಞರಾಗಿರುತ್ತಾರೆ. ಸ್ಕೂಲ್ ಪ್ರೋಗ್ರೆಸ್ ವಿಚಾರದಲ್ಲಿ ಬಾಲಿ ಕನಡಾ ಸ್ಕೂಲ್ ಮಾಸ್ಟರಾಗಿರುವ ಮ|| ಬಿ. ಶ್ರೀನಿವಾಸರಾಯರು ಇಲ್ಲಿಗೆ ಬಂದ ಸುಮಾರು ಮೂರು ವರ್ಷಗಳ ಲಾಗಾಯ್ತು ತುಂಬಾ ಮೆಹನತ್ತಿನಿಂದ ಕೆಲಸಮಾಡಿರತಕ್ಕ ಭಾಗದಲ್ಲಿ ಬಾಲಿ ಕನಡಾ ಸ್ಕೂಲಿನಲ್ಲಿ ಅರವತ್ತು ಬಾಲಕರು ಇರುವುದಲ್ಲದೆ ಮತ್ತಿಬ್ಬರು ಸಹಾಯೋಪಾಧ್ಯಾಯರಿಗೆ ನಿರೀಕ್ಷಿಸಲ್ಪಟ್ಟು ಗ್ರಾಮಸ್ಥರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ಈ ಮಹೋತ್ಸವವನ್ನು ನಡಿಸುವುದರಲ್ಲಿ ಮುಖ್ಯ ಸಹಾಯಭೂತರಾದ ಇಲ್ಲಿನ ಲೋಕಲ್ ಪ್ರೀಚರ್ ಮಿ|| ಜಾರ್ಜ್ ಮಾರ್ಕರವರೂ, ಹುಡುಗರ ಆಟಪಾಟಗಳ ವಿಷಯದಲ್ಲಿ ಶ್ರದ್ಧೆಯನ್ನೂ, ಬಹುಮಾನ ವಿನಿಯೋಗದ ವಿಷಯದಲ್ಲಿ ಉದಾರತ್ವವನ್ನೂ ತೋರಿಸಿದ ಜಮಾದಾರ್ ಮ|| ಸುಂದರರಾವ್ ಇವರುಗಳ ಪ್ರೋತ್ಸಾಹವು ಸ್ತೋತ್ರಾರ್ಹವಾದವು. ತರುವಾಯ ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನೆಯೂ ನಡೆದು ಸಭಾ ಸದರಿಗೆ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗವಾದ ನಂತರ ಸಾಯಂಕಾಲ 6½ ಗಂಟೆಗೆ ಸಭೆಯು ಬರಖಾಸ್ತಾಯಿತು.

ಕೆ. ಬಿ. ಯ.

ನಮ್ಮ ದೇಶದ ಉದ್ಯೋಗ ಕೃಷಿ.

ಈಗ ನಮ್ಮ ದೇಶದಲ್ಲಿ ಉದ್ಯೋಗ ಯಾವ ಸ್ಥಿತಿಯಲ್ಲಿ ಇದೆ? ಉದ್ಯೋಗ ಅಂದರೆ ಏನು? ಯಾರಿಗ್ಯಾರಿಗೆ ಯಾವ ಉದ್ಯೋಗ ಅವಲಂಬನೀಯವಾದುದು? ಎಂಬ ಈ ಮೊದಲಾದ ಪ್ರಶ್ನೆಗಳು ನಮ್ಮನ್ನು ಆಂಕುರಿಸುತ್ತವೆಯಲ್ಲವೇ? ಆದರೆ ಅರ್ಥಶಾಸ್ತ್ರ ಪ್ರೋಕ್ತವಾಗಿ ಹೇಳಲ್ಪಟ್ಟಿರುವ ನೀತಿವಾಕ್ಯವು "ಉದ್ಯೋಗಂ ಪುರುಷಧರ್ಮ ಮುಪೈತಿ ಲಕ್ಷ್ಮೀ" ಎಂಬಂತೆ ಸರ್ವರಿಗೂ ಸಾಧಾರಣವಾಗಿ ಪ್ರತಿದಿವಸವಲ್ಲ ಮಾಡತಕ್ಕ ಉದ್ಯೋಗಸಾಧನೆಯ ಕೃಷಿಯು ಇದ್ದೇ ಇರಬೇಕೆಂದು ಬೋಧಿಸುತ್ತದೆ. ಹೀಗಿರುವಲ್ಲಿ ಉದ್ಯೋಗವು ಬಡವರಿಗೂ, ಶ್ರೀಮಂತರಿಗೂ, ಸರ್ಕಾರ ಹುದ್ದೆದಾರರಿಗೂ, ರಾಜರಿಗೂ, ಪ್ರಜೆಗಳಿಗೂ, ಬಾಲಕರಿಗೂ ವೃದ್ಧರಿಗೂ, ಸ್ತ್ರೀ, ಪುರುಷರಾದಿಯಾಗಿ ಸರ್ವರಿಗೂ, ಅವಲಂಬನೀಯವಾದದ್ದಾಗಿರುತ್ತೆ. ಇದು ಯಾರಿಗೆ ಬೇಡ, ಮತ್ಯಾರಿಗೆ ಬೇಕು? ಸರ್ವರಿಗೂ ಅತ್ಯವಶ್ಯಕವಾದುದು. ಯಾರೇ ಆಗಲಿ ಈ ಲೋಕದಲ್ಲಿ ಮಾಡಬೇಕಾದ ಕೆಲಸವನ್ನು ಮಾಡದೆ ಇದ್ದರೆ ಐಶ್ವರ್ಯವಾಗಲಿ, ಸುಖವಾಗಲಿ, ಸಹಾಯವಾಗಲಿ, ಪರಲೋಕದಲ್ಲಿ ಮುಕ್ತಿಯಾಗಲಿ ಸಾಮಾನ್ಯವಾಗಿ ಯಾರಿಂದಲೂ ಯಾರಿಗೂ ದೊರೆಯಲಾರದು. ಆದುದರಿಂದ ಪ್ರತಿಯೊಬ್ಬನು ತನ್ನ ಸ್ಥಿತಿಗತಿ ವಿಷಯಕ್ಕನುಸಾರವಾಗಿ ತಾನು ಆಚರಿಸತಕ್ಕ ಉದ್ಯೋಗ ಕಾರ್ಯಗಳನ್ನು ಕರ್ತವ್ಯಪೂರ್ವಕವಾಗಿ ಚಟುವಟಿಕೆಯಿಂದ ವೃದ್ಧಿಯಾಗ್ಯು ಮಾಡಬೇಕಾಗಿರುತ್ತದೆ. ಆದರೆ ಉದ್ಯೋಗದಲ್ಲಿ ನಮ್ಮ ದೇಶದಷ್ಟು ಹಿಂದುಳಿದಿರುವ ದೇಶವು ಈ ಪ್ರಪಂಚದಲ್ಲಿ ಮತ್ತಾವುದೂ ಇಲ್ಲವೆಂದು ಹೇಳಬಹುದು. ನಮ್ಮ ದೇಶವು ಕೇವಲ ಸಾಮಾನ್ಯವಾಗಿ ನಾಗರಿಕ ದೇಶವಾದರೂ, ಸ್ವಲ್ಪಮಟ್ಟಿಗೆ ಜ್ಞಾನೋದಯವುಂಟಾಗಿದ್ದರೂ, ವ್ಯವಹಾರದಲ್ಲಿ ಅತ್ಯಂತ ಹಿಂದುಳಿದು ನಿರುದ್ಯೋಗಿಗಳ ಗುಂಪಿನ ತೌರೂರು ಆಗಿದೆಯೆಂದು ಈ ದೇಶದ ಸರ್ವ ಪ್ರಜೆಗಳ ಸಾಮಾನ್ಯಸ್ಥಿತಿಯ ಮೇಲೆ ಧಾರಾಳವಾಗಿ ಹೇಳಬಹುದು. ಅನುದ್ಯೋಗಿಗಳ ಗುಂಪು ದಿನದಿನಕ್ಕೆ ಹೆಚ್ಚಿ ಇವರಿಂದ ಅನೇಕಾನೇಕ ದುಷ್ಕಾರ್ಯಗಳಿಗೆ ಅವಕಾಶವುಂಟಾಗಿ ನೆಮ್ಮದಿಗೆ ಸಾಮಾನ್ಯಭಂಗ ತರುವ ಕೆಲವು ಕೃತ್ಯಗಳು ನಡೆಯುವುದಕ್ಕೆ ಎಡೆಯದಾಗಿರುತ್ತದೆ.

ಆದ್ದರಿಂದ ಪ್ರತಿ ಮನುಷ್ಯನೂ ಶಕ್ತಿಯಿಂದಲೂ, ಪರೋಪಕಾರದೃಷ್ಟಿಯಿಂದಲೂ ತಾನು ಮಾಡುವ ಕೆಲಸವೂ ಉದ್ಯೋಗವೂ ಸಫಲವಾಗಿಯೂ ಪರಿಣಮಿಸುವಂತೆ ಪ್ರಯತ್ನಪೂರ್ವಕವಾಗಿ ಮಾಡಬೇಕು. ನಿರುದ್ಯೋಗಿಯಾಗಿ ಯಾವ ಮನುಷ್ಯನೂ ಕಾಲಕಳೆಯದೆ ತನ್ನ ಜೀವನಾಂತ ಕಾಲದಲ್ಲಿ ಕೆಲವನ್ನು ವಿದ್ಯಾಭ್ಯಾಸಕ್ಕೂ ಮತ್ತೆ ಕೆಲವು ದಿವಸ ಉದ್ಯೋಗಕಾರ್ಯಕ್ಕೂ, ಮತ್ತೆ ಕೆಲವು ದಿವಸ ಪರೋಪಕಾರ ಕಾರ್ಯಕ್ಕೂ ಉಳಿದ ದಿವಸವನ್ನು ತನ್ನ ಗ್ರಾಮ ಅಥವಾ ಪಟ್ಟಣಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳಿಗೂ ಆಸಕ್ತನಾಗಿ ಪರೋಪಕಾರ ದೃಷ್ಟಿಯಿಂದ ಸಾಧ್ಯವಾದಮಟ್ಟಿಗೂ ಕೆಲಸವನ್ನು ಮಾಡುತ್ತಬರುವುದು ಒಳ್ಳೇದು. ಮುಖ್ಯವಾಗಿ ಹಳ್ಳಿಗಾಡುಗಳಲ್ಲಿ ನೂತನವಾಗಿ ಚಟುವಟಿಕೆಯಿಂದ ತಮ್ಮ ದೇಶಾಭಿವೃದ್ಧಿ ಉಂಟುಮಾಡಿಕೊಳ್ಳುವುದಕ್ಕೆ ಹೊಸ ಹೊಸ ಉದ್ಯೋಗತತ್ಪರತೆ ಉಳ್ಳವರಾಗದ ಹೊರತು ನಮ್ಮ ದೇಶವು ಸಂಪದಭ್ಯುದಯವನ್ನು ಹೊಂದಲಾರದು. ಉದ್ಯೋಗಸಾಧನ ರೀತಿಯು ಸಾಮಾನ್ಯವಾಗಿ ನಮ್ಮ ದೇಶದವರಿಗೆ ತಿಳಿಯದು. 16,000 ಗ್ರಾಮಗಳ ಪ್ರಜೆಗಳು ಕೇವಲ ಮುಷ್ಟಿ, ಅಲ್ಪಸ್ವಲ್ಪ ತರಿ ಮತ್ತು ಬಾಗಾಯಿತು ಜಮೀನಿನಿಂದಲೇ ಜೀವನಮಾಡಬೇಕಾಗಿರುತ್ತೆ. ಇವರಿಗೆ ಮಳೆ ಆದರೆ ಉಂಟು; ಇಲ್ಲದೆ ಇದ್ದರೆ ಜೀವನಕ್ಕೆ ಅಭಾವಾಗಿ ಪರಿಣಮಿಸುತ್ತೆ. ಬೇರೆ ಉದ್ಯೋಗವನ್ನುಮಾಡಿ ಮುಂದರಿದವರಲ್ಲಿ 10 ಸಾವಿರ ಹಳ್ಳಿಯವರಲ್ಲಿ ಒಬ್ಬರೂ ನಮ್ಮ ದೇಶದಲ್ಲಿ ಕಾಣದೆ ನಿರುದ್ಯೋಗದಿಂದ ಕೇವಲ ದಾರಿದ್ರ್ಯವಸ್ಥೆಯಲ್ಲಿ ದಿನೇ ದಿನೇ ಹೀನಸ್ಥಿತಿಗೆ ಬರುತ್ತಾ ಇರುವುದು ಶೋಚನೀಯವೇ ಸರಿ.

ಕೆ. ಶಿವಬಸವಯ್ಯ, ಜ್ಯಾಕನಹಳ್ಳಿ.

ಯುದ್ಧವು ಪ್ರಾರಂಭ ಆಗಿ ವರ್ಷವಾಯಿತು.

ರಾಜಧಾನಿಯಲ್ಲಿ ನಡೆದ ಮಹಾಸಭೆ

ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಪಕ್ಷದವರಿಗೆ ಜಯವಾಗುವ ವರೆಗೂ ಯುದ್ಧವನ್ನು ನಿಲ್ಲಿಸಕೂಡದೆಂಬ ಸಂಕಲ್ಪವನ್ನು ಸೂಚಿಸುವದಕ್ಕಾಗಿ ಕಳೆದ ಬುಧವಾರ ಪ್ರಾತಃಕಾಲ 9½ ಗಂಟೆಗೆ ಟೌನ್ ಹಾಲಿನಲ್ಲಿ ರಾಜಧಾನಿಯ ಎಲ್ಲಾ ದೊಡ್ಡ ಮನುಷ್ಯರೂ, ಎಲ್ಲಾ ಪಂಗಡದ ಗಣ್ಯರಾದ ಪ್ರಜೆಗಳೂ ಸಭೆಯಲ್ಲಿ ಸೇರಿದ್ದರು. ಸಭಿಕರ ಅನುಮತಿಯ ಪ್ರಕಾರ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಅಗ್ರಾಸನವನ್ನು ವಹಿಸಿದರು. ಅವರು ಮಾಡಿದ ಭಾಷಣದ ಮುಖ್ಯಾಂಶಗಳೇನೆಂದರೆ—"ಪ್ರಪಂಚದ ಚರಿತ್ರೆಯಲ್ಲಿ ಇಂಥಾ ಘೋರವಾದ ಯುದ್ಧವು ಯಾವಾಗಲೂ ನಡೆದಿಲ್ಲ. ನಮ್ಮ ಸಾರ್ವಭೌಮ ಸರ್ಕಾರದವರಾದ ಬ್ರಿಟಿಷರು ಸತ್ಯಧರ್ಮಗಳನ್ನು ಕಾಪಾಡುವದಕ್ಕಾಗಿ ತಮ್ಮ ತನುಮನಧನಗಳನ್ನು ಲಕ್ಷ್ಯವಿಲ್ಲದೆ ವ್ಯಯಮಾಡುತ್ತಿರುವಾಗ ಅವರ ಪೋಷಣೆಯಲ್ಲಿರುವ ನಾವು ನಮ್ಮ ಕರ್ತವ್ಯವನ್ನು ನೆರವೇರಿಸಲು ಯಾವ ವಿಧದಲ್ಲೂ ಹಿಂತೆಗೆಯಬಾರದೆಂಬುವದು ನಮಗೆಲ್ಲರಿಗೂ ತಿಳಿದೇ ಇರುವ ವಿಷಯವಾಗಿದೆ. ನಾವು ಮಾಡುವ ದೃಢಸಂಕಲ್ಪಕ್ಕೆ ನೀವೆಲ್ಲರೂ ಒಂದೇ ಮನಸ್ಸಿನಿಂದ ಅನುಮೋದಿಸುತ್ತೀರೆಂಬುವದಕ್ಕೆ ಯಾವ ಅನುಮಾನವೂ ಇಲ್ಲ. ಈ ವಿಧವಾಗಿ ಸಂಕಲ್ಪಮಾಡಿರುವವರು ನಾವೊಬ್ಬರೇ ಅಲ್ಲ. ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಇರುವ ನಮ್ಮ ಮಿತ್ರಮಂಡಲಿಯವರೆಲ್ಲರೂ ಈ ಸಂಕಲ್ಪವನ್ನು ಏಕವಾಕ್ಯತೆಯಿಂದ ಒಪ್ಪಿ ತಮ್ಮ ರಾಜಭಕ್ತಿಯನ್ನು ಪ್ರಕಟಿಸಿರುತ್ತಾರೆ. ಹಿಂದುಸ್ಥಾನವು ಆದಕ್ಕಿಂತ ಹೆಚ್ಚಾಗಿ ಮೈಸೂರು ದೇಶವು ಬ್ರಿಟಿಷ್ ಸರ್ಕಾರದವರಿಗೆ ಅತ್ಯಂತ ಕೃತಜ್ಞರಾಗಿರಬೇಕು. ಘನತೆಯುಳ್ಳ ನಮ್ಮ ಶ್ರೀಮನ್ ಮಹಾರಾಜರವರು ಅಲ್ಪವಾದರೂ ತಮಗೆ ಸಾಧ್ಯವಾದಷ್ಟು ಸಹಾಯವನ್ನು ಮಾಡಿರುವದರ ಮೂಲಕ ನಮಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು ತಮಗೆ ಸಾರ್ವಭೌಮ ಸರ್ಕಾರದಲ್ಲಿರುವ ಪ್ರೀತಿಯನ್ನೂ ಅಸದೃಶವಾದ ರಾಜಭಕ್ತಿಯನ್ನೂ ವ್ಯಕ್ತಗೊಳಿಸಿರುವದು ಸರ್ವರಲ್ಲಿಯೂ ಆನಂದವನ್ನುಂಟುಮಾಡಿರುತ್ತದೆ. ಮಿತ್ರಮಂಡಲಿಯವರು ಕಳೆದ ಒಂದು ವರುಷದಿಂದಲೂ ಅತ್ಯಂತ ಧೈರ್ಯದಿಂದಲೂ, ಜಯಪ್ರದವನ್ನು ಹೊಂದಬೇಕೆಂಬ ದೃಢಸಂಕಲ್ಪದಿಂದಲೂ ಯುದ್ಧಮಾಡುತ್ತಿದ್ದರೂ ಶತ್ರು ಪಕ್ಷದವರು ಸಂಪೂರ್ಣವಾಗಿ ಸೋತುಹೋಗಿಲ್ಲವಾಗಿ ವ್ಯಸನಪಡಬೇಕಾಗಿದೆ. ನಾವು ರಣರಂಗದಿಂದ ಬಹಳ ದೂರದಲ್ಲಿದ್ದರೂ ನಮ್ಮ ಪಕ್ಷದವರಿಗೆ ಶೀಘ್ರದಲ್ಲಿ ಜಯವಾಗಲೆಂದು ಸದಾ ಕಾಲದಲ್ಲಿಯೂ ದೇವರನ್ನು ಪ್ರಾರ್ಥಿಸುವುದು ನಮ್ಮ ಕರ್ತವ್ಯವಾಗಿದೆ."

ಅನಂತರ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರ್ ಮ|| ಸುಬ್ರಹ್ಮಣ್ಯ ಅಯ್ಯರವರು ಮುಂದೆ ಹೇಳುವ ರೀತಿಯಲ್ಲಿ ಭಾಷಣಮಾಡಿದರು.—"ಧರ್ಮವನ್ನು ಕಾಪಾಡುವದಕ್ಕಾಗಿಯೇ ಕೈಗೊಂಡಿರುವ ಈ ಯುದ್ಧದ ವಾರ್ಷಿಕೋತ್ಸವದಲ್ಲಿ ರಾಜಧಾನಿಯ ಪ್ರಜೆಗಳೆಲ್ಲರೂ ಸಭೆ ಸೇರಿ ಈ ಯುದ್ಧದಲ್ಲಿ ನಮ್ಮ ಪಕ್ಷದವರು ಸ್ವಾತಂತ್ರ್ಯವನ್ನೂ ಧರ್ಮವನ್ನೂ ಸ್ಥಾಪಿಸಿ ಜಯಪ್ರದವನ್ನು ಹೊಂದುವ ವರೆಗೂ ಯುದ್ಧವನ್ನು ಮಾಡಿಯೇ ತೀರಬೇಕೆಂಬ ದೃಢಸಂಕಲ್ಪವನ್ನು ಈ ಮೂಲಕ ತಿಳಿಯಪಡಿಸುತ್ತೇವೆ" ಎಂಬ ಪ್ರತಿಜ್ಞೆಯನ್ನು ನಮ್ಮ ಪರವಾಗಿ ನಾನು ಮೊದಲು ಸೂಚಿಸುತ್ತೇನೆ. ರಾಜಭಕ್ತಿಯು ನಮ್ಮಲ್ಲಿ ಸ್ವಾಭಾವಿಕವಾಗಿಯೇ ನೆಲಸಿರುವದರಿಂದ ನಾನು ಅದರ ವಿಷಯವಾಗಿ ಹೆಚ್ಚಾಗಿ ಹೇಳಬೇಕಾದದ್ದಿಲ್ಲ. ಮಿತ್ರಮಂಡಲಿಯವರು ಬಲಾತ್ಕರಿಸಲ್ಪಟ್ಟು ಈ ಯುದ್ಧದಲ್ಲಿ ಪ್ರವೇಶಿಸಿದರೇ ವಿನಹ ತಾವಾಗಿಯೇ ಯುದ್ಧಕ್ಕೆ ಪ್ರಯತ್ನಪಡಲಿಲ್ಲ. ಜರ್ಮನು ಹತ್ತಿರ ಇರುವ ಅಪಾರವಾದ ಯುದ್ಧ ಸಾಮಗ್ರಿಗಳೇ ಅವರು ಅನೇಕ ವರುಷಗಳಿಂದ ಯುದ್ಧಕ್ಕೆ ತಯಾರಾಗಿದ್ದರೆಂಬುವದನ್ನು ತಿಳಿಸುತ್ತವೆ. ಪ್ರಪಂಚವನ್ನೆಲ್ಲಾ ಗೆದ್ದು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬುವದೇ ಅವರ ಮುಖ್ಯೋದ್ದೇಶ. ಇದಕ್ಕಾಗಿಯೇ ಅವರು ಅನೇಕ ಕರಾರುಗಳನ್ನು ಉಲ್ಲಂಘಿಸಿ ಮಹಾ ಕ್ರೂರತರವಾದ ಆಯುಧಗಳನ್ನು ಉಪಯೋಗಿಸಿ ಯುದ್ಧಮಾಡುತ್ತಿದ್ದಾರೆ. ನಮ್ಮ ಪಕ್ಷದವರು ಒಪ್ಪಿದರೆ ನಮ್ಮ ಶತ್ರುಗಳು ಕರಾರು ಮಾಡಿಕೊಳ್ಳಲು ಯಾವ ಕ್ಷಣದಲ್ಲಾದರೂ ಸಿದ್ಧರಾಗಿರುತ್ತಾರೆ. ಆದರೆ ಕಾಲಾನುಕಾಲದಲ್ಲಿ ಈ ವಿಧವಾದ ಕರಾರಿನಿಂದ ಯಾವ ಪ್ರಯೋಜನವೂ ಉಂಟಾಗುವದಿಲ್ಲ. ಆದ್ದರಿಂದ ಸಂಪೂರ್ಣವಾಗಿ ಜಯವಾಗುವ ವರೆಗೂ ನಮ್ಮ ಪಕ್ಷದವರು ಯುದ್ಧಮಾಡಬೇಕಾದದ್ದು ಅತ್ಯಂತ ಅವಶ್ಯಕವಾಗಿದೆ. ಯುದ್ಧದ ಪ್ರಾರಂಭದಲ್ಲಿ ನಮ್ಮ ದೇಶದಲ್ಲಿ ಧಾನ್ಯವಾಸಿಗಳು ಸ್ವಲ್ಪಮಟ್ಟಿಗೆ ಹೆಚ್ಚಿದ್ದು, ಈಗ ಮೊದಲಿದ್ದಂತೆಯೇ ಇರುವದೂ, ನಮ್ಮ ದೇಶಕ್ಕೆ ಶತ್ರುಗಳಿಂದ ಯಾವ ವಿಧವಾದ ಬಾಧೆಯೂ ಇಲ್ಲದಿರುವದೂ ಬ್ರಿಟಿಷ್ ಜನರ ಸಮುದ್ರಸೈನ್ಯದ ಪರಾಕ್ರಮವನ್ನು ವ್ಯಕ್ತಗೊಳಿಸುತ್ತದೆ. ನಮ್ಮ ಪಕ್ಷದವರಿಗೇ ಜಯವಾಗುವದೆಂಬ ವಿಷಯದಲ್ಲಿ ಯಾರಿಗೂ ಅನುಮಾನವಿಲ್ಲ. ಯಾಕೆಂದರೆ ಅವರು ಯಾವಾಗಲೂ ಧರ್ಮಮಾರ್ಗದಲ್ಲಿಯೇ ನಡೆಯುತ್ತಾರೆ.

ಬಳಿಕ ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರವರು ಅವರ ಭಾಷಣವನ್ನು ಅನುಮೋದಿಸಿದ್ದಲ್ಲದೆ ಬ್ರಿಟಿಷ್ ಜನರೂ ಅವರ ಮಿತ್ರಮಂಡಲಿಯವರೂ ಸತ್ಯಕ್ಕೋಸ್ಕರವೇ ಯುದ್ಧಮಾಡುತ್ತಿರುವ ಕಾರಣ ಅವರು ಯುದ್ಧದಲ್ಲಿ ಜಯಪ್ರದವನ್ನು ಹೊಂದುವ ವರೆಗೂ ಎಲ್ಲರೂ ಅವರಿಗೆ ಸಹಾಯಮಾಡುವದು ಧರ್ಮವೆಂದು ತಿಳಿಸಿದರು. ಮ|| ವೆಂಕಟಕೃಷ್ಣಯ್ಯನವರೂ, ರೆವ್|| ಎಚ್. ಗಲ್ಲಿಫೋರ್ಡ್ ಸಾಹೇಬರೂ, ಮತ್ತು ಮಿ|| ವಿಜಾರ್ ಹಂಜಾ ಹುಸೇನ್ ಸಾಹೇಬರೂ ಇದೇ ವಿಚಾರವಾಗಿ ಇಂಗ್ಲೀಷಿನಲ್ಲಿ ಮಾತನಾಡಿದರು. ತರುವಾಯ ಮ|| ಅಂಬಳೆ ಅಣ್ಣಯ್ಯಪಂಡಿತರು ಮತ್ತು ಮ|| ಬಿ. ರಾಮಕೃಷ್ಣರಾಯರು ಕನ್ನಡದಲ್ಲೂ, ಮ|| ದರ್ವೇಷ್ ಪೀರ್ ಸಾಹೇಬರವರು ಉರ್ದು ಭಾಷೆಯಲ್ಲೂ ಭಾಷಣಮಾಡಿದರು. ಮಿ|| ಪಿ ಪಾಲಂಜಿಯವರು ಮೈಸೂರಿನಲ್ಲಿರುವ ಪಾರ್ಸಿ ಪಂಗಡದವರ ಪರವಾಗಿ ಮೇಲ್ಕಂಡವರ ಅಭಿಪ್ರಾಯವನ್ನೆಲ್ಲಾ ಅನುಮೋದಿಸಿ ಮಾತನಾಡಿದರು. ಅನಂತರ ವೇ|| ಜಿ. ಶ್ರೀನಿವಾಸಜೋಯಿಸರು ಚಕ್ರವರ್ತಿ ಪ್ರಭುಗಳ ಮೇಲೂ ಶ್ರೀಮನ್ಮಹಾರಾಜರವರ ಮೇಲೂ ಆಶೀರ್ವಚನರೂಪಕವಾದ ಒಂದು ಸಂಸ್ಕೃತ ಪದ್ಯವನ್ನು ಓದಿದರು. ಮಿ|| ಆರ್. ಎಚ್. ಕ್ಯಾಂಪ್‌ಬೆಲ್‌ರವರು ಮೈಸೂರಿನಿಂದ ಯುದ್ಧಭೂಮಿಗೆ ಹೋಗಿರುವವರ ಸ್ಮೃತಿ ಮ|| ಸುಬ್ಬರಾಜೆ ಅರಸಿನವರು ತಮ್ಮ ಪ್ರಾಣದ ಮೇಲೂ ಲಕ್ಷ್ಯವಿಡದೆ ಅಪಾಯಕ್ಕೆ ಗುರಿಯಾಗಿದ್ದ ಮತ್ತೊಬ್ಬ ಸವಾರನನ್ನು ಬದುಕಿಸಿದ ಸಂಗತಿಯನ್ನು ತಿಳಿಸಲು ಸಭಿಕರೆಲ್ಲರೂ ತಮ್ಮ ದೇಶೀಯರಾದವರು ಇಂಥಾ ಸಾಹಸಕಾರ್ಯವನ್ನು ಮಾಡಿದ್ದಕ್ಕಾಗಿ ಅತ್ಯಂತವಾಗಿ ಆನಂದಪಟ್ಟರು.

ಕಡೆಗೆ ಅಗ್ರಾಸನಾಧಿಪರು ಮೇಲ್ಕಂಡ ಪ್ರತಿಜ್ಞೆಯ ವಾಕ್ಯವನ್ನು ಓದಿ ಸಭಿಕರ ಅನುಮತಿಯನ್ನು ಕೇಳಿದರು. ಎಲ್ಲರೂ ಏಕವಾಕ್ಯತೆಯಿಂದ ಅದನ್ನು ಒಪ್ಪಿಕೊಂಡ ನಂತರ ಮ|| ವಿ. ಎಮ್. ನರಸಿಂಹಯ್ಯಂಗಾರ್ರ ಅಗ್ರಾಸನವನ್ನು ವಹಿಸಿದ್ದವರಿಗೆ ಸಭಿಕರ ಪರವಾಗಿ ವಂದನೆಗಳನ್ನು ಹೇಳಿದರು. ಸಭಿಕರೆಲ್ಲರೂ ಜಾರ್ಜ್ ಪ್ರಭುಗಳು, ಶ್ರೀಮನ್ ಮಹಾರಾಜರವರು, ಮ|| ಸುಬ್ಬರಾಜೆ ಅರಸಿನವರು ಇವರುಗಳ ವಿಷಯವಾಗಿ ಜಯಧ್ವನಮಾಡಿ ಸಭೆಯನ್ನು ಮುಕ್ತಾಯ ಮಾಡಿದರು.

ತುಮಕೂರು.

ಎಲ್ಲಾ ಕಡೆಯೂ ನಡಿಸಿದಂತೆ ಇಲ್ಲಿಯೂ ಕಳೆದ 4 ನೇ ತಾ. ಎ. ವಿ. ಸ್ಕೂಲ್ ಕಟ್ಟಡದಲ್ಲಿ ಯುದ್ಧದ ವಿಷಯವಾದ ಸಭೆ ಸೇರಿ [illegible] ಡೆಪ್ಯುಟಿ ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರು ಜರ್ಮನಿಯವರಿಂದ ಇದುವರೆಗೆ ಉಂಟಾದ ನಷ್ಟಗಳನ್ನು ಕುರಿತು ಭಾಷಣಮಾಡಿದ ನಂತರ ಶ್ರೀಮನ್ಮಹಾರಾಜರವರ ಮುಸಾಹಿಬ್ ಮಿ|| ಟಿ. ಎಮ್. ವಿಸಾರ್ ಕಮಾಲುದ್ದೀನ್ ಅಲಿ ಖಾನ್ ಸಾಹೇಬರವರು ಈ ಮೂರು ವಿಷಯಗಳನ್ನು ಭಾಷಣಮಾಡಿದರು. ಅವು ಯಾವುವೆಂದರೆ—(1) ಜರ್ಮನಿಯವರು ಬೆಲ್ಜಿಯಮಿನಲ್ಲಿ ದಾರಿ ಕೊಡಬೇಕೆಂದು ಅಪೇಕ್ಷಿಸಿದಾಗ ಬ್ರಿಟಿಷರು ದೂರದೃಷ್ಟಿಯಿಂದ ಯೋಚಿಸಿ ಜರ್ಮನಿಯವರು ನಿಷ್ಕರುಣರು, ಕ್ರೂರಿಗಳು; ಇವರಿಗೆ ದಾರಿ ಕೊಟ್ಟರೆ ಫ್ರಾನ್ಸಿನ ಮುತ್ತಿಗೆ ಹಾಕಿ ನಮ್ಮ ಸ್ನೇಹಿತರಾದ ದೊರೆಗಳನ್ನೂ ಪ್ರಜೆಗಳನ್ನೂ ಕಷ್ಟನಷ್ಟಗಳಿಗೆ ಗುರಿಮಾಡುತ್ತಾರೆಂದು ತಿಳಿದು ಯುದ್ಧಕ್ಕೇನೆ ಒಪ್ಪಿಕೊಂಡರು. ಕಳೆದ ವರ್ಷದ ಆಗಸ್ಟ್ 4 ಕ್ಕೆ ಈ ಯುದ್ಧವು ಶುರುವಾಗಿ ಇಂದಿಗೆ ಒಂದು ವರ್ಷವಾಯಿತು. ಇಂಗ್ಲಿಷಿನವರು ಮೊದಲು ಯೋಚಿಸಿದ್ದಂತೆ ಅವರ ಸ್ನೇಹಿತರಾದ ಫ್ರಾನ್ಸ್ ವಗೈರೆ ರಾಜರುಗಳಿಗೂ, ಪ್ರಜೆಗಳಿಗೂ ಜರ್ಮನಿಯವರಿಂದ ಕೇಡುಂಟಾಗುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. (2) ನಿಷ್ಕರುಣೆಗಳಾದ ಜರ್ಮನಿಯವರು ಕಳ್ಳ ಹಡಗುಗಳನ್ನು ಮುಳುಗಿಸುವುದು, ಊರುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಸುರಿಸುವುದು, ನಿರಪರಾಧಿಗಳನ್ನು ಕೊಲ್ಲುವುದೇ ಮೊದಲಾದ ಕ್ರೂರಕೃತ್ಯಗಳನ್ನು ಮಾಡುತ್ತಿರುವುದನ್ನು ಸಹಿಸದೆ ಸತ್ಯವೂ, ಕರುಣೆಯೂ, ಅಹಿಂಸತ್ವವೂ ಉಳ್ಳ ಇಂಗ್ಲೀಷಿನವರು ಜರ್ಮನಿಯವರಿಂದ ಕೇಡುಂಟಾಗದಂತೆ ಪ್ರಜೆಗಳನ್ನು ರಕ್ಷಿಸಬೇಕೆಂದು ಯುದ್ಧಮಾಡುತ್ತಿರುತ್ತಾರೆ. ಇಂಗ್ಲಿಷರ ಸ್ನೇಹಿತರಾದ ದೊರೆಗಳೂ, ಅವರ ಪ್ರಜೆಗಳೂ ಸಹ ತಮ್ಮ ಜೀವದಾಸೆಯನ್ನು ತೊರೆದು ಕಷ್ಟನಷ್ಟಗಳನ್ನು ಸಹಿಸಿ ಸಹಾಯಮಾಡುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಇದರಂತೆಯೇ ನಾವುಗಳೂ ಸಹ ಈ ಯುದ್ಧವು ಮುಗಿಯುವ ವರಿಗೂ ಸಹಾಯಮಾಡಬೇಕಾಗಿರುವುದು. (3) ದೇವರು ಯಾವಾಗಲೂ ನ್ಯಾಯವನ್ನೇ ಮೆಚ್ಚುತ್ತಾನೆ. ಸಕ್ಕರೆ ಕೃತ್ರಿದಾತ್ಮಗಳ ಇಷ್ಟದಂತೆ ಕೆಟ್ಟ ಕೆಲಸಕ್ಕೆ ಬಲಕೊಟ್ಟಂತೆ ತೋರಿದರೂ ಸತ್ಯಪ್ರವೃತ್ತಿಯಿಲ್ಲವೆಂಬಂತೆ ಕರುಣೆಗಳೂ, ಸತ್ಯಸಂಧರೂ, ನಾಗರಿಕರೂ ಆದ ಇಂಗ್ಲಿಷಿನವರಿಗೇನೇ ಜಯವಾಗುತ್ತೆಂದು ಖಂಡಿತವಾಗಿ ಹೇಳುತ್ತೇನೆ. ಸುತ್ತು ಇದುವರೆಗೆ ನಮ್ಮ ಪಕ್ಷದವರಿಗೇನೇ ಅನುಕೂಲಗಳುಂಟಾಗಿ ಜಯವಾಗುತ್ತಿರುವುದು. ಇಂಥಾ ಸಮಯದಲ್ಲಿ ಕಾಯಿಲೆ ಬಿದ್ದವರಿಗೆ, ಗಾಯಪಟ್ಟವರಿಗೆ, ವಿಧವೆಗಳಿಗೆ, ತಾಯಿತಂದೆಗಳನ್ನು ಕಳೆದುಕೊಂಡ ಅನಾಥರಿಗೆ ಸಹಾಯಮಾಡತಕ್ಕದ್ದೆಂದು ನಮ್ಮ ಶಕ್ತ್ಯನುಸಾರ ಎಲ್ಲರೂ ಸಹಾಯಮಾಡುತ್ತಿರಬೇಕು. ದೇವರು ಕಡೆಯಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರ ಪಕ್ಷದವರಿಗೆ ಜಯವನ್ನು ದಯಪಾಲಿಸುತ್ತಾನೆ. ಈಗ ನಾನು ಡೆಪ್ಯುಟಿ ಕಮಿಷನರ್ ಸಾಹೇಬರ ವಶಕ್ಕೆ ಒಂದು ನೂರು ರೂಪಾಯಿಗಳನ್ನು ಕೊಟ್ಟು ಈ ಹಣವನ್ನು ಅವರು ಸರ್ಕಾರದಲ್ಲಿಟ್ಟು ಇಂಗ್ಲಿಷರಿಗೆ ಜಯವಾದ ಕೂಡಲೇ ಮಸೀದಿ ವಗೈರೆಗಳಲ್ಲಿ ಧರ್ಮಕಾರ್ಯಗಳಿಗೆ ಉಪಯೋಗಿಸಲೆಂದು ಅವರು ಹೇಳಿದ ನಂತರ ಇದನ್ನು ಕೇಳಿ ಡೆ|| ಕಮಿಷನರವರು ಬಹಳ ಸಂತೋಷಪಟ್ಟು ಇದೇ ಸಂಗತಿಯನ್ನೇ ಪುನಃ ಎಲ್ಲರಿಗೂ ತಿಳಿಸಿ ಕಡೆಯಲ್ಲಿ ಶ್ರೀ ಭಗವಂತನು ಸತ್ಯಸಂಧರೂ, ಧಾರ್ಮಿಕರೂ ಆದ ನಮ್ಮ ಚಕ್ರವರ್ತಿ ಸಾರ್ವಭೌಮ ಸರ್ಕಾರದವರಿಗೇನೇ ಜಯವನ್ನು ಅನುಗ್ರಹಿಸಲೆಂದು ಜಯವನ್ನೇ ಕೋರುತ್ತಾ ಸಭೆಯನ್ನು ಮುಕ್ತಾಯಮಾಡಿದರು.

ಟಿ ನರಸೀಪುರ.

ನಮ್ಮ ಅಮಲ್ದಾರ್ ಮ|| ಟಿ. ವಿ. ಎ. ಈಶ್ವರನ್‌ರವರು ಆಗಸ್ಟ್ 4 ನೇ ತಾ. ಪ್ರಾತಃಕಾಲ ಮತ್ತು ಸಾಯಂಕಾಲ ದೇವಸ್ಥಾನಗಳಲ್ಲಿ ದೇವರಿಗೆ ಅಭಿಷೇಕಾದಿಗಳನ್ನು ಮಾಡಿಸಿದರು. ದೇವಸ್ಥಾನದಲ್ಲಿ ಸೇರಿದ್ದ ಮಹಾಜನಗಳು ಮತ್ತು ಅಮಲ್ದಾರರವರು ಸಹ ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಬ್ರಿಟಿಷ್ ಸಾಮ್ರಾಜ್ಯ ಮತ್ತು ಇಂಡಿಯಾ ಚಕ್ರವರ್ತಿಯವರಿಗೂ ಅವರ ಸ್ನೇಹಿತರ ಸಮೂಹಕ್ಕೆ ಜಯ ಉಂಟಾಗಲಿ ಎಂದು ಪ್ರಾರ್ಥನೆಯನ್ನು ಮಾಡಿದರು. ನಮ್ಮ ಚಕ್ರವರ್ತಿ ಸಾರ್ವಭೌಮರು ಶತ್ರುಗಳನ್ನು ಜಯಿಸಿ ಲೋಕಕ್ಕೆ ಹಿತವನ್ನು ಶಾಂತಿಯನ್ನು ಉಂಟುಮಾಡಲಿ ಎಂಬುವದೇ ನಮ್ಮಗಳ ಪ್ರಾರ್ಥನೆಯಾಗಿತ್ತು.

ಎಚ್. ಎ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಇಡನೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಪುನಃ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಕ್ಯಾತನಹಳ್ಳಿಯ ಎರಡು ಕೊರತೆಗಳು.

ಅಯ್ಯಾ,—ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳಿಯಲ್ಲಿ 40 ವರ್ಷದಿಂದ ಪೋಸ್ಟಾಫೀಸ್ ಇಟ್ಟಿದ್ದರು. ಈಗ ನಾಲ್ಕು ತಿಂಗಳಿಂದ ವಾರಕ್ಕೆ ಎರಡು ಸಾರ್ತಿ ಮಾತ್ರ ಕ್ಯಾತನಹಳ್ಳಿ ಪೋಸ್ಟ್ ಆಫೀಸ್‌ನಿಂದಲೇ ಆಗುವಂತೆ ಮಾಡಿದಾರೆ. ಇಲ್ಲಿಗೆ ಅನೇಕ ಫಾರಂಗಳೂ, ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳು ಬರುತ್ತವೆ. ಇದು ಭಾರಿ ಗ್ರಾಮವಾದುದರಿಂದ ಪೋಸ್ಟ್ ಬರದೆ ಬಹಳ ಕಷ್ಟ

...ಂದರೆಯಾಗಿರುತ್ತೆ. ಸರ್ಕಾರದವರು ಪ್ರತಿ ನಿತ್ಯವೂ ಟಪ್ಪಾಲು ಹೋಗಿಬರುವ ...ಂತೆ ವಾಡಿ ಪೋಸ್ಟ್‌ಆಫೀಸ್ ಕ್ರಮಪಡಿಸುವುದು. ಮತ್ತು ಈ ಊರಿಗೆ ...ಲೀಸ್ ಸ್ಟೇಷನ್ ಇರುವುದಕ್ಕೆ ಸ್ಯಾಂಕ್ಷನ್ ಆಗಿ ಎರಡು ಮೂರು ವರುಷ ...ಯಿತು. ಇನ್ನೂ ಬರಲಿಲ್ಲ. ಕಳ್ಳತನ ದಿನೇ ದಿನೇ ಜಾಸ್ತಿಯಾಗುತ್ತೆ. ...ರ್ಕಾರದವರು ಮನಸ್ಸಿಗೆ ತಂದುಕೊಂಡು ಮೇಲ್ಕಂಡ ಪೋಸ್ಟ್‌ಆಫಿಸಿನ ವಿಚಾರದಲ್ಲಿಯೂ, ಪೊಲೀಸ್ ಸ್ಟೇಷನ್ ತಕ್ಷಣ ಇರುವಂತೆಯೂ ಹುಕುಂ ದಯ...ಲಿಸಿ, ಪ್ರಜೆಗಳ ಕಷ್ಟವನ್ನು ಪರಿಹರಿಸುವರೆಂದು ನಂಬಿರುತ್ತೇನೆ.

ಪ್ರಜಾ ಹಿತಚಿಂತಕ.

ಮಾಲೂರು ತಾಲ್ಲೂಕಿನ ಒಂದು ಖೂನಿ ಮೊಕದ್ದಮೆ

...ಯ್ಯಾ.—ಈ ತಾಲ್ಲೂಕು ನಲ್ಲಮ್ಮನಹಳ್ಳಿ ಸರಹದ್ದಿನ ಕಾಡಿನಲ್ಲಿ ...6-15 ರಲ್ಲಿ ಸಾಯಂಕಾಲ 7 ಗಂಟೆ ಸಮಯದಲ್ಲಿ ಉದ್ದಾರಿ ಮುನಿವೆಂಕ...ಪ್ಪ ಎಂಬುವವನನ್ನು ಯಾರೋ ಕಳ್ಳರು ಕೊಂದರು. ಸಂಗಡ ಇದ್ದ ಇವನ ...ಂಗಸು—ಯಾರೋ ಕಳ್ಳರು ಕೊಂದರು. ಅವರ ಗುರುತು ತನಗಿಲ್ಲವೆಂದು ...ಬೋಲು ಕೈಲಿ ರಿಪೋರ್ಟು ಮಾಡಿಸಿದ್ದಲ್ಲದೆ ತನಿಖೆಗಾಗಿ ಬಂದ ಪೊಲೀಸ್ ಆಫೀಸರಲ್ಲೂ ಪಂಚಾಯಿತರಲ್ಲೂ ಅದರಂತೆಯೇ ಹೇಳಿದಳು. ಕೃತ್ಯ ಯೇಗೆ ನಡೆಯಿ...ತೋ ನಿರ್ಧರಿಸಲು ಅಸಾಧ್ಯ. ಪೊಲೀಸ್ ಇನ್ಸ್‌ಪೆಕ್ಟರು ಹೊಸಬರಾಗಿದ್ದರು. ...ಮಲ್ದಾರ್ ಸ್ವಾಮಿಯವರು ಊರಲ್ಲಿ ಆಗ ಇರಲಿಲ್ಲ. ಇದ್ದ ಪೊಲೀಸಿನವರು ...ನವ ಕಾರಣದಿಂದಲೋ ಕೆಲಜನಗಳ ಚಾಡಿ ಮಾತುಗಳನ್ನು ನಿಜವೆಂದು ...ಬ ಮೇಲ್ಕಂಡ ಮುನಿಯನ್ನು ತಿದ್ದಿ ಹಳೇ ಕೊರಲಕ್ಕಿಯಲ್ಲಿರುವ ನಾಚ್ಛ...ಬ, ಬೌತಪ್ಪ, ಮುನಿಪ್ಪ ಎಂಬ ಮೂವರನ್ನು ದಸ್ತಗಿರಿ ಮಾಡಿದರು. 1-3 ...ಅಪರಾಧಿಗಳ ಮನೆಗಳಲ್ಲಿ ಝಡ್ತಿ ಮಾಡಿದಾಗ ಡಾಗೀನ ಏನೂ ದೊರಕಲಿ...ಲ್ಲ. 3 ನೆಯವನ ಮನೆಯಲ್ಲಿದ್ದ ಒಂದು ಕೈ ಬಳೆಯನ್ನು ತನ್ನದೆಂದು ಹೇಳು...ಂತೆ ಮುನಿಗೆ ಹೇಳಿಕೊಟ್ಟು ಅದನ್ನೂ, ಒಂದು ದೊಣ್ಣೆಗೆ ರಕ್ತದ ಕಲೆಗಳಾಗಿವೆ ...ಂದು ಅದನ್ನೂ ಎರಡನ್ನೂ ಸೀಲುಮಾಡಿಸಿ ಡಾಗೀನಾ ಎಂದು ನಾಮಕರಣವ...ನ್ನು ಇಟ್ಟರು. ದೊಣ್ಣೆಗೆ ರಕ್ತವೇ ಇಲ್ಲವೆಂದು ಡಾಕ್ಟರು ಅಭಿಪ್ರಾಯಪಟ್ಟರು. ...ಬೆಯೂ ಮುನೀದಲ್ಲವೆಂದು ವ್ಯಕ್ತಪಟ್ಟಿತು. ಕಡೆಯಲ್ಲಿ ಅಪರಾಧಿಗಳ ಮೇಲೆ ...ಕವಮಾತ್ರವೂ ತಪ್ಪು ರುಜುವಾತಾಗದೆ ತಾ. 2-9-15 ರಲ್ಲಿ ಮಾಲೂರ್ ಸಬ್ ...ಜಿ ಕೋರ್ಟನಲ್ಲೇ ಮೊಕದ್ದಮೆ ವಜಾ ಆಯಿತು. ದೊಡ್ಡ ಹುದ್ದೆಗಳ...ನ್ನು ಹೊಂದಬೇಕೆಂದು ಅನ್ಯಾಯಕ್ಕೆ ಒಳಪಟ್ಟವರ ಆಶೆಯು ವ್ಯರ್ಥವಾಯಿ...ತು. ಸತ್ಯವೇ ನಿತ್ಯ ! ಧರ್ಮವೇ ಜಯ ! ಆಫೀಸರಾದ ಮಾತ್ರಕ್ಕೇ ಮಾನಸ್ಥರಾ...ದ ಬಡಜನಗಳಿಗೆ ಸಂಕಟ ಕೊಡುವುದು ಧರ್ಮವಲ್ಲ. ಅವರವರ ಮನಸ್ಸೇ ಅವ...ರಿಗೆ ಸಾಕ್ಷಿ ! ಅಪರಾಧಿಗಳೆನಿಸಿಕೊಂಡ ಜನಗಳೂ, ಅವರ ಬಂಧುಗಳೂ ಎರಡು ...ಂಗಳ ಕಾಲಾಯಿತು ಅನುಭವಿಸಿದ ಕಷ್ಟನಷ್ಟಗಳನ್ನು ಹೇಳತೀರದು. ದೇವರು ...ನೇ ಇವರ ಸಂಕಟವನ್ನು ಪರಿಹರಿಸಬೇಕು ! ಆಫೀಸರರಿಗೆ ಹೆದರಿ ಏನು ಆದ...ರೂ ಅನುಭವಿಸಿಕೊಂಡು ಸುಮ್ಮನಿರಬೇಕಾಗಿದೆ ! ಇಂಥಾ ತಪ್ಪು ಕೇಸುಗಳನ್ನು ...ಡದಿರುವದು ಉತ್ತಮ. ಈ ಕೇಸಿನಲ್ಲಿ ಅಪರಾಧಿಗಳ ಕಡೆ ಬಂದಿದ್ದ ಬೌರಿಂ...ಗ್‌ಪೇಟೆಯ ಮ|| ಬಿ. ಶೇಷಾದ್ರಿ ಅಯ್ಯಂಗಾರ್ ಎಂಬ ಅಡ್ವೊಕೇಟರು ಸತ್ಯ...ವನ್ನು ಕುರಿತು ಪಟ್ಟ ಸಾಹಸವು ಅಸಾಧಾರಣವಾಗಿತ್ತು.

ಬಾತ್ಮಿದಾರ್.

ವಿ. ಇ. ಸ್ಕೂಲು ಮಾಸ್ಟರುಗಳ ಬಡ್ತಿ ವಿಚಾರ.

ಅಯ್ಯಾ,—ಮೈಸೂರು ಗೌರ್ನಮೆಂಟಿನಿಂದ ಮಾಸ್ಟರುಗಳ ಬಡ್ತಿಗಾಗಿ ಕೆಲವು ಹಣ ಮಂಜೂರಾಯಿತು. ಇದರ ವಿಲೇವಾರಿಯನ್ನು ವಿದ್ಯಾಭ್ಯಾಸದ ಇಲಾಖೆಯವರಿಗೆ ವಹಿಸಿದರು. ಈ ಅಧಿಕಾರಿಗಳು ಕೆಲವು ಮಂದಿ ಮಾಸ್ಟರುಗಳಿಗೆ ಬಡತಿ ಕೊಟ್ಟು ಮತ್ತೆ ಕೆಲವರನ್ನು ಹಾಗೆಯೇ ನಿಲ್ಲಿಸಿದಾರೆ. ಪ್ರವೇಶಕ್ಕೆ ಕರಮು ಅದ ಮಾಸ್ಟರುಗಳೂ, ಆಗಿದ್ದರೂ ತಮ್ಮ ಕಷ್ಟವನ್ನೂ, ಯೋಗ್ಯತೆ ವಗೈರೆಗಳನ್ನೂ ಹೇಳಿಕೊಳ್ಳುವುದಕ್ಕಾಗಿ ಆಫೀಸರುಗಳ ಬಳಿಗೆ ಹೋದರೆ ಸದರಿ ...ವನ್ನು ಕೊಡದೆ ಗೇಟಿನಿಂದ ಹೊರಕ್ಕೆ ತಳ್ಳುತ್ತೇವೆಂಬದಾಗಿ ಹೇಳುತ್ತಾರೆ ಮಾಸ್ಟರುಗಳು ತಿಳುವಳಿಕೆಯಿಲ್ಲದೆ ಅಂಥಾ ಮೇಲ್ಪಟ್ಟ ಆಫೀಸರಲ್ಲಿ ಹೋಗಿ ಹೀಗೆ ಅವಮಾನ ಹೊಂದುವುದಕ್ಕಿಂತ ಸುಮ್ಮನಿರುವುದು ಲೇಸು. ಯಾವ ಆಫೀಸರೇ ...ಗಲಿ ಕಷ್ಟವನ್ನು ಅನುಭವಿಸಿ ದೊಡ್ಡ ಪದವಿಗೆ ಬಂದಿರತಕ್ಕವರಾದರೆ ತಮ್ಮ ಹಿಂದಿನ ಕಷ್ಟವನ್ನು ಸ್ಮರಿಸಿಕೊಂಡು ತಮಗೆ ದೊರಕಿರತಕ್ಕ ಅಧಿಕಾರದಲ್ಲಿ ತಮ್ಮ ಕೈಕೆಳಗಿನ ನೌಕರರಿಗೆ ಒಳ್ಳೆಯದನ್ನು ಮಾಡಿ ತಮ್ಮ ಸರ್ವೀಸ್ಸಿನಲ್ಲಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದು ದೇಶದಲ್ಲಿ ಕೀರ್ತಿಶೇಷರಾಗು...ವರು. ಸರ್ಕಾರದವರು ದೇಶೋನ್ನತಿಗೆ ವಿದ್ಯಾಭ್ಯಾಸವೇ ಮೂಲಾಧಾರವೆಂದು ತಿಳಿದು ಬಹಳ ಹಣವನ್ನು ಮಂಜೂರು ಮಾಡಿರುವರು. ಈ ಹಣದ ಸ್ವಲ್ಪ ಭಾಗವಾಗಿರುವುದು ಜಾಸ್ತಿ ಉಳಿದುದನ್ನಾದರೂ ಸರ್ವತ್ರ ಹಂಚಿದರೆ ಉತ್ತಮ ...ವಾಗಿತು.

ವಿ. ಇ. ಸ್ಕೂಲಿನಲ್ಲಿ ಒಬ್ಬರಿಂದ ಐದು ಮಂದಿ ತನಕ ಮಾಸ್ಟರುಗಳಿರು...ತ್ತಾರೆ. ಒಬ್ಬ ಉಪಾಧ್ಯಾಯನು ಸಾಮಾನ್ಯವಾಗಿ 5 ತರಗತಿಗಳಿಗೆ ಪಾಠವನ್ನು ಹೇಳಿ ತನ್ನ ಜೀವಮಾನವನ್ನು ಕೇವಲ ಸಾಯುತ್ತಿರುವುದು ಅಧಿಕಾರಿಗಳ ನೇತ್ರೇಂದ್ರಿಯಕ್ಕೆ ಬಿದ್ದಂತೆ ಕಾಣುವುದಿಲ್ಲ. ಈಗಿನ ಕಾಲದಲ್ಲಿ ಲೋ. ಸೆ. ಪರೀಕ್ಷೆಯನ್ನು ಮಾಡಿ ಲೋ. ಸೆ. ಪರೀಕ್ಷೆಗೆ ಬಾಲಕರನ್ನು ಕಳಿಸದ ಮಾಸ್ಟರುಗಳು ವಿರಳವೇ ? ಅಲ್ಲದೆ ಮೇಲ್ಕಂಡ 5 ತರಗತಿಗಳನ್ನು ಇಟ್ಟು ಮ್ಯಾನೇಜ್‌ಮೆಂಟು ನಡಿಸತಕ್ಕ ಉಪಾಧ್ಯಾಯರುಗಳ ಕಷ್ಟವನ್ನು ನೋಡದೆ ಕೆಲವು ಮಾಸ್ಟರಿಗೆ ಬಡತಿ ಕೊಟ್ಟೂ, ಕೆಲವರಿಗೆ ಕೊಡದೆಯೂ, ಕೆಲವರಿಗೆ ಸ್ವಲ್ಪ ಬಡತಿ ಕೊಟ್ಟೂ ಇರುವರು. ಇದು ನ್ಯಾಯವೇ ? 3-4 ಮಂದಿ ಉಪಾಧ್ಯಾಯರು ಇರುವ ಸ್ಕೂಲಿಗೆ ಹೆಡ್ ಮಾಸ್ಟರಿಗೆ ಒಂದು ತರಗತಿಯೂ, ಬಾಕಿಯವರಿಗೆ ಉಳಿದ ತರಗತಿಯೂ ಬಂದಿರುವುದು. ಹೆಡ್ ಮಾಸ್ಟರು ಸ್ಕೂಲಿನ ಒಟ್ಟು ಜವಾಬ್ದಾರಿಯನ್ನೇ ವಹಿಸಿರುವರಾದಕಾರಣ ಹೆಡ್ ಮಾಸ್ಟರಿಗೆ 20, 15, 12, 10, ಈ ಮೇರೆ ಹಂಚಿರುವರು ಹೆಚ್ಚು ಅಭಿವೃದ್ಧಿಯನ್ನು ತೋರಿಸಿದ ಹೆಡ್ ಮಾಸ್ಟರಿಗೆ 25 ರೂಪಾಯಿಯೂ ಬಡತಿಯಾಗಿರುವುದು. ಆದರೆ ಒಂಟಿಗನಾಗಿರತಕ್ಕ ಉಪಾಧ್ಯಾಯನಿಗೆ 15, 12, 10, ಈ ಮೇರೆ ಹಂಚಿರುವರು. ಒಂದು ಸ್ಕೂಲಿನಲ್ಲಿ ಒಬ್ಬನೇ ಇರತಕ್ಕ ಸಮಾಸ್ಟರಿಗೂ, ಹೆಡ್ ಮಾಸ್ಟರಿಗೂ ತಾರತಮ್ಯ ಬಹು ಹೆಚ್ಚಾಗಿರುವುದು.

ನಾರ್ಮಲ್ ಕಾಲೇಜಿನಲ್ಲೂ, ನಾರ್ಮಲ್ ಸ್ಕೂಲಿನಲ್ಲೂ ಟ್ರೈನಿಂಗಾದವರಿಗೆ 15, 12 ಈ ರೀತಿ ಕೊಟ್ಟು ಕೆಲವರಿಗೆ ಏನೂ ಇಲ್ಲದಂತೆ ಮಾಡಿರುವರು. ಕೆಲ...ಬರಿಗೆ 15 ರೂಪಾಯಿ ಕೊಟ್ಟು ಟ್ರೈನಿಂಗಾದವರಿಗೆ ಕಮ್ಮಿ ವಾ ಏನೂ ಇಲ್ಲದಂತೆ ಮಾಡಿರುವುದು ಬಹು ಅನ್ಯಾಯವಲ್ಲವೇ ? ಘನವನ್ನು ಹೊಂದಿರುವ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಈ ಲೋಪವನ್ನು ಹೋಗಲಾಡಿಸಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯಬೇಕಾಗಿ ಕೋರಿಕೆ

ಒಬ್ಬ ಹಳ್ಳಿ ಸ್ಕೂಲ್‌ಮಾಸ್ಟರ್.

ಕುಂಕೂರು ತಾಲ್ಲೂಕು ಬೆಳ್ಳಾವೆಯಲ್ಲಿ ಹಾಲಿ ಇರುವ ಇಂಗ್ಲಿಷ್ ಸ್ಕೂಲಿನಲ್ಲಿ ತೃಪ್ತಿಕರವಾಗಿ ಕೆಲಸ ನಡೆಯುವದಿಲ್ಲವೆಂತಲೂ, ಅದನ್ನು ತನಿಖೆಯಿಂದ ಕ್ರಮಪಡಿಸಬೇಕಾಗಿದೆ ಎಂತಲೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಬಾಗೇಪಲ್ಲಿ ತಾಲ್ಲೂಕ್ ಯಲ್ಲಂಪಲ್ಲಿಯಲ್ಲಿರುವ ಗ್ರ್ಯಾಂಟ್ ಇನ್ ಎಯಿಡ್ ಸ್ಕೂಲಿನಲ್ಲಿ 40 ಜನ ಬಾಲಕರು ವಿದ್ಯಾ ವ್ಯಾಸಂಗಮಾಡುತ್ತಾ ಇರುವರೆಂತಲೂ, ಸದರೀ ಗ್ರಾಮಕ್ಕೆ ಒಂದು ಗವರ್ನ್ಮೆಂಟ್ ವಿ. ಇ. ಸ್ಕೂಲನ್ನು ಸ್ಥಾಪಿಸಿ ಕೊಡಬೇಕೆಂತಲೂ ವಿಟ್ಠಲರಾವ್ ಎಂಬುವರು ತಿಳಿಸುತ್ತಾರೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿಯಲ್ಲಿ ನಡೆಸುತ್ತಿರುವ ಗ್ರಾಮಾಭಿವೃದ್ಧಿ ಕಾರ್ಯಗಳ ಪೈಕಿ ರಸ್ತೆ ಕಾಮಗಾರಿಯನ್ನು ರೈತರು ತಿಳುವಳಿಕೆಯಿಲ್ಲದೆ ಚರಂಡಿ ತೆಗೆಯದೆ ಬಲ್ಲಿ ಕಾಮಗಾರಿ ಮಾಡದೆ 100 ಗಜದಷ್ಟು ರಸ್ತೆಮಾಡಿರುತ್ತಾರೆಂತಲೂ, ಒಂದು ಹದ ಮಳೆ ಬಂದರೆ ಕೊಚ್ಚಲಿದ್ದು ದಕ್ಕಿಂತಲೂ ಹೀನಸ್ಥಿತಿಗೆ ಬರುವುದೆಂತಲೂ, ಈ ವಿಷಯದಲ್ಲಿ ಸದರಿ ಗ್ರಾಮಾಭಿವೃದ್ಧಿಯ ಕಮಿಟಿ ಮೆಂಬರುಗಳು ಗಮನ ಕೊಡಬೇಕೆಂತಲೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ಕಾಪು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ...ರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅಷ್ಟಲ್ಲ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವಾದ್ದು ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ಎಣ್ಣೆಯನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ಹೀಗೆ ಮುಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಯೋಗ್ಯವಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಸಂರಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತಯಾರಾದುದು. ಇವರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಲಂಗಿಯಲ್ಲಿ ಈ ದ್ರವದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಆರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಅವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-30]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ಖರ್ಚು ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಸಾಬೂನಿನ ಬಾಕ್ಸ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ನಂ. ..., ಜುಮ್ಮಾಮಜಿದ್, ಮಾರ್ಕೆಟ್, ಬಾಂಬೆ.

ಲೇ, ಡಿ ಕಂಪನಿ ... , ಮಂಗಳೂರು.

ಇಲ್ಲಿ ನೋಡಿ: ಅಭಿನವ! ಅಕ್ಷರಾಂಜಲಿ!!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವನ್ನು ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟೇಜ್ 4 ಆಣೆ. ಅಡ್ರಸ್—ಅಕ್ಷರಾಲಯ, ಮೈಸೂರು. [147-4]

FOR SALE

One 4½ H. P. Singer 2 Speed Gear Motor Cycle with acetylene lamp, horn and tool bags in good running order. For price and particulars apply to

[153-3] **Messrs. PETRI-HAY, and SON, Hunsur.**

ಜಾರ್ಜ್ ಸಾರ್ವಭೌಮರ ಚರಿತ್ರೆ.

ಕನ್ನಡಿಗರೆಲ್ಲ ಓದಬೇಕಾಗಿರುವ ಈ ಹೊಸ ಪುಸ್ತಕದಲ್ಲಿ ಚಕ್ರವರ್ತಿಯವರ ಚರಿತ್ರೆಯೂ, ದೆಹಲಿ ದರ್ಬಾರಿನಲ್ಲಿ ನಡೆದ ವಿಶೇಷ ಸಂಗತಿಗಳೂ, ಅವರ ಭಾಷಣೆಗಳೇ ಮುಂತಾದ ರಾಜಕೀಯ ವಿಚಾರವನ್ನೊಳಗೊಂಡಿರುವ 43 ಪ್ರಕರಣಗಳೂ ಇವೆ. ಪ್ರಸಿದ್ಧ ಪಂಡಿತರು ಇದನ್ನೋದಿ—ಇದು ನೀತಿಬೋಧಕವಾದುದು ಮನೋರಂಜಕವಾಗಿದೆ ರಾಜಭಕ್ತಿಯುಳ್ಳವರು ಕೊಂಡಿರಸತಕ್ಕ ಧನವು—ಎಂದು ಅಭಿನಂದಿಸಿದ್ದರಿಂದ ಸರ್ಕಾರದವರು ಪ್ರೋತ್ಸಾಹಿಸಿದಾರೆ. ಅವರ (ಚಕ್ರವರ್ತಿ ದಂಪತಿಗಳ) ಭಾವಚಿತ್ರವೂ ನೇತ್ರಾನಂದಕರವಾಗಿರುವುದು. ಬೆಲೆ 8 ಆಣೆ.

[8-32] ವಿಳಾಸ—ದಿ ಜನರಲ್ ಏಜನ್ಸಿ, ಮೈಸೂರು.

'ಸಂಗೀತ ಪಾರಿಜಾತ'

ಹೊಸ ಮುದ್ರಣ: ಹೆಂಗಸರಿಗೆ ಅತ್ಯಾವಶ್ಯಕವಾದುದು!!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ತುಂಬಿದೆ! ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ! ಇದು ವರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[275-36] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಅನುಕೂಲಾಗ್ರನಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [239-21]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1.	ವಿಶ್ವಾಬಿಂಡದ ಭೂವಿವರಣೆ	0–5–0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0–6–0
	ಮೇಲೆ ಕಂಡ ಎರಡೂ ಸೇರಿ	0–10–0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,

[31–27] ಸುಬೋಧ ಗ್ರಂಥಾಲಯ, ಮೈಸೂರು.

ಅಗ್ಗದಲ್ಲಿ ಸೀಮೆಯಣ್ಣೆ ಪಡೆಯಿರಿ.

ಇಲ್ಲಿ ಅತ್ಯುತ್ತಮವಾದ ಬಿಳೀ ಸೀಮೆಯಣ್ಣೆ ಛತ್ರಿಯಾದ ಕೋಟೆ ಮಾರ್ಕಿನ ದೊಡ್ಡ ಟಿನ್ 1 ಕ್ಕೆ 3 ಆ. 6 ಪೈಗೆ ಕೂಪನ್ ಮೂಲಕ ದೊರೆಯುತ್ತೆ. ಇಪ್ಪತ್ತೈದರು 3 ಆ 6 ಪೈ. ರವಾನಿಸಿ. [143-4]

ವಿಳಾಸ:—ಜಿ. ಎಸ್. ವೆಂಕಟರಮಣಮೂರ್ತಿ, ಹಳೇ ಅಗ್ರಹಾರ, ಮೈಸೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ಕರಾರು ಬರೆಯುವ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯು ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-4-0; ರಫ್ ಪ್ರತಿಗೆ ರೂ. 1-12-0. [158-3]

ವಿಳಾಸ—ಎಂ. ಎ. ಪಂಡಿತಾರಾಧ್ಯರು, ಮೈಸೂರು.

ಮೈಸೂರು ಸಂಸ್ಥಾನದ ಆಸ್ಥಾನ ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯ ಅಯ್ಯರವರಿಂದ ಕನ್ನಡದಲ್ಲಿ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಇದಕ್ಕೆ ಮೈಸೂರು ಸರ್ಕಾರದ ಪ್ರೋತ್ಸಾಹ ದೊರಕಿದೆ. [151-4]

ಕ್ರಯ ೧—೪—೦. ಅಂಚೆ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳಗಳು:—(1) ಎಂ. ವೆಂಕಟರಾಮಯ್ಯ, ಗ್ರಂಥ ಪ್ರಚಾರಕ, ಚಾಮರಾಜಪೇಟೆ, ಮೈಸೂರು. (2) ದಿ ಜನರಲ್ ಏಜನ್ಸಿ, ಮೈಸೂರು. (3) ಎಂ. ಎಸ್. ರಾವ್. ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಎಮ್. ಎಸ್. ಮಲಕಣ್ಣಾ ಅಂಡ್ ಬ್ರದರ್ಸ್,

ರೇಷ್ಮೆ ಜವುಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ನಮ್ಮಲ್ಲಿ ಉತ್ತಮವಾದ ರೇಷ್ಮೆ ವಸ್ತ್ರಗಳು, ಮಗುಟಗಳು, ಆರಣಿಪೇಟೆ ಸೀರೆಗಳು, ಲಿಂಗ ಧರಿಸುವ ವಸ್ತ್ರಗಳು, ಸಾಧಾರಣ ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-12]

ರೇಷ್ಮೆ ವಸ್ತ್ರಗಳು	ದರಗಳು	ಮಗುಟ, ರೇಷ್ಮೆ ಸೀರೆ, ಲಿಂಗವಸ್ತ್ರ.
1 ನೇ ನಂಬರು 0-7-6	ತೊಲೆ 1 ಕ್ಕೆ	1 ನೇ ನಂಬರು 0-8-0
2 ,, ,, 0-7-0		2 ,, ,, 0-7-6
0-6-9		

The General Assurance Society, Ltd.,
Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency specially prepared by the Society's Consulting Actuary, Mr. H. E. W. Lott. F I. A. (one of the most eminent Actuaries in England).

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or

[142-4] K. S. Tirupathi, F. C. I., Secretary,
Opposite Minto Hospital, Bangalore City.

ಪ್ರಸಿದ್ಧವಾದ

ಮೊಳಕಾಲ್ಮೂರು ರೇಷ್ಮೆ ವಸ್ತ್ರಗಳು.

ಬೆಲೆ ಸುಲಭ! ಬಣ್ಣ ಗ್ಯಾರಂಟಿ!! ಸನಗು ನಾಜೂಕು!!!

ನಮ್ಮ ಸ್ವಂತ ಮಗ್ಗಗಳಲ್ಲಿ ತಯ್ಯಾರಾಗುವ ಮಾಲುಗಳು.

ನಮ್ಮ ಮಾಲುಗಳಿಗೆ ಅನೇಕ ಎಗ್ಸಿಭಿಷನ್‌ಗಳಲ್ಲಿ ಮೆಡಲುಗಳೂ ಸರ್ಟಿಫಿಕೇಟುಗಳೂ ಬಂದಿವೆ. (1) ರೇಷ್ಮೆಯ ವಸ್ತ್ರಗಳು ½. ¾, 1. 3 ಅಂಗುಲ ಬೌಳ ಮನೆಗಳುಳ್ಳ 3, 4, 5 6 ಮೊಳಗಳು ಉದ್ದ 2, 2½, 3 ಮೊಳ ಅಗಲಗಳುಳ್ಳ ವಸ್ತ್ರಗಳು ಮತ್ತು ರುದ್ರಗಂಟು, ಮಂಗಳಗಿರಿ, ಸಾದಾ ವಸ್ತ್ರಗಳು ಬಹಳ ನಯುಕರವಾಗಿ ಹುರಿ ರೇಷ್ಮೆಯಲ್ಲಿ ತಯಾರಾಗುತ್ತವೆ (2) ರೇಷ್ಮೆಯ ಸೀರೆಗಳು:—ಆರಣೀಪೇಟೆ ಧರ್ಮಾವರ, ಕರಕೋಮಾರಿ, ಹಸುರು, ಅಂಚೂರ, ಸವರ್ಣ ಬಣ್ಣದ ಸೀರೆಗಳು ಬಹಳ ಶ್ಲಾಘ್ಯವಾಗಿ ತಯಾರಾಗುತ್ತವೆ. (3) ಮಗುಟಗಳು:—ರುದ್ರಾಕ್ಷಿ ಅಂಚು, ನವಿಲು ಕಣ್ಣು, ಸರಸಳ ಅಂಚು, ಇವೇ ಮೊದಲಾದ ಅಂಚುಗಳಲ್ಲಿ ಬಹಳ ನಯುಕರವಾಗಿ ತಯಾರಾಗುತ್ತವೆ. (4) ಲಿಂಗವಸ್ತ್ರ, ಮತ್ತು ಕೈವಸ್ತ್ರಗಳು:—ಕರಕೋಮಾರಿ ಕೈವಸ್ತ್ರಗಳು ತಯ್ಯಾರಾಗುತ್ತವೆ ಲಿಂಗದ ವಸ್ತ್ರಗಳು, ಬಹಳ ಚೆನ್ನಾಗಿ ತಯ್ಯಾರಾಗುತ್ತವೆ (5) ನಡುಕಟ್ಟುಗಳು:—5, 6, 7 ಮೊಳದ ಉದ್ದ ಇರುತ್ತವೆ.

ಮೇಲ್ಕಂಡ ಸನಗುಗಳು ಅಪೇಕ್ಷಿಸಿದವರು ವಿ. ಪಿ. ಮೂಲಕವಾಗಿಯೂ ಸರಿ, ಯಾ ಮುಂಗಡವಾಗಿ ಹಣ ಕಳುಹಿಸಿಯಾಗಲಿ ತರಿಸಿಕೊಳ್ಳಬಹುದು.

ವಿಳಾಸ:—ಕೆ. ಶಿದ್ದಪ್ಪ, ನರಸಪ್ಪ, ರೇಷ್ಮೆ ಜವಳಿ ವ್ಯಾಪಾರಸ್ಥರು,

[69-4] ಮೊಳಕಾಲ್ಮೂರು, ಚಿತ್ರದುರ್ಗ ಡಿಸ್ಟ್ರಿಕ್ಟ್.

ಊತದ ಮೊಣಕಾಲು.

ನಿನಪ ಪಯಣದಲ್ಲಿ ನೀವು ಕಂಡುಕೊಳ್ಳುವ ನೋವಿನಂತೆಯೋ ಇದೂ ನೋವಾಗಿಯೂ ಅನಾನುಕೂಲವಾಗಿಯೂ ಇರುತ್ತದೆ, ಮತ್ತು ಅದು ಹಾಸಿಗೆಯಾದವನ್ನು. ಊತದ ಮೊಣಕಾಲು ಸದಾ ಕುಂಟನನ್ನಾಗಿ ಮಾಡುತ್ತದೆ.

ಫಿಲಡೆಲ್ಫಿಯದ, ಎ. ಸಿ. ಲೇಮನ್ ಎಂಬವರು ಬರೆಯುವುದು :—"ಎರಡು ವರುಷಗಳ ಕಾಲ ಮೊಣಕಾಲಿನ ದೊಡ್ಡ ಊತದ ದೆಸೆಯಿಂದ ನರಳಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಪಡಿಸಲಿಲ್ಲ. ನಮ್ಮ ನಗರದ ನಾಲ್ವರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಲ್‌ಸ್ ಓರಿಯಂಟಲ್ ಬಾಂ ಎಂಬವನ್ನು ಉಪಯೋಗಿಸಿ, ಕ್ಷಿಪ್ರದಲ್ಲಿ ಪೂರ್ಣ ಗುಣಹೊಂದಿದೆನು." ಲಿಟಲ್‌ಸ್ ಓರಿಯಂಟಲ್ ಬಾಂ ಎಂಬುದನ್ನು ಲೇಪಿಸುವದರಿಂದ ಉಳುಕುಗಳೂ, ಗಾಯಗಳೂ, ಹರಿವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತೆ.

[81-16]

ಮೋಸಹೋಗುವವೆಂಬ ಭಯವಿಲ್ಲ.

ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ :—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ :—ಕೆ. ರಾಮಸ್ವಾಮಿ, ಪಲ್ಲಾಸ-ಆ-ಸಬುನ, 20-2-16.

ಅರ್ಧಬೆಲೆ ಮಾತ್ರ.

ಸಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು ಕರೆಸ್ಪಾಂಡೆನ್ಸು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರುವುದೇಕು.

ನಮ್ಮ ವಿಳಾಸ :—ದಿ ಮಾರುತಿ ಏಜನ್ಸಿ,

[266—38] ಪಿ. ಒ. ಬಾಕ್ಸ್ 330, ಬೊಂಬಾಯಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳು ಮೊದಲಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[201-50] GIRLS' INDUSTRIAL SCHOOL, HASSAN.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಹುಮಾನಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ನ

ಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ಕಪ್ಪಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮನಸಿನ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟಲಿ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-48]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ

ಇನಾಂ ಸಾಮಾನು 60! ಇನಾಂ ಸಾಮಾನು 60

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಯರಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಸಿದ್ಧವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಂದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದು ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆ ... ರುವ ಹೊಟ್ಟನ್ನು ಪರಿಹಾರಿಸುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯತೆಯನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯತೆಯನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗುಂಡು 6, ವ್ಯಾಘರನ 1, ತಾಂಬೂಲಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಣಿ ಕಾರೊನೇಷನ್ ಪೆಟ್ಟಿಗೆ 1, ಲವ್‌ಮನ್ ಪೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ ... ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60. ನಮ್ಮ ಕಂಪನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ... ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪೆರ್ಣಿ ಕಂಪೆನಿ.

[149-1] ನಂ. ೩, ಇರುಳಪ್ಪನ್ ಬೀದಿ, ಮದರಾ

ಸುಪೀರಿಯರ್ ಲಿವರ್ ಜುವೈಲ್ಡು ವಾಚು.

(ರಜಿಸ್ಟರಾಗಿದೆ).

ಕ್ರಯ ಸರಪಣಿ ಸಹಿತ ರೂ. 3-0-0.	5 ವರುಷಗಳ ಗ್ಯಾರಂಟಿ	ವಿ. ಪಿ. ಚಾರ್ಜು 4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರ್ಮಾಡಲ್ಪಟ್ಟು ರಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು

ಗಿಲ್ಟು ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಜೋಗುಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು. ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0; ವಿ. ಪಿ. ಚಾರ್ಜು 4 ಆಣೆ.

ಇಂಡಿಯನ್ ಮೆಯಿಲ್ ಲೀವರ್ ವಾಚು.

(ಇದು ಸಹ ರಜಿಸ್ಟರಾಗಿದೆ.)

ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0.	5 ವರುಷಗಳ ಗ್ಯಾರಂಟಿ ಪತ್ರ.	ವಿ. ಪಿ. ಛಾರ್ಜು 4 ಆಣೆ.

ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಹುಜನಗಳಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು ಇರುವದು. ಇದರ ಹಿಂಭಾಗದಲ್ಲಿ ನಮ್ಮ ದಸ್ಟು ಪ್ರೂಫ್ ಎಂಬ ಗ್ಲಾಸು ಡೋಮು ಇರುವದು. ಬಹಳ ಗಟ್ಟಿತರವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು. ಬಹಳವಾಗಿ ಹೊಗಳುವದರಿಂದ ಪ್ರಯೋಜನವಿಲ್ಲ.

ಉಪಯೋಗದಲ್ಲಿ ತಿಳಿಯುವದು. ಪರೀಕ್ಷಿಸಿರಿ. ಇಂಡಿಯನ್ ಮೆಯಿಲ್ ಲಿವರ್ ಗಡಿಯಾರ (ಗ್ಲಾಸ್ ಡೋಮು ಇರುವದು) ಉತ್ತಮ ಸರಪಣಿ ಸಹಿತ ರೂ. 3-0-0 ವಿ. ಪಿ. ಚಾರ್ಜು 4 ಆಣೆ.

ಈ ಕೆಳಗೆ ಕಾಣಿಸಿರುವ ಗಡಿಯಾರಗಳು ಸಹ ನಮ್ಮಲ್ಲಿ ದೊರೆಯುತ್ತವೆ— ಇಂಗ್ಲಿಷ್ ಮೆಯಿಲ್ ಲೀವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ಕ್ರಯ ರೂ. 2-8-0; ವಿ. ಪಿ. 4 ಆಣೆ. ರಂಗೂನ್ ಮೆಯಿಲ್ ಲಿವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ರೂ. 2-8-0; ವಿ. ಪಿ. 4 ಆಣೆ.

ವಾಚು ಕೆಲಂ :—ನಮ್ಮ ಸುಂದರವಾದ 60 ಪೇಜುಗಳ ದೊಡ್ಡ ಕ್ಯಾಟಲಾಗ್ ಬೇಕಾದವರು ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,

[156-2] ಪೋಸ್ಟು ಬಾಕ್ಸು 167, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನ್ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಗುಣಪಡಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ... ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ... ತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲಾ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನ್ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25-

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ $4\frac{1}{2}$ ಆಣೆ	550 ಮಾತ್ರೆಗಳ ಪೆಟ್ಟಿಗೆ 1ಕ್ಕೆ 1
95 ,, ,, ,, 4 ,,	200 ,, ಟಿನ್ ,, 9 ,,		1200 ,, ,, ,, 2

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತ್ರಾನ್ ಡಿಪೋ, ಬೊಂಬಾಯಿ

ಮೈಸೂರು ಸೀಮೆಗೆ ಏಜೆಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯ ಬಿಕರಿಗೆ ಇಡಲಾಗಿದೆ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಆಗಲಿ— “ನನಗೆ ದಿನಕ್ಕೆ ಒಂದು ಸಲವಾದರೂ ಶೌಚಪ್ರವೃತ್ತಿಯಾಗುತ್ತಿದೆಯೇ ?” ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋಅನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಶೌಚಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪಟವೂ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ವಾಯು ಕಲ್ಲಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ, ಬಾಲೆಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋಅನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾಗಿರುವುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ಹಾಕಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-51]

ಬೆಲೆ ೮ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೮ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು; ಅಥವಾ ಫೋಸ್ಟರ್, ಪಿ. ಒ. ಬಾಕ್ಸ್ ೫೦, ಬೊಂಬಾಯಿ—ಇವರಲ್ಲಿ ದೊರೆಯುವುದು



ಆಗಸ್ಟ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಆಗಸ್ಟ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [111-12]

ವಿಳಾಸ—ವಿ. ಕೆ. ಕೆಂಚುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

“ಕುಟುಂಬ ರಕ್ಷಿಣಿ”



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಶೀಘ್ರದಲ್ಲಿ ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮತ್ತು ಔಷಧಗಳೂ ಮನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-38] ವಿಳಾಸ :—ಸದ್ವೈದ್ಯಶಾಲಾ, ನಂಜನಗೂಡು.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 6,00,00,000

ಕಂಪನಿಯಿಂದ ಪಾವತಿ ಆಗಿರುವದು „ 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರಿಸಿಲೂ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-46] ಬ್ರಾಂಚ್ ಸೆಕ್ರೆಟರಿ, ಮದರಾಸ್

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ, ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರಿಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಟ್ಟಿಹರಳಿನಿಂದಲೂ ತಯಾರಾದ “ಬಾಲಕೇಸರಿ” ಎಂಬ ತೈಲವನ್ನು ಉಪಯೋಗಿಸಿ ನೋಡಿ.

ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಕ್ಷಯ, ಗರ್ಭವೆಟ್ಟೆ, ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ: ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-40]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

The Mystery of the Twentieth Century.

Own Properties by paying more rent! **Discharge Principal amount by paying more interest!!!**

or

Ask us to show you the way how to own properties and discharge principal amount without touching your pocket under our novel free policy system!!!

Have you not heard of the most beneficial schemes

CALLED **LAND & HOUSE PURCHASE** AND **LAND & HOUSE INVESTMENT** SCHEMES

BROUGHT FORWARD FOR THE FIRST TIME IN THE MYSORE PROVINCE BY

THE MYSORE GOVERNMENT SECURITY LIFE & MARRIAGE ASSURANCE CO., LTD., MYSORE,

For the Benefit of the Mysoreans?

If not, write for the detailed prospectus, application form and necessary information at once and avail of the undermentioned

Extraordinary Benefits Offered and Also Hitherto Unknown to the Banking World.

If you want to purchase a house or a land worth Rs. 1,000/-, all that you have to do is to purchase an investment certificate for that amount by paying an admission fee of Rs. 10/- with the proposal. This certificate entitles you to an advance of Rs. 1,000/- on the security of the purchased property to purchase house or land with, after six months, on your paying to the Company Rs. 300 either in lump-sum or by easy monthly instalments which, in no case, should be less than Rs. 5/- per mensem. After you receive the advance and take the property into your possession, you will have to be paying regularly only Rs. 7/- towards interest on the balance of Rs. 700/- (Rs. 1,000 - Rs. 300) at 12 p.c. per annum for a period of sixteen years and eight months by which time, the whole of the principal amount will be written off by the Company and the Property passes to your hands free from the incumberance.

If you want to borrow Rs. 1,000/- on the security of your immovable properties to liquidate your prior debts, all that you have to do is to purchase an investment certificate for that amount by paying an admission fee of Rs. 10/-. This certificate entitles you to an advance of Rs. 1,000/- after six months, on your paying Rs. 10/- regularly every month for not less than six months from the date of the certificate until you receive the advance. After you get the advance, you should continue paying the same Rs. 10/- every month towards interest at 12 p.c. per annum on Rs. 1,000/- for a period of 16 years and 8 months minus as many months as many instalments as you will have paid previous to your receiving the advance, when the whole of the principal amount will be written off by the Company and your property passes to your hands free from incumberance. [15-32]

N.B. If you want to purchase properties and discharge your debts without touching your pocket, ask us to explain to you **our novel free policy system.** The above examples deal with an advance of Rs. 1,000/- only. Certificates can, of course, be granted for any amounts that may be the multiples of Rs. 100 up to Rs. 5,000/- and the rates should be calculated proportionately. It is not necessary that interest is to be paid for 16 years and 8 months. The principal amount can be repaid at any time after two years when the same (principal amount) will be written off proportionately.

WANTED

Energetic and honest agents to canvass Insurance and Provident fund business as well as Local Directors of position and influence to push on our Two-in-one (share policy) and Land and House purchase and investment schemes in each and every taluk of the Mysore Province on liberal terms. For terms and prospectuses, please apply to,

M. L. NAGANNAH, Esq.,

Managing Director, Life and Marriage Assurance Buildings, Mysore.

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-39]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶುದ್ಧಿರಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಛಾಪಿಸಲ್ಪಡದೆ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೊಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,
೨೦, ಚೀನಾ ಬಜಾರ್ ರೋಡ್, ಮದ್ರಾಸು.

ಬಹಳ ಸೊಗಸಾದದ್ದು 18 ಮೊಳ ಬಾಳಿಕೆ ಬರುವದು.

ಮಧುರೆ ಜುಸ್ತಿ ಅಂಚಿನ ಸೀರೆ ಅಪ್ಸಲ್ ರಹಿಂ ಕ್ರಯ 2-8-0.

ಅಯ್ಯಾ—ಧನವಂತರೇ, ಈ ಸೀರೆ ಉಡುವುದಕ್ಕೆ ಧಡೂತಿಯಾಗಿಯೂ ನೋಡುವುದಕ್ಕೆ ನಯವಾಗಿಯೂ ಇದೆ. ಇದು ಬಹುದಿನ ಬಾಳಿಕೆ ಬರುವದಾಗಿಯೂ ಉಡಲು ಅನುಕೂಲವಾಗಿಯೂ ಅಂದವಾಗಿಯೂ ಇರುತ್ತೆ. ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ ಉದ್ದ. ಸುಂದರವಾದ ಸೆರಗು. ಇತರ ಕಂಪನಿಗಳಲ್ಲಿ ಮಾರುವ ಪಟ್ಟೆಸೀರೆಯಾದು ಇಲ್ಲ. ಈ ಹೊಸ ನಮೂನೆ ಸೀರೆಗು ಬಣ್ಣಕ್ಕೆ ಸರಕಿಗೆ ಗ್ಯಾರಂಟಿಕೊಡುತ್ತೇವೆ 1 ನ್ನು ತರಿಸಿ ಪರೀಕ್ಷಿಸಿರಿ. ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದಬೇಕೆಂದು ಬಹಳ ಕಮ್ಮಿ ಧಾರಣೆ ಹಾಕಿರುತ್ತೇವೆ. [149-2]

ಸುಂದರವಾದ ಲೇಡಿಸು ರಿಸ್ಟುವಾಚು ಇದರ ಕ್ರಯ ಚರ್ಮದ ಪಟ್ಟಿ ಸಹಿತ ರೂಪಾಯಿ. 3-8-0.



ಅಯ್ಯಾ, ಈ ಗಡಿಯಾರ ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಸೊಗಸಾದದ್ದು. ಬಹು ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ನಮ್ಮ ವಿಳಾಸ—

ವಿ. ಎ. ಎಸ್. ಶಾಸ್ತ್ರಿ, ಜನರಲ್ ಮರ್ಚಂಟ್, 3, ಅರುಣಪ್ಪನ ಬೀದಿ, ಮದರಾಸ್.

ವೃತ್ತಾಂತ ಪತ್ರಿಕೆ.

—:o:—

ಶಕೆ ೧೮೩೭ನೇ ಶ್ರಾವಣ ಆಗಸ್ಟ್ ತಾ. ೧೯ ನೇ ಗುರುವಾರ.

ಹನ್ನೆರಡು ತಿಂಗಳ ಯುದ್ಧದ ಪರಿಣಾಮ.

ಗತಿಸಿದ ಹನ್ನೆರಡು ತಿಂಗಳಲ್ಲಿ ಸಮುದ್ರದ ಮೇಲೆ ನಡೆದಿರುವ ಯುದ್ಧಕಾರ್ಯಗಳನ್ನು ಕಳೆದ ವಾರ ಸಂಕ್ಷೇಪವಾಗಿ ತಿಳಿಸಿದೆವು. ರಣರಂಗಗಳಲ್ಲಿ ನಡೆದಿರುವ ಯುದ್ಧಕಾರ್ಯಗಳ ಪರಿಣಾಮವು ವರುಷಾಂತ್ಯದಲ್ಲಿ ಹೇಗಾಗಿರುವುದೆಂದು ಈಗ ಪ್ರಸ್ತಾಪ ಮಾಡುತ್ತೇವೆ. ಕದನಗಳು ಯೂರೋಪ್ ಖಂಡ ಒಂದರಲ್ಲಿ ಮಾತ್ರವೇ ಅಲ್ಲ; ಆಫ್ರಿಕಾ ಮತ್ತೂ ಆಸ್ಯಾ ಖಂಡಗಳಲ್ಲೂ ನಡೆದಿರುವವು. ಆದಕಾರಣ ಕದನಗಳನ್ನೆಲ್ಲಾ ರತಿರತಿಯಾಗಿ ವಿವರಿಸುವುದು ಸುಲಭಸಾಧ್ಯವಲ್ಲ.

ಪೂರ್ವದಿಕ್ಕಿನ ಅಂತ್ಯಭಾಗದಲ್ಲಿ ಜಪಾನ್‌ನವರು ದಂಡು ಕಟ್ಟಿ ಹೊರಟು ಚೀನಾದಲ್ಲಿದ್ದ ಜರ್ಮನಿಯವರ ಸ್ವಾಸ್ತ್ಯಗಳಿಗೆ ಮುತ್ತಿಗೆಹಾಕಿದರು. ಜರ್ಮನಿಯವರು ಅಲ್ಲಿದ್ದ ತಮ್ಮ ರೇವು ಸ್ಥಳಗಳನ್ನೂ ನಗರಗಳನ್ನೂ ಬಹಳ ಬಲವಾಗಿ ಕಟ್ಟಿ ಭದ್ರಮಾಡಿಟ್ಟುಕೊಂಡಿದ್ದರು. ಆದಿರೂ ಜಪಾನ್‌ನವರ ಪರಾಕ್ರಮವೂ ಅವರ ನಿಪುಣತೆಯೂ ಬ್ರಿಟಿಷ್ ಮತ್ತೂ ಹಿಂದುಸ್ಥಾನದ ಕೆಲವು ಸೈನ್ಯಗಳ ಬೆಂಬಲದಿಂದ ವೃದ್ಧಿಹೊಂದಿ ಕೆಲವು ತಿಂಗಳು ಸಾಹಸಪಡುವಷ್ಟರೊಳಗೇ ಜರ್ಮನಿಯವರನ್ನೆಲ್ಲಾ ಶರಣಾಗತರನ್ನಾಗಿ ಮಾಡಿಬಿಟ್ಟವು. ಈಗ ಚೀನಾದಲ್ಲಿ ಜರ್ಮನಿಯವರ ಸ್ವಾಸ್ತ್ಯದ ಸೆಲೆಯೇ ಇಲ್ಲದಂತಾಗಿದೆ. ಈಚೆಗೆ ಜಪಾನ್‌ನವರು ಯುದ್ಧಕಾರ್ಯಗಳನ್ನು ಪೂರೈಸಿ ಕೆಲವು ತಿಂಗಳಾಯಿತು.

ಪೆಸಿಫಿಕ್ ಮಹಾಸಾಗರದಲ್ಲಿ ಜರ್ಮನಿಯವರು ಅನೇಕ ದ್ವೀಪಗಳನ್ನು ಸಂಪಾದಿಸಿಕೊಂಡು ಅನುಭವಿಸುತ್ತಿದ್ದರು. ಅವುಗಳಲ್ಲಿ ಕೆಲವು ದ್ವೀಪಗಳು ಬಹಳ ದೊಡ್ಡವಾಗಿಯೂ ಇದ್ದವು. ಆಸ್ಟ್ರೇಲಿಯದಿಂದ ಜಹಜುಗಳೂ ಸೈನ್ಯಗಳೂ ಹೋಗಿ ಅವುಗಳನ್ನೆಲ್ಲಾ ಮುತ್ತಿಗೆಹಾಕಿ ಆ ದ್ವೀಪಗಳನ್ನೆಲ್ಲಾ ಸಂಪೂರ್ಣವಾಗಿ ಜರ್ಮನಿಯವರಿಂದ ಕಿತ್ತುಕೊಂಡುಬಿಟ್ಟಿದಾರೆ. ಅಲ್ಲಿಗೂ ಜಪಾನ್‌ನವರು ಕೆಲವು ಹಡಗಿನ ಸೈನ್ಯಗಳನ್ನು ಕಳುಹಿಸಿ ಆಸ್ಟ್ರೇಲಿಯದವರಿಗೆ ಸಹಾಯಮಾಡಿದರು. ಆ ಪ್ರಾಂತ್ಯಗಳಲ್ಲಿದ್ದ ಜರ್ಮನಿಯವರ ಪ್ರತಿ ಒಂದು ಸ್ವಾಸ್ತ್ಯವೂ ಅವರ ಕೈತಪ್ಪಿ ನಮ್ಮ ಪಕ್ಷದವರ ವಶದಲ್ಲಿರುತ್ತದೆ.

ಆಫ್ರಿಕಾದಲ್ಲಿ ಜರ್ಮನಿಯವರಿಗಿರುವ ನಾಲ್ಕು ಸ್ವಾಸ್ತ್ಯಗಳಲ್ಲಿ ಕದನಗಳು ನಡೆದಿರುವವು. ಜರ್ಮನಿಯವರು ಬ್ರಿಟಿಷ್ ದಕ್ಷಿಣ ಆಫ್ರಿಕದಲ್ಲಿ ಫಿತೂರಿಮಾಡಿ ಅಲ್ಲಿನ ಜನರನ್ನು ಬ್ರಿಟಿಷ್ ಗವರ್ನಮೆಂಟಿನ ಮೇಲೆ ತಿರುಗಿಬೀಳುವಂತೆ ಮಾಡಬೇಕೆಂದು ಪ್ರಯತ್ನಪಟ್ಟರು. ಅವರ ಫಿತೂರಿಯಿಂದ ಅಲ್ಲಿ ಸ್ವಲ್ಪಮಟ್ಟಿಗೆ ಗಲಭೆಯೂ ಉಂಟಾಯಿತು. ಆದರೇನು? ಜನರಲ್ ಬೋಥಾರವರು ಅದನ್ನೆಲ್ಲಾ ಅಣಗಿಸಿ ಬೇಗನೆ ಹತೋಟಿಗೆ ತಂದುಕೊಂಡರು. ಬಳಿಕ ಅವರು ದಂಡುಕಟ್ಟಿ ಹೊರಟು ಜರ್ಮನಿಯವರ ದಕ್ಷಿಣ-ಪಶ್ಚಿಮ ಆಫ್ರಿಕಾವನ್ನು ನುಗ್ಗಿ ಅದನ್ನೆಲ್ಲಾ ಸಂಪೂರ್ಣವಾಗಿ ಗೆದ್ದು ಸ್ವಾಧೀನಪಡಿಸಿಕೊಂಡರು. ಆಫ್ರಿಕದ ಪಶ್ಚಿಮ ಸಮುದ್ರ ತೀರದಲ್ಲಿ ಟೋಗೋಲಾಂಡ್ ಎಂಬ ವಿಸ್ತಾರವುಳ್ಳ ಜರ್ಮನಿಯವರ ಸ್ವಾಸ್ತ್ಯವನ್ನು ಫ್ರೆಂಚರೂ ಬ್ರಿಟಿಷರೂ ಸೇರಿ ಹೋಗಿ ಗೆದ್ದುಕೊಂಡರು. ಅಲ್ಲಿಂದ ದಕ್ಷಿಣಭಾಗದಲ್ಲಿ ಜರ್ಮನಿಯವರ ಕ್ಯಾಮೆರೂನ್ಸ್ ಎಂಬ ಸ್ವಾಸ್ತ್ಯದಲ್ಲಿ ನಮ್ಮ ಪಕ್ಷದವರು ಯುದ್ಧಕಾರ್ಯಗಳನ್ನು ನಡಿಸುತ್ತಾ ಬಂದಿದಾರೆ. ಆ ಸೀಮೆಯಲ್ಲಿ ಬಹುಭಾಗವೆಲ್ಲಾ ನಮ್ಮ ಪಕ್ಷದವರು ಗೆದ್ದು ಸ್ವಾಧೀನಪಡಿಸಿಕೊಂಡದ್ದಾಯಿತು. ಪೂರ್ವ ಆಫ್ರಿಕಾದಲ್ಲಿರುವ ಜರ್ಮನಿಯವರ ಸ್ವಾಸ್ತ್ಯದಲ್ಲಿ ನಮ್ಮ ಪಕ್ಷದವರು ವಿಶೇಷವಾಗಿ ಇನ್ನೂ ನುಗ್ಗಿಹೋಗಿಲ್ಲ; ಆದರೂ ಅಲ್ಲಿದ್ದ ಜರ್ಮನಿಯವರ ಹಡಗುಗಳನ್ನೂ ಆಸ್ತಿಪಾಸ್ತಿಗಳನ್ನೂ ನಾಶಪಡಿಸಿದ್ದಾಯಿತು. ಟರ್ಕಿಯವರು ಜರ್ಮನಿಯವರ ಸಹಾಯವನ್ನು ಪಡೆದು ಈಜಿಪ್ಟಿಗೆ ನುಗ್ಗಬೇಕೆಂದು ಸನ್ನಾಹಮಾಡಿದರು. ಆದರೆ ಅವರು ಸೂಯೆಸ್ ಎಂಬ ಕಡಲು ಕಾಲುವೆಯನ್ನೇ ದಾಟಲಾರದೆ ಹೋದರು. ಅವರೆಲ್ಲಾ ಸೋತುಬಿಟ್ಟು ಮರಳು ಕಾಡಿನಲ್ಲಿ ಬಿದ್ದು ಹಿಂದಕ್ಕೆ ಓಡಿಹೋಗಬೇಕಾಯಿತು. ಆ ಕಾಲುವೆಯಲ್ಲಿ ಹಡಗುಗಳ ಮತ್ತೂ ಜಹಜುಗಳ ಸಂಚಾರಕ್ಕೆ ಯಾವುದೊಂದು ಅಡಚಣೆಯೂ ಉಂಟಾಗಲಿಲ್ಲ. ಈಗ ಆಫ್ರಿಕದಲ್ಲೆಲ್ಲಾ ಎರಡೇ ಎರಡು ಕಡೆ ಅಂದರೆ ಕ್ಯಾಮೆರೂನ್ಸ್ ಮತ್ತು ಜರ್ಮನಿ ಪೂರ್ವ ಆಫ್ರಿಕ ಎಂಬೀ ಪ್ರಾಂತ್ಯಗಳಲ್ಲಿ ಯುದ್ಧಕಾರ್ಯಗಳು ನಡೆಯುತ್ತಿರುವವು. ಈಜಿಪ್ಟಿನೊಳಗೂ, ಜರ್ಮನಿ ಪೂರ್ವ ಆಫ್ರಿಕದಲ್ಲೂ ನಮ್ಮ ಹಿಂದುಸ್ಥಾನದ ಸೈನ್ಯಗಳು ನಿಂತು ತುಂಬಾ ಸಹಾಯ ಮಾಡುತ್ತಾ ಬಂದಿರುವವು.

ಏಡೆನ್ ಸುತ್ತುಮುತ್ತಿನಲ್ಲಿ ಕೆಲವು ಕದನಗಳು ನಡೆದವು; ಅದರಲ್ಲಿ ವಿಶೇಷವೇನೂ ನಡೆದಂತೆ ತಿಳಿದು ಬರಲಿಲ್ಲ. ಕೆಂಪು ಕಡಲಿನ ದಕ್ಷಿಣ ಬಾಗಿಲ ಬಳಿಗೆ ಬ್ರಿಟಿಷ್ ಸೈನ್ಯಗಳು ನುಗ್ಗಿ ಹೋಗಿ ಅಲ್ಲಿರುವ ಟರ್ಕಿಯವರ ಕೆಲವು ಕೋಟೆಗಳನ್ನು ಗುಂಡಿನ ಮಳೆ ಸುರಿಸಿ ಹಾಳುಮಾಡಿರುತ್ತವೆ.

ಪರ್ಷಿಯ ಖಾರಿಯಲ್ಲಿ ಬಹಳ ಹೆಚ್ಚಾಗಿಯೇ ಕದನಗಳು ನಡೆದಿರುವವು. ಅನೇಕ ವೇಳೆ ಟರ್ಕಿ ಸೈನಿಕರನ್ನು ಬ್ರಿಟಿಷ್ ಮತ್ತೂ ಹಿಂದುಸ್ಥಾನದ ಸೈನ್ಯಗಳು ಸಂಧಿಸಿ ಕಡಿದಾಡಿ ಸೋಲಿಸಿರುತ್ತವೆ. ಇವರ ಏಟನ್ನು ತಡೆಯಲಾರದೆ ಟರ್ಕಿ ಸೈನ್ಯಗಳು ಯೂಫ್ರೆಟೀಸ್ ಮತ್ತು ಟೈಗ್ರೀಸ್ ನದಿಗಳ ಮೇಲಕ್ಕೆ ಓಡಿಹೋದವು. ಖಾರ್ನೋ ಮತ್ತು ಬಾಸ್ರಾ ನಗರಗಳನ್ನು ಬ್ರಿಟಿಷರು ಆಕ್ರಮಿಸಿಕೊಂಡು ಪ್ರಜೆಗಳನ್ನು ನೆಮ್ಮದಿಯಾಗಿ ಪರಿಪಾಲನೆ ಮಾಡಿಕೊಂಡು ಬರುತ್ತಿದಾರೆ.

ಕಾಕಸಸ್ ಪರ್ವತ ಸೀಮೆಯಲ್ಲಿ ಟರ್ಕಿಯವರಿಗೂ ರಷ್ಯಾದವರಿಗೂ ಕದನಗಳು ವಿಶೇಷವಾಗಿ ನಡೆದು ಟರ್ಕಿ ಸೈನಿಕರಲ್ಲಿ ಬಹಳ ಮಂದಿ ನಷ್ಟವಾದರು. ಪರ್ಷಿಯಾ ರಾಜ್ಯದಲ್ಲಿದ್ದ ಟರ್ಕಿಯವರನ್ನೆಲ್ಲಾ ಹೊರಡಿಸಿದ್ದಾಯಿತು. ಈ ಪ್ರಾಂತ್ಯದಲ್ಲಿ ಕದನಗಳೇನೂ ಈಚೆಗೆ ನಡೆದಿಲ್ಲ. ಯಾಕೆಂದರೆ ನಮ್ಮ ಪಕ್ಷದವರು ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸಿಕೊಂಡು ಟರ್ಕಿ ರಾಜಧಾನಿಯಾದ ಕಾನ್‌ಸ್ಟೆಂಟಿನೋಪಲ್ ನಗರಕ್ಕೆ ನುಗ್ಗಬೇಕೆಂದು ಸಾಹಸ ಪಡುತ್ತಿರುವುದರಿಂದ ಟರ್ಕಿಯವರು ತಮ್ಮ ಸೈನ್ಯಗಳನ್ನೆಲ್ಲಾ ಡಾರ್ಡನೆಲ್ಸ್ ಜಲಮಾರ್ಗದ ಬಳಿಗೆ ಕರಸಿಕೊಂಡಿದಾರೆ. ಈ ಜಲಮಾರ್ಗದ ಉದ್ದಕ್ಕೂ ಕಠಿಣವಾದ ಹಲವು ಕದನಗಳು ನಡೆದಿರುವವು. ನಮ್ಮ ಪಕ್ಷದ ಸೈನಿಕರಲ್ಲೂ ಟರ್ಕಿ ಸೈನಿಕರಲ್ಲೂ ಬಹಳ ಮಂದಿ ನಷ್ಟಪಟ್ಟರು. ಈಗ ನಮ್ಮ ಪಕ್ಷದವರು ಗಲ್ಲಿಪೋಲಿ ಎಂಬ ಅರ್ಧ ದ್ವೀಪವನ್ನು ಹತ್ತಿಹೋಗಿ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿದಾರೆ. ಇದಲ್ಲದೆ ನಮ್ಮವರು ಟರ್ಕಿಯವರನ್ನು ಹಿಂದು ಹಿಂದಕ್ಕೆ ಓಡಿಸುತ್ತಾ ಸ್ವಲ್ಪ ಸ್ವಲ್ಪವಾಗಿ ನುಗ್ಗಿಹೋಗುತ್ತಿರುವರು. ಟರ್ಕಿಯವರಾದರೋ ತಮ್ಮ ರಾಜಧಾನಿಯನ್ನು ಬಹು ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಾ ಬಂದಿದಾರೆ.

ಈ ಅಪೂರ್ವ ಯುದ್ಧದ ಮುಖ್ಯರಣರಂಗಗಳು ಯೂರೋಪ್ ಖಂಡದಲ್ಲಿರುವವು. ಯುದ್ಧಗಳು ಮೂರು ದಿಕ್ಕುಗಳಲ್ಲಿ ನಡೆಯುತ್ತಾ ಬಂದಿವೆ. ಬೆಲ್ಜಿಯಮ್ ಮತ್ತು ಫ್ರಾನ್ಸ್ ಎಂಬ ಯುದ್ಧಭೂಮಿಯು ಪಶ್ಚಿಮ ರಣರಂಗವಾಗಿಯೂ, ರಷ್ಯಾ ಮತ್ತು ಆಸ್ಟ್ರಿಯಾ ಯುದ್ಧಭೂಮಿಯು ಪೂರ್ವ ರಣರಂಗವಾಗಿಯೂ, ಆಸ್ಟ್ರಿಯಾ, ಸರ್ಬಿಯಾ ಮತ್ತು ಇಟಲಿ ಯುದ್ಧಭೂಮಿಯು ದಕ್ಷಿಣ ರಣರಂಗವಾಗಿಯೂ ವಿಂಗಡವಾಗಿವೆ. ಈ ಪ್ರತಿ ಒಂದು ರಂಗದಲ್ಲೂ ನಡೆದಿರುವ ವಿದ್ಯಮಾನಗಳನ್ನು ಸಂಕ್ಷೇಪವಾಗಿ ವಿವರಿಸುತ್ತೇವೆ.

ದಕ್ಷಿಣಭಾಗದ ರಣರಂಗದಲ್ಲಿ ಇಟಲಿಯವರೂ ಆಸ್ಟ್ರಿಯಾದವರೂ ಕದನಮಾಡುತ್ತಾರೆ. ಆಸ್ಟ್ರಿಯಾದೊಳಕ್ಕೆ ನುಗ್ಗಿ ಹೋಗಿ ಆಸ್ಟ್ರಿಯಾ ಸೈನ್ಯದ ಮೇಲೆ ಯುದ್ಧಮಾಡುತ್ತಿರುವರು. ಆಸ್ಟ್ರಿಯಾದವರು ಬಹಳ ಬಲವಾದ ಕೋಟೆ ಕೊತ್ತಲಗಳನ್ನು ಕಟ್ಟಿಕೊಂಡು ಶತ್ರುವಿಗೆ ಅವಕಾಶವಿಲ್ಲದಂತೆ ಮಾಡಿಕೊಂಡಿದ್ದರಾದ ಕಾರಣ ಇಟಲಿಯವರು ಆ ಗಡಿಗಳನ್ನೂ ದುರ್ಗಗಳನ್ನೂ ಭೇದಿಸಿಕೊಂಡು ನುಗ್ಗಿ ಹೋಗುವುದಕ್ಕೆ ಬಹಳ ಸಾಹಸ ಪರಾಕ್ರಮಗಳನ್ನು ವ್ಯಯಮಾಡಬೇಕಾಯಿತು. ಈಗ ಇಟಲಿಯವರು ಆಸ್ಟ್ರಿಯಾದವರ ಮೇಲೆ ಮಹಾ ಸಾಹಸ ಪರಾಕ್ರಮಗಳನ್ನು ಕದನಗಳಲ್ಲಿ ತೋರಿಸಿ ಅವರನ್ನು ಅನೇಕ ಮೈಲಿಗಳ ದೂರ ಹಿಮ್ಮೆಟ್ಟಿಸಿರುತ್ತಾರೆ. ಇಷ್ಟೇ ಅಲ್ಲ, ಹಲವು ಪಟ್ಟಣಗಳೂ ವಿಸ್ತಾರವಾದ ಸೀಮೆಯೂ ಇಟಲಿಯವರಪಾಲಾದವು. ಅವರು ಈಗಲೂ ಕ್ರಮೇಣ ಮುಂದಕ್ಕೆ ನುಗ್ಗಿ ಹೋಗುತ್ತಲೇ ಇರೋಣದರಿಂದ ಅವರ ಉದ್ದೇಶವು ಬೇಗನೆ ಕೈಗೂಡದಿರುವುದಕ್ಕೆ ಸಂಶಯ ಕಾಣುವುದಿಲ್ಲ.

ಅದೇ ದಕ್ಷಿಣ ಭಾಗದಲ್ಲಿ ಆಸ್ಟ್ರಿಯಾದವರಿಗೂ ಸರ್ಬಿಯಾದವರಿಗೂ ಕದನಗಳಾದವು. ಇವೆಲ್ಲಾ ಯುದ್ಧಾರಂಭದಲ್ಲಿ ನಡೆದವುಗಳು. ಕೆಲವು ಕಾಲದ ತನಕ ಆಸ್ಟ್ರಿಯಾದವರಿಗೆ ಸರ್ಬಿಯಾದವರು ತಮ್ಮ ಸೀಮೆಯೊಳಕ್ಕೆ ನುಗ್ಗಿ ಬಾರದಂತೆ ಬಹಳ ಕಠಿಣವಾಗಿ ಯುದ್ಧಮಾಡಿ ತಡೆಯನ್ನು ಕಲ್ಪಿಸಿದ್ದರು. ಅಷ್ಟರಲ್ಲೇ ಆಸ್ಟ್ರಿಯಾದವರು ಹೊಸ ಸೈನ್ಯಗಳನ್ನು ಅಪಾರವಾಗಿ ಕೂಡಿಸಿಕೊಂಡು ಬಂದು ಸರ್ಬಿಯಾದವರನ್ನು ಹಿಮ್ಮೆಟ್ಟಿಸಿ ಅವರ ಸೀಮೆಯೊಳಕ್ಕೂ ಸ್ವಲ್ಪ ದೂರ ನುಗ್ಗಿಹೋದರು. ಆದಾಗ್ಯೂ ಸರ್ಬಿಯಾದವರು ಬಹು ಪರಾಕ್ರಮದಿಂದ ನಿಂತು ಯುದ್ಧಮಾಡಿ ಆಸ್ಟ್ರಿಯಾದವರನ್ನು ಕಡೆಗೆ ತಮ್ಮ ಸೀಮೆಯಿಂದ ಹೊರಕ್ಕೆ ಓಡಿಸಿಬಿಟ್ಟರು. ಈಚೆಗೆ ಕೆಲವು ತಿಂಗಳಿಂದ ಈ ಪ್ರಾಂತ್ಯದಲ್ಲಿ ಕದನಗಳೇನೂ ನಡೆಯಲಿಲ್ಲ. ಆದರೂ ಸರ್ಬಿಯಾದವರು ಇದುವರೆಗೆ ಚೇತರಿಸಿಕೊಂಡಿರೋಣದರಿಂದ ಮತ್ತೆ ಯುದ್ಧಕ್ಕೆ ಹೊರಡಲು ಸಿದ್ಧರಾಗಿರುವಂತೆ ಕಾಣುತ್ತದೆ.

ಪಶ್ಚಿಮ ಭಾಗದಲ್ಲಿ ಜರ್ಮನಿಯವರು ಅನೇಕ ಕಾಲದಿಂದ ಯುದ್ಧಕ್ಕೆ ಸಿದ್ಧಪಡಿಸಿಕೊಳ್ಳುತ್ತಿದ್ದು ಏಕಾಏಕಿ ತಮ್ಮ ಸೈನ್ಯಗಳನ್ನು ನುಗ್ಗಿಸಿ ಬೆಲ್ಜಿಯಮಿಗೂ, ಫ್ರಾನ್ಸಿಗೂ ಮುತ್ತಿಗೆ ಹಾಕಿಕೊಂಡರು. ಅವರ ಕಡೆ ಅಗಾಧವಾದ ಸೈನ್ಯಗಳು ಇದ್ದುದ್ದರಿಂದ ಬೇಗ ಬೇಗನೆ ಬೆಲ್ಜಿಯಮಿನೊಳಕ್ಕೆ ನುಗ್ಗಿ ಲಕ್ಸೆಂಬರ್ಗಿನ ಮೂಲಕ ಫ್ರಾನ್ಸಿಗೆ ಬಂದುಬಿಟ್ಟು ಅಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳ ಮೇಲೆ ಕದನಗಳನ್ನು ಮಾಡುತ್ತಾ ಬಂದರು. ಆ ಎರಡು ರಾಜ್ಯಗಳ ಸೈನ್ಯಗಳೂ ಅಷ್ಟು ಹೆಚ್ಚಾಗಿರಲಿಲ್ಲವಾದ ಕಾರಣ ಅವು ಜರ್ಮನಿಯವರ ದಾಂಧಲೆಯನ್ನು ತಡೆಯಲಾರದೆ ಹೋದವು. ಜರ್ಮನಿಯವರು ನೆಟ್ಟಗೆ ಪಾರಿಸ್ ನಗರವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ನುಗ್ಗಿ ಬಂದುಬಿಟ್ಟರು. ಕೆಲವು ವಾರಗಳು ಕಳೆಯುವಷ್ಟರಲ್ಲೇ ಫ್ರೆಂಚರು ತಮ್ಮ ಸೈನ್ಯಗಳನ್ನು ಜೊತೆಮಾಡಿಕೊಂಡು ಜರ್ಮನಿಯವರನ್ನು ಮುಂದಕ್ಕೆ ಬಾರದಂತೆ ತಡೆದುದಲ್ಲದೆ ಅವರನ್ನು ಅಲ್ಲಿಂದ ಕ್ರಮೇಣ ಹಿಂದಕ್ಕೆ ಓಡಿಸಿಕೊಂಡುಹೋಗಿ ಬೆಲ್ಜಿಯಮಿನ ಎಲ್ಲೆಕಟ್ಟಿನ ಬಳಿ ಬಿಟ್ಟರು. ಬೆಲ್ಜಿಯಮಿನ ಸಮುದ್ರ ತೀರದಿಂದ ಹಿಡಿದು ಸ್ವಿಟ್ಸರ್‌ಲೆಂಡಿನವರೆಗೆ ಅಂದರೆ ಸುಮಾರು 300 ಮೈಲಿಗಳ ಉದ್ದಕ್ಕೂ ಕೆಲವು ತಿಂಗಳುಗಳಿಂದಲೂ ಮಹಾ ಘೋರವಾದ ಯುದ್ಧಗಳು ನಡೆಯುತ್ತಲೇ ಬಂದಿವೆ. ಈ ಕದನಗಳಲ್ಲಿ ಕೆಲವು ವೇಳೆ ಜರ್ಮನಿಯವರಿಗೆ ಅನುಕೂಲವಾಗಿರುತ್ತದೆ. ಪ್ರಥಮದಲ್ಲಿ ಅವರು ವಿಷವಾಯುಗಳನ್ನೂ ಬೆಂಕಿಯನ್ನೂ ಕಾರುವಂಥಾ ಆಯುಧಗಳನ್ನು ಪ್ರಯೋಗಮಾಡುತ್ತಾ ಬಂದರು. ಇದರಿಂದ ನಮ್ಮ ಪಕ್ಷದ ಸೈನ್ಯಗಳಿಗೆ ಕೆಲವು ಮಟ್ಟಿಗೆ ಅನನುಕೂಲವುಂಟಾಗಿ ನಷ್ಟಪಟ್ಟವು. ಯುದ್ಧಧರ್ಮದಲ್ಲಿ ಇಂಥಾ ಕ್ರೂರವಾದ ಆಯುಧಗಳನ್ನು ಪ್ರಯೋಗಮಾಡಕೂಡದೆಂಬ ವಿಧಿಯುಂಟು; ಆದರೆ ಜರ್ಮನಿಗೆ ಯಾವ ವಿಧಿಯ ಮೇಲೂ ಯಾವ ಧರ್ಮದ ಮೇಲೂ ದೃಷ್ಟಿಯೇ ಇಲ್ಲ. ಅವರು ಅವುಗಳನ್ನೆಲ್ಲಾ ಸ್ವಲ್ಪವೂ ಲಕ್ಷ್ಯ ಮಾಡದೆ ಘೋರ ಕ್ರೂರಕೃತ್ಯಗಳನ್ನೇ ಮಾಡುತ್ತಾ ಬಂದರು. ಇಷ್ಟಾದರೂ ನಮ್ಮ ಪಕ್ಷದವರು ಶತ್ರು ಸೈನ್ಯವನ್ನು ಕ್ರಮಕ್ರಮವಾಗಿ ಹಿಮ್ಮೆಟ್ಟಿಸುತ್ತಾ ಬಂದಿದಾರೆ. ಜರ್ಮನಿಯವರು ಮೊದಲು ಆಕ್ರಮಿಸಿಕೊಂಡಿದ್ದ ಸೀಮೆಯಲ್ಲಿ ಬಹು ಭಾಗವನ್ನೆಲ್ಲಾ ಅವರು ಬಿಟ್ಟುಹೋಗಬೇಕಾಯಿತು. ನಮ್ಮ ಪಕ್ಷದವರು ಶತ್ರುವನ್ನು ಇನ್ನೂ ಬೇಗನೆ ಹಿಮ್ಮೆಟ್ಟಿಸುವುದಕ್ಕೆ ಒಂದು ಅಡಚಣೆಯುಂಟಾಯಿತು. ಮೊದಲು ಅವರ ಬಳಿ ಭಾರೀ ಫಿರಂಗಿಗಳಾಗಲಿ ಅಪಾರ ಮದ್ದುಗುಂಡಾಗಲಿ ಇರಲಿಲ್ಲ; ಈಗೀಗ ಇವನ್ನೆಲ್ಲಾ ಒದಗಿಸಿಕೊಳ್ಳುತ್ತಿದಾರೆ.

ಇನ್ನು ಪೂರ್ವಭಾಗದ ರಣರಂಗದಲ್ಲಿ ಏನಾಗಿದೆಯೆಂದು ನೋಡೋಣ. ಅಲ್ಲಿ ರಷ್ಯಾದವರು ಒಂದು ಕಡೆಯೂ ಜರ್ಮನಿಯವರೂ ಆಸ್ಟ್ರಿಯಾದವರೂ ಇನ್ನೊಂದು ಕಡೆಯೂ ನಿಂತು ಅನೇಕ ಘೋರವಾದ ಕದನಗಳನ್ನು ಮಾಡಿದರು. ಸೈನ್ಯಗಳ ಸಾಲುಗಳೇ ಅನೇಕ ನೂರು ಮೈಲಿಗಳ ಉದ್ದಕ್ಕೂ ನಿಲ್ಲುತ್ತಿದ್ದವು. ಒಂದು ವೇಳೆ ರಷ್ಯಾದವರು ಆಸ್ಟ್ರಿಯಾದೊಳಕ್ಕೂ, ಪ್ರಷ್ಯಾ ಸೀಮೆಯೊಳಕ್ಕೂ ನುಗ್ಗಿ ಬಂದಿದ್ದರು. ಇವರನ್ನು ಶತ್ರುಪಕ್ಷದವರು ಅಲ್ಲಿಂದ ಹಿಂದಕ್ಕೆ ಹೊರಡಿಸಿಬಿಟ್ಟರು. ಇನ್ನೊಂದು ಸಮಯದಲ್ಲಿ ಆಸ್ಟ್ರಿಯಾದವರೂ ಜರ್ಮನಿಯವರೂ ರಷ್ಯಾ ರಾಜ್ಯದೊಳಕ್ಕೆ ನುಗ್ಗಿ ಹೋಗಿದ್ದರು; ಬಳಿಕ ಇವರು ಅಲ್ಲಿಂದ ಹಿಂದಕ್ಕೆ ಓಡಿಸಲ್ಪಟ್ಟರು. ಕೆಲವು ತಿಂಗಳ ಹಿಂದೆ ರಷ್ಯಾದವರಿಗೆ ಅನುಕೂಲವಾಗಿತ್ತು; ವರುಷಾಂತ್ಯದಲ್ಲಿ ಅವರಿಗೆ ಆಗಿನ ಅನುಕೂಲ ತಪ್ಪಿ ಕೆಲವು ಭಾಗ ನಷ್ಟವೇ ಆಗಿದೆ. ಅತ್ತಲಾಗಿ ರಷ್ಯಾದವರು ಆಸ್ಟ್ರಿಯಾದೊಳಕ್ಕೆ ನುಗ್ಗಿ ಹೋಗಿ ಬಹಳ ವಿಸ್ತಾರವಾದ ಭಾಗವನ್ನೂ ಹಲವು ಪ್ರಾಮುಖ್ಯ ನಗರಗಳನ್ನೂ ಗೆದ್ದು ಆಕ್ರಮಿಸಿಕೊಂಡಿದ್ದರು. ಈಚೆಗೆ ಜರ್ಮನಿಯವರು ಅಪಾರ ಸೈನ್ಯಗಳನ್ನು ಕೂಡಿಸಿ ತಂದು ರಷ್ಯಾದವರನ್ನು ಆಸ್ಟ್ರಿಯಾದಿಂದ ಹೊರಡಿಸಿ, ಈಗ ರಷ್ಯಾ ಸೀಮೆಯೊಳಕ್ಕೂ ನುಗ್ಗಿ ಹೋಗಿರುತ್ತಾರೆ. ಇನ್ನೂ ಬಹು ಭಯಂಕರವಾದ ಕದನಗಳು ನಡೆಯುತ್ತಲೇ ಇರುವವು. ಆದರೂ ಜರ್ಮನಿಯವರು ರಷ್ಯಾದವರ ಸೈನ್ಯಗಳನ್ನು ಸೋಲಿಸುವುದು ಅಸಾಧ್ಯ. ಈಗ ರಷ್ಯಾದವರು ಹಿಮ್ಮೆಟ್ಟಿ ಹೋಗಿ ಒಳ್ಳೊಳ್ಳೇ ಭದ್ರವಾದ ಠಾಣ್ಯಗಳಲ್ಲಿ ನಿಂತು, ಶತ್ರುವಿನ ಆಗಮನವನ್ನು ಎದುರುನೋಡುತ್ತಿದಾರೆ.

ಎಲ್ಲಾ ಒಟ್ಟುಕೂಡಿಸಿ ನೋಡಿದಲ್ಲಿ ಉಭಯ ಪಕ್ಷಗಳ ಸ್ಥಿತಿಗತಿ ಹೇಗಿದೆ ಎಂದರೆ, ಸಮುದ್ರದ ಮೇಲೆ ಎಲ್ಲಾ ಕಡೆಗಳಲ್ಲೂ ನಮ್ಮ ಪಕ್ಷದವರು ಜಯಶೀಲರಾಗಿದಾರೆ. ಭೂಯುದ್ಧಗಳಲ್ಲಿ ಯೂರೋಪಿನಲ್ಲಿ ಹೊರತು ಇತರ ಕಡೆಗಳಲ್ಲೆಲ್ಲಾ ನಮ್ಮ ಪಕ್ಷದವರಿಗೇ ವಿಶೇಷ ಜಯವಾಗಿದೆ. ಯೂರೋಪಿನೊಳಗೂ ಜರ್ಮನಿಯವರಾಗಲಿ, ಆಸ್ಟ್ರಿಯಾದವರಾಗಲಿ, ಟರ್ಕಿಯವರಾಗಲಿ ಯಾವ ಕಡೆಗೂ ಜಲಿಸಿ ನುಗ್ಗಿ ಹೋಗದಂತೆ ಸುತ್ತಲೂ ಬಲವಾದ ತಡೆಗಳನ್ನು ನಮ್ಮ ಪಕ್ಷದವರು ಕಲ್ಪಿಸಿದಾರೆ. ಇನ್ನು ಕೆಲವು ಕಾಲ ಯುದ್ಧಗಳು ನಡೆಯುತ್ತಲೇ ಇರುವವು; ಯಾಕೆಂದರೆ ಜರ್ಮನಿಯ ಸಾಮರ್ಥ್ಯವೂ ಸಲಕರಣೆಗಳೂ ಅಪಾರವಾಗಿರುವವು. ಅವೆಲ್ಲಾ ಕರಗಿ ತೊಲೆದುಹೋಗುವ ತನಕ ಯುದ್ಧಗಳು ಆಗಿಯೇ ತೀರಬೇಕು. ಹೇಗಾದರೂ, ಪರಿಣಾಮದಲ್ಲಿ ನಮ್ಮ ಪಕ್ಷದವರಿಗೇ ಜಯವಾಗುತ್ತದೆನ್ನುವುದಕ್ಕಾಗಲಿ, ಜರ್ಮನಿ ಆಸ್ಟ್ರಿಯಾ ಟರ್ಕಿ ಈ ರಾಜ್ಯಗಳು ಸೋತುಹೋಗುವವೆನ್ನುವುದಕ್ಕಾಗಲಿ ಅನುಮಾನವೇ ಇಲ್ಲ.

ಋಗ್ವೇದದಲ್ಲಿ ಸ್ತುತಿಯುಕ್ತನಾದ ದೇವರು.

ಋಗ್ವೇದದ ಕಾಲದಲ್ಲಿ ಆರ್ಯರಿಗೆ ಇಂದ್ರನೇ ಮುಖ್ಯದೇವರು. ಇಂದ್ರನು ಒಣಗಿ ಹೋಗಿದ್ದ ಪೈರುಗಳಿಗೆ ಜೀವಾಧಾರವಾದ ಮಳೆಯನ್ನು ಭೂಮಿಗೆ ಕಳುಹಿಸುವನು. ಅವನು ಕಿಡಿಗಳನ್ನುಗುಳುವ ಸಿಡಿಲುಗಳೆಂಬ ಬಾಣಗಳನ್ನು ಹಿಡಿದು ತನ್ನ ಸಹಾಯಕರಾದ ಮರುತ್ತುಗಳನ್ನು ಜೊತೆಗೆ ಕರೆದುಕೊಂಡು ರಥಾರೂಢನಾಗಿ ಅಹಿಯೆಂಬ ರಾಕ್ಷಸನ ಮೇಲೆ ಯುದ್ಧಕ್ಕೆ ಹೊರಡುತ್ತಾನೆ. ಅಹಿಯು ದೇವತೆಗಳ ವಿರೋಧಿ. ಅವನು ಭೂಮಿಯ ಮೇಲೆ ಮಳೆ ಸುರಿಯದ ಹಾಗೆ ತಡೆಯುತ್ತಾನೆ. ಇವನನ್ನು ಇಂದ್ರನು ಬಾಣಗಳಿಂದ ಹೊಡೆಯುವ ಪೆಟ್ಟಿನಲ್ಲಿ ಉಂಟಾಗುವ ಘರ್ಜನೆಯೇ ಗುಡುಗು. ಆ ಪೆಟ್ಟಿನ ಹೊಡೆತದಿಂದ ಉಜ್ವಲನವಾಗಿ ಉದುರುವ ಕಿಡಿಗಳೇ ಥಳಥಳಿಸುವ ಸಿಡಿಲು. ಮತ್ತು ಈ ಇಂದ್ರದೇವನೇ ಯುದ್ಧದಲ್ಲಿ ಆರ್ಯರ ಪಕ್ಷವಾಗಿ ನಿಂತು ಅವರ ಹಗೆಗಳಾದ ಮೂಲನಿವಾಸಿಗಳನ್ನು ಸೋಲಿಸುವವನು. ಇಂದ್ರನಲ್ಲದೆ ದೇವತೆಗಳ ಪುರೋಹಿತನಾದ ಅಗ್ನಿ, ಸೋಮ, ಸೂರ್ಯ, ಸವಿತೃ, ಉಷ, ವಾಯು, ಯಮ, ಆಕಾಶ, ಪೃಥ್ವಿ ಮುಂತಾದ ದೇವತೆಗಳನ್ನು ಅವರು ಆರಾಧಿಸಿ ಅವರಿಗೆ ಸ್ತೋತ್ರಗೀತಗಳಾದ ಋಕ್ಕುಗಳನ್ನು ಅರ್ಪಿಸುತ್ತಿದ್ದರು. ಇವರನ್ನಲ್ಲದೆ ಆರ್ಯರು ಅದಿತಿಯ ಮಕ್ಕಳಾದ ವರುಣ, ಮಿತ್ರ, ಆರ್ಯಮ, ಭಗ ಮುಂತಾದ ಸತ್ತ್ವ ದೇವರುಗಳನ್ನು ಪೂಜಿಸುತ್ತಿದ್ದರು. ಅವರೆ ಮೇಲೆ ಹೇಳಿರುವ ಸಕಲ ದೇವರುಗಳಲ್ಲಿ ವರುಣನು ಮಿತ್ರನು ಅತ್ಯುತ್ಕೃಷ್ಟರಾದವರು. ಇವರು ಇತರ ದೇವರುಗಳ ಹಿಂದೆ ಅವರಿಗೆ ಶಕ್ತಿವರ್ಧಕರಾಗಿ ನಿಂತುಕೊಂಡಿರುವರು. ಮತ್ತು ವರುಣ ಮಿತ್ರರು ಇತರ ದೇವತೆಗಳು ಗಮಿಸಬೇಕಾದ ಪಥಗಳನ್ನು ನಿರ್ಧರಿಸಿ ಅವರನ್ನಾಳುವ ಅಧಿಕಾರಿಗಳು ಎಂದು ಭಾವಿಸಲ್ಪಡುತ್ತಿದ್ದರು.

ಆದರೆ ಆದಿತ್ಯರಲ್ಲಿ ವರುಣನೇ ಪರಮ ಶ್ರೇಷ್ಠನಾದವನು ಎಂದು ಋಗ್ವೇದದಲ್ಲಿ ನಿರೂಪಿತವಾಗಿದೆ. ಆರ್ಯರು ಮೊದಲು ಅಂದರೆ ಅವರು ಬೇರೆ ಬೇರೆ ಗುಂಪುಗಳಾಗಿ ಒಡೆದು ಪ್ರತ್ಯೇಕ ಪ್ರತ್ಯೇಕವಾಗಿ ಹೋಗುವದಕ್ಕೆ ಪೂರ್ವ ಮಧ್ಯ ಆಸಿಯದಲ್ಲಿ ವಾಸಿಯಾಗಿದ್ದರು. ಅಲ್ಲಿಂದ ಅವರು ಎರಡು ಮುಖ್ಯ ಗುಂಪುಗಳಾಗಿ ಒಂದು ಗುಂಪಿನವರು ಪಶ್ಚಿಮದಿಕ್ಕಿಗೆ ಹೊರಟು ಇರಾಣ ಅಥವಾ ಪಾರಶೀ

...ವನ್ನು ಆಕ್ರಮಿಸಿ ಪಾರಸೀ ಜನಾಂಗದ ಮೂಲಪುರುಷರಾದರು. ಮತ್ತೊಂದು ...ಸಿನವರು ಪೂರ್ವದಿಕ್ಕಿಗೆ ಹೋಗಿ ಹಿಂದುಸ್ಥಾನವನ್ನು ಸ್ವೀಕರಿಸಿದ್ದು. ಇವರು ...ಗೆ ವಿಭಾಗವಾಗುವದಕ್ಕೆ ಮುಂಚೆ ಒಂದೇ ಗುಂಪಿನಲ್ಲಿರುವಾಗ ವರುಣದೇವ ...ನ್ನು ಆರಾಧಿಸುತ್ತಿದ್ದರೆಂಬದಕ್ಕೆ ಆಧಾರವಿದೆಯೆಂದು ಸಂಸ್ಕೃತ ವಿದ್ವಾಂಸರು ...ಭಿಪ್ರಾಯಪಡುತ್ತಾರೆ. ಕಾರಣಾಂತರಗಳಿಂದ ಬೇರೆ ದೇವರುಗಳ ಉತ್ಪತ್ತಿಯು ...ಂಭವಾಯಿತು. ಹೀಗಾಗದೆ ಇದ್ದರೆ ಆರ್ಯರೂ ಇರಾಣರೂ ವರುಣನನ್ನೇ ...ಜಿಸಿ ಏಕ ದೇವರ ಭಕ್ತರಾಗುತ್ತಿದ್ದರು. ಮತ್ತು ವರುಣ ದೇವನು ಸೃಷ್ಟಿ ...ನ್ನು ಸ್ವಭಾವ ಕ್ರಮದಲ್ಲಿ ನಡಿಸುವ ಶಾಶ್ವತ ದೇವರು, ಮನುಷ್ಯರಲ್ಲಿ ನೀತಿ ...ಯಮಗಳನ್ನು ಸ್ಥಾಪಿಸಿ ನಡಿಸುವ ದೇವರು ಎಂದು ಪೂಜಿಸಲ್ಪಡುತ್ತಿದ್ದನು. ...ಸ್ತ್ರಗಳಲ್ಲಿ ವರುಣನ ವಿಷಯ ಉನ್ನತೋನ್ನತವಾದ ಆಲೋಚನೆಗಳುಂಟು ...ಣಾವರೆ ವರುಣನನ್ನು ಕುರಿತು ಋಗ್ವೇದದಲ್ಲಿ ಏನು ಉಕ್ತವಾಗಿದೆ? ಆತನ ...ಷಯದಲ್ಲಿ ಯಾವ ಅಭಿಪ್ರಾಯಗಳು ಆಗ ರೂಢಿಯಲ್ಲಿದ್ದವು? ಎಂದು ...ಸ್ತ್ರೀಕರಿಸಿ ಹೇಳುವದು ಪ್ರಯೋಜನಕಾರಿಯಾಗಿರುವದು.

ಆದಿಯಲ್ಲಿ ವರುಣನು ಎಂಬ ಹೆಸರು ಆಕಾಶಮಂಡಲವನ್ನು ಆವರಿಸಿ ...ಂಡಿರುವವನು ಎಂದರ್ಥವಾಗುತ್ತೆ. ಆತನು ಸಕಲವನ್ನೂ ನಿರ್ಮಾಣಮಾಡಿ ...ಕ್ಕೂ ಆಧಾರಭೂತನಾಗಿದ್ದಾನೆ. ಸರ್ವಜ್ಞನಾಗಿ ಸಮಸ್ತವನ್ನೂ ಅರಿತು ...ಮೂ ನಿದ್ರೆಮಾಡದೆ ನಿರಂತರ ಎಚ್ಚರವಾಗಿ ವಿಶ್ವದಲ್ಲಿರುವ ಯಾವತ್ತು ಸ್ಥಾವರ ...ಜಂಗಮಗಳನ್ನು ಸತತವೂ ರಕ್ಷಿಸುತ್ತಾನೆ. ಅವನು ಕರುಣಾಳುವು, ಸಹಾಯ ...ನು, ಮಿತ್ರನು. ಅವನಿಂದ ನೀತಿಯೂ ಧರ್ಮವೂ ಹೊರಡುತ್ತವೆ. ನೀತಿ ...ವಂತನನ್ನು ಅವನು ಆಶೀರ್ವದಿಸಿ ಪಾಪಿಗಳನ್ನು ಕಠಿಣವಾಗಿ ದಂಡಿಸುತ್ತಾನೆ. ...ದರೆ ಪಾಪಿಗಳು ಪಶ್ಚಾತ್ತಾಪಪಟ್ಟರೆ ಅವರ ಪಾಪವನ್ನು ಕ್ಷಮಿಸುತ್ತಾನೆ. ...ನ್ನ ಭಕ್ತಿಯನ್ನಿಟ್ಟು ಮೃತಪಟ್ಟವರಿಗೆ ಅಮರತ್ವವನ್ನು ದಯಮಾಡುತ್ತಾನೆ. ...ಯಕರವಾದ ಜಾಡ್ಯಗಳೂ ಅಕಸ್ಮಿಕವಾಗಿ ಪ್ರಾಪ್ತಿಸುವ ಗಂಡಗಳೂ ವರುಣನು ...ನ್ನ ಆಜ್ಞೆಗಳನ್ನು ಉಲ್ಲಂಘಿಸಿದವರಿಗೆ ಕಳುಹಿಸುವ ಫಲಗಳೆಂಬ ಅಭಿಪ್ರಾಯವು ...ಸ್ಥಾರವಾಗಿ ರೂಢಿಯಲ್ಲಿದ್ದಿತು. ಪಾಪವನ್ನು ವರುಣನಿಗೆ ಅರಿಕೆಮಾಡಿ ...ವನಿಂದ ಬಿಡಿಸಬೇಕೆಂದು ಪ್ರಾರ್ಥಿಸುವ ಅನೇಕ ಋಕ್ಕುಗಳುಂಟು. ...ಪತ ಅರಿತೂ ಅರಿಯದೆಯೂ ಮಾಡಿರುವ ಪಾಪಗಳನ್ನೂ ಆಜ್ಞೋಲ್ಲಂಘನೆ ...ಕ್ಷಮಿಸು" ಎಂಬ ಈ ತರವಾದ ವಿಜ್ಞಾಪನೆಗಳು ಪುಷ್ಕಳವಾಗಿವೆ.

...ರೆ ಕೆಲವು ಕಾಲದ ಮೇಲೆ ಆರ್ಯರು ನೀತಿವಂತನೂ ಪರಿಶುದ್ಧನೂ ...ವೂ ಪಾಪಿಗಳ ರಕ್ಷಕನೂ ಆದ ದೇವರನ್ನು ಬಿಟ್ಟು ಯುದ್ಧಪ್ರಿಯ ... ಅಥವಾ ವ್ಯವಸಾಯ, ಪಶುಪಾಲನೆಗಳಲ್ಲಿ ಆಸಕ್ತರಾಗಿಯೋ ಇಂದ್ರ ...ಸೂರ್ಯ, ವಾಯು, ಪೃಥ್ವಿ, ಆಕಾಶಗಳನ್ನೂ ಪೂಜಿಸಿ ಇವುಗಳನ್ನು ...ಹಾಯಕ್ಕೆ ಬರಬೇಕೆಂದು ಬೇಡಿಕೊಂಡಿಗರು. ಋಗ್ವೇದದ ಉತ್ತರಾ... ವರುಣನ ವಿಷಯ ಹೆಚ್ಚಾಗಿ ಹೇಳಿರುವದಿಲ್ಲ. ದೇವರು ನೀತಿ ...ನೂ ಪರಿಶುದ್ಧನೂ ಪಾಪಿಗಳನ್ನು ವಿಚಾರಿಸಿ ದಂಡಿಸುವವನೂ ಪಶ್ಚಾ... ...ಪುವವರಿಗೆ ಮನ್ನಣೆ ಕೊಡುವವನೂ ಎಂಬ ಈ ಅಭಿಪ್ರಾಯಗಳು ಕಳೆ... ...ದುಹೋದವು. ಧರ್ಮಪರಿಪಾಲಕನಾದ ವರುಣನು ಆರ್ಯಮನೋದ್ದೇ... ...ಷ್ಠಾಗಲು ನೀತಿಯೂ ಧರ್ಮವೂ ಮೂಲೆಗೆ ಒತ್ತರಿಸಲ್ಪಟ್ಟು ಕಡೆ ...ರ್ನಾಮವಾಗಿ ಹೋದವು. ಪ್ರಾಚೀನಕಾಲದ ಆರ್ಯರಿಗೆ ಈ ವಿಧವಾದ ...ಲು ಕೆಲವು ಪಾರಮಾರ್ಥಿಕವಾದ ಏಕದೇವರ ಪ್ರಭಾವವೂ ಗುಣಲಕ್ಷಣ... ...ರಿದುಹೋಗಿ ತಿರಗಿ ಅಂಕುರಿಸಲೇ ಇಲ್ಲ. ಮತ್ತು ದೇವರು ನೀತಿಯುಕ್ತ ...ರಿಪಾಲಕನೂ ಅಧರ್ಮಗಳನ್ನು ದಂಡಿಸುವವನೂ ಪರಿಶುದ್ಧನೂ ಭಕ್ತರಿಗೆ ...ನಾದ ಸುಖವನ್ನು ಅನುಗ್ರಹಿಸುವನೂ ಆಗಿದ್ದಾನೆ ಎಂಬ ಅಭಿಪ್ರಾಯವು ... ಕಾಣದೆ ಕ್ರಮೇಣ ಇನ್ನೊಂದು ಅಸಂಗತವಾದ ಅಭಿಪ್ರಾಯವು ...ಮವಾಗಿ ರೂಢಿಯಲ್ಲಿ ಬಂದಿತು. ಅದೇನಂದರೆ—ದೇವತೆಗಳು ಬಲಿಷ್ಠ... ...ರಿಂದ ಅವರಿಗೆ ಇಷ್ಟಬಂದದ್ದನ್ನು ಅವರು ಮಾಡಬಹುದು. ಅವರು ...ಕ್ತರಾಗಿಯೂ ಪವಿತ್ರರಾಗಿಯೂ ಸತ್ಯವಂತರಾಗಿಯೂ ನಡೆಯಬೇ... ...ದಾಗಿಲ್ಲ ಎಂಬುವದೇ. ಪುರಾಣ ಇತಿಹಾಸಗಳಲ್ಲಿ ದೇವರು ಹೀಗೆ ...ತಂತಹ ಪಾಪವನ್ನು ಮಾಡಿದನೆಂದು ಹೇಳಿದರೆ ಅದಕ್ಕೆ ಪ್ರತ್ಯುತ್ತರ ...! ಅವರು ದೇವತೆಗಳು. ಅವರನ್ನು ವಿಚಾರಿಸುವವರಾರು? ಅವರು ಹೇಗೆ ...ಸರಿಯೆ ಎಂಬುವಲ್ಲವೇ?

...ಮಗಳು ಋಗ್ವೇದವನ್ನೂ ಅದರಲ್ಲಿ ಉಕ್ತವಾಗಿರುವ ಮತವನ್ನೂ ...ವರು. ಇದು ನ್ಯಾಯವೆ" ಸರಿ. ಮತ್ತು ವರುಣನಂತಹ ದೇವರನ್ನು ...ನೆಂದು ಒಪ್ಪಬೇಕು. ಆದರೆ ವರುಣನ ವಿಷಯವಾಗಿ ಆತಕಲ್ಲಿದ್ದ ...ಯಗಳು ಕ್ರಿಸ್ತನಲ್ಲಿ ಅನುಷ್ಠಾನಕ್ಕೆ ಬಂದವು, ಸಿದ್ಧಿಯನ್ನು ಹೊಂದಿ ...ದು ಸುಲಭವಾಗಿ ತಿಳಿಯಬಹುದು. ನಿಷ್ಪಕ್ಷಪಾತಿಗಳು ಋಗ್ವೇದದ ... ವರುಣನ ವರ್ಣನೆಯನ್ನು ಯೇಸು ಕ್ರಿಸ್ತನ ಚರಿತ್ರೆಯಾದ ಸುವಾರ್ತೆ... ...ಹೋಲಿಸಿ ನೋಡಲಿ. ವರುಣನ ವಿಷಯವಾಗಿ ವೇದದಲ್ಲಿ ಹೇಳಿರು... ...ತ್ಕೃಷ್ಟವಾಗಿದ್ದರೂ ಆದು ಮನುಷ್ಯರ ಮನೋಭಾವನೆ. ದೇವರು ...ಗೆ ಇಂತಿಂತಹ ಗುಣಗಳುಳ್ಳವನಾಗಿರಬೇಕು ಎಂದು ಆರ್ಯರು ...ದು. ಆದರೆ ಇದು ವೇದಗಳಲ್ಲಿ ಯಾಗಲಿ ಷಡ್ದರ್ಶನಗಳಲ್ಲಾಗಲಿ ಆಗಮ ...ಗಳಲ್ಲಾಗಲಿ ನೆರವೇರಲಿಲ್ಲ. ವರುಣನು ಚರಿತ್ರಾರ್ಹಪುರುಷನಲ್ಲ. ದೇವ ...ಬೇಕೆಂದು ಆರ್ಯರು ಊಹಿಸಿದ ಸಕಲ ಸದ್ಗುಣಗಳೂ ಯೇಸುಕ್ರಿಸ್ತನ ...ರ್ಣತ್ವಾಗಿ ಕಾರ್ಯತಃ ಸಿದ್ಧಿಸಿದವು. ಈತನು ಆರ್ಯರ ದೇವರಲ್ಲವೇ?

ಯುದ್ಧದ ಸಮಾಚಾರಗಳು.

ಗಲ್ಲಿಪೋಲಿಯಲ್ಲಿ ನುಗ್ಗಿಹೋಗಿದಾರೆ.

ಬ್ಯಾಲ್ಟಿಕ್ ಕಡಲಿನಲ್ಲಿ ನಾವೆಗಳ ಯುದ್ಧವಾಯಿತು.

ಈ ವಾರ ರಣರಂಗದಲ್ಲಿ ವಿಶೇಷವಾದ ಕದನಗಳ್ಯಾವವೂ ನಡೆಯಲಿಲ್ಲ. ...ರ್ವೇ ಸಾಮಾನ್ಯವಾಗಿ ನಮ್ಮ ಪಕ್ಷದವರಿಗೇ ಅನುಕೂಲವಾಗಿದೆ ...ಂಬಬರುತ್ತದೆ.

ಪಶ್ಚಿಮ ರಣರಂಗದಲ್ಲಿ.

...ರ್ಮನಿಯ ಯುವರಾಜರು ನಡಿಸುತ್ತಿರುವ ಸೈನ್ಯವು ಫ್ರೆಂಚರ ಮೇಲೆ ...ಯುದ್ಧಮಾಡಿತು; ಆದರೆ ಜಯಪ್ರದವೇನೂ ಆಗಲಿಲ್ಲ. ಅವರು ...ಲವು ಕಂದಕಗಳನ್ನು ಗೆದ್ದುಕೊಂಡರು; ಆದರೆ ಕೂಡಲೇ ಫ್ರೆಂಚರು ...ಅಲ್ಲಿಂದ ಓಡಿಸಿಬಿಟ್ಟರು. ಜರ್ಮನಿಯ ಸೈನಿಕರು ಗುಂಡುಗಳಲ್ಲಿ ...ಅನಿಲವನ್ನು ತುಂಬಿ ಹೊಡೆದರು. ಅವು ಒಡೆದು ವಿಷವಾಯುವನ್ನು ...ಹರಡಿದ್ದರಿಂದ ಜರ್ಮನಿಯವರು ಸ್ವಲ್ಪ ಮುಂದೆ ಬರಲು ಸಹಾಯ... ... ಜರ್ಮನಿಯ ಯುವರಾಜರು ಅವರ ಠಾಣ್ಯದಿಂದ ಮುಂದರಿಸ... ...ಸಾಧ್ಯವಿಲ್ಲವೆಂದು ಹೇಳಲಾಗಿದೆ.—ಬ್ರಿಟಿಷ್ ಸೈನಿಕರು ಬೆಲ್ಜಿಯ... ...ಜರ್ಮನಿಯವರನ್ನು ಸೋಲಿಸಿ ಹಿಂದಕ್ಕೆ ಹೊಡೆದಿಸಿ ಅವರ 1,200 ...ಕಂದಕಗಳನ್ನು ಕಿತ್ತು ಆಕ್ರಮಿಸಿಕೊಂಡಿದಾರೆ. ಆದರೆ ಬ್ರಿಟಿಷರ ...ರ್ಮನಿಯವರ ಫಿರಂಗಿ ಗುಂಡುಗಳು ಅನೇಕವಾಗಿ ಮತ್ತು ರಭಸ... ...ಕೋಪಾದಿ ಸುರಿದದ್ದರಿಂದ ಎರಡು ಕಡೆಗಳ ಕಂದಕಗಳೂ ಹಾಳಾ... ...ದ್ದು ಬ್ರಿಟಿಷರು ಹೊಸ ಕಂದಕಗಳನ್ನು ತೋಡಿಕೊಳ್ಳಬೇಕಾ... ...ಬ್ರಿಟಿಷರು ಜರ್ಮನಿಯವರಲ್ಲಿ 3 ಮಂದಿ ಉದ್ಯೋಗಸ್ಥರನ್ನೂ, 124 ...ಸೈನಿಕರನ್ನೂ, ಎರಡು ... ಫಿರಂಗಿಗಳ ಸಹಿತ ಕೈಸೆರೆಹಿಡಿದು ...ತಂದಿದಾರೆ. ಜರ್ಮನಿಯವರು ಪ್ರಯೋಗಿಸಿದ ಜ್ವಾಲಾ ದ್ರವ್ಯಗಳ ಪರಿಣಾಮ ...ವನ್ನು ವಿವರಿಸಿ ಒಬ್ಬ ಬಾತ್ಮೀದಾರನು ಬರೆಯುವದೇನೆಂದರೆ—ದ್ರವ್ಯವು ಒಂದು ಬೀಕರ್ಷಕವೆಯಂಥಾ ದೊಡ್ಡ ಯಂತ್ರದಿಂದ ಭೂಮಿಯ ಮೇಲೆಲ್ಲಾ ಬಿದ್ದು ಸೀಮೆಯೆಣ್ಣೆ ಹತ್ತಿಕೊಂಡು ಉರಿಯುವಂತೆ ಉರಿಯುತ್ತವೆ. ಅದು ಮೈ ಮೇಲೆ ಬಿದ್ದ ಸೈನಿಕರು ಅದರ ಉರಿಯಿಂದ ಬಹಳ ಸಂಕಟಪಡುತ್ತಾರೆ. ಅವರ ಮೈಯೆಲ್ಲಾ ಸುಟ್ಟುಹೋಗುವುದು. ಒಬ್ಬ ಸಿಪಾಯಿ ಮರಣಸಂಕಟವನ್ನು ಅನುಭವಿಸಲಾರದೆ ಕೊಂದುಬಿಡಿ ಎಂದು ಬೇಡುತ್ತಿದ್ದನು.

ಫ್ರೆಂಚರು 32 ವಿಮಾನ ಯಂತ್ರಗಳನ್ನು ಜರ್ಮನಿಯ ಸಾರ್‌ಬ್ರೂಕ್ ನಗರವನ್ನು ನಾಶಮಾಡುವುದಕ್ಕಾಗಿ ಕಳುಹಿಸಿಕೊಟ್ಟರು. ಅವು ಹೊರಟ ದಿನ ಮಂಜು ಮುಸುಕಿತ್ತು. ಅಂಥಾದ್ದರಲ್ಲೂ 28 ವಿಮಾನಗಳು ಆ ನಗರದ ಮೇಲಕ್ಕೆ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಆ ಪೈಕಿ ನಾಲ್ಕು ವಾಪಸು ಬರಲಿಲ್ಲ, ಒಂದೇನೋ ಸ್ವಿಟ್ಜರ್ಲೆಂಡಿನಲ್ಲಿ ಇಳಿದುಬಿಟ್ಟಿತು. ಜರ್ಮನಿಯವರು 8 ಮಂದಿ ಕೊಲೆಯಾದರೆಂದೂ, 4 ಮಂದಿಗೆ ಗಾಯಗಳಾದವೆಂದೂ ಹೇಳುತ್ತಾರೆ—ಜರ್ಮನಿಯ ಜೆಪ್ಪೆಲಿನ್ ಎಂಬ ಐದು ಭಾರೀ ವಿಮಾನಯಂತ್ರಗಳು ಅಗಸ್ಟ್ ತಾ 9 ನೇ ಸೋಮವಾರ ರಾತ್ರಿ ಇಂಗ್ಲೆಂಡಿನ ಮೇಲೆ ಹಾರಿ ಬಂದು ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ಒಬ್ಬ ಗಂಡಸನ್ನೂ, 9 ಹೆಂಗಸರನ್ನೂ, 4 ಮಕ್ಕಳನ್ನೂ ಕೊಂದುಹಾಕಿದವು; 5 ಜನ ಗಂಡಸರೂ, 7 ಹೆಂಗಸರೂ, ಇಬ್ಬರು ಮಕ್ಕಳೂ ಗಾಯಪಟ್ಟರು. ಆ ರಾತ್ರಿ ಮಂಜು ಮುಸುಕಿತ್ತಾದ ಕಾರಣ ಅವುಗಳ ಮೇಲೆ ನುಗ್ಗಿ ಓಡಿಸುವುದು ಕಷ್ಟವಾಯಿತು. ನಾಲ್ಕು ಜೆಪ್ಪೆಲಿನ್‌ಗಳು ಮಾತ್ರ ಹಿಂತಿರುಗಿದವು; ಗುಂಡೇಟು ತಗುಲಿ ಒಂದು ಜೆಪ್ಪೆಲಿನ್ ಮುರಿದು ಬೆಲ್ಜಿಯಮ್ ಬಳಿ ಸಮುದ್ರದಲ್ಲಿ ಬಿದ್ದುಕೊಂಡಿತು. ಫ್ರಾನ್ಸಿನ ವಿಮಾನ ಯಂತ್ರಗಳು ಅದಕ್ಕೆ ಮುತ್ತಿಗೆ ಹಾಕಿ ಅದನ್ನು ಓಸ್ಟೆಂಡಿನ ಸಮೀಪದಲ್ಲಿ ನಾಶಮಾಡಿದವು.—ಬಳಿಕ ತಾ. 12 ನೇ ಗುರುವಾರ ಎರಡು ಜೆಪ್ಪೆಲಿನ್‌ಗಳು ಇಂಗ್ಲೆಂಡಿನ ಪೂರ್ವ ತೀರದ ಮೇಲಕ್ಕೆ ಹಾರಿಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. 4 ಜನ ಗಂಡಸರೂ, ಇಬ್ಬರು ಹೆಂಗಸರೂ ಕೊಲೆಯಾದರು; 3 ಜನ ಗಂಡಸರೂ, 11 ಜನ ಹೆಂಗಸರೂ, 9 ಮಕ್ಕಳೂ ಗಾಯಪಟ್ಟರು. ಇವರೆಲ್ಲಾ ಸಭ್ಯ ಪ್ರಜೆಗಳು. ಹನ್ನೊಂದು ಮನೆಗಳು ಅಲ್ಪಸ್ವಲ್ಪ ಕೆಟ್ಟುಹೋದವು.

ಬೆಲ್ಜಿಯಮಿನಲ್ಲಿ ಜರ್ಮನಿ ಗವರ್ನರಾಗಿರುವ ಜನರಲ್ ಬಿಸ್ಸಿಂಗ್ ಎಂಬಾತನು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ರಾಜಧಾನಿಯಾದ ಬೆರ್ಲಿನ್ ನಗರಕ್ಕೆ ವಾಪಸು ಹೋದನು. ಈತನು ಒಂದು ಕಾಗದದಲ್ಲಿ "ಬೆಲ್ಜಿಯನ್‌ರು ಶತ್ಕಾಲದಲ್ಲೇ ನಮ್ಮ ಮೇಲೆ ತಿರುಗಿಬೀಳುತ್ತಾರೆ. ಬೆಲ್ಜಿಯನ್‌ರ ಸಿಡಿಮದ್ದಿನ ಗುಂಡಿಗೆ ಸಿಕ್ಕಿ ಸಾಯುವುದಕ್ಕಿಂತ ಮೊದಲೇ ನಾನಾಗಿಯೇ ಕೆಲಸ ಬಿಟ್ಟುಬಿಡುವುದು ಲೇಸು" ಎಂಬದಾಗಿ ಬರೆದಿದ್ದನಂತೆ.—ಜರ್ಮನಿಯವರು ಕೈಸೆರೆ ಹಿಡಿದಿರುವ 5,000 ಫ್ರೆಂಚ್ ಸೈನಿಕರನ್ನು ಬಂದೀಖಾನೆಗಳಲ್ಲಿರುವ ಖೈದಿಗಳೋಪಾದಿಯಲ್ಲಿ ಕ್ರೂರತರವಾಗಿ ನೋಡುತ್ತಿದಾರೆಂದೂ, ಇದಕ್ಕೆ ಫ್ರೆಂಚರು ತಮ್ಮ ಸ್ವಾಧೀನಗಳಲ್ಲಿರುವ ಜರ್ಮನಿ ಪ್ರಜೆಗಳನ್ನು ಸರಿಯಾಗಿ ಆದರಿಸುವದಿಲ್ಲವೆಂದು ತಿಳಿದದ್ದೇ ಕಾರಣವೆಂದೂ ಹೇಳಲಾಗಿದೆ.

ಪಶ್ಚಿಮ ಭಾಗದಲ್ಲಿ ಜರ್ಮನಿಯವರು ತಮಯ ನಿರೀಕ್ಷಣೆಯಲ್ಲಿದ್ದಾರೆ. ಬ್ರಿಟಿಷರು ಅವರ ಮೇಲೆ ನುಗ್ಗಿ ಬರುತ್ತಿರುವದನ್ನು ನೋಡಿ, ಇನ್ನೇನು ಬ್ರಿಟಿಷರು ತಮ್ಮ ಮೇಲೆಯೇ ವಿಶೇಷವಾಗಿ ನುಗ್ಗಿ ಯುದ್ಧಮಾಡುವ ಕಾಲ ಒದಗುತ್ತಾ ಬಂದಿದೆ ಎಂದು ಗೊತ್ತುಮಾಡಿಕೊಳ್ಳುತ್ತಿರುವರು.

ಪೂರ್ವ ರಣರಂಗದಲ್ಲಿ.

ರಷ್ಯಾದಲ್ಲಿ ನಡೆಯುವ ಕದನಗಳು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಅಲ್ಲಿನ ವಿದ್ಯಮಾನಗಳನ್ನು ವಿವರವಾಗಿ ಹೇಳುವುದು ಪ್ರಯಾಸ. ದೀರ್ಘವಾಗಿರುವ ಯುದ್ಧಸಾಲಿನ ಉದ್ದಕ್ಕೂ ಅನೇಕ ಠಾಣ್ಯಗಳಲ್ಲಿ ಮಹಾ ಘೋರವಾದ ಕದನಗಳು ನಡೆದಿರುತ್ತವೆ. ಮತ್ತು ಅನೇಕ ಸ್ಥಳಗಳಲ್ಲಿ ಜರ್ಮನಿಯವರೂ ಆಸ್ಟ್ರಿಯಾದವರೂ ಮುಂದರಿಸದಂತೆ ರಷ್ಯಾದವರು ಅವರನ್ನು ತಡೆದು ಹಿಮ್ಮೆಟ್ಟಿಸುತ್ತಿರುವರು. ಯುದ್ಧಸಾಲಿನ ಉತ್ತರ ಭಾಗದ ಕೊನೆಯಲ್ಲಿ ಅಂದರೆ ಬ್ಯಾಲ್ಟಿಕ್ ಕಡಲಿನ ಬಳಿ ಅತ್ಯಂತ ಘೋರವಾದ ಯುದ್ಧವಾಯಿತು. ರಷ್ಯಾದವರು ತಮಗೆ ಜಯವಾಯಿತೆಂದೂ, ಜರ್ಮನಿಯವರಲ್ಲಿ ಅನೇಕರನ್ನು ನಷ್ಟಪಡಿಸಿ ಹಿಂದಕ್ಕೆ ಓಡಿಸುತ್ತೇವೆಂದೂ ಹೇಳುತ್ತಾರೆ. ಅತ್ತಲಿಂಗ ಜರ್ಮನಿಯವರು ಲೋಮ್ಸಾ ಎಂಬ ಸ್ಥಳವನ್ನು ಗೆದ್ದು ಆಕ್ರಮಿಸಿಕೊಂಡಂತೆ ಹೇಳುವರು. ಅದೇ ಉತ್ತರ ಭಾಗದಲ್ಲಿರುವ ಕೋವ್ನಾ ಎಂಬ ಠಾಣ್ಯದಲ್ಲಿ ಬಹು ಭೀಕರವಾದ ಯುದ್ಧವಾಯಿತು. ಜರ್ಮನಿಯ ಮೂರು ಪಟಾಲಂ ಸೈನ್ಯಗಳು ನಾಶಮಾಡಲ್ಪಟ್ಟವು; ಅನೇಕರು ರಷ್ಯಾದವರಿಗೆ ಕೈಸೆರೆ ಸಿಕ್ಕಿದರು.—ಜರ್ಮನಿಯವರಿಗೆ ವಾರ್ಸಾ ನಗರವು ಸಂಪೂರ್ಣವಾಗಿ ಸ್ವಾಧೀನಕ್ಕೆ ಬಂದಿದೆ. ಅವರು ಅಲ್ಲಿಂದ ಮುಂದಕ್ಕೆ ಸುಮಾರು 30 ಮೈಲಿ ದೂರ ನುಗ್ಗಿ ಹೋಗಿದಾರೆ. ವಾರ್ಸಾ ಸಮೀಪದಲ್ಲಿ ಯುದ್ಧವಾದಾಗ್ಗೆ ಆ ಪಟ್ಟಣದ ಸಭ್ಯಪ್ರಜೆಗಳಲ್ಲಿ 15 ಮಂದಿ ಕೊಲೆಯಾದರು; 200 ಜನಗಳು ಗಾಯಪಟ್ಟರು.—ಬವೇರಿಯಾ ರಾಜಕುಮಾರರಾದ ಲಿಯೊಪಾಲ್ಡ್ ರವರೇ ಈಗ ವಾರ್ಸಾ ಪಟ್ಟಣದ ಗವರ್ನರಾಗಿದಾರೆ. ಅವರು ಆ ನಗರದ ಪ್ರಜೆಗಳಿಗೆ ಇಸ್ತಿಹಾರು ಕೊಟ್ಟಿರುವುದೇನೆಂದರೆ—"ಜರ್ಮನಿಯವರು ಸ್ವಪ್ರಜೆಗಳನ್ನು ತಮ್ಮ ಶತ್ರುವಾಗಿ ಭಾವಿಸುವುದಿಲ್ಲ." ಆದರೂ ಅವರು ಅನೇಕ ಪ್ರಜಾ ಮುಖಂಡರನ್ನೂ ದೊಡ್ಡ ಮನುಷ್ಯರನ್ನೂ ಜಾಮೀನಿಗಾಗಿ ಹಿಡಿದಿಟ್ಟುಕೊಂಡು ಅವರಿಗೆ ಪ್ರಜೆಗಳನ್ನೆಲ್ಲಾ ಸುಮ್ಮನಿರುವಂತೆ ಹತೋಟಿಯಲ್ಲಿಟ್ಟುಕೊಂಡಿರಬೇಕೆಂದೂ, ಯಾರಾದರೂ ಜರ್ಮನಿಯವರ ಮೇಲೆ ಬಿದ್ದದ್ದು ತಿಳಿದರೆ ಈ ಜಾಮೀನುದಾರರು ಆ ಸಂಗತಿಯನ್ನು ತಮಗೆ ಬಂದು ತಿಳಿಸಬೇಕೆಂದೂ, ತಪ್ಪಿದರೆ ಅವರನ್ನು ಕೊಂದುಹಾಕುತ್ತೇವೆಂದೂ ಬೆದರಿಸಿದ್ದಾರೆ.—ರಷ್ಯಾ ಸೈನಿಕರು ವಾರ್ಸಾ ಪಟ್ಟಣವನ್ನು ಬಿಟ್ಟುಹೋಗುವುದನ್ನು ನೋಡಿ ಅಲ್ಲಿನ ಪ್ರಜೆಗಳು—"ಹಿಂದಕ್ಕೆ ಬನ್ನಿ" ಎಂದು ಕೂಗಿಕೊಂಡರು. ಅದಕ್ಕೆ ಸೈನಿಕರು—"ನಾವು ಬೇಗನೆ ಬೆರ್ಲಿನ್ ನಗರಕ್ಕೆ ಹೋಗುವೆವು; ಈ ಮಾರ್ಗವಾಗಿಯೇ ಬಂದು ಹೋಗುತ್ತೇವೆ" ಎಂದು ಜವಾಬು ಕೊಟ್ಟರು. ಜರ್ಮನಿಯವರಿಗೆ ಸ್ವಾಧೀನವಾದಂಥ ವಾರ್ಸಾ ಪಟ್ಟಣದಲ್ಲಿ ಅನೇಕ ಕಡೆ ಬೆಂಕಿಯ ಅಪಘಾತಗಳು ನಡೆದಿರುತ್ತವೆ.

ಜರ್ಮನಿ ಸೈನಿಕರು ದಣಿದು ಬೇಸತ್ತಿದ್ದಾರೆಂದು ನಾನಾ ಕಡೆಯ ವರ್ತಮಾನಗಳು ಹೇಳುವವು. ಸರಿಯಾದ ಆಹಾರ ಕೊಡದೆ ಸೈನಿಕರನ್ನು ಬಲಾತ್ಕಾರವಾಗಿ ರಣರಂಗಕ್ಕೆ ಕಳುಹಿಸುವರು. ಅವರಿಗೆ ಬೇಸರಿಕೆಯುಂಟಾಗಿ ಮನೆಗಳಿಗೆ ಹೋದರಾದೀತೆಂಬ ಚಿಂತೆ ಹುಟ್ಟಿದೆ. ರಷ್ಯಾ ಸೈನಿಕರನ್ನು ಹಿಡಿಯಲಿಲ್ಲ ವೆನ್ನುವುದು ಜರ್ಮನಿ ಪತ್ರಿಕೆಗಳಿಗೆ ತಿಳಿದಿರೋಣದರಿಂದ ಯುದ್ಧವು ಇನ್ನೂ ಈಗಲೇ ಮುಗಿಯುವುದಿಲ್ಲವೆಂದು ಬಲ್ಲವು. ಕೊನೆಯಾಗುವುದಕ್ಕೆ ಇನ್ನೂ ಬಹಳ ಕಾಲ ಬೇಕು—ಜರ್ಮನಿ ಚಕ್ರವರ್ತಿಯು ತಮ್ಮ ಸಹೋದರಿಯಾದ ಗ್ರೀಸ್ ರಾಣಿಗೆ ತಂತೀವರ್ತಮಾನವನ್ನು ಕಳುಹಿಸಿ—"ವಿನಾಶಕರವಾದ ನನ್ನ ಖಡ್ಗವು ರಷ್ಯಾದವರನ್ನು ಹತಮಾಡಿರುತ್ತದೆ; ಅವರು ಚೇತರಿಸಿಕೊಳ್ಳುವದಕ್ಕೆ ಇನ್ನಾರು ತಿಂಗಳಾಗಬೇಕಾಗುವುದು. ಶೂರರಾದ ನನ್ನ ಸೈನಿಕರು ಹೊಂದುವ ಹೊಸ ಜಯಪ್ರದಗಳನ್ನು ಸ್ವಲ್ಪ ಕಾಲದಲ್ಲೇ ಪ್ರಕಟ ಮಾಡುವೆನು. ಯುದ್ಧವೆಂಬೀ ನಾಟಕವು ಮುಗಿಯುತ್ತಾ ಬಂದಿದೆ" ಎಂದು ತಿಳಿಸಿದರು. ರಷ್ಯಾದವರು ಹೇಳುವ ಕಥೆಯೇ ಬೇರೆ ತರವಾಗಿದೆ. ಹೆಚ್ಚೆಚ್ಚಗೂ ಅವರು ಮಹಾ ಪರಾಕ್ರಮದಿಂದ ಕಾದುತ್ತಾರೆ. ರಷ್ಯಾದಿಂದ ಜರ್ಮನಿಯವರನ್ನು ಸಂಪೂರ್ಣವಾಗಿ ಹೊರಡಿಸದಲ್ಲದೆ ಕತ್ತಿಯನ್ನು ಒರೆಯಲ್ಲಿ ಹಾಕುವುದಿಲ್ಲವೆಂದು ಶಪಥಮಾಡಿಕೊಂಡಿರುವರು.—ಜರ್ಮನಿಯವರು ರಷ್ಯಾ ರಾಜಧಾನಿಯಾದ ಪೆಟ್ರೊಗ್ರಾಡ್ ನಗರಕ್ಕೆ ಹೋಗುತ್ತಾರೆಂದು ಅನೇಕರು ಸಂಶಯಪಡಬಹುದು. ಆ ಮಾರ್ಗವು ಸಮೀಪವಾಗಿಲ್ಲ, ಮತ್ತು ಮಹಾ ಪ್ರಯಾಸವಾದೀತು. ಉದ್ದಕ್ಕೂ ಅನೇಕ ಬಲವಾದ ದುರ್ಗಗಳೂ ಕೋಟೆಗಳೂ ಇರುತ್ತವೆ. ಜರ್ಮನಿಯವರು ರೀಗಾವನ್ನು ಗೆದ್ದುಕೊಳ್ಳಲಾರದೆ ಇರುವುದರಿಂದಲೇ ಅವರು ಮುಂದಕ್ಕೆ ಆ ಮಾರ್ಗವಾಗಿ ಹೋಗಲಾರರೆಂದು ಗೊತ್ತಾಗುತ್ತದೆ.

ರೀಗಾ ಕೊಲ್ಲಿಯೊಳಕ್ಕೆ ನುಗ್ಗಿ ಹೋಗುವ ಕಡೆ ಅಗಸ್ಟ್ ತಾ. 8 ರಲ್ಲಿ ಒಂದು ಸಮುದ್ರ ಯುದ್ಧವಾಯಿತು. ಜರ್ಮನಿಯವರು 9 ಯುದ್ಧದ ಹಡಗುಗಳನ್ನೂ, 12 ಯುದ್ಧದ ಜಹಜುಗಳನ್ನೂ, ಅನೇಕ ಸಣ್ಣ ಹಡಗುಗಳನ್ನೂ ತಂದರು. ಅವರು ಕೊಲ್ಲಿಯನ್ನು ಭೇದಿಸಿಕೊಂಡು ಒಳಕ್ಕೆ ನುಗ್ಗಿಹೋಗಬೇಕೆಂದು ಮೂರಾವರ್ತಿ ಬಹಳ ಸಾಹಸಪಟ್ಟು ನುಗ್ಗಿ ಮುತ್ತಿಗೆ ಹಾಕಿದರು. ರಷ್ಯಾದವರು ಆ ಕೊಲ್ಲಿಯ ಮುಖದಲ್ಲಿ ಸಮುದ್ರದೊಳಗೆ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರು. ಅದಲ್ಲದೆ ಅವರ ಯುದ್ಧದ ನಾವೆಗಳೂ ಅಲ್ಲೇ ಕಾದಿದ್ದವು. ಜರ್ಮನಿಯವರು ನುಗ್ಗಿಹೋಗುವುದು ಸಾಧ್ಯವಾಗಲಿಲ್ಲ. ಮೈನ್‌ಗಳು ಒಡೆದು ಅವರ ಒಂದು ಯುದ್ಧದ ಜಹಜೂ, 3 ಸಣ್ಣ ಹಡಗುಗಳೂ ಹಾಳೂ ಆದವು. ರಷ್ಯಾದವರ ಸಮುದ್ರ ವಿಮಾನಗಳು ಹೊರಟು ಜರ್ಮನಿ ಹಡಗುಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಅಷ್ಟರಲ್ಲೇ ಶತ್ರುವಿನ ಹಡಗುಗಳು ವಾಪಸು ಹೋದವು. ರಷ್ಯಾದವರ ಕಡೆ ನಷ್ಟವೇನೂ ಆಗಲಿಲ್ಲ. ಜರ್ಮನಿಯವರು ಆ ಜಲಮಾರ್ಗದ ಸ್ಥಿತಿ ಹೇಗಿದೆ ಎಂದು ಅತಿ ಮಾಯಿಸಿ ಮಾಡುವುದಕ್ಕೋಸ್ಕರ ತಮ್ಮ ಜಹಜುಗಳನ್ನು ಕಳುಹಿಸಿದ್ದೆವೆಂದು ಹೇಳುತ್ತಾರೆ. ತಮ್ಮ ಎರಡು ಹಡಗುಗಳು ನಷ್ಟವಾದದ್ದನ್ನು ಅವರು ಒಪ್ಪಿಕೊಂಡಿದಾರೆ.—ಜರ್ಮನಿಯ ಯುದ್ಧದ ಹಡಗುಗಳು ಮತ್ತೆ ತಾ. 10 ನೇ ಸೋಮವಾರ ತಿರುಗಿ ರೀಗಾ ಕೊಲ್ಲಿಯಲ್ಲಿರುವ, ಬೆಳಕನ್ನು ತೋರುವ ಎತ್ತರವಾದ ಗೋಪುರವನ್ನು ನಾಶಮಾಡಬೇಕೆಂದು ಪ್ರಯತ್ನಪಟ್ಟವು. ಅಲ್ಲಿದ್ದ ರಷ್ಯಾ ಹಡಗುಗಳೂ, ಕೋಟೆ ಕೊತ್ತಲಗಳೂ ಕೂಡಲೇ ಗುಂಡುಗಳ ಮಳೆ ಸುರಿಸಿ ಆ ಶತ್ರುವಿನ ಹಡಗುಗಳನ್ನು ಓಡಿಸಿಬಿಟ್ಟವು.—ಜರ್ಮನಿಯ ವಿಮಾನ ಯಂತ್ರಗಳೂ ಜೆಪ್ಪೆಲಿನ್‌ಗಳೂ ರೀಗಾ ನಗರದ ಮೇಲೆ ಹಾರಿಹೋಗಿ ಗಾಯಪಟ್ಟ ರಷ್ಯಾ ಸೈನಿಕರು ಹೋಗುತ್ತಿದ್ದ ರೈಲ್ ಗಾಡಿಗಳ ಮೇಲೆ ಗುಂಡುಗಳನ್ನು ಹಾಕಿದವು. ಇದರಿಂದ ಅನೇಕ ಗಾಯಪಟ್ಟ ಸೈನಿಕರೂ, ಅವರನ್ನು ಉಪಚರಿಸುತ್ತಿದ್ದ ಸೇವಕಾರ್ತಿಗಳೂ ಕೊಲೆಯಾದರು.—ಜರ್ಮನಿಯವರು ಪೂರ್ವ ದಿಕ್ಕಿನಲ್ಲಿರುವ ತಮ್ಮ ಸೈನ್ಯಗಳನ್ನು ಪಶ್ಚಿಮ ರಣರಂಗಕ್ಕೆ ಕಳುಹಿಸುವುದು ಸಾಧ್ಯವಿಲ್ಲ. ನಮ್ಮ ಪಕ್ಷದವರು ಎಲ್ಲಾ ಸಿದ್ಧಪಡಿಸಿಕೊಳ್ಳುತ್ತಿದ್ದಾರಾದಕಾರಣ, ಇಷ್ಟರೊಳಗೇ ಆ ಕಡೆಯಿಂದ ವಿಶೇಷವಾದ ಸುದ್ದಿ ಬಂದೀತೆಂದು ನಿರೀಕ್ಷಿಸಬಹುದು.

ದಕ್ಷಿಣ ರಣರಂಗದಲ್ಲಿ.

ಇಟಲಿಯಿಂದ ಈ ವಾರ ಬಂದಿರುವ ಸಮಾಚಾರಗಳಲ್ಲಿ ವಿಶೇಷವೇನೂ ಕಾಣುವುದಿಲ್ಲ. ಆದರೂ ಇಟಲಿಯವರು ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳುವುದಕ್ಕೆ ಕ್ರಮವಾಗಿ ಕಾರ್ಯಭಾಗಗಳನ್ನು ನಡಿಸುತ್ತಾ ಬಂದಿರುವರು. ಆಸ್ಟ್ರಿಯಾದವರು 11,000-12,000 ಅಡಿ ಎತ್ತರವುಳ್ಳ ಆಲ್ಪ್ಸ್ ಪರ್ವತಗಳನ್ನು ಹತ್ತಿ ಇಳಿದು ಕಣಿವೆಗಳ ಮಾರ್ಗವಾಗಿ ನುಗ್ಗಿ ಹೋಗಬೇಕೆಂದು ಪ್ರಯತ್ನಪಟ್ಟರು. ಇಟಲಿಯವರು ಅವರನ್ನೆಲ್ಲಾ ಬದಿಸಿ ಓಡಿಸಿರುತ್ತಾರೆ. ಇಟಲಿಯ ಉತ್ತರ ಭಾಗದಲ್ಲಿ 40,000 ಜರ್ಮನಿಯವರು ಬಂದು ಆಸ್ಟ್ರಿಯಾದವರಿಗೆ ಸಹಾಯ ಮಾಡುತ್ತಿರುವಂತೆ ಹೇಳಲಾಗಿದೆ. ಆದಾಗ್ಯೂ ಇಟಲಿಯವರು ನುಗ್ಗಿ ಹೋಗುವುದಕ್ಕೆ ಅಡ್ಡಿಯಾಗಲಿಲ್ಲ. ಆಸ್ಟ್ರಿಯಾದವರ ಕಡೆ 16,000 ಸೈನ್ಯ ಗಾಯಪಟ್ಟು ನಷ್ಟವಾಯಿತೆಂದೂ, ಟ್ರಯೆಸ್ಟಿನ ದಕ್ಷಿಣದಲ್ಲಿರುವ ಪೋಲಾದಿಂದ ಆಸ್ಟ್ರಿಯಾದವರು ನಾಲ್ಕು ಆರ್ಮಿ ಕೋರ್ ಎಂಬ ಹಲವು ರಜಿಮೆಂಟುಗಳನ್ನು ಹೊಸದಾಗಿ ಅಲ್ಲಿಗೆ ಕಳುಹಿಸಿದರೆಂದೂ ಪ್ರಕಟವಾಗಿದೆ. ಆಸ್ಟ್ರಿಯಾದವರು ಇಸೊನ್ಜೊ ಕಣಿವೆಯಲ್ಲಿ ಹಲವು ವೇಳೆ ನುಗ್ಗಿ ಹೋದರೂ ಪ್ರತಿ ಸಲವೂ ಅವರು ಸೋತು ಹಿಮ್ಮೆಟ್ಟಬೇಕಾಯಿತು.—ಇಟಲಿಯವರು ಆಸ್ಟ್ರಿಯದ ಸಬ್‌ಮೆರೀನ್ ಎಂಬ ಹಡಗನ್ನು ಮುಳುಗಿಸಿ ಒಬ್ಬ ಉದ್ಯೋಗಸ್ಥನನ್ನೂ ಹನ್ನೊಂದು ಮಂದಿಯನ್ನೂ ಕೈಸೆರೆ ಹಿಡಿದಿರುತ್ತಾರೆ. ಅವರು ಇನ್ನೊಂದು ಸಬ್‌ಮೆರೀನನ್ನು ಮುಳುಗಿಸಿದ ಹಾಗೂ, ಅದರೊಳಗಿದ್ದವರೆಲ್ಲಾ ಸಮುದ್ರದ ಪಾಲಾದರೆಂದೂ ವರ್ತಮಾನವಿದೆ.

ಟರ್ಕಿಯಲ್ಲಿ.

ಬ್ರಿಟಿಷರು ಗಲ್ಲಿಪೋಲಿಯಲ್ಲಿ ಮುಂದಕ್ಕೆ ನುಗ್ಗಿಹೋಗಿದಾರೆ. 791 ಅಡಿ ಎತ್ತರವಾದ ಒಂದು ಗುಡ್ಡವನ್ನು ಸ್ವಾಧೀನಪಡಿಸಿಕೊಂಡರು. ಅದರ ಮೇಲಿನಿಂದ ಆ ಅರ್ಧ ದ್ವೀಪವನ್ನೆಲ್ಲಾ ಚೆನ್ನಾಗಿ ಅವರಿಸಿಕೊಳ್ಳುವಂತಾಗಿದೆ. ಇದಲ್ಲದೆ ವಿಸ್ತಾರವಾದ ಭೂ ಪ್ರದೇಶ ಸ್ವಾಧೀನವಾಯಿತು. 630 ಸೈನಿಕರು ಕೈಸೆರೆ ಸಿಕ್ಕಿದರು. ಅನೇಕ ಫಿರಂಗಿ ಬಂದೂಕು ಮದ್ದುಗುಂಡುಗಳು ಸ್ವಾಧೀನವಾದವು. ಜಹಜುಗಳಿಂದ ಹೊರಡುವ ದೀಪಗಳ ಬೆಳಕಿನಲ್ಲಿ ಬ್ರಿಟಿಷರು ಟರ್ಕಿಯವರ ಮೇಲೆ ನುಗ್ಗಿ ಕದನಮಾಡಿದರು. ಫ್ರೆಂಚ್ ಸೈನಿಕರೂ ತುಂಬಾ ಸಹಾಯ ಮಾಡಿದರು. ಅದೇ ಸಮಯದಲ್ಲಿ ಜಹಜುಗಳಿಂದ ಸೈನ್ಯಗಳು ಎರಡು ಮೂರು ಕಡೆಗಳಲ್ಲಿ ತೀರವನ್ನು ಹತ್ತಿದವು. ಆ ಪೈಕಿ ಇನೋಸ್ ಎಂಬುವುದೇ ಪ್ರಮುಖ್ಯವಾದ ಸ್ಥಳ. ಈ ಬಳಿ ಹೋಗಿ ಇಳಿದಿರುವ ಬ್ರಿಟಿಷ್ ಸೈನ್ಯಗಳು ಕಾನ್‌ಸ್ಟಾಂಟಿನೋಪಲ್‌ನಿಂದ ಟರ್ಕಿ ಸೈನ್ಯಗಳಿಗೆ ಹೋಗುವ ಸಾಮಾನುಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಅಡ್ಡಗಟ್ಟಿ ತಡೆದುಬಿಡುವುದು ಸುಲಭವಾಯಿತು. ಸಮುದ್ರ ಮಾರ್ಗವಾಗಿ ಹೋಗುವ ಸರಕುಗಳನ್ನು ಮಾರ್ಮೊರಾ ಕಡಲಿನಲ್ಲಿರುವ ಸಬ್‌ಮೆರೀನುಗಳು ತಡೆದುಬಿಡುವವು. ಭೂಮಿಯ ಮೇಲೆ ಹೋಗುವ ಸಾಮಾನುಗಳನ್ನೂ ಹೋಗದಂತೆ ತಪ್ಪಿಸಿಬಿಟ್ಟರೆ ಟರ್ಕಿಯವರ ಹಾರಾಟವು ಕೊನೆಮುಟ್ಟುವುದು ದೂರವಾಗಲಾರದು—ಬ್ರಿಟಿಷ್ ಸಬ್‌ಮೆರೀನುಗಳು ಮಾರ್ಮೊರಾ ಕಡಲಿನಲ್ಲಿ ಬಾರ್ಬರೋಸಾ ಎಂಬ ಟರ್ಕಿ ಯುದ್ಧದ ಹಡಗನ್ನು ಮುಳುಗಿಸಿತು. ಈ ಯುದ್ಧದ ಹಡಗಿನಿಂದ ಟರ್ಕಿಯವರಿಗೆ ಎಷ್ಟೋ ಸಹಾಯವಾಗುತ್ತಿತ್ತು. ಅದರಲ್ಲಿದ್ದವರೆಲ್ಲಾ ಬದುಕಿ ಬಂದರೆಂದು ಒಂದು ಸುದ್ದಿಯೂ, ಅನೇಕರು ಸಮುದ್ರದ ಪಾಲಾದರೆಂದು ಇನ್ನೊಂದು ಸುದ್ದಿಯೂ ಬಂದಿವೆ. ಇದಲ್ಲದೆ ಆ ಸಬ್‌ಮೆರೀನು ಫಿರಂಗಿಗಳ ಒಂದು ಹಡಗನ್ನೂ, ಸೈನ್ಯಗಳು ಸಾಗಿಸಲ್ಪಡುತ್ತಿದ್ದ ಒಂದು ಬರೀ ಹಡಗನ್ನು ಮುಳುಗಿಸಿರುತ್ತದೆ. ಫ್ರೆಂಚರ ಯುದ್ಧದ ಹಡಗು ಹೋಗಿ ಏಷ್ಯಾ ತೀರದಲ್ಲಿ ಟರ್ಕಿಯವರ ಬಳಿಯಲ್ಲಿದ್ದ ಆರು ಫಿರಂಗಿಗಳಲ್ಲಿ ಐದನ್ನು ನಾಶಮಾಡಿತು. ಜರ್ಮನಿಯ ಗೇಬೆನ್ ಎಂಬ ಜಹಜಿಗೆ ಟಾರ್ಪೀಡೋ ಬಡಿದು, ಅದು ಹೋಗಿ ಬಾಸ್ಪೊರಸ್‌ನಲ್ಲಿ ನೆಲದ ಮೇಲೆ ನಿಂತಿತು. ಜರ್ಮನಿಯ ಒಂದು ಸಬ್‌ಮೆರೀನು ಜಾಯೂ ಆಗಿ ಕಾನ್‌ಸ್ಟಾಂಟಿನೋಪಲ್‌ಗೆ ಸಾಗಿಸಲ್ಪಟ್ಟಿದೆ. ರಷ್ಯಾದವರು ಕಪ್ಪು ಕಡಲಿನಲ್ಲಿ ಜರ್ಮನಿಯ ಒಂದು ಜಹಜನ್ನೂ, ಕಲ್ಲಿದ್ದಲು ಭರ್ತಿಯಾಗಿದ್ದ ಟರ್ಕಿಯವರ ಮೂರು ಜಹಜುಗಳನ್ನೂ ಮುಳುಗಿಸಿರುವಂತೆ ವರ್ತಮಾನವಿದೆ. ಕಾನ್‌ಸ್ಟಾಂಟಿನೋಪಲ್‌ನಲ್ಲಿರುವ ಪ್ರಜೆಗಳಿಗೆ ಧೈರ್ಯವೂ ಗಾಬರಿ... ಯುದ್ಧ ಸಾಕೆಂದೂ, ಇಷ್ಟರಲ್ಲೇ ಕೊನೆಮುಟ್ಟಬೇಕೆಂದೂ ಅಭಿಪ್ರಾಯವುಂಟಾಗಿದೆ.—ಕಾಕಸಸ್ ಪ್ರಾಂತ್ಯದಲ್ಲಿ ರಷ್ಯಾದವರು ಟರ್ಕಿಯವರನ್ನು ಹಿಮ್ಮೆಟ್ಟಿಸಿ ಅವರ ಬೆನ್ನುಹತ್ತಿ ಹೋಗಿದಾರೆ. ಅವರು 19 ಮಂದಿ ಉದ್ಯೋಗಸ್ಥರನ್ನೂ, 1,173 ಸೈನಿಕರನ್ನೂ, ನೂರಾರು ವಾಗನ್ ಬಂಡಿಗಳನ್ನೂ, ಆಹಾರ ಮದ್ದು ಗುಂಡು ಮೊದಲಾದ ಸಾಮಗ್ರಿಗಳನ್ನೂ ಕೈಸೆರೆ ಹಿಡಿದುಕೊಂಡರು. ಪ್ರತಿ ಒಂದು ಗ್ರಾಮದಲ್ಲೂ ಗಾಯಪಟ್ಟ ಸೈನಿಕರೂ, ರಸ್ತೆಗಳ ಮೇಲೆಲ್ಲಾ ಬಿಟ್ಟುಹೋಗಿರುವ ಸಾಮಾನುಗಳೂ ರಷ್ಯಾದವರಿಗೆ ಕಂಡು ಬಂದವು.

[8 ನೇ ಪುಟವನ್ನು ನೋಡಿ.]

ನಮ್ಮ ಇಂಗ್ಲೆಂಡಿನ ಬಾತ್ಮಿದಾರರಿಂದ.

ಫೋಕ್‌ಸ್ಟನ್, ಇಂಗ್ಲೆಂಡ್—ಜುಲೈ ತಾ 14.

ನಾವು ಹಿಂದುಸ್ಥಾನದಿಂದ ಇಂಗ್ಲೆಂಡಿಗೆ ಪ್ರಯಾಣ ಮಾಡಿದ ಸುದ್ದಿಯನ್ನೂ, ಈಚೆಗೆ ಇಂಗ್ಲೆಂಡಿನಲ್ಲಿ ಯುದ್ಧ ವಿಚಾರವಾದ ನಮ್ಮ ಅನುಭವವನ್ನೂ ನಮ್ಮ ವಾಚಕರು ಓದಿ ತಿಳಿಯಲು ಕುತೂಹಲಪಟ್ಟಾರೆಂದು ನೆನಸುತ್ತೇವೆ.—ನಾವು ಹಿಂದುಸ್ಥಾನದಿಂದ ಹೊರಟು ಸಿಲೋನ್ ದ್ವೀಪದಲ್ಲಿರುವ ಕೊಲಂಬೊ ಸಮುದ್ರ ತೀರದಲ್ಲಿ ಹಡಗು ಹತ್ತಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದೆವು. ಸಮುದ್ರದ ಮೇಲೆ ದಾರಿಯ ಉದ್ದಕ್ಕೂ ಒಂದು ಹಡಗಾದರೂ ನಮ್ಮ ಕಣ್ಣಿಗೆ ಬೀಳಲಿಲ್ಲ. ಯಾಕಂದರೆ ಜರ್ಮನಿಯ "ಎಂಡೆನ್" ಎಂಬ ಜಹಜಿನ ಹಾವಳಿಗಳು ನಡೆದು ಆಗ್ಗೆ ಇನ್ನೂ ಹರುಷವಾಗಿತ್ತು. ಹಡಗುಗಳ ಯಜಮಾನರುಗಳೆಲ್ಲಾ ತಮ್ಮ ಹಡಗುಗಳನ್ನು ದೇಶಾಂತರಗಳಿಗೆ ಕಳುಹಿಸದ ಪಕ್ಷದಲ್ಲಿ ಜರ್ಮನಿಯ ಯುದ್ಧದ ಜಹಜು ಯಾವುದಾದರೂ ಬಂದು ಆ ಹಡಗುಗಳನ್ನು ಹಿಡಿದು ನಾಶಮಾಡಿಬಿಡುವುದೆಂಬ ಶಂಕೆಪಡುತ್ತಿದ್ದರು. ಅಂಥಾ ಸಂಕಟಕ್ಕೆ ಗುರಿಯಾಗದೆ ತಪ್ಪಿಸಿಕೊಳ್ಳುವದಕ್ಕಾಗಿ ಪ್ರತಿ ಒಂದು ಪ್ರಯಾಣಸ್ಥರ ಹಡಗೂ, ವ್ಯಾಪಾರದ ಹಡಗೂ ಪ್ರತ್ಯೇಕ ಪ್ರತ್ಯೇಕವಾಗಿ ತನ್ನ ಮಾರ್ಗವನ್ನು ಹಿಡಿದು ಒಂಟಿಯಾಗಿಯೇ ಪ್ರಯಾಣಮಾಡುತ್ತಿತ್ತು. ಒಂದು ವೇಳೆ "ಎಂಡೆನ್" ನಂಥಾ ಶತ್ರುವಿನ ಜಹಜು ಎದುರುಬಿದ್ದರೂ ಅದಕ್ಕೆ ಒಂದೊಂದು ಹಡಗೇ ಸಿಕ್ಕುವಂತೆಯೂ, ನಾಲ್ಕಾರು ಹಡಗುಗಳು ಏಕಕಾಲದಲ್ಲಿ ಸಿಕ್ಕಬೀಳದಂತೆಯೂ ಏರ್ಪಾಡು ಇಟ್ಟಿದ್ದರು. ದೈವವಶಾತ್ತು ಜರ್ಮನಿಯ ಜಹಜು ಒಂದಾದರೂ ಆ ಹಿಂದೂ ಸಾಗರದಲ್ಲಿ ಇರಲಿಲ್ಲ. ಬ್ರಿಟಿಷ್ ಜಹಜುಗಳು ಶತ್ರುವಿನ ಹಡಗುಗಳನ್ನೆಲ್ಲಾ ಆ ಸಾಗರದಿಂದ ಓಡಿಸಿಬಿಟ್ಟಿದ್ದವು. ಆದಕಾರಣ ನಮ್ಮ ಪ್ರಯಾಣವು ನಿರ್ವಿಘ್ನವಾಗಿ ಸಾಗಿತು. ನಾವಿದ್ದ ಹಡಗು ಸಮುದ್ರದ ಮೇಲಣ ಘಟ್ಟದ ಮಾರ್ಗದಲ್ಲಿ ಹೋಗದೆ ತನ್ನದೇ ಒಂದು ಬೇರೆ ಮಾರ್ಗವನ್ನು ಹಿಡಿದು ಹೋಗುತ್ತಿದ್ದ ಕಾರಣ ನಮಗೆ ಒಂಟಿಯಾದವೆಂಬ ಚಿಂತೆಯುಂಟಾಗಿತ್ತು. ಕೊಲಂಬೋದಿಂದ ಏಡೆನ್ ತನಕ ಒಂದು ಹಡಗನ್ನಾದರೂ ನಾವು ಕಂಡದ್ದಿಲ್ಲ. "ಎಂಡೆನ್" ನಂಥಾ ಜಹಜಾದರೂ ಒಂಟಿಯಾಗಿ ಆ ಅಗಾಧವಾದ ಸಾಗರದಲ್ಲಿ ಹೇಗೆ ಇರುವುದೋ ಎಂದು ನಮಗೆ ಆಶ್ಚರ್ಯವಾಗುತ್ತಿತ್ತು. ಪಟ್ಟಣ ಊರು ಗ್ರಾಮಗಳೊಳಗೇ ಇರುವಂಥಾ ಜನಗಳಿಗೆ ಸಮುದ್ರವು ಎಷ್ಟು ಅಗಾಧವೂ ವಿಸ್ತಾರವೂ ಆಗಿದೆಯೋ ಊಹಿಸುವುದೂ ಸಾಧ್ಯವಲ್ಲ.—ನಾವು ಏಡೆನ್ ಎಂಬ ತೀರಪಟ್ಟಣದಲ್ಲಿ ಇಳಿಯದೇನೇ ಮುಂದಕ್ಕೆ ಪ್ರಯಾಣಮಾಡಿದೆವು. ಕತ್ತಲು ಕಾಲದಲ್ಲಿ ಅಲ್ಲಿ ಕಟ್ಟಿದ್ದ ಸರ್ಚ್‌ಲೈಟ್ ಎಂಬ ಪ್ರಕಾಶಮಾನವಾದ ದೀಪಗಳು ತಿರುಗುತ್ತಾ ಆ ಕೊಲ್ಲಿಯಲ್ಲಿ ಹೋಗಿಬರುವ ಹಡಗುಗಳನ್ನು ನೋಡುತ್ತಿದ್ದವು. ಹಗಲಿನಲ್ಲೇ ನಮ್ಮ ಹಡಗು ಸೂಯಸ್ ಕಾಲುವೆಯನ್ನು ಹಾದುಹೋಯಿತು. ಅಲ್ಲಿನ ವಿದ್ಯಮಾನಗಳು ನಮಗೆಲ್ಲಾ ತುಂಬಾ ಉತ್ಸಾಹವನ್ನುಂಟುಮಾಡುತ್ತಿದ್ದವು. ನಾವು ಅಲ್ಲಿಗೆ ಹೋದ ಕೆಲವು ದಿನಗಳ ಹಿಂದೆ ಟರ್ಕೀ ಸೈನ್ಯಗಳು ಅಲ್ಲಿಗೆ ಬಂದಿದ್ದು ಸಮುದ್ರ ತೀರದ ಮೇಲೆ ಗುಂಡುಗಳನ್ನು ಹಾಕಿದ್ದವು. ಆ ಕಾಲುವೆಯ ಮಧ್ಯ ಪ್ರದೇಶದಲ್ಲಿ ನಮ್ಮ ಸೈನ್ಯಗಳು ಹೋಗಿ ಎರಡು ಗ್ರಾಮಗಳಲ್ಲಿ ಠಾಣ್ಯ ಹಾಕಿಕೊಂಡಿದ್ದವು. ಮೊದಲನೇ ಗ್ರಾಮದಲ್ಲಿ ಅನೇಕ ಕುದುರೆಗಳನ್ನೂ ಒಂಟೆಗಳನ್ನೂ ಇಟ್ಟಿದ್ದರು. ಈ ಗ್ರಾಮವನ್ನೇ ಟರ್ಕಿ ಸೈನಿಕರು ಬಹಳ ಕಠಿಣವಾಗಿ ಮುತ್ತಿಗೆ ಹಾಕಿದ್ದು, ಅವರ ಗುಂಡುಗಳು ಬಿದ್ದು ಅನೇಕ ಮನೆಗಳ ಮೋಳ್ಳುವಣಿಗಳೆಲ್ಲಾ ಕಿತ್ತುಹಾಳಾಗಿದ್ದದ್ದನ್ನೂ, ಬಾಗಿಲು ಮೊದಲಾದವುಗಳಿಗೆ ಗುಂಡು ತಗುಲಿ ತೂತು ಬಿದ್ದಿದ್ದದ್ದನ್ನೂ ನಾವು ಕಂಡೆವು. ಅಲ್ಲಿ ಈ ಕಾಲುವೆಯು ಬಹಳ ಕಿರಿದಾಗಿದೆ; 100 ಗಜದಷ್ಟು ಅಗಲವಾಗಿಲ್ಲ. ನಾವು ಹಡಗನ್ನು ಹತ್ತಿ ನೋಡಿದಾಗ ಶತ್ರುವಿನ ದಾಂಧಲೆ ಕೃತ್ಯಗಳು ಚೆನ್ನಾಗಿ ಕಾಣುತ್ತಿದ್ದವು. ಇದಲ್ಲದೆ ಶತ್ರುವಿನ ಗುಂಡೇಟು ತಗುಲಿ ಎರ್ಜಿಕ್ ಮೋಟಾಗದ ಕೊಳವೆಯು ಹಾರಿಹೋಗಿದ್ದ "ಹಾರ್ಡಿಂಗ್" ಎಂಬ ಹಡಗು ನಾವಿದ್ದ ಹಡಗನ್ನು ಒತ್ತಿಸಿಕೊಂಡು ಹೋಯಿತು. ಅದರೊಳಗೆ ಜನಗಳು ಹೊಸ ಕೊಳವೆಯನ್ನು ಜೋಡಿಸಿ ಅದಕ್ಕೆ ಬಣ್ಣ ಬಳಿಯುತ್ತಿದ್ದರು. ಅಲ್ಲಿ ನಮ್ಮ ಸೈನ್ಯಗಳೆಲ್ಲಾ ತುಂಬಾ ಉತ್ಸಾಹದಿಂದಿದ್ದವು. ಆ ಅಗಾಧವಾದ ಮರಳು ಕಾಡಿನಲ್ಲಿ ನೊಣಗಳ ಕಾಟ ಭಯಂಕರವಾಗಿದೆ. ಇಂಗ್ಲೆಂಡಿನಂಥಾ ಶೀತರಾಜ್ಯದಿಂದ ಬರುವ ಸೈನಿಕರಿಗೆ ಅವು ಬಹಳ ಅಸಹ್ಯವಾಗಿರುವವು. ಇಂಗ್ಲೆಂಡ್, ಆಸ್ಟ್ರೇಲಿಯಾ, ಹಿಂದುಸ್ಥಾನಗಳಿಂದ ಬಂದ ಸೈನ್ಯಗಳು ಅಲ್ಲಿ ಠಾಣ್ಯ ಹಾಕಿಕೊಂಡಿದ್ದವು.—ಆ ಕಾಲುವೆಯ ಪೂರ್ವದಿಕ್ಕಿನ ತೀರದಲ್ಲಿ ಉದ್ದಕ್ಕೂ ಕಂದಕಗಳನ್ನು ತೋಡಿ ಮುಂಭಾಗದಲ್ಲಿ ತಡೆಗಳನ್ನು ಕಟ್ಟಿ ಮರಳುಚೀಲಗಳನ್ನು ಪೇರಿಸಿ, ಶತ್ರುವು ನುಗ್ಗಬಾರದಂತೆ ಕಾಲುವೆಯನ್ನು ಸಂರಕ್ಷಣೆಮಾಡಿಕೊಂಡಿದ್ದರು. ಅಲ್ಲಿಗೆ ಸ್ವಲ್ಪ ದೂರದಲ್ಲಿ ನಮ್ಮ ಸೈನಿಕರು ಠಾಣ್ಯಗಳನ್ನು ಮಾಡಿಕೊಂಡು, ಶತ್ರುವನ್ನು ಕಂಡ ಒಡನೆಯೇ ಕಂದಕಗಳಿಗೆ ಹೋಗಿ ನಿಂತು ಅವರು ನುಗ್ಗಬರಲು ಅವಕಾಶಕೊಡದಂತೆ ನೋಡಿಕೊಳ್ಳುತ್ತಿದ್ದರು. ಈ ಠಾಣ್ಯಗಳ ಸುತ್ತಲೂ ಇರುವ ಕಾಡಿಗೆ ಕಾಲುವೆಯಿಂದ ನೀರು ಸಾಗಿಸಿ ಎರಚಿ ಸೈನಿಕರಿಗೆ ತಂಪಾಗುವಂತೆ ಮಾಡಿದ್ದರು. ಇನ್ನು ಕೆಲವು ಕ್ಯಾಂಪುಗಳ ಸುತ್ತಲೂ ಮುಳ್ಳು ತಂತಿಗಳನ್ನು ಸದರ ಸದರವಾಗಿ ಬೇಲಿಯೋಪಾದಿ ಕಟ್ಟಿ ಶತ್ರುವು ನುಗ್ಗಬಾರದಂತೆ ಅಡಚಣೆಯನ್ನು ಕಲ್ಪಿಸಿಕೊಂಡಿದ್ದರು. ಒಂದೆರಡು ಕಡೆ ನಮ್ಮ ಹಡಗು ಈ ಕ್ಯಾಂಪುಗಳಿಗೆ ಬಹಳ ಸಮೀಪವಾಗಿದ್ದದ್ದರಿಂದ ನನ್ನ ಕೂಡ ಇದ್ದವರು ಗಟ್ಟಿಯಾಗಿ ಕೂಗಿ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳಲ್ಲಿ ತೀರದಲ್ಲಿದ್ದವರ ಸಂಗಡ ಸಂಭಾಷಣೆಮಾಡಿದರು. ಒಂದು ಕಡೆ ಹಿಂದುಸ್ಥಾನದ ಸೈನಿಕರಿದ್ದರು.

ಸೂಯೆಸ್ ಕಾಲುವೆಯನ್ನು ದಾಟಿ ಅಲ್ಲಿಂದ ಮೆಡಿಟರ್ರೇನಿಯನ್ ಸಮುದ್ರವನ್ನು ಪ್ರವೇಶಿಸಿದೆವು. ಅಲ್ಲಿ ವಿಶೇಷವೇನೂ ಸಂಭವಿಸಲಿಲ್ಲ. ಒಂದಾನೊಂದು ದಿನ ಫ್ರೆಂಚರ ಒಂದು ಯುದ್ಧದ ಜಹಜು ಕಾಣಿಸಿಕೊಂಡು ಏನೋ ಸಂಜ್ಞೆ ಮಾಡಿತು. ನಮ್ಮ ಹಡಗಿನ ಅಧಿಕಾರಿಯು ಕೂಡಲೇ ನಮ್ಮ ಹಡಗನ್ನು ದಕ್ಷಿಣಕ್ಕೆ ತಿರುಗಿಸಿ ಸುಮಾರು ಒಂದು ಮೈಲಿ ದೂರ ಸುತ್ತಿಕೊಂಡುಹೋಗಿ ಬಳಿಕ ಪಶ್ಚಿಮಕ್ಕೆ ಹೊರಟನು. ಆ ಭಾಗದ ಸಮುದ್ರದಲ್ಲಿ ಆಸ್ಟ್ರೀಯದವರು ಮೈನ್ ಎಂಬ ಸಿಡಿಮದ್ದಿನ ಗುಂಡನ್ನು ಇಟ್ಟಿದ್ದರೆಂದು ಎಚ್ಚರಿಕೆ ಹೇಳಿತೋ ಅಥವಾ ಇನ್ನೇನಾಗಿತ್ತೋ ನಮಗೆ ತಿಳಿಯಲಿಲ್ಲ.—ಅಲ್ಲಿಂದ ಮಾರ್ಸೇಲ್ಸ್ ಎಂಬ ತೀರಪಟ್ಟಣವನ್ನು ತಲುಪಿದೆವು. ಇದು ಫ್ರಾನ್ಸಿನ ದಕ್ಷಿಣ ಸಮುದ್ರ ತೀರದಲ್ಲಿದೆ. ನನ್ನ ಕೂಡ ಇದ್ದವರನೇಕರು ಅಲ್ಲಿ ಹಡಗಿನಿಂದ ಇಳಿದು ರೈಲ್ ಗಾಡಿಯನ್ನು ಹತ್ತಿ ಫ್ರಾನ್ಸ್ ದೇಶದೊಳಗೆ ಪ್ರಯಾಣ ಮಾಡಿ ಇಂಗ್ಲೆಂಡಿನ ಸಮುದ್ರ ತೀರಕ್ಕೆ ಎದುರು ಭಾಗದಲ್ಲಿರುವ ಒಂದು ತೀರಪಟ್ಟಣಕ್ಕೆ ಹೋದೆವು. ಕೆಲವರು ಹಡಗಿನಿಂದ ಇಳಿಯದೆ ಹಡಗಿನಲ್ಲೇ ಸಮುದ್ರದ ಮೇಲೆ ಪ್ರಯಾಣ ಮಾಡಿಕೊಂಡು ಲಂಡನ್ ಪಟ್ಟಣವನ್ನು ತಲುಪಿದರು. ಆ ರೀತಿ ಸಮುದ್ರದ ಮೇಲೆ ಸುತ್ತಿಕೊಂಡು ಬಂದವರಿಗೆ ಜರ್ಮನಿಯ ಸಬ್‌ಮೆರೀನುಗಳ ಕಾಟ ತಪ್ಪದಲ್ಲವೆಂಬ ಶಂಕೆಯುಂಟಾಗಿತ್ತು. ಆ ರೀತಿಯಾದ ಹೆದರಿಕೆಯನ್ನು ಕಡಮೆ ಮಾಡುವುದಕ್ಕೆ ನಮ್ಮ ಹಡಗಿನ ಅಧಿಕಾರಿಯು ನಮ್ಮ ಹಡಗು ಅಮೇರಿಕದವರ ಹಡಗೆಂದು ಕಾಣುವಂತೆ ಅದಕ್ಕೆ ಬಣ್ಣ ಬಳಿಸಿದನು. ದೇವರ ದಯದಿಂದ ಕಡೆಗೆ ಆ ನಮ್ಮ ಹಡಗು ಸುರಕ್ಷಿತವಾಗಿ ಇಂಗ್ಲೆಂಡಿನ ತೀರವನ್ನು ತಲುಪಿತು. ಮಾರ್ಸೇಲ್ಸಿನಿಂದ ನಾನು ಹಡಗಿನ ಮೇಲೆ ಪ್ರಯಾಣ ಮಾಡಲಿಲ್ಲವಾಗಿ ಆ ಭಾಗದ ಸಮುದ್ರಯಾನದ ವಿಶೇಷಗಳನ್ನು ವಿವರಿಸಲಾರೆನು. ನಾನು ರೈಲು ಹತ್ತಿ ಫ್ರಾನ್ಸ್ ರಾಜ್ಯವನ್ನು ಹಾದು 24 ಗಂಟೆಗಳಲ್ಲಿ ದಾಟಿದೆನು. ಆ ಹಡಗಿನವರೋ ಸುತ್ತಿ ಬರುವುದಕ್ಕೆ ಎಂಟು ದಿವಸ ಹಿಡಿಯಿತು. ಹೀಗೆ ನಾನು ಸಬ್‌ಮೆರೀನುಗಳ ಕೈಗೆ ಸಿಕ್ಕಲಿಲ್ಲ.—ಫ್ರಾನ್ಸಿನಲ್ಲಿ ಈಗ ಇನ್ನೊಂದು ದೊಡ್ಡ ಕಷ್ಟವಿದೆ. ಪ್ರತಿ ಒಬ್ಬನೂ ಫ್ರಾನ್ಸನ್ನು ಹಾದುಹೋಗಬೇಕಾದರೆ ಅಲ್ಲಿ ಒಂದು ಅಪ್ಪಣೆ ಚೀಟಿಯನ್ನು (ಪ್ಯಾಸ್‌ಪೋರ್ಟ್) ತೋರಿಸಬೇಕು. ಈ ಚೀಟಿಯನ್ನು ಸಂಪಾದಿಸುವುದು ಸ್ವಲ್ಪ ಕಷ್ಟವಾಯಿತು. ರೈಲು ಹತ್ತಿ ಮಾರನೇ ದಿನ ಬೆಳಕು ಹರಿಯುವಾಗ್ಗೆ ನಾವು ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿದ್ದೆವು. ಅಲ್ಲಿ ಪ್ರತಿ ಒಂದು ಸ್ಟೇಷನ್ನಲ್ಲೂ ಅನೇಕಾನೇಕ ಸ್ತ್ರೀಯರು ದುಃಖದ ಬಟ್ಟೆಗಳನ್ನು ಹಾಕಿಕೊಂಡಿದ್ದರು. ಈ ನೋಟವು ಅತ್ಯಂತ ಅಪೂರ್ವವಾಗಿತ್ತು. ಅಲ್ಲಿ ದುಃಖವನ್ನೂ ನಷ್ಟವನ್ನೂ ಅನುಭವಿಸದೆ ಇರುವ ಸಂಸಾರವೇ ಅಪರೂಪ. ಮಾರ್ಸೇಲ್ಸಿನಲ್ಲಾಗಲಿ ಪ್ಯಾರಿಸ್ಸಿನಲ್ಲಾಗಲಿ ಪ್ರಾಯದ ಗಂಡಸರನ್ನು ಕಂಡದ್ದೇ ಇಲ್ಲವೆಂದು ಹೇಳಬಹುದು. ಅವರೆಲ್ಲರೂ ರಣರಂಗಕ್ಕೆ ಹೊರಟುಹೋಗಿದ್ದಾರೆ. ಪ್ಯಾರಿಸ್ಸಿನಿಂದ ಇಂಗ್ಲೆಂಡಿನ ಸಮುದ್ರತೀರಕ್ಕೆ ಹೋಗುವ ಮಾರ್ಗದಲ್ಲಿ ಹಲವು ಕಡೆ ಜರ್ಮನಿಯವರು ಕಳೆದ ವರುಷ ಸೆಪ್ಟೆಂಬರಿನಲ್ಲಿ ನುಗ್ಗಿ ಬಂದಿದ್ದ ಸ್ಥಳಗಳು ಬಹಳ ಸಮೀಪದಲ್ಲಿದ್ದವು. ಮತ್ತು ಕದನಗಳು ಕೂಡ ನಡೆದಂಥಾ ಎರಡು ಪಟ್ಟಣಗಳನ್ನು ಹಾದುಹೋದೆವು. ಇದಲ್ಲದೆ ಜರ್ಮನಿಯ ಸೈನಿಕರು ನುಗ್ಗಬಾರದಂತೆ ತಡೆಯುವುದಕ್ಕೋಸ್ಕರ ಒಯಿಸಾ ನದಿಯ ಸೇತುವೆಯನ್ನು ಫ್ರೆಂಚರು ಒಡೆದುಹಾಕಿದ್ದದ್ದು ನನಗೆ ಕಂಡಿತು. ದಾರಿಯ ಉದ್ದಕ್ಕೂ ಗಂಡಸರು ಮಾಡುವಂಥಾ ವ್ಯವಸಾಯಕಾರ್ಯಗಳನ್ನು ಹೆಂಗಸರೇ ಮಾಡುತ್ತಿದ್ದರು. ಇದರಿಂದ ಸ್ತ್ರೀಯರು ಕೂಡ ಈ ಯುದ್ಧದಲ್ಲಿ ಸಹಾಯಕರಾಗಿ ನಿಂತಿದಾರೆನ್ನುವುದು ವೇದ್ಯವಾಗುತ್ತದೆ.—ಅನೇಕ ಸ್ಟೇಷನ್‌ಗಳಲ್ಲಿ ರಣರಂಗದಿಂದ ಗಾಯಪಟ್ಟು ರೈಲ್‌ಗಾಡಿಗಳಲ್ಲಿ ಬರುತ್ತಿದ್ದ ಯುದ್ಧಭಟರನ್ನು ಕಂಡೆವು. ಇವರನ್ನು ಬೇರೆ ಬೇರೆ ಆಸ್ಪತ್ರೆಗಳಿಗೆ ಸಾಗಿಸಿಕೊಂಡು ಹೋಗುತ್ತಿದ್ದರು. ಅವರನ್ನು ನೋಡಿದಾಗ ನಮಗೆ ದುಃಖವು ಉಕ್ಕಿ ಬರುತ್ತಿತ್ತು. ಅವರಲ್ಲಿ ಹಿಂದುಸ್ಥಾನದ ಸೈನಿಕರೂ ಅನೇಕರಾಗಿದ್ದರು. ಇವರು ಜರ್ಮನಿಯವರ ಮೇಲೆ ನುಗ್ಗಿ ಕೈಕೈಸೇರಿಸಿ ಕದನಮಾಡುವಾಗ್ಗೆ ಎದಗೈಯನ್ನು ಶತ್ರುವಿಗೆ ಅಡ್ಡವಾಗಿ ಹಿಡಿದು ಬಲಗೈಯ ಆಯುಧದಿಂದ ಶತ್ರುವನ್ನು ಹೊಡೆಯುತ್ತಿದ್ದರೆಂಬುವುದು ಅವರ ಗಾಯಗಳನ್ನು ನೋಡುವಾಗ ಗೊತ್ತಾಗುತ್ತಿತ್ತು. ಅವರ ಎಡಗೈಗಳೂ ತೋಳುಗಳೂ ಗಾಯಪಟ್ಟಿದ್ದವು. ಅವರಲ್ಲಿ ಗೂರ್ಖಾ ಸೈನಿಕರೇ ಬಹಳ.

ಮಾರ್ಸೇಲ್ಸ್ ಪಟ್ಟಣದಿಂದ ಹೊರಟವುದಕ್ಕೆ ಬೊಲೋನ್ ಪಟ್ಟಣವನ್ನು ತಲುಪಿದ್ದಕ್ಕೂ 24 ಗಂಟೆ ಮಾತ್ರ ಹಿಡಿಯಿತು. ಅಲ್ಲಿಂದ ಇಂಗ್ಲಿಷ್ ಕಾಲುವೆಯು ಸುಮಾರು 20 ಮೈಲಿ ಅಗಲವಾಗಿದೆ. ಆಕಾಶವು ನಿರ್ಮಲವಾಗಿರುವ ದಿನ ಅಲ್ಲಿ ನಿಂತು ನೋಡಿದರೆ ಇಂಗ್ಲೆಂಡಿನ ತೀರವು ಕಾಣುವುದು. ಆ ಕಾಲುವೆಯನ್ನು ನಾವು ಒಂದು ಸಣ್ಣ ದೋಣಿಯಲ್ಲಿ ಕುಳಿತುಕೊಂಡು ದಾಟಿದೆವು. ಅದು ಅತ್ಯಂತ ವೇಗವಾಗಿ ಅಂದರೆ ಗಂಟೆಗೆ 23 ಮೈಲಿಯಂತೆ ಹೋಯಿತು. ಶತ್ರುವಿನ ಸಬ್‌ಮರೀನಿಗೆ ಸಿಕ್ಕಿಬಿದ್ದೇವೆಂಬ ಶಂಕೆಯೇ ವಿಶೇಷವಾಗಿತ್ತು. ಸುಮಾರು ಒಂದು ಗಂಟೆ ಹೊತ್ತಿನೊಳಗಾಗಿ ಇಂಗ್ಲಿಷ್ ತೀರಪಟ್ಟಣವನ್ನು ತಲುಪಿ, ಈ ಪ್ರಯಾಣದಲ್ಲಿ ಸುರಕ್ಷಿತವಾಗಿ ಕರೆದುತಂದು ತಲುಪಿಸಿದ್ದಕ್ಕಾಗಿ ದೇವರನ್ನು ಕೃತಜ್ಞತಾ ಪೂರ್ವಕವಾಗಿ ವಂದಿಸಿ ಕೊಂಡಾಡಿದೆವು.

ಫೋಕ್‌ಸ್ಟನ್ ಪಟ್ಟಣದಲ್ಲೂ ಇಂಗ್ಲೆಂಡಿನ ಇತರ ಕಡೆಗಳಲ್ಲೂ ನಡೆದ ವಿದ್ಯಮಾನಗಳನ್ನು ಕುರಿತು ಮುಂದಕ್ಕೆ ಬರೆಯುವೆನು.

ನಿಮ್ಮ ಪ್ರಿಯಮಿತ್ರನಾದ
ಡಬ್ಲ್ಯು. ಇ. ಟಾಂಲಿನ್ಸನ್.

ಒಂದು ವ್ಯವಸಾಯದ ಮೀಟಿಂಗು.

ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಹಳೇ ತಾಲ್ಲೂಕ್ ಕಛೇರಿಯಲ್ಲಿ ಅಗ್ರಿಕಲ್ಚರ್ ಮೀಟಿಂಗು ನಡೆಯಿತು. ಕಡೂರು ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಇನ್ಸ್‌ಪೆಕ್ಟರ್ ಮ|| ಸಂಜೀವರಾವ್ ಬೆನ್ನೂರ್ ರವರು ಇದೇ ತಿಂಗಳು ತಾ 7 ರಲ್ಲಿ ವಸ್ತಾರೆಗೆ ದಯಮಾಡಿಸಿದರು. ಮಾರನೇ ದಿವಸ ಬೆಳಗ್ಗೆ ಊರು ಹತ್ತಿರವಿರುವ ಜಮೀನಿನ ಹತ್ತಿರಕ್ಕೆ ವಸ್ತಾರಾ ಗ್ರಾಮಸ್ಥರನ್ನು ಕರೆದುಕೊಂಡು ಹೋಗಿ ತಾವು ತಂದಿದ್ದ "ಯುರೇಕಾ" ನೇಗಿಲನ್ನು ತರಿಸಿ ಆ ಜಮೀನನ್ನು ಹೂಡಿಸಿದರು. ಆ ಪೈಕಿ ಒಬ್ಬಾತನು ಆ "ಯುರೇಕಾ" ನೇಗಿಲನ್ನು ತೆಗೆದುಕೊಂಡುಹೋಗಿ ಸಾಯಂಕಾಲದ ವರೆಗೂ ತನ್ನ ಜಮೀನನ್ನು ಉತ್ತುಕೊಂಡನು. ಆ ನೇಗಿಲಿನಿಂದ ಭೂಮಿಯನ್ನು ಉಳುವುದಕ್ಕೆ ನಮ್ಮ ಸೀಮೆಯ ಸಾಧಾರಣವಾದ ಎತ್ತುಗಳೇ ಸಾಕಾಗಿರುತ್ತವೆ. ಈ "ಯುರೇಕಾ" ನೇಗಿಲಿನಲ್ಲಿ ಎರಡು ಸಾರಿ ಹರೀ ಜಮೀನ್ ಬೇಸಾಯಮಾಡಿದರೆ ನಾಟಿ ಹಾಕುವುದಕ್ಕೆ ಸಿದ್ಧವಾಗುತ್ತೆ. "ಯುರೇಕಾ" ನೇಗಿಲು ನಮ್ಮ ಸೀಮೆಯ ನೇಗಿಲಿಗಿಂತಲೂ ಹಗುರವಾಗಿದೆ. ಮಾರನೇ ದಿವಸ ಬೆಳಗ್ಗೆ ವಸ್ತಾರಾ ಗ್ರಾಮಸ್ಥರೆಲ್ಲರೂ ವಸ್ತಾರೆ ಹಳೇ ತಾಲ್ಲೂಕ್ ಕಛೇರಿಯಲ್ಲಿ ಸೇರಿದರು. ಸ್ಕೂಲ್ ಮಾಸ್ಟರ್ ಮ|| ಲೀಸಗಿರಿ ರಾಯರು ಉಪನ್ಯಾಸದ ಪ್ರಾರಂಭದ ಭಾಷಣ ಮಾಡಿದರು. ಮ|| ಸಂಜೀವರಾವ್ ಬೆನ್ನೂರ್ ರವರು ಬಹಳ ವಿವರಣೆಯಿಂದ ಹೇಳಿದ ವ್ಯವಸಾಯದ ಮುಟ್ಟುಗಳ ವಿಷಯಗಳು ಬಹಳ ಉಪಯೋಗಕಾರಿಗಳಾಗಿದ್ದವು. ಆ ಮೇಲೆ ಭತ್ತ, ಕಬ್ಬು, ನೆಲಗಡಲೆ, ಹರುಗಣೆ, ಸೇಬು, ಮುಂತಾದುವುಗಳ ವ್ಯವಸಾಯ ಕ್ರಮಗಳು ಚೆನ್ನಾಗಿ ರೈತರ ಅನುಭವಕ್ಕೆ ಬಂದಂತಾಯಿತು. ಅಲ್ಲಿ ಸೇರಿದ್ದವರ ಪೈಕಿ ಕೆಲವರು 10 "ಯುರೇಕಾ" ನೇಗಿಲುಗಳಿಗೆ ಆರ್ಡರು ಕೊಟ್ಟಿರುತ್ತಾರೆ. ಈ ಉಪನ್ಯಾಸದಿಂದ ಕಬ್ಬು, ನೆಲಗಡಲೆ ಮುಂತಾದುವುಗಳ ವ್ಯವಸಾಯವನ್ನು ಅಭಿವೃದ್ಧಿಗೊಳಿಸಬೇಕೆಂಬುವುದು ರೈತರ ಮನಸ್ಸಿಗೆ ಚೆನ್ನಾಗಿ ಗೊತ್ತಾಯಿತು. ಈ ವಿಧವಾದ ನೂತನ ವ್ಯವಸಾಯದಿಂದ ರೈತರನ್ನು ಅಭಿವೃದ್ಧಿ ಸ್ಥಿತಿಗೆ ತರುವ ನಮ್ಮ ಮೈಸೂರು ಗೌರ್ನಮೆಂಟಿನವರ ಪ್ರೋತ್ಸಾಹವು ಎಲ್ಲರ ಮನಸ್ಸಿಗೂ ಅತ್ಯಾನಂದವನ್ನುಂಟುಮಾಡುತ್ತಾ ಇದೆ. ಈ ಗ್ರಾಮದ ಅನೇಕ ತಿಳುವಳಿಕೆ ಇಲ್ಲದ ರೈತರುಗಳು ಈ ಉಪನ್ಯಾಸದಿಂದ ದಾರಿಗೆ ಬಂದಂತಾಯಿತು. ಈ ಗ್ರಾಮದ ವ್ಯಾಸಭೋಗಿ ಮ|| ಹೊನ್ನಪ್ಪಯ್ಯನವರು ಗೊಬ್ಬರ ಮೊದಲಾದ ವಿಷಯಗಳಲ್ಲಿ ನವೀನ ಕ್ರಮದಲ್ಲಿ ಉಪನ್ಯಾಸಮಾಡಿದ್ದು ಬಹಳ ರುಚಿಕರವಾಗಿತ್ತು.

ತಮ್ಮಾಚಾರಿ.

ಉಪಾಧ್ಯಾಯರ ಸಂಘಗಳು.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘವು.—ಆಗಸ್ಟು ತಾ. 8 ನೇ ಭಾನುವಾರ ಮಧ್ಯಾಹ್ನ 3 ಘಂಟೆಯಿಂದ ಸಂಘದ ಮೆಂಬರುಗಳು, ತಿಂಗಳಗಟ್ಲೆ ಮೀಟಿಂಗನ್ನು ನಡಿಸಿದರು. ಒಟ್ಟು 15 ಜನ ಮೆಂಬರುಗಳು, 10-12 ಜನ ಸ್ಕೂಲ್ ವಿದ್ಯಾರ್ಥಿಗಳು ಸೇರಿದ್ದರು. ಮಳೆಗಾಲವಾದ್ದರಿಂದ ದೂರದ ಹಳ್ಳಿಗಳಿಂದ ಬರತಕ್ಕವರಿಗೆ ಹವಾ ಅನುಕೂಲವಾಗಿರಲಿಲ್ಲ. ಹೈಸ್ಕೂಲ್ ಉಪಾಧ್ಯಾಯರಾದ ಮ|| ವೆಂಕಟರಾಮಯ್ಯಂಗಾರ್‍ರು ಅಗ್ರಾಸನಾಧಿಪತ್ಯದಲ್ಲಿ ಮೀಟಿಂಗಿನ ಕೆಲಸ ಪ್ರಾರಂಭವಾಯಿತು. ಸೆಕ್ರೆಟರಿಯವರು ಕಳೆದ ತಿಂಗಳ ಮಿನಿಟ್ಸ್‌ಗಳನ್ನು ರೀಡ್‌ಮಾಡಿದರು. ಗಣಿತ ಶಾಸ್ತ್ರದ ಮೇಲೆ ಸೂಕ್ಷ್ಮವಾದ ಉಪನ್ಯಾಸ ನಡೆದು ನೋಟೇಷನ್, ನ್ಯೂಮರೇಷನ್, ಸಂಕಲನ, ಈ ಮೂರನ್ನೂ ಬೋಧಿಸುವ ಕ್ರಮವನ್ನು ಚಿಕ್ಕ ಬಾಲಕರನ್ನಿಟ್ಟುಕೊಂಡು ನಿದರ್ಶನದಿಂದ ತೋರಿಸಿದರು. ತರುವಾಯ ಈ ವಿಷಯದಲ್ಲಿ ಬಹಳ ಹೊತ್ತು ಚರ್ಚೆಮಾಡಿದರು. ಸಂದೇಹವಾದ ಅನೇಕ ಅಂಶಗಳು ಹೊರಬಿದ್ದವು. ಕೆಲವು ನಿರ್ಧಾರವಾಯಿತೂ ಇಲ್ಲ. ಈ ವಿಧವಾದ ಚರ್ಚೆಗಳು ಯಾವಾಗಲೂ ನಡೆದಿರಲಿಲ್ಲ. ಬಹಳ ಪ್ರಯೋಜನವಾಗಿತ್ತು. ಅನೇಕ ವಿಷಯಗಳನ್ನು ತಿಳಿಯುವದಕ್ಕಾಗಿ ಕೆಲವು ಮಾಸಪತ್ರಿಕೆಗಳನ್ನು ತರಿಸಬೇಕೆಂದು ತೀರ್ಮಾನಮಾಡಿದರು. ಅಷ್ಟಕ್ಕೇ ಸಾಯಂಕಾಲವಾದದ್ದರಿಂದ ವ್ಯವಸಾಯದ ಉಪನ್ಯಾಸಕ್ಕೆ ಅವಕಾಶ ದೊರೆಯಲಿಲ್ಲ. ಮುಂದಿನ ತಿಂಗಳ ಮೀಟಿಂಗು ಸೆಪ್ಟೆಂಬರ್ ತಾ. 12 ನೇ ಭಾನುವಾರ ನಡೆಯತಕ್ಕದ್ದೆಂದು ಗೊತ್ತುಮಾಡಿ, ಆ ದಿನದ ಕಾರ್ಯಗಳನ್ನು ನಿಶ್ಚಯಿಸಿದರು. ತರುವಾಯ ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನು ಸಮರ್ಪಿಸಿ ಮೀಟಿಂಗನ್ನು ಮುಕ್ತಾಯಮಾಡಿದರು.

ವೀರಭದ್ರಪ್ಪ, ಜಾ. ಸೆಕ್ರೆಟರಿ.

ಅರಕಲಗೂಡು ತಾ|| ಕೊಣನೂರು.—ಕಳೆದ ವಾರ, ತಾ 31 ನೇ ಶನಿವಾರ ಮಧ್ಯಾಹ್ನ 3 ಘಂಟೆಯಲ್ಲಿ ಈ ತಾಲ್ಲೂಕು ಉಪಾಧ್ಯಾಯರ ಸಂಘವು ಈ ಊರು ವಿ. ಇ. ಸ್ಕೂಲಿನಲ್ಲಿ ನಡೆಯಿತು. ಸದರಿ ಸಭೆಗೆ ಈ ಊರು ಡಾಕ್ಟರು ವೆಂಕಟಾಚಾರ್ಯರು ಸಭಿಕರ ಕೋರಿಕೆಯಂತೆ ಅಧ್ಯಕ್ಷತೆಯನ್ನು ವಹಿಸಿದ್ದರು. ಬಸವಾಪಟ್ಟಣ ವಿ. ಇ. ಸ್ಕೂಲ್ ಮಾಸ್ತರು ಮ|| ಗಂಗಾಧರಶಾಸ್ತ್ರಿಗಳು "ದಂಡನೆ" ವಿಷಯವಾಗಿಯೂ, ಕೆಲ್ಲಾಪುರದ ವಿ. ಇ. ಸ್ಕೂಲು ಮಾಸ್ತರು ಮ|| ನಾಗಪ್ಪನವರು "ಭೂಗೋಳದ ಪಾಠದಿಂದಾಗುವ ಪ್ರಯೋಜನ" ಎಂಬ ವಿಷಯವಾಗಿಯೂ ಸ್ವಾರಸ್ಯವೂ ಯುಕ್ತಿಯುಕ್ತವೂ ಆದ ಉಪನ್ಯಾಸಗಳನ್ನು ಮಾಡಿದರು. ಈ ಊರು ವಿ. ಇ. ಸ್ಕೂಲು ಅ|| ಮಾಸ್ತರು ಮ|| ಟಿ. ಶ್ರೀಕಂಠಯ್ಯನವರು ಮಕ್ಕಳಿಗೆ ಚಿತ್ರಗಳ ಸಹಾಯದಿಂದ ಪಾಠಮಾಡಿದರು. ಹುಲಿಕಲ್ ಸ್ಕೂಲು ಹೆ. ಮಾ. ಮ|| ಸುಬ್ರಹ್ಮಣ್ಯರು ಎರಡನೇ ತರಗತಿಯವರಿಗೆ ಪದ್ಯಪಾಠವನ್ನು ಬಹು ಸ್ವಾರಸ್ಯವಾಗಿ ನಡಿಸಿದರು. ಈ ಸಂಘದಿಂದಾಗುವ ಪ್ರಯೋಜನಗಳನ್ನು ಕುರಿತು ಅಧ್ಯಕ್ಷರು ಸಂಭಾಷಿಸಿದರು. ತರುವಾಯ ರಾಮನಾಥಪುರದ ವಿ. ಇ. ಸ್ಕೂಲ್ ಹೆ. ಮಾ. ಮ|| ಆರ್. ಕೆ. ಕೃಷ್ಣಪ್ಪನವರ ಮಧುರವಾದ ಸಂಗೀತವು ಸಭಿಕರ ಚಿತ್ತವೃತ್ತಿಯನ್ನು ಆನಂದಮಯವಾಗಿ ಮಾಡಿತು. ಈ ಸಂಘಕ್ಕೆ ಬಂದಿದ್ದ ಉಪಾಧ್ಯಾಯರುಗಳಿಗೆಲ್ಲಾ ಮ|| ವೆಂಕಟಾಚಾರ್ಯರೂ, ಈ ಹೋಬಳಿ ಶೇಕ್ದಾರ್ ಮ|| ಬಿ. ಕೆ. ನರಸಿಂಹಯ್ಯಂಗಾರ್ಯರೂ, ಮ|| ವೆಂಕಟೇಶಯ್ಯನವರೂ, ಜಮಾದಾರ್ ಸಾಹೇಬರೂ ಮತ್ತು ಮಹಾಜನಗಳೂ ಆದರಾತಿಥ್ಯಗಳನ್ನು ಬಹು ವಿಶ್ವಾಸದಿಂದ ನಡೆಯಿಸಿದರು. ಈ ರೀತಿಯಾಗಿ ಗ್ರಾಮದ ಸರ್ಕಾರದ ನೌಕರರೂ, ಮಹಾಜನಗಳೂ ಸೇರಿ ಏಕೀಭವಿಸಿ ಕಾರ್ಯಗಳನ್ನು ಮಾಡುತ್ತಾ ಬಂದರೆ ನಮ್ಮ ದೇಶವು ಕ್ಷಿಪ್ರದಲ್ಲಿಯೇ ಅಭಿವೃದ್ಧಿಗೆ ಬರಲು ಸಂದೇಹವಿಲ್ಲ. ಈ ಸಂಘದ ಕಾರ್ಯಗಳನ್ನು ಬಹು ವಿಜೃಂಭಣೆಯಿಂದಲೂ, ವಿಶ್ವಾಸದಿಂದಲೂ ನಡೆಯಿಸಿದ ಈ ಸಂಘದ ಅ|| ಸೆಕ್ರೆಟರಿಯವರಾದ ಈ ಊರು ವಿ. ಇ. ಹೆ. ಮಾ. ಮ|| ಕೆ. ಕೃಷ್ಣಪ್ಪನವರು ಮಾಸ್ತರುಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ.

ಒಬ್ಬ ಪ್ರೇಕ್ಷಕ.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಒಂದು ಪತ್ರಿಕೆಯ ಪ್ರಚಾರ—ಆಕ್ಷೇಪಣೆ.

ಅಯ್ಯಾ,—ಮದರಾಸ್ "ವೀರಕೇಸರಿ" ಪತ್ರಿಕಾ ಕರ್ತರು ಪಳ್ಳಿಕ್ಕಾದಾವರ್ತ ಹೊಂದಿಸುವೆನೆಂತಲೂ, ಬರಬರುತ್ತ ವಾರಕ್ಕೊಂದಾವರ್ತ ಹೊರಡಿಸುತ್ತೇವೆಂತಲೂ ಮತ್ತು ಪತ್ರಿಕೆಯನ್ನು ತರಿಸಿಕೊಂಡವರಿಗೆ ನಾನಾ ವಿಧವಾದ ಬಹುಮಾನಗಳು ದೊರೆಯುತ್ತೆಂತಲೂ ಅನೇಕ ವಿಧವಾಗಿ ಪ್ರೋತ್ಸಾಹಿಸಿ ಕೊನೆಗೆ ಸದರೀ ಪತ್ರಿಕಾಕರ್ತರು ವಾರಕ್ಕೊಂದಾವರ್ತ, ಪಕ್ಷಕ್ಕೊಂದಾವರ್ತ ಹೊರಡುವ ಪತ್ರಿಕೆಯನ್ನು ತಿಂಗಳು 6 ಕ್ಕೊಂದು ಪತ್ರಿಕೆಯನ್ನಾದರೂ ಕಳುಹಿಸುವದಿಲ್ಲ. ಆದ್ದರಿಂದ ಸಮಸ್ತರೂ ಮೋಸ್ಸಂದ ಪತ್ರಿಕೆಯ ಪ್ರಕಟಣೆಗಳನ್ನು ನಂಬಿ ಹಿಂದೆ ಮೋಸಹೋಗಬೇಡಿರಿ. ಜಿ. ಅನಂತಭಟ್ಟ, ಕೆಗ್ಗಾ-ಗುಡ್ಡೆ ಕೊಪ್ಪ, ಕೊಪ್ಪ.

ಹೊಸದುರ್ಗದ ಕೋಆಪರೇಟಿವ್ ಸೊಸೈಟಿ—ಜವಾಬು.

ಅಯ್ಯಾ,—ತಮ್ಮ ಜೂಲೈ ತಾ. 29 ರ ಪತ್ರಿಕೆಯಲ್ಲಿ ಹೊಸದುರ್ಗ ಕೋಆಪರೇಟಿವ್ ಸೊಸೈಟಿಯಲ್ಲಿ ಈಗ ಎರಡು ವರುಷಗಳಿಂದಲೂ ಬಡ್ಡಿಯು ಹಂಚಿಲ್ಲವೆಂದು ವರ್ತಮಾನ ಪ್ರಕಟವಾಗಿದೆ. ಈ ಸೊಸೈಟಿಯು ಪ್ರಾರಂಭವಾಗಿ 7 ತಿಂಗಳಾಯಿತು. ಹೀಗಿದ್ದಲ್ಲಿ 2 ವರುಷಗಳಿಂದು ಯಾವ ಬಾತ್ಮಿದಾರರು ತಮ್ಮ ನೋಟಿಸಿಗೆ ತಂದರೆಂಬುವದು ಗೊತ್ತಾಗುವದಿಲ್ಲ. ಕ್ರಮವಾಗಿ [illegible] ಬ್ಯಾಲೆನ್ಸ್ ಶೀಟನ್ನು ರಿಜಿಸ್ಟ್ರಾರ್ ಸಾಹೇಬರ ಸನ್ನಿಧಿಗೆ ಕಳುಹಿ [illegible] ಬಡ್ಡಿ ಬಟವಾಡೆ ಮಾಡುವದಕ್ಕೆ ರಿಜಿಸ್ಟ್ರಾರ್ ಸಾಹೇಬರ ಅಪ್ಪಣೆ ಆಗ[illegible]ಕಾಗಿರುವ ಪ್ರಯುಕ್ತ ಅಲ್ಲಿಂದ ಆರ್ಡರು ಬಂದ ಕೂಡಲೆ ಮೆಂಬರುಗಳಿಗೆ [illegible] ಹಂಚಲ್ಪಡುತ್ತೆ. ಜಿ. ರಂಗಯ್ಯಂಗಾರ್, ಸೆಕ್ರೆಟರಿ.

ಒಂದು ಬಲಾತ್ಕಾರದ ವಿವಾಹದ ಮೊಕದ್ದಮೆ.

ಅಯ್ಯಾ,—ಕೊಪ್ಪ ತಾಲ್ಲೂಕು ಭಂಡಿಗಡಿಯಲ್ಲಿದ್ದ ಇಮಾಮ್ ಸಾಹೇಬ್ ಎಂಬವರು ಕಳೆದ ಆನಂದ ಸಂವತ್ಸರದ ಫಾಲ್ಗುಣ ಬಹುಳ ಏಕಾದಶಿ [illegible] ವಾರದಲ್ಲಿ ತಮ್ಮ ಜಾತಿಯವರಾದ ಇಬ್ಬರು ಪೊಲೀಸ್ ಪೇದೆಗಳ ಸಹಾಯ[illegible]ದಿಂದ ಕಾಗಿನಗೊಳ್ಳಿ ಚೆನ್ನಮ್ಮ ಹೆಗ್ಗಡತಿ ಎಂಬವಳನ್ನು ತಮ್ಮ ಕಡೆ [illegible] ಆಳಾದ ವೆಂಕಟನೆಂಬವನಿಗೆ ಪುನರ್ವಿವಾಹ ಮಾಡಿಸಬೇಕಾಗಿ ಪ್ರಯತ್ನ [illegible] ಆ ದಿನ ರಾತ್ರಿ ಎಲ್ಲಾ ಸಾಹಸಪಟ್ಟರೂ ಅವಳು ಇವರ ನಿರ್ಬಂಧದಿಂದ ತಪ್ಪಿಸಿಕೊಂಡು ಓಡಿಹೋಗಿ ತೀರ್ಥಹಳ್ಳಿ ಸಮೀಪದಲ್ಲಿರುವ ತನ್ನ ನೆಂಟರ ಮನೆಯನ್ನು ಸೇರಿ ಸದರಿ ಇಮಾಮ್ ಸಾಹೇಬರು ವೊದಲಾದವರ ಮೇಲೆ ಕ್ರಿಮಿನಲ್ ಫಿರ್ಯಾದು ದಾಖಲ್ ಮಾಡಿದಳು. ತಾಲ್ಲೋಕ್ ತಹಸೀಲ್ದಾರರು, ಇನ್ಸ್‌ಪೆಕ್ಟರು ಪ್ರಯುಕ್ತಪಟ್ಟು ನಿಜಾಂಶವನ್ನು ಶೋಧಿಸಿ ಸ್ಥಳ ಮಹಜರ್ ಮಾಡಿ[illegible] ನಾನು ಆ ದಿನ ಭಂಡಿಗಡಿಗೆ ಹೋಗಿದ್ದು, ಮಹಜರಿಗೆ ಯೋಗತಕ್ಕವರ [illegible] ನಾನೂ ಹೋದೆ. ಚೆನ್ನಮ್ಮ ಹೆಗ್ಗಡತಿಯು ತಪ್ಪಿಸಿಕೊಂಡು ಓಡಿಹೋದ [illegible]ವನ್ನು ನಮ್ಮೆದುರಿಗೆ ಎರಡು ಸಾರಿ ಹತ್ತಿ ಇಳಿಸಿದರು. ಅವರು ಸುಲಭವಾಗಿ ಹತ್ತಿ ಇಳಿದರು. ಅದು ಪೈಸಾರಿನ ದರೆಯಾಗಿತ್ತು. ಅನಂತರ ಪುನಃ ದರು [illegible] ಮುಖ್ಯಸ್ಥರ ರುಜು ತೆಗೆದರು. ನಾನು ಮರುದಿವಸ ಶೃಂಗೇರಿ ಸ್ಟೇಷನ್[illegible] ಸದರಿ ಅಪರಾಧಿಗಳನ್ನು ದಸ್ತಗಿರಿ ಮಾಡಿ ಜನರಲ್ ಕೋರ್ಟಿನಲ್ಲಿ [illegible] ನಡೆದು ತಪ್ಪು ಸಾಬೀತಾದ ಕಾರಣ ಛಾರ್ಜ್ ಮಾಡಿ ಸೆಷನ್ಸ್‌ಗೆ ಕಮಿಟ್ [illegible] ದರೆಂತಲೂ, ಸೆಷನ್ಸಿನಲ್ಲಿ ತಾ. 17-7-15 ರಲ್ಲಿ ವಿಚಾರ ನಡೆದು [illegible] ಮೇಲೆ ಬಿಟ್ಟಿರುವದಾಗಿಯೂ ವರ್ತಮಾನ ಕೇಳುತ್ತೇನೆ.

ರಾಮ. ಸೀತಾರಾಮಪ್ಪ, ಶೃಂಗೇರಿ.

ರಾಜಧಾನಿಯಲ್ಲಿ ಬಲಾತ್ಕಾರದ ವಿದ್ಯಾಭ್ಯಾಸ.

ಅಯ್ಯಾ,—ನಮ್ಮ ಸರ್ಕಾರದವರು ವಿದ್ಯೆಯನ್ನು ಹರಡಬೇಕೆಂಬ [illegible] ಹಲದಿಂದ ಬಲಾತ್ಕಾರದ ವಿದ್ಯಾಭ್ಯಾಸವನ್ನು ರಾಜಧಾನಿಯಲ್ಲಿ ಜಾರಿಗೆ [illegible]ವೆಂದು ಪ್ರಕಟಮಾಡಿ ಅಲ್ಲಿಗೆ ವರುಷದ ಮೇಲಾಯಿತು. ಅಟೆಂಡೆನ್ಸ್ [illegible]ರನ್ನೂ, ವೊದಲ್ಲಿಗರ ಕಮಿಟಿಗಳನ್ನೂ ಚುನಾಯಿಸಿ ಗೊತ್ತುಮಾಡಿ [illegible] ತಿಂಗಳ ಮೇಲಾಗಿದೆ. ಮ್ಯುನಿಸಿಪಾಲಿಟಿಯು ಎಷ್ಟು ಹಣಕೊಡಬೇಕು [illegible] ದವರು ಎಷ್ಟು ಖರ್ಚು ವಹಿಸಿಕೊಳ್ಳಬೇಕು ಎಂಬುವುದನ್ನು [illegible] ಇತ್ಯರ್ಥಪಡಿಸಿಲ್ಲ. ಆಗಿಂದಾಗ್ಗೆ ಮೀಟಿಂಗುಗಳೂ ಚರ್ಚೆಗಳೂ ನಡೆ[illegible]ದಲ್ಲೇ ಪರಿಣಮಿಸಿದೆ. ಇನ್ಸ್‌ಪೆಕ್ಟರ್ ಜನರಲ್‌ರವರು ಇದಕ್ಕಾಗಿ [illegible]

ವೇಳೆ ಮೈಸೂರಿಗೆ ಬಂದು ಹೋಗುವವರೇ ಹೊರತು ಕಾರ್ಯದಲ್ಲಿ ಏನೂ ಆಗುವುದಿಲ್ಲ. ಸರ್ಕಾರದ ಹುಕುಮು ಆಗಿ ಒಂದು ವರುಷವೇ ಮೇಲಾಗಿದ್ದರೂ ಈ ವಿಚಾರ ಇನ್ನೂ ಚರ್ಚೆಯಲ್ಲೂ ಆಲೋಚನೆಯಲ್ಲೂ ಇರುವುದಲ್ಲಾ ಎಂದು ಊರಿನವರೆಲ್ಲಾ ದುಃಖಪಡುತ್ತಿದ್ದಾರೆ. ಬಲಾತ್ಕಾರದ ವಿದ್ಯಾಭ್ಯಾಸವು ರಾಜಧಾನಿಯಲ್ಲೇ ಇನ್ನೂ ನಡೆಯದೆ ಇರುವಲ್ಲಿ ಸರ್ಕಾರದ ನಿರ್ಬಂಧವು ಎಂಥಾದ್ದೋ, ಅಧಿಕಾರಿಗಳ ಕಾರ್ಯೋತ್ಸಾಹ ಎಷ್ಟುಮಟ್ಟಿನದೋ ವಿವರಿಸಲಾಗದು. ಈ ವಿದ್ಯಾಭ್ಯಾಸಕ್ಕೆ ಅವಶ್ಯವಾದ ಸ್ಕೂಲ್ ಮನೆಗಳಿನ್ನೇ ಇನ್ನೂ ಗೊತ್ತುಮಾಡಿಲ್ಲ. ಒಂದು ಮನೆಯನ್ನು 40 ರೂಪಾಯಿ ಬಾಡಿಗೆ ಗೊತ್ತುಮಾಡಿ ಒಂದು ವರುಷದ ಬಾಡಿಗೆಯನ್ನು ಮಾಲೀಕನಿಗೆ ಪಾವತಿಮಾಡಿ ಇಲ್ಲಿಗೆ ಸುಮಾರು ಆರು ತಿಂಗಳಾಗಿದೆ ಸ್ಕೂಲನ್ನು ಇನ್ನೂ ಇಡದೆ ಬೀಗ ಹಾಕಿದ್ದಾರೆ. ಇದಕ್ಕೆ ಕೊಟ್ಟ ಬಾಡಿಗೆ ನಷ್ಟವಾಗುತ್ತಾ ಇದೆ. ಈ ನಷ್ಟವನ್ನು ಕೊಡುವವರ್‍ಯಾರು? ಸರ್ಕಾರದವರು ಇದನ್ನು ವ್ಯರ್ಥ ಖರ್ಚೆಂದು ಎಣಿಸುವುದಿಲ್ಲವೇ? ಇದಕ್ಕೆ ಯಾರು ಜವಾಬ್ದಾರರು? ಸರ್ಕಾರದವರ ಉದ್ದೇಶವನ್ನು ಬೇಗನೆ ಸಾರ್ಥಕಪಡಿಸದೆ ವೃಥಾ ಪ್ರಜೆಗಳ ಹಣವನ್ನು ಖರ್ಚುಮಾಡುವ ಇಂಥಾ ಕೆಲಸಗಳು ಎಂದಿಗೆ ಕೊನೆ ಮುಟ್ಟುವವೋ ತಿಳಿಯಲಿಲ್ಲ. ರಾಜಧಾನಿಯ ನಿವಾಸಿ.

ಒಬ್ಬ ದೊಡ್ಡಮನುಷ್ಯರ ಪರಹಿತ ಪ್ರಯತ್ನ.

ಅಯ್ಯಾ,—ಶಿಡ್ಲಘಟ್ಟದ ತಾಲೂಕು ಚಿಲಕಲನೇರ್ಪು ಹೋಬಳಿ ನಂದನ ಹೊಸಹಳ್ಳಿ ಗ್ರಾಮವು ಸುಮಾರು 30 ವರುಷಗಳ ಕೆಳಗೆ ಬಹಳ ಒಳ್ಳೇ ಸ್ಥಿತಿಯಲ್ಲಿ ನಾನಾ ಜಾತಿ ಜನರಿಂದ ನಿಬಿಡೀಕೃತವಾಗಿ ಬಹಳ ಪ್ರಸಿದ್ಧಿಯಲ್ಲಿತ್ತು. ಆಚೆಗೆ ದಿನೇ ದಿನೇ ಗ್ರಾಮದಲ್ಲಿ ದುಷ್ಟರು ಪ್ರಬಲಿಸಲು ಸಭ್ಯರಾದ ಸಂಸಾರಿಗಳೆಲ್ಲಾ ಸದರಿ ಗ್ರಾಮವನ್ನು ಬಿಟ್ಟು ಗ್ರಾಮಾಂತರಗಳನ್ನು ಸೇರಿಕೊಂಡದ್ದರಿಂದ ಕಡೆಕಡೆಗೆ 8 ಬಣಜಿಗರ ಮನೆ, 6 ಕುರುಬರ ಮನೆ, 2 ಅಗಸರದು, 2 ಕುಮ್ಮಾರರದು, ಈ ಮೇರೆಗೆ ಉಳಿದಿರುವ ಗ್ರಾಮವನ್ನು ಚೀಫ್ ಶೀಬಯ್ಯನವರ ವಂಶೀಕರಾಗಿ ಸಬ್ ರಿಜಿಸ್ಟ್ರಾರ್ ಕೆಲಸದಲ್ಲಿದ್ದು ರಿಟೈರಾಗಿರುವ ಮ॥ ಎಂ. ಲಕ್ಷ್ಮೀನರಸಪ್ಪನವರು ಸ್ವಗ್ರಾಮಾಭಿಮಾನದಿಂದ ಗ್ರಾಮವನ್ನು ಅಭಿವೃದ್ಧಿಪಡಿಸಬೇಕೆಂದು ಅವರು ರಿಟೈರಾದಾರಭ್ಯ ಆಸ್ಥೆವಹಿಸಿ ಗ್ರಾಮಕ್ಕೆ ಹೋಗುತ್ತಾ, ಗ್ರಾಮಾಭಿವೃದ್ಧಿಯನ್ನು ಚಿಂತಿಸಿ ಗ್ರಾಮದಲ್ಲಿರುವ ಸಾಹುಕಾರರ್‍ಯಾರೂ ವಗೈರೆಯನ್ನು ನಾಶಪಡಿಸುತ್ತಾ ಸಾಧ್ಯವಿಲ್ಲದೆ ಹೋಗಲು, ಗ್ರಾಮದಲ್ಲಿ ಹೇರುವಾಸಿಯಾಗಿರುವ ಸಾ. ಪಟ್ಟಂ ವೆಂಕಟರಾಮಯ್ಯನವರೇ ಮೊದಲಾದವರನ್ನೊಡಂಬಡಿಸಿ ಬೇರೆ ಸ್ಥಳದಲ್ಲಿ ಹೊಸ ಮೊದಲು ಮನೆಯನ್ನು ಕಟ್ಟಿ, ಗ್ರಾಮದಲ್ಲಿರುವ ದೇವಸ್ಥಾನದಲ್ಲಿ ಉತ್ಸವಾದಿಗಳನ್ನು ಆ ಸಾಹುಕಾರರ ಸಹಾಯದಿಂದ ನಡಿಸಿದರು. ಇವರು ಸದರಿ ಗ್ರಾಮವನ್ನು ಅಭಿವೃದ್ಧಿಗೆ ತರಬೇಕೆಂದು ಪಡುತ್ತಲಿರುವ ಪ್ರಯತ್ನವನ್ನು ವಿವರಿಸಲು ಅಸಾಧ್ಯವು. ಗ್ರಾಮದಲ್ಲಿ ಇರುವವರೂ, ಸರ್ಕಾರದ ಅಧಿಕಾರಿಗಳೂ ಇವರುಗಳಿಗೆ ಸಹಾಯಕಾರಿಗಳಾದರೆ ಜೀರ್ಣವಾಗಿರುವ ಈ ಗ್ರಾಮವು ಅಭಿವೃದ್ಧಿಗೆ ಬರಲು ಸಂದೇಹವಿಲ್ಲ. ಈ ಗ್ರಾಮದ ವಿಷಯವಾಗಿ ನಮ್ಮ ಅನುಲ್ಲಾಲ್ತ್ರಿ ಮ॥ ಕುದೂರು ಶ್ರೀನಿವಾಸರಾಯರು ನಿಗಾ ಕೊಟ್ಟು ಅಭಿವೃದ್ಧಿಪಡಿಸುವರೆಂದು ನಂಬಿರುವ ಪ್ರತ್ಯಕ್ಷದರ್ಶಿ.

ಪೋಸ್ಟ್‌ಮ್ಯಾನುಗಳ ಜೀವನದ ಕಷ್ಟ.

ಅಯ್ಯಾ,—ಮೈಸೂರು ದೇಶದಲ್ಲಿ ಸ್ಕೂಲ್ ಮಾಸ್ಟರುಗಳ ಬಡ್ತಿ ವಿಚಾರವು ಉತ್ತಮಸ್ಥಿತಿಗೆ ಬಂತು. ಬಹಳ ಕಷ್ಟಪಡುತ್ತಿರುವ ಪೋಸ್ಟ್‌ಮ್ಯಾನ್‌ಗಳ ಕಷ್ಟ ವಿಚಾರಿಸುವವರೇ ಇಲ್ಲದಂತೆ ಆಗಿದೆ. ಇವರಿಗಿರುವ ಜವಾಬ್ದಾರಿಯೂ ದರೋ ಅಪರಿಮಿತವಾಗಿದೆ. ಅಲ್ಲದೆ ಒಂದು ಸಣ್ಣ ತಪ್ಪುಮಾಡಿದರೆ ಅದಕ್ಕೆ ಕೊಡುವ ಶಿಕ್ಷೆಯನ್ನು ಕೇಳಿದ ಮಾತ್ರಕ್ಕೇ ಗರ್ಭನಿರ್ಭೇದವಾಗುತ್ತದೆ. ಮತ್ತು ಒಬ್ಬ ಸಣ್ಣ ಹುಡುಗ ಒಂದು ಕಂಪ್ಲೇಂಟ್ ಮಾಡಿದರೆ ಅದೇ ದೊಡ್ಡ ಬೆಟ್ಟದಂತಾಗುವುದು. ಪದೇ ಪದೇ ಪೇಪರುಗಳಲ್ಲಿ ಪೋಸ್ಟ್‌ಮ್ಯಾನುಗಳ ಅಭಿವೃದ್ಧಿ ಎಂದು ಬಹಳ ಜನಗಳು ಬಾತ್ಮಿ ಕೊಡುತ್ತಲೇ ಇರುವರು. ಇದಕ್ಕೆ ಅವರಿಗಿರುವ ಅಲ್ಪ ಸಂಬಳವೇ ಕಾರಣವೆಂದು ತೋರುತ್ತದೆ. ಒಬ್ಬ ವಿಲೇಜ್ ಪೋಸ್ಟ್‌ಮ್ಯಾನ್‌ಗೆ 40ರ ಲಾಗಾಯಿತು 100ರ ವರೆಗೆ ಗ್ರಾಮಗಳನ್ನು ಕೊಡುತ್ತಾರೆ. ಅವನ್ನೆಲ್ಲಾ ಎರಡು ದಿನದಲ್ಲಿ ಸುತ್ತಿಕೊಂಡು 3 ನೇ ದಿನ ಆಫೀಸಿಗೆ ಸೇರಬೇಕಾದ ನಿರ್ಬಂಧವಿದೆ ಮತ್ತು ಬ್ರಾಂಚ್ ಆಫೀಸುಗಳಲ್ಲಿ ಪೋಸ್ಟ್ ಮಾರ್ಕ್ ಎಂದು ಕೊಟ್ಟಿರುತ್ತಾರೆ ಆತನಿಗೆ ಸುಮಾರು 40-50 ಗ್ರಾಮಗಳನ್ನು ಸೇರಿಸಿರುತ್ತಾರೆ. ಟಪಾಲನ್ನೂ ಕೆಲಸಮಾಡಿ, ಪ್ರತಿನಿತ್ಯವೆಲ್ಲೂ ಹಳ್ಳಿಗಳನ್ನು ಸುತ್ತಬೇಕಾದರೆ ಎಷ್ಟರಮಟ್ಟಿಗೆ ಕಷ್ಟಪಡಬಹುದೋ ಯೋಚಿಸಿದರೆ ಗೊತ್ತಾಗುತ್ತದೆ. ಆ ಕಷ್ಟಕ್ಕೆ ತಕ್ಕಂತೆ 12 ರೂಪಾಯಿ ಆದರೂ ಸಂಬಳ ಕೊಡುವಂತೆ ಈ ಬಡ ನೌಕರರುಗಳ ವಿಷಯದಲ್ಲಿ ಮೇಲಿನವರು ಗಮನಕ್ಕೆ ತಂದುಕೊಂಡಾರೆಂದು ನಂಬುತ್ತೇನೆ.

ಎಂ. ಡಿ. ವೆಂಕಟನರಸಪ್ಪ, ಮಂಚೇನಹಳ್ಳಿ.

[ಈ ನೌಕರರಿಗೆ ಈಗ ಸಲ್ಲುವ ಸಂಬಳವು ಅವರ ಜೀವನಕ್ಕೆ ಸಾಲದು. ಅವರು ಪೋಸ್ಟ್ ಮಾಸ್ಟರ್ ಜನರಲ್ ರವರಿಗೂ, ಆಯಾ ಡಿವಿಜನ್ ಸೂಪರಿಂಟೆಂಡೆಂಟರುಗಳಿಗೂ ಅರ್ಜಿ ಬರೆದುಕೊಂಡರೆ ಅವರು ಕೃಪೆಮಾಡಿಸುವರು.—ಎಡಿ.]

ಸೂಳೆಕೆರೆ ಕೆಳಗೆ ರೈತರ ಕಷ್ಟ.

ಅಯ್ಯಾ,—ಶಿವಮೊಗ್ಗಾ ಡಿಸ್ಟ್ರಿಕ್ಟ್ ಚನ್ನಗಿರಿ ತಾಲ್ಲೋಕಿನಲ್ಲಿರುವ ಸೂಳೆಕೆರೆಯು ನಮ್ಮ ಮೈಸೂರು ಸೀಮೆಯಲ್ಲಿ ಒಂದನೆಯದಾಗಿದೆ. ನೀರು ಯಥಾಗಲೂ ವಿಶೇಷವಾಗಿರುತ್ತೆ. ಆದರೂ ನಾಯಿ ನಾಲೆಯಲ್ಲಿನ ಪಾಲಿ ನಾಶವಾಯ್ತು. ಇದಕ್ಕೆ ಸಂಬಂಧಪಟ್ಟ ಅಚ್ಚುಕಟ್ಟೆ ವಗೈರೆ ಕೆಲಸ ರೈತರ ಸಹಾಯದಿಂದ ರೆವಿನ್ಯೂ ಇಲಾಖೆಯವರು ನಿರ್ವಹಿಸುವ ಪದ್ಧತಿ ಇದ್ದದ್ದು ರೈತರಲ್ಲಿ ಐಕಮತ್ಯವಿಲ್ಲದ್ದರಿಂದಲೂ, ರೆವಿನ್ಯೂ ಇಲಾಖೆಯವರ ಅಲಕ್ಷ್ಯದಿಂದಲೂ ಮುಸ್ಸಿ ಫಸಲು ಬೆಳೆದು, ತರಿ ಕಂದಾಯ ಕೊಟ್ಟು ಈ ಸೂಳೆಕೆರೆ ಹಿಂದಿನ ಗ್ರಾಮಗಳ ರೈತರು ದಿವಾಳಿಯಾಗಿರುವದನ್ನು ನಮ್ಮ ಘನ ಸರ್ಕಾರದವರು ತಿಳಿದು, ಇಲ್ಲಿಗೆ ಮೂರು ವರುಷಗಳ ಹಿಂದೆ ಇರ್‌ಜನಿಯರ್ ಇಲಾಖೆಗೆ ಸೇರಿಸಿ ಅಚ್ಚುಕಟ್ಟು ದುರಸ್ತು ಮಾಡಿಸಿಕೊಡುವದಕ್ಕೋಸ್ಕರ ವರ್ಷ ವರ್ಷ ಎಕರೆ ಒಂದಕ್ಕೆ ಎಂಟಾಣೆಯಂತೆ ಕೆಂಟ್ರಿಬ್ಯೂಷನ್ ಸಹ ವಸೂಲ್ ಕೊಟ್ಟು ಸಮ್ಮ ಸಮ್ಮಗಳ ದುರದೃಷ್ಟದಿಂದ ಎಷ್ಟೋ ನೀರೂ ಉಪಯೋಗಕ್ಕೆ ಬಾರದೆ ಹೋದ ಪ್ರಯುಕ್ತ ಬಾಕಿ ಇರುವ ಕಂದಾಯ ರಿಮಿಷನ್ ಆಗಬೇಕೆಂತಲೂ, ಅಚ್ಚುಕಟ್ಟು ದುರಸ್ತು ಆಗುವ ವರವಿಗೂ ಅರ್ಧ ಕಂದಾಯ ವಸೂಲು ಆಗಬೇಕೆಂತಲೂ, ಇದಕ್ಕಾಗಿ ಅರೇಹಳ್ಳಿ ಶ್ರೀಆಂಜನೇಯ ದೇವಸ್ಥಾನದಲ್ಲಿ ತಾ. 9 ರಲ್ಲಿ ಆ ಜಮಾನು ವ್ಯವಸಾಯ ಸಂಘ ಏರ್ಪಡಿಸಿ, ಅಲ್ಲಿ ಸೇರಿದ್ದ ಕಾರಿಗನೂರು, ಕಲ್ಲಹಳ್ಳಿ, ಹೊಸೂರು, ಬೆಳಲ್ಗೆರೆ, ಇನ್ನು ಕೆಲವು ಗ್ರಾಮಗಳ ಮುಖಂಡರು ಸಭೆ ಸೇರಿ ಮೇಲ್ಕಂಡ ವಿಷಯವನ್ನು ಚರ್ಚಿಸಿ ನಮ್ಮ ಮಹಬೂಬ್ ದಿವಾನ್ ಬಹದ್ದೂರ್ ರವರಿಗೂ, ಶಿವಮೊಗ್ಗಾ ಡೆಪ್ಯುಟಿ ಕಮಿಷನರ್ ರವರಿಗೂ ಅರ್ಜಿ ಗುಜರಾಯಿಸಿಕೊಂಡದ್ದಲ್ಲದೆ ನಮ್ಮ ಡಿಸ್ಟ್ರಿಕ್ಟ್ ನ್ಯಾಯವಿಧಾಯಕ ಸಭೆಯ ಮೆಂಬರುಗಳಾದ ಮ॥ ಕೆ. ವೆಂಕಟನಾರಾಯಣರಾವ್ ಮತ್ತು ಮ॥ ಬಾಲಕೃಷ್ಣರಾವ್ ಇವರಿಗೂ ಈ ಜನಗಳಿಗೆ ಉಂಟಾಗಿರುವ ಅನ್ಯಾಯವನ್ನು ಅರಿಕೆ ಮಾಡಿಕೊಂಡಿರುತ್ತೇವೆ. ಈಗ ಇಂಥಾ ನವನಾಗರಿಕ ಕಾಲದಲ್ಲಿ ಸಂಪದಭಿವೃದ್ಧಿ ಮತ್ತು ನ್ಯಾಯವಿಧಾಯಕ ಕೆಲಸಗಳು ಲವಲವಿಕೆಯಿಂದ ನಡೆಯುವಲ್ಲಿ ನಮ್ಮ ವಿಷಯ ಮಾತ್ರ ಸರ್ಕಾರದವರ ಅವಗಾಹನೆಗೆ ಬಾರದಿರುವದು ಆಶ್ಚರ್ಯವಾಗಿದೆ. ನಮ್ಮ ಸಂಸ್ಥಾನದ ಮೆಂಬರುಗಳಾದರೂ ಪ್ರಜೆಗಳಿಗುಂಟಾಗಿರುವ ಕಷ್ಟ ನಷ್ಟಗಳನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ಸರಿಪಡಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ. ಮತ್ತು ನಮ್ಮ ದಯಾಳು ಸರ್ಕಾರದವರು ಘನ ಚಿತ್ತಕ್ಕೆ ತಂದು ಶೀಘ್ರವಾಗಿ ಈ ಬಡ ರೈತರಿಗೆ ಸೌಲಭ್ಯವನ್ನು ಕಲ್ಪಿಸಿಕೊಡುತ್ತಾರೆಂದು ನಂಬಿ ಹಾರೈಸುವ ಪ್ರಜಾ ಹಿತಚಿಂತಕ.

ಸಬ್ ಅ॥ ಸರ್ಜನರು ಅಂದರೆ ಅಲಕ್ಷ್ಯ.

ಅಯ್ಯಾ,—ಇವರಿಗೆ ಸಂಬಳ ಬಡ್ತಿ ಆಗಬೇಕೆಂಬುದಾಗಿ ರಿಪ್ರೆಸೆಂಟೆಟಿವ್ ಅಸೆಂಬ್ಲಿಯಲ್ಲಾಗಲೀ, ನ್ಯಾಯವಿಧಾಯಕ ಸಭೆಯಲ್ಲಾಗಲೀ ಯಾರೊಬ್ಬರೂ ಇಷ್ಟರ ವರೆಗೆ ಮಾತಾಡಿದ್ದೇ ಇಲ್ಲ. ಈ ವರುಷ ಪುಣ್ಯಾತ್ಮರು ಒಬ್ಬರು ಇವರ ಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಊರ್ಜಿತಕ್ಕೆ ತರುವ ಎಂದು ಕಳೆದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಪ್ರಸ್ತಾಪಿಸಿದಾಗ ಈ ಸಬ್ಜೆಕ್ಟ್ ರಿಪ್ರೆಸೆಂಟೆಟಿವ್ ಅಸೆಂಬ್ಲಿಯಲ್ಲಿ ಇರುವಷ್ಟು ಯೋಗ್ಯವಾದದ್ದಲ್ಲ. ಸಬ್ ಅ॥ ಸರ್ಜನರಿಗೆ 30 ರೂ —60 ರೂ. ಕೊಡುತ್ತಾ ಇದ್ದಾರೆ ಎಂಬದಾಗಿ ಒಬ್ಬ ಆಫೀಸರು ಹೇಳಿದರು. ಈ ಆಫೀಸರು ಹೇಳಿದ ನಂತರ ಬಾಕಿ ಮೆಂಬರುಗಳು ಅವರ ಮತವನ್ನು ಅನುಸರಿಸಿದರು. ಯಾಕೆಂದರೆ ಈ ಮೆಂಬರುಗಳ ಸ್ಥಿತಿಗತಿಗಳನ್ನು ಎಲ್ಲರೂ ಬಲ್ಲರಲ್ಲವೇ? ಅವರು ಕೊಡುವ ಕಂದಾಯವೇ ಅವರಿಗೆ ಕ್ವಾಲಿಫಿಕೇಷನ್ ಹೊರತು ಅವರ ವಿದ್ಯವಲ್ಲ. ಒಬ್ಬರು ಆಫೀಸರು ಹೇಳಿದ್ದಕ್ಕೆ ವಿರೋಧವಾಗಿ ಹೋಗುವರೆ ಭಯಪಡುವಂಥಾವರು ರಿಪ್ರೆಸೆಂಟೆಟಿವ್ ಅಸೆಂಬ್ಲಿಗೆ ಯೋಗ್ಯವಾದ ಮೆಂಬರುಗಳೇ ವಾಚಕರೇ ಊಹಿಸಲಿ. ಅಗ್ಗೆ ಯಾರಾದರೂ ಒಬ್ಬ ಮೆಂಬರು ಬ್ರಿಟಿಷ್ ಇಂಡಿಯಾದಲ್ಲಿ ಡಿಸ್ಟ್ರಿಕ್ಟ್ ಸರ್ಜನರಿಗೆ ರೂ. 500-1,000, ಡೆಪ್ಯುಟಿ ಕಮಿಷನರಿಗೆ ರೂ. 1,000-1,600, ಹೀಗೆಯೂ ಇತರ ಡಿಸ್ಟ್ರಿಕ್ಟ್ ಆಫೀಸರುಗಳಿಗೂ ಒಳ್ಳೇ ಸಂಬಳ ಕೊಡುತ್ತಾ ಇದ್ದಾರೆ! ಈ ಮೈಸೂರು ಸಂಸ್ಥಾನದಲ್ಲಿ ಡಿಸ್ಟ್ರಿಕ್ಟ್ ಸರ್ಜನರಿಗೆ ರೂ. 200, ಡೆಪ್ಯುಟಿ ಕಮಿಷನರಿಗೆ ರೂ 800 ಕೊಡುವದು ಅಸಂಗತ. ಇವರ ಸಂಬಳ ಬಡ್ತಿ ಆಗಬೇಕು ಎಂದು ಹೇಳಿದ್ದರೆ ಎಲ್ಲರೂ ಅದಕ್ಕೆ ಅನುಮೋದಿಸಿ ಬಹುಶಾ ಈ ವರುಷ ರಿಪ್ರೆಸೆಂಟೆಟಿವ್ ಅಸೆಂಬ್ಲಿಯಲ್ಲಿ ಚರ್ಚಿಸುವರೆ ಸಬ್ಜೆಕ್ಟ್ ಇಟ್ಟು ಕೇಳುತ್ತಿದ್ದರು. ಡೆಪ್ಯುಟಿ ಕಮಿಷನರುಗಳು ಆರ್ಟ್ಸ್ ಗ್ರಾಜುಯೇಟ್ಸುಗಳು; ಇವರು ಮೆಟ್ರಿಕ್ಯುಲೇಷನ್ ಪಾಸಾಗಿ ನಾಲ್ಕು ವರುಷ ಆರ್ಟ್ಸ್ ಕಾಲೇಜಿನಲ್ಲಿ ಓದಿ ಪಾಸಾಗಿದ್ದರೂ ಸಹಾ ಇವರುಗಳಿಗೆ 150-800-1,000-1,500 ರೂ. ಆಗಬಹುದು. ಈ ಸಬ್ ಅ॥ ಸರ್ಜನರುಗಳು ಪ್ರೊಫೆಷನಲ್ ಗ್ರಾಜುಯೇಟುಗಳು. ಮೆಟ್ರಿಕ್ ಪಾಸಾಗಿ ನಾಲ್ಕು ವರ್ಷ ಮೆಡಿಕಲ್ ಕಾಲೇಜಿನಲ್ಲಿ ಓದಿ ಪಾಸಾಗಿದ್ದರೂ ಇವರಿಗೆ 30-60 ರೂಪಾಯಿ ಸಾಕು! ಇಂಥಾ ಸಂಗತಿಗಳು ನಡೆಯುವದು ನೋಡಿದರೆ ಪ್ರತಿ ಒಬ್ಬನಿಗೂ ಬಹಳ ಶೋಚನೀಯವಾಗುತ್ತದೆ. ಇದನ್ನು ನಮ್ಮ ದಿವಾನ್ ಸಾಹೇಬರವರು ಖುದ್ದು ಯೋಚಿಸಬೇಕಾಗಿ ಕೋರುತ್ತೇನೆ. ಎಚ್. ಜೋ. ಟೀ.

ಅಂಚೆಯವರ ಮೇಲೆ ಆಕ್ಷೇಪಣೆ.

ಅಯ್ಯಾ,—ತಮ್ಮ ಪತ್ರಿಕೆಯ 416 ನೇ ನಂಬರು ಚಂದಾದಾರ ಕರ್ ಕಾನಹಳ್ಳಿ ತಾಲ್ಲೂಕು ಹಾರೋಹಳ್ಳಿ ಹೋಬಳಿ ಗಾಡಿಹಾಳ್ಯದಲ್ಲಿ ಇರುವ ತೋಂಬಾಳಯ್ಯನು ಮಾಡುವ ಅರಿಕೆ ಏನಂದರೆ—ನಾನು ತಮ್ಮ ಪತ್ರಿಕೆಯ ಚಂದಾದಾರನಾದ ಕಾಲ ಮೊದಲ್ಗೊಂಡು ಈ ತಹಲ್ ವರಿವಿಗೂ ಪತ್ರಿಕೆಗಳು ಸಕಾಲಕ್ಕೆ ಸರಿಯಾಗಿ ಪಾವತಿ ಆಗದೆಯೂ, ಆಗಾಗ್ಗೆ ಕೆಲವು ವಾರಗಳ ಪತ್ರಿಕೆಗಳು ಶುದ್ಧ ನಾಸ್ತಿವಾಗಿ ಪಾವತಿ ಆಗದೆಯೂ ಇರುತ್ತೆ. ಹೀಗೆಯೇ ಕಳೆದ ವಾರ ಆಗಸ್ಟು ತಿಂಗಳಿನ 5 ನೇ ತಾ. ಪತ್ರಿಕೆಯು ನನಗೆ ತಲಪಲೇ ಇಲ್ಲ. ಈ ವಿಷಯವಾಗಿ ಅನೇಕ ದಫಾ ತಮ್ಮಲ್ಲಿ ಅರಿಕೆ ಮಾಡಿಕೊಂಡಾಗ್ಯೂ ಯಾವ ಪ್ರಯೋಜನವೂ ಕಂಡುಬರಲಿಲ್ಲ. ಮತ್ತು ಕೆಲವು ಸಮಯಗಳಲ್ಲಿ ಪತ್ರಿಕೆಯು ಕೈಗೆ ಬಂದು ಸೇರಿದಾಗ್ಯೂ ಕಾಲ ಮಿತಿ ಸೇರುತ್ತೆಯಲ್ಲದೆ ಸ್ಟಾಂಪು ಒಡೆದು ಇರುತ್ತೆ. ಪೋಸ್ಟ್ ಪೀವನ್‌ನ ಮಿತ್ರರೆಲ್ಲಾ ಓದಿಕೊಂಡು ಕಡೆಯಲ್ಲಿ ನನಗೆ ತಲುಪಿಸುತ್ತಾರೆ. ಬಂದು ಸೇರುವಾಗ್ಗೆ ಸ್ಟಾಂಪು ಇಲ್ಲ. ನನ್ನ ವಿಳಾಸವು ಇರುವದಿಲ್ಲ. ನಾನು ಮುಂದಾಗಿ ಚಂದಾ ಮೊಬಲಗು ತಮ್ಮ ಪತ್ರಿಕೆಗಾಗಿ ಕಟ್ಟಿ ಅದನ್ನು ಓದಿ ಸಂತೋಷಿಸಲಿಕ್ಕೆ ಪ್ರಾಪ್ತಿ ಇಲ್ಲದೆ ಇರುತ್ತೆ. ನಾನು ಕೆಲವು ಸಮಯಗಳಲ್ಲಿ ಪೋಸ್ಟ್ ಪೀವನ್‌ನನ್ನು ಪತ್ರಿಕೆಯ ವಿಷಯಗಳಲ್ಲಿ ಪ್ರಶ್ನೆ ಮಾಡಲು ಪತ್ರಿಕೆ ಬರಲೇ ಇಲ್ಲ ಎಂದು ಹೇಳುತ್ತಾನೆ. ಆದ್ದರಿಂದ ನಾನು ಯಾರನ್ನು ಆಕ್ಷೇಪಿಸಬೇಕಾಗಿರುತ್ತೋ ತಿಳಿಯಕೂಡದ್ದಾಗಿದೆ. ಆದಕಾರಣ ಇನ್ನು ಮುಂದಾದರೂ ಈ ವಿಷಯದಲ್ಲಿ ತಾವು ಕ್ರಮಪಡಿಸುವಿರೆಂದು ನಂಬುವ

ತೋಂಬಾಳಯ್ಯ.

[ಪೋಸ್ಟ್ ಇಲಾಖೆಯವರ ಮೇಲೆ ನಮ್ಮ ಚಂದಾದಾರರು ಮಾಡಿರುವ ಈ ಆಕ್ಷೇಪಣೆಯನ್ನು ಪ್ರಕಟಿಸಲು ನಮಗೆ ದುಃಖವಾಗುವುದು ಗ್ರಾಮಾಂತರಗಳ ಪೋಸ್ಟ್ ಡಿಲಿವರಿಯು ಅಕ್ರಮವಾಗಿಯೂ ಸುಸ್ತಿಯಾಗಿಯೂ ಬೇಕಾಬಿಟ್ಟಿಯಾಗಿಯೂ ನಡೆಯುತ್ತದೆ ಎನ್ನುವುದಕ್ಕೆ ಇದೊಂದು ದೃಷ್ಟಾಂತವಾಗಿದೆ. ಪತ್ರಿಕೆಗಳು ಹೆಚ್ಚಾಗಿ ಪ್ರಚಾರವಾಗದೆ ಇರುವುದಕ್ಕೆ ಪೋಸ್ಟ್ ಡಿಲಿವರಿಯು ಗ್ರಾಮಾಂತರಗಳಲ್ಲಿ ತೃಪ್ತಿಕರವಾಗಿ ನಡೆಯದೇ ಇರುವುದು ಪ್ರಬಲವಾದ ಕಾರಣ. ವರ್ತಮಾನಗಳನ್ನು ಓದಬೇಕೆಂದು ಕುತೂಹಲಪಡುವ ಗ್ರಾಮಾಂತರಗಳ ಪ್ರಜೆಗಳಿಗೆ ಇದೊಂದು ದೊಡ್ಡ ಕೊರತೆಯಾಗಿದೆ. ಜೀವನಕ್ಕೆ ಸಾಲದಷ್ಟು ಸಂಬಳ ಕೊಟ್ಟು 20-30-40 ಗ್ರಾಮಗಳನ್ನು ಸುತ್ತಿ ಬರಬೇಕೆಂದು ನಿರ್ಬಂಧಪಡಿಸಿದರೆ ಆ ಅಲ್ಪ ನೌಕರರು ಬೇಕಾಬಿಟ್ಟಿಯಾಗಿ ಕೆಲಸ ಮಾಡುವುದೇನೂ ಆಶ್ಚರ್ಯವಲ್ಲ. ನಾವು ನಮ್ಮ ಆಫೀಸಿನಲ್ಲೇ ಪೋಸ್ಟ್ ಆಫೀಸನ್ನು ಇರಿಸಿಕೊಂಡು ಚಂದಾದಾರರಿಗೆಲ್ಲಾ ಪತ್ರಿಕೆಗಳನ್ನು ಕ್ರಮವಾಗಿ ಕಳುಹಿಸುತ್ತಿದ್ದರೂ ಅವು ಗ್ರಾಮಾಂತರಗಳಲ್ಲಿ ಎದುರುನೋಡುತ್ತಿರುವ ಚಂದಾದಾರರಿಗೆ ಅಲ್ಪ ನೌಕರರ ಅಶ್ರದ್ಧೆಯಿಂದಲೂ ಸೋಮಾರಿತನದಿಂದಲೂ ಸಕಾಲಕ್ಕೆ ತಲುಪದೆ ನಮಗೆ ಈ ಮೂಲಕ ನಾನಾ ವಿಧದಲ್ಲಿ ನಷ್ಟವಾಗುತ್ತಿದೆ. ಪೋಸ್ಟ್ ಇಲಾಖೆಯವರು ದರ್ಯಾಪ್ತು ಇದನ್ನೆಲ್ಲಾ ಕ್ರಮಪಡಿಸುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.—ಎಡಿ.]

ಬ್ರಾಹ್ಮಣರೂ ವ್ಯವಸಾಯ ವೃತ್ತಿಯೂ.

ಅಯ್ಯಾ,—ಆತ್ಮಾವಲಂಬಿಗಳಾಗಿರದೆ ನೀಚಕರ್ಮವನ್ನು ಮಾಡುತ್ತಲಿರುವದರಿಂದಲೇ ಅಲ್ಲವೇ ನೀಚಕರ್ಮವನ್ನು ತೊರೆದು ಆತ್ಮಾವಲಂಬಿಗಳಾಗಿರಬೇಕೆಂದು ಈ ಪ್ರಾಂತ್ಯದ ಹಲವು ಮಂದಿ ಬಡಬ್ರಾಹ್ಮಣರು ಭೂವ್ಯವಸಾಯ ಮಾಡಲು ಶ್ರೀ ಶೃಂಗೇರಿ ಮಠದಲ್ಲಿ ಶಾಸ್ತ್ರಾಧಾರದ ಮೇಲೆ ಅಪ್ಪಣೆಯನ್ನು ಕೊಡಬೇಕೆಂದು ಪ್ರಾರ್ಥಿಸಿದರು? ಅಂದರೆ, ಶ್ರೀ ಮಠದವರು ಶಾಸ್ತ್ರಾಧಾರದ ಮೇಲೆ ಆ ರೀತಿಯಾಗಿ ಬ್ರಾಹ್ಮಣರು ವ್ಯವಸಾಯ ಮಾಡಬಹುದು ಅಂದರೆ ನೇಗಿಲು ಹಿಡಿದು ಉಳಬಹುದು ಎಂದು ಅಪ್ಪಣೆ ಕೊಡಿಸಿದರು. ಅದನ್ನು ಅನುಸರಿಸಿ ಬಹುಮಂದಿ ಬಡಬ್ರಾಹ್ಮಣರು ಬೇಸಾಯವನ್ನು ಉತ್ಸಾಹದಿಂದ ಮಾಡತೊಡಗಿದರು. ಈ ಸೀಮೆಯ ಹಲವು ಮಂದಿ ಧನಿಕರು ಇದಕ್ಕೆ ಪ್ರತಿಭಟಿಸತೊಡಗಿದಾರೆ ಅವರು ಈ ಬಡವರು ಉತ್ಸಾಹದಿಂದ ದೇಹಶ್ರಮಪಟ್ಟು ಕೆಲಸವನ್ನು ಮಾಡಿ ಉಳಿದನ್ನಾಂದದ್ದನ್ನು ಕಂಡು ಸಹಿಸಲಾರದೆ ತೊಂದರೆಯನ್ನುಂಟುಮಾಡುತ್ತಿದ್ದಾರೆ ಈ ರೀತಿ ವ್ಯವಸಾಯಮಾಡತಕ್ಕವರಿಗೆ ಬಹಿಷ್ಕಾರವನ್ನು ಕೊಡಿಸಿ ಸಂಘದಿಂದ ಹೊರಗೆ ಹಾಕಲು ಗುಂಪುಗೂಡಿರುತ್ತಿದ್ದಾರೆ ಇದನ್ನು ನೋಡಿ ಬಹುಮಂದಿ ಬಡವರು ಉಪಕ್ರಮಿಸಿದ ಕೆಲಸದಿಂದ ಹಿಂಜರಿಯುತ್ತಿರುವಂತೆ ತೋರುತ್ತಿದೆ. ಇದು ಬಹಳ ಶೋಚನೀಯವಾದ ಸಂಗತಿ. ನಾವು ನಮ್ಮ ಬಡವರಾದ, ವ್ಯವಸಾಯ ಮಾಡತಕ್ಕ, ಆತ್ಮಾವಲಂಬಿಗಳಾಗಲು ಮುಂದುವರಿಯುತ್ತಿರುವ ನಮ್ಮ ಸಹೋದರರಿಗೆ ಇಷ್ಟು ಮಾತ್ರ ಹೇಳುವೆವು. ನ್ಯಾಯವಾದ ಕರ್ತವ್ಯವನ್ನು ಮಾಡಲು ಹಿಂಜರಿಯುವುದು ಯುಕ್ತವಲ್ಲ ದುರ್ಜನರ ಬಾಧೆಯು ಪದೇ ಪದೇ ಬರುತ್ತಿದೆ ಇದನ್ನು ಲಕ್ಷ್ಯಕ್ಕೆ ತಾರದೆ ಪ್ರಯತ್ನಪಟ್ಟು ಕಾರ್ಯವನ್ನು ಸಾಧಿಸಿ ಆತ್ಮಾವಲಂಬಿಗಳಾಗಬೇಕು. ಆಗ ಮದಾಂಧರಾದ ಧನಿಕರು ಬಡವರನ್ನು ಪೀಡಿಸುವದನ್ನು ತೊರೆದು ಹಿಂಜರಿಯುವರು. ಹಾಗಿಲ್ಲದಿದ್ದರೆ ನಮ್ಮ ದೇಶವು ಉತ್ತಮಸ್ಥಿತಿಗೆ ಬರಲಾರದು. ಇದನ್ನು ಪ್ರತಿಭಟಿಸುತ್ತಿರುವ ಧನಿಕರನ್ನು ಕುರಿತು ನಾವು ವಿನಯದಿಂದ ವಿಜ್ಞಾಪಿಸುವದೇನೆಂದರೆ—ಸಹೋದರರೇ, ವಾಣಿಜ್ಯವೂ ವ್ಯವಸಾಯವೂ ಸಮಾನವಾದ ವೃತ್ತಿಗಳೆಂದು ಆರ್ಯಧರ್ಮಶಾಸ್ತ್ರಗಳು ಸಾರುತ್ತಿರುವವು. ಹೀಗಿರುವಾಗ ವಾಣಿಜ್ಯವನ್ನು ಮುಕ್ತಕಂಠದಿಂದ ಒಪ್ಪಿಕೊಳ್ಳುವ ನೀವು ವ್ಯವಸಾಯಮಾಡಲು ಪ್ರತಿಭಟಿಸುವದೇಕೆ? ಅದರಲ್ಲಿರುವ ದೋಷವೇನು? ಬಡವರಾದ ನಿಮ್ಮ ಸಹೋದರರ ಮೇಲೆ ನಿಮಗಿರುವ ಅಸೂಯೆ, ತಿರಸ್ಕಾರ ಈ ಕಾರಣಗಳಿಂದಲ್ಲದೆ ಬೇರೆ ಶಾಸ್ತ್ರಾಧಾರದ ಮೇಲೆಯಾಗಲಿ, ಕಾಲದೇಶಾನುಗುಣವಾಗಿಯಾಗಲಿ, ಇಲ್ಲವೇ ರಾಜತಂತ್ರದ ಮೇಲೆಯಾಗಲಿ ಬ್ರಾಹ್ಮಣರು ವ್ಯವಸಾಯ ಮಾಡಕೂಡದೆಂದು ಸ್ಥಾಪಿಸಬಲ್ಲಿರೋ? ಮಠಾಚಾರ್ಯರಾದ ಶ್ರೀ ಜಗದ್ಗುರು ಸ್ವಾಮಿಗಳವರ ಅಪ್ಪಣೆಯ ಬಲವತ್ತರವಾದ ಸಹಾಯವಿರುವ ಬಡ ಬ್ರಾಹ್ಮಣರನ್ನು ಬಹಿಷ್ಕೃತರನ್ನು ಮಾಡಲು ನೀವು ಮುಂದಾಗಬಹುದೋ? ಇಲ್ಲವೇ ಶ್ರೀ ಸಂಸ್ಥಾನದವರ ಅಪ್ಪಣೆಯು ಶಾಸ್ತ್ರೀಯವಲ್ಲವೆಂದು ಹೇಳಬಲ್ಲಿರೋ? ಬಡ ಸಹೋದರರ ಹಾನಿಯನ್ನುಂಟುಮಾಡಲು ಇಷ್ಟು ಸಾಹಸಪಡುವುದು ನಿಮಗೆ ಯುಕ್ತವಲ್ಲವೆಂದು ಮತ್ತೆ ಹೇಳುವೆವು. ಬಡ ಬ್ರಾಹ್ಮಣ ಪಕ್ಷಪಾತಿ.

ಪಂಚಮರ ಗುಣ ಮತ್ತು ವಿದ್ಯೆ.

ಅಯ್ಯಾ,—ನಮ್ಮ ದೇಶದಲ್ಲಿ ಪಂಚಮರೆಂಬ ಜಾತಿಯವರು ಎಲ್ಲಾ ಗ್ರಾಮಗಳಲ್ಲಿಯೂ ಇದ್ದಾರೆ. ಇವರಾದರೋ ಎಲ್ಲಾ ಜನಾಂಗದವರಿಂದಲೂ ತಳ್ಳಲ್ಪಟ್ಟು ಊರ ಹೊರಗೆ ದೂರವಾಗಿ ಮನೆಮಾರಗಳನ್ನು ಕಟ್ಟಿಕೊಂಡು ಆರಂಬ ಕಸಬಿನಿಂದಲೂ, ಕೈಗಾರಿಕೆ ಮೊದಲಾದ ಕೆಲಸಗಳಿಂದಲೂ ಜೀವನ ಮಾಡುತ್ತಾರೆ. ಹೀಗೆ ತಳ್ಳಲ್ಪಡುವುದಕ್ಕೆ ಆದಿಯಿಂದಲೂ ನಡೆದುಬಂದಿರುವ ಇವರ ಅನಾಚಾರ ಕೃತ್ಯಗಳೇ ಕಾರಣಗಳಾಗಿವೆ. ಇವರಲ್ಲಿ ಅನೇಕರು ಮದ್ಯವೆಂಬ ಕೆಟ್ಟ ಪದಾರ್ಥವನ್ನು ಸೇವಿಸಿ ಮತ್ತೇರಿ ಮೈ ಮೇಲೆ ಜ್ಞಾನವಿಲ್ಲದೆ ಸ್ವೇಚ್ಛೆಯಾಗಿ ತಿರುಗುತ್ತಾರೆ. ಇವರು ಮೊದಲೇ ನೀಚರು, ಅಲ್ಲದೆ ಮದ್ಯವೆಂಬ ದುಷ್ಟ ರಕ್ಕಸನನ್ನು ಸ್ನೇಹಿಸುತ್ತಾರೆ. ಅವರು ಲೇಶಮಾತ್ರವೂ ಶರೀರದ ಮೇಲೆ ಅಂಗೀ ಜಡದೆ ಕಾಡು ಮೃಗಗಳು ಕಡಿದಾಡಿ ಸೋತು ಬೀಳುವ ಹಾಗೆ ಮೈಮುರಿಯ ಪಟ್ಟು ತಿನ್ನುವುದಲ್ಲದೆ ತಮ್ಮ ಆತುಮಾಲನ್ನು ನ್ಯಾಯಸ್ಥಾನಕ್ಕೆ ತಿಳಿಸಲು ಅವರು ಇವರ ನೀಚಸ್ವಭಾವವನ್ನು ತಿಳಿದು ಜುಲ್ಮಾನೆ ವಿಧಿಸುತ್ತಾರೆ. ಇದೂ ಅಲ್ಲದೆ ಗೋಮಾಂಸ ಮುಂತಾದ ಸತ್ತ ಪ್ರಾಣಿಗಳನ್ನು ರಣಹದ್ದುಗಳು ತಿಂದು ತೇಗುವಂತೆ ಅದು ಹೇಗಿದ್ದರೂ ವಿಮರ್ಶೆಯಿಲ್ಲದೆ ತಿಂದು ಅಜೀರ್ಣ ಮುಂತಾದ ರೋಗಗಳನ್ನು ಬರಮಾಡಿಕೊಳ್ಳುತ್ತಾರೆ. [redacted]ಭಯ, ಗುಣ, ಮರ್ಯಾದೆ, ಭಕ್ತಿ ಯಾವುದೂ ತೋರುವುದಿಲ್ಲ. ಇಷ್ಟೆಲ್ಲಾ ಆಗುವುದಕ್ಕೆ ಅವರಲ್ಲಿ ಅರಕ್ಕ ಅವಿದ್ಯೆಯೇ ಮುಖ್ಯಕಾರಣ. ಇದನ್ನೆಲ್ಲಾ ನೋಡಿ ದಯಾಳು ಸರ್ಕಾರದವರು ಅವರ ಮೌಢ್ಯವನ್ನು ಹೋಗಲಾಡಿಸುವುದಕ್ಕೋಸ್ಕರ ಪ್ರತಿ ಗ್ರಾಮಕ್ಕೂ ಸ್ಕೂಲನ್ನು ಕೊಟ್ಟು ವಿದ್ಯೆಯ ಮಾರ್ಗದಿಂದ ಜ್ಞಾನವನ್ನು ಅರಿತು ಹೊರಗಣ ಪ್ರಪಂಚವನ್ನು ಕಂಡುಕೊಂಡು ಬುದ್ಧಿವಂತರೆಂದು ಪ್ರೋತ್ಸಾಹಗೊಳಿಸಿ ಪಂಚಮರಲ್ಲಿ ವಿದ್ಯೆಯನ್ನು ಪ್ರಕಾಶಪಡಿಸಿರುತ್ತಾರೆ. ಆದರೂ ತಾನೆ ಏನು? “ಹೊಲೆಯವನ ಮನೆಗೆ ಹೊಸ ಭತ್ತ ಬಂದ ಹಾಗೆ” ಎಂಬ ಗಾದೆಯಂತೆ ಎಲ್ಲರೂ ತಮ್ಮ ತಮ್ಮ ಹುಡುಗರು ಹುಡುಗಿಯರನ್ನು ಒಬ್ಬರ ಮೇಲೊಬ್ಬರು ಸೇರಿಸುತ್ತಾರೆ. ಆ ಬಳಿಕ ಮೊದಮೊದಲು ಬಾಲಕರ ಸಂಖ್ಯೆ 40-50 ಇದ್ದದ್ದು 5-6 ತಿಂಗಳೊಳಗಾಗಿ 4-5 ಕ್ಕೆ ಇಳಿಯುತ್ತೆ. ಇವರೇ ಸ್ವಲ್ಪಮಟ್ಟಿಗೆ ವಿವೇಕವನ್ನು ತಿಳಿದ ಮಹನೀಯರ ಮಕ್ಕಳು. ಮಾಸ್ಟರುಗಳು ಈ ವಿಚಾರ ಎಷ್ಟೋ ಪ್ರೋತ್ಸಾಹಗೊಳಿಸಿದರೂ ಪ್ರದೋಷಕಾಲದಲ್ಲಿ ಇರುವಂಥಾ ನೌರುಷವೂ ಡಂಭವೂ ಪ್ರಾತಃಕಾಲದಲ್ಲಿ ಇರುವುದಿಲ್ಲವಾದ್ದರಿಂದ ಏನೂ ಸಾರ್ಥಕವಾಗುವುದಿಲ್ಲ. ಈ ವಿಷಯಗಳನ್ನು ವಿದ್ಯಾ ಇಲಾಖಾ ಸಾಹೇಬರವರುಗಳಲ್ಲಿ ಅರಿಕೆ ಮಾಡಿಕೊಳ್ಳಲು ಅವರು ಬೇರೆ ಬೇರೆ ಸಂದರ್ಭಗಳಲ್ಲಿ ರೇಗುತ್ತಾರೆ. ಈ ರೀತಿಯಾಗಿ ಬಡಮಾಸ್ಟರುಗಳು ಉಭಯಸಂಕಟವನ್ನು ಹೊಂದಬೇಕಾಗುತ್ತೆ. ಅಲ್ಲದೆ ಬೇರೆ ಕಡೆ ವರ್ಗಾಯಿಸಿಕೊಳ್ಳುವ ವಿಷಯದಲ್ಲಿ ಏನೇನೋ ರಿಪೋರ್ಟುಗಳನ್ನು ಮಾಡಿಕೊಳ್ಳುತ್ತಾರೆ ಈ ರೀತಿಯಾಗಿ ಸ್ಕೂಲೇ ಕೆಟ್ಟುಹೋಗುತ್ತೆ. ಆದ್ದರಿಂದ ಘನವೆತ್ತದಿವ ಕರುಣಾಳು ಸರ್ಕಾರದವರು ಹೀಗೆ ಬುದ್ಧಿಯೇ ತುಂಬಿರತಕ್ಕ ಪಂಚಮರ ವಿಷಯದಲ್ಲಿ ಸಂಪೂರ್ಣಾನುಗ್ರಹವಿಟ್ಟು ವಿದ್ಯೆಯಿಲ್ಲದ ಎಲ್ಲಾ ವಿಧವಾದ ಕಷ್ಟನಷ್ಟಗಳನ್ನು ಹೊತ್ತುಕೊಂಡು ನರಳುತ್ತಿರುವ ಪಂಚಮರೆಂಬ ಕಾಡು ಮೃಗಗಳಿಗೆ ಈಗ ಜಾರಿಯಲ್ಲಿರುವ ನಿರ್ಬಂಧ ವಿದ್ಯೆಯನ್ನು ಆದಷ್ಟು ಬೇಗ ಪಂಚಮರಲ್ಲಿ ಜಾರಿಗೆ ತಂದರೆ ಅವರಿಗಾಗಿ ಪ್ರಯಾಸಪಡುವ ಬಡಮಾಸ್ಟರುಗಳ ಕಷ್ಟವು ಸಾರ್ಥಕವಾಗುತ್ತೆ. ಒಬ್ಬ ಪಂಚಮ

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ—ಪ್ಲೇಗ್ ಅತಿ ಹೆಚ್ಚಾಗಿದೆ ಪ್ರತಿ ದಿನವೂ ಕೆಲವರಿಗೆ ತಗಲುತ್ತಿದೆ. ತಗಲಿದವರಲ್ಲಿ ಕೆಲವರು ವಾಸಿಯಾಗುತ್ತಲೂ ಮರಣವಾಗುತ್ತಲೂ ಇದ್ದಾರೆ ಊರೆಲ್ಲಾ ಗಲಿಬಿಲಿ ಜಾಸ್ತಿಯಾಗಿದೆ ಕೆಲವರು ಆಗಲೇ ಊರು ಬಿಟ್ಟು ಹೋದರು. 2,000 ಜನರಿಗಿಂತ ಹೆಚ್ಚಾಗಿ ಪ್ಲೇಗ್ ಇಂಜಕ್ಷನ್ ಹಾಕಿಸಿಕೊಂಡಿರುತ್ತಾರೆ ಇನ್ನೂ ದಿನಾಲೂ ಹಾಕಿಸಿಕೊಳ್ಳುವವರೂ ಅನೇಕರಾಗಿದ್ದಾರೆ ರೋಗದ ಸೋಂಕು ಊರೆಲ್ಲಾ ವ್ಯಾಪಿಸಿದೆ ಒಂದು ವಾರದೊಳಗೆ ಅನೇಕರು ಗ್ರಾಮಬಿಡುವರು ಡಾಕ್ಟರವರಿಗೆ ಕೆಲಸ ಜಾಸ್ತಿಯಾಗಿದೆ. ಈ ಮಾಗಣೆ ಬ್ರಾಹ್ಮಣರೂ ದೇವಾಂಗದವರೂ ಮುಸಲ್ಮಾನರೂ ಮರಾಟಿಯವರೂ ಕುಡಿಗರೂ ಮಾದಿಗರೂ ಈ ರೋಗಕ್ಕೆ ತುತ್ತಾಗಿದ್ದಾರೆ. ಗ್ರಾಮದ ಸ್ಥಿತಿ ಮಹಾ ವ್ಯಸನಕರವಾಗಿದೆ. ಈ ತಿಂಗಳಂತ್ಯದೊಳಗೆ ಪ್ಲೇಗಿನ ಮರಣಗಳು ಎಷ್ಟೋ ಎಂಬ ಕಳವಳ ಉಂಟಾಗಿದೆ ಹೊರಗಿನವರ್‍ಯಾರೂ ಇಲ್ಲಿಗೆ ಬರುವಂತೆ ತೋರುವದಿಲ್ಲ.

ಕುಂಸಿ—ಈ ಪ್ರಾಂತ್ಯ ಈಗ್ಗೆ 5-6 ದಿವಸದಿಂದ ಮಳೆಯು ಜಾಸ್ತಿಯಾಗಿ ಕೆರೆ ಕಟ್ಟೆ ಎಲ್ಲಾ ತುಂಬಿರುತ್ತವೆ ಈ ಕಡೆ ಸಕಾಲದಲ್ಲಿ ಮಳೆಯು ಸಂತೃಪ್ತಿಯಾಗಿ ಬರುತ್ತಾ ಭತ್ತ, ರಾಗಿ, ಜೋಳದ ಧಾರಣೆಯು ದಿನೇ ದಿನೇ ಜಾಸ್ತಿಯಾಗುತ್ತಾ ಇದೆಯೇ ಹೊರ್ತು ತಗ್ಗುವ ಹಾಗಿಲ್ಲ.—ಇಲ್ಲಿಗೆ ನಾಲ್ಕು ಮೈಲಿ ಫಾಸಲೆಯಲ್ಲಿರುವ ಐನೂರಲ್ಲಿ ಪ್ರತಿ ಭಾನುವಾರ ಸಂತೆ ನಡೆಯುತ್ತಾ ಇತ್ತು ಈಗ್ಗೆ ಕುಂಸಿಯಲ್ಲೂ ಸಹ ಸೋಮವಾರ ದಿವಸ ಸಂತೆ ನಡೆಯಬೇಕಾಗಿ ಸರ್ಕಾರದವರು ಆರ್ಡರು ಕೊಟ್ಟಿರುತ್ತಾರೆ. ಕಳೆದ ಸೋಮವಾರ ಸಂತೆ ನಡೆಯಿತು. ಸುಮಾರು 200-300 ಜನ ಸೇರಿ 400 ರೂಪಾಯಿ ವ್ಯಾಪಾರ ನಡೆದಿರುವದಾಗಿ ಕಾಣುತ್ತೆ ಈ ಸಂತೆಯು ಇಂದೇ ಪ್ರಾರಂಭ; ಹಾಗೂ ಮಳೆಗಾಲ ಜಾಸ್ತಿ. ದಿನೇ ದಿನೇ ಈ ಸಂತೆಯು ಅಭಿವೃದ್ಧಿಗೆ ಬರುವದಕ್ಕೆ ಇಲ್ಲಿನ ಪಂಚರು, ದೊಡ್ಡ ಮನುಷ್ಯರು, ಪ್ರಜೆಗಳು ಎಲ್ಲಾ ಒಕ್ಕಟ್ಟಾಗಿ ಸೇರಿ ತಕ್ಕ ಏರ್ಪಾಡು ಮಾಡುತ್ತಾ ಬರುವದೇ ಮುಖ್ಯ ಕಾರಣವಾಗಿರುತ್ತೆ.—ಈ ಊರು ಮುಸಾಫರ್ ಬಂಗ್ಲೆಯಲ್ಲಿ ಫಾರೆಸ್ಟರು 6-7 ತಿಂಗಳ ಲಾಗಾಯ್ತು ವಾಸವಾಗಿದ್ದಾರೆ. ನಮ್ಮ ಅಮಲ್ದಾರರು ಈ ವಿಷಯ ತನಿಖೆಮಾಡಿ ಕ್ರಮಪಡಿಸುತ್ತಾರೆಂದು ನಂಬಿದೇವೆ.

[5 ನೇ ಪುಟದಿಂದ ಮುಂದಕ್ಕೆ.]

ಇತರ ವಿಷಯಗಳು.

ಇಂಗ್ಲೆಂಡಿಗೆ ಸೇರಿದ ಕಂಬರ್ಲೆಂಡ್ ತೀರಕ್ಕೆ ಜರ್ಮನಿಯ ಒಂದು ಸಬ್ ಮರೀನು ಬಂದು ತೀರದಲ್ಲಿರುವ ಕೆಲವು ಪಟ್ಟಣಗಳಿಗೆ ಗುಂಡುಗಳನ್ನು ಹಾಕಿತು. ಇದರಿಂದ ಇಂಗ್ಲಿಷ್ ಪ್ರಜೆಗಳ್ಯಾರೂ ಸಾಯಲೂ ಗಾಯಪಡಲೂ ಇಲ್ಲ; ಆಸ್ತಿಪಾಸ್ತಿಗಳಿಗೂ ವಿಶೇಷ ನಷ್ಟವಾಗಲಿಲ್ಲ. ವೈಟ್‌ಹೇವನ್ ಎಂಬಲ್ಲಿ ಬೆಂಕಿಹತ್ತಿತು; ಬೇಗನೆ ಅದನ್ನು ಆರಿಸಿಬಿಟ್ಟರು.

ಈ ವಾರ ಬಂದಿರುವ ಅನೇಕ ತಂತಿ ವರ್ತಮಾನಗಳಲ್ಲಿ ಕಾಂಗ್ರಾಗಟೇ ಕೆಲವು ಸುದ್ದಿಯೇ ಹೆಚ್ಚಾಗಿದೆ. ಅಮೇರಿಕ, ಹಾಲೆಂಡ್ ಮೊದಲಾದ ಕಡೆ ಗಳ ಪತ್ರಿಕೆಗಳು ಬಹು ಕಾಲದ ತನಕ ಯುದ್ಧಗಳು ನಡೆಯುತ್ತಾ ಬಂದರೂ ಜಯಾಪಜಯಗಳು ನಿರ್ಧರವಾಗುವಹಾಗಿಲ್ಲವೆಂದೂ, ಆದಕಾರಣ ಈ ಯುದ್ಧ ದಲ್ಲಿ ಬೆರೆಯದೆ ತಟಸ್ಥರಾಗಿರುವ ರಾಜ್ಯಗಳು ಸೇರಿ ಮಧ್ಯಸ್ಥಿಕೆಮಾಡಿ ಕರಾರು ಮಾಡುವ ಪ್ರಯತ್ನವನ್ನು ಮಾಡಬೇಕೆಂದೂ ಬರೆಯುತ್ತಾ ಬಂದಿವೆ. ಜರ್ಮ ನಿಯವರೂ ಆಸ್ಟ್ರಿಯಾದವರೂ ಈ ವಿಷಯವಾದರೂ ಚಳಿಗಾಲದಲ್ಲಿ ಯುದ್ಧ ಕಾರ್ಯಗಳು ತಪ್ಪಿಹೋಗಲೆಂಬ ಅಭಿಪ್ರಾಯವುಳ್ಳವರಾಗಿದಾರೆಂದೂ, ಈ ಉದ್ದೇಶದಿಂದ ಜರ್ಮನಿಯವರು ಕರಾರು ಮಾಡಿಸುವಂತೆ ರೋಮಿನ ಪೋಪ್ ಸ್ವಾಮಿಯವರ ಮಧ್ಯಸ್ಥಿಕೆಯನ್ನು ಬೇಡಿದಾರೆಂದೂ ಇನ್ನು ಕೆಲವು ಪತ್ರಿಕೆಗಳು ತಿಳಿಸುವವು. ಜರ್ಮನಿಯವರು ಬೆಲ್ಜಿಯಮನ್ನು ಬಿಟ್ಟುಕೊಡುವುದಕ್ಕೂ, ರಷ್ಯಾದವರಿಗೆ ಆಸ್ಟ್ರಿಯಾದಲ್ಲಿ ಸ್ವಲ್ಪ ಭಾಗವನ್ನೂ ಡಾರ್ಡನೆಲ್ಸನ್ನೂ ಕೊಡುವುದಕ್ಕೂ, ಈಜಿಪ್ಟನ್ನು ಟರ್ಕಿಯವರಿಗೆ ವಹಿಸಬೇಕೆಂದೂ ಕೋರುವಂತೆ ಪ್ರಕಟವಾಗಿದೆ. ಇವೆಲ್ಲಾ ಬರೀ ವರ್ತಮಾನವಲ್ಲವೆಂದೂ, ಇದರಲ್ಲಿ ನಿಜಾಂಶ ವಿರಬಹುದೆಂದೂ ತೋರುತ್ತದೆ. ಆದರೂ ಈ ರೀತಿಯಾದ ಕರಾರಿಗೆ ನಮ್ಮ ಪಕ್ಷದವರು ಎಂದಿಗೂ ಒಪ್ಪುವುದಿಲ್ಲ. ಅಮೇರಿಕದವರಾದರೋ ಜರ್ಮನಿಯ ವರ ಕೂಡ ಕರಾರು ಮಾಡಿಕೊಂಡೂ ಪ್ರಯೋಜನವಿಲ್ಲವೆಂದೂ, ಅವರು ಕರಾ ರಿಗೆ ಕಟ್ಟುಬೀಳತಕ್ಕವರಲ್ಲವೆಂದೂ ಹೇಳಿದಾರೆ. ಅತ್ತಲಾಗಿ ಇಟಲಿಯವರು— ಜರ್ಮನಿಯವರು ಕರಾರು ಮಾಡಿಕೊಳ್ಳಬೇಕೆಂದು ಹೊರಟಿರುವುದು ಅವರ ದುರ್ಬಲತ್ವಾ ಅವರ ಸಿಕ್ಕಿಬಿದ್ದಿರುವಿಕೆಯನ್ನೂ ಪ್ರಕಾಶಪಡಿಸುತ್ತದೆಂದು ಹೇಳುವರು. ಅಮೇರಿಕದಲ್ಲಿ ಜರ್ಮನಿಯವರು ಕರಾರು ಆಗಬೇಕೆಂಬ ಉದ್ದೇಶದಿಂದ ಸಭೆ ಗಳನ್ನು ನಡಿಸುವುದನ್ನು ನೋಡಿ ಅಲ್ಲಿರುವ ಇಟಲಿಯವರು ಅಂಥಾ ಸಭೆಗಳನ್ನು ಚದರಿಸಿಬಿಟ್ಟಿದಾರೆ. ಇಂಗ್ಲೆಂಡಿನಲ್ಲಿ ಅಂಥಾ ವಿಷಯಗಳಿಗೆ ಅವಕಾಶವನ್ನೇ ಕೊಡದೆ ಅದ್ಧಮಾಡಿರುವರು. ಅಂಥಾ ಚರ್ಚೆಗೆ ಇನ್ನೂ ಸಮಯ ಒದಗಿಲ್ಲ.

ಕಳೆದ ವಾರ ಜರ್ಮನಿಯವರು ಬ್ರಿಟಿಷರ ಎರಡು ಸಹಾಯಕನೌಕೆಗಳನ್ನು 17 ಬೇರೆ ರ ಹಡಗುಗಳನ್ನು ಮುಳುಗಿಸಿದರು. ತಟಸ್ಥರಾಗಿರುವ ರಾಜ್ಯಗಳ ಹಲವು ಹಡಗುಗಳನ್ನು ಕೂಡ ಮುಳುಗಿಸಿದಾರೆ. ಲಿಂಕ್ಸ್ ಎಂಬ ಬ್ರಿಟಿಷ್ ಯುದ್ಧದ ಹಡಗು ಉತ್ತರ ಸಮುದ್ರದಲ್ಲಿ ನೈರ್ಕ್ ಎಂಬ ಸಿಡಿಮದ್ದಿನ ಗುಂಡಿಗೆ ಬಿದ್ದು ಮುಳುಗಿಹೋಯಿತು. ಅದರೊಳಗಿದ್ದವರ ಪೈಕಿ 100 ಜನರೂ, 4 ಮಂದಿ ಹುದ್ದೇದಾರರೂ, 32 ಸೈನಿಕರೂ ಬದುಕಿ ಬಂದರು. ಜರ್ಮನಿಯ ವಿಮಾ ನಿಯ್ ಎಂಬ ಯುದ್ಧದ ಹಡಗು ಕಾವಲಿನ ಒಂದು ಹಡಗನ್ನು ಮುಳುಗಿಸಿತು. ಅದರಲ್ಲಿದ್ದವರ ಪೈಕಿ 4 ಹುದ್ದೇದಾರರೂ, 39 ಜನರೂ ಬದುಕಿ ಬಂದರು. ಅಲ್ಲಿಗೆ ಬ್ರಿಟಿಷರ ಕೆಲವು ಯುದ್ಧದ ಹಡಗುಗಳು ಹೋಗುವಷ್ಟರಲ್ಲಿ ವಿಮಾ ನದೊಳಗಿನ ಅಧಿಪತಿಯು ಅದರಲ್ಲಿದ್ದ ಜನನ್ನೆಲ್ಲಾ ಹೊರಕ್ಕೆ ಕಳುಹಿಸಿಬಿಟ್ಟು ಆ ತನ್ನ ಹಡಗಿಗೆ ಗುಂಡುಹಾಕಿ ಒಡೆದುಹಾಕಿದನು. ಈ ವಿಮಾನಿಯಾರ್ ಜಹಜು ಮೊದಲು ಜರ್ಮನಿಯವರ ದೊಡ್ಡ ವ್ಯಾಪಾರದ ಹಡಗಾಗಿತ್ತು. ಪಿರಿಂಗಿಣಿದ್ದ ಇಂಡಿಯಾ ಎಂಬ ದೊಡ್ಡ ವ್ಯಾಪಾರದ ಹಡಗು ಜರ್ಮನಿಯ ಟಾರ್ಪೀಡೋ ಬಡಿದು ಉತ್ತರ ಕಡಲಿನಲ್ಲಿ ತಾ. 8 ರಲ್ಲಿ ಮುಳುಗಿಹೋಗಿ ಅದರಲ್ಲಿದ್ದ 23 ಮಂದಿ ಹುದ್ದೇದಾರರೂ 119 ಮಂದಿ ಸೈನಿಕರೂ ಬದುಕಿ ಬಂದರು. ಅದ ರಲ್ಲಿ ಎಂಜಿನ್ ಗಳು ಒಡೆದು ಅನಾಹುತವಾದದ್ದರಿಂದ ಕೆಲವರು ಅದರಲ್ಲಿ ಸಿಕ್ಕಿ ಮೃತಪಟ್ಟಿರು; ಇನ್ನು ಕೆಲವರು ಬೆಳಗಾಳಿಯನ್ನು ಕದೆಯಲಾರದೆ ಸತ್ತುಹೋದರು. ಹದಿನೈದು ಹೆಣಗಳನ್ನು ನೋರ್ವೆಯಲ್ಲಿ ನನಾಧಿಕಾರಿಗಳು ಅಲ್ಲಿನ ಪ್ರಜೆಗಳು ವಿಶೇಷವಾದ ಪ್ರೀತಿಯನ್ನು ಸನ್ಮಾನವನ್ನೂ ನಡಿಸಿದರು.

ಯೆಮ್ಡೆನ್ ಎಂಬ ಜರ್ಮನಿ ಯುದ್ಧದ ಜಹಜನ್ನು ಮುಳುಗಿಸಿದಾಗ ಅದರಲ್ಲಿದ್ದ ಕೆಲವರು ತಪ್ಪಿಸಿಕೊಂಡು ಹೋದರಷ್ಟೆ. ಈ ಜನಗಳ ಅಲೆದಾಟ ವನ್ನು ಪತ್ರಿಕೆಗಳು ತಿಳಿಸುವವು. ಅದರಲ್ಲಿ ಏಳು ಹುದ್ದೇದಾರರು, 75 ಜನರು ಇದ್ದರು. ಇವರೆಲ್ಲಾ ಒಂದು ಸಣ್ಣ ದೋಣಿಯಲ್ಲಿ ಸೇರಿ ಸುಮಾತ್ರಾ ದ್ವೀಪಕ್ಕೆ ಹೋಗಿ, ಅಲ್ಲಿ ಇನ್ನೊಂದು ಹಡಗನ್ನು ಸಂಪಾದಿಸಿಕೊಂಡು ಸ್ಪಲ್ಲಿ ಕಾಯಿಲೆಯಾಗಿದ್ದವರನ್ನು ಗಾಯಪಟ್ಟಿದ್ದವರನ್ನು ಅಲ್ಲೇ ಬಿಟ್ಟು, ಉಳಿದವರೆಲ್ಲಾ ಅರೇಬಿಯವನ್ನು ಕಲುಪಿ ಆ ದೇಶವನ್ನು ದಾಟಿಹೋಗುತ್ತಿದ್ದರು ಅಂಬ್ಬಿಯವರು ಅವರನ್ನು ಅಲ್ಲಲ್ಲಿ ಹಡೆದು ಹಲವನ್ನು ಕೊಂದುಬಿಟ್ಟರು. ಕಳೆದುಳಿದ 14 ಜನರು ನಾನಾ ಸಂಕಟಗಳನ್ನು ಅನುಭವಿಸಿ ಹಿರಿಯ ಸೀಮೆಗೆ ಸೇರಿದ ದಮಸ್ಕಸ್ ಪಟ್ಟಣವನ್ನು ತಲುಪಿರುತ್ತಾರೆ.

ಅಮೇರಿಕದವರು ಬಿಡಾ ಮೂರ ಹಣವನ್ನು ಕೊಡಿಸಿ ಒಂದು ಸಾವಿರ ವಿಮಾನ ಯಂತ್ರಗಳನ್ನು ಮಾಡಿಸಿ ಅವುಗಳೆಲ್ಲಾ ಅಮೇರಿಕದವರನ್ನೇ ನೇಮ ಕವಾಡಿ ಫ್ರೆಂಚರಿಗೆ ಬಹುಮಾನವಾಗಿ ಕಳುಹಿಸಿಕೊಡಬೇಕೆಂದು ಸನ್ನಾಹಮಾಡು ತ್ತಿರುವಂತೆ ಪತ್ರಿಕೆಗಳು ತಿಳಿಸುವವು.—ಫ್ರೆಂಚ್ ಸೈನಿಕರು ಯುದ್ಧದಲ್ಲಿ ತಮ್ಮ ಕುದುರೆಗಳನ್ನು ಆಳಿಸಿಕೊಂಡದ್ದನ್ನು ನೋಡಿ ಇಂಗ್ಲೆಂಡಿನ ದೊರೆಯವರು 60 ಕುದುರೆಗಳನ್ನೂ, ಬ್ರಿಟಿಷ್ ರೈತರು ಅನೇಕ ಟಿಸರುಗಳನ್ನೂ ಅವರಿಗೆ ಕೊಟ್ಟು ಕಳುಹಿಸುತ್ತಾರೆ.—ಬೆಲ್ಜಿಯಮಿನ ಗಣಿ ಕೆಲಸಗಾರರು ಜರ್ಮನಿಯವರು ಹೇಳುವಂತೆ ಕೆಲಸಮಾಡದೆ ಪ್ರತಿಭಟಿಸುತ್ತಿರುವರಂತೆ.—ಈಜಿಪ್ಟಿನೊಳಗೆ ಟರ್ಕಿ ಯವರೂ ಜರ್ಮನಿಯವರೂ ಸೇನಸ್ಸಿಯ ದೊಡ್ಡ ಮೇಕರ ಕೂಡ ಸೇರಿಕೊಳ್ಳ ಬೇಕೆಂದು ಹೋದರು. ಅವರು ಇವರನ್ನೆಲ್ಲ ತಮ್ಮ ಬಳಿಗೆ ಸೇರಿಸದೆ ಓಡಿಸಿ ಬಿಟ್ಟು, ನಮ್ಮ ಪಕ್ಷದವರಲ್ಲಿ ಭಕ್ತಿ ವಿಶ್ವಾಸಗಳನ್ನು ಇಟ್ಟುಕೊಂಡಿದಾರೆ.

ಮಿ|| ಲ್ಲಾಯಿಡ್ ಜಾರ್ಜ್‌ರವರು ಬ್ರಿಟಿಷರ ಕಾರ್ಖಾನೆಗಳಲ್ಲಿ ಅವಶ್ಯ ವಾದ ಯುದ್ಧ ಸಾಮಗ್ರಿಗಳು ತಯಾರಾಗಿ ಒದಗಿಲ್ಲಿತ್ತುತ್ತಿವೆ ಎಂದೂ, ಹಿಂದಿನ ಸೆಪ್ಟೆಂಬರಿಗಿಂತ ಕಳೆದ ಜೂಲೈ ತಿಂಗಳಲ್ಲಿ ತಯಾರಾದ ಮದ್ದು ಗುಂಡುಗಳು ಇಪತ್ತಾರಷ್ಟು ಹೆಚ್ಚಾಗಿರುವವೆಂದೂ, ಆಗಸ್ಟ್ ತಿಂಗಳಲ್ಲಿ ನೂರ ರಷ್ಟು ಹೆಚ್ಚುವವೆಂದೂ, ಬಳಿಕ ಇನ್ನೂ ಹೆಚ್ಚು ಹೆಚ್ಚಾಗಿ ಒದಗಿಸಲ್ಪಡುವ ವೆಂದೂ ತಿಳಿಸಿದರೆ.

ಜರ್ಮನಿ ಚಕ್ರವರ್ತಿಯವರು ಯುದ್ಧದ ವರುಷ ತುಂಬಿದ ದಿವಸ ಎಂದು ತಾವು ಹೊರಡಿಸಿದ ಪ್ರಕಟನೆ ಆದರಲ್ಲಿ ತಿಳಿಸಿರುವುದೇನೆಂದರೆ— “ನನ್ನ ಮನಸ್ಸಾಕ್ಷಿಯು ನಿರ್ದೋಷವಾಗಿದೆ ಎಂದು ದೇವರ ಮತ್ತು ಪ್ರಪಂ ಚದ ಸಮ್ಮುಖದಲ್ಲಿ ಹೇಳುತ್ತೇನೆ. ಯುದ್ಧವಾಗಬೇಕೆಂದು ನಾನು ಮನಸ್ಸಾರ ಒಪ್ಪಿದವನಲ್ಲ. ದೇವರೇ ನಮಗೆ ಸಹಾಯಕನಾಗಿದಾನೆಂದು ಸಂಪೂರ್ಣವಾದ ಶ್ರದ್ಧೆಯಿಂದ ಹೇಳಬಲ್ಲೆನು” ಎಂಬುದು. ಅದರ ಪ್ರಪಂಚಕ್ಕೆಲ್ಲಾ ಸಾಕ್ಷಾ ತ್ತಾಗಿ ತಿಳಿದಿರುವ ಕಥೆಯೇ ಬೇರೆ.

ಒಳದೇಶದ ವೃತ್ತಾಂತಗಳು.

ಕೋಲಾರ್ ಚಿನ್ನದ ಗಣಿ ಕಾರ್ಖಾನೆಗಳಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿಗೆ ಬೇಗನೆ ಯುದ್ಧಕ್ಕೆ ಬೇಕಾಗುವ ಗುಂಡುಗಳನ್ನು ತಯಾರಾಗಿ ಕೊಡುವುದಕ್ಕೆ ಏರ್ಪಾಡು ಆಗುತ್ತಿದೆ.

ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಶ್ರಾವಣ ಬಹುಳ ನವಮಿ (ಸೆಪ್ಟೆಂಬರ್ ತಾ. 3) ಯಿಂದ ಸಂಸ್ಕೃತ ವಿದ್ವತ್ ಪರೀಕ್ಷೆಗಳು ನಡೆಯುವಾರಂಭವಾಗುತ್ತವೆ.

ಶ್ರೀಮನ್ ಮಹಾರಾಜರವರೂ ಅರಮನೆಯ ರಾಣೀವಾಸದವರೂ ಬೆಂಗಳೂ ರಿನಿಂದ ರಾಜಧಾನಿಗೆ ನಾಳೆ ಚಿತ್ತೈಸಿ 5-6 ದಿನಗಳ ತರುವಾಯ ನೀಲಗಿರಿಗೂ ಬೆಂಗಳೂರಿಗೂ ದಯಮಾಡುವರೆಂದು ಕೇಳುತ್ತೇವೆ.

ನಂಜನಗೂಡಿನಲ್ಲಿ ಮ|| ವೆಂಕಟರಾಮಯ್ಯನನ್ನು ಆರಮ್ಸ್ ಆಕ್ಟಿನ ತಪ್ಪಿತಕ್ಕೆ ಗುರಿಮಾಡಿ ಪೋಲೀಸಿನವರು ಕೊಡದ್ದ ಮೊ ಮಾಡಿದ್ದನ್ನು ಹೈಕೋರ್ಟಿನವರು ಮನ್ನಾಮಾಡಿ ವಜಾ ಮಾಡಿರುತ್ತಾರೆಂದು ತಿಳಿದು ಬಂದಿದೆ.

ನಮ್ಮ ಚೀಫ್ ಕೋರ್ಟಿನ ರಿಜಿಸ್ಟ್ರಾರಾಗಿದ್ದು ಕಾಲವಾದ ಮ|| ವಿ. ಎ. ರಾಜರತ್ನಮೊದಲಿಯಾರ್ರವರ ಪತ್ನೀರವರು ಮೊದಲಿಯಾರ್ ಸಂಗಡದಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುವ ಧರ್ಮ ಫಂಡಿಗೆ 10,000 ರೂಪಾಯನ್ನು ಬಿಂದು ಕೊಟ್ಟಿರೆಂದು ಕೇಳಿ ಸಂತೋಷಪಡುತ್ತೇವೆ.

ಕಬ್ಬಿನ ವ್ಯವಸಾಯವನ್ನು ಜಾವಾ ದ್ವೀಪಕ್ಕೆ ಹೋಗಿ ಚೆನ್ನಾಗಿ ತಿಳಿದು ಕೊಂಡು ಬಂದುಬಂಥಾ ರೈತಪ್ರಜೆಗಳಲ್ಲಿ ಯಾರಾದರೂ ಸೇರಬಯಸುವದಾದರೆ ಅವರ ವಿವರಗಳನ್ನು ಸರ್ಕಾರದವರು ಅರ್ಥವನ್ನು ವಹಿಸಿಕೊಂಡು ಕಳುಹಿಸುತ್ತೇ ವೆಂದೂ, ಇಷ್ಟವುಳ್ಳವರು ಅರ್ಜಿ ಬರೆದುಕೊಳ್ಳಬಹುದೆಂದೂ ಪ್ರಕಟಿಸಿದಾರೆ.

ನಾಡಿದ್ದು ಸಾಯಂಕಾಲ ರಾಜಧಾನಿಯ ಜಗನ್ಮೋಹನ ಬಂಗಲೆಯ ವಿಶಾಲ ಮಂಟಪದಲ್ಲಿ ಎರಡನೇ ಫಲ ಪುಷ್ಪ ಪ್ರದರ್ಶನವು ನಡೆಯುವುದು. ಶ್ರೀಮನ್ ಮಹಾರಾಜರವರು ದಯಮಾಡಿ ಪ್ರದರ್ಶನವನ್ನು ಪ್ರಾರಂಭ ಮಾಡು ವರು. ಸಮಸ್ತ ಪ್ರಜೆಗಳೂ ಹೋಗಿ ನೋಡಬಹುದು; ಯಾವ ನಿರ್ಬಂಧವನ್ನೂ ಇಡುವುದಿಲ್ಲ.

ತೀರ್ಥಹಳ್ಳಿಯಲ್ಲಿ ಮ|| ಆಗುಂಬಿ ರಾಮರಾಯರೂ, ಮ|| ಬಿ. ವೆಂಕಟ ಸುಬ್ಬಣ್ಣಾಚಾರ್ಯ ಸೇರಿ ಸುಮಾರು ಹತ್ತು ಸಾವಿರ ರೂಪಾಯಿ ಮೂಲಧನ ತೀರ್ಥಹಳ್ಳಿಯಿಂದ ಸುತ್ತುಮುತ್ತು ಮುಖ್ಯ ಗ್ರಾಮಗಳಾಗಿರುವ ಆಗಣ, ಭಾರತಿ ಪುರ, ಕೋಣಂದೂರು, ಜಗಲಗೋಡು, ಹೊಸಕೊಪ್ಪ, ದೇವಂಗಿ ಗ್ರಾಮಗಳಿಗೆ ಟೆಲಿ ಫೋನ್ ತಂತಿಗಳನ್ನು ಹಾಕಿಸುವ ಏರ್ಪಾಡು ಮಾಡುತ್ತಿರುವಂತೆ ಕೇಳುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರಾಗಿಯೂ, ಟ್ರಸ್ಟ್ ಬೋರ್ಡಿನ ಛೇರ್‌ಮೆನ್ ರಾಗಿಯೂ ಇರುವ ಮ|| ಟಿ. ಜಿ. ಲಕ್ಷ್ಮೀಪತಯ್ಯರು ಸೀಮಾ ಗವರ್ನ್‌ಮೆಂಟಿಗೆ ಕಾಗದಗಳನ್ನು ಬರೆದು ಹುಕುಂ ತರಿಸಿಕೊಳ್ಳಬಹುದೆಂದೂ, ಡೆಪ್ಯುಟಿ ಕಮಿಷನರ್ ಮಧ್ಯಸ್ಥಿಕೆ ಅವಶ್ಯವಿಲ್ಲವೆಂದೂ ಸರ್ಕಾರದವರು ಹುಕುಂ ಕೊಟ್ಟು, ಅವರ ಸಂಬಳವನ್ನು 500 ರಿಂದ 600 ರೂಪಾಯಿಗೆ ಏರ್ಪಡಿಸಿ ಮಾಡಿರುತ್ತಾರೆ.

ಕಾಲೇಜ್ ನಾಳ, ಎಡ್ವರ್ಡ್ ದಿ ಅರ್ಜನೊ ಎಂಬ 12-14 ವಯಸ್ಸಿನ ಹುಡುಗರಿಬ್ಬರು ಬೆಂಗಳೂರು ರಿಚ್‌ಮಂಡ್ ಟೌನ್ ತೋಟದಲ್ಲಿ ಹಿಂದಿನ ವಂಗಳವಾರ ಸಾಯಂಕಾಲ ಆಡುತ್ತಿದ್ದಾಗ ಒಂದು ಹಾವು ಮೊದಲನೇ ಹುಡು ಗನನ್ನು ಕಡಿಯಿತು. ಎರಡನೆಯವನು ಹೆದರಿ ಓಡಿಹೋಗದೆ ತನ್ನ ಜೇಬಿನಲ್ಲಿದ್ದ ಕಲವಸ್ತ್ರವನ್ನು ತೆಗೆದು ಹಾವು ಕಡಿದ ಸ್ಥಳದಿಂದ ಮೇಲ್ಭಾಗಕ್ಕೆ ಬಿಗಿಯಾಗಿ ಸುತ್ತಿ ಕಟ್ಟಿ, ಬಳಿಕ ಕಡಿದ ಸ್ಥಳದಲ್ಲಿದ್ದ ವಿಷವನ್ನು ತನ್ನ ಬಾಯಿನಿಂದ ಹೀರಿ ಉಗಿದುಬಿಟ್ಟು ಬಳಿಕ ಅವನನ್ನು ಮನೆಗೆ ಕರೆದುಕೊಂಡು ಹೋದನು. ನಂತರ ಮನೆಯವರು ಔಷಧಿ ಹಾಕಿದರು. ಆ ಹುಡುಗನು ಬದುಕಿಕೊಂಡನು.

ಬೆಂಗಳೂರು “ ಡೆಯಿಲಿ ಪೋಸ್ಟ್ ” ಪತ್ರಿಕೆ.

ನಮ್ಮ ಮೈಸೂರು ಗವರ್ನ್‌ಮೆಂಟಿನವರು ಜರ್ಮನಿಯವರನ್ನು ನೌಕರಿ ಯಲ್ಲಿ ಇಟ್ಟುಕೊಂಡಿದಾರೆಂಬ ವಿಷಯದಲ್ಲಿ ಬೆಂಗಳೂರು ಡೆಯಿಲಿ ಪೋಸ್ಟ್ ಎಂಬ ಇಂಗ್ಲಿಷ್ ಪತ್ರಿಕೆಯು ಒಂದೆರಡಾವರ್ತಿ ಕೆಲವು ಲೇಖನಗಳನ್ನು ಪ್ರಯೋಗಿಸಿ ನಮ್ಮ ಗವರ್ನ್‌ಮೆಂಟನ್ನು ದೂರಿತ್ತು. ಅದು ಮಿತಿಮೀರಿದ ಆಕ್ಷೇಪಣೆಗಳಾಗಿದ್ದವು. ನಮ್ಮ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂಡೇಲಿಯ ವರು ಹುಕುಂ ಕೊಟ್ಟು ಆ ಪತ್ರಿಕೆಯ ಪ್ರಚಾರವನ್ನು ಕೆಲವು ದಿನ ನಿಲ್ಲಿಸಿ ದರು. ಅಂದಿಗೆ ಆ ಪತ್ರಿಕೆಯು ಕ್ಷಮಾಪಣೆಯನ್ನು ಬೇಡಿಕೊಂಡಿತು; ಬೇರೊಬ್ಬ ಎಡಿಟರು ನೇಮಿಸಲ್ಪಟ್ಟರು. ಇವರ ಮೇಲೆ ಬ್ರಿಟಿಷ್ ರೆಸಿಡೆಂಟ ವರು ತಮ್ಮ ಹುಕುಮನ್ನು ರದ್ದು ಮಾಡಿದ್ದರಿಂದ ಆ ಪತ್ರಿಕೆಯು ಮತ್ತೆ ಎಂದಿನಂತೆ ಪ್ರಕಟವಾಗುತ್ತಲಿದೆ.

1916 ನೆ ಲೋ. ಸ. ಕನ್ನಡ ಟೆಕ್ಸ್ಟಿನ ಪ್ರಶ್ನೋತ್ತರ (ಸಂಪೂರ್ಣವಾದ ಉತ್ತರಗಳಿರುವುದು) ಸಿದ್ಧವಾಗಿ ಬಿಕರಿಯಲ್ಲಿದೆ ಕ್ರಯ 3 ಆಣೆ; ವ್ಯಾಕರಣ ಪ್ರಶ್ನೋತ್ತರ (200 ಪ್ರಶ್ನೆಗಳೂ ಸಂಪೂರ್ಣವಾದ ಉತ್ತರಗಳೂ) ಕ್ರಯ 6½ ಆಣೆ; ಬಾಲವ್ಯಾಕರಣ (ಈಗಿನ ಪರೀಕ್ಷಾ ಕ್ರಮವನ್ನು ಅನುಸರಿಸಿ ಬರೆ ದ) ವಿದ್ಯಾರ್ಥಿಗಳಿಗೆ ಅತ್ಯಂತ ಉಪಯೋಗವಾಗಿದೆ ಕ್ರಯ 6½ ಆಣೆ. [166-1]
ಕೆ. ಆರ್. ನರಸಿಂಹಯ್ಯ, ಕನ್ನಡ ಪಂಡಿತ, ಹೈಸ್ಕೂಲ್, ಚಿಕ್ಕಬಳ್ಳಾಪುರ.

THE SCIENTIFIC CUTTER
Revised and enlarged second edition of the Scientific Cutter is a masterly useful book, on cutting Men's, Children's and Women's garments on scientific principles. Price Rs. 2; with Postage Rs. 2-3-0 only.
RAO'S TAILORING COLLEGE,
167-1 318, Princess Street, Bombay No. 2.

ಸ್ಕೂಲಿಗಾಗಿ ಮನೆಗಳು ಬಾಡಿಗೆಗೆ ಬೇಕು.

ಮೈಸೂರು ಪಟ್ಟಣದಲ್ಲಿ ಬಲಾತ್ಕಾರದ ವಿದ್ಯಾಭ್ಯಾಸಕ್ಕಾಗಿ ಹೊಸ ಸ್ಕೂಲು ಗಳನ್ನು ಸ್ಥಾಪಿಸುವುದಕ್ಕೆ ಮಂಡಿಮೊಹಲ್ಲಾದಲ್ಲಿ 2, ಲಷ್ಕರುಮೊಹಲ್ಲಾದಲ್ಲಿ 4, ಕೃಷ್ಣರಾಜಮೊಹಲ್ಲಾದಲ್ಲಿ 3, ನಜರಬಾದಿನಲ್ಲಿ 1, ದೇವರಾಜಮೊಹಲ್ಲಾ ದಲ್ಲಿ 3 ಮನೆಗಳು ಬಾಡಿಗೆಗೆ ಬೇಕಾಗಿವೆ. ತಿಂಗಳಿಗೆ ರೂ 10 ರಿಂದ 25 ರೂ. ವರಿಗೆ ಬಾಡಿಗೆ ಕೊಡಲಾಗುವುದು. ಬಾಡಿಗೆಗೆ ಮನೆಗಳನ್ನು ಕೊಡಲು ಇಷ್ಟವು ಳ್ಳವರು ಈ ಮಾಹೆ 25 ರೊಳಗಾಗಿ ತಿಳಿಸಬಹುದು.

ವಿಳಾಸ—ಎಂ. ಲಕ್ಷ್ಮೀನರಸಿಂಹಯ್ಯ,
[164-1] ಅಟೆಂಡೆನ್ಸ್ ಆಫೀಸರ್, ವೈಸ್‌ರಾಯ್ ರೋಡ್, ಮೈಸೂರು.

ರಬ್ಬರು ಮುದ್ರೆಗಳು!



ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ನಜ್ಜಿಯಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ಕೇವಲ ಪೆಟ್ಟಿಗೆ, ಇಂಕ್ ಪ್ಯಾಡ್ ಮತ್ತು ಇಂಕ್ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಹೆಸರು ಮುಂತಾದವುಗಳನ್ನು ಇಟ್ಟಕ್ಷರ ಗಳಿಂದ ಬರೆಯಬೇಕು.

[160-6]
ನಮ್ಮ ವಿಳಾಸ:—ರಾಘವ್ ಎಂಡ್ ಕೊ, ತಾತಾಚಾರ್ ಸ್ಟ್ರೀಟ್, ಮದರಾಸ್.

ಸೋಲಾಪುರದ ಚಕ್ಕುಗಳೂ, ಸೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಸೀರೆಗಳೂ ಇತರಕ್ಕೆ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಬೆಲುಗಟ್ಟಲೆಯೂ, ಚಿಲ್ಲರೆಯಾಗಿಯೂ ದೊರೆಯುವುವು.

ಬೇಲುಗಟ್ಟಲೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಧಾರಣೆಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [65-26]
ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 169, ಕಿಲಾರಿ ರೋಡು (ಕುಂಬಾರಪೇಟೆ) ಬೆಂಗಳೂರು ಸಿಟಿ.

ಬಾಯಿಗೆ ಮನೋಹರ. ಹಲ್ಲುಗಳಿಗೆ ಬಲಪಡಿಸುವುದು.
“ರಾಜೇಶ್ವರಿ” ಸುಗಂಧ ಹಲ್ಲುಪುಡಿ (ರಿಜಿಸ್ಟರ್ಡ್) 6 ಆಣೆ.
ಮುಟ್ಟಿದ ಹಲ್ಲುನೋವು ಹ್ಯಾಗೆ ಬರುವದು. ಹಿಂದುಗಳೆಲ್ಲಾ ಹಲ್ಲು ನೋವು ಬಾಧೆ, ಇಟ್ಟಿಗೆ, ಕಲ್ಲುಪುಡಿಯಲ್ಲಿ ಉಜ್ಜುತ್ತಾ ಬಂದರೆ ಹಲ್ಲು ಹಾಳಾಗುತ್ತದೆ. ಇದನ್ನು ಹಲ್ಲುನೋವು ಇಲ್ಲದವರು ಕೂಡ ಪ್ರತಿ ದಿನ ಮುಖ ತೊಳೆಯುವಾಗ ಹಲ್ಲಿಗೆ ಉಜ್ಜುತ್ತಾ ಬಂದರೆ ಹಲ್ಲು ಮುತ್ತಿನಂತೆ ಶುಭ್ರವಾಗಿ ಹಲ್ಲುಗಳಿಗೆ ಬಿಗುವು ಕೊಟ್ಟು ಬಾಯಿ ದುರ್ಗಂಧವನ್ನು ತೆಗೆದು, ಬಾಯಿಗೆ ಮನೋಹರವಾದ ಸುವಾಸನೆಯುಂಟುಮಾಡುತ್ತೆ. ಅನೇಕ ತಾಳ್ವಾರ್ಗಳೂ, ಡಾಕ್ಟ ರ್, ಪಂಡಿತರೂ ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸಿ ಅನೇಕ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುತ್ತಾರೆ. ಇದು ಅನೇಕ ಮೂಲಿಕೆಗಳಿಂದ ತಯಾರಿಸಿ ಬಹು ರಮಣೀಯವಾದ ಸುವಾಸನೆ ಕೊಟ್ಟಿರುತ್ತದೆ. ನಾವಿರಾರು ವಿಕ್ರಯ. 1 ಡಜನ್ ತರಿಸಿ ನೋಡಿ. ಇದರ ಬೆಲೆ ಸೋಡಾದ ಡಬ್ಬಿ 1 ಕ್ಕೆ 6 ಆಣೆ. ಡಜನ್ ಗೆ 4 ರೂಪಾಯಿ.
ನಮ್ಮ ವಿಳಾಸ.—ಮ್ಯಾನೇಜರ್, ಟಿ. ಕೆ. ರಾಮಚಂದ್ರರಾವ್,
[163-1] 16, ತಿರುಪಳ್ಳಿ ಬೀದಿ ಸಾಹುಕಾರ್ ಪೇಟೆ ಮದರಾಸು.

ಗೃಹಕೃತ್ಯದ ನೋಟೀಸು.

ಹೊಸಕೋಟೆ ತಾಲ್ಲೂಕು ನಂದಗುಡಿ ಕಸಬಾದಲ್ಲಿದ್ದು ಹಾಲಿ ಬೆಂಗಳೂ ರು ಸಿಟಿ ಹಳೇ ತರಗುಪೇಟೆಯಲ್ಲಿ ಮಂಡೀ ವ್ಯಾಪಾರಮಾಡುವ ತುಪ್ಪದ ಚಿಕ್ಕ ಕೆಂಚಪ್ಪನವರ ಮಗ ವೀರಣ್ಣನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂ ದರೆ—ನನ್ನ ನಾಜ ದೊಡ್ಡಪ್ಪನ ಮಗ ತುಪ್ಪದ ಚನ್ನಬಸಪ್ಪನು ತಾ 23-3-1915 ರಲ್ಲಿ ಪ್ಲೇಗ್ ಜಾಡ್ಯದಿಂದ ತಾ. 26-3-15 ರಲ್ಲಿ ಕಾಲವಾದನು ಈತನಿಗೆ ಗಂಡು ಅಥವಾ ಹೆಣ್ಣು ಮಕ್ಕಳುಗಳು ಯಾರೂ ಇರುವುದಿಲ್ಲ. ಈ ನೋಟೀಸು ಕೊಟ್ಟಿರುವ ವೀರಣ್ಣ ಮತ್ತು ಈತನ ತಮ್ಮ ಚನ್ನಬಸಪ್ಪನಿಗೆ ಉತ್ತರ ವಾರಸ್‌ದಾರರಾಗಿರುತ್ತಾರೆ. ಫೌತ ಚನ್ನಬಸಪ್ಪನಿಗೆ ಯಾವ ನಾಲಾ ಇರುವುದಿಲ್ಲ. ಈತನ ಹೆಂಡತಿ ಚಿಕ್ಕರುದ್ರಮ್ಮನು ಇತರರ ದುರ್ಬೋಧನೆ ಒಳಪಟ್ಟು ನಮ್ಮಗಳ ಮತ್ತು ಫೌತ ಚನ್ನಬಸಪ್ಪನ ಪಿತ್ರಾರ್ಜಿತವಾದ ಕಟು ಬದ ಸ್ವತ್ತುಗಳನ್ನು ಪರಭಾರೆ ಮಾಡಲು ಯತ್ನಿಸುವುದರಲ್ಲಿರುತ್ತಾಳೆಂದು ತಿಳಿಯಬರುತ್ತೆ. ಆಕೆಯಿಂದ ಖರೀದಿಯಾಗಲಿ, ಭೋಗ್ಯವಾಗಲಿ, ಅಡವು ಆಧಾರವಾಗಲಿ ಹೊಂದುವವರಿಗೆ ಸದರಿ ಸ್ವತ್ತುಗಳಲ್ಲಿ ಯಾವ ವಿಧವಾದ ಹಕ್ಕೂ ಉಂಟಾಗಲಾರದು. ಹಾಗೆ ಪರಭಾರೆ ಮಾಡಿದಲ್ಲಿ ಅದು ಈ ನೋಟೀಸು ಕೊಟ್ಟಿರುವ ನನ್ನ ಹಕ್ಕನ್ನು ಎಂದಿಗೂ ಬಾಧಿಸಲಾರದು ಎಂಬುದನ್ನು ಎಲ್ಲರಿಗೂ ಸ್ಪಷ್ಟಪಡಿಸಿ ಎಚ್ಚರಿಸಿದೇನೆ. [165-1] ತುಪ್ಪದ ವೀರಣ್ಣ.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರವಿಂ ರೂ. 3-0-0.
ಆಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆ ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉದುರುವುದಕ್ಕೆ ಧರೋತಿಯಾಗಿಯೂ ನೆಟ್ಟಿ ನುಮನಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಒಬ್ಬ ಹೆಂಗಸು ಸೀರೆಯ ಉದ್ದ 18 ಮೊ ಳ. ಸುಂದರವಾದ ರಂ ಗು ಬಂದದ್ದು ಕೆಲ ಪರೀಕ್ಷಿಸಿ. ವಿಳಾ— ಪಿ. ಕೆ. ಕಂಟುಸಾ
[111-12] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಜುಯೆಲ್ಡ್ ಸ್ಪ್ರಿಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

ಇದರ ಕ್ರಯ 8 ಬಹುಮಾನಗಳ ಸಹಿತ ರೂ. 3-4-0.

ಪ್ರಿಯ ಮಿತ್ರರೇ, ಈ ಪತ್ರಿಕೆಯಲ್ಲಿ ತೋರಿಸಿರುವ ಭಾರಿ ಕ್ರಯದ ಗಡಿಯಾರಗಳು ಸೀಮೆಯಿಂದ ನೇರವಾಗಿ ನಮಗೆ ಸ್ವಲ್ಪಮಾತ್ರ ಬಂದಿರುತ್ತೆ. ಈ ಗಡಿ



ಯಾರವನ್ನು ಭಾರಿ ಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ದೊರೆಗಳು ರೈಲ್ವೆಯವರು ಕೊಂಡುಕೊಳ್ಳುತ್ತಾ ಇದಾರೆ. ಈ ಗಡಿಯಾರ ಭಾರಿ ಕ್ರಯದ ಸಾಮಾನುಗಳಿಂದಲೂ, ಸಾಣ್ಯವಾದ ಯಂತ್ರಗಳಿಂದಲೂ ತಯಾರಿಸಲ್ಪಟ್ಟಿದ್ದು. ಈ ಸೊಗಸಾದ ಗಡಿಯಾರವನ್ನು ಕೂಡಲೆ ಬರೆದು ತರಿಸಿಕೊಳ್ಳಿ. ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶವಾಗಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಇಟ್ಟಿರುತ್ತೇವೆ. 6 ವರುಷದ ಗ್ಯಾರಂಟಿ ಕೊಡುತ್ತೇವೆ. ಇತರ ಕಂಪನಿಗಳಿಂತ ನಾವು ಹೆಚ್ಚು ಶ್ಲಾಘನೆ ಮಾಡಲಾರೆವು. ಬಹುಮಾನದ ಪಟ್ಟಿ— (1) ಸುಂದರವಾದ ಸರಪಣಿ, (2) ಕಂಪಾಸ್, (3) ಜರ್ಮನ್ ಸಿಲ್ವರ್, (4) ಉಂಗುರ, (5) ಇಂಗ್ಲೀಷು ನಮೂನೆ ಕನ್ನಡಿ, (6) ಚಾಕುಗಳು, (7) ಹವಾ ಡಿ ಸೆಟ್, (8) ಸುವಾಸನೆಯುಳ್ಳ ಪರಿಮಳ ತೈಲ.
ನಮ್ಮ ವಿಳಾಸ:—ಜುಯೆಲ್‌ಸರ್ ವಾಚ್, [163-1] 84, ಮಿಂಟು ಸ್ಟ್ರೀಟು, ಪಾರ್ಕ್ ಟೌನ್, ಮದರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಅಗಸ್ಟ್ 5 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—(1) ಷೇರು ಮೊಬಲಗು	.... ರೂ.	1,00,000
,, (2) ರಿಜರ್ವ್ ಫಂಡು	.... ,,	60,000
,, (3) ಡಿಪಾಜಿಟ್ಟುಗಳು	.... ,,	33,80,463
,, (4) ಇತರೆ	.... ,,	20,886
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	44,61,349

ಲೇಣಿ:—(1) ಕೈಮುಲಕ್ಕಿ, ಬ್ಯಾಂಕುಗಳಲ್ಲಿರುವ ಹಣ	ರೂ.	10,46,748
,, (2) ಖಾತೆ ಮತ್ತು ಇತರ ಸಾಲಗಳು	..... ,,	29,63,985
,, (3) ಡಿಸ್ಕೌಂಟುಮಾಡಿದ ಸಾಮಾದೆಯಂಡಿಗಳು	,,	3,62,760
,, (4) ಇನ್‌ವೆಸ್ಟ್ಮೆಂಟುಗಳು	..... ,,	60,164
,, (5) ಏಜೆನ್ಸಿಗಳಲ್ಲಿರುವ ಮೊಬಲಗು	..... ,,	4,948
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	..... ,,	15,850
,, (7) ಇತರೆ	..... ,,	7,694
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	44,61,349

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು, ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳು, ಇವರಿಗೆ.

ಪ್ರಜೆಗಳ ಮೇಲಿನ ಅಭಿಮಾನದಿಂದ ಈ ಕೆಳಗೆ ನಮೂದಿಸುವ ವಿಷಯಗಳನ್ನು ಚರ್ಚಿಸಿ ಇತ್ಯರ್ಥಪಡಿಸಿಕೊಡಬೇಕಾಗಿ ಕೋರಲ್ಪಟ್ಟಿದೆ:—

(1) ಮಿಸ್ಸು ಜಮೀನ್‌ಗಳಿಗೆ ಗ್ರಾಮದ ನೌಕರರಾದ ತೋಟಿಗೆ ಎಕರೆ 1 ಕ್ಕೆ 3 ಸೇರು, ತಳವಾರಿಗೆ ಎಕರೆ 1 ಕ್ಕೆ 3 ಸೇರು, ಈ ರೀತಿ ಎಕರೆಗೆ 6 ಸೇರು ರಾಗಿಯನ್ನು ಕೊಡಬೇಕೆಂದು ಮಾಡಿರುವ ಕಟ್ಟಳೆಯಿಂದ ರೈತರಿಗೆ ತುಂಬಾ ತೊಂದರೆಯಾಗಿರುತ್ತೆ. ಈ ಹುಕುಂ ಹುಟ್ಟಿ ಸುಮಾರು 40 ವರ್ಷವಾಗಿದೆ. ಆಗಿನ ಕಮೀಷನರ್ ಈ ಹುಕುಂ ಕೊಟ್ಟಿರಬಹುದು. ಆದರೂ ಮೈಸೂರು ಸೀಮೆಯಲ್ಲೆಲ್ಲಾ ಈ ಹುಕುಂ ಜಾರಿಗೆ ಬಂದಿರುವುದಿಲ್ಲ. ಈ ತೋಟಿ, ತಳವಾರಿಗಳಿಗೆ ಇನಾಂತಿ ಜಮೀನ್ ಇರುತ್ತೆ. ಮಿಸ್ಸು ಎಕರೆ 1 ಕ್ಕೆ 6 ಅಣೆ ಭಾಗಾಯ್ತು ರೂ. 1-8-0 ವರೆಗೂ ಸರ್ಕಾರಕ್ಕೆ ಕಂದಾಯದ ತೆರಿಗೆ ಇದೆ. ಇದರ ಜೊತೆಗೆ ಎಕರೆಗೆ 6 ಸೇರು ರಾಗಿಯನ್ನು ಕೊಡಬೇಕಾದರೆ ಸರಾಸರಿ 6 ಅಣೆಯಷ್ಟು ಆಗಬಹುದು. ಸರ್ಕಾರದ ಕಂದಾಯದಲ್ಲಿ ಅರ್ಧವನ್ನು ಮೀರುವ ಇದನ್ನು ರೈತರು ಕೊಡಬೇಕಾದರೆ ರೈತರ ಗತಿ ಏನು? ಶ್ಯಾನುಭೋಗರಿಗೆ, ಪಟೇಲರಿಗೆ ಕೊಡುವ ಫೀಜಿಗೆ ಬೇರೆ ಉಭಯತ್ರರಿಂದ 8 ರೂಪಾಯಿ ಸರ್ಕಾರದವರೇ ನಿಯಮಿಸಿ ಕೊಡುತ್ತಾ ಇಲ್ಲವೇ? ತೋಟಿ, ತಳವಾರಿಗಳಿಗೆ ಕೇವಲ 50 ರೂಪಾಯಿ ಕೊಡಬೇಕಾಗುತ್ತದೆಯಲ್ಲಾ! ಇದು ಕೊಡಬಹುದೇ? ಅವರವರ ಸ್ಥಿತಿ, ಜವಾಬ್ದಾರಿ, ಯೋಗ್ಯತೆ, ಕಾರಣವನ್ನು ಏನೂ ನೋಡದೆ ಹುಕುಂ ಆಗಿರುವುದನ್ನು ಬದಲಾಯಿಸಿಕೊಟ್ಟು ಅಥವಾ ಮೊದಲು ಮಾಡಿಸಿಕೊಂಡ ಲೆಕ್ಕಾಗಿ ಸುಮಾರು 20 ವರುಷಗಳಿಂದ ದಸರಾ ದರ್ಬಾರಿನಲ್ಲಿ ಚರ್ಚಿಸುತ್ತಾ ಬಂದಿದ್ದಾಗ್ಯೂ ನಮ್ಮ ದುರದೃಷ್ಟದಿಂದ ವ್ಯವಸ್ಥೆಯಾಗಲಿಲ್ಲ. ಆಗಲೂ ಖಂಡಿತವಾಗಿಯೂ ಇವರಿಗೆ ರಾಗಿಯ ಕೊಡಬೇಕಾದದ್ದು ನ್ಯಾಯವೇ? ಅನ್ಯಾಯವೇ? ಇದಂತೆ ಕೊಟ್ಟರೆ ರೈತರು ಬದುಕಬಹುದೇ? ಇದನ್ನು ಈ ವರ್ಷವೇ ಇತ್ಯರ್ಥಪಡಿಸಿಕೊಡಬೇಕು; ಅಥವಾ ಇದಕ್ಕಾಗಿ ರೈತರು ಕೊಡುವ ಕಂದಾಯದ ಮೇಲೆ ಪಟೇಲರಿಗೆ ಕೊಡುವ ಫೀಜಿಗೆ ರೂಪಾಯಿಗೆ 6 ಪೈ ಬೀಳುವದರಿಂದ ಈ ತೋಟಿ, ತಳವಾರ ಉಭಯತ್ರರಿಂದ 3 ಪೈ ಆದರೂ ತೆರಿಗೆ ಹಾಕಿ ಅವರಿಗೆ ಸರ್ಕಾರದಿಂದ ಸಂಬಳ ಕೊಡುವುದಕ್ಕಾಗಲಿ, ಅಥವಾ ಈ ತೆರಿಗೆಯನ್ನೇ ಅವರಿಗೆ ವಹಿಸುವುದಕ್ಕಾಗಲಿ ಖಂಡಿತವಾದ ಹುಕುಂ ಮಾಡಿಸಿಕೊಡಬೇಕು. ಪೂರ್ವದಲ್ಲಿ ಒಂದು ಸೇರು ರಾಗಿಗೆ 2 ಕಾಸು ಇತ್ತು. ಈಗ ಒಂದು ವರ್ಷ ಬೆಳೆಯಿದ್ದರೆ ಮೂರು ವರ್ಷ ಕ್ಷಾಮ ಬರುತ್ತಾ, ರೂಪಾಯಿಗೆ 12 ಸೇರು ರಾಗಿ (1 ಸೇರು ರಾಗಿಗೆ 1 ಅಣೆ 4 ಪೈ) ಆಗುತ್ತಾ ಬಂದಿದೆ. ಇದನ್ನು ಸರ್ಕಾರದವರು ಚಿತ್ತಕ್ಕೆ ತರಬೇಕೆಂದು ಅರಿಕೆ ಮಾಡಬೇಕು. ಯೋಚಿಸುತ್ತೇವೆ ಗವರ್ನ್ಮೆಂಟಿನವರು ಅಪ್ಪಣೆಕೊಡಿಸುತ್ತಲೇ ಬಂದಿದ್ದಾರೆ. ಖಂಡಿತವಾಗಿಯೂ ಚಿತ್ತಕ್ಕೆ ತೆಗೆದುಕೊಳ್ಳಬೇಕು; ಇಲ್ಲವೇ ಇತ್ಯರ್ಥ ಮಾಡುವುದಿಲ್ಲ ವೆಂತ ಖಂಡಿತವಾದ ಆಜ್ಞೆಯಾಗಬೇಕು.

(2) ಮೈಸೂರು ಕರ್ನಾಟಕ ದೇಶವಾಗಿದೆ. ಪ್ರಜೆಗಳೆಲ್ಲಾ ವಿದ್ಯಾವಂತರಾಗಬೇಕೆಂತ ಸರ್ಕಾರದ ಪ್ರಯತ್ನವೂ, ಪ್ರಜೆಗಳಿಗೆ ಪ್ರೋತ್ಸಾಹವೂ ಕೊಡುತ್ತಿದ್ದಾರೆ. ನಮ್ಮ ದೇಶದವರಿಗೆಲ್ಲಾ ಕನ್ನಡವೇ ಮುಖ್ಯ ದೇಶಭಾಷೆಯಾಗಿದೆ. ತಾಲ್ಲೋಕು ಜಾಗಗಳಲ್ಲಿರುವ ಆಂಗ್ಲೋ ವರ್ನ್ಯಾಕ್ಯುಲರ್ ಸ್ಕೂಲುಗಳಲ್ಲಿ ಮಾತ್ರ ಲೋಯರ್ ಸೆಕಂಡರಿ ಕ್ಲಾಸಿದೆ. ಹೋಬಳಿ ಜಾಗಗಳಲ್ಲಿರುವ ವಿಲ್ಲೇಜ್ ಎಲಿಮೆಂಟರಿ ಸ್ಕೂಲುಗಳಲ್ಲಿ ಲೋಯರ್ ಸೆಕೆಂಡರಿ ಎಂಬ 4 ನೆ, 5 ನೆ ಕ್ಲಾಸುಗಳನ್ನು ಇಡದೆ ಇರುವದರಿಂದ ಬಾಲಕರು ಕನ್ನಡ ಲೋಯರ್ ಸೆಕೆಂಡರಿಯ ವರೆಗೂ ಪಾಸ್ ಮಾಡಲು ತುಂಬಾ ಅನನುಕೂಲವಾಗಿದೆ. ಬಡ ವಾಸವಾಡುವ ಗ್ರಾಮದಲ್ಲೇ ಸ್ಕೂಲಿದ್ದಾಗ್ಯೂ ವಿದ್ಯಾಭ್ಯಾಸಂಗ ಮಾಡಲು ತೊಂದರೆಯಾಗಿರುವವರಂತ ತಾಲ್ಲೋಕು ಜಾಗಗಳಿಗೆ ಹೋಗಿ ವಿದ್ಯಾ ಓದಬೇಕಾದರೆ ಬಾಲಕರ ಸಂರಕ್ಷಣೆ ಅನ್ನವಸ್ತ್ರಾದಿಗಳಿಗೆ ಗತಿ ಏನು? ಇದು ಮುಖ್ಯವಾಗಿ ಆಗಬೇಕಾದ ಏರ್ಪಾಟು. ಆದ್ದರಿಂದ ದಯವಿಟ್ಟು ಈ ವಿಚಾರವನ್ನು ಚರ್ಚಿಸಬೇಕು.

(3) ಗ್ರಾಮಾಂತರಗಳಲ್ಲಿ ಮೋಟೆಗಳು ಸಾಕುವದು ಬಹಳ ಪ್ರಬಲವಾಗಿ ಕಬ್ಬಿನ ಮಿಸ್ಸಿ ಬೆಳೆ ಮಾಡುವ ಪ್ರದೇಶಗಳಲ್ಲಿ ಫಸಲ್ ಕಾಲವಾದ ನಾಲ್ಕು ತಿಂಗಳು ಮಾತ್ರ ಮೋಟೆಗಳನ್ನು ಕಾಯುತ್ತಾ ಬಂದಾಗ್ಯೂ ಬಾಕಿ ಎಂಟು ತಿಂಗಳು ಕಾಲ ಪೋಲಿಯಾಗಿ ಕಾಯದೇ ಬಿಟ್ಟುಬಿಡುವದರಿಂದ ಯಾವುದೊಂದು ಫಸಲ್ ಮಾಡುವುದಕ್ಕೂ ತೊಂದರೆಯಾಗಿರುವ ಅಂಶ ಎಲ್ಲರಿಗೂ ಗೊತ್ತೇ ಇದೆ. ಇದಕ್ಕಾಗಿ ಕೆಲವರೆ ರಾಸಿಗೆ 2 ಅಣೆ ಬಿಡ್ಡಿ ಫಾರ್ಮ ಮಾಡಿದ್ದಾರೆ. ಎಲ್ಲಾ ಕಡೆಯೂ ಇವರಂತೆ ಆಗಲಿಲ್ಲ. ಆದಾಗ್ಯೂ ಮೋಟೆ ಸಾಕುವವರಿಂದ ಆಗುವ ತೊಂದರೆ ತಪ್ಪುವುದಿಲ್ಲ. ಮೋಟೆ ಕಡಿಮೆಯಾಗಿದ ಹೊಲಗಳಲ್ಲಿ ಅಭಿವೃದ್ಧಿಗೆ ಬರುವದೇ ಇಲ್ಲ. ಇತರ ಜಾನ್‌ವಾರುಗಳು ಮೇಯುವರೆ ಗಿಡದಲ್ಲಿ ಕಂಪು ಹುಟ್ಟಿ ಆಗುತ್ತವೆ. ಮೋಟೆಗಳಿಂದ ಮರಗಳೆಲ್ಲಾ ನಾಶವಾಯಿತು. ಮರಗಳು ಕಡಿಮೆ ಯಿಂದ ಮಳೆ ಕಡಿಮೆಯಾಯಿತು. ಮಳೆ ಕಡಿಮೆಯಾದ್ದರಿಂದ ಬೆಳೆ ಕಡಿಮೆಯಾಗಿ ಕ್ಷಾಮ ಪ್ರಾಪ್ತವಾಗುತ್ತಲೇ ಇದೆ. ಇದಕ್ಕೆ ಯಾವುದಾದರೂ ಏರ್ಪಾಟು ಮಾಡಿಸಿಕೊಡಬೇಕು.

ಈ ಮೂರು ವಿಷಯಗಳೂ ಸಕಲ ಜನರಿಗೂ ಉಪಯುಕ್ತವಾದದ್ದರಿಂದ ತಮ್ಮಿಂದ ಇತ್ಯರ್ಥಪಡಿಸಿಕೊಡಬೇಕಾದ ಭಾರ ತಮ್ಮ ಪದವಿಗೆ ಸೇರಿರುತ್ತದ್ದರಿಂದ ಖಂಡಿತವಾಗಿಯೂ ಇತ್ಯರ್ಥವಾಗುತ್ತೆಂತ ನಂಬಿ ಕೃತಜ್ಞರಾಗಿದ್ದೇವೆ.

ದೇವನಹಳ್ಳಿ ತಾಲ್ಲೋಕು ನಾಗಸಂದ್ರದ ಗ್ರಾಮಸ್ಥ ಲಿಂಗಣ್ಣಯ್ಯ ವಗೈರೆ ಪ್ರಜೆಗಳು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಶೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಪವೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ಗಿ ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-9]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಂಬಾ, ಕಾಶಿ.

ತ್ವರೆಮಾಡಿ ಹೊಸ ನಮೂನೆ ಗಡಿಯಾರ ಒಳ್ಳೆ ಲಾಭ

"ಲಾಸ್" ಸ್ಪ್ರಿಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

8 ಬಹುಮಾನಗಳ ಸಹಿತ ರೂಪಾಯಿ 2-4-0 ಮಾತ್ರ.

5 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಮಿತ್ರರೇ! ಈ ಭಾರಿ ಕ್ರಯದ ಗಡಿಯಾರ ನಾವು ಸೀಮೆಯಿಂದ ಡೈರೆಕ್ಟಾಗಿ ತರಿಸಿರುತ್ತೆ. ಈ ಗಡಿಯಾರ ಬಲಿಷ್ಠವಾದ ಸಾಮಾನುಗಳಿಂದಲೂ,



ಸಾಧ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದು ಇಂಗ್ಲಿಷು ನಮೂನೆ ಗಡಿಯಾರ ಈ ಗಡಿಯಾರವನ್ನು ಭಾರಿ ಭಾರೀ ಆಫೀಸರುಗಳು, ರೈಟರ್‌ಗಳು ಕೊಂಡುಕೊಳ್ಳುತ್ತಾ ಇದ್ದಾರೆ. ಬಹು ರಮಣೀಯವಾದ ಗಡಿಯಾರ ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶವಾಗಿ ಸರ್ವರಿಗೂ ಸಂತೋಷಪಡಿಸಬೇಕೆಂದು ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಗಡಿಯಾರವನ್ನು ಕೂಡ್ಲೆ ಬರೆದು ತರಿಸಿಕೊಳ್ಳಿ. ಬಹುಮಾನಗಳ ತಪಸೀಲು.—(1) ಸುಂದರವಾದ ಸರಪಣಿ, (2) ಕಂಪಾಸ್, (3) ಪರ್‌ಸ್ಟ್, (4) ಸುವಾಸನೆಯುಳ್ಳ ಪರಿಮಳ ಶೀಸೆ, (5) ಉಂಗುರ, (6) ಪೇಟು ಗುಂಡಿ, (7) ಕೈಗುಂಡಿಗಳು, (8) ಸುಂದರವಾದ ಗುಂಡಿ.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. [149-2]

ವಿ. ಎ. ಎಸ್. ಖಾನ್, ಜನರಲ್ ಮರ್ಚೆಂಟ್, 3 ಇರುಳಪ್ಪನ ಬೀದಿ, ಮದರಾಸ್.



ಪಂಡಿತ್ ಎಸ್. ಗರಳಪುರಿ, ಮೈಸೂರು,

ಪ್ರಸಿದ್ಧ ಮಹೌಷಧಿಗಳು.

ಜ್ವರದ ಮಾತ್ರೆ 8 ಆ. ಕೆಮ್ಮಿನ ಮಾತ್ರೆ 8 ಆ. ಅಜೀರ್ಣದ ಮಾತ್ರೆ 12 ಆ. ಬಾಲಸಂಜೀವಿನಿ 5 ಕ್ಕೆ 1 ರೂ. ಸರಳಭೇದಿ 8 ಆ. ಅಮೃತಂಜಿ ಮಾತ್ರೆ 8 ಆ. ಟಾನಿಕ್ ಮಾತ್ರೆ 1 ರೂ. ಕಸ್ತೂರಿಮಾತ್ರೆ 5 ಶೀಸೆಗೆ 1 ರೂ. ಶಾಲರಾ ಮಾತ್ರೆ 1 ರೂ. ಉಬ್ಬಸದ ಮಾತ್ರೆ 12 ಆ. ಬಾಧಾನಿವಾರಿಣಿ 5 ಡಬ್ಬಿಗೆ 1 ರೂಪಾಯಿ. ಕುಳಿ ಕಡ್ಡಿ ಮುಲಾಮು 6 ಅಣೆ. ಮುಖರಂಜಕ ಮಾತ್ರೆ 4 ಅಣೆ., 5 ಕ್ಕೆ 1 ರೂಪಾಯಿ. [126-8]

ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ.

1,000 ವಾಚುಗಳ ಮಾರಾಟ.

"ಬೊಂಬೇ ಮೈಲ್ ಲೀವರ್ ವಾಚ್.

ಗ್ರಾಹಕರೇ,—ಈ ಮೇಲೆ ಕಾಣಿಸಿದ ವಾಚು ಅತೀ ಮನೋಹರವಾಗಿ ಸೆಕೆಂಡಹೆಂಡ್ ಇದ್ದು ನೂತನ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಪ್ರಪಂಚದಲ್ಲೆಲ್ಲಾ ಇದರ ಕ್ರೀರ್ತಿಯನ್ನು ಹರಡಬೇಕೆಂಬದಾಗಿ ಅತೀ ಸುಲಭ ಖರೀದಿಯನ್ನು ಇಟ್ಟಿರುತ್ತೇವೆ. ಕಡಿಮ್ಮೆ ಕ್ರಯದ ವಾಚುಗಳು ಹೆಚ್ಚು ಕಾಲಿಯೂ ಇತರರಲ್ಲಿ ನೋಡಿಯೂ ಇರಬಹುದು. ಆದರೆ ಮೇಲೆ ಕಾಣುವ "ಬೊಂಬೇ ಲೀವರ್ ವಾಚು" ಎಂಬದು ಶೀಘ್ರತರದ ವಾಚಲ್ಲ. ಇದು ಹೆಸರಾದ ಕಂಪೆನಿಯಲ್ಲಿ ತಯಾರಿಸಲ್ಪಟ್ಟು ಶ್ರೇಷ್ಠವಾದ ಮತ್ತು ಬಲಿಷ್ಠವಾದಲೀವರ್ ಕೇಸವಾಗಿದೆ. ಸೋ



ಮುವರೆ ಗಂಭೀರವಾಗಿಯೂ ಸಮಯಾನುಸಾರ ಕೆಲಗೆ ಬಿದ್ದಾಗ್ಯೂ ನಿಲ್ಲದೆ ನಡೆಯುತ್ತದೆ. ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡಿಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವುದಿಲ್ಲ. ವಾಚು 1 ರ ಬೆಲೆ ರೂ. 2-4-0. ಪೋಸ್ಟೇಜ್ ಮತ್ತು ವಿ. ಪಿ. ಅಣೆ 4 ಅಧಿಕವಿದೆ. [139-6]

(2) ವಾರಕ್ಕೊಮ್ಮೆ ಕೀಲಿ ಕೊಡುವ ವಾಚು 1 ಕ್ಕೆ ರೂ. 7-12-0.

ನಮ್ಮ ವಿಳಾಸ:—ದಿ ಊಲನ್ ಮಾರ್ಟ್,

ನಂ. ೧, ಮಂಗಳೂರು, ದಕ್ಷಿಣ ಕನ್ನಡಾ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯು ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜ ಸೇರಿ ಒಂದಕ್ಕೆ 3 ಅಣೆ; 6 ಕ್ಕೆ 11 ಅಣೆ; 12 ಕ್ಕೆ ರೂ. 1-10-0. ಇದು ಜನವರಿ ತಿಂಗಳು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ।

[64-20]



ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಕೀಲು ಹಿಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ತಕ್ಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮುತ್ತು ಕಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ತಕ್ಕೊಳ್ಳಬೇಡಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಹಿಬ್ಬು ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಬಹಳ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ಖರ್ಚಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾಳು

ಮಾತಿನಿಂ ವೈದ್ಯರ ಸಮಯವನ್ನು ಕಾದು ಮೊರೆಯಿಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾತಶೂಲ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಅಲಿಹೊಸತೆ ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಅಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಮ್. ಡಿ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ವಿ ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯುರಿಲೇನ್ ನಂ 8, ಬೊಂಬಾಯಿ, ಅವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಿಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ಹಳ್ಳಿಗೆ ಪ್ರತಿನಿತ್ಯವೂ ಬರುವ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಬಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-50] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು · ಜಲದೋಷ · ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಪಟಿಯ್ಯ ಸಾರಿ [illegible]ನವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣುತಿರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0
ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-29]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಶ್ಮಲವಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕು, ಕಶ್ಮಲ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ಕೃಷ್ಟವಾದದ್ದೆಂದು ಎಲ್ಲರೂ ಒಪ್ಪಿದಾರೆ. ಹಿಡಿದವನಷ್ಟೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಟ್ಟಿನಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಕೇಳಿದಂತೆ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ಹಾಗೇ ಉಪಯೋಗಿಸಿ ನಮಗೆ ಬರೆದರೆ ಕಡವಾಡಿದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಕಾಸೂಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಕಾದ ಕೆಳಗಿನ ವಿಳಾಸಕ್ಕೆ ಬರೆಯಬೇಕು.

[149–1] ನಮ್ಮ ವಿಳಾಸ—ವಿ. ಎ. ಎಸ್. ಬಾಣಿ, ನಂ. ೩, ಇರುಳಪ್ಪನ ಬೀದಿ, ಮದರಾಸು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1—0—0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೆರೆಳ ಹನ್ನೆ ಸುಕ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಆರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮಡವನ್ನು ಪರಿಹರಿಸುವದು. ಕ್ಷೌರದಲ್ಲಿ ಮುಖವನ್ನು ತೇಗಿದು, ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೇಳತಕ್ಕ ಉಲ್ಲಾಸವನ್ನು ಒದಗುವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚ ಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿಲಾಪತ್ಯ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಮೂರುತ್ತು ದಿವಸಗಳ ವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮುಕ್ಕರು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1—0—0.

ಇನಾಂ ಸಾಮಾನುಗಳ ಪಟ್ಟಿ:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ಪಂಚವ ಬಾಚಣಿಗೆ 1, ಮುಖನೋಡಿಕೊಳ್ಳುವ ಕನ್ನಡಿ 1 ಜರ್ಮನ್, ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ಕಾಂಬುದವುಪತ್ರ 32, ಕೊಂಡೆ ಗಿಣಿಗಳು 6, ಕಾಲೋನೇಷನ್ ಬ್ರೂಚ್ 1, ಅರದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಲ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. 44, ನಂಬುಲಯ್ಯರ ಬೀದಿ, ಮದರಾಸು.

[156–2]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

30 – 7 – 1915 ರಿಂದ 6 – 8 – 1915 ರ ವರೆಗೆ

ಸ್ಥಳ		ಪ್ಲೇಗ್ ಕೇಸ್ ಪ್ರ.	ಪ್ಲೇಗ್ ಸತ್ತ ಪ್ರ.	ಕಾಲರಾ ಕೇಸ್ ಪ್ರ.	ಕಾಲರಾ ಸತ್ತ ಪ್ರ.
ಬೆಂಗಳೂರು	ಸಿಟಿ	2	2	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		17	3	0	0
ಮೈಸೂರು	,,	19	20	0	0
ಕೋಲಾರ	,,	8	6	0	0
ಕೋಲಾರ ಚಿನ್ನದ ಗಣಿಗಳು		0	0	0	0
ತುಮಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	0	0	0	0
ಶಿವಮೊಗ್ಗ	,,	4	1	0	0
	ಜುಮ್ಲಾ	50	32	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರ ಉತ್ತರಾಯಣೆ ವರ್ಷಋತು ಶ್ರಾವಣ ಶುದ್ಧ ದಶಮಿ ಶುಕ್ರವಾರದಿಂದ ಶ್ರಾವಣ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ ಸನ್ 1915 ನೇ ಆಗಸ್ಟ್

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸಂಕ್ರಮಣ ತಿಥಿ
20	ಶುಕ್ರ *	ದಶಮಿ	16 50	ಜ್ಯೇಷ್ಠ	2 30	4
21	ಶನಿ ;;	ಏಕಾದಶಿ	9 48	ಪೂರ್ವಾಷಾಢ	54 31	5
22	ಭಾನು ‡	ದ್ವಾದಶಿ	4-16	ಉತ್ತರಾಷಾಢ	54-33	6
23	ಸೋಮ †	ಚತುರ್ದಶಿ	54-26	ಶ್ರವಣ	48 35	7
24	ಮಂಗಳ §	ಪೌರ್ಣಮಿ	51-6	ಧನಿಷ್ಠ	47-1	8
25	ಬುಧ ::	ಪಾಡ್ಯಮಿ	48-46	ಶತಭಿಷ	46-23	9
26	ಗುರು	ಬಿದಿಗೆ	47-30	ಪೂರ್ವಾಭಾದ್ರ	46-52	10

* ಏಕಾದಶೀ ತಿಥಿ, ವರಮಹಾಲಕ್ಷ್ಮೀವ್ರತ, ಮಳೆ ನಕ್ಷತ್ರ—ಮುಖಾ 3 ನೇ ಪಾದ. ;; ಸರ್ವತ್ರ ಏಕಾದಶಿ, ಶ್ರಾವಣ ಶನಿವಾರ. ‡ ಪ್ರದೋಷ, ದಗ್ಧಯೋಗ. † ಋಗುಪಾಕರ್ಮ, ಮಳೆ ನಕ್ಷತ್ರ—ಮುಖಾ 3 ನೇ ಪಾದ § ಮಂಗಳಗೌರೀವ್ರತ, ಯಜುರುಪಾಕರ್ಮ. :: ಗಾಯತ್ರಿ ಜಪ.

Printed and Published by the Rev. H. Gulliford, Proprietor and Manager, Wesleyan Mission Press, Mysore. 19/8/1915.

REGISTERED
M. 26

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ — ಮೈಸೂರು—ಸರ್ ೧೯೧೫ ನೇ ಇಸವಿ ಆಗಸ್ಟ್ ತಾರೀಖು ೨೬ ನೇ ಗುರುವಾರ. — ಸಂಚಿಕೆ ೧೩

ಇಲ್ಲಿ ನೋಡಿ : ಅಭಿನವ ! ಅಕ್ಷರಾಂಜಲಿ !!

ವಿದ್ಯಾರ್ಥಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿಸುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟ್ 4 ಆಣೆ. ಅಡ್ರಸ್—ಅಕ್ಷರಾಲಯ, ಮೈಸೂರು. [147-6]

THE SCIENTIFIC CUTTER

Revised and enlarged second edition of the Scientific Cutter is a masterly useful book, on cutting Men's, Children's and Women's garments on scientific principles. **Price Rs. 2; with Postage Rs. 2-3-0 only.**

RAO'S TAILORING COLLEGE,
[167-2] **318, Princess Street, Bombay No. 2.**

ಉತ್ತಮವಾದ ಪುಸ್ತಕಗಳು.

[135-4]

(1) "ಪ್ರಫುಲ್ಲ" ಪತ್ತೆದಾರಿಯ ಕಥೆ ಈಗತಾನೆ ಅಚ್ಚಾಗಿದೆ. ಪ್ರಾರಂಭಿಸಿ ಮುಗಿಸುವವರೆಗೂ ನಡುವೆ ನಿಲ್ಲಿಸಲು ಮನಸ್ಸೇ ಬರುವದಿಲ್ಲ. 12 ಆಣೆ. (2) "ಜಪಾನ್ ಸಾಮ್ರಾಜ್ಯ" ಆಶ್ಚರ್ಯಕರವಾದ ವಿಷಯ ತಿಳಿವಳಿಕೆ ಆಗಲು ಬಿಟ್ಟಿವೆ. 6 ಆಣೆ. (3) "ಉತ್ತಮ ದಂಪತಿಗಳು" ವಿಷಯವಾದ ವಿಚಿತ್ರ 4 ಆಣೆ. (4) "ಉಸ್ಮತ್ತೆ" ಮನೋಹರವಾದ ಬಂಗಾಳಿ ನಾವಲ್ 2½ ಆಣೆ. (5) ಟಿ. ಸಿ. ಪ. ಯಲ್ಲಿ ಉತ್ತರ ಬರೆವ ವಿಧಾನ 1 ಆಣೆ. ಅಂಚೆ ವೆಚ್ಚ ಬೇರೆ. ದೊರೆಯುವ ಸ್ಥಳ ಪೇಟೆಯಲ್ಲಿ (1) ಎಂ. ಸುಬ್ಬರಾವ್ ಬುಕ್‌ಸೆಲರ್, (2) ಜಿ. ಕೆ. ಡಿಪೋ, (3) ಕೆ. ಬೌರಪ್ಪ ಎಂಡ್ ಕೊ; ಮೈಸೂರಿನಲ್ಲಿ (4) ಜಿ. ...ಶಾಸ್ತ್ರಿ ಶಿವರಾಂಪೇಟೆ, (5) ಜನರಲ್ ಏಜನ್ಸಿ, (6) ಸಿ ಎಲ್. ಎಸ್. ಡಿಪೋ.

ಜಾರ್ಜ್ ಸಾರ್ವಭೌಮರ ಚರಿತ್ರೆ.

ಕನ್ನಡಿಗರೆಲ್ಲ ಓದಲೇ ಬೇಕಾಗಿರುವ ಈ ಹೊಸ ಗ್ರಂಥದಲ್ಲಿ ಚಕ್ರವರ್ತಿಗಳ ಚರಿತ್ರೆಯೂ, ದೆಹಲಿ ದರ್ಬಾರಿನಲ್ಲಿ ನಡೆದ ವಿಶೇಷ ಸಂಗತಿಗಳೂ, ... ಭಾಷಣಗಳೇ ಮುಂತಾದ ರಾಜಕೀಯ ವಿಚಾರವನ್ನೊಳಗೊಂಡಿರುವ 43 ... ಇವೆ. ಪ್ರಸಿದ್ಧ ಪಂಡಿತರು ಇದನ್ನೋದಿ—ಇದು ನೀತಿಬೋಧಕ ... ಮನೋರಂಜಕವಾಗಿದೆ. ರಾಜಭಕ್ತಿಯುಳ್ಳವರು ಕೊಂಡಿರಿಸತಕ್ಕ ...—ಎಂದು ಅಭಿನಂದಿಸಿದ್ದರಿಂದ ಸರ್ಕಾರದವರು ಪ್ರೋತ್ಸಾಹಿಸಿದಾರೆ. ... (ಚಕ್ರವರ್ತಿ ದಂಪತಿಗಳ) ಭಾವಚಿತ್ರವೂ ನೇತ್ರಾನಂದಕರವಾಗಿರುವುದು. ... 8 ಆಣೆ.

[6-33] ವಿಳಾಸ—ದಿ ಜನರಲ್ ಏಜನ್ಸಿ, ಮೈಸೂರು.

'ಸಂಗೀತ ಪಾರಿಜಾತ'

... ಮುದ್ರಣ ! ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಸೆಗೆ ಕರೆಯುವ ..., ಮಂಗಳ, ಬೀಗರ ಹಾಡುಗಳು, ಕೀರ್ತನೆಗಳು, ... ಸ್ತೋತ್ರಗಳು—ಇವುಗಳಿಂದ ತುಂಬಿದೆ : ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ... ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ... ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[375-37] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ...ಗಳೊಡನೆ ರಚಿಸಲ್ಪಟ್ಟಿವೆ.

1.	ವಿಶ್ವಾಖಂಡದ ಭೂವಿವರಣೆ	0–5–0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0–6–0
	ಮೇಲೆ ಕಂಡ ಎರಡೂ ಸೇರಿ	0–10–0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ... 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶ 4 ಆಣೆ.

ವಿಳಾಸ—ಎ. ಆರ್. ವೆಂಕಟಸುಬ್ಬಾಚಾರ್ಯ,
[...] ಸುಬೋಧ ಗ್ರಂಥಾಲಯ, ಮೈಸೂರು.

ಅಗ್ಗದಲ್ಲಿ ಸೀಮೆಯಣ್ಣೆ ಪಡೆಯಿರಿ.

ಇಲ್ಲಿ ಅತ್ಯುತ್ತಮವಾದ ಬಿಳೀ ಸೀಮೆಯಣ್ಣೆ ಛಾಪಾಯಿದ ... ಮಾರ್ಕಿನ ದೊಡ್ಡ ಟಿನ್ 1 ಕ್ಕೆ 3 ಆ. 6 ಪೈಗೆ ಕೂಪನ್ ಮೂಲಕ ದೊರೆಯುತ್ತೆ. ಇಷ್ಟಪಟ್ಟವರು 3 ಆ. 6 ಪೈ. ರವಾನಿಸಿ. [143-5]

ವಿಳಾಸ :—ಜಿ. ಎಸ್. ವೆಂಕಟರಮಣಮೂರ್ತಿ, ಹಳೇ ಅಗ್ರಹಾರ, ಮೈಸೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-4-0; ರಫ್ ಪ್ರತಿಗೆ ರೂ. 1-12-0. [168-4]

ವಿಳಾಸ—ಎಂ. ಎ. ಪಂಡಿತಾರಾಧ್ಯರು, ಮೈಸೂರು.

ಮೈಸೂರು ಸಂಸ್ಥಾನದ ಆಸ್ಥಾನ ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯ ಐಯ್ಯರವರಿಂದ ಕನ್ನಡದಲ್ಲಿ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಇದಕ್ಕೆ ಮೈಸೂರು ಸರ್ಕಾರದ ಪ್ರೋತ್ಸಾಹ ದೊರಕಿದೆ. [151-5]

ಕ್ರಯ ೧—೪—೦. ಅಂಚೆ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳಗಳು :—(1) ಎಂ. ವೆಂಕಟರಾಮಯ್ಯ, ಗ್ರಂಥ ಪ್ರಚಾರಕ, ಚಾಮರಾಜಪೇಟೆ, ಮೈಸೂರು. (2) ದಿ ಜನರಲ್ ಏಜನ್ಸಿ, ಮೈಸೂರು. (3) ಎಂ. ಎಸ್. ರಾವ್. ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಎಮ್. ಎಸ್. ಮಲಕಣ್ಣಾ ಅಂಡ್ ಬ್ರದರ್ಸ್,

ರೇಷ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ನಮ್ಮಲ್ಲಿ ಉತ್ತಮವಾದ ರೇಷ್ಮೆ ವಸ್ತ್ರಗಳು, ಮೊಗಟೆಗಳು, ಅರಳೆಪೇಟೆ ಸೀರೆಗಳು, Coil ಧರಿಸುವ ವಸ್ತ್ರಗಳು, ಸಿಲ್ಕಿನಂಚು ಸೀರೆಗಳು ಬಹಳ ಚೆನ್ನಾಗಿ ತಯಾರಾಗುತ್ತವೆ. [105-13]

ರೇಷ್ಮೆ ವಸ್ತ್ರಗಳು	ದರಗಳು	ಮೊಗಟೆ, ರೇಷ್ಮೆ ಸೀರೆ, ಲಿಂಗವಸ್ತ್ರ.
1 ನೇ ನಂಬರು 0-7-6	ತೊಲೆ 1 ಕ್ಕೆ	1 ನೇ ನಂಬರು 0-8-0
2 ,, ,, 0-7-0		2 ,, ,, 0-7-6
0-6-9		

The General Assurance Society, Ltd.,
Ajmer.
(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England).

First Valuation Result :—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or

[142-5] K. S. Tirupathi, F. C. I., Secretary,
Opposite Minto Hospital, Bangalore City.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ಬೂಟಾ ಸೀರೆ, ಪೇಟ, ಮಗುಟ, ರುಮಾಲು, ಕೋಗಳು, ಕೋಟು ಸಿಲ್ಕು ಥಾನುಗಳು ಜವೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೆಂಪಾಗು ರುದ್ರಾಕ್ಷಿ ಸೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-10]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ... ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿಶ್ರಾಂತಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ.

ಈ ತೈಲವನ್ನು ಉಪಯೋಗಿಸುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ತೊಡೆಯುತ್ತಿರುವ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು ; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನಾನಾ ದೇಶಗಳ ... ಉತ್ತಮೋತ್ತಮವಾದ ಪ್ರಶಂಸಾಪತ್ರಗಳೂ ದೊರಕಿವೆ.

ಆದ್ದರಿಂದ ಒಂದಸಲ ನೋಡಿರಿ! ... ಸಹಸ್ರಾರು ... ಕಾಮಿನಿಯಾ ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೆಂದು ಸಾರ್ಥಕವಾಗಿರುತ್ತದೆ. ಆದ್ದರಿಂದ ಇಷ್ಟೊಂದು ಸೀಸೆಯನ್ನು ಕೊಂಡರೇ ವಿ. ಪಿ. ಮೂಲಕ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬುದ್ಧಿಯುಳ್ಳ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಾಟದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ ... ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕದೇ ಸರಿಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ... ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದ ... ವಾತಾವರಣವು ಆಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗೂ ಇರದು. ಈ ಒಟ್ಟೊ-ದಿಲ್ ಬಹಾರಿನ ಗಂಧವು ... ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವದು. ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-31]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಧ್ಯಮ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ... ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜೀದ್, ಮಾರ್ಕೆಟ್, ಬಾಂಬೆ.

... ಮಾರ್ಕೆಟ್, ...

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡಕಕ್ಕೆ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲನೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

[149-5] ನಮ್ಮ ವಿಳಾಸ—ವಿ. ಎ. ಎಸ್. ಪಾಣಿ, ನಂ. ೩, ಇರುಳಪ್ಪನ ಬೀದಿ, ಮದರಾಸು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ ; 6 ಕ್ಕೆ 13 ಆಣೆ ; 12 ಕ್ಕೆ ರೂ. 1-10-0. ಇವು ಐನೂರು ಅಯ್ವರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ !

ಅಮೃತಾಂಜನ ರಿಜಿಸ್ಟರ್ಡ್

[64-21]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗಂಟಲುನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕಲಬೆರಕೆ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲುಗಳನ್ನು ಪಡಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಕೂದಲಿನ ತೈಲ 0-12-0. ಖಜ್ಜಿ ಮುಲಾಮು 0-3-0. ಜ್ವರದ ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚು ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ಜಹಂಗೀರ್ ಸ್ಟ್ರೀಟ್, ಮದ್ರಾಸ್.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

ಬೇಕಾಗಿದೆ.

ಆಫೀಸ್ ಅಕೌಂಟೆಂಟ್ಸ್ ಮತ್ತು ಕಮಿಷನ್ ಮೇಲೆ ಕಂಪನಿಯ ಜೀವವಿಮೆ ಮತ್ತು ಪ್ರಾವಿಡೆಂಟ್ (ಮದುವೆ ಮತ್ತು ಉಪನಯನ) ವಿಮೆ ಕಾರ್ಯಗಳನ್ನು ನಡಸುವದಕ್ಕೆ ಮೈಸೂರು ಪ್ರಾವಿನ್ಸಿನ ಪ್ರತಿ ಒಂದು ಡಿಸ್ಟ್ರಿಕ್ಟು ಮತ್ತು ತಾಲ್ಲೂಕಿನಲ್ಲಿ ನಂಬಿಕೆಯಾದ ಮತ್ತು ಚಟುವಟಿಕೆಯಾದ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಏಜಂಟರುಗಳು ಮತ್ತು ಡಿಟೋ ಪ್ರಾವಿನ್ಸಿನ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ಜಮೀನು ಮತ್ತು ಮನೆಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳ ಮೇಲೆ ಸಾಲ ಕೊಡುವ ಡಿಪಾರ್ಟುಮೆಂಟಿನ ಕಾರ್ಯಗಳನ್ನು ನಡಸುವದಕ್ಕೆ ಸ್ಥಾಪಿಸಲ್ಪಡುವ ಬ್ರಾಂಚಾಫೀಸಿಗೆ ಲೋಕಲ್ ಡೈರೆಕ್ಟರುಗಳೂ ಸಹಾ ಬೇಕಾಗಿದೆ. ಇಷ್ಟಪಡುವವರು ನಿಬಂಧನೆಗಳಿಗೂ, ಪ್ರಕಟನ ಪತ್ರಿಕೆಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯಮಾಡಿ ಬರೆಯಿರಿ.

M. L. NAGANNA,
[15-33] Managing Director, Life & Marriage Assurance Buildings, Mysore.

---

500 ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಗಡ್ಡೆ, ಶಾವಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ. [109-6]

ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೋಧಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ, ಬೆಳ್ಳಿ ಮತ್ತು ಬಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಕರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂ. 3-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಕೂಲ ಪತ್ರಿಕೆ ಔಷಧದಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ೬. ಅವೆನ್ಯು ರೋಡ್, ಬೆಂಗಳೂರು ಸಿಟಿ.



ಪಂಡಿತ್ ಎಸ್. ಗರಳಪುರಿ, ಮೈಸೂರು

ಪ್ರಸಿದ್ಧ ಮಹೌಷಧಿಗಳು

ಜ್ವರದ ಮಾತ್ರೆ 8 ಆ. ಕೆಮ್ಮಿನ ಮಾತ್ರೆ ... ಅಜೀರ್ಣದ ಮಾತ್ರೆ 12 ಆ. ಬಾಲಸಂಜೀವಿನಿ 1 ರೂ. ಸರಳಭೇದಿ 8 ಆ. ಆಮಶಂಕೆ ಮಾತ್ರೆ ... ಟಾನಿಕ್ ಮಾತ್ರೆ 1 ರೂ. ಕಸ್ತೂರಿಮಾತ್ರೆ 5 ... ರೂ. ಕಾಲರಾ ಮಾತ್ರೆ 1 ರೂ. ಉಬ್ಬಸದ ಮಾತ್ರೆ ... ಆ. ಬಾಧಾನಿವಾರಣೆ 6 ಡಬ್ಬಿಗೆ 1 ರೂಪಾಯಿ. ... ಲೆತ್ತ ಮುಲಾಮು 6 ಆಣೆ. ಮುಖರಂಜನ ... ಆಣೆ., 6 ಕ್ಕೆ 1 ರೂಪಾಯಿ. [1...]

ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ

1,000 ವಾಚುಗಳ ಮಾರಾಟ.

"ಬೊಂಬೇ ಸ್ಮೈಲ್ ಲೀವರ್ ವಾಚ್.

ಗ್ರಾಹಕರೇ,—ಈ ಮೇಲೆ ಕಾಣಿಸಿದ ವಾಚು ಅತೀ ಮನೋಹರ... ಸೆಕೆಂಡಹೆಂಡ್ ಇದ್ದು ನೂತನ ಸಾಮಗ್ರಿಗಳಿಂದ ತಯಾರಿಸಲ್ಪಟ್ಟು ಪ್ರತ...



...ಲ್ಲಿ ಎಲ್ಲಾ ... ಸ್ವತೆಯನ್ನು ... ಬೇಕೆಂಬುದಾಗಿ ... ಸುಲಭ ಬೆಲೆ... ನ್ನು ಇಟ್ಟಿರು... ಕಮ್ಮಿ ಕ್ರಯ... ಚುಗಳು ಹಲ... ಯೂ ಇತ... ನೋಡಿಯೂ ... ಹುದು. ಅದ... ಲೆ ಕಾಣಿಸಿದ ... ಬೇ ಲೀವರ್... ಎಂಬುದು ಕೇ... ವಾಚಲ್ಲ. ... ರಾದ ಕಂಪೆ... ತಯಾರಿಸ... ಶ್ರೇಷ್ಠವಾದ ಬಲಿಷ್ಠವಾದ ಕೆಲಸವಾಗಿ... ಮುವರೆ ಗಂಭೀರವಾಗಿಯೂ ಸಮಯಾನುಸಾರ ಕೆಳಗೆ ಬದ್ಧಾಗಿಯೂ ನಡೆಯುತ್ತದೆ. ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹು ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡೆಯುವದರಲ್ಲಿ ಒಂದು ವ್ಯತ್ಯಾಸವೂ ಇರುವುದಿಲ್ಲ. ವಾಚು 1 ರ ಬೆಲೆ ರೂ. 2-4-0. ಮತ್ತು ವಿ. ಪಿ. ಆಣೆ 4 ಅಧಿಕಾಯದ. [1...]

(2) ವಾರಂಟಿಯುಳ್ಳ ಕೀಲಿ ಕೊಡುವ ವಾಚು 1 ಕ್ಕೆ ರೂ. 7-12

ನಮ್ಮ ವಿಳಾಸ:—ದಿ ಜುಬಿಲಿ ಮಾರ್ಟ್, ನಂ. ೧, ಮಂಗಳೂರು, ದಕ್ಷಿಣ ಕ...

ರೊಂಡಿನೋವನ್ನು "ಸ್ನೇಹಿತರಿಂದ ಹಿಂಸೆಪಡುವದಕ್ಕೆ" ಸಮಾನವಾಗಿ ಒಬ್ಬ ಪ್ರಖ್ಯಾತ ಬರವಣಿಗಾರನು ವಿವರಿಸಿ ಬರೆದಿದ್ದಾನೆ. ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬುದು ಪಂವಾತವನ್ನು ಅದ್ಭುತರೀತಿಯಲ್ಲಿ ವಾಸಿಮಾಡುತ್ತೆ.

ಲಕ್ಷಾಂತರ ಜನಗಳ ಪೈಕಿ, ಕೆಲವರು ನಂಬಿಕೆಯಿಂದಲೂ, ಕೆಲವರು ಬರವಸದಿಂದಲೂ, ಕೆಲವರು ಅವಿಶ್ವಾಸದಿಂದಲೂ ಉಪಯೋಗಿಸಿದ್ದಾರೆ. ಅವರ ನೋವಿನ ಬಿಡುಗಡೆಯಾದಾಗ, ನಿಸ್ಸಂತೆಯೇ ಎಲ್ಲರೂ, "ರೊಂಡಿನೋವಿಗೆ ಇದೊಂದೇ ಕೈಕಂಡ ಔಷಧವೆಂದು" ಹೇಳುವರು.

ಬಾತ್ ನಗರದ ಟ್ರೆಡೆಂಟ್ ಬೀದಿಯಲ್ಲಿರುವ ಮಿ॥ ಡಬ್ಲ್ಯು. ನೌಲ್ಸ್ ಬರೆಯುವುದು:—"5 ವರುಷಗಳ ಹಿಂದೆ ನಾನು ರೊಂಡಿನೋವಿನಿಂದ ಜೋಲುಬಿದ್ದಿದ್ದೆ. ನನ್ನ ಬಲ ತೊಡೆಯಿಂದ ಅಂಗಾಲಿನವರಿಗೆ ವಾಯುವಿನ ಯಾತನೆಯಿಂದ ರಾತ್ರೀ ಹಗಲು ಕಷ್ಟಪಟ್ಟೆನು. ರಾತ್ರಿಯಲ್ಲಿ ನೋವಿನ ಬೇಸಿಯಿಂದ ಎಚ್ಚರವಾಗಿ, ನಿದ್ರೆಯೇ ಬರುತ್ತಿರಲಿಲ್ಲ. "ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬದನ್ನು ಒಂದು ಸೀಸೆ ಉಪಯೋಗಿಸಿ ಪೂರ್ಣ ಸೌಖ್ಯ ಹೊಂದಿದೆನು."

ಸೀಸೆ 1 ಕ್ಕೆ 1 ರೂಪಾಯಿನಂತೆ ಎಲ್ಲಾ ಔಷಧಗಾರರಿಂದಲೂ ಮಾರಲ್ಪಡುತ್ತೆ.

[81-17]

...ರಬ್ಬರು ಮುದ್ರೆಗಳು!

ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ತೋಡಿನ ಪೆಟ್ಟಿಗೆ, ಬ್ರಸ್ ಪ್ಯಾಡ್ ಮತ್ತು ಇಂಕಿ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಖರ್ಚು ೩ ಆಣೆ ಬರೆಯುವವರು ಹೆಸರು ಮುಂತಾದವುಗಳನ್ನು ಇಂಗ್ಲೀಷ್ ಅಕ್ಷರಗಳಿಂದ ಬರೆಯಬೇಕು.

ವಿಳಾಸ:—ರಾಂಭೂಲ್ ಏಜೆನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಾಗಲೀ ವ್ಯಾಧಿಯಿಂದಲೀ ಮೂತ್ರಕೋಶವು ಆ ಕಾರ್ಯವನ್ನು ಮಾಡದಿದ್ದರೆ ತೊಂದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನ ಶೂಲ; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬೆಳುವಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಆಗಾಗ ನಿದ್ರೆ ಹಲ್ಲು ಕಚ್ಚುವುದು; ತಲೆನೋವು; ಗಾಬರಿ; ಕಣ್ಣು ಮೊಬ್ಬು; ತಲೆ ತಿರುಗು; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಚಿಕಿತ್ಸೆ ಮಾಡದಿದ್ದರೆ ಮೂತ್ರೋಪದ್ರವ, ವಾಯು, ಮೈಬಾವು, ಉದುಮೂತ್ರ ಮೂತ್ರಕೋಶದ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದವುಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯವನ್ನು ಸಂಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವ ಹಾಗೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [199-62]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧವನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಫೋಸ್ಟರ್ಸ್, ಪಿ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಖು-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ—ಸೋಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವಿಷಮ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ವಾಸಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅದ್ಭುತವೇ ಸರಿ.

260 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟ.ಖ. ಪ್ರತ್ಯೇಕ.

[231—39] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ಸ್ಕಾಟಿಸ್‌ಫ್ಯಾಕ್ಷನ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹವೆಗಳಿಗೂ ಎಲ್ಲಾ

ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ಪಸಂದು ಆಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 50; ಈಗಿನ ಕ್ರಯ ರೂ. 19, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.

ವಿಳಾಸ—**National Harmonium Co.,**

[170-1] **SIMLA P.O., (E) CALCUTTA.**

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿರುವುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ನಿಶ್ಶಕ್ತಿ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರೆಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯಂರೋಡ್ ನಂ 2, ಬೊಂಬಾಯಿ, ಇವರು ಬರೆದಿರುವುದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[199-51] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು

ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾರೆವು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[...0-30]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್.

ವೃತ್ತಾಂತ ಪತ್ರಿಕೆ.

೧೯೧೫ ನೇ ಇಸವಿ ಆಗಸ್ಟ್ ತಾ. ೨೬ ನೇ ಗುರುವಾರ.

ನಮ್ಮ ಗ್ರಾಮಗಳನ್ನು ಅಭಿವೃದ್ಧಿ ಮಾಡುವುದು.

ಮೈಸೂರು ಗವರ್ನ್‌ಮೆಂಟಿನವರು ಈ ಸಂಸ್ಥಾನದ ಗ್ರಾಮಗಳನ್ನು ಅಭಿವೃದ್ಧಿಗೆ ತರಬೇಕೆಂದು ಹುಕುಂ ಕೊಟ್ಟು ಕೆಲಸ ಮಾಡಿಸುತ್ತಾ ಬಂದಿದ್ದಾರಷ್ಟೆ. ಕಳೆದ ಮಾರ್ಚಿ ಆಖೈರಿಗೆ ಪೂರೈಸಿದ ಮೂರು ತಿಂಗಳಲ್ಲಿ ಗ್ರಾಮಾಂತರದ ಅಭಿವೃದ್ಧಿ ಕಾರ್ಯಗಳು ಎಷ್ಟು ಮಟ್ಟಿಗೆ ನಡೆದಿರುವವೆಂದು ಸಂಸ್ಥಾನಾಮಳೆಯ ರಿಪೋರ್ಟುಗಳನ್ನು ತರಿಸಿಕೊಂಡು, ಸರ್ಕಾರದವರು ಅವುಗಳ ವಿಷಯದಲ್ಲಿ ಹುಕುಮನ್ನು ಪ್ರಕಟಮಾಡಿ ನಮಗೊಂದು ಪ್ರತಿಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ರಿಪೋರ್ಟಿನ ಪ್ರಕಾರ ಸಂಸ್ಥಾನದಲ್ಲಿ 7,473 ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾಗಿರುವವು; ಈ ಸಂಘಗಳು ಒಟ್ಟು 12,686 ಗ್ರಾಮಗಳಲ್ಲಿ ವಾಸಮಾಡಿಕೊಂಡಿರುವಂಥಾ ಸುಮಾರು ನಾಲ್ವತ್ತು ಲಕ್ಷ ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತವೆ. ಈ ಗ್ರಾಮ ಸಂಘಗಳು ಮಾಡಬೇಕಾಗಿರುವ ಕಾರ್ಯಗಳು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ಮೊದಲನೆಯದಾಗಿ ಆಯಾ ಗ್ರಾಮಸ್ಥರನ್ನು ಒಟ್ಟಾಗಿ ಸೇರಿಸಿಕೊಂಡು ಅಲ್ಲಲ್ಲಿ ನಡೆಯಬೇಕಾಗಿರುವ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡಿಸುವುದು; ಎರಡನೆಯದಾಗಿ ವರ್ತಮಾನ ಪತ್ರಿಕೆಗಳನ್ನು ತರಿಸಿ ಗ್ರಾಮಸ್ಥರನ್ನು ಕೂಡಿಸಿ ಅವುಗಳನ್ನು ಓದಿ ಹೇಳುವುದು; ಮೂರನೆಯದಾಗಿ ಗ್ರಾಮಸ್ಥರೆಲ್ಲಾ ವಾರಗಟ್ಟಲೆ ಕೂಟಗಳನ್ನು ಮಾಡಿಕೊಂಡು ಸೇರಿ ಆಟ ಪಾಟಗಳಲ್ಲಿ ವಿಹರಿಸುವುದು, ಮತ್ತೂ ಅವರುಗಳ ಅಭಿವೃದ್ಧಿಗೆ ಹಿತಕರಗಳಾದ ವಿಷಯಗಳನ್ನು ಕುರಿತು ಉಪನ್ಯಾಸಗಳನ್ನೂ ಚರ್ಚೆಗಳನ್ನೂ ನಡಿಸುವುದು. ನಮ್ಮ ಮುಂದಿರುವ ರಿಪೋರ್ಟು ಈ ಪೈಕಿ ಅನೇಕ ಸಂಘಗಳು ಆ ಮೂರು ವಿಧವಾದ ಕಾರ್ಯಗಳನ್ನೂ ನಡಿಸಿರುವುದಿಲ್ಲವೆಂದು ಹೇಳುತ್ತದೆ.

ಸಂಸ್ಥಾನಾಮಳೆಯ 3,704 ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯಗಳನ್ನು ನಡಿಸುತ್ತಾ ಬಂದಿವೆ. ಅವು 1,61,803 ರೂಪಾಯಿ ಖರ್ಚಾಗುವ ಕೆಲಸ ಕಾರ್ಯಗಳನ್ನು ಪ್ರಾರಂಭಿಸಿರುವವು; ಸರ್ಕಾರದವರು ಅವುಗಳಿಗೆ 71,628 ರೂಪಾಯಿ ಗ್ರಾಂಟು ಕೊಡುವವರಾಗಿದ್ದಾರೆ. ಮೇಲ್ಕಂಡ ಮೂರು ತಿಂಗಳಲ್ಲಿ 30,931 ರೂಪಾಯಿನ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳು ನಡೆದಿರುತ್ತವೆ. 2,691 ಗ್ರಾಮ ಸಂಘಗಳು ಚಂದಾ ಕೊಟ್ಟು ವರ್ತಮಾನ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿರುವವು. 1,847 ಸಂಘಗಳು ವಾರಗಟ್ಟಲೆ ಕೂಟಗಳನ್ನು ನಡಿಸಿ ಉಪನ್ಯಾಸಾದಿಗಳನ್ನು ಜರುಗಿಸುವವು. ಈ ಸಂಖ್ಯೆಗಳು ಯಥಾರ್ಥವಾದವುಗಳೆಂದೂ, ರಿಪೋರ್ಟಿನಲ್ಲಿ ಹೇಳಿರುವ ಕಾರ್ಯಗಳು ತಕ್ಕ ಮಟ್ಟಿಗೆ ಗ್ರಾಮಗಳಲ್ಲಿ ಅದೇ ರೀತಿ ನಡೆಯುತ್ತಿರುವವೆಂದೂ ನಂಬಬಹುದಾಗಿ ನಿರೀಕ್ಷಿಸುತ್ತೇವೆ. ಈ ಲೆಕ್ಕಗಳಿಂದ ತಿಳಿದು ಬರುವಂತೆ ಕಾರ್ಯಗಳು ನಡೆಯುತ್ತಾ ಬಂದಿರುವ ಪಕ್ಷಕ್ಕೆ ನಮ್ಮ ಸಂಸ್ಥಾನದಲ್ಲಿ ಗ್ರಾಮಾಭಿವೃದ್ಧಿಯು ನಿಜವಾಗಿಯೂ ಪ್ರಾರಂಭವಾಯಿತೆಂದು ಸಂತೋಷಪಡಬಹುದಾಗಿದೆ. ಗ್ರಾಮಗಳಲ್ಲಿ ಯಾವ ತರಹಾ ಕೆಲಸ ಕಾರ್ಯಗಳು ನಡೆಯುತ್ತಿರುವವೋ ಈ ರಿಪೋರ್ಟಿನಿಂದ ಗೊತ್ತಾಗುವುದಿಲ್ಲ. ಗ್ರಾಮಗಳನ್ನು ಆರೋಗ್ಯಜನಕವಾಗಿ ಮಾಡಿಡುವ ಭಾಗದಲ್ಲಿ ರೈತರು ತಮ್ಮ ಕುರಿ ದನಗಳನ್ನು ಮನೆಗಳೊಳಗೆ ಕಟ್ಟಿಕೊಳ್ಳುವುದನ್ನು ತಪ್ಪಿಸಿ ಹೊರಗಡೆ ಕಟ್ಟುವಂತೆ ಮಾಡಿದ್ದಾರೆಯೋ? ಗೊಬ್ಬರ ಮತ್ತು ಕಸ ಕುಪ್ಪೆಗಳನ್ನು ಗ್ರಾಮದೊಳಗೆ ಹಾಕದಂತೆ ಮಾಡಿ ಜಮೀನುಗಳಿಗೆ ಸಾಗಿಸುವ ಏರ್ಪಾಡು ನಡೆದಿದೆಯೋ? ಗ್ರಾಮಗಳಲ್ಲಿ ಹಾದಿ ಬೀದಿಗಳಲ್ಲಿ ಬಚ್ಚಲ ರೊಚ್ಚು ಹೇಸಿಗೆ ಮುಂತಾದದ್ದು ಇಲ್ಲದಂತೆ ಚೊಕ್ಕಟವಾಗಿ ಮಾಡಲ್ಪಡುತ್ತಿದೆಯೋ? ಈ ವಿಚಾರಗಳನ್ನು ತಿಳಿಯಬೇಕೆಂದು ಕುತೂಹಲಪಡುತ್ತಿರುವೆವು. ಇದಲ್ಲದೆ ಪ್ರಜೆಗಳಿಗೆ ಒಳ್ಳೇ ಆರೋಗ್ಯಕರವಾದ ನೀರು ಒದಗುವುದಕ್ಕೆ ಎಷ್ಟು ಖರ್ಚು ಮಾಡಲಾಗಿದೆಯೋ, ಗ್ರಾಮಗಳಿಂದ ಭಾಟಾ ಮಾರ್ಗಗಳಿಗೆ ಹೋಗಿ ಸೇರುವಂಥಾ ರಸ್ತೆಗಳನ್ನು ಹಾಕುವುದಕ್ಕೆ ಏನು ಖರ್ಚಾಗಿದೆಯೋ ತಿಳಿದುಬರಲಿಲ್ಲ. ಈ ರೀತಿಯಾದ ಅಭಿವೃದ್ಧಿ ಕಾರ್ಯಗಳನ್ನು ಗ್ರಾಮಸ್ಥರು ಏಕೀಭವಿಸಿ ಮಾಡಿಕೊಳ್ಳುತ್ತಾ ಬರುವುದಾದರೆ ಅವರ ಆರೋಗ್ಯಭಾಗ್ಯವೂ ಸುಖಸಂಪತ್ತೂ ನೆಲೆಗೊಂಡು ವೃದ್ಧಿಹೊಂದುವವೆಂಬುದಕ್ಕೆ ಸಂಶಯವಿಲ್ಲ. ಈ ಭಾಗದಲ್ಲಿ ಸ್ಥಳೀಯ ಸರ್ಕಾರಿ ಅಧಿಕಾರಿಗಳ ಅಭಿಮಾನಪೂರ್ವಕವಾದ ಪ್ರೋತ್ಸಾಹವೂ ಮುತುವರ್ಜಿಯೂ ಕೆಲವು ಕಾಲದ ಮಟ್ಟಿಗಾದರೂ ವಿಶೇಷವಾಗಿ ಪ್ರಕಾಶಕ್ಕೆ ಬರಬೇಕು. ಆಗ್ಗೆ ಗ್ರಾಮಸ್ಥರಿಗೆ ಉತ್ಸಾಹವಂತರಾಗಿ ತಮ್ಮ ಅಭ್ಯುದಯ ಕಾರ್ಯಗಳನ್ನು ತಾವೇ ಮಾಡಿಕೊಳ್ಳುವ ಅಭ್ಯಾಸವಾದೀತು.

ಇಷ್ಟೊಂದು ಗ್ರಾಮಾಭಿವೃದ್ಧಿ ಸಂಘಗಳು ವರ್ತಮಾನ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿರುವವೆಂದು ತಿಳಿದು ಸಂತೋಷಪಡುತ್ತೇವೆ. ಆದರೆ ಇದರಲ್ಲಿ ಉಂಟಾಗಿರುವ ಒಂದು ದೊಡ್ಡ ಕೊರತೆಯನ್ನು ಸರ್ಕಾರದವರು ಪರಿಹರಿಸಿಕೊಡಬೇಕಾಗಿದೆ. ಈಗ ಕಾಗದಗಳೂ ಪತ್ರಿಕೆಗಳೂ ತಪ್ಪದೆ ಕ್ರಮವಾಗಿಯೂ ಕಾಲ ಕಾಲಕ್ಕೂ ಗ್ರಾಮಗಳಿಗೆ ಬಟವಡೆ ಆಗುವುದಿಲ್ಲ. ಗ್ರಾಮಗಳಿಗೆ ಹೋಗಿ ಬಟವಡೆ ಮಾಡತಕ್ಕ ಅಂಚೆ ಜವಾನರು ತಾವೂ ತಮಗೆ ಬೇಕಾದವರೂ ಓದಿಕೊಂಡ ಬಳಿಕ ಪತ್ರಿಕೆಗಳನ್ನು ವಿಳಾಸದಾರರಿಗೆ ಬಟವಡೆಮಾಡುತ್ತಾರೆಂದೂ, ಇಲ್ಲವೇ ಯಾರ ಕೈಲಾದರೂ ಕೊಟ್ಟು ಕಳುಹಿಸಿಬಿಡುತ್ತಾರೆಂದೂ, ಕೆಲವು ವೇಳೆ ಪತ್ರಿಕೆಗಳು ಬಟವಡೆ ಆಗುವುದೇ ಇಲ್ಲವೆಂದೂ ನಮ್ಮ ಚಂದಾದಾರರು ಆಗಿಂದಾಗ್ಗೆ ಆಕ್ಷೇಪಣೆ ಮಾಡುತ್ತಾರೆ. ಪ್ರತಿ ಒಂದು ಗ್ರಾಮಕ್ಕೂ ಕಾಗದ ಪತ್ರಗಳು ಬಟವಡೆ ಆಗುವಂತೆ ಈಗಲೇ ಏರ್ಪಾಡುಮಾಡಿಡುವುದು ಸಾಧ್ಯವೆಂದು ನಾವು ಹೇಳುವುದಿಲ್ಲ. ಹ್ಯಾಗೂ ಈಗಿನ ಅಕ್ರಮಗಳನ್ನು ತಪ್ಪಿಸಿ ಡಿಲಿವರಿಯನ್ನು ತೃಪ್ತಿಕರವಾಗಿ ಮಾಡಿಟ್ಟ ಪಕ್ಷದಲ್ಲಿ ಗ್ರಾಮಾಂತರಗಳಲ್ಲಿರುವ ಇನ್ನೂ ಅನೇಕಾನೇಕ ಪ್ರಜೆಗಳು ಪತ್ರಿಕೆಗಳನ್ನು ವಿಶೇಷವಾಗಿ ತರಿಸಿಕೊಂಡು ಓದುತ್ತಾರೆನ್ನುವುದಕ್ಕೆ ಅನುಮಾನವಿಲ್ಲ. ಅದರಲ್ಲೂ ಅನೇಕರಿಗೆ ಈಗಿನ ಯುದ್ಧದ ವೃತ್ತಾಂತವನ್ನು ಓದಬೇಕೆಂಬ ಕುತೂಹಲವು ಅಪಾರವಾಗಿದೆ. ಆದಕಾರಣ ಮೈಸೂರು ಗವರ್ನ್‌ಮೆಂಟಿನವರು ಈ ಸೀಮೆಯ ಗ್ರಾಮಸ್ಥರಿಗೆ ಈ ಭಾಗದಲ್ಲಿ ಉಂಟಾಗಿರುವ ಕೊರತೆಗಳನ್ನು ಅಂಚೆ ಇಲಾಖೆಯವರಿಗೆ ತಿಳಿಸಿ ಕ್ರಮಪಡಿಸಿಕೊಟ್ಟಲ್ಲಿ ಗ್ರಾಮಾಂತರಗಳೊಳಗೆ ಯಥಾರ್ಥವಾದ ವರ್ತಮಾನಗಳು ಹರಡುವುದಕ್ಕೂ ಗ್ರಾಮಸ್ಥರಲ್ಲಿ ವಿವೇಕವೂ ಪರಿಜ್ಞಾನವೂ ಹುಟ್ಟಿ ಹೆಚ್ಚುವುದಕ್ಕೂ ತುಂಬಾ ಸಹಾಯವಾದೀತು.

ಗ್ರಾಮಾಂತರಗಳಲ್ಲಿ ಈಗ ಪ್ರಾರಂಭವಾಗಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಹೀಗೆಯೇ ಮುಂದೂ ನಡೆಯುತ್ತಾ ಬರುವವೆಂದು ನಂಬಿ ನಿರೀಕ್ಷಿಸುತ್ತೇವೆ. ಯಾವ ಕೆಲಸವನ್ನಾದರೂ ಪ್ರಾರಂಭಿಸುವುದು ಸುಲಭ; ಕೆಲವು ಕಾಲ ನಡಿಸಿದ ಮೇಲೆ ಅದರಲ್ಲಿ ಉತ್ಸಾಹವು ಕಡಿಮೆಯಾಗುತ್ತಾ ಬರುವುದು ರೂಢಿಯಾಗಿದೆ. ಕಾಲಕ್ರಮದಲ್ಲಿ ಕೆಲಸ ಕಾರ್ಯಗಳು ಆಲಸ್ಯಕ್ಕೆ ಬಿದ್ದು ನಿಂತುಹೋಗಿ ಯಥಾಪ್ರಕಾರ ಮೊದಲಿದ್ದ ಸ್ಥಿತಿಗೇ ಬರುವುದುಂಟು. ಗ್ರಾಮಾಂತರಗಳ ಮೇಲೆ ಸಂಚಾರ ಮಾಡುವಂಥಾ ಸರ್ಕಾರಿ ಅಧಿಕಾರಿಗಳೂ ಪ್ರಜಾನಿಸ್ಟರೂ ಗ್ರಾಮಸ್ಥರನ್ನೂ ಸಂಘದ ಮುಖ್ಯಸ್ಥರನ್ನೂ ಕಂಡು ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕುರಿತು ಅವರ ಕೂಡ ಪದೇ ಪದೇ ಪ್ರೀತಿಪೂರ್ವಕವಾಗಿ ಮಾತನಾಡುತ್ತಾ ವಿಚಾರಿಸುತ್ತಾ ಬರುವ ಪಕ್ಷದಲ್ಲಿ ಈ ಅಭಿವೃದ್ಧಿ ಕಾರ್ಯಗಳು ನಿರುಪಾಧಿಕವಾಗಿ ನಡೆಯುತ್ತಾ ಬರುವವು. ಆದರೆ ಯಥಾರ್ಥವಾದ ಅಭಿವೃದ್ಧಿಯು ನಮ್ಮ ಗ್ರಾಮಗಳಲ್ಲಿ ಕಂಡುಬರಬೇಕಾದರೆ ಆಯಾ ಗ್ರಾಮದ ಪ್ರಜೆಗಳೇ ಸ್ವತಂತ್ರಿಸಿ ಉತ್ಸಾಹವಂತರಾಗಿ ಮುತುವರ್ಜಿ ವಹಿಸಿ ಕಾರ್ಯಗಳನ್ನು ಮಾಡಿಕೊಳ್ಳುತ್ತಾ ಬರಬೇಕಾಗಿದೆ.

ರೂಪಾಯಿನ ಮೇಲಿರುವ ರೂಪ ಯಾರದು ?

ಒಂದು ರೂಪಾಯಿ ತೆಗೆದುಕೊಂಡು ನೋಡಿರಿ. ಅದರ ಮೇಲೆ ಆಳುವ ಚಕ್ರವರ್ತಿಯ ರೂಪವೂ ಆತನ ಹೆಸರೂ ಮುದ್ರಿಸಲ್ಪಟ್ಟಿವೆಯಷ್ಟೆ. ಪ್ರತಿಯೊಂದು ನಾಣ್ಯದ ಮೇಲೆ ದೇಶವನ್ನಾಳುವ ಅರಸನ ಮುಖದ ರೂಪವನ್ನು ಮುದ್ರಿಸುತ್ತಾರೆ. ಅದು ಅವನ ಹಣ. ಅವನೇ ಅದರ ಯಜಮಾನನು. ಅದು ಅವನ ಸ್ವಂತ ಸೊತ್ತು.

ವಾಚಕರೇ, ನೀವು ಯಾರ ಸೊತ್ತು? ಎಲ್ಲಾ ಮನುಷ್ಯರೂ ಯಾರ ಸೊತ್ತು? ದೇವರು ಮನುಷ್ಯನನ್ನು ನಿರ್ಮಿಸಿದನು. ಮತ್ತು ಆತನು ಅವನನ್ನು ತನ್ನ ರೂಪವನ್ನು ಹೋಲುವವನಾಗಿ ಉಂಟುಮಾಡಿದನು. ನಾವೆಲ್ಲರೂ ದೇವರ ಸೊತ್ತುಗಳಾಗಿದ್ದೇವೆ. ಹೀಗಿರುವದರಿಂದ ನಮ್ಮಲ್ಲಿ ಒಬ್ಬನಾದರೂ ತನ್ನ ನಿಮಿತ್ತ ಬದುಕಬಾರದು. ಬದುಕಿದರೂ ಸತ್ತರೂ ನಾವು ನಮ್ಮ ಒಡೆಯನಾಗಿರುವ ದೇವರ ಸೊತ್ತುಗಳಾಗಿದ್ದೇವೆ. ದೇವರು ನಮ್ಮನ್ನು ಸೃಷ್ಟಿಸಿ ಪಾಲಿಸುವದರಿಂದ ನಾವು ಆತನ ಸೊತ್ತುಗಳೇ ಆಗಿದ್ದರೂ ಆತನು ನಮ್ಮನ್ನು ತನ್ನ ಸೊತ್ತುಗಳೆಂದು ನಿರ್ಬಂಧಪಡಿಸದೆ ನಾವೇ ನಮ್ಮ ಸ್ವಂತ ಇಷ್ಟಾನುಸಾರವಾಗಿ ಆತನನ್ನು ಪ್ರೀತಿಸಿ, ಆಜ್ಞಾಧಾರಕರಾಗಿರುವದಕ್ಕೆ ಅಥವಾ ನಾವು ಆತನನ್ನು ತ್ಯಜಿಸಿ ಆತನ ಆಜ್ಞೆಗಳನ್ನು ನಿರಾಕರಿಸುವದಕ್ಕೂ ಸ್ವತಂತ್ರರಾಗಿರಬೇಕೆಂದು ನಿಶ್ಚಯಿಸಿ ನಮಗೆ ಸ್ವತಂತ್ರವನ್ನು ಕೊಟ್ಟನು. ನಾವು ಕಬ್ಬಿಣದ ಅಥವಾ ಮರದ ಯಂತ್ರಗಳಲ್ಲ. ಯಂತ್ರಕ್ಕೆ ಬೇಕಾದುದೇನು? ಅದರ ಪ್ರಮಾಣಕ್ಕೆ ತಕ್ಕಷ್ಟು ಬೆಂಕಿ ಮತ್ತು ನೀರು. ಇಷ್ಟು ಅದಕ್ಕೆ ಒದಗಿಸಿದರೆ ಅದರ ಯಜಮಾನನು ಕೀಲುತಿರುಗಿಸಿದ ಕಡೆ ಹೋಗಲೇ ಬೇಕು. ದೇವರ ಹೋಲಿಕೆಯನ್ನು ಹೊಂದಿರುವ ನಾವು ಸ್ವತಂತ್ರ ಜೀವಿಗಳು. ಒಬ್ಬನು ತನಗಿರುವ ಸ್ವತಂತ್ರವನ್ನು ಪ್ರಯೋಗಿಸಿ—ನನಗೆ ದೇವರ ಸೊತ್ತಾಗಿರುವದಕ್ಕೆ ಮನಸ್ಸಿಲ್ಲ; ನಾನು ಆತನ ಆಜ್ಞೆಗಳನ್ನು ಕೈಕೊಳ್ಳುವದಿಲ್ಲ ಎಂದು ನಿಶ್ಚಯಿಸಿ ತನ್ನ ಮನಸ್ಸೇಚ್ಛೆಯಂತೆ ನಡೆಯಬಹುದು ಅವನು ಸ್ವತಂತ್ರನಾಗಿದ್ದಾನೆ. ಆದರೆ ಅದರಿಂದ ಪ್ರಾಪ್ತಿಸುವದೇನು? ಅವನನ್ನು ಹೇಳುವದು ಕಷ್ಟವಲ್ಲ. ಪಿತೃವಾತ್ಸಲ್ಯಕ್ಕೆ ವಿರೋಧವಾದದ್ದು ಪಿತೃದ್ರೋಹ. ರಾಜಾಜ್ಞೆಗೆ ವಿರೋಧವಾದದ್ದು ರಾಜದ್ರೋಹ. ಆದರೆ ಪಿತೃದ್ರೋಹಿಯಾದ ಮಗನು ಇನ್ನೊಬ್ಬ ಪಿತೃವನ್ನು ಬೇಗ ಸಂಪಾದಿಸಿಕೊಳ್ಳುತ್ತಾನೆ. ರಾಜದ್ರೋಹಿಯು ಕ್ಷಿಪ್ರದಲ್ಲೇ ಇನ್ನೊಬ್ಬ ರಾಜನಿಗೆ ಶರಣಾಗತನಾಗುತ್ತಾನೆ. ಆ ಇನ್ನೊಬ್ಬ ಪಿತೃವೂ ರಾಜನೂ ಯಾರು? ದೇವರಿಗೆ ವಿರೋಧಿಯಾದ ಪಿಶಾಚನೇ ಅವನು.

ಅರಸನ ಸೊತ್ತಾದ ರೂಪಾಯಿನ ಮೇಲೆ ಅವನ ರೂಪವೂ ನಾಮವೂ ಮುದ್ರಿತವಾಗಿವೆಯಷ್ಟೆ. ದೇವರ ಸೊತ್ತಾದ ನಮ್ಮ ಮುಖದಲ್ಲಿ ದೇವರ ರೂಪವೂ ಹೆಸರೂ ಮುದ್ರಿತವಾಗಿವೆ. ನೇತ್ರೇಂದ್ರಿಯಗಳಿಗೆ ಗೋಚರವಾಗುವ ಸ್ಥೂಲ ರೂಪವು ಪರಮಾತ್ಮನಾದ ದೇವರು ಅಲ್ಲ. ಆದರೆ ಪರಮಾತ್ಮನಾದ ಆತನು ತನ್ನ ಹೋಲಿಕೆಯುಳ್ಳ ಜೀವಾತ್ಮನನ್ನು ನಮಗೆ ಕೊಟ್ಟಿದ್ದಾನೆ. ಆದ್ದರಿಂದಲೇ ಆತನ ಹಾಗೆ ನಾವು ಸಹ ಆತ್ಮನ ಲಕ್ಷಣಗಳಾದ ಬುದ್ಧಿ, ಚಿತ್ತ, ಸ್ವತಂತ್ರ, ಪಾಪಪುಣ್ಯಗಳ ಜ್ಞಾನ ಮುಂತಾದ ದೈವಲಕ್ಷಣಗಳುಳ್ಳವರಾಗಿದ್ದೇವೆ. ಇದು ದೇವರ ಸೊತ್ತಾಗಿ ನಡೆಯುವ ಪ್ರತಿಯೊಬ್ಬ ಮನುಷ್ಯನ ಮುಖದ ಮೇಲೆ ಮುದ್ರಿತವಾಗಿ ಅವನ ಮುಖ ವರ್ಚಸ್ಸಿನಿಂದಲೇ ಗೋಚರವಾಗುತ್ತದೆ. ಯಾಕೆಂದರೆ ಮುಖವು ಮನಸ್ಸಿನ ಪ್ರತಿಬಿಂಬವಾಗಿರುತ್ತದೆ. ಒಬ್ಬನು ಮಧುರವಾದ ಭಕ್ಷ್ಯಗಳನ್ನೂ ಹಣ್ಣುಗಳನ್ನೂ ಸವಿದರೆ ಅವನ ಮನಸ್ಸಿಗೆ ಸಂತೋಷವಾಗುವದು. ಮನಸ್ಸಿನಲ್ಲಿ ಉಂಟಾದ ಆ ಸಂತೋಷವು ಮುಖದಲ್ಲಿ ಪ್ರತಿಬಿಂಬಿಸಿ ಕಾಣಬರುವದಿಲ್ಲವೇ? ಅವನ ಮನಸ್ಸಿನಲ್ಲಿ ಅಂಕುರವಾದ ಸಂತೋಷವು ಅವನ ಮುಖದಲ್ಲಿ ಕಾಣಬರುವದು. ಆದರೆ ಒಬ್ಬನು ಹುಳಿ ಹಣ್ಣನ್ನೋ ಅಥವಾ ಕಹಿಯಾದ ಕಾಯಿಗಳನ್ನೋ ತಿಂದರೆ ಅವನು ಮನಸ್ಸಿನಲ್ಲಿ ಅನುಭವಿಸುವ ಅಸಂತೋಷವು ಮುಖಮುದ್ರೆಯಿಂದ ಗೊತ್ತಾಗುವದು.

ಒಬ್ಬ ಬಾಲಕನು ಮಾಡಬಾರದ ಯಾವದೋ ಒಂದು ಅಕೃತ್ಯವನ್ನು ನಡಿಸಿ ಮನೆಯೊಳಗೆ ಬರುತ್ತಾನೆ. ಅವನ ಮುಖವು ಆಗಲೇ ವಿವರ್ಣವಾಗಿರುತ್ತದೆ, ಕಳೆಯು ಕುಂದಿ ಮುಖವು ಬಾಡಿರುತ್ತದೆ. ಅವನು ಯಾರನ್ನು ನೋಡುವದಕ್ಕೂ ಮಾತನಾಡಿಸುವದಕ್ಕೂ ಮನಸ್ಸಿಲ್ಲದೆ ಒಂಟಿಗನಾಗಿರಲಪೇಕ್ಷಿಸುತ್ತಾನೆ. ತಾಯಿಯು ಅವನನ್ನು ಕರೆದರೆ ಕೇವಲ ಲಜ್ಜೆಯಿಂದಲೂ ಅಸಂತೋಷದಿಂದಲೂ ಬಾಡಿದ ಮುಖವನ್ನು ಮುಚ್ಚಿಕೊಂಡು ಒತ್ತಟ್ಟಿಗೆ ನಿಂತುಕೊಳ್ಳುತ್ತಾನೆ. ಅಥವಾ ಕಣ್ಣುಗಳನ್ನೆತ್ತಿ ನೋಡದೆ ನೆಲವನ್ನೇ ನೋಡುತ್ತಿರುತ್ತಾನೆ. ಅವನನ್ನು ಯಾರೂ ಗದರಿಸಲಿಲ್ಲ, ದಂಡಿಸಲಿಲ್ಲ. ಆದರೂ ಈ ಲಕ್ಷಣಗಳು ಅವನ ಮುಖದಲ್ಲಿ ಮುದ್ರಿತವಾಗಿ ಕಾಣಬರುತ್ತವೆ. ಕಾರಣವೇನು? ಮನಸ್ಸು ತನ್ನ ಯಜಮಾನನೂ ತಂದೆಯೂ ಆಗಿರುವ ದೇವರ ಆಜ್ಞೆಯನ್ನು ಭಂಗಪಡಿಸಿದ [illegible] ವ್ಯಾಕುಲಪೀಡಿತವಾಗಿದೆ. ದೇವರ ಆಜ್ಞೆಯನ್ನು ತಿರಸ್ಕರಿಸಿ, ಪಿಶಾಚನ [illegible] ಒಳಪಟ್ಟದ್ದರಿಂದ ಅವನ ಮುಖದ ಮೇಲೆ ಸ್ವಾಭಾವಿಕವಾಗಿ ಮುದ್ರಿತವಾ[illegible] ದೇವರ ರೂಪವೂ ಕಳೆಯೂ ಮಾಸಿಹೋಗಿ ಪಿಶಾಚನ ರೂಪವೂ ಮುದ್ರಿತವಾ[illegible] ಅವನ ಮುಖದ ಕಳೆಯು ವಿಕಾರವಾಗಿರುವದಕ್ಕೆ ಕಾರಣವೇನು? ಮನ[illegible] ಕಳಂಕವಾಗಿರುವದೇ ಅಲ್ಲವೇ? ಮುಖವು ಮನಸ್ಸಿನ ನಿಜಸ್ಥಿತಿಯನ್ನು ವ್ಯ[illegible] ಪಡಿಸುತ್ತದೆ. ಆದರೆ ಒಬ್ಬನು ನಿರ್ದೋಷಿಯಾಗಿ ಲಜ್ಜಾಸ್ಪದವಾದ ಕಾ[illegible] ವನ್ನು ಮಾಡದೆ ದುಷ್ಟೇಚ್ಛೆಗೆ ಆಸ್ಪದಕೊಡದೆ ಇದ್ದರೆ ಅವನ ಮುಖವ[illegible] ಕೆಡುವದೇ ಇಲ್ಲ. ಅವನ ಮನಸ್ಸಿನಲ್ಲಿ ಚಿಂತೆಯೂ ವ್ಯಾಕುಲವೂ ಇಲ್ಲ, ಮ[illegible] ಸ್ಸು ನಿರ್ಮಲವಾಗಿರುವದರಿಂದ ಮುಖದ ಮೇಲಣ ಕಳೆಯೂ ಶೋಭಿಸು[illegible] ವಂಚಕರನ್ನು ನಾವು ಹತ್ತಿರ ಬರಗೊಡಿಸುವದಿಲ್ಲ. ಆದರೆ ನಾವೇ ವಂಚ[illegible] ಮನದಲ್ಲಿ ವಂಚನೆಯನ್ನು ರಹಸ್ಯಪಡಿಸುವದು ನ್ಯಾಯವೋ? ಅದು [illegible] ರಹಸ್ಯವಾಗಿದ್ದರೂ ಮುಖದ ಮೇಲೆ ಅದರ ಕಳಂಕವು ರೂಪವಾಗದೆ ಇರಲಾ[illegible] ಒಳಗಿದ್ದದ್ದು ಹೊರಗೆ ಬಂದೇ ಬರುವದು. ಅಂತರಂಗದಲ್ಲಿ ನಾಳುವ [illegible] ವನ್ನು ಬಹಿರಂಗಪಡಿಸದೆ ಇರುವದೇ ಅಸಾಧ್ಯ. ನಮ್ಮ ಗುಟ್ಟು ರಟ್ಟಿಸಿ [illegible] ಮುಖವನ್ನು ನೋಡುವದರಿಂದಲೇ ನಾವು ವಂಚಕರು, ಸುಳ್ಳುಗಾರರು [illegible] ನಮ್ಮ ಹಿರಿಕೆರಿಯರಿಂದ ಬಾಧಿಸಲ್ಪಡುವದು ಯಾರಿಗೆ ತಾನೆ ಸಂತೋಷವಾಗಿದ್ದೀ[illegible]

ಹಾಗಾದರೆ ಏನು ಮಾಡಬೇಕು? ನಾನು ಯಾರ ಸೊತ್ತುಗಳೋ ಆತ[illegible] ಪುನಃ ಆಶ್ರಯಿಸಿ ಪಾಪಪರಿಹಾರವನ್ನು ಬೇಡಬೇಕು. ಪಾಪಮಾಡುವವರೆ[illegible] ಪಾಪಕ್ಕೆ ದಾಸರಾಗುವರು. ಆದ್ದರಿಂದ ಪಾಪದ ಪಾಲಿಗೆ ಸತ್ತವರೆಂದು ನಮ್ಮ[illegible] ಅದರಿಂದ ಪ್ರತ್ಯೇಕಿಸಿಕೊಳ್ಳಬೇಕು. ಪಾಪವನ್ನು ನಮ್ಮ ಮೇಲೆ ಆಳಗೊ[illegible] ಅದರ ದುರಾಶೆಗೆ ಒಳಪಡದೆ ಇರಬೇಕು. ದೇಹವು ಮನುಷ್ಯನ ಆಯುಧವಾ[illegible] ಆದ್ದರಿಂದ ಮನಸ್ಸು ದೇವರನ್ನು ತನ್ನ ಧಣಿಯೂ ತನ್ನ ತಂದೆಯೂ [illegible] ಭಾವಿಸಿ ಆತನ ಕಡೆಗೆ ಮನಸ್ಸನ್ನೂ ಬುದ್ಧಿಯನ್ನೂ ತಿರುಗಿಸಬೇಕು. [illegible] ವಿಷಯ ವಿಶೇಷ ಅನುಭವವುಳ್ಳ ಶ್ರೀಪೌಲನೆಂಬ ಭಕ್ತನು—ನೀವು ನಿಮ್ಮ [illegible] ಗಳನ್ನು ಪಾಪಕ್ಕೆ ಒಪ್ಪಿಸಬೇಡಿರಿ. ಅವುಗಳನ್ನು ದುಷ್ಕೃತ್ಯವನ್ನು ನಡಿಸುವ [illegible] ನಗಳನ್ನಾಗಮಾಡಬೇಡಿರಿ. ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು, ನಿಮ್ಮ [illegible] ಳನ್ನು ನೀತಿಕೃತ್ಯಗಳನ್ನು ನಡಿಸುವದಕ್ಕೆ ತಕ್ಕ ಸಾಧನಗಳನ್ನಾಗಮಾಡಿರಿ. ಯಾ[illegible] ದರೆ ಪಾಪಕ್ಕೆ ನಿಮ್ಮ ಮೇಲೆ ಏನೇನೂ ಅಧಿಕಾರವಿರಬಾರದು ಎಂದು ಹೇಳಿದ್ದಾ[illegible] ಯಾರ್‍ಯಾರು ದೇವರ ಪರಿಶುದ್ಧಾತ್ಮನಿಗೆ ಒಳಪಟ್ಟು ನಡೆಯುತ್ತಾರೋ ಅ[illegible] ದೇವರ ಮಕ್ಕಳು. ಅವರು ಪಾಪದ ಆಳುಗಳಲ್ಲ. ಪಾಪವು ಅವರ ಮೇಲೆ [illegible] ತನಮಾಡಲಾರದು. ದೇವರಿಂದ ಬಂದು ನಮ್ಮೊಳಗಿರುವ ಪವಿತ್ರಾತ್ಮನಿಗೆ [illegible] ಗರ್ಭಗುಡಿಯಾಗಿ ಕ್ರಯಕ್ಕೆ ಕೊಳ್ಳಲ್ಪಟ್ಟಿದ್ದೀರಿ. ನೀವು ನಿಮ್ಮ ಸ್ವಂತಸೊತ್ತ[illegible] ಆದ್ದರಿಂದ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ.

ಯುದ್ಧದ ಸಮಾಚಾರಗಳು.

ರಷ್ಯಾದವರು ಇನ್ನೂ ಹಿಮ್ಮೆಟ್ಟುತ್ತಿದ್ದಾರೆ.

ಟರ್ಕಿಯವರಿಗಾದ ಸೋಲು.

ಸಮುದ್ರ ಯುದ್ಧದಲ್ಲಿ ರಷ್ಯಾದವರ ಜಯ.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು ಅನೇಕ ಠಾಣ್ಯ[illegible] ಬಹಳ ಹೆಚ್ಚಾಗಿ ಯುದ್ಧಗಳು ನಡೆದಿರುವವೆಂದು ತಿಳಿಸುತ್ತವೆ. ಕಾಕಸಸ್ ನ[illegible] ಯಲ್ಲಿ ಟರ್ಕಿಯವರು ರಷ್ಯಾದವರಿಂದ ಸೋತುಹೋದದ್ದೂ ಜರ್ಮನಿಯ[illegible] ನಾವಿಕರಿಗೆ ಅಪಜಯವಾದದ್ದೂ ವಿಶೇಷವಾದ ಸಮಾಚಾರಗಳಾಗಿವೆ.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದಲ್ಲೆಲ್ಲಾ ಫಿರಂಗಿ ಗುಂಡುಗಳ ಹೋರಾಟದ ಯುದ್ಧ[illegible] ವಿಶೇಷವಾಗಿ ನಡೆದಿರುತ್ತದೆ. ಬ್ರಿಟಿಷ್ ಸೈನಿಕರಿಗೆ ಈಗ ಹೊಸ ಮ[illegible] ಉತ್ತಮತರದ ಫಿರಂಗಿಗಳೂ ಗುಂಡುಗಳೂ ಒದಗಿಸಲ್ಪಟ್ಟಿರುವಂತೆ [illegible] ತ್ತದೆ. ಈ ಯುದ್ಧ ಭೂಮಿಯಲ್ಲಿ ಮೊನ್ನೆ ತಾನೇ ಬ್ರಿಟಿಷರು ಮುಂದ[illegible] ನುಗ್ಗಿ ಹೋದದ್ದನ್ನು ಕುರಿತು ಹುದ್ದೇದಾರರು ಹೇಳುವುದೇನೆಂದರೆ—ನ[illegible] ಫಿರಂಗಿಗಳಿಂದ ಹೊಡೆಯಲ್ಪಟ್ಟ ಗುಂಡುಗಳು ಹೋಗಿ ಶತ್ರುವಿನ ಎ[illegible] ಪಾರ್ಶ್ವದಲ್ಲಿ ಅವರು ಕಟ್ಟಿಕೊಂಡಿದ್ದ ಮುಳ್ಳುತಂತಿಗಳ ಬೇಲಿಗಳನ್ನು [illegible] ಹಾಕಿದ್ದಲ್ಲದೆ ಶತ್ರುವಿನ ಕಂದಕಗಳ ಮುಂದಿದ್ದ ಮಣ್ಣು ಗೋಡೆಗಳನ್ನ[illegible] ನಾಶಮಾಡಿರುತ್ತವೆ. ಇದರಿಂದ ನಮ್ಮ ಸೈನಿಕರು ಜಟ್ಟನೆ ಶತ್ರುವಿನ ಕಂ[illegible] ಗಳಿಗೆ ನುಗ್ಗಿ ಹೋಗಲು ಅನುಕೂಲವಾಯಿತು. ಜರ್ಮನಿಯವರು [illegible] ಯುದ್ಧ ಮಾಡಲಾರದೆ ಹೋದರು. ಒಬ್ಬ ಜರ್ಮನ ಹುದ್ದೇದಾರನು [illegible] “ಗುಂಡಿನಿಂದ ನಮ್ಮನ್ನು ಹೊಡೆಯಬೇಡಿರಿ” ಎಂದು ಮಾತುಕೊಟ್ಟ ಪಕ್ಷದಲ್ಲಿ ನಾವೆಲ್ಲಾ ನಿಮಗೆ ಶರಣಾಗತರಾಗುತ್ತೇವೆ” ಎಂದು ಹೇಳಿಕೊಂಡನು. ನ[illegible] ಅದೇ ರೀತಿ ಅವರಿಗೆ ಮಾತುಕೊಟ್ಟೆವು. ಕೂಡಲೇ 100 ಜನ ಶತ್ರು ಸೈ[illegible] ಬಂದು ನಮಗೆ ಶರಣಾಗತರಾದರು. ಇವರೆಲ್ಲಾ ಜರ್ಮನಿಯಲ್ಲಿ ಗುಮ[illegible] ರಾಗಿಯೂ ಉಪಾಧ್ಯಾಯರುಗಳಾಗಿಯೂ ಇದ್ದವರೆಂದು ಹೇಳಲಾ[illegible] ಈ ಪ್ರಕಾರ ಬ್ರಿಟಿಷ್ ಸೈನಿಕರು ಸುಲಭವಾಗಿ ಶತ್ರುವಿನ ಕಂದಕಗಳಿಗೆ [illegible] ಅವನ್ನು ಸ್ವಾಧೀನಪಡಿಸಿಕೊಂಡ ಮೇಲೆ ಅವರೆಲ್ಲಾ ವಿ|| ಲ್ಲಾಯಿಡ್ [illegible] ರವರ ಹೆಸರು ಹೇಳಿ ಜಯಧ್ವನಿ ಮಾಡಿದರು. ಯಾಕೆಂದರೆ ವಿ|| ಲ್ಲಾಯ[illegible] ಜಾರ್ಜರವರೇ ಈಗ ಮದ್ದುಗುಂಡನ್ನು ತಯಾರುಮಾಡಿಸಿ ಸೈನ್ಯಕ್ಕೆಲ್ಲಾ [illegible] ಗಿಸುವ ಅಧಿಕಾರಿಯಾಗಿದ್ದಾರೆ.

ಜರ್ಮನಿಯ ಯುವರಾಜರ ಸೈನ್ಯವು ಫ್ರೆಂಚರ ಮೇಲೆ ನುಗ್ಗಿ [illegible] ಅವರ ಸಾಲುಗಳನ್ನು ಒಡೆದು ನುಗ್ಗಬೇಕೆಂದು ಅನೇಕ ಸಲ ಪ್ರಯತ್ನಪಟ್ಟ[illegible] ಆದರೆ ಪ್ರತಿ ಸಲವೂ ಸೋತು ಹಿಮ್ಮೆಟ್ಟಿ ಹೋಗಬೇಕಾಯಿತು. ಆ ಯು[illegible] ವರು ಹುಕುಂ ಕೊಟ್ಟಿರುವುದೇನೆಂದರೆ—“ವೇರ್‌ಡನ್” ಎಂಬ [illegible] ಕೋಟೆಯನ್ನು ನಾವು ಗೆದ್ದುಕೊಳ್ಳಲೇ ಬೇಕು; [illegible] ಅವರಿಂದ ಸಾಧ್ಯವಲ್ಲವೇ ಅಲ್ಲ. ಕೆಲವು ವರ್ತಮಾನಕಾರರು ಜರ್ಮನ[illegible] ಸೈನ್ಯ ಸಾಲುಗಳ ಬಿಗಿಯೂ ಪರಾಕ್ರಮವೂ ಕಡಿಮೆಯಾಗುತ್ತಿದೆ ಎ[illegible] ಅವರು ಇದ್ದಕ್ಕಿದ್ದ ಹಾಗೇ ತಮ್ಮ ಠಾಣ್ಯಗಳನ್ನು ಬಿಟ್ಟು ಹೊರಟು[illegible] ಬಿಡುವರೆಂದೂ ಹೇಳುತ್ತಾರೆ. ಆದರೂ ಇದರ ಲಕ್ಷಣಗಳು ಇನ್ನೂ [illegible] ಬರುತ್ತಾ ಇಲ್ಲ. ಜರ್ಮನಿಯವರೇನೋ ತಮ್ಮ ಕೆಲವು ಕಂದಕ[illegible] ಫ್ರೆಂಚರು ಗೆದ್ದುಕೊಂಡರೆಂದು ಹೇಳಿ ಒಪ್ಪಿಕೊಂಡಿದ್ದಾರೆ.

ಬ್ರಿಟಿಷ್ ಯುದ್ಧದ ಇಲಾಖೆಯ ಮಂತ್ರಿಯವರಾದ ಲಾರ್ಡ್ ಕಿಚ್ನ[illegible] ವರು ಫ್ರಾನ್ಸಿಗೆ ಹೋಗಿ ಅಲ್ಲಿರುವ ಕೆಲವು ಬ್ರಿಟಿಷ್ ಮತ್ತು ಕೆಲವು ಫ್ರೆಂ[illegible] ಸೈನ್ಯಗಳನ್ನು ನೋಡಿಕೊಂಡು ಬಂದರು. ಅವರು ಫ್ರೆಂಚ್ ಸೇನಾಧಿಪ[illegible] ಜನರಲ್ ಜೋಫ್ರೆಯವರೇ ಮೊದಲಾದವರನ್ನು ಕಂಡು ಅವರ ಕೂಡ [illegible] ಚನೆ ಅಂತರಂಗಗಳನ್ನು ನಡಿಸಿದರು. ಎಲ್ಲರ ಅಭಿಮತವೂ ಸಂಕಲ್ಪವೂ [illegible] ಜಯ ಹೊಂದುವ ತನಕ ಯುದ್ಧವನ್ನು ನಡಿಸುತ್ತಲೇ ಬರಬೇಕೆನ್ನು[illegible] ಗಿದೆ. ಔತಣಕಾಲದಲ್ಲಿ ಫ್ರೆಂಚರ ಮಂತ್ರಿ ಶ್ರೇಷ್ಠರಾದ ಎಂ. ವಿವ್ಯ[illegible] ರವರು—ಉದ್ದೇಶಿಸಿಟ್ಟ ಕಾರ್ಯವು ಕೈಗೂಡುವ ತನಕ ಫ್ರಾನ್ಸ್ [illegible] ಆಯುಧವನ್ನು ಇಳಿಸುವುದಿಲ್ಲವೆಂದು ಹೇಳಿದರು. ಈ ವಾರ್ತೆ [illegible]

ಅರ್ಗೋನ ಕಾಡಿನವರು—ನಾಗೀಗ ಫ್ರೆಂಚ್ ಸೈನಿಕರನ್ನು ನೋಡಿ ಬಂದಿರು ತ್ತೇನೆ. ನಮ್ಮ ಪಕ್ಷದವರಿಗೇ ಜಯಪ್ರದವಾಘೀತೆನ್ನುವುದು ಮೊದಲಿಗಿಂತ ಹೆಚ್ಚು ಖಂಡಿತವಾಗಿರುತ್ತದೆ ಎಂದು ಹೇಳಿದನು. ಮತ್ತು ಗ್ರೇಟ್ ಬ್ರಿಟನ್ನವರು ಜಯಪ್ರದವಾಗುವುದಕ್ಕೆ ತನ್ನ ಕೈಲಾಗುವುದನ್ನೆಲ್ಲಾ ಮಾಡುತ್ತ ಬರುತ್ತೇವೆ ಎಂಬ ಭರವಸೆಯನ್ನು ಕೊಟ್ಟರು.

ಜರ್ಮನಿಯ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನ ಯಂತ್ರವು ಇಂಗ್ಲೆಂಡಿನ ಪೂರ್ವತೀರದ ಮೇಲೆ ಮತ್ತೆ ದರೋಡೆಕಳ್ಳರಂತೆ ಹಾರಿಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಈ ಗುಂಡುಗಳು ಬಿದ್ದು ಒಡೆದು ಕೆಲವು ಕಟ್ಟಡ ಗಳೂ ಒಂದು ದೇವಾಲಯವೂ ಹಾಳಾದವು; 7 ಮಂದಿ ಗಂಡಸರು, ಇಬ್ಬರು ಹೆಂಗಸರು, ಒಂದು ಮಗು ಮೃತಪಟ್ಟರು; 15 ಗಂಡಸರು, 18 ಹೆಂಗಸರು, 3 ಮಕ್ಕಳು ಗಾಯಪಟ್ಟಿದಾರೆ. ಇವರೆಲ್ಲಾ ನಿಶ್ಶಸ್ತ್ರಪ್ರಜೆಗಳು. ಈ ರೀತಿ ನಿರಪ ರಾಧಿಗಳಾದ ಪ್ರಜೆಗಳನ್ನು ಕೊಲ್ಲುವುದರಿಂದ ಅದು ಕ್ರೂರತನವಾದ ಕೊಲೆ ಯಾಗುವುದೇ ಹೊರತು ಇನ್ಯಾವ ಫಲಾಂಶವೂ ಆಗುವುದಿಲ್ಲ.

ಪೂರ್ವ ರಣರಂಗದಲ್ಲಿ.

ರೀಗಾ ಕೊಲ್ಲಿಯಲ್ಲಿ ಹಡಗುಗಳ ಯುದ್ಧ ನಡೆದು ಜರ್ಮನಿಯವರಿಗೆ ಬಹಳ ಘೋರವಾದ ನಷ್ಟ ಸಂಭವಿಸಿರುತ್ತದೆ. ಜರ್ಮನಿಯ ಮೊಲ್ಟ್ಕೆ ಎಂಬ ಅತ್ಯಂತ ದೊಡ್ಡದಾದ ಯುದ್ಧದ ಜಹಜು, ಕ್ರೂಸರ್ ಎಂಬ ಎರಡು ಯುದ್ಧದ ಹಡಗುಗಳೂ, ಟಾರ್ಪೀಡೋ ಎಂಬ ಎಂಟು ದೋಣಿಗಳೂ ಮುಳುಗಿಸ ಲ್ಪಟ್ಟವು. ಉಳಿದವುಗಳೆಲ್ಲಾ ಆ ಕೊಲ್ಲಿಯಿಂದ ಹಿಂದಕ್ಕೆ ಓಡಿಹೋದವು. ಜರ್ಮನಿಯವರು ತಮ್ಮ ಹಡಗುಗಳಲ್ಲಿ ತಂದಿದ್ದ ಸೈನ್ಯಗಳನ್ನು ಕೊಲ್ಲಿಯ ತೀರದ ಮೇಲೆ ಇಳಿಸಬೇಕೆಂದು ಎಷ್ಟೋ ಸಾಹಸಪಟ್ಟರು. ಆದರೆ ರಷ್ಯಾದವರು ಅವರನ್ನೆಲ್ಲಾ ನಾಶಮಾಡಿದ್ದಲ್ಲದೆ ಅವರ ದೋಣಿಗಳನ್ನು ಕಿತ್ತು ಸ್ವಾಧೀನ ಮಾಡಿಕೊಂಡರು.—ಇದಲ್ಲದೆ ಒಂದು ಬ್ರಿಟಿಷ್ ಸಬ್‌ಮೆರೀನು ಬಾಲ್ಟಿಕ್ ಕಡಲಿನಲ್ಲಿ ಜರ್ಮನಿಯ ಕ್ರೂಸರ್ ಎಂಬ ಯುದ್ಧದ ಹಡಗನ್ನು ಟಾರ್ಪೀಡೋ ಬಿಟ್ಟು ಹೊಡಿಸಿ ಮುಳುಗಿಸಿತೆಂದು ಹೇಳಲಾಗಿದೆ.—ರಷ್ಯಾದವರು ಜರ್ಮನಿಯ ಒಂದು ಜೆಪ್ಪೆಲಿನ್ ಎಂಬ ದೊಡ್ಡ ವಿಮಾನಯಂತ್ರವನ್ನು ಹಾಳುಮಾಡಿ ಅದರಲ್ಲಿದ್ದ ಮುದ್ದೇದಾರರಿಬ್ಬರನ್ನೂ ಎಂಟು ಜನರನ್ನೂ ಕೈಸೆರೆಹಿಡಿದುಕೊಂಡರು. ಆ ವಿಮಾನಯಂತ್ರದೊಳಗೆ ಒಂದು ಮೆಷೀನ್ ಪಿರಂಗಿಯೂ ಅನೇಕ ಸಿಡಿಮದ್ದಿನ ಗುಂಡುಗಳೂ ಇದ್ದವು.

ಪೂರ್ವ ರಣರಂಗದಲ್ಲಿ ಯುದ್ಧಗಳೇನೋ ಮಹಾ ಘೋರವಾಗಿಯೇ ನಡೆಯುತ್ತಿರುವವು. ಆದರೆ ರಷ್ಯಾದವರು ಜರ್ಮನಿಯವರನ್ನು ತಡೆದು ನಿಲ್ಲಿ ಸಲಾಗದೆ ಹೋಗಿದ್ದಾರೆ. ಈ ಘೋರ ಕದನಗಳಲ್ಲಿ ಎರಡು ಪಕ್ಷಗಳಲ್ಲೂ ಅಪಾರ ಸೈನ್ಯಗಳು ನಷ್ಟವಾಗಿರುತ್ತವೆ. ಹನ್ನೊಂದು ದಿನಗಳ ತನಕ ಅತ್ಯಂತ ಭೀಕರವಾಗಿ ಕದನಗಳು ನಡೆದ ಬಳಿಕ ಜರ್ಮನಿಯವರು ಕೊವ್ನೊ ಎಂಬ ದುರ್ಗಗಳುಳ್ಳ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು. ಇದು ಯುದ್ಧಸಾಲಿನ ಉತ್ತರ ಭಾಗದಲ್ಲಿರುತ್ತದೆ. ಜರ್ಮನಿಯವರು ಬಹಳ ಸೈನಿಕರನ್ನು ಕೈಸೆರೆ ಹಿಡಿದಂತೆ ಹೇಳುವುದಿಲ್ಲವಾದದ್ದರಿಂದ ರಷ್ಯಾದವರು ಹಿಮ್ಮೆಟ್ಟಿ ಹೊರಟು ಹೋದರೆಂದು ತಿಳಿಯುತ್ತದೆ. ದಕ್ಷಿಣ ಭಾಗದಲ್ಲಿ ನಡೆದ ಒಂದು ಕದನದಲ್ಲಿ ಆಸ್ಟ್ರಿಯಾದವರ ಸೈನಿಕರೊಳಗೆ 10,000 ಮಂದಿ ಎರಡು ಗಂಟೆ ಹೊತ್ತಿನೊಳಗಾಗಿ ನಷ್ಟವಾದರಂತೆ. ಈಚೆಗೆ ರಷ್ಯಾದವರ ಪಿರಂಗಿ ಗುಂಡುಗಳು ಬಲವಾಗಿ ರುವವೆಂದೂ, ಹೊಸ ಸೈನ್ಯಗಳನ್ನು ಕೂಡಿಸಿ ಕಳುಹಿಸಿರುತ್ತಾರೆಂದೂ ಹೇಳಲಾಗಿದೆ. ಇನ್ನೊಂದು ಠಾಣ್ಯದಲ್ಲಿ ನಡೆದ ಯುದ್ಧದೊಳಗೆ ಜರ್ಮನಿಯವರು ವಿಷಕರವಾದ ವಾಯುವನ್ನು ರಷ್ಯಾದವರ ಮೇಲೆ ಸುರಿಸಿ ಅವರ ಹಿಂದೆಯೇ ತಮ್ಮ ಸೈನ್ಯಗಳನ್ನು ನುಗ್ಗಿಸಿದರೆಂದೂ, ಆದರೆ ಆ ಸಮಯದಲ್ಲಿ ಗಾಳಿಯು ಇವರ ಕಡೆಗೇ ತಿರುಗಿ ಬೀಸಿದ್ದರಿಂದ ಆ ವಿಷವಾಯುವು ಇವರ ಮೇಲೆ ಬೀಸಿತೆಂದೂ, ಅದನ್ನು ಕಂಡು ಜರ್ಮನಿಯವರು ಹಿಮ್ಮೆಟ್ಟಿ ಓಡಿಬಂದರೆಂದೂ ತಿಳಿಯುತ್ತದೆ. ಆಗ ರಷ್ಯಾ ಸೈನಿಕರು ಅವರ ಮೇಲೆ ಪಿರಂಗಿ ಗುಂಡುಗಳ ಮಳೆಯನ್ನು ಸುರಿಸಿದರು. ಜರ್ಮನಿಯವರು ಕೂಡ ತಮ್ಮ ಸೈನಿಕರ ಮೇಲೆ ಪಿರಂಗಿ ಗುಂಡುಗಳನ್ನು ಹೊಡೆದರು. ಇದರಿಂದ ಜರ್ಮನಿಯವರ ಕಡೆ ಇದ್ದ 3,000 ಸೈನಿಕರೂ ಒಟ್ಟಾರೆ ನಷ್ಟವಾದರು.

ಜರ್ಮನಿಯವರ ಪಿರಂಗಿ ಗುಂಡುಗಳು ರಷ್ಯಾದವರನ್ನು ಎಷ್ಟು ಪರಾಕ್ರಮದಿಂದ ಕಾದಿದರೂ ನಿಲ್ಲಗೊಳಿಸದೆ ಹಿಮ್ಮೆಟ್ಟಿಸುತ್ತಿರುವವು. ಕೋಟೆಗಳು ಬೆಳ್ಳೆಯಷ್ಟು ಆಗಿಹೋದವು. ಒಬ್ಬ ವರ್ತಮಾನಕಾರನು ಕೊವ್ನೊ ಪಟ್ಟಣದ ಮುಂದೆ 1,20,000 ಜರ್ಮನಿ ಸೈನಿಕರು ನಷ್ಟವಾದರೆಂದು ಹೇಳುತ್ತಾನೆ. ಜರ್ಮನಿಯವರು ಹದಿಮೂರು ಡಿವಿಜನ್ ಸೈನ್ಯಗಳನ್ನು ತಂದಿದ್ದರು. ರಷ್ಯಾದವರು ಜರ್ಮನಿಯವರ ಸಾಲುಗಳನ್ನು ಸನೀನುಗಳಿಂದ ತಿವಿಯುತ್ತಾ ನುಗ್ಗಿ ನಡೆದು ಹೋಗಿ ತಮ್ಮ ದೊಡ್ಡ ಸೈನ್ಯವನ್ನು ಸೇರಿಕೊಳ್ಳಬೇಕಾಯಿತು.

ರಷ್ಯಾದವರು ಹಿಮ್ಮೆಟ್ಟಿಹೋದ ಹಾಗೆಲ್ಲಾ ಜರ್ಮನಿ ಮತ್ತು ಆಸ್ಟ್ರಿಯಾದವರಿಗೆ ಉಪಯೋಗಕ್ಕೆ ಬರುವಂಥಾ ಯಾವುದೊಂದು ಪದಾರ್ಥವನ್ನೂ ಹಿಂದೆ ಬಿಡದೆ ಸಾಗಿಸಿಕೊಂಡು ಹೋಗುವರು. ಸೇತುವೆಗಳನ್ನು ಒಡೆದು ಕೆಡವುತ್ತಾರೆ. ರೈಲ್ ರಸ್ತೆಗಳನ್ನು ಕಿತ್ತುಹಾಕಿರುವರು. ಇದರಿಂದ ಜರ್ಮನಿಯವರಿಗೆ ಮುಂದರಿಸಿ ನುಗ್ಗಿ ಹೋಗದಂತೆ ಅಡ್ಡಿಯಾಗುತ್ತದೆ.

ಜರ್ಮನಿ ಚಕ್ರವರ್ತಿಯು ಇನ್ನೂ ವಾರ್ಸಾ ನಗರವನ್ನು ಪ್ರವೇಶಮಾಡಿಲ್ಲ. ಪೋಲೆಂಡಿನ ವಿಲೇವಾರಿ ವಿಷಯದಲ್ಲಿ ಜರ್ಮನಿಯವರಿಗೂ ಆಸ್ಟ್ರಿಯಾದವರಿಗೂ ಏನೋ ಜಗ್ಗಾಟಗಳೂ ಮನಸ್ತಾಪಗಳೂ ಹುಟ್ಟಿರುವಂತೆ ಕಾಣುತ್ತದೆ. ಜರ್ಮನಿಯವರು ತಮ್ಮ ಸೈನಿಕರೇ ರಷ್ಯಾದವರನ್ನು ಓಡಿಸಿದವರೆಂದೂ, ಆದದ್ದರಿಂದ ಪೋಲೆಂಡಿನ ವಿಚಾರವನ್ನು ಈಗಲೇ ಇತ್ಯರ್ಥ ಮಾಡಿಕೊಳ್ಳಬೇಕೆಂದೂ ಹೇಳುತ್ತಾರೆ.

ಇಟಲಿ ಮತ್ತು ಆಸ್ಟ್ರಿಯಾ.

ಆಸ್ಟ್ರಿಯಾದವರು ಅನೇಕ ಠಾಣ್ಯಗಳಲ್ಲಿ ಇಟಲಿಯವರನ್ನು ಹಿಂದಕ್ಕೆ ಓಡಿಸಬೇಕೆಂದು ನುಗ್ಗಿ ಸಾಹಸಪಟ್ಟರು. ಆದರೆ ಪ್ರತಿ ಒಂದು ಕಡೆಯಲ್ಲೂ ಅವರಿಗೆ ಸೋಲಾಗಿ ಹಿಂದಕ್ಕೆ ಹೋದರು. ಇಟಲಿಯ ಉತ್ತರ ಪಾರ್ಶ್ವದಲ್ಲಿ ಇಟಲಿಯವರು ಕೆಲವು ಮೈಲುಗಳ ದೂರ ನುಗ್ಗಿಹೋಗಿ ಕದನಮಾಡಿದರು. ಆ ಆಸ್ಟ್ರಿಯಾ ಸೈನಿಕರಲ್ಲಿ 3,0 0 ನಷ್ಟಪಟ್ಟರು; 800 ಮಂದಿ ಇಟಲಿಯವರಿಗೆ ಕೈಸೆರೆಯಾದರು.—ಇಟಲಿಯವರು ಎತ್ತರವಾದ ಪರ್ವತಗಳನ್ನು ಹತ್ತಿ ಸುಮಾರು ಹನ್ನೊಂದುಸಾವಿರ ಅಡಿ ಎತ್ತರದಲ್ಲಿರುವ ಕಣಿವೆಗಳನ್ನು ದಾಟಿಹೋಗಿ ಆಸ್ಟ್ರಿಯಾದವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಿದಾರೆ.

ತೊಲ್ಮಿನೊ ಎಂಬ ಸ್ಥಳದಲ್ಲಿ ಇಟಲಿಯವರು ಸನೀನುಗಳನ್ನು ಹಿಡಿದು ತಿವಿಯುತ್ತಾ ನುಗ್ಗಿಹೋಗಿ ಆಸ್ಟ್ರಿಯಾದವರಿದ್ದ ಕಂದಕಗಳನ್ನು ಗೆದ್ದುಕೊಂಡು ರಟಕ ಸೈನಿಕರನ್ನು ಕೈಸೆರೆ ಹಿಡಿದರು; ಮತ್ತು ನಾಲ್ಕು ಮೆಷೀನ್ ಪಿರಂಗಿಗಳೂ ಬಹಳ ಮದ್ದು ಗುಂಡೂ ಅವರಿಗೆ ಸಿಕ್ಕಿರುತ್ತವೆ.—ಈಗ ಅಲ್ಲಿ ನಡೆಯುತ್ತಿರುವಂಥಾ ಯುದ್ಧಕಾರ್ಯಗಳಲ್ಲಿ ಕುದುರೆ ಸೈನ್ಯದಿಂದ ಅಷ್ಟೇನೂ ಪ್ರಯೋಜನವಾಗುವುದಿಲ್ಲ. ಆದಕಾರಣ ಸೈನಿಕರು ತಮ್ಮನ್ನು ಕಂದಕಗಳಿಗೇ ಕಳುಹಿಸಿರಿ ಎಂದು ಬೇಡಿಕೊಂಡದ್ದರಿಂದ ಅದೇ ರೀತಿ ಕಳುಹಿಸುತ್ತಿದಾರೆ. ಈಂಗಳ ಅಭಿಪ್ರಾಯದೊಳಗಾಗಿ ಇಲ್ಲವೇ ಸೆಪ್ಟಂಬರ್ ಪ್ರಾರಂಭದಲ್ಲಿ ಇಟಲಿಯವರು ಟ್ರಿಯೆಸ್ಟ್ ನಗರವನ್ನು ಗೆದ್ದುಕೊಳ್ಳುತ್ತಾರೆಂದು ಹೇಳಲಾಗಿದೆ.—ಆಸ್ಟ್ರಿಯದ ಜಹಜುಗಳು ಆಡ್ರಿಯಾಟಿಕ್ ಕಡಲಿನಲ್ಲಿರುವ ಪೆಲಗೋಸ ಎಂಬ ಸಣ್ಣ ದ್ವೀಪಕ್ಕೆ ಮುತ್ತಿಗೆಹಾಕಿಕೊಂಡರು. ಆದರೆ ದ್ವೀಪದ ಮೇಲೆ ತಮ್ಮ ಸೈನ್ಯವನ್ನು ಇಳಿಸುವುದಕ್ಕೆ ಧೈರ್ಯ ಸಾಲದೆ ಹಿಂತಿರುಗಿ ಹೊರಟುಹೋದವು. ಇಟಲಿಯವರ ಕಡೆ ಒಬ್ಬ ಮಂದಿ ಮಾತ್ರ ನಷ್ಟಪಟ್ಟರು.

ಆಸ್ಟ್ರಿಯಾದವರು ಕಟ್ಟಿಕೊಂಡಿರುವ ಕಂದಕಗಳು ಬಹಳ ಬಲವಾಗಿರುವುದರಿಂದ ಅದರೊಳಗಿರುವ ಆಸ್ಟ್ರಿಯಾ ಸೈನಿಕರು ತಪ್ಪಿಸಿಕೊಂಡುಹೋಗಲಾರರು; ಅಥವಾ ಶತ್ರುವಿಗೆ ಶರಣಾಗತರಾಗುವಂತೆಯೂ ಇಲ್ಲ. ಆದಕಾರಣ ಅವರೆಲ್ಲಾ ಕಂದಕಗಳೊಳಗೇ ಜೀವಸಹಿತ ಹೂಳಲಾಗುತ್ತಿದಾರೆ.

ಇಟಲಿಯವರು ಟರ್ಕಿಯವರ ಮೇಲೆ ಯುದ್ಧಕ್ಕೆ ಹೊರಟರೇವೆಂದೂ, ಟರ್ಕಿಯವರು ಕರಾರುಗಳನ್ನು ಅತಿಕ್ರಮಿಸಿ ದುಷ್ಕಾರ್ಯಗಳನ್ನು ಮಾಡುತ್ತಾ ಬಂದದ್ದೇ ಅದಕ್ಕೆ ಕಾರಣವೆಂದೂ ತಿಳಿಸಿದಾರೆ.

ಆಸ್ಟ್ರಿಯಾದವರ ವಿಮಾನಯಂತ್ರವು ಉಡಿನೆ ಎಂಬ ಪಟ್ಟಣದ ಮೇಲೆ ಹಾರಿ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಇದರಿಂದ ಐದು ಮಂದಿ ನಿಶ್ಶಸ್ತ್ರ ಪ್ರಜೆಗಳು ಮೃತಪಟ್ಟರು. ಇವರಲ್ಲಿ ಹೆಂಗಸು ಒಬ್ಬಳು, ಮಗು ಒಂದು.

ಸೆರ್ಬಿಯಾ.

ಕಳೆದ ವಾರ ಆಸ್ಟ್ರಿಯಾದವರು ಸರ್ಬಿಯಾ ರಾಜಧಾನಿಯಾದ ಬೆಲ್‌ಗ್ರೇಡ್ ನಗರಕ್ಕೆ ಪಿರಂಗಿ ಗುಂಡುಗಳನ್ನು ಹೊಡೆದರು. ಸರ್ಬಿಯಾದವರು ಅಲ್ಲಿ ಹಲವು ಪಟಾಲಮಿನಷ್ಟು ಸೈನ್ಯಗಳನ್ನು ಇಟ್ಟು ಆ ನಗರವನ್ನು ಕಾಪಾಡಿಕೊಳ್ಳುತ್ತಿದಾರೆ. ಈ ನಗರದ ಕೋಟೆ ಕೊತ್ತಲಗಳಿಂದ ಸರ್ಬಿಯಾದವರು ಸೆಮ್ಲಿನ್ ಎಂಬ ಸ್ಥಳಕ್ಕೂ, ಆಸ್ಟ್ರಿಯಾದವರು ಸೈನ್ಯಗಳನ್ನು ಕೂಡಿಸಿಟ್ಟುಕೊಂಡಿದ್ದ ಇತರ ಸ್ಥಳಗಳಿಗೂ ಪಿರಂಗಿ ಗುಂಡುಗಳನ್ನು ಹೊಡೆದರು. ಸರ್ಬಿಯಾದವರು ಈ ರೀತಿ ಗುಂಡು ಹಾಕಿದ್ದರಿಂದ ಆಸ್ಟ್ರಿಯಾದವರು ಸ್ವಲ್ಪ ಹೊತ್ತಿನೊಳಗಾಗಿ ಗುಂಡು ಹೊಡೆಯುವುದನ್ನು ನಿಲ್ಲಿಸಿಬಿಟ್ಟರು. ಆಸ್ಟ್ರಿಯಾದವರು ಮತ್ತೆ ಸರ್ಬಿಯಾವನ್ನು ಮುತ್ತಿಗೆ ಹಾಕುವುದೆಂಬ ಮಾತಿನಲ್ಲಿ ಹುರುಳೇನೂ ಇರುವುದಿಲ್ಲ. ಇವರು ಸರ್ಬಿಯಾವನ್ನು ನುಗ್ಗುತ್ತೇವೆಂದು ಹೆದರಿಸಿದ್ದಕ್ಕೆ ಕಾರಣವೇನೆಂದರೆ, ಆಸ್ಟ್ರಿಯಾದವರಲ್ಲೂ ಜರ್ಮನಿಯವರಲ್ಲೂ ಅಪಾರ ಸೈನ್ಯಗಳಿವೆ ಎಂಬದಾಗಿ ಬಾಲ್ಕನ್ ಸಂಸ್ಥಾನಗಳಿಗೆ ನಂಬಿಕೆ ಉಂಟುಮಾಡುವ ದಕ್ಕಾಗಿ ಹಾಗೆ ಮಾಡಿರುತ್ತಾರೆ. ಆದರೆ ಅವರಲ್ಲೇನೋ ಸರ್ಬಿಯಾವಿನ ಮುತ್ತಿಗೆ ಹಾಕುವುದಕ್ಕೆ ಸೈನ್ಯವಿಲ್ಲ.

ಟರ್ಕಿಯಲ್ಲಿ.

ನಮ್ಮ ಪಕ್ಷದವರು ಸೈನ್ಯವನ್ನು ಜಹಜುಗಳಲ್ಲಿ ತೆಗೆದುಕೊಂಡು ಹೋಗಿ ಗಲ್ಲಿಪೋಲಿ ಅರ್ಧ ದ್ವೀಪದಲ್ಲಿ ಇಳಿಸಿದರೆಂದು ಕಳೆದ ವಾರ ತಿಳಿಸಿದೇವಷ್ಟೆ. ಟರ್ಕಿಯವರು ಅದನ್ನು ವಿಶೇಷ ಅಡ್ಡಿಮಾಡಲಿಲ್ಲ. ಯಾಕೆಂದರೆ ಆ ಸೈನ್ಯವನ್ನು ಇನ್ನೆಲ್ಲೋ ಇಳಿಸುತ್ತಾರೆಂದು ನಂಬಿಕೊಂಡಿದ್ದರು. ಅಲ್ಲಿ ಇಳಿದ ನಮ್ಮ ಸೈನ್ಯಗಳು ಮುಂದರಿಸಿ 500 ಗಜ ದೂರ ನುಗ್ಗಿ ಹೋಗಿ ದಕ್ಷಿಣ ಭಾಗದಲ್ಲಿರುವ ನಮ್ಮ ಮೊದಲಿನ ಸೈನ್ಯದ ಕೂಡ ಸೇರಿಕೊಂಡವು. ಅನೇಕ ಮಂದಿ ಟರ್ಕಿ ಸೈನಿಕರನ್ನು ಕೈಸೆರೆ ಹಿಡಿದರು. ಅಷ್ಟರಲ್ಲೇ ಟರ್ಕಿಯವರು ಹೊಸ ಸೈನ್ಯವನ್ನು ಕರಸಿಕೊಂಡದ್ದರಿಂದ ನಮ್ಮ ಸೈನ್ಯಗಳು ಮುಂದಕ್ಕೆ ನುಗ್ಗಿ ಹೋಗದಂತೆ ತಡೆಯಾಯಿತು

ಕೆಲವು ದಿನಗಳ ಹಿಂದೆ ಗಲ್ಲಿಪೋಲಿ ಅರ್ಧ ದ್ವೀಪದಲ್ಲಿ ನಡೆದ ಯುದ್ಧದಲ್ಲಿ ಟರ್ಕಿಯವರಲ್ಲಿ 27,000 ಸೈನ್ಯ ನಷ್ಟವಾಯಿತಂತೆ. ಟರ್ಕಿಯವರು ಮೊದಲಿನಷ್ಟು ಪರಾಕ್ರಮದಿಂದ ಕಾದುವುದಿಲ್ಲ. ಆದಕಾರಣ ಅವರ ಕಂದಕಗಳನ್ನು ಸುಲಭವಾಗಿ ಗೆದ್ದುಕೊಳ್ಳಬಹುದು.—ರಾಜಧಾನಿಯಾದ ಕಾನ್‌ಸ್ಟಂಟಿನೋಪಲ್‌ನಲ್ಲಿ ಟರ್ಕಿಯವರು ಜರ್ಮನಿಯವರ ಮೇಲೆ ತಿರುಗಿಬೀಳುತ್ತಿದಾರೆಂದು ತಿಳಿಯುತ್ತದೆ. ಟರ್ಕಿ ಸುಲ್ತಾನರ ದೇಹಸ್ಥಿತಿ ಸರಿಯಾಗಿಲ್ಲವಾದ ಕಾರಣ ಪ್ರಜೆಗಳೆಲ್ಲಾ ಅವರೇನಾಗುವರೋ ಎಂದು ಕಳವಳಪಡುತ್ತಿರುವರು. ಟರ್ಕಿಯ ಬಾರ್ಬರೋಸ್ಸಾ ಎಂಬ ಯುದ್ಧದ ಜಹಜು ಮುಳುಗಿಹೋದಾಗ ಬ್ರೆಸ್ಲಾ ಜಹಜಿನಿಂದ ಹೋಗಿದ್ದ ಜರ್ಮನಿ ಕೋಘಿನವರೆಲ್ಲಾ ಸಮುದ್ರವಶರಾದರೆಂದು ತಿಳಿಸಲ್ಪಟ್ಟಿದೆ.

ಫ್ರೆಂಚರ ಒಂದು ಯುದ್ಧದ ಜಹಜು ಪ್ಯಾಲೆಸ್ಟೈನ್ ದೇಶದಲ್ಲಿ ಜಾಫಾ ನಗರದ ಬಳಿ ಇರುವ ಒಂದು ಮದ್ದಿನ ಕಾರ್ಖಾನೆಗೆ ಗುಂಡುಗಳನ್ನು ಹಾಕಿತು. ಮೊದಲು ದಾರಿಯಲ್ಲಿ ಯಾರು ಇರಕೂಡದೆಂದೂ, ದೂರ ಹೋಗಬೇಕೆಂದೂ ಪ್ರಜೆಗಳಿಗೆ ಎಚ್ಚರಿಕೆಕೊಟ್ಟಿತು. ಪ್ರಜೆಗಳ ಮನೆಗಳನ್ನು ಒಡೆದು ನಾಶಮಾಡಲಿಲ್ಲ. ಆ ಕಾರ್ಖಾನೆಯೊಂದನ್ನು ಮಾತ್ರ ನಾಶಮಾಡಿದರು.

ಕಾಕಸಸ್ ಪ್ರಾಂತ್ಯದಲ್ಲಿ ಟರ್ಕಿಯವರಿಗೆ ಪೆಟ್ಟು ಸೋಲಾಯಿತೆಂದು ತಂತೀ ವರ್ತಮಾನಗಳು ತಿಳಿಸುತ್ತವೆ. ವಾನ್ ಎಂಬ ನಗರವು ಹಲವು ವೇಳೆ ಒಬ್ಬರ ಕೈತಪ್ಪಿ ಒಬ್ಬರಿಗಾಯಿತು. ಈಗ ರಷ್ಯಾದವರು ಅದನ್ನು ಸ್ವಾಧೀನಪಡಿಸಿಕೊಂಡಿದಾರೆ. ಟರ್ಕಿಯವರ ಹಲವು ಡಿವಿಜನ್ ಸೈನ್ಯಗಳನ್ನು ಸೋಲಿಸಿ ಬೇಗಬೇಗನೆ ಓಡಿಸಿಕೊಂಡು ಹೋಗುತ್ತಿದಾರೆ. ಅಲ್ಲಿ ಸಾವಿರಾರು ಸೈನ್ಯಗಳು ರಷ್ಯಾದವರ ಕೈಸೆರೆ ಸಿಕ್ಕಿದವು. ಅನೇಕಾ ಪಿರಂಗಿಗಳೂ, ಮೆಷೀನ್ ಪಿರಂಗಿಗಳೂ, ಬಂದೂಕುಗಳೂ, ಮದ್ದು ಗುಂಡುಗಳೂ ಅಪಾರವಾಗಿ ರಷ್ಯಾದವರ ಪಾಲಾಗಿರುತ್ತವೆ. ಟರ್ಕಿಯವರು ಹಿಂದಕ್ಕೆ ಓಡಿಹೋಗುವಾಗ್ಗೆ ತ್ಯಜಿಸಿಬಿಟ್ಟುಹೋದ ಮಾರ್ಗದಲ್ಲಿ ಉಗ್ರಾಣಕ್ಕೂ ಅನೇಕ ವ್ಯಾಗನ್ ಬಂಡಿಗಳೂ ಮದ್ದುಗುಂಡುಗಳೂ ಎರಚಿದಂತೆ ಬಿದ್ದಿರುತ್ತವೆ. ಈ ಪ್ರಾಂತ್ಯದಲ್ಲಿದ್ದ ಟರ್ಕಿ ಸೈನ್ಯಗಳನ್ನು ಓಡಿಸಬೇಕೆಂತಲೇ ಬ್ರಿಟಿಷರು ಡಾರ್ಡನೆಲ್ಸಿನ ಮೇಲೂ, ಫಾರಿಸ್ ಖಾರಿಯಲ್ಲೂ ತಮ್ಮ ಸೈನ್ಯಗಳನ್ನು ನುಗ್ಗಿಸಿದರು.

ಗಲ್ಲಿಪೋಲಿಯ ಹತ್ತಿರ ಬ್ರಿಟಿಷ ಸೈನ್ಯಗಳು ಭರ್ತಿಯಾಗಿದ್ದ ರಾಯಲ್ ಎಡ್ವರ್ಡ್ ಎಂಬ ಜಹಜು ಟಾರ್ಪಿಡೋ ಬಡಿದು ನಷ್ಟವಾಯಿತು. ಅದರಲ್ಲಿ ಸೈನ್ಯಗಳಿದ್ದವು; 32 ಹುದ್ದೇದಾರರೂ, 1,350 ಸೈನ್ಯವೂ, 220 ಮಂದಿ ಸೇವಕಾಳುಗಳೂ ಇದ್ದರು. ಈ ಪೈಕಿ 600 ಮಂದಿ ಬದುಕಿಬಂದರು.

ಕಪ್ಪು ಕಡಲಿನಲ್ಲಿ 8,000 ಟನ್‌ಗಳ ಕಲ್ಲಿದ್ದಲನ್ನು ಸಾಗಿಸಿಕೊಂಡು ಹೋಗುತ್ತಿದ್ದ ಒಂದು ಟರ್ಕಿ ಜಹಜನ್ನು ರಷ್ಯಾದವರ ಸಬ್‌ಮೆರೀನು ಟಾರ್ಪೀಡೋ ಬಿಟ್ಟು ಹೊಡಿಸಿ ಮುಳುಗಿಸಿಬಿಟ್ಟಿದೆ. ರಷ್ಯಾದವರ ಟಾರ್ಪೀಡೋ ದೋಣಿಗಳು ನುಗ್ಗಿ ಕಪ್ಪು ಕಡಲಿನಲ್ಲಿ ಟರ್ಕಿಯವರ 100 ವ್ಯಾಪಾರದ ಹಡಗುಗಳನ್ನು ಮುಳುಗಿಸಿರುತ್ತವೆ.

ಬ್ರಿಟಿಷರ ಸಮುದ್ರ ವಿಮಾನಪಡೆಗು ಮಾರ್ಮೊರಾ ಕಡಲಿನಲ್ಲಿ ಸೈನ್ಯಗಳನ್ನು ಸಾಗಿಸುವ ಟರ್ಕಿ ಜಹಜನ್ನು ಸಿಡಿಮದ್ದಿನ ಗುಂಡುಹಾಕಿ ಮುಳುಗಿಸಿತು.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಬಂದಿರುವ ವರ್ತಮಾನ ಬಹಳ ಸ್ವಲ್ಪ. ಕ್ಯಾಮರೂನ್ಸ್ ಸೀಮೆಯಲ್ಲಿ ನಮ್ಮ ಪಕ್ಷದವರು ಗಾರುವಾ ಎಂಬ ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಂಡಿದಾರೆ. ಇದೇ ಜರ್ಮನಿಯವರ ವಶದಲ್ಲಿದ್ದ ಕಡೇ ಸ್ಥಳ. ಇದನ್ನು ಬಹಳ ಬಲವಾಗಿ ಕಟ್ಟಿ ಕಾಪಾಡಿಕೊಂಡಿದ್ದರು. ಆದರೇನು, ಜರ್ಮನಿಯವರು ಅದನ್ನು ಕಾಪಾಡಿಕೊಳ್ಳಲಾರದೆ ಹೋದರು; ಹಾವಾದರೂ ತಲೆತಪ್ಪಿಸಿಕೊಂಡು ಹೋಗಲಾರದೆ ಎಲ್ಲರೂ ಶರಣಾಗತರಾದರು. ಬೆಟ್ಟ ಗುಡ್ಡಗಳಲ್ಲಿ ಕೆಲವು ಗುಂಪುಗಳ ಜರ್ಮನರು ಸೇರಿಕೊಂಡಿದಾರೆ. ಇವರಿಗೆ ಆಹಾರ ಪದಾರ್ಥಗಳ್ಯಾವೂ ಸಿಕ್ಕದಂತೆ ತಡೆಯನ್ನು ಕಲ್ಪಿಸಿದ್ದಾಗಿದೆ. ಆ ಸೀಮೆಯನ್ನೆಲ್ಲಾ ಕಾರ್ಯತಃ ಸಂಪೂರ್ಣವಾಗಿ ಗೆದ್ದುಕೊಂಡದ್ದಾಯಿತೆಂದು ವರ್ತಮಾನಕಾರರು ತಿಳಿಸುತ್ತಾರೆ.

ಇತರ ವಿಷಯಗಳು.

ಜರ್ಮನಿಯವರ ಸಬ್‌ಮೆರೀನುಗಳ ಹಾವಳಿ ಮತ್ತೆ ವಿಶೇಷವಾಗಿದೆ. ಅವು ಹಲವು ಹಡಗುಗಳನ್ನು ಮುಳುಗಿಸಿಬಿಟ್ಟವು. ಐರ್ಲೆಂಡಿನ ದಕ್ಷಿಣದಲ್ಲಿ ಒಂದು ಸಬ್‌ಮೆರೀನು ಅರಾಬಿಕ್ ಎಂಬ ದೊಡ್ಡ ಪ್ರಯಾಣಿಕರ ಹಡಗನ್ನು ಮುಳುಗಿಸಿದೆ. ಅದರಲ್ಲಿ 180 ಮಂದಿ ಪ್ರಯಾಣಿಕರೂ, 243 ಮಂದಿ ಸೇವಕಾಳುಗಳೂ ಇದ್ದರು. ಅದು ಅಮೇರಿಕಕ್ಕೆ ಪ್ರಯಾಣಮಾಡಬೇಕೆಂದು ಹೋಗುತ್ತಿತ್ತು. ಅಮೇರಿಕದವರೂ 19 ಮಂದಿ ಅದರಲ್ಲಿದ್ದರು. ಜರ್ಮನಿ ಸಬ್‌ಮೆರೀನು ಎಚ್ಚರಿಕೆಯನ್ನೇ ಕೊಡಲಿಲ್ಲ. ಹಡಗಿನ ಅಧಿಕಾರಿಯು ಸಬ್‌ಮೆರೀನು ತನ್ನ ಕಣ್ಣಿಗೆ ಕಾಣಿಸಲೇ ಇಲ್ಲವೆಂದೂ, ಅದರಿಂದ ಟಾರ್ಪೀಡೋ ಮಾತ್ರ ಬರುತ್ತಿದ್ದದ್ದನ್ನು ಕಂಡೆನೆಂದೂ, ಅದರ ಏಟು ತಗಲದಂತೆ ಹಡಗನ್ನು ತಿರುಗಿಸುವುದು ಸಾಧ್ಯವಾಗಲಿಲ್ಲವೆಂದೂ ತಿಳಿಸುತ್ತಾನೆ. ಟಾರ್ಪೀಡೋ ಬಡಿದ ಹನ್ನೊಂದು ನಿಮಿಷಗಳಲ್ಲಿ ಹಡಗು ಮುಳುಗಿಹೋಯಿತು. 51 ಮಂದಿಯ ಹೊರತು ಎಲ್ಲಾ ಬದುಕಿ ಬಂದರು. ಸಮುದ್ರದ ಪಾಲಾದವರಲ್ಲಿ ಇಬ್ಬರು ಅಮೇರಿಕದವರು; ಬ್ರಿಟಿಷ್ ಪ್ರಯಾಣಿಕರು ಎಂಟು ಮಂದಿ. ನಿರಪರಾಧಿಗಳಾದ ಪ್ರಜೆಗಳನ್ನು ಈ ರೀತಿ ಕೊಂದದ್ದು ಮಹಾ ಕ್ರೂರತನವೂ ಹೇಡಿತನವೂ ಆಗಿರುತ್ತದೆ. ಅಮೇರಿಕದವರು ಎಷ್ಟು ಪ್ರತಿಭಟಿಸಿದರೂ ಜರ್ಮನಿಯವರು ಲಕ್ಷ್ಯಮಾಡುವವರಾಗಿಲ್ಲವೆಂದು ಇದರಿಂದ ವೇದ್ಯವಾಗುವುದು. ಅಮೇರಿಕದವರಿಗೆ ಜರ್ಮನಿಯ ಮೇಲೆ ಬಹಳವಾದ ಆಕ್ರೋಶ ಉಂಟಾಗಿದೆ.

ಬ್ರಿಟಿಷರ ಒಂದು ಸಬ್‌ಮೆರೀನು ಬಾಲ್ಟಿಕ್ ಕಡಲ ಮಾರ್ಗವನ್ನು ಹಿಡಿದುಹೋಗುತ್ತಾ ಡೆನ್ಮಾರ್ಕಿನ ಒಂದು ದ್ವೀಪದ ಮೇಲೆ ಸಿಂಕುಬಿಟ್ಟಿತು. ಅದರಲ್ಲಿದ್ದವರ ಪೈಕಿ 15 ಮಂದಿ ಬದುಕಿಕೊಂಡರು; ಹದಿನೈದು ಮಂದಿ ಸಿಕ್ಕಿಯಿಲ್ಲ. ನೀರಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಜನಗಳ ಮೇಲೆ ಜರ್ಮನಿಯವರು ತಮ್ಮ ಡಿಸ್ಟ್ರಾಯರೆಂಬ ಹಡಗುಗಳಿಂದ ಗುಂಡುಗಳನ್ನು ಹೊಡೆಯುತ್ತಿದ್ದರು. ಅಷ್ಟರಲ್ಲೇ ಡೆನ್ಮಾರ್ಕಿನ ಟಾರ್ಪೀಡೋ ಹಡಗುಗಳು ಹೋಗಿ ಅವರು ಗುಂಡು ಹೊಡೆಯುತ್ತಿದ್ದದ್ದನ್ನು ನಿಲ್ಲಿಸಿದರು.

ನೊರ್ವೆಯ ಒಂದು ಹಡಗಿನಲ್ಲಿ ಅಂಚೆ ವಸ್ತುಗಳು ಇದ್ದವು. ಜರ್ಮನಿಯ ಸಬ್‌ಮೆರೀನು ಆ ಹಡಗನ್ನು ತಡೆದು ಅನೇಕ ಕಾಗದಪತ್ರಗಳನ್ನು ತೆಗೆದುಕೊಂಡುಬಿಟ್ಟಿತು. ಆ ಕಾಗದಗಳನ್ನು ವಾಪಸು ಮಾಡಬೇಕೆಂದು ನೊರ್ವೆ ಗವರ್ನ್‌ಮೆಂಟಿನವರು ಜರ್ಮನಿಯವರನ್ನು ಕೇಳಿ, ಈ ಕೃತ್ಯವು ರಾಜನೀತಿಗೆ ಸಲ್ಲದೆಂದು ಪ್ರತಿಭಟಿಸಿದಾರೆ.

ನೊರ್ವೆ ರಾಜ್ಯಕ್ಕೆ ಸೇರಿದ ಸಮುದ್ರ ಭಾಗದಲ್ಲಿ ಜರ್ಮನಿಯವರು ಇನ್ನೊಂದು ಅಂಚೆ ಹಡಗನ್ನು ತಡೆದರು. ಅಷ್ಟರಲ್ಲೇ ಡಿಸ್ಟ್ರಾಯರೆಂಬ ಹಡಗು ಅಲ್ಲಿಗೆ ಬಂದದ್ದರಿಂದ ಜರ್ಮನಿಯ ಸಬ್‌ಮೆರೀನು ಅಲ್ಲಿರದೆ ಹೊರಟುಹೋಯಿತು. ಟಾರ್ಪೀಡೋ ಬಡಿದು ಮುಳುಗಿಸಲ್ಪಟ್ಟ ಇಂಡಿಯಾ ಎಂಬ ಜಹಜಿನಲ್ಲಿದ್ದ 12 ಮಂದಿ ಹುದ್ದೇದಾರರನ್ನೂ 93 ಮಂದಿ ಸೈನಿಕರನ್ನೂ ನೊರ್ವೆ ಸರ್ಕಾರದವರು ತಡೆದಿಟ್ಟುಕೊಂಡಿದಾರೆ. ಪರರಾಜ್ಯಗಳಿಗೆ ಸೇರಿದ ದೋಣಿಗಳಲ್ಲಿದ್ದ ಜನರನ್ನು ಮಾತ್ರ ವಾಪಸು ಬ್ರಿಟನ್‌ಗೆ ಕಳುಹಿಸಿಕೊಡುವರು.

ಗ್ರೀಸ್ ರಾಜ್ಯದಲ್ಲಿ ರಾಜ್ಯಭಾರ ನಡಿಸುತ್ತಿದ್ದ ಮಂತ್ರಿ ಸಭೆಯವರು ರಾಜೀನಾಮೆ ಕೊಟ್ಟುಬಿಟ್ಟರು. ದೊರೆಯವರು ಮೊದಲು ಮಂತ್ರಿಯಾಗಿದ್ದ ಎಂ. ವೆನಿಜೆಲಸ್ ಎಂಬಾತನಿಗೆ ಹೇಳಿಕಳುಹಿಸಿದರು. ಈತನು ಮಂತ್ರಿ ಪದವಿಯನ್ನು ವಹಿಸಿ ರಾಜ್ಯಭಾರವನ್ನು ನಡಿಸುವುದಾಗಿ ಒಪ್ಪಿಕೊಂಡಿರುತ್ತಾನೆ. ಈ ವಿಚಾರವು ಗ್ರೀಸ್ ರಾಜ್ಯದಲ್ಲಿ ಪರಮಾನಂದವನ್ನುಂಟುಮಾಡಿದೆ.

ಅಮೇರಿಕದಲ್ಲಿರುವ ಜರ್ಮನಿಯವರು ಅಮೇರಿಕದ ಗವರ್ನ್‌ಮೆಂಟನ್ನು ಮೋಸಪಡಿಸಬೇಕೆಂದು ನಾನಾ ಪ್ರಯತ್ನಗಳನ್ನು ಮಾಡುತ್ತಿರುವಂತೆ ಅಲ್ಲಿನ ಪತ್ರಿಕೆಗಳು ಹೇಳುತ್ತಿವೆ. ಜರ್ಮನಿ ಹುದ್ದೇದಾರರಿಗೆ ಅಮೇರಿಕದ ಸರ್ಕಾರಿ ಅಪ್ಪಣೆ ಚೀಟಿಯನ್ನು (ಪ್ಯಾಸ್ ಪೋರ್ಟ್) ಕೊಡಿಸುವ ಉಪಾಯಮಾಡಿದರು. ಲಕ್ಷಾಂತರ ರೂಪಾಯಿಯನ್ನು ಪ್ರಜೆಗಳಿಗೆ ಲಂಚವಾಗಿ ಕೊಟ್ಟರು. ಜರ್ಮನಿಯವರು ತಮ್ಮ ಭಂಗಾರವನ್ನು ಕೊಟ್ಟು ಅಮೇರಿಕದವರನ್ನು ಕೊಂಡುಕೊಂಡಿರುತ್ತಾರೆಂದು ಅಲ್ಲಿನ ಪತ್ರಿಕೆಗಳು ಬರೆಯುತ್ತವೆ. ಮದ್ದು ಗುಂಡು ತಯಾರಾಗುವ ಕಾರ್ಖಾನೆಗಳಲ್ಲಿ ಅನಾಹುತಗಳು ಸಂಭವಿಸಿರುತ್ತವೆ; ಇದಕ್ಕೆಲ್ಲಾ ಜರ್ಮನಿಯವರೇ ಕಾರಣರೆಂದು ಹೇಳಲಾಗಿದೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಕೆನಡಾ ಎಂಬ ಸ್ವಸ್ಥಾನದಿಂದ 69,00,00,000 ರೂಪಾಯಿಯ ಮದ್ದುಗುಂಡನ್ನು ತಯಾರ್ಮಾಡಿಸಿ ಕಳುಹಿಸಿಕೊಡಬೇಕೆಂದು ಅಲ್ಲಿನ ಕಾರ್ಖಾನೆಗಳಿಗೆ ಕಂಟ್ರ್ಯಾಕ್ಟು ವಹಿಸಿದಾರೆ.

ಪರ್ಶಿಯಾ ರಾಜಕ್ಕೆ ಸೇರಿದ ಬುಶೈರ್ ಎಂಬ ನಗರದಲ್ಲಿ ಕಳೆದ ಜುಲೈ ತಾ. 12 ಇಲ್ಲಿ ಬ್ರಿಟಿಷ್ ಹುದ್ದೇದಾರರಿಬ್ಬರೂ, ಒಬ್ಬ ಸಿಪಾಯಿಯೂ ಕೊಲ್ಲಲ್ಪಟ್ಟು, ಇಬ್ಬರು ಸಿಪಾಯಿಗಳಿಗೆ ಗಾಯಗಳಾದವು. ಆ ಪ್ರಾಂತ್ಯದಲ್ಲಿರುವ ಕೆಲವು ವಂಶಗಳ ಜನಗಳು ಗುಂಪುಕಟ್ಟುತ್ತಿರುವಂತೆ ಕಂಡು ಬಂದದ್ದರಿಂದ ಅಲ್ಲಿ ನಡೆಯುವ ವಿದ್ಯಮಾನಗಳನ್ನು ತಿಳಿಯಲು ಕೆಲವು ಸೈನಿಕರನ್ನು ಜೊತೆಮಾಡಿ ಆ ಪ್ರಾಂತ್ಯಕ್ಕೆ ಕಳುಹಿಸಿದ್ದರು. ಈ ಸೈನವು ಅಲ್ಲಿಂದ ಹಿಂತಿರುಗಿ ಬರುವಾಗ್ಗೆ ಮೇಲ್ಕಂಡ ಕೊಲೆಗಳು ನಡೆದು, ಕೊಲೆಪಾತಕರು ತಲೆತಪ್ಪಿಸಿಕೊಂಡು ಹೋಗಿದಾರೆ.

ಫ್ರಾನ್ಸ್ ರಾಜ್ಯದ ಪಾರ್ಲಿಮೆಂಟಿನಲ್ಲಿ ಮಂತ್ರಿಶ್ರೇಷ್ಠರು ಪ್ರಜಾಪ್ರತಿನಿಧಿಗಳನ್ನು ಕುರಿತು ಹೇಳಿದ್ದೇನೆಂದರೆ—ಯುದ್ಧಾರಂಭದಲ್ಲಿ ನಮಗೆ ಬೇಕಾಗಿದ್ದ 15,000 ಡಾಕ್ಟರುಗಳಿಗೆ 5,000 ಡಾಕ್ಟರುಗಳು ಮಾತ್ರ ಇದ್ದರು. ಈಗ ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳಿಗೂ, ಉಡುಪು ಆಹಾರ ಪದಾರ್ಥ ಮೊದಲಾದವುಗಳಿಗೂ ಸ್ವಲ್ಪವೂ ಕೊರತೆ ಇರುವುದಿಲ್ಲ. ಸೈನ್ಯದಲ್ಲಿ ಅನೇಕ ಅಧಿಕಾರಿಗಳನ್ನು ಬದಲಾಯಿಸಿಮಾಡಿರುತ್ತೇವೆ. ಈಗ ಸಮಸ್ತರೂ ಜಯಪ್ರದವಾಗುವ ತನಕ ನಮ್ಮ ದಳಪತಿಯಾದ ಜನರಲ್ ಜೊಫ್ರೆಯವರಿಗೆ ಬೆಂಬಲಕೊಡುತ್ತಾ ಬರುವೆವೆಂದು ಸಂಕಲ್ಪಮಾಡಿಕೊಂಡಿದ್ದಾರೆ ಎಂಬುದು.

ಗಲ್ಲಿಪೋಲಿ ಅರ್ಧ ದ್ವೀಪದಲ್ಲಿ ಅತಿಶಯವಾದ ಪರಾಕ್ರಮವನ್ನು ತೋರಿಸಿದಂಥಾ ಅನೇಕ ಯುದ್ಧಭಟರಿಗೆ "ವಿಕ್ಟೋರಿಯಾ ಕ್ರಾಸ್" ಎಂಬ ಘನತರವಾದ ಬಿರುದು ಕೊಡಲಾಯಿತು. ಕಮ್ಯಾಂಡರ್ ಉರ್ವಿನ್ ಎಂಬಾತನು ತಾನಿದ್ದ ಹಡಗು ಯುದ್ಧಮಾಡುತ್ತಿರುವಲ್ಲಿ ಸಮುದ್ರದೊಳಗಿಳಿದು ಕೆಲಸ ಮಾಡುತ್ತಿದ್ದು ಕಡೆಗೆ ಕೈಕಟ್ಟಿದಿಂದಲೂ ದಣಿವಿನಿಂದಲೂ ತಪ್ಪಾಗಿ ಹಡಗಿಗೆ ಬಂದನು. ಬಳಿಕ ಈತನು ಕಂಬಳಿಯನ್ನು ಸುತ್ತಿಕೊಂಡು ಸ್ವಲ್ಪಮಟ್ಟಿಗೆ ಚೇತರಿಸಿಕೊಂಡು ಡಾಕ್ಟರುಗಳು ಎಷ್ಟು ಹೇಳಿದರೂ ಅವರ ಮಾತನ್ನು ಲಕ್ಷ್ಯಮಾಡದೆ ಪುನಹ ಸಮುದ್ರದೊಳಗಿಳಿದು ತನ್ನ ಕೆಲಸವನ್ನು ಮುಗಿಸಿಕೊಂಡೇ ಮೇಲಕ್ಕೆ ಬಂದನು. ಆಗ ಡಾಕ್ಟರುಗಳು ಆತನ ದೇಹದಲ್ಲಿದ್ದ ಮೂರು ಗುಂಡೇಟಿನ ಗಾಯಗಳಿಗೆ ಔಷಧಹಾಕಿ ಚಿಕಿತ್ಸೆಮಾಡಿದರು. ತರುವಾಯ ಆತನು ಒಂದು ದೋಣಿಯಲ್ಲಿ ಕುಳಿತುಕೊಂಡು ಹೋಗಿ ಆಳವಿಲ್ಲದ ನೀರಿನಲ್ಲಿ ಗಾಯಪಟ್ಟಿದ್ದ ಸೈನಿಕರನ್ನು ಎತ್ತಿ ಕೂಡಿಸಿಕೊಂಡು ಬಂದು ಇರುತ್ತಾನೆ.—ಒಬ್ಬ ಡಾಕ್ಟರು ಗುಂಡೇಟು ಬಿದ್ದು ನಡೆಯುವುದಕ್ಕೇ ಆಗದಂತಿದ್ದರೂ ಗಾಯಪಟ್ಟ 750 ಸೈನಿಕರಿಗೆ ಚಿಕಿತ್ಸೆಮಾಡಿದನು. ನಮ್ಮ ಪಕ್ಷದ ಯುದ್ಧಭಟರ ಮನೋಧರ್ಮವೂ ಶೌರ್ಯವೂ ಇಷ್ಟು ಸ್ತೋತ್ರಾರ್ಹವಾಗಿರುವಲ್ಲಿ ಯುದ್ಧದ ಪರಿಣಾಮವನ್ನು ಹೇಳಬೇಕಾದ ಅಗತ್ಯವಿಲ್ಲ.

ವಾರಗಟ್ಟಿ ಪ್ರಕಟವಾಗುವ ಸರ್ಕಾರಿ ಲೆಕ್ಕಗಳ ಪ್ರಕಾರ 1,483 ಜಹಜುಗಳೂ ಹಡಗುಗಳೂ ಗ್ರೇಟ್ ಬ್ರಿಟನ್ ತೀರಪಟ್ಟಣಗಳಿಗೆ ಬಂದು ಹೋಗಿರುತ್ತವೆ. ಎರಡು ಬ್ರಿಟಿಷ್ ಜಹಜುಗಳು ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಬಡಿದೂ, ಐನ್ನೊಂದು ಹಡಗುಗಳು ಸಬ್‌ಮೆರೀನುಗಳು ಬಿಟ್ಟ ಟಾರ್ಪೀಡೋ ಬಡಿದೂ, ಇನ್ನು ಹತ್ತು ಬೆಸ್ತರ ದೋಣಿಗಳೂ ಮುಳುಗಿ ಹೋದವು.

ರಾಜಧಾನಿಯಲ್ಲಿ ಅರಮನೆಯ ಮೋಟರ್ ಗಾಡಿಗೆ ಸಿಕ್ಕಿ ಗಾಯಪಟ್ಟಿದ್ದ ಹುಡುಗನು ಆಸ್ಪತ್ರೆಯಲ್ಲಿ ನಡೆದ ಚಿಕಿತ್ಸೆಯಿಂದ ಬದುಕಿಕೊಂಡನು. ಮ|| ಟಿ. ಎಸ್. ನಂಜಪ್ಪನವರ ಮೋಟರಿಗೆ ಸಿಕ್ಕಿದ ಬೈರಾಗಿ ಹೆಂಗಸಿಗೆ ವಾಸಿಯಾಗಿ ಆಸ್ಪತ್ರೆಯಿಂದ ಹೊರಟುಹೋದಳು.

ಒಂದು ಕೋ|| ಸೊಸೈಟಿಯ ಜನರಲ್ ಮೀಟಿಂಗು.

ನಾಗಮಂಗಲದ ತಾ|| ಚಿಣ್ಯದಲ್ಲಿ ಕೋಆಪರೆಟಿವ್ ಸೊಸೈಟಿಯು 1914-16ನೇ ಸಾಲಿನ ಜನರಲ್ ಮೀಟಿಂಗನ್ನು ಇಲ್ಲಿನ ವಿ. ಇ. ಸ್ಕೂಲ್ ಕಟ್ಟಡದಲ್ಲಿ ಕೋ. ಸೊ. ಇನ್‌ಸ್ಪೆಕ್ಟರ್ ಮ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡಿಸಲಾಯಿತು. ಆಗ್ಗೆ ಸೊಸೈಟಿ ಮೆಂಬರುಗಳು, ಮೆಂಬರಲ್ಲದೆ ಅನೇಕ ದೊಡ್ಡ ಮನುಷ್ಯರು ಸಹಾ ದಯಮಾಡಿಸಿದ್ದರು. ಅಧ್ಯಕ್ಷರು ಸೊಸೈಟಿ ವಿಷಯದಲ್ಲಿ ಬಹು ಸ್ವಾರಸ್ಯವಾಗ ಒಂದು ಉಪನ್ಯಾಸಮಾಡಿದರು. ಅನೇಕ ದೊಡ್ಡ ಮನುಷ್ಯರು ಸೊಸೈಟಿ ಮೆಂಬರಾಗುತ್ತೇವೆಂದು ಒಪ್ಪಿ ಅಪ್ಲಿಕೇಷನ್ ಸಹಾ ಕೊಟ್ಟರು. ಅನಂತರ ಸೆಕ್ರೆಟರಿ ಮ|| ಸಿ. ವೆಂಕಟರಮಣಯ್ಯನವರು 1914-16 ನೇ ಸಾಲಿನ ಸೊಸೈಟಿ ಆದಾಯ ವ್ಯಯಗಳ ರಿಪೋರ್ಟನ್ನು ಓದಿ ಲಾಗಿ ಸರ್ವರೂ ಸಂತೋಷಿಸಿದರು. ಈ ಸೊಸೈಟಿಯು 1915-16 ನೇ ಸಾಲಿನ ಆದಾಯ ವೆಚ್ಚಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಈ ಮೀಟಿಂಗಿನಲ್ಲಿ ಮೆಂಬರುಗಳನ್ನು ನೇಮಿಸಿದರು. ಮ|| ಎಸ್. ಜಿ. ರಾಘವೇಂದ್ರಾಚಾರ್ರು ಪ್ರೆಸಿಡೆಂಟಾಗಿಯೂ, ಮ|| ಕಪ್ಪಣ್ಣನವರು ವೈಸ್ ಪ್ರೆಸಿಡೆಂಟಾಗಿಯೂ, ಮ|| ಸಿ. ವಿ. ವೆಂಕಟರಮಣಯ್ಯನವರೂ ಮ|| ವೆಂಕಟರಾಮಯ್ಯನವರೂ ಸೆಕ್ರೆಟರಿಗಳಾಗಿಯೂ ಮ|| ವೆಂಕಟಗಿರಯ್ಯನವರು ಖಜಾಂಚಿಯಾಗಿಯೂ ನೇಮಕವಾದರು. ಇವರೂ ಕಮಿಟಿಯ ಮೆಂಬರುಗಳೂ ತಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸಿ ಸೊಸೈಟಿಯನ್ನು ಅಭಿವೃದ್ಧಿಗೆ ತಂದು ಬಡಬಗ್ಗರ ನ್ಯೂನತೆಗಳನ್ನು ತಪ್ಪಿಸಿ ವೃದ್ಧಿಗೆ ತರುತ್ತಾರೆಂತ ನಂಬಿದೆ.

ಒಬ್ಬ ಮೆಂಬರು.

ಒಂದು ಸ್ಕೂಲಿನ ವಾರ್ಷಿಕೋತ್ಸವ.

ಬೆಂಗಳೂರು ಮ|| ಎಸ್. ಆರ್. ನಂಜುಡಯ್ಯನವರ ಹಿಂದೂ ಎ. ವಿ. ಸ್ಕೂಲಿನ ಹದಿಮೂರನೆಯ ವಾರ್ಷಿಕೋತ್ಸವವು ಕಳೆದ ತಾ. 16 ನೇ ಭಾನುವಾರ ಬೆಂಗಳೂರು ಸುಲ್ತಾನ್ ಪೇಟೆಯಲ್ಲಿರುವ ಹಿಂದೂ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡೆಯಿತು. ಪ್ರಾತಃಕಾಲ 8 ಗಂಟೆಗೆ ಅಲ್ಲಿನ ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ಇತರ ದೊಡ್ಡ ಮನುಷ್ಯರೂ ಬಹಳ ಸಂಭ್ರಮದಿಂದ ಸೇರಿದ್ದರು. ಸ್ಕೂಲ್ ಕಟ್ಟಡವು ಅಂದವಾಗಿ ಅಲಂಕರಿಸಲ್ಪಟ್ಟಿತ್ತು. ಬಾಲಕರು ನಿರ್ದೇಶಿಸಲ್ಪಟ್ಟ ಸ್ಥಳಗಳಲ್ಲಿ ಕುಳಿತು, ಸಂಗೀತ ವಿದ್ವಾನ್ ವೇ|| ಸುಬ್ರಹ್ಮಣ್ಯ ಶಾಸ್ತ್ರಿಗಳವರಿಂದ ಹಾರ್ಮೋನಿಯಂ, ವೀಣಾ ಗಾನಗಳಿಂದ ಆನಂದಿಸಲ್ಪಟ್ಟರು. ಅನಂತರ ಸ್ಕೂಲ್ ಸಂಸ್ಕೃತ ಪಂಡಿತರು ವೇ|| ಆರ್. ವೆಂಕಟರಾಮ ಶಾಸ್ತ್ರಿಗಳವರು ಬಹಳ ಸ್ವಾರಸ್ಯ ಉಪನ್ಯಾಸವನ್ನು ಮಾಡಿ ಬಾಲಕರನ್ನೂ ಸಭಿಕರನ್ನೂ ಸಂತೋಷಗೊಳಿಸಿದರು. ಅ. ಮಾ. ಮ|| ಜಿ. ಸುಬ್ಬರಾಯರು ಇಂಗ್ಲೀಷಿನಲ್ಲಿ ವಿದ್ಯಾರ್ಥಿಗಳು ಪಾಠಶಾಲೆಯ ವಿಚಾರದಲ್ಲಿ ಹೇಗಿರಬೇಕೆಂಬ ವಿಷಯವನ್ನು ಕುರಿತು ಉಪನ್ಯಾಸವನ್ನು ಕೊಟ್ಟ ತರುವಾಯ ಹೆಡ್ ಮಾಸ್ಟರ್ ಮ|| ಬಿ. ಸುಬ್ಬರಾಯರು ಮನೋಹರವಾದ ಇಂಗ್ಲೀಷ್ ಭಾಷಣದಿಂದ ವಿದ್ಯಾರ್ಥಿಗಳಿಗೆ ವಿವೇಕವನ್ನೂ, ಸಭಿಕರಿಗೆ ಆನಂದವನ್ನೂ ಸೂಚಿಸಿದರು. ಅನಂತರ ಮ್ಯಾನೇಜರ್ ಮ|| ನಂಜುಂಡಯ್ಯನವರು ಸಭಿಕರನ್ನು ವಂದಿಸಿ, ಸ್ವಲ್ಪ ಹೊತ್ತು ಬಾಲಕರಿಗೆ ಬುದ್ಧಿವಾದವನ್ನು ಹೇಳಿ, ವೇ|| ಸಂಗೀತ ವಿದ್ವಾನ್ ಸುಬ್ರಹ್ಮಣ್ಯ ಶಾಸ್ತ್ರಿಗಳವರಿಗೆ ಸ್ಕೂಲ್ ವಾರ್ಷಿಕೋತ್ಸವ ಸಂಭ್ರಮದ ಜ್ಞಾಪಕಾರ್ಥವಾಗಿ, ಒಂದು ತಂಬೂರಿಯನ್ನು ಬಹುಮಾನಮಾಡಿದರು.—ಈ ಶಾಲೆಯು ಈಗ ಬಹಳ ಅಭಿವೃದ್ಧಿಸ್ಥಿತಿಯಲ್ಲಿದೆ. ಇದರಲ್ಲಿ ಸುಮಾರು 1,300 ಹುಡುಗರ ವರೆಗೆ ವ್ಯಾಸಂಗಮಾಡುತ್ತಿರುವರು. ಇಷ್ಟು ಅಲ್ಪ ಕಾಲದಲ್ಲಿಯೇ ಇದು ಅಭಿವೃದ್ಧಿಗೆ ಬರುವಂತೆ ಸಹಾಯಮಾಡಿದ ಮಹನೀಯರಿಗೂ, ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿರುವ ಉಪಾಧ್ಯಾಯರಿಗೂ ವಂದನೆಗಳು ಸಮರ್ಪಿಸಲ್ಪಟ್ಟವು. ಮ|| ಬಿ. ಸುಬ್ಬರಾಯರು ಈ ಶಾಲೆಯನ್ನು ಆದಷ್ಟು ಬೇಗನೆ ಹೈಸ್ಕೂಲ್ ಮಾಡಬೇಕೆಂದು ಪ್ರಯತ್ನಪಡುತ್ತಿರುವರು. ಇವರ ಪ್ರಯತ್ನವು ಸಾರ್ಥಕವಾಗಿ ನೆರವೇರಲು ಮಹಾರಾಜಾ ಸರ್ಕಾರದವರನ್ನು ಪ್ರಾರ್ಥಿಸುತ್ತಿರುವೆವು. ಬಾಲಕರಿಂದ ಶ್ರೀಯುಃಪ್ರಾರ್ಥನೆಯು ನಡೆಯಿಸಲ್ಪಟ್ಟ ನಂತರ ಪುಷ್ಪ ತಾಂಬೂಲಾದಿಗಳಿಂದ ಸಭಿಕರೂ, ಬಾಲಕರೂ ಸನ್ಮಾನಿಸಲ್ಪಟ್ಟು ಸಭೆಯು ಆನಂದದಿಂದ ಬರಖಾಸ್ತಾಯಿತು.

ಒಬ್ಬ ಹಿತೈಷಿ.

ಸೊಂಡೂರು ರಾಣಿಯವರು ಷಿಕಾರಿಮಾಡಿದ್ದು.

ಸಂಸ್ಥಾನ್ ಸೊಂಡೂರು.—ನಮ್ಮ ಈ ಸಂಸ್ಥಾನದಲ್ಲಿ ಮಾತ್ರವಲ್ಲದೆ ನಮ್ಮ ದೇಶದಲ್ಲಿ ಈ ವರಿಗೂ ಕೇಳದಂಥಾ ಮತ್ತು ನೋಡದಂಥಾ ಮಹಾ ಆಶ್ಚರ್ಯವಾದ ಸಂಗತಿಯನ್ನು ತಿಳಿಸುವೆನು. ನಮ್ಮ ಸಂಸ್ಥಾನ್ ಸೊಂಡೂರು ಶ್ರೀಮಂತ ಮಹಾರಾಜ ಸಾಹೇಬರು ಮತ್ತು ಶ್ರೀಮಂತ ಸಕಲ ಸೌ|| ರಾಧಾ ರಾಣೀ ಸಾಹೇಬರು ಸಂಸ್ಥಾನಕ್ಕೆ ಸ್ವಲ್ಪ ದೂರವಿರುವ ಕಾಡಿನಲ್ಲಿ ಆಗಿಂದಾಗ್ಗೆ ಮಹತ್ತಾದ ಹಾನಿಯನ್ನುಂಟುಮಾಡುತ್ತಲಿರುವ ಕಾಡು ಮೃಗಗಳ ಬೇಟೆಯಾಡಲು ನಿಶ್ಚಯಿಸಿ, ಇದೇ 7 ನೇ ಆಗಸ್ಟು ಸಕಲ ಸಿಬ್ಬಂದಿ ಸಮೇತ ಕೂಡ್ಲಿಗಿ ತಾಲೂಕು ಅಂತಮನಾಳು ಗ್ರಾಮಕ್ಕೆ ಸಮೀಪವಿರುವ ಕಾಡಿಗೆ ತೆರಳಲು, ಆ ಸಮೀಪದಲ್ಲಿರುವ ಬೇಟೆ ನಾಯಕರು ಸಹ ತಮ್ಮ ತಮ್ಮ ಆಯುಧಗಳನ್ನು ಧರಿಸಿಕೊಂಡವರಾಗಿ ಕ್ಯಾಂಪಿಗೆ ತೆರಳಿ ಅಲ್ಲಿಂದ ಶ್ರೀಮಂತ ಮಹಾರಾಜರನ್ನೂ, ರಾಣೀ ಸಾಹೇಬರನ್ನೂ ಅರಣ್ಯಕ್ಕೆ ಕರೆದುಕೊಂಡು ಹೋಗಿ, ತಮ್ಮ ಯಾವತ್ತೂ ಬಲ, ಶೌರ್ಯ, ಪರಾಕ್ರಮವನ್ನು ತೋರಿಸುತ್ತಾ 3 ದಿವಸ ಸುಖವಾಸಿಗಳಾಗಿ, ಅನೇಕ ಚಿಕ್ಕ ಚಿಕ್ಕ ಮೊಲ, ಜಿಗುರೆ, ಕಾಡುಹಂದಿ ಮೊದಲಾದುವುಗಳನ್ನು ಬೇಟೆಯನ್ನಾಡುತ್ತಾ ಇರಲು ಇದೇ 9 ನೇ ತಾ. ಸೋಮವಾರ ಸಾಯಂಕಾಲ ಸುಮಾರು 5 ಘಂಟೆಯಲ್ಲಿ ಯಾರ ಸಹಾಯನ್ನೂ ಅಪೇಕ್ಷಿಸದೆಯೂ ಇಲ್ಲದೆ ನಮ್ಮ ಶ್ರೀಮಂತ ಸಕಲ ಸೌ|| ರಾಧಾ ರಾಣೀ ಸಾಹೇಬರು ಭಯವನ್ನು ಸಂಪೂರ್ಣ ತ್ಯಜಿಸಿ ತಮ್ಮ ಪ್ರಾಣದ ಮೇಲೆ ಎಳ್ಳಷ್ಟಾದರೂ ಲಕ್ಷ್ಯವಿಡದೆ ಅತಿ ಧೈರ್ಯದಿಂದಲೂ, ತೀಕ್ಷ್ಣವಾದ ದೃಷ್ಟಿಯಿಂದಲೂ ತಮ್ಮ ಎದುರಿಗೆ ಅತಿ ಉಗ್ರದಿಂದಲೂ, ಕ್ರೂರದೃಷ್ಟಿಯಿಂದಲೂ, ಸ್ವೇಚ್ಛೆಯಾಗಿ ಮದೋನ್ಮತ್ತದಿಂದ ಒಂದು ಪೊದೆಯಿಂದ ಹೊರಬಿದ್ದು ಬರುತ್ತಲಿರುವ ಚಿರತೆಯನ್ನು ಏಕಮನಸ್ಸಿನಿಂದ ಅಚಲವಾದ ಗುರಿಯನ್ನಿಟ್ಟು ಒಂದೇ ಗುಂಡಿನಿಂದ ಹೊಡೆಯಲು ಆ ಒಂದೇ ಗುಂಡಿಗೆ ಚಿರತೆಯು ಮೃತಪಟ್ಟಿತು. ಮರುದಿವಸ ಪ್ರಾತಃಕಾಲ ಈ ಕ್ರೂರ ಮೃಗವನ್ನೂ, ಇತರ ಚಿಕ್ಕ ಚಿಕ್ಕ ಮೃಗಗಳನ್ನೂ ಗಂಭೀರವಾದ ವಾದ್ಯದೊಂದಿಗೆ ಸಂಸ್ಥಾನದಲ್ಲಿ ಪ್ರವೇಶಿಸಲು ಶ್ರೀಮಂತ ಮಹಾರಾಣಿಯವರು ಹೊಡೆದಂಥಾ ಆ ಚಿರತೆಯನ್ನು ನೋಡಿ ಪುರಜನರೆಲ್ಲರೂ ಅತಿ ಆಶ್ಚರ್ಯಾನಂದದಿಂದ ಅರಮನೆಯ ವರೆಗೂ ಸಾಗಕಳುಹಿದರು. ಶ್ರೀಮಂತ ಮಹಾರಾಜ ಮತ್ತು ರಾಣಿಯವರು ಅರಮನೆಯನ್ನು ಪ್ರವೇಶಿಸುತ್ತಲೇ ಮೊದಲು ತಮ್ಮ ಕುಲ ಇಷ್ಟ ದೇವರುಗಳ ದರ್ಶನವನ್ನು ಮಾಡಿಕೊಂಡು ಸ್ವಲ್ಪ ವಿಶ್ರಮಿಸಿದ ತರುವಾಯ ಆ ಶಿಕಾರಿಗೆಲ್ಲಾ ಮೃಷ್ಟಾನ್ನ ಭೋಜನವನ್ನು ಮಾಡಿಸಿ ತರುವಾಯ ಅವರಿಗೆ ತಕ್ಕ ಬಹುಮಾನಗಳನ್ನು ಕೊಟ್ಟು ಕಳಿಸಿದರು. ಬಳಿಕ ತಾ. 13 ನೇ ಶುಕ್ರವಾರ ಶ್ರೀಮಂತ ಮಹಾರಾಜರು ದರ್ಬಾರನ್ನು ಜರುಗಿಸಿ ಶ್ರೀಮಂತ ಮಹಾರಾಣಿಯವರಿಗೆ ಒಂದು ಅನರ್ಘ್ಯವಾದ ಬಹುಮಾನವನ್ನೂ, ಇನ್ನು ಬೇಟೆಯಲ್ಲಿ ಒಳ್ಳೇ ಪರಾಕ್ರಮವನ್ನು ತೋರಿಸಿದವರಿಗೆ ಉತ್ತಮವಾದ ಬಹುಮಾನಗಳನ್ನೂ ಕೊಟ್ಟು ದರ್ಬಾರನ್ನು ಮುಗಿಸಿದರು. ತಾ. 16 ನೇ ಸೋಮವಾರ ಮುಮ್ಮ ಪುರಜನರೆಲ್ಲರೂ ಕೂಡಿ ಶ್ರೀಮಂತ ಮಹಾರಾಜ ಮತ್ತು ರಾಣಿಯವರ ಸಂತೋಷದಲ್ಲಿ ಪಾಲುಗಾರರಾಗಿರುತ್ತೇವೆಂದು ಸೂಚಿಸುವದಕ್ಕಾಗಿ ಒಂದು ಸಭೆ ಏರ್ಪಾಟುಮಾಡಿ ಅಲ್ಲಿಗೆ ಶ್ರೀಮಂತ ಮಹಾರಾಜರನ್ನೇ ಸಭಾಧ್ಯಕ್ಷರನ್ನಾಗಮಾಡಿ ತಮ್ಮ ಕೃತಜ್ಞತಾ ಪತ್ರವನ್ನು ಓದಿದರು. ತರುವಾಯ ಶ್ರೀಮಂತ ಮಹಾರಾಣಿಯವರು ಚಿರತೆಯನ್ನು ಹೊಡೆದು ಕೊಂದದ್ದಕ್ಕಾಗಿ ಒಂದು ಭಂಗಾರದ ಮೆಡಲನ್ನು ಮ|| ದಿವಾನ್ ಸುಬ್ಬರಾವ್ ಮೊದಲಿಯಾರ್ರ ಕೈಯಿಂದ ಅರ್ಪಿಸಲ್ಪಟ್ಟು ದೇವರು ಅವರಿಬ್ಬರಿಗೂ ದೀರ್ಘಾಯುಷ್ಯವನ್ನು ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸಿ ಪುಷ್ಪ ಪನ್ನೀರುಗಳನ್ನರ್ಪಿಸಿ ಸಭೆ ಮುಕ್ತಾಯಮಾಡಿದರು. ಇಷ್ಟರಲ್ಲಿಯೇ ಹೊಸ ಭಾವಿ ಕೇರಿಯ ರೈತರೆಲ್ಲಾ ತಮ್ಮ ಸಂತೋಷವನ್ನು ಪ್ರತ್ಯೇಕವಾಗಿ ತೋರಿಸುವ ಉದ್ದಿಶ್ಯ ಮತ್ತೊಂದು ಸಭೆಯನ್ನು ತಮ್ಮ ಕೇರಿಯಲ್ಲಿಯೇ ಕೂಡಿಸಿ ಒಂದು ದಿವ್ಯವಾದ ಮೆಡಲನ್ನು ಕೊಡಲಿಕ್ಕಿರುವರು.

ಒಬ್ಬ ಪ್ರಜೆ.

ಮೈಸೂರು ಗೆಜೆಟ್ ಸಂಗ್ರಹ.

ಪೊಲೀಸ್ ಸೂಪರಿನ್‌ಟೆಂಡೆಂಟ್ ಮಿ|| ಮಹಮುದ್ ಓಬೆದುಲ್ಲಾಯವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೈದು ದಿನ ಜಾಸ್ತಿ ಮಾಡಿದೆ.

ಶಿವಮೊಗ್ಗಾ ಅ|| ಮುನ್‌ಸಿಫ್ ಮ|| ಎಚ್. ಎಂ. ಕೃಷ್ಣಸ್ವಾಮಿಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೆಂಟು ದಿನ ಜಾಸ್ತಿ ಮಾಡಿದೆ.

ಡಾಕ್ಟರ್ ಎಂ. ಶ್ರೀನಿವಾಸರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮೈಸೂರು ಹೆಲ್ತ್ ಆಫೀಸರ್ ಮಿ|| ಎ. ಕೆ. ಪಾಣಿಯವರು ಅವರ ಕೆಲಸವನ್ನು ಬದಲಿ ನೋಡತಕ್ಕದ್ದು. ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಮ|| ಎಂ. ಜಿ. ಶ್ರೀನಿವಾಸ ಪೆದಿಪೆಟ್ ರವರು ಮೈಸೂರು ಹೆಲ್ತ್ ಆಫೀಸರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಗವರ್ನ್‌ಮೆಂಟ್ ಡೆಪ್ಯುಟಿ ಸೆಕ್ರೆಟರಿ ಮಿ|| ಪಿ. ಜಿ. ಡಿಸೌಜಾರವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನ ಜಾಸ್ತಿ ಮಾಡಿದೆ.

ಚನ್ನರಾಯಪಟ್ಟಣದ ಸಬ್ ಡಿವಿಜನ್ ಆಫೀಸರ್ ಮ|| ಜಿ. ಬಿ. ಹೆಬ್ಲಿಕರ್ ಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ. ಹಾಸನದ ಟ್ರೆಜರಿ ಅ|| ಕಮಿಷನ್‌ರು ಅವರ ಕೆಲಸದ ಭಾರ್ಜನ್ನೂ ವಹಿಸಿರತಕ್ಕದ್ದು.

ಬೇಲೂರಿಗೆ ವರ್ಗಪಟ್ಟಿರುವ ಅಮಲ್ದಾರ್ ಮಿ|| ಎಂ. ಅಬ್ದುಲ್ ಹಕೀಂರವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ದಿವಾನ್‌ರವರ ಆಫೀಸ್ ಮ|| ಎನ್. ಶ್ರೀನಿವಾಸಯ್ಯಂಗಾರ್ರು ಬೇಲೂರಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಫಾರೆಸ್ಟ್ ಸಬ್ ಅ|| ಕನ್‌ಸರ್ವೇಟರ್ ಮಿ|| ಸಿ. ಎಚ್. ಈಗಲ್ಸ್‌ರವರಿಗೆ ಕೊಟ್ಟಿರುವ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೆಂಟು ದಿನಗಳು ಜಾಸ್ತಿಮಾಡಿದೆ.

ಮ|| ಎಂ. ಅಹೋಬಲ ಶಾಸ್ತ್ರಿಯವರು ಆಗಸ್ಟ್ ತಾ. 18 ರಿಂದ ರಿಟೈರ್ ಆಗುವುದರಿಂದ ಶಿವಮೊಗ್ಗಾ ಡೆಪ್ಯುಟಿ ಕಮಿಷನರ್‌ರ ಆಫೀಸ್ ಮ|| ಜಿ. ಸಂತಾನಂಅಯ್ಯಂಗಾರ್ರು ನರಸೀಪುರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರು ಸಬ್ ರೆಜಿಸ್ಟ್ರಾರ್ ಮ|| ಟಿ. ಶ್ರೀಕಂಠರಾಯರನ್ನು ಕುಲೀನ್‌ಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಸೀನಿಯರ್ ಅ|| ಮೈಕಾಲಜಿಸ್ಟ್ ಮ|| ಎಂ. ಕೆ. ವೆಂಕಟರಾಯರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನ್ ಹೈ ಸ್ಕೂಲ್ ಹೆಡ್ ಮಾಸ್ಟರ್ ಮ|| ಆರ್. ವಿ ಕೃಷ್ಣಸ್ವಾಮಿ ಅಯ್ಯರವರಿಗೆ ಪೂರಾ ಸಂಬಳದ ಮೇಲೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಾಯಲೂರು ಪಟೇಲ್ ಮತ್ತು ಜಮೀನ್‌ದಾರ್ ಮ|| ದೇಶಪಾಂಡೆ ರಾಮರಾಯರನ್ನು ಮುಳಬಾಗಲು ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ

ಕೋಲಾರ್ ಡಿಸ್ಟ್ರಿಕ್ಟ್ ಪ್ರೊ|| ಅ|| ಕಮಿಷನರ್ ಮ|| ಎಂ. ವೆಂಕಟೇಶಯ್ಯಂಗಾರ್ರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಫ್ರೆಂಚ್ ರಾಕ್ಸ್ ಪೊಲೀಸ್ ಸೂಪರಿನ್‌ಟೆಂಡೆಂಟ್ ಮ|| ಎ. ವೇದಾಂತ ದೇಶಿಗಂ ಅಯ್ಯಂಗಾರ್ರನ್ನೂ, ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮ|| ಕೆ. ಸುಬ್ಬರಾಯರನ್ನೂ ಅ|| ಕಮಿಷನ್‌ರ ದರ್ಜೆಯಲ್ಲಿ 3 ರಿಂದ 2 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಮುಂದೆ ಹೇಳುವ ಸಬ್ ಜಡ್ಜಿಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮ|| ಬಿ. ನಾಗಪ್ಪನವರು ಶಿವಮೊಗ್ಗೆಯಿಂದ ಮೈಸೂರಿಗೆ, ಮ|| ಬಿ. ಸುಬ್ಬಣ್ಣನವರು ಮೈಸೂರಿನಿಂದ ಬೆಂಗಳೂರಿಗೆ, ಮ|| ಕೆ. ಲಕ್ಷ್ಮೀನಾರಣಯ್ಯನವರು ಬೆಂಗಳೂರಿನಿಂದ ಶಿವಮೊಗ್ಗೆಗೆ.

ಕೆಸಬುಗಳ ಸೂಪರಿನ್‌ಟೆಂಡೆಂಟ್ ಮ|| ಎಸ್. ರಾಘವೇಂದ್ರರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸೀನಿಯರ್ ಅ|| ಕೆಮಿಸ್ಟ್ ಮ|| ಕೆ. ಭೀಮರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಅ|| ಇನ್‌ಜನಿಯರ್ ಮ|| ವೈ. ಎಸ್. ಕೇಶವರಾಯರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರೈಲ್ವೆ ಇಲಾಖೆಯ ಅಂಡರ್ ಸೆಕ್ರೆಟರಿ ಮ|| ಟಿ. ಲಕ್ಷ್ಮೀನರಸಿಂಹರಾಯರನ್ನು ಅ|| ಕಮಿಷನ್‌ರ ದರ್ಜೆಯಲ್ಲಿ 2 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಅ|| ಅ|| ಸರ್‌ಜನ್ ಎಫ್. ಚೇಂಬರ್ಸ್ ಯವರಿಗೆ ಕೊಟ್ಟಿದ್ದ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿ ಮಾಡಿದೆ.

ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಮ|| ಎಂ. ಸದಾಶಿವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚನ್ನರಾಯಪಟ್ಟಣದ ಸಬ್ ಡಿವಿಜನ್ ಆಫೀಸರು ಅವರ ಕೆಲಸದ ಭಾರ್ಜನ್ನೂ ವಹಿಸಿರತಕ್ಕದ್ದು.

ಮ|| ಎಚ್. ಎಸ್. ನಾರಾಯಣರಾಯರನ್ನು ಫಾರೆಸ್ಟ್ ಅ|| ಕನ್‌ಸರ್ವೇಟರಾಗಿ ಖಾಯಂ ಮಾಡಿದೆ.

ಸಬ್ ಅ|| ಇನ್‌ಜನಿಯರ್ ಮ|| ಎನ್. ಲಕ್ಷ್ಮೀನರಸಿಂಹಯ್ಯನವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಮ|| ಬಿ. ಮಲ್ಲಿಕಾರ್ಜುನಪ್ಪನವರಿಗೆ ಸೆಪ್ಟೆಂಬರ್ ತಾ. 1 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕ್ ಭಾರ್ಜನ್ನು ವಹಿಸಿರತಕ್ಕದ್ದು.

ಆನೆಕಲ್ಲು ತಾಲ್ಲೂಕು ಅಮಲ್ದಾರ್ ಮಿ|| ಬಿ. ಮೊಹಿಯುದ್ದೀನ್ ಷರೀಫ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮ|| ಎಸ್. ವೆಂಕಟೋಜಯ್ಯನವರು ತಾಲ್ಲೂಕ್ ಭಾರ್ಜನ್ನೂ ವಹಿಸಿರತಕ್ಕದ್ದು.

ಹಾಸನದ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ಬಹುಮಾನ ವಿನಿಯೋಗ.

ಕಳೆದ 7 ನೇ ತಾ. ಶನಿವಾರ ಬೆಳಿಗ್ಗೆ ಹಾಸನದ ವೆಸ್ಲಿಯನ್ ಮಿಷನ್ ಕೋಟೆ ಬಾಲಿಕಾ ಪಾಠಶಾಲೆಯಲ್ಲಿ ಬಾಲಕಿಯರಿಗೆ ಬಹುಮಾನಗಳು ಹಂಚಲ್ಪಟ್ಟವು. ಆಗ್ಗೆ ಕಟ್ಟಡವು ಅನೇಕ ತರವಾದ ಪುಷ್ಪ, ತಳಿರು ತೋರಣಗಳಿಂದ ಚಿತ್ರವಿಚಿತ್ರವಾಗಿ ಅಲಂಕರಿಸಲ್ಪಟ್ಟಿತ್ತು. ಡೆಪ್ಯುಟಿ ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರು ಬಹಳ ಪ್ರೀತಿಯಿಂದ ಅಗ್ರಾಸನವನ್ನು ವಹಿಸಿದ್ದರು. ಅಲ್ಲಿಗೆ ಮಿಷನ್ ಸ್ಕೂಲುಗಳ ಮತ್ತು ಆರ್ಫನೇಜು ಸ್ಕೂ|| ಮಿಸ್ ಅಟ್ಕಿನ್‌ಸ್ ಮತ್ತು ಮಿಸ್ ಬ್ರೇಕ್‌ಸ್ಪಿಯರ್ ರವರೂ, ಡೆಪ್ಯುಟಿ ಕಮಿಷನರ್ ಸಾಹೇಬರವರ ಕುಟುಂಬ ಶ್ರೀಮತಿ ಪುಟ್ಟಮ್ಮನವರೂ, ಹಾಸನದ ಸರ್ಕಾರಿ ಮತ್ತು ಸಾಹುಕಾರಿ ದೊಡ್ಡಮನುಷ್ಯರೂ ಸಭೆಯನ್ನು ಅಲಂಕರಿಸಿದ್ದರು. ಬಾಲಕಿಯರು ದೇವರ ಪ್ರಾರ್ಥನೆಯನ್ನು ಮುಗಿಸಿದ ನಂತರ ಹೆಡ್ ಮಿಸ್ಟ್ರೆಸ್‌ರಿಂದ ಪಾಠಶಾಲೆಯ ರಿಪೋರ್ಟು ಓದಲ್ಪಟ್ಟಿತು. ಬಾಲಕಿಯರು ಇಂಪಾದ ಗಾಯನದಿಂದ ಬಹು ಸ್ವಾರಸ್ಯವಾಗಿ ಅಭಿನಯಿಸಿದ ಚಂದ್ರಹಾಸಾಭ್ಯುದಯವೆಂಬ ನಾಟಕವೂ, ಕೊನೆಯ ಪಾತ್ರದಲ್ಲಿ ಬಾಲಕಿಯರಿಬ್ಬರು ಸ್ತ್ರೀ ವಿದ್ಯಾಭ್ಯಾಸದಿಂದ ಉಂಟಾಗುವ ಜ್ಞಾನೋದಯವನ್ನು ಕುರಿತು ಮಾಡಿದ ಸಂಭಾಷಣೆಯೂ ಸರ್ವರ ಮನಸ್ಸನ್ನೂ ಸಂತೋಷಪಡಿಸಿದವು.

ಸಭಾನಾಯಕರಾಗಿದ್ದ ಮ|| ಬಿ. ರಾಮಸ್ವಾಮಯ್ಯನವರು ಸಭಿಕರನ್ನು ಕುರಿತು ಹೇಳಿದ್ದೇನೆಂದರೆ :—

ಸಭಿಕರೇ,—ಈ ದಿವಸ ಹಾಸನದ ನಿವಾಸಿಗಳಾದ ನಾವೆಲ್ಲರೂ ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಕಿಯರ ಪಾಠಶಾಲೆಯ ರಿಪೋರ್ಟನ್ನು ಕೇಳಿದುದರಿಂದಲೂ, ಬಹಳ ಶ್ರಮದಿಂದ ಅಭ್ಯಾಸಿಸಲ್ಪಟ್ಟಿರುವ ಬಾಲಕಿಯರಿಂದ ನಡೆಯಿಸಲ್ಪಟ್ಟ ಅತಿ ಸ್ವಾರಸ್ಯದಿಂದೊಡಗೂಡಿದ ಕಾರ್ಯಗಳನ್ನು ನೋಡಿದುದರಿಂದಲೂ ಕೇವಲ ಸಂತೋಷ ಉಳ್ಳವರಾದೆವು ಎನ್ನುವುದನ್ನು ಸರ್ವರೂ ಒಪ್ಪಿಕೊಳ್ಳುವುದರಲ್ಲಿ ಸಂಶಯಲೇಶವೂ ಇಲ್ಲ. ಈ ರೀತಿ ನಮ್ಮಗಳಿಗೆ ಅವಕಾಶವನ್ನು ಕೊಟ್ಟ ಈ ಪಾಠಶಾಲೆಯ ಅಧಿಕಾರಿಗಳಿಗೆ ನಾವು ಕೃತಜ್ಞರಾಗಿರುತ್ತೇವೆ.—ಅನಂತರದಲ್ಲಿ ನಮ್ಮ ದೇಶದ ಸರ್ವ ಭಾಗಗಳಂತೆಯೇ ಈ ಊರಿನಲ್ಲಿಯೂ ಬಾಲಕ ಬಾಲಕಿಯರ ವಿದ್ಯಾಭ್ಯಾಸದ ವಿಷಯದಲ್ಲಿ ಕ್ರಿಶ್ಚಿಯನ್ ಮಿಷನರಿಯವರು ಪೂರ್ವದಿಂದಲೂ ತೋರ್ಪಡಿಸಿರುವ ಆಸಕ್ತಿಯು ಸರ್ವರಿಗೂ ತಿಳಿದ ವಿಷಯವೇ ಆಗಿರುತ್ತದೆ. ಇದಕ್ಕೆ ನಾವು ಈಗ ಸೇರಿರುವ ಪಾಠಶಾಲೆಯೇ ಒಂದು ದೃಷ್ಟಾಂತವಾಗಿರುತ್ತದೆ. ಈಗ್ಗೆ ನಾಲ್ವತ್ತು ವರ್ಷಗಳ ಹಿಂದೆಯೇ ಸ್ಥಾಪಿಸಲ್ಪಟ್ಟು ಯಾವ ವಿಧವಾದ ಹೊರಗಿನ ಆಡಂಬರವೂ ಇಲ್ಲದಂತೆ ಇದುವರೆಗೆ ಒಂದೇ ಸಮಭಾವದಲ್ಲಿ ಪಾಠಶಾಲೆಯನ್ನು ನಡೆಯಿಸಿಕೊಂಡು ಈಗ ನಮಗೆ ಕಾಣುತ್ತಿರುವ ಉತ್ತಮಸ್ಥಿತಿಯಲ್ಲಿ ಇಟ್ಟುಕೊಂಡಿರುವದು ಕೇವಲ ಸ್ತೋತ್ರಾರ್ಹವಲ್ಲವೇ ! ನಮ್ಮ ಊರಿನ ಸ್ತ್ರೀ ಪ್ರಜೆಗೆ ಎಷ್ಟು ಉಪಕಾರಮಾಡಿದಂತಾಯಿತು ! ಆದರೆ ಈ ರೀತಿ ಒಂದು ಕಡೆ ಕ್ರಿಶ್ಚಿಯನ್ ಮಿಷನರಿಯವರೂ ಮತ್ತೊಂದು ಕಡೆ ಸರ್ಕಾರದವರೂ ಸಹ ಒದಗಿಸಿಕೊಟ್ಟಿರುವ ಸೌಕರ್ಯಗಳನ್ನು ನಾವು ಎಷ್ಟರ ಮಟ್ಟಿಗೆ ಉಪಯೋಗಮಾಡಿಕೊಳ್ಳಬಹುದೋ ಅಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳುತ್ತಿದೇವೆಯೋ ಎನ್ನುವದನ್ನು ಯೋಚಿಸಿ ನೋಡೋಣ. ನಾಲ್ವತ್ತು ವರ್ಷಗಳಿಂದಲೂ ನಡೆಯುತ್ತಿರುವ ಪಾಠಶಾಲೆಯಲ್ಲಿ ಉಂಟಾಗಬಹುದಾದ ಅಭಿವೃದ್ಧಿಯಲ್ಲಿ ದಶಮಾಂಶವು ಸಹ ಉಂಟಾಗಿಲ್ಲವೆಂದು ಹೇಳಬೇಕಾಗಿದೆ. 10-12 ವರ್ಷ ವಯಸ್ಸಿಗಿಂತ ಹೆಚ್ಚಾದ ಬಾಲಕಿಯರು ಓದುತ್ತಲಿರುವುದಿಲ್ಲ. 3 ನೇ ತರಗತಿಯ ಮೇಲಿನ ಕ್ಲಾಸು ಇರುವುದಿಲ್ಲ. ಬಾಲಕಿಯರ ಸಂಖ್ಯೆಯೇನೋ ಸ್ವಲ್ಪ ಹೆಚ್ಚಿರುವದುಂಟು ಆದರೆ ರಿಪೋರ್ಟನಲ್ಲಿ ಉಕ್ತವಾಗಿರುವಂತೆ ಈಗಿನ ನಾಗರಿಕಸ್ಥಿತಿಯಲ್ಲಿ ಸ್ತ್ರೀಯರು ವಿದ್ಯಾವತಿಯರೂ ಸದ್ಗೃಹಿಣಿಯರೂ ಆಗಬೇಕಾದರೆ ಸಾಧಾರಣವಾಗಿ ಅವರು ಕಡೇ ಪಕ್ಷ 10-14 ನೇ ವರ್ಷದ ವರೆಗಾದರೂ ಪಾಠಶಾಲೆಯಲ್ಲಿ ನಿಂತು ವಿದ್ಯಾಭ್ಯಾಸವನ್ನು ಮಾಡುವುದು ಅತ್ಯವಶ್ಯಕ. ಇದಕ್ಕೆ ಅವಕಾಶವನ್ನು ಉಂಟುಮಾಡಿಕೊಡದೆ ಇರುವುದು ಇಲ್ಲಿ ಕೂಡಿರುವ ಬಾಲಕಿಯರ ತಂದೆ ತಾಯಿಗಳ ಜವಾಬ್ದಾರಿಯಲ್ಲವೇ ? ನಾಲ್ವತ್ತು ವರ್ಷವೆಂಬ ಕಾಲವು ಇತರ ದೇಶಗಳಲ್ಲಿ ಎಷ್ಟೋ ಅಪಾರವಾದ ಬದಲಾವಣೆಗಳೂ ಅಭಿವೃದ್ಧಿಯೂ ಇವುಗಳನ್ನು ಕೆಲವು ಸಂದರ್ಭಗಳಲ್ಲಿ ಆಶ್ಚರ್ಯಕರವಾಗಿ ಉಂಟುಮಾಡಿರುತ್ತದೆ. ಹೀಗಿರುವಲ್ಲಿ ನಾವುಗಳು ಸಹ ಸಮಯೋಚಿತವಾಗಿ ಅಭಿವೃದ್ಧಿಯ ಮಾರ್ಗವನ್ನು ಅವಲಂಬಿಸುವುದು ನಮ್ಮ ಕರ್ತವ್ಯವಲ್ಲವೇ ? ಪ್ರತ್ಯೇಕ ತಂದೆ ತಾಯಿಗಳೆಲ್ಲರೂ ತಮ್ಮ ಹೆಣ್ಣುಮಕ್ಕಳನ್ನು ಈಗ್ಗಿಂತ ಇನ್ನೂ ವಿಶೇಷ ಹೆಚ್ಚಾಗಿ ಪಾಠಶಾಲೆಗೆ ಕಳುಹಿಸುವುದಲ್ಲದೆ ವಿದ್ಯಾಭ್ಯಾಸದಿಂದ ನಿಜವಾಗಿಯೂ ಫಲವನ್ನು ಪಡೆಯುವಂತೆ ಕೆಲವು ಸಂವತ್ಸರಗಳು ಬಿಡದೆ ವ್ಯಾಸಂಗಮಾಡಲು ಅವಕಾಶವನ್ನುಂಟುಮಾಡಿ ಸ್ತ್ರೀ ವಿದ್ಯಾಭ್ಯಾಸ ಪ್ರಚಾರದಿಂದ ದೇಶದ ಏಳಿಗೆಗೆ ಸಹಕಾರಿಗಳಾಗಬೇಕೆಂದು ಪಾರ್ಥಿಸುತ್ತೇವೆ.—ಅನಂತರ ಈ ದಿವಸ ಬಹುಮಾನಗಳನ್ನು ಪಡೆದ ಬಾಲಕಿಯರೆಲ್ಲರಿಗೂ ಅವರ ವಿಷಯದಲ್ಲಿ ನಮ್ಮ ಸಂತೋಷವನ್ನು ಸೂಚಿಸುತ್ತೇನೆ. ಈ ಪಾಠಶಾಲೆಯ ಸಮಸ್ತ ಬಾಲಕಿಯರೂ ಸದ್ಗುಣಸಂಪನ್ನೆಯರಾಗಿಯೂ, ಗುರುಹಿರಿಯರಲ್ಲಿ ಭಕ್ತಿಯುಳ್ಳವರಾಗಿಯೂ, ತಾವು ಸೇರಿರುವ ಪಾಠಶಾಲೆಗೆ ಕೀರ್ತಿಯನ್ನು ತರುವವರಾಗಿಯೂ ಪರಿಣಮಿಸಲಿ ಎಂದು ಆತ್ಮಾಸಕ್ತಿಯಿಂದ ಪ್ರಾರ್ಥಿಸುತ್ತೇವೆ !—ಪಾಠಶಾಲೆಯಲ್ಲಿ ವರ್ಷಕಾಲ ಒಂದೇ ಸಮನಾಗಿ ಶ್ರದ್ಧೆಯಿಂದಲೂ ಮಮತೆಯಿಂದಲೂ ಕೆಲಸಮಾಡುತ್ತಿರುವ ಉಪಾಧ್ಯಾಯ, ಉಪಾಧ್ಯಾಯಿನಿಯರನ್ನು ಮರೆಯಲಾಗದು. ಅವರ ಕೆಲಸವು ಶ್ರಮವಾದದ್ದು ; ಕೇವಲ ತೃಪ್ತಿಭಾವದಿಂದ ಮಾಡತಕ್ಕದ್ದು. ಇಂಥಾವರಿಗೆ ನಮ್ಮ ಮೆಚ್ಚಿಗೆಯನ್ನು ತಿಳಿಸುವುದು ಅತ್ಯವಶ್ಯಕ. ಆ ರೀತಿ ಮಾಡಲು ಸಂತೋಷಿಸುತ್ತೇವೆ.—ಅನಂತರ ಹೀಗೆ ಪಾಠಶಾಲೆಯ ಸಮಸ್ತ ಆದರ್ಶಗಳೂ ತೃಪ್ತಿಕರವಾಗಿ ನೆರವೇರಿಸಲ್ಪಡಲು ಮುಖ್ಯ ಕಾರಣಭೂತರಾದ ಪಿಂಡಿ ಸೂಪರಿನ್‌ಟೆಂಡೆಂಟ್ ಮಿಸ್ ಆಟ್ಕಿನ್‌ಸ್‌ರವರ ಮತ್ತು ರೆವ್ ಬ್ರೇಕ್‌ಸ್ಪಿಯರ್ ರವರ ವಿಷಯದಲ್ಲಿ ಈ ಪುರನಿವಾಸಿಗರು ಅತ್ಯಂತ ಕೃತಜ್ಞತೆಯುಳ್ಳವರಾಗಿರುತ್ತಾರೆನ್ನುವುದರಲ್ಲಿ ಸಂಶಯವಿಲ್ಲ. ಇತೋಧಿಕವಾದ ಅಭಿವೃದ್ಧಿಯನ್ನು ಈ ಪಾಠಶಾಲೆಯು ಹೊಂದುವುದರಿಂದಲೇ ಅವರುಗಳಿಗೆ ಕೆಲಸದ ಸಾರ್ಥಕತೆಯೂ ಮನೋಸಂತೋಷವೂ ಉಂಟಾಗಲಿ ಎಂದು ಕೋರುತ್ತೇವೆ.—ನಾನು ಹೇಳಬೇಕಾದದ್ದು ಮತ್ತೇನೂ ಇರುವುದಿಲ್ಲ. ಈ ರೀತಿ ಪಾಠಶಾಲೆಯ ಅಧಿಕಾರಿಗಳು ಈ ದಿವಸದ ಸಂತೋಷಕಾರ್ಯದಲ್ಲಿ ನಾನು ಭಾಗಿಯಾಗುವಂತೆ ಮಾಡಿದ ಗೌರವಕ್ಕೋಸ್ಕರ ಮನಃಪೂರ್ವಕವಾಗಿ ನನ್ನ ವಂದನೆಗಳನ್ನು ಅವರಿಗೆ ಒಪ್ಪಿಸುತ್ತೇನೆ.—ಪುರಪ್ರಮುಖರಾದ ಸರ್ವರೂ ಕೂಡಿರುವ ಈ ಸಮಯದಲ್ಲಿ ನಾವು ಬಿಡಲಾಗದ ಕರ್ತವ್ಯವು ಒಂದು ಇರುತ್ತದೆ. ಒಂದು ವರ್ಷದಿಂದಲೂ ನಡೆಯುತ್ತಿರುವ ಘೋರವಾದ ಯುದ್ಧದ ಅಂತ್ಯವು ಇನ್ನೂ ಲೇಶವೂ ಕಾಣಬರುವುದಿಲ್ಲ. ಅನೇಕ ವರ್ಣಿಸಲಶಕ್ಯವಾದ ಅನಾಹುತಗಳು ನಡೆಯುತ್ತಲಿವೆ. ಶೀಘ್ರದಲ್ಲಿಯೇ ಈ ಘೋರ ಯುದ್ಧವು ಕೊನೆಗಾಣಿಸಲ್ಪಟ್ಟು ನ್ಯಾಯ ಮತ್ತು ಸತ್ಪರಿಪಾಲಕರಾದ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಅತ್ಯುತ್ತಮವಾದ ಜಯಪ್ರದ ಉಂಟಾಗಲೆಂದು ಸರ್ವೇಶ್ವ

ಸ್ವರೂಪನಾದ ಭಗವಂತನನ್ನು ಪ್ರಾರ್ಥನೆಮಾಡಿ ಆ ದಿವಸದ ಕಾರ್ಯಗಳು ಪೂರ್ಣವಾದುವೆಂದು ಸೂಚಿಸುತ್ತೇವೆ.

ಈ ರೀತಿ ಭಾಷಣ ಮಾಡಿ ಬಾಲಕಿಯರಿಗೆಲ್ಲಾ ಪೆಟ್ಟಿಗೆ ಬೊಂಬೆ ನೋಡದ ಉದ ವಿಚಿತ್ರವಾದ ಸಾಮಾನುಗಳನ್ನು ಹಂಚಿದ್ದಲ್ಲದೆ ಶಾಲೆಗೆ ಬರುವಿಕೆಯ ಕ್ರಮ ಮತ್ತು ಬರವಣಿಗೆಯ ಕ್ರಮ ಇವೆರಡರಲ್ಲಿ ಇಬ್ಬರು ಬಾಲಕಿಯರಿಗೆ ತಮ್ಮ ಸ್ವಂತವಾಗಿ 5 ರೂಪಾಯಿ ಬೆಲೆಯುಳ್ಳ ಪುಸ್ತಕ ಮತ್ತು ಕಂಪಾಸ್ ಪೆಟ್ಟಿಗೆ ಬಹುಮಾನವಾಗಿ ಕೊಟ್ಟದ್ದಲ್ಲದೆ ಸರ್ಟಿಫಿಕೇಟ್ ಸಹಾ ದಯಪಾಲಿಸಿದರು. ಅಲ್ಲದೆ ಅರಕಲಗೂಡು ಸಾಹುಕಾರ್ ಮ॥ ನಂಜುಂಡ ಶೆಟ್ಟಿಯವರು ತಮ್ಮ ಸಂತೋಷಾರ್ಥವಾಗಿ ಹೆಣ್ಣು ಮಕ್ಕಳಿಗೆ ಎರಡು ರೂಪಾಯಿ ಬಹುಮಾನ ಕೊಟ್ಟರು. ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ವೀರಭದ್ರಯ್ಯನವರೂ, ಸ್ಕೂಲ್ ಮೇನೇಜರಾದ ರೆವ್. ಬರ್ರಿಲ್‌ಬ್ಯಾಂಕ್ ರವರೂ ಸಭಾಧ್ಯಕ್ಷರ ಭಾಷಣಕ್ಕಾಗಿ ವಂದಿಸಿ ಸಭೆಯ ಪರವಾಗಿಯೂ ಮತ್ತು ಉಪಾಧ್ಯಾಯರು ಬಾಲಕಿಯರಿಂದ ಮಾಡಿಸಿದ ವಿನೋದಕ್ಕಾಗಿಯೂ ಸ್ತೋತ್ರಮಾಡಿ ಮುಕ್ತಾಯಮಾಡಿದರು.

ಶ್ರಾವಣ ತಾ. 9ನೇ ಸೋಮವಾರ ಮಧ್ಯಾಹ್ನ ಅದೇ ಪಾಠಶಾಲೆಯಲ್ಲಿ ಡೆಪ್ಯುಟಿ ಕಮಿಷನರು ಮ॥ ಬಿ. ರಾಮಸ್ವಾಮಯ್ಯನವರ ಕುಟುಂಬ ಶ್ರೀಮತಿ ಲಕ್ಷ್ಮಮ್ಮನವರು ಸಭಾಧ್ಯಕ್ಷತೆಯನ್ನು ವಹಿಸಿ ಅಲ್ಲಿ ಸೇರಿದ್ದ ಬಹು ಜನ ಸ್ತ್ರೀಯರುಗಳಿಗೆ ಸ್ತ್ರೀವಿದ್ಯಾಭ್ಯಾಸದಿಂದುಂಟಾಗುವ ಉಪಯೋಗವನ್ನು ಕುರಿತು ಒಬ್ಬ ಬಾಲಕಿಯಿಂದ ಉಪನ್ಯಾಸ ಮಾಡಿಸುವುದರ ಮೂಲಕ ಸಮಸ್ತರ ಮನಸ್ಸನ್ನು ಸಂತೋಷಪಡಿಸಿದರು. ಇದಲ್ಲದೆ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್ ರಾವ್ ಬಹದ್ದೂರ್ ಎಂ. ಶಾಮರಾಯರು ಬರೆದು ಕಳುಹಿಸಿದ್ದ ಕಾಗದದ ಅಭಿಪ್ರಾಯವೇನೆಂದರೆ—"ನೀವು ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲಾ ಹೆಣ್ಣು ಮಕ್ಕಳ ಬಹುಮಾನೋತ್ಸವದ ಆಹ್ವಾನ ಪತ್ರವನ್ನು ಕಳುಹಿಸಿದ್ದಕ್ಕಾಗಿ ನಿಮಗೆ ವಂದನೆ. ಈ ಉತ್ಸವ ಕಾಲದಲ್ಲಿ ನನ್ನ ಸ್ನೇಹಿತರಾದ ಮ॥ ರಾಮಸ್ವಾಮಯ್ಯ, ಡೆಪ್ಯುಟಿ ಕಮಿಷನರವರು ಅಗ್ರಾಸನವನ್ನು ವಹಿಸುವುದಕ್ಕೆ ಒಪ್ಪಿರುವುದನ್ನು ಕೇಳಿ ಸಂತೋಷಪಡುತ್ತೇನೆ. ಈ ಕಾಲದಲ್ಲಿ ಪ್ರತಿಗಳಲ್ಲಿ ಸರ್ಕಾರದವರು ಜ್ಞಾನೋದಯವನ್ನುಂಟುಮಾಡುವುದರಲ್ಲಿ ಎಷ್ಟರ ಮಟ್ಟಿಗೆ ಆಸಕ್ತಿಯುಳ್ಳವರಾಗಿರುತ್ತಾರೆಂದು ತಮಗೆ ಹೇಳುವುದೇ ಬೇಕಾಗಿಲ್ಲ. ಪ್ರಾಥಮಿಕ ಜನಾ ಮಿಷನ್ ಲೆಜಿಸ್ಲೇಟಿವ್ ಕೌಟಿನಲ್ಲಿ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬರು ಬೇರೆ ಇಲಾಖೆಗಳ ಖರ್ಚು ಬಾಬುಗಳನ್ನು ಕಡಿಮೆ ಮಾಡುವರಾಗಿದ್ದರೂ ಮುಖ್ಯವಾಗಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗ್ರಾಂಟುಗಳನ್ನು ಕೊಡುವುದರಲ್ಲಿ ತಮಗೆ ವಿಶೇಷ ಇಷ್ಟವುಂಟೆಂದು ಅಪ್ಪಣೆಕೊಟ್ಟದ್ದನ್ನು ನಮ್ಮ ದಿವಾನ್ ಸಾಹೇಬರು ಪ್ರಕಟಿಸಿರುತ್ತಾರೆ.—ಇಂಥಾ ಸಕಾಲದಲ್ಲಿ ಸಕಲ ಪ್ರಜೆಗಳೂ ಪ್ರಪಂಚದ ಇತರ ನಾಗರಿಕ ದೇಶಗಳಂತೆ ನಮ್ಮ ದೇಶವನ್ನು ಉತ್ಕೃಷ್ಟ ಸ್ಥಿತಿಗೆ ತರುವುದರಲ್ಲಿ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬರ ಔದಾರ್ಯವನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ಪ್ರಯೋಜನಹೊಂದುವುದು ಯುಕ್ತವಾಗಿದೆ. ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಶ್ರದ್ಧೆ ವಹಿಸಬೇಕಾಗಿರುತ್ತದೆ. ಮತ್ತು ಹಾಸನದಲ್ಲಿರುವ ವಿವೇಕಿಗಳಾದ ಜನರು ತಾವೇ ತಮ್ಮ ಸ್ವಂತ ದ್ರವ್ಯದಿಂದ ಒಂದು ಹೆಣ್ಣು ಮಕ್ಕಳ ಪಾಠಶಾಲೆಯನ್ನು ಕಟ್ಟಿಸುವುದರಲ್ಲಿ ಸರ್ಕಾರದ ವಿದ್ಯಾ ಇಲಾಖೆಯವರ ಸಂಗಡಲೂ ನಮ್ಮ ದೇಶದ ವಿದ್ಯಾಭ್ಯಾಸ ಚಿಂತೆಯಲ್ಲಿ ಮುಂದಾಳುಗಳಾಗಿರುವ ವೆಸ್ಲಿಯನ್ ಮಿಷನ್ ಸಂಘದವರ ಸಂಗಡಲೂ ಪರಸ್ಪರ ಏಕಭಾವವನ್ನು ಬೇಗನೆ ಉಂಟುಮಾಡಿಕೊಳ್ಳಲು ಅವರು ಒಳ್ಳೇ ಮಾದರಿಯನ್ನು ತೋರಿಸಿದಾರೆಂದು ಮುಖ್ಯವಾಗಿ ಹೇಳಬಲ್ಲೆನು—ಇವರ ಜೊತೆಯಲ್ಲಿ ಕೋಟೆ ಹೆಣ್ಣು ಮಕ್ಕಳ ಪ್ರೋತ್ಸಾಹಕ್ಕಾಗಿ ಹತ್ತು ರೂಪಾಯಿಗಳನ್ನು ತಮಗೆ ಕಳುಹಿಸಿರುವೆನು."

ಉಭಯ ದಿನಗಳ ಸಭಾಧ್ಯಕ್ಷರಿಗೂ ಸಭಿಕರಿಗೂ ಹಾರ ತುರಾಯಿಗಳು ಕೊಡಲ್ಪಟ್ಟವು. ಇಂಥಾ ಸಂತೋಷ ಸಭೆಯನ್ನು ನಿರ್ವಿಘ್ನವಾಗಿ ನಡೆಸಿದ ಭಗವಂತನಿಗೂ, ಇಂಡಿಯಾ ಚಕ್ರವರ್ತಿ ಸಾರ್ವಭೌಮರಿಗೂ, ನಮ್ಮ ಶ್ರೀಮನ್ ಮಹಾರಾಜರವರಿಗೂ ಮಂಗಳವನ್ನು ಹಾಡುವುದರ ಮೂಲಕ ಹಾಲಿ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಬಹು ಜಾಗ್ರತೆಯಲ್ಲಿ ಜಯಪ್ರದವನ್ನುಂಟುಮಾಡಲೆಂದು ಸರ್ವಶಕ್ತನಾದ ದೇವರನ್ನು ಸಮಸ್ತರೂ ಸ್ತೋತ್ರಮಾಡಿ ಸಭೆಯನ್ನು ಮುಕ್ತಾಯಮಾಡಿದರು. ಮಕ್ಕಳಿಗೂ ಸಮಾಜದವರಿಗೂ ಫಲತಾಂಬೂಲಗಳು ಹಂಚಲ್ಪಟ್ಟವು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಗ್ರಾಂಟ್ ಸ್ಕೂಲ್ ಮಾಸ್ಟರುಗಳ ಗೋಳಾಟ.

ಅಯ್ಯಾ,—ನಮ್ಮ ಸರ್ಕಾರದವರು ಕನ್ನಡ ಲೋಯರ್ ಸೆ. ಪರೀಕ್ಷೆಯಲ್ಲಿ ಪ್ಯಾಸಾಗದೆಯೂ ಪ್ಯಾಸಾಗಿಯೂ ನಿರುದ್ಯೋಗಿಗಳಾಗಿರುವ ಬಡಬಗ್ಗರಿಗೆ ಜೀವನವನ್ನು ಕಲ್ಪಿಸುವುದಕ್ಕಾಗಿ ಗ್ರಾಂಟ್ ಸ್ಕೂಲ್ ವಿಚಾರವಾಗಿ ಸರ್ಕ್ಯುಲರ್ ಕೊಟ್ಟಿರುತ್ತಾರೆ. ಅದರ ಸ್ಕೂಲ್ ಮಾಡಲು ಅಡ್ಡಿ ಇಲ್ಲದೆಯೂ, ಭಾರಿ ಗ್ರಾಮವಲ್ಲದ ಸುಮಾರು 30-40 ಮನೆಗಳುಳ್ಳ ಗ್ರಾಮಗಳಿಗೆ ಗ್ರಾಂಟ್ ಮಂಜೂರು ಮಾಡುವುದಕ್ಕೂ, ತಕ್ಕಮಟ್ಟಿಗೆ 70-80 ಮನೆಗಳುಳ್ಳ ಸ್ಥಳಗಳಿಗೆ ಗ್ರಾಂಟ್ 7-8 ತಿಂಗಳಾದರೂ ಮಂಜೂರಾಗದೆಯೂ, ಮಂಜೂರಾಗಿರುವ ಸ್ಕೂಲುಗಳಿಗೆ 7-8 ತಿಂಗಳಾದರೂ ಸಂಬಳ ಬಾರದೆ ಇರುವುದೂ ನೋಡಿದರೆ ಈ ವಿಚಾರದಲ್ಲಿ ಎರಡು ವಿಧವಾದ ಸರ್ಕ್ಯುಲರ್ ಹುಟ್ಟಿದೆಯೋ ಏನೋ ಎಂದು ಊಹಿಸಬೇಕಾಗಿದೆ. ಗ್ರಾಮಸ್ಥರಾದರೋ ಮಾಷ್ಟರಿಗೆ ಸಂಬಳವಾಗಲಿ ದಿನಸಿಯಾಗಲಿ ಕೊಡಲು ಯೋಚಿಸುತ್ತಾರೆ. ಈ ರೀತಿ ಸರ್ಕಾರದವರಿಂದಲಾಗಲಿ ಗ್ರಾಮಸ್ಥರಿಂದಲಾಗಲಿ ಸಂಬಳ ಬಾರದೆ ಕುಗ್ರಾಮಗಳಲ್ಲಿ ವಾಸಮಾಡುವುದು ಇವರಿಗೆ ಅಸಾಧ್ಯವೆಂದು ಎಷ್ಟು ಸಾರಿ ಹೇಳಿದರೂ ತೀರದು ಅವರಲ್ಲಿ ಸಿಫಾರಸ್ಸಿರುವ ಕೆಲವರು 3ನೇ ವರ್ಗದ ತನಕ ವ್ಯಾಸಂಗಮಾಡಿ ಗ್ರಾಂಟ್ ಸ್ಕೂಲ್ ಮಾಡಿಕೊಂಡು ಸಂಬಳ ತೆಗೆದುಕೊಳ್ಳುತ್ತಿರುವುದೂ, ಲೋಯರ್ ಸೆ. ಫೆಯಿಲ್ ಆಗಿಯೂ ಪ್ಯಾಸಾಗಿಯೂ ಇರುವವರಿಗೆ ಎಲ್ಲಿಯೂ ಆರ್ಡರಾಗಲಿ ಸಂಬಳವಾಗಲಿ ಇಲ್ಲದಿರುವುದೂ ನೋಡಿದರೆ ಈ ಇಲಾಖೆಯಲ್ಲಿ ಕೆಲವರು ನಗುವವರು, ಕೆಲವರು ಅಳುವವರು ಎಂಬ ಮಾತು ನಿಜ್ಜವಾಗಿದೆ. ತಾವು ಬಡ ಗ್ರಾಂಟ್ ಸ್ಕೂಲ್ ಮಾಸ್ಟರುಗಳ ಗೋಳಾಟವನ್ನು ಸರ್ಕಾರದವರ ಗಮನಕ್ಕೆ ಬರುವಂತೆ ಮಾಡಿ ಧರ್ಮಭಾಗಿಗಳಾಗಬೇಕೆಂದು ಕೋರುವ ಬಿ. ಕೆ. ಎಸ್.

ಮದ್ಯಪಾಯಿಗಳಿಂದ ಪ್ರಯಾಣಿಕರಿಗೆ ಕಷ್ಟ.

ಅಯ್ಯಾ,—ಕೋಲಾರ ತಾಲ್ಲೂಕು ಹರಿಹರಪುರದ ಹೋಬಳಿ ನಿಲುವಾಗಿಲು ಗ್ರಾಮ, ಮಜರೆ ಕವಲಿಗೆರೆಹಟ್ಟಿ ಎಂಬುದೊಂದು ಸಣ್ಣ ಗ್ರಾಮ. ಇಲ್ಲಿ ಜನವಸತಿ ಇಲ್ಲದಿದ್ದಾಗ್ಯೂ ಇಲ್ಲಿ ಒಂದು ಸೇಂದಿ ದುಕಾನ್ ಸ್ಥಾಪಿಸಲ್ಪಟ್ಟಿರುವುದು. ಇದರ ಸಮೀಪದಲ್ಲಿ ನಿಲುವಾಗಿಲು, ಶ್ಯಾನಹಳ್ಳಿ, ಮೇಲು ಬೆಳ್ಳಿರೆಯೇ ಮುಂತಾದ ಗ್ರಾಮಸ್ಥರ ಒಕ್ಕಲುಗಳಲ್ಲಿ ಈ ದುಕಾನ್ ವ್ಯಾಪಾರಕ್ಕೆ ಅಗ್ರಗಣ್ಯರೆನಿಸಿಕೊಂಡ ಕೆಲವು ಜನರು ಅಲ್ಲಿ ಸೇರಿ ತಮ್ಮ ಹೆಚ್ಚಾದ ಬುದ್ಧಿ ಕುಶಲತೆಯನ್ನು ಈ ಅಂಗಡಿಯರಲ್ಲಿ ಮದ್ಯವನ್ನು ತೆಗೆದುಕೊಳ್ಳುವುದರಲ್ಲಿ ನಾನು ಹೆಚ್ಚು ತಾನು ಹೆಚ್ಚೆಂದು ತಮ್ಮ ತಮ್ಮ ಪ್ರತಾಪವನ್ನು ತೋರ್ಪಡಿಸಿಕೊಂಡು ತುಚ್ಛವಾದ ಮಾತಾಡುತ್ತಾ, ಸಮೀಪದಲ್ಲಿನ ರಸ್ತೆಯಲ್ಲಿ ಸಂಚಾರಮಾಡತಕ್ಕ ಬಡ ಪ್ರಯಾಣಿಕರ ಮೇಲೆ ತಮ್ಮ ಶಕ್ತಿಯನ್ನು ಪ್ರಯೋಗಿಸುತ್ತಾ, ಪ್ರಯಾಣಿಕರ ಹತ್ತಿರ ಇರುವ ವಸ್ತುಗಳು ಮತ್ತು ನಗದು ರೂಪಾಯಿಗಳನ್ನು ಬಲಾತ್ಕರಿಸಿ ಕಿತ್ತುಕೊಳ್ಳುವುದೊಂದು ದೊಡ್ಡ ಪದ್ಧತಿಯಾಗಿ ಪರಿಣಮಿಸುತ್ತಿದೆ. ಇಂಥಾ ಸಂಗತಿಗಳು ನಡೆಯುವುದು ಸರ್ಕಾರದವರ ತಿಳುವಳಿಕೆಗೆ ಬರುವುದಕ್ಕೆ ಕೇವಲ ಬಡ ಪ್ರಯಾಣಿಕರಿಗೆ ಅವಕಾಶವಿಲ್ಲದೇಲಿಯೋ, ಯಾತರಿಂದ ಬದುಕ್ತಾರೆಂಬುದು ಮತ್ತು ಈ ರೀತಿ ನಡೆದ 6-6 ಕೇಸುಗಳು ಬಲ್ಲಿ. ಇದರ ನ್ಯಾಯಸ್ಥಾನಕ್ಕೆ ಗುರಿಪಡಿಸಬೇಕೆಂದು ಪ್ರಯಾಣಿಕರ ಹಿತ್ಯೈಷಿಗಳು ಪ್ರಯತ್ನಿಸಿದ್ದಾಗ್ಯೂ ಬಡ ಪ್ರಯಾಣಿಕರ ಪರವಾಗಿ ಸಾಕ್ಷಿ ಹೇಳಲು ಊರಿನವರ ಹಕೋಟ ಬಿಡುವುದೋ ಇಂಥಾ ಸಂದರ್ಭಗಳಿಂದ ನ್ಯಾಯವಿಮರ್ಶೆಯು ಹೊರಪಡುವುದಕ್ಕೆ ತೊಂದರೆಯಾಗಿ ಕೇವಲ ಅನ್ಯಾಯವೇ ರಾಜ್ಯಸರೂಪ ಮೆರೆಯುತ್ತಿರುವುದು. ಸರ್ಕಾರದವರು ಇದನ್ನು ಗಮನಿಕೆಗೆ ತಂದುಕೊಂಡು, ಬಡ ಪ್ರಯಾಣಿಕರಿಗೆ ಅನುಕೂಲವಾಗುವಂತೆ ನ್ಯಾಯಸ್ಥಾಪನೆ ಮಾಡುತ್ತಾರೆಂದು ನಂಬುತ್ತೇನೆ.

ಒಬ್ಬ ಬಡ ಪ್ರಯಾಣಿಕರ ಅನುರಾಗಿ.

ಹಿರಾಂಪುರವೂ ನೀರಿನ ಕ್ಷಾಮವೂ.

ಅಯ್ಯಾ,—ಈಗ 2-3 ವಾರಗಳಿಂದ ಏನೂ ಮಳೆಯಿಲ್ಲ. ಭತ್ತ, ರಾಗಿ, ಕಬ್ಬು ಅತ್ಯಂತ ಕಷ್ಟವಾಗಿವೆ. ಮಳೆ ಇಲ್ಲದೆ ಒಣಗುತ್ತಿರುವದನ್ನು ನೋಡಿದರೆ ವ್ಯಸನವಾಗುತ್ತೆ. ಈ ರೀತಿ ನಷ್ಟವಾಗುತ್ತಿರುವುದನ್ನು ಅನುಭವಿಸುವ ಜಮೀನುದಾರನ, ರೈತನ ದುಃಖವು ಎಷ್ಟರಮಟ್ಟಿಗೆ ಇರಬಹುದು! ಇದಕ್ಕೋಸ್ಕರವೇ ಅಂಜನಾಪುರದ ಕೆರೆ ಆಗಬೇಕಾಗಿ 20 ವರುಷದಿಂದ ಸರಕಾರದಲ್ಲಿ ಬೇಡಿಕೊಂಡೆವು. ಇಂಥಾ ಸಂದರ್ಭದಲ್ಲಿ ಎಷ್ಟು ಅನುಕೂಲವಾಗುತ್ತಿತ್ತು! ಒಂದು ವರುಷ ಸರಿಯಾಗಿ ಬೆಳೆದರೆ ಮೂರನೇ ಎರಡು ವರುಷ ಸಕಾಲದಲ್ಲಿ ನೀರಿಲ್ಲದೆ ಫಸಲಿಲ್ಲ. ಈ ರೀತಿ ಆದರೆ ರೈತನು ಹ್ಯಾಗೆ ಏಳಿಗೆಗೆ ಬರಬೇಕು? ಯಾವ ಷೇರುಗಳಿಗಾದರೂ ಹಣ ಎಲ್ಲಿಂದ ತರಬೇಕು? ನಮಗೆ ರಸ್ತೆ ಬೇಡ, ಆಸ್ಪತ್ರೆ ಬೇಡ, ನೀರಾದರೆ ಸಾಕಾಗಿದೆ. ಅಷ್ಟು ವ್ಯಸನವಾಗಿದೆ. ನಮ್ಮ ದಿವಾನ್ ರವರು ಈ ಸಾರಿ ಇಲ್ಲಿಗೆ ದಯಮಾಡಿಸಿದ ಕಾಲದಲ್ಲಿ ನೀರಾವರಿ ಆಗಬೇಕಾದದ್ದು ಅವಶ್ಯಕವೆಂದೂ, ಕೆಲವು ಹಣ ಷೇರು ಮೂಲಕ ಭರ್ತಿಮಾಡಲು ಯೋಚಿಸಬೇಕೆಂದೂ ಅಪ್ಪಣೆ ಕೊಡಿಸಿದ್ದಕ್ಕೆ ಮ॥ ದೀಕ್ಷಿತರೇ ಮೊದಲಾದವರು ಸೋದೋಣ ವೆಂತ ಹೇಳಿದರು ಷೇರುಗಳಿಂದ ಈ ಹಣ ಭರ್ತಿಯಾಗುವುದುಂಟೇ? ಈಗ ತಾಲ್ಲೂಕಾ ಕಾವಳಿ ಜನರಲ್ಲಿ ರೈಟ್ಸ್ ಷೇರು ಬಗ್ಗೆ ಮ॥ ದೀಕ್ಷಿತರು ಮಹಪ್ರಯತ್ನಮಾಡುತ್ತಿರುವರಲ್ಲಾ! ಎಷ್ಟು ಲಕ್ಷ ಕೊಡಿಸು? ಈ ನೀರಾವರಿ ಷೇರಿಗೆ ತಾಲ್ಲೂಕಿನವರೆಲ್ಲರೂ ಯಾರೂ ಕೊಡುವುದಿಲ್ಲ. ನೀರು ಬೇಕೆಂಬ ಗ್ರಾಮಸ್ಥರು ಕೊಡಬೇಕು. ಅವರಿಗೆ ಈ ರೀತಿ ಫೇಲ್ ಆದರೆ ಎಲ್ಲಿಂದ ತರಬೇಕು? ಸರಕಾರದವರ ಕೃಪೆ ನಮ್ಮ ಮೇಲೆ ಯಾಕೆ ಬರಲೊಲ್ಲದು? ನಾವು ಏನು ಅಪರಾಧ ಮಾಡಿರುತ್ತೇವೆ? ಇದೆಲ್ಲಾ ಪತ್ರಿಕೆಯಲ್ಲಿ ಯಾಕೆ, ಅರ್ಜಿ ಬರೆದುಕೊಳ್ಳಬೇಕೆಂತ ನಮ್ಮ ಎಡಿಟರವರೂ ಜನರೂ ಹೇಳಬಹುದು. ನಾವು ಅನುಭವಿಸುತ್ತಿರುವ ದುಃಖದಲ್ಲಿ ತಾವೂ ಪಶ್ಚಾತ್ತಾಪಭಾಗಿಗಳಾದಲ್ಲಿ ನಮ್ಮ ಇಷ್ಟಾರ್ಥವು ನೆರವೇರಲಿಕ್ಕೆ ಸಹಕಾರಿಯಾದೀತೆಂಬ ಆಶೆ ನಮ್ಮನ್ನು ಬಾಧಿಸುತ್ತದೆ. ಅಂಜನಾಪುರದ ಹತ್ತಿರ ಕೆರೆಗೆ ಸಾಧನವಿಲ್ಲದಿದ್ದರೆ ಅನೆಕಟ್ಟು ಆದರೆ ಸಾಕು. ನಾಲಾ ಮೂಲಕ ದೊಡ್ಡ ಕೆರೆಗಳಿಗೆ ನೀರು ಬಿಟ್ಟುಕೊಂಡು ಪ್ರಾಣವನ್ನು ಕಾಪಾಡಿಕೊಳ್ಳಬಹುದೆಂಬುದೇ ನಮ್ಮ ಪ್ರಾರ್ಥನೆ. ಬಾತ್ಮಿದಾರ್.

ನಂಜುಂಡಸ್ವಾಮಿ, ಹರದನಹಳ್ಳಿ:—ನೀವು ಅದನ್ನು ಯಾವ ಪತ್ರಿಕೆಯಲ್ಲಿ ಓದಿದಿರೋ ಆ ಪತ್ರಿಕೆಗೆ ಬರೆಯುವುದು ಒಳ್ಳೇದು.

ಡಿ. ಎಸ್. ವೆಂಕಟಪ್ಪ; ವಿದ್ಯಾರ್ಥಿ, ಅನೇಕಲ್ಲು; ಕೆ. ಹನುಮಂತರಾವ್, ಬೆಂಗಳೂರು ಸಿಟಿ; ಮೋಕ್ಷಾಭಿಮಾನಿ, ಶೃಂಗೇರಿ; ಹೊಳಲ್ಕೆರೆ ವರ್ತಮಾನ:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಶೃಂಗೇರಿಯ ಶಾರದಾ ಬ್ಯಾಂಕು ತೃಪ್ತಿಕರವಾಗಿ ಕೆಲಸಮಾಡುವುದಿಲ್ಲವೆಂದು ಮುಂತಾಗಿ "ನ್ಯಾಯವಾದಿ" ಎಂಬ ಬಾತ್ಮಿದಾರರು ಆಕ್ಷೇಪಣೆಮಾಡಿ ಬರೆದಿದಾರೆ. ಬ್ಯಾಂಕಿನ ಜನರಲ್ ಮೀಟಿಂಗಿನಲ್ಲಿ ಷೇರುದಾರರು ಅಂಥಾ ಕೊರತೆಗಳನ್ನು ಪರಿಹರಿಸಿಕೊಳ್ಳುವ ಏರ್ಪಾಡು ಮಾಡಿಕೊಳ್ಳಬಹುದಾಗಿದೆ. ಈ ಆಕ್ಷೇಪವನ್ನು ಪ್ರಕಟಿಸಿ ಫಲ ಕಾಣುವುದಿಲ್ಲ.—ಎಡಿ.]

ತಾಲ್ಲೂಕು ವರ್ತಮಾನಗಳು.

ಗುಬ್ಬಿ.—ಈ ಪ್ರಾಂತ್ಯ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಹೋಗುತ್ತಿವೆ. ರೈತರೆಲ್ಲಾ ಆಕಾಶವನ್ನು ನೋಡಿ ಬೇಸತ್ತರು. ತುಂಬಾ ಹೆದರುತ್ತಿದಾರೆ.—ಗುಬ್ಬಿ ಗ್ರಾಮದಿಂದ ಸಿಂಗಾನಹಳ್ಳಿ ವರೆಗೆ ಶಂಬುಲಿಂಗಪ್ಪನವರ ಪಿತಾಮಹರು ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಸಾಲುಮರಗಳನ್ನು ಹಾಕಿಸಿದ್ದರಂತೆ. ಮರಗಳೇನೋ ದೊಡ್ಡದಾಗಿವೆ. ಆದರೆ ಮೇಕೆ ಕಾಯುವವರು ಆ ಸಾಲುಮರಗಳನ್ನೆಲ್ಲಾ ಬೋಳುಮಾಡಿದಾರೆ. ಇವರ ಬಂದೋಬಸ್ತು ಇವರೇ ಮಾಡಬೇಕೇ? [ ]ವರು ಮಾಡಬೇಕೇ? ನ್ಯಾಯವಾಗಿ ಸರ್ಕಾರದವರೇ ಮಾಡಬೇಕಾಗಿದೆ. ಪ್ರತಿ ನಿತ್ಯವೂ ಮೇಕೆ ಕಾಯುವವರು ಈ ಸಾಲುಮರಗಳಿಗೆ ಹೋಗದೆ ಇರುವದಿಲ್ಲ. ಅನ್ಯಾಯವಾಗಿ ಸಾಲುಮರಗಳು ಹಾಳಾಗುತ್ತವೆ. ಈಗ ಹೊಸದಾಗಿ ದಯಮಾಡಿಸಿರುವ ಅಮಲ್ದಾರ್‌ರವರು ಪಟೇಲ್ ಶ್ಯಾನುಭೋಗರಿಗಾಗಲೀ ಪೋಲೀಸಿನವರಿಗಾಗಲೀ ಅಪ್ಪಣೆ ಕೊಟ್ಟು ಕೆಲವರಿಗೆ ಶಿಕ್ಷೆ ಮಾಡಿದರೆ ಮುಂದಕ್ಕಾಗಿ ಅದು ನಿಂತುಹೋಗುವುದು. ಮತ್ತು ಬಡ ಪ್ರಯಾಣಿಕರಿಗೆ ಲಭ್ಯವಾಗುವ ಅನುಕೂಲದಲ್ಲಿ ಸ್ಥಳಾಧಿಕಾರಿಗಳಿಗೂ ಶ್ರೇಯಸ್ಸಾಗದಿರಲಾರದು.

ದೊಡ್ಡಬಳ್ಳಾಪುರ.—ಈ ಊರಿಗೆ 2½ ಮೈಲಿ ದೂರದಲ್ಲಿರುವ ಮಿಸೆಸ್ ಚಿಪ್ಪೆಸ್ ಧರ್ಮಸಾಸಯರ ತೋಟದಲ್ಲಿ ಕಳೆದ ಅಮಾವಾಸ್ಯೆ ರಾತ್ರಿ ಯಾರೋ ಇವರ ದನಕರುಗಳು ಕಟ್ಟುವ ಸ್ಥಳವನ್ನು ತೀದಿರುವ ಪ್ರಾಯಶಃ ಸುತ್ತಮುತ್ತಣ ಮಾದಿಗರಲ್ಲಿ ಕೆಲವರು ಇವರ ಎರಡು ಎಮ್ಮೆಗಳನ್ನು ಎರಡು ಎತ್ತುಗಳನ್ನು ದನಗಳ ಕೊಟ್ಟಿಗೆಯಿಂದ ಇವರ ತೋಟದ ಆಚೆಗೆ ಹೊಡೆದುಕೊಂಡು ಹೋಗಿ ಕೊಂದು ಅವುಗಳ ಚರ್ಮವನ್ನೂ ಬೇಕಾದಷ್ಟು ಮಾಂಸವನ್ನೂ ತೆಗೆದುಕೊಂಡು ಹೋಗಿರುವ ಸಂಗತಿ ಪೊಲೀಸ್ ಆಫೀಸಿಗೆ ವರದಿಯಾಗಿದೆ.—ಈ ಊರಲ್ಲಿ ಪ್ಲೇಗ್ ಕೇಸುಗಳಾಗುತ್ತಲೇ ಇದೆ. ಬೆಂಗಳೂರಿಂದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಮ॥ ಮುತ್ತುಸಾಮಿದಾಸ್‌ಯವರು ಕಳೆದ ವಾರ ಇಲ್ಲಿಗೆ ಬಂದು ಇನಾಕ್ಯುಲೇಷನ್ ಮಾಡಿದರು ಈ ವರೆಗೆ 3,000 ಜನರ ಮೇಲೆ ಪ್ಲೇಗ್ ಔಷಧ ಹಾಕಿಸಿಕೊಂಡಿರುತ್ತಾರೆ. ನಗರ್ತರೂ ವೈಶ್ಯರೂ ಉದ್ಯೋಗಸ್ಥರೂ ಊರುಬಿಟ್ಟಿದ್ದಾಯಿತು. ಊರೆಲ್ಲಾ ಸೋಂಕು ವ್ಯಾಪಿಸಿರುವುದರಿಂದ ದೇವಾಂಗದವರೂ ಮುಸಲ್ಮಾನರೂ ಇತರರೂ ಕೊಂಚಕಾಲಕ್ಕೆ ಗ್ರಾಮ ಬಿಡಲೇ ಬೇಕಾಗಿದೆ.—ವೆಸ್ಲಿಯನ್ ಮಿಷನ್ ಘನ ಎಡ್ವರ್ಡ್ ಬೋಧಕರು ಕಳೆದ ವಾರ ಇಲ್ಲಿಗೆ ಬಂದು ಇಲ್ಲಿರುವ ಕ್ರೈಸ್ತರನ್ನೆಲ್ಲಾ ಪರ್ಯಾಲೋಚಿಸಿ ವಾಪಸು ಬೆಂಗಳೂರಿಗೆ ದಯಮಾಡಿದರು.—ಈ ಪ್ರಾಂತ್ಯ ಮಳೆ ಸುತರಾಂ ಬಾರದೆ ಬೇಸಿಗೆಕಾಲದಂತೆ ಬಿಸಿಲು ಧಗೆ ಜೋರಾಗಿದೆ. ಪೈರುಗಳೆಲ್ಲಾ ಬಾಡಿಹೋದವು. ರಾಗಿ ಧಾರಣೆ 16 ಸೇರಾಗಿದೆ. ಇನ್ನು ಒಂದೆರಡು ವಾರಗಳಲ್ಲಿ ಮಳೆ ಬಾರದೆಹೋದರೆ ಈ ವರ್ಷದ ಫಸಲು ಕೈಸೇರಲಾರದು.

ಅರಕಲಗೂಡು ತಾ॥ ಹುಲಿಕಲ್ಲು.—ತಾ. 11 ರಲ್ಲಿ ಇದೇ ಗ್ರಾಮದಲ್ಲಿ ಸ್ಥಾಪಿತವಾಗಿರುವ ಕೋಆಪರೇಟಿವ್ ಸೊಸೈಟಿ ವಿಷಯವಾಗಿ ಇದೇ ಗ್ರಾಮದ ಪಾಠಶಾಲೆಯಲ್ಲಿ ಮೀಟಿಂಗ್ ನಡೆಯಿತು. ಈ ಸಭೆಗೆ ಮ॥ ನಾಗಶೇಷಣ್ಣ ಪಂಡಿತರು ಅಧ್ಯಕ್ಷತೆಯನ್ನು ವಹಿಸಿ, ಜನಗಳಿಗೆ ಕೋಆಪರೇಟಿವ್ ಸೊಸೈಟಿಯಿಂದ ಆಗತಕ್ಕ ಅನುಕೂಲಗಳನ್ನು ಕುರಿತು ತುಂಬಾ ರಮ್ಯವಾಗಿ ಲೆಕ್ಚರ್ ಕೊಟ್ಟು, ಜನಗಳಿಗೆ ಧೈರ್ಯವನ್ನೂ ಸಂತೋಷವನ್ನೂ ಉಂಟುಮಾಡಿದರು. ಗ್ರಾಮಾಭಿವೃದ್ಧಿ ವಿಷಯವಾಗಿಯೂ ಲೆಕ್ಚರ್‌ಕೊಟ್ಟರು. ನಂತರ ಮ॥ ಪಾಠಶಾಲಾ ಪಂಡಿತರು ವೇ॥ ಶಾಸ್ತ್ರಿ ರಂಗಾಚಾರ್ಯ ಧರ್ಮವೆಂಬ ವಿಷಯವಾಗಿ ತುಂಬಾ ಕಷ್ಟಪಟ್ಟು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು.—ತರುವಾಯ ಪ್ರತಿ ಸೋಮವಾರದಲ್ಲೂ ಮೆಂಬರುಗಳೂ ಗ್ರಾಮಸ್ಥರೂ ಸೇರಿ ಮೀಟಿಂಗ್‌ಮಾಡುವುದಾಗಿ ತೀರ್ಮಾನಮಾಡಿ ಸಭೆ ಮುಕ್ತಾಯಮಾಡಿದರು. ಈ ಗ್ರಾಮಕ್ಕೆ ದೊಡ್ಡಮನುಷ್ಯರು ಬರುವುದಕ್ಕೆ ರಸ್ತೆ ಇಲ್ಲದೆ ತುಂಬಾ ಅನನುಕೂಲವಾಗಿರುತ್ತೆ. ಸರ್ಕಾರದವರು ಅರಕಲಗೂಡಿನಿಂದ ಮಗ್ಗೇ ಮೇಲೆ ಹೋಗಿರುವ ರಸ್ತೆಗೆ ಸೇರಿಸಿ ನಮ್ಮೂರಿಗೂ ರಸ್ತೆ ಮಾಡಿಸಬಹುದು. ಸುಮಾರು ನಾಲ್ಕು ಮೈಲಿ ಆಗುತ್ತೆ.—ಈ ಗ್ರಾಮವು ತುಂಬಾ ಭಾರಿ ಗ್ರಾಮ. ಇಲ್ಲಿಗೆ ಅನೇಕ ಕಾಗದಗಳೂ ಮಣಿಆರ್ಡರುಗಳೂ, ವಿ. ಪಿ. ಗಳೂ ಬರುತ್ತವೆ. ಇಲ್ಲಿಗೆ ವಿಲೇಜ್ ಪೋಸ್ಟ್‌ಮನ್ ವಾರಕ್ಕೆ 1-2 ದಫಾ ಬರುತ್ತಾನೆ. ಕಾಲಕ್ಕೆ ಸರಿಯಾಗಿ ಕಾಗದಗಳು ಜಾವತಿ ಆಗುವುದಿಲ್ಲ. ಇದರಿಂದ ಆ ಇಲಾಖೆಯವರು ಇಲ್ಲಿಗೆ ಒಂದು ಪೋಸ್ಟ್ ಆಫೀಸನ್ನು ಇಡಿಸಿಕೊಟ್ಟರೆ ತುಂಬಾ ಅನುಕೂಲವಾದೀತು.

ಶ್ರೀರಂಗಪಟ್ಟಣದ ತಾ॥ ಕ್ಯಾತನಹಳ್ಳಿ.—ಮಳೆ ಸುತರಾಂ ಇಲ್ಲ. ರಾಗಿ ಬೆಳಸು ಚೆನ್ನಾಗಿದೆ. ಬತ್ತದ ನಾಟಿ ಇನ್ನೂ ಮುಗಿದಿಲ್ಲ.—ಈ ಊರಿನ ವಿದ್ಯಮಾನಗಳನ್ನು ನೋಡಿದರೆ ಕಾರ್ಯತಃ ಇದುವರೆಗೆ ಯಾರೂ ಗ್ರಾಮಾಭಿವೃದ್ಧಿಯ ಮೇಲೆ ಲಕ್ಷ್ಯವಿಟ್ಟಿರುವಂತೆ ಕಾಣುವುದಿಲ್ಲ. 800-900 ಮನೆಗಳುಳ್ಳ ಪ್ರಸಿದ್ಧಿಯಾದ ಗ್ರಾಮವಾಗಿದ್ದರೂ ಯೂನಿಯನ್ ವಿಚಾರದಲ್ಲಿ ಈ ಊರಿನಷ್ಟು ಹಿಂದುಳಿದಿರುವ ಗ್ರಾಮವು ಮತ್ತೊಂದಿಲ್ಲವೆಂದು ಹೇಳಬಹುದು. ಮೆಂಬರುಗಳು ನಾಮ ಮಾತ್ರಕ್ಕೆ ಒಡೆಯರಾಗಿರುತ್ತಾರೆ. ಗ್ರಾಮಕ್ಕೆ ತಕ್ಕ ಸೌಲಭ್ಯಗಳನ್ನು ಉಂಟುಮಾಡುವುದಕ್ಕೆ ಯಾರೂ ಪ್ರಯತ್ನಪಡದೆ ಇರುವುದೂ, ಅಧಿಕಾರಿಗಳ ಗಮನವು ಇಂಥಾ ಗ್ರಾಮಕ್ಕೆ ತಿಂಗಳಿಗೆ ಒಂದು ವೇಳೆಯಾದರೂ ಬೀಳದೆ ಇರುವುದೂ ಶೋಚನೀಯವೇ ಸರಿ. ಈ ಗ್ರಾಮಕ್ಕೆ ತಿಂಗಳಿಗೆ ಒಂದು ವೇಳೆ ಅಮಲ್ದಾರ್ರು ಬಂದು ಮೀಟಿಂಗ್ ಮಾಡುವುದು ಪದ್ಧತಿ. ಇದನ್ನು ಮ॥ ಗುಲಾಂ ಮಹಮದ್ ಮೆಕ್ಕೆಯವರ ತರುವಾಯ ಬಂದವರ್ಯಾರೂ ನಿಗಾ ವಹಿಸದೆ ಇರುವುದು ಆಶ್ಚರ್ಯ.—ಈ ಊರಿನಲ್ಲಿ ಕೆಲವು ದಿನಗಳ ಕೆಳಗೆ ಒಂದು ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ ಪ್ರಾರಂಭವಾಯಿತೆಂದು ಕೇಳಿದೆ. ಇದು ಎಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದಿರುತ್ತದೋ, ಎಲ್ಲಿ ಸ್ಥಾಪಿಸಲ್ಪಟ್ಟಿದೆಯೋ ಗೊತ್ತಿಲ್ಲ. ಹೀಗೆ ಕಾಮಕವಾಗಿ ನಡೆಯುವುದು ತೃಪ್ತಿಕರವಾಗಿಲ್ಲವೆಂದು ತೋರುತ್ತದೆ.—ಪೋಸ್ಟಾಫೀಸ್ ಪ್ರತಿ ದಿವಸ ಟಪ್ಪಾಲು ಬರದೆ ನಮಗೆ ಸಕಾಲಕ್ಕೆ ಕಾಗದ ತಲುಪದೆ ಇರುವುದು ಬಹಳ ತೊಂದರೆಯಾಗಿರುತ್ತೆ.—ಈ ಊರಿಗೆ ಸಂತೆ ಏರ್ಪಾಡು ಆಗಲಿಲ್ಲ.

ಮಾಗಡಿ.—ಇಲ್ಲಿ ಮಳೆಯಿಲ್ಲದೆ ಪೈರುಗಳೆಲ್ಲಾ ಒಣಗುತ್ತಾ ಕೆರೆ, ಬಾವಿ, ಕೊಳಗಳಲ್ಲಿ ನೀರು ಬತ್ತಿಹೋಗುತ್ತದೆ. ಸಿಕ್ಕಿಯಾದರೋ ಸಹಿಸಲಸಾಧ್ಯ. ನೀರಿನ ಕಷ್ಟ ಹೇಳತೀರದು. ಈ ಊರಿಗೆ ಕೆರೆಯ ನೀರೇ ಆಧಾರಭೂತವಾದುದು. ಅದಕ್ಕೆ ಈ ಮಳೆಗಾಲದಲ್ಲಿ ಒಂದು ತೊಟ್ಟು ನೀರೂ ಬಂದಿಲ್ಲ. ಕೆರೆಯಲ್ಲಿ ಪಾಚಿಯೂ ಅತ್ತಳಗಿಡ ಎಂಬ ಸೊಪ್ಪು ಬೆಳೆದು ನೀರು ಕೆಟ್ಟುಹೋಗುವುದರಲ್ಲಿದೆ. ಸರ್ಕಾರದವರು ಆ ಪಾಚಿಯನ್ನು ತೆಗಿಸಿದರೆ ಪಾನಾರ್ಹವಾಗಿ ನಿರ್ಮಲವಾಗುತ್ತದೆ.—ಈ ಊರು ನವನಾಗರಿಕತೆಗೆ ಮುಖ್ಯಸ್ಥಾನವಾದ ಬೆಂಗಳೂರಿಗೆ ಸಮೀಪದಲ್ಲಿದ್ದರೂ ಇಲ್ಲಿ ಜನರ ಪುರೋವೃದ್ಧಿಗಾಗಿ ಯಾವ ವಾಚಕಶಾಲೆಯಾಗಲಿ ಇಲ್ಲ. ಸಂಪದಭಿವೃದ್ಧಿ ಶಾಖೆಯವರಾಗಲಿ, ತಾಲ್ಲೂಕು ಪ್ರೋಗ್ರೆಸ್ ಕಮಿಟಿಯವರಿಂದಾಗಲಿ, ಈ ವಿಷಯದಲ್ಲಿ ಗಮನಕೊಟ್ಟಿಲ್ಲ. ಈಗಿರುವ ಅಮಲ್ದಾರರಾದ ಮ॥ ರಾಜಾರಾಯರು ಪ್ರಜಾನುರಾಗಿಗಳು, ನ್ಯಾಯೈಕಪರರು. ಇವರು ಈ ನ್ಯೂನತೆಯನ್ನು ಹೋಗಲಾಡಿಸುವರೆಂದು ನಂಬಿದೇನೆ.—ನಮ್ಮ ಎ. ವಿ. ಸ್ಕೂಲಿನ ಹೆಡ್ ಮಾಸ್ಟರೂ ಅನೇಕ ಗ್ರಂಥಕರ್ತೃಗಳೂ ಚಿರಸ್ಮರಣೀಯರೂ ಆದ ಮ॥ ಕೆ. ರಾಮಸ್ವಾಮಯ್ಯಂಗಾರ್ರು ಶ್ಯಾಮಗೊಂಡ್ಲಿಗೆ ವರ್ಗಹೊಂದಿ ಹೋಗಿ ಒಂದು ತಿಂಗಳಾಯಿತು. ಅವರ ಬದಲಿ ಇನ್ನೂ ಯಾರೂ ಬಂದಿಲ್ಲ. ನೈಟ್ ಸ್ಕೂಲ್ ಅಭಿವೃದ್ಧಿಸ್ಥಿತಿಯಲ್ಲಿದೆ.—ಮೊನ್ನೆ ಸೋಮೇಶ್ವರಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು. ಆ ದೇವಸ್ಥಾನವು ಈ ಊರ ಪಾಳೆಯಗಾರ ಕೆಂಪೇಗೌಡನಿಂದ ಕಟ್ಟಲ್ಪಟ್ಟು ಬಹಳ ಶಿಥಿಲವಾಗಿ ಚರಿತ್ರಾರ್ಹವಾಗಿದೆ. ನಮ್ಮ ಸರ್ಕಾರದವರು ಅದನ್ನು ರಿಪೇರಿ ಮಾಡಿಸಿ ಕೆಂಪೇಗೌಡನ ಹೆಸರನ್ನು ಶಾಶ್ವತಪಡಿಸುವರೆಂದು ನಂಬಿದೇನೆ.

ಅರಕಲಗೂಡು.—ಈ ಊರಿನಲ್ಲಿ ಎಂಟು ದಿನಗಳಿಂದಲೂ ಮಳೆ ಇಲ್ಲ; ಬಿಸಿಲು ಚೆನ್ನಾಗಿ ಕಾಯುತ್ತಲಿದೆ ಧಾರಣೆಗಳು ಕೆಲವು ದಿನಗಳ ನಂತರ ಕಡಮೆಯಾಗುವಂತಿದೆ.—ಇಲ್ಲಿಗೆ ಹೊಸದಾಗಿ ಬಂದಿರುವ ಅಮಲ್ದಾರ್ರು ಬಹಳ ಒಳ್ಳೇಯವರು; ಪ್ರಜಾಪಕ್ಷದವರಂತೆ ಕಾಣುತ್ತದೆ. ಇವರಿಗೆ ಟೆನ್ನಿಸ್, ರೀಡಿಂಗ್ ರೂಂ ಮೊದಲಾದುವುಗಳ ವಿಚಾರದಲ್ಲಿ ಬಹಳ ಪ್ರೀತಿ ಇದೆ.—ಇಲ್ಲಿ ಮೊದಲು ಸ್ಕೂಲು ಕಾಂಪೌಂಡಿನಲ್ಲಿದ್ದ ಟೆನ್ನಿಸ್ ಗ್ರೌಂಡನ್ನು ಹಿಂದಿದ್ದ ಅಮಲ್ದಾರ್ರು ಹುಲ್ಲು ಬೆಳೆಯಲು ಬಿಟ್ಟಿದ್ದರು. ಈಗ ಇವರು ಬಂದ ಮೇಲೆ ಟೆನ್ನಿಸ್ ಕೋರ್ಟು ಇಲ್ಲದ್ದನ್ನು ನೋಡಿ ರೀಡಿಂಗ್ ರೂಮಿನ ಪಕ್ಕದಲ್ಲಿ ತಮ್ಮ ಸ್ವಂತ ಖರ್ಚಿನಿಂದ ಟೆನ್ನಿಸ್ ಗ್ರೌಂಡನ್ನು ಮಾಡಿಸುತ್ತಾ ಇರುವುದು ಬಹಳ ಸಂತೋಷಕರವಾಗಿದೆ. ಇದಲ್ಲದೆ ರೀಡಿಂಗ್ ರೂಮಿನ ವಿಚಾರದಲ್ಲಿ ಮೀಟಿಂಗ್ ಮಾಡಿ ಇನ್ನೂ ಚಂದಾದಾರರನ್ನು ಹೆಚ್ಚಿಸಿ ನೂತನವಾದ ಪೇಪರುಗಳನ್ನು ತರಿಸಿ ಅಭಿವೃದ್ಧಿ ಮಾಡಬೇಕೆಂದು ಇದಾರೆ. ಇವರ ಲಗ್ನಕ್ಕಾಗಿ ಇಷ್ಟರಲ್ಲೇ ಕೆಲವು ಕಾಲ ರಜದ ಮೇಲೆ ಹೋಗುವರಾಗಿ ವದಂತಿ ಇದೆ.—ಮತ್ತು ಇಲ್ಲಿಯ ಸಬ್ ರೆಜಿಸ್ಟ್ರಾರ್ರು ರಜದ ಮೇಲೆ ಇರುವದರಿಂದ ಇವರ ಬದಲಿಗೆ ಹಾಲಿ ಬಂದಿರುವ ಮ॥ ಸಿ. ಲಕ್ಷ್ಮಣರಾಯರು ಈ ಊರಿನ ಸುತ್ತಮುತ್ತಲಿರುವ ಹಳ್ಳಿಗಳಿಗೆ ಪ್ರತಿನಿತ್ಯವೂ ಹೋಗಿ ಅಲ್ಲಿ ಹಳ್ಳಿ ಪಟೇಲರ ಮೂಲಕ ಜನಗಳನ್ನು ಗುಂಪು ಕೂಡಿಸಿ, ಉಪನ್ಯಾಸಮಾಡಿ ಅವರಿಗೆಲ್ಲಾ ಓದು ಕಲಿಯುವ ಹಾಗೆ ಪ್ರೋತ್ಸಾಹಪಡಿಸಿ ಕನ್ನಡ ಪೇಪರುಗಳನ್ನು ತರಿಸಿಕೊಟ್ಟು ಅವರನ್ನು ಅಭಿವೃದ್ಧಿ ಸ್ಥಿತಿಗೆ ತರುವುದರಲ್ಲಿರುತ್ತಾರೆ. ಇವರ ಉಪಕಾರವು ಅಷ್ಟಿಷ್ಟೆಂದು ತಿಳಿಯಲಾಗದು.—ಕಳೆದ ಐದು ವರುಷಗಳಿಂದಲೂ ಈ ಊರಿನ ಎ. ವಿ. ಸ್ಕೂಲಿನಲ್ಲಿ ಅ॥ ಮಾಸ್ಟರಾಗಿದ್ದ ಮ॥ ತಿಮ್ಮಪ್ಪಯ್ಯನವರು ಕಳೆದ ವಾರ ಮೂಡಿಗೆರೆ ಎ. ವಿ. ಸ್ಕೂಲಿಗೆ ಹೆಡ್ ಮಾಸ್ಟರ್ ಕೆಲಸಕ್ಕೆ ವರ್ಗಮಾಡಲ್ಪಟ್ಟರು. ಇವರು ಬಹಳ ದೊಡ್ಡ ಮನುಷ್ಯರು. ಜನಗಳ ಅನುರಾಗಕ್ಕೆ ಪಾತ್ರರು. ಇವರು ಇಲ್ಲಿ ಸ್ಕೂಲಿಗೆ ಬಂದಾರಭ್ಯ ವಿದ್ಯಾರ್ಥಿಗಳು ಬಹಳ ಅಭಿವೃದ್ಧಿಗೆ ಬಂದಿದ್ದರು. ಇವರು ಇಲ್ಲಿ ರೀಡಿಂಗ್ ರೂಮಿಗೂ, ಥಿಯೊಸಾಫಿಕಲ್ ಲಾಡ್ಜಿಗೂ ಸೆಕ್ರೆಟರಿಯಾಗಿದ್ದು ಬಹಳ ಉಪಕಾರವನ್ನು ಮಾಡಿದ್ದರು. ಪದೇ ಪದೇ ಉಪನ್ಯಾಸಗಳನ್ನು ಮಾಡಿ ಅನೇಕ ಸಂಗತಿಗಳನ್ನು ತಿಳಿಸುತ್ತಿದ್ದರು.

ರಾಜಧಾನಿಯ ಮ್ಯುನಿಸಿಪಲ್ ಮೆಂಬರುಗಳ ಚುನಾವಣೆಯು.

ಕಳೆದ 16 ನೇ ತಾ. ಸೋಮವಾರದಿಂದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯನ್ನು ವೈಸ್ ಪ್ರಸಿಡೆಂಟ್ ಮ|| ಜಿ. ನಾರಾಯಣ ರಾಯರು ಎಲ್ಲಾ ಮೊಹಲ್ಲಾಗಳಲ್ಲೂ ಖುದ್ದಾಗಿ ನಡೆಸಿದರು. ಗುರುವಾರ ಮಧ್ಯಾಹ್ನ ಮ್ಯುನಿಸಿಪಲ್ ಪ್ರಸಿಡೆಂಟರು ಕೌನ್ಸಿಲರುಗಳನ್ನೆಲ್ಲಾ ಕರಸಿಕೊಂಡು ಸ್ಪೆಷಲ್ ಮೀಟಿಂಗಿನಲ್ಲಿ ಚುನಾವಣೆಯ ಫಲಿತಾಂಶಗಳನ್ನು ಎಣಿಕೆ ಮಾಡಿಸಿ ಪ್ರಕಟಿಸಿದರು. ಈ ಸಲ ಚುನಾವಣೆಯ ಕಾರ್ಯಗಳು ಕ್ರಮದಿಂದಲೂ ತೃಪ್ತಿಕರವಾಗಿಯೂ ನಡೆದವು. ಈ ಸಲ ಎರಡು ಮೊಹಲ್ಲಾಗಳ ಹೊರತು ಉಳಿದ ಐದು ಮೊಹಲ್ಲಾಗಳಲ್ಲೂ ಚುನಾವಣೆಯ ಹೋರಾಟವೂ ದರಖಾಸ್ತುದಾರರ ಸ್ಪರ್ಧೆಯೂ ವಿಶೇಷವಾಗಿತ್ತು. ಆಯಾ ಮೊಹಲ್ಲಾಗಳ ಫಲಿತಾಂಶವನ್ನು ಇಲ್ಲಿ ತಿಳಿಸುತ್ತೇವೆ:—

ಲಷ್ಕರ್ ಮೊಹಲ್ಲಾಯಲ್ಲಿ ಮಿ|| ಮಹಮದ್ ಸೇಟರಿಗೆ 207 ಓಟುಗಳು, ಮ|| ಅನಂತರಾಜಯ್ಯನವರಿಗೆ 183 ಓಟುಗಳು, ಮ|| ಎನ್. ಶಿವರಾಜರಾಯರಿಗೆ 78 ಓಟುಗಳು ದೊರಕಿದವು. ಆದಕಾರಣ ಮೊದಲನೇ ಇಬ್ಬರು ಕೌನ್ಸಿಲರಾದರು.—ಮಂಡಿ ಮೊಹಲ್ಲಾದಲ್ಲೂ, ಚಾಮರಾಜ ಮೊಹಲ್ಲಾದಲ್ಲೂ ಒಬ್ಬೊಬ್ಬರೇ ದರಖಾಸ್ತುದಾರರಿದ್ದದ್ದರಿಂದ ಮೊದಲನೆಯದಕ್ಕೆ ಮ|| ಜವರೇಗೌಡಪ್ಪನವರಿಗೆ 91 ಓಟುಗಳೂ, ಎರಡನೆಯದಕ್ಕೆ ಮ|| ಎಂ. ವೆಂಕಟಕೃಷ್ಣಯ್ಯನವರಿಗೆ 79 ಓಟುಗಳೂ ದೊರಕಿ ಅವರಿಬ್ಬರೂ ಆಯಾ ಮೊಹಲ್ಲಾಗಳ ಕೌನ್ಸಿಲರಾದರು.—ದೇವರಾಜ ಮೊಹಲ್ಲಾಯಲ್ಲಿ ದರಖಾಸ್ತುದಾರರಾಗಿದ್ದ ಮೂರು ಮಂದಿಯ ಪೈಕಿ ಮ|| ಟಿ. ನಂಜುಂಡಯ್ಯನವರಿಗೆ 86 ಓಟುಗಳೂ, ಮ|| ಟಿ. ಕೃಷ್ಣಪ್ಪನವರಿಗೆ 80 ಓಟುಗಳೂ, ಮ|| ಎ. ಸುಬ್ಬಣ್ಣನವರಿಗೆ 74 ಓಟುಗಳೂ ದೊರೆತದ್ದರಿಂದ ಮೊದಲನೇ ಇಬ್ಬರು ಕೌನ್ಸಿಲರಾದರು.—ಕೃಷ್ಣರಾಜ ಮೊಹಲ್ಲಾಯಲ್ಲಿ ಮ|| ಕೆ. ಶ್ರೀಕಂಠಯ್ಯನವರಿಗೆ 94 ಓಟುಗಳೂ, ಮ|| ಜಿ. ಶ್ರೀನಿವಾಸ ಜೋಯಿಸರಿಗೆ 31 ಓಟುಗಳೂ ದೊರಕಿದ್ದರಿಂದ ಮೊದಲನೆಯವರು ಕೌನ್ಸಿಲರಾದರು.—ನಜರಬಾದು ಮೊಹಲ್ಲಾಯಲ್ಲಿ ಮ|| ತಿರುವೆಂಗಡ ಮೊದಲಿಯಾರ್ರಿಗೆ 34 ಓಟುಗಳೂ, ಮ|| ರಂಗಯ್ಯನವರಿಗೆ 14 ಓಟುಗಳೂ ದೊರಕಿ, ಮೊದಲನೆಯವರು ಕೌನ್ಸಿಲರಾದರು.—ಫೋರ್ಟ್ ಮೊಹಲ್ಲಾಯಲ್ಲಿ ಮ|| ಅಡ್ವೊಕೇಟ್ ಸಿ. ನಂಜಪ್ಪನವರಿಗೆ 25 ಓಟುಗಳೂ, ಮ|| ಎಂ. ನರಸಿಂಹಸ್ವಾಮಿಯವರಿಗೂ ಮ|| ಟಿ. ಎಂ. ಸಿದ್ದಪ್ಪನವರಿಗೂ ಸಮವಾಗಿ 22 ಓಟುಗಳೂ, ಮ|| ಕೃಷ್ಣರಾಜಯ್ಯನವರಿಗೆ 18 ಓಟುಗಳೂ ದೊರಕಿದವು. ಆದರೆ ಮ|| ಎಂ. ನರಸಿಂಹಸ್ವಾಮಿಯವರು ಸ್ಪರ್ಧೆಯನ್ನು ಎಣಿಸದೆ ಉದಾರಭಾವದಿಂದ ಬಿಟ್ಟುಕೊಟ್ಟರು. ಇದರಿಂದ ಮ|| ನಂಜಪ್ಪನವರೂ, ಮ|| ಸಿದ್ದಪ್ಪನವರೂ ಕೌನ್ಸಿಲರುಗಳಾದರು. ಆ ದಿನ ಮೀಟಿಂಗಿನಲ್ಲಿ ಸೇರಿದ್ದ ಮೆಂಬರುಗಳೂ ರಾಜಧಾನಿಯ ಇತರ ದೊಡ್ಡ ಮನುಷ್ಯರೂ ಮ|| ನರಸಿಂಹಸ್ವಾಮಿಯವರ ದೊಡ್ಡ ಮನಸ್ಸನ್ನು ನೋಡಿ ಸಂತೋಷಪಟ್ಟು ಅವರನ್ನು ಕೊಂಡಾಡಿದರು.

ರಾಜಧಾನಿಯಲ್ಲಿ ನಡೆದ ಫಲ ಪುಷ್ಪಾದಿಗಳ ಎರಡನೆಯ ಪ್ರದರ್ಶನ.

ಮೈಸೂರು ಪಟ್ಟಣದಲ್ಲಿ ನಗರಾಭಿವೃದ್ಧಿ ಕಾರ್ಯಗಳು ಅನೇಕವಾಗಿ ನಡೆದು, ನಾನಾ ಬಡಾವಣೆಗಳೂ, ಚೌಕಗಳೂ, ಉದ್ಯಾನವನಗಳೂ ನಿರ್ಮಾಣವಾಗುತ್ತಾ ನೋಟಕ್ಕೂ ಆರೋಗ್ಯಕ್ಕೂ ರಮ್ಯವೂ ಮನೋಹರವೂ ಆದ ಸಣ್ಣ ದೊಡ್ಡ ಹಸರು ಗಿಡಗಳೂ ಫಲ ಪುಷ್ಪ ವೃಕ್ಷಗಳೂ ಎಲ್ಲಾ ಕಡೆಗಳಲ್ಲೂ ತಲೆಯೆತ್ತುತ್ತಾ ಬಂದಿರುತ್ತವೆ. ಅರಮನೆಯ ತೋಟ ವನಗಳಲ್ಲೂ, ಅರಸುಗಳೂ ದೊಡ್ಡ ಮನುಷ್ಯರೂ ತಮ್ಮ ಬಂಗಲೆಗಳ ಆವರಣಗಳೊಳಗೂ, ಸಾಮಾನ್ಯ ಪ್ರಜೆಗಳು ತಮ್ಮ ಮನೆಗಳ ಹಿತ್ತಲುಗಳಲ್ಲೂ ತರಕಾರಿ ಹಣ್ಣು ಹಂಪಲು ಹೂವುಗಳನ್ನು ಬೆಳೆಯುವುದು ಈಚೆಗೆ ಹೆಚ್ಚಾಗಿದೆ. ಪಟ್ಟಣದಲ್ಲಿ ತೋಟಗಾರರು ಪೂರ್ವದಿಂದಲೂ ನಡೆದು ಬಂದಿರುವ ಕೆಲವು ಜಾತಿಯ ತರಕಾರಿಗಳನ್ನು ಮಾತ್ರ ಬೆಳೆಯುತ್ತಾರಲ್ಲದೆ ಬೆಂಗಳೂರು ಮೊದಲಾದ ಕಡೆಗಳಲ್ಲಿ ದೊರಕುವಂಥಾ ಬಗೆ ಬಗೆಯ ಹಣ್ಣು ಹಂಪಲು ತರಕಾರಿಗಳನ್ನು ಬೆಳೆಯುವುದಿಲ್ಲ. ಹಣ್ಣು ತರಕಾರಿ ಬೇಕಾದವರೆಲ್ಲಾ ಸಾಮಾನ್ಯವಾಗಿ ಬೆಂಗಳೂರಿಗೆ ಬರೆದೋ ಹೋಗಿಯೋ ತರಿಸಿಕೊಳ್ಳಬೇಕಾಗಿದೆ. ಇಂಥಾ ಕೊರತೆಯನ್ನು ನಿವಾರಣೆಮಾಡಬೇಕೆಂದೂ, ನಮ್ಮ ಮಹಾರಾಜರವರು ರಾಜಧಾನಿಯಲ್ಲಿ ಪ್ರಜೆಗಳಿಗೆಲ್ಲಾ ಫಲ ಪುಷ್ಪ ತರಕಾರಿಗಳನ್ನು ಹೇರಳವಾಗಿ ಬೆಳೆಯಲು ಉತ್ಸಾಹವಾಗಬೇಕೆಂದೂ ಎರಡು ವರುಷಗಳಿಂದ ಅದಕ್ಕಾಗಿ ಒಂದು ಪ್ರದರ್ಶನವನ್ನು ಇಟ್ಟು ನಡಿಸುವಂತೆ ಅಪ್ಪಣೆಕೊಟ್ಟು ಇರುತ್ತಾರೆ. ಮತ್ತು ಅವುಗಳ ಪ್ರಾರಂಭೋತ್ಸವವನ್ನೂ ಮಹಾರಾಜರವರೇ ಮುಂದರಿಸಿ ನಡಿಸುತ್ತಾ ಬಂದಿರುವರು. ಇದರ ಪ್ರಯೋಜನವನ್ನು ನಮ್ಮ ಪ್ರಜೆಗಳು ಇನ್ನೂ ಅನುಭೋಗಿಸುವಷ್ಟು ಉತ್ಸಾಹಶಾಲಿಗಳಾಗಿಲ್ಲವೆಂಬುವುದು ಕಳೆದ ಶನಿವಾರ ನಡೆದ ಪ್ರದರ್ಶನವನ್ನು ನೋಡಿ ಬಂದವರಿಗೆಲ್ಲಾ ವೇದ್ಯವಾಗಿರುತ್ತದೆ. ಈ ಪ್ರಾರಂಭೋತ್ಸವವನ್ನು ನಡಿಸುವುದಕ್ಕಾಗಿಯೇ ಶ್ರೀಮನ್ ಮಹಾರಾಜರವರು ಆ ದಿನ ಬೆಂಗಳೂರಿನಿಂದ ರಾಜಧಾನಿಗೆ ಚಿತ್ತೈಸಿ ಸುಮಾರು 15-20 ನಿಮಿಷಗಳ ತನಕ ಇದ್ದು ಪ್ರದರ್ಶನದ ಎಲ್ಲಾ ಭಾಗಗಳನ್ನೂ ಪರಾಂಬರಿಸಿಕೊಂಡು ಚಿತ್ತೈಸಿದರು

ಜಗನ್ಮೋಹನ ಬಂಗಲೆಯ ವಿವಾಹ ಮಂಟಪದಲ್ಲಿ ಒಂದು ಕಡೆ ಊರಿನ ಮತ್ತು ಹೊರಗಿನ ಬಗೆಬಗೆಯ ತರಕಾರಿಗಳನ್ನೂ, ಇನ್ನೊಂದು ಕಡೆ ಹಣ್ಣು ಹಂಪಲು ಹೂವುಗಳನ್ನೂ, ಮಧ್ಯರಂಗದ ದೊಡ್ಡ ಹಾಲ್‌ನಲ್ಲಿ ನಾನಾ ಜಾತಿಯ ನೇತ್ರಾನಂದಕರವಾದ ಹಸರು ಗಿಡಗಳನ್ನೂ ರಮ್ಯವಾಗಿ ಅಣಿಮಾಡಿ ಇಡಿಸಿ ಪ್ರದರ್ಶನ ಮಾಡಿದ್ದರು. ನೋಡುವುದಕ್ಕೆ ಫೀಜೇನೂ ಇಟ್ಟಿರಲಿಲ್ಲವಾಗಿ ಸಕಲ ಪ್ರಜೆಗಳೂ—ಪುರುಷರು, ಸ್ತ್ರೀಯರು, ಮಕ್ಕಳು—ಉತ್ಸಾಹದಿಂದ ಹೋಗಿ ನೋಡಿ ಬಂದರು. ಹಣ್ಣು ಹಂಪಲು, ಹೂವು, ತರಕಾರಿಗಳು ವಿಶೇಷವಾಗಿ ಬೆಂಗಳೂರು ತೋಟಗಾರರಿಂದ ಪ್ರದರ್ಶನ ಮಾಡಲ್ಪಟ್ಟಿದ್ದವು. ರಾಜಧಾನಿಯಲ್ಲಿ ಅರಮನೆ ತೋಟಗಳಲ್ಲೂ, ಕೆಲವು ಅರಸುಗಳ ಕೈತೋಟಗಳಲ್ಲೂ ಬೆಳೆದಿದ್ದ ವಸ್ತುಗಳೂ ಕೆಲವು ಇಡಲ್ಪಟ್ಟಿದ್ದವು. ಮಂಡಿ ಲವಾರ್ ಬಸಪ್ಪನ ಗರಡಿಯವರು ಬೆಳೆದಿದ್ದ ಸುಮಾರು 21 ಅಡಿ ಎತ್ತರವಾಗಿಯೂ ಪುಷ್ಟಿಯಾಗಿಯೂ ಇದ್ದ ಕಬ್ಬಿನ ಜಲ್ಲೆಗಳು ಬಹುಮಾನವನ್ನು ಪಡೆದವು. ಮ|| ಬಾಳರಾಜೆ ಅರಸಿನವರು, ಮ|| ಬಸವರಾಜೆ ಅರಸಿನವರು, ಮಿ|| ಕೆಲ್ಲಿಸ್ ಸಾಹೇಬರು, ಮ|| ಬಿ. ಭೀಮರಾಯರು ಪ್ರದರ್ಶನಮಾಡಿದ್ದ ತರಕಾರಿಗಳಿಗೂ ಬಹುಮಾನಗಳು ಕೊಡಲ್ಪಟ್ಟವು.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ತಲುಪಿದ ಹಲವು ಬಾತ್ಮಿಗಳನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ವಿಷಾದಪಡುತ್ತೇವೆ.

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯಲ್ಲಿ ಒಬ್ಬಾಕೆಯು ಐದು ಗಂಡು ಮಕ್ಕಳನ್ನು ಹೆತ್ತಿದ್ದಾಳೆಂದೂ, ಮಕ್ಕಳೆಲ್ಲಾ ಸೌಖ್ಯವಾಗಿವೆ ಎಂದೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಕಳೆದ ಶನಿವಾರವೂ ಭಾನುವಾರವೂ ರಾಜಧಾನಿಯಲ್ಲಿ ಒಳ್ಳೇ ಮಳೆಗಳಾದವು. ಈಗಲೂ ಮೋಡ ಮುಸುಕಿಕೊಂಡು ಮಳೆಸುರಿಯುವಂತೆಯೇ ಇರುತ್ತೆ. ಬಿಸಿಲಿನ ತಾಪ ಇಳಿದು ಹವಾ ಆಹ್ಲಾದಕರವಾಗಿದೆ.

ಬೆಂಗಳೂರು ಕೆಂಪಾಂಬುಧಿ ಮೆಮೋರಿಯಲ್ ಹಾಲಿನ ಎದುರಿಗೆ ಬ್ಯಾಂಡ್ ವಾದ್ಯ ನಡೆಯುವುದಕ್ಕೆ ಅನುಕೂಲವಾದ ಒಂದು ಕಟ್ಟಡವನ್ನು ನೇತ್ರಾನಂದಕರವಾಗಿ ಕಟ್ಟಿಸಬೇಕೆಂದು ನಮ್ಮ ಮಹಾರಾಜರವರು ಅಪ್ಪಣೆಕೊಟ್ಟು ಅದಕ್ಕಾಗಿ 10,000 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟರು ರಾಜಧಾನಿಗೆ ದಯಮಾಡಿದ್ದಾಗ್ಗೆ ಇಲ್ಲಿನ ಕಿವುಡಮೂಗರ ಮತ್ತು ಕುರುಡರ ಪಾಠಶಾಲೆಗೆ ಪತ್ನಿ ಸಮೇತ ಹೋಗಿ ಅಲ್ಲಿ ನಡೆಯುವ ಪರಹಿತಕಾರ್ಯಗಳ ಅಭಿವೃದ್ಧಿಯನ್ನು ವಿಚಾರಿಸಿ ನೋಡಿ ಸಂತೋಷಪಟ್ಟು 69 ರೂಪಾಯಿ ಬಹುಮಾನವನ್ನು ದಯಪಾಲಿಸಿದರು.

ಕೋಲಾರ್ ಚಿನ್ನದ ಗಣಿಗಳಲ್ಲಿ ಕಂಟ್ರಾಕ್ಟರಾಗಿಯೂ, ಮಹಮದೀಯ ಸಂಘದ ಪ್ರೆಸಿಡೆಂಟರಾಗಿಯೂ ಇರುವ ಮಿ|| ನವಾಬ್ ಗುಲಾಂ ಮಹಮ್ಮದ್ ಕಲಾಮಿ ಯವರನ್ನು ನಮ್ಮ ಸರ್ಕಾರದವರು ನ್ಯಾಯವಿಧಾಯಕ ಸಭೆಯಲ್ಲಿ ಮಿ|| ಅಮೀರ್ ಹಸನ್‌ರವರಿಗೆ ಬದಲು ಮೆಂಬರಾಗಿ ನೇಮಕ ಮಾಡಿರುತ್ತಾರೆ.

ಚಿತ್ರದುರ್ಗದ ಟೌನ್‌ನಲ್ಲಿ ನಡೆದ ದರೋಡೆ ಕಳವುಗಳಲ್ಲಿ ಪೋಲೀಸಿನವರು ಪತ್ತೇದಾರಿಯೊದು ನಡಿಸಿ ಸುಮಾರು 15 ಮಂದಿಯನ್ನು ಹಿಡಿದಿರುವುದಾಗಿಯೂ, ಮಡಕೆಪುರದ ನಾರಾಯಣ ಎಂಬವನು ಒಂದು ಕಳುವಾದ ಅಂಗಿ ಮಾರಿದನೆಂದು ಹೇಳಲ್ಪಟ್ಟಾಗ ಅವನು ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನೆಂದೂ ಪ್ರಕಟವಾಗಿದೆ.

ಬೆಂಗಳೂರು ವೆಸ್ಲಿಯನ್ ಲಿಟರರಿ ಸಂಘದವರು ತಮ್ಮ ಸಂಘದ ನಾಲ್ಕನೇ ವಾರ್ಷಿಕೋತ್ಸವವನ್ನು ಬರುವ 28 ನೇ ತಾ. ಶನಿವಾರ ಸಾಯಂಕಾಲ ತಮ್ಮ ಸ್ಕೂಲು ಹಾಲಿನಲ್ಲಿ ನಡಿಸುವವರಾಗಿದಾರೆಂದೂ, ಗೌರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಮಿ|| ಸಿ. ಎಚ್. ಯೇಟ್ಸ್‌ಯವರು ಅಗ್ರಾಸನವನ್ನು ವಹಿಸುವರೆಂದೂ ತಿಳಿಯುತ್ತೇವೆ.

ಕಳೆದ ವಾರ ಬೆಂಗಳೂರು ದಂಡಿನಲ್ಲಿ ಪೋಲೀಸಿನವರು ಸಾಹಸಪಟ್ಟು ಎರಡು ಕಡೆ ಜೂಜಾಡುತ್ತಿದ್ದ ಎಂಟು ಮಂದಿ ಮುಸಲ್ಮಾನರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದರು. ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ಒಟ್ಟು 30 ರೂಪಾಯಿ ಜುಲ್ಮಾನೆ ಹಾಕಿ, ಅರ್ಧ ಹಣವನ್ನು ಪೋಲೀಸಿಗೆ ವರ್ತಮಾನ ತಿಳಿಸಿದವರಿಗೆ ಬಹುಮಾನ ಕೊಡತಕ್ಕದ್ದೆಂದು ತೀರ್ಮಾನ ಮಾಡಿದರು.

ತುಮಕೂರು ಮುನ್ಸಿಫ್ ಮ|| ಬಿ. ರಂಗಯ್ಯಂಗಾರ್ರ ಪತ್ನೀರವರು ಸ್ತ್ರೀಯರ ನಾಲ್ಕಾಣೆ ಯುದ್ಧದ ಫಂಡನ್ನು ಕೂಡಿಸುತ್ತಿದಾರಷ್ಟೆ. ಈ ಫಂಡಿಗೆ ಏಪ್ರಿಲ್‌ನಿಂದ ಜೂಲೈ ಆಖೈರು ವರೆಗೆ ಕೂಡಿದ 38 ರೂಪಾಯನ್ನು ತುಮಕೂರು ಡಿಸ್ಟ್ರಿಕ್ಟ್ ಖಜಾನೆಗೆ ಪಾವತಿ ಮಾಡಿರುವುದಾಗಿಯೂ, ಪ್ರೊ|| ಶ್ರೀನಿವಾಸಯ್ಯಂಗಾರ್ರು ಅಲ್ಲಿನ ಸ್ತ್ರೀಯರ ಮತ್ತು ಮಕ್ಕಳ ಎದುರಿಗೆ ತಮ್ಮ ಯುಕ್ತಿಜ್ಞಾನವನ್ನು ಪ್ರದರ್ಶನಮಾಡಿ ಆಗ ಉತ್ಪತ್ತಿಯಾದ 5 ರೂಪಾಯನ್ನು ಈ ಫಂಡಿಗೆ ಕೊಟ್ಟಿರುವುದಾಗಿಯೂ ತಿಳಿದುಬರುತ್ತದೆ.

ರಾಜಧಾನಿಯ ಕರ್ಜನ್ ಪಾರ್ಕಿನ ಮಧ್ಯೆ ಲೇಟ್ ಮಹಾರಾಜರವರ ಭಾವಪ್ರತಿಮೆಯನ್ನು ನಿಲ್ಲಿಸುವುದಕ್ಕೆ ಕಾಗದದಲ್ಲಿ ಒಂದು ನಕ್ಕಲ್ ಮಂಟಪವನ್ನು ಗೋಪುರ ಮುಂತಾದದ್ದರ ಸಮೇತ ಮಾಡಿಸಿ ನಿಲ್ಲಿಸಿದಾರೆ. ಇದಲ್ಲದೆ ಆ ಮಂಟಪದೊಳಗೆ ಬಣ್ಣದಿಂದ ಬರೆದ ಭಾವಪ್ರತಿಮೆಯೊಂದನ್ನು ಮಾಡಿಟ್ಟಿದ್ದರು. ಶ್ರೀಮನ್ ಮಹಾರಾಜರವರ ಪರಾಂಬರಿಕೆಗಾಗಿ ಸುಮಾರು 1,500 ರೂಪಾಯಿ ವೆಚ್ಚಪಟ್ಟು ಈ ನಕ್ಕಲ್ ಮಂಟಪವನ್ನು ಮಾಡಿಸಿರುತ್ತಾರೆಂದು ಕೇಳುತ್ತೇವೆ.

ಒಬ್ಬ ಬಾತ್ಮಿದಾರರಿಂದ.—ಬೆಂಗಳೂರಿನಲ್ಲಿರುವ ಸೇವಾ ಸದನಕ್ಕೆ ನಮ್ಮ ಶ್ರೀಮದ್ಯುವರಾಜರವರು 100 ರೂಪಾಯಿ ದ್ರವ್ಯ ಸಹಾಯಮಾಡಿ ಸದರಿ ಸಂಘದ ಪ್ರೆಸಿಡೆಂಟರಾದ ಶ್ರೀಮತಿ ಪಾರ್ವತಮ್ಮನವರಿಗೆ (ಮ|| ಕೆ. ಎಸ್. ಚಂದ್ರಶೇಖರಯ್ಯರವರ ಪತ್ನಿಯವರು) ಸಂಘವು ನಡಸುತ್ತಿರುವ ಸತ್ಪ್ರೋತ್ಸಾಹಕವಾದ ಕಾರ್ಯಗಳ ವಿಷಯದಲ್ಲಿ ತಮ್ಮ ಸಂತೋಷವನ್ನೂ, ಈ ಸಂಘಕ್ಕೆ ಪ್ರವೇಶ ಇನ್ನೂ ಅನೇಕ ಜನರೂ ಮೆಂಬರುಗಳಾಗಿ ಸಹಾಯಮಾಡಿ ಸಂಘದ ಉದ್ದೇಶಗಳನ್ನು ನೆರವೇರಿಸ್ಬಾರೆಂಬ ಅವರ ಆಶಯವನ್ನೂ ತಿಳಿಯಪಡಿಸಿರುತ್ತಾರೆ. ಹಿಂದೂ ಮಹಿಳೆಯರು ತಮ್ಮ ಸ್ಥಿತಿಗತಿಗಳಲ್ಲಿ ಅಭಿವೃದ್ಧಿ ಹೊಂದುವುದಕ್ಕಾಗಿ ಏರ್ಪಟ್ಟಿರುವ ಈ ಸಂಘದ ವಿಷಯದಲ್ಲಿ ನಮ್ಮ ಶ್ರೀಮದ್ಯುವರಾಜರವರು ಪ್ರಕಟಪಡಿಸಿರುವ ದಯಾರಸಭರಿತವಾದ ಅಭಿಮಾನದಿಂದ ಸಂಘದ ಮೆಂಬರುಗಳು ಇನ್ನೂ ಹೆಚ್ಚಾಗಿ ಪ್ರಯತ್ನಮಾಡುವುದಕ್ಕೂ ಇತರರೂ ಈ ಸರ್ವಜನೋಪಯೋಗವಾದ ಕೆಲಸದಲ್ಲಿ ಮೆಂಬರುಗಳೊಂದಿಗೆ ಸೇರಿ ಸಹಾಯ ಮಾಡುವುದಕ್ಕೂ ಅಪಾರ ಉತ್ತೇಜನ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಒಬ್ಬ ಬಾತ್ಮಿದಾರರಿಂದ.—ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಶಾಖೆಯಲ್ಲಿ ತಾ. 21 ನೇ ಶನಿವಾರ ಮೀಟಿಂಗು ಮೊದಲಾದದ್ದು ಜರುಗಿದ ನಂತರ ಕಾರ್ಯದರ್ಶಿಯವರು ಸಭಿಕರಿಗೆ ತಿಳಿಸಿದ್ದೇನೆಂದರೆ—ಈ ಶಾಖೆಯ ಪ್ರೆಸಿಡೆಂಟರವರಾದ ಮ|| ಶ್ರೀಮತಿ ಟಿ. ಸುಂದರಾಬಾಯಮ್ಮನವರಿಂದ ಬೆಳಸಲ್ಪಟ್ಟ ಸುಗುಣಗಳಿಗೆ ನಿಧಿಯಾದ ಸೌ|| ವಿನಾಸಾಬಾಯಿ ಎಂಬಾಕೆಯು ಸೆನ್ನೆ ಬೆಳಗ್ಗೆ ನಮ್ಮನ್ನು ಬಿಟ್ಟು ತೆರಳಿದ್ದು ನಮ್ಮೆಲ್ಲರಿಗೂ ಬಹಳ ಕ್ಲೇಶಕರವಾಗಿರುವುದು. ಈಕೆಯ ಸುಗುಣ ಸಂಪತ್ತನ್ನು ಎಷ್ಟು ಕೊಂಡಾಡಿದರೂ ಕೊಂಚವೇ. ದೀನದಯೆ, ಪರೋಪಕಾರ, ಆಸ್ತಿಕತೆ, ಇವುಗಳಿಂದ ಶೋಭಿಸುತ್ತಿದ್ದರು. ಮುಖ್ಯವಾಗಿ ಕೈಗಾರಿಕೆ ಮೊದಲಾದ ಕುಶಲ ವಿದ್ಯೆಗಳಲ್ಲಿ ಅವರು ಬಹಳ ನಿಪುಣೆಯರು. ಯಾವಾಗಲೂ ಪರ ಸಹೋದರಿಯರಿಗೆ ಸದ್ಬೋಧೆಯಿಂದಲೇ ಅವರ ಸೋಮಾರಿತನವನ್ನು ದೂರಮಾಡಿಸುವ ಸಂಪ್ರದಾಯವಾದ ವಿದ್ಯೆಗಳನ್ನು ಕಲಿಸಲು ಶಕ್ತರಾಗಿದ್ದರು. ಸನಾತನ ಧರ್ಮದಲ್ಲಿ ಈಕೆಗೆ ಬಹಳ ಆಸಕ್ತಿಯಿತ್ತು. ಶ್ರೀ ಮಹಾಭಾರತದ ಅಜ್ಞಾತವಾಸದಲ್ಲಿ ದ್ರೌಪತಿಯು ಸತ್ಯಭಾಮೆಗೆ ಬೋಧಿಸಿದ್ದ ಯಾವ ಸುಗುಣ ಸಂಪತ್ತುಂಟೋ ಅದು ಇವರಲ್ಲಿ ಪೂರ್ತಿಯಾಗಿ ನೆಲೆಗೊಂಡಿತ್ತು. ಇಂಥಾ ಸೋದರೀಮಣಿಯನ್ನು ಕಳೆದುಕೊಂಡ ನಮ್ಮಗಳ ದುಃಖಕ್ಕೆ ಪಾರವೇ ಇಲ್ಲ. ಅವರ ಕುಟುಂಬದವರಿಗೆ ಶ್ರೀ ಸ್ವಾಮಿಯು ಧೈರ್ಯ ಸ್ಥೈರ್ಯಗಳನ್ನು ಕೊಡಲೆಂದು ಕೋರುವುದಲ್ಲದೆ ತುಂಬಿದ ಸರೋವರದಲ್ಲಿ ಅರಳಿದ ದೊಡ್ಡ ಸರೋವರವನ್ನು ಕೂಡಿ ಶ್ರೀ ಸರೋಜಿನೀ ಪಾದ ಕಮಲವನ್ನು ಸೇರಿಸಿ ಈಕೆಯ ನಿಜಾತ್ಮನಿಗೆ ಸರ್ವಸುಖಗಳೂ ಉಂಟಾಗಬೇಕೆಂದು ಪ್ರಾರ್ಥಿಸುತ್ತೇವೆ.

1916 ನೆ ಲೋ. ಸೆ. ಕನ್ನಡ ಟೆಕ್ಸ್ಟಿನ ಪ್ರಶ್ನೋತ್ತರ (ಸಂಪೂರ್ಣವಾದ ಉತ್ತರಗಳೊಡನೆ) ಸಿದ್ಧವಾಗಿ ಬಿಕರಿಯಲ್ಲಿದೆ ಕ್ರಯ 8 ಆಣೆ; ವ್ಯಾಕರಣ ಪ್ರಶ್ನೋತ್ತರ (300 ಪ್ರಶ್ನೆಗಳೂ ಸಂಪೂರ್ಣವಾದ ಉತ್ತರಗಳೂ ಇವೆ ಕ್ರಯ 1½ ಆಣೆ; ಬಾಲವ್ಯಾಕರಣ (ಈಗಿನ ಪರೀಕ್ಷಾ ಕ್ರಮವನ್ನು ಅನುಸರಿಸಿ ಲೋ. ಸೆ. ವಿದ್ಯಾರ್ಥಿಗಳಿಗೆ ಅತ್ಯಂತ ಉಪಯೋಗವಾಗಿದೆ ಕ್ರಯ 6½ ಆಣೆ. [166.2]
ಓ. ಆರ್. ನರಸಿಂಹಯ್ಯ, ಕನ್ನಡ ಪಂಡಿತ, ಹೈ ಸ್ಕೂಲ್, ಚಿಕ್ಕಬಳ್ಳಾಪುರ.

ಮನೆ ಕ್ರಯಕ್ಕೆ ಸಿಕ್ಕುತ್ತೆ.

ಮೈಸೂರು ಚಾಮರಾಜಪೇಟೆಯಲ್ಲಿರುವ, ಗತಿಸಿದ ಪಿ. ವೇದಮಿತ್ರಯ್ಯನವರ ಮನೆ, ಸಿ. ಬಜಾರ್ ಲೈನ್ ರೋಡು, ನಂ. 568 ಇದಕ್ಕೆ ಸೇರಿದ ಒಂದು ಖಾಲಿ ನಿವೇಶನ ಸಹ ಕ್ರಯಕ್ಕೆ ಸಿಕ್ಕುತ್ತೆ. ಅಪೇಕ್ಷಿಸತಕ್ಕವರು ಮೈಸೂರು ಚರ್ಚ್ ರೋಡಿನಲ್ಲಿರುವ (ಕಮಾನಿ ದರ್ವಾಜ ಬಳಿ) ವಾದ್ರಿಗಳಾದ ಸಾಮ್ಯುವೇಲ್ ಲೀಮೆಕ್‌ರವರನ್ನು ಕೇಳತಕ್ಕದ್ದು. [173.1]

ನೋಟೀಸ್.

ಬೊಂಬಾಯಿ ತಾತಾ ಸನ್ಸ್ ಸ್ವದೇಶೀ ಮಿಲ್ಸ್ ಕಂಪೆನಿಯಲ್ಲಿ ತಯಾರಾಗುವ ಪಂಚೆಗಳು, ಷರಟಿಂಗು, ಚಳ್ಳು, ಟ್ವಿಲ್, ಹಚ್ಚಡ ಮುಂತಾದ ಜವಳಿ ಮತ್ತು ನಂಬರುವಾರು ನೂಲು ವ್ಯಾಪಾರ ಮಾಡಲು ನಮ್ಮನ್ನು ಸೋಲ್ ಏಜಂಟರನ್ನಾಗಿ ಏರ್ಪಡಿಸಿರುವುದರಿಂದ ನಮ್ಮಲ್ಲಿ ಈ ಮಾಲು ಕರಾರುವಾಕ್ ಬೆಲೆಗೆ ದೊರೆಯುವುದಲ್ಲದೆ ಜವಳಿಗೆ ಡಿಸ್ಕೌಂಟು ಸಹ ದೊರೆಯುತ್ತೆ. [172-1]

ಕಮಿಷನ್ ಮತ್ತು ಜನರಲ್ ಏಜನ್ಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೊಲ್ಲೂರಯ್ಯನ ಬೀದಿ, ಶಿವಮೊಗ್ಗ.

ಸೋಲಾಪುರದ ಚಕ್ಕುಗಳೂ, ಸೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಸೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಪೇಲುಗಟ್ಟಿಯೂ, ಚಿಲ್ಲರೆಯಾಗಿಯೂ ದೊರೆಯುವುವು.

ಪೇಲುಗಟ್ಟಿ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಖರೀದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [55-21]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 159, ಕಿಲಾರಿ ರೋಡು (ತುಂಚಿಗರಪೇಟೆ) ಬೆಂಗಳೂರು ಸಿಟಿ.

ಗೃಹಕೃತ್ಯದ ನೋಟೀಸು.

ಗುಬ್ಬಿ ತಾ|| ಕಳ್ಳಿರೆ ಶ್ಯಾ|| ನಂಜುಂಡಯ್ಯ ಉರುಫ್ ಜವರಾಯಪ್ಪನವರ ಹೆಂಡತಿ ಪಾರ್ವತಮ್ಮನು ತಿಳಿಯಪಡಿಸುವದೇನೆಂದರೆ—ನನ್ನ ಪತಿಯು ಪಾಪ ಪನೇಲು ಜೂಜು ಇವೇ ಮೊದಲಾದ ಕೆಟ್ಟ ಕೆಲಸಗಳನ್ನು ಮಾಡಿ ಸುಮಾರು ಸಾವಿರ ರೂಪಾಯಿ ಬಾಳತಕ್ಕ ಚಿನ್ನ ಬೆಳ್ಳಿ ನಗಗಳನ್ನು ಹಾಳುಮಾಡಿದ್ದಲ್ಲದೆ ಸುಮಾರು 700-800 ರೂ. ಲೇವಾದೇವಿ ಮತ್ತು 1,000 ರೂ. ಸ್ಥಿರ ಸ್ವತ್ತುಗಳನ್ನು ಹಾಳುಮಾಡಿರುತ್ತಾರೆ. ಇವರಿಗೆ ನಾನು ಮತ್ತು ಸುಮಾರು 10-13 ವರುಷದ ಹೆಣ್ಣುಮಗಳು ಸಹ ಇರುತ್ತೇವೆ. ಹೆಣ್ಣುಮಗಳ ಲಗ್ನ ಸಹ ನಡೆದಿಲ್ಲ. ಇವರಿಗೆ ಕಲ್ಲುಕೆರೆ ಗ್ರಾಮದಲ್ಲಿ ಸರ್ವೆ ನಂ. 63—65 ನೇ ತರಿ ಜಮೀನುಗಳೂ, ಕಳ್ಳಿರೆ ಗ್ರಾಮದಲ್ಲಿ ಸರ್ವೆ ನಂ. 5, 42, 49-3, 73-1, 85-2, 99-1 ಸರ್ವೆ 101, ಮತ್ತು ಮಡೇನಹಳ್ಳಿ ಗ್ರಾಮದಲ್ಲಿ ಸರ್ವೆ ನಂ. 14, ಮತ್ತು ಕಳ್ಳಿರೆ ಗ್ರಾಮದಲ್ಲಿ ಖಾ ನಂ. 124—186, ಈ ಖಾನೆಗಳೂ ಮತ್ತು ವಾಸದ ಮನೆ ಇಷ್ಟು ಸೊತ್ತು ಇರುತ್ತೆ. ಇವುಗಳನ್ನೂ ಮತ್ತು ನ್ಯಾಸುಖಾವಿಕೆ ಕೆಲಸವನ್ನೂ ಯಾರಾದರೂ ಕ್ರಯ ಭೋಗ್ಯ ಆಧಾರ ವಗೈರೆ ನನ್ನ ಪತಿಯಿಂದ ಮಾಡಿಸಿಕೊಂಡರೆ ಯಾವುದೂ ಊರ್ಜಿತವಾಗುವದಿಲ್ಲ ಎಂದು ಈ ಮೂಲಕ ಎಚ್ಚರಿಸಿರುತ್ತೇನೆ.

ಪಾರ್ವತಮ್ಮ.

ಗೃಹಕೃತ್ಯದ ನೋಟೀಸು.

ಮಂಡ್ಯ ತಾ|| ಮದ್ದೂರಿನಲ್ಲಿರುವ ಪ್ರಹ್ಲಾದಯ್ಯಂಗಾರ್ರ, ಮೊಮ್ಮಕ್ಕಳು ಶಿಂಗಯ್ಯಂಗಾರ್ರು ಈ ಮೂಲಕ ತಿಳಿಯಪಡಿಸುವದೇನಂದರೆ—ಮದ್ದೂರಿಗೆ ಸೇರಿದ ನನ್ನ ಮತ್ತು ನನ್ನ ತಾಯಿ ಜಂಟಿ 61 ನೇ ಖಾತೆಯಲ್ಲಿ ಕಂಡ ಮುಷ್ಕತಿ ಬಾಗಾಯಿತು ಮತ್ತು ಮನೆ ಪೈಕಿ ಕೆಲವು ನಮ್ಮ ತಾಯಿ ಕಲ್ಯಾಣಮ್ಮನ ಸ್ವಾಧೀನದಲ್ಲಿದ್ದು ಕೆಲವು ನನ್ನ ಸ್ವಾಧೀನದಲ್ಲಿವೆ. ಕಲ್ಯಾಣಮ್ಮ ಮೃತಪಟ್ಟು ಒಂದು ವರ್ಷ. ಈಚೆಗೆ ಮೃತಪಟ್ಟ ಚಿಕ್ಕಮಗನ ಹೆಂಡತಿ ಲಕ್ಷ್ಮಮ್ಮನನ್ನು ನನ್ನ ತಾಯಿಯ ಜಂಟಿ ಸ್ವಾಸ್ತ್ಯಕ್ಕೆ ಅಂಗೀಕರಿಸಕೂಡದೆಂದು ವಗೈರೆ ಗೌರ್ನಮೆಂಟಿನಲ್ಲಿ ನನ್ನ ಫಿರ್ಯಾದು ನಡೆಯುತ್ತಾ ಇದೆ. ಈ ಲಕ್ಷ್ಮಮ್ಮನು ಅಪುತ್ರವತಿ, ಜೀವನಾಂಶಕ್ಕೆ ಮಾತ್ರ ಅರ್ಹಳು. ಈ ಜಂಟಿ ಖಾತೆಯಲ್ಲಿ ಕಂಡ ಸೊತ್ತುಗಳೂ, ನನ್ನ ತಂದೆ ನರಸಿಂಹಾಚಾರ್ ಹೆಸರಿನ ಇನಾಂ ಖಾತೆ ಜಮೀನುಗಳೂ ಸಹಾ ಪಿತ್ರಾರ್ಜಿತವಾದದ್ದು. ಇವುಗಳನ್ನು ಯಾರಾದರೂ ಈ ಲಕ್ಷ್ಮಮ್ಮನಿಂದ ಪರಭಾರೆಯುಂತಾದ್ದು ಮಾಡಿಕೊಂಡರೆ ಊರ್ಜಿತವಾಗುವದಿಲ್ಲ. ಈ ಸೊತ್ತುಗಳಿಗೆಲ್ಲಾ ಮೈನರ್ ಆಗಿರತಕ್ಕ ಜಂಟಿದಾರ್ ಶಿಂಗಯ್ಯಂಗಾರ್ರ ಮಕ್ಕಳಾದ 1 ನೇ ನರಸಿಂಹಾಚಾರ್, ಎರಡನೇ ಪ್ರಹ್ಲಾದಯ್ಯಂಗಾರ್ ಎಂಬ ಮಕ್ಕಳು ಹಕ್ಕುದಾರರಾಗಿದಾರೆ. ಸದರಿ ಸೊತ್ತುಗಳ ಉತ್ಪತ್ತಿಯಲ್ಲಿ ಕಂದಾಯ ಮತ್ತು ಜೀವನ ಕಳೆದು 300 ರೂಪಾಯಿ ನಿಲ್ಲುತ್ತೆ. ಈ ಸೊತ್ತುಗಳಿಗಾಗಿ ಸಿವಿಲ್ ಕೋರ್ಟಿನಲ್ಲಿ ನಾನು ವ್ಯಾಜ್ಯ ನಡಿಸುವವನಾಗಿದೇನೆ ಎಂದು ಈ ಮೂಲಕ ಎಚ್ಚರಿಕೆಕೊಡಲಾಗಿದೆ.

[169-1] ಮೈನರ್‌ಗಳ ತಂದೆ ಮತ್ತು ಗಾರ್ಡಿಯನ್ ಶಿಂಗಯ್ಯಂಗಾರ್.

ಒಂಬತ್ತು ಭಾಷೆ!! ಹೊಸ ಪುಸ್ತಕ! ಒಂಬತ್ತು ಲಿಪಿ!!!

ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಬಲು ಒಳ್ಳೆಯ ಸಮಯ.

ಮೊದಲನೆಯ ಪುಸ್ತಕ. ಭಾಷಾನಿಧಿ. ವರ್ಣಪರಿಜ್ಞಾನ.

ತೆನುಗು, ಅರವ, ಮಲೆಯಾಳ, ಸಂಸ್ಕೃತ, ಹಿಂದಿ, ಮಹಾರಾಷ್ಟ್ರ, ಗುಜರಾತಿ, ಬೆಂಗಾಳಿ, ಕನ್ನಡ, ಗ್ರಂಥ, ಇವುಗಳನ್ನು ಸ್ವತಂತ್ರವಾಗಿ ಕಲಿಯಬಹುದು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ! ಬೇಗ ಬೇಗ ಬರೆಯಿರಿ!!!

ಕ್ರಯ ಅಂಚೆಯ ವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ.

ಎರಡನೆಯ "ಶಬ್ದಪರಿಜ್ಞಾನ" ಮೂರನೆಯ "ವಾಕ್ಯಪರಿಜ್ಞಾನ" ಅಚ್ಚಾಗುತ್ತಿವೆ.

[171-1] ಪುಸ್ತಕ ದೊರೆಯುವ ಸ್ಥಳ—ಸವಿನುಡಿ, ಭಾಷಾನಿಧಿ, ೪೦, ಸಿ. ಬೀದಿ, ಕೋಟೆ, ಬೆಂಗಳೂರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಆಗಸ್ಟ್ 12 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ:—(1) ಷೇರು ಮೊಬಲಗು	.... ರೂ.	1,00,000
„ (2) ರಿಜರ್ವ್ ಫಂಡು	.... „	50,000
„ (3) ಡಿಪಾಜಿಟ್ಟುಗಳು	.... „	33,52,810
„ (4) ಇತರೆ	.... „	21,479
(ಖರ್ಚು ಹಾಕಿ ಬಿಟ್ಟಿರುತ್ತೆ.)	ಜುಮ್ಲಾ ರೂ.	44,24,289

ಖರ್ಚು:—(1) ಕೈಯಲ್ಲು, ಬ್ಯಾಂಕುಗಳಲ್ಲಿರುವ ಹಣ.	ರೂ.	10,64,993
„ (2) ಖಾತೆ ಮತ್ತು ಇತರ ಸಾಲಗಳು	...... „	29,11,120
„ (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	„	3,66,358
„ (4) ಇನ್‌ವೆಸ್ಟ್‌ಮೆಂಟುಗಳು	...... „	69,980
„ (5) ಏಜೆನ್ಸಿಗಳಲ್ಲಿರುವ ಮೊಬಲಗು	...... „	18,571
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	...... „	15,436
„ (7) ಇತರೆ	.... „	7,831
(ಜಮೆ, ಹಾಕಿ ಬಿಟ್ಟಿರುತ್ತೆ.)	ಜುಮ್ಲಾ ರೂ.	44,24,289

ಡಬ್ಲಿಯು. A. ರೋಸ್, ಮ್ಯಾನೇಜರ್.

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಕಳೆದ ಹದಿನೈದು ದಿನಗಳಿಂದಲೂ ಮಳೆಯಿಲ್ಲದೆ ಪೈರುಗಳು ಬಾಡುತ್ತ ಇದ್ದವು. ಈ ಮಧ್ಯೆ ಸುಮಾರಾಗಿ ಒಂದು ದಿನ ಮಳೆ ಬಂದುದರಿಂದ ಸ್ವಲ್ಪ ಸಂತೋಷವಾಯ್ತು.—ಈ ಊರಿನಲ್ಲಿ ನೀರಿನ ತೊಂದರೆಯನ್ನು ತಪ್ಪಿಸಲು ಸರ್ಕಾರದವರು ನಲ್ಲಿ ಹಾಕಿಸಲು ಮುಂಚೂರು ಮಾಡಿ [illegible] ಅದರ ಸುದ್ದಿಯೇ ಇಲ್ಲದಂತಾಗಿದೆ.—ಈ ವಾರ ಡೆಪ್ಯುಟಿ ಕಮಿಷನರ್‌ರವರು [illegible] ದಯಮಾಡಿಸಿ ಶಿವರದ ಕೆರೆಯನ್ನು ನೋಡಲು ಹೋಗಿದ್ದರು. ಅಂತೂ [illegible] ತಯಾರಾಗುವುದನ್ನು ನೋಡಬೇಕೆಂದರೆ ಯಾವ ಕಾಲ ಹಿಡಿಯುತ್ತದೋ [illegible].—ಬಹು ದಿವಸಗಳಿಂದಲೂ ಈ ಊರಲ್ಲಿ ಗರಲ್ಸ್ ಸ್ಕೂಲ್ ಹೆ॥ ಮಾಸ್ಟರಾಗಿದ್ದ ಮ॥ ಚನ್ನಬಸವಾರಾಧ್ಯರ ಪತ್ನಿಯವರು ಕಳೆದ ವಾರ ದೈವಾಧೀನರಾದರೆಂದು ಕೇಳಲು ತುಂಬಾ ವಿಷಾದಿಸುತ್ತೇನೆ. ಅವರು ತುಂಬಾ [illegible].—ಈ ಊರಲ್ಲಿ ಶಂಟವುರ ಸ್ಕೂಲನ್ನು ಚಾರ್ಜ್ ಸದಾ [illegible] ಕಟ್ಟಿಸಿ ಡೆಪ್ಯುಟಿ ಕಮಿಷನರ್‌ರಿಂದ ಈ ದಿನವೇ ಪ್ರತಿಷ್ಠಿಸಿರು [illegible] ತುಂಬಾ ಸಂತೋಷಪ್ರದವಾಗಿದೆ.—ಇಲ್ಲಿಗೆ ಹೊಸದಾಗಿ ಪೊಲೀಸ್ ಇನ್ಸ್‌ಪೆಕ್ಟರು ಬಂದಿದಾರೆ. ಇವರು ಪೊಲೀಸ್ ಉಸ್ತುವಾರಿಯನ್ನು ಮೊದಲಿ[illegible]ಗಿ ಇಡುತ್ತಾರೆಂದು ನಂಬುತ್ತೇವೆ.—ಇದು ದೊಡ್ಡ ಊರಾಗಿರುವ [illegible] ಮ್ಯುನಿಸಿಪಲ್ ವಿಚಾರಗಳಿಗೆ ಇನ್ನೂ ಹೆಚ್ಚಾಗಿ ನಿಗಾ ಕೊಡುತ್ತಾ[illegible] ನಿರೀಕ್ಷಿಸುತ್ತೇನೆ.

ಅರಸೀಕೆರೆ.—ಈ ಪ್ರಾಂತ್ಯ ವರ್ಷೇ ವರ್ಷೇ ಹೋನೆ ಮಳೆಯು [illegible] ಹಿಡಿದು ಜನಗಳಿಗೆ ಬೇಜಾರಾಗುತ್ತಿದ್ದಿತು. ಈ ಸಂವತ್ಸರ ಕಾಲ[illegible] ಮಳೆಯಾದ್ದರಿಂದ ಈ ಪ್ರಾಂತ್ಯ ರೈತರು ಬೆಳೆಯುವ ಗಿಡ್ಡರಾಗಿ [illegible] ಕೆಲಸಗಳನ್ನು ಅನಾಯಾಸವಾಗಿ ಮಾಡಿಕೊಂಡರು. ಕೆರೆ ಕಟ್ಟೆ[illegible] ತುಂಬಿದ್ದರಿಂದ ರೈತರು ಗದ್ದೆ ನಾಟಿ ಕೆಲಸ ಸಹ ಪೂರೈಸಿರುತ್ತಾರೆ. [illegible] ಪೈರು ಚೆನ್ನಾಗಿ ಫಲಿಸುವುದರಲ್ಲಿ ಯಾವ ಸಂದೇಹವೂ ತೋರುವುದಿಲ್ಲ.—[illegible] ತಾಲ್ಲೂಕಿನಲ್ಲಿದ್ದು ವರ್ಗವಹಿಸಿದ ಅಮಲ್ದಾರ್ ಮ॥ ರಾಮಸ್ವಾಮಯ್ಯಂ[illegible] ಸಿವಿಲ್ ಕ್ರಿಮಿನಲ್ ಬಾಬುಗಳಲ್ಲಿ ಬಹಳ ಸಮರ್ಥರೆನಿಸಿಕೊಂಡು [illegible] ಪಾತ್ರರಾಗಿದ್ದರು. ಹಾಲೀ ದಯಮಾಡಿಸಿರುವ ಅಮಲ್ದಾರರೂ ಅದೇ ರೀತಿ ಇದ್ದು ಅಭಿವೃದ್ಧಿಯನ್ನು ಹೊಂದುವರೆಂದು ಕೋರುತ್ತೇ[illegible].—ಈ ಊರು ಕೋಟೆ ಪೇಟೆಗಳಿಗೆ ಮಧ್ಯೆ ಪಾನಕ್ಕೋಸ್ಕರ ಬಿಟ್ಟಿರುವ [illegible] ಕೆರೆಯ ನೀರು ಪಾನಕ್ಕೆ ಯೋಗ್ಯವಾಗಿಲ್ಲವೆಂದೂ, ಈ ಬಗ್ಗೆ ಸರಿಯಾದ [illegible] ಮಾಡಿಸಿಕೊಡಬೇಕೆಂದೂ ಇಲ್ಲಿನ ದಾಕ್ಟರವರು ಬಹಳ ಮಟ್ಟಿಗೆ [illegible] ತನಕ ವರಿಗೆ ಸರ್ಕಾರದವರು ಸರಿಯಾದ ಯಾವ ಏರ್ಪಾಟನ್ನೂ ಮಾಡಿರುವದಿಲ್ಲ. ಸದರಿ ಮ॥ ವಾಸುದೇವರಾಯರು ಇಲ್ಲಿಗೆ ದಯಮಾಡಿಸಿದ್ದು ಅನೇಕಾನೇಕ ಬಡ ರೋಗಿಗಳಿಗೆ ಸರಿಯಾದ ಇಲಾಜು ಮಾಡಿ [illegible]ರುತ್ತಾರೆ. ಈ ಪ್ರಾಂತ್ಯ ಗ್ರಾಮ್ಯರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದದ್ದು ಈ ವರಿಗೆ ಅಪರೂಪವಾಗಿದ್ದಿತು. ಈಚೆಗೆ ಇಂಥಾ ಬಡ ಜನರನೇಕರು ಆಸ್ಪತ್ರೆಯಲ್ಲಿ ಔಷಧಿ ತೆಗೆದುಕೊಳ್ಳುತ್ತಿರುತ್ತಾರೆ. ಬಡವರ ವಿಷಯದಲ್ಲಿ [illegible] ತೋರಿಸುವ ದಯೆಯೇ ಇವಕ್ಕೆ ಮುಖ್ಯ ಕಾರಣವಾಗಿರುತ್ತೆ.

ಬೆಂಗಳೂರು ತಾ॥ ಗೊಟ್ಟಿಗೆರೆ.—ಈ ಗ್ರಾಮದ ಮಾರ್ಗವಾಗಿ ಈಗ [illegible] ಹೋಗುವಾಗ ನಮ್ಮ ದಿವಾನ್‌ರಾದ ಸರ್ ವಿಶ್ವೇಶ್ವರಯ್ಯನವರು [illegible]ದಾಗ್ಗೆ ನಮ್ಮ ಗ್ರಾಮದಲ್ಲಿ ಶಿಥಿಲವಾಗಿರುವ ಪಾಠಶಾಲೆಯನ್ನೂ, [illegible]ಗಳನ್ನೂ ಅಭಿವೃದ್ಧಿಗೆ ತಂದು ಇಂಗ್ಲೀಷ್ ಭಾಷೆಯನ್ನು [illegible] ಮಕ್ಕಳು ಕಲಿಯಲು ಸಹಾಯಮಾಡಿಕೊಟ್ಟು ಯುಕ್ತರಾದ ಉಪಾ[illegible]ಯನ್ನು ಬದಲಾಯಿಸಿಕೊಡಬೇಕೆಂದು ಕೇಳಿಕೊಂಡವು. ಈಗ ಒಂದು [illegible] ವಿದ್ಯಾಭ್ಯಾಸದ ಇಲಾಖಾ ಮುಖಾಂತರ ಈ ಗ್ರಾಮದ ಸ್ಕೂಲಿಗೆ [illegible]ಧ್ಯಾಯರಾಗಿ ಮ॥ ಬಿ. ನಂಜಪ್ಪನವರು ಬಂದ ಲಾಗಾಯ್ತು [illegible] ಪಾಠಶಾಲೆಯನ್ನು ಸ್ಥಾಪಿಸಿರುತ್ತಾರೆ. ಸುತ್ತುಮುತ್ತು ಗ್ರಾಮಗ[illegible] ಬಾಲಕರು ಬಹಳವಾಗಿ ಬಂದು ಸೇರಿ ವಿದ್ಯಾಭ್ಯಾಸಮಾಡಲು ಸಹಾಯ[illegible]. ಇವರು ರಾತ್ರಿ ಪಾಠಶಾಲೆಯನ್ನು ಸ್ಥಾಪಿಸಿ ಕೈಗಾರಿಕೆ ಕೂಲಿ[illegible]ರಿಗೆ ಅನುಕೂಲಪಡಿಸಿರುತ್ತಾರೆ. ಸ್ಕೂಲನ್ನು ಮಿಡಲ್ ಸ್ಕೂಲ[illegible] ಲೋವರ್ ಸೆಕಂಡರಿ ಸ್ಕೂಲನ್ನು ಮಾಡಿದರು. 5 ನೇ ತಾ. ಈ [illegible] ಹಿಂದೆ ಯಾವಾಗಲೂ ಇಲ್ಲದ "ವಿದ್ಯಾವರ್ಧಕ ಸಭಾ" ಎಂಬ[illegible] ಸ್ಥಾಪಿಸಿರುತ್ತಾರೆ. ಈ ಸಭೆಗೆ ಸುತ್ತುಮುತ್ತಲಿನ ಗ್ರಾಮದ ಜನ[illegible] ಬರುತ್ತಾರೆ. ಈ ಸಭೆಯು ಎರಡನೇ ಉಪನ್ಯಾಸವು ಮತ್ತು ಸಭೆಯು [illegible] ತಾ. 31 ರಲ್ಲಿ ನಡೆಯಿತು. ಇನ್ಸ್‌ಪೆಕ್ಟರು ಆಗ್ರಾಸನವನ್ನು ಅಲಂಕ[illegible] ಬೆಳಿಗ್ಗೆ 10 ಘಂಟೆಗೆ ಇನ್ಸ್‌ಪೆಕ್ಟರ್ ಮ॥ ವಿ. ಅನಂತಸುಬ್ಬರಾಯರು ಪಾಠ[illegible] ಪ್ರವೇಶಮಾಡಿ ಬಾಯ್ಸ್ ಸ್ಕೂಲಿನ ಬಾಲಕರ ಸಂಖ್ಯೆಯನ್ನೂ, ತರಗತಿ[illegible] ಏರ್ಪಾಟುಗಳನ್ನೂ ಪರಾಂಬರಿಸಿ ಬಹಳ ಸಂತೋಷಪಟ್ಟು, ಗರಲ್ಸ್ [illegible] ಪರೀಕ್ಷೆಮಾಡಿ ತುಂಬಾ ಸಂತೋಷಪಟ್ಟು, ಕಮಿಟಿ ಮೆಂಬರುಗಳೂ[illegible] ಬಾಯ್ಸ್ ಸ್ಕೂಲಿನ ಹೊಸ ಕಟ್ಟಡಕ್ಕಾಗಿ ಸ್ಥಳ ನಿರ್ದೇಶನಮಾಡಿದರು. [illegible] 1 ಘಂಟೆಗೆ ವಿದ್ಯಾವರ್ಧಕ ಸಭೆಯ ಕೂಟವು ಪ್ರಾರಂಭವಾಯ್ತು. [illegible] ಮುಖಂಡರೂ, ಕಮಿಟಿ ಮೆಂಬರುಗಳೂ, ಸುತ್ತುಮುತ್ತಿನ ಗ್ರಾಮ[illegible] ಕಿಕ್ಕಿರಿದು ನೆರೆದಿದ್ದರು. ಮ॥ ಬಿ. ನಂಜಪ್ಪನವರ ಉಪನ್ಯಾಸವು [illegible] ಸ್ವಾರಸ್ಯವಾಗಿಯೂ ಲೋಕವ್ಯವಹಾರ ಗರ್ಭಿತವಾಗಿಯೂ ಇದ್ದಿತು. [illegible] ಗ್ರಾಮವಾಸಿಗಳಿಗೆ ಹೇಳಿದ ಬುದ್ಧಿವಾದವು ಬಹು ಬೆಲೆಯುಳ್ಳ[illegible]ದ್ದಿತು. ಬಾಲಕ ಬಾಲಿಕೆಯರುಗಳೆಲ್ಲಾ ಮಂಗಳ ಗಾಯನದೊಡನೆ ಶ್ರೀ [illegible] ಚಕ್ರವರ್ತಿಗಳ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗ[illegible] ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳೂ ಬಾಲಕ[illegible] ತಿಂಡಿಯ ಸಮರ್ಪಣೆಯೂ ಆದ ಮೇಲೆ ಮ॥ ವಿ. ಅನಂತ

ಸುಬ್ಬರಾಯರು ಎಲ್ಲರ ವಿಶ್ವಾಸ ಸಂತೋಷಗಳಿಗೆ ಪಾತ್ರವಾದ ಮಾತುಗಳಿಂದ ತೃಪ್ತಿಪಡಿಸಿ, ಬೆಂಗಳೂರಿಗೆ ಹಿಂತಿರುಗಿದರು. ಈ ಗ್ರಾಮದಲ್ಲಿ ಈ ಪ್ರಕಾರವಾಗಿ ಪ್ರತಿ ತಿಂಗಳಲ್ಲಿಯೂ ವಿದ್ಯಾವರ್ಧಕ ಸಭೆಯನ್ನು ನಡೆಸುತ್ತಿರುವಂತೆ ಏರ್ಪಾಟುಮಾಡಿರುವ ಮ॥ ಬಿ. ನಂಜಪ್ಪನವರ ಕೋರಿಕೆಯು ನೆರವೇರಲೆಂದು ಹಾರೈಸುತ್ತೇವೆ.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............. ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು „ 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಂಗಯ್ಯ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[231-46] ಬ್ರಾಂಚ್ ಸೆಕ್ರೆಟರಿ, ಮದರಾಸ್

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ,

ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರುಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಟ್ಟಿಹರಳಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವನ್ನು ಉಪಯೋಗಿಸಿ ನೋಡಿ. ನಾವಿದಾತು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಜಂತಿ, ಕ್ಷಯ, ಗರ್ಭಕಟ್ಟಿ, ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲು 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-41]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಅಗಸ್ಟ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1–14–0.

ಇದೇ ಅಗಸ್ಟ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜಾಲ್ಕಿ ಒಳಗೆ ಖರೀದಿಸಿಕೊಳ್ಳುವವರಿಗೆ ರೂ. 1-14-0 ಅಗೆಗೆ ಕೊಡಲ್ಪಡುತ್ತ. [111-13]

ವಿಳಾಸ—ವಿ. ಕೆ. ಕಂಬುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಬಹಳ ಸೊಗಸಾದದ್ದು 18 ಮೊಳ ಬಾಳಿಕೆ ಬರುವದು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ಕ್ರಯ 2–8–0.



ಅಯ್ಯಾ,—ಘನವಂತರೇ, ಈ ಸೀರೆ ಉಡುವುದಕ್ಕೆ ಧನಿಕರಿಯರಿಗೆಯೂ ನೋಡುವುದಕ್ಕೆ ನಯವಾಗಿಯೂ ಇದೆ. ಇದು ಬಹುದಿನ ಬಾಳಿಕೆ ಬರುವದಾಗಿಯೂ ಉಡಲು ಅನುಕೂಲವಾಗಿಯೂ ಅಂದವಾಗಿಯೂ ಇರುತ್ತೆ. ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ ಉದ್ದ. ಸುಂದರವಾದ ಸೆರಗು. ಇತರ ಕಂಪನಿಗಳಲ್ಲಿ ಮಾರುವ ಮಟ್ಟಸೀರೆಯದು ಅಲ್ಲ. ಈ ಹೊಸ ಮಜಿನ್ ಸೀರೆಗೆ ಬಣ್ಣಕ್ಕೆ ಸರಕಿಗೆ ಗ್ಯಾರಂಟಿಕೊಡುತ್ತೇವೆ. 1 ನ್ನು ತರಿಸಿ ಪರೀಕ್ಷಿಸಿರಿ. ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದಬೇಕೆಂದು ಬಹಳ ಕಮ್ಮಿ ಧಾರಣೆ ಹಾಕಿರುತ್ತೇವೆ. [149-3]

ಸುಂದರವಾದ ಲೇಡಿಸು ರಿಷ್ಟುವಾಚು ಇದರ ಕ್ರಯ ಚರ್ಮದ ಪಟ್ಟಿ ಸಹಿತ ರೂಪಾಯಿ. 3–8–0.

ಅಯ್ಯಾ, ಈ ಗಡಿಯಾರ ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಸೊಗಸಾದದ್ದು. ಬಹು ಬಲಿಷ್ಠವಾದ ಸಾಮಾನುಗಳಿಂದಲೂ ಸಾಧ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ನಮ್ಮ ವಿಳಾಸ.—

ವಿ. ಎ. ಎಸ್. ಪಾಣಿ, ಜನರಲ್ ಮರ್ಚಂಟ್, 3, ಇರುಳಪ್ಪನ ಬೀದಿ, ಮದರಾಸ್.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು

ಒಂದು ಸಲ ಪರೀಕ್ಷಿಸಿ ನೋಡಿರಿ.

ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ಕರೆಸೋತಿ, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೆಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ಹಾಂಬೂಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಟಣ 1 ಕ್ಕೆ	....	ಕ್ರಯ	0-1-6
65 „ „ „	....	„	0-2-0
195 „ ಪೊಟ್ಟಣ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	......	„	0-8-0
445 „ ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	......	„	1-0-0

[80-16]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎನ್. ಸುಬ್ರಹ್ಮಣ್ಯಂ ಕಂಪೆನಿಯಲ್ಲಿ ಬಿಕರಿಗೆ ಇಡಲಾಗಿದೆ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[201-51] GIRLS' INDUSTRIAL SCHOOL, HASSAN.

ಕುಂತಲಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರಿಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-40]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ :—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಶೀನರಿ ಸಾಹಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ದರ್ಜ ವಿ.ಪಿ. ಮೂಲಕ ಕಳುಹಿಸಿರಿ." —ಕೆ. ರಾಮಸ್ವಾಮಿ, ಪಲ್ಲಾಸ-ಕಾ-ಸಿಟಿಯನ, 20-3-15.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಅದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಟೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕೆರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ :—ದಿ ಮಾರುತಿ ಏಜನ್ಸಿ,
[266-39] ಪಿ.ಒ. ಬಾಕ್ಸ್ 330, ಬೊಂಬಾಯಿ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 9-0-0.
ಆಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ...
ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ... ಧರೋಕಿಯಾಗಿಯೂ ... ಟಿಕ್ಕೆ ಸಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ... ಸೀರೆಯು ಉದ್ದ 18 ... ಕೆ. ಸುಂದರವಾದ ... ಗು. ಒಂದನ್ನು ... ಪರೀಕ್ಷಿಸಿ. ವಿಳಾಸ—

ವಿ. ಕೆ. ಕೆಂಯ...
[111-13] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದ...

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-40]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ...ರಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ...ಧಗಳಿರುತ್ತವೆ. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಛಾರ್ಜಿಲ್ಲದೆ ಚಿಕಿತ್ಸೆ ... ಹೇಳುತ್ತೇವೆ. ರೋಗಿಗಳಿಂದ ಬಂದಕಾಗದಪತ್ರಗಳನ್ನು ಅತ್ಯಂತ ಗುಪ್ತ...ಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,
೨೦, ಚೀನಾ ಬಜಾರ್ ರೋಡ್, ಮದ್ರಾಸು.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೆದುಳನ್ನು ಪರಿಪಡಿಸುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ವೈಭರಣ 1, ತಾಂಬೂಲಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೋನೇಷನ್ ಪಟ್ಟಿಗೆ 1, ರವಿವರ್ಮ ಫೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಒಟ್ಟು 60. ನಮ್ಮ ಕಂಪನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪೆನಿ,
[149-5] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅಪರದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25-30]

65 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,		1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು
ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ.

ಮೈಸೂರು ಸೀಮೆಗೆ ಏಜೆಂಟರು—ಮ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—8—1915 ರಿಂದ 13—8—1915 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ [illegible]
ಬೆಂಗಳೂರು ಪಟ್ಟಣ	0	0	0	[illegible]
ಮೈಸೂರು ,,	1	1	0	[illegible]
ಬೆಂಗಳೂರು ಡಿಸ್ಟ್ರಿಕ್ಟು	27	16	27	[illegible]
ಮೈಸೂರು ,,	8	6	0	[illegible]
ಕೋಲಾರ್ ,,	1	0	0	[illegible]
ಕೋಲಾರ್ ಚಿನ್ನದ ಗಣಿಗಳು	0	0	0	[illegible]
ತುಂಕೂರು ಡಿಸ್ಟ್ರಿಕ್ಟು	0	0	0	[illegible]
ಹಾಸನ ,,	3	0	0	[illegible]
ಚಿತ್ರದುರ್ಗ ,,	0	0	0	[illegible]
ಕಡೂರ್ ,,	3	2	0	[illegible]
ಶಿವಮೊಗ್ಗ ,,	33	21	0	[illegible]
ಜುಮ್ಲಾ	76	56	27	[illegible]

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರ ... ಯನ ವರ್ಷ ಋತು ಶ್ರಾವಣ ಬಹುಳ ಪದಿಗೆ ಶುಕ್ರವಾರದಿಂದ ಶ್ರಾವಣ ... ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಆಗಸ್ಟು ಮತ್ತು ಸೆಪ್ಟಂಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
27	ಶುಕ್ರ *	ತದಿಗೆ	47-38	ಪೂ.ಭಾ	48-36	[illegible]
28	ಶನಿ ;;	ಚೌತಿ	48-13	ರೇವತಿ	51-34	[illegible]
29	ಭಾನು	ಪಂಚಮಿ	51-30	ಅಶ್ವಿನಿ	55-43	[illegible]
30	ಸೋಮ †	ಷಷ್ಠಿ	56-10	ಭರಣಿ	60-0	[illegible]
31	ಮಂಗಳ §	ಸಪ್ತಮಿ	60-0	ಭರಣಿ	1-26	[illegible]
1	ಬುಧ ::	ಸಪ್ತಮಿ	0-4	ಕೃತ್ತಿಕೆ	7-16	[illegible]
2	ಗುರು ‡	ಅಷ್ಟಮಿ	5-6	ರೋಹಿಣಿ	13-56	[illegible]

* ಮಳೆ ನಕ್ಷತ್ರ—ಮಖಾ 4 ನೇ ಪಾದ. ;; ಶ್ರಾವಣಶನಿವಾರ, ... ಹರಚತುರ್ಥೀ. † ಮಳೆ ನಕ್ಷತ್ರ—ಪುಬ್ಬಾ 1 ನೇ ಪಾದ. § ಮಂ... ವ್ರತಂ, ಶ್ರೀ ಪ್ರಸನ್ನ ಕೃಷ್ಣಸ್ವಾಮಿ ರಥ. :: ದಧಫಲವ್ರತ, ... ಮನ್ನಾರ್ ಸಂಪ್ರದಾಯಕ್ಕೂ ಅರಮನೆಗೂ ಶ್ರೀ ಕೃಷ್ಣ ಜಯಂತಿ. ‡ ...ಪ್ಪರ್ ಸಂಪ್ರದಾಯಕ್ಕೆ ಶ್ರೀ ಕೃಷ್ಣ ಜಯಂತಿ.

Printed and Published by the Rev. H. Gu... Proprietor and Manager, Wesleyan Missio... Mysore. 26/8/1915.

REGISTERED
M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ ನೇ ಇಸವಿ ಸೆಪ್ಟಂಬರ್ ತಾರೀಖು ೭ ನೇ ಗುರುವಾರ. ಸಂಚಿಕೆ ೧೪

ಸ್ತ್ರೀಯರ ತಿಳುವಳಿಕೆಯು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಸೀಳಿಕೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ನಾಂಛಿಸಲಿಲ್ಲರು? ಅಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೆಂದರೆ:

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿದ ಕೂಡಲೇ, ತಲೆಯು ತಂಪಾಗಿ, ಮನಸ್ಸು ಉಲ್ಲಾಸವಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಕುಡಿಯುತ್ತವೆ; ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಚೇತೋಹರವೂ ಆಗಿರುತ್ತದೆ.

ಕೇಶಶಾಸ್ತ್ರದ ಎಲ್ಲ ನಿಯಮಗಳನ್ನೂ ಅನುಸರಿಸಿ ತಯಾರಿಸಲ್ಪಟ್ಟ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಹರ್ಷಿಸಿರಿ. ಈ ತೈಲವು ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನಾನಾ ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಆದಾಗಲ್ಲಿ ಒಂದಸಲ ನೋಡಿರಿ! ನೀವು ಸುಗಂಧಿತ ಬಂಧುಗಳು, ಬಾಲಕರು, ... ಕಾಮಿನಿಯಾ ತೈಲವು ಕೇಶದ ಬೆಳವಣಿಗೆಗೆ ಸರ್ವೋತ್ಕೃಷ್ಟವಾದದೆಂದು ಸಿದ್ಧವಾಗಿರುತ್ತದೆ. ಪ್ರತಿಯೊಂದು ಸೀಸೆಯನ್ನು ಕೂಡಲೇ ವಿ. ಪಿ. ಪ್ಯಾಕೇಟ ಕಳುಹಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬಲರೂ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ಸಹಾಯವೇ ದೊರಕುತ್ತದೆಂದು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೇಶತೈಲದ ಬೇರೆ ಸೀಸೆಯನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ನೀವು ನಿಮಗೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ಲೇಬಲ್ಲು ಮತ್ತು ಟ್ರೇಡ್ ಮಾರ್ಕನ್ನು ನೋಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಓಟೊ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮ. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಪುಷ್ಪಗಳಿಂದ ತೆಗೆಯಲಾಗಿದೆ. ಅದರಲ್ಲಿ ಮಧ್ಯವು (ಆಲ್ಕೋಹೋಲ್) ಸಂಪರ್ಕವಿಲ್ಲವು. ಇದರ ಒಂದು ಹನಿ ನಿಮ್ಮ ಕೈಚೀಲದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಸುವಾಸನೆಯು ಮುಗಿದರೆ, ನಿಮ್ಮ ಸುತ್ತಲು ಸುವಾಸನೆ ಹರಡುವುದೆಂದು ತಿಳಿಯಿರಿ. ಬೇರೆ ಯಾವ ಪರಿಮಳ ದ್ರವ್ಯವೂ ಹೀಗಿರಲಾರದು. ಈ ಓಟ್ಟೋ-ದಿಲ್ ಬಹಾರದ ಗಂಧವು ಅವಲ್ಪವೂ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಸಾರಿ ಸೀಸೆಯನ್ನು ತರಿಸಿಕೊಳ್ಳಿರಿ. [18-32]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಬಾಟಲಿಯ) ಸೀಸೆ ರೂ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಓಟ್ಟೊ-ದಿಲ್ ಬಹಾರ್ ಪರಿಮಳದ ಕಾಡಿಗೆಗಳು ಡಬ್ಬಿ ಒಂದಕ್ಕೆ 0-13-0.

ಪೂರ್ಣ ಕೆಲಸ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಸೀದಿ, ಮಾರ್ಕೆಟ್, ಬಾಂಬೆ.

ಏಜಂಟ್, ೩ ಕಾರ್ ಸ್ಟ್ರೀಟ್, ಮಂಗಳೂರು.

ಇಲ್ಲಿ ನೋಡಿ: ಅಭಿನವ! ಅಕ್ಷರಾಂಜಲಿ!!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವನ್ನು ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟೇಜ್ 4 ಆಣೆ. ಅಡ್ರಸ್—ಅಕ್ಷರಾಲಯ, ಮೈಸೂರು. [147-6]

ಮನೆ ಕ್ರಯಕ್ಕೆ ಸಿಕ್ಕುತ್ತೆ.

ಮೈಸೂರು ಚಾಮರಾಜಪೇಟೆಯಲ್ಲಿರುವ, ಗತಿಸಿದ ಪಿ. ವೇದಮೂರ್ತಿಯ್ಯನವರ ಮನೆ, ಸಿ. ಬಜಾರ್ ಸ್ಟ್ರೀಟ್ ರೋಡು, ನಂ. 956 ಇದಕ್ಕೆ ಸೇರಿದ ಒಂದು ಖಾಲಿ ನಿವೇಶನ ಸಹ ಕ್ರಯಕ್ಕೆ ಸಿಕ್ಕುತ್ತೆ. ಅಪೇಕ್ಷಿಸತಕ್ಕವರು ಮೈಸೂರು ಚರ್ಚ್ ರೋಡಿನಲ್ಲಿರುವ (ಕನ್ನಡ ದವಾಖಾನೆ ಬಳಿ) ಪಾದ್ರಿಗಳಾದ ಸಾಮುವೇಲ್ ಟೇಮರ್‌ರವರನ್ನು ಕೇಳತಕ್ಕದ್ದು. [173-2]

THE SCIENTIFIC CUTTER

Revised and enlarged second edition of the **Scientific Cutter** is a masterly useful book, on cutting Men's, Children's and Women's garments on scientific principles. **Price Rs. 2; with Postage Rs. 2-3-0 only.**

RAO'S TAILORING COLLEGE,

167-3 **318, Princess Street, Bombay No. 2.**

ಅರೇಬಿಯನ್ ನೈಟ್ಸ್

ಎಂದ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಅಮೂಲಾಗ್ರವಾಗಿ ಪರಿಶೀಲಿಸಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-22]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1.	ಮೈಸೂರಿನ ಭೂವಿವರಣೆ	0—5—0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0—6—0
	ಮೇಲೆ ಕಂಡ ಎರಡೂ ಸೇರಿ	0—10—0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಚೆ|| ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[31—29] ಸುಬೋಧ ಗ್ರಂಥಾಲಯ, ಮೈಸೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ಲಿವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು ಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-4-0; ರಫ್ ಪ್ರತಿಗೆ ರೂ. 1-12-0. [158-5]

ವಿಳಾಸ—ಎಂ. ಪಂಡಿತಾರಾಧ್ಯರು, ಮೈಸೂರು.

ಜಾರ್ಜ್ ಸಾರ್ವಭೌಮರ ಚರಿತ್ರೆ.

ಕನ್ನಡಿಗರೆಲ್ಲ ಓದಲೇ ಬೇಕಾಗಿರುವ ಈ ಹೊಸ ಪುಸ್ತಕದಲ್ಲಿ ಚಕ್ರವರ್ತಿಯವರ ಚರಿತ್ರೆಯೂ, ದೆಹಲಿ ದರ್ಬಾರಿನಲ್ಲಿ ನಡೆದ ವಿಶೇಷ ಸಂಗತಿಗಳೂ, ಅವರ ಭಾಷಣಗಳೇ ಮುಂತಾದ ರಾಜಕೀಯ ವಿಚಾರವನ್ನೊಳಗೊಂಡಿರುವ 43 ಪ್ರಕರಣಗಳೂ ಇವೆ. ಪ್ರಸಿದ್ಧ ಪಂಡಿತರು ಇದನ್ನೋದಿ—ಇದು ನೀತಿಬೋಧಕ ವಾದುದು ಮನೋರಂಜಕವಾಗಿದೆ. ರಾಜಭಕ್ತಿಯುಳ್ಳವರು ಕೊಂಡುಓದತಕ್ಕ ಪುಸ್ತಕವು—ಎಂದು ಅಭಿನಂದಿಸಿದ್ದರಿಂದ ಸರ್ಕಾರದವರು ಪ್ರೋತ್ಸಾಹಿಸಿದಾರೆ. ಅವರ (ಚಕ್ರವರ್ತಿ ದಂಪತಿಗಳ) ಭಾವಚಿತ್ರವೂ ನೇತ್ರಾನಂದಕರವಾಗಿರುವುದು. ಬೆಲೆ 8 ಆಣೆ.

[8-34] ವಿಳಾಸ—ದಿ ಜನರಲ್ ಏಜನ್ಸಿ, ಮೈಸೂರು.

'ಸಂಗೀತ ಪಾರಿಜಾತ'

ಹೊಸ ಮುದ್ರಣ! ಹೆಂಗಸರಿಗೆ ಅತ್ಯಾವಶ್ಯಕವಾದುದು!!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ತುಂಬಿದೆ! ಈ ಎರಡನೇ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ! ಇದು ಪರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[275-38] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England).

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or

[142-6] K. S. Tirupathi, F. C. I., Secretary,
Opposite Minto Hospital, Bangalore City.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪೆನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಾಜರಾವ್, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-47] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಒಂಬತ್ತು ಭಾಷೆ!! ಹೊಸ ಪುಸ್ತಕ! ಒಂಬತ್ತು ಲಿಪಿ!!!

ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಬಲು ಒಳ್ಳೆಯ ಸಮಯ.

ಮೊದಲನೆಯ ಪುಸ್ತಕ. ಭಾಷಾನಿಧಿ. ವರ್ಣಪರಿಜ್ಞಾನ.

ತೆಲುಗು, ಅರವ, ಮಲೆಯಾಳ, ಸಂಸ್ಕೃತ, ಹಿಂದಿ, ಮಹಾರಾಷ್ಟ್ರ, ಗುಜರಾತಿ, ಬೆಂಗಾಳಿ, ಕನ್ನಡ, ಗ್ರಂಥ, ಇವುಗಳನ್ನು ಸ್ವತಂತ್ರವಾಗಿ ಕಲಿಯಬಹುದು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ! ಬೇಗ ಬೇಗ ಬರೆಯಿರಿ!!!

ಕ್ರಯ ಅಂಚೆಯ ವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ.

ಎರಡನೆಯ "ಶಬ್ದಪರಿಜ್ಞಾನ" ಮೂರನೆಯ "ವಾಕ್ಯಪರಿಜ್ಞಾನ" ಅಚ್ಚಾಗುತ್ತಿವೆ.

[171—2] ಪುಸ್ತಕ ದೊರೆಯುವ ಸ್ಥಳ—ಸವಿನುಡಿ, ಭಾಷಾನಿಧಿ, ಕೆ. ಸಿ. ಬೀದಿ, ಕೋಟೆ, ಬೆಂಗಳೂರು.



ಸೆಪ್ಟಂಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಅಭಾರೀ ಕ್ರಯದಕ್ಕೆ ಗಡಿಯಾರಗಳನ್ನು ಸೆಪ್ಟಂಬರ್ ಒಳಗೆ ಕಳಿಸಿಕೊಳ್ಳುವವರಿಗೆ ರೂ. 1-14-0 ಆದಿಗೆ ಕೊಡಲ್ಪಡುತ್ತೆ. [111-14]

ವಿಳಾಸ—ಎ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಪ್ರೋತ್ಸಾಹಿಸಿರಿ.

ಪ್ರಖ್ಯಾತಿಪಟ್ಟ ಪ್ರೊಫೆಸರ್ ಜೇಮ್ಸರವರ ವಿದ್ಯುಚ್ಛಕ್ತಿಯ ಮಾತ್ರೆಗಳು 40 ಮಾತ್ರೆಗಳ ಶೀಸೆ 1 ಕ್ಕೆ ರೂ. 2; ಕಾಮಿನಿಯಾ ತೈಲ—ಕೂದಲನ್ನು ಬೆಳೆಸುವ ತೈಲಗಳಲ್ಲಿ ಶ್ರೇಷ್ಠವಾದದ್ದು ಶೀಸೆ 1 ಕ್ಕೆ ರೂ. 1. ಶೀಸೆ 3 ಕ್ಕೆ ರೂ. 2-10-0; ಒಟ್ಟೋ ದಿಲ್ಬಹಾರ್—ಅತ್ತರುಗಳಲ್ಲಿ ಮಧುರ, ಕೋಮಲ, ಚಿರಸ್ಥಾಯಿಯಾದದ್ದು ಶೀಸೆ 1 ಕ್ಕೆ ಆ. 8, 12, ಮತ್ತು ರೂ. 2; ಒಡ್ಸನ್ಸ್ ಮಲೇರಿಯಾ ಪಿಲ್ಸ್—ಎಲ್ಲಾ ತರದ ಜ್ವರಕ್ಕೆ ದಿವ್ಯ ಔಷಧ ಶೀಸೆ 1 ಕ್ಕೆ ರೂ. 1; ಉಸ್ಮಾ ಕಲರ್—ಇದು ಬಿಳೀ ಕೂದಲನ್ನು ಕಪ್ಪು ಮಾಡುವಂಥಾದ್ದಾಗಿದೆ ಬ್ರಷ್ ಸಮೇತವಿರುವ ಪೆಟ್ಟಿಗೆ 1 ಕ್ಕೆ ರೂ. 1; ಸೆಕ್ಸೆಕ್ ಮಾತ್ರೆಗಳು ಪೇಕೆಟ್ 1 ಕ್ಕೆ ಆ. 3; ಸುಶೀಲಮಾಲತಿ ಡಬ್ಬಿ 1 ಕ್ಕೆ ಆ. 3; ಕಮಲಾಕ್ಷರಂಜನ ಡಬ್ಬಿ 1 ಕ್ಕೆ ಆ. 5; ಕ್ರಿಸೊಲಾಯಿಡ್ (ಗಜಕರ್ಣ ಮುಲಾಮು) ಡಬ್ಬಿ 1 ಕ್ಕೆ ಆ. 4; ಕಾಮಿನಿಯಾ ಕೋಲ್ಡ್ ಕ್ರೀಮ್ ಡಬ್ಬಿ 1 ಕ್ಕೆ ಆ. 12, ಅಮೃತಾಂಜನ ಡಬ್ಬಿ 1 ಕ್ಕೆ ಆ. 8; ನೀಲಗಿರಿ ತೈಲ ಶೀಸೆ 1 ಕ್ಕೆ ಆ. 5; ದಂತಮಂಜನ ಡಬ್ಬಿ 1 ಕ್ಕೆ ಆ. 2; ಕುಂತಲಬಹಾರ ತೈಲ ಶೀಸೆ 1 ಕ್ಕೆ ಆ. 8; ವಿಶ್ವನಾಥ ತೈಲ ಶೀಸೆ 1 ಕ್ಕೆ ರೂ. 1; ಬಸೆಲ್ವಾಲದ ಆಗ್ರೂ ವಿಸ್ಕರ್ ಶೀಸೆ 1 ಕ್ಕೆ ರೂ. 1; ಹೊಬ್ಸ್ ರೋಜ್ ಸೆಂಟ್ ಶೀಸೆ 1 ಕ್ಕೆ ಆ. 8; ಲೆವೆಂಡರ್ ಶೀಸೆ 1 ಕ್ಕೆ ಆ. 12; ಜಕ್ತಾಕ್ 25 ಮಾತ್ರೆಗಳ ಪಾಕೆಟ್ 1 ಕ್ಕೆ ಆ. 1, 110 ಮಾತ್ರೆಗಳ ಪಾಕೆಟ್ 1 ಕ್ಕೆ ಆ. 4, 415 ಮಾತ್ರೆಗಳ ಮೆಟಲ್ ಡಬ್ಬಿ 1 ಕ್ಕೆ ರೂ. 1; ಊಲನ್ ದಾರದ ಕ್ಯಾಂಪ್ರಾಬ್ ಮುಸುಕಿನ ಟೋಪಿಗಳು ದೊಡ್ಡ ಸೈಜು 1 ಕ್ಕೆ ರೂ. 1-4-0; ನಾರಂಗಿ ಅತ್ತರು ಶೀಸೆ 1 ಕ್ಕೆ ಆ. 8; ರೋಜ್ ಅತ್ತರು ಶೀಸೆ 1 ಕ್ಕೆ ಆ. 8; ಬೋಂಬೇ ರೋಯಲ್ ಲೀವರ್ ವಾಚ್ ಸೆಕೆಂಡ್ ಹೇಂಡ್ ಉಳ್ಳದ್ದು, ಬಲಿಷ್ಠವಾದ ಕೆಲಸ ವಾಚು 1 ಕ್ಕೆ ರೂ. 2-4-0; ವಾರಕ್ಕೊಮ್ಮೆ ಕೀಲಿ ಕೊಡುವ ವಾಚು 1 ಕ್ಕೆ ರೂ. 7-12-0; ವಾಚ್ ಸರಪಣಿ 1 ಕ್ಕೆ ಆ. 8; ಕ್ಯಾಪಿಟೋಲ್ ಬಾಮು (ಬೇಸೋಜಾರಿ ಮುಲಾಮು) ಡಬ್ಬಿ 1 ಕ್ಕೆ ಆ. 8; ವಾಗ್ಸ್ ಪ್ರತಿ 1 ಕ್ಕೆ ಆ. 12; ಒಡ್ಸನ್ಸ್ ಕ್ಷಷ್ಟಫಿಪ್ರಪಾಷ ಶೀಸೆ 1 ಕ್ಕೆ ರೂ. 1-4-0; ಸೆಶಿಂಡಾನ್ ಡಬ್ಬಿ 1 ಕ್ಕೆ ಆ. 4½, 9; ನಂ. 1 ನೇ ಸುಪೀರಿಯರ್ ಊಲು ದಾರ 8 ಲಡೀಳಿರುವ ಬಂಡಲ್ 1 ಕ್ಕೆ ಈಗಿನ ಕ್ರಯ ರೂ. 5-12-0. ಭಕ್ತಮಹಿಮೆ ಪ್ರತಿ 1 ಕ್ಕೆ ಆ. 12. ಮೇಲೆ ಬರೆದ ಸಾಮಾನುಗಳು ವಿ. ಪಿ. ಮೂಲಕವೂ ಪಾನಿಸಲ್ಪಡುವದು. ನಮ್ಮಲ್ಲಿ ಅನೇಕ ತರದ ಇಂಗ್ಲಿಷ್ ಔಷಧಗಳೂ, ಪರಿಮಳದ್ರವ್ಯಗಳೂ, ವಾಚುಗಳೂ, ಭಾರೀ ಸುಲಭ ಬೆಲೆಯಿಂದ ದೊರೆಯುವುವವು.

[139-8] ನಮ್ಮ ವಿಳಾಸ:—ದಿ ಊಲನ್ ಮಾರ್ಟ್, ನಂ. 1, ಮಂಗಳೂರು.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರ್ಷದ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತದೆ. ಈಗ ಮಾರಿಕೆಗೆ ಬಂದಿರುವ ಅಲ್ಪ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳು ಜಾತಿಯವು. ಹಚ್ಚಿದ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ ದರ್ಬಾರ್ ಕೂದಲು ರಂಗು ದ್ದಲ್ಲ. ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋ ವಿರಿ. ಕ್ರಯ ಬುರುಸು ಸಮೇತ ಬಾಟ್ಲಿ 1 ಕ್ಕೆ ರೂ. 1-0-0 ಮಾತ್ರ. ಅಂಚೆ ಹಾಸಲು 4

ನಮ್ಮ ವಿಳಾಸ—ವಿ. ಎ. ಎಸ್. ಹಾಣಿ,

[149-6] ೩, ಇರುಳಪ್ಪನ ಬೀದಿ, ಮದರಾಸ್

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿ ತನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು ಒರಟಾಗಿರುವ ಕೂದಲು ಮೃದುವಾಗುವದು. ಪಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ಯಲ್ಲಿರುವ ಹೊಟ್ಟನ್ನು ನಿವಾರಿಸುವದು. ಕಣ್ಣಿನಲ್ಲಿ ನ್ನು ಕೆಡಿಸು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯ ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಪನ್ನೀರು, ಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿ ಸಂಪಿಗೆ, ಇರುವಂತಿಗೆ, ಮಲ್ಲಿಗೆ, ಕ್ಯಾದಿಗೆ, ಗುಲಾಬಿ, ಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿ ಯೂವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವ ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಎಲ್ಲರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

16 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಅಮೇರಿಕ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲವಾಕ್ಷೆ 22, ಕೊಂಡೆ ಗಿಣಗಳು 6, ಕಾರ್ಬೊನೇಟ್ ಬ್ರೂಚ್ 1, ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[156 3] ನಂ. 44, ನಂಬುಳಯ್ಯರ ಬೀದಿ, ಮದರಾಸ

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಲಿಗೆ ಸೇರಿನ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವ ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯ ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ. 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ಕಾಲದಲ್ಲಿ ಬರತಕ್ಕ ಸಾಧಾರಣವಾದ ಕಾಯಿಲೆಗಳನ್ನು ಗುಣಮಾಡುವ ಅತ್ಯುಪಯುಕ್ತವಾದ ಎಂಟು ಸಿದ್ಧೌಷಧಗಳನ್ನು ಒಂದು ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಕರೆಲ್ಲರೂ ಈ ಪೆಟ್ಟಿಗೆಯನ್ನು ಇಟ್ಟುಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಮನೆಯಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು.

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

ವಿಳಾಸ :- ಸದ್ವೈದ್ಯಶಾಲಾ, ನಂಜನಗೂಡು

[31-40]

ಸಾಟಿಯಿಲ್ಲದ ಬಲವರ್ಧಕ

ಟಾನಿಕ್ಕು ಮಾತ್ರೆಗಳು

[247-41]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವವು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವವು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವವು. ಕೈಕಾಲು ಸೋಟದ ನೋವುಗಳನ್ನು ಹೋಗಲಾಡಿಸುವವು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲವು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತ ಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳುಂಟು. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಧಾತುಗಳಲ್ಲಿದ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಸಾಧಾರಣಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-52] GIRLS' INDUSTRIAL SCHOOL, HASSAN.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ನ್ಯಾಷನಲ್ ಫ್ಯಾಕ್ಟರಿ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹವೆಗಳಿಗೂ ಎಲ್ಲಾ ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ನಮ್ಮ ತನಾಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 50 ; ಈಗಿನ ಕ್ರಯ ರೂ. 19, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90 ; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.



ವಿಳಾಸ—National Harmonium Co.,

170-2 SIMLA (P.O., (E) CALCUTTA.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಕಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿಕಿಂತಾನದಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ಶೂಲೆ ತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಸುಧಾರಿಸುವುದು. (2) ಊಟವಾದನಂತರ ಅಥವಾ ಪಾನವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಕ್ರಮವಾಗಿ ಅನುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡುಗಾರರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿವೆ. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಇದಕಾರಣ ಇಂತಹ ಗುಣಕಾರಿಯಾದ ಸಿಕಿಂತಾನದ ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25-31]

ಕ್ರಯ ಪೊಟ್ಟ 1 ಕ್ಕೆ 2 ಆಣೆ. 200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ. 100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ. 650 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
" " " 4 " 300 " " 9 " 1200 " " " 2 "

ಮಾಯಿಗೆ ಕಳಿಸುವಾಗ ವಿ. ಪಿ. ಮೂಲಕ ಕಳುಹಲ್ಲು ಡುವುದಿಲ್ಲವು. ಮನಿಯಾರ್ಡರ್ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು. ಪ್ರಖ್ಯಾತಿಹೊಂದಿದ ವರ್ತಕರಲ್ಲೆಲ್ಲಾ ಮಾರಲಿಕೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಲಿಂತ್ರಾಣ್ ಡಿಪೋ. ಬೊಂಬಾಯಿ.

ಮೈಸೂರು ಸೀಮೆಗೆ ಏಜೆಂಟರು—ಮ ಎಂ. ರಾಮಸಂಜೀವ ಶೆಟ್ಟರು. ಚೆನ್ನಪಟ್ಟಣ. ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಇಡಲಾಗಿದೆ.

೫೦ ಸಾಮಾನು 50! ಇನಾಂ ಸಾಮಾನು 50!!

ಕೀರ ಯೋಗ್ಯತಾ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಯರಿಗೆ ತಲೆ ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತಿಯಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಹಾದಿಯಲ್ಲಿ ಅದರ ಸುವಾಸನೆ ಸುತ್ತ ಇರುವ ಮನೆಗಳಿಗೂ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಅಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದು. ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ. ಇದು ಆರ್ವುಡ್ ಆಯಿಲ್ ನಲ್ಲಿ ತಯಾರಿಸಲ್ಪಟ್ಟದ್ದು. ಇದನ್ನು ಖರೀದಿಸುವವರಲ್ಲಿ ಉಪಯೋಗವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆ ಗಿಣಿ 6, ಬರ್ನ್ ಸಿಲ್ಕರು ವೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ 1, ರವಿವರ್ಮ ಫೋಟೋ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಒಂದೇ ಸಾರಿ ಮೂರು ತರಿಸಿಕೊಳ್ಳುವರಿಗೆ 1 ಲವಂಡರ್ ಬಾಟ್ಲು ಇನಾಮಾಗಿ ಕಳುಹಿಸುತ್ತೇವೆ. 6 ತರಿಸಿಕೊಳ್ಳುವರಿಗೆ ಇನಾಂ ಇಲ್ಲದಂತೆ ಒಂದು ರಿಸ್ಟ್ ವಾಚ್ ಕಳುಹಿಸುತ್ತೇವೆ

ನಮ್ಮ ವಿಳಾಸ:—ಗೈರ್ಯಲಕ್ಷ್ಮಿ ಅಂಡ್ ಕಂಪನಿ,

[141-6] 3, ಇರುಳಪ್ಪನ ಬೀದಿ, ಮದರಾಸು.

ಸಂತೋಷಕರವಾದ ಪ್ರಕಟನೆ!

ಸಂತೋಷಕರವಾದ ವಾಚ್!! ಸಂತೋಷಕರವಾದ ಬಹುಮಾನ!!

ಸುಂದರವಾದ ಜುವೆಲ್ಲು ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

9 ಬಹುಮಾನಗಳ ಸಹಿತ ರೂ. 2-12-0 ಮಾತ್ರ.

6 ವರ್ಷದ ಗ್ಯಾರಂಟಿ.

ಅಯ್ಯಾ ಮಿತ್ರರೆ, ಈ ನಕ್ಷೆಯಲ್ಲಿ ತೋರಿಸಿರುವ ಭಾರಿ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ



ಕೆಂಪನೀಯ ಬಲಿಷ್ಠವಾದ ಸಾಮಾನುಗಳಿಂದಲೂ, ಸಾಧ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿ ಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿ ಇರುವ ದೊರೆಗಳು ಕೊಂಡುಕೊಳ್ಳುತ್ತಾ ಇದಾರೆ. ಇದು ನೋಡುವುದಕ್ಕೆ ಮುಚ್ಚಟವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚಾಗುತ್ತಾ ಇವೆ. ಭಾರಿ ಕ್ರಯದ ಬಹುಮಾನಗಳನ್ನು ಹಾಕಿರುತ್ತೇವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಿರಿ. ಬಹುಮಾನದ ತಪಸೀಲು—(1) ಸುಂದರವಾದ ಸರಪಣಿ, (2) ಕಂಪಾಸ್, (3) ಜರ್ಮನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಪರಿಮಳ ಸುವಾಸನೆ ಸೆಂಟ್, (7) ಕೈ ಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟು ಬಟನ್ ನಮ್ಮ ವಿಳಾಸ:— [149-3]

ಗೈರ್ಯಲಕ್ಷ್ಮಿ ಅಂಡು ಕಂಪನಿ, ಜನರಲ್ ಮರ್ಚಂಟ್ಸ್,

3, ಇರುಳಪ್ಪನ ಬೀದಿ, ಸಾಹುಕಾರ್ ಪೇಟೆ, ಮದರಾಸು.

ಮೋಸಹೋಗುವೆವೆಂಬ ಭಯವಿಲ್ಲ.

ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ಸಾದಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ ಪಿ ಮೂಲಕ ಕಳುಹಿಸಿಕೊಡಿರಿ.—ಕೆ. ರಾಮಸ್ವಾಮಿ, ಪಲ್ಲಾಕು-ಕಾ-ಸಿಬ್ಬಂದಿ, 20-2-16

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೋಂಟಿ ಅಳಿದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-40] ಪಿ. ಒ. ಬಾಕ್ಸ್ 330, ಬೊಂಬಾಯಿ.

ನಮ್ಮ ಏಜಂಟರಿಗೆ.

"ವೃತ್ತಾಂತ ಪತ್ರಿಕೆ" ಯ ಮೊದಲನೇ ಕ್ವಾರ್ಟರು ಪೂರೈಸಿತು. ಏಜಂಟರು ಈ ಕ್ವಾರ್ಟರಿನ ಲೆಕ್ಕಗಳನ್ನು ಬೇಗನೆ ಮುಗಿಸಿ ಒಂದು ಪ್ರತಿಯನ್ನು ಸಬ್‌ಸ್ಕ್ರೈಬರುಗಳಿಗೂ, ಒಂದು ಪ್ರತಿಯನ್ನು ನಮಗೂ ಕಳುಹಿಸುತ್ತಾರೆಂದು ಕೋರಲ್ಪಟ್ಟಿದೆ. ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ವೃತ್ತಾಂತ ಪತ್ರಿಕೆ.

——:o:——

ಶಕೆ ೧೯೧೫ ನೇ ಇಸವಿ ಸೆಪ್ಟಂಬರ್ ತಾ. ೨ ನೇ ಗುರುವಾರ.

ನಮ್ಮ ಸರ್ಕಾರದ ಲೆಕ್ಕಪತ್ರಗಳು.

ನಮ್ಮ ಗೌವರ್ನ್‌ಮೆಂಟಿನವರು ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಆಹಾರ ದಿನಸುಗಳ ಧಾರಣೆ, ಡಿಸ್ಟ್ರಿಕ್ಟುಗಳ ವ್ಯವಸಾಯ ಮುಂತಾದ ಬಾಬುಗಳ ವಿಚಾರ, ಪವಾಸ್ಥಿತಿ, ಮಳೆಯ ವಿಚಾರ, ಈ ಮೊದಲಾದ ವಿದ್ಯಮಾನಗಳನ್ನು ಕುರಿತು ಪ್ರತಿವಾರದಲ್ಲೂ ಹಲವು ಸಂಖ್ಯೆಗಳನ್ನು ಪ್ರಕಟಮಾಡುತ್ತಾರೆ. ಇದಲ್ಲದೆ ಎಲ್ಲಾ ಇಲಾಖೆಗಳಿಂದಲೂ ಪ್ರಕಟವಾಗುವ ನಾನಾ ರಿಪೋರ್ಟುಗಳಲ್ಲಿ ವರುಷೇ ವರುಷ ಅನೇಕ ಲೆಕ್ಕಗಳನ್ನು ಕಾಣಿಸುವರು. ಈ ಸಂಖ್ಯೆಗಳೂ ಲೆಕ್ಕಗಳೂ ಎಷ್ಟು ಮಟ್ಟಿಗೆ ಯಥಾರ್ಥವಾಗಿವೆ ಎಂಬ ಪ್ರಶ್ನೆಯುಂಟಾಗುತ್ತದೆ. ಯಥಾರ್ಥವೆಂದು ಖಂಡಿತವಾಗಿ ಸಾಧಿಸಬಹುದಾದ ಸಂಖ್ಯೆಗಳನ್ನು ಗೊತ್ತುಮಾಡಿ ಪ್ರಕಟಿಸುವುದು ಸಾಧ್ಯವೇ ಎಂದು ಸಂಶಯಪಡುತ್ತೇವೆ. ಒಂದಲ್ಲದಿದ್ದರೆ ಇನ್ನೊಂದು ಕಡೆ ಯಾವುದಾದರೊಂದು ತಪ್ಪು ಬೀಳುವುದು; ಅದನ್ನು ಆಗಲೇ ಕಂಡುಹಿಡಿದು ಸರಿಪಡಿಸುವುದಿಲ್ಲ. ಆದರೂ ಆ ಸಂಖ್ಯೆಗಳೂ ಲೆಕ್ಕಗಳೂ ಕೂಡಿದ ಮಟ್ಟಿಗೂ ಯಥಾರ್ಥವಾದವುಗಳಾಗಿರಬೇಕಾದದ್ದು ಅವಶ್ಯ. ಈಗ ಪ್ರಕಟವಾಗಿರುವ ಲೆಕ್ಕಗಳನ್ನು ನೋಡಿ ಯಾವ ವಿಚಾರದಲ್ಲಾಗಲಿ ವಿದ್ಯಮಾನಗಳು ಹೀಗೆ ಹೀಗೆ ಪರಿಣಾಮವಾಗುವವೆಂದು ಗ್ರಹಿಸಿಕೊಳ್ಳುವುದು ಬಹಳ ಪ್ರಯಾಸ.

ಈ ಭಾಗವು ನಮ್ಮ ಗವರ್ನ್‌ಮೆಂಟಿಗೆ ಗೊತ್ತಾಗಿರುವಂತೆ ಕಾಣುತ್ತದೆ. ಈಗ ಸರ್ಕಾರದವರು ಜನನ, ಮರಣ, ಮದುವೆ ವಿಚಾರಗಳಲ್ಲಿ ಈಗ್ಗಿಂತಲೂ ಖರಾದಾದ ಲೆಕ್ಕಗಳು ಕೂಡಿಸಲ್ಪಡಬೇಕೆಂದು ಹುಕುಂ ಕೊಟ್ಟಿರುವರು. ಇದಕ್ಕೋಸ್ಕರ ಸರ್ಕಾರದವರು ಒಂದು ಪಂಚಾಯತಿಯನ್ನು ಗೊತ್ತುಮಾಡಿದ್ದರು. ಈ ಪಂಚಾಯತರು ಪರ್ಯಾಲೋಚನೆಯಿಂದ ಒಂದು ರಿಪೋರ್ಟನ್ನು ಬರೆದುಕೊಟ್ಟರು. ಸರ್ಕಾರದವರು ಆ ರಿಪೋರ್ಟನ್ನು ಮಾತ್ರ ಪ್ರಕಟಿಸಿರುವುದಿಲ್ಲ. ಪಂಚಾಯತರ ತೀರ್ಮಾನಗಳನ್ನು ತಿಳಿಸಿರುತ್ತಾರೆ. ಯಾವ ಯಾವ ಆಧಾರಗಳನ್ನಿಟ್ಟುಕೊಂಡು ಪಂಚಾಯತರು ಆ ರೀತಿ ಶಿಫಾರಸು ಮಾಡಿದರೋ ಅದೂ ತಿಳಿದುಬರಲಿಲ್ಲ. ಆ ಪಂಚಾಯತರು ಈಗ ಆಚರಣೆಯಲ್ಲಿರುವ ಕ್ರಮಗಳನ್ನಿಟ್ಟುಕೊಂಡು ಅವುಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ಬರೆದುಕೊಟ್ಟರೋ, ಅಥವಾ ಈ ಲೆಕ್ಕಗಳನ್ನು ಬರೆಯುವ ವಿಧಾನಗಳನ್ನೇ ಬದಲಾಯಿಸಿ ಹೊಸ ಏರ್ಪಾಡುಗಳನ್ನು ಸೂಚಿಸಿದರೋ ತಿಳಿದು ಹೇಳುವುದು ಕಷ್ಟ.

ಹ್ಯಾಗೂ ಈ ಜನನ ಮರಣ ಮೊದಲಾದ ಲೆಕ್ಕಗಳ ಜವಾಬ್ದಾರಿಯನ್ನು ಸರ್ಕಾರದವರು ಅನೇಕ ಅಧಿಕಾರಿಗಳಿಗೆ ವಹಿಸಿರುವಂತೆ ನಮಗೆ ತೋರುವುದು. ಪಟೇಲರು, ಶಾನುಭೋಗರು, ಅಮಲ್ದಾರರು, ಶ್ಯಾನಿಟರಿ ಮತ್ತು ಅ|| ಸ್ಯಾನಿಟರಿ ಇನ್ಸ್‌ಪೆಕ್ಟರುಗಳು, ಗ್ರಾಮಾಭಿವೃದ್ಧಿ ಸಂಘಗಳು, ಯೂನಿಯನ್ ಪಂಚಾಯತಿಗಳು, ಅಮಲ್ದಾರರು, ಇತರ ಮೇಲ್ಪಟ್ಟ ರೆವಿನ್ಯೂ ಮತ್ತು ಸ್ಯಾನಿಟರಿ ಅಧಿಕಾರಿಗಳು, ಡೆಪ್ಯುಟಿ ಕಮಿಷನರರು—ಇವರುಗಳೆಲ್ಲಾ ಈ ಲೆಕ್ಕಗಳ ಜವಾಬ್ದಾರಿ ವಹಿಸಲ್ಪಟ್ಟಿರುತ್ತದೆ. ಇದರಿಂದ ತೊಡಕುಗಳು ಬಹಳ ಹೆಚ್ಚಾದವೆಂದೂ, ಯಾವ ಒಂದು ಇಲಾಖೆಯಾಗಲಿ ಒಬ್ಬ ಅಧಿಕಾರಿಯಾಗಲಿ ಉಚಿತವಾದ ಜವಾಬ್ದಾರಿ ವಹಿಸಲ್ಪಟ್ಟಿಲ್ಲವೆಂದೂ ಧಾರಾಳವಾಗಿ ಹೇಳಬಹುದಾಗಿದೆ.

ಖರಾವಾದ ಲೆಕ್ಕಗಳು ಗೊತ್ತಾಗುವುದಕ್ಕೆ ಹೊಸದಾಗಿ ಕಾನೂನ್ ಕೂಡ ಮಾಡಬೇಕೆಂದು ಸರ್ಕಾರದವರು ಅಭಿಪ್ರಾಯಪಡುತ್ತಾರೆ. ಕಾನೂನು ಆಗುವುದಕ್ಕಿಂತ ಮುಂಚೆ ಅದನ್ನು ಜಾರಿಮಾಡುವ ಸಾಧನಗಳು ಗೊತ್ತಾಗಬೇಕು. ರೆವಿನ್ಯೂ ಇಲಾಖೆಗೆ ಈ ಜವಾಬ್ದಾರಿಯನ್ನು ವಹಿಸುವುದು ಸಹಜವಲ್ಲವೆಂದು ನಮಗೆ ತೋರುತ್ತದೆ. ವೈದ್ಯ ಮತ್ತು ಸ್ಯಾನಿಟರಿ ಇಲಾಖೆಯ ಅಧಿಕಾರಿಗಳೂ ನೌಕರಮಾನೇರುಗಳೂ ಈಗ ಸಂಸ್ಥಾನದಾದ್ಯಂತ ನೇಮಕವಾಗಿರುವರು. ಈ ಜನನ ಮರಣದ ಲೆಕ್ಕಗಳನ್ನು ಕೂಡಿಸುವ ಜವಾಬ್ದಾರಿಯನ್ನು ಈ ಇಲಾಖೆಗೆ ವಹಿಸುವುದೇ ನ್ಯಾಯವಾಗಿರುತ್ತದೆ. ಇದಕ್ಕಿಂತ ಮುಂಚೆ ಪ್ರತಿ ಒಂದು ಗ್ರಾಮಕ್ಕೂ ಒಬ್ಬ ರಿಜಿಸ್ಟ್ರಾರನ್ನು ನೇಮಿಸಿ, ಸಂಬಳ ಗೊತ್ತುಮಾಡಬೇಕಾಗಿದೆ. ಅದಕ್ಕೆ ಪಟೇಲ, ಶ್ಯಾನುಭೋಗ, ಗೌಡ, ಅಥವಾ ಇನ್ನೊಬ್ಬನನ್ನು ನೇಮಕ ಮಾಡಬಹುದು; ಅವನ ಬಳಿಯಲ್ಲೇ ರಿಜಿಸ್ಟ್ರರು ಇದ್ದು, ಅದರಲ್ಲಿ ಅವನೇ ಲೆಕ್ಕಗಳನ್ನು ಬರೆದಿಡುವಂತೆಯೂ, ಅಂಥಾ ಲೆಕ್ಕಕ್ಕೆ ಅವನೊಬ್ಬನೇ ಜವಾಬ್ದಾರನಾಗುವಂತೆಯೂ ಮಾಡತಕ್ಕದ್ದು. ಅಂಥಾ ರಿಜಿಸ್ಟರುಗಳನ್ನು ಸ್ಯಾನಿಟರಿ ಮತ್ತು ವೈದ್ಯ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ತನಿಖೆ ಮಾಡುತ್ತಾ ಬರಬೇಕು. ರಿಜಿಸ್ಟ್ರಾರು ತಿಂಗಳಿಗೋ, ಮೂರು ತಿಂಗಳಿಗೋ ಒಂದಾವರ್ತಿ ಒಟ್ಟು ಜನನ ಮರಣಗಳ ಲೆಕ್ಕಗಳನ್ನು ಕೂಡಿಸಿ ಮೇಲ್ಪಂಕ್ತಿ ಅಧಿಕಾರಿಗಳಿಗೆ ಕಳುಹಿಸುತ್ತಾ ಬರಬೇಕು. ಮೆಡಿಕಲ್ ಮತ್ತು ಸ್ಯಾನಿಟರಿ ಇಲಾಖೆಯವರಿಗೇ ಈ ಲೆಕ್ಕಗಳು ವಿಶೇಷವಾಗಿ ಬೇಕಾಗಿರುತ್ತವೆ. ರೆವಿನ್ಯೂ ಇಲಾಖೆಗೆ ಜನನ ಮರಣ ವಿವಾಹಾದಿಗಳು ದಾಖಲುಮಾಡಲ್ಪಟ್ಟಿವೆಯೋ ಇಲ್ಲವೋ ಎಂಬುವುದು ತಿಳಿದರೂ ತಿಳಿಯದೆ ಹೋದರೂ ಚಿಂತೆಯಿಲ್ಲ. ಸ್ಯಾನಿಟರಿ ಇಲಾಖೆಯ ಕೆಲಸಕಾರ್ಯಗಳು ಮುತುವರ್ಜಿಯಿಂದಲೂ ತೃಪ್ತಿಕರವಾಗಿಯೂ ನಡೆಯುವುದಕ್ಕೆ ಆ ಇಲಾಖೆಗೆ ಈ ಲೆಕ್ಕಗಳು ಸರಿಯಾಗಿ ತಿಳಿಯಬೇಕಾಗಿದೆ. ಆದಕಾರಣ ಇದರ ಜವಾಬ್ದಾರಿಯನ್ನು ಆ ಇಲಾಖೆಗೆ ವಹಿಸುವುದೇ ನ್ಯಾಯವೂ ಸಹಜವೂ ಆಗಿದೆ. ಈ ವಿಚಾರದಲ್ಲಿ ಈಗ ಸೂಚಿಸಲ್ಪಟ್ಟಿರುವ ಏರ್ಪಾಡು ತೃಪ್ತಿಕರವಾಗಿ ನಡೆಯುವುದಿಲ್ಲವಾದ ಕಾರಣ ಸರಿಯಾಗಿ ಪರ್ಯಾಲೋಚನೆ ಮಾಡಿ ಸಮಂಜಸವಾದ ಮತ್ತೊಂದು ಖರಾದ ಕ್ರಮವನ್ನು ರೂಪಿಸಿ, ಕರುಹಾಯ ಅವಶ್ಯವೆಂದು ತೋರುವ ಕಾನೂನು ಮಾಡಬಹುದೆಂದು ಸೂಚಿಸಲಪೇಕ್ಷಿಸುತ್ತೇವೆ. ಈಗಿನ ಕ್ರಮ ಹಳೇ ಸಂಪ್ರದಾಯವಾದದ್ದು; ಅದು ಚೆನ್ನಾಗಿರುವಂತೆ ಕಾಣುವುದಿಲ್ಲ.

ಸಂಸ್ಥಾನದ ಗೋಕಾವುಗಳ ಸೆನ್ಸಸ್ ಗಣತಿಯನ್ನು ಐದು ವರುಷಕ್ಕೊಂದು ಸಾರಿ ಕೂಡಿಸುವರಷ್ಟೆ. ಈ ವರುಷದ ಅಂತ್ಯಭಾಗದಲ್ಲೋ ಏನೋ ಈ ಸೆನ್ಸಸ್ಸು ಲೆಕ್ಕಗಳನ್ನು ಕೂಡಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಇದಕ್ಕಾಗಿ ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಿಸಬೇಕಾಗಿದೆ. ಇದಕ್ಕೆ ಸರ್ಕಾರದವರು 6,000 ರೂಪಾಯಿ ಸ್ಯಾಂಕ್ಷನ್ ಮಾಡಿರುವರು. ರೆವಿನ್ಯೂ ಕಮಿಷನರರವರು ಇಷ್ಟು ಸ್ವಲ್ಪ ಹಣದಿಂದ ಖರಾವಾದ ಲೆಕ್ಕಗಳನ್ನು ಕೂಡಿಸಬಲ್ಲರೆಂದು ನಮಗೆ ತೋರುವುದಿಲ್ಲ. ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದಿದ್ದರೆ ಬೇಕಾಬಿಟ್ಟಿ ಕೆಲಸವೇ ಆದೀತು. ಜಾಗ್ರತೆಯಲ್ಲೇ ತೃಪ್ತಿಕರವಾದ ಏರ್ಪಾಡು ಮಾಡಿ ನಮ್ಮ ಸರ್ಕಾರದವರು ಈ ಸೀಮೆಯಲ್ಲಿರುವ ದನ, ಕುರಿ, ಆಡು, ಕುದುರೆ, ಇನ್ನೇ ಮೊದಲಾದ ಪ್ರಾಣಿಗಳು ನಿಜವಾಗಿಯೂ ಎಷ್ಟೆಷ್ಟಿವೆಯೋ ಗೊತ್ತುಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಹೂವುಗಳು.

ಲೋಕದಲ್ಲಿ ದೇವರು ಅತಿ ಸುಂದರವಾದ ಹೂವುಗಳನ್ನು ಉಂಟುಮಾಡಿದ್ದಾನೆ. ಎಲ್ಲೆಲ್ಲಿಯೂ ಇವು ಸೊಗಸಾದ ಬಣ್ಣಗಳನ್ನೂ ಸುವಾಸನೆಯನ್ನೂ ಹೊಂದಿರುತ್ತವೆ. ನಾವೆಲ್ಲರೂ ಅವುಗಳನ್ನು ನೋಡಿ ಬಹಳವಾಗಿ ಸಂತೋಷಿಸುತ್ತೇವೆ. ನಮ್ಮ ದೇಶದಲ್ಲಿ ಹೆಂಗಸರು ಸಾಧಾರಣವಾಗಿ ಅವುಗಳನ್ನು ತಲೆಗೆ ಮುಡಿದುಕೊಳ್ಳುತ್ತಾರೆ. ಅಲ್ಲದೆ ಮದುವೆಯೂಟಗಳಲ್ಲಿ ಇವು ತುಂಬಾ ಉಪಯೋಗ. ದೊಡ್ಡ ಮನುಷ್ಯರಿಗೆ ಮರ್ಯಾದೆಗೋಸ್ಕರ ಹೂವಿನ ಹಾರಗಳನ್ನು ಹಾಕಿ, ಹೂವಿನ ತುರಾಯಿಗಳನ್ನು ಕೊಡುತ್ತೇವಲ್ಲವೆ? ಪಶುವಿನ ಹಬ್ಬದ ಕಾಲದಲ್ಲಿ ಅನೇಕರು ತಮ್ಮ ಕುದುರೆ, ಹಸು, ಎತ್ತು, ಕರುಗಳಿಗೆ ಹೂವಿನ ಹಾರಗಳನ್ನು ಹಾಕಿ, ಅಲಂಕಾರಮಾಡಿ ಬೀದಿಗಳಲ್ಲಿ ಮೆರವಣಿಗೆ ಮಾಡಿಸುವದನ್ನು ನೀವು ನೋಡಿದ್ದೀರಲ್ಲವೇ?

ಹೂವುಗಳಲ್ಲಿ ಸಂಪಿಗೆ, ಮಲ್ಲಿಗೆ, ಗುಲಾಬಿ, ಕಮಲ, ಸಂಪಿಗೆ ಮೊದಲಾದ ಅನೇಕ ಜಾತಿಗಳುಂಟು. ಇವುಗಳಿಗೆ ನಾನಾ ಬಣ್ಣ ಸುವಾಸನೆಗಳು ಇದ್ದರೂ, ಗಿಡದಿಂದ ಕಿತ್ತ ಸ್ವಲ್ಪ ಹೊತ್ತಿಗೆ ಬಾಡಿಹೋಗುವಂಥವುಗಳಾಗಿವೆ. ಹಾಗಾದರೆ ಎಂದಿಗೂ ಬಾಡಿಹೋಗದ ಹೂವುಗಳನ್ನು ಕುರಿತು ನೀವು ಎಂದಾದರೂ ಕೇಳಿದ್ದೀರಾ? ಆ ಹೂವು ಒಂದುಂಟು. ಅದು ಯಾವುದೆಂದರೆ—ನಮ್ಮ ಒಳ್ಳೇ ಗುಣಗಳೇ.

ಇವನ್ನು ಕೇಳಿ, ಇವುಗಳಿಗೆ ಬಣ್ಣವಿಲ್ಲ, ಸುವಾಸನೆಯಿಲ್ಲ, ಇದು ಹೇಗಾದೀತು? ಇವು ಬೆಳೆಯುವ ತೋಟವಾವುದು? ಎಂದು ನೀವು ಆಶ್ಚರ್ಯಪಡಬಹುದು. ಆ ತೋಟವು ಈ ಲೋಕವೇ. ಆ ಗಿಡಗಳು ನಾವೇ. ಆ ಹೂವುಗಳು ನಮ್ಮ ಸುಗುಣಗಳೇ. ಇವು ಎಂದಿಗೂ ಬಾಡಿಹೋಗದವುಗಳು. ಹೂವುಗಳಲ್ಲಿ ಎರಡು ವಿಧ. ಒಂದು ಸುವಾಸನೆಯೂ ಅಲಂಕಾರವೂ ಉಳ್ಳದ್ದು. ಮತ್ತೊಂದು ಬರೀ ಅಲಂಕಾರವುಳ್ಳದ್ದು.

ನಮ್ಮ ಒಳ್ಳೇ ಗುಣಗಳು ಸುವಾಸನೆಯೂ ಅಲಂಕಾರವೂ ಉಳ್ಳ ಹೂವುಗಳಿಗೆ ಸಮನಾಗಿವೆ. ನಮ್ಮ ಕೆಟ್ಟ ಗುಣಗಳು ಸುವಾಸನೆಯಿಲ್ಲದೆ ಬರೀ ಅಲಂಕಾರವಾದ ಹೂವುಗಳಿಗೆ ಸಮಾನವಾಗಿವೆ. ನಾವು ಬೆಳೆಯಿಸಿಕೊಳ್ಳುವ ಸುಗುಣಗಳೆಂಬ ಹೂವುಗಳು ಯಾವುವೆಂದರೆ—ಸತ್ಯ, ನೀತಿ, ಪ್ರೀತಿ, ಭಕ್ತಿ, ವಿಧೇಯತೆ, ಒಳ್ಳೇತನ ಎಂಬಿವುಗಳೇ. ಕೆಟ್ಟ ಗುಣಗಳೆಂಬ ಹೂವುಗಳು ಯಾವುವೆಂದರೆ—ಸುಳ್ಳು, ಕಳ್ಳತನ, ಮೋಸ, ಅನ್ಯಾಯ, ಗರ್ವ, ಹೊಟ್ಟೆಕಿಚ್ಚು ಮುಂತಾದವುಗಳೇ.

ಇವುಗಳೇ ನಮ್ಮ ಮನಸ್ಸುಗಳಲ್ಲಿ ಬೆಳೆಯುವ ಕೆಟ್ಟ ಕಳೆಗಳು. ಕೆಟ್ಟ ಗುಣಗಳು ಮುಳ್ಳುಗಳೇ. ಹೊಲಗಳಲ್ಲಿ ಕಳೆಗಳು ಇರುವದು ಮೇಲೋ? ಮುಳ್ಳುಗಳಿಂದ ದಾರಿ ಪೈರಿಗೆ ಪ್ರಯೋಜನವೋ?

ಕೆಟ್ಟ ಗುಣಗಳಿಂದ ಕೇವಲ ಕೇಡು. ಹಾಗಾದರೆ ಕೆಟ್ಟ ಗುಣಗಳಿಗೆ ನಾವು ಅವಕಾಶ ಕೊಡುವದು ನ್ಯಾಯವೋ? ಯಾರಿಗೂ ದುರ್ಗುಣಗಳು ಮೆಚ್ಚಿಕೆಯಿಲ್ಲ.

ಈ ಲೋಕದಲ್ಲಿ ಗುಣಕ್ಕಿಂತ ದೊಡ್ಡದು ಯಾವದೂ ಇಲ್ಲ. ಸ್ವರ್ಗಲೋಕದಲ್ಲಿ ಕೂಡಾ ಗುಣಕ್ಕಿಂತ ದೊಡ್ಡದು ಯಾವದೂ ಇಲ್ಲ. ಉದಾರತ್ವ ಎಂಬ ಬಿರುದನ್ನು ಹೊಂದಿರುವ ಕವಿಯ ಗ್ರಂಥದಲ್ಲಿ ಒಂದು ಪದ್ಯವುಂಟು. ಅದು ಯಾವದೆಂದರೆ—

> ಗುಣಹೀನನಧೋಗತಿ ನಿಜ
> ಗುಣಿನಂ ಸ್ವರ್ಗಾದಿಭೋಗಮುಕ್ಕುಮೆನಲ್ಕಾ
> ಗುಣಹೀನರ ಸಿರಿಯಿಂದಂ
> ಗುಣಿಗಳ ಬಡತನವೇ ಲೇಸು ಚೂಡಾರತ್ನ॥

ಅಂದರೆ—ಸುಗುಣಿಯಾದವನಿಗೆ ಸ್ವರ್ಗಾನಂದವುಂಟಾಗುತ್ತದೆ. ಗುಣಹೀನನಿಗೆ ನರಕವೇ, ನಷ್ಟವೇ ಪಾಲು. ಗುಣವಿಲ್ಲದ ಆನುಕೂಲಸ್ಥನಿಗಿಂತ ಕೇವಲ ಬಡ ಸತ್ಯವಂತನು ಉತ್ತಮನು. ಅಪಾಪಾದಗಳಿಗೆ ಗುರಿಯಾಗಿ ಒಬ್ಬನು ಐಶ್ವರ್ಯವನ್ನು ಸಂಪಾದಿಸಿಕೊಳ್ಳುವದು ಕೇವಲ ನೀಚತನ. ಗುಣವಂತರು ಧನ್ಯರು. ಇವರೇ ಭಗವಂತನ ದರ್ಶನವನ್ನು ಹೊಂದುವರು ಎಂಬುವದೇ.

ಸತ್ಯವೇ ಗತಿ, ಧರ್ಮವೇ ಜಯ.

ಹಾಗಾದರೆ ನಾವು ಒಳ್ಳೇ ಗುಣಗಳನ್ನು ಬೆಳೆಯಿಸಿಕೊಳ್ಳುವದು ನಮ್ಮ ಮುಖ್ಯ ಧರ್ಮವಲ್ಲವೇ? ಮಾವಿನ ಮರವು ಫಲವನ್ನು ಬಿಡಬಾರದೋ? ಕೆರೆಯಲ್ಲಿ ಕಮಲಪುಷ್ಪಗಳು ಅಲಂಕರಿಸಕೂಡದೋ? ಹೊಲದಲ್ಲಿ ಪೈರು ಗದ್ದೆಯಲ್ಲಿ ಭತ್ತ ಕಾಣಬಾರದೋ? ತೋಟದಲ್ಲಿ ತೆಂಗಿನಕಾಯಿ ಇಲ್ಲದಿದ್ದರೆ ನಮಗೆ ಸಂತೋಷವೋ?

ಬೆಳೆಯಿಸುವವ ಬಲಿಸಿದರೆ ಬಳ್ಳ ಕಾಳು ಇಲ್ಲವೇ?

ನಮ್ಮಲ್ಲಿ ಒಳ್ಳೇ ಗುಣಗಳನ್ನು ಬೆಳೆಯಿಸತಕ್ಕ ರೀತಿ ಮಾರ್ಗಗಳನ್ನು ಕಲಿಯಬಾರದೋ? ಖಂಡಿತವಾಗಿ ಈ ಮಾರ್ಗವನ್ನು ಕಲಿಯುವದು ನಮಗೆ ಅಗತ್ಯವಾದ ಕರ್ತವ್ಯವಾಗಿದೆ. ಈ ಮಾರ್ಗವು ಗುರುವಿನ ಪಾದವೇ.

ನಮ್ಮಲ್ಲಿ ಸದ್ಗುಣಗಳನ್ನು ಬೆಳೆಯಿಸಿಕೊಳ್ಳುವ ಹಾಗೆ ಸದ್ಗುರುವಿನ ಉಪದೇಶವು ಬೇಕೇ ಬೇಕು. ಅದು ಹೇಗೆಂದರೆ—

> ಒಳ್ಳೆಗುರುವಿನ ಕೂಡಿ ಹಳ್ಳವನು ಬಿದ್ದಂತೆ,
> ಒಳ್ಳೆಯ ಗುರುವಿನುಪದೇಶವಿಲ್ಲದಿರೆ,
> ಎಲ್ಲಿಯ ಮುಕ್ತಿ? ಸರ್ವಜ್ಞ.

ಆದ್ದರಿಂದ ಸರ್ವಜ್ಞಮೂರ್ತಿಯು ತಿಳಿಸಿರುವ ಈ ಮಹಾ ಮಾರ್ಗವನ್ನು ಅನುಸರಿಸದೆ ಇರುವದು ಸರಿಯೋ? ಗುರುವಿನಂತ ಶಿಷ್ಯ, ತಂದೆಯಂತ ಮಗ. ಸದ್ಗುರುವಿನ ಸಹವಾಸವೂ ಬೋಧನೆಯೂ ನಮಗೆ ಬೇಕಲ್ಲವೇ? ಅಂಥಾ ಸಹವಾಸದಿಂದಲೇ ನಮ್ಮಲ್ಲಿ ಸದ್ಗುಣಗಳು ಉಂಟಾಗುತ್ತವೆ.

ಒಳ್ಳೇ ಬೀಜಗಳಿಂದಲೇ ಒಳ್ಳೇ ಫಲ ಬಿಡುತ್ತದೆ. ಬೀಜದಂತೆ ಸಸಿ ಇರುವದಲ್ಲವೇ? ನಮ್ಮ ಕೆಟ್ಟ ಗುಣಗಳನ್ನು ನಾವೇ ಕಳೆದುಕೊಳ್ಳುವದು ಆಗುವದಿಲ್ಲ. ಒಬ್ಬ ಪರಮಗುರು ಬೇಕು. ಆ ಪರಮಗುರು ನರರೊಳಗಿಲ್ಲ. ಹೇಗೆಂದರೆ—

> ಸುರತರುವು ಮರನಲ್ಲ ಸುರಭಿಯೊಂದಾವಲ್ಲ।
> ಪರುಸ ಪಾಷಾಣದೊಳಿಲ್ಲ।
> ಗುರುರಾಯ ನರರೊಳಗಿಲ್ಲ ಸರ್ವಜ್ಞ॥

ಎಂದು ಸರ್ವಜ್ಞಮೂರ್ತಿಯು ತನ್ನ ಪದ್ಯದಲ್ಲಿ ಹೇಳಿರುವ ಹಾಗೆ ಮನುಷ್ಯರಲ್ಲಿ ಮುಕ್ತಿಮಾರ್ಗಕ್ಕೆ ಸೇರಿಸುವ ಗುರುವು ಇಲ್ಲ. ಹಾಗಾದರೆ ದೇವರೇ ಪರಮಗುರುವಾಗಿರಬೇಕು. ಆ ಗುರುವು ಯಾರೆಂದರೆ—ದೇವರೂ ಪರಮಗುರುವೂ ಆಗಿರುವ ಯೇಸುಸ್ವಾಮಿಯೇ. ಈ ಪರಮಗುರುವು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ—ನಾನೇ ನಿಜವಾದ ದ್ರಾಕ್ಷೇಬಳ್ಳಿ, ನೀವೆಲ್ಲಾ ಕೊಂಬೆಗಳು; ಯಾವ ಕೊಂಬೆಯು ನನ್ನಲ್ಲಿ ನೆಲೆಗೊಂಡಿರುತ್ತದೋ ಅದು ಹೆಚ್ಚಾಗಿ ಫಲ ಬಿಡುವದು; ಯಾವ ಕೊಂಬೆಯು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅದು ಫಲ ಫಲಿಸಲಾರದು ಎಂಬುವದೇ. ಇದು ಸತ್ಯವಾದ ಮಾತಲ್ಲವೇ? ಯಾರು ಯೇಸುಸ್ವಾಮಿಯಲ್ಲಿ ನೆಲೆಗೊಂಡಿರುತ್ತಾರೆಯೋ ಅವರಲ್ಲಿ ಕೆಟ್ಟಗುಣಗಳು ಕಳೆದು ಹೋಗಿಬಿಟ್ಟು ಸದ್ಧರ್ಮವು ಉಂಟಾಗುತ್ತದೆ.

ಪರಮಗುರುವಾದ ಯೇಸುಸ್ವಾಮಿಯು ದಿವ್ಯಸಹವಾಸವೂ ಮಾರ್ಗವೂ ಎಲ್ಲರಿಗೂ ಅಗತ್ಯವಾಗಿ ಬೇಕೇ ಬೇಕು. ಯಾಕೆಂದರೆ ಸದ್ಧರ್ಮವನ್ನೂ ಸದ್ಗುಣಗಳನ್ನೂ ಬೆಳೆಯಿಸಿಕೊಳ್ಳುವದು ಎಲ್ಲರಿಗೂ ಕರ್ತವ್ಯ.

ರಾಗ—ಬೇಹಾಗ್] [ಆದಿತಾಳ

ಪಲ್ಲವಿ.

> ಗುರುವೇ ನಿನ್ನ ಸ್ತೋತ್ರಿಸುವೆನು ಕರುಣದೀಕ್ಷಿಸೈ!
> ದುರಿತ ಶೋಕವನ್ನು ತೆಗೆದು ವರವ ಪಾಲಿಸೈ?

ಚರಣಗಳು

1. ಹೀನಮತಿಗಳಿಂದ ಪ್ರಾಣಹಾನಿಯಾಯಿತೈ!
   ದೀನ ಹೃದಯವೆಲ್ಲಾ ಬಹಳ ಸ್ನಾನವಾಯಿತೈ! —ಗುರುವೇ
2. ಜ್ಞಾನ ಭಕ್ತಿ ನೀತಿ ಪ್ರೀತಿ ದಾನವೀಜನೇ!
   ನಾನುಕೂಲಿಸೆನಗೆ ಸುಗುಣ ಮಾನಪಾತ್ರನೇ! —ಗುರುವೇ
3. ತಾಪಗಳನು ತಾಳಲಾರೆ ರಾಜ ಮೋಚಕಾ!
   ಕೋಪ ನರಕ ಪಾರನಾದು ಭೂಪ ರಕ್ಷಕಾ! —ಗುರುವೇ

ಯುದ್ಧದ ಸಮಾಚಾರಗಳು.

ರಷ್ಯಾದವರು ಇನ್ನೂ ಹಿಮ್ಮೆಟ್ಟುತ್ತಿರುವರು.

ಜರ್ಮನಿಯವರು ಅಮೇರಿಕಕ್ಕೆ ಅಡಿಯಾಳಾದರು.

ಈ ವಾರದ ತಂತೀ ವರ್ತಮಾನಗಳು ಪಶ್ಚಿಮ ರಣರಂಗದಲ್ಲಿ ವಿಶೇಷ ಕದನಗಳೇನೂ ಆದಂತೆ ಹೇಳುವುದಿಲ್ಲ. ಪೂರ್ವ ರಣರಂಗದಲ್ಲಾದರೋ ರಷ್ಯಾದವರು ಇನ್ನೂ ಹಿಂದು ಹಿಂದಕ್ಕೆ ಹಿಮ್ಮೆಟ್ಟಿ ಹೋಗುತ್ತಲಿರುವರು. ಅರಬಿಕ್ ಎಂಬ ಹಡಗಿನಲ್ಲಿ ಮುಳುಗಿಸಲ್ಪಟ್ಟ ಅಮೇರಿಕದವರಿಗಾಗಿ ಜರ್ಮನಿಯವರು ಪ್ರತಿ ಫಲವನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಇದರಿಂದ ಇನ್ನು ಮುಂದೆ ವ್ಯಾಪಾರದ ಹಡಗುಗಳನ್ನು ಜರ್ಮನಿಯವರು ಕಂಡರೆ ಎಚ್ಚರಿಕೆ ಕೊಡದೇನೇ ಮುಳುಗಿಸುವದಿಲ್ಲವೆಂದು ಒಪ್ಪಿದಂತಾಯಿತು. ಅವರು ಈ ಮಾತಿನಂತೆ ನಡೆದುಕೊಳ್ಳುತ್ತಾರೆಯೋ ಇಲ್ಲವೋ ಮುಂದೆ ನೋಡಬೇಕು.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದಲ್ಲಿ ನಡೆದಿರುವ ಯುದ್ಧಕಾರ್ಯಗಳು ಬಹಳ ಸ್ವಲ್ಪ. ಫಿರಂಗಿ ಗುಂಡುಗಳ ಹಾರಾಟವೂ, ವಿಮಾನಯಂತ್ರಗಳ ಸಂಚಾರವೂ ವಿಶೇಷವಾಗಿದ್ದವು. ಯುದ್ಧ ಸಾಲಿನ ದಕ್ಷಿಣ ಭಾಗದಲ್ಲಿ ಫ್ರೆಂಚರು ಮುಂದರಿಸಿ ನುಗ್ಗಿಹೋಗಿದ್ದಾರೆ; ಮತ್ತೂ ಜರ್ಮನಿಯವರಿಂದ ಕೆಲವು ಕಂದಕಗಳನ್ನು ಕಿತ್ತು ಸ್ವಾಧೀನಪಡಿಸಿಕೊಂಡರು.

ಫ್ರೆಂಚರ ಮತ್ತೂ ಬ್ರಿಟಿಷರ ವಿಮಾನಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಜರ್ಮನಿಯವರ ರೈಲ್ವೆ ಸ್ಟೇಷನ್‌ಗಳ ಮೇಲೂ, ವಿಷವಾಯುಗಳನ್ನು ತಯಾರುಮಾಡುವ ಕಾರ್ಖಾನೆಗಳ ಮೇಲೂ, ಮದ್ದುಗುಂಡು ತಯಾರಾಗುವ ಕಾರ್ಖಾನೆಗಳ ಮೇಲೂ ಸಿಡಿಮದ್ದಿನ ಗುಂಡುಗಳನ್ನು ಅಪಾರವಾಗಿ ಹಾಕಿದವು. 62 ವಿಮಾನಗಳು ನಾಲ್ಕು ಗುಂಪಾಗಿ ಹೋಗಿ 150 ಸಿಡಿಮದ್ದಿನ ಗುಂಡುಗಳನ್ನು ಸುರಿಸಿರುತ್ತವೆ. ಇನ್ನೊಂದು ವೇಳೆ ಅವು 127 ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬಂದವು.

ಫ್ಲಾಂಡರ್ಸಿನಲ್ಲಿ ಬ್ರಿಟಿಷರ ಸೈನ್ಯದ ಸಾಲು ಈಗ ದೊಡ್ಡದಾಗಿ ಮಾಡಲ್ಪಟ್ಟಿತು. ಅದು ಎಷ್ಟು ಉದ್ದಕ್ಕೆ ವ್ಯಾಪಿಸಿ ನಿಲ್ಲಿಸಲ್ಪಟ್ಟಿದೆಯೋ ತಿಳಿಯಲಿಲ್ಲ.

ಬ್ರಿಟಿಷ್ ಯುದ್ಧದ ಹಡಗುಗಳು ಬೆಲ್ಜಿಯಮ್ ತೀರಕ್ಕೆ ಹೋಗಿ ಅಲ್ಲಿರುವ ಜರ್ಮನಿಯವರ ಕಾರ್ಖಾನೆಗಳಿಗೆ ಫಿರಂಗಿ ಗುಂಡುಗಳನ್ನು ತೊಡೆದು ತುಂಬಾ ನಷ್ಟಪಡಿಸಿದವು. ಹೊಲ್ಲಾಂಡಿನ ವರ್ತಮಾನ ಪತ್ರಿಕೆಗಳಿಂದ ಜರ್ಮನಿಯ 600 ಸೈನಿಕರು ಕೊಲೆಯಾದರೆಂದೂ, ಗಾಯಪಟ್ಟಿದ್ದ 90 ಮಂದಿಯನ್ನು ಅವರು ಘೆಂಟ್ ಪಟ್ಟಣಕ್ಕೆ ಸಾಗಿಸಿಕೊಂಡು ಹೋದರೆಂದೂ, ಜರ್ಮನಿಯ ಸಬ್‌ಮರೀನುಗಳಿಗೂ ನಾಶವಾದವೆಂದೂ ತಿಳಿದು ಬರುತ್ತದೆ. ಬೆಲ್ಜಿಯಮ್ ತೀರದ ಹತ್ತಿರ ಫ್ರೆಂಚರ ಡಿಸ್ಟ್ರಾಯರುಗಳೆಂಬ ಎರಡು ಹಡಗುಗಳು ಹೋಗಿ ಜರ್ಮನಿಯ ಒಂದು ಡಿಸ್ಟ್ರಾಯರನ್ನು ಮುಳುಗಿಸಿರುತ್ತವೆ. ಫ್ರೆಂಚರು ಆ ಸಮಯದಲ್ಲಿ ಮುಳುಗಿ ಹೋಗುತ್ತಿದ್ದ ಜರ್ಮನಿಯ ನಾವಿಕರನ್ನು ಬದುಕಿಸಬೇಕೆಂದು ಪ್ರಯತ್ನಪಟ್ಟ ಹಾಗೂ, ಜರ್ಮನಿಯವರು ಫ್ರೆಂಚರ ಮೇಲೆ ತೀರದಿಂದ ಗುಂಡುಗಳನ್ನು ಹೊಡೆದರೆಂದೂ, ಇದನ್ನು ನೋಡಿ ಫ್ರೆಂಚರು ಅದನ್ನು ಬಿಟ್ಟು ಹೋಗಬೇಕಾಯಿತೆಂದೂ ತಿಳಿದುಬಂದಿದೆ.

ಬ್ರಿಟಿಷರ ಒಂದು ವಿಮಾನಯಂತ್ರವು ಹೋಗಿ ಬೆಲ್ಜಿಯಮ್ ತೀರದ ಬಳಿ ಇದ್ದ ಜರ್ಮನಿಯ ಒಂದು ಸಬ್‌ಮರೀನಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಮುಳುಗಿಸಿತು. ಜರ್ಮನಿಯವರು ಇದನ್ನು ಕಂಡದ್ದರಿಂದ ಪ್ರಕಟಿಸಲಿಲ್ಲ. ಯಾಕೆಂದರೆ ಇತರ ಕಡೆಗಳಲ್ಲಿ ಬ್ರಿಟಿಷರು ಜರ್ಮನಿಯ ಸಬ್‌ಮರೀನು ಎಂಬ ಹಡಗುಗಳನ್ನು ಅವರಿಗೆ ತಿಳಿಯದಂತೆ ಅನೇಕವಾಗಿ ಮುಳುಗಿಸಿದ್ದಾರೆ. ಇಂಥವುಗಳನ್ನು ಪ್ರಕಟಿಸಿರುವುದೂ ಇಲ್ಲ. ಮುಳುಗಿಸಿದ ಸಂಗತಿ ಜರ್ಮನಿಯವರಿಗೆ ತಿಳಿಯಬಾರದೆಂಬುವುದೇ ನಮ್ಮ ಕಡೆಯವರ ಉದ್ದೇಶ. ಜರ್ಮನಿಯವರು ತಮ್ಮ ಸಬ್‌ಮರೀನುಗಳಿಂದ ಮಹತ್ಕಾರ್ಯಗಳನ್ನು ನಡೆಸುತ್ತೇವೆಂದು ಊಹಿಸಿದ್ದರು; ಅವರ ಈ ಊಹೆಯು ಅಷ್ಟೇನೂ ಸಾರ್ಥಕವಾಗಲಿಲ್ಲವೆಂದು ಈಗ ಅವರಿಗೇ ಗೊತ್ತಾಗಿದೆ. ಜರ್ಮನಿಯ ಒಂದು ಸಮುದ್ರ ವಿಮಾನಯಂತ್ರ

ತರ್ಡನೆಲ್ಸಿಗೆ ಸೇರಿದ ಒಂದು ದ್ವೀಪದ ಮೇಲೆ ಇಳಿಯಿತು. ಅಲ್ಲಿನವರು ಅದಕ್ಕೆ 24 ಗಂಟೆ ಪುರಸತ್ತು ಕೊಟ್ಟು ಅಷ್ಟರೊಳಗೆ ಅಲ್ಲಿಂದ ಹೊರಟು ಹೋಗದಿದ್ದರೆ ಬಿಡಾಟ್ಟುಕೊಳ್ಳುತ್ತೇವೆಂದು ಹೇಳಿದರು. ಜರ್ಮನಿಯ ಒಂದು ವಿಮಾನಯಂತ್ರವು ಫ್ರಾನ್ಸಿನ ಒಂದು ಪಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ, ಒಬ್ಬ ಹೆಂಗಸನ್ನೂ ಒಂದು ಮಗುವನ್ನೂ ಕೊಂದುಹಾಕಿತು.

ಜರ್ಮನಿಯ ಹುದ್ದೇದಾರರು ತಮ್ಮ ಸೈನ್ಯಕ್ಕೆ ಕೊಟ್ಟಿರುವ ಹುಕುಮಿನ ಒಂದು ನಕಲು ಸಿಕ್ಕಿದೆ. ರಣರಂಗದಲ್ಲಿ ಸಿಕ್ಕುವ ಎಲ್ಲಾ ಆಯುಧಗಳನ್ನೂ, ಕೈದಿಗಳ ಮೇಲಿರುವ ಕೆಲವು ಬಟ್ಟೆಗಳನ್ನೂ ಕೂಡಿಸಿ ತರಬೇಕೆಂದೂ, ಇವು ಜರ್ಮನಿಯ ಸೈನ್ಯಕ್ಕೆ ಸೇರತಕ್ಕವರಿಗೆ ಬೇಕಾಗುವವೆಂದೂ ಆ ಹುಕುಮು ಹೇಳುತ್ತದೆ. ಫ್ರಾನ್ಸಿನ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಮೆಂಬರುಗಳು ಸೇರಿ ಯುದ್ಧವನ್ನು ಅತ್ಯಂತ ಪರಾಕ್ರಮದಿಂದ ನಡೆಸುತ್ತಲೇ ಬರಬೇಕೆಂದು 503 ಮೆಂಬರುಗಳು ಒಪ್ಪಿ ಸಮ್ಮತಿ ಹಾಕಿದರು; ಒಬ್ಬ ಮೆಂಬರು ಮಾತ್ರ ಅದಕ್ಕೆ ಒಪ್ಪಲಿಲ್ಲ. ಜರ್ಮನಿಯವರು ಜಯಶೀಲರಾಗಬೇಕೆಂಬ ಭಾಗದಲ್ಲಿ ಫ್ರಾನ್ಸ್ ರಾಜ್ಯಕ್ಕೆ ಅಭಿಪ್ರಾಯವೇ ಒಂದಾಗಿರುತ್ತದೆ.

ಜರ್ಮನಿಯ ಆರು ವಿಮಾನಯಂತ್ರಗಳು ಅಂತರಿಕ್ಷದಲ್ಲಿ ಫ್ರಾನ್ಸಿನ ರಾಜಧಾನಿಯಾದ ಪಾರಿಸ್ ನಗರದ ಮೇಲಕ್ಕೆ ಹಾರಿ ಬರಬೇಕೆಂದು ಸಾಹಸಪಟ್ಟುವು. ಅದೆಲ್ಲಾ ವ್ಯರ್ಥವಾಯಿತು. ಅವು ಸಿಡಿಮದ್ದಿನ ಗುಂಡುಗಳನ್ನು ಹಾಕಿ ನರ್ಸ್ ಎಂಬ ಸೇವಾ ಸ್ತ್ರೀಯರಿಬ್ಬರನ್ನೂ, ಒಂದು ಮಗುವನ್ನೂ ಕೊಂದುಬಿಟ್ಟವು. ಫ್ರೆಂಚರ ವಿಮಾನಯಂತ್ರಗಳು ಅವನ್ನು ಓಡಿಸಿಕೊಂಡು ಹೋಗಿ ಒಂದನ್ನು ನೆಲಕ್ಕೆ ಕೆಡವಿದವು. ಅದರಲ್ಲಿದ್ದವನು ವಿಮಾನಯಂತ್ರ ಸಹಿತ ಸುಟ್ಟುಹೋದನು.

ಪೂರ್ವ ರಣರಂಗದಲ್ಲಿ.

ಬಾಲ್ಟಿಕ್ ಕಡಲಿನಲ್ಲಿ ನಡೆವ ಜಹಜುಗಳ ಯುದ್ಧದ ವಿವರಗಳನ್ನು ತಿಳಿದಿದ್ದಲ್ಲಿ ಬ್ರಿಟಿಷರ ಸಬ್‌ಮೆರೀನ್ ಎಂಬ ಒಂದು ಹಡಗು ಹೋಗಿ ಜರ್ಮನಿಯ ಒಂದು ಯುದ್ಧದ ಜಹಜನ್ನು ಮುಳುಗಿಸಿತೆಂದು ತಿಳಿಯುವುದು. ಅದಲ್ಲದೆ ರಷ್ಯಾದವರ ಕಡೆ ಒಂದು ಪಿರಂಗಿಗಳ ದೋಣಿ ಮುಳುಗಿಹೋಯಿತು. ಅದರಲ್ಲಿ 148 ಮಂದಿ ಇದ್ದರು. ಅದೊಂದು ಸಣ್ಣ ಹಡಗು. ಅದು ಕಡೆಯ ತನಕ ಶತ್ರುವಿನ ಜಹಜುಗಳ ಮೇಲೆ ಕದನವನಾಡುತ್ತಲೇ ಇದ್ದು ಜರ್ಮನಿಯ ಡಿಸ್ಟ್ರಾಯರೆಂಬ ಹಡಗನ್ನು ಮುಳುಗಿಸಿಬಿಟ್ಟಿತು. ಅದರೊಳಗಿದ್ದವರ ಪೈಕಿ ಐದು ಮಂದಿ ರಷ್ಯಾವಿಗೆ ವಾಪಸು ಹೋದರು. ಜರ್ಮನಿಯವರು ಅದರಲ್ಲಿದ್ದವರ ಪೈಕಿ ಇಬ್ಬರು ಹುದ್ದೇದಾರರನ್ನೂ ನಾಲ್ವತ್ತು ಸೈನಿಕರನ್ನು ಬದುಕಿಸಿದೆವೆಂದು ಹೇಳುತ್ತಾರೆ. ಈ ಜಯಾರ್ತ್ರದ ಸಮಾಚಾರವು ಬಂದ ಕೂಡಲೇ ಲಂಡನ್ ಪಟ್ಟಣದಲ್ಲಿ ಪ್ರಜೆಗಳು ರಷ್ಯಾ ರಾಯಭಾರಿಯ ಬಂಗಲೆಯ ಮುಂದೆ ನಿಂತು ನಾನಾ ಪ್ರಕಾರವಾದ ಜಯಧ್ವನಿಗಳನ್ನು ಮಾಡಿ ತಮ್ಮ ಆನಂದವನ್ನು ಪ್ರಕಾಶಪಡಿಸಿದರು. ಅವರನ್ನು ಕುರಿತು ರಷ್ಯಾ ರಾಯಭಾರಿಯು——ನಾವು ಒಂದು ಜಯಪತ್ರವನ್ನು ಹೊಂದಿದೆವು; ಇದರ ಹಿಂದೆ ಇನ್ನೂ ಜಯಪತ್ರಗಳು ಉಂಟಾಗಿ ಪ್ರಪಂಚದಲ್ಲಿ ಶಾಂತಿಯನ್ನೂ ಸಮಾಧಾನವನ್ನೂ ನೆರಗೊಳಿಸುತ್ತವೆ" ಎಂದು ಹೇಳಿದರು. ಜರ್ಮನಿಯವರು ತಮ್ಮ ಸೈನ್ಯಗಳನ್ನು ಹಡಗುಗಳಿಂದ ತೀರದ ಮೇಲೆ ಹತ್ತಿಸದಂತೆ ರಷ್ಯಾದವರು ಎದುರಿಸಿ ತಡೆದುಬಿಟ್ಟದ್ದನ್ನು ನೋಡಿದರೆ ಜರ್ಮನಿಯವರು ಬ್ರಿಟನ್ ತೀರದ ಮೇಲೂ ತಮ್ಮ ಸೈನ್ಯಗಳನ್ನು ಇಳಿಸುವುದು ಎಷ್ಟು ಮಾತ್ರಕ್ಕೂ ಸಾಧ್ಯವಲ್ಲವೆಂದು ಗೊತ್ತಾಗುತ್ತದೆ. ಭೂಪ್ರದೇಶದಲ್ಲಿ ಯುದ್ಧಶಾಲಿನ ಉತ್ತರ ಪಾರ್ಶ್ವದಲ್ಲಿ ರಷ್ಯಾದವರು ಜರ್ಮನಿಯವರಿಗೆ ಸ್ಥಳವನ್ನು ಬಿಟ್ಟುಕೊಡಲಿಲ್ಲ; ಶತ್ರುವು ಮುಂದೆ ನುಗ್ಗದಂತೆ ತಡೆದುಬಿಟ್ಟಿದ್ದಾರೆ. ದಕ್ಷಿಣ ಭಾಗದಲ್ಲಾದರೋ ರಷ್ಯಾದವರು ಕ್ರಮವಾಗಿ ಹಿಮ್ಮೆಟ್ಟುತ್ತಿರುವರು. ಅವರು ಎರಡು ಮೂರು ಕೋಟೆಗಳನ್ನು ತ್ಯಜಿಸಿ ಪೂರ್ವದಿಕ್ಕಿಗೆ ಹೊರಟುಹೋದರು. ಹೀಗೆ ಹೋಗುವಲ್ಲಿ ಅವರು ಯಾವ ಉಪಯುಕ್ತ ಪದಾರ್ಥವನ್ನೂ ಹಿಂದೆ ಬಿಡದೆ ಎಲ್ಲವನ್ನೂ ಸಾಗಿಸಿಕೊಂಡೇ ಹೋಗುತ್ತಾರೆ. ಅದರಿಂದ ನುಗ್ಗಿ ಬರುವ ಜರ್ಮನಿಯವರಿಗೆ ಯಾವ ಪ್ರಯೋಜನಕರವಾದ ವಸ್ತುವೂ ಸಿಕ್ಕದಂತಾಯಿತು.

ಜರ್ಮನಿಯವರು ರಷ್ಯಾದವರ ಸಂಗಡಲೂ ಫ್ರೆಂಚರ ಸಂಗಡಲೂ ಕಲಹ ಬಿಡಿಸಿಕೊಳ್ಳಬೇಕೆಂದು ಸಂಧಾನ ಮಾಡಿದ ಹಾಗೂ, ಅವರು ನಮ್ಮ ಪಕ್ಷದವರ ಅನುಮತಿಯನ್ನು ಪಡೆಯದೆ ಕರಾರು ಮಾಡಿಕೊಳ್ಳುವುದಿಲ್ಲವೆಂದು ಸಿದ್ಧಾಂತ ಮಾಡಿದ ಹಾಗೂ ವರ್ತಮಾನವಿದೆ. ಕಡೆಯ ತನಕ ಯುದ್ಧ ನಡೆಯಬೇಕು. ರಷ್ಯಾ ಯುದ್ಧದ ಇಲಾಖೆಯ ಮಂತ್ರಿಯು—ಇನ್ನೊಂದು ವರ್ಷಕಾಲದ ಯುದ್ಧಕ್ಕೂ ರಷ್ಯಾ ರಾಜ್ಯವು ಸಿದ್ಧಮಾಡಿಕೊಂಡಿದೆ ಎಂದೂ, ಈ ತಿಂಗಳು ಐವತ್ತು ಲಕ್ಷ ಸೈನ್ಯಗಳು ತಯಾರಾಗುತ್ತವೆ ಎಂದೂ, ಇವು ಮುಂದಿನ ಏಪ್ರಿಲ್‌ನಲ್ಲಿ ಸಿದ್ಧವಾಗುವವೆಂದೂ, ಈಗ ತಮ್ಮ ಪಿರಂಗಿಗಳಿಗೆ ಬೇಕಾಗುವಷ್ಟು ಮದ್ದುಗುಂಡು ತಯಾರಾಗಿ ಬರುತ್ತಿರುವವೆಂದೂ ಹೇಳುತ್ತಾರೆ.

ಇಟಲಿ ಮತ್ತು ಆಸ್ಟ್ರಿಯಾ.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳಲ್ಲಿ ಇಟಲಿಯವರು ಕ್ರಮವಾಗಿ ಮುಂದಕ್ಕೆ ನುಗ್ಗಿ ಹೋಗುತ್ತಿದ್ದಾರೆಂದು ಹೇಳುವವು. ಅವರು ಕ್ರಮೇಣ ಆಸ್ಟ್ರಿಯಾದವರ ಕಂದಕಗಳನ್ನು ಗೆದ್ದುಕೊಳ್ಳುತ್ತಲೂ, ಕೋಟೆ ಕೊತ್ತಲಗಳಿಂದ ಬಲಪಡಿಸಲ್ಪಟ್ಟಿರುವ ಕೆಲವು ಭಾರಿ ಪಟ್ಟಣಗಳ ಸಮೀಪಕ್ಕೆ ಹೋಗುತ್ತಲೂ ಇದ್ದಾರೆ. ಆಸ್ಟ್ರಿಯಾದವರು ಅವರ ಮೇಲೆ ಬಿದ್ದು ಅವರನ್ನು ಹಿಂದಕ್ಕೆ ಹೊರಡಿಸಬೇಕೆಂದು ಅನೇಕ ವೇಳೆ ಸಾಹಸಪಟ್ಟರು. ಅದೆಲ್ಲಾ ನಿರರ್ಥಕವಾಯಿತು. ಆಸ್ಟ್ರಿಯದ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಇಟಲಿಯ ಒಂದು ಪಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ, ಯುದ್ಧ ಕೆಲಸವಿಲ್ಲದ ಆರು ಮಂದಿ ಸಭ್ಯ ಪ್ರಜೆಗಳನ್ನು ಕೊಂದುಬಿಟ್ಟವು.

ಬ್ರಿಟಿಷರು ತಮ್ಮ ಸೈನ್ಯಗಳನ್ನು ಜಹಜುಗಳಿಂದ ದಡವನ್ನು ಹತ್ತಿಸಿದ ವೃತ್ತಾಂತವು ಕಳೆದ ವಾರ ಪ್ರಕಟವಾಗಿದೆ. ಬಹುಶಃ 60,000 ಸೈನ್ಯ ಇವನ್ನು ಕಲ್ಲಿಪೋಲಿಯ ಉತ್ತರಭಾಗದ ತೀರವನ್ನು ಹತ್ತಿದಂತೆ ಕಾಣುತ್ತದೆ. ಬಳಿಕ 24 ಗಂಟೆ ಹೊತ್ತು ಶತ್ರುಗಳು ಅವರನ್ನು ತಡೆಯಲಿಲ್ಲ. ಆ ಮೇಲೆ ಟರ್ಕಿ ಸೈನ್ಯಗಳು ಆತುರವಾಗಿ ಬಂದು ಬ್ರಿಟಿಷ್ ಸೈನಿಕರ ಮೇಲೆ ಅತ್ಯಂತ ಪರಾಕ್ರಮದಿಂದ ಕಾದಿದವು. ಈ ಘೋರವಾದ ಕದನದಲ್ಲಿ 27,000 ಟರ್ಕಿ ಸೈನ್ಯ ಹತವಾಯಿತೆಂದೂ, ಬ್ರಿಟಿಷ್ ಸೈನ್ಯದಲ್ಲಿ ಆ ಪೈಕಿ ನಾಲ್ಕನೇ ಒಂದು ಭಾಗದಷ್ಟು ಮಾತ್ರ ನಷ್ಟವಾಯಿತೆಂದೂ ಹೇಳಲಾಗಿದೆ. ಈಚೆಗೂ ಕಠಿಣವಾದ ಕದನಗಳು ನಡೆದಿರುವುವು. ಬ್ರಿಟಿಷರು ಮುಂದರಿದು ನುಗ್ಗಿ ಹೋಗಿ ಟರ್ಕಿಯವರ ಕಂದಕಗಳಲ್ಲಿ 800 ಗಜಗಳಷ್ಟು ಸ್ವಾಧೀನಪಡಿಸಿಕೊಂಡಿದ್ದಾರೆ.

ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ಹಡಗು ಮಾರ್ಮೊರಾ ಕಡಲಿನಲ್ಲಿ ಸೈನ್ಯಗಳು ಸಾಗುವ ಎರಡು ಹಡಗುಗಳನ್ನು ಮುಳುಗಿಸಿತು. ಒಂದರಲ್ಲಿ ಸಾಮಾನುಗಳೂ ಆಹಾರಪದಾರ್ಥಗಳೂ, ಇನ್ನೊಂದರಲ್ಲಿ ಮದ್ದು ಗುಂಡುಗಳೂ ತುಂಬಿದ್ದವು. ಫ್ರೆಂಚರ ಒಂದು ವಿಮಾನ ಯಂತ್ರವು ಸಮುದ್ರ ತೀರದಲ್ಲಿ ನಿಂತಿದ್ದ ಒಂದು ಹಡಗನ್ನು ಸಿಡಿಮದ್ದಿನ ಗುಂಡು ಹಾಕಿ ಮುಳುಗಿಸಿತು.

ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಕಳ್ಳದ್ದಲಿಗೆ ಬಹಳ ಕಷ್ಟ ಉಂಟಾಗಿದೆಯಂತೆ. ಯುದ್ಧಭೂಮಿಗಳಿಂದ ಗಾಯಪಟ್ಟ ಸೈನಿಕರನ್ನು ಸಾವಿರಗಟ್ಟಲೆ ರಾಜಧಾನಿಗೆ ಸಾಗಿಸಿಕೊಂಡು ಹೋಗುತ್ತಿರುವರು.

ಸಿರಿಯಾದಲ್ಲಿ ತುಂಬಾ ಗಲಭೆಯುಂಟಾಗಿದೆ. ಟರ್ಕಿಯವರು ಹೊಸ ಗವರ್ನರನ್ನು ನೇಮಿಸಿ ಕಳುಹಿಸಿದರು. ಈ ಗವರ್ನರು ಅಲ್ಲಿನ ಹಲವು ಅರಬ್ಬಿ ಮುಖಂಡ ಪ್ರಜೆಗಳನ್ನು ಹಿಡಿದು ಗಲ್ಲಿಗೆ ಹಾಕಿಸಿರುತ್ತಾನೆ. ಅರಬ್ಬಿಯವರು ನಮ್ಮ ಪಕ್ಷದವರಿಗೆ ಸಹಾಯಮಾಡುತ್ತಾರೆಂಬುದೇ ಟರ್ಕಿಯವರಿಗಿರುವ ಭೀತಿ. ಇದಲ್ಲದೆ ಟರ್ಕಿಯವರು ಸಿರಿಯಾದಲ್ಲಿರುವ ಅಮೇರಿಕದವರನ್ನೂ ಕಷ್ಟ ನಷ್ಟಗಳಿಗೆ ಗುರಿಪಡಿಸುತ್ತಿದ್ದಾರೆ. ಇವರು ಗಾಯಪಟ್ಟ ಸೈನಿಕರನ್ನು ಬಹಳವಾಗಿ ಉಪಚರಿಸುವರು.

ಸೆರ್ಬಿಯಾ.

ಸೆರ್ಬಿಯಾ ರಾಜ್ಯದಲ್ಲಿ ಪಾರ್ಲಿಮೆಂಟ್ ಮೆಂಬರುಗಳು ಸಭೆ ಸೇರಿ ಜಯವಾಗುವ ತನಕ ಯುದ್ಧವನ್ನು ನಡೆಸುತ್ತಾ ಬರಬೇಕೆಂದು ಸಂಕಲ್ಪಮಾಡಿಕೊಂಡಿದ್ದಾರೆ. ಜರ್ಮನಿಯವರೂ ಆಸ್ಟ್ರಿಯಾದವರೂ ಅಪಾರವಾದ ಸೈನ್ಯಗಳನ್ನು ಕೂಡಿಸಿಕೊಂಡು ರಾಜಧಾನಿಯಾದ ಬೆಲ್‌ಗ್ರೇಡಿನ ಮೇಲೆ ನುಗ್ಗುವುದನ್ನು ಬಿಟ್ಟು ಸ್ವಲ್ಪ ಪೂರ್ವ ದಿಕ್ಕಿನಿಂದ ಸೆರ್ಬಿಯಾದೊಳಕ್ಕೆ ನುಗ್ಗಿ ಅಲ್ಲಿಂದ ಬಲ್ಗೇರಿಯದ ಮೂಲಕ ಹೋಗಿ ಟರ್ಕಿಯವರಿಗೆ ಸಹಾಯ ಮಾಡಬೇಕೆಂದು ಸಾಹಸಪಡುತ್ತಿರುವಂತೆ ವರ್ತಮಾನವಿದೆ. ಬಲ್ಗೇರಿಯದವರು ಜರ್ಮನಿಯವರಿಗೆ ಮಾರ್ಗ ಕೊಡದೆಹೋದರೆ ಬೆಲ್ಜಿಯಮಿಗೆ ಆದ ಪಾಡೇ ಬಲ್ಗೇರಿಯವಿಗೂ ಸಂಭವಿಸುವುದೆಂದು ಜರ್ಮನಿಯವರು ಹೆದರಿಸಿದ್ದಾರೆ. ಇದು ಗೊಡ್ಡು ಬೆದರಿಕೆಯಾಗಿ ಪರಿಣಮಿಸುವುದೋ ಏನೋ.

ಅಮೇರಿಕ ಮತ್ತು ಜರ್ಮನಿ.

ಜರ್ಮನಿಯವರು ಅರಾಬಿಕ್ ಎಂಬ ಜಹಜನ್ನು ಮುಳುಗಿಸಿದ ವಿಚಾರವಾಗಿ ಅಮೇರಿಕದವರಿಗೂ ಅವರಿಗೂ ಕಾಗದ ಪತ್ರಗಳು ನಡೆಯುತ್ತಿವೆ. ಜರ್ಮನಿಯವರು ಆ ಜಹಜಿಗೆ ಎಚ್ಚರಿಕೆ ಹೇಳದೇನೇ ಅದನ್ನು ಮುಳುಗಿಸಿದರು. ಅದರಲ್ಲಿದ್ದ ಕೆಲವು ಅಮೇರಿಕದ ಪ್ರಜೆಗಳು ಮುಳುಗಿ ಸತ್ತರು. ನಡೆದಿರುವ ಸಂಗತಿಗಳನ್ನೆಲ್ಲಾ ತಿಳಿಯುವ ತನಕ ಆಕ್ಷೇಪಣೆ ಮಾಡಬೇಡಿ ಎಂದು ಅಮೇರಿಕದಲ್ಲಿರುವ ಜರ್ಮನಿ ರಾಯಭಾರಿಯು ಅಮೇರಿಕದವರಿಗೆ ಹೇಳಿದನು. ಈಗ ಅದೇ ರಾಯಭಾರಿಯು ಅಮೇರಿಕದವರಿಗೆ ಸಂಪೂರ್ಣ ಪ್ರತಿ ಫಲವನ್ನು ಕೊಡುತ್ತೇವೆ ಎಂದು ಹೇಳಿರುತ್ತಾನೆ. ಅಮೇರಿಕದವರು ಇನ್ನು ಮುಂದೆ ಜರ್ಮನಿಯವರು ವರ್ತಕರ ಜಹಜನ್ನು ಮುಳುಗಿಸುವುದಕ್ಕೆ ಮೊದಲೇ ಅಂಥಾ ಜಹಜಿನಲ್ಲಿರುವ ಪ್ರಯಾಣಿಕರಿಗೆ ಎಚ್ಚರಿಕೆ ಹೇಳಿ ಅವರು ಜಹಜಿನಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶಕೊಡಬೇಕೆಂದು ಕೇಳಿದರು. ಜರ್ಮನಿಯವರು ಹೇಳುವ ಮಾತೂ ಇದೇನೋ ಅಲ್ಲವೋ ಮುಂದೆ ತಿಳಿಯಬೇಕು. ಹ್ಯಾಗೂ ಅಮೇರಿಕದಲ್ಲಾಗಲಿ ಇಂಗ್ಲೆಂಡಿನಲ್ಲಾಗಲಿ ಜರ್ಮನಿಯವರ ಮಾತು ನಂಬತಕ್ಕದ್ದಲ್ಲವೆಂದು ಎಲ್ಲರಿಗೂ ಚೆನ್ನಾಗಿ ಗೊತ್ತಾಗಿದೆ. ಜರ್ಮನಿಯವರ ಸಬ್‌ಮೆರೀನುಗಳು ಬ್ರಿಟಿಷರ ಹಡಗುಗಳನ್ನು ಮುಳುಗಿಸಿರುವುದು ಬಹಳ ಸ್ವಲ್ಪ; ಇದರಲ್ಲಿ ಜರ್ಮನಿಯ ಅನೇಕ ಸಬ್‌ಮೆರೀನುಗಳು ನಾಶ ಹೊಂದಿದವು. ಆದಕಾರಣ ಜರ್ಮನಿಯು ಈ ದುರ್ವ್ಯಾಪಾರವನ್ನು ಮುಂದೂ ನಡೆಸುವುದರಲ್ಲಿ ಫಲವಿಲ್ಲವೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಅವರು ಈ ಕೃತ್ಯವನ್ನು ನಿಲ್ಲಿಸಿಬಿಟ್ಟ ಪಕ್ಷದಲ್ಲಿ ಅಮೇರಿಕದವರಿಗೆ ಸಂತೋಷವೂ ಸಮಾಧಾನವೂ ಉಂಟಾಗುತ್ತದೆ.

ಇತರ ವಿಷಯಗಳು.

ಅಲೆಕ್ಸಾಂಡ್ರಾ ಮಹಾರಾಜ್ಞೀಯವರು ಯುದ್ಧ ಭೂಮಿಯಲ್ಲಿರುವ ಹಿಂದುಸ್ಥಾನದ ಸೈನಿಕರಿಗೆಲ್ಲಾ ಒಂದೊಂದು ಕಾರ್ಡನ್ನು ಬಹುಮಾನವಾಗಿ ಕಳುಹಿಸಿಕೊಟ್ಟರು. ಅದರಲ್ಲಿ ಲೇಟ್ ಎಡ್ವರ್ಡ್ ಸಾರ್ವಭೌಮರವರು ದಯಮಾಡಿ ಪಾರ್ಲಿಮೆಂಟ್ ಸಭೆಯನ್ನು ಪ್ರಾರಂಭ ಮಾಡಿದ ಚಿತ್ರ ಹಾಕಿ ಇರುತ್ತದೆ. ಅರಸಿಯವರು ಈ ಕಾರ್ಡನ್ನು ಹಿಂದುಸ್ಥಾನದ ಸೈನಿಕರು ತಮ್ಮನ್ನು ಸ್ಮರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅವರಿಗೆಲ್ಲಾ ಕಳುಹಿಸಿಕೊಟ್ಟರು.

ಡೆನ್‌ಮಾರ್ಕಿಗೆ ಸೇರಿದ ಸಮುದ್ರ ಭಾಗದಲ್ಲಿದ್ದ ಬ್ರಿಟಿಷ್ ಸಬ್‌ಮೆರೀನಿಗೆ ಜರ್ಮನಿಯ ಹಡಗು ಗುಂಡು ಹೊಡೆಯಿತಷ್ಟೆ. ಹೀಗೆ ಹೊಡೆದದ್ದು ತಪ್ಪಾಯಿತೆಂದು ಹೇಳಿ ಜರ್ಮನಿಯು ಒಪ್ಪಿಕೊಂಡು ಡೆನ್‌ಮಾರ್ಕಿನ ಕ್ಷಮಾಪಣೆಯನ್ನು ಬೇಡಿದೆ. ಆ ಸಮಯದಲ್ಲಿ ಕೊಲೆಯಾದ ಹದಿನಾಲ್ಕು ಮಂದಿ ಬ್ರಿಟಿಷ್ ಸೈನಿಕರ ಶವಗಳನ್ನು ಇಂಗ್ಲೆಂಡಿಗೆ ಸಾಗಿಸಿಕೊಂಡು ಬಂದು ಸಕಲ ಮರ್ಯಾದೆಗಳ ಸಮೇತ ಉತ್ತರಕ್ರಿಯೆಗಳನ್ನು ನಡಿಸಿದರು. ಇದಲ್ಲದೆ ಜರ್ಮನಿಯ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನಯಂತ್ರವು ಹೊಲ್ಲಾಂಡಿನ ಮೇಲ್ಭಾಗದಲ್ಲಿ ಹಾದುಹೋದಾಗ ಅವರು ಆಕ್ಷೇಪಣೆ ಮಾಡಿದರು. ಜರ್ಮನಿಯವರು ಅದಕ್ಕಾಗಿ ಹೊಲ್ಲಾಂಡಿನ ಕ್ಷಮಾಪಣೆಯನ್ನು ಬೇಡಿದರು.

ಜರ್ಮನಿಯಲ್ಲಿ ಹಲವು ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಒಂದು ಗೋಪ್ಯವಾದ ಕೂಟವನ್ನು ನಡಿಸಿದಾಗ ಜರ್ಮನಿಯ ಖಜಾನಾ ಛಕ್ಷಿಯು ಅವರನ್ನು ಕುರಿತು ಈಗಿನ ಸಾಲದ ಹಣವೆಲ್ಲಾ ಖರ್ಚಾದ ಮೇಲೆ ಹೊಸದಾಗಿ ಸಾಲ ಹುಟ್ಟಿಸುವುದು ಪ್ರಯಾಸವಾಗುತ್ತದೆ ಎಂದೂ, ಆದಕಾರಣ ಮಾನವನ್ನು ಉಳಿಸಿಕೊಳ್ಳುವಂತೆ ಸಾವು ಕರಾರು ಮಾಡಿಕೊಳ್ಳುವುದೇ ಅನುಕೂಲವೆಂದೂ ತಿಳಿಸಿದನಂತೆ. ದಳಪತಿಯಾದ ಜನರಲ್ ಮೊಲ್ಟ್ಕೆ ಎಂಬಾತನೂ ಅದೇ ರೀತಿ ಅಭಿಪ್ರಾಯಪಟ್ಟನು. ಈ ರೀತಿ ಮಾಡದೆಹೋದರೆ ಕೆಲಸಕ್ಕೆ ರಾಜನಾವೆ ಕೊಡಬೇಕಾಗುವುದೆಂದೂ ಖಜಾನಾ ಛಕ್ಷಿಯು ತಿಳಿಸಿದನಂತೆ. ಕಡೆಗೆ ಆ ಕೂಟದಲ್ಲಿ ಯಾವುದೊಂದೂ ಇತ್ಯರ್ಥವಾಗಲಿಲ್ಲ.

ಜರ್ಮನಿಯ ಸೈನ್ಯ ಎಷ್ಟಿರಬಹುದೆಂಬ ಭಾಗವನ್ನು ಗೊತ್ತುಮಾಡಿ ಪ್ರಕಟಿಸಿದ್ದಾರೆ. ಯುದ್ಧವು ಆರಂಭವಾದಾಗ್ಗೆ ಜರ್ಮನಿಯವರು 80,00,000 ಸೈನ್ಯವನ್ನು ಕೂಡಿಸಬಲ್ಲರೆಂದು ಹೇಳಲಾಯಿತು. ಆದರೂ ಅವರು 32,00,000 ಸೈನ್ಯಕ್ಕಿಂತ ಹೆಚ್ಚಾಗಿ ಯುದ್ಧ ಭೂಮಿಗೆ ಕಳುಹಿಸಲಾರರೆಂದು ತಿಳಿಸಲ್ಪಟ್ಟಿತು. ಕಳೆದ ಜೂನ್ ತಿಂಗಳಲ್ಲಿ ಜರ್ಮನಿ ಸೈನ್ಯಗಳು ಯುದ್ಧ ಭೂಮಿಗಳಲ್ಲಿ ಎಷ್ಟೆಷ್ಟಿದ್ದವೆಂದರೆ—ಪಶ್ಚಿಮ ರಣರಂಗದಲ್ಲಿ 18,00,000; ಪೂರ್ವ ರಣರಂಗದಲ್ಲಿ 14,00,000. ಜರ್ಮನಿಯವರು ಕದನಗಳಲ್ಲಿ 15,00,000 ಸೈನ್ಯವನ್ನು ಕಳಕೊಂಡಿದ್ದಾರೆ; ಇವರಲ್ಲಿ ಕೊಲೆಯಾದವರೇ 4,00,000 ಸೈನಿಕರು. ಆದಕಾರಣ ಅವರು ಇನ್ನೂ 33,00,000 ಸೈನ್ಯವನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಆದರೆ ಜೂನ್ ತಿಂಗಳಿಂದೀಚೆಗೆ ಅವರ ಕಡೆಯಲ್ಲಿ ಅನೇಕ ಸೈನ್ಯಗಳು ನಷ್ಟವಾಗಿರುತ್ತವೆ. ಇದರಿಂದ ಅವರು ಮಿಗಿಸಿಟ್ಟುಕೊಂಡಿರುವ ರಿಜರ್ವ್ ಸೈನ್ಯವು ಬಹಳ ಮಟ್ಟಿಗೆ ಕಡಮೆಯಾಗಿದೆ

ಜರ್ಮನಿಯ ಖಜಾನಾ ಛಕ್ಷಿ ಮೊದಲಾದವರು ಹೇಳಿರುವ ಮಾತಿಗೆ ಪ್ರತಿಯಾಗಿ ಬ್ರಿಟಿಷ್ ಮಂತ್ರಿಗಳಲ್ಲಿ ಒಬ್ಬರಾದ ಸರ್ ಎಡ್ವರ್ಡ್ ಗ್ರೇ ಯವರು ದಸಾಬನ್ನು ಪ್ರಕಟಿಸಿದ್ದಾರೆ. ಅವರು ಹೇಳಿರುವುದೇನೆಂದರೆ—ಜರ್ಮನಿಯ ಮಂತ್ರಿಗಳು ಹೇಳುವುದನ್ನು ನೋಡಿದರೆ ಜರ್ಮನಿಯವರೇ ಎಲ್ಲಾ ರಾಜ್ಯಗಳ ಮೇಲೂ ಸ್ವತಂತ್ರಾಧಿಕಾರವನ್ನು ನಡಿಸುವಂತೆ ಮಾಡಿಕೊಳ್ಳಬೇಕೆಂದು ಸಂಕಲ್ಪ ಮಾಡಿಕೊಂಡಿರುವಂತೆ ಕಾಣುತ್ತದೆ. ಇತರ ರಾಜ್ಯಗಳೆಲ್ಲಾ ಜರ್ಮನಿಯವರು ಕೊಡುವಷ್ಟೇ ಹಕ್ಕು ಸ್ವಾತಂತ್ರ್ಯಗಳನ್ನು ಪಡೆದಿರಬೇಕೆಂದು ಹೇಳುತ್ತಾರೆ. ಜರ್ಮನಿಯವರು ಮಾತ್ರ ಯಾವ ಕರಾರನ್ನೂ ಲಕ್ಷ್ಯ ಮಾಡದೆ ಯಾವ ವೇಳೆ ಬೇಕಾದರೂ ಯುದ್ಧಕ್ಕೆ ಹೊರಟು ಎಂಥಾ ರಾಕ್ಷಸ ಕೃತ್ಯಗಳನ್ನಾದರೂ ಮಾಡಬಹುದಂತೆ. ಇಷ್ಟೆಲ್ಲಾ ಮಾಡಿದಾಗ್ಯೂ ಜರ್ಮನಿಯ ವ್ಯಾಪಾರಕ್ಕೆ ಯಾವ ಅಡ್ಡಿಯೂ ಪ್ರತಿಬಂಧಕವೂ ಇರಕೂಡದಂತೆ. ಜರ್ಮನಿಯವರಿಗೆ ಆಗಿರುವ ನಷ್ಟವನ್ನೆಲ್ಲಾ ನಮ್ಮ ಪಕ್ಷದವರು ವಹಿಸಿಕೊಂಡು ಪರಿಹಾರವನ್ನು ತೆರಬೇಕಂತೆ. ಜರ್ಮನಿಯ ಮಂತ್ರಿಗಳು ಹೀಗೆಲ್ಲಾ ಕೊಚ್ಚಿಕೊಂಡಿರುವುದನ್ನು ನೋಡಿದರೆ ಪ್ರಪಂಚದ ಸರ್ವ ಸ್ವತಂತ್ರಾಧಿಕಾರವೂ ತನಗಾಗಬೇಕೆಂದೂ, ಪರ ರಾಜ್ಯಗಳವರು ತನಗೆ ಪೊಗದಿಗಳನ್ನು ಕೊಡಬೇಕೆಂದೂ ಜರ್ಮನಿಯು ಈಗ ಯುದ್ಧಮಾಡುತ್ತಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂಥಾ ಜರ್ಮನಿಯ ಹಟವಾದವನ್ನು ನಮ್ಮ ಪಕ್ಷದವರು ಎಂದಿಗೂ ಅಂಗೀಕರಿಸಲಾರರು. ನಮ್ಮ ಪಕ್ಷದವರು ಜರ್ಮನಿಯವರ ಅಡಿಯಾಳುಗಳಾಗಬೇಕೆಂದು ಅಲ್ಲ; ಯಥಾರ್ಥವಾದ ಸ್ವಾತಂತ್ರ್ಯವನ್ನೂ ನಿರುಪಾಧಿಕತೆಯನ್ನೂ ಸಂಪಾದಿಸಿಕೊಂಡು ಅನುಭೋಗಿಸಬೇಕೆಂತಲೇ ಯುದ್ಧಮಾಡುತ್ತಿದ್ದಾರೆ ಎಂಬುದು. ಈಗ ಯುದ್ಧದಲ್ಲಿ ಬೆರೆಯದೆ ಇರುವ ರಾಜ್ಯಗಳು ಈ ಜವಾಬು ಸಹಜವಾದದ್ದೆಂದು ಒಪ್ಪಿಕೊಂಡಿರುತ್ತವೆ. ನಮ್ಮ ಚಕ್ರವರ್ತಿ ಸಾರ್ವಭೌಮರವರು ಮಹಾರಾಜ್ಞಿಯವರ ಸಮೇತ ಬ್ರೈಟನ್ ನಗರಕ್ಕೆ ಚಿತ್ತೈಸಿ ಅಲ್ಲಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದುತ್ತಿರುವ ಹಿಂದುಸ್ಥಾನದ ಗಾಯಪಟ್ಟ ಸೈನಿಕರನ್ನು ಪರಾಂಬರಿಸಿ ಅವರ ಯೋಗಕ್ಷೇಮಗಳನ್ನು ನೆಟ್ಟಗೆ ವಿಚಾರಣೆ ಮಾಡಿದರು. ಚಕ್ರವರ್ತಿಯವರು ಯುದ್ಧ ಭೂಮಿಯಲ್ಲಿ ಪರಾಕ್ರಮವನ್ನು ತೋರಿಸಿದಂಥಾ ಸೈನಿಕರಿಗೆ ಸ್ವಹಸ್ತ ಬಿರುದುಗಳನ್ನು ಕೊಟ್ಟು, ಅವರ ಕೈಗಳನ್ನು ಹಿಡಿದು ಅವರಿಗೆ ತಮ್ಮ ಆನಂದವನ್ನು ತಿಳಿಸಿದರು. ಗಾಯಪಟ್ಟವರ ಉಪಚಾರಕ್ಕಾಗಿ ದಕ್ಷಿಣ ಆಫ್ರಿಕಾದಿಂದ ಯುದ್ಧ ಭೂಮಿಗೆ ಹೋಗುವ ಸೈನಿಕರ ಕೂಡ ನಮ್ಮ ಹಿಂದುಸ್ಥಾನದವರೂ ಕೆಲವರು ಹೋಗುತ್ತಾರೆ.

ಗಾಯಪಟ್ಟು ಕೈಸರ ಹಿಡಿಯಲ್ಪಟ್ಟಿದ್ದ 270 ಮಂದಿ ಬ್ರಿಟಿಷ್ ಸೈನಿಕರು ಜರ್ಮನಿಯಿಂದ ವಾಪಸು ಬಂದರು. ಅವರ ಸಂತೋಷವು ವಿಶೇಷವಾಯಿತು. ಯಾಕೆಂದರೆ ಇಂಗ್ಲೆಂಡಿನಲ್ಲಿ ಎಲ್ಲಾ ವಿಷಯಗಳೂ ಮೊದಲಿನಂತೆಯೇ ಇದ್ದದ್ದನ್ನು ನೋಡಿದಾಗ ಅವರು ವಿಸ್ಮಯಪಟ್ಟರು. ಜೆಪ್ಪೆಲಿನ್ ವಿಮಾನಯಂತ್ರಗಳು ಲಂಡನ್ ಪಟ್ಟಣವನ್ನು ನಾಶಮಾಡಿದವೆಂದು ಜರ್ಮನಿಯವರು ಅವರಿಗೆ ಹೇಳಿ ಗಾಬರಿ ಪಡಿಸಿದ್ದರು.

ಕಳೆದ ವಾರ ಜರ್ಮನಿಯ ಸಬ್‌ಮೆರೀನುಗಳು 19 ವ್ಯಾಪಾರದ ಹಡಗುಗಳನ್ನು ಮುಳುಗಿಸಿದವೆಂದೂ, 1,369 ಹಡಗುಗಳು ಗ್ರೇಟ್ ಬ್ರಿಟನ್ ತೀರಪಟ್ಟಣಗಳಿಗೆ ಬಂದು ಹೋಗಿರುವವೆಂದೂ ಸರ್ಕಾರಿ ಲೆಕ್ಕಗಳಿಂದ ಗೊತ್ತಾಗುತ್ತದೆ.

ಜರ್ಮನಿಯವರು ರೊಮೇನಿಯ ರಾಜ್ಯವನ್ನು ನುಗ್ಗಿಕೊಂಡು ಹೋಗಿ ಟರ್ಕಿಗೆ ಮದ್ದು ಗುಂಡನ್ನು ಒದಗಿಸಿ ಸಹಾಯಮಾಡಬೇಕೆಂದಿರುವಂತೆ ವರ್ತಮಾನವಿದೆ. ಗ್ರೀಸ್ ರಾಜ್ಯವು ಏನು ಮಾಡುವುದೋ ಇನ್ನೂ ತಿಳಿಸಿಲ್ಲ. ಇದನ್ನೆಲ್ಲಾ ನೋಡಿದರೆ ಇಷ್ಟರಲ್ಲೇ ಬಾಲ್ಕನ್ ಸಂಸ್ಥಾನಗಳು ತಟಸ್ಥಭಾವವನ್ನು ಬಿಟ್ಟು ಪಕ್ಷ ಪರಪಕ್ಷಗಳನ್ನು ವಹಿಸಿ ಯುದ್ಧಕ್ಕೆ ಹೊರಡುವುದೂ ಇಲ್ಲದಿದ್ದರೂ ಇತ್ಯರ್ಥವಾಗಬೇಕೆಂದು ಕಾಣುವುದು. ಇಟಲಿಯು ಟರ್ಕಿಯ ಮೇಲೆ ಯುದ್ಧಕ್ಕೆ ಹೊರಟಿರುವುದರಿಂದ ಬಾಲ್ಕನ್ ಸಂಸ್ಥಾನಗಳಿಗೆ ವಿಶೇಷ ಯೋಚನೆಯುಂಟಾಗಿದೆ.

ಜಪಾನ್ ರಾಜ್ಯದ ಯುದ್ಧದ ಇಲಾಖಾ ಮಂತ್ರಿಯು ಈಗ ಪ್ಯಾರಿಸ್ ನಗರದಲ್ಲಿದ್ದು, ಜಪಾನ್ ರಾಜ್ಯವು ಆತ್ಮರಕ್ಷಣೆಗೋಸ್ಕರಲೂ, ಪ್ರಪಂಚದಲ್ಲಿ ನೆಮ್ಮದಿಯನ್ನು ಕಾಪಾಡುವುದಕ್ಕೋಸ್ಕರಲೂ ನಮ್ಮ ಪಕ್ಷದವರ ಸ್ನೇಹವನ್ನು ವಿಶೇಷವಾಗಿ ಬೆಳಸುವುದಕ್ಕೆ ಸಿದ್ಧವಾಗಿದೆ ಎಂದು ಹೇಳಿದರು.

ಜರ್ಮನಿಗೂ ಆಸ್ಟ್ರಿಯಾಕ್ಕೂ ಪರರಾಜ್ಯಗಳವರ್‍ಯಾರೂ ಶಕ್ತಿಯನ್ನು ಕಳುಹಿಸಕೂಡದೆಂದೂ, ಪರರಾಜ್ಯಗಳ ಅಂಥಾ ಹಡಗುಗಳು ಸಿಕ್ಕಿದರೆ ಹಿಡಿದುಬಿಡುತ್ತೇವೆಂದೂ ನಮ್ಮ ಪಕ್ಷದವರು ಪ್ರಕಟಮಾಡಿದ್ದಾರೆ.

ಜರ್ಮನಿಯಿಂದ ಕಳೆದ ವರುಷ ಅನೇಕ ಸಲ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನಯಂತ್ರಗಳು ಇಂಗ್ಲೆಂಡಿನ ಮೇಲೆ ಹಾರಿಬಂದಿರುವವು. ಅವು ಹಾಕಿದ ಸಿಡಿಮದ್ದಿನ ಗುಂಡುಗಳಿಂದ 71 ಮಂದಿ ದೊಡ್ಡವರೂ, 18 ಮಕ್ಕಳೂ ಕೊಲೆಯಾದರು; 189 ಮಂದಿ ದೊಡ್ಡವರಿಗೂ, 31 ಮಕ್ಕಳಿಗೂ ಗಾಯಗಳಾಗಿವೆ. ಯಾವನೊಬ್ಬ ಸೈನಿಕನೂ ನಾವಿಕನೂ ಕೊಲೆಯಾಗಲಿಲ್ಲ. ಒಂದಾವರ್ತಿ ಮಾತ್ರ ಯುದ್ಧದ ಇಲಾಖೆಯವರಿಗೆ ಸ್ವಲ್ಪ ನಷ್ಟವುಂಟಾಯಿತು. ಈ ದಾಳಿಗಳು ಶತ್ರು ಶಕ್ತ್ಯನುಸಾರವಲ್ಲದೆ ಇದರಿಂದ ಯುದ್ಧಕಾರ್ಯಗಳಿಗೆ ಯಾವ ಪ್ರತಿಕೂಲವೂ ಆಗಲಿಲ್ಲ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಕಳೆದ ಶನಿವಾರ ರಾಜಧಾನಿಗೆ ದಯಮಾಡಿ ಮರುದಿನ ವಾಪಸು ಬೆಂಗಳೂರಿಗೆ ತೆರಳಿದರು.

ಮಳವಳ್ಳಿಯಲ್ಲಿ ಕಸಬುದಾರರೆಲ್ಲಾ ಸಭೆ ಸೇರಿ ಮ|| ಎಸ್. ಎನ್. ಶ್ರೀನಿವಾಸಶಾಸ್ತ್ರಿಗಳ ಪ್ರೋತ್ಸಾಹದಿಂದ ಕಸಬುಗಳನ್ನು ಸ್ಥಾಪಿಸುವುದಕ್ಕಾಗಿ ಒಂದು ಕಂಪನಿಯನ್ನು ಪ್ರಾರಂಭಮಾಡಿ, ಷೇರು ಮೂಲಕ ಹಣವನ್ನು ಕೂಡಿಸುತ್ತಿದ್ದಾರೆ.

ಬೌರಿಂಗ್‌ಪೇಟೆಯಲ್ಲಿ ಪೊಲೀಸ್ ಹುದ್ದೇದಾರರಾಗಿದ್ದ ಮ|| ಕೆ. ಎ ಬಾದ್‌ಷಾ ಸಾಹೇಬರಿಗೆ ಮದರಾಸ್ ಸರ್ಕಾರದವರು ನೌಕರಿ ಕೊಟ್ಟು ಅಲ್ಲಿಗೆ ಕರಸಿಕೊಂಡರು. ಮ|| ಬಾದ್‌ಷಾರವರು ಬಹಳ ಮೇಲಾದ ಸರ್ವಿಸ್ ಮಾಡಿ ಪ್ರಜೆಗಳ ಪ್ರೀತಿ ವಿಶ್ವಾಸವನ್ನು ಸಂಪಾದಿಸಿಕೊಂಡಿದ್ದರು. ಅಲ್ಲಿನವರು ಅವರಿಗೆ ನಾಲ್ಕಾರು ದಿನ ಔತಣಗಳನ್ನು ಮಾಡಿ ಸಂತೋಷಪಡಿಸಿರುತ್ತಾರೆ.

ಮಹಮದೀಯ ಸಂಘದ ಪ್ರೆಸಿಡೆಂಟರಾಗಿರುವ ಮ|| ನವಾಬ್ ಗುಲಾಮ್ ಅಹಮದ್ ಸಾಹೇಬ್ ಕಲಾಮಿ ಬಹದೂರ್‌ಯವರನ್ನು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನಮ್ಮ ಸರ್ಕಾರದವರು ನೇಮಕಮಾಡಿದ್ದನ್ನು ಕೊಂಡಾಡಿ ಮಹಮದೀಯ ಸಂಘದವರು ಕೇಳಿ ಕಳೆದ ಶುಕ್ರವಾರ ಸಾಯಂಕಾಲ ಅಮ್ಮತ್ತಿಯಲ್ಲಿ ಸಂತೋಷಕೂಟವನ್ನು ನಡಿಸಿ ನಮ್ಮ ದಿವಾನರವರಿಗೆ ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ತಿಳಿಸಿದರು.

ಪರಹಿತ ಕಾರ್ಯಗಳನ್ನು ನಡಿಸುವುದರಲ್ಲಿ ಜನಗಳಿಗೆ ಆಸಕ್ತಿಯನ್ನು ಉಂಟುಮಾಡುವುದಕ್ಕಾಗಿ ಬೆಂಗಳೂರಿನಲ್ಲಿ ಸೋಷಲ್ ಸರ್ವಿಸ್ ಲೀಗ್ ಎಂಬ ಸಂಘವನ್ನು ಪ್ರಾರಂಭಿಸಿದ್ದಾರೆ. ಈ ಸಂಘದ ತಿಂಗಳು ಕಟ್ಟೆ ಮೀಟಿಂಗು ಮೊನ್ನೆ ಮಂಗಳವಾರ ಸರ್ದಾರ್ ಕಾಂತರಾಜೆ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಘದ ಕಾರ್ಯಗಳಿಗೆ ನಮ್ಮ ಮಹಾರಾಜರವರೂ, ಶ್ರೀಮದ್ಯುವರಾಜರವರೂ ತಲಾ 500 ರೂಪಾಯನ್ನೂ, ಸರ್ದಾರ್ ಕಾಂತರಾಜೆ ಅರಸಿನವರು 200 ರೂಪಾಯನ್ನೂ ಉಚಿತವಾಗಿ ದಯಪಾಲಿಸಿದ್ದಾರೆ.

ಸರ್ಕಾರದವರು ರಾಜಧಾನಿಯಲ್ಲಿರುವ ಅಡ್ವೊಕೇಟ್ ಮ|| ಎಚ್. ನರಸಿಂಗರಾಯರನ್ನು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನೇಮಿಸಿದ ಸಂತೋಷಾರ್ಥವಾಗಿ ಮ|| ರಾಯರು ತಮ್ಮ ಮನೆಯಲ್ಲಿ ಕಳೆದ ಭಾನುವಾರ ಒಂದು ಸಂತೋಷಕೂಟವನ್ನು ನಡಿಸಿದರು. ಎಲ್ಲಾ ಕೋಮುಗಳ ಮತ್ತು ಕಸಬುಗಳ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಕರೆಸಲ್ಪಟ್ಟಿದ್ದರು. ದಿವ್ಯವಾದ ಫಲಾಹಾರಗಳೂ, ಮನೋಹರವಾದ ಸಂಗೀತವೂ ಹಾಡುಗಾರಿಕೆಯೂ, ನಾನಾ ವಿನೋದಗಳೂ ಕಲ್ಪಿಸಲ್ಪಟ್ಟಿದ್ದು, ಎಲ್ಲರೂ ಸಂತೋಷಪಟ್ಟು ಮ|| ನರಸಿಂಗರಾಯರನ್ನು ವಂದಿಸಿದರು.

ಕಳೆದ ಶುಕ್ರವಾರ ಆನೇಕಲ್ ತಾಲ್ಲೂಕು ಅತ್ತಿಬೆಲೆಯಲ್ಲಿ ಸಾಹುಕಾರ್ ಸಿದ್ದಬಸಪ್ಪನವರು ಗಂಡುಮಕ್ಕಳಿಗಾಗಿ ಕಟ್ಟಿಸಿಕೊಟ್ಟಿರುವ ಸ್ಕೂಲ್ ಕಟ್ಟಡವನ್ನೂ, ಸಾಹುಕಾರ್ ಅಪ್ಪಾಜಪ್ಪನವರು ಹೆಣ್ಣುಮಕ್ಕಳಿಗಾಗಿ ಕಟ್ಟಿಸಿಕೊಟ್ಟಿರುವ ಸ್ಕೂಲ್ ಕಟ್ಟಡವನ್ನೂ ಶ್ರೀಮದ್ಯುವರಾಜರು ಅಲ್ಲಿಗೆ ದಯಮಾಡಿ ಪ್ರತಿಷ್ಠೆಮಾಡಿದರು. ಆಗ್ಗೆ ದಿವಾನರೇ ಮುಂತಾದ ಅನೇಕ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಹೋಗಿದ್ದರು. ಸಾಹುಕಾರರಿಬ್ಬರೂ ಅಡ್ರೆಸ್ಸುಗಳನ್ನೋದಿ ದಿವ್ಯವಾದ ಕೈಪೆಟ್ಟಿಗೆಗಳಲ್ಲಿಟ್ಟು ಒಪ್ಪಿಸಿದರು. ರಾವ್ ಬಹದೂರ್ ಎಂ. ಶಾಮರಾಯರು ಉಪನ್ಯಾಸಮಾಡಿದರು. ಪ್ರಜೆಗಳ ಪರವಾಗಿ ಮ|| ರಾಮಣ್ಣನವರು ಒಂದು ಅಡ್ರೆಸ್ಸನ್ನು ಓದಿದರು. ಶ್ರೀಮದ್ಯುವರಾಜರವರು ಆ ಸಾಹುಕಾರರುಗಳನ್ನೂ ನಿವೇಶನವನ್ನು ಉಚಿತವಾಗಿ ಕೊಟ್ಟ ಮ|| ರಾಮಶೆಟ್ಟರನ್ನೂ ವಂದಿಸಿ, ಅವರುಗಳ ಹೆಸರು ಶಾಶ್ವತವಾಗಿ ನಿಲ್ಲುವುದೆಂದೂ, ಇತರರಿಗೆ ಇವರಿಂದ ಒಳ್ಳೇ ಮೇಲ್ಪಂಕ್ತಿ ಆಯಿತೆಂದೂ ಅಪ್ಪಣೆಕೊಡಿಸಿ, ಸಭಿಕರು ಆನಂದ ಧ್ವನಿಮಾಡುತ್ತಿರುವಲ್ಲಿ ಕಟ್ಟಡಗಳನ್ನು ಪ್ರತಿಷ್ಠೆಮಾಡಿದರು.

ನಂಜನಗೂಡು ಉಪಾಧ್ಯಾಯರ ಸಂಘದ ಎರಡನೇ ಮೀಟಿಂಗು.

ತಾ. 29 ನೇ ಮಧ್ಯಾಹ್ನ 3ಕ್ಕೆ ನಂಜನಗೂಡು ದಳವಾಯಿ ಕಟ್ಟಡದ ಮಹಡಿಯ ಮೇಲೆ ಸಬ್ ಡಿವಿಜನ್ ಆಫೀಸರ್ ಮ|| ಎನ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಈ ಸಭೆಯು ಪ್ರಾರಂಭವಾಯಿತು. ಕನ್ನಡ ಹೈಸ್ಕೂಲ್ ಉಪಾಧ್ಯಾಯರಾದ ಮ|| ಎಸ್. ಗುಂಡಪ್ಪನವರು ತಕ್ಕ ಚಿತ್ರಗಳೊಂದಿಗೂ, ಉಪಕರಣಗಳೊಂದಿಗೂ, ವಿವರಣೆಗಳೊಂದಿಗೂ ಭೂವಿವರಣೆಯ ಬೋಧನಾ ಕ್ರಮವೆಂಬ ಉಪನ್ಯಾಸವನ್ನು ಸ್ವಾರಸ್ಯವಾಗಿ ಹೇಳಿದರು. ಆ ಮೇಲೆ ಹೈಸ್ಕೂಲ್ ಹೆಡ್ ಮಾಸ್ಟರ್ ಮ|| ವಿ. ಸಿ. ಗುಂಡಪ್ಪನವರು ಕ್ಲೋರಿಕ್ ಆಸಿಡ್ ವನ್ನು ತಯಾರು ಮಾಡಿ ಅದರ ವಿಚಾರಗಳನ್ನು ಅನೇಕ ನಿದರ್ಶನಗಳಿಂದಲೂ, ಪ್ರಯೋಗಗಳಿಂದಲೂ ಸ್ಪಷ್ಟಪಡಿಸಿ, ಸಭಿಕರಿಗೆ ಆನಂದವನ್ನುಂಟುಮಾಡಿದರು ಬಳಿಕ ಸಭಾಧ್ಯಕ್ಷರು ಉಪಾಧ್ಯಾಯರ ಕೆಲಸದ ಜವಾಬ್ದಾರಿಕೆಯ ವಿಚಾರದಲ್ಲಿ ಸ್ವಾರಸ್ಯವಾದ ವಿಷಯಗಳನ್ನು ತಿಳಿಸಿದ್ದಲ್ಲದೆ ಗ್ರಾಮಾಂತರಗಳಲ್ಲಿರುವ ಉಪಾಧ್ಯಾಯರು ಗ್ರಾಮಸ್ಥರಿಗೆ ತಕ್ಕ ಬೋಧೆಯನ್ನು ಮಾಡುವುದು ಅವರ ಕರ್ತವ್ಯವೆಂಬ ಹಿತೋಕ್ತಿಯನ್ನು ಹೇಳಿ ಸಭೆಯನ್ನು ಮುಗಿಸಿದರು. ಮುಂದೆ 26 ನೇ ಸೆಪ್ಟೆಂಬರ್ ಮೀಟಿಂಗಿನಲ್ಲಿ ನಡೆಯುವ ಕೆಲಸಗಳ್ಯಾವವೆಂದರೆ—(1) ಗ್ರಾಮ ಪಂಚಾಯಿತಿ ಎಂಬ ಉಪನ್ಯಾಸ, ನಂಜನಗೂಡು ಅಮಲ್ದಾರ್ ಮ|| ಬಿ. ಭೀಮರಾಯರಿಂದ; (2) "ಭೂವಿವರಣೆಯ ಮಾದರಿ ಪಾಠ" ನಂಜನಗೂಡು ಕನ್ನಡ ಹೈಸ್ಕೂಲ್ ಉಪಾಧ್ಯಾಯರು ಮ|| ಎಸ್. ಗುಂಡಪ್ಪನವರಿಂದ; (3) "ಸಲ್ಲಾಪೋಪದೇಶ" ಮಕ್ಕಳ ತರಗತಿಗೆ ಗೊತ್ತುಮಾಡಿದ್ದಾದ ಉಪಾಧ್ಯಾಯರು ಮ|| ಶ್ರೀಕಂಠಯ್ಯನವರಿಂದ.

ವಿ. ಸಿ. ಗುಂಡಪ್ಪ, ಸೆಕ್ರೆಟರಿ.

ಒಂದು ಕೋಆಪರೆಟಿವ್ ಸೊಸೈಟಿ.

ನಾನು ಅನೇಕ ಸೊಸೈಟಿಗಳನ್ನು ನೋಡಿರುತ್ತೇನೆ ಆದರೆ ಕೃಷ್ಣರಾಜ ಪೇಟೆ ತಾಲ್ಲೂಕು ಸರ್ವಮಾನ್ಯ ಮಡವನಕೋಡಿ ಗ್ರಾಮದಲ್ಲಿರುವ ಶ್ರೀ ಆಂಜನೇಯಸ್ವಾಮಿ ಕೋಆಪರೆಟಿವ್ ಸೊಸೈಟಿಯು 1914 ನೇ ಡಿಸೆಂಬರ್ 1 ನೇ ತಾ. ಆಗಾಯಿತು ಪ್ರಾರಂಭವಾಯಿತು ದಿನೇ ದಿನೇ ಬಹಳ ಅಭಿವೃದ್ಧಿಸ್ಥಿತಿಗೆ ಬರುತ್ತಾ ಇದೆ. ಜನಗಳು ತಮ್ಮ ತಮ್ಮಷ್ಟಕ್ಕೆ ತಾವಾಗಿಯೇ ಬಂದು ಸೊಸೈಟಿಗೆ ಮೆಂಬರಾಗಿ ಸೇರಿಕೊಳ್ಳುತ್ತಾ ಇದಾರೆ. ಮೆಂಬರುಗಳು ಮತ್ತು ಮೆಂಬರಲ್ಲದವರೂ ಸಹಾ ಮೇಲ್ಕಂಡ ಸೊಸೈಟಿಯಲ್ಲಿ ಭಾರಿಯಾಗಿ ಡಿಪಾಜಿಟ್ ಮೊಬಲಗನ್ನು ಕಟ್ಟುತ್ತಾ ಇದಾರೆ. ಷೇರು ಮೊಬಲಗನ್ನು ಇಪ್ಪತ್ತು ತಿಂಗಳಲ್ಲಿ ಸೊಸೈಟಿಗೆ ಪ್ರೈಸಲ್ಲಾದಬಹುದೆಂತ ಗೊತ್ತು ಮಾಡಿದ್ದಾಗ್ಯೂ ಅನೇಕ ಮೆಂಬರುಗಳು ತಮ್ಮಗಳ ಬಾಬ್ತು ಷೇರು ಪೂರಾ ಮೊಬಲಗನ್ನು ಒಂದೇ ಸಲ ಕೊಡುತ್ತಾ ಇದಾರೆ. ಹಳ್ಳಿಗಾಡಿನಲ್ಲಿ ಇಷ್ಟರಮಟ್ಟಿನ ನಂಬಿಕೆಗೂ ಮತ್ತು ಅಭಿವೃದ್ಧಿ ವಿಚಾರದಲ್ಲಿ ನೋಡಿದರೆ ಈ ಸೊಸೈಟಿಗೆ ಪ್ರೆಸಿಡೆಂಟರಾಗಿರುವ ನಮ್ಮ ಅಮಲ್ದಾರ್ ಮ|| ಟಿ. ವೆಂಕಟರಾಮಯ್ಯನವರ ಮುತುವರ್ಜಿ ಮತ್ತು ಸೊಸೈಟಿ ಇನ್‌ಸ್ಪೆಕ್ಟರ್ ಮ|| ಎಂ. ವೆಂಕಟಕೃಷ್ಣಪ್ಪಯ್ಯನವರ ಪ್ರೋತ್ಸಾಹ, ಸೊಸೈಟಿ ಮೆಂಬರುಗಳ ನಡತೆ, ಸೊಸೈಟಿಯ ನೌಕರ ಮಾನೇಜರುಗಳ ನಡತೆ ಮತ್ತು ವಿಶ್ವಾಸವೇ ಮೇಲ್ಕಂಡ ಅಭಿವೃದ್ಧಿಸ್ಥಿತಿಗೆ ಕಾರಣವೆಂತ ತೋರುತ್ತೆ. ಈ ಸೊಸೈಟಿಯು ಕಡೆಯಿಂದ ಈ ಗ್ರಾಮದಲ್ಲಿ ಕೈಗಾರಿಕೆ ಕಸಬುಗಳನ್ನು ಅಭಿವೃದ್ಧಿಪಡಿಸತಕ್ಕ ಬಗ್ಗೆ ನೂಲು ಮತ್ತು ರೇಷ್ಮೆ ಸನಗುಗಳನ್ನು ತಯಾರು ಮಾಡಿಸುತ್ತಲಿದಾರೆ. ರೇಷ್ಮೆ ಸನಗುಗಳಲ್ಲಿ ಬಣ್ಣ ಗ್ಯಾರಂಟಿಯುಳ್ಳ ತರಹಾವರಿ ಬಣ್ಣದ ಪೇಟ, ಮಗುಟ, ಸೀರೆ, ಕುಪ್ಪಸ, ಕೋಟಿನ ಬಟ್ಟೆ ವಗೈರೆ ತಯಾರಾಗುತ್ತಾ ಇವೆ. ಈ ಸೊಸೈಟಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ಅನೇಕ ರೈತರು ಹೊರಗೆ ಹೆಚ್ಚು ಬಡ್ಡಿ ಕೊಟ್ಟು ಸಾಲ ಮಾಡಿ ತಮ್ಮ ಮನೆ ಮಠಗಳನ್ನು ಸಾಲಗಾರರ ಪಾಲು ಮಾಡುತ್ತಲಿದಾರೆ ಈ ಸೊಸೈಟಿಯು ಹೆಚ್ಚಾದ ಅಭಿವೃದ್ಧಿಗೆ ಬಂದು, ನಮ್ಮನ್ನು ಕಾಪಾಡಬೇಕೆಂದು ಕೋರುತ್ತೇನೆ.

ಮ. ರಂ.

ಕುಣಿಗಲಿನಲ್ಲಿ ನಡೆದ ಒಂದು ಸಭೆ.

ಕಳೆದ 23 ನೇ ತಾ. ಭಾನುವಾರ ಸಾಯಂಕಾಲ ಇಲ್ಲಿನ ಎ. ವಿ. ಸ್ಕೂಲ್ ಹಾಲಿನಲ್ಲಿ ಇಲ್ಲಿಗೆ ಬೆಂಗಳೂರಿನಿಂದ ಬಂದಿರುವ ಮೈಸೂರು ಸ್ಟೀಂ ಟ್ಯಾಂವೆ ಕಂಪನಿ ಏಜಂಟ್ ಮ|| ಕೆ. ಆರ್. ಚಕ್ರವರ್ತಯ್ಯಂಗಾರ್ರವರು ಅಮಲ್ದಾರ್ ಮ|| ಬಿ. ಯಂ. ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ನಮ್ಮ ದೇಶದ ಹೀನಸ್ಥಿತಿಗೆ ಕಾರಣಗಳನ್ನೂ, ಉತ್ತಮ ಸ್ಥಿತಿಗೆ ಬರಲಿಕ್ಕೆ ನಾವುಗಳು ಅನುಸರಿಸಬೇಕಾದ ಕರ್ತವ್ಯಗಳನ್ನೂ ವಿವರಿಸಿ, ಈಗ ನಡೆಯುತ್ತಿರುವ ಘೋರ ಯುದ್ಧದಿಂದ ಅನ್ಯದೇಶೀಯ ಪದಾರ್ಥಗಳಿಗೆ ಅರ್ಧ ಬೆಲೆಗೆ ನಾಲ್ಕರಷ್ಟು ಮೊದಲುಗೊಂಡು ಹತ್ತರಷ್ಟು ಇನ್ನೂ ಅಧಿಕ ಬೆಲೆ ಕೊಟ್ಟು ತೆಗೆದುಕೊಳ್ಳಬೇಕಾಗಿರುವುದರಿಂದ ನಮ್ಮ ದೇಶದವರು ಕಣ್ಣು ತೆರೆದು ನೋಡಬೇಕಾಗಿ ಬಂದಿರೋಣವರಿಂದ ಈ ಯುದ್ಧದಿಂದ ನಮ್ಮ ಹಿಂದೂಸ್ತಾನಕ್ಕೆ ಎರಡು ಬಗೆಯಾದ ಅಭ್ಯುದಯಗಳು ಉಂಟಾಗುವುದು ಹೇಗೆಂದರೆ—ನಮ್ಮ ದೇಶದ ಕೈಗಾರಿಕೆಗಳು ಯಾವ ರೀತಿಯಿಂದಲಾದರೂ ಅಭಿವೃದ್ಧಿಗೆ ಬರುವುದು ಒಂದು ಬಗೆ; ನಮ್ಮನ್ನಾಳುವ ಬ್ರಿಟಿಷ್ ರಾಜಪುರುಷರು ಜರ್ಮನಿ ಚಕ್ರಾಧಿಪತ್ಯವನ್ನು ಗೆದ್ದು ತಮ್ಮ ಆಳ್ವಿಕೆಗೊಳಪಡಿಸಿಕೊಂಡು ಅನ್ಯಾದೃಶ್ಯವಾದ ಪ್ರಾಬಲ್ಯವನ್ನು ಹೊಂದುವುದು ಮತ್ತೊಂದು ಬಗೆ ಇವೇ ಮೊದಲಾಗಿ ಉಪನ್ಯಾಸವನ್ನು ಮಾಡಿ, ಫೌಂಟನ್ ಪೆನ್ ಎಂಬ ಜೇಬಿನಲ್ಲಿರುವ ಲೇಖನಿಗೆ ಬಳಕಲಿಕ್ಕೆ ಉಪಯೋಗಿಸುವ ಅತ್ಯುತ್ತಮವಾದ ಶಾಯಿಯನ್ನೂ, ಎಷ್ಟು ಕಠಿಣವುಳ್ಳ ಬಟ್ಟೆಗಳನ್ನು ಬೆಳ್ಳಗೆ ಮಾಡಬಹುದಾದ ರೀತಿಯನ್ನೂ, ರಾಗಿ ಮತ್ತು ಗೋಧಿ ಇವುಗಳಿಂದ ಕಾಫಿಯನ್ನು ತಯಾರು ಮಾಡುವ ರೀತಿಯನ್ನೂ, ತೆಂಗಿನಕಾಯಿ ಚಿಪ್ಪಿನಲ್ಲಿಯೂ, ಮರಗಳು ಹಾಲಿನಲ್ಲಿಯೂ ತಯಾರಿಸಬಹುದಾದ ಬಣ್ಣಗಳನ್ನೂ ಜನಗಳ ಮನಸ್ಸಿಗೆ ಚೆನ್ನಾಗಿ ತಿಳಿಯುವ ಹಾಗೆ ಅವರಿವರಿಗೆ ಮಾಡಿ ತೋರಿಸಿ, ಅಲ್ಲಿ ನೆರೆದಿದ್ದವರಿಗೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿದರು ಇದಲ್ಲದೆ ತಮಗೆ ಗೊತ್ತಾಗಿರುವ ಕೈಗಾರಿಕೆಗಳನ್ನು ಯಾರು ಕಲಿಯಲಿಕ್ಕೆ ಅಪೇಕ್ಷಿಸಿದರೂ ಅವರಿಗೆ ಕಲಿಸುವುದಾಗಿ ಹೇಳಿದರು. ಕಾರ್ಖಾನೆಗಳನ್ನು ಇಟ್ಟು ನಡೆಸುವುದಾದರೆ ಕೈಗಾರಿಕೆಗಳು ಮಾಡುವ ರೀತಿಯನ್ನು ತೋರಿಸಿಕೊಡುವುದಾಗಿ ಒಪ್ಪಿಕೊಂಡರು ಅನಂತರ ಏಜಂಟರಾಗಿರುವ ಮೈಸೂರು ಸ್ಟೀಂ ಟ್ರಾಂವೆ ಕಂಪನಿಯ ವಿಷಯವಾಗಿ ಉಪನ್ಯಾಸ ಮಾಡಿದ್ದಲ್ಲದೆ ಇದರ ಷೇರುಗಳನ್ನು ತೆಗೆದುಕೊಳ್ಳುವುದರಿಂದ ಉಂಟಾಗುವ ಫಲಪ್ರಾಪ್ತಿಯನ್ನು ವಿವರಿಸಿ ಹೇಳಿದರು. ಇವರ ಪ್ರಯತ್ನಗಳು ಅತ್ಯುತ್ತಮವಾದವುಗಳಾದದ್ದರಿಂದ ಎಲ್ಲೆಲ್ಲಿಯೂ ಫಲಕಾರಿಗಳಾಗಬೇಕೆಂದು ಹಾರೈಸುತ್ತೇವೆ.

ಕ ರ.ಬ

ಪಂಚಮಸ್ಕೂಲ್ ಸ್ಥಾಪನೆ.

ಚಿಕ್ಕಮಗಳೂರು ತಾಲ್ಲೂಕು ಪಟ್ಟಣದಲ್ಲಿ ಈಗ 30 ದಿನಗಳಿಂದ ಮಳೆ ಇಲ್ಲದೆ ಈ ಗ್ರಾಮದಲ್ಲಿ ಆಗುವ ಒಂದೇ ಒಂದು ತೋಟಕ್ಕೆ ಬಹಳ ತೊಂದರೆ ಆಗಿದೆ. ಆದರೂ ಕೆರೆಯಲ್ಲಿ ತುಂಬಾ ನೀರಿದೆ. ಕಳೆದ ತಾ. 19 ನೇ ಗುರುವಾರ ಮಧ್ಯಾಹ್ನ ಡಿ. ಇನ್. ಮ|| ಕೆ ನಾರಾಯಣರಾಯರೂ, ಪಟ್ಟಣಕ್ಕೆ ರೇಂ ಶಾಮರಾಯರವರೂ ಸ್ಕೂಲ್ ಇನ್‌ಸ್ಪೆಕ್ಷನ್ನಿಗೆ ದಯಮಾಡಿಸುವಾಗ ಈ ಹಿಂದಲೇ ಮ|| ಅಂ. ಶಾಮರಾಯರಿಂದ ಪ್ರೋತ್ಸಾಹಿಸಿ ತಯಾರಾದ ಪಂಚಮಸ್ಕೂಲ್ ಸ್ಥಾಪನೆಗಾಗಿ ಪಟ್ಟಣದ ಶ್ಯಾನು ಮ|| ಹೊನ್ನಪ್ಪಯ್ಯನವರು, ಶ್ಯಾ|| ರಾಮಯ್ಯನವರು, ಪಟೇಲ್ ದೇವಪ್ಪಗೌಡರು, ಜ ವಾಸುದೇವರಾಯರು, ರಾಮಾಚಾರ್ರು ಮುಂತಾದ ಗ್ರಾಮಸ್ಥರೂ, ಪಂಚಮರೂ ಸಹಾ ಪ್ರಾರ್ಥಿಸಿಕೊಂಡಂತೆ ತೋರಣ ಚಪ್ಪರ ಮುಂತಾದವುಗಳಿಂದ ಅಲಂಕರಿಸಿದ್ದ ಸ್ಕೂಲಿಗೆ ಮ|| ನಾರಾಯಣರಾಯರು ದಯಮಾಡಿಸಿದರು. ಅಲ್ಲಿ ನೆರೆದಿದ್ದ ಪಂಚಮ ಬಾಲಕ ಬಾಲಕಿಯರನ್ನು ಪರಾಂಬರಿಸಿ ಪಂಚಮರಿಗೆ ವಿದ್ಯಾಭ್ಯಾಸದಿಂದ ಆಗುವ ಪ್ರಯೋಜನಗಳನ್ನು ಮನನವಾಗುವಂತೆ ಅರಿಕೆಮಾಡಿದರು. ಗೊತ್ತಾದ ಪಂಚಮಸ್ಕೂಲ್ ಮಾಸ್ತರಾದ ಚನ್ನಗಿರಿ ಬುಡ್ಡಾ ಸಾಹೇಬರಿಂದ ಸ್ಕೂಲ್ ಪ್ರಾರಂಭಮಾಡಿ ಮ|| ಅಂ. ಶಾಮರಾಯರು ತರಿಸಿದ ಹಣ್ಣು ಮೊದಲಾದ ತಿಂಡಿ ಪದಾರ್ಥಗಳನ್ನು ಕೊಡಿಸಿ ಸ್ಕೂಲ್ ಪುರೋಭಿವೃದ್ಧಿಗೆ ಅನುಕೂಲಿಸುವ ವಿಷಯಗಳನ್ನು ಅಪ್ಪಣೆಕೊಡಿಸಿದರು. ಆ ಮೇಲೆ ಗ್ರಾಮಸ್ಥರಿಗೂ ಪಂಚಮಸ್ಕೂಲಿನಿಂದ ಆಗುವ ಪ್ರಯೋಜನಗಳನ್ನು ಯುಕ್ತಿ ಯುಕ್ತವಾಗಿ ತಿಳಿಸಿ ಅಸಮಾಧಾನವನ್ನು ಕಳೆದು ಗ್ರಾಮದ ಸ್ಕೂಲಿಗೆ ಸಭಿಕರೊಡನೆ ದಯಮಾಡಿಸಿ ಸ್ಕೂಲ್ ಇನ್‌ಸ್ಪೆಕ್ಷನ್ ಮಾಡುವ ವೇಳೆ ಸ್ಕೂಲ್ ಮಾಸ್ಟರ್ ವಿ ಶೇಷಗಿರಿರಾಯರು ಹೊಸದಾಗಿ ಬಾಲಕರಿಂದ ತಯಾರಿಸಿದ ನಕ್ಷೆ, ಮಣ್ಣು ಮತ್ತು ಕಾಗದದ ಕೆಲಸ, ಸೀಮೆಯ ಸುಣ್ಣದಿಂದ ತಯಾರಿಸಿದ ವಸ್ತುಗಳನ್ನು ಸಹಾ ಸಭಿಕರು ನೋಡಿ ಬಹಳ ಸಂತೋಷಪಟ್ಟರು ಮತ್ತು ಮಲೆನಾಡು ಸ್ಕೀಮ್ ಇಲಾಖೆಯವರಿಂದ ಈ ಗ್ರಾಮಕ್ಕೆ ಆಗಿರುವ ಕೆಲಸಗಳನ್ನು ಆಗ ದಯಮಾಡಿದ್ದ ಓವರ್‌ಸಿಯರ್ ಮ|| ವೆಂಕಟರಾಯರಿಂದ ತಿಳಿದುಕೊಂಡು ಇವುಗಳಿಂದಲೇ ಹೋದ ವರುಷಕ್ಕಿಂತಲೂ ಈ ವರುಷ ಈ ಗ್ರಾಮದಲ್ಲಿ ಖಾಯಿಲೆ ಕಡಮೆಯಾಗಿದೆ ಎಂದು ಅಪ್ಪಣೆಕೊಡಿಸಿದರು ಜಾತಿ ಭೇದವಿಲ್ಲದೆ ಸರ್ವತ್ರ ಒಂದೇ ವಿಧವಾಗಿ ವಿದ್ಯಾದಾನ ಮಾಡುತ್ತಿರುವ ಘನವನ್ನು ಹೊಂದಿದ ನಮ್ಮ ಮಹಿಶೂರ್ ಶ್ರೀಮನ್ ಮಹಾರಾಜರವರಿಗೂ ಮತ್ತು ಬ್ರಿಟಿಷ್ ಗವರ್ನ್‌ಮೆಂಟಿನವರಿಗೂ ಪ್ರಜೆಗಳಾದ ನಾವುಗಳು ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿರುತ್ತೆ.

ಶಿವಸ್ವಾಮಿ.

ಸರ್ಕೀಟು ಉಪನ್ಯಾಸಕರುಗಳ ಉಪಯೋಗ.

ನಮ್ಮ ಸರ್ಕಾರದವರಿಂದ ನಮ್ಮ ದೇಶದ ಪ್ರಜಾ ಏಳಿಗೆಗಾಗಿ ಸ್ಥಾಪಿಸಲ್ಪಟ್ಟು ಕಳೆದ ಮಾರ್ಚಿ ತಿಂಗಳ ಆಗಾಯಿತು ನಡೆದು ಬರುತ್ತಿರುವ ಏಟಿನರೆಂಟ್ ಲೆಕ್ಚರರುಗಳ ಉಪಯೋಗವು ಆವಶ್ಯಕವಾದುದೆಂಬುದು ಪ್ರಜೆಗಳ ಮತ್ತು ಸರ್ಕಾರದವರ ಮನಸ್ಸಿನಲ್ಲಿ ಚೆನ್ನಾಗಿ ನಾಟುತ್ತದೆ. ಪ್ರಜೆಗಳನ್ನು ವಿದ್ಯಾಬುದ್ಧಿ ಸುಶೀಲವಂತರನ್ನಾಗಿ ಮಾಡುವುದರಲ್ಲಿ ಬದ್ಧಕಂಕಣರಾಗಿ ಅದಕ್ಕೆ ಆವಶ್ಯಕವಾದ ಏರ್ಪಾಡುಗಳನ್ನು ಮಾಡಿಯೂ, ಮಾಡುತ್ತಲೂ ಇರುವ ನಮ್ಮ ಗವರ್ನ್‌ಮೆಂಟಿಗೆ ನಾವು ಚಿರಕಾಲ ಕೃತಜ್ಞರಾಗಿ ಅದನ್ನು ಸಾರ್ಥಕಪಡಿಸಿಕೊಳ್ಳುವುದು ನಮ್ಮ ಮುಖ್ಯ ಕರ್ತವ್ಯವಾಗಿದೆ ದೇಶದಲ್ಲಿ ಸತ್ಪ್ರಜಾ ಸಮುದಾಯವೇ ಅಭಿವೃದ್ಧಿಹೊಂದಿದಲ್ಲಿ ಶಾಸನ ನಿರ್ಮಾಣಕ್ಕಾಗಿ ವಿಚಾರಗಳುವ ಅಪಾರ ದ್ರವ್ಯವು ಉಳಿದು ಇಂತಹ ಅನೇಕಾನೇಕ ಪ್ರಜೋಪಯುಕ್ತ ಕಾರ್ಯಗಳಿಗೆ ಅದೂ ಸಹ ವಿನಿಯೋಗವಾಗಲು ಅಡ್ಡಿ ಇರುವುದಿಲ್ಲ.

ಮೇಲ್ಕಂಡ ಲೆಕ್ಚರರುಗಳಲ್ಲೊಬ್ಬರಾದ ಹಾಸನದ ಡಿಸ್ಟ್ರಿಕ್ಟ್ ಉಪನ್ಯಾಸಕರು ಈ ಮಾಹೆಯಲ್ಲಿ ಬಾಣಾವರದ ಹೋಬಳಿಯ ಸುತ್ತ ಜಾವಗಲ್ ಹೋಬಳಿಯ ಕೆಲವು ಗ್ರಾಮಗಳಲ್ಲಿ ಸಂಚರಿಸಿ ಅಲ್ಲಲ್ಲಿನ ನಿವಾಸಿಗಳಿಗೆ ಪ್ರಜೋಪಯುಕ್ತ ಅನೇಕ ವಿಷಯಗಳನ್ನು ಬೋಧಿಸಿ ಅವರು ಸನ್ಮಾರ್ಗಾವಲಂಬಿಗಳಾಗುವಂತೆ ಪ್ರೇರಿಸಿ ಅವರನ್ನು ಸನ್ಮಾರ್ಗಕ್ಕೆ ತರುಗಲು ಮಾಡುತ್ತಿರುವ ಕಾರ್ಯಗಳು ಶ್ಲಾಘಿಸತಕ್ಕದ್ದಾಗಿವೆ ಇವರು ಗ್ರಾಮಾಂತರಗಳಿಗೆ ಹೋಗಿ ಅಲ್ಲಿಂದ ವಾಪಸ್ ಬರುವ ವೇಳೆ ಅಲ್ಲಲ್ಲಿಯ ಗ್ರಾಮಸ್ಥರು ತಮ್ಮನ್ನು ಅಗಲಿ ಹೊರಟು ಹೋಗುವರಲ್ಲಾ ಎಂಬ ವ್ಯಸನದಿಂದ ಕಳುಹಿಸಿಕೊಡುತ್ತಾರೆ. ಇವರು ಮತ್ತಾವಾಗ, ಕೆಲವು ಗ್ರಾಮಗಳಿಗೆ ಹೋಗಿ ಪ್ರಜೆಗಳೆಲ್ಲರಿಗೂ ಉಪನ್ಯಾಸಿಸುವ ವೇಳೆ ಆ ಎರಡು ಕಡೆಗಳಲ್ಲಿಯೂ ಬಸವ, ರಂಗ ಎಂಬಿಬ್ಬರಿಗೆ ನಾಗರ ಹಾವು ಕಡಿದು ಅವರು ವಿಷವೇರಿ ಗೋಳಾಡುತ್ತಿರುವ ಸಮಾಚಾರ ಕೇಳಿದೊಡನೆಯೇ ಇವರು ಅವರುಗಳನ್ನು ಸದರಿ ಉಪನ್ಯಾಸದ ಮಂದಿರಕ್ಕೆ ಬರಮಾಡಿಕೊಂಡು ಶಾವೇಟೇರಿನ ಗಂಧವನ್ನು ತಯಿಸಿ ಅವರಿಗೆ ಕುಡಿಸಿ, ಕಡಿದ ಸ್ಥಳಕ್ಕೂ ಅದನ್ನೇ ಲೇಪನ ಮಾಡಿಸಿದ್ದರಿಂದ ಅವರಿಬ್ಬರೂ ಬದುಕಿಕೊಂಡು ಸಂತೋಷದಿಂದ ಕೊಂಡಾಡಿದರು. ಇವರು ಸಂಚರಿಸಿದ ಕೆಲವೆಡೆಗಳಲ್ಲಿ ಅನೇಕ ರೋಗಿಗಳನ್ನು ಪರೀಕ್ಷಿಸಿ ತಕ್ಕ ಚಿಕಿತ್ಸೆಗಳನ್ನು ಮಾಡಿಸುತ್ತಲೂ, ಅಲ್ಲಲ್ಲಿ ವಾಚಕ ಮಂದಿರಗಳನ್ನೂ, ಸ್ಕೂಲುಗಳನ್ನೂ, ಸೇದುವ ಭಾವಿಗಳನ್ನೂ ಏರ್ಪಡಿಸಿಯೂ ಏರ್ಪಡಿಸುತ್ತಲೂ ಇರುವುದು ಅತ್ಯಂತ ಸ್ತೋತ್ರಾರ್ಹವಾಗಿದೆ. ಹೀಗೆಯೇ ಪ್ರತಿಯೊಬ್ಬ ಉದ್ಯೋಗಸ್ಥನೂ ತಮ್ಮ ತಮ್ಮ ನಿಯಮಿತ ಕಾರ್ಯವನ್ನು ಮನಃಪೂರ್ವಕವಾಗಿ ಮಾಡುತ್ತಾ ಬರುವುದಾದರೆ ಕಸ್ತೂರಿಕೆ ನಾವೂ ನಮ್ಮ ರಾಷ್ಟ್ರವೂ ಅತ್ಯಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ.

ಪ್ರತ್ಯಕ್ಷದರ್ಶಿ.

ಬೇಲೂರಿನಲ್ಲಿ ನಡೆದ ಸಂತೋಷ ಕೂಟಗಳು.

ಇಲ್ಲಿ ಆರು ವರ್ಷಗಳಿಂದಲೂ ಇದ್ದು ಪ್ರಜೆಗಳೆಲ್ಲರ ಅಪಾರ ಪ್ರೀತಿ ವಿಶ್ವಾಸಗಳಿಗೊಳಪಟ್ಟು ಪರೋಪಕಾರ ಕಾರ್ಯದಲ್ಲಿಯೇ ನಿರತರಾಗಿದ್ದ ಡಾಕ್ಟರ್ ಬಿ. ಕೆ. ವೆಂಕಟಾಚಾರ್ರವರಿಗೆ ಅಕ್ಕೀಹೆಬ್ಬಾಳಿಗೆ ವರ್ಗವಾದದ್ದು ಇಲ್ಲಿಯ ನಿವಾಸಿಗಳೆಲ್ಲರಿಗೂ ಅತ್ಯಂತ ವ್ಯಸನವಾಗಿರುತ್ತೆ. ತಾ 20 ನೇ ದಿವಸ ಇಲ್ಲಿನ ಅಂಗಡೀ ಬೀದಿಯ ವರ್ತಕರೂ, ಮಹಮ್ಮದೀಯರೇ ಮೊದಲಾದ ಎಲ್ಲಾ ಸಂಗಡದವರೂ ಸೇರಿ ಕಾಫಿ ಪ್ಲಾಂಟರ್ ಮ|| ಬಿ. ಎನ್. ಕೇಶವರಾಯಶೆಟ್ಟರ ಮನೆಗೆ ಇವರನ್ನು ಇತರೇ ಎಲ್ಲಾ ವೈದಿಕ ಲೌಕಿಕ ಮಹಾ ಜನಗಳನ್ನೂ ಬರಮಾಡಿಕೊಂಡು ಮ|| ಕೇಶವರಾಯಶೆಟ್ಟರು ಇವರ ಗುಣಕಥನ ವಿಷಯಕವಾದ ಉಪನ್ಯಾಸವನ್ನು ಸಾರಸ್ಯವಾಗಿ ಮಾಡಿ ಎಲ್ಲರ ಪರವಾಗಿಯೂ ತಮ್ಮ ಕೃತಜ್ಞತಾ ಪೂರ್ವಕವಾದ ವಂದನೆಯನ್ನು ಸಮರ್ಪಿಸಿ ಇವರ ಅಗಲಿಕೆಯ ದುಃಖವನ್ನು ತೋರ್ಪಡಿಸಿದರು —ಇಲ್ಲಿಂದ ಗುರುಕೇರಿ ಒಕ್ಕಲಿಗ ಮಂಡಲಿಯವರು ವಾದ್ಯಘೋಷದೊಡನೆ ಅವರನ್ನು ಕರೆದುಕೊಂಡುಹೋಗಿ ಅಲ್ಲಿ ಉತ್ತರಗಟ್ಟಿ ಆಂಜನೇಯ ದೇವಸ್ಥಾನದ ಮುಂದೆ ದಿವ್ಯವಾಗಿ ಅಲಂಕರಿಸಿದ್ದ ಮಂಟಪದಲ್ಲಿ ಎಲ್ಲರನ್ನೂ ಬಿಜಯಂಗೈಸಿ ಅಲ್ಲಿಯವರೆಲ್ಲರ ಪರವಾಗಿ ಮ|| ಚನ್ನೇಗೌಡರು —ನಮ್ಮ ಡಾಕ್ಟರವರು ಇಲ್ಲಿಗೆ ದಯಮಾಡಿಸಿದ ಆಗಾಯಿತು ಬಡವರು ಬಲ್ಲಿದರೆಂಬುದನ್ನು ನೋಡದೆ ಸರ್ವತ್ರ ಒಂದೇ ಸಮನಾಗೆಣಿಸಿ ಮಾಡಿದ ಉಪಕಾರ ಕಾರ್ಯಗಳನ್ನು ಸಭಿಕರೆಲ್ಲರಿಗೂ ವಿಶದಪಡಿಸಿದ್ದಲ್ಲದೆ ಈ ಮಹಾನುಭಾವರ ಅಗಲಿಕೆಯ ವ್ಯಸನವನ್ನು ಖಂಡಿತ ಮರೆಯಲಾರೆವೆಂದೂ ಹೇಳಿ, ಇವರ ಶ್ರೇಯಸ್ಸನ್ನು ಬಯಸಿ ದೇವರ ಪ್ರಾರ್ಥನೆ ಮಂಗಳಾರತಿಗಳು ನಡೆಸಲ್ಪಟ್ಟು ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲ ಸಕ್ಕರೆ ಸಹ ವಿನಿಯೋಗಿಸಲ್ಪಟ್ಟ ತರುವಾಯ ಈ ಟವನ್ ಕೋಟೆ ಪೇಟೆಯ ಎಲ್ಲಾ ಸಂಗಡದವರೂ ಸೇರಿ ವಾದ್ಯಘೋಷದಿಂದ ಇವರನ್ನು ಇಲ್ಲಿಯ ಕಾರೊನೇಷನ್ ಹಾಲಿಗೆ ಬರಮಾಡಿಕೊಂಡು ನಮ್ಮ ಅಮಲ್ದಾರ್ರವರ ಅಧ್ಯಕ್ಷತೆಯಿಂದ ಇಲ್ಲಿಯ ಕಾಫಿ ಪ್ಲಾಂಟರ್ ಮ|| ಕೆ. ತಮ್ಮಯ್ಯನವರು ಕನ್ನಡದಲ್ಲೂ, ಪೇಟೆಯ ಮಹಮ್ಮದೀಯ ಪ್ರಮುಖರಾದ ಮಿ|| ಅಬ್ದುಲ್ ರಹಿಮಾನ್ ಸಾಹೇಬರು ಹಿಂದೂಸ್ಥಾನಿಯಲ್ಲೂ, ವೇ|| ರಾಮಾಜೋಯಿಸರು ಸಂಸ್ಕೃತದ ಆಧಾರದಿಂದ ವೈದ್ಯರುಗಳ ಸಹಜ ಕರ್ತವ್ಯಗಳನ್ನೂ ಪ್ರಶಂಸೆಮಾಡಿ, ಅದರಂತೆಯೇ ನಮ್ಮ ಡಾ|| ವೆಂಕಟಾಚಾರ್ರು ವರ್ತಿಸಿದರೆಂದೂ, ಇವರ ಪರೋಪಕಾರ ಕಾರ್ಯಗಳನ್ನು ವಿಶದವಾಗಿ ಪ್ರಶಂಸಿಸಿ ಇವರ ಚಿರಸ್ಮರಣೀಯವಾದ ಕೃತಜ್ಞತೆಗೋಸ್ಕರ ಇಲ್ಲಿನವರೆಲ್ಲಾ ಚಂದಾ ಸೇರಿಸಿ ಮದ್ರಾಸಿನಿಂದ ಬಂಗಾರದ ಗಡಿಯಾರದ ಸರಪಣಿಯೊಂದನ್ನು ತರಿಸಿ ಇದನ್ನು ಇವರಿಗೆ ಸಮರ್ಪಿಸಲು ಕುತೂಹಲಪಟ್ಟು ಸರ್ಕಾರದ ಅಪ್ಪಣೆಯನ್ನು ಬೇಡಿದ್ದರೂ ಸಕಾಲಕ್ಕೆ ಅಪ್ಪಣೆ ಬಾರದ್ದರಿಂದ ಇದನ್ನು ಅಲಂಕರಿಸಿ ನೋಡಿ ಸಂತೋಷಪಡಲವಕಾಶವಾಗದ್ದಕ್ಕೆ ತುಂಬಾ ವ್ಯಸನಪಟ್ಟು ಘನ ಈ ಸಭೆಯಿಂದಲೇ ಕೂಡಲೆ ಅಪ್ಪಣೆ ದಯಪಾಲಿಸಬೇಕೆಂದು ಸರ್ಕಾರವನ್ನು ಬೇಡಿಕೊಂಡು ಅನಂತರ ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲ ಸಕ್ಕರೆ ಸಹ ವಿನಿಯೋಗಿಸಲ್ಪಟ್ಟ ತರುವಾಯ ಸಭೆಯು ಭರಖಾಸ್ತಾಯಿತು. ಆ ರಾತ್ರಿಯೇ ಇವರನ್ನು ನಿವಾಸಿಗಳೆಲ್ಲರೂ ಬಹಳ ವ್ಯಸನದಿಂದ ಪ್ರಯಾಣ ಮಾಡಿಸಿದರು. ಇವರ ಸ್ಥಾನಕ್ಕೆ ಬಂದಿರುವ ಮ|| ಜಾನಕೀರಾಮ್ ರವರೂ ಸಹ ಮೇಲ್ಕಂಡವರಂತೆ ಇಲ್ಲಿಯ ಪ್ರಜೆಗಳೆಲ್ಲರ ಅಪಾರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗುವರೆಂದು ನಿರೀಕ್ಷಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಸ್ತ್ರೀವಿದ್ಯಾಭ್ಯಾಸ ಪ್ರೋತ್ಸಾಹ ಸಭೆಯು.

ಆನೆಕಲ್ಲಿನಲ್ಲಿ ಸ್ತ್ರೀಯರ ಸಭೆಯೊಂದು ನಡೆದು ಅಲ್ಲಿನ ಅಮಲ್ದಾರ್ರವರ ಪತ್ನೀಯವರು ಉಪನ್ಯಾಸ ಮಾಡುವಾಗ್ಗೆ ಸ್ತ್ರೀಯರನ್ನು ಕುರಿತು ಹೇಳಿದ ಅಭಿಪ್ರಾಯಗಳೇನೆಂದರೆ—ಎಲ್ಲಾ ಜನರಲ್ಲಿಯೂ ಸಾಮಾನ್ಯವಾಗಿ ಮಕ್ಕಳು ಹುಟ್ಟಿದಂದಿನಿಂದ ತಾಯಿ ಅಥವಾ ದಾದಿ ಇವರ ಬಳಿಯಲ್ಲಿರುತ್ತಾರೆ. ಈ ಹೆಂಗಸರು ತಿಳುವಳಿಕೆ ಇಲ್ಲದವರಾಗಿದ್ದರೆ ಮಕ್ಕಳು ಏಳಿಗೆಗೆ ಬರುವುದು ಹೇಗೆ? ಹಾಗಲ್ಲದೆ ಅವರು ವಿದ್ಯಾವತಿಯರಾಗಿದ್ದರೆ ತಮ್ಮ ಮಕ್ಕಳನ್ನು ಉತ್ತಮ ರೀತಿಯಲ್ಲಿ ಶಿಕ್ಷಿಸುವರು. ಮಕ್ಕಳು ಇತರರನ್ನು ನೋಡಿ ನಡೆಯುವ ಸ್ವಭಾವವುಳ್ಳವರು ಸ್ತ್ರೀಯರು ವಿದ್ಯಾವತಿಯರಾಗಿ ಸನ್ಮಾರ್ಗದಲ್ಲಿ ನಡೆದು ತಾಯಿ ತಂದೆ ಮಕ್ಕಳು ಎಂಬಂತೆ ಅವರಂತೆಯೇ ಅವರ ಮಕ್ಕಳು ನಡೆದುಕೊಂಡು ಮುಂದಕ್ಕೆ ಬರಲವಕಾಶವಿದೆ ಎಂಬುದಕ್ಕೆ ಸಂದೇಹವಿಲ್ಲ. ಹಿರಿಯಕ್ಕನ ಚಾಳಿ ಮನೆಗೆಲ್ಲ ಎಂಬ ಗಾದೆಯು ಸಾಮಾನ್ಯವಾಗಿ ಎಲ್ಲರಲ್ಲಿಯೂ ಪ್ರಸಿದ್ಧವಷ್ಟೆ. ಮನುಷ್ಯನ ಬುದ್ಧಿಯೂ ಗುಣವೂ ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಅಂಕುರಿಸುವುದೆಂತಲೂ, ಈ ಗುಣಗಳ ಸ್ವರೂಪವು ಬಹುತರವಾಗಿ ತಾಯಿಯ ಗುಣಗಳನ್ನೇ ಅನುಸರಿಸುತ್ತದೆ ಎಂತಲೂ ಶಾಸ್ತ್ರಜ್ಞರು ನಿಶ್ಚಯಿಸಿರುವರು. ಆದುದರಿಂದ ಹೆಂಗಸರಿಗೆ ವಿದ್ಯೆ ಕಲಿಸಿ ಜ್ಞಾನಾಭಿವೃದ್ಧಿ ಮಾಡಿದರೆ ಬುದ್ಧಿವಂತರಾಗುವ ಮಕ್ಕಳು ಹುಟ್ಟುವುದು ಹೆಚ್ಚುತ್ತದೆ.

ದೇವರ ಸೃಷ್ಟಿಯಲ್ಲಿ ಗಂಡಸರೂ ಹೆಂಗಸರೂ ಒಂದೇ. ಗಂಡಸರಿಗೆ ವಿದ್ಯೆಯನ್ನು ಕಲಿಯಲು ಹೇಗೆ ಸ್ವಭಾವಸಿದ್ಧವಾದ ಬಾಧ್ಯತೆ ಇರುವುದೋ ಹಾಗೆಯೇ ಹೆಂಗಸರಿಗೂ ಇದೆ. ಆದುದರಿಂದ ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸದೆ ಮೂಢಯರನ್ನಾಗಿ ಮಾಡುವುದು ಅನ್ಯಾಯ. ಮನುಷ್ಯರು ತಾವು ಸಾಕುವ ಗಿಳಿ, ನಾಯಿ ಮುಂತಾದ ಪ್ರಾಣಿಗಳಿಗೆ ತಕ್ಕ ಮಟ್ಟಿಗೆ ವಿದ್ಯೆ ಕಲಿಸುವುದೂ, ಸ್ತ್ರೀಯರಿಗೆ ವಿದ್ಯೆ ಕಲಿಸದಿರುವುದೂ ಬಹಳ ಆಶ್ಚರ್ಯ. ಆದುದರಿಂದ ವಿದ್ಯೆಯನ್ನು ಕಲಿಯುವ ಶಕ್ತಿಯುಳ್ಳ ಸ್ತ್ರೀಯರಿಗೆ ಉಚಿತವಾದ ವಿದ್ಯೆಯನ್ನು ಕಲಿಸುವುದು ಉತ್ತಮವೆಂದು ನನಗೆ ತೋರುತ್ತದೆ ಕೆಲವರು ಹೆಂಗಸರಿಗೆ ವಿದ್ಯೆಯನ್ನು ಕಲಿಸುವುದರಿಂದ ದುರಹಂಕಾರ ಬರುವದೆನ್ನುವರು "ಅಲ್ಪ ವಿದ್ಯಾ ಮಹಾಗರ್ವೀ" ಎಂಬಂತೆ ಅಧಿಕ ವಿದ್ಯೆಯನ್ನು ಕಲಿಸುವುದಕ್ಕೆ ಬದಲಾಗಿ ಸ್ವಲ್ಪವಾಗಿ ಕಲಿಸುವುದರಿಂದ ಹೀಗಾಗುತ್ತೆಂಬದಾಗಿ ತಿಳಿಯಬಹುದು. ಅಲ್ಲದೆ ಯಾರಿಗಾದರೂ ಒಂದು ಅಧಿಕವಾದ ವಸ್ತುವಿದ್ದರೆ ಅವರಿಗೆ ಹೆಮ್ಮೆ ಬರುವುದು. ಎಲ್ಲಾ ಹೆಂಗಸರಿಗೂ ವಿದ್ಯೆ ಕಲಿಸಿದರೆ ಗರ್ವಕ್ಕೆ ಅವಕಾಶವಿರುವುದಿಲ್ಲ.

ನಮ್ಮ ದೇಶಕ್ಕಿಂತ ಅಮೇರಿಕ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸದ ಪ್ರಚಾರವು ಹೆಚ್ಚು ಎಂಬದಾಗಿ ನಾವು ಅನೇಕರಿಂದ ಕೇಳಿದೇವೆ. ಆದಕ್ಕೆಲ್ಲಾ ಅಲ್ಲಿನ ಸ್ತ್ರೀಯರು ವಿದ್ಯಾವತಿಯರಾದುದರಿಂದ ಅಷ್ಟರ ಮಟ್ಟಿಗೆ ಪ್ರಸಿದ್ಧಿಪಟ್ಟಿದಾರೆಂಬುವುದಕ್ಕೆ ಸಂದೇಹವಿಲ್ಲ. ನಮ್ಮ ದೇಶದಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸಲು ಬಹಳವಾಗಿ ಸ್ತ್ರೀಯರನ್ನು ದೂರುತ್ತಾರೆ (1) ಸ್ತ್ರೀಯರಿಗೆ ವಿದ್ಯೆ ಕಲಿಸಿದರೆ ಸರಕಾರದ ಕೆಲಸಗಳು ನಡೆಯುವುದಕ್ಕೆ ಬದಲಾಗಿ ಮನೆಯ ಸಂಸಾರಕ್ಕೆ ತೊಂದರೆ ಬರುವುದು ಎಂಬುದೊಂದು. (2) ಮತ್ತೆ ಕೆಲವರು ಸ್ತ್ರೀಯರಿಗೆ ವಿದ್ಯೆಯನ್ನು ಹೇಳಿಕೊಡುವುದರಿಂದ ಅವರು ಪುರುಷರಿಗೆ ಮರ್ಯಾದೆ ತೋರಿಸದೆ ಎದುರುಬಿದ್ದು ಅವರನ್ನು ಲಕ್ಷಿಸುವುದಿಲ್ಲವೆನ್ನುವರು (3) ಮತ್ತು ಸ್ತ್ರೀಯರಿಗೆ ವಿದ್ಯೆ ಕಲಿಸುವುದರಿಂದ ಅವರೇನು ಸರಕಾರದಲ್ಲಿ ಉದ್ಯೋಗ ಮಾಡಬೇಕೇ? ಇವೇ ಮೊದಲಾದ ಆಕ್ಷೇಪಗಳನ್ನು ಮಾಡುವುದುಂಟು. ಇದು ಬಹಳ ಅನ್ಯಾಯ; ತಿಳಿದವರು ಹೀಗೆ ಹೇಳಲಾರರು ಸಾಮಾನ್ಯವಾಗಿ ಒಂದು ಸಂಸಾರದಲ್ಲಿ ಗಂಡಸಿಗೆ ಯಾವಾಗಲೂ ಸಂಪಾದನೆಯಲ್ಲಿಯೇ ಆಸಕ್ತಿ ಇರುತ್ತೆ. ಅವನಿಗೆ ಸುಖವೆಂಬುವುದೇ ಕಾಣುವುದಿಲ್ಲ. ಮನೆಯಲ್ಲಿರುವ ಸ್ತ್ರೀಯರು ಮನೆಯಲ್ಲಿ ದುಂದು ಮಾಡದೆ ಒಪ್ಪವಾಗಿ ಮಕ್ಕಳುಗಳನ್ನೂ ಕಾಪಾಡಿಕೊಂಡು, ಕಷ್ಟಪಟ್ಟು ಬಂದ ಯಜಮಾನನಿಗೆ ಉಪಚರಿಸಿಕೊಂಡು ಇರುವುದಕ್ಕೆ ವಿದ್ಯೆ ಇಲ್ಲದಿದ್ದರೆ ಹೇಗಾಗುತ್ತೆ? ಸ್ತ್ರೀಯರಲ್ಲಿ ಉದ್ಯೋಗಿಗಳು ಹೆಚ್ಚಾಗಿ ಇಲ್ಲದವರಿಗೆ ಮನೆಯ ಕೆಲಸಗಳು ಕಳೆದ ಮೇಲೆ ಬಹಳ ವಿರಾಮವಿರುತ್ತದೆ. ಮನೆ ಕೆಲಸವಾದ ಮೇಲೆ ಬಿಡುವಾದ ಕಾಲದಲ್ಲಿ ಸದ್ವ್ಯಾಸಂಗವಿಲ್ಲದಿದ್ದರೆ ಸ್ವಭಾವವಾಗಿ ಮನಸ್ಸಿನಲ್ಲಿ ದುರಾಲೋಚನೆಗಳು ಹುಟ್ಟುವವು. ವಿದ್ಯಾಭ್ಯಾಸದಿಂದುಂಟಾಗುವ ಸದ್ವ್ಯಾಸಂಗಕ್ಕಿಂತಲೂ ಉತ್ತಮವಾದುದು ಇನ್ಯಾವುದೂ ಇಲ್ಲ.

ಈಗ ಸರ್ಕಾರದವರು ಹೆಣ್ಣು ಮಕ್ಕಳಿಗೆ ಸ್ಕೂಲುಗಳನ್ನೂ ಕಾಲೇಜುಗಳನ್ನೂ ನಿರ್ಮಿಸಿರುತ್ತಾರೆ ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸುತ್ತಿರುತ್ತಾರೆ ಸ್ವಲ್ಪವಾಗಿ ವಿದ್ಯೆಯನ್ನು ಕಲಿತು ಸ್ವಲ್ಪ ಮಟ್ಟಿಗೆ ನಾಗರೀಕತೆ, ನಮ್ರತೆ, ಪಾತಿವ್ರತ್ಯ ಇಂತಹ ಸದ್ಗುಣಗಳನ್ನು ತಿಳಿದವರನ್ನೂ, ಹಳ್ಳಿಗಳಲ್ಲಿ ಸ್ತ್ರೀವಿದ್ಯಾಭ್ಯಾಸವಿದೆ ಎನ್ನ ತಿಳಿಯುವ ಹಳೇ ಕಾಲದವರನ್ನೂ ಒಂದು ಪಕ್ಕದಿಗೆ ಹಾಕಿದರೆ ಏನಾಗುವುದು ಭಾವಿಸಬಹುದು? ಯೋಚನೆ ಮಾಡಿದರೆ ಹಳ್ಳಿಯವರಿಗಿಂತ ಸ್ವಲ್ಪವಾಗಿ ತಿಳಿದವರೇ ಉತ್ತಮವೆಂದು ತೋರುವುದು.

ಮೈಸೂರು ಮುನಿಸಿಪಾಲ್ ಮೀಟಿಂಗು.

ಕಳೆದ ಶುಕ್ರವಾರದ ಬೆಳಗ್ಗೆ ರಾಜಧಾನಿಯ ಮುನಿಸಿಪಲ್ ಮೀಟಿಂಗು ಟೌನ್ ಹಾಲ್ ಬಂಗಲೆಯಲ್ಲಿ ನಡೆಯಿತು. ಅಲ್ಲಿ ಮೆಂಬರುಗಳು ತೀರ್ಮಾನಮಾಡಿದ ವಿಷಯಗಳ್ಯಾವವೆಂದರೆ ಮುನಿಸಿಪಲ್ ಹಣದ ಪೈಕಿ 20-25 ಸಾವಿರ ರೂಪಾಯಿಯನ್ನು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಡಬಹುದೆಂದು ಒಪ್ಪಿದರು — ಕುರಿಗಳ ಕಸಾಯಿ ಖಾನೆಯಲ್ಲಿ ಒಬ್ಬ ಜವಾನನನ್ನು ಖಾಯಂವಾಗಿ ನೇಮಿಸಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ —ಶ್ರೀರಂಗಪಟ್ಟಣದ ರಸ್ತೆಯಲ್ಲಿರುವ ಹಳೆ ಕ್ಯಾಂಪುಗಳನ್ನು ಕಿತ್ತು ಬೇರೆ ಕಡೆ ಕಟ್ಟಿಕೊಳ್ಳಬೇಕೆಂದು ಸರ್ಕಾರದವರು ಬರೆದಿದ್ದರು. ಅದರ ಸಾಮಗ್ರಿ ಖರ್ಚಿನಲ್ಲಿ ಕೆಲವು ಭಾಗವನ್ನು ಸರ್ಕಾರದವರೇ ವಹಿಸಿಕೊಳ್ಳುವಂತೆ ಕೇಳಿಕೊಳ್ಳಬೇಕೆಂದು ಮೆಂಬರುಗಳು ಇತ್ಯರ್ಥಮಾಡಿದರು.—ಮುನಿಸಿಪಲ್ ಇಂಜನಿಯರಿಗೆ ತಿಂಗಳಿಗೆ 35 ರೂಪಾಯಿ ಅಲೋಯನ್ಸು ಕೊಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ರಜಿಸ್ಟ್ರೇಷನ್ ಗುಮಾಸ್ತೆಯನ್ನು ಸೆಪ್ಟೆಂಬರ್ ಆಖೈರು ವರೆಗೆ ನೇಮಿಸಿಕೊಳ್ಳಬಹುದೆಂದು ಗವರ್ನ್‌ಮೆಂಟಿನವರು ತಿಳಿಸಿದಾರೆ.—ಟ್ರಸ್ಟ್ ಬೋರ್ಡ್ ಚೇರ್‌ಮನ್‌ರವರೇ ಮುನಿಸಿಪಲ್ ಪ್ರೆಸಿಡೆಂಟರಾಗಿ ಚಾರ್ಜ್ ಸಾಲ್

ರಷ್ಟೆಲು ವರೆಗ ಇರಬಹುದೆಂದೂ, ಅವರಿಗೆ ಮಾಹೆಯಾನಾ 200 ರೂಪಾಯಿ ಅಲೋಯೆನ್ಸು ಸ್ಯಾಂಕ್ಷನ್ ಮಾಡಿದೆ ಎಂದೂ, ಅವರು ಗವರ್ನಮೆಂಟಿಗೆ ಸೀದಾ ಕಾಗದ ಪತ್ರಗಳನ್ನು ಕಳುಹಿಸಬಹುದೆಂದೂ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ. ಮೆಂಬರುಗಳು ಗವರ್ನಮೆಂಟಿನವರನ್ನು ವಂದಿಸುವಂತೆ ತೀರ್ಮಾನ ಮಾಡಿದರು.—ಕತ್ತೆಗಳ ಮೇಲೂ ನಾಯಿಗಳ ಮೇಲೂ ತೆರಿಗೆ ಹಾಕಬೇಕಾದದ್ದಿಲ್ಲವೆಂದು ಮ್ಯುನಿಸಿಪಲ್ ಕೌನ್ಸಿಲ್‌ನವರ ಅಭಿಪ್ರಾಯವನ್ನು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದರು.—ತಿರುವೆಂಗಳಂ ಮೊದಲಿಯಾರ್ರವರ ನವರ ರಾಜರಿಗೂ ಕೃಷ್ಣರಾಜ ಮೊಹಲ್ಲಾ ದೀವಾನ್ ಬೀದಿಯಲ್ಲಿ ಸಾಂಬಸ್ವಾನ ಗುಡಿ ಎದುರಿಗಿರುವ ನಿವೇಶನವನ್ನು ರೂಢಿಯಾದ ಕ್ರಯಕ್ಕೆ ಖರಂ ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಮ|| ಮನ್ನಾರ್ ಕೃಷ್ಣಶೆಟ್ಟರು ಇಲವಾಲದ ರಸ್ತೆಯಲ್ಲಿ ಛತ್ರಿವಿಲಾಸ್ ಕಟ್ಟಡದ ಎದುರಿಗಿರುವ ಖಾಲಿ ನಿವೇಶನವನ್ನು ತಮಗೆ ಕೊಟ್ಟರೆ ಅಲ್ಲಿ ಬ್ರಾಹ್ಮಣ ಮತ್ತು ವೈಶ್ಯ ವಿದ್ಯಾರ್ಥಿಗಳಿಗೋಸ್ಕರ ಸ್ಟೂಡೆಂಟ್ಸ್ ಹೋಮ್ ಕಟ್ಟಿಸುವುದಾಗಿ ಕೇಳಿದ್ದರು. ಅವರಿಂದ ಸರಿಯಾದ ಕರಾರು ಬರಸಿಕೊಂಡು ಆ ನಿವೇಶನವನ್ನು ಅವರಿಗೆ ವಹಿಸಬಹುದೆಂದು ಮೆಂಬರುಗಳು ಒಪ್ಪಿಕೊಂಡಿದಾರೆ.—ರಾಜಧಾನಿಯಲ್ಲಿ ಕಟಲಾ ಸಾಗಿಸುವ ಗಾಡಿಗಳಿಗೆ ಮಾಹೇವಾರು ಸಂಬಳಗಳನ್ನು ನಿಷ್ಕತ್ತಿ ಮಾಡುತ್ತಿದಾರೆ. ಇನ್ನು ಮೇಲೆ ಇಷ್ಟು ಕಟರ ಸಾಗಿಸಿದರೆ ಇಷ್ಟು ಹಣ ಕೊಡುವುದಾಗಿ ಏರ್ಪಾಡುಮಾಡಬೇಕೆಂದೂ, ಇದನ್ನು ಮಂಡಿ ಮತ್ತು ಲಷ್ಕರ್ ಮೊಹಲ್ಲೆಗಳಲ್ಲಿ ಜಾರಿಗೆ ತಂದು ಪರೀಕ್ಷಿಸಬೇಕೆಂದೂ ಮೆಂಬರುಗಳು ಇಚ್ಛೆಪಡಿಸಿದರು.—ದಿನವಹಿ ಹಿತ್ತಲು ಗುಡಿಸುವುದಕ್ಕಾಗಿ ನೇಮಿಸಿರುವ ಸಿಬ್ಬಂದಿಯ ಪೈಕಿ ಗಾಡಿಗಳನ್ನೂ ಓವಲಿಗಳನ್ನೂ ಇಟ್ಟುಕೊಂಡು ಉಳಿದವರನ್ನು ವಜಾಮಾಡಬೇಕೆಂದು ಇತ್ಯರ್ಥವಾಯಿತು.—ಕಟಲಾ ಗುಡಿಸುವವರಿಗೆ ಐದು ಮನೆಗಳನ್ನು ಮ್ಯುನಿಸಿಪಲ್ ಹಣದಿಂದ ಕಟ್ಟಿಸುವುದಕ್ಕೆ ಅಂದಾಜು ಪಟ್ಟಿ ಒಪ್ಪಲಾಯಿತು.—ಪಟ್ಟಣದ ಬೀದಿಗಳಲ್ಲಿ ಮೋಟಾರುಗಳನ್ನು ಓಡಿಸುವ ವೇಗವನ್ನು ಇನ್ನೂ ಹೆಚ್ಚು ಮಾಡಿಕೊಡಬೇಕೆಂದು ಕೆಲವರು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಆ ಅರ್ಜಿಯನ್ನು ಸರ್ಕಾರಕ್ಕೆ ಕಳುಹಿಸಿ, ವೇಗವನ್ನು ಹೆಚ್ಚಿಸುವುದು ಸರಿಯಲ್ಲವೆಂದು ತಿಳಿಸುವಂತೆ ತೀರ್ಮಾನ ಮಾಡಿದಾರೆ.

ಚಾಮರಾಜ ಪೇಟೆಯಲ್ಲಿ ಮ|| ತುರುವೆಕೆರೆ ಬಸವರಾಜ ಅರಸಿನವರು ತಮ್ಮ ಬಂಗಲೆಯ ಪೂರ್ವ ಭಾಗದಲ್ಲಿರುವ ಖಾಲಿ ನಿವೇಶನವನ್ನು ಕ್ರಯ ಕಟ್ಟಿ ತಮಗೆ ಕೊಡಬೇಕೆಂದು ಕೇಳಿದ್ದರು. ಈ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಯ ಅಭಿಪ್ರಾಯ ತಿಳಿಯುವುದಕ್ಕೆ ತಗೆದಿಟ್ಟರು.—ಮಧುವನದ ಎದುರಿಗೆ ಸ್ಮಶಾನಕ್ಕೆ ಅಡ್ಡಗೋಡೆ ಹಾಕುವುದಕ್ಕೆ 1,337 ರೂಪಾಯಿ ಖರ್ಚಾಗುವುದೆಂದು ಅಂದಾಜು ಮಾಡಲ್ಪಟ್ಟಿತ್ತು. ಇದನ್ನು ಟ್ರಸ್ಟ್‌ಬೋರ್ಡಿನವರು ಮಾಡಿಸಬೇಕೆಂದು ಇತ್ಯರ್ಥಪಡಿಸಿದರು.—ಅಕ್ಕಿ ಅಂಗಡಿ ಸಾಬ್ ದೊಡ್ಡಮ್ಮನವರಿಗೆ ಭತ್ತ ಕುಟ್ಟುವ ಯಾಂತ್ರಿಕ ಕಾರ್ಖಾನೆಯನ್ನು ಕಟ್ಟಿಕೊಳ್ಳುವುದಕ್ಕೆ ಎಗ್ಜಿಬಿಷನ್ ಮೈದಾನದ ಪಕ್ಕದಲ್ಲಿ ನಿವೇಶನವನ್ನು ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡಿದಾರೆ.—ಮ|| ಪುರುಷೋತ್ತಮ ಸಂಭಗಿರಿ ಗೋಸಾಯಿಯವರಿಗೆ ಎಗ್ಜಿಬಿಷನ್ ಮೈದಾನದ ಉತ್ತರ ಮರಕೊಯ್ಯುವ ಕಾರ್ಖಾನೆ ಇಡುವುದಕ್ಕೆ ನಿವೇಶನವನ್ನು ಕೊಡುವುದರಿಂದ ತುಂಬಾ ಅನನುಕೂಲವಾದೀತೆಂದು ಎಗ್ಜಿಬಿಷನ್ ಸೆಕ್ರೆಟರಿಯವರು ಬರೆದಿರುತ್ತಾರೆ.—ಕಮಾನಿ ಚಾಮರಾಜಾ ರಸ್ತೆಯ ಪೂರ್ವ ಮೂಲೆಯಲ್ಲಿ ಮಿ. ಪ್ಯಾನ್ಸಿಂಗ್ ಸಾಹೇಬರು ಮೃಗಾದಿಗಳ ಚರ್ಮವನ್ನು ಶುದ್ಧಿಮಾಡುವ ಕಾರ್ಖಾನೆಯನ್ನು ಇಟ್ಟಿದಾರೆ. ಅದರ ಮುಂಭಾಗದಲ್ಲಿ ಕಂದಕವನ್ನು ಮುಚ್ಚಿ ನೆಲಸಮ ಮಾಡಿಕೊಂಡು ತಮ್ಮ ಕಾರ್ಖಾನೆಯ ಆವರಣಕ್ಕೆ ಸೇರಿಸಿಕೊಳ್ಳುತ್ತೇವೆಂದು ಅವರು ಅರ್ಜಿ ಬರೆದುಕೊಂಡಿದ್ದರು. ಆ ನಿವೇಶನವನ್ನು ಅವರಿಗೆ 25 ರೂಪಾಯಿಗೆ ಬಿಕರಿ ಮಾಡಬಹುದೆಂದೂ, ಆದರೆ ತಿಂಗಳೊಳಗಾಗಿ ಅವರು ಕಂದಕವನ್ನು ಭರ್ತಿಮಾಡಿ ಆರೋಗ್ಯಕರವಾದ ಸ್ಥಿತಿಗೆ ತಂದುಕೊಳ್ಳಬೇಕೆಂದೂ ಅವರಿಗೆ ತಿಳಿಸುವಂತೆ ಇತ್ಯರ್ಥಮಾಡಲಾಯಿತು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಜೂಜಾಡುವವರಿಂದ ಉಂಟಾಗುವ ಅನರ್ಥ.

ಅಯ್ಯಾ,—ಗುಂಡ್ಲುಪೇಟೆ ತಾಲ್ಲೋಕು ಕಟ್ಟಹಳ್ಳಿ ಗ್ರಾಮದ ದಾಸಬಜಗರ ಕೆಟ್ಟಿಗಳ ಬಾಕಿ ಪಟ್ಟಯ್ಯ ಎಂಬುವನ ಮಗ ಸುಮಾರು 25 ವರ್ಷ ವಯಸ್ಸಿನ ರಾಮ ಎಂಬುವನು ಇಸ್ಪೀಟ್ ಆಟಗಳಲ್ಲಿ ತುಂಬಾ ಗಟ್ಟಿಗನಾಗಿ ಸದರಿ ಗ್ರಾಮದಲ್ಲಿ ಕೆಲವು ಜನಗಳ ಹತ್ತಿರ 8-10 ರೂಪಾಯಿನ ವರೆಗೂ ಸಾಲ ಮಾಡಿ ವಾಪಸು ಅವರಿಗೆ ಕೊಡುವದಕ್ಕೆ ದಾರಿ ಇಲ್ಲದೆ ಸಮಯ ಕಾದಿದ್ದು ಮನೆಯಲ್ಲಿ ತಂದೆ ತಾಯಿಗಳು ಇಲ್ಲದಿರುವ ವೇಳೆ ಪೆಟ್ಟಿಗೆ ಬೀಗವನ್ನು ಒಡೆದು ಸುಮಾರು 400 ರೂಪಾಯಿನ ವರಿವಿಗೂ ನಗದು ನಾಣ್ಯಗಳನ್ನೂ ಒಡವೆಗಳನ್ನೂ ಕದ್ದುಕೊಂಡು ಪರಾರಿಯಾದನು. ಲೋಕದಲ್ಲಿ ತಂದೆ ತಾಯಿಗಳಾದವರು ಬಾಲ್ಯದಲ್ಲಿ ಮಕ್ಕಳಿಗೆ ವಿದ್ಯೆ ಕಲಿಸದೆ ಅವರನ್ನು ಸ್ವೇಚ್ಛಾನುಸಾರ ತಿರುಗುವದಕ್ಕೆ ಬಿಟ್ಟುಕೊಡುವದರಿಂದಲ್ಲವೆ ಇಂಥಾ ಅನರ್ಥಕ್ಕೆ ಕಾರಣವಾದದ್ದು. ಅಲ್ಲದೆ ಜೂಜಾಡುವವರಲ್ಲಿ ಉಂಟಾಗತಕ್ಕ ಫಾಯಿದೆಯು ಎಷ್ಟರಮಟ್ಟಿಗೆ ಇವೆ ಎಂಬುದನ್ನು ವಾಚಕರು ಊಹಿಸಿ, ಸರ್ಕಾರದವರು ಇಂಥಾ ಕೆಲಸಗಳಿಗೆ ಪ್ರವೇಶಿಸತಕ್ಕ ದುಷ್ಟರನ್ನು ಹಿಡಿದು ತಕ್ಕ ಬಂದೋಬಸ್ತು ಮಾಡಿಯಾರೆಂತ ನಂಬಿದ್ದೇನೆ.

ಒಬ್ಬ ಖಾತ್ರಿದಾರ್

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕ್ಷಾಮದ ಭೀತಿ.

ಅಯ್ಯಾ,—ಈ ಮುಂಗಾರಿನಲ್ಲಿ ಮಳೆಯಂತೂ ಇಲ್ಲವೆ ಬಹಳ ದಿನದಿಂದ ರಾಗಿ ಪೈರುಗಳೆಲ್ಲಾ ಒಣಗುತ್ತಾ ಇವೆ. ಈ ವರ್ಷ ಬಿತ್ತನೆಗಡಕ್ಕೆ ಕಟ್ಟಿ ಬಂದು ಅಕ್ಕಿ ಅಗಿ ಉತ್ತಿ ಅಕ್ಕಿ ತಿನ್ನುವ ಪ್ರಾಣಿಗಳು ಹೆಚ್ಚಿ ನಷ್ಟವನ್ನುಂಟುಮಾಡುತ್ತಾ ಇವೆ. ಇಲಿಗಳು ವಿಪರೀತವಾಗಿವೆ. ಅಡಿಕೆ ತೋಟದ ಗೊನೆಗಳಲ್ಲಿ ಕಾಯಿಗಳನ್ನೆಲ್ಲಾ ಬಹಳವಾಗಿ ಕೆಡವುತ್ತಾ ಇವೆ. ಸಣ್ಣ ಗೊನೆಗಳ ಕಡ್ಡಿಗಳನ್ನೆಲ್ಲಾ ಕತ್ತರಿಸಿ ಹಾಳುಮಾಡುತ್ತಾ ಇವೆ. ಅಡಿಕೆ ಮರಗಳ ಎಲೆಗಳನ್ನೆಲ್ಲಾ ಟರಾಬರು ಮಾಡುತ್ತಾ ಇವೆ. ಕಟ್ಟು ಇರುವಲ್ಲಿ ಹೆಚ್ಚಿನ ನಷ್ಟ ಮಾಡುತ್ತಾ ಇವೆ. ಒಂದು ಮನೆಯಲ್ಲಿ ಮರಿ ಹಾಕಿದ್ದು ನೋಡುವಲ್ಲಿ 14 ಮರಿಗಳಿದ್ದುವು. ಒಂದು ಇಲಿ 7-8 ತಿಂಗಳಲ್ಲಿ 4 ಸಾರಿ ಮರಿಮಾಡಿದಬಹುದು. ಇದಕ್ಕೆಲ್ಲಾ ಬಿದ್ರು ಅಕ್ಕಿಯೇ ಕಾರಣವಾಗಿದೆ. ಕಾಡಿನಲ್ಲಿ ಇರುವ ಹುಲ್ಲು ಗಿಡಗಳೆಲ್ಲಾ ಕತ್ತರಿ ಹರವುತ್ತಾ ಇವೆ. ಗದ್ದೆ ಸಾಲುಗಳನ್ನೆಲ್ಲಾ ಕಡಿದು ಹಾಳುಮಾಡುತ್ತಿವೆ. ಕಟ್ಟೆ ಅಕ್ಕಿ ಕೊಳೆತದ್ದರಿಂದ ಉಂಟಾದ ಹುಳುಗಳು ಅಡಿಕೆ ಗೊನೆಗೆ ಹತ್ತಿ ಅಡಿಕೆಕಾಯಿ ಕತ್ತರಿ ಕೊರೆದುಹಾಕುತ್ತಾ ಇವೆ. ಕಟ್ಟೆ ಅಕ್ಕಿ ತಿಂದಿಗಾಗಿ ಕಾಡುಹಂದಿಗಳು ಬಹಳ ಹೆಚ್ಚಿ ಇವೆ. ಮೊಲಗಳು ಬಹಳವಾಗಿ ಗದ್ದೆ ಸಸಿಗಳನ್ನೆಲ್ಲಾ ಹಾಳುಮಾಡುತ್ತಿವೆ. ಅಡಿಕೆ ತೋಟಕ್ಕೆ ಕೊಳೆ ರೋಗವಲ್ಲದೆ ಬೇರೆ ಒಂದು ರೋಗವು ಹುಟ್ಟಿ ಬಹಳ ಫಸಲು ಹಾಳಾಗುತ್ತಾ ಇವೆ. ಬಿದ್ರು ಅಕ್ಕಿ ಕೊಳೆತದ್ದರಿಂದ ವಿಪರೀತ ಸೊಳ್ಳೆಗಳು ಹೆಚ್ಚಾಗಿವೆ. ಚಳಿಜ್ವರ ಬಹಳವಾಗಿದೆ. ಬತ್ತದ ಫಸಲು ನಷ್ಟಮಾಡುವ ಪಕ್ಷಿಗಳು ಬಹಳವಾಗಿವೆ. ದನಗಳಿಗೆ ಸಹಾ ಗಂಟಲು ಕಟ್ಟುವ ರೋಗವು ಪ್ರಾಪ್ತಿಯಾಗಿ ಹಬ್ಬುತ್ತಾ ಇದೆ. ಮತ್ತು ತಮ್ಮ ಪತ್ರಿಕೆಯಲ್ಲಿ ತೀರ್ಥಹಳ್ಳಿಯ ಕೆಲವು ಸ್ಥಳಗಳಿಗೆ ಟೆಲಿಫೋನ್ ಕಂಬ ಹಾಕುವರೆಂಬ ಸುಳ್ಳು ಖಾತ್ರಿಯನ್ನು ಯಾರೋ ಪ್ರಕಟಿಸಿರುತ್ತಾರೆ. ಈ ತಾಲ್ಲೂಕಿನಲ್ಲಿ ಮೇಲ್ಕಂಡ ಕಾರಣಗಳಿಂದಲೂ, ಇನ್ನೂ ಅನೇಕ ಕಾರಣಗಳಿಂದಲೂ ಹಣದ ತೊಂದರೆಯು ಬಹಳವಾಗಿದ್ದರೂ, ಇಂಥಾ ಹೊಸ ಕೆಲಸ ನಡಿಸುವರೆಂಬ ವಿಷಯವು ಕೇವಲ ಸುಳ್ಳಾಗಿದೆ. ಇಂಥಾ ರೀತಿಯಿಂದ ನಷ್ಟಕಷ್ಟಗಳು ಪ್ರಾಪ್ತಿಯಾಗುತ್ತಾ ಇರುವದರಿಂದ ಕ್ಷಾಮವು ತಲೆದೋರುವುದೋ ಎಂಬ ಭೀತಿ ತೋರುತ್ತೆ.

ದೇ. ರಾಮಣ್ಣಗೌಡ.

ಮಾಲೂರು ಲಂಡನ್ ಮಿಷನ್ ಸ್ಕೂಲು.

ಅಯ್ಯಾ,—ಮಾಲೂರು ಗ್ರಾಮದಲ್ಲಿ ಕೆಲವು ಜನರು ಪಟ್ಟಿರುವ ದುರಭಿಪ್ರಾಯವನ್ನೂ, ಅವರು ಮಾಡುತ್ತಿರುವ ಕೆಲಸಗಳನ್ನೂ ತಿಳಿಸುವುದು ಅವಶ್ಯಕವಾಗಿದೆ. ಈ ಗ್ರಾಮದಲ್ಲಿ ಈಗ್ಗೆ 30 ವರುಷಗಳ ಹಿಂದಿನಿಂದಲೂ ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಯು ಇರುತ್ತದೆ. ಇದು ಲಂಡನ್ ಮಿಷನ್ ಸಂಘದವರಿಗೂ ನಮ್ಮ ಮೈಸೂರು ಸರ್ಕಾರಕ್ಕೂ ಸೇರಿದ್ದಾಗಿರುತ್ತೆ. ಈಗ್ಗೆ ಒಂದು ವರುಷದ ಹಿಂದೆ ಈ ಪಾಠಶಾಲೆಯಲ್ಲಿ 2 ನೇ ಉಪಾಧ್ಯಾಯರಾಗಿದ್ದ ಮ|| ಬಿ. ಹೆಚ್. ಶ್ರೀನಿವಾಸರಾಯರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಲ್ಲಿ ಇಲ್ಲಿ ಜನಗಳ ಮನೆಗೆ ಹೋಗಿ ಬಾಲಿಕೆಯರ ತಂದೆತಾಯಿಗಳಿಗೆ—ನಿಮ್ಮ ಹುಡುಗಿಯನ್ನು ಮಿಷನ್ ಸ್ಕೂಲಿಗೆ ಕಳುಹಿಸಬೇಡಿ; ಅಲ್ಲಿ ಯೇಸುವಿನ ಚರಿತ್ರೆ ಬೋಧಿಸುತ್ತಾರೆ ಎಂದು ಅನೇಕ ವಿಧವಾಗಿ ಹೇಳುತ್ತಾರೆ. ಸುಮಾರು ಒಂದು ತಿಂಗಳ ಹಿಂದೆ ಇವರಿಗೆ ತಕ್ಕಂಥಾ ಜನರನ್ನು ಸೇರಿಸಿಕೊಂಡು ಒಂದು ಮೀಟಿಂಗ್ ಮಾಡಬೇಕೆಂದೂ, ತಾಲ್ಲೂಕು ಅಮಲ್ದಾರರನ್ನು ಚೇರ್‌ಮನ್‌ರಾಗಬೇಕೆಂದೂ ಕೆಲವು ಜನಗಳು ಕೇಳುವಲ್ಲಿ ಅಮಲ್ದಾರರು ಆ ಜನರಿಗೆ—ನೀವು ಮಾಡತಕ್ಕ ಪ್ರಯತ್ನ ಸರಿಯಾದದ್ದಲ್ಲ; ಈ ಸಣ್ಣ ಊರಿಗೆ ಎರಡು ಪಾಠಶಾಲೆಗಳು ಅನಾವಶ್ಯಕ. ಒಂದು ಪಾಠಶಾಲೆಗೇ ಹುಡುಗರು ಕಮ್ಮಿಯಾಗಿದಾರೆ. ಇಂಥಾ ಮೀಟಿಂಗುಗಳಿಗೆ ನಾನು ಬರುವದಿಲ್ಲವೆಂದರು. ಇವರುಗಳು ಅವರು ಬಾರದೆ ಹೋದರೂ ಚಿಂತೆಯಿಲ್ಲವೆಂದು ತಾವುಗಳೇ ಮೀಟಿಂಗನ್ನು ಮಾಡಿದರಂತೆ. ಕೆಲವು ಜನರು ಸೇರಿ ಪ್ರ್ಯಾಗಾಂಡಾ ಮಾಡಿ ಇಲ್ಲಿಂದ ಮಿಷನ್ ಸ್ಕೂಲನ್ನು ತೆಗೆಸಬೇಕೆಂದು ಉದ್ದೇಶಮಾಡಿಕೊಂಡು ಇದೇ ಊರಿನಲ್ಲಿರುವ ಮುಜರಾಯಿ ಇಲಾಖೆಗೆ ಒಳಪಟ್ಟ ಶಂಕರನಾರಾಯಣಸ್ವಾಮಿ ದೇವಸ್ಥಾನದಲ್ಲಿ ಸ್ಕೂಲು ಇಡುವ ಪ್ರಯತ್ನಪಟ್ಟಿದಾರೆ. ಮಿಷನ್ ಸ್ಕೂಲಿಗೆ ಬರುತ್ತಿದ್ದ ಕೆಲವು ಸಣ್ಣ ಕ್ಲಾಸಿನ ಬಾಲಿಕೆಯರು ನಿರ್ಬಂಧದಿಂದ ಅಲ್ಲಿಗೆ ಹೋಗುತ್ತಾ ಇದಾರೆ. ಈ ಸ್ಥಳವು ಸ್ಕೂಲಿಗೆ ಸರಿಯಾಗಿಲ್ಲ; ಮತ್ತು ಗ್ರಾಮಸ್ಥರಿಗೆ ಅಂಥದು ಇಷ್ಟವಿಲ್ಲ. ಇದು ಮೊದಲಿಂದಲೂ ದೇವಸ್ಥಾನ. ಈ ವಿಷಯದಲ್ಲಿ ಮುಜರಾಯಿ ಸೂಪರಿಂಟೆಂಡೆಂಟರಿಗೆ ಅರ್ಜಿ ಮಾಡಲಾಗುತ್ತೆ. ಈ ಮಿಷನ್ ಪಾಠಶಾಲೆಯು ಗವರ್ನಮೆಂಟಿನಿಂದಲೂ ಮತ್ತು ಸಂಘದಿಂದಲೂ ಪ್ರೋತ್ಸಾಹಿಸಲ್ಪಡುತ್ತೆ. ದಿವಾನ್ ಸಾಹೇಬರವರು, ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರು ಮುಂತಾದ ಸಂಸ್ಥಾನದ ಅಧಿಕಾರಿಗಳು ಇಲ್ಲಿಗೆ ದಯಮಾಡಿದ್ದಾಗ್ಗೆ ಈ ಬಾಲಿಕಾ ಪಾಠಶಾಲೆಯನ್ನು ನೋಡಿ ತುಂಬಾ ಸಂತೋಷಪಟ್ಟರು. ಈ ಬಾಲಿಕಾ ಪಾಠಶಾಲೆಯ ಮೇಲೆ ನ್ಯಾಯವಾಗಿಯೂ ಯಾವ ವಿಧವಾದ ದೋಷಗಳಾಗಲಿ ಕೊರತೆಗಳಾಗಲಿ ಇರುವುದಿಲ್ಲ. ನಮ್ಮ ಸರ್ಕಾರದವರು ಈ ದುರಭಿಮಾನದಿಂದ ಮಾಡುತ್ತಿರುವ ವೈಮನಸ್ಯದ ಕೆಲಸಗಳಿಗೆ ಯಾವ ವಿಧವಾದ ಪ್ರೋತ್ಸಾಹವನ್ನೂ ಕೊಡಲಾರರೆಂದು ನಂಬುವ

ಹಿತವಾದಿ.

ತಿಪಟೂರಿನ ಕಾಯಿ ಕೊಬರಿಯ ವ್ಯಾಪಾರದ ಲಕ್ಷಣಗಳು.

ಅಯ್ಯಾ,—ಈ ತಿಪಟೂರಲ್ಲಿ ದೊಡ್ಡ ದೊಡ್ಡ ವರ್ತಕರು ಮಾಡತಕ್ಕ ವ್ಯಾಪಾರದ ಆಡಳಿತವನ್ನು ನೋಡಿದರೆ ಗರ್ಭ ನಿರ್ಭೇದವಾಗುತ್ತದೆ. ರೈತ ಜನರು ತಂದುಕೊಡುವ ಕಾಯಿ ಕೊಬರಿಯನ್ನು ತೆಗೆದುಕೊಂಡು ದಲ್ಲಾಳಿ ಮೂಲಕ ಇಟ್ಟುಕೊಂಡಿರುವ ದಲ್ಲಾಳಿ ಕಂಪನಿಗಳಾಗಿ ಇರುತ್ತವೆ. ರೈತ ಜನಗಳು ತಂದ ಕಾಯಿ ಕೊಬರಿಗೆ ಸಂತೆಯಾದ ಶನಿವಾರ ದಿವಸ ಕಂಪನಿದಾರರುಗಳೆಲ್ಲಾ ಸೇರಿ ಧಾರಣೆ ನಿಷ್ಕರ್ಷೆಮಾಡಿ ಈ ಧಾರಣೆ ಒಂದು ತಿಂಗಳ ವರೆಗೆ ಇದ್ದು ಪುನಃ ಎಲ್ಲರೂ ಸೇರಿ ಧಾರಣೆ ಮಾಡುತ್ತಾ ಇದ್ದರು. ಈಚೆಗೆ ತಿಂಗಳಿಗೊಂದಾವರ್ತಿ ತಪ್ಪಿಸಿ ವಾರಕ್ಕೊಂದಾವರ್ತಿ ಮಾಡುತ್ತಾ ಬಂದರು. ಪುನಃ ಇದು ತಪ್ಪಿ ಈಗ ನಡಿಸುತ್ತಿರುವ ವಿಷಯವನ್ನು ವಿಜ್ಞಾಪಿಸಿಕೊಳ್ಳುತ್ತೇನೆ. ಹಿಂದೆ ತಾ. 14-6-15 ರ ವರೆಗೆ ಕೊಬರಿ 50 ರೂಪಾಯಿ ಧಾರಣೆ ಇದ್ದದ್ದನ್ನು 16-6-15 ರಲ್ಲಿ ದಾಸ್ತಾನ್ ಮಾಡಿ ಒಂದು ತಿಂಗಳ ಮೇಲ್ಪಟ್ಟ ಕಾಲ ರೈತರಿಂದ ಬಹಳವಾಗಿ ಮಾಲು ಬರಮಾಡಿಕೊಂಡು ದಾಸ್ತಾನಿಗೆ ಮೊದಲಿದ್ದ ದರದಂತೆ ಹೊರಗೆ ಆಸಾಮಿಗಳಿಗೆ ರವಾನೆ ಮಾಡುತ್ತಾ ಇದ್ದು ಸದರಿ ಮಾಲು ಪೂರೈಸಿದ ನಂತರ ತಾ. 17-7-15 ರಲ್ಲು 40 ರೂ ಕಮ್ಮಿ ಧಾರಣೆ ಮಾಡಿ ರೈತಾಪಿ ಜನಗಳಿಗೆ ಬಹಳ ನಷ್ಟದಿಂದ ಹಣ ಪಾವತಿ ಮಾಡಿದರು. ಈಚೆಗೆ ತಾ 6- -15 ರ ವರೆಗೆ 41 ರೂ. ಧಾರಣೆ ಮಾಡಿ ಹಣ ಕೊಡುತ್ತಾ ಇದ್ದು, ತಾ. 7-8-15 ರಲ್ಲು ದಾಸ್ತಾನ್ ಮಾಡಿದರು. ನಂತರ ತಾ. 11-8-15 ಕ್ಕೆ ಮೊದಲಿದ್ದ 44 ರೂ ಧಾರಣೆ ಎಂದು ತಿಳಿಸಿ ಪುನಃ 18-8-15 ರಲ್ಲು ದಾಸ್ತಾನ್ ಎಂದು ಹಾಲಿ ಇಟ್ಟಿದಾರೆ. ಮತ್ತು ದಾಸ್ತಾನ್ ಎಂದು ನೆಪಮಾತ್ರಕ್ಕೆ ಹೇಳತಕ್ಕದ್ದೇ ಹೊರತು ಪ್ರತಿ ಅಂಗಡಿಗಳಲ್ಲೂ ಕೆಲವು ಜನಗಳ ಯೋಗ್ಯತೆ ಆಧಾರದ ಮೇಲೆ 40-41-42-43 ರೂ. ಈ ರೀತಿ ಧಾರಣೆಯಿಂದ ಹಣ ಕೊಡುತ್ತಾರೆ. ಬಡವರಿಗೆ ಮಾತ್ರ ದಾಸ್ತಾನ್. ರೈತಾಪಿ ಜನಗಳು ದಾಸ್ತಾನ್ ಕಾಲದಲ್ಲಿ ತಂದುಕೊಟ್ಟಿರುವ ಮಾಲು ಆಸಾಮಿಗಳಿಗೆ ರವಾನೆ ಮಾಡದೆ ಧಾರಣೆ ಆದ ಕಾಲದಲ್ಲಿ ನಮ್ಮಗಳಿಗೆ ಪಾವತಿ ಮಾಡಿರುವ ರೇಟನಂತೆ ರವಾನೆಗೆ ಹಾಕದೆ ಜಾಸ್ತಿ ರೇಟು, ದಲ್ಲಾಳಿ ಸಹ ಹಾಕುತ್ತಾರೆ. ದಲ್ಲಾಳಿ ಕಂಪನಿಗಳು ಅಂದರೆ ಮಾಲು ತರತಕ್ಕವರಲ್ಲಿಯೂ ಮತ್ತು ರವಾನಿಸುವವರಲ್ಲಿಯೂ ಸಹ ನ್ಯಾಯವಾದ ದಲ್ಲಾಳಿಯನ್ನು ತೆಗೆದುಕೊಂಡು ವ್ಯಾಪಾರ ನಡಿಸತಕ್ಕದ್ದೇ ದಲ್ಲಾಳಿ ಕಂಪನಿಯಾಗಿರುತ್ತೆ. ಈ ಊರಲ್ಲಿ ಇರತಕ್ಕ ದಲ್ಲಾಳಿ ಕಂಪನಿಗಳಾದರೋ ರೈತಾಪಿ ಜನಗಳ ಮತ್ತು ರವಾನೆ ಆಸಾಮಿಗಳ ಮೋಸಪಡಿಸತಕ್ಕ ಕಂಪನಿಗಳಾಗಿರುತ್ತವೆ. ಈ ಮೋಸದ ಕಂಪನಿಗಳ ಬಲೆಗೆ ಸಿಕ್ಕಿ ನಷ್ಟ ಹೊಂದುತ್ತಿರುವ ಬಡ ರೈತರು ತಪ್ಪಿಸಿ ಬದುಕಿಕೊಳ್ಳಲು ಉಪಾಯವಿಲ್ಲದೆ ನರಳುವದಾಗಿದೆ. ಹಿಂದೆ ಇದೇ ವಿಷಯವನ್ನು ಕುರಿತು ಪ್ರಕಟಿಸಿದ್ದಾಗ್ಯೂ ನಮ್ಮ ಸರ್ಕಾರದವರು ನಿಗಾ ಕೊಡಲಿಲ್ಲ. ಈಗಲಾದರೂ ಅವರು ಬಡ ರೈತಾಪಿ ಜನಗಳ ಮೇಲೆ ದಯವಿಟ್ಟು ಅನ್ಯಾಯವಾಗಿ ಬಡ ರೈತರನ್ನು ಮೋಸದಿಂದ ಹೀನಸ್ಥಿತಿಗೆ ತರುತ್ತಿರುವ ವಿಷಯಗಳು ಸುಳ್ಳೇ ಅಥವಾ ನಿಜವೇ ಎಂಬುವ ಭಾಗ ಪರ್ಯಾಲೋಚನೆಗೆ ತಂದಲ್ಲಿ ನಿಜತ್ವ ಯಾವತ್ತೂ ವೇದ್ಯವಾಗಿ ಬಡ ರೈತಾಪಿ ಜನಗಳಿಗೆ ಬಂದೊದಗಿರುವ ಕಷ್ಟನಷ್ಟವನ್ನು ಪರಿಹರಿಸುತ್ತಾರೆಂದು ಪ್ರಾರ್ಥಿಸುವ ಬಡ ರೈತರ ಹಿತಚಿಂತಕ.

ಗೊರಮಗೊಂಡನಹಳ್ಳಿ ಪಟೇಲ್ ರಂಗೇಗೌಡ.

ಒಂದು ಗ್ರಾಮಾಭಿವೃದ್ಧಿಯೂ ಮೈಸೂರು ಸರ್ಕಾರವೂ—ಆಕ್ಷೇಪಣೆಗಳು.

ಅಯ್ಯಾ,—ಶಿವಮೊಗ್ಗ ತಾಲ್ಲೂಕು ಅರಬಿಳಚಿ ಗ್ರಾಮವು ಸುಮಾರು 300 ಮನೆಗಳುಳ್ಳದ್ದು. ಇದಕ್ಕೆ ಯೂನಿಯನ್ ನಿಯಾಮಕವಾಗಿ 8 ವರುಷವಾಯಿತು. ನೇಮಕವಾದ ವರುಷ ಯೂನಿಯನ್ ಕಂದಾಯ ವಸೂಲಾಗಿದ್ದು ಈಗ 8-10 ತಿಂಗಳು ಮುಂದೆ ನಮ್ಮ ಅಮಲ್ದಾರರು ಬಂದು 6 ವರುಷದ ಕಂದಾಯ ವಸೂಲುಮಾಡಿದರು. ಗ್ರಾಮ ಪಾಕೀಜ ವಗೈರೆ ಇದುವರೆಗೂ ಯಾವ ಏರ್ಪಾಡೂ ಮಾಡಿದಂತಾಗಲಿಲ್ಲ. ಜಾಡಮಾಲಿ ಸಂಬಳ ಮಾತ್ರ 8 ವರುಷದಿಂದ ಅನ್ಯಾಯವಾಗಿ ಪಾವತಿ ಆಗುತ್ತೆ. ಮೀಟಿಂಗೆನ್ನುವದು ಎಷ್ಟು ದಿನಕ್ಕೊಂದಾವರ್ತಿ ನಡೆಯುವದಾಗಲಿ ಇದಕ್ಕೆ ಮೆಂಬರುಗಳು ಯಾರೆನ್ನುವದಾಗಲಿ ಸ್ಥಳದವರಾದ ನಮಗೇ ಗೊತ್ತಿಲ್ಲ.—ನಮ್ಮ ಗ್ರಾಮಕ್ಕೆ ಪಾನಕ್ಕೆ ಯೋಗ್ಯವಾದ ನೀರಿಲ್ಲವೆಂದು ಬಹು ದಿನಗಳಿಂದ ಅರಿಕೆಮಾಡಿಕೊಳ್ಳುತ್ತಾ ಬಂದದ್ದರ ಮೇಲೆ 2 ಭಾವಿಗಳನ್ನು ತೆಗೆಸಿಕೊಡುವದಾಗಿ ಅಪ್ಪಣೆ ಆದ್ದರ ಮೇಲೆ ಭಾವಿ ತೆಗೆದರೆ ಉಪ್ಪು ನೀರು ಬರುವದಲ್ಲದೆ ಚಲೋ ಸಿಹಿನೀರು ಬರುವದಿಲ್ಲವೆನ್ನುವದಕ್ಕೆ ಹಾಲಿ ಇರುವ ಭಾವಿಗಳೇ ಸಾಕ್ಷಿಯಾಗಿವೆ. ಆದ್ದರಿಂದ ಹಾಲಿ ಬಳಸೋ ಹೊಂಡವನ್ನೇ ಜರೂರು ಕಾಮಗಾರಿ ಮಾಡಿಸಿಕೊಡುವದಕ್ಕೆ ಸರ್ಕಾರದವರ ಅಪ್ಪಣೆ ಪ್ರಕಾರ 500 ರೂಪಾಯಿ ಕಂಟ್ರಿಬ್ಯೂಷನ್ ಹಣ ಕಟ್ಟಿ ಈಗ ತಿಂಗಳಾಗುತ್ತಾ ಬಂದಾಗ್ಯೂ ನಮ್ಮ ಬಳಸೋ ಹೊಂಡದ ಕಡೆ ಸರ್ಕಾರದವರ ನಿಗಾ ಎಷ್ಟು ದಿನಕ್ಕೆ ಬೀಳುತ್ತದೋ ತಿಳಿಯದು. ನೀರಿನ ತೊಂದರೆ ತಪ್ಪಿದರೆ ಸಾಕೆಂದು ಬಡವರೆಲ್ಲಾ ಕೂಲಿಮಾಡಿ ವರಾತ ಕೊಟ್ಟಿದಾರೆ. ಜರೂರು ಮಾಡಿ ಸರ್ಕಾರದವರು ಕಾಮಗಾರಿ ಮಾಡಿಸುವದಕ್ಕೆ ಸಕಾಲವಾಗಿದೆ. ಇಲ್ಲದಿದ್ದರೆ ನೀರು ತುಂಬಿ ಅವಕಾಶ ಕಡಮೆಯಾಗುತ್ತೆ.—ನಮ್ಮ ಗ್ರಾಮ ಆಜುಬಾಜೂ ಗ್ರಾಮಗಳ ಹಡದಿ ದನಗಳ ದೆಸೆಯಿಂದ ಮಾಡಿದ ಫಸಲು ಕೈಸೇರದಂತಾಗುತ್ತೆಂದು ದೊಡ್ಡಿ ಇರುವ ಸ್ಥಳಗಳಿಗೆ ಹೊಡೆಯಬೇಕೆಂದರೆ ದೂರ ಫಾಸಲೆ ಆದ್ದರಿಂದ ಹೊಡೆದುಕೊಂಡುಹೋಗಿ ಬರುವ ತೊಂದರೆ ಬಹಳವಾಗುವ ಪ್ರಯುಕ್ತ ಮಧ್ಯ ಸ್ಥಳವಾದ ನಮ್ಮ ಗ್ರಾಮದಲ್ಲಿ ದೊಡ್ಡಿ ಇಡಬೇಕಾಗಿ ಸರ್ಕಾರಕ್ಕೆ ಅರ್ಜಿಗಳ ಗುದುರಾಯಿಸಿಕೊಳ್ಳುತ್ತಾ ಬಂದದ್ದರ ಮೇಲೆ ತಾಲ್ಲೋಕು ಧಣಿಗಳು ತೋರಿಸಿದ ಜಾಗದಲ್ಲಿ ಪಾಠ್ ಐಗೋಡಿನಿಂದ ಕಟ್ಟಿಸಿದ್ದನ್ನು ಡೆಪ್ಟಿ ಕಮಿಷನರೂ, ಅಮಲ್ದಾರರು ಪರಾಂಬರಿಸಿ ಮೇಲ್ಪಾವಣಿ ಮಾಡಿ ಜಾರಿ ಹುಕುಂ ಕೇಳುವಂತೆ ಅಪ್ಪಣೆ ಆದ ಪ್ರಕಾರ ಕಂಪೌಂಡಿನೊಳಗೆ ಹಣದಿಂದ ಮೇಲ್ಪಾವಣಿ ಮಾಡಿ ಜಾರಿ ಹುಕುಂ ಕೇಳಲಾಗಿ ರೂಬರೂ ಅಜಮಾಯಿಷಿಯಿಂದ ಹುಕುಂ ಕೊಡಿಸೋಣಾಗುತ್ತೆಂದು ಹೇಳಿದಾಗ ಪೈರು ಸಣ್ಣದಾಗಿತ್ತು. ದೊಡ್ಡ ಪೈರಾದಾಗ್ಯೂ ಜಾರಿ ಹುಕುಂ ಆಗಲಿಲ್ಲ. ಪೈರು ಹಡದಿ ದನಗಳ ಪಾಲಾದ ನಂತರ ಹುಕುಂ ಆಗುತ್ತೋ, ಅಥವಾ ಕೊಯಿದ ನಂತರ ಆಗುತ್ತೋ ಗೊತ್ತಿಲ್ಲ.—ನಮ್ಮ ಗ್ರಾಮದ ಮಧ್ಯೆ ಇರುವ ಕೋಟೆ ಗೋಡೆಗಳು ಸಡಲಿ ಬಿದ್ದು ನಾದುರಸ್ತಾಗಿರುತ್ತೆ. ಇದರಲ್ಲಿ ವಿಷಜಂತುಗಳು ಸೇರಿಕೊಂಡು ಆಬಾಲವೃದ್ಧರ ಸಂಚಾರಕ್ಕೆ ಭಯವೂ ಅಡಚಣೆಯೂ ಆಗಿರುತ್ತೆ. ಈ ಕೋಟೆಯಿಂದ ಗ್ರಾಮದವರಿಗೆ ಯಾವ ಪ್ರಯೋಜನವೂ ಇಲ್ಲ. ಕೋಟೆ ಇರುವ ಜಾಗದಲ್ಲಿ ಸುಮಾರು 10-16 ಮನೆಗಳಿಗಿಂತ ಹೆಚ್ಚು ಸ್ಥಳವಿದೆ. ಅನೇಕರು ಮನೆ ಕಟ್ಟುವದಕ್ಕೆ ಸ್ಥಳವಿಲ್ಲದೆ ಪೇಚಾಡುತ್ತಾರೆ. ಕೋಟೆಯನ್ನು ಸರ್ಕಾರದವರು ಮನೆಗಳಿಗೆ ಸರಿಯಾಗಿ ಹರಾಜು ಮಾಡಿಸಿದಲ್ಲಿ ಜನರು ಪಡೆದುಕೊಂಡು ಅದರ ಕಲ್ಲುಗಳನ್ನು ಸರ್ಕಾರಕ್ಕೆ ಲೂಟಿಮಾಡಿ ಕೊಡುತ್ತೇವೆ.—ನಮ್ಮ ಗ್ರಾಮಕ್ಕೆ 6 ಮೈಲಿ ಹೊಳೆಹೊನ್ನೂರು, 9 ಮೈಲಿ ಬೆಂಕಿಪುರ, 10 ಮೈಲಿ ಅಸ್ಸೀರಿ, ಈ ರೀತಿ ದೂರ ಫಾಸಲೆಯಲ್ಲಿರುತ್ತವೆ. ಈ ಊರುಗಳಲ್ಲಿ ಆಗುವ ಸಂತೆಗೆ ಹೆಂಗಸರು ಮಕ್ಕಳು ಹೋಗಿಬರುವ ಹಾಗಿಲ್ಲ. ಮಳೆಗಾಲದಲ್ಲಿ ಗಂಡಸರು ಹೋಗಿಬರುವದೇ ಪರಮ ಕಷ್ಟ. ಈ ತೊಂದರೆಗಳನ್ನು ನೋಡಿ ನಮ್ಮ ಗ್ರಾಮದಲ್ಲಿ ಪ್ರತಿ ಬುಧವಾರ ಸಂತೆ ಆಗಬೇಕಾಗಿ ಸರ್ಕಾರದವರು ಹುಕುಂ ಮಾಡಿದಂತೆ ಕೆಲವು ಕಾಲ ಜಾರಿ ಇದ್ದು ಯಾವ ಕಾರಣದಿಂದಲೋ ನಿಂತುಹೋಗಿರುತ್ತೆ.—ನಮ್ಮ ಗ್ರಾಮದಲ್ಲಿ ಜವಳಿ ವ್ಯಾಪಾರಿಗಳೂ, ಅಡಿಕೆ ವ್ಯಾಪಾರಿಗಳೂ ಇರುತ್ತಾರೆ. ಇಲ್ಲಿಗೆ ನಾನಾ ಕಡೆಗಳಿಂದ ಕಾಗದ ಪತ್ರಗಳು ಬರಬೇಕಾಗಿರುತ್ತೆ. ಸಕಾಲಕ್ಕೆ ಬಾರದ್ದರಿಂದ ಅನೇಕರಿಗೆ ತುಂಬಾ ಅಡಚಣೆ ಆಗಿದೆ. ನಮ್ಮ ಸರ್ಕಾರದವರು ಬ್ರಾಂಚು ಆಫೀಸು ಇಡಬೇಕೆಂದು ಮಾಡಿದ ಏರ್ಪಾಡು ಈಚೆಗೆ ಯಾಕೆ ಮಾನಸಿಕ ಮಾಡಿದರೋ ಗೊತ್ತಾಗಲಿಲ್ಲ.—ಈ ಗ್ರಾಮದಲ್ಲಿ ಸರ್ಕಾರಿ ಸ್ಕೂಲ್ ಏರ್ಪಡಿಸಿ ಬಹು ದಿವಸವಾಯಿತು. ಒಬ್ಬ ಬಾಲಕನಾದರೂ ತೇರ್ಗಡೆ ಹೊಂದಲಿಲ್ಲ. ಗ್ರಾಮಸ್ಥರಾದ ಪ್ರಮುಖರು ತಿಂಗಳಿಗೊಂದಾವರ್ತಿಯಾದರೂ ಸ್ಕೂಲಿಗೆ ಹೋಗಿ ಬಾಲಕರ ಪಾಠ ಪರೀಕ್ಷೆಮಾಡತಕ್ಕ ಕುಶಲರಿಲ್ಲ. ಇವರಿಗೆ ಓದರೆ ವೈರಿಯಾಗಿದಾರೆ. ಮಕ್ಕಳಾದರೂ ಬುದ್ಧಿಕುಶಲರಾಗಲೆಂಬ ಇರಾದೆ ಮೊದಲೇ ಇಲ್ಲ. ಇವರ ಮಕ್ಕಳು ದನಕರುಗಳನ್ನು ಕಾದರೆ ಸಾಕೆಂದು ಭಾವಿಸುವ ಮಂದಮತಿಯುಳ್ಳವರು. ಈಗ ಸರ್ಕಾರದವರು ಮಾಡಿರುವ ಬಲಾತ್ಕಾರ ವಿದ್ಯಾಭ್ಯಾಸದ ಶಾಸನವನ್ನು ಜಾರೀಲಿ ತಂದರೆ ಎಲ್ಲರೂ ತಮ್ಮ ಬಾಲಕರನ್ನು ಕಳುಹಿಸಿ ವಿದ್ಯಾವಂತರನ್ನು ಮಾಡ್ಯಾರೆಂದು ನಂಬಿದೇನೆ.

ವೈ ಚಂದ್ರಶೇಖರಯ್ಯ.

[ಅರಸಿ ಶಿದ್ಧಲಿಂಗಪ್ಪ, ಭದ್ರಾಸಾಗರ ; ಎಂ. ಮಾದರಾಜ ಅರ್ಸ್, ಮೈಸೂರು ; ಮುದಲ್ಪುರು ವಿಚಾರಗಳು ; ಉತ್ತರಾಕಾಂಕ್ಷಿ, ಕೆಸ್ತೂರು ; ಸಜ್ಜನಹಿತೈಷಿ, ಹನುಮಂತಪುರ ; ಚಂದಾದಾರ್ ವಗೈರೆ, ಬಿಡಿಗನವಿಲೆ ; ಗೋರೂರು ಮೀಟಿಂಗ್ ವಿಷಯ ; ದೇಶಾಭಿಮಾನಿ ಬಳರಾಳು ; ಕೆ. ಶಿವಬಸವಯ್ಯ, ಕ್ಯಾತನಹಳ್ಳಿ ; ಗೋರಘಟ್ಟದ ಸಭೆಯ ವರ್ತಮಾನ ; ಮುಷ್ಕೇರ ವಿಚಾರ :—ಈ ಖಾತ್ರಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಪತ್ರಿಕೆ ಚಂದಾದಾರ, ಅರಸೀಕೆರೆ.—ಆ ಕಂಪನಿಯ ಡೈರೆಕ್ಟರಿಗೆ ಬರೆದು ಸಂಶಯ ಪರಿಹರಿಸಿಕೊಳ್ಳಬಹುದು.

ಬಿಷ್ಟಜೋಯಿಸ್, ಹಾಲ್ಮತ್ತೂರು.—ದರ್ಖಾಸ್ತಿಯಲ್ಲಿರುವ ಮೊಕದ್ದಮೆ ವಿಷಯದಲ್ಲಿ ನಿಮ್ಮ ಖಾತ್ರಿ ಪ್ರಕಟಿಸತಕ್ಕದ್ದಾಗಿಲ್ಲ.

ವಿದ್ಯಾ ಪ್ರಸಾರಕ.—ನಿಮ್ಮ ಹೆಸರು ವಿಳಾಸ ತಿಳಿಸಿಲ್ಲ.

ಎಂ. ಗುಡ್ಡದಮ್ಮ, ತಿಮ್ಮನಹಳ್ಳಿ.—ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ, ತುಮಕೂರು ಪೊ. ಸೂಪರಿಂಟೆಂಡೆಂಟರಿಗೂ ಮತ್ತೆ ಅರ್ಜಿ ಬರೆದುಕೊಳ್ಳುವುದು ಉತ್ತಮ. —ಎಡಿ]

ತಾಲ್ಲೋಕು ವರ್ತಮಾನ.

ಹುಣಸೂರು.—ಈ ತಾಲ್ಲೂಕಿನಲ್ಲಿ ಸುಮಾರು 20 ದಿವಸದಿಂದಲೂ ಮಳೆ ಇಲ್ಲದೆ ಬಿಸಿಲಿನ ತಾಪ ಹೇಳತೀರದು. ಹಿಂದಿನ ಬೆಳೆಸೆಲ್ಲ ಒಣಗುತ್ತಿದೆ. ಮುಂಬಿನ ಬೆಳೆಸೆಲ್ಲ ಕೊಯ್ಲಿಗೆ ಬಂದಿದೆ. ಜನಗಳಂತು ಮೇಘವನ್ನೇ ನೋಡುತ್ತಾರೆ.—ಈ ತಾಲ್ಲೂಕು ಅಮಲ್ದಾರರು ಜನಾನುರಾಗವನ್ನು ಸಂಪಾದಿಸಿ ಸರ್ಕಾರಿ ಕೆಲಸಗಳನ್ನು ಬಹಳ ಮುತುವರ್ಜಿಯಿಂದ ನಡಿಸುತ್ತಾ ಅಲ್ಲದೆ ತಾಲ್ಲೂಕ್ ಸರಹದ್ದು ಗ್ರಾಮಗಳಿಗೆ ಸಂಚಾರ ದಯಮಾಡಿಸಿ, ಗ್ರಾಮಗಳನ್ನು ಪರಾಂಬರಿಸಿ ಗ್ರಾಮಾಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಗ್ರಾಮದ ಮುಖಂಡರುಗಳಿಗೆ ಬೋಧಿಸುತ್ತಾ, ಬಡ ಪ್ರಜೆಗಳು ಹೇಳಿಕೊಂಡ ಕಷ್ಟ ನಷ್ಟಗಳನ್ನು ಚೆನ್ನಾಗಿ ಲಾಲಿಸಿ ಬಡ ಪ್ರಜೆಗಳಿಗೆ ತೊಂದರೆ ಬಾರದಂತೆ ಸದುತ್ತರವನ್ನು ಕೊಟ್ಟು ಪ್ರಜೆಗಳನ್ನು ಪ್ರೀತಿಸುತ್ತಾರೆ.—ಈ ತಾಲ್ಲೂಕು ಸಣಹುಮ್ಮ ಗ್ರಾಮಗಳಲ್ಲಿ ಜಾಡ್ಯಗಳು ತಲೆದೋರಿ ಹುಲ್ಲೇಹಾಳು, ಗಾವಡಗೆರೆ ಗ್ರಾಮಗಳಲ್ಲಿ ಪ್ಲೇಗಿನ ರೋಗದಿಂದ ಜನಗಳು ಬಹಳ ಮಟ್ಟಿಗೆ ನಷ್ಟವಾಗಿ ಈಗ ಷೆಡ್ಡುಗಳಲ್ಲಿ ವಾಸಮಾಡುತ್ತಾರೆ.—ಬೆಂಕಿಪುರದ ಗ್ರಾಮದಲ್ಲಿ ಮಾರಿ ಸಿಡುಬು ಎಂಬುವ ಜಾಡ್ಯ ತಲೆದೋರಿ ಈ ರೋಗದಿಂದಲೇ ಸುಮಾರು 16 ಹುಡುಗರು ಮೃತರಾದರು.—ಈ ಬೆಂಕಿಪುರದ ಗ್ರಾಮದಲ್ಲಿ ಬಾಲಕರ ಪಾಠಕ್ಕೆ ಒಂದು ಪಾಠಶಾಲೆ ಇಲ್ಲದೆ ಬಹಳ ತೊಂದರೆಯಾಗಿತ್ತು. ಸಾಹುಕಾರ್ ಪಟೇಲ್ ಚೆನ್ನೇಗೌಡರು, ಮ|| ಬಸವಾರಾಧ್ಯರು ಇನ್ನು ಮುಂತಾದವರ ಸಹಾಯದಿಂದ ಒಂದು ಪ್ರೈವೇಟ್ ಪಾಠಶಾಲೆ ಸ್ಥಾಪಿಸಲಾಗಿ ಸುಮಾರು 7-8 ತಿಂಗಳಿಂದ ಅಭಿವೃದ್ಧಿಗೆ ಬಂದಿದೆ.

ತಿಪ್ಟೂರು.—ಈ ಊರಲ್ಲಿ ಈ ವಾರ ಒಂದು ಹದ ಮಳೆಯಾಗಿ ಪೈರುಗಳೆಲ್ಲಾ ಸಣ್ಣಗಾಗಿದ್ದರೂ ಹಚ್ಚಗಾಗಿರುತ್ತವೆ. ಈ ಟವರ್ ಭಾಂಯಾಗಿದ್ದಾಗ್ಯೂ ಎರಡು ವರ್ಷಗಳಿಂದಲೂ ಕಾವಾಗಾರಿಗಳಿಲ್ಲದೆ ಅಲ್ಲಲ್ಲಿ ಚರಂಡಿಗಳೂ ರಸ್ತೆಗಳೂ ಹಳ್ಳ ಹಿಟ್ಟಾಗಿ ಇರುವದರಿಂದ ಮುಂದಾದರೂ ನಮ್ಮ ವೈಸ್ ಪ್ರೆಸಿಡೆಂಟರು ನಿಗಾ ಕೊಡುತ್ತಾರೆಂದು ನಂಬುತ್ತೇವೆ —ಈ ಟವರ್ ನೀರಿಗೆ ಬಹಳ ತೊಂದರೆಯಾದಾಗ್ಯೂ ಕೆರೆಗೆ ಬಂದಿರುವ ಅಲ್ಪ ಸ್ವಲ್ಪ ನೀರಿನ ಹತ್ತಿರದಲ್ಲೇ ಹೇಸಿಕೆಮಾಡಿ ಗಲೀಜಾಗುವದರಿಂದ ನಮ್ಮ ಹೊಸ ಪೊ. ಇನ್‌ಸ್ಪೆಕ್ಟರ ನಿಗಾಕ್ಕೆ ಬಂದಿಲ್ಲವಾಗಿ ಕಾಣುತ್ತೆ. ಟವರ್‌ನಲ್ಲಿ ಲಾಂದ್ರಗಳು ಆಯಾ ಗಲ್ಲಿಗಳಿಗೆ ಸರಿಯಾಗಿ ಹಾಕಿದ್ದಲ್ಲಿ ನಮ್ಮ ಟವರ್ ಚಿಕ್ಕದಾದಾಗ್ಯೂ ದೀಪಗಳು ಪ್ರಕಾಶದಿಂದ ಕಾಣುತ್ತಿತ್ತು. ಲಾಂದ್ರಗಳ ವಿಷಯ ನಮ್ಮ ವೈಸ್ ಪ್ರೆಸಿಡೆಂಟರವರ ಗಮನಕ್ಕೆ ಬಂದಿಲ್ಲವಾಗಿ ಕಾಣುತ್ತೆ.—ಈ ಟವರ್ ಪಾಟೀಲ್ ಮ|| ನಂಜೇಗೌಡ್ರು ಹೆಗ್ಗಡೇವನಕೋಟೆ ತಾಲ್ಲೂಕಿನಿಂದ ರಾಸು ಕಳುವಾಗಿ ಬಂದದ್ದನ್ನು ಈ ಟವರ್‌ನಲ್ಲಿ ಚಮತ್ಕಾರದಿಂದ ಪತ್ತೆಮಾಡಿದ್ದಕ್ಕಾಗಿ ಪೊ. ಇನ್‌ಸ್ಪೆಕ್ಟರ್ ಜನರಲ್‌ರವರಿಂದ ಮುಂಜೂರಾಗಿ ಬಂದ ಬಹುಮಾನವನ್ನು ತಾ. 16 ರಲ್ಲಿ ನಮ್ಮ ಪೊ. ಇನ್‌ಸ್ಪೆಕ್ಟರಿಂದ ಹೊಂದಿರುತ್ತಾರೆ.—ನಮ್ಮ ಅಮಲ್ದಾರರು ಇಲ್ಲಿಗೆ ಬಂದಾಗಿನಿಂದ ಗ್ರಾಮಾಂತರಗಳ ಸಂಚಾರದಿಂದಲೂ ಸರ್ಕಾರಿ ಕೆಲಸಗಳಲ್ಲಿ ಬಹಳ ಚಟುವಟಿಕೆಯಿಂದಲೂ ನಿಸ್ಪೃಹರಾಗಿಯೂ ಕೆಲಸ ನಡಿಸುತ್ತಾ ಇದ್ದಾರೆ.

ಮಂಡ್ಯ.—ಅಮಲ್ದಾರ್ ಶ್ರೀನಿವಾಸರಾಯರ ಛತ್ರ ದೇವಸ್ಥಾನವು ಅಭಿವೃದ್ಧಿ ಸ್ಥಿತಿಯಲ್ಲಿದೆ ದೇವಸ್ಥಾನದ ರಿಪೇರಿಗೆ 400 ರೂಪಾಯಿ ಸ್ಯಾಂಕ್ಷನ್ ಆಗಿ ದೇವಸ್ಥಾನದ ಒಳಗಿನ ಭಾವಿ ಒಂದು ವಿನಹ ಬಾಕಿ ಕೆಲಸಗಳನ್ನು ಛತ್ರದ ಏಜಂಟ್ ಮ|| ಎಚ್. ರಾಘವೇಂದ್ರರಾಯರು ಬಹಳ ಮೆಹನತ್ತಿನಿಂದ ಮುತುವರ್ಜಿವಹಿಸಿ ಪೂರೈಸಿರುತ್ತಾರೆ. ಮುಂಭಾಗದ ಬಾಗಿಲುವಾಡಾ ವಗೈರೆ ಪರಿಷ್ಕಾರವಾಗಿ ಮಾಡಿಸಿ, ಹಿಂಭಾಗದ ಕೊಳವನ್ನು ಶುಚಿಯಾಗಿಟ್ಟು ಕೊಂಡಿರುವದಲ್ಲದೆ ಹುಷ್ಪಿನ ಗಿಡಗಳನ್ನು ಹಾಕಿಸಿರುವರು. ತಾ. ೨೪ ನೇ ಶನಿವಾರ ದೇವಸ್ಥಾನದಲ್ಲಿ ಅಭಿಷೇಕ ಮುಂತಾದ್ದು ನಡೆದು ರಾತ್ರಿ ಮಂಗಳಾರ್ತಿ ಬಹಳ ವಿಜೃಂಭಣೆಯಾಗಿ ಆಯ್ತು. ಗ್ರಾಮಸ್ಥರೂ ನೌಕರವರ್ಗದವರೂ ದಯಮಾಡಿ ಬಹಳ ಸಂತೋಷಪಟ್ಟರು.—ಮಳೆಯಿಲ್ಲದೆ ಪೈರು ಒಣಗುತ್ತಾ ಇದೆ. ಮದ್ದೂರು ಕಡೆಯ ಕೆಲವು ಸ್ಥಳಗಳಲ್ಲಿ ಪಾಷಾಣ ಹಾಕಿ ದನಗಳನ್ನು ಕೊಲ್ಲುತ್ತಿದ್ದದ್ದನ್ನು ಪೊ. ಇನ್. ಮ|| ದಿವಾಕರನಾಯಕರೂ, ಜಮಾದಾರ್ ಮ|| ಗುರಪ್ಪನವರೂ ಮುತುವರ್ಜಿಯಿಂದ ಕಂಡುಹಿಡಿಯುತ್ತಿರುವರು. ಈ ದುಷ್ಕಾರ್ಯವು ಬಹು ದಿವಸಗಳಿಂದ ಅಲ್ಲಲ್ಲಿ ನಡೆಯುತ್ತಿದ್ದುದರಿಂದ ಇದರ ತನಿಖೆ ಕೊನೆಮುಟ್ಟುವುದು ಕೆಲವು ದಿವಸಗಳಾಗಬಹುದು.—ಸ್ಯಾನಿಟೇಷನ್ ರೂಲಸು ಅನೇಕರಿಗೆ ಗೊತ್ತಿದ್ದರೂ ಸಂದುಗೊಂದುಗಳಲ್ಲಿ ವಿಪರೀತ ಹೇಸಿಕೆ ಮಾಡಿ ಆರೋಗ್ಯಕ್ಕೆ ತೊಂದರೆಯನ್ನುಂಟುಮಾಡುತ್ತಿದ್ದಾರೆ. ಸ್ಯಾ. ಇನ್‌ಸ್ಪೆಕ್ಟರಿಗಂತೂ ವಿಪರೀತ ಕೆಲಸ. ಇದನ್ನು ನೋಡಲು ಹ್ಯಾಗೆ ಅವಕಾಶ ಸಿಕ್ಕೀತು? ಈ ಊರಲ್ಲಿರತಕ್ಕ ಅನೇಕ ಮನೆಗಳಿಗೆ ಹಿತ್ತಲುಗಳು ಇಲ್ಲದಿರುವದೇ ಇದಕ್ಕೆ ಕಾರಣ. ಈ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಗಮನಿಸತಕ್ಕದಾಗಿದೆ.—ಇನ್‌ಜನಿಯರಿಂಗ್ ಅಧಿಕಾರಿಯಾಗಿದ್ದ ಮ|| ಶಾಮೇಶಕಿ ಶಾಸ್ತ್ರಿಗಳಿಗೆ ಹಾಸನಕ್ಕೆ ವರ್ಗವಾಯ್ತು. ಇವರು ಈ ಸ್ಥಳವನ್ನು ಬಿಡುವದಕ್ಕೆ ಮುಂಚೆ ಈ ಇಲಾಖೆಗೆ ಸೇರಿದವರೂ ಇತರ ಸ್ನೇಹಿತರೇ ಮೊದಲಾದವರೂ ಇವರಿಗೆ ಒಂದು ಎಂಟರ್‌ಟೇನ್‌ಮೆಂಟ್ ಕೊಟ್ಟು ಅವರ ಗುಣಕಥನವನ್ನು ಮಾಡಿದರು. ಈ ಊರಲ್ಲೂ ಸುತ್ತುಮುತ್ತಣ ಗ್ರಾಮದಲ್ಲೂ ಆಡು ಕುರಿಗಳನ್ನು ಸಾಕುವುದು ವಿಶೇಷ ರೂಢಿಗೆ ಬಂದು ಸಾಲು ಮರಗಳೆಲ್ಲಾ ಬೋಳಾಗುತ್ತಿವೆ. ಇದನ್ನು ತಪ್ಪಿಸಲು ಸರ್ಕಾರದವರು ಕಠಿಣವಾದ ರೂಲಸನ್ನು ಜಾರಿಗೆ ತರುವುದು ಅತ್ಯಾವಶ್ಯಕ.

ತುಮಕೂರು.—ಮೋಡಹಾಕಿಕೊಂಡು ಮಳೆ ಬಾರದೆ ಬಹಳ ಶೀತವಾಗಿ ಗಾಳಿ ಬೀಸುತ್ತಿರುವುದರಿಂದ ಅಲ್ಲಲ್ಲಿ ಚಳಿ ಜ್ವರಗಳ ಬಾಧೆ ಜಾಸ್ತಿಯಾಗುತ್ತಾ ಬರುತ್ತಿದೆ. ಮಳೆಯಿಲ್ಲದೆ ಪೇರಾದ ಬೀಜಗಳು ಮೊಳೆಯದೆಯೂ, ಮೊಳೆತರೂ ವೃದ್ಧಿಯಾಗದೆಯೂ ಇರುತ್ತದೆ.—ಇಲ್ಲಿ ವೈಸ್ ಪ್ರೆಸಿಡೆಂಟರ ಚುನಾವಣೆಯ ವಿಷಯದಲ್ಲಿ ಓಟ್ಸುಗಳು ಕೊಡಲ್ಪಟ್ಟವು. ಅದರಲ್ಲಿ ಹಿಂದಿನಿಂದಲೂ ವೈಸ್ ಪ್ರೆಸಿಡೆಂಟರಾಗಿಯೂ, ತುಂಬಾ ಮುತುವರ್ಜಿಯಿಂದ ಕೆಲಸಮಾಡುತ್ತಲೂ ಬಂದಿರುವ ಮ|| ಸಿ. ಶೇಷಾದ್ರಿಅಯ್ಯಂಗಾರ್ರವರೇ ಇನ್ನು ಮುಂದೆಯೂ ವೈಸ್ ಪ್ರೆಸಿಡೆಂಟರಾಗಬೇಕೆಂದು ಹೆಚ್ಚು ಓಟ್ಸುಗಳು ಕೊಡಲ್ಪಟ್ಟವಲ್ಲದೆ ಓಟ್ಸು ಕೊಡಲು ನೇಮಕವಾಗದ ಅನೇಕ ಪ್ರಜೆಗಳು ಕೂಡ ಇವರೇ ಇರಬೇಕೆಂದು ಅಪೇಕ್ಷಿಸುತ್ತಾರೆ. ಆದ್ದರಿಂದ ಇವರನ್ನೇ ಸರ್ಕಾರದವರು ಮುಂದೆಯೂ ನೇಮಕಮಾಡಬೇಕಾಗಿ ಪ್ರಾರ್ಥನೆ.—ಈ ಊರಿಗೆ ನೀರು ಸರಬರಾಯಿ ಮಾಡತಕ್ಕ ವಿಚಾರದಲ್ಲಿ ಅನೇಕ ಮೀಟಿಂಗುಗಳು ನಡೆಯುತ್ತಾ ಬಂದಾಗ್ಯೂ, ನೀರಿಗೋಸ್ಕರವೆಂದು ಮ್ಯುನಿಸಿಪಲ್ ಕಂದಾಯಗಳನ್ನು ಹೆಚ್ಚಿಸಿ ವಸೂಲ್ಮಾಡುತ್ತಾ ಬಂದಾಗ್ಯೂ ನೀರಿನ ಅನಿವಾರ್ಯತೆ ತಪ್ಪಲೇ ಇಲ್ಲ. ಅಧಿಕಾರಿಗಳಿಗೆ ಸಾಮಾನ್ಯವಾಗಿ ಇದರ ಕಷ್ಟ ಗೊತ್ತಾಗುವುದಿಲ್ಲ. ಹೆಂಗಸರು ಒಂದು ಮೈಲಿ ದೂರದಿಂದ ಹೊತ್ತು ಬಳಲುತ್ತಿದ್ದಾರೆ. “ಐಶ್ವರ್ಯವಂತರ ಕೊಡದ ಬಾಯಿ ತೆರೆಯುವಾಗ್ಗೆ ಬಡವರ ಪ್ರಾಣಗಳು ಹೋದವು” ಎಂಬ ಗಾಥೆಯಂತಾಗಿದೆ.—ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟು ಕ್ರಮವಾಗಿ ನಡೆಯುತ್ತಿದೆ. ಆದರೆ ದಾರಿಯಲ್ಲಿ ಛತ್ರ ವಗೈರೆ ಒಣಗಲು ಹಾಕಿ ಕಾಲ್ನಡೆಗಳೂ ಬಂಡಿಗಳೂ ತಿರುಗಾಡಲು ಉಂಟುಮಾಡುತ್ತಿರುವ ತೊಂದರೆಯು ಇನ್ನೂ ಪರಿಹಾರವಾಗಲೇ ಇಲ್ಲ.—ದಕ್ಷಿಣ ಬಡಾವಣೆಯಲ್ಲಿ ಸ್ಯಾನಿಟೇಷನ್ ರೂಲ್ಸ್ ಅನುಸರಿಸಿ ಮನೆಗಳನ್ನು ಕಟ್ಟುತ್ತಾ ಬಂದಿರುತ್ತಾರೆ. ಕನ್ಸರ್‌ವೆನ್ಸಿ ರಸ್ತೆಗಳೂ ಇವೆ. ಆದರೆ ಬಚ್ಚಲ ರೊಚ್ಚು ಕ್ರಮವಾಗಿ ಹೋಗಲು ಚರಂಡಿಗಳು ಮಾತ್ರ ಇಲ್ಲದೆ ತುಂಬಾ ದುರ್ವಾಸನೆಗೆ ಕಾರಣವಾಗಿದೆ. ಇದಕ್ಕೆ ಮ್ಯುನಿಸಿಪಾಲಿಟಿಯವರು ಗಮನಕೊಡಬೇಕು.—ಎಲ್ಲಾ ಇಲಾಖೆಗಳಲ್ಲೂ ಕಳ್ಳಮಟ್ಟಿಗೆ ಬಡ ನೌಕರದಾರರುಗಳಿಗೆ ಬಡ್ತಿ ಕೊಡುತ್ತಾ ಬರುತ್ತಿದ್ದಾರೆ. ಆದರೂ ಪೋಸ್ಟ್ ಇಲಾಖಾ ಜವಾನರಿಗೆ ಇನ್ನೂ ಬಡ್ತಿ ದೊರೆಯದಿರುವದು ತುಂಬಾ ವ್ಯಸನ.—ಈಚೆಗೆ ಕೆಲವು ವರ್ಷಗಳ ಹಿಂದಿನಿಂದ ರೆವಿನ್ಯೂ ಕಮಿಷನರವರು ತಾಲ್ಲೂಕ್ ಆಫೀಸುಗಳಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಒಂದು ಸ್ಥಳದಲ್ಲಿ ಯಾವ ಗುಮಾಸ್ತರನ್ನೂ ಇರಿಸಕೂಡದೆಂದು ಮಾಡಿರುವ ಏರ್ಪಾಡು ಬಹಳ ಸ್ತೋತ್ರಾರ್ಹವಾದದ್ದು. ಇದರಂತೆ ದುಡ್ಡು ಓಡ್ಯಾಡುವ ಎಲ್ಲಾ ಇಲಾಖೆಗಳಲ್ಲೂ ಮಾಡಿದ್ದರೆ ಪ್ರಜೆಗಳಿಗೆ ತುಂಬಾ ಸಹಾಯವಾದೀತು.

ರಬ್ಬರು ಮುದ್ರೆಗಳು!

ನಾವು ನಾನಾ ತರದ ಭಾಷೆಗಳಲ್ಲಿ ಅತ್ಯುತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ಕೋಡಿನ ಪೆಟ್ಟಿಗೆ, ಬ್ರಷ್ ಪ್ಯಾಡ್ ಮತ್ತು ಇಂಕಿ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಹೆಸರು ಮುಂತಾದವುಗಳನ್ನು ಇಂಗ್ಲೀಷ್ ಅಕ್ಷರಗಳಿಂದ ಬರೆಯಬೇಕು.

[160-8]

ನಮ್ಮ ವಿಳಾಸ:—ರಾಂಭಾಗ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 3-0-0.

ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ಬನಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಣುಸಾಮಿ

[111-14] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸಮಸ್ತ ಜನಗಳಿಗೂ ತಿಳಿಯಪಡಿಸುವ ಬಗ್ಗೆ.

ಮೈಸೂರು ಮಂಡಿ ಮೊಹಲ್ಲಾ ಗಾಡಿ ಹೊನ್ನಯ್ಯನ ಗಲ್ಲಿಯಲ್ಲಿದ್ದು ವಿಶ್ವಕರ್ಮ ಆಪಿಲಾಂಡ ಸೋಸ್ತ್ರಿ ಮಗ ರಾಮಾಚಾರಿಯು ತನ್ನ ಬಾಬ್ತು ಮ್ಯುನಿಸಿಪಲ್ 007 ನೇ ನಂಬರ್ ಮನೆಯನ್ನು ಮಂಡಿಯಲ್ಲಿರುವ ಶ್ರೀ ಕಾಳಿಕಾಂಬ ಅಮ್ಮನವರ ಪೂಜಾ ವಿನಿಯೋಗಕ್ಕೂ, ಚರಸ್ವತ್ತನ್ನು ತನ್ನ ಸಾಕು ಮಗ ದೇವಾಂಗದ ಕಟ್ಟೆಯ್ಯನಿಗೂ ಕೊಡಬೇಕೆಂದು ಸ್ವಮತಸ್ಥರೂ, ಪಣಸ್ಥರೂ, ಇತರ ಮತಸ್ಥರೂ ಪಂಚಾಯಿತಿಯಲ್ಲಿ ನಿರ್ಧರಿಸಿ, ಅದರಂತೆ ರಿಕಾರ್ಡು ಮಾಡುವವರೊಳಗಾಗಿ ಫವತಿಯಾಗಿರುವದರಿಂದ ಆತನ ಇಷ್ಟದಂತೆ ಮನೆಯನ್ನು ದೇವಸ್ಥಾನಕ್ಕೆ ಬಿಟ್ಟುಕೊಟ್ಟು ಚರಸ್ವತ್ತನ್ನು ಕಟ್ಟೆಯ್ಯನಿಗೆ ಕೊಟ್ಟಿರುತ್ತೇವೆ. ಆತನ ಉತ್ತರ ಕ್ರಿಯೆಗಳನ್ನು ದೇವಸ್ಥಾನದ ಫಂಡಿನಿಂದಲೇ ನಡಿಸಿರುತ್ತೇವೆ. ಇಲ್ಲಿಂದ 11 ತಿಂಗಳವರಿಗೂ ಕಟ್ಟೆಯ್ಯನು ಬಗರ್ ಬಾಡಿಗೆಯಿಂದ ಮೇಲ್ಕಂಡ ಮನೆಯಲ್ಲಿ ವಾಸಮಾಡಿಕೊಂಡಿದ್ದು ಆ ನಂತರ ದೇವಸ್ಥಾನಕ್ಕೆ ಮನೆಯನ್ನು ಒಪ್ಪಿಸತಕ್ಕದ್ದಲ್ಲದೆ ಚರಸ್ವತ್ತು ಆತನ ಸುಪರ್ದು ಮಾಡಲ್ಪಟ್ಟಿದೆ ಎಂದು ಆತನ ರುಜು ಉಳ್ಳ ಪಾಲಿ ಕಾಗದವನ್ನು ಬರಸಿರುತ್ತೇವೆಂದು ತಿಳಿಸುವ ಪಂಚಾಯಿತರು. [181-1]

ಗೃಹಕೃತ್ಯದ ನೋಟೀಸು.

ಮಂಡ್ಯ ತಾ. ಮದ್ದೂರಿನಲ್ಲಿರುವ ಪ್ರಹ್ಲಾದಯ್ಯಂಗಾರ್ರ ಮೊಮ್ಮಕ್ಕಳು ಶಿಂಗಯ್ಯಂಗಾರ್ರು ಈ ಮೂಲಕ ತಿಳಿಯಪಡಿಸುವದೇನಂದರೆ.—ಮದ್ದೂರಿಗೆ ಸೇರಿದ ನನ್ನ ಮತ್ತು ನನ್ನ ತಾಯಿ ಜಂಟಿ 61 ನೇ ಖಾತೆಯಲ್ಲಿ ಕಂಡ ಮಿಕ್ಕಿ ತರಿ ಬಾಗಾಯಿತು ಮತ್ತು ಮನೆ ಪೈಕಿ ಕೆಲವು ನಮ್ಮ ತಂದೆ ಕಲ್ಯಾಣಮ್ಮನ ಸ್ವಾಧೀನದಲ್ಲಿದ್ದು ಕೆಲವು ನನ್ನ ಸ್ವಾಧೀನದಲ್ಲಿವೆ. ಕಲ್ಯಾಣಮ್ಮ ಮೃತಪಟ್ಟು ಒಂದು ವರ್ಷ. ಈಚೆಗೆ ಮೃತಪಟ್ಟ ಚಿಕ್ಕಮಗನ ಹೆಂಡತಿ ಲಕ್ಷ್ಮಮ್ಮನನ್ನು ನನ್ನ ತಾಯಿಯ ಜಂಟಿ ಸ್ಥಾನಕ್ಕೆ ಅಂಗೀಕರಿಸಕೂಡದೆಂದು ವಗೈರೆ ಗವರ್ನಮೆಂಟಿನಲ್ಲಿ ನನ್ನ ಫಿರ್ಯಾದು ನಡೆಯುತ್ತಾ ಇದೆ. ಈ ಲಕ್ಷ್ಮಮ್ಮನು ಅಪುತ್ರವತಿ, ಜೀವನಾಂಶಕ್ಕೆ ಮಾತ್ರ ಅರ್ಹಳು. ಈ ಜಂಟಿ ಖಾತೆಯಲ್ಲಿ ಕಂಡ ಸೊತ್ತುಗಳೂ, ನನ್ನ ತಂದೆ ನರಸಿಂಹಾಚಾರ್ ಹೆಸರಿನ ಇನಾಂ ಖಾತೆ ಜಮೀನುಗಳೂ ಸಹಾ ಪಿತ್ರಾರ್ಜಿತವಾದವು. ಇವುಗಳನ್ನು ಯಾರಾದರೂ ಈ ಲಕ್ಷ್ಮಮ್ಮನಿಂದ ಪರಭಾರೆಮುಂತಾದು ಮಾಡಿಕೊಂಡರೆ ಊರ್ಜಿತವಾಗುವದಿಲ್ಲ. ಈ ಸೊತ್ತುಗಳಿಗೆಲ್ಲಾ ಮೈನರ್ ಆಗಿರತಕ್ಕ ಜಂಟಿದಾರ್ ಶಿಂಗಯ್ಯಂಗಾರ್ರ ಮಕ್ಕಳಾದ 1 ನೇ ನರಸಿಂಹಾಚಾರ್, ಎರಡನೇ ಪ್ರಹ್ಲಾದಯ್ಯಂಗಾರ್ ಎಂಬ ಮಕ್ಕಳು ಹಕ್ಕುದಾರರಾಗಿದ್ದಾರೆ. ಸದರಿ ಸೊತ್ತುಗಳ ಉತ್ಪತ್ತಿಯಲ್ಲಿ ಕಂದಾಯ ಮತ್ತು ಜೀವನ ಕಳೆದು 300 ರೂಪಾಯಿ ಸಲ್ಲತಕ್ಕದ್ದು. ಈ ಸೊತ್ತುಗಳಿಗಾಗಿ ಸಿವಿಲ್ ಕೋರ್ಟಿನಲ್ಲಿ ನಾನು ವ್ಯಾಜ್ಯ ನಡಿಸುವನಾಗಿದೇನೆ ಎಂದು ಈ ಮೂಲಕ ಎಚ್ಚರಿಕೆಕೊಡಲಾಗಿದೆ.

[169-2] ಮೈನರ್‌ಗಳ ತಂದೆ ಮತ್ತು ಗಾರ್ಡಿಯನ್ ಶಿಂಗಯ್ಯಂಗಾರ್.

ವಿಚಿತ್ರ ಗೋಲ್ಡನ್ ಪಾಕೆಟ್ ದೀಪವು.

ಕ್ರಯ ರೂ. 2-4-0 ಮಾತ್ರ.

ಘನವಂತರೇ, ಈ ವಿಚಿತ್ರ ಜೇಬು ದೀಪಗಳು ಇಂಗ್ಲೆಂಡ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೇ ನಮ್ಮ ಹಿಂದೂ ದೇಶಕ್ಕೆ ಕಳುಹಿಸಿರುತ್ತಾರೆ. ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದು ನೋಡುವರಿಗೆ ಆಶ್ಚರ್ಯವಾಗುವ ಹಾಗೆ ಹತ್ತಿ ಉರಿಯುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ. ಸರ್ವರಿಗೂ ಬಹಳ ಉಪಯೋಗ. ಇದು ಇತರ ದೀಪಗಳನ್ನು ಹಚ್ಚುವದಕ್ಕೂ, ಪ್ರಯಾಣ ಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಬೇಕಾದವುಗಳನ್ನು ಹಚ್ಚುವದಕ್ಕೂ ಬಹಳ ಉಪಯೋಗವಾದದ್ದು. ಇದನ್ನು ಸುಲಭವಾಗಿ ಉಪಯೋಗಿಸಬಹುದು ಆದರಿಂದ ಯಾವ ಕೆಡಕೂ ಉಂಟಾಗುವದಿಲ್ಲ. ಸ್ಟಾಕ್ ಖರ್ಚಾಗುತ್ತಾ ಇದೆ. ಜಾಗ್ರತೆ ತರಿಸಿಕೊಳ್ಳಿ ಅನಂತರ ದೊರೆಯಲಾರದು. ಇದು ಪ್ರತಿ ಒಂದು ಕುಟುಂಬದಲ್ಲಿಯೂ ಅವಶ್ಯವಾಗಿ ಇರಬೇಕು.

ನಮ್ಮ ವಿಳಾಸ—ಕೆ. ರಾಮಚಂದ್ರರಾವ್ ಅಂಡ್ ಕಂಪೆನಿ,

[179-1] 16, ತಿರುಪಳ್ಳಿ ಬೀದಿ, ಸಾಹುಕಾರ್‌ಪೇಟೆ, ಮದರಾಸು.

ಡೋಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಿರುವದರಿಂದ ಕೂಸುಗಳು ಬಹಳ ಪ್ರೀತಿಯಿಂದ ಕುಡಿಯುತ್ತವೆ ಇದನ್ನು ಸೇವಿಸುವದರಿಂದ ಕೂಸುಗಳು ಶಕ್ತಿವಂತರಾಗಿ ದಷ್ಟಪುಷ್ಟವಾಗಿ ಬೆಳೆಯುತ್ತವೆ. ಕ್ರಯ ಸೀಸೆ 1 ಕ್ಕೆ 12 ಆಣೆ; ಟ. ಖ. 4 ವಿಳಾಸ—ಕೆ. ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

[177-1] [ಏಜಂಟರು ಬೇಕಾಗಿರುತ್ತಾರೆ.]

ESANOFELE

ಮಲೇರಿಯಾ ಜ್ವರವನ್ನು ನಾಶಮಾಡಬೇಕೆಂಬುವ ರೆಲ್ಲಾ “ಈಸಾನೊಫೆಲಿ” ಯನ್ನು ಉಪಯೋಗಿಸಿ ಜಯಪ್ರಾಪ್ತಿ ಮಾಡುತ್ತಿದ್ದಾರೆ. ಇದು ವಾಸಿಮಾಡುವುದರಲ್ಲೂ, ಜ್ವರವನ್ನು ಬಾರದಂತೆ ಸಂರಕ್ಷಿಸುವುದರಲ್ಲೂ ಚೆನ್ನಾಗಿ ಪ್ರಖ್ಯಾತಿಪಡೆದಿದೆ. ಕ್ರಯ ಬಾಟ್ಲಿ 1 ಕ್ಕೆ ರೂ. 2-0-0. ಎಲ್ಲಾ ಔಷಧ ಷಾಪುಗಳಲ್ಲೂ ದೊರೆಯುತ್ತೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಹುಡುಗರಿಗಾಗಲಿ, ಹುಡುಗಿಯರಿಗಾಗಲಿ ಬೇಕಾಗಿದ್ದರೆ “ಈಸಾನೊಫೆಲೀನಾ” ಎಂಬುದನ್ನು ಕೊಡಿ ಎಂದು ಕೇಳಿ. ಇದು ಸೀಬನೋಪಾದಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ. ಮಲೇರಿಯಾಕ್ಕೆ ನಿರ್ಬಾಧಕವಾದ, ನಂಬಿಕೆಯುಳ್ಳ, ಬೇಗ ಗುಣ ಕೊಡುವ ಔಷಧ. ಇದು ಇನ್ನೂ ಎಲ್ಲಾ ಜಾತಿಯ ಜ್ವರಗಳಿಗೂ ಖಾತರಿಯಾದ ಔಷಧ. [176-1]

ಮೈಸೂರು ಸಂಸ್ಥಾನದ ಏಜಂಟರು :—

ಜಿ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪ್ಪೋ—

ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಲಿ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಒಂದು ರೀಡಿಂಗ್ ರೂಮಿನ ವಾರ್ಷಿಕ ಮೀಟಿಂಗು.

ಹೊಸದುರ್ಗದ ತಾಲ್ಲೂಕು ಬೆಲಗೂರು ಗ್ರಾಮದಲ್ಲಿ ಶ್ರೀಪ್ರಸನ್ನ ಮಾರುತೇಶ್ವರ ಅಸೋಸಿಯೇಷನ್ ರೀಡಿಂಗ್ ರೂಂ ಪ್ರಾರಂಭವಾಗಿ ಒಂದು ವರ್ಷವಾಯಿತು. ಈ ರೂಮಿನ ಮೆಂಬರುಗಳಿಂದ ವಸೂಲಾದ ಚಂದಾ ಮೊಬಲಗಿನಲ್ಲಿ ಇದು ವರಿವಿಗೆ ಎಂಟು ಪತ್ರಿಕೆಗಳನ್ನು ತರಿಸುತ್ತಾ ಬಂದಿದೆ. ತಾ. 11 ನೇ ಮಂಗಳವಾರ ಮೀಟಿಂಗ್ ನಡೆದದ್ದರಲ್ಲಿ ಇನ್ನು ಮುಂದೆ ಹೊಸದಾಗಿ ಮೂರು ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದೆಂದು ತೀರ್ಮಾನವಾಯಿತು. ಇದು ವರೆಗಿನ ಆದಾಯ ಖರ್ಚು ವಗೈರೇ ಲೆಕ್ಕಪತ್ರಗಳನ್ನೂ ಹಳೇ ಪತ್ರಿಕೆಗಳನ್ನೂ ಮತ್ತು ಇತರ ರಿಕಾರ್ಡುಗಳನ್ನೂ ಶಿಲ್ಕು ಹಣವನ್ನೂ ತನಿಖೆ ಮಾಡಲಾಗಿ ಸಮರ್ಪಕವಾಗಿರುತ್ತವೆಂದು ಒಪ್ಪಲಾಯಿತು. ಬಳಿಕ ಈಗ ನಡೆಯುತ್ತಿರುವ ಘೋರ ಯುದ್ಧದಲ್ಲಿ ನಮ್ಮ ಮಹಾಪ್ರಭುಗಳಾದ ಬ್ರಿಟಿಷ್ ಗೌರ್ನಮೆಂಟಿನವರಿಗೆ ಜಯವಾಗಲೆಂದು ಜಗದೀಶನನ್ನು ಪ್ರಾರ್ಥಿಸಿದೆವು. ಈಗ ನಮ್ಮ ತಾಲ್ಲೂಕಿನ ಹೊಸದಾಗಿ ಬಂದಿರುವ ಅಮಲ್ದಾರರಾದ ಮಿ॥ ಥಾಮ್ಸನ್ ರವರು ಈ ರೀಡಿಂಗ್ ರೂಮಿನ ಮೇಲೆ ದಯವಿಟ್ಟು ಪ್ರೋತ್ಸಾಹಿಸುತ್ತಾ ಪೋಷಕರಾಗಿರಬೇಕೆಂದು ಕೋರಲ್ಪಟ್ಟಿತು. ಮ್ಯಾನೇಜರ್ ಮ॥ ಬಿ. ಎಂ. ತಿಮ್ಮಪ್ಪನವರು ರೀಡಿಂಗ್ ರೂಮಿನ ಕಾರ್ಯಗಳನ್ನು ಮುತುವರ್ಜಿಯಿಂದ ನಡಿಸುತ್ತಿರುವುದಕ್ಕಾಗಿ ಅವರ ಉಪಕಾರವನ್ನು ಸ್ಮರಿಸಿ ಮೀಟಿಂಗು ಭರಖಾಸ್ತು ಮಾಡಲಾಯಿತು.

ಒಬ್ಬ ಮೆಂಬರು.

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು ತಾ॥ ಆಲದೂರು.—ಕಡೂರು ಡಿಸ್ಟ್ರಿಕ್ಟಿಗೆ ನಮ್ಮ ಸರ್ಕಾರದವರು ನೇಮಿಸಿರುವ ಮಲೆನಾಡು ಇಂಪ್ರೂವ್‌ಮೆಂಟು ಉಪನ್ಯಾಸಕರು ಮ॥ ಬಿ. ಟಿ. ಶಿಂಗಯ್ಯಂಗಾರ್ರು ಈ ಪ್ರಾಂತ್ಯವೆಲ್ಲಾ ಉಪನ್ಯಾಸ ಮಾಡಿಕೊಂಡು ನೆನ್ನೆ ನಮ್ಮ ಗ್ರಾಮಕ್ಕೆ ದಯಮಾಡಿದರು. ಅವರ ಉಪನ್ಯಾಸವನ್ನು ಕೇಳಲು ಇಲ್ಲಿನ ಪಟೇಲರು ರಾಮಪ್ಪಗೌಡರ ಪ್ರೋತ್ಸಾಹದ ಮೇಲೆ ಇಲ್ಲಿನ ಪೋಲೀಸ್ ಜಮಾದಾರರೊಂದಿಗೆ ಈ ಊರ ಛತ್ರದಲ್ಲಿ ಬಹು ಮಂದಿ ಗ್ರಾಮಸ್ಥರನ್ನೂ ದೊಡ್ಡ ಮನುಷ್ಯರನ್ನೂ ಸೇರಿಸಿಕೊಂಡು ಸಿದ್ಧರಾಗಿದ್ದರು. ಈ ದಿನ ಮಹಮದೀಯರಿಗೆಲ್ಲಾ ಮುಖ್ಯ ಎಂಟ ದೊಡ್ಡ ಹಬ್ಬವಾದುದರಿಂದ ಸದರಿ ಮತಕ್ಕೆ ಮುಖಂಡರಾದ ಆ ಪಾಪ್ಲ ಮಿ॥ ಕರೀಂ ಸಾಹೇಬರು ಈ ಗ್ರಾಮದ ಮತ್ತು ಅಕ್ಕಪಕ್ಕ ಗ್ರಾಮಗಳ ಮಹಮದೀಯರನ್ನೆಲ್ಲಾ ಇಲ್ಲಿನ ಮಸೀದಿಯಲ್ಲಿ ಸೇರಿಸಿ, ಅವರ ಮತಪದ್ಧತಿ ಮೇರೆ ಪ್ರಾರ್ಥನಾದಿ ಕಾರ್ಯಗಳನ್ನು ಮುಗಿಸಿ, ಅವರಿಗೆಲ್ಲಾ ಉಪನ್ಯಾಸ ಕೇಳುವುದರ ಪ್ರಯೋಜನವನ್ನು ತಿಳಿಸಿ ಹೇಳಿ, ಎಲ್ಲರೊಂದಿಗೆ ಬಾಜಾಭಜಂತ್ರಿ ವಾದ್ಯದ ಸಮೇತ ನೇಮಿದ್ದ ಛತ್ರಕ್ಕೆ ಬಂದು ನೆನ್ನೆ ಪೋಸ್ಟ್ ಮಾಸ್ಟರು, ಸ್ಕೂಲು ಮಾಸ್ಟರು, ಸದರಿ ಉಪನ್ಯಾಸಕರು ಮತ್ತು ಸ್ಕೂಲು ವಿದ್ಯಾರ್ಥಿಗಳನ್ನು ಸಹ ಇಲ್ಲಿನ ಟ್ರಾವಲರ್ಸ್ ಬಂಗ್ಲೆಯಿಂದ ವಾದ್ಯ ವೈಭವದೊಡನೆ ಬಹು ಮರ್ಯಾದೆಯಿಂದ ಕರೆದುಕೊಂಡು ಹೋಗಿ ಅಲ್ಲಿ ಸರ್ವರಿಗೂ ಆಸನಗಳನ್ನು ಕೊಟ್ಟು ಮರ್ಯಾದೆ ಮಾಡಿದರು. ಆಗ್ಗ ಉಪನ್ಯಾಸಕರು ನಮ್ಮ ಮಕ್ಕಳನ್ನು ಅತ್ಯಗತ್ಯವಾಗಿ ವಿದ್ಯಾವಂತರನ್ನಾಗಿ ಮಾಡಬೇಕೆಂದೂ, ಅದರಿಂದುಂಟಾಗುವ ಪ್ರಯೋಜನ, ಆರೋಗ್ಯ, ನೈರ್ಮಲ್ಯ, ವ್ಯವಸಾಯ ಪರಸ್ಪರ ಸಹಾಯ, ಈ ವಿಷಯಗಳನ್ನು ಕುರಿತು ಬಹು ಸ್ಪಷ್ಟವಾಗಿ ಸರ್ವರಿಗೂ ತಿಳಿಯುವಂತೆ ಅನೇಕ ಉಪಮಾನಗಳನ್ನು ಕೊಟ್ಟು ಉಪನ್ಯಾಸ ಮಾಡಿದರು. ಸದಸ್ಯರೆಲ್ಲರೂ ಏಕಕಂಠ್ಯದಿಂದ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಿ ಮುಂದೆ ತಮ್ಮ ಮಕ್ಕಳನ್ನೆಲ್ಲಾ ಕ್ರಮವಾಗಿ ಸ್ಕೂಲಿಗೆ ಕಳುಹಿಸುವುದಾಗಿ ಹೇಳಿ, ಈ ಉಪನ್ಯಾಸಕರನ್ನು ಪದೇ ಪದೇ ನಮ್ಮ ಗ್ರಾಮಗಳಿಗೆ ಕಳುಹಿಸಿಕೊಟ್ಟು ಉಪನ್ಯಾಸ ಮಾಡಿಸುವಂತೆ ತಾಲ್ಲೂಕಿನವರು ನಡೆಯಿಸಿಕೊಡಲು ಮ॥ ರಾಮಪ್ಪಗೌಡರ ಮೂಲಕ ರಿಪೋರ್ಟು ಮಾಡಿಸಿ ಸಭಿಕರಿಗೂ, ಉಪನ್ಯಾಸಕರಿಗೂ ವಂದನೆ ಸಮರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು. ಮೇಲಾಗಿ ಈ ಗ್ರಾಮದಲ್ಲಿ ನಮ್ಮ ಸರ್ಕಾರದವರು ಒಂದು ಪರಸ್ಪರಸಹಾಯಕ ಸಂಘವನ್ನೂ ಸ್ಥಾಪಿಸಿ ಸ್ಕೂಲಿನ ಇಲ್ಲಿನ ಪ್ರಜೆಗಳೆಲ್ಲರಿಗೂ ಸೌಕರ್ಯವನ್ನು ಕಲ್ಪಿಸಿಕೊಟ್ಟಿರುವುದು ಶ್ಲಾಘನೀಯವಾಗಿದೆ.

ನರಸಿಂಹರಾಜಪುರ.—ಈ ವರ್ಷ ಮುಂಗಾರು ಮಳೆಯು ಜಾಸ್ತಿಯಾಗಿ, ಬೇಕಾದಾಗ ಮಳೆ ಬರಲಿಲ್ಲ, ಬೇಡವಾದಾಗ ಹೊಯ್ಯುವುದು, ಈ ರೀತಿಯಾಗಿ ಬಹು ಬೇಸಾಯವು ಚೆನ್ನಾಗಿಲ್ಲ. ಹವಾ ಸಾಧಾರಣವಾಗಿರುತ್ತೆ. ಮಳೆಗಾಲವಾದ್ದರಿಂದ ಊರಲ್ಲೆಲ್ಲಾ ಕಳೆ ಬೆಳೆದು ಬಹಳ ಹೊಲಸಾಗಿರುತ್ತೆ.—ಇಲ್ಲಿನ ಅಮಲ್ದಾರ್ ಮ॥ ಟಿ. ವಿಶ್ವೇಶ್ವರಯ್ಯನವರು ಜನಾನುರಾಗಿಗಳಾಗಿ ಕೀಳು ಮೇಲು ಎಂಬ ಭಿನ್ನಭೇದಗಳಿಲ್ಲದೆ ನಿಷ್ಪಕ್ಷಪಾತರಾಗಿ ಮುತುವರ್ಜಿಯಿಂದ ಕೆಲಸ ನಡೆಸುತ್ತಿರೋದು ಬಹಳ ಶ್ಲಾಘನೀಯವಾಗಿದೆ.—ಈ ಊರ ಹೆಸರು ಬದಲಾಯಿಸಿದ್ದು, ರೈಲು ಮಾರ್ಗವಾಗುತ್ತಿರುವುದು, ಹೊಸದಾಗಿ ಮುನ್ಸಿಫ್ ಕೋರ್ಟು ಬಂದದ್ದು ಇವೆಲ್ಲವೂ ಮಲೆನಾಡು ಇಂಪ್ರೂವ್‌ಮೆಂಟಿನ ಉದ್ದೇಶವಾಗಿ ಗ್ರಾಮ ಅಭಿವೃದ್ಧಿಗೆ ಬಹಳ ಅನುಕೂಲವಾಗಿರುತ್ತೆ.—ಇಲ್ಲಿನ ಪಿ. ಡಬ್ಲ್ಯು. ಡಿ. ಮಿ॥ ಬ್ಯಾಪ್ಟಿಸ್ಟ್ ಸಾಹೇಬರು ಕೇವಲ ಪುಂಡರಾದ ಕೆಲವರನ್ನು ಪೋಲೀಸಿನಲ್ಲಿ ಒಪ್ಪಿಸಿ ತಕ್ಕ ಶಿಕ್ಷೆಯನ್ನು ಮಾಡಿಸಿದ್ದರಿಂದ ತುಂಟರ ಉಪದ್ರವ ಕಡಿಮೆಯಾಗಿ ಕಳವು ಮುಂತಾದ ಕೃತ್ಯಗಳು ಇಲ್ಲದೆ ಅವರು ಇಲ್ಲಿರುವವರೆಗೂ ಚೆನ್ನಾಗಿತ್ತು. ಈಚೆಗೆ ಅವರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಮ॥ ರಾಮಸ್ವಾಮಯ್ಯನವರು ಬಂದಿರುತ್ತಾರೆ. ಇವರು ಹಿಂದೆ ಕೆಲವು ಕಾಲ ಇಲ್ಲಿದ್ದವರಾದ್ದರಿಂದ ಸ್ಥಳ ಜನ ವಿದ್ಯಮಾನಗಳನ್ನೆಲ್ಲಾ ಅರಿತವರಾಗಿಯೇ ಇರುತ್ತಾರೆ. ಮಿ॥ ಬ್ಯಾಪ್ಟಿಸ್ಟರು ಹೊರಟ ಕೂಡಲೆ 2 ಕಳುವಿನ ಕೇಸುಗಳು ನಡೆದಿವೆ. ಈ ಪ್ಯಾಟೆ ಟೌನಿಗೆ 4-5 ಮೈಲಿ ಫಾಸಲೆಯಲ್ಲಿರುವ ಕೆಸವೆ ಎಂಬ ಗ್ರಾಮದಲ್ಲಿ ಸೋಮಯ್ಯನವರ ಮನೆಯಲ್ಲಿ ಸುಮಾರು 1-1½ ಸಾವಿರ ರೂಪಾಯಿನ ಒಡವೆ ವಸ್ತುಗಳನ್ನು ಯಾರೋ ದುಷ್ಟರು ರಾತ್ರಿಕಾಲದಲ್ಲಿ ಕಳುವುಮಾಡಿರುತ್ತಾರೆ. ನಮ್ಮ ಹೊಸ ಇನ್ಸ್‌ಪೆಕ್ಟರು ಪತ್ತೆ ತರದೊಡನೆ ನಡಿಸುತ್ತಾ ಇದ್ದಾರೆ.—ಇಲ್ಲಿ ಡೆಪ್ಯುಟಿ ಅಮಲ್ದಾರರಾಗಿದ್ದ ಮ॥ ಎಂ. ಅಹೋಬಲ ಶಾಸ್ತ್ರಿಗಳಿಗೆ ತಾ. 13 ಕ್ಕೆ ರಿಟೈರ್ ಆಗಿ ಅವರ ಸ್ಥಾನಕ್ಕೆ ಶಿವಮೊಗ್ಗದಿಂದ ಮ॥ ಕೆ. ಸೀತಾರಾಮ ಅಯ್ಯಂಗಾರ್ರು ಬಂದು ತಾ. 13 ನೇ ಪ್ರಾತಃಕಾಲ ಸಬ್ ಡಿವಿಜನ್ ಛಾರ್ಜನ್ನು ವಹಿಸಿಕೊಂಡರು. ಷೆರ್ಷೆ ಅಮಲ್ದಾರ್ರು ಪ್ರಜಾಭಿಮಾನಿಗಳಾಗಿ ಸರ್ಕಾರಿ ಕೆಲಸವನ್ನು ಕೇವಲ ಸರ್ವಿಸ್‌ದಾರರಾದ್ದರಿಂದ ಚೆನ್ನಾಗಿ ನಡಿಸುತ್ತಾ ಒಳ್ಳೆಯವರಾಗಿದ್ದರು. ಇನ್ನೂ ಕೆಲವು ಕಾಲ ಕೆಲಸ ಮಾಡಲು ಶಕ್ತರಾಗಿಯೂ ಇದ್ದರು. ರೀಡಿಂಗ್ ರೂಂ ಕಟ್ಟಡದಲ್ಲಿ ಊರಿನವರೆಲ್ಲರೂ ಸೇರಿ ಮ॥ ಅಹೋಬಲ ಶಾಸ್ತ್ರಿಗಳು ಕೇವಲ ಶಾಂತತೆ, ದಕ್ಷತೆ, ನಿಷ್ಪಕ್ಷಪಾತಗಳಿಂದ ಕೆಲಸ ಮಾಡಿ ಪೆನ್ಷನ್ ಹೊಂದಿರುವುದು ಬಹಳ ಸಂತೋಷಕರವಾದದ್ದೆಂತ ಉಪನ್ಯಾಸ ಮಾಡಿ ದೇವರು ಇವರಿಗೆ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಹಾರೈಸಿದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ನಾಗೇಶಶಾಸ್ತ್ರಿಗಳ ಗ್ರಾಮೋಫೋನ್, ಹಾರ್ಮೋನಿಯಂಗಳ ವಾದ್ಯ ವಿಶೇಷವು ನಡಿಸಲ್ಪಟ್ಟಿತು. ಸಭೆಯವರಿಗೆ ಅಲ್ಪಾಹಾರವಾಗಿ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ, ಮಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಪಶೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ಕು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-11]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ರಭಸವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ಕಲ್ಲೆನಿಸುವುದು; ಕಣ್ಣಿನ ನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-1]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಫೋಸ್ಟರ್, ೩ ೬ ಬಾರ್ಕ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮೈಸೂರು ಸಂಸ್ಥಾನದ ಆಸ್ಥಾನ ವೈಣಿಕ ವಿದ್ವಾನ್ ಎಸ್. ಸುಬ್ರಹ್ಮಣ್ಯ ಐಯ್ಯರವರಿಂದ ಕನ್ನಡದಲ್ಲಿ ರಚಿಸಲ್ಪಟ್ಟಿರುವ

ಸಂಗೀತ ಸಮಯ ಸಾರ.

ಇದಕ್ಕೆ ಮೈಸೂರು ಸರ್ಕಾರದ ಪ್ರೋತ್ಸಾಹ ದೊರಕಿದೆ. [151-5]

ಕ್ರಯ ೧—೪—೦. ಅಂಚೆ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳಗಳು:—(1) ಎಂ. ವೆಂಕಟರಾಮಯ್ಯ, ಗ್ರಂಥ ಪ್ರಚಾರಕ, ಚಾಮರಾಜಪೇಟೆ, ಮೈಸೂರು. (2) ದಿ ಜನರಲ್ ಏಜನ್ಸಿ, ಮೈಸೂರು. (3) ಎಂ. ಎಸ್. ರಾವ್. ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಒಂದು ಬುದ್ಧಿಮಾತು.

ನಿಶ್ಶಕ್ತ ವಾಯುವಿನಿಂದ ಕಷ್ಟಪಟ್ಟು ಹಾಸಿಗೆಯ ಮೇಲೆಯೇ ಇದ್ದು, ವಾತರೋಗದಿಂದ ಪೀಡಿತರಾಗಿ ಔಷಧಗಳಿಂದಲೂ ಆಸ್ಪತ್ರೆಗಳ ಸೇವನೆಗಳಿಂದಲೂ ಗುಣ ಹೊಂದದೆ ಇದ್ದವರು, ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸುವುದರಿಂದ ನಿಜವಾಗಿ ಗುಣ ಹೊಂದುವರು.

ಕೆರ್ರಿ ಪಟ್ಟಣದ ರಷ್‌ಫೋರ್ಡ್ ಕಂಪನಿಯಲ್ಲಿ 16 ವರುಷದಿಂದ ಹಾಸಿಗೆಮಾರುವ ಬಿದ್ದಿದ್ದ ಒಬ್ಬ ಅಂಗಡಿಯಾಳಿನ ವಾಸಿಯಾಯಿತು. ಯೋರ್ಕ್ ನಗರದ ಮಿಲ್ಲಿನಲ್ಲಿ 20 ವರುಷಗಳಿಂದ ಕಷ್ಟಪಡುತ್ತಿದ್ದವನು ವಾಸಿಯಾದನು. ಬ್ರಿಸ್ಟಲ್ ಪಟ್ಟದಲ್ಲಿ 40 ವರುಷಗಳಿಂದ ಕಷ್ಟಪಟ್ಟವನೊಬ್ಬನು ಸ್ವಸ್ಥಹೊಂದಿದನು. ಚೆಸ್ಟರ್ ನಗರದಲ್ಲಿ 80 ವಯಸ್ಸಿನ ಎ. ಬಾತ್ ಎಂಬಾತನು ಹೇಳುವುದು:—

“ವಾಯುವಿನಿಂದ ಅಂಗಹೀನನಾಗಿ ಭಯಂಕರವಾದ ಸ್ಥಿತಿಯಲ್ಲಿದ್ದೆ. ಎಲ್ಲಾ ವಿಧವಾದ ಔಷಧಗಳನ್ನೂ ವೈದ್ಯರನ್ನೂ ಪರೀಕ್ಷಿಸಿ, ಉತ್ತಮ ಆಸ್ಪತ್ರೆಗೂ ಹೋದೆನು. ಆದರೆ ಅವುಗಳಿಂದ ಏನೂ ಮೇಲಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬುದರಲ್ಲಿ 2 ಸೀಸೆಗಳನ್ನು ಉಪಯೋಗಿಸಿದ್ದರಿಂದ ಪೂರ್ಣ ಸ್ವಸ್ಥವಾಯಿತು. ವಾಯುನೋವಿಗೆ ಕೈಕಂಡ ಔಷಧಿಯಾದ ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿರಿ.”

ಸೀಸೆ 1ಕ್ಕೆ 1 ರೂ. ಮೋರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[81-18]

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Free Insurance and Provident (Marriage and Upanayana) Policies are a speciality. Two-in-one (Share Policy) Scheme and property investment (Land and house purchase and investment) Schemes are a novelty.

WANTED

One energetic and experienced *Secretary* for the Branch Office to be opened shortly at Bangalore, and District Agents for each and every district in the Mysore Province *on both commission and office allowance.* Secretary's allowance *Rs. 50-20-200*, and that of District Agents *Rs. 25* per mensem. Also taluk and local directors required in each and every taluk in the Province. *Security and good reference essential.* For prospectuses and other particulars please apply, with your experience in the line, to

M. L. NAGANNA,

Managing Director, Life & Marriage Assurance Buildings, Mysore.

15-34

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಆನವರಿ ಆಖೈರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು ಆದುದರಿಂದ ತ್ವರೆಮಾಡಿರಿ!

[64-22]



ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಕೀಲುನೋವು, ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಖರಾಬಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಅಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಪೋಮೇಡ್ ತೈಲ 0-12-0. ಬಿಳಿ ಮುಲಾಮು 0-3-0. ಮಲೇರಿಯ ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸ್.

ಸೋಲಾಪುರದ ಚಕ್ಕುಗಳೂ, ಶೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಶೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಬೇಲುಗಟ್ಟಿಯೂ, ಚಿಲ್ಲರೆಯಾಗಿಯೂ ದೊರೆಯುವುವು.

ಬೇಲುಗಟ್ಟಿ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಖರೀದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [65-22]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 160, ಕಿಲಾರಿ ರೋಡು (ಕುಂಚಿಗರಪೇಟೆ) ಬೆಂಗಳೂರು ಸಿಟಿ.

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ, ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರುಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಟ್ಟಿಹುರಿಗಳಿಂದಲೂ ತಯಾರಾದ "ಬಾಲಶೇಖರಂ" ಎಂಬ ತೈಲವನ್ನು ಉಪಯೋಗಿಸಿ ನೋಡಿ. ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ನುರಿ, ಕ್ಷಯ, ಗರ್ಭವೆಟ್ಟೆ ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-42]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಆಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0

ಕೂದಲೆಣ್ಣೆಗೆ ಹಾಕುವ ಟೀ ಕೆರೋಸಿನ್ ಎಣ್ಣೆ ಕೊಟ್ಟಾರು:

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಟೀ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ಪಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪೆನಿ,

[174-1] 177, ಮಿಂಟ್ ಬಜಾರ್ ರೋಡ್, ಮದರಾಸ್

ಅಗ್ಗದಲ್ಲಿ ಸೀಮೆಯಣ್ಣೆ ಪಡೆಯಿರಿ.

ಇಲ್ಲಿ ಅತ್ಯುತ್ತಮವಾದ ಬಿಳೀ ಸೀಮೆಯಣ್ಣೆ ಭರ್ತಿಯಾದ ಕೋತಿ ಮಾರ್ಕಿನ ದೊಡ್ಡ ಟಿನ್ 1 ಕ್ಕೆ 3 ಆ 6 ಪೈಗೆ ಕೂಪನ್ ಮೂಲಕ ದೊರೆಯುತ್ತೆ. ಇಷ್ಟವುಳ್ಳವರು 3 ಆ. 6 ಪೈ ಲವಾಜಿಮೆ. [143-6]

ವಿಳಾಸ :—ಜಿ. ಎಸ್. ವೆಂಕಟರಮಣಮೂರ್ತಿ, ತಳೀ ಅಗ್ರಹಾರ, ಮೈಸೂರು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(1) ಆರೋಗ್ಯ ಪ್ರಭಾಕರ (ಟಾನಿಕ್) 48 ಮಾತ್ರೆಗೆ 1 ರೂ.; (2) ಕಾಲರಾ ಮಾತ್ರೆ 1 ರೂ.; (3) ಅಜೀರ್ಣದ ಮಾತ್ರೆ 5 ೦ ಕ್ಕೆ 12 ಆ ; (4) ಜ್ವರದ ಮಾತ್ರೆ 8 ಆ.; (5) ಮೃತ್ಯುಂಜಯ ಮಾತ್ರೆ (ಎಲ್ಲಾ ವಿಧ ಕಸ್ತೂರಿ ಮಾತ್ರೆಗಳಿಗಿಂತ ಶ್ರೇಷ್ಠ) 160 ಕ್ಕೆ 4 ಆ.; (6) ಬ.ಧಾ ನಿವಾರಿಣಿ 4 ಆ.; (7) ಬಾಲಸಂಜೀವಿನಿ 4 ಆ.; (8) ಉಬ್ಬಸದ ಮಾತ್ರೆ 12 ಆ.; (9) ಸರಳ ಭೇದಿ ಮಾತ್ರೆ 8 ಆ.; (10) ಕಸ್ತೂರಿ ಮಾತ್ರೆ 300 ಕ್ಕೆ 4 ಆ.

[126-10] ನಮ್ಮ ವಿಳಾಸ :—ಪಂಡಿತ್ ಎಸ್. ಗರಳಪುರಿ, ಮೈಸೂರು.

ಸುಪೀರಿಯರ್ ಲಿವರ್ ಜುವೈಲ್ಡು ವಾಚು.

(ರಿಜಿಸ್ಟರಾಗಿದೆ).

ಕ್ರಯ ಸರಪಣಿ ಸಹಿತ ರೂ. 3-0-0.	6 ವರುಷಗಳ ಗ್ಯಾರಂಟಿ	ವಿ. ಪಿ. ಚಾರ್ಜು 4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಾಗಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಬೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು. ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0; ವಿ. ಪಿ. ಚಾರ್ಜು 4 ಆಣೆ.



ಇಂಡಿಯನ್ ಮೆಯಿಲ್ ಲೀವರ್ ವಾಚು.

(ಇದು ಸಹ ರಿಜಿಸ್ಟರಾಗಿದೆ.)

ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0.	5 ವರುಷಗಳ ಗ್ಯಾರಂಟಿ ಪತ್ರ.	ವಿ. ಪಿ. ಛಾರ್ಜು 4 ಆಣೆ.

ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಡಬಗ್ಗರಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು ಇರುವದು. ಇದರ ಹಿಂಭಾಗದಲ್ಲಿ ನಮ್ಮ ಡಸ್ಟು ಪ್ರೂಫ್ ಎಂಬ ಗ್ಲಾಸು ಡೋಮು ಇರುವದು. ಬಹಳ ಗಟ್ಟಿತನವಾದ ಸಾಮಾನುಗಳಿಂದ ತಯಾರಾಗಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು. ಬಹಳವಾಗಿ ಹೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ತಿಳಿಯುವದು. ಪರೀಕ್ಷಿಸಿರಿ. ಇಂಡಿಯನ್ ಮೆಯಿಲ್ ಲಿವರ್ ಗಡಿಯಾರ (ಗ್ಲಾಸ್ ಡೋಮು ಇರುವದು) ಉತ್ತಮ ಸರಪಣಿ ಸಹಿತ ರೂ. 3-0-0. ವಿ ಪಿ ಚಾರ್ಜು 4 ಆಣೆ.

ಈ ಕೆಳಗೆ ಕಾಣಿಸಿರುವ ಗಡಿಯಾರಗಳು ಸಹ ನಮ್ಮಲ್ಲಿ ದೊರೆಯುತ್ತವೆ— ಇಂಗ್ಲಿಷ್ ಮೆಯಿಲ್ ಲೀವರ್ ಗಡಿಯಾರ ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ಕ್ರಯ ರೂ. 2-8-0; ವಿ. ಪಿ. 4 ಆಣೆ. ರಂಗೂನ್ ಮೆಯಿಲ್ ಲಿವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ರೂ. 2-8-0; ವಿ. ಪಿ. 4 ಆಣೆ

ಕಾಚಾ ಕಲಂ :—ನಮ್ಮ ಸುಂದರವಾದ 60 ಪೇಜುಗಳ ದೊಡ್ಡ ಕ್ಯಾಟಲಾಗ್ ಬೇಕಾದವರು ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,

[166-3] ಪೋಸ್ಟು ಬಾಕ್ಸು 167, ಮದರಾಸ್.



ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪತ್ರಿಕೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಕ್ಕಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ಶ್ರೇಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-60]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ, ವೇಪೇರಿ, ಮದರಾಸ್.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಆಗಸ್ಟು 19 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬೇಕಿ:—	(1) ಷೇರು ಮೊಬಲಗು	ರೂ.	10,00,000
,,	(2) ರಿಜರ್ವ್ ಫಂಡು	,,	60,000
,,	(3) ಡಿಪಾಜಿಟ್ಟುಗಳು	,,	33,58,766
,,	(4) ಇತರೆ	,,	22,726
	(ಆಣೆ ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	44,24,299

ಪೇಟಿ:—	(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ	11,20,426
,,	(2) ಖಾತೆ ಮತ್ತು ಇತರ ಸಾಲಗಳು	,,	28,80,999
,,	(3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,44,096
,,	(4) ಇನ್ವೆಸ್ಟ್‌ಮೆಂಟುಗಳು	,,	59,979
,,	(5) ಏಜನ್ಸಿಗಳಲ್ಲಿರುವ ಮೊಬಲಗು	,,	2,631
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	16,473
,,	(7) ಇತರೆ	,,	7,889
	(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	44,31,492

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6 8—1915 ರಿಂದ 13 8- 1915 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	6	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	27	16	27	13
ಮೈಸೂರು ,,	8	6	0	0
ಕೋಲಾರ್ ,,	1	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	3	0	0	0
ಚಿತ್ರದುರ್ಗ ,,	0	0	0	0
ಕಡೂರ್	3	2	0	0
ಶಿವಮೊಗ್ಗ	33	21	0	0
ಜುಮ್ಲಾ	76	56	27	13

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ದಕ್ಷಿಣಾಯನೆ ವರ್ಷಋತು ಶ್ರಾವಣ ಬಹುಳ ನವಮಿ ಶುಕ್ರವಾರದಿಂದ ಶ್ರಾವಣ ಬಹುಳ ಅಮಾವಾಸ್ಯೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಸೆಪ್ಟಂಬರ್.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸಿಂಹ ಮಾಸ ತೇದಿ
3	ಶುಕ್ರ *	ನವಮಿ	10 16	ಮೃಗಶಿರ	20 27	18
4	ಶನಿ ;;	ದಶಮಿ	14-59	ಆರಿದ್ರಾ	26 35	19
5	ಭಾನು ,,	ಏಕಾದಶಿ	19 3	ಪುನರ್ವಸು	31 52	20
6	ಸೋಮ †	ದ್ವಾದಶಿ	22-10	ಪುಷ್ಯ	36-29	21
7	ಮಂಗಳ §	ತ್ರಯೋದಶಿ	24-10	ಆಶ್ಲೇಷ	39 42	22
8	ಬುಧ ::	ಚತುರ್ದಶಿ	24-44	ಮಘಾ	41-41	23
9	ಗುರು ‡	ಅಮಾವಾಸ್ಯೆ	24-6	ಪುಬ್ಬಾ	42-19	24

* ತಿರುವೋಣೋತ್ಸವ, ಮಳೆ ನಕ್ಷತ್ರ—ಪುಬ್ಬ 2 ನೇ ಪಾದ. ;; ಸರ್ವತ್ರ ಏಕಾದಶೀ ತಿಥಿ, ಶ್ರಾವಣಶನಿವಾರ. ,, ದ್ವಾದಶೀ ತಿಥಿ, ಸರ್ವತ್ರ ಏಕಾದಶಿ. † ಶೂನ್ಯತಿಥಿ, ಪ್ರದೋಷ, ಮಳೆ ನಕ್ಷತ್ರ— ಪುಬ್ಬ 3 ನೇ ಪಾದ. § ಸರ್ವತ್ರ ತ್ರಯೋದಶೀ ತಿಥಿ, ಮಂಗಳಗೌರೀ ವ್ರತ, ಮಾಸಶಿವರಾತ್ರಿ. :: ಪಾಷಾಣಭಾವ. ‡ ಸರ್ವತ್ರ ಅಮಾವಾಸ್ಯೆ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ. ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಪೋರೆಯಿಡುವದು ನಿಜವಾಗಿಯೂ ತಪ್ಪುವುದು —ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ ಕಟ್ಟಿಹಮ್ಮ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೆ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

"(1) ಡಿಕ್ಸನ್ ಪ್ರಭಾಕರ್, ಫೆರೊ ಆಯುರ್ವೇದೀಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವುದು— "ತಮ್ಮ ಲೋಕಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಹೊಟ್ಟೆಯನೋವು, ಹೊಟ್ಟೆನೋವು, ದಿನಕಟ್ಟಿಲಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು— "ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[199-52] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

Printed and Published by the Rev. H. Gulliford Proprietor and Manager. Wesleyan Mission Press, Mysore. 2/9/1915

REGISTERED
M. 30

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ | ಮೈಸೂರು—ಸನ್ ೧೯೧೫ ನೇ ಇಸವಿ ಸೆಪ್ಟೆಂಬರ್ ತಾರೀಖು ೯ ನೇ ಗುರುವಾರ. | ಸಂಚಿಕೆ ೧೫

ಇಲ್ಲಿ ನೋಡಿ : ಅಭಿನವ! ಅಕ್ಷರಾಂಜಲಿ!!

ವಿಶ್ರಾಂತಿ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವ [illegible] ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; [illegible] ಅಡ್ರಸ್—ಅಕ್ಷರಾಲಯ, ಮೈಸೂರು. [147-7]

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, [illegible] ಕ್ರಿಮಿನಲ್ ಕೇಸನ್ನು ವ್ಯವಹಾರಗಳ ರೀತಿಯನ್ನು ತಿಳಿಸುವ 615 ಪೇಜು [illegible] ಗ್ರಂಥ. ವಿ. ಪಿ. ಮೂಲಕ ಸ್ಟೇಜ್ ಸಹಿತ ರೂ 2-4-0; [illegible] ರೂ. 1-12-0 [158-6]

ವಿಳಾಸ—ಎಂ. [illegible] ಮೈಸೂರು.

ಮನೆ ಕ್ರಯಕ್ಕೆ ಸಿಕ್ಕುತ್ತೆ.

ಮೈಸೂರು ಚಾಮರಾಜಪೇಟೆಯಲ್ಲಿರುವ, [illegible] ಮನೆ, ಸಿ. ಬಜಾರ್ ಕ್ರಾಸ್ ರೋಡು ನಂ. 958 [illegible] ಕ್ರಯಕ್ಕೆ ಸಿಕ್ಕುತ್ತೆ. ಅಪೇಕ್ಷಿತರು [illegible] ದಿವಾನ್ ಬಹದ್ದೂರ್ [illegible] ಕೇಳಬಹುದು. [173-3]

THE SCIENTIFIC CUTTER

Revised and enlarged second edition of the Scientific Cutter is a masterly useful book, on cutting Men's, Children's and Women's garments on scientific principles. **Price Rs. 2; with Postage Rs. 2-4-0 only.**

RAO'S TAILORING COLLEGE,

[167-4] **318, Princess Street, Bombay No. 2.**

ನೋಟೀಸ್.

[illegible] ಸ್ವದೇಶೀ ಮಿಲ್ಲು [illegible] ಕಚ್ಚೆಗಳು, ಸರ್ಟಿಂಗು, ಚಕ್ಕು, ಟ್ವಿಲ್ [illegible] ನಮ್ಮನ್ನು [illegible] ಈ ಮಾಲು [illegible] [172-2]

ಕಮಿಷನ್ ಮತ್ತು ಜನರಲ್ ಏಜಂಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೊಲ್ಲೂರಯ್ಯನ ಬೀದಿ, ಶಿವಮೊಗ್ಗ.

ಉತ್ತಮವಾದ ಪುಸ್ತಕಗಳು.

[135-5]

(1) “ಪ್ರಪುಲ್ಲ” ಪತ್ರದಾಯಿಯ ಕಥೆ [illegible] 12 ಆಣೆ (2) [illegible] 6 ಆಣೆ. (3) [illegible] (4) “ಉನ್ನತ್ತ” [illegible] ಬಂಗಾಳೀ ನಾವಲ್ [illegible] ಆಣೆ. ಅಂಚೆ ವೆಚ್ಚ ಬೇರೆ [illegible] (1) ಎಂ. ಸುಬ್ಬರಾವ್ ಬುಕ್‌ಸೆಲರ್ (2) [illegible] (3) [illegible] (4) [illegible] (5) ಜನರಲ್ ಏಜನ್ಸಿ, (6) [illegible]

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ [illegible] ರಚಿಸಲ್ಪಟ್ಟಿವೆ.

1. [illegible] ಭೂವಿವರಣೆ	0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	0-6-0
ಮೇಲೆ ಕಂಡ ಎರಡೂ ಸೇರಿ	0-10-0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿವೆ)	

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಟೆ|| ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ ೨ ಆಣೆ; ಆರೋಗ್ಯ ಪ್ರಶ್ನೋತ್ತರ [illegible] 1 ಆಣೆ; ಪತ್ರರತ್ನಾಕರ ೫ ಆಣೆ; ಲೇಖ್ಯತತ್ವ ಪ್ರಕಾಶ 4 ಆಣೆ.

ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,

[21-30] ಸುಬೋಧ ಗ್ರಂಥಾಲಯ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳೂ. [illegible] ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-53] GIRLS' INDUSTRIAL SCHOOL, HASSAN.

“ಕಾದಂಬರೀ ಸಂಗ್ರಹ” ಮಾಸಪತ್ರಿಕೆ!

ಈ ಪತ್ರಿಕೆಯಲ್ಲಿ ಇದುವರೆಗೆ 25 ಪುಸ್ತಕಗಳು ಪ್ರಕಟವಾಗಿವೆ.

[illegible] 2 ಆ, ಸೌದಾಮಿನಿ, 5 ಆ, ಬೃಂದಾವನ 2 ಆ, [illegible] 2 ಆ, ಪ್ರೇಮಪಿಪಾಸೆ 2 ಆ, [illegible] 3 ಆ, [illegible] 2 ಆ, [illegible] 6 ಆ, [illegible] ಚಂದ್ರ 3 ಆ, [illegible] 3 ಆ, [illegible] 12 ಆ, [illegible] 3 ಆ. [illegible] 5 ಆ. [illegible] 5 ಆ, ಚಂದ್ರಕಾವಿಜಯ ನಾಟಕ 3 ಆ ಎಂಟು ಕಾದಂಬರಿ ಸೇರಿದ್ದಾದ ಪ್ರಥಮ ಸಂಪುಟ 1-4-0, 11 ಗ್ರಂಥಗಳುಳ್ಳ ದ್ವಿತೀಯ ಸಂಪುಟ 1-8-0, ದೊಡ್ಡ ದೊಡ್ಡ 3 ಕಾದಂಬರಿಗಳುಳ್ಳ ತೃತೀಯ ಸಂಪುಟ 1-8-0

ವಿಳಾಸ:—ಕಾದಂಬರೀ ಸಂಗ್ರಹ ಆಫೀಸ್, ಮೈಸೂರು; ಮತ್ತು

[8-35] ಜನರಲ್ ಏಜನ್ಸಿ, ಮೈಸೂರು

‘ಸಂಗೀತ ಪಾರಿಜಾತ’

ಹೊಸ ಮುದ್ರಣ! ಹೆಂಗಸರಿಗೆ ಅತ್ಯಾವಶ್ಯಕವಾದುದು!!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ! [illegible]

[275-39] ವಿಳಾಸ [illegible] ಬುಕ್ ಸ್ಟಾಲ್, ಮೈಸೂರ್

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). 142 7

First Valuation Result: The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F.C.I., Secretary, Opposite Minto Hospital, Bangalore City. Mysore Agent—Mr. S. P. Ratnamma

ಸರ್ವೋಪಕಾರಿ ಸಹಾಯಕರಿರಾ, [illegible]

ಈಗಿನ ಕಾಲದಲ್ಲಿ [illegible] ಮನೋಹರವಾದ

ಮತ್ತು [illegible] ಪರಿಮಳ ದ್ರವ್ಯವಿದು

ಆಟೋ ಹೋಪಿನ್.

[illegible]

ಕವರಲೆಟ್ಟಿಗೆ ಹಾಕುವ [illegible]

ಜೋಕೆ! ನಮ್ಮ ರಾಜಮುದ್ರೆಗಳನ್ನು

ಪುಷ್ಪಾಕರ ಹೂವಲೆಣ್ಣೆ

[illegible]

ಕ್ರಯ 1 ಬಾಟ್ಲಿಗೆ 1 ರೂಪಾಯಿ; [illegible]

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. [illegible]

ವಿಳಾಸ—[illegible] ಕಂಪನಿ,

[174-2] 177, [illegible] ರೋಡ್, ಮದರಾಸ್

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ [illegible] ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸದಿರುವಳು? ಅಂಥ ಕೇಶ [illegible] ಸ್ತ್ರೀಯರಿಗೆ ಒದಗಿಸಿ ಕೊಡುವ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)



ಈ ತೈಲವು ಸ್ತ್ರೀಯರಿಗೆ [illegible] ತಲೆ ಹುಣ್ಣು, ಹೇನು ಮೊದಲಾದ [illegible] ನಿವಾರಣೆಯಾಗುತ್ತದೆ. ಈ ತೈಲವನ್ನು [illegible] ಮನಸ್ಸು ಉಲ್ಲಾಸದಿಂದ [illegible]

[illegible]

[illegible] ಕಾಮಿನಿಯಾ ತೈಲದ [illegible]

ಉಗಳನ್ನು ಬೆರೆಯುವುದಕ್ಕೆ [illegible] ವಿ. ಪಿ. [illegible] ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ—ಅನೇಕ [illegible] “ಕಾಮಿನಿಯಾ ತೈಲ” ವನ್ನು [illegible] ಅಂಥಾ ಸಂದರ್ಭದಲ್ಲಿ [illegible] “ಕಾಮಿನಿಯಾ ಓಯಿಲ್” [illegible]

ಅತೀ ಮನೋಹರವಾದ ಸುರಭಿಯು!

ಒಟೊಶ್ರೀ ದಿಲ್ ಬಹಾರ್!!

ಈ ಸುಗಂಧದ ದ್ರವವು [illegible] ಆಯ್ದ ತೆಗೆದ ಸೌಗಂಧಿಕ [illegible] (ಆಲ್ಕೊಹೋಲ್) [illegible] ಒಟ್ಟೋ-ದಿಲ್ ಬಹಾರಿನ ಗಂಧವು [illegible] [18-33]

[illegible] ರೂ. 0-5-0. ಒಂದು ಡ್ರಾಮಿನ (ಶೀಶೆಯು) [illegible] 0-12-0 [illegible] ರೂ. 2-0-0. [illegible] 0-4-0 ಒಟ್ಟೋ-ದಿಲ್ ಬಹಾರ್ ಪರಿಮಳದ [illegible] ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜೀದ್, ಮಾರ್ಕೆಟ್, ಬಾಂಬೆ.

[illegible]

ಒಂಬತ್ತು ಭಾಷೆ!! ಹೊಸ ಪುಸ್ತಕ! ಒಂಬತ್ತು ಲಿಪಿ!!!

ಬೋಧಕರ ಸಹಾಯವಿಲ್ಲದ ಕಲಿಯುವುದಕ್ಕೆ ಬಲು ಒಳ್ಳೆಯ ಸಮಯ.

ಮೊದಲನೆಯ ಪುಸ್ತಕ. ಭಾಷಾನಿಧಿ. ವರ್ಣಪರಿಜ್ಞಾನ.

ತೆಲುಗು, ಅರವ, ಮಲೆಯಾಳ, ಸಂಸ್ಕೃತ, ಹಿಂದಿ, ಮಹಾರಾಷ್ಟ್ರ, ಗುಜರಾತಿ, ಬೆಂಗಾಳಿ, ಕನ್ನಡ, ಗ್ರಂಥ, ಇವುಗಳನ್ನು ಸ್ವತಂತ್ರವಾಗಿ ಕಲಿಯಬಹುದು.

ಬಹು ಸ್ವಲ್ಪ ಪ್ರತಿಗಳು ಉಳಿದಿವೆ! ಬೇಗ ಬೇಗ ಬರೆಯಿರಿ!!!

ಕ್ರಯ ಅಂಚೆಯ ವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ.

ಎರಡನೆಯ "ಶಬ್ದಪರಿಜ್ಞಾನ" ಮೂರನೆಯ "ವಾಕ್ಯಪರಿಜ್ಞಾನ" ಅಚ್ಚಾಗುತ್ತಿವೆ.

[171-4] ಪುಸ್ತಕ ದೊರೆಯುವ ಸ್ಥಳ—ಸನಿನುಡಿ, ಭಾಷಾನಿಧಿ, ೬೨, ಸಿ. ಬೀದಿ, ಕೋಟೆ, ಬೆಂಗಳೂರು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಕಲು ಸಹ ಸಾಕು. ಇತರರಿಗೆ ವಿ. ಪಿ ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು ಆದುದರಿಂದ ತ್ವರೆಮಾಡಿರಿ!



[64-23]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದು ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗಂಟಲನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕಳ್ಳ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕಡದಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕಡದಿಗೆ ಇಲ್ಲದ ಬಾಟ್ಲುಗಳನ್ನು ಪಡಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಜಜ್ಜು ಮಾತ್ರೆ 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚು ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಆಸ್ಟ್ರೇಲಿಯಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ಮನೆಯಲ್ಲಿದ್ದರೆ ವಾತು

ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಸಾಧಾರಣ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯವಿಲೇನ್ ನಂ 2. ಬೊಂಬಾಯಿ, ಇವರು ಬರೆದಿರುವದು—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[199-53] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇನಾಂ ಸಾಮಾನು 50! ಇನಾಂ ಸಾಮಾನು 50!!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್) ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯುವ ಸ್ತ್ರೀಯರಿಗೆ ತಲೆ ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತಾ ಇರುವ ಮನೆಗಳಿಗೂ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದು. ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಇದು ಆರ್ಮಂಡು ಆಯಿಲ್ ನಲ್ಲಿ ತಯಾರಿಸಲ್ಪಟ್ಟದ್ದು. ಇದನ್ನು ಬರೆಯುವದರಲ್ಲಿ ಉಪಯೋಗವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆ ಗಿಣಿ 6, ಜರ್ಮನ್ ಸಿಲ್ವರು ಮೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ 1, ರವಿವರ್ಮ ಫೋಟೋ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಒಂದೇ ಸಾರಿ ಮೂರು ತರಿಸಿಕೊಳ್ಳುವರಿಗೆ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. 6 ತರಿಸಿಕೊಳ್ಳುವರಿಗೆ ಇನಾಂ ಇಲ್ಲದಂತೆ ಒಂದು ರಾಸ್ ವಾಚ್ ಕಳುಹಿಸುತ್ತೇವೆ.

ನಮ್ಮ ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,

[149-7] 3, ಇರುಳಪ್ಪನ ಬೀದಿ, ಮದರಾಸು.

ಶ್ರೇಷ್ಠ ಮಹೌಷಧಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(1) ಆರೋಗ್ಯ ಪ್ರಭಾಕರ (ಟಾನಿಕ್) 48 ಮಾತ್ರೆಗೆ 1 ರೂ.; (2) ಕಾಲರಾ ಮಾತ್ರೆ 1 ರೂ.; (3) ಅಜೀರ್ಣದ ಮಾತ್ರೆ 8 ಕ್ಕೆ 12 ಆ.; (4) ಜ್ವರದ ಮಾತ್ರೆ 8 ಆ.; (5) ಮುಖರಂಜನ್ ಮಾತ್ರೆ (ಎಲ್ಲಾ ವಿಧ ಕಸ್ತೂರಿ ಮಾತ್ರೆಗಳಿಗಿಂತ ಶ್ರೇಷ್ಠ) 160 ಕ್ಕೆ 4 ಆ.; (6) ಬ ಧಾ ನಿವಾರಿಣಿ 4 ಆ.; (7) ಬಾಲಸಂಜೀವಿನಿ 4 ಆ.; (8) ಉಬ್ಬಸದ ಮಾತ್ರೆ 12 ಆ.; (9) ಕಫಭೇದಿ ಮಾತ್ರೆ 8 ಆ.; (10) ಕಸ್ತೂರಿ ಮಾತ್ರೆ 300 ಕ್ಕೆ 4 ಆ.

[126-11] ನಮ್ಮ ವಿಳಾಸ:—ಪಂಡಿತ್ ಎಸ್. ಗರಳಪುರಿ, ಮೈಸೂರು.

ನಿಮಗೆ ಮೈ ಸ್ವಸ್ಥವಿಲ್ಲವೋ?

ನಿಮಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿಮಗೆ ಯಾವ ನೋವು ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೋ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ. ಹಾಗೆ ಆಗದಿದ್ದರೆ ಡೋನ್ಸರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಮಲಪ್ರವೃತ್ತಿಯಾಗಿ ನಿಮಗೆ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಗಳ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವವು ಎಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶದ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಥವಾ ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ಸರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಆ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [175-2]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಸುಪೀರಿಯರ್ ಲಿವರ್ ಜುವೆಲ್ಡು ವಾಚು.

(ರಿಜಿಸ್ಟರಾಗಿದೆ).

ಕ್ರಯ ಸರಪಣಿ ಸಹಿತ	6 ವರುಷಗಳ	ವಿ. ಪಿ. ಚಾರ್ಜು
ರೂ. 3-0-0.	ಗ್ಯಾರಂಟಿ	4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಾಗಲ್ಪಟ್ಟ ವಾಚಾಗಿದೆ. ಇದು ಒಳ್ಳೆ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುವ ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗಾಜು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡ್ ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಹೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು. ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0; ವಿ. ಪಿ. ಚಾರ್ಜು 4 ಆಣೆ.



"ಇಂಡಿಯನ್ ಮೆಯಿಲ್ ಲೀವರ್ ವಾಚು.

(ಇದು ಸಹ ರಿಜಿಸ್ಟರಾಗಿದೆ.)

ಉತ್ತಮ ಸರಪಣಿ ಸಹಿತ	5 ವರುಷಗಳ ಗ್ಯಾರಂಟಿ	ವಿ. ಪಿ. ಛಾರ್ಜು
ಕ್ರಯ ರೂ. 3-0-0.	ಪತ್ರ.	4 ಆಣೆ.

ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಎಲ್ಲಿಯೂ ಸಿಕ್ಕಲಾರದು. ಬಡಜನರ ಉಪಯೋಗಕ್ಕಾಗಿ ಇಷ್ಟು ಕಡಿಮೆ ಕ್ರಯ ಇಟ್ಟಿದ್ದೇವೆ. ಕಡಿಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡ್ ಮಾರ್ಕು ಇರುವದು. ಇದರ ಹಿಂಭಾಗದ ನಮ್ಮ ಡಸ್ಟ್ ಪ್ರೂಫ್ ಎಂಬ ಗ್ಲಾಸು ಡೋಮು ಇರುವದು. ಬಹಳ ಗಟ್ಟಿಯಾದ ಸಾಮಾನಿಂದ ತಯಾರಾಗಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕೆಡವಿದರೂ, ಕೆಳಗೆ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು. ಬಹಳವಾಗಿ ಹೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ತಿಳಿಯುವದು. ಪರೀಕ್ಷಿಸಿರಿ. ಇಂಡಿಯನ್ ಮೆಯಿಲ್ ಲೀವರ್ ಗಡಿಯಾರ (ಗ್ಲಾಸ್ ಡೋಮು ಇರುವದು) ಉತ್ತಮ ಸರಪಣಿ ಸಹಿತ ರೂ. 3-0-0 ವಿ. ಪಿ. ಚಾರ್ಜು 4 ಆಣೆ.



ಈ ಕೆಳಗೆ ಕಾಣಿಸಿರುವ ಗಡಿಯಾರಗಳು ಸಹ ನಮ್ಮಲ್ಲಿ ದೊರೆಯುತ್ತವೆ—ಇಂಗ್ಲಿಷ್ ಮೆಯಿಲ್ ಲೀವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ಕ್ರಯ ರೂ. 2-8-0; ವಿ. ಪಿ. 4 ಆಣೆ. ರಂಗೂನ್ ಮೆಯಿಲ್ ಲೀವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ರೂ. 2-8-0 ವಿ. ಪಿ. 4 ಆಣೆ.

ತಾಜಾ ಕಲಂ:—ನಮ್ಮ ಸುಂದರವಾದ 60 ಪೇಜುಗಳ ದೊಡ್ಡ ಕ್ಯಾಟಲಾಗ್ ಬೇಕಾದವರು ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[156-4] ಪೋಸ್ಟ್ ಬಾಕ್ಸ್ 167, ಮದರಾಸ್.

ರಬ್ಬರು ಮುದ್ರೆಗಳು!



ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇಗರ ಕ್ರಯ ತೋಡಿನ ಪೆಟ್ಟಿಗೆ, ಬ್ರಸ್ ಪ್ಯಾಡ್ ಮತ್ತು ಇಂಕಿ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಹೆಸರು ಮುಂತಾದವುಗಳನ್ನು ಹುಟ್ಟಕ್ಷರಗಳಿಂದ ಬರೆಯಬೇಕು.

[10-9]

ನಮ್ಮ ವಿಳಾಸ:—ರಾ ಛಿತಿ ಬಿಡಕ್ ೩, ಸಾಹುಕಾರ್‌ಪೇಟೆ, ಮದರಾಸ್.

ಡೋಂಗರೆ ಇವರ ಬಾಲಾಮೃತ.

ಇದು ಬಹಳ ಪುಷ್ಟಿಕಾರಕವಾದದ್ದರಿಂದ ಕೂಸುಗಳು ಲವಲವಿಕೆಯಿಂದ ತಳೆಯುತ್ತವೆ. ಇದನ್ನು ತಕ್ಕೊಳ್ಳುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ತೂಕ ಬೆಳೆಯುತ್ತದೆ. ಕ್ರಯ—ಶೀಸೆ 1 ಕ್ಕೆ 12 ಆಣೆ; ಟ. ಖ. 4 ಆಣೆ.

ವಿಳಾಸ—ಕೆ. ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

177-2] [ಏಜಂಟರು ಬೇಕಾಗಿರುತ್ತಾರೆ.]

ಕುಂತಲಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ನೂರು ಬಂಗಾರದ ಬೆಳ್ಳಿಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚಪ್ಪಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮನಸಿನ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿ. [213-51]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

ಸ್ಪ್ರಿಂಗ್ ಪಾಕೆಟ್ಟು ರೈಲ್ವೆ ರೆಗ್ಯುಲೇಟರ್ ವಾಚ್.

ಇದರ ಕ್ರಯ ೮ ಬಹುಮಾನಗಳ ಸಮೇತ ರೂ. 3-0-0.

ಈ ವಾಚ್ 5 ವರುಷಗಳ ವರೆಗೆ ನಿಲ್ಲದೇ ನಡೆಯತಕ್ಕಂಥಾದ್ದು. ಮತ್ತು ಇಂಪರ್ ಮಾರ್ಕು ಅಂದರೆ ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಸರಕಾರದ ಉದ್ಯೋಗಸ್ಥರಿಗೂ, ವರ್ತಕರಿಗೂ ಮತ್ತು ಇತರ ಜನರಿಗೂ ಸಪ್ಲೈ ಮಾಡುತ್ತೇವೆ. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದ ಏನು? ಇದರ ೮ ಬಹುಮಾನಗಳ ತಪ್ಸೀಲ್:—1 ಸುಂದರವಾದ ಸರಪಣಿ, 2 ಉತ್ತರಮುಖಿ, 3 ಇಂಗ್ಲೀಷು ನಮೂನೆ ಬಾಟಣಿಗೆ, 4 ಜರ್ಮನ್ ಕನ್ನಡಿ, 5 ಕರವಸ್ತ್ರ, 6 ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ, 7 ಪಟು ಗುಂಡಿ ಸೆಟ್, 8 ಸುವಾಸನೆಯುಳ್ಳ ಪರಿಮಳದ ಸೀಸೆ.



ನಮ್ಮ ವಿಳಾಸ:—ಕಮಲರಾಂ ಅಂಡು ಕಂಪನಿ,

[180-1] ನಂ. 28, ಇರುಳಪ್ಪನ್ ಬೀದಿ, ಸಾಹುಕಾರ್ ಪೇಟೆ. ಮದರಾಸು.

ಸೋಲಾಪುರದ ಚಕ್ಕುಗಳೂ, ಶೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಶೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಬೇಲುಗಟ್ಲೆಯೂ, ಚಿಲ್ಲರೆಯಾಗಿಯೂ ದೊರೆಯುವುವು.

ಬೇಲುಗಟ್ಲೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಖರೀದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [55-23]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡು (ಕುಂಚಿಗರಪೇಟೆ) ಬೆಂಗಳೂರು ಸಿಟಿ.

ಸಾಟಿಯಿಲ್ಲದ ಬಲವರ್ಧಕ್ ಟಾನಿಕ್ಕು ಮಾತ್ರೆಗಳು

[247-42]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಛಾರ್ಜಿಲ್ಲದೆ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

20—8—1915 ರಿಂದ 27—8—1915 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	6	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	17	5	15	5
ಮೈಸೂರು ,,	17	10	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	
ಹಾಸನ ,,	10	5	0	
ಚಿತ್ರದುರ್ಗ ,,	18	12	0	0
ಕಡೂರ್ ,,	5	4	0	0
ಶಿವಮೊಗ್ಗಾ ,,	13	6	0	0
ಒಟ್ಟು ...	80	42	15	5

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೇ ವರ್ಷ ಋತೌ ಭಾದ್ರಪದ ಬಹುಳ ಪಾಡ್ಯಮಿ ಶುಕ್ರವಾರದಿಂದ ಭಾದ್ರಪದ ಬಹುಳ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1915 ನೇ ಸೆಪ್ಟಂಬರ್.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸಿಂಹ ಮಾಸ ತೇದಿ
10	ಶುಕ್ರ *	ಪಾಡ್ಯಮಿ	22-11	ಉತ್ತರ	41 57	25
11	ಶನಿ ;;	ಬಿದಿಗೆ	19-18	ಹಸ್ತ	40 25	26
12	ಭಾನು ::	ತದಿಗೆ	15-24	ಚಿತ್ತ	37 53	27
13	ಸೋಮ †	ಚೌತಿ	10-39	ಸ್ವಾತಿ	34 45	28
14	ಮಂಗಳ §	ಪಂಚಮಿ	5-18	ವಿಶಾಖ	54-27	29
15	ಬುಧ	ಸಪ್ತಮಿ	53-29	ಅನೂ	26-54	30
16	ಗುರು ‡	ಅಷ್ಟಮಿ	47-19	ಜ್ಯೇಷ್ಠ	23-40	31

* ತಿಥಿದ್ವಯಂ, ಅಶ್ವಿಜಯಂತಿ, ಚಂದ್ರೋದಯ, ಜನ್ಮಾಷ್ಟಮಿ 1, ಮಳೆ ನಕ್ಷತ್ರ—ಪುಬ್ಬಾ 4 ನೇ ಪಾದ. ;; ತ್ರಿತೀಯಾ ತಿಥಿ, ಸಾಮಗೋಪಾಕರ್ಮ, ಮೃತ್ಯುಯೋಗ. :: ಚತುರ್ಥೀ ತಿಥಿ, ಸ್ವರ್ಣಗೌರೀ ವ್ರತ, ಸಿದ್ಧಿವಿನಾಯಕ ವ್ರತ. † ಋಷಿಪಂಚಮಿ, ಮಳೆ ನಕ್ಷತ್ರ—ಉತ್ತರಾ 1 ನೇ ಪಾದ. § ದಗ್ಧಯೋಗ. ‡ ಮಳೆ ನಕ್ಷತ್ರ—ಉತ್ತರಾ 2 ನೇ ಪಾದ.

ಕೂದಲ ಅಲಂಕಾರವೇ ನಿಮ್ಮ ಮುಖ್ಯ ಸೌಂದರ್ಯ.

ಇದಕ್ಕೆ ನೀವು ಪ್ರಖ್ಯಾತವಾದ ನಮ್ಮ ಪುಷ್ಪಗಂಧ ತೈಲವನ್ನೇ ಹಚ್ಚಬೇಕು.

[78-1]



"ಪುಷ್ಪಗಂಧತೈಲ"

ಈ ಕೂದಲೆಣ್ಣೆಯನ್ನು ಖರೆ ಸಸ್ಯಪದಾರ್ಥಗಳಿಂದಲೇ ತಯಾರು ಮಾಡಿದೆ. ಇದರಲ್ಲಿ ಸ್ವಲ್ಪಮಾತ್ರವೂ ಲೋಹದೆಣ್ಣೆಯಾಗಲಿ, ಇತರ ಅಸಹ್ಯ ಎಣ್ಣೆಯಾಗಲಿ ಸೇರಿರುವುದಿಲ್ಲವೆಂದು ಖಾಗ್ರಿ ನಮೂದುತ್ತೇವೆ. ಸಾವಿರಾರು ಪ್ರಜೆಗಳು ಇದನ್ನೇ ದಿನವೂ ಉಪಯೋಗಿಸುತ್ತಾರೆ. ನೀವ್ಯಾಕೆ ಉಪಯೋಗಿಸುವುದಿಲ್ಲ?

ಬಿಕರಿಮಾಡುವವರು-ವಿಕ್ಟೋರಿಯಾ ಸೈಕಲ್ ಮಾರ್ಟ್, ಮೈಸೂರು; ಮತ್ತು ಮಡಕೇರಿ.

(೨) ಮ್ಯೂಚ್ಯುಯಲ್ ಬೆನೆಫಿಟ್ ಹೌಸ್, ಬೆಂಗಳೂರು ಸಿಟಿ.

ಪ್ರೊಪ್ರೈಟರು—ವಿ. ಕೆ. ರ್ಯಾನಡೆ, ಅಂಗ್ರೇಸ್‌ವಾಡಿ, ಬೊಂಬಾಯಿ ೪.

ರಕ್ಷಿತವಾಗಿ ಸ್ವಲ್ಪ ಹಣ ಹಾಕಿ ವಂಶ ಪಾರಂಪರ್ಯವಾಗಿ ಶೇ ೭ ವರ್ಷವೂ ಲಾಭ ಪಡೆಯಿರಿ! | ಶೇ. ಸಾಲೀಯಾನಾ 6 ರೂ. ಬಡ್ಡಿ ಪ್ರಕಾರ ಸಾಲ ಪಡೆಯುವ ಅರ್ಹತೆಯನ್ನು ಹೊಂದಿ!! | ಯಾವ ಚಂದಾವನ್ನೂ ಕೊಡದೆ 500 ರೂ. ವರೆಗೆ ಬೋನಸ್ಸುಳ್ಳ ಜೀವವಿಮೆ ಪತ್ರ ಪಡೆಯಿರಿ; ಮಾಫಿ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ!!!

ಮೈಸೂರು ದೇಶದ ಜನಗಳಿಗೋಸ್ಕರ ಮೈಸೂರಲ್ಲಿ ಸ್ಥಾಪಿತವಾಗಿರುವ

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಷೂರೆನ್ಸ್ ಕಂಪನಿಯು

ಮೈಸೂರು ದೇಶದಲ್ಲಿ ಮೊದಲನೇ ಸಾರಿ ಜಾರಿಗೆ ತಂದಿರುವ

ಅತ್ಯಾಶ್ಚರ್ಯಕರವಾದ ಮತ್ತು ನವೀನವಾದ ಒಂದರಲ್ಲಿ ಎರಡು ಅಥವಾ ಷೇರು ಜೀವವಿಮೆ

ಎಂಬ ಏರ್ಪಾಡನ್ನು ಕೇಳಿಲ್ಲವೇ?

ಇಲ್ಲದಿದ್ದರೆ ಅದನ್ನು ತಪ್ಸೀಲಾಗಿ ವಿವರಿಸುವ ಪ್ರಕಟನ ಪತ್ರಿಕೆ, ದರಖಾಸ್ತು ಫಾರಂ ಮತ್ತು ಇತರ ಅವಶ್ಯಕವಾಗಿ ತಿಳಿಯತಕ್ಕ ವಿಷಯಗಳಿಗೋಸ್ಕರ ಕೂಡಲೇ ಬರೆಯಿರಿ. ಮತ್ತು ಮೇಲ್ಕಂಡ ಏರ್ಪಾಡಿನ ಪ್ರಕಾರ ಕಂಪೆನಿಯ ಜತೆ ಷೇರುಗಳಿಗೆ ದರಖಾಸ್ತು ಕೊಟ್ಟು, 55 ರೂಪಾಯಿಗಳನ್ನು ಆರು ಕಂತುಗಳಿಂದ ಒಂದು ವರ್ಷದಲ್ಲಿ ಪಾವತಿ ಮಾಡಿ, ಇದುವರೆಗೂ ಜೀವವಿಮೆ ಪ್ರಪಂಚಕ್ಕೇ ತಿಳಿಯದ ಈ ಮೇಲೆ ವಿವರಿಸಿರುವ ವಿಶೇಷಕರವಾದ ಪ್ರಯೋಜನವನ್ನು ಹೊಂದಿರಿ. ಹೀಗೆ ನಿಮ್ಮಿಂದ ವಸೂಲಾಗುವ ಮೊಬಲಗೆಲ್ಲಾ ಗೌರ್ನಮೆಂಟಿನಲ್ಲೂ, ಮತ್ತು ಪಟ್ಟಾದಗಳ ಮೇಲೂ ಸುರಕ್ಷಿತವಾಗಿ ಇಡಲ್ಪಡುವದು

ಬೇಕಾಗಿದೆ.

ನಮ್ಮಲ್ಲಿ ಸ್ಥಿರಸ್ವತ್ತುಗಳ ಮೇಲೆ ಸಾಲ ಕೊಡುವದು, ಜೀವವಿಮೆ ಇನ್ನೂ ಮುಂತಾದ ನವೀನವಾದ ಏರ್ಪಾಡುಗಳು ಇರುತ್ತವೆ. ಮೈಸೂರು ದೇಶದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈ ಕಂಪೆನಿಯ ಕೆಲಸವನ್ನು ನಡೆಸುವದಕ್ಕೆ ಲೋಕಲ್ ಡೈರೆಕ್ಟರುಗಳು ಬೇಕಾಗಿರುತ್ತೆ. ಇಷ್ಟವುಳ್ಳವರು ಪ್ರಕಟನ ಪತ್ರಿಕೆಗಳಿಗೂ ಮತ್ತು ನಿಬಂಧನೆಗಳಿಗೂ ಸಹ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

M. L. NAGANNA, Esq.,

[15-35] Managing Director, Life & Marriage Assurance Buildings, Mysore.

THE BANK OF MYSORE, LTD.

Applications are invited for the post of Manager of the Branch of the Bank of Mysore, Ltd., at Mysore City, carrying a salary of Rs. 150 per mensem. None but those who have a good practical knowledge of Banking and Accounts and can furnish a cash security of Rs. 5,000 need apply. Applications, with copies of testimonials, to be forwarded to the undersigned by the 15th instant.

W. C. ROSE, Manager,
(183-1) **Bank of Mysore, Ltd., Bangalore.**

ವೃತ್ತಾಂತ ಪತ್ರಿಕೆ.

೫೮ ೧೯೧೫ನೇ ಇಸವಿ ಸೆಪ್ಟೆಂಬರ್ ತಾ. ೯ ನೇ ಗುರುವಾರ

ಮೈಸೂರು ಸರ್ಕಾರದ ಕೆಲವು ಹುಕುಮುಗಳು.

ನಮ್ಮ ಗವರ್ನಮೆಂಟಿನವರು ಈಚೆಗೆ ಕೆಲವು ವಿಚಾರಗಳನ್ನು ಕುರಿತು ಹುಕುಮುಗಳನ್ನು ಪ್ರಕಟಿಸಿದಾರೆ; ಆ ಪೈಕಿ ಕೆಲವನ್ನು ವಿವರಿಸಿ ಪ್ರಸ್ತಾಪಿಸುವೆವು.

ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕೆಲವನ್ನು ರೆವಿನ್ಯೂ ಇಲಾಖೆಯವರು ವಿಚಾರಣೆ ಮಾಡುವ ವಿಚಾರವಾಗಿ ಸರ್ಕಾರದವರು ಈಗ ಕೊಟ್ಟಿರುವ ಹುಕುಮು ವಿಶೇಷವಾದದ್ದಾಗಿದೆ. ರೆವಿನ್ಯೂ ವಿಚಾರಗಳನ್ನು ಕುರಿತು ತನಿಖೆ ಮಾಡುವುದಕ್ಕೆ ಅಧಿಕಾರಿಗಳು ತಮ್ಮ ಅಧಿಕಾರಕ್ಕೆ ಒಳಪಟ್ಟ ತಾಲ್ಲೋಕುಗಳಲ್ಲೂ ಗ್ರಾಮಾಂತರಗಳ ಮೇಲೂ ಸಂಚಾರ ಹೋಗುತ್ತಾರೆ. ಕೆಲವು ವೇಳೆ ಅವರು ದರ್ಯಾಪ್ತಿಗೆ ಇಟ್ಟುಕೊಂಡಿರುವ ಮೊಕದ್ದಮೆಗಳಲ್ಲಿ ಫಿರ್ಯಾದಿ ಅಪರಾಧಿಗಳೂ, ಸಾಕ್ಷಿಗಳೂ, ವಕೀಲರೂ ಮ್ಯಾಜಿಸ್ಟ್ರೇಟರು ಹೋಗುವಂಥಾ ಸ್ಥಳಗಳಿಗೆ ಹೋಗಬೇಕಾಗಿರುತ್ತದೆ. ಇದರಿಂದ ಕಕ್ಷಿಗಾರರೇ ಮೊದಲಾದವರಿಗೆ ನಾನಾ ಕಷ್ಟನಷ್ಟಗಳುಂಟಾಗುವವು. ಸರ್ಕಾರದವರು ಇದನ್ನು ನೋಡಿ ಇನ್ನು ಮುಂದೆ ಮ್ಯಾಜಿಸ್ಟ್ರೇಟರು ಸಾಮಾನ್ಯವಾಗಿ ತಮ್ಮ ಹೆಡ್ ಕ್ವಾರ್ಟರುಗಳಲ್ಲಿರುವಾಗಲೇ ಕ್ರಿಮಿನಲ್ ಮೊಕದ್ದಮೆಗಳನ್ನು ದರ್ಯಾಪ್ತಿ ಮಾಡಬೇಕೆಂದೂ, ಕಕ್ಷಿಗಾರರು ತಮಗೆ ಅನುಕೂಲವಾಗಿದೆ ಎಂದು ಸಮ್ಮತಿಸುವ ಮೊಕದ್ದಮೆಗಳನ್ನು ಅಪರೂಪವಾಗಿ ಇತರ ಕಡೆಗಳಲ್ಲಿ ದರ್ಯಾಪ್ತಿ ಮಾಡಬಹುದೆಂದೂ, ಹೀಗೆ ಬೇರೆ ಸ್ಥಳದಲ್ಲಿ ದರ್ಯಾಪ್ತಿ ಆಗುವ ಪ್ರತಿ ಒಂದು ಮೊಕದ್ದಮೆಯ ವಿಷಯದಲ್ಲೂ ಸರಿಯಾದ ಕಾರಣವನ್ನು ತೋರಿಸಬೇಕೆಂದೂ ವಿಧಿಸಿ ಹುಕುಂ ಕೊಟ್ಟಿದಾರೆ. ಆದರೆ ಕ್ರಿಮಿನಲ್ ಮೊಕದ್ದಮೆಗಳು ಇನ್ನೂ ಬೇಗಬೇಗನೆ ವ್ಯವಸ್ಥೆಯಾಗುವಂತೆ ಸರ್ಕಾರದವರು ಏರ್ಪಾಡು ಮಾಡಿದರಾಗಬೇಕೆಂದು ಸೂಚಿಸಲು ಕುತೂಹಲ ಪಡುತ್ತೇವೆ. ಈ ಏರ್ಪಾಡು ಪರಮಾವಶ್ಯಕವಾಗಿ ಪರಿಣಮಿಸಿರುತ್ತದೆ.

ಪರಸ್ಪರ ಸಹಾಯಕ ಸಂಘಗಳ ನಡವಳಿಕೆ ವಿಷಯದಲ್ಲಿ ಸರ್ಕಾರದವರು ಖಂಡಿತವಾದ ಹುಕುಮನ್ನು ಕೊಟ್ಟಿರುತ್ತಾರೆ. ಸಂಘಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಸರ್ಕಾರದವರು ಇದುವರೆಗೆ ಹಣವನ್ನು ಒದಗಿಸಿರುವುದಿಲ್ಲ; ಇನ್ನು ಮುಂದೆಯೂ ಅವುಗಳ ಕಾರಬಾರಿಗೆ ಹಣವನ್ನು ಅಡ್ವಾನ್ಸಾಗಿ ಕೊಡುವುದಿಲ್ಲವೆಂದು ತಿಳಿಸಿದಾರೆ. ಪ್ರಜೆಗಳಲ್ಲಿ ಪರಸ್ಪರವಾದ ನಂಬಿಕೆಯು ಹೆಚ್ಚಿ ಸ್ಥಿರಪಡಿಸುತ್ತಾ ಬರಬೇಕಾಗಿದೆ. ಸೊಸೈಟಿಗಳನ್ನು ಹೊಸದಾಗಿ ಪ್ರಾರಂಭಿಸಬಹುದು; ಅದರ ಮೂಲಧನಕ್ಕೆ ಸರ್ಕಾರದ ಹಣವನ್ನು ನಿರೀಕ್ಷಿಸಬೇಕಾದ ಅಗತ್ಯ ಕಾಣುವುದಿಲ್ಲ. ಇದು ನ್ಯಾಯವಾದದ್ದೆಂದು ನಾವು ಒಪ್ಪಿಕೊಳ್ಳುತ್ತೇವೆ. ಯಾಕೆಂದರೆ ಸುಲಭವಾಗಿ ಸಾಲ ಸಿಕ್ಕುವ ಏರ್ಪಾಡು ಮಾಡಿದ್ದರೆ ಪ್ರಜೆಗಳಲ್ಲಿ ನಿಷ್ಪ್ರಯೋಜನವಾದ ಕೆಲಸ ಕಾರ್ಯಗಳಿಗೆಲ್ಲಾ ಸಾಲಮಾಡುವ ದುರಭ್ಯಾಸ ಉಂಟಾದೀತು. ಸರ್ಕಾರದ ಹಣ ಎಷ್ಟು ಬೇಗನೆ ನಷ್ಟವಾಯಿತೋ ವ್ಯವಸಾಯದ ಬ್ಯಾಂಕುಗಳೇ ಹೇಳುತ್ತವೆ. ಸುಮಾರು ಇಪ್ಪತ್ತು ವರುಷಗಳಿಂದಲೂ ಬಾಕಿಗಳನ್ನು ವಸೂಲ್ಮಾಡುವುದಕ್ಕೆ ಸರ್ಕಾರದವರು ಸಾಹಸ ಪಡುತ್ತಿದ್ದರೂ ಇನ್ನೂ ಬಹಳ ಹಣಗಳು ನಿಂತಿರುವವು. ಸಂಸ್ಥಾನದಲ್ಲಿ ಬೇಕಾದಷ್ಟು ಹಣ ಇಲ್ಲದೆ ಇಲ್ಲ. ಪರಸ್ಪರ ಸಹಾಯವು ಸ್ಥಿರಪಟ್ಟು ಪ್ರಜೆಗಳಿಗೆ ಅದರಲ್ಲಿ ನಂಬಿಕೆಯೂ ಉತ್ಸಾಹವೂ ನೆಲೆಗೊಂಡಿರುವ ಪಕ್ಷಕ್ಕೆ ಅವರೇ ತಮ್ಮ ಹಣಗಳನ್ನು ಸಂಘಗಳಿಗೆ ತಂದುಕೊಟ್ಟು ಅವುಗಳನ್ನು ಉಚ್ಛ್ರಾಯ ಸ್ಥಿತಿಗೆ ತಂದುಕೊಳ್ಳಲಿ; ಸರ್ಕಾರದ ಹಣವನ್ನು ಅಪೇಕ್ಷಿಸಲು ಕಾರಣವಿರುವುದಿಲ್ಲ.

ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ಹಿರಿಯೂರಿನ ಬಳಿ ಸರ್ಕಾರದವರು ವ್ಯವಸಾಯ ಇಲಾಖೆಯ ಮೂಲಕ ಬೆಳೆಗಳ ಪರೀಕ್ಷೆಗಾಗಿ ಒಂದು ಫಾರಮನ್ನು ಪ್ರಾರಂಭ ಮಾಡುವಂತೆ ಸ್ಯಾಂಕ್ಷನ್ ಮಾಡಿದಾರೆ. ವ್ಯವಸಾಯದ ಇಲಾಖೆಯ ಡೈರೆಕ್ಟರವರು ಇದನ್ನು ಜರೂರಾಗಿ ಸ್ಯಾಂಕ್ಷನ್ ಮಾಡಿಕೊಡಬೇಕೆಂದು 1914ನೇ ಡಿಸೆಂಬರ್ ತಾ. 10ರಲ್ಲಿ ಸರ್ಕಾರಕ್ಕೆ ಬರೆದುಕೊಂಡರು. ಸರ್ಕಾರದವರು 1915 ಜೂಲೈ ತಾ. 8ರ ತನಕ ವ್ಯವಸ್ಥೆ ಮಾಡಲಿಲ್ಲ. ಈಗ ಸ್ಯಾಂಕ್ಷನ್ ಹುಕುಂ ಕೊಟ್ಟಿರುವುದರಿಂದ ಈ ಫಾರಮಿನ ಕೆಲಸ ಕಾರ್ಯಗಳು ಈ ಸಾಲಿನಲ್ಲೇ ನಡೆದು ಪೂರೈಸುವವೋ ಇಲ್ಲವೋ ಹೇಳಲಾಗದು. ಈ ವ್ಯವಸಾಯದ ಫಾರಮನ್ನು ಪ್ರಾರಂಭಿಸುವುದಕ್ಕೆ 30,000 ರೂಪಾಯಿ ಖರ್ಚಾಗುತ್ತದೆ; ಬಳಿಕ ವರುಷಕ್ಕೆ 25,000 ರೂಪಾಯಿನಂತೆ ಸಿಬ್ಬಂದಿ, ಸಾಮಾನು ಮೊದಲಾದವುಗಳಿಗೆ ಖರ್ಚಾದೀತು. ಈ ರೀತಿ ಈ ಫಾರಮನ್ನು ಮೂರು ವರುಷ ನಡಿಸುತ್ತಾ ಬಂದ ಪಕ್ಷದಲ್ಲಿ ಮೂರನೇ ವರುಷಾಂತ್ಯದಲ್ಲಿ 28,000 ರೂಪಾಯಿ ಹುಟ್ಟುವಳಿ ಕಾಣುತ್ತದೆ. ಇಂಥಾ ಫಾರಮುಗಳಿಂದ ಪ್ರಜೆಗಳಿಗೆ ನಿಜವಾಗಿಯೂ ಉಪಕಾರವಾಗಬೇಕಾದರೆ ಅವುಗಳ ಖರ್ಚು ಅವುಗಳಲ್ಲೇ ಹುಟ್ಟುವಳಿ ಆಗುವಂತೆ ಆಗಬೇಕು. ಈಗ ಪ್ರಾರಂಭಿಸುವ ಫಾರಮಿನಲ್ಲಿ ಕಬ್ಬು, ಹೊಗೇಸೊಪ್ಪು, ಆಲೂಗೆಡ್ಡೆ, ಹತ್ತಿ, ಜೋಳ, ಇವೇ ಮೊದಲಾದವುಗಳನ್ನು ಬೆಳೆಮಾಡಬೇಕೆಂದು ಉದ್ದೇಶ ಮಾಡಿದಾರೆ. ಈ ಫಾರಮಿನಲ್ಲಿ ನಡೆಯುವ ಪರೀಕ್ಷಾ ಕಾರ್ಯಗಳು ಆ ಪ್ರಾಂತ್ಯದ ಜಮೀನುದಾರರಿಗೂ ಸರ್ಕಾರಕ್ಕೂ ಫಲದಾಯಕವಾಗಲೆಂದು ಹಾರೈಸುತ್ತೇವೆ.

ಮಲೆನಾಡಿನಲ್ಲಿ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರದವರು ಸಾಲಿಯಾನಾ 5,000 ರೂಪಾಯಿನಂತೆ ಎರಡು ವರುಷ ಕೊಡುತ್ತೇವೆಂದು ಸ್ಯಾಂಕ್ಷನ್ ಮಾಡಿದಾರೆ. ಇದುವರೆಗೆ 200 ಮರಾಟಿ ಕುಣುಬಿ ಸಂಸಾರಗಳು ಹೊಸದಾಗಿ ಬಂದು ನೆಲಸಿರುವರು; ಈಗ ಈ ಜನಗಳು 1,000 ವರೆಗೆ ಐದು 682 ಎಕರೆ ಜಮೀನುಗಳನ್ನು ವ್ಯವಸಾಯಕ್ಕೆ ತಂದಿರುವರು. ಈಗ ಸ್ಯಾಂಕ್ಷನ್ ಮಾಡಲ್ಪಟ್ಟಿರುವ ಹಣದಿಂದ ಹೊಸದಾಗಿ ಸಂಸಾರಗಳನ್ನು ತಂದು ಮಲೆಸೀಮೆಯಲ್ಲಿ ನೆಲಸುವಂತೆ ಮಾಡಬೇಕೆಂಬುವುದೇ ಉದ್ದೇಶ. ಪ್ರತಿ ಒಂದು ಸಂಸಾರಕ್ಕೂ ಜೀವನಕ್ಕೆ 10 ರೂಪಾಯಿನ ದವಸವನ್ನೂ, 60 ರೂಪಾಯಿನ ಒಂದು ಜೊತೆ ಎತ್ತನ್ನೂ, ನಗದು 30 ರೂಪಾಯನ್ನೂ ಅಂದರೆ 100 ರೂಪಾಯಿನಂತೆ ಸಾಲಕೊಟ್ಟು ಕರೆದುತಂದು ನಿಲ್ಲಿಸುತ್ತಾರೆ. ಈ ಪ್ರಯತ್ನದ ಫಲಿತಾಂಶವೇನಾಗುವುದೋ, ಈ ಹಣದಲ್ಲಿ ಎಷ್ಟು ಸಾಲಿಗೆ ವಾಪಸು ಬರುವುದೋ ಎಂದು ಕುತೂಹಲದಿಂದ ನಿರೀಕ್ಷಿಸುವೆವು. ಬೊಂಬಾಯಿ ಅಧಿಪತ್ಯದಿಂದ ನಾವು ಸಂಸಾರಗಳನ್ನು ತಂದು ನಿಲ್ಲಿಸಬೇಕಾದ ಪಕ್ಷದಲ್ಲಿ ನಮ್ಮ ಸೀಮೆಯಲ್ಲಿ ಪ್ರಜಾ ಕ್ಷೋಭೆ ಇರಬೇಕು; ಅಥವಾ ನಮ್ಮ ಪ್ರಜೆಗಳು ಬಹಳ ಐಶ್ವರ್ಯವಂತರಾಗಿರಬೇಕು; ಇಲ್ಲವೇ ಇವರು ಬರೀ ಸೋಮಾರಿಗಳಾಗಿರಬೇಕು. ವ್ಯವಸಾಯಾಭಿವೃದ್ಧಿಗೆ ನಮ್ಮ ಸೀಮೆಯೊಳಗೇನೋ ವಿಶೇಷ ಅವಕಾಶವಿದೆ. ಕೆಲಸಕ್ಕೆ ತಕ್ಕಷ್ಟು ಪ್ರಜೆಗಳು ಇಲ್ಲದೆ ಹೋದ ಪಕ್ಷದಲ್ಲಿ ವ್ಯವಸಾಯ ಕಾರ್ಯಗಳಿಗೆ ಯಂತ್ರ ಮೊದಲಾದ ವಿಶೇಷ ತರದ ಸಾಧನಗಳನ್ನು ಉಪಯೋಗಿಸಿಕೊಳ್ಳಬೇಕು. ಎಷ್ಟು ಅಪಾರವಾಗಿ ಬೆಳೆಯನ್ನು ಉತ್ಪತ್ತಿ ಮಾಡಿದರೂ ಖರ್ಚಾಗುವುದಕ್ಕೆ ಯಾವ ವಿಧವಾದ ತೊಂದರೆಯೂ, ಅಡ್ಡಿಯೂ, ಅನುಮಾನವೂ ಇರುವುದಿಲ್ಲ. ಪ್ರಜೆಗಳಿಗೆ ತಿನ್ನುವುದಕ್ಕೆ ಧಾನ್ಯಗಳೂ, ಉಡುವುದಕ್ಕೆ ಬಟ್ಟೆಗಳೂ ಪರಮಾವಶ್ಯಕ. ಇವುಗಳನ್ನು ಎಷ್ಟು ಹೆಚ್ಚಾಗಿ ಬೆಳೆದರೆ ಅಷ್ಟೂ ಒಳ್ಳೇದು; ಈ ಭಾಗಕ್ಕೆ ಎಷ್ಟು ಸಾಲಿಗೆ ಬೇಕಾದರೂ ಸಹಾಯ ಪ್ರೋತ್ಸಾಹಗಳನ್ನು ಒದಗಿಸಬಹುದಾಗಿದೆ.

ನಂಬಿಕೆಯ ಮೂಲಕ ಬೆಂಕಿಯ ಬಲವನ್ನು ಅರಿಸಿದವರು.

ಯೂಫ್ರೆಟೀಸ್ ನದಿಯ ಪ್ರವಾಹದಿಂದ ಫಲವತ್ತಾದ ಪ್ರದೇಶವು ಈಗ ಸುಮಾರು 2,500 ವರುಷಗಳ ಕೆಳಗೆ ಪ್ರಾಚೀನಕಾಲದ ನಾಗರಿಕತೆಗೆ ತೌರುಮನೆಯಾಗಿತ್ತು. ಅಲ್ಲಿ ಪ್ರಸಿದ್ಧವಾದ ಬ್ಯಾಬಿಲೋನ್ ನಗರದಲ್ಲಿ ನೆಬುಕಡ್ನೇಜರನೆಂಬ ಅರಸನು ಬಹು ವಿಚಿತ್ರತರವಾದ ತೋಟವುಳ್ಳ ಮಹಾಮಂದಿರವನ್ನು ಕಟ್ಟಿಸಿ ಬಹು ಪರಾಕ್ರಮದಿಂದ ರಾಜ್ಯವನ್ನು ವಿಸ್ತರಿಸಿ ಬಹು ವೈಭವದಿಂದ ಆಳುತ್ತಿದ್ದನು. ಅವನು ರಾಜ್ಯಾಂಗದ ಪ್ರತಿಯೊಂದು ಅಂಶಕ್ಕೂ ಬುದ್ಧಿ ಲಕ್ಷ್ಯ ಕೊಟ್ಟು ರಾಜ್ಯಕರ್ತವ್ಯಧುರೀಣನೆನ್ನಿಸಿಕೊಂಡಿದ್ದನು. ಮತ್ತು ತನ್ನ ರಾಜ್ಯಕ್ಕೆ ಸೇರಿದ ಸಕಲ ಜನಾಂಗ, ಕುಲ, ಭಾಷೆ, ಪಂಗಡದವರನ್ನು ನಿಷ್ಪಕ್ಷಪಾತವಾದ ಧರ್ಮದಿಂದ ಪಾಲಿಸುತ್ತಿದ್ದನು. ಅವನ ಕೈಕೆಳಗೆ ಅಧಿಕಾರವನ್ನು ವಹಿಸುವದಕ್ಕೆ ಪ್ರಭುಗಳೂ ಸಾಮಂತರೂ ಅಧಿಕಾರಿಗಳೂ ಬೇಕಾದಾಗ ತನ್ನ ಬಂಧುಗಳು ಯಾರು? ಅರಮನೆಯ ವರ್ಗದವರು ಯಾರು? ಸ್ವದೇಶಿಗಳು ಯಾರು? ಎಂದು ವಿಚಾರಿಸದೆ, ಯೋಗ್ಯರು ಯಾರು? ದೇಹದ ಅಂಗಸೌಷ್ಠವ, ಬುದ್ಧಿ, ವಿದ್ಯೆ, ಯಾರಲ್ಲಿದೆಯೋ ಅವರು ಯಾವ ದೇಶ, ಕೋಶ, ಜಾತಿಯವರಾಗಲಿ ಅವರನ್ನು ಆರಿಸಿಕೊಂಡು ತಕ್ಕ ಶಿಕ್ಷಣೆಯಿಂದ ಅವರಿಗೆ ರಾಜ್ಯಾಡಳಿತದ ಕ್ರಮಗಳಲ್ಲಿ ಅವರನ್ನು ತರಬೇತುಮಾಡಿ ಅವರನ್ನೇ ಅಧಿಕಾರದಲ್ಲಿಟ್ಟನು. ಇದರಿಂದ ಪ್ರಜೆಗಳಲ್ಲಿ ಆತನಿಗೆ ಗೌರವವೂ ಪರಸ್ಪರ ಪ್ರೀತಿಯೂ ಐಕಮತ್ಯವೂ ಸಾಧ್ಯವಾದವು. ಮತ್ತು ಅವನು ಯುದ್ಧಪ್ರಿಯನಾಗಿರದೆ ಸಮಾಧಾನವನ್ನು ರಾಜ್ಯದಲ್ಲಿ ಯಾವ ರೀತಿಯಲ್ಲಿ ಭಂಗಬಾರದಂತೆ ಕಾಪಾಡುವವನಾಗಿದ್ದನು. ಆತನು ಪಶ್ಚಿಮಪ್ರಾಂತ್ಯಗಳನ್ನು ಗೆದ್ದುದರಿಂದ ತನ್ನ ರಾಜಧಾನಿಯಲ್ಲಿ ಗುಲಾಮರಾಗಿ ಬಿದ್ದಿದ್ದ ಇಬ್ರಿಯರಲ್ಲಿ ನಾಲ್ಕು ಮಂದಿ ಸ್ಫುರದ್ರೂಪಿಗಳಾಗಿದ್ದ ಯೌವನಸ್ಥರನ್ನು ಆರಿಸಿಕೊಂಡು ಅವರನ್ನು ರಾಜ್ಯಾಧಿಕಾರಿಗಳಾಗಿ ನೇಮಿಸಿದನು. ಈ ತರುಣರು ತಮ್ಮ ಹಿರಿಯರಿಂದಲೂ ಮತಬೋಧಕರಿಂದಲೂ—ಯೆಹೋವನೆಂಬ ಜಗದೀಶ ದೇವರ ವಿನಾ ಉಳಿದ ಜನಗಳು ಆರಾಧಿಸುವ ದೇವರುಗಳೂ ಪೂಜಿಸುವ ವಿಗ್ರಹಗಳೂ ದೇವರುಗಳಲ್ಲವಿರುವದರಿಂದ ಅವುಗಳನ್ನು ಪೂಜಿಸುವದು ವ್ಯರ್ಥವೂ ಪಾಪವೂ ಎಂದು ನಂಬಿದ್ದರು.

ಅರಸನಾದ ನೆಬುಕಡ್ನೇಜರನು ತನ್ನ ಕೈಕೆಳಗಿನ ಅಧಿಕಾರಿಗಳು ಯಾವ ಮತಸ್ಥರು? ಅವರು ಯಾವ ದೇವರನ್ನು ಪೂಜಿಸುತ್ತಾರೆ? ಎಂದು ತಿಳಿದಿದ್ದರೂ ಆವರವರ ಮತ ಸಂಪ್ರದಾಯ ಕಟ್ಟಳೆ ಪದ್ಧತಿಗಳ ವಿಷಯ ಯಾರನ್ನೂ ನಿಂದಿಸದೆ ಸ್ವತಂತ್ರವನ್ನು ಕೊಟ್ಟು ತನ್ನ ಪ್ರಜೆಗಳು ತಮ್ಮ ತಮ್ಮ ಇಷ್ಟಬಂದ ದೇವರನ್ನು ಪೂಜಿಸಿ ತಮ್ಮ ತಮ್ಮ ಮತ ಸಂಪ್ರದಾಯಗಳನ್ನು ನಿರ್ಬಾಧಕವಾಗಿ ಅನುಸರಿಸಿಕೊಂಡಿರಬಹುದು; ಆದರೆ ರಾಜಭಕ್ತಿ, ವಿಧೇಯತ್ವಗಳಲ್ಲಿ ಮಾತ್ರ ತತ್ಪರರಾಗಿರಬೇಕೆಂದು ನಿರ್ಣಯಿಸಿದ್ದನು. ಅವನ ರಾಜ್ಯವು ಸರ್ವಸಮೃದ್ಧವಾದ ಈ ಪರಿಣಾಮಗಳಿಂದ ಚತುರ್ದಿಕ್ಕುಗಳಿಗೂ ವಿಸ್ತರಿಸಿತು. ಅರಸನು ದಿಗ್ವಿಜಯವನ್ನು ಹೊಂದಿ ರಾಜಧಾನಿಗೆ ಬಂದು ಪೂರ್ಣತೃಪ್ತನಾಗಿ ಅರಮನೆಯಲ್ಲಿ ವಾಸಮಾಡಿಕೊಂಡಿದ್ದನು. ಆದರೆ ಅವನ ಮನಸ್ಸಿನಲ್ಲಿ ಒಂದು ಚಿಂತೆಯು ಸದಾ ಪೀಡಿಸುತ್ತಿತ್ತು. ಏನಂದರೆ—ಇಷ್ಟು ವಿಸ್ತಾರವಾಗಿ ವ್ಯಾಪಿಸಿ ಬಗೆಬಗೆಯ ಜನಾಂಗ ಕುಲ ಭಾಷೆಗಳಿಂದ ಒಪ್ಪುವ ಈ ಸಾಂರಾಜ್ಯದಲ್ಲಿ ದಂಗೆ, ಅನ್ಯಾಯ ರಕ್ತ, ಪ್ರಜಾಕ್ಷೋಭೆ, ಬಯಗಳು, ತಲೆದೋರದಂತೆ ಸ್ಥಿರವಾದ ಐಕಮತ್ಯ, ಪರಸ್ಪರ ಮೈತ್ರೀಭಾವ, ರಾಜ್ಯದ ಕಟ್ಟುಪಾಡುಗಳನ್ನು ಏರ್ಪಡಿಸಿ ಸಕಲ ವಿಧವಾದ ಸಿಥಿಲತೆಗೆ ಅದು ಒಳಬೀಳದಂತೆ ಮಾಡಬೇಕೆಂದು ಚಿಂತಿಸಿ ಈ ಕಾರ್ಯಸಾಧನೆಗೆ ಒಂದು ಉಪಾಯವನ್ನು ಕಲ್ಪಿಸಿದನು. ಪ್ರಜೆಗಳಲ್ಲಿ ಐಕಮತ್ಯವೂ ಅನುರಾಗವೂ ಹೆಚ್ಚುವದಕ್ಕೆ ಅವರೆಲ್ಲರೂ ಒಂದೇಸ್ಥಳಕ್ಕೆ ಬಂದು ಒಬ್ಬನೇ ದೇವರನ್ನು ಆರಾಧಿಸಿ ಒಂದೇ ಮತ ಸಂಪ್ರದಾಯವುಳ್ಳವರಾದರೆ ತನ್ನ ಮನೋರಥವು ಸಿದ್ಧಿಸುವದೆಂದು ಕೊನೆಗೆ ಅದಕ್ಕೆ ತಕ್ಕ ಸನ್ನಾಹವನ್ನು ಮಾಡಲೆತ್ನಿಸಿದನು. ರಾಜಧಾನಿಯ ಹೊರಗಡೆ ಇದ್ದ ವಿಸ್ತಾರವಾದ ಬಯಲು ದಿನ್ನೆಯ ಮೇಲೆ ನಿಗಿನಿಗಿ ಹೊಳೆಯುವ ಶುದ್ಧ ಭಂಗಾರದಿಂದ ಅರವತ್ತು ಮೊಳ ಎತ್ತರವಾಗಿಯೂ ಆರು ಮೊಳ ಅಗಲವಾಗಿಯೂ ಇರುವ ವಿಗ್ರಹವನ್ನು ಮಾಡಿಸಿ ನಿಲ್ಲಿಸಿದನು. ಮತ್ತು ಪ್ರಭುಗಳನ್ನೂ ಸುಭೇದಾರರನ್ನೂ ಅಧಿಕಾರಿಗಳನ್ನೂ ನ್ಯಾಯಾಧಿಪತಿಗಳನ್ನೂ ಬೊಕ್ಕಸದವರನ್ನೂ ಪಂಡಿತರನ್ನೂ ಕೊತ್ವಾಲರನ್ನೂ ಅದರ ಪ್ರತಿಷ್ಠೆಗೆ ಕರಸಿ ಆ ವಿಗ್ರಹದ ಎದುರಿಗೆ ನಿಲ್ಲಿಸಿದನು. ಮತ್ತು ಅರಸನ ಅಪ್ಪಣೆಯನ್ನು ಸಾರುವವನು ಗಟ್ಟಿಯಾಗಿ ಕೂಗಿ ಪ್ರಜೆಗಳೇ, ಜನಾಂಗಗಳೇ, ಭಾಷೆಯವರೇ ನೀವು ಕೊಂಬು, ಪಿಳ್ಳಂಗೋವಿ, ತಂಬೂರಿ, ವೀಣೆ, ಕಿನ್ನರಿ, ಶಹನಾಯಿ ಮುಂತಾದ ವಾದ್ಯಘೋಷವನ್ನು ಕೇಳಿದ ಕೂಡಲೆ ಅಡ್ಡಬಿದ್ದು, ಈ ದೇವರನ್ನು ಪೂಜಿಸಬೇಕು. ಯಾರು ಅಡ್ಡಬೀಳದೆ ಆರಾಧಿಸದೆ ಇರುವನೋ ಅವರನ್ನು ಅದೇ ಗಳಿಗೆಯಲ್ಲಿ ಉರಿಯುವ ಬೆಂಕಿಯ ಭಟ್ಟಿಯಲ್ಲಿ ದೊಬ್ಬಲಾಗುವುದು ಎಂದು ಸಾರಿದನು. ಅದೇ ಸಮಯದಲ್ಲಿ ಆ ಇಬ್ರಿಯ ಯೌವನಸ್ಥರಾದ ಶದ್ರಾಕ್, ಮೇಶಾಕ್, ಅಬೆದ್ನೆಗೋ ಇವರ ಹೊರತು ಎಲ್ಲರೂ ನಿಂತಲ್ಲಿಯೇ ಅಡ್ಡಬಿದ್ದು ಆರಾಧಿಸಿದರು. ಪರದೇಶಸ್ಥರಾದ ಇವರ ಅಭಿವೃದ್ಧಿಯನ್ನು ನೋಡಿ ಸಹಿಸಲಾರದೆ ಇವರನ್ನು ಹೇಗಾದರೂ ಅಪಮಾನಪಡಿಸಬೇಕೆಂದು ಕಾರಣವನ್ನು ಹುಡುಕುತ್ತಿದ್ದ ಸ್ವದೇಶಿಗಳಾದ ಅಧಿಕಾರಿಗಳು ತಕ್ಷಣ ಅರಸನಿಗೆ ಅವರ ಮೇಲೆ ದೂರು ಹೇಳಿದರು.

ಅರಸನು ಕನಲಿಕೋಪಿಯಾದನು. ಅವನು ಆಜ್ಞಾಭಂಗವನ್ನು ಸಹಿಸುವವನಲ್ಲ. ಈ ಜನಗಳು ಪರದೇಶಿಗಳಾದ ಗುಲಾಮರು. ಆದರೂ ನಾನು ಅವರನ್ನು ಅಧಿಕಾರದಲ್ಲಿಟ್ಟಿದ್ದೇನೆ. ಇವರು ನನ್ನ ಪ್ರಜೆಗಳ ಎದುರಿಗೆ ನನ್ನ ರಾಜಾಜ್ಞೆಯನ್ನು ಉಲ್ಲಂಘನೆಮಾಡಿದರು ಎಂದು ಅವರನ್ನು ಕರೆಯಿಸಿ ನಾನು ನಿಮ್ಮನ್ನು ಈ ಬೆಂಕಿಯ ಗುಂಡಕ್ಕೆ ಹಾಕಿ ಸುಡಿಸುತ್ತೇನೆ. ನಿಮ್ಮನ್ನು ನಿಮ್ಮ ದೇವರು ನನ್ನ ಕೈಯಿಂದ ತಪ್ಪಿಸುವನೋ? ಎಂದು ಗದರಿಸಿದನು. ಅವರು ಆ ಪರಕೀಯ ರಾಜ್ಯಾಧಿಕಾರವನ್ನು ಬಹು ವಿಚಕ್ಷಣೆಯಿಂದ ನಡಿಸಿದ್ದರಿಂದ ಅವರನ್ನು ರಕ್ಷಿಸಬೇಕೆಂಬ ಅಭಿಲಾಷೆ ಅರಸನಿಗಿತ್ತು. ಆದರೆ ಆ ಏಕದೇವ ಭಕ್ತರು—ನಾವು ಸೇವಿಸುವ ದೇವರು ನಿಶ್ಚಯವಾಗಿ ನಮ್ಮನ್ನು ಉರಿಯುವ ಬೆಂಕಿ ಭಟ್ಟಿಯೊಳಗಿಂದ ತಪ್ಪಿಸಲು ಸಮರ್ಥನು. ಮತ್ತು ಅರಸನೇ, ನಿನ್ನ ಕೈಯೊಳಗಿಂದ ನಮ್ಮನ್ನು ತಪ್ಪಿಸುವನು. ತಪ್ಪಿಸದಿದ್ದರೂ ನಾವು ನಿನ್ನ ದೇವರುಗಳನ್ನು ಸೇವಿಸುವದಿಲ್ಲ. ನಿನ್ನ ಭಂಗಾರದ ವಿಗ್ರಹವನ್ನು ಪೂಜಿಸುವದಿಲ್ಲವೆಂದು ಖಂಡಿತವಾಗಿ ನುಡಿದರು. ಅರಸನು ಕಿಡಿಕಿಡಿಯಾಗಿ ಉರಿಯುತ್ತಿರುವ ಭಟ್ಟಿಯನ್ನು ಆದಕ್ಕಿಂತ ಏಳರಷ್ಟು ಹೆಚ್ಚುಮಾಡಿ ಆ ಮೂವರು ತರುಣರನ್ನು ಅದಕ್ಕೆ ದೊಬ್ಬಿಸಿದನು. ಅವರ ಇಜಾರು, ಅಂಗಿ, ವಸ್ತ್ರಗಳನ್ನು ತೆಗೆಯದೆ ಇದ್ದ ಹಾಗೆಯೇ ಅವರನ್ನು ಆ ಭಟ್ಟಿಯೊಳಕ್ಕೆ ಎಸೆದರು. ಅವರು ಆ ಗುಂಡದಲ್ಲಿ ನಷ್ಟವಿಲ್ಲದೆ ತಿರುಗಾಡುತ್ತಿದ್ದರು. ಮತ್ತು ಅವರ ಕೂಡ ನಾಲ್ಕನೆಯವನೊಬ್ಬನು ಇದ್ದಾನೆ. ಆ ನಾಲ್ಕನೆಯವನ ರೂಪವು ದೇವರ ಮಗನ ಹಾಗಿದೆಯೆಂದು ಅರಸನೂ ಪ್ರಜೆಗಳೂ ನೋಡಿ ಅತಿ ವಿಸ್ಮಯದಿಂದ ಅವರನ್ನು ಹೊರಗೆ ಕರೆದು ಪರೀಕ್ಷಿಸಲು ಬೆಂಕಿಯ ವಾಸನೆಯು ಸಹ ಅವರ ಉಡುಪುಗಳ ಮೇಲೆಯಾದರೂ ಇಲ್ಲದಿರುವದನ್ನು ತಿಳಿದು ಅರಸನು ಎಲ್ಲವನ್ನು ನೋಡಿ—ಶದ್ರಾಕ್, ಮೇಶಾಕ್, ಅಬೆದ್ನೆಗೋವರ ದೇವರಿಗೆ ಸ್ತುತಿಯಾಗಲಿ. ಆತನು ತನ್ನ ದೂತನನ್ನು ಕಳುಹಿಸಿ ತನ್ನನ್ನು ನಂಬಿದ ಭಕ್ತರನ್ನು ಕಾಪಾಡಿದ್ದಾನೆ. ಇನ್ನು ಮೇಲೆ ನನ್ನ ಸಕಲ ಪ್ರಜೆಗಳೂ ಆತನನ್ನು ಪೂಜಿಸಲಿ. ಮತ್ತು ಯಾರಾದರೂ ಆ ದೇವರಿಗೆ ವಿರೋಧವಾಗಿ ಮಾತಾಡಿದರೆ, ದೂಷಣೆ ಹೇಳಿದರೆ ಅವನನ್ನು ಸಂಹರಿಸಿ ಅವರ ಮನೆಯನ್ನು ನಾಶಮಾಡುವೆನು. ಈ ವಿಧವಾಗಿ ರಕ್ಷಿಸುವ ದೇವರು ಇನ್ನಾರೂ ಇಲ್ಲವೆಂದು ಇಸ್ತಿಹಾರ ಹೊರಡಿಸಿ ತನ್ನ ರಾಜ್ಯದಲ್ಲಿ ಸಾರಿಸಿ ಆ ಮೂವರು ಯೌವನಸ್ಥರಿಗೆ ರಾಜ್ಯದಲ್ಲಿ ಉನ್ನತ ಪದವಿಯನ್ನು ಕೊಟ್ಟನು.

ಯುದ್ಧದ ಸಮಾಚಾರಗಳು.

ಫಿರಂಗಿಗಳ ವಿಶೇಷ ಯುದ್ಧಗಳು.

ರಷ್ಯಾದವರು ಬಲಕಾಯಿಸಿಕೊಂಡರು.

ಕಳೆದ ವಾರದ ತಂತಿವರ್ತಮಾನಗಳು ವಿಶೇಷವಾದ ಯುದ್ಧಗಳು ನಡೆದುವೆಂದು ಹೇಳುವುದಿಲ್ಲ. ಆದರೂ ಪೂರ್ವ ರಣರಂಗದಲ್ಲಿ ಪಶ್ಚಿಮ ರಣರಂಗದಲ್ಲೂ ನಿಲುಗಡೆ ಇಲ್ಲದೆ ಕದನಗಳು ನಡೆಯುತ್ತಾ ಬಂದಿರುವವು.

ಪಶ್ಚಿಮ ರಣರಂಗದಲ್ಲಿ.

ಕಳೆದ ಹತ್ತು ದಿನಗಳಿಂದಲೂ ನಮ್ಮ ಪಕ್ಷದವರು ತಮ್ಮ ಫಿರಂಗಿಗಳಿಂದ ನಿಲುಗಡೆಯಿಲ್ಲದೆ ಶತ್ರುವಿನ ಮೇಲೆ ಗುಂಡುಗಳನ್ನು ಸುರಿಸುತ್ತಿದ್ದಾರೆ. ಇದೇ ಆ ಯುದ್ಧಸಾಲಿನ ಉದ್ದಕ್ಕೂ ನಡೆದಿರುವ ವಿಶೇಷವಾದ ಕಾರ್ಯ. ನಮ್ಮ ಪಕ್ಷದವರು ಶತ್ರುವಿನ ಕಂದಕಗಳಿಗೂ, ಸೈನಿಕರು ಸುರಕ್ಷಿತವಾಗಿ ನಿಲ್ಲತಕ್ಕ ಭದ್ರವಾದ ಸ್ಥಳಗಳಿಗೂ, ಸೈನ್ಯಗಳ ಮೂಲ ಸ್ಥಾನಗಳಿಗೂ ಗುಂಡುಗಳನ್ನು ಹಾಕಿದರು. ರೈಲ್ ಗಾಡಿಗಳನ್ನು ಒಡೆದುಹಾಕಿ, ಜರ್ಮನಿಯ ಸೈನಿಕರು ಕಂದಕಗಳಿಂದ ತಪ್ಪಿಸಿಕೊಂಡು ಹೋಗುವುದು ಅಸಾಧ್ಯವಾಗುವಂತೆ ಮಾಡಿದರೆ ನಮ್ಮ ಪಕ್ಷದವರು ಆದಿಯಿಂದಲೂ ಇಷ್ಟೊಂದು ಘೋರವಾದ ಗುಂಡುಗಳ ಮಳೆಯನ್ನು ಯಾವಾಗಲೂ ಸುರಿಸಲಿಲ್ಲ. ಒಂದು ರಾತ್ರಿ ನಮ್ಮ ಪಕ್ಷದವರು ಜರ್ಮನಿಯವರ ಮೇಲೆ ನಾಲ್ಕು ಗಂಟೆಗಳೊಳಗಾಗಿ 80,000 ಸಿಡಿಯುವ ಗುಂಡುಗಳನ್ನು ಸುರಿಸಿದರು. ಇದರಿಂದ ನಮ್ಮ ಪಕ್ಷದವರು ಮುಂದರಿಸಿ ನುಗ್ಗಿ ಹೋಗುವ ಪ್ರಯತ್ನಪಟ್ಟದ್ದಾರೆಯೋ ಇಲ್ಲವೋ ಎಂಬುದು ಗೊತ್ತಾಗಲಿಲ್ಲ. ತಂತಿವರ್ತಮಾನಗಳಿಂದ ಈ ವಿಚಾರವೇನೂ ಗೊತ್ತಾಗಲಿಲ್ಲ. ಇಟಲಿಯ ಒಬ್ಬ ಹುದ್ದೇದಾರನು ನಮ್ಮ ಪಕ್ಷದವರ ಸೈನ್ಯಗಳ ಸಾಲುಗಳನ್ನು ನೋಡಿದನೆಂದೂ, ನಮ್ಮ ಪಕ್ಷದವರು ಶತ್ರುವಿನ ಸಾಲನ್ನು ಮುರಿದು ಶತ್ರು ಸೈನ್ಯಗಳನ್ನು ಹಿಂದಕ್ಕೆ ಓಡಿಸುವದನ್ನು ಸಂಪೂರ್ಣವಾಗಿ ಎಲ್ಲವನ್ನೂ ಸಿದ್ಧಪಡಿಸಿಕೊಂಡಲ್ಲದೆ ನುಗ್ಗಿ ಹೋಗುವುದು ಸರಿಯಲ್ಲವೆಂದು ಹೇಳಿಕೆಯೂ ಪ್ರಕಟವಾಗಿದೆ. ಜರ್ಮನಿಯವರು ರಷ್ಯಾ ರಾಜ್ಯದೊಳಕ್ಕೆ ಬೇಕಾದಷ್ಟು ನುಗ್ಗಿ ಹೋಗಲಿ. ಅವರು ಅಲ್ಲಿ ನುಗ್ಗಿ ದೂರ ದೂರವಾಗಿ ಹೋದಷ್ಟೂ ತಮ್ಮ ಸೈನ್ಯವನ್ನು ಅಲ್ಲಿಂದ ಪಶ್ಚಿಮ ರಣರಂಗಕ್ಕೆ ಕರೆದುತರುವುದು ಅಸಾಧ್ಯವಾದೀತು. ಈ ಮಾತನ್ನು ರಷ್ಯಾ ಸೈನ್ಯಾಧಿಪತಿಗಳು ಸಹ ಸರಿಯೆಂದು ಒಪ್ಪಿಕೊಂಡಿರುವಂತೆ ಪ್ರಕಟವಾಗಿದೆ.

ಕದನಗಳು ನಡೆದ ವರ್ತಮಾನವೇನೋ ಬಹಳ ಸ್ವಲ್ಪ. ಆದರೂ ಬ್ರಿಟಿಷ್ ಹುದ್ದೇದಾರರುಗಳು ನಷ್ಟಪಟ್ಟಿರುವುದು ಬಹಳ ಹೆಚ್ಚಾಗಿದೆ. ಈ ಪೈಕಿ ಸ್ಪೋಲಿಯಲ್ಲೇ ಹೆಚ್ಚು ನಷ್ಟವಾಯಿತು.

ನಮ್ಮ ಪಕ್ಷದವರ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಬೆಲ್ಜಿಯಮ್‌ನೊಳಗೆ ಜರ್ಮನಿಯವರ ಅನೇಕ ಠಾಣ್ಯಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಸುರಿದವು. ಇದರಿಂದ ಅನೇಕ ಶತ್ರು ಸೈನಿಕರು ಮೃತಪಟ್ಟರು; ಹಲವರಿಗೆ ಗಾಯಗಳಾದವು. ಮನೆ ಮಠಗಳೂ, ಠಿಕಾಣೆಗಳೂ, ವಿಮಾನಯಂತ್ರಗಳೂ ನಾಶ ಹೊಂದಿದವು. ಜರ್ಮನಿಯ ವಿಮಾನ ಯಂತ್ರಗಳು ಕೂಡ ಅಂತರಿಕ್ಷದಲ್ಲಿ ಬಂದು ಫ್ರಾನ್ಸಿನ ಕೆಲವು ನಗರಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿಹೋದವು.

ಬೆಲ್ಜಿಯಮ್ ಸೈನಿಕರು ಮದ್ದು ಗುಂಡು ಮೊದಲಾದವುಗಳನ್ನೆಲ್ಲಾ ಜರ್ಮನಿಗೆ ಒಪ್ಪಿಸದೆ ಬಚ್ಚಿಟ್ಟುಕೊಂಡಿದಾರೆ. ಯುದ್ಧವಾದ ಮೇಲೆ ಆದರೂ ಹೊರಗೆ ತೆಗೆದು ಕೊಡಬೇಕೆಂದು ಜರ್ಮನಿ ಸೈನಿಕರಿಗೆ ಬರಬೇಕೆಂದು ಹುಕುಂ ಹೊರಡಿಸಿದೆ.

ಪೂರ್ವ ರಣರಂಗದಲ್ಲಿ.

ರಷ್ಯಾ ಸೇನಾಪತಿಗಳು ತಮ್ಮ ಸೈನ್ಯಗಳ ಸಾಲನ್ನು ಚಿಕ್ಕದಾಗಿಯೂ, ಬೇರ ...ಗಿಯೂ, ಸುರಕ್ಷಿತವಾಗಿರುವಂತೆಯೂ ಮಾಡಿಕೊಳ್ಳುವುದರಲ್ಲೇ ಇದ್ದಾರೆ. ...ತ್ತೀಚ್ಚೆಗೆ ಅವರು ಕೆಲವು ರಾಜ್ಯಗಳಲ್ಲಿ ಹಿಮ್ಮೆಟ್ಟಿ ಹೋಗುತ್ತಲೂ, ಹೀಗೆ ...ಭಾಗಗಳೂ ಶತ್ರುವಿನ ಮೇಲೆ ಕದನಮಾಡುತ್ತಲೂ ಬಂದಿದ್ದಾರೆ. ಉತ್ತರ ...ದಲ್ಲಿ ಅವರು ಹಿಮ್ಮೆಟ್ಟುವುದನ್ನು ನಿಲ್ಲಿಸಿ ರೀಗಾ ನಗರದ ಹತ್ತಿರ ಜರ್ಮನಿ ...ವರು ನುಗ್ಗಿ ಬಾರದಂತೆ ಅವರನ್ನು ತಡೆದುಬಿಟ್ಟಿದ್ದಾರೆ. ಜರ್ಮನಿಯವರಾ ...ಗೆ ಒಂದು ನದಿಯನ್ನು ದಾಟಬೇಕೆಂದು ಪ್ರಯತ್ನಗಳನ್ನು ಮಾಡುತ್ತಿ...ರು; ಇದುವರೆಗೆ ಅವರು ದಾಟಲು ಸಾಧ್ಯವಾಗದೆ ಇದೆ. ಅಲ್ಲಿಂದ ಸ್ವಲ್ಪ ...ಕ್ಕೆ ರಷ್ಯಾದವರು ಸೈನ್ಯಗಳನ್ನು ಕೂಡಿಸಿಕೊಂಡು ಜರ್ಮನಿಯವರ ...ಗೆ ನುಗ್ಗಿ ಕದನಮಾಡಿ ಅವರನ್ನು ಹಿಂದಕ್ಕೆ ಓಡಿಸಿದ್ದಲ್ಲದೆ ಕೆಲವು ನೂರು ...ನ್ನೂ 13 ಮೆಷೀನ್ ಫಿರಂಗಿಗಳನ್ನೂ ಕೈಸೆರೆ ಹಿಡಿದುಕೊಂಡರು. ಅಲ್ಲಿಂದ ...ಸ್ವಲ್ಪ ದಕ್ಷಿಣಕ್ಕೆ ರಷ್ಯಾದವರು ಇನ್ನು ಕೆಲವು ಕೋಟೆಗಳನ್ನು ಬಿಟ್ಟು ...ದ ಪ್ರಕಾರ ಹಿಂದಕ್ಕೆ ಹೋಗಿ ಸುರಕ್ಷಿತವಾದ ಸ್ಥಾನಗಳಲ್ಲಿ ನಿಂತು ...ರು. ಹೀಗೆ ಹಿಮ್ಮೆಟ್ಟಿ ಹೋಗುವಲ್ಲಿ ಒಂದು ರೆಜಿಮೆಂಟಿನಷ್ಟು ಸೈನ್ಯವನ್ನು ...ಯವರು ಬಳಸಿ ಸುತ್ತುಹಾಕಿಕೊಂಡರು. ಆದರೆ ಆ ರೆಜಿಮೆಂಟಿನ ...ಬಹು ಪರಾಕ್ರಮದಿಂದ ನುಗ್ಗಿ ಕದನಮಾಡಿ ಜರ್ಮನಿಯವರಲ್ಲಿ ಒಂದು ...ಸೈನ್ಯವನ್ನು ನಾಶಪಡಿಸಿ ಹೊರಕ್ಕೆ ಬಂದುಬಿಟ್ಟರು. ಈ ಯುದ್ಧ ...ದ ದಕ್ಷಿಣಭಾಗದಲ್ಲಿ ಅಂದರೆ ಗೆಲಿಷಿಯಾದಲ್ಲಿ ಜರ್ಮನಿಯವರಿಗೂ ...ಯಾದವರಿಗೂ ಮುಂದಕ್ಕೆ ನುಗ್ಗಿ ಹೋಗದಂತೆ ಬಲವಾದ ತಡೆಕಟ್ಟಿ ...ದೆ. ಅವರು ನುಗ್ಗಿ ಹೋಗಿ ಎಲ್ಲು ಸಲ ಮೇಲೆ ಬಿದ್ದು ಕದನಮಾಡಿದರು; ...ರಷ್ಯಾದವರು ಅವರ ಮೇಲೆ ಬಿದ್ದು ಕದನಮಾಡಿ ನಾಲ್ವತ್ತು ಮೈಲಿಯ ...ಕ್ಕೆ ಅವರನ್ನು ಹಿಂದಕ್ಕೆ ಓಡಿಸಿದರು ಮತ್ತು ರಷ್ಯಾದವರು 100 ...ದ್ದೇದಾರರನ್ನೂ, 7,000 ಯುದ್ಧಭಟರನ್ನೂ, 30 ಫಿರಂಗಿಗಳನ್ನೂ, ...ಮೆಷೀನ್ ಫಿರಂಗಿಗಳನ್ನೂ ಕೈಸೆರೆ ಹಿಡಿದಿದ್ದಾರೆ. ಈ ಸೈನಿಕರಲ್ಲಿ ...ನೇ ಒಂದು ಭಾಗ ಜರ್ಮನಿಯವರು. ಈ ಕದನದ ಬಳಿಕ ರಷ್ಯಾದ ...ಸ್ಥಳದ ವಾಪಸು ಹೋಗಿ ತಮ್ಮ ಸ್ಥಾನಗಳನ್ನು ಸೇರಿಸಿಕೊಂಡರು.

ಈಗ ರಷ್ಯಾದವರು ತಮ್ಮ ಸೈನ್ಯಗಳನ್ನೆಲ್ಲಾ ಒಟ್ಟಿಗೆ ಒಂದೇ ಗಮನಾಗಿ ...ಕೊಂಡರೆಂದು ಕಾಣುತ್ತದೆ. ಜರ್ಮನಿಯವರು ಈ ಸೈನ್ಯಗಳನ್ನು ವಿಭಾ...ಮಾಡಿ ಕೈಸೆರೆ ಹಿಡಿಯಲಾರದೆ ಹೋಗಿದ್ದಾರೆ. ರಷ್ಯಾ ಸೈನ್ಯಗಳು ತಮ್ಮ ...ಗಳನ್ನು ಬಿಟ್ಟುಕೊಡದೆ ಎಲ್ಲಿನ ತನಕ ಕಾಪಾಡಿಕೊಳ್ಳುತ್ತಾ ಬರುವವೋ ...ದ ತನಕ ಜರ್ಮನಿಯವರು ಅವರನ್ನು ಅಲ್ಲಿ ಬಿಟ್ಟು ತಮ್ಮ ಸೈನ್ಯವನ್ನು ...ಂದ ಪಶ್ಚಿಮ ರಣರಂಗಕ್ಕೆ ಕಳುಹುವುದು ಸಾಧ್ಯವಾಗಲಾರದು. ರಷ್ಯಾದ ...ಕೆಲವು ಮಾಸ ಹಿಮ್ಮೆಟ್ಟಿ ಹೋಗುತ್ತಾರಾದರೂ ಅವರ ಉತ್ಸಾಹವಾಗಲಿ ...ಯವಾಗಲಿ ಸ್ವಲ್ಪವೂ ಕುಂದಿ ಹೋದಲಿಲ್ಲ.

ಇಟಲಿ ಮತ್ತು ಆಸ್ಟ್ರಿಯಾ.

ಈ ಯುದ್ಧಭೂಮಿಯಿಂದ ವಿಶೇಷ ವರ್ತಮಾನವೇನೂ ಬಂದಿಲ್ಲ. ಆದರೆ ...ನಡೆಯುವ ವಿದ್ಯಮಾನಗಳು ತುಂಬಾ ತೃಪ್ತಿಕರವಾಗಿರುತ್ತವೆ. ಆಸ್ಟ್ರಿ...ಯವರು ಪದೇ ಪದೇ ಇಟಲಿಯವರ ಮೇಲೆ ನುಗ್ಗಿ ಕದನಮಾಡುತ್ತಾರೆ. ...ಪ್ರತಿ ಸಲವೂ ಅವರು ಸೋತು ಹಿಂದಕ್ಕೆ ಬರುತ್ತಿರುವರು. ಇಟಲಿಯ ...ನಿಧಾನವಾಗಿ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಾ, ಆಸ್ಟ್ರಿಯಾ ...ಕರು ಹಿಡಿದಿರುವ ಕಂದಕಗಳನ್ನು ಆಕ್ರಮಿಸಿಕೊಳ್ಳುತ್ತಾ ಇದ್ದಾರೆ. ...ಕೆಗಳಲ್ಲಿ ಆಸ್ಟ್ರಿಯಾದವರು ಹಿಮ್ಮೆಟ್ಟಿ ಹೋಗುತ್ತಿರುವಂತೆ ಕಾಣು... ಇಟಲಿಯವರ ವಿಮಾನಯಂತ್ರಗಳು ಹೋಗಿ ಟ್ರಿಯೆಸ್ಟ್ ನಗರದ ಬಳಿ ...ವ ರೈಲ್ವೆ ಸ್ಟೇಷನ್‌ಗಳ ಮೇಲೆ ಗುಂಡುಗಳನ್ನು ಹಾಕುತ್ತಲಿವೆ.

ಟರ್ಕಿಯಲ್ಲಿ.

ಕೆಲವು ದಿನಗಳ ಹಿಂದೆ ರಷ್ಯಾದವರು ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ...ಯವರ ಮೇಲೆ ಜಯಪ್ರದ ಹೊಂದಿದರಷ್ಟೆ. ಆ ಯುದ್ಧದಲ್ಲಿ ರಷ್ಯಾದ ...5,215 ಟರ್ಕಿ ಸೈನಿಕರನ್ನೂ, 13 ಫಿರಂಗಿಗಳನ್ನೂ, 16 ಮೆಷೀನ್ ...ಗನ್‌ಗಳನ್ನೂ ಕೈಸೆರೆ ಹಿಡಿದರೆಂದೂ, ಮದ್ದು ಗುಂಡೂ ಅಪಾರವಾಗಿ ಸಿಕ್ಕಿ... ಈ ವಾರ ತಿಳಿಸಲ್ಪಟ್ಟಿವೆ.

ಕಪ್ಪು ಕಡಲಿನಲ್ಲಿ ರಷ್ಯಾದವರು ಫಿರಂಗಿಗಳನ್ನು ಇರಿಸಿರುವ ಕೆಲವು ಸಣ್ಣ ...ಟರ್ ದೋಣಿಗಳನ್ನು ಇಟ್ಟಿದ್ದಾರೆ. ಈ ಮೋಟರ್ ದೋಣಿಗಳು ಟರ್ಕಿ ...ಗಳಲ್ಲಿ ಹತ್ತಿಹೋಗಿ ಟರ್ಕಿಯವರ ಹಡಗುಗಳನ್ನೂ, ಸೈನ್ಯಗಳು ಸಾಗುವ ...ಗಳನ್ನೂ ನಾಶಪಡಿಸಿದವು.

ಗಲ್ಲಿಪೊಲಿ ಅರ್ಧ ದ್ವೀಪದಲ್ಲಿ ಬ್ರಿಟಿಷರು ಕಳೆದ ವಾರ ಇನ್ನೂ ಮುಂದಕ್ಕೆ ...ದೂರ ನುಗ್ಗಿ ಹೋಗಿ ಪ್ರಮುಖ್ಯವಾದ ಕೆಲವು ಸ್ಥಾನಗಳನ್ನು ಆಕ್ರಮಿಸಿ...ರು. ಇದಕ್ಕೋಸ್ಕರ ಅಲ್ಲಿ ಬಹಳ ಘೋರವಾದ ಕದನವಾಯಿತು. ...ಷ್ ಸೈನಿಕರಿಗೆ 3 ಮೆಷೀನ್ ಫಿರಂಗಿಗಳು, 3 ಮೋಟರುಗಳೆಂಬ ಫಿರಂಗಿ..., 300 ಬಂದೂಕುಗಳು, 500 ಸಿಡಿಮದ್ದಿನ ಗುಂಡುಗಳು, ಅಪಾರವಾದ ...ಮದ್ದು ಗುಂಡು, ಇವೆಲ್ಲಾ ಸಿಕ್ಕಿದವು. ಈಗ ಬ್ರಿಟಿಷರು ಆ ಅರ್ಧ ...ದಲ್ಲಿ ಮಧ್ಯ ಪ್ರದೇಶದ ತನಕ ನುಗ್ಗಿ ಹೋದಂತಾಯಿತು. ನಮ್ಮ ಸಣ್ಣ ...ಗಳು ಹೋಗಿ ಜಲಮಾರ್ಗದಲ್ಲಿ ಟರ್ಕಿಯವರು ಹಾಕಿಕೊಂಡಿರುವ ...ನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಹುಡುಕಿ ಮಾರ್ಗವನ್ನು ಸರಿಮಾ...ತ್ತಿವೆ ಎಂದು ಟರ್ಕಿಯವರು ತಿಳಿಸುತ್ತಾರೆ. ಇದರಿಂದ ಈ ಕಡೆಯ ಯುದ್ಧ ...ಗಳು ಇನ್ನೇನು ಕೊನೆಯಾಗುವಂತೆ ಕಾಣುತ್ತದೆ. ಬ್ರಿಟಿಷ್ ಸಬ್‌ಮೆ...ಗಳು ಹೋಗಿ ಟರ್ಕಿಯವರ ಸೈನ್ಯಗಳನ್ನು ಸಾಗಿಸುವಂಥಾ ನಾಲ್ಕು ...ಗಳನ್ನು ಮುಳುಗಿಸಿಬಿಟ್ಟವು.

ಮಾಂಟಿನೀಗ್ರೋದಲ್ಲಿ.

ಆಸ್ಟ್ರಿಯಾದವರಿಗೂ ಮಾಂಟಿನೀಗ್ರೋದವರಿಗೂ ಒಂದು ಕದನವಾಯಿ...ದು ಒಂದು ತಂತಿವರ್ತಮಾನ ಹೇಳುತ್ತದೆ. ಇದರಲ್ಲಿ ಆಸ್ಟ್ರಿಯಾದ ...ರು ಸೋತು ಹಿಂದಕ್ಕೆ ಹೋದರು. ತಂತಿವರ್ತಮಾನಗಳು ತಿಳಿಸುವಂಥಾ ...ಗಳು ಮಾಂಟಿನೀಗ್ರೋ ಸಂಸ್ಥಾನದ ಆಚೆ ಆಸ್ಟ್ರಿಯಾದೊಳಗಿರುವಂ...ಗಳು ತ್ತವೆ.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ವಿಶೇಷ ವರ್ತಮಾನವೇನೂ ಬಂದಿಲ್ಲ. ನಮ್ಮ ಪಕ್ಷದವರು ...ನ್ ಎಂಬ ಸೀಮೆಯೊಳಗೆ ಇನ್ನೊಂದು ಪಟ್ಟಣವನ್ನು ಗೆದ್ದು ...ಸ್ವಾಧೀನಪಡಿಸಿಕೊಂಡಿದ್ದಾರೆ. ಇನ್ನೊಂದು ರಾಜ್ಯದಲ್ಲಿ ಕದನವಾಗಿ ಜರ್ಮನಿ...ಯವರನ್ನು ಸೋಲಿಸಿದರು. ಅಲ್ಲಿ ಜರ್ಮನಿಗೆ ಸೇರಿರುವ ಪ್ರದೇಶ ಇನ್ನೇನೂ ...ಉಳಿದಿರುವಂತೆ ಕಾಣಬರುವುದಿಲ್ಲ.

ಇತರ ವಿಷಯಗಳು.

ಜರ್ಮನಿಯವರಿಗೂ ಅಮೇರಿಕದವರಿಗೂ ಕೆಲವು ಕಾಗದ ಪತ್ರಗಳು ನಡೆ...ವೆ. ಇವುಗಳ ಅರ್ಥ ಸರಿಯಾಗಿ ಗೊತ್ತಾಗಲಿಲ್ಲ. ಪ್ರತಿ ಒಂದು ವರ್ತ...ದ ಹಡಗುಗಳನ್ನು ಜರ್ಮನಿಯವರು ಮುಂದಾಗಿ ಎಚ್ಚರಿಕೆಕೊಟ್ಟು, ಅದರಲ್ಲಿ ...ವ ಪ್ರಯಾಣಿಕರು ಬದುಕಿಕೊಳ್ಳುವತನಕ ಸಾವಕಾಶಮಾಡಿ ಬಳಿಕ ಅದನ್ನು ...ಮುಳುಗಿಸಬಹುದೆಂದು ಅಮೇರಿಕದವರು ಕೇಳುತ್ತಾರೆ. ಜರ್ಮನಿಯವರೂ ...ಪ್ರಯಾಣಿಕರಿರುವಂಥಾ ಹಡಗುಗಳ ವಿಷಯದಲ್ಲಿ ತಾವು ಆ ರೀತಿ ...ನಡೆದುಕೊಳ್ಳುತ್ತೇವೆಂದು ಒಪ್ಪಿರುವಂತೆ ಕಾಣುವುದು. ಇಷ್ಟಾದರೂ ಸ್ಥಿರಪಟ್ಟರೆ ...ಗಳು; ಅದರಿಂದ ಪ್ರಯಾಣಿಕರಿಗೆ ತಮ್ಮ ಪ್ರಾಣಕ್ಕೆ ಭಯವಿಲ್ಲವೆಂಬ ಧೈರ್ಯ...ಯುಂಟಾದೀತು. ಈ ಮಾತಿನಂತೆ ಜರ್ಮನಿಯವರು ನಡೆಯುವರೋ ಏನೋ ಮುಂದೆ ನೋಡಬೇಕು.

ಅಡ್ಮಿರಲ್ ವಾನ್ ತಿರ್ಪಿಟ್ಸ್ ಎಂಬಾತನೇ ಜರ್ಮನ ಜಹಜುಗಳ ಅಧಿಪತಿ. ಈತನಿಗೂ ಜರ್ಮನಿಯ ಖಜಾನಾ ಛತ್ರಿಗೂ ಭಿನ್ನಾಭಿಪ್ರಾಯ ಉಂಟಾಗಿದೆ ಎಂದು ಹೇಳುತ್ತಾರೆ. ಆ ಅಧಿಪತಿಗೆ ದೀರ್ಘಸ್ಥಿತಿ ಕೊಟ್ಟು ವಿಶ್ರಾಂತಿ ಪಡೆಯಬೇಕಾಗಿದೆ. ಜರ್ಮನಿಯವರು ಬ್ರಿಟಿಷ್ ಹಡಗುಗಳ ಸಂಚಾರವನ್ನು ನಿಲ್ಲಿಸಿ ನಾಶಮಾಡಬೇಕೆಂದು ಉದ್ದೇಶಪಟ್ಟದ್ದು ವ್ಯರ್ಥವಾಯಿತು. ಆದಕಾರಣ ಅಮೇರಿಕದವರು ಕೇಳುವ ಅರ್ಥವನ್ನು ಜರ್ಮನಿಯವರು ಒಪ್ಪಿಕೊಳ್ಳಬಹುದು. ಯುದ್ಧವು ಪ್ರಾರಂಭವಾದಾರಭ್ಯ ಜರ್ಮನಿಯ ಸಬ್‌ಮೆರೀನುಗಳು ಬ್ರಿಟಿಷರ 11,328 ಹಡಗುಗಳಲ್ಲಿ 138 ನ್ನು ಮಾತ್ರ ಇದುವರೆಗೆ ಮುಳುಗಿಸಿರುವವು. ಅವರಲ್ಲಿ ಅನೇಕ ಹಡಗುಗಳು ಸಣ್ಣವು, ಹಳೆಯವು, ವೇಗವಾಗಿ ಹೋಗತಕ್ಕವುಗಳಾಗಿರಲಿಲ್ಲ. ಕಳೆದ ವಾರ ಮೂರು ಹಡಗುಗಳನ್ನು ಮಾತ್ರ ಮುಳುಗಿಸಿದ್ದಾರೆ.

ರೋಮನ್ ಕ್ರೈಸ್ತ ಮತಾಧಿಪತಿಯಾದ ಪೋಪ್ ಸ್ವಾಮಿಗಳು ಕೇರೀರು ಮಾಡಿಸಬೇಕೆಂಬ ಉದ್ದೇಶದಿಂದ ಅಮೇರಿಕದ ಪ್ರೆಸಿಡೆಂಟ್ ವಿಲ್‌ಸನ್ ರವರಿಗೆ ತಮ್ಮ ಕೈಕೆಳಗಿರುವ ಕಾರ್ಡಿನಲ್ ಗಿಬ್ಬನ್ಸ್ ಎಂಬ ಅಧಿಕಾರಿಯ ಮೂಲಕ ಹೇಳಿ ಕಳುಹಿಸಿದರೆಂದು ಪ್ರಕಟವಾಗಿದೆ. ಅಮೇರಿಕದ ಪ್ರೆಸಿಡೆಂಟರು ಮಧ್ಯಸ್ಥಗಾರರಾಗಿ ನಿಂತು ಕೇರಾರು ಮಾಡಿಸಬೇಕೆಂಬುವುದೇ ಸ್ವಾಮಿಗಳ ಉದ್ದೇಶ. ಆದರೆ ಕರಾರಿನ ಕಲಮುಗಳನ್ನು ಪ್ರಕಟಿಸಿಲ್ಲ. ಆದಾಗ್ಯೂ ಆ ಕಲಮುಗಳು ಜರ್ಮನಿಯವರಿಗೂ, ಆಸ್ಟ್ರಿಯಾದವರಿಗೂ, ಟರ್ಕಿಯವರಿಗೂ ಅನುಕೂಲವಾಗಿವೆ ಎಂದು ತಿಳಿಸಲಾಗಿದೆ. ಸದ್ಯದಲ್ಲಿ ನಮ್ಮ ಪಕ್ಷದವರು ಕರಾರು ಮಾಡಿಕೊಳ್ಳುವುದಕ್ಕೆ ಒಪ್ಪುವವರಾಗಿಲ್ಲವೆಂದು ನಮಗೆ ತೋರುತ್ತದೆ.

ಬ್ರಿಟಿಷ್ ಮಂತ್ರಿ ಸಭೆಯಲ್ಲಿ ಒಬ್ಬರಾದ ಸರ್ ಎಡ್ವರ್ಡ್ ಗ್ರೇ ಯವರು ಯುದ್ಧಕ್ಕೆ ಮುಂಚೆ ಇಂಗ್ಲೆಂಡಿಗೂ ಜರ್ಮನಿಗೂ ನಡೆದ ವಿಚಾರಗಳನ್ನು ಕುರಿತು ಕೆಲವು ಸಂಗತಿಗಳನ್ನು ಪ್ರಕಟಮಾಡಿದ್ದಾರೆ. ಜರ್ಮನಿಯವರು—ನಾವು ಏನು ಮಾಡಿದಾಗ್ಯೂ ನೀವು ತಲೆಹಾಕದೆ ತಟಸ್ಥರಾಗಿರಬೇಕು ಎಂದು ಮೊದಲೇ ಇಂಗ್ಲೆಂಡನ್ನು ಕೇಳಿದರಂತೆ. ಜರ್ಮನಿಯವರು ಆಸ್ಟ್ರಿಯಾದವರಿಗೆ ಚಿತಾವಣೆ ಮಾಡಿ ಯುದ್ಧಕ್ಕೆ ಹೊರಡಿಸಿದರೆ—ಹೀಗೆ ಹೊರಡಿಸಿದವರೇ ಜರ್ಮನಿಯವರು—ಬ್ರಿಟನ್ನವರು ತಟಸ್ಥರಾಗಿರಬೇಕೆಂದು ಕೇಳಿದರು. ಜರ್ಮನಿಯವರು ಮಾತ್ರ ತಮ್ಮ ಸ್ನೇಹವುಳ್ಳ ರಾಜ್ಯಕ್ಕೆ ಸಹಾಯವಾಗಿ ಹೊರಡಬಹುದಂತೆ; ಬ್ರಿಟಿಷರು ಮಾತ್ರ ಅವರ ಸ್ನೇಹಿತರಿಗೆ ಸಹಾಯ ಮಾಡಲು ಹೋಗದೆ ಸುಮ್ಮನಿರಬೇಕಂತೆ. ಇಂಥಾ ಪಕ್ಷಪಾತವಾದ ಸಲಹೆಯು ಬ್ರಿಟಿಷರಿಗೆ ಒಪ್ಪಿಗೆಯಾಗಲಿಲ್ಲ. ಒಪ್ಪಿದ್ದ ಪಕ್ಷದಲ್ಲಿ ಜರ್ಮನಿಯವರೇ ತಮ್ಮ ಪ್ರತಾಪವನ್ನು ಪ್ರಪಂಚದಲ್ಲಿ ಹಬ್ಬಿಸಿ ಕೊಳ್ಳುತ್ತಿದ್ದರು. ಬೆಲ್ಜಿಯಮ್ ರಾಜ್ಯಕ್ಕೆ ವಿಪತ್ತು ಪ್ರಾಪ್ತವಾದದ್ದು ಜರ್ಮನಿಯ ದುರಾಗತ ಕೃತ್ಯದಿಂದಲೇ ಎಂದು ಡಚ್ಚರ ಪತ್ರಿಕೆಗಳು ಸ್ಥಾಪಿಸುತ್ತವೆ.

ರಷ್ಯಾದವರು ಯುದ್ಧವನ್ನು ಮುಂದರಿಸುವುದರಲ್ಲಿ ಅವರಿಗೆ ಹಣದ ಕಷ್ಟವೇನೂ ಇಲ್ಲ. ಈಗಾಗಲೇ ಅವರು 910 ಕೋಟಿ ರೂಪಾಯಿನ್ನು ಸಾಲ ಮಾಡಿದರು; ಇನ್ನು ಮುಂದೆಯೂ ಸಾಲ ಮಾಡಬೇಕಾಗುತ್ತದೆ. ರಷ್ಯಾದವರು ಸಾಲವನ್ನು ಹೀಗೆ ಸರಿಯಾಗಿ ತೀರಿಸುತ್ತಾರೆ. ಸದ್ಯದಲ್ಲಿ ಬ್ರಿಟನ್ ರಾಜ್ಯವನ್ನು ಬಿಟ್ಟರೆ ರಷ್ಯಾ ರಾಜ್ಯದಲ್ಲಿರುವಷ್ಟು ರಿಜರ್ವ್ ಚಿನ್ನದಷ್ಟು ಇನ್ಯಾವ ರಾಜ್ಯದಲ್ಲೂ ಇಲ್ಲ. ವಾರ್ಸಾ ಪಟ್ಟಣದಲ್ಲಿರುವ ಕೆಲವು ರಷ್ಯಾ ಧನಿಕರು ಜರ್ಮನಿಯವರಿಗೆ ಅವರ ನೋಟುಗಳನ್ನು ತೆಗೆದುಕೊಂಡು ಭಂಗಾರವನ್ನು ಕೊಡದೆ ತಿರಸ್ಕರಿಸಿದರು. ಜರ್ಮನಿಯವರಿಗೆ ಕೋಪ ಹುಟ್ಟಿ, 30 ಜನರನ್ನು ಹಿಡಿದು ಸೆರೆಯಲ್ಲಿ ಹಾಕುವಂತೆ ಜರ್ಮನಿಗೆ ಸಾಗಹಾಕಿರುತ್ತಾರೆ.

ಪರ್ಷಿಯಾ ರಾಜ್ಯಕ್ಕೆ ಸೇರಿದ ಬೆಬ್ರಿಜ್ ಪಟ್ಟಣದಲ್ಲಿ ಜರ್ಮನಿ ರಾಯಭಾರಿಯು ಅಲ್ಲಿರುವ ರಷ್ಯಾ ಮತ್ತು ಬ್ರಿಟಿಷ್ ರಾಯಭಾರಿಗಳನ್ನು ಕೊಂದು ಹಾಕಬೇಕೆಂದು ಕಾರ್ಯಭಾಗ ನಡೆಸಿದನು. ಅವರಿಬ್ಬರೂ ಸಿಕ್ಕದೆ ಪ್ರತಿಭಟಿಸಿ ತಪ್ಪಿಸಿಕೊಂಡರು. ಪರ್ಷಿಯಾ ಸರಕಾರದವರು ಇವರ ಸಂರಕ್ಷಣೆಗಾಗಿ ಸೈನ್ಯವನ್ನು ಕಳುಹಿಸಿದ್ದಾರೆ.

ಡೆನ್ಮಾರ್ಕಿನ ಬಳಿ ಸಮುದ್ರದೊಳಗೆ ಮುಳುಗಿಸಲ್ಪಟ್ಟ ಬ್ರಿಟಿಷ್ ಸಬ್‌ಮೆರೀನನ್ನು ಮೇಲಕ್ಕೆ ಎತ್ತಿದ್ದಾಯಿತು. ಆದರೆ ಆ ಸರ್ಕಾರದವರು ಯುದ್ಧ ಮುಗಿಯುವ ತನಕ ಅದನ್ನು ಹೊರಕ್ಕೆ ಬಿಡದೆ ಇಟ್ಟುಕೊಳ್ಳುತ್ತಾರೆ.

ಮೆಸಿಡೋನಿಯಾ ಸೀಮೆಯು ಈಗ ಸರ್ಬಿಯಾಗೆ ಸೇರಿದೆ. ಅದನ್ನು ಕೊಡಿಸಬೇಕೆಂದು ಬಲ್ಗೇರಿಯಾ ಕೇಳಿತು. ಅದನ್ನು ಬಿಟ್ಟುಕೊಡಲಾರೆವೆಂದು ಸರ್ಬಿಯಾದವರು ಹೇಳಿಬಿಟ್ಟರು. ಆದಕಾರಣ ಬಲ್ಗೇರಿಯವು ಈಗಿನ ಯುದ್ಧದಲ್ಲಿ ನಮ್ಮ ಪಕ್ಷದವರಿಗೆ ಸಹಾಯಮಾಡುವುದಿಲ್ಲವೆಂದೂ, ತಟಸ್ಥನಾಗಿರುವುದಾಗಿಯೂ ತಿಳಿಸಿದೆ.

ಜರ್ಮನಿಯವರು 64 ವಯಸ್ಸಿನೊಳಗಿರತಕ್ಕ ಗಂಡಸರೆಲ್ಲಾ ಸೈನ್ಯಕ್ಕೆ ಸೇರಬೇಕೆಂದು ಹುಕುಂ ಕೊಟ್ಟಿದ್ದಾರಂತೆ. ಇಂಥವರನ್ನು ರೈಲ್ವೆ ಮೊದಲಾದ ಇಲಾಖೆಗಳಲ್ಲಿ ನೇಮಿಸಿಕೊಳ್ಳುವುದು ಸಾಧ್ಯವಾದದ್ದು; ಅದು ಬಿಟ್ಟು ಅಂಥವರನ್ನು ಸೈನ್ಯಕ್ಕೆ ಸೇರಿಸಿಕೊಂಡರೆ ಯುದ್ಧಭೂಮಿಯಲ್ಲಿ ಅವರಿಂದ ಪ್ರಯೋಜನವೇನೂ ಆಗುವುದಿಲ್ಲ.

ಫ್ರಾನ್ಸಿನಲ್ಲಿ ಯುದ್ಧಕಾರ್ಯಗಳಲ್ಲಿ ಸೇರದೆ ಇರುವಂಥಾ ಬ್ರಿಟಿಷ್ ಮತ್ತು ಹಿಂದುಸ್ಥಾನದ ಸೈನಿಕರು ಫ್ರೆಂಚ್ ರೈತರಿಗೆ ಸಹಾಯಮಾಡಿ ಅವರ ಜಮೀನುಗಳಲ್ಲಿ ಬೆಳೆದ ಪೈರನ್ನು ಕೊಯಿದು ಕಾಗಿಸುತ್ತಿದ್ದಾರೆ.

ಜರ್ಮನಿಯ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನ ಯಂತ್ರಗಳು ಯಾವ ಯಾವ ಪಟ್ಟಣಗಳ ಮೇಲೆ ಹಾರಿ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿದವೆಂಬ ಸಮಾಚಾರವನ್ನು ಪ್ರಕಟಿಸುವುದಿಲ್ಲವೆಂದು ಮಿ॥ ಬಾಲ್ಫರವರು ಹೇಳಿ, ಅದಕ್ಕೆ ಕಾರಣಗಳನ್ನು ತಿಳಿಸಿದ್ದಾರೆ. ಅವು ಬರುವುದು ರಾತ್ರಿಹೊತ್ತು. ಅಂತರಿಕ್ಷದಿಂದ ಆ ಕತ್ತಲಲ್ಲಿ ಯಾವ ಊರು, ಯಾವ ಸ್ಥಳವೆಂಬುವುದು ವಿಮಾನ ಯಂತ್ರಗಳಿಗೆ ಗೋಚರವಾಗುವುದಿಲ್ಲ. ನಾವು ಅಂಥಾ ಸ್ಥಳಗಳ ಹೆಸರುಗಳನ್ನು ಪ್ರಕಟಿಸಿದರೆ ವಿಮಾನ ಯಂತ್ರಗಳು ಆ ಸಮಾಚಾರವನ್ನು ತಿಳಿದು ಮತ್ತೆ ಬಂದು ಕೆಡುಕನ್ನುಂಟುಮಾಡಲು ಅವಕಾಶ ಉಂಟಾಗುವುದು.

ನಮ್ಮ ಪಕ್ಷದವರು ಗ್ರೀಸ್ ರಾಜ್ಯದವರ ಕೂಡ ಒಂದು ಕರಾರನ್ನು ಮಾಡಿಕೊಂಡರು. ಗ್ರೀಸ್ ರಾಜ್ಯದವರು ತಮ್ಮ ರೇವುಪಟ್ಟಣಗಳ ಮೂಲಕ ಶತ್ರುಗಳಿಗೆ ಯಾವುದೊಂದು ಯುದ್ಧ ಸಾಮಗ್ರಿಯೂ ಹೋಗಗೊಡದಂತೆಯೂ, ಗ್ರೀಸ್ ರಾಜ್ಯದಿಂದ ಬರುವ ಹಡಗುಗಳನ್ನು ನಮ್ಮ ಪಕ್ಷದವರು ತಡೆದು ಶೋಧನೆಮಾಡುವುದಿಲ್ಲವೆಂದೂ ಪರಸ್ಪರ ಒಪ್ಪಂದವಾಗಿರುತ್ತದೆ.

ಈಚೆಗೆ ಜರ್ಮನ ಸೈನಿಕರಲ್ಲಿ ನಷ್ಟಪಟ್ಟಿರುವ ಹುದ್ದೇದಾರರ ಸಂಖ್ಯೆಯು ಬಹಳ ಹೆಚ್ಚಾಗಿದೆ ಎಂದು ತಿಳಿಸಲ್ಪಟ್ಟಿದೆ. ಕಳೆದ ಜೂನ್ ತಾ. 15 ವರೆಗೆ 43,792 ಮಂದಿ ನಷ್ಟಪಟ್ಟಿದ್ದರಂತೆ; ಅಂದರೆ ಈ ಸಂಖ್ಯೆಯಲ್ಲಿ ಕೊಲೆಯಾದವರು, ಗಾಯಪಟ್ಟವರು, ಸಿಕ್ಕದೆ ಇರುವವರು ಸೇರಿಸಲ್ಪಟ್ಟಿದ್ದಾರೆ. ಆದರೆ ಈ ನಷ್ಟಪಟ್ಟವರ ಸಂಖ್ಯೆಯು ಜುಲೈ ತಾ. 15 ಕ್ಕೆ 52,041 ಆಗಿರುವುದು. ಒಂದುವರೆ ತಿಂಗಳು ಯುದ್ಧ ನಡೆದದ್ದರಲ್ಲಿ ಜರ್ಮನಿಯ ಸೈನ್ಯದೊಳಗೆ 8,069 ಮಂದಿ ಹುದ್ದೇದಾರರು ನಷ್ಟಪಟ್ಟಂತಾಯಿತು.

ಅಮೇರಿಕಕ್ಕೆ ಹೋಗುತ್ತಿದ್ದ ಒಂದು ಬ್ರಿಟಿಷ್ ಜಹಜನ್ನು ಐರ್ಲೆಂಡಿನ ದಕ್ಷಿಣ ಭಾಗದಲ್ಲಿ ಜರ್ಮನಿಯ ಸಬ್‌ಮೆರೀನು ಮುಳುಗಿಸಿರುತ್ತದೆ. ಜಹಜು ನೋಡಿದ್ದವರಿಗೆ ಎಚ್ಚರಿಕೆ ಕೊಟ್ಟು ತಿಳಿಸಿಲ್ಲ. ದೇವರ ದಯೆಯಿಂದ ಆ ಜಹಜು ಮುಳುಗದೆ ಬಹಳ ಹೊತ್ತು ತೇಲುತ್ತಿದ್ದದ್ದರಿಂದ ಅದರಲ್ಲಿದ್ದವರಲ್ಲಿ ಕೆಲವರು ಹೊರತು ಉಳಿದವರೆಲ್ಲಾ ಬದುಕಿಕೊಂಡರು. ಯಂತ್ರಗಳು ಒಡೆದು ಇಪ್ಪತ್ತು ಮಂದಿ ಗಾಯಪಟ್ಟರು. ಕೆನಡಾ ಯುದ್ಧಭಟನಾದ ಒಬ್ಬ ಕುರುಡನು ಆ ಜಹಜಿನಲ್ಲಿದ್ದು ಆ ಪೆಟ್ಟಿಕ್ಕೆ ಬೆಚ್ಚಿಬಿದ್ದಾಗ ಅವನಿಗೆ ಕಣ್ಣು ಬಂತೆಂದು ತಿಳಿದುಬಂದಿದೆ.

ಬರೋಡಾ ಸಂಸ್ಥಾನದ ಮಹಾರಾಜರವರು ಯುದ್ಧಭೂಮಿಯಿಂದ ವಾಪಸು ಬಂದರು. ಹಿಂದುಸ್ಥಾನದ ಸೈನ್ಯಗಳೆಲ್ಲಾ ಬಹಳ ಚಟುವಟಿಕೆಯಾಗಿಯೂ ಉಲ್ಲಾಸಯುಕ್ತವಾಗಿಯೂ ಇವೆ ಎಂದು ಮಹಾರಾಜರವರು ತಿಳಿಸುತ್ತಾರೆ. ಗಾಯಪಟ್ಟ ಯುದ್ಧಭಟರನ್ನು ರಣರಂಗದಿಂದ ಎಂಟು ಗಂಟೆ ಹೊತ್ತಿನೊಳಗಾಗಿ ಇಂಗ್ಲೆಂಡಿಗೆ ಸಾಗಿಸಿಕೊಂಡು ಹೋಗುವಂತೆ ಏರ್ಪಾಡುಮಾಡಿಯಾಯಿತು.

ರೇವಾ ಸಂಸ್ಥಾನದ ಮಹಾರಾಜರವರು ಇನ್ನೊಂದು ವಿಮಾನಯಂತ್ರವನ್ನು ಗವರ್ನ್‌ಮೆಂಟಿಗೆ ಒಪ್ಪಿಸಿ ತಮ್ಮ ಔದಾರ್ಯವನ್ನೂ ರಾಜಭಕ್ತಿಯನ್ನೂ ಪ್ರಕಾಶಪಡಿಸಿರುತ್ತಾರೆ.

ಡಾರ್ಡನೆಲ್ಸ್ ಜಲಮಾರ್ಗದಲ್ಲೂ ಫ್ರಾನ್ಸಿನಲ್ಲೂ ಕದನಗಳಲ್ಲಿ ಗಾಯಪಟ್ಟ 38 ಮಂದಿ ಹಿಂದುಸ್ಥಾನದ ಸಿಪಾಯಿಗಳು ಒಬ್ಬ ಹುದ್ದೇದಾರನ ಸಂಗಡ ಲಾಹೋರ್ ಪಟ್ಟಣಕ್ಕೆ ಬಂದಿದ್ದರು. ಇವರು ತಮಗೆ ಯಾವುದೊಂದು ಕೊರತೆಯೂ ಚಿಂತೆಯೂ ಇರಲಿಲ್ಲವೆಂದು ಹೇಳುತ್ತಾ ವಿಶೇಷ ಉತ್ಸಾಹಪಡುತ್ತಿದ್ದಾರೆ.

ಒಳದೇಶದ ವೃತ್ತಾಂತಗಳು.

ಬರುವ ತಿಂಗಳು ತಾ 2 ನೇ ಶನಿವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನ್ಯಾಯವಿಧಾಯಕ ಸಭೆಯ ಮೀಟಿಂಗು ನಡೆಯುವುದು.

ನಮ್ಮ ಸಂಸ್ಥಾನದಲ್ಲಿ ಸೀಸದ ಕಡ್ಡಿಗಳನ್ನೂ, ದೀಪದ ಕಡ್ಡಿಗಳನ್ನೂ ತಯಾರುಮಾಡುವುದಕ್ಕೆ ಕಾರ್ಖಾನೆಗಳನ್ನು ಪ್ರಾರಂಭಿಸಬೇಕೆಂದು ತರಪೋದು ನಡೆಯುತ್ತಿದೆ.

ನಮ್ಮ ಯುವರಾಜರವರು ಪೂನಾ ಪಟ್ಟಣದಲ್ಲಿ ಸೇವಾಸದನವನ್ನು ಕಟ್ಟುವ ಫಂಡಿಗೆ 2,000 ರೂಪಾಯನ್ನೂ, ಮೂರು ವರುಷದ ತನಕ ವರುಷಕ್ಕೆ 600 ರೂಪಾಯಿ ಚಂದಾವನ್ನೂ ಕೊಡುವುದಾಗಿ ತಿಳಿಸಿದ್ದಾರೆ.

ಕಳೆದ ಶನಿವಾರ ಮಧ್ಯಾಹ್ನ ಶ್ರೀಮನ್ ಮಹಾರಾಜರವರು ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿ ಮಾರುದಿನ ಇದ್ದು ಸೋಮವಾರ ಬೆಳಗ್ಗೆ ವಾಪಸು ಚಿತ್ತೈಸಿದರು. ಗೌರಿ, ಗಣೇಶ ಹಬ್ಬಕ್ಕಾಗಿ ಅವರೂ ರಾಣಿವಾಸದವರೂ ರಾಜಧಾನಿಗೆ ಬರುವಂತೆ ಕೇಳುತ್ತೇವೆ.

ಕಳೆದ ಭಾನುವಾರ ಮಧ್ಯಾಹ್ನ ಹೊಸಕೋಟೆ ಟವನ್ನಿನಲ್ಲಿ 7–8 ಜನರು ಸೇರಿ ಭಯಂಕರವಾಗಿ ಮಾರಾಮಾರಿ ನಡಿಸಿದರೆಂದೂ, ಪೋಲೀಸಿಗೆ ತಿಳಿದು ಜಮಾದಾರ್ ಕೃಷ್ಣರಾಯರು ಅವರನ್ನೆಲ್ಲಾ ಹಿಡಿದು ಕೈಕೋಳತೊಟ್ಟು ಬರೆದುಕೊಂಡರೆಂದೂ ತಿಳಿದುಬರುತ್ತದೆ.

ಕುಣಿಗಲ ಕುದುರೆ ಫಾರಮಿನಲ್ಲಿ ಬೆಳಸಿ ಸಾಕಿದ ಒಂಭತ್ತು ಕುದುರೆಗಳನ್ನು ಕಳೆದ ಶನಿವಾರ ಪೂನಾ ಪಟ್ಟಣದಲ್ಲಿ ಬಿಕರಿ ಮಾಡಿದರು. ಅವು ಒಳ್ಳೆಯ ಜಾಜಿನ ಕುದುರೆಗಳಾಗುವವೆಂದು ಬಹು ಮಂದಿ ದೊಡ್ಡ ಮನುಷ್ಯರು ಸ್ಪರ್ಧೆ ಮಾಡಿ ಹೆಚ್ಚು ಬೆಲೆಗೆ ಕೊಂಡುಕೊಂಡರು.

ಚಿತ್ರದುರ್ಗ ಟವನ್ನಿನಲ್ಲಿ ನಡೆದ ಡಕಾಯಿತಿ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ಶನಿವಾರ, 14 ಜನರ ಮೇಲೆ ಅಪರಾಧ ರುಜುವಾತಾಗಿದೆ ಎಂದೂ, ಅವರನ್ನು ಸೆಷನ್ಸ್ ಜಡ್ಜರು ವಿಚಾರಣೆಮಾಡಬೇಕೆಂದೂ ತೀರ್ಮಾನ ಮಾಡಿದರು. ಸೆಷನ್ಸ್ ವಿಚಾರಣೆಯು ಮುಂದಿನ ಮಂಗಳವಾರ ಪ್ರಾರಂಭವಾಗುವುದಾಗಿದೆ.

ಕಳೆದ ಜುಲೈ ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಮೈಸೂರು ಶ್ರೀರಂಗಪಟ್ಟಣದ ರಸ್ತೆಯಲ್ಲೂ, ಶ್ರೀರಂಗಪಟ್ಟಣ ಚನ್ನರಾಯಪಟ್ಟಣದ ರಸ್ತೆಯಲ್ಲೂ, ಮಳವಳ್ಳಿ ಮದ್ದೂರು ರಸ್ತೆಯಲ್ಲೂ ಮೂರು ಕಡೆ ಡಕಾಯಿತಿಗಳು ನಡೆದವು. ಅಪರಾಧಿಗಳನ್ನು ಪತ್ತೆಮಾಡುವವರಿಗೆ 100 ರೂಪಾಯಿ ಬಹುಮಾನ ಕೊಡುತ್ತೇವೆಂದು ಪೋಲೀಸ್ ಇನ್. ಜನರಲ್‌ರವರು ಪ್ರಕಟಿಸಿದ್ದಾರೆ.

ಬೆಂಗಳೂರು ಚಿಕ್ಕಪೇಟೆಯಲ್ಲಿ ಜವಳಿ ಅಂಗಡಿ ಮ॥ ಸಂಕಪ್ಪ ಬಸಪ್ಪನವರು ಸೇವಾ ಸದನದ ಉಪಯೋಗಕ್ಕಾಗಿ 25 ರೂಪಾಯಿ ಕೊಟ್ಟಿದ್ದಕ್ಕಾಗಿ ಸದನದ ಅಧಿಕಾರಿಗಳು ಅವರಿಗೆ ತುಂಬಾ ಕೃತಜ್ಞರಾಗಿದ್ದಾರೆ. ಈ ಸಂಘವು ಮಾಡುವ ಪರಹಿತ ಕಾರ್ಯಗಳನ್ನು ಇತರ ಧನಿಕರೂ ತಿಳಿದು ಸಹಾಯ ಮಾಡಬೇಕಾಗಿದೆ ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿರುವ ಎಲ್ಲಾ ಸ್ಕೂಲ್ ಮಾಸ್ಟರುಗಳೂ ಅಕ್ಟೋಬರ್ ತಾ. 10-11 ರಲ್ಲಿ ಚನ್ನರಾಯಪಟ್ಟಣದ ಎ. ವಿ. ಸ್ಕೂಲಿನಲ್ಲಿ ನಡೆಯಲ್ಪಡುವ ಟೀಚರ್ಸ್ ಕಾನ್‌ಫರೆನ್ಸಿಗೆ ಬರುವಂತೆ ಏರ್ಪಾಡು ಮಾಡಿದೆ ಎಂದೂ, ಅದಕ್ಕೆ ಅಲ್ಲಿನ ಅಮಲ್ದಾರ್ ಮಿ॥ ಹೈದರಲ್ಲಿ ಖಾನ್ ಸಾಹೇಬರು ಸಹಾಯ ಮಾಡಿ ಪ್ರೋತ್ಸಾಹಪಡಿಸುತ್ತಿದ್ದಾರೆಂದೂ ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

ದಿವಾನ್ ಸರ್ ವಿಶ್ವೇಶ್ವರಯ್ಯನವರು ನಾಳೆ ಚಿತ್ರದುರ್ಗಕ್ಕೆ ದಯಮಾಡುವವರಾಗಿದ್ದಾರೆ. ಅನೇಕ ವರುಷಗಳಿಂದ ಅಲ್ಲಿನ ಪ್ರಜೆಗಳು ಒಳ್ಳೇ ಕುಡಿಯುವ ನೀರಿನ ಏರ್ಪಾಡಾಗದೆ ಬಹಳ ಸಂಕಟಪಡುತ್ತಿದ್ದಾರೆ. ದಿವಾನ್‌ರವರೂ, ಪ್ರಜಾಹಿತಚಿಂತಕರಾದ ಡೆಪ್ಯುಟಿ ಕಮಿಷನರ್ ಮ॥ ಬಾಲಕುಂದರಂ ಅಯ್ಯರವರೂ ಕಲೆತು ಪ್ರಜೆಗಳ ಈ ದೊಡ್ಡ ಕೊರತೆಯನ್ನು ತಾತ್ಕಾಲಿಕವಾಗಿ ತಪ್ಪಿಸುವ ಏರ್ಪಾಡು ಮಾಡುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಶಿವಮೊಗ್ಗದಿಂದ ರೈಲ್ ರಸ್ತೆಯನ್ನು ಸಮುದ್ರ ತೀರದ ತನಕ ಬಡಾವಣೆ ಮಾಡಿದರೆ ಭಟ್ಕಳವೆಂಬ ರೇವುಪಟ್ಟಣದಲ್ಲಿ ಹಡಗುಗಳು ಬಂದು ಹೋಗುವುದಕ್ಕೆ ಅನುಕೂಲವಾಗುವುದೇ ಎಂದು ಆಜಮಾಯಿಸಿ ನೋಡಿ ತಿಳಿಸಬೇಕೆಂದು ನಮ್ಮ ಸರ್ಕಾರದವರು ಸರ್ ಫ್ರಾನ್ಸಿಸ್ ಸ್ಪ್ರಿಂಗ್ ಎಂಬವರನ್ನು ನೇಮಕ ಮಾಡಿರುತ್ತಾರೆಂದೂ, ಅವರು ಮುಂದಿನ ತಿಂಗಳು ಅಲ್ಲಿಗೆ ಹೋಗಿ ಆಜಮಾಯಿಸಿ ನೋಡಿ ತಮ್ಮ ಅಭಿಪ್ರಾಯವನ್ನು ತಿಳಿಸುವರೆಂದೂ ಪ್ರಕಟವಾಗಿದೆ.

ಶ್ರೀಮನ್ ಮಹಾರಾಜರವರು ಮ॥ ಎಂ. ಮುದ್ದುರಾಜೆ ಅರಸಿನವರಿಗೆ ಅರಮನೆ ಖಾಸ್ ಸಮುಖದ ಧಕ್ಷಿಗಿರಿಯನ್ನು ದಯಪಾಲಿಸಿದರೆಂದು ಕೇಳಿ ಸಂತೋಷಪಡುತ್ತೇವೆ. ಇವರು ಸುಮಾರು 24 ವರ್ಷಗಳಿಂದಲೂ ಆ ಇಲಾಖೆಯ ಮೊಹ್ತೇಮರಾಗಿದ್ದು ಖಾಸ್ ಸಮುಖ ಮತ್ತು ಬಿಡದಿ ಕೆಲಸ ಕಾರ್ಯಗಳನ್ನು ತೃಪ್ತಿಕರವಾಗಿಯೂ, ನೌಕರರುನೌಕರರುಗಳ ಹಿತಚಿಂತನೆಯಿಂದಲೂ ನಡಿಸುತ್ತಾ ಬಂದಿರುವುದನ್ನು ನಮ್ಮ ಮಹಾರಾಜರವರು ಸರಾಂಬರಿಸಿ ಮೆಚ್ಚಿ ಅವರಿಗೆ ಘನತರವಾದ ಧಕ್ಷಿಗಿರಿಯನ್ನು ಕೊಟ್ಟಿದ್ದಾರೆ.

ಹುಬ್ಬಳ್ಳಿಯಲ್ಲಿ ಚಾತುರ್ಮಾಸ್ಯಕ್ಕಾಗಿ ಮೊಕ್ಕಾಂ ಮಾಡಿರುವ ಶ್ರೀ ಶಿವಗಂಗಾಸ್ವಾಮಿಗಳವರಿಗೆ ತುಮಕೂರು ತಾಲ್ಲೂಕು ಮಣ್ಣೆ ಕೋಳಾಲ ಗ್ರಾಮದ ಮ॥ ಸೋಮಶೇಖರಪ್ಪನವರು ಕಳೆದ ತಾ. 16 ರಲ್ಲಿ ಕೆಲವು ಕವನಗಳನ್ನು ಮಾಡಿದ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಶ್ರೀ ಸ್ವಾಮಿಗಳು ಮ॥ ನಾರಾಯಣಪ್ಪನವರ ಬುದ್ಧಿಶಕ್ತಿ, ಉತ್ಸಾಹಶಕ್ತಿ, ಧರ್ಮಮಾರ್ಗ ಪ್ರವರ್ತನೆಗಳನ್ನು ನೋಡಿ ಸಂತೋಷಪಟ್ಟು ಅವರಿಗೆ "ಧರ್ಮಮಾರ್ಗ ಸಂಚಾರಿ" ಎಂಬ ಬಿರುದನ್ನು ದಯಪಾಲಿಸಿದರೆಂದು ತಿಳಿದುಬಂದಿದೆ.

ಗೋಮಾರಿರೋಗ (ದನಗಳ ದೊಡ್ಡರೋಗವೂ) ಅದರ ಚಿಕಿತ್ಸೆಯೂ.

ಈ ರೋಗವು ಬೇಲೂರು ತಾಲ್ಲೂಕು ಗಂಗೂರು, ಸಾಣೇನಹಳ್ಳಿ ಗ್ರಾಮಗಳಲ್ಲಿ ಈಗ್ಗೆ 2 ತಿಂಗಳಿಂದ ವ್ಯಾಪಿಸಿ ನೂರಾರು ರಾಸುಗಳನ್ನು ಕೊಂದುಹಾಕಿತು. ಈ ರೋಗದ ಸೋಂಕು ದೊಡ್ಡ ಕೋಡಿಹಳ್ಳಿ ಗ್ರಾಮಕ್ಕೂ ವ್ಯಾಪಿಸಿ ದನಗಳಲ್ಲಿ ರೋಗದ ಚಿಹ್ನೆಗಳು ಕಾಣಿಸಿಕೊಂಡವು. ರೋಗ ತಗಲಿದ ಗ್ರಾಮಗಳ ಜನರು ಪೂರ್ವಪದ್ಧತಿಯಂತೆ ಅದೊಂದು ಹೆಮ್ಮಾರಿ ದೇವತೆಯೆಂದು ಭಾವಿಸಿ ಆ ದೇವತೆಯ ತೃಪ್ತ್ಯರ್ಥವಾಗಿ ಆರೋಗ್ಯದಲ್ಲಿದ್ದ ಕುರಿ, ಕೋಣಗಳನ್ನು ಆಹುತಿಕೊಡಿಸಿದರು. ಆದರೂ ಪ್ರಯೋಜನವಾಗಲಿಲ್ಲ. ದಿನದಿನಕ್ಕೆ ರಾಸುಗಳ ಮರಣಸಂಖ್ಯೆಯು ಹೆಚ್ಚುತ್ತಲೇ ಬಂದಿತು. ಕೋಡಿಹಳ್ಳಿ ಸ್ಕೂಲ್ ಮಾಸ್ಟರ್ ಮ॥ ಲಿಂಗಪ್ಪಯ್ಯನವರು ಇದು ಒಂದು ಸಾಂಕ್ರಾಮಿಕ ರೋಗವೆಂದು ಆ ಗ್ರಾಮದ ಪಟೇಲರಿಗೆ ತಿಳಿಸಿ ಅವರಿಂದ ಹಾಸನದ ಡಿಸ್ಟ್ರಿಕ್ಟ್ ವೆಟರಿನರಿ ಇನ್‌ಸ್ಪೆಕ್ಟರವರಿಗೆ ರಿಪೋರ್ಟುಮಾಡಿಸಿದ್ದರ ಮೇಲೆ ಇನ್‌ಸ್ಪೆಕ್ಟರ್ ಮ॥ ಕೆ. ಜಿ. ರಂಗಣ್ಣನವರು ಸದರಿ ಗ್ರಾಮಕ್ಕೆ ಬಂದು ಕಾಯಿಲೆಯಾಗಿ [illegible] ರಾಸುಗಳಿಗೆ ಔಷಧಿಯನ್ನು ಕೊಟ್ಟು ರೋಗ ತಗಲದೆ ಇರುವ ರಾಸುಗಳಿಗೆ [illegible] ಲೇಷನ್ ಮಾಡಿಸಬೇಕೆಂತ ಹೇಳಿದರು. ಜನರು ಚಿಕಿತ್ಸೆಯನ್ನು ಮಾಡಿಸಿ [illegible] ಅಮ್ಮನಿಗೆ ಕೋಪ ಬರುತ್ತೆಂದು ಮೂಢಭಕ್ತಿ ಮತ್ತು ಮೂರ್ಖತನದಿಂ ಇನಾಕ್ಯುಲೇಷನ್ ಮಾಡಿಸುವುದಕ್ಕೆ ಒಪ್ಪಲಿಲ್ಲ. ಅನಂತರ ಕೆಲವರು ಸ್ಕೂಲ್ ಮಾಸ್ಟರ ಮತ್ತು ಇನ್‌ಸ್ಪೆಕ್ಟರ ಮಾತನ್ನು ನಂಬಿ 115 ರಾಸುಗಳಿಗೆ ಇನಾಕ್ಯುಲೇಷನ್ ಮಾಡಿಸಿದರು. ಇನಾಕ್ಯುಲೇಷನ್ ಮಾಡಿದ ರಾಸುಗಳ ಪೈಕಿ ಕೆಲವಕ್ಕೆ ಕಾಯಿಲೆ ಆಗಲೇ ಇಲ್ಲ. ಕೆಲವಕ್ಕೆ ಆದರೂ ಬಹು ಸೂಕ್ಷ್ಮವಾಗಿ ಕಾಣಿಸಿಕೊಂಡು 1-2 ದಿನಗಳಲ್ಲಿಯೇ ಆರೋಗ್ಯವನ್ನು ಹೊಂದಿದವು. ಗರ್ಭವಾಗಿದ್ದ ಒಂದು ಎಮ್ಮೆ ಮಾತ್ರ ಹೊಟ್ಟೆಯಲ್ಲಿ ಕರು ಸತ್ತದ್ದರಿಂದ ಮೃತಪಟ್ಟಿತು. ಬಾಕಿ 114 ರಾಸುಗಳೂ ಆರೋಗ್ಯವಾಗಿವೆ. ಇನಾಕ್ಯುಲೇಷನ್ ಮಾಡಿಸದೆ ಇದ್ದ 100-150 ರೂಪಾಯಿ ಬೆಲೆಬಾಳುವ ರಾಸುಗಳು 40-50 ರ ವರೆಗೆ ಮೃತಪಟ್ಟವು. ಒಂಬತ್ತು ವಾರದ ಎಳೇ ಕರುವಿಗೂ, ಗರ್ಭದ ದನಗಳಿಗೂ ಎಲ್ಲಾ ಜಾನುವಾರುಗಳಿಗೂ ಇನಾಕ್ಯುಲೇಷನ್ ಮಾಡಿಸುವುದು ಬಹು ಪ್ರಯೋಜನಕಾರಿಯೆಂದು ಈಗ ಗೊತ್ತಾಯಿತು. ಇನಾಕ್ಯುಲೇಷನ್ ಮಾಡಿಸದೆ ರಾಸುಗಳನ್ನು ಕಳೆದುಕೊಂಡವರು ತಾವು ಇನಾಕ್ಯುಲೇಷನ್ ಮಾಡಿಸಬೇಕಾಗಿತ್ತೆಂದು ಈಗ ಪಶ್ಚಾತ್ತಾಪಪಡುತ್ತಿದ್ದಾರೆ. ಗ್ರಾಮಾಂತರಗಳಲ್ಲಿರುವ ರೈತ ಮಹಾಜನಗಳು ತಮ್ಮ ಗ್ರಾಮದಲ್ಲಿ ದನಗಳಿಗೆ ರೋಗದ ಗುರುತು ಕಂಡ ಕೂಡಲೇ ಆಯಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರುವ ಪಶುವೈದ್ಯ ಚಿಕಿತ್ಸಕರಿಗೆ ವರ್ತಮಾನಕೊಟ್ಟು ಅವರಿಂದ ತಕ್ಕ ಚಿಕಿತ್ಸೆ ಮಾಡಿಸಿ ತಮ್ಮ ರಾಸುಗಳನ್ನು ಕಾಪಾಡಿಕೊಂಡು, ಘನ ಸರ್ಕಾರದವರು ಪ್ರಜೆಗಳ ಸುಖ ಸಂಪತ್ತುಗಳ ಅಭಿವೃದ್ಧಿಗಾಗಿ ಏರ್ಪಡಿಸಿರುವ ಉಪಯೋಗಗಳನ್ನು ಅನುಭವಿಸಿ ಏಳಿಗೆಗೆ ಬರಬೇಕೆಂದು ಪ್ರಾರ್ಥಿಸುವ ಜೋಡಿದಾರ್ ಜಿ. ರಾಮಯ್ಯ.

ಪರಸ್ಪರ ಸಹಾಯ ಸಂಘಗಳು.

ಬೆಳ್ಳವಾಡಿ.—ಶ್ರೀ ಜಗನ್ಮೋಹನ ರಂಗನಾಥಸ್ವಾಮಿ ಪರಸ್ಪರ ಸಹಾಯ ಸಂಘದ 1914-15 ನೇ ಸಾಲಿನ ಜನರಲ್ ಮೀಟಿಂಗು ಕಳೆದ ತಿಂಗಳು 8 ನೇ ತಾ. ದಿವಸ ಸ್ಕೂಲ್ ಹಾಲಿನಲ್ಲಿ ಕಾವೇರಿ ಪವರ್ ಸ್ಕೀಮ್ ಆಪರೇಟರ್ ಮ॥ ಸಿ. ರಾಮಭದ್ರಗೌಡರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು. ಸ್ಕೂಲ್ ಹೆಡ್ ಮಾಸ್ಟರ್ ಮತ್ತು ಈ ಸಂಘದ ಅ॥ ಸೆಕ್ರಟರಿ ಮ॥ ಜಿ. ರಾಮಯ್ಯನವರಿಂದ ಸಂಘದ ಆಡಳಿತದ ರಿಪೋರ್ಟು ಓದಲಾಯ್ತು. ಮುಂದಿನ ಸಾಲಿಗೆ ಕಾರ್ಯನಿರ್ವಾಹಕ್ಕೆ ಇದರಡಿ ಕಂಡವರನ್ನು ಚುನಾಯಿಸಲಾಯಿತು—ಮ॥ ಬಿ. ಶ್ರೀನಿವಾಸಯ್ಯಂಗಾರ್ರು—ಪ್ರೆಸಿಡೆಂಟ್, ನಾರಣಪ್ಪನವರು—ಸೆಕ್ರಟರಿ, ಜಿ. ರಾಮಯ್ಯನವರು—ಅ॥ ಸೆಕ್ರಟರಿ, ರಂಗಯ್ಯನವರು—ಟ್ರೆಜರರ್. ಆಡಿಟರ್—ಶ್ರೀನಿವಾಸರಾಯರೂ, ವೆಂಕಟರಂಗಶೆಟ್ಟರೂ. ಈ ಸಂಘವು 1915 ನೇ ಜೂನ್ 1 ನೇ ತಾ. ನಲ್ಲಿ 213 ಜನ ಮೆಂಬರುಗಳೂ, ರೂ 10,556-3-1 ಬಂಡವಾಳವೂ ಉಳ್ಳದ್ದಾಗಿತ್ತು. ಖರ್ಚು ಜಾತಾ ರೂ 717-15-6 ಲಾಭ ಸಂಪಾದಿಸಿ ರಿಜರ್ವ್ ಫಂಡು, ಅಭಿವೃದ್ಧಿ ಫಂಡು ಕಳೆದು ಷೇರ್‌ದಾರ್ರಿಗೆ ಶೇ. 6 0 ಮೇರೆ ಲಾಭ ಹಂಚಲ್ಪಟ್ಟಿತು. ಪ್ರಯೋಜನಕರವಾದ ಉದ್ದೇಶಗಳಿಗೆ ರೂ 7,667 ಸಾಲ ಕೊಟ್ಟಿರುತ್ತೆ. ಫಸ್ಟ್ ಕೌನ್ಸಿಲರ್ ಮ॥ ಎಚ್. ವಿ. ನಂಜುಂಡಯ್ಯನವರು ಲೆಕ್ಕಗಳನ್ನು ಪರಾಂಬರಿಸಿ ಒಳ್ಳೇ ಅಭಿಪ್ರಾಯಕೊಟ್ಟಿರುತ್ತಾರೆ. ಮಹಾರಾಜರವರಿಗೂ ಯುವರಾಜರಿಗೂ ಶ್ರೇಯಃಪ್ರಾರ್ಥನೆ ಬೇಳಿಸಿ ಸಭೆ ವಿಸರ್ಜಿಸಲ್ಪಟ್ಟಿತು.

ಸೆಕ್ರಟರಿ.

ಅರಸೀಕೆರೆ.—ಅರಸೀಕೆರೆ ತಾಲ್ಲೂಕು ಕೋಆಪರೇಟಿವ್ ಸೊಸೈಟಿಯ 1914-15 ನೇ ಸಾಲಿನ ಜನರಲ್ ಮೀಟಿಂಗು ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ಕಳೆದ ಆಗಸ್ಟು ತಾ. 29 ನೇ ಭಾನುವಾರ ಮಧ್ಯಾಹ್ನ ಸೊಸೈಟಿ ಪ್ರೆಸಿಡೆಂಟ್ ಮತ್ತು ಅಮಲ್ದಾರ್ ಮಿ॥ ಗುಲಾಂ ಮೊಹದೀನ್ ಮಕ್ಕೆಯವರ ಅಧ್ಯಕ್ಷತೆಯಲ್ಲಿ ನಡಿಸಲಾಯಿತು. ಅಗ್ಗ ವೈಸ್ ಪ್ರೆಸಿಡೆಂಟ್ ಮ॥ ಕೆಂಚರಾಯಶೆಟ್ಟರು, ಸೆಕ್ರಟರಿ ಮ॥ ಜೀವಣ್ಣರಾಯರು, ಡೈರೆಕ್ಟರ್‌ಗಳು, ಸೊಸೈಟಿಯ ಮೆಂಬರುಗಳು 55 ಮೆಂಬರಲ್ಲದೆ ಅನೇಕ ದೊಡ್ಡ ಮನುಷ್ಯರು ಸಹಾ ದಯಮಾಡಿಸಿದ್ದರು. ಅಧ್ಯಕ್ಷರು ಸೊಸೈಟಿಯ ಮೀಟಿಂಗನ್ನು ಪ್ರಾರಂಭಿಸಿದ ತರುವಾಯ ಸೆಕ್ರಟರಿ ಮ॥ ಜೀವಣ್ಣರಾಯರು 1914-15 ನೇ ಸಾಲಿನ ಸೊಸೈಟಿಯ ಆದಾಯವ್ಯಯಗಳ ರಿಪೋರ್ಟನ್ನು ಓದಲಾಗಿ ಸರ್ವರೂ ಸಂತೋಷಿಸಿದರು. ಈ ಸೊಸೈಟಿಯ 1915-16 ನೇ ಸಾಲಿನ ಆದಾಯ ವೆಚ್ಚಗಳನ್ನು ನೋಡಿಕೊಳ್ಳುವದಕ್ಕೋಸ್ಕರ ಓಟ್ಸ್ ಮುಖಾಂತ್ರ ಡೈರೆಕ್ಟರುಗಳನ್ನು ಚುನಾಯಿಸಿದಾಗ ಹಿಂದಿನ ಸಾಲಿನ ಡೈರೆಕ್ಟರುಗಳಲ್ಲದೆ ಹೊಸದಾಗಿ ತಾ॥ ಶಿರಸ್ತೇದಾರ್ ಮ॥ ರಾಮಣ್ಣನವರೂ, ಮಿ॥ ಖಾಸೀಂ ಅಲಿ ಸೇಟರೂ, ಮ॥ ಬಿ. ಮಧ್ವರಾಯರೂ ಡೈರೆಕ್ಟರಾದರು. ಮಿ॥ ಗುಲಾಂ ಮೊಹದೀನ್ ಮಕ್ಕೆಯವರು ಪ್ರೆಸಿಡೆಂಟರಾಗಿಯೂ ಮ॥ ಜೀವಣ್ಣರಾಯರು ಸೆಕ್ರಟರಿ ಮತ್ತು ಟ್ರೆಜರರಾಗಿಯೂ ಹಿಂದಿನ ಸಾಲಿನಂತೆ ನೇಮಕವಾದರು. ಈ ವರೆಗೂ ಒಂದು ಲಕ್ಷ ರೂಪಾಯಿನ ಜಮಾಖರ್ಚು ನಡಿಸಲ್ಪಟ್ಟಿರುತ್ತೆ. ಮೇಲ್ಕಂಡವರೂ ಕಮಿಟಿಯ ಮೆಂಬರುಗಳೂ ಸಾಹಸಪಟ್ಟು ಸೊಸೈಟಿಯನ್ನು ಅಭಿವೃದ್ಧಿಗೆ ತರುವದಲ್ಲದೆ ಬಡಬಗ್ಗರಿಗೆ ಇರತಕ್ಕ ಕಷ್ಟಗಳನ್ನು ತಪ್ಪಿಸುತ್ತಾರೆಂದು ನಂಬಿದೆ.

ಒಬ್ಬ ಮೆಂಬರು.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರದ ಚಿನ್ನದ ಗಣಿಗಳಲ್ಲಿ ಕಂಟ್ರಾಕ್ಟರಾಗಿಯೂ, ಮುಸ್ಲಿಮ್ ಸಂಘದ ಪ್ರೆಸಿಡೆಂಟರಾಗಿಯೂ ಇರುವ ಮಿ॥ ನವಾಬ್ ಗುಲಾಮ್ ಅಹಮದ್ ಕಲಾಮಿಯವರನ್ನು ಮೈಸೂರು ನ್ಯಾಯವಿಧಾಯಕ ಸಭೆಗೆ ಪ್ರಜಾ ಪಕ್ಷದ ಮೆಂಬರಾಗಿ ನೇಮಕವಾಡಿದೆ.

ಮ॥ ತಿರುಮಲಗಿರಿ ಶೆಟ್ಟರನ್ನು ಕಾರ್ಗಾನಹಳ್ಳಿ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ಮತ್ತೆ ನೇಮಕ ಮಾಡಿದೆ.

ವಿದ್ಯಾಭ್ಯಾಸ ಮತ್ತು ವ್ಯವಸಾಯದ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ ಕೆಲಸದ ಮತ್ತು ಸಂಪದಭ್ಯುದಯ ಸಮಾಜದ ಸೆಕ್ರಟರಿ ಕೆಲಸದ ಭಾರ್ಜನ್ನು ಮ॥ ಡಿ. ಎಂ. ನರಸಿಂಗರಾಯರಿಂದ ಮಿ॥ ಪಿ. ಜಿ. ಡಿಸೋಜಾರವರು ಆಗಸ್ಟ್ ತಾ. 17 ರಲ್ಲಿ ಪಡೆದುಕೊಂಡಿದ್ದಾರೆ.

ಮಿಲಿಟರಿ ಸೆಕ್ರಟರಿ ಮತ್ತು ಚೀಫ್ ಕಮಾಂಡಾಂಟರಾದ ಲೆಫ್ಟಿನೆಂಟ್ ಕರ್ನಲ್ ಜೋನ್ಸ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಸಿ. ವೆಂಕಟರಾಯರು ಮಿಲಿಟರಿ ಸೆಕ್ರಟರಿ ಕೆಲಸದ ಮತ್ತು ಮ॥ ಆರ್. ಪುಟ್ಟಣ್ಣನವರು ಚೀಫ್ ಕಮಾಂಡೆಂಟ್ ಕೆಲಸದ ಭಾರ್ಜನ್ನು ವಹಿಸತಕ್ಕದ್ದು.

ಅರಕಲಗೂಡು ತಾಲ್ಲೂಕ್ ಛಾರ್ಜನ್ನು ವಹಿಸಿರುವ ಮ॥ ಎಸ್. ವೆಂಕಟಾಚಲಯ್ಯನವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮ॥ ಡಿ. ಎಂ. ನರಸಿಂಗರಾಯರನ್ನು ಆಗಸ್ಟ್ ತಾ. 20 ರಿಂದ ಗವರ್ನ್‌ಮೆಂಟ್ ಜನರಲ್ ಸೆಕ್ರಟರಿಯಾಗಿ ಖಾಯಂ ಮಾಡಿದೆ.

ಕೋಆಪರೇಟಿವ್ ರೆಜಿಸ್ಟ್ರಾರ್ ಮ॥ ಎಂ. ಎ. ನಾರಾಯಣ ಅಯ್ಯಂಗಾರ್ರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಸೆಪ್ಟಂಬರ್ ತಾ॥ 10 ರ ವರೆಗೆ ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಮೈಸೂರು ಡಿವಿಜನ್ ಸಬ್ ಅ॥ ಇಂಜನಿಯರ್ ಮ॥ ಎಂ. ಜಿ. ತಿಂಗರಾಚಾರ್ರನ್ನು ವ್ಯವಸಾಯದ ಇಲಾಖೆಗೆ ಹಂಗಾಮಿಯಾಗಿ ವರ್ಗಮಾಡಿದೆ.

ವಿ ನಿಗ್ನ್ಯಾಂ ರೈಲ್ವೆ ಸರ್ವೆ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮ॥ ಟಿ. ಕೆ. ಅರುಣಾಚಲ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಿಟೈರ್ಡ್ ಅ॥ ಕಮಿಷನರ್ ಮ॥ ಸಿ. ಶೇಷಾದ್ರಿ ಅಯ್ಯಂಗಾರ್ರು ತುಮಕೂರು ಮ್ಯುನಿಸಿಪಲ್ ಕೌನ್ಸಿಲ್ ವೈಸ್ ಪ್ರೆಸಿಡೆಂಟರಾಗಿರಬೇಕೆಂದು ಚುನಾವಣೆಯಾಗಿರುವುದನ್ನು ಅಂಗೀಕರಿಸಲಾಗಿದೆ.

ಅನರರಿ ಅ॥ ಸರ್ಜನ್ ಮ॥ ಎಫ್. ಚೇಂಬರ್ಸ್‌ರವರಿಗೆ ಕೊಟ್ಟಿರುವ ಒಂದು ತಿಂಗಳು ಇಪ್ಪತ್ತಮೂರು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ॥ ಬಿ. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವ ಅನರರಿ ಅ॥ ಸರ್ಜನ್ ಮ॥ ಎಂ. ಡಿ. ಶ್ರೀನಿವಾಸ ಅಯ್ಯಂಗಾರ್ರು ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾಗಿ ಬದಲಿ ನೋಡತಕ್ಕದ್ದು.

ಮುಂದೆ ಹೇಳುವ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮ॥ ಎಂ. ಜಿ. ಸಾಮ್ಯುಯಲ್‌ರವರು ಕಡೂರಿನಿಂದ ಚಿತ್ರದುರ್ಗಕ್ಕೆ; ಮ॥ ಎಂ. ಜಿ. ಶ್ರೀನಿವಾಸ ಪಿಡ್‌ಪಟ್‌ರವರು ಚಿತ್ರದುರ್ಗದಿಂದ ಕಡೂರಿಗೆ.

ಕಡೂರು ಸಬ್ ಡಿವಿಜನ್ ಆಫೀಸರ್ ಮ॥ ಬಿ. ಟಿ. ಕೇಶವ ಅಯ್ಯಂಗಾರ್ರಿಗೆ ಕೊಟ್ಟಿರುವ ಒಂದು ತಿಂಗಳು ಏಳು ದಿನಗಳ ಪ್ರಿವಿಲೆಜ್ ರಜವನ್ನು ಒಂದು ವಾರ ಜಾಸ್ತಿಮಾಡಿದೆ. ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರ್ ಮ॥ ಎಂ. ಶ್ರೀನಿವಾಸಮೂರ್ತಿಯವರಿಗೆ ಬಿಡುಗಡೆಯಾದ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು.

ಕಳೆದ 30 ನೇ ತಾ. ಸೋಮವಾರ ಬೆಳಿಗ್ಗೆ ರಾಜಧಾನಿಯ ನಗರಾಭಿವೃದ್ಧಿಗಾಗಿ ಏರ್ಪಟ್ಟ ಸಂಘದವರು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮೀಟಿಂಗನ್ನು ನಡಿಸಿದರು. ಆಗ ಮೆಂಬರುಗಳು ತೀರ್ಮಾನ ಮಾಡಿದ ವಿಷಯಗಳ್ಯಾವವೆಂದರೆ—

ಲಕ್ಷ್ಮೀಪುರದ ಬಡಾವಣೆಯಲ್ಲಿ ಮ॥ ಪಿ. ಅಯ್ಯಸಾಮಿ ಮೊದಲಿಯಾರ್ರ ಬಾಬತು ಕೆಲವು ಜಮೀನುಗಳನ್ನು ಟ್ರಸ್ಟ್ ಬೋರ್ಡಿನವರು ಕೊಂಡುಕೊಂಡರು. ಅದರ ಪ್ರತಿಫಲದ ವಿಷಯದಲ್ಲಿ ಟ್ರಸ್ಟ್ ಬೋರ್ಡಿಗೂ ಮ॥ ಮೊದಲಿಯಾರ್ರಿಗೂ ಚರ್ಚೆ ಆಗುತ್ತಲೇ ಬಂದಿದೆ. ಆ ಜಮೀನಿನ ಪಕ್ಕದ ಜಮೀನಿಗೆ ಎಕರೆ 1 ಕ್ಕೆ 150 ರೂಪಾಯಿನಂತೆ ಪ್ರತಿಫಲಕೊಡತಕ್ಕದ್ದೆಂದು ಚೀಫ್ ಕೋರ್ಟಿನಲ್ಲಿ ತೀರ್ಮಾನವಾಯಿತು. ಈ ದರದಂತೆ ಮ॥ ಮೊದಲಿಯಾರ್ರಿಗೂ ಪ್ರತಿಫಲ ಕೊಡಬೇಕೆಂದು ಟ್ರಸ್ಟ್ ಬೋರ್ಡಿನವರು ಮೊದಲು ಇಚ್ಛೆಪಟ್ಟಿದ್ದರು. ಆದರ ನಂತರ ಮ॥ ಮೊದಲಿಯಾರ್ರು ತಮ್ಮಲ್ಲಿದ್ದ ಜಮೀನ್ ಕ್ರಯಪತ್ರಗಳನ್ನು ಹಾಜರು ಮಾಡಿ ಆ ಜಮೀನಿಗೆಲ್ಲಾ 1,300 ರೂಪಾಯಿ ಕೊಟ್ಟಿರುವುದಾಗಿಯೂ, ಈಗ ಎಕರೆಗೆ 150 ರೂಪಾಯಿನಂತೆ ಪ್ರತಿಫಲ ತೆಗೆದುಕೊಂಡರೆ ಕೈಯಿಂದ ಹೊಟ್ಟ ಹಣದಲ್ಲೇ ಮುಕ್ಕಾಲು ಭಾಗ ನಷ್ಟವಾಗುವುದೆಂದೂ ಕೇಳಿಕೊಂಡರು. ಮಿ॥ ಸಾದೆ ಸಾಹೇಬರು ಪ್ರಜೆಗಳಿಗೆ ನಷ್ಟಪಡಿಸಿದರೆ ಟ್ರಸ್ಟ್ ಬೋರ್ಡಿನ ಹೆಸರು ಕೆಟ್ಟುಹೋಗುವುದೆಂದೂ, ಮ॥ ಮೊದಲಿಯಾರ್ರಿಗೆ ತಕ್ಕ ಪ್ರತಿಫಲ ಕೊಟ್ಟು ಸಂತೋಷಪಡಿಸಬೇಕೆಂದೂ ಸೂಚಿಸಿದರು. ಕಾನೂನ್ ಪ್ರಕಾರ ನೋಡಿದರೆ ಮ॥ ಮೊದಲಿಯಾರ್ರಿಗೆ ಪ್ರತಿಫಲಕ್ಕೆ ಹಕ್ಕಿಲ್ಲವಾದರೂ ಈ ವಿಚಾರದ ಕಾಗದ ಪತ್ರಗಳನ್ನೆಲ್ಲಾ ಸರ್ಕಾರದವರ ಪರ್ಯಾಲೋಚನೆ ಮತ್ತು ತೀರ್ಮಾನಕ್ಕೆ ಕಳುಹಿಸತಕ್ಕದ್ದೆಂದು ಮೆಂಬರುಗಳು ಇಚ್ಛೆಪಟ್ಟರು.—ಸಾಡಿರಂಗ್ ಸರ್ಕಲ್‌ನಲ್ಲಿ ಶ್ರೀಮನ್ ಮಹಾರಾಜರವರು ದಯಪಾಲಿಸಿರುವ ತೊಟ್ಟಿ ಕಟ್ಟೆಯನ್ನು ಮಧ್ಯೆ ಹೂವಿನ ತೋಟಯ ಸುತ್ತಲೂ ಕೈಪಿಡಿ ಗೋಡೆಯ ಮೇಲೆ ನಿಲ್ಲಿಸುವುದಕ್ಕೆ 247 ರೂಪಾಯಿ ಖರ್ಚು ಮಾಡಬಹುದೆಂದೂ, ಆ ತಂತೀ ಕಟಕಟೆಯನ್ನು ಅಮೋಘದಿಂದ ತರಿಸಿಕೊಟ್ಟದ್ದಕ್ಕಾಗಿ ಶ್ರೀಮನ್ ಮಹಾರಾಜರವರಿಗೆ ಕೃತಜ್ಞತಾ ಪೂರ್ವಕವಾದ ವಿಜ್ಞಾಪನೆಯನ್ನು ಅರ್ಪಿಸಬೇಕೆಂದೂ ತೀರ್ಮಾನವಾಯಿತು.—ಕರ್ಜನ್ ಪಾರ್ಕಿನಲ್ಲಿ ಮೆಮೋರಿಯಲ್ ಫೌಂಟನ್ ಉತ್ತರಕ್ಕೆ ರಸ್ತೆಯ ಎರಡು ಕಡೆಗಳಲ್ಲೂ ಜನಸಂಚಾರಕ್ಕೆ ಅನುಕೂಲವಾದ ಕಾಲುಹಾದಿ (ಫುಟ್ ಪ್ಯಾತ್) ಗಳನ್ನು ತಯಾರುಮಾಡಿಸುವುದಕ್ಕೆ 570 ರೂಪಾಯೂ, ಟೌನ್ ಹಾಲ್ ಬಂಗಲೆಯ ಉತ್ತರ ಪಾರ್ಶ್ವದಲ್ಲಿ ಒಂದು ಚೌಕ ಮಾಡಿ ಅಲಂಕಾರವಾಗಿ ಮಾಡಿಸುವುದಕ್ಕೆ 4,914 ರೂಪಾಯೂ ಖರ್ಚುಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಮ॥ ಅಂಬಳೆ ಅಣ್ಣಯ್ಯಪಂಡಿತರವರು ಸುಮಾರು 10,000 ರೂಪಾಯಿ ಮುಟ್ಟಿಸಿ ಒಂದು ಗರ್ಲ್ಸ್ ಸ್ಕೂಲನ್ನು ಧರ್ಮಕ್ಕೆ ಕಟ್ಟಿಸಿಕೊಡುತ್ತೇವೆಂದೂ, ಅದಕ್ಕೆ ಅನುಕೂಲವಾದ ನಿವೇಶನವನ್ನು ಉಚಿತವಾಗಿ ಕೊಡಿಸಬೇಕೆಂದೂ ಕೇಳಿದ್ದರು. ಸೂರಡಿ ರಸ್ತೆಯಲ್ಲಿ ಅವರಿಗೆ ನಿವೇಶನವನ್ನು ಕೊಡಬಹುದೆಂದು ಮ್ಯುನಿಸಿಪಲ್ ಕೌನ್ಸಿಲ್‌ನವರು ತೀರ್ಮಾನಮಾಡಿದ್ದನ್ನು ಮೆಂಬರುಗಳು ಒಪ್ಪಿಕೊಂಡರು.—ಅರಮನೆ ಖಜಾನೆ ಹೆಡ್ ಸರಾಫ್ ಮ॥ ಮನ್ನಾರು ಕೃಷ್ಣಶೆಟ್ಟರವರು ವಿದ್ಯಾರ್ಥಿನಿಲಯ (ಸ್ಟುಡೆಂಟ್ಸ್ ಹೋಮ್) ವನ್ನು ಸುಮಾರು 10,000 ರೂಪಾಯಿ ಖರ್ಚುಮಾಡಿ ಧರ್ಮಕ್ಕೆ ಕಟ್ಟಿಸಿಕೊಡುತ್ತೇವೆಂದೂ ಒಂದು ಅನುಕೂಲವಾದ ನಿವೇಶನವನ್ನು ಕೊಡಬೇಕೆಂದೂ ಕೇಳಿದರು. ಮ್ಯುನಿಸಿಪಲ್ ಕೌನ್ಸಿಲ್‌ನವರು ಅದಕ್ಕಾಗಿ ಚುನಾಯಿಸಿರುವ ಸ್ಥಳವನ್ನು (ಅಂದರೆ, ನಂಜರಾಜಬಹದ್ದೂರರವರ ಧರ್ಮಸತ್ರದ ಬಳಿ) ಕೊಡಬಹುದೆಂದು ಮೆಂಬರುಗಳು ಸಮ್ಮತಿಸಿದರು.—ಸಾಹುಕಾರ್ ನರಸಿಂಹಯ್ಯನವರು ಛತ್ರ ಕಟ್ಟುವ ಯಂತ್ರವನ್ನು ಇಡುವುದಕ್ಕೆ ಚಾಮರಾಜಮೊಹಲ್ಲಾ ಹಳೇ ಒಳಗೇರಿ ಪ್ರದೇಶದಲ್ಲಿ ಸ್ಥಳವನ್ನು ಕೊಡಿಸಬೇಕೆಂದು ಕೇಳಿದ್ದರು. ಆ ಸ್ಥಳವು ಸ್ಕೂಲ್ ಫಾರಂಗಾಗಿ ಬಿಟ್ಟಿರೋಣದರಿಂದ ಅದನ್ನು ಕೊಡಲಾಗದೆಂದು ಇಚ್ಛೆಪಟ್ಟರು.—ಹಿಂದಿನ ಬಡಾವಣೆಯಲ್ಲಿ ಮಿ॥ ಹಂಜಾ ಹುಸೇನ್‌ರವರ ಮನೆ ಹಿಂಭಾಗದಲ್ಲಿ ಬ್ರಾಹ್ಮಣರಿಗಾಗಿ ಕೆಲವು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಿವೇಶನಗಳನ್ನು ವಿಂಗಡಿಸಿ ಕೊಡಬಹುದೆಂದು ಒಪ್ಪಲಾಯಿತು.—ಕನ್ನೇಗೌಡನಕೊಪ್ಪಲಿನಲ್ಲಿ ಮಿಷನ್ ಇಡುವುದಕ್ಕೆ ಸಾಹುಕಾರ್ ದೊಡ್ಡಯ್ಯನವರಿಗೆ ನಿವೇಶನವನ್ನು ಕೊಡುವಂತೆ ಮೆಂಬರುಗಳು ಒಪ್ಪಿದರು.—ಊರಿಂದಾಚೆ ಗ್ರಾಮಸಾರದ ನೀರನ್ನು ವಿನಿಯೋಗಿಸಿಕೊಳ್ಳುವಂಥಾ ಸೂಯೆಜ್ ಫಾರವನ್ನು ತಯಾರುಮಾಡಿಕೊಡುವ ಕೆಲಸದ ಕಂಟ್ರಾಕ್ಟನ್ನು ಬೆಂಗಳೂರಿನ ಮ॥ ಹುಚ್ಚಪ್ಪನವರಿಗೆ ವಹಿಸಬಹುದೆಂದು ಮೆಂಬರುಗಳು ತೀರ್ಮಾನಮಾಡಿದರು. ಈ ಕೆಲಸವನ್ನು ಅವರು ಸುಮಾರು 23,689 ರೂಪಾಯಿಗೆ ಮಾಡಿಕೊಡುವುದಾಗಿ ದರಖಾಸ್ತು ಹಾಕಿದ್ದರು.

ಉಪಾಧ್ಯಾಯರುಗಳ ಸಂಘಗಳು.

ಚಾಮರಾಜನಗರ.

ಉಪಾಧ್ಯಾಯರ ಸಂಘದ ಮೂರನೇ ಮೀಟಿಂಗು ಕಸಬಾ ಎ. ವಿ. ಸ್ಕೂಲು ಕಟ್ಟಡದಲ್ಲಿ ತಾ. 29 ರಲ್ಲಿ ನಡೆಯಿತು. 55 ಜನ ಉಪಾಧ್ಯಾಯರುಗಳು ಸೇರಿದ್ದರು. ಕುದೇರು ವಿ. ಇ. ಸ್ಕೂಲು ಹೆಡ್ ಮಾಸ್ಟರೂ ಮತ್ತು ಪಂಡಿತರು ಮ॥ ವೆಂಕಟಕೃಷ್ಣಮಾಚಾರ್ರು ಅಗ್ರಾಸನಾಧಿಪತಿಗಳಾಗಿದ್ದರು. ರಾಮಸಮುದ್ರ ವಿ. ಇ. ಸ್ಕೂಲು ಹೆಡ್ ಮಾಸ್ಟರು ಮ॥ ಶ್ರೀನಿವಾಸ ಚಕ್ರವರ್ತಿಗಳು ಭೂಗೋಳ ಪಾಠದಿಂದಾಗುವ ಪ್ರಯೋಜನಗಳು ಎಂಬ ವಿಚಾರದಲ್ಲಿ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಓದಿದ ನಂತರ ಎ. ವಿ. ಸ್ಕೂಲು ಅ. ಮಾ. ಮ॥ ಸಂಪತ್ ಅಯ್ಯಂಗಾರ್ರು ಮಳೆಯ ವಿಚಾರವಾಗಿ ನಿದರ್ಶನ ರೂಪದಲ್ಲಿ ಒಂದು ಮಾದರಿ ಪಾಠವನ್ನು ನಡಿಸಿದರು. ಪಾಠಕ್ರಮವು ಸಮರ್ಪಕವಾಗಿತ್ತು. ಇದರ ಗುಣದೋಷಗಳ ವಿಚಾರದಲ್ಲಿ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಟ್ರೈನಿಂಗ್ ಶಾಲೆಯ ಅ. ಮಾ. ಮತ್ತು ಪಂಡಿತರು ಮ॥ ನರಸಿಂಹಶಾಸ್ತ್ರಿಗಳವರು ಪಾಠಶೋಧನೆಯ ವಿಚಾರದಲ್ಲಿ ಹೇಳಿದ ಸಲಹೆಗಳು ಮಾಸ್ತರುಗಳಿಗೆ ಬಹಳ ಉಪಯೋಗವಾದವುಗಳಾಗಿದ್ದವು. ಬಂದಿದ್ದ ಮಾಸ್ತರುಗಳೆಲ್ಲರೂ ಬಹಳ ಉತ್ಸಾಹಶಾಲಿಗಳಾಗಿ ನಿಜವಾದ ಉಪಾಧ್ಯಾಯರಾಗುವುದಕ್ಕೆ ಬೇಕಾದ ಮಾರ್ಗವನ್ನು ಅನುಸರಿಸುವುದಕ್ಕೆ ಇಷ್ಟವುಳ್ಳವರಾಗಿರುವುದು ಸಂತೋಷಕರವಾಗಿದೆ. ಈ ಮೀಟಿಂಗಿಗೆ ಗ್ರಾಂಟು ಸ್ಕೂಲು ಮಾಸ್ತರುಗಳೂ ಮತ್ತು ಬೇರೆ ಕೆಲವು ವಿ. ಇ. ಸ್ಕೂಲು ಮಾಸ್ತರುಗಳೂ ಬಂದೇ ಇರುವುದು ವ್ಯಸನಕರವಾಗಿದೆ. ಈ ತಾಲ್ಲೂಕಿನಲ್ಲಿರುವ ಎಲ್ಲಾ ಉಪಾಧ್ಯಾಯರುಗಳೂ ಈ ಸಂಘಕ್ಕೆ ಮೆಂಬರುಗಳಾಗಿ ಸಂಘದ ಪ್ರಯೋಜನಗಳನ್ನು ಹೊಂದುತ್ತಾರೆಂದು ನಂಬಿದೆ. ಈ ಸಂಘದ ನಾಲ್ಕನೆಯ ಮೀಟಿಂಗು ಇದೇ ಎ. ವಿ. ಸ್ಕೂಲಿನಲ್ಲಿ ತಾ. 26 ನೇ ಭಾನುವಾರ ಸೇರಿ ಈ ಕೆಳಗೆ ಕಂಡ ರೀತಿಯಲ್ಲಿ ಕಾರ್ಯವನ್ನು ನಡೆಸುವಂತೆ ತೀರ್ಮಾನವಾಗಿದೆ. ಆರೋಗ್ಯ ವಿಚಾರದಲ್ಲಿ ಉಪನ್ಯಾಸ—ಕುದೇರು ವಿ. ಇ. ಸ್ಕೂಲು ಹೆ. ಮಾ. ಮ॥ ವೆಂಕಟಕೃಷ್ಣಮಾಚಾರ್; ಮೈಸೂರು ದೇಶದಲ್ಲಿ ಮಹಮ್ಮದೀಯರ ಆಳ್ವಿಕೆ, ಮಾದರಿಯ ಪಾಠ—ಎ. ವಿ. ಸ್ಕೂಲು ಅ. ಮಾ. ಮ॥ ಎಚ್. ವೆಂಕಟರಾಮಯ್ಯ; ಪಾಠಶೋಧನೆ; ಪಾಠಶಾಲೆಯಲ್ಲಿ ಶಿಕ್ಷೆಯು ಅವಶ್ಯಕವೆ ಎಂಬ ವಿಚಾರದಲ್ಲಿ ಚರ್ಚೆ. ತಾಲ್ಲೂಕಿನ ಎಲ್ಲಾ ಮಾಸ್ತರುಗಳೂ ದಯವಿಟ್ಟು ದಯಮಾಡಿಸಬೇಕಾಗಿ ಪ್ರಾರ್ಥನೆ.

ಕೆ. ಮಾಧವರಾವ್, ಸೆಕ್ರಟರಿ.

ಅರಕಲಗೂಡು ತಾಲ್ಲೂಕು [illegible]ಪಟ್ಟಣ.

ಆಗಸ್ಟು ಮಾಹೆ [illegible] ನೇ ಶನಿವಾರ ಮಧ್ಯಾಹ್ನ 5 ಘಂಟೆ ಸಮಯದಲ್ಲಿ ಈ ತಾಲ್ಲೂಕು ವಿ. ಇ. ಸ್ಕೂಲ್ ಉಪಾಧ್ಯಾಯರ ಸಂಘವು ಈ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ನಡೆಯಿತು. ಸದರಿ ಸಭೆಯಲ್ಲಿ ಈ ಹೋಬಳಿ ಶೇಕದಾರ್ರು ಮ॥ ಶೇಷಪ್ಪನವರು ಸಭಿಕರ ಕೋರಿಕೆಯಂತೆ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ರಾಮನಾಥಪುರದ ಗರ್ಲ್ಸ್ ಸ್ಕೂಲ್ ಮಾಸ್ಟರು ಮ॥ ಸೂರ್ಯನಾರಣಪ್ಪನವರು ಸ್ತ್ರೀ ವಿದ್ಯಾಭ್ಯಾಸದಿಂದ ಉಂಟಾಗುವ ಪ್ರಯೋಜನದ ವಿಷಯವಾಗಿಯೂ, ಮರೂರು ವಿ. ಇ. ಸ್ಕೂಲ್ ಮಾಸ್ಟರು ಮ॥ ಶ್ರೀಕಂಠಯ್ಯನವರು ಧಿಸ್ನರಾಜಿ ಎಂಬುದರ ವಿಷಯವಾಗಿಯೂ, ಕೊಣನೂರು ವಿ. ಇ. ಸ್ಕೂಲ್ ಅ. ಮಾ. ಮ॥ ಶ್ರೀಕಂಠಯ್ಯನವರು ಉಪಾಧ್ಯಾಯರು ವ್ಯಾಯಾಮಕಾಲದಲ್ಲಿ ಮಾಡಬೇಕಾದ ಕೆಲಸದ ವಿಷಯವಾಗಿಯೂ, ರಾಮನಾಥಪುರದ ವಿ. ಇ. ಸ್ಕೂಲ್ ಅ. ಮಾ. ಮ॥ ನಾರಣಪ್ಪನವರು ಪತ್ರಿಕೆಯನ್ನು ಓದುವದರಿಂದ ಉಂಟಾಗುವ ಪ್ರಯೋಜನದ ವಿಷಯವಾಗಿಯೂ ಬಹು ಸ್ವಾರಸ್ಯವಾಗಿಯೂ ಉದಾಹರಣೆಗಳಿಂದಲೂ ಉಪನ್ಯಾಸಮಾಡಿದರು. ಮತ್ತೆ ಗರ್ಲ್ಸ್ ಸ್ಕೂಲ್ ಮಾ. ಮ॥ ವೆಂಕಟಸುಬ್ಬಯ್ಯನವರು ಚಿತ್ರದ ಸಹಾಯದಿಂದ ಮಕ್ಕಳಿಗೆ ವಸ್ತುಪಾಠವನ್ನು ಬೋಧಿಸಿದರು. ಸಂಘದ ವೈಸ್ ಪ್ರೆಸಿಡೆಂಟರಾದ ರುದ್ರಪಟ್ಟಣದ ವಿ. ಇ. ಸ್ಕೂಲ್ ಹೆ. ಮಾ. ಮ॥ ರಾಮಯ್ಯನವರು ಈ ಸಂಘದಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಮಾಡಿದ ಉಪನ್ಯಾಸವು ಸರ್ವಸಮ್ಮತವಾಗಿಯೂ, ಅವರ ವಾಗ್ಝರಿಯು ಆಶ್ಚರ್ಯವನ್ನುಂಟುಮಾಡುವದಾಗಿಯೂ ಇದ್ದಿತು. ಕೊಣನೂರು ಡಾಕ್ಟರ್ ವೆಂಕಟಾಚಾರ್ರು ಈ ಗ್ರಾಮದ ಸ್ಯಾನಿಟೇಷನ್ ಇನ್‌ಸ್ಪೆಕ್ಟರ್‌ಗೆ ದಯಮಾಡಿಸಿದ್ದವರು ಸಭೆಗೆ ದಯಮಾಡಿ ಸಭಾಧ್ಯಕ್ಷರ ಕೋರಿಕೆಯಂತೆ ಈ ಗ್ರಾಮಸ್ಥರ ಏಕಮತ್ಯದ ವಿಷಯಲ್ಲಿ ಪ್ರಶಂಸಿಸಿದರು. ಕೊಣನೂರು ವಿ. [illegible] ಹೆ. ಮಾ. ಮ॥ ಕೆ. ಕೃಷ್ಣಪ್ಪನವರು ಸಭಿಕರ ಪರವಾಗಿ ನಮ್ಮನ್ನಾಳುವ ಬ್ರಿಟಿಷ್ ಸಾರ್ವಭೌಮರ ಮತ್ತು ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ, ಈಗ ಸಂಭವಿಸಿರುವ ಘೋರ ಯುದ್ಧದಲ್ಲಿ ಬ್ರಿಟಿಷ್ ಧ್ವಜಪತಾಕೆಯು ಜಯಶಾಲಿಯಾಗಿ ನೆಲೆಗೊಳ್ಳಲೆಂದು ದೇವರ ಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಬರ್ಖಾಸ್ತುಮಾಡಿದರು. ನಂತರ ರಾಮನಾಥಪುರದ ವಿ. ಇ. ಸ್ಕೂಲ್ ಹೆ. ಮಾ. ಮ॥ ಆರ್. ಕೆ. ಕೃಷ್ಣಪ್ಪನವರು, ಚಿಟ್ಟದಪುರದ ಗರ್ಲ್ಸ್ ಸ್ಕೂಲ್ ಸಂಗೀತದ ಮಾಸ್ಟರು ಮ॥ ಸೂರ್ಯನಾರಣಪ್ಪನವರು ವಗೈರೇರು ಹಾಡಿದ ಸಂಗೀತವು ಕರ್ಣಾನಂದವಾಗಿತ್ತು. ಬಸವಾಪಟ್ಟಣದ ಮ॥ ಕರ್ಣಣ್ಣನವರು ಹಾಡಿದ ತತ್ವಗಳು ವೇದಾಂತ ರಹಸ್ಯಗಳಿಂದ ಕೂಡಿದ್ದಾಗಿ ಪಂಡಿತಪಾಮರ ರಂಜನೀಯವಾಗಿದ್ದವು. ಈ ಸಂಘಕ್ಕೆ ಸುಮಾರು 40 ಜನ ವಿ. ಇ. ಸ್ಕೂಲ್ ಮಾಸ್ಟರುಗಳು ನೆರೆದಿದ್ದರು. ಇವರುಗಳಿಗೆಲ್ಲಾ ಕಾಲಕ್ಕೆ ಸರಿಯಾಗಿ ಆದರಾತಿಥ್ಯಗಳು ಈ ಗ್ರಾಮಸ್ಥರುಗಳಿಂದಲೂ ಮತ್ತು ಈ ಗ್ರಾಮದ ಸ್ಕೂಲ್ ಕಮಿಟಿ ಮೆಂಬರುಗಳಿಂದಲೂ ಬಹಳ ವಿಶದಯಾಗಿ ನಡಿಸಲ್ಪಟ್ಟವು. ನಮ್ಮ ಬಾಲಕರ ಬಾಲಕಿಯರುಗಳ ವಿದ್ಯಾಭಿವೃದ್ಧಿಗಾಗಿಯೂ, ನಮ್ಮಗಳ ಏಳಿಗೆಗಾಗಿಯೂ ಅಪರಿಮಿತ ಧನ ವ್ಯಯಮಾಡಿ ಸಾಹಸಪಡುತ್ತಲಿರುವ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೆ ಭಗವಂತನು ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸಲಾಯಿತು.

ಶ್ರೀನಿವಾಸಯ್ಯ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಉಪಾಧ್ಯಾಯರ ಸಂಬಳದ ಬಟವಾಡೆ.

ಅಯ್ಯಾ,—ಘನತೊಂದಿದ ಮೈಸೂರು ಸರ್ಕಾರದವರು ಕುಗ್ರಾಮದಲ್ಲಿರುವವರು ವಿದ್ಯಾವಂತರಾಗಲು ಅನುಕೂಲಪಡಿಸಿರುವ ಗ್ರಾಂಟಿನ್ಯಡ್ ಸ್ಕೂಲ್ ಮಾಸ್ತರು ಕಲಬಿಗೆ ಪ್ರತಿ ತಿಂಗಳಲ್ಲಿಯೂ ಬಿಲ್ ತಯಾರುಮಾಡಿ ಇನ್‌ಸ್ಪೆಕ್ಟರ್ ಇ

...ರ್ ಸಾಹೇಬರವರಿಂದ ರುಜುವಾಗಿ ಪೋಸ್ಟ್ ಮೂಲಕ ಬರುತ್ತೆ. ವಿಲೇಜ್ ಪೋಸ್ಟ್ ವರ್ಕ್‌ಗಳು ಈ ತಿಂಗಳು ಬಂದದ್ದನ್ನು ಮುಂದಿನ ತಿಂಗಳಲ್ಲಿಯೋ ಅಥವಾ ಮುಂದೇ ರೀತಿಯಾಗಿಯೋ ಬಟವಾಡೆ ಮಾಡುತ್ತಾರೆ. ಇಂಥಾ ಸಂದರ್ಭದಲ್ಲಿ ಆಯಾ ತಿಂಗಳ ಪಲುಬು ಆ ತಿಂಗಳು ಪಾವತಿಯಾಗಲು ತೊಂದರೆಯಾಗುತ್ತೆ. ಮತ್ತು ... ಗ್ರೈವ್ ಆಗುವ ಸಂದರ್ಭದಲ್ಲಿ ತಲಬಿಗೆ ಮಾರ್ಗವೇನೋ ಹಳ್ಳಿಯ ... ಹೊಸದಾಗಿ ವಾಪ್ಪರಾಗಿರುವವರಿಗೆ ಗೊತ್ತೇ ಇಲ್ಲ. ಘನತೆಯಿಂದಿಸ ಸರ್ಕಾರದವರು ಇಂಥಾ ತೊಂದರೆಗಳನ್ನು ತಪ್ಪಿಸಿಕೊಡಬೇಕಾಗಿ ಪ್ರಾರ್ಥನೆ.

ಒಬ್ಬ ಗ್ರ್ಯಾಂಟ್ ಸ್ಕೂಲ್‌ಮಾಸ್ತರು.

ಗ್ರಾಮಗಳಲ್ಲಿ ಮೌಢ್ಯವೂ, ಕ್ರೂರತನವೂ.

ಅಯ್ಯಾ,—ಈಗಿನ ವಿದ್ಯಮಾನದಲ್ಲಿ ಗ್ರಾಮಾಂತರ ಪ್ರಜೆಗಳ ನ್ಯಾಯವಾದ ... ಮುಖಾಂತರಕ್ಕೆ ವಿರೋಧವಾಗಿ ಹಿಂಸಕರ ಆಲೋಚನೆಯು ವಾಚಕರ ಅವಗಾಹನೆಗೆ ಇವರೆಡು ಕೆಳಗೆ ವಿವರಿಸಿರುತ್ತೇನೆ. ಕಳೆದ ತಿಂಗಳ ಅಂತ್ಯದಲ್ಲಿ ಒಂದು ದಿನ ನಾನು ಮಧ್ಯಾಹ್ನ 3 ಗಂಟೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ಮಂಡಗದ್ದೆ ... ಕೋಡೂರಿಯಿಂದ ಪೂರ್ವಭಾಗದ ಈ ಗ್ರಾಮದ ಕಡೇ ಗದ್ದೆ ಮೇಲಾಗಿ ... ಹೋಗಬೇಕೆಂದು ಒಬ್ಬನೇ ಪ್ರಯಾಣಿಸಿದೆನು. ಒಬ್ಬ ಗೌಡನು ಹೆಗಲ ಮೇಲೆ ಕೇಪಿನ ಬಂದೂಕು ಹಿಡಿದು ಕೈಯಲ್ಲಿ ಕತ್ತಿ ಸಮೇತ ದಾರಿ ಬಳಿ ಬಂದು ನಿಲ್ಲೋ ಎಂತ ಬೆದರಿಸಿ ನಿಲ್ಲಿಸಿದನು. ಅವನು ಒಬ್ಬನೇ ಇದ್ದನು. ಒಬ್ಬ ... ತನ್ನ ತೋಟ ನಾಶ ಒತ್ತಿದೇವೆಂದು ತಾಲ್ಲೋಕಿನಲ್ಲೂ ಫಿರ್ಯಾದು ... 200 ರೂಪಾಯಿ ವರಿಗೆ ನಷ್ಟ ಉಂಟುಮಾಡಿದಾನೆ. ಇದಕ್ಕಾಗಿ ಆತನನ್ನು ... ಹಾಕುತ್ತೇನೆ ಎಂದು ಹೇಳಿದನು. ಆಗ್ಗೆ ಅವನು ಬಂದದ್ದು ... ಸದರಿ ಗೌಡನೇ ನಾನಾಗಿರಬಹುದೆಂದು ಊಹಿಸಿ ಎದುರು ನೋಡು ... ಅಲ್ಲವಾದ್ದರಿಂದ ತಾನು ಗ್ರಹಿಸಿದ ಅಸೂಯೆಯೂ ಅವನ ಬಾಯಿಂದ ... ಮಾತುಗಳಿಂದ ನಾನು ಗ್ರಹಿಸಿ ಸ್ಥಳ ಪಂಚಾಯತಿಯಲ್ಲಿಯಾಗಲಿ, ಸರ್ಕಾರದ ನ್ಯಾಯಸ್ಥಾನದಲ್ಲಿಯಾಗಲಿ ವ್ಯವಸ್ಥೆ ಪಡಿಸಿಕೊಳ್ಳುವುದು ಉಭಯತ್ರರಿಗೂ ... ಎಂತಲೂ, ನ್ಯಾಯ ಸ್ಥಿರಪಡಿಸಿಕೊಳ್ಳುವುದಕ್ಕೆ ಹೆಚ್ಚು ನಷ್ಟಗಳ್ಯಾಕೆ? ನ್ಯಾಯವನ್ನು ಸಾಧಿಸುವುದಕ್ಕೆ ನಷ್ಟವಾದರೆ ಅದರ ತಪ್ಪು ಅವರೇ ಸಹಿಸಿಕೊಳ್ಳಲ್ಲದೆ ವೃಥಾ ನಿಷ್ಠುರ ಎಣಿಸುವುದು ಕೆಲಸವಲ್ಲವೆಂತಲೂ ನಾನು ಉತ್ತರ ಕೊಟ್ಟೆನು. ಅದಕ್ಕೆ "ಏನಂತೀ" ಎಂದು ಚಹರೆ ಬದಲಾಯಿಸಿ ನುಡಿದನು. ... ಭಯಪಟ್ಟು ಹೋದೆನು. ಇಂಥಾ ಕ್ರೂರಜನರು ದುರಾಲೋಚನೆಯಿಂ... ಮತ್ತು ಮದ್ಯಪಾನಿಗಳಾಗಿದ್ದರಿಂದಲೂ ಯಾವ ಕಾಲಕ್ಕೆ ಏನು ಕೃತ್ಯವಾ... ? ಹಣ ಶಕ್ತಿ ಜನ ಸಮೂಹ ಉಳ್ಳವರಾಗಿದಾರೆ. ಜನರು ಸರ್ಕಾರವೇ ... ಭಯವನ್ನು ಮೇಲೆ ಇರುತ್ತಾರೆ. ನಿಷ್ಕಳಂಕವಾದ ಗ್ರಾಮ ... ಮಾಡಬೇಕೆಂದು ದಯಾಳು ಸರ್ಕಾರದವರು ಉದ್ದೇಶಿಸುವದಾಗಿ ಬಡಕಾಯಿ ... ಗ್ರಾಮಾಂತರವಾಸಿಗಳಿಗೆ ಯಾವಾಗ್ಗೆ ಲಭಿಸುವದೋ ಎಂದು ನನಂತರ ಪ್ರಜೆಗಳು ನಿರುತ್ತರರಾಗಿ ಪ್ರಾರ್ಥಿಸುತ್ತಲಿದಾರೆ.

ನಿ ರಾಮಪ್ಪ.

ಕುಣಿಗಲು ಕೋಆಪರೇಟಿವ್ ಸೊಸೈಟಿಯ ವಿಚಾರ.

ಅಯ್ಯಾ,—ಕಳೆದ ಜನರಲ್ ಮೀಟಿಂಗಿನಲ್ಲಿ ಮೈಸೂರು ನೀಮೆಯ ... ರಿಜಿಸ್ಟ್ರಾರ್ ಸಾಹೇಬರು ಇಲ್ಲಿನ ಸೊಸೈಟಿಯು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದೆ ಎಂದು ಸಂತೋಷಪಟ್ಟು, ಸೊಸೈಟಿಯ ಸೆಕ್ರೆಟರಿಯವ ... ಆ ಕಾಲದಲ್ಲಿ ರೈಟರಾಗಿದ್ದ ಮ॥ ಶ್ರೀಕಂಠಯ್ಯನವರಿಗೂ, ಬಹುಮಾನಗಳನ್ನು ಕೊಡಿಸಿದರಷ್ಟೆ. ಈಚೆಗೆ ಈ ಸೊಸೈಟಿಯ ಸ್ಥಿತಿಯು ... ಕೆಟ್ಟಿರುವದೆಂದು ತುಂಬಾ ಪುಕಾರಾಗಿದೆ. ಸೆಕ್ರೆಟರಿಯವರೂ ಕಮಿಟಿ ... ತಮಗೆ ಬೇಕಾದಂತೆ ಕೆಲಸಗಳನ್ನು ನಡಿಸುತ್ತಾರೆಂತಲೂ, ಇವರ ... ತಡೆಯೇ ಇಲ್ಲವೆಂತಲೂ, ಮಿಸಾಚಿಟ್ಟು ದಾರರಿಗೆ ಕೂಡ ಸಕಾಲಕ್ಕೆ ... ಹಣ ಸಿಕ್ಕುವುದು ಕಷ್ಟವಾಗಿದೆಯೆಂತಲೂ, ಬಡಜನಗಳಿಗೆ ಸಾಮಾನ್ಯವಾಗಿ ಸೆಕ್ರೆಟರಿಯವರು ಸಾಲ ಕೊಡುವುದೇ ಇಲ್ಲವೆಂತಲೂ, ನಿಜರ್ಜನವಾದ ಕಾಲದಲ್ಲಿ ಸೊಸೈಟಿಗೆ ಹೋದರೆ ಬಾಗಿಲನ್ನೇ ತೆರೆದಿರುವುದಿಲ್ಲವೆಂತಲೂ, ... ಕೊಡುತ್ತಾರೋ ಎಂಬುವಾಗಿ ಕೇಳುತ್ತಾರೆಂತಲೂ, ಸೆಕ್ರೆಟರಿಯವರಿಗೂ ... ಯವರಿಗೂ ಜನರ ಮಾತಿನಲ್ಲಿಯೂ ಲಕ್ಷ್ಯವೇ ಇಲ್ಲವೆಂತಲೂ, ಅವರಿಗೆ ಸೊಸೈಟಿಯ ಅಭಿವೃದ್ಧಿ ವಿಷಯದಲ್ಲಿ ದೃಷ್ಟಿಯೇ ಇಲ್ಲವೆಂತಲೂ ಬಹಳ ಪುಕಾರಾಗಿದೆ; ಮತ್ತು ಅನೇಕರು ತಾವು ಹಾಕಿರುವ ಹಣವನ್ನು ವಾಪಸು ತೆಗೆದುಕೊಳ್ಳುವದು ಒಳ್ಳೆಯದೆಂತ ಯೋಚಿಸುತ್ತಿದ್ದಾರೆ. ಅಲ್ಲದೆ ಕಮಿಟಿ ಮೆಂಬರುಗಳಾಗಿದ್ದ ನಮ್ಮ ಅಮಲ್ದಾರರವರೂ, ಸಬ್ ರಿಜಿಸ್ಟ್ರಾರವರೇ ಮೊದಲಾದ ಕೆಲವು ಸರ್ಕಾರಿ ಉದ್ಯೋಗಸ್ಥರು ಕಮಿಟಿಯಿಂದ ನಿವೃತ್ತರಾಗಿರುತ್ತಾರೆ. ಇದರಿಂದ ಜನಗಳಿಗೆಲ್ಲಾ ಬಹಳ ಗಾಬರಿಯುಂಟಾಗಿದೆ. ಸೊಸೈಟಿಯಲ್ಲಿ ಸರಿಯಾಗಿ ಕೆಲಸಗಳು ನಡೆಯದೆ ಇದ್ದರೆ ತಾಲ್ಲೂಕಿನ ಅಧಿಕಾರಿಗಳು ಮುಂದೆ ... ಲೋಪಗಳನ್ನು ಸರಿಪಡಿಸುವದಕ್ಕೆ ತಕ್ಕ ಸಲಹೆಯನ್ನು ಮಾಡದೆ ತಾವೇ ಮೊದಲು ಸೊಸೈಟಿಯಿಂದ ನಿವೃತ್ತರಾಗುವದನ್ನು ನೋಡಿ ವಿಷಾದಪಡಬೇಕಾಗಿದೆ. ಪ್ರಜೆಗಳ ಕ್ಷೇಮಚಿಂತನೆಯಲ್ಲಿ ಕಂಕಣಬದ್ಧರಾಗಿರುವ ನಮ್ಮ ಶ್ರೀಮನ್ಮಹಾರಾಜರವರಿಗೆ ಈ ಸೊಸೈಟಿಯ ಮೇಲೆ ತುಂಬಾ ಅಭಿಮಾನವಿದೆ. ಇಂಥಾ ಈ ಸೊಸೈಟಿಗೆ ಈಗ ಒದಗಿರುವ ದುರ್ದೆಸೆಯನ್ನು ನೋಡಿ ಬಹಳ ... ಪಡಬೇಕಾಗಿದೆ. ಆದಕಾರಣ ರಿಜಿಸ್ಟ್ರಾರ್ ಸಾಹೇಬರು ದಯಮಾಡಿ ಈ ಸೊಸೈಟಿಯ ಆಡಳಿತವನ್ನು ತನಿಖೆಮಾಡಿ ಮೆಂಬರುಗಳನ್ನು ವಿಚಾರಿಸಿ ಅವರಿಗಿರುವ ತೊಂದರೆಯನ್ನು ತಪ್ಪಿಸಿ ಸೊಸೈಟಿಯು ಸರ್ವ ಸಮರ್ಪಕವಾದ ಸ್ಥಿತಿಗೆ ಬರಲು ತಕ್ಕ ಏರ್ಪಾಡುಗಳನ್ನು ಮಾಡಿ ಜನಗಳಲ್ಲಿ ಧೈರ್ಯವನ್ನೂ ನಂಬಿಕೆಯನ್ನೂ ಹುಟ್ಟಿಸಿ ಬಡ ಜನಗಳಿಗೆ ಸಹಾಯವಾಗುವಂತೆ ಮಾಡುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ನ. ಸ.

[ನಾಲ್ಕಾರು ಮೆಂಬರುಗಳು ಇಂಥಾ ಅಕ್ರಮ ಲೋಪದೋಷಗಳನ್ನು ವಿವರಿಸಿ ರಿಜಿಸ್ಟ್ರಾರವರಿಗೆ ಅರ್ಜಿ ಬರೆದುಕೊಂಡರೆ ಅವರು ತನಿಖೆ ಮಾಡುವರು. ... ದ್ದರೆ ಮೆಂಬರುಗಳು ಸ್ಪೆಷಲ್ ಮೀಟಿಂಗು ಮಾಡಿ ಬಹುಮತಿಯಿಂದ ಸೆಕ್ರೆಟರಿ ಮೊದಲಾದವರುಗಳನ್ನು ನೇಮಕ ಮಾಡಿಕೊಳ್ಳಬಹುದು.—ಎಡಿ.]

[illegible] ಮೆಂಬರುಗಳೂ ಮತ್ತು ಅವರು ಕೊಡುವ ಸಬ್ಜೆಕ್ಟುಗಳೂ.

ಅಯ್ಯಾ,—ಮೈಸೂರಿನಲ್ಲಿ ಪ್ರತಿ ವರುಷವೂ ನವರಾತ್ರಿ ಕಾಲದಲ್ಲಿ ನಡೆಯುವ ರೆಪ್ರೆಸೆಂಟೆಟಿವ್ ಅಸೆಂಬ್ಲಿ ಮೀಟಿಂಗಿಗೆ ಮೆಂಬರಾಗಲು ಹೆಚ್ಚು ಕಂದಾಯ ಕೊಡತಕ್ಕವರೇ ಅರ್ಹರೆಂದು ಸರ್ಕಾರದವರು ನಿರ್ಧರಿಸಿ ಮಾಡಿರುತ್ತಾರೆ ... ಹೆಚ್ಚು ಕಂದಾಯ ಕೊಡತಕ್ಕವರೇ ರಾಜ್ಯಾಡಳಿತದಲ್ಲಿಯೂ, ಪ್ರಜೆಗಳ ಹಿತಚಿಂತನದಲ್ಲಿಯೂ ಯೋಗ್ಯರೆಂದೂನೂ, ತಿಳುವಳಿಕಸ್ಥರೆಂದೂನೂ ... ಹಾಗಾಯಿತು. ಎಷ್ಟೋ ಜನ ಮೆಂಬರುಗಳಿಗೆ ಪ್ರಪಂಚ ಜ್ಞಾನವೇ ಇರುವುದಿಲ್ಲ. ಆದರೆ ತಾವು ದೊಡ್ಡ ಮನುಷ್ಯರು ರಾಜ ದೃಷ್ಟಿಗೆ ಬೀಳುತ್ತೇವೆ ಎಂಬ ಅಹಂಕಾರವನ್ನು ಇಟ್ಟುಕೊಂಡು ಸ್ಥಳದಲ್ಲಿ ತಿಳುವಳಿಕೆ ಇಲ್ಲದ ರೈತರು ... ಈ ವರ್ಷ ಮೈಸೂರಿಗೆ ಹೋದಾಗ ಹಾಗಾಯಿತು ಹೀಗಾಯಿತು. ... ಈ ವಿಷಯವನ್ನು ಚರ್ಚೆ ಮಾಡಿದೆವು. ಅದಕ್ಕೆ ಹುಕುಂ ಆಗಿದೆ ಎಂದು ... ಸ್ವಪ್ರಯೋಜನದಲ್ಲಿ ಪೂರ್ಣ ದೃಷ್ಟಿಯಿಟ್ಟು ಆ ಆಫೀಸ ... ಈ ಕೆಲಸವನ್ನು, ಈ ಆಫೀಸರಲ್ಲಿ ಹೇಳಿ ಆ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಹೇಳಿಕೊಳ್ಳುವವರೇ ಅನೇಕರಿರುತ್ತಾರೆ. ಯಾರಾ ... ಆಫೀಸರು ಸ್ಥಳಕ್ಕೆ ಬಂದಾಗ್ಗೆ ಈ ಮೆಂಬರುಗಳನ್ನು ಕರಸಿ ಸ್ಥಳ ವಿಷಯ ... ವಿಚಾರ ಮಾಡಿದಾಗ ಇವರ ಆನಂದಕ್ಕೆ ಪಾರವೇ ಇಲ್ಲ. ಈ ರೀತಿ ವಿಚಾರ ಮಾಡುವುದನ್ನು ರೈತರುಗಳು ನೋಡಿ ಮೆಂಬರುಗಳು ಹೇಳುವ ಮಾತುಗಳೆಲ್ಲಾ ನಿಜವೆಂದು ನಂಬಿಕೊಂಡು ಪ್ರತಿ ಒಂದು ಕೆಲಸಕ್ಕೂ ಅವರಲ್ಲಿಯೇ ಹೋಗಿ ಹೇಳಿಕೊಳ್ಳುತ್ತಾರೆ. ಆ ಕೆಲಸಗಳ ಪರ್ಯವಸಾನ ವಾಚಕರೇ ಊಹಿಸಿಕೊಳ್ಳಬಹುದು. ಕೆಲವು ಜನ ಮೆಂಬರುಗಳಿಗೆ ಶಕಾರ, ಸಕಾರ ಭೇದ ಕೂಡಾ ತಿಳಿಯದೆ ಬಾಯಿಗೆ ಬಂದಂತೆ ಹರಟುತ್ತಾರೆ. ಇನ್ನೂ ಕೆಲವರಿಗೆ ಸಭಾ ಕಂಪ. ಇವರು ತೊಟ್ಟ ಅಂಗಿಯೆಲ್ಲಾ ಒದ್ದೆಯಾಗಿ, ಮುಖ ಬೆವರಿ, ನಾಲಿಗೆ ತೊದಲಿ, ಆಮರಣ ಪರಿಯಂತರ ಇಂಥಾ ಸಂದರ್ಭ ಬರಬಾರದೆಂದು ತಮ್ಮ ಕುಲದೇವತೆಯನ್ನು ಸ್ಮರಿಸಿಕೊಳ್ಳುವರು. ಈ ರೀತಿ ಒಂದೆರಡು ದಫಾ ಅನುಭವಿಸಿ ಇನ್ನು ಮುಂದೆ ಕೇಳುವ ಪ್ರಶ್ನೆಗಳಿಗೆಲ್ಲಾ ತಲೆಹಾಕುತ್ತಾ ಇದ್ದರೆ ಇತರರು ಗಂಭೀರವೆಂದು ತಿಳಿದುಕೊಳ್ಳುತ್ತಾರಾಗಿ ಭಾವಿಸಿ, ಮೌನವಾಗಿದ್ದು ಪ್ರತಿ ಒಂದಕ್ಕೂ ತಲೆಹಾಕುತ್ತಾ, ತಮ್ಮ ಮೆಂಬರ ಅವಧಿಯನ್ನು ಮುಗಿಸಿಕೊಳ್ಳುತ್ತಾರೆ. ಹೀಗಿದ್ದಾಗ್ಯೂ ಇಂಥಾವರು ಪ್ರತಿಷ್ಠೆಯನ್ನೂ ಅಹಂಕಾರವನ್ನೂ ಬಿಡುವುದಿಲ್ಲ. ಸ್ಥಳದಲ್ಲಾದರೋ ನಿಮಿತ್ತಕ್ಕೆ ಸಿಗದಂತೆಯೂ, ಕಾಟ ತಪ್ಪದಂತೆಯೂ ಕಾಲಹರಣ ಮಾಡುವರು. ಸಬ್ಜೆಕ್ಟು ಕೊಡುವಾಗ ಬಹಿರಂಗಪಡಿಸದೆ ತಮಗೆ ತೋಚಿದ ಮತ್ತು ತಮಗೆ ಅನುಕೂಲವಾದ ಈ ಕೆರೆ ಕಾಮಗಾರಿ ಆಗಬೇಕು, ತಮ್ಮ ಗ್ರಾಮದ ಹುಲ್ಲು ಬನ್ನಿ ಮಾಫಿಯಾಗಬೇಕು, ನಾಟಾ ಮುಫತ್ತು ಕೊಡಿಸಬೇಕು, ಈ ಹೊಳೆಗೆ ಅಡ್ಡಕಟ್ಟೆ ಹಾಕಬೇಕು, ಇವೇ ಮೊದಲಾದ ಬಾಯಿಗೆ ಬಂದ ವಿಷಯಗಳನ್ನು ಬರೆದು ಕೊಡುವರು. ಈ ಸಂದರ್ಭದಲ್ಲಿ ಯಾರಾದರೂ ಇಂಥಾ ವಿಷಯಗಳನ್ನೇ ಸಬ್ಜೆಕ್ಟ್ ಹಾಕಬೇಕೆಂದು ಹೇಳಿದರೆ "ಆ ರೀತಿ ಬರೆದುಕೊಡುವುದು ಆಗುವುದಿಲ್ಲ. ಅದರ ವಿಷಯ ನಿಮಗೆ ತಿಳಿಯದು. ಅದರಿಂದ ಏನು ಪ್ರಯೋಜನ? ಇದು ಆಗತಕ್ಕದ್ದಲ್ಲ" ಎಂಬ ದುರಭಿಮಾನದ ಉತ್ತರವನ್ನು ಕೊಡುವುದರಲ್ಲಿ ಬಹು ನಿಪುಣರು. ಮುಖ್ಯವಾಗಿ ಇತರರು ಹೇಳುವ ವಿಷಯಗಳನ್ನು ಗ್ರಹಿಸಿಕೊಂಡು ಸಾಧಕ ಬಾಧಕ ರೀತಿಯಿಂದ ಉದಾಹರಣೆಯೊಂದಿಗೆ ತಿಳಿಸತಕ್ಕ ಚೈತನ್ಯವಿಲ್ಲದಿರುವುದೇ ಈ ದುರಭಿಮಾನಕ್ಕೆ ಕಾರಣವಾಗಿ, ತಾವೇ ಸರ್ವ ಸ್ವತಂತ್ರರಂತೆ ಜವಾಬು ಹೇಳುತ್ತಾರೆ. ತಮ್ಮನ್ನು ಯಾವ ಉದ್ದೇಶದಿಂದ ಮೆಂಬರರನ್ನಾಗಿ ಚುನಾವಣೆ ಮಾಡಿದಾರೆಂದು ತಿಳಿದುಕೊಳ್ಳುವಷ್ಟು ಯೋಗ್ಯತೆ ಇರುವುದಿಲ್ಲ. ಇಂಥಾ ಮೆಂಬರುಗಳಿಂದ ಸರಕಾರಕ್ಕೆ ತಾನೇ ಏನು ಪ್ರಯೋಜನ? ದೇಶ ಸೇವೆ ತಾನೇ ಹೇಗೆ ನಡೆದೀತು? ಆದರೆ ಇಂಥವರನ್ನು ಚುನಾವಣೆ ಮಾಡುವವರ ತಪ್ಪೆಂದು ಹೇಳಬಹುದು. ಹಾಗೆ ಹೇಳುವ ಪಕ್ಷದಲ್ಲಿ ಹಾಳೂರಿಗೆ ಉಳಿದವನೇ ಗೌಡನೆಂಬ ಗಾದೆಗೆ ಸರಿಯಾಗಿ ಸರಕಾರದವರು ನಿಷ್ಕರ್ಷಿಸಿರುವ ಕಂದಾಯವನ್ನು ಇಂಥಾವರೇ ಕೊಡುತ್ತಿದ್ದ ಮೇಲೆ ಇನ್ಯಾರನ್ನು ತಾನೇ ಚುನಾವಣೆ ಮಾಡುವದಕ್ಕಾದೀತು? ಆದ್ದರಿಂದ ಚುನಾವಣೆ ಮಾಡತಕ್ಕವರ ತಪ್ಪೇನೂ ಅಲ್ಲ. ವಿದ್ಯೆ, ತಿಳುವಳಿಕೆ, ವಾಗ್ಮಿ, ಸದ್ಗುಣ, ಧೈರ್ಯ, ನಿಷ್ಕಳಂಕ, ಪ್ರಜಾ ಹಿತಚಿಂತನೆ, ಇವೇ ಮೊದಲಾದ ಗುಣಗಳುಳ್ಳವರೇ ಮೆಂಬರಾಗುವದಕ್ಕೆ ಯೋಗ್ಯರು. ಈ ಯೋಗ್ಯತೆಗಳು ಹೆಚ್ಚು ಕಂದಾಯ ಕೊಟ್ಟ ಮಾತ್ರದಿಂದ ಬರುತ್ತೇವೆ ಎಂದು ಹೇಳುವದಕ್ಕಾಗುವದಿಲ್ಲ. ಕೇವಲ ಬಡವರಲ್ಲಿಯೂ ಸ್ವಲ್ಪ ಕಂದಾಯ ಕೊಡತಕ್ಕವರಲ್ಲಿಯೂ, ಇವೇ ಮೊದಲಾದ ಅನೇಕ ಗುಣಗಳು ಇರುತ್ತವೆ. ಕಂದಾಯದ ನಿರ್ಬಂಧದಿಂದ ಇವರುಗಳು ಸರಕಾರಕ್ಕೆ ಒಳ್ಳೇ ಸಲಹೆಗಳನ್ನು ಕೊಟ್ಟು ದೇಶಸೇವೆ ಮಾಡಿ ಪ್ರಕಾಶಕ್ಕೆ ಬರಲು ಅಡ್ಡಿಯಾಗಿರುತ್ತೆ. ಮೆಂಬರಾಗಲು ಸರಕಾರದವರು ಇಟ್ಟಿರತಕ್ಕ ಕಂದಾಯ ವಗೈರೆ ನಿರ್ಬಂಧವು ತಪ್ಪೆಂದು ಹೇಳುವುದಕ್ಕೂ ಆಗುವುದಿಲ್ಲ. ಆದರೆ ಮೆಂಬರುಗಳು ತಾವು ಸಬ್ಜೆಕ್ಟ್ ಕೊಡುವುದಕ್ಕೆ ಮೊದಲು ಆಯಾ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ಅಮಲ್ದಾರರ ಸಹಾಯದಿಂದ ಎಲ್ಲರನ್ನೂ ಬರಮಾಡಿಕೊಂಡು ಒಂದು ಮೀಟಿಂಗು ಮಾಡಿ ಇತರರು ಹೇಳುವ ಮತ್ತು ತಾವು ಕೊಡಬೇಕೆಂದಿರುವ ವಿಷಯಗಳನ್ನು ಚೆನ್ನಾಗಿ ಚರ್ಚೆಯಿಂದ ನಿಷ್ಕರ್ಷಿಸಿ, ಎಲ್ಲರಿಂದ ನಿರ್ಧಾರವಾಗುವ ವಿಷಯಗಳನ್ನು ಡಿಸ್ಟ್ರಿಕ್ಟಿನಲ್ಲಿ ನಡೆಯುವ ಮೀಟಿಂಗಿಗೆ ಸಿದ್ಧಪಡಿಸುವುದೂ, ಅಲ್ಲಿ ನಿಷ್ಕರ್ಷೆಯಾದದ್ದು ದಸರಾ ಅಸೆಂಬ್ಲಿಗೆ ಕಳುಹಿಸುವುದೂ, ಈ ರೀತಿ ಮಾಡಿದಲ್ಲಿ ದಸರಾ ಮೀಟಿಂಗು ಕಾಲದಲ್ಲಿ ವಿಷಯಗಳನ್ನು ಸಾಧಕ ಬಾಧಕ ಚರ್ಚೆಯಿಂದ ತಿಳಿಸಲು ಮೆಂಬರರು ತುಂಬಾ ಶಕ್ತರಾಗುತ್ತಾರಲ್ಲದೆ ಅದರ ಫಲವನ್ನು ಕೂಡಾ ಸರಕಾರದವರು ಮತ್ತು ಪ್ರಜೆಗಳು ಸಹ ಜಾಗ್ರತೆ ಹೊಂದಬಹುದು. ಇದಕ್ಕೆ ನಮ್ಮ ಸರಕಾರದವರು ಗಮನ ಕೊಟ್ಟು ಇನ್ನು ಮುಂದೆ ಆಯಾಯ ತಾಲ್ಲೂಕಿನಲ್ಲಿ ಮೇಲ್ಕಂಡಂತೆ ಚರ್ಚೆ ನಡೆದು ಸಬ್ಜೆಕ್ಟುಗಳು ಬರಬೇಕೆಂದು ವಿಧಿ ಮಾಡಿದಲ್ಲಿ ಅಸಂಭವವಾದ ಸಬ್ಜೆಕ್ಟುಗಳು ಬಾರದೆ ಇರುವುದಕ್ಕೂ, ರೈತರುಗಳ ಕಷ್ಟ ನಿವಾರಣೆಯಿಂದ ಸುಭಿಕ್ಷವುಂಟಾಗುವುದಕ್ಕೂ ಅನುಕೂಲವಾಗಬಹುದಲ್ಲದೆ ಒಂದೊಂದು ತಾಲ್ಲೂಕಿಗೆ ಈಗ ಇರತಕ್ಕ ಮೆಂಬರುಗಳ ಸಂಖ್ಯೆಯನ್ನು ತಗ್ಗಿಸಿ ಮಿತವಾದ ಸಂಖ್ಯೆಯನ್ನು ಕೂಡಾ ಮಾಡಬಹುದಾಗಿದೆ. ಮತ್ತು ರೈತರುಗಳಿಗೆ ಸ್ವತಂತ್ರವನ್ನು ಹೆಚ್ಚಿಸಿದಂತೆಯೂ ಆಗುತ್ತೆ.

ಪ್ರಜಾ ಹಿತೈಷಿ.

[ಇದರಲ್ಲಿ ಸರ್ಕಾರದವರು ಮತ್ತೂ ಪ್ರಜೆಗಳ ದೀರ್ಘಾಲೋಚನೆಗೆ ಯೋಗ್ಯವೂ ಹಿತಕರವೂ ಆದ ಸಲಹೆಗಳಿರುವವೆಂದು ನಮಗೆ ತೋರುತ್ತದೆ.—ಎಡಿ.]

ತಾಲ್ಲೋಕು ವರ್ತಮಾನಗಳು.

ಕುಣಿಗಲು.—ಇಲ್ಲಿ ಒಂದು ತಿಂಗಳಿಂದ ಮಳೆಯಿಲ್ಲದೆ ಪೈರುಗಳೆಲ್ಲಾ ಬಾಡಿಹೋಗಿದ್ದವು. ಈಚೆಗೆ ಒಂದು ವಾರದಿಂದಲೂ ಆಗಾಗ್ಗೆ ಮಳೆ ಬರುತ್ತಲೇ ಇರುವದರಿಂದ ಪೈರುಗಳೆಲ್ಲಾ ಬಹು ಚೆನ್ನಾಗಿ ಕಂಗೊಳಿಸುತ್ತಿರುವವು. ರೈತರು ತುಂಬಾ ಹಸನ್ಮುಖಿಗಳಾಗಿ ತಮ್ಮ ಕೆಲಸಗಳನ್ನು ಹರ್ಷದೊಡನೆ ನಡಿಸುತ್ತಿರುವರು. ನೀರಿಲ್ಲದ ಬತ್ತಿಹೋಗಿದ್ದ ದೊಡ್ಡ ಕೆರೆಯು ಇದುವರಿಗೂ ಬಿದ್ದ ಮಳೆಯಿಂದ ಕಾಲು ಭಾಗದ ಮಟ್ಟಿಗೂ ಭರ್ತಿಯಾಗಿದೆ.—ಕಳೆದ ತಿಂಗಳ 24 ನೇ ತಾ ಮಂಗಳವಾರ ಬೆಳಗ್ಗೆ ಇಲ್ಲಿನ ದೊಡ್ಡ ಕೆರೆಗೆ ಸ್ನಾನ ಮಾಡಿಗೋಸ್ಕರ ಹೋಗಿದ್ದ ವೈಶ್ಯರ ತಾಯಿ ಮತ್ತು ಮಗಳು ಅಕಸ್ಮಾತ್ತು ಕಾಲುಜಾರಿ ಮೊದಲು ಮಗಳು ನೀರಿನೊಳಕ್ಕೆ ಬಿದ್ದಳು. ಮಗಳನ್ನು ಎಳೆದುಕೊಳ್ಳಬೇಕೆಂದು ತಾಯಿ ಕೈಕೊಟ್ಟು ತಾನೂ ಹಾಗೆಯೇ ನೀರಿನೊಳಗೆ ಸೇರಿ ಇಬ್ಬರೂ ಏಕಕಾಲದಲ್ಲಿ ಅಕಾಲಮರಣಕ್ಕೆ ಗುರಿಯಾದರು. ಇವರಲ್ಲಿ ಮಗಳಿಗೆ ಸಣ್ಣ ವಯಸ್ಸಿನ ಮೂರು ಮಕ್ಕಳು ಇವೆ. ಈ ಮಕ್ಕಳ ಮತ್ತು ಬಂಧುಗಳ ದುಃಖವನ್ನು ಹೇಳಕೂಡದ್ದಾಗಿದೆ.

ಶಿಡ್ಲಘಟ್ಟದ ತಾ॥ ಗಂಜಗುಂಟೆ.—ತುಂತುರು ಮಳೆ ಸುಮಾರಾಗಿ ಬೀಳುತ್ತಾ ಇದೆ. ಆದರೂ ಮಳೆಯು ಬೀಳುವುದಕ್ಕೆ ಮೊದಲೇ ಕೆಲವು ಹೊಲಗಳು ಒಣಗಿಹೋದುವು. ಉಳಿದ ಅಲ್ಪಸ್ವಲ್ಪ ಬೆಳೆಗಳು ಸುಮಾರಾಗಿವೆ.—ಈ ಗ್ರಾಮದ ಕೋಆಪರೇಟಿವ್ ಸೊಸೈಟಿಯು ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತಾ ಇವೆ.—ಈ ಗ್ರಾಮದಲ್ಲಿ ವ್ಯಾಪಾರಸ್ಥರು ಕಮ್ಮಿ ಬಟ್ಟುಗಳನ್ನೂ ಸೇರುಗಳನ್ನೂ ಉಪಯೋಗಿಸುತ್ತಾ ಬಡ ಜನಗಳಿಗೆ ತುಂಬಾ ನಷ್ಟಮಾಡುತ್ತಿದ್ದಾರೆ ಮತ್ತು ಈ ಗ್ರಾಮದ ಪಾಠಶಾಲಾ ವಿಷಯವಂತು ಹೇಳಬೇಕಾದದ್ದೇ ಇಲ್ಲ. ಮುಖ್ಯವಾಗಿ ಈ ಗ್ರಾಮದ ಎ. ವಿ. ಸ್ಕೂಲಿಗೆ ಸುತ್ತಲೂ ಕಾಂಪೌಂಡ್ ಗೋಡೆ ಇದೆ. ಆದರೂ ಬಾಗಿಲು ಇಲ್ಲದ್ದರಿಂದ ರಾತ್ರಿ ಕತ್ತೆಗಳಿಂದಲೂ ಜನಗಳಿಂದಲೂ ತುಂಬಾ ಗಲೀಜು ಆಗುತ್ತೆ. ಪಟೇಲ್ ಶ್ಯಾನುಭೋಗರೂ ಗ್ರಾಮಸ್ಥರೂ ಈ ವಿಷಯದಲ್ಲಿ ಸಗಾ ಕೊಡುವದಿಲ್ಲ. ಮತ್ತು ಗ್ರಾಮದಲ್ಲಿ ಎಲ್ಲಿ ನೋಡಿದರೂ ನಾಗದಾಳಿ ಮುಳ್ಳುಗಳು ಆವರಿಸಿಕೊಂಡಿವೆ. ಗ್ರಾಮದ ಪಶ್ಚಿಮದ ಕಡೆ ಹೋಗುವ ರಸ್ತೆಯು ನಾಗದಾಳಿ ಪೊದೆಗಳಿಂದ ಆವರಿಸುತ್ತಾ ಬಂದು ರಸ್ತೆಯೇ ಮುಚ್ಚಿಹೋಗುತ್ತಾ ಬಂದಿದೆ.—ಈ ಗ್ರಾಮದಲ್ಲಿ ಒಂದು ಪೋಲೀಸ್ ಸ್ಟೇಷನ್ ಇದೆ. ಮೂರು ಜನ ಕಾನಸ್ಟೇಬಲ್‌ಗಳು ಇರುತ್ತಾರೆ. ಅವರು ರಾತ್ರಿಯಾದರೆ ಊರಿನೊಳಕ್ಕೆ ಬರುವವರೇ ಇಲ್ಲ. ಕಳ್ಳಕಾಕರ ಕಾಟ ತಲೆದೋರಿದೆ. ವಿಚಾರಿಸಿದರೆ ನಮಗೆ ಗ್ರಾಮದಲ್ಲಿ ಗಸ್ತುಮಾಡುವ ರೂಲ್ಸ್ ಇಲ್ಲವೆಂತಲೂ, ಗ್ರಾಮದ ತನಿಖೆ ತಮಗೆ ಬೇಕಾಗಿಲ್ಲವೆಂತಲೂ ಹೇಳುತ್ತಾರೆ. ಮೊದಲು ಇದ್ದವರು ಬಹಳ ಮುತುವರ್ಜಿಯಿಂದ ಕೆಲಸಮಾಡುತ್ತಾ ಕಳ್ಳಕಾಕರ ಕಾಟಕ್ಕೆ ಆಸ್ಪದವಿಲ್ಲದಂತೆ ನೋಡಿಕೊಳ್ಳುತ್ತಿದ್ದರು.

ದೊಡ್ಡಬಳ್ಳಾಪುರ.—ಸುಮಾರು 15 ದಿನಗಳಿಂದ ಮಳೆಯಿಲ್ಲ. ಪೈರುಗಳು ಒಣಗುತ್ತಲಿವೆ. ಬಿಸಿಲು ಹೆಚ್ಚು. ವೈಶಾಖ ಶುದ್ಧ 15 ರ ಲಾಗಾಯ್ತು ಬ್ರಾಹ್ಮಣರ ಬೀದಿಯಲ್ಲಿ ಇಲಿಗಳು ಬಿದ್ದು 2-3 ಜನ ಬ್ರಾಹ್ಮಣರೂ, 5-6 ಜನ ದೇವಾಂಗದವರೂ, ಇತರರು ಒಬ್ಬಿಬ್ಬರೂ ಸತ್ತರು. ಇಲ್ಲಿನ ಡಾಕ್ಟರಿಂದಲೇ 2,000 ಜನರು ಇನಾಕ್ಯುಲೇಷನ್ ಮಾಡಿಸಿಕೊಂಡರು. ದೇವಾಂಗದವರೆಲ್ಲಾ ಇನಾಕ್ಯುಲೇಷನ್ ಮಾಡಿಸಿಕೊಂಡು ಉದ್ಯೋಗಾದಿಗಳನ್ನು ಮಾಡಿಕೊಂಡು ಮನೆಗಳಲ್ಲಿರುತ್ತಾರೆ. ಬೆಂಗಳೂರಿನಿಂದ ಡಾಕ್ಟರು ಮುತ್ತುಸಾಮಿ ದಾಸರು ಸಹ ಬಂದು ಕೆಲವರಿಗೆ ಇನಾಕ್ಯುಲೇಷನ್ ಮಾಡಿದರು. ಮಾಕಪಕಪ್ಪನ ಗಲ್ಲಿಯಲ್ಲಿ ಇಲಿಗಳು ಸತ್ತದ್ದರಿಂದ ಅಕ್ಕಸಾಲಿಗರು, ನಗರ್ತರು ಆ ಬೀದಿಯನ್ನು ಬಿಟ್ಟರು. ವೈಶ್ಯರಲ್ಲಿ ಕೆಲವರು ಮನೆಗಳು ಬಿಟ್ಟಿರುತ್ತಾರೆ. ಸುಮಾರು 60-70 ಮನೆಯವರು ಊರುಬಿಟ್ಟಿರಬಹುದು.—15 ತಾ. ರಾತ್ರಿ ಹೊರಿಯರ ಪಾಳ್ಯದಲ್ಲಿ ಹ್ಯಾಗೋ ಬೆಂಕಿಬಿದ್ದು 2 ಮನೆಗಳು ಸಾಮಾನು ಸಹಿತ ಸುಟ್ಟು ಹೋದವು. ಊರಿನಲ್ಲಿ ಪೇಟೆಯಲ್ಲಿ ಜನಗಳೆಲ್ಲಾ ಇದ್ದು 17 ನೇ ತಾ. ರಾತ್ರಿ ಯಬ್ಬಾಳದ ಸಂಜಪ್ಪನವರ ಅಂಗಡಿ ಬೀಗವೂ ಕಿಟ್ಟರ ಮಣ್ಣಿಪ್ಪನಮನೆ ಬೀಗವೂ ಕಳ್ಳರು ಮುರಿದು ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋದರು. ಪುನಃ 19 ನೇ ತಾ. ಚಿತ್ತರ ವೀರಪ್ಪನವರ ಸಾರಾಯಿ ಅಂಗಡಿ ಬೀಗ ಮುರಿದು ಕೆಲವು ಸಾಮಾನುಗಳು ಸಾರಾಯಿ ಸೀಸೆಗಳು ತೆಗೆದುಕೊಂಡು ಹೋಗಿರುತ್ತಾರೆ. ಅದೇ ರಾತ್ರಿ ಎ. ವಿ. ಸ್ಕೂಲ್ ಬೀಗ ಮುರಿದಿದ್ದರು; ಏನೂ ಹೋಗಿರಲಿಲ್ಲ. ಆ ರಾತ್ರಿಯೇ ಲಕ್ಷ್ಮೀನಾರಾಯಣನ ಗುಡಿ ಸಾಲಿನಲ್ಲಿ ಕೆಲವು ಸಾಮಾನುಗಳು ಸಹಾ ಕಳುವಾಯ್ತು.—ಪರಸ್ಥಳ ಮತ್ತು ಹಳ್ಳಿಗಳಿಂದ ದಿನಸು, ಹುಲ್ಲು, ಕಟ್ಟಿಗೆ ವಗೈರೆ ಬರುವದು ಕಡಮೆ. ಊರಿನಲ್ಲಿ ಪ್ಲೇಗಿನ ಗಲಾಟೆ ಅಷ್ಟೇನೂ ಇಲ್ಲ. ಬರೀ ಜನಗಳ ಗಾಬರಿ ಮಾತ್ರ ಇದೆ. ಆಚೆ ಹೋದರೆ ಕಳ್ಳರ ಭಯ. ನಮ್ಮ ಪೋಲೀಸ್ ಇನ್‌ಸ್ಪೆಕ್ಟರು ಮೆಹನತ್ತುಮಾಡಿ ಜನಗಳ ಮಾನ ಧನಗಳನ್ನು ಕಾಪಾಡಬೇಕಾಗಿ ಪ್ರಾರ್ಥಿಸುತ್ತಿರುತ್ತಾರೆ.

ಮಂಡ್ಯ ತಾ॥ ಹೊನಗೋನಹಳ್ಳಿ.—ಮಳೆ ಇಲ್ಲದೆ ಪೈರುಪಚ್ಚೆಗಳೆಲ್ಲಾ ಒಣಗುತ್ತಲಿವೆ. ಈ ಊರಿನ ಕೆರೆ ಬಹಳ ದಿವಸದಿಂದಲೂ ರಿಪೇರಿ ಇಲ್ಲದೆ ಇದೆ. ಮತ್ತು ಹೂಳು ಹೆಚ್ಚಾಗುತ್ತಾ ಬಂದಿದೆ. ಈ ಕೆರೆ 2-3 ಸಾರಿ ತುಂಬಿದರೆ ತಕ್ಕಮಟ್ಟಿಗೆ ಬೆಳೆ ಆಗುತ್ತೆ.—ಈ ಗ್ರಾಮ ಮತ್ತು ಹುಲಿವಾಸವೆಂಬ ಗ್ರಾಮವು ಸೇರಿ ಈ ಹೊನಗೋನಹಳ್ಳಿ ಗ್ರಾಮದಲ್ಲಿ ಸ್ಕೂಲ್ ಮಾಡಿಸಿಕೊಡಬೇಕೆಂದು ಅನೇಕಾವರ್ತಿ ಇಲಾಖೆ ಅಧಿಕಾರಿಗಳಿಗೆ ಅರ್ಜಿಗಳನ್ನು ಗುಜರಾಯಿಸಿಕೊಂಡರೂ ಕೂಡ ಇನ್ನೂ ನೆರವೇರಲಿಲ್ಲ. ಈ ಎರಡು ಗ್ರಾಮಗಳಿಂದ ಕನಿಷ್ಟಪಕ್ಷ 150 ವಿದ್ಯಾರ್ಥಿಗಳಾದರೂ ಸೇರಲು ಅಭ್ಯಂತರವಿಲ್ಲ. ಸ್ಟೇಟ್ ಸ್ಕೂಲ್ ಅವಶ್ಯಕತೆಯೂ ಉಂಟು. ಆದ್ದರಿಂದ ಸರ್ಕಾರದವರು ಬಡ ರೈತಪ್ರಜೆಗಳ ಮೇಲೆ ಅಭಿಮಾನವಿಟ್ಟು ಶೀಘ್ರದಲ್ಲಿ ಸ್ಕೂಲ್ ಏರ್ಪಾಡು ಮಾಡಿಸಿಕೊಡಬೇಕಾಗಿ ಬೇಡುತ್ತೇವೆ.—ಈ ಗ್ರಾಮಕ್ಕೆ ಸೇರಿರುವ ಗೋಮಾಳದ ಭೂಮಿ 334 ಎಕ್ರೆ; ಉತ್ಕೃಷ್ಟವಾದ್ದು 110 ಎಕರೆ ಮಾತ್ರ. ಉಳಿದದ್ದು ಗೋಮಾಳಕ್ಕೆ ಉಪಯೋಗವಾದ್ದಲ್ಲ. ಸುಣ್ಣಪರೆಯಿಂದಲೂ, ಕಲ್ಲುಮಾಟಗಳಿಂದಲೂ ಕೂಡಿ ಹುಲ್ಲು ಸಹ ಬೆಳೆಯುವದಿಲ್ಲ. ಹಿಂದೆ ಈ ಗೋಮಾಳಕ್ಕಾಗಿ ಅನೇಕರು ದರಖಾಸ್ತು ಹಾಕಿದಾಗ್ಯೂ ಅದು ಗೋಮಾಳಕ್ಕೆ ಸಂಬಂಧಪಟ್ಟದ್ದೆಂದು ಗೌರ್ನಮೆಂಟಿನವರು ನಿರ್ಣಯಿಸಿದರು. ಈಚೆಗೆ ಅನೇಕರು ಮೇಲ್ಕಂಡ ಗೋಮಾಳಕ್ಕೆ ದರಖಾಸ್ತು ಕೊಟ್ಟದಾರೆಂದು ಕೇಳುತ್ತೇವೆ. ಅದು ಅವರ ಕೈಸೇರುವ ಪಕ್ಷಕ್ಕೆ ಈ ಊರಿಗೆ ಗೋಮಾಳವಿಲ್ಲದೆ ಬಡ ರೈತಪ್ರಜೆಗಳಿಗೆ ತುಂಬಾ ಪೇಚಾಟ ಉಂಟಾಗಿರುತ್ತೆ. ಸರ್ಕಾರದವರು ಜಾನುವಾರುಗಳ ಕಡೆಗೆ ದೃಷ್ಟಿ ಇಡಬೇಕಾಗಿ ಕೋರಿಕೆ.—ಈ ಗ್ರಾಮಕ್ಕೆ ಮುಖಂಡರಾಗಿಯೂ ಪಟೇಲರಾಗಿಯೂ ಇದ್ದ ಮರಿಗೌಡರೆಂಬುವರು 110 ವರ್ಷ ವಯಸ್ಸುಳ್ಳವರಾಗಿದ್ದು ತಾ. 8 ರಲ್ಲಿ ಕಾಲವಾದರು. ಇವರು ಮೊಮ್ಮಗಳ ಮಕ್ಕಳವರಿವಿಗೂ ಸಂತಾನ ಪಡೆದಿದ್ದರು. ಆ ದಿವಸ ಗ್ರಾಮದ ಮುಖಂಡರು ಪುಟ್ಟೇಗೌಡರು ಬಹಳ ಮುತುವರ್ಜಿ ವಹಿಸಿ ವಾದ್ಯಸಮೇತ ಶಾಸ್ತ್ರೋಕ್ತವಾಗಿ ದಹನಕಾರ್ಯಗಳನ್ನು ನಡಿಸಿದರು. ನಂತರ 11 ನೇ ದಿವಸ ಇವರ ಮೊಮ್ಮಕ್ಕಳು ಪಟೇಲ್ ಕುಳ್ಳೇಗೌಡರು ಕೊಳ್ಳೇಗಾಲ ಶ್ರೀನಿವಾಸದಾಸರನ್ನು ಕರಸಿ ಹರಿಕಥೆ ಮಾಡಿಸಿ ಬಹಳ ಜನಗಳಿಗೆ ಸಂತೋಷಪಡಿಸಿದರು. ಮತ್ತು ಸಾವಿರಾರು ಜನರಿಗೆ ಅನ್ನದಾನವನ್ನೂ ನಡಿಸಿದರು.

ತ್ಯಾಮಗೊಂಡ್ಲು.—ಈ ಕಡೆಗೆ ತಿಂಗಳಿಂದಲೂ ಮಳೆ ಇಲ್ಲದೆ ಪೈರುಪಚ್ಚೆಗಳೆಲ್ಲಾ ಒಣಗಿಹೋಗಿದ್ದವು. ಆದರೆ ಈಚೆಗೆ ಮಳೆ ಬಂದದ್ದರಿಂದ ಪೈರುಗಳೆಲ್ಲಾ ಕಳಕಳನೆ ನೇತ್ರಾನಂದಕರವಾಗಿವೆ.—ಬೇರೆ ಬೇರೆ ತಾಲ್ಲೂಕುಗಳಲ್ಲಿ ಚಿಕ್ಕ ಗ್ರಾಮಗಳಲ್ಲಿ ಕೂಡ ಜನರ ಉಪಯೋಗಾರ್ಥವಾಗಿ ಸಂತೆಗಳು ನೇಮಕವಾಗಿ ವಾರಕ್ಕೊಂದು ಸಾರಿ ಸ್ಥಳದ ಪರಸ್ಥಳದ ವರ್ತಕರೆಲ್ಲರೂ ತಮ್ಮ ವ್ಯಾಪಾರದ ದಿನಸಿ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುವಂತೆ ಸರ್ಕಾರದವರು ವಿಧಿಸಿರುವದು ಉಂಟು. ಇದರಿಂದ ಎಲ್ಲರಿಗೂ ಬಹಳ ಪ್ರಯೋಜನವೆಂಬುವದು ಸರ್ವರಿಗೂ ಗೊತ್ತಾಗಿದೆ. ಆದರೆ ಈ ತ್ಯಾಮಗೊಂಡ್ಲು 3-4 ಸಾವಿರ ಪ್ರಜಾಸಂಖ್ಯೆಯುಳ್ಳದ್ದಾಗಿದ್ದಾಗ್ಯೂ ಇಲ್ಲಿ ಸಂತೆ ಜಾರಿಯಲ್ಲಿ ಬರಲಿಲ್ಲ. ಇದರಿಂದ ವರ್ತಕರಿಗೂ ಬಡವರಿಗೂ ಬಹಳ ತೊಂದರೆ. ಸರ್ಕಾರದವರು ಟವನ್‌ನಲ್ಲಿಯೂ ಹಳ್ಳಿಗಳಲ್ಲಿಯೂ ವಾರಕ್ಕೊಂದು ಸಾರಿ ಸಂತೆ ಕಟ್ಟುವ ಏರ್ಪಾಡನ್ನು ಕುರಿತು ಸಾರಿಸಿ, ಜಾರಿಗೆ ತಂದರೆ ಎಲ್ಲರಿಗೂ ಬಹಳ ಪ್ರಯೋಜನವಾದೀತು.—ಮುನಿಸಿಪಲ್ ಏರ್ಪಾಡುಗಳು ತೃಪ್ತಿಕರವಾಗಿಲ್ಲ. ಊರು ಸುತ್ತಲೂ ತಿಪ್ಪೆ ಗುಂಡಿಗಳು; ಎಲ್ಲಿ ನೋಡಿದರೂ ಮಲಮೂತ್ರಗಳ ದುರ್ವಾಸನೆ. ಚರಂಡಿಗಳಲ್ಲಿ ಬಚ್ಚಲ ನೀರು ಹೊರಗೆ ಹೋಗುವದಿಲ್ಲ. ಜಾಡಮಾಲಿಗಳು ಸರಿಯಾಗಿ ಕಚರಾ ಸಾಗಿಸುವದಿಲ್ಲ. ಅಧಿಕಾರಿಗಳು ಗಮನಕ್ಕೆ ತಂದುಕೊಂಡರೆ ಊರಿಗೆ ಕ್ಷೇಮ. ಆಸ್ಪತ್ರೆ ಡಾಕ್ಟರುವರು ಬೇಗ್ಗೆ ಊರಿನಲ್ಲಿ ಸಂಚರಿಸುತ್ತಾ ಈ ವಿಚಾರಗಳನ್ನು ಸರಿಮಾಡುವದಕ್ಕೆ ಪ್ರಯತ್ನಪಡುತ್ತಾರೆ.—ಕಳೆದ ತಾ. 25 ರಲ್ಲಿ ಈ ಊರು ವಿದ್ಯಾರ್ಥಿಗಳ ರೀಡಿಂಗ್ ರೂಮಿನಲ್ಲಿ ಅದರ ವಾರ್ಷಿಕೋತ್ಸವವನ್ನು ತಾ॥ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ಕೆ ರಾಮಸ್ವಾಮಿಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ದೇವರ ಪ್ರಾರ್ಥನೆಯನ್ನು ಮ॥ ಸಿ. ಗೋವಿಂದರಾಜುಲು ಸೆಟ್ಟರು ಹಾಡಿದರು. ಮ॥ ಟಿ ಆರ್. ಮುನಿಸ್ವಾಮಿ ಸೆಟ್ಟರು ಮುಂದಿನ ವಾರ್ಷಿಕ ರಿಪೋರ್ಟನ್ನು ಓದಿದರು. ಮ॥ ಟಿ. ಸಿದ್ಧನಂಜಪ್ಪನವರು ವಿದ್ಯೆ ಮತ್ತು ಪತ್ರಿಕೆಗಳ ವಿಷಯದಲ್ಲಿ ಜನರಂಜಕವಾಗುವಂತೆ ಭಾಷಣಮಾಡಿ, ವಾಂಛಿರವು ಚಿರಜೀವಿಯಾಗಿರಲೆಂದು ಕೋರಿದರು. ಮ॥ ಡಿ ವೆಂಕಣ್ಣಾಚಾರ್ಯರು ವಾಚನಾಲಯಗಳ ಅವಶ್ಯಕತೆಯನ್ನು ಕುರಿತು ಸಭಾಸದರೆಲ್ಲರ ಚಿತ್ತದಲ್ಲಿಯೂ ಬಿಂಬಿಸುವಂತೆ ಭಾಷಿಸಿದರು. ತರುವಾಯ ಅಗ್ರಾಸನಾಧಿಪತಿಗಳು ಸರಳಶೈಲಿಯಿಂದ ಹಿಂದಿನ ಉಪನ್ಯಾಸಕರ ಅಭಿಪ್ರಾಯಗಳನ್ನೇ ಪುಷ್ಟೀಕರಿಸುವ ಭಾಷಣವನ್ನು ಮಾಡಿ ಸರ್ವರಿಗೂ ಆನಂದವನ್ನುಂಟುಮಾಡಿದರು. ಕೊನೆಗೆ ಸಂಗೀತವೂ ಮಂಗಳವೂ ನಡೆದು, ಗಂಧಪುಷ್ಪವಿನಿಯೋಗವಾಗುತ್ತಿರಲು ನಮ್ಮ ಸಾರ್ವಭೌಮ ಸರ್ಕಾರಕ್ಕೂ ನಮ್ಮ ಶ್ರೀಮನ್ಮಹಾರಾಜರವರಿಗೂ ಜಯವಾಗಲೆಂದು ಘೋಷಿಸಿ ಸಭಾ ಬರಖಾಸ್ತು ಮಾಡಲ್ಪಟ್ಟಿತು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 6,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ಬೊನಸ್‌ಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್ ನೆಳಕು, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-48] ಬ್ರಾಂಚ್ ಸೆಕ್ರೆಟರಿ, ಮದರಾಸ್

ಗೃಹಕೃತ್ಯದ ನೋಟೀಸು.

ತರೀಕೆರೆ ಕಸಬಾದಲ್ಲಿರುವ ಕೊಪ್ಪದ ರೇಂಜ್ ಎಕ್ಸೈಸ್ ಇನ್ಸ್‌ಪೆಕ್ಟರ್ ಎಂ. ಶೇಷಗಿರಿರಾವ್ ತಿಳಿಯಪಡಿಸುವದೇನಂದರೆ—ಇದೇ ತರೀಕೆರೆ ಕಸಬಾದಲ್ಲಿ ಇದ್ದು ಹಾಲಿ ಫೌತಿ ಆಗಿರುವ ಇಟ್ಟಿಗೆ ಸುಬ್ಬಣ್ಣನವರ ಮಕ್ಕಳು ಕೆಳಸಪ್ಪನವರ ಬಾಬತು ಸ್ಥಿರ ಚರ ಸ್ವತ್ತುಗಳೂ, ಬರಬೇಕಾದ ಸಾಲದ ಮೊಬಲಗೂ ಕೂಡ ಇವರು ಫೌತಿ ಸಬಬು ಇವರ ಮೈನರ್ ಮಕ್ಕಳು 1 ನೇ ಅಶ್ವತ್ಥನಾರಾಯಣಯ್ಯ, 2 ನೇ ಹಿರಿಯಣ್ಣಪ್ಪ ಇವರ ಹೆಸರಿಗೆ ಖಾತೆ ಇದೆ. ಈ ಮೈನರ್ ಹುಡುಗರಿಗೋಸ್ಕರ ಇವರ ಸೋದರ ಮಾವ ರಾಯಸದ ವೆಂಕಟರಮಣಯ್ಯನವರ ಮೂಲಕ ಕ್ರಯ, ದಾನ, ಅಡವು, ಫಸಲು ಗುತ್ತಿಗೆ ಮಾಡುವದಾಗಿ ವಗೈರೆ ನಮಗೆ ತಿಳಿದು ಬಂದಿದೆ. ಈ ಸ್ವತ್ತುಗಳು ಒಟ್ಟು ಸಮಷ್ಟಿಸ್ವತ್ತಾಗಿಯೂ, ನಮಗೆ ಪಾಲು ಹಕ್ಕು ಇರುವದರಿಂದಲೂ ಇವನ್ನು ಯಾರೂ ಮೇಲ್ಕಂಡಂತೆ ಕ್ರಯ ವಗೈರೆಗೆ ಪಡೆಯಕೂಡದು; ಅಥವಾ ಬೇರೆ ಯಾವ ವಿಧದಲ್ಲಾದರೂ ನನ್ನ ತಿಳುವಳಿಕೆ ವಿನಹ ಮಾಡಿಕೊಳ್ಳಕೂಡದು. ನಮಗೆ ತಗಲುವ ನಷ್ಟ ಮತ್ತು ಮುಂದಿನ ಖರ್ಚು ವಗೈರೆ ಎಲ್ಲಾ ಭಾರಕ್ಕೂ ಗುರಿಯಾಗಬೇಕಾಗುತ್ತೆಂದು ಎಚ್ಚರಿಸಿರುತ್ತೇನೆ.

[186-1] ಎಂ. ಶೇಷಗಿರಿರಾವ್, ಎಕ್ಸೈಸ್ ಇ। ಇನ್ಸ್‌ಪೆಕ್ಟರ್, ತರೀಕೆರೆ.

ಗೃಹಕೃತ್ಯದ ನೋಟೀಸು.

ಶ್ರೀರಂಗಪಟ್ಟಣ ತಾ. ಚಂದಗಾಲ್ ಹೋಬಳಿ ಹುರುಳಿ ಕ್ಯಾತನಹಳ್ಳಿ ಗ್ರಾಮದಲ್ಲಿರುವ ಕುಂಬಾರ ಶಿದ್ದ ಮೈನರ್ ಗಾರ್ಡಿಯನ್ ಜನಕ ತಂದೆ ಬಸವಶೆಟ್ಟಿಯು ತಿಳಿಸುವುದೇನಂದರೆ—ಮೈನರ್ ಶಿದ್ದನು ಸದರಿ ಕ್ಯಾತನಹಳ್ಳಿ ಗ್ರಾಮದಲ್ಲಿದ್ದು ಫೌತಿ ಆದ ಕುಂಬಾರ ತಿಪ್ಪಶೆಟ್ಟಿಗೆ ದತ್ತು ಮಗನಾಗಿರುವನು. ಈತನ ಹೆಂಡತಿ ಕಾಳಮ್ಮನು ಜನಗಳ ದುರ್ಬೋಧನೆಯಿಂದ ಮೈನರಿಗೆ ಮೋಸಪಡಿಸಬೇಕೆಂಬ ದುರಾಲೋಚನೆಯಿಂದ ಮೈನರ್ ಆಸ್ತಿಯನ್ನು ಪರಾಧೀನ ಮಾಡಲು ಉದ್ಯುಕ್ತಳಾಗಿರುವ ಕಾರಣ ಕೆಳಗೆ ಕಂಡ ಸ್ವತ್ತುಗಳನ್ನು ಆಕೆಯಿಂದ ಯಾರೂ ಆಧಾರ ಬೋಗ್ಯ ಕ್ರಯ ಮುಂತಾದ್ದರ ಮೂಲಕ ಹೊಂದಕೂಡದೆಂದು ಎಚ್ಚರಿಸಿರುತ್ತೇನೆ. ಸ್ವತ್ತುಗಳು—ಶ್ರೀರಂಗಪಟ್ಟಣ ತಾ॥ ಚಂದಗಾಲ್ ಹೋ॥ ಹುರುಳಿ ಕ್ಯಾತನಹಳ್ಳಿ ಗ್ರಾಮದಲ್ಲಿರುವ (೧) ಸರ್ವೆ ನಂ. ೧೦ ನೇ ಖುಷ್ಕಿ ಎಕರೆ ೪-೬ ಕಂದಾಯ ರೂ. ೩-೮ ; ನಂ. ೯೫ ನೇ ಖುಷ್ಕಿ ಎಕರೆ ೫-೪ ಆಕಾರ ರೂ. ೫-೮ ; ಈ ೨ ಜಮೀನುಗಳಲ್ಲಿ ಫೌತಿ ತಿಪ್ಪಶೆಟ್ಟಿ ಬಾಬತು ಮೂರನೇ ಒಂದು ಭಾಗ ಜಮೀನ್. (೨) ಅದೇ ಗ್ರಾಮದಲ್ಲಿ ಪೂ. ಪ ಕ್ಕೆ ಬೀದಿ, ದ. ಕ್ಕೆ ಈಡಿಗರ ಓಬೆಗೌಡ್ನಮನೆ, ಉ. ಕ್ಕೆ ಕುಂಬಾರ ಬಸವಶೆಟ್ಟಿ ಮನೆ, ಈ ಮಧ್ಯೆ ಇರುವ ೮ ಅಂಕಣ ಹುಲ್ಲುಮನೆ ಮೈನರ್‌ನ ದತ್ತುತಾಯಿ ಕಾಳಮ್ಮ ವಾಸವಾಗಿರುವದು. (೩) ಅದೇ ಗ್ರಾಮದಲ್ಲಿರುವ ಮೈನರ್ ಬಾಬತು ಹುಲ್ಲು ಹಿತ್ತಲು. [182-1]

ಕುಂಬಾರ ಶಿದ್ದ ಮೈನರ್ ಗಾರ್ಡಿಯನ್ ಜನಕತಂದೆ ಬಸವಶೆಟ್ಟಿ.

ಗೃಹಕೃತ್ಯದ ನೋಟೀಸು.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತೀರ್ಥಹಳ್ಳಿ ತಾಲ್ಲೂಕು ಮೋಗರವಳ್ಳಿ ಮಾಗಣಿ ಕೋಳಿಗೆ ಗ್ರಾಮದ ಮಜರೆ ಮೂಡುಕೋಳಿಗೆ ತಿಮ್ಮಯ್ಯಗೌಡರ ಮಕ್ಕಳು 1 ನೇ ನಾಗಪ್ಪಗೌಡರು, 2 ನೇ ಕೊಠಾಲಗೌಡರು, 3 ನೇ ದುಗ್ಗಪ್ಪಗೌಡರು ಸದರಿ 1 ನೇ ನಾಗಪ್ಪಗೌಡರು ಫೌತಿ. ಇವರ ಮಕ್ಕಳು 1 ನೇ ಗುಂಡಪ್ಪ, 2 ನೇ ಚನ್ನಪ್ಪ. ಈ ಎರಡು ಜನರ ಮೈನರ್ ಗಾರ್ಡಿಯನ್ ತಾಯಿ ಮುತ್ತಮ್ಮ ಎಂಬವರು ಸಹಾ ಒಂದೇ ಅವಿಭಕ್ತ ಕುಟುಂಬಿಕರು ಒಟ್ಟು ಕುಟುಂಬದ ಪಿತರಾರ್ಜಿತ ಸ್ಥಿರ ಚರಾಸ್ತಿಗಳನ್ನು 1 ನೇ ನಾಗಪ್ಪಗೌಡರು ಈಗ ಸುಮಾರು ೬-೬ ತಿಂಗಳ ಹಿಂದೆ ಗತಿಸಿದ ನನ್ನ ಮೈದುನ 3 ನೇ ದುಗ್ಗಪ್ಪಗೌಡರು ಸದರಿ ಮೈನರರು ಗುಂಡಪ್ಪ ಮತ್ತು ಚನ್ನಪ್ಪ ಇವರಿಗೆ ಮೋಸಮಾಡಬೇಕೆಂಬ ಬದ್ದ ಇರಾದೆಯಿಂದ ಒಟ್ಟು ಕುಟುಂಬದ ಹಾಗು ಮೈನರರ ಹಿಸ್ಸೆಗೆ ಸಮ್ಮಂಧಪಟ್ಟ ಸ್ಥಿರ ಚರಾಸ್ತಿಗಳನ್ನು ಪರಾಧೀನ ಮಾಡಲು ಸದರಿ ದುಗ್ಗಪ್ಪಗೌಡರು ಸಿದ್ಧರಾಗಿರುತ್ತಾರೆ. ಮೈನರರ ವಿನಹ ಯಾರಾದರೂ ಈ ಆಸ್ತಿಗಳನ್ನು ಪಡೆದುಕೊಂಡರೆ ಆಗಲಿ ಅಥವ ಸದರಿ ಆಸ್ತಿ ಜಮಾಖ್‌ದಾರಿಯಿಂದ ಸಾಲ ಕೊಟ್ಟರೆ ಆಗಲಿ ಈ ಆಸ್ತಿಗಳ ಮೇಲೆ ಯಾವ ಥರದಿಂದಲಾದರೂ ಪರಾಧೀನ ಹೊಂದಿದವರಿಗೆ ಈ ಹಕ್ಕು ಊರ್ಜಿತವಾಗಿ ನಿಲ್ಲುವದಿಲ್ಲವಾಗಿ ಖಂಡಿತ ಇದರಿಂದ ತಿಳಿಯಪಡಿಸಿರುತ್ತೆ. ಸದರಿ ಗುಂಡಪ್ಪ ಚನ್ನಪ್ಪ ಇವರ ಮೈನರ್

[184-1] ತಾ. 23-8-1915. ಗಾರ್ಡಿಯನ್ ತಾಯಿ ಮುತ್ತಮ್ಮ.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ನ್ಯಾಟಿನ್ ಫ್ಯಾಕ್ಟರ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಜನಗಳಿಗೂ ಎಲ್ಲಾ



ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ಪಸಂದು ತವಾಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 50 ; ಈಗಿನ ಕ್ರಯ ರೂ. 10, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90 ; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.

ವಿಳಾಸ—National Harmonium Co.,

[170-3] SIMLA P.O., (E) CALCUTTA.

ತಿಗಣೆಯ ಔಷಧ.

ಅನೇಕ ಜನಗಳು ಪರೀಕ್ಷಿಸಿ ನೋಡಿದ್ದಾಗಿದೆ.

ಹೊಸದಾಗಿ ಕಂಡುಹಿಡಿದಿರತಕ್ಕ ಈ ಔಷಧವು ಸುಲಭ ಕ್ರಯಕ್ಕೆ ಸಿಕ್ಕುತ್ತದೆ. ಉಪಯೋಗಿಸತಕ್ಕ ಕ್ರಮ :—ಒಂದು ಸೇರು ಸುಣ್ಣವನ್ನು ಸುಟ್ಟು ಅದಕ್ಕೆ ½ ತೊಲಾ ನಮ್ಮ ಪುಡಿಯನ್ನು ಮಿಶ್ರಮಾಡಿ ಗೋಡೆಗೆ ಹಚ್ಚಿದರೆ ತಿಗಣೆಗಳೆಲ್ಲಾ ಸಂಪೂರ್ಣವಾಗಿ ನಾಶಹೊಂದುವವು. ಈ ನಮ್ಮ ಪುಡಿಯು ಖಂಡಿತವಾಗಿಯೂ ಗುಣಕಾರಿಯಾಗಿದೆ ಪೌಂಡು 1 ಕ್ಕೆ ರೂ. 2-3-0; ಪೋಸ್ಟೇಜು ಬೇರೆ. ಪರೀಕ್ಷಿಸಿ ನೋಡಿ. 1 ತೊಲಾ ಪೊಟ್ಟಣಕ್ಕೆ 1 ಆಣೆ. [187-1]

ಪನ್ಸಾರಿ ಅಂಗಡಿ ಸಿದ್ದಪ್ಪ ಬಿನ್ ಶೆಟ್ಟಪ್ಪ, ಹಳೇ ಅಗ್ರಹಾರ, ಮೈಸೂರು.

ಮಧುರೆ ಜುನ್ನಾಡಿ ಲಂಚಸ ಸೀರೆ ಅವ್ವಲ್ ರಕಮ್ ರೂ. 3-0-0

ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಣುಸಾಮಿ

[111-16] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಆಯುರ್ ಭೈಷಜ್ಯ ಮಂದಿರಂ, ಶ್ರೀ ಶೃಂಗಗಿರಿ.

ಮೆಡಲ್ ಮತ್ತು ಸರ್ಟಿಫಿಕೇಟುಗಳನ್ನು ಹೊಂದಿರುವ ಶಾಸ್ತ್ರೀಯವಾದ ಔಷಧಗಳು.

1 ಅಜೀರ್ಣ ಬಲ ನಾಲಾನಲ ರಸ—ಮನುಷ್ಯನ ಶಕ್ತಿಗೆ ಜೀರ್ಣ ಬಲವೇ ಮುಖ್ಯ ಕಾರಣವು. ಜೀರ್ಣಶಕ್ತಿ ಇಲ್ಲದಿರುವ ಕೊರತೆಯೇ ಅನೇಕ ರೋಗಗಳಿಗೆ ಮೂಲ ಕಾರಣವು. ಈ ಮಾತ್ರೆಯು ಎಂಥಾ ಅಜೀರ್ಣ ರೋಗಗಳನ್ನಾದರೂ ಪರಿಹರಿಸಿ, ಜೀರ್ಣಶಕ್ತಿಯನ್ನೂ, ಬಲವನ್ನೂ ಉಂಟುಮಾಡುತ್ತದೆ ಮಲಬಂಧವನ್ನು ಹರಿಸುತ್ತದೆ. ಮತ್ತು ಇದು ಆಮವಾಯು, ಹುಳಿತೇಗು, ಅಜೀರ್ಣ ವಾಯು, ವಿಷೂಚಿ, ಪರಿಣಾಮಶೂಲೆ, ಭೇದಿ, ಕೆಮ್ಮು, ಉಬ್ಬಸ, ಅಸಾಧ್ಯವಾದ ಜ್ವರಗಡ್ಡೆಗಳು, ಈ ರೋಗಗಳನ್ನು ನಿರ್ಮೂಲ ಮಾಡುವುದು. ವಿಶೇಷ ವಿವರವೇನು? ಅಗ್ನಿಮಾಂದ್ಯ (ಡಿಸ್ಪೆಪ್ಸಿಯಾ) ರೋಗಕ್ಕೆಲ್ಲಾ ಸಂಜೀವಿನಿಯು. ಕ್ರಯ 25 ಮಾತ್ರೆ ರೂ. 1-0-0. ವಿ. ಪಿ. ಛಾರ್ಜ್ ಬೇರೆ.

2 ಚಂದ್ರಚೂಡವಟಿಕೆ.—ಉತ್ತಮವಾದ ಶಕ್ತಿವರ್ಧಕ (ಟಾನಿಕ್) ಲೇಹವು ಸೇರು ರೂ. 2-0-0. ವಿ. ಪಿ. ಛಾರ್ಜ್ ಪ್ರತ್ಯೇಕ. ನಮ್ಮಲ್ಲಿ ಎಲ್ಲಾ ರೋಗಗಳಿಗೂ ತಕ್ಕ ಔಷಧಗಳಿವೆ. [185-1]

ನಮ್ಮ ವಿಳಾಸ—ಆಯುರ್ ಭಿಷಗ್ವರ ಕೆ. ಶೇಷಶಾಸ್ತ್ರೀ, ಶೃಂಗೇರಿ

ಪ್ರೋತ್ಸಾಹಿಸಿರಿ.

ಪ್ರಖ್ಯಾತಿಪಟ್ಟ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುಚ್ಛಕ್ತಿಯ ಮಾತ್ರೆಗಳು 40 ಮಾತ್ರೆಗಳ ಶೀಸೆ 1 ಕ್ಕೆ ರೂ. 2; ಕಾಮಿನಿಯಾ ತೈಲ—ಕೂದಲನ್ನು ಬೆಳೆಸುವ ತೈಲಗಳಲ್ಲಿ ಶ್ರೇಷ್ಠವಾದದ್ದು ಶೀಸೆ 1 ಕ್ಕೆ ರೂ. 1, ಶೀಸೆ 3 ಕ್ಕೆ ರೂ. 2-10-0; ಒಟ್ಟೋ ದಿಲ್‌ಬಹಾರ್—ಅತ್ತರುಗಳಲ್ಲಿ ಮಧುರ, ಕೋಮಲ, ಚಿರಸ್ಥಾಯಿಯಾದದ್ದು ಶೀಸೆ 1 ಕ್ಕೆ ಆ. 8, 12, ಮತ್ತು ರೂ. 2; ಒಡ್ಡೆನ್ಸ್ ಮಲೇರಿಯಾ ಪಿಲ್ಸ್—ಎಲ್ಲಾ ತರದ ಜ್ವರಕ್ಕೆ ದಿವ್ಯ ಔಷಧ ಶೀಸೆ 1 ಕ್ಕೆ ರೂ. 1; ಉಕ್ಕಾ ಕಲರ್—ಇದು ಬಿಳೀ ಕೂದಲನ್ನು ಕಪ್ಪು ಮಾಡುವಂಥಾದ್ದಾಗಿದೆ ಬ್ರಷ್ ಸಮೇತವಿರುವ ಪೆಟ್ಟಿಗೆ 1 ಕ್ಕೆ ರೂ. 1; ಪೆನ್ ಸೆನ್ ಮಾತ್ರೆಗಳು ಪೇಕೆಟ್ 1 ಕ್ಕೆ ಆ. 3; ಸುಶೀಲಮಾಲತಿ ಡಬ್ಬಿ 1 ಕ್ಕೆ ಆ. 3; ಕಮಾಕುರಂಜನ ಡಬ್ಬಿ 1 ಕ್ಕೆ ಆ. 5; ಕ್ರಿಸೊಲಾಯಿನ್ (ಗಜಕರ್ಣ ಮುಲಾಮು) ಡಬ್ಬಿ 1 ಕ್ಕೆ ಆ. 4; ಕಾಮಿನಿಯಾ ಕೋಲ್ಡ್ ಕ್ರೀಮ್ ಡಬ್ಬಿ 1 ಕ್ಕೆ ಆ. 12, ಅಮೃತಾಂಜನ ಡಬ್ಬಿ 1 ಕ್ಕೆ ಆ. 8; ನೀಲಗಿರಿ ತೈಲ ಶೀಸೆ 1 ಕ್ಕೆ ಆ. 5; ದಂತಮಂಜನ ಡಬ್ಬಿ 1 ಕ್ಕೆ ಆ. 2; ಕುಂತಲಮಹಾಬಲ ತೈಲ ಶೀಸೆ 1 ಕ್ಕೆ ಆ. 8; ವಿಶ್ವನಾಥ ತೈಲ ಶೀಸೆ 1 ಕ್ಕೆ ರೂ. 1; ಬಟ್ಟೆವಾಲದ ಆಗ್ರಾ ಸಿಲ್ವರ್ ಶೀಸೆ 1 ಕ್ಕೆ ರೂ. 1; ಹೊಸ್ಟಿನ್ ರೋಜ್ ಸೆಂಟ್ ಶೀಸೆ 1 ಕ್ಕೆ ಆ. 8; ಲೆವೆಂಡರ್ ಶೀಸೆ 1 ಕ್ಕೆ ಆ. 12 ಮೇಲೆ ಬರೆದ ಸಾಮಾನುಗಳು ವಿ. ಪಿ. ಮೂಲಕವೂ ರವಾನಿಸಲ್ಪಡುವದು ನಮ್ಮಲ್ಲಿ ಅನೇಕ ತರದ ಇಂಗ್ಲಿಷ್ ಔಷಧಗಳೂ, ಪರಿಮಳ ದ್ರವ್ಯಗಳೂ, ವಾಚುಗಳೂ, ಭಾರೀ ಸುಲಭ ಬೆಲೆಯಿಂದ ದೊರೆಯಲ್ಪಡುವದು.

[130-9] ನಮ್ಮ ವಿಳಾಸ:—ದಿ ಯೂನಿಯನ್ ಮಾರ್ಟ್, ನಂ. 1, ಮಂಗಳೂರು.

GRAND CLEARANCE SALE Rs. 1-15-0.

ಯೋಗ್ಯತಾ ಪತ್ರಿಕೆ.—ನಾನು ಪ್ರಾತ್ರಿಯಿಂದ ಎಲ್ಲರಿಗೂ ತಿಳಿಸುವದೇನಂದರೆ, ನಿಮ್ಮಿಂದ ನಾನು ತರಿಸಿಕೊಂಡ ಲೇಡಿಸ್ ಗಡಿಯಾರ ಉಪಯೋಗಕ್ಕೆ ಬಹಳ ಶ್ರೇಷ್ಠವಾಗಿದೆ. ಗಂಟೆ ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಇತರ ಕಂಪನಿಯವರು ಇಂಥಾ ಗಡಿಯಾರವನ್ನು ಕಳುಹಿಸುವದಿಲ್ಲ. ಮತ್ತು 3 ಗಡಿಯಾರಗಳನ್ನು ವಿ. ಪಿ. ಮೂಲಕ ಕಳುಹಿಸಿ ಕೊಡಿ. [149-4]

ಮ್ಯಾನೇಜರ್, ಇರಾಯದೂಕನ ಆಫೀಸು, ತಿರುಚನಾಪಳ್ಳಿ.

ಸುಂದರವಾದ ಲೇಡೀಸ್ ಸ್ಪ್ರಿಂಗ್ ಪಾಕೆಟ್ ವಾಚ್.

ಅಸಲು ಕ್ರಯ ರೂ. 3-14-0 ; ಈಗ ರೂ. 1-15-0.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವು ಕಂಪನ್‌ಸೇಷನ್ ಬ್ಯಾಲನ್ಸ್ ಬಹು ಸೊಗಸಾದ ಗಡಿಯಾರ. ಇದು ನೋಡುವದಕ್ಕೆ ಮುಚ್ಚಟವಾಗಿ ಇರುತ್ತೆ. ಇದು ಚಿಲ್ಲರೆ ಎರಡು ಮೂರು ರೂಪಾಯಿ ಕ್ರಯದ ಬೊಂಬಾಯಿ ಗಡಿಯಾರಗಳನ್ನು ಕೊಂಡು ಹಣ ಕಳೆಕೊಂಡು ನಂಬಿ ಮೋಸಹೋಗಬೇಡಿರಿ. 5 ವರ್ಷಗಳ ಗ್ಯಾರಂಟಿ. ಇದೇ ಸೆಪಟೆಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಮಾತ್ರ ರೂ. 1-15-0 ಕೊಡಬೇಕೆಂದು ನಮ್ಮ ಏರ್ಪಾಡು ಆಗಿದೆ.

ನಮ್ಮ ವಿಳಾಸ—ರಾಸ್ ವಾಚ್ ಕಂಪೆನಿ,

ಡೈರೆಕ್ಟ್ ಇಂಪಾರ್ಟರ್ಸ್, 3 ಅರುಣಪ್ಪನ ಬೀದಿ, ಮದರಾಸು.

ನಮ್ಮ ಏಜಂಟರಿಗೆ.

"ವೃತ್ತಾಂತ ಪತ್ರಿಕೆ" ಯ ಮೊದಲನೇ ಕ್ವಾರ್ಟರು ಪೂರೈಸಿದೆ. ಏಜಂಟರು ಈ ಕ್ವಾರ್ಟರಿನ ಲೆಕ್ಕಗಳನ್ನು ಬೇಗನೆ ಮುಗಿಸಿ ಒಂದು ಪ್ರತಿಯನ್ನು ಸೂಪರೇಂಟರಿಗೂ, ಒಂದು ಪ್ರತಿಯನ್ನು ನಮಗೂ ಕಳುಹಿಸಬೇಕಾಗಿ ಕೋರಲ್ಪಟ್ಟಿದೆ. ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸೆಪ್ಟೆಂಬರ್ ಮಹೋತ್ಸವದ ಕೈಗಡಿಯಾರ.



ಅರ್ಧ ಕ್ರಯ ರೂ. 1-14-0.

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಅರ್ಧಾಂ ಕ್ರಯದಕ್ಕೆ ಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ. 1-14-0 ಆಣೆಗೆ ಕೊಡಲ್ಪಡುವುದು. [111-15]

ವಿಳಾಸ—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಜುಯೆಲ್ಡ್ ಸ್ಪ್ರಿಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

ಇದರ ಕ್ರಯ 8 ಬಹುಮಾನಗಳ ಸಹಿತ ರೂ. 3-4-0.

ಮಿತ್ರರೆ, ಈ ನಕ್ಷೆಯಲ್ಲಿ ತೋರಿಸಿರುವ ಜುಯೆಲ್ಡ್ ಸ್ಪ್ರಿಂಗ್ ಪಾಕೆಟ್ಟು ರಿಜಿಸ್ಟರ್ಡ್ ವಾಚ್ 5 ರತ್ನಗಳು ಉಳ್ಳ ಕೀಲೆಸ್ ಬ್ಯಾಲೆನ್ಸ್ ಬಹು ಬಲಿಷ್ಠವಾದ



ಈ ಗಡಿಯಾರ ನಾಜೂಕಾದ ಯಂತ್ರದಿಂದಲೂ, ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟಿದ್ದು. ಇದು ನೋಡುವದಕ್ಕೆ ಸುಂದರವಾಗಿಯೂ, ಮುಚ್ಚಟವಾಗಿಯೂ ಇರುತ್ತೆ. ನಮ್ಮ ಕೆಲಸ ಹೊಸದಾಗಿ ಇರುವದರಿಂದ ಪ್ರಖ್ಯಾತಿಗೊಳಿಸಬೇಕೆಂಬ ಉದ್ದೇಶವಾಗಿಯೂ, ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕಿ ಇರುತ್ತೇವೆ. ಈ ಸೊಗಸಾದ ಗಡಿಯಾರವನ್ನು ಕೂಡಲೆ ಬರೆದು ತರಿಸಿಕೊಳ್ಳಿ.

ಬಹುಮಾನದ ತಫಸೀಲು—1 ಸುಂದರವಾದ ಸರಪಣಿ, 2 ಉತ್ತಮ ಪಿನ್, 3 ಇಂಗ್ಲಿಷ್ ನಮೂನೆ ಬಾಚಣಿಗೆ, 4 ಜರ್ಮನ್ ಕನ್ನಡಿ, 5 ಕರವಸ್ತ್ರ, 6 ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ 7 ಸೆಟುಗುಂಡಿ ಸೆಟ್, 8 ಪಿನ್ನುಸಾಸೆ.

ನಮ್ಮ ವಿಳಾಸ :—ಕಮಲರಾಂ ಅಂಡು ಕಂಪನಿ,

[180-1] ನಂ. 28, ಇರುಲಪ್ಪನ್ ಬೀದಿ, ಸಾಹುಕಾರ್ ಪೇಟೆ, ಮದರಾಸು

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಒಟಿ ಶೀರೆ, ಪೇಟ, ಮಗುಟ, ರುಮಾಲು, ಕಣಗಳು ಕೋಟು ಸಿಲ್ಕುಥಾನುಗಳು ಜವೇರಿ ಬದರ್ ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊಸಾಡು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ ಬೇಗ ಬರೆದು ತರಿಸಿಕೊಳ್ಳಿ. [119-12]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ :—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷಿನರಿ ಸಾಹಾ ಬನಾವಟ್ಟು ಮತ್ತು ಮಜಬೂತವಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಎಷ್ಟು ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇನ್ನು ಅಗ್ಗದ ಕೊಡುವದಿಲ್ಲ. ಮತ್ತೊಂದು ಡಜನ್ ವಿ ಪಿ ಮೂಲಕ ಕಳುಹಿಸಿರಿ."—ಕೆ. ರಾಮಸ್ವಾಮಿ, ಡಿಸ್ಟ್ರಿಕ್ಟ್-ಕೋರ್ಟು-ಮಂಗಳೂರು, 20-3-15.

ಅರ್ಧಬೆಲೆ ಮಾತ್ರ.

ಸಿರಾಕರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಬೇಕೆಂದು ಅವರಿಂದ ಅನುಗ್ರಹವಾಗಿ ಕೇಳಿಕೊಳ್ಳಲ್ಪಟ್ಟಿದೆ.

ಎಂಟು ನಾಲ್ಕು ರೂಪಾಯಿ ಗಂಟೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೇ ಉತ್ತಮ ಸಮಯ! ಈ ಎಂಟು ದಿನ ಕೆಲ್ಲುಂಡು ನಲಕೇ ಕೊಡಲ್ಪಡುವ ನಿಕ್ಕಲ್ ಪೆಳ್ಳಿ ಗಡಿಯಾರವು ಮಜಬೂತವಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು ಆರ್ಡರ್‌ಗಳನ್ನು ಅಂಗೀಕರಿಸಲ್ಪಟ್ಟ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ವಿವರಕ್ಕೆ ಲಕ್ಷ್ಯ ರೆಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ :—ದಿ ಮಾರುತಿ ಏಜನ್ಸಿ,

[266-41] ಪಿ. ಓ. ಬಾಕ್ಸ್ 330, ಬೊಂಬಾಯಿ.

ತಾಲ್ಲೋಕು ವರ್ತಮಾನಗಳು.

ದೇವೂರು.—ಇಲ್ಲಿ 2 ವರ್ಷಗಳಿಂದ ನ್ಯಾಯದ್ವಿತೀಯ ಶಕ್ತಿಯಾದಿಗಳಾಗಿಯೂ, [illegible]ಗಳಾಗಿಯೂ ಇದ್ದ ಅಮಲ್ದಾರ್ ಮ|| ಲಿಂಗೋಜಿರಾವ್ [illegible]ವರಿಗೆ ಬೆಂಗಳೂರಿಗೆ ವರ್ಗವಾಗಿ ಇವರ ಛಾಜಿಗೆ ಮ|| ಶ್ರೀನಿ[illegible] ಬರುವವರಾಗಿರುತ್ತಾರೆ.—ಇಲ್ಲಿ ಸುಮಾರು 6 ವರ್ಷಗ[illegible] ಶಾಸ್ತ್ರವಾಗಿದ್ದ ಈ ತಾಲ್ಲೂಕಿನ ಸಕಲ ಪ್ರಜೆಗಳಿಗೂ ಅತ್ಯುಪಕಾರಿ[illegible] ಮ|| ಟಿ. ಕೆ. ವೆಂಕಟಾಚಾರ್ಯರಿಗೆ ವರ್ಗವಾಯಿತೆಂದು ಕೇಳಿದ[illegible] ಬಹಳ ವ್ಯಸನಪಡುತ್ತಿದಾರೆ. ಇವರು ಊರಿಗೆ ಬಂದ[illegible] ಅನಾಥರಿಗೂ ಮುಖ್ಯಶ್ರಯರಾಗಿದ್ದು, [illegible] ರೋಗಿಗಳನ್ನು ಉಪಚರಿಸುತ್ತಾ ತಮ್ಮ [illegible] ಧನಗಳನ್ನು ಈ ಲೋಕ ಸೇವೆಯಲ್ಲಿಯೇ ವಿನಿಯೋಗಿಸುತ್ತಾ, [illegible] ಪ್ರೀತಿ ವಿಶ್ವಾಸಾದಿಗೊಳಪಟ್ಟವರು. ಇವರ ಸ್ಥಾನಕ್ಕೆ ಬಂದಿ[illegible] ಮ|| ಜಾನಕೀರಾವ್ ರವರು ಪ್ರಜೆಗಳ ವ್ಯಸನವನ್ನು ಜಾಗ್ರತೆಯಿಂದ [illegible]ಸುವರೆಂದು ಹಾರೈಸುತ್ತೇವೆ.

[illegible]—ಈಚೆಗೆ ಮಳೆ ಇಲ್ಲ. ಕೊತ್ವಾಲ್ ಚೆಟ್ಟಿ ಹಸ್ತದ ದಾಕಿ [illegible]ನಿಂದ ಊರಲ್ಲಿ ಪ್ಲೇಗ್ ಇದೆ ಎಂದು ಗೊತ್ತಾಗುತ್ತದೆ— [illegible] ವಸ್ತುಗಳೀಗ್ ಲೋಹದ ಬೆಲೆಗೆ ಬಿಂಬಿಸ ವಾಗಿನ್ನು [illegible] ವರ್ಗ ಬಹಳ ಹೆಚ್ಚಾಗಿ ಬರುತ್ತಿವೆ. ಇವೆಲ್ಲಾ ನದಿಯ ಮಾರ್ಗವಾಗಿ [illegible] ರವಾನೆ ಆಗುತ್ತೆಂಬ ವರ್ತಮಾನ ಕೇಳಿದೆವು.—ಈ ಊರಲ್ಲಿ [illegible] ಸ್ಕೂಲ್ ಪ್ರಾರಂಭವಾಯಿತು. ಪೇಟೆಯಲ್ಲಿ ದೇವಸ್ಥಾನದ ಮುಮ್ದೆ [illegible] ಎಂಬುವರು ಬಹಳ ಚೆನ್ನಾಗಿ ಕಲಿಸುತ್ತಾರೆಂದು ಪೇಟೆ[illegible] ಕೇಳುತ್ತಾರೆ. ರಾತ್ರಿ ಸೋಷಿಯಲ್ ಸ್ಕೂಲ್ ಸಹ ಪ್ರಾರಂಭವಾ[illegible] ಗುಡಿಯಲ್ಲಿ ಹೊಸದಾಗಿ ಸ್ಥಾಪಿಸಿರುವ [illegible] ಸ್ಕೂಲ್ [illegible] ಮಾಡುತ್ತಾರೆ. ರಾತ್ರಿ ಕಾಲದಲ್ಲಿ [illegible] ಮತ್ತು [illegible] ಸಹಾಯದಿಂದ [illegible] ನಡೆಸುತ್ತಿದಾರೆ. [illegible] 7ರ ಮಂದಿ [illegible]—[illegible] ಈ ಊರಲ್ಲಿ [illegible] ನಡೆಯುತ್ತಿದೆ ಮುಸಲ್ಮಾನ್ ಬಾವಾಜಿಗಳು ಬಹಳ ಜನವನ್ನು [illegible] ಕಸರತ್ತಿನ ಬೆನ್ನಿಗೆ [illegible] ಎತ್ತುತ್ತಾರೆ. ಕೆಲವ[illegible] ಅಂಗಡಿ ಎದುರಿಗೆ ರಕ್ತವನ್ನು ತಮ್ಮ ಮೈಯಿಂದ ಕೆಡವುತ್ತಾ [illegible] ಹಣ ಕೇಳುತ್ತಾರೆ. ಇದು ಎಲ್ಲರೂ ನೋಡಿದ [illegible]. ಸರ್ಕಾರದವರು ಈ ವಿಷಯಕ್ಕೆ ಗಮನಕೊಟ್ಟು ಜನರಿಗೆ [illegible] ಹಿಂಸೆಯನ್ನು ತಪ್ಪಿಸಿಕೊಡುವರೆಂದು ನಂಬಿದೇವೆ.

ಕುಮಾರಪುರ ತಾ|| ಕೆಂಬಾಳುಗ್ರಾಮ.—ಕುಮಾರ, 100-120 ಮನೆಗ[illegible] ದೊಡ್ಡ ಗ್ರಾಮದಲ್ಲಿ ಸರ್ಕಾರಿ ಸ್ಕೂಲ್ ಇರಲೇ ಇಲ್ಲ. ಈಚೆಗೆ [illegible] ಈ ಕೆಂಬಾಳು, ಇಲ್ಲಿಗೆ ಮೂರು ಮೈಲಿ ದೂರದಲ್ಲಿರುವ [illegible], 3 ಮೈಲಿ ಇರುವ ಕೆಂಬಾಳಪುರ, ಈ 3 ಗ್ರಾಮಗಳನ್ನೂ ಸೇರಿಸಿ [illegible] ಕಳುಹಿಸಿ ಅವರು ಪ್ರತಿ ತಿಂಗಳಿಗೆ [illegible] 2 ದಿನ ಬೇರೆ [illegible] ಗಂಟೆ ಕೆಲಸ ಮಾಡತಕ್ಕದ್ದೆಂದು ಗೊತ್ತುಮಾಡಿರುತ್ತಾರೆ. ಇದರಿಂದ [illegible] ಸ್ವಲ್ಪವೂ ಫಲವಿಲ್ಲವೆಂದು ಹೇಳಿದರೆ ಮೇಲೆ ಆ ಮೇಷ್ಟರು ಈ [illegible]ನಲ್ಲಿ ಪ್ರತಿ ದಿನವೂ ಬೆಳಗ್ಗೆ 3 ಗಂಟೆ ಕೆಲಸ ಮಾಡಿ ಬಹು ಶ್ರಮವನ್ನು [illegible] 22 ಬಾಲಕರನ್ನು ತಯಾರು ಮಾಡುತ್ತಾ ಇದಾರೆ. [illegible] ಹಗಲು ಬರಲು ಆಗುವುದಿಲ್ಲವೆಂದಾಗ ರಾತ್ರಿ ಪಾಠ ನಡೆಸುತ್ತಾ[illegible]. ಊರಿನವರ ಅವಿವೇಕವನ್ನು ಹೋಗಲಾಡಿಸಲು ಆಗಾಗ್ಗೆ ಉಪನ್ಯಾಸ[illegible] ಮಾಡುತ್ತಾರೆ. [illegible] ರೀಡಿಂಗ್ ರೂಮ್ [illegible] ಮಾಡಿ [illegible] ದಿನವೂ ಊರಿನ ಎಲ್ಲಾ ಜನರಿಗೂ ಪತ್ರಿಕೆಗಳನ್ನು ಓದಿ ಹೇಳುತ್ತಾರೆ. [illegible] ಗ್ರಾಮದವರೂ ನಮ್ಮಲ್ಲಿಗೆ ಪ್ರತಿ ದಿನವೂ ಬರಬೇಕೆಂದು [illegible] ಮೇಲೆ ಈ ಮೇಷ್ಟರು [illegible] ಪ್ರತಿ ದಿನವೂ ಕೆಲಸ ಮಾಡುತ್ತಾರೆ. [illegible] 31 ಹುಡುಗರು ಓದುತ್ತಾರೆ. ಈ [illegible] 6-7 [illegible] ವಿದ್ಯೆಯನ್ನು ಹೇಳುತ್ತಾ ಇದಾರೆ. ಇವರು ಒಂದು ದಿನಕ್ಕೆ 11 ಗಂಟೆ[illegible], 6 ಮೈಲಿ ನಡೆದು, ಈ ರೀತಿ ಒಟ್ಟು 64 ಜನ ಬಾಲಕರನ್ನು [illegible] ತಯಾರು ಮಾಡುತ್ತಾ ಇದಾರೆ. ಅಲ್ಲದೆ ಸರ್ಕಾರದ ಅಪ್ಪಣೆ [illegible] ಮಾಡಿಬಿಟ್ಟರೆ ಯಾರಿಗೂ ಪ್ರಯೋಜನವಾಗುತ್ತದೆ. ಇವರ [illegible] ಸ್ಕೂಲು ಮನೆಯೂ, [illegible] ಇಲ್ಲ. [illegible] ಕೆಂಬಾಳು, ಕಣಕುಪ್ಪೆ, ಕೆಂಬಾಳಪುರ, [illegible], ಈ [illegible] ಗ್ರಾಮದ [illegible] ಅನುಮತಿ [illegible].

[illegible]—[illegible] ಅನೇಕವಾಗಿ [illegible]. [illegible] ಮಾಡಿಬಿಟ್ಟರು [illegible] ಎಂಬ [illegible]ವನ್ನು ಈ [illegible] ತಮ್ಮ [illegible] ವ್ಯಕ್ತಪಡಿಸುತ್ತಿದ್ದರೂ ತಮ್ಮನ್ನು [illegible] ಮೇಲೆ [illegible] ಈ ಗ್ರಾಮವು [illegible] ಆಗಿಹೋಗಿದ್ದಿತು. [illegible] ನಮ್ಮ ಘನವೆತ್ತ [illegible] ಶ್ರೀಕೃಷ್ಣರಾಜ ಒಡೆ[illegible] ಇವರ ಆಜ್ಞೆಯಿಂದ ಈ [illegible] ಆಗುವುದಕ್ಕೆ ಪ್ರಾರಂಭವಾಗಿದೆ. [illegible] ದೇವಾಲಯ[illegible] ಕೆಲವು [illegible] ಅಷ್ಟ ಕ್ರಮವೆಂದು, ಗರ್ಲ್ಸ್ ಸ್ಕೂಲ್ ಒಂದು ಇಲ್ಲದಿದ್ದುದು [illegible] ಮತ್ತು ವಿದ್ಯಾಭ್ಯಾಸಕ್ಕೆ [illegible] 270 ಮಂದಿ ಬಾಲಕ [illegible] 3 ಮಂದಿ [illegible] ವಿದ್ಯಾಭ್ಯಾಸ ಮಾಡುತ್ತಿರುವುದು ಬಹಳ [illegible]. [illegible] ಹಾಸ್ಪಿಟಲ್ [illegible] ಬಂದು [illegible] (ಸ್ತ್ರೀಪುರುಷರೆಲ್ಲರಿಗೂ) ವಿದ್ಯೆಯು ಅಗತ್ಯ, ವ್ಯವಸಾಯ [illegible] ವಿಶೇಷವಾದ [illegible] ಮತ್ತು [illegible] ಅಭಿವೃದ್ಧಿ, ಆರೋಗ್ಯ, ಐಕಮತ್ಯ, [illegible] ಪ್ರಯೋಜನಾಂಶಗಳನ್ನು [illegible] ಮಾಡಿದರು. ಇದರಿಂದ ಜನರಿಗೆ ತಮ್ಮ [illegible] ಬಹು [illegible] ಇನ್ನು ಮುಂದೆ ಅದನ್ನು [illegible] ಬೇಕೆಂಬ ಬುದ್ಧಿ[illegible] ಎಂದು ತೋರುತ್ತದೆ.—ಇಲ್ಲಿಗೆ ಸುತ್ತ ಮುತ್ತಲೂ ಸುಮಾರು ಪ್ರತಿ[illegible]ಯೂ 200 ಎಕರೆ ಪ್ರದೇಶ ಕಬ್ಬಿನ ಪೈರು ಇದ್ದೇ ಇರುವ[illegible] ಗ್ರಾಮದಲ್ಲಿ ಕಬ್ಬಿನ ಆಲೆ ಯಂತ್ರವನ್ನು ಸ್ಥಾಪಿಸಲು [illegible] ಹಾಸ್ಪಿಟಲ್ [illegible] ಸೊಸೈಟಿ [illegible]ವನ್ನು [illegible] ಹತ್ತಿರದಲ್ಲಿಯೇ ಸ್ಥಾಪಿಸುವವರಾಗಿ[illegible].—ಇಲ್ಲಿಗೆ 2 ಮೈಲಿ ದೂರದಲ್ಲಿರುವ ಹುಲೀಕೆರೆ ಎಂಬ ಗ್ರಾಮದಲ್ಲಿ [illegible] ಒಂದು ಕೋಆಪರೇಟಿವ್ ಸೊಸೈಟಿಯು ಏರ್ಪಡಲು ಆ ಸೊಸೈಟಿಯ [illegible]ಯಿಂದ [illegible].

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ಸಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ, ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರಿಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ.

ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಿಪ್ಪುಹರಳೆಗಳಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವನ್ನು ಉಪಯೋಗಿಸಿ ನೋಡಿ. ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಕ್ಷಯ, ಗರ್ಭವೆಟ್ಟೆ, ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ ಅಂಚೆ ವೆಚ್ಚ ಬೇರೆ. [235-43]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರೀಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನ ಬೆಳ್ಳಿ-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ—ಸೋಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವರಸೇ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನಡು ನೋವು, ಹಲ್ಲು ನೋವು, ಆರೋಚಕಗಳು ಬಹಳ ಬೇಗನೆ ವಾಸಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯು ಸೀಸೆ 0-4-0. ಐವತ್ತಕ್ಕೆ 1 ಚೆಟ್ಟು. ಟಿ.ಖ ಪ್ರತ್ಯೇಕ.

[231-41] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿರಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುವಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿರಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಿನನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲಾ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸಿರಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25-32]

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	650 ಮಾತ್ರೆಗಳ ಪೆಟ್ಟಿಗೆ 1ಕ್ಕೆ 1 ರೂ.
95 ,, ,, ,, 4 ,,	300 ,, ,, ,, 9 ,,		1200 ,, ,, ,, 2 ,,

1 ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಠಿಂಠ್ರಾರ್ಕ್ ಡಿಪೋ, ಬೊಂಬಾಯಿ.

ಮೈಸೂರು ಸೀಮೆಗೆ ಏಜೆಂಟರು—ಮ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ರವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ESANOFELE

ಮಲೇರಿಯಾ ಜ್ವರವನ್ನು ನಾಶಮಾಡಬೇಕೆಂಬುವರೆಲ್ಲಾ "ಈಸಾನೊಫೆಲಿ" ಯನ್ನು ಉಪಯೋಗಿಸಿ ಬಯದ್ವಸಿ ಮಾಡುತ್ತಿದಾರೆ. ಇದು ವಾಸಿಮಾಡುವುದರಲ್ಲೂ, ಜ್ವರವನ್ನು ಬಾರದಂತೆ ಸಂರಕ್ಷಿಸುವುದರಲ್ಲೂ ಚೆನ್ನಾಗಿ ಪ್ರಖ್ಯಾತಿಪಡೆದಿದೆ. ಕ್ರಯ ಬಾಟ್ಲಿ 1 ಕ್ಕೆ ರೂ. 2-0-0. ಎಲ್ಲಾ ಔಷಧ ಷಾಪುಗಳಲ್ಲೂ ದೊರೆಯುತ್ತೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಹುಡುಗರಿಗಾಗಲಿ, ಹುಡುಗಿಯರಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸಿಂಹಿಯಾಗಿರುವುದರಿಂದ ಸೇವನೆಗೆ ರುಚಿಯಾಗಿರುತ್ತದೆ. ಮಲೇರಿಯಾಕ್ಕೆ ಸಿದ್ಧಾರ್ಥಕವಾದ, ನಂಬಿಕೆಯುಳ್ಳ, ಬೇಗ ಗುಣ ಕೊಡುವ ಔಷಧ. ಇದು ಇನ್ನೂ ಎಲ್ಲಾ ಜಾತಿಯ ಜ್ವರಗಳಿಗೂ ಪಾಶಕವಾದ ಔಷಧ. [170-2]

ಮೈಸೂರು ಸಂಸ್ಥಾನದ ಏಜಂಟರು :—

ಜಿ. ಬಿ. ಫಾರ್ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ. ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ.

ಬಿ. ಜಿ. ಗೋರಿಯೋ ಕಂಪನಿ, ನಾಲೆಸಾ ಬೀದಿ, ಬೊಂಬಾಯಿ

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೇರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಂಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳ ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ ... ಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋವುಲ್ಲಾಸನನ್ನುಂಟುಮಾಡುವದು. ಯಾವ ... ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವ... ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯ... ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ... ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ... ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-32]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್

ನೆರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರ್ಷದ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತದೆ. ಈಗ ಮಾರಿಕೆಗೆ ಬಂದಿರುವ ಅಲ್ಪ ತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳು ಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಪು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ ದರ್ಬಾರ್ ಕೂದಲು ರಂಗು ಅಂಥಾದ್ದಲ್ಲ. ಬಿಡು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1-0-0 ಮಾತ್ರ. ಅಂಚೆ ಹಾಸಲು 4 ಆಣೆ.

ನಮ್ಮ ವಿಳಾಸ—ವಿ. ಎ. ಎಸ್. ರಾಣಿ.

೩, ಇರುಳಪ್ಪನ ಬೀದಿ, ಮದರಾಸ್.

[149-7]

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯು... ವು ಒರಟಾಗಿರುವ ಕೂದಲು ಮೃದುವಾಗುವದು ಸೇಬ್ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮದಡನ್ನು ಪರಿಹರಿಸುವದು ... ನಲ್ಲಿ ತುಂಬ... ನ್ನು ಕೆಡಿಸು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಮೂವತ್ತು ದಿವಸಗಳವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿಯು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪಿನ್ನು 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜರ್ಮನ್, ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲವಸ್ತು 32, ಕೆಂಪು ಗಿಣಿಗಳು 6, ಬಾರ್ಡೆಸೀಜ್ ಬ್ರೂಚ್ 1, ಜವಾದ ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಚ್. ಎಮ್. ಸ್ವಾಮಿ ಅಂಡ್ ಕಂಪೆನಿ,

ನಂ. 44, ನಂಬುಳಯ್ಯರ ಬೀದಿ, ಮದರಾಸು.

[156-4]

ಆ ಕೆಮ್ಮಿನ ಹಿಂದೆ ಮರಣವು ಅಡಗಿಕೊಂಡಿದೆ.

ಉತ್ತಮ ಔಷಧಗಳಿಂದಲೂ ಚಿಕಿತ್ಸೆಯಿಂದಲೂ ವಾಸಿಯಾಗದೆ ನಿಮ್ಮ ಪ್ರಾಣವನ್ನು ಸವಿಸುತ್ತಿರುವ ಕೆಮ್ಮು ನಿಮಗಿದೆಯೋ? ಹಾಗಿದ್ದರೆ ಒಂದು ವೇಳೆ ನಿರೀಕ್ಷೆ ಇಲ್ಲದವರಾಗಿದ್ದೀರಿ, ಅಂಥವರೆಲ್ಲಾ ವೆಟಲ್‌ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಬೇಕೆಂದು ಹೇಳುತ್ತೇವೆ.

ಉರಿಸ್ಸರ್‌ಷ್ಮೆಯನ ಅಡ್ವೇಷಂ ಸ್ಥಳದ ಮಿ॥ ಎಚ್. ಡ್ರಿಂಕ್‌ವಾಟರ್ ಯವರು ಹೇಳುವದು:—"೨ ವರ್ಷಗಳಕಾಲ ನನಗೆ ಸದಾ ಬಾಧಿಸುವ ಒಣಕೆಮ್ಮು ಆದರೊಂದಿಗೆ ಕುತ್ತಿಗೆಯಲ್ಲಿ ಕಟ್ಟುಹಿಡಿಯುವಿಕೆಯೂ ಉಂಟಾಗಿ ರಾತ್ರಿಯೆಲ್ಲಾ ಎಷ್ಟೋ ಇರುತ್ತಿದ್ದನಲ್ಲದೆ, ಮನೆಯವರೆಲ್ಲರಿಗೂ ತೊಂದರೆಯನ್ನುಂಟುಮಾಡುತ್ತಿತ್ತು. ಕೆಮ್ಮಿನ ಔಷಧಿಗಳನೇಕ ಉಪಯೋಗಿಸಲು, ತತ್ಕಾಲದ ಪ್ರಯೋಜನವೇ ಹೊರತು ಬೇರೆ ಪ್ರಯೋಜನವಾಗಲಿಲ್ಲ. ಕಡೆಗೆ ವೆಟಲ್‌ಸ್ ಓರಿಯೆಂಟಲ್ ಬಾಂ ಎಂಬದನ್ನು ಉಪಯೋಗಿಸಲು ಮನಸ್ಸು ಮಾಡಿದೆನು, ಅರ್ಧ ಸೀಸೆ ಉಪಯೋಗಿಸುವದರಲ್ಲಿಯೇ, ಮೊದಲನೇ ಇಡೀ ರಾತ್ರಿಯ ನಿದ್ರೆಯಾಯಿತು. ಹಾಗೆಯೇ ಪೂರ್ಣ ವಾಸಿಯಾಯಿತು."

ಸೀಸೆ 1ಕ್ಕೆ 1 ರೂ. ಮೇರಿಗೆ ಎಲ್ಲಾ ಔಷಧಾಗಾರದಲ್ಲಿಯೂ ಸಿಗುತ್ತೆ.

[81-10]

Printed and Published by the Rev. H. Gou... Proprietor and Manager, Wesleyan Mission P... Mysore. 9/9/1915.

REGISTERED
M. 90

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ ನೇ ಇಸವಿ ಸೆಪ್ಟಂಬರ್ ತಾರೀಖು ೧೪ ನೇ ಗುರುವಾರ. ಸಂಚಿಕೆ ೧೪

ಮನೆ ಕ್ರಯಕ್ಕೆ ಸಿಕ್ಕುತ್ತೆ.

ಮೈಸೂರು ಚಾಮರಾಜಪೇಟೆಯಲ್ಲಿರುವ, ಗತಿಸಿದ ಪಿ ವೇದಮಿತ್ರಯ್ಯ ನವರ ಮನೆ, ಸಿ. ಟಿಜಾರ್ ಲೈನ್ ರೋಡು. ನಂ. 958 ಇದಕ್ಕೆ ಸೇರಿದ ಖಾಲಿ ನಿವೇಶನ ಸಹ ಕ್ರಯಕ್ಕೆ ಸಿಕ್ಕುತ್ತೆ. ಅಪೇಕ್ಷಿಸತಕ್ಕವರು ಲೈನ್ ರೋಡಿನಲ್ಲಿರುವ (ಕಮಾನಿ ದರ್ವಾಜ ಬಳಿ) ಶಾದ್ರಿಗಳಾದ ಮುಹೇಲ್ ಲೇಮೋರವರನ್ನು ಕೇಳತಕ್ಕದ್ದು. [173-4]

'ಸಂಗೀತ ಪಾರಿಜಾತ'

ಮುದ್ರಣ ! ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಳೆಗೆ ಕರೆಯುವ ಪದ, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ಸ್ತೋತ್ರಗಳು—ಇವುಗಳಿಂದ ತುಂಬಿದೆ ! ಈ ಎರಡನೆಯ ಮುದ್ರಣ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ಪ್ರತಿಗಳಿಗೆ ಕಮಿಷನ್ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ

[375-40] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

"ಕಾದಂಬರೀ ಸಂಗ್ರಹ" ಮಾಸಪತ್ರಿಕೆ!

ಪತ್ರಿಕೆಯಲ್ಲಿ ಇದುವರೆಗೆ 25 ಪುಸ್ತಕಗಳು ಪ್ರಕಟವಾಗಿವೆ.

ಮೃತ್ಯು ಪಾಶ 3 ಆ, ಸೌದಾಮಿನಿ, 5 ಆ, ಬೃಂದಾವನ 2 ಆ, ಮಾ ... 3 ಆ, ಪ್ರೇಮಪಿಪಾಸೆ 2 ಆ, ಸುಲೋಚನಾ 3 ಆ, ನೀತಿಬೋಧಿನಿ 2 ಆ, ... 6 ಆ, ವಿನೋದ ಚಂದ್ರ 2 ಆ, ಸದಾಚಾರ ವಿವೇಚನೆ 2 ಆ, ... 12 ಆ, ಕಮಲ ಕುಮಾರಿ 8 ಆ, ನನ್ನ ಸಂಸಾರ 5 ಆ, ವಿನೋದ ... 5 ಆ, ಚಂದ್ರಿಕಾವಿಜಯ ನಾಟಕ 3 ಆ. ಎಂಟು ಕಾದಂಬರಿ ಗಳುಳ್ಳ ಪ್ರಥಮ ಸಂಪುಟ 1-4-0, 11 ಗ್ರಂಥಗಳುಳ್ಳ ದ್ವಿತೀಯ ಸಂಪುಟ ...0, ದೊಡ್ಡ ದೊಡ್ಡ 3 ಕಾದಂಬರಿಗಳುಳ್ಳ ತೃತೀಯ ಸಂಪುಟ 1-8-0.

ವಿಳಾಸ :—ಕಾದಂಬರೀ ಸಂಗ್ರಹ ಆಫೀಸ್, ಮೈಸೂರು ; ಮತ್ತು

[336] ಜನರಲ್ ಏಜನ್ಸಿ, ಮೈಸೂರು

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-8]

First Valuation Result :—The total liablities under all assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, opposite Minto Hospital, Bangalore City. Mysore Agent—Mr. S. P. Ramanna.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ... ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣ ಪ್ರತಿಯನ್ನು ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸಂಪಾದಿಸಿರುವರು. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಸುಲಭವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುವುದು. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-23]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಇಲ್ಲಿ ನೋಡಿ : ಅಭಿನವ! ಅಕ್ಷರಾಂಜಲಿ !!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವನ್ನು ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟೇಜ್ 4 ಆಣೆ ಅಡ್ರಸ್—ಅಕ್ಷರಾಲಯ, ಮೈಸೂರು. [147-8]

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 616 ಪೇಜು ಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-4-0; ರಫ್ ಪ್ರತಿಗೆ ರೂ. 1-12-0 [158-7]

ವಿಳಾಸ—ಎಂ. ಪಂಡಿತಾರಾಧ್ಯರು, ಮೈಸೂರು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 6,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ. ಎಸ್. ರಂಗಯ್ಯ, ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-49] ಬ್ರಾಂಚ್ ಸೆಕ್ರೆಟರಿ, ಮದರಾಸ್

ಮೋಸಹೋಗುವೆವೆಂಬ ಭಯವಿಲ್ಲ.

• ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ :—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಷೀನರಿ ಸಾಚಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಲ್ಲಿ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ. —ಕೆ. ರಾಮಸ್ವಾಮಿ, ಪಲ್ಲಾಸ-ಶಾ-ಸಿಟುನ, 20-2-16.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ವಿಷಯ ಬಗ್ಗೆ ರಿಪ್ಲೈಕಾರ್ಡು ಬರೆಯಬೇಕು.

ನಮ್ಮ ವಿಳಾಸ :—ದಿ ಮಾರುತಿ ಏಜನ್ಸಿ,

[266-42] ಪಿ. ಓ. ಬಾಕ್ಸ್ 330, ಬೊಂಬಾಯಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಸೂಚನೆಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[188-1] GIRLS' INDUSTRIAL SCHOOL, HASSAN.

ಸೋಲಾಪುರದ ಚೆಕ್ಕುಗಳೂ, ಶೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹಮೇಷ ಜಾಸ್ತಾಗಿ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಶೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಬೇಲುಗಟ್ಲೆಯೂ, ಚಿಲ್ಲರೆಯಾಗಿಯೂ ದೊರೆಯುವವು.

ಬೇಲುಗಟ್ಲೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಖರೀದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [56-24]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 169, ಕಿಲಾರಿ ರೋಡು (ಕುಂಬಿಗರಪೇಟೆ) ಬೆಂಗಳೂರು ಸಿಟಿ.

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಖರೀದಿಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಒಂಟಿ ಶಾಲುಗಳೂ 5 ರೂ. ನಿಂದ 7, 10, 50 ರೂ. ಗಳ ವರೆಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಖರೀದಿಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. 50 ರೂ. ಸರಕು ತರಿಸುವವರಿಗೆ ರಿಯಾಯತಿ ಉಂಟು. ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಗಿ ಕೊಡುತ್ತೇವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್, ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,

[180-1] *AMRITSAR, PANJAB.*

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1.	ವಿಶ್ವಾಪಿಂಡದ ಭೂವಿವರಣೆ	0-5-0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0-6-0
	ಮೇಲೆ ಕಂಡ ಎರಡೂ ಸೇರಿ	0-10-0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಟೆ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,

[31-31] ಸುಬೋಧ ಗ್ರಂಥಾಲಯ, ಮೈಸೂರು.

ಒಂಬತ್ತು ಭಾಷೆ !! ಹೊಸ ಪುಸ್ತಕ ! ಒಂಬತ್ತು ಲಿಪಿ !!!

ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಬಲು ಒಳ್ಳೆಯ ಸಮಯ.

ಮೊದಲನೆಯ ಪುಸ್ತಕ. ಭಾಷಾನಿಧಿ. ವರ್ಣಪರಿಜ್ಞಾನ.

ತೆಲುಗು, ಅರವ, ಮಲೆಯಾಳ, ಸಂಸ್ಕೃತ, ಹಿಂದಿ, ಮಹಾರಾಷ್ಟ್ರ, ಗುಜರಾತಿ, ಬೆಂಗಾಳಿ, ಕನ್ನಡ, ಗ್ರಂಥ, ಇವುಗಳನ್ನು ಸ್ವತಂತ್ರವಾಗಿ ಕಲಿಯಬಹುದು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ ! ಬೇಗ ಬೇಗ ಬರೆಯಿರಿ !!!

ಕ್ರಯ ಅಂಚೆಯ ವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ.

ಎರಡನೆಯ "ಶಬ್ದಪರಿಜ್ಞಾನ" ಮೂರನೆಯ "ವಾಕ್ಯಪರಿಜ್ಞಾನ" ಅಚ್ಚಾಗುತ್ತಿವೆ.

[171-4] ಪುಸ್ತಕ ದೊರೆಯುವ ಸ್ಥಳ—ಸವಿನುಡಿ, ಭಾಷಾನಿಧಿ, ೮೦, ಸಿ. ಬೀದಿ, ಕೋಟೆ, ಬೆಂಗಳೂರು.

ಮಧುರೆ ಚುನ್ನಡಿ ಅಂಚಿನ ಸೀರೆ ಅಪ್ಸಲ್ ಧಬಲ ರೂ. 3-0-0.
ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧರಿಸುವುದಕ್ಕೆ ನಯವಾಗಿಯೂ, ಬಲು ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಪೆನಿ

[111-16] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಶೋಭಿತವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲವು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದರೋ!

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಕಾವು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯತೊಡಗಿದ ಬಳಿಕ ಎಂದಿಗೂ ಜಿಗುಟಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ। ನೇಗಿನಹಾಳಕರ ಬಂಧುಗಳು. ಟಿಸವನಹಳ್ಳಿ, ಬೆಳಗಾಂವಿ—ನಾವು ಕೆಲ ತಿಂಗಳ ಹಿಂದೆ ಕೊಳ್ಳಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೆರಡು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವ್ಯಸನೀಪರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಭಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲದೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಚಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-34]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಬೇರೆ ಕಂಪಿನ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜಿದ್, ಮಾರ್ಕೆಟ್, ಬಾಂಬೆ.

ಏಜೆಂಟ್, ಬಿ ಜಂಕ್ ಮಾರ್ಕೆಟ್, ಮಂಗಳೂರು.

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ, ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರಿಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಟ್ಟಿಹರಳೆಣ್ಣೆಯಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವನ್ನು ಉಪಯೋಗಿಸಿ ನೋಡಿ. ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಜುರಿ, ಕ್ಷಯ, ಗರ್ಭಚಿಟ್ಟೆ, ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-44]



ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ಸ್ವಾಟಿಸ್‌ಫ್ಯಾಕ್ಷನ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹನೆಗಳಿಗೂ ಎಲ್ಲಾ ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷ ಗ್ಯಾರಂಟಿ. ಸವ... ತನಾಗದಿದ್ದರೆ ... ವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯ... ಕ್ರಯ ರೂ. 38, 40, 60; ಈಗಿನ ಕ್ರಯ ರೂ. 19, 20, ... ಡಬ್ಬಲ್ ರೀಡ್ ಕ್ರಯ ರೂ. 60, 70, 80, 90; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.



ವಿಳಾಸ—National Harmonium Co,

[170-4] SIMLA P.O., (E) CALCUTTA

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [25-33]

45 ಮಾತ್ರೆಗಳ ಪೊಟ್ಣ 1 ಕ್ಕೆ 3 ಆಣೆ	200 ಮಾತ್ರೆಗಳ ಪೊಟ್ಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ೬೮ ,, 9 ,,		1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ಬಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂಟ್ರಾನ್ ಡಿಪೋ, ಬೊಂಬಾಯಿ

ಮೈಸೂರು ಸೀಮೆಗೆ ಏಜೆಂಟರು—ಮ॥ ಎಂ. ರಾಮಸಂಜೀವ ಶೆಟ್ಟಿರು, ಚನ್ನಪಟ್ಟಣ. ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ESANOFELE

ಮಲೇರಿಯಾ ಜ್ವರವನ್ನು ನಾಶಮಾಡಬೇಕೆಂಬುವರೆಲ್ಲಾ "ಈಸಾನೊಫೆಲಿ" ಯನ್ನು ಉಪಯೋಗಿಸಿ ಜಯಧ್ವನಿ ಮಾಡುತ್ತಿದಾರೆ. ಇದು ವಾಸಿಮಾಡುವುದರಲ್ಲೂ, ಜ್ವರವನ್ನು ಬಾರದಂತೆ ಸಂರಕ್ಷಿಸುವುದರಲ್ಲೂ ಚೆನ್ನಾಗಿ ಪ್ರಖ್ಯಾತಿಪಡೆದಿದೆ. ಕ್ರಯ ಬಾಟ್ಲಿ 1 ಕ್ಕೆ ರೂ. 2-0-0. ಎಲ್ಲಾ ಔಷಧ ಷಾಪುಗಳಲ್ಲೂ ದೊರೆಯುತ್ತೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಹುಡುಗರಿಗಾಗಲಿ, ಹುಡುಗಿಯರಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸಿಹಿಯಾಗಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ. ಮಲೇರಿಯಾಗೆ ನಿರ್ಬಾಧಕವಾದ, ನಂಬಿಕೆಯುಳ್ಳ, ಬೇಗ ಗುಣ ಕೊಡುವ ಔಷಧ. ಇದು ಇನ್ನೂ ಎಲ್ಲಾ ಜಾತಿಯ ಜ್ವರಗಳಿಗೂ ಖಾತರಿಯಾದ ಔಷಧ. [176-3]

ಮೈಸೂರು ಸಂಸ್ಥಾನದ ಏಜಂಟರು :—

ಜೆ. ಬಿ. ಫಾರ್ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ—

ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಆರ್ಯ ಭೈಷಜ್ಯ ಮಂದಿರಂ, ಶ್ರೀ ಶೃಂಗಗಿರಿ.

ಮೆಡಲ್ ಮತ್ತು ಸರ್ಟಿಫಿಕೇಟುಗಳನ್ನು ಹೊಂದಿರುವ ಶಾಸ್ತ್ರೀಯವಾದ ಔಷಧಗಳು.

1 ಅಜೀರ್ಣ ಬಲ ಕಾಲಾನಲ ರಸ.—ಮನುಷ್ಯನ ಶಕ್ತಿಗೆ ಜೀರ್ಣ ಬಲವೇ ಮುಖ್ಯ ಕಾರಣವು. ಜೀರ್ಣಶಕ್ತಿ ಇಲ್ಲದಿರುವ ಕೊರತೆಯೇ ಅನೇಕ ರೋಗಗಳಿಗೆ ಮೂಲ ಕಾರಣವು. ಈ ಮಾತ್ರೆಯು ಎಂಥಾ ಅಜೀರ್ಣ ರೋಗಗಳನ್ನಾದರೂ ಪರಿಹರಿಸಿ, ಜೀರ್ಣಶಕ್ತಿಯನ್ನೂ, ಬಲವನ್ನೂ ಉಂಟುಮಾಡುತ್ತದೆ. ಮಲಬಂಧವನ್ನು ಹರಿಸುತ್ತದೆ. ಮತ್ತು ಇದು ಆಮವಾಯು, ಹುಳಿತೇಗು, ಅಜೀರ್ಣ ವಾಯು, ವಿಷೂಚಿ, ಪರಿಣಾಮಶೂಲೆ, ಭೇದಿ, ಕೆಮ್ಮು, ಉಬ್ಬಸ, ಅಸಾಧ್ಯವಾದ ಜ್ವರಗಡ್ಡೆಗಳು, ಈ ರೋಗಗಳನ್ನು ನಿರ್ಮೂಲ ಮಾಡುವುದು. ವಿಶೇಷ ವರ್ಣನೇನು ? ಅಗ್ನಿಮಾಂದ್ಯ (ಡಿಸ್ಪೆಪ್ಸಿಯಾ) ರೋಗಕ್ಕೆಲ್ಲಾ ಸಂಜೀವಿನಿಯು. ಕ್ರಯ 25 ಮಾತ್ರೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

2 ಚಂದ್ರಚೂಡಪಾಕ.—ಉತ್ತಮವಾದ ಶಕ್ತಿವರ್ಧಕ (ಟಾನಿಕ್) ಲೇಹ್ಯ ಸೇರು ರೂ. 2-0-0. ವಿ. ಪಿ. ಛಾರ್ಜು ಪ್ರತ್ಯೇಕ. ನಮ್ಮಲ್ಲಿ ಎಲ್ಲಾ ರೋಗಕ್ಕೂ ತಕ್ಕ ಔಷಧಗಳಿವೆ. [185-2]

ನಮ್ಮ ವಿಳಾಸ—ಆರ್ಯ ಭಿಷಗ್ವಾದ ಕೆ. ಶೇಷಶಾಸ್ತ್ರೀ, ಶೃಂಗೇರಿ.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರ್ಷದ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತದೆ. ಈಗ ಮಾರಿಕೆಗೆ ಬಂದಿರುವ ಅಲ್ಪ ತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳು ಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ ದರ್ಬಾರ್ ಕೂದಲು ರಂಗು ಅಂಥಾದ್ದಲ್ಲ. ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ 1 ಕ್ಕೆ ರೂ. 1-0-0 ಮಾತ್ರ. ಅಂಚೆ ಹಾಸಲು 4 ಅಣೆ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ,

[149-3] ೩, ಇರುಳಪ್ಪನ ಬೀದಿ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದಿದ್ದ ಪಕ್ಷದಲ್ಲಿ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣು ಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವ ಲಕ್ಷಣ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-3]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧ ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಪೋಸ್ಟ್ ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ದವ್ನಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಾಜಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಯೊಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜರ್ಮನ್, ಸಿಲ್ವರ್ ಕಾಡಿಗೆ ಧರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡೆ ಗಿಣಿಗಳು 6, ಕಾರ್ನೇಷನ್ ಬ್ರೂಚ್ 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,

[156 5] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಸುಗಂಧ ನಶ್ಯವು ! ಸುಗಂಧ ನಶ್ಯವು !! ಸುಗಂಧ ನಶ್ಯವು !!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ ! ಸುಲಭಕ್ರಯ !! ಸುಲಭಕ್ರಯ !!!

ಡಾಕ್ಟರ್ ಜಿ. ಪಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-33]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

NOTICE.

TENDERS will be received at the Office of the Military Secretary to His Highness the Maharaja of Mysore, Cubbon Park, Bangalore, up to 2p. m. on Thursday, 2nd December, 1915, for the supply of the articles required for repairing the tents of the Government House, Mysore.

For particulars, please see page 1793, Part II, of the Mysore Gazette, dated 2nd September, 1915.

(Sd) C. VENKATA RAO,
Office Assistant,
In charge Military
Secretary's Office.

Dated Bangalore,
4th September, 1915.
[198-1]

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ನೇ ಇಸವಿ ಸೆಪ್ಟಂಬರ್ ತಾ. ೧೬ ನೇ ಗುರುವಾರ.

ಪ್ರಜೆಗಳ ಚಾಕರರ ನಡವಳಿಕೆ.

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ಪ್ರಜಾಪರಿಪಾಲನೆಗಾಗಿ ನೇಮಕಮಾಡಿರುವಂಥಾ ಪಬ್ಲಿಕ್ ಸರ್ವೆಂಟುಗಳೆಂಬ [ಪ್ರಜೆಗಳ ಚಾಕರರು] ನೌಕರರುಗಳ ವರ್ತನದ ವಿಷಯದಲ್ಲಿ ಇದುವರೆಗೆ ರೂಢಿಯಲ್ಲಿದ್ದ ನಿರ್ಬಂಧಗಳನ್ನು ರದ್ದುಮಾಡಿ ಬೇರೆ ಹುಕುಮನ್ನು ಕೊಟ್ಟಿದ್ದಾರೆ. ಈ ಹುಕುಮಿನಲ್ಲಿ ಕಂಡು ಬರುವ ನಿಬಂಧನೆಗಳು ಬಹಳ ವಿಶೇಷವಾಗಿರುತ್ತವೆ. ಅದನ್ನು ನೌಕರಿದಾರರುಗಳು ಮಾತ್ರವಲ್ಲದೆ ಸಮಸ್ತ ಪ್ರಜೆಗಳೂ ಚೆನ್ನಾಗಿ ತಿಳಿಯಬೇಕಾದದ್ದು ಅವಶ್ಯಕವಾಗಿದೆ.

ಈ ನಿಬಂಧನೆಗಳ ಸಾರಾಂಶವನ್ನು ಮಾತ್ರ ಇಲ್ಲಿ ತಿಳಿಸುವೆವು. ಯಾವನೊಬ್ಬ ದೊಡ್ಡ ನೌಕರನೂ ಸರ್ಕಾರದ ಒಪ್ಪಿಗೆಯನ್ನು ಪಡೆಯದೆ ಭೂಸ್ಥಿತಿಯನ್ನು ಸಂಪಾದನೆ ಮಾಡಿಕೊಳ್ಳಕೂಡದು; ಸಣ್ಣ ನೌಕರನಾಗಿದ್ದರೆ ಡೆಪ್ಯುಟಿ ಕಮಿಷನರವರ ಸಮ್ಮತಿಯನ್ನು ಪಡೆಯಬೇಕು. ಪ್ರತಿ ಒಬ್ಬ ನೌಕರನೂ ಪಿತರಾರ್ಜಿತವಾಗಿಯೂ ಸ್ವಯಾರ್ಜಿತವಾಗಿಯೂ ಪಡೆದಿರುವ ಎಲ್ಲಾ ಭೂಸ್ಥಿತಿಗಳನ್ನೂ ಪಟ್ಟಿಮಾಡಿ ಡೆಪ್ಯುಟಿ ಕಮಿಷನರವರ ಅಧೀನದಲ್ಲೂ, ಅಥವಾ ಆಯಾ ಇಲಾಖಾ ಮೊಖ್ತೇಸರರ ಅಧೀನದಲ್ಲೂ ಇಟ್ಟಿರಬೇಕು. ಯಾವ ನೌಕರನಾಗಲಿ ಸ್ವತಂತ್ರನಾಗಿ ಜಮೀನು ವ್ಯವಸಾಯದ ಕೆಲಸವನ್ನು ಮಾಡಕೂಡದು.

ಸರ್ಕಾರದ ನೌಕರನಾಗಿರುವವನು ಲಾಭ ಸಂಪಾದನೆಯ ಗುತ್ತಿಗೆ ಯಾವ ಕಾರ್ಯದಲ್ಲೂ ಪ್ರವರ್ತಿಸಕೂಡದು. ಆದರೆ ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಏರ್ಪಟ್ಟ ಕಂಪನಿಗಳಿಗೆ ಸಹಾಯಮಾಡಬಹುದಾಗಿದೆ. ಯಾರೇ ಆಗಲಿ ಕಂಪನಿಗಳ ಡೈರೆಕ್ಟರಾಗಿರಲೂ, ಅಂತರಂಗವಾದ ವ್ಯಾಪಾರವಾದರೂ ಮಾಡಕೂಡದು. ಸರ್ಕಾರದಲ್ಲಿ ಯಾವ ಕಂಟ್ರಾಕ್ಟಿನಲ್ಲಾಗಲಿ, ಹೆಂಡ ಸಾರಾಯಿ ದುಕಾನುಗಳಲ್ಲಾಗಲಿ ಕೈಹಾಕಿರಕೂಡದು. ಸರ್ಕಾರಿ ನೌಕರನು ಯಾರಿಗೂ ಸಾಲ ಕೊಡಕೂಡದು; ಯಾರಿಂದಲೂ ಸಾಲ ತೆಗೆದುಕೊಳ್ಳಲೂ ಕೂಡದು. ಒಂದು ಬ್ಯಾಂಕು ಅಥವಾ ಕಂಪನಿಯಲ್ಲಿ ಲೇವಾದೇವಿ ಮಾಡತಕ್ಕದ್ದು. ತನ್ನ ಕೈಕೆಳಗೆ ಅಥವಾ ತನ್ನ ಅಧಿಕಾರಕ್ಕೊಳಪಟ್ಟ ನೌಕರನಲ್ಲಿ ಲೇವಾದೇವಿ ಮಾಡಿದ್ದರೆ ಆ ಸಂಗತಿಯನ್ನು ತನ್ನ ಮೇಲ್ಪಟ್ಟ ಅಧಿಕಾರಿಗೆ ತಿಳಿಸಿರಬೇಕು. ಸರ್ಕಾರಿ ನೌಕರನು ಆಗಾಗ್ಗೆ ಸಾಲಗಾರರಿಂದ ವಾರಂಟಿನಲ್ಲಿ ಹಿಡಿಯಲ್ಪಡುತ್ತಿದ್ದರೂ, ಅವನು ಮಾಡಿರುವ ಸಾಲ ಎರಡು ವರುಷದ ಮಿಯಾದೆಯಲ್ಲಿ ತೀರಿಸಲಾಗದಿದ್ದರೂ ಅಂಥವನು ನೌಕರಿಯನ್ನು ಕಳೆದುಕೊಂಡಾನು. ಇಂಥಾ ನೌಕರರ ವಿಚಾರವನ್ನು ಅಧಿಕಾರಿಗಳು ಗವರ್ನಮೆಂಟಿಗೆ ತಿಳಿಸುತ್ತಾ ಬರಬೇಕು.

ಯಾವ ಸರ್ಕಾರಿ ನೌಕರನೇ ಆಗಲಿ ಯಾವ ತರಹಾ ಬಹುಮಾನವನ್ನೂ ಪ್ರತಿ ಫಲವನ್ನೂ ಯಾರಿಂದಲೂ ಅಂಗೀಕರಿಸಲಾಗದು; ಹೂವು ಹಣ್ಣುಗಳನ್ನು ಕೂಡ ತೆಗೆದುಕೊಳ್ಳುವುದು ತರವಲ್ಲ. ಶುಭಶೋಭನಾದಿಗಳಲ್ಲಿ ರಕ್ತಸಂಬಂಧಿಗಳಲ್ಲದೆ ಇತರರ್‍ಯಾರಿಂದಲೂ ಉಡಿಗೆರೆ ಮೊದಲಾದವುಗಳನ್ನು ತೆಗೆದುಕೊಳ್ಳಕೂಡದು. ವೈದ್ಯದ ಇಲಾಖೆಯ ಅಧಿಕಾರಿಗಳು ತಾವು ಮಾಡತಕ್ಕ ಚಿಕಿತ್ಸಾದಿಗಳಿಗೆ ಇಲಾಖೆಯ ನಿಬಂಧನೆಗಳನ್ನು ಅನುಸರಿಸಿ ಪ್ರತಿಫಲವನ್ನು ಅಂಗೀಕರಿಸಬಹುದು. ಗವರ್ನಮೆಂಟಿನವರ ಅನುಜ್ಞೆಯನ್ನು ಪಡೆಯದೆ ನೌಕರರು ಅಡ್ರೆಸ್ಸುಗಳನ್ನೂ, ಹೊಗಳಿಕೆಯ ವಾಕ್ಯಗಳನ್ನೂ ಸ್ವೀಕರಿಸಕೂಡದು; ಮತ್ತೂ ಅಂಥಾ ಕೂಟಗಳಲ್ಲಿ ಭಾಗಿಗಳಾಗಲೂ ಕೂಡದು. ದಿವಾನರವರು ಅಡ್ರೆಸ್ಸನ್ನು ಅಂಗೀಕರಿಸಬಹುದು. ಪ್ರಜೆಗಳ ಮುಖಂಡರು ಸೇರಿ ನೌಕರನನ್ನು ಕೂಡಿಸಿಕೊಂಡು ಫೋಟೋ ತೆಗಿಸಿಕೊಳ್ಳಬಹುದು; ಆದರೆ ಅಂಥಾ ನೌಕರನು ಆ ಫೋಟೋಗಳನ್ನು ಅವರಿಂದ ಬಹುಮಾನವಾಗಿ ಸ್ವೀಕರಿಸಕೂಡದು. ಅಧಿಕಾರಿಗಳೂ ಮುಖಂಡರೂ ಕಲೆತು ಚಂದಾ ಹಣಗಳನ್ನು ಕೂಡಿಸಬೇಕಾಗಿ ಬಂದರೆ ಅದರ ಮೇಲ್ವಿಚಾರಣೆಗೆ ಏರ್ಪಟ್ಟ ಸಂಘದಲ್ಲಿ ಪ್ರಜೆಗಳೊಳಗೆ ಗಣ್ಯರಾದವರೂ ಮೆಂಬರುಗಳಾಗಿರಬೇಕು. ಮತ್ತು ಅಂಥಾ ಸಂಘಗಳಲ್ಲಿ ಜಮಾಖರ್ಚು ಲೆಕ್ಕಗಳನ್ನೆಲ್ಲಾ ಕ್ರಮವಾಗಿ ಇಟ್ಟಿರತಕ್ಕದ್ದು.

ಸರ್ಕಾರದ ನೌಕರನು ಯಾವುದೊಂದು ಸರ್ಕಾರಿ ಕಾಗದ ಪತ್ರದ ವಿಚಾರವನ್ನೂ ಗವರ್ನಮೆಂಟ್ ಸ್ಯಾಂಕ್ಷನ್ ಇಲ್ಲದೆ ಯಾರಿಗೂ ತಿಳಿಸಕೂಡದು. ಸರ್ಕಾರದ ಅಪ್ಪ[illegible]ದ ನೌಕರನು ಪತ್ರಿಕೆಯನ್ನು ನಡಿಸಲೂ, ಪತ್ರಿಕೆಗಳಿಗೆ ಬಾತ್ಮಿಗಳನ್ನು ಬರೆಯಲೂ ಕೂಡದು. ಸರ್ಕಾರದ ನಡವಳಿಕೆಯನ್ನಾಗಲಿ, ರಾಜಕೀಯ ವಿಚಾರವನ್ನಾಗಲಿ ಆಕ್ಷೇಪಣೆ ಮಾಡುವಂಥಾ ಯಾವ ಕೂಟಕ್ಕೂ, ನೌಕರನಾದವನು ಹೋಗಲೂ, ಅದರಲ್ಲಿ ಭಾಗಿಯಾಗಲೂ ಕೂಡದು. ಸರ್ಕಾರದ ನೌಕರರು ಯಾವ ಕೆಲಸ ಕಾರ್ಯ ವ್ಯಾಜ್ಯಾದಿಗಳಲ್ಲೂ ಪಂಚಾಯತಿಗೆ ನಿಲ್ಲಕೂಡದು; ಸರ್ಕಾರದವರ ಅನುಮತಿ ಪಡೆದು ಪಂಚಾಯತಿ ಮಾಡುವಾಗ ಪ್ರತಿಫಲವನ್ನು ಅಂಗೀಕರಿಸಕೂಡದು. ನೌಕರನು ಸರ್ಕಾರಿಯಾಗಿ ನಡಿಸಿದ ಕೆಲಸ ಕಾರ್ಯಗಳನ್ನು ಸಾಧಿಸುವುದಕ್ಕೆ ಪತ್ರಿಕೆಗಳಿಗೆ ಬಾತ್ಮಿಗಳನ್ನು ಬರೆಯಕೂಡದು; ಕೋರ್ಟಿನಲ್ಲಿ ನಿಂತು ವಾದಿಸಲೂ ಕೂಡದು. ಇತರ ನೌಕರರ ಸಂಗಡ ಸೇರಿ ಸರ್ಕಾರಕ್ಕೆ ಮನವಿ ಮಾಡಕೂಡದು; ತಾನೊಬ್ಬನೇ ಅರ್ಜಿ ಬರೆದುಕೊಳ್ಳಬಹುದು.

ಈ ಮೇಲ್ಕಂಡ ನಿಬಂಧನೆಗಳು ಸಹಜವಾಗಿ ಸರ್ಕಾರದ ನೌಕರನ ಸ್ವೇಚ್ಛಾ ಪ್ರವರ್ತನೆಗಳನ್ನು ನಿರ್ಬಂಧಪಡಿಸುವವು; ಇವೆಲ್ಲಾ ಪ್ರಜಾಪಾಲನೆಯ ಕೆಲಸಕಾರ್ಯಗಳು ತೃಪ್ತಿಕರವಾಗಿಯೂ ಸಾರ್ಥಕವಾಗಿಯೂ ನಡೆಯುವುದಕ್ಕೆ ಸಹಕಾರಿಗಳಾಗಿರುತ್ತವೆ. ಸರ್ಕಾರದ ನೌಕರರು ಪ್ರಜೆಗಳ ವಿಷಯದಲ್ಲಿ ನಡೆದುಕೊಳ್ಳಬೇಕಾದ ವರ್ತನವನ್ನೂ ಹೀಗೆಯೇ ವಿಧಾಯಕಮಾಡಿ ಪ್ರಕಟಮಾಡಿದ್ದನ್ನು ನೋಡಬೇಕೆಂದು ಕುತೂಹಲಪಡುತ್ತೇವೆ. ಸರ್ಕಾರದ ನೌಕರರಿಗೆ ಮೇಲ್ಕಂಡ ನಿಬಂಧನೆಗಳಲ್ಲಿ ಪ್ರಜೆಗಳ ಚಾಕರರು ಎಂಬ ಹೆಸರು ಕೊಡಲಾಗಿದೆ; ಆದರೆ ಅನೇಕ ಸಂದರ್ಭಗಳಲ್ಲಿ ಅವರು ಪ್ರಜೆಗಳ ಯಜಮಾನರೋ ಎನ್ನುವಂತೆ ನಡೆಯುವರು. ಪ್ರತಿ ಒಬ್ಬ ಸರ್ಕಾರಿ ನೌಕರನನ್ನೂ ಪ್ರಜೆಗಳೇ ಸಂಬಳಕೊಟ್ಟು ಸಾಕತಕ್ಕವರು; ಪ್ರಜೆಗಳಿಗೆ ಸೌಕರ್ಯಗಳನ್ನು ಕಲ್ಪಿಸಿ ಕಾಪಾಡುವುದೇ ನೌಕರನ ಕರ್ತವ್ಯ. ಪ್ರಜೆಗಳನ್ನು ಕಷ್ಟನಷ್ಟಗಳಿಗೂ ಸುಲಿಗೆ ಹಿಂಸೆಗಳಿಗೂ ಗುರಿಪಡಿಸುವಂಥಾ ನೌಕರನು ಅವನ ಧರ್ಮವನ್ನು ಮೀರಿ ನಡೆಯುತ್ತಾನೆ. ಜನಗಳಿಗೆ ಉಪಕಾರ ಮಾಡತಕ್ಕದ್ದೇ ಅವನ ಕರ್ತವ್ಯ; ಅವರನ್ನು ಸಂಕಟಪಡಿಸಿ ಐಶ್ವರ್ಯವನ್ನು ಸಂಪಾದನೆ ಮಾಡುವುದು ಅವನಿಗೆ ಧರ್ಮವಲ್ಲ. ನೌಕರನು ತನ್ನ ಸ್ಥಾನವು ಮಹಾ ಗೌರವವಾದದ್ದೆಂಬ ಭಾವನೆಯನ್ನಿಟ್ಟುಕೊಂಡು, ತಾನು ಪ್ರಜೆಗಳಲ್ಲಿ ಪ್ರೀತಿ ಗೌರವಗಳನ್ನು ಪಡೆಯುವಂತೆಯೂ, ನಮ್ಮ ಶ್ರೀಮನ್ಮಹಾರಾಜರವರಿಗೆ ಯಶಸ್ಸನ್ನು ತರುವಂತೆಯೂ ತನ್ನ ಕರ್ತವ್ಯ ಕಾರ್ಯಗಳನ್ನು ನಡಿಸುತ್ತಾ ಬರುವಂತಾಗಲೆಂದು ಹಾರೈಸುತ್ತೇವೆ.

ಮಹಾರಾಜರ ಕೀರ್ತ್ಯಾನವು.

ಒಂದಾನೊಂದು ದಿವಸ ಒಬ್ಬ ಮಹಾರಾಜರು ತಮ್ಮ ಅರಮನೆಯಲ್ಲಿ ಇರುವಾಗ ತಮ್ಮ ದಿವಾನರನ್ನು ಕರೆಸಿ, ರಾಜ್ಯದ ಕಾರ್ಯಗಳನ್ನು ಕುರಿತು ಮಾತನಾಡುತ್ತಾ ಇದ್ದರು. ಆಗ ಆ ಅರಮನೆಯ ಹತ್ತಿರಕ್ಕೆ ಇಬ್ಬರು ಭಿಕ್ಷಗಾರರು ಬಂದು, ಮಹಾರಾಜರು ತಮ್ಮಲ್ಲಿ ದಯೆಯಿಟ್ಟು ಭಿಕ್ಷವನ್ನು ಕೊಡುವ ಹಾಗೆ ಅವರಿಬ್ಬರೂ ಘಟ್ಟಿಯಾಗಿ ಕೂಗಿದರು. ಆ ಭಿಕ್ಷಗಾರರಲ್ಲಿ ಒಬ್ಬನು ಸದ್ಭಕ್ತನೂ ಮತ್ತೊಬ್ಬನು ಭಕ್ತಿಯಿಲ್ಲದವನು. ಭಕ್ತನಾದವನು ಭಿಕ್ಷಬೇಡಿಕೊಳ್ಳುತ್ತಿರುವಲ್ಲಿ ಹೇಳಿದ್ದೇನೆಂದರೆ—"ಭಗವಂತನೇ! ತಂದೆಯೇ! ಎಲ್ಲಾ ಮೇಲುಗಳನ್ನು ಕೊಡುವವನು ನೀನೇ. ಸರ್ವ ಸ್ತೋತ್ರವೂ ಮಹಿಮೆಯೂ ನಿನ್ನವೇ" ದೇವರಿಗೆ ಕಂಪು, ಮನುಷ್ಯರಿಗೆ ಸಂಪು ಎಂಬಂತೆ ಪ್ರಾರ್ಥಿಸಿದನು.

ಎರಡನೆಯವನು ದೇವರನ್ನು ಸ್ತುತಿಸುವದಕ್ಕಿಂತ ಮಹಾರಾಜರನ್ನು ಹೊಗಳುವದರಿಂದ ಬಹಳ ಲೇಸು ಎಂತ ಭಾವಿಸಿಕೊಂಡು, ಅರಮನೆಯ ಅರಮನೆಯ ಬಾಗಲಲ್ಲಿ ನಿಂತುಕೊಂಡು, ನಮ್ಮ ಮಹಾರಾಜರಿಗಿಂತ ದಕ್ಷರು ಯಾರು? ಅರಸನಿಗೆ ಆರು ಬಾಯಿ, ತಿರುಕನಿಗೆ ಒಂದೇ ಬಾಯಿ ಎಂಬಂತೆ ಘಟ್ಟಿಯಾಗಿ ಕೂಗಿ ಧೊರೆಯನ್ನು ಮುಂದಿನಿಂದ ಹೊಗಳಬೇಕು, ಮಕ್ಕಳನ್ನು ಹಿಂದಿನಿಂದ ಹೊಗಳಬೇಕು ಎಂಬಂತೆ ಅರಸನಿಗೆ ಮುಖಸ್ತುತಿಮಾಡಿದನು.

ಅರಸನು ಭಿಕ್ಷಗಾರರ ಶಬ್ದಗಳನ್ನು ಕೇಳಿ, ತಮ್ಮ ಸೇವಕರಲ್ಲಿ ಒಬ್ಬನನ್ನು ನೋಡಿ ನೀನು ಎರಡು ಕುಂಬಳಕಾಯಿಗಳನ್ನು ತಕ್ಕೊಂಡು ಬಾ. ಒಂದು ಕಾಯಿಯಲ್ಲಿ ರಂಧ್ರವನ್ನು ಮಾಡಿ, ಅದರಲ್ಲಿ ಇನ್ನೂರು ರೂಪಾಯಿಗಳನ್ನು ಇರಿಸಿ, ಅದನ್ನು ಚೆನ್ನಾಗಿ ಮುಚ್ಚಿ, ನನಗೆ ಸ್ತೋತ್ರವನ್ನು ಮಾಡುವವನಿಗೆ ಕೊಡು. ಮತ್ತೊಬ್ಬನಿಗೆ ಬರೀ ಕಾಯಿಯನ್ನು ಕೊಟ್ಟು ಕಳುಹಿಸು ಎಂದು ಅಪ್ಪಣೆಕೊಟ್ಟನು.

ಆ ಭಕ್ತನು ತನಗೆ ಸಿಕ್ಕಿದ ಕಾಯಿಯನ್ನು ನೋಡಿ, ಸಂತೋಷಪಟ್ಟು ತನ್ನ ಮನೆಯ ಕಡೆಗೆ ಹೋದನು. ಆತನು ಹೋಗುತ್ತಿರುವಾಗ ಮಂಗ ಬಲ್ಲದೇ ಮಾಣಿಕ್ಯದ ಬೆಲೆ ಎಂಬಂತೆ ಎರಡನೆಯವನು ಅವನ ಜೊತೆಯಲ್ಲಿ ಸೇರಿ, ಈ ಕಾಯಿಯು ನನಗೆ ಬೇಡ. ಮಹಾರಾಜರು ಏತಕ್ಕೆ ಇಷ್ಟೇ ಕೊಟ್ಟು ನಾಚಿಕೆಪಡಿಸಿದ್ದಾರೋ ತಿಳಿಯದು, ನೀನು ಇದಕ್ಕೆ ಒಂದು ದುಡ್ಡು ಕೊಟ್ಟರೆ ನನಗೆ ಇದನ್ನ ಕೊಟ್ಟುಬಿಡುತ್ತೇನೆ ಎಂತ ಹೇಳಿ, ಸಿಟ್ಟಿನಿಂದ ಮಾತಾಡಿದನು. ಅದಕ್ಕೆ ಆ ಭಕ್ತನು ಒಪ್ಪಿ, ಆ ಕುಂಬಳಕಾಯಿಗೆ ಒಂದು ದುಡ್ಡು ಕೊಟ್ಟು, ಮನೆಗೆ ತೆಗೆದುಕೊಂಡು ಹೋಗಿ, ಒಡೆದು, ಅದರಲ್ಲಿರುವ ದ್ರವ್ಯವನ್ನು ಕಂಡು ಬಹಳ ಸಂತೋಷ ಹೊಂದಿದನು. ಇಷ್ಟು ಸಂಪತ್ತು ಆತನಿಗೆ ಸಿಕ್ಕಿದ್ದರಿಂದ, ಆತನು ಒಂದು ಅಂಗಡಿಯನ್ನು ಏರ್ಪಡಿಸಿಕೊಂಡು ಭಿಕ್ಷಬೇಡುವದನ್ನು ಬಿಟ್ಟುಬಿಟ್ಟನು.

ಆ ಭಕ್ತಿಹೀನನು ಮತ್ತೆ ಅರಮನೆಯ ಬಾಗಲಿನ ಹತ್ತಿರಕ್ಕೆ ಹೋಗಿ, ಹಾಡಿದ್ದೇ ಹಾಡೋ ಕಿಸುಬಾಯಿದಾಸ ಎಂಬಂತೆ, ತಾನು ಮೊದಲು ಹೊಗಳಿದಂತೆ ಅರಸನನ್ನು ಸ್ತುತಿಸಿದನು. ಅರಸನು ಅದನ್ನು ಕೇಳಿ, ಉಲ್ಲಾಸಗೊಂಡು, ತನ್ನ ಸೇವಕರು ಮತ್ತೊಂದು ಕುಂಬಳಕಾಯಿಯನ್ನು ತೆಗೆದು ತೂತುಮಾಡಿ, ಅದರಲ್ಲಿ ಮುನ್ನೂರು ರೂಪಾಯಿ ಹಾಕಿ ಅದನ್ನು ಮುಚ್ಚಿ, ಭಿಕ್ಷಗಾರನ ಕೈಗೆ ಕೊಟ್ಟು ಅವನನ್ನು ಸಂತೋಷಪಡಿಸಿ ಕಳುಹಿಸಬೇಕೆಂದು ಆಜ್ಞಾಪಿಸಿದನು. ಆ ಭಿಕ್ಷಗಾರನು ಅದನ್ನು ತೆಗೆದುಕೊಂಡು, ಕೊಟ್ಟದ್ದು ಉಟ್ಟುಕೋ ಅಂದರೆ ಪಟ್ಟೆಗೆ ಕೈಹಾಕಿದ ಎಂಬಂತೆ ತೃಪ್ತನಾಗದೆ, ತನ್ನ ಸ್ನೇಹಿತನ ಅಂಗಡಿಗೆ ಹೋಗಿ—ನಮ್ಮ ಮಹಾರಾಜರು ಹಾಸ್ಯಮಾಡತಕ್ಕವರೋ ಏನೋ! ಈ ದಿವಸ ಮತ್ತೊಂದು ಕಾಯಿಯನ್ನು ಕೊಡಿಸಿದ್ದಾರೆ; ನೀನು ಇದಕ್ಕೆ ಎರಡು ಕಾಸು ಕೊಟ್ಟರೆ ಸಾಕು ಎಂತ ಹೇಳಿದನು. ಆ ಕಾಯಿಯನ್ನು ಅಲ್ಲಿ ಹಾಕಿಬಿಟ್ಟು, ಹೊರಟುಹೋದನು. ಆ ಭಕ್ತನ ಹೆಂಡತಿಯು ಸಂತೋಷವಾಗಿ ಅದನ್ನು ಹೊಂದಿ, ಒಡೆದು, ಮತ್ತೆ ಮುನ್ನೂರು ರೂಪಾಯಿಗಳನ್ನು ತನ್ನ ವಶಮಾಡಿಕೊಂಡಳು.

ಮಾರನೇ ದಿನ, ಮಹಾರಾಜನು ತಿರಿಗಿ ಅರಮನೆಯ ಬಾಗಲಲ್ಲಿ, ಆ ಭಿಕ್ಷಗಾರನು ಕೂಗುವದನ್ನು ಕೇಳಿ—ಅದೇನು? ಅವನು ಎಂಥವನು? ಎರಡಾವರ್ತಿ ಆ ನೀಚನಿಗೆ ನಾನು ದ್ರವ್ಯವನ್ನು ಕೊಟ್ಟಿದ್ದೇನೆ. ಇನ್ನೂ ಅವನು ಭಿಕ್ಷ ಬೇಡುವದು ಏತಕ್ಕೆ? ನನ್ನ ಬಳಿಗೆ ಅವನನ್ನು ಕರಮಾಡು ಎಂದು ಕೋಪಗೊಂಡನು. ಸೇವಕರು ಆ ಭಿಕ್ಷಗಾರನನ್ನು ಅರಸನ ಬಳಿಗೆ ಕರಕೊಂಡು ಬಂದರು. ಆಗ ಅರಸನು ಅವನಿಗೆ—ನಾನು ಈ ವಾರಕ್ಕೆ ನಿನಗೆ ಐನೂರು ರೂಪಾಯಿಗಳನ್ನು ಕೊಟ್ಟು ನಿನ್ನನ್ನು ಅನುಕೂಲಸ್ಥನನ್ನಾಗಿ ಮಾಡಿದ್ದೇನೆ. ಇನ್ನೂ ನೀನು ಭಿಕ್ಷಬೇಡುವದು ಅವಶ್ಯವೋ, ಏನು? ಎಂಬುದಾಗಿ ಖಂಡಿಸಿದನು. ಆಗ ಭಿಕ್ಷಗಾರನು—ಮಹಾರಾಜರೇ! ತಮ್ಮ ಅರಮನೆಯ ಬಾಗಲಲ್ಲಿ ನನಗೆ ಸಿಕ್ಕಿದ್ದು ಎರಡು ಕುಂಬಳಕಾಯಿಗಳೇ ಹೊರತು ಮತ್ತೇನೂ ಸಿಕ್ಕಿಲ್ಲ. ಆ ಎರಡು ಕಾಯಿಗಳನ್ನು ಮತ್ತೊಬ್ಬ ಭಿಕ್ಷಗಾರನಿಗೆ ಬಹಳ ಸ್ವಲ್ಪ ಕ್ರಯಕ್ಕೆ ಮಾರಿಬಿಟ್ಟೆನು ಎಂದು ಅರಿಕೆಮಾಡಿದನು.

ಇದನ್ನು ಕೇಳಿ, ಆ ಮಹಾರಾಜರು—ಇಗೋ! ಲೌಕಿಕ ಆಲಾಪಗಳಲ್ಲಿ ಸಿಕ್ಕಿಕೊಳ್ಳುವದಕ್ಕಿಂತ ದೇವರನ್ನು ಸ್ಮರಿಸುವದು ಎಷ್ಟೋ ಲಾಭ! ಆ ಭಕ್ತನಿಗೆ ನಾನು ದಯತೋರಿಸದೆ ಏನೇನೂ ಕೊಡದೆ ಹೋದರೂ ಕೂಡ, ದೇವರು ಅವನಿಗೆ ಕೊಡಿಸಿದ್ದಾನೆ; ಭಕ್ತಿಯಿಲ್ಲದವನಿಗೆ ದೊರೆತ ದ್ರವ್ಯವನ್ನು ದೇವರು ವಜಾಮಾಡಿದ್ದಾನೆ ಅಂದರು

"ಲೌಕಿಕನಿಗೆ ಲಯ; ಭಕ್ತನಿಗೆ ಭಾಗ್ಯ.
ಲೋಭಿಗೆ ಲುಕ್ಸಾನು; ಶಿಷ್ಯನಿಗೆ ಸ್ವರ್ಗ."

ರಾಗ—ರೇಖಾ ಪಲ್ಲವಿ. ಅಟ್ಟತಾಳ ಚಾಪು

ಲೋಕಭೋಗವೇತಕ್ಕೆ ನಿನಗೆ?
ಭೀಕರ ಹಾನಿ ಬರುವದು ಕೊನೆಗೆ

ಅನುಪಲ್ಲವಿ.

ನಾಕ ಮಾರ್ಗ ತಾ ಕಳೆದು,
ಮೂರ್ಖನಾಗಿ ಬಳಿದು—

ಚರಣಗಳು

1. ಹೊನ್ನು ಹೆಣ್ಣು ಮಣ್ಣುಗಳಿಗೆ-ನಿನ್ನ ಮನವನ್ನು ಕೊಟ್ಟು,
ಭಿನ್ನ ಮಾರ್ಗವನ್ನು ಸೇರು-ತಿನ್ನು ಕೆಡಬಹುದೇ? ಲೋಕ
2. ಮೃತ್ಯು ಬೆನ್ನು ಹತ್ತಿರಲು-ಹೊತ್ತಿನಲ್ಲೇ ಭಕ್ತನಾಗಿ
ಉತ್ತಮ ಕರ್ತನಾ ಯೇಸು-ಕ್ರಿಸ್ತನ ನಂಬಿನು ನೀ— ಲೋಕ

ಮಹಾ ಭಕ್ತರು ರಚಿಸಿರುವ ಭಕ್ತಿಗೀತಾವಳಿ ಎಂಬ ಸಂಗೀತ ಪುಸ್ತಕದಲ್ಲಿ ಮೇಲ್ಕಂಡ ಶ್ಲೋಕಗಳು ಅಡಗಿರುತ್ತವೆ. ಈ ಸದ್ಭಕ್ತರು ಲೌಕಿಕ ಆಲಾಪಗಳಲ್ಲಿ ನಂಬಿಕೆಯಿಟ್ಟುಕೊಳ್ಳದೆ, ಸದ್ಭಕ್ತಿಯನ್ನು ಬೆಳಸಿಕೊಳ್ಳುವದರಿಂದ ಇಷ್ಟವಾದ ಫಲವು ದೊರೆಯುತ್ತದೆಂದು ನಂಬುವವರಾಗಿದ್ದಾರೆ. ಅವರು ಪರಮಗುರುವಾದ ಯೇಸು ಕ್ರಿಸ್ತನ ಮಾರ್ಗವನ್ನು ಅನುಸರಿಸುವದು ಉತ್ತಮ ಭಕ್ತಿಯೆಂದು ಬೋಧಿಸಿದ್ದಾರೆ. ನೀವು ಜಗದ್ರಕ್ಷಕನಾದ ಯೇಸು ಕ್ರಿಸ್ತನ ಚರಿತ್ರೆಯಲ್ಲಿ ಇದಕ್ಕೆ ಸಂಬಂಧವಾದ ಸಾಮ್ಯಗಳನ್ನು ನೋಡಬಹುದು. ಅವುಗಳನ್ನು ಸಂಕ್ಷೇಪಿಸಿ ಇಲ್ಲಿ ಬರೆದಿದ್ದೇವೆ.

ಅವು ಯಾವವೆಂದರೆ—ಒಬ್ಬಾನೊಬ್ಬ ಗೌಡನ ಭೂಮಿಯಲ್ಲಿ ಬಹು ಒಳ್ಳೇ ಬೆಳೆಯಾಯಿತು. ಆಗ ಆತನು ತನ್ನ ಮನೆಯಲ್ಲಿದ್ದ ಚಿಕ್ಕ ಕಣಜಗಳನ್ನೆಲ್ಲಾ ಕೀಳಿಸಿಬಿಟ್ಟು, ಮುಂಚೆಗಿಂತಲೂ ದೊಡ್ಡವುಗಳಾಗಿ ಕಟ್ಟಿಸಿ, ಆ ದವಸಧಾನ್ಯಗಳನ್ನೆಲ್ಲಾ ಅವುಗಳಲ್ಲಿ ತುಂಬಿಟ್ಟು, ಬಹಳ ಹೆಚ್ಚಳಪಟ್ಟನು. ಆನಂತರ ಒಂದು ದಿನ ರಾತ್ರಿ ಆತನು ಮಲಗಿಕೊಂಡಿರುವಾಗ ತನ್ನ ಜೀವಾತ್ಮನಿಗೆ—ಎಲೈ ಜೀವಾತ್ಮವೇ! ಅನೇಕ ವರ್ಷಗಳಿಗೆ ಆಗುವಷ್ಟು ಆಹಾರ ನಿನಗೆ ಟಿಕ್ಕಿದೆ. ಉಣ್ಣು, ತಿನ್ನು, ಕುಡಿ, ಸುಖಪಡು ಎಂದು ಗರ್ವದಿಂದ ಅಂದುಕೊಂಡನು. ಆದರೆ ದೇವರು ಆತನಿಗೆ—ನೀನು ಹುಚ್ಚ; ಈ ರಾತ್ರಿ ಯಮದೂತರು ಬಂದು ನಿನ್ನ ಪ್ರಾಣವನ್ನು ತೆಗೆದರೆ ನೀನು ಕೂಡಿಸಿಟ್ಟಿರುವದೆಲ್ಲಾ ಯಾರಿಗಾಗುವದು? ಎಂದು ಹೇಳಿದನು. ಆ ರಾತ್ರಿಯೇ ಆ ಮನುಷ್ಯನು ಗತಿಯಿಲ್ಲದವನಾಗಿ ಸತ್ತುಹೋದನು.

ಪಾಪಾತ್ಮನ ನಡವಳಿ, ಪುಣ್ಯಾತ್ಮನ ರೀತಿ.

ಯೇಸು ಸ್ವಾಮಿಯವರು ಒಂದು ಊರಿಗೆ ದಯಮಾಡಿಸುತ್ತಿರುವಾಗ ಅನುಕೂಲಸ್ಥನಾದ ಒಬ್ಬಾನೊಬ್ಬ ಅಧಿಕಾರಿಯು ಓಡಿ ಬಂದು, ಆ ಸ್ವಾಮಿಯವರಿಗೆ ನಮಸ್ಕಾರಮಾಡಿ—ಗುರುವೇ! ನಾನು ಮುಕ್ತನಾಗುವದಕ್ಕೆ ಏನು ಮಾಡಬೇಕೆಂದು ವಿಚಾರಿಸಿದನು. ಅದಕ್ಕೆ ಸ್ವಾಮಿಯವರು ಆತನನ್ನು ನೋಡಿ ನೀನು ನನ್ನ ಮತದ ಆಜ್ಞೆಗಳಿಗೆ ಸರಿಯಾಗಿ ನಡೆದುಕೊಂಡಿದ್ದೀಯಾ? ಎಂದು ಕೇಳಿದರು. ಆತನು—ಹೌದು, ಸ್ವಾಮಿ! ನಾನು ಚಿಕ್ಕಂದಿನಿಂದಲೂ ಆ ಆಜ್ಞೆಗಳಿಗೆ ಸರಿಯಾಗಿ ನಡೆದಿದ್ದೇನೆ ಎಂದು ಉತ್ತರ ಕೊಟ್ಟನು. ಆಗ ಯೇಸು ಸ್ವಾಮಿಯವರು ತಮ್ಮ ಕರುಣಾ ದೃಷ್ಟಿಯಿಂದ ಆ ಸ್ಥಿತಿವಂತನನ್ನು ನೋಡಿ—ನಿನಗೆ ಒಂದು ಲೋಪವಿದೆ. ನೀನು ಪ್ರಪಂಚಕ್ಕೆ ಒಳಗಾಗಿದ್ದೀ. ಅದ್ದರಿಂದ ಅದನ್ನು ತ್ಯಜಿಸಬೇಕು? ಹೋಗಿ ನಿನ್ನ ಬದುಕನ್ನೆಲ್ಲಾ ಮಾರಿಬಿಟ್ಟು, ಬಡವರಿಗೆ ಕೊಟ್ಟು, ನನ್ನ ಶಿಷ್ಯನಾಗಿ ನನ್ನನ್ನು ಹಿಂಬಾಲಿಸು. ಅನಂತರ ಪರಲೋಕದಲ್ಲಿ ನಿನಗೆ ಸಂಪತ್ತು ಸ್ಥಿರವಾಗುವದು ಎಂದು ಅಪ್ಪಣೆಕೊಟ್ಟರು. ಆ ಅನುಕೂಲಸ್ಥನು ಈ ಮಾತುಗಳನ್ನು ಕೇಳಿ, ಬೇಡವೆಂದು ಹೊರಟುಹೋದನು. ಭಕ್ತಿ ಸಿಕ್ಕಿದಾಕ್ಷಣ, ಮುಕ್ತಿ ಸಿಕ್ಕಿದ ಹಾಗಾಯ್ತೇ? ಸ್ಥಿತಿವಂತನು ಮುಕ್ತನಾಗುವದಕ್ಕಿಂತ ಆನೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವದು ಸುಲಭ. ಮುಕ್ತಿ ಸಿಕ್ಕದಿದ್ದರೆ ಗತಿ ಏನು? ಪ್ರಿಯ ಸ್ವದೇಶ ಮಹನೀಯರೇ! ನಾವು ನೆರವೇರಿಸಬೇಕಾದ ಕರ್ತವ್ಯ ಒಂದೇ. ಅದು ಯಾವದೆಂದರೆ—ಪರಮಗುರುವಾದ ಯೇಸು ಸ್ವಾಮಿಯ ಸನ್ಮಾರ್ಗದಲ್ಲಿ ನಡೆದುಕೊಳ್ಳುವವರಾಗಿ ಆತನಿಗೆ ಮೆಚ್ಚಿಕೆಯಾದ ಭಕ್ತಿಯನ್ನು ಬೆಳಸಿಕೊಳ್ಳುವದೇ

ಯುದ್ಧದ ಸಮಾಚಾರಗಳು.

ರಷ್ಯಾದವರಿಗಾದ ಒಂದು ಜಯಪ್ರದ.

ಆಸ್ಟ್ರಿಯಾಕ್ಕೂ ಅಮೇರಿಕಕ್ಕೂ ಹೋರಾಟ.

ಈ ವಾರದ ತಂತೀ ವರ್ತಮಾನಗಳಲ್ಲೆಲ್ಲಾ ರಷ್ಯಾದವರು ಗೆಲಿಷಿಯಾದಲ್ಲಿ ಜರ್ಮನಿ ಆಸ್ಟ್ರಿಯಾ ಸೈನ್ಯಗಳನ್ನು ಸೋಲಿಸಿ ಜಯಪ್ರದ ಹೊಂದಿದ್ದೇ ಮುಖ್ಯವಾಗಿರುತ್ತದೆ. ರಷ್ಯಾದವರು 17,000 ಸೈನಿಕರನ್ನೂ 80 ಪಿರಂಗಿಗಳನ್ನೂ ಕೈಸೆರೆ ಹಿಡಿದರೆಂದು ಹೇಳಲಾಗಿದೆ.

ಪಶ್ಚಿಮ ರಣರಂಗದಲ್ಲಿ.

ಬ್ರಿಟಿಷ್ ಸೇನಾಪತಿಯಾದ ಸರ್ ಜಾನ್ ಫ್ರೆಂಚ್‌ರವರು ತಮ್ಮ ಭಾಗದ ಯುದ್ಧಸಾಲಿನಲ್ಲಿ ಬಲವಾದ ಪಿರಂಗಿ ಗುಂಡುಗಳ ಹೋರಾಟ ವಿಶೇಷವಾಗಿತ್ತೆಂದೂ, ಶತ್ರು ಸೈನ್ಯಗಳಿದ್ದ ಕೆಲವು ಕಂದಕಗಳನ್ನು ಸುರಂಗ ಹಾಕಿ ನಾಶಮಾಡಿದೆವೆಂದೂ ತಿಳಿಸುತ್ತಾರೆ. ಜರ್ಮನಿಯವರ ಎರಡು ವಿಮಾನಯಂತ್ರಗಳನ್ನೂ ಮುರಿದುಹಾಕಿದರು.

ಫ್ರೆಂಚರ ಸೈನ್ಯಗಳಿರುವ ಭಾಗದಲ್ಲಿ ಜರ್ಮನಿಯ ಯುವರಾಜರ ಸೈನಿಕರು ಮತ್ತೆ ನುಗ್ಗಿ ಬಂದು ಸೈನ್ಯದ ಸಾಲುಗಳನ್ನು ಒಡೆದುಹಾಕಬೇಕೆಂದು ಸಾಹಸಪಟ್ಟರು. ಆದರೆ ಅವರು ಕೆಲವು ಕಂದಕಗಳನ್ನು ಸ್ವಾಧೀನಮಾಡಿಕೊಂಡರಲ್ಲದೆ ಮುಂದಕ್ಕೆ ನುಗ್ಗಿ ಬರುವುದು ಅವರಿಂದ ಸಾಧ್ಯವಾಗಲಿಲ್ಲ. ಫ್ರೆಂಚರು ಕೆಲವು ಸೈನಿಕರನ್ನು ಕೈಸೆರೆ ಹಿಡಿದುಕೊಂಡರು. ಅಲ್ಸಾಸ್ ಮತ್ತು ಲೋರೇನ್ ಪ್ರಾಂತ್ಯದಲ್ಲಿ ಜರ್ಮನಿಯವರು ವಿಷ ವಾಯುಗಳನ್ನೂ, ಬೆಂಕಿಯ ದ್ರಾವಕಗಳನ್ನೂ ಸುರಿಸಿ ಫ್ರೆಂಚರ ಮೇಲೆ ನುಗ್ಗಿ ಬಂದರು. ಆದಾಗ್ಯೂ ಅವರು ಫ್ರೆಂಚರನ್ನು ಹಿಂದಕ್ಕೆ ಓಡಿಸಲಾರದೆ ಹೋದರು.

ಈ ರಣರಂಗದಲ್ಲಿ ಎರಡು ಕಡೆಗಳಿಂದಲೂ ಫಿರಂಗಿ ಗುಂಡುಗಳ ಮಳೆ ಸುರಿಯುತ್ತಿತ್ತು. ಫ್ರೆಂಚರು ಮೂವತ್ತು ಯುದ್ಧದ ವಿಮಾನಗಳನ್ನು ತೆಗೆದುಕೊಂಡು ಹೋಗಿ ಬೆಲ್ಜಿಯಮ್ ತೀರಕ್ಕೆ ಗುಂಡುಗಳನ್ನು ಹಾಕಿದರು. ಇದರಿಂದ ಜರ್ಮನಿಯವರ ಕಡೆ ಬಹಳ ನಷ್ಟವಾಗಿರುತ್ತದೆ. ಎರಡು ಪಕ್ಷದವರ ವಿಮಾನ ಯಂತ್ರಗಳ ಕಾರುಬಾರು ವಿಶೇಷವಾಗಿತ್ತು. ಜರ್ಮನಿಯ ವಿಮಾನ ಯಂತ್ರಗಳು ಫ್ರಾನ್ಸಿನಲ್ಲಿ ಸಭ್ಯ ಪ್ರಜೆಗಳಿರುವ ಊರುಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಫ್ರೆಂಚರ ವಿಮಾನ-ಯಂತ್ರಗಳು ಜರ್ಮನಿಯವರ ಅನೇಕ ರೈಲ್ವೆ ಸ್ಟೇಷನ್‍ಗಳ ಮೇಲೂ, ಕಾರ್ಖಾನೆಗಳ ಮೇಲೂ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಲಿಲೆ ಎಂಬ ಕೋಟೆಪಟ್ಟಣದ ಬಳಿ ಶತ್ರುವಿನ ಒಂದು ವಿಮಾನ ಯಂತ್ರವನ್ನು ಇಳಿಸಿಕೊಂಡು ಅದರಲ್ಲಿದ್ದವರನ್ನು ಕೈಸೆರೆ ಹಿಡಿದುಕೊಂಡರು.

ಜರ್ಮನಿಯ ಜೆಪ್ಪೆಲಿನ್ ಎಂಬ ವಿಮಾನ ಯಂತ್ರಗಳು ಮತ್ತೆ ಬ್ರಿಟನ್ ಮೇಲೆ ಬಂದಿದ್ದವು. ಆ ವಿಮಾನಗಳು ಲಂಡನ್ ಪಟ್ಟಣಕ್ಕೆ ಬಂದಿದ್ದಂತೆ ತೋರುತ್ತದೆ. ಆದರೆ ಬ್ರಿಟಿಷ್ ಫಿರಂಗಿಗಳೂ ವಿಮಾನ ಯಂತ್ರಗಳೂ ಎದುರು ಬಿದ್ದು ಗುಂಡು ಹೊಡೆದವು. ಆದಾಗ್ಯೂ ಜೆಪ್ಪೆಲಿನ್‍ಗಳು ಅನೇಕ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಇದರಿಂದ 12 ಜನ ಗಂಡಸರು, ಇಬ್ಬರು ಹೆಂಗಸರು, 6 ಮಕ್ಕಳು ಕೊಲೆಯಾದವು; 8 ಗಂಡಸರು, 4 ಹೆಂಗಸರು, ಇಬ್ಬರು ಮಕ್ಕಳು ಘೋರ ಗಾಯಪಟ್ಟರು. ಮತ್ತು 38 ಗಂಡಸರಿಗೂ, 33 ಹೆಂಗಸರಿಗೂ, 11 ಮಕ್ಕಳಿಗೂ ಅಲ್ಪಸ್ವಲ್ಪ ಗಾಯಗಳಾಗಿವೆ. ಈಚೆಗೆ ಬಂದಿರುವ ವರ್ತಮಾನದಿಂದ ಗಾಯಪಟ್ಟವರಲ್ಲಿ 4 ಮಂದಿ ಮೃತಪಟ್ಟರೆಂದೂ, ತಪ್ಪಿಸಿಕೊಂಡಿದ್ದ ಮೂರು ಮಂದಿಯ ಹೆಣಗಳು ಸಿಕ್ಕಿದವೆಂದೂ, ಮೃತಪಟ್ಟವರೆಲ್ಲಾ ಒಟ್ಟು 17 ಜನಗಳೆಂದೂ ತಿಳಿಯುತ್ತದೆ. ಈ ವರ್ತಮಾನಕ್ಕೂ ಇತರ ವರ್ತಮಾನಗಳಿಗೂ ಸಮಂಜಸವಾಗುವುದಿಲ್ಲ. ಮೃತಪಟ್ಟವರಲ್ಲಿ ಒಬ್ಬನೂ, ಗಾಯಪಟ್ಟವರಲ್ಲಿ ಮೂವರೂ ಹೊರತು ಉಳಿದವರೆಲ್ಲಾ ಸಭ್ಯ ಪ್ರಜೆಗಳು. ಆ ನಾಲ್ಕು ಮಂದಿ ಮಾತ್ರ ಸೈನಿಕರು. ಇಂಗ್ಲೆಂಡಿನ ಮೇಲೆ ಈ ವಿಮಾನ ಯಂತ್ರಗಳ ದಾಳಿ ಪ್ರಾರಂಭವಾದಾರಭ್ಯ 103 ಮಂದಿ ಸಿಡಿಮದ್ದಿನ ಗುಂಡುಗಳಿಗೆ ಸಿಕ್ಕಿ ಮೃತಪಟ್ಟರೆಂದೂ, 270 ಜನರಿಗೆ ಗಾಯಗಳಾದವೆಂದೂ ತಿಳಿದುಬಂದಿದೆ. ಜೆಪ್ಪೆಲಿನ್ ವಿಮಾನ ಯಂತ್ರಗಳು ವಾಪಸು ಹೋಗುವಾಗ್ಗೆ ಒಂದಕ್ಕೆ ದಾರಿ ತಪ್ಪಿ ಅದು ಹಾಲೆಂಡಿನ ಮೇಲೆ ಹೋಯಿತು. ಡಚ್ಚರು ಅದಕ್ಕೆ ಗುಂಡುಗಳನ್ನು ಹೊಡೆದರು. ಮತ್ತು ಆಂಟ್ವರ್ಪಿನಿಂದ ಬ್ರಸ್ಸೆಲ್ಸ್ ನಗರಕ್ಕೆ ಹೋಗುತ್ತಿದ್ದ ಒಂದು ಜೆಪ್ಪೆಲಿನ್ ಯಂತ್ರವು ಬಿದ್ದು ಕೆಟ್ಟುಹೋಯಿತಂತೆ.

ಜರ್ಮನಿಯ ವಿಮಾನ ಯಂತ್ರಗಳು ಕ್ರಮವಾಗಿ ಎರಡು ದಿನ ರಾತ್ರಿ ಹೊತ್ತು ಇಂಗ್ಲೆಂಡಿನ ಮೇಲೆ ಬಂದಿದ್ದವು. ಅವು ಸುರಿಸಿದ ಗುಂಡುಗಳಿಂದ ಯುದ್ಧ ನಷ್ಟವೇನೂ ಆಗಲಿಲ್ಲ. ಕೆಲವು ಆಸ್ತಿಪಾಸ್ತಿಗಳು ನಷ್ಟವಾದವು.

ಪೂರ್ವ ರಣರಂಗದಲ್ಲಿ.

ರಷ್ಯಾದವರು ದೊಡ್ಡ ಕಷ್ಟಕ್ಕೆ ಗುರಿಯಾಗಿದ್ದು ಈಗ ಚೇತರಿಸಿಕೊಂಡರು. ಜರ್ಮನಿಯವರು ಅಪಾರವಾದ ಸೈನ್ಯಗಳನ್ನೂ ಫಿರಂಗಿ ಮದ್ದುಗುಂಡುಗಳನ್ನೂ ತೆಗೆದುಕೊಂಡು ಹೋಗಿ ರಷ್ಯಾದವರ ಮೇಲೆ ನುಗ್ಗಿ ಕದನಗಳನ್ನು ಮಾಡಿ ಅವರನ್ನು ಅನೇಕ ಮೈಲಿಗಳ ದೂರಕ್ಕೆ ಹಿಮ್ಮೆಟ್ಟಿಸಿದರು. ವಾರ್ಸಾ ಮೊದಲಾದ ಅನೇಕ ಪ್ರಾಮುಖ್ಯವಾದ ನಗರಗಳೂ ಕೋಟೆಗಳೂ ಜರ್ಮನಿಯವರ ವಶವಾದವು. ಜರ್ಮನಿಯವರ ಕಡೆ ಅಪಾರ ನಷ್ಟ ಸಂಭವಿಸಿದಾಗ್ಯೂ ರಷ್ಯಾದವರು ಬಹಳ ನಷ್ಟಪಟ್ಟಿರಬೇಕು. ಯುದ್ಧವು ಪ್ರಾರಂಭವಾದಾರಭ್ಯ 15,00,000 ರಷ್ಯಾ ಸೈನಿಕರು ಕೈಸೆರೆಯಾದರೆಂದು ಕೆಲವರು ಅಂದಾಜು ಕಟ್ಟುತ್ತಾರೆ. ರಷ್ಯಾದವರೇನೋ ಅನೇಕಾನೇಕ ಸೈನಿಕರನ್ನು ಜರ್ಮನಿ ಮತ್ತು ಆಸ್ಟ್ರಿಯಾ ಸೈನ್ಯಗಳಿಂದ ಕೈಸೆರೆ ಹಿಡಿದುಕೊಂಡು ಬಂದಿದ್ದಾರೆನ್ನುವುದಕ್ಕೆ ಸಂಶಯವಿಲ್ಲ. ಈಚೆಗೆ ರಷ್ಯಾದವರಿಗೆ ಜರ್ಮನಿಯವರು ಅಪಾರ ಸೈನ್ಯಗಳನ್ನು ಕಳೆದುಕೊಂಡರು. ಅವರ "ಗಾರ್ಡ್ಸ್" ಎಂಬ ಒಂದು ಸೈನ್ಯದಲ್ಲೇ 530 ಹುದ್ದೇದಾರರೂ, 23,602 ಸೈನಿಕರೂ ನಷ್ಟವಾಗಿರುವರು.

ರಷ್ಯಾ ದಳಪತಿಯಾದ ಗ್ರಾಂಡ್ ಡ್ಯೂಕ್ ನಿಕೊಲಸ್‍ರವರು ಬಹಳ ಪರಾಕ್ರಮದಿಂದ ಸೈನ್ಯವನ್ನು ನಡಿಸುತ್ತಾ ಬಂದರು. ಹನ್ನೆರಡು ತಿಂಗಳಿಂದಲೂ ಹಗಲು ರಾತ್ರಿ ವಿಶ್ರಾಂತಿಯಿಲ್ಲದೆ ಕಷ್ಟಪಟ್ಟರು. ಅವರಿಗೆ ವಿಶ್ರಾಂತಿ ಅವಶ್ಯವಾಯಿತು. ರಷ್ಯಾ ಚಕ್ರವರ್ತಿಯವರು ಆ ದಳಪತಿಗೆ ರಜಾ ಕೊಟ್ಟು, ತಾವೇ ಸರ್ವ ಸೈನ್ಯಾಧಿಪತ್ಯವನ್ನು ವಹಿಸಿಕೊಂಡಿದ್ದಾರೆ. ಚಕ್ರವರ್ತಿಯವರು ತಮ್ಮ ರಷ್ಯಾ ಜನಾಂಗಕ್ಕೆಲ್ಲಾ ಆಜ್ಞೆಕೊಟ್ಟು ತಿಳಿಸಿರುವುದೇನೆಂದರೆ—ಡ್ಯೂಕ್ ನಿಕೊಲಸ್‍ರವರು ಬಹಳ ಶ್ರೇಷ್ಠವಾದ ಸರ್ವೀಸನ್ನು ಮಾಡಿರೋಣದರಿಂದ ಅವರನ್ನು ವಂದಿಸಿ ಕೊಂಡಾಡಬೇಕಾಗಿದೆ. ಜರ್ಮನಿಯವರನ್ನು ನಮ್ಮ ದೇಶದಿಂದ ಹೊರಡಿಸಿ ಹಿಂದಕ್ಕೆ ಓಡಿಸುವ ಭಾಗದಲ್ಲಿ ರಷ್ಯಾ ರಾಜ್ಯದ ನಮ್ಮ ಸಮಸ್ತ ಪ್ರಜೆಗಳೂ ಏಕವಾಗಿ ಸಹಾಯ ಮಾಡಬೇಕಾಗಿದೆ ಎಂಬೀ ರೀತಿ ತಿಳಿಸಿರುತ್ತಾರೆ.

ರಷ್ಯಾದವರ ಮುಖ್ಯವಾದ ಸೈನ್ಯ ಸಾಲುಗಳು ರೀಗಾದಿಂದ ಗೆಲಿಷಿಯಾ ತನಕ ಉದ್ದಕ್ಕೂ ನೆಟ್ಟಗೆ ವಿಸ್ತರಿಸಿಕೊಂಡಿರುವವು. ಮಧ್ಯೆ ಈ ಸಾಲು ಪೂರ್ವ ದಿಕ್ಕಿಗೆ ಸ್ವಲ್ಪ ಬಾಗಿದಂತಿದೆ. ಯಾಕೆಂದರೆ ಇಲ್ಲಿ ರಷ್ಯಾದವರು ಇತರ ಭಾಗಗಳಿಗಿಂತ ಜಾಸ್ತಿಯಾಗಿ ಹಿಮ್ಮೆಟ್ಟಿಹೋಗಿರುವರು. ಹೀಗೆ ಹಿಂದಕ್ಕೆ ಹೋಗುವಾಗ್ಗೆ ಅವರು ಶತ್ರುವಿಗೆ ಸಹಾಯವಾಗಬಹುದಾದ ಎಲ್ಲಾ ಭಾಗಗಳನ್ನೂ ಒಡೆದು ನಾಶಮಾಡಿ ಹೊರಟುಹೋದರು. ಅವರು ಬ್ರೆಸ್ಟ್ ಲಿಟೋವ್ಸ್ಕ್ ಎಂಬ 80,000 ಪ್ರಜೆ ಇದ್ದ ನಗರವನ್ನು ಬಿಟ್ಟುಹೋಗುವಲ್ಲಿ ಅದರಲ್ಲಿದ್ದ ಪ್ರಜೆಗಳೆಲ್ಲಾ ತೆರಳಿಕೊಂಡರು. ಅಲ್ಲಿದ್ದ ಆಹಾರ ಸಾಮಗ್ರಿ ಮೊದಲಾದವುಗಳನ್ನೆಲ್ಲಾ ಸಾಗಿಸಿಕೊಂಡು ಕಡೆಯಲ್ಲಿ ಊರಿಗೆ ಬೆಂಕಿ ಹಾಕಿಬಿಟ್ಟರು. ಆಸ್ಟ್ರಿಯಾದವರು ಆ ನಗರಕ್ಕೆ ಪ್ರವೇಶ ಮಾಡಿದಾಗ ಅವರು ಆಹಾರಕ್ಕೂ ನೀರು ಮೊದಲಾದವುಗಳಿಗೂ ಊರಲ್ಲೆಲ್ಲಾ ಅಲೆದಾಡಿದರು. ಏನೊಂದೂ ಅವರಿಗೆ ಸಿಕ್ಕಲಿಲ್ಲ. ಯಾವುದೋ ಒಂದೇ ಒಂದು ಸಂಸಾರ ಅದರಲ್ಲಿತ್ತು. ಅವರ ಸೈನ್ಯ ನಿಲ್ಲುವುದಕ್ಕೂ ಸ್ವಲ್ಪವಾದರೂ ಆಶ್ರಯವಿರಲಿಲ್ಲ.

ರಷ್ಯಾದವರು ಈಗ ಒಂದು ಠಾಣ್ಯದಲ್ಲಿ ನಿಂತು ಅಲ್ಲಿ ಶತ್ರುವಿಗೆ ಯುದ್ಧ ಕೊಡುವವರಾಗಿದ್ದಾರೆ. ಅವರಿಗೆ ಈಗ ಫಿರಂಗಿಗಳೂ ಮದ್ದು ಗುಂಡುಗಳೂ ಬೇಕಾದಷ್ಟು ಒದಗುತ್ತಿರುವುದು ಹೇಳಲಾಗಿದೆ. ಆದದ್ದರಿಂದ ಜರ್ಮನಿಯವರು ಅಲ್ಲಿಂದ ಮುಂದಕ್ಕೆ ನುಗ್ಗಿಹೋಗುವುದು ಸಾಧ್ಯವಲ್ಲವೆಂದು ಹೇಳಬಹುದು. ರೀಗಾ ಪಡುವ ಪಾರ್ಶ್ವದಲ್ಲಿರುವ ಜರ್ಮನಿ ಸೈನಿಕರಿಗೆಲ್ಲಾ ಅವರ ದಳಪತಿಯು ಹುಕುಂ ಕೊಟ್ಟಿರುವುದೇನೆಂದರೆ—ನೀವೆಲ್ಲಾ ಇಷ್ಟೊಂದಾವರ್ತಿ ಸಾಹಸಪಟ್ಟು ನುಗ್ಗಿಹೋಗಿ ನದಿಯನ್ನು ದಾಟಿ ಆ ನಗರವನ್ನು ಸ್ವಾಧೀನಪಡಿಸಿಕೊಂಡು, ಮುಂದಿನ ಏಪ್ರಿಲ್ ತನಕ ಅಲ್ಲಿರುವಂತೆ ಮಾಡಿಕೊಳ್ಳಬೇಕು; ಮತ್ತು ಆಗ ನೀವೆಲ್ಲಾ ರಷ್ಯಾ ರಾಜಧಾನಿಯಾದ ಪೆಟ್ರೋಗ್ರಾಡ್ ನಗರದ ಮೇಲೆ ನುಗ್ಗಿಹೋಗಿ ಮುತ್ತಿಗೆ ಹಾಕಿಕೊಳ್ಳಬಹುದು ಎಂಬದಾಗಿ ತಿಳಿಸಿದ್ದಾನೆ.

ಜರ್ಮನಿಯವರನ್ನು ರಷ್ಯಾದವರು ಸುಮ್ಮನೆ ಬಿಟ್ಟಿಲ್ಲ; ಸಮಯ ಸಂದರ್ಭಗಳು ಒದಗಿದಾಗಲೆಲ್ಲಾ ಅವರು ಜರ್ಮನಿಯವರ ಮೇಲೆ ನುಗ್ಗಿ ಕದನ ಮಾಡುತ್ತಿರುವರು. ಗೆಲಿಷಿಯಾದಲ್ಲಿ ಇನ್ನೂ ರಷ್ಯಾದವರು ಇದ್ದೇ ಇರುವರು. ಅಲ್ಲಿ ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾದವರ ಮೇಲೆ ನುಗ್ಗಿ ಮುತ್ತಿಗೆ ಹಾಕಿಕೊಳ್ಳಬೇಕೆಂದು ಸನ್ನಾಹ ಮಾಡುತ್ತಿರುವಾಗ್ಗೆ ಅವರ ಸುಳುವನ್ನು ರಷ್ಯಾದವರು ತಿಳಿದು ಬಹಳ ಪರಾಕ್ರಮದಿಂದ ಶತ್ರುವಿನ ಮೇಲೆ ಬಿದ್ದು ಕದನಮಾಡಿ ಜರ್ಮನಿಯ ಮತ್ತು ಆಸ್ಟ್ರಿಯಾ ಸೈನ್ಯಗಳನ್ನು ಸಂಪೂರ್ಣವಾಗಿ ಸೋಲಿಸಿಬಿಟ್ಟರು. ಸತ್ತವರ ಹೆಣಗಳೂ ಗಾಯಪಟ್ಟವರೂ ರಣರಂಗದಲ್ಲೆಲ್ಲಾ ಹೇರಳವಾಗಿ ಬಿದ್ದುಕೊಂಡಿದ್ದರು. ಇದಲ್ಲದೆ ರಷ್ಯಾದವರು ಸೆಪ್ಟಂಬರ್ ತಾ. 1ರಿಂದ ಈಚೆಗೆ ಶತ್ರು ಸೈನ್ಯಗಳಲ್ಲಿ 383 ಹುದ್ದೇದಾರರನ್ನೂ, 17,000 ಸೈನಿಕರನ್ನೂ ಕೈಸೆರೆ ಹಿಡಿದುಕೊಂಡಿದ್ದಾರೆ. ಮತ್ತು ರಷ್ಯಾದವರಿಗೆ 14 ಭಾರವಾದ ಫಿರಂಗಿಗಳೂ, 19 ಸಣ್ಣ ಫಿರಂಗಿಗಳೂ, 66 ಮೆಷೀನ್ ಫಿರಂಗಿಗಳೂ, ಅಪಾರ ಯುದ್ಧಸಾಮಗ್ರಿಗಳೂ, ಆಹಾರ ಪದಾರ್ಥಗಳೂ ಸಿಕ್ಕಿರುತ್ತವೆ. ಈ ಜಯವು ಈಗ ರಷ್ಯಾದವರಿಗೆ ವಿಶೇಷ ಉತ್ತೇಜನ ಕೊಟ್ಟಿದೆ. ಇನ್ನು ಮುಂದೆ ರಷ್ಯಾದವರು ಉದ್ದಕ್ಕೂ ಜಯಪ್ರದರಾಗಿರುತ್ತಾ ಶತ್ರುವನ್ನು ಹಿಮ್ಮೆಟ್ಟಿಸಿ ಓಡಿಸಿಬಿಡುತ್ತಾ ಬಂದಾರೆಂದು ನಿರೀಕ್ಷಿಸುವೆವು. ಅಲ್ಲಿಂದೀಚೆಗೂ ರಷ್ಯಾದವರು ಜರ್ಮನಿಯವರ ಮಹಾ ಘೋರವಾದ ಮುತ್ತಿಗೆಗಳನ್ನು ತಪ್ಪಿಸಿಕೊಂಡು ಓಡಿ ಶತ್ರುವಿನ ಮೇಲೆ ನುಗ್ಗಿ ಕದನಮಾಡಿ ಇನ್ನೂ 6,000 ಸೈನ್ಯವನ್ನು ಕೈಸೆರೆ ಹಿಡಿದುಕೊಂಡರು.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿಯವರು ತಮ್ಮ ಯುದ್ಧಸಾಲಿನ ಉದ್ದಕ್ಕೂ ಶತ್ರುವಿನ ಮೇಲೆ ನುಗ್ಗಿ ಕದನಮಾಡುತ್ತಾ, ಅವರ ಕಂದಕಗಳನ್ನು ಆಗಿಂದಾಗ್ಗೆ ಗೆದ್ದುಕೊಳ್ಳುತ್ತಾ ಬಂದಿದ್ದಾರೆ. ಇಟಲಿಯ ಉತ್ತರ ಪಾರ್ಶ್ವದಲ್ಲಿ ಇಟಲಿಯವರು ಹದಿನೈದು ಸಣ್ಣ ಹೋಬಳಿಗಳನ್ನು ಗೆದ್ದು ಆಕ್ರಮಿಸಿಕೊಂಡು ಈಗ ಟ್ರೆಂಟ್ ನಗರದ ಹೊರ ಕೋಟೆಗಳಿಗೆ ಮುತ್ತಿಗೆಹಾಕುತ್ತಲಿದ್ದಾರೆ. ಆ ನಗರದಲ್ಲಿರುವ ಪ್ರಜೆಗಳು ಊರು ಬಿಟ್ಟು ಹೋಗುತ್ತಿರುವರು. ಅನೇಕ ಠಾಣ್ಯಗಳಲ್ಲಿ ಆಸ್ಟ್ರಿಯಾದವರು ಇಟಲಿಯವರ ಮೇಲೆ ಬಿದ್ದು ಕದನಮಾಡಿದರು. ಒಂದಾವರ್ತಿಯೂ ಅವರು ಜಯಶೀಲರಾಗದೆ ಹಿಮ್ಮೆಟ್ಟಿ ಹೋಗಬೇಕಾಯಿತು.

ಟರ್ಕಿಯಲ್ಲಿ.

ಟರ್ಕಿ ವಿಷಯವಾದ ಯುದ್ಧವಾರ್ತೆಗಳು ವಿಶೇಷವಾಗಿ ಬಂದಿಲ್ಲ. ನಮ್ಮ ಪಕ್ಷದವರೇನೋ ಗಲ್ಲಿಪೋಲಿಯಲ್ಲಿ ಮುಂದಕ್ಕೆ ನುಗ್ಗಿಹೋಗಿದ್ದಾರೆ. ಟರ್ಕಿಯವರು ನುಗ್ಗಿಬಂದು ಮುತ್ತಿಗೆಹಾಕಿದರು. ಕೆಲವು ಸಮುದ್ರ ಸೈನಿಕರು ಬ್ರಿಟಿಷ್ ಸಬ್‍ಮೆರೀನ್‍ನಲ್ಲಿ ಹೋಗಿ ಮಾರ್ಮೊರಾ ಕಡಲಿನಲ್ಲಿ ತೀರವನ್ನು ಹತ್ತಿ, ಕಾನ್‍ಸ್ಟಾಂಟಿನೋಪಲ್ ರಾಜಧಾನಿಯಿಂದ ಸುಮಾರು 20 ಮೈಲಿ ದೂರದಲ್ಲಿರುವ ಒಂದು ರೈಲ್ವೆ ಸೇತುವೆಯನ್ನು ಗುಂಡುಹಾಕಿ ನಾಶಮಾಡಿದರು. ನಮ್ಮ ಪಕ್ಷದವರು ಗಲ್ಲಿಪೋಲಿಯಲ್ಲಿ ನಡಿಸಿರುವ ಕಾರ್ಯಗಳ ಮಹತ್ವವನ್ನು ಜರ್ಮನಿಯವರು ಈಗೀಗ ನೋಡಿ ಮುಂದಟ್ಟು ಮಾಡಿಕೊಳ್ಳುತ್ತಿದ್ದಾರೆ.

ಕಪ್ಪು ಕಡಲಿನಲ್ಲಿ ರಷ್ಯಾದವರ ಡಿಸ್ಟ್ರಾಯರುಗಳೆಂಬ ಎರಡು ಹಡಗುಗಳು ಟರ್ಕಿಯ ಒಂದು ಯುದ್ಧದ ಜಹಜಿನ ಮೇಲೆ ನುಗ್ಗಿಹೋಗಿ ಅದರಲ್ಲಿ ಒಂದು ಫಿರಂಗಿಯನ್ನು ಒಡೆದುಹಾಕಿದವು. ಆ ಯುದ್ಧದ ಜಹಜು ತಪ್ಪಿಸಿಕೊಂಡು ಓಡಿಹೋಯಿತು. ಡಿಸ್ಟ್ರಾಯರುಗಳು ಕಲ್ಲಿದ್ದಲು ಭರ್ತಿಯಾಗಿದ್ದ ನಾಲ್ಕು ಟರ್ಕಿ ಹಡಗುಗಳನ್ನು ಮುಳುಗಿಸಿಬಿಟ್ಟವು. ಆ ಯುದ್ಧದ ಜಹಜು ಕಲ್ಲಿದ್ದಲ ಹಡಗುಗಳನ್ನು ತನ್ನ ಆಶ್ರಯದಲ್ಲಿ ಇಟ್ಟುಕೊಂಡು ಕಾಯುತ್ತಿತ್ತು. ಬ್ರಿಟಿಷರ ಒಂದು ಸಬ್‍ಮೆರೀನು ಮಾರ್ಮೊರಾ ಕಡಲಿನಲ್ಲಿ ಟರ್ಕಿಯ ಡಿಸ್ಟ್ರಾಯರೆಂಬ ಒಂದು ಹಡಗನ್ನು ಮುಳುಗಿಸಿತೆಂದು ಹೇಳಲಾಗಿದೆ.

ಪರ್ಷಿಯಾದಲ್ಲಿ.

ಬ್ರಿಟಿಷರು ತಮ್ಮ ಆಸ್ತಿಪಾಸ್ತಿಗಳ ಸಂರಕ್ಷಣೆಗೋಸ್ಕರ ಪಾರ್ಷಿಯಾ ಕೊಲ್ಲಿಯಲ್ಲಿರುವ ಬುಷೈರ್ ಎಂಬ ತೀರಪಟ್ಟಣದಲ್ಲಿ ಕೆಲವು ಸೈನ್ಯಗಳನ್ನು ತಂದಿಡಬೇಕಾಯಿತು. ಆ ಪ್ರಾಂತ್ಯದ ಅಧಿಪತಿಗಳಿಬ್ಬರು ತಮ್ಮ ಜನಗಳನ್ನು ಕೂಡಿಸಿ ಕಳೆದ ವಾರ ನಮ್ಮ ಸೈನ್ಯದ ಮೇಲೆ ಮುತ್ತಿಗೆ ಹಾಕಿಕೊಂಡರು. ನಮ್ಮ ಸೈನಿಕರು ಸನೀನುಗಳಿಂದ ತಿವಿಯುತ್ತಾ ಅವರನ್ನು ಸೋಲಿಸಿದರು. ಬಳಿಕ ಸವಾರ್ ಸೈನ್ಯಗಳು ಅವರನ್ನು ಓಡಿಸಿಕೊಂಡು ಹೋಗಿ ಚದರಿಸಿಬಿಟ್ಟವು. ಓಡಿಹೋಗುತ್ತಿದ್ದವರ ಮೇಲೆ ನಮ್ಮ ಸೈನ್ಯಗಳು ಫಿರಂಗಿ ಗುಂಡುಗಳನ್ನು ಸುರಿಸಿದವು. ಯುದ್ಧಭೂಮಿಯಲ್ಲಿ ಸುಮಾರು 40 ಹೆಣಗಳು ಸಿಕ್ಕಿರುತ್ತವೆ. ಮತ್ತು ಶತ್ರುವು ಹೆಣಗಳನ್ನೂ ಗಾಯಪಟ್ಟವರನ್ನೂ ಎತ್ತಿಕೊಂಡು ಓಡಿಹೋದರು. ನಮ್ಮ ಕಡೆ ಎಷ್ಟು ನಷ್ಟವಾಯಿತೋ ಇನ್ನೂ ಸರಿಯಾಗಿ ತಿಳಿಯಲಿಲ್ಲ. ಇಬ್ಬರು ಬ್ರಿಟಿಷ್ ಹುದ್ದೇದಾರರು ಕೊಲೆಯಾದರು; ನಾಲ್ಕು ಮಂದಿಗೆ ಗಾಯಗಳಾದವು.

ಇಸ್ಫಹಾನ್ ನಗರದಲ್ಲಿರುವ ಬ್ರಿಟಿಷ್ ರಾಯಭಾರಿಯು ಒಂದು ದಿನ ಬೆಳಗ್ಗೆ ಕುದುರೆ ಸವಾರಿ ಮಾಡುತ್ತಿದ್ದಾಗ್ಗೆ ಆತನ ಮೇಲೆ [illegible] ನುಗ್ಗಿ ಸ್ವಲ್ಪ ಗಾಯಮಾಡಿದರು. ಆತನ ಸಂಗಡಿದ್ದ ಹಿಂದೂಸ್ಥಾನದ ಒಬ್ಬ ಸವಾರನನ್ನು ಕೊಂದುಬಿಟ್ಟರು. ಪರ್ಷಿಯಾ ಸರ್ಕಾರದವರು ಈ ಸುದ್ದಿಯನ್ನು ಕೇಳಿ ಕ್ಷಮಾಪಣೆಯನ್ನು ಬೇಡಿದ್ದಲ್ಲದೆ ಸಹಾಯ ಮಾಡುವುದಾಗಿ ತಿಳಿಸಿದರು. ಮತ್ತು ಲಂಡನ್ ಪಟ್ಟಣದಲ್ಲಿರುವ ಪರ್ಷಿಯಾ ರಾಯಭಾರಿಯೂ ಕೂಡ ಬ್ರಿಟಿಷ್ ಸರ್ಕಾರದ ಕ್ಷಮಾಪಣೆಯನ್ನು ಬೇಡಿಕೊಂಡರು.

ಸೆರ್ಬಿಯಾ.

ಸೆರ್ಬಿಯವನ್ನು ನುಗ್ಗಬೇಕೆಂದು ಆಸ್ಟ್ರಿಯಾದವರು ಕಾಯುತ್ತಿದ್ದಾರೆ. ರಾಜಧಾನಿಯಾದ ಬೆಲ್‍ಗ್ರೇಡ್ ಪಟ್ಟಣದ ಕೋಟೆ ಕೊತ್ತಲಗಳ ಮೇಲೆ ಬ್ರಿಟಿಷ್ ಮತ್ತು ಫ್ರೆಂಚರ ಫಿರಂಗಿಗಳನ್ನು ಇಟ್ಟು ಬಲಪಡಿಸಿದ್ದಾಯಿತು. ಇದಲ್ಲದೆ ಫ್ರೆಂಚರ ವಿಮಾನ ಯಂತ್ರಗಳೂ ಆ ಪಟ್ಟಣದ ಸಂರಕ್ಷಣೆಗಾಗಿ ಹೋಗಿರುವವು. ಇವು ಆಗಲೇ ಆಸ್ಟ್ರಿಯದವರ ಮೂರು ವಿಮಾನ ಯಂತ್ರಗಳನ್ನು ನಾಶಮಾಡಿರುತ್ತವೆ.

ಅಮೇರಿಕ ಮತ್ತು ಆಸ್ಟ್ರಿಯಾ.

ಅಮೇರಿಕದಲ್ಲಿರುವ ಆಸ್ಟ್ರಿಯಾ ರಾಯಭಾರಿಯಾದ ಡಾಕ್ಟರ್ ಡುಂಬ ಎಂಬಾತನು ಮಾಡಿದ ಕೆಲಸದಿಂದ ಅಮೇರಿಕ ರಾಜ್ಯಕ್ಕೂ ಆಸ್ಟ್ರಿಯಾ ರಾಜ್ಯಕ್ಕೂ ಇದ್ದ ಅನುರಾಗಕ್ಕೆ ಕುಂದಕವಾಯಿತು. ಆತನು ಮಾಡಿದ ಕೆಲಸವೇನೆಂದರೆ—ಆತನು ಒಬ್ಬ ಅಮೇರಿಕದ ಪ್ರಜೆಯ ಕೂಡ ಕಾಗದವನ್ನು ಬರೆದು ತನ್ನ ಗವರ್ನ್‍ಮೆಂಟಿಗೆ ಕಳುಹಿಸಿದನು. ಆ ಚಾರನು ಇಂಗ್ಲೆಂಡಿಗೆ ಸೇರಿದ ಫಾಲ್‍ಮತ್ ನಗರಕ್ಕೆ ಬಂದಾಗ ಅಲ್ಲಿನವರು ಅವನನ್ನು ಅನುಮಾನದ ಮೇಲೆ ಹಿಡಿದು ಶೋಧನೆಮಾಡಿ ಅವನ ಹತ್ತಿರವಿದ್ದ ಕಾಗದ ಪತ್ರಗಳನ್ನು ಕಿತ್ತುಕೊಂಡರು. ಡಾಕ್ಟರ್ ಡುಂಬನು—ಅಮೇರಿಕದಲ್ಲಿ ಮದ್ದುಗುಂಡು ಮೊದಲಾದ ಯುದ್ಧ ಸಾಮಗ್ರಿಗಳು ತಯಾರಾಗುವ ಕಾರ್ಖಾನೆಗಳೊಳಕ್ಕೆ ಕೂಲೀ ಜನರು ಹೋಗದಂತೆ ಅವರಿಗೆ ಲಂಚಕೊಟ್ಟು ನಿಲ್ಲಿಸಬಲ್ಲೆನೆಂದು ಆಸ್ಟ್ರಿಯಾ ಗವರ್ನ್‍ಮೆಂಟಿಗೆ ಬರೆದು ಇದ್ದನು. ಈ ವಿಚಾರವು ಬೆಳಕಿಗೆ ಬಂದಾಗ ಡಾ|| ಡುಂಬನು ಆ ರೀತಿ ಬರೆದದ್ದುಂಟೆಂದು ಹೇಳಿ ಒಪ್ಪಿಕೊಂಡು, ಆ ಕಾರ್ಖಾನೆಗಳಲ್ಲಿ ಆಸ್ಟ್ರಿಯಾದವರೂ ಜರ್ಮನಿಯವರೂ ಅನೇಕ ಮಂದಿ ಕೆಲಸ ಮಾಡುತ್ತಿದ್ದಾರಾದ್ದರಿಂದ ಅವರನ್ನು ಶಿಕ್ಷಿಸಬೇಕು ಎಂಬದಾಗಿ ಹೇಳಿದನು. ರಾಯಭಾರಿಯಾಗಿ ಮಹಾ ಗೌರವಕ್ಕೆ ನೆಲೆಯಾಗಿರುವ ಈತನು ಇಂಥಾ ಅಲ್ಪವಾದ ಕೃತ್ರಿಮವನ್ನು ಮಾಡಿದನಲ್ಲಾ ಎಂದು ಅಮೇರಿಕದವರೆಲ್ಲಾ ಆಗ್ರಹಪಟ್ಟರು. ಅಮೇರಿಕ ಸಂಸ್ಥಾನಗಳ ಅಧಿಪತಿಯಾದ ಪ್ರೆಸಿಡೆಂಟ್ ವಿಲ್‍ಸನ್‍ರವರು—ಡಾ|| ಡುಂಬನು ಅಮೇರಿಕದ ವ್ಯಾಪಾರವನ್ನು ಹಾಳುಮಾಡಿ ವರ್ತಕರಿಗೆ ನಷ್ಟಪಡಿಸಬೇಕೆಂದು ಪ್ರಯತ್ನಪಟ್ಟಿದ್ದಕ್ಕಾಗಿಯೂ, ಪರರಾಜ್ಯದ ಪ್ರಜೆಯನ್ನು ತನ್ನ ಚಾರನಾಗಿ ಮಾಡಿಕೊಂಡು ಕಾಗದವನ್ನು ಬರೆದು ಕಳುಹಿಸಿದ್ದು ರಾಯಭಾರಿಯ ಧರ್ಮಕ್ಕೆ ವಿರೋಧವಾದದ್ದೆಂದೂ ಹೇಳಿ, ಆ ರಾಯಭಾರಿಯನ್ನು ಅಮೇರಿಕದಿಂದ ವಾಪಸು ಕರೆಸಿಕೊಳ್ಳಬೇಕೆಂದು ಆಸ್ಟ್ರಿಯಾವಿಗೆ ಬರೆದು ತಿಳಿಸಿದರು. ಆದರೂ ಪ್ರೆಸಿಡೆಂಟರು ಆಸ್ಟ್ರಿಯಾದವರ ಸ್ನೇಹವನ್ನು ಬಿಡದೆ ಬೇರೊಬ್ಬ ರಾಯಭಾರಿಯನ್ನು ಕಳುಹಿಸಬೇಕೆಂದು ತಿಳಿಸಿದರು.

ಇತರ ವಿಷಯಗಳು.

ಮೇಲ್ಕಂಡ ವಿಚಾರವು ಹೆಸ್ಪೇರಿಯನ್ ಎಂಬ ಜಹಜನ್ನು ಮುಳುಗಿಸಿರುವುದನ್ನು ಮರೆತಂತೆ ಮಾಡಿದೆ. ಜರ್ಮನಿಯವರು ಆ ಜಹಜನ್ನು ಟಾರ್ಪೀಡೋದಿಂದ ಬಡಿಸಿ ಮುಳುಗಿಸಿದರು. ಅದರಲ್ಲಿ ಒಬ್ಬ ಅಮೇರಿಕದವನು ಇದ್ದನು. ಮೊದಲು ತಿಳಿಸಿದ್ದದ್ದಕ್ಕಿಂತಲೂ ಅದರಲ್ಲಿ ಹೆಚ್ಚು ನಷ್ಟವಾಗಿರುತ್ತದೆ. ಸಂಜೆ ಕತ್ತಲು ಕವಿಯುತ್ತಿದ್ದ ವೇಳೆ ಅದಕ್ಕೆ ಟಾರ್ಪೀಡೋ ಬಿಟ್ಟು ಹೊಡೆದರು. ಕೂಡಲೇ ಜಹಜಿನಲ್ಲಿದ್ದವರು ದೋಣಿಗಳನ್ನು ಕೆಳಕ್ಕೆ ಇಳಿಸಿದರು. ಎರಡು ಸಂದರ್ಭಗಳಲ್ಲಿ ದೋಣಿಗಳೊಳಗಿದ್ದವರು ಸಮುದ್ರದಲ್ಲಿ ಬಿದ್ದುಕೊಂಡರು. ಇವರನ್ನೆಲ್ಲಾ ನೀರಿನಿಂದ ಎತ್ತಿದ್ದಾಯಿತು. ಹೆಂಗಸರಿಬ್ಬರು ನೀರಿನಲ್ಲಿ ಅದ್ದಿದ್ದ ಕಾರಣ ಸತ್ತುಹೋದರು. ಆ ಜಹಜು ಮರುದಿನ ಬೆಳಗ್ಗೆ ಆರು ಗಂಟೆಯ ತನಕ ಮುಳುಗದೆ ತೇಲುತ್ತಿತ್ತು. ಅದರಲ್ಲಿ ಒಟ್ಟು 33 ಜನರು ಮೃತಪಟ್ಟರು; ಈ ಪೈಕಿ ಬಹುಶಃ 12 ಮಂದಿ ಪ್ರಯಾಣಿಕರಾಗಿದ್ದರು.

ಜರ್ಮನಿಯವರು ತಮ್ಮ ಸಬ್‍ಮೆರೀನ್ ಎಂಬ ಹಡಗುಗಳಿಂದ ಬ್ರಿಟಿಷರ ವ್ಯಾಪಾರದ ಹಡಗುಗಳನ್ನೂ ಜಹಜುಗಳನ್ನೂ ನಾಶಮಾಡುತ್ತೇವೆಂದು ಊಹಿಸಿದ್ದರು. ಅದು ವ್ಯರ್ಥವಾಯಿತು. ಅದಕಾರಣ ವೃಥಾ ಅಮೇರಿಕದವರನ್ನು ರೇಗಿಸಿ ಶತ್ರುಗಳನ್ನಾಗಿ ಮಾಡಿಕೊಳ್ಳಬಾರದೆಂದು ಜರ್ಮನಿಯವರು ಯೋಚಿಸಿದ್ದಾರೆ. ಜರ್ಮನಿಯವರು ತಮ್ಮ ಉದ್ದೇಶ ನೆರವೇರಿದ್ದರೆ ಅಮೇರಿಕದವರ ಯಾವ ಆಕ್ಷೇಪಣೆಯನ್ನೂ ಲಕ್ಷ್ಯವೇ ಮಾಡುತ್ತಿರಲಿಲ್ಲ ಎಂಬದಾಗಿ ಬ್ರಿಟಿಷ್ ಮಂತ್ರಿ ಸಾಮಾಜಿಕರಲ್ಲೊಬ್ಬರಾದ ಮಿ|| ಬಾಲ್ಫರ್ ಯವರು ತಿಳಿಸಿದ್ದಾರೆ. ಗ್ರಂಥಕರ್ತನಾದ ಒಬ್ಬ ಫ್ರೆಂಚ್ ಪ್ರಜೆಯು ಬ್ರಿಟಿಷ್ ಸಮುದ್ರ ಸೈನ್ಯವನ್ನೂ ಯುದ್ಧದ ಜಹಜುಗಳನ್ನೂ ನೋಡಿ ಬಂದು ಅವೆಲ್ಲಾ ಯಾವ ನಿಮಿಷದಲ್ಲಿ ಬೇಕಾದರೂ ಯುದ್ಧಕ್ಕೆ ಹೊರಡುವಂತೆ ಸಿದ್ಧವಾಗಿವೆ ಎಂದು ಹೇಳಿದನು. ಒಬ್ಬ ಅಮೇರಿಕದ ಪ್ರಜೆಯೂ ಅವನ್ನೆಲ್ಲಾ ಬಂದು ನೋಡಿ, ಯುದ್ಧಾರಂಭವಾದ ಈಚೆಗೆ ಗ್ರೇಟ್ ಬ್ರಿಟನ್‍ನವರು ತಮ್ಮ ಸಮುದ್ರ ಸೈನ್ಯವನ್ನು ಬಹಳವಾಗಿ ಬಲಪಡಿಸಿಕೊಂಡಿದ್ದಾರೆಂದು ಹೇಳುತ್ತಾನೆ. ಜರ್ಮನಿಯ ಸಬ್‍ಮೆರೀನುಗಳನ್ನು ಎಲ್ಲೆಲ್ಲಿ ಮುಳುಗಿಸಿದರೋ, ಎಲ್ಲೆಲ್ಲಿ ಅವನ್ನು ಹಿಡಿದರೋ ಅಂಥಾ ಸ್ಥಳಗಳನ್ನೆಲ್ಲಾ ಗುರುತುಮಾಡಿ ತೋರಿಸುವಂಥಾ ಪಟ್ಟಿಯನ್ನು ಕೂಡ ನೋಡಿದೆನೆಂದು ಆತನು ಹೇಳಿದ್ದಾನೆ. ನಾನಾ ಪ್ರಕಾರವಾಗಿ ನಾಶಮಾಡಲ್ಪಟ್ಟ ಶತ್ರುವಿನ ಸಬ್‍ಮೆರೀನುಗಳ ವೃತ್ತಾಂತವನ್ನು ಬ್ರಿಟಿಷರು ಪ್ರಕಟಿಸದೆ ಗೋಪ್ಯವಾಗಿಟ್ಟುಕೊಂಡಿದ್ದಾರೆ. ಬ್ರಿಟಿಷ್ ಸಮುದ್ರ ತೀರಗಳ ಸಂರಕ್ಷಣೆಗೋಸ್ಕರ ಇಂಗ್ಲಿಷ್ ಕಡಲುಕಾಲುವೆಯಿಂದ ಐಸ್ಲೆಂಡಿನ ವರೆಗೂ ಅನೇಕ ಯುದ್ಧದ ಜಹಜುಗಳನ್ನೂ ಬೇರೆಬೇರೆ ಜಾತಿಯ 2,300 ಹಡಗುಗಳನ್ನೂ ಪಹರೆ ಇಟ್ಟಿದ್ದಾರೆ. ಯುದ್ಧಕ್ಕೆ ಹೊರಡಬೇಕೆಂದು ಸಂಜ್ಞೆ ಕೊಟ್ಟ ಕ್ಷಣವೇ ಅವೆಲ್ಲಾ ಹೊರಡುವಂತೆ ಸಿದ್ಧವಾಗಿರುತ್ತವೆ. ಒಂದು ಸಬ್‍ಮೆರೀನು ಹಾಳಾಯಿತೆಂದು ಜರ್ಮನಿಯವರು ಈಗ ತಿಳಿಸುವರು.—ಕಳೆದ ವಾರದಲ್ಲಿ 1,438 ಹಡಗುಗಳೂ ಜಹಜುಗಳೂ ಬ್ರಿಟಿಷ್ ತೀರ ಪಟ್ಟಣಗಳಿಗೆ ಬಂದುಹೋದದ್ದರ ಪೈಕಿ 10 ವ್ಯಾಪಾರದ ಹಡಗುಗಳನ್ನೂ 4 ಅಂಬಿಗರ ದೋಣಿಗಳನ್ನೂ ಮಾತ್ರ ಜರ್ಮನಿಯ ಸಬ್‍ಮೆರೀನುಗಳು ಮುಳುಗಿಸಿರುವವು. ಇದುವರೆಗೆ ಮುಳುಗಿಸಲ್ಪಟ್ಟ ಹಡಗುಗಳಲ್ಲಿ ಬ್ರಿಟಿಷರ 28,86,00,000 ರೂಪಾಯಿನ ಸರಕು ನಷ್ಟವಾಗಿರುವುದು.

ಲೂಸಿಟೇನಿಯಾ ಎಂಬ ಜಹಜಿನಲ್ಲಿ ಕೆಲವು ಫಿರಂಗಿಗಳಿದ್ದದ್ದನ್ನು ನಾನು ಕಂಡೆನೆಂದು ಒಬ್ಬ ಅಮೇರಿಕದವನು ವಾಙ್ಮೂಲಕೊಟ್ಟನು. ಜರ್ಮನಿ ರಾಯಭಾರಿಯು ಈ ಮಾತಿನ ಮೇಲೆ ಅದನ್ನು ಮುಳುಗಿಸಿದ್ದರಲ್ಲಿ ಜರ್ಮನಿಯವರ ತಪ್ಪೇನೂ ಇಲ್ಲವೆಂದು ವಾದಿಸಿದನು. ಅಮೇರಿಕದವನು ಈಗ ತನ್ನ ಮಾತು ಸುಳ್ಳೆಂದು ಒಪ್ಪಿಕೊಂಡನು. ಅದಕ್ಕಾಗಿ ಅವನಿಗೆ 18 ತಿಂಗಳ ಬಂದೀಖಾನೆ ಆಯಿತು.—ಲಂಡನ್ ಪಟ್ಟಣದಲ್ಲಿ ಒಬ್ಬ ಗೂಢಚಾರನು ಸಿಕ್ಕಿ ಕೊಲ್ಲಲ್ಪಟ್ಟನು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರೂ ಅರಮನೆಯ ರಾಣೀವಾಸದವರೂ ಕಳೆದ ವಾರ ರಾಜಧಾನಿಗೆ ದಯಮಾಡಿದರು.

ಈ ಸಲ ನವರಾತ್ರಿ ಹಬ್ಬದಲ್ಲಿ ಅಂದರೆ ಅಕ್ಟೋಬರ್ ತಾ. 10, 11, 12 ನೇ ತಾರೀಖುಗಳಲ್ಲಿ ರಾಜಧಾನಿಯಲ್ಲಿ ಪರಸ್ಪರ ಸಹಾಯ ಸಂಘಗಳ ಐದನೇ ಮಹಾ ಸಭೆ ನಡೆಯುವಂತೆ ಏರ್ಪಾಡಾಗಿದೆ.

ನಮ್ಮ ದಿವಾನ್‍ರವರು ಈ ದಿನ ಬೆಳಗ್ಗೆ ಬೆಂಗಳೂರಿನಿಂದ ಕೋಲಾರಕ್ಕೆ ಹೋಗಿ ಶನಿವಾರ ಅಲ್ಲಿಂದ ವಾಪಸು ಬರುವಂತೆಯೂ, ಶನಿವಾರ ರಾತ್ರಿ ಹೊರಟು ಭಾನುವಾರ ಬೆಳಗ್ಗೆ ಚಿತ್ರದುರ್ಗಕ್ಕೆ ಹೋಗಿ ಒಂದೆರಡು ದಿನ ಅಲ್ಲಿದ್ದು ಬುಧವಾರ ಬೆಳಗ್ಗೆ ಬೆಂಗಳೂರಿಗೆ ಬರುವಂತೆಯೂ ಏರ್ಪಾಡಾಗಿದೆ.

ಮಾಮೂಲಿನಂತೆ ಈ ವರ್ಷವೂ ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಮಂದಿರವನ್ನು ಇಟ್ಟು ನಡಿಸುತ್ತಾರೆ. ಅಲ್ಲಿ ಬಂದು ನಿಲ್ಲತಕ್ಕವರಿಗೆ ರೈಲ್ವೇ ಮೊದಲಾದ ಕೆಲವು ಸೌಕರ್ಯಗಳೂ ರಿಯಾಯಿತಿಗಳೂ ದೊರಕುವವು. ಈ ವಿಚಾರದಲ್ಲಿ ಮೆಂಬರುಗಳು ಬೆಂಗಳೂರಿನಲ್ಲಿರುವ ಮ|| ಕರಣಿಕ ಕೃಷ್ಣಮೂರ್ತಿರಾಯರಿಗೆ ಮೊದಲೇ ಬರೆದು ಗೊತ್ತುಮಾಡಿಕೊಳ್ಳಬಹುದು.

ಬೆಂಗಳೂರು ಚಾಮರಾಜಪೇಟೆಯಲ್ಲಿ ಮ|| ಎಚ್. ರಾಮಯ್ಯನವರೇ ಮೊದಲಾದ ದೊಡ್ಡ ಮನುಷ್ಯರು ಸಾಹಸಪಟ್ಟು ರಾಮೇಶ್ವರ ದೇವಸ್ಥಾನಕ್ಕೆ ಸೇರಿದಂತೆ ಕಟ್ಟಿಸಿರುವ ಒಂದು ಸಮಾಜ ಮಂದಿರವನ್ನು ಶ್ರೀಮದ್ಯುವರಾಜರವರು ದಯಮಾಡಿ ಕಳೆದ ಶುಕ್ರವಾರ ಸಾಯಂಕಾಲ ಪ್ರತಿಷ್ಠೆ ಮಾಡಿದರು. ಈ ಪ್ರಾರಂಭೋತ್ಸವವು ಬಹು ಸಂತೋಷದಿಂದಲೂ ಸಾರ್ಥಕವಾಗಿಯೂ ನೆರವೇರಿತು.

ಒಬ್ಬ ಬಾತ್ಮೀದಾರರಿಂದ—ಅರಕಲಗೂಡು ತಾ|| ಹೊನ್ನವಳ್ಳಿ ಗ್ರಾಮದ ಪೂರ್ವ ಭಾಗದಲ್ಲಿರುವ ಕಟ್ಟೆಯಲ್ಲಿ ತಾ. 6 ರಲ್ಲಿ ಯಾರೋ ಬಂದು ಹೆಣ್ಣು ಮಗುವನ್ನು ಹೆತ್ತು ಬಿಸಾಕಿದ್ದರು. ಪಟೇಲ್ ಚನ್ನರಾಯಗೌಡರು ಪೋಲೀಸಿಗೆ ರಿಪೋರ್ಟ್ ಮಾಡಲಾಗಿ ಇನ್‍ಸ್ಪೆಕ್ಟರೂ, ಜಮಾದಾರರೂ ಬಂದು ಮಹಜರು ಮಾಡಿ ದಫನ್ ಮಾಡಿಸಿದರು.

ರಾಜಧಾನಿಯ ಚಾಮರಾಜ ರೋಡಿನಲ್ಲಿರುವ ಮಿ|| ವಿ. ಆರ್. ಕಮಾಲುದ್ದೀನ್ ಅಲಿಖಾನ್‍ರವರು ತಮ್ಮ ದಿವಾನ್‍ಖಾನೆಯ ಒಂದು ಭಾಗವನ್ನು ಸ್ಕೂಲು ಇಡುವುದಕ್ಕಾಗಿ ಒಪ್ಪಿಸಿಬಿಟ್ಟರು. ಕಳೆದ ವಾರ ಬಾಲಬೋಧಿನಿ ಪಾಠಶಾಲೆಯನ್ನು ಅಲ್ಲಿಟ್ಟು ಪ್ರಾರಂಭಮಾಡಿದರು. ಆಗ್ಗೆ ಒಂದು ಸಂತೋಷ ಸಭೆ ನಡೆದು ಮ|| ವೆಂಕಟಕೃಷ್ಣಯ್ಯನವರು ಮಿ|| ಖಾನ್‍ರವರ ಔದಾರ್ಯವನ್ನು ಕೊಂಡಾಡಿದರು.

ಮಿ|| ಪಾಲ್ ಚಿನ್ನಪ್ಪನವರು ಮಕ್ಕಳ ವಿದ್ಯಾಭ್ಯಾಸ ಕ್ರಮಗಳನ್ನೂ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಇತರ ಭಾಗಗಳನ್ನೂ ಇಟಲಿ, ಅಮೇರಿಕ, ಕೆನಡಾ, ಜಪಾನ್ ಮೊದಲಾದ ಕಡೆಗಳಲ್ಲಿ ಕಲಿತು ಪಂಡಿತರೆಂಬ ಬಿರುದು ಪಡೆದು ವಾಪಸು ಬಂದರು. ಇವರನ್ನು ನಮ್ಮ ಸರ್ಕಾರದವರು ಮೈಸೂರು ಟ್ರೈನಿಂಗ್ ಕಾಲೇಜಿನ ಅ|| ಪ್ರಿನ್ಸಿಪಲ್‍ರಾಗಿ ನೇಮಕಮಾಡಿದರು. ಇವರು ಕಳೆದ ವಾರ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ.

ಕಳೆದ 7 ನೇ ತಾ. ಮಂಗಳವಾರ ಕೊಪ್ಪ ತಾಲೂಕು ಹೊಸಕೊಪ್ಪದಲ್ಲಿ ಅಮಲ್ದಾರ್ ಮಿ|| ಅಬ್ದುಲ್ ಹಕ್‍ರವರ ಅಧ್ಯಕ್ಷತೆಯಲ್ಲಿ ಒಂದು ಮಹಾಜನ ಸಭೆ ನಡೆದು ಒಂದು ವಸ್ತುಪ್ರದರ್ಶನ ಶಾಲೆಯನ್ನು ಶಾಶ್ವತವಾಗಿ ಕಟ್ಟಿಸಬೇಕೆಂದು ತೀರ್ಮಾನವಾಯಿತು. ಕಟ್ಟಡಕ್ಕೆ ಮ|| ಎಚ್. ಕೃಷ್ಣರಾಯರು ಒಂದು ನಿವೇಶನವನ್ನೂ 600 ರೂಪಾಯಿಗಳನ್ನೂ ಕೊಡುವುದಾಗಿ ವಾಗ್ದಾನ ಮಾಡಿದ್ದೂ, ಇತರರೂ ಚಂದಾ ಕೊಡುವಂತೆ ಒಪ್ಪಿಕೊಂಡದ್ದೂ ಸ್ತೋತ್ರಾರ್ಹವಾಗಿದೆ. ಮಲೆನಾಡನ್ನು ಅಭಿವೃದ್ಧಿಗೆ ತರುವುದರಲ್ಲಿ ಅಭಿಮಾನವುಳ್ಳವರೆಲ್ಲಾ ದ್ರವ್ಯ ಸಹಾಯ ಮಾಡಿ ಈ ಕಾರ್ಯವನ್ನು ಸಾರ್ಥಕ ಪಡಿಸಬೇಕೆಂದು ಸೆಕ್ರೆಟರಿಗಳು ಪ್ರಕಟಮಾಡಿದ್ದಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಆಗಸ್ಟ್ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬೇಕು:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 60,000
,, (3) ಡಿಪಾಜಿಟ್ಟುಗಳು	....	,, 33,60,952
,, (4) ಇತರೆ	....	,, 26,358
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 44,26,310

ಬೇಕು:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 10,64,397
,, (2) ಖಾತೆ ಮತ್ತು ಇತರ ಸಾಲಗಳು	......	,, 29,33,128
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 3,30,649
,, (4) ಇನ್‌ವೆಸ್ಟ್‌ಮೆಂಟುಗಳು	....	,, 63,201
,, (5) ಏಜೆನ್ಸಿಗಳಲ್ಲಿರುವ ಮೊಬಲಗು	......	,, 10,354
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 15,490
,, (7) ಇತರೆ	....	,, 10,191
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 44,26,310

ಡಬ್ಲಿಯು. A. ರೋಸ್, ಮ್ಯಾನೇಜರ್.

ಒಂದು ಕೋಆಪರೆಟಿವ್ ಸೊಸೈಟಿ.

ಚಿಕ್ಕಬಳ್ಳಾಪುರ ತಾಲ್ಲೂಕು ದಿಬ್ಬೂರು ಕೋಆಪರೆಟಿವ್ ಸೊಸೈಟಿಯ ವಾರ್ಷಿಕ ಜನರಲ್ ಮೀಟಿಂಗು ಇದೇ ಮಾಹೆ 7 ನೇ ತಾ. ಎ. ವಿ. ಸ್ಕೂಲಿನಲ್ಲಿ ಜರುಗಿತು. ನಮ್ಮ ತಾಲ್ಲೂಕ್ ಅಮಲ್ದಾರರು ಮಿ|| ಬಾಲ್ ಸಾಹೇಬರು ಅಗ್ರಾಸನವನ್ನಲಂಕರಿಸಿದ್ದರು. ಸೊಸೈಟಿಯ ಸೆಕ್ರೆಟರಿಯವರಾದ ಮ|| ಡಿ. ಹನುಮಂತರಾಯರು ಸಂಘದ ರಿಪೋರ್ಟನ್ನು ಓದಿದರು ಈ ಸಂಘವು 1913 ನೇ ಡಿಸೆಂಬರು 13 ರಲ್ಲಿ ಸ್ಥಾಪಿಸಲ್ಪಟ್ಟು ಇತಲ್ ವರಿವಿಗೆ ರೂ. 4,867-13-6 ಪೈ ಜವಾ ಖರ್ಚು ನಡೆದು, ರೂ. 225-4-4 ಪೈ ಲಾಭ ಬಂದಿರುತ್ತೆಂದೂ, ಖರ್ಚು ರೂ. 73-3-8 ಪೈ ಆಗಿರುತ್ತೆಂದೂ, ಖರ್ಚು ಕಳೆದು ರೂ. 152-0-* ಪೈ ನಫೆ ಬಂದಿರುತ್ತೆಂದೂ ತಿಳಿಯಬಂತು. ಈಗಿರುವ ಮೆಂಬರುಗಳೇ ಮುಂದಿನ ವರ್ಷಕ್ಕೂ ಕಮಿಟಿ ಮೆಂಬರುಗಳಾಗಿರಲು ಓಟ್ಸ್ ಮೂಲಕ ನಿರ್ಧರಿಸಲಾಯಿತು. ಬಡ್ಡಿ ದರಗಳು ಈಗಿನಂತೆ ಇರಬೇಕೆಂದು ತೀರ್ಮಾನಿಸಲಾಯಿತು. ರಿಜರ್ವ್ ಫಂಡಿಗಾಗಿ 38 ರೂಪಾಯಿ, ಸೆಕ್ರೆಟರಿಯವರ ಬೋನಸ್ಸಿಗಾಗಿ 20 ರೂಪಾಯಿ, ಆಡಿಟಿಗೂ 18 ರೂಪಾಯಿ ತೆಗೆದಿಟ್ಟು ಉಳಿದ ಮೊಬಲಗು ಮೆಂಬರುಗಳಿಗೆ ನಫೆ ಹಂಚಲು ತೀರ್ಮಾನಿಸಿದ ನಂತರ ಶ್ರೀಮನ್ಮಹಾರಾಜರವರಿಗೂ, ಯುವರಾಜರವರಿಗೂ ಮಂಗಳವನ್ನು ಬಯಸಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದ ನಂತರ ಮೀಟಿಂಗು ಬರಖಾಸ್ತಾಯಿತು.

ಒಬ್ಬ ಮೆಂಬರು.

ಸೆಂಟ್ ಜಾನ್ ಆಂಬ್ಯುಲೆನ್ಸ್, ಮೈಸೂರು ಶಾಖೆ.

ಮೇಲ್ಕಂಡ ಸಂಘದ ಮೈಸೂರು ಬ್ರಾಂಚಿನ ಗೌರವ ಸೆಕ್ರೆಟರಿಯವರಾದ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಯುದ್ಧದ ರಿಲೀಫ್ ಫಂಡಿಗಾಗಿ ತಮಗೆ ತಲುಪಿರುವ ಕೆಳಗೆ ಕಂಡ ಹಣಗಳ ಹದಿನಾಲ್ಕನೇ ಚಂದಾ ಪಟ್ಟಿಯನ್ನು ನಮಗೆ ಕಳುಹಿಸಿದಾರೆ. ಚಂದಾ ಕೊಟ್ಟವರು ಯಾರೆಂದರೆ—

ಮಹಾರಾಜರವರ ಕಾಲೇಜಿನಲ್ಲಿ ವಸೂಲಾದದ್ದು—ಪ್ರಿನ್ಸಿಪಲ್‌ರು, ಮಿ|| ಮೆಕಿಂಟಾಷ್‌ರವರು, ಮ|| ಸಿ. ಆರ್. ರೆಡ್ಡಿಯವರು, ಮ|| ಎನ್. ಎಸ್. ಸುಬ್ಬರಾಯರು, ತಲಾ ರೂ. 10; ಮ|| ಗಳಾದ ಹಿರಿಯಣ್ಣನವರು, ಶ್ರೀಕಂಠಯ್ಯನವರು, ತಲಾ ರೂ. 10; ಬಿ. ಸುಬ್ಬರಾಯರು, ವೆಂಕಟರಾಮಯ್ಯನವರು, ತಲಾ ರೂ. 8; ಮ|| ಗಳಾದ ಅಣ್ಣಾಜಿರಾಯರು, ಕೃಷ್ಣಸ್ವಾಮಿಯವರು, ಮಿ|| ಜೆ. ಎನ್. ರೂಟೆನ್‌ರವರು, ತಲಾ ರೂ. 5; ಪ್ರೆಸಿಡೆನ್ಸಿ ಯೂನಿಯನ್ ಎಸ್. ಎನ್. ಸುಬ್ರಹ್ಮಣ್ಯನ್‌ರವರ ಮೂಲಕ ರೂ. 15; ಐದು ರೂಪಾಯಿ ಸೊಳಗೆ ವಸೂಲಾದದ್ದು ರೂ. 43; ಕಳೆದ ಸಾಲಿನಲ್ಲಿ ಕೂಡಿಸಲ್ಪಟ್ಟದ್ದು ರೂ. 36-13-9, ಜುಮ್ಲಾ ರೂ. 199-13-9.

ವಾಣಿವಿಲಾಸ್ ಆಸ್ಪತ್ರೆಯಲ್ಲಿ ವಸೂಲಾದದ್ದು—ಮಿಸ್ ರೋಜೇರಿಯೊ ರೂ. 5, ಮಿಸ್ ಡೇವಿಡ್‌ಸನ್ ರೂ. 3, ಎರಡು ರೂಪಾಯಿ ಒಳಗೆ ರೂ. 24; ಜುಮ್ಲಾ ರೂ. 32. ಶೃಂಗೇರಿ ಜಹಗೀರಿಯ ಪ್ರಜೆಗಳು ರೂ. 25, ಮಿಸ್ ಎಂ. ಡಿವಾಜ್ ರೂ. 16, ಎನ್. ಎನ್. ಸೆಪ್ಟಂಬರಿಗೆ ರೂ. 15, ಅ|| ಸರ್ಜನ್ ಕೃಷ್ಣಯ್ಯಂಗಾರ್ರು ರೂ. 15, ಐದು ರೂಪಾಯಿ ಒಳಗೆ ರೂ. 6-8-0; ಜುಮ್ಲಾ ರೂ. 77-8-0. ಮಹಾರಾಣಿಯವರ ಕಾಲೇಜ್ 3ನೇ ಪಟ್ಟಿಯಂತೆ ರೂ. 28-13-0. ಜುಮ್ಲಾ ಇದು ವರೆಗೆ ಫಂಡಿಗೆ ವಸೂಲಾದ ಚಂದಾ ರೂ. 10,535-6-3 ಪೈ. ಇದಲ್ಲದೆ ಸಾಮಾನು ಭರ್ತಿಮಾಡುವ ಚೀಲಗಳ ಎರಡು ಪೆಟ್ಟಿಗೆಗಳನ್ನು ಬೊಂಬಾಯಿಗೆ ಕಳುಹಿಸಲಾಯಿತು.

ಮೈಸೂರು ಗೆಜೆಟ್ ಸಂಗ್ರಹ.

ಅರಸೀಕೆರೆ ಟೌನ್ ಮ್ಯುನಿಸಿಪಾಲಿಟಿಯಲ್ಲಿ ಮಕ್ಕಳಿಗೆ ಬಲಾತ್ಕರಿಸಿ ದೇವಿ ಬಿಡುಬು ಹಾಕಿಸುವ ಕಾನೂನನ್ನು ಇದೇ ಸೆಪ್ಟಂಬರ್ ತಾ. 15 ರಿಂದ ಒಂದು ವರುಷದ ತನಕ ಜಾರಿ ಮಾಡಲ್ಪಟ್ಟಿದೆ.

ಸೀನಿಯರ್ ಜಿಯಾಲಜಿಸ್ಟ್ ಮ|| ಬಿ. ಜಯರಾಮ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಿಕಾರಿಪುರದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮ|| ಟಿ. ಸ್ವಾಮಿನಾಥ ಶಾಸ್ತ್ರಿಯವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ರಜದ ಮೇಲಿರುವ ಸರ್ಜನ್ ಮಿಸ್ ಆಯಿಬಮ್ಮಾಳ್ ಯವರನ್ನು ಮೈಸೂರು ವಾಣಿ ವಿಲಾಸ್ ಆಸ್ಪತ್ರೆಗೂ, ಅ|| ಸರ್ಜನ್ ಮಿಸ್ ಮೇರಿ ಡಿವಾಜ್ ಯವರನ್ನು ಮೈಸೂರಿನಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೂ ವರ್ಗ ಮಾಡಿದೆ.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಕೆ. ಕೃಷ್ಣಯ್ಯರವರಿಗೆ ಸೆಪ್ಟಂಬರ್ ತಾ. 8 ರಿಂದ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕಡೂರು ಸಬ್ ಡಿವಿಜನ್ ಆಫೀಸರ್ ಮ|| ಬಿ. ಟಿ. ಕೇಶವಯ್ಯಂಗಾರ್ರು ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸತಕ್ಕದ್ದು.

ಮ|| ಎ. ಕೆ. ಪಾಣಿಯವರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ವಾಪಸು ಬರುವ ತನಕ ಮೈಸೂರು ಸಿಟಿ ಹೆಲ್ತ್ ಆಫೀಸರ ಕೆಲಸದ ವಿಲೇವಾರಿಯು ಈಗಿನಂತೆಯೇ ನಡೆಯತಕ್ಕದ್ದು.

ಮುಂದೆ ಹೇಳುವ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ.—ಮ|| ಗಳಾದ ಸಿ. ಲಕ್ಷ್ಮಣರಾಯರು ಅರಕಲಗೂಡಿನಿಂದ ಬೇಲೂರಿಗೆ, ಎಂ. ವೆಂಗಯ್ಯಶೆಟ್ಟರು ಬೇಲೂರಿನಿಂದ ಗುಂಡ್ಲುಪೇಟೆಗೆ, ಟಿ. ರಾಮಸ್ವಾಮಯ್ಯಂಗಾರ್ರು ಗುಂಡ್ಲುಪೇಟೆಯಿಂದ ಮುಳಬಾಗಿಲಿಗೆ, ಎಂ. ಸುಬ್ಬಣ್ಣನವರು ಮುಳಬಾಗಿಲಿನಿಂದ ಯಡತೊರೆಗೆ, ವಿ. ಶ್ರೀನಿವಾಸಮೂರ್ತಿಯವರು ಯಡತೊರೆಯಿಂದ ಶಿಡ್ಲಘಟ್ಟಕ್ಕೆ, ಎಂ. ವೆಂಕಟಾಚಲಯ್ಯಂಗಾರ್ರು ಶಿಡ್ಲಘಟ್ಟದಿಂದ ಚಿಕ್ಕನಾಯಕನಹಳ್ಳಿಗೆ, ಕೆ. ವೆಂಕಟಾಚಾರ್ರು ಚಿಕ್ಕನಾಯಕನಹಳ್ಳಿಯಿಂದ ಚನ್ನರಾಯಪಟ್ಟಣಕ್ಕೆ, ಸಿ. ಕೃಷ್ಣಮೂರ್ತಿಶಾಸ್ತ್ರಿಗಳು ಚನ್ನರಾಯಪಟ್ಟಣದಿಂದ ಮೈಸೂರಿಗೆ, ಜಿ. ಶ್ರೀಕಂಠರಾಯರು ಮೈಸೂರಿನಿಂದ ಕಡೂರಿಗೆ, ಬಿ. ಆನಂದರಾಯರು ಕಡೂರಿನಿಂದ ತಿಪಟೂರಿಗೆ, ಎಲ್. ಶ್ರೀನಿವಾಸ ಗೋಪಾಲ್‌ರವರು ಚಿಕ್ಕಮಗಳೂರಿನಿಂದ ಅರಕಲಗೂಡಿಗೆ, ಎನ್. ಟಿ. ನರಸಿಂಹಯ್ಯಂಗಾರ್ರು ಅರಕಲಗೂಡಿನಿಂದ ಆನೆಕಲ್ಲಿಗೆ, ಎಸ್. ರಾಮಸ್ವಾಮಯ್ಯಂಗಾರ್ರು ಆನೆಕಲ್ಲಿನಿಂದ ದೇವನಹಳ್ಳಿಗೆ, ಕೆ. ರಾಮಕೃಷ್ಣಯ್ಯನವರು ದೇವನಹಳ್ಳಿಯಿಂದ ಮದ್ದಗಿರಿಗೆ, ಬಿ. ವಿ. ನಾರಾಯಣಯ್ಯಂಗಾರ್ರು ಮದ್ದಗಿರಿಯಿಂದ ಮಾಗಡಿಗೆ, ಎ. ಕೃಷ್ಣರಾಯರು ಮಾಗಡಿಯಿಂದ ಚಿಕ್ಕಮಗಳೂರಿಗೆ.

ಮ|| ಸಿ. ಶ್ರೀಕಂಠಯ್ಯನವರನ್ನು ಜೂಲೈ ತಾ. 1 ರಿಂದ ಬೆಂಗಳೂರು ಸೆಂಟ್ರಲ್ ಕಾಲೇಜ್ ರಸಾಯನ ಶಾಸ್ತ್ರ ಬೋಧಕರಾಗಿ ನೇಮಿಸಿದೆ.

ಯಡತೊರೆ ಸಬ್ ಡಿವಿಜನ್ ಅ|| ಇಂಜನಿಯರ್ ಮ|| ಕೆ. ನಾರಾಯಣಯ್ಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಸಬ್ ಅ|| ಇಂಜನಿಯರ್ ಮ|| ಕೆ. ಆರ್. ವೆಂಕಟಸುಬ್ಬಾಚಾರ್ರಿಗೆ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಅರಸೀಕೆರೆ ತಾಲ್ಲೂಕು ಅಮಲ್ದಾರ್ ಮಿ|| ಗುಲಾಂ ಮಹಮ್ಮದ್ ಮೊಕ್ರಾಯಿ ಯವರಿಗೆ ಒಂಭತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದ್ದಾಗ ಶಿರಸ್ತೆದಾರ್ ಮ|| ಬಿ. ರಾಮಣ್ಣನವರು ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಕೋಲಾರದ ಡಿಸ್ಟ್ರಿಕ್ಟ್ ರೈಲ್ವೆಗಳ ವಿಚಾರ.

ಡಿಸ್ಟ್ರಿಕ್ಟ್ ಬೋರ್ಡಿನ ತೀರ್ಮಾನ.

ಕೋಲಾರ ಡಿಸ್ಟ್ರಿಕ್ಟ್ ರೈಲ್ವೆ ಕಾಂಗಾರಿ ವಿಚಾರದಲ್ಲೂ, ರೈಲ್ವೆ ನಡೆಸತಕ್ಕ ವಿಚಾರದಲ್ಲೂ ಬೋರ್ಡಿನವರು ಬರೆದುಕೊಡತಕ್ಕ ಮುಸೂದೆಯ ಮುಚ್ಚಳಿಕೆ ಕುರಿತು ಗೌರ್ನಮೆಂಟ್ ರೈಲ್ವೆ ಸೆಕ್ರೆಟರಿಯವರಿಂದ ಕಳ್ಳಿದ ಲೆಟರನ್ನು ಮೆಂಬರುಗಳು ಓದಿಸಿ ಚರ್ಚೆಯಿಂದ ತೀರ್ಮಾನ ಮಾಡಿರುವುದೇನೆಂದರೆ.

1. ಈ ವಿಚಾರದಲ್ಲಿ ಚರ್ಚೆ ಮಾಡಲಾಗಿ ಹಾಲಿ ತಯಾರಾಗಿ ಬಂದಿರುವ ಮುಸೂದೆಯ ಮುಚ್ಚಳಿಕೆಯನ್ನು ಅಂಗೀಕಾರ ಮಾಡಲು ಆಗಲಾರದೆಂದು ಮೆಂಬರುಗಳೆಲ್ಲರೂ ಒಂದೇ ಅಭಿಪ್ರಾಯ ಪಟ್ಟಿರುತ್ತಾರೆ.

2. ಗೌರ್ನಮೆಂಟಿನವರು ಈ ರೈಲ್ವೆ ವಿಚಾರದಲ್ಲಿ (1) ಬೋರ್ಡಿನವರು ಡಿಬೆಂಚರ್‌ಗೋಸ್ಕರ ತೆಗೆದ ಸಾಲಕ್ಕೆ ಜಾಮೀನ್‌ದಾರರಾಗಿಯೂ, (2) ರೈಲ್ವೆಯನ್ನು ನಡೆಸುವವರಾಗಿಯೂ, (3) ಮತ್ತು ಬೋರ್ಡಿನವರೊಡನೆ ಭಾಗಸ್ಥರಾಗಿಯೂ, ಈ ರೀತಿ ಮೂರು ವಿಧವಾದ ಸಂಬಂಧಗಳನ್ನಿಟ್ಟುಕೊಂಡಿರೋಣವರಿಂದಲೂ, ಯಾವ ಕಾಲದಲ್ಲಿ ಬೇಕಾದರೂ ಗೌರ್ನಮೆಂಟಿನವರು ತಮ್ಮ ಭಾಗವನ್ನು ವಾಪಸ್ ತೆಗೆದುಕೊಳ್ಳಬಹುದಾದ ಮತ್ತು ರೈಲ್ವೆ ನಡೆಸತಕ್ಕ ಅಧಿಕಾರವನ್ನು ಬಿಟ್ಟುಕೊಡಬಹುದಾದ ಸಂಭವಗಳಿರುವುದರಿಂದ ಪ್ರತಿಯೊಂದು ಬಾಬನ್ನೂ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಬೇಕಾದದ್ದು ಅತ್ಯವಶ್ಯಕವಾಗಿದೆ.

3. ಮತ್ತು ಬೋರ್ಡಿನವರು ತೆಗೆದ ಸಾಲದ ಮೊಬಲಗಿನ ಮೇಲೆ ಸರ್ಕಾರದವರು ಬಡ್ಡಿ ಪಾವತಿಗೆ ಜಾಮೀನು ಕೊಟ್ಟಿರುವ ವಿಚಾರದಲ್ಲಿ ಹಾಲಿ ಬೋರ್ಡಿಗೆ ರೈಲ್ವೆ ಸೆಸ್ ಮೂಲಕವಾಗಿ 75,000 ರೂಪಾಯಿ ವರಿಗೂ ಉತ್ಪತ್ತಿ ಇರುವುದರಿಂದ ರೈಲ್ವೆ ಹುಟ್ಟುವಳಿ ಬಾಬಿನಲ್ಲಿ ನಷ್ಟ ಸಂಭವಿಸಿದ ವರ್ಷಗಳಲ್ಲಿ ಕಮ್ಮಿಯಾಗುವ ಮೊಬಲಗನ್ನು ಸರ್ಕಾರದಿಂದ ತೆಗೆದುಕೊಂಡು, ಆದಾಯ ಹೊಂದಿದ ವರ್ಷಗಳಲ್ಲಿ ಅದನ್ನು ಬಡ್ಡಿಯ ಸಮೇತ ವಾಪಸು ಮಾಡಬೇಕೆಂಬ ಕರಾರನ್ನು ಒಪ್ಪಿಕೊಳ್ಳುವುದು ಬೋರ್ಡಿನವರಿಗೆ ಉತ್ತಮವಾಗಿ ತೋರುತ್ತೆ. ಯಾತಕ್ಕೆಂದರೆ ಮೇಲ್ಕಂಡ ರೀತಿಯಲ್ಲಿ ಸರ್ಕಾರದವರು ಡಿಬೆಂಚರ್ ಸಾಲದ ಮೇಲಿನ ಬಡ್ಡಿಯನ್ನು ಪಾವತಿ ಮಾಡಬೇಕಾಗುವ ಸಂಭವವು ಕೇವಲ ಅಪರೂಪವಾದ್ದರಿಂದ ಸರ್ಕಾರದವರು ನೆಪಮಾತ್ರಕ್ಕೆ ಬಡ್ಡಿಗೆ ಜಾಮೀನಾಗಿರೋಣದರಿಂದಲೇ ಅರ್ಧ ಫಾಯಿದೆಯನ್ನೂ, ಭಾಗಸ್ಥರಾಗಿರೋಣದರಿಂದ ಉಳಿದುದರಲ್ಲಿ ಅರ್ಧವನ್ನೂ ಕೇಳತಕ್ಕದ್ದು ಸಹಜವಲ್ಲವೆಂದು ಬೋರ್ಡಿನವರು ಅಭಿಪ್ರಾಯ ಪಡುತ್ತಾರೆ.

4. ಬೋರ್ಡಿನವರು ಮೂಲಧನದಲ್ಲಿ ಭಾಗಸ್ಥರಾಗಿರೋಣದರಿಂದ ರೈಲ್ವೆ ಕಾರುಬಾರಿಗೆ ಸಂಬಂಧಪಟ್ಟ ಅನೇಕ ವಿಷಯಗಳಲ್ಲಿ ಬೋರ್ಡಿನವರು ಸರ್ಕಾರದವರೊಡನೆ ಸಮಾನಸ್ಥರಾಗಿ ಅಭಿಪ್ರಾಯಗಳನ್ನು ಅನ್ಯೋನ್ಯವಾಗಿ ತಿಳುಹಿಸಲು ಅವಕಾಶವಿರುವುದೆಂದು ಬೋರ್ಡಿನವರು ಊಹಿಸುತ್ತಾರಾದ್ದರಿಂದ ಬೋರ್ಡಿನವರ ಮತ್ತು ಸರ್ಕಾರದವರ ಅಭಿಪ್ರಾಯಗಳು ಬೇರೆಬೇರೆಯಾಗುವ ಸಂದರ್ಭದಲ್ಲಿ ಪಂಚಾಯಿತರ ಮೂಲಕ ವ್ಯವಸ್ಥೆಗೊಳಿಸತಕ್ಕದು ಅವಶ್ಯಕವಾಗಿರುತ್ತೆ.

5 ರೈಲ್ವೆ ನಡೆಸತಕ್ಕ ವಿಚಾರದಲ್ಲಿ ಆಗತಕ್ಕ ಖರ್ಚುಗಳು ಒಟ್ಟು ಹುಟ್ಟುವಳಿಯ ಪೈಕಿ ಶೇಕಡ ಇಷ್ಟೆಂದು (ಮಸಲಾ 55 ರಂತೆ) ನಿರ್ಧರಿಸುವುದು ಅತ್ಯವಶ್ಯಕವಾಗಿದೆ. ಇದೇ ರೀತಿಯಾಗಿ ಮದ್ರಾಸ್ ಅಧಿಪತ್ಯದಲ್ಲಿನ ಡಿಸ್ಟ್ರಿಕ್ಟ್ ಬೋರ್ಡು ರೈಲ್ವೆಗಳನ್ನು ನಡೆಸತಕ್ಕ ವಿಚಾರದಲ್ಲಿ ದಕ್ಷಿಣ ಇಂಡಿಯಾ ರೈಲ್ವೆ ಕಂಪನಿಯವರು ಒಪ್ಪಿರುತ್ತಾರಾಗಿ ಅದರಂತೆಯೇ ಜಾರಿಗೆ ತರಬಹುದಾಗಿರುತ್ತೆ. ಹೀಗೆ ಮಾಡದೆ ಇರುವುದಾದರೆ ಮೂಲಧನಕ್ಕೆ ಸೇರತಕ್ಕ ಇತರ ಖರ್ಚುಗಳು, ಪೋಲೀಸು ಸಿಬ್ಬಂದಿ ವಗ್ಯೆರೆ ಖರ್ಚುಗಳ ಪಾವತಿ ಬಗ್ಗೆ ಹಣ ಒದಗಿಸಲು ಅವಕಾಶವಿಲ್ಲದೆ ಬೋರ್ಡಿಗೆ ನಷ್ಟ ಸಂಭವಿಸಲು ಕಾರಣವಾಗುತ್ತೆ.

6. ಸರ್ಕಾರದವರ ಇನ್‌ಸ್ಪೆಕ್ಷನ್ ಸಿಬ್ಬಂದಿ ಖರ್ಚಿಗಾಗಿ ರೈಲ್ವೆಯಿಂದ ಸರಾಸರಿ ಮೈಲಿ ಪ್ರಕಾರವಾಗಿ ಕಂಟ್ರಿಬ್ಯೂಷನ್ ಪಾವತಿ ಮಾಡತಕ್ಕ ವಿಚಾರ ಇಂಥಾ ಸಿಬ್ಬಂದಿಯನ್ನು ಸರ್ಕಾರದವರು ಏರ್ಪಡಿಸಿದಾಗ್ಗೆ ಸಂಸ್ಥಾನದಾದ್ಯಂತ ಇರತಕ್ಕ ಒಟ್ಟು ಮೈಲಿಗಳಿಗೂ ಬೋರ್ಡಿನವರ ರೈಲ್ವೆಗೂ ಸರಾಸರಿಯಾಗುವ ಖರ್ಚನ್ನು ಹಂಚಬಹುದಾಗಿರುತ್ತೆ.

7. ಯಾವ ಕಾಲದಲ್ಲಾದರೂ ಸರ್ಕಾರದವರು ರೈಲ್ವೆ ನಡೆಸಲು ಏಜಂಟರಾಗಿರುವುದನ್ನು ಬಿಡುವ ಸಂದರ್ಭದಲ್ಲಿ ತೊಂದರೆಗಳು ಬಾರದಿರಲು ಇಂಡಿಯಾ ಗೌರ್ನಮೆಂಟಿನಲ್ಲಿರುವ ಏರ್ಪಾಡಿನಂತೆ ಜನರಲ್ ಮತ್ತು ನಡೆವಳಿಕೆ ಮುಚ್ಚಳಿಕೆಗಳು ಪ್ರತ್ಯೇಕವಾಗಿ ಮಾಡಿರತಕ್ಕದ್ದು ಮುಖ್ಯವಾದದ್ದೆಂದು ತೀರ್ಮಾನಿಸಲಾಯಿತು.

ತೀರ್ಥಹಳ್ಳಿಯ ಮೊದಲನೇ ತಾಲ್ಲೋಕು ಕಾನ್‌ಫರೆನ್ಸು.

ಈ ಕಾನ್‌ಫರೆನ್ಸು ತಾ. 8-9 ನೇ ಸೆಪ್ಟಂಬರ್ 1915 ಈ 2 ದಿವಸ ತೀರ್ಥಹಳ್ಳಿಯಲ್ಲಿ ನಡೆಯಿತು. ರಿಸೆಪ್ಷನ್ ಕಮಿಟಿಯವರ ಕೋರಿಕೆಯಂತೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನ್ ಸಾಹೇಬರವರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. ಡಿಸ್ಟ್ರಿಕ್ಟ್ ಮುಖ್ಯಾಧಿಕಾರಿಗಳಲ್ಲಿ ಫಾರೆಸ್ಟ್ ಆಫೀಸರು, ಹೆಲ್ತ್ ಆಫೀಸರು, ಪೋಲೀಸ್ ಸೂಪರಿಂಟೆಂಡೆಂಟರು, ಕೋಆಪರೆಟಿವ್ ಸೊಸೈಟಿಗಳ ಇನ್‌ಸ್ಪೆಕ್ಟರು, ಬ್ಯಾಂಕ್ ಓವರ್‌ಸೀಯರು, ಮತ್ತು ಮಲೆನಾಡು ಇಂಪ್ರೂವ್‌ಮೆಂಟ್ ಸ್ಪೆಷಲ್ ಆಫೀಸರು ಸಹಾ ಈ ಕಾನ್‌ಫರೆನ್ಸಿನಲ್ಲಿ ಹಾಜರಿದ್ದರು. ಇದಲ್ಲದೆ ತಾಲ್ಲೋಕಿನ ರೈತ, ವರ್ತಕ, ಸಾಹುಕಾರ್ ಮುಂತಾದ ಪ್ರಜೆಗಳು ಸುಮಾರು 600 ಜನಗಳ ವರಿಗೆ ಸೇರಿತ್ತು ಈ ಕಾನ್‌ಫರೆನ್ಸಿನಲ್ಲಿ ಮಲೆನಾಡು ಇಂಪ್ರೂವ್‌ಮೆಂಟಿಗೆ ಅವಶ್ಯಕವೆಂದು ತೋರಿಬಂದ 26 ವಿಷಯಗಳು ಚರ್ಚಿಸಲ್ಪಟ್ಟವು. ಹೀಗೆ ಚರ್ಚಿಸಲ್ಪಟ್ಟ ವಿಷಯಗಳಲ್ಲಿ ಮಲೇರಿಯಾ ಜ್ವರಕ್ಕೆ ಕೊಯ್ನಾ ಹಂಚುವುದು, ಆರೋಗ್ಯ ನಿಯಮಕ್ಕೆ ಅನುಸರಿಸಿ ಮ... ನ್ನು ಕಟ್ಟಿಕೊಳ್ಳುವುದು, ಬಲಾತ್ಕಾರವಾಗಿ ದೇವಿ ಹಾಕಿಸುವುದು, ಕಾ... ನಿರ್ಮೂಲ ಮಾಡುವುದು, ಸೊಳ್ಳೆಗಳಿಂದ ಆಗತಕ್ಕ ಬಾಧೆಯನ್ನು ... ಮಾಡುವುದು, ಸಂಚಾರದ ಆಸ್ಪತ್ರೆಗಳನ್ನು ಏರ್ಪಡಿಸುವುದು, ತೀರ್ಥ... ಟೌನ್‌ನಲ್ಲಿ ಒಂದು ಹೆಂಗಸರ ಆಸ್ಪತ್ರೆಯನ್ನು ಇಡುವುದು, ಸೂಲಗಿತ್ತಿ... ಸ್ಥಳದ ಹೆಣ್ಣು ಮಕ್ಕಳನ್ನು ತಯಾರು ಮಾಡುವುದು, ಬಲಾತ್ಕಾರ ವಿದ್ಯಾಭ್ಯಾ... ಫಾರೆಸ್ಟ್ ವಿಷಯ, ಜನಗಳ ಐಕಮತ್ಯ, ಮದ್ಯಪಾನ, ಲೇವಾದೇವಿ... ಉಂಟಾಗುವ ಕೊರತೆ, ಚೌಡಿ-ದೈವ-ಜಕಣಿ ಇವುಗಳ ಹರಕೆ, ಈ ಮುಂ... ಚರ್ಚೆ ನಡೆದದ್ದರಲ್ಲಿ ಸ್ಥಳೀಯ ಜನಗಳಲ್ಲಿ ಅನೇಕ ಭಿನ್ನಾಭಿಪ್ರಾಯ... ಹೊರಟವು ಅಲ್ಲದೆ ಮ|| ನಾಲೂರು ರಂಗಪ್ಪಗೌಡರು ಹೇಳಿದ್ದರಲ್ಲಿ ... ಮನುಷ್ಯರುಗಳು ಎಲ್ಲಾ ಕಮಿಟಿಗೂ ಮೆಂಬರುಗಳಾಗುವದರಿಂದ ಬಡವ... ಸುಖಗಳು ಅವರಿಗೆ ವ್ಯಕ್ತವಾಗದೆ ಕಮಿಟಿ ಉದ್ದೇಶಗಳು ನೆರವೇರುವದಿಲ್ಲ... ತಲೂ, ಹಾಗೂ ಈ ದೊಡ್ಡ ಮನುಷ್ಯರಲ್ಲಿ ಅನೇಕರು ವಿದ್ಯಾಹೀನರಲ್ಲವೆಂ... ಇಂಥಾವರು ಸ್ವಾರ್ಥಪರರೆಂತಲೂ, ಬಡ ರೈತರುಗಳಲ್ಲಿ ಅನೇಕರು ... ಯಿಂದಲೂ, ಗುಣದಿಂದಲೂ, ಕಾರ್ಯದಕ್ಷರಾಗಿರುವುದರಿಂದ ಬಡ ರೈತ... ಕೆಂದಾಯದ ನಿರ್ಬಂಧವಿಲ್ಲದೆ ಮೆಂಬರುತನ ಕೊಡಿಸಬೇಕೆಂತಲೂ ... ವಿಳೇದು ಕಮಿಟಿ ವಿಚಾರ ಬಂದಾಗ ಅಪ್ಪಣೆ ಕೊಡಿಸಿದ್ದಕ್ಕೆ ಸಭೆಯು... ಬಹು ಪಕ್ಷದವರು ಇವರ ಹೇಳಿಕೆಯನ್ನೇ ಅನುಮೋದಿಸಿದರು. ಈಗ ... ನಡೆದಿರುವ ಎಲ್ಲಾ ವಿಷಯಗಳಲ್ಲಿಯೂ ಪ್ರಜೆಗಳು ತಾವೇ ಕಲೆತು ತಮ್ಮ... ದಿಂದಲೇ ಮಲೆನಾಡು ಅಭಿವೃದ್ಧಿಗೆ ತಕ್ಕ ಸಾಧನಗಳನ್ನು ಮಾಡಿಕೊಳ್ಳ... ಯೂ, ಇಂಥಾ ಏರ್ಪಾಡುಗಳಿಗೆ ಬೇಕಾಗುವ ಆಲೋಚನೆಗಳನ್ನು ... ದವರು ಕೊಡುವುದಾಗಿಯೂ, ಸರಕಾರದವರೇ ಎಲ್ಲಾ ಬಗ್ಗೆ ಖರ್ಚು ವಹಿಸಿಕೊಳ್ಳುವದು ಸಾಧ್ಯವಲ್ಲವೆಂತಲೂ ಪ್ರೆಸಿಡೆಂಟರು ಅಪ್ಪಣೆ ಕೊಡಿ...

ಈ ಮಲೆನಾಡು ಪ್ರದೇಶವು ವಿದ್ಯೆ, ಬುದ್ಧಿ, ಕೃಷಿ, ಕೈಗಾರಿಕೆ, ಆ... ಗ್ಯಭಾಗ್ಯ, ಈ ಮುಂತಾದ ಮುಖ್ಯಾಂಶಗಳಲ್ಲಿ ಕೇವಲ ಹಿಂದುಳಿದಿರುತ್ತೆ... ಸರಕಾರದವರು ಒಪ್ಪಿಕೊಂಡಿರುತ್ತಾರೆ. ಹೀಗಿರುತ್ತಾ ಇಂಥವರು ಒಟ್ಟಾಗಿ ಸೇರಿಕೊಂಡು ಎಲ್ಲಾ ಕೆಲಸಗಳನ್ನೂ ತಾವೇ ನಡೆಸಬೇಕೆಂದು ಈ... ಮಾತು ಈಗ ಸಧ್ಯ ನಡೆಯಲಾರದು. ಹೀನಸ್ಥಿತಿಯಲ್ಲಿದ್ದ ಪ್ರದೇಶವು ... ಸ್ಥಿತಿಗೆ ಬಂದ ಮೇಲೆ ಅಂಥಾ ಸ್ವತಂತ್ರವನ್ನು ಪ್ರಜೆಗಳಿಗೆ ವಹಿಸಿದರೆ ಸರ... ವರ ಉದ್ದೇಶವು ನೆರವೇರುತ್ತೆ ಹೀಗೆ ದುರ್ಬಲವಾಗಿರುವ ಸ್ಥಿತಿಯಲ್ಲಿ ... ರದ ಸಹಾಯವಿಲ್ಲದೆ ಸ್ವಂತವಾಗಿ ಕೆಲಸಕಾರ್ಯಗಳು ಮನಃಪೂರ್ತಿಯಾಗಿ... ಯುವ ಭಾಗದಲ್ಲಿ ಮಲೆನಾಡು ಅಭಿವೃದ್ಧಿಗೆ ಬರುತ್ತೇ ಏನಹಾ ಹೀಗೆ ... ಫರೆನ್ಸು ಸೇರಿ ಎಲ್ಲಾ ಪ್ರಜೆಗಳೇ ಮಾಡಿಕೊಳ್ಳಬೇಕೆಂದು ಹೇಳಿದರೆ ... ಒಂದು ಶತಮಾನದ ವರಿವಿಗೂ ಯಾವ ಅಭಿವೃದ್ಧಿಯೂ ಉಂಟಾಗಲಾ... ಈ ಇಂಪ್ರೂವ್‌ಮೆಂಟ್ ಕಾರ್ಯ ಆವಾಜವಾ ಏರ್ಪಡಿಸಿ ಇದಕ್ಕಾಗಿ ... ಮಾಡುವ ಹಣವನ್ನು ಪ್ರಜೆಗಳ ಉಪಯೋಗಕ್ಕೆ ಸಕಾಲದಲ್ಲಿ ಅವರವರ ... ಅನುಕೂಲತೆಗಳ ಮೇಲೆ ಖರ್ಚುಮಾಡಿದರೆ ಒಂದು ಭಾಗದಲ್ಲಿ ಅಭಿವೃದ್ಧಿ... ಬಹುದೆಂತ ಖಂಡಿತ ಹೇಳಬಹುದು ನಮ್ಮ ಘನ ಸರ್ಕಾರದವರು ... ಸಿದ ಈ ಇಂಪ್ರೂವ್‌ಮೆಂಟ್ ಶಾಖೆಯಿಂದ ನಡೆಯುವ ಕೆಲಸಗಳು ಸ... ನಡೆಯುವುದರಲ್ಲಿ ಅಭಿವೃದ್ಧಿಗೆ ಬಂದರೂ ಬರಬಹುದು. ಹಾಗೆ ನಡೆ... ದಿಲ್ಲ. ಪ್ರಜೆಗಳ ಅಭಿಪ್ರಾಯವೂ, ಈ ಇಂಪ್ರೂವ್‌ಮೆಂಟ್ ಕಮಿಟಿ... ಅಭಿಪ್ರಾಯವೂ ಕೇವಲ ಭಿನ್ನವಾಗಿರುವುದರಿಂದ "ಮರದ ಕಾಲು ಬೆಂಕಿ... ಯುವುದಿಲ್ಲ, ಮಣ್ಣಿನ ಕಾಲು ನೀರಿಗೆ ನಡೆಯುವುದಿಲ್ಲ" ಎಂಬ ಗಾ... ಸರಿಯಾಗಿರುತ್ತೆ.

ಈ ಮಲೆನಾಡಿನಲ್ಲಿ ಜಾತಿಭೇದ, ಮತಭೇದ, ತಾರತಮ್ಯಗಳು ಹೆ... ನಡವಳಿಕೆ ವ್ಯತ್ಯಾಸ, ಗಂಡು ಹೆಣ್ಣು ಕೊಟ್ಟು ತರುವದು ಕೂಡ ಒಂದೊ... ಕೋಮುಗಳಲ್ಲೇ ನಿಷೇಧವಿರುವುದರಿಂದಲೂ, ಲೇವಾದೇವಿಯಲ್ಲಿ ... ದೀರ್ಘಕಾಲದ ಲೇವಾದೇವಿಯಿಂದ ಗ್ರಾಮ ಭೂಮಿ ಮನೆಮಠಗಳನ್ನು ... ಕೊಳ್ಳುವ ದೊಡ್ಡ ತೊಂದರೆ ಇರುವುದರಿಂದಲೂ, ಮಲೆನಾಡಿನ ಹೀನಸ್ಥಿ... ಇದೇ ಮುಖ್ಯ ಕಾರಣವೆಂದು ಹೇಳಬಹುದು. ಇದನ್ನು ದುಃಸ್ವಪ್ನ... ಮಹನೀಯರು ಹುಟ್ಟಿದರೆ ಬಹು ಸ್ವಲ್ಪ ಕಾಲದಲ್ಲಿ ಮಲೆನಾಡು ಬಹು ... ಸ್ಥಿತಿಗೆ ಬರುತ್ತೆ. "ರೋಗಕ್ಕೆ ತಕ್ಕ ಮದ್ದು ಕೊಡಬೇಕು" ಎಂಬ ಗಾದೆ... ಯಾಗಿ ಈ ಮಲೆನಾಡಿನ ಪ್ರಜೆಗಳ ಶೀಲಸ್ವಭಾವಕ್ಕೆ ತಕ್ಕಂತೆ ಏರ್ಪಾಡು... ಸರ್ಕಾರದವರೇ ಸರ್ಕಾರದ ಖರ್ಚಿನಿಂದ ಮಾಡುತ್ತಾ ಬರಬೇಕೇ ವಿನಹಾ... ಗಳು ಎಂದಿಗೂ ಪರಸ್ಪರ ಸೇರಿ ತಮ್ಮಲ್ಲಿ ಇರಬಹುದಾದ ಅಲ್ಪಸ್ವಲ್ಪ ... ದಿಂದ ತಮ್ಮ ಏಳಿಗೆಯ ಕಲ್ಪನೆಯನ್ನು ಮಾಡಿಕೊಳ್ಳುವುದಿಲ್ಲ. ದೊಡ್ಡ ... ಫರೆನ್ಸು ಮಾಡಿ ಹೀಗೀಗೆ ಮಾಡಿಕೊಳ್ಳಿ ಎಂತ ಸರ್ಕಾರದವರು ಹೇಳ... ಭಯಕ್ಕೂ ದಾಕ್ಷಿಣ್ಯಕ್ಕೂ ಸಹಾ ಸಭೆಯಲ್ಲಿ ಒಪ್ಪಿದರೂ ಹಿಂದಿನಿಂದ ... ಕೆಲಸವನ್ನೂ ಖಂಡಿತ ಮಾಡುವುದಿಲ್ಲ. ಸರ್ಕಾರದವರು ತಮ್ಮ ತಮ್ಮ ... ಯಲ್ಲಿ ಮುಂದಾಳುಗಳಾಗಿದಾರೆಂತ ಭಾವಿಸುವುದು, ಪ್ರಜೆಗಳು ಸರ್ಕಾರದ... ನಮ್ಮನ್ನು ಉನ್ನತಸ್ಥಿತಿಗೆ ತರುವದಕ್ಕೆ ಪ್ರಯತ್ನಮಾಡುತ್ತಿದಾರೆಂತ ಭಾವಿ... ವದು, ಹೀಗಾದರೆ ಈ ಮಲೆನಾಡು ಹೇಗೆ ವೃದ್ಧಿಗೆ ಬಂದೀತು? ಆದರೆ ... ಶ್ರೀಮನ್ಮಹಾರಾಜ ಮೈಸೂರು ಸರ್ಕಾರದವರು ಪ್ರತ್ಯಕ್ಷ ಪರೋಕ್ಷಗಳಲ್ಲಿಯೂ ... ಪ್ರಜೆಗಳ ಏಳಿಗೆಯನ್ನೇ ಬಯಸುತ್ತಿರುವುದರಿಂದ ಈಗಿನ ಸರ್ಕಾರದ ... ದಲ್ಲಿ ಶ್ರೀಷ್ಠರೆನಿಸಿದ ಸಚಿವಶ್ರೇಷ್ಠರ ಸುಧಾರಣೆಯಿಂದ ಈ ಮಲೆನಾಡು ... ವೃದ್ಧಿಗೆ ಬಾರದೇ ಇರದೆಂದು ಪ್ರಜೆಗಳು ಹಾರೈಸುತ್ತಾರೆ.

ಈ ಮಲೆನಾಡು ಕಾನ್‌ಫರೆನ್ಸು ಈ ತೀರ್ಥಹಳ್ಳಿಯಲ್ಲಿ ನಡೆಸಿ... ದೂ, ಹೆಚ್ಚಾಗಿ ಪ್ರಜೆಗಳನ್ನು ಒದಗಿಸಬೇಕೆಂದೂ ಸಹಾ ನಮ್ಮ ಮಲೆ... ಇಂಪ್ರೂವ್‌ಮೆಂಟ್ ಆಫೀಸರ್ ಮ|| ಅಪ್ಪಣ್ಣಯ್ಯಂಗಾರ್ರು, ನಮ್ಮ ತಾಲ್ಲೂ... ಅಮಲ್ದಾರ್ ಮ|| ಎಸ್. ಶ್ರೀನಿವಾಸಯ್ಯಂಗಾರ್ರು ತುಂಬಾ ಮೆಹ... ಮಾಡಿರುತ್ತಾರೆ. ರಿಸೆಪ್ಷನ್ ಕಮಿಟಿಯ ಸೆಕ್ರೆಟರಿ ಮ|| ಕೆ. ಪುಟ್ಟ... ಮತ್ತು ಮಹನೀಯರುಗಳಲ್ಲಿ ಮ|| ಎ ವೈ. ಹೆಬ್ಬಾರ್, ವೈ ಲಿಂಗಪ್ಪ... ಬಿ. ವೆಂಕಟಸುಬ್ಬಣ್ಣಾಚಾರ್ರು, ಎ. ರಾಮರಾವ್, ಕೆ. ಚನ್ನಕೇಶವಯ್ಯ... ಯು ಕೃಷ್ಣಾಚಾರ್, ಟಿ ಸುಬ್ರಹ್ಮಣ್ಯಭಟ್ಟರು, ಜಿ. ಮಂಜಪ್ಪ... ದೇ. ರಾಮಣ್ಣಗೌಡರು, ಹಳೇ ಮೇಳಿಗೆ ಮಂಜಯ್ಯನವರು, ಇನ್ನೂ ... ಮಹನೀಯರು ಪ್ರತಿ ಪಕ್ಷದಲ್ಲಿ ಅನೇಕ ಸಲಹೆಗಳನ್ನು ಕೊಟ್ಟಿರುತ್ತಾರೆ.

ಕಾ. ರಾಘವೇಂದ್ರರಾವ್.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲ... ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡ... ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ... ವಿಳಾಸಗಳನ್ನು ಬರೆದು ತಿಳಿಸತಕ್ಕದು. ಮತ್ತು ಬಾತ್ಮಿಯನ್ನು ಕಾಗದದ ... ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡ...

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ... ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ... ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟ... ವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ... ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಸಂಬಳದ ತೊಂದರೆ.

ಅಯ್ಯಾ,—ಚನ್ನಗಿರಿ ತಾಲ್ಲೂಕು ಬಸವಾಪಟ್ಟಣದ ಹೋಬಳಿಯಲ್ಲಿ 6-7 ತಿಂಗಳ ಹಿಂದೆ ಇದ್ದ ಶೇಕದಾರ್ ವೆಂಕಟರಾಯರು ವರ್ಗವಟ್ಟು ಹೋದಾಯಿತು. ಈ ವರೆವಿಗೂ ಈ ಹೋಬಳಿ ಸ್ಕೂಲ್ ಮಾಸ್ಟರುಗಳ ಸಂಬಳಕ್ಕೆ ಪಾವತಿಯಾಗದೆ ಬಹಳ ತೊಂದರೆಯಾಗುತ್ತೆ. ಸರ್ಕಾರದ ವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಈ ಬಡಸಾಕರರ ಸಂಬಳ ಸಕಾಲಕ್ಕೆ ಪಾವತಿಮಾಡಿಸಬೇಕಾಗಿ ಕೋರಿಕೆ.

ಒಬ್ಬ ಸ್ಕೂಲ್ ಮಾಸ್ಟರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಿನ.

ಅಯ್ಯಾ,—ಇದುವರೆಗೆ ರಾಜಧಾನಿಯಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆ ಮೆಂಬರುಗಳು ತಮ್ಮ ಮನೆಗಳಲ್ಲಿ ನವರಾತ್ರಿ ಹಬ್ಬದ ಕಟ್ಟಲೆಯನ್ನೆಲ್ಲಾ ಮುಗಿಸಿಕೊಂಡು ಏಕಾದಶಿಯ ದಿನ ತಮ್ಮ ಸ್ಥಳದಿಂದ ಹೊರಟುಬರುವುದು ಅನುಕೂಲವಾಗಿತ್ತು. ಅನೇಕ ಮೆಂಬರುಗಳು ಈ ರೀತಿ ಮಾಡುತ್ತಿದ್ದರು. ಈ ವರ್ಷ ವಿಜಯದಶಮಿ ಆದ ಎರಡನೇ ದಿನವೇ ಅಂದರೆ ಏಕಾದಶಿ ದಿನ ಪ್ರತಿನಿಧಿ ಸಭೆಯನ್ನು ಪ್ರಾರಂಭಿಸುವಂತೆ ಸರ್ಕಾರದವರು ಪ್ರಕಟಿಸಿದಾರೆ. ನಮ್ಮದು ಹಿಂದೂ ಧರ್ಮ; ನಮ್ಮ ಸರ್ಕಾರವೂ ಹಿಂದೂ ಧರ್ಮವನ್ನು ಅವಲಂಬಿಸಿ ದಮ್ಮ ಆಚಾರ ಕೊಂಡು ಬರತಕ್ಕದ್ದಾಗಿದೆ. ಏಕಾದಶಿ ದಿನಕ್ಕೆ ಬರಲು ಬಹು ಜನ ಪ್ರತಿನಿಧಿಗಳಿಗೆ ಅನನುಕೂಲವಾಗುತ್ತಾದ್ದರಿಂದ ನಮ್ಮ ದಿವಾನ್‌ರವರು ಈ ವರ್ಷ ದ್ವಾದಶಿಯಾದರೂ ಸಭೆ ಪ್ರಾರಂಭವಾಗುವಂತೆ ಸೂಚಿಸುತ್ತೇನೆ.

ಒಬ್ಬ ಪ್ರತಿನಿಧಿ.

ನೀರಿನ ತೊಂದರೆ.

ಅಯ್ಯಾ,—ಚನ್ನಗಿರಿ ತಾಲ್ಲೂಕು ದಾಗಿನಕಟ್ಟೆ ಗ್ರಾಮವು ಒಂದು ಸಾವಿರ ಪ್ರಜಾಸಂಖ್ಯೆಯುಳ್ಳದಾಗಿಯೂ, ಯೂನಿಯನ್ ಇರುವ ಗ್ರಾಮವಾಗಿಯೂ ಇದೆ. ಮತ್ತು ಗವರ್ನಮೆಂಟ್ ಪಾಠಶಾಲೆಯೂ, ಈಗ ಹೊಸದಾಗಿ ಏರ್ಪಡಿಸಲಾಗಿರುವ ವಿಲೇಜ್ ಮುನ್ಸೀಫ್ ಕೋರ್ಟೂ ಸಹಾ ಇವೆ. ಇಂಥಾ ದೊಡ್ಡ ಗ್ರಾಮದಲ್ಲಿ ಸರಿಯಾದ ಸಿಹಿನೀರಿನ ಭಾವಿಗಳಿಲ್ಲದೆ ಉಂಟಾಗಿರುವ ಜನರ ತೊಂದರೆಯನ್ನು ಹೇಳತೀರದು. ಇರುವ ಒಂದೆರಡು ಭಾವಿಗಳಲ್ಲಿ ಜನರು ಚಿಪ್ಪುಗಳಲ್ಲಿ ನೀರು ತುಂಬುತ್ತಿರುವರು. ಈ ಕಷ್ಟವನ್ನು ತಾಲ್ಲೂಕು ಅಮಲ್ದಾರ್ ಮ|| ಕೆ. ನಾರಾಣಯ್ಯರವರು ನೋಡಿ ಒಂದು ಸಿಹಿನೀರು ಭಾವಿ ಯನ್ನು ತೆಗೆಯಿಸಲು ಕೆಲಸಕ್ಕೆ ಶುರುಮಾಡಿದರೆ ಸರ್ಕಾರದಿಂದ ಹಣ ಸ್ಯಾಂಕ್ಷನ್ ಆಗುತ್ತೇವೆಂದು ಅಪ್ಪಣೆಮಾಡಿದ್ದರು. ಆದರೆ ಇವರು ಅಷ್ಟರಲ್ಲಿಯೇ ರಜಾದ ಮೇಲೆ ಹೊರಟು ಹೋದ್ದರಿಂದ ಈಗ ಹೊಸ ಅಮಲ್ದಾರರು ಬಂದಿರುತ್ತಾರೆ. ಇವರು ಕೂಡ ಈ ಜನಗಳ ಕಷ್ಟವನ್ನು ಚಿತ್ತಕ್ಕೆ ತಂದು, ಜಾಗ್ರತೆ ಭಾವಿಯ ಕೆಲಸಕ್ಕೆ ಶುರುಮಾಡಿ ಕೀರ್ತಿಯನ್ನು ಪಡೆಯುವರೆಂದು ನಂಬಿದೇನೆ.

ಕೆ. ಎಸ್.

ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಮೆಂಬರುಗಳ ಚುನಾವಣೆ.

ಅಯ್ಯಾ,—ಈಗ ಶ್ರೀರಂಗಪಟ್ಟಣದಲ್ಲಿ ಮ್ಯುನಿಸಿಪಲ್ ಮೆಂಬರ ಚುನಾವಣೆ ಬಹಳ ಬಿರುಸಾಗಿದೆ. ಮೊದಲು ಚುನಾಯಿಸಲ್ಪಟ್ಟಿರುವ ಮೆಂಬರುಗಳೂ ಮತ್ತು ಜನಗಳ ಪ್ರೋತ್ಸಾಹದಿಂದ ಹೊಸದಾಗಿ ಚುನಾವಣೆಗೆ ನಿಂತಿರುವ ಮೆಂಬರುಗಳೂ ತಮಗೆ ಹೆಚ್ಚಾಗಿ ಓಟ್ಸು ಸಿಕ್ಕಬೇಕೆಂದು ಬಹಳ ಪ್ರಯತ್ನಮಾಡುತ್ತಿರುವರು. ಹಳೇ ಮೆಂಬರುಗಳಲ್ಲಿ ಕೆಲವರು ತಮ್ಮ ಮೊಹಲ್ಲೆಯ ಯೋಗಕ್ಷೇಮವನ್ನು ಎಂದೂ ಇಲ್ಲದ ಉತ್ಸಾಹದಿಂದ ಚುನಾವಣೆ ಅವಧಿಯಲ್ಲಿ ತೋರಿಸುತ್ತಾ, ಕೆಲವರು ತಮ್ಮ ದೊಡ್ಡಸ್ತಿಕೆಗೆ ಜನಗಳು ಗಮನಕೊಟ್ಟೇ ಕೊಡುವರೆಂಬ ವಿಶ್ವಾಸದಿಂದ ಪೂರ್ವದಲ್ಲಿ ಚುನಾವಣೆ ಕೆಲಸಮಾಡುತ್ತಿದ್ದ ಮೇರೆ ಔದಾಸೀನ್ಯಯುಕ್ತರಾಗಿಯೂ ಇರುವರು. ಊರಿನಲ್ಲಾದರೋ ಒಂದು ಬೀದಿ ಯಾದರೂ ಸರಿಯಾಗಿ ದೀಪದ ಕಂಭಗಳಿಲ್ಲ. ರಾತ್ರಿ ವೇಳೆ ನಾಯಿ, ಕತ್ತೆಗಳ ಹಾವಳಿ ಅಧಿಕವಾಗಿದೆ. ಬಹಳ ದಿವಸದಿಂದ ಮೋರಿ ರಿಪೇರಿಯಿಲ್ಲದೆ ನೀರು ಹೋಗುವುದಕ್ಕೆ ಆತಂಕವಾಗಿದೆ. ಖಾಲಿ ಮನೆಗಳಲ್ಲೆಲ್ಲಾ ಕಾಡು ಗಿಡಗಳು ಬೆಳೆದು ಸೊಳ್ಳೆಗಳಿಗೆ ಆಶ್ರಯವಾಗಿದೆ. ಓಟ್ಸ್ ಕೊಡತಕ್ಕವರು ಇದನ್ನೆಲ್ಲಾ ಗೌರ್ನಮೆಂಟಿನ ನೋಟಕ್ಕೆ ಸರಿಯಾಗಿ ತಂದು, ಪಾಠಕ್ಕೆ ಒಂದಾವರ್ತಿಯಾದರೂ ತಮಗೆ ಸೇರಿದ ಮೊಹಲ್ಲೆಗಳಿಗೆ ಹೋಗಿ ತಮಗೆ ಹಿತವಮಾಡುವರೆಂದು ನಂಬಿ ಓಟ್ಸ್ ಕೊಟ್ಟಿರುವ ಜನಗಳ ಯೋಗಕ್ಷೇಮವನ್ನು ವಿಚಾರಿಸದೆ ಸುಮ್ಮನೆ ಗೌರವಾರ್ಥ ಸ್ಥಾನದ ತಿಂಗಳು ತಿಂಗಳಿಗೆ ಮ್ಯುನಿಸಿಪಲ್ ಮೀಟಿಂಗಿಗೆ ಹೋಗಿ ಬರುತ್ತಿರುವ ಕರ್ತವ್ಯ ಮೇಲೆ ನಮೂದು ಮಾಡಿರುವ ತೊಂದರೆಗಳಿಗೂ, ಇತರ ಕಷ್ಟ ಅನಾನುಕೂಲಗಳಿಗೂ ಗಮನವನ್ನು ಎಷ್ಟರಮಟ್ಟಿಗೆ ಮೂರು ವರುಷದ ಅವಧಿಯಲ್ಲಿ ಕೊಟ್ಟಿರುತ್ತಾರೆ ಎಂಬುವದು ಜನಗಳಿಗೆ ಚೆನ್ನಾಗಿ ತಿಳಿದೇ ಇದೆ. ಆದ್ದರಿಂದ ಜನಗಳು ಚೆನ್ನಾಗಿ ಯೋಚನೆಮಾಡಿ ತಮಗೆ ಹಿತವನ್ನು ಮಾಡುವ ಮತ್ತು ಯಾರೋ ಅಂಥಾವರಿಗೇನೇ ಓಟ್ಸು ಕೊಟ್ಟರೆ ಉತ್ತಮ. ಈ ವಿಷಯ ದಲ್ಲಿ ಗೌರ್ನಮೆಂಟಿನವರು ಇಂಥಾವರಿಗೇನೇ ಓಟ್ಸು ಕೊಡಬೇಕೆಂತ ಬಲಾತ್ಕಾರ ಮಾಡುವದಿಲ್ಲ. ಜನರಿಗೆ ಅನುಕೂಲಮಾಡುವವರನ್ನು ಜನರೇ ಚುನಾಯಿಸ ಬಹುದೆಂದು ಸ್ವತಂತ್ರಕೊಟ್ಟಿರುತ್ತಾರೆ. ಜನಗಳು ಬರೀ ದೊಡ್ಡಸ್ತಿಕೆಗೂ; ಪೂರ್ವದಿಂದ ಇದ್ದವರೆಂದೂ ಮಾತ್ರವೇ ಯೋಚನೆಮಾಡದೆ, ತಮಗೆ ಹಿತವನ್ನು ಮಾಡುವವರಾಗಿಯೂ, ಜನಗಳ ಪ್ರೀತಿಯನ್ನು ಸಂಪಾದನೆಮಾಡಿರುವವರಿಗೇನೇ ಓಟ್ಸು ಕೊಡಬೇಕು. ಓಟ್ಸನ್ನು ನನಗೆ ಕೊಡಬೇಕೆಂತ ಬಲಾತ್ಕಾರಮಾಡಿದ ಮಾತ್ರದಿಂದಲೇ ಕೊಟ್ಟು ತೊಂದರೆಗೆ ಸಿಕ್ಕಬಾರದು. ಮೆಂಬರುಗಳಾದರೋ ಈಗ ತಮಗೆ ಚುನಾವಣೆ ಒಂದಾವರ್ತಿ ಆದರೆ ಮೂರು ವರ್ಷಗಳವರೆಗೆ ತಮ್ಮನ್ನು ಮಾತಾಡಿಸುವವರೇ ಇಲ್ಲವೆಂತ ಖಂಡಿತವಾಗಿ ತಿಳಿದುಕೊಂಡಿರುತ್ತಾರೆ. ಇದು ಎಚ್ಚರಿಕೆಯಾಗಿರುವ ಕಾಲ ಈಗಲೇ. ಆದ್ದರಿಂದ ಶ್ರೀರಂಗಪಟ್ಟಣದ ಪ್ರಜೆಗಳು ಮೆಂಬರುಗಳನ್ನು ಎಚ್ಚರಿಕೆಯಿಂದ ಚುನಾಯಿಸಬೇಕು.

ಜನಗಳ ಹಿತಚಿಂತಕ.

[ಅನೇಕ ಬಾತ್ಮಿಗಳಿಗೆ ಬರೆದವರ ಹೆಸರು ವಿಳಾಸಗಳೇ ಇಲ್ಲ. ಕೆಲವಕ್ಕೆ ಬರೀ ಹೆಸರು ಮತ್ತು ಸ್ಥಳ ಬರೆದಿದಾರೆ. ಬಾತ್ಮಿದಾರರು ತಮ್ಮ ಸಂಪೂರ್ಣ ವಾದ ವಿಳಾಸಗಳನ್ನು ಬರೆದ ಹೊರತು ನಾವು ಸ್ಥಳ ಕೊಡಲಾರೆವು. ಅದಲ್ಲದೆ ಗ್ರಾಮಾಂತರಗಳಲ್ಲಿ ನಡೆಯುವ ಸಾಮಾನ್ಯವಾದ ಸಣ್ಣ ವಿಷಯಗಳನ್ನು ಬಹಳ ವಾಗಿ ಬೆಳಸಿ ಬಾತ್ಮಿ ಬರೆಯುವ ಅಭ್ಯಾಸ ರೂಢಿಗೆ ಬಂದಿದೆ. ಸ್ಥಳ ಸಂಕೋಚದಿಂದ ನಾವು ಅಂಥಾ ಅನೇಕ ಬಾತ್ಮಿಗಳನ್ನು ಬಿಡಬೇಕಾಗುವುದು. ಬರೀ ವರ್ತಮಾನಗಳನ್ನು ಕ್ರೋಢೀಕರಿಸಿ, ಅನಾವಶ್ಯಕವಾದ ಹೊಗಳಿಕೆ ಅಥವಾ ಟೀಕೆಗಳಿಲ್ಲದೆ ಬರೆದ, ಸಂಪೂರ್ಣವಾದ ಹೆಸರು ವಿಳಾಸಗಳನ್ನುಳ್ಳ ಬಾತ್ಮಿಗಳನ್ನು ಬಹು ಸಂತೋಷದಿಂದ ಪ್ರಕಟಿಸಬಹುದು.—ಎಡಿ.]

ತಾಲ್ಲೋಕು ವರ್ತಮಾನಗಳು.

ಕಡೂರು.—ಸುಮಾರು ಒಂದು ತಿಂಗಳಿಂದ ಮಳೆಯಿಲ್ಲ. ರಾಗಿ ಮುಂತಾದ ಪೈರುಗಳೆಲ್ಲಾ ಒಣಗಿಯೂ ಒಣಗುತ್ತಲೂ ಇವೆ. ಮಳೆ ಬಾರದಿದ್ದರೆ ಈಗಿರುವ ಪೈರಿಗೂ, ಮುಂದೆ ಹಾಕುವ ಪೈರಿಗೂ ಅನನುಕೂಲವಾಗುತ್ತೆ.— ಈ ಪ್ರಾಂತ್ಯ ಕಾಡುಹಂದಿಗಳ ಕಾಟ ವಿಶೇಷವಾಗಿ ತೋಟ, ಗದ್ದೆ, ಹೊಲ ಗಳಲ್ಲಿ ಫಸಲು ಕೈಸೇರುವದು ಕಷ್ಟವಾಗಿದೆ. ಹಿಂದೆ ಪಿಕಾರಿ ನಿರ್ಬಂಧವಿಲ್ಲದ್ದರಿಂದ ಹಳ್ಳಿಯವರು ಆಗಾಗ್ಗೆ ಇವುಗಳನ್ನು ಅಡಗಿಸುತ್ತಾ ಇದ್ದರು. ಈಗಲೂ ಸರ್ಕಾರದವರು ಈ ಪ್ರಾಂತ್ಯ ಆ ನಿರ್ಬಂಧವನ್ನು ತಪ್ಪಿಸಿ ಕೊಟ್ಟಲ್ಲಿ ಪರಮ ಉಪಕಾರವಾದೀತು.

ಅರಸೀಕೆರೆ ತಾ|| ಕುರುವಂಕ.—ನಮ್ಮ ಸರ್ಕಾರದವರು ತಮ್ಮ ಪ್ರಜೆಗಳಾದ ನಾವೆಲ್ಲರೂ ಇತರ ಪ್ರಬಲಜನಾಂಗದವರಂತೆ ವಿದ್ಯೆ ಕಲಿತು ತನ್ಮೂಲಕ ಸ್ವಾವಲಂಬಿಗಳಾಗುವುದೇ ರಾಜ್ಯದ ಒಂದು ಆಸ್ತಿ ಎಂದು ತಿಳಿದು ಈ ಸಂಸ್ಥಾನದ ಇತರ ಕಡೆಗಳಲ್ಲಿ ಏರ್ಪಡಿಸಿರುವಂತೆಯೇ ಸುಮಾರು 700 ಜನರುಳ್ಳ ಈ ಗ್ರಾಮಕ್ಕೂ ಒಂದು ಸರ್ಕಾರಿ ಸ್ಕೂಲನ್ನೂ, ಈಚೆಗೆ ಒಂದು ಗ್ರಾಮಾಭಿವೃದ್ಧಿ ಸಂಘವನ್ನೂ ದಯಪಾಲಿಸಿರುತ್ತಾರೆ. ಸಂಘಗಳಿಗೆ ಸಂಬಂಧಪಟ್ಟವರಲ್ಲಿ ಗ್ರಾಮಾಧಿಕಾರಿಗಳು ಸಹ ವಿದ್ಯಾಭಿಮಾನಿಗಳೂ, ಆರೋಗ್ಯ ಮತ್ತು ಏಕಮತ್ಯಾಪೇಕ್ಷಿಗಳೂ ಆಗಿ ಎಷ್ಟರ ಮಟ್ಟಿಗೆ ಮುತುವರ್ಜಿವಹಿಸುವರೋ ಅಷ್ಟುಮಟ್ಟಿಗೂ ಹೆಚ್ಚಾಗಿ ಫಲವಾದೀತೆನ್ನುವುದಕ್ಕೆ ಅನುಮಾನವಿಲ್ಲ.

ಹೊಸಕೋಟೆ.—ಈ ತಾಲ್ಲೋಕಿನಲ್ಲಿ ಗ್ರಾಮಾಭಿವೃದ್ಧಿ ಕಮಿಟಿ ಕೆಲಸಗಳಲ್ಲಿ ಹೆಚ್ಚು ಮುತುವರ್ಜಿಯನ್ನು ತೋರಿಸಿರುತ್ತಾರೆಂದು ಅಮಲ್ದಾರರನ್ನೂ, ಸ್ಯಾನಿಟರಿ ಇನ್‌ಸ್ಪೆಕ್ಟರನ್ನೂ ಗೌರ್ನಮೆಂಟಿನವರು ಶ್ಲಾಘನೆ ಮಾಡಿರುತ್ತಾರೆಂದು ಕೇಳಲು ಸಂತೋಷಪಡುತ್ತೇವೆ. ಅಮಲ್ದಾರರು ಮತ್ತು ಶೇಕದಾರರು ಕಷ್ಟಪಟ್ಟು ಕೆಲಸಮಾಡಿ ಭಾವಿ ಸ್ಕೂಲ್ ವಗೈರೆ ಕೆಲಸಗಳನ್ನು ಅನೇಕ ಗ್ರಾಮಗಳಲ್ಲಿ ಶುರುಮಾಡಿಸಿ ಸ್ಯಾನಿಟರಿ ಇನ್‌ಸ್ಪೆಕ್ಟರ ಕೈಯಿಂದ ಇವುಗಳಿಗೆ ಅಂದಾಜಾ ವಗೈರೆ ತಯಾರುಮಾಡಿಕೊಟ್ಟಿದ್ದರಿಂದ ಬಹಳ ಹೆಚ್ಚು ಕೆಲಸ ನಡೆದಿರುವಂತೆ ತಿಳಿಯಬರುತ್ತೆ. ಇವರಂತೆಯೇ ಇತರ ಅಧಿಕಾರಿಗಳೂ ಒಳ್ಳೇ ಕೆಲಸಗಳನ್ನು ಮಾಡಿ ಗೌರ್ನಮೆಂಟಿನ ಶ್ಲಾಘನೆಗೆ ಪಾತ್ರರಾದಾರೆಂದು ನಂಬುತ್ತೇನೆ.

ದೊಡ್ಡಬಳ್ಳಾಪುರ.—ಈ ಪ್ರಾಂತ್ಯಕ್ಕೆಲ್ಲಾ ತುಂಬಾ ಮಳೆ ಆಗಿ ಪೈರುಗಳೆಲ್ಲಾ ಚೇತರಿಸಿಕೊಂಡು ಚೆನ್ನಾಗಿವೆ. ಕೆರೆಗಳಿಗೂ ಕೂಡಾ ಕೊಂಚ ನೀರು ಬಂದಿರುತ್ತೆ. ಈ ವರಿಗೂ 3,700 ಜನರು ಪ್ಲೇಗ್ ಪಿಡಬು ಹಾಕಿಸಿಕೊಂಡರು. ಇದರ ಪ್ರಯೋಜನವು ದೊಡ್ಡಬಳ್ಳಾಪುರದವರಿಗೆ ವಿಶೇಷವಾಗಿ ದೇವಾಂಗದವರಿಗೆ ಬಹು ಚೆನ್ನಾಗಿ ತಿಳಿದಿದೆ. ಈ ಜನಗಳು ಸ್ವಂತ ಮನೆಗಳಲ್ಲೇ ಕಸಬು ಮಾಡಿಕೊಂಡು ವಾಸಮಾಡುತ್ತಿದಾರೆ. ಒಟ್ಟು 65 ಜನರಿಗೆ ಈ ರೋಗ ತಗಲಿ 26 ಮರಣಗಳಾಗಿವೆ. ಅಂಗಡಿ ಬೀದಿಯ ಕೆಲವರು ಹೊರ್ತು ಎಲ್ಲಾ ಮುಚ್ಚಲ್ಪಟ್ಟು ಊರಾಚೆ ವಾಸಮಾಡುತ್ತಾರೆ. ಪ್ಲೇಗ್ ಸೋಂಕು ಊರಿನಲ್ಲಿ ವಾಸಮಾಡುವವರಿಗೆ ಅಪಾಯಕರವಾಗಿರುತ್ತೆ. ಪೋಸ್ಟ್ ಆಫೀಸು ಕಳೆದ ವಾರ ರೈಲ್ವೆ ಸ್ಟೇಷನ್ ಬಳಿ ಛತ್ರಕ್ಕೆ ವರ್ಗಾಯಿಸಲ್ಪಟ್ಟಿದೆ. ಇಲ್ಲಿನ ವೃದ್ಧ ಪೋಸ್ಟ್ ಮಾಸ್ಟರವರು ಬಾಗೇಪಲ್ಲಿಗೂ ಅಲ್ಲಿನವರನ್ನು ಇಲ್ಲಿಗೂ ವರ್ಗಾಯಿಸಿರುತ್ತಾರೆ.

ಬೆಂಗಳೂರು.—ಬೆಂಗಳೂರು ವೆಸ್ಲಿಯನ್ ಲಿಟರರಿ ಸಂಘದವರು ತಮ್ಮ ಸಂಘದ ನಾಲ್ಕನೇ ಸಂವತ್ಸರೋತ್ಸವವನ್ನು 18 ನೇ ತಾ. ಶನಿವಾರ ಸಾಯಂಕಾಲ ತಮ್ಮ ಸ್ಕೂಲು ಹಾಲಿನಲ್ಲಿ ನಡಿಸುವರು. ಮೈಸೂರು ಗೌರ್ನಮೆಂಟು ಪ್ರೆಸ್ ಸೂಪರಿಂಟೆಂಡೆಂಟ್ ಮಿ|| ಸಿ. ಎಚ್. ಏಟ್ಸ್‌ರವರು ಅಗ್ರಾಸನವನ್ನು ವಹಿಸುವರು.—ಮುಳಬಾಗಲು ತಾಲ್ಲೂಕು ದೇವರಾಯ ಸಮುದ್ರದ ಜನಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯಸ್ಥರು ತಮ್ಮ ಜಾತಿಯ ವಿದ್ಯಾರ್ಥಿಗಳ ಪ್ರೌಢ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಒಂದು ಸಂಘವನ್ನು ಈ ತಿಂಗಳು ಏರ್ಪಡಿಸಿರುವುದು ಸ್ತೋತ್ರಾರ್ಹವಾಗಿದೆ. ಈ ಸಂಘದವರು ಬೆಂಗಳೂರು ಸಿಟಿ ಕಿಲಾರಿ ರೋಡಿನಲ್ಲಿ “ಅಪ್ಪಗ್ರಾಮದ ಲಾಡ್ಜ್” ಎಂಬ ನಾಮಧೇಯದಿಂದ ಒಂದು ಊಟದ ಮತ್ತು ವಾಸದ ಶಾಲೆಯನ್ನೂ, ಒಂದು ರೀಡಿಂಗ್ ರೂಮನ್ನೂ ಈ ಜಾತಿಯ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದಾರೆ. ಇದಕ್ಕಾಗಿ ತುಂಬಾ ಮುತುವರ್ಜಿ ವಹಿಸಿ ಬಹಳ ಸಹಾಯಮಾಡುತ್ತಿರುವ ಲೋಕಲ್ ಎಗ್ಸಾಮಿನೇಷನ್ ಮ್ಯಾನೇಜರ್ ಮಿ|| ಕೆ. ರಾಮಯ್ಯನವರು ಪ್ರೆಸಿಡೆಂಟರಾಗಿ ನಿಂತು ಕೆಲಸಮಾಡುತ್ತಿರುವುದಕ್ಕಾಗಿ ಈ ಸಂಘದವರು ಅವರನ್ನು ವಂದಿಸುತ್ತಾರೆ.

ಶಿವಮೊಗ್ಗ.—ಈ ಟೌನ್‌ನಲ್ಲಿ ಪ್ಲೇಗ್ ಗಲಾಟೆ ವಿಶೇಷವಾಗಿಲ್ಲ. ಆದರೆ ಭದ್ರಾವತಿ, ಅಮರಂಕ ಹೆಚ್ಚಾಗಿರುವಂತೆ ತೋರುತ್ತೆ.—ವ್ಯಾಕ್ಸಿನೇಟರ್ ಕೆಲಸದಲ್ಲಿ ಮೊದಲು ಇದ್ದ ಸುಬ್ಬರಾಯಪಿಳ್ಳೆ ಮಗನಿಗೆ ಮಲರೋಗ ಬರುತ್ತಾ ಇತ್ತಂತಲೂ, ಅಕಸ್ಮಾತ್ತಾಗಿ ತಪ್ಪಿಸಿಕೊಂಡು ಹೋದನೆಂತಲೂ ಹುಡುಕುತ್ತಿದ್ದನು. 3 ದಿನದ ನಂತರ ಈ ಊರು ನಾಡಿಗರ ಮೆಟ್ಟಿಲ ಹತ್ತಿರ ಇರುವ ಬಂಡೆಯ ಮೇಲೆ ಅಂಗಿ ಪಂಚೆ ಹಾಕಿಕೊಂಡಿದ್ದ ಹೆಣ ಸಿಕ್ಕಿತು. ಪೋಲೀಸಿನವರು ಪತ್ತೆಮಾಡುವಾಗ್ಗೆ ಇವರ ಮಗನೆಂದು ಗೊತ್ತಾದ್ದರಿಂದ ದಫನ್ ಬಗ್ಗೆ ವಿಚಾರಣೆಯಿಂದ ಕೊಡಿಸಿದರು.—ಪೇಟೆಯಲ್ಲಿ ರಾತ್ರಿ ನಡೆಯುವ ಸೋಷಿಯಲ್ ಸ್ಕೂಲಿಗೆ 10-12 ಜನರು ಮಾತ್ರ ಬರುತ್ತಾರೆಂತಲೂ, ಇನ್ನು ಕೆಲವರು ಕಾರಣಾಂತರದಿಂದ ಬರುವುದಿಲ್ಲವೆಂತಲೂ, ಸಾ|| ಕಾಡಪ್ಪನವರು ಈ ವಿಷಯ ಸಗಾ ತೆಗೆದುಕೊಂಡರೆ ಬಹಳ ಜನಗಳು ಬಂದು ಓದಲು ಇಷ್ಟವುಳ್ಳವರಾಗಿದಾರೆಂತಲೂ ಹೇಳುತ್ತಾರೆ. ಮ|| ಕಾಡಪ್ಪನವರು ಜನಾನುರಾಗಕ್ಕೆ ತಕ್ಕಂತೆ ಪ್ರೋತ್ಸಾಹ ಕೊಡ್ತಾರಾಗಿ ನಂಬಿದೇವೆ.—ಕೃಷ್ಣರಾಜಪುರದ ರಸ್ತೆಯಲ್ಲಿ ಮಾಡಿದ ರಿಪೇರಿ ಚೆನ್ನಾಗಿಲ್ಲ. ರಸ್ತೆ ಬಹಳ ಕೆಟ್ಟುಹೋಗಿದೆ. ತಿರುಗಾಡುವುದು ಬಹಳ ಕಷ್ಟ. ವೈಸ್ ಪ್ರೆಸಿಡೆಂಟರು ನಿಗಾ ಇಟ್ಟು ಜನಗಳ ಕಷ್ಟ ನಿವಾರಣೆ ಮಾಡಿಕೊಡ್ತಾರಾಗಿ ನಂಬಿದೇವೆ.—ನಲ್ಲಿ ಹತ್ತಿರ ಹುಡುಗರು ಸೇರಿ ಕಲ್ಲಿನಿಂದ ತಿರುಪನ್ನು ಅನೇಕ ಕಡೆ ಹಾಳುಮಾಡುತ್ತಾ ಇದಾರೆ. ಪೋಲೀಸಿನವರು ಅಂಥಾ ಹುಡುಗರನ್ನು ಹಿಡಿದು ದಂಡಿಸುವುದು ಒಳ್ಳೇದು.

ಕೋಲಾರ.—ಈ ಪ್ರಾಂತ್ಯ 10-15 ದಿವಸದಿಂದ ಮಳೆಯು ಸುತರಾಂ ಇಲ್ಲ. ಈಗ್ಗೆ 2-3 ದಿವಸದಿಂದ ಮೋಡ ಕವಿಚಿಕೊಂಡು ಇರುವದೇ ವಿನಹ ಮಳೆ ಮಾತ್ರ ಬರುವದಿಲ್ಲ. ಈ ವರುಷ ಈ ಕಡೆ ಒಂದೆರಡು ಮಳೆ ಮಾತ್ರ ಬಲವತ್ತಾಗಿ ಬಂದ ದೆಸೆಯಿಂದ ಪ್ರಜೆಗಳು ಸಂತುಷ್ಟಿಯಾಗಲು ಕಾರಣವಾಗಿರುತ್ತೆ. ಭತ್ತದ ಫಸಲೇನೋ ಈ ಕೋಲಾರಿಯಲ್ಲೂ ಬಹು ಚೆನ್ನಾಗಿರುತ್ತೆ. ರಾಗಿ ಕೆಲವು ಕಡೆ ಬಿತ್ತನೆಯಾದಾಗ್ಯೂ ರಾಗಿ ಬಿತ್ತನೆ ಮುಂತಾದ್ದಕ್ಕೆ ಮಳೆಯು ಬೇಕಾಗಿ ಜನಗಳ ಹಂಬಲಿಕೆಯಾಗಿದೆ.—ಈ ಊರಿನಲ್ಲಿ ಹೊಸದಾಗಿ ನಡೆಯುತ್ತಾ ಇರುವ ಸೋಮವಾರದ ಸಂತೆಯು ದಿನೇದಿನೇ ಅಭಿವೃದ್ಧಿಯಾಗುತ್ತಾ ಸಾವಿರ ಪ್ರಜೆಗಳೂ, ನೂರಾರು ಅಂಗಡಿ ಕಟ್ಟೆಗಳೂ ಸೇರಿ ಬಹು ವಿಜೃಂಭಣೆಯಿಂದ ಸಂತೆಯು ನಡೆಯುತ್ತಾ ಇದೆ. ಕ್ರಮೇಣ ಸಂತೆಯು ಇನ್ನೂ ಅಭಿವೃದ್ಧಿಯಾಗಲು ಅಭ್ಯಂತರವಿಲ್ಲ. ಮುಖ್ಯವಾಗಿ ನಮ್ಮ ಅಮಲ್ದಾರರು ಈ ಸಂತೆ ವಿಷಯದಲ್ಲಿ ಬಹು ಮೆಹನತ್ತುಪಟ್ಟು ಇಷ್ಟರಮಟ್ಟಿಗೆ ಅಭಿವೃದ್ಧಿಗೆ ತಂದಿದಾರೆ. ನಮ್ಮ ಅಮಲ್ದಾರರು ಬಹು ಸಾಧುಸಜ್ಜನರು, ಪ್ರಜೆಗಳ ಮೇಲೆ ತುಂಬಾ ವಿಶ್ವಾಸ. ಸರ್ಕಾರಿ ಕೆಲಸದಲ್ಲಿ ಬಹು ಚಟುವಟಿಕೆಯಾಗಿ ನಡೆಯುತ್ತಾರೆ.—ಇಲ್ಲಿನ ಆಸ್ಪತ್ರೆಗೆ ಹೊಸದಾಗಿ ಬಂದಿರುವ ಡಾಕ್ಟರು ಜನರಲ್ಲಿ ಬಹು ವಿಶ್ವಾಸ ಪಡೆಯುತ್ತಾ ರೋಗಿಗಳಿಗೆ ಯೋಗ್ಯವಾದ ಇಲಾಜುಮಾಡುತ್ತಾ ಇವರು ಜನರಲ್ಲಿ ಇಟ್ಟಿರತಕ್ಕ ವಿಶ್ವಾಸ ಮತ್ತು ಪ್ರೀತಿ ಹೊಗಳಿಕೆಯಾಗುತ್ತಾ ಇದೆ.—ಇಲ್ಲಿ ಪ್ರಜೆಗಳ ಕ್ಷೇಮಕ್ಕೋಸ್ಕರ ಒಂದು ಸೊಸೈಟಿ ಬ್ಯಾಂಕು ಮತ್ತು ರೀಡಿಂಗ್ ರೂಮು ಇರುವದು ಇಲ್ಲಿನ ಮುನ್ಸಿಪಲ್ ಮೆಂಬರುಗಳಿಗೂ ಮತ್ತು ದೊಡ್ಡ ಸಾಹುಕಾರರಿಗೂ ಗೇನೇ ಹೊರ್ತು ಬಡಜನಗಳಿಗೂ ಮತ್ತು ಅಲ್ಪ ವಿದ್ಯಾವಂತರಿಗೆ ತಿಳುವಳಿಕೆ ಕೊಡುತ್ತಾ ಸೊಸೈಟಿಯ ಅಭಿವೃದ್ಧಿಯೂ ರೀಡಿಂಗ್ ರೂಮಿನ ಅಭಿವೃದ್ಧಿಯೂ ತರುವಂತೆ ಕಾಣುವದಿಲ್ಲ. ಮೆಂಬರುಗಳು ಮತ್ತು ದೊಡ್ಡ ಮನುಷ್ಯರು ದೈತ ರನ್ನು ಬರಮಾಡಿಕೊಂಡು ಮೀಟಿಂಗ್ ಮಾಡಿ ವಿದ್ಯೆ, ಸೊಸೈಟಿ, ರೀಡಿಂಗ್ ರೂಮಿನ ಪ್ರಯೋಜನವೆಲ್ಲಾ ಬೋಧನೆಮಾಡುತ್ತಾ ಬಂದರೆ ಅವು ಇದ್ದದ್ದು ಸಾರ್ಥಕವೇ ಹೊರ್ತು ಹೆಸರಿಗೆ ಮಾತ್ರ ಇದ್ದರೆ ಏನು ಪ್ರಯೋಜನ?—ಈ ಕಸ್ಬಾದಲ್ಲಿ ಇರತಕ್ಕ ಟ್ರಾವೆಲರ್ಸ್ ಬಂಗ್ಲೆಯಲ್ಲಿ ಫಾರೆಸ್ಟರು ಕಳೆದ ಮಾರ್ಚಿ ಮಾಹೆ ಲಾಗಾಯಿತು ವಾಸಮಾಡುತ್ತಾರೆ. ಈ ಹಿಂದೆ ಪತ್ರಿಕೆಯಲ್ಲಿ ಇದೇ ವಿಷಯ ಪ್ರಾಯಿವಾಗಿರುವದು ನೋಡಿ ಸದರಿ ಫಾರೆಸ್ಟರು ಬಂಗ್ಲೆ ಬಿಟ್ಟು ಹಾಲಿ ರೀಡಿಂಗ್ ರೂಮು ಮಾಡಿರುವ ಸರ್ಕಾರಿ ಆಸ್ಪತ್ರೆಯ ಒಂದು ಕೊಠಡಿಯಲ್ಲಿ ಇದಾರೆ. ಇದರಿಂದ ರೀಡಿಂಗ್ ರೂಮಿಗೆ ಜನರು ಯಾವ ರೀತಿ ಸೇರಬೇಕೋ ತಿಳಿಯದು.

ಹಾಸನದ ತಾ|| ಗೋರೂರು.—ಈ ಪ್ರಾಂತ್ಯ ರಾಗಿ 18 ಸೇರು ಅಕ್ಕಿ 9 ಸೇರು ಮಾರಾಟವಿರುತ್ತದೆ. ಈ ಸಾರಿ ರಾಗಿ ಫಸಲು ಅತ್ಯುತ್ತಮವಾಗಿದ್ದು 15 ದಿನಗಳಿಂದ ಕಟಾವ್ ಆಗುತ್ತಲಿದೆ. ಒಂದುವರೆ ತಿಂಗಳಿಂದಲೂ ಮಳೆ ಇಲ್ಲದೆ ಕಿರಾಣಿ ಮೊದಲಾದ್ದು ಒಣಗಿಹೋಯಿತು.—ತಾ. 30 ನೇ ರಾತ್ರಿ ಅಶ್ವತ್ಥಾಮಾಚಾರ್ರ ಮನೆಯಲ್ಲಿ ಹೆಚ್ಚಿಗೆ ಬೆಲೆಯಾಗುವ ಹಸುವನ್ನು ಯಾರೋ ಅಪಹರಿಸಿದ್ದರು. ಅದು ಹೊಳೆನರಸೀಪುರದ ಒಬ್ಬ ವೈಶ್ಯರ ಮನೆಯಲ್ಲಿ ಪತ್ತೆಯಾಗಿ ಮಾಲೀಕರು ಹಸುವನ್ನು ಬಿಡಿಸಿಕೊಂಡು ಬಂದಿರುತ್ತಾರೆ. ತೋಟಗಳಲ್ಲಿ ಅಡಿಕೆ, ಬಾಳೆ, ಫಸಲು ಆಗಾಗ್ಗೆ ಹೇರಳವಾಗಿ ಕಳುವು ಆಗುತ್ತಲೇ ಇವೆ.—ಈ ಊರಿಗೆ ಒಂದು ಇಂಗ್ಲೀಷ್ ಗ್ರ್ಯಾಂಟ್ ಸ್ಕೂಲನ್ನು ತರಿಸಿಕೊಡುವದಾಗಿ ಇಲ್ಲಿನ ದೊಡ್ಡಮನುಷ್ಯರು ಗ್ರಾಮದ ಆಯಾಯ ಪಂಗಡದ ಮುಖ್ಯಸ್ಥರನ್ನು ಬರಮಾಡಿಕೊಂಡು ಸಭೆ ಸೇರಿಸಿ, ಚಂದಾ ವಸೂಲ್ಮಾಡಿ ಆರು ತಿಂಗಳಾಗಿರಬಹುದು. ಈಗಲಾದರೋ ವಸೂಲ್ಮಾಡಿದ್ದ ಚಂದಾ ಮೊಬಲಗು ಆಯಾ ಜನಗಳಿಗೇನೇ ವಾಪಸು ಮಾಡಲಾಯಿತು. ಇದು ತುಂಬಾ ವ್ಯಸನಕರವಾದದ್ದು.—ಬಾಯ್ಸ್ ಸ್ಕೂಲಿನಲ್ಲಿ ಸ್ಥಳಸಾಲದೆ ಹುಡುಗರು ಕಿಕ್ಕಿರಿಯುವಂತೆ ಕೂರುವುದು ಮತ್ತು ಮಾಸ್ಟರು ಸಾಲದಿರುವ ಸಂಗತಿಗಳನ್ನು ಇಲಾಖೆಯವರು ಕೂಡಲೆ ಕ್ರಮಪಡಿಸಬೇಕಾಗಿದೆ.—(ಇನ್ನೊಬ್ಬ ಬಾತ್ಮಿದಾರರಿಂದ) ಈ ಗ್ರಾಮದ ಮ|| ಜಿ. ಲಕ್ಷ್ಮಣಶೆಟ್ಟರವರು ಜಾರ್ಜ್ ಸಾರ್ವಭೌಮರವರ ಕಿರೀಟಧಾರಣೆ ಮಹೋತ್ಸವದ ಜ್ಞಾಪಕಾರ್ಥವಾಗಿ ಕಾರೊನೇಷನ್ ಹಾಲ್ ಎಂಬ ಕಟ್ಟಡವನ್ನು ಥಿಯೋಸಾಫಿಕಲ್ ಸಂಘದವರ ಪರವಾಗಿ ನಿಂತು ಶ್ರೀರಾಮ ಮಂದಿರವೆಂಬ ಕಟ್ಟಡವನ್ನೂ, ಊರಬಾಗಿಲಿನಲ್ಲಿ ವಿಘ್ನೇಶ್ವರ ದೇವಸ್ಥಾನವನ್ನೂ, ಗ್ರಾಮಾಭಿಮಾನಿಗಳ ಸಹಾಯದಿಂದ ಹೆಚ್ಚು ಖರ್ಚುಮಾಡಿ ಕಟ್ಟಿಸಿರುವರು.—ಈ ಗ್ರಾಮದ ಅನೇಕ ದೊಡ್ಡ ಮನುಷ್ಯರು ಪಾಠಶಾಲೆಯಲ್ಲಿ ರಾತ್ರಿ 8 ರಿಂದ 9½ ಘಂಟೆ ವರಿಗೆ ಸದ್ಗ್ರಂಥಗಳನ್ನು ಓದಿಸಿ ಕೇಳುತ್ತಾ ಸದ್ವ್ಯಾಪಾರದಲ್ಲಿ ಕಾಲ ಕಳೆಯುತ್ತಾ ಇರುವರು. ಇವುಗಳಿಗೆ ಅನುಸಾರವಾದ ಉಪನ್ಯಾಸಗಳೂ ತಿಂಗಳಿಗೆ ಒಂದೆರಡು ಸಲ ನಡೆಯಲು ಏರ್ಪಾಡಾಗಿದೆ.—ಈ ಗ್ರಾಮದ ಸಂತೆಯಲ್ಲಿ ನಡೆಯುವ ಅನ್ಯಾಯಗಳನ್ನು ಕೇಳುವವರೇ ಇಲ್ಲ. ಬಡವರು ಯಾವ ಸಾಮಾನು ಕೊಳ್ಳುವುದೂ ಕಷ್ಟ. ಯಾಕೆಂದರೆ ಧಾರಣೆ ಬಹಳ ಜಾಸ್ತಿ; ಅದರ ಮೇಲೆ ಅಳತೆ ಸೇರು ಬಟ್ಟು ನಗದಿಯಾಗಿರುವದನ್ನು ಉಪಯೋಗಿಸದೆ ಇರುವುದೂ ಅಲ್ಲದೆ ಕೆಲವರು ಎಲ್ಲವನ್ನೂ ಒಟ್ಟಾಗಿ ವಹಿಸಿಕೊಂಡು ತಗ್ಗಾಗಿ ಮಾರುವುದಕ್ಕೆ ಪ್ರಯತ್ನಿಸುವರು. ಪೋಲೀಸ್ ಜವಾಬ್ದಾರರು ಮುತುವರ್ಜಿ ವಹಿಸಿದರೆ ಇದೆಲ್ಲಾ ಕ್ರಮಪಡುವುದರಲ್ಲಿ ಸಂದೇಹವಿಲ್ಲ.—ಗ್ರಾಮದ ಹೋಬಳಿ ಮತ್ತು ಗ್ರಾಮಕ್ಕೆ ಸಮೀಪವಾಗಿರುವ ವಿ.ಇ. ಸ್ಕೂಲುಗಳ ಉಪಾಧ್ಯಾಯರ ಸಂಘವು ಏರ್ಪಾಡಾಗಿ 2 ತಿಂಗಳಾಯಿತು. ಸಂಘದ ಕೆಲಸವು ಪ್ರತಿ ಮಾಹೆಯ ಎರಡನೇ ವಾರದಲ್ಲಿ ಗ್ರಾಮದಲ್ಲಿ ಸೇರತಕ್ಕದೆಂದೂ, ವಿದ್ಯಾಭ್ಯಾಸಕ್ಕೆ ಅನುಕೂಲಿಸುವ ಮಾದರಿ ಪಾಠಗಳೂ, ಉಪನ್ಯಾಸಗಳೂ ನಡಿಸಲ್ಪಡಬೇಕೆಂದೂ ತೀರ್ಮಾನಿಸಲ್ಪಟ್ಟು ಅದರಂತೆ ನಡೆಯುತ್ತಾ ಇದೆ. ಪರಸ್ಥಳದಿಂದ ಬರತಕ್ಕ ಉಪಾಧ್ಯಾಯರುಗಳಿಗೆ ಊಟ ಉಪಚಾರಗಳಿಗೆ ಸರಿಯಾದ ಏರ್ಪಾಡು ಮಾಡಿಕೊಡಲು *ಮ|| ಜಿ. ಲಕ್ಷ್ಮೀನರಸಿಂಹಾಚಾರ್ರು ಒಪ್ಪಿದಾರೆ.*

ತರೀಕೆರೆ.—ಈಗಿನ ಹವಾ ಶೀತವಾಗಿದ್ದು ಅನಾರೋಗ್ಯಕರವಾಗಿರುತ್ತೆ. ಯಾವಾಗಲೂ ಮೋಡಗಳು ಕವಿದು ಆಗಾಗ್ಗೆ ಅಲ್ಪಸ್ವಲ್ಪ ಮಳೆ ಬರುತ್ತಾ ಇದ್ದರೂ ದೊಡ್ಡ ಮಳೆ ಇಲ್ಲ. ಪೈರುಪಚ್ಚೆಗಳಿಗೆ ಹದ ಸಾಲದೆಂದು ತಿಳಿದು ಬರುತ್ತೆ.—ಗೌರಿ, ಗಣೇಶಾಗಮನೋತ್ಸವವು ಕಷ್ಟಸಗಳನ್ನು ಆನಂದಗೊಳಿಸುವಲ್ಲಿ ಇಲ್ಲಿನ ಮೋಲ್ಸಕ್ಕರೆ ಹಾಲುಮತ ಹೆಂಡದ ಅಂಗಡಿ ವಗೈರೆ ಬೀದಿಗಳಲ್ಲಿ ಹತ್ತು ಹದಿನೈದು ದಿನಗಳಿಂದಲೂ ಇಲಿಗಳು ಸಾಯುತ್ತೆ ಎಂಬ ಪ್ರಸ್ತಾಪಗಳು ಜನರ ಆಂತಃಕರಣವಾಗಿರುತ್ತೆ. ಧಾರಾಳವಾಗಿ ನುಡಿಯಲಾರರು.—ಇಲ್ಲಿನ ಸಂದಲ್ ಕೋಠಿಗೆ ಹೊಸದಾಗಿ ಬಂದಿರುವ ಮ|| ಕೆಂಚಪ್ಪನವರು ಪ್ರಜಾರಂಜಕರೂ, ಗುಣವಂತರೂ ಆಗಿರುತ್ತಾರಲ್ಲದೆ ಇಲಾಖೆಯ ಕಾರ್ಯಾಸಕ್ತರೂ ಆಗಿರುವದು ತುಂಬಾ ಸಂತೋಷವಾಗಿದೆ. ಮೊದಲು ಅಲ್ಲಲ್ಲಿ ಕಂಡ ಬಿಟ್ಟಿಬಿದ್ದಿದ್ದ ಗಂಧದ ಮರಗಳನ್ನೆಲ್ಲಾ ವಿಂಗಡಿಸಿ ಲಾಟುಲಾಟಾಗಿಯೂ, ನೀಟಾಗಿಯೂ ಕ್ರಮಪಡಿಸಿರುವದಲ್ಲದೆ ಕೆಸರಾಗಿದ್ದ ರಸ್ತೆ, ಹೂವಿನ ಮತ್ತು ಇತರ ಮರ ಸಸಿಗಳನ್ನು ಸರಾಂಬರಿಸುತ್ತಾ, ಚೊಕ್ಕಟವಾಗಿಟ್ಟಿರುವದರಲ್ಲಿ ಆಸಕ್ತರಾಗಿರುವರು.—ಇಲ್ಲಿ ಎರಡು ರೀಡಿಂಗ್ ರೂಮುಗಳಿರುತ್ತವೆ. ಮಹಮ್ಮದೀಯರ ರೀಡಿಂಗ್ ರೂಮು ಎಲ್ಲಾ ವಿಷಯಗಳಲ್ಲಿ ತೃಪ್ತಿಕರವಾಗಿ ಆ ಕೋಮಿನವರಿಗೆ ಪ್ರಯೋಜನವನ್ನುಂಟುಮಾಡುತ್ತಾ ಇರುವದು ತುಂಬಾ ಸಂತೋಷವಾಗಿರುತ್ತೆ. ಆದರೆ ಎರಡನೆಯದು ಮಾತ್ರ ಹೀನಸ್ಥಿತಿಗೆ ಬಂದು ಪ್ರಯೋಜನವಿಲ್ಲದೆ ಇರುವದು ವ್ಯಸನಕರವಾಗಿರುತ್ತೆ. ಇದರ ಪ್ರೆಸಿಡೆಂಟರೂ, ಸೆಕ್ರೆಟರಿಗಳೂ ಕ್ರಮಪಡಿಸಿ ಸಕಲರಿಗೂ ಪ್ರಯೋಜನವಾಗುವಂತೆ ಅನುಕೂಲಮಾಡುವದು ತುಂಬಾ ಉಪಕಾರವಾಗಿರುತ್ತೆ.—ಈಚೆಗೆ ಸಂತೆಯಲ್ಲಿ ಜೂಜಾಟದವರ ಸುಳುವು ತಪ್ಪಿದುತ್ತೆ. ಇದಕ್ಕೆ ಬದಲಾಗಿ ಫಕೀರರ, ಮೊಂಡರ ಹಾವಳಿ ಹೆಚ್ಚಾಗಿರುತ್ತೆ. ಹಳ್ಳಿ ಹೆಂಗಸರ ಮೇಲೆ ಮನಸ್ಸೀ ಮಾತನಾಡುವದಲ್ಲದೆ ಅವರ ವ್ಯಾಪಾರಕ್ಕೆ ತುಂಬಾ ತೊಂದರೆಪಡಿಸುತ್ತಾರೆ. ಸರ್ಕಾರದವರು ಇದಕ್ಕೆ ಗಮನಕೊಡ್ತಾರೆಂದು ನಂಬುತ್ತೇನೆ.—ನಮ್ಮ ಆಸ್ಪತ್ರೆಯಲ್ಲಿ ಬಡವರು ದೊಡ್ಡವರು ಎಂಬ ಭೇದವನ್ನಿಡದೆ ಔಷಧಿಗಳನ್ನು ಕೊಡುತ್ತಾರೆ. ಬಲಹೀನರಾದ ಬಡವರಿಗೆ ಮೊಟ್ಟೆ, ಹಾಲು ಮುಂತಾದ್ದನ್ನು ತಿನ್ನಲು ತಮ್ಮ ಸ್ವಂತದಿಂದ ದುಡ್ಡು ಕೊಡುತ್ತಾರೆ.—ತಾ. 5 ನೆ ರಾತ್ರಿ ಬ್ರಾಹ್ಮಣರಲ್ಲಿ ಒಬ್ಬ ಮುದುಕಿ ಕಾಲವಾದರು. ಶವವನ್ನು ಸಾಗಿಸಲು ಬಹಳ ತೊಂದರೆಯಾಯಿತು. ಇಲ್ಲಿ 150 ರ ವರಿಗೆ ಬ್ರಾಹ್ಮಣರ ಮನೆಗಳಿದ್ದರೂ ಒಬ್ಬರೂ ಬರಲಿಲ್ಲ. ಡಾಕ್ಟರು, ಸಬ್ ರೆಜಿಸ್ಟ್ರಾರ್ರು, ಕಲ್ಬಾ ಶೇಕದಾರ್ರು, ಹಳೂರ್ ತಿಮ್ಮಪ್ಪಯ್ಯನವರು ಬಹಳ ಮೆಹನತ್ತಿನಿಂದ 3-4 ಜನಗಳನ್ನು ಸೇರಿಸಿ ಶವವನ್ನು ಸಾಗಿಸಲು ಸೋಮವಾರ 12 ಗಂಟೆಯಾಯ್ತು. ಅವರು ಇರುವುದು ತುಂಬಾ ಬ್ರಾಹ್ಮಣರ ಬೀದಿ. ಇಷ್ಟಿದ್ದರೂ ಅವರಿಗೆ ಅನ್ನ ಹಾಕುವವರು ಯಾರೂ ದಿಕ್ಕಿಲ್ಲದ ಹಾಗಾಯ್ತು. ಮಕ್ಕಳು ಹಸಿವಿನಿಂದ ಬಳಲಿದರು. ಬ್ರಾಹ್ಮಣರಲ್ಲಿ ಈ ರೀತಿ ಮಾಡುವುದು ಜಾತಿಗೇ ಕೆಟ್ಟ ಹೆಸರು ಬರಲು ಸಂದೇಹವಿಲ್ಲ. ಇಂಥಾ ವಿಷಯಗಳಲ್ಲಿ ಸ್ಥಳದ ದೊಡ್ಡ ಮನುಷ್ಯರೂ, ಪಟೇಲ್ ಶ್ಯಾನುಭೋಗರೂ, ಸ್ಥಳದ ಜೋಯಿಸರೂ, ಶ್ರೀಮಠದ ಅಧಿಕಾರಿಗಳೂ ಒಟ್ಟು ಸೇರಿ ಸರಿಯಾದ ಏರ್ಪಾಡು ಮಾಡಬೇಕಾಗಿದೆ. ಸಂತರ್ಪಣೆ, ಸಮಾರಾಧನೆಗಳಿಗಾದರೆ ಹೆಂಗಸರು, ಗಂಡಸರು, ಮಕ್ಕಳು ಆದಿಯಾಗಿ ಎಲ್ಲರೂ ಹೊರಡುತ್ತಾರೆ. ಸತ್ತ ಸ್ಥಳಕ್ಕೂ ಇದೇ ರೀತಿ ಹೊರಟರೆ ಒಳ್ಳೇ ಹೆಸರೂ ಪುಣ್ಯವೂ ಬರಲು ಸಂದೇಹವಿಲ್ಲ.

ಇಂಡಿಯಾ ಗೌರ್ನ್ಮೆಂಟಿನ ವಾಯಿದೆಯುಳ್ಳ ಸಾಲ.

ಮಹಾಜನಗಳು ಪೋಸ್ಟ್ ಆಫೀಸಿನ ಮೂಲಕ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾದ ಷರತ್ತುಗಳು.

ಗವರ್ನ್‌ಮೆಂಟಿನವರು ಈ ವರುಷದ ಸಾಲವನ್ನು ಶೇಕಡಾ 4 ರಂತೆ ಬಡ್ಡಿಯುಳ್ಳ ಹೊಸ ರೀತಿಯಿಂದ ಕೊಡಿಸುತ್ತಿದಾರೆ. ಈ ಸಾಲವನ್ನು 1923 ನೇ ಇಸವಿ ನೊವೆಂಬರಿನೊಳಗಾಗಿ ಪೂರ್ತಾ ತೀರಿಸಿಬಿಡುತ್ತಾರೆ; ಆದರೆ ಗವರ್ನ್‌ಮೆಂಟಿನವರು ಇಷ್ಟಪಟ್ಟಲ್ಲಿ ಈ ಸಾಲವನ್ನು 1920 ನೇ ಇಸವಿ ಅಕ್ಟೋಬರ್ ಆದ ಬಳಿಕ ಯಾವಾಗಲಾದರೂ ಪಾವತಿ ಮಾಡಬಹುದಾಗಿದೆ.

2. ಕಲ್ಕತ್ತಾ, ಮದ್ರಾಸ್, ಬೊಂಬಾಯಿ, ಇನ್ನೂ ಇತರ ದೊಡ್ಡ ಪಟ್ಟಣಗಳಲ್ಲಿ ಗವರ್ನ್‌ಮೆಂಟಿನವರು ಎಂದಿನಂತೆ ದರಖಾಸ್ತುಗಳ ಮೂಲಕ ಆಗಲೇ 4½ ಕೋಟಿ ರೂಪಾಯಿ ಸಾಲವನ್ನು ಕೊಡಿಸಿದ್ದಾಗಿದೆ; ಅಲ್ಲಿಗೆ ಈ ಸಾಲ ಕೊಡಿಸುವುದು ನಿಲ್ಲಿಸಲ್ಪಟ್ಟಿದೆ. ಆದರೆ ಇತರ ಸಾವಿರಾರು ಪ್ರಜೆಗಳ್ಯಾರಾದರೂ ಅಲ್ಪಸ್ವಲ್ಪ ಹಣಗಳನ್ನು ಗವರ್ನ್‌ಮೆಂಟಿಗೆ ಸಾಲ ಕೊಡಬೇಕೆಂದು ಕುತೂಹಲಪಡುತ್ತಿದ್ದರೆ ಇಂಥವರಿಗೂ ವಿಶೇಷವಾದ ಅವಕಾಶವನ್ನು ಈಗ ಕಲ್ಪಿಸಿರುತ್ತದೆ. ಇಂಥವರು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಣವನ್ನು ಹಾಕಿಯೂ ಹಾಕದೆಯೂ ಇರಬಹುದು; ಮತ್ತು ಇಂಥವರು ಸೇವಿಂಗ್ಸ್ ಬ್ಯಾಂಕು ಇರುವಂಥಾ ಸಮೀಪವಾದ ಯಾವ ಪೋಸ್ಟ್ ಆಫೀಸಿನ ಮೂಲಕವಾದರೂ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾಗಿದೆ.

ಹಣವನ್ನು ಕಟ್ಟತಕ್ಕ ಕ್ರಮ.

3. ಇಷ್ಟವುಳ್ಳವರು ಅಕ್ಟೋಬರ್ ತಾ. 30 ರ ತನಕ ದರಖಾಸ್ತುಗಳನ್ನು ಪೋಸ್ಟ್ ಆಫೀಸಿನ ಮೂಲಕ ಕೊಡತಕ್ಕದ್ದಾಗಿದೆ.

4. ದರಖಾಸ್ತು 100 ರೂಪಾಯಿಗೆ ಕಡಮೆ ಇರಕೂಡದು; ಕೆಲವು ನೂರು ರೂಪಾಯಿಗಳಿಗೆ ಬೇಕಾದರೂ ದರಖಾಸ್ತು ಕೊಡಬಹುದು. ಯಾವ ಒಬ್ಬ ದರಖಾಸ್ತುದಾರನೂ 5,000 ರೂಪಾಯಿಗಿಂತ ಹೆಚ್ಚಿಗೆ ದರಖಾಸ್ತು ಮಾಡಕೂಡದು.

ವಿಶೇಷ.—ಈಗ ಶೇಕಡಾ 3½ ಬಡ್ಡಿಯುಳ್ಳ ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಆಫೀಸಿನ ಮೂಲಕ ಪಡೆದಿಟ್ಟುಕೊಂಡಿರುವವರು ಕೂಡ ಈ ಹೊಸ ಸಾಲಕ್ಕೆ 5,000 ರೂಪಾಯಿ ತನಕ ದರಖಾಸ್ತು ಮಾಡಬಹುದು.

5. ದರಖಾಸ್ತು ಮಾಡಬೇಕೆಂಬುವರು ಪೋಸ್ಟ್ ಆಫೀಸಿನಲ್ಲಿ ಕೇಳಿದರೆ ಅಲ್ಲಿ ದರಖಾಸ್ತು ಫಾರಮನ್ನು ಮುಫತ್ತಾಗಿ ಕೊಡುತ್ತಾರೆ. ಅದರ ನಮೂನೆ ಇದರ ಅಡಿಯಲ್ಲಿ ಛಾಪಿಸಿದೆ. ಆ ನಮೂನೆಯನ್ನು ತಂದು ಭರ್ತಿ ಮಾಡಿ ಪೂರ್ತಾ ಹಣದ ಸಮೇತ ಅದನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಬೇಕು. ಇದಕ್ಕೆ ತಮ್ಮ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವಿದ್ದರೆ ಅದನ್ನೇ ಉಪಯೋಗಿಸಿಕೊಳ್ಳಬಹುದು; ಹಾಗಿಲ್ಲದಿದ್ದರೆ ನಗದಾಗಿ ಪಾವತಿ ಮಾಡಬೇಕು. ದರಖಾಸ್ತುದಾರರು ಖುದ್ದಾಗಿ ಪೋಸ್ಟ್ ಆಫೀಸಿಗೆ ಹೋಗಬಹುದು, ಇಲ್ಲವೇ ತಮ್ಮ ಕಡೆಯವರ ಮೂಲಕ ಕಳುಹಿಸಬಹುದು. ಪಾವತಿ ಮಾಡಲ್ಪಟ್ಟ ಪೂರ್ತಾ ಹಣಗಳಿಗೆ ಕ್ರಮವಾದ ರಸೀದಿ ಕೊಡಲಾಗುತ್ತದೆ.

6. ದರಖಾಸ್ತುದಾರನು ಪಾವತಿ ಮಾಡಿದ ಪ್ರತಿ 100 ರೂಪಾಯಿಗೂ ಒಂದರಂತೆ ಗವರ್ನ್‌ಮೆಂಟ್ ಪ್ರಾಮಿಸರಿ ಪತ್ರಗಳು ಅತನಿಗೆ ಕಳುಹಿಸಲಾಗುತ್ತವೆ.

ಪ್ರಾಮಿಸರಿ ಪತ್ರಗಳನ್ನು ಜೋಪಾನ ಮಾಡಿಡುವುದು.

7. ಪತ್ರಗಳನ್ನು ದರಖಾಸ್ತುದಾರನು ತನ್ನ ಬಳಿಯಲ್ಲೇ ಇಟ್ಟುಕೊಳ್ಳಬಹುದು; ಅಥವಾ ಅತನಿಗೆ ಸಮ್ಮತವಾಗಿದ್ದರೆ ಪೋಸ್ಟ್ ಆಫೀಸಿನ ಅಧಿಕಾರಿಗಳು ಅವನ್ನು ಅತನಿಗೋಸ್ಕರ ತಮ್ಮಲ್ಲೇ ಇಟ್ಟುಕೊಳ್ಳುತ್ತಾರೆ. ದರಖಾಸ್ತು ಮಾಡುವಾಗಲೇ ದರಖಾಸ್ತುದಾರನು ತನ್ನ ಇಷ್ಟವನ್ನು ದರಖಾಸ್ತಿನಲ್ಲಿ ಬರೆದು ಕೊಡತಕ್ಕದ್ದು. ಪತ್ರಗಳು ತನ್ನ ಬಳಿಯೇ ಇರಬೇಕೆಂದು ಅಪೇಕ್ಷಿಸಿದರೆ ಅವು ಸಿದ್ಧವಾಗುವ ಸಮಯವನ್ನು ಪೋಸ್ಟ್ ಆಫೀಸಿನವರು ಅತನಿಗೆ ತಿಳಿಸುತ್ತಾರೆ; ಅಂಥಾ ಸಮಯದಲ್ಲಿ ಅತನು ಖುದ್ದು ಹಾಜರಾಗಿ ಪತ್ರಗಳನ್ನು ತೆಗೆದುಕೊಳ್ಳತಕ್ಕದ್ದು. ಪತ್ರಗಳು ಪೋಸ್ಟ್ ಆಫೀಸಿನಲ್ಲೇ ಇರಲೆಂದು ಅಪೇಕ್ಷಿಸಿದ ಪಕ್ಷದಲ್ಲಿ ದರಖಾಸ್ತುದಾರನು ಪೋಸ್ಟ್ ಆಫೀಸಿಗೆ ಹಾಜರಾಗಬೇಕಾದದ್ದಿಲ್ಲ; ಆದರೆ ಅವು ಬಂದ ಕೂಡಲೆ ಪೋಸ್ಟ್ ಆಫೀಸಿನವರು ಅವು ತಮ್ಮ ವಶಕ್ಕೆ ಬಂದಿವೆ ಎಂದೂ, ತಮ್ಮ ವಶದಲ್ಲಿ ಇಟ್ಟುಕೊಂಡಿರುತ್ತೇವೆಂದೂ ದರಖಾಸ್ತುದಾರನಿಗೆ ತಿಳಿಯಪಡಿಸುತ್ತಾರೆ. ಕೆಲವು ಕಾಲದ ಮೇಲೆ ಪತ್ರಗಳು ಬೇಕೆಂದು ಕೇಳುವ ಪಕ್ಷಕ್ಕೆ ಅವನ್ನು ದರಖಾಸ್ತುದಾರನಿಗೆ ಕೊಡಲಾಗುತ್ತದೆ.

ಬಡ್ಡಿಯನ್ನು ಪಾವತಿಮಾಡುವ ಕ್ರಮ.

8. ಶೇಕಡ 4 ರಂತೆ ಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಪ್ರತಿ ವರುಷವೂ ಮೇ ತಾ. 31 ರಲ್ಲಿ ಶೇಕಡಾ 2 ರಷ್ಟು, ನೊವೆಂಬರ್ ತಾ 30 ರಲ್ಲಿ ಶೇಕಡಾ 2 ರಷ್ಟು ಪಾವತಿಮಾಡಲಾಗುತ್ತದೆ. ಈ ಸಾಲದ ಹಣ ಪಾವತಿ ಮಾಡಿದ ತಾರೀಖು ಲಾಗಾಯಿತು ಮುಂದಿನ ನೊವೆಂಬರ್ ತಾ. 30 ರ ವರಿಗಿನ ಬಡ್ಡಿಯನ್ನು ಪತ್ರಗಳ ಸಂಗಡಲೇ ಕೊಡುತ್ತಾರೆ; ಒಂದು ವೇಳೆ ಪತ್ರಗಳನ್ನು ಪೋಸ್ಟ್ ಆಫೀಸಿನ ವಶದಲ್ಲೇ ಬಿಟ್ಟಿದ್ದರೆ ಮುಂದಿನ ಪ್ಯಾರಾದಲ್ಲಿ ಹೇಳುವ ಪ್ರಕಾರ ಬಡ್ಡಿಯನ್ನು ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ ಕೂಡಿಸಲಾಗುವುದು.

9. ದರಖಾಸ್ತುದಾರನು ಪತ್ರಗಳನ್ನು ಪೋಸ್ಟ್ ಆಫೀಸಿನಲ್ಲೇ ಬಿಟ್ಟಿರುವ ಪಕ್ಷದಲ್ಲಿ ಪೋಸ್ಟ್ ಆಫೀಸಿನವರು ಪತ್ರಗಳ ಬಡ್ಡಿಯನ್ನು ಕಾಲಕಾಲಕ್ಕೆ ವಸೂಲು ತೆಗೆದುಕೊಂಡು ಪತ್ರಗಳ ಸೊತ್ತುಕಾರರ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ಪ್ರಾರಂಭಮಾಡಿ ಆ ಲೆಕ್ಕಕ್ಕೆ ಕೂಡಿಸುತ್ತಾ ಬರುತ್ತಾರೆ. ಮತ್ತು ಬಡ್ಡಿ ಬಂದಿದೆ ಎಂಬ ಸಂಗತಿಯನ್ನು ಪೋಸ್ಟ್ ಆಫೀಸಿನವರು ಅಂಥಾ ದರಖಾಸ್ತುದಾರನಿಗೆ ಕಾಲಕ್ರಮದಲ್ಲಿ ತಿಳಿಸುತ್ತಾ ಬರುವರು. ಇದಕ್ಕಾಗಿ ಯಾವುದೊಂದು ರುಸುಮನ್ನೂ ವಸೂಲ್ಮಾಡುವುದಿಲ್ಲ; ಮತ್ತು ಆರು ತಿಂಗಳಿಗೊಂದಾವರ್ತಿ ಪಾವತಿಮಾಡುವ ಬಡ್ಡಿಯಲ್ಲಿ ಆದಾಯದ ಮೇಲಣ ತೆರಿಗೆಯನ್ನು ಕಟಾಯಿಸುವುದೂ ಇಲ್ಲ.

ದರಖಾಸ್ತುದಾರನು ಪತ್ರಗಳನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡಿದ್ದರೆ ಆರು ತಿಂಗಳಿಗೊಂದುಸಲ ಪಾವತಿಮಾಡುವ ಬಡ್ಡಿ ಹಣದಲ್ಲಿ ಪದ್ಧತಿಯ ಪ್ರಕಾರ ಆದಾಯದ ಮೇಲಣ ತೆರಿಗೆಯನ್ನು ಕಟಾಯಿಸಿಕೊಳ್ಳಲಾಗುವುದು

ಪ್ರಾಮಿಸರಿ ಪತ್ರಗಳನ್ನು ಬಿಕರಿಮಾಡುವುದು.

10. ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣ ಹಾಕಿರತಕ್ಕವರ ಪೈಕಿ ಯಾರಾದರೂ ಈ ಹೊಸ ಸಾಲದ ಪತ್ರಗಳನ್ನು ಪಡೆದುಕೊಂಡಿದ್ದು, ಅಂಥಾ ಪತ್ರಗಳನ್ನು ಬಿಕರಿ ಮಾಡಬೇಕೆಂದು ಅಪೇಕ್ಷಿಸಿ ತಿಳಿಸಿದಲ್ಲಿ ಪೋಸ್ಟ್ ಆಫೀಸಿನವರು ದಳ್ಳಾಳಿ ಅಥವಾ ರುಸುಮು ಯಾವುದನ್ನೂ ತೆಗೆದುಕೊಳ್ಳದೆ ಆ ಪತ್ರ ಅಥವಾ ಪತ್ರಗಳನ್ನು ಬಿಕರಿಮಾಡಿಸಿಕೊಡುತ್ತಾರೆ. ಈ ವಿಷಯದಲ್ಲಿ ಪೋಸ್ಟ್ ಆಫೀಸುಗಳಲ್ಲಿ ವಿಚಾರಿಸಿದರೆ ಎಲ್ಲಾ ಸಂಗತಿಗಳೂ ಸ್ಪಷ್ಟವಾಗಿ ತಿಳಿಸಲ್ಪಡುವವು.

ದರಖಾಸ್ತಿನ ನಮೂನೆ.

..................ನಾನು 1915 ನೇ ಇಸವಿ ಜುಲೈ ತಾ. 28 ರಲ್ಲಿ ಪ್ರಕಟವಾದ ಗೆಜೆಟ್ ಆಫ್ ಇಂಡಿಯಾ ವಿಶೇಷ ಪತ್ರಿಕೆಯಲ್ಲಿ ನಮೂದಾಗಿರುವ ಶೇಕಡಾ ನಾಲ್ಕರಂತೆ ಬಡ್ಡಿಯುಳ್ಳ ವಾಯಿದೆ ಕಂಡ ಸಾಲಕ್ಕಾಗಿ.................. ರೂಪಾಯಿಗಳ ಸಾಲಕ್ಕೋಸ್ಕರ ದರಖಾಸ್ತು ಮಾಡುತ್ತೇನೆ.

ನಾನು ಈ ಮೂಲಕ ಕೇಳುವ ಸಾಲದ ಪತ್ರಗಳಿಗೆ ಪೂರ್ತಾ .... ರೂಪಾಯಿಗಳನ್ನು ಹಾಜರು ಮಾಡುತ್ತೇನೆ.

ನಾನು ಈ ಸಾಲಕ್ಕೆ ಹಣವನ್ನು ಕೊಡಬೇಕಾಗಿರುವುದರಿಂದ ನನ್ನ ಹೆಸರಿನಲ್ಲಿ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಬಾಕಿ ಇರುವ ಹಣದ ಪೈಕಿ ಈ ಸಾಲಕ್ಕೆ ಬೇಕಾಗುವ .... ರೂಪಾಯಿಗಳನ್ನು ವಾಪಸು ಕೊಡಿಸುವಂತೆ ಮಾಡಬೇಕೆಂದು ಕೋರುತ್ತೇನೆ.

ಈ ದರಖಾಸ್ತಿನ ಹಣಕ್ಕಾಗಿ ಇದರ ಕೂಡ .... ರೂಪಾಯನ್ನು ಹಾಜರು ಮಾಡಿರುವೆನು; ಬಾಕಿ .... ರೂಪಾಯನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿರುವ .... ರೂಪಾಯಿನಲ್ಲಿ ಉಪಯೋಗಿಸಿಕೊಳ್ಳುವಂತೆ ಕೋರುತ್ತೇನೆ

ನನ್ನ ಬಾಬತು ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಮತ್ತು ಟೆಲಿಗ್ರಾಫ್ ಅಕೌಂಟೆಂಟ್ ಜನರಲ್‌ರವರು ನನ್ನ ಪರವಾಗಿ ತಮ್ಮ ಬಳಿಯಲ್ಲೇ ಇಟ್ಟುಕೊಂಡಿರಬೇಕೆಂದೂ, ಆ ಪತ್ರಗಳಿಗಾಗಿ ಬರುವ ಬಡ್ಡಿಯನ್ನು ಕಾಲಕ್ರಮದಲ್ಲಿ ವಸೂಲಿ ತೆಗೆದುಕೊಂಡು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ ಕೂಡಿಸುತ್ತಾ ಬರಬೇಕೆಂದೂ ಕೋರುತ್ತೇನೆ.

ನನಗೆ ಕೊಟ್ಟಿರುವ ಕೆಳಗೆ ನಮೂದಾಗುವ ಹೆಸರು ವಿಳಾಸವುಳ್ಳ ಪ್ರಾಮಿಸರಿ ಪತ್ರಗಳ ಮೊಬಲಗನ್ನು ನನಗೆ ಪಾವತಿ ಮಾಡಿಸಬೇಕೆಂದು ಕೋರುತ್ತೇನೆ.

ಹೆಸರು ______________

ಮೇಲ್ವಿಳಾಸ ______________

ತಾರೀಖು ________ 1915.

[ಇಷ್ಟವುಳ್ಳವರು ಈ ಫಾರಮನ್ನೇ ಕತ್ತರಿಸಿ ಉಪಯೋಗಿಸಬಹುದು.]

ಇಂವೆಂಟಿಕ್ ಸ್ಪ್ರಿಂಗ್ ಲೀವರ್ ಪಾಕೆಟ್ ವಾಚ್.

20 ಬಹುಮಾನಗಳ ಸಹಿತ ರೂ. 3-0-0 ಮಾತ್ರ.

ಅಯ್ಯಾ, ಈ ಹೊಸದಾಗಿ ಬಂದಿರುವ ವಸ್ತು ಇದರಲ್ಲಿ ತೋರಿಸುವ ಗಡಿಯಾರ ನೋಡುವುದಕ್ಕೆ ಸುಂದರವಾಗಿಯೂ, ನಾಜೂಕಾಗಿಯೂ ಸರಿಯಾದ



ಕಾಲವನ್ನು ತೋರಿಸುವದಾಗಿಯೂ, ಬಲಿಷ್ಠವಾದ ಸಾಮಾನುಗಳು ಉಳ್ಳವಾಗಿಯೂ, ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ, ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದಾಗಿಯೂ, ಅನೇಕರಿಗೆ ಸಂಬಳಿಯುಳ್ಳದ್ದಾಗಿವೆ. ಈ ಗಡಿಯಾರವನ್ನು ತರಿಸಿನೋಡಿದರೆ ನಿಮಗೇ ತಿಳಿಯುತ್ತೆ. ಬರೀ ಮಾತುಗಳಿಂದ ಏನು? ಬಹುಮಾನಗಳ ವಿವರ.—ಒಂದು ಸರಪಣಿ, ಒಂದು ಉತ್ತರಮುಖಿ, ಮೂರು ಕರವಸ್ತ್ರಗಳು, ಉತ್ತಮತರದ ಕೂದಲೆಣ್ಣೆಯುಳ್ಳ 3 ಸೀಸೆಗಳು, ಒಂದು ಬಾಚಣಿಗೆ, ಒಂದು ಕೈಗನ್ನಡಿ, 10 ಪೋಸ್ಟು ಕಾರ್ಡುಗಳು. [196-1]

ವಿಳಾಸ—ಟಿ. ಜಿ. ಎಲ್. ಕೃಷ್ಣ ಮತ್ತು ಕಂಪನಿ,
3-3 ಪೋಲೀಸ್ ಕಮಿಷನರ ಆಫೀಸ್ ರೋಡ್, ಎಗ್ಮೋರ್, ಮದರಾಸ್.

ಪ್ರೋತ್ಸಾಹಿಸಿರಿ.

ಪ್ರಖ್ಯಾತಿಪಟ್ಟ ಪ್ರೊಫೆಸರ್ ಜೇಮ್ಸರವರ ವಿದ್ಯುಚ್ಛಕ್ತಿಯ ಮಾತ್ರೆಗಳು 40 ಮಾತ್ರೆಗಳ ಸೀಸೆ 1 ಕ್ಕೆ ರೂ. 2; ಕಾಮಿನಿಯಾ ತೈಲ—ಕೂದಲನ್ನು ಬೆಳೆಸುವ ತೈಲಗಳಲ್ಲಿ ಶ್ರೇಷ್ಠವಾದದ್ದು ಸೀಸೆ 1 ಕ್ಕೆ ರೂ. 1, ಸೀಸೆ 3 ಕ್ಕೆ ರೂ. 2-10-0; ಒಟ್ಟೋ ದಿಲ್‌ಬಹಾರ್—ಅತ್ತರುಗಳಲ್ಲಿ ಮಧುರ, ಕೋಮಲ, ಚಿರಸ್ಥಾಯಿಯಾದದ್ದು ಸೀಸೆ 1 ಕ್ಕೆ ಆ. 8, 12, ಮತ್ತು ರೂ. 2; ಒಡ್ಮನ್ಸ್ ಮಲೇರಿಯಾ ಪಿಲ್ಸ್—ಎಲ್ಲಾ ತರದ ಜ್ವರಕ್ಕೆ ದಿವ್ಯ ಔಷಧ ಸೀಸೆ 1 ಕ್ಕೆ ರೂ 1; ಉಕ್ಕಾ ಕಲರ್—ಇದು ಬಿಳೀ ಕೂದಲನ್ನು ಕಪ್ಪು ಮಾಡುವಂಥಾದ್ದಾಗಿದೆ ಬ್ರಷ್ ಸಮೇತವಿರುವ ಪೆಟ್ಟಿಗೆ 1 ಕ್ಕೆ ರೂ. 1; ಸೆಂಟ್ ಸೆಂಟ್ ಮಾತ್ರೆಗಳು ಪಾಕೆಟ್ 1 ಕ್ಕೆ ಆ. 3; ಸುಶೀಲಮಾಲತಿ ಡಬ್ಬಿ 1 ಕ್ಕೆ ಆ. 3; ನಯನಾಮೃತಾಂಜನ ಡಬ್ಬಿ 1 ಕ್ಕೆ ಆ. 5; ಕ್ರಿಸೊಲೈಯಿನ್ (ಗಡಕಜ್ಜಿ ಮುಲಾಮು) ಡಬ್ಬಿ 1 ಕ್ಕೆ ಆ. 4; ಕಾಮಿನಿಯಾ ಕೋಲ್ಡ್ ಕ್ರೀಮ್ ಡಬ್ಬಿ 1 ಕ್ಕೆ ಆ. 12, ಅಮೃತಾಂಜನ ಡಬ್ಬಿ 1 ಕ್ಕೆ ಆ. 8; ನೀಲಗಿರಿ ತೈಲ ಸೀಸೆ 1 ಕ್ಕೆ ಆ. 5; ದಂತಮಂಜನ ಡಬ್ಬಿ 1 ಕ್ಕೆ ಆ. 2; ಕುಂತಲಬಹಾರ ತೈಲ ಸೀಸೆ 1 ಕ್ಕೆ ಆ. 8; ವಿಶ್ವನಾಥ ತೈಲ ಸೀಸೆ 1 ಕ್ಕೆ ರೂ. 1; ಬಾಟ್ಲಿವಾಲರ ಅಗ್ಯೂ ಮಿಕ್ಸ್ಚರ್ ಸೀಸೆ 1 ಕ್ಕೆ ರೂ. 1; ಹೊಬ್ಬ್ ರೋಜ್ ಸೆಂಟ್ ಸೀಸೆ 1 ಕ್ಕೆ ಆ. 8; ಲೆವೆಂಡರ್ ಸೀಸೆ 1 ಕ್ಕೆ ಆ. 12 ಮೇಲೆ ಬರೆದ ಸಾಮಾನುಗಳು ವಿ. ಪಿ. ಮೂಲಕವೂ ರವಾನಿಸಲ್ಪಡುವವು. ನಮ್ಮಲ್ಲಿ ಅನೇಕ ತರದ ಇಂಗ್ಲಿಷ್ ಔಷಧಗಳೂ, ಪರಿಮಳ ದ್ರವ್ಯಗಳೂ, ವಾಚುಗಳೂ, ಭಾರೀ ಸುಲಭ ಖರೀದಿಯಿಂದ ದೊರೆಯಲ್ಪಡುವವು.

[139-10] ನಮ್ಮ ವಿಳಾಸ:—ದಿ ಊರ್ಲ್ ಮಾರ್ಟ್, ನಂ 1, ಮಂಗಳೂರು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.



ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ಬೂಟಾ ಸೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಜವೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ಕು ರುದ್ರಾಕ್ಷಿ ಸೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-13]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ವಿದ್ಯುಚ್ಛಕ್ತಿಯ ರಸದ ಮಣಿಗಳು.

ಕೊರಗೆ ಸವರುವುದಕ್ಕೆ ಮಾತ್ರ ಫಲವಾಗದಿದ್ದರೆ 100 ರೂಪಾಯಿ ಸಮೇತ ಕ್ರಯ ವಾಪಸುಮಾಡುತ್ತೇವೆ. ಇದು ಹೊಸದಾಗಿ ಕಂಡುಹಿಡಿದದ್ದು ಸಾವಿರಾರು ಯೋಗ್ಯತಾ ಪತ್ರಗಳುಂಟು. ಸೆಳವು, ಉಬ್ಬಸ, ಖಲಿಜದ ಅಕ್ರಮ ಸಿತಪ್ರಾಣ, ಗಜರಲು, ಭೇದಿ ಮೊದಲಾದವು ಆಶ್ಚರ್ಯವಾಗಿ ವಾಸಿಯಾಗುವವು ಕ್ರಯ ರೂ. 2-0-0. ಇದೇ ಸೆಪ್ಟಂಬರ್ ತಾ. 25 ರೊಳಗೆ ತರಿಸಿಕೊಂಡರೆ ಪೋಸ್ಟೇಜು ಸಹಿತ 12 ಆಣೆ ಮಾತ್ರ. ನಮಗೆ ಇಂಗ್ಲೀಷಿನಲ್ಲೇ ಬರೆಯಬೇಕು.

[195-1] ವಿಳಾಸ—GHATALAH & Co., Chittoo[r]

ದೊಡ್ಡಬಳ್ಳಾಪುರದ ಮುನ್ಸಿಫ್ ಕೋರ್ಟಿನ[ಲ್ಲಿ]

ಅಸಲ್ ನಂಬರು 33/ 13-14.

ವಾದಿ—ರಾಮರಾವ್. [191-1]

ಪ್ರತಿವಾದಿಗಳು—1 ನೇ ಗೌರಮ್ಮನವರ ಶಿದ್ದೀರಪ್ಪ, 2 ಲಕ್ಷ್ಮಮ್ಮ ಉರುಫ್ ಸುಬ್ಬಮ್ಮ, 3 ವೆಂಕೂಬಾಯಿ, 4 ಕೃಷ್ಣಾಬಾಯಿ, 5 ತಿ. ಪಪ್ಪ, 6 ದೇವಶೆಟ್ಟಪ್ಪ, 7 ಹಲಗೆಶೆಟ್ಟಪ್ಪ, 8 ಟಿ ಸಿದ್ದಪ್ಪ (1, 5, 6, 7, ನೇ ಪ್ರತಿವಾದಿಗಳು ತಮಗೋಸ್ಕರವೂ ಮತ್ತು ದೊಡ್ಡಬಳ್ಳಾಪುರದಲ್ಲಿರುವ ನಗರೇಶ್ವರ ದೇವರಿಗೆ ಭಕ್ತರಾದ ಇತರ ನಗರ್ತ ಮಂಡಲಿಯವರಿಗೋಸ್ಕರವೂ ಮೊದ್ದಮೆಯನ್ನು ನಡಿಸಲು ಪ್ರತಿವಾದಿಗಳಾಗಬೇಕು.)

ಈ ವಿಚಾರದಲ್ಲಿ ಈಗ ಪ್ರಕಟಿಸತಕ್ಕ ಅಂಶಗಳು—ಮೇಲ್ಕಂಡ ಮೊದ್ದಮೆಯನ್ನು 1, 5, 6, 7, 8 ನೇ ಪ್ರತಿವಾದಿಗಳು ತಮಗೋಸ್ಕರವೂ ಮತ್ತು ತಮ್ಮ ನಗರ್ತ ಮಂಡಲಿಗೆ ಸೇರಿದ ದೊಡ್ಡಬಳ್ಳಾಪುರದಲ್ಲಿರುವ ನಗರೇಶ್ವರ ದೇವರ ಭಕ್ತರಾದ ಇತರ ನಗರ್ತ ಮಂಡಲಿಯವರಿಗೋಸ್ಕರವೂ ನಡಿಸುವುದಕ್ಕೆ ಸಿ. ಪ್ರೊ. ಕೋಡು ಆರ್ಡರು 1, ರೂಲ್ 8 ರ ಮೇರೆಗೆ ಕೋರ್ಟಿನ ಪರ್ಮಿಷನ್ ಅಪ್ಪಣೆ ಕೊಡಿಸಬೇಕೆಂತ ವಾದಿಯು ಅರ್ಜಿ ಕೊಟ್ಟು ಅಪ್ಪಣೆ ಪಡೆದಿರುತ್ತಾನೆ. ಈ ಸಂಗತಿಯನ್ನು ಸಮಸ್ತ ಜನಗಳೂ ತಿಳಿಯತಕ್ಕದ್ದು.

D. S. APPU RAO, Pleader. **N. K. SREENIVASA RAO**, Muns[hi]

ELECTRIC MUSICAL PHOTO RING

ಎಲಕ್ಟ್ರಿಕ್ಕು ವಿಚಿತ್ರ ಕೈ ಉಂಗರ.

ಇದರ ಕ್ರಯ ರೂ. 1-0-0 ಮಾತ್ರ.

ಈ ಸೊಗಸಾದ ಕೈ ಉಂಗರ 8 ಲೋಹದಲ್ಲಿ ಇರುವ ಆಶ್ಚರ್ಯವಾದ ಉಂಗರ. ಇದಕ್ಕೆ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಕೊಟ್ಟು ಬರ್‌ನಿಷ್ ಮಾಡಿದೆ. ಇದರ ಕಲ್ಲುಗಳು ಕೋಟಿ ಸೂರ್ಯ ಪ್ರಕಾಶಕ್ಕೆ ಥಳಥಳಿಸುವದು. ಇದರ ಪಕ್ಕದಲ್ಲಿ ಇರುವ ವಿಚಿತ್ರ ಕನ್ನಡಕದಲ್ಲಿ ನೋಡಿದರೆ 30 ತಲೆಗಳು ತಗಲಿಸಿಕೊಂಡಿರುವ ಭಯಂಕರನಾದ ಮಹಾ ರಾಕ್ಷಸನನ್ನು ಅಘೋರವಾದ ಕಾಳಿ ಮಹಾದೇವಿ ಕಾಲಿನಲ್ಲಿ ಅದಿಮಿ ಕೊಂಡಿರುವ ಫೋಟೋವನ್ನು

ನೋಡಬಹುದು. ಜಾಸ್ತಿಯಾಗಿ ಖರ್ಚಾಗುತ್ತಾ ಇದೆ. ಜಾಗ್ರತೆಯಾಗಿ ತರಿಸಿಕೊಳ್ಳಿ. ರೂ. 1-0-0.

ವಿಳಾಸ:—ಟಿ ರಾಮಚಂದ್ರರಾವ್,
[194-1] 16, ತಿರುಪಳ್ಳಿ ಬೀದಿ, ಸಾಹುಕಾರ್ ಪೇಟೆ, ಮದರಾಸು.

ಗೃಹಕೃತ್ಯದ ನೋಟೀಸು.

ಮೈಸೂರು ಮಂಡಿ ಮೊಹಲ್ಲಾ ತೂಗರಿಬೀದಿ ವೆಂಕಟರಮಣಸ್ವಾಮಿ ದೇವಸ್ಥಾನದ ಬಳಿಯಲ್ಲಿರುವ ತೆಲುಗು ಬಣಜಿಗರ ರಾಚಯ್ಯನ ಮಕ್ಕಳು ಪನುಮಯ್ಯ ಮತ್ತು ನರಸಿಂಹಯ್ಯನು ಸಹಾ ತಿಳಿಯಪಡಿಸುವದೇನೆಂದರೆ—ನಮ್ಮ ತಂದೆ ಜೊತೆಯಲ್ಲಿ ಹುಟ್ಟಿದವರು 1 ನೇ ಸೀಬಯ್ಯ, 2 ನೇ ನಮ್ಮ ತಂದೆ ರಾಚಯ್ಯ, 3 ನೇ ನಂಜುಂಡಪ್ಪ ಈ ಮೂವರೂ ವಿಭಾಗವಾಗಲಿಲ್ಲ. ನಾವು ಮೈನರಾಗಿದ್ದಾಗ್ಗೆ ನಮ್ಮ ತಂದೆಯೂ ನಮ್ಮ ದೊಡ್ಡಪ್ಪನೂ ಕಾಲವಾದರು. ನಮ್ಮ ಪಿತ್ರಾರ್ಜಿತದ ಆಸ್ತಿ ಅಂದರೆ ಒಲೆಕುಪ್ಪುವ ಬೀದಿಯಲ್ಲಿರುವ ಒಂದು ಖಾಲಿ ನಿವೇಶನ ಮತ್ತು ವೆಂಕಟರಮಣಸ್ವಾಮಿ ದೇವಸ್ಥಾನದ ಬಳಿ ಇರುವ ಮ್ಯುನಿಸಿಪಲ್ 2279 ನೇ ಡೋರ್ ನಂಬರುಳ್ಳ ಒಂದು ಹೆಂಚಿನಮನೆ ಇವೆರಡು ನಮ್ಮ ಚಿಕ್ಕಪ್ಪನಾದ ನಂಜುಂಡಪ್ಪನ ಅನುಭವದಲ್ಲಿಯೇ ಇರುತ್ತೆ. ಈತನು ನಮಗೆ ಮೋಸ ಮಾಡಬೇಕೆಂದು ಈ ಸ್ಥಿರ ಸ್ವತ್ತುಗಳನ್ನು ಪರಾಧೀನಮಾಡುತ್ತಾನೆಂದು ಕೇಳುತ್ತೇವೆ. ಈ ಸ್ವತ್ತುಗಳನ್ನು ನಮ್ಮಗಳ ಅನುಮತಿಯಿಲ್ಲದೆ ಯಾರಾದರೂ ಭೋಗ್ಯ, ಕ್ರಯ ವಗೈರೆಗೆ ಪಡೆದರೆ ಊರ್ಜಿತವಾಗತಕ್ಕದ್ದಲ್ಲವೆಂದೂ ನಮ್ಮ ನಷ್ಟಕ್ಕೆಲ್ಲಾ ಗುರಿಯಾಗುವರೆಂದೂ ಇದರಿಂದ ಎಚ್ಚರಿಸಿಯೇವೆ

[197-1] ರಾಚಯ್ಯನ ಮಗ ಮರಗೆಲಸದ ನರಸಿಂಹಯ್ಯ.

ಗೃಹಕೃತ್ಯದ ನೋಟೀಸು.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ತೀರ್ಥಹಳ್ಳಿ ತಾಲ್ಲೂಕು ಮೇಗರವಳ್ಳಿ ಹೋಬಳಿ ಕೋಳಿಗೆ ಗ್ರಾಮದ ಮಜರೆ ಮೂಡುಕೋಳಿಗೆ ತಿಮ್ಮಯ್ಯಗೌಡರ ಮಕ್ಕಳು 1 ನೇ ನಾಗಪ್ಪಗೌಡರು, 2 ನೇ ಕೊತವಾಲಗೌಡರು, 3 ನೇ ದುಗ್ಗಪ್ಪಗೌಡರು. ಸದರಿ 1 ನೇ ನಾಗಪ್ಪಗೌಡರು ಸತ್ತರು. ಇವರ ಮಕ್ಕಳು 1 ನೇ ಗುಂಡಪ್ಪ, 2 ನೇ ಚಿನ್ನಪ್ಪ. ಈ ಎರಡು ಜನರ ಮೈನರ್ ಗಾರ್ಡಿಯನ್ ತಾಯಿ ಮುತ್ತಮ್ಮ ಎಂಬುವರು ಸಹಾ ಒಂದೇ ಅವಿಭಕ್ತ ಕುಟುಂಬಿಕರು ಒಟ್ಟು ಕುಟುಂಬದ ಪಿತರಾರ್ಜಿತ ಸ್ಥಿರ ಚರಾಸ್ತಿಗಳನ್ನು 1 ನೇ ನಾಗಪ್ಪಗೌಡರು ಈಗ ಸುಮಾರು 5-6 ತಿಂಗಳ ಹಿಂದೆ ಗತಿಸಿದ ನನ್ನ ಮೈದುನರು 3 ನೇ ದುಗ್ಗಪ್ಪಗೌಡರು ಸದರಿ ಮೈನರರು ಗುಂಡಪ್ಪ ಮತ್ತು ಚಿನ್ನಪ್ಪ ಇವರಿಗೆ ಮೋಸಮಾಡಬೇಕೆಂಬ ಬದ್ಧ ಇರಾದೆಯಿಂದ ಒಟ್ಟು ಕುಟುಂಬದ ಹಾಗು ಮೈನರರ ಹಿಸ್ಸೆಗೆ ಸಮ್ಮಂಧಪಟ್ಟ ಸ್ಥಿರ ಚರಾಸ್ತಿಗಳನ್ನು ಪರಾಧೀನ ಮಾಡಲು ಸದರಿ ದುಗ್ಗಪ್ಪಗೌಡರು ಸಿದ್ಧರಾಗಿರುತ್ತಾರೆ. ಮೈನರರ ವಿನಹ ಯಾರಾದರೂ ಈ ಆಸ್ತಿಗಳನ್ನು ಪಡೆದುಕೊಂಡರೆ ಆಗಲಿ ಅಥವ ಸದರಿ ಆಸ್ತಿ ಜವಾಬ್ದಾರಿಯಿಂದ ಸಾಲ ಕೊಟ್ಟರೆ ಆಗಲಿ ಈ ಆಸ್ತಿಗಳ ಮೇಲೆ ಯಾವ ಥರದಿಂದಲಾದರೂ ಪರಾಧೀನ ಹೊಂದಿದವರಿಗೆ ಈ ಹಕ್ಕು ಊರ್ಜಿತವಾಗಿ ನಿಲ್ಲುವದಿಲ್ಲವಾಗಿ ಜಾಹಿರ ಇದರಿಂದ ತಿಳಿಯಪಡಿಸಿರುತ್ತೆ. ಸದರಿ ಗುಂಡಪ್ಪ ಚಿನ್ನಪ್ಪ ಇವರ ಮೈನರ್

[184-2] ತಾ. 23-8-1915. ಗಾರ್ಡಿಯನ್ ತಾಯಿ ಮುತ್ತಮ್ಮ.

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-43]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತ ಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟ್ಲಾಗನ್ನು ಬಿಟ್ಟಿ ಕಳಿಸುವೆವು. ಛಾರ್ಜಿಲ್ಲದೆ ಚಿಕಿತ್ಸೆಗಳನ್ನು ಕಳಿಸುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು.

ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

"ಕುಟುಂಬ ರಕ್ಷಿಣಿ"



ಬೆಲೆ ರೂ 2-8-0 ಮಾತ್ರ ಟಪಾಲ್ ಖರ್ಚು ಬೇರೆ.

ಈ ಕುಟುಂಬ ರಕ್ಷಿಣಿಯು ಎಳೇ ಮಕ್ಕಳು ಮೊದಲು ಸರ್ವರಿಗೂ ಯಾವ ರೋಗವೂ ಬಾರದಂತೆ ಶರೀರವನ್ನು ಕಾಪಾಡುವ ಮತ್ತು ಬಂದ ರೋಗಗಳನ್ನು ಅಲ್ಪದಲ್ಲಿ ಗುಣಮಾಡುವ ಅತ್ಯವಶ್ಯಕವಾದ ಎಂಟು ಸಿದ್ಧೌಷಧಗಳನ್ನು ಅಂದವಾದ ಪೆಟ್ಟಿಗೆಯಲ್ಲಿ ಒಳಗೊಂಡಿರುವುದು. ಸಂಸಾರಿಗಳೆಲ್ಲರೂ ಈ ಪೆಟ್ಟಿಗೆಯೊಂದನ್ನು ಇರಿಸಿಕೊಂಡಿದ್ದರೆ ಅನುಭವಶಾಲಿಯಾದ ವೈದ್ಯನು ಮಹೌಷಧಗಳೊಡನೆ ಸಮೀಪದಲ್ಲಿಯೇ ಇದ್ದಷ್ಟು ಪ್ರಯೋಜನ ಉಂಟಾಗುವುದು

ಮೂರು ಪೆಟ್ಟಿಗೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಖರ್ಚು ಮುಫತ್ತು.

[231-43] ವಿಳಾಸ :—ಸದ್ವೈದ್ಯಶಾಲಾ, ನಂಜನಗೂಡು.

ಕುಂತಲಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-52]

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಬಹಳ ಸೊಗಸಾದದ್ದು 18 ಮೊಳ ಬಾಳಿಕೆ ಬರುವದು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ಕ್ರಯ 2-8-0.

ಅಯ್ಯಾ,—ಘನವಂತರೇ, ಈ ಸೀರೆ ಉಡುವುದಕ್ಕೆ ಧಡೂತಿಯಾಗಿಯೂ ನೋಡುವುದಕ್ಕೆ ನಯವಾಗಿಯೂ ಇದೆ. ಇವು ಬಹುದಿನ ಬಾಳಿಕೆ ಬರುವದಾಗಿಯೂ ಉಡಲು ಅನುಕೂಲವಾಗಿಯೂ ಅಂದವಾಗಿಯೂ ಇರುತ್ತೆ. ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ ಉದ್ದ. ಸುಂದರವಾದ ಸೆರಗು. ಇತರ ಕಂಪನಿಗಳಲ್ಲಿ ಮಾರುವ ಮಟ್ಟಿಸೀರೆಯಿದು ಅಲ್ಲ. ಈ ಹೊಸ ನಮೂನೆ ಸೀರೆಗು ಬಣ್ಣಕ್ಕೆ ಸರಕಿಗೆ ಗ್ಯಾರಂಟಿಕೊಡುತ್ತೇವೆ 1 ನ್ನು ತರಿಸಿ ಪರೀಕ್ಷಿಸಿರಿ. ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದಬೇಕೆಂದು ಬಹಳ ಕಮ್ಮಿ ಧಾರಣೆ ಹಾಕಿರುತ್ತೇವೆ. [149-4]

ಸುಂದರವಾದ ಲೇಡಿಸು ರಿಸ್ಟುವಾಚು ಇದರ ಕ್ರಯ ಚರ್ಮದ ಪಟ್ಟಿ ಸಹಿತ ರೂಪಾಯಿ. 3-8-0.



ಅಯ್ಯಾ, ಈ ಗಡಿಯಾರ ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಸೊಗಸಾದದ್ದು. ಬಹು ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು.

ನಮ್ಮ ವಿಳಾಸ.—

ವಿ ಎ. ಎಸ್. ವಿಠಾಣಿ, ಜನರಲ್ ಮರ್ಚೆಂಟ್, 3, ಇರುಳಪ್ಪನ ಬೀದಿ, ಮದರಾಸ್.

ಸುಪೀರಿಯರ್ ಲಿವರ್ ಜುವೈಲ್ಡ್ ವಾಚು.

(ರಿಜಿಸ್ಟರಾಗಿದೆ).

ಕ್ರಯ ಸರಪಣಿ ಸಹಿತ ರೂ. 3-0-0.	5 ವರುಷಗಳ ಗ್ಯಾರಂಟಿ.	ವಿ. ಪಿ. ಚಾರ್ಜು 4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳಲ್ಲಿ ಕಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ತೊಗಲುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು. ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0; ವಿ. ಪಿ. ಚಾರ್ಜು 4 ಆಣೆ.

ಇಂಡಿಯನ್ ಮೆಯಿಲ್ ಲೀವರ್ ವಾಚು.

(ಇದು ಸಹ ರಿಜಿಸ್ಟರಾಗಿದೆ.)

ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0.	5 ವರುಷಗಳ ಗ್ಯಾರಂಟಿ ಪತ್ರ.	ವಿ. ಪಿ. ಛಾರ್ಜು 4 ಆಣೆ.

ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಹಳ ಗಿರಾಕಿಗಳ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು ಇರುವದು. ಇದರ ಹಿಂಭಾಗದಲ್ಲಿ ನಮ್ಮ ಡಸ್ಟು ಪ್ರೂಫ್ ಎಂಬ ಗ್ಲಾಸು ಡೋಮು ಇರುವದು. ಬಹಳ ಗಟ್ಟಿತರವಾದ ಸಾಮಾನುಗಳಿಂದ ತಯಾರಿಸಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು. ಬಹಳವಾಗಿ ಹೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ತಿಳಿಯುವದು. ಪರೀಕ್ಷಿಸಿರಿ. ಇಂಡಿಯನ್ ಮೆಯಿಲ್ ಲಿವರ್ ಗಡಿಯಾರ (ಗ್ಲಾಸ್ ಡೋಮು ಇರುವದು) ಉತ್ತಮ ಸರಪಣಿ ಸಹಿತ ರೂ. 3-0-0. ವಿ. ಪಿ. ಚಾರ್ಜು 4 ಆಣೆ.



ಈ ಕೆಳಗೆ ಕಾಣಿಸಿರುವ ಗಡಿಯಾರಗಳು ಸಹ ನಮ್ಮಲ್ಲಿ ದೊರೆಯುತ್ತವೆ— ಇಂಗ್ಲಿಷ್ ಮೆಯಿಲ್ ಲೀವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ಕ್ರಯ ರೂ. 2-8-0; ವಿ. ಪಿ. 4 ಆಣೆ. ರಂಗೂನ್ ಮೆಯಿಲ್ ಲಿವರ್ ಗಡಿಯಾರ, ಗ್ಲಾಸು ಡೋಮು ಇಲ್ಲದ್ದು, ಸರಪಣಿ ಸಹಿತ ರೂ. 2-8-0; ವಿ. ಪಿ. 4 ಆಣೆ.

ತಾಜಾ ಕಲಂ :—ನಮ್ಮ ಸುಂದರವಾದ 60 ಪೇಜುಗಳ ದೊಡ್ಡ ಕ್ಯಾಟಲಾಗ್ ಬೇಕಾದವರು ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,

[156-5] ಪೋಸ್ಟು ಬಾಕ್ಸು 167, ಮದರಾಸ್.



ಅನಾಹುತಗಳು ಸಂಭವಿಸುವವು !

ಕೆಲಸಮಾಡುವ ಯಾವ ಮನುಷ್ಯನಾದರೂ, ಕೆಲಸಮಾಡದ ಅನೇಕ ಮನುಷ್ಯರಲ್ಲಾದರೂ ಅನಾಹುತಗಳು ಆಗುತ್ತವೆ, ಪ್ರತಿದಿನವೂ ಯಾರಿಗಾದರೂ ಸಂಭವಿಸುತ್ತೆ. ಎಂದಾದರೂ ಒಂದು ದಿನ ಅದು ನಿಮಗೂ ಆದೀತು.

ಇಲಿನಾಯ್ಸಿನ ಶಿಪ್ಪುಡಿಯಲ್ಲಿರುವ ಮೆ॥ ಓ. ಎಸ್. ಸ್ಟ್ಯಾಂಟನ್ ಹೇಳುವದು '— "ಮಹಡಿಯಿಂದ ಇಳಿಯುತ್ತಿದ್ದಾಗ ನನ್ನ ಹೆಂಡತಿಯು ನಿಂತುಕೊಳ್ಳಲಾರದಷ್ಟು ಕಠಿಣವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೀಲು ಪೆಡಸಾಗಿ ಬಹಳ ಊದಿಕೊಂಡು, ಮುಟ್ಟಿದರೆ ನೋವು ಸಹಿಸಕೂಡದಷ್ಟು ಮಟ್ಟಿಗೆ ಇತ್ತು. ಆಕೆ ಅನೇಕವಾದ ಔಷಧಿಗಳನ್ನೆಲ್ಲಾ ಉಪಯೋಗಿಸಿ, ಆ ತತ್ಕಾಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂಡಳು.

ಸ್ಲೋನ್ಸ್ ಓರಿಯೆಂಟಲ್ ಬಾಂ ಎಂಬುದನ್ನು ಕುರಿತು ಕೇಳಿ, ಅದನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿಕೊಂಡಳು. ಅದನ್ನು 3 ದಿವಸಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು."

ಸೀಸೆ 1ಕ್ಕೆ 1 ರೂ. ಮೇರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[81-30]

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Two in one (share policy) scheme and Property Investment (Land and house-purchase and investment) schemes, the benefits of which are hitherto unknown to both the Insurance and Banking worlds, are a speciality. Free policies are a Novelty.

WANTED

One energetic and experienced **Travelling Inspector** on both commission and allowance to organize branches, and **Local Directors** on Commission in each and every taluk of the Mysore Province. **Security** and **Good references essential.**

For propectuses and other particulars please apply with your experience in the line to:—

M. L. NAGANNA, Esq.,

[15-36] Managing Director, Life & Marriage Assurance Buildings, Mysore.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಜಪಾನ್, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಡು ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಬಾಕುವಾಯು, ಜ್ವರ, ಮಂಟ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಹೊಟ್ಟೆನೋವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆರಿಸ್ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ॥ ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-1] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಸೆಪ್ಟಂಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1–14–0.

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಈಭಾರೀ ಕ್ರಯದಕೈ ಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ. 1-14-0 ಆಣೆಗೆ ಕೊಡಲ್ಪಡುವುದು. [111-16]

ವಿಳಾಸ—ವಿ. ಕೆ. ಕಂಚುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ನಕ್ಕಲ್‌ಗಳಿಂದ ಮೋಸಹೋಗದಿರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಬಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವದು. ಇದು ಅಶುದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ ಕೊಳವೆಗೆ 0-8-0; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0

ಕೂದಲೆಣ್ಣೆಗೆ ಹಾಕುವ ಬೀ ಕೆರೋಸಿನ್ ಎಣ್ಣೆ ಕೊಟ್ಟಾರು, ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೀ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮಿದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿಸಿ

3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಬಂಗಾರದ ಪದಕಗಳು ಬಂದಿವೆ

ವಿಳಾಸ—ಸಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[174-3] 177, ಚೈನಾಬಜಾರ್ ರೋಡ್, ಮದರಾಸ್

ರಬ್ಬರು ಮುದ್ರೆಗಳು!

ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಚಾಲಕಿ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ಕೊಡಿನ ಪೆಟ್ಟಿಗೆ, ಬ್ರಸ್ ಪ್ಯಾಡ್ ಮತ್ತು ಇಂಕಿ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಚಾರ್ಜ್ 4 ಆಣೆ ಬರೆಯುವವರು ಹೆಸರು ಮುಂತಾದವುಗಳನ್ನು ಹುಟ್ಟಕ್ಷರಗಳಿಂದ ಬರೆಯಬೇಕು

[140-10]

ನಮ್ಮ ವಿಳಾಸ:—ರಾಂಬನ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

GRAND CLEARANCE SALE Rs. 1-15-0.

ಯೋಗ್ಯತಾ ಪತ್ರಿಕೆ.—ನಾನು ಬ್ರಾತ್ರಿಯಿಂದ ಎಲ್ಲರಿಗೂ ತಿಳಿಸುವದೇನಂದರೆ, ನಿಮ್ಮಿಂದ ನಾನು ತರಿಸಿಕೊಂಡ ಲೇಡಿಸ್ ಗಡಿಯಾರ ಉಪಯೋಗಕ್ಕೆ ಬಹಳ ಶ್ರೇಷ್ಠವಾಗಿದೆ. ಗಂಟೆ ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಇತರ ಕಂಪನಿಯವರು ಇಂಥಾ ಗಡಿಯಾರವನ್ನು ಕಳುಹಿಸುವದಿಲ್ಲ ಮತ್ತು 3 ಗಡಿಯಾರಗಳನ್ನು ವಿ. ಪಿ. ಮೂಲಕ ಕಳುಹಿಸಿ ಕೊಡಿ. [149-5]

ಮ್ಯಾನೇಜರ್, ಇರಾಯದಕ್ಷತನ ಆಫೀಸು, ತಿರುಚನಾಪಳ್ಳಿ.

ಸುಂದರವಾದ ಲೇಡೀಸ್ ಸ್ಪ್ರಿಂಗ್ ಪಾಕೆಟ್ ವಾಚ್.

ಅಸಲು ಕ್ರಯ ರೂ. 3–14–0; ಈಗ ರೂ. 1–15–0.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವ ಕಂಪಸೇಷನ್ ಬ್ಯಾಲನ್ಸ್ ಬಹು ಸೊಗಸಾದ ಗಡಿಯಾರ ಇದು ನೋಡುವದಕ್ಕೆ ಮುಚ್ಚಟವಾಗಿ ಇರುತ್ತೆ ಇತರ ಚಿಲ್ಲರೆ ಎರಡು ಮೂರು ರೂಪಾಯಿ ಕ್ರಯದ ಬೋಗಸ್ ಗಡಿಯಾರಗಳನ್ನು ಕೊಂಡು ಹಣ ಕಳಕೊಂಡು ಸಂಬಿ ಮೋಸಹೋಗಬೇಡಿರಿ 5 ವರ್ಷಗಳ ಗ್ಯಾರಂಟಿ ಇದೇ ಸೆಪಟೆಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಮಾತ್ರ ರೂ. 1-15-0 ಕೊಡಬೇಕೆಂದು ನಮ್ಮ ಏರ್ಪಾಡು ಆಗಿದೆ.

ನಮ್ಮ ವಿಳಾಸ—ರಾಸ್ ವಾಚ್ ಕಂಪೆನಿ,

ಡೈರೆಕ್ಟ್ ಇಂಪಾರ್ಟರ್ಸ್, 3 ಇರುಳಪ್ಪನ ಬೀದಿ, ಮದರಾಸು

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(1) ಆರೋಗ್ಯ ಪ್ರಭಾಕರ (ಟಾನಿಕ್) 48 ಮಾತ್ರೆಗೆ 1 ರೂ.; (2) ಕಾಲರಾ ಮಾತ್ರೆ 1 ರೂ.; (3) ಅಜೀರ್ಣದ ಮಾತ್ರೆ 50 ಕ್ಕೆ 12 ಆ.; (4) ಜ್ವರದ ಮಾತ್ರೆ 8 ಆ.; (5) ಮುಖರಂಜನ್ ಮಾತ್ರೆ (ಎಲ್ಲಾ ವಿಧ ಕಸ್ತೂರಿ ಮಾತ್ರೆಗಳಿಗಿಂತ ಶ್ರೇಷ್ಠ) 150 ಕ್ಕೆ 4 ಆ.; (6) ಬಾಧಾ ನಿವಾರಿಣಿ 4 ಆ.; (7) ಬಾಲಸಂಜೀವಿನಿ 4 ಆ.; (8) ಉಬ್ಬಸದ ಮಾತ್ರೆ 12 ಆ.; (9) ಸರಳ ಭೇದಿ ಮಾತ್ರೆ 8 ಆ.; (10) ಕಸ್ತೂರಿ ಮಾತ್ರೆ 300 ಕ್ಕೆ 4 ಆ.

[126-12] ನಮ್ಮ ವಿಳಾಸ:—ಪಂಡಿತ್ ಎಸ್. ಗರಳಪುರಿ, ಮೈಸೂರು.

ಡೋಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಿರುವದರಿಂದ ಕೂಸುಗಳು ಲವಲವಿಕೆಯಿಂದ ತಕ್ಕೊಳ್ಳುತ್ತವೆ. ಇದನ್ನು ತಕ್ಕೊಳ್ಳುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ತೂಕ ಸಹ ಬೆಳೆಯುತ್ತದೆ. ಕ್ರಯ—ಶೀಸೆ 1 ಕ್ಕೆ 12 ಆಣೆ; ಟ.ಖ. 4 ಆಣೆ.

ವಿಳಾಸ—ಕೆ. ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

[177-3] [ಏಜಂಟರು ಬೇಕಾಗಿರುತ್ತಾರೆ.]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

27—8—1915 ರಿಂದ 3—9—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	4	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	24	12	2	3
ಮೈಸೂರು ,,	15	11	0	0
ಕೋಲಾರ್ ,,	2	1	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	8	4	0	0
ಚಿತ್ರದುರ್ಗ ,,	7	3	0	0
ಕಡೂರ್ ,	6	2	0	0
ಶಿವಮೊಗ್ಗಾ ..	25	14	0	0
ಒಟ್ಟು	91	48	2	3

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಭಾದ್ರಪದ ಶುದ್ಧ ನವಮಿ ಶುಕ್ರವಾರದಿಂದ ಭಾದ್ರಪದ ಶುದ್ಧ ಪೌರ್ಣಮಿ ಗುರುವಾರದ ವರೆಗಿನ ಒಂದು ವಾರದ ಸಂಚಾಂಗ.

1915 ನೇ ಸೆಪ್ಟಂಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾ ಮಾಸ ತೇದಿ
17	ಶುಕ್ರ *	ನವಮಿ	41-18	ಮೂಲ	18 30	1
18	ಶನಿ	ದಶಮಿ	36-37	ಪೂಷಾ	14-39	2
19	ಭಾನು ::	ಏಕಾದಶಿ	30-14	ಉಷಾ	11-18	3
20	ಸೋಮ †	ದ್ವಾದಶಿ	26-25	ಶ್ರವಣ	8-37	4
21	ಮಂಗಳ §	ತ್ರಯೋದಶಿ	23-0	ಧನಿಷ್ಟ	6-43	5
22	ಬುಧ ;;	ಚತುರ್ದಶಿ	20-43	ಶತಭಿಷ	5-57	6
23	ಗುರು ‡	ಪೌರ್ಣಮಿ	19-34	ಪೂಭಾ	6-7	7

* ನಂದನವಮಿ :: ಸರ್ವತ್ರ ಏಕಾದಶಿ, ವೆಂಕಟೇಶ ಜಯಂತಿ. † ಶ್ರವಣ ದ್ವಾದಶಿ, ವಾಮನ ಜಯಂತಿ, ಪ್ರದೋಷ, ಮಳೆ ನಕ್ಷತ್ರ—ಉತ್ತರಾ 3 ನೇ ಪಾದ. § ತ್ರಯೋದಶೀ ತಿಥಿ. ;; ತಿಥಿದ್ವಯಂ, ಅನಂತಪದ್ಮನಾಭ ವ್ರತ. ‡ ಪ್ರಥಮಾ ತಿಥಿ, ಮಳೆ ನಕ್ಷತ್ರ—ಉತ್ತರಾ 4 ನೇ ಪಾದ.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ ರಿಜಿಸ್ಟರ್ಡ್

[64-24]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆ ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗೊಂಟಲನೋವು, ಶೀತ, ಚರ್ಮ ವ್ಯಾಧಿ, ಹಲ್ಲು ನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಶೀಘ್ರವಾಗಿ ನಿಲ್ಲುವವು. ಠಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0 ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಇನಾಂ ಸಾಮಾನು 50! ಇನಾಂ ಸಾಮಾನು 50!!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಹೊಂದಿರುವ

(ರಿಜಿಸ್ಟರ್ಡ್)

ರಾಜಸುಂದರಿ ರೋಜ

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಸಾಮಾನುಗಳ ಸಮೇತ ಡಬ್ಬಿ 1 ಕ್ಕೆ ರೂ. 1-0-0 ಮಾತ್ರ. ಯಾವ ಸ್ತ್ರೀಯರಿಗೆ ತಲೆ ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತಾ ಇರುವ ಮನೆಗಳಿಗೂ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವುದು. ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಇದು ಆಮ್ಲ್ಯಾಡು ಆಯಿಲ್ ನಲ್ಲಿ ತಯಾರಿಸಲ್ಪಟ್ಟದ್ದು. ಇದನ್ನು ಬರೆಯುವದರಲ್ಲಿ ಉಪಯೋಗವಿಲ್ಲ. ಒಂದನ್ನು ತರಿಸಿ ಪರೀಕ್ಷಿಸಿರಿ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆ ಗಿಣಿ 6, ಜರ್ಮನ್ ಸಿಲ್ವರು ಮೈಭರಣಿ 1, ಅದ್ದಾ 1, ತಾಂಬೂಲ ಪಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ 1, ರವಿವರ್ಮ ಫೋಟೊ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಒಂದೇ ಸಾರಿ ಮೂರು ತರಿಸಿಕೊಳ್ಳುವರಿಗೆ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. 6 ತರಿಸಿಕೊಳ್ಳುವರಿಗೆ ಇನಾಂ ಇಲ್ಲದಂತೆ ಒಂದು ರಾಸ್ ವಾಚ್ ಕಳುಹಿಸುತ್ತೇವೆ

ನಮ್ಮ ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,

[149-8] 3, ಇರುಳಪ್ಪನ ಬೀದಿ, ಮದರಾಸು.

Printed and Published by the Rev. H. Gulliford. Proprietor and Manager, Wesleyan Mission Press, Mysore. 16/9/1915.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸೆ ೧೯೧೬ ನೇ ಇಸವಿ ಸೆಪ್ಟೆಂಬರ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೧೨

ಇಲ್ಲಿ ನೋಡಿ : ಅಭಿನವ! ಅಕ್ಷರಾಂಜಲಿ!!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವ ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟ್ 4 ಆಣೆ. ಅಡ್ರೆಸ್—ಅಕ್ಷರಾಲಯ, ಮೈಸೂರು. [147-8]

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಕ್ರಿಮಿನಲ್ ಸಿವಿಲ್ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-4-0; ಲಿಫ್ ರೂ. 1-12-0. [158-8]

ವಿಳಾಸ—ಎಂ. ಪಂಡಿತಾರಾಧ್ಯರು, ಮೈಸೂರು.

ಆರ್ಯ ಭೈಷಜ್ಯ ಮಂದಿರಂ, ಶ್ರೀ ಶೃಂಗಗಿರಿ.

ಮೆಡಲ್ ಮತ್ತು ಸರ್ಟಿಫಿಕೇಟುಗಳನ್ನು ಹೊಂದಿರುವ ಶಾಸ್ತ್ರೀಯವಾದ ಔಷಧಗಳು.

1 ಅಜೀರ್ಣ ಬಲ ಕಾಲಾನಲ ರಸ —ಮನುಷ್ಯನ ಶಕ್ತಿಗೆ ಜೀರ್ಣ ಬಲ ಮುಖ್ಯ ಕಾರಣವು. ಜೀರ್ಣಶಕ್ತಿ ಇಲ್ಲದಿರುವ ಕೊರತೆಯೇ ಅನೇಕ ರೋಗಗಳ ಮೂಲ ಕಾರಣವು. ಈ ಮಾತ್ರೆಯು ಎಂಥಾ ಅಜೀರ್ಣ ರೋಗಗಳನ್ನೂ ಪರಿಹರಿಸಿ, ಜೀರ್ಣಶಕ್ತಿಯನ್ನೂ, ಬಲವನ್ನೂ ಉಂಟುಮಾಡುತ್ತದೆ. ದೇಹವನ್ನು ಪುಷ್ಟಿಗೊಳಿಸುತ್ತದೆ. ಮತ್ತು ಇದು ಆಮವಾಯು, ಹುಳಿತೇಗು, ಗುಲ್ಮ ವಾಯು, ವಿಸೂಚಿ, ಪರಿಣಾಮಶೂಲೆ, ಭೇದಿ, ಕೆಮ್ಮು, ಉಬ್ಬಸ, ಮುಂತಾದ ವ್ಯಾಧಿಗಳು, ಈ ರೋಗಗಳನ್ನು ನಿರ್ಮೂಲ ಮಾಡುವುದು. ಇದು ಮಾತ್ರವೇನು? ಅಗ್ನಿಮಾಂದ್ಯ (ಡಿಸ್ಪೆಪ್ಸಿಯಾ) ರೋಗಕ್ಕೆಲ್ಲಾ ಸಂಜೀವಿನಿ. ಕ್ರಯ 25 ಮಾತ್ರೆ ರೂ. 1-0-0. ವಿ. ಪಿ. ಛಾರ್ಜು ಬೇರೆ.

2 ಚಂದ್ರಚೂಡ ಕಷಾಯ —ಉತ್ತಮವಾದ ಶಕ್ತಿವರ್ಧಕ (ಟಾನಿಕ್) ಔಷಧ. ಕ್ರಯ ರೂ. 2-0-0 ವಿ. ಪಿ. ಛಾರ್ಜು ಪ್ರತ್ಯೇಕ. ನಮ್ಮಲ್ಲಿ ಎಲ್ಲಾ ತರದ ಔಷಧಗಳಿವೆ. [185-3]

ನಮ್ಮ ವಿಳಾಸ—ಆಯುರ್ವೇದ ಭಿಷಗ್ವರ ಕೆ. ಶೇಷಶಾಸ್ತ್ರೀ, ಶೃಂಗೇರಿ.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.



ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ದುಪಟಿ, ಪೇಟ, ಮುಗುಟ, ರುಮಾಲು, ರವಿಕೆ, ಕೋಟು ಸಿಲ್ಕು ಥಾನುಗಳು ಮತ್ತು ಚಾದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೆಂಪು ರುದ್ರಾಕ್ಷಿ ಸರ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-14]

ವಿಳಾಸ—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ನಂಬಿ ಮೋಸಹೋಗಬೇಡಿ.

ಇತರರು ಮಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಅದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಉಂಟೆ ಶಾಲು ಗಳು 5 ರೂ. ನಿಂದ 7, 10, 50 ರೂ. ಗಳ ವರೆಗೂ ಸಿಕ್ಕುತ್ತವೆ. ಪಸಂದಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಬೆಲೆಯದಾದರೂ ನಮ್ಮಲ್ಲಿ ಸಿಕ್ಕುತ್ತವೆ. 50 ರೂ. ಸರಕು ತರಿಸುವವರಿಗೆ ರಿಯಾಯತಿ ಉಂಟು. ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಗಿ ಕೊಡುತ್ತೇವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್, ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS, AMRITSAR, PANJAB.

[...]

ಇಂಡಿಯಾ ಗವರ್ನಮೆಂಟಿನ ವಾಯಿದೆಯುಳ್ಳ ಸಾಲ.

ಮಹಾಜನಗಳು ಪೋಸ್ಟ್ ಆಫೀಸಿನ ಮೂಲಕ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾದ ಷರತ್ತುಗಳು.

ಗವರ್ನ್‌ಮೆಂಟಿನವರು ಈ ವರುಷದ ಸಾಲವನ್ನು ಶೇಕಡಾ 4 ರಂತೆ ಬಡ್ಡಿಯುಳ್ಳ ಹೊಸ ರೀತಿಯಿಂದ ಎತ್ತುತ್ತಾರೆ. ಈ ಸಾಲವನ್ನು 1923 ನೇ ಇಸವಿ ನವೆಂಬರು ತಿಂಗಳೊಳಗಾಗಿ ಪೂರ್ತಾ ತೀರಿಸಿಬಿಡುತ್ತಾರೆ; ಆದರೆ ಗವರ್ನ್‌ಮೆಂಟಿನವರು ಇಷ್ಟಪಟ್ಟಲ್ಲಿ ಈ ಸಾಲವನ್ನು 1920 ನೇ ಇಸವಿ ಅಕ್ಟೋಬರ್ ಆದ ಬಳಿಕ ಯಾವಾಗಲಾದರೂ ವಾಪಸು ಮಾಡಬಹುದಾಗಿದೆ.

2. ಕಲ್ಕತ್ತಾ, ಮದ್ರಾಸ್, ಬೊಂಬಾಯಿ, ಇನ್ನೂ ಇತರ ದೊಡ್ಡ ಪಟ್ಟಣಗಳಲ್ಲಿ ಗವರ್ನ್‌ಮೆಂಟಿನವರು ಎಂದಿನಂತೆ ದರಖಾಸ್ತುಗಳ ಮೂಲಕ ಆಗಲೇ ಕೆಲವು ಕೋಟಿ ರೂಪಾಯಿ ಸಾಲವನ್ನು ಎತ್ತಿದ್ದಾಗಿದೆ; ಅಲ್ಲಿಗೆ ಈ ಸಾಲ ಎತ್ತುವುದು ನಿಲ್ಲಿಸಲ್ಪಟ್ಟಿದೆ. ಆದರೆ ಇತರ ಸಾಮಾನ್ಯ ಪ್ರಜೆಗಳ್ಯಾರಾದರೂ ಅಲ್ಪ ಸ್ವಲ್ಪ ಹಣಗಳನ್ನು ಗವರ್ನ್‌ಮೆಂಟಿಗೆ ಸಾಲ ಕೊಡಬೇಕೆಂದು ಕುತೂಹಲಪಡುತ್ತಿದ್ದರೆ ಅಂಥವರಿಗೂ ವಿಶೇಷವಾದ ಅವಕಾಶವನ್ನು ಈಗ ಕಲ್ಪಿಸಿರುತ್ತದೆ. ಇಂಥವರು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಣವನ್ನು ಹಾಕಿಯೂ ಹಾಕದೆಯೂ ಇರಬಹುದು; ಮತ್ತು ಇಂಥವರು ಸೇವಿಂಗ್ಸ್ ಬ್ಯಾಂಕು ಇರುವಂಥಾ ಸಮೀಪವಾದ ಯಾವ ಪೋಸ್ಟ್ ಆಫೀಸಿನ ಮೂಲಕವಾದರೂ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾಗಿದೆ.

ಹಣವನ್ನು ಕಟ್ಟತಕ್ಕ ಕ್ರಮ.

3. ಇಷ್ಟವುಳ್ಳವರು ಅಕ್ಟೋಬರ್ ತಾ. 30 ರ ತನಕ ದರಖಾಸ್ತುಗಳನ್ನು ಪೋಸ್ಟ್ ಆಫೀಸಿನ ಮೂಲಕ ಕೊಡತಕ್ಕದ್ದಾಗಿದೆ.

4. ದರಖಾಸ್ತು 100 ರೂಪಾಯಿಗೆ ಕಡಮೆ ಇರಕೂಡದು; ಕೇವಲ ನೂರು ರೂಪಾಯಿಗಳಿಗೆ ಬೇಕಾದರೂ ದರಖಾಸ್ತು ಕೊಡಬಹುದು. ಯಾವ ಒಬ್ಬ ದರಖಾಸ್ತುದಾರನೂ 5,000 ರೂಪಾಯಿಗಿಂತ ಹೆಚ್ಚಿಗೆ ದರಖಾಸ್ತು ಮಾಡಕೂಡದು.

ವಿಶೇಷ.—ಈಗ ಶೇಕಡಾ 3½ ಬಡ್ಡಿಯುಳ್ಳ ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಆಫೀಸಿನ ಮೂಲಕ ಪಡೆದಿಟ್ಟುಕೊಂಡಿರುವವರು ಕೂಡ ಈ ಹೊಸ ಸಾಲಕ್ಕೆ 5,000 ರೂಪಾಯಿ ತನಕ ದರಖಾಸ್ತು ಮಾಡಬಹುದು

5. ದರಖಾಸ್ತು ಮಾಡಬೇಕೆಂಬುವರು ಪೋಸ್ಟ್ ಆಫೀಸಿನಲ್ಲಿ ಕೇಳಿದರೆ ಅಲ್ಲಿ ದರಖಾಸ್ತು ಫಾರಮನ್ನು ಮುಫತ್ತಾಗಿ ಕೊಡುತ್ತಾರೆ. ಅದರ ನಮೂನೆ ಇದರ ಅಡಿಯಲ್ಲಿ ಛಾಪಿಸಿದೆ. ಆ ನಮೂನೆಯನ್ನು ತುಂಬಿ ಭರ್ತಿ ಮಾಡಿ ಪೂರ್ತಾ ಹಣದ ಸಮೇತ ಅದನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಬೇಕು. ಅದಕ್ಕೆ ತನ್ನ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವಿದ್ದರೆ ಅದನ್ನೇ ಉಪಯೋಗಿಸಿಕೊಳ್ಳಬಹುದು; ಹಾಗಿಲ್ಲದಿದ್ದರೆ ನಗದಾಗಿ ಪಾವತಿ ಮಾಡಬೇಕು. ದರಖಾಸ್ತುದಾರರು ಖುದ್ದಾಗಿ ಪೋಸ್ಟ್ ಆಫೀಸಿಗೆ ಹೋಗಬಹುದು, ಇಲ್ಲವೇ ತಮ್ಮ ಕಡೆಯವರ ಮೂಲಕ ಕಳುಹಿಸಬಹುದು. ಪಾವತಿ ಮಾಡಲ್ಪಟ್ಟ ಪೂರ್ತಾ ಹಣಗಳಿಗೆ ಕ್ರಮವಾದ ರಸೀತಿ ಕೊಡಲಾಗುತ್ತದೆ.

6. ದರಖಾಸ್ತುದಾರನು ಪಾವತಿ ಮಾಡಿದ ಪ್ರತಿ 100 ರೂಪಾಯಿಗೂ ಒಂದರಂತೆ ಗವರ್ನ್‌ಮೆಂಟ್ ಪ್ರಾಮಿಸರಿ ಪತ್ರಗಳು ಆತನಿಗೆ ತಲುಪಿಸಲಾಗುತ್ತವೆ.

ಪ್ರಾಮಿಸರಿ ಪತ್ರಗಳನ್ನು ಜೋಪಾನ ಮಾಡಿಡುವುದು.

7. ಪತ್ರಗಳನ್ನು ದರಖಾಸ್ತುದಾರನು ತನ್ನ ಬಳಿಯಲ್ಲೇ ಇಟ್ಟುಕೊಳ್ಳಬಹುದು; ಅಥವಾ ಆತನಿಗೆ ಸಮ್ಮತವಾಗಿದ್ದರೆ ಪೋಸ್ಟ್ ಆಫೀಸಿನ ಅಧಿಕಾರಿಗಳು ಅವನ್ನು ಆತನಿಗೋಸ್ಕರ ತಮ್ಮಲ್ಲೇ ಇಟ್ಟುಕೊಳ್ಳುತ್ತಾರೆ. ದರಖಾಸ್ತು ಮಾಡುವಾಗಲೇ ದರಖಾಸ್ತುದಾರನು ತನ್ನ ಇಷ್ಟವನ್ನು ದರಖಾಸ್ತಿನಲ್ಲಿ ಬರೆದುಕೊಡತಕ್ಕದ್ದು. ಪತ್ರಗಳು ತನ್ನ ಬಳಿಯೇ ಇರಬೇಕೆಂದು ಅಪೇಕ್ಷಿಸಿದರೆ ಅವು ಸಿದ್ಧವಾಗುವ ಸಮಯವನ್ನು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಸುತ್ತಾರೆ; ಅಂಥಾ ಸಮಯದಲ್ಲಿ ಆತನು ಖುದ್ದು ಹಾಜರಾಗಿ ಪತ್ರಗಳನ್ನು ತೆಗೆದುಕೊಳ್ಳತಕ್ಕದ್ದು. ಪತ್ರಗಳು ಪೋಸ್ಟ್ ಆಫೀಸಿನಲ್ಲೇ ಇರಲೆಂದು ಅಪೇಕ್ಷಿಸಿದ ಪಕ್ಷದಲ್ಲಿ ದರಖಾಸ್ತುದಾರನು ಪೋಸ್ಟ್ ಆಫೀಸಿಗೆ ಹಾಜರಾಗಬೇಕಾದದ್ದಿಲ್ಲ; ಆದರೆ ಅವು ಬಂದ ಕೂಡಲೆ ಪೋಸ್ಟ್ ಆಫೀಸಿನವರು ಅವು ತಮ್ಮ ವಶಕ್ಕೆ ಬಂದಿವೆ ಎಂದೂ, ತಮ್ಮ ವಶದಲ್ಲಿ ಇಟ್ಟುಕೊಂಡಿರುತ್ತೇವೆಂದೂ ದರಖಾಸ್ತುದಾರನಿಗೆ ತಿಳಿಯಪಡಿಸುತ್ತಾರೆ. ಕೆಲವು ಕಾಲದ ಮೇಲೆ ಪತ್ರಗಳು ಬೇಕೆಂದು ಕೇಳುವ ಪಕ್ಷಕ್ಕೆ ಅವನ್ನು ದರಖಾಸ್ತುದಾರನಿಗೆ ಕೊಡಲಾಗುತ್ತದೆ.

ಬಡ್ಡಿಯನ್ನು ಪಾವತಿಮಾಡುವ ಕ್ರಮ.

8. ಶೇಕಡ 4 ರಂತೆ ಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಪ್ರತಿ ವರುಷವೂ ಮೇ ತಾ. 31 ರಲ್ಲಿ ಶೇಕಡಾ 2 ರಷ್ಟು, ನೊವೆಂಬರ್ ತಾ. 30 ರಲ್ಲಿ ಶೇಕಡಾ 2 ರಷ್ಟು ಪಾವತಿಮಾಡಲಾಗುತ್ತದೆ. ಈ ಸಾಲದ ಹಣ ಪಾವತಿಮಾಡಿದ ತಾರೀಖು ಲಾಗಾಯತು ಮುಂದಿನ ನೊವೆಂಬರ್ ತಾ. 30 ರ ವರಿಗಿನ ಬಡ್ಡಿಯನ್ನು ಪತ್ರಗಳ ಸಂಗಡಲೇ ಕೊಡುತ್ತಾರೆ; ಒಂದು ವೇಳೆ ಪತ್ರಗಳನ್ನು ಪೋಸ್ಟ್ ಆಫೀಸಿನ ವಶದಲ್ಲೇ ಬಿಟ್ಟಿದ್ದರೆ ಮುಂದಿನ ಪ್ಯಾರಾದಲ್ಲಿ ಹೇಳುವ ಪ್ರಕಾರ ಬಡ್ಡಿಯನ್ನು ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ ಕೂಡಿಸಲಾಗುವುದು.

9. ದರಖಾಸ್ತುದಾರನು ಪತ್ರಗಳನ್ನು ಪೋಸ್ಟ್ ಆಫೀಸಿನಲ್ಲೇ ಬಿಟ್ಟಿರುವುದಾದರೆ ಪೋಸ್ಟ್ ಆಫೀಸಿನವರು ಪತ್ರಗಳ ಬಡ್ಡಿಯನ್ನು ಕಾಲಕಾಲಕ್ಕೆ ವಸೂಲು ತೆಗೆದುಕೊಂಡು ಪತ್ರಗಳ ಸೊತ್ತುದಾರರ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ಪ್ರಾರಂಭಮಾಡಿ ಆ ಲೆಕ್ಕಕ್ಕೆ ಕೂಡಿಸುತ್ತಾ ಬರುತ್ತಾರೆ. ಮತ್ತು ಬಡ್ಡಿ ಬಂದಿದೆ ಎಂಬ ಸಂಗತಿಯನ್ನು ಪೋಸ್ಟ್ ಆಫೀಸಿನವರು ಅಂಥಾ ದರಖಾಸ್ತುದಾರನಿಗೆ ಕಾಲಕ್ರಮದಲ್ಲಿ ತಿಳಿಸುತ್ತಾ ಬರುವರು. ಇದಕ್ಕಾಗಿ ಯಾವುದೊಂದು ರುಸುಮನ್ನೂ ವಸೂಲ್ಮಾಡುವುದಿಲ್ಲ; ಮತ್ತು ಆರು ತಿಂಗಳಿಗೊಂದಾವರ್ತಿ ಪಾವತಿಮಾಡುವ ಬಡ್ಡಿಯಲ್ಲಿ ಆದಾಯದ ಮೇಲಣ ತೆರಿಗೆಯನ್ನು ಕಟಾಯಿಸುವುದೂ ಇಲ್ಲ.

ದರಖಾಸ್ತುದಾರನು ಪತ್ರಗಳನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡಿದ್ದರೆ ಆರು ತಿಂಗಳಿಗೊಂದುಸಲ ಪಾವತಿಮಾಡುವ ಬಡ್ಡಿ ಹಣದಲ್ಲಿ ಪದ್ಧತಿಯ ಪ್ರಕಾರ ಆದಾಯದ ಮೇಲಣ ತೆರಿಗೆಯನ್ನು ಕಟಾಯಿಸಿಕೊಳ್ಳಲಾಗುವುದು.

ಪ್ರಾಮಿಸರಿ ಪತ್ರಗಳನ್ನು ಬಿಕರಿಮಾಡುವುದು.

10. ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣ ಹಾಕಿರತಕ್ಕವರ ಪೈಕಿ ಯಾರಾದರೂ ಈ ಹೊಸ ಸಾಲದ ಪತ್ರಗಳನ್ನು ಪಡೆದುಕೊಂಡಿದ್ದು, ಅಂಥಾ ಪತ್ರಗಳನ್ನು ಬಿಕರಿ ಮಾಡಬೇಕೆಂದು ಅಪೇಕ್ಷಿಸಿ ತಿಳಿಸಿದಲ್ಲಿ ಪೋಸ್ಟ್ ಆಫೀಸಿನವರು ದಳ್ಳಾಳಿ ಅಥವಾ ರುಸುಮು ಯಾವುದೊಂದೂ ತೆಗೆದುಕೊಳ್ಳದೆ ಆ ಪತ್ರ ಅಥವಾ ಪತ್ರಗಳನ್ನು ಬಿಕರಿ ಮಾಡಿಸಿಕೊಡುತ್ತಾರೆ. ಈ ವಿಷಯದಲ್ಲಿ ಪೋಸ್ಟ್ ಆಫೀಸುಗಳಲ್ಲಿ ವಿಚಾರಿಸಿದರೆ ಎಲ್ಲಾ ಸಂಗತಿಗಳೂ ಸ್ಪಷ್ಟವಾಗಿ ತಿಳಿಸಲ್ಪಡುವುವು.

ದರಖಾಸ್ತಿನ ನಮೂನೆ.

............ನಾನು 1916 ನೇ ಇಸವಿ ಜುಲೈ ತಾ. 28 ರಲ್ಲಿ ಪ್ರಕಟವಾದ ಗೆಜೆಟ್ ಆಫ್ ಇಂಡಿಯಾ ವಿಶೇಷ ಪತ್ರಿಕೆಯಲ್ಲಿ ನಮೂದಾಗಿರುವ ಶೇಕಡಾ ನಾಲ್ಕರಂತೆ ಬಡ್ಡಿಯುಳ್ಳ ವಾಯಿದೆ ಕಂಡ ಸಾಲಕ್ಕಾಗಿ ....ರೂಪಾಯಿಗಳ ಸಾಲಕ್ಕೋಸ್ಕರ ದರಖಾಸ್ತು ಮಾಡುತ್ತೇನೆ.

ನಾನು ಈ ಮೂಲಕ ಕೇಳುವ ಸಾಲದ ಪತ್ರಗಳಿಗೆ ಪೂರ್ತಾ ....ರೂಪಾಯಿಗಳನ್ನು ಹಾಜರು ಮಾಡುತ್ತೇನೆ. ನಾನು ಈ ಸಾಲಕ್ಕೆ ಹಣವನ್ನು ಕೊಡಬೇಕಾಗಿರೋಣದರಿಂದ ನನ್ನ ಹೆಸರಿನಲ್ಲಿ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಬಾಕಿ ಇರುವ ಹಣದ ಪೈಕಿ ಈ ಸಾಲಕ್ಕೆ ಬೇಕಾಗುವ ....ರೂಪಾಯಿಗಳನ್ನು ವಾಪಸು ಕೊಡಿಸುವಂತೆ ಮಾಡಬೇಕೆಂದು ಕೋರುತ್ತೇನೆ. ಈ ದರಖಾಸ್ತಿನ ಹಣಕ್ಕಾಗಿ ಇದರ ಕೂಡ ....ರೂಪಾಯನ್ನು ಹಾಜರು ಮಾಡಿರುವೆನು; ಬಾಕಿ ....ರೂಪಾಯನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿರುವ ....ರೂಪಾಯಿನಲ್ಲಿ ಉಪಯೋಗಿಸಿಕೊಳ್ಳುವಂತೆ ಕೋರುತ್ತೇನೆ	ಅವಶ್ಯವಿಲ್ಲದ ಭಾಗಗಳನ್ನು ಹೊಡೆದುಬಿಡಿ.
ನನ್ನ ಬಾಬತು ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಮತ್ತು ಟೆಲಿಗ್ರಾಫ್ ಅಕೌಂಟೆಂಟ್ ಜನರಲ್‌ರವರು ನನ್ನ ಪರವಾಗಿ ತಮ್ಮ ಬಳಿಯಲ್ಲೇ ಇಟ್ಟುಕೊಂಡಿರಬೇಕೆಂದೂ, ಆ ಪತ್ರಗಳಿಗಾಗಿ ಬರುವ ಬಡ್ಡಿಯನ್ನು ಕಾಲಕ್ರಮದಲ್ಲಿ ವಸೂಲಿ ತೆಗೆದುಕೊಂಡು ನನ್ನ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ ಕೂಡಿಸುತ್ತಾ ಬರಬೇಕೆಂದೂ ಕೋರುತ್ತೇನೆ. ನನಗೆ ಕೊಟ್ಟಿರುವ ಕೆಳಗೆ ನಮೂದಾಗುವ ಹೆಸರು ವಿಳಾಸವುಳ್ಳ ಪ್ರಾಮಿಸರಿ ಪತ್ರಗಳ ಮೊಬಲಗನ್ನು ನನಗೆ ಪಾವತಿ ಮಾಡಿಸಬೇಕೆಂದು ಕೋರುತ್ತೇನೆ	ಅವಶ್ಯವಿಲ್ಲದ ಭಾಗಗಳನ್ನು ಹೊಡೆದು ಬಿಡಿ.

ಹೆಸರು ____________________

ಮೊಕ್ಕಾಮು ____________________

ತಾರೀಖು ____________ 1916.

[192-3] [ಇಷ್ಟವುಳ್ಳವರು ಈ ಫಾರಮನ್ನೇ ಕತ್ತರಿಸಿ ಉಪಯೋಗಿಸಬಹುದು.]

ಸುರಕ್ಷಿತವಾಗಿ ಸ್ವಲ್ಪ ಹಣ ಹಾಕಿ ವಂಶ ಪಾರಂಪರ್ಯವಾಗಿ ಪ್ರತಿ ವರ್ಷವೂ ಲಾಭ ಪಡೆಯಿರಿ !

ಶೇ. ಸಾಲೀಯಾನಾ ೮ ರೂ. ಬಡ್ಡಿ ಪ್ರಕಾರ ಸಾಲ ಪಡೆಯುವ ಅರ್ಹತೆಯನ್ನು ಹೊಂದಿ !!

ಯಾವ ಚಂದಾವನ್ನೂ ಕೊಡದೆ 500 ರೂ. ವರೆಗೆ ಬೋನಸ್ಸುಳ್ಳ ಜೀವವಿಮೆ ಪತ್ರ ಪಡೆಯಿರಿ; ವಸತಿ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ !!!

ಮೈಸೂರು ದೇಶದ ಜನಗಳಿಗೋಸ್ಕರ ಮೈಸೂರಲ್ಲಿ ಸ್ಥಾಪಿತವಾಗಿರುವ

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಷೂರೆನ್ಸ್ ಕಂಪೆನಿಯು

ಮೈಸೂರು ದೇಶದಲ್ಲಿ ಮೊದಲನೇ ಸಾರಿ ಜಾರಿಗೆ ತಂದಿರುವ

ಅತ್ಯಾಶ್ಚರ್ಯಕರವಾದ ಮತ್ತು ನವೀನವಾದ ಒಂದರಲ್ಲಿ ಎರಡು ಅಥವಾ ಷೇರು ಜೀವವಿಮೆ

ಎಂಬ ಏರ್ಪಾಡನ್ನು ಕೇಳಿಲ್ಲವೇ?

ಇಲ್ಲದಿದ್ದರೆ ಅದನ್ನು ತಪ್ಪಿಲ್ಲದೆ ವಿವರಿಸುವ ಪ್ರಕಟನ ಪತ್ರಿಕೆ, ಪ್ರಪೋಸಲ್ ಫಾರಂ ಮತ್ತು ಇತರ ಅವಶ್ಯಕವಾಗಿ ತಿಳಿಯತಕ್ಕ ವಿಷಯಗಳಿಗೋಸ್ಕರ ತಕ್ಷಣವೇ ಬರೆಯಿರಿ ಮತ್ತು ಮೇಲ್ಕಂಡ ಏರ್ಪಾಡಿನ ಪ್ರಕಾರ ಕಂಪೆನಿಯು ಹತ್ತು ಷೇರುಗಳಿಗೆ ದರಖಾಸ್ತು ಕೊಟ್ಟು, 55 ರೂಪಾಯಿಗಳನ್ನು ಆರು ಕಂತುಗಳಾಗಿ ಒಂದು ವರ್ಷದಲ್ಲಿ ಪಾವತಿ ಮಾಡಿ, ಇದುವರೆವಿಗೂ ಜೀವವಿಮೆ ಪ್ರಪಂಚಕ್ಕೇ ತಿಳಿಯದ ಈ ಮೇಲೆ ವಿವರಿಸಿರುವ ವಿಶೇಷತರವಾದ ಪ್ರಯೋಜನವನ್ನು ಹೊಂದಿರಿ. ಹೀಗೆ ನಿಮ್ಮಿಂದ ವಸೂಲಾಗುವ ಮೊಬಲಗೆಲ್ಲಾ ಗೌರ್ನಮೆಂಟಿನಲ್ಲೂ, ಮತ್ತು ಕಟ್ಟಡಗಳ ಮೇಲೂ ಸುರಕ್ಷಿತವಾಗಿ ಇಡಲ್ಪಡುವದು.

ಬೇಕಾಗಿದೆ.

ನಮ್ಮಲ್ಲಿ ಸ್ಥಿರಸ್ವತ್ತುಗಳ ಮೇಲೆ ಸಾಲ ಕೊಡುವದು, ಜೀವವಿಮೆ ಇನ್ನೂ ಮುಂತಾದ ನವೀನವಾದ ಏರ್ಪಾಡುಗಳು ಇರುತ್ತವೆ. ಮೈಸೂರು ದೇಶದ ಪ್ರತಿಯೊಂದು ತಾಲ್ಲೋಕಿನಲ್ಲಿಯೂ ಈ ಕಂಪೆನಿಯ ಕೆಲಸವನ್ನು ನಡೆಸುವದಕ್ಕೆ ಲೋಕಲ್ ಡೈರೆಕ್ಟರುಗಳು ಬೇಕಾಗಿರುತ್ತೆ. ಇಷ್ಟವುಳ್ಳವರು ಪ್ರಕಟನ ಪತ್ರಿಕೆಗಳಿಗೂ ಮತ್ತು ನಿಬಂಧನೆಗಳಿಗೂ ಸಹ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

M. L. NAGANNA, Esq.,

[15-37] Managing Director, Life & Marriage Assurance Buildings, Mysore.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜ ಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಮ್ಮ ಮನೆಯಲ್ಲಿದ್ದರೆ ಮಾತು ವಾಸಿಸೂ ವೈದ್ಯರ ಸಮಯವನ್ನು ಕಾದು ಪೇರೆಯಿಡುವದು ನಿಜವಾಗಿಯೂ ತಪ್ಪುವದು.—ಶೀತ, ಶೀತವಾಯು, ಅಜೀರ್ಣ, ಸಿಡಿಬಾವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಣೇರಿಸೆ, ಬಲಹೀನತೆ ಕೆಟ್ಟಸ್ವಪ್ನ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 100 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ಕರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆರಿಡ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯಂಲೇನ್ ನಂ ೪, ಬೊಂಬಾಯಿ., ಇವರು ಬರೆದಿರುವದು—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-2] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ರಬ್ಬರು ಮುದ್ರೆಗಳು!



ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಎಲ್ಲಾ ತರದಂಥ ರಬ್ಬರು ಮುದ್ರೆಗಳನ್ನು ಮಾಡುತ್ತೇವೆ. ಇದರ ಕ್ರಯ ತೋಡಿನ ಪೆಟ್ಟಿಗೆ, ಬ್ರಷ್ ಮತ್ತು ಇಂಕಿ ಬಾಟ್ಲು ಸಹಿತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಅಕ್ಷರ ಮುಂತಾದವುಗಳನ್ನು ಇಂಗ್ಲೀಷ್ ಅಕ್ಷರಗಳಿಂದ ಬರೆಯಬೇಕು.

[149-11]

ನಮ್ಮ ವಿಳಾಸ:—ರಾಂಭಾಗನ್ ವರ್ಕ್ಸ್, ಸಾಹುಕಾರ್‌ಪೇಟೆ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಉರಿ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆಸುತ್ತುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮತ್ತು ಕ್ರಿಯೆಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ಹೋಗುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [176-4]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು, ಅಥವಾ ಡೋನ್ಸ್ ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದುಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವು ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-34]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ.



ಸೆಪ್ಟಂಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1–14–0.

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವ ಕ್ಕಾಗಿ ಅರ್ಧಾರ್ಧ ಕ್ರಯದ ಕೈ ಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲ್ಪಡುತ್ತೆ. [111-17]

ವಿಳಾಸ—ವಿ. ಕೆ. ಕಣ್ಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಹಿನ ಕಾಲದಲ್ಲಿ ಸಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಅಕ್ಕೆ ಭಂಗಾರದ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಶ್ರೀಮಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ಇರುವುದು. ಇದು ಅಸಲ್ಲವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬುಡ್ಡಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-6-0 ; ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡುಗಳು 1 ಡಜನ್‌ಗೆ 0-12-0. ಕೊಡಲೆಣ್ಣೆಗೆ ಹಾಕುವ ಟೀ ಕೆರೋಸಿನ್ ಎಣ್ಣೆ ಕೊಟ್ಟಾರು,

ಜೋಕೆ! ನಮ್ಮ ರಾಜಗುರುಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಈ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ನುಣುಪಿನ ಕಣ್ಣಿಗೂ ತಂಪು ಕೊಡುವುದು, ಕೂದಲು ಉದುರುವುದನ್ನು ತಡೆದು ಕಪ್ಪುಮಯವಾಗಿ ಬೆಳಸುತ್ತದೆ. ಮಾರ್ಕೆಟಿನಲ್ಲಿ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ

ವಿಳಾಸ—ನಾ ಧಗವಾನ್‌ದಾಸ್ ಚೂನಿಲಾಲ್ ಕಂಪನಿ, 177, ಬೈನಾಬಜಾರ್ ರೋಡ್, ಮದರಾಸ್

[...14]

'ಸಂಗೀತ ಪಾರಿಜಾತ'

ಹೊಸ ಮುದ್ರಣ ! ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ತುಂಬಿದೆ ! ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ

[275-41] ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

(1) ಆರೋಗ್ಯ ಪ್ರಭಾಕರ (ಟಾನಿಕ್) 40 ಮಾತ್ರೆಗೆ 1 ರೂ.; (2) ಕಾಲರಾ ಮಾತ್ರೆ 1 ರೂ ; (3) ಅಜೀರ್ಣದ ಮಾತ್ರೆ 5 ಕ್ಕೆ 12 ಆ ; (4) ಜ್ವರದ ಮಾತ್ರೆ 8 ಆ ; (5) ಮುಖರಂಜನ ಮಾತ್ರೆ (ಎಲ್ಲಾ ವಿಧ ಕಸ್ತೂರಿ ಮಾತ್ರೆಗಳಿಗಿಂತ ಶ್ರೇಷ್ಠ) 150 ಕ್ಕೆ 4 ಆ.; (6) ಬಾಧಾ ನಿವಾರಣ 4 ಆ.; (7) ಬಾಲಸಂಜೀವಿನಿ 4 ಆ.; (8) ಉಬ್ಬಸದ ಮಾತ್ರೆ 12 ಆ ; (9) ಸರ್ವ ಭೇದಿ ಮಾತ್ರೆ 8 ಆ ; (10) ಕಸ್ತೂರಿ ಮಾತ್ರೆ 300 ಕ್ಕೆ 4 ಆ

[126-3] ನಮ್ಮ ವಿಳಾಸ :—ಪಂಡಿತ್ ಎಸ್. ಗಣಪತಿ, ಮೈಸೂರು.

ಸೋಲಾಪುರದ ಚಕ್ಕುಗಳೂ, ಶೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರಕಿದೆ.

ವರ್ತಕರಲ್ಲಿ ಹಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಶೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಚಿಲ್ಲರೆ ಯಾಗಿಯೂ ದೊರೆಯುವುವು.

ಬೇಲುಗಟ್ಟಿ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಬೆಲೆಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [55–25]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 150, ಕಿಲಾರಿ ರೋಡು (ಕುಂಬಿಗರಪೇಟೆ) ಬೆಂಗಳೂರು ಸಿಟಿ.

ನೋಟೀಸ್.

ಬೊಂಬಾಯಿ ತಾತಾ ಸನ್ಸ ಸ್ವದೇಶೀ ಮಿಲ್ಸು ಕಂಪೆನಿಯಲ್ಲಿ ತಯಾರಾಗುವ ಪಂಚೆಗಳು, ಪರಟಂಗು, ಚಕ್ಕು, ಟ್ವಿಲ್, ಹಚ್ಚಡ ಮುಂತಾದ ಜವಳಿ ಮತ್ತು ನಂಬರುವಾರು ನೂಲು ಮಾರಾಟ ಮಾಡಲು ನಮ್ಮನ್ನು ಸೋಲ್ ಏಜಂಟರನ್ನಾಗಿ ನಿರ್ವಹಿಸಿರುವುದರಿಂದ ನಮ್ಮಲ್ಲಿ ಈ ಮಾಲು ಕಾರಾರುವಾಕ್ ಬೆಲೆಗೆ ದೊರೆಯುವುದಲ್ಲದೆ ಜವಳಿಗೆ ಡಿಸ್ಕೌಂಟು ಸಹ ದೊರೆಯುತ್ತೆ. [172-3]

ಕಮಿಷನ್ ಮತ್ತು ಜನರಲ್ ಏಜನ್ಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೋಲ್ಲಿರಯ್ಯನ ಬೀದಿ, ಶಿವಮೊಗ್ಗ.

ಹೊಸ ಪುಸ್ತಕಗಳು.

ಸೊಗಸಾದ ಕಾಗದ, ಅಂದವಾದ ಮುದ್ರಣ, ಉತ್ತಮ ವಿಷಯ.

(1) "ಪ್ರಫುಲ್ಲ" ಪತ್ತೇದಾರಿಯ ಕಥೆ ಈಗತಾನೆ ಅಚ್ಚಾಗಿದೆ ಪ್ರಾರಂಭಿಸಿದರೆ ಮುಗಿಸುವವರೆಗೂ ನಡುವೆ ನಿಲ್ಲಿಸಲು ಮನಸ್ಸೇ ಬರುವದಿಲ್ಲ. 12 ಆಣೆ. (2) "ಜಪಾನ್ ಸಾಮ್ರಾಜ್ಯ" ಆಶ್ಚರ್ಯಕರವಾದ ವಿಷಯ ತಿಳಿವಳಿಕೆ ನಾಗರಿಕತೆ ಹೆಚ್ಚುತ್ತವೆ. 6 ಆಣೆ. (3) "ಉತ್ತಮ ದಂಪತಿಗಳ" ವಿಷಯವಾದ ವಿಚಿತ್ರ ಕಥೆ. 4 ಆಣೆ. (4) "ಉನ್ನತಿ" ಮನೋಹರವಾದ ಬಂಗಾಳಿ ನಾವಲ್ 2½ ಆಣೆ. (5) ಲೊ. ಸೆ. ಪ. ಯಲ್ಲಿ ಉತ್ತರ ಬರೆವ ವಿಧಾನ 1 ಆಣೆ. ಅಂಚೆ ವೆಚ್ಚ ಬೇರೆ. ಬೆಂಗಳೂರು ದೊಡ್ಡಪೇಟೆಯಲ್ಲಿ (1) ಎಂ. ಸುಬ್ಬರಾವ್ ಬುಕ್‌ಸೆಲರ್, (2) ಕೆ. ಚೌರಪ್ಪ ಎಂಡ್ ಕೊ; ಮೈಸೂರಿನಲ್ಲಿ (3) ಜನರಲ್ ಏಜನ್ಸಿ [135-6]

"ಕಾದಂಬರೀ ಸಂಗ್ರಹ" ಮಾಸಪತ್ರಿಕೆ!

ಈ ಪತ್ರಿಕೆಯಲ್ಲಿ ಇದುವರೆಗೆ 25 ಪುಸ್ತಕಗಳು ಪ್ರಕಟವಾಗಿವೆ.

ನ್ಯಾಕ್ಸ್ ಪರೀಕ್ಷೆ 2 ಆ, ಸೌದಾಮಿನಿ, 5 ಆ, ಬೃಂದಾವನ 2 ಆ, ಮಾಲಿನೀ 2 ಆ, ಪ್ರೇಮವಿಜಯ 2 ಆ, ಸುಲೋಚನಾ 3 ಆ, ಸೀತಾಬೋಧಿನಿ 2 ಆ, ಕಾಪಾಲಿಕ 6 ಆ, ವಿನೋದ ಚಂದ್ರ 2 ಆ, ಸದಾಚಾರ ವಿವೇಚನೆ 2 ಆ, ವಿಶಾಲಾಕ್ಷಿ 12 ಆ, ಕಮಲ ಕುಮಾರಿ 9 ಆ, ನನ್ನ ಸಂಸಾರ 5 ಆ, ವಿನೋದ ಲಹರಿಯು 5 ಆ, ಚಂದ್ರಿಕಾವಿಜಯ ನಾಟಕ 3 ಆ. ಎಂಟು ಕಾದಂಬರಿ ಸೇರಿ ಬೈಂಡಾದ ಪ್ರಥಮ ಸಂಪುಟ 1-4-0, 11 ಗ್ರಂಥಗಳುಳ್ಳ ದ್ವಿತೀಯ ಸಂಪುಟ 1-8-0, ದೊಡ್ಡ ದೊಡ್ಡ 3 ಕಾದಂಬರಿಗಳುಳ್ಳ ತೃತೀಯ ಸಂಪುಟ 1-8-0

ವಿಳಾಸ :—ಕಾದಂಬರೀ ಸಂಗ್ರಹ ಆಫೀಸ್, ಮೈಸೂರು ; ಮತ್ತು

[8-37] ಜನರಲ್ ಏಜನ್ಸಿ, ಮೈಸೂರು

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರೀಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಕು-ಲೋಹಭಸ್ಮ-ಮುಂತಾದವುಗಳಿಂದ ವಂಶ ಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ—ಸೊಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ಪರಸ್ಪರ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ಸದು ನೋವು, ಹಲ್ಲು ನೋವು, ಆರೋಚಕಗಳು ಬಹಳ ಬೇಗನೆ ಜಾತರ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟಿ.ಪಿ ಪ್ರತ್ಯೇಕ.

[231–43] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಒಂಬತ್ತು ಭಾಷೆ!! ಹೊಸ ಪುಸ್ತಕ! ಒಂಬತ್ತು ಲಿಪಿ !!!

ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಬಲು ಒಳ್ಳೆಯ ಸಮಯ.

ಮೊದಲನೆಯ ಪುಸ್ತಕ. ಭಾಷಾನಿಧಿ. ವರ್ಣಪರಿಜ್ಞಾನ.

ತಮಿಳು, ಆಂಧ್ರ ಮಲೆಯಾಳ, ಸಂಸ್ಕೃತ, ಹಿಂದಿ, ಮಹಾರಾಷ್ಟ್ರ, ಗುಜರಾತಿ, ಬೆಂಗಾಳಿ, ಕನ್ನಡ, ಗ್ರಂಥ, ಇವುಗಳನ್ನು ಸ್ವತಂತ್ರವಾಗಿ ಕಲಿಯಬಹುದು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ! ಬೇಗ ಬೇಗ ಬರೆಯಿರಿ!!!

ಕ್ರಯ ಅಂಚೆಯ ವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ.

ಎರಡನೆಯ "ಶಬ್ದಪರಿಜ್ಞಾನ" ಮೂರನೆಯ "ವಾಕ್ಯಪರಿಜ್ಞಾನ" ಅಚ್ಚಾಗುತ್ತಿವೆ.

[171-5] ಪುಸ್ತಕ ದೊರೆಯುವ ಸ್ಥಳ—ಸವಿಸುಡಿ, ಭಾಷಾನಿಧಿ, ೩೦, ಸಿ. ಬೀದಿ, ಕೋಟೆ, ಬೆಂಗಳೂರು.

ದಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದಾರೆ. ಸಿವಿಮವಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವುದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾನೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುತೇವೆ. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಕೂಲಿ ಬೇರೆ ಬೀಳುವದು. ಸಾಬೂನುಕ್ಕಾಗಿ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

[143-9] ನಮ್ಮ ವಿಳಾಸ—ವಿ. ಎ. ಎಸ್. ಕಾಶಿ, ನಂ. ೩, ಇರುಳಪ್ಪನ ಬೀದಿ, ಮದರಾಸು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪನಿಯು ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಇರುವರಿಗೆ ವಿ. ಪಿ. ಛಾರ್ಜ್ ಸೇರಿ ಒಂದಕ್ಕೆ 3 ಆಣೆ ; 6 ಕ್ಕೆ 13 ಆಣೆ ; 12 ಕ್ಕೆ ರೂ. 1-10-0. ಇವು ಇನ್ನು ಅಯ್ಮೆರು ವರಿಗೆ ಮಾತ್ರ ಸಿಗುವವು. ಬೇಗ ಮುಗಿಯತಕ್ಕವು ಆದುದರಿಂದ ತ್ವರೆಮಾಡಿರಿ !

[64-25]



ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗೊಂಟಲನೋವು, ಶೀತ, ಚರ್ಮ ವ್ಯಾಧಿ, ಹಲ್ಲು ನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ವಹಿಸಿಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ವಹಿಸಿಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0, ದಂತಮಂಜನ 0-2-0. ಮೋಗಿನ ತೈಲ 0-13-0 ಖಜ್ಜಿ ಮುಲಾಮು 0-14-0. ಜುಲಾಬು ಮಾತ್ರೆ 0-8-0. ಗುಂಡರಿ ಮುಲಾಮು 0-8-0 ವ್ಯಾಪಾರಿಗಳಿಗೆ ಬರಿಯರಿ ವ್ಯಾಪಾರಸ್ಥರಿಗೆ ಬೇರೇ ಕಮಿಷನ್ ದೊರಕುವದು,

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ, ಮತ್ತು ಜಹಂಗೀರ್ ಸ್ಟ್ರೀಟ್, ಮದ್ರಾಸು.

ಡೋಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಿರುವದರಿಂದ ಕೂಸುಗಳು ಬಹಳ ಪ್ರೀತಿಯಿಂದ ಕುಡಿಯುತ್ತವೆ. ಇದನ್ನು ಕುಡಿಸುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ತೂಕ ಸಹ ಬೆಳೆಯುತ್ತದೆ. ಕ್ರಯ ಸೀಸೆ 1 ಕ್ಕೆ 12 ಆಣೆ; ಟಿ.ಪಿ. 4 ಆಣೆ.

ವಿಳಾಸ—ಕೆ. ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

[177–4] [ಏಜಂಟರು ಬೇಕಾಗಿರುತ್ತಾರೆ.]

ವೃತ್ತಾಂತ ಪತ್ರಿಕೆ.

—:0:—

೧೯೧೫ನೇ ಇಸವಿ ಸೆಪ್ಟಂಬರ್ ತಾ. ೨೩ನೇ ಗುರುವಾರ.

ಕನ್ನಡ ಭಾಷಾಭಿವೃದ್ಧಿಯು.

ಮೈಸೂರು ಸಂಪದಭಿವೃದ್ಧಿ ಸಮಾಜದವರು ತೀರ್ಮಾನ ಮಾಡಿದ್ದನ್ನು ಅಂಗೀಕರಿಸಿ ನಮ್ಮ ಸರ್ಕಾರದವರು ಸಹಾಯವನ್ನೂ, ಪ್ರೋತ್ಸಾಹವನ್ನೂ ಒದಗಿಸಿದ್ದರಿಂದ ಕಳೆದ ಮೇ ತಿಂಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ಕನ್ನಡ ಭಾಷಾಭಿವೃದ್ಧಿಯ ಸಭೆಯೊಂದು ಜರುಗಿತು. ಈ ಸಭೆಗೆ ಮೈಸೂರು ಸಂಸ್ಥಾನದವರಲ್ಲದೆ ಬೊಂಬಾಯಿ ಮತ್ತೂ ಮದರಾಸ್ ಅಧಿಪತ್ಯಗಳಿಂದಲೂ, ಹೈದರಾಬಾದ್ ಸಂಸ್ಥಾನದಿಂದಲೂ ಅನೇಕ ಪ್ರತಿನಿಧಿಗಳು ಬಂದಿದ್ದರು. ಸಭೆಯು ನಾಲ್ಕು ದಿನ ನಡೆದು ಕಡೆಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಒಂದು ಸಂಘವು ವಿಶೇಷ ಉತ್ಸಾಹದಿಂದ ನಿರ್ಮಾಣವಾಯಿತು. ಅದರ ನಡವಳಿಕೆಗೆ ಕೆಲವು ನಿಬಂಧನೆಗಳನ್ನು ರಚಿಸಿದರು. ಸಂಘದ ಉದ್ದೇಶ ಕಾರ್ಯಗಳನ್ನು ನಡಿಸುವುದಕ್ಕೆ ಒಂದು ಕಮಿಟಿ ನೇಮಕವಾಯಿತು. ಈ ಕಮಿಟಿಯ ಮೆಂಬರುಗಳು ಕನ್ನಡ ಭಾಷಾಭಿವೃದ್ಧಿಗೋಸ್ಕರ ಮಾಡಿರುವ ಕೆಲಸಕಾರ್ಯಗಳ್ಯಾವವು? ಮೇಲ್ಕಂಡ ಮಹಾ ಸಭೆಯ ವೃತ್ತಾಂತವನ್ನು ಕ್ರೋಢೀಕರಿಸಿ ರಿಪೋರ್ಟು ಬರೆದು ಪ್ರಕಟಮಾಡುವುದಕ್ಕೇ ನಾಲ್ಕು ತಿಂಗಳು ಹಿಡಿಯಿತಲ್ಲಾ? ಅಲ್ಲಿಂದೀಚೆಗೆ ಏನೊಂದೂ ನಡೆದಿರುವಂತೆ ಕಂಡುಬರುವುದಿಲ್ಲ.

ಈ ಸಭೆಯ ವೃತ್ತಾಂತವಿರುವ ಇಂಗ್ಲಿಷ್ ರಿಪೋರ್ಟನ್ನು ಓದಿ ನೋಡಿದೆವು. ಅದರಲ್ಲಿ ಸೀನಿಯರ್ ಕೌನ್ಸಲರ್ ಮ|| ಎಚ್. ವಿ. ನಂಜುಂಡಯ್ಯ, ಸಿ.ಐ.ಇ. ಯವರು ಮಾಡಿದ ಭಾಷಣ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಮಿಟಿ ಮೆಂಬರುಗಳ ಹೆಸರುಗಳು, ಯಾವಜ್ಜೀವವೂ ಮೆಂಬರಾಗಿರುತ್ತೇನೆಂದು ಒಪ್ಪಿರುವವರ ಹೆಸರುಗಳು, ೧ ನೆಯ ಮತ್ತೂ ೨ ನೆಯ ತರಗತಿ ಮೆಂಬರುಗಳ ಹೆಸರುಗಳು, ಪರಿಷತ್ತಿನ ನಿಬಂಧನೆಗಳು, ಅದರ ಜಮಾಖರ್ಚಿನ ಪಟ್ಟಿಗಳು, ಇಷ್ಟಲ್ಲದೆ ಇನ್ನೇನೂ ಪ್ರಕಟವಾಗಿಲ್ಲ. ಈ ರಿಪೋರ್ಟಿನ ಕನ್ನಡ ಪ್ರತಿಗಳು ಇನ್ನೂ ಸಿದ್ಧವಾಗಿಲ್ಲವಂತೆ.

ಸ್ವಭಾಷೆಯನ್ನು ಅಭಿವೃದ್ಧಿ ಮಾಡಿಕೊಳ್ಳಬೇಕೆಂದು ನಮ್ಮ ಕನ್ನಡ ಸೀಮೆಯವರು ಪ್ರಯತ್ನ ಪಡುತ್ತಿರುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ನಮ್ಮ ಜನಗಳು ಸ್ವಭಾಷೆಯಲ್ಲೇ ಸಕಲ ವಿದ್ಯೆಗಳಲ್ಲೂ ಪರಿಜ್ಞಾನವನ್ನು ಸಂಪಾದಿಸಿಕೊಳ್ಳುವಂತೆ ಮಾಡಿಡಬೇಕಾದದ್ದು ಅಪೇಕ್ಷಣೀಯವೂ ಅವಶ್ಯಕವೂ ಆಗಿದೆ. ಆದರೆ ಈ ಭಾಗದಲ್ಲಿ ಮಹಾ ಸಭೆಯವರು ಸರಿಯಾದ ಮಾರ್ಗದಲ್ಲಿ ಕಾರ್ಯ ನಡಿಸಿರುತ್ತಾರೆಯೇ, ಆದರಿಂದ ಅವರ ಶ್ರೇಷ್ಠವಾದ ಉದ್ದೇಶವು ಸಾರ್ಥಕವಾದೀತೇ ಎಂದು ಸಂಶಯ ಪಡುತ್ತೇವೆ.

ಮಹಾಸಭೆಗಳನ್ನು ಸೇರಿಸುವುದೂ, ಭಾಷಣಗಳನ್ನೂ ಉಪನ್ಯಾಸಗಳನ್ನೂ, ಅಲ್ಪಸ್ವಲ್ಪ ಗಲಭೆಯನ್ನೂ ಉತ್ಸಾಹವನ್ನೂ ಕಲ್ಪಿಸುವುದೂ ಸುಲಭಸಾಧ್ಯವೇ ಸರಿ; ಬದಲೆ ಕಷ್ಟಕರವಾದ—ಅದರಲ್ಲೂ ಪ್ರತಿಫಲವಿಲ್ಲದೆ ಕಷ್ಟವೇ ತುಂಬಿರುವ—ಇಂಥಾ ಶಾಶ್ವತವಾದ ಮತ್ತೂ ಪ್ರಜೋಪಕಾರವಾದ ಮಹತ್ಕಾರ್ಯವನ್ನು ಹಿಡಿದು ಜಿತಮನಸ್ಸಿನಿಂದ ಸಾಧಿಸುವುದು ಮಹಾ ಪ್ರಯಾಸ. ಯಾಕಂದರೆ ಭಾಷೆಯನ್ನು ಅಭಿವೃದ್ಧಿ ಮಾಡುವ ಕಾರ್ಯದಲ್ಲಿ ಪ್ರವರ್ತಿಸುವಂಥಾ ಪುರುಷರು ಅದರಲ್ಲಿ ಭಕ್ತಿ ಪ್ರೀತಿಗಳನ್ನು ಇಟ್ಟುಕೊಂಡು ಕೆಲಸಮಾಡಬೇಕಲ್ಲದೆ ಅದರಿಂದ ದ್ರವ್ಯವನ್ನು ಕೂಡಿಹಾಕುತ್ತೇನೆಂದು ಅಭಿಲಾಷೆ ಪಡುವುದಿಲ್ಲ. ದ್ರವ್ಯಾಕಾಂಕ್ಷೆಯುಳ್ಳವರಿಗೆ ಈ ಕಾರ್ಯದಲ್ಲಿ ಫಲವಿಲ್ಲ; ಇಂಥವರಿಂದ ಆ ಕಾರ್ಯವೂ ಸಾರ್ಥಕವಾಗುವುದಿಲ್ಲ.

ಈ ಮಹಾ ಸಭೆಯು ಕನ್ನಡ ಭಾಷೆಯನ್ನು ಅಭಿವೃದ್ಧಿಗೆ ತರಬೇಕಾದದ್ದು. ಅಲ್ಲಿ ಸೇರಿದವರ ಸ್ವಭಾಷೆಯು ಕನ್ನಡ. ಇಂಥಾ ಸಭೆಯ ವೃತ್ತಾಂತವನ್ನು ಅನ್ಯಭಾಷೆಯಾದ ಇಂಗ್ಲಿಷಿನಲ್ಲಿ ಬರೆದು ಪ್ರಕಟಮಾಡಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ. ಇಷ್ಟೇ ಅಲ್ಲ. ಈ ಮಹಾ ಸಭೆಯಲ್ಲಿ ಅಗ್ರಭಾಷಣವನ್ನು ಮಾಡಿದ ಅಧ್ಯಕ್ಷರು ಸ್ವಭಾಷೆಯ ಮಹಿಮಾತಿಶಯಗಳನ್ನು ಹೊಗಳುವುದಕ್ಕೂ, ಅದನ್ನು ಅಭಿವೃದ್ಧಿಗೆ ತರಬಹುದಾದ ಮಾರ್ಗಗಳನ್ನು ಸೂಚಿಸುವುದಕ್ಕೂ ಸ್ವಭಾಷೆಯನ್ನು ತ್ಯಜಿಸಿ ಅನ್ಯಭಾಷೆಯನ್ನು ಪ್ರಯೋಗಿಸಿ ಭಾಷಣಮಾಡಿದ್ದು ಇನ್ನೂ ಆಶ್ಚರ್ಯವಾಗಿದೆ. ಇದು ತಪ್ಪೆಂದು ನಮಗೆ ತೋರುತ್ತದೆ. ಇದರಿಂದ ಏನು ತೋರುತ್ತೆಂದರೆ, ಈ ಮಹಾ ಸಭೆ ನಡೆದದ್ದು ನಮ್ಮ ಕನ್ನಡವನ್ನು ತಿಳಿದವರಿಗೋಸ್ಕರ ಅಲ್ಲ; ಇಂಗ್ಲಿಷ್ ಬಲ್ಲವರಿಗಾಗಿ ಈ ಸಭೆ ನಡಿಸಲ್ಪಟ್ಟಿತೆಂದು ವೇದ್ಯವಾಗುವುದು.

ಆ ಮಹಾ ಸಭೆಯಲ್ಲಿ ಸೂಚಿಸಲ್ಪಟ್ಟಿರುವ ಕೆಲವು ಸಲಹೆಗಳು ಬಹಳ ಚೆನ್ನಾಗಿರುತ್ತವೆ; ಆದರೆ ಸಭೆಯ ಮೆಂಬರುಗಳಿಗೆ ತಮ್ಮ ಉದ್ದೇಶದ ನೆಲೆಯೇ ಪರಿಷ್ಕಾರವಾಗಿ ತಿಳಿದಿರುವಂತೆ ಕಾಣುವುದಿಲ್ಲ; ಆದಕಾರಣ ಅವರು ಕಾರ್ಯಕಾರಿಯಾದ ಮಾರ್ಗಗಳನ್ನು ಕೈಬಿಟ್ಟಿರುವರು. ಬಗೆ ಬಗೆಯ ಗ್ರಂಥಗಳನ್ನು ರಚಿಸುವುದಕ್ಕೆ, ಕನ್ನಡ ಭಾಷಾನಿಧಿಯನ್ನು ವಿಸ್ತರಿಸಿ ಬೆಳಸಬೇಕಾಗಿದೆ ಎಂದು ಅನೇಕರು ಸೂಚಿಸಿರುತ್ತಾರೆ. ಪಾಠಶಾಲೆಗಳಲ್ಲಿ ಮಕ್ಕಳು ಓದುವುದಕ್ಕೆ ಉತ್ತಮವಾದ ಪಾಠ ಪುಸ್ತಕಗಳನ್ನೂ, ಸಾಮಾನ್ಯ ಪ್ರಜೆಗಳಿಗೆ ಬುದ್ಧಿ ವಿವೇಕ ಪರಿಜ್ಞಾನಾದಿಗಳನ್ನು ಉಂಟುಮಾಡುವಂಥಾ ಪುಸ್ತಕಗಳನ್ನೂ ರಚಿಸಬೇಕೆಂಬ ಸಲಹೆಯು ಸಹಜವಾದದ್ದೇ ಸರಿ. ಇದು ಅವಶ್ಯವಾಗಿ ಆಗಬೇಕಾದದ್ದೇ. ಆದರೆ ಕನ್ನಡ ಪಡಿಗಳನ್ನು ಕುತೂಹಲಪಟ್ಟು ಓದುವವರು ಬಹಳ ಕೊಂಚ. ಆದಾಗ್ಯೂ ಅದನ್ನು ಓದತಕ್ಕವರು ಅನೇಕರಿರುತ್ತಾರೆಂದೇ ಇಟ್ಟುಕೊಳ್ಳೋಣ. ಇಂಥವರು ಓದುವುದೂ, ಓದಲಪೇಕ್ಷಿಸುವುದೂ ಯಾವುದು? ವರ್ತಮಾನ ಪತ್ರಿಕೆಗಳ ಮೇಲೂ, ಮಾಸ ಪತ್ರಿಕೆಗಳ ಮೇಲೂ ಅನೇಕರಿಗೆ ಅಭಿರುಚಿ ಇರುವಂತೆ ಕಾಣುತ್ತದೆ. ಆದಕಾರಣ ಜನಗಳು ಓದಲಪೇಕ್ಷಿಸುತ್ತಿರುವ ಇಂಥಾ ಪತ್ರಿಕೆಗಳ ಮೂಲಕವೇ ನಾವು ಭಾಷೆಯನ್ನು ಬೆಳಸಿ ಹಬ್ಬಿಸುತ್ತಾ ಬಂದರೆ ಕನ್ನಡ ಭಾಷೆಯು ನೆಲೆಗೊಂಡು ಅಭಿವೃದ್ಧಿ ಹೊಂದೀತು. ಪ್ರಪಂಚದಲ್ಲಿ ದಿನವಹಿ ನಡೆಯುತ್ತಾ ಬಂದಿರುವ ಸುದ್ದಿ ಸಮಾಚಾರಗಳನ್ನು ಕನ್ನಡದಲ್ಲಿ ಬರೆದು ತಿಳಿಸುವುದು ತುಂಬಾ ಕಷ್ಟವೆಂಬ ಸಂಗತಿಯನ್ನು ನಾವು ಬಲ್ಲೆವು. ವಿಷಯಗಳನ್ನು ಅರ್ಥವಾಗುವಂತೆ ಬರೆಯುವಾಗ್ಗೆ ನಿರೂಪಗಳಾದ ಬಗೆ ಬಗೆಯ ಮಾತುಗಳನ್ನೂ ಪದಬಂಧಗಳನ್ನೂ ಕಲ್ಪಿಸಿ ಪ್ರಯೋಗ ಮಾಡಬೇಕಾಗಿದೆ. ವರ್ತಮಾನ ಪತ್ರಿಕೆಯನ್ನು ನಡಿಸತಕ್ಕವರು ಬಹಳ ಚುರುಕಾಗಿ ಬರೆಯಬೇಕು. ನವೀನವಾದ ವಿಚಾರಗಳನ್ನೂ ಸೂಕ್ಷ್ಮವಾದ ಅಭಿಪ್ರಾಯಗಳನ್ನೂ ವಿವರಿಸುವಾಗ್ಗೆ ಸರಿಯಾದ ಮಾತುಗಳ್ಯಾವವೆಂದು ಹುಡುಕಾಡುತ್ತಾ ಇರುವುದಕ್ಕೆ ಅವರಿಗೆ ಸಮಯವಿರುವುದಿಲ್ಲ. ಆದಾಗ್ಯೂ ಈಗಿನ ಕನ್ನಡ ವರ್ತಮಾನ ಪತ್ರಿಕೆಗಳು ಸಾಹಸಪಟ್ಟು ಕನ್ನಡ ಭಾಷೆಯ ಪರಿಮಿತಿಯನ್ನು ಕೂಡಿದ ಮಟ್ಟಿಗೂ ವಿಸ್ತರಿಸಿಯೂ, ಅಭಿವೃದ್ಧಿಗೆ ತಂದೂ ಇರುತ್ತವೆ.

ಮಹಾ ಸಭೆಯವರು ಇಂಥಾ ವರ್ತಮಾನ ಪತ್ರಿಕೆಗಳನ್ನು ಅಭಿವೃದ್ಧಿಗೆ ತರಬೇಕೆಂಬ ವಿಚಾರದಲ್ಲಿ ಎಳ್ಳಷ್ಟಾದರೂ ಸೂಚಿಸದೆ ಹೋದರು. ನಮ್ಮ ಭಾಷೆಯನ್ನು ಅಭಿವೃದ್ಧಿ ಮಾಡಬೇಕೆಂದು ಕುತೂಹಲ ಪಡುತ್ತಿರುವವರು ಸಾಮಾನ್ಯ ಜನರಿಗೆ ಅರ್ಥವಾಗದಂಥಾ ಸಂಸ್ಕೃತಪದವನ್ನು ಉಪಯೋಗಿಸದೆ, ಓದುತ್ತಾ ಹೋದಂತೆ ಅರ್ಥವಾಗುವಂಥಾ ಸುಲಭವಾದ ಮಾತುಗಳನ್ನು ಪ್ರಯೋಗಿಸಿ ಪ್ರಪಂಚದಲ್ಲಿ ಈಗ ನಡೆಯುವ ವರ್ತಮಾನಗಳನ್ನು ವಿವರಿಸಿ ಬರೆದು ಕಳುಹಿಸಿದರೆ ನಾವು ಅಂಥಾ ಬರವಣಿಗೆಗಳನ್ನು ಅಂಗೀಕರಿಸಿ ಸಂತೋಷದಿಂದ ಪ್ರಕಟಮಾಡಲು ಸಿದ್ಧರಾಗಿರುತ್ತೇವೆ. ಆದರೆ ವಿದ್ಯಾವಂತರು ಕನ್ನಡದಲ್ಲಿ ಬರೆಯುವುದೇ ಈಗ ಅಪರೂಪ; ಒಂದು ವೇಳೆ ಅವರು ಬರೆಯುವುದಾದರೂ ಕನ್ನಡದಲ್ಲಿ ಅವರಿಗೆ ಅಭಿರುಚಿ ಇಲ್ಲ. ತಮಗೆ ತೋರಿದ್ದನ್ನು ಇಂಗ್ಲಿಷಿನಲ್ಲಿ ಬರೆಯುವುದೇ ವಾಡಿಕೆಗೆ ಬಂದಿದೆ. ಇಂಥಾದ್ದರಲ್ಲಿ ಕನ್ನಡಭಾಷೆ ಹೇಗೆ ತಾನೇ ಅಭಿವೃದ್ಧಿಯಾದೀತು? ಕನ್ನಡವನ್ನು ಅಭಿವೃದ್ಧಿಗೆ ತರಬೇಕೆಂಬವರು ಕನ್ನಡ ಬರವಣಿಗೆಯನ್ನೇ ಇಟ್ಟುಕೊಳ್ಳಬೇಕು. ಇದು ಆದೀತೇ? ಇದಕ್ಕೆ ಅವರು ಒಪ್ಪುತ್ತಾರೆಯೇ? ಇಲ್ಲವಾದರೆ ಕನ್ನಡ ಭಾಷಾಭಿವೃದ್ಧಿಯು ಇಂಗ್ಲಿಷ್ ಕಲಿಯದವರ ಪಾಲಿಗೆ ಬಂದಿತು. ಆದಾಗ್ಯೂ ಈ ಪರಿಷತ್ತಿನವರು ಕಾರ್ಯತಃ ಏನು ಮಾಡುತ್ತಾರೆಂಬೋ ನೋಡೋಣ.

ಸತ್ಯವನ್ನು ತಿಳಿಯುವದಕ್ಕೆ ತಕ್ಕ ಮಾರ್ಗ.

ಕ್ರೈಸ್ತರ ಸತ್ಯವೇದವಾದ ಬೈಬಲೆಂಬ ಪುಸ್ತಕವನ್ನು ಲೋಕದಲ್ಲಿ ಓದಬಲ್ಲ ಸಕಲರಿಗೂ ಸುಲಭಸಾಧ್ಯವಾಗಿ ದೊರಕುವಂತೆ ಮಾಡಬೇಕೆಂದು ಬೈಬಲ್ ಸೊಸೈಟಿಯೆಂಬ ಸತ್ಯವೇದ ವಿಸ್ತಾರಾರ್ಥಕ ಸಮಾಜವನ್ನು ಕ್ರೈಸ್ತ ಮತದವರು ಸ್ಥಾಪಿಸಿ ನಡಿಸುತ್ತಿದ್ದಾರಷ್ಟೆ. ಇಂಗ್ಲಿಷ್ ಭಾಷೆಯನ್ನು ಕಲಿಯುವ ಪ್ರೌಢವಿದ್ಯಾಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಓದಿ ಪಾರಂಗತರಾದ ವಿದ್ಯಾರ್ಥಿಗಳಿಗೆ ಮೇಲೆ ನಮೂದಿಸಿರುವ ಬೈಬಲ್ ಸೊಸೈಟಿಯವರು ಬೈಬಲ್ ಗ್ರಂಥದ ಒಂದೊಂದು ಪ್ರತಿಯನ್ನು ಮುಫತ್ತಾಗಿ ಕೊಡುವ ಪದ್ಧತಿಯುಂಟು. ಬಿ. ಎ. ಮತ್ತು ಬಿ. ಎಸ್‌ಸಿ. ಎಂಬ ಪರೀಕ್ಷೆಗಳಲ್ಲಿ ಉತ್ತೀರ್ಣರಾದ 400 ಮಂದಿ ಈ ಪುಸ್ತಕವನ್ನು ಓದಬೇಕೆಂಬ ಅಭಿಲಾಷೆಯಿಂದ ಈ ವರುಷ—ತಮಗೆ ಸತ್ಯವೇದದ ಪ್ರತಿಯನ್ನು ಕೊಡಬೇಕೆಂದು ಕಲ್ಕತ್ತೆಯಲ್ಲಿ ಕೇಳಿಕೊಂಡರು. ಈ ದಾನವನ್ನು ಮಾಡುವದಕ್ಕಾಗಿ ಕಳೆದ ಆಗಸ್ಟ್ ತಿಂಗಳ 20 ನೇ ಶುಕ್ರವಾರದಲ್ಲಿ ಅಲ್ಲಿನ ಒಂದಾನೊಂದು ಸರ್ವ ವಿದ್ಯಾಶಾಲೆಯಲ್ಲಿ ಒಂದು ಸಭೆಯು ನೆರೆದು ಬಂದಿದ್ದಿತು. ಆ ಸಭೆಯಲ್ಲಿ ಬೈಬಲನ್ನು ಅಪೇಕ್ಷಿಸಿದ ಈ ನಾನೂರು ಮಂದಿಗೆ ಒಂದೊಂದು ಪ್ರತಿಯನ್ನು ಹಂಚಿದ ನಂತರ ಕಲ್ಕತ್ತೆಯ ಬಿಷಪರೆಂಬ ಅಧ್ಯಕ್ಷರು ಸತ್ಯವೇದವನ್ನು ಪಡೆದ ಆ ಪಂಡಿತರಿಗೆ ಒಂದು ಉಪನ್ಯಾಸವನ್ನು ಹೇಳಿದರು. ಅವರು ತಮ್ಮ ಭಾಷಣದಲ್ಲಿ ಹೇಳಿದ ಮುಖ್ಯಾಂಶಗಳನ್ನು ಇಲ್ಲಿ ಕನ್ನಡದಲ್ಲಿ ಬರೆಯುತ್ತೇವೆ. ಅದೇನಂದರೆ—

ಬಿ. ಎ. ಮತ್ತು ಬಿ ಎಸ್‌ಸಿ. ಪರೀಕ್ಷೆಗಳಲ್ಲಿ ತೃಪ್ತಿಕರವಾದ ಪರೀಕ್ಷೆಗಳನ್ನು ಕೊಟ್ಟು ಉತ್ತೀರ್ಣವಾಗಿರುವ ಇಷ್ಟೊಂದು ಮಂದಿ ವಿದ್ವಾಂಸರಿಗೆ ಕೆಲವು ನುಡಿಗಳನ್ನು ಹೇಳುವದಕ್ಕೆ ತಕ್ಕ ಅನುಕೂಲವು ನನಗೆ ದೊರೆತದ್ದು ಬಹಳ ಅಮೂಲ್ಯವಾದ ಸಮಯವೆಂದು ನಾನು ಭಾವಿಸುತ್ತೇನೆ. ಬೈಬಲನ್ನು ಪಡೆಯಬೇಕೆಂದು ನೀವೆಲ್ಲರೂ ಅಭಿಲಾಷೆಪಟ್ಟು ಕೇಳಿಕೊಂಡದ್ದರಿಂದಲೇ ಅದರ ಪ್ರತಿಗಳು ನಿಮಗೆ ಕೊಡಲ್ಪಟ್ಟವೆಂದು ನಾನು ತಿಳಿದಿದ್ದೇನೆ. ಮುಖ್ಯವಾಗಿ ಈ ಕಾರಣದಿಂದ ಈ ಸಂದರ್ಭವು ನನಗೆ ಬಹಳ ಅನುಕೂಲ್ಯವಾದದ್ದು. ಸತ್ಯವೇದವನ್ನು ಓದಬೇಕೆಂದು ನೀವು ಅಪೇಕ್ಷಿಸಿದ್ದರಲ್ಲಿ ನಿಮ್ಮ ಮನೋರಥವು ಏನರಬಹುದೆಂದು ನಾನು ಯೋಚಿಸುತ್ತಿದ್ದೆನು. ಹೀಗೆ ಯೋಚಿಸುತ್ತಿರುವಲ್ಲಿ ನಿಮ್ಮ ಮನೋಗತವು ನನಗೆ ಗೊತ್ತಾಯಿತು. ಮನುಷ್ಯನಿಗೆ ದೇವರಲ್ಲಿ ಭಕ್ತಿಯನ್ನಿಡುವದು ಅಗತ್ಯವಾದದ್ದು. ದೇವದಾರ್ಢ್ಯವು ನಮಗೆ ಅತ್ಯುಪಯುಕ್ತವಾದುದು. ಅದನ್ನು ಆರ್ಜಿಸುವದಕ್ಕೆ ನೀವು ಬೇರೆ ಬೇರೆ ಅಂಗಸಾಧನೆಗಳನ್ನು ಕೈಕೊಳ್ಳುತ್ತೀರಿ. ಮನಸ್ಸಿಗೆ ಅಗತ್ಯವಾದ ವಿದ್ಯವನ್ನು ಅಭ್ಯಾಸಮಾಡುವದರಲ್ಲಿ ನಿಮ್ಮ ಆಯುಷ್ಯದ ಒಂದು ಭಾಗವನ್ನು ವ್ಯಯಮಾಡಿ ಮೇಲ್ತರಿಯಾದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ನಿಮ್ಮ ಪಾಂಡಿತ್ಯವನ್ನು ಪ್ರಕಟಿಸಿದ್ದೀರಿ. ವಿದ್ಯವೂ ದೇಹದಾರ್ಢ್ಯವೂ ಲಭ್ಯವಾಗಿವೆ ಸರಿ. ಆದರೂ ಅವೇ ನಿಮ್ಮ ಬಾಳಿಗೆ ಸಾಲವು. ಮತ್ತೇನೋ ಒಂದು ಬೇಕಾಗಿದೆ ಎಂದು ಎಣಿಸುತ್ತೀರಿ. ಇವುಗಳನ್ನು ಮೀರಿದ ತೃಪ್ತಿಯನ್ನು ಉಂಟುಮಾಡುವ ಮತ್ತೇನೋ ಒಂದಿರಬೇಕು. ದೇಹದ ಪಟುತ್ವವೂ ಮನಸ್ಸನ್ನು ವಿಕಸಿಸ ಮಾಡುವ ವಿದ್ಯವೂ ಅಲ್ಲದೆ ಇವುಗಳಿಗಿಂತ ಅತ್ಯುನ್ನತವಾದದ್ದೊಂದಿದೆ. ಅದೇನಂದರೆ ಸತ್ಯಾರ್ಜನೆ. ಮನುಷ್ಯನು ಪರಮಾತ್ಮನಾದ ದೇವರಿಗೆ ಸಂಬಂಧಪಟ್ಟ ಜೀವಾತ್ಮನು. ಜೀವಾತ್ಮನಿಗೆ ಪರಮಾತ್ಮನ ವಿನಾ ತೃಪ್ತಿಯಾಗಲಾರದು. ಆತನ ವಿಷಯವಾದ ತಿಳುವಳಿಕೆಯನ್ನು ಪಡೆಯುವದು ಅಗತ್ಯವೆಂದು ನೀವು ನಿಶ್ಚಯಿಸಿ—ಈ ವಿಷಯದಲ್ಲಿ ಕ್ರೈಸ್ತ ಮತವು ಏನು ತಿಳಿಸುತ್ತದೆಂದು ನಿಶ್ಚಯಿಸಿಕೊಳ್ಳಲಪೇಕ್ಷಿಸಿದ್ದೀರಿ. ಈ ಕಾರಣದಿಂದ ಬೈಬಲನ್ನು ಓದಲಪೇಕ್ಷಿಸಿದ್ದೀರೆಂದು ನಾನು ಸಂದೇಹವಿಲ್ಲದೆ ನಂಬಿದ್ದೇನೆ. ಆದ್ದರಿಂದ ಸತ್ಯವನ್ನು ತಿಳಿಯುವ ಮಾರ್ಗವನ್ನು ತೋರಿಸಬೇಕೆಂದು ಉದ್ದೇಶಿಸಿ ನಿಮಗೆ ಈ ನುಡಿಗಳನ್ನು ಹೇಳುತ್ತೇನೆ. ನಾವು ಸತ್ಯವನ್ನು ಗ್ರಹಿಸುವದಕ್ಕೆ ಏನು ಮಾಡಬೇಕು? ಎಂಬುವದು ಈ ದಿನ ನಮ್ಮ ಪ್ರತಿಜ್ಞೆಯಾಗಿದೆ. ಕ್ರಿಸ್ತನು ಈ ವಿಷಯವಾಗಿ ಹೇಳಿರುವದನ್ನು ಕೇಳಿರಿ. ಏನಂದರೆ—ದೇವರ ಚಿತ್ತದಂತೆ ನಡುವದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧೆಯು ದೇವರಿಂದ ಬಂದದ್ದೋ ಅಥವಾ ಅಲ್ಲವೋ? ಎಂಬುವದು ಗೊತ್ತಾಗುವುದು. ಇದರ ಅರ್ಥವೇನಂದರೆ ದೇವರ ವಿಷಯವಾದ ಜ್ಞಾನದಲ್ಲಿ ಯಾರಾದರೂ ಅಭಿವೃದ್ಧಿ ಹೊಂದಬೇಕೆಂದು ಅಪೇಕ್ಷಿಸಿದ್ದೆ ಆದರೆ ಅದಕ್ಕೆ ಒಂದು ಮಾರ್ಗವುಂಟು. ಆ ಮಾರ್ಗವೇನಂದರೆ ಸತ್ಯಾರ್ಥಿಯಾದವನು ದೇವರ ಚಿತ್ತವನ್ನು ತಿಳಿದಿರುವಷ್ಟನ್ನು ಪೂರ್ಣಮನಸ್ಸಿನಿಂದ ತನ್ನ ನಡತೆಯಲ್ಲಿ ಅನುಷ್ಠಾನಕ್ಕೆ ತರುವದೇ. ಸದ್ಯ ತಿಳಿದಿರುವ ಸತ್ಯಕ್ಕೆ ಸ್ವಲ್ಪವೂ ಭಂಗವಾಗದಂತೆ ಸ್ಥಿರಚಿತ್ತದಿಂದ ಅದನ್ನು ಅಭ್ಯಾಸಮಾಡುವದರಿಂದ ಮುಂದೆ ತಿಳಿಯದೇ ಇರುವ ಸತ್ಯವು ಅವನಿಗೆ ಇದರಿಂದಲೇ ತಿಳಿಯುವದು.

ಒಬ್ಬನು ಈಗ ಸತ್ಯವೆಂದು ತಿಳಿದು ನಂಬಿರುವಷ್ಟನ್ನು ನಡತೆಯಲ್ಲಿ ಅನುಷ್ಠಾನಕ್ಕೆ ತಂದರೆ ಹಾಗೆ ಸತ್ಯಾಚರಣೆಯನ್ನು ಶ್ರದ್ಧೆಯಿಂದ ನಡಿಸುವದರಿಂದ ಅವನಿಗೆ ಸದ್ಯ ತಿಳಿಯದಿರುವ ಸತ್ಯವು ಮುಂದೆ ಗೊತ್ತಾಗುವದು ಎಂಬ ಬೋಧನೆಯು ಸಕಲ ಮತಗಳಲ್ಲಿಯೂ ಸಿಕ್ಕುವದಿಲ್ಲ. ಸತ್ಯವನ್ನು ತಿಳಿಯುವದು ಎಲ್ಲರಿಗೂ ಸಾಧ್ಯವಲ್ಲ; ಆದರೆ ಯಾರು ಕೇವಲ ಉತ್ಕೃಷ್ಟವಾದ ಬುದ್ಧಿಜ್ಞಾನವೂ ಉಳ್ಳವರಾಗಿ, ಏಕಾಂತವಾದ ಪ್ರದೇಶದಲ್ಲಿ ಧ್ಯಾನಪರಾಯಣರಾಗಿರುವರೋ ಅಂಥಹ ಕೆಲವರಿಗೆ ಮಾತ್ರ ದೇವರ ವಿಷಯವಾದ ಸತ್ಯವು ಲಭ್ಯವಾಗುವದೆಂದು ಬೇರೆ ಬೇರೆ ಮತ ಬೋಧಕರು ಸಾಧಿಸುವದುಂಟು. ಈ ಮಾತು ನಿಜವಾದರೆ ಕೇವಲ ತತ್ವಜ್ಞಾನಿಗಳಿಗೂ ಪಂಡಿತೋತ್ತಮರಿಗೂ ಮಾತ್ರ, ಅದರಲ್ಲಿಯೂ ಬಹಳ ಸಮಯವನ್ನೂ ಶ್ರಮವನ್ನೂ ವ್ಯಯಮಾಡುವ ಕೆಲವರಿಗೆ ಮಾತ್ರ ದೇವರ ವಿಷಯವಾದ ಜ್ಞಾನ ಸಂಪಾದನೆಯಾಗುವದು. ಹೀಗಿದ್ದರೆ ನಮ್ಮಂತಹ ಸಾಮಾನ್ಯವಾದ ಜನಗಳ ಗತಿಯೇನು? ಲೋಕದಲ್ಲಿ ಬಹು ಕೊಂಚ ಮಂದಿಗೆ ಮಾತ್ರ ತತ್ವಜ್ಞಾನವನ್ನು ತಿಳಿಯುವದಕ್ಕೆ ತಕ್ಕಷ್ಟು ಬುದ್ಧಿ, ದ್ರವ್ಯ, ವಿರಾಮಗಳಿರುತ್ತವೆ. ಬಾಕಿ ಲಕ್ಷೋಪಲಕ್ಷ ಜನಗಳು ದಿನ ನಿತ್ಯ ಆಹಾರ ವಸ್ತ್ರಗಳನ್ನು ದುಡಿಯಬೇಕಾಗಿದೆ. ನಾನಾ ಕೆಲಸಗಳನ್ನು ಮಾಡುವದರಲ್ಲಿ ಕಾಲವನ್ನು ವ್ಯಯ ಮಾಡಬೇಕಾಗಿದೆ. ಇಂಥವರಿಗೆ ಸಹ ದೇವರನ್ನು ಕುರಿತು ತಿಳಿಯುವದು ಅಗತ್ಯವಾಗಿದೆ. ಸಾಧಾರಣಗಳಾದ ವೃತ್ತಿಗಳನ್ನು ನಡಿಸುವವರು ನನ್ನನ್ನು ಕುರಿತು ತಿಳಿಯುವದಕ್ಕೆ ಅನರ್ಹರೆಂದು ಅವರನ್ನು ದೇವರು ತಿರಸ್ಕರಿಸುತ್ತಾನೋ? ಇಲ್ಲವೇ ಇಲ್ಲ. ಯೇಸು ಕ್ರಿಸ್ತನು ಸತ್ಯಾಪೇಕ್ಷೆಗಳಿಗೆ ಹೇಳುವದೇನಂದರೆ—ಸಾಧಾರಣ ಮನುಷ್ಯರು ತಮಗೆ ತಿಳಿದು ಇರುವಷ್ಟನ್ನು ಹೃದಯ ಶುದ್ಧಿಯಿಂದಲೂ ಸ್ಥಿರಚಿತ್ತದಿಂದಲೂ ವಿಧೇಯವಾದ ಮತ್ತು ಭಕ್ತಿಪೂರ್ವಕವಾದ ಮನಸ್ಸಾಕ್ಷಿಯಿಂದಲೂ ಕೈಕೊಳ್ಳುತ್ತ ಬಂದರೆ ದೇವರನ್ನು ಕುರಿತು ಇನ್ನು ಹೆಚ್ಚಾಗಿ ತಿಳಿದು ಆ ತಿಳುವಳಿಕೆಯಲ್ಲಿ ಅಭಿವೃದ್ಧಿ ಹೊಂದುವದಕ್ಕೆ ಅದೇ ಮಾರ್ಗವಾಗಿರುವದು ಎಂಬುವದೇ. ನೀವು ನಿಮಗೆ ನೇಮಕವಾದ ದೈನಂದಿನ ಕೆಲಸವನ್ನು ನಂಬಿಕೆಯಿಂದಲೂ ಮನ ಮೆಚ್ಚುವ ರೀತಿಯಲ್ಲಿಯೂ ಮಾಡುತ್ತ ದಿನ ಸದ್ಯದಲ್ಲಿ ನಿಮಗಿರುವ ಜ್ಞಾನವನ್ನು ಪ್ರಯೋಗಿಸಿದರೆ ನಿಮಗೆ ಬೇಕಾದ ಜ್ಞಾನಪ್ರಕಾಶವು ನಿಮಗೆ ಸಾಕಾದಷ್ಟು ದಯಪಾಲಿಸಲ್ಪಡುವದು. ಕ್ರಮೇಣ ನಿಮ್ಮ ಮನಸ್ಸುಗಳು ವಿಕಸಿತವಾಗಿ ಕಡೆಗೆ ದಿವ್ಯದರ್ಶನವೇ ನಿಮಗಾಗುವದು. ಈ ದರ್ಶನವನ್ನು ಪಡೆಯಬೇಕೆಂದು ಅರಣ್ಯವಾಸಕ್ಕೆ ಹೋಗುವದು ಬೇಕಿಲ್ಲ. ಸನ್ಯಾಸವನ್ನು ಕೈಕೊಂಡು ಏಕಾಂತವಾಸದಲ್ಲಿ ದೀರ್ಘತಪಸ್ಸಿನಿಂದ ದೇಹವನ್ನು ಬಳಲಿಸುವದು ಅನಾವಶ್ಯಕ. ಕ್ರಿಸ್ತನು ದೇವರನ್ನು ಕಾಂಕ್ಷೆಯಿಂದ ತಿಳಿಯಬೇಕೆಂದು ಅಪೇಕ್ಷಿಸಿದ ಸಾಮಾನ್ಯ ಜನಗಳಿಗೆ ಪದೇ ಪದೇ ಇದೇ ಅಭಿಪ್ರಾಯವನ್ನು ಒತ್ತಿ ಹೇಳುತ್ತಿದ್ದನು. ಇದ್ದವನು ತನಗಿರುವಷ್ಟನ್ನು ಪ್ರಯೋಗಿಸಿದರೆ ಅವನಿಗೆ ಇನ್ನೂ ಹೆಚ್ಚಾಗಿ ಕೊಡಲ್ಪಡುವದು. ಅಂಥವನಿಗೆ ಮತ್ತೂ ಹೆಚ್ಚುವದು. ಆದರೆ ಒಬ್ಬನು ತನಗೆ ಸ್ವಲ್ಪವೇ ಇದೆಯೆಂದು ಪ್ರಯೋಗಿಸದೆ ಬಿಟ್ಟರೆ ಅವನಲ್ಲಿ ಇದ್ದದ್ದು ಸಹ ತೆಗೆಯಲ್ಪಟ್ಟು ಕಡೆಕಡೆಗೆ ಏನೂ ಇಲ್ಲದೆ ಹೋಗುವದು.

ಯುದ್ಧದ ಸಮಾಚಾರಗಳು.

ರಷ್ಯಾದವರ ಇನ್ನು ಕೆಲವು ಜಯಪ್ರದಗಳು.

ಕಳೆದ ವಾರ ಬಂದಿರುವ ತಂತೀವರ್ತಮಾನಗಳಿಂದ ವಿಶೇಷವಾದ ಯುದ್ಧ ಕಾರ್ಯಗಳೇನೂ ನಡೆದಿಲ್ಲವೆಂದು ಹೇಳಬೇಕಾಗಿದೆ. ರಷ್ಯಾದಲ್ಲೇನೋ ಬಹು ಘೋರವಾದ ಯುದ್ಧಗಳು ನಡೆಯುತ್ತಾ ಬಂದಿರುವವು. ಅಂತೂ ರಣರಂಗಗಳಲ್ಲಿ ವಿಶೇಷ ವ್ಯತ್ಯಾಸವೇನೂ ಆಗಿರುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದಲ್ಲಿ ಎಂದಿನಂತೆ ಫಿರಂಗೀ ಗುಂಡುಗಳ ಹಾವಳಿ ವಿಶೇಷ. ಗಂಟೆ ಗಂಟೆಗೂ ಸಾವಿರಾರು ಗುಂಡುಗಳು ಸುರಿಯುತ್ತಿರುವವು. ಆದರೆ ಅವುಗಳಿಂದ ಸೈನಿಕರು ಸಾಯುವುದೂ ಗಾಯಪಡುವುದೂ ಅಪರೂಪ. ಒಂದೆರಡು ಠಾಣ್ಯಗಳಲ್ಲಿ ಜರ್ಮನಿಯವರು ನಮ್ಮ ಪಕ್ಷದ ಸೈನ್ಯಗಳ ಸಾಲಿನ ಮೇಲೆ ನುಗ್ಗಿ ಬಂದು ಭೇದಿಸಬೇಕೆಂದು ಒಂದೆರಡಾವರ್ತಿ ಸಾಹಸಪಟ್ಟರು. ನಮ್ಮ ಪಕ್ಷದವರು ಅವರಿಗೆ ಅವಕಾಶಕೊಡದೆ ಹಿಂದಕ್ಕೆ ಓಡಿಸಿರುತ್ತಾರೆ.

ಜರ್ಮನಿಯವರ ವಿಮಾನ ಯಂತ್ರಗಳು ಇಂಗ್ಲೆಂಡಿನ ಮೇಲೆ ಹಾರಿಬಂದದ್ದೇ ವಿಶೇಷವಾದ ಸುದ್ದಿ. ಅವು ತಾ. 12 ನೇ ಭಾನುವಾರ ಬಂದಿದ್ದವು. ಇವರಿಂದ ಪ್ರಾಣ ನಷ್ಟವೇನೂ ಆಗಲಿಲ್ಲ; ಕಟ್ಟಡಗಳು ಸ್ವಲ್ಪ ಮಟ್ಟಿಗೆ ನಷ್ಟವಾಗಿರುತ್ತವೆ. ಅಲ್ಲಲ್ಲಿ ಕಿಟಿಕಿ ಗಾಜುಗಳು ಒಡೆದುಹೋದವು; ಕೆಲವು ಟೆಲಿಗ್ರಾಫ್ ತಂತಿಗಳು ಕಿತ್ತುಹೋದವು. ವಿಮಾನ ಯಂತ್ರಗಳು ಮತ್ತೆ ಆ ಮಾರನೆ ದಿನ ಕೆಂಟ್ ಪ್ರಾಂತ್ಯದ ಮೇಲೆ ಬಂದಿದ್ದವು. ಆಗ್ಗೆ ಒಂದು ಮನೆ ಸ್ವಲ್ಪ ಕೆಟ್ಟುಹೋಯಿತು. ಒಬ್ಬನು ಕೊಲೆಯಾದನು; ಆರು ಮಂದಿಗೆ ಗಾಯಗಳಾದವು. ಇಂಗ್ಲಿಷ್ ವಿಮಾನಕಾರರು ಶತ್ರುವಿನ ಆ ವಿಮಾನವನ್ನು ಓಡಿಸಿಬಿಟ್ಟರು. ೩೦ನೆ ಆ ದಿನ ರಾತ್ರಿ ಜರ್ಮನಿಯ ವಿಮಾನಗಳು ಬಂದಿದ್ದವು; ಆದರೆ ಅವನ್ನು ನಿಲ್ಲಗೊಡದೆ ಓಡಿಸಿಬಿಟ್ಟರು. ಪ್ರಾಣ ನಷ್ಟವೂ ಆಗಲಿಲ್ಲ; ಮನೆ ಮಠಗಳೂ ಕೆಡಲಿಲ್ಲ.

ಒಬ್ಬಾನೊಬ್ಬ ಲೇಖಕನು ಹೀಗೆ ವಿಮಾನಗಳು ಬಂದು ದರೋಡೆ ಕೃತ್ಯಗಳನ್ನು ನಡಿಸುವುದು ಯುದ್ಧ ಕಾರ್ಯವಲ್ಲವೆಂದು ವಿವರಿಸಿ ಬರೆಯುತ್ತಾನೆ. ಆತನು ಕಾಣಿಸಿರುವ ದೃಷ್ಟಾಂತಗಳೇನಂದರೆ—ಶತ್ರುವಿನ ಒಂದು ಸಿಡಿಮದ್ದಿನ ಗುಂಡು ಕೂಲಿಕಾರರು ವಾಸಮಾಡುತ್ತಿದ್ದ ಕೆಲವು ಮನೆಗಳ ಮೇಲೆ ಬಿದ್ದಿತು. ಅವುಗಳೊಳಗೆ ಮಕ್ಕಳೇ ಅನೇಕರಿದ್ದರು. ಆ ಪೈಕಿ ಸಣ್ಣ ಮಕ್ಕಳೈದು ಕೊಲೆಯಾದರು. ಜೆಪ್ಪೆಲಿನ್ ಎಂಬ ಶತ್ರುವಿನ ವಿಮಾನಯಂತ್ರವು ಹತ್ತಿರ ಸಮೀಪದಲ್ಲಿ ಸಾಮಾನುಗಳ ಉಗ್ರಾಣದ ಕಟ್ಟಡಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದಂತೆ ಸುಳ್ಳು ಸುದ್ದಿಯನ್ನು ತಿಳಿಸಿತು. ಇನ್ನೊಂದು ಗುಂಡು ಕೆಲವು ತಬೇಲೆಗಳ ಮೇಲೆ ಬಿದ್ದು ಅವನ್ನು ಉರಿಸಿತು. ಸೇವಕರು 11 ಕುದುರೆಗಳನ್ನೂ, ಒಂದು ನಾಯಿಯನ್ನೂ, ಹಕ್ಕಿ ಇದ್ದ ಪಂಜರವನ್ನೂ ಹೊರಕ್ಕೆ ಸಾಗಿಸಿದರು. ಒಂದು ಕೋಳಿ ಮಾತ್ರ ಸತ್ತು ಹೋಯಿತು. ಮತ್ತೊಂದು ಗುಂಡು ಬೀದಿಯಲ್ಲಿ ನಿಂತಿದ್ದ ಒಂದು ಮೋಟರ್ ಬಾಡಿಗೆ ಗಾಡಿಗೆ ಬಡಿಯಿತು. ಅದರೊಳಗೆ 20 ಜನರಿದ್ದರು. 10 ಜನರು ಕೊಲೆಯಾದರು; 10 ಜನಕ್ಕೆ ಗಾಯಗಳಾದವು. ಇವರ ಪೈಕಿ ಯಾರೊಬ್ಬರೂ ಯುದ್ಧಕ್ಕೆ ಸಂಬಂಧಪಟ್ಟವರಲ್ಲ.

ಅತ್ತಲಾಗಿ ಫ್ರೆಂಚರ ಮತ್ತು ಬ್ರಿಟಿಷರ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಜರ್ಮನಿಯ ಕೆಲವು ಪಟ್ಟಣಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬಂದಿರುತ್ತವೆ. ಒಂದು ಸ್ಥಳದಲ್ಲಿ 40 ಮಂದಿ ಸೈನಿಕರು ಕೊಲೆಯಾದರು.

[illegible] ಜರ್ಮನಿಯ ಸೈನಿಕರಿರುವ ಸ್ಥಳಗಳ ಮೇಲೆ ಅಂತರಿಕ್ಷದಲ್ಲಿ ಅನೇಕ [illegible] ವಿಮಾನ ಯಂತ್ರಗಳ ಕದನಗಳು ನಡೆದಿರುವವು. ಹನ್ನೊಂದು ಕದನಗಳಲ್ಲಿ [illegible] ಪಕ್ಷದ ವಿಮಾನಗಳು ಶತ್ರುವಿನ ವಿಮಾನಗಳನ್ನು ಹೊಡೆದು ಕೆಡಹಿಬಿಟ್ಟವು.

ಪೂರ್ವ ರಣರಂಗದಲ್ಲಿ.

ಜರ್ಮನಿ ಮತ್ತು ಆಸ್ಟ್ರಿಯಾ ಸೈನ್ಯಗಳು ರಷ್ಯಾದವರನ್ನು ಹಿಂದಕ್ಕೆ [illegible]ದು ಮಹತ್ಪ್ರಯತ್ನಗಳನ್ನು ಮಾಡುತ್ತಿವೆ. ಯುದ್ಧಸಾಲಿನ ಮಧ್ಯ [illegible]ದಲ್ಲಿ ಮಾತ್ರವೇ ಅವರು ಸ್ವಲ್ಪ ಮುಂದರಿಸಿ ನುಗ್ಗಿ ಹೋಗಿರುತ್ತಾರೆ. [illegible] ಸಾಲಿನ ಉತ್ತರ ಭಾಗದಲ್ಲಿ ರಷ್ಯಾದವರು ಜರ್ಮನಿಯವರ ಮೇಲೆ [illegible] ಕದನಮಾಡಿದಾರೆ. ದಕ್ಷಿಣ ಭಾಗದಲ್ಲಾದರೋ ರಷ್ಯಾದವರು ಮತ್ತೆ [illegible]ದಿಂದ ಶತ್ರು ಸೈನ್ಯಗಳನ್ನು ಅಪಾರವಾಗಿ ಸೆರೆ ಹಿಡಿದುಕೊಂ[illegible]. ಜರ್ಮನಿಯವರು ಅಪಾರವಾಗಿ ನಷ್ಟಪಟ್ಟರು. ಆಗಸ್ಟ್ ತಾ 20 [illegible] ಸೆಪ್ಟಂಬರ್ ತಾ. 12 ರ ತನಕ ರಷ್ಯಾದವರು 40,000 ಸೈನ್ಯಗಳನ್ನು [illegible] ಹಿಡಿದಿರುತ್ತಾರೆ. ಇದಲ್ಲದೆ ಕೆಲವು ಸಾವಿರ ಸೈನಿಕರು ರಷ್ಯಾದವರಿಗೆ [illegible]ಯಾದರು. ದಕ್ಷಿಣ ಭಾಗದಲ್ಲಿ ಅವರು ಜರ್ಮನಿಯವರನ್ನು ಹಲವು [illegible] ದೂರ ಹಿಂದಕ್ಕೆ ಓಡಿಸಿಬಿಟ್ಟರು.

ಜರ್ಮನಿಯ ಗೂಢಚಾರರ ಚಿತಾವಣೆಯಿಂದ ದುಷ್ಕರ್ಮಿಗಳು ರಷ್ಯಾ [illegible]ನಿಯಾದ ಪೆಟ್ರೊಗ್ರಾಡ್ ನಗರದಲ್ಲಿ ಮದ್ದು ಗುಂಡು ತಯಾರಾಗುವ [illegible] ಕಾರ್ಖಾನೆಗೆ ಕೆಲವು ತಿಂಗಳ ಹಿಂದೆ ಸಿಡಿಮದ್ದಿನ ಗುಂಡಿಟ್ಟು ಒಡೆದು [illegible]ಟ್ಟರೆಂದೂ, ಇದರಿಂದಲೇ ರಷ್ಯಾ ಸೈನಿಕರಿಗೆ ಮದ್ದು ಗುಂಡು [illegible] ಒದಗದೆ ಕಷ್ಟಪಟ್ಟರೆಂದೂ ಹೇಳಲಾಗಿದೆ

ರಷ್ಯಾ ಚಕ್ರವರ್ತಿ ಜಾರ್‌ಯವರು ಅತ್ಯುಹಾನೋರೆಯನ್ನು ಪ್ರಕಟಿಸಿ [illegible] ಪ್ರಾಯದಲ್ಲಿರುವ 35 ವಯಸ್ಸಿನೊಳಗಿರುವ ಗಂಡಸರು ಅಂದರೆ [illegible],000 ಜನಗಳು ಸೈನ್ಯಕ್ಕೆ ಸಿದ್ಧರಾಗಬೇಕೆಂದು ಸಾರಿಸಿರುತ್ತಾರೆ. ಆದರೆ [illegible] ಈ ಪೈಕಿ 20,00,000 ಸೈನ್ಯ ಮಾತ್ರ ಬೇಕಾಗಿರುವುದಂತೆ.

ಆಸ್ಟ್ರಿಯಾದವರು ಸರ್ಬಿಯದ ಮತ್ತು ಮಾಂಟನೀಗ್ರೋದ ಎಲ್ಲೆಕಟ್ಟಿ[illegible] ಯುದ್ಧ ಸೈನ್ಯಗಳನ್ನು ವಾಪಸು ಕರೆಸಿಕೊಂಡರೆಂದೂ, ಇಟಲಿ ಮತ್ತು [illegible] ಮೇಲೆ ಕದನಮಾಡುವಂತೆ ಕಳುಹಿಸಿದರೆಂದೂ ಪ್ರಕಟವಾಗಿದೆ.

ರಷ್ಯಾ ರಾಜ್ಯಾಧಿಕಾರಗಳಲ್ಲಿ ನಾನಾ ಬದಲಾವಣೆಗಳಾಗುವಂತೆ ಕಂಡು [illegible]. ರಷ್ಯಾ ದೊಡ್ಡ ಮನುಷ್ಯರು ರಷ್ಯಾ ರಾಜ್ಯದೊಳಗೆ ಯಹೂದ್ಯರ [illegible] ಫಿನ್‌ಲೆಂಡಿನಲ್ಲೂ ಈಗ ಜಾರಿಯಲ್ಲಿರುವ ಅನೇಕ ಕ್ರೂರತರ [illegible] ಶಾಸನಗಳನ್ನು ತೆಗೆದುಹಾಕಬೇಕೆಂದೂ, ಪ್ರಜಾಪ್ರತಿನಿಧಿಗಳಿಗೆ [illegible] ಸೌಲಭ್ಯಗಳನ್ನು ಕಲ್ಪಿಸಿ ರಾಜ್ಯಭಾರವನ್ನು ನಡೆಸಬೇಕೆಂದೂ ಕೇಳು[illegible]. ಶೀಘ್ರದಲ್ಲೇ ಈ ರೀತಿಯಾದ ಬದಲಾವಣೆಗಳು ಮಾಡಲ್ಪಟ್ಟು ರೂಢಿಗೆ [illegible] ತೋರುತ್ತದೆ.

ಜರ್ಮನಿಯ ಸೈನಿಕರಿಗೆ ರಷ್ಯಾ ರಾಜ್ಯದಲ್ಲಿ ವಿಪ್ರಕೃತವಾಗಿರುವ ಕಷ್ಟ [illegible] ಜರ್ಮನಿ ಪತ್ರಿಕೆಗಳು ವಿವರಿಸಿ ಬರೆಯುತ್ತಿರುವವು. ರಷ್ಯಾದವರು [illegible] ಪರಾಕ್ರಮದಿಂದ ತಮ್ಮ ಸ್ಥಾನಗಳನ್ನು ಕಾಪಾಡಿಕೊಳ್ಳುತ್ತಾ ಬಂದಿ[illegible]. ಈಗಾಗಲೇ ಮಳೆಗಳು ಪ್ರಾರಂಭವಾಗಿ ಸುರಿಯುತ್ತಿರುವವು. ಇದರಿಂದ [illegible]ಯವರಿಗೆ ಸೈನ್ಯ ಸಾಮಾನುಗಳನ್ನು ತಮ್ಮ ರಾಜ್ಯದಿಂದ ಸಾಗಿಸ ತರು[illegible] ತುಂಬಾ ಪ್ರಯಾಸವಾ'ದೆ.

ಒಂದು ಭಾಗದಲ್ಲಿ ರಷ್ಯಾದವರು ಜರ್ಮನಿಯವರನ್ನು ಸೋಲಿಸಿ ಹಿಮ್ಮೆ[illegible]. ಆ ಸಂದರ್ಭದಲ್ಲಿ ಜರ್ಮನಿಯವರು ಸ್ಥಳೀಯ ಸಭ್ಯ ಪ್ರಜೆಗಳನ್ನು [illegible] ತಮ್ಮ ಸೈನ್ಯದ ಮುಂದೆ ನಿಲ್ಲಿಸಿದರೆಂದೂ, ರಷ್ಯಾದವರು ಆ ತಮ್ಮ [illegible] ಮೇಲೆ ಗುಂಡುಗಳನ್ನು ಸುರಿಸದೆಹೋಗಲೆಂಬುವುದೇ ಜರ್ಮನಿಯವರ [illegible]ದ್ದೇಶವೆಂದೂ ತಿಳಿದುಬಂದಿದೆ.

ಇಟಲಿ ಮತ್ತು ಆಸ್ಟ್ರಿಯಾ.

ಆಸ್ಟ್ರಿಯಾದವರು ಇಟಲಿಯವರ ಹಿಮ್ಮೆಟ್ಟಿಸಬೇಕೆಂದು ಅನೇಕ ವೇಳೆ [illegible] ಮೇಲೆ ನುಗ್ಗಿ ಕದನಮಾಡಿದರು. ಆದರೆ ಪ್ರತಿ ಸಲವೂ ಅವರು ಸೋತು [illegible] ಹೋಗಬೇಕಾಯಿತು. ಆಸ್ಟ್ರಿಯಾದವರು ಗುಂಡುಗಳಲ್ಲಿ ವಿಷವಾ[illegible] ತುಂಬಿ ಹೊಡೆಯಲಾರಂಭಿಸಿರುತ್ತಾರೆ.

ಆಸ್ಟ್ರಿಯಾದವರ ವಿಮಾನಗಳು ಇಟಲಿಯ ಕೆಲವು ಪಟ್ಟಣಗಳ ಮೇಲೆ [illegible] ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಇಟಲಿಯ ವಿಮಾನ [illegible] ಹೋಗಿ ಟ್ರಿಯೆಸ್ಟ್ ನಗರದ ಬಳಿ ರೈಲ್ ಗಾಡಿಗಳಿಗೆ ಗುಂಡುಗಳನ್ನು [illegible]ತ್ತವೆ

[illegible] ಸಬ್‌ಮೆರೀನ್ ಎಂಬೊಂದು ಹಡಗು ಆಸ್ಟ್ರಿಯದ ಟಾರ್ಪೀ[illegible] ಎಂಬ ದೋಣಿಯನ್ನು ಮುಳುಗಿಸಿತು.

ಫ್ರೆಂಚ್ ದಳಪತಿಯಾದ ಜನರಲ್ ಜೊಫ್ರಿಯವರು ಇಟಲಿಗೆ ಹೋಗಿ [illegible] ಸೈನ್ಯಗಳ ಸಾಲುಗಳನ್ನು ನೋಡಿಕೊಂಡು ಬಂದರು. ಆ ಸಮಯದಲ್ಲಿ [illegible] ದೊರೆಯು ಆ ದಳಪತಿಗೆ ಒಂದು ಬಿರುದನ್ನು ದಯಪಾಲಿಸಿದರು.

ಟರ್ಕಿಯಲ್ಲಿ.

ಈ ವಾರ ಈ ಪ್ರಾಂತ್ಯದ ವಿಶೇಷ ವರ್ತಮಾನವೇನೂ ಬಂದಿಲ್ಲ. ಟರ್ಕಿ[illegible] ಕೋಟೆಗಳು ನಾಶವಾಗಲ್ಪಟ್ಟವು. ಆದರೆ ಟರ್ಕಿ ಸೈನ್ಯಗಳು [illegible] ಕಂದಕಗಳನ್ನು ಕೈಬಿಡಲಿಲ್ಲ.

ಬ್ರಿಟಿಷರ ಒಂದು ಸಬ್‌ಮೆರೀನ್ ಹಡಗು ಮುಳುಗಿಸಲ್ಪಟ್ಟಿತು. ಅದರ [illegible] 3 ಮಂದಿ ಹುದ್ದೆದಾರರನ್ನೂ 25 ಮಂದಿ ಸೈನಿಕರನ್ನೂ ಟರ್ಕಿಯವರು [illegible] ಹಿಡಿದುಕೊಂಡು ಹೋಗಿದಾರೆ.

ಮಂತ್ರಿ ಸಭೆಯಲ್ಲಿದ್ದ ಷೇಕ್-ಉಲ್-ಇಸ್ಲಾಮ್ ಎಂಬವರು ಆರ್ಮೇನಿಯಾ[illegible]ಯಲ್ಲಿ ಕ್ರೈಸ್ತರನ್ನು ನಿಷ್ಕಾರಣವಾಗಿ ಕೊಂದುಹಾಕಿದ್ದು ಯೋಗ್ಯವಲ್ಲವೆಂ[illegible] ಪ್ರತಿಭಟಿಸಿ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆಂದು ತಿಳಿಸಲಾಗಿದೆ.

ಗಲ್ಲಿಪೊಲಿ ಜಲಮಾರ್ಗಗಳಲ್ಲಿ ಟರ್ಕಿಯವರು ವೈರ್ ಎಂಬ ಸುರಂ[illegible] ಹಾಕಲು ಪ್ರಾರಂಭಿಸಿದಾರೆ. ಆದರೆ ನಮ್ಮ ಪಕ್ಷದವರು ಅವುಗ[illegible] ನಾಶಮಾಡಿದರು.—ಕಪ್ಪು ಕಡಲಿನಲ್ಲಿ ಟರ್ಕಿಯವರು ಮದ್ದುಗುಂ[illegible] ಸಾಗಿಸಿಕೊಂಡು ಹೋಗುತ್ತಿದ್ದ ಕೆಲವು ಹಡಗುಗಳನ್ನು ರಷ್ಯಾ[illegible]ಯುದ್ಧದ ಜಹಜುಗಳು ಒಡೆದು ಹಾಳುಮಾಡಿ ಅವುಗಳಲ್ಲಿದ್ದ ಟರ್ಕಿಯವ[illegible] ಸೆರೆ ಹಿಡಿದುಕೊಂಡರು.

ಆಫ್ರಿಕಾದಲ್ಲಿ.

ಕಳೆದ ವಾರ ಪೂರ್ವ ಆಫ್ರಿಕಾದಲ್ಲಿ ಬ್ರಿಟಿಷರಿಗೂ ಜರ್ಮನಿಯವರಿಗೂ [illegible] ಕದನವಾಯಿತು. ಜರ್ಮನಿಯವರು ಓಡಿ ಹೋದರು. ಯುದ್ಧ[illegible] ಒಟ್ಟು ಜರ್ಮನಿಯವರೂ 31 ಸ್ವದೇಶಿಗಳೂ ಸತ್ತು ಬಿದ್ದಿದ್ದರು; [illegible] ಗಾಯಗಳಾಗಿರುತ್ತವೆ. ಬ್ರಿಟಿಷರ ಕಡೆ 3 ಮಂದಿ ಕೊಲೆಯಾದರು; [illegible] ಮಂದಿ ಗಾಯಪಟ್ಟಿದಾರೆ. ಅಲ್ಲಿ ಜರ್ಮನಿಯವರು ಬಿಟ್ಟು ಹೋಗಿದ್ದ [illegible] ಬಂದೂಕುಗಳೂ ಮದ್ದು ಗುಂಡೂ ಆಹಾರ ಸಾಮಗ್ರಿಗಳೂ ಸಿಕ್ಕಿರುತ್ತವೆ.

ದಕ್ಷಿಣ ಆಫ್ರಿಕಾದಲ್ಲಿ ದಂಗೆಯೆದ್ದು ತಲೆ ತಪ್ಪಿಸಿಕೊಂಡು ಹೋಗಿದ್ದ [illegible] ಎಂಬಾತನು ಪೋರ್ಚುಗೀಸರ ಸೀಮೆಯಲ್ಲಿ ಸಿಕ್ಕಿಬಿದ್ದನು.

ಇತರ ವಿಷಯಗಳು.

ಯುದ್ಧಕ್ಕೆ ಸಂಬಂಧಪಡದಂಥಾ ಜಹಜುಗಳನ್ನು ಮುಳುಗಿಸುವುದಿಲ್ಲವೆಂದು [illegible] ವಾಗ್ದಾನಮಾಡಿರುವುದನ್ನು ಅಮೇರಿಕದವರು ಒಪ್ಪಿಕೊಂಡ[illegible] ಕೊಂಡಾಗಿದೆ. ಜರ್ಮನಿಯವರು ಈ ಮಾತಿನಂತೆ ನಡೆಯುವುದೂ ಇಲ್ಲದಿದ್ದ ಮುಂದೆ ಗೊತ್ತಾಗಬೇಕು. ಮೊನ್ನೆ ತಾನೇ ಮುಳುಗಿದ ಜಹಜಿಗೆ ಟಾರ್ಪೀಡೋ ಬಿಟ್ಟು ಹೊಡೆಯಲಿಲ್ಲವೆಂದೂ, ಅದು ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಹಾಳಾಯಿತೆಂದೂ ಜರ್ಮನಿಯವರು ಹೇಳಿದಾರೆ. ಅವರ ಮಾತು ನಂಬುವುದೇ ಸಂಶಯವಾಗಿದೆ.

ಯುದ್ಧವು ಪ್ರಾರಂಭವಾದಾರಭ್ಯ ಮೊದಲನೇ ವರುಷದಲ್ಲಿ ಬ್ರಿಟಿಷ್ ಸೈನಿಕರು ನಷ್ಟವಾಗಿರುವುದನ್ನು ಪ್ರಕಟಮಾಡಿದಾರೆ.

	ಹುದ್ದೆದಾರರು	ಸೈನಿಕರು	ಒಟ್ಟು
ಕೊಲೆಯಾದವರು	4,965	70,992	75,957
ಗಾಯಪಟ್ಟವರು	9,973	2,41,086	2,51,059
ತಪ್ಪಿಸಿಕೊಂಡವರು	1,501	53 466	54,967
ಒಟ್ಟು	16,439	3,65,544	3,81,983

ಈ ಪೈಕಿ ಶೇಕಡಾ 40 ರಷ್ಟು ಅಂದರೆ 1,52,600 ಮಂದಿ ಯಾವಜ್ಜೀವವೂ ಯಾವ ಕೆಲಸವನ್ನೂ ಮಾಡದಂತಾಗಿದಾರೆ.

ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸುವ ಕಾರ್ಯದಲ್ಲಿ ನೇಮಿಸಲಾದ ಬ್ರಿಟಿಷ್ ಸೈನಿಕರಲ್ಲಿ ಎಷ್ಟು ನಷ್ಟವಾದರೆಂದರೆ—

	ಹುದ್ದೆದಾರರು	ಸೈನಿಕರು	ಒಟ್ಟು
ಕೊಲೆಯಾದವರು	1,130	16,478	17,608
ಗಾಯಪಟ್ಟವರು	3,271	59,257	62,528
ತಪ್ಪಿಸಿಕೊಂಡವರು	373	8,021	8 394
ಒಟ್ಟು	4,774	83,756	88,530

ಈ ಸಂಖ್ಯೆಗಳು ಮೇಲಿನ ಸಂಖ್ಯೆಗಳಲ್ಲಿ ಸೇರಿರುತ್ತವೆ. ಗಲ್ಲಿಪೊಲಿ ಅರ್ಧದ್ವೀಪದಲ್ಲಿ ನಡೆದ ಕದನಗಳು ಮಹಾ ಘೋರವಾದವುಗಳೆನ್ನುವುದಕ್ಕೆ ಈ ಸಂಖ್ಯೆಗಳೇ ದೃಷ್ಟಾಂತವಾಗಿರುವವು.

ಬ್ರಿಟಿಷ್ ಸೈನ್ಯದ ಇಲಾಖೆಯ ಮಂತ್ರಿಯಾದ ಲಾರ್ಡ್ ಕಿಚ್ನರ್‌ಯವರು ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭಾಮನೆಯಲ್ಲಿ ಯುದ್ಧದ ನಡವಳಿಕೆಯನ್ನು ಕುರಿತು ದೀರ್ಘವಾಗಿ ವಿವರಿಸಿ ಭಾಷಣಮಾಡಿದರು. ಬ್ರಿಟಿಷ್ ಸೈನಿಕರ ಯುದ್ಧಸಾಲು ಮೊದಲಿದ್ದದಕ್ಕಿಂತ ಇನ್ನೂ 17 ಮೈಲಿ ದೂರ ಹೆಚ್ಚಿಸಲಾಗಿದೆ. ಇದರಿಂದ ಫ್ರೆಂಚರಿಗೆ ತುಂಬಾ ಸಹಾಯವೂ ಅನುಕೂಲವೂ ಆಯಿತು. ಬ್ರಿಟಿಷ್ ಸೈನಿಕರಿಗೋಸ್ಕರ ಅನೇಕ ಭಾರೀ ಫಿರಂಗಿಗಳನ್ನೂ ಮದ್ದು ಗುಂಡುಗಳನ್ನೂ ತಯಾರುಮಾಡಿ ಕಳುಹಿಸಲಾಗಿದೆ. ಶತ್ರು ಸೈನಿಕರು ಹಾಕುವ ಬೆಂಕಿಯ ದ್ರಾವಕಗಳಿಗೂ, ವಿಷವಾಯುಗಳಿಗೂ ಪ್ರತೀಕಾರಗಳನ್ನು ಮಾಡಿಕೊಟ್ಟು ಒದಗಿಸಿದೆ. ಬಲಾತ್ಕಾರವಿಲ್ಲದೆ ಪ್ರಜೆಗಳೇ ಸೈನ್ಯಕ್ಕೆ ಬಂದು ಸೇರುತ್ತಿರುವುದು ತೃಪ್ತಿಕರವಾಗಿಯೂ ಸ್ತೋತ್ರಾರ್ಹವಾಗಿಯೂ ಇದೆ. ಕಲ್ಲಿನಿಂದಲಾಗಲಿ ಕಬ್ಬಿಣದಿಂದಲಾಗಲಿ ಕೋಟೆಗಳನ್ನು ಕಟ್ಟಿದ್ದಾಗ್ಯೂ ಪ್ರಯೋಜನವಿಲ್ಲವೆಂದು ನಿರ್ಧರವಾಯಿತು. ಭೂಮಿಯಲ್ಲಿ ಆಳವಾದ ಕಂದಕಗಳನ್ನು ತೋಡಿಕೊಂಡು ಕಾಯುವುದೇ ಈಗಿನ ಯುದ್ಧದ ಕ್ರಮ. ಫ್ರೆಂಚ್ ಸೈನ್ಯಗಳು ಎಷ್ಟೋ ಉತ್ತಮವಾದ ಸ್ಥಿತಿಯಲ್ಲಿರುತ್ತವೆ. ರಷ್ಯಾದವರು ಪರಾಕ್ರಮದಿಂದ ಯುದ್ಧಮಾಡುತ್ತಿದಾರೆ. ಜರ್ಮನಿಯವರು ಪೂರ್ವ ರಣರಂಗದಲ್ಲಿ ಅನೇಕ ಸೈನ್ಯಗಳನ್ನೂ ಭಾರೀ ಫಿರಂಗಿಗಳನ್ನೂ ಇಟ್ಟುಕೊಂಡಿದಾರೆ. ಮೊದಲು ರಷ್ಯಾ ಸೈನಿಕರಿಗೆ ಬೇಕಾಗುವಷ್ಟು ಯುದ್ಧಸಾಮಗ್ರಿಗಳು ಒದಗಲಿಲ್ಲ. ಆದಾಗ್ಯೂ ರಷ್ಯಾ ಸೈನ್ಯಗಳನ್ನು ಜರ್ಮನಿಯವರಿಂದ ನಾಶಮಾಡಲಾಗಲಿಲ್ಲ. ಜರ್ಮನಿಯವರು ದಿನಕ್ಕೆ ಐದು ಮೈಲಿಯಂತೆ ಮುಂದುಮುಂದಕ್ಕೆ ನುಗ್ಗಿ ಹೋಗುತ್ತಿದ್ದರು. ಈಗಲಾದರೋ ದಿನಕ್ಕೆ ಒಂದು ಮೈಲೀ ದೂರವೂ ಹೋಗುವುದು ಅವರಿಗೆ ಪ್ರಯಾಸವಾಗಿದೆ. ಅನೇಕ ಠಾಣ್ಯಗಳಲ್ಲಿ ರಷ್ಯಾದವರು ಅವರನ್ನು ತಡೆದು ಇರುತ್ತಾರೆ. ಈಗ ರಷ್ಯಾದವರಿಗೆ ಅಪಾರ ಮದ್ದು ಗುಂಡು ಒದಗಿಸಿರುತ್ತದೆ.

ಬ್ರಿಟಿಷ್ ಮಂತ್ರಿ ಶ್ರೇಷ್ಠರಾದ ಮಿ|| ಆಸ್ಕಿತ್‌ರವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಒಂದು ಭಾಷಣಮಾಡಿ ಯುದ್ಧದ ಖರ್ಚಿಗೆ ಇನ್ನೂ 50,00,00,000 ಪೌಂಡು ಬೇಕೆಂದು ಕೇಳಿದರು. ಈಗ ದಿನ ಒಂದಕ್ಕೆ 35,00,000 ಪೌಂಡಿನಂತೆ ಯುದ್ಧಕ್ಕೆ ಖರ್ಚಾಗುತ್ತಿದೆ. ಕಳೆದ ಏಪ್ರೆಲ್ ತಿಂಗಳ ಪ್ರಾರಂಭದಿಂದ 50,00,00,000 ಪೌಂಡು ಖರ್ಚಾಗಿರುತ್ತದೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಪರರಾಜ್ಯಗಳಿಗೆ 3,00,00,000 ಪೌಂಡು ಸಾಲ ಕೊಟ್ಟಿರುತ್ತಾರೆ. ಬ್ರಿಟಿಷ್ ಸ್ವಾಸ್ಥ್ಯಗಳಿಗೆ 2,80,00,000 ಪೌಂಡು ಸಾಲ ಕೊಟ್ಟಿರುವರು. ಇನ್ನೂ ಅನ್ಯ ದೇಶಗಳಿಗೆ 25,00,00,000 ಪೌಂಡು ಸಾಲ ಕೊಟ್ಟಿದಾರೆ. ಸೈನ್ಯಕ್ಕೆ ಜನರು ಬಂದು ಸೇರುವುದು ತೃಪ್ತಿಕರವಾಗಿದೆ; ಇದುವರೆಗೆ 30,00,000 ಪ್ರಜೆಗಳು ಬಂದು ಸೈನ್ಯಕ್ಕೆ ಸೇರಿಕೊಂಡಿದಾರೆ. 715 ಕಾರ್ಖಾನೆಗಳಲ್ಲಿ 80,00,000 ಪ್ರಜೆಗಳು ಸೇರಿ ಯುದ್ಧಸಾಮಗ್ರಿಗಳನ್ನು ತಯಾರುಮಾಡುತ್ತಿರುವರು. ಹೀಗೆಲ್ಲಾ ವಿವರಿಸಿ ಕಡೆಯಲ್ಲಿ ಮಂತ್ರಿವರ್ಯರು ಅಪ್ಪಣೆಕೊಡಿಸಿದ್ದೇನೆಂದರೆ—"ಯಂತ್ರ ಸಾಧನಗಳಿಂದಲೂ, ಜನಗಳನ್ನು ಕ್ರಮವರ್ಗಪಟ್ಟುಕೊಂಡು ನಡೆಸುವುದರಿಂದಲೂ, ದೀರ್ಘಕಾಲ ತಾಳ್ಮೆಯಿಂದ ಕಾಯುವುದರಿಂದಲೂ ಈಗಿನ ಯುದ್ಧವು ಜಯಿಸತಕ್ಕದ್ದಾಗಿದೆ. ಯಾವ ಪಕ್ಷವು ಉತ್ತಮೋತ್ತಮವಾದ ಆಯುಧಸಾಮಗ್ರಿಗಳನ್ನು ಒದಗಿಸಿಕೊಂಡು ದೀರ್ಘಕಾಲ ತಾಳ್ಮೆಯಿಂದ ಎದುರುನೋಡಬಲ್ಲದೋ ಆ ಪಕ್ಷಕ್ಕೆ ಜಯವು ಲಭ್ಯವಾಗುತ್ತದೆ. ನಾವು ಮಾಡಬೇಕೆಂದಿರುವ ಕಾರ್ಯವೂ ಇದೇ."

ನಮ್ಮ ಪಕ್ಷದವರು ಏಕೀಭವಿಸಿ ಅಮೇರಿಕ ರಾಜ್ಯದಲ್ಲಿ 20,00,00,000 ಪೌಂಡು ಸಾಲ ಮಾಡಬೇಕೆಂದು ಪ್ರಯತ್ನಪಟ್ಟಿದಾರೆ. ಇದಕ್ಕೋಸ್ಕರ ಅನೇಕ ಬ್ಯಾಂಕುಗಳವರು ಅಮೇರಿಕಕ್ಕೆ ಹೋಗಿರುವರು. ಅಮೇರಿಕದ ಸರ್ಕಾರದವರು ತಮ್ಮ ಬ್ಯಾಂಕುಗಳಿಗೆ ಸಾಲ ಕೊಡಿ ಎಂದಾಗಲಿ, ಕೊಡಬಾರದೆಂದಾಗಲಿ ಹೇಳುವುದಿಲ್ಲ. ಅಷ್ಟುಮಾತ್ರ ಬ್ಯಾಂಕುಗಳು ಸಾಲ ಕೊಡಬಹುದಾಗಿದೆ. ಜರ್ಮನಿ ಬ್ಯಾಂಕುಗಳೂ ಸಾಲ ಕೊಡಲು ಒಪ್ಪಿದಾರೆ. ಇವರು ಅಮೇರಿಕದವರೇ. ಇದರಿಂದ ಅಮೇರಿಕಕ್ಕೇ ಉಪಕಾರವಾಗುವುದು.

ಗ್ರೇಟ್ ಬ್ರಿಟನ್ನಿನೊಳಗೆ ಪ್ರಜೆಗಳು ಪೋಸ್ಟ್ ಆಫೀಸುಗಳ ಮೂಲಕ ಸರ್ಕಾರಕ್ಕೆ 3,30,00,000 ಪೌಂಡು ಸಾಲವನ್ನು ಒದಗಿಸಿರುವರು.

ಅಮೇರಿಕದಲ್ಲಿದ್ದ ಆಸ್ಟ್ರಿಯಾ ರಾಯಭಾರಿ ಡಾ|| ಡಂಬ ಎಂಬಾತನು ಅಲ್ಲಿಂದ ನೆನ್ನೆ (ತಾ. 22 ರಲ್ಲಿ) ಅಮೇರಿಕದಿಂದ ವಾಪಸು ಹೊರಡುವಂತೆ ನಿಷ್ಕರ್ಷೆಯಾಗಿತ್ತು.

ಜರ್ಮನಿಗೆ ನಾನಾ ಪದಾರ್ಥಗಳನ್ನು ಭರ್ತಿಮಾಡಿಕೊಂಡು ಹೋಗುತ್ತಿದ್ದ 42 ಹಡಗಗಳನ್ನು ಬ್ರಿಟಿಷರು ತಡೆದು ಸ್ವಾಧೀನಪಡಿಸಿಕೊಂಡಿದಾರೆ. ಅಮೇರಿಕದಿಂದ ಅವು ಬಂದು ಮೊದಲು ಸ್ವೀಡನ್ ರಾಜ್ಯಕ್ಕೆ ಹೋಗಿ ಅಲ್ಲಿಂದ ಕಡೆಗೆ ಜರ್ಮನಿಯನ್ನು ತಲಪುವಂತೆ ಏರ್ಪಾಡಾಗಿತ್ತು. ಗ್ರೇಟ್ ಬ್ರಿಟನ್ನ ನ್ಯಾಯಸ್ಥಾನಗಳು ಆ ಸಾಮಾನುಗಳನ್ನೆಲ್ಲಾ ಕಿತ್ತುಕೊಳ್ಳಬೇಕೆಂದು ತೀರ್ಮಾನಮಾಡಿರುವವು. ಆ ಸರಕುಗಳು ಬಹಳ ಬೆಲೆಯುಳ್ಳವುಗಳೆಂದು ತಿಳಿಸಲ್ಪಟ್ಟಿದೆ.

ಜರ್ಮನಿಯವರು ಬೆಲ್ಜಿಯಮ್ ರೈಲ್ವೆಗಳನ್ನು ಕಿತ್ತುಹಾಕಿ ರಷ್ಯಾ ದೇಶಕ್ಕೆ ಸಾಗಿಸಿಕೊಂಡು ಹೋಗುತ್ತಿರುವುದನ್ನು ನೋಡಿ ಬೆಲ್ಜಿಯಮ್ ರಾಜ್ಯವು ಪ್ರತಿಭಟಿಸಿ ಹಾಗೆ ಸಾಗಿಸಕೂಡದೆಂದು ಜರ್ಮನಿಗೆ ತಿಳಿಸಿರುತ್ತದೆ.

ಚೀನಾ ರಾಜ್ಯದಲ್ಲಿ ಚೀನೆಯಿಂದ ರಷ್ಯಾಕ್ಕೆ ಹೋಗಿ ಬರುವ ರೈಲ್ ರಸ್ತೆಯಲ್ಲಿ ಕೆಲವು ಸೇತುವೆಗಳನ್ನು ಜರ್ಮನಿಯ ಕಡೆಯವರು ಒಡೆದುಹಾಕಬೇಕೆಂದು ಪ್ರಯತ್ನಪಟ್ಟಂತೆ ಪ್ರಕಟವಾಗಿದೆ.—ಯುದ್ಧಭೂಮಿಯಿಂದ ಒಬ್ಬ ಬ್ರಿಟಿಷ್ ಸೈನಿಕನು ಜ್ಞಾಪಕಾರ್ಥವಾಗಿ ಇಟ್ಟಿರಬೇಕೆಂದು ಒಂದು ಒಡೆಯುವ ಗುಂಡನ್ನು ಅಂಚೆಯ ಮೇಲೆ ಭಾಂಗಿ ಮಾಡಿ ಕಳುಹಿಸಿದನು. ಅದು ಲಂಡನ್ ಪಟ್ಟಣದ ಪೋಸ್ಟ್ ಆಫೀಸಿನಲ್ಲಿ ಒಡೆದು ಹಲವರಿಗೆ ನಾನಾ ಘಾಯಗಳಾದವು.

ಗ್ರೇಟ್ ಬ್ರಿಟನ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಸಂಘಗಳನ್ನು ಮಾಡಿಕೊಂಡು ಎಲ್ಲರೂ ಏಕವಾಗಿರುತ್ತಾರೆ. ಇವರು ಒಂದು ಕಡೆ ಸೇರಿ ವಾರ್ಷಿಕ ಕೂಟವನ್ನು ನಡಿಸಿದರು. ಅವರಲ್ಲಿ ಮುಂದಾಳುಗಳಾಗಿದ್ದ ಕೆಲವರು ಯುದ್ಧವನ್ನು ಬೇಗನೆ ನಿಲ್ಲಿಸಬೇಕೆಂದು ಸಾಧಿಸಿದರು. ಸಭೆಯ ಅಧ್ಯಕ್ಷನು—ಅಂಥಾ ಅಭಿಪ್ರಾಯವುಳ್ಳವರನ್ನೆಲ್ಲಾ ನಮ್ಮ ಸಂಘಗಳಿಂದಲೇ ತೆಗೆದು ಹಾಕಬೇಕೆಂದು ಹೇಳಿದನು. ಕಡೆಗೆ ಈ ಸಮಾಜದಲ್ಲಿ ಪ್ರತಿನಿಧಿಗಳು—ಯುದ್ಧವನ್ನು ಜಯವಾಗುವ ತನಕ ನಡಿಸುತ್ತಲೇ ಬರಬೇಕೆಂದೂ, ಅದಕ್ಕೆ ಬೇಕಾಗುವಷ್ಟು ಸಹಾಯ ಮಾಡುತ್ತೇವೆಂದೂ ತೀರ್ಮಾನ ಮಾಡಿಕೊಂಡರು. ಈ ತೀರ್ಮಾನವನ್ನು 600 ಪ್ರತಿನಿಧಿಗಳು ಒಪ್ಪಿಕೊಂಡರು; 7 ಮಂದಿ ಮಾತ್ರ ಒಪ್ಪಲಿಲ್ಲ.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ಬಂದಿರುವ ಹಲವು ಬಾತ್ಮಿಗಳನ್ನು ಪ್ರಕಟಿಸಲು ಸ್ಥಳ ಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಮನ್ ಮಹಾರಾಜರವರು ನೆನ್ನೆ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವರಾಗಿದ್ದರು. ಮಹಾ ಮಾತೃಶ್ರೀಯವರೂ ರಾಣಿವಾಸದವರೂ ಶನಿವಾರ ಸಾಯಂಕಾಲ ಬೆಂಗಳೂರಿಗೆ ಪ್ರಯಾಣಮಾಡಿದರು.

ಈ ಸಲ ನವರಾತ್ರಿ ಉತ್ಸವಗಳ ಕಾಲದಲ್ಲಿ ಮೈಸೂರು ಸಂಸ್ಥಾನದ ಪೊಲೀಸ್ ಇಲಾಖೆಯವರ ಕಸರತ್ತುಗಳೂ ಕವಾಯತುಗಳೂ ರಾಜಧಾನಿಯಲ್ಲಿ ನಡಿಸಲ್ಪಟ್ಟು ಬಹುಮಾನಗಳನ್ನು ಕೊಡುವರೆಂದು ಕೇಳುತ್ತೇವೆ.

ಮೈಸೂರು ವ್ಯವಸಾಯದ ಇಲಾಖಾ ಡೈರೆಕ್ಟರಾದ ಡಾ|| ಎಲ್. ಸಿ. ಕೋಲ್ಮನ್‌ರವರು ಆರು ತಿಂಗಳ ರಜಾ ಪಡೆದು ಸೀಮೆಗೆ ಪ್ರಯಾಣಮಾಡಿದರು. ಮಿ|| ಯಜ್ಞನಾರಾಯಣಯ್ಯಂಗಾರರು ಅವರ ಕೆಲಸವನ್ನು ನಡಿಸುತ್ತಾರೆ.

ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ರಾವ್ ಬಹದ್ದೂರ್ ಮ|| ಎಂ ಶಾಮರಾಯರು ಬಿಡದಿಯಲ್ಲಿ ಒಂದು ಹೊಸ ಪಾಠಶಾಲೆಯನ್ನು ಪ್ರತಿಷ್ಠೆ ಮಾಡಿ ಕೆಲವು ಮುಸಲ್ಮಾನ್ ಹೆಣ್ಣುಮಕ್ಕಳಿಗೆ ವೇತನ ಕೊಡುವುದಾಗಿ ಮಾತು ಕೊಟ್ಟು ಬಂದರು.

ಪಂಜಾಬಿನಿಂದ ಬೆಂಗಳೂರಿಗೆ ಬಂದಿರುವ ಪಂಜಾಬಿ ಕ್ರೈಸ್ತ ರೆಜಿಮೆಂಟಿಗೆ ಬೆಂಗಳೂರಿನಲ್ಲಿ ವೈದ್ಯರಾಗಿರುವ ಮಿ|| ಧನಸಿಂಗ್‌ಯವರನ್ನು ಚಾಪ್ಲೇನ್‌ರನ್ನಾಗಿ ಸರ್ಕಾರದವರು ನೇಮಿಸಿರುವುದು ಹಿಂದೂ ದೇಶೀಯರೆಲ್ಲರಿಗೂ ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ರಾಜಧಾನಿಯಲ್ಲಿ ಕೆಲವು ವರ್ತಕರು ಸೇರಿ ಅಂಗಡಿಗಳಿಗೆ ನೀರಿನ ತೆರಿಗೆಯನ್ನು ಹಾಕುವುದು ನ್ಯಾಯವಲ್ಲವೆಂದು ಅಭ್ಯರ್ಥನೆಮಾಡಿ ಈ ವಿಚಾರವನ್ನು ಈ ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ಗವರ್ನ್‌ಮೆಂಟಿಗೆ ಮೆಂಬರುಗಳ ಮೂಲಕ ಅರಿಕೆಮಾಡಿಸುವಂತೆ ತೀರ್ಮಾನಮಾಡಿದರು.

ಶ್ರೀರಂಗಪಟ್ಟಣದ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ರೆಜಿಸ್ಟರ್ ಮಾಡುವುದಕ್ಕೆ ಕಕ್ಷಿಗಾರರು ಹಾಜರು ಮಾಡಿದ್ದ ಪತ್ರಗಳ ಪೈಕಿ ಸುಮಾರು ಇಪ್ಪತ್ತು ಪತ್ರಗಳು ಫೋರ್ಜರಿ ಆದವೆಂದು ತಿಳಿದು ಡೆಪ್ಯುಟಿ ಕಮಿಷನರು ಅಲ್ಲಿಗೆ ಹೋಗಿ ತನಿಖೆಯಿಂದ ಒಬ್ಬ ಗುಮಾಸ್ತನನ್ನು ಸಸ್ಪೆಂಡ್ ಮಾಡಿ, ಇನ್ನೊಬ್ಬನನ್ನು ಕೆಲಸದಿಂದ ವಜಾ ಮಾಡಿದರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಸುಬ್ರಾಯನ ಕೆರೆ ಉತ್ತರ ಪಾರ್ಶ್ವದ ಬೀದಿಯಲ್ಲಿ ಟ್ರಸ್ಟ್ ಬೋರ್ಡಿನವರು ಚಪ್ಪಲ ಸಲ್ಲಿಗಳನ್ನು ಹಾಕಿಸುವುದಕ್ಕೆ ಆಳವಾದ ಚರಂಡಿಗಳನ್ನು ತೋಡಿಸಿ ಅದರಲ್ಲಿದ್ದ ಕಲ್ಲುಗಳನ್ನು ಒಡೆಸಲು ಸಿಡಿಮದ್ದನ್ನು ಹಾಕಿಸಿದ್ದರು. ಕಳೆದ ಶುಕ್ರವಾರ ಸಾಯಂಕಾಲ ಈ ಕೂಲಿಯವರ ಅಜಾಗ್ರತೆಯಿಂದ ಆ ಸಿಡಿಮದ್ದು ಹಾರಿ ಒಬ್ಬ ಕೂಲಿಯವನ ತೋಳು ಒಡೆದುಹೋಯಿತು; ಇನ್ನೊಬ್ಬನಿಗೆ ಒಂದು ಕಣ್ಣು ಊನವಾಯಿತು.

ಮೈಸೂರು ಸಂಸ್ಥಾನದಲ್ಲಿ ಸಿವಿಲ್ ಕೋರ್ಟುಗಳ ನೌಕರಮಾನೇಜುಗಳ ಸಂಬಳವನ್ನು ಬಡ್ತಿ ಮಾಡಿ ಕಳೆದ ಜೂಲೈ ಲಾಗಾಯತು ಜಾರಿಗೆ ಬರತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ. ಈಗ ಬಡ್ತಿ ಕೊಟ್ಟಿರುವುದು ವರುಷಕ್ಕೆ 23,184 ರೂಪಾಯಿ ಆಗುತ್ತದೆ. ಆಯಾ ಕೋರ್ಟಿನ ಜಡ್ಜಿಗಳು ನೌಕರಮಾನೇಜುಗಳ ನಡವಳಿಕೆಯನ್ನು ಹಕೀಕತಿಯಲ್ಲಿಟ್ಟುಕೊಂಡು ಅಕ್ರಮಗಳನ್ನು ದರ್ಖಾಸ್ತು ಅರ್ಜಿ ಅಡಗಿಸಿದ ಪಕ್ಷದಲ್ಲಿ ಈಗ ಸರ್ಕಾರದವರು ಸ್ಯಾಂಕ್ಷನ್ ಮಾಡಿರುವ ಬಡ್ತಿಗಳು ಸಾರ್ಥಕವಾಗುವವು.

ಆನೇಕಲ್ಲಿನಲ್ಲಿ ಮ|| ಮುನಿಸಾಮಪ್ಪನವರು ಸುಮಾರು 13,000 ರೂಪಾಯಿ ಖರ್ಚುಮಾಡಿ ಒಂದು ದಿವ್ಯವಾದ ಸ್ಕೂಲನ್ನು ಕಟ್ಟಿಸಿದರು. ಕಳೆದ ವಾರ ಸರ್ದಾರ್ ಕಾಂತರಾಜೆ ಅರಸಿನವರು ದಯಮಾಡಿ ಅದನ್ನು ಪ್ರತಿಷ್ಠೆಮಾಡಿ, ಅವರ ಔದಾರ್ಯವನ್ನು ಕೊಂಡಾಡಿದರು. ಪಾಠಶಾಲೆಯಲ್ಲಿ ಮಕ್ಕಳಿಗೆ ನೆಯ್ಗೆ, ಮರ ಕೆಲಸ, ಕಟ್ಟಡ ಕೆಲಸಗಳನ್ನು ಕಲಿಸುವಂತೆ ಏರ್ಪಾಡಾಗಿದೆ. ಇಂಥಾ ಶ್ಲಾಘ್ಯವಾದ ಉಪಕಾರವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಆ ಪ್ರಾಂತ್ಯದ ಪ್ರಜೆಗಳೆಲ್ಲಾ ಮ|| ಮುನಿಸಾಮಪ್ಪನವರಿಗೆ ಕೃತಜ್ಞರಾಗಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಬೆಂಗಳೂರಿನಲ್ಲಿ ದಿನವಹಿ ಪ್ರಕಟವಾಗುತ್ತಿದ್ದ "ಡೆಯಿಲಿ ಪೋಸ್ಟ್" ಎಂಬ ಇಂಗ್ಲಿಷ್ ಪತ್ರಿಕೆಯು ಮಿತಿಮೀರಿದ ಆಕ್ಷೇಪಣೆಗಳನ್ನು ನಮ್ಮ ಸರ್ಕಾರದ ಮೇಲೆ ಬರೆಯುತ್ತಿದ್ದದ್ದರಿಂದ ಬ್ರಿಟಿಷ್ ರೆಸಿಡೆಂಟರು ನೋಡಿ ಅದನ್ನು ಕೆಲವು ಕಾಲ ನಿಲ್ಲಿಸಿದ್ದು, ಬೇರೊಬ್ಬ ಎಡಿಟರು ನೇಮಕವಾದ ಮೇಲೆ ಅದನ್ನು ಪ್ರಕಟಿಸಬಹುದೆಂದು ಹುಕುಂ ಕೊಟ್ಟಿದ್ದರಷ್ಟೆ. ಅದರಂತೆ ಕೆಲವು ದಿನ ಆ ಪತ್ರಿಕೆಯು ಪ್ರಕಟವಾಗುತ್ತಿತ್ತು. ಕಳೆದ ವಾರ ಅದರ ಎಡಿಟರನ್ನು ಮತ್ತೆ ಬದಲಾಯಿಸಿದ್ದರಿಂದಲೋ ಏನೋ ಮೊನ್ನೆ ಮಂಗಳವಾರದಿಂದ ನಿಲ್ಲಿಸಿರುತ್ತಾರೆ.

ಈ ಸಲ ವಿಜಯ ದಶಮಿಯ ದಿನ ಬ್ರಿಟಿಷ್ ರೆಸಿಡೆಂಟರು ಬೆಂಗಳೂರಿನಿಂದ ನಮ್ಮ ಮಹಾರಾಜರವರಿಗೆ ಒಂದು ಪತ್ರಿಕೆಯನ್ನು ಬರೆದು ಮುದ್ರಾಂ ರಾಜಧಾನಿಗೆ ಕಳುಹಿಸುವುದಾಗಿ ಒಪ್ಪಿದಾರೆ. ಆ ಪತ್ರಿಕೆಯನ್ನು ಒಂದು ಕೊಳವೆಯಲ್ಲಿ ಹಾಕಿಕೊಡುವರು. ಓಡುವುದರಲ್ಲಿ ಗಟ್ಟಿಗರಾದ 174 ಜನರು ಅರ್ಧ ಮೈಲಿಗೆ ಒಬ್ಬರಂತೆ ಮೈಸೂರಿನ ತನಕ ನಿಂತು ಆ ಕೊಳವೆಯನ್ನು ಓಡಿ ತಂದು ಒಬ್ಬರಿಂದೊಬ್ಬರಿಗೆ ಕೊಡುವರು. ಕಡೆಯಲ್ಲಿ ಅದು ನಮ್ಮ ಮಹಾರಾಜರಿಗೆ ತಲಪುವುದು. ಬೆಂಗಳೂರಿನಿಂದ ಉದ್ದಕ್ಕೂ ಅರ್ಧರ್ಧ ಮೈಲಿಯಂತೆ ಓಡಿ ಬಂಥಂಥಾ ಜನಗಳನ್ನು ರೈಲಿನಲ್ಲೂ ಮೋಟರುಗಳಲ್ಲೂ ಹತ್ತಿಸಿಕೊಂಡು ಮೈಸೂರನ್ನು ತಲಪಿಸುವಂತೆಯೂ, ಇವರಿಗೆಲ್ಲಾ ಮಹಾರಾಜರವರು ಆ ದಿನ ರಾಜಧಾನಿಯಲ್ಲಿ ಆತಿಥ್ಯ ನಡಿಸುವುದಾಗಿಯೂ, ಇವರಿಗೋಸ್ಕರ ಮೆರವಣಿಗೆ ರಸ್ತೆಯಲ್ಲಿ ಪ್ರತ್ಯೇಕವಾದ ಸ್ಥಳವು ಏರ್ಪಾಡು ಮಾಡುವುದಾಗಿಯೂ, ಅಂಥಾ ಪ್ರತಿ ಒಬ್ಬರಿಗೂ ಒಂದು ಸರ್ಟಿಫಿಕೇಟು ಕೊಡುವಂತೆಯೂ ಏರ್ಪಾಡಾಗುತ್ತದೆ. ಈ ಓಟಕ್ಕೆ ಸೇರಲು ಒಪ್ಪುವವರು ಬೆಂಗಳೂರು ಸಿಟಿ ವೈ.ಎಂ.ಸಿ.ಎ. ಸೆಕ್ರೆಟರಿಗೆ ಬರೆದುಕೊಳ್ಳತಕ್ಕದ್ದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಸೆಪ್ಟಂಬರ್ 9 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬೇಕು:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 50,000
,, (3) ಡಿಪಾಜಿಟ್ಟುಗಳು	....	,, 33,80,599
,, (4) ಇತರೆ	....	,, 27,215
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 44,57,814

ಬೇಕು:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 10,52,432
,, (2) ಖಾತೆ ಮತ್ತು ಇತರ ಸಾಲಗಳು	.....	,, 20,37,733
,, (3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು		,, 3,64,148
,, (4) ಇನ್ವೆಸ್ಟ್‌ಮೆಂಟುಗಳು	....	,, 50,710
,, (5) ಏಜಂಸಿಗಳಲ್ಲಿರುವ ಮೊಬಲಗು	.....	,, 17,837
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	.....	,, 15,536
,, (7) ಇತರೆ	....	,, 10,398
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 44,57,814

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಅರೆಹಳ್ಳಿ ವ್ಯವಸಾಯ ಸಂಘ.

ಈ ಸಂಘದ ಉದ್ದೇಶವು ಸೂಳೇ ಕೆರೆಯ ಹಿಂದಲ ಅರೇ ಬಯಲ್ ಗಳಿಗೆ ಉಂಟಾಗಿರುವ ನೀರಿನ ತೊಂದರೆಯನ್ನು ಪರಿಹರಿಸಿಕೊಳ್ಳುವುದೇ ಮುಖ್ಯ ಉದ್ದೇಶವಾಗಿದೆ. ಈ ಸಂಘವು ಕಳೆದ ಆಗಸ್ಟು ತಿಂಗಳು ತಾ. 9 ರಲ್ಲಿ ಪ್ರಾರಂಭಿಸಲ್ಪಟ್ಟು ಈ ತಿಂಗಳು ತಾ 13 ನೇ ಸೋಮವಾರ ಪುನಃ ಅರೆಹಳ್ಳಿ ಆಂಜನೇಯ ದೇವಸ್ಥಾನದಲ್ಲಿ ಅರೆಹಳ್ಳಿ ಮ|| ಮಹಮ್ಮದ್ ಯಾಕೂಬ್ ಸಾಹೇಬರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆಯಿತು. ಇವರು ಹೇಳಿದ ಮಾತುಗಳೇನೆಂದರೆ ಈ ಪ್ರದೇಶವು ಯಾವಾಗಲೂ ಸಂಪದಭಿವೃದ್ಧಿಯಾಗಿರಬೇಕೆಂಬ ಉದ್ದೇಶದಿಂದ ಭಾರಿ ಬಾಗವಾಡು ಮುಟ್ಟಿಸಿ ಸರ್ಕಾರದವರು ಈ ಸೂಳೆ ಕೆರೆಯನ್ನು ನಿರ್ಮಿಸಿದಾರೆ. ಆದರೆ ಈ ಕಾಲದಲ್ಲಿ ಸಂಪತ್ತಿಗೆ ಬದಲು ದಾರಿದ್ರ್ಯವು ಅಭಿವೃದ್ಧಿಯಾಗಿದೆ ಹೀಗಾಗಲು ಕಾರಣವೇನೆಂಬುವುದನ್ನು ವಿಚಾರಮಾಡಿದ್ದರಲ್ಲಿ ಇಲ್ಲಿನ ಜನರಿಂದ ತಿಳಿಯಬಂದ ಸಂಗತಿಯನ್ನು ನಿವರಿಸುತ್ತೇನೆ—(1) ಈ ಸೂಳೇ ಕೆರೆಗೆ ನೀರು ಬಾರದಂತೆ ; (2) ಇದು ಸಿದ್ಧ ಭೂಮಿಯಾದ್ದರಿಂದ ಫಲವಿಲ್ಲವಂತೆ; (3) ತರೀಜಮೀನಿಗೆ ನೀರು ಇಲ್ಲದೆ ಮುಸ್ಕಿ ಫಸಲು ಬೆಳೆದು ಕರಿ ಕಂದಾಯ ಕೊಡುತ್ತಾ ಕಷ್ಟಪಡುವುದಾಗಿಯೂ ಹೇಳುತ್ತಾರೆ. ಈ 3 ಕಾರಣಗಳ ಪೈಕಿ 1-2 ನೇ ಕಾರಣಗಳು ಶುದ್ಧ ಸುಳ್ಳು. ಇದು ಅಜ್ಞಾನ ಪ್ರಲಾಪಗಳ ಮಾತು. 3 ನೇ ಕಾರಣವಾದ ಮುಸ್ಕಿ ಫಸಲು ಬೆಳೆದು ತರಿ ಕಂದಾಯ ಕೊಡುವುದರ ಮೂಲಕ ದಾರಿದ್ರ್ಯ ಹೆಚ್ಚಿರುವುದೇ ನಿಜವಾದದ್ದು. ನಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಸರ್ಕಾರದವರು ನ್ಯಾಯವಿಧಾಯಕ ಸಭೆಯನ್ನೂ, ಪ್ರಜಾಪ್ರತಿನಿಧಿ ಸಭೆಯನ್ನು ಸಹಾ ಕಲ್ಪಿಸಿಕೊಟ್ಟಿರುತ್ತಾರೆ. ಈ ಸಭೆಗಳಿಗೆ ಹೋಗತಕ್ಕ ಮೆಂಬರುಗಳನ್ನು ಚುನಾಯಿಸತಕ್ಕ ಅಧಿಕಾರವನ್ನು ಸಹಾ ನಮಗೆ ಕೊಟ್ಟಿರುತ್ತಾರೆ. ಇನ್ನು ಮುಂದೆ ನಮ್ಮ ಅನನುಕೂಲವನ್ನು ಮತ್ತು ಅದರ ಪರಿಹಾರವನ್ನು ಸಹಾ ಸರ್ಕಾರದವರಿಗೂ ಮತ್ತು ನ್ಯಾಯವಿಧಾಯಕ ಸಭೆ ಮೆಂಬರುಗಳಿಗೂ, ಪ್ರಜಾಪ್ರತಿನಿಧಿ ಮೆಂಬರುಗಳಿಗೂ ತಿಳಿಸಿ ಆಗಾಗ್ಗೆ ಪರಿಹರಿಸಿಕೊಳ್ಳತಕ್ಕದ್ದು ನಮ್ಮ ಕೆಲಸವಾಗಿದೆ. ಇಂಥಾ ನವನಾಗರಿಕ ಕಾಲದಲ್ಲಿ ನಾವು ಮಾತ್ರ ಪ್ರಯತ್ನಪಡದೆ ಸರ್ಕಾರದವರ ಮೇಲೆ ದೂರುವುದು ಪ್ರಯೋಜನವಿಲ್ಲವೆಂದು ಹೇಳಿ ಪೂರೈಸಿದರು. ಶಿದ್ದಳ್ಳಿ ದುಡಪ್ಪ, ಹೊಸೂರು ವಾಸಿ.

ಮೈಸೂರು ಗೆಜೆಟ್ ಸಂಗ್ರಹ.

ಅರಸೀಕೆರೆ ಟೌನ್ ಮ್ಯುನಿಸಿಪಾಲಿಟಿಯಲ್ಲಿ ಒಂದು ವರುಷವೂ, ಕೋಲಾರ್ ಸ್ಯಾನಿಟರಿ ಬೋರ್ಡಿನ ಅಧಿಕಾರಕ್ಕೊಳಪಟ್ಟ ಪ್ರದೇಶದಲ್ಲಿ ಐದು ವರ್ಷಗಳ ವರೆಗೂ ಮಕ್ಕಳಿಗೆ ಬಲಾತ್ಕರಿಸಿ ಬೇಧೀ ಕೊಡುವ ಶಾಸನವು ಜಾರಿಯಲ್ಲಿರತಕ್ಕದ್ದು.—ಬಾಡಿಗೆ ಗಾಡಿಗಳಿಗೆ ಸಂಬಂಧಪಟ್ಟ ಶಾಸನವನ್ನು ಚಿಕ್ಕಮಗಳೂರು ಮ್ಯುನಿಸಿಪಲ್ ಸರಹದ್ದಿನಲ್ಲಿ ಜಾರಿಗೆ ತರಲಾಗಿದೆ.

ಹಿರಿಯೂರು ತಾಲೂಕು ಅ|| ಅಮಲ್ದಾರ್ ಮ|| ಸಿ. ಕೃಷ್ಣರಾಯರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಲೋಕಲ್ ಸರ್ವಿಸ್ ರೆಜಿಮೆಂಟಿನ ಜಮೇದಾರ್ ಹರಿರಾಮ್‌ರವರನ್ನು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ 5 ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಕಮಾಡಿದೆ.

ಶಿವಮೊಗ್ಗಾ ಅ|| ಕಮಿಷನರ್ ಮ|| ಸಿ ಗೋಪಾಲಾಚಾರ್ರಿಗೆ ಅವರು ದರ್ಯಾಫ್ತು ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಿದೆ

ಕೋಲೀಸ್‌ಪೇಟೆ ಸಬ್ ಡಿವಿಜನ್ ಆಫೀಸರ್ ಮ|| ಎ. ಕೆ. ಸಯ್ಯದ್ ತಾಜ್ ಪೀರಾನ್‌ರವರಿಗೆ ಸೆಪ್ಟಂಬರ್ ತಾ 14 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಬೆಂಗಳೂರು ಸಿವಿಲ್ ಆಫೀಸರ್ ಮ|| ಎಂ. ಹಸನಲ್ಲಿಯವರು ಕೋಲೀಸ್‌ಪೇಟೆ ಸಬ್ ಡಿವಿಜನ್ ಛಾರ್ಜನ್ನು ವಹಿಸಬೇಕದ್ದು.

ಸೆಂಟ್ರಲ್ ಜೈಲ್ ಛಾರ್ಜಿಗೆ ಮ|| ಬಿ. ಮುತ್ತುಸಾಮಿದಾಸ್‌ಯವರನ್ನೂ, ಮ|| ಟಿ. ಎಸ್. ನಂಜಪ್ಪನವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿಯೂ ವರ್ಗಮಾಡಿದೆ.

ಮ|| ಎಂ. ಸದಾಶಿವರಾಯರು ರಜದ ಮೇಲಿರುವಾಗ ಮ|| ಎಸ್. ಚಕ್ರಪಾಣಿ ಅಯ್ಯಂಗಾರ್ರು ಹೊಳೇನರಸೀಪುರದ ಸಬ್ ಡಿವಿಜನ್ ಛಾರ್ಜನ್ನೂ, ಮ|| ಜಿ. ರುದ್ರಪ್ಪನವರು ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸತಕ್ಕದ್ದು.

ಚಿಕ್ಕಬಳ್ಳಾಪುರದ ಹೆಡ್ ಮಾಸ್ಟರ್ ಮ|| ಕೆ. ಚಿಂತಾಮಣಿ ರಾಯರಿಗೆ ಆಗಸ್ಟ್ ತಾ. 16 ರಿಂದ 1 ತಿಂಗಳೂ 23 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮೈಸೂರು ಮಹಾರಾಜಾ ಕಾಲೆಜ್ ಅ|| ಮಾಸ್ಟರ್ ಮ|| ಎ. ವೆಂಕಟೇಶಯ್ಯನವರು ಚಿಕ್ಕಬಳ್ಳಾಪುರಕ್ಕೆ ಹೆಡ್ ಮಾಸ್ಟರಾಗಿ ವರ್ಗಮಾಡಲ್ಪಟ್ಟಿದಾರೆ.

ಬೆಂಗಳೂರು ಸೆಂಟ್ರಲ್ ಕಾಲೆಜ್ ಅ|| ಪ್ರೊಫೆಸರ್ ಮ|| ಎಂ. ಟಿ ನರಸಿಂಹಯ್ಯಂಗಾರ್ರಿಗೆ ಆಗಸ್ಟ್ ತಾ. 17 ರಿಂದ ಆರು ತಿಂಗಳ ಫರ್ಲೋ ರಜಾ ಕೊಟ್ಟಿದೆ.—ಮೈಸೂರು ಮಹಾರಾಣಿ ಕಾಲೆಜ್ಜಿಗೆ ವರ್ಗವಾಗಿರುವ ಮ|| ಟಿ. ರಾಮಯ್ಯನವರಿಗೆ 2 ತಿಂಗಳೂ 8 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸುಣ್ಣದ ಕಿರೂಸಿ ವಿಚಾರ.

ಶಿಡ್ಲಘಟ್ಟದ ತಾಲೂಕು ಸಾದ್ಲಿ ಹೋಬಳಿ ಗಡಿ ಮಂಚೇನಹಳ್ಳಿ ಮಜರೆ ವರದಗಾನಹಳ್ಳಿ ಗ್ರಾಮದಲ್ಲಿರುವ ಒಕ್ಕಲಿಗ ಸೂಲಾಲಪ್ಪನ ಚಿಕ್ಕ ಸುಬ್ಬನ ಮಗಳು 25 ವರುಷದ ಬೈರಮ್ಮನೆಂಬ ಹೆಂಗಸನ್ನು ಅದೇ ಗ್ರಾಮದಲ್ಲಿರುವ ಕೊಂಚರ ಗಂಗನೆಂಬವನು ತಾ 26 ನೇ ರಾತ್ರಿ 8-9 ಘಂಟೆ ಸಮಯದಲ್ಲಿ ಮೇಲ್ಕಂಡ ಗಂಗ ಚಿಕ್ಕಮಗ ವೆಂಕಟರಾಯನೆಂಬುವನು ಹಾಲು ಕರೆಯೋಕೆಂದು ಕೇಳಿ ಎದೆ ಹಾಲು ತೆಗೆದುಕೊಂಡು ರಾತ್ರಿ 10. ಘಂಟೆ ಸಮಯದಲ್ಲಿ ಚಿಕ್ಕ ವೆಂಕಟರಾಯನು ನನ್ನ ತಂದೆ ಗಂಗನಿಗೆ ಸುಣ್ಣ ಕೊಡಬೇಕೆಂತ ಕರೆದುಕೊಂಡು ಹೋಗಿ ಗಂಗನ ಬಳಿ ಬಿಡುತ್ತಲೇ ನನ್ನ ಗಂಡ ಬೈರಪ್ಪನು ಬೆಳ್ಳೂಟಿಹಳ್ಳಿಯಿಂದ ಬಂದು ಇದಾನೆ. ಒಂಟಿಪ್ರೊಡಗದ ಮರದ ಬಳಿ ಇದಾನೆಂತ ಹೇಳಿ ಕರೆದುಕೊಂಡು ಹೋಗಿ ಅಲ್ಲಿ ಇಲ್ಲವಾದ ಕಾರಣ ಆ ಹೆಂಗಸು ಕೂಗಿಕೊಳ್ಳಲು ಗಂಟ್ಲು ಹಿಡಿದು ಚಿಕ್ಕನಹಳ್ಳಿ ಬೆಟ್ಟದ ಬಳಿ ಸೊಳ್ಳೆ ನಾಗಪ್ಪ ಕುಂಟೆಗೆ ಸುಮಾರು 125 ಗಜದ ಫಾಸಲೆಯಲ್ಲಿ ನೈರುತ್ಯ ಮೂಲೆಗೆ ಕೊಂದುಹಾಕಿ ಸುಮಾರು 150 ರೂಪಾಯಿನ ಒಡವೆ ಮಾಲನ್ನು ಅಪಹರಿಸಿದರು ಈ ಕೃತ್ಯವು ಯಾರಿಗೂ ತಿಳಿದಿರಲಿಲ್ಲ. ಮೃತಳ ಬೈರಮ್ಮನಿಗೆ 1½ ವರುಷದ ಗಂಡು ಮಗು ಇರುತ್ತೆ. ಈ ವಿಚಾರ ತಾ. 26 ನೇ ಸುಮಾರು ಸಾಯಂಕಾಲ 3 ಘಂಟೆ ಸಮಯದಲ್ಲಿ ಕಾವಲುಗಾರ ಮುನಿಗನೆಂಬವನು ನೋಡಿ ಪಟೇಲ್ ಬೈರಡ್ಡಿಯವರಿಗೆ ತಿಳಿಸಿದ ಕೂಡಲೆ ಗ್ರಾಮಸ್ಥರನ್ನು ಕರೆದುಕೊಂಡು ಹೋಗಿ ನೋಡಲಾಗಿ ಅಸ್ತಿ ಶವ ಬಿದ್ದಿತ್ತು. ಕಾಲು ಪಾದಗಳು ಹಸ್ತಗಳು ಇಲ್ಲ; ಕಿವಿ ಕಣ್ಣು ಮೂಗು ಇಲ್ಲ. ಹೆಣ ಯಾರದೆಂತ ಕೇಳಲಾಗಿ ವರದಗಾನಹಳ್ಳಿ ಚಿಕ್ಕ ಸುಬ್ಬಣ್ಣನು ನನ್ನ ಮಗಳು ಬೈರಮ್ಮನೆಂಬವಳು ಬುಧವಾರ ರಾತ್ರಿ 10 ಘಂಟೆಯಲ್ಲಿ ಹೋದವಳು ಇದುವರಿಗೂ ಹುಡುಕಿದವು, ಸಿಕ್ಕಲಿಲ್ಲ. ಇಲ್ಲ ಇರತಕ್ಕ ಸೀರೆ ಕುಬುಸ ನೋಡಿದರೆ ನನ್ನ ಮಗಳು ಬೈರಮ್ಮನದಾಗಿರುತ್ತೆ ಎಂತ ತಿಳಿಸಿದನು. ಇದೇ ರೀತಿ ಸಾದ್ಲಿ ಪೋಲೀಸಿಗೆ ರಿಪೋರ್ಟ್ ಮಾಡಿದ ಕೂಡಲೆ ಇನ್ಸ್‌ಪೆಕ್ಟರು ಬಂದು ಫಿರ್ಯಾದಿ ಸುಬ್ಬಣ್ಣನ ಎದುರಿಗೆ ಕೊಂಚರ ಗಂಗನನ್ನು ಹಿಡಿದು ಕೇಳಿದ್ದರ ಮೇಲೆ ಚಿಕ್ಕಬಳ್ಳಾಪುರ ತಾಲೂಕು ಅಜ್ಜೂರು ಪಿಚ್ಚಿಗುಂಟ್ಲ ಈರಿಗ, ಮುನಿಗ, ವಡ್ರ ಹೊಸೂರಿಗ 3 ಜನ ಬಂದಿದ್ದರೆಂತ ಹೇಳಿದ್ದರ ಮೇಲೆ ಪಟೇಲ್ ಬೈರಡ್ಡಿಯವರು, ಕುರುಬರಹಳ್ಳಿ ಪಟೇಲ್ ಸುಬ್ಬರಡ್ಡಿಯವರು ಕಾನ್ಸ್‌ಟೇಬಲ್ ಅಲಿಫ್ ಸಾಬಿ, ತಳವಾರ ಗಂಗ, ನೀರುಗಂಟಿ ಪಿಳ್ಳವೆಂಕಟಿಗ ಇವರುಗಳು ಅದೂರು ಸೂಸಪಲ್ಲಿ ಆ ಪ್ರಾಂತ್ಯ ತಲಾಷ್ ಮಾಡಿ 3 ಜನರನ್ನು ಹಿಡಿದುಕೊಳ್ಳುವಲ್ಲಿ ಹೊಸೂರಿಗನು ಪರಾರಿ ಆಗಿರುತ್ತಾನೆ. ಮಿಕ್ಕ ಇಬ್ಬರನ್ನು ಹಿಡಿದು ತಂದು ಕೇಳಿದ್ದರ ಮೇಲೆ ನಾವುಗಳು ಬಂದಿಲ್ಲ. ಗಂಗನಿಂದ ಈ ಕೃತ್ಯ ನಡೆದಿರುತ್ತೆಂತ ಹೊಸೂರಿಗನಿಂದ ನಮಗೆ ತಿಳಿದುಬರುತ್ತೆಂತ ಅವರು ತಿಳಿಸುತ್ತಾರೆ. ಅಮಲ್ದಾರ್ರು, ದಾಕ್ಟರು ದಯಮಾಡಿ ಹೆಣ ಅವಮಾಯಿಷಿ ಮಾಡಿ ಅಲ್ಲಿ ಇದ್ದ ಸೀರೆ ಕುಬುಸ ವಗೈರೆ ಸಾಮಾನು ಮೊಹರುಮಾಡಿ ತಾಲೂಕಿಗೆ ರವಾನೆ ಮಾಡಿರುತ್ತಾರೆ ಅಪರಾಧಿ ಗಂಗ ಮಗ ದೊಡ್ಡ ವೆಂಕಟ್ರಾಯನು ಚಿಕ್ಕ ವೆಂಕಟ್ರಾಯನನ್ನು ವಿಚಾರಿಸಿದ್ದರಲ್ಲಿ, ಗಂಗನು ಒಡವೆ ಮಾಲನ್ನು ಅವನ ಸ್ವಂತ ಹುಲ್ಲಿನ ಬಣವೆಯಲ್ಲಿ ಇಟ್ಟಿದ್ದ ವಿಶಿಷ್ಟ ಒಡವೆಯನ್ನು ಪಂಚಾಯತದ ಮೊಹ್ರಾ ಸರ್ಕಾರಕ್ಕೆ ಕೊಟ್ಟಿರುತ್ತಾನೆ. ತಾ. 2 ರಲ್ಲಿ ಪೊಲೀಸ್ ಸೂಪ್ರಂಟು ಸಾಹೇಬರು ದಯಮಾಡಿ ಫಿರ್ಯಾದಿ ಮನೆ ಜನಗಳನ್ನು ವಿಚಾರಿಸಿ ಪಿಚ್ಚಿಗುಂಟ್ಲ ನಂಜನನ್ನು ವಿಚಾರಣೆ ಮಾಡಿದಾಗ ಅನುಮಾನದಿಂದ ತಾ. 3 ನೇ ದಿನ ನಂಜನ್ನ ಹಿಡಿದು ಕಸಿಬಿ ಮಾಡಿದಲ್ಲಿ ಗಂಗನಿಂದ ಮಗ ದೊಡ್ಡ ವೆಂಕಟರಾಯ ಖೂನ್ ಮಾಡಿದ್ದು ನಿಜವೆಂತಾ ಒಪ್ಪಿರುತ್ತಾರೆ. ಕಳುವಾಗಿದ್ದ ಚೂರಿ ಕೊಂಡದ ಪಂಚದಲ್ಲಿ ಬಳಿ ಗಡಿದ ಕೆಳಗೆ ಇಟ್ಟಿದ್ದು 1 ನೇ ಅಪರಾಧಿ ಗಂಗನು ಕೊಟ್ಟಿರುತ್ತಾನೆ ನಾಲ್ಕು ವಿಶಿಷ್ಟವೂ ಪತ್ತೆ ಆಗಿರುತ್ತೆ. ಪ|| ವೀರಭದ್ರಾಚಾರಿ, ಗಡಿ ಮಂಚೇನಹಳ್ಳಿ

ಪೋಲೀಸಿನವರ ಕರ್ತವ್ಯ.

ಬಂಗಾಳಾ ಗವರ್ನರವರ ಬುದ್ಧಿ ಮಾತುಗಳು.

ಬಂಗಾಳಾ ಅಧಿಪತ್ಯದ ಗವರ್ನರವರಾದ ಲಾರ್ಡ್ ಕಾರ್ಮೈಕೇಲ್‌ರವರು ಸುರದಾ ನಗರದ ಪೋಲೀಸ್ ಸ್ಕೂಲಿಗೆ ದಯಮಾಡಿದ್ದಾಗ ಪೋಲೀಸ್ ನೌಕರರವರಿಗೆ ಕರ್ತವ್ಯದ ಮಹತ್ವವನ್ನು ಕುರಿತು ಪ್ರಸಂಗಮಾಡಿ ಹೇಳಿದ್ದೇನೆಂದರೆ—

“ನಿಮ್ಮ ಕೈಯಲ್ಲಿರುವ ಅಧಿಕಾರ ವಿಶೇಷವಾದದ್ದು ನಿಮ್ಮಿಂದ ಅನೇಕ ಉಪಕಾರಗಳಾಗುತ್ತವೆ. ನಿಮ್ಮ ವಶಕ್ಕೊಪ್ಪಿಸಿರುವ ಪ್ರಜೆಗಳ ವಿಷಯದಲ್ಲಿ ನೀವು ನಿಮ್ಮ ಅಧಿಕಾರವನ್ನು ಸಾರ್ಥಕವಾಗಿ ನಡೆಸಿದರೆ ಅವರೆಲ್ಲಾ ಬಹಳ ಸುಖದಿಂದಿರುತ್ತಾರೆ. ನಿಮ್ಮ ಅಧಿಕಾರವನ್ನು ವಿವೇಕದಿಂದ ನಡೆಸಬೇಕು ಜನಗಳ ಮೇಲೆ ರೇಗಿ ದುಷ್ಟತನವಾದ ಕಠಿಣವಾಕ್ಯಗಳನ್ನು ಉಪಯೋಗಿಸಬಾರದು; ಜನಗಳನ್ನು ವೃಥಾ ಕಷ್ಟ ನಷ್ಟ ಮನೋವ್ಯಥೆಗಳಿಗೆ ಗುರಿಮಾಡಬಾರದು. ನಿಮ್ಮ ಕರ್ತವ್ಯಕ್ಕೆ ಸೇರದೆ ಇರುವಂಥಾ ಚಿಲ್ಲರೆ ವಿಷಯಗಳಿಗೆ ನೀವು ಕಟಿಕಾರಬೇಡಿ ಇದರಿಂದ ಸ್ವಲ್ಪವೂ ಪ್ರಯೋಜನವಾಗುವುದಿಲ್ಲ ; ನಿಮ್ಮ ಗುಂಪಿಗೆ ಅದು ಅಪಕೀರ್ತಿಯನ್ನು ತರುತ್ತದೆ ದಸ್ತಗಿರಿ ಮಾಡಿದವರ ವಿಷಯದಲ್ಲಿ ಅವರೇ ಅಪರಾಧಿಗಳೆಂದು ರುಜುವಾತಾಗುವಂತೆ ಅವರನ್ನು ಕ್ರೂರತರವಾಗಿ ನಡಿಸಬೇಡಿ. ಪತ್ತೆ ಹರಡೂದು ಮಾಡುವಾಗ್ಗೆ ಮೊಕದ್ದಮೆಗೆ ಸಾಧಕವಾದ ನಿಶ್ಚಯವಾದ ಸಂಗತಿಗಳನ್ನು ಮಾತ್ರ ನಿಜಾರಿಸಿ ಗೊತ್ತುಮಾಡುವುದೊಂದೇ ನಿಮ್ಮ ಕರ್ತವ್ಯವೆನ್ನುವುದನ್ನು ಮರೆಯಬೇಡಿ. ಮ್ಯಾಜಿಸ್ಟ್ರೇಟರು ತಕ್ಷೀರು ರುಜುವಾತಾಗಿದೆ ಎಂದು ತೀರ್ಮಾನಮಾಡುವ ತನಕ ನೀವು ಹಿಡಿದಿರುವ ಮನುಷ್ಯನು ನಿರಪರಾಧಿ ಎಂದೇ ತಿಳಿಯಿರಿ. ಅವನನ್ನು ನಿರಪರಾಧಿಯನ್ನು ಕಾಣುವಂತೆ ಕಾಣಿರಿ. ಧರ್ಮ ಮತ್ತು ನ್ಯಾಯದ ಮೇಲೆ ನಿಮಗೆ ಯಾವಾಗಲೂ ದೃಷ್ಟಿ ಇರಲಿ ನಿಮ್ಮ ಪತ್ತೆ ತರಪೂದಿನಲ್ಲಿ ನೀವು ಹಿಡಿದಿರುವ ಮನುಷ್ಯನಿಗೆ ಅನುಕೂಲವಾದ ವಿಷಯಗಳು ಗೊತ್ತಾದರೆ ಅದನ್ನೂ ತಿರಸ್ಕರಿಸದೆ ರೆಕಾರ್ಡು ಮಾಡಿಕೊಳ್ಳಿ. ಅವನು ಅಪರಾಧಿ ಎಂದು ನಿಮ್ಮ ಮನಸ್ಸಿಗೆ ಎಷ್ಟು ಪರಿಷ್ಕಾರವಾಗಿ ತಿಳಿಯುತ್ತಿದ್ದಾಗ್ಯೂ ಅವನಿಗೆ ಅನುಕೂಲವಾಗುವ ರುಜುವಾತುಗಳನ್ನು ಎಂದಿಗೂ ಮರೆಮಾಚಬೇಡಿ. ಅಂಥಾ ರುಜುವಾತನ್ನು ಮುಚ್ಚಿಟ್ಟು ಅವನಿಗೆ ಶಿಕ್ಷೆಯಾಗುವಂತೆ ಮಾಡಬೇಡಿ ನೀವು ಕೋರ್ಟಿನಲ್ಲಿ ನಿಂತಿರುವಾಗ ಮ್ಯಾಜಿಸ್ಟ್ರೇಟಿಗೆ ನಿಜವನ್ನು ಕಂಡುಹಿಡಿಯುವುದಕ್ಕೆ ಸಹಾಯವಾಗುವಂತೆ ನೀವು ರುಜುವಾತುಗಳನ್ನು ಒಪ್ಪಿಸಬೇಕಾದದ್ದೇ ನಿಮ್ಮ ಕರ್ತವ್ಯವೆಂದು ತಿಳಿಯಿರಿ. ನಿಜವಾದದ್ದನ್ನೇ ಹೇಳಿ. ನಿಜವನ್ನೆಲ್ಲಾ ಹೇಳಿ. ನಿಜವನ್ನು ಬಿಟ್ಟು ಇನ್ನೇನೂ ಹೇಳಬೇಡಿ. ನಿಶ್ಚಯವನ್ನು ಕಂಡು ಹಿಡಿಯುವುದಕ್ಕೆ ಇದೇ ಛಾಪಾ ಮಾರ್ಗ. ಇಷ್ಟು ಮಾತ್ರ ನೀವು ಜ್ಞಾಪಕದಲ್ಲಿಟ್ಟುಕೊಂಡು ನಡೆಯುತ್ತಾ ಬಂದರೆ ಪೋಲೀಸಿನ ಗೌರವವು ಹೆಚ್ಚುವುದು; ಅವರ ಕೆಲಸವು ಎಷ್ಟೋ ಫಲಕಾರಿಯಾದೀತು. ನೀವೆಲ್ಲಾ ಹಿಂದುಸ್ಥಾನದಲ್ಲೇ ಹುಟ್ಟಿ ಬೆಳೆದವರು. ಪ್ರಜೆಗಳು ಕೂಡ ನಿಮ್ಮ ದೇಶದವರೇ. ನೀವು ಘನವಂತರೆನ್ನುವುದನ್ನು ಮರೆಯಬೇಡಿ. ಘನಸ್ಥರೂ ಮಾನವಂತರೂ ತಿರಸ್ಕರಿಸುವ ಅಥವಾ ಲಜ್ಜೆಪಡುವ ಯಾವ ಕೆಲಸಕಾರ್ಯಗಳನ್ನೂ ನೀವು ಮಾಡಬೇಡಿ.

“ನಿಮ್ಮ ಮನಸ್ಸು ನಿರ್ಮಲವಾಗಿರಲಿ. ಕಲ್ಮಷವಿಲ್ಲದ ಮನಸ್ಸಿಗೆ ಸರಿಸಮಾನವಾದ ಐಶ್ವರ್ಯ ಬೇರೊಂದಿಲ್ಲ. ಅದೇ ಅಪರಿಮಿತವಾದ ದ್ರವ್ಯವೆಂದು ತಿಳಿಯಿರಿ. ನಮ್ಮ ಜೀವಮಾನಗಳಲ್ಲಿ ನಮಗೆ ಕಿರೀಟವಾಗಲಿ, ಐಶ್ವರ್ಯವಾಗಲಿ, ಸನ್ಮಾನವಾಗಲಿ, ಪದವಿಯಾಗಲಿ ದೊರಕುವುದಕ್ಕೆ ನಮ್ಮ ಮನೋಧರ್ಮವು ಕಾರಣವಲ್ಲ ; ಅವೆಲ್ಲಾ ನಮ್ಮ ದೃಷ್ಟಿಗೆ ಗೋಚರವಾಗತಕ್ಕವುಗಳಲ್ಲ. ಆದರೆ ನಮ್ಮ ಜೀವಮಾನಕ್ಕೆ ಸತ್ಯವಂತಿಕೆಯೋ, ಧರ್ಮವೇ, ಸಚ್ಚರಿತ್ರೆಯೋ ಕಿರೀಟವು ಇಂಥಾ ಕಿರೀಟವನ್ನು ಪ್ರತಿ ಒಬ್ಬನೂ ಸಂಪಾದಿಸಿಕೊಳ್ಳಬಲ್ಲನು ಅದರ ಸಂಗಡ ಐಶ್ವರ್ಯ ದೊರಕಬಹುದು, ಇಲ್ಲದೆಯೂ ಹೋಗಬಹುದು ; ಅದರ ಸಂಗಡ ವ್ಯಥೆ ಇರಬಹುದು, ಇಲ್ಲದೆಯೂ ಇರಬಹುದು ; ಅದರ ಕೂಡ ಅಧಿಕಾರವಿರಬಹುದು, ಇಲ್ಲದೆಯೂ ಇರಬಹುದು. ಆದರೆ ಅದು ಇವೆಲ್ಲಕ್ಕಿಂತಲೂ ಎಷ್ಟೋ ಅಮೂಲ್ಯವಾದದ್ದು ; ಇವೆಲ್ಲಾ ನಾಶವಾದರೂ ಅದೃಶ್ಯವಾದರೂ ಆ ಕಿರೀಟ ಒಂದೇ ಶಾಶ್ವತವಾಗಿ ನಿಲ್ಲತಕ್ಕದ್ದು. ಅದನ್ನು ಧರಿಸಿರುವಂಥಾ ಯಾವನೊಬ್ಬನೂ ಅಂಜಬೇಕಾದದ್ದಿಲ್ಲ, ಕಳಂಕಪಡಬೇಕಾದದ್ದಿಲ್ಲ, ಆಶ್ಚರ್ಯಪಡಬೇಕಾದದ್ದಿಲ್ಲ ; ತನ್ನ ಕಠಿಣವಾದ ಕರ್ತವ್ಯದಿಂದ ಹಿಂಜರಿಯಬೇಕಾದದ್ದಿಲ್ಲ. ಕಳಂಕವಿಲ್ಲದ ಮನಸ್ಸಾಕ್ಷಿಯನ್ನು ಪಡೆಯುವಂಥಾ ರೀತಿಯಲ್ಲಿ ವರ್ತಿಸುತ್ತಾ ಬಂದರೆ ಸಾಕು. ಜನರು ದೂರಿ ದುರ್ಜನವಾಡುತ್ತಾರೆಂದು ಭಯಪಡಬೇಕಾದದ್ದಿಲ್ಲ ; ತನ್ನವರು ತನ್ನನ್ನು ಅಲ್ಲಗಳೆದು ಬಹಿಷ್ಕರಿಸುತ್ತಾರೆಂದು ಚಿಂತಿಸಬೇಕಾದದ್ದಿಲ್ಲ. ನಿರ್ಮಲವಾದ ಮನಸ್ಸೊಂದಿದ್ದರೆ ಯಾವ ಕಷ್ಟವೂ ವ್ಯಸನವೂ ನಷ್ಟವೂ ನಡುಗಿಸಲಾರದು. ಕಡೆಗೆ ಮರಣಕ್ಕೂ ಹೆದರಬೇಕಾದದ್ದಿಲ್ಲ. ನಿರ್ಮಲವಾದ ಮನಸ್ಸೆಂಬ ಗಟ್ಟಿಯೂ ಬಲವೂ ಆದ ಒತ್ತಾಸೆಯೊಂದಿದ್ದರೆ ದೇವರ ಸನ್ನಿಧಾನದಲ್ಲೂ ಅಳುಕದೆ ನಿಲ್ಲಬಹುದು”

ಯಾತ್ರಿದಾರರಿಗೆ ನೋಟೀಸ್.

ಯಾತ್ರಿಧಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಕೋ ಆಪರೇಟಿವ್ ಕಾನ್‌ಫರೆನ್ಸಿಗೆ ಹೋಗುವ ಮೆಂಬರುಗಳಿಗೆ ರೈಲ್ವೆ ಕಂಪನಿ ರಿಯಾಯಿತಿ ಆವಶ್ಯಕತೆ.

ಅಯ್ಯಾ,—ಈ ಮಹಾ ಸಭೆಯು ಈಗ 4-5 ವರುಷಗಳಿಂದ ವರುಷಕ್ಕೊಂದು ವರುಷ ಅಧಿಕವಾಗಿ ನಡೆಯುತ್ತಿದೆ ಈ ಸಭೆಗೆ ಸುಮಾರು 1,000 ಜನ ಮೆಂಬರುಗಳು ಸೇರುತ್ತಾರೆ. ಈ ಪೈಕಿ ಮುಕ್ಕಾಲು ಭಾಗ ಸೊಸೈಟಿಯಿಂದ ಬರತಕ್ಕವರು ಗೌರವಕ್ಕಾಗಿ ಸ್ವಂತ ಖರ್ಚಿನಿಂದಲೇ ಬರುತ್ತಾರೆ ಈಗ ಎರಡು ವರುಷದಿಂದ ದಸರಾ ಮೆಂಬರುಗಳಿಗೆ ರೈಲ್ವೆ ಕಂಪನಿಯವರು ರಿಯಾಯಿತಿ ತೋರಿಸುವಂತೆ ಈ ಮಹಾ ಸಭೆಯ ಮೆಂಬರಿಗೂ ತೋರಿಸುವ ಭಾಗದಲ್ಲಿ ಬಹುಮುಖ್ಯ ಈ ಸಭೆಯು ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ಈ ಭಾಗದಲ್ಲಿ ರಿಜಿಸ್ಟ್ರಾರರು ದಯಮಾಡಿ ಬರೆದು ಈ ದಫಾ ಬರತಕ್ಕವರಿಗೇನೇ ಈ ಅನುಕೂಲವನ್ನು ಕಲ್ಪಿಸಿ ಕೊಡುತ್ತಾರಾಗಿ ನಂಬಿದೇನೆ. ಈ ಬಗ್ಗೆ ಅವಶ್ಯಕವಾಗಿ ಆಗಬೇಕಾದ ಏರ್ಪಾಟಿಗೆ ನಾನು ಮುಂದಾಳಾಗಿ ನಿಂತು ಪ್ರಜಾ ಸೇವೆ ಮಾಡಲು ಸಿದ್ಧನಾಗಿದೇನೆ. ಕೆ. ಪರಮೇಶ್ವರಯ್ಯ, ಕಡೂರು

[ಈ ವಿಚಾರಕ್ಕೆ ಸರ್ಕಾರಿ ಅಧಿಕಾರಿಗಳು ಪ್ರವರ್ತಿಸುವುದಿಲ್ಲ ಕಾನ್‌ಫರೆನ್ಸಿನ ಮುಂಬರುಗಳಲ್ಲಿ ಯಾರಾದರೂ ಮುಂದಾಳಾಗಿ ನಿಂತು ಇತರ ಮೆಂಬರುಗಳ ಸಮ್ಮತಿ ಸಹಾಯಗಳನ್ನು ಪಡೆದು ರೈಲ್ವೆ ಕಂಪನಿಯವರಿಗೆ ಬರೆದು ಏರ್ಪಾಡು ಮಾಡಿಕೊಳ್ಳತಕ್ಕದ್ದಾಗಿದೆ —ಎಡಿ.]

ಮಲೆನಾಡಿನ ದೈವವೂ ಸುಳ್ಳು, ಭೂತವೂ ಸುಳ್ಳು, ರೋಗ ನಿಜ.

ಅಯ್ಯಾ,—ಸೊರಬ ತಾಲೂಕು ಚಂದ್ರಗುತ್ತಿ ವಿಷಯ ಕಳೆದ ತಿಂಗಳ 1 ನೇ ತಾ. ಪೇಪರಿನಲ್ಲಿ ಪ್ರಕಟವಾಗಿರುವ ಸಂಗತಿಗಳೆಲ್ಲಾ ನಿಜ ಆದರೆ ಹಿಂದೆ ವೈದ್ಯಶಾಲೆ ಕೆಲವು ದಿವಸ ಮುಚ್ಚಲ್ಪಟ್ಟಿತ್ತು. ಈಚೆಗೆ ತೆರೆಯಲ್ಪಟ್ಟಿರುತ್ತೆಂದು ಮೊಗಂ ಆಗಿ ಬರೆದಿರುತ್ತಾರೆ. ಇದಕ್ಕೆ ಸ್ವಲ್ಪ ವಿಶದವಾದ ವಿವರಣೆಬೇಕಾಗಿರುತ್ತೆ ಯಾಕೆ ಮುಚ್ಚಿತ್ತು ? ಯಾರಿಂದ ತೆರೆಯಲ್ಪಟ್ಟಿತು ? ಕೆಲಸಗಳು ಚೆನ್ನಾಗಿ ನಡೆಯುತ್ತದೆಯೇ ? ಎಂಬುದು ಗೊತ್ತಾಗದ ಆದ್ಯರು ಪಶ್ಚಾತ್ತಾಪ ಪಡಬಹುದೆಂದು ನಾನು ಪುನಃ ಬರೆದಿರುವುದನ್ನು ಕೆಲವರೂ ಮನ್ನಿಸಬೇಕಾಗಿ ಪ್ರಾರ್ಥನೆ ಈ ಹಿಂದೂ ವೈದ್ಯಶಾಲೆಯು 1913 ನೇ ಇಸವಿ ಆಗಸ್ಟ್ ತಿಂಗಳಲ್ಲಿ ಆನವಟ್ಟಿಯಿಂದ ಇಲ್ಲಿಗೆ ಬಂತು. ಆಗ ಹರೀಕೆರೆ ಪಂಕರಪಂಡಿತರು ವೈದ್ಯರಾಗಿದ್ದರು ಅನಾರೋಗ್ಯದಿಂದ ಅವರಿಗೆ ಕೆಲಸದಿಂದ ನಿವೃತ್ತಿಯಾಯಿತು. ಪುನಃ ಹೊಸ ವೈದ್ಯರು ಬರಲೇ ಇಲ್ಲ. ಇದೇ ಮೇ ಆಖೈರಿಗೆ ಕೆ. ಲಕ್ಷ್ಮೀನಾರಾಯಣರೆಂಬುವರು ವೈದ್ಯರಾಗಿ ಬಂದರು. ಅವರು ಜನಾನುರಾಗಿಗಳಾಗಿಯೂ, ಶ್ರದ್ಧೆಯಿಂದಲೂ ಕೆಲಸ ಮಾಡುತ್ತಾ ಇದಾರೆ. ಇದು ಮಲೆನಾಡು ಪ್ರದೇಶದ ಒಂದು ಮೂಲೆಯಲ್ಲಿರುವುದರಿಂದ ಇಲ್ಲಿಗೆ ವೈದ್ಯಶಾಲೆಯೇನೋ ಅಗತ್ಯ. ಆದರೆ ಈ ಆಸ್ಪತ್ರೆ ಮತ್ತು ಈ ಊರು ಜನಂಗೆ ಗಾಡಿಗತನದವರು ಮತ್ತು ಮಂತ್ರವಾದಿಗಳು ಜಾತಕರೆಂದು ಹೇಳಿಕೊಳ್ಳುವ ಹುಚ್ಚು ಇನ್ನೂ ಬಿಟ್ಟಿಲ್ಲ. ಇದು ಈಗಿನ ನಾಗರಿಕ ಜನಗಳ ಆಚರಣೆಗೆ ಶುದ್ಧ ತಪ್ಪಾಗಿದೆ. ಇದನ್ನು ಕಡಮೆ ಮಾಡಲು ಗ್ರಾಮದ ಮುಖಂಡರೂ, ಪಟೇಲರುಗಳೂ ಶಕ್ತರಿಲ್ಲದೆ ಮುಖ್ಯರಿಂದಲೂ ಅಸಾಧ್ಯವಾಗಿರುತ್ತೆ. ಅವರು ತಮಗೆ ಅಥವಾ ತಮ್ಮಂದಿರಿಗೆ ಕಾಹಿಲೆಯಾದರೆ ವೈದ್ಯಶಾಲೆಗೆ ಹೋಗಿ ಔಷಧಿ ತೆಗೆದುಕೊಳ್ಳುತ್ತಾ, ಜನಗಳಿಗೆ ಪ್ರೋತ್ಸಾಹಿಸುತ್ತಾ, ರೋಗವು ಅನಾರೋಗ್ಯದಿಂದ ಬರುವುದನ್ನೂ, ಅದಕ್ಕೋಸ್ಕರವೇ ಸರ್ಕಾರದವರು ಆಸ್ಪತ್ರೆ ಮತ್ತು ವೈದ್ಯಶಾಲೆಗಳನ್ನು ಪ್ರಜೆಗಳ ಉಪಯೋಗಕ್ಕಾಗಿ ಇಟ್ಟಿರುವುದನ್ನೂ, ಅಲ್ಲಿ ಚಿಕಿತ್ಸೆ ಹೊಂದಿದರೆ ಆರೋಗ್ಯವಂತರಾಗಬಹುದೆಂಬುದನ್ನೂ ತಿಳಿಸಿ, ಮೂಢ ಪ್ರಜೆಗಳ ಮೇಲ್ಕಂಡ ಕೃತ್ರಿಮವಾದ ಗಾಡಿಗರ ಮತ್ತು ಮಂತ್ರವಾದಿಗಳ ಯಂತ್ರ ಸಹಾ ಕಡಮೆ ತಪ್ಪಿಸುವರೆಂದು ನಂಬಿದೇನೆ. ಪ್ರಜಾಹಿತಚಿಂತಕ.

ಮೈಸೂರು ಚಾಮರಾಜಪುರಂ ರೈಲ್ವೆ ಸ್ಟೇಷನ್ ಕೊರತೆಗಳು.

ಅಯ್ಯಾ,—ಇಲ್ಲಿ ರೈಲ್ವೆ ಸ್ಟೇಷನ್ ಆಗಿ ಸುಮಾರು 2½ ವರ್ಷವಾಯಿತು. ಇದರಿಂದ ಕೋರ್ಟಿಗೆ ಬರತಕ್ಕವರಿಗೂ ಮತ್ತು ಲಕ್ಷ್ಮೀಪುರ, ಪೀಪಲ್ಸ್ ಪಾರ್ಕ್ ಮುಂತಾದ ಸ್ಥಳದವರಿಗೂ ಅನುಕೂಲವಾಗಿರುತ್ತೆ. ಈ ರೈಲ್ವೆ ಸ್ಟೇಷನ್ ಉತ್ಪತ್ತಿಯು ಕೆಂಗೇರಿ, ಬಿಡದಿ, ಮಂಡ್ಯ ವಗೈರೆ ಸ್ಟೇಷನ್‌ಗಳಿಗಿಂತ ಹೆಚ್ಚಾಗಿದೆ. ಸುಮಾರು 1,200 ರೂಪಾಯಿ ತಿಂಗಳು ಒಂದಕ್ಕೆ ಉತ್ಪತ್ತಿ ಆಗಬಹುದು. ಇಷ್ಟಾದರೂ ಇಲ್ಲಿ ಪ್ರಯಾಣಿಕರಿಗೆ ರೈಲ್ ಬರುವ ವೇಳೆ ಕಾದಿರಲು ವೇಯಿಟಿಂಗ್ ರೂಂ ಇಲ್ಲ. ಬಿಸಿಲು, ಮಳೆ, ಚಳಿ ಮತ್ತು ಗಾಳಿ ಕಾಲದಲ್ಲಿ ಪ್ರಯಾಣಸ್ಥರು ಬಹಳ ತೊಂದರೆ ಪಡಬೇಕಾಗಿದೆ. ರೈಲ್ವೆ ಅಧಿಕಾರಿಗಳಿಗೆ ಎಷ್ಟು ಅರ್ಜಿಗಳು ಬರೆದರೂ ಇನ್ನೂ ಅದಕ್ಕೆ ಅವರು ಗಮನ ಕೊಟ್ಟಿಲ್ಲ. ಈ ಸ್ಟೇಷನ್ನಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಒಂದು ನಲ್ಲಿ ಬಹಳ ಮುಖ್ಯವಾಗಿ ಬೇಕಾಗಿರುತ್ತೆ. ಇದಕ್ಕೆ ರೈಲ್ವೆ ಅಧಿಕಾರಿಗಳ ಗಮನ ಬೀಳಬೇಕು ಈ ಸ್ಟೇಷನ್‌ಗೆ ನಂಜನಗೂಡಿನಿಂದ ಮೆಯಿಲ್ ಗಾಡಿಯು 10-12 ಕ್ಕೆ ಬಂದು ಮೈಸೂರಿಗೆ 10-22 ಕ್ಕೆ ಹೋಗುತ್ತದೆ. ಸೀದಾ ಹೋಗುವ ಪ್ರಯಾಣಸ್ಥರು ಮೈಸೂರಿನಲ್ಲಿ 1 ಘಂಟೆ 18 ನಿಮಿಷ ಕಾದಿರಬೇಕಾಗಿದೆ ಇದರಿಂದ ಅನೇಕರು ಅಲ್ಲಿ ಕಾದಿರಲಾರದೆ ತೊಂದರೆ ಪಟ್ಟುಕೊಂಡು ಮೈಸೂರು ಸ್ಟೇಷನ್‌ಗೆ ಸೀದಾ ಹೋಗುತ್ತಾರೆ. ರಾತ್ರಿಯ ಗಾಡಿಯೂ ಸಹ ನಂಜನಗೂಡಿನಿಂದ 8-29 ಕ್ಕೆ ಬಂದು 8-36 ಕ್ಕೆ ಮೈಸೂರು ಸ್ಟೇಷನ್‌ಗೆ ತಲಪುತ್ತದೆ. ಅಲ್ಲಿ ಒಂದು ಗಂಟೆ ಹೊತ್ತು ಕಾದಿರಬೇಕು. ಇದೂ ಅಲ್ಲದೆ ಮೊದಲು ನಂಜನಗೂಡಿನಿಂದ ಪೂನಾವರೆಗೂ ಸೀದಾ ಗಾಡಿಯನ್ನು ಬಿಡುತ್ತಿದ್ದರು. ಈಗ ನಂಜನಗೂಡಿನಿಂದ ಮೈಸೂರಿಗೆ ಬೇರೆ ಗಾಡಿ, ಮೈಸೂರಿಂದ ಮುಂದಕ್ಕೆ ಬೇರೆ ಗಾಡಿ ಹೋಗುವ ಹಾಗೆ ಏರ್ಪಾಡಾಗಿದೆ. ರಾತ್ರಿ ಹೊತ್ತು ಈ ಗಾಡಿಯಲ್ಲಿ ಹೆಂಗಸರು ಮಕ್ಕಳು ಇಳಿದು ಬೇರೆ ಗಾಡಿ ಹತ್ತಬೇಕಾಗಿದೆ. ಇದರಿಂದ ಅನೇಕ ಪ್ರಯಾಣಿಕರು ತೊಂದರೆ ಪಡುತ್ತಿದಾರೆ. ಈ ವಿಚಾರದಲ್ಲಿ ರೈಲ್ವೆ ಕೊರತೆಗಳನ್ನು ಅಧಿಕಾರಿಗಳಿಗೆ ಅನೇಕರು ಬರೆದುಕೊಂಡಿದಾರೆ. ಆದರೆ ಯಾವುದೊಂದೂ ಇನ್ನೂ ಇತ್ಯರ್ಥವಾಗಲಿಲ್ಲ. ತಮ್ಮ ಪತ್ರಿಕೆಯಲ್ಲಿ ಕಾಣಿಸುವ ಅನೇಕ ಸಂಗತಿಗಳಿಗೆ ಪ್ರತಿಯೊಂದು ಇಲಾಖೆವರೂ ನಿಗಾ ಕೊಡುವುದರಿಂದ ದಯವಿಟ್ಟು ಈ ಸಂಗತಿಗಳನ್ನು ಪ್ರಕಟ ಮಾಡುವಿರೆಂದು ನಂಬಿರುತ್ತೇನೆ. ಮುಖ್ಯವಾಗಿ ಬೆಳಗ್ಗೆ, ರಾತ್ರಿ ಗಾಡಿ

...ನಿಂದ ಬರುವುದು ಈಗಿನ ಕಾಲಕ್ರಮದ ಮೂರ್ನಾಲ್ಕು ಗಂಟೆ ಹೊತ್ತು ... ಬಂದು, ಹೀಗಾ ಹೋದರೆ ಪ್ರಯಾಣಿಕರಿಗೆ ಬಹಳ ಅನುಕೂಲವಾ... ಇಲ್ಲಿನ ಸ್ಟೇಷನ್ ಮಾಸ್ಟರು ಮ|| ಎನ್. ಕಾಶೀಪತಯ್ಯನವರು ... ಮುಂಚಿತವಾಗಿಯಿಂದ ಪ್ರಯಾಣಿಕರ ವಿಶ್ವಾಸಕ್ಕೆ ಪಾತ್ರರಾಗಿ ಕೆಲಸ ಮಾಡುತ್ತಿರುವರು. ಇವರ ಕಷ್ಟಕ್ಕೆ ತಕ್ಕ ಸಂಬಳ ರೈಲ್ವೆ ಅಧಿಕಾರಿಗಳು ಕೊಡ... ಇವರಿಗೆ ವಾಸಕ್ಕೆ ಸಹಾ ಮನೆ ಇಲ್ಲದೆ ಒಂದು ರೈಲ್ ಗಾಡಿಯ ... ಕಟ್ಟಿಸಿಕೊಂಡು ಛಳಿಗಾಳಿಯಲ್ಲಿ ಸಂಸಾರ ಸಹಿತ ವಾಸಮಾಡಬೇ... ಈಗಲಾದರೂ ರೈಲ್ವೆ ಸರ್ಕಾರದವರು ಈ ಮುಖ್ಯವಾದ ಸ್ಟೇಷನ್‌ಗೆ ... ಸಹಾ ಕೊಟ್ಟು ಇದರ ಅಭಿವೃದ್ಧಿಯ ವಿಚಾರದಲ್ಲಿ ಏರ್ಪಾಡು ... ಮಾಡದೆ ಪ್ರಯಾಣಿಕರಿಗೆ ಸಹ ಅನುಕೂಲವನ್ನು ಕಲ್ಪಿಸಬೇಕಾಗಿದೆ.

ಪ್ರಯಾಣಿಕರ ಹಿತೈಷಿ.

...ಕೂಲ್ ಮಾಸ್ಟರುಗಳಿಗೆ ಅದರಲ್ಲೂ ನಾರ್ಮಲ್ ಸ್ಕೂಲುಗಳಿಗೆ ಕಳುಹ... ಕೂಲ್ ಮಾಸ್ಟರುಗಳಿಗೆ ತಿಂಗಳು ತಿಂಗಳಿಗೆ ಅವರ ಸಂಬಳ ಪಾವತಿ ...ವುದಿಲ್ಲವೆಂದು ನಮಗೆ ಅನೇಕ ಬಾತ್ಮಿಗಳು ಬರುತ್ತಲೇ ಇರುವವು. ಈಗ ...ದವರು ಇಟ್ಟಿರುವ ನಿಬಂಧನೆಗಳೂ ತೊಡಕುಗಳೂ ಯಾರಿಗಾದರೂ ... ಪಾವತಿ ಆಗಬಹುದಾದದ್ದನ್ನು ತಪ್ಪಿಸುವುದಕ್ಕಾಗಿ ಮಾಡಿಟ್ಟರ... ಇಂಥಾ ನಿಬಂಧನೆಗಳಿಂದ ಉಪಾಧ್ಯಾಯರು 2-3 ತಿಂಗಳವರೆಗೆ ...ಕ್ಕೆ ಮಾರ್ಗವಿಲ್ಲದೆ ಹೊಸ ಸ್ಥಳದಲ್ಲಿ ಪರದಾಡುವ ಕಷ್ಟವನ್ನು ಅನುಭವಿ...ಗಿರುತ್ತದೆ. ಅಮಲ್ದಾರರಿಗೂ ಅ|| ಕಮಿಷನರಿಗೂ ಇಂಥಾ ...ಗಳು ಇರುವವೇ ಎಂದು ಸಂದೇಹ ಪಡುತ್ತೇವೆ; ಒಂದು ವೇಳೆ ಒದಗಿ... ಅವರು ತಡೆದುಕೊಳ್ಳಬಲ್ಲರು. ಅಲ್ಪ ಸಂಬಳದ ಈ ಬಡ ಉಪಾಧ್ಯಾಯ... ಈ ರೀತಿಯಾದ ಕಷ್ಟ ಬರುವುದು ಯೋಗ್ಯವಲ್ಲ. ಇದನ್ನು ತಪ್ಪಿಸುವುದಕ್ಕೆ ...ದವರು ನಾರ್ಮಲ್ ಕಾಲೇಜಿನ ಅಥವಾ ಸ್ಕೂಲಿನ ಅಧ್ಯಕ್ಷರ ವಶಕ್ಕೆ ... ಹಣವನ್ನು ಅಡ್ವಾನ್ಸಾಗಿ ಕೊಟ್ಟು, ಅದಕ್ಕೆ ಅವರನ್ನೇ ಜವಾಬ್ದಾರರ...ಗಿ ಮಾಡಬೇಕೆಂದು ನಮಗೆ ತೋರುವುದು. ಈಗಲಾದರೋ ಒಬ್ಬನ ... ಪಾವತಿ ಆಗಬೇಕಾದರೆ 2-3 ಇಲಾಖೆಗಳ ಕೈಕಾಯಬೇಕು. ಕಾಗದ ... ಓಡಾಟ ಬಹಳ ತಾಮಸವಾದದ್ದರಿಂದ ಬಡ ಸಂಬಳಗಾರನು ಕಷ್ಟಪಡ...ಬೇಕಾಗಿದೆ. ಈ ಕಷ್ಟಕ್ಕೆ ಸಿಕ್ಕಿದ ಒಬ್ಬ ನೌಕರನು ಒಂದು ವರುಷವಾದರೂ ...ಳವನ್ನು ಪಡೆಯಲಿಲ್ಲವಂತೆ. ಯಾವ ಗವರ್ನ್‌ಮೆಂಟಿನವರಾಗಲಿ ತಮ್ಮ ...ರರನ್ನು ಈ ರೀತಿ ವ್ಯಥೆಪಡಿಸುವುದು ತರವಲ್ಲ. ಸರ್ಕಾರದವರು ಚಿಲ್ಲರೆ ...ರರ ತೊಂದರೆಗಳನ್ನು ಅತಿ ಜಾಗ್ರತೆಯಾಗಿ ತಪ್ಪಿಸುವಂಥಾ ಏರ್ಪಾಡನ್ನು ಮಾಡುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ —ಎಡಿ.]

ತಾಲ್ಲೂಕು ವರ್ತಮಾನಗಳು.

ಹೊಳಲ್ಕೆರೆ ತಾ|| ಪುಟೇಮಾಳಲಿ.—ಈ ಗ್ರಾಮದ ಸ್ಕೂಲಿಗೆ ಕೆ. ಹನು...ಮಂತರಾಯರು ಬಂದ ಮೇಲೆ 65 ಹುಡುಗರವರೆಗೂ ಬರುತ್ತಾ ಇರುವುದಲ್ಲದೆ ...ಲು ಅಭಿವೃದ್ಧಿಗೆ ಬಂದಿರುತ್ತೆ. ಈ ಪೈಕಿ ಪರಸ್ಥಳದ ಹುಡುಗರೇ ಜಾಸ್ತಿ. ...ರ್ಕರೆ ಅಮಲ್ದಾರ್ರು ದಯಮಾಡಿಸಿ ಸ್ಕೂಲು ನೋಡಿ ಕುಂಬಾ ಸಂತೋಷ ...ಟ್ಟರು. ತಾ. 16 ನೇ ಗುರುವಾರ ಹನುಮಂತರಾಯರು ಸ್ಕೂಲಿಗೆ ಗ್ರಾಮಸ್ಥ...ರನ್ನು ಬರಮಾಡಿಕೊಂಡು ವಿದ್ಯಾಭಿವೃದ್ಧಿ ವಿಷಯದಲ್ಲಿಯೂ, ಗ್ರಾಮಾಭಿವೃದ್ಧಿ ವಿಷಯದಲ್ಲಿಯೂ, ನಡೆಯುತ್ತಿರುವ ಯುದ್ಧದ ವಿಷಯದಲ್ಲೂ ಬಹಳ ಸ್ವಾರ...ಸ್ಯವಾಗಿ ಉಪನ್ಯಾಸ ಮಾಡಿದರು. ಅನಂತರ ಸಭಿಕರಿಗೆ ಗಂಧ ಹೂ ಕೊಟ್ಟು ...ಲು ಬಾಲಕರು ಮೊದಲುಗೊಂಡು ಎಲ್ಲರಿಗೂ ಅಲ್ಪಾಹಾರವನ್ನು ಹಂಚಿ ...ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಎಲ್ಲರೂ ಎದ್ದು ಜಯ ... ಮಾಡುತ್ತಾ ಸಭೆಯನ್ನು ಮುಕ್ತಾಯಮಾಡಿದರು.

ಚಾಮರಾಜನಗರದ ತಾ|| ಬಾಣಹಳ್ಳಿ.—ಈ ಗ್ರಾಮದಲ್ಲಿ ನಮ್ಮ ಸರ್ಕಾ...ರದವರು ಒಂದು ಗ್ರಾಂಟ್ ಇನ್ ಏಡ್ ಸ್ಕೂಲ್ ದಯಪಾಲಿಸಿದರೆಂಬ ಸಂತೋ...ಷಕ್ಕೆ ಕುಂಬಾ ವಿಜೃಂಭಣೆಯಿಂದ ತಾ. 7 ರಲ್ಲು ಕೋಬಳಿ ಶೇಕ್ದಾರರು ...ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ... ಸೇರಿತು. ಮ|| ಶ್ಯಾನುಭೋಗ ಸುಬ್ಬಣ್ಣನವರು, ಮಾದಪ್ಪನವರು, ...ಶಂಕರಪ್ಪನವರು, ಸದಸ್ಯನವರು ಪಟೇಲ್ ನಂಜೇಗೌಡರು ಮುಂತಾದವ...ರೆಲ್ಲಾ ಸೇರಿದ್ದರು. ಛೇರ್‌ಮೆನ್ನರ ಅಪ್ಪಣೆ ಮೇರೆ ಶ್ರೀಮನ್ ಮಹಾರಾಜಾ ...ಬಹದ್ದೂರವರ ಫೋಟೋ ಇಟ್ಟು ಮುಜರೆ ಮಾಡಲಾಯಿತು. ... ಈ ಸ್ಕೂಲಿಗೆ ಮಾಸ್ಟರಾಗಿ ಬಂದಿರುವ ಮ|| ರಂಗಾಶೆಟ್ಟಪ್ಪನವರು ...ವ್ಯಾಸದ ವಿಷಯದಲ್ಲಿ ಉಪನ್ಯಾಸ ಮಾಡಿದರು. ಛೇರ್‌ಮೆನ್ನರು ಸ್ಕೂಲ್ ...ಅಭಿವೃದ್ಧಿಸ್ಥಿತಿಗೆ ತರುವ ವಿಷಯದಲ್ಲಿಯೂ, ಗ್ರಾಮಾಭಿವೃದ್ಧಿ ವಿಷಯದಲ್ಲಿ ... ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಫಲ, ಪುಷ್ಪ, ...ಲುಗಳು ಹಂಚಿದ ನಂತರ ಸಭೆಯು ಬರಖಾಸ್ತಾಯಿತು.

ಮಂಡ್ಯದ ತಾ ಕದಲೂರು.—ಹಾಲಿ ಇರುವ ಮಾಸ್ಟರ್ ಮ|| ಕೆ. ಕೃಷ್ಣ...ಯ್ಯನವರು ಈ ಗ್ರಾಮಕ್ಕೆ ಬಂದ ಮೇಲೆ ಬಾಲಕರ ಜಮಾವಣೆಯು ಬಹಳವಾಗಿ ...ದ್ದು ಸ್ಕೂಲ್ ಕುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆ. 62 ಮಂದಿ ಬಾಲಕರು ...ವ್ಯಾಸ ಮಾಡುತ್ತಿದಾರೆ —ಕಳೆದ ತಾ 19 ನೇ ಗುರುವಾರ ಸ್ಕೂಲ್ ...ನಲ್ಲಿ ಈ ಹೋಬಳಿ ಶೇಕ್ದಾರ್ ಮ|| ಎಂ. ವೆಂಕೋಬರಾಯರ ಅಧ್ಯಕ್ಷತೆ...ಯಲ್ಲಿ ಗ್ರಾಮಾಭಿವೃದ್ಧಿ ಸಂಘದ ಸಭೆಯು ಸೇರಿತ್ತು. ಮ|| ಎಂ. ವೆಂಕೋಬ...ರಾಯರು ರಾತ್ರಿ ಪಾಠಶಾಲೆಯು ಅವಶ್ಯಕವೆಂಬ ವಿಷಯದಲ್ಲಿ ಬಹು ಸ್ವಾರ...ಸ್ಯವಾದ ಉಪನ್ಯಾಸ ಮಾಡಿದರು. ಮತ್ತೂ ನಮ್ಮ ಅಭಿವೃದ್ಧಿಗೆ ಸಹಕಾರಿಯಾ...ಗುವ ಅನೇಕ ಬುದ್ಧಿವಾದಗಳನ್ನು ತಿಳಿಸಿ ಈ ಗ್ರಾಮದಲ್ಲಿ ಒಂದು ರಾತ್ರಿ ...ಶಾಲೆ ಸ್ಥಾಪಿಸಬೇಕೆಂದು ಅಲ್ಲಿ ಸೇರಿದ್ದ ಗ್ರಾಮಾಭಿವೃದ್ಧಿ ಸಂಘದ ಮೆಂಬ...ರುಗಳೂ, ಇತರ ಪ್ರಮುಖರಿಗೂ ಅಪ್ಪಣೆ ಕೊಡಿಸಿದ್ದಕ್ಕೆ ಎಲ್ಲರೂ ಸಂತೋಷ...ದಿಂದ ಒಪ್ಪಿದರು. ಅದರಂತೆ ತಾ. 26 ನೇ ಸಾಯಂಕಾಲ ಸ್ಕೂಲ್ ಆರಂಭಿಸ...ಲ್ಪಟ್ಟಿತು. ನಮ್ಮ ಪ್ರಭುಗಳಾದ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ...ರವರಿಗೂ, ಶ್ರೀಮದ್ಯುವರಾಜರವರಿಗೂ, ಚಕ್ರವರ್ತಿ ಸಾರ್ವಭೌಮರವರಿಗೂ, ನಮ್ಮ ...ಮಿತ್ರವರ್ಗದವರಿಗೂ ದೇವರು ಸಹಾ ಆಯುರಾರೋಗ್ಯಾದಿಗಳನ್ನಿತ್ತು ಕಾಪಾಡ...ಬೇಕೆಂದು ಪ್ರಾರ್ಥಿಸಿದರು —ಈಚೆಗೆ ಸೆಪ್ಟಂಬರ್ ತಾ. 16 ರಲ್ಲಿ ಒಂದು ರೀಡಿಂಗ್ ...ರೂಮ್ ಸ್ಥಾಪಿಸಲ್ಪಟ್ಟಿತು. ಮ|| ವೆಂಕೋಬರಾಯರೇ ಇದಕ್ಕೆ ಪ್ರೆಸಿಡೆಂಟರಾ...ಗಿರುತ್ತಾರೆ. ಸದಾ ಪ್ರಜೆಗಳ ಹಿತಚಿಂತನೆಯಲ್ಲಿಯೇ ನಿರತರಾಗಿ ವಿದ್ಯಾಭ್ಯಾಸ, ...ವ್ಯವಸಾಯ, ಕೈಗಾರಿಕೆಗಳನ್ನು ಸಾಧ್ಯವಾಗುವ ಮಟ್ಟಿಗೆ ಈ ಹೋಬಳಿಯಲ್ಲಿ ...ಅಭಿವೃದ್ಧಿಗೆ ತರಬೇಕೆಂದು ಉತ್ಸಾಹಶಾಲಿಗಳಾಗಿ ಪ್ರಜೆಗಳನ್ನು ತಮ್ಮ ಮಕ್ಕ...ಳಂತೆ ಕಾಪಾಡುತ್ತಿರುವ ನಮ್ಮ ಶೇಕ್ದಾರ್ ಮ|| ಎಂ. ವೆಂಕೋಬರಾಯರ ಸಾಹ...ಸ ಸ್ತೋತ್ರಾರ್ಹವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕೈಮತೂರಿನಲ್ಲಿ ಐಶ್ವರ್ಯವಂತನೂ ತಾಲ್ಲೂಕ್ದಾರನೂ ಆಗಿದ್ದು ... ಗೌರವ ಸ್ಥಾನವನ್ನು ಪಡೆದಿದ್ದ ಬಾಬು ಪ್ರಿಯನಾಥರಾಯನೆಂಬಾತನನ್ನು ...ದವರು ದೇಶಾಂತರ ಕೊಟ್ಟು ಅವನ ಊರಿನಿಂದ ಹೊರಕ್ಕೆ ಹೋಗದಂತೆ ...ಮಾಡಿದ್ದಾರೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ಅಕೆಯಾಬ್, ಪೆಗು, ಸೈಗಾಂಗ್, ಟಂಗೂ, ಬೆಸೀನ್ ಎಂಬೀ ನಗರಗಳಲ್ಲಿ ವಾಂತಿಭೇದಿ ಉಪದ್ರ ಕಾಣಿಸಿಕೊಂಡು ಕೆಲ ಕೆಲವು ಮರಣಗಳಾಗಿವೆ.

ಬೊಂಬಾಯಿ ಪಟ್ಟಣದಲ್ಲಿ ಭಿಕ್ಷುಕರ ಕಾಟವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕೆಂದೂ, ಇದಕ್ಕೆ ಸಹಾಯವನ್ನು ಒದಗಿಸುತ್ತೇವೆಂದೂ ಮ್ಯುನಿಸಿಪಾಲಿಟಿಯವರು ಒಪ್ಪಿ ಬರೆದು ತಿಳಿಸಿದ್ದಾರೆ.

ಸಾಂಗ್ಲಿ ಸಂಸ್ಥಾನದ ರಾಜರು ಒಂದು ಮೋಟರ್ ಅಂಬ್ಯುಲೆನ್ಸ್ ಗಾಡಿಯನ್ನು ಕೊಂಡು ಯುದ್ಧಭೂಮಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಇಂಡಿಯಾ ಗವರ್ನ್‌ಮೆಂಟಿಗೆ 30,000 ರೂಪಾಯಿ ಚಂದಾ ಕಳುಹಿಸಿದಾರೆ.

ಸಿಲೋನ್ (ಲಂಕಾ) ದ್ವೀಪದಲ್ಲಿರುವ ಮಿ|| ಎಫ್. ಟಿ ಡಿಸಾರಂ ಎಂಬ ದೊಡ್ಡ ಲಾಯರು ಬ್ರಿಟಿಷ್ ಯುದ್ಧದ ಇಲಾಖೆಯವರು ಒಂದು ವಿಮಾನ ಯಂತ್ರವನ್ನು ಕೊಂಡುಕೊಳ್ಳಲೆಂದು 33,750 ರೂಪಾಯಿ ಚಂದಾ ಕಳುಹಿಸಿ ಕೊಟ್ಟಿದಾರೆ.

ಪಂಜಾಬ್ ಅಧಿಪತ್ಯದಲ್ಲೆಲ್ಲಾ 40-50 ವರುಷಗಳಿಂದಲೂ ಪ್ರಕಟವಾಗುತ್ತಾ ಬಂದಿರುವ ಅಖ್ಬಾರ್ ಆಮ್ ಎಂಬ ಪತ್ರಿಕೆಯಲ್ಲಿ ಈಚೆಗೆ ಕೆಲವು ದುಷ್ಟವಾದ ವಿಷಯಗಳನ್ನು ಪ್ರಕಟಿಸಿದರು. ಈಗ ಆ ಪತ್ರಿಕೆಯವರನ್ನು 1,000 ರೂಪಾಯಿ ಠೇವಣಿ ಕಟ್ಟಬೇಕೆಂದು ಸರ್ಕಾರದವರು ನೋಟಿಸ್ ಕೊಟ್ಟಿದಾರೆ.

ಬೊಂಬಾಯಿ ಪಟ್ಟಣದ ಸಮೀಪ ಬಂದರಿನಲ್ಲಿ ಏಷ್ಯಾಟಿಕ್ ಪೆಟ್ರೋಲಿಯಂ ಕಂಪನಿಯವರು ಸೀಮೆಯೆಣ್ಣೆಯನ್ನು ಭಾರೀ ಪೀಪಾಯಿಗಳನ್ನು ಕಟ್ಟಿ ಭರ್ತಿ ಮಾಡುತ್ತಾರೆ ಅಂಥಾ ಒಂದು ಪೀಪಾಯಿಗೆ ಕಳೆದ ಬುಧವಾರ ಹ್ಯಾಗೋ ಬೆಂಕಿಬಿದ್ದು 1,50,700 ರೂಪಾಯಿನ 3,50,000 ಗ್ಯಾಲನ್ ಎಣ್ಣೆ ಉರಿದು ಹೋಯಿತು.

ಕಲ್ಕತ್ತಾ ಪಟ್ಟಣದಲ್ಲಿ ಒಂದು ಪೋಸ್ಟ್ ಆಫೀಸಿನಿಂದ ಇನ್ನೊಂದು ಪೋಸ್ಟ್ ಆಫೀಸಿಗೆ ಅಂಚೆ ಬಸ್ತಗಳನ್ನು ದೋಣಿಯ ಮೇಲೆ ಹೇರಿ ಸಾಗಿಸುತ್ತಿದ್ದಾಗ 20 ಮಂದಿ ಡಕಾಯಿತಿಕೋರರು ಹಗಲಿನಲ್ಲೇ ಅದನ್ನು ತಡೆದು ಬಸ್ತಗಳನ್ನೆಲ್ಲಾ ಹೊತ್ತುಕೊಂಡುಹೋದರು. ಆ ಕಳ್ಳರಾಗಲಿ ಬಸ್ತಗಳಾಗಲಿ ಎಂಟು ದಿನದಿಂದ ಪತ್ತೆ ಆಗಲಿಲ್ಲ.*

ಮ|| ಚಕ್ರಪಾಣಿಚೆಟ್ಟಿ ಎಂಬೊಬ್ಬ ಪುಣ್ಯವಂತನು ಕುಂಭಕೋಣದಲ್ಲಿ 70,000 ರೂಪಾಯಿ ಖರ್ಚುಮಾಡಿ ಒಂದು ವಿಸ್ತಾರವಾದ ಮಂಟಪವನ್ನು ಧರ್ಮಾರ್ಥವಾಗಿ ಕಟ್ಟಿಸಿದನು ಅದರಲ್ಲಿ ಮಧ್ಯೆ ತನ್ನದೊಂದು ಪ್ರತಿಮೆಯನ್ನು ಮಾಡಿಟ್ಟಿರುತ್ತಾನೆ ಕಳೆದ ವಾರ ಈ ಪ್ರಜೋಪಕಾರವಾದ ಕಟ್ಟಡವು ಬಹಳ ಸಂಭ್ರಮದಿಂದ ಪ್ರತಿಷ್ಠೆ ಮಾಡಲಾಯಿತು.

ಫ್ರೆಂಚರು ಹಿಂದುಸ್ಥಾನದಲ್ಲಿ ತಮ್ಮದಾಗಿರುವ ಪಾಂಡಿಚೆರಿ (ಪುದುಚೇರಿ) ಮೊದಲಾದ ನಗರಗಳಲ್ಲಿ ತಮ್ಮ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಅವರ ಬಳಿ ಇರುವ ಭಂಗಾರದ ನಾಣ್ಯಗಳನ್ನು ಪ್ರತಿಫಲ ಕೊಟ್ಟು ತರಿಸಿಕೊಳ್ಳುತ್ತಿದಾರೆ. ಪ್ರಜೆಗಳು ಈಗಾಗಲೇ 10,000 ಫ್ರಾಂಕ್ ಎಂಬ ಚಿನ್ನದ ಕಾಸುಗಳನ್ನು ಸರ್ಕಾರಕ್ಕೆ ಕೊಟ್ಟು ಬೆಳ್ಳಿ ನಾಣ್ಯಗಳನ್ನು ತೆಗೆದುಕೊಂಡರು.

ಚಿಕ್ಕ ವಯಸ್ಸಿನ ಒಬ್ಬ ಬಂಗಾಳಿಯು ಕಲ್ಕತ್ತಾ ಪಟ್ಟಣದ ಬಳಿ ಹೌರಾ ಸ್ಟೇಷನ್ನಲ್ಲಿ ರೈಲ್ ಗಾಡಿ ಇಳಿದನು. ಅವನು ಗುಟ್ಟಾಗಿ ಅಫೀಮು ತರುತ್ತಾನೆಂದು ಪೋಲೀಸಿಗೆ ಬಾತ್ಮಿ ಬಂದದ್ದರ ಮೇಲೆ ಅವರು ಹೋಗಿ ಅವನ ಸಾಮಾನನ್ನು ಶೋಧನೆಮಾಡಿದರು. ಅಫೀಮಿಗೆ ಪ್ರತಿಯಾಗಿ ಅವನ ಹತ್ತಿರ 900 ಪಿಸ್ತೂಲಿನ ತೋಟಾಗಳು ಸಿಕ್ಕಿದವು ಅವನನ್ನು ದಸ್ತಗಿರಿ ಮಾಡಿದಾರೆ.

ಸ್ಕಾಟ್ಲೆಂಡಿನ ಪೂರ್ವ ತೀರದಲ್ಲಿರುವ ಅಬರ್‌ಡೀನ್ ನಗರದಲ್ಲಿ ಮಿ|| ವಿಲ್ಲಿಯಂ ಚಾರ್ಲ್ಸನ್ ಎಂಬ ಇಂಜಿನಿಯರು ಕಾಲವಾದನು. ಈತನು ತನ್ನ 11,56,030 ರೂಪಾಯಿ ಆಸ್ತಿಯಲ್ಲಿ ಅರೆವಾಸಿಯನ್ನು ಆ ನಗರದ ಇಂಜಿನಿಯರಿಂಗ್ ವಿದ್ಯಾಶಾಲೆಯ ಫಂಡಿಗೂ, ಉಳಿದದ್ದನ್ನು ಕಲ್ಕತ್ತಾ ಪಟ್ಟಣದಲ್ಲಿ ನಡೆಯುವ ಪರಹಿತ ಕಾರ್ಯಗಳಿಗೂ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿದಾನೆ.

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ 150 ರೂಪಾಯಿಗೆ ಮೇಲ್ಪಟ್ಟು ಸಂಬಳವನ್ನು ಪಡೆಯುವಂಥಾ ಎಲ್ಲಾ ಸರ್ಕಾರೀ ಅಧಿಕಾರಿಗಳೂ ತಮ್ಮ ಸಂಬಳದಲ್ಲಿ ಪ್ರತಿ ತಿಂಗಳೂ ಯುದ್ಧ ಮುಗಿಯುವ ತನಕ ಶೇಕಡಾ 1¼ ರೂಪಾಯಿನಂತೆ ಚಂದಾ ಕೊಡಿಸಿ, ಮದರಾಸ್ ಎಂಬ ಹಡಗಿನ ಖರ್ಚಿಗೆ ಕೊಡುತ್ತೇವೆಂದು ಪ್ರತಿಜ್ಞಾನ ಮಾಡಿ ಆ ರೀತಿ ವಸೂಲಾಗುವ ಸುಮಾರು 1,100 ರೂಪಾಯನ್ನು ಕಳುಹಿಸಿಕೊಡುತ್ತಿದಾರೆ.

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಪ್ಲೇಗ್ ಉಪದ್ರದ ಹಾವಳಿಯು ಸ್ವಲ್ಪ ಕಡಮೆಯಾಗಿರುತ್ತದೆ. ಬೊಂಬಾಯಿ ಅಧಿಪತ್ಯದಲ್ಲಿ 846, ಮಧ್ಯ ಪ್ರಾಂತ್ಯಗಳಲ್ಲಿ 147, ಮದರಾಸ್ ಅಧಿಪತ್ಯದಲ್ಲಿ 111, ಹೈದರಾಬಾದ್ ಸಂಸ್ಥಾನದಲ್ಲಿ 97, ಮೈಸೂರು ಸಂಸ್ಥಾನದಲ್ಲಿ 70, ಸಂಯುಕ್ತ ಅಧಿಪತ್ಯಗಳಲ್ಲಿ 51, ಬರ್ಮ 22, ಮಧ್ಯ ಇಂಡಿಯ 20, ಬೀಹಾರ್ ಮತ್ತು ಒರಿಸ 16, ಪಂಜಾಬ್ 2, ಈ ರೀತಿ ಮರಣಗಳಾಗಿವೆ.

ಹಿಂದೂ ಸ್ತ್ರೀಯರು ವಿದ್ಯಾವತಿಯರಾಗಬೇಕೆಂಬ ಕುತೂಹಲದಿಂದ ಬರೋಡಾ ಸಂಸ್ಥಾನದ ಗಾಯಕವಾಡೀ ಮಹಾರಾಣೀಯವರು 1,60,000 ರೂಪಾಯಿ ಉಚಿತವಾಗಿ ಕೊಟ್ಟು ಒಂದು ಫಂಡನ್ನು ಏರ್ಪಡಿಸಿದರು ಈ ಫಂಡಿನ ಬಡ್ಡಿಯಲ್ಲಿ ವಿದ್ಯೆ ಕಲಿಯುವ ಬಾಲಕಿಯರಿಗೂ ಸ್ತ್ರೀಯರಿಗೂ 29 ವೇತನಗಳನ್ನು ಕೊಡಬೇಕೆಂದೂ, ಉಳಿದ ಹಣವನ್ನು ಹಿಂದೂ ಸ್ತ್ರೀಯರು ಸೀಮೆಗೆ ಹೋಗಿ ವಿದ್ಯೆ ಕಲಿಯುವುದಕ್ಕೆ ವೇತನ ಕೊಡಬೇಕೆಂದೂ ಗೊತ್ತುಮಾಡಿದಾರೆ.

ಅಯೋಧ್ಯಾ ರೋಹಿಲ್‌ಖಂಡ್ ರೈಲ್ವೆಯಲ್ಲಿ ಬಾರ್ಖಂಡಿವೆಂಬ ಸ್ಟೇಷನ್ನೊಳಗೆ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರಿಗೂ ಗ್ಯಾಂಗ್ ಕೂಲಿಯವರಿಗೂ ಮನಸ್ತಾಪವಿದ್ದದ್ದರಿಂದ ಅವರು ಸ್ಟೇಷನ್ ಮಾಸ್ಟರನ್ನು ತಮ್ಮ ಕೊಠಡಿಯೊಳಗೆ ಹಾಕಿ ಬೀಗಹಾಕಿ, ಕಳ್ಳನನ್ನು ಹಿಡಿದಿದೇವೆಂದು ಪೋಲೀಸಿಗೆ ತಿಳಿಸಿದರು. ಇವರು ಹೋಗಿ ಸ್ಟೇಷನ್ ಮಾಸ್ಟರನ್ನು ಬಿಡುಗಡೆ ಮಾಡಿ, ಆ ಕೂಲಿಯವರ ಮೇಲೆ ಮೊಕದ್ದಮೆ ಮಾಡಿದರು. ಪ್ರತಿ ಒಬ್ಬ ಕೂಲಿಯವನಿಗೂ ಮೂರು ತಿಂಗಳಂತೆ ಕಠಿಣ ಸಜಾ ವಿಧಿಸಲ್ಪಟ್ಟಿತು.

ಕಳೆದ ವರುಷ ಬ್ರಿಟಿಷ್ ಇಂಡಿಯಾದಲ್ಲಿ ಕಾಡು ಮೃಗಗಳು 1,745 ಪ್ರಜೆಗಳನ್ನು ಕೊಂದುಹಾಕಿದವು. 22,894 ಪ್ರಜೆಗಳು ಹಾವು ಕಡಿದು ಮೃತಪಟ್ಟರು. ಗೋಕಾಯಿಗಳಲ್ಲಿ 94,746 ರಾಸುಗಳನ್ನು ಕಾಡು ಮೃಗಗಳೂ, 10,039 ರಾಸುಗಳನ್ನು ಹಾವುಗಳೂ ಕೊಂದುಹಾಕಿದವು 1,481 ಹುಲಿಗಳು, 6,557 ಚಿರತೆಗಳು, 3,076 ಕರಡಿಗಳು, 3,066 ತೋಳಗಳು, ಅಂತು 25,909 ಕಾಡು ಮೃಗಗಳನ್ನು ಕೊಲ್ಲಿಸಿದ್ದಕ್ಕೆ 1,91,181 ರೂಪಾಯಿ ಇನಾಮು ಕೊಡಲಾಯಿತು. 1,18,816 ಹಾವುಗಳನ್ನು ಹೊಡೆದುಹಾಕಿದರು.

ಮಲಬಾರ್ ಜಿಲ್ಲೆಗೆ ಸೇರಿದ ಏರನಾಡಿನಲ್ಲಿ ಕೆಲವು ಮಾಪಿಳ್ಳೆಗಳು ಮಹಲುಷ್ಯ ಮಾಡಿಕೊಂಡು ಕಲೆಕ್ಟರಾದ ಮಿ|| ಇನ್ನಿಸ್ ಸಾಹೇಬರನ್ನು ಕೊಂದುಹಾಕಬೇಕೆಂದು ಪ್ರಯತ್ನಪಟ್ಟದ್ದು ರುಜುವಾತಾಯಿತು. ಈ ಮೊಕದ್ದಮೆಯಲ್ಲಿ ಹತ್ತಾರು ಮಂದಿ ಅಪರಾಧಿಗಳಿಗೆ ಬೇರೆ ಬೇರೆ ಅವಧಿಯ ಸಜಾ ಶಿಕ್ಷೆ ವಿಧಿಸಲ್ಪಟ್ಟಿದೆ. ಈಚೆಗೆ ಮದರಾಸ್ ಗವರ್ನ್‌ಮೆಂಟಿನವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಶಿಫಾರಸನ್ನು ಅಂಗೀಕರಿಸಿ, ಮಾಪಿಳ್ಳೆಗಳಲ್ಲಿ ಮುಖಂಡರಾಗಿದ್ದ ಏಳು ಜನರನ್ನು ಮಲಬಾರ್ ಜಿಲ್ಲೆಯಿಂದ ಗಡೀಪಾರು ಮಾಡಿಸಿರುತ್ತಾರೆ.

ಹಿಂದುಸ್ಥಾನದಲ್ಲಿ ಉತ್ಪತ್ತಿಯಾದ ಗೋಧಿಯನ್ನು ಗವರ್ನ್‌ಮೆಂಟಿನವರೇ ರೈತನಿಂದ ಧಾರಣೆ ನಿಷ್ಕರ್ಷೆಮಾಡಿ ಕೊಂಡುಕೊಂಡು ಹಡಗುಗಳಲ್ಲಿ ಸೀಮೆಗೆ ಸಾಗಿಸುತ್ತಿದ್ದರು. ಈಚೆಗೆ ಪೇಟೆ ಧಾರಣೆಯು ಹೆಚ್ಚಿಹೋಯಿತು. ಬೆಳೆಯು ಮಳೆ ಇಲ್ಲದೆ ಕಡಮೆಯಾಗುವ ಸಂಭವ ಕಾಣುತ್ತದೆ. ಇದನ್ನು ನೋಡಿ ಇಂಡಿಯಾ ಗವರ್ನ್‌ಮೆಂಟಿನವರು ಒಂದು ಪಂಚಾಯತಿಯನ್ನು ನೇಮಕಮಾಡಿದಾರೆ. ಅವರು ಗೋಧಿ ಬೆಳೆಯ ಪೂರ್ವೋತ್ತರವನ್ನೆಲ್ಲಾ ತನಿಖೆಮಾಡಿ ಧಾರಣೆಯನ್ನು ಹೆಚ್ಚಿಸಬೇಕೇ ಬೇಡವೇ ಎಂಬುದನ್ನು ಗೊತ್ತುಮಾಡಿ ಸರ್ಕಾರಕ್ಕೆ ತಿಳಿಸುವರು.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಕಳೆದ 4 ನೇ ತಾ. ವರೆಗೆ ಬೇರೆ ಬೇರೆ ಅಧಿಪತ್ಯಗಳಲ್ಲಿ ವಸೂಲಾಗಿರುವ ಚಂದಾ ಹಣಗಳೆಷ್ಟೆಂದರೆ—

ಸಿಮ್ಲಾ ಬ್ಯಾಂಕಿಗೆ ಪಾವತಿ......	...... ರೂ.	43,09,807-1- 2
ಬಂಗಾಳಾ ಬ್ಯಾಂಕಿಗೆ	...... ,,	41,28,776-6-10
ಬೊಂಬಾಯಿ ಬ್ಯಾಂಕಿಗೆ	...... ,,	8,22,530-5- 6
ಮದರಾಸ್ ಬ್ಯಾಂಕಿಗೆ	...... ,,	6,62,123-7- 8
ಜುಮ್ಲಾ ರೂಪಾಯಿಗಳು		99,22,737-5- 2

ಬೊಂಬಾಯಿನಲ್ಲಿ ಒಂದು ಕಂಪನಿಯವರು ಯುದ್ಧಭೂಮಿಗೆ ಹೊಗೇಸೊಪ್ಪನ್ನು ಒದಗಿಸುವುದಾಗಿ ಕಂಟ್ರಾಕ್ಟು ವಹಿಸಿಕೊಂಡು 53,000 ರೂಪಾಯಿನ ಮಾಲನ್ನು ರವಾನೆಮಾಡಿದರು. ಇದಕ್ಕೆ ಅವರು ಲೈಸೆನ್ಸು ಪಡೆಯಲಿಲ್ಲವೆಂದು ಗೊತ್ತಾದ್ದರಿಂದ ಕಲೆಕ್ಟರು ಅದರ ಹತ್ತರಷ್ಟು ಅಂದರೆ 5,30,000 ರೂಪಾಯಿ ಜುಲ್ಮಾನೆ ವಿಧಿಸಿದರು. ಆ ಕಂಪನಿಯವರು ಅಪೀಲ್ ಮಾಡಿದರು. ಯುದ್ಧ ಕಾಲದಲ್ಲಿ ಹಿಂದೆ ಅನೇಕ ವೇಳೆ ಅವರು ಕಂಟ್ರಾಕ್ಟು ತೆಗೆದುಕೊಂಡಿದ್ದರಾದಕಾರಣ ಸೈನ್ಯಕ್ಕೆ ಕಳುಹಿಸಿದ ಹೊಗೇಸೊಪ್ಪಿಗೆ ಲೈಸೆನ್ಸು ಅವಶ್ಯವಿಲ್ಲವೆಂದು ಜುಲ್ಮಾನೆಯು ವಜಾ ಮಾಡಲ್ಪಟ್ಟಿತು.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸಿಲ್‌ಹಟ್ ಡಿಸ್ಟ್ರಿಕ್ಟಿನೊಳಗೆ ಸಹೋದರ ಸಹೋದರಿಯರಿಬ್ಬರು ಒಂದಾಗಿ ತಮ್ಮ ಒಡಹುಟ್ಟಿದವರನ್ನೇ ಕೊಂದುಹಾಕಿದರೆಂಬ ಭಯಂಕರವಾದ ಸುದ್ದಿ ಪ್ರಕಟವಾಗಿದೆ. ನಾಯಬಾಳ ಗ್ರಾಮದಲ್ಲಿ ಜಹಭಕ್ಷನೂ ಇವನ ತಂಗಿ ಮರಿಯಂ ಬೀಬಿಯೂ ಸಮರಾತ್ರಿಯಲ್ಲಿ ತಮ್ಮ ಅಣ್ಣನಾದ ಷರಿಯತ್ ಎಂಬವನ ಮನೆಗೆ ಹೋಗಿ ನಿದ್ದೆಮಾಡುತ್ತಿದ್ದ ತಾಯನ್ನೂ, ಅಣ್ಣನ ಹೆಂಡತಿಯನ್ನೂ, ಅವನ ಒಬ್ಬ ಗಂಡುಮಗು ಮತ್ತೂ ಮೂವರು ಹೆಣ್ಣುಮಕ್ಕಳನ್ನೂ ಕತ್ತಿ ಕತ್ತರಿಸಿ ಕೊಂದುಹಾಕಿ, ಅಣ್ಣನ ಕತ್ತಿನಮೇಲೂ ಹೊಡೆದು ಗಾಯಮಾಡಿದರು. ಬಳಿಕ ಅವರಿಬ್ಬರೂ ಸಿಕ್ಕಿ ಪೋಲೀಸಿನವರ ತನಿಖೆಗೆ ಗುರಿಮಾಡಲ್ಪಟ್ಟಿದಾರೆ.

ಅಲ್ಲಹಾಬಾದ್ (ಪ್ರಯಾಗ) ಪಟ್ಟಣದ ಸೆಷನ್ಸ್ ಜಡ್ಜರು ಒಂದು ಘೋರವಾದ ಮೊಕದ್ದಮೆಯನ್ನು ದರ್ಯಾಪ್ತಿ ಮಾಡುತ್ತಿದಾರೆ. ಅದರ ಕಥೆ ಏನೆಂದರೆ, ಒಬ್ಬ ಗಂಡಸೂ ಇಬ್ಬರು ಹೆಂಗಸರೂ ಸೇರಿ ಒಬ್ಬ ಬನಿಯ ವರ್ತಕನ ಹೆಂಡತಿಯನ್ನು ಚಿತಾಯಿಸಿ ಕರೆದುಕೊಂಡುಹೋಗಿ ಅಮೃತಸಾರದಲ್ಲಿ ಜಗತ್ ಸಿಂಗನಿಗೆ 300 ರೂಪಾಯಿಗೆ ಬಿಕರಿ ಮಾಡಿದರು. ಅವನು ಒಂದು ತಿಂಗಳ ಮೇಲೆ ಕಾಳಸಿಂಗನಿಗೆ ಅಷ್ಟಕ್ಕೇ ಮಾರಿಬಿಟ್ಟನು. ಈ ಪ್ರಕಾರ ಅವಳು ಅನೇಕ ಸಲ ಒಬ್ಬರಿಂದೊಬ್ಬರಿಗೆ ಮಾರಲ್ಪಟ್ಟಳು ಕಡೆಗೆ ಪೋಲೀಸಿಗೆ ತಿಳಿದಾಗ ಅವಳು ತನ್ನ ಕಥೆಯನ್ನೆಲ್ಲಾ ಹೇಳಿಕೊಂಡಳು ಅವರು ಅವಳನ್ನು ಬಿಡಿಸಿಕೊಂಡು ಬಂದು ಅಪರಾಧಿಗಳನ್ನು ಹಿಡಿದು ಮೊಕದ್ದಮೆ ಮಾಡಿದಾರೆ.

ದಕ್ಷಿಣ ಮಲಬಾರಿನಲ್ಲಿ ಒಬ್ಬ ಇಂಜನಿಯರೂ ಅತನ ಶಿಷ್ಯನೂ ಜೇಡಿ ಮಣ್ಣುಗಳನ್ನು ಪರಿಶೋಧನೆ ಮಾಡುತ್ತಿದಾರೆ. ಅದರಲ್ಲಿ ಸರ್ವೋತ್ತಮವಾದ ಮತ್ತು ಬಹಳ ಅಗ್ಗವಾದ ಸಿಮೆಂಟ್ ಎಂಬ ಗಾರೆ ಪುಡಿಯನ್ನು ತಯಾರುಮಾಡಬಹುದೆಂದೂ, ಅಂಥಾ ಜೇಡಿಮಣ್ಣು ಅಪಾರವಾಗಿ ದೊರಕುವುದೆಂದೂ ಹೇಳುತ್ತಾರೆ. ಅದಲ್ಲದೆ ಈ ಗಾರೆ ಪುಡಿಯನ್ನು ಒಂದು ಪೀಪಾಯಿಗೆ 2 ರೂಪಾಯಿಗೆ ಬಿಕರಿ ಮಾಡಬಹುದಂತೆ- [~~ಈಗ 1 ಪೀಪಾಯಿಗೆ~~ 14-15 ರೂಪಾಯಿ ಕ್ರಯವಿದೆ.] ಇಂಥಾ ನವೀನವಾದ ಪದಾರ್ಥವನ್ನು ತಯಾರುಮಾಡುವುದಕ್ಕೆ ಮಲಬಾರಿನಲ್ಲಿ ಒಂದು ಕಂಪನಿಯನ್ನು ಪ್ರಾರಂಭಿಸಬೇಕೆಂದು ಏರ್ಪಾಡಾಗುತ್ತಿದೆ. ಇದು ಎಷ್ಟು ಮಟ್ಟಿಗೆ ಸಾಧ್ಯವೋ ಮುಂದೆ ನೋಡಬೇಕು.

ಹಿಂದುಸ್ಥಾನದ ವಾಯವ್ಯ ಸರಹದ್ದು ಪ್ರಾಂತ್ಯದಲ್ಲಿ ಎಲ್ಲೆಕಟ್ಟಿನ ಆಚೆ ಬಾಬ್ರಾ ಮುಲ್ಲಾ ಎಂಬ ಮುಖಂಡನು ಸುಮಾರು 10,000 ಸೈನಿಕರನ್ನು ಕಟ್ಟಿಕೊಂಡು ಎಲ್ಲೆಯನ್ನು ದಾಟಿ ಬಂದು ದುರಾಗತ ಕೃತ್ಯಗಳನ್ನು ನಡಿಸಿದ್ದರಿಂದ ಬ್ರಿಟಿಷ್ ಸೈನ್ಯಗಳು ಹೋಗಿ ಅವನ ಹಾವಳಿಯನ್ನು ತಡೆದು ಕದನ ಮಾಡಿ ಓಡಿಸಿ ಬಂದಿರುತ್ತಾರೆ. ಬ್ರಿಟಿಷರ ಕಡೆ 22 ಮಂದಿ ಕೊಲೆಯಾದರು, 89 ಮಂದಿ ಗಾಯಪಟ್ಟರು; ಶತ್ರುವಿನ ಕಡೆ 1,500 ಮಂದಿಯು ತನಕ ನಷ್ಟ ಹೊಂದಿ ಓಡಿಹೋದರು. ಈ ಶತ್ರುಗಳಲ್ಲಿ ಅನೇಕರನ್ನು ಬ್ರಿಟಿಷ್ ಸೈನಿಕರು ಸೆರೆ ಹಿಡಿದು ತಂದಿದಾರೆ. ಇವರನ್ನು ಬಂಧನದಲ್ಲಿಡುವುದಕ್ಕೆ ಸ್ಥಳವಿಲ್ಲದ್ದರಿಂದ ಪೆಷಾವರ್ ನಗರದ ಜೈಲ್‌ಖಾನೆಯಲ್ಲಿದ್ದ ಅನೇಕ ಬಂದೀವಾನರನ್ನು ವಾಯಿದೆ ಮುಗಿಯುವುದಕ್ಕೆ ಮೊದಲೇ ಖುಲಾಸ್ ಮಾಡಿಸಿ, ನೋಟ್ಯಂದವರನ್ನು ಅಲ್ಲಿ ಇಟ್ಟುಕೊಂಡಿರುವರು.

ಹಿಂದುಸ್ಥಾನದಲ್ಲಿ ಬ್ರಿಟಿಷ್ ಗವರ್ನ್‌ಮೆಂಟನ್ನು ತಲೆಕೆಳಗೆ ಮಾಡಬೇಕೆಂದು ಕೆಲವು ದುಷ್ಟರು ಫಿತೂರಿಮಾಡಿದರೆಂದು ಸರ್ಕಾರದವರು 61 ಜನರನ್ನು ದಸ್ತಗಿರಿ ಮಾಡಿ ಪಂಜಾಬ್ ಅಧಿಪತ್ಯಕ್ಕೆ ಸೇರಿದ ಲಾಹೋರ್ ನಗರದಲ್ಲಿ ದರ್ಯಾಪ್ತಿ ಮಾಡಿದರು. ಕಳೆದ ವಾರ ಈ ಮೊಕದ್ದಮೆಯ ತೀರ್ಮಾನ ಹೇಳಲಾಯಿತು. 24 ಜನರಿಗೆ ಮರಣದಂಡನೆಯೂ, 27 ಮಂದಿಗೆ ಬಂಕೋಲ್ ಶಿಕ್ಷೆಯೂ, 6 ಜನರಿಗೆ ಬೇರೆ ಬೇರೆ ಅವಧಿಯುಳ್ಳ ಕಠಿಣ ಸಜಾ ವಿಧಿಸಲ್ಪಟ್ಟಿದೆ. 4 ಮಂದಿಯನ್ನು ಮಾತ್ರ ಖುಲಾಸ್ ಮಾಡಿಬಿಟ್ಟರು. ಲಾಹೋರ್ ಪಟ್ಟಣದಲ್ಲಿ ದಯಾನಂದ ಕಾಲೇಜಿನಲ್ಲಿ ಚರಿತ್ರ ಬೋಧಕರಾಗಿದ್ದ ಭಾಯಿಪರಮಾನಂದ, ಎಂ.ಎ ಎಂಬ ವಿದ್ಯಾವಂತರಿಗೆ ಮರಣದಂಡನೆಯಾಯಿತು; ಮತ್ತು ಅವರ ಆಸ್ತಿಪಾಸ್ತಿಯನ್ನೆಲ್ಲಾ ಸರ್ಕಾರಕ್ಕೆ ಮುಟ್ಟುಗೋಲು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ.

ಕಳೆದ ವರುಷ ಬೊಂಬಾಯಿ ಪಟ್ಟಣದಲ್ಲಿರುವ ಪಾರ್ಸಿ ಜನಗಳು ತಮ್ಮ ಜನಗಳ ಸಹಾಯಕ್ಕಾಗಿ ಅನೇಕ ಧರ್ಮಕಾರ್ಯಗಳನ್ನು ಮಾಡಿರುತ್ತಾರೆ. ಆ ಪೈಕಿ ಕೆಲವನ್ನು ಇಲ್ಲಿ ವಿವರಿಸುವೆವು. ಸರ್ ಕೋವಸ್‌ಜಿ ಜಹಂಗೀರ್‌ಯವರು ಬಡ ಸಂಸಾರಿಗಳಿಗೋಸ್ಕರ ಆರೋಗ್ಯಕರವಾದ ಆರು ಮನೆಗಳನ್ನು ಕಟ್ಟಿಸಿಕೊಟ್ಟರು. ಜಾವೇರ್ ಬಾಯಿ ವಾಡಿಯಾ ಎಂಬ ಪಾರ್ಸಿ ಸ್ತ್ರೀಯು 30,000 ರೂಪಾಯಿ ಮುಟ್ಟಿಸಿ ಒಂದು ಸಾಲು ಮನೆಗಳನ್ನು ಕಟ್ಟಿಸಿದಳು. ಪಾರ್ಸಿ ಸ್ತ್ರೀಯರ ಪ್ರೌಢ ವಿದ್ಯಾಭ್ಯಾಸಕ್ಕೆ ಒಂದು ಕಾಲೇಜನ್ನು ಪ್ರಾರಂಭಿಸುವುದಕ್ಕೆ ಲಕ್ಷಾಂತರ ರೂಪಾಯಿ ಕೊಡುತ್ತಿದೆ. ಮಿ|| ನೌರೋಜಿ ಗಾಮಾಡಿಯಾ ಎಂಬಾತನು ಒಂದು ಪಾರ್ಸಿ ಗರಲ್ಸ್ ಸ್ಕೂಲಿಗೆ 90 ಸಾವಿರ ರೂಪಾಯಿ ಕೊಟ್ಟನು. ಲೇಟ್ ಮಿ|| ಫೆರೋಜ್‌ಷಾ ಮಾನಿಕ್‌ಜಿ ಕಾಕಾರವರು ತಮ್ಮ ಆಸ್ತಿಯಲ್ಲಿ 6 ಲಕ್ಷ ರೂಪಾಯಿ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನವನ್ನು ಬರೆದರು. ಹಾರ್ಮುಸ್‌ಜಿ ಆರ್ದೇಷಾಲಾ ಸಹೋದರರು ಒಂದು ಫಂಡನ್ನು ಹಾಕಿ ಅದರಿಂದ ಸಣ್ಣ ವರ್ತಕರಿಗೂ, ಕಸಬುದಾರರಿಗೂ ಬಂಡವಾಳವನ್ನು ಒದಗಿಸಿ ಅವರನ್ನು ಅಭಿವೃದ್ಧಿಗೆ ತರುವ ಏರ್ಪಾಡು ಮಾಡಿದಾರೆ. ಇದಲ್ಲದೆ ಈ ಸಹೋದರರು ನಾನಾ ಧರ್ಮಕಾರ್ಯಗಳಿಗೆ ದ್ರವ್ಯಸಹಾಯಮಾಡಿರುವರು. ಮತ್ತು ಫ್ರಾನ್ಸಿನ ಒಂದು ಆಸ್ಪತ್ರೆಯಲ್ಲಿ ಮೂರು ಜನ ಗಾಯಪಟ್ಟ ಸೈನಿಕರನ್ನು ಕಾಪಾಡುವ ಖರ್ಚನ್ನು ವಹಿಸಿಕೊಂಡು ಕೊಡುತ್ತಿದಾರೆ.

ತಾಲ್ಲೋಕು ವರ್ತಮಾನಗಳು.

ಚನ್ನರಾಯಪಟ್ಟ.—ತಾಲ್ಲೂಕು ಉಪಾಧ್ಯಾಯರ ಸಂಘದ 21 ನೆಯ ಸಭೆಯು ತಾ. 19 ನೇ ಭಾನುವಾರ ಎ. ವಿ. ಸ್ಕೂಲ್ ಹಾಲಿನಲ್ಲಿ ಹೆಡ್ ಮಾಸ್ಟರ್ ಮ|| ಎ ಕೃಷ್ಣಸ್ವಾಮಯ್ಯಂಗಾರ್ರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಹಿಂದಲಹಳ್ಳಿ ವಿ. ಇ. ಸ್ಕೂಲ್ ಮಾಸ್ಟರ್ ಮ|| ಹೆಚ್. ವಿ. ನಂಜಪ್ಪನವರು ಭೂವಿವರಣೆಯಲ್ಲಿ ಋತುಗಳ ವಿಷಯವಾಗಿ ಎ. ವಿ ಎರಡನೇ ತರಗತಿ ಬಾಲಕರಿಗೆ ಪಾಠ ನಿದರ್ಶನವನ್ನು ಮಾಡಿದರು ಆ ವಿಷಯದಲ್ಲಿ ಚರ್ಚೆಯೂ ನಡೆಸಲ್ಪಟ್ಟಿತು. ಈ ಸಂಘದಲ್ಲಿ ಕೆಲವರು ಬರುವ ಉಪಾಧ್ಯಾಯರ ಸಮೂಹದಲ್ಲಿ ವಿದ್ಯಾಭ್ಯಾಸದ ಪ್ರದರ್ಶನಗಳನ್ನು ಇಡಬೇಕೆಂದು ಸಲಹೆ ಕೊಟ್ಟದ್ದರ ಮೇಲೆ ಆ ರೀತಿ ಮಾಡಬಹುದೆಂದು ತೀರ್ಮಾನ ಮಾಡಲಾಯಿತು. ಮುಂದೆ ನಡೆಯುವ ಈ ಸಮಾಜಕ್ಕೆ ಮ|| ವೈ ನರಸಿಂಗರಾಯರು ದಯಮಾಡಿಸುವುದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಇಲ್ಲಿನ ಮಹಾಜನಗಳೂ, ವಿಲೇಜ್ ಇಂಪ್ರೂವ್ಮೆಂಟ್ ಕಮಿಟಿಯವರೂ ಈ ಸಮಾಜಕ್ಕೆ ಸಹಾಯ ಮಾಡುತ್ತಾರೆಂದು ನಂಬಿದೇನೆ.

ಹೊಳೆನರಸೀಪುರ.—ಇಲ್ಲಿನ ಕೋ ಆಪರೇಟಿವ್ ಸಂಘಕ್ಕೆ ಒಂದು ಹೊಸ ಮನೆಯು ಸಿದ್ಧವಾಯಿತು. ಇದರ ಗೃಹಪ್ರವೇಶವು ತಾ 4 ನೇ ಶನಿವಾರ ಅತಿ ಸಂಭ್ರಮದಿಂದ ನಮ್ಮ ಅಮಲ್ದಾರ್ರ ಅಧ್ಯಕ್ಷತೆಯಲ್ಲಿ ನೆರವೇರಿತು. ಆಗ್ಗೆ ಈ ತಾಲ್ಲೋಕಿನ ಅನೇಕ ಮಹನೀಯರು ಹಾಜರಾದ್ದರು. ಸೆಕ್ರಟರಿ ಮ|| ವೆಂಕೋಬರಾಯರು ಈ ಕಟ್ಟಡವನ್ನು ಪ್ರಾರಂಭಿಸಿ ಮುಕ್ತಾಯಮಾಡಿದ ರಿಪೋರ್ಟನ್ನು ಓದಿದರು. ಈ ಅಲಂಕಾರವಾದ ಕಟ್ಟಡವು ಕೋಟೆಯೊಳಗೆ ಕಟ್ಟಿ ಪೂರೈಸುವ ಹಾಗೆ ತುಂಬಾ ಶ್ರದ್ಧೆಯನ್ನು ವಹಿಸಿದ ಅಮಲ್ದಾರ್ ಮ|| ತಿರುನಾರಣಯ್ಯಂಗಾರ್ರು ಪ್ರಜೆಗಳ ಸ್ತೋತ್ರಕ್ಕೆ ಪಾತ್ರರಾಗಿರುವರು ಕಟ್ಟಡಕ್ಕೆ ದ್ರವ್ಯ ಸಹಾಯವಾಗುವಂತೆ ಅನುಕೂಲಪಡಿಸಿದ ರಿಜಿಸ್ಟ್ರಾರ್ ಮ|| ನಾರಣಯ್ಯಂಗಾರ್ರನ್ನು ಜನರೆಲ್ಲರೂ ವಂದಿಸುವರು, ಈ ಸಂಘವು ಚಿರಕಾಲ ಬಾಳಿ ಅನೇಕ ಗ್ರಾಮಾಂತರದ ಜನರಿಗೆ ಹಿತಕರವಾಗಲೆಂದು ಹಾರೈಸುವೆವು.—ಇಲ್ಲಿನ ಪೋಲೀಸ್ ಜಮಾದಾರ್ ಅನ್ಯರಲ್ಲಿ ಮೇಳರಿಯುವರು ವರ್ಗವಾದದ್ದು ಅನೇಕರಿಗೆ ವಿಷಾದಕರವಾಗಿದೆ. ಇವರು ಪ್ರಜೆಗಳಲ್ಲಿ ಅನುರಾಗವುಳ್ಳವರಾಗಿದ್ದರು. ತಮ್ಮ ಕೆಲಸದಲ್ಲಿ ಕೇವಲ ಚಟುವಟಿಕೆಯನ್ನು ತೋರಿಸುತ್ತಾ ಪ್ರಜಾ ನೆಮ್ಮದಿಯನ್ನು ಕಾಪಾಡುವದರಲ್ಲಿ ಮುಂದಾಳುಗಳಾಗಿದ್ದರು.—ಇಲ್ಲಿನ ಮ್ಯುನಿಸಿಪಾಲಿಟಿಯು ಕೇವಲ ಅತೃಪ್ತಿಕರವಾಗಿದೆ. 3-4 ತಿಂಗಳಿಂದ ಗುಡಿಸಿದ ಕಸದ ರಾಶಿಗಳು ಆ ಬೀದಿಗಳಲ್ಲಿಯೇ ಬಿದ್ದಿರುತ್ತವೆ. ಕೋಟೆಯೊಳಗೆ ದೇವಸ್ಥಾನದ ಪಕ್ಕದಲ್ಲಿ ಚರಂಡಿ ದುರ್ವಾಸನೆ ಸಹಿಸಕೂಡದಂತಿದೆ.

The General Assurance Society, Ltd.,

Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-9]

First Valuation Result:—The total liablities under all Assurances issued up to 31st March 1912, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಗೃಹಕೃತ್ಯದ ನೋಟೀಸು.

ಶ್ರೀರಂಗಪಟ್ಟಣ ತಾ|| ಚಂದಗಾಲ್ ಹೋಬಳಿ ಹುರುಳಿ ಕ್ಯಾತನಹಳ್ಳಿ ಗ್ರಾಮದಲ್ಲಿರುವ ಕುಂಬಾರ ಶಿದ್ಧ ಮೈನರ್ ಗಾರ್ಡಿಯನ್ ಜನಕ ತಂದೆ ಬಸವಶೆಟ್ಟಿಯು ತಿಳಿಸುವುದೇನಂದರೆ—ಮೈನರ್ ಶಿದ್ಧನು ಸದರಿ ಕ್ಯಾತನಹಳ್ಳಿ ಗ್ರಾಮದಲ್ಲಿದ್ದ ಫೌತಿ ಆದ ಕುಂಬಾರ ತಿಪ್ಪಶೆಟ್ಟಿಗೆ ದತ್ತು ಮಗನಾಗಿರುವನು. ಈತನ ಹೆಂಡತಿ ಕಾಳಮ್ಮನು ಜನಗಳ ಪ್ರಚೋದನೆಯಿಂದ ಮೈನರಿಗೆ ಮೋಸಪಡಿಸಬೇಕೆಂಬ ದುರಾಲೋಚನೆಯಿಂದ ಮೈನರ್ ಆಸ್ತಿಯನ್ನು ಪರಾಧೀನ ಮಾಡಲು ಉದ್ಯುಕ್ತಳಾಗಿರುವ ಕಾರಣ ಕೆಳಗೆ ಕಂಡ ಸ್ವತ್ತುಗಳನ್ನು ಆಕೆಯಿಂದ ಯಾರೂ ಆಧಾರ ಭೋಗ್ಯ ಕ್ರಯ ಮುಂತಾದ್ದರ ಮೂಲಕ ಹೊಂದಕೂಡದೆಂದು ಎಚ್ಚರಿಸಿರುತ್ತೇನೆ. ಸ್ವತ್ತುಗಳು—ಶ್ರೀರಂಗಪಟ್ಟಣ ತಾ|| ಚಂದಗಾಲ್ ಹೋ| ಹುರುಳಿ ಕ್ಯಾತನಹಳ್ಳಿ ಗ್ರಾಮದಲ್ಲಿರುವ (೧) ಸರ್ವೆ ನಂ. ೧೦ ನೇ ಮುಸ್ಕಿ ಎಕರೆ ೪-೬ ಕಂದಾಯ ರೂ. ೩-೮; ನಂ. ೯೫ ನೇ ಮುಸ್ಕಿ ಎಕರೆ ೫-೪ ಆಕಾರ ರೂ. ೫-೮; ಈ ೨ ಜಮೀನುಗಳಲ್ಲಿ ಫೌತಿ ತಿಪ್ಪಶೆಟ್ಟಿ ಬಾಬತು ಮೂರನೇ ಒಂದು ಭಾಗ ಜಮೀನು (೨) ಅದೇ ಗ್ರಾಮದಲ್ಲಿ ಪೂ. ಪ. ಕ್ಕೆ ಬೀದಿ, ಪ. ಕ್ಕೆ ಈಡಿಗರ ಓಬೆಗೌಡ್ನ ಮನೆ, ಉ. ಕ್ಕೆ ಕುಂಬಾರ ಬಸವಶೆಟ್ಟಿ ಮನೆ, ಈ ಮಧ್ಯೆ ಇರುವ ೮ ಅಂಕಣ ಹುಲ್ಲು ಮನೆ ಮೈನರ್‌ನ ದತ್ತುತಾಯಿ ಕಾಳಮ್ಮ ವಾಸವಾಗಿರುವದು. (೩) ಅದೇ ಗ್ರಾಮದಲ್ಲಿರುವ ಮೈನರ್ ಬಾಬತು ಹುಲ್ಲು ಹಿತ್ತಲು. [182-2]

ಕುಂಬಾರ ಶಿದ್ಧ ಮೈನರ್ ಗಾರ್ಡಿಯನ್ ಜನಕತಂದೆ ಬಸವಶೆಟ್ಟಿ.

ಬಹು ಬಲಿಷ್ಟವಾದ ವಾಚು ಬಹು ನಾಜೂಕಾದ ವಾಚು

ಬಹು ಸೊಗಸಾದ ವಾಚು ಲೋಕಪ್ರಸಿದ್ಧವಾದ ವಾಚು

(10 ಚಿನ್ನದ ಪದಕಗಳು ಪಡೆದಿರುವ ಲೋಕಪ್ರಸಿದ್ಧವಾದ)

ಜುಮೆಲ್ ಸ್ಪ್ರಿಂಗ್ ಪಾಕೆಟ್ ಜೂಬ್ಲಿ (ರಿಜಿಸ್ಟರ್) ವಾಚು

10 ಬಹುಮಾನಗಳ ಸಮೇತ ಕ್ರಯ ರೂ. 3-4-0 ಮಾತ್ರ

8 ವರುಷ ಗ್ಯಾರಂಟಿ ಸಹ ಕಳುಹಿಸಲ್ಪಡುತ್ತೇವೆ.

ಅಯ್ಯಾ, ಪ್ರಿಯಮಿತ್ರರೇ 10 ಚಿನ್ನದ ಪದಕಗಳು ಬಹುಮಾನವಾಗಿ ಹೊಂದಿರತಕ್ಕ ವಾಚು. ಎಷ್ಟು ಕೆಲಸಮಾಡಿರಬೇಕೋ ಎಂದು ತಾವೇ ಯೋಚಿಸಿನೋಡಿರಿ. ಬಹು ಬಲಿಷ್ಟವಾದ ಯಂತ್ರದಿಂದಲೂ ನಾಜೂಕಾದ ಸಾಮಾನುಗಳಿಂದಲೂ 6 ರತ್ನಗಳುಳ್ಳ ಓಪನ್ ಫೇಸ್ ಕಂಪೆನ್ಸೇಷನ್ ಬಲಿಷ್ಟವಾದ ಲೀವರ್ ಕೆಲಸದಿಂದಲೂ ಕೂಡಿದಾಗಿ ಬಂದಿರುತ್ತ ಬರೀ ಮಾತುಗಳಿಂದಲೇನು? ಒಂದು ಸರಿಸಿ ಪರೀಕ್ಷೆ ಮಾಡಿದರೆ ನಿಮ್ಮ ಮನಸ್ಸಿಗೆ ಗೋಚರವಾಗುತ್ತದೆ.

ಬಹುಮಾನಗಳ ವಿವರ.—ಸರಪಣಿ 1, ಉಂಗುರ 1, ವಾಚ್‌ಪೆಟ್ಟಿಗೆ 1, ಫೌಂಟನ್ ಪೆನ್ ಗೊಂಬೆ 1, ಕಾರ್ಡ್ಕೇಸ್ 1, ಇಮಿಟೇಷನ್ ಗುಂಡಿ ಸೆಟ್ 1, ಸೇಫ್ಟಿ ಪಿನ್ 1, ಕಾರ್ನೇಷನ್ ಕನ್ನಡಿ 1, ಇಂಗ್ಲೀಷು ಬಾಚಣಿಗೆ 1, ಬಳ್ಳಾರು ಚೊಂಬೆ 1.

[200-1] ನಮ್ಮ ವಿಳಾಸ.—ಟಿ. ಸುಂದರ ರಾವ್ ಬ್ರದರ್ಸ್, ನಂ. 27, ಅರುಳಪ್ಪನ್ ಬೀದಿ, ಸಾಹುಕಾರ್ ಪೇಟೆ ಪೋಸ್ಟ್, ಮದರಾಸು.

ತಿಗಣೆಯ ಔಷಧ.

ಅನೇಕ ಜನಗಳು ಪರೀಕ್ಷಿಸಿ ನೋಡಿದ್ದಾಗಿದೆ.

ಹೊಸದಾಗಿ ಕಂಡುಹಿಡಿದಿರತಕ್ಕ ಈ ಔಷಧವು ಸುಲಭ ಕ್ರಯಕ್ಕೆ ಸಿಕ್ಕುತ್ತದೆ. ಉಪಯೋಗಿಸತಕ್ಕ ಕ್ರಮ:—ಒಂದು ಸೇರು ಸುಣ್ಣವನ್ನು ಸುಟ್ಟು ಅದಕ್ಕೆ ½ ತೋಲಾ ನಮ್ಮ ಪುಡಿಯನ್ನು ಮಿಶ್ರಮಾಡಿ ಗೋಡೆಗೆ ಹಚ್ಚಿದರೆ ತಿಗಣೆಗಳೆಲ್ಲಾ ಸಂಪೂರ್ಣವಾಗಿ ನಾಶಹೊಂದುವವು. ಈ ನಮ್ಮ ಪುಡಿಯು ಖಂಡಿತವಾಗಿಯೂ ಗುಣಕಾರಿಯಾಗಿದೆ ಪೌಂಡು 1 ಕ್ಕೆ ರೂ. 2-3-0; ಪೋಸ್ಟೇಜು ಬೇರೆ. ಪರೀಕ್ಷಿಸಿ ನೋಡಿ. 1 ತೋಲಾ ಪೊಟ್ಟಣಕ್ಕೆ 1 ಆಣೆ. [187-2]

ಪರ್ಷನಾರ ಅಂಗಡಿ ಸಿದ್ಧಪ್ಪ ಬಿನ್ ಶಿಟ್ಟಪ್ಪ, ಹಳೇ ಅಗ್ರಹಾರ, ಮೈಸೂರು.

ಸೋಲಾಪುರದ ಜುನಿ ಮಿಲ್ಲಿನ ಜವಳಿಗಳು

ಮತ್ತು ಹಸನಾದ ಹತ್ತಿಯ ತುಪ್ಪ (ಎಣ್ಣೆ).

ಬಾಳ್ತು ರಮಾಂಪಾರು ಸೋಲಾಪುರದ ಜುನಿ ಮಿಲ್ಲಿನ ಚಕ್ಕಗಳು, ಸೀರೆಗಳು, ಶಿರಗಗಳು, ಹಸನಾದ ಹೊದಿಯುವ ಅರು ಮೊಳದ ಪಂಚೆಗಳು ಮತ್ತು ಸುಪೀರಿಯರ್ ಕೋರಾ ಮಲ್ಲುಗಳು ಸರಿಯಾದ ಖರೀದಿಗೆ ಬೇಲುಗಟ್ಟಲೆ ಒಟ್ಟಾಗಿಯೂ ಚಿಲ್ಲರೆಯಾಗಿಯೂ ನಮ್ಮಲ್ಲಿ ದೊರೆಯುತ್ತವೆ.

ನಮ್ಮಲ್ಲಿರುವ ಹಸನಾದ ಹತ್ತಿಯ ತುಪ್ಪವನ್ನು ಒಟ್ಟಾಗಿ ತರಿಸಿಕೊಳ್ಳುವವರಿಗೆ ತುಂಬಾ ಫಾಯಿದೆಯಾಗಿ ಕೊಡುತ್ತೇವೆ

ಅಲ್ಲದೆ ನಮ್ಮಲ್ಲಿ ಸೇರು 1 ಕ್ಕೆ ಒಂದು ರೂಪಾಯಿ ಬೆಂಗಳೂರು ತೋಲ 1 ಕ್ಕೆ ರೂ. 1-0-0 ರ ವರಿಗೂ ಹಸನಾದ ಊದುಬತ್ತಿಗಳು ದೊರೆಯುತ್ತವೆ.

ವಿಳಾಸ—ಜಿ. ಎಸ್. ಶ್ರೀಕಂಠಯ್ಯ ಅಂಡ್ ಕೊ,

[199-1] ದೊಡ್ಡಪೇಟೆ, ಮೈಸೂರು.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೋ ಟಾನಿಕ್ ಪಿಲ್ಸ್ ಎಂಬುವ

ವಿದ್ಯುಚ್ಛಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸಮಾಡುವಂಥ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕ್ಷಯರೋಗ, ಎಳವು, (ಹಿಸ್ಟೀರಿಯಾ,) ಧಾರುದೌರ್ಬಲ್ಯವು, ಮಂದಾಗ್ನಿ, ಕೆಟ್ಟ ರಕ್ತ, ತಲೆ ತಿರುಗುವಿಕೆ ಶಕ್ತಿಹೀನತೆ, ಸ್ತ್ರೀ ಗರ್ಭ ವಿಕಾರಗಳು, ಅಕಾಲದ ಮೃತ್ಯು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಕೀಲುಗಳ ನೋವು, ಈ ಮೇಲೆ ಹೇಳಿರುವ ವ್ಯಾಧಿಯು ಆರಂಭಿಸುತ್ತಲೇ ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟವನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುಚ್ಛಕ್ತಿಯ ವಾಜೀಕರಣ ಮಾತ್ರೆಗಳನ್ನು ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳು ನೀವು ಉಪಯೋಗಿಸಿದ ದಿನ ಮೊದಲ್ಗೊಂಡು ಮನೋಲ್ಲಾಸವನ್ನು ಕೊಡುತ್ತವೆ 40 ಮಾತ್ರೆಗಳುಳ್ಳ ಸೀಸೆ 1 ಕ್ಕೆ ರೂ. 2-0-0; ಟಿ ಪಿ ಸೀಸೆ 1 ಕ್ಕೆ 0-4-0.

[139-10] ನಮ್ಮ ವಿಳಾಸ:—ದಿ ಊರ್ಲ್ ವಾರ್ಟ್ಸ್, ನಂ. 1, ಮಂಗಳೂರು.

ಕುಂತಳಾನಂದ ತೈಲವು.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ಸಿಪ್ಪೆ(ಹೊಟ್ಟು)ಭಂಗವನ್ನು, ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟ್ಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ. [213-53]

ನಮ್ಮ ವಿಳಾಸ:—ಬಿ. [illegible]ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ಬೆಲೆ ಬಹಳ ಕಡಿಮೆ ಬೆಲೆ ಬಹಳ ಕಡಿಮೆ

ಸೊಗಸಾದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನಲ್ಲಿ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಒಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವುದಕ್ಕೆ ಚಿಕ್ಕವಾದ ಗುಂಡುಗಳುಳ್ಳ ಡಾಬುಗಳಂತೆ ಮುಂಭಾಗದಲ್ಲಿ ಕೊಣಿಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟಪಡೀರುವದಿಲ್ಲ. ಸೀಟಿಕ್ಕೆ ಒಂದೇ ತುಂಡಾಗಿಯೇ ಇರುವದು. ಇದರ ಕೆಲಸದ ನಾಜೂಕು ಬರವಣಿಗೆಯಿಂದ ತಿಳಿಯಬರದು. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ ಒಂದು ಸಲ ಒಬ್ಬರು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸು ಮಾಡುವರು.

ಭಂಗಾರದ ಗಿಲೀಟಿನ ಗೆಜ್ಜೆಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0.

ವಿಳಾಸ.—ರಾಸ್ ವಾಚ್ ಅಂಡು ಕಂಪನಿ,

[149-6] 3, ಇರುಳಪ್ಪನ ಬೀದಿ, ಮದರಾಸು.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ಏಷ್ಯಾಖಂಡದ ಭೂವಿವರಣೆ 0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ 0-6-0
   ಮೇಲೆ ಕಂಡ ಎರಡೂ ಸೇರಿ 0-10-0
3. ಯೂರೊಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ|| ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಶೇಕ್ಸ್ಪಿಯರ್ (?) ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[31-32] ಸುಬೋಧ ಗ್ರಂಥಾಲಯ, ಮೈಸೂರು.

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-44]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈ ಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಕಾಗದದಲ್ಲಿ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯದೆ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಜನಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಹೋಗುವವರೆಗೂ ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ಕಳೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ವೈಭವಣಿ 1, ಕಾಂಬಿನಲವಾತ್ರ 40, ದಂತದ ಬಾಚಣಿಗೆ 1, ಸೊಗಸಾದ ರಾಣಿ ಕಾರ್ನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಒಟ್ಟು 60. ನಮ್ಮ ಕಂಪನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಹಾಣಿ ಕಂಪನಿ,

[149-9] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅಸ್ಸಲ್ ರವಿಂ ರೂ. 3-0-0.
ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆ ಯನ್ನು ಪ್ರತಿ ಸೀರೆಗೂ ಬಹುಮಾನವಾಗಿ ಕೊಡುತ್ತೇವೆ.



ಅದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ ಉಂಡದಸೂದ ಸೀರೆ ಗ ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಪಿ. ಕೆ. ಕಂದಸಾಮಿ

[111-17] ಅಂಡ್ ಕಂಪನಿ, 21 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಆರೋಗ್ಯವಿದ್ದರ್ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ, ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರಿಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಿಟ್ಟಹರಳೆಣ್ಣೆಯಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವನ್ನು ಉಪಯೋಗಿಸಿ ನೋಡಿ. ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕುರಿ, ಕ್ಷಯ, ಗರ್ಭವಟ್ಟೆ, ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-46]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಅರ್ಧ ಕ್ರಯ: ಒಂದು ತಿಂಗಳು ಮಾತ್ರ!

ನಮ್ಮ "ಸ್ಯಾಟಿಸ್‌ಫ್ಯಾಕ್ಷನ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹವೆಗಳಿಗೂ ಎಲ್ಲಾ ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ನಮ್ಮ



ತನಾಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 60; ಈಗಿನ ಕ್ರಯ ರೂ. 19, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.

ವಿಳಾಸ—National Harmonium Co.,

[170-5] SIMLA P.O., (E) CALCUTTA.

ಸ್ತ್ರೀಯರ ಘೋಷಣಾವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ನಾಂಛಿಸಲೊಲ್ಲಳು? ಅಂತಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯವ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೊಡೆಯಿಸೊದರಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅವರ ಅತಿ ವೇಗವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಶೀಲುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ಕಳೆಯಸ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಪ್ರಮಾಣಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗುಡಿ, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲಕ್ಕೆ ಕೂದಲನ್ನು ಬೆಳೆಯಿಸುವದರಲ್ಲಿ ಸರ್ವೋತ್ಕೃಷ್ಟವಾದದೆಂದು ಸಾಧನವಾಗಿರುತ್ತದೆ. ಸೈಯಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ಪ್ಯಾರ್ಸೆಲ್ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬೀನಶರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಯಿಂದ ತಮಗೆ ಅಷ್ಟಲ್ಲ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವುಳ್ಳದ್ದು ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ನೋಟ ನಿಗೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ, ಮಹಮುಬಾನ್ ವಾಸಿಸದ ಸಂಜ್ಞೆ ದ ಟಕಸ ಬಿಳಿಯಲ್ಲಿ ಇಲುಕಿಯೂ ಬೇಸದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮ. ಹೆಸ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತೆಗೆದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ವಾಸನೆಯು ಆವರಿಸಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧ ಹೇಗೇ ಇರಲಿ, ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-35]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾಡುಗಗಳ ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಏಜೆಂಟ್ಸ್—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ೮ ಕ್ಲಬ್ ಮಾರ್ಕೆಟ್, ಬೆಂಗಳೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

(ರಿಜಿಸ್ಟರ್ಡ್)

ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [25-34]

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಡಬ್ಬಿಗೆ 1 ಕ್ಕೆ 1 ರೂ.
85 ,, ,, ,, 4 ,,	300 ,, ಟಿನ್ ,, 9 ,,		1200 ,, ,, ,, 2 ,,

1. ರಖಾವಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತ್ರಾನ್ ಡಿಪೋ, ಬೊಂಬಾಯಿ.

ಮೈಸೂರು ಸೀಮೆಗೆ ಏಜೆಂಟರು—ಮ|| ಎಂ. ರಾಮಸಂಜೀವ ಶೆಟ್ಟರು, ಚೆನ್ನಪಟ್ಟಣ.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ESANOFELE

ಮಲೇರಿಯಾ ಜ್ವರವನ್ನು ನಾಶಮಾಡಬೇಕೆಂಬುವರೆಲ್ಲಾ "ಈಸಾನೊಫೆಲಿ" ಯನ್ನು ಉಪಯೋಗಿಸಿ ಜಯಧ್ವನಿ ಮಾಡುತ್ತಿದಾರೆ. ಇದು ವಾಸಿಮಾಡುವುದರಲ್ಲೂ, ಜ್ವರವನ್ನು ಬಾರದಂತೆ ಸಂರಕ್ಷಿಸುವುದರಲ್ಲೂ ಚೆನ್ನಾಗಿ ಪ್ರಖ್ಯಾತಿಪಡೆದಿದೆ. ಕ್ರಯ ಬಾಟ್ಲಿ 1 ಕ್ಕೆ ರೂ. 2-0-0. ಎಲ್ಲಾ ಔಷಧ ಸಾಪುಗಳಲ್ಲೂ ದೊರೆಯುತ್ತೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಹುಡುಗರಿಗಾಗಲಿ, ಹುಡುಗಿಯರಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸೀರಿಸೋಪಾದಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ. ಮಲೇರಿಯಾವಿಗೆ ನಿರ್ಬಾಧಕವಾದ, ನಂಬಿಕೆಯುಳ್ಳ, ಬೇಗ ಗುಣ ಕೊಡುವ ಔಷಧ. ಇದು ಇನ್ನೂ ಎಲ್ಲಾ ಜಾತಿಯ ಜ್ವರಗಳಿಗೂ ಬಾತಕಿಯಾದ ಔಷಧ. [176-1]

ಮೈಸೂರು ಸಂಸ್ಥಾನದ ಏಜಂಟರು :—
ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ—
ಬಿ. ಜಿ. ಗೋರಿಯೋ ಕಂಪನಿ, ಪಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—
ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ರಸವಾದ ಕೈಪಿಡಿ

ಸಚಿತ್ರ

NOTES ON AYURVEDIC CHEMISTRY (ILLUSTRATED)

ವೈದ್ಯರಿಗೂ ವಾದಿಗಳಿಗೂ ರಸಿಕರಿಗೂ ಅದ್ಭುತವಾದದ್ದು.

ವೈದ್ಯಸಿಂಧು ಗ್ರಂಥಮಾಲೆ

ನಂಬರ್ 6.

ವೈದ್ಯರಿಗೂ ವಾದಕಾರರಿಗೂ ಅತ್ಯುಪಯೋಗವಾದ ಈ ಪುಸ್ತಕವನ್ನು ರಚಿಸಿ ಪ್ರಕಟಿಸಿತು. ಇದರ ಪ್ರಕಾಶನಾಕ್ರಮ ಉಪಯೋಗಗಳು ಇರುವವರೂ ಕರ್ನಾಟಕ ಶೀಲಿಯಲ್ಲಿ ... ಇದರ ಉಪಯೋಗವು ವೈದ್ಯಸಿಂಧುವಿನ ವಾಚಕರಿಗೂ, ವಾಚಕೇತರರಿಗೂ ಲಭಿಸುವಂತೆ ಕೆಲವು ಪುಸ್ತಕಗಳನ್ನು ಮಾತ್ರ ಹೆಚ್ಚಾಗಿ ಪ್ರಿಂಟ್ ಮಾಡಿಸಿದ್ದಾಗ್ಯೂ ಈ ಹೆಚ್ಚು ಪ್ರತಿಗಳು ಪುಸ್ತಕ ಬೈಂಡಿಗೆ ಬರುವದರೊಳಗಾಗಿ ಮುಗಿದವು. ಸರಳ ಕನ್ನಡ ಕೈಪಿಡಿಯಲ್ಲಿ ಬರೆಯಲ್ಪಟ್ಟು ಅವಶ್ಯಕವಾದ ಸ್ಥಳಗಳಲ್ಲಿ ಚಿತ್ರಗಳನ್ನು ಕೊಟ್ಟಿರುವದು. ಇತರ ಗ್ರಂಥಗಳಂತೆ ಇದು ಸಹಾ ಪ್ರಸಿದ್ಧವಾದ ಕ್ಯಾಕ್ಸ್‌ಟನ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿದೆ. ವೈದ್ಯಸಿಂಧು ವಾಚಕರಿಗೆ ತಿಳಿಸುವ ಉದ್ದೇಶದಿಂದ ಇದರಲ್ಲಿ ಅಡಗಿರುವ ಕೆಲವು ವಿಷಯಗಳನ್ನು ತಿಳಿಸುವದು ಯುಕ್ತವೆಂದು ಭಾವಿಸಿ ಪ್ರಕಟಿಸಿದೆ.

ಸಚಿತ್ರಗಳು ಪದಾರ್ಥಗಳಲ್ಲಿ ಪರಸ್ಪರ ಶತ್ರುವರ್ಗ (incompatibles) ಮಿತ್ರವರ್ಗ (compatibles) ಪುಟಗಳು ಇವುಗಳ ಭೇದಗಳ ವರ್ಣನೆ ಸಹಾ ಮಹಾಪುಟ, ಗಜಪುಟ, ವರಾಹಪುಟ, ಕುಕ್ಕುಟಪುಟ, ಕಪೋತಪುಟ, ಗೋವರಪುಟ, ಭಾಂಡಪುಟ, ಯಂತ್ರಗಳ ಭೇದಗಳು, ವರ್ಣನೆ ಭೂಧರಯಂತ್ರ, ಪಾತಾಳಯಂತ್ರ, ವಾಲುಕಾಯಂತ್ರ, ತಿರ್ಯಕ್ಪಾತನಯಂತ್ರ, ವಿದ್ಯಾಧರಯಂತ್ರ, ದೋಳಯಂತ್ರ, ಡಮರುಯಂತ್ರ, ಕೋಷ್ಠಿಯಂತ್ರ, ನಾಳಿಕಾಯಂತ್ರ, ... ಯಂತ್ರ, ಕಚ್ಛಪಯಂತ್ರ, ಅಂಧಮೂಷಯಂತ್ರ, ಧಾತುಗಳು, ಉಪಧಾತುಗಳು, ರಸ, ಉಪರಸ ವಿಷ, ಉಪವಿಷ, ರತ್ನ ಉಪರತ್ನ ಓಷಧಿಗಳು, (ಚಿನ್ನ, ಬೆಳ್ಳಿ, ತಾಮ್ರ, ಕಂಚು, ಕಬ್ಬಿಣ, ಕಾಂತ, ವಂಗ, ನಾಗ, ಸುವರ್ಣಮಾಕ್ಷಿಕ, ತಾರಮಾಕ್ಷಿಕ, ತಾಳಕ, ಮನಶಿಲೆ, ಸ್ರೋತ್ರಾಂಜನ, ತುತ್ಥ, ಪಾದರಸ, ಇಂಗಲೀಕ, ವಜ್ರ, ವೈಕ್ರಾಂತ, ಮಾಣಿಕ್ಯ, ಮುತ್ತು, ಹವಳ, ಪಚ್ಚೆ, ಪುಷ್ಯರಾಗ, ವಜ್ರ, ನೀಲ, ಗೋಮೇಧಿಕ, ವೈಢೂರ್ಯ, ಸಮುದ್ರಫೇನ, ಗೈರಿಕ, ಶಂಖ, ಟಂಕಣ, ನವಸಾಗರಗಳು, ಲಾಂಗಲಿ, ಗುಂಜಿ, ವಿಷಮುಷ್ಟಿ ಬೀಜ, ಉಮ್ಮತ್ತಿಯಬೀಜ, ಅಫೀಮು, ಬೀಶಾಳಿ) ಇವು ಪ್ರತಿಯೊಂದಕ್ಕೂ ಬೇರೆ ಬೇರೆ ಶುದ್ಧಿಕ್ರಮ, ಶುದ್ಧಿ ಮಾಡಿದ ಪದಾರ್ಥಗಳ ದೋಷ, ಇವುಗಳ ಭಸ್ಮ ಮಾಡುವಕ್ರಮ ಇವು ವಿಶದವಾಗಿ ವಿವರಿಸಲ್ಪಟ್ಟಿವೆ. ಅಲ್ಲದೆ ಮುಂದೆ ಹೇಳುವ ಪ್ರತಿಯೊಂದು ಪದಾರ್ಥದ ಉತ್ಪತ್ತಿಕ್ರಮ ಗುಣದಾರ ಭೇದಗಳು, ಶುದ್ಧಿ ಜಾರಣ ಮಾರಣ ಭಸ್ಮ ಮಾಡಲು ತಯಾರು ಮಾಡಿಕೊಂಡು ಪುಟಕೊಟ್ಟು ಭಸ್ಮ ಮಾಡುವಕ್ರಮ, ಇವುಗಳಲ್ಲಾ ಸಂಪೂರ್ಣವಾಗಿ ವಿವರಿಸಲ್ಪಟ್ಟಿವೆ. ಅನ್ನಭೇದಿ, ಅಂಜನ, ಅರದಾಳ, ಅಭ್ರಕ, ಇಂಗಲೀಕ, ಉಪ್ಪು, ಉಕ್ಕು, ಎಕ್ಕದಬೇರು, ಕಂಚು, ಕಪಿಲ, ಕಪ್ಪೆಚಿಪ್ಪು, ಕಬ್ಬಿಣ ಕಿಟ್ಟ, ಕಲ್ಲುಸಕ್ಕರೆ, ಕವಡೆ, ಕಾಡಿಕ್ಕಾರ, ಕಾಂತಲೋಹ, ಕಾರೆಹಣ್ಣು, ಗಂಧಕ, ಗೃಹಧೂಮ, ಗೇರು, ಗೋಪಿಚಂದನ, ಗೌರೀಪಾಷಾಣ, ಚಂದ್ರ, ಚೌಳುಪ್ಪು, ಜವಖಾರ, ತಗರ, ತಾಮ್ರ, ತವರಾಸಾಗರ, ತಾಳಕ, ಪಾದರಸ, (ವಿಶೇಷವಾಗಿ ಮರ್ದನ, ಕಂಚುಕ, ನಿರ್ಮಲ, ಉತ್ಥಾಪನ, ಊರ್ಧ್ವಪಥನ, ಅಧಃಪಾತನ, ತಿರ್ಯಕ್ಪಾತನ, ಬೋಧನ, ನಿಯಮನ, ಸಂದೀಪನ, ಅನುವಾಸ, ಮುಖೋತ್ಪತ್ತಿ, ಜಾರಣ, ಸಿಂಧೂರಾದಿ ಜಾರಣ, ಸಮಗುಣ, ಗಂಧಕಜಾರಣ, ದ್ವಿಗುಣ ಗಂಧಕಜಾರಣ, ತ್ರಿಗುಣ ಗಂಧಕಜಾರಣ, ಚತುರ್ಗುಣ ಗಂಧಕಜಾರಣ, ಪಂಚಗುಣ ಗಂಧಕಜಾರಣ, ಷಡ್ಗುಣ ಗಂಧಕಜಾರಣ, ವಡಬಾನಲಬೀಜಬಂಧನ, ಬೀಜಾರೋಪಣ, ಅನ್ನಪುಟಬಂಧ, ಅನ್ನವಾರದ ಬಂಧನ, ಪಾರದಕಟ್ಟು ಇದು ಕಟ್ಟುಗುವ ಸೇರುವವಲ್ಲಿ, ಹಲ್ಲಿನ, ಅಂತಗೇ ಮೊದಲಾದ 64 ಬಗೆಗಳ ವರ್ಣನೆ ಭಸ್ಮ ಯೋಗ ಸಹಾ) ಪಾದರಸ, ಪಾಣಿಕೋಳ, ಪಾಷಾಣಭೇದ, ಪೆಟ್ಲುಪ್ಪು, ಭಂಗಾರ, ಜಾಡಾಲವಣ, ಬೆಳಗಾರ, ಮನಶಿಲೆ, ಮರ್ದಾರ, ಮುತ್ತು, ಮುತ್ತುಚಿಪ್ಪು, ಮುತ್ತು ಮುಡದಾರಸಿಂಗಿ, ಮುರ್ದಾಶಿಂಗ್ ಮಣ್ಣು, ಮೈಲುತುತ್ಥ, ರಸಕರ್ಪೂರ, ರೌಪ್ಯ, ರೌಪ್ಯ ಮಾಕ್ಷಿಕ, ಲೋಹಚುಂಬಕ, ಲೋಹಭಸ್ಮ, ವಜ್ರ, ವಜ್ರಾಭ್ರ, ಶಂಖ, ಶಂಖಪಾಷಾಣ, ಶೀಸ, ಸಂಗಜೀರಿಗೆ, ಸಜ್ಜೆಖಾರ, ಸತುವು, ಸಾಂಬರಲವಣ, ಸೀಮೆಸುಣ್ಣ, ಸುಣ್ಣ, ಸುವರ್ಣಮಾಕ್ಷಿಕ, ಸೌರಾಷ್ಟ್ರಿಕೆ, ಸ್ಫಟಿಕ, ಸೈಂಧವಲವಣ, ಹಪ್ಪಳಖಾರ, ಹವಳ, ಹಿತ್ತಾಳೆ, ಇವೆಲ್ಲಾ ವಿವರಿಸಲ್ಪಟ್ಟಿವೆ. ಅಲ್ಲದೆ ಈ ಭಸ್ಮಗಳಲ್ಲಿ ಪ್ರತಿಯೊಂದರ ಅನುಪಾನ ಭೇದದಿಂದ ಗುಣಪಾಠಗಳಲ್ಲ ಅನೇಕ ವಿಧವಾದ ರೋಗಗಳಿಗೂ ಬರೆಯಲ್ಪಟ್ಟು ಸಂಪೂರ್ಣ ಚಿಕಿತ್ಸಾನುಕೂಲವಾಗಿರುತ್ತೆ.

ಸುವರ್ಣರಜತವಾದ ಪ್ರತಿಪಾದ್ಯವಾದ ಧಾತುರತ್ನವಾಲಾ ಸಂಗ್ರಹ ಇದರಲ್ಲಿ 16-18-20-22 ಬಣ್ಣಗಳ ಬಂಗಾರ ಬೆಳ್ಳಿಯನ್ನು ತಯಾರಿಸುವ ಕ್ರಮಗಳು ಸಂಸ್ಕೃತ ಮೂಲ ಕನ್ನಡ ತಾತ್ಪರ್ಯಸಹಿತ ಇರುತ್ತೆ. ಆಯುರ್ವೇದಗ್ರಂಥಗಳ ಸಾರವಾದ ಸಹಾ ಒಟ್ಟು ಬೈಂಡಾದ 220 ಪುಟಗಳ ದೊಡ್ಡ ಪುಸ್ತಕ 1 ಕ್ಕೆ ಕ್ರಯ 12 ಆಣೆ ಮಾತ್ರ, ವಿ.ಪಿ. ಮೂಲಕ ರೂ. 1-0-0.

ವಾಚಕರು ದಿನವೂ ಖರ್ಚಾಗುತ್ತಿರುವದು ಅದ್ದರಿಂದ ತಕ್ಷಣವೇ ಬರೆದು ತರಿಸಿಕೊಳ್ಳಿರಿ. ತ್ವರೆಮಾಡಿರಿ! ಅಲಕ್ಷ್ಯಮಾಡಿದರೆ ಇಷ್ಟು ದೊಡ್ಡ ಪುಸ್ತಕವನ್ನು ಪುನಹ ಮುದ್ರಿಸಲು ಬಹಳ ಕಾಲ ಹಿಡಿಯುವದು.

' ವೈದ್ಯಸಿಂಧು ಆಫೀಸಿನಲ್ಲೂ, ಬೆಂಗಳೂರಿನ ಎಲ್ಲಾ ಬುಕ್ ಡಿಪೋಗಳಲ್ಲಿಯೂ ದೊರೆಯುವುದು.

ಧನ್ವಂತರೀ ಶಿಕ್ಷಾಪದ್ಧತಿ.

ಸಮಸ್ತ ವೈದ್ಯ ವಿದ್ಯಾರ್ಥಿಗಳ ಮತ್ತು ವೈದ್ಯರ ಉಪಯೋಗಕ್ಕಾಗಿ ರಚಿಸಲ್ಪಟ್ಟಿದೆ. ವೈದ್ಯ ಧರ್ಮಾಚರಣೆಗಳ, ಕರ್ಮವಿಪಾಕ, ವೇದ, ಉಪವೇದ, ಅಷ್ಟೋತ್ತರ ರಕೋಪನಿಷತ್ತುಗಳು, 6 ಶಾಸ್ತ್ರಗಳು, 64 ವಿದ್ಯೆಗಳು, 18 ಪುರಾಣಗಳು, 137 ವ್ರತಗಳು, ಅಶ್ವಯಾನ ಗಣಿತಕ್ರಮ, 12 ಸಂಕ್ರಮಣ, 27 ನಕ್ಷತ್ರ, 60 ಸಂವತ್ಸರ, 14 ಮನುಗಳು, 14 ಲೋಕಗಳು, 16 ಉಪಚಾರಗಳು, ವೈದ್ಯ ಕೋಷ್ಟಕಗಳು (weights and measures), ವೈದ್ಯ ಪರಿಭಾಷಾ, ಕರಿಂ ಕರಿಭಾಷಾ, ಕರ್ನಾಟಕ ಪರಿಭಾಷಾ, ಔಷಧಗಳ ತೂಕ, ಧಾರ್ಮಿಕ ತೂಕಗಳು, ಮುಂಬಯಿ ಪರಿಭಾಷಾ, ಮದರಾಸು, ಅಂಗ್ಲ ಪರಿಭಾಷಾ ಮೊದಲಾದ ಎಲ್ಲಾ ಕೋಷ್ಟಕಗಳು.

ಕ್ರಯ ಒಂದು ಆಣೆ ಮಾತ್ರ.

[193-1] ವಿಳಾಸ—ವೈದ್ಯಸಿಂಧು ಆಫೀಸ್, ಬೆಂಗಳೂರು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ|| ಎಂ. ಎಸ್. ಕೃಷ್ಣ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ಸಂಜೀವಯ್ಯನವರು ಅಥವಾ ಮ|| ವೆಂಕಟೇಶಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-50] ಬ್ರಾಂಚ್ ಸೆಕ್ರೆಟರಿ, ಮದರಾಸ್

ಮೋಸಹೋಗುವೆವೆಂಬ ಭಯವಿಲ್ಲ.

"ನಾನು ಬಾಂಬೆಯಿಂದ ಬರೆದು ತರಿಸಿದವೇಸಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ನೋಡಲಿಕ್ಕೆ ಬಹಳ ಚನ್ನಾಗಿಯೂ ಮತ್ತು ಮಾಡುವಿಕೆಯೂ ಬಹಳ ದಿನ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಶ್ಚಿಮ-ಅಹ-ಸಿಟಿಬನ, 20-2-16.

ಅರ್ಧಬೆಲೆ ಮಾತ್ರ.

ಗಿರಾಕಿದಾರರ ನಮ್ಮ ಮಾನವಂತ ಗರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿನಗಳಿಗೊಂದು ಸಲ ಕೀ ಕೊಡಬಲ್ಲವುದ ನಿಕ್ಕಲ್ ಲೀವರ್ ಗಡಿಯಾರವು ಮಾಮೂಲಾಗಿಯೂ ಬಹಳ ದಿನ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟರೆ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ದೊಡ್ಡ ಬೆಲೆ ರೂ. 16-0-0. ಅನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0 ಗ್ಯಾರಂಟಿ 10 ವರ್ಷಗಳು. ಕಡಿಮೆ ಆರ್ಡರ್‌ನ್ನು ಇಂಗ್ಲೀಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266-43] ಪಿ. ಒ. ಬಾಕ್ಸ್ 330, ಬೊಂಬಾಯಿ.

ಹರಿವಾತದಿಂದ ಹಿಂಸೆ ಪಡಬೇಡಿ.

ನೀವು ಹಿಂಸೆಪಡಬೇಕಾದದ್ದು ಇಲ್ಲವೇ ಇಲ್ಲ. ಹಿಂದುಗಳು ಅನೇಕ ಔಷಧಗಳನ್ನು ಉಪಯೋಗಿಸಿದ್ದೀರಿ. ಆದರೂ ಕಣಕನೋವ ನ್ನಾದರೂ ಹೋಗಿಸುವ ಔಷಧಿಯುಂಟು.

ಸೌಂದರ್ಯ ಸಂಸ್ಥಾನದ ಸೇಂಟ್ ಹಿಲಿಯಸ್ಸಿನ ಮಿ|| ಸಾಮುಯೆಲ್ ಹಾಲ್ಸ್ ಹೇಳುವದೇನೆಂದರೆ:—ನಾನು ಹರಿವಾತದಿಂದ ಅಧಿಕ ಕಷ್ಟ ಪಟ್ಟೆನು. ನನ್ನ ಗೋಳನ್ನು ಯಾರೂ ನೋಡಕೂಡದಿತ್ತು. ಕಣ್ಣು ತೆರೆದು ನೋಡಲೂ ದಸ್ಸು ಕಷ್ಟವಾಗಿತ್ತು. ನನ್ನ ಕಣ ತಲೆ ಮುಖದಲ್ಲಿಯೂ ತಲೆಯ ಪಕ್ಕಗಳಲ್ಲಿಯೂ ಒಂದಿಷ್ಟು ತೈಲವನ್ನು ತಿಕ್ಕಿದ್ದರಮೇಲೆ 7 ನಿಮಿಷಗಳಲ್ಲಿ ನೋವಿನಿಂದ ಬಿಡುಗಡೆ ಹೊಂದಿದೆನು. ಮೂರು ವಾರಗಳ ತರುವಾಯ ಆ ನೋವು ತಿರುಗಿ ಕಾಣಿಸಲೇ ಇಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಅರ್ಧ ಸೀಸೆ ಉಪಯೋಗಿಸಿ, ಪೂರ್ಣ ಕ್ಷೇಮ ಹೊಂದಿದೆನು.

ಸೀಸೆ 1ಕ್ಕೆ 1 ರೂ. ಮೇಲಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[81-21]

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳು, ಗಂಜಿಗಳು, ದರಗಳು ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[188-2] GIRLS' INDUSTRIAL SCHOOL, HASSAN.

ಸಂತೋಷಕರವಾದ ಪ್ರಕಟನೆ!

ಸಂತೋಷಕರವಾದ ವಾರ್ತೆ !! ಸಂತೋಷಕರವಾದ ಬಹುಮಾನ!!

ಸುಂದರವಾದ ಜುವೆಲ್ಲ್ಡ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

9 ಬಹುಮಾನಗಳ ಸಹಿತ ರೂ. 2-12-0 ಮಾತ್ರ.

6 ವರ್ಷದ ಗ್ಯಾರಂಟಿ.

ಅಯ್ಯಾ ಮಿತ್ರರೆ, ಈ ಪತ್ರಿಕೆಯಲ್ಲಿ ತೋರಿಸಿರುವ ಛಾಯಾ ಕ್ರಿಯದ ಈ ಯಾವ ಕಾಲ ನೀಡುಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ.

ಈ ಕಂಪನೀಸ್‌ನ ಬಲಿಷ್ಠವಾದ ಸಾಮಾನುಗಳೂ, ಸಾಮಾನ್ಯವಾದ ಯಂತ್ರದಲ್ಲಿಯೂ ಕೂಡ ರಿಪೇರಿಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿ ಅಧಿಕ್ಯಗಳಿರುವ ಬ್ಯಾಂಕಿನಲ್ಲಿ ಇಟ್ಟು ದೊರೆಗಳು ಕೊಂಡುಕೊಳ್ಳುತ್ತಾ ಇದಾರೆ. ಅದು ನೋಡುವುದಕ್ಕೆ ಮುಚ್ಚಟವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ಸಾವಿರಾರು ಗಡಿಯಾರಗಳು ಖರ್ಚಾಗುತ್ತಾ ಇವೆ. ಭಾರಿ ಕ್ರಯದ ಬಹುಮಾನಗಳನ್ನು ಕಾಣಿಕೆರುತ್ತೇವೆ. ಅನ್ನು ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಿರಿ. ಬಹುಮಾನ ಕಡಲೆಯು—(1) ಸುಂದರವಾದ ಸರಪಣಿ, (2) ಕಂಪಾಸ್, (3) ಚಾಕು ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಪರಿಮಳ ಸುವಾಸನೆ ಸೆಂಟ್, (7) ಕೈ ಗುಂಡಿಗಳು, (8) ರೇಶ್ಮೆ ಕೆಲಸ ಮಾಡಿದ ವಸ್ತ್ರ (9) ಗಿಲೀಟು ಬಟನ್.

ನಮ್ಮ ವಿಳಾಸ:— [149-6]

ಧೈರ್ಯಲಕ್ಷ್ಮಿ ಅಂಡು ಕಂಪೆನಿ, ಜನರಲ್ ಮರ್ಚೆಂಟ್ಸ್, 3, ಐರುಕಪ್ಪನ ಪೇಟೆ, ಸಾಹುಕಾರ್ ಪೇಟೆ, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

3 ..9—1915 ರಿಂದ 10—9 - 1915 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	0	0	0
ಬೆಂಗಳೂರು ಡಿಸ್ಟ್ರಿಕ್ಟು	30	17	0	0
ಮೈಸೂರು ,,	17	8	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	11	4	0	0
ಚಿತ್ರದುರ್ಗ ,,	4	4	0	0
ಕಡೂರ್ ,,	11	4	0	0
ಶಿವಮೊಗ್ಗ ,,	11	4	0	0
ಜುಮ್ಲಾ......	85	41	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರ ದಕ್ಷಿಣಾಯನ ವರ್ಷ ಋತು ಭಾದ್ರಪದ ಬಹುಳ ಪಾಡ್ಯಮಿ ಶುಕ್ರವಾರದಿಂದ ಭಾದ್ರಪದ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಸೆಪ್ಟಂಬರ್.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾ ಮಾಸ ದಿನ
24	ಶುಕ್ರ *	ಪಾಡ್ಯಮಿ	19-39	ಉತ್ತರಭಾದ್ರ	7-[illegible]36	8
25	ಶನಿ ;;	ಬಿದಿಗೆ	21-3	ರೇವತಿ	10-[illegible]5	9
26	ಭಾನು ::	ತದಿಗೆ	23-42	ಅಶ್ವಿನಿ	14-1[illegible]	10
27	ಸೋಮ †	ಚೌತಿ	27-26	ಭರಣಿ	19-1[illegible]	11
28	ಮಂಗಳ §	ಪಂಚಮಿ	32-0	ಕೃತ್ತಿಕೆ	25-4	12
29	ಬುಧ	ಷಷ್ಠಿ	37-8	ರೋಹಿಣಿ	31-31	13
30	ಗುರು ‡	ಸಪ್ತಮಿ	42-29	ಮೃಗಶಿರ	38-6	14

* ದ್ವಿತೀಯಾ ತಿಥಿ, ಅಪರಪಕ್ಷಾರಂಭ, ಪ್ರೋಷ್ಠಪದ್ವಿತೀಯಾ. ;; ಸಂಕಷ್ಟಹರ ಚತುರ್ಥಿ. :: ಸರ್ವತ್ರ ತೃತೀಯಾ ತಿಥಿ, ಬೃಹದ್ಗೌರೀವ್ರತ, ಮಹಾಭರಣಿ; ... ಚತುರ್ಥಿ. † ಗಜಗೌರೀವ್ರತ, ಮಳೆ ನಕ್ಷತ್ರ—ಹಸ್ತ 1 ನೇ ಪಾದ. § ... ವಾಚಮ್ಮಣ್ಣಿಯವರ 2 ನೇ ಜನ್ಮಾರ್ಚನ ವರ್ಧಂತಿ, ದಗ್ಧಯೋಗ. ‡ ... ವ್ಯತೀಪಾತ, ಮೃತ್ಯುಯೋಗ, ಮಳೆ ನಕ್ಷತ್ರ—ಹಸ್ತ 2 ನೇ ಪಾದ.

Printed and Published by the Rev. H. G[illegible], Proprietor and Manager, Wesleyan Mission [illegible], Mysore. 23/9/1915.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೫ ನೇ ಇಸವಿ ಸೆಪ್ಟೆಂಬರ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೧೪

ಇಂಡಿಯಾ ಗವರ್ನಮೆಂಟಿನ ವಾಯಿದೆಯುಳ್ಳ ಸಾಲ.

ಮಹಾಜನಗಳು ಪೋಸ್ಟ್ ಆಫೀಸಿನ ಮೂಲಕ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾದ ಸುರತ್ತುಗಳು.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ನೇಕಡಾ 4 ರಂತೆ ಬಡ್ಡಿಯುಳ್ಳ ಹೊಸ ರೀತಿಯಿಂದ ಕೊಡಿಸುತ್ತಿದಾರೆ. ಈ ಸಾಲವನ್ನು 1925 ನೇ ... ಡಿಸೆಂಬರ್ ಮೊದಲಾಗಿ ಪೂರಾ ತೀರಿಸಿಬಿಡುತ್ತಾರೆ; ಆದರೆ ಗವರ್ನಮೆಂಟಿನವರು ಇಷ್ಟಪಟ್ಟಲ್ಲಿ ಈ ಸಾಲವನ್ನು 1920 ನೇ ಇಸವಿ ಅಕ್ಟೋಬರ್ ಆದ ಬಳಿಕ ... ವಾಪಸು ಮಾಡಬಹುದಾಗಿದೆ.

2. ಕಲ್ಕತ್ತಾ, ಮದ್ರಾಸ್, ಬೊಂಬಾಯಿ, ಇನ್ನೂ ಇತರ ದೊಡ್ಡ ಪಟ್ಟಣಗಳಲ್ಲಿ ಗವರ್ನಮೆಂಟಿನವರು ಎಂದಿನಂತೆ ದರಖಾಸ್ತುಗಳ ಮೂಲಕ ಆಗಲೇ ... ರೂಪಾಯಿ ಸಾಲವನ್ನು ಕೊಡಿಸಿದ್ದಾಗಿದೆ; ಅಲ್ಲಿಗೆ ಈ ಸಾಲ ಕೊಡಿಸುವುದು ನಿಲ್ಲಲಿಲ್ಲ. ಆದರೆ ಇತರ ಸಾಮಾನ್ಯ ಪ್ರಜೆಗಳ್ಯಾರಾದರೂ ಅಲ್ಪ ಸ್ವಲ್ಪ ... ಗವರ್ನಮೆಂಟಿಗೆ ಸಾಲ ಕೊಡಬೇಕೆಂದು ಕುತೂಹಲಪಡುತ್ತಿದ್ದರೆ ಅಂಥವರಿಗೂ ವಿಶೇಷವಾದ ಅವಕಾಶವನ್ನು ಈಗ ಕಲ್ಪಿಸಿರುತ್ತದೆ. ಅಂಥವರು ... ಬ್ಯಾಂಕುಗಳಲ್ಲಿ ಹಣವನ್ನು ಹಾಕಿಯೂ ಹಾಕದೆಯೂ ಇರಬಹುದು; ಮತ್ತು ಅಂಥವರು ಸೇವಿಂಗ್ಸ್ ಬ್ಯಾಂಕು ಇರುವಂಥಾ ಸವಿಸದಲ್ಲಾದ ಯಾವ ... ಆಫೀಸಿನ ಮೂಲಕವಾದರೂ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾಗಿದೆ.

ಹಣವನ್ನು ಕಟ್ಟತಕ್ಕ ಕ್ರಮ.

3. ಅಪೇಕ್ಷಿಸುವವರು ಅಕ್ಟೋಬರ್ ತಾ. 30 ರ ತನಕ ದರಖಾಸ್ತುಗಳನ್ನು ಪೋಸ್ಟ್ ಆಫೀಸಿನ ಮೂಲಕ ಕೊಡತಕ್ಕದ್ದಾಗಿದೆ.

4. ದರಖಾಸ್ತು 100 ರೂಪಾಯಿಗೆ ಕಡಮೆ ಇರಕೂಡದು; ಕೆಲವು ನೂರು ರೂಪಾಯಿಗಳಿಗೆ ಬೇಕಾದರೂ ದರಖಾಸ್ತು ಕೊಡಬಹುದು. ಯಾವ ಒಬ್ಬ ದರ ಖಾಸ್ತುದಾರನೂ 5,000 ರೂಪಾಯಿಗಿಂತ ಹೆಚ್ಚಿಗೆ ದರಖಾಸ್ತು ಮಾಡಕೂಡದು.

ವಿಶೇಷ—ಈಗ ನೇಕಡಾ 3½ ಬಡ್ಡಿಯುಳ್ಳ ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಆಫೀಸಿನ ಮೂಲಕ ಪಡೆದಿಟ್ಟುಕೊಂಡಿರುವವರು ಕೂಡ ಈ ಹೊಸ ... 5,000 ರೂಪಾಯಿ ತನಕ ದರಖಾಸ್ತು ಮಾಡಬಹುದು.

5. ದರಖಾಸ್ತು ಮಾಡಬೇಕೆಂಬುವವರು ಪೋಸ್ಟ್ ಆಫೀಸಿನಲ್ಲಿ ಕೇಳಿದರೆ ಅಲ್ಲಿ ದರಖಾಸ್ತು ಫಾರಮುಗಳನ್ನು ಮುಫತ್ತಾಗಿ ಕೊಡುತ್ತಾರೆ. ಅದರ ನಮೂನೆ ... ಯಲ್ಲಿ ಪ್ರಕಟಿಸಿದೆ. ಆ ನಮೂನೆಯನ್ನು ಕಂಡು ಭರ್ತಿ ಮಾಡಿ ಪೂರಾ ಹಣದ ಸಮೇತ ಅದನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಬೇಕು. ಇದಕ್ಕೆ ... ಪೋಸ್ಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವಿದ್ದರೆ ಅದನ್ನೇ ಉಪಯೋಗಿಸಿಕೊಳ್ಳಬಹುದು; ಹಾಗಿಲ್ಲದಿದ್ದರೆ ನಗದಾಗಿ ಪಾವತಿ ಮಾಡಬೇಕು. ದರಖಾಸ್ತುದಾ ... ತಾನಾಗಿ ಪೋಸ್ಟ್ ಆಫೀಸಿಗೆ ಹೋಗಬಹುದು, ಇಲ್ಲವೇ ತಮ್ಮ ಕಡೆಯವರ ಮೂಲಕ ಕಳುಹಿಸಬಹುದು. ಪಾವತಿ ಮಾಡಲ್ಪಟ್ಟ ಪೂರಾ ಹಣಗಳಿಗೆ ಕ್ರಮ ... ಕೊಡಲಾಗುತ್ತದೆ.

6. ದರಖಾಸ್ತುದಾರನು ಪಾವತಿ ಮಾಡಿದ ಪ್ರತಿ 100 ರೂಪಾಯಿಗೂ ಒಂದರಂತೆ ಗವರ್ನಮೆಂಟ್ ಪ್ರಾಮಿಸರಿ ಪತ್ರಗಳು ಆತನಿಗೆ ಕಳುಹಿಸಲಾಗುತ್ತದೆ.

ಪ್ರಾಮಿಸರಿ ಪತ್ರಗಳನ್ನು ಜೋಪಾನ ಮಾಡಿಡುವುದು.

7. ಪತ್ರಗಳನ್ನು ದರಖಾಸ್ತುದಾರನು ತನ್ನ ಬಳಿಯಲ್ಲೇ ಇಟ್ಟುಕೊಳ್ಳಬಹುದು; ಅಥವಾ ಆತನಿಗೆ ಸಮ್ಮತವಾಗಿದ್ದರೆ ಪೋಸ್ಟ್ ಆಫೀಸಿನ ಅಧಿಕಾರಿಗಳು ... ತಮ್ಮಲ್ಲೇ ಇಟ್ಟುಕೊಳ್ಳುತ್ತಾರೆ. ದರಖಾಸ್ತು ಮಾಡುವಾಗಲೇ ದರಖಾಸ್ತುದಾರನು ತನ್ನ ಇಷ್ಟವನ್ನು ದರಖಾಸ್ತಿನಲ್ಲಿ ಬರೆದುಕೊಡತಕ್ಕದ್ದು. ... ಬಳಿಯೇ ಇರಬೇಕೆಂದು ಅಪೇಕ್ಷಿಸಿದರೆ ಅವು ಸಿದ್ಧವಾಗುವ ಸಮಯವನ್ನು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಸುತ್ತಾರೆ; ಅಂಥಾ ಸಮಯದಲ್ಲಿ ... ಹಾಜರಾಗಿ ಪತ್ರಗಳನ್ನು ತೆಗೆದುಕೊಳ್ಳತಕ್ಕದ್ದು. ಪತ್ರಗಳು ಪೋಸ್ಟ್ ಆಫೀಸಿನಲ್ಲೇ ಇರಲೆಂದು ಅಪೇಕ್ಷಿಸಿದ ಪಕ್ಷದಲ್ಲಿ ದರಖಾಸ್ತುದಾರನು ... ಆಫೀಸಿಗೆ ಹಾಜರಾಗಬೇಕಾದದ್ದಿಲ್ಲ; ಆದರೆ ಅವು ಬಂದ ಕೂಡಲೆ ಪೋಸ್ಟ್ ಆಫೀಸಿನವರು ಅವು ತಮ್ಮ ವಶಕ್ಕೆ ಬಂದಿವೆ ಎಂದೂ, ತಮ್ಮ ವಶದಲ್ಲಿ ಇಟ್ಟು ... ಕೊಂಡೂ ದರಖಾಸ್ತುದಾರನಿಗೆ ತಿಳಿಯಪಡಿಸುತ್ತಾರೆ. ಕೆಲವು ಕಾಲದ ಮೇಲೆ ಪತ್ರಗಳು ಬೇಕೆಂದು ಕೇಳುವ ಪಕ್ಷಕ್ಕೆ ಅವನ್ನು ದರಖಾಸ್ತುದಾರನಿಗೆ ... ಕೊಡುತ್ತದೆ.

ಬಡ್ಡಿಯನ್ನು ಪಾವತಿಮಾಡುವ ಕ್ರಮ.

8. ನೇಕಡ 4 ರಂತೆ ಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಪ್ರತಿ ವರುಷವೂ ಮೇ ತಾ. 31 ರಲ್ಲಿ ಒಂದಾವರ್ತಿ, ನೊವೆಂಬರ್ ತಾ. 30 ರಲ್ಲಿ ... ಪಾವತಿಮಾಡಲಾಗುತ್ತದೆ. ಈ ಸಾಲದ ಹಣ ಪಾವತಿ ಮಾಡಿದ ತಾರೀಖು ಲಾಗಾಯಿತು ಮುಂದಿನ ನೊವೆಂಬರ್ ತಾ. 30 ರ ವರೆಗಿನ ಬಡ್ಡಿಯನ್ನು ... ಕೊಡುತ್ತಾರೆ; ಒಂದು ವೇಳೆ ಪತ್ರಗಳನ್ನು ಪೋಸ್ಟ್ ಆಫೀಸಿನ ವಶದಲ್ಲೇ ಬಿಟ್ಟಿದ್ದರೆ ಮುಂದಿನ ಪ್ಯಾರಾದಲ್ಲಿ ಹೇಳುವ ಪ್ರಕಾರ ಬಡ್ಡಿಯನ್ನು ... ಸ್ ಬ್ಯಾಂಕ್ ಲೆಕ್ಕಕ್ಕೆ ಕೊಡಿಸಲಾಗುವುದು.

9. ದರಖಾಸ್ತುದಾರನು ಪತ್ರಗಳನ್ನು ಪೋಸ್ಟ್ ಆಫೀಸಿನಲ್ಲೇ ಬಿಟ್ಟಿರುವುದಾದರೆ ಪೋಸ್ಟ್ ಆಫೀಸಿನವರು ಪತ್ರಗಳ ಬಡ್ಡಿಯನ್ನು ಕಾಲಕಾಲಕ್ಕೆ ವಸೂಲು ... ಪತ್ರಗಳ ಸೊತ್ತುಗಾರನ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ಪ್ರಾರಂಭಮಾಡಿ ಆ ಲೆಕ್ಕಕ್ಕೆ ಕೊಡಿಸುತ್ತಾ ಬರುತ್ತಾರೆ. ಮತ್ತು ಬಡ್ಡಿ ... ಸಂಗತಿಯನ್ನು ಪೋಸ್ಟ್ ಆಫೀಸಿನವರು ಅಂಥಾ ದರಖಾಸ್ತುದಾರನಿಗೆ ಕಾಲಕ್ರಮದಲ್ಲಿ ತಿಳಿಸುತ್ತಾ ಬರುವರು. ಇದಕ್ಕಾಗಿ ಯಾವುದೊಂದು ರುಸುಂ ... ವಸೂಲಾಗುವುದಿಲ್ಲ; ಮತ್ತು ಆರು ತಿಂಗಳಿಗೊಂದಾವರ್ತಿ ಪಾವತಿಮಾಡುವ ಬಡ್ಡಿಯಲ್ಲಿ ಆದಾಯದ ಮೇಲಣ ತೆರಿಗೆಯನ್ನು ಕಟಾಯಿಸುವುದೂ ಇಲ್ಲ. ... ದರಖಾಸ್ತುದಾರನು ಪತ್ರಗಳನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡಿದ್ದರೆ ಆರು ತಿಂಗಳಿಗೊಂದುಸಲ ಪಾವತಿಮಾಡುವ ಬಡ್ಡಿ ಹಣದಲ್ಲಿ ಪದ್ಧತಿಯ ಪ್ರಕಾರ ... ಮೇಲಣ ತೆರಿಗೆಯನ್ನು ಕಟಾಯಿಸಿಕೊಳ್ಳಲಾಗುವದು.

ಪ್ರಾಮಿಸರಿ ಪತ್ರಗಳನ್ನು ವಿಕರಿಮಾಡುವುದು.

10. ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣ ಹಾಕಿರತಕ್ಕವರ ಪೈಕಿ ಯಾರಾದರೂ ಈ ಹೊಸ ಸಾಲದ ಪತ್ರಗಳನ್ನು ಪಡೆದುಕೊಂಡಿದ್ದು, ಅಂಥಾ ಪತ್ರಗಳನ್ನು ವಿಕರಿ ... ಬೇಕೆಂದು ಅಪೇಕ್ಷಿಸಿದಲ್ಲಿ ಪೋಸ್ಟ್ ಆಫೀಸಿನವರು ದಲ್ಲಾಳಿ ಅಥವಾ ರುಸುಂ ಯಾವುದೊಂದೂ ತೆಗೆದುಕೊಳ್ಳದೆ ಆ ಪತ್ರ ಅಥವಾ ಪತ್ರಗಳನ್ನು ವಿಕರಿ ... ಮಾಡುತ್ತಾರೆ. ಈ ವಿಷಯದಲ್ಲಿ ಪೋಸ್ಟ್ ಆಫೀಸುಗಳಲ್ಲಿ ವಿಚಾರಿಸಿದರೆ ಎಲ್ಲಾ ಸಂಗತಿಗಳೂ ಸ್ಪಷ್ಟವಾಗಿ ತಿಳಿಸಲ್ಪಡುವವು.

ದರಖಾಸ್ತಿನ ನಮೂನೆ.

..................ನಾನು 1915 ನೇ ಇಸವಿ ಜೂಲೈ ತಾ. 28 ರಲ್ಲಿ ಪ್ರಕಟವಾದ ಗೆಜೆಟ್ ಆಫ್ ಇಂಡಿಯಾ ವಿಶೇಷ ಪತ್ರಿಕೆಯಲ್ಲಿ ನಮೂದಾಗಿರುವ ... ನೂರಕ್ಕೆ 4 ರಂತೆ ಬಡ್ಡಿಯುಳ್ಳ ವಾಯಿದೆ ಕಂಡ ಸಾಲಕ್ಕಾಗಿ .... ರೂಪಾಯಿಗಳ ಸಾಲಕ್ಕೋಸ್ಕರ ದರಖಾಸ್ತು ಮಾಡುತ್ತೇನೆ.

ನಾನು ಈ ಮೂಲಕ ಕೇಳುವ ಸಾಲದ ಪತ್ರಗಳಿಗೆ ಪೂರಾ ...... ರೂಪಾಯಿಗಳನ್ನು ಹಾಜರು ಮಾಡುತ್ತೇನೆ. ನಾನು ಈ ಸಾಲಕ್ಕೆ ಹಣವನ್ನು ಕೊಡಬೇಕಾಗಿರುವದರಿಂದ ನನ್ನ ಹೆಸರಿನಲ್ಲಿ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ... ಹಣದ ಪೈಕಿ ಈ ಸಾಲಕ್ಕೆ ಬೇಕಾಗುವ ...... ರೂಪಾಯಿಗಳನ್ನು ವಾಪಸು ಕೊಡಿಸುವಂತೆ ನಾನು ಬೇಕೆಂದು ಕೋರುತ್ತೇನೆ. ಈ ದರಖಾಸ್ತಿನ ಪಲಕ್ಕಾಗಿ ಇದರ ಜೊತೆ ...... ರೂಪಾಯಿಯನ್ನು ಹಾಜರು ಮಾಡಿರುವೆನು; ಬಾಕಿ ...... ರೂಪಾಯನ್ನು ಪೋಸ್ಟ್ ... ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿರುವ ...... ರೂಪಾಯಿಯಲ್ಲಿ ಉಪಯೋಗಿಸಿಕೊಳ್ಳುವಂತೆ ಕೋರುತ್ತೇನೆ	ಅವಶ್ಯವಿಲ್ಲದ ಭಾಗಗಳನ್ನು ಹೊಡೆದುಬಿಡಿ.
ನನ್ನ ಬಾಬತು ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಮತ್ತು ಟೆಲಿಗ್ರಾಫ್ ಅಕೌಂಟೆಂಟ್ ಜನರಲ್‌ರವರು ನನ್ನ ಪರವಾಗಿ ತಮ್ಮ ... ಇಟ್ಟುಕೊಂಡಿರಬೇಕೆಂದೂ, ಆ ಪತ್ರಗಳಿಗಾಗಿ ಬರುವ ಬಡ್ಡಿಯನ್ನು ಕಾಲಕ್ರಮದಲ್ಲಿ ವಸೂಲಿ ತೆಗೆದುಕೊಂಡು ನನ್ನ ಪೋಸ್ಟ್ ... ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ ಕೊಡಿಸುತ್ತಾ ಬರಬೇಕೆಂದೂ ಕೋರುತ್ತೇನೆ ಕೆಳಗೆ ಕೊಟ್ಟಿರುವ ಕೆಳಗೆ ನಮೂದಾಗುವ ಹೆಸರು ವಿಳಾಸವುಳ್ಳ ಪ್ರಾಮಿಸರಿ ಪತ್ರಗಳ ಮೊಬಲಗನ್ನು ನನಗೆ ಪಾವತಿ ಮಾಡಿಕೊಡ ಬೇಕೆಂದು ಕೋರುತ್ತೇನೆ.	ಅವಶ್ಯವಿಲ್ಲದ ಭಾಗಗಳನ್ನು ಹೊಡೆದುಬಿಡಿ.

...

...

...

...1915.

[ಅವಶ್ಯವುಳ್ಳವರು ಈ ಫಾರಮನ್ನೇ ಕತ್ತರಿಸಿ ಉಪಯೋಗಿಸಬಹುದು.]

ಇಲ್ಲಿ ನೋಡಿ : ಅಭಿನವ! ಅಕ್ಷರಾಂಜಲಿ !!

ವಿಶ್ರಾಂತಿಗೆ ಆನಂದವನ್ನು ಆನಂದಕ್ಕೆ ಪ್ರಯೋಜನವನ್ನು ಮಕ್ಕಳಿಗೆ ತಿಳಿವನ್ನು ಕೊಡುವ ಕನ್ನಡ ಮಾಸಪತ್ರಿಕೆ. ವರ್ಷದ ಚಂದಾ 1 ರೂಪಾಯಿ; ಪೋಸ್ಟೇಜ್ 4 ಆಣೆ ಅಡ್ರಸ್—ಅಕ್ಷರಾಲಯ, ಮೈಸೂರು. [147-9]

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ 2-4-0; ರಫ್ ಪ್ರತಿಗೆ ರೂ. 1-12-0 [158-9]

ವಿಳಾಸ—ಎಂ. ಪಂಡಿತಾರಾಧ್ಯರು, ಮೈಸೂರು.

ಅರೇಬಿಯನ್ ನೈಟ್ಸ್
ಎಂಬ
ಯವನ ಯಾಮಿನೀ ವಿನೋದ ಕಥೆಗಳು.
(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸಂಪಾದಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [239-24]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ, ಮುಗುಟ. ರುಮಾಲು, ಕಣಗಳು, ಕೋಟು ಸಲ್ಯಾಘಾನುಗಳು ಪನೀರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ಡು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ ಬೇಗ ಬರೆದು ತರಿಸಿಕೊಳ್ಳಿ. [119-15]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಒಂಟಿ ಶಾಲುಗಳೂ 3 ರೂ. ಇಂದ 7, 10, 50 ರೂ. ಗಳ ವರಗೂ ಸಿಕ್ಕುತ್ತವೆ. ಪಸಂದಿಯಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಪದಕಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಒಳ್ಳೇದು ಎಷ್ಟು ಬೆಲೆಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. 50 ರೂ. ಸರಕು ತರಿಸುವವರಿಗೆ ರಿಯಾಯತಿ ಉಂಟು. ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಗಿ ಕೊಡುತ್ತೇವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್, ಶಾಲ್ ಮರ್ಚೆಂಟ್ಸ್,
ಅಮೃತಸರ, ಪಂಜಾಬು.

PEER BROS., SHAWL MERCHANTS,
AMRITSAR, PANJAB.

[100-3]

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಪಂ ರೂ. 3-0-0.

ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೆ. ಕಂಧುಸಾಮಿ

[111-18] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ನ್ಯಾಟಿಸ್‌ಫ್ಯಾಕ್ಟರ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹವೆಗಳಿಗೂ ಎಲ್ಲಾ



ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ಸಮ್ಮತವಾಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 50; ಈಗಿನ ಕ್ರಯ ರೂ. 19, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.

ವಿಳಾಸ—National Harmonium Co.,

[170-0, SIMLA P.O., (E) CALCUTTA.

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ

ಸದ್ದು ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರುಗಿ ಅನೇಕ ಕಷ್ಟಗಳಿಗೆ ಗುರಿಯಾಗಿ ವ್ಯಸನಪಡುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಟ್ಟುಗಳಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವನ್ನು ಉಪಯೋಗಿಸಿರಿ. ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಕ್ಷಯ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಕಾವು, ಕ್ಷಯ, ಗರ್ಭವಿಷ್ಟ ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಮಿಭೇದ ಮಾಡಿಸುತ್ತದೆ. ಕ್ರಯ ಬಾಟ್ಲಿ 1ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ [235-46]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲವರ್ಣದ ವಿಶೇಷವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲ ! ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ!

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಕೂಡ ಬಳಸಿಕೊಳ್ಳುತ್ತಲೇ, ಮಸ್ತಿಷ್ಕದ ಕೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ಕೊಡೆಯಕೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಸೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿ ನಹಾರಕರ ಬಂಧುಗಳು. ಬನವನಹಳ್ಳಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ಕಳುಹಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ಮರ್ಯಾದಸ್ಥರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ನಮ್ಮ ಮುತರುಜಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ತರಿಮಳ ದ್ರವ್ಯದ ಗಂಧವು ಹೀಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-36]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-13-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಊದುಬತ್ತಿಗಳು ಡಜನ್ ಒಂದಕ್ಕೆ 0-13-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಸಿದ್, ಮಾರ್ಕೆಟ್, ಬೊಂಬಾಯಿ.

ಏಜಂಟ್, ಓ ಉಲ್ಲೆ ಮಾರ್ಕೆಟ್, ಮಂಗಳೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

(ರಿಜಿಸ್ಟರ್ಡ್)

ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಶಾ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಆ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [25-

45 ಮಾತ್ರೆಗಳ ಪೊಟ್ಟಣ 1ಕ್ಕೆ 3 ಆಣೆ 200 ಮಾತ್ರೆಗಳ ಪೊಟ್ಟಣ 1ಕ್ಕೆ 7 ಆಣೆ | 100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ | 550 ಮಾತ್ರೆಗಳ ಪೆಟ್ಟಿಗೆ 1ಕ್ಕೆ 1 ರೂ
95 „ „ „ 4 „ 200 „ ೨೫ „ 9 „ | 1200 „ „ „ 2

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತ್ರಾನ್ ಡಿಪೋ, ಬೊಂಬಾಯಿ

ಮೈಸೂರು ಸೀಮೆಗೆ ಏಜೆಂಟರು—ಮ। ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಇವರ ಕಂಪನಿಯ ವಿಕರಿಗೆ ಇಡಲಾಗಿದೆ.

ESANOFELE

ಮಲೇರಿಯಾ ಜ್ವರವನ್ನು ನಾಶಮಾಡುವ ಕೆಂಪು ಪಲ್ಲಾ "ಈಸಾನೊಫೆಲಿ" ಯನ್ನು ಉಪಯೋಗಿಸಿ ಜಯಪ್ರದ ಮಾಡುತ್ತಿದಾರೆ. ಇದು ವಾಸಿಮಾಡುವುದರಲ್ಲೂ, ಜ್ವರವನ್ನು ಬಾರದಂತೆ ಸಂರಕ್ಷಿಸುವುದರಲ್ಲೂ ಚೆನ್ನಾಗಿ ಪ್ರಖ್ಯಾತಿಪಡೆದಿದೆ. ಕ್ರಯ ಬಾಟ್ಲ 1ಕ್ಕೆ ರೂ. ೨-೦-೦. ಎಲ್ಲಾ ಔಷಧ ಶಾಪುಗಳಲ್ಲೂ ದೊರೆಯುತ್ತೆ. ಚಿಕ್ಕ ಮಕ್ಕಳಿಗಾಗಲಿ, ಯಾವ ವಯಸ್ಸಿನ ಹುಡುಗರಿಗಾಗಲಿ, ಹುಡುಗಿಯರಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸಿಹಿಯಾಗಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ. ಮಲೇರಿಯಾಗೆ ನಿವಾರಕವಾದ, ನಂಬಿಕೆಯುಳ್ಳ, ಬೇಗ ಗುಣ ಕೊಡುವ ಔಷಧ. ಇದು ಇನ್ನೂ ಎಲ್ಲಾ ಜಾತಿಯ ಜ್ವರಗಳಿಗೂ ಬಾಧಕವಾದ ಔಷಧ. [176-5]

ಮೈಸೂರು ಸಂಸ್ಥಾನದ ಏಜಂಟರು :—

ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ—

ಬಿ. ಜಿ. ಗೋರಿಯೋ ಕಂಪನಿ, ಮಾಲೆನ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

'ಸಂಗೀತ ಪಾರಿಜಾತ'

ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಮುದ್ರಿತ !

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಸೆಗೆ ಕರೆಯುವ ..., ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ... ಸ್ತೋತ್ರಗಳು—ಇವುಗಳಿಂದ ತುಂಬಿದೆ ! ಈ ಎರಡನೆಯ ಮುದ್ರಣ ... ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ... ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ... ತಡವು ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯು... ಒಂದಕ್ಕೆ ಕ್ರಯ 4 ಆಣೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

[...]

"ಕಾದಂಬರೀ ಸಂಗ್ರಹ" ಮಾಸಪತ್ರಿಕೆ!

ಪತ್ರಿಕೆಯಲ್ಲಿ ಇದುವರೆಗೆ 25 ಪುಸ್ತಕಗಳು ಪ್ರಕಟವಾಗಿವೆ. ... 3 ಆ, ಸೌದಾಮಿನಿ, 5 ಆ, ಬೃಂದಾವನ 2 ಆ, ... 3 ಆ, ಪ್ರೇಮಪಿಪಾಸ್ಸೆ 2 ಆ, ಸುಲೋಚನಾ 3 ಆ, ಸೀತಾಬೋಧಿನಿ 2 ಆ, ... 6 ಆ, ವಿನೋದ ಚಂಪು 2 ಆ, ಸದಾಚಾರ ವಿವೇಚನ 2 ಆ, ... 12 ಆ, ಕಮಲ ಕುಮಾರಿ 9 ಆ, ನನ್ನ ಸಂಸಾರ 5 ಆ, ವಿನೋ... 5 ಆ, ಚಂದ್ರಿಕಾವಿಜಯ ನಾಟಕ 3 ಆ ಎಂಟು ಕಾದಂಬರಿ ... ಪ್ರಥಮ ಸಂಪುಟ 1-4-0, 11 ಗ್ರಂಥಗಳುಳ್ಳ ದ್ವಿತೀಯ ಸಂಪುಟ ..., ದೊಡ್ಡ 3 ಕಾದಂಬರಿಗಳುಳ್ಳ ತೃತೀಯ ಸಂಪುಟ 1-8-0.

ವಿಳಾಸ:—ಕಾದಂಬರೀ ಸಂಗ್ರಹ ಆಫೀಸ್, ಮೈಸೂರು; ಮತ್ತು ಜನರಲ್ ಏಜೆನ್ಸಿ, ಮೈಸೂರು.

[...]

NOTICE.

TENDERS will be received at the Office of the [Mil]itary Secretary to His Highness the Maharaja [of] Mysore, Cubbon Park, Bangalore, up to 2p. m. [o]n Thursday, 2nd December, 1915, for the supply [of] the articles required for repairing the tents of [th]e Government House, Mysore.

For particulars, please see page 1703. Part II, [of] the Mysore Gazette, dated 2nd September, 1915.

(Sd) C. VENKATA RAO,

Dated Bangalore, ... September, 1915. — *Office Assistant, In charge Military Secretary's Office.*

[...8-2]

ಸೋಲಾಪುರದ ಜುನಿ ಮಿಲ್ಲಿನ ಜಮಖಾನಗಳು

ಮತ್ತು ಹಸನಾದ ಹತ್ತಿಯ ತುಪ್ಪ (ಎಕ್ಸ್).

... ಸೋಲಾಪುರದ ಜುನಿ ಮಿಲ್ಲಿನ ಜಮಖಾನಗಳು, ... ಹಸನಾದ ... ಪಂಚೆಗಳು ಮತ್ತು ... ನಮ್ಮಲ್ಲಿ ದೊರೆಯುತ್ತವೆ

... ಹಸನಾದ ಹತ್ತಿಯ ತುಪ್ಪವನ್ನು ಒಟ್ಟಾಗಿ ತರಿಸಿಕೊಳ್ಳು... ಫಾಯಿದೆಯಾಗಿ ಕೊಡುತ್ತೇವೆ

... ನಮ್ಮಲ್ಲಿ ಸೇರು 1 ಕ್ಕೆ ಒಂದು ... ರೂ. 1-0-0 ರ ವರೆಗೂ ಹಸನಾದ ಊದುಬತ್ತಿಗಳು ದೊರೆಯುತ್ತವೆ.

ವಿಳಾಸ—ಜಿ. ಎಸ್. ಶ್ರೀಕಂಠಯ್ಯ ಅಂಡ್ ಕೊ, ದೊಡ್ಡಪೇಟೆ, ಮೈಸೂರು.

[...]

... ವೈದ್ಯ ... ಶ್ರೀ ಶೃಂಗೇರಿ.

ಮೆಡಲ್ ಸರ್ಟಿಫಿಕೇಟ್‌ಗಳನ್ನು ಹೊಂದಿರುವ ಶಾಸ್ತ್ರೀಯವಾದ ಔಷಧಗಳು.

1. ... ರಸ ... ಎಂಟು ... 1-2-3-4 ದಿನಕ್ಕೆ ..., ಸನ್ನಿಪಾತ, ವಿಷಮಜ್ವರ, ಮುಂತಾದ ಸಕಲ ಜ್ವರಗಳನ್ನೂ ... ಮಲೆನಾಡಿನ ಜ್ವರಕ್ಕೆ ಸಂಜೀವಿನಿ. ಮಳೆಗಾಲದ ಕೆಲ... 50 ಮಾತ್ರೆ 1 ರೂಪಾಯಿ.

2. ... — ಮಾತ್ರೆ ... ಎಲ್ಲಾ ತರದ ಜ್ವರಗಳ... 1 ರೂಪಾಯಿ [185-4]

3. ... ಪಾಕ — ಉತ್ತಮವಾದ ಶಕ್ತಿವರ್ಧಕ (ಟಾನಿಕ್) ... 2 ರೂಪಾಯಿ ವಿ. ಪಿ. ... ಬೇರೆ.

ನಮ್ಮಲ್ಲಿ ಎಲ್ಲಾ ರೋಗಕ್ಕೂ ತಕ್ಕ ಔಷಧವಿರುವುದು.

ವಿಳಾಸ:—... ಕೆ. ... ಶಾಸ್ತ್ರೀ, ಶೃಂಗೇರಿ.

ಹೊಸ ಭೂವಿವರಣೆಗಳು.

... ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

... ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ... ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ... ರಚಿಸಲ್ಪಟ್ಟಿವೆ.

1. ... ಭೂವಿವರಣೆ 0–5–0
2. ಪ್ರಾಕೃತಿಕ ಭೂಗೋಳ ಶಾಸ್ತ್ರ 0–6–0
   ಮೇಲೆ ಕಂಡ ಎರಡೂ ಸೇರಿ 0–10–0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)

1916 ನೆಯ

... ಸೆಕೆಂಡರಿ ಕನ್ನಡ ಟೆ|| ನೋಟ್ಸ್.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

... ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ... 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾ... 4 ಆಣೆ.

... ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು.

[...]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

10-9—1915 ರಿಂದ 17—9—1915 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು "	1	0	0	0
ಬೆಂಗಳೂರು ಡಿಸ್ಟ್ರಿಕ್ಟ್	68	24	0	0
ಮೈಸೂರು "	18	13	0	0
ಕೋಲಾರ್ "	11	7	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	0	0	0	0
ಹಾಸನ "	0	2	0	0
ಚಿತ್ರದುರ್ಗ "	3	1	0	0
ಕಡೂರ್ "	23	16	0	0
ಶಿವಮೊಗ್ಗ "	16	8	0	0
ಒಟ್ಟು...	131	72	0	0

ಮೋಸಹೋಗುವೆವೆಂಬ ಭಯವಿಲ್ಲ.

" ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಷೀನರಿ ... ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ. "—ಕೆ. ರಾಮಸ್ವಾಮಿ, ಕಲ್ಯಾಣ-..., 20-2-16.

ಅರ್ಧಬೆಲೆ ಮಾತ್ರ.

ಸರಾಸರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಅದ್ದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸ ... ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ. 8-0-0. ಗ್ಯಾರಂಟಿ 10 ವರ್ಷಗಳು. ಕಡೆಸ್ಟಾಕನ್ನು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ಲಿಸ್ಟ್ ... ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,

[266–44] ಪಿ.ಓ. ಬಾಕ್ಸ್ 330, ಬೊಂಬಾಯಿ.

ಹೊಗಳಿಕೆಗಿಂತಲೂ

ಪರೀಕ್ಷೆಯೇ ಮೇಲು !!!

ನೂರಾರು ವರುಷಗಳ ಅನುಭವದಿಂದ ಗುಣಕಂಡು ಪ್ರಖ್ಯಾತಿ ಹೊಂದಿರುವ ಶಾಸ್ತ್ರ ಸಮ್ಮತವಾದ ಮತ್ತು ಅತಿ ಸುಲಭ ಬೆಲೆಯುಳ್ಳ ಈ ಮಹೌಷಧಗಳನ್ನು ಸಮಯದಲ್ಲಿ ತರಿಸಿ ಇರಿಸಿಕೊಳ್ಳಿರಿ. ಕಷ್ಟಕಾಲದಲ್ಲಿ ಮುತ್ತಾದರೂ ಇದರಂತೆ ಶರೀರವನ್ನು ಕಾಪಾಡಲಾರದು. ಪರೀಕ್ಷಿಸಿ ಗುಣವನ್ನು ತಿಳಿಯಿರಿ.

ಶ್ರೀಕರ ಕಸ್ತೂರಿ ಮಾತ್ರೆ ಸುಮಾರು 300 ಮಾತ್ರೆ, ಸೀಸೆಗೆ 4 ಆಣೆ. ಸುಖಭೇದಿ ಮಾತ್ರೆ 50 ಮಾತ್ರೆ, ಸೀಸೆಗೆ 4 ಆಣೆ. ಬಾಲ ಸಂಜೀವಿನಿ 50 ಮಾತ್ರೆ, ಸೀಸೆಗೆ 4 ಆಣೆ. ಅಮೃತಲೇಪ (ತಲೆನೋವು ವಾಯುನೋವುಗಳಿಗೆ ಸಿದ್ಧೌಷಧ) ಸೀಸೆಗೆ 4 ಆಣೆ. ನಾರಿಕೇಳಾಂಜನ ಸೀಸೆಗೆ 4 ಆಣೆ. ಆಮೋದಿನಿ 150 ಮಾತ್ರೆ (ಸಂಗೀತಗಾರರಿಗೂ-ಬಾಯಿನಾತ ಮತ್ತು ಬಾಯಿ ನಾಥಕ್ಕೂ-ಅಯಾಸಪರಿಹಾರಕ್ಕೂ-ಎಲ್ಲಾ ವಿಧ ಕೆಮ್ಮುಗಳೂ-ಅತ್ಯುಪಯುಕ್ತವಾದುದು) ಸೀಸೆಗೆ 4 ಆಣೆ.

ಮೇಲ್ಕಂಡ ಆರು ಔಷಧಗಳ ಪೈಕಿ ನಿಮಗೆ ಬೇಕಾಗುವ 6 ಸೀಸೆಗಳನ್ನು ಚುನಾಯಿಸಿ ಒಟ್ಟಿಗೆ ತರಿಸಿದರೆ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಸೇರಿ ರೂ. 1-8-0. 12 ಸೀಸೆಗೆ ರೂ. 2-12-0. 25 ಸೀಸೆಗೆ ರೂ. 5-0-0.

ಪ್ರತಿ ಔಷಧದ ಜೊತೆಯಲ್ಲೂ ವಿಶದವಾದ ಅನುಪಾನ ಪತ್ರವಿರುವುದು.

ವಿಳಾಸ:—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,

[231–44] ಸದ್ವೈದ್ಯಶಾಲಾ, ನಂಜನಗೂಡು.

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಭಾದ್ರಪದ ಬಹುಳ ಅಷ್ಟಮಿ ಶುಕ್ರವಾರದಿಂದ ಭಾದ್ರಪದ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಅಕ್ಟೋಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾ ಮಾಸ ತೇದಿ
1	ಶುಕ್ರ *	ಅಷ್ಟಮಿ	47-25	ಆರಿದ್ರಾ	44-23	15
2	ಶನಿ ;;	ನವಮಿ	51-48	ಪುನರ್ವಸು	50-5	16
3	ಭಾನು ::	ದಶಮಿ	55-2	ಪುಷ್ಯ	54-49	17
4	ಸೋಮ +	ಏಕಾದಶಿ	57-12	ಆಶ್ಲೇಷ	58-25	18
5	ಮಂಗಳ §	ದ್ವಾದಶಿ	57-58	ಮಖಾ	60-0	19
6	ಬುಧ ,,	ತ್ರಯೋದಶಿ	57-23	ಮಖಾ	0-7	20
7	ಗುರು ‡	ಚತುರ್ದಶಿ	55-38	ಪುಬ್ಬ	1-7	21

* ಮಧ್ಯಾಷ್ಟಮಿ, ದಗ್ಧಯೋಗ. ;; ಅವಿಧವಾನವಮಿ, ಹರಿಹರವ್ರತ, ದಗ್ಧಯೋಗ. :: ಸರ್ಕಾರ್ ಕಾಂತರಾಜೇ ಅರಸಿನವರ ವರ್ಧಂತಿ, ಮಳೆ ನಕ್ಷತ್ರ—ಹಸ್ತ 3 ನೇ ಪಾದ. + ಸ್ಮಾರ್ತ ಶ್ರೀವೈಷ್ಣವ ಏಕಾದಶಿ. § ಪರಿವಾಸರ. ,, ಪ್ರದೋಷ. ‡ ಘಾತಚತುರ್ದಶಿ, ಮಾಸಶಿವರಾತ್ರಿ, ಮಳೆ ನಕ್ಷತ್ರ-ಹಸ್ತ 4 ನೇ ಪಾದ.

ಸಿರಸ್ಥತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ಪ್ರಸಿದ್ಧ ಪತ್ರಿಕೆ.

1. ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಈ ಕೆಳಗೆ ವಿವರಿಸಿ ಇರುವ ಸ್ವತ್ತುಗಳನ್ನು ಆ ಬಳಿ 1915 ನೇ ಅಕ್ಟೋಬರ್ 15 ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

2. ಹರಾಜು ಪ್ರಾತಃಕಾಲ 8 ಗಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಭವದರವಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

3. ಹರಾಜುಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಪೈಕಿ ಶೇಕಡಾ 25 ನ್ನು ಡಿಪಾಜಟ್ಟಿಗಾಗಿ ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯ್ತು 15 ದಿವಸಗಳಲ್ಲಿ ಪಾವತಿಮಾಡಲ್ಪಡದೆಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರುಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಶೇಕಡಾ 25 ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆಯೂ, ಅಥವಾ ಹರಾಜುಬಾಬತು ಬಾಕೀ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಗೆ ಸದರಿ ಸ್ವತ್ತನ್ನು ಪುನಹಾ ಹರಾಜುಮಾಡಿ ಸರ್ಕಾರಕ್ಕೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಸದರೀ ದರವಾಸ್ತುದಾರನನ್ನು ಗುರಿಪಡಿಸಲ್ಪಡುತ್ತೆ.

5. ಹರಾಜು ಛೇರ್‌ಮನ್ ಸಾಹೇಬರವರಿಂದ ಮುಂಜೂರು ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

6. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಛೇರ್‌ಮನ್ ಸಾಹೇಬರವರಿಂದ ಹರಾಜು ಮುಂಜೂರು ಮಾಡಲ್ಪಟ್ಟ ಕೂಡಲೆ ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತಿಗೆ ಹರಾಜುದಾರರ ಹೆಸರಿನಲ್ಲಿ ಛೇರ್‌ಮನ್ ಸಾಹೇಬರವರ ಸೈನ್ ಮೊಹರು ಮಾಡಲ್ಪಟ್ಟ ಒಂದು ಟೈಟಲ್ ಡೀಡು ಯಾನೆ ಪತ್ರವು ಅವರಿಗೆ ಕೊಡಲ್ಪಡುವದು.

ಟಿ. ಲಕ್ಷ್ಮೀನಾರಾಯಣರು,
ಛೇರ್‌ಮನ್.

[201–1]

ಹರಾಜು ಸ್ವತ್ತಿನ ವಿವರ.

ಮೊಹಲ್ಲಾ	ರಸ್ತೆ ನಂಬರು	ಕಟ್ಟಡ: ಡೋರ್ ನಂಬರು	ಕಟ್ಟಡ: ಪ್ಲಾಟ್ ನಂಬರು	ವಿವರ	ಚೌಹದ್ದು: ಪೂರ್ವ	ಚೌಹದ್ದು: ಪಶ್ಚಿಮ	ಚೌಹದ್ದು: ಉತ್ತರ	ಚೌಹದ್ದು: ದಕ್ಷಿಣ	ಷರಾ
ಮೈಸೂರು ದೇವರಾಜ ಮೊಹಲ್ಲಾ	46 ನೇ ಬ್ಲಾಕ್	159	12	ಉತ್ತರ ಭಾಗದ ಮನೆ, ಜಾಗ ಮತ್ತು ಅದರ ಮೇಲೆ ಇರುವ ತಾರಸಿ ಮತ್ತು ಹೆಂಚಿನ ಕಟ್ಟಡ $= \frac{30\frac{1}{2}+33\times75}{2} = 260\frac{5}{12}$ ಚದರ ಗಜಗಳು.	11 ನೇ ಕ್ರಾಸ್ ರಸ್ತೆ ...	... ರಸ್ತೆ	ರೋಡ್	ರೋಡ್	ಈ ಎರಡು ಭಾಗಗಳೂ ಬೇರೆ ಬೇರೆ ಹರಾಜು ಮಾಡಲ್ಪಡುತ್ತೆ.
				ದಕ್ಷಿಣ ಭಾಗದ ಮನೆ ಜಾಗ ಮತ್ತು ಅದರ ಮೇಲೆ ಇರುವ ಹೆಂಚಿನ ಕಟ್ಟಡ $=45\times47=235$ ಚದರಗಜಗಳು.	...	190 ನೇ ಪ್ಲಾಟ್ ನಂಬರು	...	ರೋಡ್	

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೫ ನೇ ಇಸವಿ ಸೆಪ್ಟಂಬರ್ ತಾ. ೩೦ ನೇ ಗುರುವಾರ.

ಮೈಸೂರು ಸಂಸ್ಥಾನದ ಬಜೆಟ್ಟು.

ನಮ್ಮ ಸರ್ಕಾರದವರು ಚಾಲ್ತಿ ಸಾಲಿನ ಜಮಾ ಖರ್ಚುಗಳ ಅಜ್ಮೈಷ್ ಅಂದಾಜಾ ಪಟ್ಟಿಗಳನ್ನು ಈಗ ಅಂದರೆ ವರುಷವು ಪ್ರಾರಂಭವಾಗಿ ಎರಡೂವರೆ ತಿಂಗಳು ಕಳೆದುಹೋದ ಮೇಲೆ ಪ್ರಕಟಿಸಿದಾರೆ. ಇದರ ಮಸೂದೆಯು ಕಳೆದ ಜೂಲೈ ತಾ. 26–27 ರಲ್ಲಿ ನಮ್ಮ ನ್ಯಾಯವಿಧಾಯಕ ಸಭೆಯೊಳಗೆ ಚರ್ಚಿಸಲ್ಪಟ್ಟಿತು. ಆದರೆ ಆ ಸಭೆಯಲ್ಲಿ ನಡೆದ ಚರ್ಚೆಗಳನ್ನು ಮಾತ್ರ ಸರ್ಕಾರದವರು ಇನ್ನೂ ಪ್ರಕಟಮಾಡಲಿಲ್ಲ. ಹ್ಯಾಗೂ ಆ ಮಸೂದೆಯಲ್ಲಿ ಕಾಣಿಸಿದ್ದ ಜಮಾ ಖರ್ಚುಬಾಬುಗಳು ಚರ್ಚೆಯಿಂದ ವ್ಯತ್ಯಾಸಮಾಡಲ್ಪಟ್ಟಿರುವಂತೆ ನಮಗೆ ತೋರುವುದಿಲ್ಲ.

ಈ ಆದಾಯ ವ್ಯಯಗಳ ಲೆಕ್ಕಗಳ ಕೂಡ ಕೆಲವು ವಿವರಣೆಗಳನ್ನು ಪ್ರಕಟಮಾಡಿರುತ್ತಾರೆ. ಇದನ್ನು ನೋಡಲಾಗಿ ಕಳೆದ ಸಾಲಿನ ಕಾರುಬಾರುಗಳ ದೆಸೆಯಿಂದ ಆದಾಯಕ್ಕಿಂತಲೂ 41,43,000 ರೂಪಾಯಿನಷ್ಟು ಖರ್ಚು ಹೆಚ್ಚಾಯಿತೆಂದು ಕಂಡುಬರುತ್ತದೆ. ಪ್ರಪಂಚದ ಎಲ್ಲಾ ಸೀಮೆಗಳಲ್ಲೂ ಹೇಗೋ ಹಾಗೆ ನಮ್ಮ ಸೀಮೆಯಲ್ಲೂ ಈಗಿನ ಯುದ್ಧದ ದೆಸೆಯಿಂದ ಹಣ ಕಾಸುಗಳ ಕಷ್ಟ ಸಂಭವಿಸಿರುವುದು. ಇಂಥಾ ಕಷ್ಟ ಒದಗುವುದೆಂದು ಮೊದಲೇ ತಿಳಿಯುವುದಕ್ಕೆ ಯಾರಿಗೂ ಸಾಧ್ಯವಾಗಿರಲಿಲ್ಲ. ಈ ಕಾರಣದಿಂದ ನಮ್ಮ ಸಂಸ್ಥಾನದ ರಾಜಾದಾಯದಲ್ಲಿ ಪ್ರಾಮುಖ್ಯವಾಗಿ ಜಂಗಲ್ ಉತ್ಪತ್ತಿಯ ಮಾರಾಟದೆಂಬ ಒಂದು ಬಾಬಿನಲ್ಲೇ ಹನ್ನೊಂದು ಲಕ್ಷ ರೂಪಾಯಿ ನಷ್ಟ ಸಂಭವಿಸಿತು. ಯಾಕಂದರೆ ಶ್ರೀಗಂಧವನ್ನು ವಿಕರಿ ಮಾಡಲು ಸಾಧ್ಯವಾಗಲಿಲ್ಲ. ಎರಡನೆಯದಾಗಿ ರೈಲ್ವೆ ಬಾಬಿನಲ್ಲಿ ಎರಡು ಲಕ್ಷವೂ, ಬೆಂಗಳೂರು ದಂಡಿನ ಸಿಲ್ಕು ಹುಟ್ಟುವಳಿಯಲ್ಲಿ ನಾಲ್ಕು ಲಕ್ಷವೂ, ಜಮೀನ್ ಕಂದಾಯದ ಬಾಬಿನಲ್ಲಿ ಮೂರೂವರೆ ಲಕ್ಷವೂ ವರಮಾನ ಕಡಮೆಯಾಯಿತು. ಆದರೆ ಸರ್ಕಾರದ ನಾನಾ ಇಲಾಖೆಗಳಲ್ಲಿ ಖರ್ಚುಬಾಬುಗಳನ್ನು ಕೋತಾಮಾಡಿದ್ದರಿಂದಲೂ, ಕೆಲವು ಬಾಬುಗಳಲ್ಲಿ ಹೆಚ್ಚಾಗಿ ಹುಟ್ಟುವಳಿ ಆದದ್ದರಿಂದಲೂ ಮೇಲ್ಕಂಡ ನಷ್ಟವು ಕೂಡಿಸಲ್ಪಟ್ಟಿತು. ಎಕ್ಸೈಸ್ ಎಂಬ ಒಂದು ಬಾಬಿನಲ್ಲೇ ಒಂಭತ್ತು ಲಕ್ಷ ರೂಪಾಯಿ ಹೆಚ್ಚು ಉತ್ಪತ್ತಿಯಾಗಿರುತ್ತದೆ. ನಮ್ಮ ಮಹಾರಾಜರವರು ಯುದ್ಧದ ಖರ್ಚಿಗೆಂದು ಸುಮಾರು ಐವತ್ತೆರಡು ಲಕ್ಷ ರೂಪಾಯನ್ನು ಚಂದಾ ದಯಪಾಲಿಸಿರುವುದೇ ಮೇಲ್ಕಂಡಂತೆ ಖರ್ಚು ಹೆಚ್ಚಲು ಕಾರಣವಾಯಿತು.

ಈ ಅಜ್ಮೈಷ್ ಜಮಾಖರ್ಚು ತಃಖ್ತೆಗಳನ್ನು ನೋಡಲಾಗಿ ನಮ್ಮ ಸರ್ಕಾರದವರು ಚಾಲ್ತಿ ಸಾಲಿನಲ್ಲಿ 2,74,02,000 ರೂಪಾಯಿ ಹುಟ್ಟುವಳಿ ಆದೀತೆಂದೂ, 2,73,70,000 ರೂಪಾಯಿ ಖರ್ಚಾದೀತೆಂದೂ, ಸಾಲಾಖೈರಿನಲ್ಲಿ ಖರ್ಚುಜಾತಾ 32,000 ರೂಪಾಯಿ ಶಿಲ್ಕು ಉಳಿಯುವುದೆಂದೂ ಅಂದಾಜು ಕಟ್ಟಿರುವಂತೆ ಗೊತ್ತಾಗುತ್ತದೆ. ಇದಲ್ಲದೆ ವಿಶೇಷವಾದ ಬಾಬುಗಳಿಗೆ ಅಂದರೆ ಕಾವೇರಿ ರಿಜರ್ವಾಯರು, ರೈಲ್ ಮಾರ್ಗಗಳು, ಟ್ರಾಮ್‍ವೇ, ಇವೇ ಮೊದಲಾದ ಕಾಮಗಾರಿಗಳಿಗೆ ನಮ್ಮ ಸರ್ಕಾರದವರು ಇನ್ನೂ 66,35,000 ರೂಪಾಯಿ ಖರ್ಚುಮಾಡುವವರಾಗಿದಾರೆ. ಈ ಹಣವನ್ನೆಲ್ಲಾ ಗವರ್ನಮೆಂಟಿನಲ್ಲಿ ಉಳಿದಿರುವ ಠೇವಣಿ ಆಸ್ತಿಯಿಂದ ಕೊಡಬೇಕಾಗಿ ಬರುವುದು.

ಇನ್ನೂ ಹೆಚ್ಚು ಹಣಗಳನ್ನು ಸ್ಯಾಂಕ್ಷನ್ ಮಾಡಿರುವ ಬಾಬುಗಳ್ಯಾವವೆಂದರೆ—ಕ್ರಮೇಣ ಖರ್ಚು ಹೆಚ್ಚುತ್ತಲೇ ಬಂದಿರುವ ಸಂಪದಭ್ಯುದಯ ಸಮಾಜಕ್ಕೆ 10,000 ರೂಪಾಯಿ; ಪಬ್ಲಿಕ್ ಲೈಬ್ರರಿ ಯಾನೆ ಸರಸ್ವತೀ ಭಂಡಾರಗಳಿಗೆ 15,000; ನಂದಿಬೆಟ್ಟದ ಅಭಿವೃದ್ಧಿ ಕಾರ್ಯಗಳಿಗೆ 5,000. ಈ ಹಣಗಳನ್ನು ಸಿವಿಲ್ ಕಾಮಗಾರಿ ಎಂಬ ಬಾಬಿನಿಂದ ಮಿಗಿಸಿಕೊಡುವಂತೆ ನಿಷ್ಕರ್ಷೆಯಾಗಿದೆ.

ಮೇಲ್ಕಂಡ ಕಾರ್ಯಗಳಿಗೆಲ್ಲಾ ದ್ರವ್ಯವನ್ನು ಒದಗಿಸಲು ಕೈಯಲ್ಲಿರುವ ನಗದು ಹಣ ಸಾಲದಾದ್ದರಿಂದ ಸರ್ಕಾರದವರು ಕೊಂಡಿಟ್ಟುಕೊಂಡಿರುವ ಆಸ್ತಿಯ ಪತ್ರಗಳನ್ನು ವಿಕರಿಮಾಡಬೇಕೆಂದು ಯೋಚಿಸಿದಾರೆ. ಆದರೆ ಹೀಗೆ ಇಟ್ಟುಕೊಂಡಿರುವ ಆಸ್ತಿಯು ಎಷ್ಟೋ, ಅದು ಯಾವ ಯಾವ ರೂಪದಲ್ಲಿದೆಯೋ ಎಲ್ಲಿಯೂ ಕಾಣಿಸಿರುವುದಿಲ್ಲ. ಸರ್ಕಾರದವರು ಒಂದು ಬ್ಯಾಲೆನ್ಸ್ ಷೀಟನ್ನು ಪ್ರಕಟಮಾಡಿ ಅದರಲ್ಲಿ ಒಟ್ಟು ಆಸ್ತಿ ಎಷ್ಟಿದೆ, ಯಾವ ರೂಪದಲ್ಲಿದೆ; ಅವರು ಜವಾಬ್ದಾರಿ ವಹಿಸಿರುವ ಇನ್ಷುರೆನ್ಸ್ (ವಿಮೆ) ಫಂಡು ಎಷ್ಟು, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು ಹಣವೆಷ್ಟು, ಧರ್ಮಕಾರ್ಯಗಳಿಗೆ ಸರ್ಕಾರದಲ್ಲಿ ಇಟ್ಟಿರುವ ಹಣವೆಷ್ಟು, ಕಾವೇರಿ ವಿದ್ಯುಚ್ಛಕ್ತಿಯ ಬಾಬಿನ ಡಿಪ್ರೀಸಿಯೇಷನ್ (ಖರ್ಚಾಗಿರುವ ಹಣವನ್ನು ಕೂಡಿಸುವ) ಫಂಡೆಷ್ಟು, ಇವೇ ಮೊದಲಾದ ಬಾಬುಗಳ ಹಣಗಳೆಷ್ಟೆಷ್ಟು ಇರಬೇಕೆಂಬುವದನ್ನು ತಃಖ್ತೆಹಾಕಿ ತಿಳಿಸಿದರಾದೀತೆಂದು ಕುತೂಹಲಪಡುತ್ತೇವೆ.

ಈ ಬಜೆಟ್ಟಿನಲ್ಲಿ ಒಂದು ಭಾಗವು ಸ್ಪಷ್ಟವಾಗಿ ಗೊತ್ತಾಗುವಂತಿಲ್ಲ. ಮುಜರಾಯಿ ಬಾಬಿನ ವರಮಾನವೇನೆಂಬುವುದನ್ನು ಎಲ್ಲೂ ತಿಳಿಸದೆ, ಸುಮಾರು ಮೂರೂವರೆ ಲಕ್ಷ ರೂಪಾಯನ್ನು ಖರ್ಚುಬಾಬಿನಲ್ಲಿ ತೋರಿಸಿದಾರೆ. ಪೃಥುವಟ್ಟುಗಳಿಂದಲೂ, ಇತರ ಆಸ್ತಿಗಳಿಂದಲೂ ಹಣ ಉತ್ಪತ್ತಿಯಾಗತಕ್ಕದ್ದಾಗಿದೆ. ಹ್ಯಾಗೂ ಈ ಬಾಬಿನಲ್ಲಿ ಉತ್ಪತ್ತಿಯಾಗುವ ಹಣಗಳನ್ನೆಲ್ಲಾ ಪ್ರಜೆಗಳಿಗೆ ತಿಳಿಸಬೇಕಾದದ್ದು ನ್ಯಾಯವೆಂದು ತೋರುವುದು.

ಹಿಂದಿನ ವರುಷಗಳಲ್ಲಿ ನಡೆದಿರುವ ಕಾಮಗಾರಿ ಮೊದಲಾದವುಗಳನ್ನು ನೋಡಿ ಹೇಳುವುದಾದರೆ ಸರ್ಕಾರದವರು ಈ ಸಾಲಿನಲ್ಲಿ ತೆಗೆದಿಟ್ಟಿರುವಷ್ಟು ಹಣಗಳೂ ವಿನಿಯೋಗವಾಗುವಂತೆ ಉದ್ದೇಶಿಸಿದ ಕಾಮಗಾರಿಗಳು ಪೂರ್ತಿಯಾಗಿ ನಡೆಯುವವೆನ್ನುವ ಭರವಸೆ ಕಾಣುವುದಿಲ್ಲವಾದ ಕಾರಣ ಸರ್ಕಾರದವರು ಕೊಂಡಿಟ್ಟುಕೊಂಡಿರುವ ಆಸ್ತಿಪತ್ರಗಳನ್ನು ವಿಕರೀ ಮಾಡಬೇಕಾದ ಸಂಭವ ಉಂಟಾಗಲಾರದೆಂದು ನಿರೀಕ್ಷಿಸುತ್ತೇವೆ. ಹ್ಯಾಗೂ ಈಗಿನ ಯುದ್ಧವು ಪೂರೈಸುವ ತನಕ ಖರ್ಚುಬಾಬುಗಳ ವಿಷಯದಲ್ಲಿ ವಿಶೇಷ ಜಾಗರೂಕರಾಗಿರಬೇಕು. ಯಾಕಂದರೆ ಹೊಸದಾಗಿ ಕೊಳ್ಳಬೇಕಾಗುವ ಪದಾರ್ಥಗಳ ಧಾರಣೆಯೆಲ್ಲಾ ಬಹಳ ಹೆಚ್ಚಾಗಿರುತ್ತದೆ; ಮತ್ತು ಕೈಯಲ್ಲಿರುವ ಸಾಲದ ಪತ್ರಗಳನ್ನು ವಿಕರಿ ಮಾಡುವುದಕ್ಕೆ ಪ್ರಯತ್ನಪಟ್ಟಲ್ಲಿ ಅವುಗಳ ಬೆಲೆ ಕಡಮೆಯಾಗಿ ರೋಣದರಿಂದ ತುಂಬಾ ನಷ್ಟವಾದೀತು.

ಸರ್ಕಾರದ ಜೀವವಿಮೆ ಕಂಪನಿ ವಿಷಾದು.

ಮೈಸೂರು ಗವರ್ನ್‍ಮೆಂಟಿನವರು ಸರ್ಕಾರಿ ಲೈಫ್ ಇನ್ಷುರೆನ್ಸ್ ಕಂಪನಿಯ 1913–14 ನೇ ಸಾಲಿನ ಆಡಳಿತದ ರಿಪೋರ್ಟನ್ನು ಈಗ ಅಂದರೆ ಹದಿನೈದು ತಿಂಗಳು ಕಳೆದ ಬಳಿಕ ಪ್ರಕಟಮಾಡಿದಾರೆ. ವಿಮೆಮಾಡಿದ್ದು ಕಾಲವಾದ ನೌಕರರ ಬೋನಸ್ ಹಣಗಳು ಬೇಗನೆ ಪಾವತಿ ಆಗದೆ ಹಲವು ಸಂದರ್ಭಗಳಲ್ಲಿ ತುಂಬಾ ಸಾವಕಾಶವಾಗುವುದು. ಈ ರೀತಿ ಸಾವಕಾಶವಾಗಲು ಕಾರಣವೇನೋ ನಮಗೆ ತಿಳಿಯುವುದಿಲ್ಲ. ಮರಣ ಸಂಭವಿಸಿದ ಸಮಯದಲ್ಲೇ ಹಣ ಬೇಕಾಗಿರೋಣದರಿಂದ ಒಡನೆಯೇ ಪಾವತಿ ಆಗುವಂತೆ ಏರ್ಪಾಡು ಮಾಡಬೇಕಾಗಿರುತ್ತದೆ. ಸಾಧುಕಾರಿ ಕಂಪನಿಗಳಲ್ಲಿ ಹೀಗೆ ಸಾವಕಾಶವಾದರೆ ಅವುಗಳಿಗೆ ಉಳುಬಾಳಿರುವುದಿಲ್ಲ. ನಮ್ಮ ಮುಂದಿರುವ ರಿಪೋರ್ಟಿನಲ್ಲಿ ಒಂದು ಕಡೆ 1906 ನೇ ಇಸವಿ ಮೇ ತಿಂಗಳಲ್ಲಿ ಮರಣ ಸಂಭವಿಸಿತೆಂದೂ, ಅದಕ್ಕೆ ಸಂಬಂಧಪಟ್ಟ ಬೋನಸ್ ಹಣವು 1915 ನೇ ಜನವರಿಯಲ್ಲಿ ಪಾವತಿಮಾಡಿದರೆಂದೂ, 1912 ನೇ ಜೂಲೈನಲ್ಲಿ ಸಂಭವಿಸಿದ ಮರಣಕ್ಕೆ ಸಂಬಂಧಪಟ್ಟ ಬೋನಸ್ ಹಣವನ್ನು 1914 ನೇ ಏಪ್ರಿಲ್ ತಿಂಗಳಲ್ಲಿ ಸಲ್ಲಿಸಿದರೆಂದೂ ಕಾಣಿಸಿದೆ.

ಈಗ ಜಾರಿಯಲ್ಲಿರುವ ವಿಮೇಪತ್ರಗಳು 15,892; ಇವುಗಳಿಗೆ 27,608 ರೂಪಾಯಿ ಚಂದಾ ವಸೂಲಾಗುತ್ತಿದೆ. ಇವುಗಳಿಗಾಗಿ ಒಟ್ಟು 79,51,279 ರೂಪಾಯಿ ಬೋನಸ್ ಹಣ ಸಲ್ಲಬೇಕಾಗುವುದು. ಈಗ ಈ ಫಂಡಿನಲ್ಲಿ 29,15,369 ರೂಪಾಯಿ ಉಳಿದಿದೆ. ಸರ್ಕಾರದವರು ಈ ಹಣವನ್ನು ಯಾವ ರೀತಿ ಉಪಯೋಗಪಡಿಸಿ ವೃದ್ಧಿಮಾಡುವರೋ ತಿಳಿಯಲಿಲ್ಲ. ಆಡಿಟರುಗಳು ಈ ಫಂಡಿನ ಲೆಕ್ಕಗಳನ್ನು ತನಿಖೆಮಾಡಿ, ಎಲ್ಲಾ ತೃಪ್ತಿಕರವಾಗಿರುವಂತೆ ತಿಳಿಸಿರುವುದಾಗಿಯೂ, ಲಾಭವನ್ನು ವಿಮೇದಾರರಿಗೆಲ್ಲಾ ಹಂಚಿಕೊಟ್ಟಿರುವುದಾಗಿಯೂ ಈ ರಿಪೋರ್ಟಿನಿಂದ ವೇದ್ಯವಾಗುತ್ತದೆ. ಫ್ಯಾಮಿಲಿ ಪೆನ್ಷನ್ (ಹೆಂಡತಿ ಮಕ್ಕಳ ಜೀವನಾಂಶ) ಎಂಬ ಶಾಖೆಯು ವೃದ್ಧಿ ಹೊಂದುತ್ತಾ ಇಲ್ಲ. ಸರ್ಕಾರದವರು ಈ ಏರ್ಪಾಡಿನಲ್ಲಿ ಯಾವುದೋ ಕೆಲವು ಬದಲಾವಣೆಗಳನ್ನು ಮಾಡಿಟ್ಟು ಈ ಶಾಖೆಯು ಅಭಿವೃದ್ಧಿಗೆ ಬರುವಂತೆ ಮಾಡುತ್ತೇವೆಂದು ತಿಳಿಸಿದಾರೆ.

ಸತ್ತು ಪುನಃ ಜೀವಿತನಾಗಿ ಎದ್ದುಬಂದವನು ದೇವಕುಮಾರನು.

ಪಾಲೆಸ್ತೀನ್ ದೇಶದಲ್ಲಿ ವಾಸವಾಗುತ್ತಿದ್ದ ಯೆಹೂದ್ಯರ ಮತಗ್ರಂಥಗಳು ಕ್ರೈಸ್ತರ ಸತ್ಯವೇದವಾದ ಬೈಬಲ್ ಎಂಬ ಪುಸ್ತಕದಲ್ಲಿವೆ. ಯೆಹೂದ್ಯರ ಈ ಮತಗ್ರಂಥಗಳ ಸಂಗ್ರಹವನ್ನು ಈಗ ಹಳೇ ಒಡಂಬಡಿಕೆಯೆಂದು ಕರೆಯುತ್ತಾರೆ. ಈ ಗ್ರಂಥಗಳನ್ನು ಆಮೂಲಾಗ್ರವಾಗಿ ಪರಿಶೋಧಿಸಿದರೆ ಒಂದು ಮುಖ್ಯಾಂಶವು ಬಹು ಪರಿಷ್ಕಾರವಾಗಿ ವ್ಯಕ್ತವಾಗುವದು. ಅದೇನಂದರೆ ಯೆಹೂದ್ಯರಲ್ಲಿ ಮತಬೋಧಕರಾಗಿದ್ದ ಪ್ರವಾದಿಗಳು—ಒಬ್ಬನೇ ದೇವರು ಇದ್ದಾನೆ; ಆತನ ವಿನಾ ಬೇರೆ ದೇವರುಗಳಿಲ್ಲವೇ ಇಲ್ಲ ಎಂಬ ಮುಖ್ಯ ತತ್ವವನ್ನು ಹಿಡಿದು ಅದು ತಮ್ಮ ಜನಗಳ ಮನಸ್ಸಿನಲ್ಲಿಯೂ ಹೃದಯದಲ್ಲಿಯೂ ಬಹು ಖಚಿತವಾಗಿ ನಾಟಿ ನೆಲೆಗೊಳ್ಳುವಂತೆ ಬಗೆಬಗೆಯ ವಿಧಾನಗಳಿಂದ ಪದೇ ಪದೇ ಅದನ್ನೇ ಬೋಧಿಸುತ್ತಲಿದ್ದರು. ಇದೊಂದು ಪಾಠವನ್ನು ಅವರು ಹೃದಯಂಗಮವಾಗಿ ಕಲಿತು ಅವರ ಒಬ್ಬನೇ ದೇವರಾದ ಯೆಹೋವನನ್ನು ಪೂಜಿಸಿ ಸೇವಿಸುವದು ಅವರ ಜೀವಮಾನದ ಮುಖ್ಯ ಕೆಲಸವಾಗಿದ್ದಿತು. ಈ ಯೆಹೋವ ದೇವರು ಅವರ ಪಿತೃಗಳಿಗೆ ಪ್ರತ್ಯಕ್ಷನಾಗಿ ಅವರಿಗೆ ತನ್ನ ಚಿತ್ತವನ್ನು ಪ್ರಕಟಿಸುವದಕ್ಕೆ ಹತ್ತು ಆಜ್ಞೆಗಳನ್ನು ಕೊಟ್ಟನು. ಅವುಗಳಲ್ಲಿ ಮುಖ್ಯವಾದ ಪ್ರಥಮ ಪಾಠವೇನಂದರೆ—ಇಸ್ರಾಯೇಲೇ ಕೇಳು, ಯೆಹೋವನೆಂಬ ನಿಮ್ಮ ದೇವರು ನಾನೇ, ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು. ಯಾವ ಮೂರ್ತಿಯನ್ನೂ ಮಾಡಿಕೊಳ್ಳಬೇಡ ಮೇಲಣ ಆಕಾಶದಲ್ಲಾಗಲಿ ಕೆಳಗಣ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವದರ ರೂಪವನ್ನೂ ಮಾಡಿಕೊಳ್ಳಬೇಡ, ಅವುಗಳಿಗೆ ಅಡ್ಡಬೀಳಲೂ ಬೇಡ, ಪೂಜೆಮಾಡಲೂ ಬೇಡ ಎಂಬುವದೇ. ಇದೊಂದೇ ಪಾಠವನ್ನು ಆ ಜನಾಂಗದವರು ಚನ್ನಾಗಿ ಕಲಿತು ಅವರಲ್ಲಿ ಸ್ಥಿರಪಡುವದಕ್ಕೆ ಸುಮಾರು ಎರಡು ಸಾವಿರ ವರುಷಗಳು ಹಿಡಿಯಿತು. ಯಾಕಂದರೆ ಅವರ ಸುತ್ತುಮುತ್ತಲೂ ಇದ್ದ ಇತರ ಜನಾಂಗಗಳಲ್ಲಿಯೂ ಲೋಕದ ಬೇರೆ ಬೇರೆ ಕಡೆಗಳಲ್ಲಿಯೂ ಒಬ್ಬನೇ ನಿಜವಾದ ದೇವರನ್ನು ತ್ಯಜಿಸಿ ಬಹು ದೇವರುಗಳು ಇದ್ದಾರೆಂದು ನಂಬಿ ತಮ್ಮ ತಮ್ಮ ಇಷ್ಟಾನುಸಾರವಾಗಿ ತಮಗೆ ಹಿತವೆಂದು ತೋರಿದ ದೇವರುಗಳನ್ನು ಆರಾಧಿಸುವ ಪದ್ಧತಿಯು ಬಹು ರೂಢಿಯಾಗಿದ್ದಿತು. ಮತ್ತು ಯೆಹೂದ್ಯರು ಸಹ ಈ ಜನಾಂಗದವರ ಪದ್ಧತಿಗಳನ್ನು ಅನುಸರಿಸಿ ತಮ್ಮ ಮತಬೋಧಕರು ಹೇಳಿದ ಏಕದೇವರನ್ನು ತ್ಯಜಿಸಿ ಬಹುದೇವರುಗಳನ್ನು ಆಗಾಗ್ಯೆ ಪೂಜಿಸುತ್ತಿದ್ದರು. ಅಂಥಾ ಸಮಯದಲ್ಲಿ ಆ ಪ್ರವಾದಿಗಳು ಅವರನ್ನು ಕಠಿಣವಾಗಿ ಗದರಿಸಿ ಏಕದೇವರಾದ ಯೆಹೋವನ ಕೋಪವು ಅವರನ್ನು ದಂಡಿಸುವದೆಂದು ತಿಳಿಸಿದರು. ಕಟ್ಟಕಡೆಗೆ ಯೆಹೂದ್ಯರು ಈ ಪಾಠವನ್ನು ಕಲಿತು—ನಿನ್ನ ದೇವರಾದ ಯೆಹೋವನನ್ನು ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕೆಂಬುವದೇ ಮೊದಲನೆಯ ಆಜ್ಞೆ; ಈ ಪ್ರಧಾನಾಜ್ಞೆಯು ಎಲ್ಲಾ ಧರ್ಮಶಾಸ್ತ್ರಕ್ಕೂ ಆಧಾರವಾಗಿದೆಯೆಂದು ನಂಬಿದರು. ಮತ್ತು ಯಾರಾದರೂ ಮತ್ತೊಬ್ಬ ದೇವರನ್ನು ಕುರಿತು ಪ್ರಸ್ತಾಪಮಾಡಿದರೆ ಅವನನ್ನು ಬಹಿಷ್ಕರಿಸಿ ಹಗೆಮಾಡಿ ಅವನನ್ನು ಸಂಹರಿಸುವದಕ್ಕೂ ಉದ್ಯುಕ್ತರಾದರು.

ದೇವರ ಏಕತ್ವದ ವಿಷಯದಲ್ಲಿ ಇಂತಹ ಕಠಿಣವಾದ ಅಭಿಪ್ರಾಯದಲ್ಲಿ ಎರಡು ಸಾವಿರ ವರುಷಗಳು ಸ್ಥಿರಪಟ್ಟು ಅತಿ ಹಠಾತ್ತಾಗಿ ಅದನ್ನು ಸಾಧಿಸುವ ಜನಗಳ ಮಧ್ಯದಲ್ಲಿ ಕ್ರಿಸ್ತನು ಹುಟ್ಟಿ ಬೆಳೆದನು. ಆತನ ತಂದೆತಾಯಿಗಳು ಉದರಪೋಷಣೆಗಾಗಿ ಕೈಕೆಲಸಮಾಡುತ್ತಿದ್ದ ಸಾಧಾರಣ ಜನಗಳು. ಆತನು ಹುಟ್ಟಿದ್ದು ಹಳ್ಳಿಯಲ್ಲಿ. ಆತನು ಶಾಸ್ತ್ರಿಗಳ ಮಕ್ಕಳಂತೆ ವಿದ್ಯಾಭ್ಯಾಸಮಾಡಿದವನಲ್ಲ. ಆತನ ಜೊತೆಗಾರರು ಬೆಸ್ತರು, ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದ ಯೌವನಸ್ಥರು. ಯೆಹೂದ್ಯರ ಮತಬೋಧಕರೂ ಶಾಸ್ತ್ರಿಗಳೂ ಪಂಡಿತರೂ ವಾಸಮಾಡುತ್ತಿದ್ದ ಅವರ ಮುಖ್ಯಪಟ್ಟಣವಾದ ಯೆರೂಸಲೇಮಿಗೆ ಬಂದು—ನಾನು ದೇವರ ಕುಮಾರನು; ನಾನು ಪಾಪಗಳನ್ನು ಪರಿಹರಿಸುವ ಅಧಿಕಾರವನ್ನು ದೇವರಿಂದ ಪಡೆದಿದ್ದೇನೆ; ನಾನೂ ತಂದೆಯಾದ ದೇವರೂ ಒಂದೇ; ದೇವರಾದ ತಂದೆಯು ನನ್ನನ್ನು ಈ ಲೋಕಕ್ಕೆ ಕಳುಹಿಸಿದ್ದಾನೆ; ನನ್ನನ್ನು ನಂಬುವವನಿಗೆ ನಿತ್ಯಜೀವ ಸಿಕ್ಕುತ್ತದೆ; ನಾನೇ ಜೀವವನ್ನು ಕೊಡುವ ರೊಟ್ಟಿ; ಆತ್ಮೀಯ ಜೀವಕ್ಕೆ ಆಧಾರವಾದ ನೀರು, ನನ್ನನ್ನು ನಂಬುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ಬಾಯಾರಿಕೆಯಾಗುವದಿಲ್ಲವೆಂದು ಬಹಿರಂಗವಾಗಿ ಸಾರಿದನು.

ಏಕದೇವರ ಭಕ್ತರಾದ ಯೆಹೂದ್ಯರು ಯೇಸು ತನಗೆ ಆರೋಪಿಸಿಕೊಳ್ಳುವ ಈ ಅಮಾನುಷವಾದ ಗುಣಲಕ್ಷಣಗಳನ್ನು ಕುರಿತು ಕೇಳಿದರು. ಪಾರ್ಶ್ವವಾಯು ರೋಗಿಯನ್ನು ಬರೀ ಬಾಯಿಮಾತಿನಿಂದ ವಾಸಿಮಾಡುವದು, ಪಾಪಪರಿಹಾರ ಕೊಡುವದು, ಸತ್ತವರನ್ನು ಬದುಕಿಸುವದು, ನಾನೂ ಒಬ್ಬನೇ ದೇವರಾದ ಯೆಹೋವನೂ ಒಂದೇ ಎಂದು ದೇವರಿಗೆ ತನ್ನನ್ನು ಸರಿಸಮಾನಮಾಡಿಕೊಳ್ಳುವದು ಈ ಮೊದಲಾದ ದೈವಲಕ್ಷಣಗಳು ತನಗಿವೆಯೆಂದು ನಿರ್ಭಯವಾಗಿಯೂ ನಿಸ್ಸಂದೇಹವಾಗಿಯೂ ಹೇಳುತ್ತಿರುವದನ್ನು ಕೇಳಿ ಅವರಿಗೆ ಕೋಪೋದ್ರೇಕವಾಯಿತು. ಯೇಸು ಒಬ್ಬ ರೋಗಿಯನ್ನು ನೋಡಿ ಅವನಿಗೆ—ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂದು ಹೇಳಿದನು. ಶಾಸ್ತ್ರಿಗಳು ಅದನ್ನು ಕೇಳಿ ಇವನು ಯಾಕೆ ಹಾಗೆ ಮಾತಾಡುತ್ತಾನೆ? ಇದು ದೇವದೂಷಣೆ. ದೇವರೊಬ್ಬನೇ ಹೊರತು ಮತ್ಯಾರು ಪಾಪಗಳನ್ನು ಕ್ಷಮಿಸಬಲ್ಲರು? ಎಂದು ಅವನಲ್ಲಿ ಬೇಸರಪಟ್ಟರು. ಮತ್ತೊಂದು ದಿನ ಯೇಸು ದೇವರು ತನ್ನ ತಂದೆಯೆಂದು ಹೇಳಿ ದೇವರಿಗೆ ತನ್ನನ್ನು ಸರಿಸಟ್ಟಿಕೊಂಡದ್ದರಿಂದ ಯೆಹೂದ್ಯರು ಆತನನ್ನು ಕೊಲ್ಲುವದಕ್ಕೆ ಪ್ರಯತ್ನಮಾಡಿದರು. ಕೆಲವು ಸರ್ತಿ ಆತನ ಸುತ್ತಲು ಗುಂಪುಕಟ್ಟಿಕೊಂಡು ದೊಂಬೀ ನಡಾಟಿ ಅವನ ಮೇಲೆ ಕಲ್ಲುಗಳನ್ನು ಎಸೆದು ಪ್ರಾಣಘಾತ ಮಾಡಲುದ್ದೇಶಿಸಿದರು. ಆದರೆ ಸಾಮಾನ್ಯ ಜನಗಳು ಯೇಸುವಿನ ಸದ್ಗುಣಗಳನ್ನೂ ಸದುಪದೇಶವನ್ನೂ ಪರೋಪಕಾರಕ್ಕಾಗಿಯೇ ತನ್ನ ಕಾಲವನ್ನೂ ಶಕ್ತಿಯನ್ನೂ ವ್ಯಯಮಾಡುತ್ತಿರುವದನ್ನೂ ನೋಡಿ ಆತನ ಪಕ್ಷವನ್ನು ವಹಿಸಿದ್ದರಿಂದ ಯೆಹೂದ್ಯ ಮತಾಭಿಮಾನಿಗಳು ಈ ಸಾಮಾನ್ಯ ಜನಗಳ ಹಗೆಗೆ ಹೆದರಿ ಯೇಸುವಿನ ಮೇಲೆ ಕೈಮಾಡದೆ ಬಿಟ್ಟುಬಿಟ್ಟರು. ಆದರೂ ಅವರು ಆಲೋಚನೆಮಾಡಿ ಕುಯುಕ್ತಿಯನ್ನು ಮಾಡಿ ಒಳಸಂಚಿನಿಂದ ಆತನು ಏಕಾಂತವಾಗಿರುವದನ್ನು ತಿಳಿದು ಅವನನ್ನು ಹಿಡಿದು ಸಂಹರಿಸಿದರು. ಅವರು ಅವನ ಮೇಲೆ ಹೊರಿಸಿದ ಅಪರಾಧವೇನು? ಅವರ ನ್ಯಾಯಸ್ಥಾನದಲ್ಲಿ ಅಧಿಪತಿಗಳ ಮುಂದೆ ಯೇಸುವನ್ನು ಹಿಡಿದು ನಿಲ್ಲಿಸಲು ನ್ಯಾಯಾಧಿಪತಿಯು—ನೀನು ಜೀವಸ್ವರೂಪನಾದ ದೇವರ ಕುಮಾರನೆಂದು ಹೇಳಿಕೊಂಡದ್ದು ನಿಜವೋ? ನೀನು ದೇವಕುಮಾರನೋ? ನಮಗೆ ಹೇಳು ಅಂದನು. ಯೇಸು ಪ್ರತ್ಯುತ್ತರವಾಗಿ ನೀನೇ ಹೇಳಿದ್ದೀ; ಇದಲ್ಲದೆ ಇನ್ನು ಮೇಲೆ ನಾನು ಸರ್ವಶಕ್ತನಾದ ದೇವರ ಬಲಗಡೆಯಲ್ಲಿ ಕೂತಿರುವದನ್ನೂ ನೋಡುವಿರಿ ಎಂದು ಹೇಳಿದ್ದನ್ನು ಕೇಳಿ ಅವರೆಲ್ಲರೂ ಏಕಸ್ವರದಿಂದ—ಇದು ದೇವದೂಷಣೆ ಮಾತು; ಇವನು ಮರಣದಂಡನೆ ಹೊಂದುವದಕ್ಕೆ ಪಾತ್ರನು ಎಂದು ತೀರ್ಮಾನಿಸಿದರು. ಮತ್ತು ಇದೇ ಅಪರಾಧಕ್ಕಾಗಿ ಆತನನ್ನು ಕೊಂದರು.

ಹೀಗೆ ಸಂಹರಿಸಲ್ಪಟ್ಟ ಯೇಸು ಸತ್ತುಹೋಗಿ ಮೂರು ದಿನಗಳಾದ ಮೇಲೆ ಪುನಃ ಜೀವಿತನಾಗಿ ಎದ್ದು ಬಂದು ತನ್ನ ಶಿಷ್ಯರಿಗೆ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅವರಿಗೆ ಕಾಣಿಸಿಕೊಂಡು ಅವರ ಸಂಗಡ ಸಂಭಾಷಣೆಮಾಡಿ ಅವರ ಸಂಗಡ ಕೂತು ಊಟಮಾಡಿ ಅವರ ಸಂದೇಹವನ್ನು ಪರಿಹರಿಸಿದನು. ನಮ್ಮ ಗುರುವು ಸತ್ತು ಹೋಗಿದ್ದು ಪುನಃ ಎದ್ದು ಬಂದಿರುವದು ನಿಜವೆಂದು ಆ ಶಿಷ್ಯರಿಗೆ ಖಾತ್ರಿಯುಂಟಾದ ಕೂಡಲೆ ಆತನು ದೇವಕುಮಾರನೇ ನಿಜವೆಂತ ನಿಷ್ಕರ್ಷಿಸಿದರು. ಮತ್ತು ತಮ್ಮ ಗುರುವನ್ನು ಕೊಂದ ಯೆಹೂದ್ಯರು ಮಾಡಿದ್ದು ಕೇವಲ ಕೆಟ್ಟಕೆಲಸವೂ ಪಾಪವೂ ಆಗಿದೆಯೆಂದು ಧೈರ್ಯದಿಂದ ಹೇಳಿ ಯೇಸುವು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟಿದ್ದಾನೆ. ಈತನನ್ನು ದೇವರು ಪ್ರಭುವೂ ರಕ್ಷಕನೂ ಆಗಬೇಕೆಂದು ನೇಮಿಸಿದ್ದಾನೆ. ನಾವು ರಕ್ಷಣೆ ಹೊಂದಬೇಕಾದರೆ ಯೇಸು ಕ್ರಿಸ್ತನೇ ನಮಗೆ ಗತಿ. ದೇವರ ಕುಮಾರನನ್ನು ಆಶ್ರಯಿಸದ ಬೇರೆ ಯಾರೂ ರಕ್ಷಣೆ ಹೊಂದುವದಕ್ಕಾಗುವದಿಲ್ಲವೆಂದು ಬೋಧಿಸಿದರು. ಈ ನಿರ್ಣಯವು ನ್ಯಾಯವಾದದ್ದಲ್ಲವೋ?

ಯುದ್ಧದ ಸಮಾಚಾರಗಳು.

ರಷ್ಯಾದವರ ಜಯಪ್ರದಗಳು.

ಪಶ್ಚಿಮದಲ್ಲಿ ಮುಂದರಿಸಿ ನುಗ್ಗಿದಾರೆ.

ಈ ವಾರದ ಯುದ್ಧವಾರ್ತೆಗಳು ಹರ್ಷವನ್ನುಂಟುಮಾಡುತ್ತವೆ. ಪಶ್ಚಿಮ ರಣರಂಗದಲ್ಲಿ ನಮ್ಮ ಪಕ್ಷದವರು ಮುಂದರಿಸಿ ನುಗ್ಗಿಹೋಗಲು ಪ್ರಾರಂಭ ಮಾಡಿದಾರೆ. ಪೂರ್ವರಣರಂಗದಲ್ಲಿ ರಷ್ಯಾದವರು ಶತ್ರುವಿಗೆ ಸಗ್ಗದೆ ತಮ್ಮ ಠಾಣ್ಯಗಳನ್ನು ಪರಾಕ್ರಮದಿಂದ ಕಾಪಾಡಿಕೊಂಡಿರುವರು; ಮತ್ತು ಕೆಲವು ಕಡೆಗಳಲ್ಲಿ ಶತ್ರುವಿನ ಮೇಲೆ ನುಗ್ಗಿ ಜಯಪ್ರದವನ್ನು ಹೊಂದಿರುತ್ತಾರೆ.

ನಮ್ಮ ಪಕ್ಷದವರು ಮುಂದರಿಸಿ ನುಗ್ಗಿ ಹೋಗುತ್ತಿದಾರೆಂಬುವುದು ಈಗ ಬಂದಿರುವ ವರ್ತಮಾನದಿಂದ ಸ್ಥಿರಪಟ್ಟಿದೆ. ಅವರು ಗೆದ್ದಿರುವ ಭಾಗಗಳನ್ನು ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಿರುವರು. ಬೆಲ್ಜಿಯನ್ನರು ಕೂಡ ಜರ್ಮನಿಯವರ ಕೆಲವು ಕಂದಕಗಳನ್ನು ಗೆದ್ದುಕೊಂಡಿದಾರೆ. ಪೂರ್ವ ರಣರಂಗದಲ್ಲಿ ರಷ್ಯಾದವರು ದಕ್ಷಿಣ ಸಾಲಿನಲ್ಲಿ ಇನ್ನು ಕೆಲವು ಜಯಪ್ರದಗಳನ್ನು ಹೊಂದಿದರೆಂದು ವರ್ತಮಾನ ಬಂದಿದೆ; ಇದರ ವಿವರಗಳು ಹೊರಬಿದ್ದಿಲ್ಲ.

ಪಶ್ಚಿಮ ರಣರಂಗದಲ್ಲಿ.

ಫಿರಂಗಿ ಗುಂಡುಗಳ ಹೋರಾಟವು ಇನ್ನೂ ಇದ್ದೇ ಇದೆ. ಕೆಲವು ರಾತ್ರಿಗಳಲ್ಲಿ ಈಗಿನಷ್ಟು ಗುಂಡುಗಳ ಮಳೆ ಹಿಂದೆ ಯಾವಾಗಲೂ ಸುರಿದದ್ದಿಲ್ಲ. ಜರ್ಮನಿಯವರ ಕಂದಕಗಳು ಅನೇಕವಾಗಿ ನಾಶವಾಡಲ್ಪಟ್ಟವು; ಅವರ ಮದ್ದು ಗುಂಡುಗಳಿಗಾದ ನಷ್ಟ ಅಪಾರವಾಗಿರುತ್ತದೆ. ಭೂಮಿಯ ಕಡೆಯಿಂದಲೂ, ಬೆಲ್ಜಿಯಮ್ ತೀರದಲ್ಲಿ ಬ್ರಿಟಿಷ್ ಜಹಜುಗಳಿಂದಲೂ ಫಿರಂಗಿ ಗುಂಡುಗಳು ಶತ್ರುವಿನ ಮೇಲೆ ಸುರಿಸಲ್ಪಟ್ಟವೆ. ನಮ್ಮ ಪಕ್ಷದವರು ಮುಂದಕ್ಕೆ ನುಗ್ಗಿ ಹೋಗಬೇಕೆಂತಲೇ ಈ ರೀತಿ ಗುಂಡುಗಳ ಮಳೆ ಸುರಿಸಿದರು. ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ತಮ್ಮ ಸೈನಿಕರ ಸಾಲುಗಳನ್ನು ಹತ್ತು ಮೈಲಿ ಉದ್ದಕ್ಕೆ ಮುಂದಕ್ಕೆ ನುಗ್ಗಿಸಿಕೊಂಡು ಹೋಗಿ ಶತ್ರುವಿನ ಸೈನ್ಯಗಳನ್ನು ಅರ್ಧ ಮೈಲಿ ಹಿಡಿದು ಮೂರು ಮೈಲಿ ತನಕ ಹಿಂದಕ್ಕೆ ಓಡಿಸಿರುತ್ತಾರೆ. ಜರ್ಮನಿ ಸೈನಿಕರಿಂದ್ದ ಮೊದಲನೇ ಸಾಲಿನ ಉದ್ದಕ್ಕೂ ಅವರ ಕಂದಕಗಳನ್ನೆಲ್ಲಾ ನಮ್ಮ ಪಕ್ಷದವರು ಗೆದ್ದು ಆಕ್ರಮಿಸಿಕೊಂಡರು. ಅವುಗಳ ಜೊತೆಗೆ ಎರಡೇ ದಿನಗಳಲ್ಲಿ ಗಾಯಪಡದಂಥಾ 20,000 ಶತ್ರು ಸೈನಿಕರನ್ನು ಕೈಸೆರೆ ಹಿಡಿದುಕೊಂಡು ಬಂದರು. ನಮ್ಮವರಿಗೆ ಸಿಕ್ಕಿರುವ ಮದ್ದುಗುಂಡು ಮೊದಲಾದ ಸಾಮಾನುಗಳು ಎಷ್ಟೆಂದು ಇನ್ನೂ ಲೆಕ್ಕವಾಗಿಲ್ಲ. ಇದುವರೆಗೆ ತೀಸದ್ದರಲ್ಲಿ 24 ರೊಕ್ಕ

..., ಮತ್ತು ಮೆಷೀನ್ ಪಿರಂಗಿಗಳೂ, ಅಪಾರ ಮದ್ದುಗುಂಡುಗಳೂ ... ಈ ಸ್ಥಳ ಬ್ರಿಟಿಷ್ ಸೈನಿಕರು 2,600 ಶತ್ರು ಸೈನಿಕರನ್ನೂ ... ಪಿರಂಗಿಗಳನ್ನೂ ಕೈಸೆರೆಹಿಡಿದಿರುತ್ತಾರೆ. 70 ಗಂಟೆಗಳ ಹೊತ್ತು ... ಗುಂಡುಗಳು ಬಿದ್ದು ಕಂದಕಗಳು ನಾಶವಾದದ್ದರಿಂದ ಅವು ... ಜರ್ಮನಿ ಸೈನ್ಯಗಳು ತ್ವಜಿಸಿ ಹಿಮ್ಮೆಟ್ಟಿ ಹೋಗಬೇಕಾಯಿತೆಂದೂ, ... ಸಾಮಗ್ರಿಗಳು ಬಹಳ ನಷ್ಟವಾಯಿತೆಂದೂ ಜರ್ಮನಿಯವರೇ ಹೇಳಿ ... ಕೊಂಡಾರೆ. ಕದನವು ನಿಲುಗಡೆ ಇಲ್ಲದೆ ನಡೆಯುತ್ತಲೇ ಇದೆ

... ರಾಜ್ಯದ ಬೆಸ್ತರು ನಾರ್ವೆ ಸಮುದ್ರತೀರದ ಬಳಿ ಜರ್ಮನಿಯ ... ಸಬ್‌ಮೆರೀನ್ ಎಂಬ ಹಡಗು ಮುಳುಗಿಸಲ್ಪಟ್ಟಿತೆಂದೂ, ಅದರೊಳ ... ವರೆಲ್ಲಾ ಮೃತಪಟ್ಟರೆಂದೂ ತಿಳಿಸಿದ್ದಾರೆ

ಇಂಗ್ಲೆಂಡ್‌ದಲ್ಲಿ ವಿಮಾನಗಳ ಕದನಗಳು ವಿಶೇಷವಾಗಿ ನಡೆದಿರುವವು. ... ದಿನ ಜರ್ಮನಿಯ ಎರಡು ವಿಮಾನ ಯಂತ್ರಗಳು ಹತ್ತಿಕೊಂಡು ... ಸುಡ ಮೇಲೆ ಬಿದ್ದುಕೊಂಡವು. ನಮ್ಮ ಪಕ್ಷದವರ ಅನೇಕ ... ಯಂತ್ರಗಳು ಹೋಗಿ ಶತ್ರುವಿನ ರೈಲ್ ರಸ್ತೆಗಳ ಮೇಲೂ, ರೈಲ್ವೆ ... ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬಂದಿರುತ್ತವೆ. ನಮ್ಮ ... ಕೆಲವು ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಜರ್ಮನಿಯ ... ಸಂಸ್ಥಾನವಾದ ಸ್ಟುಟ್‌ಗಾರ್ಟ್ ಎಂಬ ನಗರದಲ್ಲಿ ದೊರೆಯ ರಾಜ ... ಮೇಲೂ, ರೈಲ್ವೆ ಸ್ಟೇಷನ್‌ಗೂ ಗುಂಡುಗಳನ್ನು ಹಾಕಿರುತ್ತವೆ. ಜರ್ಮ ... ಕಲಿಯಾದರೆಂದೂ, ಅನೇಕ ಸೈನಿಕರೂ ಇತರರೂ ಗಾಯ ... ರೆಂದೂ, ಅಸ್ತಿಪಾಸ್ತಿಗೆ ವಿಶೇಷ ನಷ್ಟ ಸಂಭವಿಸಲಿಲ್ಲವೆಂದೂ ಅವರೇ ಪ್ರಕಟಿಸಿ ... ಕೆಲವು ದಿನಗಳ ಹಿಂದೆ ರಾತ್ರಿಹೊತ್ತು ಲಂಡನ್ ಪಟ್ಟಣದ ಮೇಲೆ ವಿಮಾನ ... ದಲ್ಲಿ ಹಾರಿಬಂದಿದ್ದ ಜರ್ಮನ ಸವಾರನು ಅದರ ವೃತ್ತಾಂತವನ್ನು ... ವಾನೆ. ಅದರಲ್ಲಿ ಅವನು ಹೇಳುವುದೇನೆಂದರೆ ಥೇಮ್ಸ್ ನದಿಯು ಚೆನ್ನಾಗಿ ... ತ್ತದೆ. ಅದರ ದಾರಿಯಲ್ಲೇ ನಾವು ಲಂಡನ್ ಪಟ್ಟಣದ ಮೇಲೆ ಹೋದೆವು. ... ಮೇಲೆಲ್ಲಾ ಕತ್ತಲು ಕವಿದಿತ್ತು. ಕೆಲವು ಕಡೆ ಕತ್ತಲು ಹೆಚ್ಚಾ ... ಅಂಥಾ ಕಡೆಗಳಿಗೆ ಗುಂಡುಹಾಕಬೇಕೆಂದು ಕುತೂಹಲಪಟ್ಟೆವು. ... ಪಟ್ಟಣದ ಮೇಲೆ ಹೋದ ಕೂಡಲೇ ಸರ್ಚ್ ಲೈಟ್ ಎಂಬ ಕಾವಲಿನ ... ಗಳನ್ನು ನಮ್ಮ ಕಡೆಗೆ ತಿರುಗಿಸಿದರು. ಒಡನೆಯೇ ನಮಗೆ ಗುರಿಯಿಟ್ಟು ... ಗಳನ್ನು ಎಲ್ಲಾ ಕಡೆಗಳಿಂದಲೂ ಹೊಡೆಯಾರಂಭಿಸಿದರು. ನಾವು ಸೆಂಟ್ ... ಎಂಬ ದೇವಾಲಯಕ್ಕೆ ಗುಂಡು ಹಾಕಲಿಲ್ಲ. ಟವರ್ ಬ್ರಿಡ್ಜ್ ಎಂಬ ... ಒಡೆಯಬೇಕೆಂದು ಗುಂಡು ಹಾಕಿದೆವು ; ಇದು ಅದಕ್ಕೆ ಬಡಿಯಿತೋ ... ತಿಳಿಯದು. ಲಿವರ್‌ಪೂಲ್ ಬೀದಿಯ ಸ್ಟೇಷನ್‌ಗೂ ಗುಂಡು ... ಅಲ್ಲಿ ಕೆಲವು ನಷ್ಟವಾಯಿತು. ಈ ರೀತಿಯಾದ ವರ್ತಮಾನವಲ್ಲ ... ಇಲ್ಲದೆಹೋದರೂ ಬ್ರಿಟಿಷ್ ಗವರ್ನ್‌ಮೆಂಟಿನವರು ಇದನ್ನು ಪ್ರಕ ... ರುತ್ತಾರೆ. ಆದಾಗ್ಯೂ ಜರ್ಮನಿಯವರ ಜೆಪ್ಪೆಲಿನ್ ಯಂತ್ರಗಳು ... ಪಟ್ಟಣದ ಮೇಲೆ ಬಂದಿದ್ದು ಬಹಳ ಮಟ್ಟಿಗೆ ನಷ್ಟವನ್ನುಂಟುಮಾಡಿವೆ ... ಗೊತ್ತಾಗುತ್ತದೆ.

ಪಶ್ಚಿಮ ರಣರಂಗದಲ್ಲಿ.

ಪೂರ್ವ ರಣರಂಗದ ಯುದ್ಧಸಾಲು ಬಹಳ ದೂರದ ತನಕ ವ್ಯಾಪಿಸಿರುವು ... ಅಲ್ಲಿ ನಡೆಯುವ ಕದನ ಕಾರ್ಯಗಳು ತೊಡಕಾಗಿರುತ್ತವೆ. ಸರಿಯಾಗಿ ... ಕಷ್ಟ. ಒಂದು ಸ್ಥಾನದಲ್ಲಿ ಜರ್ಮನಿಯವರು ರಷ್ಯಾದವರನ್ನು ... ಸುವಂತೆ ಕಾಣುವುದು. ಆದರೆ ಅನೇಕ ಸ್ಥಾನಗಳಲ್ಲಿ ರಷ್ಯಾದವರು ... ಯವರನ್ನೂ ಆಸ್ಟ್ರಿಯದವರನ್ನೂ ಸೋಲಿಸಿ ಹಿಂದಕ್ಕೋಡಿಸುತ್ತಿದ್ದಾರೆ; ... ಗಳನ್ನು ಕೈಸೆರೆ ಹಿಡಿದೂ ಇರುವರು.

ಯುದ್ಧಸಾಲಿನ ಉತ್ತರ ಭಾಗ ಅಂದರೆ ರೀಗಾ ತೀರಪಟ್ಟಣದ ಹತ್ತಿರ ... ಜರ್ಮನಿಯವರ ಮೇಲೆ ನುಗ್ಗಿ ಕದನಮಾಡಿ ಅವರನ್ನು ಕೆಲವು ... ಹಿಮ್ಮೆಟ್ಟಿಸಿದ್ದಾರೆ ಅಲ್ಲಿಂದ ದಕ್ಷಿಣಕ್ಕೆ ರಷ್ಯಾದವರೇ ಹಿಮ್ಮೆಟ್ಟಿ ಹೋಗಿ ...; ಹೀಗೆ ಹೋಗುವಾಗಲೂ ಅವರು ಜರ್ಮನಿಯವರಲ್ಲಿ ಬಹಳ ನಷ್ಟ ... ರೆ. ಅಲ್ಲಿಂದ ದಕ್ಷಿಣಕ್ಕೆ ಜರ್ಮನಿಯವರು ಸ್ವಲ್ಪ ದೂರ ಹಿಮ್ಮೆಟ್ಟಿ ... ರೆಂದು ಹೇಳಿ ಒಪ್ಪಿಕೊಂಡಿದ್ದಾರೆ. ದಕ್ಷಿಣ ಪ್ರಾಂತ್ಯದಲ್ಲಿ ರಷ್ಯಾ ... ಮುಂದುಮುಂದಕ್ಕೆ ನುಗ್ಗಿಹೋಗುತ್ತಾ ಅನೇಕ ಶತ್ರು ಸೈನಿಕರನ್ನು ... ಹಿಡಿದಿರುವರು. ಇವರು ಲುಕ್ ಎಂಬ ಪಟ್ಟಣವನ್ನು ಜರ್ಮನಿಯವ ... ಕಿತ್ತುಕೊಂಡರು; ಅಲ್ಲಿ 6,128 ಯುದ್ಧಭಟರು ರಷ್ಯಾದವರಿಗೆ ಕೈಸೆರ ... ರು. ಈ ನಗರದ ಹತ್ತಿರ ರಷ್ಯಾದವರು ಹಲವು ಗ್ರಾಮಗಳನ್ನು ಗೆದ್ದು ... ಸೈನಿಕರನ್ನೂ ಮದ್ದುಗುಂಡು ಪಿರಂಗಿಗಳನ್ನೂ ವಶಮಾಡಿಕೊಂಡಿದ್ದಾರೆ ... ಸಾಲಿನ ಒಂದು ಸ್ಥಾನದಲ್ಲಿ ಜರ್ಮನಿ ಸೈನಿಕರ ಬಳಿ ಇದ್ದ ಎಂಟು ... ಗಳನ್ನೂ, ನಾಲ್ಕು ಹೌವಿಟ್ಜರುಗಳೆಂಬ ಪಿರಂಗಿಗಳನ್ನೂ, ಇತರ ಜಾತಿಯ ... ಪಿರಂಗಿಗಳನ್ನೂ ಮದ್ದುಗುಂಡು ಸಮೇತ ರಷ್ಯಾದವರು ಕಿತ್ತುಕೊಂ... . ಹೀಗೆ ಕಿತ್ತುಕೊಂಡ ಪಿರಂಗಿಗಳನ್ನೇ ರಷ್ಯಾದವರು ಜರ್ಮನಿಯವರ ... ಎತ್ತಿಟ್ಟು ಗುಂಡುಗಳ ಮಳೆ ಸುರಿಸಿ ಅವರನ್ನು ಓಡಿಸಿರುತ್ತಾರೆ. ರಷ್ಯಾ ... ಸೈನಿಕರು ಅನೇಕ ಕದನಗಳಲ್ಲಿ ಶತ್ರು ಸೈನ್ಯಗಳನ್ನು ಬಹಳ ... ಓಡಿಸಿದ್ದಾರೆ. ಗಲವು ಸ್ಥಾನಗಳಲ್ಲಿ ಕದನಗಳು ಬಹಳ ಘೋರವಾಗಿ ... ಒಂದು ಬೆಟ್ಟವು ಅನೇಕ ಸಲ ಈ ಪಕ್ಷದವರಿಗೂ, ಆ ಪಕ್ಷದವರಿಗೂ ... , ಕೈಬಿಟ್ಟುಹೋಗುತ್ತಲೂ ಇತ್ತು. ಆಗಸ್ಟ್ ತಿಂಗಳ ಕಡೇ ವಾರ ... ಸೆಪ್ಟಂಬರ್ ತಿಂಗಳ ಪ್ರಾರಂಭದಲ್ಲೂ ರಷ್ಯಾದವರು ಶತ್ರು ಸೈನ್ಯದಲ್ಲಿ ... ಉದ್ದದ ಯುದ್ಧಸಾಲಿನಲ್ಲಿ ಒಟ್ಟು 70,000 ಯುದ್ಧಭಟರನ್ನೂ, ... ಗಳನ್ನೂ, 200 ಮೆಷೀನ್ ಪಿರಂಗಿಗಳನ್ನೂ ಕೈಸೆರೆ ಹಿಡಿದುಕೊಂಡಿ... . ಯುದ್ಧವು ಮಹಾ ಘೋರವಾಗಿ ನಡೆಯಿತು. ಒಂದು ಸ್ಥಾನದೊಳಗೆ ... ಎದುರು ಪಾರ್ಶ್ವದಲ್ಲೇ ರಣರಂಗದಲ್ಲಿ ಎಂಟು ಸಾವಿರ ಜರ್ಮನಿ ... ಕೊಲೆಯಾಗಿ ಬಿದ್ದಿದ್ದರು.

ಜರ್ಮನಿಯ ವಿಮಾನ ಯಂತ್ರಗಳು ರೀಗಾ ಸಮೀಪಕ್ಕೂ ರೀಗಾ ಕೊಲ್ಲಿಗೂ ... . ಒಂದನ್ನು ರಷ್ಯಾ ಪಿರಂಗಿ ಗುಂಡುಗಳು ಕೆಳಕ್ಕೆ ಇಳಿಸಿ ಬಿಟ್ಟವು ... ಕೊಲ್ಲಿಗೆ ಬಂದಿದ್ದವುಗಳನ್ನೆಲ್ಲಾ ರಷ್ಯಾ ಸಮುದ್ರ ವಿಮಾನಗಳು ಇಲ್ಲಿಂದ ... ಟ್ಟವು.

ಕೈಸೆರೆ ಸಿಕ್ಕಿರುವ ಜರ್ಮನಿ ಸೈನಿಕರು ವಾರ್ಸಾ ನಗರವನ್ನು ಗೆದ್ದುಕೊಂಡ ... ಅಲ್ಲಿಂದ ಮುಂದಕ್ಕೆ ಯುದ್ಧಕಾರ್ಯಗಳನ್ನು ನಡೆಸದೆ ನಿಲ್ಲಿಸಿ ಬಿಡುತ್ತೇ ... ಜರ್ಮನಿಯವರು ಹೇಳುತ್ತಿದ್ದ ಮಾತನ್ನು ಅವರು ತಪ್ಪಿ ಮುಂದಕ್ಕೂ ... ವನ್ನು ನಡೆಸಿಕೊಂಡು ಹೋಗುತ್ತಿದ್ದಾರಲ್ಲಾ ಎಂದು ಜರ್ಮನಿ ಸೈನಿಕರ ... ಕುಗ್ಗಿಹೋಗಿದೆ ಎಂದು ಹೇಳುತ್ತಾರೆ. ಜರ್ಮನಿಯವರ್ಯಾರಿಗೂ ಈ ... ಕಾಲದಲ್ಲಿ ಯುದ್ಧಮಾಡುತ್ತಾ ಇರುವುದರಲ್ಲಿ ಅಭಿರುಚಿ ಇಲ್ಲ.

ರಷ್ಯಾದವರು ಮರಣಕ್ಕೂ ಹೆದರುವುದಿಲ್ಲವೆಂದು ಜರ್ಮನಿಯವರೇ ಅವ ... ಕೊಂಡಾಡುತ್ತಾರೆ. ಒಂದು ಸ್ಥಾನದಲ್ಲಿ ಜರ್ಮನಿಯವರು 200 ರಷ್ಯಾ ... ಸವಾರರನ್ನು ಸುತ್ತುಹಾಕಿ ಸಿಕ್ಕಿಸಿಕೊಂಡರು. ಇವರ್ಯಾರೂ ಶರಣಾಗತ ... ಲೊಲ್ಲದೆಹೋದರು. ಪ್ರತಿ ಒಬ್ಬನೂ ಕೊಲ್ಲಲ್ಪಟ್ಟನು.

ರಷ್ಯದವರಿಗೆ ಯುದ್ಧದಲ್ಲಿ ಬಹಳ ಪರಾಕ್ರಮವೂ ಅಭಿರುಚಿಯೂ ... . ಸಾಧ್ಯವಾದ ಕಡೆಗಳಲ್ಲೆಲ್ಲಾ ಅವರು ಬಹಳ ಶೌರ್ಯದಿಂದ ಶತ್ರುವಿನ ... ನುಗ್ಗಿ ಕದನಮಾಡುತ್ತಾರೆ. ಜಯವಾಗುವುದೆಂಬ ನಿರೀಕ್ಷೆಯು ಅವ ... ಹೆಚ್ಚಾಗಿದೆ. ರಷ್ಯಾದವರಿಗಾದ ನಷ್ಟಕ್ಕಿಂತ ಜರ್ಮನಿಯವರ ಕಡೆ ... ನಷ್ಟವಾಗಿರುವುದು. ಒಟ್ಟಾಗಿ ಜರ್ಮನಿಯ ಸೈನಿಕರಲ್ಲಿ 40,00,000 ... ನಷ್ಟವಾಗಿದ್ದಾರೆಂದು ಹೇಳಲಾಗಿದೆ.

ಇಟಲಿ ಮತ್ತು ಆಸ್ಟ್ರಿಯಾ.

ಇಟಲಿಯವರು ಬೇಗ ಬೇಗನೆ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಾ ಇಲ್ಲ. ಆಸ್ಟ್ರಿಯಾದವರ ಕೋಟೆಗಳನ್ನೂ ಕಂದಕಗಳನ್ನೂ ನಾಶಪಡಿಸುವುದು ಅವರಿಗೆ ಬಹಳ ಪ್ರಯಾಸವಾಗಿರುವಂತೆ ತೋರುವುದು. ಬೆಟ್ಟ ಗುಡ್ಡ ಪರ್ವತಗಳಲ್ಲಿ ಅನೇಕ ಘೋರ ಕದನಗಳು ಆದವು. ಆಸ್ಟ್ರಿಯಾದವರು ಇಟಲಿಯವರ ಮೇಲೆ ನುಗ್ಗಿ ಕದನ ಮಾಡಿದರು. ಆದರೇನು, ಪ್ರತಿ ಸಲವೂ ಅವರು ಹಿಮ್ಮೆಟ್ಟಬೇಕಾಯಿತು. ಒಂದು ಸ್ಥಾನದಲ್ಲಿ ಇಟಲಿಯವರು 193 ಸೈನಿಕರನ್ನು ಅಪಾರ ಯುದ್ಧಸಾಮಗ್ರಿಗಳನ್ನೂ ಸ್ವಾಧೀನ ಪಡಿಸಿಕೊಂಡಿದ್ದಾರೆ.

ಟರ್ಕಿಯಲ್ಲಿ.

ಟರ್ಕಿಯಲ್ಲಿ ನಡೆದ ಯುದ್ಧವಾರ್ತೆಗಳು ವಿಶೇಷವಾಗಿ ಬಂದಿಲ್ಲ. ಟರ್ಕಿಯವರು ನಮ್ಮ ಪಕ್ಷದ ಸೈನ್ಯಗಳಿರುವ ಕಂದಕಗಳ ಕೆಳಗಡೆಗೆ ಸುರಂಗಗಳನ್ನು ಹಾಕಿ ಮದ್ದಿಟ್ಟು ಹಾರಿಸಿಬಿಡಬೇಕೆಂದು ಪ್ರಯತ್ನಪಟ್ಟರು. ಅವರ ಸುರಂಗವೇ ಹತ್ತಿಕೊಂಡು ಸುಮಾರು 15 ಮಂದಿ ಮೃತಪಟ್ಟರು. ಡಾರ್ಡನೆಲ್ಸ್‌ನಲ್ಲಿ ರಷ್ಯಾ ಹಡಗುಗಳು ಟರ್ಕಿಯ ಒಂದು ಸಬ್‌ಮೆರೀನ್ ಹಡಗನ್ನು ಮುಳುಗಿಸಿರುತ್ತವೆ. ಫ್ರೆಂಚರು ಯುದ್ಧದ ಜಹಜಿಗೆ ಮಾಡಿ ತಂದಿದ್ದ ಒಂದು ವ್ಯಾಪಾರದ ಜಹಜಿಗೆ ಆದು ರೋಡ್ಸ್ ಎಂಬ ತೀರ ಸ್ಥಳದಲ್ಲಿ ಸಿಂಹಾದ್ರಿಗೆ ಟಾರ್ಪೆಡೋ ಬಡಿದು ಮುಳುಗಿಹೋಯಿತು. 62 ಮಂದಿಯಲ್ಲಿ 12 ಜನರು ನೀರಿನ ಪಾಲಾದರು. ಫ್ರೆಂಚರು ಡಾರ್ಡನೆಲ್ಸ್ ಜಲಮಾರ್ಗದ ಏಷ್ಯಾ ತೀರದ ಮೇಲೆ ಗುಂಡುಗಳ ಮಳೆ ಸುರಿಸಿದರು.

ಗಲ್ಲಿಪೋಲಿ ಅರ್ಧ ದ್ವೀಪದಲ್ಲಿ ಆಸ್ಟ್ರೇಲಿಯದ ಸೈನಿಕರೇ ವಿಶೇಷವಾಗಿ ಕದನಕ್ಕೆ ಸಿಕ್ಕಿದರು. ಅವರೇ ಬಹು ಪರಾಕ್ರಮದಿಂದ ಯುದ್ಧ ಮಾಡಿದ್ದರಿಂದ ಅವರಲ್ಲಿ ಬಹು ಮಂದಿ ನಷ್ಟಪಟ್ಟರು. ಒಟ್ಟು 19,183 ಮಂದಿ ನಷ್ಟಪಟ್ಟದ್ದರಲ್ಲಿ 4,604 ಮಂದಿ ಕೊಲೆಯಾಗಿರುತ್ತಾರೆ. ಆ ಪ್ರದೇಶವು ಬಹಳ ಕಷ್ಟಕರವಾದದ್ದು ; ನಮ್ಮ ಪಕ್ಷದವರು ಅಪಾರ ಸಾಹಸಪರಾಕ್ರಮವನ್ನು ತೋರಿಸುವರು.

ಸೆರ್ಬಿಯಾದಲ್ಲಿ.

ಆಸ್ಟ್ರಿಯಾದವರು ಡಾನ್ಯೂಬ್ ನದಿಯ ಆಚೆ ಇರುವ ಸೆರ್ಬಿಯಾದಿಗೆ ಸೇರಿದ ಎಂಟು ಠಾಣ್ಯಗಳ ಮೇಲೆ ಗುಂಡುಗಳನ್ನು ಹಾಕಿದರು. ಆದರೆ ನಷ್ಟವೇನೂ ಆಗಿರುವುದಿಲ್ಲ. ಆಸ್ಟ್ರಿಯಾದವರು ಸೆರ್ಬಿಯಾದೊಳಕ್ಕೆ ನುಗ್ಗಬೇಕೆಂದು ಪ್ರಯತ್ನಪಟ್ಟರು. ಆದರೆ ಅವರು ಆ ನದಿಯನ್ನೇ ದಾಟಲಾರದೆ ಹೋದರು. ಸೆರ್ಬಿಯಾದವರು ಸೈನ್ಯಗಳನ್ನು ಸಿದ್ಧಪಡಿಸಿ ಇಟ್ಟುಕೊಂಡೇ ಇದ್ದಾರೆ.

ಬಲ್ಗೇರಿಯಾ ಮತ್ತು ಗ್ರೀಸ್.

ಬಲ್ಗೇರಿಯಾ ಸರ್ಕಾರದವರು 2,50,000 ಜನರು ಸೈನ್ಯಕ್ಕೆ ಬಂದು ಸೇರಬೇಕೆಂದು ಇಸ್ತಿಹಾರು ಕೊಟ್ಟಿದ್ದಾರೆ. ಅವರಲ್ಲೆಲ್ಲಾ ಯುದ್ಧಸನ್ನದ್ಧರಾಗಿ ಮಾಡಲು ಏರ್ಪಾಡಾಗಿರುತ್ತದೆ. ಇದನ್ನು ನೋಡಿ ಗ್ರೀಸ್ ರಾಜ್ಯದವರು ತಮ್ಮ ಸೈನ್ಯಗಳನ್ನು ಸಿದ್ಧಪಡಿಸಿಕೊಳ್ಳುವಂತೆ ಹುಕುಂ ಕೊಟ್ಟಿದ್ದಾರೆ. ಯಾವ ರೀತಿ ನಡೆಯಬೇಕೆಂಬ ವಿಷಯದಲ್ಲಿ ಗ್ರೀಸ್ ದೊರೆಯವರು ಅವರ ಮಂತ್ರಿಯ ಅಭಿಪ್ರಾಯವನ್ನು ಅಂಗೀಕರಿಸಿದ್ದಾರೆ. ಪ್ರಜೆಗಳಾದರೋ ಯುದ್ಧಾಪೇಕ್ಷೆಯಿಂದ ತವಕಪಡುತ್ತಿರುವರು. ಗ್ರೀಸ್ ಮತ್ತು ಸೆರ್ಬಿಯಾದವರು ಸೇರಿ ಮುಂದಿನ ಕಾರ್ಯಕ್ರಮವನ್ನು ಚರ್ಚಿಸಿ ಇತ್ಯರ್ಥಮಾಡುವರೆಂದು ಪ್ರಕಟವಾಗಿದೆ. ಈ ಸಂಗತಿಗಳ ಅರ್ಥವೇನೋ ಊಹಿಸಿ ಹೇಳುವುದು ಪ್ರಯಾಸ. ಸ್ಥಾನ್ಸ್ ಮತ್ತು ಬಾಲ್ಕನ್ ಯುದ್ಧವು ಪ್ರಾರಂಭವಾಗದಿರಲೆಂದು ಹಾರೈಸುತ್ತೇವೆ. ಇನ್ನು ಕೆಲವು ದಿನಗಳೊಳಗಾಗಿ ಮುಖ್ಯವಾದ ಸಮಾಚಾರಗಳು ಹೊರಪಡಬಹುದು.

ಈಚೆಗೆ ಬಂದಿರುವ ವರ್ತಮಾನದಿಂದ ಬಲ್ಗೇರಿಯಾದವರು ಆತ್ಮರಕ್ಷಣೆಗಾಗಿ ಸೈನ್ಯವನ್ನು ಕೂಡಿಸುತ್ತಿರುವಂತೆಯೂ, ಜರ್ಮನಿಯವರಿಗೂ ಆಸ್ಟ್ರಿಯಾದವರಿಗೂ ಬಲ್ಗೇರಿಯಾ ಮೂಲಕ ಟರ್ಕಿಗೆ ಹೋಗದಂತೆ ತಡೆಯಬೇಕೆಂಬ ಪ್ರವೇಶವೆಂತಹ ಬಲ್ಗೇರಿಯಾದವರ ಉದ್ದೇಶವೆಂದೂ, ಆದರೂ ಸೈನ್ಯ ಕೂಡಿಸುವುದನ್ನು ನೋಡಿ ಗ್ರೀಸಿನವರೂ ಸೈನ್ಯವನ್ನು ಜೊತೆಮಾಡುತ್ತಿದ್ದಾರೆಂದೂ ತಿಳಿಯುತ್ತದೆ.

ಇತರ ವಿಷಯಗಳು.

ಕಳೆದ ವಾರ ಬ್ರಿಟಿಷ್ ದ್ವೀಪಗಳ ತೀರಪಟ್ಟಣಗಳಿಗೆ ಬಂದು ಹೋದ 1,323 ಜಹಜುಗಳಲ್ಲಿ ಎರಡನ್ನು ಮಾತ್ರ ಜರ್ಮನಿಯ ಸಬ್‌ಮೆರೀನುಗಳು ಮುಳುಗಿಸಿದವು. ಅಲ್ಲದೆ ಈಚೆಗೆ ಐರ್ಲೆಂಡಿನ ದಕ್ಷಿಣದಲ್ಲಿ ಮೂರು ಜಹಜುಗಳನ್ನು ಮುಳುಗಿಸಿರುವಂತೆ ಕಾಣುತ್ತದೆ. ಅವುಗಳಲ್ಲಿದ್ದವರೆಲ್ಲಾ ಬದುಕಿ ಬಂದರು ; 11 ಜನ ಮಾತ್ರ ಸಿಕ್ಕಿ ಇಲ್ಲ.

ಜಾವಾ ದ್ವೀಪದಿಂದ ಆಮ್‌ಸ್ಟರ್‌ಡಾಂ ನಗರಕ್ಕೆ ಬರುತ್ತಿದ್ದ ಡಚ್ಚರ ಒಂದು ಜಹಜು ಇಂಗ್ಲೆಂಡಿನ ತೀರದಲ್ಲಿ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿಯಿತು. ಅದರಲ್ಲಿದ್ದವರು ಇನ್ನೊಂದು ಹಡಗಿಗೆ ಹೋಗಿ ಸೇರಿಕೊಂಡರು. ಆ ಜಹಜನ್ನು ಥೇಮ್ಸ್ ನದಿಯೊಳಕ್ಕೆ ಎಳೆದು ತಂದರು. ಆದರೆ ಅದು ತೀರಕ್ಕೆ ಬರುವುದರೊಳಗಾಗಿ ಮುಳುಗಿಹೋಯಿತು.

ಜರ್ಮನಿಯ ಎರಡು ವಿಮಾನ ಯಂತ್ರಗಳು ಸ್ವಿಟ್ಜರ್ಲೆಂಡಿನ ಮೇಲೆ ಹಾರಿಹೋದವು. ಒಂದು ವಿಮಾನವು ಸ್ವಿಟ್ಜರ್ಲೆಂಡ್ ಸೀಮೆಗೆ ಗುಂಡುಹಾಕಿತು. ಆ ಗವರ್ನ್‌ಮೆಂಟಿನವರು ಆ ವಿಮಾನಿಕನನ್ನು ಶಿಕ್ಷಿಸಬೇಕೆಂದೂ, ಅವನು ಗುಂಡುಹಾಕಿದ್ದು ಧರ್ಮವಲ್ಲವೆಂದೂ ಪ್ರತಿಭಟಿಸಿ ಜರ್ಮನಿ ಸರ್ಕಾರಕ್ಕೆ ತಿಳಿಸಿದರು. ಕೂಡಲೇ ಜರ್ಮನೀ ರಾಯಭಾರಿಯು ತಪ್ಪನ್ನು ಒಪ್ಪಿಕೊಂಡು ಅವರ ಕ್ಷಮೆಯನ್ನು ಬೇಡಿದನು.

ಟರ್ಕಿಯವರು ಅರ್ಮೀನಿಯದ ಕ್ರೈಸ್ತರನ್ನೆಲ್ಲಾ ಕೊಂದು ಹಾಕುತ್ತಿದ್ದಾರೆಂದು ವರ್ತಮಾನವಿದೆ. ಅಮೇರಿಕದವರು ಇದಕ್ಕೆ ಗಮನಕೊಟ್ಟು ಟರ್ಕಿಯವರ ಮೇಲೆ ಪ್ರತಿಭಟಿಸಿ ಅವರು ಆ ರೀತಿ ಕ್ರೈಸ್ತರಕ್ಕೆ ನಡೆಸುವುದನ್ನು ನಿಲ್ಲಿಸಬೇಕೆಂದು ಅಮೇರಿಕದವರಿಗೆ ತಿಳಿಸಲಾಯಿತು.

ಎಮ್‌ಡನ್ ಎಂಬ ಜರ್ಮನಿ ಯುದ್ಧದ ಹಡಗಿನಲ್ಲಿದ್ದ ಒಬ್ಬ ಹುದ್ದೇದಾರನು ಸಿಂಗಪುರದಲ್ಲಿ ಬಂಧನದಿಂದ ತಪ್ಪಿಸಿಕೊಂಡು ಅಮೇರಿಕಕ್ಕೆ ಹೋಗಿ ಅಲ್ಲಿಂದ ಜರ್ಮನಿಗೆ ವಾಪಸು ಹೋಗಬೇಕೆಂದು ಪ್ರಯತ್ನಪಡುತ್ತಿದ್ದಾನಂತೆ.

ಲಂಡನ್ ಪಟ್ಟಣದಲ್ಲಿ ಸರ್ಕಾರದವರು ಒಬ್ಬ ಗಂಡಸನ್ನೂ ಒಬ್ಬ ಹೆಂಗಸನ್ನೂ ಹಿಡಿದು ಅವರು ಗೂಢಚಾರರೆಂದು ಅವರ ಮೇಲೆ ವಿಚಾರಣೆ ಮಾಡಿದರು. ಅವರ ಮೇಲೆ ಆ ಅಪರಾಧ ರುಜುವಾಯಿತು. ಗಂಡಸನ್ನು ಗಲ್ಲಿಗೆ ಹಾಕಿದರು ; ಹೆಂಗಸಿಗೆ ಹತ್ತು ವರುಷ ಸಜಾ ವಿಧಿಸಿದರು ;

ಬ್ರಿಟಿಷ್ ಚಕ್ರಾಧಿಪತ್ಯದ ಪ್ರತಿನಿಧಿ ಸಭೆಯಲ್ಲಿ ಹಿಂದುಸ್ಥಾನದ ಪ್ರತಿನಿಧಿಯನ್ನು ಸೇರಬೇಕೆಂದು ಅಂಗೀಕರಿಸಬೇಕೆಂದು ವೈಸ್‌ರಾಯರವರ ಮಂತ್ರಾಲೋಚನಾ ಸಭೆಯಲ್ಲಿ ಸೂಚಿಸಿದ್ದನ್ನು ಇಂಗ್ಲೆಂಡಿನಲ್ಲಿ ಸಮ್ಮತಿಪಟ್ಟು ಅಂಗೀಕರಿಸಿರುವಂತೆ ಕಾಣುತ್ತದೆ. ಹೀಗಾಗುವುದೇ ಸಹಜ. ನಮ್ಮ ರಾಷ್ಟ್ರದ ಒಬ್ಬ ಪ್ರತಿನಿಧಿಯು ಆ ಸಭೆಯಲ್ಲಿರುವಂತಾಗಬೇಕು.

ಆಸ್ಟ್ರಿಯಾ ರಾಯಭಾರಿಯಾದ ಡಾಕ್ಟರ್ ಡುಂಬನ ಮೇಲೆ ಅಮೇರಿಕದವರಿಗೆ ಸಿಟ್ಟಾಗಿದೆ. ಆತನಿಗೆ ಗೊತ್ತಿರುವ ಆತನನ್ನು ಕೆಲಸದಿಂದ ಬಿಡಿಸಿ ವಾಪಸು ಕರೆಸಿಕೊಳ್ಳಬೇಕೆಂದು ಅಮೇರಿಕದವರು ತಿಳಿಸಿದ್ದಾರೆ. ಮತ್ತು ಅತನು ವಾಪಸು ಹೋಗುವುದಕ್ಕೆ ತಾವೇನೂ ಕಾವಲು ಕೊಡುವುದಿಲ್ಲವೆಂದು ಹೇಳಿದರು.

ಬ್ರಿಟಿಷ್ ಜಮಾಖರ್ಚಿನ ಅಂದಾಜು ಪಟ್ಟಿಗಳನ್ನು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮುಂದೆಯಲ್ಲಿ ಕಳೆದ ವಾರ ಹಾಜರು ಮಾಡಿದರು. ರಾಜಾದಾಯ 27 ಕೋಟಿ 20 ಲಕ್ಷ ಪೌಂಡುಗಳೆಂದೂ, ಖರ್ಚು 159 ಕೋಟಿ ಪೌಂಡುಗಳೆಂದೂ ಅಂದಾಜು ಮಾಡಲ್ಪಟ್ಟಿದೆ. ಈಗ ಬ್ರಿಟನ್‌ಗೆ 220 ಕೋಟಿ ಪೌಂಡುಗಳ ಸಾಲವಿದೆ. ಈ ಸಂಖ್ಯೆಗಳು ಅಪಾರವಾಗಿರೋಣದರಿಂದ ಅವು ಸಾಮಾನ್ಯ ಗ್ರಹಿಕೆಗೆ ಮೀರಿರುತ್ತವೆ. ಮುಂದಿನ ವರುಷ ಸಾಲದ ಬಾಬತಿಗೆ 10 ಕೋಟಿ ಪೌಂಡು, ಭೂಸೈನ್ಯದ ಖರ್ಚಿಗೆ 71½ ಕೋಟಿ ಪೌಂಡು, ಇತರ ಕಾರ್ಯಗಳಿಗೆ 43 ಕೋಟಿ 30 ಲಕ್ಷ ಪೌಂಡು, ಅಂತು 133 ಕೋಟಿ 80 ಲಕ್ಷ ಪೌಂಡುಗಳು ಬೇಕಾಗಿರುತ್ತದೆ. ಇದಕ್ಕೋಸ್ಕರ ಆದಾಯದ ಮೇಲೂ, ಟೀ ಸೊಪ್ಪಿನ ಮೇಲೂ, ಸಕ್ಕರೆ, ಕಾಫೀಬೀಜ, ಕೋಕೋ, ಹೊಗೆಸೊಪ್ಪುಗಳ ಮೇಲೂ ಸುಂಕ ಮತ್ತು ತೆರಿಗೆಗಳನ್ನು ಹೆಚ್ಚು ಮಾಡಿದ್ದಾರೆ. ವರುಷಕ್ಕೆ 130 ಪೌಂಡು (ಅಂದರೆ 1,950 ರೂಪಾಯಿ) ವರಮಾನವುಳ್ಳವರು 23 ಪೌಂಡು (ಅಂದರೆ 345 ರೂಪಾಯಿ) ತೆರಿಗೆಯನ್ನು ಸರ್ಕಾರಕ್ಕೆ ಕೊಡುವಂತಾಗಿದೆ. ಆದಾಯದ ಹೆಚ್ಚಳವನ್ನು ವಜಾಮಾಡಿದರು. ಇನ್ನು ಮೇಲೆ ಅಂಚೆಯವಾಗಲಿ ಕಾಗದಗಳಿಗೆ ಅರೆಯಷ್ಟನೇ ಒಂದು ಅಣೆ ಮಿಚಿದ್ ಮಾಡಿದ್ದಾರೆಯಾಯಿತು. ಇದಲ್ಲದೆ ಮೋಟಾರ್ ಗಾಡಿ, ಗಡಿಯಾರ, ಬೆಲೆಸಿನ ಹಾಟು, ಇವೇ ಮೊದಲಾದ ಮುಖ್ಯವಲ್ಲದ ಪದಾರ್ಥಗಳಿಗೆ ಭಾರಿ ಸುಂಕಗಳನ್ನು ಹಾಕಿದ್ದಾರೆ. ಚಾಲ್ತಿ ಸಾಲಿನ ಬ್ರಿಟಿಷ್ ರಾಜಾದಾಯವು 30 ಕೋಟಿ 50 ಲಕ್ಷ ಪೌಂಡುಗಳಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ; ಅಂದರೆ ಹುಟ್ಟುವಳಿಯು ಏರಿಹೋಯಿತು. ಇದರಿಂದ ಈ ಘೋರವಾದ ಯುದ್ಧಕ್ಕೆ ಬ್ರಿಟನ್ ಪ್ರಜೆಗಳು ಎಷ್ಟೊಂದು ದ್ರವ್ಯವನ್ನು ಒದಗಿಸಬೇಕಾಗಿ ಬಂದಿದೆ ಎನ್ನುವುದು ಗೊತ್ತಾಗಬಹುದು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿಯ ಪೋಲೀಸಿನವರು ಐದು ಮಂದಿ ಬಾಲಕರನ್ನು ಹಿಡಿದು, ಇವರು ಸುಮಾರು 24 ಕಳವು ನಡೆಸಿದ್ದಾರೆಂದು ಫಿರ್ಯಾದು ತಂದಿದ್ದಾರೆ.

ದೊಡ್ಡಬಳ್ಳಾಪುರದಲ್ಲಿ ಇದುವರೆಗೆ ಪ್ಲೇಗಿನಿಂದ ಸುಮಾರು 100 ಜನಗಳು ಕಾಲವಾದರೆಂದೂ, ಕಳೆದ ವಾರ ಮಳೆ ಆಗಿರುವುದಾಗಿಯೂ ತಿಳಿದುಬರುತ್ತದೆ.

ಈ ಸಲ ನವರಾತ್ರಿಯಲ್ಲಿ ರಾಜಧಾನಿಯಲ್ಲಿ ನಡೆಯುವ ಕೋಆಪರೇಟಿವ್ ಕಾನ್ಫರೆನ್ಸಿನಲ್ಲಿ ನಮ್ಮ ಯುವರಾಜರವರು ಭಾಷಣ ಮಾಡುವರೆಂದೂ, ಮ|| ಅಲಾ ಭಾಯಿ ಸಮಲ್ದಾಸ್ ಮೆಹತಾ ಎಂಬ ಬೊಂಬಾಯಿನ ದೊಡ್ಡ ಮನುಷ್ಯರು ಸಭೆಯ ಪ್ರೆಸಿಡೆಂಟರಾಗುತ್ತಾರೆಂದೂ ಪ್ರಕಟವಾಗಿದೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಒಬ್ಬ ಖೈದಿಯು ಸೂಪರಿಂಟೆಂಡರ ಮೇಲೆ ಬಿದ್ದು ಹೊಡೆದನೆಂದೂ, ಇದಕ್ಕೆ ಚಾಬುರಾಯನೆಂಬ ನೌಕರನು ಕಾರಣನೆಂದೂ ಚೀಫ್ ಜೈಲರಾದ ಸೂಪರ್ವೈಸರು ಆ ನೌಕರನ ಮೇಲೆ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದಾರೆ. ಈ ಮೊಕದ್ದಮೆಗೆ ಜೈಲಿನಲ್ಲಿರುವ ಕೆಲವು ಖೈದಿಗಳು ಸಾಕ್ಷಿಗಳಾಗಿ ಬರಬೇಕಾಗಿದೆ.

ಬರೋಡಾ ಸಂಸ್ಥಾನದಲ್ಲಿ ದಿವಾನ್‌ಗಿರಿಯನ್ನು ವಹಿಸಿಕೊಂಡಿರುವ ಮ|| ವಿ. ಪಿ. ಮಾಧವರಾವ್, ಸಿ.ಐ.ಇ ರವರು ಗಾಯಕವಾಡ ಮಹಾರಾಜರವರ ಪ್ರೀತಿ ಸನ್ಮಾನಗಳನ್ನು ಸಂಪಾದಿಸಿಕೊಂಡಿರುವುದರಿಂದ ಮಹಾರಾಜರವರು ಅವರ ಭಾವ ಪ್ರತಿಮೆಯನ್ನು ಮಾಡಿಸಿ ತರಿಸಿ ತಮ್ಮ ಸಂಸ್ಥಾನದಲ್ಲಿ ಇಡಿಸಿ ಅವರ ಹೆಸರನ್ನು ಶಾಶ್ವತಪಡಿಸಬೇಕೆಂದು ತೀರ್ಮಾನ ಮಾಡಿರುವಂತೆ ಪ್ರಕಟವಾಗಿದೆ.

ಈ ಸಲ ನವರಾತ್ರಿ ಉತ್ಸವ ಕಾಲದಲ್ಲಿ ವಿದ್ಯಾರ್ಥಿಗಳೂ ಇತರರೂ ರಾಜಧಾನಿಯಲ್ಲಿ ನಾನಾ ಬಗೆಯ ಪಂದ್ಯಗಳು ನಡೆದು ಬಹುಮಾನಗಳು ಕೊಡಲ್ಪಡುತ್ತವೆ. ಕ್ರಿಕೆಟ್, ಟೆನ್ನಿಸ್, ಮಂಥನ್ ರೇಸ್, ಜಿಂಖಾನಾ ಆಟಗಳು ನಡೆಯುತ್ತವೆ. ಹಿಂದುಸ್ಥಾನದ ಸ್ವಾಂಡೋ ಎಂದು ಪ್ರಖ್ಯಾತಿ ಪಡೆದಿರುವ ರಾಮಮೂರ್ತಿಯವರು ಬಂದು ತಮ್ಮ ಸಾಮರ್ಥ್ಯವನ್ನು ಪ್ರಕಾಶಪಡಿಸುತ್ತಾರೆ.

ರಾಜಧಾನಿಯ ಗೌರ್ನಮೆಂಟ್ ಹೌಸು ಸೂಪರಿಂಟೆಂಡರಾದ ಮ|| ವಿಶ್ವಂಭರಯ್ಯನವರ 9 ವರುಷದ 2 ನೇ ಬಾಲಕನು ಆಕಸ್ಮಿಕವಾಗಿ ಬಂಗಲೆ ಅವರ ದಲ್ಲಿರುವ ಕೊಳದಲ್ಲಿ ಬಿದ್ದು ತೀರಿಹೋದನು.—ಹಳೇ ಆಸ್ಪತ್ರೆಯಿಂದಲ್ಲಿ ಗುರು ಕಾರ್ ದೇವಣ್ಣನವರ ಬೀದಿಯಲ್ಲಿ ಒಬ್ಬ ಹೆಂಗಸು ಬಾವಿಯಲ್ಲಿ ಬಿದ್ದು ಮೃತಳಾದಳು.—ಹೊಡ್ಡ ಪೇಟೆಯಲ್ಲಿ ಗಾಡಿ ಹಾದು ಒಂದು ಆಡು ಸತ್ತುಹೋಯಿತು.

ಕಳೆದ ಬುಧವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಹುಜೂರ್ ಸೆಕ್ರೆಟರಿಯವರ ಕೂಡ ಅಲ್ಲಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬ ಕೈಗಾರಿಕೆ ಪಾಠಶಾಲೆಗೆ ದಯಮಾಡಿ ಪ್ರತಿ ಒಂದು ಕೈಗಾರಿಕೆ ಭಾಗವನ್ನೂ ಪರಿಶೀಲಿಸಿ ಸುಮಾರು 2 ಗಂಟೆ ಹೊತ್ತು ಇದ್ದು ಶಿಕ್ಷಣಾದಿ ಕ್ರಮಗಳನ್ನು ತನಿಖೆಮಾಡಿ ಸೂಪರಿಂಟೆಂಡರ ಮೂಲಕ ತಿಳಿದು ಸಂತೋಷಪಟ್ಟರು.

ಕಳೆದ ವಾರದಿಂದ ರಾಜಧಾನಿಯಲ್ಲಿ ಮೋಡ ಮುಸುಕಿಕೊಂಡೇ ಇದೆ. ಆಗಾಗ್ಗೆ ಮಳೆ ಸುರಿಯುವುದು. ಬುಧವಾರ ರಾತ್ರಿ 4-6 ಅಂಗುಲ ಮಳೆ ಆಯಿತು. ಕೆರೆ ಕಟ್ಟೆ ಕೊಳಗಳೆಲ್ಲಾ ತುಂಬಿ ಕೋಡಿ ಹರಿಯುತ್ತಲಿವೆ. ಬೇರೆ ಬೇರೆ ಬಡಾವಣೆಗಳಲ್ಲಿ ಹತ್ತಾರು ಮನೆಗಳೂ, ಹಲವು ಮನೆಗಳ ಗೋಡೆಗಳೂ ಬಿದ್ದುಹೋದವು. ಬೀದಿಗಳ ಮೇಲೆಲ್ಲಾ ನೀರು ಹರಿದು ರಸ್ತೆಗಳು ಕಿತ್ತು ಬಹಳವಾಗಿ ಕೆಟ್ಟುಹೋಗಿರುತ್ತವೆ.

ತರೀಕೆರೆ—ನರಸಿಂಹರಾಜಪುರದ ಟ್ರಾಮ್‌ವೆಯನ್ನು ಕೊಪ್ಪದ ಮುಖಾಂತರ ಶೃಂಗೇರಿಗೆ ಬಿಡಾವಣ ಮಾಡುವುದಕ್ಕೆ ನಾವೆಗೆ ತತ್ಕಾಲ ತುಂಗಾ ನದಿಗೆ ಸೇತುವೆ ಕಟ್ಟುವ ಖರ್ಚಲ್ಲದೆ 5,32,000 ರೂಪಾಯಿ ಬೇಕಾಗುವುದೆಂದು ರೈಲ್ವೆ ಸೆಕ್ರೆಟರಿಯವರು ತಿಳಿಸಿದ್ದಾರೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕ್ ಬೋರ್ಡುಗಳಲ್ಲೂ ಇದಕ್ಕೆ ಹಣವನ್ನು ಒದಗಿಸುವ ಏರ್ಪಾಡು ಮಾಡಬೇಕೆಂದು ಅಮಲ್ದಾರ್ರುಗಳಿಗೆ ತಿಳಿಸಲ್ಪಟ್ಟಿದೆ.

ಇಂಡಿಯಾ ಗವರ್ನ್‌ಮೆಂಟಿನವರು ಶೇಕಡಾ ನಾಲ್ಕು ರೂಪಾಯಿ ಬಡ್ಡಿಯುಳ್ಳ ಸಾಲಬೇಕೆಂದು ಅಪೇಕ್ಷಿಸಿರುತ್ತಾರೆ. ಸಾಮಾನ್ಯ ಪ್ರಜೆಗಳೂ ಕೂಡ 100 ರೂಪಾಯಿಯಾದರೂ ಈ ಸಾಲಕ್ಕೆ ಕೊಡಬಹುದೆಂಬ ರಿಯಾಯಿತಿ ತೋರಿಸಲ್ಪಟ್ಟಿದೆ. ಇಂಥಾ ಸಮಯದಲ್ಲಿ ಹಣವಿರತಕ್ಕವರು ಸಾಲಕೊಟ್ಟು ಕ್ರಮವಾಗಿ ಬಡ್ಡಿ ಪಡೆಯಬಹುದು. ಈ ಸಾಲದ ವಿವರಗಳನ್ನು ಇನ್ನೊಂದು ಕಡೆ ಪ್ರಕಟಮಾಡಿರುತ್ತೇವೆ. ಅಪೇಕ್ಷೆಪಡುವವರು ತಮಗೆ ಸಮೀಪವಾಗಿರುವ ಪೋಸ್ಟ್ ಆಫೀಸಿನಲ್ಲಿ ವಿಚಾರಿಸಿದರೂ ಅದರ ವಿವರವೆಲ್ಲಾ ಚೆನ್ನಾಗಿ ಗೊತ್ತಾದೀತು.

ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ನಡೆಯುವಾಗ್ಗೆ ಸಭೆಗಳೂ ಕೂಟಗಳೂ ವಿನೋದಗಳೂ ಅನೇಕವಾಗಿ ಜರುಗುವುದರಿಂದ ಅವುಗಳನ್ನೆಲ್ಲಾ ಜನಗಳ ತಿಳುವಳಿಕೆಗೋಸ್ಕರ ಆಯಾ ದಿನವೇ ಪ್ರಕಟಿಸಿಡುತ್ತಾ ಬರಬೇಕೆಂದು ಸರ್ಕಾರದವರು ಏರ್ಪಾಡುಮಾಡಿದ್ದಾರೆ. ಸಾರ್ವಜನಿಕವಾಗಿ ನಡೆಯುವ ಸಭೆ, ಕೂಟ, ವಿನೋದಗಳನ್ನು ಆಯಾ ಮುಖಂಡರೂ, ಸೆಕ್ರೆಟರಿಗಳೂ ಹಾಗೆಯೇ ಮೊದಲೇ ತಿಳಿಸಿದರೆ ಅಂಥವುಗಳನ್ನು ಸರ್ಕಾರಿ ನೋಟೀಸುಗಳಲ್ಲಿ ಸೇರಿಸಿ ಪ್ರಕಟಿಸಲಾಗುತ್ತದೆಂದೂ, ಈ ವಿಚಾರವನ್ನು ಮೈಸೂರು ಗೆಸ್ಟ್ ಕ್ವಾರ್ಟರ್ಸ್‌ನಲ್ಲಿರುವ ಮ|| ಬಿ. ನಾರಾಯಣಸ್ವಾಮಯ್ಯಂಗಾರ್ರಿಗೆ ತಿಳಿಸಬೇಕೆಂದೂ ಪ್ರಕಟಮಾಡಲಾಗಿದೆ.

ನಮ್ಮ ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಎ. ಎ. ಜೋನ್ಸ್ ರವರು ಕಳೆದ ಬುಧವಾರ ಸಾಯಂಕಾಲ ಮೋಟಾರಿನಲ್ಲಿ ಪತ್ನಿ ಸಮೇತ ರಾಜಧಾನಿಗೆ ಬಂದು ರಾತ್ರಿ ಬಂಗಲೆಯಲ್ಲಿ ಊಟ ಮಾಡಿದ ಮೇಲೆ ಏನೋ ವೇದನೆ ಎಂದು ಹೇಳುತ್ತಾ ಸ್ವಲ್ಪ ಹೊತ್ತಿನಲ್ಲಿ ಕಾಲವಾದರು. ಇಲ್ಲಿನ ವೈದ್ಯರು ಹೋಗಿ ಚಿಕಿತ್ಸೆಗಳನ್ನು ಮಾಡಿದರೂ ಪ್ರಯೋಜನವಾಗಲಿಲ್ಲ. ಮರುದಿನ ಶವವನ್ನು ಪೆಟ್ಟಿಗೆಯಲ್ಲಿ ಹಾಕಿ ಮೋಟಾರಿನಲ್ಲಿ ಬೆಂಗಳೂರಿಗೆ ಸಾಗಿಸಿ ಸೈನಿಕರ ಮರ್ಯಾದೆಗಳೊಡನೆ ಉತ್ತರಕ್ರಿಯೆಗಳು ನಡೆಸಲ್ಪಟ್ಟವು. ಅವರಿಗೆ ಇಂಥಾ ಆಕಸ್ಮಿಕವಾದ ಮರಣ ಪ್ರಾಪ್ತವಾಯಿತಲ್ಲಾ ಎಂದು ಮೈಸೂರಿನವರೆಲ್ಲಾ ವ್ಯಸನಪಡುತ್ತಿರುವರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಸೆಪ್ಟೆಂಬರ್ 16 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೂಲಧನ	....	ರೂ. 10,00,000
,, (2) ರಿಜರ್ವ್ ಫಂಡು	....	,, 50,000
,, (3) ಡಿಪಾಜಿಟ್ಟುಗಳು	....	,, 33,93,510
,, (4) ಇತರೆ	....	,, 29,711
(ಆನೆ ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 44,73,221
ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 9,68,893
,, (2) ಖಾತೆ ಮತ್ತು ಇತರ ಸಾಲಗಳು	......	,, 29,90,095
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 3,89,733
,, (4) ಇನ್‌ವೆಸ್ಟ್‌ಮೆಂಟುಗಳು	....	,, 59,710
,, (5) ಏಜೆನ್ಸಿಗಳಲ್ಲಿರುವ ಮೂಲಧನ	......	,, 48,093
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 15,649
,, (7) ಇತರೆ	....	,, 11,148
(ಆನೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 44,73,221

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟ್ ಸಂಗ್ರಹ.

ಅ|| ಕಮಿಷನರ್ ಮ|| ಎಂ ಶ್ರೀನಿವಾಸಮೂರ್ತಿಯವರನ್ನು 1914 ನೇ ಜುಲೈ ತಾ. 1 ರಿಂದ 1 ನೇ ಕ್ಲಾಸಿಗೆ ಬಡ್ತಿಮಾಡಿದೆ

ಸಾಗರ ತಾಲ್ಲೂಕ್ ಅಮಲ್ದಾರ್ ಮ|| ಸಜ್ಜನಪುರ ವೆಂಕಯ್ಯನವರಿಗೆ ಪ್ರೆಸಿಡೆನ್ಸಿಯವರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಕಾನೂನಿಗೆ ಸಂಬಂಧಪಡುವ ಮೊಕದ್ದಮೆಗಳನ್ನು ಹಿಡಿದು ಫಯಾಸಲ್ಮಾಡುವ ಅಧಿಕಾರ ವಹಿಸಿದೆ.

ಹೊಸಕೋಟೆ ಅಮಲ್ದಾರ್ ಮ|| ಎಂ. ಎನ್. ಶ್ರೀನಿವಾಸಯ್ಯಂಗಾರ್ರಿಗೆ ಆಗಸ್ಟ್ ತಾ. 6 ರಿಂದ 2 ತಿಂಗಳು 15 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕೋಲಾರದ ಡೆಪ್ಯುಟಿ ಅಮಲ್ದಾರ್ ಮ|| ಎಸ್ ಸುಬ್ಬರಾಯರು ಹೊಸಕೋಟೆ ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿದಾರೆ. ಮಧುಗಿರಿ ಅಮಲ್ದಾರರು ಕೊರಟಗೆರೆ ಸಬ್ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ತುಮಕೂರು ಖಜಾನಾ ಅ|| ಕಮಿಷನರ್ ಮ|| ಎ. ವೆಂಕಟೇಶಯ್ಯನವರಿಗೆ ಸೆಪ್ಟೆಂಬರ್ ತಾ. 23 ರಿಂದ 12 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಗುಬ್ಬಿ ಸಬ್ ಡಿವಿಜನ್ ಆಫೀಸರು ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು

ಯಡಿಯೂರು ಡಿವಿಜನ್ ಅ|| ಇಂಜನಿಯರ್ ಮ|| ಕೆ. ಎ. ದೇಶಿಕಾಚಾರ್ಯರಿಗೆ 10 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಕೋಆಪರೆಟಿವ್ ಸೊಸೈಟಿಯ ಮೀಟಿಂಗು.

ಶಿರಾ ತಾಲ್ಲೂಕು ಕಡವಿಗೆರೆ.

ಈ ಸಂಘದ 1914-15 ನೇ ಸಾಲ್ ಜನರಲ್ ಮೀಟಿಂಗು ಕಳೆದ ಆಗಸ್ಟು 31 ನೇ ತಾ. ಈ ಗ್ರಾಮದ ವಿ. ಇ. ಸ್ಕೂಲ್ ಕಟ್ಟಡದಲ್ಲಿ ಕೋ|| ಸೊಸೈಟಿಗಳ ಇನ್‌ಸ್ಪೆಕ್ಟರ್ ಮ|| ಎನ್. ಆರ್. ನಗರ್ಕರ್ ಯವರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು. ಈ ಸಂಘದ ಅ|| ಸೆಕ್ರೆಟರಿ ಮ|| ಕೆ ನಾಗೇಶರಾಯರಿಂದ ಸಂಘದ ಆಡಳಿತದ ರಿಪೋರ್ಟು ಓದಲಾಗಿ ಸರ್ವರೂ ಸಂತೋಷಿಸಿದರು. ಸಾಲ್ ಮೊದಲಿನಲ್ಲಿ 31 ಮಂದಿ ಮೆಂಬರುಗಳೂ 691 ರೂಪಾಯಿ ಷೇರು ಮೂಲಧನವೂ ಇದ್ದದ್ದು ಈ ಸಾಲ್ ಆಖೈರಿಗೆ 57 ಮಂದಿ ಮೆಂಬರುಗಳೂ, 1,552 ರೂಪಾಯಿ ಷೇರು ಮೂಲಧನವೂ ಜಮಾಯಿಸಿ ಒಟ್ಟು ರೂ 16,023-14-6 ಕ್ಕೆ ಜಮಾ ಖರ್ಚು ನಡೆದಿರುತ್ತೆ. ಶಿವಾಯಿ ಸ್ಕೂಲ್ ಮಕ್ಕಳಿಗೆ ಆರ್ಜನೆ ಮತ್ತು ವಿಶ್ವ ವೃಯದ ವಿಷಯದಲ್ಲಿ ತಿಳುವಳಿಕೆಯನ್ನುಂಟುಮಾಡುವುದರ ಮೂಲಕ ಪ್ರತಿಯೊಬ್ಬರಿಂದ 1 ಕ್ಕೆ ಲಾಗಾಯ್ತು ಸಂಗ್ರಹಿಸಿದ್ದು 13 ರೂಪಾಯಿ ಖಾಯಂ ಡಿಪಾಜಿಟ್ಟಿನಲ್ಲಿರುತ್ತೆ. ಈ ರೀತಿಯಾಗಿ ಖರ್ಚು ಜಾತಾ ರೂ. 196-15-6 ಲಾಭ ಸಂಪಾದಿಸಿ, ಇದರಲ್ಲಿ ರಿಜರ್ವ್ ಫಂಡು, ಪೆನ್ಸನ್ ವಗೈರೆ ಕಳೆದು ಶೇಕಡಾ 7½ ರೂಪಾಯಿ ಮೇರೆ ಲಾಭ ಹಂಚಲ್ಪಟ್ಟಿತು. ಹಿಂದಿನ ಸಾಲಿನ ಕಾರ್ಯ ನಿರ್ವಾಹಕರೇ ಈ ಸಾಲಿಗೂ ಇರತಕ್ಕದೆಂದು ಸರ್ವರೂ ಅನುಮೋದಿಸಿದರು. ಇದೇ ವಿಷಯದಲ್ಲಿ ದಯಮಾಡಿಸಿದ್ದ ಮಾಚೀನಹಳ್ಳಿ ಸೊ. ಸೆಕ್ರೆಟರಿ ಮೇ|| ಭೀಮಾಚಾರಿಯರು ಮಾಡಿದ ಉಪನ್ಯಾಸವು ಶ್ಲಾಘನೀಯವಾಗಿತ್ತು. ನಮ್ಮ ಪ್ರಭುಗಳೇ ಮೊದಲಾದವರಿಗೆ ಆಯುರಾರೋಗ್ಯಾದಿಗಳನ್ನು ದಯಪಾಲಿಸಬೇಂದು ಸರ್ವರೂ ಪ್ರಾರ್ಥಿಸಿದರು. ಸಭಾಸದರನ್ನು ಗಂಧ ಪುಷ್ಪ ತಾಂಬೂಲ ಅಲ್ಪಾಹಾರಗಳಿಂದ ಸತ್ಕರಿಸಿ, ಸಭೆ ಬರಖಾಸ್ತಾಯಿತು. ಒಬ್ಬ ಮೆಂಬರು.

ನಂಜನಗೂಡು ಉಪಾಧ್ಯಾಯರ ಸಂಘದ 3 ನೇ ಸಭೆ.

ತಾ. 26 ನೇ ಭಾನುವಾರ ಮಧ್ಯಾಹ್ನ 3 ಗಂಟೆಗೆ ಕನ್ನಡ ಹೈಸ್ಕೂಲ್ ಹಾಲಿನಲ್ಲಿ ವೈಸ್ ಪ್ರೆಸಿಡೆಂಟ್ ಮ|| ಕೆ. ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರ ಹಿತೋಕ್ತಿಯು ಆದ ತರುವಾಯ ಹೈಸ್ಕೂಲ್ ಉಪಾಧ್ಯಾಯರಾದ ಮ|| ಎಸ್. ಗುಂಡಪ್ಪನವರು ಭೂವಿವರಣೆಯ ಬೋಧನಾ ಕ್ರಮವೆಂಬ ಉಪನ್ಯಾಸಕ್ಕೆ ಸಂಬಂಧಪಟ್ಟ ಪಾಠದ ಮಾದರಿಯನ್ನು ಕನ್ನಡ 4 ನೇ ತರಗತಿಗೆ ವರ್ಷಕದ ಪಾಠವನ್ನು ಹೇಳುವುದರ ಮೂಲಕ ಪ್ರದರ್ಶಿಸಿದರು. ತಕ್ಕ ಉಪಕರಣಗಳಿದ್ದು ಪಾಠವು ಕ್ಲಿಷ್ಟತಾಲವಿಲ್ಲದೆ ಮುಗಿಯಿತು. ಈ ಊರಿನ ಅನೇಕ ಪ್ರಮುಖರು ದಯಮಾಡಿಸಿ ನವೀನ ಮಾದರಿಯಲ್ಲಿ ಪಾಠ ಹೇಳುವುದರಿಂದ ಬಾಲಕರಿಗೆ ತುಂಬಾ ಪ್ರಯೋಜನವಿರುವುದಾಗಿ ತಿಳಿದುಕೊಂಡು ಸಂತೋಷಪಟ್ಟರು. ಗಟ್ಟವಾಡಿಪುರದ ಉಪಾಧ್ಯಾಯರು ಮ|| ಎಸ್. ಶ್ರೀಕಂಠಯ್ಯನವರು ಸಲ್ಲಾಪೋಪದೇಶವೆಂಬ ಮಾದರಿ ಪಾಠವನ್ನು ಬಿ. ತರಗತಿಗೆ ಬೋಧಿಸಿ ಸಭಿಕರನ್ನು ಆನಂದಗೊಳಿಸಿದರು. ಉಪಕರಣಗಳನ್ನು ಉತ್ತಮ ರೀತಿಯಲ್ಲಿ ಸಿದ್ಧಪಡಿಸಿದ್ದರು. ಬಳಿಕ ಸಲ್ಲಾಪೋಪದೇಶವೆಂಬ ವಿಚಾರವಾಗಿ ಒಂದು ಉಪನ್ಯಾಸವನ್ನು ಹೇಳಿದರು. ಆ ಮೇಲೆ ಅಮಲ್ದಾರ್ ಮ|| ಬಿ. ಭೀಮರಾಯರು ಬರೆದಿದ್ದ ಗ್ರಾಮ ಪಾಠಶಾಲೆ ಎಂಬ ಸ್ವಾರಸ್ಯವಾದ ಉಪನ್ಯಾಸವು ಓದಲ್ಪಟ್ಟಿತು. ಅನಂತರ ಅಧ್ಯಕ್ಷರು ನವೀನ ವಿದ್ಯಾಭ್ಯಾಸದ ಕ್ರಮದಲ್ಲಿರುವ ಪ್ರಯೋಜನಗಳನ್ನು ಸ್ಪಷ್ಟಪಡಿಸಿ, ಅದನ್ನು ಅನುಸರಿಸುವುದರಿಂದ ದೇಶವು ಉನ್ನತ ಸ್ಥಿತಿಗೆ ಬರುವುದೆಂದು ಸೂಕ್ತವಾದ ಮಾತುಗಳಿಂದ ತಿಳಿಸಿ ಸಭೆಯನ್ನು ಮುಗಿಸಿದರು. ಈ ಊರಿನ ಅನೇಕ ದೊಡ್ಡಮನುಷ್ಯರು ವಿದ್ಯಾಭ್ಯಾಸದಲ್ಲಿ ಬಹು ಆಸಕ್ತಿಯನ್ನಿಟ್ಟು ಉಪಾಧ್ಯಾಯರುಗಳೊಡನೆ ಕಲೆತು ವಿದ್ಯಾಭ್ಯಾಸವನ್ನು ಉನ್ನತ ಸ್ಥಿತಿಗೆ ತರುವುದರಲ್ಲಿ ಸಿರಕರಾಗಿರುವುದು ಸ್ತೋತ್ರಾರ್ಹವಾಗಿರುತ್ತೆ. ಪ್ಲೀಡರ್ ಮ|| ಸುಬ್ಬರಾಯರು ಕನ್ನಡ 3 ನೇ ತರಗತಿಗೆ ಮುಂದಿನ ತಿಂಗಳ ಸಭೆಯಲ್ಲಿ ಗಣಿತದ ಮಾದರಿ ಪಾಠವನ್ನು ಮಾಡುವುದಾಗಿ ಒಪ್ಪಿಕೊಂಡಿರುವುದು ಸಂತೋಷಕರವಾಗಿದೆ. ಪ್ರೇಕ್ಷಕರ್.

ಒಂದು ಬಹುಮಾನ ಸಭೆ—ಚಾಮರಾಜನಗರ.

ಶ್ರೀ ಚಾಮರಾಜೇಶ್ವರ ಸ್ವಾಮಿಯವರ ರಥೋತ್ಸವದ ಕಾಲದಲ್ಲಿ ಚಾಮರಾಜನಗರದಲ್ಲಿ ಕಳೆದ ಜೂನ್ ತಾ. 17 ರಲ್ಲು ನಡೆದ ವಿಲೇಜು ಕಮಿಟಿ ಕಾನ್ಫರೆನ್ಸ್ ವ್ಯವಸಾಯ ಮತ್ತು ಕೈಗಾರಿಕೆ ವಸ್ತುಗಳ ಪ್ರದರ್ಶನಕ್ಕಾಗಿ ಕಮಿಟಿಯವರ ಏರ್ಪಾಡಿನ ಮೇರೆಗೆ ಜನನ ಮಂಟಪದಲ್ಲಿ ಕಳೆದ ತಾ. 15 ರಲ್ಲು ಬಹುಮಾನವಿನಿಯೋಗದ ಸಭೆ ಸೇರಿತ್ತು. ಆಗ ಪೇಠಾಭಿಮಾನಿಗಳೆಲ್ಲರೂ ಸೇರಿದ್ದರು. ಡೆಪ್ಯುಟಿ ಕಮಿಷನರ್ ಮ|| ಎ. ಸುಬ್ರಹ್ಮಣ್ಯ ಅಯ್ಯಂಗಾರರು ಆ ದಿನ ನೋಟೀಸಿನಲ್ಲಿ ದಯಮಾಡಿಸಿ ಅಗ್ರಾಸನವನ್ನು ವಹಿಸಿದರು. ಸೆಕ್ರೆಟರಿ ಮ|| ವೆಂಕಟಸ್ವಾಮಯ್ಯನವರು ಸಭೆಯಲ್ಲಿ ಜಮಾಖರ್ಚು ರಿಪೋರ್ಟು ಓದಿದರು ಇನಾಂ ವಗೈರೆ ಸಂಖ್ಯೆ, ತರಹೆ, ಸರ್ಕಾರದವರ ಇಲಾಖಾ ಆಫೀಸರುಗಳ ಸಹಾಯಕ್ಕೆ ಕೃತಜ್ಞರಾಗಿದೇವೆಂದು ಹೇಳಿದರು. ಅನಂತರ ಪ್ರೆಸಿಡೆಂಟರು ಸಮಯೋಚಿತವಾದ ಜವಾಬು ಹೇಳಿದರು. ಹೆಣ್ಣುಮಕ್ಕಳು ವಿನೋದಾರ್ಥವಾಗಿ ಸಂಗೀತ ಮತ್ತು ಹಾಡನ್ನು ಹೇಳಿದರು ಆಗ ಎ. ಸೂ. ಮ|| ಸಿ. ನರಸಿಂಹಶಾಸ್ತ್ರಿಗಳೂ, ಇನ್. ಸೂ. ಮ|| ಎ. ಜಿ. ರಾಮಚಂದ್ರರಾಯರೂ ಲೆಕ್ಚರ್ ಕೊಟ್ಟರು. ಮ|| ದೊರಸ್ವಾಮಯ್ಯಂಗಾರ್ರು 4,000 ರೂಪಾಯಿ ಬೆಲೆಯುಳ್ಳ ಮಿಷನ್ ತರಿಸಿ ಕೆಲಸ ಮಾಡಿಸುತ್ತಿರುವುದರಿಂದಲೂ, ಮ|| ರಾಮೇಗೌಡರು ಧರ್ಮಾರ್ಥವಾದ ಕೆಲಸಗಳನ್ನು ಮಾಡಿಸಿದ್ದರಿಂದಲೂ ಮೈಸೂರು ಸರ್ಕಾರದವರು ದಯಪಾಲಿಸಿದ ಸರ್ಟಿಫಿಕೇಟುಗಳನ್ನು ಈ ಸಭೆಯಲ್ಲಿ ದಯಪಾಲಿಸಿದರು. ಪ್ರದರ್ಶನದ ಸಾಮಾನುಗಳಿಗಾಗಿ 6 ಬೆಳ್ಳಿ ಮೆಡಲುಗಳೂ, 5 ಕ್ಕೆ ಮೊದಲನೆ ತರಗತಿ ಬಹುಮಾನವೂ, 83 ಕ್ಕೆ 2 ನೇ ತರಗತಿ ಬಹುಮಾನವೂ, 4 ಕ್ಕೆ ಸರ್ಟಿಫಿಕೇಟುಗಳೂ, ರಾಸುಗಳ ಪೈಕಿ 3 ಕ್ಕೆ ಮೊದಲನೇ ಬಹುಮಾನವೂ, ಬೆಳ್ಳಿ ಮೆಡಲೂ; 4 ಕ್ಕೆ 2 ನೇ ತರಗತಿ ಬಹುಮಾನವೂ, ಬೆಳ್ಳಿ ಮೆಡಲೂ ದಯಪಾಲಿಸಿದರು. ಪ್ರೆಸಿಡೆಂಟರು ವಾಪಸು ದಯಮಾಡಿಸುವುದಕ್ಕೆ ಮುಂಚೆ 2 ತಿಂಗಳಿಂದ ಇಲ್ಲದ ಮಳೆ ಪುರಪ್ರವೇಶವಾದ ಕೂಡಲೆ ಭಾರಿ ಮಳೆಯಾದ ವಿಚಾರದಲ್ಲಿ ಅವರ ಕೃತಜ್ಞತೆಯನ್ನು ತೋರಿಸಿದರು. ಅನಂತರ ಶ್ರೀಮನ್ ಮಹಾರಾಜರವರಿಗೂ, ಅವರ ಕುಟುಂಬಕ್ಕೂ ಶ್ರೇಯಃಪ್ರಾರ್ಥನೆ ಮಾಡಲಾಯಿತು ಪಾನ್‌ಸುಪಾರಿ ಬಟವಾಡೆ ಆದ ಕೂಡಲೆ ಸಭೆಯು ಬರಖಾಸ್ತು ಆಯಿತು. ಡೆಪ್ಯುಟಿ ಕಮಿಷನರವರೂ, ಇತರ ದೊಡ್ಡ ಮನುಷ್ಯರೂ 4 ಗಂಟೆಗೆ ಫಲಾಹಾರ ಮಾಡಿಕೊಂಡು ದಯಮಾಡಿಸಿದರು ಇಷ್ಟೆಲ್ಲಾ ಮುತುವರ್ಜಿ ವಹಿಸಿ ಪೇಠಾಭಿಮಾನಿಗಳಿಗೆ ಪ್ರೋತ್ಸಾಹಕೊಟ್ಟ ನಮ್ಮ ಸಬ್ ಡಿವಿಜನ್ ಸಾಹೇಬರು ಮ|| ಯನ್. ಸುಬ್ಬರಾಯರಿಗೂ, ನಮ್ಮ ಅಮಲ್ದಾರ್ ಮ|| ಕೆ. ಕೇಶವಚಾರ್ರಿಗೂ ತುಂಬಾ ಕೃತಜ್ಞರಾಗಿರುತ್ತೇವೆ. ವಾಚಕ.

ದಿವಾನ್ ರವರ ಪ್ರಸಕೀಟು—ಚಿತ್ರದುರ್ಗ.

ನಮ್ಮ ದಿವಾನ್ ಸಾಹೇಬರವರು ಪರಿವಾರದೊಡನೆ ಈ ಮಾಹೆ 19 ನೇ ತಾ. ಬೆಳಗ್ಗೆ 9 ಘಂಟೆಗೆ ಇಲ್ಲಿಗೆ ದಯಮಾಡಿಸಿದ ಕೂಡ್ಲೆ ಇಲ್ಲಿನ ಛಾವಣಿಗಳೆಲ್ಲಾ ಮುದ್ದು ಪರಾಂಬರಿಸಿ ಭೋಜನಾ ನಂತರ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಎಲ್ಲಾ ಅಧಿಕಾರಿಗಳನ್ನೂ ಬರಮಾಡಿಕೊಂಡು ಆಯಾ ಅಧಿಕಾರಿಯ ಕಾರುಬಾರುಗಳ ಆಲೋಚನೆ ಮಾಡಿದರು. ಮರುದಿವಸ ಮೆಮೋರಿಯಲ್ ಹಾಲಿನಲ್ಲಿ 3 ಘಂಟೆ ಹೊತ್ತು ಮ್ಯುನಿಸಿಪಲ್ ಮೆಂಬರುಗಳನ್ನೂ ಪ್ರಜೆಗಳ ಮುಖಂಡರನ್ನೂ ಬರಮಾಡಿಕೊಂಡು ಡಿಸ್ಟ್ರಿಕ್ಟಿನ ಸ್ಥಿತಿ ಗತಿಗಳನ್ನೆಲ್ಲಾ ವಿಚಾರಿಸಿಕೊಳ್ಳುತ್ತಾ ರೈಲ್ವೆ ಕಲೆಕ್ಷನ್, ನೀರಿನ ಸರಬರಾಯಿ ಮುಂತಾದ ಪ್ರಜೋಪಕಾರವಾದ ಕೆಲಸಗಳ ಆಲೋಚನೆ ಮಾಡಿದರು. ಸಾಯಂಕಾಲ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಬೃಹನ್ಮಠಕ್ಕೆ ದಯಮಾಡಿ ಸ್ವಾಮಿಗಳ ದರ್ಶನ ಮಾಡಿಕೊಂಡು ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿ ಅಲ್ಲಿಂದ ಪಾರ್ಕಿನಲ್ಲಿ ಆದಿದ್ದ ಮ್ಯುನಿಸಿಪಲ್ ಮೆಂಬರುಗಳ ಟೀಪಾರ್ಟಿಗೆ ದಯಮಾಡಿಸಿ ಅವರಿಗೆ ದರ್ಶನಕೊಟ್ಟು, ಕೂಡ್ಲೆ ಸ್ಕೂಲ್ ಇಂಪ್ರೂವ್‌ಮೆಂಟಿನ ಕೆಲಸ ನೋಡಲು ದೊಡ್ಡ ಸಿದ್ಧವ್ವನಹಳ್ಳಿಗೆ ಹೋಗಿ ನೋಡಿಕೊಂಡು ಬಂದು ರಾತ್ರಿ 7 ಘಂಟೆಗೆ ಬಂಗ್ಲೆಗೆ ಬಂದು 10 ಘಂಟೆವರಿಗೂ ಬಂಗ್ಲೆಯ ಮುಂಭಾಗದಲ್ಲಿ ಕೂತು ಗ್ರಾಮಾಂತರ ಪ್ರಜೆಗಳ ಅಹವಾಲುಗಳನ್ನು ವಿಚಾರಿಸುತ್ತಾ ಅವರಿಗೆ ಸಮರ್ಪಕವಾದ ಉತ್ತರಗಳು ಕೊಡುತ್ತಾ ಇದ್ದರು. ಮಾರನೇ ದಿವಸ ಬೆಳಗ್ಗೆ ಟವನ್ ಇನ್‌ಸ್ಪೆಕ್ಷನ್ ಮಾಡುತ್ತಾ, ಗರಲ್ಸ್ ಸ್ಕೂಲಿಗೆ ಹೋಗಿದ್ದು ಪುನಃ ಟವನ್ ಪೂರ್ವ ಬೀದಿಯಲ್ಲಿ ಹೊರಟು ರಂಗಯ್ಯನ ಬಾಗಿಲ ಬಳಿ ಕಾದಿದ್ದ ಇಲ್ಲಿನ ಆರ್ಫನ್ ಸ್ಕ್ವೆಡೆಂಟ್ಸ್ ಹೋಮಿನ ಬಡ ವಿದ್ಯಾರ್ಥಿಗಳಿಗೂ ಅದರ ಮ್ಯಾನೇಜರಿಗೂ ದರ್ಶನವನ್ನು ದಯಪಾಲಿಸಿ ಆ ಹೋಮಿನ ಪ್ರಶ್ನೋತ್ತರಗಳನ್ನು ಕೇಳಿ ಆ ಮ್ಯಾನೇಜರ ಪ್ರಾರ್ಥನೆಗಳಿಗೆ ಸೂಕ್ತವಾದ ಆರ್ಡರ್ ದಯಪಾಲಿಸುವುದಾಗಿ ಹೇಳಿ, ಅಲ್ಲಿಂದ ಆಸ್ಪತ್ರೆ, ಡಿಸ್ಟ್ರಿಕ್ಟ್ ಆಫೀಸು ಮುಂತಾದವನ್ನು ಇನ್‌ಸ್ಪೆಕ್ಷನ್ ಮಾಡಿಕೊಂಡು ಸಾಯಂಕಾಲ 4½ ಘಂಟೆಯಿಂದ ಹೊಳಲ್ಕೆರೆ ಮಾರ್ಗವಾಗಿ ಬೆಂಗಳೂರಿಗೆ ದಯಮಾಡಿಸಿದರು. ದಿವಾನ್ ಸಾಹೇಬರವರು ಶಾಂತಚಿತ್ತತೆಯಿಂದ ಎಲ್ಲಾ ಪ್ರಜೆಗಳ ಅಹವಾಲುಗಳನ್ನೂ ಕೇಳುತ್ತಾ, ವಿಚಾರಿಸುತ್ತಾ, ರಾತ್ರಿ ಹಗಲೂ ಬೇಸರಿಕೆಯಿಲ್ಲದೆ ರಾಜಕಾರ್ಯಗಳನ್ನೂ ಪ್ರಜೋಪಕಾರ ಕೆಲಸಗಳನ್ನೂ ಮಾಡುತ್ತಾ ದೇಶ ಹಿತಚಿಂತನೆಯಲ್ಲಿಯೇ ಮಗ್ನರಾಗಿರುವುದಕ್ಕಾಗಿ ಎಲ್ಲಾ ಪ್ರಜೆಗಳೂ ಆನಂದಪಡುತ್ತಾರೆ ಹೊಸದಾಗಿ ದಯಮಾಡಿಸಿರುವ ಡೆಪ್ಯುಟಿ ಕಮಿಷನರ್ ಮ|| ಬಾಲಸುಂದರಂ ಅಯ್ಯರವರು ದಿವಾನ್‌ರವರ ಮೇಲ್‌ಪಙ್ತಿಯನ್ನು ಇಟ್ಟುಕೊಂಡು ನಿಷ್ಪಕ್ಷಪಾತತೆಯಿಂದ ಪ್ರಜಾನುರಾಗಿಗಳಾಗಿ ಇಲ್ಲಿಗೆ ಬಂದ ಸ್ವಲ್ಪ ಕಾಲದಲ್ಲಿಯೇ ತಮ್ಮ ಕಾರ್ಯ ನಿರ್ವಾಹಕತ್ವವನ್ನು ತೋರಿಸುತ್ತಿರುವುದು ಈ ಡಿಸ್ಟ್ರಿಕ್ಟಿನ ಪ್ರಜೆಗಳ ಭಾಗ್ಯೋದಯವಾಗಿದೆ. ಖಾತೆದಾರ್.

ಖಾತೆದಾರರಿಗೆ ನೋಟೀಸ್.

ಖಾತೆದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಮದರಾಸ್ ವ್ಯಾಪಾರಿಗಳ ಮೋಸವಂತೆ.

ಅಯ್ಯಾ,—ಬಳ್ಳಾರಿಜಿಲ್ಲಾ ಹುವಿನ ಹಡಗಲಿ ತಾಲ್ಲೂಕು ನವಲಿಗ್ರಾಮದಲ್ಲಿರುವ ಪಂಕ್ತಿವೀರಪ್ಪನು ಬರೆಯುವದು ಏನೆಂದರೆ—ಕೆ. ರಾಮಚಂದ್ರ ರಾವ್ ಅಂಡ್ ಕಂಪನಿ, ಸಾಹುಕಾರಪೇಟೆ, ಮದರಾಸು, ಇವರ ಕಂಪನಿಯಲ್ಲಿ ಕಳಿಸುವದು ನಮಗೆ ಕೆಲವು ಸಾಮಾನುಗಳನ್ನು ತರಿಸಿದ್ದು ಒಂದಾದರೂ ಕ್ಯಾಟಲಾಗಿನಂತೆ ಇರುವದಿಲ್ಲ. ಬರಿಯುತಕ್ಕದ್ದು ಬಹಳ ಮನೋರಂಜನೆವಾದದ್ದು. ನಾವು ಈ ಕ್ಯಾಟಲಾಗನ್ನು ನೋಡಿ ಕಾರ್ಡು ಬರೆದರೆ ಯಾತಕ್ಕೂ ಬಾರದಂಥಾ ಸಾಮಾನುಗಳನ್ನು ಕಳಿಸುತ್ತಾರೆ. ದುಡ್ಡಿನ ಆಸೆಯಿಂದ ಇಂಥಾ ಕಂಪನಿಯನ್ನು ಇಟ್ಟಂತೆ ಕಾಣುತ್ತದೆ. ಕಾರಣಲ್ಲಿನ ಕೂಡ ಈ ಕಂಪನಿಯಲ್ಲಿ ತರಿಸಿದರೆ ಬಹಳ ಮೋಸಹೊಂದುತ್ತೇವೆ. ಈ ಕಂಪನಿಯಲ್ಲಿ ತರಿಸುವದು ದುಡ್ಡು ಕಳೆಯುವದು ಅಲ್ಲದೆ ಸಾಮಾನುಗಳು ಸರಿಯಾಗಿ ಬರುವದಿಲ್ಲ. ಪಂಕ್ತಿವೀರಪ್ಪ.

[ವ್ಯಾಪಾರಸ್ಥರು ಹೀಗೆ ಮೋಸಮಾಡುವುದು ಶೋಚನೀಯ.—ಎಡಿ.]

ಗ್ರಾಂಟ್ ಸ್ಕೂಲ್ ಮಾಸ್ಟರುಗಳ ಸಂಬಳ ಸಂದಿಲ್ಲವಂತೆ.

ಅಯ್ಯಾ,—ಮೈಸೂರು ದೇಶದಲ್ಲಿ ಗೌರ್ನಮೆಂಟ್ ಸ್ಕೂಲ್ ಮಾಸ್ಟರುಗಳ ಸಂಬಳ ಬಡ್ತಿ ವಿಚಾರವು ಉತ್ತಮ ಸ್ಥಿತಿಗೆ ಬಂತು. ಪರಸ್ಥಳದಿಂದ ಬಂದು ಕಷ್ಟಪಡುತ್ತಿರುವ ಚಿತ್ರದುರ್ಗದ ತಾಲ್ಲೂಕಿನ ಎಯಿಡೆಡ್ಡು ಸ್ಕೂಲ್ ಮಾಸ್ಟರುಗಳನ್ನು ವಿಚಾರಿಸುವವರೇ ಇಲ್ಲದಂತೆ ಆಗಿವೆ. ಸ್ಕೂಲುಗಳನ್ನು ಅಭಿವೃದ್ಧಿಗೆ ತರಬೇಕೆಂಬುವದಾದರೊ ಅಪರಿಮಿತವಾಗಿದೆ. ಸರ್ಕಾರದವರು 7 ರೂಪಾಯಿ, ಗ್ರಾಮಸ್ಥರು 3 ರೂಪಾಯಿ ಅಂತು 10 ರೂಪಾಯಿ ಸಂಬಳ ಕೊಡಬೇಕೆಂದು ಗೊತ್ತಾಗಿದೆ. ಸ್ಕೂಲುಗಳನ್ನು ಏರ್ಪಾಡು ಮಾಡಿ 7-8 ತಿಂಗಳಾದಾಗ್ಯೂ ಗ್ರಾಮಸ್ಥರಿಂದಲೂ, ಸರ್ಕಾರದಿಂದಲೂ ಸಂಬಳವಿಲ್ಲ. ಮಾಸ್ಟರು ಯಾವ ರೀತಿ ಜೀವನ ಮಾಡಬೇಕು? ಹೊಸ ರೂಲ್ಸು ಎಂದಿಗೆ ಜಾರಿಗೆ ಬರುತ್ತದೆಯೋ ತಿಳಿಯದು. ಮಾಸ್ಟರುಗಳ ಸಂಬಳ ಬಾಬ್ತಿ ಮುಂಜೂರು ಮಾಡಿಕೊಡುವಂತೆ ಈ ಬಡ ನೌಕರರುಗಳ ವಿಷಯದಲ್ಲಿ ಮೇಲಿನವರು ಗಮನಕ್ಕೆ ತಂದುಕೊಂಡಾರೆಂದು ನಂಬುತ್ತೇನೆ. ವಿದ್ಯಾಭಿಮಾನಿ.

[ಇಂಥಾ ಬಾಬ್ತಿ ಪ್ರಕಟಿಸಲು ನಮಗೆ ನಾಚಿಕೆಯಾಗುತ್ತದೆ.—ಎಡಿ.]

ಪಂಚಮರಿಗೆ ಸ್ಕೂಲ್ ಬೇಕಂತೆ.

ಅಯ್ಯಾ,—ಮಂಡ್ಯಾ ತಾಲ್ಲೋಕು ದುದ್ದದ ಹೋಬಳಿ ಹೊಳಲ್ ಗ್ರಾಮದಲ್ಲಿ ಸುಮಾರು 40-50 ಕುಟುಂಬದವರಿಗೂ ಹೆಚ್ಚುಮಂದಿದ್ದುಕೊಂಡು ನಮಗೆ ಒಂದು ಸ್ಕೂಲಿಗೆ ಗತಿಯಿಲ್ಲದೆ ಸಂಕೋಚಪಡುವೆವು. ನಮ್ಮ ಸರ್ಕಾರದವರು 15-20 ಹುಡುಗರು ಸೇರುವ ಗ್ರಾಮಗಳಿಗೆಲ್ಲಾ ಸ್ಕೂಲನ್ನು ಕೊಟ್ಟಿದ್ದಾರೆ. 40-45 ಹುಡುಗರು ಭರ್ತಿಯಾಗುವ ನಮ್ಮ ದೊಡ್ಡ ಗ್ರಾಮಕ್ಕೆ ಮಾತ್ರ ಸ್ಕೂಲ್ ಇಲ್ಲದೆ ಇರುವುದು ವ್ಯಸನಕರವಾಗಿದೆ. ಸರ್ಕಾರದವರು ಈ ಪ್ರಕಟನೆಯನ್ನು ನೋಡಿ ನಮಗೊಂದು ಸ್ಕೂಲನ್ನು ಕೊಟ್ಟಾರೆಂದು ಸಂತೋಷಿಸುವೆವು. ಮತ್ತು ಸ್ಕೂಲ್ ಮನೆ ವಿಚಾರದಲ್ಲಿ ಅರ್ಧ ಹಣವನ್ನು ನಾವೇ ಭರ್ತಿಮಾಡಿ ಕೊಡುತ್ತೇವೆ. ಈ ಊರಿನಲ್ಲಿ 300-400 ಮನೆಗಳೂ, 2,000-3,000 ಪ್ರಜೆಗಳೂ ಇದ್ದು ಮುನಿಸಿಪಲ್ ಚರಂಡಿಗಳಿಲ್ಲದೆ ಅಸಹ್ಯವಾಗಿರುವುದು. ಈ ಊರಿನ ದೊಡ್ಡ ಕೆರೆ ಕೋಡಿ ನೀರು ರಸ್ತೆಯ ಮೇಲೆಯೇ ಹೋಗುತ್ತೆ. ಅದು ದೊಡ್ಡ ಕಂದಕವಾಗಿ ಸೇತುವೆಯನ್ನು ಕಟ್ಟಿಸದೇನೇ ಪ್ರಾಣನಷ್ಟಕ್ಕೆ ಅವಕಾಶವಾಗಿದೆ.

ಕೆಲವು ಪಂಚಮರು.

ಪೋಸ್ಟಾಫೀಸಿನ ಮೇಲೆ ಆಕ್ಷೇಪಣೆ.

ಅಯ್ಯಾ,—ದಾವಣಗೆರೆ ತಾಲ್ಲೂಕು ಅಣಗೋಡಿನಲ್ಲಿರುವ ಕೆಂಗನೂರು ಪತ್ರಾರಿ ನಂಜುಂಡಪ್ಪನು ಬರೆದ ವಿನಯ—17-9-14 ರ ಲಾಗಾಯ್ತು ಇದುವರಿಗು ಅನೇಕ ಪತ್ರಿಕೆ ಗೈರುವಿಲೆಯಾದವು. ಪತ್ರಿಕೆ ಪೋಸ್ಟು ಮ್ಯಾನ್ ಮುದ್ದು ತಪ್ಪಿಸಿ ಬರುವ ಬಿಡುವುದು ಅಪರೂಪ 3-3 ಪತ್ರಿಕೆ ಯಾವು ಈ ವಿಶ್ರಾಂತ್ಯದ ಜನಗಳ ಕೈಗೆ ಕೊಟ್ಟು ಕಳುಹಿಸುತ್ತಾ ಬಂದನು. ಎಷ್ಟೋ ದಿವಸಕ್ಕೆ ಬಂದು ತಪ್ಪಿದರೂ ತಪ್ಪಿದವು; ಇಲ್ಲವೇ ಗೈರುವಿಲೆಯೋ ಹೊತ್ತು ಸರಿಯಾಗಿ ತಲಪುವದಿಲ್ಲ. ಅರಸಿಕ್ಕಿತ್ತು ಪೋಸ್ಟು ಮ್ಯಾನ್ ಬಂದಾಗ ಕೇಳಿದರೆ ಆಫೀಸಿನಿಂದ ಪತ್ರಿಕೆ ಬಂದಿಲ್ಲ ಎಂದು ಹೇಳುತ್ತಾನೆ. ಆದ್ದರಿಂದ ಈ ನ್ಯೂನತೆಗಳನ್ನು ಸರಿಪಡಿಸಿ ಸರಿಯಾಗಿ ತಲ್ಪುವಂತೆ ಮಾಡಬೇಕೆಂದು ಕೋರುತ್ತೇನೆ. ಈ ಪ್ರಾಂತ್ಯ ತಮ್ಮಿಂದ ಪತ್ರಿಕೆ ಪಡೆಯುವವರು ಇದೇ ರೀತಿ ಮಾತನಾಡುತ್ತಾರೆ. ಇನ್ನೂ ಕೆಲವು ಜನ ತಮ್ಮ ಪತ್ರಿಕೆಗೆ ಚಂದಾದಾರರು ಆಗಲು ಇಚ್ಛಿಸುತ್ತಾರೆ ಸರಿಯಾಗಿ ತಲ್ಪುವದಿಲ್ಲವಾದ್ದರಿಂದ ಹಿಂತೆಗೆಯುತ್ತಾರೆ. ತಾವು ಪೋಸ್ಟ್ ಇಲಾಖೆಗೆ ಈ ವಿಚಾರ ತಿಳಿಯಪಡಿಸಬೇಕೆಂದು ಕೋರುತ್ತೇನೆ. ನಂಜುಂಡಪ್ಪ, ಅಣಗೋಡು.

[ಗ್ರಾಮಾಂತರಗಳಿಗೆ ಪೋಸ್ಟ್ ಕ್ರಮವಾಗಿ ಎಂದಿಗೆ ಜಾರಿಯಾಗುತ್ತೋ ನಮಗೆ ತಿಳಿಯದು. ಇಂಥಾ ಅಕ್ರಮವನ್ನು ಪೋಸ್ಟ್ ಇಲಾಖೆಯವರು ಪರೀಕ್ಷಿಸಿ ಸರಿಪಡಿಸದಿದ್ದರೆ ಈಗಿನ ಕೆಟ್ಟಹೆಸರು ಇನ್ನೂ ಹೆಚ್ಚುತ್ತೆನ್ನುವುದಕ್ಕೆ ಅನುಮಾನವಿಲ್ಲವೆಂಬ ಹೇಳಬೇಕಾಗುತ್ತದೆ.—ಎಡಿ.]

ಸದಾರಮೆ ನಾಟಕದ ಕಂಪನಿ ಮೇಲೆ ಆಕ್ಷೇಪಣೆ.

ಅಯ್ಯಾ,—ಮೈಸೂರು ಮ|| ಚಕ್ರವರ್ತಿಯವರು ಹೊಸದಾಗಿ ಕಂಪನಿ ಏರ್ಪಾಟು ಮಾಡಿ ಮೊನ್ನೆ ಆಡಿದ ಸದಾರಮೆ ನಾಟಕದಲ್ಲಿ ವೈಶ್ಯರ ಪಾರ್ಟುಗಳು ವಿಶೇಷವಾಗಿದ್ದವು. ಇವರು ಮಾಡಿದ ವೈಶ್ಯರ ಪಾರ್ಟುಗಳು ಮತ್ತು ಅವರುಗಳ ಆಡುವಿಕೆಯು ವೈಶ್ಯರ ಜಾತಿಯವರನ್ನೇ ತಿರಸ್ಕರಿಸುವಂತೆಯೂ ಮತ್ತು ಅನೇಕ ವೈಶ್ಯರಿಗೆ ಮನಸ್ಸಿಗೆ ವ್ಯಥೆಯೂ, ಬೇಸರವೂ ಮತ್ತು ಈ ಜಾತಿಯವರನ್ನು ಅನೇಕ ಜನಗಳ ಎದುರಿಗೆ ತಿರಸ್ಕರಿಸಿ ಅಪಹಾಸ್ಯಗಳಿಗೆಯೋ ಎನ್ನುವಂತೆ ಇದ್ದದ್ದನ್ನು ನೋಡಿ ಸಂಕಟವೂ ಪಡಬೇಕಾದ ಸಂಭವ ಬಂತು. ಈ ನಾಟಕದವರು ವೈಶ್ಯರ ಪಾರ್ಟುಗಳನ್ನು ಅಷ್ಟು ಹೀನಾಯಿಕೆಯಿಂದ ಆಡಿದ್ದು ಈ ಜಾತಿಯವರಿಗೆ ಖೇದವನ್ನು ಉಂಟುಮಾಡತಕ್ಕದ್ದಾಗಿದೆ ಇಂಥಾ ನಾಟಕಗಳು ಆಡಬೇಕಾದರೆ ಮೊದಲು ಮೆಜಿಸ್ಟ್ರೇಟರವರಿಂದ ಲೈಸೆನ್ಸ್ ಪಡೆದುಕೊಳ್ಳಬೇಕಾಗಿದೆ ಎಂತ ತಿಳಿಯುತ್ತೇನೆ. ಹಾಗೆ ಇದ್ದಲ್ಲಿ ಈವರೆಗೂ ಮೆಜಿಸ್ಟ್ರೇಟರವರು ಇಂಥಾ ಆಟಗಳನ್ನು ಆಡುವದಕ್ಕೂ ಮತ್ತು ಇವರಿಂದ ಉಂಟಾಗುವ ಮಾತ್ಸರಗಳಿಗೂ ಅವಕಾಶಕೊಡದೆ ಪ್ರತಿ ಒಂದು ಜಾತಿಯವರನ್ನೂ ಸರಿಯಾದ ರೀತಿ ಕಾಪಾಡುವರೆಂದು ನಂಬುತ್ತೇನೆ. ಈ ನಾಟಕದ ಕಂಪನಿಯವರು ಇಂಥಾ ವೈಷಮ್ಯಗಳನ್ನು ಉಂಟುಮಾಡತಕ್ಕ ನಾಟಕಗಳನ್ನು ಆಡುವದಕ್ಕಿಂತ ಒಳ್ಳೆ ವಿವೇಕವೂ, ಜ್ಞಾನವೂ ಉಂಟುಮಾಡತಕ್ಕವುಗಳನ್ನು ಆಡಿ ಪ್ರತಿ ಒಂದು ಜಾತಿಯವರನ್ನೂ ಸಂತೋಷಪಡಿಸಬೇಕಾಗಿರುತ್ತೆ. ಈ ಅಂಶಕ್ಕೆ ನಾಟಕದ ಕಂಪನಿಯವರು ಸಂಪೂರ್ಣ ನಿಗಾ ಕೊಡಬೇಕಾಗಿರುತ್ತೆ. ವೈಶ್ಯರ ಹಿತೈಷಿ.

ಮಲೆನಾಡಿನಲ್ಲಿ ವ್ಯಾಕ್ಸಿನೇಷನ್.

ಅಯ್ಯಾ,—ನಮ್ಮ ಸರ್ಕಾರದವರು ಮಲೆನಾಡು ಜನಗಳು ಕೇವಲ ಹಿಂದುಳಿದವರೆಂದು ಪರಿಶೋಧಿಸಿ ತಿಳುಕೊಂಡು ಈಚೆಗೆ ಅಭಿವೃದ್ಧಿಗೆ ಬೇಕಾಗುವ ಸೌಲಭ್ಯಗಳನ್ನು ಒದಗಿಸಿಕೊಡುತ್ತಾ ಇರುವುದು ಸರಿಯಷ್ಟೆ. ಮೈಲಿ ಉಪದ್ರ ಬಂದು ಜನಗಳು ಇದರಿಂದ ವಿಶೇಷವಾಗಿ ಮೃತಪಡುತ್ತಿದ್ದರು. ಆದರೆ ಈಚೆಗೆ ಸರ್ಕಾರದವರು ಜನಗಳಿಗೆ ಹೆಚ್ಚಾಗಿ ಪ್ರೋತ್ಸಾಹಕೊಡುತ್ತಾ ವ್ಯಾಕ್ಸಿನೇಷನ್ ಮಾಡುವುದು ಜಾರೀಲಿ ತಂದಾಗ್ಯೂ, ಇದರ ಅನುಕೂಲತೆಯನ್ನು ಮಲೆನಾಡಿನವರು ತಿಳಿದುಕೊಳ್ಳದೆ ವ್ಯಾಕ್ಸಿನೇಟರು ಹಳ್ಳಿಗೆ ಬರುವಾಗ ರೈತರು ಗೈರ್ಹಾಜರಾಗುತ್ತಲೇ ಬಂದರು. ಈಚೆಗೆ ಬಲಾತ್ಕಾರವಾಗಿ ವ್ಯಾಕ್ಸಿನೇಷನ್ ಮಾಡಿಸುವ ರೂಲ್ಸು ಜಾರೀಲಿ ತರುತ್ತಲೂ, ಕೆಲವು ಪ್ರದೇಶಗಳಲ್ಲಿ ತಂದೂ ಇದಾರೆ. ಆದರೆ 1905 ನೇ ಇಸ್ವೀಲಿ ಶೃಂಗೇರಿ ಸರ್ಕಲ್‌ನಲ್ಲಿ ವ್ಯಾಕ್ಸಿನೇಟರಾಗಿದ್ದ ಮ|| ಸಿ. ದಾಸೇಗೌಡರು ಈ ಮಲೆನಾಡು ಜನಗಳಿಗೆ ಇರತಕ್ಕ ಒಂದು ವಿಧವಾದ ಹೆದರಿಕೆಯನ್ನು ತಪ್ಪಿಸಿ ಜನಗಳಿಗೆ ಹೆಚ್ಚಾಗಿ ಪ್ರೋತ್ಸಾಹಕೊಟ್ಟು, ಮಹನಸ್ತುಮಾಡಿ ಇವರು 1909 ರಲ್ಲಿ ತರೀಕೆರೆಗೆ ವರ್ಗಪಟ್ಟಿಕನಕ ಸುಮಾರು 4,000 ಜನಗಳಿಗೆ ವ್ಯಾಕ್ಸಿನೇಷನ್ ಮಾಡಿದರು. ಇವರ ಮಹನತ್ತನ್ನು ಸೀನಿಯರ್ ಸರ್ಜನ್ ಸ್ಮಿಯತ್ ಸಾಹೇಬರು ಪಗಾಂಬರಿಸಿ ತಕ್ಕ ಸರಟಿಫಿಕೇಟು ಅನುಗ್ರಹಿಸಿದರು. ಇದು ನಮಗೆಲ್ಲಾ ಪೂರ್ಣ ಗೊತ್ತಿರುತ್ತದೆ. ಸರ್ಕಾರದವರು ಪುನಹ ಅವರನ್ನೇ ಇಲ್ಲಿಗೆ ಕಳುಹಿಸಿಕೊಟ್ಟರೆ ನಮ್ಮಗಳಿಗೆ ಹೆಚ್ಚಾಗಿ ಸೌಲಭ್ಯ ದೊರಕಬೇಕೆಂಬುದು ನಿಸ್ಸಂಶಯವಾಗಿದೆ. ಕೆ. ಕೆ. ವೆಂಕಟಗಿರಿಯಪ್ಪ.

ಯಮ್ಮೆಯ ಪ್ರಾಣಸಂಕಟ, ಬಡವನ ಸಹಾಯ.

ಅಯ್ಯ,—ತಾ 12 ನೇ ಭಾನುವಾರ ಕುಂಸಿ ವಾಸಿ ಗುಡ್ಡನಕೊಪ್ಪದ ಮಸ್ತಾನ್ ಸಾಹೇಬರ ಯಮ್ಮೆಯು ಗಟ್ಟವಾಗಿದ್ದದ್ದು ಕರು ಹಾಕುವದಕ್ಕೆ ಹಗ ಲೆಲ್ಲಾ ಬಹು ಪ್ರಯಾಸಪಟ್ಟಾಗ್ಯೂ ಆಗದೆ ಕರುವಿನ ಮುಂಗಾಲುಗಳು ಮಾತ್ರ ಹೊರಗೆ ಬಂದು ಶರೀರಕ್ಕೆ ಅಡ್ಡವಾಗಿ ಕರವು ಸಿಕ್ಕಿಕೊಂಡಿತ್ತು. ಕರುವಿನ ಕಾಲಿಗೆ ಹಗ್ಗ ಕಟ್ಟಿ ಎಳದೂ ನೋಡಿದರು. ಪ್ರಯೋಜನವಾಗಲಿಲ್ಲ. ಯಮ್ಮೆ ಸತ್ತು ಹೋದೀತೆಂಬ ಭಯದಿಂದ ಆಸ್ಪತ್ರೆ ಡಾಕ್ಟರಲ್ಲಿ ತೆಗೆದುಕೊಂಡು ಹೋಗಿ ತೋರಿಸಿದರು. ಅವರು ಹೊರಗೆ ಬಂದ ಕರುವಿನ ಕಾಲುಗಳು ಮಾತ್ರ ಕತ್ತರಿಸಿ ಬರೀ ಏನೂ ಮೂಗುವ್ಯಾಣಿ ಪಡುತ್ತಿರುವ ತೊಂದರೆ ಹೋಗಲಾಡಿಸಲು ಏನೂ ಬುದ್ಧಿವಂತಿಕೆ ಖರ್ಚುಮಾಡಲಿಲ್ಲ. ಇದೇ ರೀತಿ ತೊಂದರೆಪಡುತ್ತಿದ್ದ ಯಮ್ಮೆಗೆ ಎರಡು ದಿನಗಳು ಗತಿಸಿ ಹೋದವು. ಕರವು ಹೊಟ್ಟೆಯೊಳಗೆ ಸತ್ತು ಹೊಟ್ಟೆ ಉಬ್ಬಿಕೊಂಡಿತು. ಈ ಎಮ್ಮೆಯ ಸಂಕಟ ನೋಡುವದಕ್ಕೆ ಅನೇಕರು ಬಂದಾಗ್ಯೂ ಯಾರಿಂದಲೂ ಸಾಧ್ಯವಾಗದೆ ಹೋಯ್ತು. ತಾ. 15ನೇ ಬುಧವಾರ ಹೊತ್ತರಲ್ಲಿ ಯಮ್ಮೆ ಪ್ರಾಣಹೋಗುವಂತಿತ್ತು. ಅಷ್ಟರಲ್ಲೇ ನಯ್ಯದ್ ಮಹಮ್ಮದ್ ಸಾಹೇಬರು ಹೋಗಿ ಚಿಕಿತ್ಸೆಮಾಡಿ ಸುಲಭ ರೀತಿಯಾಗಿ ಕರುವು ಹೊರಗೆ ತೆಗೆದುಬಿಟ್ಟರು. ಒಡನೆಯೇ ಎಮ್ಮೆಯು ಚೇತರಿಸಿಕೊಂಡು ಮೇಲು ಕೈದ್ದು ಈಗ್ಗೆ ಬಹು ಚೆನ್ನಾಗಿರುತ್ತೆ. ನೇಟಿವ್ ಜನರಲ್ಲಿ ಇಂಥಾ ಬುದ್ಧಿಶಾಲಿ ಗಳಿಗೆ ನಮ್ಮ ಸರ್ಕಾರದವರು ಚುನಾಯಿಸಿ ನಜರ್‌ನಲ್ಲಿ ಇಟ್ಟುಕೊಳ್ಳಬೇಕಾದ್ದು ವೆಟರಿನರಿ ಇಲಾಖೆಗೆ ಯೋಗ್ಯವಾಗಿದೆ. ಇವರು ಪಟ್ಟಿರತಕ್ಕ ಮೆಹನತ್ತಿಗೆ ಈ ಗ್ರಾಮದ ಜನಗಳೆಲ್ಲಾ ಸೇರಿ ಬಹು ಸಂತೋಷದಿಂದ ಯಮ್ಮೆಯೊಂದಿಗೆ ಹೂವಿನ ಹಾರ ಮುಂತಾದ್ದು ಇವರ ಕೊರಳಿಗೆ ಹಾಕಿ ಊರಿನಲ್ಲೆಲ್ಲಾ ವಿಜೃಂಭಣೆಯಿಂದ ವಾದ್ಯದೊಡನೆ ಮೆರವಣಿಗೆ ಮಾಡಿ, ಪ್ರಾಣ ಬಿಡುತ್ತಾ ಇದ್ದ ಯಮ್ಮೆಯ ಸಂಕಟ ಹೋಗಲಾಡಿಸಿದ್ದಕ್ಕೆ ಬಹುಮಾನದೊಂದಿಗೆ ತೃಪ್ತಿಪಡಿಸಿದರು. ಚಂದಾದಾರ್.

ಘೋರಕೃತ್ಯವಂತೆ.

ಅಯ್ಯಾ,—ಇದೇ ತಿಂಗಳು ತಾ. 10 ನೇ ಶುಕ್ರವಾರ ಕೊಪ್ಪದ ಕಸಬಾ ಹೋಬಳಿಯಲ್ಲಿರುವ ಚೀಕೆಹಳ್ಳಿ ಎಂಬ ಗ್ರಾಮಸ್ಥನಾದ ಒಕ್ಕಲಿಗ ಗೋಪಾಲ ಗೌಡ ಎಂಬ ತರುಣನೊಬ್ಬನು ಸಂಸಾರದೊಳಗಣ ಕದರ್ಚೆಯಿಂದ ಕೋಪೋ ದ್ರಿಕ್ತನಾಗಲು ತನ್ನ ಹೆಂಡತಿಯು ತೌರುಮನೆಯಲ್ಲಿದ್ದುದರಿಂದ ಅಳಿ ಯನ್ನು ಕರತರಲೋಸುಗ ಹೊರಟುಹೋಗಲಾಗಿ ಆ ಮನೆಯಲ್ಲಿದ್ದ ಆತನ ಅತ್ತೆ, ಭಾವ ಮೊದಲಾದವರು ಮಧ್ಯಾಹ್ನಕಾಲವಾದದ್ದರಿಂದ ಊಟ ಮಾಡಿ ಕೊಂಡು ಕರೆದುಕೊಂಡು ಹೋಗಬಹುದೆಂದು ತಿಳಿಸಿದ್ದಾಗಿಯೂ, ಅದಕ್ಕೊಡಂ ಬಡದೆ ಆ ಮೂರ್ಖನು ಮನೆಯೊಳಗಿದ್ದ ತನ್ನ ಹೆಂಡತಿಯನ್ನು ಕೈಹಿಡಿದೆಳೆದು ಕೊಂಡು ಹೊರಗೆ ಬಂದು ತನ್ನ ಕೈಯಲ್ಲಿ ಹಿಡಿದಿದ್ದ ದೊಣ್ಣೆಯಿಂದ 3-4 ಏಟುಗಳನ್ನು ಹೊಡೆಯಲಾಗಿ ಮನೆಯವರು ಆತನ ಇಷ್ಟಕ್ಕೆ ವಿರೋಧವಾಗಿ ಹೋದ ಪಕ್ಷದಲ್ಲಿ ಹೆಚ್ಚಾಗಿ ಶಿಕ್ಷಿಸಿಯಾನೆಂಬ ವ್ಯಥೆಯಿಂದ ಕೂಡ್ಲೆ ಕರೆದು ಕೊಂಡು ಹೋಗಬಹುದಾಗಿ ಅನುಮತಿ ಕೊಟ್ಟದ್ದಾಗಿಯೂ, ಅನಂತರ ಆತನು ಮನೆಯಲ್ಲಿದ್ದ ತನ್ನ ಅತ್ತೆ ಭಾವ ಮೊದಲಾದವರಿಗೆಲ್ಲಾ ನಮಸ್ಕರಿಸುವಂತೆ ತನ್ನ ಹೆಂಡತಿಗೆ ಅಪ್ಪಣೆಮಾಡಿ ಅಲ್ಲಿಂದ ತನ್ನ ಮನೆಯನ್ನು ಕುರಿತು ಹೊರಟದ್ದಾ ಗಿಯೂ, ತನ್ನ ಮನೆಯು ಅಲ್ಲಿಂದ 2 ಮೈಲಿ ದೂರವಿದ್ದುದರಿಂದಲೂ ಮತ್ತು ಜನಸಂಚಾರವಿಲ್ಲದ ಕಾಡುದಾರಿಯಾದುದರಿಂದಲೂ ದಾರಿಯಲ್ಲಿ ತನ್ನ ಹೆಂಡತಿ ಯನ್ನು ಕರೆತರುತ್ತಾ ಕೈಲಿ ಹಿಡಿದಿದ್ದ ದೊಣ್ಣೆಯಿಂದ ಏಟುಗಳನ್ನು ಹೊಡೆ ಯುತ್ತ ಬರುವಲ್ಲಿ ಆ ಹುಡುಗಿಯು ಸರ್ವಾಂಗವೂ ರಕ್ತಪ್ರವಾಹದಿಂದ ತುಂಬಿರಲು ಹಾಗೂ ಹೀಗೂ ನಡೆದುಬರುತ್ತಾ ತನ್ನ ಗಂಡನ ಅಧಿಕವಾದ ಹೊಡೆತದ ಬಲ ಮೂರ್ಛೆಯಿಂದ ಬಿದ್ದದ್ದಾಗಿಯೂ, ಆ ಮೇಲೂ ಬಿದ್ದ ತನ್ನ ಹೆಂಡತಿಯ ಕಾಲನ್ನು ಹಿಡಿದುಕೊಂಡು ಸತ್ತ ನಾಯಿಯನ್ನು ಎಳೆಯೋಪಾದಿ ಯಲ್ಲಿ ತೋಟದೊಳಗಿನಿಂದ 2 ಫರ್ಲಾಂಗ್ ದೂರವಿರುವ ತನ್ನ ಮನೆಯ ವರೆ ವಿಗೂ ಎಳೆದುಕೊಂಡು ಬರುತ್ತಿರುವ ಘೋರಕೃತ್ಯವು ಮನೆಯ ನೆರೆಹೊರೆಯವ ರಿಗೆ ತಿಳಿದುಬರಲಾಗಿ ಅವರೆಲ್ಲರೂ ಘಾಬರಿಯಿಂದಲೂ ವ್ಯಸನದಿಂದಲೂ ಓಡಿ ಬಂದು ಆತನನ್ನು ಬಂಧಿಸಿದ್ದಾಗಿಯೂ, ಅಷ್ಟರಲ್ಲೇ ಆ ಸ್ತ್ರೀಯು ಸಂಕಟಪಡು ತ್ತಿರಲು ಕೂಡ್ಲೆ ಡಾಕ್ಟರನ್ನು ಮನೆಗೆ ಬರಮಾಡಿಕೊಂಡು ತೋರಿಸುವಷ್ಟರಲ್ಲೇ ಆ ಹುಡುಗಿಯು ಬಾಯಾರಿಕೆಯಾಗುತ್ತದೆ, ನೀರು ಕೊಡಿ, ನೀರು ಕೊಡಿ ಎಂದು ಕೂಗುವ ಆರ್ತಸ್ವರವನ್ನು ಕೇಳಿ ತಕ್ಷಣವೇ ಡಾಕ್ಟರು ನೀರು ಹಾಲು ಗಳ ಕುಡಿಸಿದೊಡನೆ 2-3 ನಿಮಿಷಗಳಲ್ಲೇ ಪ್ರಾಣವನ್ನು ಬಿಟ್ಟಳೆಂಬುವಾಗಿ ದುಃಖಕರವಾದ ವಿಚಾರವನ್ನು ತಿಳಿಸಲು ತುಂಬಾ ವಿಷಾದಪಡುವೆನು. ಆ ಮೇಲೆ ಪೊಲೀಸ್ ಇನ್‌ಸ್ಪೆಕ್ಟರು ಬಂದು ಆತನನ್ನು ಬಂದೋಬಸ್ತು ಮಾಡಿಸಿದ್ದಾ ಗಿಯೂ, ಇಷ್ಟರಲ್ಲೇ ರಾತ್ರಿಯಾದ್ದರಿಂದ ಮಾರನೇ ದಿನ ಬೆಳಿಗ್ಗೆ ತಾಲ್ಲೂಕು ಮ್ಯಾಜಿಸ್ಟ್ರೇಟರೂ, ಪೊಲೀಸ್ ಇನ್‌ಸ್ಪೆಕ್ಟರೂ ಮುಂದಿನ ಕ್ರಮ ಜರುಗಿಸಿ ದ್ದಾಗಿಯೂ, ಈಗ ಸದರಿ ಕೇಸು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್‌ರವರ ಕೋರ್ಟಿನಲ್ಲಿರುವುದಾಗಿಯೂ ವರ್ತಮಾನ ಕೇಳುತ್ತೇನೆ. ಅಪರಾಧಿಯು ತನ್ನ ಹೆಂಡತಿಯಲ್ಲಿ ತಾನು ನಡಿಸಿದ ನಿರ್ದಯಮಾನಗಳನ್ನೆಲ್ಲಾ ಕಟ್ಟಿಲು ಕೊಟ್ಟಿರುವುದ ಲ್ಲದೆ, ತಾನು ಈ ಕೃತ್ಯವನ್ನು ತನ್ನ ಮನಃಪೂರ್ವಕವಾಗಿ ಮಾಡಿರುತ್ತೇನೆಂ ದೂ, ಅದಕ್ಕಾಗುವ ಶಿಕ್ಷೆಯನ್ನು ತಾನೇ ಅನುಭವಿಸಲು ಬದ್ಧನಾಗಿರುತ್ತೇ ನೆಂದೂ ಸ್ಟೇಟ್‌ಮೆಂಟ್ ಬರೆದು ರುಜುಹಾಕಿರುವುದಾಗಿಯೂ ಕೇಳುತ್ತೇನೆ.

ಹಿತೈಷಿ

ತಾಲ್ಲೋಕು ವರ್ತಮಾನಗಳು.

ಗುಂಡ್ಲುಪೇಟೆ ತಾ|| ಕೋಟೆಹನಾಡಿ.—ಈ ಗ್ರಾಮದಲ್ಲಿ ಸಾಹುಕಾರ್ ಮ|| ರಾ|| ಕೆ. ಮಹಮ್ಮದ್ ಯೂಸಫ್ ಸಾಹೇಬರು ಶ್ರೀ ವರದರಾಜಸ್ವಾಮಿಯವರ ದೇವಸ್ಥಾನದ ಪಶ್ಚಿಮ ಪಾರ್ಶ್ವದ ತಮ್ಮ ಜಮೀನಿನಲ್ಲಿ ಒಂದು ಧರ್ಮ ಪಾಠ ಶಾಲಾ ಕಟ್ಟಡವನ್ನು ಕಟ್ಟಿಸಬೇಕೆಂದು ಪ್ರಯತ್ನಪಟ್ಟು ತಾಲ್ಲೂಕು ಆಫೀಸರ ಲ್ಲಿ ಅರ್ಜಿ ಮಾಡಿಕೊಂಡದ್ದರ ಮೇಲೆ ಅಮಲ್ದಾರರು 3,150 ರೂಪಾಯಿ ಅಂದಾಜು ಖಾಲ್ತು ಪ್ಲಾನನ್ನು ತಯಾರುಮಾಡಿಸಿ ಕಳುಹಿಸಿಕೊಟ್ಟಿರು. ಅನಂತರ ಈ ಧರ್ಮಕಾರ್ಯ ಪ್ರವರ್ತಕರು ಉದಾರ ಮನಸ್ಸಿನಿಂದ ಆ ಕಟ್ಟಡದ ಕೆಲಸವನ್ನು ಪ್ರಾರಂಭಿಸಿರುತ್ತಾರೆ.

ಶ್ರೀರಂಗಪಟ್ಟ.—ತಾ 21 ನೇ ಮಂಗಳವಾರ ಸಾಯಂಕಾಲ ಇಲ್ಲಿಯ ಶ್ರೀಮನ್ನಿಮುಗಿರಿ ಮುಕ್ತಿರಾಜ ಮಠದಲ್ಲಿ ರಿಟೈರ್ಡ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಮುಮುಲಾಚಾರ್ಯರು ಈ ಟೌನಿನಲ್ಲಿ ಸಂಸ್ಕೃತವನ್ನೂ, ಅಧ್ಯಯನವನ್ನೂ ವೃದ್ಧಿಮಾಡಬೇಕೆಂಬ ಉದ್ದೇಶ್ಯ ಬಹು ಸ್ವಾರಸ್ಯವಾಗಿ ಉಪನ್ಯಾಸವನ್ನು ಕೊಟ್ಟರು. ಈ ಕಾರ್ಯವು ನೆರವೇರಿ ಶಾಶ್ವತವಾಗಿ ನಡಿಸಲ್ಪಟ್ಟರೆ ಲೋಕೋಪ ಕಾರವಾಗುವುದು.—ಇಲ್ಲಿಯೂ ಕೋಆಪರೆಟಿವ್ ಸೊಸೈಟಿಗಳಲ್ಲಿ 2-3 ಪಾರ್ಟಿ ಗಳಾಗಿವೆ. ಪ್ರತಿ ಮನೆಯ ಬಾಗಿಲಲ್ಲಿ ಕತ್ತೆಗಳ ಸಾರಾವನ್ನೂ, ಬಚ್ಚಲ ರೊಚ್ಚು ದುರ್ಗಂಧವನ್ನೂ ವರ್ಣಿಸಲು ಅಸಾಧ್ಯವಾಗಿದೆ. ಗಲ್ಲಿಗಳಲ್ಲಿರುವ ಮನೆಗಳಿಗೂ, ಮ್ಯುನಿಸಿಪಾಲಿಟಿಗೂ ಸಂಬಂಧವಿದೆಯೋ ಇಲ್ಲವೋ ಎಂಬ ಸಂದೇಹವುಂಟಾಗಿದೆ. ಮುಖ್ಯವಾಗಿ ಎಲ್ಲರೂ ಒಗ್ಗಟ್ಟಿನಿಂದ ಪ್ರಜೋಪಕಾರ ಕೆಲಸಗಳನ್ನು ಮಾಡು ವುದು ಮುಖ್ಯವಾಗಿದೆ.

ಹಿರಿಯೂರು.—ಈ ವಾರ 1-2 ಮಳೆ ಆಗಿದೆ. ಅದುದಂಕೆ ಉಪದ್ರ ಸ್ವಲ್ಪ ಕಡಿಮೆ. ಪೇಟೆ ಹಳ್ಳಿಯಲ್ಲಿ ಇಲಿ ಸಾಯುತ್ತವೆಂದೂ, ಗರಲ್ಸ್ ಸ್ಕೂಲಲ್ಲಿ ಇಲಿ ಬಿದ್ದದ್ದರಿಂದ ಸ್ಕೂಲ್ ಮುಚ್ಚಿದರೆಂದೂ ವರ್ತಮಾನವಿದೆ.—ಕೃಷ್ಣರಾಜ ಪುರದ ಅಂಗಡಿ ಶೀನಪ್ಪನ ಮನೆಯಲ್ಲಿ ಕಳುವಾದದ್ದನ್ನು ಪೊಲೀಸಿನವರು ಪತ್ತೆ ಮಾಡಿದ್ದರಲ್ಲಿ ಆತನ ಅನುಬಂಧಿಯಲ್ಲಿ ಕೆಲವು ಹೊಸ ಬಟ್ಟೆ ಸಿಕ್ಕಿತೆಂದೂ, ನಕಲೀಕರು ಹೋಗಿ ನೋಡಿದರೆಂದೂ ಕೇಳುತ್ತೇವೆ.—ಕೃಷ್ಣರಾಜಪುರದ ರಸ್ತೆ ಯನ್ನು ಸರಿಪಡಿಸಿದ್ದಕ್ಕೆ ಸಂತೋಷಪಡುತ್ತೇವೆ.—ಮೊನ್ನೆ ದಿನ ವೈಶ್ಯರ ಪುರೋ ಹಿತ ಪುಟ್ಟಭಟ್ಟರ ಮನೆಯಲ್ಲಿ ಹೆಂಗಸರು ಜಾಸಿಗೆ ಕೆಳಗೆ ಅಡ್ಡಿಕೆ, ಬೆಳ್ಳಿ ಪಟ್ಟೆ ಇಟ್ಟಿದ್ದನ್ನು ಯಾರೋ ಹಿತ್ತಲಿಂದ ಬಂದು ಕನ್ನ ಹಾಕಿ ಒಡವೆಯನ್ನು ಮಾತ್ರ ಕದ್ದಿದ್ದಾರೆ. ಪೊಲೀಸಿನವರು ಪತ್ತೆ ತರದೂದಿನಲ್ಲಿದ್ದಾರೆ.—ದೊಡ್ಡಿಗೆ ಕಲ್ಲು ಹಾಕಿ ನೆಲಗಟ್ಟು ಮಾಡಿದ್ದು ದನಕರುಗಳಿಗೆ ಸುಖವಾಯಿತು.

ಮಾಗಡಿ.—ಇಲ್ಲಿ ಈಚೆಗೆ ಆದ ಮಳೆಯಿಂದ ರಾಗಿ ಮತ್ತು ಜೋಳದ ಪೈರಿಗೆ ಸ್ವಲ್ಪ ಉತ್ತಮವಾಯಿತು. ಮೋಡವಾದುತ್ತಿದೆಯೇ ಹೊರತು ಮಳೆ ಯಿಲ್ಲ. ಕೆರೆ ಭಾವಿಗಳಿಗೆ ನೀರು ಬಂದಿಲ್ಲ.—ನೆನ್ನೆ ಇಲ್ಲಿಂದ ವರ್ಗವಟ್ಟ ಪೊಲೀಸ್ ಇನ್‌ಸ್ಪೆಕ್ಟರ್ ಮ|| ಬಸವರಾಜೆ ಅರಸಿನವರಿಗೂ, ಸಬ್ ರಿಜಿಸ್ಟ್ರಾರ್ ಕೃಷ್ಣರಾಯರಿಗೂ ಎ. ವಿ. ಸ್ಕೂಲಿನಲ್ಲಿ ಟೀ ಪಾರ್ಟಿ ಆಯಿತು. ಪುರಪ್ರಮುಖ ರನೇಕರೂ, ಸ್ಥಳೀಯಾಧಿಕಾರಿಗಳೂ ದಯಮಾಡಿಸಿದ್ದರು. ಫಲಾಹಾರವಾದ ಮೇಲೆ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ಎಲ್ಲರೂ ಅವರ ಗುಣಕಥನ ಮಾಡಿದರು. ಇವರು ಜನಾನುರಾಗಿಗಳಾಗಿಯೂ ಪ್ರಜಾಹಿತಚಿಂತಕ ರಾಗಿಯೂ ಇದ್ದರು.—ಈ ಊರಿನಲ್ಲಿ ಒಂದು ವಾಚಕಶಾಲೆ ಇಲ್ಲದಿರುವುದು ಶೋಚನೀಯವಾಗಿದೆ. ಹಿಂದೆ ಸ್ಥಾಪಿಸಲ್ಪಟ್ಟಿದ್ದದ್ದು ಆಲ್ಪಾರಂಭದಲ್ಲೇ ನಿಂತು ಹೋಯಿತು. ಈ ವರಿವಿಗೂ ಈ ವಿಷಯವು ಸ್ಥಳೀಯಾಧಿಕಾರಿಗಳ ಮತ್ತು ಸಂಪದ ಭಿವೃದ್ಧಿ ಸಮಾಜದವರ ದೃಷ್ಟಿಪಥಕ್ಕೆ ಬಾರದಿದೆ.

ನೆಲಮಂಗಲದ ತಾ|| ಗೋರಹಳ್ಳಿ.—ಈ ಗ್ರಾಮದಲ್ಲಿ ರೆಪ್ರಜಂಟೆಟಿವ್ ಅಸೆಂಬ್ಲಿ ಮೆಂಬರ್ ಮ|| ಡಿ. ಯಸ್. ಕೃಷ್ಣರಾಯರಿಂದ ತಯಾರುಮಾಡಿಸಲ್ಪಟ್ಟ ಸ್ಕೂಲ್ ಮನೆಯನ್ನು ತಾ. 15 ನೇ ಬುಧವಾರ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಹೆಚ್. ಯನ್. ವೆಂಕಟರಮಣಯ್ಯನವರ ಆಧ್ಯಕ್ಷತೆಯಲ್ಲಿ ಪ್ರಾರಂಭಮಾಡ ಲ್ಪಟ್ಟಿತು. ಬಾಲಕ ಬಾಲಕಿಯರಿಂದ ದೇವರ ಪ್ರಾರ್ಥನೆಯಾದ ಮೇಲೆ ಸ್ಕೂಲ್ ವಿಷಯವಾಗಿ ಮ|| ಬಿ. ಎಸ್. ಕೃಷ್ಣರಾಯರಿಂದ ರಿಪೋರ್ಟು ಓದಲ್ಪಟ್ಟಿತು. ಮೊಸ್ಟ ಬೆಲವಂಗಲದ ವಿದ್ವಾನ್ ನಂಜುಂಡಪ್ಪನವರ ಸಂಗೀತವೂ, ಫೋನೋಗ್ರಾಫ್, ಬ್ಯಾಂಡುವಾದ್ಯವೂ, ಮಂಗಳವೂ ನಡೆದವು. ಇಂಜನೀರ್ ಸಾಹೇಬರು ಕೋ ಆಪರೇಟಿವ್ ಸೊಸೈಟಿ ಇನ್‌ಸ್ಪೆಕ್ಟರು, ಅನೇಕ ಶಿಕ್ಷೋಪಾಧ್ಯಾಯರು ಮತ್ತು ಪ್ರಜೆ ಗಳು ಸುಮಾರು 600 ಜನಗಳವರಿಗೆ ಹಾಜರಿದ್ದರು. ಸರ್ವರಿಗೂ ಹಾರ ತುರಾಯಿ ತಾಂಬೂಲ ವಗೈರೆ ಕೊಟ್ಟನಂತರ ಬಾಲಕ ಬಾಲಕಿಯರಿಗೆ ಮಿಠಾಯಿ ಹಣ್ಣು ಹಂಚಲ್ಪಟ್ಟು ಸಭೆಯನ್ನು ಪೂರೈಮಾಡಿದರು. ಡೆಪ್ಯುಟಿ ಇನ್‌ಸ್ಪೆಕ್ಟರ್ ಸಾಹೇ ಬರು ಸ್ಕೂಲ್ ಪ್ರತಿಷ್ಠೆ ಕೆಲಸವನ್ನು ಸಾಂಗವಾಗಿ ನಡಿಸಿ ಜನಗಳಿಗೆ ಬುದ್ಧಿವಾದ ವನ್ನು ಹೇಳಿ, ಮಂಗಳವಾದ್ಯಗಳಿಂದ ದಯಮಾಡಿಸಿದ್ದಕ್ಕಾಗಿ ಪ್ರಜೆಗಳು ಬಹಳ ಸಂತೋಷಭರಿತರಾದರು.

ಗುಬ್ಬಿ.—ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ವಿದ್ಯಾ ರ್ಥಿನಿಯರು ತಾ. 10 ನೇ ಶುಕ್ರವಾರ ಗಂಡಸರಿಗಾಗಿಯೂ, ಎ. ವಿ. ಸ್ಕೂಲಿನಲ್ಲಿ ತಾ 21 ನೇ ಮಂಗಳವಾರ ಗರಲ್ಸ್ ಸ್ಕೂಲಿನಲ್ಲಿ ಹೆಂಗಸರಿಗಾಗಿಯೂ "ಕಾನ್ಸರ್ಟ್" ಎಂಬ ವಿನೋದ ಗೋಷ್ಠಿಯನ್ನು ನಡಿಸಿದರು. ಅಮಲ್ದಾರ್ ಮ|| ಕೆ. ಕೆ. ವೆಂಕಟಸ್ವಾಮಿ ಅಯ್ಯಂಗಾರವರು ಅಗ್ರಾಸನವನ್ನು ವಹಿಸಿದ್ದರು. ಸ್ಥಳೀಯ ಸರ್ಕಾರಿ ಅಧಿಕಾರಿಗಳೂ, ವರ್ತಕಮಹಾಜನರೂ, ರೆವ್. ಪರ್‌ಸ್ಟನ್ ಯವರೂ ದಯಮಾಡಿ ದ್ದರು. ಬಾಲಕಿಯರ ಆಟಪಾಟಗಳೂ, ಡ್ರಿಲ್ ಮೊದಲಾದ ಅಂಗಸಾಧನೆಗಳೂ, ಹಾಡುಗಾರಿಕೆಯೂ, ನ್ಯಾಯ ನೀತಿ ಆರೋಗ್ಯಗಳನ್ನು ಕುರಿತ ಸಂಭಾಷಣೆಗಳೂ, ಸಂಸ್ಕೃತ ಬಾಯಿಪಾಠ ಶ್ಲೋಕಗಳೂ ಸಭಿಕರನ್ನು ಆನಂದಗೊಳಿಸಿ, ಈ ಪಾಠ ಶಾಲಾಸ್ಥಿತಿಯು ಸರ್ವ ಸಮರ್ಪಕವಾಗಿದೆ ಎಂಬ ಅಂಶವನ್ನು ವ್ಯಕ್ತಪಡಿಸಿದವು. ಈ ಮೂಲಕ ಬಾಲಕಿಯರು ಸ್ವಲ್ಪ ಹಣವನ್ನು ಕೂಡಿಸಿ, ಯುದ್ಧದ ಫಂಡಿಗೆ ಕಳುಹಿಸಿದರು. ಈಗ ನಡೆಯುತ್ತಿರುವ ಮಹಾ ಯುದ್ಧದಲ್ಲಿ ಬ್ರಿಟಿಷ್ ಸಾರ್ವ ಭೌಮರಿಗೂ, ಇವರ ಮಿತ್ರಮಂಡಲಿಯವರಿಗೂ ಜಯವಾಗಲೆಂಬ ಪ್ರಾರ್ಥನೆ ಯಿಂದ ಸಭೆಯು ಮುಕ್ತಾಯವಾಯಿತು. ಸಭಿಕರಲ್ಲಿ ಕೆಲವರು ಧಾರಾಳವಾದ ಚಂದಾ ಮೂಲಕ ಬಾಲಕಿಯರಿಗೆ ಮಿಠಾಯಿ ಹಂಚುವ ಏರ್ಪಾಡು ಮಾಡಿದರು.

ಶೃಂಗೇರಿ.—ಇಲ್ಲಿ ಒಂದು ತಿಂಗಳಿಂದಲೂ ಮಳೆಯಿಲ್ಲದೆ ಪೈರುಗಳೆಲ್ಲಾ ಬಾಡಿಹೋಗಿದ್ದವು. ಈಚೆಗೆ ಒಂದು ವಾರದಿಂದಲೂ ಆಗಾಗ್ಗೆ ಮಳೆ ಬರುತ್ತಲೇ ಇರುವದರಿಂದ ಪೈರುಗಳೆಲ್ಲಾ ಬಹಳ ಚೆನ್ನಾಗಿ ಕಂಗೊಳಿಸುತ್ತಿರುವವು. ಈ ಊರು ಮುನ್ಸಿಪಾಲಿಟಿಯ ಏರ್ಪಾಟುಗಳು ತೃಪ್ತಿಕರವಾಗಿಲ್ಲ. ಜಾಡಮಾಲಿಗಳು ಸರಿಯಾಗಿ ಕಚಡಾ ಸಾಗಿಸುವದಿಲ್ಲ. ರೋಡಿನಲ್ಲೆಲ್ಲಾ ಗ್ರಾವೆಲ್ ಹಾಕಿರೋಣದ ರಿಂದ ಜನಗಳು ತಿರುಗಾಡಲು ಬಹಳ ತೊಂದರೆಯಾಗಿದೆ. ರಾತ್ರಿ ಕಾಲದಲ್ಲಿ ಮುನ್ಸಿಪಲ್ ದೀಪ ಇರುವುದೇ ದುಸ್ತರ. ಮೆಂಬರುಗಳು ಈ ವಿಚಾರದಲ್ಲಿ ನಿಗಾ ಕೊಟ್ಟಂತೆ ಇಲ್ಲ. ಹೊಸದಾಗಿ ಅನೇಕ ಕಟ್ಟಡಗಳು ತಯಾರಾಗಬೇಕಾಗಿ ನಿಷ್ಕ ರ್ಷಿಸಲ್ಪಟ್ಟಿರುತ್ತೆ.—ಕಂದಾಯ ವಸೂಲಿ ವಿಷಯದಲ್ಲಿ ಏಜಂಟರೇ ಹಳ್ಳಿ ಕಡೆ ಮೊಕ್ಕಾಂ ಮಾಡಿ ಇತ್ಯರ್ಥಪಡಿಸುತ್ತಾ ಇದ್ದಾರೆ. ಇಲ್ಲಿನ ಕೋಆಪರೇಟಿವ್ ಸೊಸೈಟಿ ಬಹಳ ಚೆನ್ನಾಗಿ ಕೆಲಸ ನಡಿಸುತ್ತಾ ಇದೆ. ಇದೇ ಕೊಪ್ಪ ತಾಲ್ಲೂಕು ಬೇಲಿಹಳ್ಳಿಯಲ್ಲಿ ನಡೆದಿರುವ ಪ್ರಾಣಹಾನಿಯು ಬಹಳ ವಿಷಾದಕರವಾಗಿದೆ. ತಾಲೂಕು ಬ್ಯಾಂಕಿನ ಮೂಲಕ ನಡಿಸುವ ಅಡಿಕೆ ವ್ಯಾಪಾರದ ಪಪ್ಪದ ವಿಷಯವು ಯೋಚನೆಗೆ ಆಸ್ಪದವಾಗಿದೆ.

ಪರಸಗಡ ತಾ|| ಯುತ್ರಗಟ್ಟ.—ತಾ. 14 ನೇ ಮಂಗಳವಾರ ಸಾಯಂಕಾಲ 7 ಗಂಟೆ ಸುಮಾರಿಗೆ ಈ ಊರಿಗೆ ಸುಮಾರು 50 ಮಂದಿ ದರೋಡೆ ಕಳ್ಳರು ಪಂಜು ಹತ್ತಿಕೊಂಡು ಬಂದು ಇಲ್ಲಿರುವ ಮುಸಾಫರಿ ಬಂಗಲೆಯ ಕಾರಕೂನ (ರೈಟರ್) ಸಿಂಗಪ್ಪ ಈತನ ಮನೆಯನ್ನು ಲೂಟಿಮಾಡಿ ಆತನ ಹೆಂಡತಿ ಮೈ ಮೇಲಿನ ದಾಗೀನೆಗಳನ್ನು ಮತ್ತು ಆತನ ಮಗನ ಮೈ ಮೇಲಿನ ದಾಗೀನೆಗಳನ್ನು ಸುಲುಕೊಂಡರು. ಪೊಲೀಸ್ ಜನೋದಾರರು ಈ ಊರಿನಲ್ಲಿದ್ದರೂ ಅವರ ಹತ್ತಿರ ಬಂದೂಕು ಮುಂತಾದ್ದು ಏನೂ ಇಲ್ಲದ್ದರಿಂದ ಅವರು ಮನೆ ಬಿಟ್ಟು ಹೊರಗೆ ಬರಲಿಕ್ಕಾಗಲಿಲ್ಲ. ಆಗ ಸಿಂಗಪ್ಪನು ಮನೆಯಲ್ಲಿರಲಿಲ್ಲ. ಆತನ ಹೆಂಡತಿಯು ಭಯಪಟ್ಟು ಸುಮ್ಮನೆ ಆ ಕಳ್ಳರಿಗೆ ಎಲ್ಲಾ ತೆಗೆದು ಕೊಟ್ಟುಬಿಟ್ಟಳು. ಬಂಗಲೆ ಯನ್ನು ಕಾಯುವ ಸಿಪಾಯಿಗೆ ಸ್ವಲ್ಪ ಗಾಯವಾಗಿದೆ. ಅಲ್ಲಿಂದ ಈ ಊರಿಗೆ ಎರಡು ಅಥವಾ ಎರಡೂವರೆ ಮೈಲು ದೂರದಲ್ಲಿರುವ ಜೀವಾಪುರ ಎಂಬ ಗ್ರಾಮ ಕ್ಕೆ ಹೋಗಿ ಆ ಊರು ಸುಲಿಗೆ ಮಾಡಿ ಓಡಿಹೋದರು. ಪೊಲೀಸಿನವರು ಈಗ ಕಳ್ಳರ ಪತ್ತೆ ಮಾಡುತ್ತಲಿದ್ದಾರೆ. ಕೆಲವರನ್ನು ಹಿಡಿದುಕೊಂಡು ಬಂದಿದ್ದಾರೆ. ಅವರೆ ಅವರೇ ಕಳ್ಳರೆಂಬುವದು ಇನ್ನೂ ತಿಳಿಯಲಿಲ್ಲ.

ಕಾನ್ ಕಾನಹಳ್ಳಿ.—ಕಳೆದ ತಾ. 20 ನೇ ಸೋಮವಾರ ಕಾನಕಾನಹಳ್ಳಿ ತಾಲ್ಲೂಕು ಮರಳವಾಡಿ ಹೋಬಳಿ ಗೋಡೂರು ಗ್ರಾಮದಲ್ಲಿ ನೂತನವಾಗಿ ಕಟ್ಟತಕ್ಕ ದೇವಸ್ಥಾನದಲ್ಲಿ ಇಲ್ಲಿನ ಗ್ರಾಂಟು ಸ್ಕೂಲು ಪ್ರಾರಂಭಿಸಲ್ಪಟ್ಟಿತು. ಈ ಸ್ಥಳವು ಚಪ್ಪರ ತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಡೆ|| ಇನ್‌ಸ್ಪೆಕ್ಟರ್ ಮ|| ಅನಂತ ಸುಬ್ಬರಾಯರು ದಯಮಾಡಿ ಅಗ್ರಾಸನಾಧಿಪತ್ಯವನ್ನು ವಹಿಸಿದ್ದ ರು. ಶಾರದಾ ಪೂಜೆಯೂ, ವಾಚಕಶಾಲಾ ಪ್ರತಿಷ್ಠೆಯೂ ಆಯಿತು. ಈ ಉತ್ಸ ವಕ್ಕೆ ಅನೇಕ ಗ್ರಾಂಟ್ ಸ್ಕೂಲ್ ಮಾಸ್ಟರುಗಳೂ, ಗೌ|| ಸ್ಕೂಲ್ ಮಾಸ್ಟರುಗ ಳೂ, ಅನೇಕ ವಿದ್ಯಾಭಿಮಾನಿಗಳಾದ ದೊಡ್ಡಮನುಷ್ಯರುಗಳೂ ಸಭೆಯನ್ನು ಅಲಂ ಕರಿಸಿದ್ದರು. ಅಗ್ರಾಸನಾಧಿಪತಿಗಳು ಮಾಡಿದ ಧರ್ಮಬೋಧಾ ಉಪನ್ಯಾಸವನ್ನು ಕೇಳಿ ಗಟ್ಟಾವಳು ರಾಮಪುರದ ಪಟೇಲ ಚಿಕ್ಕ ಕೃಷ್ಣೇಗೌಡನ್ನು, ಗಾಡಾರಹಳ್ಳಿ ಪಟೇಲ್ ಸಿದ್ದೇಗೌಡನ್ನು ಬಹಳ ಸಂತೋಷಪಟ್ಟು ತಮ್ಮ ಗ್ರಾಮದಲ್ಲಿಯೂ ಒಂದು ಸ್ಕೂಲು ಕಟ್ಟಡವನ್ನು ಕಟ್ಟಿಸಿ ಉಚಿತವಾಗಿ ಸರ್ಕಾರಕ್ಕೆ ಒಪ್ಪಿಸುವುದಾಗಿ ವಾಗ್ದಾ ನ ಮಾಡುವುದರ ಮೂಲಕ ತಮ್ಮ ಔದಾರ್ಯವನ್ನು ತೋರ್ಪಡಿಸಿದರು. ಸಭೆ ಯವರು ಬಹಳ ಸಂತೋಷಪಟ್ಟರು. ಅನಂತರ ಸಾರ್ವಭೌಮರ, ಮಹಾರಾಜರ ಶ್ರೇಯಃಪ್ರಾರ್ಥನೆ ನಡೆದು ಗಂಧ ಪುಷ್ಪ ತಾಂಬೂಲಗಳಿಂದ ಸಭೆಯನ್ನು ಅಲಂ ಕರಿಸಿದ್ದಾಯಿತು. ಅಲ್ಲಿಗೆ ಸಭೆಯು ಬರಖಾಸ್ತಾಯಿತು.

ತಿಪಟೂರು.—ಈ ಊರಲ್ಲಿ ಒಂದು ತಿಂಗಳಿನಿಂದಲೂ ಪೈರುಗಳು ಬಿಸಿಲ ಬೇಗೆಯಿಂದ ಬಾಡುತ್ತಾ ಇದ್ದವು. ನೀರಿನ ತೊಂದರೆಯನ್ನಂತೂ ಹೇಳಲೇ ತೀ ರದು. ಈ ವಾರ ಅಲ್ಪಸ್ವಲ್ಪ ಮಳೆಯಾಗಿದೆ. ಪೇಟೆಗಳಿಂದ ಬಂದು ಎರಡು ತಿಂಗಳು ಆಗುತ್ತಾ ಬಂತು. ಈಗಾಗಲೇ ಕೆಲವು ಮನೆಗಳಲ್ಲಿ ಇಲಿಗಳು ಬೀಳುತ್ತಾ ಇವೆ. ಇಲ್ಲಿನ ಸ್ಯಾ|| ಇನ್‌ಸ್ಪೆಕ್ಟರು ಊರಿನ ಮ್ಯುನಿಸಿಪಲ್ ವಿಚಾ ರಗಳಿಗೆ ನಿಗಾ ಕೊಟ್ಟು ಪ್ರತಿಯೊಂದು ಗಲ್ಲಿಯಲ್ಲಿಯೂ ಶುಚಿಯಾಗಿಡುವಂತೆ ನೋಡಿಕೊಳ್ಳತಕ್ಕದ್ದು ಅತ್ಯವಶ್ಯಕ. ಈ ಕಾಲದಲ್ಲಿ ನಮ್ಮ ಅಮಲ್ದಾರರು ವಾರದಲ್ಲಿ ಕೆಲವು ಸಾರಿ ಊರಿನ ಗಸ್ತು ಮಾಡುತ್ತಿರುವುದು ತುಂಬಾ ಪ್ರಯೋ ಜನಕರವಾದೀತು.—ಇಲ್ಲಿನ ಕೋಆಪರೆಟಿವ್ ಸೊಸೈಟಿಯ ವಾರ್ಷಿಕೋತ್ಸವವು ನಮ್ಮ ಅಮಲ್ದಾರ್ರ ಅಧ್ಯಕ್ಷತೆಯಲ್ಲಿ ನಡೆದು ಷೇರುದಾರರಿಗೆಲ್ಲಾ ಅನುಕೂಲ ವಾದ ಬಡ್ಡಿಯೂ ಸೆ|| ಮ|| ರಾ. ತಿಮ್ಮಣ್ಣಯ್ಯನವರಿಗೆ ಮುತುವರ್ಜಿಯಿಂದ ಸೊಸೈಟಿಯ ಕೆಲಸ ನಡಿಸಿಕೊಂಡು ಬಂದುದಕ್ಕಾಗಿ ತಕ್ಕ ಬಹುಮಾನವೂ ದೊರೆ ತುದಲ್ಲದೆ, ಹೊಸದಾಗಿ ಮೈನರ್ ಡಿಪಾಜಿಟ್ಟಿಂಟ ಒಂದು ಅಕೌಂಟನ್ನು ಪ್ರಾರಂಭಮಾಡಿ ಬಾಲ ಬಾಲಕಿಯರು ಹಣ ಶೇಖರಿಸುವ ಅನುಕೂಲ ಮಾಡಿ ಕೊಟ್ಟರು.—ಈ ಊರಿನ ಬುಡನ್ ಸಾಬಿ ಎಂಬವನು ಕಳವಿನಿಂದ ಗೋಹತ್ಯೆ ಮಾಡಿದ್ದನ್ನು ಇಲ್ಲಿನ ಕಸಬಾ ದಫೇದಾರ್ ವಸಂತಯ್ಯನು ಮೆಹನತ್ತಿನಿಂದ ಪತ್ತೆ ಮಾಡಿದನು.—ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಕೆಲವು ದಿನಗಳ ಹಿಂದೆ ಮೈಸೂರು ಅಕ್ಷರಾಲಯದ ಮ್ಯಾನೇಜರು ಅಕ್ಷರಾಭ್ಯಾಸದ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸಮಾಡಿ ಅದರ ವಿಧಾನವನ್ನೂ ತೋರಿಸಿದರು.

ಅರಸಿಕೆರೆ.—ಕಳೆದ ವಾರ ಇಲ್ಲಿ ವಿಶೇಷವಾಗಿ ಮಳೆ ಬಂದದ್ದರಿಂದ ಒಣಗಿ ಹೋಗಿದ್ದ ಪೈರುಗಳೆಲ್ಲಾ ಚಿಗುರಿ ರೈತರಿಗೆ ಹರ್ಷವನ್ನುಂಟುಮಾಡಿತು. ಆದಾ ಗ್ಯೂ ಬಿಸಿಲಿನ ತಾಪ ಇನ್ನೂ ಶಮನವಾಗಿಲ್ಲ.—ಕಳೆದ ಬುಧವಾರ ಸಾಯಂಕಾಲ ಪಾಟ್ರಿಕ್ ಎಂಬ ರೋಮನ್ ಕೆಥೋಲಿಕ್ ಕ್ರೈಸ್ತನು ವಿಶೇಷವಾಗಿ ಕುಡಿದು ಬೃಹಸ್ಪತಿವಾರ ಬೆಳಗಿನಿಂದ ಮಧ್ಯಾಹ್ನದವರಿಗೂ ಮತ್ತನಾಗಿ ಜ್ಞಾನವಿಲ್ಲದೆ ಪೇಟೆ ಅಂಗಡಿ ಕಲ್ಲಿನ ಮೇಲೆ ಬಿದ್ದಿದ್ದನು. ಸಾಯಂಕಾಲ ಇವನನ್ನು ಆಸ್ಪತ್ರೆಗೆ ಸಾಗಿಸಿ, ಡಾಕ್ಟರು ಪ್ರಯಾಸಪಟ್ಟರೂ ಸಾಧ್ಯವಾಗದೆ ರಾತ್ರಿ ಪ್ರಾಣ ಬಿಟ್ಟನು. ಮಾರನೆದಿನ ಬೆಳಿಗ್ಗೆ ಪೊಲೀಸು ಇನ್‌ಸ್ಪೆಕ್ಟರು ಮಹಜರ್ ಮಾಡಿದರು.—ಇಲ್ಲಿನ ಸಂತೆಯಲ್ಲಿ ಕ್ರಮವಿಲ್ಲ. ವ್ಯಾಪಾರಸ್ಥರು ಬೇಕಾಬಿಟ್ಟಿ ಕೂತುಕೊಳ್ಳುತ್ತಾರೆ. ಗಾಡಿ, ಜನರ ಸಂಚಾರಕ್ಕೆ ಕಷ್ಟ. ಮಳೆ ಬಂದ ಕಾಲದಲ್ಲಿ ಇನ್ನೂ ಕಷ್ಟ. ನಿಲ್ಲ ಲಿಕ್ಕೆ ಆಶ್ರಯ ಸ್ಥಳವಿಲ್ಲ. ಮರಗಳಂತು ಸುತರಾಂ ಇಲ್ಲ. ಗದ್ದಲ ಬಹಳ. ಸಂತೆ ಕಾಲದಲ್ಲಿ ಸರ್ಕಾರದವರು ಬಂದು ನಿಲ್ಲುವದು ಅವಶ್ಯ. ನಮ್ಮ ಟವನ್ ಗಸ್ತುಗಳಲ್ಲಿಯೂ ರೋಡುಗಳನ್ನು ರಿಪೇರಿ ಮಾಡಿಸುವದಲ್ಲದೆ ರಸ್ತೆಗಳ ಲ್ಲಿರುವ ಕಲ್ಮಷವನ್ನು ತೆಗೆದು ಹಾಕಿಸುವದರಲ್ಲಿ ಅಮಲ್ದಾರ್ರು ಹೆಚ್ಚು ಮುತು ವರ್ಜಿ ವಹಿಸಿರುತ್ತಾರೆ. ಟ್ಯಾಂಕ್ ಇನ್‌ಸ್ಪೆಕ್ಟರು, ಪೊಲೀಸ್ ಇನ್‌ಸ್ಪೆಕ್ಟರು ಆಗಾಗ್ಗೆ ಬಂದಾಗಳು ಈ ವಿಷಯ ಹೆಚ್ಚು ಗಮನ ಕೊಡುವರೆಂದು ನಂಬಿದೇವೆ.— ಈಚೆಗೆ ಬಾಸಾವರದಿಂದ ವರ್ಗವಟ್ಟು ಬಂದಿರುವ ಡಾಕ್ಟರು ರೋಗಿಗಳನ್ನು ಪರಾಂಬರಿಸುವದರಲ್ಲಿ ಹೆಚ್ಚು ಮುತುವರ್ಜಿ ವಹಿಸಿದ್ದಾರೆ. ಇವರು ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವರು

ಚಿತ್ರದುರ್ಗ.—ಚಿತ್ರದುರ್ಗದ ಪ್ರಾಂತ್ಯ 10-15 ದಿವಸಗಳಿಂದ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಹೋಗುತ್ತಲಿವೆ. ವ್ಯವಸಾಯಗಾರರ ಗೋಳು ನಿರ್ವಾಹವಿಲ್ಲದ್ದಾಗಿದೆ. ಟವನ್ ಪ್ರಜೆಗಳಿಗೆ ನೀರಿನ ತೊಂದರೆ ತಪ್ಪಲಿಲ್ಲ. ಬಡಜನರು ಮತ್ತು ಬಡನೌಕರರು ಜೀವನ ಮಾಡುವುದು ತುಂಬಾ ಕಷ್ಟವಾಗಿದೆ. ಧಾರಣೆವಾಸಿಯು ದಿನೇ ದಿನೇ ಏರುತ್ತಲಿದೆ. ಅಜು ಬಾಜು ಗ್ರಾಮಗಳಲ್ಲಿ ದನಗಳಿಗೆ ರೋಗೋಪದ್ರವ ತಗಲಿ ಸಾಯುತ್ತಲಿರುವವು.—ಈ ಟವನ್‌ನಲ್ಲಿ ಸುಮಾರು 1-2 ತಿಂಗಳ ಕೆಳಗೆ ಕಳ್ಳರ ಭಯವು ಜಾಸ್ತಿಯಾಗಿ ಎರಡು ಕಡೆ ಘೋರವಾದ ಡಕಾಯಿತಿಗಳು ನಡೆಸಿದ್ದ ಕಳ್ಳರನ್ನು ಹಿಡಿಯಲು ನಮ್ಮ ಪೊಲೀಸಿ ನವರು ತುಂಬಾ ಮುತುವರ್ಜಿ ವಹಿಸಿ ಪತ್ತೆ ಹಚ್ಚಾಯಿಸಿದರಿಂದ ಆ ಕಳ್ಳರನ್ನು ಹಿಡಿದು ದಸ್ತಗಿರಿ ಮಾಡಿ ಜನರಲ್ ಕೋರ್ಟಿನಲ್ಲಿ ವಿಚಾರಣೆ ನಡೆದು ತಪ್ಪು ಸಾಬೀತಾದ ಕಾರಣ ಛಾರ್ಜು ಮಾಡಿ ಸೆಷನ್‌ಗೆ ಕಮಿಟ್ ಮಾಡಿದ್ದರು. ಸೆಷನ್ ಕೋರ್ಟಿನಲ್ಲಿ ಸದರಿ 13 ಜನ ಅಪರಾಧಿ ಕಳ್ಳರ ವಿಚಾರಣೆಯು ನಡೆದು ತಪ್ಪು ರುಜುವಾತಾದ ಕಾರಣ ತಾ. 17 ನೇ ಶುಕ್ರವಾರ ಆರು ಜನರಿಗೆ ಆರಾರು ವರ್ಷ ಕಠಿಣ ಸಜಾ, 4 ಜನರಿಗೆ ನಾಲ್ಕು ನಾಲ್ಕು ವರ್ಷ ಕಠಿಣ ಸಜಾ ವಿಧಿಸಿ, ಬಾಕಿ 3 ಜನರ ಮೇಲೆ ತಪ್ಪು ರುಜುವಾತು ಬಾರದ್ದರಿಂದ ಬಿಡುಗಡೆ ಹೊಂದಿದರು.— ಅಲ್ಲಿಗೆ ನಾಳೆ ಭಾನುವಾರ ನಮ್ಮ ದಿವಾನ್ ಸಾಹೇಬರವರು ದಯಮಾಡಿಸುವ ದಾದ್ದರಿಂದ ಇಲ್ಲಿಯ ಪ್ರಜೆಗಳೆಲ್ಲಾ ಮಹಾ ಸಂತೋಷಪಡುತ್ತಾ ಇಲ್ಲಿಯ ಟವನ್ ರಸ್ತೆ ರೋಡುಗಳಲ್ಲಿ ಕದಳೀಸ್ತಂಭ ತೋರಣಗಳಿಂದ ಅಲಂಕರಿಸಲ್ಪಟ್ಟ ಚಪ್ಪರ ಗಳು ಟವನ್ ಹಾಲ್ ಸಹ ಶೃಂಗರಿಸಿ, ನಿರೀಕ್ಷಣೆಯಲ್ಲಿ ಸರ್ವರೂ ಸಂತೋಷಭ ರಿತರಾಗಿದ್ದಾರೆ.—ಇಂಜನೀರು ಇಲಾಖೆ ಸಣ್ಣ ಪುಟ್ಟ ನೌಕರರಿಗೆ ಸಂಬಳ ಜಾಸ್ತಿ ಯಾಗದೆ ಸಂಕಟ ಪಡುತ್ತಿದ್ದಾರೆ. ಎಲ್ಲಾ ಇಲಾಖೆಯ ನೌಕರರಿಗೂ ಅಷ್ಟಿಷ್ಟು ಸಂಬಳ ಬಡ್ತಿ ಮಾಡಿರುವಂತೆ ಮೇಲ್ಪಟ್ಟ ಅಧಿಕಾರಿಗಳು ಇವರಿಗೂ ಬಡ್ತಿ ಮಾಡಿ ಇವರ ಸಂಕಟವನ್ನು ಪರಿಹರಿಸ್ಯಾರೆಂದು ನಂಬಿದೆ.

ಕೃಷ್ಣರಾಜಪೇಟೆ.—ಈಚೆಗೆ ನಮ್ಮ ಡೆಪ್ಟಿ ಕಮಿಷನರವರ ಸಹಾಯದಿಂದ ಲೂ, ಮ|| ಕೃಷ್ಣಶಾಸ್ತ್ರಿಯವರ ಪ್ರೋತ್ಸಾಹದಿಂದಲೂ, ಸ್ಥಳಾಧಿಕಾರಿಗಳ ಮತ್ತು ದೊಡ್ಡ ಮನುಷ್ಯರ ಸಾಹಸ ಪ್ರಯತ್ನಗಳಿಂದಲೂ ಈ ತಾಲ್ಲೂಕಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿವೆ. ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದ ಕ್ಕಾಗಿ ಕಿಕ್ಕೇರಿ ಕಡೆ ಕೆಲಗಣ ರೈತರಿಗೆ ಹಿಂಡಿ ಗೊಬ್ಬರವನ್ನು ಬಹಳವಾಗಿ ತರಿ ಸಿಕೊಟ್ಟಿದ್ದಾರೆ. ಅದನ್ನು ರೈತರು ಗನ್ನಾ ಫಸಲಿಗೆ ಹಾಕಿ ಪರೀಕ್ಷೆ ಮಾಡುತ್ತಿರು ವರು. ಹೇಮಾವತಿ ನದೀ ತೀರದಲ್ಲಿರುವ ಹರಿಹರಪುರದಲ್ಲಿ ಹಿಪ್ಪನೇರಳೆ ವ್ಯವಸಾಯ ಮಾಡಿ ರೇಷ್ಮೆ ಬೆಳೆ ಮಾಡುವುದಕ್ಕೆ ಐದು ವರುಷದ ವರೆಗೆ ಮುಫ ತ್ತಾಗಿ ನೀರನ್ನು ಕೊಡುವುದಾಗಿ ನಮ್ಮ ಡೆಪ್ಟಿ ಕಮಿಷನರು ವಾಗ್ದಾನ ಮಾಡಿ ರೋಣದರಿಂದ ಈ ಕಸಬುದಾರಿ ವ್ಯವಸಾಯ ಮತ್ತೆ ತಲೆಯೆತ್ತುವುದಕ್ಕೆ ಅವ ಕಾಶವೂ ಪ್ರೋತ್ಸಾಹವೂ ಆಗುತ್ತದೆ. ಕಬ್ಬಿನ ಹಾಲು ತೆಗೆಯುವುದಕ್ಕೂ, ಭತ್ತವನ್ನು ಅಕ್ಕಿ ಮಾಡುವುದಕ್ಕೂ ಯಂತ್ರವನ್ನು ತರಿಸಬೇಕೆಂದು ಪ್ರಜೆ ಗಳು 2000 ರೂಪಾಯಿ ಷೇರು ಮೂಲಕ ಕೂಡಿಸಿ ಸೊಸೈಟಿ ಮಾಡಿಕೊಂಡಿ ದ್ದಾರೆ. ಯಂತ್ರ ಮೊದಲಾದವುಗಳನ್ನು ತರಿಸಿಕೊಡಬೇಕೆಂದು ಸೊಸೈಟಿಯ ವರು ಮಿ|| ಛಾಟರ್‌ಟನ್ ಸಾಹೇಬರಲ್ಲಿ ಅಪ್ಲಿಕೇಷನನ್ನು ಇಟ್ಟಿದ್ದಾಗಿದೆ. ಡೆಪ್ಟಿ ಕಮಿಷನರ ಪ್ರೋತ್ಸಾಹದ ಮೇಲೆ ಇನ್ನೊಂದು ಸೊಸೈಟಿ ಏರ್ಪಡಾಗಿದೆ. ಇದರ ಮೂಲಧನಕ್ಕೆ 10,000 ರೂಪಾಯಿನಲ್ಲಿ ಸದ್ಯ 600 ರೂಪಾಯಿ ಕೂಡಿ ಸಲ್ಪಟ್ಟಿದೆ. ಸೊಸೈಟಿಯವರು ಪ್ರತ್ಯೇಕವಾದ ಕಬ್ಬಿನ ಆಲೆ ಯಂತ್ರವನ್ನು ತರಿಸಿಕೊಳ್ಳುವವರಾಗಿದ್ದಾರೆ. ಮುಖ್ಯವಾದ ಜಮೀನ್‌ದಾರರುಗಳು ಜಮೀನಿಗೆ ನೀರು ಹಾಯಿಸಿ ವ್ಯವಸಾಯ ಯಂತ್ರಗಳನ್ನು ತರಿಸಿಕೊಡಬೇಕೆಂದು ಹಣ ಅಪ್ಲಿಕೇಷನು ಕೊಟ್ಟಿರುತ್ತಾರೆ. ವಿದ್ಯಾಭ್ಯಾಸವು ಬಹಳ ಚುರುಕಾಗಿ ನಡೆದು

ಕ್ಕಿದೆ. ಇದುವರೆಗೆ ಸುಮಾರು 50 ಸ್ತ್ರಾಂಟು ಸ್ಕ್ಯೂಲುಗಳು ಏರ್ಪಾಡಾಗಿರುವವು. ಕೆಲವು ರಾತ್ರಿ ಪಾಠಶಾಲೆಗಳೂ ಪ್ರಾರಂಭವಾಗಿ ನಡೆಯುತ್ತಿವೆ. ಈ ಪ್ರಕಾರ ನಮ್ಮ ತಾಲ್ಲೂಕುಗಳು ಈಚಿಗೆ ತುಂಬಾ ಅಭಿವೃದ್ಧಿಗೆ ಬರುತ್ತಿರುವುದೆಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(1) ಆರೋಗ್ಯ ಪ್ರಭಾಕರ (ಟಾನಿಕ್) 48 ಮಾತ್ರೆಗೆ 1 ರೂ.; (2) ಕಾಲರಾ ಮಾತ್ರೆ 1 ರೂ.; (3) ಅಜೀರ್ಣದ ಮಾತ್ರೆ 6 ಕ್ಕೆ 12 ಆ.; (4) ಜ್ವರದ ಮಾತ್ರೆ 8 ಆ.; (5) ಮುಖರಂಜಕ ಮಾತ್ರೆ (ಎಲ್ಲಾ ವಿಧ ಕಸ್ತೂರಿ ಮಾತ್ರೆಗಳಿಗಿಂತ ಶ್ರೇಷ್ಠ) 160 ಕ್ಕೆ 4 ಆ.; (6) ಬಾಧಾ ನಿವಾರಿಣಿ 4 ಆ.; (7) ಬಾಲಸಂಜೀವಿನಿ 4 ಆ.; (8) ಉಬ್ಬಸದ ಮಾತ್ರೆ 12 ಆ.; (9) ಸರಳ ಭೇದಿ ಮಾತ್ರೆ 8 ಆ.; (10) ಕಸ್ತೂರಿ ಮಾತ್ರೆ 320 ಕ್ಕೆ 4 ಆ.

[126-14] ನಮ್ಮ ವಿಳಾಸ:—ಪಂಡಿತ್ ಎಸ್. ನರಹರಿ, ಮೈಸೂರು.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.

[204-1]

ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವುದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ.

ಕ್ರಯ ಡಬ್ಬಿ 1 ಕ್ಕೆ ರೂ. 2-0-0 ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

ಇದರ ಪೂರಾ ಶೀಟಿಲಾಗು ಅಪೇಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಬಹು ಬಲಿಷ್ಠವಾದ ವಾಚು — ಬಹು ನಾಜೂಕಾದ ವಾಚು
ಬಹು ಸೊಗಸಾದ ವಾಚು — ಲೋಕಪ್ರಸಿದ್ಧವಾದ ವಾಚು

(10 ಚಿನ್ನದ ಪದಕಗಳು ಪಡೆದಿರುವ ಲೋಕಪ್ರಸಿದ್ಧವಾದ)

ಜುಯಲ್ಸ್ ಸ್ಪ್ರಾಂಗ್ ಪಾಕೆಟ್ ಜೂಬ್ಲಿ (ರಿಜಿಸ್ಟರ್) ವಾಚು

10 ಬಹುಮಾನಗಳ ಸಮೇತ ಕ್ರಯ ರೂ. 3-4-0 ಮಾತ್ರ

8 ವರುಷ ಗ್ಯಾರಂಟಿ ಸಹ ಕಳುಹಿಸಲ್ಪಡುತ್ತೇವೆ.

ಅಯ್ಯ, ಪ್ರಿಯಮಿತ್ರರೇ 10 ಚಿನ್ನದ ಪದಕಗಳು ಬಹುಮಾನವಾಗಿ ಹೊಂದಿರತಕ್ಕ ವಾಚು ಎಷ್ಟು ಕೆಲಸವಾಡಿರಬೇಕೋ ಎಂದು ತಾವೇ ಯೋಚಿಸಿನೋಡಿರಿ.

ಬಹು ಬಲಿಷ್ಠವಾದ ಯಂತ್ರದಿಂದಲೂ ನಾಜೂಕಾದ ಸಾಮಾನುಗಳಿಂದಲೂ 6 ರತ್ನಗಳನ್ನು ಓಪನ್ ಫೇಸ್ ಲಿವರ್ ಸೆಟ್ ಬಲಿಷ್ಠವಾದ ಲೀವರ್ ಕೆಲಸದಿಂದಲೂ ತಯಾರಾಗಿ ಬಂದಿರುತ್ತೆ. ಬರೀ ಮಾತುಗಳಿಂದೇನು? ಒಂದು ತರಿಸಿ ಪರೀಕ್ಷೆ ಮಾಡಿದರೆ ನಿಮ್ಮ ಮನಸ್ಸಿಗೆ ಗೋಚರವಾಗುತ್ತದೆ. ಬಹುಮಾನಗಳ ವಿವರ:—ಸರಪಣಿ 1, ಉಕ್ಕರುಮುಖಿ 1, ವಾಚ್‌ಪೆಟ್ಟಿಗೆ 1, ಥಂಬು ನೇರದಂತೆ ಚೀಲ 1, ಕರವಸ್ತ್ರ 1, ಇಂಪೀರಿಯಲ್ ಗುಂಡಿ ಸೆಟ್ 1, ಸೆಂಟು ಶೀಸೆ 1, ಕಾರ್ಡಿನ್‌ಸೆಟ್ ಚಾಕು 1, ಇಂಗ್ಲೀಸು ಬಾಚಣಿಗೆ 1, ರಬ್ಬರು ಬೊಂಬೆ 1.

[200-2] ನಮ್ಮ ವಿಳಾಸ:—ಟಿ ಸುಂದರ ರಾವ್ ಬ್ರದರ್ಸ್,
ನಂ. 27, ಇರುಳಪ್ಪನ್ ಬೀದಿ, ಸಾಹುಕಾರ್ ಪೇಟೆ ಪೋಸ್ಟ್, ಮದರಾಸು.

ಸ್ಪ್ರಾಂಗ್ ಪಾಕೆಟ್ಟು ಕೈಲೆ ರೆಗ್ಯುಲೇಟರ್ ವಾಚ್.

ಇದರ ಕ್ರಯ 14 ಬಹುಮಾನಗಳ ಸಮೇತ ರೂ. 3-0-0.

ಈ ವಾಚ್ 5 ವರುಷಗಳ ವರೆಗೆ ನಿಲ್ಲದೇ ನಡೆಯುತಕ್ಕಂಥದ್ದು. ಪುನಃ ಇಂಜಿನ್ ವರ್ಕು ಅಂದರೆ ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು

ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಸಕಾಲದಲ್ಲಿ ಉಪಯೋಗಕ್ಕೆ ಬಂದೂ, ವರ್ತಕರಿಗೂ ಮತ್ತು ಇತರ ಜನರಿಗೂ ಸಹಾಯ ಮಾಡುತ್ತೇವೆ. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದ ಏನು? ಇದರ 14 ಬಹುಮಾನಗಳ ವಿವರ:—ಸುಂದರವಾದ ಸರಪಣಿ, ಉಕ್ಕರುಮುಖಿ, ಇಂಗ್ಲೀಷು ನಮೂನೆ ಬಾಚಣಿಗೆ, ಜರ್ಮನ್ ಚಾಕು, ಕರವಸ್ತ್ರ, ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ, ಷರಟು ಗುಂಡಿ ಸೆಟ್, ಸುವಾಸನೆಯುಳ್ಳ ಪರಿಮಳದ ಸೀಸೆ (ಸೆಂಟ್), 6 ಪಿಕ್ಚರುಗಳು.

[203-1] ನಮ್ಮ ವಿಳಾಸ:—ಆರ್. ರಾಮಚಂದ್ರ ನಾಯುಡು,
ಪೋಸ್ಟು ಬಾಕ್ಸ್ ನಂ. 228, ಟೆರಿಗ್ರಾಮ್ ವಿಳಾಸ "ಕೋಲ್" ಮದರಾಸ್.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

ಸಮಸ್ತ ಪಟೇಲ್ ಶ್ಯಾನುಭೋಗರುಗಳು ಜವಾನ್ ದಾರರುಗಳು ವರ್ತಕರು ಗಳಿಗೂ ಪೊಲೀಸ್ ಇಲಾಖೆಯವರಿಗೂ ಅತ್ಯಂತ ಆವಶ್ಯಕವಾದದ್ದು. ಹೊಸ ಪ್ರತಿ. 698 ಪುಟಗಳುಳ್ಳ ದೆಮ್ಮಿ ಅಷ್ಟಪತ್ರಿಕೆಗೆ ಕ್ರಯ ಮೂರು ರೂಪಾಯಿ. ಒಂದು ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟಪಾಲು ಹಾಸಲು ಮುಫತ್ತು.

ವಿಳಾಸ:—ಎ. ನರಸಿಂಗರಾವ್, ಎಡಿಟರ್,
[295-1] ಲಾ ಗೆಜೆಟ್, ಬೆಂಗಳೂರು ಸಿಟಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[188-3] GIRLS' INDUSTRIAL SCHOOL, HASSAN.



ಸೆಪ್ಟಂಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದಕ್ಕೆ ಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಅತಿಗೆ ಕೊಡಲ್ಪಡುತ್ತೆ. [111-18]

ವಿಳಾಸ:—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

The People's Bank Ltd., Tirthahalli.

ದಿ ಪೀಪಲ್ಸ್ ಬ್ಯಾಂಕು ಲಿಮಿಟೆಡ್, ತೀರ್ಥಹಳ್ಳಿ.

ನೋಟೀಸ್.

ಸನ್ 1915 ನೇ ಸೆಪ್ಟಂಬರ್ ತಾ. 30 ಕ್ಕೆ ಆಗುವ ಈ ಬ್ಯಾಂಕಿನ ಮೂರನೇ ವರ್ಷದ ಷೇರ್‌ದಾರರುಗಳ ಲೆಕ್ಕಗಳು ತಯಾರಿಸಬೇಕಾಗಿರುವುದರಿಂದ ಇದೇ ಇಸವಿ ಅಕ್ಟೋಬರ್ ತಾ. 1 ರ ಆರಾಭ್ಯ ಇದೇ ತಿಂಗಳು ತಾ. 20 ರ ವರೆಗೆ ಈ ಬ್ಯಾಂಕಿನ ಮೆಂಬರುಗಳ ರಿಜಿಸ್ಟರನ್ನು ಮೆಂಬರುಗಳಾಗಲಿ, ಇತರರಾಗಲಿ ನೋಡುವುದಕ್ಕೆ ಅವಕಾಶ ಕೊಡಲ್ಪಡುವದಿಲ್ಲ. ಮತ್ತು ಈ ಕಾಲದಲ್ಲಿ ಷೇರ್ಸ್‌ಗಳ ವಿಕ್ರಯಗಳು ಅಂಗೀಕರಿಸಲ್ಪಡುವದಿಲ್ಲ. [202-1]

(ಡೈರೆಕ್ಟರವರ ಅಪ್ಪಣೆ ಪ್ರಕಾರ.)

ತೀರ್ಥಹಳ್ಳಿ, — ಬಿ. ಆನಂದಾಚಾರ್,
23-9-1915. — ಅಕ್ಟಿಂಗ್ ಮೇನೇಜಿಂಗ್ ಡೈರೆಕ್ಟರ್.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 5,00,00,000
ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಾಜು, ಬಿ.ಎ., ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ಸಂಜೀವಯ್ಯನವರು ಅಥವಾ ಮಿ॥ ವೆಂಕಟರಮಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[221-51] ಬ್ರಾಂಚ್ ಸೆಕ್ರೆಟರಿ, ಮದರಾಸು.

ಸಂತೋಷಕರವಾದ ಪ್ರಕಟನೆ!

ಸಂತೋಷಕರವಾದ ವಾಚ್ !! — ಸಂತೋಷಕರವಾದ ಬಹುಮಾನ !!

ಸುಂದರವಾದ ಜುಪ್ಲೀಟ್ಯು ಪಾಕೆಟ್ಟು (ರಿಜಿಸ್ಟರ್ಡು) ವಾಚ್.

9 ಬಹುಮಾನಗಳ ಸಹಿತ ರೂ. 2-12-0 ಮಾತ್ರ.

6 ವರ್ಷದ ಗ್ಯಾರಂಟಿ.

ಅಯ್ಯಾ ಮಿತ್ರರೆ, ಈ ಸರ್ಕಲ್ಲಿನಲ್ಲಿ ತೋರಿಸಿರುವ ಭಾರಿ ಕ್ರಯದ ಗಡಿಯಾರ ವಾಚು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ

ಕಂಪೆನಿಯ ಬಲಿಷ್ಠವಾದ ಸಾಮಾನುಗಳಿಂದಲೂ, ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಈ ಗಡಿಯಾರವನ್ನು ಭಾರಿ ಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿ ಇರುವ ದೊರೆಗಳು ಕೊಂಡುಕೊಳ್ಳುತ್ತಾ ಇದ್ದಾರೆ, ಇದು ನೋಡುವುದಕ್ಕೆ ಮುದ್ದಿಟಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ಸಾವಿರಾರು ಗಡಿಯಾರಗಳು ಮಾರಾಟವಾಗುತ್ತಾ ಇವೆ ಭಾರಿ ಕ್ರಯದ ಬಹುಮಾನಗಳನ್ನು ಕೊಡುತ್ತೇವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಿರಿ. ಬಹುಮಾನದ ತಪಸೀಲು—(1) ಸುಂದರವಾದ ಸರಪಣಿ, (2) ಕಂಪಾಸ್, (3) ಜರ್ಮನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಪರಿಮಳ ಸುವಾಸನೆ ಸೆಂಟ್, (7) ಕೈ ಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟು ಬಟನ್. ನಮ್ಮ ವಿಳಾಸ:— [149-7]

ಧೈರ್ಯಲಕ್ಷ್ಮಿ ಅಂಡು ಕಂಪನಿ, ಜನರಲ್ ಮರ್ಚಂಟ್ಸ್,
3, ಇರುಳಪ್ಪನ ಬೀದಿ, ಸಾಹುಕಾರ್ ಪೇಟೆ, ಮದರಾಸು.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-10]

First Valuation Result:—The total liabilities under all Assurances issued up to 31st March 1918, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-45]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶುದ್ಧಿ ರಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತ ಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಭಾರತಾಲ್ಪದ ಚಿಕಿತ್ಸೆಗನ್ನು ಹೇಳುತ್ತೇವೆ. ರೋಗಿಗಳಿಂದ ಬರುವ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ:—

ರಾಜವೈದ್ಯ ನಾರಾಯಣಜಿ ಕೇಶವಜಿ,
೨೦, ಚೀನಾ ಬಜಾರ್ ರೋಡ್, ಮದ್ರಾಸು.

ಇದನ್ನು ಅವಶ್ಯವಾಗಿ ಓದಿ.

ಜುಯಲ್ಸ್ ಸ್ಪ್ರಾಂಗ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

ಇದರ ಕ್ರಯ 14 ಬಹುಮಾನಗಳ ಸಮೇತ ರೂ. 3-4-0.

ಮಿತ್ರರೇ, ಈ ಸರ್ಕಲ್ಲಿನಲ್ಲಿ ತೋರಿಸಿರುವುದು ಜುಯಲ್ ಸ್ಪ್ರಾಂಗ್ ಪಾಕೆಟ್ ರಿಜಿಸ್ಟರ್ಡ್ ವಾಚು 6 ರತ್ನಗಳುಳ್ಳ ಕೀಲೆಸ್ ಬ್ರಾಕೆಟ್ಸ್. ಬಹು



ಬಲಿಷ್ಠವಾದ ಕೈ ಗಡಿಯಾರ ಈ ಗಡಿಯಾರ ನಾಜೂಕಾದ ಯಂತ್ರದಲ್ಲಿಯೂ, ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಿಸಲ್ಪಟ್ಟಿದ್ದು. ಇದು ನೋಡುವುದಕ್ಕೆ ಸುಂದರವಾಗಿಯೂ, ಮುಚ್ಚಲ್ಪಟ್ಟಿರುವಾಗಿಯೂ ಇರುತ್ತೆ. ನಮ್ಮ ಕಂಪನಿ ಹೊಸದಾಗಿರುವುದರಿಂದ ಪ್ರಖ್ಯಾತಿ ಹೊಂದಬೇಕೆಂಬ ಉದ್ದೇಶದಿಂದಲೂ, ಭಾರಿ ಭಾರಿ ಕ್ರಯವುಳ್ಳ ಬಹುಮಾನಗಳನ್ನು ಹಾಕುತ್ತೇವೆ. ಈ ಸೊಗಸಾದ ಗಡಿಯಾರವನ್ನು ಕೂಡ್ಲೆ ಬರೆದು ತರಿಸಿಕೊಳ್ಳಿ. ಈ ಗಡಿಯಾರವು 5 ವರ್ಷಗಳ ಪರ್ಯಂತರ ನಿಲ್ಲದೇ ನಡೆಯತಕ್ಕಂಥದ್ದು. ಬಹುಮಾನಗಳ ತಪಸೀಲು:—ಸುಂದರವಾದ ಸರಪಣಿ, ಉಕ್ಕರುಮುಖಿ, ಇಂಗ್ಲೀಷ್ ನಮೂನೆ ಬಾಚಣಿಗೆ, ಜರ್ಮನ್ ಚಾಕು, ಕರವಸ್ತ್ರ, ಸೊಗಸಾದ ರೇಷ್ಮೆ ಕೆಲಸ ಮಾಡಿದ ವಾಚ್ ಪೆಟ್ಟಿಗೆ, ಷರಟು ಗುಂಡಿ ಸೆಟ್, ಸುವಾಸನೆಯುಳ್ಳ ಪರಿಮಳ ಸೀಸೆ (ಸೆಂಟ್), 6 ಪಿಕ್ಚರುಗಳು. [203-1]

ನಮ್ಮ ವಿಳಾಸ:—ಆರ್. ರಾಮಚಂದ್ರ ನಾಯುಡು,
ಪೋಸ್ಟ್ ಬಾಕ್ಸ್ ನಂ. 228, ಟೆಲಿಗ್ರಾಮ್ ವಿಳಾಸ "ಕೋಲ್" ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಲಿ—ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ? ಎಂದು



(೧೨ ಆನೆ ಬುಡ್ಡಿ ಚರಿತಾರು)

ನನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್‌ರವರ ಡಿನ್ನರ್ ಪಿಲ್ಲು ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ಸೇವಿಸು. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧದಷ್ಟಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ನಾಲಿಗೆ; ಅಶಕ್ತಿ; ಎದೆಯು ಹಲ್ಲಕಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಸೊಂಟದ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು. ಡೋನ್‌ರವರ ಡಿನ್ನರ್ ಪಿಲ್ಲು ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡುಹೆಂಗಸರಿಗೆ ಹೆಂಗುಸರಿಗಾಗಲಿ ಕೊಡಬಹುದು. ಇವು ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗಾಂಗಗಳೆಲ್ಲಾ ಕುಶಲವಾಗಿಯೂ ಹಿತವಾಗಿಯೂ ಇದ್ದು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [176-5]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಪ್ರೊಫೆಸರ್ ಜೇಮ್ಸರವರ ಎಲೆಕ್ಟ್ರೋ ಟಾನಿಕ್ ಪಿಲ್ಸ್ ಎಂಬುವ

ವಿದ್ಯುಚ್ಛಕ್ತಿಯ ವಾಜೀಕರಣ ಮಾತ್ರೆಗಳು.

ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ..., ಮನೆಯಲ್ಲಿಯೇ ಕೆಲಸಮಾಡುವಂತಹ ವಿದ್ಯಾವಂತರಿಗೂ, ..., ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿ... ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ. ... ಕ್ಷಯರೋಗ, ಎಳವು, (ಹಿಸ್ಟೀರಿಯಾ) ಶರೀರದೌರ್ಬಲ್ಯ ... ಮಂದಾಗ್ನಿ, ಕೆಟ್ಟ ರಕ್ತ, ತಲೆ ತಿರುಗುವಿಕೆ, ಶಕ್ತಿಹೀನತೆ, ಸ್ತ್ರೀ ಗರ್ಭ..., ಅಕಾಲದ ಮೃತ್ಯು, ಸೊಂಟದಲ್ಲಿಯ ನೋವು, ಮುಖದಲ್ಲಿಯ ..., ಕೀಲುಗಳ ನೋವು. ಈ ಮೇಲೆ ಹೇಳಿರುವ ವ್ಯಾಧಿಯು ಆರಂಭಿಸು... ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟವನ್ನು ತಂದು..., ... ಮೇಲೆ ಪ್ರೊಫೆಸರ್ ಜೇಮ್ಸರವರ ವಿದ್ಯುಚ್ಛಕ್ತಿಯ ವಾಜೀ... ಮಾತ್ರೆಗಳನ್ನು ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳು ನೀವು ಉಪ... ದಿನ ಮೊದಲ್ಗೊಂಡು ಮನೋಲ್ಲಾಸವನ್ನು ಕೊಡುತ್ತವೆ. 40 ... ಸೀಸೆ 1 ಕ್ಕೆ ರೂ 2-0-0 ; ಟ ಪ ಸೀಸೆ 1 ಕ್ಕೆ 0-4-0.

...] ನಮ್ಮ ವಿಳಾಸ:—ದಿ ಯೂನಿಯನ್ ಮಾರ್ಟ್, ನಂ 1, ಮಂಗಳೂರು

ಡೋಂಗರೆ ಇವರ ಬಾಲಾಮೃತ.

... ಮಧುರವಾದುದರಿಂದ ಕೂಸುಗಳು ಬಹಳ ಪ್ರೀತಿಯಿಂದ ತಕ್ಕೊ... ತಕ್ಕೊಳ್ಳುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ... ಬೆಳೆಯುತ್ತವೆ. ಕ್ರಯ. ಸೀಸೆ 1 ಕ್ಕೆ 12 ಆಣೆ; ಟ.ಪ. 4 ಆಣೆ

...—ಕೆ.ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

...] [ಏಜಂಟರು ಬೇಕಾಗಿರುತ್ತಾರೆ.]



ಲಿಟ್ಲ್ ಓರಿಯಂಟಲ್ ಬಾಮ್ ಎಂಬುದು.

ಹಳೇ ನೋವಿದ್ದರೂ, ಎಂಥ ... ಇದ್ದರೂ, ಯಾವಿಧದ ... ಇದ್ದರೂ ಸ್ವಸ್ಥ ಮಾಡಿ ... ಆಶೀರ್ವಾದಕ್ಕೆ ... ಹುಡಿದೆ.

ಪಟ್ಟುಕೋಟೆ ... ಹೀಗೆ ... ಬರೆಯುವ ...—"ನನ್ನ ಹತ್ತಿರವಿದ್ದ ಲಿಟ್ಲ್ ಓರಿಯಂಟಲ್ ಬಾಂ ಎಂಬುದರ 1 ಸೀಸೆಯನ್ನು ನನ್ನ ತಾಯಿಗೂ, ಮೊಣಕಾಲಿಗೂ ಹಚ್ಚಿದ 10 ನಿಮಿಷಗಳಲ್ಲಿ ನೋವು ಬಿಟ್ಟಿತು. ಮತ್ತೊಂದಾವರ್ತಿ ಉಪಯೋಗಿಸಿದೆನು ನನಗಿದ್ದ ನೋವು ತಿರುಗಿ ಬರಲಿಲ್ಲ. ಆ ತೈಲದಲ್ಲಿ ಸ್ವಲ್ಪ ಹತ್ತಿಗೆ ಹಾಕಿಕೊಂಡು ನನ್ನ ಮಗನಿಗೆ ... ನೋವಿಗೆ ಹಚ್ಚಿದೆನು. ಅವನಿಗೆ ಸ್ವಸ್ಥವಾಯಿತು. ಒಬ್ಬ ಹೆಂಗಸಿನ ಕಥೆ! ಅವಳಿಗೆ 1 ವರುಷದಿಂದ ಬಂದಾಗಿತ್ತು, ಅದರಿಂದ ಅವಳು ಅಧಿಕ ನೋವನ್ನು ಅನುಭವಿಸಿದಳು. ಲಿಟ್ಲ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಲು ಹೇಳಿದೆನು. ನನ್ನಲ್ಲಿದ್ದ 1 ಸೀಸೆ ತೈಲವನ್ನು ಮಾತ್ರ ಆಕೆಗೆ ಕೊಟ್ಟೆನು. ಅದರಿಂದಲೇ ಆಕೆಗೆ ಕ್ಷೇಮವಾಯಿತು."

ಸೀಸೆ 1ಕ್ಕೆ 1 ರೂ. ಮೇರಿಗೆ ... ಅಂಗಡಿಗಳಲ್ಲಿಯೂ ಸಿಗುತ್ತೆ.

ಒಂಬತ್ತು ಭಾಷೆ !! ಹೊಸ ಪುಸ್ತಕ ! ಒಂಬತ್ತು ಲಿಪಿ !!!

ಬೋಧಕರ ಸಹಾಯವಿಲ್ಲದೆ ಕಲಿಯುವುದಕ್ಕೆ ಬಲು ಒಳ್ಳೆಯ ಸಮಯ.

ಮೊದಲನೆಯ ಪುಸ್ತಕ. ಭಾಷಾನಿಧಿ. ವರ್ಣಪರಿಜ್ಞಾನ.

ತೆಲುಗು, ಅರವ, ಮಲೆಯಾಳ, ಸಂಸ್ಕೃತ, ಹಿಂದಿ, ಮಹಾರಾಷ್ಟ್ರ, ಗುಜರಾತಿ, ಬಂಗಾಳಿ, ಕನ್ನಡ, ಗ್ರಂಥ, ಇವುಗಳನ್ನು ಸ್ವತಂತ್ರವಾಗಿ ಕಲಿಯಬಹುದು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ ! ಬೇಗ ಬೇಗ ಬರೆಯಿರಿ !!!

ಕ್ರಯ ಅಂಚೆಯ ವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ.

ಎರಡನೆಯ "ಶಬ್ದಪರಿಜ್ಞಾನ" ಮೂರನೆಯ "ವಾಕ್ಯಪರಿಜ್ಞಾನ" ಅಚ್ಚಾಗುತ್ತಿವೆ.

[171-6] ಪುಸ್ತಕ ದೊರೆಯುವ ಸ್ಥಳ—ಸವಿನುಡಿ, ಭಾಷಾನಿಧಿ, ೬೦, ಸಿ. ಬೀದಿ, ಕೋಟೆ, ಬೆಂಗಳೂರು.

THE MYSORE GOVERNMENT SECURITY

LIFE & MARRIAGE ASSURANCE Co., Ltd., MYSORE.

Attractive Schemes. **CAPITAL Rs. 5,00,000.** Soundest Principles.

Two in one (share policy) scheme and Property Investment (Land and house-purchase and investment) schemes, the benefits of which are hitherto unknown to both the Insurance and Banking worlds, are a speciality. Free policies are a Novelty.

WANTED

One energetic and experienced **Travelling Inspector** on both commission and allowance to organize branches, and **Local Directors** on Commission in each and every taluk of the Mysore Province. **Security and Good references essential.**

For propectuses and other particulars please apply with your experience in the line to:—

M. L. NAGANNA, Esq.,

15-38, Managing Director, Life & Marriage Assurance Buildings, Mysore.

ದಬೂರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕು, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

[149-10] ನಮ್ಮ ವಿಳಾಸ—ವಿ. ಎ. ಎಸ್. ಬಾಣಿ, ನಂ. ೩, ಇರುಳಪ್ಪನ ಬೀದಿ, ಮದರಾಸು.

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಪ್ರತ್ಯೇಕ. ಇತರರಿಗೆ ವಿ. ಪಿ ಛಾರ್ಜು ಸೇರಿ ಒಂದಕ್ಕೆ 3 ಆಣೆ ; 6 ಕ್ಕೆ 14 ಆಣೆ ; 13 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಗುವವು. ಆದುದರಿಂದ ತ್ವರೆಮಾಡಿರಿ!

[64-26]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ತಲೆ, ಸಂಧಿವಾತ, ಎದೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ತಕ್ಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡ್ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಪತ್ರಿಕೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಪತ್ರಿಕೆ ಇಲ್ಲದ ಬಾಟ್ಲುಗಳನ್ನು ಪಡಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮಹಾನೀಲಿ ತೈಲ 0-12-0. ಬಿಳಿ ಮುಲಾಮು 0-3-0. ಬಾಲಾಮೃತ 0-6-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚು ಕಮಿಷನ್ ದೊರೆಯುವದು.

ಅಮೃತಾಂಜನ ಡಿಪೋ, ಫೋರ್ಟ್. ಮುಂಬಯಿ, ಮತ್ತು ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಹಗಲು ರಾತ್ರಿಗೂ ವೈದ್ಯರ ಸಮಯವನ್ನು ಕಾದು ತೊರೆಯಬಹುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾತಶೂಲೆ, ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಹೊಟ್ಟೆನೋವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಡಬ್ಬಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ದಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-3] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತರಗಳಾಗಿ ಯೋಗ್ಯತಾ ಪತ್ರಿ[illegible] ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆ[illegible] ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ [illegible] ಗಳನ್ನು, ಮೆದಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ [illegible] ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವ[illegible] ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯ[illegible] ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ [illegible] ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು [illegible] ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣ[illegible] ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-34]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್

ಸೋಲಾಪುರದ ಚಕ್ಕುಗಳೂ, ಶೀರೆಗಳೂ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಎರಡಾವರ್ತಿ ಭಂಗಾರದ ಪದಕವು ದೊರೆತಿದೆ.

ವರ್ತಕರಲ್ಲಿ ಹಮೇಷ ದಾಸ್ತಾನ್ ಇರಬೇಕಾದ ಮುಖ್ಯವಾದ ನಮೂನೆ ಚಕ್ಕುಗಳು ಮತ್ತು ಶೀರೆಗಳೂ ಇತರರಲ್ಲಿ ದೊರೆಯುವುದಕ್ಕಿಂತ ಸುಲಭಕ್ರಯಕ್ಕೆ ಬೇಲುಗಟ್ಲೆಯೂ, ಚಿಲ್ಲರೆಯಾಗಿಯೂ ದೊರೆಯುವುವು.

ಬೇಲುಗಟ್ಲೆ ಕೊಂಡುಕೊಳ್ಳುವ ವರ್ತಕರಿಗೆ ಮಿಲ್ಲಿನ ಖರೀದಿಗೆ ದೊರೆಯುವುದು.

ಬೇಕಾದ ನಮೂನೆಗಳನ್ನು ತಿಳಿಸಿ ಇತರ ವಿಷಯಗಳನ್ನು ಕಾಗದದ ಮೂಲಕ ತಿಳಿದುಕೊಳ್ಳಬಹುದು. [65-26]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 159, ಕಿಲಾರಿ ರೋಡು (ಕುಂಬಿಗರಪೇಟೆ) ಬೆಂಗಳೂರು ಸಿಟಿ.

ಬೆಲೆ ಬಹುಸುಲಭ ಬೆಲೆ ಬಹುಸುಲಭ

ಸೊಗಸಾದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನಿಂದ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವದಕ್ಕೆ ಚಿಕ್ಕದಾದ ಗುಂಡುಗಳುಳ್ಳ ಡಾಬುಗಳಂತೆ ಮುಂಭಾಗದಲ್ಲಿ ಕೊಣೆಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟತೋರುವದಿಲ್ಲ. ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ಇದರ ಕೆಲಸದ ನಾಜೂಕು ಬರವಣಿಗೆಯಿಂದ ಉಪಯೋಗವಿಲ್ಲ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಬ್ಬರು ತರಿಸಿನೋಡಿದರೆ ಮತ್ತೂ ಬಹಳ ಬೇಗನೆ ತಾವಾಗಿಯೇ ತರಿಸಲು ಮಾಡುವರು.



ಭಂಗಾರದ ಗಿಲೀಟಿನ ಗೆಜ್ಜೆಕಟ್ಟಿದ ಡಾಬುಗಳು 1ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0.

ವಿಳಾಸ.—ರಾಸ್ ವಾಚ್ ಅಂಡು ಕಂಪನಿ, 3, ಇರುಳಪ್ಪನ ಬೀದಿ, ಮದರಾಸು.

[149-7]

ರಬ್ಬರು ಮುದ್ರೆಗಳು!



ನಾವು ನಾನಾ ತರದ [illegible] ಲ್ಲಿ ಅತಿ ಉತ್ತಮವಾದ [illegible] ಬಾಳಿಕೆ ಬರುವ ಹಾಗೆ [illegible] ದಂಥ ರಬ್ಬರು ಮುದ್ರೆಗಳು [illegible] ರು ಮಾಡುತ್ತೇವೆ. ಇದರ [illegible] ಕೊಡಿನ ಪೆಟ್ಟಿಗೆ, ಬ್ರಸ್ [illegible] ಮತ್ತು ಇಂಕಿ ಬಾಟ್ಲ [illegible] ರೂ. 1-8-0; ವಿ. ಪಿ. [illegible] 4 ಆಣೆ ಬರೆಯುವವರು [illegible] ಮುಂತಾದವುಗಳನ್ನು ಹುಟ್ಟ[illegible] ಗಳಿಂದ ಬರೆಯಬೇಕು.

[140-12]

ನಮ್ಮ ವಿಳಾಸ:—ರಾಂಭೂಕ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾ[illegible]

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!

ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಆಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. [illegible] ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸಪಡಬೇಡಿ. [illegible] ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸು[illegible] ನಿಲ್ಲುವದು. ಇದು ಅಪದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ಸ[illegible] ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ [illegible] ಬಾಟ್ಲಿಗೆ ರೂ 2-0-0; 1 ಡ್ರಾಂ ಕೊಳವೆಗೆ 0-12-0; ½ ಡ್ರಾಂ [illegible] 0-8-0; ಆಟೋ ಮೋಹಿನಿ ಪರಿಮಳವುಳ್ಳ ಅಗರುಬತ್ತಿಗಳು 1 ಪ್ಯಾಕೆಟ್‌ಗೆ 0-1[illegible]

ಕೂದಲಿನ್ನಿಗೆ ಹಾಕುವ ಬೀ ಕೆರೋಸೀನ್ ಎಣ್ಣೆ ಕೊಡ್ಲಾರು.

ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು [illegible] ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ [illegible] ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳ[illegible] ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ; ಒಂದಾವರ್ತಿ ತರಿಸಿ ಪರೀಕ್ಷಿ[illegible] 3 ಬಾಟ್ಲಿಗೆ ರೂ. 2-10-0; ಅಂಚೆ ವೆಚ್ಚ ಬೇರೆ. ನಮ್ಮ ಏಜೆ[illegible] ಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಪಾ ಭಗವಾನ್‌ದಾಸ್ ಚುನಿಲಾಲ್ ಕಂಪನಿ, 177, ಚೈನಾಬಜಾರ್ ರೋಡ್, ಮದರಾ[illegible]

[174-5]

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೆದುಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದಸ್ಸು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ಮೈಭರಣ 1, ತಾಂಬೂಲಪಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರುಬುಡ್ಡಿ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಕಾಣಿ ಕಂಪೆನಿ, ನಂ. ೩, ಇರುಳಪ್ಪನ್ ಬೀದಿ, ಮದರಾಸ್.

[149-10]

Printed and Published by the Rev. H. Go[illegible] Proprietor and Manager, Wesleyan Mission P[illegible] Mysore. 30/9/1915.

REGISTERED
M. 26

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—೧೯೧೬ನೇ ಇಸವಿ ಅಕ್ಟೋಬರ್ ತಾರೀಖು ೫ನೇ ಗುರುವಾರ. ಸಂಚಿಕೆ ೧೯

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ಕರಡ ಲೇಖನ ಕ್ರಮಗಳನ್ನೂ, ಕ್ರಿಮಿನಲ್ ಸಿವಿಲ್ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ 2-8-0; ರಫ್ ರೂ. 1-12-0. [158-16]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ನೋಟೀಸ್.

ಬೊಂಬಾಯಿ ತಾತಾ ಸನ್ಸ್ ಸ್ವದೇಶೀ ಮಿಲ್ಸ್ ಕಂಪೆನಿಯಲ್ಲಿ ತಯಾರಾದ ಜಮಖಾನೆಗಳು, ಪಂಚೆಗಳು, ಚೆಕ್ಸ್, ಟ್ವಿಲ್, ಹಚ್ಚಡ ಮುಂತಾದ ಜವಳಿ ಸಾಮಾನುಗಳು ಸೇಲು ಮಾರ್ಕೆಟ್ ಮಾಡಲು ನಮ್ಮನ್ನು ಸೋಲ್ ಏಜೆಂಟ್ ನ್ನಾಗಿ ಏರ್ಪಡಿಸಿರುವುದರಿಂದ ನಮ್ಮಲ್ಲಿ ಈ ಮಾಲು ಕಾರಖಾನೆ ಬೆಲೆಯಲ್ಲಿಯೂ ಚಿಲ್ಲರೆ ಜವಳಿಗೆ ಡಿಸ್ಕೌಂಟು ಸಹ ದೊರೆಯುತ್ತೆ. [172-4]

ಕಮಿಷನ್ ಮತ್ತು ಜನರಲ್ ಏಜೆನ್ಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೊಲ್ಲೂರಯ್ಯನ ಬೀದಿ, ಶಿವಮೊಗ್ಗ.

ಹೊಸ ಪುಸ್ತಕಗಳು.

ಒಳ್ಳೇ ಕಾಗದ, ಅಂದವಾದ ಮುದ್ರಣ, ಉತ್ತಮ ವಿಷಯ. (1) "ಕೃಷ್ಣಲೀಲೆ" ಸತ್ಯದಾರಿಯ ಕಥೆ ಈಗತಾನೆ ಅಚ್ಚಾಗಿದೆ ಪ್ರಾರಂಭಿಸಿ ಮುಗಿಯುವವರೆಗೂ ನಡುವೆ ನಿಲ್ಲಿಸಲು ಮನಸ್ಸೇ ಬರುವದಿಲ್ಲ. 12 ಆಣೆ. (2) "ಸಾಮ್ರಾಜ್ಯ" ಆಶ್ಚರ್ಯಕರವಾದ ವಿಷಯ ತಿಳಿವಳಿಕೆ ಸಾಗರಿ ಇತ್ಯಾದಿ 6 ಆಣೆ. (3) "ಉತ್ತಮ ದಂಪತಿಗಳು" ವಿಷಯವಾದ ವಿಚಿತ್ರ 10 ಆ. (4) "ಉನ್ಮತ್ತೆ" ಮನೋಹರವಾದ ಬಂಗಾಳಿ ನಾವಲ್ 2½ ಆಣೆ. ವಿ. ಪಿ. ಖರ್ಚು ಉತ್ತರ ಬರೆವ ವಿಳಾಸ 1 ಆಣೆ. ಅಂಚೆ ವೆಚ್ಚ ಬೇರೆ. ದೊಡ್ಡಪೇಟೆಯಲ್ಲಿ (1) ಎಂ. ಸುಬ್ಬರಾವ್ ಬುಕ್‌ಸೆಲರ್, (2) ... ಅಂಡ್ ಕೋ; ಮೈಸೂರಿನಲ್ಲಿ (3) ಜನರಲ್ ಏಜೆನ್ಸಿ. [136-7]

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ, ಬೂಟೆ ಸೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕು ಥಾನುಗಳು ಪನೀರ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರಿಯ ರುದ್ರಾಕ್ಷಿ ಸೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅವನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಇನ್ನು ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ ಬೇಗ ಬರೆದು ... [119-16]

ವಿ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ನಂಬಿ ಮೋಸಹೋಗಬೇಡಿ.

ಕೆಲರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಖರೀದಿಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಬಿಂಟಿ ಶಾಲು ... ರೂ. ನಿಂದ 7, 10, 50 ರೂ. ಗಳ ವರೆಗೂ ಸಿಕ್ಕುತ್ತವೆ. ಇಷ್ಟವಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಖರೀದಿಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. 50 ರೂ. ಸರಕು ತರಿಸುವವರಿಗೆ ರಿಯಾಯತಿ ಉಂಟು. ವ್ಯಾಪಾರಸ್ಥರಿಗೆ ತುಂಬಾ ಅನುಕೂಲ ಮಾಡಿಕೊಡುತ್ತೇವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ವಿಳಾಸ—ಪೀರ್ ಬ್ರದರ್ಸ್, ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS, AMRITSAR, PANJAB.

ಇಂಡಿಯಾ ಗವರ್ನಮೆಂಟಿನ ವಾಯಿದೆಯುಳ್ಳ ಸಾಲ.

ಮಹಾಜನಗಳು ಪೋಸ್ಟ್ ಆಫೀಸಿನ ಮೂಲಕ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾದ ಪುರತ್ತುಗಳು.

ಗವರ್ನಮೆಂಟಿನವರು ಈ ವರುಷದ ಸಾಲವನ್ನು ಶೇಕಡಾ 4 ರಂತೆ ಬಡ್ಡಿಯುಳ್ಳ ಹೊಸ ರೀತಿಯಿಂದ ತೆಗೆದುಕೊಳ್ಳುತ್ತಾರೆ. ಈ ಸಾಲವನ್ನು 1923 ನೇ ಇಸವಿ ನವೆಂಬರಿನೊಳಗಾಗಿ ಪೂರ್ತಾ ತೀರಿಸಿಬಿಡುತ್ತಾರೆ; ಆದರೆ ಗವರ್ನಮೆಂಟಿನವರು ಇಷ್ಟಪಟ್ಟಲ್ಲಿ ಈ ಸಾಲವನ್ನು 1920 ನೇ ಇಸವಿ ಅಕ್ಟೋಬರ್ ಆದ ಬಳಿಕ ಯಾವಾಗಲಾದರೂ ವಾಪಸು ಮಾಡಬಹುದಾಗಿದೆ.

2. ಕಲ್ಕತ್ತಾ, ಮದ್ರಾಸ್, ಬೊಂಬಾಯಿ, ಇನ್ನೂ ಇತರ ದೊಡ್ಡ ಪಟ್ಟಣಗಳಲ್ಲಿ ಗವರ್ನಮೆಂಟಿನವರು ಎಂದಿನಂತೆ ದರಖಾಸ್ತುಗಳ ಮೂಲಕ ಆಗಲೇ 4½ ಕೋಟಿ ರೂಪಾಯಿ ಸಾಲವನ್ನು ತೆಗೆದಿದ್ದಾಗಿದೆ; ಅಲ್ಲಿಗೆ ಈ ಸಾಲ ತೆಗೆದುಕೊಳ್ಳುವುದು ನಿಲ್ಲಿಸಲ್ಪಟ್ಟಿದೆ. ಆದರೆ ಇತರ ಸಾಮಾನ್ಯ ಪ್ರಜೆಗಳ್ಯಾರಾದರೂ ಅಲ್ಪಸ್ವಲ್ಪ ಹಣಗಳನ್ನು ಗವರ್ನಮೆಂಟಿಗೆ ಸಾಲ ಕೊಡಬೇಕೆಂದು ಉತ್ಸಾಹಪಡುತ್ತಿದ್ದರೆ ಇಂಥವರಿಗೂ ವಿಶೇಷವಾದ ಅವಕಾಶವನ್ನು ಈಗ ಕಲ್ಪಿಸಿರುತ್ತದೆ. ಇಂಥವರು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಣವನ್ನು ಹಾಕಿಯೂ ಹಾಕದೆಯೂ ಇರಬಹುದು; ಮತ್ತು ಇಂಥವರು ಸೇವಿಂಗ್ಸ್ ಬ್ಯಾಂಕು ಇರುವಂಥಾ ಸಮೀಪದವಾದ ಯಾವ ಪೋಸ್ಟ್ ಆಫೀಸಿನ ಮೂಲಕವಾದರೂ ಈ ಸಾಲಕ್ಕೆ ಹಣವನ್ನು ಕಟ್ಟಬಹುದಾಗಿದೆ.

ಹಣವನ್ನು ಕಟ್ಟತಕ್ಕ ಕ್ರಮ.

3. ಇಷ್ಟವುಳ್ಳವರು ಅಕ್ಟೋಬರ್ ತಾ. 30 ರ ಒಳಗೆ ದರಖಾಸ್ತುಗಳನ್ನು ಪೋಸ್ಟ್ ಆಫೀಸಿನ ಮೂಲಕ ಕೊಡತಕ್ಕದ್ದಾಗಿದೆ.

4. ದರಖಾಸ್ತು 100 ರೂಪಾಯಿಗೆ ಕಡಮೆ ಇರಕೂಡದು; ಕೆಲವು ನೂರು ರೂಪಾಯಿಗಳಿಗೆ ಬೇಕಾದರೂ ದರಖಾಸ್ತು ಕೊಡಬಹುದು. ಯಾವ ಒಬ್ಬ ದರಖಾಸ್ತುದಾರನೂ 5,000 ರೂಪಾಯಿಗಿಂತ ಹೆಚ್ಚಿಗೆ ದರಖಾಸ್ತು ಮಾಡಕೂಡದು.

ವಿಶೇಷ.—ಈಗ ಶೇಕಡಾ 3½ ಬಡ್ಡಿಯುಳ್ಳ ಪ್ರಾಮಿಸರಿ ಪತ್ರಗಳನ್ನು ಪೋಸ್ಟ್ ಆಫೀಸಿನ ಮೂಲಕ ಪಡೆದಿಟ್ಟುಕೊಂಡಿರುವವರು ಕೂಡ ಈ ಹೊಸ ಸಾಲಕ್ಕೆ 5,000 ರೂಪಾಯಿ ವರೆಗೆ ದರಖಾಸ್ತು ಮಾಡಬಹುದು.

5. ದರಖಾಸ್ತು ಮಾಡಬೇಕೆಂಬವರು ಪೋಸ್ಟ್ ಆಫೀಸಿನಲ್ಲಿ ಕೇಳಿದರೆ ಅಲ್ಲಿ ದರಖಾಸ್ತು ಫಾರಮನ್ನು ಮುಫತ್ತಾಗಿ ಕೊಡುತ್ತಾರೆ. ಅದರ ನಮೂನೆ ಇದರ ಕೆಳಗಡೆ ಛಾಪಿಸಿದೆ. ಆ ನಮೂನೆಯನ್ನು ತುಂಬಿ ಭರ್ತಿ ಮಾಡಿ ಪೂರ್ತಾ ಹಣದ ಸಮೇತ ಅದನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಬೇಕು. ಅದಕ್ಕೆ ತಮ್ಮ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವಿದ್ದರೆ ಅದನ್ನೇ ಉಪಯೋಗಿಸಿಕೊಳ್ಳಬಹುದು; ಹಾಗಿಲ್ಲದಿದ್ದರೆ ನಗದಾಗಿ ಪಾವತಿ ಮಾಡಬೇಕು. ದರಖಾಸ್ತುದಾರರು ಖುದ್ದಾಗಿ ಪೋಸ್ಟ್ ಆಫೀಸಿಗೆ ಹೋಗಬಹುದು, ಇಲ್ಲವೇ ತಮ್ಮ ಕಡೆಯವರ ಮೂಲಕ ಕಳುಹಿಸಬಹುದು. ಪಾವತಿ ಮಾಡಲ್ಪಟ್ಟ ಪೂರ್ತಾ ಹಣಗಳಿಗೆ ಕ್ರಮವಾದ ರಸೀದಿ ಕೊಡಲಾಗುತ್ತದೆ.

6. ದರಖಾಸ್ತುದಾರನು ಪಾವತಿ ಮಾಡಿದ ಪ್ರತಿ 100 ರೂಪಾಯಿಗೂ ಒಂದರಂತೆ ಗವರ್ನಮೆಂಟ್ ಪ್ರಾಮಿಸರಿ ಪತ್ರಗಳು ಆತನಿಗೆ ಕಳುಹಿಸಲಾಗುತ್ತವೆ.

ಪ್ರಾಮಿಸರಿ ಪತ್ರಗಳನ್ನು ಜೋಪಾನ ಮಾಡಿಡುವುದು.

7. ಪತ್ರಗಳನ್ನು ದರಖಾಸ್ತುದಾರನು ತನ್ನ ಬಳಿಯಲ್ಲೇ ಇಟ್ಟುಕೊಳ್ಳಬಹುದು; ಅಥವಾ ಆತನಿಗೆ ಸಮ್ಮತವಾಗಿದ್ದರೆ ಪೋಸ್ಟ್ ಆಫೀಸಿನ ಅಧಿಕಾರಿಗಳು ಅವನ್ನು ಆತನಿಗೋಸ್ಕರ ತಮ್ಮಲ್ಲೇ ಇಟ್ಟುಕೊಳ್ಳುತ್ತಾರೆ. ದರಖಾಸ್ತು ಮಾಡುವಾಗಲೇ ದರಖಾಸ್ತುದಾರನು ತನ್ನ ಇಷ್ಟವನ್ನು ದರಖಾಸ್ತಿನಲ್ಲಿ ಬರೆದುಕೊಡತಕ್ಕದ್ದು. ಪತ್ರಗಳು ತನ್ನ ಬಳಿಯೇ ಇರಬೇಕೆಂದು ಅಪೇಕ್ಷಿಸಿದರೆ ಅವು ಸಿದ್ಧವಾಗುವ ಸಮಯವನ್ನು ಪೋಸ್ಟ್ ಆಫೀಸಿನವರು ಆತನಿಗೆ ತಿಳಿಸುತ್ತಾರೆ; ಅಂಥಾ ಸಮಯದಲ್ಲಿ ಆತನು ಖುದ್ದು ಹಾಜರಾಗಿ ಪತ್ರಗಳನ್ನು ತೆಗೆದುಕೊಳ್ಳತಕ್ಕದ್ದು. ಪತ್ರಗಳು ಪೋಸ್ಟ್ ಆಫೀಸಿನಲ್ಲೇ ಇರಲೆಂದು ಅಪೇಕ್ಷಿಸಿದ ಪಕ್ಷದಲ್ಲಿ ದರಖಾಸ್ತುದಾರನು ಪೋಸ್ಟ್ ಆಫೀಸಿಗೆ ಹಾಜರಾಗಬೇಕಾದದ್ದಿಲ್ಲ; ಆದರೆ ಅವು ಬಂದ ಕೂಡಲೆ ಪೋಸ್ಟ್ ಆಫೀಸಿನವರು ಅವು ತಮ್ಮ ವಶಕ್ಕೆ ಬಂದಿವೆ ಎಂದೂ, ತಮ್ಮ ವಶದಲ್ಲಿ ಇಟ್ಟುಕೊಂಡಿರುತ್ತೇವೆಂದೂ ದರಖಾಸ್ತುದಾರನಿಗೆ ತಿಳಿಯಪಡಿಸುತ್ತಾರೆ. ಕೆಲವು ಕಾಲದ ಮೇಲೆ ಪತ್ರಗಳು ಬೇಕೆಂದು ಕೇಳುವ ಪಕ್ಷಕ್ಕೆ ಅವನ್ನು ದರಖಾಸ್ತುದಾರನಿಗೆ ಕೊಡಲಾಗುತ್ತದೆ.

ಬಡ್ಡಿಯನ್ನು ಪಾವತಿಮಾಡುವ ಕ್ರಮ.

ಬಲ್ಗೇರಿಯಾ ಮತ್ತು ಗ್ರೀಸ್ ರಾಜ್ಯಗಳ ವಿಷಯವಾಗಿ ಅನೇಕ ತಂತೀ ವರ್ತಮಾನಗಳು ಬಂದಿರುತ್ತವೆ. ಬಲ್ಗೇರಿಯಾದವರು ತಮ್ಮ ಬಹು ಭಾಗದ ಸೈನಿಕರನ್ನು ಕರೆಸಿ ಯುದ್ಧಕ್ಕೆ ಸಿದ್ಧಪಡಿಸಿಕೊಂಡರು. ಇವರು ತಮಗೆ ಯಾವ ದೇಶದ ಮೇಲೂ ನುಗ್ಗಿ ಮುತ್ತಿಗೆಹಾಕುವ ಉದ್ದೇಶವಿಲ್ಲವೆಂದೂ, ತಮ್ಮ ರಾಜ್ಯವನ್ನು ಸಂರಕ್ಷಿಸಿಕೊಳ್ಳಬೇಕೆಂಬುವುದೇ ತಮ್ಮ ಅಭಿಮತವೆಂದೂ ಹೇಳಿದ್ದಾರೆ. ಬಲ್ಗೇರಿಯಾದವರನ್ನು ನೋಡಿ ಗ್ರೀಸ್ ರಾಜ್ಯದವರೂ ತಮ್ಮ ಸೈನ್ಯಗಳನ್ನು ಕೂಡಿಸಿಕೊಂಡು ಯುದ್ಧಸನ್ನದ್ಧರಾಗಿರುತ್ತಾರೆ. ಈಗಿನ ಸ್ಥಿತಿಯು ಬಹಳ ಬದಲಾಯಿಸಿರುವ ಸಂಗತಿ ಗ್ರೀಸ್ ಮಂತ್ರಿಗೆ ತಿಳಿದಿದೆ. ಆದ್ದರಿಂದಲೇ ಗ್ರೀಸ್ ರಾಜ್ಯವು ಯುದ್ಧಕ್ಕೆ ಸಿದ್ಧವಾಗಿರಬೇಕೆಂದು ಮಂತ್ರಿಯು ಏರ್ಪಾಡು ಮಾಡಿರುವುದು. ಬಲ್ಗೇರಿಯಾದವರು ಸೆರ್ಬಿಯಾದವರ ಮೇಲೆ ಬಿದ್ದರೆ ಗ್ರೀಸ್ ರಾಜ್ಯದವರು ಕೂಡಲೆ ಕಟ್ಟುಬಿದ್ದು ಸೆರ್ಬಿಯರಿಗೆ ಸಹಾಯಮಾಡುತ್ತಾರೆ.

ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯನೆಯಲ್ಲಿ ಸರ್ ಎಡ್ವರ್ಡ್ ಗ್ರೇಯವರು ಹೇಳಿದ ಅಭಿಪ್ರಾಯಗಳೇನೆಂದರೆ—ಬ್ರಿಟನ್ನವರು ಬಲ್ಗೇರಿಯಾದವರ ವಿಷಯದಲ್ಲಿ ಪ್ರೀತಿ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ಬಲ್ಗೇರಿಯಾದವರೇನಾದರೂ ಬಾಲ್ಕನ್ ಸಂಸ್ಥಾನಗಳ ಮೇಲೆ ತಮ್ಮ ಪರಾಕ್ರಮವನ್ನು ತೋರಿಸಿದ ಪಕ್ಷದಲ್ಲಿ ಬ್ರಿಟನ್ನವರು ಆ ಸಂಸ್ಥಾನಗಳಿಗೆ ಬೆಂಬಲವಾಗಿ ನಿಂತು ಬಲ್ಗೇರಿಯಾವನ್ನು ಬಡಿಯುವರು. ಬಾಲ್ಕನ್ ಸಂಸ್ಥಾನಗಳಲ್ಲಿ ಪರಸ್ಪರ ಸಮ್ಮತಿಯೂ ಸಮಾಧಾನವೂ ಇದ್ದ ಪಕ್ಷದಲ್ಲಿ ಅವು ದಿನ ಕ್ರಮೇಣ ಅಭಿವೃದ್ಧಿ ಹೊಂದುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೋಸ್ಕರ ಬ್ರಿಟನ್ನವರು ಅವರವರಿಗೆ ಸುಹೃದಯವನ್ನು ಕಲ್ಪಿಸಿ ಕಾಪಾಡಬೇಕೆಂದು ಉದ್ದೇಶಪಟ್ಟು ಸಾಹಸಪಡುತ್ತಾರೆ ಎಂದು ಹೇಳಿದರು. ಜರ್ಮನಿಯವರಾದರೋ ಆ ಸಂಸ್ಥಾನಗಳಲ್ಲಿ ಪರಸ್ಪರ ಕಿತ್ತಾಟಗಳನ್ನು ಹುಟ್ಟಿಸಿ ವೈರವೈಷಮ್ಯಗಳನ್ನು ಕಲ್ಪಿಸಬೇಕೆಂದು ಇದ್ದಾರೆ.

ಜರ್ಮನಿಯ ಮತ್ತು ಆಸ್ಟ್ರಿಯಾದ ಹುದ್ದೇದಾರರು ಬಲ್ಗೇರಿಯಾದವರಿಗೆ ಸಹಾಯ ಮಾಡಬೇಕೆಂದು ಅಲ್ಲಿಗೆ ಹೋಗಿರುವುದಾಗಿ ವರ್ತಮಾನ ಬಂದಿದೆ. ಈ ಹುದ್ದೇದಾರರನ್ನು ಬಲ್ಗೇರಿಯಾದವರು ತಮ್ಮ ದೇಶದಿಂದ ಹೊರಡಿಸಿ ಬಿಡಬೇಕೆಂದು ರಷ್ಯಾದವರು ಬಲ್ಗೇರಿಯಾ ಸರ್ಕಾರದವರಿಗೆ 24 ಘಂಟೆ ಮಾಯಿದೆಯುಳ್ಳ ನೋಟೀಸನ್ನು ಕೊಟ್ಟಿದ್ದಾರೆ. ಇದರಿಂದ ಬಹುಶಃ ಬಲ್ಗೇರಿಯಾದವರು ಸೆರ್ಬಿಯಾದವರ ಮೇಲೆ ಯುದ್ಧಕ್ಕೆ ಹೊರಡುವಂತೆಯೂ, ಗ್ರೀಸ್ ರಾಜ್ಯದವರು ಸೆರ್ಬಿಯಾದವರಿಗೆ ಸಹಾಯ ಮಾಡುವಂತೆಯೂ ತೋರುವುದು. ಬ್ರಿಟನ್ನಲ್ಲೂ ಫ್ರಾನ್ಸಿನಲ್ಲೂ ಇರುವ ಬಲ್ಗೇರಿಯಾ ಪ್ರಜೆಗಳು ತಮ್ಮ ರಾಜ್ಯವು ಮಿತ್ರಮಂಡಲಿಯವರ ಮೇಲೆ ಯುದ್ಧಕ್ಕೆ ಹೊರಡುವುದನ್ನು ಕುರಿತು ಆಕ್ಷೇಪಣೆ ಮಾಡಿ ಪ್ರತಿಭಟಿಸುತ್ತಿರುವರು.

ಇತರ ವಿಷಯಗಳು.

ಆಸ್ಟ್ರಿಯಾದವರು ಅಮೇರಿಕದಲ್ಲಿದ್ದ ತಮ್ಮ ರಾಯಭಾರಿಯಾದ ಡಾಕ್ಟರ್ ಡುಂಬನನ್ನು ವಾಪಸು ಬರಬೇಕೆಂದು ಹುಕುಂ ಕೊಟ್ಟರು. ಬ್ರಿಟಿಷ್ ರಾಯಭಾರಿಯು ಆತನಿಗೆ ಆಶ್ರಯವನ್ನು ಕೊಟ್ಟಿದ್ದರಿಂದ ಇಂಗ್ಲಿಷರು ಆತನನ್ನು ಕೈಸೆರೆ ಹಿಡಿಯುವುದು ತಪ್ಪಿತು.—ನಮ್ಮ ಪಕ್ಷದವರಿಗೆ ಅಮೇರಿಕದಲ್ಲಿ 2,00,00,000 ಪೌಂಡನ್ನು ಸಾಲ ಕೊಡುತ್ತೇವೆಂದು ಅಲ್ಲಿನವರು ಒಪ್ಪಿದ್ದಾರೆ. ಇದಕ್ಕೆ ಶೇಕಡಾ 5 ರಂತೆ ಬಡ್ಡಿ. ಸಾಲ ಸಿಕ್ಕದಂತೆ ಮಾಡಬೇಕೆಂದು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದವು. ಹಣ ಕೊಡುವುದಾಗಿ ವಾಗ್ದಾನವೂ ಆಗಿದೆ. ಇದರಿಂದ ಅಮೇರಿಕದಲ್ಲಿ ನಮ್ಮ ಪಕ್ಷದವರಿಗೆ ಸಾಮಾನುಗಳು ಸುಲಭಕ್ರಯಕ್ಕೆ ಸಿಗುತ್ತವೆ.

• [illegible]ಯಲ್ಲಿ ಟರ್ಕಿಯವರು ಆರ್ಮೀನಿಯನ್ ಪ್ರಜೆಗಳನ್ನು ಹಿಂಸಿಸದಂತೆಯೂ ಕೊಲ್ಲದಂತೆಯೂ ನೋಡಿಕೊಳ್ಳಬೇಕೆಂದು ಅಮೇರಿಕದವರು ಇಸ್ತಾನ್ ಮೂಲಕವಾಗಿ ಟರ್ಕಿಗೆ ಎಚ್ಚರಿಕೆಕೊಟ್ಟು ತಿಳಿಸಿದ್ದಾರೆ. ಅದುವರೆಗೆ ಅನೇಕರನ್ನು ಕೊಂದುಹಾಕಿರುವಂತೆ ಕಾಣುವುದು. ಟರ್ಕಿ ಗವರ್ನಮೆಂಟಿನವರು ಗಮನ ಕೊಟ್ಟು ತಡೆಯದೆ ಹೋದರೆ ಇನ್ನೂ ಅನೇಕರು ಕೊಲ್ಲಲ್ಪಡುತ್ತಾರೆ.—ಜರ್ಮನಿಯ ವಿಮಾನ ಯಂತ್ರಗಳು ತಮ್ಮ ರಾಜ್ಯದ ಮೇಲೆ ಹಾರಾಡುತ್ತವೆಂದು ಹಾಲೆಂಡ್ ಸರ್ಕಾರದವರು ಪ್ರತಿಭಟಿಸಿ ಜರ್ಮನಿಗೆ ತಿಳಿಸಿದ್ದಾರೆ. ಬಹುಶಃ ಆ ವಿಮಾನ ಯಂತ್ರಗಳು ಪದೇಪದೇ ಆ ರಾಜ್ಯದ ಮೇಲೆ ಹೋಗಿ ಬರುತ್ತಿರಬೇಕು.—ಜರ್ಮನಿಯಲ್ಲಿ ಮದ್ದುಗುಂಡುಗಳು ತಯಾರಾಗುತ್ತಿದ್ದ ಒಂದು ಕಾರ್ಖಾನೆಯಲ್ಲಿ ಸಿಡಿಮದ್ದು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಕಾರ್ಖಾನೆಯೇ ನಾಶವಾಯಿತೆಂದೂ, 243 ಮಂದಿ ಕೂಲಿಕಾರರು ಮೃತಪಟ್ಟರೆಂದೂ ವರ್ತಮಾನ ಬಂದಿದೆ.—ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯನೆಯಲ್ಲಿ ಜನಾ ಖರ್ಚುಗಳ ಅಂದಾಜು ಪಟ್ಟಿಗಳ ವಿಷಯವಾಗಿ ಬಹಳ ಆಕ್ಷೇಪಣೆಗಳು ಮಾಡಲ್ಪಟ್ಟಾಗ್ಯೂ, ಓಟ್ ಹಾಕಿ ತೀರ್ಮಾನಿಸಿದಾಗ ಎಂಟು ಮೆಂಬರುಗಳು ಹೊರತು ಉಳಿದವರೆಲ್ಲಾ ಗವರ್ನಮೆಂಟಿನವರ ಸಲಹೆಗಳನ್ನು ಮೆಚ್ಚಿ ಒಪ್ಪಿಕೊಂಡಿರುತ್ತಾರೆ.

ಸೆಪ್ಟಂಬರ್ ತಾ. 29 ಕ್ಕೆ ಅಖೈರಾದ ವಾರದಲ್ಲಿ ಜರ್ಮನಿಯ ಸಬ್‌ಮೆರೀನುಗಳು ಆರು ಹಡಗುಗಳನ್ನು ಮುಳುಗಿಸಿರುತ್ತವೆ. ಒಟ್ಟು 1,387 ಹಡಗುಗಳು ಬ್ರಿಟಿಷ್ ತೀರಪಟ್ಟಣಗಳಿಗೆ ಬಂದು ಹೋಗಿರುವವು.

ಒಳದೇಶದ ವೃತ್ತಾಂತಗಳು.

ಶ್ರೀಮತ್ ಮಹಾರಾಜರವರು ಕಳೆದ ಶನಿವಾರ ಬೆಂಗಳೂರಿಗೆ ದಯಮಾಡಿ ಒಂದು ದಿನ ಇದ್ದು ಸೋಮವಾರ ವಾಪಸು ಚಿತ್ತೈಸಿದರು. ಶ್ರೀಮದ್ಯುವರಾಜರವರು ಮೊನ್ನೆ ರಾಜಧಾನಿಗೆ ದಯಮಾಡಿದರು.

ನಾಳೆ ಶುಕ್ರವಾರ ಬೆಳಗ್ಗೆ ನಮ್ಮ ಶ್ರೀಮದ್ಯುವರಾಜರವರು ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಅಗ್ರಾಸನವನ್ನು ವಹಿಸಿ ಪ್ರಜೆಗಳಿಗಾಗಿ ಏರ್ಪಾಡು ಮಾಡಿರುವ ವಾಚಕಶಾಲೆ ಮತ್ತು ಸರಸ್ವತೀ ಭಂಡಾರಗಳನ್ನು ಪ್ರತಿಷ್ಠೆ ಮಾಡುವವರಾಗಿದ್ದಾರೆ.

ನಮ್ಮ ಮಹಾರಾಜರವರ ಮಾವಂದಿರಾದ ರಾಣಾಸಾಹೇಬರವರಿಗೆ ರಾಜಧಾನಿಯಲ್ಲಿ ದೇಹಾಲಸ್ಯವುಂಟಾಗಿದೆ. ಕಳೆದ ವಾರ ಸೀನಿಯರ್ ಸರ್ಜನ್ನರಾದ ಮ॥ ಅರುಮುಗಂ ಮುದಲಿಯರವರು ಬೆಂಗಳೂರಿಂದ ಬಂದು ಅವರ ದೇಹಸ್ಥಿತಿಯನ್ನು ಪರೀಕ್ಷೆಮಾಡಿಕೊಂಡು ಹೋದರು.

ಬೊಂಬಾಯಿ ಗವರ್ನರವರ ಪತ್ನೀಯವರು ಕ್ರಿಸ್‌ಮಸ್ ಹಬ್ಬದ ಫಂಡನ್ನು ಕಲ್ಪಿಸಿ ಚಂದಾ ಕೂಡಿಸುತ್ತಿದ್ದಾರೆ. ಈ ಫಂಡಿನ ಹಣದಿಂದ ಯುದ್ಧಭೂಮಿಗೆ ಹೋಗಿರುವಂಥಾ ಹಡಗುಗಳಲ್ಲಿ ಕೆಲಸ ಮಾಡುವ ನಮ್ಮ ದೇಶದ ಜನಗಳಿಗೆ ಹಬ್ಬದ ನಿಮಿತ್ತವಾದ ಬಹುಮಾನಗಳನ್ನು ಕಳುಹಿಸುತ್ತಾರೆ. ಹಿಂದುಸ್ಥಾನದ ಸಕಲ ಪ್ರಜೆಗಳೂ ತಮ್ಮ ಶಕ್ತ್ಯನುಸಾರ ಈ ಫಂಡಿಗೆ ದ್ರವ್ಯ ಸಹಾಯ ಮಾಡಬೇಕೆಂದು ಅವರು ಈ ಮೂಲಕ ಪ್ರಕಟಿಸುತ್ತಾರೆ.

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ಮಿಷನ್ ಹೈ ಸ್ಕೂಲ್ ಮಂದಿರದಲ್ಲಿ ರೆವ॥ ಇ. ಡಬ್ಲ್ಯು. ಥಾಂಸನ್‌ರವರು ಇಂಗ್ಲೀಷರು ಬೆಂಗಳೂರನ್ನು ಮುತ್ತಿಗೆ ಹಾಕಿ ಗೆದ್ದುಕೊಂಡ ವೃತ್ತಾಂತವನ್ನು ಬೇರೆಬೇರೆ ನಕ್ಷೆಗಳ ಸಹಿತ ವಿವರಿಸಿ ಉಪನ್ಯಾಸ ಮಾಡಿದರು. ಮಹಾರಾಜರ ಕಾಲೇಜಿನ ಪ್ರಿನ್ಸಿಪಲ್‌ರಾದ ಮಿ॥ ಟಿ. ಡೆನ್ಹಮ್‌ರವರು ಅಗ್ರಾಸನವನ್ನು ವಹಿಸಿದ್ದರು. ಸಭಾಮಂದಿರವು ಅನೇಕ ವಿದ್ಯಾವಂತರಿಂದ ತುಂಬಿ ತುಳುಕುತ್ತಿತ್ತು. ಆಗ ಟಿಕೆಟ್ಟು ಮೂಲಕ ಉತ್ಪತ್ತಿಯಾದ ರೂ. 63-15-0 ಯನ್ನು ಮದರಾಸ್ ಎಂಬ ಆಸ್ಪತ್ರೆ ಹಡಗಿನ ಫಂಡಿಗಾಗಿ ಕಳುಹಿಸಿದರು.

ದಸರಾಮಹೋತ್ಸವ.

(ರಾಕ್ಷಸನಾಮ ಸಂ|| ದ ಅಶ್ವಯುಜ ಶುದ್ಧ) ಅಕ್ಟೋಬರ್ ೧೯೧೫.

ಅಕ್ಟೋಬರ್ ತಾ|| ೯ ನೆಯ ಸ್ಥಿರವಾರ ಪ್ರಾತಃಕಾಲ ೯ ಘಂಟೆಗೆ ವೃಶ್ಚಿಕಲಗ್ನದಲ್ಲಿ ಸಿಂಹಾಸನಾರೋಹಣ, ನಜರ್; ಸಾಯಂಕಾಲ ೭ ಘಂಟೆಗೆ ದರ್ಬಾರ್, ನಜರ್. ತಾ|| ೧೦ ನೆಯ ಭಾನುವಾರದಿಂದ ತಾ|| ೧೫ ನೆಯ ಶುಕ್ರವಾರದವರೆಗೆ ಪ್ರತಿ ದಿನ ಪ್ರಾತಃಕಾಲ ೮ ಘಂಟೆಗೆ ಆನೆ ಕುದುರೆ ಕೇರ ಬೀಗೆ ಬಿಜಯಮಾಡುವವು; ಸಾಯಂಕಾಲ ೭ ಘಂಟೆಗೆ ದರ್ಬಾರ್. ತಾ|| ೧೬ ನೆಯ ಸ್ಥಿರವಾರದ ಪ್ರಾತಃಕಾಲ ೮ ಘಂಟೆಗೆ ಆನೆ ಕುದುರೆ ಕೇರ ಬೀಗೆ ಬಿಜಯಮಾಡುವವು; ಸಾಯಂಕಾಲ ೭ ಘಂಟೆಗೆ ಇಂಗ್ಲೀಷ್ ದರ್ಬಾರ್. ತಾ|| ೧೭ ನೆಯ ಭಾನುವಾರ ಪ್ರಾತಃಕಾಲ ೬||| ಘಂಟೆಗೆ ತುಲಾಲಗ್ನದಲ್ಲಿ ಆನೆ ಕುದುರೆ ಮತ್ತು ಆಯುಧ ಕೇರ ಬೀಗೆ ಬಿಜಯಮಾಡುವವು. ಅನಂತರ ಆಯುಧ ಗಜಾಶ್ವಾದಿಗಳ ಪೂಜೆ. ಸಾಯಂಕಾಲ ೭ ಘಂಟೆಗೆ ದರ್ಬಾರ್. ತಾ|| ೧೮ ನೆಯ ಸೋಮವಾರ ಪ್ರಾತಃಕಾಲ ೭||| ಘಂಟೆಗೆ ತುಲಾಲಗ್ನದಲ್ಲಿ ಆಯುಧ ಗಜಾಶ್ವಗಳು ಬನ್ನೀಮಂಟಪಕ್ಕೆ ಬಿಜಯಮಾಡುವವು, ಅನಂತರ ಪಟ್ಟೀಕಾಗ; ಸಾಯಂಕಾಲ ೪ ಘಂಟೆಗೆ ಪಂಜಿನಸ್ವಾರಿ, ಅನಂತರ ದರ್ಬಾರ್. ದಿವಾನ್‌ರಿಂದಲೂ, ಖಾಸಾ ಅಳಿಯಂದಿರುಗಳಿಂದಲೂ ಮತ್ತು ರಿಟೈರ್ಡ್ ದಿವಾನ್‌ರವರಿಂದಲೂ ಮಾತ್ರ ನಜರ್. ತಾ|| ೧೯ ನೆಯ ಮಂಗಳವಾರ ಸಾಯಂಕಾಲ ೭|| ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್, ಆಕ್ಟಿವ್ ಮತ್ತು ರಿಟೈರ್ಡ್ ಕೌನ್ಸಿಲರುಗಳು, ಇತರ ಸರದಾರರುಗಳು, ಸಿವಿಲ್ ಆಫೀಸರುಗಳು ಮತ್ತು ಇತರರಿಂದಲೂ ನಜರ್. ತಾ|| ೨೦ ನೆಯ ಬುಧವಾರ ಸಾಯಂಕಾಲ ೭|| ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್; ಮಿಲಿಟೆರಿಯವರಿಂದಲೂ, ಪ್ರಜಾಪ್ರತಿನಿಧಿಗಳು ಮತ್ತು ಪೋಲೀಸ್ ಆಫೀಸರುಗಳಿಂದಲೂ ನಜರ್.

ಒಂದು ಕೋಆಪರೆಟಿವ್ ಸೊಸೈಟಿಯ ಮೀಟಿಂಗು.

ಅರಸೀಕೆರೆ ತಾಲ್ಲೂಕು ದೊಡ್ಡ ಮೇಟಿಕುರ್ಕೆ.

ಈ ಊರು ಬಸವೇಶ್ವರ ಸೊಸೈಟಿ ಜನರಲ್ ಮೀಟಿಂಗು ಕಳೆದ ಮಾಹೆ 25 ನೇ ತಾ. ಶನಿವಾರ ಮಧ್ಯಾಹ್ನ ಕೋಆಪರೆಟಿವ್ ಸೊಸೈಟಿ ಇನ್‌ಸ್ಪೆಕ್ಟರ್ ಮ|| ಎಂ. ಎಸ್. ಸೂರಪ್ಪನವರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು. ಇದಕ್ಕಾಗಿ ಗೌರ್ನಮೆಂಟ್ ಎ. ವಿ. ಸ್ಕೂಲ್ ಹಾಲ್ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತು. ಅನೇಕ ಜನ ದೊಡ್ಡ ಮನುಷ್ಯರು ಸ್ಥಳ ಪರಸ್ಥಳಗಳಿಂದ ದಯಮಾಡಿಸಿದ್ದರು. ಇವರಿಗೆಲ್ಲಾ ಸೊಸೈಟಿ ಸೆಕ್ರಿಟರಿ ಮತ್ತು ಡಿ. ಕೆ. ಮೆಂಬರು ಮ|| ಎಂ. ಎಚ್. ಹರಿಯಣ್ಣನವರು ಭೋಜನಾದಿ ಉಚಿತ ಸತ್ಕಾರ ನಡಿಸಿ ಮರ್ಯಾದೆ ಮಾಡಿದರು. ಆ ಕಾಲಕ್ಕೆ ದಯಮಾಡಿಸಿದ್ದ ಹಾಸನ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ್ ಮ|| ಬಿ. ವೆಂಕಟಾಚಾರ್ರು ವಿದ್ಯಾಭ್ಯಾಸ, ವ್ಯವಸಾಯ, ಗ್ರಾಮ ಪಾಠಶಾಲೆ ವಿಚಾರಗಳನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಅಗ್ರಾಸನಾಧಿಪತಿಗಳು, ಸಂಘದ ರೂಲ್ಸ್ ವಗೈರೆ ವಿಷಯಗಳನ್ನು ಪುಷ್ಟೀಕರಿಸಿ ಶ್ಲಾಘನೀಯವಾಗಿ ಸರ್ವರ ಮನಸ್ಸಿಗೂ ತಿಳುವಳಿಕೆಯುಂಟಾಗುವಂತೆ ಉಪನ್ಯಾಸ ಮಾಡಿದರು. ಸೆಕ್ರಿಟರಿಯವರು ರಿಪೋರ್ಟ್ ಓದಿ ಹೇಳಿದರು. ಕವುವಾರು ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನ ಮಾಡಲ್ಪಟ್ಟವು. ಸ್ಕೂಲ್ ಹೆಡ್ಮಾಸ್ಟರ್ ಮ|| ಕೆ. ಕೃಷ್ಣಮೂರ್ತಿಯವರಿಂದ ತಯಾರ್ಮಾಡಲ್ಪಟ್ಟ ಮಕ್ಕಳ ಡಿಪಾಜಿಟ್ ಆಕರ್ಷಿಸುವ ಲಕ್ಷ್ಮೀಲಾಭವು ಎಂಬ ಸಂವಾದವು ಸ್ಕೂಲ್ ಬಾಲಕ ಬಾಲಕಿಯರಿಂದ ಅಭಿನಯಿಸಲ್ಪಟ್ಟಿತು. ಜಾಯಿಂಟ್ ಸೆಕ್ರಿಟರಿ ಮ|| ಗೂರೂಸಾಹೇಬರು ಹಿಂದುಸ್ಥಾನಿಯಲ್ಲಿ ಗಾನ ರೂಪವಾಗಿ ದೇವರ ಪ್ರಾರ್ಥನೆ ಮಾಡಿದರು. ಸೆಕ್ರಿಟರಿಯವರು ಲೋಕ ಸೇವೆಯೇ ದೇವರ ಸೇವೆ ಎಂಬ ವಿಚಾರದಲ್ಲಿ ಉಪನ್ಯಾಸ ಮಾಡಿ ಲೋಕ ಸೇವೆಯಿಂದಲೇ ಧನ್ಯರಾಗಬೇಕೆಂತ ತಿಳಿಸಿ ಅಗ್ರಾಸನಾಧಿಪತಿಗಳಿಗೂ ಮತ್ತು ಸರ್ವರಿಗೂ ವಂದನೆಗಳನ್ನು ಅರ್ಪಿಸಿದರು. ಸರ್ವರಿಗೂ ಗಂಧ ಪುಷ್ಪ ತಾಂಬೂಲ ವಿನಿಯೋಗಿಸಲ್ಪಟ್ಟು ಸಮ್ರಾಟ್ ಶ್ರೀಮಾನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ಮಂಗಳವಾಗಲೆಂಬ ಜಯಧ್ವನಿ, ಕರತಾಡನ ಮೊದಲಾದ ಕೋಲಾಹಲದೊಡನೆ ಸಭೆಯು ಬರಖಾಸ್ತು ಮಾಡಲಾಯಿತು.

ಒಬ್ಬ ಮೆಂಬರು.

ಅನಾಥ ಬಾಲಕಿಯರು.

ನಮ್ಮ ದೇಶದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರಲ್ಲಿ ಹೆಂಗಸು ವಿಧವೆಯಾದರೆ ಪುನಃ ವಿವಾಹಮಾಡಿಕೊಳ್ಳಲು ಮತಪದ್ಧತಿಗಳು ಅಪ್ಪಣೆಯನ್ನು ಕೊಡುವುದಿಲ್ಲ. ಶೂದ್ರಾದಿಗಳಲ್ಲಿ ಕೂಡಾವಳಿ ಎಂಬ ಪದ್ಧತಿಯು ಆಚರಣೆಯಲ್ಲಿರುತ್ತೆ. ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಬೇಕೋ ಕೂಡದೋ ಎಂಬ ವಿಚಾರವನ್ನು ಕುರಿತು ನಾವು ಪ್ರಸ್ತಾಪಮಾಡುವುದಿಲ್ಲ. ಈ ವಿಷಯವನ್ನು ವಾಚಕರು ಮನಸ್ಸಿನಲ್ಲಿಡಬೇಕು. ವಿಧವೆಯರ ಸತ್ಕಾಲಕ್ಷೇಪಕ್ಕೆ ಯಾವ ಮಾರ್ಗಗಳಿರುತ್ತವೆಯೋ ಅವುಗಳನ್ನು ನಾವು ಉಪಯೋಗಿಸಿಕೊಳ್ಳುತ್ತಿದೇವೆಯೋ ಎಂಬುದನ್ನು ನಾವು ವಿಚಾರಮಾಡಬೇಕಾಗಿದೆ. ವಿಚಾರಮಾಡಿ ನೋಡಿದಲ್ಲಿ ಸಾಧಾರಣವಾಗಿ ಶೇಕಡ 65 ಸಂಸಾರಗಳಲ್ಲಿ ವಿಧವೆಯರು ಇರುತ್ತಾರೆ. ಇವರಪಾಡೇನಾಗಿದೆಯೋ ವಾಚಕರನೇಕರಿಗೆ ತಿಳಿದೇ ಇದೆ. ದುಡಿಯುವ ಎತ್ತಿನಂತೆ ಕೆಲಸಮಾಡಿಕೊಂಡು ಮನೆಯಲ್ಲಿ ಆಳಿನಂತೆ—ಕೆಲವು ವೇಳೆಗಳಲ್ಲಿ ಆಳಿಗಿಂತ ಕಡೆಯಾಗಿ ಇರುತ್ತಾರೆ. ಬೆಳಗ್ಗೆ ಪ್ರಾರಂಭದಿಂದ ರಾತ್ರಿ ಮಲಗಿಕೊಳ್ಳುವ ವರಿಗೂ ಪ್ರಪಂಚವನ್ನೇ ಮರೆತು ಮೂಗು ಪ್ರಾಣಿಗಳಂತೆ ಕಷ್ಟಪಟ್ಟು ಕೆಲಸಮಾಡುತ್ತಾರೆ. ಎಲ್ಲಾ ಮನೆಗಳಲ್ಲೂ ಒಂದೇ ರೀತಿಯಾಗಿರುತ್ತೆಂದು ಹೇಳುವುದು ಕಷ್ಟ. ಕೆಲವು ಸಂಸಾರಗಳಲ್ಲಿ ವಿಧವೆಯರನ್ನು ಅಣ್ಣತಮ್ಮಂದಿರೂ ಅಕ್ಕತಂಗಿಯರೂ ಬಹಳ ಕನಿಕರದಿಂದ ಕಾಣುತ್ತಿದ್ದಾರೆ. ಮತ್ತೆ ಕೆಲವು ಮನೆಗಳಲ್ಲಿ ವಿಧವೆಯರು ತಮ್ಮ ದುಃಖವನ್ನು ಮರೆತು ದೇವರ ಧ್ಯಾನದಲ್ಲಿ ನಿರತರಾಗಿ ಮನೆಯ ಸಂಸಾರದ ಭಾರವನ್ನೆಲ್ಲಾ ವಹಿಸಿಕೊಂಡು ಗೃಹಕೃತ್ಯಗಳನ್ನು ಬಹಳ ಸಾಮರ್ಥ್ಯದಿಂದ ನಡಿಸಿಕೊಂಡು ಪರೋಪಕಾರ ಒಂದರಲ್ಲೇ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಸಂಸಾರಗಳಲ್ಲಿ ವಿಧವೆಯರ ಪಾಡು ಹೇಳಲತಕ್ಕವಾಗಿರುತ್ತೆ. ಅವರ ಕಷ್ಟಗಳು ದೇವರಿಂದಲೇ ಪರಿಹರಿಸಲ್ಪಡತಕ್ಕವುಗಳಾಗಿರುತ್ತವೆ. ಅನುಬಂಧಿಗಳು ಎಲ್ಲರೂ ಕೀಳಾಗಿ ಕಾಣುತ್ತಾ, ದಾಸಿಗಿಂತಲೂ ಕಡೆಯಾಗಿ ಎಣಿಸುತ್ತಾ, ವಿಧವೆಯರ ಸಂಕಟಗಳನ್ನು ಕಡಮೆಮಾಡುವುದಕ್ಕೆ ಬದಲು ಹೆಚ್ಚುಮಾಡುತ್ತಾ ಇರುತ್ತಾರೆ. ಕೆಲವು ಮನೆಗಳಲ್ಲಿ ವಿಧವೆಯರು ಮೂಢತನದಿಂದಲೋ ಅಥವಾ ಪ್ರಾಪಂಚಿಕ ವ್ಯವಹಾರದ ಪರಿಚಯವಿಲ್ಲದ್ದರಿಂದಲೋ ಅತಿಯಾದಿಗಳಿಂದಲೂ ಆಲಸಿಯಿಂದಲೂ ತಮ್ಮ ಮನಸ್ಸಿನ ಸಂಕಟವನ್ನು ಹೆಚ್ಚುಮಾಡಿಕೊಂಡು ಪರರ ಸುಖಕ್ಕೂ ಕಂಟಕರಾಗಿರುತ್ತಾರೆ. ಹೀಗೆಯೇ ಇನ್ನೂ ಅನೇಕ ಪರಿಯಾಗಿರುತ್ತಾರೆ.

ಅವರ ಪಾಡನ್ನು ಅಷ್ಟು ಮಟ್ಟಿಗೆ ಉತ್ತಮಸ್ಥಿತಿಗೆ ತರಲು ಅನೇಕ ಮಾರ್ಗಗಳುಂಟು. ಆ ಮಾರ್ಗಗಳನ್ನು ಅನುಸರಿಸಿದಲ್ಲಿ ಅನೇಕ ಉಪಯೋಗಗಳಾಗುತ್ತವೆ. ಕೈಲಾದ ಮಟ್ಟಿಗೂ ವಿಧವೆಯರಿಗೆ ಓದುಬರಹವನ್ನು ಕಲಿಸಿಕೊಡಬೇಕು. ನಮ್ಮ ದೇಶದಲ್ಲಿ ಅನೇಕರಿಗೆ ಈ ವಿಷಯವು ಸರಿಯಾಗಿ ಕಾಣುವುದಿಲ್ಲ. ಮತ್ತು ಓದುಬರಹ ತಿಳಿದಿರುವ ಹೆಂಗಸಿನಲ್ಲಿ ವಿಧವಿಧವಾದ ಕಳಂಕವನ್ನು ಹೊರಿಸುತ್ತಾರೆ. ನಿಜವೋ ಸುಳ್ಳೋ ನ್ಯಾಯವೋ ಅನ್ಯಾಯವೋ ಒಂದೂ ವಿಚಾರ ಮಾಡದೆ ವಿದ್ಯಾಭ್ಯಾಸ ಮಾಡುತ್ತಿರುವ ವಿಧವೆಯ ಮೇಲೆ ದೂರುಕಟ್ಟುತ್ತಾರೆ. ಇದು ಶೋಚನೀಯ ವಿಷಯವಾಗಿದೆ. ನಮ್ಮ ದೇಶದ ವಿದ್ಯಾವಂತರೆಲ್ಲಾ ಈ ವಿಷಯವನ್ನು ಯೋಚಿಸಿ ಈ ಅಕಾರಣ ದೋಷಾರೋಪಣೆಯನ್ನು ತಪ್ಪಿಸಿ, ವಿಧವೆಯರಿಗೆ ವಿದ್ಯಾಭ್ಯಾಸಮಾಡಿಸಬೇಕು. ಶಾಸ್ತ್ರ ಪುರಾಣಾದಿಗಳನ್ನು ವಿಧವೆಯರು ತಮ್ಮಷ್ಟಿಗೆ ತಾವೇ ಓದಿಕೊಂಡು ದೇವರ ಧ್ಯಾನದಲ್ಲಿ ಕಾಲಕಳೆಯುವುದಕ್ಕೆ ಅನುಕೂಲವಾಗುತ್ತದೆ. ಹೆಂಗಸು ವಿದ್ಯಾವತಿಯಾದರೆ ದೇಶಕ್ಕೆ ಉಂಟಾಗಬಹುದಾದ ಉಪಯೋಗಗಳೆಲ್ಲಾ ವಾಚಕರಿಗೆ ತಿಳಿದೇ ಇದೆ.

ವಾರಕ್ಕೆ ಒಂದಾವರ್ತಿ ಒಂದು ಭಜನೆ ಕೂಟವನ್ನು ಮಾಡಿಕೊಂಡು ಸ್ನೇಹಿತರೆಲ್ಲಾ ಒಟ್ಟುಕೂಡಿ ದೇವರ ಧ್ಯಾನದಲ್ಲಿ ಕಾಲವನ್ನು ಕಳೆಯಬಹುದು. ಮತ್ತು ಈ ವಿಧವಾದ ಕೂಟಗಳಲ್ಲಿ ಉಪಯೋಗಕರವಾದ ವಿಷಯಗಳನ್ನು ಕುರಿತು ಉಪನ್ಯಾಸಮಾಡಿ, ಸ್ನೇಹಿತರೆಲ್ಲಾ ಆ ವಿಷಯವನ್ನು ಚರ್ಚಿಸಿ ಒಬ್ಬರಿಂದೊಬ್ಬರು ತಾವು ಅರಿಯದ ಅನೇಕ ವಿಚಾರಗಳನ್ನು ತಿಳಿದುಕೊಳ್ಳಬಹುದು. ಸದಾಕಾಲದಲ್ಲೂ ಮನೆಯಲ್ಲೇ ಕುಳಿತುಕೊಂಡು ಹೊಳ್ಳುಹರಟೆ ಬಡಿಯುತ್ತಾ, ಪ್ರಪಂಚದ ವ್ಯವಹಾರಜ್ಞಾನ ಸ್ವಲ್ಪವೂ ಇಲ್ಲದೆ, ಮೂಢತನದಿಂದ ಕಾಲವನ್ನು ಹ್ಯಾಗೋ ಹಾಗೆ ಕಳೆಯುವುದರ ಬದಲು ಹೀಗೆ ವಾರಕ್ಕೊಂದಾವರ್ತಿ ಸ್ನೇಹಿತರೆಲ್ಲರೂ ಒಟ್ಟುಕೂಡಿ ಸತ್ಕಾಲಕ್ಷೇಪಮಾಡುವುದರಲ್ಲಿ ಏನೂ ಬಾಧಕಗಳು ತೋರುವುದಿಲ್ಲ. ಇದರಲ್ಲಿ ಅನುಚಿತವಾದ ಅಂಶವು ಯಾವದೂ ಉಂಟಾಗುವುದಿಲ್ಲ. ಹೀಗೆ ಒಂದು ಸ್ಥಳದಲ್ಲಿ ಸೇರಲು ಮನೆ ಬಂಗಲೆ ಮುಂತಾದ್ದು ಯಾವುದೂ ದೊರಕದೆ ಇದ್ದಲ್ಲಿ ಪಾಠಶಾಲೆಗಳಲ್ಲಿ ಶನಿವಾರ ಮಧ್ಯಾಹ್ನವೋ ಅಥವಾ ಭಾನುವಾರವೋ ಸ್ಥಳ ದೊರಕಬಹುದು. ಯಾವುದೂ ಅನುಕೂಲವಾಗದಿದ್ದರೆ ದೇವಸ್ಥಾನಗಳಲ್ಲಿ ಅಪ್ಪಣೆಯನ್ನು ಪಡೆದು ಸಂಘವನ್ನು ಸೇರಿಸಬಹುದು. ಮೈಸೂರು ಪಟ್ಟಣದಲ್ಲಿ ಅನಾಥ ಬಾಲಿಕಾಶ್ರಮದಲ್ಲಿ ಎಲ್ಲರೂ ಸೇರಿ ಒಂದು ಸಂಘವನ್ನು ಏರ್ಪಾಡುಮಾಡಿದರೆ ಬಹಳ ಸಹಾಯವಾದೀತು.

ಮತ್ತು ಈ ವಿಧವಾದ ಸಂಘದಲ್ಲಿ ಬಹಳ ಉಪಯುಕ್ತವಾದ ವಿಷಯಗಳಲ್ಲಿ ತರಪೇತುಕೊಡಲು ಏರ್ಪಾಡುಗಳನ್ನು ಮಾಡಬಹುದು. ಆರೋಗ್ಯ, ಸಂಸಾರದ ಆದಾಯವೆಚ್ಚ, ಹೊಲಿಗೆ, ಗಾಯ ಮುಂತಾದ ಪೆಟ್ಟುಪಡೆದವರಿಗೆ ಪ್ರಥಮ ಸಹಾಯದ ವಿಧಾನಗಳು, ಶಾಯಿಲೆಯವರ ಉಪಚಾರ, ಸೂಲಗಿತ್ತಿಯ ಕೆಲಸ, ಮನೆಯಲ್ಲಿ ಎಳೆಯಮಕ್ಕಳನ್ನು ಅವರ ಬಾಲ್ಯದಲ್ಲಿ ಸರಿಯಾಗಿ ಪೋಷಿಸಿ, ದೇಹಾರೋಗ್ಯ ಮತ್ತು ಚಟುವಟಿಕೆ ಮುಂತಾದ್ದನ್ನು ನೋಡಿಕೊಳ್ಳುವ ವಿಷಯ, ಪಾಕಶಾಸ್ತ್ರ, ಮನೋಲ್ಲಾಸಪಡಿಸತಕ್ಕ ಕೈಗಾರಿಕೆಗಳು, ಮತ್ತು ಅನುಕೂಲವಿದ್ದವರಿಗೆ ಸಂಗೀತ ಈ ಮೊದಲಾದ ವಿಷಯಗಳಲ್ಲೆಲ್ಲಾ ನಮ್ಮ ವಿಧವೆಯರು ತರಪೇತು ಹೊಂದಲು ಸರ್ಕಾರದವರೇ ಆಗಲಿ, ಅಥವಾ ಪ್ರೈವೇಟ್ ಫಂಡಿನಿಂದಾಗಲಿ ಒಂದು ಪಾಠಶಾಲೆಯನ್ನು ಸ್ಥಾಪಿಸಿದರೆ ಬಹಳ ಪ್ರಯೋಜನವುಂಟಾದೀತು. ಹಾಗೆ ಪಾಠಶಾಲೆಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಒಂದು ಸಣ್ಣ ಸಂಘವನ್ನು ಏರ್ಪಾಡುಮಾಡಿ, ಎಷ್ಟು ಮಂದಿ ಮೇಲೆ ಹೇಳಿದ ರೀತಿ ವಾರಕ್ಕೊಂದಾವರ್ತಿ ಬರಲು ಸಮ್ಮತಿಸುತ್ತಾರೆ ? ಅವರ ತಂದೆತಾಯಿಯರು ಒಡಂಬಡುತ್ತಾರೆಯೆ ? ಎಂಬುವದನ್ನು ಗೊತ್ತುಮಾಡಿಕೊಳ್ಳಬೇಕು.

ಮೇಲೆ ಹೇಳಿದಂತೆ ಒಂದು ಸಣ್ಣ ಸಂಘವನ್ನು ಮೈಸೂರು ಅನಾಥ ಬಾಲಿಕಾಶ್ರಮದವರು ಪ್ರಾರಂಭಿಸಿದರೆ ಅನುಕೂಲವಾಗುತ್ತದೆ. ತರುಣರಲ್ಲಿ ಅನೇಕರು ಈ ವಿಧ ಕಾರ್ಯಗಳಿಗೆ ಒಡಂಬಡುವುದಿಲ್ಲ. ಆದಾಗ್ಯೂ ಧೈರ್ಯದಿಂದ ದೇಶಾಭಿಮಾನಿಗಳೆಲ್ಲರೂ ಮನಸ್ಸಿಟ್ಟು ಮಾಡತಕ್ಕ ಕಾರ್ಯವಾಗಿರುತ್ತೆ.

ಲಂಡನ್. ಎಸ್. ಜಿ. ಶಾಸ್ತ್ರೀ.

ಮೈಸೂರು ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು.

ಕಳೆದ ತಾ. 27 ನೇ ಸೋಮವಾರ ಬೆಳಗ್ಗೆ ಮೈಸೂರು ನಗರಾಭಿವೃದ್ಧಿಯ ಸಂಘದವರು ಟೌನ್ ಹಾಲಿನಲ್ಲಿ ಸಭೆ ಸೇರಿ ಚೇರ್‌ಮನ್ ಮ|| ಟಿ. ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ತಿಂಗಳು ಕಟ್ಟೆಯ ಮೀಟಿಂಗನ್ನು ನಡಿಸಿದರು. ಮೆಂಬರುಗಳಾದ ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು, ಮಿ|| ಮಹಮದ್ ಜಾಫರ್‌ಸಾಹೇಬರು, ಹೆಲ್ತ್ ಆಫೀಸರ್ ಮ|| ಎ. ಕೆ. ವಾಣಿಯವರು, ರೆವ್|| ಜಿ. ಡಬ್ಲ್ಯು. ಸಾಡೆಸಾಹೇಬರು, ಎಂ. ವೆಂಕಟಕೃಷ್ಣಯ್ಯನವರು, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮ|| ಎಂ. ಶ್ರೀನಿವಾಸರಾಯರು ಹಾಜರಾಗಿದ್ದರು. ಮೀಟಿಂಗಿನಲ್ಲಿ ಚರ್ಚೆಯಿಂದ ತೀರ್ಮಾನಮಾಡಲ್ಪಟ್ಟ ವಿಷಯಗಳ್ಯಾವವೆಂದರೆ—

ಊರನಗೆರೆ ಬಾಗಿಲಲ್ಲಿ ರಸ್ತೆಯ ಎರಡು ಕಡೆಗಳಲ್ಲೂ ಅಲಂಕಾರವಾದ ಗೋಪುರಗಳುಳ್ಳ ಎರಡು ಕಟ್ಟಡಗಳನ್ನು ಮಾಡಿಸಬೇಕೆಂದೂ, ಅದಕ್ಕೆ 4,000 ರೂಪಾಯಿ ಖರ್ಚಾಗಬಹುದೆಂದೂ, ಆ ಪೈಕಿ ಒಂದರಲ್ಲಿ ಸುಂಕದಕಟ್ಟೆಯನ್ನು ಇಡಬಹುದೆಂದೂ ಒಪ್ಪಲಾಯಿತು.—ಟ್ರಸ್ಟ್ ಬೋರ್ಡಿನವರು ನಜರ್‌ಬಾದು, ಲಷ್ಕರ್ ಮತ್ತು ಮಂಡಿಮೊಹಲ್ಲೆಗಳಲ್ಲಿ ಅಭಿವೃದ್ಧಿಕಾರ್ಯಗಳನ್ನು ಮಾಡಿಸಿದ್ದಾಯಿತೆಂದೂ, ಆ ಮೊಹಲ್ಲೆಗಳನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳಬಹುದೆಂದೂ ಸೂಚಿಸಿದರು. ಅದಕ್ಕೆ ಮ|| ರಂಗಯ್ಯಂಗಾರ್ರು ಹೇಳಿದ್ದೇನೆಂದರೆ—ಟ್ರಸ್ಟ್ ಬೋರ್ಡಿನವರು ಮನೆಗಳನ್ನು ಒಡೆದು ಗಲ್ಲಿಗಳನ್ನೂ, ಕೆಲವು ಚರಂಡಿಗಳನ್ನೂ ಹಾಕಿದ್ದಾಗಿರಬಹುದು. ಅಲ್ಲಿಗೆ ಅಭಿವೃದ್ಧಿಕಾರ್ಯಗಳೆಲ್ಲಾ ಮುಗಿಯಿತೆಂದು ಹೇಳಲಾಗದು. ಪಾಯಿಖಾನೆಗಾಗಿ ಇನ್ನೂ ಸುಮಾರು 7,000 ಗುಂಡಿಗಳನ್ನು ಮನೆಗಳಲ್ಲಿ ಮಾಡಿಕೊಂಡಿದಾರೆ. ಇದು ಇನ್ನೂ ಹೋಗಲಿಲ್ಲ. ಪಾಯಿಖಾನೆಯನ್ನು ಮನೆಗಳಿಂದ ಪ್ರತಿದಿನವೂ ಸಾಗಿಸುವಂತೆ ಅನುಕೂಲವಾದ ಗಲ್ಲಿಗಳನ್ನು ಎಲ್ಲಾ ಕಡೆಯಲ್ಲೂ ಹಾಕಿಕೊಟ್ಟಿಲ್ಲ. ಇಂಥಾದ್ದರಲ್ಲಿ ಮ್ಯುನಿಸಿಪಾಲಿಟಿಯವರು ಹೇಗೆ ವಹಿಸಿಕೊಳ್ಳಬಹುದು ? ಯಥಾರ್ಥವಾದ ಅಭಿವೃದ್ಧಿ ಕಾರ್ಯ ನಡೆದಿರುವುದೇನೋ ಕಾಣುವುದಿಲ್ಲ. ಟ್ರಸ್ಟ್ ಬೋರ್ಡಿನವರು ಮಾಡಬೇಕಾಗಿರುವ ಎಲ್ಲಾ ಕಾಮಗಾರಿಗಳನ್ನೂ ತೃಪ್ತಿಕರವಾಗಿಯೂ, ಶಾಶ್ವತವಾಗಿ ನಿಲ್ಲುವಂತೆಯೂ ಮಾಡಿ ಪೂರೈಸುವ ತನಕ ಆ ಮೊಹಲ್ಲೆಗಳನ್ನು ಮ್ಯುನಿಸಿಪಾಲಿಟಿಗೆ ವಹಿಸುವುದು ನ್ಯಾಯವಲ್ಲ. ಈಗ ಟ್ರಸ್ಟ್ ಬೋರ್ಡಿನವರು ಕಟ್ಟಿಸಿರುವ ಚರಂಡಿಗಳು ಅನೇಕಾನೇಕ ಕಡೆ ಆಗಲೇ ಕೆಟ್ಟುಹೋಗಿವೆ. ಸ್ವಲ್ಪ ದೊಡ್ಡಮಳೆ ಸುರಿದರೆ ನೀರು ಹೋಗದೆ ಕಟ್ಟಿಕೊಂಡು ರಸ್ತೆಗಳ ಮೇಲೆ ಹರಿದು ಮ್ಯುನಿಸಿಪಾಲಿಟಿಯಿಂದ ದುರಸ್ತು ಮಾಡಿಸಿದ ರಸ್ತೆಗಳನ್ನು ಕೆಡಿಸಿ ತುಂಬಾ ನಷ್ಟಪಡಿಸತಕ್ಕವುಗಳಾಗಿವೆ. ಇಂಥಾ ರಸ್ತೆಗಳ ರಿಪೇರಿಗೆ ಮ್ಯುನಿಸಿಪಲ್ ಹಣವನ್ನು ವಿಶೇಷ ಖರ್ಚುಮಾಡಬೇಕಾಗಿದೆ ಎಂಬದಾಗಿ ಹೇಳಿದರು. ಅದಕ್ಕೆ ಚೇರ್‌ಮನ್‌ರವರು—ಸುಕ್ಕಿಗಾರೆಯಿಂದ ಚರಂಡಿಗಳನ್ನು ಕಟ್ಟಿದರೆ ಸಾಕೆಂದು ಮೊದಲು ಇಂಜನಿಯರುಗಳ ಅಭಿಪ್ರಾಯವಿತ್ತು. ಅದರ ಪ್ರಕಾರ ಟ್ರಸ್ಟ್ ಬೋರ್ಡಿನವರು ಚರಂಡಿಗಳನ್ನು ಕಟ್ಟಿದರು. ಅವರ ತಪ್ಪೇನೂ ಇಲ್ಲ. ಈಗ ಸಿಮೆಂಟ್ ಗಾರೆಹಾಕಿ ಕಟ್ಟುವುದು ಉತ್ತಮವೆಂದು ಗೊತ್ತಾಗಿದೆ. ಇದರಂತೆ ಕಟ್ಟಿಸುತ್ತಿದೇವೆ. ಮುಂದೆ ಇದೂ ಶಾಶ್ವತವಾಗಿ ನಿಲ್ಲತಕ್ಕದ್ದಲ್ಲ. ಈಗ ಕೆಟ್ಟುಹೋಗಿರುವಂಥಾ ಹಳೇ ಚರಂಡಿಗಳನ್ನು ಎರಡು ವರುಷದಿಂದ ದುರಸ್ತುಮಾಡುವುದಕ್ಕೆ ಸಾಲಿಯಾನಾ 3,000 ರೂಪಾಯಿ ಖರ್ಚುಮಾಡುತ್ತಿರುವೆವು ಎಂದು ಹೇಳಿದರು. ರೆವ್. ಸಾಡೆಸಾಹೇಬರು—ಆ ಮೊಹಲ್ಲೆಗಳನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳುವುದು ಸರಿಯಲ್ಲವೆಂದು ಹೇಳಿದರು. ಕಡೆಯಲ್ಲಿ ಟ್ರಸ್ಟ್ ಬೋರ್ಡ್ ಮೆಂಬರುಗಳು ಆ ಮೂರು ಮೊಹಲ್ಲೆಗಳಲ್ಲೂ ಸಂಚಾರಮಾಡಿ ಎಲ್ಲಾ ಭಾಗಗಳನ್ನೂ ಪರೀಕ್ಷಿಸಿಯೂ ಮಾಡಿ ಎಲ್ಲೆಲ್ಲಿ ಯಾವ ಯಾವ ಲೋಪಗಳು ಇರುವವೋ ಗೊತ್ತುಮಾಡಿ ಅವುಗಳನ್ನೆಲ್ಲಾ ಮೊದಲು ಸರಿಪಡಿಸಿ ಆ ಬಳಿಕ ಮ್ಯುನಿಸಿಪಾಲಿಟಿಗೆ ವಹಿಸಬೇಕೆಂದು ತೀರ್ಮಾನ ಮಾಡಲಾಯಿತು.

ಮನೆಗಳ ಬಚ್ಚಲುಕೊಚ್ಚೆಯನ್ನು ನಲ್ಲಿಗಳ ಮೂಲಕ ಸಾಗಿಸುವ ಕಾಮಗಾರಿಗಳು ನಡೆಯುತ್ತಿರುವವಷ್ಟೆ. ಕೆಲವು ಮನೆಯವರು ಸ್ವಂತಖರ್ಚಿನಿಂದ ತಮ್ಮ ಮನೆ ಬಚ್ಚಲ ನೀರನ್ನು ಬೀದಿ ನಲ್ಲಿಗೆ ಹಿಂದುಬಿಡುವುದಕ್ಕೆ ಅನುಕೂಲ ಮಾಡಿಕೊಂಡಿದ್ದಾರೆಂದೂ, ಇನ್ನು ಕೆಲವರು ಮಾಡಿಸಿಕೊಳ್ಳದೆ ತಿರಸ್ಕಾರ ಮಾಡುತ್ತಾರೆಂದೂ ಪ್ರೆಸಿಡೆಂಟರು ಸೂಚಿಸಿದರು. ಸರ್ಕಾರದವರು ಈ ಕಾಮಗಾರಿಯನ್ನು ಟ್ರಸ್ಟ್ ಬೋರ್ಡಿನಿಂದಲೇ ಮಾಫಿಯಾಗಿ ಮಾಡಿಸಿಕೊಡತಕ್ಕದ್ದೆಂದೂ, ಅದಕ್ಕಾಗಿ ಮುಂದೆ ಬಚ್ಚಲ ತೆರಿಗೆಯನ್ನು ವಸೂಲ್ಮಾಡತಕ್ಕದ್ದೆಂದೂ ಶ್ಯಾಂಕ್ಷನ್ ಮಾಡಿದಾರೆ. ಆದಕಾರಣ ಇದುವರೆಗೆ ಇಂಥಾ ಕಾಮಗಾರಿಯ ಬಾಬ್ತು ಯಾರ್ಯಾರಿಂದ ಛಾರ್ಜು ವಸೂಲ್ಮಾಡಲ್ಪಟ್ಟಿದೆಯೋ ಅಂಥಾ ಹಣವನ್ನು [illegible] ವಾಪಸು ಕೊಡುವಂತೆ ಮೆಂಬರು ಶಿಫಾರಸು ಮಾಡಿದರು.—ಬಾಬು [illegible] ಕಾಲ್ತ್ಯಯಲ್ಲಿ ಕೆಂಪಂಕಿ ದೇವರಾಜ ಮಾರ್ಕೆಟ್ ಚೌಕದ ಅಭಿವೃದ್ಧಿಗೆ ಈ ಸಾಲಿನಲ್ಲಿ 10,000 ರೂ., ಕೃಷ್ಣರಾಜಮೊಹಲ್ಲಾ ಬಚ್ಚಲ ನಲ್ಲಿ ಕಾಮಗಾರಿಗೆ 15,000 ರೂ., ಮನೆಕಟ್ಟುವವರಿಗೆ ಸಾಲ ಕೊಡುವುದಕ್ಕೆ 5,000 ರೂ., ಮ್ಯುನಿಸಿಪಲ್ ಆಫೀಸ್ ಕಟ್ಟುವ ಬಾಬಿನ 20,000 ರೂ., ಈ ರೀತಿ ವಿನಿಯೋಗಿಸಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಬಂಡಿಕೇರಿಯಲ್ಲಿ ಕಾಳನೆಂಬಾತ ತನ್ನ ನಿವೇಶನದ ಒಂದು ಮೂಲೆಯಲ್ಲಿ ಒಂದು ಸಣ್ಣ ಮನೆ ಕಟ್ಟಿ ತನ್ನ ಸಹೋದರನಿಗೆ ಬಿಕರಿ ಮಾಡಿ ಉಳಿದ ಸ್ಥಳದಲ್ಲೇ ಸ್ವಂತ ಮನೆ ಕಟ್ಟಬೇಕೆಂದು ಲೈಸೆನ್ಸು ಪಡೆದಿರುವ ವಿಷಯದಲ್ಲಿ ಹೆಲ್ತ್ ಆಫೀಸರ ಅಭಿಪ್ರಾಯವನ್ನು ತಿಳಿಯಬೇಕೆಂದು ತೀರ್ಮಾನ ಮಾಡಿದರು.—ರಾಜಧಾನಿಯ ಸುತ್ತಲೂ ಒಂದು ರಸ್ತೆಯನ್ನು ಮಾಡಿಸುವುದಕ್ಕೆ ಸದ್ಯ 52,000 ರೂಪಾಯಿ ಅಂದಾಜು ಮಾಡಲ್ಪಟ್ಟಿದೆ. ಈ ಪೈಕಿ ಈಗ 6 ಮೈಲಿ ರಸ್ತೆ ಇದೆ; ಇನ್ನು 9 ಮೈಲಿ ರಸ್ತೆಯನ್ನು ಮಾಡಿಸುವುದು ಅವಶ್ಯವೆಂದು ಆ ಅಂದಾಜನ್ನು ಮಂಜೂರು ಆಗಿ ಒಪ್ಪಿಕೊಂಡರು.—ದೊಡ್ಡಕೆರೆ ಏರಿಯ ಮೇಲೆ ದೊರೆಗಳ ಸೋಪಾನದ ಬಳಿ ಇರುವ ಅರಳಿಮರಗಳನ್ನು ಒಡೆದುಹಾಕಿ ಹೊಸದಾಗಿ ಒಂದು ಕಟ್ಟೆಯನ್ನು ಮಾಡಿಸುವುದಕ್ಕೆ ಸುಮಾರು 457 ರೂಪಾಯಿನ ಖರ್ಚು ಪಟ್ಟಿಯನ್ನು ಮಂಜೂರು ಮಾಡಿದರು.—ಶ್ರೀಪತಿ ಶಾಸ್ತ್ರಿಗಳ ಛತ್ರದ ಹಿಂಭಾಗದಲ್ಲಿ ಹೋಗಿರುವ ರಸ್ತೆಯಿಂದ ನಾಲೆಯ ಮೇಲೆ ಹಾದುಹೋಗುವಂತೆ ಒಂದು ಸೇತುವೆಯನ್ನು 350 ರೂಪಾಯಿ ಮುಟ್ಟಿಸಿ ಕಟ್ಟಿಸಬಹುದೆಂದು ತೀರ್ಮಾನವಾಯಿತು.—ಚಮನ್‌ಪಟ್ಟತೋಟದ ಎದುರಿಗೆ ಸ್ಮಶಾನಭೂಮಿಯಲ್ಲಿ ಹೊಸ ಸುತ್ತುವುದು ರಸ್ತೆಗೆ ಕಾಣದಂತೆ ಒಂದು ಆವರಣ ಗೋಡೆಯನ್ನು ಹಾಕುವುದಕ್ಕೆ 1,500 ರೂಪಾಯಿ ಖರ್ಚು ಒಪ್ಪಲಾಯಿತು.—ನಜರ್‌ಬಾದ್ ಮೊಹಲ್ಲೆಯಲ್ಲಿ ಬಚ್ಚಲ ನೀರು ಸಾಗಿಸುವ ನಲ್ಲಿ ಕಾಮಗಾರಿಗೆ 99,000 ರೂಪಾಯಿ ಅಂದಾಜು ಪಟ್ಟಿಯನ್ನೂ, ಇಟ್ಟಿಗೆಗೂಡಿನಲ್ಲೂ ಅದೇ ರೀತಿ ನಲ್ಲಿ ಹಾಕುವುದಕ್ಕೆ 59,200 ರೂಪಾಯಿ ಅಂದಾಜು ಪಟ್ಟಿಯನ್ನೂ ಮೆಂಬರುಗಳು ಒಪ್ಪಿದರು.

ಮೈಸೂರು ನ್ಯಾಯವಿಧಾಯಕ ಸಭೆ.

ಕಳೆದ ಶನಿವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮೀಟಿಂಗು ನಡೆಯಿತು. ದಿವಾನ್‌ರು ಕೌನ್ಸಿಲ್ ಮೆಂಬರುಗಳು, ಸರ್ಕಾರದ ಮತ್ತು ಪ್ರಜಾಪಕ್ಷದ ಮೆಂಬರುಗಳು ಹಾಜರಾಗಿದ್ದರು. ಸೆಕ್ರಿಟರಿಯವರು ಮಿ|| ನವಾಬ್ ಗುಲಾಂ ಅಹಮದ್ ಕಲಾಮಿಯವರು ಮೆಂಬರಾಗಿ ಸಭೆಗೆ ಬಂದಿದಾರೆಂದು ತಿಳಿಸಿದ ಮೇಲೆ ಬೇರೆಬೇರೆ ಮೆಂಬರುಗಳು ಕೇಳಿದ ಪ್ರಶ್ನೆಗಳಿಗೆ ಸರ್ಕಾರಿ ಮೆಂಬರುಗಳು ಉತ್ತರಗಳನ್ನು ಕೊಟ್ಟರು. ಅವುಗಳಲ್ಲಿ ಮುಖ್ಯವಾದವುಗಳ ಅಭಿಪ್ರಾಯಗಳನ್ನು ತಿಳಿಸುವೆವು.

ಬೆಂಗಳೂರು ಚರ್ಮದ ಕಾರ್ಖಾನೆ ಮತ್ತು ಡಿಸ್ಟಿಲರಿಯಿಂದ ದುರ್ವಾಸನೆಯಾದ ನೀರು ಬರುವದೆಂದೂ, ಅದನ್ನು ಸರ್ಕಾರದವರು ತಡೆಯಬಾರದೇ ಎಂದೂ ಮ|| ಬಂಗಯ್ಯಶೆಟ್ಟರು ಕೇಳಿದ್ದಕ್ಕೆ ಸೆಕ್ರಿಟರಿಯವರು ಇದರ ಸಲುವಾಗಿ ಒಂದು ಕಮಿಟಿಯನ್ನು ಸರ್ಕಾರದವರು ನೇಮಿಸಿರುವದಾಗಿಯೂ, ರಿಪೋರ್ಟು ಬಂದ ಕೂಡಲೆ ಅದನ್ನು ಕ್ರಮಪಡಿಸುತ್ತಾರೆಂದೂ ಜವಾಬು ಕೊಟ್ಟರು.—ಈಗ 8 ವರುಷ ತುಂಬುವುದಕ್ಕೆ ಮುಂಚೆ ಯಾರೂ ಹೆಣ್ಣುಮಕ್ಕಳಿಗೆ ಮದುವೆ ಮಾಡದಂತೆ ಕಾನೂನ್ ಮಾಡಲಾಗಿದೆ. ಇನ್ನು ಮುಂದೆ 10-11 ವರುಷ ತುಂಬುವ ತನಕ ಹೆಣ್ಣುಮಕ್ಕಳಿಗೆ ಯಾರೂ ಮದುವೆ ಮಾಡದಂತೆ ಕಾನೂನನ್ನು ಬದಲಾಯಿಸಬಾರದೇ ಎಂದು ಮ|| ಬಂಗಯ್ಯಶೆಟ್ಟರು ಪ್ರಶ್ನೆ ಮಾಡಿದ್ದಕ್ಕೆ ಮೊದಲನೇ ಕೌನ್ಸಿಲರು ಕಾನೂನ್ ಮಾಡದೇನೇ ಈಗ ಪ್ರಜೆಗಳು 11-12 ವರುಷ ತುಂಬುವ ತನಕ ಮದುವೆ ಮಾಡುತ್ತಾ ಇಲ್ಲವೆಂದೂ, ಈ ಸಲಹೆಯ ವಿಷಯದಲ್ಲಿ ಪ್ರಜೆಗಳು ಸಮ್ಮತಿ ಪಡತಕ್ಕವರಾಗಿದಾರೆಂದು ಗೊತ್ತಾದರೆ ಗವರ್ನ್‌ಮೆಂಟಿನವರು ಅದನ್ನು ಬದಲಾವಣೆ ಮಾಡುವ ಯೋಚನೆ ಮಾಡುತ್ತಾರೆಂದೂ ಜವಾಬುಕೊಟ್ಟರು.

ಶ್ರೀರಂಗಪಟ್ಟಣದ ಮ|| ಬಿ. ನರಸಿಂಗರಾಯರು ಮೈಸೂರು, ಬೆಂಗಳೂರು ಪಟ್ಟಣಗಳಲ್ಲೂ ಕಾವೇರಿ ರಿಜರ್ವಾಯರಿನಲ್ಲೂ ಸರ್ಕಾರದವರು ಎಷ್ಟು ಸಾರಾಯಿ ಅಂಗಡಿಗಳಿಗೆ ಲೈಸೆನ್ಸು ಕೊಟ್ಟದಾರೆ ? ಅವುಗಳಲ್ಲಿ ಸರ್ಕಾರಕ್ಕೆ ಬರುವ ಉತ್ಪತ್ತಿ ಎಷ್ಟು ? ಜಿಲರಿಮಾಡಬೇಕಾದ ದರವೇನು ಎಂಬೀ ಸಂಗತಿಗಳನ್ನು ಕುರಿತು ಪ್ರಶ್ನೆಮಾಡಿದ್ದಕ್ಕೆ ಎರಡನೇ ಕೌನ್ಸಿಲರು ಒಂದು ಪತ್ರಿಕೆಯನ್ನು ಪ್ರಕಟಮಾಡಿ ಅವರು ಕೇಳಿದ್ದಕ್ಕೆ ಜವಾಬು ಹೇಳಿದರು.

ಮಾಗಡಿ ಮ|| ಕರಣಿಕ ಕೃಷ್ಣಮೂರ್ತಿರಾಯರು ಸಬ್ ರಿಜಸ್ಟ್ರಾರ್‌ಗಳ ವಿಷಯದಲ್ಲಿ ಕೇಳಿದ ಪ್ರಶ್ನೆಗಳಿಗೆ ಮೊದಲನೇ ಕೌನ್ಸಿಲರು—ಸಬ್ ರಿಜಸ್ಟ್ರಾರುಗಳು ಅವರ ಇಲಾಖೆಯವರ ಅಭಿಪ್ರಾಯವಂತೆ ಗೆಜೆಟ್ ಆಫೀಸರುಗಳಲ್ಲವೆಂದೂ, ಅವರನ್ನು ಪತ್ತೋಟಿಯಲ್ಲಿಟ್ಟುಕೊಂಡು ಆಳುವ ಅಧಿಕಾರಿಗಳನ್ನು ಕಾನೂನ್ ನಲ್ಲೂ ರೂಲುಸಿನಲ್ಲೂ ವಿವರಿಸಿದೆ ಎಂದೂ, ಮುಖ್ಯಾಧಿಕಾರಿಗೆ ಈಗಿರುವ ಅಧಿಕಾರವನ್ನು ಹೆಚ್ಚಿಸಬೇಕಾದ ಆಗತ್ಯ ಕಂಡುಬರುವುದಿಲ್ಲವೆಂದೂ ಜವಾಬು ಕೊಟ್ಟರು.—ಅದೇ ಮೆಂಬರು ಪೆಟ್ರೋಲ್ ದ್ರಾವಕದ ಕಂಟ್ರಾಕ್ಟಿನ ವಿಷಯದಲ್ಲಿ ಕೇಳಿದ ಕೆಲವು ಪ್ರಶ್ನೆಗಳಿಗೆ ಸೆಕ್ರಿಟರಿಯವರು ದರಗಳೇ ಮೊದಲಾದ ವಿವರಗಳನ್ನು ತಿಳಿಸಿದರು.

ಮ|| ಬಿ. ಕೆ. ಗರುಡಾಚಾರ್ರು ಕೇಳಿದ ಪ್ರಶ್ನೆಗಳಿಗೆ ಎರಡನೇ ಕೌನ್ಸಿಲರು ಜವಾಬು ಹೇಳಿದ್ದೇನೆಂದರೆ—ಹೊಳೆನರಸೀಪುರದಲ್ಲಿರುವ ಕೆರೆ ಕೆಳಗೂ, ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಬಡ್ರನಕೆರೆ ಕೆಳಗೂ ತರೀಫಸಲು 5 ಆಣೆ ಆಗಿಯೂ, 16 ಆಣೆ ತನಕ ಆಗಿದೆ. ಕಂದಾಯ ರಿಮಿಷನ್ ಮಾಡಬೇಕಾದ ಆಗತ್ಯ ಕಂಡುಬರಲಿಲ್ಲ. ಕಂದಾಯವನ್ನು ರಿಮಿಷನ್ ಮಾಡಲೂ ಇಲ್ಲ.

ಮ|| ಎಚ್. ನರಸಿಂಗರಾಯರು ಕೋರ್ಟುಗಳ ವಿಷಯದಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿದ್ದಕ್ಕೆ ಕಂಟ್ರೋಲರವರು ತಕ್ಕ ಉತ್ತರಗಳನ್ನು ಕೊಟ್ಟು ಬದಲಾವಣೆ ಮಾಡಬೇಕಾದ ಆಗತ್ಯವಿಲ್ಲವೆಂದು ತಿಳಿಸಿದರು.

ಮ|| ಎಸ್. ಆರ್. ಬಾಲಕೃಷ್ಣರಾಯರು ರೈಲ್ವೆ ಇಲಾಖೆಗೆ ಬೇಕಾದ ಕೆಲವು ಸರಕನ್ನು ಜಾಸ್ತಿ ದರ ಕೊಟ್ಟು ಸರ್ಕಾರದವರು ಕೊಂಡುಕೊಂಡರೆಂಬ ಪ್ರವಾದದ ವಿಷಯದಲ್ಲಿ ಕೇಳಿದ ಪ್ರಶ್ನೆಗೆ ಸೆಕ್ರಿಟರಿಯವರು ಜವಾಬು ಹೇಳಿ ಆ ಪ್ರವಾದದ ಪೂರ್ವೋತ್ತರವನ್ನು ಕುರಿತು ಸರ್ಕಾರದವರು ಸರಿಯಾಗಿ ಶೋಧನೆ ಮಾಡಿದ್ದರಲ್ಲಿ ಅಂಥಾ ಅಕ್ರಮಗಳೇನೂ ನಡೆದಿರುವಂತೆ ಕಂಡುಬರಲಿಲ್ಲವೆಂದು ತಿಳಿಸಿದರು.

ಮೊದಲಿನಂತೆ ರೆವಿನ್ಯು ಮತ್ತು ಇತರ ಮೊಕದ್ದಮೆಗಳಲ್ಲಿ ಗವರ್ನ್‌ಮೆಂಟಿನ ತೀರ್ಮಾನಗಳನ್ನು ಸರ್ಕಾರಿ ಗೆಜಟ್ಟಿನಲ್ಲಿ ಪ್ರಕಟಮಾಡಬೇಕೆಂದು ಮ|| ಎಂ. ವೆಂಕಟಕೃಷ್ಣಯ್ಯನವರು ಸೂಚಿಸಿದ್ದಕ್ಕೆ ಎರಡನೇ ಕೌನ್ಸಿಲರು ಈ ವಿಚಾರವನ್ನು ಯೋಚಿಸಲಾದೀತೆಂದು ಜವಾಬುಕೊಟ್ಟರು.—ಪೋಲೀಸಿನವರು [illegible] ಗಿರಿ ಮಾಡುವ ಜನರನ್ನು ಹಿಂಸಿಸಿ ಅವರಿಂದ ಕಳ್ಳತನ ಒಪ್ಪಿಸುತ್ತಾರೆಂದು ಅನೇಕ ವೇಳೆ ತಿಳಿಯೋಣದರಿಂದ ಅಂಥಾ ಒಪ್ಪಿಗೆಯನ್ನು [illegible] ರಿಗೆ ಸೇರಿಸಿಕೊಳ್ಳದಂತೆ ಕಾನೂನ್ ಬದಲಾವಣೆ ಮಾಡಬಾರದೇ ಎಂದು [illegible]

...ಕೌನ್ಸಿಲರು ಕೇಳಿದ ಸವಾಲಿನ ಅಭಿಪ್ರಾಯವೇನೆಂದರೆ—ದೃಶ್ಯ ... ಹಿಂಸೆಮಾಡುತ್ತಾರೆಂಬ ಮಾತನ್ನು ಗವರ್ನ್‌ಮೆಂಟಿನವರು ಅಂಗೀಕರಿಸಿದರು. ಇಂಡಿಯಾ ಗವರ್ನ್‌ಮೆಂಟಿನವರು ಈ ವಿಚಾರದಲ್ಲಿ ದೀರ್ಘವಾಗಿ ಚರ್ಚಿಸಿ ಆಲೋಚನೆ ಮಾಡಿ ಅಂಥಾ ಬದಲಾವಣೆ ಅವಶ್ಯವಿಲ್ಲವೆಂದು ತೀರ್ಮಾನಮಾಡಿರುತ್ತಾರೆ. ನಮ್ಮ ಗವರ್ನ್‌ಮೆಂಟಿನವರೂ ಅಭಿಪ್ರಾಯವನ್ನೇ ಅಂಗೀಕರಿಸಿರುವದರಿಂದ ಕಾನೂನ್ ಬದಲಾವಣೆ ಮಾಡುವವರಾಗಿಲ್ಲ.

ಮ|| ವೆಂಕಟರಾಮಣ್ಣನವರು ಕೋಟೆ ತಳಾರಿಗಳ ಆಯದ ವಿಷಯವಾಗಿ ಪ್ರಶ್ನೆಮಾಡಿ, ಅವರಿಗೆ ಧಾನ್ಯಕ್ಕೆ ಬದಲಾಗಿ ನಗದನ್ನೇ ಸಲ್ಲಿಸುವಂತೆ ಮಾಡಿದರೆಂದು ಸೂಚಿಸಿದ್ದಕ್ಕೆ ಎರಡನೇ ಕೌನ್ಸಿಲರು ಈ ವಿಚಾರವು ಗವರ್ನ್‌ಮೆಂಟಿನವರ ಆಲೋಚನೆಯಲ್ಲಿದೆ ಎಂದು ಹೇಳಿದರು.

ಮೈಸೂರು ಸಿವಿಲ್ ಕೋರ್ಟುಗಳ ನೌಕರರುಗಳು ತಪ್ಪು ಮಾಡಿದರೆ ಆಯಾ ಕೋರ್ಟುಗಳ ಜಡ್ಜಿಗಳೇ ತಕ್ಕ ಶಿಕ್ಷೆಯನ್ನು ವಿಧಿಸುವುದಕ್ಕೆ ಕಾನೂನನ್ನು ಬದಲಾವಣೆ ಮಾಡಿದರು.—ಗಣಿಗಳ ಕಾನೂನ್ ಪ್ರಕಾರ ಅಪರಾಧಿಗೆ ಜುಲ್ಮಾನೆ ಆದರೆ ಅಂಥಾ ಜುಲ್ಮಾನೆ ಹಣವನ್ನು ಕೋಲಾರ್ ಸ್ಯಾನಿಟರಿ ಬೋರ್ಡಿನ ಖರ್ಚಿಗೆ ಜಮಾ ಮಾಡಬೇಕೆಂಬ ಕಾನೂನ್ ಬದಲಾವಣೆಯನ್ನು ಒಪ್ಪಿಕೊಂಡರು.—ಸರ್ಕಾರಕ್ಕೆ ಒಂದು ಜಮೀನಾಗಲಿ, ನಿವೇಶನ ಅಥವಾ ಕಟ್ಟಡವಾಗಲಿ ಬೇಕಾದರೆ ಅದನ್ನು ತೆಗೆದುಕೊಳ್ಳುವ ಯಜಮಾನ್ಯವು ಈಗ ಡೆಪ್ಯುಟಿ ಕಮೀಷನರಿಗೆ ಮಾತ್ರ ಉಂಟು. ಈ ಯಜಮಾನ್ಯವನ್ನು ಸಬ್ ಡಿವಿಜನ್ ಆಫೀಸರುಗಳೂ ವಹಿಸಬೇಕೆಂದು ಕಾನೂನು ಬದಲಾವಣೆ ಸೂಚಿಸಲ್ಪಟ್ಟಿತು. ಮ|| ಪುಟ್ಟಣ್ಣಶೆಟ್ಟರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರನ್ನೂ ಅದರಲ್ಲಿ ಸೇರಿಸಬಹುದೆಂದು ಹೇಳಿದರು. ಮುಂದಕ್ಕೆ ಈ ಭಾಗವನ್ನು ಯೋಚಿಸಬಹುದೆಂದು ತಿಳಿಸಲಾಯಿತು.—ಬಿಲ್ಸ್ ಆಫ್ ಎಕ್ಸ್‌ಚೇಂಜ್ ಮತ್ತು ಹುಂಡಿ ಈ ಸ್ಟಾಂಪನ್ನು ಇಂಡಿಯಾ ಗವರ್ನ್‌ಮೆಂಟಿನವರು ಶೇಕಡಾ 50 ರಷ್ಟು ಹೆಚ್ಚಿಸುತ್ತಾರೆ. ಮೈಸೂರಿನಲ್ಲೂ ಹುಂಡಿ ಪತ್ರಗಳ ಚಲಾವಣೆ ಆಗುವುದರಿಂದ ಸ್ಟಾಂಪನ್ನು ಇಲ್ಲೂ ಅದೇ ರೀತಿ ಬದಲಾಯಿಸಿ ಹೆಚ್ಚಿಸಬೇಕೆಂದು ಸೂಚಿಸಿದ್ದಕ್ಕೆ ಮ|| ಎಸ್. ಆರ್. ಬಾಲಕೃಷ್ಣರಾಯರು—ಸ್ಟಾಂಪಿನ ದರ ಹೆಚ್ಚಿಸುವುದು ವ್ಯಾಪಾರಾಭಿವೃದ್ಧಿಗೆ ಕುಂದಕವಾದೀತೆಂದು ಆಕ್ಷೇಪಣೆ ಮಾಡಿದರು. ಪ್ರೆಸಿಡೆಂಟರವರು—ಹೀಗೆ ಹೆಚ್ಚಿಸುವುದರಿಂದ ವರ್ತಕರಿಗೆ ಭಾರವಾಗುವುದಿಲ್ಲ; ಇದರಿಂದ ಸರ್ಕಾರಕ್ಕೂ ವಿಶೇಷ ಉತ್ಪತ್ತಿ ಆಗುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲೂ ನಮ್ಮ ಸಂಸ್ಥಾನದಲ್ಲೂ ವ್ಯಾಪಾರವು ಲೇವಾದೇವಿಯೂ ಹೇರುಪೇರಿಲ್ಲದೆ ಒಂದೇ ಸಮನಾಗಿರುವುದಕ್ಕಾಗಿಯೇ ಈಗ ದರವನ್ನು ಹೆಚ್ಚಿಸಬೇಕಾಗಿದೆ ಎಂದು ಸಮಾಧಾನ ಹೇಳಿದರು.—ಯುದ್ಧ ಭೂಮಿಗೆ ಹೋಗಿರುವ ಸೈನಿಕರ ಮತ್ತು ಅವರ ಹಿಂಬಾಲಕರ ಮೇಲೆ ನಮ್ಮ ದೇಶದ ಸಿವಿಲ್ ಅಥವಾ ರೆವಿನ್ಯೂ ಕೋರ್ಟುಗಳಲ್ಲಿ ಯುದ್ಧ ಕಳೆದ ಆರು ತಿಂಗಳ ತನಕ ಮೊಕದ್ದಮೆಗಳನ್ನು ಹಾಕದೆ ಅನಾಮತ್ತು ಇಟ್ಟಿರಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಈಗ ಹೊಸ ಒಂದು ಕಾನೂನು ಮಾಡಿದ್ದಾರೆ. ಅದನ್ನೇ ನಮ್ಮ ಸಂಸ್ಥಾನದಲ್ಲೂ ಪಾಸ್ ಮಾಡಿ ಕೂಡಲೇ ಜಾರಿಗೆ ತರಬೇಕಾಗಿದೆ ಎಂದು ಮೊದಲನೇ ಕೌನ್ಸಿಲರು ಸೂಚಿಸಿ, ಆ ಕಾನೂನನ್ನು ಓದಿಹೇಳಿದರು. ಮೆಂಬರುಗಳು ಒಪ್ಪಿದರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಸನ್ನಿಧಾನದಲ್ಲಿ ಒಂದು ವಿಜ್ಞಾಪನೆಯು.

ಅಯ್ಯಾ—ಮೈಸೂರು ಸೀಮೆಯಲ್ಲಿ ಪ್ರತಿ ಒಂದು ಗ್ರಾಮಕ್ಕೂ ಒಬ್ಬೊಬ್ಬ ಪಟೇಲರಂತೆ ಸರ್ಕಾರದವರು ಅನೇಕಯುಗದಿಂದಲೂ ಚುನಾಯಿಸಿರುವದು ಸರಿಯಷ್ಟೆ. ಆದರೆ ಇವರಿಗೆ ಸರ್ಕಾರದಿಂದ ಸಲ್ಲತಕ್ಕ ಪೋಟಿಗೆಯು ತುಂಬಾ ಕಡಮೆ ಎಂಬುದು ತಮ್ಮಗಳೆಲ್ಲರ ಚಿತ್ತಕ್ಕೂ ವೇದ್ಯವೇ ಇರುತ್ತೆ. ಬಹು ದಿವಸದಿಂದ ಪಡೆಯುತ್ತಿರುವ ಈ ಪಟೇಲರುಗಳ ಪೋಟಿಗೆಯನ್ನು ಯಾವ ರೀತಿಯಾಗಿ ಹೆಚ್ಚಿಸಬೇಕೆಂಬುದು ಅನೇಕ ವೇಳೆ ಚರ್ಚೆಗೆ ಬಂದಿರುವದೂ ತಮ್ಮಗಳೆಲ್ಲರಿಗೂ ಜ್ಞಾಪಕವಿರಬಹುದು ಈ ಪಟೇಲಿ ಕೆಲಸವು ತುಂಬಾ ಜವಾಬ್ದಾರಿಯುಳ್ಳದ್ದೂ, ಗ್ರಾಮಾಭಿವೃದ್ಧಿಗೆ ಅತ್ಯಂತ ಸಹಕಾರಿಯಾಗಿಯೂ, ಶ್ರಮಸಾಧ್ಯವಾಗಿಯೂ ಇರುತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ನ್ಯಾಯವಾದ ಈ ಪಟೇಲಿ ಕೆಲಸ ನೋಡುವವರ ಪೈಕಿ ಕೆಲವರು ವಿನಹಾ ಅನೇಕರು ತುಂಬಾ ಬಡವರಾಗಿರುವರು. ಇವರ ಕೆಲಸವಾದರೋ ಪ್ರತಿ ದಿನವೂ ವಿರಾಮವಿಲ್ಲದೆ ನಡೆಯಬೇಕಾಗಿರುತ್ತದೆ ಇಂಥಾ ಬಡಪಾಯಿಗಳಾದ ಪಟೇಲರುಗಳ ಕಷ್ಟ ಸಂಕಟಗಳನ್ನು ಪ್ರಜಾಪ್ರತಿನಿಧಿಗಳಾದ ತಾವುಗಳು ಘನವನ್ನು ಹೊಂದಿದ ಸರ್ಕಾರದವರ ಪರ್ಯಾಲೋಚನೆಗೆ ಬರುವಂತೆ ಮಾಡಿ ಪೋಟಿಗೆಯನ್ನು ಹೆಚ್ಚಿಸಬೇಕೆಂದು ಈ ವರ್ಷದ ಪ್ರಜಾಪ್ರತಿನಿಧಿ ಸಭೆಯಲ್ಲಿ ಜ್ಞಾಪಕದಲ್ಲಿ ತಂದು ಕಾಪಾಡುವರೆಂದು ನಂಬಿರುತ್ತೇನೆ. ಜಿ. ಪಿ. ಹೆಚ್.

II

ಅಯ್ಯಾ—ಈ ಅಕ್ಟೋಬರ್ ತಿಂಗಳಲ್ಲಿ ನಡೆಯುವ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳ ಚುನಾವಣೆಗೆ ತಮಗೆ ಓಟು ಕೊಡಬೇಕೆಂದು ಈಗಾಗಲೇ 8 ಜನ ಕ್ಯಾಂಡಿಡೇಟುಗಳು ನಮ್ಮಗಳಿಗೆ ಕಾಗದಗಳು ಬರೆದುಕೊಂಡಿದ್ದಾರೆ ಇನ್ನು ಕೆಲವರು ಬರೆದುಕೊಳ್ಳುವರಾಗಿದ್ದಾರೆ. ಈ ಮೆಂಬರ್ ಕೆಲಸವು ಬಹಳ ಜವಾಬ್ದಾರಿಯುಳ್ಳದ್ದು; ಅಲ್ಲದೆ ದೊಡ್ಡ ಗೌರವವಾದ ಪದವಿಯಾಗಿದೆ ಇದಕ್ಕೆ ಓಟು ಸಂಪಾದಿಸುವದರಲ್ಲಿ ಅನೇಕರು ಅನೇಕ ತರಹ ಸಾಹಸಗಳು ಮಾಡಬಹುದು. ಓಟು ಕೊಡತಕ್ಕವರು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಮೆಂಬರುಗಳ ವಯಸ್ಸು, ಯೋಗ್ಯತೆ, ಗೌರವ ಮೊದಲಾದ ಗುಣಗಳನ್ನು ವಿಚಾರಿಸಿ ತೂಕಮಾಡಿ ನೋಡಿ ಕಂಡವರಿಗೆ ಓಟು ಕೊಡಬೇಕಾದದ್ದು ಅವರ ಕರ್ತವ್ಯವಾಗಿದೆ ಸಭೆಗೆ ಹೋಗುವವರಿಗೆ ಮುಂಚೆ ಯಾರಿಗೂ ಓಟು ಕೊಡುವ ವಿಷಯದಲ್ಲಿ ನಿರ್ಧಾರವಾಗಿ ಒಳಪಟ್ಟು ವಾಗ್ದಾನ ಮಾಡಬಾರದು ಈಗ ಕೆಲವು ವರ್ಷಗಳಿಂದ ಕೌನ್ಸಿಲ್ ನಡೆಯುತ್ತಿದೆ. ಈ ಪದವಿ ಬಂದ ಮಾತ್ರಕ್ಕೆ ಗರ್ವಿಷ್ಠರಾಗಬಾರದು. ಜನರ ಸುಖದುಃಖಗಳನ್ನು ಅರಿತವರಾಗಿ ಜೋಕೆಯಿಂದ ಇರಬೇಕು. ಸ್ವಾರ್ಥ ದೃಷ್ಟಿಯುಳ್ಳವರು ಇಂಥಾವರನ್ನು ನೋಡಿ ಚುನಾಯಿಸಬೇಕು. ಓಟು ಕೊಡತಕ್ಕವರು ಕೌನ್ಸಿಲ್ ಮೆಂಬರಾಗುವವರಷ್ಟೇ ಜವಾಬ್ದಾರಿಯುಳ್ಳವರು. ಈ ವಿಷಯದಲ್ಲಿ ಓಟು ವಿಚಾರವಿಲ್ಲದೆ ಕೊಟ್ಟುಬಿಟ್ಟರೆ ದೇಶಕ್ಕೆ ಆಗುವ ಉಪಕಾರ ತಪ್ಪುವದಲ್ಲದೆ ಅನರ್ಥವೂ ಆಗಬಹುದು. ದೇಶಾಂತ್ಯಲ್ಲಿರ್ವ ವಿಚಾರ ಸಾಕೇಬರವರು ನಮ್ಮ ಮಹಾರಾಜರವರಿಂದ ನಮಗೆ ಕೊಡಿಸುವ ಈ ಹಕ್ಕನ್ನು ತಾವುಗಳೆಲ್ಲರೂ ಸಾರ್ಥಕಗೊಳಿಸಬೇಕೆಂದು ಬೇಡುವ

ಪ್ರಜಾ ಹಿತವಾದಿ.

ಆಸ್ಪತ್ರೆ ಬೇಕು.

ಅಯ್ಯಾ—ತೀರ್ಥಹಳ್ಳಿ ತಾ|| ಮೃಗವಧೆ ಹೋಬಳಿಗೆ ಸೇರಿದ ಸುಮಾರು 40.50 ಗ್ರಾಮಗಳು ತುಂಗಾ ನದಿಯ ಬಲಪಾರ್ಶ್ವದಲ್ಲಿ ಉದ್ದಕ್ಕೂ ಇರುತ್ತವೆ. ಈ ತಾಲ್ಲೂಕಿನ ½ ಭಾಗವೇ ಮೃಗವಧೆ ಹೋಬಳಿಗೆ ಸೇರಿದ್ದಾಗಿದೆ. ಇಂಥಾ ಹೋಬಳಿಗೆ ಒಂದು ಆಸ್ಪತ್ರೆಯೂ ಇಲ್ಲದೆ ಇರುವದು ಗ್ರಾಮ ನಿವಾಸಿಗಳ ದೌರ್ಭಾಗ್ಯವನ್ನು ಸೂಚಿಸುತ್ತದೆ. ರೋಗಾದಿ ಉಪದ್ರಗಳೇ ಮೊದಲಾದ ಕಾಯಿಲೆಯು ಬಂದಾಗ ತೀರ್ಥಹಳ್ಳಿಯಲ್ಲಿರುವ ಆಸ್ಪತ್ರೆಗೆ ಹೋಗಿಯೇ ಔಷಧಗಳನ್ನು ತರಬೇಕು. ಈ ಹೋಬಳಿಯ ಆಚೆಯ ಗ್ರಾಮಗಳಿಗೆ ಸುಮಾರು 10-12-15-18 ಮೈಲುಗಳ ಫಾಸಲೆಯಾಗುತ್ತದೆ. ಇಷ್ಟು ಫಾಸಲೆ ಹೋಗಿ ರೋಗಿಗಳಿಗೆ ಔಷಧ ತಂದುಕೊಡಲು ಹೆಚ್ಚು ಕಡಮೆ 1½ ದಿವಸಗಳಾಗುತ್ತದೆ. ಇದೂ ಅಲ್ಲದೆ ತುಂಗಾ ನದಿಯು ಈ ಹೋಬಳಿಯನ್ನು ಪ್ರತ್ಯೇಕಿಸಿರುವದರಿಂದ ಮಳೆಕಾಲದಲ್ಲಿ ನದಿಯನ್ನು ದಾಟಿ ಹೋಗಿಬರಲು ಮತ್ತಷ್ಟು ಸಂಕಟವನ್ನು ಹೆಚ್ಚಿಸುತ್ತದೆ. ಶಿವಾಯಿ ಒಂದು ತಿಂಗಳ ಕೆಳಗೆ ಇದೇ ಹೋಬಳಿ ಹಡಗಿನ ಮಕ್ಕಿ ಎಂಬಲ್ಲಿ ಒಬ್ಬ ಹೆಂಗಸಿಗೆ ಕಾಯಿಲೆಯಾಗಿತ್ತು. ಆಸ್ಪತ್ರೆಗೆ ಹೋಗಿ ಔಷಧ ತರಲು 1½ ದಿವಸವಾಯಿತು. ಅವನು ಬರುವಷ್ಟರಲ್ಲಿಯೇ ಆ ಪ್ರಾಣಿಯು ಜೀವದಿಂದಿರಲಿಲ್ಲ. ಈ ಪ್ರಕಾರ ಅನೇಕ ಕೇಸುಗಳು ಆಗುತ್ತಲೇ ಇರುತ್ತವೆ. ಈ ಹೋಬಳಿಗೆ ಒಂದು ಆಸ್ಪತ್ರೆ ಇಡಿಸಿಕೊಡಬೇಕೆಂಬದಾಗಿ ನಗರ ತಾಲ್ಲೂಕ್ ಜನರಬಂದಿಯಲ್ಲಿ ತೀರ್ಥಹಳ್ಳಿಯಲ್ಲಿದ್ದ ಅಮಲ್ದಾರ್ ಮ|| ಎಸ್. ಧರ್ಮರಾಯರಲ್ಲಿ ಕೇಳಿಕೊಂಡದ್ದರ ಮೇಲೆ ಅವರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಚರ್ಚಿಸಿ ಈ ಹೋಬಳಿಗೆ ಮಧ್ಯಭಾಗವಾಗಿಯೂ, ಕೊಪ್ಪಕ್ಕೂ ತೀರ್ಥಹಳ್ಳಿಗೂ ಮಧ್ಯಸ್ಥಳವಾಗಿಯೂ, ಸರ್ಕಾರಿ ಹೈರೋಡು ಬಾಜುವಾಗಿಯೂ ಇರುವ ಹೀರೆಕೆರೆ ಎಂಬ ಸ್ಥಳದಲ್ಲಿ ಒಂದು ಆಸ್ಪತ್ರೆಯನ್ನು ಇಟ್ಟು ನಡಿಸತಕ್ಕದ್ದೆಂದು ತೀರ್ಮಾನವಾಗಿತ್ತು. ಈ ವಿಚಾರವಾಗಿ ಅಮಲ್ದಾರ್ರು ಈ ಹೋಬಳಿಯ ಮುಖಂಡರುಗಳನ್ನು ಕರೆಸಿ ಆಸ್ಪತ್ರೆ ಕಟ್ಟಡವನ್ನು ಚಂದಾ ಮೂಲಕ ಗ್ರಾಮಸ್ಥರೇ ಕಟ್ಟಿಸಿಕೊಟ್ಟಲ್ಲಿ ಹೀರೆಕೆರೆಯಲ್ಲಿ ಆಸ್ಪತ್ರೆಯನ್ನು ಸರ್ಕಾರದವರು ಇಡಿಸುತ್ತಾರೆಂದು ತಿಳಿಸಿದರು. ಈ ಅಪ್ಪಣೆಯಂತೆ ಗ್ರಾಮಸ್ಥರು ಕಟ್ಟಡವನ್ನು ಕಟ್ಟಿಸಿಕೊಡಲು ತಮ್ಮ ತನು ಮನ ಧನಗಳನ್ನು ನಾನಾ ವಿಧವಾದ ಕಷ್ಟಕೋರತೆಗಳಲ್ಲಿ ಪ್ರತಿ ವರುಷವೂ ಉಪಯೋಗಿಸುತ್ತಾ ಬಂದದ್ದರಿಂದ ಭಾರಾಳವಿಲ್ಲದವರಾಗಿರುತ್ತಾರೆ. ಆ ಕಷ್ಟಕೋರತೆಗಳನ್ನು ಈ ಮೂಲಕ ಬರೆದು ತಿಳಿಸಲು ಲೇಖನ ದೀರ್ಘವಾಗುತ್ತದೆ ಎನ್ನುವದರ ಮೇಲೆ ನಿಲ್ಲಿಸಿರುತ್ತೇನೆ. ಕಟ್ಟಡದ ವಿಷಯದಲ್ಲಿ ಹಾಗೂ ಒಬ್ಬ ಪಟೇಲರು ತುಂಬಾ ಮುತುವರ್ಜಿ ವಹಿಸಿ ಗ್ರಾಮಸ್ಥರಿಂದ ಚಂದಾ ವಸೂಲು ಮಾಡಲು ಪ್ರಯತ್ನಪಟ್ಟರು. ಆದರೆ ಇಂಥಾ ದೊಡ್ಡ ಕಾರ್ಯಗಳಲ್ಲಿ ಒಬ್ಬರ ಪ್ರಯತ್ನವು ಎಷ್ಟರ ಮಟ್ಟಿಗೆ ಫಲಕಾರಿಯಾದೀತು! ಆದ್ದರಿಂದ ರೈತರು ಕಟ್ಟಡವನ್ನು ಕಟ್ಟಿಸಿ ಕೊಡಲಿಲ್ಲ. ಸರ್ಕಾರದವರು ಆಸ್ಪತ್ರೆಯನ್ನು ಇಡಿಸಿಕೊಡಲಿಲ್ಲ. ಪ್ರಜಾ ಹಿತೈಷಿಗಳಾದ ನಮ್ಮ ಸರ್ಕಾರದವರು ಕಟ್ಟಡದ ವಿಷಯದಲ್ಲಿ ಪೂರಾ ಜವಾಬ್ದಾರಿಯನ್ನು ರೈತರಿಗೆ ವಹಿಸದೆ ಅರೆವಾಸಿ ಹಣವನ್ನು ಸರ್ಕಾರದವರು ಕೊಡಿಸುವದಲ್ಲದೆ ಬಾಕಿ ಅರವಾಸಿ ಮೊಬಲಗನ್ನು ಗ್ರಾಮಸ್ಥರು ಚಂದಾ ಮೂಲಕ ಜವಾಯಿಸಿಕೊಂಡು ಕಟ್ಟಡವನ್ನು ತಯಾರು ಮಾಡಿಸಿ ಕೊಡುವಂತೆ ಏರ್ಪಾಡುಮಾಡಿಸಿ ಪ್ರಜೆಗಳ ಆರೋಗ್ಯವನ್ನು ಕಾಪಾಡುತ್ತಾರಾಗಿ ನಂಬಿ ನಿರೀಕ್ಷಿಸುವೆನು. ಒಬ್ಬ ರೈತ.

ಚನ್ನಪಟ್ಟಣದ ಸ್ಟೂಡೆಂಟ್ಸ್ ಹೋಮಿನ ಕೆಲವು ವಿದ್ಯಾರ್ಥಿಗಳಿಗೆ ಸೆಕ್ರೆಟರಿಯು "ತಪ್ಪಿಗೆ ಸಲ್ಲದಷ್ಟು ಜುಲ್ಮಾನೆಯನ್ನು ಹೊರಿಸುತ್ತಾರೆ" ಎಂದೂ, "ಹುಡುಗರು ಇಲ್ಲಿ ಎಷ್ಟು ಸೌಖ್ಯಪಡುತ್ತಿರುವರೆಂದು ಅವರ ಮಾತಾಪಿತೃಗಳು ತಿಳಿದಿರುತಾರೆಯೇ" ಎಂದೂ ಒಬ್ಬ ಬಾತ್ಮಿದಾರರು ಬರೆದಿದ್ದಾರೆ. ಇಂಥಾದ್ದನ್ನು ಹೋಮಿನ ಮ್ಯಾನೇಜಿಂಗ್ ಕಮಿಟಿಯವರು ನೋಡಿ ಕ್ರಮಪಡಿಸಬೇಕು.

ಚಿಕ್ಕಮಗಳೂರು ಗವರ್ನ್‌ಮೆಂಟ್ ಗರಲ್ಸ್ ಸ್ಕೂಲಿಗೆ ಸರ್ಕಲ್ ಇನ್ಸ್‌ಪೆಕ್ಟರು ಹೋಗಿ ಪರೀಕ್ಷೆಮಾಡಿ, ಬಾಲಿಕೆಯರಿಗೆ ಹಿತೋಕ್ತಿಗಳನ್ನು ಹೇಳಿ, ಉಪಾಧ್ಯಾಯಿನಿಯರ ಮತ್ತೂ ಉಪಾಧ್ಯಾಯರ ಮುತುವರ್ಜಿಯುಳ್ಳ ಕಾರ್ಯಗಳನ್ನು ನೋಡಿ ಸಂತೋಷಪಟ್ಟರೆಂದು ಬಾತ್ಮಿ ಬಂದಿದೆ.

ಟಿ. ನರಸೀಪುರದ ವಾಚಕಶಾಲೆಗೆ ಮ|| ಗಂಜಾಂ ವೆಂಕಟರಮಣಶೆಟ್ಟರು ತುಂಬಾ ಸಹಾಯಮಾಡಿದ್ದಾರೆ. ಈಗ ಅದು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದೆ ಎಂದೂ, ಅಲ್ಲಿ ಸ್ಥಳಸಂಕೋಚವಾಗಿದೆ ಎಂದೂ, ಮ|| ಶೆಟ್ಟರೂ ಸರ್ಕಾರದವರೂ ಸಹಾಯಮಾಡಬೇಕಾಗಿದೆ ಎಂದೂ ಒಂದು ಬಾತ್ಮಿ ಬಂದಿದೆ.

ಬೆಂಗಳೂರು ತಾ|| ಗೊಟ್ಟಿಗೆರೆಯಲ್ಲಿ ಒಂದು ಮೀಟಿಂಗ್ ನಡೆದು ಮ|| ಬಿ. ನಂಜಪ್ಪನವರು ವಾಚಕಶಾಲೆ ಸ್ಕೂಲುಗಳನ್ನು ಏರ್ಪಡಿಸಿ ಚೆನ್ನಾಗಿ ನಡಿಸುತ್ತಾ ವಿದ್ಯಾಭಿವೃದ್ಧಿಗೆ ಕಾರಣರಾಗಿದ್ದಾರೆಂದು ಮುಂತಾಗಿ ತೀರ್ಮಾನಿಸಿದಂತೆ ಬಾತ್ಮಿ ಬಂದಿದೆ.

ಅರಕಲಗೂಡು ಕೋಟೆಯಲ್ಲಿರುವ ಸರ್ಕಾರದ ಛತ್ರದಲ್ಲಿ ಈಗ್ಗೆ ಸುಮಾರು ವರುಷದಿಂದಲೂ ತಾಲ್ಲೂಕ್ ಶಿರಸ್ತೇದಾರರು ವಾಸವಾಗಿರುತ್ತಾರೆಂದೂ, ಪರಸ್ಥಳದ ಮುಸಾಫರರಿಗೆ ಇಳುಕೊಳ್ಳಲು ಸ್ಥಳ ಸಿಕ್ಕುವುದಿಲ್ಲವೆಂದೂ ಸುಬ್ರಹ್ಮಣ್ಯ ಯಾತ್ರಿಕರೊಬ್ಬರು ಬರೆಯುತ್ತಾರೆ. ಸರ್ಕಾರದವರು ಇದರ ನಿಜಸ್ಥಿತಿ ತನಿಖೆಯನ್ನು ಮಾಡಿ ಕ್ರಮಪಡಿಸುತ್ತಾರೆಂದು ನಂಬಬಹುದು. —ಎಡಿ.]

ತಾಲ್ಲೂಕು ವರ್ತಮಾನಗಳು.

ಮೊಳಕಾಲ್ಮೂರು.—ಈಗ ಸುಮಾರು 15 ದಿವಸಗಳ ಲಾಗಾಯ್ತು ಮಳೆ ಚೆನ್ನಾಗಿ ಬಂದು ಪೈರಿಗೆ ನೀರು ಸಮೃದ್ಧಿಯಾಗಿ ಕೆರೆ ಕುಂಟೆಗಳೆಲ್ಲಾ ತುಂಬಿ ಕೋಡಿ ಹರಿಯುತ್ತಾ ಇವೆ—ಬಳ್ಳಾರಿಯಿಂದ ರಾಯದುರ್ಗಕ್ಕೆ ಬಂದು ಹೋಗುವ ರೈಲು ಪ್ರವಾಹದ ದೆಸೆಯಿಂದ ನಾಲ್ಕು ದಿವಸಗಳು ನಿಂತುಹೋಗಿತ್ತು. ಇದರಿಂದ ಜನಗಳಿಗೂ, ಟಪಾಲು ಬರುವುದಕ್ಕೂ ತುಂಬಾ ಅಡಚಣೆಯಾಗಿತ್ತು. ಮತ್ತು ಬಳ್ಳಾರಿಗೆ ಹೋಗತಕ್ಕ ರಸ್ತೆಯಲ್ಲಿ ಒಂದು ಚಿಕ್ಕ ಸೇತುವೆಯಲ್ಲಿ ಒಬ್ಬ ಮನುಷ್ಯನು ಗಾಡಿಯನ್ನು ಹೊಡೆದುಕೊಂಡು ಹೋಗುವಾಗ ಪ್ರವಾಹ ಬಂದು ಗಾಡಿಯು ಮಗುಚಿಕೊಂಡಿತು. ದೇವರ ದಯದಿಂದ ಮನುಷ್ಯನೂ ಎತ್ತುಗಳೂ ಬದುಕಿಕೊಂಡವು.—ಇಲ್ಲಿ ಅಕ್ಕಿ 7 ಸೇರು, ಬೇಳೆ 5½ ಸೇರು, ಜೋಳ, ರಾಗಿ, 14-16 ಸೇರು, ತುಪ್ಪ 5 ಆಣೆ. ಈ ರೀತಿ ಇದೆ—ಈ ಊರಲ್ಲಿ ರೀಡಿಂಗ್ ರೂಮ್ ಪ್ರಾರಂಭವಾಗಿ 4-5 ತಿಂಗಳು ಆಗಿರಬಹುದು. ಪತ್ರಿಕೆಗಳೆಲ್ಲಾ ಕ್ರಮವಾಗಿ ಬರುತ್ತಾ ಇವೆ. ಆದಾಗ್ಯೂ ಗ್ರಾಮದ ಅನೇಕ ಜನಗಳು ಇದರ ಪ್ರಯೋಜನವನ್ನು ಹೊಂದದೆ ಇರುವುದಕ್ಕಾಗಿ ವಿಷಾದಿಸಬೇಕಾಗಿದೆ. ಮುಂದೆಯಾದರೂ ಪ್ರಯೋಜನ ಹೊಂದುವರೆಂದು ನಂಬಿರುತ್ತೇನೆ

ಹುಣಸೂರು.—ಹುಣಸೂರಲ್ಲಿ ಮತ್ತೆ ಪ್ಲೇಗ್ 1-1½ ತಿಂಗಳಿಂದ ವ್ಯಾಪಿಸಿಕೊಂಡಿರುವುದು. ಈ ಸಾರಿಯ ರೋಗವು ತುಂಬಾ ಕಠಿಣವಾದದ್ದಾಗಿ ತೋರುವುದು. ಇದರ ದೆಸೆಯಿಂದ ಸುಮಾರು 50 ಮರಣಗಳಾಗಿವೆ ಜನರು ಮೊದಲು ಊರುಬಿಟ್ಟು ತಿರಿಗಿ ಬಂದು ಇನ್ನೂ 5-6 ತಿಂಗಳು ಮಾತ್ರವೇ ಆಯಿತು. ಇಷ್ಟು ಬೇಗ ಮತ್ತೆ ಊರು ಬಿಡುವ ಕಷ್ಟವು ಬಂದಿರುತ್ತೆ ಪಾಪ! ಬಡವರು ಬೀದಿಯಲ್ಲಿ ಪಟಿಮೋರಿ ಅಲ್ಲಿಂದ ಛಪ್ಪರ, ಮೋಟುಗೋಡೆ ಇವುಗಳೆಲ್ಲಾ ಮಾಡಿಕೊಂಡು ಅನೇಕರನ್ನು ಕಳೆದುಕೊಳ್ಳುತ್ತಿರುವರು ಅಲ್ಲಲ್ಲಿ ಇಲಿಗಳು ಸಾಯುತ್ತಿರುವವು ಸದ್ಯದಲ್ಲಿ ಶಮನವಾಗುವ ಸಂಭವ ಕಾಣದಿರುವುದರಿಂದ ಕಸಬಾಪೇಟೆ, ಗೌಡರ ಬೀದಿ, ಮೋಚಿ ಬೀದಿಗಳಲ್ಲಿ ಜನರು ಮನೆಗಳನ್ನು ಬಿಟ್ಟು ನಾನಾ ಕಡೆಗಳಿಗೆ ಹೊರಟುಹೋಗಿರುತ್ತಾರೆ ಈಗೀಗ ಬ್ರಾಹ್ಮಣರ ಬೀದಿಗಳಲ್ಲೂ ಕೆಲವು ಮನೆಗಳಲ್ಲಿ ಇಲಿಗಳು ಸತ್ತದ್ದನ್ನು ನೋಡಿ ಅವರೂ ಸಹ ಬೇರೆ ಬೇರೆ ಕಡೆ ಜೋಪಡಿಗಳಿಗೆ ಓಡುತ್ತಿರುವರು. ಮೋಡ ಮುಚ್ಚಿಕೊಂಡು ಮಳೆ ಬರುತ್ತಾ ಇದ್ದದ್ದು ಈಚೆಗೆ 4-5 ದಿನಗಳಿಂದ ಅಷ್ಟಾಗಿ ಮಳೆ ಬಾರದೆ ತಂಗಾಳಿ ಬೀಸುತ್ತಾ ಹವಾ ಬದಲಾವಣೆಯಾಗಿರುವುದು. ಪೇಟೆ ಯಾಚೆ ಕೊಪ್ಪಲಿಕ್ಕೆ ಜೋಬು, ಗಳು, ಹುಲ್ಲು, ಚಾಪೆ ಮೊದಲಾದ ಸಾಮಾನುಗಳಿಲ್ಲದೆ ಜನರು ಹಲವು ತರದ ಪೇಚಾಟಕ್ಕೆ ಗುರಿಯಾಗಿದ್ದಾರೆ. ಈ ಮಧ್ಯೆ ಸ್ಕೂಲುಗಳ ಪಾಡು ಹೇಳತೀರದು. ವಿದ್ಯಾಭ್ಯಾಸಕ್ಕೆ ತುಂಬಾ ಅಡಚಣೆಯಾಗುತ್ತಿದೆ. ಪ್ರಾಥಮಿಕದಿಂದಲೂ, ದೂರಭಾಗದಿಂದಲೂ ಮಕ್ಕಳು ಬರುವುದು ಸಾಧ್ಯವಲ್ಲ. ಸರ್ಕಾರದವರು ಜನಗಳಿಗೆ ಇರುವ ಇಂಥಾ ಕಷ್ಟ ಸಂದರ್ಭಗಳಲ್ಲಿ ಸಹಾಯಕಾರಿಗಳಾಗಿರಬೇಕು. ಕಳೆದ ತಿಂಗಳು ಡೆಪ್ಯುಟಿ ಕಮೀಷನರೂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರೂ ಬಂದಿದ್ದರು. ಈ ವಾರ ತಿರಿಗಿ ಬರುವುದರಲ್ಲಿದ್ದಾರೆ.—ಮ್ಯುನಿಸಿಪಾಲಿಟಿ ಏರ್ಪಾಡು ಬಹಳ ತೃಪ್ತಿಕರವಾಗಿರತಕ್ಕದ್ದು.

ಹಾಸನ.—ಕಳೆದ ತಾ. 30 ನೇ ಗುರುವಾರ ಬೆಳಿಗ್ಗೆ 9 ಗಂಟೆಗೆ ಇಲ್ಲಿನ ಜೂಬಿಲಿ ಹಾಲ್‌ನಲ್ಲಿ ಒಂದು ಸ್ಪೆಷಲ್ ಮೀಟಿಂಗು ನಡೆಯಿತು. ಡೆಪ್ಯುಟಿ ಕಮೀಷನರಾದ ಮ|| ಬಿ. ರಾಮಸ್ವಾಮಿ ಅಯ್ಯರವರು ಅಗ್ರಾಸನವನ್ನು ವಹಿಸಿದ್ದರು. ಹಾಸನದ ಡಿಸ್ಟ್ರಿಕ್ಟಿನಲ್ಲಿ ಸ್ವಂತ ಖರ್ಚಿನಿಂದ ಅನೇಕ ಪರೋಪಕಾರ್ಯಗಳನ್ನು ನಡಿಸಿದ ಪ್ರಜಾಮುಖಂಡರಿಗೆ ಸರ್ಕಾರದಿಂದ ಬಂದಿದ್ದ ಸರ್ಟಿಫಿಕೇಟುಗಳನ್ನು ಕೊಡುವುದಕ್ಕಾಗಿ ಗವರ್ನ್‌ಮೆಂಟಿನವರು ಈ ಸಭೆಯನ್ನು ನಡಿಸಿದರು. ಅನೇಕ ಸರ್ಕಾರಿ ಅಧಿಕಾರಿಗಳೂ ಮುಖಂಡ ಪ್ರಜೆಗಳೂ ಸಭೆಯಲ್ಲಿ ಹಾಜರಾಗಿದ್ದರು. ಡೆಪ್ಯುಟಿ ಕಮೀಷನರವರು ಪರಾರ್ಥವಾದ ಧರ್ಮಕಾರ್ಯಗಳನ್ನು ನಡಿಸಬೇಕೆಂಬ ವಿಷಯದಲ್ಲಿ ಮಾಡಿದ ಭಾಷಣವು ಸ್ತೋತ್ರಾರ್ಹವಾಗಿಯೂ, ಪ್ರೋತ್ಸಾಹಕರವಾಗಿಯೂ ಇತ್ತು. ಬಡಪ್ರಜೆಗಳನ್ನು ವಿದ್ಯಾವಂತರಾಗಿ ಮಾಡುವುದಕ್ಕೆ ಪುಣ್ಯವಂತರು ಗ್ರಾಮಾಂತರಗಳಲ್ಲಿ ಸ್ಕೂಲ್ ಮನೆಗಳನ್ನು ಕಟ್ಟಿಸಿಕೊಡಬೇಕಾಗಿದೆ. ಬುದ್ಧಿ ವಿವೇಕ ಪ್ರಪಂಚಜ್ಞಾನಗಳು ಎಲ್ಲಾ ಕಡೆಗಳಲ್ಲೂ ಹರಡಿಕೊಳ್ಳುವುದಕ್ಕೆ ವಾಚಕಶಾಲೆಗಳನ್ನೂ, ಪುಸ್ತಕ ಭಂಡಾರಗಳನ್ನೂ ಕಟ್ಟಿಸಬೇಕಾಗಿರುತ್ತದೆ. ಇಂಥಾ ಪರೋಪಕಾರ ಕಾರ್ಯಗಳನ್ನು ಮಾಡುತ್ತಾ ಬಂದ ಪಕ್ಷದಲ್ಲಿ ನಮ್ಮ ಮಹಾರಾಜರವರ ಸರ್ಕಾರದವರಿಗೆ ಎಷ್ಟೋ ಆನಂದವಾದೀತು.—ಹಾಸನದ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಬಹಳ ಒಳ್ಳೇ ಮಳೆಗಳಾದವು. ರೈತಪ್ರಜೆಗಳು ಹರ್ಷಪಡುತ್ತಿದ್ದಾರೆ. ಕೆಲವು ಕಡೆ ಪೈರುಗಳು ಕ್ಷೀಣವಾಗುತ್ತಲಿವೆ.—ನಮ್ಮ ಡೆಪ್ಯುಟಿ ಕಮೀಷನರೂ, ಸಂಪದಭಿವೃದ್ಧಿ ಸಮಾಜದ ಸೆಕ್ರೆಟರಿ ಮ|| ತಿಳ್ಳೈನ್‌ಯವರೂ ಅನೇಕ ಸ್ಥಳಗಳಲ್ಲಿ ಬಹು ಚಟುವಟಿಕೆಯಾದ ಕಾರ್ಯಗಳನ್ನು ಮಾಡುತ್ತಿದ್ದಾರೆ. ವಿದ್ಯೆ, ವ್ಯವಸಾಯ, ಕೈಗಾರಿಕೆಗಳನ್ನು ವೃದ್ಧಿಮಾಡುವುದಕ್ಕೆ ಹಲವು ಪ್ರಜಾಮುಖಂಡರ ಕೂಡ ಕಲೆತು ಆಲೋಚನೆ ಮಾಡಿರುತ್ತಾರೆ. ಅವರು ಪ್ರಜೆಗಳಿಂದ ಸೂಚಿಸಲ್ಪಟ್ಟ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಗಮನಕೊಟ್ಟಿರುವರು. ನಮ್ಮ ಡಿಸ್ಟ್ರಿಕ್ಟಿನ ಜನಗಳು ಹೊಸ ವಿಷಯಗಳನ್ನು ಕಲಿಯುವುದರಲ್ಲೂ, ಸಾಹಸಪಡುವುದರಲ್ಲೂ ಆಸಕ್ತರಾದಾರೆಂದು ಹಾರೈಸಲ್ಪಟ್ಟಿದೆ.

ದೊಡ್ಡ ಬಳ್ಳಾಪುರ.—ಈಗ 5-6 ದಿನಗಳ ಮುಂದೆ ಆದ 4-5 ಅಂಗುಲ ಮಳೆಯಿಂದ ಒಣಗಿ ಹೋಗಿದ್ದ ಕೆರೆಗಳೆಲ್ಲಾ ತುಂಬಿವೆ. ಕೆಲವು ಕೆರೆಗಳು ಕೋಡಿ ಹರಿಯುತ್ತಲಿವೆ. ಇಲ್ಲಿನ ಮ್ಯುನಿಸಿಪಲ್ ಮೆಂಬರಾಗಿಯೂ, ರೇಷ್ಮೆ ನೂಲು ವ್ಯಾಪಾರಿಗಳಾಗಿಯೂ ಇರುವ ಹಜಬೆ ಗುರುಶಂಭುಲಿಂಗಪ್ಪನವರ ತಾಯಿ ವೃದ್ಧರಾಗಿದ್ದು ಕಾಲವಾದರು. ಅವರ ಮತಪದ್ಧತಿ ಪ್ರಕಾರ ಶ್ರಾದ್ಧಕರ್ಮಗಳನ್ನು ನಡಸಿ 12 ನೇ ದಿನ ಗೋದಾನ, ಭೂದಾನಾದಿಗಳನ್ನೂ, ಧೋತ್ರದ ಜೋಡುಗಳು, ಶಾಲುಗಳು, ಪಂಚೆಗಳು ಕೊಟ್ಟರು. ಮತ್ತು ಬಡವರಾದ ಇತರರಿಗೂ ಪಂಚೆ, ಸೀರೆ ಮೊದಲಾದವುಗಳನ್ನು ಕೊಟ್ಟದ್ದಲ್ಲದೆ ಅವರ ಕುಲಸ್ಥರಿಗೂ ಇತರರು ಸುಮಾರು 400 ಜನಗಳ ವಂದಿಗೆ ಮೃಷ್ಟಾನ್ನದಿಂದ ಸಂತುಷ್ಟಿಪಡಿಸಿದರು.—ಈಗ ಪ್ಲೇಗಿನ ಗಲಾಟೆ ಏನೂ ಇಲ್ಲ. ದೇವಾಂಗದವರಲ್ಲಿ ಮೂರು ಸಾವಿರ ಜನ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದರು. ಈ ಪೈಕಿ 100 ಜನರಿಗೆ ಪ್ಲೇಗು ಕಾಣಿಸಿಕೊಂಡು ಇಬ್ಬರು ಹುಡುಗರುಮಾತ್ರ ಕಾಲವಾದರು. ಬಾಕಿಯವರೆಲ್ಲರೂ ಗುಣವಾಗಿ ಸುಖವಾಗಿರುತ್ತಾರೆ. ಈ ಜನಗಳೇ ಈ ಊರಿನಲ್ಲಿ ಅರ್ಧವಿರುತ್ತಾರೆ. ವೈಶಾಖಮಾಸದ ಲಾಗಾಯ್ತು ಪ್ಲೇಗು ಮತ್ತು ಇತರ ಕಾರಣಗಳಿಂದ 19-20 ಜನ ದೇವಾಂಗದವರು ಸತ್ತಿರುತ್ತಾರೆ. ಬಾಕಿ ಜಾತಿಯವರು ಇನಾಕ್ಯುಲೇಷನ್ ಮಾಡಿಸಿಕೊಂಡಿರಲಿಲ್ಲ. ಆ ಪೈಕಿ ನಗರ್ತರಲ್ಲಿ ಈ ಸಲ ಈ ರೋಗವು ಹೆಚ್ಚಾಗಿ 15 ಜನಗಳ ವರಿಗೂ ಸತ್ತುಹೋದರು ಮುಸಲ್ಮಾನರು ಸಹ 20 ರ ವರಿಗೂ ಸತ್ತರು. ಬ್ರಾಹ್ಮಣರು 6-7 ಜನಗಳು ಸತ್ತರು. ಲಿಂಗಾಯಿತರು ಊರ ಹೊರಗಿನಿಂದ ತಮ್ಮ ಮನೆಗಳನ್ನು ಶುದ್ಧಿಮಾಡಿಕೊಂಡು ವಾಪಸು ಬಂದರು. ಈ ರೋಗವು ತಲೆದೋರಿ 5 ತಿಂಗಳಾಯ್ತು. ಒಟ್ಟು 60 ಜನಗಳು ಸತ್ತಿರಬಹುದು. ಇನಾಕ್ಯುಲೇಷನ್ ಮಾಡಿಸಿಕೊಂಡು ಈ ರೋಗಕ್ಕೆ ಸಿಕ್ಕದೆ ಉದ್ಯೋಗಾದಿಗಳನ್ನು ಮಾಡಿಕೊಂಡಿರುವ ದೇವಾಂಗದವರನ್ನು ನೋಡಿ ಈಚೆಗೆ ಇತರೇ ಜಾತಿಯವರೂ ಇನಾಕ್ಯುಲೇಷನ್ ಮಾಡಿಸಿಕೊಂಡಿರುತ್ತಾರೆ—ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರಿಗೆ ಮಾಲೂರಿಗೂ, ಅಲ್ಲಿನವರು ಇಲ್ಲಿಗೂ ಬಂದಿರುತ್ತಾರೆ. ಇವರು ಪೋಲೀಸ್ ಉಸ್ತುವಾರಿಯಿಂದ ಜನಗಳ ಮಾನ ಧನಗಳನ್ನು ಕಾಪಾಡಬೇಕಾಗಿ ಸರ್ವರೂ ಹಾರೈಸುವರು.—ಇಲ್ಲಿಗೆ ಕೊಳಾಯಿ ಇಡಬೇಕೆಂದು ಗೊತ್ತು ಮಾಡಿರುವ ಶಿವಪುರದ ಕೆರೆಯು ತುಂಬಿ ಹರಿಯುತ್ತಿದೆ ನಮ್ಮ ದಿವಾನರವರು ಅಪ್ಪಣೆ ಕೊಡಿಸಿರುವಂತೆ ಈ ಸಾರಿಯಾದರೂ ಕೊಳಾಯಿಗಳಿಂದ ನೀರು ತರಿಸಿಕೊಟ್ಟು ಕಾಪಾಡಬೇಕಾಗಿ ಬೇಡುತ್ತಾರೆ.

ಚನ್ನರಾಯಪಟ್ಟಣ.—ಈ ಊರಿನ ಹವ ಬಹಳ ಚೆನ್ನಾಗಿದೆ. ಮಳೆ ಬಹಳವಾಗಿ ಆಗಿ ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿಬಿದ್ದಿರುತ್ತವೆ. ಆದರೆ ಸಂತೆಯಲ್ಲಿ ಧಾನ್ಯಗಳ ಧಾರಣೆ ಮಾತ್ರ ಇಳಿತಕ್ಕೆ ಬಂದಿಲ್ಲ.—ನಮ್ಮ ಅಮಲ್ದಾರ್ ಮಿ|| ಹೈದರಲ್ಲಿಖಾನ್ ಸಾಹೇಬರು ಮುನಿಸಿಪಾಲಿಟಿ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿರುವುದರಿಂದ ಲಾಂದ್ರಗಳೆಲ್ಲಾ ಬಹಳ ಪ್ರಕಾಶವಾಗಿ ರಾತ್ರಿಯಲ್ಲಾ ಉರಿಯುವುದಲ್ಲದೆ ಪ್ರತಿ ಒಂದು ಗಲ್ಲಿಯೂ ಬಹಳ ಶುಚಿಯಾಗಿರುತ್ತದೆ—ಸಂತೆಗೆ ಪರಸ್ಥಳಗಳಿಂದ ಬರುವ ಜನರ ವಿಷಯದಲ್ಲಿ ಮುನಿಸಿಪಲ್ ಮೆಂಬರುಗಳು ತುಂಬಾ ನಗಾ ತೆಗೆದುಕೊಂಡು ಹಾಸಲು ವಗೈರೆ ವಸೂಲು ಮಾಡಿ ಸರ್ಕಾರಕ್ಕೆ ಜಮಾ ಆಗುತ್ತಿರುತ್ತೆ. ನಮ್ಮ ಅಮಲ್ದಾರ್ರು ಸರ್ಕಾರಿ ಕೆಲಸಗಳನ್ನು ಬಹಳ ಚಟುವಟಿಕೆಯಿಂದ ಮಾಡುತ್ತಾ ಇರುವುದರಿಂದ ಸರ್ವರೂ ಕೊಂಡಾಡುತ್ತಾರೆ.—ಈ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಮ|| ಕೃಷ್ಣಮೂರ್ತಿ ಶಾಸ್ತ್ರಿಗಳವರಿಗೆ ಮೈಸೂರಿಗೆ ವರ್ಗವಾದ ಪ್ರಯುಕ್ತ ಇಲ್ಲಿನ ಕೋಆಪರೇಟಿವ್ ಸೊಸೈಟಿ ಮೆಂಬರುಗಳೆಲ್ಲರೂ ಸೇರಿ ತಾ. 3 ನೇ ಭಾನುವಾರ ಅವರಿಗೋಸ್ಕರ ಒಂದು ಟೀ ಪಾರ್ಟಿ ಏರ್ಪಡಿಸಿ ಅಲ್ಲಿಗೆ ನಮ್ಮ ಅಮಲ್ದಾರರನ್ನೂ ಶಿರಸ್ತೇದಾರರನ್ನೂ ಹೊಸ ಸಬ್ ರಿಜಿಸ್ಟ್ರಾರನ್ನೂ ಪೋಲೀಸ್ ಇನ್ಸ್‌ಪೆಕ್ಟರನ್ನೂ ತಾಲ್ಲೂಕು ಅಧಿಕಾರಿಗಳನ್ನೂ ಗ್ರಾಮಸ್ಥರನ್ನೂ ಬರಮಾಡಿಕೊಂಡು ಸರ್ವರಿಗೂ ಫಲಾಹಾರಾದಿಗಳಾದ ಬಳಿಕ ಗುಬ್ಬಿಯಿಂದ ಬಂದಿರುವ ನಾಟಕದ ಕಂಪನಿ ಮ|| ಕೇಶವಮೂರ್ತಿ ರಾಯರ ಪಿಟೀಲು, ಮ|| ಮೂರ್ತಿರಾಯರ ಹಾರ್ಮೋನಿಯಂ ನಡೆದದ್ದನ್ನು ಸರ್ವರೂ ಕೇಳಿ ತುಂಬಾ ಸಂತೋಷಪಟ್ಟರು. ಮ|| ಕೃಷ್ಣಮೂರ್ತಿ ಶಾಸ್ತ್ರಿಗಳು ಬಹಳ ಬುದ್ಧಿಶಾಲಿಗಳು. ಈ ಊರಿನ ಕೋಆಪರೇಟಿವ್ ಸೊಸೈಟಿಯನ್ನು ಅಭಿವೃದ್ಧಿಗೆ ತಂದು ತೋರಿದಾರೆ! ಇದಿಲ್ಲದೆ ಈಗ 14 ರ ವರಿಗೂ ಹೆಚ್ಚಿನ ... ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿ ಸಾಲಿನ ವ್ಯಾಪಾರಿಗಳಿಗೆಲ್ಲಾ ಒಳ್ಳೆ ಸ್ಥಳದಲ್ಲಿಯೇ ಜಾಗ ತಯಾರಾಗಿ ... ಸಣ್ಣ ಜನರಿಗೆ ಸಹಾ ... ಸೊಸೈಟಿಗೆ ... ರಾಗೂ ... ದಷ್ಟು ... ಭಕ್ತರ ... ಸಹಾ ... ಬೇಕೆಂದು ಬಂದಿರುವ ಹಣವನ್ನು ಕೊಡಿಸುತ್ತಾ ಇರುತ್ತಾರೆ ಇದು ನಡತೆಗೂ, ಇವರು ಹಾಕಿದ ಮೇಲ್ಪಂಕ್ತಿಯಿಂದಲೂ ಜನಗಳು ತುಂಬಾ ಸಂತೋಷಪಟ್ಟುಕೊಂಡು ತಾವಾಗಿ ಸೊಸೈಟಿಗೆ ಮೆಂಬರುಗಳಾಗಿ ಬಂದು ಸೇರುತ್ತಾರೆ. ಅಲ್ಲದೆ ನಮ್ಮ ಅಮಲ್ದಾರ್ರು ವಿದ್ಯಾಭಿವೃದ್ಧಿ ಗ್ರಾಮಾಭಿವೃದ್ಧಿ ವಿಷಯಗಳಲ್ಲಿ ಬಹಳ ಶ್ರದ್ಧೆಯಾಗಿ ರೈತರಿಗೆಲ್ಲಾ ಹೇಳಿ ವಿದ್ಯಾದಾನ ಮಾಡಿಸುತ್ತಿರುವುದನ್ನು ಕಂಡು ರೈತರೆಲ್ಲರೂ ಕೊಂಡಾಡುತ್ತಾರೆ

ಬೆಲೆ ಬಹುಸುಲಭ   ಬೆಲೆ ಬಹುಸುಲಭ

ಸೊಗಸಾದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನಿಂದ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವುದಕ್ಕೆ ಚಕ್ಕವಾದ ಗುಂಡುಗಳು ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟಕೊಡುವದಿಲ್ಲ. ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ಅದರ ಕೆಲಸದ ಜಾಣತನವು ಬರವಣಿಗೆಯಿಂದ ಉಪಯೋಗವಿಲ್ಲ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಬ್ಬರು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸು ಮಾಡುವರು.

ಭಂಗಾರದ ಗಿಲೀಟಿನ ಗೆಜ್ಜೆಕಟ್ಟಿದ ಡಾಬುಗಳು 1ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ 1-12-0.

ವಿಳಾಸ.—ರಾಸ್ ವಾಚ್ ಅಂಡು ಕಂಪನಿ,
[149-8]   3, ಅರುಳಪ್ಪನ ಬೀದಿ, ಮದರಾಸು.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪಿಲ್ಸ್ ಎಂಬುವ

ವಿದ್ಯುತ್ ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮನೆಯಲ್ಲಿಯೇ ಕೆಲಸಮಾಡುವಂತಹ ವಿದ್ವಾಂಸರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಪುಷ್ಟಿದಾಯಕ ಔಷಧ.

ಈ ಮಾತ್ರೆಗಳು ಕ್ಷಯರೋಗ, ಎಳವು, (ಹಿಸ್ಟೀರಿಯಾ,) ಶರೀರದೌರ್ಬಲ್ಯವು, ಮಂದಾಗ್ನಿ, ಕೆಟ್ಟ ರಕ್ತ, ತಲೆ ತಿರುಗುವಿಕೆ ಶಕ್ತಿಹೀನತೆ, ಸ್ತ್ರೀ ಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯು ನೋವು, ಮುಖದಲ್ಲಿಯು ಬಿಳುಪು, ಕೀಲುಗಳ ನೋವು. ಈ ಮೇಲೆ ಹೇಳಿರುವ ವ್ಯಾಧಿಯು ಆರಂಭಿಸುತ್ತಲೇ ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟವನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿದ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್ ಶಕ್ತಿಯ ವಾಜೀಕರಣ ಮಾತ್ರೆಗಳನ್ನು ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳು ನೀವು ಉಪಯೋಗಿಸಿದ ದಿನ ಮೊದಲ್ಗೊಂಡು ಮನೋಲ್ಲಾಸವನ್ನು ಕೊಡುತ್ತವೆ. ಈಗಲೇ ಬಂದ ಶಿಫಾರಸು ಪತ್ರ —"ತಾ. 15-9-15." ಶ್ರೀಮಾನ್, ತಾವು ಮೊದಲು ರವಾನಿಸಿದ ಪ್ರೊಫೆಸರ್ ಜೇಮ್ಸ್‌ರವರ 25 ಗುಳಿಗೆಗಳಿಂದ ನನಗೆ ತುಂಬಾ ಗುಣಕಂಡು ಬಂದಿರುವದರಿಂದ ಈ ಪತ್ರ ನೋಡಿದೊಡನೆ 40 ಗುಳಿಗೆಗಳ 1 ಸೀಸೆಯನ್ನು ರವಾನಿಸಿಕೊಡಿರಿ. ಮಲ್ಲಂದ ಬೆಳಿಯಪ್ಪ, ಗೋಣಿಕೊಪ್ಪಲ್ ಪೋಸ್ಟು." 40 ಮಾತ್ರೆಗಳುಳ್ಳ ಸೀಸೆ 1 ಕ್ಕೆ ರೂ 2-0-0; ಟ. ಖ ಸೀಸೆ 1 ಕ್ಕೆ 0-4-0.

[139-12] ನಮ್ಮ ವಿಳಾಸ:—ದಿ ಊಲ್ಫ್ ಮಾರ್ಟ್, ನಂ. 1, ಮಂಗಳೂರು.

ಸಂತೋಷಕರವಾದ ಪ್ರಕಟನೆ!

ಸಂತೋಷಕರವಾದ ವಾಚ್!!   ಸಂತೋಷಕರವಾದ ಬಹುಮಾನ!!

ಸುಂದರವಾದ ಜುವ್ವೆಲ್ಡ್ ಪಾಕೆಟ್ಟು (ರಿಜಿಸ್ಟರ್ಡ್) ವಾಚ್.

9 ಬಹುಮಾನಗಳ ಸಹಿತ ರೂ. 2-12-0 ಮಾತ್ರ.

6 ವರ್ಷದ ಗ್ಯಾರಂಟಿ.

ಅಯ್ಯಾ ಮಿತ್ರರೆ, ಈ ಪಕ್ಕೆಯಲ್ಲಿ ತೋರಿಸಿರುವ ಭಾರಿ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪನೀಪರ್ ಟಲಿಪ್ಟವಾದ ಸಾಮಾನುಗಳಿಂದಲೂ, ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಈ ಗಡಿಯಾರವನ್ನು ಭಾರಿ ಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿ ಇರುವ ದೊರೆಗಳು ಕೊಂಡುಕೊಳ್ಳುತ್ತಾ ಇದ್ದಾರೆ. ಇದು ನೋಡುವುದಕ್ಕೆ ಮುಚ್ಚಟನಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚಾಗುತ್ತಾ ಇವೆ. ಭಾರಿ ಕ್ರಯದ ಬಹುಮಾನಗಳನ್ನು ಹಾಕಿರುತ್ತೇವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಿರಿ. ಬಹುಮಾನದ ತಪಸೀಲು—(1) ಸುಂದರವಾದ ಸರಪಣಿ, (2) ಕಂಪಾಸ್, (3) ಇವಾಕ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಪರಿಮಳ ಸುವಾಸನೆ ಸೆಂಟ್, (7) ಕೈ ಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟು ಬಟನ್. ನಮ್ಮ ವಿಳಾಸ:— [149-8]

ಧೈರ್ಯಲಕ್ಷ್ಮಿ ಅಂಡು ಕಂಪೆನಿ, ಜನರಲ್ ಮರ್ಚಂಟ್ಸ್,
3, ಅರುಳಪ್ಪನ ಬೀದಿ, ಸಾಹುಕಾರ್ ಪೇಟೆ, ಮದರಾಸು.

ತಿಗಣೆಯ ಔಷಧ.

ಅನೇಕ ಜನಗಳು ಪರೀಕ್ಷಿಸಿ ನೋಡಿದ್ದಾಗಿದೆ.

ಹೋಟಲಾಗಿ ಕಂಡುಹಿಡಿದಿರತಕ್ಕ ಈ ಔಷಧವು ಸುಲಭ ಕ್ರಯಕ್ಕೆ ಸಿಕ್ಕುತ್ತದೆ. ಉಪಯೋಗಿಸತಕ್ಕ ಕ್ರಮ:—ಒಂದು ಸೇರು ಸುಣ್ಣವನ್ನು ಸುಟ್ಟು ಅದಕ್ಕೆ ¼ ತೋಲಾ ನಮ್ಮ ಪುಡಿಯನ್ನು ಮಿಶ್ರಮಾಡಿ ಗೋಡೆಗೆ ಹಚ್ಚಿದರೆ ತಿಗಣೆಗಳೆಲ್ಲಾ ಸಂಪೂರ್ಣವಾಗಿ ನಾಶಹೊಂದುವವು. ಈ ನಮ್ಮ ಪುಡಿಯು ಖಂಡಿತವಾಗಿಯೂ ಗುಣಕಾರಿಯಾಗಿದೆ. ಪೌಂಡು 1 ಕ್ಕೆ ರೂ. 2-2-0; ಪೋಸ್ಟೇಜು ಬೇರೆ. ಪರೀಕ್ಷಿಸಿ ನೋಡಿ. 1 ತೋಲಾ ಪೊಟ್ಟಣಕ್ಕೆ 1 ಆಣೆ. [187-3]

ಪಕ್ ಸಾರೆ ಅಂಗಡಿ ಸಿದ್ದಪ್ಪ ಬಿನ್ ಶೆಟ್ಟಪ್ಪ, ಹಳೇ ಅಗ್ರಹಾರ, ಮೈಸೂರು.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರಾಸ್ಲೀ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಷ್ವನ್ ಹಲ್ಲರುಗಳು ನಂ 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಸ್ಟೀರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಬೂನು; ಬಟ್ಟೆ ರೇಕುಗಳು; ಅಸ್ಟ್ರೇಲಿಯಾ ದೇಶದ ನಾಟಿ ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-1]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.

Branchee—Bezwada and Tanjore.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮಶೀನರಿ ನಾಜೂಕಾಗಿ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ.ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಬ್ಲಿಕ್-ವರ್ಕ್-ಸಿಟಿ, 20-2-16.

ಅರ್ಧಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.

ಎರಡು ನಾಲ್ಕು ರೂಪಾಯಿಯ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟಲ್ಲಿ ಎಂಟು ದಿವಸದವರೆಗೆ ಪುನಃ ಕೊಡಬೇಕಾದ ಅವಶ್ಯವಿಲ್ಲ. ಮೊದಲಿನ ಬೆಲೆ ರೂ. 16-0-0. ಇನ್ನು ಸ್ವಲ್ಪ ಕಾಲದವರೆಗೆ ವಿ. ಪಿ. ಖರ್ಚು ಸಹ ರೂ 8-0-0 ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಳಾಸ ಮಹಿತಿ ಬಗ್ಗೆ ರಿಪ್ಲೈ ಕಾರ್ಡು ಬರಿಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜೆನ್ಸಿ,
[266-45]   ಪಿ. ಓ. ಬಾಕ್ಸ್ 330, ಬೊಂಬಾಯಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಸೂರೆನ್ಸ್ ಕಂಪನಿ ಲಿಮಿಟೆಡ್,

ಮದರಾಸ್ ಬ್ರಾಂಚು.

ಈ ಕಂಪನಿಯ ಕಾರ್ಯಕ್ರಮಗಳ ವಿಷಯದಲ್ಲಿ ಯಾರೋ ದುಷ್ಟರು ಬೆಂಗಳೂರು ಮತ್ತು ಮೈಸೂರಿನ ಇತರ ಪ್ರಾಂತ್ಯಗಳಲ್ಲಿ ಸುಳ್ಳುಸುದ್ದಿಯನ್ನು ಹಂಚಿ ನಮ್ಮ ವಿಮೆ ಪತ್ರದಾರರಿಗೆ ಕಂಪನಿಯ ವಿಷಯದಲ್ಲಿ ಅವಿಶ್ವಾಸವನ್ನು ಹುಟ್ಟಿಸುತ್ತಿರುವರೆಂದು ಕೇಳುತ್ತೇವೆ. ಇದು ಕೇವಲ ನಿರಾಧಾರವಾದ ವಚನ. ನಮ್ಮ ಕಂಪನಿಯ ಸಾಂಪತ್ತಿಕ ಸ್ಥಿತಿಯು ಸಂಪೂರ್ಣವಾಗಿ ಅನುಕೂಲವಾಗಿರುವುದಲ್ಲದೆ ಇದರ ನಿಧಿಯು 5 ಕೋಟಿ ರೂಪಾಯಿಗಳಿಗೆ ಹೋಗಿದೆ. ನಮ್ಮ ಕಾರ್ಯಕ್ರಮಗಳು ಮೊದಲಿಗಿಂತಲೂ ಈಗ ಮತ್ತೂ ಅನುಕೂಲವಾಗಿವೆ. [321-52]

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

ನವರಾತ್ರಿ ಹಬ್ಬದ ವರೆವಿಗೆ ಮಾತ್ರ.

ಅಸಲ್ ಮಾಲು.   ಬಣ್ಣ ಖಾತರಿ.   ಕ್ರಯ ಸುಲಭ.

ವರ್ತಕರಿಗೆ ಬಿಡೂರಾಗಿ ಬೇಕಾದಂಥಾ ನೋಲಾಪುರದ ನಮೂನೆವಾರು ಚಕ್ಕುಗಳು ಸೀರೆಗಳು ಖಣಗಳು ಮತ್ತು ಗಟ್ಟಿ ಬಣ್ಣದ ಇತರ ನಮೂನೆ ಸೀರೆಗಳು ನವರಾತ್ರಿಯವರೆವಿಗೆ ಮಾತ್ರ ಕಡಮೆ ಬೆಲೆಯಿಂದ ದೊರೆಯುವವು. ಹಿಂದಿನ ಬೆಲೆಯಿಗಿಂತ ನಮ್ಮಲ್ಲಿ ಬಹಳ ಕಡಮೆ.

ಚಿಲ್ಲರೆ ಥಾನುಗಳನ್ನು ಕೋರುವವರು ಕೆ. ಪ್ರಹ್ಲಾದರಾವ್ ಅಂಡ್ ಸನ್, ಅಕ್ಕಿಪೇಟೆ ಶ್ರೀನಿವಾಸಾಚಾರ್ರ ಬೀದಿ, ಬೆಂಗಳೂರು ಸಿಟಿ, ಇವರಿಗೆ ಬರೆಯಬಹುದು.

ಬೇಲುಗಟ್ಟೆ ಕೋರುವವರು ಇವರಲ್ಲಿ ಅಥವಾ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು:— [56-27]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡು (ಕುಂಬಿಗರಪೇಟೆ) ಬೆಂಗಳೂರು ಸಿಟಿ.

ತುಂಕೂರು 1 ನೇ ಮುನ್ಸಿಫ್ ಕೋರ್ಟಿನಲ್ಲಿ.

1914-15 ನೇ O.S. ನಂ. 1199.

ವಾದಿ:—ಶಿರಾ ತಾ|| ಕಾಮಗಾನಹಳ್ಳಿಯಲ್ಲಿರುವ ಬೀರಂಣನ ಮಗ ಪಾಲುಮಠದ ಬೂತೇಗೌಡ ವಗೈರೆ.

ಪ್ರತಿವಾದಿಗಳು:—ಗುಬ್ಬಿ ತಾ|| ಹಾಗಲ್ವಾಡಿಯಲ್ಲಿರುವ ಪಾಲುಮಠದ ದೇವರಾಮಪ್ಪನ ಮಗ ರಾಮಪ್ಪ, (2) ಇವನ ಮಗ ಸಂಣ ಬೀರಲಿಂಗಪ್ಪ, (3) 2 ನೇ ಪ್ರತಿವಾದಿ ತಮ್ಮ ಪರಶುರಾಮಪ್ಪ, (4) 1 ನೇ ಪ್ರತಿವಾದಿ ತಾತ ಅಂಣನ ಮಕ್ಕಳು ಬೀರೀ ರಾಮಪ್ಪನ ಮಗ ದೊಡ್ಡ ಬೀರಲಿಂಗಪ್ಪ, (5) ಇವನ ತಮ್ಮ ಸಿದ್ಧಪ್ಪ, (6) ಗುಬ್ಬಿ ತಾ|| ಹಾಗಲ್ವಾಡಿಯಲ್ಲಿರುವವರು—ಪುಣಿ ಶಿದ್ಧರಾಮಯ್ಯ, (7) ಯಾಳಪ್ಪ, (8) ಚೋಳಲಿಂಗಯ್ಯ, (9) ಲಿಂಗೇಗೌಡ, (10) ಬೀರಯ್ಯನ ಬಸೂರಯ್ಯ, (11) ಬಸಪ್ಪ, (12) ರಾಮೇಗೌಡ, (13) ಕಲ್ಲಯ್ಯನ ಲಿಂಗಂಣನಮಗ ಶಿದ್ದಯ್ಯ, (14) ನಾಗಮ್ಮನಮಗ ಹೊನ್ನಯ್ಯ, (15) ಜವರಯ್ಯನ ಮಗ ಶಿದ್ದಲಿಂಗಯ್ಯ, (16) ದಾಸಪ್ಪ, (17) ನಾಗಮ್ಮ ಹೊನ್ನಯ್ಯ, (18) ಕಂಚಪ್ಪ, (19) ಶಿದ್ದಯ್ಯನ ಲಿಂಗಯ್ಯ, (20) ಕುಂಟಲಿಂಗಯ್ಯ, (21) ಕಂಬಿ ಮಲ್ಲಯ್ಯ, (22) ಮುಪಣ್ಣೇರಂಗಯ್ಯ, (23) ಗೋಳಾಯಿ ಚಿಕ್ಕಂಣ, (24) ಸೇದುವಯ್ಯನ ಕರೇ ಶಿದ್ದಯ್ಯ, (25) ಮಲ್ಲಯ್ಯನ ಮುದ್ದಯ್ಯ, (26) ಮಲ್ಲಜ್ಜಯ್ಯ, (27) ಪುಟ್ಟಶಿದ್ದಯ್ಯನ ಶಿದ್ದರಾಮು, (28) ಬೀದಿ ಮನೆ ಪುಟ್ಟಿಲ್ಲಯ್ಯ, (29) ಚಿಕ್ಕ ಹೊಸೂರಯ್ಯ, (30) ಚಿಕ್ಕ ಪುಟ್ಟಿಲ್ಲಯ್ಯ, (31) ಪೂಜಾರಿ ಮಲ್ಲಯ್ಯ, (32) ಮರೇಗಟ್ಟದ ಶಿದ್ದಲಿಂಗಯ್ಯ (33) ರುದ್ರಯ್ಯ, (34) ಪೂಜಾರಿ ಶಿದ್ದಲಿಂಗಯ್ಯ, (35) ಗೊಂಡೆಪ್ಪ, (36) ಚಿಟ್ಟಯ್ಯನ ಜೋಗಂಣ, (37) ಉಗ್ರಯ್ಯ, (38) ಸೋಮಯ್ಯ, (39) ಸೇವನಯ್ಯನ ಜೋಗಲಿಂಗಯ್ಯ, (40) ಕರೇತಿಮ್ಮಯ್ಯ, (41) ಗಂಗೆ ಸಿದ್ದಯ್ಯನ ಮಗ ಕರೇ ಶಿದ್ದ, (42) ಗುಬ್ಬಿ ತಾ|| ಹಾಗಲ್ವಾಡಿ ಸಂ|| ಮತ್ತಿಕೆರೆ ಗ್ರಾಮಸ್ಥರು—ವೆಂಕಟಯ್ಯ, (43) ಭೈರಂಣನ ಶಿದ್ದಯ್ಯ, (44) ತೊರೆಯಪ್ಪ, (45) ಹಾಡಿತಿಮ್ಮಯ್ಯನ ದಾಸಪ್ಪ, (46) ತಿಪಟೂರು ತಾ|| ಗಿಡಬಾ ಸಂ|| ಮರೇಗಟ್ಟದ ಗ್ರಾಮಸ್ಥರು—ಶಿದ್ದಯ್ಯ, (47) ಭಂಗಿ ಲಿಂಗಯ್ಯ, (48) ಶಿದ್ದಲಿಂಗಯ್ಯ, (49) ದೇವಿಕೆರೆಪ್ಪ, (50) ಬಿಡ ತಾ|| ಬಿಡ ಸಂ|| ಕಲ್ಲನಾಳ್ಕದ ಗ್ರಾಮಸ್ಥರು—ಕಂಬಯ್ಯ, (51) ಹೊಸೂರಯ್ಯ, (52) ಪರಿಷಯ್ಯ, (53) ಲಿಂಗಂಣ, (54) ನಾಗಂಣ, (55) ಗುಬ್ಬಿ ತಾ|| ಹಾಗಲ್ವಾಡಿ ಸಂ|| ಕುರೇಹಳ್ಳಿ ಗ್ರಾಮಸ್ಥರು—ಮಲ್ಲಯ್ಯ, (56) ಮರಿಯಪ್ಪ, (57) ಬಿಳಿಯಪ್ಪಯ್ಯ, (58) ರಂಗಯ್ಯ, (59) ದೊಡ್ಡ ಮರಿಯಪ್ಪ, (60) ಕೋಡಿಹಳ್ಳಿ ಶಿದ್ದಯ್ಯ, (61) ಚಿಕ್ಕ ರಂಗಯ್ಯ, (62) ತಿಪ್ಪಯ್ಯ, (63) ಜೋಗಪ್ಪ, (64) ಲಕ್ಕನಾಯಿ, (65) ಪುಟ್ಟತಿಮ್ಮಯ್ಯನ ರಂಗಯ್ಯ, (66) ಮಲ್ಲಿ ತಿಮ್ಮಯ್ಯ, (67) ಜೋಗಪ್ಪ, (68) ದೊಡ್ಡ ಶಿದ್ದಯ್ಯ, (69) ಗೋರಪ್ಪನ ಮುಮ್ಮಗ ಶಿದ್ದ, (70) ಚಿಟ್ಟಜೋರಯ್ಯ, (71) ಜವರಯ್ಯ—

ಮೇಲ್ಕಂಡ 1 ರ ಲಾಗಾಯ್ತು 71 ಪ್ರತಿವಾದಿಗಳಿಗೆ ತಿಳಿಯಪಡಿಸುವದೇನಂದರೆ—ಹಾಲಿ ಶಿರಾ ತಾಲ್ಲೂಕು ಬೇವಿನಹಳ್ಳಿಯಲ್ಲಿರುವ ಬೀರೇ ದೇವರು ಮತ್ತು ಹೊಸೂರಮ್ಮ ಎಂಬ ದೇವರುಗಳ ದೇವಸ್ಥಾನಕ್ಕೆ 1 ನೇ ವಾದಿ ಗೌಡನೆಂತಲೂ, 2 ನೇ ವಾದಿ ಯಜಮಾನನೆಂತಲೂ, ತೀರ್ಮಾನಿಸಿ ದೇವರ ಬಾಬ್ತು ಸ್ವತ್ತುಗಳನ್ನಾಗಲಿ ಅವುಗಳ ಬೆಲೆ ರೂ 64-4-0 ಯನ್ನಾಗಲಿ ಪ್ರತಿವಾದಿಗಳಿಂದ 1-2 ನೇ ವಾದಿಗಳಿಗೆ ಕೊಡಿಸಬೇಕೆಂತಲೂ, ವಾದಿಗಳ ಅನುಮತಿಯಂತೆ 1 ರ ಲಾಗಾಯ್ತು 5 ನೇ ಪ್ರತಿವಾದಿಗಳು ಪೂಜೇ ವಗೈರೆ ಕೆಲಸ ನಡಿಸತಕ್ಕದ್ದೆಂತಲೂ, ಅದಕ್ಕೆ ತಪ್ಪಿದರೆ ವಾದಿಗಳು ಪೂಜೆ ಮುಂತಾದ ಕೆಲಸ ನಡಿಸಲು ಪ್ರತಿವಾದಿಗಳು ಯಾವಾಗಲೂ ತಕರಾರು ನಡಿಸಕೂಡದೆಂತಲೂ ಪರಮನೆಂಟು ಇಂಜಂಕ್ಷನ್ ಕೊಡಿಸಬೇಕೆಂತ ವಾದಿಗಳು ದಾವಾ ಮಾಡಿರುತ್ತಾರೆ. ಈ ಮೊಕದ್ದಮೆಗೆ ಆಕ್ಷೇಪಣೆಯಾಗಲಿ ತಕರಾರು ನಡಿಸತಕ್ಕವರೆಲ್ಲಾ ಹೀರಂಗು 11-10-1915 ನೇ ದಿವಿ 11 ಘಂಟೆಗೆ ಈ ಕೋರ್ಟಿನ ರೂಬರೂಬು ಹಾಜರಾಗತಕ್ಕದ್ದೆಂದು ಇದರಿಂದ ಸಮಸ್ತರಿಗೂ ಸೂಚಿಸಿದೆ. [209-1]

Tumkur,   **B. Ranga Iyengar, B.A., B.L.**
Date 29-9-15.   *First Munsiff.*

ಸುರಕ್ಷಿತವಾಗಿ ಸ್ವಲ್ಪ ಹಣ ಹಾಕಿ ವಂಶಪಾರಂಪರ್ಯವಾಗಿ ಪ್ರತಿ ವರ್ಷವೂ ಲಾಭ ಪಡೆಯಿರಿ!   ಶೇ. ಸಾಧಿಯಾನಾ 6 ರೂ. ಬಡ್ಡಿ ಪ್ರಕಾರ ಸಾಲ ಪಡೆಯುವ ಅವಕಾಶವನ್ನು ಹೊಂದಿ!!   ಯಾವ ಚಂದಾವನ್ನೂ ಕೊಡದೆ 500 ರೂ. ವರೆಗೆ ಬೋನಸ್ಸುಳ್ಳ ಜೀವವಿಮೆ ಪತ್ರ ಪಡೆಯಿರಿ; ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ!!!

ಮೈಸೂರು ದೇಶದ ಜನಗಳಿಗೋಸ್ಕರ ಮೈಸೂರಲ್ಲಿ ಸ್ಥಾಪಿತವಾಗಿರುವ

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಮ್ಯಾರಿಯೇಜ್ ಅಷೂರೆನ್ಸ್ ಕಂಪೆನಿಯು

ಮೈಸೂರು ದೇಶದಲ್ಲಿ ಮೊದಲನೇ ಸಾರಿ ಜಾರಿಗೆ ತಂದಿರುವ
ಅತ್ಯಾಶ್ಚರ್ಯಕರವಾದ ಮತ್ತು ನವೀನವಾದ ಒಂದರಲ್ಲಿ ಎರಡು ಅಥವಾ ಷೇರು ಜೀವವಿಮೆ
ಎಂಬ ಏರ್ಪಾಡನ್ನು ಕೇಳಿಲ್ಲವೇ?

ಇಲ್ಲದಿದ್ದರೆ ಅದನ್ನು ತಪ್ಸೀಲಾಗಿ ವಿವರಿಸುವ ಪ್ರಕಟನ ಪತ್ರಿಕೆ, ದರಖಾಸ್ತು ಫಾರಂ ಮತ್ತು ಇತರ ಅವಶ್ಯಕವಾಗಿ ತಿಳಿಯತಕ್ಕ ವಿಷಯಗಳಿಗೋಸ್ಕರ ತಕ್ಷಣವೇ ಬರೆಯಿರಿ. ಮತ್ತು ಮೇಲ್ಕಂಡ ಏರ್ಪಾಡಿನ ಪ್ರಕಾರ ಕಂಪೆನಿಯ ಹತ್ತು ಷೇರುಗಳಿಗೆ ದರಖಾಸ್ತು ಕೊಟ್ಟು, 55 ರೂಪಾಯಿಗಳನ್ನು ಆರು ಕಂತುಗಳಾಗಿ ಒಂದು ವರ್ಷದಲ್ಲಿ ಪಾವತಿ ಮಾಡಿ, ಇದುವರಿವಿಗೂ ಜೀವವಿಮೆ ಪ್ರಪಂಚಕ್ಕೇ ತಿಳಿಯದ ಈ ಮೇಲೆ ವಿವರಿಸಿರುವ ವಿಶೇಷತರವಾದ ಪ್ರಯೋಜನವನ್ನು ಹೊಂದಿರಿ. ಹೀಗೆ ನಿಮ್ಮಿಂದ ವಸೂಲಾಗುವ ಮೊಬಲಗೆಲ್ಲಾ ಗೌರ್ನಮೆಂಟಿನಲ್ಲೂ, ಮತ್ತು ಕಟ್ಟಡಗಳ ಮೇಲೂ ಸುರಕ್ಷಿತವಾಗಿ ಇಡಲ್ಪಡುವದು

ಬೇಕಾಗಿದೆ.

ನಮ್ಮಲ್ಲಿ ಸ್ಥಿರಸ್ವತ್ತುಗಳ ಮೇಲೆ ಸಾಲ ಕೊಡುವದು, ಜೀವವಿಮೆ ಇನ್ನೂ ಮುಂತಾದ ನವೀನವಾದ ಏರ್ಪಾಡುಗಳು ಇರುತ್ತವೆ. ಮೈಸೂರು ದೇಶದ ಪ್ರತಿಯೊಂದು ತಾಲ್ಲೋಕಿನಲ್ಲಿಯು ಈ ಕಂಪೆನಿಯ ಕೆಲಸವನ್ನು ನಡೆಸುವದಕ್ಕೆ ಲೋಕಲ್ ಡೈರೆಕ್ಟರುಗಳು ಬೇಕಾಗಿರುತ್ತೆ. ಇಷ್ಟವುಳ್ಳವರು ಪ್ರಕಟನ ಪತ್ರಿಕೆಗಳಿಗೂ ಮತ್ತು ನಿಬಂಧನೆಗಳಿಗೂ ಸಹ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

M. L. NAGANNA, Esq.,
[15-39]   Managing Director, Life & Marriage Assurance Buildings, Mysore.

ಮಧುರೆ ಕುಸ್ಸಿಡಿ ಅಂಚಿನ ಸೀರೆ ಅಸ್ಸಲ್ ರಬಂ ರೂ. 3-0-0.

ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆ ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೆ. ಕೆಂಚುಸಾಮಿ

[11-19] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ಸ್ಯಾಟಿಸ್‌ಫ್ಯಾಕ್ಷನ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹಾಡುಗಳಿಗೂ ಎಲ್ಲಾ



ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ಸಮ್ಮತವಾಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 50; ಈಗಿನ ಕ್ರಯ ರೂ. 19, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90; ಈಗಿನ ಕ್ರಯ ರೂ. 30, 35, 40, 45. ಆಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.

ವಿಳಾಸ—National Harmonium Co.,

[170-7] SIMLA P.O., (E) CALCUTTA.

ಆರೋಗ್ಯವಿದ್ದರೆ ಮಗು.

ಐಶ್ವರ್ಯವಿದ್ದರೆ ನಗು.

ಮಕ್ಕಳು ಆರೋಗ್ಯವಾಗಿದ್ದರೆ ಪೋಷಕರ ಸಂತೋಷಕ್ಕೆ ಮಿತಿಯೇ ಇಲ್ಲ. ಹಾಗಿಲ್ಲದೆ ಮಕ್ಕಳು ವ್ಯಾಧಿಗ್ರಸ್ತರಾದರೆ ತಂದೆತಾಯಿಗಳು ರಾತ್ರಿ ಹಗಲೆನ್ನದೆ,

ನಿದ್ದೆ ಆಹಾರಗಳಿಲ್ಲದೆ, ತಮ್ಮ ಕೆಲಸಗಳನ್ನು ತೊರೆದು, ವೈದ್ಯರನ್ನು ಹುಡುಕಿಕೊಂಡು ಮನೆಮನೆಯೂ ತಿರಿಗಿ, ಕಷ್ಟನಷ್ಟಗಳಿಗೆ ಗುರಿಯಾಗಿ ವ್ಯಸನಪಡುತ್ತಿರುವುದು ವರ್ಣಿಸಲಸಾಧ್ಯ. ಶ್ರೇಷ್ಠವಾದ ಮೂಲಿಕೆಗಳಿಂದಲೂ ಚಟ್ಟಿಹರಕಿನಿಂದಲೂ ತಯಾರಾದ "ಬಾಲಕೇಸರಿ" ಎಂಬ ತೈಲವನ್ನು ಉಪಯೋಗಿಸಿ ನೋಡಿ. ಸಾವಿರಾರು ಯೋಗ್ಯತಾ ಪತ್ರಗಳನ್ನು ಪಡೆದಿದೆ. ಅಜೀರ್ಣ, ಜ್ವರ, ಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುತ್ತಿರುವುದು, ಕುರು, ಕ್ಷಯ, ಗರ್ಭಚೆಟ್ಟಿ, ಮೊದಲಾದ ವ್ಯಾಧಿಗಳನ್ನು ನಾಶಮಾಡಿ ಮಕ್ಕಳನ್ನು ದೃಢಾಂಗಿಗಳನ್ನಾಗಿ ಮಾಡುವುದಲ್ಲದೆ, 2-3 ಸಲ ಸುಖಭೇದಿ ಮಾಡಿಸುತ್ತದೆ. ಕ್ರಯ ಬಾಟ್ಲಿ 1 ಕ್ಕೆ 12 ಆಣೆ. ಅಂಚೆ ವೆಚ್ಚ ಬೇರೆ. [235-47]

ವಿಳಾಸ—ಧನ್ವಂತರಿ ವೈದ್ಯಶಾಲಾ, ದೇವನಹಳ್ಳಿ ಟೌನ್.

ಸ್ತ್ರೀಯರ ಭೂಷಣವು!!!

ಕೃಷವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ಸವಿಲವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲಿಲ್ಲರು? ಇಂಥಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಕೂದಲಿಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಂದಿಯತಕ್ಕದ್ದಾಗಿದೆ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅದರ ಬದಲು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಅದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಕೆಲವುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಾಳುಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಹಲಿಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಸ್ಥಳಗಳ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅತ್ಯಗಳಲ್ಲಿ ಒಂದನ್ನೇ ನೋಡಿರಿ! ನೇಗಿಸಹಾರದ ಬಂಧುಗಳು. ಬಸವನಹಳ್ಳಿ, ಬಿಳಿಗಾಂವ—ಕಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲ ಬೆಳೆಯುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಒಂದು ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ 2-10-0, ಅ. ವೆ. 0-7-0 ಬೇರೆ.

ಸೂಚನೆ—ಅನೇಕ ದುರ್ಬೀಸೀಲರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಕೈ ಬೆಲೆಯಿಂದ ತಮಗೆ ಅಧಿಕ ನಫೆಯೇ ದೊರಕುತ್ತದೆಂದು, "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ..." ಎಂದು ಅವರಿಗೆ ಬಸರ ಉಪ್ಪ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇಲ್ಲದಿದ್ದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ. ಕ್ರಯಪಟ್ಟಿಯನ್ನು ಬೇಕಾದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ನಿಮ್ಮ ಹಣವನ್ನು ಉಳಿಸಿಕೊಳ್ಳಬಹುದು.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯಂತ ಚಿತ್ತಾಕರ್ಷಕವಾದ ಸುವಾಸನೆಯುಳ್ಳ ಹೂಗಳ ಸೌಗಂಧಿಕ ತೈಲಾಂಶವಾಗಿರುವುದು, ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದು ಸಲ ನಿಮ್ಮ ಕೈವಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಬಿಂದುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೆಂಡು ಸುವಾಸನೆಯು ಆರಂಭವಾಗುವುದು. ಬೇರೆ ಯಾವ ತರಮಳ ದ್ರವ್ಯದ ಬೆಲೆ ಇಷ್ಟು ಅಲ್ಪ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವಲ್ಲಿ ಪ್ರತಿಯೊಂದು ಸ್ಥಳ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-37]

ಒಂದು ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ 1-12-0. ಅರ್ಧ ಡಜನ್ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ಖರ್ಚು ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಮಳದ ಕಾಡುಗಳ ಒಂದು ಬಾಕ್ಸ್ 0-12-0.

ಎಲ್ಲಾ ತರಹ ಎಣ್ಣೆ ಸುಗಂಧಗಳು ಸಿಕ್ಕುವ ಸ್ಥಳ:—

ಏಜಂಟ್ಸ್—ಇಂಪೀರ್ಯಲ್ ಡ್ರಗ್ ಕೆಮಿಕಲ್ ಕಂಪನಿ,

ನಂ. ಉಮ್ಮಮುಜಿದ್, ಮಾರ್ಕೆಟ್, ಬೊಂಬಾಯಿ.

ಏಜಂಟ್, ಕೆ ಉಲ್ಲಾ ನಾರ್ತ್, ಮಂಗಳೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

(ರಿಜಿಸ್ಟರ್ಡ್)

ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25-36]

45 ಮಾತ್ರೆಗಳ ಪೊಟ್ಟ 1 ಕ್ಕೆ 3 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 „ „ „ 4 „	200 „ ೬ „ 9 „	80 „ „ „ 4 „	1200 „ „ „ 2 „

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರಲ್ಲೆಲ್ಲಾ ವಿಕರಿಗೆ ಇಟ್ಟಿದೇವೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತ್ರಾನ್ ಡಿಪೋ, ಬೊಂಬಾಯಿ.

ಮೈಸೂರು ಸೀಮೆಗೆ ಏಜೆಂಟರು—ಮೆ॥ ಎಂ. ರಾಮಸಂಜೀವ ಶೆಟ್ಟರು, ಚನ್ನಪಟ್ಟಣ.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ESANOFELE

ಮಲೇರಿಯಾ ಜ್ವರವನ್ನು "ಈಸಾನೊಫೆಲೆ"ಯು 15 ದಿನಗಳಲ್ಲಿ ನಾಶಮಾಡುತ್ತದೆ.

ಚಳಿ ಜ್ವರ ಕೆರಳುವುದಿಲ್ಲ; ಇನ್ಯಾವ ವಿಧವಾದ ತೊಡಕುಗಳೂ ಕಷ್ಟಗಳೂ ಪ್ರಾಪ್ತವಾಗುವುದಿಲ್ಲ. ಪ್ರಖ್ಯಾತರಾದ ಪಂಡಿತರು ಇದನ್ನೇ ಶಿಫಾರಸು ಮಾಡಿದ್ದಾರೆ. ಕ್ರಯ ಬಾಟ್ಲಿ 1 ಕ್ಕೆ ರೂ. 2-0-0. ಎಲ್ಲಾ ಔಷಧ ಮಾರಾಟದ ಅಂಗಡಿಗಳಲ್ಲೂ ವಿಕರಿಗೆ ಇಟ್ಟಿದೆ. ಚಿಕ್ಕ ಮಕ್ಕಳಿಗಾಗಲಿ, ಯಾವ ವಯಸ್ಸಿನ ಹುಡುಗರಿಗಾಗಲಿ ಹುಡುಗಿಯರಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಶೀಘ್ರವಾಗಿ ನಿಮ್ಮ ಸೇವನೆಗೆ ರುಚಿಯಾಗಿರುತ್ತದೆ. [170-6]

ಮೈಸೂರು ಸಂಸ್ಥಾನದ ಏಜಂಟರು :—

ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳಲ್ಲಾ ಡಿಪೋ—

ಬಿ. ಜೆ. ಗೋರಿಯೋ ಕಂಪನಿ, ಪಾಲೀಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ಸಕ್ಕರೆ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.

[204-2]

ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ.

ಕ್ರಯ ಡಬ್ಬಿ 1 ಕ್ಕೆ ರೂ. 2-0-0 ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

ಅದರ ಪೂರಾ ಕೀಟಲಾಗು ಅಪೇಕ್ಷಿಸುವವರು 6 ಆಣಿನ ಸ್ಟಾಂಪನ್ನು ಕಳುಹಿಸಿರಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಿಮ್ಮ ಜೀವಮಾನದ ಅರ್ಧ ಭಾಗವೆಲ್ಲಾ ನೀವು ವಾಯುವಿನಿಂದ ಕಷ್ಟಪಟ್ಟು, ಮುಖ್ಯ ವೈದ್ಯರಿಂದಲೂ ಅನ್ಯತ್ರಿಯಿಂದಲೂ ಪ್ರಯೋಜನ ಹೊಂದದೆ ನಿರೀಕ್ಷೆ ಹೀನರಾಗಿದ್ದರೂ, ನಿಮ್ಮ ವಾಯುನೋವು ವಾಸಿಯಾಗಬಹುದು.

ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದು ತಕ್ಷಣ ಬಿಡುಗಡೆಯನ್ನು ಕೊಟ್ಟು, ನೋವನ್ನು ಹೊರಡಿಸಿ, ಕಡತುಕೊಂಡಿರುವ ಕೀಲುಗಳನ್ನೂ ನರಗಳನ್ನೂ ನಿಮ್ಮ ಪ್ರಾಯಕಾಲದಲ್ಲಿದ್ದಂತೆ ಮಾಡುವುದು.

ಯೇಸು ಕ್ರಿಸ್ತನು ಪಾಲೆಸ್ತೀನ್ ದೇಶದಲ್ಲಿ ಸಂಚಾರಮಾಡುತ್ತ ತನ್ನ ಬಳಿಗೆ ಬಂದ ಜನಗಳಿಗೆ ದಿವ್ಯವಾದ ಉಪದೇಶವನ್ನು ಹೇಳುತ್ತಲಿದ್ದನು. ಸ್ವಲ್ಪಕಾಲದೊಳಗೇನೇ ಜನಗಳು ಆತನ ಉಪದೇಶವನ್ನು ಕೇಳುವದಕ್ಕೆ ಆತನ ಬಳಿಗೆ ಗುಂಪುಗುಂಪಾಗಿ ಬರುವದಕ್ಕಾರಂಭಿಸಿದರು. ಯಾಕೆಂದರೆ ಆತನ ಬೋಧನೆಯು ಕೇಳಿದವರ ಮನಸ್ಸನ್ನು ಆಕರ್ಷಿಸಿ ಅವರ ಹೃದಯವನ್ನು ಹೊಕ್ಕು ಪದೇಪದೇ ಅವರ ಆಲೋಚನೆಗಳನ್ನು ಆತನ ಕಡೆಗೆ ತಿರುಗಿಸಿ ಮಧುರವಾದ ಆತನ ಬೋಧನೆಯನ್ನು ಬೇಸರವಿಲ್ಲದೆ ಎಷ್ಟು ಹೊತ್ತಿನ ವರೆಗಾದರೂ ಕೇಳಬೇಕು ಎಂಬ ಅಭಿಲಾಷೆಯನ್ನು ಹೆಚ್ಚಿಸುವದಾಗಿದ್ದಿತು. ಇದೂ ಅಲ್ಲದೆ ಆ ಕಾಲದ ಶಾಸ್ತ್ರಿಗಳೂ ಗುರುಗಳೂ ಬಡವರನ್ನೂ ಹೀನಜಾತಿಯವರನ್ನೂ ಧಿಕ್ಕಾರಮಾಡಿ ಅವರ ಬಳಿಗೆ ಹೋಗುತ್ತಿರಲಿಲ್ಲ. ತಮ್ಮ ಬಳಿಗೆ ಬರಬೇಕೆಂದು ಅಪೇಕ್ಷಿಸಿದವರನ್ನು ಸೇರಿಸಿಕೊಳ್ಳುತ್ತಲೂ ಇರಲಿಲ್ಲ. ಯೇಸುವಾದರೋ ಬಡವರನ್ನೂ ಕೀಳುಜಾತಿಯವರನ್ನೂ ಪಾಪಿಗಳಾದ ಕೇವಲ ಅಧಮಾಧಮರನ್ನೂ ಹುಡುಕಿಕೊಂಡು ಹೋಗಿ ಅವರ ಕಷ್ಟಸುಖಗಳನ್ನು ವಿಚಾರಿಸಿ ಅವರ ಸ್ನೇಹವನ್ನು ಬಳಸಿ ಅವರನ್ನು ಹೇಗಾದರೂ ಉತ್ತಮಸ್ಥಿತಿಗೆ ತರಬೇಕೆಂದು ಅವನ್ನೇ ತನ್ನ ಉದ್ಯೋಗ ಮಾಡಿಕೊಂಡನು. ಮತ್ತು ಎಲ್ಲಿ ಹೋದರೂ ರೋಗಿಗಳನ್ನೂ ಕುರುಡರನ್ನೂ ಕುಂಟರನ್ನೂ ವಿಚಾರಿಸಿ ಅವರನ್ನು ಸ್ವಸ್ಥಮಾಡುತ್ತಿದ್ದನು. ಇಂತಹ ಸತ್ಪುರುಷನು ಸಕಲರ ಕಣ್ಮನಗಳನ್ನು ತನ್ನ ಕಡೆಗೆ ಆಕರ್ಷಿಸಿದ್ದು ಆಶ್ಚರ್ಯವಲ್ಲ. ದೆವ್ವಹಿಡಿದ ಬಹಳ ಜನರನ್ನೂ ರೋಗಪೀಡಿತರನ್ನೂ ಆತನ ಬಳಿಗೆ ಸಂಜೆಮುಂಜಾನೆಗಳಲ್ಲಿ ಕರಕೊಂಡು ಬರುತ್ತಿದ್ದರು. ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ವ್ಯಾಧಿಯಲ್ಲಿ ನೆಟ್ಟಗಿಲ್ಲದವರನ್ನು ವಾಸಿಮಾಡಿದನು. ಇದನ್ನು ಆತನು ಬೇಸರವಿಲ್ಲದೆ ಮಾಡುತ್ತಿರುವದನ್ನು ಆ ಬಡಪ್ರಜೆಗಳು ಆಶ್ಚರ್ಯದಿಂದ ಸ್ವೀಕರಿಸಿಕೊಂಡು—ಈತನು ನಮ್ಮ ಬೇನೆಗಳನ್ನು ತಾನೇ ಹೊತ್ತುಕೊಂಡನು; ನಮ್ಮ ರೋಗಗಳನ್ನು ಸ್ವಸ್ಥಮಾಡುತ್ತಾನೆ ಎಂದು ದೇಶದ ಸಕಲ ದಿಕ್ಕುಗಳಲ್ಲಿಯೂ ಸಾರತೊಡಗಿದರು.

ಯೇಸು ಕ್ರಿಸ್ತನು ಮಾಡಿದ ಮಹತ್ಕಾರ್ಯಗಳಲ್ಲಿ ಕೆಲವು ಸುವಾರ್ತೆಗಳೆಂಬ ಆತನ ಜೀವಚರಿತ್ರೆಯಲ್ಲಿ ಬರೆಯಲ್ಪಟ್ಟಿರುತ್ತವೆ. ಅವುಗಳ ಪೈಕಿ ಒಂದನ್ನು ಕುರಿತು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಮಾಡುತ್ತೇವೆ. ಆತನು ಕಪೆರ್ನೌಮ್ ಎಂಬ ಊರಿಗೆ ಮೊದಲು ಒಂದು ಸರ್ತಿ ಬಂದು ಆ ಹಳ್ಳಿಯಲ್ಲಿ ವಾಸಮಾಡುತ್ತಿದ್ದ ಜನಗಳಿಗೆ ಉಪದೇಶಮಾಡಿ ಅಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದ್ದನು. ಆ ಹಳ್ಳಿಯಲ್ಲಿ ಜನಗಳು ಬಹು ಬಡವರು; ಸಮೀಪದಲ್ಲಿದ್ದ ಗಲಿಲಾಯ ಸಮುದ್ರದಲ್ಲಿ ಮೀನು ಹಿಡಿದು ಜೀವನಮಾಡುತ್ತಿದ್ದರು. ಅವರಲ್ಲಿ ಪ್ರೌಢವಿದ್ಯೆಯನ್ನು ಕಲಿತವರು ಯಾರೂ ಇರಲಿಲ್ಲ. ಇಂತಹ ಪಾಮರರ ಮೇಲೆ ಯೇಸುವಿಗೆ ಬಹಳ ಕರುಣೆ ಇದ್ದಿತು. ಇವರನ್ನು ಆ ಕಾಲದ ಶಾಸ್ತ್ರಿಗಳೂ ಮತಬೋಧಕರೂ ಧಿಕ್ಕರಿಸಿ ಅವರಲ್ಲಿ ಹೋಗಿ ಕೂತುಕೊಂಡಾದರೂ ನಿಂತುಕೊಂಡಾದರೂ ಅವರ ಸಂಗಡ ಕಾಲ ವ್ಯಯಮಾಡುವುದು ತಮಗೆ ಕೇವಲ ಅಯೋಗ್ಯವೆಂದು ಭಾವಿಸಿದ್ದರು. ಇದನ್ನು ಯೇಸು ತಿಳಿದು ಅಂಥವರ ಬಳಿಗೆ ಆಗಾಗ್ಗೆ ಹೋಗಿ ಅವರಿಗೆ ದೇವರ ಪ್ರೀತಿಯನ್ನು ಕುರಿತು ಹೇಳಬೇಕೆಂದು ಪುನಃ ಕಪೆರ್ನೌಮಿಗೆ ಬಂದನು. ಆತನು ಅಲ್ಲಿದ್ದ ಒಬ್ಬನ ವಿಸ್ತಾರವಾದ ಮನೆಯಲ್ಲಿ ಕುಳಿತುಕೊಂಡಿರಲು ಆತನು ಬಂದಿದ್ದಾನೆಂಬ ವರ್ತಮಾನವು ಕೂಡಲೆ ಊರಲ್ಲೆಲ್ಲಾ ಹಬ್ಬಿತು. ಮತ್ತು ಬಹು ಜನರು ಆತನನ್ನು ನೋಡಬೇಕೆಂದು ಕೂಡಿಬಂದದ್ದರಿಂದ ಬಾಗಿಲಿನ ಬಳಿಯಲ್ಲಾದರೂ ಸ್ಥಳವಿಲ್ಲದ ಹಾಗೆ ಆ ಮನೆಯು ನೋಟಕರಿಂದ ತುಂಬಿತ್ತು. ಆತನು ಅವರಿಗೆ ದೇವರ ವಾಕ್ಯವನ್ನು ಹೇಳುತ್ತಿದ್ದನು ಅಷ್ಟರಲ್ಲಿ ಕೆಲವರು ಒಬ್ಬ ಪಾರ್ಶ್ವವಾಯು ರೋಗಿಯನ್ನು ಎಲ್ಲಿಂದಲೋ ನಾಲ್ಕು ಮಂದಿಯಿಂದ ಹೊರಿಸಿಕೊಂಡು ಬಂದು ಅವನನ್ನು ಯೇಸುವಿಗೆ ತೋರಿಸಬೇಕೆಂದು ಅಪೇಕ್ಷಿಸಿದರು. ಪಾರ್ಶ್ವವಾಯು ರೋಗವು ಒಬ್ಬನಿಗೆ ತಗಲಿದರೆ ಅದು ತಗಲಿದವನ ಅರ್ಧ ದೇಹವನ್ನು ಒಣಗಿದ ಕಟ್ಟಿಗೆಯಂತೆ ಜಡವಾಗಿಯೂ ನಿಸ್ಸಾರವಾಗಿಯೂ ಮಾಡಿ ಬಹಳ ನೋವನ್ನುಂಟುಮಾಡುವದಲ್ಲದೆ ರೋಗಿಯು ಬಿದ್ದ ಕಡೆಯೇ ಬಿದ್ದುಕೊಂಡಿರುವಂತೆ ಮಾಡುವದು. ಒಂದು ಪಾರ್ಶ್ವದ ಕಣ್ಣೂ ಕೈ ಕಾಲುಗಳೂ ರೋಗಿಯ ಹತೋಟಿ ತಪ್ಪಿ ಅವುಗಳನ್ನು ಅಲ್ಲಾಡಿಸುವದಕ್ಕೂ ಕೂಡ ಆಗಲಾರದು. ಜನರ ಗುಂಪು ಬಹಳವಾಗಿದ್ದದ್ದರಿಂದ ಅವರು ರೋಗಿಯನ್ನು ಆತನ ಹತ್ತಿರಕ್ಕೆ ತರುವದು ಅಸಾಧ್ಯವಾಯಿತು. ಅವರು ಇದಕ್ಕೆ ಏನು ಉಪಾಯಮಾಡಬೇಕೆಂದು ಯೋಚಿಸಿ ಅವರು ಆ ಮಾಳಿಗೆಯ ಮನೆಯ ಮೇಲೆ ಹತ್ತಿ ರೋಗಿಯನ್ನು ತಮ್ಮ ಸಂಗಡಲೇ ಸೇದಿಕೊಂಡು ಆ ಮನೆಯ ದೊಡ್ಡ ಗವಾಕ್ಷದಿಂದ ಪಾರ್ಶ್ವವಾಯು ರೋಗಿಯನ್ನು ಯೇಸು ಕೂತು ಇದ್ದಲ್ಲಿಗೆ ಸರಿಯಾಗಿ ಇಳಿಬಿಟ್ಟರು. ಆಗ ಯೇಸು ಅವರ ನಂಬಿಕೆಯನ್ನೂ ರೋಗಿಯ ಪರಿತಾಪವಾದ ಸ್ಥಿತಿಯನ್ನೂ ನೋಡಿ ಅತ್ಯಂತ ಪರಿತಾಪಪಟ್ಟನು. ಮತ್ತು ಆ ರೋಗಿಯ ದೇಹವನ್ನು ಪಾರ್ಶ್ವವಾಯು ರೋಗವು ಬಾಧಿಸುತ್ತಿರುವದು ಮಾತ್ರವಲ್ಲ, ಅವನ ರೋಗಕ್ಕೆ ಕಾರಣವಾದ ಪಾಪವು ಅವನ ಮನಸ್ಸನ್ನು ಪೀಡಿಸಿ ಕೇವಲ ಖಿನ್ನಸ್ಥಿತಿಗೆ ಅವನನ್ನು ತಂದಿರುತ್ತದೆಂದು ಯೇಸುವಿಗೆ ತಟ್ಟನೆ ತಿಳಿಯಿತು. ಯೇಸು ಅವನ ಮನೋವ್ಯಾಕುಲವನ್ನು ಸೂಕ್ಷ್ಮ ದೃಷ್ಟಿಯಿಂದ ಭೇದಿಸಿ ತಿಳಿದು ರೋಗದ ಮೂಲವನ್ನೇ ಹೋಗಲಾಡಿಸಬೇಕೆಂದು ರೋಗಿಯನ್ನು ದೃಷ್ಟಿಸಿ ನೋಡಿ—ಮಗನೇ, ನಿನ್ನನ್ನು ಕಾಡುವ ಪಾಪಗಳು ನಿನಗೆ ಕ್ಷಮಿಸಲ್ಪಡಲಿ ಎಂದು ಹೇಳಿದನು. ರೋಗಿಗೆ ವಾಸಿಯಾಯಿತೋ ಇಲ್ಲವೋ ಸುತ್ತಲಿರುವವರಿಗೆ ತಿಳಿಯಲಿಲ್ಲ. ಯಾಕೆಂದರೆ ರೋಗಿಯು ಇನ್ನೂ ಹಾಗೆಯೇ ನಿಶ್ಚೇಷ್ಟಿತನಾಗಿ ಅಲುಗಾಡದೆ ಮಲಗಿದ್ದನು. ಇದನ್ನು ನೋಡಿದವರಲ್ಲಿ ಕೆಲವರು ಅವನಿಗೆ ಇನ್ನೂ ವಾಸಿಯಾಗಲಿಲ್ಲವೆಂದು ತಿಳಿದು ಯೇಸು ಬರೀ ಡಂಭದ ಮಾತುಗಳಿಂದ ತನ್ನ ಥೋರಣೆಯನ್ನು ತೋರಿಸುತ್ತಾನೆಯೇ ಹೊರತು ಅವನನ್ನು ವಾಸಿಮಾಡಲಾರನು. ಮತ್ತು ದೇವರೊಬ್ಬನೇ ಹೊರತು ಮತ್ತ್ಯಾರೂ ಪಾಪಗಳನ್ನು ಪರಿಹರಿಸಲಾರರು. ಯೇಸು ಮನುಷ್ಯನಾಗಿದ್ದು ಯಾಕೆ ಇಂಥಾ ಡಂಭ ಕೊಚ್ಚಿಕೊಳ್ಳುತ್ತಾನೆ? ಇದು ದೇವದೂಷಣೆ, ಮಹಾಪಾಪವೆಂದು ತಮ್ಮ ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದರು. ಹೀಗೆ ಅಂದುಕೊಳ್ಳುತ್ತಿರುವದನ್ನು ಯೇಸು ತನ್ನ ಆತ್ಮದಲ್ಲಿ [illegible] ಕೊಂಡು ಅವರಿಗೆ ನೀವು ನಿಮ್ಮ ಮನಸ್ಸಿನಲ್ಲಿ ಯಾಕೆ ಹೀಗೆ ಅಂದುಕೊಳ್ಳುತ್ತೀರಿ? ರೋಗಿಗೆ ಪಾಪಗಳನ್ನು ಪರಿಹರಿಸುವದು ಅವನನ್ನು ವಾಸಿಮಾಡುವದು [illegible] ಸುಲಭವಲ್ಲ. ಆದರೆ ಅವನಿಗೆ ಪಾಪಪರಿಹಾರವೂ ರೋಗಪರಿಹಾರವೂ [illegible] ಕಿದ್ದು ನಿಮಗಿನ್ನೂ ಗೊತ್ತಾಗಲಿಲ್ಲ. ಆದ್ದರಿಂದ ನೀವು ಗುಣುಗುಟ್ಟು[illegible] ಆದರೆ ಅವನ ಪಾಪವೇ ಅವನನ್ನು ರೋಗಕ್ಕಿಂತ ಹೆಚ್ಚಾಗಿ ಬಾಧಿಸುತ್ತಿದೆ. [illegible] ನನಗೆ ತಿಳಿಯಿತು. ನಿಮಗೆ ಅದು ಮರೆಯಾಗಿದೆ. ಅವನಿಗೆ ರೋಗ [illegible] ಎದ್ದು ತಿರುಗಾಡಿದ್ದನ್ನು ನೀವು ನೋಡಿದರೆ ಅವನಿಗೆ ಪಾಪವು ರೋಗವು [illegible] ಹಾರವಾಯಿತೆಂದು ನೀವು ನಂಬುವಿರಿ ಎಂದು ಹೇಳಿ ರೋಗಿಯ ಕಡೆಗೆ [illegible] ಕೊಂಡು—ನೀನು ಎದ್ದು ಹಾಸಿಗೆಯನ್ನು ಸುತ್ತಿ ಎತ್ತಿಕೊಂಡು [illegible] ಹೋಗು ಅಂದನು. ಅವನ ಕೈಕಾಲುಗಳು ಕೂಡಲೆ ನೆಟ್ಟಗಾಗಿ ಯೇಸು [illegible] ಹಾಗೆ ಅವನು ಎದ್ದುಹೋದನು. ನೋಡಿದವರು ಈತನು ಸಾಕ್ಷಾತ್ [illegible] ಎಂದು ನಂಬಿದರು.

ಯುದ್ಧದ ಸಮಾಚಾರಗಳು.

ನಮ್ಮ ಪಕ್ಷದವರು ನುಗ್ಗಿಹೋಗುತ್ತಲೇ ಇದಾರೆ.

ರಷ್ಯಾದವರು ಜರ್ಮನಿಯವರ ಮೇಲೆ ನುಗ್ಗುವುದು.

ಈ ವಾರ ಬಂದಿರುವ ತಂತೀವರ್ತಮಾನಗಳನ್ನು ಒಟ್ಟು ಕೂಡಿಸಿ [illegible] ದರೆ ನಮ್ಮ ಪಕ್ಷದವರಿಗೇ ಅನುಕೂಲವಾಗಿರುವಂತೆ ಗೊತ್ತಾಗು[illegible] ಬಾಲ್ಕನ್ ಸಂಸ್ಥಾನಗಳಲ್ಲಿ ನಡೆಯುವ ಕಾರ್ಯಗಳು ಸ್ಪಷ್ಟವಾಗಿಯೂ [illegible] ತೃಪ್ತಿಕರವಾಗಿಯೂ ಇಲ್ಲ.

ಪಶ್ಚಿಮ ರಣರಂಗದಲ್ಲಿ.

ನಮ್ಮ ಪಕ್ಷದವರು ಗೆದ್ದುಕೊಂಡಿರುವ ಪ್ರದೇಶಗಳನ್ನು ಜರ್ಮನಿಯ[illegible] ಸುಮ್ಮನೆ ಬಿಟ್ಟುಕೊಡಲಿಲ್ಲ. ಅವರು ಆ ಠಾಣ್ಯಗಳನ್ನು ಪುನಹ ಗೆದ್ದು[illegible] ಬೇಕೆಂದು ಪದೇ ಪದೇ ನಮ್ಮ ಪಕ್ಷದ ಸೈನ್ಯಗಳ ಮೇಲೆ ನುಗ್ಗಿ ಕದನ[illegible] ದರು. ಆದರೆ ಒಂದೆರಡು ಠಾಣ್ಯಗಳ ಹೊರತು ಉಳಿದ ಪ್ರದೇಶಗಳ[illegible] ನಮ್ಮ ಪಕ್ಷದವರು ಶತ್ರುವಿಗೆ ಬಿಟ್ಟುಕೊಡದೆ ಬಹಳ ಪರಾಕ್ರಮದಿಂದ [illegible] ಕೊಳ್ಳುತ್ತಾ ಬಂದಿದಾರೆ. ಬ್ರಿಟಿಷರೂ ಫ್ರೆಂಚರೂ ಗೆದ್ದು ಸ್ವಾಧೀನಪಡಿ[illegible] ದಿರುವ ಠಾಣ್ಯಗಳನ್ನು ಗೆದ್ದುಕೊಳ್ಳುವುದಕ್ಕಾಗಿ ಅನೇಕ ವೇಳೆ ಶತ್ರುಸೈ[illegible] ನುಗ್ಗಿ ಬಂದರೂ ಅವರಿದ್ದ ಕಂದಕಗಳ ಸಮೀಪಕ್ಕೂ ಬರಲಾರದೆ ಹೊ[illegible] ಮತ್ತು ಫಿರಂಗಿಗಳ, ಬಂದೂಕುಗಳ ಗುಂಡುಗಳಿಗೆ ಸಿಕ್ಕಿ ಅನೇಕರು [illegible] ನಷ್ಟಪಟ್ಟರು. ಬ್ರಿಟಿಷರು ಇರುವ ಒಂದು ಭಾಗದಲ್ಲಿ ಜರ್ಮನಿಯವರು [illegible] ಬಂದು ಒಂದು ಕೋಟೆಯಲ್ಲಿ ಒಂದು ಭಾಗವನ್ನು ಮತ್ತೆ ಗೆದ್ದುಕೊಂ[illegible] ಫ್ರೆಂಚ್ ಸೈನಿಕರು ಗೆದ್ದುಕೊಂಡಿದ್ದ ಕಂದಕಗಳ ಪೈಕಿ ಕೆಲವನ್ನು [illegible] ಮತ್ತೆ ಸ್ವಾಧೀನಪಡಿಸಿಕೊಂಡರು. ಇನ್ನೊಂದು ಠಾಣ್ಯದಲ್ಲಿ ಬ್ರಿಟಿಷರು [illegible] ನಿಯವರ ಅಪಾರ ಸೈನ್ಯಗಳನ್ನು ಹಿಂದಕ್ಕೆ [illegible]ಲ್ಲದೆ ಅವರು [illegible] ಸಾವಿರ ಅಡಿಯಷ್ಟು [illegible] ಮುಂದಕ್ಕೆ ನುಗ್ಗಿಹೋಗಿ ಜರ್ಮನಿಯವರ [illegible] ಕೆಲವು ಕಂದಕಗಳನ್ನು ಆಕ್ರಮಿಸಿಕೊಂಡಿದಾರೆ. ಲೂಸ್ ಎಂಬ [illegible] ವನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಜರ್ಮನಿಯವರು ನುಗ್ಗಿ ಬಂದು [illegible] ಪರಾಕ್ರಮದಿಂದ ಕಾದಿದರು. ಆದರೆ ಅವರು ನೂರಾರು ಸಾವಿರಾರು ಸೈನಿಕ[illegible] ಕಳೆದುಕೊಂಡು ವಾಪಸು ಹೋಗಬೇಕಾಯಿತು. ರಣರಂಗದಲ್ಲಿ ಸಾ[illegible] ಹೆಣಗಳನ್ನು ಬಿಟ್ಟುಹೋದರು.

ಅಲ್ಲಿಂದ ದಕ್ಷಿಣಕ್ಕೆ ಫ್ರೆಂಚರು ಇನ್ನು ಸ್ವಲ್ಪ ಮುಂದಕ್ಕೆ ನು[illegible] ಹೋದರು. ಅವರು ಒಂದು ಗ್ರಾಮವನ್ನೂ ಒಂದು ಗುಡ್ಡವನ್ನೂ ಗೆದ್ದು [illegible] ಮಾಡಿಕೊಂಡದ್ದಲ್ಲದೆ ಒಂದು ಸಾವಿರಕ್ಕಿಂತಲೂ ಹೆಚ್ಚು ಸೈನಿಕರನ್ನು [illegible] ಹಿಡಿದು ತಂದಿದಾರೆ. ಇನ್ನೊಂದು ಠಾಣ್ಯದಲ್ಲಿ ಫ್ರೆಂಚರು ಶತ್ರುವಿನ [illegible] ಗಳನ್ನೂ, ಎರಡು ಕೋಟೆಗಳನ್ನೂ ಗೆದ್ದುಕೊಂಡರು. ಅಲ್ಲಿ ಫ್ರೆಂಚರಿ[illegible] ಸೈನಿಕರು ಕೈಸೆರೆ ಸಿಕ್ಕಿದರು; ಮತ್ತು ಕೆಲವು ಮೆಷೀನ್ ಫಿರಂಗಿ[illegible] ಕಿತ್ತುಕೊಂಡು ಬಂದಿದಾರೆ. ಜರ್ಮನಿಯವರು ಈ ಠಾಣ್ಯಗಳನ್ನು [illegible] ಗೆದ್ದುಕೊಳ್ಳಬೇಕೆಂದು ತುಂಬಾ ಸಾಹಸಪಟ್ಟರು. ಅವರ ಸಾಹಸವು ವ್ಯ[illegible] ವಾಯಿತು; ಅವರ ಕಡೆ ಅನೇಕ ಸೈನ್ಯಗಳನ್ನು ಕಳೆದುಕೊಂಡರು.

ಬೆಲ್ಜಿಯಮ್‌ನಲ್ಲೂ, ದಕ್ಷಿಣ ಭಾಗದಲ್ಲೂ ಜರ್ಮನಿಯವರು ಬೆಲ್ಜಿ[illegible] ರಮೇಲೂ, ಫ್ರೆಂಚರ ಮೇಲೂ ನುಗ್ಗಿ ಕದನಮಾಡಿದರು; ಅವರಿಗೆ ಪ್ರಯ[illegible] ನವಾಗುವುದಕ್ಕೆ ಪ್ರತಿಯಾಗಿ ಅವರ ಕಡೆ ಅನೇಕರನ್ನು ಕಳೆದುಕೊಂಡು [illegible] ಟ್ಟರು. ಬೆಲ್ಜಿಯಮ್‌ನಲ್ಲಿ ಯುದ್ಧ ನಡೆದಾಗಲೆಲ್ಲಾ ಬ್ರಿಟಿಷ್ ಪಡೆ[illegible] ಸಮುದ್ರ ಕಡೆಯಿಂದ ಬಂದು ಬೆಲ್ಜಿಯರ್ನರಿಗೆ ಬೆಂಬಲಕೊಟ್ಟವು. [illegible] ಅನೇಕ ಜಹಜುಗಳು ಹೊಸದಾಗಿ ತಯಾರಾಗಲ್ಪಟ್ಟವುಗಳೆಂದು [illegible] ಬರುತ್ತದೆ.—ಫ್ರೆಂಚರು ಒಂದು ದೊಡ್ಡ ವಿಮಾನಯಂತ್ರವನ್ನು ಕಳೆದು[illegible] ರು. ಆದರೆ ಅವರು ಜರ್ಮನಿಯ ಒಂದು ವಿಮಾನಯಂತ್ರವನ್ನು ಕೆಳ[illegible] ಕೊಂಡು ಅದರಲ್ಲಿದ್ದ ವಿಮಾನಚಾರರನ್ನು ಕೈಸೆರೆ ಹಿಡಿದುಬಿಟ್ಟರು. [illegible] ರಂಗದ ಯುದ್ಧವಾರ್ತೆಯು ತೃಪ್ತಿಕರವಾಗಿದೆ.

ಪೂರ್ವ ರಣರಂಗದಲ್ಲಿ.

ಜರ್ಮನಿಯವರು ಮುಂದು ಮುಂದಕ್ಕೆ ನುಗ್ಗಿ ಹೋಗುವುದು [illegible] ಹೋಯಿತೆಂದು ತಂತೀವರ್ತಮಾನಗಳಿಂದ ಗೊತ್ತಾಗುತ್ತದೆ. ಮಹಾ [illegible] ವಾದ ಕದನಗಳು ನಡೆದವು. ಅವೆರಲ್ಲೆಲ್ಲಾ ಸಾಮಾನ್ಯವಾಗಿ ರಷ್ಯಾದ[illegible] ಶತ್ರುವಿನ ಮೇಲೆ ನುಗ್ಗಿ ಕದನಮಾಡಿರುತ್ತಾರೆ. ರಷ್ಯಾದವರು ಕೆಲವ[illegible] ಮುಂದಕ್ಕೆ ನುಗ್ಗಿ ಬಂದಿದಾರೆಂದು ಜರ್ಮನಿಯವರೇ ಹೇಳಿ ಒಪ್ಪಿಕೊಂ[illegible] ವರು. ರಷ್ಯಾದವರ ಕಡೆಯಿಂದ ಬಂದಿರುವ ತಂತಿವರ್ತಮಾನಗಳು ಕೆಲ[illegible] ಕರಲ್ಲಿ ಕೈಸೆರೆ ಹಿಡಿದವರೊಳಗೆ ೪,೦೦೦ ಸೈನ್ಯವನ್ನು ರಷ್ಯಾದವರು [illegible] ನಗರಕ್ಕೆ ಕರೆದುತಂದಿದಾರೆಂದು ಹೇಳುತ್ತವೆ; ಆದರೆ ಇವರೆಲ್ಲಾ [illegible] ಗಳಲ್ಲಿ ಕೈಸೆರೆ ಹಿಡಿಯಲ್ಪಟ್ಟವರೋ ಅಲ್ಲವೋ ಅದು ಮಾತ್ರ [illegible] ಕೈಸೆರೆ ಹಿಡಿಯಲ್ಪಟ್ಟ ಸೈನಿಕರು ಹುಮಾರಾಗಿ ಎಲ್ಲರೂ ಹಂಗೇರಿಯ[illegible] ರಷ್ಯಾದವರು ಇವರನ್ನು ಗುಡ್ಡಗಳಿಂದ ಕಣಿವೆಗಳಿಗೆ ಓಡಿಸಿ ಅಲ್ಲಿ ಸುತ್ತಿ[illegible] ಅವರನ್ನೆಲ್ಲಾ ಕೈಸೆರೆ ಹಿಡಿದುಬಿಟ್ಟರು. ಇತರ ಠಾಣ್ಯಗಳಲ್ಲಿ ರಷ್ಯಾದ[illegible] ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡಂತೆಯೂ, ಸೈನಿಕರನ್ನು ಕೈಸೆರೆ [illegible] ಯೂ ತಂತೀವರ್ತಮಾನಗಳು ಹೇಳುವವು. ಈಗ ಕದನಗಳಾಗುತ್ತಿರುವ [illegible] ಪ್ರದೇಶವು ಬಹಳ ಶೀತವಾದದ್ದು, ತುಂಬಾ ಕೊಚ್ಚೆ ಕೆಸರು ಉಳ್ಳದ್ದು. [illegible] ಕಾರಣ ಎರಡು ಪಕ್ಷಗಳಿಗೂ ಮುಂದರಿಸಿ ನುಗ್ಗಿ ಹೋಗುವುದು [illegible] ಪ್ರಯಾಸ, ಮಹತ್ತು ಸಾವಕಾಶ.

ರಷ್ಯಾ ಸೀಮೆಯಲ್ಲಿ ಕೊಲೆಯಾಗಿ ಬಿದ್ದ ಜರ್ಮನಿ ಹುದ್ದೆದಾ[illegible] ಕನ್ನು ಹುಡುಕಿದಾಗ ಕೆಲವು ಕಾಗದಗಳು ಸಿಕ್ಕಿದವು. ಅವನ್ನು [illegible] ದರೆ ಜರ್ಮನಿಯವರಿಗೆ ಧೈರ್ಯ ಕುಂದಿರುವಂತೆ ಗೊತ್ತಾಗುತ್ತದೆ. [illegible] ಹುದ್ದೆದಾರನು ಬರೆಯುವುದೇನೆಂದರೆ—ರಷ್ಯಾ ಸೈನಿಕರು ಸಿಕ್ಕಿದ[illegible] ಕೊಂಡು ಹೋಗುತ್ತಿದಾರೆ. ನಮ್ಮ ಸ್ಥಾನಗಳನ್ನು ನಾವು ಕಾಪಾಡಿಕೊಳ್ಳ[illegible] ತುಂಬಾ ಪ್ರಯಾಸವಾಗುವಂಥಾ ಸಮಯ ಪ್ರಾಪ್ತವಾಗುವಂತಿದೆ. [illegible] ಕ್ಕೆಲ್ಲಾ ಗೆದ್ದುಬಿಡುತ್ತೇವೆಂದು ಕೊಚ್ಚಿಕೊಳ್ಳುತ್ತಿದ್ದವರು ಅಂಡ್, [illegible]

ಯುದ್ಧ ಶಿಕ್ಷಣ ಬಗ್ಗೆ ಜಯವನ್ನು ಗೆಲ್ಲುತ್ತೇವೆಂದೂ ಊಹಿಸಲಿಲ್ಲ. ಈ ಯುದ್ಧವನ್ನು ನಮ್ಮ ಮುಖ್ಯ ಕೆಲಸ ಹಾಗೆ ಬಿಡಬೇಕು. ಇಷ್ಟೆಲ್ಲ ಉದ್ದೇಶಗಳನ್ನು ಹೊಂದಿರುವುದು—ರಷ್ಯಾದವರು ಹಿಮ್ಮೆಟ್ಟಿ ಹೋದಾಗಲೂ ನಮ್ಮ ಶತ್ರುಗಳು ಭಯಂಕರವಾದಷ್ಟು ನಷ್ಟವನ್ನುಂಟುಮಾಡಿದರು. ವಿಲ್‌ಹೆಲ್ಮ್ [ಅಂದರೆ, ಜರ್ಮನಿಯ ಕೈಸರ್ ದೊರೆ] ಜರ್ಮನಿಯ ಸರ್ವಸ್ವವನ್ನೂ ತೆಗೆದು ಉಪಯೋಗಿಸಿಕೊಂಡಾಯಿತು. ಇನ್ನು ಉಳಿದಿರುವ (ರಿಜರ್ವ್) ಸೈನ್ಯವೇನೂ ಇಲ್ಲ. ಜರ್ಮನಿಯ ದಳಪತಿಯೊಬ್ಬನು ಬರೆಯುವುದು—ಕೈಸರ್ ದೊರೆಯು ಈಗ ಹಿಡಿದಿರುವ ಪ್ರದೇಶಗಳನ್ನೂ ಜರ್ಮನಿಯ ಸ್ವಾಸ್ಥ್ಯಗಳನ್ನೂ ಒಪ್ಪಿಸಿಬಿಟ್ಟು ಸಂಧಿ ಮಾಡಿಕೊಳ್ಳಬೇಕೆಂದು ಕುತೂಹಲ ಪಡುತ್ತಾರೆ; ಆದರೆ ಮಿತ್ರಮಂಡಲಿಯವರು ಆ ಮಾತನ್ನು ತಮ್ಮ ಕಿವಿಗೇ ಹಾಕಿಕೊಳ್ಳುವುದಿಲ್ಲ.

ಯುದ್ಧಸಾಲಿನ ಮಧ್ಯಕ್ಕೆ ಸ್ವಲ್ಪ ಉತ್ತರ ಭಾಗದಲ್ಲೇ ವಿಶೇಷವಾದ ಕದನ ನಡೆಯುತ್ತಿದೆ. ಅಲ್ಲಿ ಜರ್ಮನಿಯ ದಳಪತಿಯಾದ ಹಿಂಡೆಂಬರ್ಗ್ ಎಂಬಾತನು ಒಂದು ಠಾಣ್ಯದಲ್ಲಿ ರಷ್ಯಾದವರ ಸಾಲನ್ನು ಒಡೆದು ನುಗ್ಗಿ ಹೋಗಿ ಬಳಿಕ ಆ ಠಾಣ್ಯವನ್ನು ಬಿಟ್ಟು ಇನ್ನೊಂದು ಠಾಣ್ಯದ ಮೇಲೆ ಸೈನ್ಯವನ್ನು ನುಗ್ಗಿಸಿ ಕದನಮಾಡುತ್ತಿರುವನು. ಆದರೆ ರಷ್ಯಾದವರು ಎಂದಿಗಿಂತಲೂ ವಿಶೇಷ ಪರಾಕ್ರಮವನ್ನು ತೋರಿಸುತ್ತಾ ಶತ್ರುವಿಗೆ ಸ್ವಲ್ಪವೂ ಸ್ಥಳ ಕೊಡದೆ ತಮ್ಮ ಠಾಣ್ಯವನ್ನು ಕಾಪಾಡಿಕೊಳ್ಳುತ್ತಿದ್ದಾರೆ. ರಷ್ಯಾದವರು ಪ್ರತಿ ಸಲವೂ ಜರ್ಮನಿಯವರನ್ನು ಸೋಲಿಸಿ ಓಡಿಸುತ್ತಿದ್ದಾರೆಂದೂ, ಆ ಠಾಣ್ಯದಲ್ಲಿ 2,300 ಜರ್ಮನಿ ಸೈನಿಕರನ್ನು ಕೈಸೆರೆ ಹಿಡಿದುಕೊಂಡಿದ್ದಾರೆಂದೂ, ಗೆಲಿಷಿಯಾ ಎಲ್ಲೆಕಟ್ಟಿನಲ್ಲಿ 1,176 ಸೈನಿಕರನ್ನು ಕೈಸೆರೆ ಹಿಡಿದುಕೊಂಡಿದ್ದಾರೆಂದೂ ಹೇಳಲಾಗಿದೆ.

ಜರ್ಮನಿಯವರು ಚಳಿಗಾಲವನ್ನು ಕಳೆಯುವುದಕ್ಕೋಸ್ಕರ ತಮ್ಮ ಠಾಣ್ಯಗಳನ್ನು ನೆಲಸುತ್ತಿದ್ದಾರೆಂದೂ, ಅವರು ಮುಂದರಿಸಿ ನುಗ್ಗಿ ಹೋಗುವುದು ಕೊನೆಗೊಂಡಿತೆಂದೂ ತಿಳಿಸಲ್ಪಟ್ಟಿದೆ. ಇದಲ್ಲದೆ ಜರ್ಮನಿಯ ಅನೇಕ ಉದ್ಯೋಗದಾರರು ಆತ್ಮಹತ್ಯಮಾಡಿಕೊಳ್ಳುತ್ತಿರುವುದಾಗಿಯೂ, ಇದುವರೆಗೆ 111 ಮಂದಿ ಉದ್ಯೋಗದಾರರು ಯುದ್ಧಭೂಮಿಯಲ್ಲಿ ಪ್ರಾಣ ಕಳೆದುಕೊಂಡರೆಂದೂ ಹೇಳಲಾಗಿದೆ.

ಬ್ರಿಟಿಷ್ ಮತ್ತು ರಷ್ಯಾ ಸಬ್‌ಮೆರಿನುಗಳು ಬ್ಯಾಲ್ಟಿಕ್ ಕಡಲಿನಲ್ಲಿ ಬಹಳ ಚುರುಕಾಗಿ ಕಾರ್ಯಗಳನ್ನು ನಡೆಸುತ್ತಿರುವವು. ಇದರಿಂದ ಜರ್ಮನಿಗೂ ಸ್ವೀಡನ್‌ಗೂ ವ್ಯಾಪಾರ ನಡೆಯದಂತೆ ವಿಶೇಷ ಅಡ್ಡಿ ಮಾಡಲಾಯಿತು.

ಇಟಲಿ.

ಇಟಲಿಯಿಂದ ಬಂದಿರುವ ವರ್ತಮಾನಗಳಲ್ಲಿ ವಿಶೇಷವೇನೂ ಕಾಣುವುದಿಲ್ಲ. ಫಿರಂಗಿ ಗುಂಡುಗಳ ಹಾರಾಟವೂ, ಕೆಲವು ಸಣ್ಣ ಕದನಗಳೂ ನಡೆದಿವೆ.

ಟರ್ಕಿ.

ಗ್ಯಾಲಿಪೊಲಿ ಪರ್ಯಾಯದ್ವೀಪದಲ್ಲಿ ಕದನವಾಯಿತು. ಟರ್ಕಿಯವರು ಹಿಮ್ಮೆಟ್ಟಿಸಲ್ಪಟ್ಟರು.—ಗಲ್ಲಿಪೊಲಿ ಅರ್ಧ ದ್ವೀಪದಲ್ಲಿ ವಿಶೇಷ ಕಾರ್ಯಗಳೇನೂ ನಡೆದಂತೆ ಕಾಣುವುದಿಲ್ಲ. ನಮ್ಮ ಪಕ್ಷದವರು ಬಹಳವಾಗಿ ಹೊಸ ಸೈನ್ಯಗಳನ್ನು ಸಾಗಿಸಿಕೊಂಡು ಹೋಗಿ ಅಲ್ಲಿ ಇಳಿಸಿದ್ದಾರೆ.

ಕೆಲವು ವಾರಗಳ ಹಿಂದೆ ಮಾರ್ಮೊರಾ ಕಡಲಿನಲ್ಲಿ ಒಬ್ಬ ಬ್ರಿಟಿಷ್ ನಾವಿಕ ಉದ್ಯೋಗದಾರನ ವಿಷಯ ಸೂಕ್ಷ್ಮವಾಗಿ ತಿಳಿಸಲ್ಪಟ್ಟಿತ್ತು. ಈಚೆಗೆ ಆ ಸಾಹಸದ ಸಂಭವದ ವಿಷಯದಲ್ಲಿ ಕೆಲವು ವಿವರಗಳು ಪ್ರಕಟವಾಗಿವೆ. ಲೆಫ್ಟಿನೆಂಟ್ ಡ್ಯಾಕ್ರೆಸ್ ಎಂಬ ಆ ನಾವೆಯ ಉದ್ಯೋಗದಾರನು ಸ್ವಲ್ಪ ದೂರ ಈಜಿಕೊಂಡು, ಸ್ವಲ್ಪ ದೂರ ಒಂದು ಮರದ ತುಂಡಿನ ಮೇಲೂ ಹೋಗಿ ರಾತ್ರಿ ಹೊತ್ತಿನಲ್ಲಿ ತೀರವನ್ನು ಹತ್ತಿದನು. ಆತನು ಬಳಿಕ ಗುಡ್ಡಗಳ ಮೇಲೆ ಹತ್ತಿ ರೈಲ್ ರಸ್ತೆಯನ್ನು ನಾಶಮಾಡಬೇಕೆಂದು ಪ್ರಯತ್ನಪಟ್ಟು ಅರ್ಧ ಗಂಟೆ ಹೊತ್ತಿನಲ್ಲಿ ಕಂಭಗಳ ಬಳಿ ಸೇರಿದನು. ಅಲ್ಲಿ ಟರ್ಕಿ ಸೈನಿಕರಿದ್ದು ಸೇತುವೆಯನ್ನು ಪಹರೆ ಕಾಯುತ್ತಿದ್ದರು. ಅಲ್ಲಿಂದ ಎದುರು ಕಡೆಗೆ ಹೋಗಿ ನೋಡಿದಾಗ ಅಲ್ಲಿ ಸೈನಿಕರು ರಸ್ತೆ ಮತ್ತು ಸೇತುವೆಗಳನ್ನು ಕಾಯುತ್ತಿದ್ದರು. ಕಡೆಯಲ್ಲಿ ಆತನು ರೈಲಿಗೆ ವಿಶೇಷ ನಷ್ಟವನ್ನುಂಟುಮಾಡುವಂಥಾ ಒಂದು ಸ್ಥಳವನ್ನು ಹುಡುಕಿದನು. ಅಲ್ಲಿ ಆತನು ಡೈನಮೈಟನ್ನು ಇಟ್ಟಿದ್ದನ್ನು ಕಾವಲಿನವರು ಕಂಡರು. ಆಗ ಆತನು ಡೈನಮೈಟನ್ನು ಹತ್ತಿಸಿ ತನ್ನ ಕೈಯಲ್ಲಿದ್ದ ಪಿಸ್ತೂಲಿನಿಂದ ಬರುತ್ತಿದ್ದ ಟರ್ಕಿಯವರ ಮೇಲೆ ಹೊಡೆದು ಓಡಿಹೋದನು. ಆತನು ತೀರವನ್ನು ಸೇರುವುದಕ್ಕೆ ಬಹಳ ದೂರದ ತನಕ ಓಡುತ್ತಲೇ ಹೋಗಬೇಕಾಯಿತು. ಆತನು ಹತ್ತಿಸಿಟ್ಟಿದ್ದ ಡೈನಮೈಟು (ಸಿಡಿಮದ್ದು) ಹತ್ತಿಕೊಂಡು ರೈಲ್ ರಸ್ತೆಯು ಒಡೆದು ನಾಶವಾಯಿತು. ಆಗ ಆ ಉದ್ಯೋಗದಾರನು ಸಮುದ್ರ ತೀರದ ಸ್ವಲ್ಪ ದೂರ ಈಜಿಕೊಂಡು ಹೋಗುತ್ತಾ ಶಿಳ್ಳುಹಾಕಿ ಸಮುದ್ರದೊಳಗಿದ್ದ ಬ್ರಿಟಿಷ್ ಸಬ್‌ಮೆರೀನ್ ಎಂಬ ಹಡಗಿಗೆ ತನ್ನ ಸುಳಿವು ತಿಳಿಯಪಡಿಸಿದನು. ಆದರೆ ಅದರೊಳಗಿದ್ದವರಿಗೆ ಅದು ಕೇಳಲಿಲ್ಲ. ಆಗ ಆ ಇಂಗ್ಲಿಷ್ ಉದ್ಯೋಗದಾರನು ಹಿಂತಿರುಗಿ ಸಮುದ್ರದ ತೀರಕ್ಕೆ ಹೋಗಿ ಅಲ್ಲಿ ವಿಶ್ರಮಿಸಿಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಆತನು ತನ್ನ ಆಯುಧಗಳನ್ನೆಲ್ಲಾ ತೀರದಲ್ಲೇ ಬಿಟ್ಟು ಸಮುದ್ರಕ್ಕೆ ಇಳಿದು ಒಂದು ಮೈಲಿ ದೂರ ಈಜಿಕೊಂಡು ಹೋಗುವಷ್ಟರಲ್ಲೇ ಬ್ರಿಟಿಷ್ ಜಹಜು ಆತನನ್ನು ನೀರಿನಿಂದ ಎತ್ತಿ ಕರೆದುಕೊಂಡಿತು. ಅಷ್ಟು ಹೊತ್ತಿಗೆ ಬೆಳಗಿನ ಝಾಮವಾಯಿತು. ಟರ್ಕಿಯವರು ಜೋರಾಗಿ ಗುಂಡುಗಳನ್ನು ಹೊಡೆಯುತ್ತಿದ್ದರು. ಲೆಫ್ಟಿನೆಂಟ್ ಡ್ಯಾಕ್ರೆಸನು ಸ್ವಲ್ಪವೂ ಗಾಯಪಡದೆ ತಪ್ಪಿಸಿಕೊಂಡು ಬಂದನು.

ಬಾಲ್ಕನ್ ಸಂಸ್ಥಾನಗಳು.

ಬಾಲ್ಕನ್ ಸಂಸ್ಥಾನಗಳ ಸ್ಥಿತಿಗತಿ ಹೀಗಾಗಿದೆ ಎಂದು ಮೊದಲು ತಿಳಿದುಕೊಳ್ಳುವುದು ಒಳ್ಳೇದು. ಹಿಂದೆ ಬಲ್ಗೇರಿಯಾ, ಸರ್ಬಿಯಾ, ಗ್ರೀಸ್, ಈ ಮೂರು ರಾಜ್ಯಗಳೂ ಸೇರಿ ಟರ್ಕಿಯ ಮೇಲೆ ಯುದ್ಧಮಾಡಿ ಜಯಪ್ರದ ಹೊಂದಿದವು. ಯುದ್ಧದ ಅಂತ್ಯದಲ್ಲಿ ಟರ್ಕಿ ರಾಜ್ಯಕ್ಕೆ ಸೇರಿದ್ದ ಬಹಳ ಭಾಗಗಳನ್ನು ಕಿತ್ತು ಬಲ್ಗೇರಿಯಾ, ಸರ್ಬಿಯಾ, ಗ್ರೀಸ್, ಈ ಮೂರು ರಾಜ್ಯಗಳೂ ಹಂಚಿಕೊಟ್ಟವಾಯಿತು. ಬಲ್ಗೇರಿಯಾದವರು ತಮಗೆ ಸರಿಯಾದ ಭಾಗ ಬರಲಿಲ್ಲವೆಂದು ಅತೃಪ್ತರಾಗಿದ್ದರು. ಇದರಿಂದ ಬಲ್ಗೇರಿಯಾವಿಗೂ ಸರ್ಬಿಯಾ ಮತ್ತು ಗ್ರೀಸಿಗೂ ಯುದ್ಧವಾಯಿತು. ಈ ಯುದ್ಧದಲ್ಲಿ ಬಲ್ಗೇರಿಯಾ ಗೆಲ್ಲಲಿಲ್ಲ. ಬಲ್ಗೇರಿಯಾವಿಗೆ ಮೊದಲು ದೊರೆತಿದ್ದ ಬಹು ಭಾಗವೆಲ್ಲಾ ಸರ್ಬಿಯಾ ಮತ್ತು ಗ್ರೀಸಿಗೆ ಸೇರಿಹೋಯಿತು. ಸರ್ಬಿಯಾವಿಗೂ ಗ್ರೀಸಿಗೂ ಒಂದು ಕರಾರು ನಡೆದಿದೆ. ಬಲ್ಗೇರಿಯಾ ಯುದ್ಧಕ್ಕೆ ಬಂದರೆ ಅವರಿಬ್ಬರೂ ಪರಸ್ಪರ ಸಹಾಯ ಮಾಡಬೇಕೆಂದು ಸರ್ಬಿಯಾ ಮತ್ತು ಗ್ರೀಸ್ ಒಪ್ಪಂದಮಾಡಿಕೊಂಡಿವೆ. ಬಲ್ಗೇರಿಯಾದವರು ಈಗ ಜರ್ಮನಿಯವರ ಚಿತಾವಣೆಯಿಂದ ತಮ್ಮ ಸೈನ್ಯವನ್ನು ಯುದ್ಧಕ್ಕೆ ಸಿದ್ಧಪಡಿಸಿಕೊಂಡಿದ್ದಾರೆ; ಮತ್ತೆ ಸರ್ಬಿಯಾ ರಾಜ್ಯದ ಮೇಲೆ ನುಗ್ಗುವುದಕ್ಕೂ ತಯಾರಾಗಿರುವರು. ಆದಕಾರಣ ಗ್ರೀಸ್‌ನವರು ತಮ್ಮ ಸೈನ್ಯಗಳನ್ನು ಕೂಡಿಸಿ ಸಿದ್ಧಪಡಿಸಿಕೊಂಡು, ಮುಂದೇನಾದೀತೋ ಎಂದು ಸಮಯವನ್ನು ನೋಡುತ್ತಿದ್ದಾರೆ. ರಷ್ಯಾದವರು ಬಲ್ಗೇರಿಯಾದವರಿಗೆ—ನಿಮ್ಮ ಸೈನ್ಯದಲ್ಲಿರುವ ಜರ್ಮನಿ ಉದ್ಯೋಗದಾರರನ್ನು ಕೆಲಸದಿಂದ ತೆಗೆದುಹಾಕದಿದ್ದರೆ ನಿಮ್ಮನ್ನು ನಮ್ಮ ಶತ್ರುಗಳೆಂದು ಭಾವಿಸುತ್ತೇವೆ ಎಂದು ಕಡೆಯಮಾತು ಹೇಳಕಳುಹಿಸಿದರು. ಈ ಪ್ರಕಾರ ಹೇಳಕಳುಹಿಸಿದ್ದನ್ನು ಬ್ರಿಟನ್, ಫ್ರಾನ್ಸ್, ಇಟಲಿ ರಾಜ್ಯಗಳವರು ಸರಿ ಎಂದು ಒಪ್ಪಿಕೊಂಡಿದ್ದಾರೆ. ಬಲ್ಗೇರಿಯಾದವರು ರಷ್ಯಾದವರ ಮಾತನ್ನು ತಿರಸ್ಕಾರಮಾಡಿದರು. ಅದರ ಮೇಲೆ ಬಲ್ಗೇರಿಯಾ ರಾಜಧಾನಿಯಾದ ಸೋಫಿಯಾ ಎಂಬ ಪಟ್ಟಣದಲ್ಲಿದ್ದ ಬೇರೆಬೇರೆ ರಾಜ್ಯಗಳ ರಾಯಭಾರಿಗಳೆಲ್ಲಾ ಅಲ್ಲಿಂದ ಹಿಂತಿರುಗಿ ತಮ್ಮ ತಮ್ಮ ರಾಜ್ಯಗಳಿಗೆ ಹೊರಟುಹೋದರು.

ಮಿತ್ರಮಂಡಲಿಯವರು ಸರ್ಬಿಯಾ ಮತ್ತು ಗ್ರೀಸ್ ರಾಜ್ಯಗಳಿಗೆ ಸಹಾಯ ಮಾಡಬೇಕೆಂದು ಮಾತು ಕೊಟ್ಟಿದ್ದಾರೆ. ಅವರು ಇದಕ್ಕೋಸ್ಕರ ತಮ್ಮ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳನ್ನು ಗ್ರೀಸಿಗೆ ಸೇರಿದ ಸಲೋನಿಕಾ ತೀರಕ್ಕೆ ಸಾಗಿಸಿಕೊಂಡು ಹೋಗಿ ಇಳಿಸಿದರು. ಆದರೆ ಗ್ರೀಸ್ ರಾಜ್ಯದವರು ಏನು ಮಾಡಬೇಕೆಂದಿರುವರೋ ಅವರಲ್ಲೇ ಇನ್ನೂ ನಿಶ್ಚಯವಾಗಿರುವಂತೆ ತೋರಲಿಲ್ಲ. ದೊರೆಯೂ ಮಂತ್ರಿಯೂ ಒಬ್ಬರಮಾತನ್ನೊಬ್ಬರು ಸಮ್ಮತಿಸಲಿಲ್ಲ. ಆದಕಾರಣ ಮಂತ್ರಿಯು ರಾಜೀನಾಮೆ ಕೊಟ್ಟುಬಿಟ್ಟನು. ಈಗ ಗ್ರೀಸಿನಲ್ಲಿ ಬೇರೆಬೇರೆ ಪಕ್ಷದವರು ಒಂದಾಗಿ ರಾಜ್ಯಭಾರ ಕಾರ್ಯಗಳನ್ನು ವಹಿಸಿಕೊಂಡಿದ್ದಾರೆ. ಮಿತ್ರಮಂಡಲಿಯ ಸೈನ್ಯಗಳು ಹೋಗಿ ಗ್ರೀಸ್‌ನಲ್ಲಿ ಇಳಿದದ್ದು ಅಲ್ಲಿನ ಪ್ರಜೆಗಳಿಗೂ ಸೈನ್ಯಕ್ಕೂ ಸಂತೋಷವಾಯಿತು. ಆದರೆ ಅವರ ಗವರ್ನ್‌ಮೆಂಟಿನ ಮನಸ್ಸು ಇನ್ನೂ ಬಂದಿತವಾಗಲಿಲ್ಲ. ಮಿತ್ರಮಂಡಲಿಯವರೇನೋ ಅನೇಕ ಸೈನ್ಯಗಳನ್ನೂ, ಫಿರಂಗಿ ಮದ್ದುಗುಂಡುಗಳನ್ನೂ ಆ ದೇಶದಲ್ಲಿಳಿಸಿ ಸರ್ಬಿಯಾವಿಗೆ ಸಹಾಯ ಮಾಡಲು ಸಿದ್ಧರಾಗಿರುತ್ತಾರೆ.

ಜರ್ಮನಿಗೂ ಬಲ್ಗೇರಿಯಾವಿಗೂ ಕರಾರು ನಡೆದಿದೆ ಎಂದೂ, ಕರಾರಿನ ಕಲಮುಗಳು ಇಂಥಿಂಥವುಗಳೆಂದೂ ವರ್ತಮಾನ ಪತ್ರಿಕೆಗಳು ಹೇಳುವವು. ಆ ಕಲಮುಗಳು ಯಾವವೆಂದರೆ—ಜರ್ಮನಿಯವರು ಬಲ್ಗೇರಿಯಾ ರೈಲ್ ರಸ್ತೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸೈನ್ಯ ಯುದ್ಧಸಾಮಗ್ರಿಗಳನ್ನು ಟರ್ಕಿಗೆ ಕಳುಹಿಸಿಕೊಡುತ್ತಾರೆ. ಜರ್ಮನಿಯವರು 3,00,000 ಸೈನ್ಯವನ್ನು ತಂದು ಸರ್ಬಿಯಾವನ್ನು ಮುತ್ತಿಗೆಹಾಕುವರು; ಬಲ್ಗೇರಿಯಾದವರೂ ಅದಕ್ಕೆ 3,00,000 ಸೈನ್ಯವನ್ನು ಒದಗಿಸಬೇಕು. ರೂಮೇನಿಯಾ ಸಂಸ್ಥಾನವು ಸರ್ಬಿಯಾವಿಗೆ ಸಹಾಯಮಾಡುವುದಾದರೆ ಜರ್ಮನಿಯವರು ರೂಮೇನಿಯಾದ ಮುತ್ತಿಗೆಗೆ 3,00,000 ಸೈನ್ಯವನ್ನು ಒದಗಿಸಬೇಕು. ಈ ರೀತಿಯಾದ ಕರಾರು ಜರ್ಮನಿಯವರಿಗೂ ಬಲ್ಗೇರಿಯಾದವರಿಗೂ ನಡೆದಿದೆ ಎಂಬ ಮಾತು ಎಷ್ಟು ಮಟ್ಟಿಗೆ ನಿಜವೋ ಹೇಳಲಸಾಧ್ಯ.

ರೂಮೇನಿಯಾದಲ್ಲಿ ಬೇಗ ಬೇಗನೆ ಸೈನ್ಯವನ್ನೂ ಯುದ್ಧಸಾಮಗ್ರಿಯನ್ನೂ ಜೊತೆಮಾಡಿಕೊಳ್ಳುತ್ತಿದ್ದಾರೆ. ಗ್ರೀಸ್ ರಾಜ್ಯದಲ್ಲಿ ಹೊಸ ಗವರ್ನ್‌ಮೆಂಟು ರೂಪಿಸಲ್ಪಟ್ಟಿದೆ. ಬಲ್ಗೇರಿಯಾದವರು ಇನ್ನೂ ಸರ್ಬಿಯಾ ಮೇಲೆ ನುಗ್ಗಲಿಲ್ಲ. ವಿರೋಧಪಕ್ಷದ ಮುಖಂಡರು ತಮ್ಮ ದೊರೆಯಾದ ಫರ್ಡಿನೆಂಡ್‌ಯವರನ್ನು ಕಂಡು ಬಲ್ಗೇರಿಯವನ್ನು ಜರ್ಮನಿಯ ಪಕ್ಷವಾಗಿ ನಿಲ್ಲಿಸಕೂಡದೆಂದು ಪ್ರತಿಭಟಿಸಿರುತ್ತಾರೆ. ಬಲ್ಗೇರಿಯಾ ಸೈನ್ಯಗಳ ಉದ್ಯೋಗದಾರರು ಜರ್ಮನಿಯ ಉದ್ಯೋಗದಾರರ ಕೈಕೆಳಗೆ ಕೆಲಸಮಾಡಲು ಒಪ್ಪುತ್ತಿಲ್ಲವೆಂದೂ, ಆದಕಾರಣ ಫರ್ಡಿನೆಂಡ್ ರಾಜನೇ ಬಲ್ಗೇರಿಯಾ ಸೈನ್ಯಾಧಿಪತ್ಯವನ್ನು ವಹಿಸುತ್ತಾನೆಂದೂ ವರ್ತಮಾನವಿದೆ.

ಜರ್ಮನಿ ಮತ್ತು ಆಸ್ಟ್ರಿಯಾ ಸೈನ್ಯಗಳು ಸರ್ಬಿಯಾ ಸೀಮೆಯ ಮೇಲೆ ನುಗ್ಗಿ ಹಲವು ಕಡೆಗಳಲ್ಲಿ ಮುತ್ತಿಗೆಹಾಕುತ್ತಿರುವವು. ಅವರು ಇದಕ್ಕೋಸ್ಕರ ಪೂರ್ವ ರಣರಂಗದಿಂದ ತಮ್ಮ ಕೆಲವು ಸೈನ್ಯಗಳನ್ನು ಕರಸಿಕೊಂಡಿದ್ದಾರೆಂದು ಹೇಳಲ್ಪಟ್ಟಿದೆ. ಬೆಲ್‌ಗ್ರೇಡ್ ಎಂಬ ಸರ್ಬಿಯಾ ರಾಜಧಾನಿಯ ಸಮೀಪದಲ್ಲಿ ಆ ಶತ್ರು ಸೈನ್ಯಗಳು ಡ್ಯಾನ್ಯೂಬ್ ನದಿಯನ್ನು ದಾಟಬೇಕೆಂದು ಸಾಹಸಪಟ್ಟವು. ಅದು ಸಾಧ್ಯವಾಗಲಿಲ್ಲ. ಮಿತ್ರಮಂಡಲಿಯವರು ಕೆಲವು ಸೈನ್ಯವನ್ನು ನಾಶಮಾಡಿದರು; ಕೆಲವನ್ನು ಕೈಸೆರೆ ಹಿಡಿದುಕೊಂಡರು. ಅವರು 100 ಮಂದಿಗಿಂತಲೂ ಹೆಚ್ಚಾಗಿದ್ದರೆಂದು ಹೇಳಲಾಗಿದೆ. ವಾಯುವ್ಯ ಪ್ರಾಂತ್ಯದಲ್ಲಿ ಜರ್ಮನಿಯವರು ಡ್ಯಾನ್ಯೂಬನ್ನು ದಾಟಿದಂತೆ ಕಾಣುವುದು. ಆದರೂ ಅವರು ಒಳದೇಶದಲ್ಲಿ ನುಗ್ಗಿ ಹೋಗುವುದು ಸಾಧ್ಯವಲ್ಲ. ಪಾಪ, ಸರ್ಬಿಯಾವಿಗೆ ಇನ್ನೊಂದು ಸಲ ಯುದ್ಧದ ಕಷ್ಟನಷ್ಟಗಳು ಪ್ರಾಪ್ತವಾದವಲ್ಲಾ ಎಂದು ಮರುಗಬೇಕಾಗಿದೆ.—ಅಷ್ಟರಾಗಿ ರಷ್ಯಾದವರ ಕಪ್ಪು ಕಡಲ ತೀರದಲ್ಲಿರುವ ವಾರ್ನಾ ಎಂಬ ಬಲ್ಗೇರಿಯಾ ತೀರಪಟ್ಟಣಕ್ಕೆ ಮುತ್ತಿಗೆ ಹಾಕಿ ಗುಂಡುಗಳನ್ನು ಹೊಡೆಯುತ್ತಿದ್ದಾರೆ.—ಸರ್ಬಿಯಾದಲ್ಲಿ ಬಹಳ ಕಠಿಣವಾದ ಕದನಗಳು ನಡೆಯುತ್ತಿರುವ ಹಾಗೆ ಕಾಣುವುದು. ಈಗ ಒಳನುಗ್ಗಿರುವವರು ಜರ್ಮನಿ ಸೈನಿಕರು. ಅವರು ಸರ್ಬಿಯಾ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣವನ್ನು ಗೆದ್ದು ಸ್ವಾಧೀನಪಡಿಸಿಕೊಂಡಿರುವಂತೆ ವರ್ತಮಾನ ಬಂದಿದೆ. ಬಲ್ಗೇರಿಯಾದವರು ಇನ್ನೂ ಯುದ್ಧಕ್ಕೆ ಹೊರಟಿಲ್ಲ.

ಇತರ ವಿಷಯಗಳು.

ಟರ್ಕಿಯವರು ಏಷ್ಯಾ ಮೈನರಿನಲ್ಲಿ ತಮ್ಮ ಜೊತೆ ಪ್ರಜೆಗಳಾಗಿದ್ದ ಆರ್ಮೀನಿಯಾ ಕ್ರೈಸ್ತರನ್ನು ಕೊಂದುಹಾಕುವ ಕೆಲಸದಲ್ಲಿ ಪ್ರವರ್ತಿಸಿದ್ದಾರೆ. ಅಲ್ಲಿನ ಕಥೆಗಳನ್ನು ಕೇಳಿದರೆ ಟರ್ಕಿಯವರು ಆರ್ಮೀನಿಯಾ ಗುಂಪಿನವರನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡಬೇಕೆಂದಿರುವಂತೆ ಕಾಣುತ್ತದೆ. ಕಪ್ಪು ಕಡಲಿನ ತೀರದಲ್ಲಿರುವ ಟ್ರೆಬಿಜಾಂಡ್ ಪಟ್ಟಣದಲ್ಲಿ ಆರ್ಮೀನಿಯಾದವರನ್ನು ದೋಣಿಗಳಲ್ಲಿ ಭರ್ತಿಮಾಡಿಕೊಂಡು ಹೋಗಿ ಸಮುದ್ರದ ಪಾಲು ಮಾಡಿಬಿಟ್ಟರಂತೆ. ಇದುವರೆಗೆ ಆ ಜನರು 4 ರಿಂದ 8 ಲಕ್ಷದ ವರೆಗೂ ಈ ಕ್ರೂರ ಮರಣಕ್ಕೆ ತುತ್ತಾದರೆಂದೂ, ಇನ್ನೂ ಕೊಲೆಗಳು ನಡೆಯುತ್ತಿವೆ ಎಂದೂ ಹೇಳಲಾಗಿದೆ. ಇಂಥಾ ಕ್ರೂರಕೃತ್ಯವನ್ನು ನಿಲ್ಲಿಸಬೇಕೆಂದು ಅಮೇರಿಕದವರು ಪ್ರತಿಭಟಿಸಿರುತ್ತಾರೆ. ಟರ್ಕಿಯವರು ಈ ರೀತಿ ಕೊಲೆಮಾಡಲು ಯಾವ ಕಾರಣವೂ ಇಲ್ಲವಾದ ಕಾರಣ ಪ್ರಪಂಚದವರೆಲ್ಲಾ ಅವರನ್ನು ಖಂಡಿಸಿ ಅಲ್ಲಗಳೆಯುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈ ಕೊಲೆಗಳ ವಿವರವನ್ನು ಓದುವುದು ಬಹಳ ಘೋರವಾಗಿದೆ. ಏಷ್ಯಾ ಮೈನರ್ ಸೀಮೆಯಲ್ಲಿ ಅಮೇರಿಕದವರು ಇಟ್ಟಿರುವ ಒಂದು ವಿದ್ಯಾಶಾಲೆಯಲ್ಲಿ ಬಹಳ ಶಂಕಾಸ್ಪದವಾದ ಕೃತ್ಯಗಳು ನಡೆದಿವೆ. ಮೂರನೇ ಎರಡುಪಾಲು ಹುಡುಗಿಯರನ್ನೂ, ಏಳನೇ ಆರು ಪಾಲು ಹುಡುಗರನ್ನೂ ಕೊಂದುಹಾಕಿದರು, ದೇಶಭ್ರಷ್ಟರನ್ನಾಗಿ ಮಾಡಿದರು, ಅಲ್ಲವೇ ಜನಾನಾಯೊಳಕ್ಕೆ ಸೇರಿಸಿಕೊಂಡರು; ವಿದ್ಯಾಶಾಲೆಯ ಉಪಾಧ್ಯಾಯರು ಕೊಲೆಯಾದರು, ಸೆರೆಮನೆಯಲ್ಲಿ ಹಾಕಲ್ಪಟ್ಟರು, ಕ್ರೂರವಾಗಿ ಹಿಂಸಿಸಲ್ಪಟ್ಟರು; ಕೆಲವರಿಗೆ ಬುದ್ಧಿಭ್ರಮಣೆಯುಂಟಾಯಿತು; ಕೆಲವರು ತಲೆತಪ್ಪಿಸಿಕೊಂಡರು. ಒಬ್ಬ ಉಪಾಧ್ಯಾಯನ ತಲೆಯ ಮತ್ತೆ ಮುಖದ ಮೇಲಣ ಕೂದಲನ್ನು ಬಲಾತ್ಕಾರವಾಗಿ ಕಿತ್ತು, ಉಗುರುಗಳನ್ನು ಭಯಂಕರವಾಗಿ ಕೊಯಿದು, ಬಳಿಕ ಕ್ರೂರ ಹಿಂಸೆಪಡಿಸಿ ಕೊಂದುಹಾಕಿರುತ್ತಾರೆ. ಇನ್ನೊಬ್ಬ ಉಪಾಧ್ಯಾಯನನ್ನು ಆಹಾರ ಕೊಡದೆ ಉಪವಾಸವಿಟ್ಟು, ಎರಡು ಕೈಗಳನ್ನೂ ಎತ್ತಿಕಟ್ಟಿ 24 ಗಂಟೆ ಹೊತ್ತು ನೇತುಹಾಕಿ, ಬಹಳವಾಗಿ ಹೊಡೆದು ಪ್ರಾಣ ತೆಗೆದುಬಿಟ್ಟಿದ್ದಾರೆ. ಈ ಭಯಂಕರವಾದ ಕೃತ್ಯಗಳನ್ನು ಕೇಳಿ ಅಮೇರಿಕದವರಿಗೆ ವಿಸ್ಮಯವುಂಟಾಗಿದೆ.

ಅಮೇರಿಕದವರಿಗೂ ಜರ್ಮನಿಯವರಿಗೂ ವಿವಾದಗಳು ನಡೆದದ್ದು ಈಗ ವ್ಯವಸ್ಥೆಯಾಯಿತು. ಜರ್ಮನಿಯವರು ಅರೇಬಿಕ್ ಎಂಬ ಜಹಜನ್ನು ಮುಳುಗಿಸಿ ಅದರಲ್ಲಿದ್ದ ಅಮೇರಿಕದವರನ್ನು ಕೊಂದುಹಾಕಿದರಷ್ಟೆ. ಈಗ ಜರ್ಮನಿಯವರು ತಮ್ಮ ಅಪ್ಪಣೆ ಮೀರಿ ಆ ಜಹಜು ಮುಳುಗಿಸಲ್ಪಟ್ಟಿತೆಂದೂ, ಆದಕಾರಣ ಅಮೇರಿಕದವರಿಗೆ ಪರಿಹಾರ ದ್ರವ್ಯವನ್ನು ಕೊಡುತ್ತೇವೆಂದೂ ಒಪ್ಪಿಕೊಂಡರು. ಇನ್ನು ಮೇಲೆ ಮೊದಲೇ ಎಚ್ಚರಿಕೆಕೊಡದೆ ಅವರು ಜಹಜನ್ನು ಮುಳುಗಿಸುವುದಿಲ್ಲವೆಂದು ಹೇಳಿದ್ದಾರೆ. ಈಚೆಗೆ ಹೆಸ್ಪೇರಿಯನ್ ಎಂಬ ಭಾರೀ ಜಹಜು ಮುಳುಗಿಹೋಯಿತಷ್ಟೆ. ಜರ್ಮನಿಯ ಸಬ್‌ಮೆರೀನು ಅದನ್ನು ಮುಳುಗಿಸಲಿಲ್ಲವೆಂದೂ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿಯಿತೆಂದೂ ಕಂಡುಬಂದಿದೆ. ಆದಕಾರಣ ಜರ್ಮನಿಯವರು ತಮ್ಮ ಮಾತಿನ ಪ್ರಕಾರ ನಡೆಯುತ್ತಿರುವಂತೆ ಕಾಣುತ್ತದೆ. ಜರ್ಮನಿಯಲ್ಲಿರುವ ಅಮೇರಿಕದವರು ಬ್ರಿಟಿಷರು ಬೇಗ ಬೇಗನೆ ಜರ್ಮನಿಯ ಸಬ್‌ಮೆರೀನುಗಳನ್ನು ಹುಡುಕಿ ನಾಶಮಾಡುತ್ತಿದ್ದಾರೆಂದೂ, ಸಬ್‌ಮೆರೀನುಗಳಲ್ಲಿ ಹೋಗಬೇಕಾದ ನಾವಿಕರು ಹೋಗುವುದಕ್ಕೆ ಹಿಂಜರಿಯುತ್ತಿದ್ದಾರೆಂದೂ ತಿಳಿಸುತ್ತಾರೆ. ಅಲ್ಲದೆ ಅಮೇರಿಕದವರು ಹೇಳುವ ಪ್ರಕಾರ ಬ್ರಿಟಿಷರು ಜರ್ಮನಿಯ 60-70 ಸಬ್‌ಮೆರೀನುಗಳನ್ನು ಹಿಡಿದುಬಿಟ್ಟಿದ್ದಾರೆ, ಅಲ್ಲವೇ ಹಾಳುಮಾಡಿದ್ದಾರೆ. ಹೀಗಾಗಿ ಜರ್ಮನಿಯ ಸಬ್‌ಮೆರೀನುಗಳಿಂದ ಬ್ರಿಟಿಷ್ ಹಡಗುಗಳು ಮುಳುಗುವುದು ಬಹಳ ಮಟ್ಟಿಗೆ ಕಡಿಮೆಯಾಗಿದೆ. ಅನೇಕ ದಿನಗಳಿಗೆ ಅತಿ ಒಂದು ಬ್ರಿಟಿಷ್ ಹಡಗನ್ನು ಮಾತ್ರ ಮುಳುಗಿಸಿವೆ. ಬ್ಯಾಲ್ಟಿಕ್ ಕಡಲಿನಲ್ಲಿ ಬ್ರಿಟಿಷ್ ಸಬ್‌ಮೆರೀನು ಜರ್ಮನಿಯ ಜಹಜನ್ನು ಮುಳುಗಿಸಿದಂತೆ ವರ್ತಮಾನವಿದೆ. ಅದರಲ್ಲಿದ್ದ ಜನರನ್ನು ಬದುಕಿಸಿದರು. ಗ್ರೀಸಿನ ಸಮುದ್ರ ತೀರದ ಆಚೆ ಆಸ್ಟ್ರಿಯಾ ಸಬ್‌ಮೆರೀನು ಫ್ರೆಂಚರ ಒಂದು ಜಹಜನ್ನು ಮುಳುಗಿಸಿತು. ಅದರಲ್ಲಿದ್ದವರು ಬದುಕಿಬಂದಿದ್ದಾರೆ.—ಜರ್ಮನಿಯವರು ಆಸ್ಪತ್ರೆಗಳಿಗೆ ಫಿರಂಗಿ ಗುಂಡುಗಳನ್ನು ಹೊಡೆದದ್ದರಿಂದ ಅವುಗಳಲ್ಲಿದ್ದ 46 ಮಂದಿ ನರ್ಸ್ ಎಂಬ ಸೇವಾ ಸ್ತ್ರೀಯರು ಮೃತಪಟ್ಟಂತೆ ಹೇಳಲಾಗಿದೆ.

ಮೌರ್ವಿ ಸಂಸ್ಥಾನದ ಠಾಕೂರ್ ರಾಜರು ಎರಡು ಮೋಟರ್ ಆಂಬ್ಯುಲೆನ್ಸ್ ಗಾಡಿಗಳನ್ನು ಒಪ್ಪಿಸಿದರು. ಚಕ್ರವರ್ತಿಯವರು ಅವನ್ನು ಅಂಗೀಕರಿಸಿ ರಾಜರನ್ನು ವಂದಿಸಿರುತ್ತಾರೆ. ಹಿಂದುಸ್ಥಾನದ ಸೈನಿಕರ ಉಪಯೋಗಕ್ಕೋಸ್ಕರ ಒಂದು ಮೋಟರ್ ಆಂಬ್ಯುಲೆನ್ಸ್ ಗಾಡಿಯನ್ನು ಸಿದ್ಧಪಡಿಸಿ ಒಪ್ಪಿಸಬೇಕೆಂದು ಈ ರಾಷ್ಟ್ರದಲ್ಲಿರುವ ವಿಲಾಸಿಗಳು ಚಂದಾ ಹಣಗಳನ್ನು ಕೊಡಿಸುವರು. ಯುದ್ಧಭೂಮಿಯಲ್ಲಿರುವ ರಟ್ಲಾಮ್ ರಾಜರು ಹಿಂದುಸ್ಥಾನದ ವರ್ತಮಾನ ಪತ್ರಿಕೆಗಳಿಗೆ ಬರೆದು ಈ ರಾಷ್ಟ್ರದ ಸಾಮಂತ ರಾಜರುಗಳೆಲ್ಲಾ ಚಂದಾ ಹಾಕಿ ಡ್ರೆಡ್‌ನಾಟ್ ಎಂಬ ಜಾತಿಯ ಭಾರೀ ಯುದ್ಧದ ಜಹಜನ್ನು ತಯಾರುಮಾಡಿಸಿ ನಮ್ಮ ಚಕ್ರವರ್ತಿಯವರಿಗೆ ಒಪ್ಪಿಸಬೇಕೆಂದು ಸೂಚಿಸಿದ್ದಾರೆ. ಈ ಜಹಜಿಗೆ ಮೂರು ಕೋಟಿ ರೂಪಾಯಿಗಿಂತಲೂ ಹೆಚ್ಚು ಬೇಕಾದೀತು.—ಮದರಾಸ್ ಎಂಬ ಆಸ್ಪತ್ರೆ ಜಹಜು ಸೂಯೆಜ್ ಕಾಲುವೆ ಕಡೆಯಿಂದ ಬೊಂಬಾಯಿಗೆ ಬಂದಿದೆ. ಯುದ್ಧಭೂಮಿಯಲ್ಲಿ ಗಾಯಪಟ್ಟ 437 ಹಿಂದುಸ್ಥಾನದ ಸೈನಿಕರು ಅದರಲ್ಲಿ ಬಂದಿಳಿದರು.—ಬ್ರಿಟಿಷರೂ ಫ್ರೆಂಚರೂ ಅಪೇಕ್ಷಿಸಿದ ಸಾಲವು ಅಮೇರಿಕದಲ್ಲಿ ಬಹಳ ಹೆಚ್ಚಾಗಿಯೇ ವಸೂಲಾಯಿತು.

ನಮ್ಮ ಪಕ್ಷದವರು ಒಂದು ನವೀನವಾದ ವಿಮಾನ ಯಂತ್ರವನ್ನು ರಚಿಸಿದ್ದಾರೆ. ಶತ್ರುವಿನ ಪಟ್ಟಣಗಳಿಗೂ, ಕಂದಕಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಹಾಕಿ ನಾಶಪಡಿಸುವಂಥಾ ಫಿರಂಗಿಗಳನ್ನು ಆ ವಿಮಾನದಲ್ಲಿ ಇಟ್ಟಿರುವರು. ಸಾಮಾನ್ಯವಾಗಿ ವಿಮಾನ ಯಂತ್ರದಲ್ಲಿ ಸಣ್ಣ ಗೋಲಿಗಳನ್ನು ಹಾಕಿ ಹೊಡೆಯುವ ಬಂದೂಕುಗಳಿರುವವು. ಈಗ ಇಟ್ಟಿರುವ ಹೊಸ ಫಿರಂಗಿಯು ದೊಡ್ಡ ಗುಂಡುಗಳನ್ನು ಹಾಕಿ ಹೊಡೆದು ನಾಶಮಾಡುವುದಕ್ಕೆ ಅನುಕೂಲವಾಗಿದೆ.—ಲಾರ್ಡ್ ಕರ್ಸನ್‌ರವರಿಗೆ ಸ್ವಲ್ಪ ದೇಹಾಲಸ್ಯವಾಗಿದೆ. ಕೆಲವು ದಿವಸಗಳಲ್ಲಿ ಅವರಿಗೆ ಆರೋಗ್ಯವಾಗಿ ಕೆಲಸದ ಮೇಲೆ ದಯಮಾಡುವರು

ಮಜಲಿನ ಓಟ—ಬೆಂಗಳೂರಿನಿಂದ ಮೈಸೂರಿಗೆ.

ಬೆಂಗಳೂರು ರೆಸಿಡೆನ್ಸಿಯಿಂದ ಮುಂದಿನ ಸೋಮವಾರ ಮೈಸೂರು ಅರಮನೆಗೆ ಮಜಲಿನ ಪ್ರಕಾರ ಓಟವು ಏರ್ಪಾಡಾಗಿದೆ. ನಮ್ಮ ಮಹಾರಾಜರವರಿಗೆ ಆ ದಿನ ಶುಭವಾದನಾ ಪತ್ರಿಕೆಯನ್ನು ತಲಪಿಸುವುದಕ್ಕೆ ಅನೇಕಾನೇಕ ವಿದ್ಯಾರ್ಥಿಗಳು ಕುತೂಹಲಪಟ್ಟು ಸ್ಪರ್ಧೆಮಾಡುತ್ತಿದ್ದಾರೆ. ಆರಿಸಲ್ಪಟ್ಟ ವಿದ್ಯಾರ್ಥಿಗಳಲ್ಲಿ ಕಡೆಯ ಅರ್ಧ ಮೈಲಿ ದೂರ ಯಾರು ಬೇಗನೆ ಓಡಬಲ್ಲರೆಂದು ನಾಳೆ ಶನಿವಾರ ಬೆಂಗಳೂರಿನಲ್ಲಿ ಪರೀಕ್ಷೆಮಾಡುವರು. ಇದಕ್ಕೆ ಮೈಸೂರಿನಿಂದ 3 ಮಂದಿ, ಚನ್ನಪಟ್ಟಣದಿಂದ ಒಬ್ಬ, ಬೆಂಗಳೂರಿನವರು 3 ಮಂದಿ ಬೆಂಗಳೂರಿನಲ್ಲಿ ಸೇರುತ್ತಾರೆ. ಚನ್ನಪಟ್ಟಣದ ಹೈಸ್ಕೂಲ್ ವಿದ್ಯಾರ್ಥಿಯಾದ ವಿ. ನಾರಾಯಣಶೆಟ್ಟಿಯು 2¼ ನಿಮಿಷದಲ್ಲಿ ಅರ್ಧಮೈಲಿ ಓಡಿರುವನು. ಸೋಮವಾರ ಬೆಳಗ್ಗೆ 7 ಗಂಟೆಗೆ ಬೆಂಗಳೂರು ರೆಸಿಡೆನ್ಸಿಯಲ್ಲಿ ಮೊದಲನೇ ವಿದ್ಯಾರ್ಥಿಯು ರೆಸಿಡೆಂಟರಿಂದ ಪತ್ರಿಕೆಯನ್ನು ಪಡೆದು ಓಟವನ್ನು ಪ್ರಾರಂಭಿಸಿ ತನ್ನ ಮಜಲನ್ನು ತೀರಿಸಿ ಎರಡನೆಯವನಿಗೆ ಕೊಟ್ಟು ಸ್ಪೆಷಲ್ ರೈಲು ಹತ್ತುತ್ತಾನೆ. ಎರಡನೆಯವನು ಹಾಗೆಯೇ ಓಡಿ ಆ ಪತ್ರಿಕೆಯನ್ನು ಮೂರನೆಯವನಿಗೆ ಒಪ್ಪಿಸಿ ರೈಲು ಹತ್ತುವನು. ಹೀಗೆಯೇ ಪ್ರತಿ ಒಬ್ಬರೂ ಮೈಸೂರಿನ ತನಕ ಓಡಿ ರೈಲು ಹತ್ತುತ್ತಾ ಬರುತ್ತಾರೆ. ಅಂಥಾ ಪ್ರತಿ ಒಬ್ಬರಿಗೂ ಒಂದು ಬಿಲ್ಲೆಯನ್ನು ಗುರುತಿಗೆ ಕೊಡುವರು. ಇವರಿಗೆಲ್ಲಾ ರಾಜಧಾನಿಯ ಟೌನ್ ಹಾಲಿನಲ್ಲಿ ಮಹಾರಾಜರವರು ತಿಂಡಿತೀರ್ಥವನ್ನು ಕೊಡಿಸುವಂತೆ ಅಪ್ಪಣೆಕೊಡಿಸಿದ್ದಾರೆ. ಆ ದಿನ ಓಡತಕ್ಕವರ ಹೆಸರಿನ ಪಟ್ಟಿ ಕ್ರಮವಾದ ಮೇಲೆ ಬೇಕಾದವರು ಮೈಸೂರು ಸ್ಕೂಲುಗಳ ಲಿಸ್ಟ್, ಸಿ. ಎಲ್. ಎಸ್. ಬುಕ್ ಡಿಪೋವಲ್ಲೂ, ಜನರಲ್ ಏಜನ್ಸಿಯಲ್ಲೂ ಪಡೆಯಬಹುದು.

ಒಳದೇಶದ ವೃತ್ತಾಂತಗಳು.

ಮೈಸೂರು ಯೂನಿವರ್ಸಿಟಿ ಎಂಬ ಸರ್ವ ವಿದ್ಯಾನಿಲಯವು ಸದ್ಯದಲ್ಲೇ ರೂಪಿಸಲ್ಪಡುವ ಹಾಗೆ ಕಾಣುವುದಿಲ್ಲವೆಂದು ಪ್ರಕಟವಾಗಿದೆ.

ಕುಣಿಗಲ ಕುದುರೆ ಫಾರಮಿನಲ್ಲಿದ್ದ ಬೀಜದ ಎರಡು ಭಾರೀ ಕುದುರೆಗಳು ಸತ್ತುಹೋದವೆಂದೂ, ಇದರಿಂದ ಸುಮಾರು 50,000 ರೂಪಾಯಿ ನಷ್ಟವಾಯಿತೆಂದೂ ತಿಳಿಯುತ್ತದೆ.

ರಾಜಧಾನಿಯ ವೀರಶೈವಾಶ್ರಮದ ಸೆಕ್ರೆಟರಿ ಮ॥ ಎಂ. ಪಿ. ಲಿಂಗಪ್ಪನವರು ಪ್ರಜಾಪ್ರತಿನಿಧಿ ಮೆಂಬರುಗಳಲ್ಲಿ ವೀರಶೈವರಿಗೋಸ್ಕರ ಒಂದು ವಿಚಾರವನ್ನು ಮಾಡಿರುತ್ತಾರೆ. ಬಂತಕ್ಕೆ ಮೆಂಬರುಗಳು ಅವರಿಗೆ ಮೊದಲೇ ತಿಳಿಸಿದಲ್ಲಿ ಎಲ್ಲಾ ಅನುಕೂಲಗಳನ್ನೂ ಅವರು ಮಾಡಿಕೊಡುವರೆಂದು ತಿಳಿದುಬಂದಿದೆ.

ರಾಜಧಾನಿಯ ಪ್ರಜಾಪಕ್ಷದ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಸೋಮವಾರ ದಿವಾನ್‌ರವರ ಭೇಟಿಮಾಡಿ, ಅಂಗಡಿಗಳಿಗೆ ನೀರಿನ ತೆರಿಗೆ ಹಾಕಿಸಕೂಡದೆಂದು ಅರಿಕೆಮಾಡಿಕೊಂಡರು. ದಿವಾನ್‌ರವರು ಈ ವಿಚಾರವು ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಬರತಕ್ಕದ್ದಾಗಿದೆ ಎಂದು ಅಪ್ಪಣೆಕೊಟ್ಟರೆಂದು ಕೇಳುತ್ತೇವೆ.

ಶ್ರೀಮನ್ ಮಹಾರಾಜರವರು ಅರಮನೆಯ ಖಾಸ್ ಸಮುಖದ ಇಲಾಖಾ ಭಕ್ಷೀರಾದ ಮ॥ ಎಂ. ಮುದ್ದುರಾಜೇ ಅರಸಿನವರಿಗೆ ಸಂಬಳವನ್ನು ಬಡ್ತಿ ಮಾಡಿದರೆಂದೂ, ಅರಮನೆಯ ಗಾರ್ಡ್ ಇಲಾಖೆಯ ಸಿಪಾಯಿಗಳಿಗೂ, ಸುಬೇದಾರರಿಗೂ ಸರ್ವತ್ರ ಸಂಬಳಗಳನ್ನು ಹೆಚ್ಚಿಸಿರುತ್ತಾರೆಂದೂ ತಿಳಿಸಲು ಸಂತೋಷವಾಗುತ್ತದೆ.

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮಿ॥ ಆರ್. ಎಚ್. ಕ್ಯಾಂಬೆಲ್‌ರವರು ನೊವೆಂಬರ್ ತಿಂಗಳ ಕಡೇ ವಾರದ ತನಕ ಇದ್ದು, ಬೊಂಬಾಯಿ ಗವರ್ನರವರ ಕೂಡ ಗೆರೋಸಪ್ಪಾ ಜಲಪಾತವೇ ಮೊದಲಾದ ಕಡೆ ಸಂಚರಿಸಿ ಷಿಕಾರಿ ಮೊದಲಾದದ್ದು ನಡೆದ ಬಳಿಕ ರಜಾ ಉಪಯೋಗಿಸಿಕೊಂಡು ಸೀಮೆಗೆ ಹೋಗಿಬರುತ್ತಾರೆಂದು ಕೇಳುತ್ತೇವೆ.

ಗತಿಸಿದ ಕೀರ್ತಿಶೇಷರಾದ ಜಿ.ಕೆ. ಗೋಖಲೆಯವರ ಮೆಮೋರಿಯಲ್ ಹಾಲ್ ಫಂಡಿಗೆ ಚಂದಾ ಹಣವನ್ನು ಕೊಡಿಸಿಕೊಡುವ ಉದ್ದೇಶದಿಂದ ಬಳ್ಳಾರಿಯ ಅಮೆಚೂರ್ ನಾಟಕದ ಕಂಪನಿಯವರು ರಾಜಧಾನಿಗೆ ಬಂದು ಈ ದಿನವೂ, ನಾಳೆಯೂ, ನಾಡಿದ್ದೂ ಚರಿತ್ರಾರ್ಹವಾದ ಮೂರು ನಾಟಕಗಳನ್ನು ಆಡುತ್ತಾರೆ. ಸುಲ್ತಾನಾ ಚಾಂದುಬೀಬಿ, ಒಥೆಲೊ, ವಿಜಯನಗರದ ಅವಸಾನ ಎಂಬವೇ 3 ನಾಟಕಗಳು. ಬಳ್ಳಾರಿಯ ಹೈಕೋರ್ಟ್ ವಕೀಲರಾದ ಮ॥ ಟಿ. ರಾಘವಾಚಾರ್, ಬಿ.ಎ., ಬಿ.ಎಲ್. ರವರು ಆ ನಾಟಕಗಳಲ್ಲಿ ಮುಖ್ಯಪಾತ್ರಗಳನ್ನು ವಹಿಸಿ ಅಭಿನಯಿಸುವರು.

ಚಾಮರಾಜನಗರದ ಉಪಾಧ್ಯಾಯರ ಸಂಘ.

ಈ ಸಂಘದ 4 ನೇ ಮೀಟಿಂಗು ಕಳೆದ ಮಾಹೆ 25 ನೇ ತಾ. ಎ. ವಿ ಸ್ಕೂಲು ಕಟ್ಟಡದಲ್ಲಿ ನಡೆಯಿತು. ಆರೋಗ್ಯವಿಚಾರವಾದ ಉಪನ್ಯಾಸವೂ, ಶಾವ್ಯದ ಪಾಠದ ಕ್ರಮವೂ, ಪಾಠಶಾಲೆಗಳಲ್ಲಿ ದೇಹದಂಡನೆಯು ಅವಶ್ಯವೇ ಎಂಬ ವಿಚಾರದಲ್ಲಿ ಚರ್ಚೆಯೂ ಉಲ್ಲಾಸದಿಂದ ಜರುಗಿದವು. ಈ ಸಂಘದ 5 ನೇ ಮೀಟಿಂಗು ಅಕ್ಟೋಬರ್ ಮಾಹೆ 31 ನೇ ತಾರೀಖಿನಲ್ಲಿ ಎ. ವಿ. ಸ್ಕೂಲು ಕಟ್ಟಡದಲ್ಲಿ ನಡೆಯುವುದು. ಇದರಲ್ಲಿ "ಮೈಸೂರು ದೇಶದಲ್ಲಿ ಮಹಮ್ಮದೀಯರ ಆಳ್ವಿಕೆ" ಎಂಬ ವಿಚಾರದಲ್ಲಿ ಮಾದರಿ ಪಾಠವು ಸ್ಕೂಲ್ ಅ|| ಮಾಸ್ಟರ್ ಮ|| ವೆಂಕಟರಾಯರಿಂದ ನಡೆಸಲ್ಪಡುವುದು. ರಾಮಸಮುದ್ರ ವಿ. ಇ. ಸ್ಕೂಲ್ ಹೆಡ್ ಮಾಸ್ಟರ್ ಮ|| ಸುಬ್ರಹ್ಮಣ್ಯರು ಅಕ್ಷರಾಭ್ಯಾಸಕ್ರಮ ಎಂಬ ವಿಚಾರದಲ್ಲಿ ಉಪನ್ಯಾಸ ಮಾಡುವರು. ತಾಲ್ಲೋಕಿನ ಉಪಾಧ್ಯಾಯರುಗಳೆಲ್ಲಾ ದಯಮಾಡಿಸಬೇಕಾಗಿ ಪ್ರಾರ್ಥನೆ. ಕೆ. ಮಾಧವರಾವ್, ಸೆಕ್ರಟರಿ.

ಸೇವಾಸದನದ ಸಂಘ, ಬೆಂಗಳೂರು.

ಈ ಸಂಘದ ಸ್ಥಾಪನೋತ್ಸವವು ಈ ತಿಂಗಳು 1 ನೇ ಶುಕ್ರವಾರ ಬೆಂಗಳೂರು ಬ್ರಹ್ಮಜ್ಞಾನ ಸಭೆಯ ಹಾಲ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು. ಸಭೆಯು ಸಾಯಂಕಾಲ 4 ಘಂಟೆಗೆ ಪ್ರಾರಂಭವಾಯಿತು. ಸುಮಾರು 150 ಜನ ಸ್ತ್ರೀಯರು ಸೇರಿದ್ದರು. ಮ|| ವಿ. ಯಸ್. ಸಾಂಬಶಿವ ಅಯ್ಯರವರ ಪತ್ನಿಯವರು ಅಗ್ರಾಸನವನ್ನು ವಹಿಸಿದ್ದರು. ಸಭೆಯ ಪ್ರಾರಂಭದಲ್ಲಿ ಸೌ|| ಲಕ್ಷ್ಮೀದೇವಮ್ಮ ಮತ್ತು ಸೌ|| ವೆಂಕಮ್ಮ, ಈ ಇಬ್ಬರು ಹುಡುಗಿಯರೂ ದೇವ ಪ್ರಾರ್ಥನೆಯನ್ನು ಮಾಡಿದ ನಂತರ ಮಿ|| ಜಿ. ಶ್ರೀನಿವಾಸ ಅಯ್ಯರವರ ಪತ್ನಿಯವರು ವೀಣೆಯನ್ನೂ, ಸೌ|| ಸರೋಜಮ್ಮ ಮತ್ತು ಸೌ|| ಜಯಲಕ್ಷ್ಮಮ್ಮ ಎಂಬಿಬ್ಬರು ಹುಡುಗಿಯರು ಹಾರ್ಮೋನಿಯಂ ನುಡಿಸಿದರು. ಸಂಘದ ಕಾರ್ಯದರ್ಶಿಯವರಾದ ಶ್ರೀಮತಿ ರಂಗಮ್ಮನವರು ಕಳೆದ ಮೂರು ತಿಂಗಳಲ್ಲಿ ಸಂಘದಿಂದ ನಡಿಸಿದ ಕೆಲಸವನ್ನೂ ಮತ್ತು ಸದನದ ಉದ್ದೇಶಗಳನ್ನೂ ವಿವರಿಸಿದರು. ಅಗ್ರಾಸನಾಧಿಪತಿಗಳು ಬೊಂಬಾಯಿ ಸೇವಾಸದನ ಸಂಘವು ನೆರವೇರಿಸುತ್ತಿರುವ ಅತ್ಯುತ್ತಮವಾದ ಕೆಲಸಗಳನ್ನು ವಿವರಿಸಿ, ಬೆಂಗಳೂರಿನ ಸಂಘದ ಮೆಂಬರುಗಳೆಲ್ಲರೂ ಸೇರಿ ಪ್ರಯಾಸಪಟ್ಟು ಆ ಸಂಘದಂತೆಯೇ ಇದನ್ನು ವೃದ್ಧಿಪಡಿಸಿ ಲೋಕೋಪಕಾರವನ್ನು ಮಾಡಬೇಕೆಂದು ಬಹಳ ಸ್ವಾರಸ್ಯವಾಗಿ ಹೇಳಿದರು.

ಸದನದ ಅಧ್ಯಕ್ಷಿಣಿಯರಾದ ಶ್ರೀಮತಿ ಪಾರ್ವತಮ್ಮನವರು ಈ ಸದನದ ಮೂಲಕವಾಗಿ ಎಷ್ಟೋ ಪ್ರಯೋಜನಕರವಾದ ಕೆಲಸವನ್ನು ಮಾಡಬಹುದೆಂದೂ, ಈ ಕೆಲಸವನ್ನು ನೆರವೇರಿಸುವದಕ್ಕಾಗಿ ಮೆಂಬರುಗಳೆಲ್ಲಾ ಸೇರಿ ಸಹಾಯಮಾಡಬೇಕೆಂದೂ ಹೇಳಿದ್ದಲ್ಲದೆ, ಮ|| ಸಾಂಬಶಿವ ಅಯ್ಯರವರ ಪತ್ನಿಯವರು ಎಷ್ಟು ತೊಂದರೆಗಳಿದ್ದರೂ ಅದನ್ನೆಲ್ಲಾ ಬಿಟ್ಟು ಅಗ್ರಾಸನವನ್ನು ವಹಿಸಿ ಈ ಸಭೆಯ ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ತುಂಬ ವಂದನೆಗಳನ್ನು ಸಮರ್ಪಿಸಿದರು. ಮತ್ತು ನಮ್ಮ ಮೈಸೂರು ರಾಜ್ಯದ ಶ್ರೀಮನ್ ಮಹಾರಾಜರವರಿಗೂ, ಮಹಾರಾಣಿಯವರುಗಳಿಗೂ ಮತ್ತು ಶ್ರೀಮದ್ಯುವರಾಜರವರು ಮೊದಲಾದ ರಾಜಕುಲದವರೆಲ್ಲರಿಗೂ ಸರ್ವಶಕ್ತನಾದ ದೇವರ ಆಶೀರ್ವಾದವನ್ನು ಬಯಸಿದರು. ಅನಂತರ ಕೋಟೆ ಸ್ಕೂಲ್ ಹೆಡ್ ಮಿಸ್ಟ್ರೆಸ್ ಮಿಸ್ ಫೇಜ್‌ರವರು ಜಾರ್ಜ್ ಸಾರ್ವಭೌಮರಿಗೆ ಇಂಗ್ಲೀಷಿನಲ್ಲಿ ಮಂಗಳ ಶಾಸನವನ್ನು ಹಾಡಿದರು. ಮ|| ಶ್ರೀನಿವಾಸಯ್ಯರವರ ಪತ್ನಿಯವರು ಕನ್ನಡದಲ್ಲಿ ಮಂಗಳವನ್ನು ಹಾಡಿದರು. ಸಭೆಯು ಇಲ್ಲಿಗೆ ಮುಗಿಯಿತು ಎಚ್. ವಿ

[ಈ ಸಂಘದ ಕಳೆದ ಒಂಭತ್ತು ತಿಂಗಳ ರಿಪೋರ್ಟನ್ನೂ ನಿಬಂಧನೆಗಳನ್ನೂ ನಮಗೆ ಕಳುಹಿಸಿದಾರೆ. ಸಂಘವು ಪರಹಿತಕ್ಕಾಗಿ ರಚಿಸಲ್ಪಟ್ಟಿರೋಣವರಿಂದ ವಿದ್ಯಾವಂತರೂ ಪುಣ್ಯವಂತರೂ ಅದಕ್ಕೆ ಸಹಾಯ ಪ್ರೋತ್ಸಾಹಗಳನ್ನು ಒದಗಿಸುವಂತಾಗಬೇಕೆಂದೂ, ಅದರ ಕಾರ್ಯಗಳು ಶಾಶ್ವತವಾಗಿ ನಡೆಯುತ್ತಾ ಅಭಿವೃದ್ಧಿ ಹೊಂದಬೇಕೆಂದೂ ಬಯಸುತ್ತೇವೆ.—ಎಡಿ.]

ಕೋಆಪರೆಟಿವ್ ಸೊಸೈಟಿ ಮೀಟಿಂಗುಗಳು.

ಮಂಡ್ಯ ತಾಲ್ಲೂಕು ಮದ್ದೂರು.

ಕೋಆಪರೆಟಿವ್ ಸೊಸೈಟಿ ಜನರಲ್ ಮೀಟಿಂಗು ಈ ಮಾಹೆ 3 ನೇ ತಾ. ಭಾನುವಾರ ಮಧ್ಯಾಹ್ನ ನಮ್ಮ ತಾಲ್ಲೂಕು ಅಮಲ್ದಾರ್ರು ಮ|| ಎಚ್. ಬಸವರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಈ ಊರು ಕನ್ನಡ ಸ್ಕೂಲ್ ಹಾಲಿನಲ್ಲಿ ನಡಿಸಲ್ಪಟ್ಟಿತು. ಅನೇಕ ಜನ ದೊಡ್ಡಮನುಷ್ಯರು ಸ್ಥಳ ಪರಸ್ಥಳಗಳಿಂದ ದಯಮಾಡಿಸಿದ್ದರು. ಆ ಕಾಲಕ್ಕೆ ದಯಮಾಡಿಸಿದ್ದ ಮೈಸೂರು ಡಿಸ್ಟ್ರಿಕ್ಟ್ ಎ|| ರಿಜಿಸ್ಟ್ರಾರ್ ಮ|| ಅಪ್ರಮೇಯಯ್ಯಂಗಾರ್ರವರು ರೈಸ್ ಮಿಲ್ ವಗೈರೆ ವಿಷಯದಲ್ಲಿ ಸ್ವಾರಸ್ಯವಾದ ಉಪನ್ಯಾಸ ಮಾಡಿ ರೈಸ್ ಮಿಲ್‌ಗೋಸ್ಕರ ಕೆಲವು ಷೇರುಗಳನ್ನು ಪಡೆಯಿಸಿದರು. ಸಂಘದ ಅ|| ಸೆಕ್ರಟರಿಯವರು ರಿಪೋರ್ಟು ಓದಿ ಹೇಳಿದರು. ತರುವಾಯ ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನ ಮಾಡಲ್ಪಟ್ಟವು. ನಂತರ ಸೆಕ್ರಟರಿಯವರು ಬಂದಿದ್ದ ದೊಡ್ಡಮನುಷ್ಯರಿಗೂ, ಅಗ್ರಾಸನಾಧಿಪತಿಗಳಿಗೂ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಿದರು ತರುವಾಯ ಸರ್ವರಿಗೂ ಪುಷ್ಪ ತಾಂಬೂಲ ವಿನಿಯೋಗಿಸಲ್ಪಟ್ಟು ನಮ್ಮ ಶ್ರೀಮನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ ಮಂಗಳವಾಗಲೆಂಬ ಕೋಲಾಹಲದೊಡನೆ ಸಭೆಯು ಬರಖಾಸ್ತು ಮಾಡಲಾಯಿತು. ಒಬ್ಬ ಮೆಂಬರು.

ಸಕಲೇಶಪುರ.

ಈ ಊರು ಕೋಆಪರೆಟಿವ್ ಸೊಸೈಟಿಯ ಜನರಲ್ ಮೀಟಿಂಗು ಇದೇ ತಾ. 1 ನೇ ಶುಕ್ರವಾರ ನಡೆಯಿತು. ಸೆಕ್ರಟರಿಯವರು ಓದಿದ ರಿಪೋರ್ಟನ್ನು ಸಭಿಕರೆಲ್ಲಾ ಮಂಜೂರುಮಾಡಿದರು. ಮಂಜರಾಬಾದು ತಾಲ್ಲೂಕು ಅಮಲ್ದಾರ್ ಮ|| ಆರ್. ತಿರುನಾರಣಯ್ಯಂಗಾರ್ರು ಅಗ್ರಾಸನವನ್ನು ವಹಿಸಿದ್ದರು. ಅಮಲ್ದಾರ್ರು ಪ್ರೆಸಿಡೆಂಟಾಗಿಯೂ, ಮ|| ರಾಮಣ್ಣನವರು ಸೆಕ್ರಟರಿಯಾಗಿಯೂ ಇರಲು ಸರ್ವರೂ ಒಪ್ಪಿದರು. ಕೆಲವು ಮೆಂಬರುಗಳು ನೇಮಕವಾದರು. ಕಳೆದ ವರುಷ ಸೊಸೈಟಿ ಕೆಲಸ ನಡಿಸಿದ ಸೆಕ್ರಟರಿ ಮ|| ಜೆ. ರಾಮಣ್ಣನವರಿಗೆ 75 ರೂಪಾಯಿನ ಭೋನಸ್ಸು ಕೊಡಲು ತೀರ್ಮಾನಿಸಲಾಯ್ತು. ರಿಜರ್ವ್ ಫಂಡಿಗೆ ನಫಾಂಶವಾದ ರೂ. 225-10-0 ಪೈಕಿ ಕಾಲುಭಾಗ ರೂ. 56-6-6, ಷೇರು ಫೀ ಬಾಬ್ತು 21 ರೂ., ಸುಸ್ತಿ ಬಡ್ಡಿ ಬಾಬ್ತು ರೂ. 98-9-9 ಪೈ, ಜುಂಲಾ ರೂ. 176-15-3 ನ್ನು ರಿಜರ್ವ್ ಫಂಡಿಗೆ ಸೇರಿಸಬೇಕೆಂಬದಾಗಿ ತೀರ್ಮಾನಿಸಲಾಯ್ತು. ನಫಾಂಶದ ಪೈಕಿ ಉಳಿದಿರುವ ರೂ. 168-3-3 ಪೈ ಮೆಂಬರುಗಳಿಗೂ, ಈ ಪೈಕಿ ಕಳೆದ ಸಾಲ್ ಡಿಪಾಜಿಟ್‌ದಾರ್ರಿಗೆ ಪಾವತಿ ಆಗಬೇಕಾದದ್ದು ಜಾಕಾ ಉಳಿದದ್ದನ್ನು ಹಂಚತಕ್ಕದ್ದೆಂತ ತೀರ್ಮಾನಿಸಲಾಯ್ತು. ಸೊಸೈಟಿಯಲ್ಲಿ ಮೊಬಲಗು ಜಾಸ್ತಿ ಇಲ್ಲವಾಗಿ ಆವಶ್ಯಕವಾಗಿ ಸಾಲ ಬೇಕಾಗಿರುವದರಿಂದ ಫಿಕ್ಸೆಡ್ ಡಿಪಾಜಿಟ್ಟು ಕೊಡಲು ಮ|| ಗಳಾದ ಸುಬ್ಬಶೆಟ್ಟರವರು 250, ಪಾಪು ಶಿದ್ದೇಗೌಡರು 500, ನಾರಾಯಣಸ್ವಾಮಿನಾಯುಡು 500, ಎನ್. ಪಟ್ಟಾಭಿರಾಮಯ್ಯನವರು 200, ಜುಂಲಾ 1,450 ರೂಪಾಯನ್ನು ಕೊಡಲು ಒಪ್ಪಿರುವ ಬಗ್ಗೆ ಸೊಸೈಟಿಯವರು ಬಹಳ ಕೃತಜ್ಞರಾಗಿರುತ್ತಾರೆ. ಷೇರು ಮೊಬಲಗಿನ ಮೇಲೆ ಸುಸ್ತಿ ಬಡ್ಡಿ ವಿಚಾರದಲ್ಲಿ ರಿಜಿಸ್ಟ್ರಾರವರಿಂದ ತಿಳಿಸಿರುವ ಆರ್ಡರು ಸಂಗತಿ ಷೇರು ಮೊಬಲಗಿನ ಮೇಲೆ ಬಾಕಿ ಅಕ್ಟೋಬರು ಗುರ್ರಿ ಆಗಾಯ್ತು ರೂಪಾಯಿಗೆ 3 ಪೈ ಮೇರೆ ಬಡ್ಡಿ ತೆಗೆದುಕೊಳ್ಳಬೇಕೆಂತ ತೀರ್ಮಾನಿಸಲಾಯ್ತು. ರಿಜಿಸ್ಟ್ರಾರವರಿಂದ ತಿಳಿಸಿದ ಗ್ರಾಮಾಭಿವೃದ್ಧಿ ಪತ್ರಾರ್ಗೆ ಸಂಬಂಧಪಟ್ಟ ಹುಕುಂ ಸಂಗತಿ ಸಭಿಕರು ಓದಿ ಹೇಳಿ ಪ್ರೋತ್ಸಾಹಿಸಲಾಯ್ತು. ಒಬ್ಬ ಮೆಂಬರು.

ಮೈಸೂರು ಗೆಜೆಟ್ ಸಂಗ್ರಹ.

ಅ|| ಕಂಟ್ರೋಲರ್ ಮ|| ಬಸಪ್ಪ ಶಂಕ್ ಬಾದಾಮಿಯರನ್ನು ಸರ್ಕಾರದ ಭೀಮಾ ಕಂಪನಿಯ ಜಾಯಿಂಟ್ ಸೆಕ್ರಟರಿಯಾಗಿ ನೇಮಕಮಾಡಿದೆ.—ಕಂಟ್ರೋಲರವರ ಆಫೀಸ್ ಪ್ರೊ|| ಅ|| ಕಮಿಷನರ್ ಮ|| ಎ. ಎನ್. ರಾಘವಾಚಾರ್ರಿಗೆ ದಸರಾ ರಜಾ ಜೊತೆಗೆ 11 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.—ಅ|| ಕಂಟ್ರೋಲರ್ ಮ|| ಎನ್. ಕೃಷ್ಣಸ್ವಾಮಿರಾಯರಿಗೆ ಅಕ್ಟೋಬರ್ ತಾ. 27 ರಿಂದ 10 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.—ಶ್ರೀರಂಗಪಟ್ಟಣದ ಮುನ್ಸಿಫ್ ಮ|| ಎ. ಶ್ರೀನಿವಾಸರಾಘವಾಚಾರ್ರಿಗೆ ಅಕ್ಟೋಬರ್ ತಾ. 11 ರಿಂದ ದಸರಾ ರಜಾ ಪೂರೈಸುವ ತನಕ ರಜಾ ಕೊಟ್ಟಿದೆ.—ಗಣಿಗಳ ಇನ್ಸ್‌ಪೆಕ್ಟರ್ ಮಿ|| ಎಲ್. ಎಚ್. ಟಿಕ್ಸಿಕ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿಂದ 3 ತಿಂಗಳ ಪ್ರಿವಿಲೆಜ್ ರಜವನ್ನೂ, ಮನ್ನೊಂದು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ.

ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಜಮೇದಾರ್ ಟ್ರೂಪ್ ಕಮ್ಯಾಂಡರ್ ದರ್ಜೆಯಲ್ಲಿ ಮುಂದೆ ಹೇಳುವವರಿಗೆ ಬಡ್ತಿ ಕೊಡಲಾಗಿದೆ—ಮ|| ಗಳಾದ ದೇವರಾವ್ ಸಿಂಧೆ, ಶಿವರಾಮಸಿಂಗ್, ರಾಮರಾವ್ ಜಾದವ್, ಆರ್. ಎಸ್. ನಂಜರಾಜೆ ಅರಸ್, ಇಸೂಫ್ ಖಾನ್, ಕೆ. ಎಚ್. ಚೆಂಗೇರಿ, ಎಚ್. ಶ್ರೀನಿವಾಸಮೂರ್ತಿ.

ಮಾಲೂರು ಅಮಲ್ದಾರ್ ಮಿ|| ಎಸ್. ರಾಬರ್ಟ್‌ರವರನ್ನು ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ, ಬೆಂಗಳೂರು ಅಮಲ್ದಾರ್ ಮ|| ಟಿ. ಹನುಮಂತರಾಯರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆ ಅ|| ಕಮಿಷನರಾಗಿಯೂ ಬದಲಿ ನೇಮಕ ಮಾಡಿದೆ. ಮ|| ಬಿ. ಭೀಮರಾಯರು ಕೆಲಸದಿಂದ ನಿವೃತ್ತರಾಗುವಂತೆ ಹುಕುಂ ಮಾಡಲ್ಪಟ್ಟಿದೆ—ಚಿತ್ರದುರ್ಗದ ಎಕ್ಸೈಸ್ ಆಫೀಸರ್ ಮ|| ಎಸ್. ವೆಂಕಟರಂಗಂ ಯವರು ಅ|| ಕಂಟ್ರೋಲರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮುಂದೆ ಹೇಳುವ ಅ|| ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ.—ಮಿ|| ಮಹಮದ್ ಓಬೆದುಲ್ಲಾಯವರು ಕಡೂರಿನಿಂದ ಫ್ರಂಟ್ ರಾಕ್ಸಿಗೆ, ಮ|| ಎ. ವೇದಾಂತ ದೇಶಿಗಂ ಅಯ್ಯಂಗಾರ್ರು ಫ್ರಂಟ್ ರಾಕ್ಸಿನಿಂದ ಪೋಲೀಸ್ ಇನ್|| ಜನರಲ್‌ರವರ ಆಫೀಸಿಗೆ, ಮ|| ಎಂ. ಲಕ್ಷ್ಮಣಶಾಸ್ತ್ರಿಯವರು ಬೆಂಗಳೂರಿನಿಂದ ಶಿವಮೊಗ್ಗಾ ಸಬ್ ಡಿವಿಜನ್‌ಗೆ, ಮ|| ಆನಂದರಾವ್ ಎಸ್. ಸಿಸಿಯವರು ಶಿವಮೊಗ್ಗೆಯಿಂದ ಚಳ್ಳಕೆರೆ ಸಬ್ ಡಿವಿಜನ್‌ಗೆ, ಮ|| ಎಸ್ ನಾರಾಯಣರಾಯರು ಚಳ್ಳಕೆರೆಯಿಂದ ಪೋಲೀಸ್ ಸೂಪರಿಂಟೆಂಡೆಂಟರಾಗಿ ಕೋಲಾರಕ್ಕೆ, ಮ|| ಸಿ. ದೇವರಾಜೆ ಅರಸಿನವರು ಕೋಲಾರದಿಂದ ಮಾಲೂರು ಸಬ್ ಡಿವಿಜನ್‌ಗೆ, ಮ|| ಬಿ. ಸಿ. ಕೃಷ್ಣಶಾಸ್ತ್ರಿಯವರು ಮಾಲೂರಿನಿಂದ ಫ್ರಂಟ್ ರಾಕ್ಸ್ ಸಬ್ ಡಿವಿಜನ್‌ಗೆ, ಮ|| ಎಂ. ಕೃಷ್ಣಸ್ವಾಮಿ ಅಯ್ಯಂಗಾರ್ರು ಫ್ರಂಟ್ ರಾಕ್ಸಿನಿಂದ ಎಕ್ಸೈಸ್ ಆಫೀಸರಾಗಿ ಚಿತ್ರದುರ್ಗಕ್ಕೆ.

ರೆವಿನ್ಯೂ ಕಮಿಷನ್‌ರ ಅಸಿಸ್ಟೆಂಟರಾದ ಮ|| ಟಿ. ಜಿ ರಾಮ ಅಯ್ಯರವರಿಗೆ ಅಕ್ಟೋಬರ್ ತಾ. 6 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.—ಮ|| ಪಿ. ಪಲ್ಲುಯವರಿಗೆ ಸೆಪ್ಟಂಬರ್ ತಾ. 28 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಎಕ್ಸೈಸ್ ಕಮಿಷನರ್ ಮ|| ಪಿ ರಾಘವೇಂದ್ರರಾಯರನ್ನು ಸಂಪದಭ್ಯುದಯ ಸಮಾಜದ ಮೆಂಬರಾಗಿ ನೇಮಿಸಿದೆ.—ಬೆಂಗಳೂರು ಸೆಂಟ್ರಲ್ ಕಾಲೇಜ್ ಚರಿತ್ರಬೋಧಕರಾದ ಮ|| ಕೆ. ಶ್ರೀನರಸಿಂಹಯ್ಯನವರನ್ನು 175 ರೂಪಾಯಿ ಸಂಬಳದ ಮೇಲೆ ಅ|| ಸಂಧಿಸರಾಗಿ ನೇಮಿಸಿದೆ.—ವ್ಯವಸಾಯದ ಇಲಾಖಾ ಡೈರೆಕ್ಟರ್ ಡಾ|| ಎಲ್ ಸಿ. ಕೋಲ್‌ಮನ್ ರವರಿಗೆ ಸೆಪ್ಟಂಬರ್ ತಾ. 17 ರಿಂದ 2 ತಿಂಗಳು 9 ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಕೂಡ 3 ತಿಂಗಳು 21 ದಿನಗಳ ರಜವನ್ನೂ ಕೊಟ್ಟಿದೆ. ಮ|| ಎಚ್. ವಿ. ಕೃಷ್ಣಯ್ಯನವರನ್ನು ಡೈರೆಕ್ಟರಾಗಿ ಬದಲಿ ನೇಮಿಸಿದೆ.

ಕಡೂರು ಡಿವಿಜನ್ ಅ|| ಇಂಜನಿಯರ್ ಮ|| ಎಚ್. ಆರ್. ವೆಂಕಟಸುಬ್ಬರಾಯರಿಗೆ ಆಗಸ್ಟ್ ತಾ. 8 ರಿಂದ 2 ತಿಂಗಳು 6 ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಮಕೂರು ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಗಳ ಕಾನ್ಸರ್ಟ್ ಎಂಬ ಸಂತೋಷ ಸಭೆ.

ಈ ಮಾಹೆ ತಾ. 7 ನೇ ಗುರುವಾರ ಕೋಟೆ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿ ಬೆಳಿಗ್ಗೆ 8 ಘಂಟೆಗೆ ಈ ಸಭೆಯು ಉಪಕ್ರಮಿಸಲ್ಪಟ್ಟಿತು. ತುಮಕೂರು ಡೆಪ್ಟಿ ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರೇ ಅಗ್ರಾಸನವನ್ನು ವಹಿಸಿದ್ದರು. ಮ|| ಕೃಷ್ಣಯ್ಯಂಗಾರ್, ಎಗ್ಸಿಕ್ಯುಟಿವ್ ಇಂಜನಿಯರವರು, ಗುಬ್ಬಿ ಸಬ್ ಡಿವಿಜನ್ ಆಫೀಸರ್ ಮ|| ಎಚ್ ವಿ. ರಾಮಸ್ವಾಮಯ್ಯನವರು, ಡಾ|| ಬಿ. ಡಿ. ರಾಘವೇಂದ್ರರಾಯರು, ಮ|| ಬಿ. ರಂಗಯ್ಯಂಗಾರ್ ಮುನ್ಸೀಫರು, ಪಾರೆಸ್ಟ್ ಅ|| ಕ|| ಮ|| ವರದಾಚಾರ್ರು, ಎಕ್ಸೈಜ್ ಅ|| ಕ|| ಮ|| ಕೃಷ್ಣಮನಾಯುಡುಯವರು, ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಜಗನ್ನಾಥರಾಯರು, ಅಡ್ವೊಕೇಟ್ ಮ|| ಲಕ್ಷ್ಮೀಧರರಾಯರು, ಪ್ಲೀಡರ್ ಮ|| ಬಿ. ಕೃಷ್ಣಯ್ಯಂಗಾರ್ರು, ಪ್ರೈಮರಿ, ಎ. ವಿ ಸ್ಕೂಲ್ ಮಾಸ್ಟರುಗಳು, ಇನ್ನೂ ಇತರ ಸ್ಕೂಲುಗಳ ಹೆಡ್ ಮಾಸ್ಟರುಗಳೂ ಭೂರಿ ವರ್ತಕರೇ ಮೊದಲಾದವರೂ ಸಭಾಸದರಾಗಿದ್ದರು. ಈ ಸ್ಕೂಲುಗಳ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಪ್ಯಾಚೆಟ್‌ರವರು ಮತ್ತು ಪೇಟೆ ಸ್ಕೂಲ್ ಹೆಡ್ ಮಾಸ್ಟರ್ ಮ|| ಟಿ. ಗುರುಚನ್ನಬಸವಯ್ಯನವರು, ಕೋಟೆ ಸ್ಕೂಲ್ ಹೆಡ್ ಮಾಸ್ಟರ್ ಮ|| ಆರ್. ವೆಂಕಟರಾಯರು, ಇವರುಗಳ ಕ್ರಮವಾದ ಏರ್ಪಾಡುಗಳಿಂದ ಇಂಗ್ಲಿಷ್ ವೆಲ್‌ಕಂ, ದೇವರ ಸ್ತೋತ್ರ, ವಾರಿವಾಳದ ಗೂಡು ಮತ್ತು ಲಕ್ಷ್ಮೀಸರಸ್ವತಿಯವರ ಸಂವಾದ ಮೊದಲಾದ 24 ಐಟಂಗಳಿಂದ ಕೂಡಿದ ಪ್ರೋಗ್ರಾಮ್ ಬಹು ಕ್ರಮವಾಗಿಯೂ, ಗಂಭೀರವಾಗಿಯೂ ಸಭೆಯವರ ಮನೋಗ್ರಹಣವನ್ನು ಮಾಡುತ್ತಾ ನಡಿಸಲ್ಪಟ್ಟಿತು. ಇದಾದ ನಂತರ ಸಭಾಧ್ಯಕ್ಷರು ಎದ್ದು—ನಮ್ಮ ದೇಶಕ್ಕೆ ಬ್ರಿಟಿಷರು ಬಂದನಂತರ ವಿದ್ಯಾಭಿವೃದ್ಧಿಯ ವಿಷಯದಲ್ಲಿ ನಮ್ಮಗಳಿಗೆ ತುಂಬಾ ಸಹಾಯವುಂಟಾಗಿರುತ್ತೆಂತಲೂ, ಮಿಷನ್ ಸಂಘದವರ ಪಾಠಶಾಲೆಗಳು ಅತ್ಯಂತ ಪ್ರಾಚೀನವಾದವುಗಳೆಂದೂ, ಈಗಿನ ನವೀನ ಪಾಠಶಾಲೆಗಳಿಗೆಲ್ಲಾ ಈ ಮಿಷನ್ ಪಾಠಶಾಲೆಗಳು ಮಾತೃಪ್ರಾಯವಾಗಿರುವವೆಂದೂ, ಲೇ|| ಸೂ|| ಮಿಸ್ ಪ್ಯಾಚೆಟ್‌ರವರು ತುಂಬಾ ಶ್ರಮಪಟ್ಟು ಈ ಪಾಠಶಾಲೆಗಳನ್ನು ಅಭಿವೃದ್ಧಿಗೆ ತಂದಿರುತ್ತಾರೆಂದೂ ಬಹು ಗಂಭೀರವಾದ ಉಪನ್ಯಾಸಮಾಡಿದರು. ಅನಂತರ ಪುಷ್ಪಾದಿಗಳ ವಿನಿಯೋಗವಾಯಿತು. ಶ್ರೀಮನ್ ಮಹಾರಾಜರವರ ಮತ್ತು ಶ್ರೀಮನ್ ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯು ಆದನಂತರ ಉಪಾಧ್ಯಾಯ ಸಂಘದ ಪಕ್ಷವಾಗಿ ಪೇಟೆ ಸ್ಕೂಲ್ ಹೆಡ್ ಮಾಸ್ಟರ್ ಮ|| ಟಿ. ಗುರುಚನ್ನಬಸವಯ್ಯನವರು ಮಹನೀಯರುಗಳು ದಯಮಾಡಿ ಉಪಾಧ್ಯಾಯರಿಂದ ಶಿಕ್ಷಣವನ್ನು ಹೊಂದಿದ ಬಾಲಿಕೆಯರ ಬುದ್ಧಿಕೌಶಲ್ಯಗಳನ್ನು ಪರಾಮರಿಸಿ ಸಂತೋಷಪಟ್ಟಿದ್ದಕ್ಕೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿದರು.

ಅದೇ ಮಧ್ಯಾಹ್ನ 4 ಘಂಟೆಗೆ ಆಯರಮಹಿಳೆಯರಿಗೋಸ್ಕರ ಪುನಃ ಸಭೆಯು ಉಪಕ್ರಮಿಸಲ್ಪಟ್ಟಿತು. ಆಗ ಮಿಸೆಸ್ ಕೆ. ಆರ್. ಶ್ರೀನಿವಾಸಯ್ಯಂಗಾರ್ರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಮಿಸೆಸ್ ಕೃಷ್ಣಯ್ಯಂಗಾರ್ರವರು ಮಿಸೆಸ್ ಬಿ. ಡಿ. ರಾಘವೇಂದ್ರರಾಯರು ಮೊದಲಾದ ಸುಮಾರು 400-500 ಮಂದಿ ಸ್ತ್ರೀ ಸಮೂಹವು ಸೇರಿತ್ತು. ಬಾಲಿಕೆಯರು ತೋರಿಸುತ್ತ ಬಂದ ಕುಶಲತೆಗಾಗಿ ಸ್ತ್ರೀ ಸಮೂಹವು ಜಯಘೋಷವನ್ನು ಮಾಡುತ್ತಾ ಇತ್ತು. ಸ್ಪೀಕರ್ ಮ|| ಬಿ. ಕೃಷ್ಣಯ್ಯಂಗಾರ್ರ ಕುಮಾರಿ ಶ್ರೀಮತಿ ರಂಗಮ್ಮನವರು ಸ್ತ್ರೀ[illegible]ಭಿವೃದ್ಧಿ ವಿಷಯದಲ್ಲಿ ಯುಕ್ತಿಯುಕ್ತವಾದ ಒಂದು ಉಪನ್ಯಾಸವನ್ನು [illegible]ದರು. ಪುಷ್ಪಾದಿಗಳ ವಿನಿಯೋಗವಾದ ನಂತರ ಪೇಟೆ ಗರಲ್ಸ್ ಸ್ಕೂಲ್ [illegible] ಮಿಸ್ಟ್ರೆಸ್ ಸೌ|| ಡಿ. ಯಮುಲಮ್ಮನವರು ಸಭಿಕರಿಗೆ ಉಪಾಧ್ಯಾಯ [illegible] ವಂದನೆಯನ್ನು ಅರ್ಪಿಸಿದರು. ಅನಂತರ ಆರ್ಯಬಾಲಿಕಾ ಪಾಠಶಾಲೆಯ [illegible] ಮಿಸ್ಟ್ರೆಸ್ ಶ್ರೀಮತಿ ದೊಡ್ಡ ಸುಬ್ಬಮ್ಮನವರು ಸಭಾಧ್ಯಕ್ಷರಿಗೋಸ್ಕರ [illegible] ತಾವು ಈ ದಿನ ಬಹಳ ಆನಂದಪಟ್ಟೆವೆಂದೂ, ಇನ್ನು ಮುಂದೆಯೂ [illegible] ಈ ರೀತಿ ನಡಿಸಲ್ಪಡತಕ್ಕದ್ದೆಂದೂ ಸಭಾಧ್ಯಕ್ಷರ ಇಂಗಿತವನ್ನು [illegible] ಜುಬ್ಬಾಗಳು, ಲಂಗಾಗಳು ವಗೈರೆ ಹೊಲಿಗೆ ಸಾಮಾನುಗಳು, ಆಟದ [illegible] ನುಗಳು ವಿಕ್ರಯವಾದವು. ಈ ರೀತಿಯಾದ ಉಪಾಧ್ಯಾಯರ ಪಕ್ಷಮತ್ವ [illegible] ಸಂಗೀತ ಉಪಾಧ್ಯಾಯರಾದ ಮ|| ವೀರಭದ್ರಪ್ಪನವರ ಶಿಕ್ಷಣಕ್ಕೆ [illegible] ಮೆಚ್ಚಿಕೊಂಡು ಇವರುಗಳೆಲ್ಲಾ ಸಂಘದಿಂದ ಪ್ರೋತ್ಸಾಹ ಹೊಂದಲು [illegible] ರಾಗಿರುತ್ತಾರೆಂದು ಅಭಿಪ್ರಾಯಪಟ್ಟರು. ಪ್ರತ್ಯಕ್ಷದರ್ಶಿ.

ಶ್ರೀನಿವಾಸಮಂದಿರದ ಸ್ತ್ರೀ ಶಾಖಾ.

ಇದೇ ತಿಂಗಳು 1 ನೇ ತಾ. ಶುಕ್ರವಾರ ಸಾಯಂಕಾಲ [illegible] ಹೊಂದಿದ ಮಹಾ ಮಾತೃಶ್ರೀಗಳಾದ ಮಹಾರಾಣಿ, ಸಿ. ಐ. ಯವರ [illegible] ರಯು ಚಿತ್ತೈಸುವಾಗ ಸ್ವಾಗತರಾದವರು ಪ್ರೆಸಿಡೆಂಟರಾದ ಮಾತೃಶ್ರೀ [illegible] ಟಿ. ಸುಂದರಾಬಾಯಮ್ಮನವರು, ಸೌ|| ಎಚ್. ವಿ. ಕೃಷ್ಣವೇಣಮ್ಮನವರು, ಸೌ|| ಕೆ. ಪಿ. ಪಾರ್ವತಮ್ಮನವರು, ಸೌ|| ಕೆ. ಸೀನಮ್ಮನವರು, ಸೌ|| [illegible] ಯನ್. ಪದ್ಮಮ್ಮನವರು ಮತ್ತು ಸೌ|| ಡಿ ಬಾಲಾಂಬಮ್ಮನವರು ಮೊದಲಾದ ಎಲ್ಲರೂ ಸೇರಿ ಮಹಾಮಾತೆಯವರನ್ನು ಮಂದಿರಕ್ಕೆ ಪಥಮಾಡಿಸಿ ದೇವರ [illegible] ಯನ್ನು ಮಾಡಿಕೊಂಡು ಅಲ್ಲಿ ಇಟ್ಟಿರುವ ಪುರಾಣಪ್ರಸಿದ್ಧವಾದ ಪಠಗಳನ್ನು ಕಟಾಕ್ಷಿಸಿ ಸುವರ್ಣ ಪುಷ್ಪಗಳನ್ನು ಸಮರ್ಪಿಸಿ, ತೀರ್ಥಪ್ರಸಾದಗಳನ್ನು ಸ್ವೀಕರಿಸಿಕೊಂಡು ಪ್ರದಕ್ಷಿಣವಾಗಿ ಚಿತ್ತೈಸಿ, ಸರಸ್ವತೀ ಭಂಡಾರವನ್ನು ಪ್ರವೇಶಿಸಿ, ಅಲ್ಲಿರುವ ಎಲ್ಲಾ ಪೇಪರುಗಳನ್ನೂ ಕಟಾಕ್ಷಿಸಿದ್ದಲ್ಲದೆ ಗಣಪತಿ, ಪದ್ಮನಾಭ ವಿಗ್ರಹಗಳನ್ನು ಸಂದರ್ಶಿಸಿ, ಬೀರುಗಳಲ್ಲಿರುವ ಸಮಸ್ತ ಪುಸ್ತಕಗಳನ್ನೂ ವೀಕ್ಷಿಸಿಕೊಂಡು, ಬಹಳ ಸಂತೋಷದೊಡನೆ ದೊಡ್ಡ ಹಾಲಿಗೆ ದಯಮಾಡಿಸಿದರು. ಕೂಡಲೆ ಪ್ರೆಸಿಡೆಂಟರಾದ ಮಾತೃಶ್ರೀ ಸೌ|| ಟಿ. ಸುಂದರಾಬಾಯಮ್ಮನವರು [illegible] ಸಿಸ್ತೇನೆಂದರೆ:—"ಈ ದಿನ ಸುದಿನವೆಂದು ನಾವು ಭಾವಿಸುತ್ತೇವೆ. ಸನ್ನಿಧಾನ ಮಹಾಸ್ವಾಮಿಯು, ಶ್ರೀಮನ್ ಮಹಾರಾಣಿಯವರೂ, ಶ್ರೀಯುವರಾಣಿಯವರು ಮತ್ತು ಶ್ರೀಮಹಾರಾಜ ಕುಮಾರಿಯವರ ಸವಾರಿಯೂ ಮಂದಿರಕ್ಕೆ ಚಿತ್ತೈಸಿದುದನ್ನು ನಮ್ಮ ಸ್ತ್ರೀಸಮಾಜಕರ ಭಾಗ್ಯೋದಯವೆಂದೇ ನೆನಸಿರುವೆವು. ಈ ವಿಧವಾದ ಸನ್ನಿಧಾನದ ಪರಮ ಅನುಗ್ರಹಕ್ಕೆ ನಾವುಗಳು ಬಹಳ ಕೃತಜ್ಞರಾಗಿರುತ್ತೇವೆ."

ಅನಂತರ ಕಾರ್ಯದರ್ಶಿಯವರು ವಿಜ್ಞಾಪಿಸಿಕೊಂಡದುದೇನೆಂದರೆ:—"ಈ ಮಂದಿರವು ನಮ್ಮನ್ನಾಳುವ ಮಹಾಸ್ವಾಮಿಗಳ ಮತ್ತು ಶ್ರೀಮನ್ ಯುವರಾಜರವರ ಮತ್ತು ಪುರಜನಗಳ ಕೃಪಾಕಟಾಕ್ಷಕ್ಕೆ ಪಾತ್ರವಾಗಿ ಯಥೋಚಿತ ಅಭಿವೃದ್ಧಿಯನ್ನು ಹೊಂದುತ್ತಲಿದೆ. ಸನ್ನಿಧಾನದ ಅಭಿಮಾನದಿಂದಯಿಂದ ಶ್ರೀ ಶ್ರೀನಿವಾಸಮಂದಿರ ಎನ್ನತಕ್ಕ ಅತಿಗಂಭೀರವಾದ ಈ ಶ್ರೀ ಸಭೆಯು ಪೂರ್ತಿಯಾಗಿದ್ದರಿಂದ ಮುಂದೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳು ದಿನೇದಿನೆ ಅಭಿವೃದ್ಧಿಯನ್ನು ಹೊಂದುವುದೆಂಬದಾಗಿ ನಾವುಗಳು ನೆನಸುತ್ತೇವೆ. ಮುಖ್ಯವಾಗಿ ಇಲ್ಲಿ ಸೇರತಕ್ಕವರೆಲ್ಲರೂ ಸನ್ನಿಧಾನದ ವಾತ್ಸಲ್ಯ, ಸೌಶೀಲ್ಯ, ಸೌಲಭ್ಯಾದಿಗಳನ್ನು ಸದಾ ನೆನಸಿನಲ್ಲಿಟ್ಟುಕೊಂಡು ಕೃತಜ್ಞರಾಗಿರುತ್ತೇವೆ."

ಕಾಪೆಯ ಮೆಂಬರುಗಳಲ್ಲಿ ಕೆಲವರು ವೀಣ, ಹಾರ್ಮೋನಿಯಂ, [illegible] ಬಗಳಿಂದ ವ್ರಾತ್ಯವಾಗಿ ಹಾಡಿದರು. ಸಣ್ಣ ಹೆಣ್ಣು ಮಕ್ಕಳು ಒಬ್ಬ ಮುದ[illegible] ರಿಂದ ಕವಿತ್ವಮಾಡಲ್ಪಟ್ಟ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ಹಾಡನ್ನು ನುಡಿಸಿದರು. ಮಹಾಮಾತೃಶ್ರೀಯವರೇ ಮೊದಲಾದವರಿಗೆ ಮಂಗಳ ದ್ರವ್ಯಗಳನ್ನು ಸಮರ್ಪಿಸಿದರು. ಅನಂತರ ಶ್ರೀಮಹಾಮಾತೆಯವರು ಅನಾಥ ಬಾಲಿಕಾಶ್ರಮವನ್ನು ಪ್ರವೇಶಿಸಿ ಎಲ್ಲಾ ಬಾಲಕರನ್ನೂ ಕಟಾಕ್ಷಿಸಿ ಬಹಳ ಸಂತೋಷಪಟ್ಟದ್ದಲ್ಲದೆ, ಆ ಬಾಲಕರನ್ನು ಪ್ರೀತಿಯೊಡಗೂಡಿದ ಕೆಲವು ಮಾತು[illegible]ಗಳಿಂದ ಆನಂದಿಸಿದರು. ಬಾಲಕರೆಲ್ಲಾ ಇರತಕ್ಕ ಸ್ಥಳವನ್ನೂ ಕಟಾಕ್ಷಿಸಿ, ಮಹಡಿಯ ಮೇಲಕ್ಕೆ ತೆರಳಿ ಅಲ್ಲಿ ಅವರ ಸ್ವಾಗತವನ್ನೂ, ಕೈಗಾರಿಕೆ ಕೆಲಸಗಳನ್ನು ಮುದ್ದಾಗಿ ಪ್ರತಿಬಿಂಬನನ್ನೂ ಸ್ವಹಸ್ತ ತೆಗೆದು ನೋಡಿ ಬಹಳ ಸಂತೋಷಿಸಿದರು.

ಇಲ್ಲಿಗೆ ಬಂದಿದ್ದ ಕೆಲ ಮೆಂಬರುಗಳ ಹೆಸರನ್ನೂ ಅವರುಗಳೆಲ್ಲರೂ ಶ್ರ[illegible]ದ್ಧವಾಗಿ ಮಾಡುತ್ತಲಿರುವ ಈ ಕಾರ್ಯಗಳನ್ನೂ ನೋಡಿ ನಾವುಗಳು ಬಹಳ ಸಂತೋಷಪಟ್ಟೆವೆಂದು ಮಹಾಮಾತೃಶ್ರೀಗಳು ಪ್ರೆಸಿಡೆಂಟರೇ ಮೊದಲಾದ ಎಲ್ಲರಿಗೂ ಅಪ್ಪಣೆಕೊಡಿಸಿದರು. ಅನಂತರ ಜಯಜಯ ಶಬ್ದದೊಡನೆ ಸವಾರಿಯು ಚಿತ್ತೈಸಿತು. ಒಬ್ಬ ಸಖಿ.

ಹೊಸದುರ್ಗದಲ್ಲಿ ನಡೆದ ಒಂದು ಗೃಹಪ್ರವೇಶೋತ್ಸವ.

ಇಲ್ಲಿನ ಎ. ವಿ. ಸ್ಕೂಲಿನ ಹೊಸ ಕಟ್ಟಡದ ಪ್ರತಿಷ್ಠೆಯು ತಾ. 27 ರಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಚಿತ್ರದುರ್ಗದ ಡೆಪ್ಟಿ ಕಮಿಷನರಾದ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು ಆ ದಿನ ಮಧ್ಯಾಹ್ನ 3 ಗಂಟೆಗೆ ಮೋಟಾರ್ ಗಾಡಿಯಲ್ಲಿ ಹಳರು ತೋರಣಗಳಿಂದಲೂ ಚಿತ್ರಪಟಾದಿಗಳಿಂದಲೂ ಅಲಂಕೃತವಾಗಿದ್ದ ಈ ಹೊಸ ಕಟ್ಟಡದ ಮುಂಭಾಗಕ್ಕೆ ದಯಮಾಡಿಸಿದರು. ಈ ಊರಿನ ಮ್ಯುನಿಸಿಪಲ್ ಮೆಂಬರುಗಳೇ ಮುಂತಾದ ದೊಡ್ಡಮನುಷ್ಯರು ಎದುರುಗೊಂಡು ಕರೆತಂದರು. ಮ|| ಕಂಟ್ರ್ಯಾಕ್ಟುದಾರ್ ಫಣಿಯಪ್ಪನವರಿಂದ ಒಪ್ಪಿಸಲ್ಪಟ್ಟ ಬೆಳ್ಳಿ ಬೀಗದ ಕೈಯಿಂದ ಅವರು ವಾದ್ಯಧ್ವನಿಯೊಡನೆ ಬಾಗಿಲನ್ನು ತೆರೆದು ಸುಂದರವಾಗಿ ಅಲಂಕೃತವಾಗಿದ್ದ ಸ್ಕೂಲ್ ಹಾಲನ್ನು ಪ್ರವೇಶಿಸಿದರು. ಇವರೊಡನೆ ದಯಮಾಡಿಸಿದ್ದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮ|| ರಾಮಸ್ವಾಮಿರಾಯರವರೂ, ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟು ಮ|| ನಂಜುಂಡರಾಜೆ ಅರಸಿನವರೂ ಈ ಸಮಾರಂಭದಲ್ಲಿ ಸೇರಿ ಸುಖಾಸೀನರಾದರು. ಸ್ಕೂಲ್ ಹೆಡ್ಮಾಸ್ಟರ್ ರಾಮಚಂದ್ರರಾಯರು ಸ್ಕೂಲ್ ರಿಪೋರ್ಟನ್ನು ಓದಿದರು. ಬಾಲಕ ಬಾಲಕಿಯರುಗಳ ಗಾನಗಳೂ ಸಂಭಾಷಣಾ ರೂಪವಾದ ಚಮತ್ಕಾರವಾದ ಸಂವಾದಗಳೂ ನಡಿಸಲ್ಪಟ್ಟವು. ಇವುಗಳೆಲ್ಲವೂ ಅತ್ಯಂತ ಮನೋಜ್ಞಗಳಾಗಿದ್ದವು. ಇದಾದ ನಂತರ ಸಭಾಧ್ಯಕ್ಷರಾದ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು ಸಮಯೋಚಿತವಾಗಿಯೂ ಸಕಲಜನ ಮನೋರಂಜಕವಾಗಿಯೂ ಸ್ವಾರಸ್ಯವಾದ ಭಾಷಣ ಮಾಡಿದರು. ಇದರ ಸಾರಾಂಶವೇನೆಂದರೆ:—

ವಿದ್ಯೆಯು ಮಾನುಷವರ್ಗಕ್ಕೆ ಮುಖ್ಯವಾದ ಕಣ್ಣಾಗಿರುವದು. ಪ್ರಕೃತ ವಿದ್ಯಾಭ್ಯಾಸಮಾಡಿರುವವರ ಸಂಖ್ಯೆಯು ಪ್ರಜಾಸಾಮಾನ್ಯಕ್ಕೇನ ಶೇಕಡಾ [illegible] ಮಂದಿಗಿಂತ ಹೆಚ್ಚಾಗಿಲ್ಲ; ಉಳಿದ ಶೇಕಡಾ ತೊಂಭತ್ತನಾಲ್ಕು ಜನರು [illegible] ಕುರುಡರಂತೆಯೇ ಇರುವರು ಅಷ್ಟು ಮಂದಿ ಕಣ್ಣಿಲ್ಲದವರನ್ನು [illegible] ಆರು ಜನಗಳು ನಡಿಸಿಕೊಂಡು ಹೋಗುವದು ಹೇಗೆ ಸಾಧ್ಯವಾದೀತು! [illegible] ದರಿಂದ ನಮ್ಮ ದೇಶದಲ್ಲಿರುವ ಎಲ್ಲಾ ಬಾಲಕರನ್ನೂ ವಿದ್ಯಾವಂತರನ್ನಾಗಿ ಮಾಡುತ್ತಾ ಬಂದರೆ ಇನ್ನು 20-30 ವರುಷಗಳಲ್ಲಿ ಅನೇಕ ಜನಾ ವಿದ್ಯಾವಂತರಾಗುವರು. ಪ್ರತಿ ವರ್ಷವೂ ಇಲ್ಲಿನ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ[illegible] ವರು ಈ ತಾಲ್ಲೂಕಿನ ಇತರ ಪಾಠಶಾಲೆಗಳಲ್ಲಿ ಉಪಾಧ್ಯಾಯರಾಗಿ [illegible] ಮಾಡಿ ಗ್ರಾಮಾಂತರಗಳಲ್ಲಿಯೂ ವಿದ್ಯಾಪ್ರಚಾರಕ್ಕೆ ಸಹಾಯಮಾಡ[illegible]

...ಉಪಾಧ್ಯಾಯರ ವೃತ್ತಿಯನ್ನು ಕೇವಲ ಸಾಮಾನ್ಯವಾದುದೆಂದು ... ಇದು ಬಹಳ ಜವಾಬುದಾರಿಯುಳ್ಳ ಗೌರವವಾದ ಕೆಲಸ. ... ಸ್ಥಾಪಿತವಾಗಿರುವ ಪ್ರೋಗ್ರೆಸ್ ಕಮಿಟಿಯವರು ಪ್ರತಿ ವರ್ಷವೂ ಈ ಪಾಠಶಾಲೆಯಲ್ಲಿ ವ್ಯಾಸಂಗಮಾಡಿದ ಕೆಲವು ಮಂದಿ ವಿದ್ಯಾರ್ಥಿಗಳಾದರೂ ಹೈಸ್ಕೂಲಿಗೆ ಹೋಗಿ ಸೇರಿ ವಿದ್ಯಾಭ್ಯಾಸಮಾಡಿ ಅಲ್ಲಿಂದ ಕಾಲೇಜು ತರಗತಿಗಳಲ್ಲಿ ವಿದ್ಯಾಭ್ಯಾಸಮಾಡಿ ಶಿಲ್ಪವಿದ್ಯೆ, ವೈದ್ಯಶಾಸ್ತ್ರ, ವ್ಯವಸಾಯ ಶಾಸ್ತ್ರ ಮುಂತಾದವುಗಳನ್ನು ಕಲಿಯುವಂತೆ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟರೆ ಅಂತಹವರು ಕೆಲವು ದೇಶ ಸೇವೆಯನ್ನು ಮಾಡಿ ಇಲ್ಲಿ ಬಂದು ನೆಲಸಿದ ನಂತರ ಇಲ್ಲಿನ ಪ್ರಜಾವರ್ಗಕ್ಕೆ ಅತ್ಯಂತ ಸಹಾಯಕರಾಗುವರು. ಮೇಲೆ ಕಂಡ ಕಮಿಟಿಯವರು ವಯಸ್ಕರಾದವರನ್ನೆಲ್ಲಾ ರಾತ್ರೀ ಪಾಠಶಾಲೆಗೆ ಹೋಗಿ ವಿದ್ಯೆಕಲಿಯುವಂತೆ ಪ್ರೋತ್ಸಾಹಿಸಬೇಕು. ಈ ಊರಿನಲ್ಲಿ ಸರ್ಕಾರಿ ಪಾಠಶಾಲೆಯು ಸ್ಥಾಪಿತವಾಗಿ ... ಅರ್ಧ ಶತಮಾನವಾಯಿತು. ಹಾಲಿ 250 ಜನ ವಿದ್ಯಾರ್ಥಿಗಳ ವರಿ... ವ್ಯಾಸಂಗಮಾಡುತ್ತಿರುವದು ಸಾಮಾನ್ಯವಾಗಿ ತೃಪ್ತಿಕರವಾದ ವಿಷಯವೇ. ... ಪಾಠಶಾಲೆಯ ಕಟ್ಟಡವು ಹ್ಯಾಗೆ ಅಭಿವೃದ್ಧಿಯಾಗುತ್ತಾ ಬಂದಿದೆಯೋ ... ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಾ ಬರಬೇಕು. ಈ ಭಾಗಕ್ಕೆ ... ಅನುಸಂಧಾನವು ತಂದೆತಾಯಿಗಳಿಂದಲೂ ಪೋಷಕರಿಂದಲೂ ಆಗಬೇಕಾಗಿದೆ. ಪ್ರಕೃತ ನಮ್ಮ ಸರ್ಕಾರದವರು ಪಾಠಶಾಲೆಗಳಿಗೆ ಕಟ್ಟಡಗಳನ್ನು ... ಹೊಸದಾಗಿ ಪಾಠಶಾಲೆಗಳನ್ನು ಸ್ಥಾಪಿಸುವದರಲ್ಲಿಯೂ ... ದ್ರವ್ಯವನ್ನು ವಿನಿಯೋಗಿಸುತ್ತಲಿರುತ್ತಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ನಮಗೆ ಮಾಡುತ್ತಲಿರುವ ಸಹಾಯವನ್ನು ಸಫಲಗೊಳಿಸಿಕೊಳ್ಳುವದು ಪ್ರಜೆಗಳೆಲ್ಲರ ಮುಖ್ಯಕರ್ತವ್ಯವಾಗಿದೆ. ಆದುದರಿಂದ ವಯಸ್ಕರಾದವರೆಲ್ಲರೂ ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಗಮನಿಸಬೇಕೆಂದು ಪುನಃ ಅವರುಗಳಿಗೆ ಹೇಳುತ್ತೇನೆ. ಈ ದಿನದ ಸಮಾರಂಭವು ನನಗೆ ಬಹು ಸಂತೋಷಕರವಾಗಿತ್ತು ಎಂಬುದೇ.

ಪ್ರತ್ಯಕ್ಷದರ್ಶಿ.

ಪರಸ್ಪರಸಹಾಯ ಸಂಘಗಳ ಐದನೇ ಮಹಾಸಭೆ.

ಮೈಸೂರು ಸಂಸ್ಥಾನದ ಕೋಆಪರೇಟಿವ್ ಸಂಘಗಳ ಐದನೇ ಮಹಾಸಭೆಯು ರಾಜಧಾನಿಯ ಟೌನ್ ಹಾಲ್ ಸಭಾಮಂದಿರದಲ್ಲಿ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಯಿತು. ಸೊಸೈಟಿಗಳ ಪರವಾಗಿ ಸುಮಾರು 300 ಪ್ರತಿನಿಧಿಗಳೂ, 300 ವಿಜಿಟರುಗಳೂ ಅಲ್ಲದೆ ರಾಜಧಾನಿಯಲ್ಲಿರುವ ಅನೇಕ ಅಧಿಕಾರಿಗಳೂ ಎಲ್ಲಾ ಕೋಮು ಮತ್ತು ಕಸಬುಗಳ ನೂರಾರು ಮಂದಿ ದೊಡ್ಡ ಮನುಷ್ಯರೂ ಮಹಾಸಭೆಯಲ್ಲಿ ಹಾಜರಾಗಿದ್ದರು. ಶ್ರೀಮದ್ಯುವರಾಜರವರ ಬಲಪಾರ್ಶ್ವದಲ್ಲಿ ಬ್ರಿಟಿಷ್ ರೆಸಿಡೆಂಟ್ ಪದವಿಯನ್ನೈದಿದ ಕರ್ನಲ್ ಸರ್ ಹ್ಯೂ ಡೇಲಿಯವರು, ಸರ್ದಾರ್ ಎಂ ಕಾಂತರಾಜ ಅರಸಿನವರು, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮ|| ಆರ್. ಎಚ್. ಕ್ಯಾಂಬೆಲ್‌ರವರು, ಎಡಪಾರ್ಶ್ವದಲ್ಲಿ ಬೊಂಬಾಯಿ ಆಧಿಪತ್ಯದ ನ್ಯಾಯವಿಧಾಯಕ ಸಭೆಯ ಮೆಂಬರಾದ ಮ|| ಲಾಲೂಭಾಯಿ ಸಮಾಲ್‌ದಾಸ್ ಮೆಹತಾ, ಸಿ. ಐ. ಇ. ಯವರು, ಮ|| ಎಚ್. ವಿ. ನಂಜುಂಡಯ್ಯನವರು, ಹಿಂಭಾಗದಲ್ಲಿ ಹೈದರಾಬಾದ್ ಸಂಸ್ಥಾನದ ಪರಸ್ಪರಸಹಾಯ ಸಂಘಗಳ ರಿಜಿಸ್ಟ್ರಾರ್ ಮ|| ... ಚಾರ್ಯ, ಕಂಟ್ರೋಲರ್ ಮ|| ಟಿ. ಎಸ್. ಚಕ್ರವರ್ತಿಯವರು, ಸೆಕ್ರೆಟರಿ ಮ|| ಡಿ. ಎಂ. ನರಸಿಂಗರಾಯರು, ಮ|| ಎಂ. ಎಸ್. ಬಾಳಪ್ಪಾಜಿ ಅರಸಿನವರು, ಮ|| ಎಚ್. ನಂಜುಂಡರಾಜೆ ಅರಸಿನವರು, ಬೊಂಬಾಯಿನ ಕೆಲವು ಸ್ತ್ರೀಯರು, ಇವರೆಲ್ಲಾ ಕುಳಿತಿದ್ದರು.

ರಿಜಿಸ್ಟ್ರಾರ್ ಸಬ್ ಜಡ್ಜ್ ಮ|| ಎಸ್. ವರದರಾಜಯ್ಯಂಗಾರ್ಯ, ಮಹಾಸಭೆಯ ಪರವಾಗಿ ಶ್ರೀಮದ್ಯುವರಾಜರವರಿಗೆ ಅಡ್ರೆಸ್ಸನ್ನು ಓದಿ ಹೇಳಿ ಸಭೆಯನ್ನು ಪ್ರಾರಂಭಿಸಬೇಕೆಂದು ಕೇಳಿಕೊಂಡರು. ಶ್ರೀಮದ್ಯುವರಾಜರವರು ಸಭೆಯ ಪ್ರಾರ್ಥನೆಯನ್ನು ಆದರದೊಡನೆ ಅಂಗೀಕರಿಸಿ ಸಭಿಕರನ್ನು ಕುರಿತು ಪ್ರಕಟಿಸಿದ ಅಭಿಪ್ರಾಯಗಳೇನೆಂದರೆ—

ಘನವೊಂದಿದ ಕರ್ನಲ್ ಸರ್ ಹ್ಯೂ ಡೇಲಿಯವರು ನಮ್ಮ ನಡುವೆ ಬಿಜಯಮಾಡಿಸುತ್ತಿರುವದು ನಮಗೆ ತುಂಬಾ ಗೌರವಕರವಾಗಿರುವುದು. ಇದು ಅವರಿಗೆ ನಮ್ಮಲ್ಲಿರುವ ಆದರವನ್ನು ತೋರಿಸುತ್ತದೆ. ಇದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ.—ಈ ಸಮ್ಮೇಳನದ ಅಗ್ರಾಸನಾಧಿಪತ್ಯಕ್ಕೆ ನೀವು ಮೈಸೂರು ದೇಶವನ್ನು ಬಿಟ್ಟು ಬಹಳ ದೂರದವರನ್ನು ಹುಡುಕಿಕೊಂಡುಹೋದುದು ಇದೇ ಮೊದಲು. ಈಗ ನಮಗೆ ದೊರೆತಿರುವ ಈ ಮಹನೀಯರಿಗಿಂತ ಹೆಚ್ಚು ಯೋಗ್ಯತೆಯುಳ್ಳವರು ಇಂಡಿಯಾದೇಶದಲ್ಲಿ ಸಿಕ್ಕುವುದು ದುರ್ಲಭ. ನಮಗೆ ... ಘನತೆವೊಂದಿದ ಮ|| ಲಾಲೂಭಾಯಿ ಸಮಾಲ್‌ದಾಸ್ ಮೆಹತಾ ಸಿ. ಐ. ಇ. ಯವರು ಬೊಂಬಾಯಿ ಸೆಂಟ್ರಲ್ ಬ್ಯಾಂಕಿನಲ್ಲಿ ಡೈರೆಕ್ಟರಾಗಿದ್ದಾರೆ. ಇಂಡಿಯಾದೇಶದಲ್ಲಿ ಅನ್ಯೋನ್ಯಸಹಾಯ ಪದ್ಧತಿಯು ಏಳಿಗೆಗೆ ಬರುವುದಕ್ಕೆ ... ಪರಿಶೀಲಿಸಲಿಕ್ಕೆ ಇಂಡಿಯಾ ಸರ್ಕಾರದವರಿಂದ ನಿಯಮಿತವಾಗಿದ್ದ ಕಮಿಟಿಯಲ್ಲಿ ಇವರೂ ಮೆಂಬರಾಗಿದ್ದರು. ಪರಸ್ಪರ ಸಹಾಯಸಂಘಗಳು ... ಕಾರ್ಯಗಳನ್ನು ನಡಿಸುತ್ತಲಿವೆ ಎಂಬುದನ್ನು ಕೂಲಂಕಷವಾಗಿ ತಿಳಿಯುವದಕ್ಕೆ ಇವರಿಗೆ ಬಹಳ ಅನುಕೂಲವಾದ ಸಮಯ ಸಿಕ್ಕಿತು. ಬ್ಯಾಂಕಿನ ... ಗಳಲ್ಲಿಯೂ ... ಸಹಾಯ ವಿಷಯಗಳಲ್ಲಿಯೂ ಇವರಿಗೆ ಇರತಕ್ಕ ... ವಿಶೇಷವಾದ ಅನುಭವವೂ ನೀವು ಕೈಕೊಂಡಿರುವ ಪ್ರಕೃತ ಕಾರ್ಯನಿರ್ವಾಹಕ್ಕೆ ಬಹಳ ಸಹಕಾರಿಯಾಗುತ್ತವೆ ಎಂಬುದರಲ್ಲಿ ಏನೇನೂ ಅನುಮಾನವಿಲ್ಲ.—ಇದುವರೆಗೂ ನಿಮ್ಮ ಮಹಾಸಭೆಯ ಕೆಲಸಗಳಿಗಾಗಿ ನೀವು ಸರ್ಕಾರದವರ ಸಹಾಯವನ್ನೂ ಸಂಪದಭಿವೃದ್ಧಿ ಸಮಾಜದವರ ಸಹಾಯವನ್ನೂ ಪಡೆದುಕೊಂಡಿದ್ದಿರಿ. ಆದರೆ ಈ ಸಂವತ್ಸರ ನಿಮ್ಮ ಭಾರವನ್ನು ನೀವೇ ವಹಿಸಿಕೊಂಡು ಈ ಸಮ್ಮೇಳನಕ್ಕೆ ಮುಟ್ಟುವ ವೆಚ್ಚದಲ್ಲಿ ಅರ್ಧದಷ್ಟು ಕೊಟ್ಟಿದ್ದೀರೆಂದು ಕೇಳಿ ತುಂಬಾ ಸಂತೋಷವಾಯಿತು. ಈ ನಿಮ್ಮ ಸ್ವಾತಂತ್ರ್ಯ ಸ್ವಾವಲಂಬನಗಳನ್ನು ಕಂಡು ಸಂತೋಷಿಸಿ ಈ ಸಮ್ಮೇಳನವು ಇನ್ನು ಮುಂದೆ ... ಆಗಿ ನಿಮ್ಮಿಂದಲೇ ಕಾರ್ಯಕಾರಿಯಾಗುವುದೆಂದು ನಂಬುತ್ತೇವೆ. ಈಗ ಚರ್ಚಿಸುವ ವಿಷಯದಲ್ಲಿ ಈ ವಿಷಯವೂ ಸೇರಿರುತ್ತದೆ. ಇಲ್ಲಿ ನಡೆಯುವ ಚರ್ಚೆಗಳಲ್ಲಿ ಮುಂದೆ ತೊಂದರೆಯಿಲ್ಲದೆ ಕೆಲಸ ನಡೆಯುವ ಯಾವುದಾದರೂ ಒಂದು ಸಂಸ್ಥಾನವೇತೆಂದೂ, ಮುಂದಿನ ವರ್ಷದ ಸಮ್ಮೇಳನಗಳು ಈಗಿನಂತೆ ಪರಸ್ಪರಸಹಾಯದ ಇಲಾಖೆಯವರಿಂದಲ್ಲದೆ, ಉತ್ತರೋತ್ತರ ನೀವು ಕೂಡಿಕೊಂಡಿರುವ ಅನ್ಯೋನ್ಯಸಹಾಯನಿರತರಿಂದಲೇ ಏರ್ಪಾಡಾದೀತೆಂತಲೂ ನಿರೀಕ್ಷಿಸುತ್ತೇವೆ.—ಮೈಸೂರು ಸೀಮೆಯಲ್ಲಿ ಅನ್ಯೋನ್ಯಸಹಾಯ ಪದ್ಧತಿಯು ಈ ಸ್ಥಿತಿಯಲ್ಲಿರುವುದಕ್ಕಾಗಿ ನೀವು ಹೆಮ್ಮೆಪಡುವುದು ಸಹಜವೇ. ಈಗ ಈ ಸೀಮೆಯಲ್ಲಿ 714 ಸಂಘಗಳಿವೆ. 53,267 ಮೆಂಬರುಗಳಿದ್ದಾರೆ. 30,85,747 ರೂಪಾಯಿ ಬಂಡವಾಳವಿದೆ. ಗತ ಸಂವತ್ಸರದಲ್ಲಿ ನಿಮ್ಮ ಒಟ್ಟು ಲೇವಾದೇವಿಗಳು 1,31,13,546 ರೂಪಾಯಿಗಿಂತಲೂ ಹೆಚ್ಚಾಯಿತು. ಇದರಿಂದ ನಿಮಗೆ 1,61,691 ರೂಪಾಯಿ ಲಾಭ ದೊರಕಿದೆ. ಸುಲಭವಾದ ನಿಮ್ಮ ಲೇವಾದೇವಿಯ ಏರ್ಪಾಡಿನಿಂದ ಅನ್ಯಾಯವಾಗಿ ಕೆರುತ್ತಿದ್ದ 3,00,000 ರೂಪಾಯಿಗಳ ಬಡ್ಡಿ ಉಳಿಯಿತು. ಈ ಪದ್ಧತಿಯಿಂದ ತಲೆದೋರುವ ತಿಳುವಳಿಕೆ, ಒಳ್ಳೇ ನಡವಳಿಕೆ ಇಂತಹ ಗ್ರಾಮದವರ ಜೀವನವು ಬಹಳವಾಗಿ ಮಾರ್ಪಟ್ಟಿದೆ. ಪರಸ್ಪರ ಸಹಾಯಸಂಘಗಳಿಲ್ಲದಿರುವ ಗ್ರಾಮದವರಿಗಿಂತಲೂ ಆ ಸಂಘಗಳಿರತಕ್ಕ ಗ್ರಾಮದವರಿಗೆ ಪ್ರಾಮಾಣಿಕತನವೂ, ಸ್ವಾವಲಂಬನ ಶಕ್ತಿಯೂ ಹೆಚ್ಚಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹತ್ತು ವರ್ಷಗಳ ಬೆಳವಣಿಗೆಯಿಂದುಂಟಾದ ಈ ಫಲವು ತುಂಬಾ ಸಮರ್ಪಕವಾಗಿರುತ್ತದೆ.

ಪರಸ್ಪರಸಹಾಯಪದ್ಧತಿಯಿಂದ ಬೇರೆಬೇರೆ ವೃತ್ತಿಯವರಿಗೂ ಲಭಿಸಿರುವ ಪ್ರಯೋಜನವನ್ನು ಕುರಿತು ಯೋಚಿಸಿದರೆ ಅದರ ಏಳಿಗೆಯೂ ಸಮರ್ಪಕವಾಗಿಯೇ ಇದೆ. ಇಂಡಿಯಾ ದೇಶದ ಇತರ ಕಡೆಗಳಲ್ಲಿ ಇರುವಂತೆ ನಮ್ಮ ಸಂಘಗಳಲ್ಲಿಯೂ ಮುಖ್ಯವಾದವು ಲೇವಾದೇವಿಯ ಸಂಘಗಳೇ. ಆದರೆ ಇಂಡಿಯಾ ದೇಶದ ಇತರ ಕಡೆಯವರು ಅನ್ಯೋನ್ಯಸಹಾಯಪದ್ಧತಿಯ ಉಚ್ಚರೀತಿಯ ಮಾದರಿಗಳನ್ನು ಕೈಕೊಳ್ಳಬೇಕೆಂದು ಇನ್ನೂ ಆಲೋಚನೆಮಾಡುತ್ತಿರುವಾಗ ನೀವು ಇಲ್ಲಿ ಆಗಲೇ ಆರಂಬ ಮತ್ತು ಕೈಗಾರಿಕೆಗಳಲ್ಲಿ ಪರಸ್ಪರ ಸಹಾಯ ಕ್ರಮವನ್ನು ಏರ್ಪಡಿಸಿಕೊಂಡಿದ್ದೀರಿ. ನಿಮ್ಮಲ್ಲಿ ಹಲವು ಸಂಘಗಳು ವ್ಯವಸಾಯಕ್ಕೆ ಬೇಕಾಗುವ ಸೀಮೆಯನೇಗಿಲು ಮುಂತಾದ ಹೊಸ ಯಂತ್ರಗಳನ್ನು ಜನರಲ್ಲಿ ಬಳಕೆಗೆ ತರುತ್ತಿವೆ; ಕೆಲವು ಸಂಘಗಳು ಗೊಬ್ಬರವನ್ನೂ ಬೀಜವನ್ನೂ ಒದಗಿಸುತ್ತಿವೆ; ಇನ್ನು ಕೆಲವು, ಮೆಂಬರುಗಳು ಬೆಳೆದ ದವಸವನ್ನು ಒಟ್ಟಿಗೆ ಮಾರುವ ಕರಾರೊಂದು ನಡಿಸುತ್ತಿವೆಯೆಂದು ಕೇಳುತ್ತೇವೆ. ನೆಯಿಗೆಯವರಿಗಾಗಿ 20 ಸಂಘಗಳು ಕೆಲಸ ನಡಿಸುತ್ತಿರುವವು. ಕಬ್ಬನ್ನು ಗಾಣವಾಡಿ ಬೆಲ್ಲಮಾಡತಕ್ಕ ಮತ್ತು ಬಟ್ಟೆಯನ್ನು ಕುಟ್ಟತಕ್ಕ ಸಂಘಗಳು 6.7 ಇವೆ. ಅನ್ಯೋನ್ಯಸಹಾಯಕ್ರಮದಲ್ಲಿ ನೀರಾವರಿ ವ್ಯವಸಾಯ ನಡಿಸುವ 2-3 ಸಂಘಗಳಿವೆ. ಚನ್ನಪಟ್ಟಣದಲ್ಲಿ ಅರಗಿನ ಸಾಮಾನು ಮಾಡುವ ಸಂಘ ಒಂದಿದೆ. ಅಲ್ಲಿಯ ಕೆಲಸಗಾರರು ಸಂಘದ ಮೆಂಬರುಗಳಾಗಿದ್ದಾರೆ. ಪರಸ್ಪರಸಹಾಯ ಪದ್ಧತಿಯು ಈ ವಿಧದಿಂದಲೂ, ಇತರ ವಿಧಗಳಿಂದಲೂ ಅಪಾರವಾಗಿ ಏಳಿಗೆಗೆ ಬರುವ ಸಂಭವವಿದೆ. ಅನ್ಯೋನ್ಯಸಹಾಯಕ್ರಮದಿಂದ ಏನೇನು ಅನುಕೂಲವಾದೀತೆಂಬುದನ್ನು ನೀವು ಚೆನ್ನಾಗಿ ಯೋಚಿಸಿ ಮುಂದಿಟ್ಟುಮಾಡಿಕೊಂಡಿದ್ದೀರಿ. ಈ ವಿಷಯದಲ್ಲಿ ನನಗೆ ಲೇಶಮಾತ್ರವೂ ಅನುಮಾನವಿಲ್ಲ. ಅನ್ಯೋನ್ಯ ಸಹಾಯಧರ್ಮಗಳನ್ನು ಚೆನ್ನಾಗಿ ತಿಳಿದುಕೊಂಡು ಆಚರಣೆಗೆ ತರುವುದೀಗ ನಮಗೆ ದೊರೆಯುವ ಫಲಕ್ಕೆ ಮೂಲಭೂತವಾದುದು. ಈ ಸಂಗತಿಯನ್ನು ನೀವು ಮರೆಯಕೂಡದು. ಇದರಂತೆಯೇ ಮುಖ್ಯವಾದ ಇನ್ನೊಂದು ವಿಷಯವನ್ನು ತಿಳಿಸುತ್ತೇನೆ. ಆದಾಯ ವೆಚ್ಚಗಳನ್ನು ಚೆನ್ನಾಗಿ ಮಂಡಿಟ್ಟುಮಾಡಿಕೊಂಡ ಹೊರತು ಕೈಗಾರಿಕೆಯನ್ನಾಗಲಿ, ಜನಸಮುದಾಯವನ್ನಾಗಲಿ ಉದ್ಧಾರಮಾಡುವ ಕಾರ್ಯವನ್ನು ಹಚ್ಚಿಕೊಳ್ಳಕೂಡದು.—ನಾವು ಪ್ರಸ್ತಾಪಿಸಿದ ಪರಸ್ಪರಸಹಾಯದ ಕಮಿಟಿಯವರು ತಮ್ಮ ಕಾರ್ಯಗಳನ್ನು ಮುಗಿಸಿಕೊಂಡು ಪರಿಶೀಲನೆಯಿಂದ ಕಂಡುಬಂದ ಅಭಿಪ್ರಾಯಗಳನ್ನು ಒಂದು ರಿಪೋರ್ಟಿನಲ್ಲಿ ಪ್ರಕಟಿಸಿದ್ದಾರೆ. ಇನ್ನು ಮುಂದೆ ಇಂಡಿಯಾ ದೇಶದಲ್ಲಿ ನಡೆಯುವ ಸಕಲವಿಧವಾದ ಪರಸ್ಪರಸಹಾಯ ಕಾರ್ಯಗಳಿಗೂ ಆ ರಿಪೋರ್ಟಿನಲ್ಲಿ ಕಾಣಿಸಿರುವ ಅಭಿಪ್ರಾಯಗಳೇ ಮೂಲ ಸೂತ್ರಗಳಾಗಿರುತ್ತವೆ. ಆ ರಿಪೋರ್ಟು ಇಂಡಿಯದಲ್ಲಿರುವ ಬ್ರಿಟಿಷ್ ಸ್ವಾಧೀನಗಳಿಗೆ ಮಾತ್ರ ಅನ್ವಯಿಸುವುದಾಗಿ ಹೇಳಿದೆ. ಆದರೆ ಆ ಕಮಿಟಿಯ ಮೆಂಬರುಗಳಲ್ಲಿ ಕೆಲವರು ಆಶ್ರಿತರಾಜ್ಯಗಳ, ಮುಖ್ಯವಾಗಿ ಮೈಸೂರು ಸಂಸ್ಥಾನದ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲರು. ಆ ಕಮಿಟಿಯ ಒಂದು ಭಾಗದವರು ನಮ್ಮ ಆಹ್ವಾನದಂತೆ ಬೆಂಗಳೂರಿಗೆ ಬಂದಿದ್ದರು. ಅವರು ಬೆಂಗಳೂರಿನಲ್ಲಿ ಒಂದೇ ದಿವಸ ಇದ್ದರೂ ನಮ್ಮ ದೇಶದ ಪರಸ್ಪರಸಹಾಯಸಂಘಗಳ ಅನುಭವವು ಸ್ವಲ್ಪ ಕಾಲವಾಗಿದ್ದರೂ ಕೌತುಕವಾಗಿಯೂ ತಿಳಿದುಕೊಳ್ಳತಕ್ಕದಾಗಿಯೂ ಇದ್ದಿತು ಎಂದು ಹೇಳಿರುವರು. ಆದಕಾರಣ ಅವರು ನಿರ್ಧರಿಸಿರುವ ವಿಷಯಗಳು ಬ್ರಿಟಿಷ್ ಇಂಡಿಯದ ಇತರ ಕಡೆಗಳಿಗೆ ಅನ್ವಯಿಸುವಂತೆಯೇ ನಮ್ಮ ಸಂಸ್ಥಾನಕ್ಕೂ ಅನ್ವಯಿಸುತ್ತವೆ. ಇತರ ಕಡೆಗಳಿಗೆ ಎಷ್ಟು ಉಪಯೋಗವಾಗುತ್ತಿದೆಯೋ ಅಷ್ಟು ಇಲ್ಲಿಗೂ ಉಪಯೋಗವಾಗುತ್ತದೆ.

ನಿಮ್ಮ ಪ್ರಾಥಮಿಕ ಸಂಘಗಳ ಆಡಳಿತವೂ ಮೇಲುವಿಚಾರಣೆಯೂ ಬಹಳ ಮಟ್ಟಿಗೆ ಸಮರ್ಪಕವಾಗಿಯೂ ಫಲಪ್ರದವಾಗಿಯೂ ಇವೆ. ನೀವು ಆಯಾಯ ಸ್ಥಳಗಳಲ್ಲಿಯೇ ಅಲ್ಲಿಗೆ ಬೇಕಾದಷ್ಟು ಬಂಡವಾಳವನ್ನು ಶೇಖರಮಾಡಿಕೊಂಡು ಮೋಸಬಾರದಂತೆ ಮೆಂಬರುಗಳಿಗೆ ಅವರವರ ಯೋಗ್ಯತೆಗೆ ತಕ್ಕ ರೀತಿಯಲ್ಲಿ ಸಾಲಕೊಡುತ್ತಾ, ಕೊಟ್ಟ ಸಾಲವು ದುರುಪಯೋಗವಾಗದಂತೆ ನೋಡಿಕೊಳ್ಳುತ್ತಾ ಇದ್ದೀರಿ. ಪರಸ್ಪರಸಹಾಯ ಧರ್ಮಗಳಿಗೆ ವಿರೋಧಬಾರದಂತೆ ನೀವು ಯಾವಾಗಲೂ ಕಾರ್ಯಗಳನ್ನು ನಿರ್ವಹಿಸುತ್ತಿದ್ದೀರಿ. ನೀವು ಆಗಿಂದಾಗ್ಗೆ ನಡಿಸುತ್ತಿರುವ ವಿಹಾರಯಾತ್ರೆಗಳೂ, ಗತ ಸಂವತ್ಸರದಲ್ಲಿ ನಡೆದ 17 ತಾಲ್ಲೂಕು ಸಭೆಗಳಂತಿರುವ ಸಭೆಗಳೂ ಈ ಧರ್ಮಗಳನ್ನು ಅವಶ್ಯಕವಾಗಿ ನಿಮ್ಮ ಅವಗಾಹನೆಗೆ ತರುತ್ತಿರುವುದರಿಂದ ಈ ವಿಷಯದಲ್ಲಿ ಇನ್ನೇನೂ ಹೆಚ್ಚಾಗಿ ಮಾಡಬೇಕಾದುದಿಲ್ಲವೆಂದು ಕಾಣುತ್ತದೆ—ನಾನು ಹಿಂದೆ ಹೇಳಿದ ಪ್ರತ್ಯೇಕ ಸಂಘಗಳ ಕಾರ್ಯಭಾರವು ನಿಮ್ಮ ಕೈಯಲ್ಲಿರುವುದು; ಮುಂದೆಯೂ ಹಾಗೇ ಇದ್ದೀತು. ಆದರೆ ನೀವು ಇನ್ನೂ ಅವುಗಳ ಮೇಲುವಿಚಾರಣೆ, ಲೆಕ್ಕಗಳ ತನಿಖೆ ಈ ವಿಷಯಗಳಲ್ಲಿ ತಕ್ಕಷ್ಟು ಗಮನ ಕೊಟ್ಟಿರುವಂತೆ ಕಾಣುವುದಿಲ್ಲ. ಈ ವಿಷಯವನ್ನು ನಾವು ನಿಮಗೆ ಎರಡು ವರ್ಷಗಳ ಹಿಂದೆಯೇ ಸೂಚಿಸಿದ್ದೆವು. ತನಗೆ ಬೇಕಾದ ಹಣವನ್ನು ಕೂಡಿಸಿಕೊಂಡು, ತನ್ನ ಕಾರ್ಯವನ್ನು ತಾನೇ ನಿರ್ವಹಿಸಿಕೊಳ್ಳತಕ್ಕ ಅನ್ಯೋನ್ಯಸಹಾಯ ಪದ್ಧತಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಯೂನಿಯನ್ನಿನ ಕ್ರಮವೇಗ ಪಾಸ್ತವವಾಗಿಯೂ ಸುಲಭವಾದ ಫಲಕಾರಿಯಾದ ಮಾರ್ಗವೆಂದು ತಿಳಿಸಿದ್ದೆವು. ಈಗ ನಿಮ್ಮಲ್ಲಿ ಆಗಲೇ 15 ಯೂನಿಯನ್‌ಗಳು ಇರುತ್ತವೆ. ಅವುಗಳಿಗೆ ಬೇಕಾದ ಬಂಡವಾಳವಿಲ್ಲವಾದುದರಿಂದ ಇದುವರೆಗೆ ಅವು ಸಾಕಾದಷ್ಟು ತೃಪ್ತಿಕರವಾಗುವಂತೆ ಕಾರ್ಯವನ್ನು ಮಾಡಿರುವುದಿಲ್ಲ. ಅವುಗಳ ಕಾರ್ಯಗಳು ತೀರ ಬಾಲ್ಯಾವಸ್ಥೆಯಲ್ಲಿಯೇ ಇರುವುದರಿಂದ ಆಡಳಿತಗಳನ್ನೂ ಮೇಲುವಿಚಾರಣೆಯನ್ನೂ ನಡಿಸುವುದಕ್ಕೆ ತಮ್ಮ ಸ್ವಂತವಾಗಿ ಅಧಿಕಾರಿಗಳನ್ನು ನೇಮಿಸುವುದಕ್ಕೆ ಆಗಲಿಲ್ಲ. ಯೂನಿಯನ್‌ಗಳ ಮೂಲಕ ಪ್ರಾಥಮಿಕ ಸಂಘಗಳಿಗೆ ಬಂಡವಾಳವು ಒದಗುವಂತೆ ಮಾಡಿಕೊಂಡು ಅದರಲ್ಲಿ ಬರುವ ಲಾಭದಿಂದ ತಕ್ಕ ಸಿಬ್ಬಂದಿಯನ್ನು ಇಟ್ಟುಕೊಳ್ಳಬಹುದು. ಆದುದರಿಂದ ನೀವು ಈ ಯೂನಿಯನ್‌ಗಳನ್ನು ಅಭಿವೃದ್ಧಿಗೆ ತರುವ ಕಾರ್ಯವನ್ನು ತುಂಬಾ ಮುತುವರ್ಜಿಯಿಂದ ನಡಿಸಿ ಮೇಲುವಿಚಾರಣೆಯನ್ನು ನಡಿಸುವುದಕ್ಕೆ ಆರಂಭಿಸಬೇಕು—ನಾವು ಮೊದಲೇ ವ್ಯವಸಾಯ ಮತ್ತು ಕೈಗಾರಿಕೆಯ ಪರಸ್ಪರ ಸಹಾಯ ವಿಷಯವನ್ನು ಹೇಳಿ, ಆ ರೀತಿಯ ಪರಸ್ಪರಸಹಾಯ ಕ್ರಮವನ್ನು ಮೈಸೂರು ರಾಜ್ಯದಲ್ಲಿ ಅಭಿವೃದ್ಧಿಗೆ ತರುವುದು ಅವಶ್ಯಕವೆಂದು ತಿಳಿಸಿರುತ್ತೇವೆ. ಪರಸ್ಪರಸಹಾಯದ ಕಮಿಟಿಯವರು ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಿ ಕೈಗಾರಿಕೆ, ವ್ಯವಸಾಯ, ಪರಸ್ಪರಸಹಾಯ ಸಂಘವೆಂಬ ಬಾಬುಗಳನ್ನು ಒಬ್ಬ ಹುದ್ದೆದಾರನ ಕೈಕೆಳಗೆ ಇಡುವುದೀಗ ನಮ್ಮ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸುವುದಕ್ಕೆ ಉತ್ತಮವಾದ ಮಾರ್ಗವೆಂದು ತಿಳಿಸಿದ್ದಾರೆ. ಇದೇ ಉದ್ದೇಶದಿಂದ ಮೈಸೂರು ಸರ್ಕಾರದವರು ಸಂಪದಭ್ಯುದಯ ಸಮಾಜವನ್ನು ಏರ್ಪಡಿಸಿರುವುದು ನಿಮಗೆ ತಿಳಿದೇ ಇದೆ. ಮೇಲೆ ಹೇಳಿದ ಇಲಾಖೆಗಳೂ ವಿದ್ಯಾಭ್ಯಾಸದ ಇಲಾಖೆಯೂ ಈ ಸಮಾಜದಲ್ಲಿ ಪ್ರತಿನಿಧಿಗಳನ್ನು ಹೊಂದಿವೆ. ವಿದ್ಯೆಯಿಲ್ಲದಿದ್ದರೆ ನಾವು ಅಭಿವೃದ್ಧಿಯನ್ನು ಹೊಂದಬೇಕೆಂದು ಮಾಡುವ ಸಕಲ ಪ್ರಯತ್ನಗಳೂ ನಿಜವಾಗಿಯೂ ಫಲಕಾರಿಯಾಗಲಾರವು. ಆ ಸಭೆಯು ಪ್ರೋತ್ಸಾಹಪಡಿಸಬೇಕಾದ ವಿಷಯಗಳಲ್ಲಿ ಅನ್ಯೋನ್ಯ ಸಹಾಯವೂ ಸೇರಿರುವುದು. ಆದುದರಿಂದ ಈ ಪದ್ಧತಿಗೆ ಹೆಚ್ಚು ಗಮನವನ್ನು ಇನ್ನು ಮುಂದೆ ಆ ಸಭೆಯವರು ಕೊಡುತ್ತಾರೆಂದು ನಂಬುತ್ತೇವೆ—ಈ ಭಾಷಣವನ್ನು ಮುಗಿಸುವುದಕ್ಕೆ ಮೊದಲು ಸಹಜವಾಗಿ ನಿಮ್ಮ ಕಾರ್ಯಗಳಲ್ಲಿ ತೋರುವ ಉತ್ಸಾಹ, ವಿವೇಕಗಳಿಗೆ ಸಂತೋಷಿಸಿ, ಆ ಉತ್ಸಾಹ ವಿವೇಕಗಳು ಇದೇ ರೀತಿಯಾಗಿ ಮುಂದೆಯೂ ಇರಬೇಕೆಂದು ಆಶಿಸುತ್ತೇವೆ.

ಶ್ರೀಮದಿಂಡಿಯಾ ಚಕ್ರವರ್ತಿಯವರು ನಮಗೆ ಕೊಟ್ಟಿರುವ ಬಿರುದಿಗೆ ನಿಮ್ಮ ಸಂತೋಷವನ್ನು ಸೂಚಿಸಿದುದಕ್ಕಾಗಿ ನಾವು ಕೃತಜ್ಞರಾಗಿರುವೆವು. ಈ ಸಮ್ಮೇಳನವು ಈಗ ಉಪಕ್ರಮವಾಯಿತೆಂದು ಅಪ್ಪಣೆಕೊಡಲು ಸಂತೋಷಿಸುತ್ತೇವೆ.

ಬಳಿಕ ರಾಜಧಾನಿಯ ಸಾಹುಕಾರ್ ಮ|| ಎಂ. ಎಲ್. ವರ್ಧಮಾನಯ್ಯನವರು ಇಂಗ್ಲಿಷಿನಲ್ಲೂ, ಬೇರೂರು ಮ|| ಅರಂಬಳ ಸಂಜೀವರು ಕನ್ನಡದಲ್ಲೂ ಮ|| ಲಾಲೂಭಾಯ್ ಸಮಾಲ್‌ದಾಸ್ ಮೆಹತಾಯವರಿಗೆ ವಿಜ್ಞಾಪನೆಯನ್ನು ಮಾಡಿ ಅವರು ಅಗ್ರಾಸನವನ್ನು ವಹಿಸಿ ಮಹಾಸಭೆಯನ್ನು ನಡಿಸಬೇಕೆಂದು ಕೇಳಿಕೊಂಡರು. ಅಗ್ರ ಅವರು ಮಾಡಿದ ವಿಜ್ಞಾಪನೆಯ ಮುಖ್ಯಾಭಿಪ್ರಾಯವೇನೆಂದರೆ—"ಈ ವರ್ಷ ಪರಸ್ಥಳದ ದೊಡ್ಡ ಮನುಷ್ಯರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡು ಅನ್ಯದೇಶೀಯರಲ್ಲೆಲ್ಲಾ ಈ ವಿಷಯಗಳಲ್ಲಿ ಪೂರ್ಣಪರಿಚಯ ಮತ್ತು ಆದರವುಳ್ಳ ದೊಡ್ಡ ಮನುಷ್ಯರನ್ನು ಹುಡುಕುವುದರಲ್ಲಿ ತಾವೇ ಅಗ್ರಗಣ್ಯರೆಂಬ ತಮ್ಮ ಕೀರ್ತಿಯನ್ನು ಕೇಳಿ ತಮ್ಮನ್ನು ಅಧ್ಯಕ್ಷರನ್ನಾಗಿ ಬರಮಾಡಿಕೊಳ್ಳಬೇಕೆಂದು ನಮಗೆ ಒಡನೆಯೇ ತೋರಿತು. ಪರಸ್ಪರಸಹಾಯ ಸಂಘಗಳು ಇಂಡಿಯಾ ದೇಶದಲ್ಲಿ ಪ್ರಾರಂಭವಾದಾರಭ್ಯ ಅಂದರೆ ಕಳೆದ ಹತ್ತು ವರ್ಷಗಳಿಂದಲೂ ಅವುಗಳ ಏಳಿಗೆಯಲ್ಲಿ ತಾವು ತೋರಿಸಿರುವ ಆಸಕ್ತಿಯು ನಮಗೆ ಚೆನ್ನಾಗಿಯೇ ತಿಳಿದಿದೆ. ಬೊಂಬಾಯಿ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಸ್ಥಾಪನೆಗೆ ತಾವೇ ಕಾರಣಭೂತರಾಗಿ ಅದರ ಈಗಿನ ಉನ್ನತಸ್ಥಿತಿಗೆ ತಮ್ಮ ಸದಾಲೋಚನೆಯೇ ಕಾರಣವಾಗಿರುತ್ತದೆ. ಪರಸ್ಪರಸಹಾಯಸಂಘಗಳ ಈಗಿನ ಸ್ಥಿತಿಯನ್ನು ಶೋಧಿಸಿ ಮುಂದೆ ಅವುಗಳು ಅಭಿವೃದ್ಧಿಗೆ ಬರಲು ತಕ್ಕ ಸಲಹೆಗಳನ್ನು ಕೊಡಬೇಕೆಂದು ಇಂಡಿಯಾ ಗೌವರ್ನಮೆಂಟಿನವರು ಏರ್ಪಡಿಸಿದ ಕಮಿಟಿಗೆ ತಮ್ಮನ್ನು ಮೆಂಬರನ್ನಾಗಿ ಚುನಾಯಿಸಿದ್ದೇ ಪರಸ್ಪರಸಹಾಯ ಸಂಘಗಳ ಅಭಿವೃದ್ಧಿಯಲ್ಲಿ ತಮ್ಮ ಅತಿಶಯವಾದ ಪಾರಮಾರ್ಥಿಕ ಕಾರ್ಯವನ್ನು ಸ್ಪಷ್ಟಪಡಿಸುತ್ತದೆ....ಕೋಆಪರೇಟಿವ್ ಕಮಿಟಿಯ ಕೆಲಸವನ್ನು ಈಗ ತಾನೇ ಪೂರೈಸಿ, ಇಂಡಿಯಾದೇಶದ ಎಲ್ಲಾ ಕಡೆಗಳಲ್ಲಿಯೂ ಪ್ರಚಾರದಲ್ಲಿರುವ ಪರಸ್ಪರ ಸಹಾಯಸಂಘಗಳ ಪದ್ಧತಿಗಳನ್ನು ಸ್ವತಃ ಪರೀಕ್ಷಿಸಿ ತಮ್ಮ ಸಂಪೂರ್ಣಾನುಭವವನ್ನು ನಮಗೆ ತಿಳಿಸಲು ಸಿದ್ಧರಾಗಿ ಬಿಜಮಾಡಿಸಿರುವುದು ನಮಗೆ ಅತ್ಯಧಿಕವಾದ ಸಂತೋಷವನ್ನುಂಟುಮಾಡಿದೆ. ತಾವು ಇಲ್ಲಿರುವ ಅಲ್ಪಕಾಲದಲ್ಲೇ ನಾವು ಪರಸ್ಪರ ಸಹಾಯಸಂಘಗಳನ್ನು ನಡೆಯಿಸಲು ಅನುಸರಿಸಿರುವ ಪದ್ಧತಿಯನ್ನೂ ಅದರ ಫಲಿತಾಂಶವನ್ನೂ ಸಾಧ್ಯವಾದಷ್ಟು ಮಟ್ಟಿಗೆ ತಮಗೆ ತಿಳಿಸುವೆವು. ನಮ್ಮ ಕಾರ್ಯವು ತಮಗೆ ಸಂಪೂರ್ಣವಾಗಿ ತೃಪ್ತಿಯನ್ನುಂಟುಮಾಡುತ್ತದೆಂಬ ಹೆಮ್ಮೆಯು ನಮಗಿರುವುದಿಲ್ಲ. ಆದರೆ ನಾವು ಉದ್ದೇಶಾನುಸಾರ ನಡೆಯುವುದರಲ್ಲಿಯೂ, ಕಾರ್ಯಸಾಧನೆಯಲ್ಲಿ ಪ್ರಥಮಪ್ರಯತ್ನರಾಗಿರುವುದರಲ್ಲಿಯೂ, ಮತ್ತು ಪರಸ್ಪರಸಹಾಯಧರ್ಮಗಳ ಸಂಪೂರ್ಣವಾದ ಆಚರಣೆಯಲ್ಲಿಯೂ ಇಂಡಿಯಾ ದೇಶದಲ್ಲಿ ಯಾರಿಗೂ ಹಿಂದಾಗಿಲ್ಲವೆಂದು ನಂಬಿದೇವೆ. ನಮ್ಮಲ್ಲಿರುವ ನ್ಯೂನತೆಗಳನ್ನು ಪರಿಹರಿಸಿಕೊಳ್ಳಬೇಕೆಂಬ ಇಚ್ಛೆಯು ನಮಗೆ ಸಂಪೂರ್ಣವಾಗಿರುವದರಿಂದ ತಾವು ಸಂಕೋಚಪಡದೆ ದಯವಿಟ್ಟು ಆ ನ್ಯೂನತೆಗಳನ್ನು ವಿಶದವಾಗಿ ತಿಳಿಸಬೇಕೆಂದು ಪ್ರಾರ್ಥಿಸುವೆವು. ಈಗ ನಾವು ವಿಶ್ವಾಸಪೂರ್ವಕವಾಗಿ ತಮಗೆ ಬಯಸುವ ಸುಸ್ವಾಗತವನ್ನು ಅಂಗೀಕರಿಸಿ ಈ ಸಭೆಯ ಅಧ್ಯಕ್ಷತೆಯನ್ನು ತಾವು ವಹಿಸಬೇಕೆಂದು ಪ್ರಾರ್ಥಿಸುತ್ತೇವೆ."

ತರುವಾಯ ಪ್ರೆಸಿಡೆಂಟ್ ಸ್ಥಾನವನ್ನು ಅಂಗೀಕರಿಸಿ ಮ|| ಮೆಹತಾರವರು ಬಹು ಮನೋಜ್ಞವಾದ ಮತ್ತು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. [ಇದು ತುಂಬಾ ದೀರ್ಘವಾಗಿರೋಣದರಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲ.—ಎಡಿ.]

ತರುವಾಯ ರಿಜಿಸ್ಟ್ರಾರ್‌ರವರು ಯುವರಾಜರೇ ಮೊದಲಾದವರಿಗೆ ಹಾರತುರಾಯಿಗಳನ್ನೊಪ್ಪಿಸಿದರು. ಅಲ್ಲಿಗೆ ಆಗಿನ ಸಭೆ ಬರಖಾಸ್ತಾಯಿತು. ಫಲಾಹಾರವೂ ವಿಶ್ರಾಂತಿಯೂ ಆದ ಬಳಿಕ ಮ|| ಎಲ್. ಎಸ್. ಮೆಹತಾರವರು ಅಧ್ಯಕ್ಷತೆಯನ್ನು ವಹಿಸಿ ಸಾಯಂಕಾಲ 6 ಗಂಟೆ ತನಕ ಸಭೆಯನ್ನು ನಡಿಸಿದರು. ಆಗ ಮೇಲ್ಕಂಡ ಭಾಷಣಗಳ ಕನ್ನಡ ಭಾಷಾಂತರಗಳು ಓದಲ್ಪಟ್ಟವು. ವ್ಯವಸಾಯದ ಇಲಾಖಾ ಕೆಮಿಸ್ಟರಾದ ಮ|| ಎ. ಕೆ. ಯಜ್ಞನಾರಾಯಣಯ್ಯರವರು ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೆ ರೈತಪ್ರಜೆಗಳು ಪರಸ್ಪರಸಹಾಯ ಸಂಘಗಳನ್ನು ಮಾಡಿಕೊಂಡು ಹಣವನ್ನು ಕೂಡಿಸಿ ಕೆಲಸಗಳನ್ನು ನಡಿಸುವುದು ಶ್ರೇಯಸ್ಕರವಾಗಿರುತ್ತದೆಂಬ ಅರ್ಥಕ್ಕೆ ಒಂದು ಭಾಷಣವನ್ನು ಮಾಡಿದರು. ತರುವಾಯ ಬೆಂಗಳೂರು ಏಷ್ಯನ್ ಪ್ರೆಸ್ಸಿನ ಪ್ರೊಪ್ರೈಟರಾದ ಮ|| ಕೆ. ಎಸ್. ಕೃಷ್ಣ ಅಯ್ಯರವರು ಸಂಘಗಳಿಗೆ ಅನುಕೂಲಗಳನ್ನು ಒದಗಿಸುವಂಥಾ ಕೂಟಸಂಘಗಳು ಆಗಬೇಕೆಂದು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಬಳಿಕ ಮಹಾಸಭೆಯಲ್ಲಿ ಚರ್ಚೆಯಾಗಬೇಕಾದ ವಿಷಯಗಳನ್ನು ಪರಿಶೋಧನೆ ಮಾಡಿ ತೀರ್ಮಾನಗಳನ್ನು ಸೂಚಿಸುವುದಕ್ಕೆ ಸಬ್ ಕಮಿಟಿಗಳು ರಚಿಸಲ್ಪಟ್ಟವು. ಅಲ್ಲಿಗೆ ಮೊದಲನೇ ದಿನದ ಕಾರ್ಯಗಳು ಮುಗಿದವು.

ಮಾರುದಿನ ಅಂದರೆ ಸೋಮವಾರ ಮಧ್ಯಾಹ್ನದಿಂದ ಸಾಯಂಕಾಲದವರೆಗೂ, ಮಂಗಳವಾರ ಮಧ್ಯಾಹ್ನವೂ ಸಭೆ ಸೇರಿ ಪರಸ್ಪರಸಹಾಯ ಸಂಘಗಳ ಕಾರುಬಾರುಗಳು, ಆಡಳಿತ, ಅಭಿವೃದ್ಧಿಗೆ ತರುವ ವಿಚಾರಗಳು, ಈ ಮೊದಲಾದ ವಿಷಯಗಳನ್ನು ಕುರಿತು ಚರ್ಚೆ ನಡೆದು ತೀರ್ಮಾನಗಳು ಮಾಡಲ್ಪಟ್ಟವು.

ತಾಲ್ಲೂಕು ವರ್ತಮಾನಗಳು.

ಬ್ರಿಟಿಷರು ತಮ್ಮ ಸೈನ್ಯಗಳ ಸಾಲಿನ ಉತ್ತರ ಭಾಗದಲ್ಲಿ ಶತ್ರುವಿನ ಕಡೆಯಿಂದ ಬಂದು ಬೀಳುತ್ತಿದ್ದ ಗುಂಡುಗಳ ಹೊಗೆ ಮತ್ತು ವಿಷವಾಯುವಿನ ಮಧ್ಯೆ ನುಗ್ಗಿಹೋಗಿ ಒಂದು ಸಾವಿರ ಗಜದಷ್ಟು ಪ್ರದೇಶವನ್ನು ಗೆದ್ದು ಆಕ್ರಮಿಸಿಕೊಂಡರು ಆದರೆ ಶತ್ರುವಿನ ಗುಂಡುಗಳ ಮಳೆ ಅಪಾರವಾಗಿ ಸುರಿಯುತ್ತಿದ್ದದ್ದರಿಂದ ಆ ಸ್ಥಳವನ್ನು ಬ್ರಿಟಿಷರು ಹಿಡಿಯಲಾರದೆ ಸ್ವಲ್ಪ ಹೊತ್ತಿನಲ್ಲೇ ವಾಪಸು ಬರಬೇಕಾಯಿತು. ಬೆಲ್ಜಿಯಮ್ ತೀರದಲ್ಲಿ ಬ್ರಿಟಿಷ್ ಜಹಜುಗಳಿದ್ದು ತುಂಬಾ ಸಹಾಯಮಾಡಿದವು. ಇನ್ನು ಕೆಲವು ಕಡೆಗಳಲ್ಲಿ ಬ್ರಿಟಿಷರು ನುಗ್ಗಿ ಹೋಗಿ ಕೆಲವು ಸ್ಥಾನ್ಯಗಳನ್ನು ಗೆದ್ದು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ

ನಮ್ಮ ಪಕ್ಷದವರ ವಿಮಾನ ಯಂತ್ರಗಳು ಬಹಳ ಚುರುಕಾದ ಕಾರ್ಯಗಳನ್ನು ನಡಿಸುತ್ತವೆ ಅವು ಅಂತರಿಕ್ಷದಲ್ಲಿ ನುಗ್ಗಿ ಹೋಗಿ ಶತ್ರುವಿನ ವಿಮಾನಯಂತ್ರಗಳ ತಬೇಲೆಗಳಿಗೂ, ರೈಲ್ವೇ ಸ್ಟೇಷನ್‌ಗಳಿಗೂ, ರೈಲ್ ರಸ್ತೆಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಹಾಕಿ ನಷ್ಟಪಡಿಸಿರುತ್ತವೆ

ಫ್ರೆಂಚರೂ ಕೂಡ ಹಲವು ಠಾಣ್ಯಗಳಲ್ಲಿ ಮುಂದರಿಸಿ ನುಗ್ಗಿ ಹೋಗಿ ಶತ್ರು ಸೈನಿಕರಲ್ಲಿ ಸಣ್ಣ ಸಣ್ಣ ಗುಂಪುಗಳನ್ನು ಕೈಸೆರೆ ಹಿಡಿದು, ಗೆದ್ದ ಪ್ರದೇಶಗಳನ್ನು ಪರಾಕ್ರಮದಿಂದ ಕಾಪಾಡಿಕೊಂಡಿದ್ದಾರೆ.

ನಮ್ಮ ಪಕ್ಷದವರು ಗೆದ್ದಿರುವ ಪ್ರದೇಶಗಳನ್ನು ಅವರಿಂದ ಕಿತ್ತುಕೊಳ್ಳಬೇಕೆಂದು ಜರ್ಮನಿಯವರು ಅನೇಕ ವೇಳೆ ನುಗ್ಗಿ ಬಂದು ಬಹಳ ಕಠಿಣವಾಗಿ ಕದನ ಮಾಡಿದರು. ಅವರು ಎಷ್ಟೋ ಪರಾಕ್ರಮದಿಂದ ಕದನ ಮಾಡಿದಾಗ್ಯೂ ಕಳಕೊಂಡಿದ್ದ ಕಂದಕಗಳನ್ನು ಮತ್ತೆ ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ. ಜರ್ಮನಿಯವರ ಕಡೆ ಅಪಾರ ನಷ್ಟವುಂಟಾಗಿರುತ್ತದೆ.

ಜರ್ಮನಿಯವರು ತಮ್ಮ ಸೈನ್ಯಗಳನ್ನು ಸಾಗಿಸಿ ತರುತ್ತಿದ್ದ ರೈಲ್ ಗಾಡಿಗಳಿಗೆ ಅನಾಹುತ ಸಂಭವಿಸಿ ಅನೇಕ ಸೈನಿಕರು ಮೃತಪಟ್ಟರೆಂದು ತಿಳಿಸಲಾಗಿದೆ. ಒಂದು ಅನಾಹುತದಲ್ಲಿ 85 ಜರ್ಮನಿ ಸೈನಿಕರು ಒಂದು ನಾಲೆಯಲ್ಲಿ ಮುಳುಗಿಕೊಂಡು ಸತ್ತುಹೋದರು.

ಪೂರ್ವ ರಣರಂಗದಲ್ಲಿ.

ಯುದ್ಧಸಾಲಿನ ಉದ್ದಕ್ಕೂ ಈ ವಾರ ಕದನಗಳಾದಂತೆ ಕಾಣುವುದಿಲ್ಲ. ಉತ್ತರದಲ್ಲಿ ಅಂದರೆ ರೀಗಾ ಡಿಸ್ಟ್ರಿಕ್ಟಿನಲ್ಲಿ ಶಾಂತವಾಗಿದ್ದಂತೆ ತೋರುವುದು. ಆದರೆ ಮಧ್ಯದಲ್ಲಿ ಕದನವು ಮಹಾ ಘೋರವಾಗಿ ನಡೆದಿದೆ. ಹಲವು ಗ್ರಾಮಗಳು ಈಗ ರಷ್ಯಾದವರ ಸ್ವಾಧೀನಕ್ಕೆ ಬಂದವು. ಇವನ್ನು ಜರ್ಮನಿಯವರು ಹಿಂದೆ ರಷ್ಯಾದವರಿಂದ ಕಿತ್ತು ಸ್ವಾಧೀನಪಡಿಸಿಕೊಂಡಿದ್ದರು. ಈಗ ರಷ್ಯಾದವರು ಮತ್ತೆ ಅವುಗಳೊಳಗಿಂದ ಜರ್ಮನಿಯವರನ್ನು ಓಡಿಸಿರುತ್ತಾರೆ. ಜರ್ಮನಿಯವರು ಮುಂದರಿಸಿ ನುಗ್ಗಿಹೋಗಲು ಸಾಧ್ಯವಾಗಲಿಲ್ಲವೆಂದು ಕಾಣುತ್ತದೆ. ಜರ್ಮನಿಯವರ ವಶವಾಗಬಹುದೆಂದು ಬಿಟ್ಟುಹೋಗಿದ್ದ ಕೆಲವು ಪಟ್ಟಣಗಳಿಗೆ ಮತ್ತೆ ರಷ್ಯಾದವರು ಬಂದು ವಾಸಮಾಡುತ್ತಿದ್ದಾರೆ ಈಚೆಗೆ ಎರಡು ಪಕ್ಷದ ಸೈನಿಕರೂ ವಿಶೇಷವಾಗಿ ಬಹಳ ಸಮೀಪದಲ್ಲಿ ಒಬ್ಬರ ಮೇಲೊಬ್ಬರು ನುಗ್ಗಿ ಸಂಗೀನುಗಳಿಂದ ತಿವಿದಾಡುತ್ತಾ ಕದನಮಾಡಿದಂತೆ ತಿಳಿಯುವುದು

ಅಲ್ಲಿಂದ ದಕ್ಷಿಣಕ್ಕೆ ರಷ್ಯಾದವರು ಒಂದು ದೊಡ್ಡ ನದಿಯನ್ನು ದಾಟಿ ಈಚೆಗೆ ಬಂದು ಜರ್ಮನಿಯವರನ್ನು ಕೆಲವು ಮೈಲಿಗಳ ದೂರ ಹಿಂದಕ್ಕೆ ಓಡಿಸಿ ಅವರಲ್ಲಿ 10 ಉದ್ಯೋಗದಾರರನ್ನೂ, 2,000 ಸೈನಿಕರನ್ನೂ, 4 ಫಿರಂಗಿಗಳನ್ನೂ 10 ಮೆಷೀನ್ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ರಷ್ಯಾದವರಿಗೆ ಈಗ ಮದ್ದುಗುಂಡು ಮೊದಲಾದ ಯುದ್ಧಸಾಮಗ್ರಿಗಳು ಅಪಾರವಾಗಿ ಒದಗುತ್ತಿವೆ. ಅವರು ಈಗ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಿದ್ದಾರೆ. ಇದರಿಂದ ಜರ್ಮನಿಯವರು ಅಲ್ಲಿರುವ ತಮ್ಮ ಸೈನ್ಯಗಳನ್ನು ಸಾವಿರಗಟ್ಟಲೆ ತೆಗೆದು ಸೆರ್ಬಿಯಾಕ್ಕೆ ಕಳುಹಿಸದಂತೆ ಅಡ್ಡಿಯಾಗಿರುವುದು. ಈ ಸೈನ್ಯವೆಲ್ಲಾ ಅಲ್ಲೇ ಇದ್ದು ರಷ್ಯಾದವರನ್ನು ತಡೆಯಬೇಕಾಗಿ ಬಂದಿದೆ ಜರ್ಮನಿಯವರು ಮುಂದರಿಸಿ ನುಗ್ಗಿ ಹೋಗುವುದು ನಿಂತುಹೋಯಿತೆಂದೂ, ಹೊಸ ಸೈನ್ಯಗಳು ಒದಗಿದ ಕೂಡಲೆ ರಷ್ಯಾದವರು ಅವರ ಮೇಲೆ ನುಗ್ಗಿ ಅವರನ್ನು ಹಿಂದಕ್ಕೆ ಓಡಿಸುತ್ತಾರೆಂದೂ ಸ್ಪಷ್ಟವಾಗಿದೆ. ಹ್ಯಾಗೂ ಎಲ್ಲಾ ಕಡೆಗಳಲ್ಲೂ ರಷ್ಯಾದವರು ಶತ್ರುವಿನ ಮೇಲೆ ಬಿದ್ದು ನುಗ್ಗುವುದಕ್ಕೆ ಇನ್ನೂ ಸ್ವಲ್ಪ ತಡವಾದೀತೆಂದು ಕಾಣುವುದು.

ಇಟಲಿ.

[illegible]ಯವರ ಕಾರ್ಯಾಚರಣೆಗಳ ವಿಷಯದಲ್ಲಿ ಬಂದಿರುವ ವರ್ತಮಾನಗಳು [illegible] ಸ್ವಲ್ಪ. ಅವರ ಸೈನ್ಯಗಳು ಉತ್ತರ ದಿಕ್ಕಿನಲ್ಲಿರುವ ಪರ್ವತ ಪ್ರದೇಶಗ[illegible] [illegible]ವಾಗಿ ನುಗ್ಗಿ ಹೋಗುತ್ತಿರುವಂತೆ ತೋರುತ್ತದೆ. ಕೆಲವು ಕಡೆ [illegible]ಯಾದವರು ವಿಶೇಷ ಪರಾಕ್ರಮವನ್ನು ತೋರಿಸಿ ಇಟಲಿಯವರ ಮೇಲೆ [illegible] ಕದನ ಮಾಡಿದರು. ಆದರೆ ಅವರು ಸೋತು ಹಿಮ್ಮೆಟ್ಟುವಂತಾಯಿತು.

ಟರ್ಕಿ.

[illegible]ಯಿಂದ ವಿಶೇಷ ವರ್ತಮಾನವೇನೂ ಬಂದಿರುವುದಿಲ್ಲ. ಅವರು [illegible]ನಲ್ಲಿ ಕಂದಕಗಳನ್ನು ತೋಡುತ್ತಿರುವಂತೆ ವರ್ತಮಾನವಿದೆ; ಇದರ [illegible] ತಿಳಿಯಲಿಲ್ಲ. ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸುವ [illegible]ನಗಳಲ್ಲಿ ಬ್ರಿಟಿಷರ 96,899 ಸೈನಿಕರು ನಷ್ಟಪಟ್ಟರು; ಇವರಲ್ಲಿ 4,899 [illegible] ಉದ್ಯೋಗಸ್ಥರು. 18,957 ಸೈನಿಕರು ಕೊಲೆಯಾದರು; 68,852 ಮಂದಿ [illegible]; 9,090 ಮಂದಿ ಸಿಕ್ಕಿ ಇಲ್ಲ. ಇವರೊಳಗೆ ಆಸ್ಟ್ರೇಲಿಯಾ [illegible], ನ್ಯೂಜಿಲೆಂಡಿನವರೂ ಸೇರಿ ಹೋಗಿದ್ದಾರೆ. ಇವರೊಳಗೆ 1,201 [illegible]ರೂ, 27,920 ಸೈನಿಕರೂ ನಷ್ಟನಾದರು. ಈ ಸಂಖ್ಯೆಗಳನ್ನು ನೋಡಿ [illegible] ಪ್ರಾಂತ್ಯದಲ್ಲಿ ನಡೆದ ಕದನಗಳು ಮಹಾ ಕಠಿಣವಾಗಿದ್ದವೆಂದು [illegible]ಗುವದು.

ಆಫ್ರಿಕಾದಲ್ಲಿ.

ಕೆಲವು ವಾರಗಳಿಂದ ಆಫ್ರಿಕಾ ಕಡೆಯ ವರ್ತಮಾನಗಳೇನೂ ಬಂದಿರುವು[illegible]. [illegible]ಮ ಆಫ್ರಿಕಕ್ಕೆ ಸೇರಿದ ಕ್ಯಾಮರೂನ್ಸ್ ಸೀಮೆಯಲ್ಲಿ ಈಗ ಬ್ರಿಟಿ[illegible] ಒಂದು ದೊಡ್ಡ ನಗರವನ್ನು ಗೆದ್ದು ಇರುತ್ತಾರೆಂದು ತಿಳಿಸಲ್ಪಟ್ಟಿದೆ. ಈ [illegible]ಪ್ರಾಂತ್ಯದಲ್ಲಿ ಮಳೆಗಾಲವು ಕೊನೆಗಂಡಿತು. ಇನ್ನು ಅಲ್ಲಿ ಮುಂದರಿಸಿ ನುಗ್ಗಿ[illegible]ವ ಕಾರ್ಯಗಳು ಪ್ರಾರಂಭವಾಗುವವು.

ಬಾಲ್ಕನ್ ಸಂಸ್ಥಾನಗಳು.

ಬಾಲ್ಕನ್ ಸಂಸ್ಥಾನಗಳನ್ನು ಕುರಿತು ಸರ್ ಎಡ್ವರ್ಡ್ ಗ್ರೇಯವರು [illegible] ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಒಂದು [illegible]ವನ್ನು ಮಾಡಿದರು. ಬಾಲ್ಕನ್ ಸಂಸ್ಥಾನಗಳೂ ಟರ್ಕಿಯೂ ಈ ಯುದ್ಧ[illegible] ಸೇರದೆ ಪ್ರತ್ಯೇಕವಾಗಿರಬೇಕೆಂದೇ ಗ್ರೇಟ್ ಬ್ರಿಟನ್ ರಾಜ್ಯದವರು [illegible]ಸಿದರು. ಆದರೆ ಜರ್ಮನಿಯು ಉಪಾಯಮಾಡಿ ಟರ್ಕಿಯನ್ನು ತನ್ನ [illegible] ಸೇರಿಸಿಕೊಂಡಿತು. ಇದರಿಂದ ಎಲ್ಲಾ ರೂಪಾಂತರಹೊಂದಿತು. ಉಳಿದ [illegible]ನಗಳೆಲ್ಲ ಯುದ್ಧದಲ್ಲಿ ಬೆರೆಯದೆ ತಟಸ್ಥವಾಗಿರಬೇಕೆನ್ನುವುದು ಗ್ರೇಟ್ [illegible]ನವರ ಆಶಯವಾಗಿತ್ತು. ಆದರೆ ಜರ್ಮನಿಯು ಟಿಸಾವಗೆಮಾಡಿ [illegible]ಕ್ಕೆ ಹೋರಡುವಂತೆ ಸಂಧಾನಮಾಡಿತು. ಬಾಲ್ಕನ್ ಸಂಸ್ಥಾನಗಳಲ್ಲಿ [illegible] ಪಳಮೆಯಿಲ್ಲ. ನಮ್ಮ ಪಕ್ಷದವರು ಕೆಡುತ್ತಾರೆಂದು ಹೇಳಿದ್ದಕ್ಕಿಂ[illegible] ಹೆಚ್ಚಾಗಿ ಜರ್ಮನಿಯವರು ಕೆಡುತ್ತಾರೆಂದು ವಾಗ್ದಾನಮಾಡಿದ್ದರಿಂದ [illegible]ರಿಯಾ ಸಂಸ್ಥಾನವು ಜರ್ಮನಿಯ ಕಡೆ ಸೇರಿಕೊಂಡಿತು. ರೂಮೇನಿಯಾ [illegible]ನವು ಯುದ್ಧದಲ್ಲಿ ಸೇರದೆ ನೆಮ್ಮದಿಯಾಗಿರಬೇಕೆಂದು ಸಾಹಸಪಡುತ್ತದೆ. [illegible] ಪಕ್ಷದವರು ತಮ್ಮ ಕೈಲಾಗುವ ಮಟ್ಟಿಗೂ ಸರ್ಬಿಯಾವಿಗೆ ಸಹಾಯ [illegible]ಗಿದೆ. ಗ್ರೀಸ್ ಮತ್ತು ಸರ್ಬಿಯಾ ಇವೆರಡು ರಾಜ್ಯಗಳೂ ಏಕಪಾ[illegible]; ಹಾಗಿಲ್ಲದಿದ್ದರೆ ಎರಡೂ ಹಾಳಾಗಬೇಕು. ನಮ್ಮ ಪಕ್ಷದ ಸೈನ್ಯ[illegible] ಹೋಗಿ ಸಾಲೋನಿಕದಲ್ಲಿ ಇಳಿದಾಗ ಗ್ರೀಸ್ ಸಂಸ್ಥಾನವು ಇಳಿಸಕೂಡ[illegible] ಪ್ರತಿಭಟಿಸಿತು; ಆದರೂ ಗ್ರೀಸ್ ನಮ್ಮ ಪಕ್ಷದ ಸೈನ್ಯಗಳಿಗೆ ಸಹಾಯಕ[illegible]ತು.

[illegible]ರಿಯಸಂಸ್ಥಾನದಲ್ಲಿರುವ ಪ್ರಜೆಗಳು ಕದನಕ್ಕೆ ಹೊರಡುವ ವಿಷಯದಲ್ಲಿ [illegible]ಪ್ರಾಯವುಳ್ಳವರಾಗಿಲ್ಲ. ಅನೇಕರಿಗೆ ಯುದ್ಧಮಾಡುವುದು ಇಷ್ಟವಿಲ್ಲದೆ [illegible] ತ್ಯಜಿಸಿ ರೂಮೇನಿಯಾ ಸಂಸ್ಥಾನಕ್ಕೆ ಹೊರಟುಹೋಗುತ್ತಿದ್ದಾರೆ.

ಜರ್ಮನಿ ಮತ್ತು ಬಲ್ಗೇರಿಯಾ ಸೈನ್ಯಗಳು ನುಗ್ಗಿಹೋಗಿ ಸರ್ಬಿಯಾ[illegible] ಮೂರು ನಾಲ್ಕು ಕಡೆಗಳಲ್ಲಿ ಮುತ್ತಿಗೆ ಹಾಕಿ ಕದನ ಮಾಡುತ್ತಲಿವೆ [illegible]ವನ್ನು ಸೋಲಿಸಿ ಹಾಳುಕೆಡುವ ಬೇಕೆಂದು ಜರ್ಮನಿ ಹೇಳುತ್ತದೆ [illegible]ನೈಋತ್ಯ ಪಕ್ಷದಲ್ಲಿ ಜರ್ಮನಿಯು ಬೆಲ್ಜಿಯಮ್ಮಿಗೆ ಮಾಡಿದ್ದಕ್ಕಿಂತಲೂ [illegible] ಹೆಚ್ಚಾದ ಕೇಡನ್ನು ಮಾಡಬಹುದು. ಸರ್ಬಿಯಾವಿನ ಉತ್ತರದಲ್ಲೂ [illegible]ದಲ್ಲಿ ಎಳ್ಳಿಕಟ್ಟಾಗಿರುವ ಸೇವೆಗಳನ್ನು ದಾಟಿ ಒಳನುಗ್ಗಬೇಕೆಂದು [illegible]ನು ಪ್ರಯತ್ನಪಟ್ಟರು. ಎರಡು ಕಡೆಗಳಲ್ಲಿ ಅವರಿಗೆ ಸಾಧ್ಯವಾಗದೆ [illegible] ಸೈನ್ಯಗಳನ್ನು ನಷ್ಟಪಡಿಸಿಕೊಂಡರು. ಜರ್ಮನಿಯವರು ಸರ್ಬಿಯಾ [illegible]ಧಾನಿಯಾದ ಬೆಲ್‌ಗ್ರೇಡ್ ಪಟ್ಟಣಕ್ಕೆ 60,000 ಸಿಡಿಮದ್ದಿನ ಗುಂಡುಗ[illegible] ಸುರಿಸಿ ಅಪಾರ ನಷ್ಟವನ್ನುಂಟುಮಾಡಿದರು. ಪಟ್ಟಣವನ್ನು ನಾಶಪಡಿಸಿ[illegible]ವುದಕ್ಕೆ ಇಷ್ಟಪಡದೆ ಸರ್ಬಿಯಾದವರು ಅದನ್ನು ಬಿಟ್ಟು ಹಿಂದಕ್ಕೆ [illegible]ದರು. ಅಂಥಾಪ್ರಸಂಗದಲ್ಲೂ ಸರ್ಬಿಯಾದವರು ಆಸ್ಟ್ರಿಯಾದ ಎರಡು ಸಣ್ಣ [illegible]ದ್ಧದ ಜಹಜುಗಳನ್ನು ಹಿಡಿದು ನದಿಯಲ್ಲಿ ಮುಳುಗಿಸಿರುತ್ತಾರೆ. ಆಸ್ಟ್ರಿ[illegible]ದವರು ಬೆಲ್‌ಗ್ರೇಡ್ ನಗರವು ತಮ್ಮ ಸ್ವಾಧೀನವಾಯಿತೆಂದೂ, 600 ಸೈನಿ[illegible] 35 ಪಿರಂಗಿಗಳೂ ಮಾತ್ರವೇ ಸಿಕ್ಕಿದವೆಂದೂ ಹೇಳುತ್ತಾರೆ. ಅತ್ತಲಾಗಿ [illegible]ಯಾ ಮತ್ತು ಜರ್ಮನಿ ಸೈನ್ಯಗಳು ಅಪಾರವಾಗಿ ನಷ್ಟವಾದವು. [illegible] ಎಂಬಲ್ಲಿ 20,000 ಗಾಯಪಟ್ಟ ಸೈನಿಕರಿದ್ದಾರೆ. ಬೋಸ್ನಿಯಾದಲ್ಲೂ [illegible]ಪಟ್ಟವರು ಅನೇಕರಿರುತ್ತಾರೆ. ಒಟ್ಟಾಗಿ ಜರ್ಮನಿ ಮತ್ತು ಆಸ್ಟ್ರಿಯಾ[illegible]ದಲ್ಲಿ 20,000 ಕೊಲೆಯಾದರು; 60,000 ಗಾಯಪಟ್ಟರು. ಈ ರೀತಿ [illegible] ನಷ್ಟ ಸಂಭವಿಸಿದ್ದನ್ನು ನೋಡಿ ಜರ್ಮನಿಯು ಬಲ್ಗೇರಿಯಾವನ್ನು [illegible] ನುಗ್ಗಿಹೋಗುವಂತೆ ಬಲಾತ್ಕಾರ ಮಾಡುತ್ತಿದೆ.

ಬಲ್ಗೇರಿಯಾ ಸಂಸ್ಥಾನದ ದೊರೆಯು ದಾಯಾದಿಯ ದೊರೆಗೆ ಸಂತೀವ [illegible]ವನ್ನು ಕಳುಹಿಸಿ ಜರ್ಮನಿಯ ಕಡೆ ಸೇರಿಕೊಂಡದ್ದು ಬಹಳ ನೀಚ [illegible]ದ್ದೆಂದು ತಿಳಿಸಿದಾಗ ಗ್ರೀಸಿಗೂ ಸರ್ಬಿಯಾವಿಗೂ ಒಬ್ಬರಿಗೊಬ್ಬರು [illegible]ರಾಗಬೇಕೆಂದು ಕರಾರು ನಡೆದಿತ್ತು. ಆ ಕರಾರಿನಂತೆ ನಡೆಕೊಳ್ಳ[illegible] ಅಗತ್ಯ ಕಾಣುವುದಿಲ್ಲವೆಂದು ಗ್ರೀಸ್ ಸರ್ಬಿಯಾವಿಗೆ ತಿಳಿಸಿಬಿಟ್ಟಿದೆ. [illegible] ಗ್ರೀಸಿಗೆ ಮಂತ್ರಿಯಾಗಿದ್ದ ವೆನಿಜೆಲಾಸನು ಗ್ರೀಸ್ ರಾಜ್ಯವೂ ಸೇರಿ [illegible] ಬಲ್ಗೇರಿಯಾವನ್ನು ಹತಮಾಡಬೇಕೆಂದು ಹೇಳುತ್ತಾನೆ.

[illegible] ಎಂಬ ನಗರವನ್ನು ಸರ್ಬಿಯಾದವರು ತಮ್ಮ ರಾಜಧಾನಿಯಾಗಿ [illegible]ಕೊಂಡಿದ್ದಾರೆ. ಬಲ್ಗೇರಿಯಾದವರು ಅದನ್ನು ಕಿತ್ತು ಸ್ವಾಧೀನಪಡಿಸಿ[illegible]ಬೇಕೆಂದು ಹೊರಟಿದ್ದಾರೆ. ಅವರೀಗ ಎಲ್ಲೆಯನ್ನು ದಾಟಿಹೋದರು. [illegible] ಮುಂದಕ್ಕೆ ಸರ್ಬಿಯಾದವರು ಸೈನ್ಯವನ್ನಿಟ್ಟುಕೊಂಡು ಕದನಕ್ಕೆ [illegible]ವಾಗಿ ಅಡ್ಡಿಮಾಡುತ್ತಿರೋಣದರಿಂದ ಬಲ್ಗೇರಿಯಾದವರು ಮುಂದರಿಸ [illegible]. ಆದರೆ ಸಾಲೋನಿಕದಲ್ಲಿ ಹೋಗಿ ಇಳಿದಿರುವ ನಮ್ಮ ಪಕ್ಷದ [illegible]ಗಳು ಏನು ಮಾಡುತ್ತಿವೆಯೋ ತಿಳಿಯಲಿಲ್ಲ. ನಮ್ಮವರ ಆ ಸೈನ್ಯ 30,000 [illegible] ಹೇಳಲಾಗಿದೆ. ಗ್ರೀಸಿನವರು ತಮ್ಮ ರೈಲ್ ಮಾರ್ಗಗಳನ್ನು ಅವರಿಗೆ [illegible] ಸಹಾಯ ಮಾಡಿದರು. ಆದಕಾರಣ ನಮ್ಮ ಪಕ್ಷದ ಈ ಸೈನ್ಯಗಳು [illegible] ಬಲ್ಗೇರಿಯಾದವರನ್ನು ಸಂಧಿಸಿ ಅವರನ್ನು ಹಿಮ್ಮೆಟ್ಟಿಸುತ್ತಾ[illegible] ನಿರೀಕ್ಷಿಸಬಹುದು. ಅತ್ತಲಾಗಿ ರಷ್ಯಾದವರು ತಮ್ಮ ಯುದ್ಧದ [illegible]ಗಳನ್ನು ತಂದು ಕಪ್ಪು ಕಡಲಿನಲ್ಲಿರುವ ವಾರ್ನ ಮತ್ತು ಬರ್ಗಾಸ್ ಎಂಬ ಬಲ್ಗೇರಿಯಾ ತೀರಪಟ್ಟಣಗಳಿಗೆ ಪಿರಂಗಿಗುಂಡುಗಳನ್ನು ಸುರಿಸುತ್ತಿದ್ದಾರೆ.

[illegible] ಬಲ್ಗೇರಿಯಾವಿಗೂ ಗೋಪ್ಯವಾಗಿ ಒಂದು ಕರಾರು ನಡೆ[illegible] ಏನೆಂದರೆ, ಜರ್ಮನಿಯವರು ಗೆದ್ದರೆ ಬಾಲ್ಕನ್ ಅರ್ಧ ದ್ವೀಪದಲ್ಲಿ ಬಹಳ ಭಾಗವನ್ನೆಲ್ಲಾ ಬಲ್ಗೇರಿಯಾವಿಗೆ ಸೇರಿಸಿಕೊಡುವಂತೆ ಒಪ್ಪಿದಾರೆಂದೂ ವರ್ತಮಾನ ಪತ್ರಿಕೆಗಳು ಹೇಳುವವು.

ಆಸ್ಟ್ರಿಯಾದವರು ಮಾಂಟಿನೀಗ್ರೋ ಸಂಸ್ಥಾನದ ಮೇಲೆ ನುಗ್ಗಿ ಮುತ್ತಿಗೆಹಾಕಿಕೊಂಡು ಮೂರು ಕಡೆಗಳಲ್ಲಿ ನದಿಯನ್ನು ದಾಟಬೇಕೆಂದು ಪ್ರಯತ್ನಪಟ್ಟರು. ಆದರೆ ಅವರನ್ನೆಲ್ಲಾ ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ. ಆಸ್ಟ್ರಿಯಾದವರು ಎಲ್ಲೆಯನ್ನು ದಾಟಿ ಹೋಗಲಿಲ್ಲ.

ರಷ್ಯಾದವರ ಎರಡು ಟಾರ್ಪೆಡೋ ದೋಣಿಗಳು ಕಪ್ಪು ಕಡಲಿನಲ್ಲಿ ಟರ್ಕಿಯವರ 19 ವ್ಯಾಪಾರದ ಹಡಗುಗಳನ್ನು ಮುಳುಗಿಸಿರುತ್ತವೆ.

ಈಚೆಗೆ ಬಂದಿರುವ ತಂತೀವರ್ತಮಾನಗಳು ಸರ್ಬಿಯಾದವರು ಮಹಾ ಪರಾಕ್ರಮದಿಂದ ಕದನಮಾಡುತ್ತಿರುವರೆಂದೂ, ಜರ್ಮನಿಯವರ ಕಡೆ ಇನ್ನೂ 80,000 ಹೊಸ ಸೈನ್ಯಗಳು ಬಂದು ಸೇರಿರುವವೆಂದೂ, ಈಗ ಇವರು ಸರ್ಬಿಯಾದವರನ್ನು ಬಲಗಡೆಗೆ ಒತ್ತಿಸಿ ಹಿಮ್ಮೆಟ್ಟಿಸುತ್ತಿದ್ದಾರೆಂದೂ ತಿಳಿಸುವವು.

ಬಲ್ಗೇರಿಯಾ ತೀರದಲ್ಲಿ ಹಡಗುಗಳೂ ಜಹಜುಗಳೂ ಸಿಕ್ಕಿದರೆ ಮುಳುಗಿಸುತ್ತೇವೆಂದೂ, 48 ಗಂಟೆ ಹೊತ್ತಿನೊಳಗಾಗಿ ತಟಸ್ಥರಾಜ್ಯಗಳ ಹಡಗುಗಳೂ ಜಹಜುಗಳೂ ಅಲ್ಲಿಂದ ಹೊರಟು ಹೋಗಬೇಕೆಂದೂ ಬ್ರಿಟಿಷರು ಇಸ್ತಿಹಾರು ಹಾಕಿಸಿ ಎಚ್ಚರಿಕೆ ಕೊಟ್ಟಿದ್ದಾರೆ.

ಸದ್ಯಕ್ಕೆ ರೂಮೇನಿಯವು ಯುದ್ಧದಲ್ಲಿ ಬೆರೆಯದೆ ಪ್ರತ್ಯೇಕವಾಗಿರುತ್ತದೆ.

ಇತರ ವಿಷಯಗಳು.

ಜರ್ಮನಿಯ ಜೆಪ್ಲಿನ್ ಎಂಬ ದೊಡ್ಡ ವಿಮಾನ ಯಂತ್ರಗಳು ಲಂಡನ್ ಪಟ್ಟಣದ ಮೇಲೂ, ಇಂಗ್ಲೆಂಡಿನ ಪೂರ್ವತೀರದ ಡಿಸ್ಟ್ರಿಕ್ಟುಗಳ ಮೇಲೂ ಬಂದಿದ್ದು ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರಿಂದ ಹಲವು ಕಡೆಗಳಲ್ಲಿ ಬೆಂಕಿಹುಟ್ಟಿ ಹತ್ತಿಕೊಂಡಿತು. ಆದರೆ ಯುದ್ಧದ ಇಲಾಖೆಗೆ ಸಂಬಂಧಪಡುವ ಯಾವುದೊಂದು ಕಟ್ಟಡಕ್ಕೂ ವಿಶೇಷ ನಷ್ಟವೇನೂ ಆಗಲಿಲ್ಲ. ಅದರಿಂದ 169 ಮಂದಿ ನಷ್ಟಪಟ್ಟರು. ಅದರ ವಿವರವೇನೆಂದರೆ—ಸೈನ್ಯದವರಲ್ಲಿ ಕೊಲೆಯಾದವರು 14, ಗಾಯಪಟ್ಟವರು 13; ಪ್ರಜೆಗಳಲ್ಲಿ ಕೊಲೆಯಾದವರು ಗಂಡಸರು 27, ಹೆಂಗಸರು 9, ಮಕ್ಕಳು 6; ಗಾಯಪಟ್ಟವರು—ಗಂಡಸರು 64, ಹೆಂಗಸರು 39, ಮಕ್ಕಳು 7. ಈ ಪೈಕಿ ಲಂಡನ್ ಪಟ್ಟಣದ ಆವರಣದೊಳಗೆ ಕೊಲೆಯಾದವರು 32, ಗಾಯಪಟ್ಟವರು 95. ನಿರಪರಾಧಿಗಳಾದ ಸಭ್ಯ ಪ್ರಜೆಗಳನ್ನು ಕೊಂದುಹಾಕಿರುವುದಕ್ಕೆ ಇದೊಂದು ದೃಷ್ಟಾಂತ. ಬ್ರಿಟಿಷ್ ವಿಮಾನ ಯಂತ್ರಗಳು ಅಂತರಿಕ್ಷಕ್ಕೆ ಹೋಗಿ ಆ ಶತ್ರುವಿನ ವಿಮಾನ ಯಂತ್ರಗಳಿಗೆ ಮುತ್ತಿಗೆ ಹಾಕಿದವು; ಆದರೆ ಅಷ್ಟರಲ್ಲೇ ಮಂಜು ಆವರಿಸಿಕೊಂಡದ್ದರಿಂದ ಶತ್ರುವಿನ ವಿಮಾನಗಳು ತಪ್ಪಿಸಿಕೊಂಡುಹೋದವು. ಈ ಜರ್ಮನಿಯ ಪರೋಡೆಯನ್ನು ನೋಡಿ ಇಂಗ್ಲಿಷ್ ಪ್ರಜೆಗಳಿಗೆ ಆಗ್ರಹವುಂಟಾಗಿ ಅವರನ್ನು ನಾಶಮಾಡಬೇಕೆಂದು ಹೆಚ್ಚಾಗಿ ಸೈನ್ಯಕ್ಕೆ ಸೇರುತ್ತಿರುವರು.

ಬ್ರಿಟಿಷರು ತಮ್ಮ ಸಬ್‌ಮೆರೀನ್ ಎಂಬ ಜಲಯಂತ್ರಗಳನ್ನು ಬಿಟ್ಟು ಜರ್ಮನಿಯವರ ಹಡಗುಗಳನ್ನು ಬ್ಯಾಲ್ಟಿಕ್ ಕಡಲಿನಲ್ಲಿ ಮುಳುಗಿಸುತ್ತಿದ್ದಾರೆ. ಜರ್ಮನಿಯವರು ಬ್ರಿಟಿಷ್ ಹಡಗುಗಳನ್ನು ಮುಳುಗಿಸುವುದು ಬಹಳ ಕಡಿಮೆ ಯಾಯಿತು. 1,601 ಜಹಜುಗಳು ಗ್ರೇಟ್ ಬ್ರಿಟನ್‌ಗೆ ಬಂದು ಹೋದದ್ದರಲ್ಲಿ ನಾಲ್ಕನ್ನು ಮಾತ್ರ ಜರ್ಮನಿಯವರು ಮುಳುಗಿಸಿದರು. ಬ್ಯಾಲ್ಟಿಕ್ ಕಡಲಿನಲ್ಲಿ ಬ್ರಿಟಿಷರು ಜರ್ಮನಿಯ ಸೈನಿಕರನ್ನು ಸಾಗಿಸುವಂಥಾ ಒಂದು ಜಹಜನ್ನೂ, ಕಬ್ಬಿಣದ ಅದಿರು ಮೊದಲಾದ ಸಾಮಾನುಗಳು ಭರ್ತಿಯಾಗಿ ಜರ್ಮನಿಗೆ ಹೋಗುತ್ತಿದ್ದ ಏಳು ಜಹಜುಗಳನ್ನೂ ಮುಳುಗಿಸಿಬಿಟ್ಟರು. ಅವುಗಳೊಳಗಿದ್ದ ಜನಗಳನ್ನೆಲ್ಲಾ ಬದುಕಿಸಿರುತ್ತಾರೆ. ಇದಲ್ಲದೆ ಬ್ಯಾಲ್ಟಿಕ್ ಕಡಲಿನಲ್ಲಿ ಡೆನ್ಮಾರ್ಕಿನ ಬಳಿ ಬ್ರಿಟಿಷ್ ಸಬ್‌ಮೆರೀನು ಜರ್ಮನಿಯ ಮೂರು ಸಣ್ಣ ಯುದ್ಧದ ಜಹಜುಗಳನ್ನೂ ಕದನವಾಯಿತು. ಬ್ರಿಟಿಷ್ ಸಬ್‌ಮೆರೀನು ಸಾಹಸಪಟ್ಟು ಎರಡು ಟಾರ್ಪೆಡೋ ದೋಣಿಗಳನ್ನು ಮುಳುಗಿಸಿತು. ಮೂರನೆಯದು ತಪ್ಪಿಸಿಕೊಂಡು ಹೋಯಿತು. ಬಳಿಕ ಬ್ರಿಟಿಷ್ ಸಬ್‌ಮೆರೀನು ನೀರಿನ ಮೇಲೆ ಬಂದು ಸ್ವಲ್ಪ ಹೊತ್ತು ಕಾಣಿಸಿಕೊಂಡು ಪುನಹಾ ಮುಳುಗಿ ಅದೃಶ್ಯವಾಯಿತು. ತರುವಾಯ ಜರ್ಮನಿಯ ಎರಡು ಯುದ್ಧದ ಜಹಜುಗಳು ಬಂದು ಆ ಸರಹದ್ದಿನಲ್ಲೆಲ್ಲಾ ಹುಡುಕಾಡಿ ಏನೂ ಕಾಣದೆ ಹೊರಟುಹೋದವು.

ಜರ್ಮನಿಯ ಕೈಸರ್ ಚಕ್ರವರ್ತಿಯು 50 ವಯಸ್ಸಿನವರನ್ನು ಸೈನ್ಯಕ್ಕೆ ಸೇರಬೇಕೆಂದು ಇಸ್ತಿಹಾರು ಹಾಕಿಸಿದ್ದಾರಂತೆ. ಕೆಲವು ಸಂದರ್ಭಗಳಲ್ಲಿ ಜರ್ಮನಿಯ ಸೈನಿಕರು ಯುದ್ಧಕ್ಕೆ ಹೊರಡದೆ ಹಿಂಜರಿದಾಗ ಉದ್ಯೋಗಸ್ಥರು ಪಿಸ್ತೂಲು ಕತ್ತಿಗಳನ್ನು ಎತ್ತಿ ಕೊಂದುಬಿಡುವುದಾಗಿ ಹೆದರಿಸಿದರೆಂದು ತಿಳಿಸಲ್ಪಟ್ಟಿದೆ. ಸ್ವೀಡನ್ ರಾಜ್ಯದಲ್ಲಿ ಪ್ರಕಟವಾಗುವ ಒಂದು ಪತ್ರಿಕೆಯಲ್ಲಿ ಜರ್ಮನಿಯ ರಾಜಧಾನಿಯಿಂದ ಈಗ ತಾನೇ ವಾಪಸು ಬಂದು ಇರುವ ಒಬ್ಬಾತನು ಬರೆಯುವುದೇನೆಂದರೆ—ಜರ್ಮನಿಯವರಿಗೆ ಯುದ್ಧದ ಬೇಗೆಯು ಸಾಕಾಗಿದೆ. ಅವರು ಇನ್ನೂ ಪ್ಯಾರಿಸ್ ನಗರವನ್ನೇ ಗೆಲ್ಲಲಿಲ್ಲವೆಂದೂ, ಕರೆನ್ಸಿ ನೋಟುಗಳನ್ನೇ ಅನೇಕವೆಂದು ಹೆಚ್ಚಾಗಿ ಚಲಾವಣೆಗೆ ತಂದಿರುವುದೇಕೆ ಎಂದೂ, ಏನೇನೋ ಮಾಡಿಬಿಡುತ್ತೇವೆಂದು ಕೊಚ್ಚಿಕೊಂಡ ವಿಷಯಗಳೆಲ್ಲಾ ಇನ್ನೂ ಯಾಕೆ ಕೈಗೂಡಲಿಲ್ಲವೆಂದೂ ಕೇಳುತ್ತಾರೆ. ಇನ್ನು ಸ್ವಲ್ಪ ದಿನಗಳೊಳಗಾಗಿ ಯುದ್ಧಮಾಡುವುದಕ್ಕೆ ಸ್ಕೂಲ್ ಹುಡುಗರೂ ಮುದುಕರೂ ಉಳಿಯುತ್ತಾರೆಂದು ಹೇಳುವರು. ಬಾಲ್ಯ ವಿವಾಹಗಳು ನಡೆಯಲಿ ಎಂದು ಅಪ್ಪಣೆ ಕೊಟ್ಟಿರುತ್ತಾರಂತೆ.

ಫ್ರೆಂಚರು ಒಂದು ಹೊಸ ತರಹಾ ವಿಮಾನ ಯಂತ್ರವನ್ನು ತಯಾರ್ ಮಾಡಿದ್ದಾರೆ. ಅದರಲ್ಲಿ 2 ಪಿರಂಗಿಗಳನ್ನಿಡಬಹುದು; 12 ಜನರು ಕುಳಿತುಕೊಳ್ಳುವುದಕ್ಕೆ ಸ್ಥಳವಿದೆ. ಈ ಪಿರಂಗಿಗಳಿಂದ ಗುಂಡು ಹೊಡೆದರೆ ಭೂಮಿಯೊಳಗಿರುವ ಕಂದಕಗಳು ನಾಶವಾಗುತ್ತವೆ.

ಫ್ರೆಂಚರ ಪರರಾಜ್ಯಗಳ ಮಂತ್ರಿಯು ರಾಜೀನಾಮೆ ಕೊಟ್ಟು ಕೆಲಸ ಬಿಟ್ಟನು. ಫ್ರೆಂಚ್ ಪಾರ್ಲಿಮೆಂಟಿನಲ್ಲಿ ಚರ್ಚೆಯಾಯಿತು. ಫ್ರಾನ್ಸ್ ರಾಜ್ಯವೆಲ್ಲಾ ಯುದ್ಧವನ್ನು ಮುಂದರಿಸುವ ಭಾಗದಲ್ಲಿ ಏಕವಾಗಿರುತ್ತದೆ. ಗವರ್ನ್‌ಮೆಂಟಿನ ಪಕ್ಷವನ್ನು 372 ಮೆಂಬರುಗಳೂ, 9 ಮಂದಿ ಮಾತ್ರ ವಿರೋಧ ಪಕ್ಷವನ್ನೂ ವಹಿಸಿದ್ದಂತೆ ಗೊತ್ತಾಯಿತು.

ಅಮೇರಿಕದ ಪ್ರೆಸಿಡೆಂಟ್ ವಿಲ್‌ಸನ್‌ರವರು ಈ ಯುದ್ಧದಲ್ಲಿ ತಮ್ಮ ರಾಜ್ಯವು ಬೆರೆಯದೆ ಪ್ರತ್ಯೇಕವಾಗಿಯೇ ಇರಬೇಕೆಂದು ತಿಳಿಸಿದ್ದಾರೆ. ಆದರೂ ಆ ರಾಜ್ಯದಲ್ಲಿ ನಾವೆಯನ್ನೂ ಭೂಸೈನ್ಯವನ್ನೂ ಬಹಳ ಮಟ್ಟಿಗೆ ಹೆಚ್ಚಿಸುವಂತೆ ತೀರ್ಮಾನ ಮಾಡಿಕೊಂಡರು.

ಜರ್ಮನಿಯವರು ಟಿನ್‌ಗಳಲ್ಲಿ ರಬ್ಬರನ್ನು ಭರ್ತಿಮಾಡಿ ಅದೆಲ್ಲಾ ಆಹಾರಕ್ಕಾಗಿ ಉಪಯೋಗಿಸುವ ವಿಸಾನು ಎಂದು ಹೇಳಿ ಜಹಜಿನಲ್ಲಿ ಸಾಗಿಸಿಕೊಂಡು ಹೋಗುತ್ತಿದ್ದರು. ಡೇನಿಷ್ ಗವರ್ನ್‌ಮೆಂಟಿನವರು ಅದನ್ನೆಲ್ಲಾ ಕಿತ್ತು ಇಟ್ಟುಕೊಂಡಿದ್ದಾರೆ.

ಬೆಲ್ಜಿಯಮ್ಮಿಗೆ ಸೇರಿದ ಬ್ರುಸೆಲ್ಸ್ ನಗರದಲ್ಲಿ ಮಿಸ್ ಕೆವೆಲ್ ಎಂಬ ಇಂಗ್ಲಿಷ್ ನರ್ಸ್ ಎಂಬ ಸೇವಾಸ್ತ್ರೀಯು ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದಳು. ಈಕೆ ಇಂಗ್ಲಿಷ್ ಮತ್ತು ಫ್ರೆಂಚ್ ಸೈನಿಕರಿಗೆ ಆಶ್ರಯ ಕೊಟ್ಟಳೆಂದೂ, ಬೆಲ್ಜಿಯನ್ ಪ್ರಾಯಸಮರ್ಥರು ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶಕೊಟ್ಟಳೆಂದೂ ತಪ್ಪು ಹೊರಿಸಿ ಆಕೆಯನ್ನು ಮರಣದಂಡನೆಗೆ ಗುರಿಮಾಡಿ ಗಲ್ಲಿಗೆ ಹಾಕಿಯಿದ್ದಾರೆ. ಈ ಸಂಗತಿಯು ಇಂಗ್ಲೆಂಡಿನಲ್ಲಿ ಬಹಳ ಆಕ್ರೋಶವನ್ನುಂಟುಮಾಡಿದೆ.

ಒಳದೇಶದ ವೃತ್ತಾಂತಗಳು.

ಒಬ್ಬ ಬಾತ್ಮಿದಾರರಿಂದ—ನಂಜನಗೂಡಿನಲ್ಲಿ ಪೋಲೀಸು ಸ್ಟೇಷನ್‌ನಲ್ಲಿ ಒಬ್ಬ ಖೈದಿಯು ಸತ್ತ ವಿಚಾರದಲ್ಲಿ ಒಬ್ಬ ದಫೇದಾರನಿಗೂ ಒಬ್ಬ ಕಾನ್‌ಸ್ಟೆಬಲ್‌ಗೂ ಶಿಕ್ಷೆ ಆಗಿತ್ತಷ್ಟೆ. ಚೀಫ್ ಕೋರ್ಟಿನಲ್ಲಿ ದಫೇದಾರನು ತಪ್ಪಿತಸ್ಥನಲ್ಲವೆಂದು ಖುಲಾಸು ಮಾಡಿರುತ್ತಾರೆ.

ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೆ ಮಿ|| ಎಚ್. ಜಿ. ಆಲ್ಬರ್ಟ್‌ಸನ್ ಸಾಹೇಬರು ಸೂಪರಿನ್‌ಟೆಂಡೆಂಟರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಕಳೆದ ವಾರ ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಕಳೆದ ಶನಿವಾರ ರಾಜಧಾನಿಯ ಅರಮನೆಯಲ್ಲಿ ನವರಾತ್ರಿ ಕಟ್ಟಲೆಯ ಇಂಗ್ಲಿಷ್ ದರ್ಬಾರು ನಡೆಯಿತು. ಬ್ರಿಟಿಷ್ ರೆಸಿಡೆಂಟರವರು ಪತ್ನಿ ಪರಿವಾರ ಸಮೇತ ಅರಮನೆ ಮರ್ಯಾದೆಗಳಿಂದ ದರ್ಬಾರಿಗೆ ಚಿತ್ತೈಸಿ ಉತ್ಸವಗಳನ್ನು ಪರಾಂಬರಿಸಿಕೊಂಡು ದಯಮಾಡಿದರು. ಗೌರವಾರ್ಥವಾದ 13 ತೋಪುಗಳು ಎರಡು ವೇಳೆಯೂ ಹಾರಿಸಲ್ಪಟ್ಟವು. ಬಾಣಬಿರುಸುಗಳ ತಮಾಷೆಯು ವಿಶೇಷವಾಗಿ ನಡೆಯಲಿಲ್ಲ. ಬೇರೆ ಹತ್ತಾರುಮಂದಿ ಯೂರೋಪಿಯನ್ ಸರ್ದಾರರೂ, ಲೇಡಿಗಳೂ ಆ ದಿನ ದರ್ಬಾರಿಗೆ ಕರೆಸಲ್ಪಟ್ಟಿದ್ದರು.

ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಮೈದಾನಿನಲ್ಲಿ ಪೋಲೀಸ್ ಇಲಾಖೆಯವರಿಗೆ ಕಳೆದ ವಾರ ನಾನಾ ಬಗೆಯ ಜಂಬೂನಾ ಪೋಟಾಪೋಟಿಗಳೂ ಪಂದ್ಯಗಳೂ ನಡೆದು ಗೆದ್ದವರಿಗೆಲ್ಲಾ ಮೊನ್ನೆ ಮಂಗಳವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ಚಾಮುಂಡಿ ಜಂಬೂನಾ ಮೈದಾನಿನಲ್ಲಿ ಬಹುಮಾನಗಳನ್ನು ದಯಪಾಲಿಸಿದರು. ಹೀಗೆಯೇ ಪ್ರಾಣಿಗಳ ಪ್ರದರ್ಶನವೂ ಅಧಿಕಾರಿಗಳಿಗೆ ಕೆಲವು ಪಂದ್ಯಗಳೂ ನಡಿಸಲ್ಪಟ್ಟು ನೆನ್ನೆ ಸಾಯಂಕಾಲ ಶ್ರೀಮನ್ ಮಹಾರಾಜರವರಿಂದ ಬಹುಮಾನಗಳು ಹಂಚಲ್ಪಟ್ಟವು.

ರಾಜಧಾನಿಯಲ್ಲಿ ಸ್ಥಾಪನೆಯಾಗಿ ನಡೆಯುತ್ತಿರುವ ವಿದ್ಯಾಸಂಘದ ಸೆಕ್ರೆಟರಿಗಳು ಸಂಘದ ಎರಡನೆಯ ವಾರ್ಷಿಕ ಕೂಟವನ್ನು ಕಳೆದ ಗುರುವಾರ ಸಾಯಂಕಾಲ ಮಹಾರಾಜರವರ ಕಾಲೇಜಿನಲ್ಲಿ ನಡಿಸಿದರು. ನೂರಾರುಮಂದಿ ವಿದ್ಯಾವಂತರು ಕಲೆತು ಫಲಾಹಾರಮಾಡಿದ ಬಳಿಕ ಕನ್ನಂಬಾಡಿ ಕಲಾವಿನ ಅಣೆಕಟ್ಟೆಯ ವೃತ್ತಾಂತವು ಬಹು ಸ್ವಾರಸ್ಯವಾಗಿ ಹೇಳಲಾಯಿತು. ಸಂಘದ ಪ್ರೆಸಿಡೆಂಟರಾದ ರೆವ್|| ಎಚ್. ಗಲ್ಲಿಫೋರ್ಡ್ ಸಾಹೇಬರು ಅಗ್ರಾಸನವನ್ನು ವಹಿಸಿ ವಾರ್ಷಿಕ ಕಾರ್ಯಗಳನ್ನು ನೆರವೇರಿಸಿದರು.

ಕಳೆದ ಶುಕ್ರವಾರ ಸಾಯಂಕಾಲ ಅರಮನೆಯ ಚಾಮುಂಡಿ ತೊಟ್ಟಿ ಅಂತಸ್ತಿನಲ್ಲಿ ದೊಡ್ಡ ಮನುಷ್ಯರುಗಳ ಹೆಂಗಸರು ನಿಂತು ಅರಮನೆಯ ಮುಂಭಾಗದ ರಂಗಸ್ಥಳದಲ್ಲಿ ನಡೆಯುತ್ತಿದ್ದ ನವರಾತ್ರಿ ಉತ್ಸವಗಳನ್ನು ನೋಡುತ್ತಿರುವಾಗ ಆ ಪೈಕಿ ಒಬ್ಬ ಹೆಂಗಸು ತನ್ನ ನಡುವಿನಲ್ಲಿದ್ದ ಭಂಗಾರದ ಡಾಬು ಕಳುವಾಯಿತೆಂದು ಗಲಭೆಮಾಡಿದಳು. ಅರಮನೆ ಅಧಿಕಾರಿಗಳು ಅಲ್ಲಿದ್ದ ಗೌರವಸ್ಥರ ಮನೆ ಹೆಂಗಸರನ್ನು ಪೋಲೀಸಿನವರ ಮೂಲಕ ಶೋಧನೆ ಮಾಡಿಸುವುದಕ್ಕೆ ಒಪ್ಪಲಿಲ್ಲ. ವಿಷಯವು ಅಷ್ಟಕ್ಕೇ ಕೊನೆಗಂಡಿತೋ ಏನೋ.

ಮೊನ್ನೇ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೈಸೂರು ಪ್ರಜಾಪ್ರತಿನಿಧಿ ಸಮಾಜವನ್ನು ನಮ್ಮ ದಿವಾನ್‌ರವರು ರಾಜಧಾನಿಯ ಪಬ್ಲಿಕ್ ಆಫೀಸ್ ದರ್ಬಾರ್ ಮಂದಿರದಲ್ಲಿ ಪ್ರಾರಂಭಮಾಡಿದರು. ಈ ಸಲ ಸುಮಾರು 250 ಮಂದಿ ಪ್ರತಿನಿಧಿಗಳು ಡಿಸ್ಟ್ರಿಕ್ಟುಗಳಿಂದ ಬಂದಿರುವಂತೆ ಕೇಳಿದೆವು. ಆ ದಿನ ಬ್ರಿಟಿಷ್ ರೆಸಿಡೆಂಟರವರೂ ಯೂರೋಪಿಯನ್ ಅತಿಥಿಗಳೂ ದಯಮಾಡಿ ಸಭೆಯ ಪೀಠವನ್ನು ಅಲಂಕರಿಸಿದ್ದರು. ದಿವಾನ್‌ರವರು ಪದ್ಧತಿಯ ಪ್ರಕಾರ ಸಂಸ್ಥಾನದ ಆಳ್ವಿಕೆಯ ವಿದ್ಯಮಾನಗಳನ್ನು ಕುರಿತು ಉಪನ್ಯಾಸ ಮಾಡಿದರು.

ಬೆಂಗಳೂರು ಅಮೆಚೂರ್ ನಾಟಕದ ಕಂಪನಿಯವರು ರಾಜಧಾನಿಯಲ್ಲಿ ಕಳೆದ ವಾರ ಚರಿತ್ರವಿಚಾರವಾದ ಮೂರು ನಾಟಕಗಳನ್ನು ಆಡಿದರು. ಕಡೆಯ ನಾಟಕಕ್ಕೆ ಶ್ರೀಮದ್ಯುವರಾಜರೂ ಅರಸುಗಳೂ ಅಧಿಕಾರಿಗಳೂ ವಿದ್ಯಾವಂತರಾದ ದೊಡ್ಡ ಮನುಷ್ಯರೂ ಅನೇಕವಾಗಿ ಸೇರಿ ನಾಟಕವನ್ನು ನೋಡಿ ಸಂತೋಷಪಟ್ಟರು. ಅರಮನೆಯ ನಾಟಕದ ಕಂಪನಿಯವರು ನಾಲ್ಕು ನಾಟಕಗಳನ್ನು ಕಳೆದ ವಾರ ಅಭಿನಯಿಸಿದರು. ನಾಳೆ ರಾತ್ರಿ ಅಧಿಕಾರಿಗಳಿಗೂ, ವಿದ್ಯಾವಂತರಾದ ದೊಡ್ಡ ಮನುಷ್ಯರಿಗೂ ಮನುಚರಿತ್ರೆಯನ್ನು ಆಡುವವರಾಗಿದ್ದಾರೆ.

ಕಳೆದ ಬುಧವಾರ ನಮ್ಮ ಶ್ರೀಮದ್ಯುವರಾಜರವರು ಪರಸ್ಪರ ಸಹಾಯ ಸಂಘಗಳ ಸಮಾಜದ ಪ್ರತಿನಿಧಿಗಳಿಗೂ, ರಾಜಧಾನಿಯ ಎಲ್ಲಾ ಕೋಮು ಮತ್ತು ಕಸಬುಗಳ ದೊಡ್ಡಮನುಷ್ಯರಿಗೂ, ಅಧಿಕಾರಿಗಳಿಗೂ ಖಾಸ್ ಬಂಗಲೆಯ ಮೃಗಾಲಯದಲ್ಲಿ ಗಾರ್ಡನ್ ಪಾರ್ಟಿ ಎಂಬ ವನವಿಹಾರ ಸಂತೋಷಕೂಟವನ್ನು ನಡಿಸಿದರು. ಅತಿಥಿಗಳು ಆ ದಿವ್ಯವಾದ ವನದಲ್ಲಿ ತಂಡತಂಡವಾಗಿ ಕೂಡಿ ವಿಹರಿಸುತ್ತಾ, ಅಲ್ಲಿ ನಾನಾ ವಿಚಿತ್ರ ಮೃಗ ಪಕ್ಷಿ ಕ್ರಿಮಿಗಳನ್ನು ನೋಡುತ್ತಾ, ಆನೆ ಒಂಟೆಗಳ ಸವಾರಿಮಾಡುತ್ತಾ, ರುಚಿಕರವಾದ ಭೋಜ್ಯಗಳನ್ನು ಸೇವಿಸಿ ತೃಪ್ತರಾಗಿ ಶ್ರೀಮದ್ಯುವರಾಜರವರ ಭೇಟಿಮಾಡಿ ಬೀಳ್ಕೊಂಡರು.

ಕಳೆದ ಸೋಮವಾರ ಸಾಯಂಕಾಲ ನವರಾತ್ರಿ ಕಟ್ಟಲೆಯ ಜಂಬೂಸವಾರಿ ಉತ್ಸವವು ಮಹಾ ವೈಭವಯುಕ್ತವಾಗಿ ನೆರವೇರಿತು. ಶ್ರೀಮನ್ ಮಹಾರಾಜರವರು ಆನೆಯ ಮೇಲೆ ಭಂಗಾರದ ಅಂಬಾರಿಯಲ್ಲಿ ಶ್ರೀಮದ್ಯುವರಾಜರವರ ಸಮೇತ ಪದ್ಧತಿಯ ಪ್ರಕಾರ ಬನ್ನಿ ಮಂಟಪಕ್ಕೆ ಮೆರವಣಿಗೆಯಲ್ಲಿ ಚಿತ್ತೈಸಿ ಶಮೀ ಪೂಜಾದಿಗಳನ್ನು ಬೆಳಸಿ ಅಶ್ವಾರೂಢರಾಗಿ ಸೈನ್ಯಗಳ ಕವಾತನ್ನು ಪರಾಂಬರಿಸಿಕೊಂಡು ವಾಪಸು ಮೆರವಣಿಗೆಯಲ್ಲಿ ರಾತ್ರಿ ಸುಮಾರು 10 ಗಂಟೆಗೆ ಅರಮನೆಗೆ ದಯಮಾಡಿದರು. ಲಕ್ಷಾಂತರ ಪ್ರಜೆಗಳು ರಸ್ತೆಗಳಲ್ಲೂ ಮನೆಗಳ ಮೇಲೂ ಕಿಟಕಿಗಳಿಂದಲೂ ಮೆರವಣಿಗೆಯನ್ನು ನೋಡಿ ನೇತ್ರಾನಂದ ಹೊಂದಿದರು. ಆ ರಾತ್ರಿ ದೀಪೋತ್ಸವವು ಎಲ್ಲಾ ಕಡೆಗಳಲ್ಲೂ ಕಳಕಳಿಸುತ್ತಿತ್ತು.

ಕಳೆದ ಸೋಮವಾರ ಬೆಂಗಳೂರು ವೈ. ಎಂ. ಸಿ. ಎ. ಸಂಘದವರು ಏರ್ಪಾಡುಮಾಡಿದ್ದ ಅರ್ಧ ಮೈಲಿ ಮಜಲಿನ ಓಟವು ಬಹಳ ತೃಪ್ತಿಕರವಾಗಿ ನಡೆಯಿತು. ಬೆಂಗಳೂರಿಂದ ಮೈಸೂರಿನ ವರೆಗೆ ಅರ್ಧ ಮೈಲಿಗೆ ಒಬ್ಬನಂತೆ 175 ವಿದ್ಯಾರ್ಥಿಗಳು ರಸ್ತೆಯ ಉದ್ದಕ್ಕೂ ನಿಂತು ಮೇಲ್ಕಂಡ ಸಂಘದ 25 ಮಂದಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಬ್ರಿಟಿಷ್ ರೆಸಿಡೆಂಟರವರಿಂದ ಒಂದು ಶುಭಸಾಧನ ಪತ್ರಿಕೆಯನ್ನು ತಂದು ನಮ್ಮ ಮಹಾರಾಜರವರಿಗೆ ಒಪ್ಪಿಸಿದರು. ಮೊದಲನೆಯವನು ಆ ದಿನ ಬೆಳಗ್ಗೆ ಪತ್ರಿಕೆಯನ್ನು ಪಡೆದು 7 ಗಂಟೆ 17 ನಿಮಿಷಕ್ಕೆ ಬೆಂಗಳೂರು ರೆಸಿಡೆನ್ಸಿ ಬಂಗಲೆಯಿಂದ ಓಡಲಾರಂಭಿಸಿದನು. ಆ ಪತ್ರಿಕೆಯು ಹಾಗೆಯೇ ಒಬ್ಬನಿಂದೊಬ್ಬನಿಗೆ ಕೊಡಲ್ಪಟ್ಟು ಮಧ್ಯಾಹ್ನ 3 ಗಂಟೆಗೆ ಶ್ರೀಮನ್ ಮಹಾರಾಜರವರಿಗೆ ಅರಮನೆಯಲ್ಲಿ ಒಪ್ಪಿಸಲ್ಪಟ್ಟಿತು. ಓಡಿದ ಅಷ್ಟು ಮಂದಿ ವಿದ್ಯಾರ್ಥಿಗಳನ್ನೂ ರೈಲ್ ಗಾಡಿ, ಮೋಟರುಗಳಲ್ಲಿ ರಾಜಧಾನಿಗೆ ಕರಿಸಿಕೊಂಡು ಟೌನ್ ಹಾಲ್ ಮಂದಿರದಲ್ಲಿ ಅವರಿಗೆಲ್ಲಾ ದಿನಸಾವರಿ ಫಲಾಹಾರಗಳನ್ನು ಕೊಡಿಸಿದರು. ಆ ಪತ್ರಿಕೆಯಲ್ಲಿ ಬ್ರಿಟಿಷ್ ರೆಸಿಡೆಂಟ್ ಸರ್ ಹ್ಯೂಡೇಲಿಯವರು ನಮ್ಮ ಮಹಾರಾಜರವರಿಗೆ ಬರೆದು ಕಳಿಸಿದ್ದ ಮುಖ್ಯಾಭಿಪ್ರಾಯಗಳೇನೆಂದರೆ—ಈ ದಿನದ ಸಂತೋಷವನ್ನು ಹೆಚ್ಚಿಸುವಂತೆ ತಾವು ಈ ಮಜಲಿನ ಓಟಕ್ಕೆ ಪ್ರೋತ್ಸಾಹಕೊಟ್ಟದ್ದು ಬಾಲಕರ ಕಾಯಪುಷ್ಟಿಯನ್ನು ವೃದ್ಧಿಮಾಡುವುದರಲ್ಲಿ ತಮಗಿರುವ ಪ್ರೀತಿಯನ್ನು ಪ್ರಕಾಶಪಡಿಸುತ್ತದೆ. ಬಹಳ ಸ್ವಲ್ಪ ಕಾಲದೊಳಗಾಗಿ ಸಂಸ್ಥಾನದ ಕಾಲೇಜು ಮತ್ತು ಸ್ಕೂಲುಗಳ ಸುಮಾರು 500 ವಿದ್ಯಾರ್ಥಿಗಳು ಈ ಪಂದ್ಯದಲ್ಲಿ ಸೇರಬೇಕೆಂದು ಪ್ರಾರ್ಥಿಸಿಕೊಂಡರು. ಆ ಪೈಕಿ ಸುಮಾರು 200 ಬಾಲಕರು ಈ ಪತ್ರಿಕೆಯನ್ನು ತಮಗೆ ತಂದೊಪ್ಪಿಸುತ್ತಾರೆ—ಸಂಸ್ಥಾನದ ಆರೋಗ್ಯಭಾಗ್ಯವೂ ಪೈರುಪಚ್ಚೆಗಳೂ ಸಂತೋಷಜನಕವಾಗಿರುತ್ತವೆ. ಇಂಥಾ ಶುಭಸಮಯದಲ್ಲಿ ಬೆಂಗಳೂರು ವೈ. ಎಂ. ಸಿ. ಎ. ಸಂಘದ ಪರವಾಗಿ ತಮ್ಮ ಔದಾರ್ಯವನ್ನು ಸಂತೋಷದಿಂದ ಕೊಂಡಾಡುತ್ತೇನೆ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ತಾವು ಘನತರವಾದ ಸ್ಥಾನವನ್ನು ಸಂಪಾದಿಸಿಕೊಂಡಿದ್ದೀರಿ. ತಮ್ಮ ಪ್ರಜೆಗಳ ಪ್ರೀತಿಗೆ ಪಾತ್ರರಾಗಿರುವಿರಿ. ತಮಗೂ ತಮ್ಮ ಸೀಮೆಗೂ ಶಾಶ್ವತವಾದ ಸೌಭಾಗ್ಯವುಂಟಾಗಲಿ.

ಮೈಸೂರು ಗೆಜೆಟ್ ಸಂಗ್ರಹ.

ಮುಂದಿನ ವಾರದ ಮೈಸೂರು ಸರ್ಕಾರಿ ಗೆಜಟ್ಟು ದಸರಾ ಹಬ್ಬದ ನಿಮಿತ್ತ ಪ್ರಕಟವಾಗಲ್ಪಡುವುದಿಲ್ಲ.

ಶಿವಮೊಗ್ಗ, ಶಿಂಸಿ, ಚನ್ನಗಿರಿ, ಸಿಕಾರಿಪುರ, ಹೊಳ್ಳೆಹೊನ್ನೂರು, ತೀರ್ಥಹಳ್ಳಿ, ಈ ಟವನ್ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಮುಂದಿನ 1918ನೇ ಜೂನ್ ಆಖೈರು ತನಕ ದೇವೀ ಶಿಡುಬನ್ನು ಬಲಾತ್ಕರಿಸಿ ಹಾಕುವ ಕಾನೂನು ಜಾರಿಯಲ್ಲಿರತಕ್ಕದ್ದು.

ಪ್ರಿವಿಲೆಜ್ ರಜದ ಮೇಲೆ ಇರುವ ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ॥ ಬಿ ಕೃಷ್ಣರಾಯರಿಗೆ ನಾಲ್ಕು ತಿಂಗಳೂ ಇಪ್ಪತ್ತೆಂಟು ದಿವಸಗಳ ರಜಾ ಕೊಟ್ಟಿದೆ ಈಗ ಮಾಡಲ್ಪಟ್ಟಿರುವ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು

ಗಣಿಗಳ ಇನ್ಸ್‌ಪೆಕ್ಟರ್ ಮಿ॥ ಎಲ್. ಎಚ್ ಟೆಕ್ಸ್‌ತ್‌ರವರು ರಜದ ಮೇಲಿರುವಾಗ್ಗೆ ಮಿ॥ ಎ ಟಿ ಸೀಟಲ್ ಯವರು ಗಣಿಗಳ ಇನ್ಸ್‌ಪೆಕ್ಟರಾಗಿಯೂ ಕೆಲಸನೋಡತಕ್ಕದ್ದು; ಮ॥ ಸಿ. ಇ ಸೂರ್ಯನಾರಾಯಣರಾಯರು ಗಣಿಗಳ ಡೆಪ್ಯುಟಿ ಇನ್ಸ್‌ಪೆಕ್ಟರಾಗಿರತಕ್ಕದ್ದು.

ಅ॥ ಸರ್ಜನ್ ಮ॥ ಜಗನ್ನಾಥಂ ಪಿಳ್ಳೆಯವರನ್ನು ಹಂಗಾಮಿಯಾಗಿ ಮೈಸೂರು ಜನರಲ್ ಆಸ್ಪತ್ರೆಗೆ ವರ್ಗಮಾಡಿದೆ

ಬೆಂಗಳೂರು ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲ್ ಸೂಪರಿಂಟೆಂಡೆಂಟರಾದ ಮ॥ ಎಸ್. ವೆಂಕಟಸುಬ್ಬ ಶೆಟ್ಟರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳೂ ಇಪ್ಪತ್ತನಾಲ್ಕು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಆರ್. ರಾಮಚಂದ್ರರಾಯರು ಅವರ ಕೆಲಸದ ಭಾರವನ್ನು ವಹಿಸತಕ್ಕದ್ದು.

ಮಿ॥ ಎಸ್. ಜಿ. ಫಾರ್ಬ್ಸ್ ಯವರನ್ನು ಚೀಫ್ ಇಲೆಕ್ಟ್ರಿಕಲ್ ಇಂಜನಿಯರಾಗಿ ಖಾಯಂ ಮಾಡಿದೆ.

ಇಬ್ಬರು ಪೋಲೀಸ್ ಆಫೀಸರುಗಳು ಕೊಲೆಯಾದರು.

ಕಳೆದ ವಾರ ಬಂಗಾಳಕ್ಕೆ ಸೇರಿದ ಮೈಮನ್‌ಸಿಂಗ್ ಎಂಬ ಡಿಸ್ಟ್ರಿಕ್ಟಿನ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ಯತೀಂದ್ರ ಮೋಹನ ಘೋಸ್ ಎಂಬಾತನನ್ನು ಯಾರೋ ದುರಾತ್ಮರು ಗುಂಡುಹೊಡೆದು ಕೊಂದುಹಾಕಿದರು. ಆತನು ಕೆಲಸಗಳನ್ನು ಪೂರೈಸಿಕೊಂಡು ಸಾಯಂಕಾಲ ಏಳೂವರೆ ಗಂಟೆಯ ಹೊತ್ತಿಗೆ ಮನೆಗೆ ಬಂದು ಮನೆಯ ಮುಂಭಾಗದ ಒಂದು ಕೊಠಡಿಯಲ್ಲಿ ವಿಶ್ರಮಿಸಿಕೊಳ್ಳಲು ಕುಳಿತಿದ್ದನು ಆತನ ಹೆಂಡತಿಯೂ ಹದಿಮೂರು ವಯಸ್ಸಿನ ಮಗನೂ ಅದೇ ಕೊಠಡಿಯಲ್ಲಿದ್ದರು. ಬಾಗಿಲಿನಲ್ಲಿ ತಟ್ಟಿದ ಶಬ್ದವಾದ್ದರಿಂದ ಯಾರೋ ತನ್ನನ್ನು ನೋಡುವುದಕ್ಕೆ ಬಂದಿರಬೇಕೆಂದು ಯತೀಂದ್ರನು ಹೆಂಗಸರನ್ನು ಒಳಕ್ಕೆ ಹೋಗುವಂತೆ ಹೇಳಿದನು. ಅಷ್ಟರಲ್ಲಿ ಕೆಲವರು ಕೊಠಡಿಯೊಳಕ್ಕೆ ನುಗ್ಗಿ ಎಂಟು ಹತ್ತು ಗುಂಡನ್ನು ಹೊಡೆದರು. ಯತೀಂದ್ರನು ತಕ್ಷಣವೇ ಮೃತಪಟ್ಟನು. ಅವನ ಹತ್ತಿರದಲ್ಲಿದ್ದ ಅವನ ಮಗನೂ ಸತ್ತುಹೋದನು. ಮನೆಯ ಹೊರಗಡೆ ಆಡುತ್ತಿದ್ದ ಐದು ವರ್ಷದ ಇನ್ನೊಬ್ಬ ಮಗನನ್ನೂ ಅವರೇ ಕೊಂದುಹಾಕಿದರು. ಮರುದಿನ ಡಾಕ್ಟರ್ ಪರೀಕ್ಷೆ ನಡೆದ ನಂತರ ಶವಗಳನ್ನು ದಹನ ಮಾಡಿದರು. ಅಲ್ಲಿನ ಜನಗಳು ಈ ಕ್ರೂರ ಕೃತ್ಯವನ್ನು ನೋಡಿ ಬಹಳ ಗಾಬರಿಗೊಂಡಿದ್ದಾರೆ ಪೋಲೀಸಿನವರು ಇನ್ನೂ ಯಾರನ್ನೂ ಹಿಡಿದಿಲ್ಲ.

ಬೆಳಗಾವಿಗೆ ಹದಿನೇಳು ಮೈಲು ದೂರದಲ್ಲಿರುವ ಒಂದು ರೈಲ್ವೆ ಸ್ಟೇಷನ್ನಿಂದ ಜಾಫರ್ ಹುಸೇನ್ ಎಂಬ ಪೋಲೀಸ್ ಇನ್ಸ್‌ಪೆಕ್ಟರು ಹೊರಟನು. ಅವನು ದಾರಿಯಲ್ಲಿ ಸಿಕ್ಕಿದ ಒಂದು ಜೋಳದ ಹೊಲದ ಮಾರ್ಗವಾಗಿ ಹೋಗುತ್ತಿರುವಾಗ ಕೆಲವರು ಗುಂಡು ಹೊಡೆದು ಅವನನ್ನು ಕೊಂದುಹಾಕಿದರು. ಸರ್ಕಾರದವರು ಬೇರಡ್ ಎಂಬ ತಂಟೆಕೋರ ಜನಗಳ ಬಂದೋಬಸ್ತಿಗಾಗಿ ಅವನನ್ನು ಅಲ್ಲಿಗೆ ಕಳುಹಿಸಿದ್ದರು ಆ ಜನರು ಕೆಲವು ಕಾಲದಿಂದ ಇವನನ್ನು ಹೊಂಚುಹಾಕಿದ್ದು ಕೊಂದುಹಾಕಿರಬಹುದೆಂದು ತೋರುತ್ತದೆ

ನಮ್ಮ ದಿವಾನರವರ ಸರ್ಕೀಟು.

ನಮ್ಮ ಮಂತ್ರಿವರ್ಯರಾದ ಶ್ರೀಮಾನ್ ವಿಶ್ವೇಶ್ವರಯ್ಯನವರು ಕಳೆದ ತಿಂಗಳು ತಾ 19 ರಲ್ಲಿ ಹೊಳಲ್ಕೆರೆ ರೈಲ್ವೆ ಸ್ಟೇಷನ್ನಿಂದ ಚಿತ್ರದುರ್ಗಕ್ಕೆ ದಯಮಾಡಿಸುವಾಗ್ಗೆ ಈ ಚಿಕ್ಕಹಳ್ಳಿ ಗ್ರಾಮದ ಬಳಿ 12 ನೇ ಮೈಲು ಬಳಿ ಶೃಂಗರಿಸಲ್ಪಟ್ಟ ಚಪ್ಪರದ ಬಳಿ ಮೆಂಬರು ವಗೈರೆ ಪಟೇಲ್ ಶ್ಯಾನುಭೋಗರು ಕಾದು ಇದ್ದು ಅವರು ಬಂದ ಕೂಡಲೆ ಸವರ್ಗರೂ ಭೇಟಿ ತೆಗೆದುಕೊಂಡರು. ಮೋಟಾರನ್ನು ನಿಲ್ಲಿಸಿ ಪ್ರಜೆಗಳ ಕ್ಷೇಮಾರೋಗ್ಯವನ್ನು ವಿಚಾರಿಸಿಕೊಂಡ ನಂತರ ಫಲ ಪುಷ್ಪಾದಿಗಳನ್ನು ಸ್ವೀಕರಿಸಿ ಚಿತ್ರದುರ್ಗಕ್ಕೆ ದಯಮಾಡಿಸಿದರು. ಪುನಃ ಕಳೆದ ಮಾಹೆ ತಾ. 21 ನೇ ಸಾಯಂಕಾಲ 4½ ಗಂಟೆಗೆ ಮೋಟಾರಿನಲ್ಲಿ ಚಿತ್ರದುರ್ಗದಿಂದ ಹೊರಟು ಚಿಕ್ಕಹಳ್ಳಿ ಗ್ರಾಮಕ್ಕೆ ಮಂತ್ರಿವರ್ಯರು ನಮ್ಮ ಡೆಪ್ಯುಟಿ ಕಮೀಷನರು ಮ॥ ಬಾಲಸುಂದರಂ ಅಯ್ಯರವರು, ದಾವಣಗೆರೆ ಸಬ್ ಡಿವಿಜನ್ ಆಫೀಸು ಮ॥ ಚೊಕ್ಕಲಿಂಗನವರು, ಪ್ರೊ॥ ಸೂ॥ ಮ॥ ವಾಟೆಯ್ಯನವರು, ನಮ್ಮ ಅಮಲ್ದಾರರು ಮ॥ ಬಿ. ಸುಬ್ಬರಾಯರು ಇವರೊಡನೆ ನಮ್ಮ ಈ ಸಣ್ಣ ಗ್ರಾಮಕ್ಕೆ ದಯಮಾಡಿಸಿ ಪ್ರಜೆಗಳ ಯೋಗಕ್ಷೇಮ, ಅನೇಕ ಅಹವಾಲ್‌ಗಳು ಗ್ರಾಮಾಭಿವೃದ್ಧಿ ಸಂಘದ ಕೆಲಸಗಳು, ಇತರ ರೈತರಿಗೆ ವಿಷಯ ಇವುಗಳನ್ನೆಲ್ಲಾ ಮುದ್ದು ವಿಚಾರಿಸಿ ಗ್ರಾಮವು ಪಾಠಶಾಲೆ ಇಟ್ಟುಕೊಳ್ಳತಕ್ಕ ವಿಷಯದಲ್ಲಿ ಅನೇಕ ನೀತಿವಾಕ್ಯವನ್ನು ಪ್ರಜೆಗಳಿಗೆ ಬೋಧಿಸಿ ಸಾಯಂಕಾಲ 5½ ಗಂಟೆಗೆ ಹೊಳಲ್ಕೆರೆ ರೈಲ್ವೇ ಸ್ಟೇಷನ್ನಿಗೆ ಮೋಟಾರ್ ಗಾಡಿಯಲ್ಲಿ ಕುಳಿತುಕೊಂಡು ದಯಮಾಡಿದರು ಹಿಂದೆ ಅನೇಕ ಮಂತ್ರಿವರ್ಯರು ಇಂಥ ಸಣ್ಣ ಗ್ರಾಮಗಳಿಗೆ ಗಮನ ಕೊಡಲಿಲ್ಲ. ಈಗಿನ ಮಂತ್ರಿವರ್ಯರು ಇಷ್ಟು ಮಟ್ಟಿಗೆ ವಹಿಸಿ ಪ್ರಜೆಗಳ ಕ್ಷೇಮಾರೋಗ್ಯವೇ ಮುಖ್ಯವಾದ್ದೆಂತ ಎಣಿಸಿ ನಮ್ಮ ಗ್ರಾಮಕ್ಕೆ ದಯಮಾಡಿಸಿ ಸರ್ವರಿಗೂ ಭೇಟಿಕೊಟ್ಟ ವಿಷಯದಲ್ಲಿ ಭಗವಂತನು ಮಂತ್ರಿವರ್ಯರಿಗೂ ಮತ್ತು ಶ್ರೀಮನ್ ಮಹಾರಾಜರವರಿಗೂ ಶ್ರೇಯಸ್ಸನ್ನುಂಟುಮಾಡಲಿ ಎಂತ ಹಾರೈಸುತ್ತೇವೆ.

ಗ್ರಾಮವಾಸಿ.

ಚನ್ನರಾಯಪಟ್ಟಣದ ಉಪಾಧ್ಯಾಯರ ಸಮಾಜ.

ಈ ಅಕ್ಟೋಬರ್ ತಾ. 11ನೇ ಭಾನುವಾರ ಬೆಳಗ್ಗೆ ಇಲ್ಲಿನ ಎ ವಿ ಸ್ಕೂಲ್ ಕಟ್ಟಡದಲ್ಲಿ ಈ ತಾಲೂಕಿನ ಉಪಾಧ್ಯಾಯರುಗಳ ಸಮಾಜವೂ, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರದರ್ಶನವೂ ಜರುಗಿದವು. ನಮ್ಮ ಅಮಲ್ದಾರ್ ಪಿ॥ ಹೈದರಲ್ಲಿಖಾನ್ ಸಾಹೇಬರವರೂ, ಶಿರಸ್ತೆದಾರ್ ಮ॥ ಗರುಡಾಚಾರ್ರು, ಸಬ್ ರಿಜಿಸ್ಟ್ರಾರರು, ಪೋಲೀಸ್ ಇನ್ಸ್‌ಪೆಕ್ಟರೂ ಮತ್ತು ಸ್ಥಳೀಯ ದೊಡ್ಡ ಮನುಷ್ಯರಾದ ಮ॥ ಅಂಕಂ ಸುಬ್ಬಣ್ಣಶೆಟ್ಟರೂ, ತಿಮ್ಮಪ್ಪಶೆಟ್ಟರೂ, ವೆಂಕಟರಾಮಯ್ಯನವರೂ, ನಾರಸಿಂಹಯ್ಯನವರೂ, ಮತ್ತೂ ಇತರ ಅಧಿಕಾರಿಗಳೂ ದಯಮಾಡಿಸಿದ್ದರು. ಇದಲ್ಲದೆ ಈ ಸಮಾಜವನ್ನು ಅಲಂಕರಿಸುವುದಕ್ಕಾಗಿ ಡಿ. ಎ. ಸೂ॥ ಮಿ॥ ಅಬ್ದುಲ್ ಖಾದರ್ ಸಾಹೇಬರೂ, ಸ್ಕೂಲ್ ಇನ್ಸ್‌ಪೆಕ್ಟರ್ ಮ॥ ವೀರಭದ್ರಯ್ಯನವರೂ, ಸಂಸ್ಕೃತ ಪಾಠಶಾಲೆಗಳ ಅ॥ ಡ॥ ಇನ್ಸ್‌ಪೆಕ್ಟರೂ, ಶ್ರೀನಿವಾಸಪುರದ ರಿಟೈರ್ಡ್ ಅಮಲ್ದಾರ್ ಮ॥ ತಿರುನಾರಣಯ್ಯಂಗಾರ್ರು ಮತ್ತು ಈ ತಾಲ್ಲೋಕಿಗೆ ಸೇರಿದ ಎಲ್ಲಾ ಸ್ಕೂಲಿನ ಉಪಾಧ್ಯಾಯರೂ ಮತ್ತು ಅವರವರ ಕಮಿಟಿ ಮೆಂಬರುಗಳೂ ಇಲ್ಲಿ ಸೇರಿದ್ದರು.

ಸಮಾಜದ ಸೆಕ್ರೆಟರಿ ಮ॥ ಎ. ಕೃಷ್ಣಸ್ವಾಮಿ ಅಯ್ಯಂಗಾರ್ರು ಸ್ವಾಗತವನ್ನು ಕೇಳಿ ಅವರ ಕೋರಿಕೆಯಂತೆ ರಿ. ಅ ಮ॥ ತಿರುನಾರಣಯ್ಯಂಗಾರ್ರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. ಈ ಸ್ಕೂಲು ಹೆಡ್ ಮಾಸ್ಟರು ಮ॥ ಎ ಕೃಷ್ಣಸ್ವಾಮಿ ಅಯ್ಯಂಗಾರ್ರು ಈ ತಾಲ್ಲೋಕಿನಲ್ಲಿರುವ ಸ್ಕೂಲ್ ಮಾಸ್ಟರುಗಳೆಲ್ಲರೂ ಪರಸ್ಪರ ಸಹಾಯದಿಂದ ತಮ್ಮ ಶಾಲೆಗಳ ಅಭಿವೃದ್ಧಿಗಾಗಿ ತಕ್ಕ ಏರ್ಪಾಡನ್ನು ಮಾಡಿಕೊಂಡು ಬಾಲಕರು ಅನುಕೂಲ್ಯವಾದ ಕಾಲವನ್ನು ಉಪಯೋಗಕರವಾದ ಕೆಲಸ ಮಾಡುವುದರಲ್ಲಿಯೇ ವಿನಿಯೋಗಿಸುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ಸಮಾಜವೂ ಪ್ರದರ್ಶನವೂ ಏರ್ಪಡು ಮಾಡಲ್ಪಟ್ಟಿತೆಂದು ತಿಳಿಸಿದರು. ಆಗ ಎ ವಿ. ಸ್ಕೂಲ್ ಅ॥ ಮಾ॥ ಮ॥ ನರಸಿಂಹಶಾಸ್ತ್ರಿಗಳು ಅಂಗಸಾಧನೆಯ ವಿಷಯವಾಗಿ ಶ್ರೋತೃಗಳ ಮನಸ್ಸಿಗೂ ಚೆನ್ನಾಗಿ ನಾಟುವಂತೆ ಸ್ವಾರಸ್ಯವಾಗಿ ಉಪನ್ಯಾಸವನ್ನು ಮಾಡಿದರು ಅನಂತರ ಹಿರಿಸಾವೆ ಎ. ವಿ ಸ್ಕೂಲ್ ಹೆಡ್ ಮಾಸ್ಟರು ಮ॥ ವೆಂಕಟರಮಣಯ್ಯನವರು ಮಾಡಿದ "ಮಕ್ಕಳ ವಿದ್ಯಾಭ್ಯಾಸವೂ, ಪೋಷಕರೂ" ಎಂಬ ಉಪನ್ಯಾಸದಲ್ಲಿ ಪೋಷಕರು ಎಷ್ಟರ ಮಟ್ಟಿಗೆ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷವಾದ ಗಮನ ಕೊಡಬೇಕೆಂಬುದನ್ನು ತಿಳಿಸಿದರು. ಅನಂತರ ಸೆಕ್ರೆಟರಿ ಮತ್ತು ಸಭಿಕರ ಕೋರಿಕೆಯಂತೆ ಮಿ॥ ಹೈದರಲ್ಲಿಖಾನ್ ಸಾಹೇಬರು ಪ್ರದರ್ಶನ ಪ್ರವೇಶೋತ್ಸವವನ್ನು ನಡಿಸಿದರು.

ಮಧ್ಯಾಹ್ನ ನುಗ್ಗಿಹಳ್ಳಿ ಮಾಸ್ಟರು ಮಿ॥ ಅಬ್ದುಲ್ ವಹಾಬ್‌ರವರು ಗಣಿತ ಪಾಠ ನಿದರ್ಶನವನ್ನು ಮಾಡಿದರು. ಶ್ರವಣಬೆಳ್ಗೊಳ ಮತ್ತು ಚನ್ನರಾಯಪಟ್ಟಣದ ಹಿಂದೀ ಸ್ಕೂಲ್ ಮಾಸ್ಟರುಗಳು ವಿದ್ಯಾಭ್ಯಾಸ ವಿಷಯವಾಗಿ ಉಪನ್ಯಾಸಮಾಡಿದರು. ಅನಂತರ ಹಳ್ಳಿಯ ಶಾಲೆಯಲ್ಲಿ ಕಿಂಡರ್‌ಗಾರ್ಟನ್ ಕ್ರಮವನ್ನು ಅನುಸರಿಸುವ ಬಗೆಗಳು ಯಲಿಯೂರ್ ಸ್ಕೂಲ್ ಮಾಸ್ಟರು ಶ್ರೀಕಂಠಶಾಸ್ತ್ರಿಗಳಿಂದ ಸಭಿಕರ ಮಾನಸೋಲ್ಲಾಸವಾಗುವಂತೆ ಉಪನ್ಯಾಸಮಾಡಿಸಿದರು. ಬಳಿಕ ಹಿಂದಲಹಳ್ಳಿ ಸ್ಕೂಲ್ ಬಾಲಕರಿಗೂ, ಎ ವಿ. ಸ್ಕೂಲ್ ಬಾಲಕರಿಗೂ ಫುಟ್ ಬಾಲ್ ಪಂದ್ಯ ನಡೆದು ಎಲ್ಲರೂ ತೆರಳಿದರು

ಸೋಮವಾರ ಬೆಳಗ್ಗೆ ಹಿರಿಸಾವೆ ಸ್ಕೂಲ್ ಮಾಸ್ಟರು ಮ॥ ವೆಂಕಟರಮಣಯ್ಯನವರು ಮಾದರಿಯ ಪಾಠವನ್ನು ಚೆನ್ನಾಗಿ ನಿದರ್ಶನಮಾಡಿದರು. ಎ. ವಿ ಸ್ಕೂಲಿನ ಮ॥ ಕೃಷ್ಣಸ್ವಾಮಿಯ್ಯಂಗಾರ್ರು ವಿದ್ಯಾಭ್ಯಾಸಕ್ರಮದಲ್ಲಿ ದೇಶಾಂತರದವರ ವಿದ್ಯಾಭ್ಯಾಸ ಕ್ರಮಗಳಲ್ಲೂ, ನಮ್ಮ ಪ್ರಾಚೀನ ವಿದ್ಯಾಭ್ಯಾಸ ಕ್ರಮದಲ್ಲೂ ಇರುವ ಗುಣಾವಗುಣಗಳನ್ನು ಚೆನ್ನಾಗಿ ತೋರಿಸಿ ಇಂಗ್ಲೀಷಿನ ವಿದ್ಯಾಭ್ಯಾಸ ಕ್ರಮವೇ ಉತ್ತಮವೆಂದು ಹೃದಯಂಗಮವಾಗುವಂತೆ ಉಪನ್ಯಾಸನೆ ಮಾಡಿದರು. ಆ ಸಮಯಕ್ಕೆ ಮ॥ ಬ್ರಾಕ್‌ಬ್ಯಾಂಕ್ ಸಾಹೇಬರವರು ದಯಮಾಡಿಸಿ ಸಭಾಲಂಕಾರ ಮಾಡಿದರು. ಮ॥ ನರಸಿಂಹಯ್ಯನವರು ಸ್ತ್ರೀ ವಿದ್ಯಾಭ್ಯಾಸ ವಿಷಯವಾಗಿ ಚೆನ್ನಾಗಿ ಉಪನ್ಯಾಸಮಾಡಿದರು. ಅನಂತರ ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಉಪಾಧ್ಯಾಯ ಕರ್ತವ್ಯತೆಯು ಎಷ್ಟು ಜವಾಬ್ದಾರಿಯಾದುದೆಂದು ಉಪನ್ಯಾಸಮಾಡಿದರು. ಸಂಸ್ಕೃತ ಸ್ಕೂಲುಗಳ ಇನ್ಸ್‌ಪೆಕ್ಟರೂ, ಡೆಪ್ಯುಟಿ ಇನ್ಸ್‌ಪೆಕ್ಟರೂ ಉಪಾಧ್ಯಾಯರ ಕರ್ತವ್ಯತೆಯ ವಿಷಯವಾಗಿ ಸಭಿಕರಿಗೆ ಅತ್ಯಾನಂದವಾಗುವಂತೆ ವಿಚಿತ್ರವಾದ ದೃಷ್ಟಾಂತಗಳೊಡನೆ ಉಪನ್ಯಾಸಮಾಡಿದರು.

ಇಲ್ಲಿಂದ ಮೈಸೂರಿಗೆ ವರ್ಗವಾದ ಸಬ್ ರಿಜಿಸ್ಟ್ರಾರ್ ಮ॥ ಕೃಷ್ಣಮೂರ್ತಿಶಾಸ್ತ್ರಿಗಳಿಂದ ಲೋಕಸೇವಾ ವಿಷಯದಲ್ಲಿ ಇಟ್ಟಿದ್ದ ಬಹುಮಾನವು ಯಲಿಯೂರ್ ಸ್ಕೂಲ್ ಮಾಸ್ಟರು ಮ॥ ಶ್ರೀಕಂಠಶಾಸ್ತ್ರಿಗಳಿಗೂ, ನಮ್ಮ ಅಮಲ್ದಾರ್ ಮಿ॥ ಹೈದರಲ್ಲಿಖಾನ್ ಸಾಹೇಬರಿಂದ ಹಳ್ಳಿಯ ಸ್ಕೂಲಿನ ವಿದ್ಯಾಭ್ಯಾಸಕ್ಕೆ ಇರುವ ತೊಂದರೆಯ ನಿವಾರಣೋಪಾಯ ವಿಷಯಕವಾದ ಉಪನ್ಯಾಸದ ಬಹುಮಾನವು ಹಿಂದಲಹಳ್ಳಿ ಸ್ಕೂಲ್ ಮಾಸ್ಟರು ಮ॥ ನಂಜಪ್ಪನವರಿಗೂ, ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ಹೈದರ್‌ಹುಸೇನ್ ಸಾಹೇಬರು ಹಿಂದೀ ಉಪನ್ಯಾಸಕ್ಕೋಸ್ಕರ ಇಟ್ಟಿದ್ದ ಬಹುಮಾನವು ನುಗ್ಗಿಹಳ್ಳಿ ಸ್ಕೂ ಮಾ. ಮಿ॥ ಅಬ್ದುಲ್ ವಹಾಬ್‌ರವರಿಗೂ ಕೊಡಲ್ಪಟ್ಟಿತು. ಅನಂತರ ಕಾನ್‌ಫರೆನ್ಸ್ ಸೆಕ್ರೆಟರಿ ಮ॥ ಕೃಷ್ಣಸ್ವಾಮಿಯ್ಯಂಗಾರ್ರು ಈ ಕಾರ್ಯಾರಂಭದಿಂದಲೂ ಉಂಟಾದ ಅನುಕೂಲಗಳನ್ನೂ, ಕಾನ್‌ಫರೆನ್ಸಿಗೆ ದಯಮಾಡಿಸಿದ ನೂರಾರು ಮಂದಿ ಉಪಾಧ್ಯಾಯರುಗಳಿಗೆ ಭೋಜನಾದಿಗಳಿಗೆ ಅತ್ಯುತ್ತಮವಾದ ಸೌಕರ್ಯಗಳನ್ನು ಉಂಟುಮಾಡಿಕೊಟ್ಟ ಈ ಗ್ರಾಮದ ಮ॥ ಅಂಕಂ ಸುಬ್ರಾಯಶೆಟ್ಟರು, ತಿಮ್ಮಪ್ಪಶೆಟ್ಟರು, ಮೂಡಗೆರೆ ವೆಂಕಟರಾಮಯ್ಯರು, ನಾರಸೀ ದೇವಶೆಟ್ಟಯ್ಯನವರು, ಗುಬ್ಬಿ ನಾಟಕ ಸಭಾ ಮ್ಯಾ॥ ಚೆಂದಣ್ಣನವರು ಮತ್ತು ಗ್ರಾಮಸ್ಥರು ಮಾಡಿದ ಸಹಾಯವನ್ನೂ ಕೊಂಡಾಡಿ ಈ ಕಾನ್‌ಫರೆನ್ಸಿಗೋಸ್ಕರ ದಯಮಾಡಿಸಿದ್ದ ಅಧಿಕಾರಿಗಳಿಗೂ, ಎಲ್ಲಾ ಉಪಾಧ್ಯಾಯರಿಗೂ ವಂದನೆಯನ್ನು ಸಮರ್ಪಿಸಿದರು ಅನಂತರ ವಾದ್ಯವು ಭೋರ್ಗರೆಯುತ್ತಿರಲು ಇಂಡಿಯಾ ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ನಡೆಯಿತು

ಎನ್. ಕೇಶವಾಶಾಸ್ತ್ರಿ

ಮೈಸೂರು ಪಬ್ಲಿಕ್ ಲೈಬ್ರರಿ.

ಶ್ರೀಮದ್ಯುವರಾಜರವರು ಪ್ರತಿಷ್ಠೆ ಮಾಡಿದ್ದು.

ಕಳೆದ ಶುಕ್ರವಾರ ಬೆಳಗ್ಗೆ ನಮ್ಮ ಶ್ರೀಮದ್ಯುವರಾಜರವರು ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಮಹಡಿಯ ಮೇಲೆ ಸರ್ಕಾರದಿಂದ ಪ್ರಾರಂಭಿಸಲ್ಪಟ್ಟಿರುವ ಪಬ್ಲಿಕ್ ಲೈಬ್ರರಿ ಯಾನೆ ಸರಸ್ವತೀ ಭಂಡಾರವನ್ನು ಸಭೆಯ ಅಗ್ರಾಸನವನ್ನು ಅಲಂಕರಿಸಿ ಪ್ರತಿಷ್ಠೆ ಮಾಡಿದರು. ಈ ಉತ್ಸವದ ಸಭೆಯಲ್ಲಿ ಅಗ್ರಪೀಠದ ಮೇಲೆ ಶ್ರೀಮದ್ಯುವರಾಜರವರ ಅಕ್ಕಪಕ್ಕಗಳಲ್ಲಿ ದಿವಾನ್‌ರವರು, ಕೌನ್ಸಿಲರುಗಳು, ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರು, ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಕುಳಿತುಕೊಂಡರು ಸಭಾ ಮಂದಿರದಲ್ಲಿ ಯೂರೋಪಿಯನ್ ಲೇಡಿಗಳು, ಸರ್ಕಾರದ ಅಧಿಕಾರಿಗಳು, ಲೈಬ್ರರಿಯ ಕಮಿಟಿ ಮೆಂಬರುಗಳು, ವೈದಿಕ ಮಂಡಲಿಯ ಪ್ರತಿನಿಧಿಗಳು, ಬಹು ಮಂದಿ ದೊಡ್ಡಮನುಷ್ಯರು, ಅನೇಕ ವಿದ್ಯಾರ್ಥಿಗಳು ಕುಳಿತಿದ್ದರು.

ಪಂಡಿತ್ ರಾಘವೇಂದ್ರಾಚಾರ್ರು, ಪಂಡಿತ್ ರಾಮಾನುಜಾಚಾರ್ರು, ಮೌಲ್ವಿ ಮಹಮದ್ ಸಾಹೇಬರು ಸಂಸ್ಕೃತ, ಕನ್ನಡ, ಫಾರಸೀ ಭಾಷೆಗಳಲ್ಲಿ ದಿವ್ಯವಾದ ಕವನಗಳನ್ನು ಓದಿಹೇಳಿದರು. ಎಕನಾಮಿಕ್ ಕಾನ್‌ಫರೆನ್ಸ್ ಸೆಕ್ರೆಟರಿಯವರು ಲೈಬ್ರರಿ ಕಮಿಟಿಯ ಮೆಂಬರುಗಳನ್ನು ಹೆಸರು ಹೇಳಿ ಶ್ರೀಮದ್ಯುವರಾಜರವರಿಗೆ ಭೇಟಿ ಮಾಡಿಸಿದ ಬಳಿಕ ಸರಸ್ವತಿ ಭಂಡಾರಗಳಿಂದ ಯೂರೋಪ್, ಅಮೇರಿಕಗಳ ನಗರಗಳಲ್ಲಿ ಆಗಿರುವ ಪ್ರಯೋಜನಗಳನ್ನೂ, ಆಯಾ ಪುಸ್ತಕ ಭಂಡಾರಗಳಲ್ಲಿರುವ ಲಕ್ಷಾಂತರ ಪುಸ್ತಕಗಳ ವಿವರಗಳನ್ನೂ ಸೂಚಿಸಿ, ರಾಜಧಾನಿಯಲ್ಲಿ ಈಗ ಸ್ಥಾಪನೆಯಾಗುವ ಪುಸ್ತಕ ಭಂಡಾರದ ಪೂರ್ವೋತ್ತರವನ್ನು ತಿಳಿಸಿದರು. ನಮ್ಮ ಸರ್ಕಾರದವರು ಮೈಸೂರು, ಬೆಂಗಳೂರು ಪಟ್ಟಣಗಳಲ್ಲಿ ಒಂದೊಂದು ಪುಸ್ತಕ ಭಂಡಾರವನ್ನು ಸ್ಥಾಪಿಸಬೇಕೆಂದು 35,000 ರೂಪಾಯಿ ಸ್ಯಾಂಕ್ಷನ್ ಮಾಡಿದರು ಮತ್ತು ಪ್ರತಿ ವರುಷವೂ ಅವುಗಳಿಗೆ 4,200 ರೂಪಾಯಿ ಗ್ರಾಂಟು ಕೊಡುತ್ತಾ ಬರುವಂತೆ ಅಪ್ಪಣೆಕೊಡಿಸಿದಾರೆ. ಇದಲ್ಲದೆ ಅವುಗಳ ಸಿಬ್ಬಂದಿ ಖರ್ಚಿಗೆ ಮೈಸೂರಿಗೆ 1,116 ರೂಪಾಯಿ, ಬೆಂಗಳೂರಿಗೆ 1,636 ರೂಪಾಯಿ ಪ್ರತಿ ವರುಷವೂ ಕೊಡುವರು. ಮೈಸೂರು ಲೈಬ್ರರಿಗೆ ಕೊಟ್ಟ 15,000 ರೂಪಾಯಿನಲ್ಲಿ ಕಮಿಟಿಯವರು 8,187 ರೂಪಾಯಿಗೆ ಪುಸ್ತಕಗಳನ್ನು ತರಿಸಿಟ್ಟು, 7,220 ರೂಪಾಯಿಯನ್ನು ಬೆಂಚು, ಬೀರು, ಕುರ್ಚಿ, ಮೇಜು ಮೊದಲಾದವುಗಳಿಗೆ ಖರ್ಚು ಮಾಡಿದಾರೆ. ಈಗ ಲೈಬ್ರರಿಯಲ್ಲಿ 2,300 ಪುಸ್ತಕಗಳಿವೆ ಓರಿಯಂಟಲ್ ಲೈಬ್ರರಿಯಿಂದ 1,000 ಪುಸ್ತಕಗಳನ್ನು ಇಲ್ಲಿಗೆ ತಂದಿಟ್ಟಿದಾರೆ ಪುಸ್ತಕಗಳನ್ನು ಯಾರು ಬೇಕಾದರೂ ಲೈಬ್ರರಿಯಲ್ಲಿ ಬಿಟ್ಟು ಓದಬಹುದು; ಮನೆಗೆ ತೆಗೆದುಕೊಂಡು ಹೋಗತಕ್ಕವರು ಮಾತ್ರ ತಿಂಗಳಿಗೆ 2 ರೂ., 1 ರೂ. ಫೀಜು ಕೊಡಬೇಕು. ಕಳೆದ ಫೆಬ್ರವರಿ 11 ರ ರೀಡಿಂಗ್ ರೂಮು ಯಾನೆ ವಾಚಕಶಾಲೆ ಪ್ರಾರಂಭವಾಗಿದೆ. ಸೆಪ್ಟಂಬರ್ ಕಡೆಯ ತನಕ 27,… ಜನರು ಬಂದು ಮುಫತ್ತಾಗಿ ಪತ್ರಿಕೆಗಳನ್ನು ಓದಿರುವರು; ಅಂದರೆ ದಿವಸಕ್ಕೆ 300 ಜನರು ಬಂದು ಓದುತ್ತಾರೆ ನಮ್ಮ ಜನಗಳಲ್ಲಿ ವಿದ್ಯೆಯೂ, ಪ್ರಜ್ಞಾನವೂ ಉಂಟಾಗುವುದಕ್ಕೆ ಇಂಥಾ ವಾಚಕಶಾಲೆಗಳೂ, ಪುಸ್ತಕ ಭಂಡಾರಗಳೂ ವಿಶೇಷ ಸಹಾಯಕಾರಿಗಳಾಗಿರುತ್ತವೆ. ಈ ವಿಷಯದಲ್ಲಿ ನಮ್ಮ ದಿವಾನರವರು ಅಪ್ಪಣೆಕೊಡಿಸಿರುವ ವಿಷಯವನ್ನು ಇಲ್ಲಿ ಸೂಚಿಸಬೇಕಾಗಿರುವುದು ಅದೇನೆಂದರೆ — "ನಮ್ಮ ಪ್ರಜೆಗಳು ವಿವೇಕಿಗಳೂ ಬುದ್ಧಿಶಾಲಿಗಳೂ ಕುಶಲರುಗಳೂ, ಚಾತುರ್ಯವುಳ್ಳವರೂ ಆಗದಿದ್ದರೆ ಅವರ ಕೆಲಸ ಕಾರ್ಯಗಳು ಅಲ್ಪಮಾತ್ರದವುಗಳಾಗಿಯೂ, ಅವರ ಜೀವನವು ತುಂಬಾ ಕೀಳುತರದ್ದಾಗಿಯೂ ಇದ್ದೀತು. ನಮ್ಮ ಸಂಸ್ಥಾನದಲ್ಲಿ ಈಗಿನಂತೆ ಬಡತನ, ಒರಟುತನ, ರೋಗಗಳೇ ಮೆರೆಯುತ್ತಾ ಇರುವುದು; ಕಷ್ಟಕಾಲ ಸಂಭವಿಸಿದಾಗ ಜನರು ಕಂಗಲಾಗುತ್ತಾರೆ. ಆದಕಾರಣ ನಮ್ಮ ಪ್ರಜೆಗಳಿಗೆ ಸೌಭಾಗ್ಯವುಂಟಾಗಬೇಕಾದರೆ ಅವರು ವಿದ್ಯೆ ಕಲಿಯಬೇಕು, ಬುದ್ಧಿಶಾಲಿಗಳಾಗಬೇಕು, ನವೀನ ಶಾಸ್ತ್ರಾಭ್ಯಾಸವಂತರಾಗಬೇಕು, ಸರ್ವದಾ ಚುರುಕಾಗಿ ಕೆಲಸಮಾಡತಕ್ಕವರಾಗಬೇಕು." ಈ ಪುಸ್ತಕ ಭಂಡಾರವು ಈ ಉದ್ದೇಶಗಳನ್ನು ಕೂಡಿದ ಮಟ್ಟಿಗೂ ನೆರವೇರಲೆಂದು ಹಾರೈಸಲ್ಪಟ್ಟಿದೆ.

ಬಳಿಕ ಮ॥ ಎಚ್. ವಿ ನಂಜುಂಡಯ್ಯನವರು ಮನುಷ್ಯರಲ್ಲಿ ಮೊದಲು ಸಂಜ್ಞೆಗಳೂ, ತರುವಾಯ ಶಬ್ದಗಳೂ, ಬಳಿಕ ಅಕ್ಷರಗಳೂ, ಅನಂತರ ಲಿಪಿಯೂ, ಕಡೆಯಲ್ಲಿ ಅಚ್ಚುಹಾಕುವುದೂ, ಈಗ ನಾಲ್ಕಾರು ನಿಮಿಷಗಳೊಳಗೆ ಪುಸ್ತಕಗಳು ತಯಾರಾಗುವಂಥಾ ಯಂತ್ರ ಸಾಧನಗಳೂ ಕಲ್ಪನೆಯಾಗಿರುವ ವಿಚಾರಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಭಾಷಣಮಾಡಿ, ಬರೀ ಪುಸ್ತಕಗಳನ್ನು ಸರ್ವದಾ ಓದೋಣವರಿಂದಲೂ, ಇಂಥಾ ಭಂಡಾರಗಳಿಂದಲೂ ಸೌಭಾಗ್ಯಗಳೂ ಉಂಟಾಗಲಾರವೆಂದೂ, ಜನರು ಶ್ರೇಷ್ಠವಾದ ಪುಸ್ತಕಗಳನ್ನು ಓದಿ ಮನನ ಮಾಡಿಕೊಳ್ಳುತ್ತಾ, ತಾವು ಸಂಗ್ರಹಿಸಿದ ಉತ್ತಮವಾದ ಅಭಿಪ್ರಾಯಗಳನ್ನು ಆಚರಣೆಗೆ ತರಬೇಕೆಂದೂ, ಕಮಿಟಿ ಮೆಂಬರುಗಳು ತಮಗೆ ಬೇಕಾದ ಪುಸ್ತಕಗಳನ್ನು ಮಾತ್ರ ತರಿಸದೆ, ಓದತಕ್ಕ ಜನಗಳ ಅಭಿಪ್ರಾಯ ಸ್ಥಿತಿಗತಿ ಮುಂತಾದವುಗಳನ್ನು ಯೋಚಿಸಿ ಅನೇಕರಿಗೆ ಹಿತವನ್ನುಂಟುಮಾಡುವ ಪುಸ್ತಕಗಳನ್ನು ತರಿಸಬೇಕೆಂದೂ, ಈ ಕಟ್ಟಡದಲ್ಲಿ ಈ ಪುಸ್ತಕ ಭಂಡಾರವನ್ನು ಇಟ್ಟಿರುವುದು ತರವಲ್ಲವೆಂದೂ, ಲೈಬ್ರರಿಗೆ ಅನುಕೂಲವಾದ ಸ್ಥಾನವಾಗಿಯೇ ಸರ್ಕಾರಕ್ಕೂ ಪ್ರತ್ಯೇಕವಾದ ಸರಿಯಾದ ಕಟ್ಟಡ ಕಟ್ಟಿಸಿ ರಾಜ್ಯವನ್ನಾಗಿ ನಡೆಸಬೇಕೆಂದೂ ತಿಳಿಯಪಡಿಸಿದರು.

ಅನಂತರ ಶ್ರೀಮದ್ಯುವರಾಜರವರು ಇಂಥಾ ಪುಸ್ತಕ ಭಂಡಾರಗಳು ಪಾಶ್ಚಾತ್ಯ ರಾಜ್ಯಗಳಲ್ಲಿ ಅತ್ಯಂತ ಪ್ರಯೋಜನವನ್ನುಂಟುಮಾಡಿವೆ ಎಂದೂ, ತಮ್ಮ ಸೋದರರೂ ತಮ್ಮ ಗೌರ್ನಮೆಂಟಿನವರೂ ಅಭಿಮಾನವಿಟ್ಟು ಈ ವಾಚಕಶಾಲೆಗಳನ್ನೂ ಪುಸ್ತಕ ಭಂಡಾರಗಳನ್ನೂ ಪೋಷಿಸಿ ಅವುಗಳ ಏಳಿಗೆಯನ್ನು ನೋಡುವರೆಂದು ಮನಃಪೂರ್ವಕವಾಗಿ ಅಪ್ಪಣೆ ಕೊಡಿಸಿ ಪುಸ್ತಕ ಭಂಡಾರವನ್ನು ಪ್ರತಿಷ್ಠೆ ಮಾಡಿದರು.

ರಾವ್ ಬಹದೂರ್ ಮ॥ ಎಂ. ಸಿ. ರಂಗಯ್ಯಂಗಾರ್ರು ಇಂಗ್ಲಿಷಿನಲ್ಲಿಯೂ, ಮ॥ ಅಂಬಳೆ ಅಣ್ಣಯ್ಯಪಂಡಿತರು ಕನ್ನಡದಲ್ಲೂ ಸಮಯೋಚಿತವಾದ ಸಂತೋಷವಚನಗಳಿಂದ ಶ್ರೀಮದ್ಯುವರಾಜರವರಿಗೆ ಸಭಿಕರ ಪರವಾಗಿ ವಂದನೆಗಳನ್ನು ಸಮರ್ಪಿಸಿದರು. ಶ್ರೀಮದ್ಯುವರಾಜರವರು ಎಲ್ಲರೊಡನೆ ಒಳಕ್ಕೆ ದಯಮಾಡಿಸಿ ಏರ್ಪಾಡಿದ್ದ ಬೀರುಗಳನ್ನೂ ಅವುಗಳಲ್ಲಿ ಜೋಡಿಸಿಟ್ಟಿದ್ದ ಪುಸ್ತಕಗಳನ್ನೂ ನೋಡಿ ಸಂತೋಷಪಟ್ಟುಕೊಂಡು ತೆರಳಿದರು

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗಬೇಕೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಕೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಮಲೆನಾಡು ಅಭಿವೃದ್ಧಿಯು.

ಅಯ್ಯಾ,—ನಮ್ಮ ಮೈಸೂರು ದೇಶದಲ್ಲಿ ಸರ್ಕಾರದವರು ಪಟ್ಟಣಗಳಿಗೆ ಮಾತ್ರ ಏಳಿಗೆಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಿರುತ್ತಾರೆ. ದೇಶದ ಹುಟ್ಟುವಳಿಯು ಮತ್ತು ಎಲ್ಲಾ ಬಾಬುಗಳಲ್ಲಿಯೂ ಗ್ರಾಮ ನಿವಾಸಿಗಳಿಂದಲೇ ಹೆಚ್ಚು ಉತ್ಪತ್ತಿಯು ಇರುತ್ತದೆ. ಗ್ರಾಮ ನಿವಾಸಿಗಳಿಂದ ಈ ಹುಟ್ಟುವಳಿಯು ಸರ್ಕಾರಕ್ಕೆ ಲಭಿಸಿದಾಗ್ಯೂ ಗ್ರಾಮ ನಿವಾಸಿಗಳ ವಿಷಯದಲ್ಲಿ ಯಾವ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟಿಲ್ಲ. ಹಾಗೂ ಗ್ರಾಮ ನಿವಾಸಿಗಳು ವಿದ್ಯೆಯಲ್ಲಿಯೂ, ಆರೋಗ್ಯದಲ್ಲಿಯೂ, ಸಕಲ ವಿದ್ಯೆಗಳಲ್ಲಿಯೂ ಈಗ ಹಿಂದುಳಿದಿರುತ್ತಾರೆಂದು ಹೇಳಬೇಕಾದ್ದಿಲ್ಲ. ಮತ್ತು ಈ ಪರಿಯಂತರ ಮಲೆನಾಡು ನಿವಾಸಿಗಳನ್ನಂತೂ ವಿಚಾರಿಸತಕ್ಕವರೇ ಇರಲಿಲ್ಲ. ನಮ್ಮ ಮಂತ್ರಿಶ್ರೇಷ್ಠರಾದ ಸರ್ ಎಂ ವಿಶ್ವೇಶ್ವರಯ್ಯನವರು ದಿವಾನ್ ಪದವಿಯನ್ನಲಂಕರಿಸಿದ ಮೇಲೆ ಮಲ್ನಾಡು ನಿವಾಸಿಗಳ ವಿಷಯದಲ್ಲಿ ತುಂಬಾ ಹಿತಚಿಂತನೆಯನ್ನು ಇಟ್ಟುಕೊಂಡು ಮಲ್ನಾಡು ಪ್ರಜೆಗಳನ್ನು ಉಚ್ಛ್ರಾಯಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಮಲ್ನಾಡು ಇಂಪ್ರೂವ್‌ಮೆಂಟ್ ಸ್ಕೀಮ್ ಎಂಬ ಹೊಸ ನಿಬಂಧನೆಯನ್ನು ಜಾರಿಗೆ ತಂದು ತನ್ಮೂಲಕ ಮಲ್ನಾಡು ಪ್ರಜೆಗಳ ಆರೋಗ್ಯವೇ ಮೊದಲಾದ ಸಂಪದಭಿವೃದ್ಧಿ ಕಾರ್ಯಗಳನ್ನು ಹೆಚ್ಚಿಸಬೇಕೆಂದೂ, ಈ ಬಗ್ಗೆ ಪ್ರತಿ ವರುಷ ಒಂದು ಲಕ್ಷ ರೂಪಾಯಿ ವಿನಿಯೋಗಿಸಬೇಕೆಂದೂ ಸ್ಯಾಂಕ್ಷನ್ ಮಾಡಿರುತ್ತಾರೆ. ಗತ ವರ್ಷದ ಬಾಬ್ತು ಹಣವು ಯಾವ ಯಾವ ರೀತಿಯಲ್ಲಿ ಖರ್ಚಾಯಿತೋ ತಿಳಿಯಲಿಲ್ಲ. ಮಲ್ನಾಡು ಪ್ರಾಂತದಲ್ಲಿ ಮುಖ್ಯವಾಗಿ ಹೆಚ್ಚು ಕಾರ್ಯಗಳು ನಡೆಯಬೇಕಾದ ತೀರ್ಥಹಳ್ಳಿ, ಕೊಪ್ಪ, ಈ ತಾಲೂಕುಗಳಲ್ಲಿ ರೈತರಿಗೆ ಯಾವ ಏರ್ಪಾಡುಗಳನ್ನೂ ಮಾಡಿಸಿಕೊಟ್ಟು ಇಲ್ಲ. ಕೆಲವು ಗ್ರಾಮಗಳಲ್ಲಿ ಗ್ರಾಮವೃದ್ಧಿ ಕಾರ್ಯಗಳನ್ನು ಅಂದರೆ ಸಂಘಗಳನ್ನು ಸ್ಥಾಪಿಸಿದ್ದರೂ ಅದಕ್ಕೆ ಕಾರ್ಯಗಳನ್ನು ಸಾಧಿಸುತ್ತಾ ಬಂದದ್ದರಿಂದುಂಟಾದ ಆಲಸ್ಯದಿಂದ ವಿಶ್ರಾಂತಿಯನ್ನು ಅನುಭವಿಸುತ್ತಾ ಇವೆ. ಈ ವಿಷಯಗಳು ಸದರಿ ಇಂಪ್ರೂವ್‌ಮೆಂಟ್ ಕಮಿಟಿಯವರ ಗಮನಕ್ಕೆ ಬಾರದ್ದು ತುಂಬಾ ಶೋಚನೀಯವಾಗಿರುತ್ತದೆ. ಇನ್ನಾದರೂ

ನರು ಗ್ರಾಮ ಕಮಿಟಿಯವರುಗಳಿಗೆ ವಿಶ್ರಾಂತಿಯಿಂದ ಬಿಡುಗಡೆಹೊಂದಿ ತಮ್ಮ ಕೆಲಸಗಳನ್ನು ನಡಿಸುವದರಲ್ಲಿ ಶ್ರದ್ಧೆಯನ್ನು ತೋರಿಸುವಂತೆ ಎಚ್ಚರಿಸುತ್ತಾರೆಂದು ನಂಬಿರುವೆವು. ಒಬ್ಬ ರೈತ.

ವರಲಕ್ಷ್ಮಿನಲ್ಲಿ ಪಾಠಶಾಲೆಗಳು.

ಅಯ್ಯಾ,—ಹಿಂದೆ ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಯು ಮೈಸೂರ್ನ ವಿಚಾರ ನಮೂದಿಸಿದ ಮೇಲೆ ಗ್ರಾಮಾಧಿಕಾರಿಗಳಾದ ಕುಲ್ಕರ್ಣಿ ಅಮಲ್ದಾರ್ ಸಾಹೇಬರ ಇರಾದೆಗೆ ವಿರುದ್ಧವಾಗಿ ಬಂದಿರುವರು ತಮ್ಮಲ್ಲಿ ತಮ್ಮ ಅನೇಕಾವರ್ತಿ ವಿನಟಿ ಗುಣಗಳನ್ನು ಪಾಡುತ್ತಾ ಇದ್ದರು. ಆದರೂ ಇನ್ಸ್ಪೆಕ್ಟರು ಬಂದಿದ್ದಾಗ್ಗೆ ಮ॥ ಶ್ರೀನಿವಾಸರಾಯರ ಅಪೇಕ್ಷೆಯಂತೆ ಅವರ ಹೊಸ ಏರ್ಪಾಡಿನ ಪಾಠಶಾಲೆಗೆ ಹೋಗಿ ನೋಡಿದರೇ ವಿನಹ ಪ್ರೋತ್ಸಾಹ ವೇನೂ ದೊರೆತಂತಿಲ್ಲ. ಮತ್ತು ಈಗ ಮ॥ ಶ್ರೀನಿವಾಸರಾಯರು ತಾವು ಶ್ರದ್ಧೆಯಿಂದ ಕೆಲಸಮಾಡುವವರೆಂದು ತೋರ್ಪಡಿಸುವಂತೆ ಧ್ಯಾನಸಾಪಾ ಪಾಠಶಾಲೆ ಮುಚ್ಚಿಟ್ಟಿರುವುದು ಶೋಚನೀಯವಾಗಿದೆ. ಇದರಿಂದ ಬ್ರಿಟಿಷ್ ಮತ್ತು ಶ್ರೀಮನ್ಮಹಾರಾಜರವರ ಆಜ್ಞೆಯನ್ನು ಉಲ್ಲಂಘಿಸಿದಂತಾಯಿತಲ್ಲವೇ? ತಮ್ಮ ಆಜ್ಞೆಯನ್ನೇ ಉಲ್ಲಂಘಿಸಿದವರಿಗೆ ನೀತಿಪರರಾದ ಸರ್ಕಾರದವರು ಪ್ರೋತ್ಸಾಹಿಸುವರೇ? 40 ವರುಷಗಳಿಂದಿರುವ ಮಿಷನ್ ಸ್ಕೂಲು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದೆ. ಈ ಶಾಲೆಯಲ್ಲಿ ಇಂಗ್ಲಿಷ್ ಮತ್ತು ನಾರ್ಮಲ್ ಟ್ರೈನಿಂಗ್ ಪ್ಯಾಸಾದ ಒಬ್ಬ ಹೆಡ್ ಟೀಚರು, ಸಂಗೀತ ಪರಿಶ್ರಮವಿರುವ ಒಬ್ಬ ಉಪಾಧ್ಯಾಯರು, ಇನ್ನೊಬ್ಬ ಉಪಾಧ್ಯಾಯರೂ ಇರುತ್ತಾರೆ. ಮತ್ತು ನಾಲ್ಕನೇ ತರಗತಿ ವರಿವಿಗೆ ವಿದ್ಯಾಭ್ಯಾಸವು ನಡೆಯುತ್ತಲಿದೆ. ಮುಂದಿನ ವರುಷ ಲೋವರ್ ಸೆಕೆಂಡರಿ ತರಗತಿಯನ್ನು ಏರ್ಪಡಿಸಬಹುದೆಂಬ ನಿರೀಕ್ಷೆ ಇದೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ಸಹಾಯಕವಾದ ಗವರ್ನಮೆಂಟ್ ಏರ್ಪಾಡಿನಂತೆ ಹೊಲಿಗೆ, ಪಾಕಶಾಸ್ತ್ರ, ಕಸೂತಿ ಮುಂತಾದ ಐಚ್ಛಿಕ ವಿಷಯಗಳೂ ಸರಿಯಾಗಿ ನಡೆಯುತ್ತಿವೆ. ಗವರ್ನಮೆಂಟಿನವರು ಈ ಬಾಲಿಕಾ ಪಾಠಶಾಲೆಗೆ ವರುಷಕ್ಕೆ 200 ರೂಪಾಯಿ ಹಣದ ಗ್ರ್ಯಾಂಟು ಕೊಡುತ್ತಾರೆ. ಮಿಷನ್ನವರು 400 ರೂಪಾಯಿವರೆಗೆ ವೆಚ್ಚಮಾಡುವರು. ಈ ರೀತಿ ಗವರ್ನ್ಮೆಂಟಿಗೆ ಮಿಷನ್ ಸಂಘವು ಎಷ್ಟು ಮಟ್ಟಿಗೆ ಸಹಕಾರಿಯಾಗಿದೆ ಎಂಬುದು ಊಹಿಸಬಹುದು. ಮೈಸೂರ್ನ ಪಾಠಶಾಲೆಗೆ ಸರ್ಕಾರಿ ನೌಕರರ ಮಕ್ಕಳೇ ಹೆಚ್ಚಾಗಿ ಹೋಗುವರು. ಮ॥ ಶ್ರೀನಿವಾಸರಾಯರು ಗ್ರಾಮಸ್ಥರ ಇರಾದೆಯಂತೆ ಶಾಲೆಯನ್ನಿಟ್ಟಿರುತ್ತೇನೆಂದು ಹೇಳುತ್ತಾರೆ. ಈ ಶಾಲೆ ಇದ್ದ ಗ್ರಾಮಸ್ಥರ ಬಹು ಮಂದಿ ಬಾಲಕಿಯರು ಮಿಷನ್ ಶಾಲೆಗೆ ಬರುವುದರಿಂದ ಮಿಷನ್ ಶಾಲೆಯ ಮೇಲೆ ಗ್ರಾಮಸ್ಥರಿಗೆ ವೈಷಮ್ಯವಿಲ್ಲವೆಂದೂ, ಈ ಸಣ್ಣ ಊರಿಗೆ ಬೇರೊಂದು ಬಾಲಿಕಾ ಪಾಠಶಾಲೆಯು ಅನಾವಶ್ಯಕವೆಂದೂ ಸ್ಪಷ್ಟಪಡುತ್ತೆ. ಮ॥ ಶ್ರೀ ನಿವಾಸರಾಯರು ಇಟ್ಟುಕೊಂಡಿರುವ ಶಾಲೆಯಲ್ಲಿ ಸಾಧಾರಣಮಟ್ಟಿಗೆ ಓದು ಬರೆಯಲು ಕಲಿಯುವ ಇಬ್ಬರು ಬಾಲಕಿಯರನ್ನು ಉಪಾಧ್ಯಾಯರಂತೆ ನೇಮಿಸಿಕೊಂಡಿದ್ದಾರೆ. ಆದುದರಿಂದ ಗವರ್ನಮೆಂಟಿನವರು ಯಾವ ವಿಧವಾದ ಪ್ರೋತ್ಸಾಹವನ್ನೂ ಬೇರೊಂದು ಶಾಲೆಗೆ ಮಾಡದೆ ಮಿಷನ್ ಮೂಲಕ ತಮ್ಮ ಗೌರವವನ್ನೂ, ಆದಾಯವನ್ನೂ ಮತ್ತೂ ನ್ಯಾಯವನ್ನೂ ಕಾಪಾಡಿಕೊಳ್ಳುವರೆಂದು ನಿರೀಕ್ಷಿಸುವ ಹಿತವಾದಿ.

ಗ್ರಾಮಾಂತರ ಕೆಸಬುದಾರಿ ಕಾರ್ಖಾನೆ

ಅಯ್ಯಾ,—ತಮ್ಮ 7ನೇ ತಾ. ಪತ್ರಿಕೆಯಲ್ಲಿ "ಮೈಸೂರಿನಲ್ಲಿ ಕೆಸಬುದಾರಿ ಕಾರ್ಖಾನೆಗಳು" ಎಂಬ ಪ್ರಧಾನ ಲೇಖನವನ್ನು ಓದಿನೋಡಿದೆ. ಸಂಸ್ಥಾನದಲ್ಲಿ 11 ಕಾರ್ಖಾನೆಗಳು ಉಂಟು ಎಂಬ ವರ್ತಮಾನವು ಕೇವಲ ತೃಪ್ತಿಕರವೆಂದೇ ಹೇಳಬೇಕು. ಅವರ ಅದರಲ್ಲಿ ಗೋರೀಬಿದನೂರು ಸಕ್ಕರೆ ಕಾರ್ಖಾನೆಯು ನಿಂತುಹೋದದ್ದು ಅಲ್ಪತೃಪ್ತಿಯಲ್ಲಿಯೂ ಕೊರತೆಯನ್ನು ಉಂಟುಮಾಡುವಂತಾಯಿತು.—ಬೆಂಗಳೂರು ನಗರದಲ್ಲಿ ಬಟ್ಟೆ, ಕಂಬಳಿ, ಹೊಂಚುಕಾರ್ಖಾನೆಗಳೂ ಅವುಗಳ ಅಂಶಗಳನ್ನು ಹೊಂದಿ ಪ್ರತ್ಯಕ್ಷದಲ್ಲಿ ವೃದ್ಧಿಯಲ್ಲಿ ಬರುತ್ತಿರುವುದನ್ನು ನೋಡಿ ಉತ್ಸಾಹಪರರಾಗಬಹುದು. ದಾವಣಗೆರೆ ವಗ್ಗರೆ ಸ್ಥಳಗಳಲ್ಲಿ ಇರತಕ್ಕ ಹತ್ತಿ ವಗ್ಗರೆ ಯಂತ್ರಶಾಲೆಗಳು ಸಣ್ಣ ಪುಟ್ಟವುಗಳಾದ್ದರಿಂದ ಅಷ್ಟು ಸಾಮಾನ್ಯವಾಗಿ ಗಮನಕ್ಕೆ ಬರುವದಿಲ್ಲ. ಹಾಸನದ ಕಾಫಿ, ಗೊಬ್ಬರದ ಕಾರ್ಖಾನೆಗಳು ಮಲನಾಡು ಪ್ರಾಂತ್ಯಕ್ಕೆ ಸಹಾಯವಾಗತಕ್ಕದ್ದಾಗಿವೆ. ಮೈಸೂರಿನಲ್ಲಿ ಸ್ಥಾಪಿತವಾಗಿರುವ ಅಕ್ಕಿ ಯಂತ್ರಶಾಲೆಗಳು ಹಾಗೂ ಬಹಿರಂಗವಾಗಿ ಸೂರ್ಯ ರಶ್ಮಿಯನ್ನು ಕಾಣುತ್ತಲಿವೆ.—ಗೋರೀಬಿದನೂರು ಬೆಲ್ಲದಿಂದ ಸಕ್ಕರೆ ಉತ್ಪನ್ನ ಕಾರ್ಖಾನೆಯನ್ನು ಲೇಟ್ ಅರಬತ್ನಾಟ್ ಕಂಪೆನಿಯವರು ಸ್ಥಾಪಿಸಿದರು. ಆಗ್ಗೆ ಬೆಲ್ಲದ ಧಾರಣೆಯು ಒಂದು ಖಂಡಿಯಗೂ ಕೆಳಗೆ ಇಳಿದು ಒಂದೂಕಾಲು ರೂಪಾಯಿಗೆ ವಿಕ್ರಯದ ಇತ್ತು. ಗೋರೀಬಿದನೂರು ಪ್ರಾಂತ್ಯ ಕಬ್ಬು ಬೆಳೆ ಪ್ರಬಲವಾಗಿ ಸ್ಥಳದ ಬೆಲ್ಲ ದೊರೆಯುವದರ ಜೊತೆಗೆ ಬೆಂಗಳೂರು ತರಗುಪೇಟೆಯಲ್ಲಿ ಕೀಳುತರದ ಬೆಲ್ಲ ದೊರೆಯುವ ಸಂಭವವೂ ಇತ್ತು. ಇದರೊಂದಿಗೆ ತಿಬಟೂರು ಸಂಕೆಯಲ್ಲಿ ವಿಪುಲವಾಗಿ ಯಿಯವಾದ ಸರಕು ಗೋರೀಬಿದನೂರು ಕಾರ್ಖಾನೆಗೆ ಸುಕರವಾಗಿ ಒದಗಲು ಅನುಕೂಲಿಸುತ್ತಿತ್ತು. ಈ ಸ್ಥಳಗಳಿಂದ ರೈಲು, ಟೆಲಿಗ್ರಾಫ್ ಬಹುದೂರ ಸಹಾಯವಿರುವಂತೆ ತೋರಿಬಂತು. ದಿಟೋ ಕಾರ್ಖಾನೆ ಕಟ್ಟಡಕ್ಕೂ, ಸಕ್ಕರೆ ಉತ್ಪನ್ನ (ತಯಾರಿಸುವ) ಯಂತ್ರಗಳಿಗೂ ಸಾವಿರಾರು ರೂಪಾಯಿ ಹಾಕಲ್ಪಟ್ಟು, ಯಥೋಚಿತ ಲಕ್ಷೋಪಲಕ್ಷವಾಗಿ ಖರ್ಚಾಯಿತು. ದಿನಕ್ರಮೇಣ ಬೆಲ್ಲದ ಧಾರಣೆಯು ದುಗುಣಯೂಗಿ ಪ್ರತ್ಯಕ್ಷ ಮೂರರಷ್ಟು ಹೆಚ್ಚಿಬಂತು. ಈ ಬೆಲೆ ಮಿಕ್ಕಿ ಬೆಲ್ಲದಿಂದ ಸಕ್ಕರೆ ತಯಾರಿಸುವ ಆಶೆ ನಿಂತುಹೋಯಿತು. ಬಂಡವಾಳ ಹಾಕಿದವರ ಪಾಲು ಕ್ಲೇಶಕ್ಕೆ ಈಡಾಯಿತು. ಸದರಿ ಕಾರ್ಖಾನೆಯು ಖಾಜನೆ ಬಿಟುವ ಹಾಗೆ ಹ್ಯಾಗೆ ಎಂಬವಾಗಿ ಅರ್ಥಸಾಧಕರು ಅಭಿಪ್ರಾಯವನ್ನು ಅಪೇಕ್ಷಿಸುತ್ತಿದ್ದು, ಕಾರ್ಖಾನೆ ನೆಲೆಗೊಂಡಿರುವ ಸ್ಥಳವನ್ನು ಚಿಂತಿಸಿದರೆ ಕಾರ್ಖಾನೆಯು ಜೀರ್ಣೋದ್ಧಾರವಾಗತಕ್ಕಲ್ಲ; ಬೆಲ್ಲದ ಧಾರಣೆ ಏರುತ್ತಿದ್ದರಿಂದ ಕಬ್ಬಿಗೆ ಕೇಂದ್ರ ಬೆಲ್ಲ ದೊರೆಯುವ ಸಂಭವವಿದ್ದರೆ ಕಾರ್ಖಾನೆಯನ್ನು ನಡಿಸಬಹುದು ಎಂಬ ಅಭಿಪ್ರಾಯ ಹೊರಪಟ್ಟಿತು. ಅಂದರೆ ಈಗಿನ ಸೇಂದಿ ಸಬಲರೀಯ ಮಾಡಿಸುವದಕ್ಕೇನೇ ಸಾಲದೆ ಇರುವಲ್ಲಿ ಸೇಂದಿ ಬೆಲ್ಲ ದೊರೆಯುವದು ಸಾಧ್ಯವೇ? ಕಾರ್ಖಾನೆ ನಡೆಯುವದು ನಿಜವೇ? ಎಂಬ ಪ್ರಶ್ನೆಗಳಲ್ಲಿ ಮಾತ್ರ ಯಿತ್ತು. ಅವಿಸಂಕಲ್ಪವಾಗಿದ್ದ ಅರಬತ್ನಾಟ್ ಕಂಪೆನಿಯವರ ಮೌಢ್ಯಕ್ಕೆ ಇಷ್ಟು ದೂರ ಪ್ರಕಾಶಿಸಿದವರು ಇಲ್ಲವೆಂದು ಹೇಳೋಣವೇ? ಸದರಿ ಅರಬತ್ನಾಟ್ ಕಂಪೆನಿಯವರು ಈ ಕಾರ್ಖಾನೆಗೆ ಬೆಲ್ಲ ಒದಗಿಸಬೇಕೆಂಬ ಚಿಂತೆಯಿಂದ ಸುಮಾರು ಕಡಿಮೆ ತಲಾವು ಕೆರೆ 5,000 ಎಕರೆ ಜಮೀನುಗಳನ್ನು ಕ್ರಯಕ್ಕೆ ಸರ್ಕಾರದಿಂದ ಪಡೆದುಕೊಂಡ ವಿವೇಕಕ್ಕೆ ಸನ್ಮತಿಸೋಣವೇ? ಈ ಜಮೀನುಗಳಲ್ಲಿ ಕಬ್ಬನ್ನೇ ಬೆಳೆಮಾಡಬೇಕೆಂದು ಸರ್ಕಾರದವರು ನಿರ್ಬಂಧ ಪಡಿಸಿ ಕ್ರಯಕ್ಕೆ ಕೊಟ್ಟದ್ದು ಯುಕ್ತವಲ್ಲವೆಂದು ಹೇಳೋಣವೇ? ನೆನ್ನೆ ಮೊನ್ನೆಯ ವರಿವಿಗೂ ಸದರಿ ಕಾರ್ಖಾನೆಯನ್ನು ನಡಿಸಿಕೊಂಡಿದ್ದಂಥಾ ಅರಬತ್ನಾಟ್ ರವರ ಕೋಶಿಯರ ಇಂಡಸ್ಟ್ರಿಯಲ್ ರವರು ಸದರಿ ಕಾರ್ಖಾನೆಗೆ ತಕ್ಕ ಬೆಲ್ಲವನ್ನು ಬೆಳೆಯದೇ ಜಮೀನುಗಳನ್ನೆಲ್ಲಾ ರಾಜೀನಾಮೆ ಕೊಟ್ಟುಬಿಟ್ಟ ವರ್ತಮಾನವನ್ನು ಏನೆಂದು ಕೇಳೋಣ? ಜಮೀನಿಗೆ ಹಾಕಿದ ಬಂಡವಾಳವೂ ಕಾರ್ಖಾನೆಯೊಂದಿಗೆ ಹೋಯಿತು. ಅಂತೂ ಇಂತು ಬಂಡವಾಳ ಒದಗಿಸಿದ ಬಡ ಜನಗಳಿಗೆ ವಿಶೇಷ ಕೇಡಾಯಿತು. ಕೆಂಪನೆ ಅಂದರೆ ಕ್ಷಣಾಯುಮಾನವಾಯಿತು. ಕಾರ್ಖಾನೆ ಎಂದರೆ ಪಾರಮಾರ್ಥವಾಯಿತು. ಸಕ್ಕರೆ ಮಾತುಗಳಾಡಿಕೊಂಡು ಹಾಕಿದ ಲಕ್ಷೋಪಲಕ್ಷ ಲಕ್ಷ್ಯವಿಲ್ಲದೆ ಹೋಯಿತು.

ಈ ಬಗೆ ಕಾರ್ಖಾನೆಗಳು ಈಗ ಗ್ರಾಮಾಂತರಗಳಲ್ಲಿ ಏರ್ಪಡಬೇಕೆಂಬ ಸಂಪದಭ್ಯುದಯಕಾರರ ಮಹತ್ಪ್ರಯತ್ನಗಳನ್ನು ನೋಡುತ್ತಲಿದೇವೆ. ಕಸಬುದಾರಿಗಳಿಗೆ ಸಲಕರಣೆಯಾಗುವ ಯಂತ್ರಸಾಧನಗಳನ್ನು ಒದಗಿಸುವ ಕೆಲಸವನ್ನು ನಮ್ಮ ಸರ್ಕಾರದವರೇ ವಹಿಸಿಕೊಂಡು ಅದಕ್ಕೆ ತಕ್ಕ ಅಧಿಕಾರಿಗಳನ್ನು ಏರ್ಪಡಿಸಿ ಗ್ರಾಮ ಗ್ರಾಮಗಳಲ್ಲೂ ಅಧಿಕಾರಿಗಳು ಸರ್ಕಾರದ ಉದ್ದೇಶಗಳನ್ನು ಕೊಂಡಾಡಿ ಹರಡುತ್ತಲಿದಾರೆ. ಅಲ್ಲಲ್ಲಿ ಯಂತ್ರ ಸ್ಥಾಪನೆಗಳು ಆಗುತ್ತಲೇ ಇವೆ. ಗ್ರಾಮವಾಸಿಗಳಾದ ಅನೇಕ ಜನಗಳು ತಮ್ಮ ಮೌಢ್ಯಕ್ಕಾಗಿ ಕೊರತೆಪಟ್ಟುಕೊಂಡು ಯಂತ್ರಗಳನ್ನು ಕಂಡು ಆಶ್ಚರ್ಯಯುಕ್ತವಾದ ಅನುಮಾನಗಳಿಂದ ಪೀಡಿತರಾಗಿರುತ್ತಾರೆ. ಮೇಲ್ಕಂಡ ಅಧಿಕಾರಿಗಳನ್ನು ಬಗೆಬಗೆಯಾದ ಚಟಿಗಳಿಂದ ಓಂಸಿಸುತ್ತಿದಾರೆ. ಸದರಿ ಗ್ರಾಮವಾಸಿಗಳಿಗೆ ತಿಳಿಯಹೇಳುವ ಸಧಾನಪೂರ್ವಕರಾಗುವದಕ್ಕೂ ಅಧಿಕಾರಿಗಳಿಗೆ ಅವಕಾಶ ದೊರೆಯುವದು ಶ್ರಮಸಾಧ್ಯವಾಗಿದೆ. ಎರಡು ವಿಧ ಸಂಕಟ ಅಧಿಕಾರಿಗಳಿಗೆ ಕಾರ್ಯದ ಆತುರ; *ಗ್ರಾಮವಾಸಿಗಳಿಗೆ ಕಾಲಕ್ಕೆ ಬೆಲೆಯಿಲ್ಲದೆ ಧೋರಣೆ. ಗ್ರಾಮವಾಸಿಗೆ ಅಧಿಕಾರಿ*ಯ ಅಭಿಮುಖದಲ್ಲಿ ಕ್ಷಣಿಕವಾದ ಉತ್ಸಾಹವು. ಪ್ರಜೆಗಳು ಸ್ವಯಂ ಬುದ್ಧಿಪುಷ್ಟಿಯೂ, ಅನುಭವವೂ ಸಾಲದೆ ಅಧಿಕಾರಿಗಳ ಸಮಯೋಚಿತವಾದ ಉಪನ್ಯಾಸ ಉದ್ಬೋಧನಗಳನ್ನು ಕೇಳಿ ಓದಿದ ಮಾತ್ರಕ್ಕೇನೇ ವೃದ್ಧಿಯನ್ನು ಹೊಂದಲಾರರು. ಗ್ರಾಮವಾಸಿಗಳಲ್ಲಿ ಮೇಲ್ಕಂಡ ಯಂತ್ರಗಳನ್ನು ಸ್ವತಂತ್ರವಾಗಿ ಕೊಂಡು ನಿರ್ವಹಿಸತಕ್ಕ ಪುಣ್ಯಾತ್ಮರು ವಿರಳ. ಹಾಗಿದ್ದರೂ ಒಬ್ಬರಿಬ್ಬರಿಂದ ಆಗತಕ್ಕ ಕೆಲಸವಲ್ಲ. ತಾವು ತಾವೇ ಬೆರತು ಗುಂಪುಗೂಡಿ ಕಾರ್ಯನಿರ್ವಾಹ ಮಾಡುವ ಮನೋಭಾವವೂ ಇಲ್ಲ. ಅಧಿಕಾರಿಗಳ ಪ್ರವೇಶವು ಅತ್ಯವಶ್ಯಕ.—ಅಧಿಕಾರಿಗಳು ಕಸಬುದಾರಿ ಕಾರ್ಖಾನೆಗಳನ್ನು ಏರ್ಪಡಿಸುವದಕ್ಕೆ ಮೊದಲು ಕಾರ್ಖಾನೆಗಾಗಿ ಷೇರುದಾರರನ್ನು ಜಮಾಯಿಸಿ ಸಂಘವನ್ನು ಉಂಟುಮಾಡಿದ ಮಾತ್ರಕ್ಕೇ ಸಂಘದ ಕಾರ್ಖಾನೆಯು ಕೆಲಸವು ನಿರಂತರವಾಗಿ ನಡೆಯುತ್ತಿಂಬುದು ಯೋಚಿಸಬೇಕಾಗುತ್ತೆ. ಕಾರ್ಖಾನೆಗೆ ತಕ್ಕಷ್ಟು ಪದಾರ್ಥಗಳು ನಿಜವಾಗಿ ಆಯಾ ಪರಿಸ್ತರಗಳಲ್ಲಿ ಬೆಳೆದು ಬರುವವೇ? ಬಂತ ಬೆಳೆಗಳು ಸದರಿ ಕಾರ್ಖಾನೆಗೇನೇ ಒದಗಿಬರುವವೇ? ಎಂಬೀ ಅಂಶಗಳನ್ನು ಚಿಂತಿಸಬೇಕು.

ಮೊದಲು ಪ್ರಸ್ತಾಪಿಸಿದ ಗೋರೀಬಿದನೂರು ಕಾರ್ಖಾನೆಯು ಅಂತ್ಯಕ್ಕೆ ಮುಖ್ಯ ಕಾರಣವು ಸಾಕಾದಷ್ಟು ಪದಾರ್ಥವು ಒದಗಿಬರದೆಹೋದದ್ದೇ ಎಂದು ಗೊತ್ತಾಗುತ್ತೆ. ಸುತ್ತಮುತ್ತು ಬೆಳೆದರೂ ಕೂಡ ಬೆಲ್ಲವು ಕಾರ್ಖಾನೆ ಪಕ್ಕಟಗೆ ಬರತಕ್ಕದ್ದಾಗಲಿಲ್ಲ. ಒಂದು ವೇಳೆ ಪಕ್ಕಟಗೆ ತರಬೇಕೆಂದರೂ ಕೂಡ ಆಸ್ಪಾಸ್ ಗರಾತಿಯಿಂದ ಉಂಟಾಗುವ ಹೆಚ್ಚು ಬೆಲೆಗಳು ಪದಾರ್ಥಗಳನ್ನು ಸಂತೆಡೆಯಲ್ಲೇ ನಿಲ್ಲಿಸುವದಕ್ಕೆ ಅವಕಾಶ ಕೊಡುವದಿಲ್ಲ. ಬೆಳೆ ಬೆಳೆದರೆ ಕೊಟ್ಟನಾಗಬೇಕು; ಕೊಟ್ಟಪಟ್ಟರೆ ಭತ್ತವಿರಬೇಕು. ಭತ್ತವನ್ನು ಕಂಡ ಮೇಲೆಯೇ ಕೊಟ್ಟದ ಯೋಚನೆ. ಬೆಳೆ ಇಡತಕ್ಕವರಿಲ್ಲದೂ ಸೇರಿದರೇನೇ ಒಂದು ಕಾರ್ಖಾನೆಗೆ ಜೀವನ. ಆಯಾ ಕಾರ್ಖಾನೆಗೆ ಲಾಭ ಆ ಲಾಭಕ್ಕೆ ಬೆಳೆ ಇಟ್ಟವರೇ ಭಾಗಿಗಳಾಗುತ್ತಾರೆ. ಕಾರ್ಖಾನೆಯು ನಿಸ್ಸಂದೇಹವಾಗಿ ನಿರಂತರ ನಡೆಯುತ್ತೆ. ವರ್ಷಾಕಾಲ ಕೆಲಸವಿಲ್ಲದಿದ್ದರೂ ಬೆಳೆ ಮಾಲೀಸು ಕಾಲದಲ್ಲಿ ಮಾತ್ರ ಕೆಲಸ ನಡಿಸಿದರೇನೇ ಸಾಕು. ತಯಾರಾದ ಪದಾರ್ಥಗಳ ವಿಲೆಯಿಂದ ಸಮಚಾನುಸಾರ ಲಾಭ ಸಂಪಾದಿಸಬಹುದು. ಆಯಾ ಕಾರ್ಖಾನೆಗೆ ಷೇರುದಾರರಲ್ಲದ ಜನರ ಬೆಳೆಗಳನ್ನು (ಜಿನಸಿಗಳನ್ನು) ತಯಾರಿಸಿ ಕೊಟ್ಟರೆ ಅಧಿಕ ಪ್ರಯೋಜನವುಂಟು.—ಪಟ್ಟಣವಾಸಗಳಲ್ಲಿ ಸ್ವತಂತ್ರವಾಗಿ ಸ್ಥಾಪಿಸಲ್ಪಡುವ ಕಾರ್ಖಾನೆಗಳ ವಿಚಾರ ಬೇರೆ. ಪಟ್ಟಣಾಸಕ್ಕೆ ಬೇಕಾದ ಪದಾರ್ಥಗಳು ನಾನಾ ದಿಕ್ಕುಗಳಿಂದ ಬರುತ್ತಲೇ ಇರುತ್ತವೆ. ತಕ್ಕಷ್ಟು ಸರಕು ಕಾರ್ಖಾನೆಗೆ ಒದಗಬಹುದು. ವರ್ತಕರೂ ಕಾರ್ಖಾನೆಯವರೂ ಅನ್ಯೋನ್ಯವಾಗಿ ಪರಸ್ಪರ ಹೊಂದಿಕೊಂಡು ಕೆಲಸ ನಿರ್ವಹಮಾಡುವರು. ಗ್ರಾಮಾಂತರಗಳ ಕಾರ್ಖಾನೆಗೆ ಈ ಸೌಲಭ್ಯಗಳಿಲ್ಲ. ಗ್ರಾಮವಾಸಿಗಳು (ಬೆಳೆ ಇಡುವವರು) ಒಗ್ಗಟ್ಟು ಸಂಘಗಳನ್ನು ಮೊದಲು ಏರ್ಪಡಿಸಿಕೊಂಡು ಆಯಾ ಸಂಘಕ್ಕೆ ಬೇಕಾದಷ್ಟು ಕಸಬುದಾರಿ ಸಲಕರಣೆಗಳನ್ನು ಹೊಂದಿಸಿಕೊಳ್ಳುವದು ಯುಕ್ತವೆಂಬದೇ ಮೊದಲಾದ ಉಪದೇಶಗಳನ್ನು ಅಧಿಕಾರಿಗಳು ಹೇಳಿ ತೋರ್ಪಡಿಸಬೇಕು. ಸ್ವತಂತ್ರ ಕಾರ್ಖಾನೆಗಳು ವಿಪತ್ಕರಗಳಾದೀತು. ಇದಕ್ಕೆ ಗೋರೀಬಿದನೂರು ಕಾರ್ಖಾನೆಯೇ ಸಾದೃಶ್ಯ. ಬಿ. ಸಿ. ಅ., ಚನ್ನರಾಯಪಟ್ಟಣ.

ಟಿ. ಪಿ. ಸಿ., ಹರಿಹರ; ಪ್ರತ್ಯಕ್ಷಿ, ಅರಕಲಗೂಡು; ಸಿ. ಎಸ್. ಎಂ., ಕಲೀಸ್‌ಪೇಟೆ, ಸಕೀಷ, ಶಿವಮೊಗ್ಗ:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಬಾತ್ಮಿದಾರರು ತಮ್ಮ ಹೆಸರನ್ನೂ ಸ್ಥಳವನ್ನೂ ಮಾತ್ರ ಕಾಣಿಸಿ ಬಾತ್ಮಿ ಬರೆಯುತ್ತಾರೆ. ಇಂಥವುಗಳಿಗೆ ನಾವು ಗಮನ ಕೊಡಲಾರೆವು. ಅವರ ಹೆಸರು, ಕಸಬು ಯಾ ಜೀವನೋಪಾಯ ಮೊದಲಾದ ಸಂಪೂರ್ಣವಾದ ವಿಳಾಸವನ್ನು ಬಾತ್ಮಿಗಳಲ್ಲಿ ಬರೆದು ಕಳುಹಿಸಬೇಕೆಂದು ಒತ್ತಿ ಹೇಳುತ್ತೇವೆ.—ಎಡಿ.]

ತಾಲ್ಲೋಕು ವರ್ತಮಾನಗಳು.

ಹುಣಸೂರು.—ಬಿಸಿಲು ಬಹು ತೀಕ್ಷ್ಣವಾಗಿದೆ. ಹಿಮವು ಬಹು ದಟ್ಟನಾಗಿ ಬೀಳುತ್ತಿರುವುದು. ಪ್ಲೇಗಿನ ಹಾವಳಿಯಿಂದಲೂ, ದಸರಾ ರಜಾದಿಂದಲೂ ಸ್ಕೂಲುಗಳೂ, ಪಬ್ಲಿಕ್ ಆಫೀಸುಗಳೂ ಮುಚ್ಚಲ್ಪಟ್ಟಿರುವವು. ಪ್ಲೇಗ್ ಸ್ವಲ್ಪ ಇಳಿತವಾದ ಹಾಗೆ ತೋರುತ್ತದೆ. ಈಗ ಮುಸಲ್ಮಾನರ ಕೇರಿಯಲ್ಲಿ ಕೆಲವರು ಇದರಿಂದ ತೀರಿಹೋದರು. ಅನೇಕರು ಊರನ್ನು ಬಿಟ್ಟು ನಾನಾ ಕಡೆಗೆ ಹೊರಟುಹೋದರು. ಮ್ಯುನಿಸಿಪಾಲಿಟಿಯ ಏರ್ಪಾಡು ಚೆನ್ನಾಗಿಲ್ಲ. ರೋಡುಗಳು ಚೆನ್ನಾಗಿಲ್ಲ. ಅಲ್ಲಲ್ಲಿ ಹಳ್ಳ ಕಿಟ್ಟುಗಳಿರುವುದರಿಂದ ಜನರಿಗೆ ಎಷ್ಟೋ ತೊಂದರೆ. ಜಾನುವಾರುಗಳು ಆಗಿಂದಾಗ್ಗೆ ಮುಗ್ಗರಿಸುವಂತಿದೆ.—ಇಲ್ಲಿ ಮೈಸೂರಿಂದ ಮಡಕೇರಿಯ ವರಿವಿಗೂ ತಿರುಗುವ ದೊಡ್ಡ ರೋಡಿರುವುದು. ಈ ಮಾರ್ಗವಾಗಿಯೇ ಪ್ರತಿ ದಿನವೂ ಅನೇಕ ಬಂಡಿ, ಟಪ್ಪಾ, ಬೈಸಿಕಲ್, ಮೋಟರುಗಳು ತಿರುಗಬೇಕು. ಅನೇಕ ಸರದಾರರೂ ಆಫೀಸರುಗಳೂ ಸಂಚರಿಸುತ್ತಾರೆ. ಓಗಿರುವ ದೊಡ್ಡ ರೋಡೇ ಈ ಪಾಡಾಗಿದ್ದರೆ ಊರೊಳಗಿನ ಸಣ್ಣ ರೋಡುಗಳ ಸ್ಥಿತಿ ಹೇಳತೀರದು. ಊರೊಳಗೆ ತುಂಬಾ ಗಲೀಜಿರುವುದು. *ಗ್ರಾಮದ ಪಾಕೀಜು ಸ್ವಲ್ಪವಾದರೂ ತೃಪ್ತಿಕರವಾಗಿಲ್ಲ.* ಟವರ್ ಒಳಹೊಕ್ಕು ನೋಡುವವರು ಯಾರೂ ಕಾಣಲಿಲ್ಲ. ಎಲ್ಲಿ ನೋಡಿದರೂ ಪಾಳು ಗೋಡೆಗಳೂ, ಬಾಳು ನಿವೇಶನಗಳೂ, ಗಾಂಟೀನಾ ಮೊದಲಾದ ಗಿಡ ಗೆಂಡೆಗಳೂ ಇರುತ್ತವೆ. ಗ್ರಾಮಸ್ಥರು ಹೊರಗೆ ಸಾಗಲಿಕ್ಕೆ ಅನುಕೂಲವಾದ ಚರಂಡಿಗಳಿಲ್ಲ. ದೊಡ್ಡ ದೊಡ್ಡ ಆಫೀಸರುಗಳು ಬಂದರೆ ಊರ ಒಳಹೊಕ್ಕು ತಕ್ಕ ಇನ್ಸ್ಪೆಕ್ಷನ್ ಮಾಡುವದಿಲ್ಲ. ಮ್ಯುನಿಸಿಪಲ್ ದೀಪಗಳು ಅನೇಕ ಸ್ವಲ್ಪ ಹೊತ್ತು ಮಾತ್ರ ಉರಿಯುತ್ತವೆ. ಈ ಊರಿಗೆ ಕುಡಿಯುವ ನೀರನ್ನು ಕರಲಿಕ್ಕಾಗಿ 3 ಕಡೆ ನಲ್ಲಿಗಳಿರುವವು. ಅವುಗಳಿಗೆ ತಿರುವೇ ಇಲ್ಲ. ಜನರು ಕಾಲು ಭಾಗದ ನೀರನ್ನು ಉಪಯೋಗಿಸಿದರೆ ರಾತ್ರಿ ಹಗಲೂ ಮುಕ್ಕಾಲು ಪಾಲು ನೀರು ವೃಥಾ ನಷ್ಟವಾಗುತ್ತಿದೆ. ಯಾರೂ ಇದಕ್ಕೆ ಗಮನವೇ ಕೊಡಲಿಲ್ಲ. ಬಲವಾದ ತಿರುಪುಗಳನ್ನು ಹಾಕಿಸಿದರೆ ಅನುಕೂಲ.

ಮಂಜರಾಬಾದು ತಾ॥ ದೇವಾಲದಕೆರೆ.—ಈ ಗ್ರಾಮದಲ್ಲಿ ಸ್ಕೂಲಿಗೋಸ್ಕರ ಕಟ್ಟಿಸಿಕೊಟ್ಟಿರುವ ಕಾರೊನೇಷನ್ ಹಾಲಿನಲ್ಲಿ ಮಾಮೂಲಿನಂತೆ ಶಾರದಾ ಪೂಜೆಯ ಉದ್ದೇಶವೂ ಮತ್ತು ಈ ಕಟ್ಟಡವನ್ನು ಕಟ್ಟಿಸಿದ ಮ॥ ಪುಟ್ಟೇಗೌಡರಿಗೆ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಬಹುಮಾನ ಪೂರ್ವಕವಾದ ಸರ್ಟಿಫಿಕೇಟ್ ಬಂದದ್ದಾಗಿಯೂ ಸಂತೋಷ ಪೂರ್ವಕವಾದ ಒಂದು ದೊಡ್ಡ ಸಭೆಯು ತಾ 14 ನೇ ಗುರುವಾರ ಮಧ್ಯಾಹ್ನ 11 ಘಂಟೆಗೆ ನೆರೆಯಿತು. ಮಂಜರಾಬಾದು ಮತ್ತು ಮೂಡಿಗೆರೆ ಪ್ರಾಂತ್ಯದಿಂದ ಅನೇಕ ದೊಡ್ಡ ಮನುಷ್ಯರು ಈ ಸಭೆಗೆ ದಯಮಾಡಿಸಿದ್ದರು. ಸ್ಕೂಲ್ ಮುಂಭಾಗ ಮತ್ತು ಒಳಭಾಗದಲ್ಲಿ ನೇತ್ರಾನಂದಕರವಾಗಿ ಅಲಂಕಾರ ಮಾಡಿತ್ತು. ಮ॥ ಪುಟ್ಟೇಗೌಡರನ್ನು ವಾದ್ಯಘೋಷಗಳೊಡನೆ ಎದುರುಗೊಂಡು ಕರೆತರಲಾಯಿತು. ನಂತರ ಶಾರದಾ ಪೂಜೆ ಮಂಗಳಾರತಿ ನಡೆಯಿತು. ಪ್ರಜಾ ಸೌಖ್ಯಕ್ಕಾಗಿ ಅನೇಕ ಪರೋಪಕಾರಗಳನ್ನು ಮಾಡಿಸಿಯೂ, ಮಾಡಿಸುತ್ತಲೂ ಇರುವ ದೇವಾಲದ ಕೆರೆ ಮ॥ ಪ॥ ಶಿವೇಗೌಡರ ಮಕ್ಕಳು ಪುಟ್ಟೇಗೌಡರಿಗೆ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಬಹುಮಾನ ಪೂರ್ವಕವಾದ ಸರ್ಟಿಫಿಕೇಟನ್ನು ದಯಪಾಲಿಸಿದ್ದಕ್ಕಾಗಿ ನಾವುಗಳು ಸಂತೋಷಪಡುತ್ತೇವೆಂತಲೂ, ಇಂಥಾ ಪರೋಪಕಾರಿಗಳು ಹೆಚ್ಚಿದಹಾಗೆಲ್ಲಾ ದೇಶವು ಉತ್ತಮ ಸ್ಥಿತಿಗೆ ಬರುವುದೆಂತಲೂ ಮ॥ ನರಸಿಂಹ ಜೋಯಿಸರು ಮಾಧುರ್ಯವಾದ ಮಾತುಗಳಿಂದ ಅಪ್ಪಣೆ ಕೊಡಿಸಿದರು. ನಾಗರಿಕತೆಯಲ್ಲಿಯೂ, ವಿದ್ಯೆಯಲ್ಲಿಯೂ ಹಿಂದುಳಿದಿರುವ ಈ ಮಲೆನಾಡು ಪ್ರದೇಶದಲ್ಲಿ ವೈಷಮ್ಯವನ್ನು ಬಿಟ್ಟು ಪರಸ್ಪರ ಸಹಾಯದಿಂದ ಇಂಥಾ ಪರೋಪಕಾರ ಕೆಲಸಗಳನ್ನು ಮಾಡುತ್ತಾ ಬಂದರೆ ಈ ರಾಜ್ಯವು ರಾಮರಾಜ್ಯದಂತೆ ಪರಿಣಮಿಸಿ ನಮ್ಮ ಶ್ರೀಮನ್ಮಹಾರಾಜರವರ ಸದುದ್ದೇಶವು ನೆರವೇರುವುದರಲ್ಲಿ ಅಭ್ಯಂತರವಿಲ್ಲವೆಂದು ಸ್ವಾರಸ್ಯವಾದ ಒಂದು ಉಪನ್ಯಾಸವನ್ನು ಈ ಸ್ಕೂಲ್ ಮಾಸ್ಟರ್ ಮ॥ ಜಿ. ವೆಂಕಟರಾಮಯ್ಯನವರು ಹೇಳಿದರು. ನಂತರ ಬಾಲಕ ಬಾಲಕಿಯರು ದೇವರ ಪ್ರಾರ್ಥನಾರೂಪವಾದ ಹಾಡುಗಳನ್ನೂ, ನಮ್ಮ ಶ್ರೀಮನ್ಮಹಾರಾಜರವರ ಶ್ರೀಮನ್ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನಾರೂಪವಾದ ಹಾಡುಗಳನ್ನೂ ಹಾಡಿದ್ದು ಸಭೆಯವರಿಗೆ ಆನಂದವಾಗಿತ್ತು. ಬಳಿಕ ಸರ್ವರಿಗೂ ಹಾರ ತುರಾಯಿ ಗಂಧ ತಾಂಬೂಲ ಸಕ್ಕರೆ ಹಂಚಲ್ಪಟ್ಟಿತು. ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಜಯ ಉಂಟಾಗಿ ಕೂಡಲೆ ಶಾಂತಿಯು ನೆಲೆಗೊಳ್ಳಲೆಂದು ಪ್ರಾರ್ಥಿಸಿ ಜಯಘೋಷದಿಂದ ಸಭೆಯು ಬರಖಾಸ್ತಾಯಿತು.

ಶಿಕಾರಿಪುರ.—ರಾಗಿ ಪೈರು ಕೆಡಿಸುವ ಪೂರ್ವ ಮಳೆ ಬಂತು. ನೀರು ಮಳೆ ಹದವು ಭತ್ತದ ಪೈರಿಗೆ ಆಗಲಿಲ್ಲ. ಸುತ್ತಮುತ್ತಲು ಹಳ್ಳಿಗಳಲ್ಲಿ ಇಲಿಗಳು ಬೀಳುತ್ತಲಿವೆ. ಟವನ್ನಿನಲ್ಲಿರತಕ್ಕ ಮ್ಯುನಿಸಿಪಲ್ ಲಾಂದ್ರಗಳು ಹಚ್ಚದೆ 2 ತಿಂಗಳು ಕಳೆದು 3 ನೇ ತಿಂಗಳು ಪ್ರಾರಂಭವಾಯಿತು. ಲಾಂಟೀನಾ, ಗಿಡ, ಮುಳ್ಳುಹರಿವೆ ಹಕ್ಕುದಾರಿ ನಿವೇಶನದಲ್ಲಿ ಬೆಳೆದಿರುವದಲ್ಲದೆ ಸರಕಾರಿ ಜಾಗದಲ್ಲಿ ಕೂಡಾ ನಿರ್ಭಯವಾಗಿ ಬೆಳೆದಿರುತ್ತವೆ. ಮಳೆ ಕಮ್ಮಿ ಆದ್ದರಿಂದ ಮಾಮೂಲು ಪ್ರಕಾರ ರಸ್ತೆ ಬಾಜು ಚರಂಡಿ ಪಾಕು ಮಾಡಿಸಬೇಕಾದ ಹಣ ಉಳಿಯಿತು. ಮೆಂಬರುಗಳು ತಮ್ಮ ಕೆಲಸವನ್ನು ಜಾಗರೂಕತೆಯಿಂದ ಮಾಡುತ್ತಾರೆ.—ಈ ಮಾಹೆ 9 ನೇ ತಾ ರಾತ್ರಿ ಕೋರಿ ಮುಜ್ಞಿದ್ದಿ ಮಂಜಪ್ಪಯ್ಯನವರಲ್ಲಿಯೂ, ಸಬ್ ಓವರ್ಸಿ ಗೋಪಾಲಸ್ವಾಮಿ ಮೊದಲಿಯಾರ್ರಲ್ಲಿಯೂ ಕನ್ನಾ ಕೋರಿ ಸುಮಾರು 2 ಸಾವಿರ ರೂಪಾಯಿ ಮಾಲು ಕಳುವಾಗಿಹೋಯಿತು. ಮಂಜಪ್ಪಯ್ಯನವರಲ್ಲಿ ಜುಜುವಿ ಕಳುವಾಗಿದೆ. ಮೇಲ್ಕಂಡ ಮೊದಲಿಯಾರ್ರಿಗೆ ಹೊಡೆದು, ಅವರ ಹೆಂಡತಿ ಮೈಮೇಲಿದ್ದ ನಗಗಳು ಸಹಾ ಸುಲಿಗೆ ಮಾಡಿಕೊಂಡು ಹೋದರು. ಪೋಲೀಸು ಸ್ಟೇಷನ್ನಿನಲ್ಲಿ ಕೂಡಲೆ ಹೋಗಿ ತಿಳಿಸಿದ್ದಕ್ಕೆ ಮಾತನಾಡಲಿಲ್ಲವಂತೆ. ಪುನಃ ಇನ್ಸ್ಪೆಕ್ಟರಲ್ಲಿಗೂ, ದಫೇದಾರ್ರವರಿಗೂ ಹೋಗಿ ತಿಳಿಸಿದಾಗ ಮಾರನೇ ಬೆಳಿಗ್ಗೆ 8 ಘಂಟೆಗೆ ಕೃತ್ಯನಡೆದ ಸ್ಥಳಕ್ಕೆ ಬಂದರಂತೆ. ಕೃತ್ಯನಡೆದ ಸ್ಥಳಕ್ಕೆ ತಕ್ಷಣ ಮೇಲ್ಕಂಡವರು ಬಂದಿದ್ದರೆ ಗುಮಾನಿ ಜನಗಳ ಮನೆಯನ್ನು ತಕ್ಷಣ ನೋಡಿದ್ದರೆ ಒಂದು ವಿಧ ಸಮಾಧಾನವಾಗುತ್ತಿತ್ತಲ್ಲವೇ.—ಇನ್ಸ್ಪೆಕ್ಟರು ಮ॥ ಹನುಮಂತನಾಯುಡುರವರಿಗೆ ವರ್ಗವಾದದ್ದು ನ್ಯಾಯವೆಂದು ಹೇಳುತ್ತಾರೆ. ಜಮೇದಾರ್ ತಿಮ್ಮನಾಯ್ಕರೆಂಬುವರು ಬಂದು ಸ್ವಲ್ಪ ದಿನವಾಗಿತ್ತು. ಅವರಿಗೆ ತಿರಗಿ ವರ್ಗವಾಗಿ ಹೊಸಬರನ್ನು ಹಿಂದೆ ಬಹಳ ದಿವಸ ಇಲ್ಲಿ ಸರ್ವಿಸ್ ಮಾಡಿದ ಕೆಳಗಿನ ನೌಕರರನ್ನು ಮಗಾಯಿಸಲಾಗುದಾಗಿತ್ತು. ಈಗ ಬಂದ ಜಮಾದಾರ್ರು ಹೊಸಬರು. ಅವರಿಗೆ ಜನಗಳ ಯೋಗ್ಯತೆ ತಿಳಿಯುವದರಲ್ಲೇ ಈ ಕೃತ್ಯ ನಡೆದುಹೋಯಿತು. ಇವರಿಗೆ ಸ್ವಲ್ಪ ಜನರ ಯೋಗ್ಯತೆ ತಿಳಿಯುವದರಲ್ಲೇ ಮತ್ತೆ ವರ್ಗವಾದರೆ ಕಷ್ಟ. ಜಮಾದಾರ್ ತಿಮ್ಮನಾಯ್ಕರು ವರ್ಗವಾಗಿ ಹೋದ ಈಚೆಗೆ ಅಂದರೆ 10 ನೇ ತಾ ನಿಂದ (ಕಳ್ಳತನವಾದ ಮಾರನೆ ದಿನದಿಂದ) ರಾತ್ರಿ ಪೋಲೀಸು ಗಸ್ತು ಪ್ರಾರಂಭವಾಗಿದೆ. ರಾತ್ರಿ 11 ಘಂಟೆಗೆ, ಬೆಳಗಿನಜಾವ 4 ಘಂಟೆಗೆ ಟವರ್ ಗಸ್ತು ಮಾಡುತ್ತಾರೆ. ಇದೆಲ್ಲಾ ಆಕ್ಷೇಪಣೆ ಅಲ್ಲ.—ಶಿಕಾರಿಪುರದ ಶಿರಸ್ತೇದಾರ್ ಮ॥ ಎಚ್. ರಂಗರಾಯರು ವರ್ಗವಾಗಿ ಈಚೆಗೆ ಮ॥ ಎ. ಎಲ್. ಪುಟ್ಟಯ್ಯ ಎಂಬವರು ಆ ಕೆಲಸಕ್ಕೆ ಬಂದಿರುತ್ತಾರೆ. ಈಚೆಗೆ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುವುದಕ್ಕೆ ಪ್ರಾರಂಭವಾಗಿರುತ್ತದೆ. ಅಮಲ್ದಾರರವರು ಇನ್ನೂ ಹೊಸಬರು.

ಬೇಲೂರು.—ಈಗ ಒಂದು ವರ್ಷದಿಂದಲೂ ಈ ಊರಿನಲ್ಲಿ ಪ್ಲೇಗ್ ಚಿರಸ್ಥಾಯಿಯಾಗಿ ನಿಂತು ಅನೇಕ ಯುವಕ ಯುವತಿಯರನ್ನು ಆಹುತಿ ತೆಗೆದುಕೊಳ್ಳುತ್ತಿರುವುದು ತುಂಬಾ ನಷ್ಟವೂ ದುಃಖಕರವೂ ಆಗಿದೆ. ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು ಇದರ ನಿವಾರಣೋಪಾಯಕ್ಕೆ ತಕ್ಕ ಗಮನವನ್ನು ಕೊಡದೆ ದರ ಮೂಲಕ ಅಂದರೆ ಟವರ್ ಪದೇ ಪದೇ ಇನ್ಸ್ಪೆಕ್ಟ್ ಮಾಡುತ್ತಾ, ಪ್ಲೇಗ್ ಸೋಂಕು ಇರತಕ್ಕ ಸ್ಥಳವನ್ನು ಸರಿಯಾಗಿ ಶುದ್ಧಿ ಮಾಡಿಸುತ್ತಾ, ಪ್ರಜೆಗಳಿಗೆ ಪ್ಲೇಗ್ ಇನಾಕ್ಯುಲೇಷನ್ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸಿ ಅದಕ್ಕೆ ತಕ್ಕ ಏರ್ಪಾಡು ಮಾಡುತ್ತಾ ಬಂದಲ್ಲಿ ಪ್ರಜೆಗಳ ಈ ಅಪಾರ ದುಃಖವು ನಿವಾರಣೆಯಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ಅಮಲ್ದಾರರೂ, ಮ್ಯುನಿಸಿಪಲ್ ಮೆಂಬರುಗಳೂ ಮುಖ್ಯವಾಗಿ ಟವರ್ ಪಾಕೀಜು ವಿಷಯದಲ್ಲಿ ವಿಶೇಷ ಗಮನ ಕೊಟ್ಟಲ್ಲಿ ಎಷ್ಟೋ ಸಹಾಯವಾದೀತು. ಅನೇಕ ಪ್ಲೇಗ್ ರೋಗಿಗಳಿಗೆ ಇಲ್ಲಿನ ನೇಟಿವ್ ಡಾಕ್ಟರು ಮ॥ ಆರ್. ನಂಜಪ್ಪನವರ ಔಷಧೋಪಚಾರದಿಂದ ಗುಣವಾಗಿಯೂ ಗುಣವಾಗುತ್ತಲೂ ಇರುತ್ತದೆ. ಇವರು ಪ್ಲೇಗ್ ಅಗಲಿದ ಇಬ್ಬರು ಅನಾಥ ಹುಡುಗರನ್ನು ತಮ್ಮ ಪಕ್ಕದಲ್ಲಿಟ್ಟುಕೊಂಡು ಔಷಧೋಪಚಾರದಿಂದ ರಾತ್ರಿ ಹಗಲೂ ಉಪಚರಿಸಿ ಇಬ್ಬರನ್ನೂ ಕಾಪಾಡಿದ್ದು ಅತ್ಯಂತ ಸ್ತೋತ್ರಾರ್ಹವಾಗಿದೆ. ಇದಲ್ಲದೆ ಇವರು ಬಡವರಿಗೂ, ಅನಾಥರಿಗೂ ಮುಖ್ಯಾಶ್ರಯರಾಗಿದಾರೆ. ಅನೇಕಾನೇಕ ರೋಗಿಗಳನ್ನು ಗುಣಪಡಿಸಿಯೂ ಪಡಿಸುತ್ತಲೂ ಪ್ರತಿಫಲಾಪೇಕ್ಷೆ ಇಲ್ಲದೆ ವರ್ತಿಸುತ್ತಿದಾರೆ.—ಇಲ್ಲಿ ಪೋಸ್ಟಾಫೀಸು ತಾಲ್ಲೂಕ್ ಆಫೀಸಿನಲ್ಲಿ ಒಂದು ಸಣ್ಣ ಕೊಠಡಿಯಲ್ಲಿ ಇಡಲ್ಪಟ್ಟಿದೆ. ಇದರೊಳಗೆ 2-3 ಜನರಿಗಿಂತ ಹೆಚ್ಚಾಗಿರಲು ಸ್ಥಳವಿಲ್ಲ. ಪ್ರತಿ ದಿವಸವೂ ಈ ಪೋಸ್ಟಾಫೀಸಿಗೆ ಬರಬೇಕಾದ ಜನಗಳ ಸಂಖ್ಯೆ ಬಹಳ. ಎಲ್ಲರೂ ಬೀದಿಯಲ್ಲಿ ನಿಂತು ಮಳೆಯಾಗಲಿ, ಬಿಸಿಲಾಗಲಿ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗಬೇಕಾಗಿದೆ. ಇದರಿಂದ ಪ್ರಜೆಗಳಿಗೆ ಎಷ್ಟು ಹಿಂಸೆ ಎಂಬುದನ್ನು ಪೋಸ್ಟ್ ಇಲಾಖೆಯವರು ಮುಖ್ಯವಾಗಿ ಗಮನಿಸಿ ಕೂಡಲೆ ಆ ಪೋಸ್ಟಾಫೀಸನ್ನು ಸರಿಯಾದ ಮನೆಗೆ ಮಾರ್ಪಯಿಸಿ ಜನರ ತೊಂದರೆಯನ್ನು ಹೋಗಲಾಡಿಸುತ್ತಾರೆಂದು ನಂಬುತ್ತೇವೆ.—ಇಲ್ಲಿನ ಪರಸ್ಪರ ಸಹಾಯಕ ಸಂಘದ ಕಾರ್ಯಕ್ರಮಗಳು ಅತ್ಯಂತ ತೃಪ್ತಿಕರವಾಗಿ ನಡೆಯುತ್ತಾ ಇದರ ಪ್ರಯೋಜನವನ್ನು ಸಕಲರೂ ಸಂತೋಷದಿಂದ ಪಡೆಯುತ್ತಿದಾರೆ. ಸಕ್ರೆಟರಿಯವರು ತುಂಬಾ ಮುತುವರ್ಜಿ ವಹಿಸಿ ಕಾರ್ಯಗಳನ್ನು ಜರುಗಿಸುತ್ತಿರುವುದಲ್ಲದೆ ಸುತ್ತಮುತ್ತಲು ಅನೇಕ ಗ್ರಾಮಗಳಲ್ಲಿ ಸೊಸೈಟಿಗಳನ್ನು ಏರ್ಪಡಿಸುತ್ತಲೂ, ಅಲ್ಲಿನ ರೈತರೆಲ್ಲರಿಗೂ ಅದರ ಪ್ರಯೋಜನವನ್ನು ಬೋಧಿಸಿ ಅಭಿವೃದ್ಧಿಪಡಿಸುತ್ತಲೂ ಇರುವುದು ಸಂತೋಷಪ್ರದವಾಗಿದೆ.

ನೋಟೀಸ್.

ಬೊಂಬಾಯಿ ತಾತಾ ಸನ್ಸ ಸ್ವದೇಶೀ ಮಿಲ್ಸ್ ಕಂಪೆನಿಯಲ್ಲಿ ತಯಾರಾಗುವ ಪಂಚೆಗಳು, ಪರಟಿಂಗು, ಚಕ್ಕು, ಟ್ವಿಲ್, ಹಚ್ಚಡ ಮುಂತಾದ ಜವಳಿ ಮತ್ತು ನಂಬರುವಾರು ನೂಲು ಮಾರಾಟ ಮಾಡಲು ನಮ್ಮನ್ನು ಸೋಲ್ ಏಜೆಂಟರನ್ನಾಗಿ ಏರ್ಪಡಿಸಿರುವುದರಿಂದ ನಮ್ಮಲ್ಲಿ ಈ ಮಾಲು ಕಾರಖಾನೆ ಬೆಲೆಗೆ ದೊರೆಯುವುದಲ್ಲದೆ ಜವಳಿಗೆ ಡಿಸ್ಕೌಂಟು ಸಹ ದೊರೆಯುತ್ತೆ. [172-5]

ಕಮಿಷನ್ ಮತ್ತು ಜನರಲ್ ಏಜನ್ಸಿ—

144, ದೊಡ್ಡಪೇಟೆ,	ಕೋಟ್ಟೂರಯ್ಯನ ಬೀದಿ,
ಬೆಂಗಳೂರು ಸಿಟಿ.	ಶಿವಮೊಗ್ಗ.

ಒಳ್ಳೇ ಹೊಸ ನಮೂನೆ ! ಅಮೂಲ್ಯವಾದ ವಸ್ತು ! ಒಳ್ಳೇ ಫಾಯಿದೆ

7 ವರುಷ ಗ್ಯಾರಂಟಿ ಗಡಿಯಾರವು.

9 ಬಹುಮಾನಗಳು ಹೊಂದುವ ಗಡಿಯಾರದ ಕ್ರಯ ರೂ. 3-15-0 ಮಾತ್ರ

ಅಯ್ಯಾ ಮಿತ್ರರೇ,—ನಾವು ಅಮೇರಿಕಾದಿಂದ ಹೊಸ ನಮೂನೆಯಾಗಿ ತಯಾರ್ಮಾಡಿಸಿ ತರಿಸಿರುವ ಗಡಿಯಾರದ ಸಾಮಾನುಗಳು ತುಂಬಾ ಬಲವಾದದ್ದು



ನಾಜೂಕಾದದ್ದು. ಅಂದವಾಗಿಯೂ, ಇಂಗ್ಲಿಷ್ ನವ ಮಾಸಿಯಾಗಿರುವ ಗಡಿಯಾರವನ್ನು ನಮಗೆ ಬರೆದು ಅನೇಕ ದೊಡ್ಡ ಮನುಷ್ಯರು ಉದ್ಯೋಗಸ್ಥರೂ, ಇತರೇ ಅನೇಕರೂ ಉಪಯೋಗಿಸುತ್ತಿದ್ದಾರೆ. ಈ ಗಡಿಯಾರವನ್ನು ತರಿಸಿಕೊಳ್ಳುವರಿಗೆ ಕೊಡುವ ಬಹುಮಾನಗಳು—1 ಗಡಿಯಾರದ ಸರಪಣಿ, 2 ಕಂಪಾಸ್, 3 ಷರಟುಗುಂಡಿ, 4 ಗುಂಡಿ, 5 ಕರವಸ್ತ್ರ, 6 ಪರಿಮಳ ಶೀಸೆ, 7 ಗಡಿಯಾರದ ಪೆಟ್ಟಿ, 8 ಗಡಿಯಾರದ ಚೀಲ, 9 ಸೊಗಸಾದ ಉಂಗರ.

ನಮ್ಮ ಕಂಪನಿ ಅಡ್ರೆಸ್ಸು —ಎಚ್. ಕೆ. ಲೋಟಸ್ ಅಂಡ್ ಕೋ,

[320-1] ನಂ. 8 ಅರುಳಪ್ಪನ ಬೀದಿ, ಸಾಹುಕಾರ್‌ಪೇಟೆ, ಮದರಾಸ್.

ಹೊಸ ವಾಚ್! ಬೆಲೆ ಅಗ್ಗದ! ಬೇಗ ನೋಡಿ!

ಎನಿಗ್ಮಾ ಸ್ವಿಸ್ ಮೇಡ್ ವಾಚು. ಕ್ರಯ ರೂ. 3-8-0.

ನಮ್ಮಲ್ಲಿರುವ ಈ ಹೊಸ ನಮೂನೆ ವಾಚು ಎಲ್ಲಾ ತರದ ಅಗ್ಗದ ರೈಲ್ವೆ, ಬೊಂಬಾಯಿ, ಇತರ ನಮೂನೆಗಳ ವಾಚ್‌ಗಳಿಗಿಂತ ಎಷ್ಟೋ ಮೇಲಾದದ್ದು.



ಖರೆಾರು ಟೈಂ. ಸಾಮಾನ್ಯವಾಗಿ ಉಪಯೋಗಿಸಿದರೆ ತುಂಬಾ ಬಾಳಿಕೆ. ವಾಚ್‌ಗಳ ಕ್ರಯ ಫೋಟೋಪೇಟಿಗೆ ಬಂದಿರುವದರಿಂದ ಲಾಭ ಬಹಳ ಸ್ವಲ್ಪಕ್ಕೆ ಇಳಿದಿದೆ. ನಾವು ಕೂಡ ಅನೇಕ ವಾಚ್‌ಗಳನ್ನು ಬಿಕರಿ ಮಾಡುವುದರಿಂದ ಲಾಭವನ್ನು ಅಲ್ಪವಾಗಿ ಇಟ್ಟಿದೇವೆ. ಅಗ್ಗದಲ್ಲಿ ಇಷ್ಟು ಮಜಬೂತಾದ ವಾಚು ಇದುವರೆಗೆ ಯಾರೂ ಮಾರಿದ್ದಿಲ್ಲವೆಂದು ಖಚಿತವಾಗಿ ಸಕಲರೂ ನಂಬಬೇಕು. ನಂಬಿಕೆಯಾದ ವಾಚನ್ನು ಅಲ್ಪ ಕ್ರಯಕ್ಕೆ ಬಿಕರಿ ಮಾಡಬೇಕೆಂಬುವುದೇ ನಮ್ಮ ಉದ್ದೇಶ. ಈ ವಾಚಿಗೆ ಶಿಫಾರಸಾಗಲಿ, ವಿವರಣೆಯಾಗಲಿ ಅಗತ್ಯವಿಲ್ಲ. ಇದು ಶ್ರೇಷ್ಠ ತರದ ಭಾರಿ ಇಂಗ್ಲಿಷ್ ವಾಚಿಗೆ ಸರಿಸಮಾನವಾದದ್ದೆಂದು ಖಂಡಿತವಾಗಿ ಹೇಳುತ್ತೇವೆ. ಈಗಿನ ಸಂದರ್ಭವನ್ನು ಕಳಕೊಳ್ಳಬೇಡಿ. ಈ ವಾಚಿನ ಕ್ರಯ ರೂ. 3-4-0 ಮಾತ್ರ. [221-1]

ರೋಸ್ಕೋಪ್ ವಾಚ್ ರೂ. 1-11-0, ರೈಲ್ವೆ ರೆಗ್ಯುಲೇಟರ್ ರೂ 2-10-0, ರೈಲ್ವೆ ಫ್ಯಾನ್ಸಿ ಡಯಲ್ ರೂ 3-0-0, ಬೊಂಬಾಯಿ ಮೇಯಿಲ್ ರೂ 2-4-0, ರಿಸ್ಟ್ ವಾಚ್ ಕೈ ಪಟ್ಟಿ ಸಹಿತ ರೂ 3-6-0. ಬಹುಮಾನಗಳಿಗೆ 6 ಆಣೆ ಹೆಚ್ಚು ಕೊಡಬೇಕು. ಬಹುಮಾನಗಳು —ಸರಪಣಿ, ಉಕ್ಕಿನಮುಖಿ, ಷರ್ಟ್ ಗುಂಡಿಗಳು, ಜರ್ಮನ್ ಬಾಚಣಿಗೆ, ಕನ್ನಡಿ, ಕೈವಸ್ತ್ರ, ವಾಸ್ಲಿನ್ ಹೇರಾಯಿಲ್, 6 ಫ್ಯಾನ್ಸಿ ಪೋಸ್ಟ್ ಕಾರ್ಡುಗಳು.

ನಮ್ಮ ವಿಳಾಸ.—ಕಮಲರಾವ್ ಕಂಪನಿ,

28, ಅರುಳಪ್ಪನ್ ಬೀದಿ, ಸಾಹುಕಾರ್‌ಪೇಟೆ, ಮದರಾಸ್.

ಯುರೋಪು ದೇಶದ ಮಹಾಯುದ್ಧದ ಚರಿತ್ರೆಯು.

ಕ್ರಯ ರೂಪಾಯಿ 1 ; ಟಪಾಲ್ ಖರ್ಚು 2 ಆಣೆ.

ಈಗ ಯುರೋಪು ದೇಶದಲ್ಲಿ ನಡೆಯುತ್ತಲಿರುವ ಮಹಾ ಯುದ್ಧದ ಚರಿತ್ರೆಯು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ ಎಲ್ಲಾ

ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು ರಾಜ್ಯದ ಸೇನಾಬಲವೂ ಮತ್ತು ವಿಮಾನಬಲವೂ, ಅವುಗಳ ಪಠಗಳೂ, ರಾಜರುಗಳ ಸೇನಾಧ್ಯಕ್ಷರುಗಳು, ಆಯಾ ದೇಶದ ರಾಜರುಗಳು, ಮಂತ್ರಿಗಳು, ಮೊದಲಾದವರುಗಳ ಭಾವಚಿತ್ರಗಳು, ಯುದ್ಧಸಂಬಂಧವಾದ ವಿಷಯಗಳು, ಇವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ ಯುದ್ಧಾರಂಭವಾದ ಲಾಗಾಯಿತು ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇದು ಡೆಮ್ಮಿ 20 ಫಾರಂಗಳುಳ್ಳ ಸುಂದರವಾದ ಟೈಂಡಿನಿಂದೊಡಗೂಡಿದ 160 ಪುಟಗಳುಳ್ಳ ಯುದ್ಧಚರಿತ್ರೆಯು. ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡಭಾಷೆಯಲ್ಲಿ ತಯಾರಿಸಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಈ ಗ್ರಂಥವು ಪುಸ್ತಕ ಭಂಡಾರದಲ್ಲಿ ಇಡಲು ಲಾಯಖಾದದ್ದು. ಇದನ್ನು ಎಲ್ಲರೂ ಓದತಕ್ಕದ್ದು. 30 ಯುದ್ಧಪಟಗಳು ಗ್ರಂಥದ ಆಯಾ ಸ್ಥಳಗಳಲ್ಲಿ ಹಾಕಲ್ಪಟ್ಟಿರುತ್ತೆ. [219-1]

ವಿಳಾಸ—ಭಾರತಿ ಏಜನ್ಸಿ, ಪಾರ್ಕ್ ಟವನ್, ಮದರಾಸು.

ನವರಾತ್ರೆ ಹಬ್ಬದ ವರಿವಿಗೆ ಮಾತ್ರ.

ಅಸಲ್ ಮಾಲು. ಬಣ್ಣ ಖಾತರಿ. ಕ್ರಯ ಸುಲಭ.

ವರ್ತಕರಿಗೆ ಜರೂರಾಗಿ ಬೇಕಾದಂಥಾ ಸೋಲಾಪುರದ ನಮೂನೆವಾರು ಚೆಕ್ಕುಗಳು ಸೀರೆಗಳು ಖಣಗಳು ಮತ್ತು ಗಟ್ಟಿ ಬಣ್ಣದ ಇತರ ನಮೂನೆ ಸೀರೆಗಳು ನವರಾತ್ರೆಯವರಿವಿಗೆ ಮಾತ್ರ ಕಡಮೆ ಕ್ರಯಕ್ಕೆ ದೊರೆಯುವುದು. ಮಿಲ್ಲಿನ ಪಟ್ಟೀದಿಗಿಂತ ನಮ್ಮಲ್ಲಿ ಬಹಳ ಕಡಮೆ.

ಚಿಲ್ಲರೆ ಥಾನುಗಳನ್ನು ಕೋರುವವರು ಕೆ. ಪ್ರಹ್ಲಾದರಾವ್ ಅಂಡ್ ಸನ್, ಒಕಲ್‌ಪೇಟೆ ಶ್ರೀನಿವಾಸಾಚಾರ್ರ ಬೀದಿ, ಬೆಂಗಳೂರು ಸಿಟಿ, ಇವರಿಗೆ ಬರೆಯಬಹುದು.

ಬೇಲುಗಟ್ಲೆ ಕೋರುವವರು ಇವರಲ್ಲಿ ಅಥವಾ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು :— [36-20]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 159, ಕಿಲಾರಿ ರೋಡು (ಕುಂಬಾರಪೇಟೆ) ಬೆಂಗಳೂರು ಸಿಟಿ.

ಕರ್ಣಿಕ

ಎಲ್ಲಾ ಜ್ವರಗಳಿಗೂ ಖಂಡಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-2]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಸ್ಯು ಮಿಕ್ಸ್ಚರ್ ಡಿಪೊ, ಬೊಂಬಾಯಿ. 4.

KARNIK Bros., BOMBAY, 4.

ಹಂಗಿಲ್ಲ ಸವಿಮಾಡಿಸಿತು ! ಇನ್ನೂ ನೋಡಲಿಲ್ಲ?

ಈಗತಾನೇ ಹೊರಪಟ್ಟಿರುವ ಎರಡು ಪುಸ್ತಕಗಳು !!!

ಪ್ರಬಂಧ ಮುಕ್ತಾವಳಿ.—ಕನ್ನಡ ಪ್ರಬಂಧ ಮತ್ತು ಪತ್ರ ಬರೆಯುವ ಮಾರ್ಗವನ್ನು ವಿವರಿಸುತ್ತದೆ. ಬೆಲೆ 12 ಆಣೆ ಮಾತ್ರ.

1916 ನೆ ಜೋ. ಸಿ. ಟೆಸ್ಟ್ ರಹಸ್ಯ ವಿವರಣೆ —ಅತ್ಯುತ್ತಮ ಉತ್ತರಗಳು ಚೆನ್ನಾಗಿ ವಿವರಿಸಲ್ಪಟ್ಟಿವೆ. ಅವಶ್ಯ ನೋಡಿ. ಬೆಲೆ 4 ಆಣೆ.

[225-1] ವಿಳಾಸ—ಎಂ. ಕೃಷ್ಣಪ್ಪ, 34, ಗಾಣಿಗರಪೇಟೆ, ಬೆಂಗಳೂರು

ಮನೋಲ್ಲಾಸಿನಿ ತೈಲವು.

ಕಠಿಣ ತಲೆನೋವು, ತಲೆ ತಿರುಗುವಿಕೆ, ನಿದ್ರೆ ಬಾರದಿರುವದು, ಶಿರ ... ವದು, ಕೂದಲು ಉದುರುವದು, ಕಣ್ಣುಗಳಿಂದ ನೀರು ಸುರುವದು ... ಳುಗಳ ಉರಿ, ಖಂಡಿತವಾಗಿ ಗುಣಪಡಿಸಿ, ನೆನಪುಶಕ್ತಿಯನ್ನು ವೃದ್ಧಿಸಿ, ... ಲನ್ನು ಬೆಳಸುತ್ತದೆ. ಇತರ ಪರಿಮಳದ ತೈಲಗಳಂತೆ ಇದರಿಂದ ಕೃತಕ ... ಗುವದಿಲ್ಲ. 3 ಔನ್ಸ್ ಸೀಸೆಗೆ 12 ಆಣೆ ; 3 ಸೀಸೆಗಳಿಗೆ ರೂ 2. ... ಹಾಸಲು ಬೇರೆ [226-1]

ನಮ್ಮ ವಿಳಾಸ.—ಮನೋಲ್ಲಾಸಿನಿ ಕಂಪನಿ, ಕಂಕನಾಡಿ, ದ. ಕ...

ಕಾರಾಮಾರ್ಕಾ! ಬಾಳಿಕೆ! ಅಗ್...

ರೈಲ್ವೆ ರೂಪದ, ಬಹಳ ಬಲವಾದ, ಲೀವರ್ ಚಲನೆಯುಳ್ಳ ... ಕೆಂಪುಗಳಿರುವ, ಓಪನ್ ಫೇಸ್ ಪಾಕೆಟ್ ಗಡಿಯಾರ. 18 ಲೈ...



ನಿಕ್ಕಲ್ ಕೇಸ್ ಉಳ್ಳದ್ದು; ತಿರುಪಿ... ಗ್ಲಾಸ್ ಮುಚ್ಚಳ, ಚಿನ್ನದ ಗಿಲ್ಟಿ... ಕೆತ್ತನೆಮಾಡಿದ್ದು. 4 ನಿಮಿಷ ... ಕೆಟ್ ಜೂವೆಲ್ ಚಲನೆಯುಳ್ಳದ್ದು ... 20 ಬಹುಮಾನಗಳ ಸಹಿತ ಪೂರ... ವಾದದ್ದು. ಕ್ರಯ ರೂ. 3-6-... ಬಹುಮಾನಗಳ ವಿವರ.—1 ... ಚ್ ಪೆಟ್ಟಿಗೆ, 1 ನಿಕ್ಕಲ್ ಸರಪ... 1 ಉತ್ತರಮುಖಿ, 3 ಕರವಸ್ತ್ರಗಳು ... 2 ಬಾಟ್ಲಿ ಮಾಡ್ರಿ ಕೂದಲೆಣ್ಣೆ ... ಗಳು, 1 ಬಾಚಣಿಗೆ, 1 ಕನ್ನಡಿ, 10 ಪೋಸ್ಟ್ ಕಾರ್ಡುಗಳು...

ವಿಳಾಸ:—ಟಿ. ಜೆ. ಎಲ್. ಕೃಷ್ಣ ಮತ್ತು ಕಂಪನಿ,

3-3 ಪೋಲೀಸ್ ಕಮಿಷನರ ಆಫೀಸ್ ರೋಡ್,

ವಿದ್ಯಾಭ್ಯಾಸದ ಕಮಿಟಿ.—ಈ ವರ್ಷದಲ್ಲಿ ಈ ಕಮಿಟಿಯವರು ವಿಚಾರಮಾಡಿದ ಬಹು ಮುಖ್ಯ ವಿಷಯಗಳು ಯಾವುವೆಂದರೆ:—ಜನ ಸಾಮಾನ್ಯದಲ್ಲಿ ವಿದ್ಯಾಭಿವೃದ್ಧಿಯಾಗುವುದಕ್ಕೆ ಹೆಚ್ಚು ಸೌಕರ್ಯಗಳನ್ನು ಒದಗಿಸುವುದು, ಗ್ರಾಮಗಳಲ್ಲಿ ಪುಸ್ತಕ ಭಂಡಾರಗಳನ್ನು ಇಡುವುದು, ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದು, ವ್ಯಾಯಾಮ ವಿದ್ಯೆಯನ್ನು ಬೋಧಿಸುವುದು, ಸ್ಕೂಲನ್ನು ಇಟ್ಟುಕೊಳ್ಳುವಷ್ಟು ಜನಸ್ಥ ಸಾಲದ ಸಣ್ಣ ಗ್ರಾಮಗಳಿಗೆ ಸಂಚಾರಮಾಡುತ್ತಾ ಬೋಧಿಸತಕ್ಕ ಉಪಾಧ್ಯಾಯರುಗಳನ್ನು ನಿಯಮಿಸುವುದು. ಇದಲ್ಲದೆ, ಪ್ರೌಢವಯಸ್ಸಿನವರ ವಿದ್ಯಾಭ್ಯಾಸಕ್ಕೆ ಉಪನ್ಯಾಸ ಕೊಡತಕ್ಕ ಏರ್ಪಾಡನ್ನು ಮಾಡಿ, ಸಂಚಾರ ಹೊರಟು ಬೋಧಿಸಬಲ್ಲ ನಾಲ್ವರು ಉಪನ್ಯಾಸಕರನ್ನು ನಿಯಮಿಸಲಾಗಿದೆ. ಕಮಿಟಿಯವರು ಬೆಂಗಳೂರು ಮೈಸೂರು ನಗರಗಳಲ್ಲಿ ಪಬ್ಲಿಕ್ ಲೈಬ್ರರಿ (ಸಾರ್ವಜನೀಕ ಪುಸ್ತಕ ಭಂಡಾಗಾರ) ಗಳನ್ನು ಇಡುವ ಏರ್ಪಾಡು ಮಾಡಿರುತ್ತಾರೆ. ಈ ಕಮಿಟಿಯವರ ಪ್ರಯತ್ನಗಳಿಂದ, ಕರ್ನಾಟಕ ಭಾಷಾ ಸಾಹಿತ್ಯಗಳ ಅಭಿವೃದ್ಧಿಗೆ ಸರ್ವೋತ್ತಮವಾದ ಮಾರ್ಗಗಳು ಯಾವುವೆಂದು ಚರ್ಚಿಸಿ ನಿರ್ಣಯಿಸಲು ಒಂದು ಕಾನ್‌ಫರೆನ್ಸನ್ನು (ಪರಿಷತ್ತನ್ನು) ಸೇರಿಸಲಾಯಿತು. ಈ ಪರಿಷತ್ತಿನಲ್ಲಿ ರಾಜಮಂತ್ರಪ್ರವೀಣ ಮಿ॥ ಹೆಚ್. ವಿ. ನಂಜುಂಡಯ್ಯ, ಸಿ. ಐ. ಇ. ಯವರು ಅಧ್ಯಕ್ಷರಾಗಿದ್ದರು. ಇದಕ್ಕೆ ಮದರಾಸು ಬೊಂಬಾಯಿ ಆಧಿಪತ್ಯಗಳಿಂದಲೂ ಪ್ರತಿನಿಧಿಗಳು ಬಂದಿದ್ದರು.

ವ್ಯವಸಾಯ ಕಮಿಟಿ.—ಈ ಕಮಿಟಿಯವರು ರೇಷ್ಮೆ ತಯಾರಿಯ ಉದ್ಯೋಗವನ್ನು ವೃದ್ಧಿಗೆ ತರತಕ್ಕ ಕೆಲಸವನ್ನೇ ಹೆಚ್ಚಾಗಿ ನಡಿಸಿದರು. ಕಮಿಟಿಯವರು ಮಾಡಿದ ಏರ್ಪಾಡಿಗೆ ಅನುಗುಣವಾಗಿ ಬೆಂಗಳೂರಲ್ಲಿ ಸರ್ಕಾರಿಯಲ್ಲದ ಒಂದು ಪಯನಿಯರ ಮನೆಯನ್ನು ಕಲ್ಪಿಸಲಾಗಿದೆ. ಇದಕ್ಕೆ ಸರ್ಕಾರದವರು 10,000 ರೂಪಾಯಿ ಸಾಲವನ್ನು ಕೊಟ್ಟಿರುತ್ತಾರೆ. ಕಮಿಟಿಯವರು ವಿವಿಧ ವಿಷಯಗಳನ್ನು ಬೋಧಿಸುವ 20 ಇಂಗ್ಲೀಷ್ ಲೇಖನಗಳನ್ನೂ 20 ಕನ್ನಡ ಲೇಖನಗಳನ್ನೂ ಮುದ್ರಿಸಿ ಪ್ರಕಟಿಸಿದರು. ಮೈಸೂರು ಸಿಲ್ಕ್ ಅಸೋಸಿಯೇಷನಿನವರು ರೇಷ್ಮೆಯನ್ನು ಮಗ್ಗಕ್ಕೆ ಅನುಕೂಲವಾಗುವಂತೆ ಸಿದ್ಧಪಡಿಸುವ ಕೆಲಸದಲ್ಲಿ ಪರೀಕ್ಷೆಗಳನ್ನು ನಡಿಸಿದುದಲ್ಲದೆ, ಅದಕ್ಕೆ ಸಂಬಂಧಪಟ್ಟ ಬೇರೆಬೇರೆ ವಿಧಾನಗಳನ್ನು ಹುಡುಗರಿಗೂ ಹೆಣ್ಣು ಮಕ್ಕಳಿಗೂ ಕಲಿಸುತ್ತಿದ್ದಾರೆ.

ಕೈಗಾರಿಕೆಗಳು ಮತ್ತು ವಾಣಿಜ್ಯ ಕಮಿಟಿ.—ದೀಪದಕಡ್ಡಿ, ಪೆನ್ಸಿಲು, ಕಾಗದ, ಸಾಬೂನುಗಳನ್ನು ತಯಾರುಮಾಡುವ ವಿಷಯದಲ್ಲಿಯೂ, ಒಂದು ಹತ್ತಿ ಗಿರಣಿಯನ್ನು ಸ್ಥಾಪಿಸುವ ವಿಷಯದಲ್ಲಿಯೂ ವಿಚಾರಗಳನ್ನು ನಡಿಸಲಾಯಿತು. ಸಂಸ್ಥಾನದಲ್ಲಿ ಜನರು ವಾಡಿಕೆಯಾಗಿ ಅನುಸರಿಸುತ್ತಿರುವ ಚಿಲ್ಲರೆ ಉದ್ಯೋಗಗಳು ಯಾವವು, ಅವುಗಳನ್ನು ಅಭಿವೃದ್ಧಿಗೆ ತರುವ ಮಾರ್ಗಗಳು ಏನಿವೆ, ಎಂಬುದನ್ನು ಗೊತ್ತುಮಾಡುವ ಉದ್ದೇಶದಿಂದ, ಬೆಂಗಳೂರು ಮೈಸೂರು ನಗರಗಳಲ್ಲಿ ಜನಗಳು ಮನೆಗಳಲ್ಲಿ ಮಾಡುತ್ತಿರುವ ಚಿಲ್ಲರೆ ಕೈಗಾರಿಕೆಗಳ ಮತ್ತು ಉದ್ಯೋಗಗಳ ವೃತ್ತಾಂತವನ್ನು ಸಂಗ್ರಹಿಸುವುದಕ್ಕೆ ಒಬ್ಬ ಆಫೀಸರನ್ನು ನೇಮಿಸಿಯಿತ್ತು. ಅವರು ಕಳುಹಿಸಿದ ರಿಪೋರ್ಟು ಈಗತಾನೆ ಫೈಯಿಸ್ ಮಾಡಲ್ಪಟ್ಟಿದೆ. ಕೈಗಾರಿಕೆಗಳನ್ನು ಸ್ಥಾಪಿಸಿ ಪ್ರೋತ್ಸಾಹವನ್ನು ಕೊಟ್ಟಿರುವುದು ಮಾತ್ರವಲ್ಲದೆ, ಕಮಿಟಿಯವರು, ಸರ್ಕಾರದ ವಿಚಾರಣೆಗೊಳಪಟ್ಟ ಒಂದು ಲೈಫ್ ಇನ್‌ಷ್ಯೂರೆನ್ಸ್ ಏರ್ಪಾಡನ್ನು ಜಾರಿಗೆ ತರುವುದು, ಗ್ರಾಮ ಸೇವಿಂಗ್ ಬ್ಯಾಂಕುಗಳನ್ನು ಇಡುವುದು, ಇವೇ ಮೊದಲಾದ ಜನಗಳ ಅರ್ಥಾಭ್ಯುದಯ ಸ್ಥಿತಿಗೆ ಸಂಬಂಧಪಟ್ಟ ವಿಷಯಗಳನ್ನು ಚೆನ್ನಾಗಿ ವಿಚಾರಮಾಡಿರುತ್ತಾರೆ. ಅಲ್ಲದೆ ವರ್ತಕರು ಅನ್ಯದೇಶಗಳಿಗೆ ಹೋಗಿ ಬರುವುದಕ್ಕೆ ಸೌಕರ್ಯಗಳನ್ನು ಮಾಡುವುದಕ್ಕೂ, ವ್ಯಾಪಾರದ ಅಭಿವೃದ್ಧಿಗಾಗಿ ಅವಶ್ಯಕವಾದ ಸಂಗತಿಗಳನ್ನು ತಿಳಿಸತಕ್ಕ ಬಾತಮೀದಾರರನ್ನು ನೇಮಿಸುವದಕ್ಕೂ ಏರ್ಪಾಡುಗಳನ್ನು ಕಮ್ಮಿ ಮಾಡಿರುತ್ತಾರೆ.

ಜಲಾಶಯ ಕಾರ್ಯಗಳು.—ಕನ್ನಂಬಾಡಿಯ ಬಳಿ ಕಾವೇರೀ ಜಲಾಶಯದ ಕಾಮಗಾರಿಯು ತೃಪ್ತಿಕರವಾಗಿ ಸಾಗಿರುತ್ತದೆ. ಅಣೆಕಟ್ಟೆಯು ನದಿಯ ಪಾತ್ರದಲ್ಲಿ 51.50 ಅಡಿ ಎತ್ತರದವರೆಗೂ, ಪಕ್ಕಗಳಲ್ಲಿ 56 ಅಡಿ ಲಾಗಾಯ್ತು 74 ಅಡಿ ಎತ್ತರದವರೆಗೂ ಎದ್ದಿದೆ. ಕಟ್ಟೆಯಲ್ಲಿ ಇಡಲ್ಪಟ್ಟಿರುವ ಬಿಡುಗಂಡಿಗಳ ಸಹಾಯದಿಂದ, ವಿಶೇಷ ಪ್ರವಾಹ ಕಾಲಗಳಲ್ಲಿ ವಿನಾ ಮಿಕ್ಕ ಕಾಲಗಳಲ್ಲಿ ನಾಲೆಗೆ ನೀರು ಎಷ್ಟು ಬೇಕಾದರೆ ಅಷ್ಟು ಮಾತ್ರ ಹರಿದುಹೋಗುವಂತೆ ಕ್ರಮಪಡಿಸಬಹುದು. ಈ ಮೇರೆಗೆ ಜಮಾಯಿಸಲ್ಪಟ್ಟ ನೀರಿನಿಂದ, ಕೋಲಾರದ ಚಿನ್ನದ ಗಣಿಯವರಿಗೆ ಹಾಲಿ ಕೊಡುತ್ತಿರುವ 9,321 ಹಾರ್ಸ್ ಪವರ್ ವಿದ್ಯುಚ್ಛಕ್ತಿಯನ್ನು ತಪ್ಪದೆ ಕೊಡುತ್ತೇವೆಂದು ಭರವಸೆ ಕೊಡಬಹುದಲ್ಲದೆ, ಈಚೆಗೆ ಸದರಿ ಗಣಿ ಕಂಪೆನಿಯವರೊಡನೆ ಹೊಸದಾಗಿ ಮಾಡಿಕೊಂಡಿರುವ ಒಡಂಬಡಿಕೆಗೆ ಅನುಗುಣವಾಗಿ ಇನ್ನೂ 5,000 ಹಾರ್ಸ್ ಪವರ್ ಪ್ರಮಾಣದವರೆಗೆ ಹೆಚ್ಚು ಶಕ್ತಿಯನ್ನು ಒದಗಿಸುವುದಕ್ಕೂ ಸಹ ಆಗುತ್ತದೆ. ಜಲಾಶಯದ ಕಟ್ಟೆಯನ್ನು ಕಟ್ಟುವುದಕ್ಕಾಗಿ ಈ ವರ್ಷದಲ್ಲಿ 26,02,000 ರೂಪಾಯಿ ಖರ್ಚಾಗಿ, 1916ನೇ ಜೂನ್ ಆಖ್ಯರವರೆಗೆ 71,45,000 ರೂಪಾಯಿ ಒಟ್ಟು ಖರ್ಚು ಮುಟ್ಟುತ್ತದೆ. ಜಲಾಶಯದಲ್ಲಿ ಅತ್ಯುನ್ನತವಾದ ಭಾಗವನ್ನು ಆಧಾರಮಾಡಿಕೊಂಡು ಆ ಮೂಲಕ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಒಂದು ಏರ್ಪಾಡು ಪ್ರತ್ಯೇಕವಾಗಿ ಆಲೋಚಿಸಲ್ಪಡುತ್ತಿದೆ. ಕಾವೇರೀ ಜಲಾಶಯದಿಂದ ಶಿಂಷಾ ಮಾಗಡೆಗೆ ಬಂದಿರುವ ಜಮೀನುಗಳ ರೈತರಿಗೆ ಸ್ಥಳವಸತಿಯನ್ನು ಕಲ್ಪಿಸಿಕೊಡುವುದಕ್ಕಾಗಿ ಕೈಗೊಂಡ ನಾಲೆ ಕಾಮಗಾರಿಗಳು ಸಹ ತಕ್ಕಮಟ್ಟಿಗೆ ಮುಂದಕ್ಕೆ ಸಾಗಿರುತ್ತವೆ. ಹೇಮಗಿರಿ ಮತ್ತು ಮಂದಗೆರೆ ನಾಲೆಗಳ ಕೆಳಗೆ ಸುಮಾರು 2,600 ಎಕರೆಯಷ್ಟು ಹೊಸ ಜಮೀನಿನ ಸಾಗುವಳಿಗೆ ನೀರು ಸರಬರಾಯಿ ಮಾಡಿರುವುದಲ್ಲದೆ, ಚಾಮರಾಜ ದಕ್ಷಿಣತೀರದ ನಾಲೆಗಳ ಕೆಳಗೂ, ತಗ್ಗಿನಲ್ಲಿರುವ ಇನ್ನೆರಡು ನಾಲೆಗಳ ಕೆಳಗೂ ಸ್ವಲ್ಪ ದೂರದವರೆಗೆ ಇರತಕ್ಕ ಜಮೀನುಗಳಿಗೂ ಸಾಗುವಳಿಗಾಗಿ ನೀರು ಕೊಡಲಾಯಿತು. ಈ ನಾಲೆಗಳ ಕಾಮಗಾರಿಗಾಗಿ 5,39,000 ರೂಪಾಯಿ ಖರ್ಚು ಆಗಿರುತ್ತದೆ. ಹಾಲಿ ಇರತಕ್ಕ ನಾಲೆಗಳ ಕೆಳಗೆ ಕಬ್ಬಿನ ಸಾಗುವಳಿಯನ್ನು ಹೆಚ್ಚಿಸುವ ವಿಷಯಕ್ಕೆ ಸಂಬಂಧಪಟ್ಟ ಸಲಹೆಗಳು ಸಹ ಪಕ್ವಕ್ಕೆ ಬರುತ್ತಲಿವೆ. ಕಾವೇರೀ ನದಿಯ ನೀರನ್ನು ಉಪಯೋಗಿಸಿಕೊಳ್ಳುವ ವಿಷಯದಲ್ಲಿ ನಮ್ಮ ಸರ್ಕಾರಕ್ಕೂ ಮದ್ರಾಸು ಆಧಿಪತ್ಯದ ಸರ್ಕಾರಕ್ಕೂ ಇದ್ದ ವಿವಾದವನ್ನು ವ್ಯವಸ್ಥೆಮಾಡುವುದಕ್ಕಾಗಿ ನೇಮಿಸಲ್ಪಟ್ಟಿದ್ದ ಆರ್ಬಿಟ್ರೇಷನ್ ಕಮಿಟಿಯವರು ಕೊಟ್ಟಿರುವ ತೀರ್ಪು ಇನ್ನೂ ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ನೀರಾವರಿ ಕಾಮಗಾರಿಗಳು.—ಮಾರಿಕಣಿವೆ ಜಲಾಶಯದ ಸಂಬಂಧಕ್ಕೆ ಜಾರಿಗೆ ಕೊಟ್ಟಿರುವಂಥ ತಾತ್ಕಾಲಿಕವಾಗಿ ನೀರನ್ನು ಸರಬರಾಯಿ ಮಾಡುವ ಏರ್ಪಾಡು ಇದುವರೆಗೂ ತಕ್ಕಮಟ್ಟಿಗೆ ಅನುಕೂಲವಾಗಿಯೇ ಇರುವುದು ಕಂಡುಬಂದಿದೆ. ನೀರಾವರಿಯಾದ ಜಮೀನಿನ ವಿಸ್ತೀರ್ಣವು ಹೆಚ್ಚುತ್ತಲಿದೆ. ನೀರಾವರಿ ಆಗಬಹುದಾದ ಜಮೀನಿಗೂ, ನಾಲೆಯ ನೀರಿಗೂ ಗಿರಾಕಿಯು ಕ್ರಮೇಣ ಹೆಚ್ಚುತ್ತಲಿದೆ. ನಾಲೆಯ ಬಳಿಯಲ್ಲಿರುವ ಗ್ರಾಮಗಳ ಆರೋಗ್ಯವು ಸಹ ಉತ್ತಮ ಸ್ಥಿತಿಗೆ ಬರುತ್ತಲಿದೆ. ಈ ಏರ್ಪಾಡಿನ ಪ್ರಕಾರ ಸರಿಯಾಗಿ ಕೆಲಸ ನಡೆಯುವಂತೆ ಮಾಡುವುದಕ್ಕೋಸ್ಕರ, ಈಚೆಗೆ ಉಂಟಾಗಿರುವ ಅನುಭವದ ಮೇರೆಗೆ ನಿಬಂಧನೆಗಳನ್ನು ತಿದ್ದುಪಾಟು ಮಾಡಿಯದೆ. ನಾಲೆಯ ಪ್ರದೇಶಕ್ಕೆ ಹೊರಗಿನಿಂದ ಜನರು ಬಂದು ನೆಲಸುವದಕ್ಕೆ ಉಪಕ್ರಮವಾಗಿದೆ.

ಮೈನರ್ ಕೆರೆಗಳು.—ಈ ಕೆರೆಗಳನ್ನು ದುರಸ್ತು ಮಾಡಿಸಿ ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿರುವುದೇ ರೈತರ ಏಳಿಗೆಗೆ ಬಹುಮಟ್ಟಿಗೆ ಮುಖ್ಯ ಕಾರಣವಾಗಿರುವದು. ಈ ವಿಷಯವು ಹೋದ ವರ್ಷದ ಸಭೆಯಲ್ಲಿ ಸಂಪೂರ್ಣವಾಗಿ ಚರ್ಚಿಸಲ್ಪಟ್ಟಿತು. ಅದಕ್ಕೆ ಫಲಿತಾಂಶವಾಗಿ, ಪೂರ್ವದ ನಿಬಂಧನೆಗಳನ್ನು ಬದಲಾಯಿಸಿ ಮೊದಲಿಗಿಂತಲೂ ಹೆಚ್ಚಾದ ರಿಯಾಯಿತಿಗಳನ್ನು ತೋರಿಸಲಾಯಿತು. ಸಾಕಷ್ಟು ಸಿಬ್ಬಂದಿಯನ್ನೂ ಕೂಡ ಕೊಟ್ಟಿರುತ್ತದೆ. ಇಷ್ಟು ಸವಲತ್ತುಗಳನ್ನು ಕೊಟ್ಟಿರುವುದರಿಂದ ರೈತರು ತಮ್ಮ ಕೆರೆಗಳನ್ನು ದುರಸ್ತು ಮಾಡಿಸುವ ವಿಷಯದಲ್ಲಿ ಈಗ ವಹಿಸಿರುವದಕ್ಕಿಂತಲೂ ಹೆಚ್ಚಾದ ಮುತುವರ್ಜಿಯನ್ನು ವಹಿಸುವರೆಂತಲೂ, ಕಾಮಗಾರಿಯ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳು ಇನ್ನೂ ಹೆಚ್ಚಾದ ಅಭಿವೃದ್ಧಿಯನ್ನು ತೋರಿಸಲು ಸಹಾಯಮಾಡುವರೆಂತಲೂ ಸರ್ಕಾರದವರು ನಂಬಿರುತ್ತಾರೆ.

ಸರ್ಕಾರೀ ತರಫ್ ಕಾಮಗಾರಿ ನಡಿಯುತ್ತಿರುವ ಮತ್ತು ಕಟ್ಟಿಸ್ತಿರುವ ಲೈನುಗಳು.—ಮೈಸೂರು ಅರಸೀಕೆರೆ ರೈಲ್ವೆಯ ಲೈನಿನಲ್ಲಿ ಸಮರ್ಪಕವಾಗಿ ಕೆಲಸವು ಮುಂದರಿಯಿತು. 1915-16 ನೆಯ ಸಾಲಿನ ಕಡೆಯಲ್ಲಿ ಈ ಲೈನು ಜನಸಂಚಾರಕ್ಕೆ ಅವಧಿಯಪ್ಪಿಗೂ ಸಿದ್ಧವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಕೋಲಾರ-ಚಿಕ್ಕಬಳ್ಳಾಪುರ ರೈಲ್ವೆಯ ಲೈನಿನಿಂದ ಒಡೆಯುವ ಕೋಲಾರ-ಶ್ರೀನಿವಾಸಪುರದ ಶಾಖೆಯು ಪ್ರಾಯಶಃ ಮುಂದಿನ ಡಿಸೆಂಬರ್ ಮಾಹೆಯಲ್ಲಿ ಜನಸಂಚಾರಕ್ಕೆ ಒದಗಬಹುದಾಗಿ ಕಾಣುತ್ತದೆ. ಲಕ್ಕವಳ್ಳಿ-ನರಸಿಂಹರಾಜಪುರ ಟ್ರಾಂವೆಯ ಲೈನಿನಲ್ಲಿ ಕಾಮಗಾರಿಯು ನಡಿಯುತ್ತಾ ಇದೆ. ಪ್ರಸಕ್ತ ಸರ್ಕಾರೀ ಸಾಲಿನಲ್ಲಿ ಈ ಲೈನು ಜನಸಂಚಾರಕ್ಕೆ ಸಿದ್ಧವಾಗಬಹುದು. ಚಾಲು ಸಾಲಿನಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಫೀಡರ್ ರೈಲ್ವೆಗಳ ಸರ್ವೇ ಕಾಮಗಾರಿಗಳನ್ನು ಆರಂಭಿಸಲಾಯಿತು. ಹಾಸನ-ಚಿಕ್ಕಮಗಳೂರು, ಚಿಕ್ಕಮಗಳೂರು-ಕಡೂರು ಮತ್ತು ಚಿಕ್ಕಜಾಜೂರು-ಚಿತ್ರದುರ್ಗ ರೈಲ್ವೆಲೈನುಗಳನ್ನು ಹಾಕುವ ಉದ್ದೇಶವು ಇನ್ನೂ ಪರ್ಯಾಲೋಚನೆಯಲ್ಲೇ ಇರುತ್ತದೆ. ಪ್ರಸಕ್ತ ಸಂವತ್ಸರದ ಕಡೆಯಲ್ಲಿ, ಕೋಲಾರದಿಂದ ಬೌರಿಂಗ್‌ಪೇಟೆಗೆ ಆಗಿರುವ ಕೋಲಾರ ಡಿಸ್ಟ್ರಿಕ್ಟ್ ಬೋರ್ಡು ರೈಲ್ವೆಯಲ್ಲಿಯೂ, ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಲೈನಿನ ಯಲಹಂಕ ದೇವನಹಳ್ಳಿಯ ಶಾಖೆಯಲ್ಲಿಯೂ ಮತ್ತು ತರೀಕೆರೆ ನರಸಿಂಹರಾಜಪುರ ಟ್ರಾಂವೆ ಲೈನಿನ ತರೀಕೆರೆ ಲಕ್ಕವಳ್ಳಿಯ ಶಾಖೆಯಲ್ಲಿಯೂ ಜನಸಂಚಾರವು ಆಮದು ರಪ್ತು ನಡಿಯುತ್ತಾ ಇದ್ದವು. ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆಯ ದೇವನಹಳ್ಳಿ ಚಿಕ್ಕಬಳ್ಳಾಪುರದ ಶಾಖೆಯು ಕೂಡ ಈಚೆಗೆ ಜನಸಂಚಾರಕ್ಕೂ ಆಮದು ರಪ್ತಿಗೂ ಒದಗಿ ಸಿದ್ಧವಾಗಿರುತ್ತದೆ.

ಹೊಸ ರೈಲ್ವೆಗಳು.—ಸರ್ವೇ ಕೆಲಸಗಳು ಮೊದಲೇ ನಡೆದು ಶ್ರೀಮನ್ ಮಹಾರಾಜಾ ಸಾಹೇಬ್ ಬಹದೂರವರ ಸರ್ಕಾರದಿಂದ ವಿಚಾರಮಾಡಲ್ಪಡುತ್ತಿರುವ ಇತರ ಲೈನುಗಳ ಪೈಕಿ ಮೊರಪ್ಪನ್-ಹೊಸೂರು ಲೈನಿಗೆ ಸೇರಿರುವ ಬೆಂಗಳೂರು ಹೊಸೂರು ಲೈನನ್ನೂ, ಮೈಸೂರು ಕೊಡಗು ಲೈನನ್ನೂ ಇಲ್ಲಿ ನಮೂದಿಸಬಹುದಾಗಿದೆ.

ನಂಜನಗೂಡು ಈರೋಡ್ ಲೈನು.—ನಮ್ಮ ಸಂಸ್ಥಾನದಲ್ಲಿ ವ್ಯಾಪಾರವು ಚೆನ್ನಾಗಿ ವೃದ್ಧಿಹೊಂದುವುದಕ್ಕೆ ಎರಡು ರೈಲ್ವೆ ಲೈನುಗಳು ಬಹು ಮುಖ್ಯವಾದವುಗಳಾಗಿವೆ. ಸಂಸ್ಥಾನದಲ್ಲಿರುವ ಮೀಟರ್‌ಗೇಜ್ ಲೈನು ನಂಜನಗೂಡಿನಲ್ಲಿ ಅಖೈರಾಗುತ್ತದೆ. ಇದನ್ನು ಇನ್ನೂ ಮುಂದಕ್ಕೆ ತೆಗೆದುಕೊಂಡು ಹೋಗಿ ದಕ್ಷಿಣ ಇಂಡಿಯದಲ್ಲಿ ಈರೋಡಿನ ಹತ್ತಿರ ಅದೇ ಗೇಜಿನ ಲೈನಿಗೆ ಸೇರಿಸುವ ತನಕ ಮೈಸೂರು ಸೀಮೆಯ ರೈಲ್ವೆ ಲೈನು ಪೂರ್ಣವಾಗುವುದಿಲ್ಲ.

ರ್ಗಗಳಿಂದ ಆಲೋಚನೆಯಲ್ಲಿರುವ ಈ ವಿಷಯವನ್ನು ಕುರಿತು ಇಂಡಿಯಾ ಗಾರರೊಡನೆ ಪುನಃ ಆಗದಪತ್ರ ಬೆಳೆಸುತ್ತಾ ಇದೆ.

ಪಶ್ಚಿಮ ಸಮುದ್ರತೀರಕ್ಕೆ ರೈಲ್ವೆ ಲೈನು.—ಈ ಸಂಸ್ಥಾನದ ರೈಲ್ವೆ ಲೈನುಗಳನ್ನು ಪಶ್ಚಿಮಸಮುದ್ರದ ತೀರದಲ್ಲಿ ಅನುಕೂಲವಾದ ರೇವು ಪಟ್ಟಣಕ್ಕೆ ಸೇರಿಸ ಒಂದು ಲೈನು, ಈಗ ತುರ್ತು ಅವಶ್ಯಕವಾಗಿರುತ್ತದೆ. ಅರಸೀಕೆರೆಯಿಂದ ಹಾಸನ ಮಾರ್ಗವಾಗಿ ಮಂಗಳೂರಿಗೆ ಒಂದು ರೈಲ್ವೆಯನ್ನು ಹಾಕಬೇಕೆಂಬ ವಿಷಯವು ಬಹು ಕಾಲದಿಂದ ಪರ್ಯಾಲೋಚನೆಯಲ್ಲಿದೆ. ಈ ವಿಷಯದಲ್ಲಿ ಒಂದು ಕಾಲದಲ್ಲಿ ಶ್ರೀಮನ್ಮಹಾರಾಜಾ ಸಾಹೇಬ್ಬಹಾದ್ದೂರವರ ಸರ್ಕಾರದವರು ಬಹು ಕುತೂಹಲವುಳ್ಳವರಾಗಿದ್ದರು. ಆದರೆ, ಈ ವಿಷಯವನ್ನು ಸಂಪೂರ್ಣವಾಗಿ ವಿಚಾರ ನಡೆಸಲಾಗಿ ನಮ್ಮ ಕುತೂಹಲವು ಕಡಿಮೆಯಾಗಿ ನಮ್ಮ ಆಲೋಚನೆಯನ್ನು ಬದಲಾಯಿಸಬೇಕಾಯಿತು. ಏಕೆಂದರೆ, ಬಳಿಯದು, ಮಂಗಳೂರು ಪೋರ್ಟಿನಲ್ಲಿ ವರ್ಷಕ್ಕೆ ಕಡೆಯಪಕ್ಷ ಮೂರು ತಿಂಗಳ ಕಡಮೆಯಿಲ್ಲದೆ ಹಡಗುಗಳ ಸಂಚಾರಕ್ಕೆ ಅವಕಾಶವಿರುವದಿಲ್ಲ. ಸಂಸ್ಥಾನಕ್ಕೆ ಶಾಶ್ವತವಾದ ಪ್ರಯೋಜನ ಉಂಟಾಗಬೇಕಾದರೆ ವರ್ಷದ ಎಲ್ಲಾ ಕಾಲಗಳಲ್ಲಿಯೂ ಸಿದ್ಧವಾಗಿರತಕ್ಕ ರೇವು ಅವಶ್ಯಕವಾಗಿರುತ್ತದೆ. ಎರಡನೆ ವಿಷಯವೇನೆಂದರೆ ಇಲ್ಲಿ ನ್ಯಾರೋಗೇಜ್ ಲೈನನ್ನು ಹಾಕಬೇಕೆಂದು ಹಿಂದಿನಲ್ಲಿ ಪ್ರಯತ್ನಪಟ್ಟಿತು: ನಮ್ಮ ಸಂಸ್ಥಾನದೊಳಗೆ ಇರುವ ಮುಖ್ಯ ಲೈನುಗಳೆಲ್ಲಾ ಮೀಟರ್‌ಗೇಜಿನಲ್ಲಿರುವುದರಿಂದ ಇದಕ್ಕೆ ನ್ಯಾರೋಗೇಜ್ ಲೈನನ್ನು ಹಾಕಿದರೆ ಮಧ್ಯೆ ಗೇಜ್ ಬದಲಾಯಿಸಬೇಕಾಗುವುದು. ಅಥವಾ, ಪಶ್ಚಿಮ ಸಮುದ್ರತೀರಕ್ಕೆ ಮಂಜರಾಬಾದ್ ಘಾಟಿಯ ಮಾರ್ಗವಾಗಿ ಮೀಟರ್ ಗೇಜ್ ಲೈನನ್ನು ಹಾಕುವುದಕ್ಕೆ ಒಂದುಕೋಟಿ ರೂಪಾಯಿಗಿಂತಲೂ ಹೆಚ್ಚು ಖರ್ಚಾಗುವುದು. ಯುದ್ಧದೆಸೆಯಿಂದ ವಿದ್ಯಮಾನಸ್ಥಿತಿಗಳು ಬದಲಾಯಿಸಿರುವುದರಿಂದ ಇಷ್ಟು ಖರ್ಚನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇದೂ ಅಲ್ಲದೆ, ನ್ಯಾರೋಗೇಜ್ ಲೈನನ್ನು ಹಾಕಿದರೆ ನಮ್ಮ ಸಂಸ್ಥಾನಕ್ಕೆ ಬೇಕಾದ ಅವಶ್ಯಕತೆಯನ್ನು ಒದಗಿಸಿಕೊಟ್ಟಂತೆ ಆಗುವುದಿಲ್ಲ. ಏಕೆಂದರೆ, ಮೈಸೂರು ಸೀಮೆಯ ಗಡಿಯಲ್ಲಿ ಗೇಜನ್ನು ಬದಲಾಯಿಸಬೇಕಾಗುವುದು ಮತ್ತು ಪಶ್ಚಿಮ ಸಮುದ್ರತೀರದಲ್ಲಿ ಅನುಪಯುಕ್ತವಾದ ರೇವು ಇದ್ದಂತಾಗುವುದು. ನಮ್ಮ ಸಂಸ್ಥಾನದ ವಿದ್ಯಮಾನಸ್ಥಿತಿಗಳನ್ನೂ ದ್ರವ್ಯೋತ್ಪತ್ತಿಯನ್ನೂ ಅನುಕೂಲಾಗ್ರವಾಗಿ ಪರಿಶೀಲನೆಮಾಡಿದ ಯಾರೊಬ್ಬರೇ ಆಗಲಿ, ಈ ವಿಷಯದಲ್ಲಿ ನಮ್ಮ ಸರ್ಕಾರದವರು ಮಾಡಿರುವ ಆಖೈರ್ ತೀರ್ಮಾನವು ನ್ಯಾಯವಾದುದೆಂದು ಒಪ್ಪಿಕೊಳ್ಳುವರೆಂದಾಗಿ ನಾವು ದೃಢವಾಗಿ ನಂಬಿರುತ್ತೇವೆ. ಇದಕ್ಕೆ ಬದಲಾಗಿ, ತೃಪ್ತಿಕರವಾದ ಒಂದು ರೇವು ಪಟ್ಟಣಕ್ಕೆ ಹೋಗುವ ಮತ್ತೊಂದು ಲೈನನ್ನು ಹಾಕುವುದಕ್ಕೆ ಅನಾಯಿಸಿಗಳು ಉಪಕ್ರಮಿಸಲ್ಪಟ್ಟಿರುತ್ತವೆ. ಪಶ್ಚಿಮ ತೀರದಲ್ಲಿ ರುವ ರೇವಿಗೆ ಲೈನನ್ನು ಹಾಕಬೇಕೆಂದು 30 ವರುಷಗಳಿಂದಲೂ ಪ್ರಯತ್ನಪಡುತ್ತಿದ್ದೇವೆ. ಈಗಲಾದರೂ ಇಂಥಾ ಲೈನನ್ನು ಹಾಕುವ ಸಂಭವವು ನಮ್ಮ ಸಂಸ್ಥಾನದ ದ್ರವ್ಯ ಸಂಪತ್ತಿಗೆ ಅನುಸಾರವಾಗಿರುತ್ತದೆ.

ಮ್ಯುನಿಸಿಪಾಲಿಟಿಗಳು.—ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಕಮಿಟಿಯನ್ನು ಏರ್ಪಡಿಸಿದೆಯೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಸಿರುವುದು ಷ್ಟೆ. ಈ ಕಮಿಟಿಯವರು ಬೆಂಗಳೂರಿಗೆ ಅತಿ ಜರೂರಾಗಿ ಆಗಬೇಕಾಗಿರುವ ಅಭಾವಗಳ ವಿಷಯದಲ್ಲಿ ಒಂದು ಪ್ರಿಲಿಮಿನರಿ ರಿಪೋರ್ಟನ್ನು ಕಳುಹಿಸಿದ್ದಾರೆ. ಸರ್ಕಾರದವರು, ಕಮಿಟಿಯ ಸಲಹೆಗಳನ್ನು ಸಾಮಾನ್ಯವಾಗಿ ಅಂಗೀಕರಿಸಿ ಈ ಅಭಾವಗಳಿಗಾಗಿ ತಗಲುವ ಖರ್ಚಿನಪೈಕಿ ಸ್ವಲ್ಪ ಭಾಗವನ್ನು ಸರ್ಕಾರದವರು ವಹಿಸುವರೆಂದು ಒಪ್ಪಿ, ಈಚೆಗೆ ಹುಕುಮನ್ನು ಸಾದರ್ಪಡಿಸಿರುತ್ತಾರೆ.—ಮೈಸೂರು ಸಿಟಿ ಅಭಿವೃದ್ಧಿಗಾಗಿ ಮೈಸೂರು ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಕೊಟ್ಟಿರುವ ಕೆಲವು ಸಲಹೆಗಳನ್ನೂ ಸಹ ಸರ್ಕಾರದವರು ಮಂಜೂರುಮಾಡಿರುತ್ತಾರೆ. ಈ ಸಲಹೆಗಳಲ್ಲಿ ದೇವರಾಜ ಮಾರ್ಕೆಟ್ ಸ್ಥಾನವನ್ನೂ, ಮಾರ್ಕೆಟ್ ಚೌಕವನ್ನು ರಮಣೀಯವಾಗಿ ಮಾಡುವುದೂ, ಹೊಸದಾಗಿ ಮ್ಯುನಿಸಿಪಲ್ ಆಫೀಸನ್ನು ಕಟ್ಟಿಸುವುದೂ, ಬಡವರು ಮನೆ ಕಟ್ಟಿಕೊಳ್ಳುವುದಕ್ಕೆ ಅನುಕೂಲಪಡಿಸುವುದೂ ಸಹ ಸೇರಿರುತ್ತವೆ. ಇನ್ನೂ ಮಾಡಬೇಕಾಗಿರುವ ಕಾಮಗಾರಿಗಳು ಹೆಚ್ಚಾಗಿರುವುದರಿಂದ ಟ್ರಸ್ಟ್ ಬೋರ್ಡಿಗೆ ಕೊಡಬೇಕಾದ ಗ್ರಾಂಟನ್ನು ಸಾಲೀಯಾನಾ 3½ ಲಕ್ಷ ರೂಪಾಯಿಗೆ ಹಂಗಾಮಿಯಾಗಿ ಹೆಚ್ಚಿಸಿರುತ್ತದೆ.

ಲೋಕಲ್ ಸೆಲ್ಫ್ ಗೌರ್ನಮೆಂಟಿನಲ್ಲಿ ಬದಲಾವಣೆಗಳು.—ಲೋಕಲ್ ಸೆಲ್ಫ್ ಗವರ್ನಮೆಂಟಿನ ವಿಷಯದಲ್ಲಿ ಜನಗಳಿಗೆ ಇನ್ನೂ ವಿಶೇಷಾಸಕ್ತಿಯನ್ನು ಹುಟ್ಟುವಂತೆ ಮಾಡುವುದಕ್ಕಾಗಿ ಈ ಕ್ರಮವನ್ನು ಮ್ಯುನಿಸಿಪಲ್ ಪ್ರದೇಶಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ಉತ್ತಮಸ್ಥಿತಿಗೆ ತರಬೇಕೆಂಬ ಸಂಗತಿಯು ಕೆಲವು ಕಾಲದಿಂದೀಚೆಗೆ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ವಿಷಯವನ್ನು ಎಲ್ಲಾ ಭಾಗಗಳಲ್ಲಿಯೂ ಪರಿಶೀಲನೆಮಾಡುವುದಕ್ಕೋಸ್ಕರ ಸರ್ಕಾರದವರು ಎರಡು ಕಮಿಟಿಗಳನ್ನು ನಿಯಮಿಸಿದರು. ಸ್ಥಳಿಕ ಸಂಘಗಳ ಏರ್ಪಾಡಿನ ಕ್ರಮವನ್ನೂ ಕರ್ತವ್ಯವನ್ನೂ ವಿಚಾರಮಾಡುವುದು ಮೊದಲನೆ ಕಮಿಟಿಯ ಉದ್ದೇಶವಾಗಿಯೂ ದ್ರವ್ಯ ಸಾಧನ ವೃದ್ಧಿ ಮಾರ್ಗವನ್ನು ಕುರಿತು ಪರ್ಯಾಲೋಚಿಸುವುದು ಎರಡನೆ ಕಮಿಟಿಯ ಕೆಲಸವಾಗಿಯೂ ಇತ್ತು. ಮೊದಲನೆಯ ಕಮಿಟಿಗೆ ಮಿ|| ಎಂ. ಕಾಂತರಾಜ ಅರಸ್, ಸಿ.ಎಸ್.ಐ., ಯವರು ಪ್ರೆಸಿಡೆಂಟರಾಗಿಯೂ, ಎರಡನೆಯ ಕಮಿಟಿಗೆ ರಾಜಮಂತ್ರಪ್ರವೀಣ ಮಿ|| ಸಿ. ಶ್ರೀನಿವಾಸಯ್ಯಂಗಾರ್‌ರವರು ಅಗ್ರಾಸನಾಧಿಪತಿಗಳಾಗಿಯೂ ಇದ್ದರು. ಈ ಎರಡು ಕಮಿಟಿ ರಿಪೋರ್ಟುಗಳನ್ನೂ ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಲಾಗಿದೆ. ಕಮಿಟಿಯವರ ಶಿಫಾರಸುಗಳು ಕಳೆದ ಜೂನ್ ತಿಂಗಳಲ್ಲಿ ಮೈಸೂರಿನಲ್ಲಿ ಕೆ. ಪಿ. ಪುಟ್ಟಣ್ಣಚೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಲೋಕಲ್ ಬೋರ್ಡ್ಸ್ ಮತ್ತು ಮ್ಯುನಿಸಿಪಲ್ ಕಾನ್ಫರೆನ್ಸಿನಲ್ಲಿ ಸಹ ಚರ್ಚಿಸಲ್ಪಟ್ಟವು. ಈ ಕಾನ್ಫರೆನ್ಸು ಏರ್ಪಟ್ಟುದುದಕ್ಕೂ ಅದರಲ್ಲಿ ಇಷ್ಟು ಚೆನ್ನಾಗಿ ನಡೆದುದಕ್ಕೂ, ಸರ್ಕಾರೀ ಅಧಿಕಾರಿಗಳಲ್ಲದ ದೊಡ್ಡ ಮನುಷ್ಯರ ಪ್ರಯತ್ನಗಳೇ ಮುಖ್ಯ ಕಾರಣಗಳಾಗಿರುವುದು ಶ್ಲಾಘನೀಯಾಂಶವಾಗಿದೆ.—ನಮ್ಮ ಸೀಮೆಯಲ್ಲಿ ಲೋಕಲ್ ಸೆಲ್ಫ್ ಗೌರ್ನಮೆಂಟ್ ತೃಪ್ತಿಕರವಾಗಿ ಅಭಿವೃದ್ಧಿಗೆ ಬಂದಿರುವುದಿಲ್ಲವೆಂತಲೂ, ಲೋಕಲ್ ಸಂಘಗಳವರು ಈ ದೇಶದ ಸ್ಥಳಿಕ ವಿಷಯದಲ್ಲಿ ತಾವು ನ್ಯಾಯವಾಗಿ ಮಾಡಬೇಕಾಗಿರುವ ಕರ್ತವ್ಯಗಳನ್ನು ಮಾಡುತ್ತಿಲ್ಲವೆಂತಲೂ ಸಾಮಾನ್ಯವಾಗಿ ಒಪ್ಪಿಕೊಳ್ಳತಕ್ಕದ್ದಾಗಿದೆ. ಸಂಘಗಳವರು ಶ್ರದ್ಧೆಯನ್ನು ವಹಿಸದೆ ಇರುವುದಕ್ಕೆ, ಮುಖ್ಯವಾಗಿ, ಜನಗಳ ಪರವಾಗಿ ಚುನಾಯಿಸಲ್ಪಟ್ಟವರ ಸಂಖ್ಯೆಯು ಕಮ್ಮಿಯಾಗಿರುವುದೂ, ತಮ್ಮ ತಮ್ಮ ಸ್ಥಳಗಳ ಹಣದ ವಿಷಯದಲ್ಲಿ ನ್ಯಾಯವಾದ ಅಧಿಕಾರಗಳು ಅವರಿಗಿಲ್ಲದಿರುವುದೂ ಕಾರಣವೆಂದು ಹೇಳಲಾಗಿದೆ. ಆದುದರಿಂದ, ಆಯಾ ಸ್ಥಳದ ಕಾರ್ಯಗಳ ವಿಚಾರದಲ್ಲಿ ಜನರ ಪ್ರತಿನಿಧಿಗಳನ್ನು ಇನ್ನೂ ಹೆಚ್ಚಾಗಿ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನಗಳನ್ನು ಮಾಡಬೇಕೆಂದು ಸರ್ಕಾರದವರು ನಿಷ್ಕರ್ಷೆ ಮಾಡಿರುತ್ತಾರೆ.—ಈ ವಿಷಯದಲ್ಲಿ ಸರ್ಕಾರದವರು ಅನುಸರಿಸಬೇಕೆಂದಿರುವ ಮುಖ್ಯ ತತ್ವಗಳನ್ನು ಇಲ್ಲಿ ಸೂಚಿಸಿ ಇದೆ.—ಮ್ಯುನಿಸಿಪಲ್ ಕೌನ್ಸಿಲುಗಳ ವಿಷಯದಲ್ಲಿ ಪ್ರಜಾ ಸಂಖ್ಯೆಗೆ ಅನುಗುಣವಾಗಿ "ಸಿಟಿ," "ಟವುನ್" ಮತ್ತು "ಮೈನರ್" ಮ್ಯುನಿಸಿಪಾಲಿಟಿಗಳೆಂಬದಾಗಿ 3 ವಿಧವಾದ ಮ್ಯುನಿಸಿಪಾಲಿಟಿಗಳನ್ನು ಏರ್ಪಡಿಸಬೇಕೆಂದು ಉದ್ದೇಶಿಸಿದೆ. ಚುನಾಯಿಸಲ್ಪಟ್ಟವರ ಸಂಖ್ಯೆಯು ಸಿಟಿಗಳಲ್ಲಿ ಮೂರರಲ್ಲಿ ಎರಡು ಭಾಗಕ್ಕೆ ಕಮ್ಮಿಯಿಲ್ಲದೆಯೂ, ಟವನುಗಳಲ್ಲಿ ಅರ್ಧ ಭಾಗಕ್ಕೆ ಕಮ್ಮಿಯಿಲ್ಲದೆಯೂ, ಮೈನರ್ ಮ್ಯುನಿಸಿಪಾಲಿಟಿಗಳಲ್ಲಿ ಮೂರರಲ್ಲಿ ಒಂದು ಭಾಗಕ್ಕೆ ಕಮ್ಮಿಯಿಲ್ಲದೆಯೂ, ಇರಲಾಗುವುದು. ಕೆಲವು ಗೊತ್ತಾದ ಮ್ಯುನಿಸಿಪಲ್ ಕೌನ್ಸಿಲುಗಳಲ್ಲಿ ಪ್ರೆಸಿಡೆಂಟರನ್ನೂ, ಕೆಲವು ಟೌನ್ ಮ್ಯುನಿಸಿಪಲ್ ಕೌನ್ಸಿಲ್ಲುಗಳಲ್ಲಿ ಈಗ ಇರುವುದಕ್ಕಿಂತಲೂ ಹೆಚ್ಚಾಗಿ ವೈಸ್ ಪ್ರೆಸಿಡೆಂಟರುಗಳನ್ನೂ ಚುನಾಯಿಸಿಕೊಳ್ಳಲಾಗುವುದು. ಸಿಬ್ಬಂದಿ ವಿಷಯದಲ್ಲಿಯೂ, ಕೆಲಸಗಳ ವಿಷಯದಲ್ಲಿಯೂ ಮತ್ತು ಬಡ್ಜೆಟ್ಟಿನ ವಿಷಯದಲ್ಲಿಯೂ ಕೌನ್ಸಿಲುಗಳಿಗೆ ಇನ್ನೂ ಹೆಚ್ಚು ಅಧಿಕಾರಗಳನ್ನು ಕೊಡಲಾಗುವುದು. ಬಡ್ಜೆಟ್ಟಿನ ಕೆಲವು ಗೊತ್ತಾದ ಅಂಶಗಳನ್ನು ಮಾತ್ರ ಸರ್ಕಾರದವರು ಪರಿಶೋಧಿಸುತ್ತಾರೆ. ಈ ಕೌನ್ಸಿಲುಗಳಲ್ಲಿ ಪ್ರಜಾಪರವಾದ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ಅವರುಗಳಿಗೆ ಸೇರಿದ ಪ್ರದೇಶಗಳಿಗೆ ಚಲಾಯಿಸತಕ್ಕ ಅಧಿಕಾರಗಳನ್ನು ಹೆಚ್ಚಿಸುವುದು—ಇವುಗಳೇ ಈ ಬದಲಾವಣೆಗಳ ಮುಖ್ಯ ಫಲಿತಾಂಶವಾಗುವುದು.—ಡಿಸ್ಟ್ರಿಕ್ಟ್ ಮತ್ತು ಗ್ರಾಮಾಂತರಗಳ ಬೋರ್ಡ್ ಏರ್ಪಾಟಿನಲ್ಲಿ, ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯು ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಕನಿಷ್ಠಪಕ್ಷ ಮೂರರಲ್ಲಿ ಎರಡು ಭಾಗದಂತೆಯೂ ತಾಲ್ಲೂಕು ಬೋರ್ಡು ಮತ್ತು ಯೂನಿಯನುಗಳಲ್ಲಿ ಕನಿಷ್ಠಪಕ್ಷ ಅರ್ಧ ಭಾಗದಂತೆಯೂ ಇರುವಂತೆ ಹೆಚ್ಚಿಸಲಾಗುವುದು. ತಾಲ್ಲೂಕು ಬೋರ್ಡಿನವರೂ, ಯೂನಿಯನ್ನಿನವರೂ, ಸಹ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಏಜೆಂಟರಾಗಿರುವುದು ಮಾತ್ರವೇ ಅಲ್ಲದೆ ನಿಜವಾಗಿ ಸ್ವತಂತ್ರಸಂಘವಾಗಿದ್ದು, ಸ್ವತಂತ್ರವಾದ ಹಣವನ್ನೂ, ಬಡ್ಜೆಟ್ಟನ್ನೂ ಪಡೆದವರಾಗಿ ತಮ್ಮ ಅಧಿಕಾರ ಸರಹದ್ದಿನೊಳಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ಇರುವ ಸಮಸ್ತ ಅಧಿಕಾರಗಳನ್ನೂ ಚಲಾಯಿಸುವುದಕ್ಕೆ ಶಕ್ತರಾಗಿರಬೇಕೆಂದು ಲೋಕಲ್ ಸೆಲ್ಫ್ ಗೌರ್ನಮೆಂಟ್ ಕಮಿಟಿಯವರು ಮಾಡಿರುವ ಶಿಫಾರಸುಗಳನ್ನು ಕೆಲವು ಬದಲಾವಣೆಗಳೊಡನೆ ಮಂಜೂರ್ಮಾಡಬೇಕೆಂದು ಎಣಿಸಿಯದೆ. ತಾಲ್ಲೂಕು ಬೋರ್ಡು ಮತ್ತು ಯೂನಿಯನುಗಳಿಗೆ ಸಿಬ್ಬಂದಿಯ ವಿಷಯದಲ್ಲಿಯೂ ಬಡ್ಜೆಟ್ಟಿನ ವಿಷಯದಲ್ಲಿಯೂ ಇತರಕ್ಕೆ ಅಧಿಕಾರಗಳನ್ನೂ ಸಹ ಹೆಚ್ಚಿಸಲಾಗುವುದು.—ಈ ಬೋರ್ಡುಗಳ ಕರ್ತವ್ಯಗಳನ್ನು ಹೆಚ್ಚಿಸುವ ವಿಷಯದಲ್ಲಿ ಕೆಲವು ಮುಖ್ಯವಾದ ಬದಲಾವಣೆಗಳನ್ನು ಮಾಡಬೇಕೆಂದು ಉದ್ದೇಶಿಸಿ ಇದೆ. ಎಂದರೆ,—ಪ್ರೈಮರಿ ವಿದ್ಯಾಭ್ಯಾಸ, ವೈದ್ಯ ಸಹಾಯ ಮತ್ತು ಪಶು ವೈದ್ಯಶಾಲೆ ಇವುಗಳ ಮೇಲಿನ ವಿಚಾರಣೆಯನ್ನು ಚುನಾಯಿಸಲ್ಪಟ್ಟ ಲೋಕಲ್ ಸಂಘಗಳಿಗೆ ಹಂಗಾಮಿಯಾಗಿ ವರ್ಗಾಯಿಸಬೇಕೆಂತಲೂ, ಮತ್ತು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡುಗಳ ಪಾಡಿಕೆಯಾದ ಕರ್ತವ್ಯಗಳಿಗೆ ಸೇರಿದವುಗಳಲ್ಲವಾದರೂ ಸ್ಥಳಿಕ ಆವಶ್ಯಕತೆಗಳಿಗೂ, ತೊಂದರೆಗಳ ನಿವಾರಣೆಗೂ, ಸಾಮಾನ್ಯವಾಗಿ ಡಿಸ್ಟ್ರಿಕ್ಟ್ಟಿಯ ತಾಲ್ಲೂಕಿನ ಆದಳಿತಗಳಿಗೂ ಸಂಬಂಧಪಟ್ಟು ಇರುವಂಥ ವಿಷಯಗಳಲ್ಲಿ, ತೀರ್ಮಾನಗಳನ್ನು ಮಾಡಿ ಅವುಗಳನ್ನು ಸರ್ಕಾರದವರ ಆಲೋಚನೆಯ ಬಗ್ಗೆ ಕಳುಹಿಸಿಕೊಡುವ ಅಧಿಕಾರವನ್ನು ಸದರಿ ಬೋರ್ಡುಗಳಿಗೆ ಕೊಡಬೇಕೆಂತಲೂ ಉದ್ದೇಶಿಸಿ ಇದೆ.—ಸ್ಥಳಿಕ ಸಂಘಗಳ ದ್ರವ್ಯಾನುಕೂಲತೆಯು ಸಾಮಾನ್ಯವಾಗಿ ಅತೃಪ್ತಿಕರವಾದ ಸ್ಥಿತಿಯಲ್ಲಿರುವುದೇ ಅವುಗಳ ಅಭಿವೃದ್ಧಿಗೆ ಬಾಧಕವಾಗಿರುವ ಮುಖ್ಯವಾದ ಪ್ರತಿಬಂಧಕವಾಗಿದೆ. ಈ ವಿಷಯವನ್ನು ಪರಿಶೀಲನೆ ಮಾಡಿದ ಲೋಕಲ್ ಫೈನಾನ್ಸ್ ಕಮಿಟಿಯವರೂ ಲೋಕಲ್ ಫಂಡ್ಸ್ ಜನರಲ್ ಮತ್ತು ವಿಲೇಜ್ ಸ್ಕೂಲ್ ಫಂಡ್ ಎಂಬದಾಗಿ ಬೇರೆಬೇರೆ ಇರತಕ್ಕ ಎರಡು ಫಂಡುಗಳನ್ನು ವಜಾ ಮಾಡಿ ಅವುಗಳನ್ನು ಲೋಕಲ್ ಬೋರ್ಡಿಗೆ ಸೇರಿಸಬೇಕೆಂತಲೂ, ಈಗ ಸ್ಟೇಟ್ ಫಂಡಿಗೆ ಜಮಾ ಕಟ್ಟುತ್ತಿರುವ ಮೊಹತರ್ಫಾ ತೆರಿಗೆಯನ್ನು ಸಹ ಈ ಸಂಘಗಳಿಗೆ ಜಮಾ ಕಟ್ಟಬೇಕೆಂತಲೂ ಶಿಫಾರಸುಮಾಡಿರುತ್ತಾರೆ. ಈ ವುಟ್ಟುವಳಿಗಳನ್ನು ಈ ಸಂಘಗಳಿಗೆ ಕೊಡುವುದರ ಜೊತೆಗೆ ಸರ್ಕಾರದಿಂದ ಭಾರಿಯಾಗಿ ಗ್ರಾಂಟ್-ಇನ್-ಏಡುಗಳನ್ನು ಕೊಡಬೇಕೆಂದೂ ಈ ಕಮಿಟಿಯವರು ಅಭಿಪ್ರಾಯಪಟ್ಟಿರುತ್ತಾರೆ. ಈ ಶಿಫಾರಸುಗಳ ಮೇರೆಗೆ ನಡೆಯಬೇಕಾದರೆ ಸರ್ಕಾರದ ವುಟ್ಟುವಳಿಯಿಂದ ಭಾರಿಯಾಗಿ ಗ್ರಾಂಟುಗಳನ್ನು ಕೊಡಬೇಕಾಗಿ ಬರುತ್ತದೆ. ಆದುದರಿಂದ ಸರ್ಕಾರದವರು ಶಿಫಾರಸುಗಳನ್ನು ಅಂಗೀಕರಿಸುವುದಕ್ಕೆ ಮುಂಚೆ ಇನ್ನೂ ಹೆಚ್ಚಾಗಿ ಪರ್ಯಾಲೋಚನೆ ಮಾಡಬೇಕಾಗಿರುತ್ತದೆ.

ಸಿವಿಲ್ ಸರ್ವಿಸ್.—ಹೊಸದಾಗಿ ಕ್ರಮಪಡಿಸಿದ ಸಿವಿಲ್ ಸರ್ವಿಸ್ ಏರ್ಪಾಟಿನ ಮೇರೆಗೆ ನಡೆಯುವ ಎರಡನೆಯ ಪರೀಕ್ಷೆಯು ಮುಂದಿನ ನವೆಂಬರ್ ತಿಂಗಳಲ್ಲಿ ನಡೆಯುವುದು. ಈ ಪರೀಕ್ಷೆಗೆ 45 ಜನರು ಅಪ್ಲಿಕೇಷನ್ ಕೊಟ್ಟಿದ್ದರು. ಆ ಪೈಕಿ 27 ಜನರನ್ನು ಪರೀಕ್ಷೆಗೆ ಸೇರಿಸಿಕೊಂಡಿದೆ. ಪ್ರೊಬೇಷನರಿ ಅಸಿಸ್ಟೆಂಟ್ ಕಮೀಷನರುಗಳಿಗೆ ಕೊಡುವ ಶಿಕ್ಷಣದಲ್ಲಿ ವ್ಯಾವಹಾರಿಕ ಜ್ಞಾನಕ್ಕೆ ಹೆಚ್ಚು ಅವಕಾಶವುಂಟಾಗುವಂತೆ ಮಾಡಲು ಈಚೆಗೆ ಹುಕುಂ ಸಾದರ್ಪಡಿಯದೆ.

ಗ್ರಾಮಾಭಿವೃದ್ಧಿಯ ಏರ್ಪಾಡು.—ಮುಂದೆ ಸಫಲವಾಗಿ ಪರಿಣಮಿಸುವ ವಿಚಾರದಲ್ಲಿ ವಿಶೇಷ ಭರವಸೆಯನ್ನು ಕೊಡತಕ್ಕದ್ದು ಗ್ರಾಮಾಭಿವೃದ್ಧಿಯ ಏರ್ಪಾಡಾಗಿರುತ್ತದೆ. ಈ ಏರ್ಪಾಟನ್ನು ಜಾರಿಗೆ ತಂದು ಸುಮಾರು ಎರಡು ವರ್ಷಗಳಾದವು. ಇಷ್ಟು ಕಾಲದಲ್ಲಿ 13,360 ಗ್ರಾಮಗಳಿಂದ ಅಂದರೆ ಸಂಸ್ಥಾನದಲ್ಲಿನ ಗ್ರಾಮಗಳ ಸಂಖ್ಯೆಯಲ್ಲಿ ಶೇಕಡ 79ರಂತೆ 7,745 ವಿಲೇಜ್ ಕಮಿಟಿಗಳು ಏರ್ಪಾಡಾಗಿರುತ್ತವೆ. 2,966 ಗ್ರಾಮಗಳಲ್ಲಿ ಕಮ್ಮಿಟಿಗಳು ಗ್ರಾಮಗಳ ಒಳಗೂ ಹೊರಗೂ ಆಗಬೇಕಾಗಿರುವ ಆರೋಗ್ಯಾಭಿವೃದ್ಧಿಗೆ ಸಂಬಂಧಪಟ್ಟ ಕೆಲಸಗಳಿಗೆ ಗಮನ ಕೊಡಲು ಕ್ರಮವಾಗಿ ವಾರವಾರದಲ್ಲಿಯೂ ಸಭೆ ಸೇರುತ್ತಾ ಇವೆ. 2,659 ಗ್ರಾಮಗಳಲ್ಲಿ ಜನರು ವರ್ತಮಾನ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಉಪಯೋಗಕರವಾದ ಸಂಗತಿಗಳನ್ನು ಪ್ರಚಾರ ಮಾಡತಕ್ಕ ಬಗ್ಗೆ 2,139 ವಿಲೇಜ್ ಕಮ್ಮಿಟಿಗಳಲ್ಲಿ ವಾರಗಟ್ಟಲೆ ಮೀಟಿಂಗುಗಳು ನಡೆದಿರುತ್ತವೆ. ಈ ವರ್ಷ ಕೈಕೊಂಡಿರುವ ಲೋಕೋಪಕಾರವಾದ ನಾನಾ ಕಾರ್ಯಗಳು ಅಂದಾಜಿನ ಮೇರೆಗೆ ಸುಮಾರು 2½ ಲಕ್ಷ ರೂಪಾಯಿ ಬೆಲೆ ಬಾಳತಕ್ಕದ್ದಾಗಿರುತ್ತವೆ. ಈ ಪೈಕಿ, ಗ್ರಾಮಸ್ಥರು ಕಂಟ್ರಿಬ್ಯೂಷನ್ ಮೂಲಕ ಅಥವಾ ಕೆಲಸಮಾಡುವುದರ ಮೂಲಕ ಸಹಾಯ ಮಾಡಿರುವುದು 1½ ಲಕ್ಷ ರೂಪಾಯಿ ಆಗುತ್ತದೆ. ಬಾಕಿ ಮೊಬಲಗನ್ನು ಸರ್ಕಾರದಿಂದ ಕೊಟ್ಟಿರುತ್ತದೆ. 1914-15 ರಲ್ಲಿ ಇದಕ್ಕಾಗಿ ಕಮಿಟಿಗಳವರು ಖರ್ಚು ಮಾಡಿರುವುದು 75,000 ಆಗುತ್ತದೆ.—ಈ ಏರ್ಪಾಟಿನಿಂದ ಎಷ್ಟೋ ಪ್ರಯೋಜನ ಉಂಟೆಂದು ಗ್ರಾಮಸ್ಥರು ಸಂಪೂರ್ಣವಾಗಿ ತಿಳಿದುಕೊಂಡು ಸರ್ಕಾರದ ಅಧಿಕಾರಿಗಳೊಡನೆ ಸೇರಿ ಮನಃಪೂರ್ವಕವಾಗಿ ಕೆಲಸಮಾಡುತ್ತಿರುವುದು ಆನಂದಕರವಾಗಿರುತ್ತದೆ.—ಈ ಏರ್ಪಾಡಿನ ಅಜಮಾಯಿಷಿ ಅವಧಿ ಪೂರಾಯಿಸಿತೆಂದು ಹೇಳಬಹುದಾಗಿದೆ. ಇದನ್ನು ಮುಂದೆ ಯಾವ ರೀತಿಯಲ್ಲಿ ಕೈಗೊಂಡು ಅಭಿವೃದ್ಧಿಗೆ ತರಬಹುದೆಂಬ ಅಂಶವನ್ನು ಆಲೋಚಿಸತಕ್ಕದ್ದು ಅವಶ್ಯಕವಾಗಿದೆ. ಮುಂದಿನ ವರ್ಷದಲ್ಲಿ ಸಂಸ್ಥಾನದಲ್ಲಿನ ಪ್ರತಿಯೊಂದು ಗ್ರಾಮವನ್ನೂ ಮಜರೆಯನ್ನೂ ಈ ಏರ್ಪಾಡಿನ ಕಾರ್ಯಕ್ರಮಕ್ಕೆ ಒಳಪಡಿಸುವುದು ಅವಶ್ಯಕವಾಗಿದೆ. ಇದುವರೆಗೂ ಕಮಿಟಿಗಳು ಇತರ ನಿರ್ಬಂಧವಿಲ್ಲದೆ ತಮ್ಮ ಇಷ್ಟಕ್ಕೆ ತಾವಾಗಿಯೇ ಕೆಲಸಮಾಡುತ್ತಲಿವೆ. ಆದರೆ ಈ ಏರ್ಪಾಡಿನ ನಿಯಮಗಳಿಗೆ ಕಾನೂನಿನ ಆಧಾರವನ್ನು ಕಲ್ಪಿಸಬಹುದೆಂದು ಗ್ರಾಮಸ್ಥರು ಪದೇಪದೇ ಸರ್ಕಾರೀ ಆಫೀಸರುಗಳಿಗೆ ವಿಜ್ಞಾಪಿಸಿರುತ್ತಾರೆ. ಆದರೆ ಸದ್ಯಕ್ಕೆ ಈ ಏರ್ಪಾಡನ್ನು ಸರ್ಕಾರದವರು ಪ್ರತಿಗ್ರಾಮಕ್ಕೂ ನಿರ್ಬಂಧಪಡಿಸಿ ಜಾರಿಗೆ ತರುವುದು ಯುಕ್ತವಾಗಿರಲಾರದು. ಮತ್ತು ನಿರ್ಬಂಧಪಡಿಸತಕ್ಕದ್ದು ಉತ್ತಮವೇ ಅಲ್ಲವೇ ಎಂಬ ಅಂಶವನ್ನು ತಾವೇ ನಿರ್ಧಾರ ಮಾಡಿಕೊಳ್ಳಲು ಗ್ರಾಮಸ್ಥರಿಗೇ ಬಿಡತಕ್ಕದ್ದು ಇನ್ನೊಂದು ಪರ್ಯಾಯವಾಗಿದೆ. ಅಂಥಾ ಪ್ರವರ್ತನೆಯ ವಿಷಯದಲ್ಲಿ ಯಾವ ಗ್ರಾಮದ ಜನಗಳ ಪೈಕಿಯಾಗಲೀ ಮೂರರಲ್ಲಿ ಎರಡು ಭಾಗಕ್ಕೆ ಕಮ್ಮಿ ಇಲ್ಲದಷ್ಟು ಜನಗಳು ಸಮ್ಮತಿಸಿದರೆ, ಈ ಏರ್ಪಾಡನ್ನು ನಿರ್ಬಂಧದಿಂದ ನಡೆಸಬಹುದಾಗಿರುತ್ತದೆ. ಹಾಗೆ ಮಾಡಿದಲ್ಲಿ ಪ್ರತಿಯೊಬ್ಬನೂ ಸ್ವತಃ ಕೆಲಸ ಮಾಡುವುದಕ್ಕೆ ಆಗಲಿ ಅಥವ ಅದಕ್ಕೆ ಬದಲಾಗಿ ಒಂದು ಸೆಸ್ಸನ್ನು ಕೊಡುವುದಕ್ಕೆ ಆಗಲೀ ಅವನ ಇಷ್ಟಕ್ಕೆ ಬಿಡಬೇಕಾಗಿರುತ್ತದೆ. ಎಷ್ಟು ಸೆಸ್ಸನ್ನು ವಸೂಲ್ಮಾಡಬೇಕೆಂಬ ಭಾಗವನ್ನೂ ವಿನಾಯಿತಿಯನ್ನು ಯಾವಯಾವ ಸಂದರ್ಭಗಳಲ್ಲಿ ತೋರಿಸಬಹುದೆಂಬ ಭಾಗವನ್ನೂ ಕಮಿಟಿಗಳವರೇ ವ್ಯವಸ್ಥೆ ಮಾಡಿಕೊಳ್ಳಬೇಕು. ಪ್ರತಿ ಗ್ರಾಮದಲ್ಲಿಯೂ ವಸೂಲ್ ಮಾಡಲ್ಪಟ್ಟ ಹಣವು ಕಮಿಟಿಯವರಲ್ಲಿಯೇ ನಿಂತು ಅವರಿಂದ ಖರ್ಚು ಮಾಡಲ್ಪಡತಕ್ಕದ್ದಾಗಿದೆ. ಜನರು ಸಾಕಾದಷ್ಟು ಅವಲಂಬನವನ್ನು ಕೊಟ್ಟಲ್ಲಿ, ಈ ಅಂಶಗಳನ್ನು ಕುರಿತು ಸರ್ಕಾರದಿಂದ ಕಾನೂನನ್ನು ಏರ್ಪಡಿಸಲು ಯಾವ ಅಭ್ಯಂತರವೂ ಇರುವುದಿಲ್ಲ.

ಗ್ರಾಮದ ಇತರ ಏರ್ಪಾಡುಗಳು.—ಇತರ ಏರ್ಪಾಟುಗಳ ಮೇರೆಗೆ ಕೆಲಸಗಳು ಈಚೆಗೆ ಪ್ರಾರಂಭವಾಗಿವೆ. 143 ಗ್ರಾಮ ಕೋರ್ಟುಗಳು ಸ್ಥಾಪಿತವಾಗಿವೆ. ಅವುಗಳ ಪೈಕಿ ಅನೇಕ ಕೋರ್ಟುಗಳು ದಾವೆಗಳನ್ನು ಹಿಡಿದು ವಿಚಾರ ಮಾಡಲು ಪ್ರಾರಂಭಿಸಿರುತ್ತವೆ. 65 ಕೆರೆ ಪಂಚಾಯಿತಿಗಳನ್ನು ಮಂಜೂರ್ಮಾಡಲಾಗಿದೆ. ವಿಲೇಜ್ ಫಾರೆಸ್ಟುಗಳನ್ನು ಏರ್ಪಡಿಸುವುದಕ್ಕೆ ಸಲಹೆಗಳು ಬಂದು ಪರ್ಯಾಲೋಚನೆಯಲ್ಲಿರುತ್ತವೆ. ಗ್ರಾಮಗಳಲ್ಲಿ ಭಾವಿಗಳನ್ನು ವಿಶೇಷವಾಗಿ ತೆಗೆಸುವುದಕ್ಕಾಗಿ ಗ್ರಾಮಾಭಿವೃದ್ಧಿಯ ಏರ್ಪಾಡಿನ ಗ್ರಾಂಟಿನಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡುಗಳ ಬಡ್ಜೆಟ್ಟಿನಲ್ಲಿಯೂ ಕೊಟ್ಟಿರುವ ಮೊಬಲಗಿನ ಜತೆಗೆ ಸಾಲೀಯಾನಾ ಒಂದುಲಕ್ಷ ರೂಪಾಯಿಯನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ಮಲೆನಾಡಿನ ಅಭಿವೃದ್ಧಿಯ ಏರ್ಪಾಡು.—ಶಿವಮೊಗ್ಗ, ಕಡೂರು, ಹಾಸನ ಡಿಸ್ಟ್ರಿಕ್ಟುಗಳ ಮಲೆನಾಡು ಪ್ರದೇಶಗಳಲ್ಲಿ ಆರೋಗ್ಯಾಭಿವೃದ್ಧಿಗೂ ಅರ್ಥೋತ್ಪತ್ತಿಗೂ 1914ನೆಯ ಫೆಬ್ರುವರಿ ಮಾಹೆಯಲ್ಲಿ ಮಾಡಿದ ಏರ್ಪಾಡಿನಂತೆ ಈ ವರ್ಷದಲ್ಲಿ ಕೆಲಸಗಳು ನಡೆಯಿಸಲ್ಪಟ್ಟವು. ಕಮಿಟಿಯವರು ಕೊಟ್ಟ ಸಲಹೆಗಳನ್ನು ಅನುಸರಿಸಿ ನಡಿಸಿದ ಕಾರ್ಯಗಳು ಇದರಡಿ ಕಂಡ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿವೆ. ಹಾಲಿ ಅನಾರೋಗ್ಯ ಗ್ರಾಮಗಳಲ್ಲಿ ವಾಸವಾಗಿರತಕ್ಕವರಿಗೆ ಬೇರೆ ಕಡೆಯಲ್ಲಿ ಗ್ರಾಮಗಳನ್ನು ಕಲ್ಪಿಸಿಕೊಡುವುದು, ಕ್ವಿನೈನನ್ನು ಉಚಿತವಾಗಿ ಕೊಡುವುದು, ಸೂಲಗಿತ್ತಿಯರ ಸಂಖ್ಯೆಯನ್ನು ಹೆಚ್ಚಿಸುವುದು, ಚುನಾಯಿಸಲ್ಪಟ್ಟ ಕೆಲವು ಮಧ್ಯ ರಾಷ್ಟ್ರಗಳಲ್ಲಿ ಹೆಂಗಸರ ಆಸ್ಪತ್ರೆಗಳನ್ನಿಡುವುದು, ಇವೇ ಮೊದಲಾದ ವೈದ್ಯ ಸೌಕರ್ಯಗಳನ್ನು ಹೆಚ್ಚಿಸುವುದು; ಗ್ರಾಮಗಳ ಒಳಗೂ ಹೊರಗೂ ಬೆಳೆದುಕೊಂಡಿರುವ ಗಿಡಗೆಂಟೆಗಳನ್ನು ತೆರವುಮಾಡುವುದು, ಪಾನಾರ್ಹವಾದ ನೀರನ್ನು ಒದಗಿಸುವುದು, ದೇವಿಹಾಕುವುದನ್ನು ಜನಗಳಲ್ಲಿ ರೂಢಿಗೆ ತರುವುದು, ಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ವಿಸ್ತರಿಸುವುದು. ಇವುಗಳಲ್ಲದೆ ಸಂಚಾರಮಾರ್ಗಗಳನ್ನು ಹೆಚ್ಚಿಸುವುದೂ, ರೈತರಿಗೆ ಸಾಲದ ಬಾಧೆಯನ್ನು ನಿವಾರಣೆ ಮಾಡುವುದೂ, ಗ್ರಾಮಗಳಲ್ಲಿ ಚಿರಂಡಿಗಳ ಏರ್ಪಾಡನ್ನು ಉತ್ತಮಸ್ಥಿತಿಗೆ ತರುವುದೂ, ಫಾರೆಸ್ಟ್ ಉತ್ಪತ್ತಿಗೆ ಸಂಬಂಧಪಟ್ಟ ಚಿಲ್ಲರೆ ಕೈಗಾರಿಕೆಗಳು ಮೊದಲಾದ ಹೆಚ್ಚು ಉದ್ಯೋಗಗಳನ್ನು ಜನಗಳಿಗೆ ಕಲ್ಪಿಸಿಕೊಡುವುದೂ.—ಈ ವಿಚಾರಗಳಲ್ಲಿ ತಕ್ಕ ಏರ್ಪಾಡುಗಳನ್ನು ಸದರಿ ಕಮಿಟಿಗಳವರು ವಿಮರ್ಶೆಮಾಡಿ ಸೂಚಿಸಬೇಕಾಗಿದೆ. ಮಲೆನಾಡಿನಲ್ಲಿ ಕೂಲಿಯವರನ್ನು ಒದಗಿಸತಕ್ಕದ್ದು ಈ ಕಮಿಟಿಗಳವರು ಪರ್ಯಾಲೋಚಿಸುತ್ತಿರುವ ಅಂಶಗಳಲ್ಲಿ ಬಹು ಮುಖ್ಯವಾದುದಾಗಿದೆ. ಅಭಿವೃದ್ಧಿಯ ಏರ್ಪಾಡಿನಂತೆ ಕಾರ್ಯಗಳನ್ನು ನಡಿಸುವುದಕ್ಕೆ ಬೇಕಾದ ಸರಿಯಾದ ಸಿಬ್ಬಂದಿಯನ್ನು ಒದಗಿಸಿಕೊಳ್ಳುವುದಕ್ಕೆ ಪ್ರಾರಂಭದಲ್ಲಿ ಕಷ್ಟವೂ ಸಾವಕಾಶವೂ ಆದುದರಿಂದ, ಸದರಿ ಕಮಿಟಿಗಳವರ ಕಾರ್ಯಗಳಿಗೆ ಬಹು ಪ್ರತಿಬಂಧಕವುಂಟಾಯಿತು.

ತಾರತಮ್ಯ ನಿರೂಪಣೆ.—ಪುರೋಭಿವೃದ್ಧಿಯ ವಿಷಯದಲ್ಲಿಯೂ ಪರಿಷ್ಕರಣ ವಿಷಯದಲ್ಲಿಯೂ, ಈಗತಾನೇ ವಿವರಿಸಿರುವ ಅನೇಕ ಏರ್ಪಾಡುಗಳನ್ನು ಕೇಳಿ, ನಮ್ಮಲ್ಲಿ ಎಲ್ಲವೂ ಸರಿಯಾಗಿರುವುದೆಂತಲೂ ನಾವು ಯಥೋಚಿತವಾದ ಪರಿಮಿತಿಗೆ ಮೀರಿ ಪ್ರಯತ್ನಗಳನ್ನು ಮಾಡುತ್ತಿದ್ದೇವೆಂತಲೂ, ಮತ್ತೇನೂ ಪ್ರಯತ್ನ ಮಾಡಬೇಕಾದುದಿಲ್ಲವೆಂತಲೂ ಈ ದೇಶದಲ್ಲಿ ಪ್ರಾಯಶಃ ಅನೇಕರಿಗೆ ಭಾವನೆಯುಂಟಾಗಬಹುದು. ಆದರೆ ನಿಜಸ್ಥಿತಿ ಹಾಗಿಲ್ಲ; ಚೆನ್ನಾಗಿ ಪರಿಶೀಲಿಸಿ ನೋಡಿದರೆ, ನಮ್ಮ ಸ್ಥಿತಿಯು ಅತೃಪ್ತಿಕರವಾಗಿರುವುದೆಂದು ತಿಳಿಯ ಬರುವುದು.

ಉತ್ಪತ್ತಿ, ವ್ಯಾಪಾರ ವಿಷಯಗಳಲ್ಲಿ ತಾರತಮ್ಯ.—ಈ ದೇಶದ ಉತ್ಪತ್ತಿಯನ್ನೂ ಸಂಪತ್ತನ್ನೂ, ವೃದ್ಧಿಗೊಳಿಸಲು ಈ ದೇಶದಲ್ಲಿ ವಿಶೇಷವಾಗಿ ದೊರೆಯುವ ಸಹಜ ಸಾಧನಗಳನ್ನೂ, ಜನರಲ್ಲಿರುವ ಅಪಾರವಾದ ಬುದ್ಧಿ ಶಕ್ತಿಯನ್ನೂ ಸರಿಯಾಗಿ ಕೃಷಿ ಮಾಡಿ ಉಪಯೋಗಿಸಿಕೊಳ್ಳಲಾರದೆ ಹಾಗೆಯೇ ಬಿಟ್ಟಿರಲಾಗಿದೆ.—ಈ ದೇಶದಲ್ಲಿ ಕೈಗಾರರಿಗೆ ಕೆಲಸಗಳು ಬಹಳ ಕಮ್ಮಿ, ವಿದ್ಯಾಭ್ಯಾಸವು ಸಾಲದು, ಸಂಪಾದನೆ ಸ್ವಲ್ಪ, ಅಹನ್ಯಹನಿ ಜೀವನ, ಪರಸ್ಪರ ಸಹಾಯಕ ಬುದ್ಧಿ ಕಡಿಮೆ, ಸಾಮಾನ್ಯವಾಗಿ ಉತ್ತಮಸ್ಥಿತಿಗೆ ಬರಬೇಕೆಂಬ ಆಶೆಯೂ ತಕ್ಕ ಪ್ರಯತ್ನವೂ ಇಲ್ಲ.—ಈ ಕಾರಣಗಳಿಂದ ಈ ದೇಶವು ಹೀನಸ್ಥಿತಿಯಲ್ಲಿರುತ್ತದೆ. ಸುಖಸಂಪತ್ತಿಗೂ ಜ್ಞಾನಾಭಿವೃದ್ಧಿಗೂ ಆಧಾರವಾದ ಎಲ್ಲಾ ವಿಷಯಗಳಲ್ಲಿಯೂ ಉನ್ನತಸ್ಥಿತಿಯಲ್ಲಿರುವ ಇತರ ದೇಶೀಯರಿಗೂ ನಮಗೂ ವಿಶೇಷ ತಾರತಮ್ಯವಿರುತ್ತದೆಂಬ ವಿಷಯದಲ್ಲಿ ಏನೇನೂ ಸಂಶಯವಿಲ್ಲ.—ಇದುವರೆಗಿನ ಅನುಭವದಿಂದ ತಿಳಿಯಬರುವಂತೆ, ಈಗಿನ ಅಲ್ಪ ಜೀವನ ವೃತ್ತಿಯಿಂದ ಅಪಾಯವುಂಟು. ಇದರಿಂದ ದುರ್ಭಿಕ್ಷ ಕಾಲದಲ್ಲಿ ಯಾವ ಆಧಾರವೂ ಇಲ್ಲದೆ ಹೋಗುವುದು. ಮಳೆಗಳು ಕಾಲಕಾಲಕ್ಕೆ ಸರಿಯಾಗಿ ನಡೆಯುವುದು ನಿಶ್ಚಯವಿಲ್ಲವಾದುದರಿಂದ, ಕಳೆದ ಆಗಸ್ಟ್ ತಿಂಗಳಲ್ಲಿ ಸಂಭವಿಸಿದಂತೆ ಋತುಧರ್ಮವು ಸ್ವಲ್ಪ ವ್ಯತ್ಯಸ್ತವಾಗಿ ಮಳೆಗೆ ಕೊರತೆಯುಂಟಾದಾಗ ಜನರ ಮನಸ್ಸು ಕ್ಷೋಭೆಯಿಂದ ತಹತಹಪಡುವ ಸ್ಥಿತಿಯುಂಟಾಗುವುದು. ಮಳೆಯು ಸ್ವಲ್ಪ ಕಡಿಮೆಯಾದರೇನೇ ಎಷ್ಟೋ ಕಷ್ಟವಾಗುತ್ತದೆ. ಸುತರಾಂ ಬೆಳೆದೆ ಹೋದರೆ ಬಹು ಪ್ರಜಾಹಾನಿಯೇ ಆಗಬಹುದು. ಆದುದರಿಂದ ಋತುಧರ್ಮ ವೈಷಮ್ಯದಿಂದುಂಟಾಗುವ ವಿಪತ್ತುಗಳಿಗೆ ಸುಲಭವಾಗಿ ಗುರಿಯಾಗುವ ಬಡಜನಗಳಿಗೆ ಕಷ್ಟಪಟ್ಟು ಕೆಲಸ ಮಾಡುವ ವಿಷಯದಲ್ಲಿಯೂ, ಮಿತವ್ಯಯದ ವಿಷಯದಲ್ಲಿಯೂ ತಕ್ಕ ಶಿಕ್ಷಣವನ್ನು ಕೊಡಬೇಕಾಗಿದೆ. ಕೆಲಸಗಾರರು 3-4 ವರ್ಷಗಳವರೆಗೆ ಬಿಡದೆ ಕೆಲಸ ಮಾಡಿದಲ್ಲಿ, ತಮಗೂ ತಮ್ಮ ಕುಟುಂಬಗಳಿಗೂ ಬೇಕಾದಷ್ಟು ಹಣವನ್ನಾಗಲೀ ಧಾನ್ಯವನ್ನಾಗಲೀ ಕೂಡಿಸಿಟ್ಟುಕೊಂಡು ಒಂದೆರಡು ವರ್ಷಗಳಕಾಲ ಮಳೆ ಬೆಳೆಗಳು ಆಗದಿದ್ದರೂ, ಅಥವಾ ದುರ್ಭಿಕ್ಷವುಂಟಾದರೂ, ಜಯಿಸಿಕೊಂಡು ಕಡೆಹಾಯಬಲ್ಲರು. ಈ ದೇಶದಲ್ಲಿ ಈಗ ಕೂಲಿಯವರಿಗೆ ಕೂಲಿಯ ದರ ಹೆಚ್ಚಿರುವುದಲ್ಲದೆ ಗಿರಾಕಿಯೂ ತುಂಬಾ ಇದೆ. ಒಂದು ವರ್ಷದ ದುರ್ಭಿಕ್ಷವನ್ನು ತಡೆಯುವುದಕ್ಕೆ ಸಾಧಕವಾದ ಇಂಥಾ ಆಧಾರವನ್ನು, ನಿಜವಾಗಿ ಕಷ್ಟಪಟ್ಟು ಕೆಲಸಮಾಡುವ ಯಾವ ಕೂಲಿಯವನಾಗಲೀ ಉಪೇಕ್ಷಿಸಿ ಬಿಟ್ಟುಬಿಡುವುದಕ್ಕೆ ಯಾವ ನೆವವೂ ಇರಲಾರದು. ಜನಗಳು ಹೆಚ್ಚುಕಾಲ ಕೆಲಸಮಾಡುವ ಅಭ್ಯಾಸವನ್ನು ಪಡೆದುಕೊಳ್ಳಬೇಕಲ್ಲದೆ, ಕೈಗಾರಿಕೆ, ಸಾಮಾನು ತಯಾರಿ, ವ್ಯಾಪಾರ, ಇವುಗಳನ್ನು ಇನ್ನೂ ಹೆಚ್ಚಾಗಿ ಕೈಗೊಳ್ಳುತ್ತಾ ಬರಬೇಕು. ಮೇಲೆ ಹೇಳಿದ ರೀತಿಗಳಲ್ಲಿ ನಡೆದುಕೊಂಡರೆ, ಯೂರೋಪ್ ದೇಶಗಳಲ್ಲಿ ಇಂಥ ಎಚ್ಚರಿಕೆಯ ಕೆಲಸಗಳಿಂದ ಕ್ಷಾಮನಿವಾರಣೆ ಅಪೂರ್ವವಾಗಿರುವಂತೆಯೇ ನಮ್ಮ ದೇಶದಲ್ಲಿಯೂ ಅಪೂರ್ವವಾಗುವುದು.

ಉಪಸಂಹಾರ.—ಉನ್ನತದೆಶೆಯಲ್ಲಿರುವ ದೇಶೀಯರು ಸಫೋರ್ತ್ಯಪ್ರಯತ್ನವೆಂದು ಭಾವಿಸಿರುವ ಉದ್ದೇಶಗಳನ್ನು ತಮಗೆ ತಿಳಿಯಪಡಿಸಲಾಗಿದೆ. ಏಕೆಂದರೆ ಅಭಿವೃದ್ಧಿ ವಿಷಯದಲ್ಲಿ ಪುರೋಗಾಮಿಗಳಾಗಿರುವ ಜನರು ಅನುಸರಿಸುವ ಮಾರ್ಗಗಳನ್ನೇ ನಾವೂ ಅನುಸರಿಸುವದು ಕ್ಷೇಮಕರವು. ಹವಾ ಮೊದಲಾದ ಕಾರಣಗಳಿಂದ ಕಾರ್ಯದಕ್ಷತೆಯಲ್ಲಿಯೂ ಸಂಪತ್ತಿನಲ್ಲಿಯೂ ನಾವುಗಳು ಆ ದೇಶೀಯರಿಗೆ ಎಂದಿಗೂ ಸರಿಸಮಾನರಾಗಲು ಸಾಧ್ಯವಾಗದಿರಬಹುದು. ಅದಮಾತ್ರಕ್ಕೆ ನಮ್ಮ ಕೈಲಾದುದನ್ನು ಸಾಧಿಸಲು ಪ್ರಯತ್ನ ಮಾಡದೆ ಬಿಡುವದು ಸರಿಯಲ್ಲ. ಸಕಲ ವಿಷಯಗಳಲ್ಲೂ ನಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಂಡು ಶೀಘ್ರದಲ್ಲಿಯೇ ನಮ್ಮ ಸಂಪಾದನಶಕ್ತಿಯನ್ನು ದ್ವಿಗುಣ ತ್ರಿಗುಣವಾಗುವಂತೆ ಮಾಡಿಕೊಳ್ಳ

[8 ನೇ ಪುಟವನ್ನು ನೋಡಿ.]

ಗೃಹಕೃತ್ಯದ ನೋಟೀಸು.

ಮೈಸೂರು ಮಂಡಿಮೊಹಲ್ಲಾ ವೆಂಕಟರಮಣಸ್ವಾಮಿ ದೇವಸ್ಥಾನದ ಬಳಿ ಇರುವ ಕಬ್ಬಿಣ ಕೆಲಸದ ಸಂಜಪ್ಪಾಚಾರಿ ಮೊಮ್ಮಕ್ಕಳಾದ ಲಕ್ಷ್ಮಣಾಚಾರಿ ಮತ್ತು ವೈನರ್ ಚಿತಂಬರಾಚಾರಿಯು ಈ ಮೂಲಕ ತಿಳಿಯಪಡಿಸುವದೇನಂದರೆ—ಡಿಟೋ ಮೊಹಲ್ಲಾ ಲಷ್ಕರ್ ಬಸಪ್ಪನ ಗರಡಿ ಮುಂಭಾಗದಲ್ಲಿರುವ ಮರ್ಕ್‌ ಡೋ|| ನಂ|| ೭ನೇ ನಮ್ಮ ಪಿತ್ರಾರ್ಜಿತವಾದ ಅರೆಮಾಡಿ ಹೆಂಚಿನ ಮನೆಯು ವಾಸದ ಹಕ್ಕು ಮಾತ್ರ ನಮ್ಮ ಚಿಕ್ಕಮ್ಮನಾದ ಪೌತಿ ಚಿನ್ನಮ್ಮನಿಗೆ ಇತ್ತು. ಆಕೆ ಮಗಳಾದ ಲಕ್ಷ್ಮಮ್ಮನು ನಮಗೆ ಆಗದ ಜನರ ದುರ್ಬೋಧನೆಯಿಂದ ಡಿಟೋ ಮನೆಯನ್ನು ಕ್ರಯಮಾಡಬೇಕೆಂದು ದುರುದ್ದೇಶಪಟ್ಟಿರುತ್ತಾಳೆ. ಆಕೆಯಿಂದ ಮಾಡಿಕೊಂಡ ಕ್ರಯ ಊರ್ಜಿತವಾಗತಕ್ಕದ್ದಲ್ಲ. ಮುಂದೆ ಯಾರಾದರೂ ಕ್ರಯ ಮಾಡಿಕೊಂಡಲ್ಲಿ ನಮ್ಮಗಳ ವಿಶಿಷ್ಟ ನಷ್ಟಗಳಿಗೂ ಗುರಿಯಾಗಬೇಕೆಂದು ಎಚ್ಚರಿಸಿರುತ್ತೇವೆ.

[235-1] ಲಕ್ಷ್ಮಣಾಚಾರಿ ಮತ್ತು ವೈನರ್ ಚಿತಂಬರಾಚಾರಿ.

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೧೫ ನೇ ಇಸವಿ ಅಕ್ಟೋಬರ್ ತಾ. ೨೮ ನೇ ಗುರುವಾರ.

ದಿವಾನರವರು ಮಾಡಿದ ಉಪನ್ಯಾಸ.

ಮೈಸೂರು ಸಂಸ್ಥಾನದ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರು ಈ ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ಓದಿದ ಅಡ್ರೆಸ್ಸಿನ ವಿಶೇಷ ಭಾಗಗಳನ್ನು ಈ ವಾರ ಪ್ರಕಟಿಸಿರುತ್ತೇವೆ. ಅದನ್ನೆಲ್ಲಾ ಒಟ್ಟುಕೂಡಿಸಿ ನೋಡಿದಲ್ಲಿ ಅದು ತೃಪ್ತಿಕರವಾಗಿದೆ ಎಂದು ಹೇಳಬಹುದು. ಕಳೆದ ಸಾಲು ಸಾಮಾನ್ಯವಾದದ್ದೆಂದು ಹೇಳಲಾಗದು. ಯುದ್ಧದ ದೆಸೆಯಿಂದ ಆಮದು ರಫ್ತು ಅಂದರೆ ವ್ಯಾಪಾರಕ್ಕೆ ಅದರಲ್ಲೂ ಶ್ರೀಗಂಧದ ಮಾರಾಟಕ್ಕೆ ವಿಶೇಷ ಅಡಚಣೆಯುಂಟಾಯಿತು. ಗಂಧವು ವಿಕ್ರಯವಾಗದೆ ರಾಜಾದಾಯವು ಬಹಳ ಕಡಮೆಯಾಯಿತು. ಆದರೆ ಕೆಲವು ಬಾಬುಗಳಲ್ಲಿ ಉತ್ಪತ್ತಿ ಹೆಚ್ಚಿದ್ದರಿಂದಲೂ, ಇಲಾಖೆಗಳ ಖರ್ಚು ಬಾಬನ್ನು ತಕ್ಕ ಮಟ್ಟಿಗೆ ಕೋತಾ ಮಾಡಿ ಹಣ ಉಳಿಸಿದ್ದರಿಂದಲೂ ಕಳೆದ ಸಾಲಿನ ರಾಜಾದಾಯವೂ ಖರ್ಚು ಸುಮಾರಾಗಿ ಒಂದಕ್ಕೊಂದು ಸರಿಹೋಯಿತು. ಯುದ್ಧದ ಖರ್ಚಿಗೆ ದ್ರವ್ಯವನ್ನು ಒದಗಿಸಿದ್ದರಿಂದ ಹುಟ್ಟುವಳಿಗಿಂತಲೂ ಖರ್ಚು ಹೆಚ್ಚಾಗಿರುತ್ತದೆ. ನಮ್ಮ ಸರ್ಕಾರದವರು ಇಷ್ಟು ಮಟ್ಟಿಗೆ ತೃಪ್ತಿಕರವಾಗಿಯೂ, ಸುಲಲಿತವಾಗಿಯೂ ಸಂಸ್ಥಾನದ ಕಾರುಕರ್ದಿಗಳನ್ನು ನಡಿಸಿರುವುದನ್ನು ನೋಡಿ ಸಂತೋಷಪಡುತ್ತೇವೆ.

ನಮ್ಮ ಗವರ್ನಮೆಂಟಿನವರು ಈ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೂ, ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೂ ಇದುವರೆಗೆ ಇದ್ದದ್ದಕ್ಕಿಂತಲೂ ಹೆಚ್ಚಾದ ಸ್ವಾತಂತ್ರ್ಯವನ್ನು ದಯಪಾಲಿಸಿರುತ್ತಾರೆ. ಮೊದಲನೇ ಸಭೆಯ ಮೆಂಬರುಗಳು ಇನ್ನು ಮೇಲೆ ನಮ್ಮ ಗವರ್ನಮೆಂಟಿನವರನ್ನು ಕೆಲವು ಉಪಪ್ರಶ್ನೆಗಳನ್ನು ಕೇಳುವುದಕ್ಕೂ, ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಸಂಸ್ಥಾನದ ಬಡ್ಜೆಟ್ಟನ್ನು ಅಂದರೆ ಜಮಾ ಖರ್ಚು ಬಾಬುಗಳನ್ನು ಹಿಡಿದು ಚರ್ಚೆ ಮಾಡಿ ತಮ್ಮ ಅಭಿಮತವನ್ನು ಅರಿಕೆ ಮಾಡುವುದಕ್ಕೂ ಅವಕಾಶ ದೊರಕಿತು. ಸರ್ಕಾರದವರು ಈ ವಿಚಾರಗಳಿಗೆ ರೂಲುಸುಗಳನ್ನು ಮಾಡಿ ಇಷ್ಟರಲ್ಲೇ ಪ್ರಕಟಿಸುವುದಾಗಿ ತಿಳಿಸಿದಾರೆ. ಇದರಿಂದ ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರಜೆಗಳ ಇಂಗಿತಗಳನ್ನು ತಿಳಿಯಬೇಕೆಂಬ ಭಾಗದಲ್ಲಿ ಕುತೂಹಲವುಳ್ಳವರಾಗಿದಾರೆಂದು ಗೊತ್ತಾಗುತ್ತದೆ.

ಸಂಸ್ಥಾನದ ಆಳ್ವಿಕೆಯ ವಿಷಯದಲ್ಲಿ ನಮ್ಮ ದಿವಾನರವರು ಮತ್ತೊಂದು ವಿಚಾರವನ್ನು ಕುರಿತು ಪ್ರಸ್ತಾಪ ಮಾಡಿದಾರೆ. ಗವರ್ನಮೆಂಟಿನವರು ಸ್ಥಳೀಯ ಸಂಘಗಳಿಗೆ ಇನ್ನೂ ಹೆಚ್ಚಾದ ಸ್ವಾತಂತ್ರ್ಯಗಳನ್ನು ವಹಿಸಿ, ಪ್ರಜೆಗಳಲ್ಲಿ ಆತ್ಮಾವಲಂಬನೆಯನ್ನು ಹುಟ್ಟಿಸಿ ಅಭಿವೃದ್ಧಿಗೆ ತರಬೇಕೆಂದು ತವಕಪಡುತ್ತಿರುವರು. ಈಗ ಇರುವಂಥಾ ಸ್ಥಳೀಯ ಸಂಘಗಳ ರಚನೆಯನ್ನು ಬೇರ್ಪಡಿಸಿ, ಅವುಗಳಿಂದ ಇನ್ನೂ ಹೆಚ್ಚಾದ ಕೆಲಸ ಕಾರ್ಯಗಳು ನಡೆಯುವಂತೆ ಮಾಡಿಡುತ್ತಾರೆ. ಮ್ಯುನಿಸಿಪಾಲಿಟಿಗಳ ತರಗತಿಗಳು ಹೊಸ ರೂಪವನ್ನು ಧರಿಸುವವು. ಕೆಲವು ಮ್ಯುನಿಸಿಪಾಲಿಟಿಗಳಿಗೆ ಪ್ರಥಮ ವಿದ್ಯಾಭ್ಯಾಸ, ವೈದ್ಯ, ಪಶುವೈದ್ಯ, ಈ ಮೊದಲಾದ ಬಾಬುಗಳ ಜವಾಬ್ದಾರಿಗಳನ್ನು ವಹಿಸುತ್ತಾರೆ. ಡಿಸ್ಟ್ರಿಕ್ಟ್ ಬೋರ್ಡು ಮತ್ತು ತಾಲ್ಲೂಕ್ ಬೋರ್ಡುಗಳಿಗೆ ತಮ್ಮ ತಮ್ಮ ವ್ಯವಹರಣೆಗೆ ಸಂಬಂಧಪಟ್ಟ ಪ್ರದೇಶಗಳಲ್ಲಿ ತಮ್ಮಿಂದ ನಿರ್ವಹಿಸಲಾಗದಂಥಾ ವಿಚಾರಗಳನ್ನು ಕುರಿತು ರೆಜಲ್ಯೂಷನ್ ಯಾನೆ ತೀರ್ಮಾನಗಳನ್ನು ಮಾಡಿ ಸರ್ಕಾರಕ್ಕೆ ಅರಿಕೆಮಾಡಿಕೊಳ್ಳುವ ಅಧಿಕಾರವು ವಹಿಸಲ್ಪಡುವುದು. ಈ ಸಂಘಗಳಿಗೆ ಸರ್ಕಾರದವರು ಎಷ್ಟು ಮಟ್ಟಿಗೆ ದ್ರವ್ಯ ಸಹಾಯವನ್ನು ಮಾಡುತ್ತಾರೋ ಅಷ್ಟು ಮಟ್ಟಿಗೂ ಈ ಸಲಹೆಗಳೂ ಸಾರ್ಥಕವೊಂದುವವು.

ನಮ್ಮ ಸಂಸ್ಥಾನದಲ್ಲಿ ರೈಲ್ ರಸ್ತೆಗಳನ್ನು ಹಾಕಿ ಹರಡಬೇಕೆಂಬ ವಿಚಾರವಾಗಿ ದಿವಾನರವರು ಹೇಳಿರುವ ಮಾತುಗಳು ತುಂಬಾ ಸ್ವಾರಸ್ಯವಾಗಿರುತ್ತವೆ. ರೈಲ್ ರಸ್ತೆಗಳು ಒತ್ತಾವಣೆ ಮಾಡಲ್ಪಡುವವೆಂದೂ, ಪಶ್ಚಿಮ ತೀರದ ತನಕ ರೈಲು ಮಾರ್ಗ ವಾದೀತೆಂದೂ, ಈರೋಡಿಗೂ ರೈಲ್ ರಸ್ತೆ ಹಾಕಲ್ಪಡುವುದೆಂದೂ ನಂಬಿ ನಿರೀಕ್ಷಿಸುತ್ತೇವೆ.

ಸಂಪದಭ್ಯುದಯ ಸಮಾಜದ ಫಲಗಳೇನೂ ಕಾಣಬರಲಿಲ್ಲ. ಅದಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲಾ ಬಹಳ ಮಟ್ಟಿಗೆ ಇನ್ನೂ ತನಿಖೆಯಲ್ಲೂ ವಿಚಾರದಲ್ಲೂ ಇರುತ್ತವೆ. ಸಾಧನಗಳೇನೋ ಅನೇಕವಾಗಿ ಸೂಚಿಸಲ್ಪಟ್ಟಿರುವವು; ಇನ್ನೂ ಯಾವುದೊಂದೂ ಕಾರ್ಯಗತ ಆಗಿರುವುದಿಲ್ಲ; ಒಂದು ವೇಳೆ ಆಗಿದ್ದರೂ ಗಣ್ಯವಾದದ್ದಾಗಿಲ್ಲ. ಇದೆಲ್ಲಾ ಇಷ್ಟೊಂದು ದ್ರವ್ಯವ್ಯಯವಿಲ್ಲದೇನೇ ಮಾಡಬಹುದಾಗಿತ್ತು.

ನಮ್ಮ ಸಂಸ್ಥಾನವನ್ನು ಪಾಶ್ಚಾತ್ಯ ದೇಶಗಳಿಗೆ ಹೋಲಿಸುವಲ್ಲಿ ನಮ್ಮ ಸೀಮೆಯು ಎಷ್ಟೋ ಹಿಂದೆ ಬಿದ್ದಿದೆ ಎಂದು ಧಾರಾಳವಾಗಿ ಹೇಳಬಹುದು. ಈ ಭಾಗವನ್ನು ದಿವಾನರವರು ಬಹಳ ಪರಿಷ್ಕಾರವಾಗಿ ವಿವರಿಸಿ ಹೇಳಿರುತ್ತಾರೆ. ಅದಕ್ಕಿಂತಲೂ ನಮ್ಮ ಸಂಸ್ಥಾನವನ್ನು ಈ ರಾಷ್ಟ್ರದ ಇತರ ಭಾಗಗಳಿಗೆ ಹೋಲಿಸುವುದು ಸಹಜವೆಂದು ನಮಗೆ ಕಾಣುತ್ತದೆ. ಹ್ಯಾಗೂ ನಮ್ಮ ಸಂಸ್ಥಾನದ ಪ್ರಜೆಗಳಿಗೆ ಕರ್ತವ್ಯಜ್ಞಾನವನ್ನೂ ಚಟುವಟಿಕೆಯನ್ನೂ ವಿವೇಕವನ್ನೂ ಬಹಳವಾಗಿ ಹುಟ್ಟುವಂತೆ ಮಾಡಬೇಕೆಂದು ನಮ್ಮ ದಿವಾನರವರು ದೃಷ್ಟಾಂತಪೂರ್ವಕವಾಗಿ ಒತ್ತಿಹೇಳುತ್ತಾ ಬಂದಿರುವುದು ನ್ಯಾಯವೂ ಅವಶ್ಯವೂ ಆಗಿದೆ. ವಿದ್ಯೆಯಲ್ಲೂ, ವ್ಯವಸಾಯದಲ್ಲೂ, ಕಸಬುಗಳಲ್ಲೂ, ವ್ಯಾಪಾರದಲ್ಲೂ ನಾವು ಇನ್ನೂ ಬಹಳ ಹಿಂದೆ ಬಿದ್ದಿರುವೆವು. ನಮ್ಮ ಕುಂದು ಕೊರತೆಗಳನ್ನು ಎತ್ತಿಹಾಕಿ ನಮ್ಮಲ್ಲಿ ಚಟುವಟಿಕೆಯನ್ನು ಕಲ್ಪಿಸಬೇಕಾದದ್ದು ಪರಮಾವಶ್ಯಕ. ಆದರೆ ನಮ್ಮ ದೇಶದ ಹವಾಸ್ಥಿತಿಯನ್ನೂ ನಮ್ಮ ಜನಗಳಲ್ಲಿರುವ ಕಟ್ಟುಪಾಡುಗಳನ್ನೂ ನೋಡಿದಲ್ಲಿ ನಾವು ಪಾಶ್ಚಾತ್ಯ ದೇಶಗಳವರಂತೆ ಆಗುವುದು ಸಾಧ್ಯವಲ್ಲ. ಆದಾಗ್ಯೂ ನಮ್ಮಲ್ಲಿ ಸದ್ಗುಣಗಳೂ ಸಚ್ಚರಿತೆಯೂ ಇನ್ನೂ ಚೆನ್ನಾಗಿ ಬೆಳೆಯುವಂತಾದ ಪಕ್ಷದಲ್ಲಿ ನಾವುಗಳು ತಕ್ಕ ಮಟ್ಟಿಗೂ ಶ್ರೇಯಸ್ಸನ್ನು ಹೊಂದುವೆವು. ಐಶ್ವರ್ಯಾಭಿವೃದ್ಧಿಯಿಂದಲೇ ನಮಗೆ ಸಕಲ ಶ್ರೇಯಸ್ಸೂ ಉಂಟಾಗಲಾರದು. ನಮ್ಮ ಸೀಮೆಯ ಪ್ರಜೆಗಳು ಇನ್ನಷ್ಟು ಚಟುವಟಿಕೆಯುಳ್ಳವರೂ, ಸತ್ಯಸಂಧರೂ, ಮಿತವ್ಯಯಿಗಳೂ, ನಂಬಿಗಸ್ತರೂ, ಪರಸ್ಪರ ಪ್ರೀತಿ ಸಹನೆಗಳಿಂದ ಬೆರೆದು ಕಾರ್ಯ ನಡಿಸತಕ್ಕವರೂ ಆದ ಹೊರತು ಅಷ್ಟೇನೂ ವಿಶೇಷವಾದ ಅಭಿವೃದ್ಧಿಯು ಕಂಡುಬರಲಾರದು. ಬರಿಯ ವಿದ್ಯೆ ಸಾಲದು; ಶ್ರೇಯಸ್ಸಿಗೆ ನಿರ್ದುಷ್ಟವಾದ ಗುಣ ನಡತೆಗಳೇ ಪ್ರಾಧಾನ್ಯವಾಗಿರುತ್ತವೆ.

ಸದ್ಗುರುವಿನ ಸಂಕ್ಷೇಪ ಚರಿತ್ರೆ.

ಯೇಸು ಕ್ರಿಸ್ತನೆಂಬ ಹೆಸರನ್ನು ಕೇಳುತ್ತಲೇ ಕೆಲವರಿಗೆ ವಿರೋಧವಾಗಿ ತೋರುವದು. ಆದರೆ ಈ ವಿಧವಾಗಿ ಯಾರು ಬೇಸರಪಡುವರೋ ಅಂಥವರು ಈ ಪುಣ್ಯಾತ್ಮನ ಚರಿತ್ರೆಯನ್ನು ಮೊದಲಿಂದ ಕಡೇ ವರೆಗೂ ತಿಳಿದುಕೊಂಡರೆ ಈತನ ಮೇಲೆ ಈ ಬಗೆಯ ಹಗೆಯನ್ನು ಸಾಧಿಸಲಾರರೆಂದು ನಂಬುತ್ತೇವೆ. ಈ ಚರಿತ್ರೆಯನ್ನು ಸವಿಸ್ತಾರವಾಗಿ ತಿಳಿಯಲಪೇಕ್ಷಿಸುವವರು ಆ ಗುರುವಿನ ಶಿಷ್ಯರೊಳಗೆ ನಾಲ್ಕು ಮಂದಿಯಿಂದ ಬರೆಯಲ್ಪಟ್ಟಿರುವ ಸುವಾರ್ತೆಗಳೆಂಬ ಪುಸ್ತಕಗಳನ್ನು ಚೆನ್ನಾಗಿ ಓದಬೇಕು.

ಮೊಟ್ಟಮೊದಲು ನಾವು ಗಮನಿಸತಕ್ಕದ್ದು ಒಂದಿದೆ. ಅದೇನಂದರೆ—ದೇವರು ನಿರ್ಗುಣನಾಗಿರದೆ ಸಗುಣನಾಗಿದ್ದು ಮನುಷ್ಯರನ್ನು ಪ್ರೀತಿಸಿ, ಅವರು ಸನ್ಮಾರ್ಗದಲ್ಲಿಯೇ ನಡೆಯಬೇಕೆಂದು ಅಪೇಕ್ಷಿಸುತ್ತಾನೆ. ಮತ್ತೊಂದು ಯಾವದೆಂದರೆ—ದೇವರು ತಾನೇ ಆ ಸನ್ಮಾರ್ಗವನ್ನು ನಮಗೆ ತಿಳಿಸದ್ದಾನೆ. ಹಾಗಿಲ್ಲದಿದ್ದರೆ ನಾವಾಗಿ ಅದನ್ನು ತಿಳಿದುಕೊಳ್ಳಲಾರೆವು. ಋಷಿಗಳೂ ಕಾಲಜ್ಞಾನಿಗಳೂ ಆದ ಮಹಾತ್ಮರು ಆ ಸನ್ಮಾರ್ಗವನ್ನು ಒಂದು ತರವಾಗಿ ತಿಳಿಸಬಹುದು. ಆದರೂ ನಾವು ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ದೇವರು ತಾನೇ ಅವತರಿಸಿ ಬಂದು ಅದನ್ನು ನಮಗೆ ತೋರಿಸಿಕೊಡಬೇಕು.

ಆತನು ಲೋಕದಲ್ಲಿ ಈ ರೀತಿಯಾಗಿ ಅವತಾರವೆತ್ತಿದ ಚರಿತ್ರೆಯ ವಿವರ—ಆತನು ಏಷ್ಯಾಖಂಡದಲ್ಲಿರುವ ಪಾಲಸ್ತೀನ್ ಎಂಬ ಚಿಕ್ಕ ದೇಶದಲ್ಲಿ ಸುಮಾರು 1915 ವರುಷಗಳ ಕೆಳಗೆ ಬಡವರಾದರೂ ಭಕ್ತಿಯುಳ್ಳ ಒಂದು ಕುಟುಂಬದೊಳಗೆ ಅವತರಿಸಿದನು. ಆತನಿಗೆ ಅವರ ಭಾಷೆಯಲ್ಲಿ "ಮನುಷ್ಯರನ್ನು ರಕ್ಷಿಸುವವನು" ಎಂಬರ್ಥಕೊಡುವ "ಯೇಸು" ಎಂಬ ಹೆಸರಿಟ್ಟರು. ಆ ದೇಶಪದ್ಧತಿಯಂತೆ ಬೇರೆ ಚಿಕ್ಕ ಹುಡುಗರ ಜೊತೆಯಲ್ಲಿ ಈತನೂ ಮಠಕ್ಕೆ ಹೋಗಿ ವೇದಶಾಸ್ತ್ರಗಳನ್ನು ಓದುವಷ್ಟರ ಮಟ್ಟಿಗೆ ಕಲಿತುಕೊಂಡ ಮೇಲೆ ತನ್ನ ತಂದೆಯು ಕಾರ್ಖಾನೆಯಲ್ಲಿ ಬಡಗಿಯ ಕೆಲಸಮಾಡಿ ಕುಟುಂಬ ಪೋಷಣೆಗಾಗಿ ಹೆತ್ತವರಿಗೆ ಸಹಾಯ ಮಾಡುತ್ತಾ ಬಂದನು.

ಇದಾದ ಮೇಲೆ ಕುರುಡರ ಕುರುಡುತನವನ್ನೂ ಕುಷ್ಠರೋಗಿಗಳ ಪರಿತಾಪಸ್ಥಿತಿಯನ್ನೂ ಹೆತ್ತವರಿಲ್ಲದ ಮಕ್ಕಳ ಅನಾದರಣೆಯನ್ನೂ ತಿಳುವಳಿಕೆ ಇಲ್ಲದವರ ಮೂಢತನವನ್ನೂ ಸ್ಮರಿಸಿ ಅವರ ದುರ್ಗತಿಯ ವಿಷಯ ಹೇಳಲೊಡದ ದುಃಖಪಟ್ಟನು. ಆದರೆ ಇದೆಲ್ಲಕ್ಕಿಂತ ಹತ್ತರಷ್ಟು ಹೆಚ್ಚಾಗಿ ಮನುಷ್ಯರ ಹೃದಯದಲ್ಲಿದ್ದ ಕೆಡಕನ್ನೂ ಅವರು ಮಾಡುತ್ತಿದ್ದ ಮಹಾ ಪಾತಕ ಕೆಲಸಗಳನ್ನೂ ನೋಡಿ ಪರಿತಾಪಪಟ್ಟು ಇವುಗಳಿಂದಲೇ ಮನುಷ್ಯರು ಮೋಕ್ಷವನ್ನು ಹೊಂದದೇ ಹೋಗುತ್ತಾರೆಂದೂ ಇವುಗಳೇ ದೊಡ್ಡ ಅಡ್ಡಿಯೆಂದೂ ಗ್ರಹಿಸಿಕೊಂಡನು.

ಆತನು ಇನ್ನೂ ಮನೆಗೆ ಹೋಗದೆ ಜನರು ರಕ್ಷಣೆಹೊಂದುವ ಮಾರ್ಗವೇನೆಂದು ಹುಡುಕಿ ತನ್ನ ಮೂವತ್ತನೇ ಪ್ರಾಯದಲ್ಲಿ ಆ ದೇಶವನ್ನೆಲ್ಲಾ ಸುತ್ತಿ ಸತ್ಯೋಪದೇಶಮಾಡುವದಕ್ಕೆ ಆರಂಭಿಸಿದನು.

ಆ ಕಾಲದಲ್ಲಿ ತನ್ನ ದೈವಶಕ್ತಿಯನ್ನುಪಯೋಗಿಸಿ ಕುರುಡರು, ಕಿವುಡರು, ಕುಂಟರೇ ಮೊದಲಾದ ಅನೇಕ ರೋಗಿಷ್ಟರಿಗೆ ಕ್ಷೇಮವನ್ನನುಗ್ರಹಿಸಿದನು. ಬಹಳ ಹಸಿದಿದ್ದವರಿಗೆ ಅದ್ಭುತ ರೀತಿಯಾಗಿ ಊಟಮಾಡಿಸಿದನು. ಎರಡುಮೂರು ಸಾರಿ ಸತ್ತವರಿಗೂ ತಿರಿಗಿ ಜೀವಕೊಟ್ಟನು. ಈ ರೀತಿಯಾಗಿ ಕಷ್ಟ ದುಃಖದಲ್ಲಿರುವವರಿಗೆ ತನ್ನಲ್ಲಿದ್ದ ಅಂತಃಕರಣವನ್ನು ತೋರಿಸಿದನು. ಆದರೆ ಇವೆಲ್ಲವುಗಳಿಗಿಂತ ಆತನು ಮಾಡಿದ ಜ್ಞಾನೋಪದೇಶವು ಬಹಳ ಮುಖ್ಯವಾಗಿತ್ತು. ಅದರ ಮುಖ್ಯಾಂಶವೇನಂದರೆ—ನಾವು ಗುಲಾಮರೋ ಎಂದು ದೇವರಿಗೆ ಹೆದರಿಕೊಂಡು ನಡೆಯುವವರಾಗಿರದೆ, ಆತನನ್ನು ತಂದೆಯೆಂದೇ ತಿಳಿದು, ನಂಬಿ, ಸನ್ಮಾನಮಾಡಿ ಪ್ರೀತಿಸುತ್ತಾ ವಿಧೇಯವುಳ್ಳ ಮಕ್ಕಳಂತೆ ನಡೆಯಬೇಕೆಂಬುವದೂ ನಾವು ಪೂರ್ಣ ಹೃದಯದಿಂದ ಆತನ ಮೇಲೆ ಭಕ್ತಿ ಇಡಬೇಕೆಂದೂ ನಾವು ನಮ್ಮ ಮನೆಯವರನ್ನೂ ನಮ್ಮನ್ನೂ ಹ್ಯಾಗೆ ಪ್ರೀತಿಸಿಕೊಂಡು ಕಾಪಾಡುತ್ತಾ ಬರುತ್ತೇವೋ ಹಾಗೆಯೇ ನಮ್ಮ ನೆರೆಯವರನ್ನೂ ನಮ್ಮ ದೇಶದಲ್ಲಿರುವ ಎಲ್ಲರನ್ನೂ ಜಾತಿಭೇದ ನೋಡದೆ ನಮ್ಮಿಂದಾದಮಟ್ಟಿಗೆ ಕಾಪಾಡುತ್ತಾ ಬರಬೇಕೆಂಬುವದೇ.

ಆತನು ಒಳ್ಳೇ ಮಾರ್ಗವನ್ನು ಕುರಿತು ಮಾತಾಡುವಾಗಲೆಲ್ಲಾ ಆತನು ಬೋಧಿಸಿದ ಮಾರ್ಗವೇ ಆ ದೇಶದವರ ಕೆಟ್ಟತನವನ್ನು ಬಯಲುಪಡಿಸಿತು. ಸತ್ಯವನ್ನು ಕುರಿತು ಬೋಧಿಸುವಾಗಲೆಲ್ಲಾ ಸುಳ್ಳು, ಕಪಟವೇ ಮೊದಲಾದ ಅಸತ್ಯಗುಣಗಳು ಅವರಿಗೆ ತರವಲ್ಲವೆಂದು ತೋರಿಸಿಕೊಟ್ಟನು. ಆದರೆ ದೆಶೆಯಿಂದಲೇ ಅವರು ರೇಗಿಬಿದ್ದು ಕಡೆಗೆ ಆತನ ಮೇಲೆ ತೀರಿಸಲಾರದ ಕೋಪಗೊಂಡರು. ಆತನಾದರೋ ಅವುಗಳಲ್ಲೊಂದನ್ನೂ ಲಕ್ಷ್ಯಮಾಡದೆ ಮೊದಲಿಗಿಂತಲೂ ಹೆಚ್ಚಾಗಿ ಕೆಟ್ಟತನವನ್ನು ಖಂಡಿಸಿ, ಮನುಷ್ಯರು ಕಂಡುಕೊಳ್ಳಬೇಕಾದ ಸನ್ಮಾರ್ಗವನ್ನು ವೈರಾಗ್ಯದಿಂದ ಬೋಧಿಸುತ್ತಾ ಬಂದನು. ಮತ್ತು ದೇಶಪದ್ಧ ಎಂಬ ವ್ಯರ್ಥಕರ್ಮಾಚರಣೆಗಳನ್ನು ಮಾಡುವದರಿಂದ ರಕ್ಷಣೆ ಹೊಂದಲಾರರೆಂದೂ ಎಲ್ಲರೂ ತನ್ನಲ್ಲಿ ಭಕ್ತಿಯಿಟ್ಟು ತನ್ನ ಶಿಷ್ಯರಾಗಿದ್ದುಕೊಂಡು ತಾನು ಕೊಟ್ಟ ಕಟ್ಟಳೆಗಳಂತೆ ನಡೆಯುವದರಿಂದ ಮುಕ್ತಿಹೊಂದುವರೆಂದೂ ಬೋಧಿಸುತ್ತಾ ಬಂದನು. ತಮ್ಮ ದೇಶಾಚಾರಗಳ ಮೇಲೆ ಬಹಳ ಅಭಿಮಾನಗೊಂಡಿದ್ದ ಆತನ ವಿರೋಧಿಗಳು ಅದನ್ನು ಕೇಳದು ಆತನನ್ನು ಹಿಡಿದು ಶಿಲುಬೆ ಎಂಬ ಕಂಬಕ್ಕೆ ಜಡಿದು ಕೊಂದುಹಾಕಿದರು. ಆತನ ಶಿಷ್ಯರು ಹೇಳತೀರದ ದುಃಖದಿಂದ ಆತನನ್ನು ತೆಗೆದು ಸಮಾಧಿಮಾಡಿ ಇನ್ನು ಆತನನ್ನು ಎಂದೂ ಕಾಣಲಾರೆವು ಎಂದು ವ್ಯಥೆಪಡುತ್ತಿದ್ದರು. ಆತನಾದರೋ ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದು ನಾಲ್ವತ್ತು ದಿನದ ವರೆಗೆ ತನ್ನ ಮಹಿಮಾತಿಶಯವನ್ನು ತೋರಿಸುತ್ತಾ ಇದ್ದು ಕಡೆಗೆ ಅವರ ಕಣ್ಣಿಗೆ ಮರೆಯಾಗಿ ಪರವನ್ನೈದಿದನು.

ಆತನು ಆ ಕಾಲದಲ್ಲಿ ತಿಳಿಸಿದ ರೀತಿಯಾಗಿ ಆಗಿನಿಂದ ಈಗಿನ ವರೆಗೆ ತನ್ನ ಮೇಲೆ ಇರುವ ಭಕ್ತಿ ವೈರಾಗ್ಯದಿಂದ ನಡೆಯುವವರಿಗೆ ಆತ್ಮೀಯವಾಗಿ ತನ್ನನ್ನು ತೋರಿಸಿಕೊಂಡು ಅವರು ಕೇಡನ್ನು ಅಸಹ್ಯದಿಂದ ದೂರಮಾಡುವಂತೆ ಸಹಾಯಮಾಡಿ, ಕೃಪಾಕಟಾಕ್ಷವೇ ಅವರ ಹೃದಯಗಳಲ್ಲಿ ಯಾವಾಗಲೂ ಹೆಚ್ಚುತ್ತಾ ಬರುವಂತೆ ಅವರಿಗೆ ಶ್ರೇಷ್ಠಭಾಗ್ಯವನ್ನು ಕೊಡುತ್ತಾನೆ. ಎಲ್ಲಾ ದೇಶಗಳಲ್ಲಿಯೂ ಈ ಭಾಗ್ಯಕರವಾದ ಸುಸ್ಥಿತಿಯನ್ನು ಹೊಂದಿರುವ ಕೋಟ್ಯನುಕೋಟಿ ಜನರು ಇದರ ವಿಷಯ ಸಾಕ್ಷಿಗಳಾಗಿರುವರು.

ಆದುದರಿಂದ ಈ ಲೋಕದಿಂದ ಪರಲೋಕಕ್ಕೆ ಪ್ರಯಾಣಿಗಳಾಗಿರುವ ನಾವು ಆ ಮಹಾ ಸದ್ಗುಣಸಂಪನ್ನನಾಗಿರುವ ಈ ರಕ್ಷಣಾಮೂರ್ತಿಯ ಮೇಲೆ ಭಕ್ತಿಯನ್ನಿಟ್ಟು ಆತನ ದಿವ್ಯ ಚರಣದ ಮೇಲೆ ಶರಣುಮಾಡಿ ಆತನು ಕೊಡುವ ಶ್ರೇಷ್ಠ ಭಾಗ್ಯವನ್ನು ಹೊಂದಿಕೊಂಡು ಜೀವಿಸೋಣ.

ಯುದ್ಧದ ಸಮಾಚಾರಗಳು.

ಸರ್ಬಿಯಾದಲ್ಲಿ ಘೋರ ಕದನ.

ಇಟಲಿಯವರ ಜಯಪ್ರದಗಳು.

ಈ ವಾರ ರಣರಂಗಗಳಿಂದ ಬಂದಿರುವ ತಂತೀ ವರ್ತಮಾನಗಳು ಬಹುತರವಾಗಿ ಮಿತ್ರಮಂಡಲಿಯವರಿಗೇ ಅನುಕೂಲವಾಗಿರುವವೆಂದು ಸೂಚಿಸುತ್ತವೆ. ಗಲ್ಲಿಪೋಲಿಯ ಹೊರತು ಉಳಿದ ಎಲ್ಲಾ ಯುದ್ಧ ಭೂಮಿಗಳಲ್ಲೂ ಚಟುವಟಿಕೆಯಾಗಿ ಕದನ ಕಾರ್ಯಗಳು ನಡೆದಿರುವವು. ಅನೇಕ ಕದನಗಳಲ್ಲಿ ನಮ್ಮ ಪಕ್ಷದವರಿಗೇ ಅನುಕೂಲವಾಗಿರುತ್ತದೆ.

ಪಶ್ಚಿಮ ರಣರಂಗದಲ್ಲಿ.

ಜರ್ಮನಿಯವರು ತಮ್ಮ ರಿಜರ್ವ್ ಸೈನ್ಯಗಳನ್ನು ಅಪಾರವಾಗಿ ತಮ್ಮ ಬ್ರಿಟಿಷರೂ ಫ್ರೆಂಚರೂ ಗೆದ್ದುಕೊಂಡಿರುವ ಠಾಣ್ಯಗಳನ್ನು ಅವರಿಂದ ಕಿತ್ತುಕೊಳ್ಳಬೇಕೆಂದು ಮುತ್ತಿಗೆ ಹಾಕಿದರು. ಅವರು ಕೆಲವು ವೇಳೆ ಕತ್ತಲಲ್ಲಿ ಮೇಲೂ, ಕೆಲವು ವೇಳೆ ಹಗಲಿನಲ್ಲೂ ನುಗ್ಗಿ ಕದನಮಾಡಿದರು. ಆದರೆ ಯಾವ ಕಡೆಯಲ್ಲೂ ಅವರು ಕಳೆದುಕೊಂಡಿದ್ದ ಠಾಣ್ಯಗಳನ್ನು ಮತ್ತೆ ಗೆದ್ದುಕೊಳ್ಳಲಾರದೆ ಹೋದರು. ನಮ್ಮ ಪಕ್ಷದವರ ಫಿರಂಗಿ ಗುಂಡುಗಳ ಹೊಡೆತವು ಅತ್ಯಂತ ವಿನಾಶಕರವಾಗಿದ್ದವು. ಅಂಥಾದ್ದರಲ್ಲೂ ಶತ್ರುವು ಒಂದು ಕಡೆ ಫ್ರೆಂಚರ ಸಾಲಿನ ಬಳಿಗೆ ಬಂದು ಸ್ವಲ್ಪ ಪ್ರದೇಶವನ್ನು ಗೆದ್ದುಕೊಂಡರು. ಆದಾಗ್ಯೂ ಫ್ರೆಂಚರು ಶತ್ರುವನ್ನು ಕೂಡಲೇ ಅಲ್ಲಿಂದ ಹಿಂದಕ್ಕೆ ಓಡಿಸುತ್ತಾರೆ. ಜರ್ಮನಿಯವರ ಕಡೆ ಯುದ್ಧಿದಾರರಿಗೆ ಅಭಾವವಾದ ಕಾರಣ ಅವರು ಸೈನ್ಯಕ್ಕೆ ನಾನ್‌ಕಮಿಷನ್ ಯುದ್ಧಿದಾರರನ್ನು ನೇಮಿಸಿ ಅವರಿಂದ ಈ ಮುತ್ತಿಗೆಯನ್ನು ಹಾಕಿಸಿದರು. ಪ್ರತಿ ಒಂದು ಕದನದಲ್ಲೂ ಜರ್ಮನಿಯವರ ಕಡೆ ಬಹಳ ನಷ್ಟ ಸಂಭವಿಸಿರುತ್ತದೆ.

ಬ್ರಿಟಿಷರು ಗೆದ್ದಿರುವ ಪ್ರದೇಶವು 7,000 ಗಜ (ಸುಮಾರು 4 ಮೈಲಿ) ಉದ್ದವಾಗಿಯೂ, 3,200 ಗಜ (ಸುಮಾರು 2 ಮೈಲಿ) ಅಗಲವಾಗಿಯೂ ಇದೆ. ಈ ಪ್ರದೇಶವನ್ನು ಜರ್ಮನಿಯವರು ಗೆದ್ದುಕೊಳ್ಳಬೇಕೆಂದು ಮಾಡಿದ ಸಾಕು ಪ್ರಯತ್ನವೆಲ್ಲಾ ವ್ಯರ್ಥವಾಯಿತು.

ವಿಮಾನಯಂತ್ರಗಳೂ, ಯುದ್ಧದ ಹಡಗುಗಳಿಂದ ಹೊಡೆಯಲ್ಪಟ್ಟ ಫಿರಂಗಿಗಳೂ ಶತ್ರುವಿನ ವಿಮಾನಗಳ ತಬೇಲೆಗಳನ್ನೂ, ಮದ್ದು ಗುಂಡುಗಳ ಉಗ್ರಾಣಗಳನ್ನೂ ಬಹಳ ಮಟ್ಟಿಗೆ ಹಾಳುಮಾಡಿರುತ್ತವೆ.

ಪೂರ್ವ ರಣರಂಗದಲ್ಲಿ.

ಜರ್ಮನಿಯವರು ನುಗ್ಗಿ ಮುಂದಕ್ಕೆ ಹೋಗದಂತೆ ರಷ್ಯಾದವರು ಅವರನ್ನು ತಡೆದಿರುವುದು ಮಾತ್ರವೇ ಅಲ್ಲ; ಹಲವು ಠಾಣ್ಯಗಳಲ್ಲಿ ರಷ್ಯಾದವರು ಅವರನ್ನು ಹಿಂದಕ್ಕೆ ಓಡಿಸಿರುತ್ತಾರೆ, ಮತ್ತು ಅನೇಕರನ್ನು ಹಿಡಿದಿರುವರು. ಉತ್ತರಕಡೆ ರೀಗಾದಿನ ಬಳಿ ಇರುವ ಯುದ್ಧಸಾಲಿನಲ್ಲಿ ಜರ್ಮನಿಯವರು ಬಹಳ ಚುರುಕಾಗಿ ಯುದ್ಧಕಾರ್ಯಗಳನ್ನು ನಡಿಸುತ್ತಿದಾರೆ; ಆದಾಗ್ಯೂ ಅವರು ಅಷ್ಟೇನೂ ಮುಂದಕ್ಕೆ ನುಗ್ಗಿ ಹೋಗಿರುವುದಿಲ್ಲ. ಯುದ್ಧಸಾಲಿನ ಮಧ್ಯ ಭಾಗದಿಂದ ಹಿಡಿದು ದಕ್ಷಿಣದ ಕೊನೆಯ ತನಕ ರಷ್ಯಾದವರು ಜರ್ಮನಿಯವರನ್ನು ಬಹಳ ದೂರ ಹಿಂದಕ್ಕೆ ಓಡಿಸಿ ಅವರ ಸ್ವಾಧೀನವಾಗಿದ್ದ ಹಲವು ಗ್ರಾಮಗಳನ್ನು ಮತ್ತೆ ಗೆದ್ದುಕೊಂಡದ್ದಲ್ಲದೆ ಶತ್ರುಸೈನಿಕರಲ್ಲಿ ಬಹುಮಂದಿಯನ್ನು ಕೈಸೆರೆ ಹಿಡಿದಿರುವರು. ತಂತೀವರ್ತಮಾನಗಳು ಹೇಳುವ ಪ್ರಕಾರ ಅವರು ಒಂದು ಠಾಣ್ಯದಲ್ಲಿ 3,300 ಸೈನಿಕರನ್ನೂ ಅನೇಕ ಮೆಷೀನ್ ಫಿರಂಗಿಗಳನ್ನೂ ಕೈಸೆರೆ ಹಿಡಿದಿದಾರೆ. ಇನ್ನೊಂದು ಠಾಣ್ಯದಲ್ಲಿ ರಷ್ಯಾದವರು ಆಕಸ್ಮಿಕವಾಗಿ ಶತ್ರುವಿನ ಮೇಲೆ ನುಗ್ಗಿ ಮುತ್ತಿಗೆಹಾಕಿಕೊಂಡು 9 ಫಿರಂಗಿಗಳನ್ನೂ, ಅನೇಕ ಮೆಷೀನ್ ಫಿರಂಗಿಗಳನ್ನೂ, 700 ಸೈನಿಕರನ್ನೂ ಕೈಸೆರೆ ಹಿಡಿದು ತಂದಿದಾರೆ. ಮೂರನೆಯ ಠಾಣ್ಯದಲ್ಲಿ ರಷ್ಯಾದವರು 85 ಮಂದಿ ಯುದ್ಧೇದಾರರನ್ನೂ 3,582 ಸೈನಿಕರನ್ನೂ, ಒಂದು ಫಿರಂಗಿ ಮತ್ತು ಹತ್ತು ಮೆಷೀನ್ ಫಿರಂಗಿಗಳನ್ನೂ ಕೈಸೆರೆ ಹಿಡಿದರು. ಯುದ್ಧಸಾಲಿನ ದಕ್ಷಿಣ ಕೊನೆಯಲ್ಲಿ ಅಂದರೆ ಗೇಲಿಷಿಯಾದಲ್ಲಿ ರಷ್ಯಾದವರು ಎರಡು ದಿನ ಕದನಮಾಡಿ 148 ಯುದ್ಧೇದಾರರನ್ನೂ 7,500 ಸೈನಿಕರನ್ನೂ, 2 ಹೌವಿಟ್ಜರ್ ಎಂಬ ಭಾರಿ ಫಿರಂಗಿಗಳನ್ನೂ, ಅನೇಕ ಮೆಷೀನ್ ಫಿರಂಗಿಗಳನ್ನೂ ಕೈಸೆರೆ ಹಿಡಿದು ತಂದಿದಾರೆ. ಒಂದು ಘೋರ ಯುದ್ಧ ನಡೆದದ್ದರಲ್ಲಿ ರಷ್ಯಾದವರು 2,000 ಸೈನ್ಯವನ್ನು ಕೈಸೆರೆ ಹಿಡಿದರು; ಆಗ್ಗೆ ರಷ್ಯಾದವರ ಕಡೆ 51 ಮಂದಿ ಮಾತ್ರ ನಷ್ಟವಾದರು. ರಷ್ಯಾದವರು ಹೊಸದಾಗಿ ಸೈನ್ಯಗಳನ್ನೂ ಯುದ್ಧಸಾಮಗ್ರಿಗಳನ್ನೂ ಒದಗಿಸಿಕೊಂಡು ಕಳುಹಿದಾರೆ. ಇದಲ್ಲದೆ ಅವರ ವಿಮಾನ ಯಂತ್ರಗಳು ಕೂಡ ತುಂಬಾ ಚುರುಕಾಗಿ ಕಾರ್ಯಭಾಗವಹಿಸುತ್ತಿವೆ. ರಷ್ಯಾದವರಿಗೆ ಕೈಸೆರೆ ಸಿಕ್ಕಿರುವ ಒಬ್ಬ ಜರ್ಮನಿ ಯುದ್ಧೇದಾರನು—ಇನ್ನು ಜರ್ಮನಿ ಸೈನ್ಯಗಳು ರಷ್ಯಾದಿಂದ ವಾಪಸು ಹೋಗುವುದು ಸಾಧ್ಯವೇ ಅಲ್ಲವೆಂದು ಹೇಳಿದನು. ಈಗ ಜರ್ಮನಿಯವರು ರಷ್ಯಾಸೀಮೆಯಲ್ಲೇ ಇದ್ದುಕೊಂಡು ಮಳೆ ಮತ್ತು ಶೀತಕಾಲವನ್ನು ಕಳೆಯುವುದಕ್ಕಾಗಿ ದೊಡ್ಡ ಕಂದಕಗಳನ್ನು ತೋಡಿಕೊಳ್ಳುತ್ತಿದಾರೆಂದು ವರ್ತಮಾನವಿದೆ.

ಸಮುದ್ರದ ಮೇಲೆ.

ಬ್ರಿಟಿಷರ ಸಬ್‌ಮೆರೀನುಗಳೂ, ಯುದ್ಧದ ಹಡಗುಗಳೂ ಸಮುದ್ರದ ಮೇಲೆ ತುಂಬಾ ಚುರುಕಾದ ಕಾರ್ಯಗಳನ್ನು ಮಾಡುತ್ತಿರುವವು. ಉತ್ತರ

...ಜರ್ಮನಿಯವರ 26 ಟ್ರಾಲರುಗಳೆಂಬ ಭಾರೀ ಬೆಸ್ತರ ಹಡಗುಗಳನ್ನು ... ಕೈಸೆರೆ ಹಿಡಿದು ಇಂಗ್ಲೆಂಡಿಗೆ ತಂದು ಇರುತ್ತವೆ. ಈ ಸೈನಿಕ ... ಹಡಗುಗಳ ಬಳಿ ಜರ್ಮನಿಯ ಯುದ್ಧದ ಜಹಜುಗಳಿದ್ದು ಅವಕ್ಕೆ ... ಕೊಡುತ್ತಿದ್ದುವು. ಆದರೆ ಅವು ಬ್ರಿಟಿಷರ ಜಹಜುಗಳನ್ನು ಕಂಡ ... ನಿಲ್ಲದೆ ಓಡಿಹೋದವು.

... ಬಾಲ್ಟಿಕ್ ಕಡಲಿನಲ್ಲಿ ಬ್ರಿಟಿಷ್ ಸಬ್‌ಮೆರೀನುಗಳು ಹೋಗಿ ಲಿಬೊ ... ಬಳಿ ಜರ್ಮನಿಯ ಒಂದು ಯುದ್ಧದ ಜಹಜನ್ನು ಮುಳುಗಿಸಿದವು ... ನಾವಿಕರಲ್ಲಿ ಕೆಲವರು ಮಾತ್ರ ಬದುಕಿಕೊಂಡರು. ಮತ್ತು ಅವುಗಳು ... ಸಾಮಗ್ರಿಗಳನ್ನು ಸಾಗಿಸುವ ಐದು ಜರ್ಮನಿ ಹಡಗುಗಳನ್ನು ... ಇನ್ನೊಂದು ಹಡಗನ್ನು ಓಡಿಸಿ ದಡದ ಮೇಲೆ ನಿಲ್ಲುವಂತೆ ಮಾಡಿ... ಇಷ್ಟೇ ಅಲ್ಲ; ನಮ್ಮ ಸಬ್‌ಮೆರೀನುಗಳು ಪಾಲ್ಟಿಕ್ ಭಾರೀ ವ್ಯಾಪಾರದ ... ಗಳನ್ನೂ, ಕಬ್ಬಿಣದ ತುಕ್ಕು ಭರ್ತಿಯಾಗಿದ್ದ ಒಂದು ಹಡಗನ್ನೂ, ಮರದ ... ತುಂಬಿದ್ದ ಒಂದು ಹಡಗನ್ನೂ ಮುಳುಗಿಸಿ ಬಂದವು ಮತ್ತು ಜರ್ಮನಿ ... ಇನ್ನೊಂದು ಹಡಗನ್ನು ಹಿಡಿದು ರಷ್ಯಾ ತೀರದ ಪಟ್ಟಣಕ್ಕೆ ಸಾಗಿಸಿಕೊಂಡು ... —ಜರ್ಮನಿಯವರ ಡಿಸ್ಸ್ಟ್ರಾಯರೆಂಬ ಒಂದು ಸಣ್ಣ ಯುದ್ಧದ ... ಇನ್ನೊಂದು ಜಹಜಿಗೆ ಬಡಿದು ಎರಡಾಗಿ ಒಡೆದು ಮುಳುಗಿಹೋಯಿತು. ... ಪೈಕಿ ಐದು ಮಂದಿ ಮಾತ್ರ ಬದುಕಿಬಂದರು.

... ಒಂದು ಪ್ರಯಾಣದ ಹಡಗು ಮೆಡಿಟರೇನಿಯನ್ ಕಡಲಿನಲ್ಲಿ ... ಜರ್ಮನಿಯವರು ಎಚ್ಚರಿಕೆ ಕೊಡದೇನೇ ಅದಕ್ಕೆ ಗುಂಡುಗಳನ್ನು ... ಅದರಲ್ಲಿದ್ದ ಪ್ರಯಾಣಿಕರಿಗೆ ಶಗಲಿ ಐವತ್ತು ಮಂದಿ ಮುಳುಗಿ ...; 30 ಜನರಿಗೆ ಗಾಯಗಳಾಗಿವೆ —ಸ್ವೀಡನ್ ರಾಜ್ಯಕ್ಕೆ ಸೇರಿದ ಒಂದು ... ಬರುತ್ತಿದ್ದಾಗ ಅದು ಬ್ರಿಟಿಷ್ ಹಡಗೆಂದು ಭ್ರಮಿಸಿ ಜರ್ಮನಿಯ ... ಅದಕ್ಕೆ ಗುಂಡು ಹಾಕಿದ್ದರಿಂದ ಅದರಲ್ಲಿ ಇಬ್ಬರಿಗೆ ಗಾಯಗಳಾದವು ... ಮೇಲೆ ಜರ್ಮನಿ ಸರ್ಕಾರದವರು ಸ್ವೀಡನ್ನಿನವರ ಕ್ಷಮಾಪಣೆಯನ್ನು ... —ಕಳೆದ ವಾರದಲ್ಲೆಲ್ಲಾ ಜರ್ಮನಿಯ ಸಬ್‌ಮೆರೀನುಗಳು ಒಂದೇ ... ಬ್ರಿಟಿಷ್ ಹಡಗನ್ನು ಮುಳುಗಿಸಿರುತ್ತವೆ —ಬ್ರಿಟಿಷರು ಜರ್ಮನಿ ಸಬ್‌ ... ಗಳನ್ನು ಕೈಸೆರೆ ಹಿಡಿಯುವುದನ್ನು ನೋಡಿ ಜರ್ಮನಿಯವರು ಬ್ರಿಟಿಷರ ... ಆಕ್ಷೇಪಣೆ ಮಾಡುತ್ತಿದ್ದಾರೆ ಇದುವರೆಗೆ ಈ ರೀತಿ 43 ಸಬ್‌ಮೆರೀನು ... ಕಳೆದುಕೊಂಡೆವೆಂದು ಜರ್ಮನಿಯವರು ಹೇಳಿದಾರೆ.

ಬಾಲ್ಕನ್ ಸಂಸ್ಥಾನಗಳು.

ಬಾಲ್ಕನ್ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಸಮಾಚಾರಗಳೇನೆಂಬು... ಈಗ ಬಂದಿರುವ ತಂತೀ ವರ್ತಮಾನಗಳಿಂದ ಸ್ಪಷ್ಟವಾಗುವುದಿಲ್ಲ. ಆದರೂ ... ತಿಳಿಯುವ ಮಟ್ಟಿಗೆ ಅಲ್ಲಿನ ಸ್ಥಿತಿ ಏನಾಗಿದೆ ಎಂದರೆ—ಉತ್ತರ ... ದಲ್ಲಿ ಬೆಲ್‌ಗ್ರೇಡಿನ ಬಳಿ ಸರ್ಬಿಯಾದವರು ಕೆಲವು ದೂರ ಹಿಮ್ಮೆಟ್ಟಿ... ದ್ದಾರೆ. ಆದರೂ ಆ ಬಳಿಯಲ್ಲಿ ಜರ್ಮನಿಯವರೂ ಆಸ್ಟ್ರಿಯಾದ ... ನಷ್ಟಪಟ್ಟರು. ಆಸ್ಟ್ರಿಯಾದ ಒಬ್ಬ ದಳಪತಿಯು ತಂತೀ ... ಕೊಟ್ಟು ತಿಳಿಸಿದ್ದೇನೆಂದರೆ— ನೀವು ಇನ್ನೂ ಅಪಾರವಾಗಿ ಹೊಸ ... ಗಳನ್ನು ನಮಗೆ ಒದಗಿಸದೆ ಹೋದರೆ ನಾವು ನಮ್ಮ ಉದ್ದೇಶವನ್ನು ನೆರ ... ಪುದು ಅಸಾಧ್ಯ." ಜರ್ಮನಿಯ ಕೆಲವು ರೆಜಿಮೆಂಟುಗಳು ಮುಕ್ಕಾಲು ... ನಾಶವಾಗಲ್ಪಟ್ಟವು. ಇದಲ್ಲದೆ ಸರ್ಬಿಯಾದವರು ನಾಲ್ಕು ಪಿರಂಗಿ... ಕಿತ್ತುಕೊಂಡರು. ಬಲ್ಗೇರಿಯಾದವರು ಬಹಳ ದೂರ ನುಗ್ಗಿ ಹೋಗು... ಅವರಿಂದ ಸಾಧ್ಯವಾಗದೆ ಇದೆ. ಈಗಲಾದರೋ ನಮ್ಮ ಪಕ್ಷದವರು ... ಸೀಮೆಯೊಳಕ್ಕೆ ಪ್ರವೇಶಮಾಡಿ ಒಂದು ಪಟ್ಟಣವನ್ನು ಗೆದ್ದು ... ಸಿಕೊಂಡಿದಾರೆ. ಬಲ್ಗೇರಿಯಾದವರು ತಮ್ಮ ರಾಜಧಾನಿಯಾದ ... ನಗರವನ್ನು ಬಲಪಡಿಸಿಕೊಳ್ಳುತ್ತಾರೆಂದು ಹೇಳಲಾಗಿದೆ. ಇದರಿಂದ ... ಮೊದಲು ಸರ್ಬಿಯಾವನ್ನು ಸುಲಭವಾಗಿ ಗೆದ್ದುಬಿಡುತ್ತೇವೆಂದು ನೆನಸಿ... ಕೈಗೂಡುವುದು ಸಾಧ್ಯವಲ್ಲವೆಂದು ಈಗ ಅವರಿಗೇ ತಿಳಿದಂತಾಯಿತು. ... ಬಲ್ಗೇರಿಯಾದವರು ಟರ್ಕಿಯವರಿಗೆ ಸಹಾಯ ಮಾಡಬೇಕೆಂಬುದನ್ನು ... ಬಲ್ಗೇರಿಯದ ಕೆಲವು ಸೈನಿಕರು ತಾವು ಯುದ್ಧ ಮಾಡುವು... ಇಷ್ಟವಿಲ್ಲವೆಂದು ತಿರಸ್ಕಾರ ಮಾಡಿಬಿಟ್ಟರು. ಮತ್ತು ಟರ್ಕಿ ಸೈನಿಕರು ... ನೋಡಿ ಬಲ್ಗೇರಿಯಾದವರು ಅವರನ್ನು ಗುಂಡುಗಳಿಂದ ಹೊಡೆದು ... ಹಾಕಿದರು.

ಸರ್ಬಿಯಾ ದೇಶವು ಬೆಟ್ಟಗುಡ್ಡಗಳ ಸೀಮೆ. ಶತ್ರುಗಳು ನುಗ್ಗಿಬಂದು ಈ ... ನ್ನು ಗೆಲ್ಲುವುದು ಬಹಳ ಪ್ರಯಾಸ. ನಮ್ಮ ಪಕ್ಷದವರು ಹೊಸ ಸೈನ್ಯ ... ನ್ನು ಸಾಗಿಸಿಕೊಂಡು ಹೋಗಿ ಸಲೊನೀಕಾ ತೀರದಲ್ಲಿ ಇಳಿಸುತ್ತಲೂ, ಒಳ ... ನುಗ್ಗಿಹೋಗಿ ಬಲ್ಗೇರಿಯವನ್ನು ಪ್ರವೇಶಮಾಡುತ್ತಲೂ ಇದಾರೆ. ... ಬ್ರಿಟಿಷ್ ಯುದ್ಧದ ಜಹಜುಗಳು ಹೋಗಿ ಬಲ್ಗೇರಿಯಾ ತೀರಪಟ್ಟಣ... ಗುಂಡುಗಳನ್ನು ಸುರಿಸುತ್ತಲಿವೆ.

ಗ್ರೀಸ್ ರಾಜ್ಯದ ಸ್ಥಿತಿಯು ಬಹಳ ಕಷ್ಟಕರವಾಗಿ ಪರಿಣಮಿಸಿದೆ. ದೊರೆಗೆ ... ಯುದ್ಧಕ್ಕೆ ಸೇರುವುದಕ್ಕೆ ಇಷ್ಟವಿಲ್ಲ. ಪ್ರಜೆಗಳೂ ಸೈನಿಕರೂ ಯುದ್ಧಕ್ಕೆ ... ಬೇಕೆಂದು ಆತುರಪಡುತ್ತಿದಾರೆ. ರಷ್ಯಾದವರೂ ಬ್ರಿಟನ್ನಿನವರೂ ಗ್ರೀಸಿ... —ಸರ್ಬಿಯಾಕ್ಕೂ ಗ್ರೀಸಿಗೂ ಹಿಂದೆ ನಡೆದಿರುವ ಕರಾರಿನ ಪ್ರಕಾರ ಗ್ರೀಸು ... ಯಾಕ್ಕೆ ಸಹಾಯಮಾಡಿ ಬಲ್ಗೇರಿಯಾವನ್ನು ಓಡಿಸಬೇಕೆಂದು ತಿಳಿಸಿದಾರೆ.

ಟರ್ಕಿಯಲ್ಲಿ:—

ಕೆಲವು ಕಾಲದಿಂದ ಗಲ್ಲಿಪೋಲಿ ಅರ್ಧದ್ವೀಪದಲ್ಲಿ ಅಲ್ಪಸ್ವಲ್ಪ ಸುರಂಗ... ಗಳನ್ನು ಹಾಕುತ್ತಿರುವುದರ ಹೊರತು ಇನ್ನೇನೂ ವಿಶೇಷಕಾರ್ಯಗಳು ನಡೆದಂತೆ ... ದಿಲ್ಲ. ಬ್ರಿಟಿಷ್ ಸೇನಾಪತಿಯಾದ ಸರ್ ಇಯನ್ ಹ್ಯಾಮಿಲ್‌ಟನ್ ... ಅಲ್ಲಿ ನಡೆದಿರುವ ಸಮಾಚಾರಗಳನ್ನು ತಿಳಿಸುವುದಕ್ಕಾಗಿ ವಾಪಸು ಇಂಗ್ಲೆಂ... ಡಿಗೆ ಬಂದರು. ಜನರಲ್ ಸರ್ ಚಾರಲ್ಸ್ ಮನ್‌ರೊ ಎಂಬವರು ದಳಪತಿಯಾಗಿ ... ಪೋಲಿಗೆ ಹೋಗಿದಾರೆ. ಬಾಲ್ಕನ್ಸ್ ಸೀಮೆಯಲ್ಲಿ ಕದನಗಳು ನಡೆಯುತ್ತಿ... ರುವುದರಿಂದ ಗಲ್ಲಿಪೋಲಿಯ ಯುದ್ಧಕಾರ್ಯಗಳು ಸದ್ಯಕ್ಕೆ ನಿಲ್ಲಿಸಲ್ಪಟ್ಟಿರುವಂತೆ ... —ಈಚೆಗೆ ಮೆಸೊಪೊಟೇಮಿಯಾದಲ್ಲಿ ನಡೆದ ಯುದ್ಧದ ವಿವರಗಳು ... ಪ್ರಕಟವಾಗಿರುವವು. ಅಲ್ಲಿ 10,000 ಟರ್ಕಿ ಸೈನಿಕರು 35 ಪಿರಂಗಿಗಳ ... ದಾಳಿಹಾಕಿಕೊಂಡಿದಾರೆ. ಅವರ ಜೊತೆಗೆ ಕೆಲವು ಅರಬ್ಬಿ ಜನವೂ ... ದರು. ನಮ್ಮ ಪಕ್ಷದವರು ಹಗಲು ಕಳೆಯುವ ತನಕ ಅವರ ಮೇಲೆ ... ನುಗ್ಗಿಹಾಕಿಕೊಂಡಿದ್ದರು. ರಾತ್ರಿ ಕತ್ತಲಲ್ಲಿ ಶತ್ರುವು ಬಹಳ ಸೈನ್ಯವನ್ನು ... ಕೊಂಡು ತಪ್ಪಿಸಿಕೊಂಡು ಓಡಿಹೋದರು.

ಇಟಲಿ.

ಈಚೆಗೆ ಇಟಲಿಯು ವಿಶೇಷ ಯುದ್ಧಕಾರ್ಯಗಳೇನೂ ಮಾಡದೆ ಇದ್ದಂತೆ ... ವು. ಈಗ ಇಟಲಿಯವರು ಏಕಕಾಲದಲ್ಲಿ ಮುಂದಕ್ಕೆ ನುಗ್ಗಿಹೋಗ... ಸನ್ನಾಹ ಮಾಡಿಕೊಳ್ಳುತ್ತಿದಾರೆ. ಅಲ್ಲಿ ಆಸ್ಟ್ರಿಯಾದವರು ... 00,000 ಸೈನ್ಯವನ್ನು ತಂದಿಟ್ಟು ಇಟಲಿಯವರಿಗೆ ಯುದ್ಧ ಕೊಡಬೇಕೆಂದಿದಾರೆ. ... ಇಟಲಿಯವರು ಉತ್ತರ ದಿಕ್ಕಿನಿಂದ ಉಡ್ರಿಯ್ಯಾ ಸಮುದ್ರ ತೀರದ ತನಕ ಸೈನ್ಯ... ವನ್ನು ಶತ್ರುವಿನ ಮೇಲೆ ನುಗ್ಗಿಸಿ ಕದನಮಾಡಿದಂತೆ ತಿಳಿಯುತ್ತದೆ. ಬಹಳ ... ವಾದ ಕದನಗಳು ಜರುಗಿದವು. ಇಟಲಿಯವರು ಕೆಲವು ಪರ್ವತಗಳನ್ನು ... ಕೊಂಡು ಶತ್ರುವನ್ನು ಹಿಂದಕ್ಕೆ ಓಡಿಸಿದಾರೆ. ಇದಲ್ಲದೆ ಇಟಲಿಯವರು ... ಸೈನಿಕರಿದ್ದ ಅನೇಕ ಕಂದಕಗಳನ್ನು ಆಕ್ರಮಿಸಿಕೊಂಡು, 19,000 ... ಹೆಚ್ಚು ಸೈನಿಕರನ್ನೂ ಹಲವು ಮೆಷಿನ್ ಪಿರಂಗಿಗಳನ್ನೂ ಅಪಾರ ... ಗುಂಡನ್ನೂ ಕೈಸೆರೆ ಹಿಡಿದುಕೊಂಡರು. ಅವರು ಒಂದು ಕಣಿವೆಯಲ್ಲಿ ಶತ್ರು ಪಕ್ಷದ 426 ಹೆಣಗಳನ್ನು ಹೂಳಿದರು. ಅಂತು ಇಟಲಿಯವರು ಇನ್ನೂ ಮುಂದರಿಸಿ ನುಗ್ಗಿಹೋಗುತ್ತಲೇ ಇದಾರೆ.

ಇತರ ವಿಷಯಗಳು.

ಜರ್ಮನಿಯವರು ಬ್ರಸೆಲ್ಸ್ ಪಟ್ಟಣದಲ್ಲಿ ಮಿಸ್ ಕವೆಲ್ ಎಂಬ ಸೇವಾಸ್ತ್ರೀಯನ್ನು ಗುಂಡಿನಿಂದ ಕೊಂದುಹಾಕಿದ ವಿಷಯದಲ್ಲಿ ಅನೇಕ ತಂತೀ ವರ್ತಮಾನಗಳು ಬಂದಿವೆ. ಆಕೆಯನ್ನು ವಿಚಾರಣೆ ಮಾಡಿದಾಗ ಆಕೆ ಈ ರೀತಿ ಹೇಳಿದಳಂತೆ —ಬ್ರಿಟಿಷ್ ಮತ್ತು ಬೆಲ್ಜಿಯನ್ ಸೈನಿಕರು ತಪ್ಪಿಸಿಕೊಂಡು ಹೋಗುವಂತೆ ನಾನು ಅವರಿಗೆ ಸಹಾಯಮಾಡಿದ್ದುಂಟು; ಇಲ್ಲವಾದರೆ ಅವರನ್ನು ಜರ್ಮನಿಯವರು ಹಿಡಿದು ಗುಂಡಿನಿಂದ ಕೊಲ್ಲುತ್ತಿದ್ದರು. ಆಕೆಯನ್ನು ವಿಚಾರಣೆ ಮಾಡಿ ಸಾಯಂಕಾಲ ಐದು ಗಂಟೆಗೆ ಗುಂಡಿನಿಂದ ಹೊಡೆದು ಕೊಂದುಬಿಡಬೇಕೆಂದು ತೀರ್ಮಾನ ಮಾಡಿದರು. ಮಾರನೇ ಬೆಳಗಿನ ಝಾಮದ 2 ಗಂಟೆಗೆ ಗುಂಡಿನಿಂದ ಕೊಂದುಹಾಕಿದರು. ಕಡೇ ಗಳಿಗೆಯ ತನಕ ಆಕೆಗೆ ಧೈರ್ಯ ಕುಂದಲೇ ಇಲ್ಲ. ಸೈನಿಕರಿಗೆ ಆಕೆಯನ್ನು ಕೊಲ್ಲುವುದು ಸಮ್ಮತವಾಗಿರಲಿಲ್ಲವೆಂದು ಕಾಣುತ್ತದೆ. ಒಂದೇ ಒಂದು ಗುಂಡು ಆಕೆಗೆ ತಗುಲಿತ್ತು. ಒಬ್ಬ ಸುಬೇದಾರನು ಆಕೆಯ ತಲೆಗೆ ಗುರಿಕಟ್ಟಿ ಗುಂಡುಹೊಡೆದನು. ಅಷ್ಟಕ್ಕೇ ಪ್ರಾಣಹೋಯಿತು. ಕೊಲೆಮಾಡಿದ ಸುದ್ದಿಯನ್ನು ಜರ್ಮನಿಯವರು ಅಲ್ಲಿದ್ದ ಅಮೇರಿಕದ ರಾಯಭಾರಿಗೆ ತಿಳಿಸದೆ ಮರೆಮಾಚಿದರು. ಸ್ಪೈಯಿನ್ ರಾಯಭಾರಿಯು ಆಕೆಯನ್ನು ಬಿಟ್ಟುಬಿಡಬಹುದೆಂದು ಬಹಳವಾಗಿ ಕೇಳಿಕೊಳ್ಳುತ್ತಿದ್ದನು. ಮಿಸ್ ಕವೆಲ್ ಎಂಬೀ ಸ್ತ್ರೀಯು ರೋಗಿಗಳನ್ನುಪಚರಿಸುವುದರಲ್ಲಿ ಮಗ್ನಳಾಗಿದ್ದಳು; ಅನೇಕ ಜರ್ಮನಿ ಸೈನಿಕರಿಗೂ ಉಪಚಾರ ಮಾಡಿರುತ್ತಾಳೆ. ಇಂಥಾ ಪಂಡಿತಕಾರಿಣಿಯನ್ನು ಜರ್ಮನಿಯವರು ಕೊಂದುಹಾಕಿದ್ದು ಮಹಾ ಕ್ರೂರಕೃತ್ಯವಾಗಿದೆ. ಈ ಕೊಲೆಯು ಎಲ್ಲೆಲ್ಲೂ ಅಪರಿಮಿತವಾದ ಆಕ್ರೋಶವನ್ನುಂಟುಮಾಡಿರುವುದು.

ಜರ್ಮನಿಯವರು ಬ್ರಸೆಲ್ಸ್ ನಗರದಲ್ಲಿ ಇನ್ನು ಕೆಲವು ಸ್ತ್ರೀಯರನ್ನು ಕೊಂದುಹಾಕಬೇಕೆಂದು ತೀರ್ಮಾನಮಾಡಿದರು. ಆದರೆ ಮತಾಧಿಪತಿಯಾದ ಪೋಪ್ ಸ್ವಾಮಿಗಳು ಮಧ್ಯಸ್ಥಿಕೆಮಾಡಿದ್ದರಿಂದ ಕೈಸರ್ ಚಕ್ರವರ್ತಿಯು ಅವರಿಗೆಲ್ಲಾ ಕ್ಷಮಾಪಣೆಯನ್ನು ಕೊಟ್ಟರು. ಅನೇಕ ಸ್ತ್ರೀಯರನ್ನು ಬಂದೀಖಾನೆಯಲ್ಲಿ ಹಾಕಿರುತ್ತಾರೆ —ಇಬ್ಬರ ಮೇಲೆ ... ದ್ರೋಹಿಗಳೆಂಬ ಅಪವಾದವು ಇಂಗ್ಲೆಂಡಿನಲ್ಲಿ ರುಜುವಾತಾಯಿತು. ಒಬ್ಬನನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು; ಎರಡನೆಯವನಿಗೆ ಐದು ವರುಷ ಸಜಾ ಶಿಕ್ಷೆಯಾಯಿತು.

ಇಂಗ್ಲೆಂಡಿನ ಮಂತ್ರಿ ಶ್ರೇಷ್ಠರಾದ ಮಿ॥ ಆಸ್ಕಿತ್ ರವರಿಗೆ ದೇಹಾಲಸ್ಯವುಂಟಾಗಿತ್ತು, ಈಗ ಆರೋಗ್ಯವಾಗಿದಾರೆ; ಇಷ್ಟರಲ್ಲೇ ಕೆಲಸದ ಮೇಲೆ ಹಾಜರಾಗುವರು. ಮಂತ್ರಿ ಸಭೆಯಲ್ಲಿ ಮೆಂಬರಾಗಿದ್ದ ಸರ್ ಎಡ್ವರ್ಡ್ ಕಾರ್ಸನ್ ರವರು ಕೆಲಸಕ್ಕೆ ರಾಜೀನಾಮೆಕೊಟ್ಟರು. ಕಾರಣವೇನೋ ತಿಳಿಸಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಜನರಲ್ ಬೋಥಾರವರು ಪ್ರಧಾನ ಮಂತ್ರಿಯಾಗಿ ಚುನಾಯಿಸಲ್ಪಟ್ಟರು. ಎದುರು ಪಕ್ಷದವರು ಪ್ರಬಲರಾಗಿದ್ದಾಗ್ಯೂ ಅವರ ಕಡೆಯವರಿಗೇ ಚುನಾವಣೆಯಲ್ಲಿ ಹೆಚ್ಚು ಸಮ್ಮತಿಗಳು ದೊರಕಿರುತ್ತವೆ.

ಫ್ರಾನ್ಸಿನ ರಾಜಧಾನಿಯಾದ ಪಾರಿಸ್ ನಗರದಲ್ಲಿ ಒಂದು ಕಡೆ ಮದ್ದಿನ ಅನಾಹುತ ಸಂಭವಿಸಿತು. ಅಲ್ಲಿ ಸುಮಾರು 100 ಜನ ಗಂಡಸರು ಹೆಂಗಸರು ಸೇರಿ ಕೆಲಸಮಾಡುತ್ತಿದ್ದರು. ಈ ಅನಾಹುತದಿಂದ 37 ಜನರು ಮೃತಪಟ್ಟರು; 53 ಮಂದಿಗೆ ಗಾಯಗಳಾದವು —ಹಿಂದುಸ್ಥಾನದ ಮಹಾರಾಜರುಗಳೂ, ರಾಜರುಗಳೂ, ಪ್ರಜೆಗಳೂ ಮಾಡಿರುವ ವಿಶೇಷ ಸಹಾಯಗಳನ್ನು ವಿವರಿಸಿ ಹೌಸ್ ಆಫ್ ಕಾಮನ್ಸ್ ಎಂಬ ಸಭೆ ಮನೆಯಲ್ಲಿ ಪಟ್ಟಿಗಳನ್ನು ಓದಿ ಹೇಳಿದರು. ಅದನ್ನು ಕೇಳಿ ಸಭೆಯಲ್ಲಿದ್ದವರೆಲ್ಲಾ ಪರಮಾನಂದಪಟ್ಟರು. ಹಿಂದುಸ್ಥಾನದ ರಾಜಭಕ್ತಿಗೆ ಪ್ರತಿಯಾಗಿ ಯಾವುದಾದರೊಂದು ಗಣ್ಯವಾದ ವರಪ್ರದಾನವನ್ನು ಕೊಡಬಾರದೇ ಎಂದು ಸರ್ ಜಾನ್ ರಾಂವಲ್ಡ್ ರವರು ಪ್ರಶ್ನೆಮಾಡಿದರು. ಗವರ್ನ್‌ಮೆಂಟಿನವರು ಅಂಥಾ ಸಮಯ ಇನ್ನೂ ಬಂದಿಲ್ಲವೆಂದು ಜವಾಬುಕೊಟ್ಟರಾದಾಗ್ಯೂ, ಹಿಂದುಸ್ಥಾನದ ಸಹಾಯವನ್ನು ಬಹಳವಾಗಿ ಮೆಚ್ಚಿಕೊಂಡಿರುತ್ತೇವೆಂದೂ, ಸಮಯ ಒದಗಿದಾಗ ಬಹಳ ಆನಂದದಿಂದ ಪ್ರತ್ಯುಪಕಾರಮಾಡಲಾಗುವುದೆಂದೂ ಹೇಳಿದರು.—ಇಂಗ್ಲೆಂಡಿನಲ್ಲಿ ಸರ್ಕಾರದವರು ಪ್ರಾಯಬಂದವರನ್ನು ಬಲಾತ್ಕರಿಸಿ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೇ ಅಥವಾ ಹಾಗಿಲ್ಲದೆ ತಾವಾಗಿ ಇಷ್ಟಪಟ್ಟು ಬಂದವರನ್ನು ಮಾತ್ರ ಸೈನಿಕರಾಗಿ ಮಾಡಿಕೊಳ್ಳಬೇಕೇ ಎಂಬ ವಿಷಯದಲ್ಲಿ ಜನಗಳು ಎರಡು ಕಕ್ಷಿಗಳಾಗಿ ವಿಭಾಗಿಸಲ್ಪಟ್ಟಿದಾರೆ. ಇದುವರೆಗೆ ಬಲಾತ್ಕಾರವೇನೂ ಇರಲಿಲ್ಲ; ಜನಗಳು ತಾವಾಗಿಯೇ ಬಂದು ಸೈನ್ಯಕ್ಕೆ ಸೇರುತ್ತಿದ್ದರು. ಹೀಗೆ ಬಂದಿರುವವರ ಸಂಖ್ಯೆಗಳನ್ನು ಗವರ್ನ್‌ಮೆಂಟಿನವರು ಪ್ರಕಟಮಾಡಿಯೇ ಇಲ್ಲ. ಹ್ಯಾಗೂ ಈ ರೀತಿ ಇದುವರೆಗೆ ಮೂವತ್ತು ಲಕ್ಷ ಜನರು ಬಂದು ಸೇರಿದರೆಂದು ಹೇಳಬಹುದಾಗಿದೆ. ಈಗಲಾದರೋ ಸೈನ್ಯಕ್ಕೆ ಹೆಚ್ಚು ಜನರು ಬೇಕಾಗಿದೆ. ಹೇರಳವಾಗಿ ಸೈನ್ಯಗಳನ್ನು ಕೂಡಿಸಿ ಯುದ್ಧಭೂಮಿಗೆ ಕಳುಹಿಸಿದ ಪಕ್ಷದಲ್ಲಿ ಈ ಯುದ್ಧದ ಅಂತ್ಯವನ್ನು ಬಹಳ ಸಮೀಪಕ್ಕೆ ತರಬಹುದು.

ನಮ್ಮ ಚಕ್ರವರ್ತಿ ಸಾರ್ವಭೌಮರಾದ ಜಾರ್ಜ್ ಪ್ರಭುಗಳು ಸೈನ್ಯಕ್ಕೆ ಇನ್ನೂ ಹೆಚ್ಚು ಜನರು ಬಂದು ಸೇರಬೇಕೆಂಬ ವಿಷಯದಲ್ಲಿ ತಮ್ಮ ಅಭಿಮತವನ್ನು ಇಸ್ತಿಹಾರು ಮೂಲಕ ಪ್ರಕಟಮಾಡಿರುತ್ತಾರೆ. ಅವರು ಅಪ್ಪಣೆಕೊಡಿಸಿರುವುದೇನೆಂದರೆ— "ನಮ್ಮ ಚಕ್ರಾಧಿಪತ್ಯದ ಸಾಹಸ ಸಾಮರ್ಥ್ಯಗಳನ್ನು ನೋಡಿ ಆನಂದಪಡುತ್ತೇವೆ. ಪ್ರಪಂಚದ ಎಲ್ಲಾ ಭಾಗಗಳಿಂದಲೂ ನಮ್ಮ ಪ್ರಜೆಗಳು ತಾವಾಗಿಯೇ ಸಹಾಯಕರಾಗಿ ಬರುತ್ತಿರುವುದು ಅಂದರೆ ತಮ್ಮ ಮನೆಗಳನ್ನೂ, ತಮ್ಮ ಐಶ್ವರ್ಯವನ್ನೂ ತಮ್ಮ ಪ್ರಾಣವನ್ನೂ ತ್ಯಾಗಮಾಡಿ ತಮ್ಮ ಹಿರಿಯರಿಂದ ಸಂಪಾದನೆಮಾಡಲ್ಪಟ್ಟಿರುವ ಸರ್ವ ಸ್ವಾತಂತ್ರ್ಯವುಳ್ಳ ರಾಜ್ಯಕ್ಕೆ ಶತ್ರುವು ಕಾಲುಹಾಕದಂತೆ ನಿಗ್ರಹಮಾಡುವುದಕ್ಕಾಗಿ ಬರುತ್ತಿರುವುದು ಸ್ತೋತ್ರಾರ್ಹವೂ ಚಿರಸ್ಮರಣೀಯವೂ ಆಗಿದೆ. ಇದನ್ನು ನೋಡಿ ನಾವು ತುಂಬಾ ಅಹಂಕಾರಪಟ್ಟುಕೊಳ್ಳುವೆವು. ಯುದ್ಧವು ಇಷ್ಟರಲ್ಲೇ ಕೊನೆಗಾಣುವಂತಿಲ್ಲ. ರಣರಂಗಗಳಲ್ಲಿ ಹೆಚ್ಚು ಹೆಚ್ಚಾಗಿ ಸೈನ್ಯಗಳು ಹೋಗಿ ನಿಲ್ಲಬೇಕಾಗಿದೆ. ಅವರ ಮೂಲಕ ಜಯಪ್ರದವೂ ಶಾಶ್ವತವಾದ ನೆಮ್ಮದಿಯೂ ಲಭ್ಯವಾಗಬೇಕು. ಪ್ರಾಚೀನಕಾಲಗಳಲ್ಲಿ ಅತ್ಯಂತ ಘೋರಕಷ್ಟಗಳು ಒದಗಿದಾಗ್ಗೆ ನಮ್ಮ ಪ್ರಜೆಗಳಲ್ಲಿ ಮಹಾ ಪರಾಕ್ರಮಯುಕ್ತವಾದ ಸಂಕಲ್ಪವು ಪ್ರಕಾಶಕ್ಕೆ ಬಂದಿತು. ಎಲ್ಲಾ ಕೋಮುಗಳ ಪ್ರಜೆಗಳನ್ನೂ ನಾವು ಕೇಳಿಕೊಳ್ಳುವುದೇನೆಂದರೆ—ನೀವಾಗಿಯೇ ಮನಸ್ಸುಮಾಡಿ ಬಂದು ಸೈನ್ಯಕ್ಕೆ ಸೇರಿ ರಣರಂಗದಲ್ಲಿ ನಿಮ್ಮ ಪರಾಕ್ರಮವನ್ನು ತೋರಿಸಿ. ನಮ್ಮ ಪ್ರಾರ್ಥನೆಯನ್ನು ನೀವುಗಳು ನೆರವೇರಿಸುವುದಾದರೆ ನಮ್ಮ ಮಿತ್ರಮಂಡಲಿಗೆ ಸೇರಿ ಬಹುಕಾಲದಿಂದ ನಮಗೆ ಬೆಂಬಲ ಕೊಡುತ್ತಿರುವ ಜನಾಂಗಗಳಿಗೆ ನೀವು ಎಷ್ಟೋ ಸಹಾಯ ಮಾಡಿದಂತಾಗುವುದು. ಇದುವರೆಗೆ ಮಿತ್ರಮಂಡಲಿಯವರು ಗ್ರೇಟ್ ಬ್ರಿಟನ್ ರಾಜ್ಯದ ಮಹಿಮೆಯನ್ನೂ ಅದರ ಕೀರ್ತಿಯನ್ನೂ ಬಹು ಪರಾಕ್ರಮದಿಂದ ಬೆಂಬಲಕೊಟ್ಟು ಕಾಪಾಡಿಕೊಂಡು ಬಂದಿದಾರೆ. ಅಂಥವರಿಗೆ ಸಹಾಯಕರಾಗಿ ಬರುವುದೀಗ ನಿಮ್ಮಗಳ ಕರ್ತವ್ಯಾಂಶವಾಗಿರುವುದು."

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ತಲುಪಿರುವ ಬಾತ್ಮಿಗಳನ್ನು ಸ್ಥಳಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುತ್ತೇವೆ.

ಈ ಸಲದ ಪ್ರಜಾಪ್ರತಿನಿಧಿ ಸಭೆಯು ಕಳೆದ ಮಂಗಳವಾರ ಸಾಯಂಕಾಲ ಸುಮಾರು 7 ಗಂಟೆಗೆ ಪೂರೈಸಿತು. ಶ್ರೀಮನ್ಮಹಾರಾಜರವರು ಮೂರು ದಿನ ದಯಮಾಡಿದ್ದು ಸಭೆಯಲ್ಲಿ ನಡೆದ ಚರ್ಚೆಗಳನ್ನು ಸಾಕ್ಷಾತ್ತಾಗಿ ಪರಾಂಬರಿಸಿದರು. ಮುಖ್ಯವಾದ ಚರ್ಚೆಗಳನ್ನು ಬರುವ ವಾರ ಪ್ರಕಟಿಸುತ್ತೇವೆ.

ಕಳೆದ ವಾರ ಸುಮಾರಾಗಿ ಪ್ರತಿ ದಿನವೂ ರಾಜಧಾನಿಯಲ್ಲಿ ಒಳ್ಳೇ ಮಳೆಯಾಗಿ ಬಿಸಿಲ ತಾಪ ಕಡಮೆಯಾಗಿರುತ್ತದೆ. ಜನಾರೋಗ್ಯವು ತೃಪ್ತಿಕರವಾಗಿದೆ.

ಬೆಂಗಳೂರು ಬೌರಿಂಗ್ ಇನ್‌ಸ್ಟಿಟ್ಯೂಟ್ ಎಂಬ ಸಂಘದ ಪೋಷಕರಾಗಿರುವ ನಮ್ಮ ಮಹಾರಾಜರವರು ಆ ಸಂಘದ ಕಾರ್ಯಗಳಿಗಾಗಿ 1,000 ರೂಪಾಯಿ ಗ್ರ್ಯಾಂಟು ದಯಪಾಲಿಸಿರುತ್ತಾರೆ.

ಈ ಸಲ ನವರಾತ್ರಿ ಉತ್ಸವಗಳಿಗೆ ಮದರಾಸ್ ಗವರ್ನರ್ ಲಾರ್ಡ್ ಪೆಂಟ್ಲೆಂಡ್‌ರವರು ರಾಜಧಾನಿಗೆ ದಯಮಾಡುವಂತೆ ಏರ್ಪಾಡಾಗಿತ್ತು. ಈಚೆಗೆ ಅವರ ಮಕ್ಕಳಿಗೆ ದೇಹಾಲಸ್ಯವಾದದ್ದರಿಂದ ಬರದೆ ನಿಂತುಬಿಟ್ಟರು.

ಸುಬ್ರಹ್ಮಣ್ಯ ಗ್ರಾಮಕ್ಕೆ ಸೇರಿದ ಕುಳಗುಂದದಲ್ಲಿ ಮುಂದಿನ ನೋವೆಂಬರ್ ತಾ. 21 ರಲ್ಲೂ, ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ಡಿಸೆಂಬರ್ ತಾ. 13 ರಲ್ಲೂ ದನಗಳ ಪ್ರದರ್ಶನಗಳು ನಡೆಯುವಂತೆ ಪ್ರಕಟನಾಗಿದೆ.

ಮಧುಗಿರಿಯ ಮುನ್‌ಸಿಫರಾದ ಮ॥ ಶ್ರೀಕಂಠೇಶಗೌಡ, ಬಿ.ಎ., ಬಿ.ಎಲ್. ರವರ ಮೇಲೆ ಲಂಚ ತೆಗೆದುಕೊಂಡರೆಂಬ ಮೊಕದ್ದಮೆ ಬಂದಿರುವುದೆಂದೂ ಸರ್ಕಾರದವರು ಅವರನ್ನು ಸಸ್ಪೆಂಡ್ ಮಾಡಿರುವುದಾಗಿಯೂ ಕೇಳುತ್ತೇವೆ.

ಕಾವೇರಿ ರಿಜರ್ವಾಯರ್ ಕಾಮಗಾರಿಗೆ ಸಂಬಂಧಪಟ್ಟ ಒಬ್ಬ ಇಂಜನಿಯರು ಕಾಮಗಾರಿ ಹಣಗಳನ್ನು ದುರ್ವಿನಿಯೋಗ ನಡಿಸಿದಾರೆಂದು ಸರ್ಕಾರಕ್ಕೆ ತಿಳಿದು ಬಂದಿರುವುದಾಗಿಯೂ, ಅವರ ಲೆಕ್ಕ ಮುಂತಾದುವುಗಳನ್ನು ಒಂದೆರಡು ತಿಂಗಳಿಂದ ತನಿಖೆ ಮಾಡಿಸುತ್ತಿರುವುದಾಗಿಯೂ ವರ್ತಮಾನ ಹುಟ್ಟಿದೆ. ಸರ್ಕಾರದವರು ಇದರ ನಿಜಸ್ಥಿತಿಯನ್ನು ಪ್ರಕಟಿಸಿ ಪ್ರಜೆಗಳಲ್ಲಿ ಹುಟ್ಟಿ ಹಬ್ಬುತ್ತಿರುವ ಸಂಶಯವನ್ನು ಪರಿಹರಿಸಬೇಕಾಗಿದೆ.

ಕಳೆದ ಭಾನುವಾರ ಚಾಮುಂಡಿ ಬೆಟ್ಟದ ಮೇಲೆ ರಥೋತ್ಸವವು ಪದ್ಧತಿಯಂತೆ ಬೆಳೆಯಿತು. ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಹಿತ ಬೆಟ್ಟದ ಮೇಲಕ್ಕೆ ಚಿತ್ತೈಸಿ, ರಥವು ನೆಲೆಗೆ ನಿಲ್ಲುವ ತನಕ ಅದರ ಕೂಡ ಇದ್ದು ಸೇವಾದಿಗಳನ್ನು ಮುಗಿಸಿಕೊಂಡು ಬಂದರು. ಅರಮನೆ ಇಲಾಖೆಯಿಂದ ಸಮಾರಾಧನೆಯೂ, ಅನೇಕ ಭಕ್ತಾದಿಗಳಿಂದ ನಾನಾಕಪೂಜೆ ಸಮಾರಾಧನೆಗಳೂ ನಡೆದವು. ಸಾವಿರಾರು ಪ್ರಜೆಗಳು ಅಲ್ಲಿ ಸೇರಿದ್ದರು.

ಒಬ್ಬ ಬಾತ್ಮಿದಾರರು ಬರೆಯುವುದು.— ಇದೇ ಆಶ್ವೀಜ ಶುದ್ಧ ಅಷ್ಟಮಿ ದಿವಸ ಮಾಂಸಹಾರಿಗಳು ಶಕ್ತಿಗಳಿಗೂ ಆಯುಧಗಳಿಗೂ ಕಾರ್ಖಾನೆಗಳಿಗೂ ಬಲಿಗಳನ್ನರ್ಪಿಸಿದರು. ಮತ್ತು ಮಾಂಸಾಹಾರಿಗಳಲ್ಲದ ಅನೇಕ ಉತ್ತಮ ವರ್ಗದವರು ತಮ್ಮ ಕಾರ್ಖಾನೆಗಳಿಗೂ ಆಯುಧಗಳಿಗೂ ಬೂದುಗುಂಬಳಕಾಯಿ, ತೆಂಗಿನಕಾಯಿ, ನಿಂಬೇಹಣ್ಣು ಮುಂತಾದ ಫಲಗಳಿಗೆ ಕುಂಕುಮವನ್ನು ತುಂಬಿ, ನೋಡುವುದಕ್ಕೆ ಕೆಂಪಾಗಿರುವಂತೆ ವಿಕಾರಮಾಡಿ ಹೊಡೆಯುತ್ತಾರೆ. ಈ ರೀತಿ ಮಾಡುವುದು ಯಾವ ಧರ್ಮವೋ ತಿಳಿಯಲಿಲ್ಲ.

ಕಳೆದ ವಾರ ರಾಜಧಾನಿಯ ಟೌನ್ ಹಾಲ್ ಹಿಂಭಾಗದ ಸಾಲು ಅಂಗಡಿಗಳ ಪೈಕಿ ಮ॥ ಕೆ. ನರಸಿಂಹಯ್ಯನವರ ಜವಳಿ ಅಂಗಡಿಗೆ ಹೈರೋಡಿನ ಕಡೆ ಕಳ್ಳರು ದೊಡ್ಡದಾಗಿ ಕನ್ನಾಹಾಕಿ ಒಳಗಡೆ ಬೀರುಗಳಲ್ಲಿದ್ದ ಸುಮಾರು ಒಂದು ಸಾವಿರ ರೂಪಾಯಿನ ಭಾರಿ ಸೀರೆಗಳನ್ನು ಸಾಗಿಸಿಕೊಂಡು ಹೋದರು. ಆ ದಿನ ರಾತ್ರಿ ಬೆಳದಿಂಗಳೂ, ಅಕ್ಕಪಕ್ಕಗಳಲ್ಲೇ ನಾಟಕಾದಿ ವಿನೋದಗಳ ಸಂದಣಿಯೂ ವಿಶೇಷವಾಗಿದ್ದು ಪೋಲೀಸಿನವರ ಸುಳುವೇ ಇಲ್ಲದೆ ಈ ದುಃಖಕರವಾದ ನಷ್ಟಕ್ಕೆ ಮ॥ ನರಸಿಂಹಯ್ಯನವರು ಗುರಿಯಾಗಬೇಕಾಯಿತು. ಪೋಲೀಸಿನವರು ಕಳುವಾದ ಸಾಮಾನುಗಳನ್ನು ಪತ್ತೆಮಾಡಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ಕಳೆದ ಭಾನುವಾರ ದಿವಾನ್‌ರವರು ಪ್ರಜಾಪ್ರತಿನಿಧಿಗಳಿಗೂ, ಮುಖ್ಯ ಅಧಿಕಾರಿಗಳಿಗೂ, ರಾಜಧಾನಿಯ ಎಲ್ಲಾ ಪಂಗಡಗಳ ದೊಡ್ಡ ಮನುಷ್ಯರಿಗೂ ಸರ್ ಶೇಷಾದ್ರಿ ಅಯ್ಯರವರ ಬಂಗಲೆಯಲ್ಲೂ, ಮರಿಮಲ್ಲಪ್ಪನವರ ಹೈಸ್ಕೂಲ್ ಮುಂತಾದ ಕಟ್ಟಡಗಳಲ್ಲೂ ಕೋಮುವಾರು ಔತಣಗಳನ್ನು ಮಾಡಿಸಿದರು. ಔತಣದ ಏರ್ಪಾಡುಗಳು ತೃಪ್ತಿಕರವಾಗಿದ್ದವು. ಭೋಜನಾನಂತರ ಅತಿಥಿಗಳನ್ನೆಲ್ಲಾ ದಿವಾನ್‌ರವರು ದೊಡ್ಡ ಡೇರಾದಲ್ಲಿ ಕೂಡಿಸಿಕೊಂಡು ಸಂಗೀತ, ಹಾಡುಗಾರಿಕೆಗಳನ್ನು ಮಾಡಿಸಿ ಸಂತೋಷಪಡಿಸಿ ಹೂವು ಗಂಧ ಅಡಿಕೆಲೆಗಳನ್ನು ಕೊಡಿಸಿದರು. ಅತಿಥಿಗಳು ತೃಪ್ತಿಪಟ್ಟು ಶ್ರೀಮನ್ ಮಹಾರಾಜರವರ ಮತ್ತು ದಿವಾನ್‌ರವರ ಶ್ರೇಯಸ್ಸನ್ನು ಬಯಸುತ್ತಾ ತೆರಳಿದರು.

ಮೈಸೂರು ಸೀಮೆಯ ವ್ಯವಸಾಯದ ಇಲಾಖಾ ಡೈರೆಕ್ಟರವರು ತಿಳಿಸುವುದು.—ರಾಗಿ ಮತ್ತು ಕಡ್ಲೆಕಾಯಿ ಬೆಳೆ ವಿಷಯವಾಗಿ ಕೊಡುವ ವ್ಯವಸಾಯಕ್ಕೆ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳದ ಫಾರಂನಲ್ಲಿ 1915 ನೇ ಇಸವಿ ನವಂಬರು 22, 23, 24ನೇ ತಾ. ಗಳಲ್ಲಿ ನಡೆಯುವದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳದ ಫಾರಂನಲ್ಲಿ ಇರಲು ಸ್ಥಳವೂ ಮತ್ತು ಅವರಿಗೆ ತಗಲತಕ್ಕ ರೈಲು ಛಾರ್ಜು ಮತ್ತು ಊಟದ ಖರ್ಚಿನಲ್ಲಿ ಮೂರನೇ ಒಂದು ಭಾಗ ಸರ್ಕಾರದಿಂದ ಮುಫತ್ತಾಗಿ ಕೊಡಲಾಗುತ್ತೆ. ಸದರಿ ಪಾಠವನ್ನು ಕೇಳಲು ಬರಲಪೇಕ್ಷೆಯುಳ್ಳ ಜನಗಳು ಒಂದು ವಾರದ ಮುಂಚಿತವಾಗಿ ತಿಳಿಸತಕ್ಕದ್ದು.

ಒಬ್ಬ ಬಾತ್ಮಿದಾರರಿಂದ.—ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಶಾಖೆಯಲ್ಲಿ 22 ನೇ ತಾ. ಶುಕ್ರವಾರ "ಶೀಲ" ವನ್ನೂ ಮತ್ತು 23 ನೇ ತಾ. ಶನಿವಾರ "ಸಂಸ್ಕೃತ ಭಾಷಾಭಿಜ್ಞತೆ" ಯನ್ನೂ ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸಗಳನ್ನು ಶ್ರೀಮತಿ ಪಂಡಿತ ಸುಂದರಮ್ಮನವರು ಸ್ತ್ರೀಮಂಡಲಿಯವರಿಗಾಗಿ ಕೊಟ್ಟರು. ಅದರಲ್ಲಿ ಅನೇಕ ವಿಷಯಗಳು ಅಡಕವಾಗಿದ್ದಲ್ಲದೆ ತತ್ಕಾಲೋಚಿತವಾದ ಮಾರ್ಗಗಳನ್ನು ಬಹಳ ಸೂಕ್ಷ್ಮವಾಗಿ ತೋರ್ಪಡಿಸುತ್ತಲಿತ್ತು. ಮುಖ್ಯವಾಗಿ ಇದನ್ನು ಕೇಳುವುದಕ್ಕೆ ಬಂದಿದ್ದ ಸಹೋದರಿಯರೆಲ್ಲರಿಗೂ ಆನಂದವಾಯಿತು. ನಮ್ಮ ದಿವಾನ್‌ರವರ ಮಾತೋಶ್ರೀ ವೆಂಕಮ್ಮನವರೂ, ನಮ್ಮ ಪ್ರೆಸಿಡೆಂಟರ ಮನೆಯವರೇ ಮೊದಲಾದ ಅನೇಕರೂ ಸಭೆಯನ್ನಲಂಕರಿಸಿದ್ದರಲ್ಲದೆ ಉಪನ್ಯಾಸಕರಿಗೆ ಪ್ರೋತ್ಸಾಹದಿಂದ ತಮ್ಮ ಸಂತೋಷವನ್ನು ತೋರ್ಪಡಿಸಿದರು. ನಮ್ಮ ಪ್ರಭುಗಳ ಶ್ರೇಯಃಪ್ರಾರ್ಥನೆಗಳಿಂದ ಸಭೆಯು ಮುಕ್ತಾಯವಾಯ್ತು.

[೮ ನೇ ಪುಟದಿಂದ ಮುಂದೆ]

ಬೇಕು. ಈಗಿನ ನಮ್ಮ ಕೇವಲ ಕೀಳುದರ್ಜೆಯು ಮುಂದೆ ನಮ್ಮ ದೇಶಾಭಿವೃದ್ಧಿಗೆ ಎಷ್ಟು ಅವಕಾಶವಿದೆ ಎಂಬುವದನ್ನು ತೋರಿಸುತ್ತದೆ, ಮತ್ತು ನಮ್ಮ ಪ್ರಯತ್ನಗಳು ಕ್ಷಿಪ್ರದಲ್ಲಿಯೇ ಸಫಲವಾಗುತ್ತವೆಂಬುವದಕ್ಕೆ ಶುಭಸೂಚನೆಯೂ ಆಗಿಯೂ ಇರುತ್ತದೆ—ಜನಗಳ ಕಾರ್ಯದಕ್ಷತೆಯನ್ನು ವೃದ್ಧಿಗೊಳಿಸುವದಕ್ಕೆ ಸರ್ಕಾರದವರು ಮಾಡಬಹುದಾದದ್ದು ಸ್ವಲ್ಪವಾದರೂ, ಅಷ್ಟನ್ನೂ ಮಾಡುತ್ತಲಿರುವರು. ಆದರೆ ಜನಗಳು ಉತ್ಸಾಹಯುಕ್ತರಾಗಿ ಸ್ವತಃ ಕೆಲಸಮಾಡತೊಡಗಿದ ಹೊರತು ಸರ್ಕಾರದವರ ಪ್ರಯತ್ನದಿಂದಲೇ ವಿಶೇಷ ಪ್ರಯೋಜನವುಂಟಾಗಲಾರದು. ಪ್ರಜಾಪ್ರತಿನಿಧಿಗಳಲ್ಲಿ ವಿಶೇಷ ಪ್ರಜ್ಞರಾದವರು ಈಗಿನ ಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ, ಇದು ಉಪೇಕ್ಷ್ಯಮಾಡತಕ್ಕದ್ದಲ್ಲವೆಂದು ಚೆನ್ನಾಗಿ ತಿಳಿದು, ದೇಶದ ಏಳಿಗೆಗಾಗಿ ಮಾಡತೊಡಗಿರುವ ಅನೇಕ ಹೊಸಹೊಸ ಏರ್ಪಾಡುಗಳನ್ನು ನಡಿಸುವುದರಲ್ಲಿ ಸರ್ಕಾರದವರಿಗೆ ಸಹಾಯಕರಾಗಿರಲು ಪ್ರಯತ್ನಮಾಡುವರೆಂದು ನಂಬಿರುತ್ತೇವೆ ಈ ಸಹಾಯವು ಸರ್ಕಾರೀ ನೌಕರರಿಂದಲೂ, ಇತರರಿಂದಲೂ ಆಗಬೇಕಾಗಿರುತ್ತದೆ ಈ ಸಹಾಯವು, ಕೇಳಿದಾಗ ಮಾಡೋಣವೆಂದು ತಟಸ್ಥರಾಗಿ ಇರುವುದಕ್ಕೆ ಬದಲಾಗಿ, ತಾವು ಪ್ರಯೋಜನಕರವಾದ ಸಲಹೆಗಳನ್ನು ಕೊಡುತ್ತಾ, ಅಂಥ ಸಂದರ್ಭಗಳನ್ನು ತಮಗೆ ಕಲ್ಪಿಸಿಕೊಡಬೇಕು ಎಂದು ಕೇಳಿಕೊಂಡು ಮಾಡತಕ್ಕದ್ದಾಗಿರಬೇಕು—ನಮಗೆ ಅವಶ್ಯಕವಾದ ಈ ವಿಧವಾದ ಸಹಾಯವೊದಗಲು ಪ್ರಾರಂಭವಾಗಿರುವದು ಸಂತೋಷಕರವಾಗಿದೆ. ಹೋದವರ್ಷದ ಸಭೆಯಲ್ಲಿ ಗ್ರಾಮಾಭಿವೃದ್ಧಿಯ ಏರ್ಪಾಡಿನ ಸಂಬಂಧದಲ್ಲಿ, ಈ ಸಭೆಗೆ ಸೇರಿದ ಸುಮಾರು 60 ಜನ ಮೆಂಬರುಗಳು ಸಹಾಯ ಮಾಡಿದ ವಿಷಯವನ್ನು ಪ್ರಸ್ತಾಪಿಸಿದೆವು. ಈ ವರ್ಷ ಸಂಪದಭಿವೃದ್ಧಿ ಸಮಾಜದ ಸಂಬಂಧದಲ್ಲಿ ಸುಮಾರು 200 ಜನ ಮುಖಂಡರು ಸಹಾಯಮಾಡಿರುತ್ತಾರೆ. ಆ ಪೈಕಿ ಅನೇಕರು ಈ ಸಭೆಯ ಮೆಂಬರುಗಳು. ಅವರೆಲ್ಲರಿಗೂ ನಮ್ಮ ಕೃತಜ್ಞತೆಯನ್ನು ತಿಳಿಯಪಡಿಸಲು ಸಂತೋಷಿಸುತ್ತೇವೆ. ಹೀಗೆ ತೃಪ್ತಿಕರವಾದ ಸಹಾಯವು ಒದಗುತ್ತಿರುವಲ್ಲಿ ಈ ವರ್ಷದಲ್ಲಿಯೂ ಮುಂದೆಯೂ, ತಾವೇ ಇಷ್ಟಪಟ್ಟು ಮಾಡುವ ಅಮೂಲ್ಯವಾದ ಈ ಬಗೆಯ ಸಹಾಯವು ಹೆಚ್ಚಾಗಿ ಬರುತ್ತದೆಂಬುವದರಲ್ಲಿ ಮಹಾರಾಜರ ಸರ್ಕಾರದವರಿಗೆ ಯಾವ ಸಂದೇಹವೂ ಇಲ್ಲ.—ಮಹನೀಯರೇ, ಘನತೆಯನ್ನೈದಿದ ಇಂಡಿಯಾ ದೇಶದ ವೈಸರಾಯಿಯವರಾದ ಲಾರ್ಡ್ ಹಾರ್ಡಿಂಗ್‌ರವರ ಲೋಕೋಪಕಾರಕವಾದ ಪ್ರಭುತ್ವದ ಅವಧಿಯು ಸಮೀಪಿಸುತ್ತಾ ಬಂದಿರುವ ವಿಷಯದಲ್ಲಿ ಶ್ರೀಮನ್ ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಉಂಟಾಗಿರುವ ವಿಶೇಷ ವಿಷಾದವನ್ನು ಈ ಸಂದರ್ಭದಲ್ಲಿ ಹೇಳದೆ ಬಿಟ್ಟರೆ ಈ ಉಪನ್ಯಾಸವು ಪೂರ್ತಿಯಾಗದೆಂತ ತಾವೂ ಭಾವಿಸುವಿರೆಂದು ತಿಳಿಯುತ್ತೇವೆ. ಈ ಮಹಾಪ್ರಭುಗಳವರು ನಿಜವಾದ ಹಿತೈಷಿಗಳಾಗಿಯೂ ಪರಮಾಪ್ತರಾದ ಸ್ನೇಹಿತರಾಗಿಯೂ ಇರುವದರಿಂದ ಎಲ್ಲಾ ನೇಟಿವ್ ಸಂಸ್ಥಾನಗಳವರೂ ಇವರ ನ್ಯಾಯಾನುವರ್ತನದಲ್ಲಿಯೂ ನಿಷ್ಪಕ್ಷಪಾತದಲ್ಲಿಯೂ ಸಂಪೂರ್ಣ ಭರವಸೆಯನ್ನು ಇಟ್ಟಿರುತ್ತಾರೆ.—ಇದೂ ಅಲ್ಲದೆ, ನಮ್ಮ ರೆಸಿಡೆಂಟರವರಾದ ಆನರೆಬಲ್ ಕರ್ನಲ್ ಸರ್ ಹ್ಯೂ ಡೇಲಿಯವರು ಈ ಸಭೆಗೆ ದಯಮಾಡಿಸುವ ಸಂದರ್ಭವು ಪ್ರಾಯಶಃ ಇದೇ ಕಡೆಯದಾಗಬಹುದೆಂದು ಜ್ಞಾಪಿಸಿದರೆ ತಾವೂ ಬಹಳ ವಿಷಾದಪಡುವಿರೆಂತ ಎಣಿಸುತ್ತೇವೆ. ಈ ದೇಶಕ್ಕೆ ದಯಮಾಡುವಾಗಲೇ ಇವರ ಖ್ಯಾತಿಯು ವಿಶೇಷವಾಗಿತ್ತು. ಇವರು ರೆಸಿಡೆಂಟರಾಗಿರುವ ಕಾಲದಲ್ಲಿ ಮಹಾರಾಜರವರ ಸರ್ಕಾರದವರಿಗೂ ಇವರಿಗೂ ಇರತಕ್ಕ ಸಂಬಂಧವು ಅಸಾಧಾರಣವಾದ ಸೌಹಾರ್ದದಿಂದ ಕೂಡಿದುದಾಗಿತ್ತು. ಇವರು ಈ ಸಂಸ್ಥಾನಕ್ಕೆ ನಿಜವಾದ ಮಿತ್ರರಾಗಿದ್ದುಕೊಂಡು ಬ್ರಿಟಿಷ್ ರಾಜ್ಯತಂತ್ರದ ಸರ್ವೋತ್ಕೃಷ್ಟ ಸಂಪ್ರದಾಯಗಳನ್ನು ಯೋಗ್ಯರೀತಿಯಲ್ಲಿ ಕಾಪಾಡಿಕೊಂಡು ಬಂದಿರುತ್ತಾರೆ. ಇವರು ಕೆಲಸದಿಂದ ನಿವೃತ್ತರಾಗಿ ದಯಮಾಡಿದ ಬಳಿಕವು ಶ್ರೀಮನ್ ಮಹಾರಾಜರವರು ಇವರಲ್ಲಿಟ್ಟಿರುವ ಪ್ರೇಮ ಪುರಸ್ಸರವಾದ ಗೌರವವೂ ಮೈಸೂರು ಸೀಮೆಯ ಪಿಶಿಷ್ಟಪ್ರಜೆಗಳ ಶ್ರೇಯಃಪ್ರಾರ್ಥನೆಯೂ ಇದ್ದೇ ಇರುವುವು

ಪ್ರತಿನಿಧಿಗಳ ಪ್ರಾರ್ಥನೆ.

ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಏಕವಾಗಿ ದಿವಾನರವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಅದರಲ್ಲಿ ಅವರು ಬಿನ್ನೈಸಿಕೊಂಡ ವಿಷಯಗಳ್ಯಾವವೆಂದರೆ—ಅನೇಕ ಕಮಿಟಿಗಳನ್ನೂ ಅಧಿಕಾರಿಗಳನ್ನೂ ಒಳಗೊಂಡಿರುವ ಸಂಪದಭ್ಯುದಯಸಮಾಜ, ವ್ಯವಸಾಯ ಮತ್ತು ಕೈಗಾರಿಕೆಗಳಿಗೋಸ್ಕರ ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟಿರುವ ಇಲಾಖೆಗಳು, ಕೈಗಾರಿಕೆಗಳಿಗೆ ಕೊಡಲ್ಪಡುತ್ತಿರುವ ಪ್ರೋತ್ಸಾಹ, ನಮ್ಮ ದೇಶೀಯರಿಂದಲೇ ನಿರ್ವಹಿಸಲ್ಪಡುವ ರೈಲ್ವೆಯನ್ನು ಹಾಕುವುದಕ್ಕೆ ನಡೆಯುತ್ತಿರುವ ಏರ್ಪಾಡುಗಳು, ಇವುಗಳೆಲ್ಲವೂ ಗೌರ್ನಮೆಂಟಿನವರು ಪ್ರಜೆಗಳ ಅನುಕೂಲ್ಯಕ್ಕಾಗಿ ಕಲ್ಪಿಸಿರುವ ಅನೇಕ ಸೌಕರ್ಯಗಳಲ್ಲಿ ಮುಖ್ಯವಾಗಿರುತ್ತವೆ. ಇವುಗಳಿಗೆಲ್ಲಾ ನಾವು ಗೌರ್ನಮೆಂಟಿನವರಿಗೆ ಕೇವಲ ಕೃತಜ್ಞರಾಗಿರುತ್ತೇವೆ. ಈ ಕೆಳಗೆ ನಮೂದಿಸಿರುವ ನಮ್ಮ ಅಹವಾಲುಗಳನ್ನು ಗೌರ್ನಮೆಂಟಿನವರು ತಮ್ಮ ಉದಾರಚಿತ್ತಕ್ಕೆ ತೆಗೆದುಕೊಂಡು ಅವುಗಳನ್ನು ನಡಿಸಿಕೊಡಬೇಕೆಂದು ನಾವು ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ. (1) ಈ ಸಭೆಯಲ್ಲಿ ಚರ್ಚಿಸಲ್ಪಡಬಹುದಾದ ಸಬ್‌ಜಕ್ಟುಗಳ ವಿಚಾರದಲ್ಲಿ ಮಾಡಿರುವ ನಿರ್ಬಂಧಗಳಿಂದ ಅನೇಕ ಮುಖ್ಯವಾದ ಸಬ್‌ಜಕ್ಟುಗಳನ್ನು ಬಿಟ್ಟುಬಿಡಬೇಕಾಗುವುದಲ್ಲದೆ, ಅನೇಕರು ಈ ವಿಚಾರದಲ್ಲಿ ಸಂಕೋಚಪಡುವುದಕ್ಕೆ ಕಾರಣವಾಗಿದೆ. ಆದುದರಿಂದ ಈ ನಿರ್ಬಂಧಗಳನ್ನು ತಪ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ (2) ಪ್ರಜಾಪ್ರತಿನಿಧಿಗಳು ಮೊದಲೇ ವಿಜ್ಞಾಪಿಸಿದ್ದ ಸಬ್‌ಜಕ್ಟುಗಳಲ್ಲದೆ ಈ ಮಹಾಸಭೆಗಾಗಿ ಮೈಸೂರು ಪಟ್ಟಣಕ್ಕೆ ಬಂದನಂತರ ಸಭೆಯು ಪ್ರಾರಂಭಿಸುವುದಕ್ಕೆ ಪೂರ್ವಭಾವಿಯಾಗಿ ಹೊಸ ಸಬ್‌ಜಕ್ಟುಗಳನ್ನು ಸೇರಿಸುವ ಪದ್ಧತಿಯು ಪೂರ್ವದಲ್ಲಿತ್ತು ಈ ಪದ್ಧತಿಯು ಆಚರಣೆಯಲ್ಲಿದ್ದಾಗ ನಾವುಗಳೆಲ್ಲರೂ ಕಲೆತು ಸಂಸ್ಥಾನಕ್ಕೆ ಸಂಬಂಧಪಟ್ಟ ಮುಖ್ಯ ವಿಷಯಗಳನ್ನು ಚರ್ಚಿಸುವುದಕ್ಕೆ ಅವಕಾಶವಿತ್ತು. ಹೊಸ ರೂಲುಗಳು ಜಾರಿಗೆ ಬಂದನಂತರ ನಮಗಿದ್ದ ಬಾಧ್ಯತೆ ತಪ್ಪಿದ್ದಲ್ಲದೆ ಮುಖ್ಯ ವಿಚಾರಗಳಲ್ಲಿ ಪ್ರಜಾಪ್ರತಿನಿಧಿಗಳ ಒಟ್ಟು ಅಭಿಪ್ರಾಯವೇನೆಂಬುದು ಗೌರ್ನಮೆಂಟಿನವರಿಗೆ ತಿಳಿಯುವುದಕ್ಕೆ ಅವಕಾಶವಿಲ್ಲದಂತಾಗಿದೆ. ಆದುದರಿಂದ ಹೊಸ ಸಬ್‌ಜಕ್ಟುಗಳನ್ನು ಸೇರಿಸುವ ಹಕ್ಕನ್ನು ಮೊದಲಿನಂತೆ ನಮಗೆ ದಯಪಾಲಿಸಬೇಕಾಗಿ ಪ್ರಾರ್ಥನೆ. (3) ನಮ್ಮ ದೇಶದಲ್ಲಿ ಒಂದು ಸಕಲ ವಿದ್ಯಾನಿಲಯವನ್ನು ಏರ್ಪಡಿಸುವುದು ಆವಶ್ಯಕವೆಂಬುದು ಸರ್ವರಿಗೂ ವೇದ್ಯವಾಗಿರುತ್ತದೆ. ನಮ್ಮ ಸಂಪದಭ್ಯುದಯ ಸಾಮಾಜಿಕರೆಲ್ಲರೂ ಇದರ ಆವಶ್ಯಕತೆಯನ್ನು ಏಕ ಕಂಠದಿಂದ ತೋರಿಸಿರುವರು ಈ ವಿಚಾರದಲ್ಲಿ ನಮ್ಮ ಘನಪಾಲಿಗಳಾದ ಸರ್ಕಾರದವರು ನಡಿಸುತ್ತಿರುವ ಪ್ರಯತ್ನಗಳು ಆಗಲೇ ಫಲೋನ್ಮುಖಗಳಾಗಿರುತ್ತವೆಂಬುದನ್ನು ಕೇಳಿ ಸಂತೋಷಪಡುತ್ತೇವೆ. ಆದರೆ ಈ ಭಾಗಗಳಲ್ಲಿ ನಮ್ಮ ಅರಿಕೆಗಳನ್ನೆಲ್ಲಾ ಸರ್ಕಾರದವರು ನಡಿಸಿಕೊಡಬೇಕಾಗಿ ಪುನಃ ಕೇಳಿಕೊಳ್ಳುತ್ತೇವೆ. (4) ರಾಜಧಾನಿಯಲ್ಲಿ ನೀರಿನ ತರಿಗೆಯನ್ನು ಮನೆಯ ಮೇಲೂ ಅಂಗಡಿಯ ಮೇಲೂ ಸಹ ವಸೂಲ್ಮಾಡಬೇಕೆಂದು ವಿಧಿಸುವ ರೂಲಿನ ಪ್ರಕಾರ ಅನೇಕ ಸಂದರ್ಭಗಳಲ್ಲಿ ಒಬ್ಬ ಮನುಷ್ಯನು ಈ ತೆರಿಗೆಯನ್ನು ಎರಡಾವರ್ತಿ ಕೊಡಬೇಕಾಗುವುದು. ಆದುದರಿಂದ ಅಂಗಡಿಗಳ ಮೇಲೆ ನೀರಿನ ತೆರಿಗೆಯನ್ನು ವಸೂಲು ಮಾಡಬೇಕೆಂಬ ರೂಲನ್ನು ವಜಾ ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ (5) ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ನಡೆದ ಜುಡಿಷಿಯಲ್ ಕಾನ್‌ಫರೆನ್ಸಿನವರು ಸೂಚಿಸಿದ್ದ ಸಲಹೆಗಳಲ್ಲಿ ಜುಡಿಷಿಯಲ್ ಅಧಿಕಾರವನ್ನು ಎಗ್ಸಿಕ್ಯೂಟಿವ್ ಅಧಿಕಾರದಿಂದ ಬೇರ್ಪಡಿಸಬೇಕೆಂಬುವುದು ಅತ್ಯಂತ ಮುಖ್ಯವಾದದ್ದು. ಈ ಸಲಹೆಯನ್ನು ಸಂಪೂರ್ಣವಾಗಿ ಜಾಗ್ರತೆಯಲ್ಲಿಯೇ ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇವೆ. (6) ಮಲೆನಾಡು ಕಮಿಟಿಯವರು ಕೇವಲ ಸ್ಯಾನಿಟರಿ ಏರ್ಪಾಡುಗಳಿಗೆ ಮಾತ್ರವೇ ಗಮನಕೊಡುತ್ತಿರುವರೆಂದು ಕೇಳುತ್ತೇವೆ. ಕೇವಲ ಸ್ಯಾನಿಟರೀ ಏರ್ಪಾಡುಗಳು ಮಲೆನಾಡಿನ ದುರವಸ್ಥೆಯನ್ನು ಹೋಗಲಾಡಿಸಲಾರವೆಂದು ನಮ್ಮ ಅಭಿಪ್ರಾಯ. ಆದುದರಿಂದ ಇವುಗಳ ಜೊತೆಗೆ ಮಲೆನಾಡಿನ ಎಕನಾಮಿಕ್ ಸರ್ವೆಯೊಂದನ್ನು ಏರ್ಪಡಿಸಬೇಕೆಂತಲೂ, ಮಲೆನಾಡಿನ ಜನಗಳ ಏಳಿಗೆಗೆ ಬೇಕಾದ ಏರ್ಪಾಡುಗಳನ್ನೂ ಮಾಡಿಕೊಡಬೇಕಾಗಿಯೂ ಪ್ರಾರ್ಥನೆ. (7) ಜನಗಳ ಮನಸ್ಸನ್ನು ಚೆನ್ನಾಗಿ ತಿಳಿಯಬೇಕಾದರೆ ಅಧಿಕಾರಿಗಳು ದೇಶಭಾಷೆಯಲ್ಲಿ ತಕ್ಕಷ್ಟು ಪರಿಶ್ರಮ ಹೊಂದಿರುವುದು ಅವಶ್ಯಕ. ಆದುದರಿಂದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕನಿಷ್ಠ ಪಕ್ಷ ಸ್ಕೂಲ್ ಫೈನಲ್ ತರಗತಿಗಿಟ್ಟಿರುವ ಮಟ್ಟಿಗಾದರೂ ಕನ್ನಡ ಪ್ರಬಂಧರಚನೆಯನ್ನೂ, ಕನ್ನಡ ಭಾಷಾಂತರವನ್ನೂ ಇಡುವುದು ಆವಶ್ಯಕ. (8) ಸುಪಾರಿ ಹಾಲತ್ ಯಾನೆ ಅಡಿಕೆಯ ಮೇಲಿನ ಸುಂಕವು ಅನಾವಶ್ಯಕವೆಂದು ನಮಗೆ ತೋರುತ್ತದೆ. ಆದುದರಿಂದ ಸದರೀ ಸುಂಕವನ್ನು ಪೂರ್ಣವಾಗಿ ತಪ್ಪಿಸಬೇಕಾಗಿ ಕೋರಿಕೆ. (9) ದೇಶದ ಆದಳಿತಗಳನ್ನು ಸಾಕ್ಷಾತ್ತಾಗಿ ನಡಿಸುವುದರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿನಂತೆ ಇಲ್ಲಿಯೂ ಕೂಡ ಖಾಸಗೀ ದೊಡ್ಡ ಮನುಷ್ಯರೊಬ್ಬರನ್ನು ನೇಮಿಸಿಕೊಳ್ಳುವುದಕ್ಕೆ ಸರಿಯಾದ ಕಾಲವು ಪ್ರಾಪ್ತವಾಗಿರುತ್ತದೆ. ಆದುದರಿಂದ ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ಲಿಗೆ ಒಬ್ಬ ಖಾಸಗೀ ದೊಡ್ಡ ಮನುಷ್ಯರನ್ನು ನೇಮಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ (10) ಜುಡಿಷಿಯಲ್ ಕಾನ್‌ಫರೆನ್ಸಿನವರು ಮಾಡಿದ ಅನೇಕ ಸಲಹೆಗಳು ಗೌರ್ನಮೆಂಟಿನವರ ಉದಾರ ಚಿತ್ತಕ್ಕೆ ಬಾರದಿರುವುದನ್ನು ನೋಡಿ ಜನಗಳು ಸಂಕೋಚಚಿತ್ತವುಳ್ಳವರಾಗಿರುವರು. ಆದುದರಿಂದ ಗೌರ್ನಮೆಂಟಿನವರು ಸದರೀ ಸಲಹೆಗಳ ವಿಚಾರವಾಗಿ ಪುನರಾಲೋಚನೆ ಮಾಡಬೇಕೆಂತಲೂ, ಜುಡಿಷಿಯಲ್ ಕಾನ್‌ಫರೆನ್ಸನ್ನು ಮೂರು ವರ್ಷಕ್ಕೊಂದಾವೃತ್ತಿ ನಡೆಯುವಂತೆ ಏರ್ಪಾಡು ಮಾಡಬೇಕೆಂತಲೂ ಪ್ರಾರ್ಥಿಸುತ್ತೇವೆ. (11) ಸ್ವಾಮಿಯವರ ಅಡ್ರೆಸ್ಸಿನ ಕಾಪಿಯು ನಮಗೆ ಸ್ವಲ್ಪ ಪೂರ್ವಭಾವಿಯಾಗಿಯೇ ಸಿಕ್ಕಿದರೆ ಅದಕ್ಕೆ ಸೂಕ್ತವಾದ ಅರಿಕೆಯನ್ನು ನಾವು ಸಿದ್ಧಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ವಿಚಾರವು ತಮ್ಮ ಚಿತ್ತಕ್ಕೆ ಬರುವುದೆಂದು ಕೋರುತ್ತೇವೆ (12) ಈಗ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಯುದ್ಧದ ಅನರ್ಥಗಳಿಂದ ನಮ್ಮ ವ್ಯಾಪಾರಕ್ಕೆ ಉಂಟಾಗಿರತಕ್ಕ ತೊಂದರೆಗಳು ವಿಶೇಷವಾಗಿವೆ. ಬ್ರಿಟಿಷ್ ನಾವೆಯವರು ವ್ಯಾಪಾರ ಮಾರ್ಗಗಳನ್ನು ರಕ್ಷಿಸುವುದಕ್ಕೆ ಮಾಡಿರತಕ್ಕ ಬಲವಾದ ಪ್ರಯತ್ನಗಳೂ, ಇದಕ್ಕೆ ಬ್ರಿಟಿಷ್ ಗೌರ್ನಮೆಂಟಿನವರು ಮಾಡಿರತಕ್ಕ ಸಹಾಯವೂ ನಮ್ಮ ವ್ಯಾಪಾರಕ್ಕೆ ತುಂಬಾ ಕುಂದಕವುಂಟಾಗದಂತೆ ಮಾಡಿರುತ್ತವೆ. ಇದರಿಂದ ನಾವು ನಮ್ಮ ನಮ್ಮ ಕೆಲಸಗಳನ್ನು ಸುಲಲಿತವಾಗಿ ಮಾಡಿಕೊಳ್ಳುತ್ತಿರುವೆವು. ಬ್ರಿಟಿಷ್ ಗೌರ್ನಮೆಂಟಿನವರು ನಮಗೆ ಅನೇಕ ವಿಧವಾಗಿ ಉಪಕಾರಗಳನ್ನು ಮಾಡುತ್ತಲಿದ್ದಾರೆ. ಇದಕ್ಕಾಗಿ ನಾವು ಎಷ್ಟು ಕೃತಜ್ಞರಾಗಿದ್ದರೂ ಅದು ಅಲ್ಪವಾಗಿಯೇ ಇದೆ. ಈ ಯುದ್ಧದಲ್ಲಿ ನಮ್ಮ ಶಕ್ತಿಗನುಸಾರವಾಗಿ ನಾವೂ ಭಾಗಿಗಳಾಗುವುದಕ್ಕೆ ಬ್ರಿಟಿಷ್ ಗೌರ್ನಮೆಂಟಿನವರು ಅವಕಾಶಕೊಟ್ಟದ್ದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ. ಬ್ರಿಟಿಷ್ ಜನಗಳಿಗೂ ಮಿತ್ರಮಂಡಲಿಯವರಿಗೂ ಜಗದೀಶ್ವರನು ಶೀಘ್ರದಲ್ಲಿಯೇ ಜಯವನ್ನುಂಟುಮಾಡಲೆಂದು ನಾವು ಪ್ರಾರ್ಥಿಸುತ್ತೇವೆ.—ನಮ್ಮ ಶ್ರೀಮನ್ಮಹಾರಾಜರವರು ನಮಗೆ ನಿರಂತರವಾಗಿ ಮಾಡುತ್ತಲಿರುವ ಅನೇಕ ಉಪಕಾರಗಳು ನಮ್ಮ ರಾಜಭಕ್ತಿ ವಿಶ್ವಾಸಗಳಿಗೆ ಅತ್ಯಂತ ಉತ್ತೇಜನವನ್ನು ಕೊಟ್ಟಿರುತ್ತವೆ. ಶ್ರೀಮನ್ ಮಹಾರಾಜರವರ ಉಪಕಾರಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ. ಈ ವಿಷಯವನ್ನು ಶ್ರೀಮನ್ ಮಹಾರಾಜರವರಿಗೆ ನಮ್ಮ ಪಕ್ಷವಾಗಿ ತಾವು ವಿಜ್ಞಾಪಿಸಬೇಕೆಂದು ಅತ್ಯಂತ ಭಕ್ತಿಪುರಸ್ಸರವಾಗಿ ನಾವು ತಮ್ಮನ್ನು ಬೇಡುತ್ತೇವೆ.

ಪ್ರತಿನಿಧಿಗಳ ಅಡ್ರೆಸ್ಸುಗಳಿಗೆ ದಿವಾನರವರ ಉತ್ತರ.

ಕೋಲಾರದ ಚಿನ್ನದ ಗಣಿಗಳ ಬೋರ್ಡ್, ಸಂಟ್ರಲ್ ಮಹಮ್ಮದೀಯ ಅಸೋಸಿಯೇಷನ್, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳು, ಉತ್ತರ ಮೈಸೂರು ಪ್ಲಾಂಟರುಗಳ ಅಸೋಸಿಯೇಷನ್, ತರೀಕೆರೆ ಮುಸ್ಲಿಂ ಅಸೋಸಿಯೇಷನ್, ಪ್ರತಿನಿಧಿ ಸಭೆಯ ಮೆಂಬರುಗಳು, ಈ ಪ್ರತಿನಿಧಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರಿಗೆ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿದರು. ಅವುಗಳನ್ನೆಲ್ಲಾ ಒಟ್ಟುಕೂಡಿಸಿ ದಿವಾನರವರು ದಯಪಾಲಿಸಿದ ಪ್ರತ್ಯುತ್ತರದ ಮುಖ್ಯಾಂಶಗಳೇನೆಂದರೆ.....

.....ಕೋಲಾರದ ಚಿನ್ನದ ಗಣಿಗಳ ಬ್ರಾಂಚ್ ರೈಲ್ವೆಯ ಮೇಲಿನ ಅಧಿಕಾರವನ್ನು ಈ ಸಂಸ್ಥಾನಕ್ಕೆ ಕಾಯಮಾಗಿ ಪುನಃ ವರ್ಗಾಯಿಸಬೇಕೆಂದು ಮೈನಿಂಗ್ ಬೋರ್ಡಿನವರು ಅರಿಕೆಮಾಡಿಕೊಂಡಿರುವ ವಿಚಾರದಲ್ಲಿ, ಇಂಡಿಯಾ ಸರ್ಕಾರದವರು, ಕೆಲವು ಷರತ್ತುಗಳಿಗೆ ಒಳಪಡಿಸಿ ನಮ್ಮ ವಿಜ್ಞಾಪನೆಯನ್ನು ದೊಡ್ಡ ಮನಸ್ಸುಮಾಡಿ ನಡಿಸಿಕೊಟ್ಟಿರುತ್ತಾರೆಂಬ ವಿಷಯವನ್ನು ಕೇಳಿ ತಾವೂ ಸಂತೋಷಪಡುವಿರಿ—ಮೈನಿಂಗ್ ಬೋರ್ಡಿನವರ ಅಭಿನಂದನ ಪತ್ರಿಕೆಯಲ್ಲಿ ಸೂಚಿಸಿರುವ ಗಣಿಗಳ ರೆಗ್ಯುಲೇಷನಿನ ನಿಯಮಗಳನ್ನು ಬ್ರಾಂಚ್ ರೈಲ್ವೆಗಳಿಗೆ ಅನ್ವಯಿಸಬೇಕೆಂಬ ವಿಷಯವನ್ನೂ, ಇತರ ವಿಷಯಗಳನ್ನೂ ಶ್ರೀಮನ್ ಮಹಾರಾಜರವರ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸುವರು—ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳ ಪ್ರತಿನಿಧಿಗಳು ಒಪ್ಪಿಸಿದ ಪತ್ರಿಕೆಯಲ್ಲಿ, ಗ್ರಾಮಾಂತರಗಳಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವು ಹರಡುವಂತೆ ಮಾಡಬೇಕೆಂದು ತಿಳಿಸಿರುವ ಕೋರಿಕೆಯನ್ನು ಸರ್ಕಾರದವರು ಸಂಪೂರ್ಣವಾಗಿ ಸಮ್ಮತಿಸುತ್ತಾರಲ್ಲದೆ, ಸರ್ವರ ದೃಷ್ಟಿಯಲ್ಲಿರುವ ಈ ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಆವಶ್ಯಕವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.—ಮಹಮ್ಮದೀಯರಿಗೆ ಅವರ ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ಮಹಮ್ಮದೀಯ ಅಸೋಸಿಯೇಷನಿನವರು ಸಂತುಷ್ಟರಾಗಿರುವುದು ನಮಗೂ ಸಂತೋಷಕರವಾಗಿದೆ. ಈ ವಿಧವಾದ ಸೌಕರ್ಯಗಳನ್ನು ಇನ್ನೂ ಹೆಚ್ಚಿಸತಕ್ಕ ವಿಷಯವು, ನಮ್ಮ ದ್ರವ್ಯಾನುಕೂಲತೆಯನ್ನೂ, ಇದೇ ಸ್ಥಿತಿಯಲ್ಲಿಯೇ ಇರತಕ್ಕ ಇತರ ಪ್ರಜಾ ಪಂಗಡಗಳವರಿಗೆ ಒದಗಿಸಿಕೊಡಬೇಕಾದ ಅನುಕೂಲತೆಗಳನ್ನೂ ನೋಡಿಕೊಂಡು, ಅವುಗಳಿಗೆ ತಕ್ಕಂತೆ ಮಾಡಬೇಕಾದ ವಿಷಯವಾಗಿದೆ. ಬ್ರಿಟಿಷ್ ಇಂಡಿಯಾ ದೇಶದ ಕೆಲವು ಭಾಗಗಳಲ್ಲಿರುವ ಮಹಮ್ಮದೀಯರಲ್ಲಿ, ಪಂಗಡವಾರ್ ಪಾಠಶಾಲೆಗಳನ್ನು ಹೆಚ್ಚಿಸಿಕೊಳ್ಳುವುದಕ್ಕಿಂತಲೂ, ಜನಸಾಮಾನ್ಯದ ಪ್ರಯೋಜನಕ್ಕಾಗಿ ಏರ್ಪಡಿಸಿರುವ ಪಾಠಶಾಲೆಗಳಿಗೇ ತಮ್ಮ ಮಕ್ಕಳನ್ನೂ ಕಳುಹಿಸಿಕೊಡುವುದು ಅವರ ಶಾಶ್ವತವಾದ ಪುರೋವೃದ್ಧಿಗೆ ಅನುಕೂಲವೆಂದು ಎಣಿಸಿ ಆ ರೀತಿ ಮಾಡುವ ವಾಡಿಕೆಯು ಹೆಚ್ಚುತ್ತಲಿರುವದು ಗೋಚರಕ್ಕೆ ಬಂದಿದೆ.

ಸಂಸ್ಥಾನದಲ್ಲಿ ಮದ್ಯಪಾನವು ಹೆಚ್ಚುತ್ತಿರುವುದೆಂದು ವಿಜ್ಞಾಪನ ಪತ್ರಿಕೆಗಳಲ್ಲಿ ಸೂಚಿಸಲಾಗಿದೆ. ಆದರೆ ಹುಟ್ಟುವಳಿ ಹೆಚ್ಚಾದರೂ ಮದ್ಯಗಳ ಸೇವನೆಯು ಸರಾಸರಿ ಹೆಚ್ಚಾಯಿಲ್ಲವೆಂದು ನಮ್ಮ ಉಪನ್ಯಾಸದಲ್ಲಿ ತಿಳಿಸಿರುತ್ತೇವೆ.—ಉತ್ತರ ಮೈಸೂರು ಪ್ಲಾಂಟರುಗಳ ಸಂಘದವರೂ, ಇತರರೂ, ಅವರುಗಳ ವಿಜ್ಞಾಪನಾ ಪತ್ರಿಕೆಗಳಲ್ಲಿ ಇನ್ನೂ ಅನೇಕ ಸ್ಥಳಿಕ ಮುಖ್ಯ ವಿಷಯಗಳನ್ನು ಕುರಿತು ಪ್ರಸ್ತಾಪಿಸಿರುತ್ತಾರೆ. ಇವುಗಳನ್ನು ಯುಕ್ತರೀತಿಯಲ್ಲಿ ಪರ್ಯಾಲೋಚಿಸಲಾಗುವುದು—. ಈ ಸಭೆಯವರು ನೆನ್ನೆ ನಡಿಸಿದ ಮೀಟಿಂಗಿನ ಪ್ರತಿನಿಧಿಗಳು ಈಗತಾನೇ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯ ನಕಲು ಈ ದಿನ ಪ್ರಾತಃಕಾಲವೇ ನಮ್ಮ ಕೈಸೇರಿತು. ಅದರಲ್ಲೂ ಅನೇಕ ಮುಖ್ಯ ವಿಷಯಗಳ ವಿಚಾರವಿದೆ. ತಮಗೆ ತಿಳಿದಂತೆ ಅವುಗಳಲ್ಲಿ ಕೆಲವನ್ನು ಸರ್ಕಾರದವರು ಸಂಪೂರ್ಣವಾಗಿ ಅನುಮೋದಿಸುತ್ತಾರೆ. ಇನ್ನು ಕೆಲವು ವಿಷಯಗಳಲ್ಲಿ ಮೆಂಬರುಗಳ ದೃಷ್ಟಿಯಲ್ಲಿರುವ ಉದ್ದೇಶಗಳನ್ನು ಸರ್ಕಾರದವರು ಸಾಮಾನ್ಯತಃ ಸರಿಯೆಂದು ಒಪ್ಪಿಕೊಂಡರೂ, ಕೂಡಲೇ [illegible]ಗಳನ್ನು ಕಾರ್ಯತಃ ಮಾಡತೊಡಗುವುದು ಸಾಧ್ಯವಲ್ಲ. ಇನ್ನೂ ಅಲ್ಲದೆ, [illegible] ಹೆಚ್ಚಾಗಿ ವಿಮರ್ಶೆಮಾಡಿ ಚರ್ಚಿಸಬೇಕಾದ ವಿಷಯಗಳೂ ಸಹ ಇರುತ್ತವೆ.

ಘನತೆಯನ್ನೈದಿದ ಇಂಡಿಯಾ ಚಕ್ರವರ್ತಿಗಳವರು ನಮ್ಮ ಶ್ರೀಮನ್ಮಹಾರಾಜರವರಿಗೆ ಕೊಟ್ಟಿರುವ ಬಿರುದಿನ ವಿಚಾರವಾಗಿ ವಿಜ್ಞಾಪನಾ ಪತ್ರಿಕೆಗಳಲ್ಲಿ ಮಾಡಿರತಕ್ಕ ಭೂಷಣವಾದ ಪ್ರಸ್ತಾಪವು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಬಹಳವಾಗಿ ಸಂತೋಷವನ್ನುಂಟುಮಾಡುತ್ತದೆ.—ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಸರ್ಕಾರದವರು ಮಾಡತೊಡಗಿರುವ ನಾನಾವಿಧವಾದ ಪ್ರಸ್ಕರಣದ ಮತ್ತು ಅಭಿವೃದ್ಧಿಯ ಏರ್ಪಾಡುಗಳನ್ನು ಕುರಿತು ತಾವುಗಳು ವಿಜ್ಞಾಪನಾ ಪತ್ರಿಕೆಗಳಲ್ಲಿ ಶ್ಲಾಘಾಪುರಸ್ಸರವಾಗಿ ಪ್ರಸ್ತಾಪಿಸಿರುವುದಕ್ಕೋಸ್ಕರ, ನಮ್ಮ ಸಹೋದ್ಯೋಗಿಗಳ ಪರವಾಗಿಯೂ ನಮ್ಮ ಪರವಾಗಿಯೂ ತಮಗೆ ಮನಃಪೂರ್ವಕವಾಗಿ ವಂದನೆ ಮಾಡುತ್ತೇವೆ ಇದಲ್ಲದೆ ಸಾರ್ವಭೌಮ ಸರ್ಕಾರದವರು ನಮಗೆ ಕರುಣಿಸಿ ಕೊಟ್ಟಿರುವ ಬಿರುದಿನ ವಿಷಯದಲ್ಲಿ ನೀವುಗಳು ತಿಳಿಸಿದ ಅಭಿನಂದನಗಳಿಗಾಗಿ ಕೃತಜ್ಞರಾಗಿದೇವೆ.

ಮಹನೀಯರೇ, ಶ್ರೀಮನ್ಮಹಾರಾಜರವರ ವಿಷಯದಲ್ಲಿಯೂ, ಮಹಾರಾಜರವರ ಸಿಂಹಾಸನಾಧಿಪತ್ಯದ ವಿಷಯದಲ್ಲಿಯೂ ನೀವುಗಳು ನಿಮ್ಮ ವಿಜ್ಞಾಪನಾ ಪತ್ರಿಕೆಗಳಲ್ಲಿ ತೋರ್ಪಡಿಸಿರುವ ರಾಜಭಕ್ತಿ ವಿಶ್ವಾಸಗಳನ್ನೂ, ಶ್ರೀಮನ್ಮಹಾರಾಜರವರ ಸುಖ ಪರಿಪಾಲನದಲ್ಲಿ ಅನುಭವಿಸುತ್ತಿರುವ ಅನೇಕ ಪ್ರಯೋಜನಗಳಿಂದ ನಿಮ್ಮಗಳಿಗುಂಟಾಗಿರುವ ಸಂತೋಷವನ್ನೂ ಶ್ರೀಮನ್ಮಹಾರಾಜರವರ ಸನ್ನಿಧಾನದಲ್ಲಿ ಅರಿಕೆಮಾಡುವುದು ನಮಗೆ ಕೇವಲ ಸಂತೋಷಕರವಾಗಿದೆ.

ಮೈಸೂರು ನ್ಯಾಯವಿಧಾಯಕ ಸಭೆ.

ಈ ಸಲದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಗೆ ಮೆಂಬರಾಗಬೇಕೆಂದು ಮುಂದೆ ಹೇಳುವ 14 ಜನಗಳು ಉಮೇದುವಾರರಾಗಿದ್ದರು. ಅವರು ಯಾರೆಂದರೆ—

ಮಿ. ಗಳಾದ ಎಫ್. ಯಂ. ಅಬ್ದುಲ್ ಕುದೂಸ್, ಚನ್ನಪಟ್ಟಣ; [illegible] ನಾರಾಯಣಚೆಟ್ಟಿ, ದಾವಣಗೆರೆ; ಎಂ. ಅನಂತಯ್ಯಶೆಟ್ಟಿ, ಚಿತ್ರದುರ್ಗ; [illegible] ನರಸಿಂಗರಾವ್, ಶ್ರೀರಂಗಪಟ್ಟಣ; ಎಂ. ಬಸವಯ್ಯ, ಬಿ.ಎ., ಬಿ.ಎಲ್., ಬೆಂಗಳೂರು; ಸಿ. ಚನ್ನಕೇಶವಯ್ಯ, ಬಿ.ಎ., ಚಿತ್ರದುರ್ಗ; ಸಿ. ನರಸಿಂಹಯ್ಯ, ಬಿ.ಎ., ಬಿ.ಎಲ್, ಮೈಸೂರು; ಎಂ. ಕರ್ಣಿಕ ಕೃಷ್ಣಮೂರ್ತಿರಾವ್, ಬೆಂಗಳೂರು; ಎಂ. ವೆಂಕಟಕೃಷ್ಣಯ್ಯ, ಮೈಸೂರು; ಎಸ್. [illegible]ರಾಮಯ್ಯ, ಶಿವಮೊಗ್ಗ; ಜಿ. ಗಿರಿಮಾಜಿರಾವ್, ಕೋಲಾರ; ಎಸ್. ಆರ್. ಬಾಲಕೃಷ್ಣರಾವ್, ಬಿ.ಎ., ಎಲ್‌ಎಲ್.ಬಿ., ಶಿವಮೊಗ್ಗ; ಕೆ. ಚಂದ್ರಶೇಖರಯ್ಯ, ಮೈಸೂರು; ಡಿ. ವೆಂಕಟರಾಮಯ್ಯ, ಬಿ.ಎ., ಬೆಂಗಳೂರು.

ಈ ಚುನಾವಣೆಯು ಕಳೆದ ತಾ. 22 ನೇ ಶುಕ್ರವಾರ ಪ್ರತಿನಿಧಿ ಸಭೆಯಲ್ಲಿ ನಡೆಯಿತು. ಮೈಸೂರು ಡೆಪ್ಯುಟಿ ಕಮಿಷನರ್ ಮ॥ ಎ. ಸುಬ್ರಹ್ಮಣ್ಯಅಯ್ಯರವರು, ಅ॥ ಕಮಿಷನರುಗಳಾದ ಮ॥ ಸಿ. ಎಸ್. ಕುಪ್ಪುಸಾಮಯ್ಯಂಗಾರ್ಯ, [illegible] ಮೋಕ್ರಿಯವರು, ಸೆಕ್ರೆಟರಿ ಮ॥ ಜಿ. ಶ್ರೀನಿವಾಸಅಯ್ಯರವರು ನಿಂತು ಚುನಾವಣೆಗಳನ್ನು ನಡಿಸಿದರು. ಸುಮಾರು 186 ಪ್ರತಿನಿಧಿ ಸಭೆಯ ಮೆಂಬರುಗಳು ಆ ದಿನ ಹಾಜರಿದ್ದು ಮೇಲ್ಕಂಡ ಉಮೇದುವಾರರ ಪೈಕಿ ತಮಗೆ ಇಷ್ಟ ತೋರಿದ ನಾಲ್ಕು ಮಂದಿಗೆ ತಮ್ಮ ಓಟುಗಳನ್ನು ಕೊಟ್ಟರು. ಓಟ್ ಮಾಡುವುದು ಪ್ರಾರಂಭವಾಗುವುದಕ್ಕಿಂತ ಮುಂಚೆ ದಿವಾನರವರು ಪ್ರತಿನಿಧಿಗಳನ್ನು ಕುರಿತು—ನೀವುಗಳು ನಾಲ್ಕು ಮಂದಿಯನ್ನು ಚುನಾಯಿಸಬೇಕಾಗಿದೆ. ಪ್ರತಿ ಒಬ್ಬ ಮೆಂಬರೂ ನಾಲ್ಕು ಮಂದಿಗೆ ಓಟುಗಳನ್ನು ಕೊಡುವ ಅಧಿಕಾರವನ್ನು ಪಡೆದಿದ್ದಾರೆ ಯಾರ ದಾಕ್ಷಿಣ್ಯಕ್ಕೂ ಕಟ್ಟುಬೀಳದೆ ನ್ಯಾಯವಿಧಾಯಕ ಸಭೆಯಲ್ಲಿ ನಿಮ್ಮ ಪರವಾಗಿ ಕೆಲಸಮಾಡುವುದಕ್ಕೆ ನಂಬಿಕೆಯನ್ನೂ ಸಾಮರ್ಥ್ಯವನ್ನೂ ಪಡೆದಿರುವಂಥವರಿಗೇನೇ ನಿಮ್ಮ ಓಟುಗಳನ್ನು ಕೊಡಬೇಕು ಎಂದಾಗಿ ಎಚ್ಚರಿಕೆಯ ಮಾತುಗಳನ್ನು ಸೂಚಿಸಿದರು. ಬಳಿಕ ಚುನಾವಣೆಗೆ ಪ್ರಾರಂಭವಾಗಿ ಆ ದಿನ ಸಾಯಂಕಾಲದ ತನಕ ನಡೆಯಿತು.

ಮಾರನೇ ಶನಿವಾರ ಮಧ್ಯಾಹ್ನ ಪ್ರತಿನಿಧಿ ಸಭೆಯು ಪ್ರಾರಂಭವಾಗುತ್ತಲೆ ದಿವಾನರವರು ಪ್ರತಿನಿಧಿಗಳಿಂದ ಹೆಚ್ಚಾಗಿ ಓಟುಗಳನ್ನು ಪಡೆದು ಶ್ರೀಮನ್ ಮಹಾರಾಜರವರ ಗವರ್ನಮೆಂಟಿನ ಅನುಮತಿಯನ್ನು ಪಡೆದ ಮೆಂಬರುಗಳ ಹೆಸರುಗಳನ್ನು ಓದಿ ಹೇಳಿದರು. ಅವರು ಯಾರೆಂದರೆ—

1. ಮ॥ ಎಂ. ಬಸವಯ್ಯ, ಬಿ.ಎ., ಬಿ.ಎಲ್., ಬೆಂಗಳೂರು.
2. ,, ಬಿ. ನರಸಿಂಗರಾವ್, ಶ್ರೀರಂಗಪಟ್ಟಣ.
3. ,, ಎಂ. ಕರ್ಣಿಕ ಕೃಷ್ಣಮೂರ್ತಿರಾವ್, ಬೆಂಗಳೂರು
4. ,, ಸಿ. ನರಸಿಂಹಯ್ಯ, ಬಿ.ಎ., ಬಿ.ಎಲ್., ಮೈಸೂರು.

ತರುವಾಯ ಈ ನಾಲ್ಕು ಮಂದಿ ಮೆಂಬರುಗಳು ಒಬ್ಬರಾದ ಮೇಲೊಬ್ಬರು ಎದ್ದು ಪ್ರತಿನಿಧಿಗಳು ತಮಗೆ ಓಟ್‌ಕೊಟ್ಟದ್ದಕ್ಕೂ, ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು ಆ ಚುನಾವಣೆಯನ್ನು ಒಪ್ಪಿಕೊಂಡು ತಮ್ಮನ್ನು ನ್ಯಾಯ ವಿಧಾಯಕ ಸಭೆಯ ಮೆಂಬರಾಗಿ ಸ್ಯಾಂಕ್ಷನ್ ಮಾಡಿದ್ದಕ್ಕೂ ಮನಃಪೂರ್ವಕವಾದ ವಂದನೆಗಳನ್ನು ಸಲ್ಲಿಸಿ, ಆ ಮಹಾಸಭೆಯಲ್ಲಿ ತಮ್ಮ ತಮ್ಮ ಕೈಲಾಗುವ ಮಟ್ಟಿಗೂ ಪ್ರಜೆಗಳ ಪಕ್ಷವನ್ನು ವಹಿಸಿ ಹೋರಾಡುವೆವೆಂದೂ, ತಮ್ಮ ಕರ್ತವ್ಯವನ್ನು ನಡಿಸುವುದಕ್ಕೆ ಪ್ರತಿನಿಧಿಗಳು ತಮ್ಮ [illegible]ಗಳನ್ನು ತಿಳಿಸುತ್ತಾ ಬರಬೇಕೆಂದೂ ಅರಿಕೆಮಾಡಿದರು.

ಮೈಸೂರಿನಲ್ಲಿ ಬಚ್ಚಲುನೀರು ಸಾಗಿಸುವ ತೆರಿಗೆ.

ಕಳೆದ ಶನಿವಾರ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಪ್ರತಿಮನೆ ಮೇಲೆ ಬಚ್ಚಲ ತೆರಿಗೆಯನ್ನು ಹಾಕಬೇಕೆಂಬ ವಿಚಾರ ಬಹಳ ಹೊತ್ತು ಚರ್ಚೆಯಾಯಿತು. ಮ್ಯುನಿಸಿಪಲ್ ಪ್ರೆಸಿಡೆಂಟರು ಈ ಬಚ್ಚಲ ನಲ್ಲಿಗಳನ್ನು ಹಾಕುವದರ ಪೂರ್ವೋತ್ತರವನ್ನು ವಿವರಿಸಿದರು. ಅದರ ಸಾರಾಂಶವೇನೆಂದರೆ—ಮೊದಲು ರಸ್ತೆಗಳ ಪಕ್ಕಗಳಲ್ಲಿ ಮನೆಗಳ ರೊಚ್ಚಿನ ನೀರೂ ಮಳೇ ನೀರೂ ಸಾಗುವುದಕ್ಕೆ ಚರಂಡಿಗಳನ್ನು ಕಟ್ಟಿದರೆ ಸಾಕೆಂದು ಟ್ರಸ್ಟ್ ಬೋರ್ಡಿನವರು ಗಾರೆ ಬಚ್ಚಲುಗಳನ್ನು ಒಂದೆರಡು ಮೊಹಲ್ಲೆಗಳಲ್ಲಿ ಕಟ್ಟಿದರು. ಬಳಿಕ ನಮ್ಮ ದಿವಾನರವರು ಮನೆಗಳ ರೊಚ್ಚು ಸಾಗುವುದಕ್ಕೆ ಊರಿನಲ್ಲೆಲ್ಲಾ ಭೂಮಿಯೊಳಗೆ ಭಾರೀ ನಲ್ಲಿಗಳನ್ನು ಹಾಕಿಸಬೇಕೆಂದೂ, ಮಳೇ ನೀರಿಗೆ ರಸ್ತೆಗಳಲ್ಲಿ ಚರಂಡಿಗಳಾಗಬೇಕೆಂದೂ ಹುಕುಂ ಕೊಟ್ಟರು. ಅದರಂತೆ 2½ ಮರುಷದಿಂದ ನಲ್ಲಿಗಳನ್ನು ಹಾಕಿಸುತ್ತಿದ್ದೇವೆ. ಮನೆಗಳಿಗೆ ಮುಫತ್ತಾಗಿ ಒಂದು ಬಚ್ಚಲನ್ನು ಕಟ್ಟಿಸಿಕೊಟ್ಟಿದೆ; ಹೆಚ್ಚಾಗಿ ಕಟ್ಟಿಸಬೇಕಾದ ಕಡೆ ಮನೆಯವರಿಂದ ಕಾಮಗಾರಿ ಖರ್ಚನ್ನು ವಸೂಲ್ಮಾಡಿದ್ದಾಯಿತು. ಬಚ್ಚಲ ತೆರಿಗೆ ಹಾಕಬೇಕೆಂದು ಸರ್ಕಾರದಿಂದ ಹುಕುಂ ಬಂದದ್ದರ ಮೇಲೆ ಮನೆಯವರಿಂದ ವಸೂಲ್ಮಾಡಿದ್ದ ಕಾಮಗಾರಿ ಹಣವನ್ನು ಅವರಿಗೆ ವಾಪಸು ಕೊಡುತ್ತಿದ್ದೇವೆ. ಈ ತೆರಿಗೆ ಹಾಕುವ ಕ್ರಮವೇನು ಎಂದು ಸರ್ಕಾರದವರು ಕೇಳಿದ್ದಾರೆ. ಇದನ್ನು ಮ್ಯಾನೇಜಿಂಗ್ ಕಮಿಟಿಯವರು ಪರ್ಯಾಲೋಚಿಸಿ ಮನೆಯವರಿಗೆಲ್ಲಾ ಮೊದಲನೇ ಬಚ್ಚಲಿಗೆ ಒಂದು ರೂಪಾಯಿ, 2-3 ನೇ ಬಚ್ಚಲಿಡಿಸಿಕೊಂಡವರಿಗೆ ತಲಾ 8 ಆಣೆಯಂತೆ ವರುಷಕ್ಕೆ ತೆರಿಗೆ ವಸೂಲ್ಮಾಡಬಹುದೆಂದು ಶಿಫಾರಸು ಮಾಡಿದ್ದಾರೆ. ಪಟ್ಟಣದೊಳಗೆ 13,000 ಮನೆಗಳಿವೆ; ಸುಮಾರು 20,000 ಬಚ್ಚಲು ಕಟ್ಟಬೇಕಾಗುವುದು. ಈ ಬಚ್ಚಲುಗಳನ್ನೆಲ್ಲಾ ತೊಳೆದು ಶುಚಿಕೊಳ್ಳುವಂತೆ ನೋಡಿಕೊಳ್ಳುವುದಕ್ಕೆ ಸಾಲಿಯಾನ 30,000 ರೂಪಾಯಿ ಬೇಕಾಗುವುದು. ಈ ರೀತಿ ಬಚ್ಚಲೊಂದಕ್ಕೆ 1½ [illegible]

...ಯು ತೆರಿಗೆ ಬೀಳುತ್ತದೆ. ಈಗ ಮ್ಯಾನೇಜಿಂಗ್ ಕಮಿಟಿಯವರು ಒಂದೊಂದು ...ಯು ತೆರಿಗೆ ಸಾಕು ಎಂದು ಗೊತ್ತುಮಾಡಿದಾರೆ ಎಂದು ಹೇಳಿದರು. ...ರಾವ್ ಬಹದೂರ್ ಮ|| ರಂಗಯ್ಯಂಗಾರ್ರು ತಿಳಿಸಿದ್ದೇನಂದರೆ—ಎಲ್ಲಾ ...ಹಾಸುವವಕ್ಕೋಸ್ಕರ ರಸ್ತೆ ಪಕ್ಕದಲ್ಲಿ ಗಾರೆ ಬಚ್ಚಲು ಕಟ್ಟಿದೆವು. ಬಳಿಕ ...ತೃಪ್ತಿಕರವಲ್ಲವೆಂದು ಜಲ್ಲಿ ಗಾರೆಯಿಂದ ಬಚ್ಚಲು ಕಟ್ಟಿದೆವು. ಬೊಂಬಾಯಿ ...ದ ಕಡೆ ಬಚ್ಚಲು ಹ್ಯಾಗೆ ಕಟ್ಟಿದಾರೆಂದು ತಿಳಿಯುವುದಕ್ಕೆ ಅಧಿಕಾರಿ ...ಗಿ ಬಂದರು. ಅವರ ಅಭಿಪ್ರಾಯದಂತೆ ಬಚ್ಚಲುಗಳಿಗೆಲ್ಲಾ ಸಿಮೆಂಟ್ ...ಗಾರೆ ಮಾಡಿಸಿದೆವು. ತರುವಾಯ ದಿವಾನ್‌ರವರು ಬಚ್ಚಲ ನೀರಿಗೆ ...ಲು ಹಾಕಬೇಕೆಂದು ಹುಕುಂ ಕೊಟ್ಟರು. ಆ ಮೇಲೆ ಇದಕ್ಕಾಗಿ ಒಂದು ...ಹಾಗ ಚೀಫ್ ಇಂಜನಿಯರೂ ಮ್ಯುನಿಸಿಪಲ್ ಕೌನ್ಸಿಲ್ಲಿನ ಕೆಲವು ...ರುಗಳೂ ನಲ್ಲಿ ಹಾಕುವುದರಲ್ಲಿ ಫಲವಾಗದೆಂದು ಸಂಶಯಪಟ್ಟರು. ...ರ ಹುಕುಂ ಪ್ರಕಾರ ಹೊಸದಾಗಿ ಬಚ್ಚಲು ಕಟ್ಟುವುದನ್ನು ನಿಲ್ಲಿಸಿ ...ಹಾಕುತ್ತಾ ಬಂದಿದೇವೆ. ಇದಕ್ಕೆಲ್ಲಾ ಸುಮಾರು 28-30 ಲಕ್ಷ ...ಯು ಖರ್ಚಾಗುತ್ತದೆ. ಇದನ್ನು ಸರ್ಕಾರದವರೇ ವಹಿಸಿಕೊಂಡು ಕೊಡು ... ಈ ನಲ್ಲಿಗಳ ಸಿಬ್ಬಂದೀ ಖರ್ಚಿಗೆ ಮ್ಯುನಿಸಿಪಾಲಿಟಿಯವರು ಬಚ್ಚಲು ...ಹಾಕಬೇಕಾಗಿದೆ. ವಿನಾಯಿತಿ ಇಲ್ಲದೆ ಪ್ರತಿ ಮನೆಯವರೂ ಒಂದು ...ಯ ತೆರಿಗೆ ಕೊಡಬೇಕು. ಇದಲ್ಲದೆ ಮನೆಯ ಆವರಣದೊಳಗೆಲ್ಲಾ ...ಗಳ ನೀರನ್ನು ಒಂದೇ ಬಚ್ಚಲಿಗೆ ಬಂದು ಬೀಳುವಂತೆ ಕಾಮಗಾರಿ ...ಮಾಡಿಕೊಳ್ಳಬೇಕಾದೀತು. ಈ ರೀತಿ ಹೇಳಿದ್ದನ್ನು ಕೇಳಿ ಮ|| ಬಿ. ಕೃಷ್ಣ ...ರು ಸರ್ಕಾರದವರು ಬಚ್ಚಲು ನಲ್ಲಿ ಹಾಕಿಸಿದ್ದು ಅನುಕೂಲವಾಯಿತು. ...ಬಡವರಿಗೆ ಈ ತೆರಿಗೆ ಮಾಫ್ ಮಾಡಬೇಕೆಂದು ಸೂಚಿಸಿದರು. ಮ|| ...ಯ್ಯನವರು, ಮ|| ನಂದಪ್ಪನವರು, ಮ|| ಮಾದಪ್ಪನವರು, ಮಿ|| ...ಮ್ಮದ್ ಸೇಟರು ಮುಂತಾದವರು ಈ ತೆರಿಗೆ ವಿಷಯವನ್ನು ಪಟ್ಟಣದಲ್ಲಿ ...ಪ್ರಜೆಗಳಿಗೆ ತಿಳಿಸಿ ತರುವಾಯ ಇತ್ಯರ್ಥ ಮಾಡಬೇಕೆಂದು ಹೇಳಿದರು. ...ಶಾಸನವನ್ನು ಓದಿಸಿ ಈ ಹೊಸ ತೆರಿಗೆ ಹಾಕುವ ವಿಷಯದಲ್ಲಿ 60 ನೇ ...ಪ್ರಕಾರ ನಡೆಸಬೇಕಾದ ಆಚರಣೆಗಳನ್ನೆಲ್ಲಾ ಕ್ರಮಪಡಿಸಿ ಮ್ಯಾನೇ ...ಕಮಿಟಿಯವರು ರೆಜಲ್ಯೂಷನ್ ತಯಾರ್ಮಾಡಿ ಕೌನ್ಸಿಲ್ಲಿಗೆ ಕಳು ...ಬೇಕೆ ತೀರ್ಮಾನಮಾಡಿದರು.

ನವರಾತ್ರಿ ದರ್ಬಾರಿನಲ್ಲಿ ಬಿರುದುಗಳನ್ನು ದಯಪಾಲಿಸಿದ್ದು.

ಮೈಸೂರು ಸರ್ಕಾರದ ವಿಶೇಷ ಪತ್ರಿಕೆ.

1915 ನೇ ಇಸವಿ ಅಕ್ಟೋಬರ್ ತಾರೀಖು 20 ರಲ್ಲು ನವರಾತ್ರಿ ಮಹೋ ...ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ...ದ್ದೂರ್‌ರವರು ಕೆಳಗೆ ಕಂಡಂತೆ ಬಿರುದುಗಳನ್ನು ದಯಪಾಲಿಸಿರುತ್ತಾರೆ:—

(1) ದಿವಾನ್ ಬಹದೂರ್ ಜ್ಞಾನ ಶರಣ ಚಕ್ರವರ್ತಿಯವರಿಗೆ, "ರಾಜಮಂತ್ರ ಪ್ರವೀಣ" ಎಂಬ ಬಿರುದನ್ನೂ,

(2) ಕರ್ಪೂರ ಶ್ರೀನಿವಾಸರಾಯರಿಗೆ, "ರಾಜಸಭಾ ಭೂಷಣ" ಎಂಬ ಬಿರುದನ್ನೂ,

(3) ರಾವ್ ಬಹದ್ದೂರ್ ಶ್ಯಾಮಗೊಂಡ್ಲು ವೆಲ್ಲೂರು ಆರ್ವೋಗಂ ಮೊದಲಿಯಾರ್ರವರಿಗೆ "ರಾಜಕಾರ್ಯ ಪ್ರವೀಣ" ಎಂಬ ಬಿರುದನ್ನೂ,

(4) ಅಲ್‌ಕೊಂಡವಲ್ಲಿ ಗೋಪಾಲಾಚಾರ್ಲುಯವರಿಗೆ "ಜನೋಪಕಾರಿ" ಎಂಬ ಬಿರುದನ್ನೂ,

(5) ಮಂಡಿಕಲ್ ರಾಮಾಶಾಸ್ತ್ರಿಯವರಿಗೆ "ಆಸ್ಥಾನ ಕವಿರತ್ನಂ" ಎಂಬ ಬಿರುದನ್ನೂ

ಮರ್ಯಾದೆಗಳೊಡನೆ ದಯಪಾಲಿಸಿರುತ್ತಾರೆ.

ತಾರೀಖು 20 ನೇ ಅಕ್ಟೋಬರ್ 1915, ಮೊಕ್ಕಾಂ ಮೈಸೂರು.

ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ದೇಶದ ಏಳಿಗೆಗೆ ಸಹಾಯಕ ...ದ ಅಥವಾ ಜನೋಪಕಾರಕವಾದ ಕಾರ್ಯಗಳನ್ನು ಮಾಡಿರುವ ವಿಷಯದಲ್ಲಿ ...ಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರು ತಮ್ಮ ಮೆಚ್ಚುಗೆಯನ್ನು ...ದಿನ ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ತಿಳಿಯಪಡಿ ...ಕ್ಕನ್ವಂದು ಅಪ್ಪಣೆ ದಯಪಾಲಿಸಿರುವದನ್ನು ಈ ಮೂಲಕ ಪ್ರಕಟಿಸಿರುತ್ತದೆ:—

(1) ಮ|| ರಾ|| ಚೆಂಗಾಡು ಶೇಷಾದ್ರಿ ಅಯ್ಯಂಗಾರ್ರವರು, ತುಮಕೂರು ...ಆನರರಿ ವೈಸ್ ಪ್ರೆಸಿಡೆಂಟರಾಗಿ ಕಷ್ಟಪಟ್ಟು ಮನಃಪೂರ್ವಕವಾಗಿ ಕೆಲಸ ...ಮಾಡುತ್ತಿರುವದು ಮತ್ತು ಪರಸ್ಪರ ಸಹಾಯಕ ಏರ್ಪಾಡಿನಲ್ಲಿ ವಿಶೇಷ ಆಸಕ್ತಿ...ಯನ್ನು ತೋರಿಸುತ್ತಲಿರುವದು

(2) ಮ|| ರಾ|| ಸೋಮೆಪಲ್ಲಿ ರಂಗಾಚಾರ್ಲುಯವರು, ಮೈಸೂರು—...ಸ್ಕೃತ ವಿದ್ಯಾಭ್ಯಾಸಂಗವನ್ನು ಪ್ರೋತ್ಸಾಹಮಾಡುವ ಕೆಲಸದಲ್ಲಿ ವಿಶೇಷ ...ಉಳ್ಳವರಾಗಿರುವದಲ್ಲದೆ, ಮೈಸೂರು ಸಂಸ್ಕೃತ ಕಾಲೇಜಿಗೆ ಆನರರಿ ...ಕೆಲಸವನ್ನು ಮಾಡುತ್ತಲಿರುವದು.

(3) ಮ|| ರಾ|| ಸಾಹುಕಾರ ಚಂದ್ರಯ್ಯನವರ ನರಸಿಂಹಯ್ಯನವರು, ...—ಉದ್ದಿಷ್ಟವಾದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆಗೋಸ್ಕರ 1,000 ರೂಪಾಯಿಗಿಂತ ಹೆಚ್ಚಾಗಿ ಷೇರುಗಳನ್ನು ತಾವೇ ತೆಗೆದುಕೊಂಡದ್ದ...ಕ್ಕೆ, ಈ ವಿಷಯದಲ್ಲಿ ಇತರರಿಗೂ ಆಸಕ್ತಿಯನ್ನು ಉಂಟುಮಾಡಿದ್ದು ಮತ್ತು ...15 ನೇ ಜನವರಿಯಲ್ಲಿ ಶ್ರೀಮನ್ಮಹಾರಾಜರವರ ಸವಾರಿ ಮಲೆನಾಡು ...ಪ್ರದೇಶಕ್ಕೆ ಚಿತ್ತೈಸಿದ್ದಾಗ ಅವರ ಸುಖಾಗಮನಕ್ಕೂ ಆತಿಥ್ಯಕ್ಕೂ ಬಹಳ ...ವನ್ನು ಮಾಡಿದ್ದು.

(4) ಮ|| ರಾ|| ಕಂಟ್ರಾಕ್ಟರ್ ಮುನಿಸ್ವಾಮಪ್ಪನವರು, ಆನೆಕಲ್—...ಗಾಗಿ 14,000 ರೂಪಾಯಿ ಅಂದಾಜು ಬಾಳುವ ಕಟ್ಟಡವನ್ನು ಧರ್ಮಾ...ರ್ಥವಾಗಿ ಕೊಟ್ಟಿದ್ದು.

(5) ಮ|| ರಾ|| ಇಂಗಳಗೊಂದಿ ಶಾಂತಪ್ಪಶೆಟ್ಟಿಯವರು, ನರಸಿಂಹರಾಜ ...—ಸುಮಾರು 10,000 ರೂಪಾಯಿ ಅಂದಾಜಿನ ಧರ್ಮಕಾರ್ಯವನ್ನು ...ಮಾಡಿದ್ದು.

(6) ಮ|| ರಾ|| ಸಾಹುಕಾರ್ ಬಸಪ್ಪನವರ ಬಸಪ್ಪಶೆಟ್ಟಿಯವರು, ...ಬೆಂಗಳೂರು—10,000 ರೂಪಾಯಿ ವರೆಗೆ ಧರ್ಮಕಾರ್ಯಗಳನ್ನು ಮಾಡಿದ್ದು.

(7) ಮ|| ರಾ|| ಆಗಳಿ ವೆಂಕಟರಾಮಯ್ಯನವರು, ಸೀರಾ—ಪರಸ್ಪರ ಸಹಾಯಕ ಏರ್ಪಾಡಿನ ಸಂದರ್ಭದಲ್ಲಿ ವಿಶೇಷ ಉಪಯುಕ್ತವಾದ ಕೆಲಸಗಳನ್ನು ನೆರವೇರಿಸಿದ್ದು.

ಮೊಕ್ಕಾಂ ಮೈಸೂರು | ಹುಕುಂ ಬಮೋಜಿಬ್,
ತಾ|| 20 ನೇ ಅಕ್ಟೋಬರ್, 1915. | ಡಿ. ಎಂ. ನರಸಿಂಗರಾವ್,
ಮೈಸೂರು ಸರ್ಕಾರದ ಜನರಲ್ ಸೆಕ್ರೆಟರಿ.

[ದರ್ಬಾರಿನಲ್ಲಿ ಈ ದೊಡ್ಡ ಮನುಷ್ಯರುಗಳಿಗೆ ಖಿಲ್ಲತ್ತುಗಳನ್ನು ಶ್ರೀಮನ್ ಮಹಾರಾಜರವರು ಕೊಡಿಸಿ ಸನ್ಮಾನಮಾಡಿಸಿದರು.—ಎಡಿ.]

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗ್.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಮೀಟಿಂಗು ಟೌನ್ ಹಾಲ್ ಬಂಗಲೆಯಲ್ಲಿ ಜರುಗಿತು. ಮೊದಲು ಸೆಪ್ಟಂಬರ್ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಪ್ಯಾಸ್ ಮಾಡಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ 16,185 ರೂಪಾಯಿ ಜಮಾ ಆಯಿತು; ರೂ. 18,280-14-0 ಖರ್ಚಾಯಿತು. ಜನನ 176; ಮರಣ 173. ಈ ಪೈಕಿ ಕ್ಷಯ 15. ಆಡಿಟರು ಕೆಲವು ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆಮಾಡಿ ಹೊಸ ಸಾಲಿನಲ್ಲಿ ಮೂರು ತಿಂಗಳು ಕಳೆದರೂ ಮೊಹತರ್ಫಾ ವಸೂಲಿ ತೃಪ್ತಿಕರವಾಗಿ ನಡೆದಿಲ್ಲವೆಂದೂ, ಗಾಡಿ ಮೊದಲಾದ ವಾಹನಗಳು ಪಟ್ಟಣದಲ್ಲಿ ಎಷ್ಟಿವೆ ಎಂಬ ಲೆಕ್ಕವೇ ಇನ್ನೂ ಸರಿಯಾಗಿ ಮಾಡಿಲ್ಲವೆಂದೂ ರಿಪೋರ್ಟಿನಲ್ಲಿ ಕಾಣಿಸಿದ್ದರು. ವೈಸ್ ಪ್ರೆಸಿಡೆಂಟರು ಕೆಲವು ಲೆಕ್ಕ ಮಾತ್ರ ಬಾಕಿ ಇರುವುದಾಗಿಯೂ, ಇದೆಲ್ಲಾ ಬೇಗನೆ ಪೂರೈಸುತ್ತೇವೆಂದೂ ತಿಳಿಸಿದರು. ಮನೆಗಳ ಸರ್ವೆ ಮಾಡಿಸಬೇಕೆಂದು ಸಿಬ್ಬಂದಿ ನೇಮಿಸಿ ಸುಮಾರು ಮೂರು ವರುಷ ಕಳೆದರೂ ಆ ಕೆಲಸ ಮುಗಿಯಲಿಲ್ಲವೆಂದು ಕೆಲವು ಮೆಂಬರುಗಳು ಆಕ್ಷೇಪಣೆಮಾಡಿದ್ದಕ್ಕೆ ಇಂಜನಿಯರು ಎಲ್ಲಾ ಮುಗಿಯುತ್ತಾ ಬಂದಿದೆ ಎಂದು ಸಮಾಧಾನ ಹೇಳಿದರು. ಕಸಬಿನ ತೆರಿಗೆ ಹಾಕುವ ವಿಷಯದಲ್ಲಿ ಸರ್ಕಾರದಿಂದ ಬಂದ ಹುಕುಮನ್ನು ಮ್ಯಾನೇಜಿಂಗ್ ಕಮಿಟಿಯವರು ಇಟ್ಟುಕೊಂಡು, ಮನೆಗಳ ಯಜಮಾನರುಗಳ ವರಮಾನಗಳನ್ನು ಗೊತ್ತುಮಾಡಿಸುತ್ತಿದಾರೆಂದೂ, ಈ ಲೆಕ್ಕಗಳು ಸಿದ್ಧವಾದ ಮೇಲೆ ಈ ಹೊಸ ತೆರಿಗೆಹಾಕುವ ವಿಚಾರವನ್ನು ವ್ಯವಸ್ಥೆಮಾಡುತ್ತಾರೆಂದೂ ತಿಳಿಯಿತು.

ಈಗಿರುವ ಮ್ಯುನಿಸಿಪಲ್ ಪ್ರೆಸಿಡೆಂಟರು 1,000 ರೂಪಾಯಿ ವರೆಗಿನ ಮ್ಯುನಿಸಿಪಲ್ ಕಾಮಗಾರಿಗಳನ್ನು ಸ್ವತಂತ್ರಿಸಿ ಮಾಡಿಸಬಹುದೆಂದೂ, ಕೃಷ್ಣರಾಜಮೊಹಲ್ಲಾ ಜನಾನಾ ಸ್ಕೂಲ್ ಮನೆಗೆ ಇನ್ನೂ 6 ರೂಪಾಯಿ ಬಾಡಿಗೆ ಜಾಸ್ತಿ ಮಾಡಿಕೊಡಬಹುದೆಂದೂ, ಇಂಡಿಜನಸ್ ಆಸ್ಪತ್ರೆ ಸೂಪರೆಂಟ್ ಮ|| ಎಸ್. ವೆಂಕೋಬರಾಯರಿಗೂ, ಆಯುರ್ವೇದಿಕ್ ಕಾಲೇಜ್ ಹೆಡ್ ಪಂಡಿತರಿಗೂ ಸಂಬಳ ಬಡ್ತಿ ಮಾಡಬಹುದೆಂದೂ, ಆಸ್ಪತ್ರೆ ಹತ್ತರ ಜನಾನಾ ಮಿಷನ್ ಸ್ಕೂಲಿನ ಬಳಿ ಇರುವ ಖಾಲಿ ನಿವೇಶನವನ್ನು ಬಿಕರಿ ಮಾಡಕೂಡದೆಂದೂ, ಕನ್ನೇಗೌಡನಕೊಪ್ಪಲ ಹತ್ತರ ಮ|| ದೊಡ್ಡಯ್ಯನವರಿಗೆ ಭತ್ತಕುಟ್ಟುವ ಯಂತ್ರವನ್ನು ಇಡುವ ಕಟ್ಟಡಗಳಿಗಾಗಿ 2 ಎಕರೆ 36 ಗುಂಟೆ 46 ಚದರ ಗಜದಷ್ಟು ಜಮೀನನ್ನು ಎಕರೆಗೆ 160 ರೂಪಾಯಿನಂತೆ ಬಿಕರಿ ಮಾಡಬಹುದೆಂದೂ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಚಾಮರಾಜಮೊಹಲ್ಲಾದಲ್ಲಿ ಮ|| ಟಿ. ಬಸವರಾಜೆ ಅರಸಿನವರಿಗೂ, ಮ|| ಎಚ್. ನಂಜುಂಡರಾಜೆ ಅರಸಿನವರಿಗೂ ಅವರುಗಳ ಬಂಗಲೆ ಪಕ್ಕದಲ್ಲಿರುವ ನಿವೇಶನಗಳನ್ನು ಅವರ ಅರ್ಜಿಯಂತೆ ಅವರಿಗೆ ಬಿಕರಿ ಮಾಡದೆ ಹಾಗೇ ಇಟ್ಟಿರಬೇಕೆಂದೂ, ವೈದ್ಯ ಇಲಾಖೆಯವರು ವಾಣೀವಿಲಾಸ್ ಆಸ್ಪತ್ರೆಯಿಂದ ಸೂಲಗಿತ್ತಿ ಶಿರೋಮಣಿಯವರನ್ನು ನಜರ್ಬಾದ್ ಆಸ್ಪತ್ರೆಗೆ ವರ್ಗಮಾಡಿದ ಕಾರಣ ಆಕೆಗೆ ಸಲ್ಲುವ ಜಾಸ್ತಿ ಸಂಬಳವನ್ನು ಮ್ಯುನಿಸಿಪಾಲಿಟಿಯವರು ವಹಿಸಲಾಗುವದಿಲ್ಲವೆಂದೂ, ಕನ್ಸರ್ವೆನ್ಸಿ ಸಿಬ್ಬಂದಿಯವರ ದಿರಸಿಗಾಗಿ 450 ರೂಪಾಯಿ ಖರ್ಚು ಮಾಡಬಹುದೆಂದೂ, ಮ್ಯುನಿಸಿಪಲ್ ಜವಾನರ ದಿರಸುಗಳಿಗಾಗಿ 678 ರೂಪಾಯಿ ಖರ್ಚು ಮಾಡಬಹುದೆಂದೂ, ಸಿಟಿಯಲ್ಲಿ ಸಾಲು ಮರಗಳನ್ನು ಹಾಕಿ ಬೆಳಸುವ ಸಿಬ್ಬಂದಿ ಖರ್ಚಿನಲ್ಲಿ ಒಂದಂಶವನ್ನು ಕೊಡಬಹುದೆಂದೂ ಮ್ಯಾನೇಜಿಂಗ್ ಕಮಿಟಿಯವರು ತೀರ್ಮಾನ ಮಾಡಿದ್ದನ್ನು ಮೆಂಬರುಗಳು ಒಪ್ಪಿಕೊಂಡರು.

ಆಯಾ ಮನೆಗೆ ಸಂಬಂಧಪಟ್ಟ ಕಟ್ಟಡಗಳ ಐದು ವರುಷಗಳ ಮೊಹತರ್ಫಾ ತೆರಿಗೆ ಸುಮಾರು 8,000 ರೂಪಾಯನ್ನು ಲೆಕ್ಕದಿಂದ ವಜಾ ಮಾಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಮ|| ಎನ್. ಶ್ರೀಕಂಠಯ್ಯನವರು ಕೇಳಿದ ಪ್ರಶ್ನೆಗಳಿಗೆ ಜವಾಬು ಕೊಡಲಾಯಿತು. (1) ಮ್ಯುನಿಸಿಪಲ್ ಸರಹದ್ದಿನೊಳಗಿರು ಪಕೋಟೆಗಳಿಂದ ತರುವ ವೀಳ್ಯದೆಲೆಗೂ, ತೆಂಗಿನಕಾಯಿಗೂ ಸುಂಕ ವಸೂಲ್ಮಾಡುವುದು ಯುಕ್ತವೇ? ಉತ್ತರ.—ಯುಕ್ತವಾಗಿದೆ (2) ಕನ್ನೇಗೌಡನಕೊಪ್ಪಲಿಂದ ಬರುವ ಗಾಡಿಗಳಿಗೆ ಟೋಲ್ ಗೇಟ್ ಕಂಟ್ರಾಕ್ಟರು ಟೋಲ್ ತೆರಿಗೆ ವಸೂಲ್ಮಾಡಬಹುದೇ? ಉತ್ತರ.—ಕೂಡದು. ಚಟ್ಟಹಳ್ಳಿ ಬಡಾವಣೆಯಲ್ಲಿ ಆಸ್ಪತ್ರೆಯನ್ನಿಡಬೇಕಾದದ್ದು ಅವಶ್ಯವೆಂದೂ, ಇದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಕೂಡ ಒಪ್ಪಿರುತ್ತಾರೆಂದೂ ಮೆಂಬರುಗಳು ತೀರ್ಮಾನಿಸಿದರು.—ಚಟ್ಟಿಯನ್ನು ಅಭಿವೃದ್ಧಿ ಮಾಡುವುದಕ್ಕೆ ನೇಮಿಸಲ್ಪಟ್ಟಿರುವ ಒಬ್ಬ ಸಬ್ ಓವರ್ಸಿಯರ ದುಗುಣ ಅಲೋಯನ್ಸು ಕೊಡಬೇಕೆಂದು ಕೇಳಿರುವ ವಿಚಾರವು ಮ್ಯುನಿಸಿಪಾಲಿಟಿಗೆ ಸಂಬಂಧಪಡುವುದಿಲ್ಲವೆಂದು ಮೆಂಬರುಗಳು ಅಭಿಪ್ರಾಯಪಟ್ಟರು.—ಚಾಮರಾಜ ರೋಡಿನಲ್ಲಿ ಒಂದು ಗರಲ್ಸ್ ಸ್ಕೂಲನ್ನು ಕಟ್ಟಿಕೊಡುತ್ತೇವೆಂದು ಮ|| ಅಂಬಳೆ ಅಣ್ಣಯ್ಯಪಂಡಿತರು ಒಪ್ಪಿರೋಣದರಿಂದ ಅವರಿಗೆ ನಿವೇಶನವನ್ನು ಕೊಡಬಹುದೆಂದೂ, ಮ್ಯುನಿಸಿಪಾಲಿಟಿಯವರೂ ವಿದ್ಯಾ ಇಲಾಖೆಯವರೂ ಒಪ್ಪುವಂಥಾ ಕಟ್ಟಡವನ್ನು ಮ|| ಪಂಡಿತರು ಒಂದು ವರುಷದೊಳಗೆ ಕಟ್ಟಿಸಿಕೊಡಬಹುದೆಂದೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

ಮಹಾರಾಜ! ಮಹಾರಾಜ!

ನಮ್ಮ ಷಾಪಿನಲ್ಲಿ

ಲೆಕ್ಕಗಳನ್ನು ಎತ್ತುವುದಕ್ಕೆ ಎಲ್ಲಾ ಸರಕುಗಳನ್ನೂ ಅತ್ಯಂತ ಅಗ್ಗವಾಗಿ ಬಿಕರಿಮಾಡಿಬಿಡುತ್ತೇವೆ.

ನವಂಬರ್ 5 ಕ್ಕೆ ಖೈರಾಗುತ್ತೆ.

ಪೀಸ್ ಗುಡ್ಸ್ ಬಟ್ಟೆಗಳು ಈಗಿನ ಹವಾಕ್ಕೆ ಅನುಕೂಲವಾದವು ಕಂ ಖರೀದಿಗೆ ಕೊಡುವೆವು.

ಈ ಸಮಯ ಮತ್ತೆ ಸಿಕ್ಕದು.

ಎಲ್. ಎ. ಪೋರ್ವಾಲ್ ಕಂಪನಿ,
[234-1] ಬೆಂಗಳೂರು ಸಿಟಿ.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರಮಂ ರೂ. 3-0-0.

ಅಕ್ಟೋಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಭಡೂತಿಯಾಗಿಯೂ ಮೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂದುಸಾಮಿ

[111-21] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ವಯಸ್ಸಾಗದೇನೇ ಮುದುಕರಂತೆ ಕಾಣುವುದೇಕೆ?

ನರೆ ಕೂದಲನ್ನು ಪಡೆದವರು ನಮ್ಮಲ್ಲಿ ದೊರೆಯುವ "ರರ್ತ ಜ್ಯೋತಿ" ಕೂದಲ ಬಣ್ಣವನ್ನು ತರಿಸಿ ಹಚ್ಚಿಕೊಂಡರೆ ಅದು ಬಿಳೀ ಕೂದಲನ್ನು ಕೆಲವು ನಿಮಿಷಗಳೊಳಗಾಗಿ ಅಚ್ಚ ಕಪ್ಪಾಗಿ ಮಾರ್ಪಡಿಸುವುದು. ಕೂದಲನ್ನು ರೇಷ್ಮೆಯಂತೆ ನುಣುಪಾಗಿಯೂ ಹೊಳೆಯುವಂತೆಯೂ ಮಾಡುತ್ತದೆ. ಈ ನಮ್ಮ ಬಣ್ಣವನ್ನು ಪಡೆದವರು ಯೌವನವನ್ನೇ ಪಡೆದಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಬಿಳೀ ಕೂದಲಿಗೆ ಈ ಬಣ್ಣವನ್ನು ಹಾಕಿ ಅದು ಕಪ್ಪಾಗಲಿಲ್ಲವೆಂದು ರುಜು ವಾತು ಕೊಡುವವರಿಗೆ

ನಾವು 100 ರೂಪಾಯಿ ಇನಾಂ ಕೊಡುತ್ತೇವೆ.

ಬಟ್ಟ್ಲು, ಬುರುಸು ಸಹಿತ ಒಂದು ಪೆಟ್ಟಿಗೆ ಬಣ್ಣಕ್ಕೆ ಕ್ರಯ ರೂ. 1-0-0; ಅಂಚೆ ವೆಚ್ಚ ಬೇರೆ. ವರ್ತಕರಿಗೆ ಸ್ಪೆಷಲ್ ದರ. ದಕ್ಷಿಣ ಇಂಡಿಯಾ ಸೋಲ್ ಏಜಂಟರು:—

ವಾ ಭಗವಾನ್‌ದಾಸ್ ಜೂನಿಲಾಲ್ ಕಂಪನಿ,
[231-1] 177, ಚೀನಾ ಬಜಾರ್ ರೋಡ್, ಮದರಾಸ್.

ಹೊಗಳಿಕೆಗಿಂತಲೂ

ಪರೀಕ್ಷೆಯೇ ಮೇಲು!!!

ನೂರಾರು ವರುಷಗಳ ಅನುಭವದಿಂದ ಗುಣಕಂಡು ಪ್ರಖ್ಯಾತಿ ಹೊಂದಿರುವ ಶಾಸ್ತ್ರ ಸಮ್ಮತವಾದ ಮತ್ತು ಅತಿ ಸುಲಭ ಬೆಲೆಯುಳ್ಳ ಈ ಮಹೌಷಧಗಳನ್ನು ಸದಾ ಮನೆಯಲ್ಲಿ ತರಿಸಿ ಇರಿಸಿಕೊಳ್ಳಿರಿ. ಕಷ್ಟಕಾಲದಲ್ಲಿ ಮತ್ತಾವುದೂ ಇದರಂತೆ ಶರೀರವನ್ನು ಕಾಪಾಡಲಾರದು. ಪರೀಕ್ಷಿಸಿ ಗುಣವನ್ನು ತಿಳಿಯಿರಿ. [231-46]

ಶ್ರೀಕರ ಕಸ್ತೂರಿ ಮಾತ್ರೆ ಸುಮಾರು 300 ಮಾತ್ರೆ ಸೀಸೆಗೆ	4 ಆಣೆ.
ಸುಖಭೇದಿ ಮಾತ್ರೆ 50 ಮಾತ್ರೆ ಸೀಸೆಗೆ	4 ಆಣೆ.
ಬಾಲ ಸಂಜೀವಿನಿ 50 ಮಾತ್ರೆ ಸೀಸೆಗೆ	4 ಆಣೆ.
ಅಮೃತಲೇಪ (ತಲೆನೋವು ವಾಯುನೋವುಗಳಿಗೆ ಸಿದ್ಧೌಷಧ) ಸೀಸೆಗೆ	4 ಆಣೆ.
ನಾರಿಕೇಳಾಂಜನ ಸೀಸೆಗೆ	4 ಆಣೆ.
ಅಮೋದಿನಿ-ಬಾಯಾರಿಕೆ, ಬಾಯಿನಾಥ, ಆಯಾಸಕ್ಕೆ 160 ಮಾತ್ರೆ	4 ಆಣೆ.

ಮೇಲ್ಕಂಡ ಆರು ಔಷಧಗಳ ಪೈಕಿ ನಿಮಗೆ ಬೇಕಾಗುವ 6 ಸೀಸೆಗಳನ್ನು ಚುನಾಯಿಸಿ ಒಟ್ಟಿಗೆ ತರಿಸಿದರೆ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಸೇರಿ ರೂ. 1-8-0 12 ಸೀಸೆಗೆ ರೂ. 2-12-0. 25 ಸೀಸೆಗೆ ರೂ. 5-0-0.

ಪ್ರತಿ ಔಷಧದ ಜೊತೆಯಲ್ಲೂ ವಿಶದವಾದ ಅನುಪಾನ ಪತ್ರವಿರುವುದು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಜಂಟಲ್ ಮೆನ್‌ರ ಪಾಕೆಟ್ ವಾಚ್.

ಓದಿದ ಕೂಡಲೇ ಬರೆದು ತರಿಸಿ ನೋಡಿ.

ಅತಿ ಸುಂದರವಾದದ್ದು, ಒಂದು ಸಲ ನೋಡಿದರೆ ಮತ್ತು ಬಿಡಲಾಗದು. ಹೊಸ ನಮೂನೆ ಮತ್ತೊಂದು ಗಡಿಯಾರದ ಹಾಗೆ ಇರುವುದಿಲ್ಲ. ಸೀಮೆ ಮತ್ತು



ಮೆಕ್ಕ ದೇಶಗಳ ನಿಪುಣರಿಂದ ಮಾಡಲ್ಪಟ್ಟಿದೆ. ವಾಚು ಇರುವವು ಸ್ವಲ್ಪ. ಆದರಿಂದ ಕಕ್ಷಣ ಬರೆದು ತರಿಸಿಕೊಳ್ಳಿ. ಈ ವಾಚು ಜುಲೈ ಮಾಸದೊಳಗೆ ತೆಗೆಯುವವರಿಗೆ 15 ಬಹುಮಾನಗಳಿಂದ ಬೆಲೆ ರೂ. 3-14-0. ಇಂಥಾ ಸಮಯ ನಿಮಗೆ ಮತ್ತೆ ದೊರೆಯುವುದಿಲ್ಲ. ತಾತ್ಸಾರ ಮಾಡದೆ ಬರೆದು ನೋಡಿ. ಬಹುಮಾನಗಳು 1. ಗಡಿಯಾರದ ಸರಪಣಿ, 2. ಉತ್ತರ ಮುಖಿ, 3. ಹಣದ ಚೀಲ, 4 ಎಲೆಕ್ಟ್ರಿಕ್ ಶಾವಂತಿಗೆ ಹೂವು, 5 ಇಮಿಟೇಷನ್ ಡೈಮಂಡ್ ಪಂಟುಗುಂಡಿ, 6. ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 7. ಡಿಟೋ ಸಾದಿನ ಚಿಪ್ಪು, 8. ಡಿಟೋ ಕಣ್ಣುಕಪ್ಪಿನ ಭರಣಿ, 9. ಡಿಟೋ ನಶ್ಯದ ಡಬ್ಬಿ, 10 ಇಮಿಟೇಷನ್ ಡೈಮಂಡ್ ಮಡಿಗು ಟಟ್ಟು, 11. ಚಾಕು, 12. ರೇಷ್ಮೆ ಧಾರ, 13. ಕರವಸ್ತ್ರ. 14. ಕೆಂಪು ಸಾಯಿ ಪೊಟ್ಟು, 15. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಕೆ,

ಚಿನ್ನದ ಗಿಲ್ಟು ಬೆಲ್ಟು ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು	ಬೆಲೆ ರೂ. 4-0-0	ಪೋಸ್ಟೇಜು
ಬೆಳ್ಳಿ ಗಿಲ್ಟು ಡಾಬು	,, ,, 3-0-0	ಬೇರೆ.



ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 130 ಗಟ್ಟಿ ಗೆಜ್ಜೆಗಳು ಸುತ್ತಲ್ಪಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಅಲ್ಪ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಿದಾರೆ. ಚಿನ್ನದ ಗಿಲ್ಟು ನಾಗಮುರಿಗೆ ರೂ. 3-8-0.

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಬೆಳ್ಳಿ ಕಂಬಿಯಿಂದ ತಯಾರಾಗಿ ಇವೆ. ಇವು ಎಂದಿಗೂ ಕೆಡುವದಿಲ್ಲ. ಇವು ಎಲ್ಲರು ಧರಿಸಿಕೊಳ್ಳಬಹುದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-6-0	1-4-0	0-14-0	0-10-0

ಅಂದವಾದ ಡಾಬು (ಒಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-4-0	0-14-0

ಅಂದವಾದ ಪ್ರದುಷೇರಿ ರುಳಿ (ಕಾಲು ಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-12-0	1-9-0	1-5-9	1-3-0

ಪೋಸ್ಟೇಜ್ ಬೇರೆ.



ಮಧುರೆ ಚನ್ನಡಿ ಸೀರೆ ರೂ. 2-8-0 ತಂಜಾವೂರು ಗೆಜ್ಜೆ ಅತ್ತಿಕೆ 7 ಆಣೆ; ಕೈ ಗಡಿಯಾರ ರೂ. 1-14-0. [232-1]

ವಿಳಾಸ—ದಯಾನಿಧಿ, ಕೇರುಬೀದಿ,
ತಿರುವಲ್ಲಿಕ್ಕೇಣಿ, ಮದ್ರಾಸು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಚನ ವಟಿಕೆ.—2-3 ವಟಿಕೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ವಟಿಕೆಗೆ 4 ಆ, 5 ಶೀಷೆಗೆ 1 ರೂಪಾಯಿ.

2. ಜ್ವರದಮಾತ್ರೆ.—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ ಆ, 6 ಶೀಷೆಗೆ 2½ ರೂ, 12 ಶೀಷೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ಸಂಜೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 6 ಕ್ಕೆ 1 ರೂ, 12 ಕ್ಕೆ 2½ ರೂ.

[120-8] ನಮ್ಮ ವಿಳಾಸ.—ಪಂಡಿತ್ ಎಸ್. ಗಿರಿಪುರಿ, ಮೈಸೂರು.



ಅಕ್ಟೋಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಈಹೇ ಅಕ್ಟೋಬರ್ ಹಬ್ಬದ ಮಹೋತ್ಸವ ಕ್ಕಾಗಿ ಈಭಾರೀ ಕ್ರಯದಕೈ ಗಡಿಯಾರವನ್ನು ಅಕ್ಟೋಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲ್ಪಡುತ್ತೆ. [111-21]

ವಿಳಾಸ.—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಅಟೋ ಮೋಹಿನಿಯೇ ಅನೇಕ ಕಾಲದಿಂದಲೂ ಜಾಹಿರಾತ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ

ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಅಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗಮಲಿಗೆ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ತಾಳುವಂಥಾದ್ದು ಅಟೋ ಮೋಹಿನಿಯೇ.

ಕ್ರಯ ½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ 2—0—0.

1 ಡ್ರಾಮ್ ಶೀಷೆಗೆ	0—12—0	ವಾಣಿ ಸೀಸೆಗೆ	0—2—0
½ ,, ,,	0—8—0	ಕಾರ್ಡ ಪರ್ಸಿಗೆ	0—12—0

ಕೂದಲನ್ನು ಬೆಳೆಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳೆಸುವಂಥದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರ ಜಾಹೀರಾತುಗಳಂಥಾ ಎಣ್ಣೆಯಲ್ಲ. ಇದರಲ್ಲಿ ಸಿಂಹಿಯಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಜಾಹಿರಾತ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [207-4]

ಕ್ರಯ 1 ಬಾಟ್ಲಿಗೆ ರೂ. 1-0-0.
,, 3 ,, ,, 2-10-0.

ಸೋಲ್ ಏಜಂಟರು.—ಷಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ, 177, ಚೈನಾಬಜಾರ್ ರೋಡ್, ಮದರಾಸು.

ಮನೋಲ್ಲಾಸಿನಿ ತೈಲವು.

ಕಠಿಣ ತಲೆನೋವು, ತಲೆ ತಿರುಗುವಿಕೆ, ನಿದ್ದೆ ಬಾರದಿರುವದು, ಕಿವಿ ಸೋರುವದು, ಕೂದಲು ಉದುರುವದು, ಕಣ್ಣುಗಳಿಂದ ನೀರು ಬರುವದು, ತಲೆ, ಕೈಕಾಲುಗಳ ಉರಿ, ಇವುಗಳನ್ನು ಜಾಗ್ರತೆಯಾಗಿ ಗುಣಪಡಿಸಿ, ನೆನಪುಶಕ್ತಿಯನ್ನು ವೃದ್ಧಿಸಿ, ಕೂದಲನ್ನು ಬೆಳಸುತ್ತದೆ. ಇತರ ಹರಿವಾಣದ ತೈಲಗಳಂತೆ ಇದರಿಂದ ಶೈತ್ಯ ಉಂಟಾಗುವದಿಲ್ಲ. 3 ಔನ್ಸ್ ಸೀಸೆಗೆ 12 ಆಣೆ; 3 ಸೀಸೆಗಳಿಗೆ ರೂ 2. ಅಂಚೆ ಕೂಲಿ ಬೇರೆ [226-3]

ನಮ್ಮ ವಿಳಾಸ.—ಮನೋಲ್ಲಾಸಿನಿ ಕಂಪನಿ, ಕಂಚನಾಡಿ, ದ. ಕನ್ನಡ

ರಿಜಿಸ್ಟರ್ ಸುಪೀರಿಯರ್ ಲಿವರ್ ಜುವೈಲ್ಡು ವಾಚು.

ಕ್ರಯ ಸರಪಣಿ ಸಹಿತ	5 ವರುಷಗಳ	ವಿ. ಪಿ. ಚಾರ್ಜು
ರೂ. 3.0.0.	ಗ್ಯಾರಂಟಿ	4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಿಯುಳ್ಳ, ಚಕ್ರಗಳಲ್ಲಿ ಕೆಂಪುಗಳು ಕಟ್ಟಲ್ಪಟ್ಟ ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಲ್ವರ್ ಸಲ್ಲೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಬೆಲೆ ಗಳುವದರಿಂದ ಪ್ರಯೋಜನವಿಲ್ಲ. ಉಪಯೋಗಿಸಿ ನೋಡಬಹುದು. ಕಳ್ಳಿ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು. [223-]

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ, ಪೋಸ್ಟು ಬಾಕ್ಸು 107, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ: ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಡುಬಿಡುವುದು; ಬಿಡದೆ ಬಾಯಾರಿಕೆ; ಬಿಳಿಚಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುನೋಟ್ಟ; ಕೀಲು ಗುಣಕೆ; ಮೈನೋವು; ಕೀಲುನೋವು; ಮರವು; ನಿಸ್ತ್ರಾಣ; ಇವೇ ಮೊದಲಾದವು. ಅಲಕ್ಷ್ಯಮಾಡಿದರೆ ಮೂತ್ರಪಿಂಡದ್ರವ, ವಾಯು, ಮೈಬಾವು, ಉರುಮುಖ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರಪಿಂಡಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವನ್ನು ವಿಸರ್ಜನೆ ಮಾಡಿ, ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [175-9]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವನ್ನಾಗಿಡುತ್ತವೆ.



ರೂ. ೩—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಫೋಸ್ಟರ್ ಮೆಕ್ ಲೆಲನ್ ಕಂ. ಬೊಂಬಾಯಿ—ಇವರಲ್ಲಿ ದೊರೆಯುವುದು

ಪಾಲ್ಘಾಟ್ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಬಹಳ

ಪ್ರಯಾಸ ಸಮಯವನ್ನು ಕಾದು ಹೋರಿಯಾಡುವವು ನಿಜವಾಗಿಯೂ ತಪ್ಪುವವು.—ಶೀತ, ಶೀತವಾಯು, ಅಜೀರ್ಣ, ವಾರ್ಧಕ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕಟ್ಟುವಾಸ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರ್ ಆದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಉಪಯೋಗಿಸುವ ಕ್ರಮವು ಪ್ರತಿ ಸೀಸೆಯೊಡನೆಯೂ ಇರುವುದು. 180 ಮಾತ್ರೆಗಳುಳ್ಳ ಸೀಸೆಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ 2-12-0; 25 ಸೀಸೆಗಳಿಗೆ ರೂ. 5-0-0

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಕ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಕ್. ಆಫ್ ದಿ ಬ್ರಿಟಾನಿಕ್ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಫಿಸಿಷಿಯನ್, ವಿಟಿಯಿಂಟಿಲೇಟ್ ನಂ 2. ಬೊಂಬಾಯಿ, ಇವರು ಬರೆಯುವರು.—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಪ್ರತ್ಯಕ್ಷವಾಗಿ ಪ್ರಸೂತಿ ಜ್ವರ, ಅಜೀರ್ಣ, ಮಲಬದ್ಧತೆ, ಹಳ್ಳಿಯನೋವು, ಹೊಟ್ಟೆ ನೋವು, ದಿನಕಟ್ಟಲೆಯ ಜ್ವರ, ಶಿಶ್ನಸಂಬಂಧವಾದ ರೋಗ, ಮಕ್ಕಳ ಎಲವು ವಾಯುಗಳಲ್ಲೂ ಗುಣಕಾರಿಯಾಗಿರುತ್ತದೆ. ನಮ್ಮಲ್ಲಿಗೆ ಬರುವ ಔಷಧಿ ವ್ಯಾಪಾರಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಸಿ. ಎಸ್. ಅಣ್ಣಾಜಿರಾವ್, ರಿಟೈರ್ಡ್ ಸಬ್ ಜಡ್ಜ್ ಮತ್ತು ಸ್ಪೆಷಲ್ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು.—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರಾದ ಪಾಲ್ಘಾಟ್ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೆನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಸಂತೋಷಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧಗಳನ್ನು ತಯಾರುಮಾಡುತ್ತಾರೆ."

[180-7] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಜಿಸ್ಟರ್ಡು) ಶಕುಂತಳೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1—0—0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡುಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ನುಣ್ಣಗಾಗುವುದು. ನೀಲಿಕಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪು ಕೊಡುವುದು. ತಲೆಯಲ್ಲಿರುವ ಮದವನ್ನು ನಿಲ್ಲಿಸುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಪನ್ನೀರು, ಪುನಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಕ್ಯಾದಗೆ, ಕ್ಯಾದಿಗೆ, ಗುಲಾಬಿ, ವಿರಜಾಕ್ಷಿ, ದವನ, ಮರುಗ, ಇವ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಮೂವತ್ತು ದಿವಸಗಳ ವರೆಗೂ ಇದರ ವಾಸನೆ ತೋರುವುದು. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿ.—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ, 22, ಕೊಂಡೆ ಗಿಣಿಗಳು 8, ಕಾರ್ನಿಲಿಯನ್ ಬ್ರೂಚ್ 1, ಐವಾಜು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ, ನಂ. 44, ನಂಬುಲಯ್ಯರ ಬೀದಿ, ಮದರಾಸು.

[223-2]

"ಹನುಮಾನ್" ಬೋರಾಕ್ಸ್ ಸಬೂನು

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ತುರಿ, ಕಜ್ಜಿ, ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ತಲೆಗೆ ಮಲಿನವು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾನ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾನ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಸ್ನಾನ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರು ಭೇದವಿಲ್ಲದಂತೆ ಸರ್ವಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದ ಜನ ಯಾವ ಬೇರೆ ಸಾಬೂನನ್ನೂ ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇವೆ.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹರುಗಳಲ್ಲಿಯೂ ದೊಡ್ಡ ಅಂಗಡಿಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಶ್ರೀ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರ್ತು ಇರುವದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-3] ಈವನಿಂಗ್ ಬಜಾರ್ ರೋಡ್, ಮದರಾಸು

ರಬ್ಬರು ಮುದ್ರೆಗಳು!



ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ಕೆತ್ತಿದ ಪೆಟ್ಟಿಗೆ, ಬ್ರಷ್ ಪ್ಯಾಡ್ ಮತ್ತು ಇಂಕಿ ಬಾಟ್ಲ ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಹೆಸರು ಮುಂತಾದವುಗಳನ್ನು ಹುಟ್ಟಕ್ಷರಗಳಿಂದ ಬರೆಯಬೇಕು.

[..-16]

...ಮ್ಮ ವಿಳಾಸ:—ರಾಂಭಾಕ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ಡೋಂಗರೆ ಇವರ ಬಾಲಾಮೃತ.

...ಮ ಬಹಳ ಮಧುರವಿರುವದರಿಂದ ಕೂಸುಗಳು ಉಪಲವಿಕೆಯಿಂದ ತಕ್ಕೊ...ವೆ. ಇದನ್ನು ತಕ್ಕೊಳ್ಳುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ...ಕ ಬೆಳೆಯುತ್ತದೆ. ಕ್ರಯ... ಶೀಸೆ 1 ಕ್ಕೆ 12 ಆಣೆ; ವಿ.ಪಿ. 4 ಆಣೆ.

...ಸ—ಕೆ.ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

[..-9] [ಏಜಂಟರು ಬೇಕಾಗಿರುತ್ತಾರೆ.]

ತ್ವರೆಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಛಾರ್ಜು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ।

[54-29]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಠಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಗಳನ್ನು ಪಡಕೊಳ್ಳಬೇಡಿರಿ. ಬಾಟ್ಲ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖುಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-6-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚಿಲ್ಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ, ಪೋರ್ಟು, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸ್.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡುಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೊಡವೆಗಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ವೈಭರಣ 1, ಕಾಂಟೂಲವಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಮೊತ್ತ 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪೆನಿ,

[149-11] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ, ಘಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾರೆವು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0

ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[..-38]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೧, ಮದ್ರಾಸ್.

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-49]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟ್ಲಾಗನ್ನು ಬಿಟ್ಟಿ ಕಳಿಸುವೆವು. ಛಾರ್ಜಿಲ್ಲದೆ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,
೨೦, ಚೇನಾ ಬಜಾರ್ ರೋಡ್, ಮದ್ರಾಸು.

1,000 ರೂಪಾಯಿ ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.

[204-5]

ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಹೊಂದಿರುವುದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ.

ಕ್ರಯ ಡಬ್ಬಿ 1 ಕ್ಕೆ ರೂ. 2-0-0 ಟಪ್ಪಾಲು ಖರ್ಚು 1 ಡಬ್ಬಾದಿಂದ 3 ಡಬ್ಬಿಗಳಿಗೆ 0-8-0.

ಇದರ ಪೂರಾ ಕೇಟಲಾಗು ಅಪೇಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

GRAND CLEARANCE SALE—Rs. 1-15-0.

ಯೋಗ್ಯತಾ ಪತ್ರಿಕೆ.—ನಾನು ಟ್ರಿಚಿಯಿಂದ ಎಲ್ಲರಿಗೂ ... ವದೇನಂದರೆ, ನಿಮ್ಮಿಂದ ನಾನು ತರಿಸಿಕೊಂಡ ಲೇಡೀಸ್ ಗಡಿಯಾರ ... ಗಳ್ಳಿ ಬಹಳ ಶ್ರೇಷ್ಠವಾಗಿದೆ. ಗಂಟೆ ತೋರಿಸುವದರಲ್ಲಿ ಒಂದು ... ವ್ಯತ್ಯಾಸವೂ ಇಲ್ಲ. ಇತರ ಕಂಪನಿಯವರು ಇಂಥಾ ಗಡಿಯಾರವನ್ನು ... ವದಿಲ್ಲ. ಮತ್ತು 3 ಗಡಿಯಾರಗಳನ್ನು ವಿ. ಪಿ. ಮೂಲಕ ಕಳುಹಿಸಿ... ಮ್ಯಾನೇಜರ್, ಇರಾಯುದೂತನ ಆಫೀಸು, ತಿರುಚಿನಾಪಳ್ಳಿ.

ಈಗಿನ ಕಾಲದಲ್ಲಿ ಕೆಲವರು ಉಪಯೋಗವಿಲ್ಲದ ಗಡಿಯಾರಗಳನ್ನು ... ಕೊಂಡು ಅದಕ್ಕಾಗಿ ಬಹು ಚೆನ್ನಾಗಿ ಬರೆದು ಇನಾಂ ಸಾಮಾನು ಹಾಕಿ ... ಪಡಿಸುವರು.

ಸುಂದರವಾದ ಲೇಡಿಸ್ ಸ್ಪ್ರಿಂಗ್ ಪಾಕೆಟ್ ವಾಚ್.

ಅಸಲು ಕ್ರಯ ರೂ. 3-14-0; ಈಗ ರೂ. 1-15-0.



ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರ ಕಂಪನ್ಸೇಷನ್ ಬ್ಯಾಲೆನ್ಸ್ ಬಹು ಸೊಗಸಾದ ಗಡಿಯಾರ. ಇದು ನೋಡುವದಕ್ಕೆ ಮುಚ್ಚಟವಾಗಿ ಇರುತ್ತೆ. ಇತರ ಚಿಲ್ಲರೆ 3-3 ರೂಪಾಯಿ ಕ್ರಯದ ಬೆಂಟಾಯಿ ಗಡಿಯಾರಗಳನ್ನು ಕೊಂಡು ಹಣ ಕಳಕೊಂಡು ಮೋಸಹೋಗಬೇಡಿ. 5 ವರ್ಷಗಳ ಗ್ಯಾರಂಟಿ. ಇದೇ ಅಕ್ಟೋಬರ್ ತಿಂಗಳೊಳಗೆ ತರಿಸಿಕೊಳ್ಳುವರಿಗೆ ಮಾತ್ರ ರೂ. 1-15-0 ಕೊಡಬೇಕೆಂದು ನಮ್ಮ ಏರ್ಪಾಡು.

ನಮ್ಮ ವಿಳಾಸ.—

ರಾಸ್ ವಾಚ್ ಅಂಡು ಕಂಪನಿ, ಡೈರೆಕ್ಟ್ ಇಂಪೋರ್ಟರ್ಸ್,
[149-11] 9, ಇರುಳಪ್ಪನ ಬೀದಿ, ಮದ...

ದಬಾರ್ ಸೋಪ್.
ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ಶಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

[149-14] ನಮ್ಮ ವಿಳಾಸ—ವಿ. ಎ. ಎಸ್. ಪಾಣಿ, ನಂ. ೩, ಇರುಳಪ್ಪನ ಬೀದಿ, ಮದರಾಸು.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು
ಒಂದು ಸಲ ಪರೀಕ್ಷಿಸಿ ನೋಡಿರಿ.
ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೇಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ಶಾಂಟೂಲದಲ್ಲಿಯೂ, ಬಳಲಿಕೆ ಬಾಯಾರಿಕೆಯಲ್ಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದವು.

30 ಮಾತ್ರೆಗಳ ಪೊಟ್ಟಣ 1 ಕ್ಕೆ	....	ಕ್ರಯ 0-1-6
65 ,, ,, ,,	....	,, 0-3-0
195 ,, ಪೊಟ್ಟಣ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	...	,, 0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	......	,, 1-0-0

[214-3]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಸ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.



ಇಂಗ್ಲಾಂಡಿನ ಬಾತ್ ನಗರದ ಟ್ರೌಬ್ರಿಡ್ಜ್ ಬೀದಿಯಲ್ಲಿರುವ ಮಿ" ಜಬ್ಲ್ಯೂ. ನೌಲ್ಸ್ ಬರೆಯುವುದು:—"ರಾತ್ರಿ ಹಗಲು ರೊಂಟೀ ನೋವಿನಿಂದ ಕಷ್ಟಪಟ್ಟೆನು. ನನ್ನ ಬಲ ತೊಡೆಯು ಮೇಲಿನಿಂದ ಅಂಗಾಲಿನ ಪರ್ಯಂತರ ವಾಯುವಿನ ಹೊಡೆತದಂತ ಬಾಧೆ ಹೊಂದಿತು. ರಾತ್ರಿ ಹಗಲು ಕಷ್ಟಪಟ್ಟು ನನಗೆ ತಿಳಿದಿದ್ದ ಮದ್ದುಗಳನ್ನೆಲ್ಲಾ ಉಪಯೋಗಿಸಿದೆನು; ಆದರೂ ಯಾವದೂ ಗುಣವಾಗಲಿಲ್ಲ. ಡಿ ವಿಲ್ಸ್ ಪಿಂಕ್ ಪಿಲ್ಸ್ ಎಂಬ ... ತ್ರೆಯ ಮೊದಲನೇ ಸೀಸೆಯು ಅಲ್ಪ ಗುಣ ಮಾಡಿದರು. ... ಸೀಸೆಗಳನ್ನು ಉಪಯೋಗಿಸಿದ್ದ ಮೇಲೆ ಅದರ ನೋವೇ ... ತು. ನನಗೆ ಪೂರ್ಣ ಗುಣವಾಯಿತೆಂದು ನಂಬುತ್ತೇನೆ."

ನಿನಗೆ ರೊಂಟೀ ನೋವಿದ್ದರೆ, ಅನುಮಾನಗಳನ್ನೆಲ್ಲಾ ಬಿಟ್ಟು, ನಿನ್ನ ಪ್ರಯೋಜನಕ್ಕೋಸ್ಕರವಾ ಈ ಮಹಾ ಔಷಧದ ಪರೀಕ್ಷೆಗೋಸ್ಕರವಾ ಪರೀಕ್ಷಿಸಿ ನೋಡು.

ಸೀಸೆ 1 ಕ್ಕೆ 1 ರೂ. ಮೆಡಿಸಿನ್ ವ್ಯಾಪಾರಿಗಳ ... ಔಷಧಾಗಾರಗಳಲ್ಲಿಯೂ ಸಿಗುತ್ತೆ.

[8 -16]

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ... ಯನೆ ಶರದೃತು ಆಶ್ವೀಜ ಬಹುಳ ಷಷ್ಠಿ ಶುಕ್ರವಾರದಿಂದ ಆಶ್ವೀಜ ... ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಅಕ್ಟೋಬರ್ ಮತ್ತು ನವಂಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ
29	ಶುಕ್ರ *	ಷಷ್ಠಿ	21-52	ಆರಿದ್ರಾ	1-53
30	ಶನಿ †	ಸಪ್ತಮಿ	26-10	ಪುನರ್ವಸು	7-40
31	ಭಾನು	ಅಷ್ಟಮಿ	29-27	ಪುಷ್ಯ	12-31
1	ಸೋಮ	ನವಮಿ	31-34	ಆಶ್ಲೇಷ	16-17
2	ಮಂಗಳ §	ದಶಮಿ	32-22	ಮಘಾ	18-50
3	ಬುಧ ;;	ಏಕಾದಶಿ	31-52	ಪುಬ್ಬಾ	20-7
4	ಗುರು ‡	ದ್ವಾದಶಿ	30-8	ಉತ್ತರಾ	20-14

* ಕೂಷ್ಮತಿಥಿ. † ಸಪ್ತಮೀ ತಿಥಿ, ಮಳೆ ನಕ್ಷತ್ರ—ಸ್ವಾತಿ 3ನೇ ... § ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ. ;; ಸರ್ವತ್ರ ಏಕಾದಶಿ, ... ನಕ್ಷತ್ರ—ಸ್ವಾತಿ 4 ನೇ ಪಾದ. ‡ ಪ್ರದೋಷ.

Printed and Published by the Rev. H. Gu... Proprietor and Manager, Wesleyan Mission ... Mysore. 28/10/1915.

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—೧೯೧೫ ನೇ ಇಸವಿ ನವೆಂಬರ್ ತಾರೀಖು ೪ ನೇ ಗುರುವಾರ. ಸಂಚಿಕೆ ೨೩

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ಬಿಳಿ ಕರಿ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಬೆಲೆಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[188-7] GIRLS' INDUSTRIAL SCHOOL, HASSAN.

NOTICE.

Applications are invited for the post of Head Examiner on Rs. 60-5-70 in the Government Press, Bangalore.

Applicants should be Mysoreans by birth, and Graduates of any Indian University possessing good knowledge of Kanarese and well experienced in correcting proofs.

The applications should reach the undersigned not later than the 30th October, 1915.

Forms of applications can be had at the Office of the Superintendent, Government Press, Bangalore.

30th September, 1915. (*Sd.*) C. H. YATES,

[227-3] SUPERINTENDENT, Government Press.

ನವರಾತ್ರಿ ಹಬ್ಬದ ವರೆವಿಗೆ ಮಾತ್ರ.

ಹೊಸ ಮಾದರಿ, ಬಣ್ಣ ಜಾಸ್ತಿ, ಕ್ರಯ ಸುಲಭ.

ವರ್ತಕರಿಗೆ ಜರೂರಾಗಿ ಬೇಕಾದಂಥಾ ಸೋಲಾಪುರದ ಜಮಖಾನೆ ಚೆಕ್ಕುಗಳು ಸೀರೆಗಳು ಖಣಗಳು ಮತ್ತು ಗಟ್ಟಿ ಬಣ್ಣದ ಇತರ ನಮೂನೆ ಸೀರೆಗಳು ನವರಾತ್ರಿಯವರೆವಿಗೆ ಮಾತ್ರ ಕಡಮೆ ಖರೀದಿಗೆ ದೊರೆಯುವುದು. ಮಿಲ್ಲಿನ ಖರೀದಿಗಿಂತ ನಮ್ಮಲ್ಲಿ ಬಹಳ ಕಡಮೆ.

ಚಿಲ್ಲರೆ ಸಾಮಾನುಗಳನ್ನು ಕೋರುವವರು ಕೆ. ಪ್ರಹ್ಲಾದರಾವ್ ಚೀಫ್ ಸರ್, ಜಕಾರ್ಟು ಶ್ರೀನಿವಾಸಾಚಾರ್ರ ಬೀದಿ, ಬೆಂಗಳೂರು ಸಿಟಿ, ಇವರಿಗೆ ಬರೆಯಬಹುದು.

ಬೇಲುಗಟ್ಟೆ ಕೋರುವವರು ಇವರಲ್ಲಿ ಅಥವಾ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು :— [55-31]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, 159, ಕಿಲಾರಿ ರೋಡು (ಸುಂಕೇನಹಳ್ಳಿ) ಬೆಂಗಳೂರು ಸಿಟಿ.

ಹೊಸ ಭೂವಿವರಣೆಗಳು.

ಲೋಯರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1.	ಮಿಸ್ಟ್ರಾಮಂಡಲದ ಭೂವಿವರಣೆ	0–6–0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0–6–0
	ಮೇಲೆ ಕಂಡ ಎರಡೂ ಸೇರಿ	0–10–0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ ಲೋವರ್ ಸೆಕೆಂಡರಿ ಕನ್ನಡ ಟೆ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[31-38] ಸುಬೋಧ ಗ್ರಂಥಾಲಯ, ಮೈಸೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ವೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನು, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನು ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0. [168-20]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ರಿಜಿಸ್ಟರ್ಡ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಸಂಪಣಿ ಸಹಿತ ಕ್ರಯ ರೂ 3-0-0. 5 ವರುಷಗಳ ಗ್ಯಾರಂಟಿ ಪತ್ರ. ವಿ. ಪಿ. ಛಾರ್ಜು 4 ಆಣೆ.



ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಡಬಗ್ಗರಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕೂ ಡಸ್ಟು ಪ್ರೂಫ್ ಎಂಟಗ್ರಾಬು ಡೋಮೂ ಇರುವದು. ಬಹಳ ಗಟ್ಟಿತರವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿರಿ.

ನಮ್ಮ ವಿಳಾಸ :—ಯುಪೀರಿಯರ್ ವಾಚ್ ಕಂಪೆನಿ,

[223-3] ಪೋಸ್ಟು ಬಾಕ್ಸು 167, ಮದರಾಸ್.

ಆಂಗ್ಲಭಾಷಾ ಪ್ರಕಾಶಕ.

ಸ್ವತಃ ಇಂಗ್ಲೀಷ್ ಕಲಿಯುವದಕ್ಕೆ ಯೋಗ್ಯವಾದ ನೂತನ ಪುಸ್ತಕ.

ಲಕ್ಷಾಂತರ ಜನರಿಗೆ ಆವಶ್ಯಕವಾದದ್ದು.

ಉಪೇಕ್ಷ್ಯ ಮಾಡಬೇಡಿ. ಖಂಡಿತ ಗಮನಿಸಿ.

ಇಂಥ ಉತ್ತಮ ಪುಸ್ತಕಗಳು ಇದುವರೆವಿಗೆ ಇದ್ದೇ ಇರಲಿಲ್ಲ. ಸಾವಿರಾರು ವಿಷಯಗಳು ಇದರಲ್ಲೇ ಅಡಗಿವೆ. ದೇಶಬಾಂಧವರ ಪ್ರಯೋಜನಕ್ಕಾಗಿ ಬೆಲೆಯೂ ಕಡಮೆ ಮಾಡಿದೆ. [238-1]

5 ಭಾಗಗಳೂ ಇರುವ ಪುಸ್ತಕ... ರೂ. 0–11–0.

3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1–10–0.

ನಮ್ಮ ವಿಳಾಸ—ಬಾಲಕೃಷ್ಣ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜೆಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜೆಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು; ಜಲ್ಲಡೆ ರೇಕುಗಳು; ಆಸ್ಟ್ರೇಲಿಯಾ ದೇಶದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-6]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಅಪೂರ್ವ ಲಾಭ ! ಕೆಲವೇ ಪ್ರತಿಗಳು ಮಾತ್ರ ಇವೆ !!

ಮನೋಗಣಿತ 1 ಕ್ಕೆ 9 ಪೈ. 12 ಕ್ಕೆ 6 ಆ., 50 ಕ್ಕೆ 1-8-0, 100 ಕ್ಕೆ 2-8-0 ಪರಾಸ್ಪೇಪರ್ 1 ಕ್ಕೆ 1 ಆ 3 ಪೈ. 12 ಕ್ಕೆ $\frac{3}{4}$ ರೂ. 50 ಕ್ಕೆ 2-10-0. 100 ಕ್ಕೆ ರೂ 4-4-0, ಪೋಸ್ಟೇಜ್ ಪ್ರತ್ಯೇಕ. [230-2]

ವಿಳಾಸ—ಕೆ. ಶ್ರೀನಿವಾಸಾಚಾರ್, ಅ. ಮಾ., ಮುರುಗಮಲೆ, ಕೋಲಾರ್.

ಶರೀಕ್ಕೆ ಸಮಾಪಿಸಿತು ! ಇನ್ನೂ ನೋಡಲಿಲ್ಲವೇ !!

ಈಗತಾನೇ ಹೊರಪಟ್ಟಿರುವ ಎರಡು ಪುಸ್ತಕಗಳು !!!

ಪ್ರಬಂಧ ಮುಕ್ತಾವಳಿ.—ಕನ್ನಡ ಪ್ರಬಂಧ ಮತ್ತು ಪತ್ರ ಬರೆಯುವ ಮಾರ್ಗವನ್ನು ವಿವರಿಸುತ್ತದೆ. ಬೆಲೆ 12 ಆಣೆ ಮಾತ್ರ.

1916 ನೆ ಲೋ. ಸೆ. ಟೆಕ್ಸ್ಟ್ ರಹಸ್ಯ ವಿವರಣೆ—ಅತ್ಯುತ್ತಮ ವಿಷಯಗಳು ಚೆನ್ನಾಗಿ ವಿವರಿಸಲ್ಪಟ್ಟಿವೆ. ಅವಶ್ಯ ನೋಡಿ. ಬೆಲೆ 4 ಆಣೆ.

[225-3] ವಿಳಾಸ—ಎಂ. ಕೃಷ್ಣಪ್ಪ, 34, ಗಾಣಿಗರಪೇಟೆ, ಬೆಂಗಳೂರು ಸಿಟಿ.

'ಸಂಗೀತ ಪಾರಿಜಾತ'

ಹೊಸ ಮುದ್ರಣ ! ಹೆಂಗಸರಿಗೆ ಅತ್ಯಾವಶ್ಯಕವಾದುದು !!

ಹೆಂಗಸರಿಗೂ ಗಂಡಸರಿಗೂ ಅತ್ಯಾವಶ್ಯಕವಾದ ಪುಸ್ತಕ ! ಹಸೆಗೆ ಕರೆಯುವ ಹಾಡು, ಮಂಗಳ, ಬೀಗರ ಹಾಡುಗಳು, ಸೀಸಪದ್ಯಗಳು, ಕೀರ್ತನೆಗಳು, ದೇವತಾ ಸ್ತೋತ್ರಗಳು—ಇವುಗಳಿಂದ ತುಂಬಿದೆ ! ಈ ಎರಡನೆಯ ಮುದ್ರಣದಲ್ಲಿ ಹಾಡುಗಳನ್ನು ಹೆಚ್ಚಿಸಿರುತ್ತೆ, ಕಾಗದವೂ ಉತ್ತಮ ! ಇದು ವರೆಗೆ ಪುಸ್ತಕ ಬೇಕೆಂದು ಆರ್ಡರ್ ಕಳುಹಿಸಿರುವವರು ಮತ್ತೆ ಬರೆದರೆ ಕಳುಹುವೆವು. ಒಂದು ನೂರು ಪ್ರತಿಗಳಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳುವವರಿಗೆ ಕಮಿಷನ್ ದೊರೆಯುವುದು. ಪುಸ್ತಕ ಒಂದಕ್ಕೆ ಕ್ರಯ 4 ಆಣೆ.

[276-47] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರ್.

"ಕಾದಂಬರೀ ಸಂಗ್ರಹ" ಮಾಸಪತ್ರಿಕೆ!

ಈ ಪತ್ರಿಕೆಯಲ್ಲಿ ಇದುವರೆಗೆ 25 ಪುಸ್ತಕಗಳು ಪ್ರಕಟವಾಗಿವೆ.

ಮೃತ್ಯು ಪರೀಕ್ಷೆ 2 ಆ, ಸೌದಾಮಿನಿ, 6 ಆ, ಬೃಂದಾವನ 2 ಆ, ಮಾಲಿನೀ 2 ಆ, ಪ್ರೇಮಶಿಖಾಸ್ಟ 2 ಆ, ಸುಲೋಚನಾ 3 ಆ, ಶೀಲಬೋಧಿನಿ 2 ಆ, ಕ್ಷಾತ್ರತೇಜ 6 ಆ, ವಿನೋದ ಚಂದ್ರ 2 ಆ, ಸದಾಚಾರ ವಿವೇಚನೆ 2 ಆ, ವಿಶಾಲಾಕ್ಷಿ 12 ಆ, ಕಮಲ ಕುಮಾರಿ 9 ಆ, ನನ್ನ ಸಂಸಾರ 5 ಆ, ವಿನೋದಗುಚ್ಛ 5 ಆ, ಚಂದ್ರಿಕಾವಿಜಯ ನಾಟಕ 3 ಆ ಎಂಟು ಕಾದಂಬರಿಗಳಿಂದಾದ ಪ್ರಥಮ ಸಂಪುಟ 1-4-0, 11 ಗ್ರಂಥಗಳುಳ್ಳ ದ್ವಿತೀಯ ಸಂಪುಟ 1-8-0, ದೊಡ್ಡ ದೊಡ್ಡ 3 ಕಾದಂಬರಿಗಳುಳ್ಳ ತೃತೀಯ ಸಂಪುಟ 1-8-0.

ವಿಳಾಸ :—ಕಾದಂಬರೀ ಸಂಗ್ರಹ ಆಫೀಸ್, ಮೈಸೂರು ; ಮತ್ತು

[8-43] ಜನರಲ್ ಏಜೆನ್ಸಿ, ಮೈಸೂರು

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಸೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು .... ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ಚೆಟ್ಟಿಯಾ, ಚೀಫ್ ಏಜೆಂಟ್, ಬೆಂಗಳೂರು ; ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[222-3] ಬ್ರಾಂಚ್ ಸೆಕ್ರೆಟರಿ, ಮದರಾಸ.

ದೀಪಾವಳಿ ಹಬ್ಬದ ವಾಚುಗಳ ಮಾರಾಟ.

"ವಿಲೀಸಿಯಾ ವಾಚುಗಳು."

ಈ ವಾಚುಗಳು ಉತ್ತಮ ಸಾಹಿತ್ಯಗಳಲ್ಲಿ ತಯಾರಿಸಲ್ಪಟ್ಟು ಸ್ವಲ್ಪ ಕ್ರಯಕ್ಕೆ ಸರಿಯಾದ ಸಮಯ ತೋರಿಸುವಂಥಾದ್ದಾಗಿವೆ. ಇದರ ಕೆಳಕಂಡ ಯಾವ ವಾಚನ್ನಾದರೂ ತರಿಸಿನೋಡಿ. ಕ್ರಯಕ್ಕೆ ತಕ್ಕುದಿಲ್ಲವಾದ್ದಲ್ಲಿ 8 ದಿನದ ಮುದ್ದತು. ಬೆಳ್ಳಿಯ ಪ್ಲೇಟಿನ ಸೆಕೆಂಡ್ ಹ್ಯಾಂಡ್ ಇರುವ ವಾಚು 13 ಸ್ಟೋನ

[139-14]		ವಾಚು 1 ರ	4- 4-0
ಮೇಲ್ಕಾಣಿಸಿದ ರೀತಿಯದೇ		ಶುದ್ಧ ನಿಕ್ಕಲಿನ ಬಾಬತು	4- 0-0
,,	,,	16 ಸ್ಟೋನಿನಲ್ಲಿ ಫೇನ್ಸೀ ಡಯಲ್	4-12-0
,,	,,	ಬೆಳ್ಳಿಯ ಬಾಬತು	5- 0-0
,,	,,	ನಿಕ್ಕಲ್ ರಿಸ್ಟ್ ವಾಚ್ ಚರ್ಮ ಪಟ್ಟಿ ಸಹಿತ	4-12-0
,,	,,	ಬೆಳ್ಳಿಯ ಕೇಸ್ ರಿಸ್ಟ್ ವಾಚ್ ಫೇನ್ಸೀ ಡಯಲ್	6- 0-0
,,	,,	ನಿಕ್ಕಲ್ ಕೇಸ್ ಡೆಮ್ಯೂವರ್ (ಕತ್ತಲೆಯಲ್ಲಿ ಕಾಣುವಂಥಾದ್ದು)	8- 4-0
6 ರತ್ನಗಳಿರುವ 16 ಸ್ಟೋನ ವಾಚು 1 ರ			3- 4-0
ವಾರಕ್ಕೊಮ್ಮೆ ಕೀಲಿಕೊಡುವ ವಾಚು 1 ರ			7- 8-0

ಮೇಲ್ಕಾಣಿಸಿದ ವಾಚುಗಳು ಕೂಡಲೆ ಬರೆದು ತರಿಸಿಕೊಳ್ಳಿ. ಈ ದರಕ್ಕೆ ಮುಂದೆ ದೊರೆಯಲಾರವು. ಈ ವಾಚುಗಳು ಪ್ರತಿ ಒಬ್ಬರನ್ನೂ ಮೋಹಿಸುವವು.

ವಿಳಾಸ—ದಿ ಯೂನಿಯನ್ ಮಾರ್ಟ್, ನಂ.1, ಮಂಗಳೂರು.

ರಬ್ಬರು ಮುದ್ರೆಗಳು!

ನಾವು ನಾನಾ ತರದ ಭಾಷೆಗಳಲ್ಲಿ ಅತಿ ಉತ್ತಮವಾದ ಮತ್ತು ಬಾಳಿಕೆ ಬರುವ ಹಾಗೆ ಗಟ್ಟಿಯಾದಂಥ ರಬ್ಬರು ಮುದ್ರೆಗಳು ತಯಾರು ಮಾಡುತ್ತೇವೆ. ಇದರ ಕ್ರಯ ಕೋಡಿನ ಪೆಟ್ಟಿಗೆ, ಬ್ರಸ್ ಪ್ಯಾಡ್ ಮತ್ತು ಇಂಕಿ ಬಾಟ್ಲಿ ಸಮೇತ ರೂ. 1-8-0; ವಿ. ಪಿ. ಖರ್ಚು 4 ಆಣೆ. ಬರೆಯುವವರು ಹೆಸರು ಮುಂತಾದವುಗಳನ್ನು ಹುಟ್ಟಕ್ಷರಗಳಿಂದ ಬರೆಯಬೇಕು.

[140-17]

ನಮ್ಮ ವಿಳಾಸ:—ರಾಂಭೂಕ್ ಏಜನ್ಸಿ, ಸಾಹುಕಾರ್‌ಪೇಟೆ, ಮದರಾಸ್.

ತ್ವರೆಮಾಡಿರಿ! ನಮ್ಮ 1916 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ವಹಿಯ. ಇತರರಿಗೆ ವಿ. ಪಿ. ಖರ್ಚು ಸೇರಿ ಒಂದಕ್ಕೆ 3 ಆಣೆ; 6 ಕ್ಕೆ 13 ಆಣೆ; 12 ಕ್ಕೆ ರೂ. 1-10-0. ಇವು ಜನವರಿ ಆಖೈರು ವರಿಗೆ ಮಾತ್ರ ಸಿಕ್ಕು ವಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ ರಿಜಿಸ್ಟರ್ಡ್

[64-30]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕಳ್ಳ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಲೇಬಲ್ ಮಾಡಿರುತ್ತೇವೆ. ಲೇಬಲ್ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. 0-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-3-0. ದಂತಮಂಜನ 0-2-0. ನೀಲಾಂಜನ ತೈಲ 0-12-0. ಮು 0-3-0. ಗುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಹೆಚ್ಚು ಕಮಿಷನ್ ದೊರೆಯುವದು.

ಅಮೃತಾಂಜನ ಡಿಪೋ, ಫೋರ್ಟ್. ಮುಂಬಯಿ, ಮತ್ತು ೯ ಥಂಬುಚೆಟ್ಟಿ ಸ್ಟ್ರೀಟ್, ಮದ್ರಾಸ್.

DONGRES
THE
TONIC FOR

BALAMRIT.
IDEAL
CHILDREN.

ಡೋಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಿರುವದರಿಂದ ಕೂಸುಗಳು ಬಹಳ ಆಸೆಯಿಂದ ತೆಗೆದುಕೊಳ್ಳುತ್ತವೆ. ಇದನ್ನು ತೆಗೆದುಕೊಳ್ಳುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ತೂಕ ಸಹ ಬೆಳೆಯುತ್ತದೆ. ಕ್ರಯ—ಸೀಸೆ 1 ಕ್ಕೆ 12 ಆಣೆ; ಟಿ.ಪಿ. 4 ಆಣೆ.

ವಿಳಾಸ—ಕೆ. ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

[177-10] {ಏಜಂಟರು ಬೇಕಾಗಿರುತ್ತಾರೆ.}

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ತಮ್ಮ ತಲೆಯನ್ನು ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಶ್ರೇಷ್ಠವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡರೆ ಸುವಾಸನೆ ಸಹಿತ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ತೊಳೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ಮೆದುಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ವೈಭರಣಿ 1, ತಾಂಬೂಲಪಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಣಿ ಶಾರೋಶೇಪ್ ಪೆಟ್ಟಿಗೆ 1, ರಮಿಮರ್ ಫೋಸ್ಟು ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಒಟ್ಟು 60. ನಮ್ಮ ಕಂಪೆನಿ ಪ್ರಖ್ಯಾತಿಹೊಂದುವುದಕ್ಕಾಗಿ ಇದು ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
[149-15] ನಂ. ೩, ಇರುಳಪ್ಪನ್ ಬೀದಿ, ಮದರಾಸ

ಸುಗಂಧ ನಶ್ಯವು! ಸುಗಂಧ ನಶ್ಯವು!! ಸುಗಂಧ ನಶ್ಯವು!!!

ತಲೆನೋವು ಜಲದೋಷ ಪೀನಸ

ಪರಿಹಾರವಾಗುವದು

ಸುಲಭಕ್ರಯ! ಸುಲಭಕ್ರಯ!! ಸುಲಭಕ್ರಯ!!!

ಡಾಕ್ಟರ್ ಜಿ. ಬಿ. ಯವರ ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವುದಲ್ಲದೆ, ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು, ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ, ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ, ಮನೋವುಲ್ಲಾಸವನ್ನುಂಟುಮಾಡುವದು. ಯಾವ ಔಷಧವು ಇಷ್ಟು ಸುಲಭ ಕ್ರಯಕ್ಕೂ, ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15 ಸರ್ತಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕ ಗುಣವೂ ಪರಿಮಳವೂ, ಖಾರವೂ ಹೋಗುವದಿಲ್ಲ.

(ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾರೆವು.)

ಬುಡ್ಡಿ ಒಂದಕ್ಕೆ ಕ್ರಯ ರೂ. 0 4 0 ... ವಿ. ಪಿ. ಚಾರ್ಜು 0 3 0
ಡಜನ್ 1 ಕ್ಕೆ ಕ್ರಯ ರೂ. 2 8 0 ... ವಿ. ಪಿ. ಚಾರ್ಜು 0 6 0

[10-39]

ನಮ್ಮ ವಿಳಾಸ:—ಗುರುಬಸವ ಕಂಪನಿ, ಪೋಸ್ಟ್ ಬಾಕ್ಸ್ ನಂ. ೫೧೦, ಮದ್ರಾಸ್.

ಪ್ರತಿ ತರಿಸಿಕೊಳ್ಳಿರಿ! ಕೆಲವು ಪ್ರತಿಗಳೇ ಉಳಿದಿವೆ!!

ತಡವಾದರೆ ಮತ್ತೆ ದೊರೆಯಲಾರವು!!!

ಈ ಪುಸ್ತಕದ ಸಹಾಯದಿಂದ ಸ್ವತಃ ಔಷಧಗಳನ್ನು ತಯಾರಿಸಬಾರದೇಕೆ?

ರೂಪಾಯಿ 1–8–0 ಮಾತ್ರ ವೆಚ್ಚ ಮಾಡಿದರೆ ನಿಮಗೆ ಸಾವಿರಾರು ರೂಪಾಯಿಯ ಲಾಭ ಉಂಟು.

ಹಿಂದು-ಯುನಾನಿ ವೈದ್ಯ, ಸುಗಂಧ ಬೋಧಕ.

ಈ ಕಾಲದಲ್ಲಿ ವಿಧವಿಧವಾದ ವೈದ್ಯ ಮುಂತಾದ ಹೆಸರಿನಿಂದ ಕಂದೋಪದ ಪುಸ್ತಕಗಳು ಹೊರಟು, ಅವುಗಳಲ್ಲಿ ಹೇಳುವಂತೆ ಯಾವ ಉಪಯೋಗವೂ ತೋರದಿದ್ದರೂ ಜನರನ್ನು ಮೋಸಗೊಳಿಸುತ್ತಲಿರುವುದರಿಂದ ನ್ಯಾಯವಾದ ಪುಸ್ತಕಗಳು ಪ್ರಚಾರಕ್ಕೆ ಬರಲು ಧೈರ್ಯ ಪಡುತ್ತಾ ಸಮಯ ನಿರೀಕ್ಷಿಸುತ್ತಿದ್ದೆವು. ನಾವು ವೈದ್ಯ ಮುಂತಾದ ಉಪಯುಕ್ತವಾದ ವಿಷಯಗಳಲ್ಲಿ ಎಷ್ಟೋ ವರ್ಷಗಳಿಂದ ಪ್ರಜಾನುರಾಗವನ್ನು ಸಂಪಾದಿಸಿರುವದರಿಂದ ಈ ವಿಷಯಗಳನ್ನು "ಹಿಂದು-ಯುನಾನಿ ವೈದ್ಯ, ಸುಗಂಧಬೋಧಕ" ಎಂಬ ಹೆಸರಿನಿಂದ ಜನರ ಉಪಯೋಗಾರ್ಥವಾಗಿ ಪ್ರಕಟಿಸಿರುವೆವು.

ಈ ಪುಸ್ತಕವು ಮೂರು ಅಧ್ಯಾಯಗಳಿಂದ ಅಡಕವಾಗಿದೆ.

೧ ನೇ ಭಾಗದ ಹಿಂದು ವೈದ್ಯದಲ್ಲಿ

ಕಸ್ತೂರಿ ಮಾತ್ರೆಗಳು, ಪಚ್ಚಕರ್ಪೂರ ಮಾತ್ರೆಗಳು, ವಿಷ್ಣುಚಕ್ರಘುಟಿಕಾ, ನಾನಾ ತರಹ ಭೇದಿಮಾತ್ರೆಗಳು, ನಾನಾ ತರಹ ಭೇದಿಚೂರ್ಣ, ಜೋಗಿ ರಸಾಯನ ... [illegible] ... ಲೇಹಗಳು, ಭಸ್ಮಗಳು, ತೈಲಗಳು, ... [illegible] ... ಮುಂತಾದ ಅನೇಕ ಔಷಧಿಗಳು ಶಾಸ್ತ್ರೋಕ್ತವಾಗಿ ತಯಾರುಮಾಡತಕ್ಕ ವಿವರಣೆ, ಅವುಗಳ ಅನುಪಾನ ಮತ್ತು ಸೇವನಾ ಕ್ರಮ ಮುಂತಾದವು ಮರೆಯಿಲ್ಲದೆ ವಿವರಿಸಲ್ಪಟ್ಟಿವೆ.

೨ ನೇ ಭಾಗದ ಯುನಾನಿ ವೈದ್ಯದಲ್ಲಿ

ಬಾಲವೃದ್ಧ ಸ್ತ್ರೀಪುರುಷರಿಗೆ ಹಿತಕರವಾಗಿ ರುಚಿಯಾಗಿಯೂ ಗುಣವೂ ಉಳ್ಳ ನಾನಾ ತರಹ ಷರಬತ್, ನಾನಾ ತರಹ ಗುಲ್ಕನ್, ನಾನಾ ತರಹ ಮುರಬ್ಬ, ... [illegible] ... ಮುಂತಾದ ಯುನಾನಿ ವೈದ್ಯವಿಧಾನ ... ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

೩ ನೇ ಭಾಗದ ಸುಗಂಧದ ಅಧ್ಯಾಯದಲ್ಲಿ

ಅಗರುಬತ್ತಿ, ಹಸನು ಕಸ್ತೂರಿಬತ್ತಿ, ಧೂಪದಬತ್ತಿ, ಮೈಸೂರು ಹಸೀ ಬತ್ತಿ, ... [illegible] ... ಪರಿಮಳ ಪದಾರ್ಥಗಳನ್ನು ಶಾಸ್ತ್ರೋಕ್ತವಾಗಿ ಮಾಡತಕ್ಕ ವಿಧಾನಗಳು ವಿವರಿಸಲ್ಪಟ್ಟಿವೆ. [236-1]

ಕ್ರಯ ಪುಸ್ತಕ ೧ ಕ್ಕೆ ರೂ. ೧–೮–೦.

ನಮ್ಮ ವಿಳಾಸ:—ವೆಂಕಟೇಶವಿಲಾಸ ಬುಕ್ ಡಿಪೋ, ೩೦೮, ಹಲಸೂರುಪೇಟೆ, ಬೆಂಗಳೂರು ಸಿಟಿ.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-15]

First Valuation Result:—The total liabilities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಚಿಹ್ನೆಗಳೇನೆಂದರೆ:— ... [illegible] ... ಇವೆಲ್ಲಾ ಉಂಟಾಗುವುವು.

ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುತ್ತ ಈ ಮಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-10]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

... ಅಥವಾ ೬ ಬುದ್ದಿಗಳಿಗೆ ರೂ. ೧೧—೮—೦. ಇವುಗಳನ್ನು ನಾಡುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್ ... ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಸಚಿತ್ರ ಕಿಮಿಯಾ.

ವಾದಭ್ರಷ್ಟ ವೈದ್ಯಶ್ರೇಷ್ಠ, ಕಿಮಿಯಾ ಎಂದರೇನು? ಇದು ವೈದ್ಯರ ಗುಟ್ಟು. ... [illegible] ... ಲಭ್ಯವಾದ ಉತ್ತಮ ವಸ್ತುವನ್ನೇ ಪಡೆಯಿರಿ.

ಒಂದನೇ ಭಾಗ—ಸುವರ್ಣ ಮೊದಲಾದ ಧಾತೋಪಧಾತು, ರಸೋಪರಸ, ... [illegible] ...

ಎರಡನೇ ಭಾಗ—ಎರಡು ಭಾಗಗಳೂ ಸೇರಿ ೬೩೦ ಪುಟಗಳ ಪುಸ್ತಕ, ಸಚಿತ್ರ, ಸುಂದರ ಮುದ್ರಣ. ಅಂದವಾದ ಬೈಂಡು. ಕ್ರಯ ೧ ರೂ ಪಾಯಿ ಮಾತ್ರ; ವಿ. ಪಿ. ಮೂಲಕ ರೂ ೧–೪–೦.

ಸೇವಾಂಕ ರಹಸ್ಯವನ್ನು ಬೋಧಿಸುವ ಕನ್ನಡ ದತ್ತಾತ್ರೇಯ ಚರಿತ್ರೆ. ಸ್ತ್ರೀ ... ಶೀಘ್ರವಾಗಿ ಖರೀದಿಸುವವರು ಹೆಸರು ರಿಜಿಸ್ಟರ್ ಮಾಡುವುದು ಉಚಿತ.

ಧನ್ವಂತರಿ ಪತ್ರಿಕೆ.

ಅಷ್ಟೋತ್ತರ ಶತನಾಮ, ಕವಚ, ಪೂಜಾವಿಧಿ, ಕಥೆ, ಸ್ತೋತ್ರ, ಕಥಾ ... [illegible] ... ಕ್ರಯ ೧ ಆಣೆ ... ಕಳುಹಿಸಿದರೆ ರವಾನಿಸುತ್ತೇವೆ.

ಶ್ರೀ ಧನ್ವಂತರಿ ಪಾದಾಮೃತ—ಭಜನೆಗೆ ಬಹಳ ಅನುಕೂಲವಾಗಿದೆ. ಕ್ರಯ ೧ ಪ್ರ. [237-1]

Recognised by the Government H. H. the Maharajah of Mysore

ಮೈಸೂರು ಸರ್ಕಾರದಿಂದ ಸನ್ಮಾನಿಸಿ ಪ್ರೋತ್ಸಾಹಿಸಲ್ಪಟ್ಟ ಪಂಡಿತ ನಿಘಂಟು.

ಇಂಗ್ಲಿಷ್, ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ, ಗುಜರಾತಿ, ತೆಲುಗು, ತಮಿಳು ಭಾಷೆಗಳು ಅಕಾರಾದಿ, ಶುದ್ಧ ಪಕ್ಕ ಸಹ. ಸಂಗ್ರಹಕ್ಕೆ ಅವಶ್ಯವಾದದ್ದು. ಸ್ವಲ್ಪ ಕಾಪಿಗಳಿವೆ ಕ್ರಯ 3 ರೂ.; ವಿ. ಪಿ. ಮೂಲಕ ರೂ. 3-4-0.

ವಿಳಾಸ:—ವೈದ್ಯ ಸಿಂಧು ಆಫೀಸ್, ಬೆಂಗಳೂರು ಸಿಟಿ.

ಮಧುರೆ ಜುನ್ನಾರಿ ಅಂಚಿನ ಸೀರೆ ಅಪ್ಪಲ್ ರಬಂ ರೂ. 3–0–0.

ಅಕ್ಟೋಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಉಚಿತವಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಢೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಟ್ಟೆ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸರಕು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೆ. ಕಂಪೆನಿ

[111-23] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ಸವಿವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲಿಲ್ಲ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರವಾದದ್ದು

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಶೋಭಾಯುಕ್ತವಾಗಿ ಮಾಡುವುದೋ, ಹಾಗೆಯೇ ಮಾನಸಿಕ ಶಕ್ತಿಯನ್ನು ಪಡುವ ಪುರುಷರಿಗೂ ಅಷ್ಟೇ ಅಗತ್ಯದ ಸಹಕಾರವಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಉಪಯೋಗಿಸುವುದರಿಂದ ಬಹಳ ಕಪ್ಪಾಗಿ ದಟ್ಟವಾಗಿ ಬೆಳೆದು ನುಣ್ಣಗೆ ಆಗುವುವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಸೀಸಾವರೆದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಾಳುಮಾಡಬೇಡಿ. ಪ್ರತ್ಯಕ್ಷವಾಗಿ ಒಂದೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ಸೇಠ ಸಹಾಯಕರ ಬಂಧುಗಳು. ಅಸನಸೋಲ್, ಬರೆಯುವುದು—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೆಂದು ಸಾಧಕವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೊಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳೆಯಿಂದ ತಮಗೆ ಅಕ್ಕಲ ಸಹಿಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಸೀಸೆಯ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ನೋಟ ಕೊಡದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ತಾವು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ. ನಮ್ಮ ಮೆಹರಬಾನ್ ಮಾಡಿದರೆ ನಾವು ಪಂಚಕರ ಬರೆಯಲ್ಲಿ ಸೂಚಿಸಿರುವ ಕರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಬೆನ್ನಾಗಿ ಪರೀಕ್ಷಿಸಿ ಆಯ್ದು ಹೂಗಳ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿರುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಸರ್ಗವಿಲ್ಲ. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸೈಸರ್ಗಿಕವಾದೊಂದು ಆಹ್ಲಾದಕರತೆಯು ಉಂಟಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರದ ಗಂಧವು ಅದಲ್ಲವುಗಳನ್ನು ವಿಸರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-41]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆಗೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ತಂಬಾಕು ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜಿದ್, ಮಾರ್ಕೆಟ್, ಬಾಂಬೆ.

ಏಜಂಟ್, ... ಮಾರ್ಕೆಟ್, ಮಂಗಳೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚರ್ಚೆಗಳೂ ತೀರ್ಮಾನಗಳೂ.

ಈ ಸಲ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಅಕ್ಟೋಬರ್ ತಾ. 20 ರಿಂದ ತಾ. 26 ನೇ ಮಂಗಳವಾರ ಸಾಯಂಕಾಲದ ತನಕ ಸಂಸ್ಥಾನಾಮಳಿಗೆ ಸಂಬಂಧಪಟ್ಟ ವಿಚಾರಗಳು ಚರ್ಚೆಯಾದವು. ಈ ಚರ್ಚೆಗಳನ್ನು ವಿಸ್ತಾರವಾಗಿ ಪ್ರಕಟಿಸಲು ಸ್ಥಳವಿಲ್ಲವಾಗಿ ಸಂಕ್ಷೇಪವಾಗಿ ತಿಳಿಸುತ್ತೇವೆ.

ಕಾನೂನ್ ತಿದ್ದುವ ವಿಚಾರಗಳು.

ಮೆಂಬರುಗಳ ಪ್ರಾರ್ಥನೆ.—ನಷ್ಟಹೊಂದಿದ ಕಕ್ಷಿಗಾರನು ಅಧಿಕಾರಿಯ ಮೇಲೂ, ಸರ್ಕಾರದ ಮೇಲೂ ದಾವಾ ಮುಂತಾದ್ದು ಮಾಡಿ ಪರಿಹಾರ್ಪಡೆಯುವುದಕ್ಕೆ ಕಾನೂನ್‌ನಲ್ಲಿ ಈಗ ಅವಕಾಶವಿಲ್ಲ. ಆ ರೀತಿ ಅವಕಾಶವನ್ನು ಕಲ್ಪಿಸಿ ಕೊಡಬೇಕು. ದಿವಾನ್‌ರವರ ಉತ್ತರ.—ಅಂಥಾ ಬದಲಾವಣೆಗೆ ಸಧ್ಯದಲ್ಲಿ ಕಾರಣವೇನೂ ಕಾಣುವುದಿಲ್ಲ. ನೋಡೋಣ.

ಪ್ರ.—ಸಿವಿಲ್ ಕೋರ್ಟ್ ಡಿಕ್ರಿಯನ್ನು ಸಾಲಗಾರನ ಮೇಲೂ, ಅವನ ಆಸ್ತಿಯ ಮೇಲೂ ಜಾರಿಮಾಡುವಂತೆ ಪತ್ರದಲ್ಲಿ ಕಾಣಿಸಿದ್ದರೆ ಆಸಾಮಿಯ ಮೇಲೆ ಜಾರಿಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಪ್ರಥಮ ಡಿಕ್ರಿ ಮತ್ತು ಅಪ್ಪೀಲ್ ಡಿಕ್ರಿಗಳು ಆಗುವಷ್ಟರಲ್ಲಿ ಕಾಲವಿಳಂಬವೂ ವೃಥಾ ದ್ರವ್ಯ ನಷ್ಟವೂ ಆಗುತ್ತಿದೆ. ಇದನ್ನು ತಪ್ಪಿಸಿ, ಪೂರ್ವದಲ್ಲಿದ್ದಂತೆ ಕಾನೂನನ್ನು ಬದಲಾಯಿಸಿಕೊಡಬೇಕು. ಉ.—ಇದು ಸಾಧ್ಯವೆಂದು ಹೇಳಲಾಗುವುದಿಲ್ಲ.

ಪ್ರ.—ಮಕ್ಕಳಿಲ್ಲದ ವಿಧವೆಯರಿಗೆ ಜೀವನಕ್ಕೆ ಕಷ್ಟವಾಗೋಣದರಿಂದ ಪಟೇಲಿ ಮತ್ತು ಇನಾಮನುಭೋಗ ಹಕ್ಕನ್ನು ಅವರಿಗೆ ತಪ್ಪಿಸದೆ ಅವರ ಹೆಸರಿನಲ್ಲಿ ಪೂರ್ವದಲ್ಲಿದ್ದಂತೆ ನಿಲ್ಲಿಸಿಕೊಡಬೇಕು. ಉ.—ಈ ಉದ್ಯೋಗವು ಕೆಲಸ ಮಾಡುವುದಕ್ಕೇ ಹೊರತು ಜೀವನಕ್ಕಲ್ಲ. ಈಗ ಮಾಡಿರುವ ರೂಲನ್ನು ಬದಲಾಯಿಸುವುದು ಸಾಧ್ಯವಲ್ಲ.

ಪ್ರ.—(1) ಜಮೀನನ್ನು ಸರ್ಕಾರಕ್ಕೆ ಬೇಕೆಂದು ಪ್ರಕಟಮಾಡಿ ಪಡೆದು ಕೊಳ್ಳುತ್ತಾರೆ. ಇದರಿಂದ ಮಾಲೀಕರಿಗೆ ನಾನಾ ಕಷ್ಟ ನಷ್ಟಗಳಾಗುವವು. ಇಂಥಿಂಥಾ ಉದ್ದೇಶಗಳಿಗಾಗಿ ಸರ್ಕಾರದವರು ಜಮೀನುಗಳನ್ನೂ ನಿವೇಶನಗಳನ್ನೂ ರೈತರಿಂದ ತೆಗೆದುಕೊಳ್ಳತಕ್ಕದ್ದು ಎಂಬದನ್ನು ಗೊತ್ತುಮಾಡಿ ಲ್ಯಾಂಡ್ ಅಕ್ವಿಜಿಷನ್ ರೂಲನ್ನು ಬದಲಾಯಿಸಿದರೆ ಉತ್ತಮ. (2) ಅಕ್ವಿಜಿಷನ್ ಆಫೀಸರು ಮಾಡಿದ ತೀರ್ಮಾನದ ಮೇಲೆ ಸಿವಿಲ್ ಕೋರ್ಟಿನಲ್ಲಿ ಅಪೀಲ್ ಮಾಡುವುದಕ್ಕೆ ಕಾನೂನ್‌ನಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಉ.—(1) ಇದು ಸಾಧ್ಯವಲ್ಲ. (2) ಯೋಚಿಸಿ ನೋಡೋಣ.

ಪ್ರ.—(1) ಜಮೀನುದಾರರು 100-200 ರೂಪಾಯಿ ಅಡ್ವಾನ್ಸು ಕೊಟ್ಟು ಆಳುಗಳನ್ನಿಟ್ಟುಕೊಂಡು ವ್ಯವಸಾಯ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಆಳುಗಳು ಬೇರೇ ಅಕೋಸ್ತರಗಳಿಂದ ಸಾಲವನ್ನು ತೀರಿಸದೇನೂ, ಮುಟ್ಟುಗಳನ್ನು ವಾಪಸು ಕೊಡದೇನೂ ತಪ್ಪಿಸಿಕೊಂಡು ಹೋಗುತ್ತಾರೆ. ಇದರಿಂದ ವ್ಯವಸಾಯ ಕೆಲಸಕ್ಕೆ ತುಂಬಾ ನಷ್ಟವಾಗುತ್ತದೆ. ಬ್ರೀಚ್ ಅಫ್ ಕಂಟ್ರಾಕ್ಟ್ ಕಾನೂನನ್ನು ಬದಲಾಯಿಸಿ ವ್ಯವಸಾಯದ ಆಳುಗಳನ್ನೂ ವಾರಂಟಿನಿಂದ ಹಿಡಿದು ತರುವಂತೆ ಮಾಡಿಕೊಡಬೇಕು. (2) ಬ್ರಿಟಿಷ್ ಸೀಮೆಯ ವಾರಂಟನ್ನು ನಮ್ಮ ಸೀಮೆಯಲ್ಲಿ ಜಾರೀ ಮಾಡುವಂತೆ ನಮ್ಮ ಸೀಮೆಯ ವಾರಂಟನ್ನು ಬ್ರಿಟಿಷ್ ಸೀಮೆಯವರು ಜಾರೀ ಮಾಡುವುದಿಲ್ಲ. ಇದರಿಂದ ಬಹಳ ತೊಂದರೆಗಳಾಗುತ್ತಿವೆ. ಉ.—(1) ವ್ಯವಸಾಯದ ಕೂಲಿಯವರಿಂದ ಬರವಣಿಗೆಯಲ್ಲಿ ಕಂಟ್ರಾಕ್ಟು ಮಾಡಿಕೊಂಡಿದ್ದರೆ ಈಗಲೂ ವಾರಂಟು ಕೊಡುತ್ತಾರೆ. ಇದಕ್ಕಿಂತ ಹೆಚ್ಚು ಅನುಕೂಲ ಮಾಡಿಕೊಡಲಿಕ್ಕಾಗದು. ಅಂಥಾ ಆಳಿನ ಮೇಲೆ ಸಿವಿಲ್ ಕೋರ್ಟಿನಲ್ಲಿ ದಾವಾ ಮಾಡಿಕೊಳ್ಳಿ. (2) ಈ ವಿಷಯದಲ್ಲಿ ಸರ್ಕಾರದವರು ಬ್ರಿಟಿಷ್ ಸೀಮೆಯವರ ಕೂಡ ಕಾಗದಪತ್ರಗಳನ್ನು ನಡಿಸುತ್ತಿದ್ದಾರೆ ಜಾಗ್ರತೆಪಡಿಸುವೆವು.

ಪ್ರ.—(1) ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾ ಪಕ್ಷದ ಮೆಂಬರುಗಳು ಸರ್ಕಾರದವರನ್ನು 12 ಪ್ರಶ್ನೆಗಳನ್ನು ಕೇಳಬಹುದೆಂಬ ರಿಯಾಯಿತಿ ಕೊಡೋಣಾಗಿದೆ. ಈ ಪ್ರಶ್ನೆಗಳ ಸಂಖ್ಯೆಯನ್ನು 30 ಇಲ್ಲವೇ 24 ಕ್ಕೆ ಹೆಚ್ಚಿಸಬೇಕು. (2) ಮೆಂಬರುಗಳು ಕೇಳಿದ ಪ್ರಶ್ನೆಗಳಲ್ಲಿ ಸರ್ಕಾರದವರು ಕೆಲವನ್ನು ಕಾರಣ ಹೇಳದೆ ಬಿಟ್ಟುಬಿಡುತ್ತಾರೆ. (3) ಬಡ್ಜೆಟ್ ವಿಚಾರಗಳನ್ನು ಚರ್ಚಿಸಿ ಮೆಂಬರುಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಾರಷ್ಟೆ. ಈ ಅಭಿಪ್ರಾಯಗಳಲ್ಲಿ ಹೆಚ್ಚು ಮಂದಿ ಒಪ್ಪುವ ಭಾಗಗಳನ್ನು ಸರ್ಕಾರದವರು ಅಂಗೀಕರಿಸಿ ಆ ರೀತಿ ಜಾರಿಮಾಡುವಂತಾಗಬೇಕು. ಉ.—(1) ಪ್ರಶ್ನೆಗಳನ್ನು ಇನ್ನೂ ಹೆಚ್ಚಾಗಿ ಕೇಳಬಹುದೆಂಬದಾಗಿ ಸರ್ಕಾರದವರು ರಿಯಾಯಿತಿ ತೋರಿಸಬೇಕೆಂದಿದ್ದಾರೆ. (2) ಉತ್ತರ ಹೇಳದೆ ಬಿಟ್ಟುಬಿಡುವ ಪ್ರಶ್ನೆಗಳಿಗೆ ಸರ್ಕಾರದವರು ಕಾರಣ ತಿಳಿಸುವುದಕ್ಕಾಗುವುದಿಲ್ಲ. (3) ಸಧ್ಯದಲ್ಲಿ ಇದು ಸಾಧ್ಯವಲ್ಲ. ಮುಂದೆ ನೋಡೋಣ.

ಪ್ರ.—ಹಣಗಾರರು ದುಬಾರಿ ಬಡ್ಡಿಯನ್ನು ಹಾಕಿ ರೈತರನ್ನು ಮುಳುಗಿಸುತ್ತಾರೆ. ಅನೇಕರು ತಮ್ಮ ಜಮೀನು ಮನೆಗಳನ್ನು ಕಳಕೊಂಡು ಕೆಟ್ಟುಹೋದರು. ಇದನ್ನು ತಪ್ಪಿಸುವುದಕ್ಕೆ ಬಡ್ಡಿ ದರವನ್ನು ಸರ್ಕಾರದವರು ನಿರ್ಬಂಧಮಾಡಿ ಒಂದು ಕಾನೂನು ಜಾರಿಗೆ ತರಬೇಕು. ಉ.—ಪರಸ್ಪರಸಹಾಯ ಸಂಘಗಳನ್ನು ಮಾಡಿಕೊಂಡರೆ ಇದು ಪರಿಹಾರವಾಗುತ್ತದೆ. ಕಾನೂನ್ ಮಾಡಬೇಕಾದ ಅಗತ್ಯವಿಲ್ಲ. ಸಿವಿಲ್ ಕೋರ್ಟುಗಳಲ್ಲಿ ಬಡ್ಡಿ ದರವನ್ನು ಕಡಮೆ ಮಾಡುತ್ತಿದ್ದಾರೆ. ಬಡ್ಡಿ ದರವನ್ನು ಯಾವ ಪಾಶ್ಚಾತ್ಯ ರಾಜ್ಯದಲ್ಲೂ ನಿಗದಿ ಮಾಡಿರುವುದಿಲ್ಲ.

ಪ್ರ.—(1) ನ್ಯಾಯವಿಧಾಯಕ ಸಭೆಯಲ್ಲಿರುವ 8 ಮಂದಿ ಪ್ರಜಾ ಪಕ್ಷದ ಮೆಂಬರುಗಳ ಪೈಕಿ ನಾಲ್ವರನ್ನು ಪ್ರತಿನಿಧಿ ಸಭೆಯವರೂ, ನಾಲ್ವರನ್ನು ಡಿಸ್ಟ್ರಿಕ್ಟುಗಳವರೂ ಚುನಾಯಿಸುತ್ತಾರೆ. ಇದು ತೃಪ್ತಿಕರವಾಗಿಲ್ಲ. ಇದನ್ನು ತಪ್ಪಿಸಿ ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಒಬ್ಬ ಮೆಂಬರು ಚುನಾವಣೆಯಾಗುವಂತೆ ಮಾಡಬೇಕು. (2) ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಲ್ ಕೌನ್ಸಿಲ್‌ಗಳಿಂದ ಮೆಂಬರು ಚುನಾವಣೆಯಾಗುವಂತೆ ಮಾಡಿಕೊಡಬೇಕು. ಉ.—(1) ದಿವಾನ್‌ರವರು ಸಭೆಯ ಬಹುಮತ ಹೇಗಿದೆ ಎಂದು ವಿಚಾರಿಸಿದಾಗ ಅನೇಕ ಮೆಂಬರುಗಳು ಡಿಸ್ಟ್ರಿಕ್ಟ್‌ವಾರ್ ಚುನಾವಣೆಯನ್ನು ಅನುಮೋದಿಸಿದರು. (2) ಇದು ಸರ್ಕಾರದ ಯೋಚನೆಯಲ್ಲಿದೆ.

ಪ್ರ.—ಗ್ರಾಮಾಂತರಗಳಲ್ಲಿ ರಾಗಿಯನ್ನು ಕೂಡಿಸಿಡುವುದಕ್ಕೆ ರೈತರು ಹಗೇವುಗಳನ್ನು ಮಾಡಿಕೊಂಡಿದ್ದಾರೆ. ಕೆಲವು ವೇಳೆ ಅಂಥಾ ರಾಗಿ ಮುಗ್ಗಲಾಗಿ ಜನರು ತಿಂದು ಕೆಡುಕಾಗುತ್ತದೆ. ಇದಕ್ಕೋಸ್ಕರ ಹಗೇವುಗಳನ್ನು ಹೀಗೇ ಕಟ್ಟಬೇಕೆಂದು ಸರ್ಕಾರದವರು ಒಂದು ಕಾನೂನ್ ಮಾಡಿ ಜಾರಿಗೆ ತರಬೇಕು. [ಇದನ್ನು ಅನೇಕ ಪಟೇಲ್ ಇನಾಮನುಭೋಗ ಮೆಂಬರುಗಳು ಒಪ್ಪಲಿಲ್ಲ.] ಉ.—ಇದು ಅವಶ್ಯಕವಿಲ್ಲ.

ಪ್ರ.—ಗೋವುಗಳನ್ನು ಬಹಳವಾಗಿ ಕೊಲ್ಲುತ್ತಾರೆ. ಇದರಿಂದ ವ್ಯವಸಾಯವು ಅಭಿವೃದ್ಧಿಗೆ ಬರದೆ ಅಡಚಣೆಯಾಗಿದೆ. ಲೈಸೆನ್ಸ್ ಪಡೆಯದೆ ಯಾರೂ ದನಗಳನ್ನು ಕೊಲ್ಲದಂತೆ ಕಾನೂನ್ ಮಾಡಬೇಕು. ಉ.—ದೊಡ್ಡ ಪಟ್ಟಣಗಳಲ್ಲಿ ಈ ರೂಲು ಜಾರಿಯಲ್ಲಿದೆ. ಸಂಸ್ಥಾನಾಮಳಿ ಜಾರಿಮಾಡುವುದು ಸಾಧ್ಯವಲ್ಲ. ಇದು ಅವಶ್ಯವೆಂಬುದೇನೋ ಸರ್ಕಾರದವರಿಗೆ ತಿಳಿದಿದೆ.

ಪ್ರ.—ಕೊಲೆಮಾಡಿದವನ್ನು ಗಲ್ಲಿಗೆ ಹಾಕದಂತೆ ಮಾಡುವುದು ಒಳ್ಳೇದು. ಉ.—ಇದು ಸಾಧ್ಯವಲ್ಲ.

ಕೋರ್ಟುಗಳು.

ಪ್ರ.—ಡಿಕ್ರಿಯನ್ನು ಕೊಟ್ಟ ಕೋರ್ಟಿನವರೇ ಜಾರೀ ಕ್ರಮ ನಡಿಸುವಂತೆ ರೂಲು ಬದಲಾವಣೆಯಾಗಬೇಕು. ಈಗ ಕೋರ್ಟಿನಿಂದ ಕೋರ್ಟಿಗೆ ಜಾರಿಕ್ರಮ ನಡಿಸುವುದಕ್ಕೆ ರವಾನೆಯಾಗುತ್ತದೆ. ಇದರಿಂದ ಕಾಲವಿಳಂಬ, ದ್ರವ್ಯ ನಷ್ಟವಾಗುತ್ತದೆ. ಉ.—ಇದು ಆಗಲಾರದು.

ಪ್ರ.—ರೆವಿನ್ಯೂ ಅಧಿಕಾರಿಗಳಿಗೆ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತು ಮಾಡುವ ಅಧಿಕಾರವನ್ನು ತಪ್ಪಿಸಬೇಕು. ಕೆಲವು ವರುಷಗಳ ಹಿಂದೆ ಸರ್ಕಾರದವರು ಕೆಲವು ಅಮಲ್ದಾರರಿಗೆ ಆ ಅಧಿಕಾರವನ್ನು ತಪ್ಪಿಸಿದ್ದರು. ಅದನ್ನು ಕ್ರಮೇಣ ಸಂಸ್ಥಾನಾಮಳಿ ಜಾರಿಗೆ ತರುವುದಕ್ಕೆ ಪ್ರತಿಯಾಗಿ ಯಥಾ ಪ್ರಕಾರ ಮೊದಲಿನಂತೆಯೇ ಅವರು ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದ್ದಾರೆ. ಇದರಿಂದ ನಾನಾ ಅನರ್ಥಗಳಾಗುವವು; ಪ್ರಜೆಗಳ ಕಷ್ಟವನ್ನೆಲ್ಲಾ ಈ ಸಭೆಯಲ್ಲಿ ರಹಸ್ಯವಾಗಿ ಹೇಳುವುದು ಶಕ್ಯವಲ್ಲ. ಉ.—ಕಷ್ಟಗಳುಂಟೆಂಬದನ್ನು ಸರ್ಕಾರದವರೂ ತಿಳಿದಿದ್ದಾರೆ. ಇದಕ್ಕೆ ಹೆಚ್ಚು ಹಣ ಖರ್ಚಾಗಬೇಕು. ಇದೊಂದೇ ಯೋಚನೆಯಾಗಿದೆ. ಹೇಗೆ ಮಾಡಬಹುದೆಂದು ಈಗ ಸರ್ಕಾರದಲ್ಲಿ ಚರ್ಚೆಯಾಗುತ್ತಿದೆ. ಬೇಗನೆ ಇತ್ಯರ್ಥವಾಗಬಹುದು.

ಪ್ರ.—ಫಸ್ಟ್ ಗ್ರೇಡ್, ಸೆಕೆಂಡ್ ಗ್ರೇಡ್, ಪ್ಲೀಡರುಗಳೆಂಬ ವ್ಯತ್ಯಾಸವನ್ನು ವಜಾ ಮಾಡಬೇಕು. ಅಡ್ವೊಕೇಟರು, ಪ್ಲೀಡರುಗಳು ಎಂಬ ಎರಡು ದರ್ಜೆಗಳಿದ್ದರೆ ಸಾಕಾಗಿದೆ. ಉ.—ಈ ವಿಚಾರದಲ್ಲಿ ಚೀಫ್ ಕೋರ್ಟಿನವರು ಆಲೋಚನೆ ಮಾಡುತ್ತಿದ್ದಾರೆ. ಸರ್ಕಾರದವರು ಅವರ ಅಭಿಪ್ರಾಯವನ್ನು ತಿಳಿದು ಕೆಲವು ಬದಲಾವಣೆಗಳನ್ನು ಮಾಡುವರು.

ಪ್ರ.—ಹೊಳೆನರಸಿಪುರದ ಮುನ್ಸಿಫರಿಗೆ 100 ರೂಪಾಯಿ ತನಕ ಇರುವ ಸ್ಮಾಲ್ ಕಾಜ್ ಮೊಕದ್ದಮೆಗಳನ್ನು ಹಿಡಿದು ತೀರ್ಮಾನ ಮಾಡುವ ಅಧಿಕಾರವನ್ನು ವಹಿಸಬೇಕು. ಈಗ ಕಕ್ಷಿಗಾರರು ಮಿರ್ಲೆ, ಸಾಗ್ರಾಮ, ಹೊಳೆನರಸಿಪುರ, ಈ ಹೋಬಳಿಗಳಿಂದ ಮೈಸೂರಿಗೆ ಬರಬೇಕಾಗಿದೆ. ಉ.—ವಿಚಾರಿಸಿ ಸಾಧ್ಯವಾದರೆ ಹಾಗೆ ಮಾಡುತ್ತೇವೆ.

ಪ್ರ.—ಸಿವಿಲ್ ಕೋರ್ಟುಗಳಲ್ಲಿ ಕಕ್ಷಿಗಾರರಿಗೆ ಡಿಪಾಜಿಟ್ ಬಾಕಿ ಬರಬೇಕಾದರೆ ಬಹಳ ಪ್ರಯಾಸ. ಅಂಥಾ ಬಾಕಿಗಳನ್ನು ಮೂರು ವರುಷ ಕಳೆಯಿತೆಂದು ಕಕ್ಷಿಗಾರರಿಗೆ ತಿಳಿಯದಂತೆ ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆ. ಉ.—ಅಂಥಾ ಹಣವನ್ನು ಜಾಗ್ರತೆಯಾಗಿ ವಾಪತಿ ಮಾಡುವಂತೆ ಏರ್ಪಾಡು ಮಾಡುತ್ತೇವೆ.

ಪ್ರ.—ದಾವಾ ವಾಪಸ್ ತೆಗೆದುಕೊಂಡ ಸಂದರ್ಭದಲ್ಲಿ ದಾವಾ ಸ್ಟಾಂಪಿನ ಮೈಕಿ ಅರ್ಧವನ್ನು ವಾಪಸು ಕೊಡಿಸಬೇಕು. ಉ.—ವಾಪಸು ಕೊಡಕೂಡದೆಂದೂ, ಕೊಟ್ಟರೆ ಮೊಕದ್ದಮೆಗಳು ಹೆಚ್ಚುವವೆಂದೂ ಚೀಫ್ ಕೋರ್ಟಿನವರು ಅಭಿಪ್ರಾಯಪಡುತ್ತಾರೆ. ವಿಚಾರದಿಂದ ಹುಕುಂ ಕೊಡುವೆವು.

ಪ್ರ.—ಎರಡನೇ ಅಪೀಲ್ ಮಾಡಿದಾಗ ಅಪೀಲನ್ನು ಹೀರಿಂಗ್ ಇಡದೇನೇ ವಜಾ ಮಾಡಿದರೆ ಅರ್ಧ ಸ್ಟಾಂಪನ್ನು ವಾಪಸು ಕೊಡಿಸಬೇಕು. ಉ.—ಇದು ಆಗಲಾರದು.

ಪ್ರ.—ಕಕ್ಷಿಗಾರರು ಹುಕುಂ ಆದ ಏಳು ದಿನಗಳೊಳಗೆ ಪ್ರೋಸೆಸ್ ಫೀ ಮತ್ತು ಭತ್ಯಗಳನ್ನು ಕಟ್ಟಬೇಕೆಂಬ ವಿಧಿಯನ್ನು ತಪ್ಪಿಸಿ ಹೀರಿಂಗಿಗೆ ಏಳು ದಿನ ಮುಂಚೆ ಯಾವಾಗಲಾದರೂ ಕಟ್ಟಬಹುದೆಂಬ ರಿಯಾಯಿತಿ ಆಗಬೇಕು. ಉ.—ಗುರುತು ಮಾಡಿಕೊಂಡಿದ್ದೇವೆ; ಆಲೋಚನೆ ಮಾಡಿ ಹುಕುಂ ಕೊಡುವೆವು.

ಪ್ರ.—ಕ್ರಿಮಿನಲ್ ಕೋರ್ಟುಗಳಲ್ಲಿ ಸಜಾ ಶಿಕ್ಷೆ ವಿಧಿಸುತ್ತಾರಷ್ಟೆ. ವಿಧಿಸಲ್ಪಟ್ಟ ತಾರೀಖಿನಿಂದ ಮೂರು ದಿನ ಕಳೆದ ಮೇಲೆ ಜಾರಿ ಆಗುವಂತೆ ಮಾಡಬೇಕು. ಉ.—ಇದು ಆಗಲಾರದು.

ಪ್ರ.—ಕೋರ್ಟುಗಳಲ್ಲಿ ಕಾಪಿ ಬರೆಯತಕ್ಕವರು ಪ್ರತಿ ಪುಟದಲ್ಲೂ ಕಡೇ ಪಕ್ಷ 75 ಮಾತುಗಳಾದರೂ ಬರೆಯುವುದಿಲ್ಲ. ಬೇಕಾಬಿಟ್ಟಿ ಬರೆಯೋಣದಿಂದ ಕಕ್ಷಿಗಾರರಿಗೆ ವೃಥಾ ದುಡ್ಡು ನಷ್ಟವಾಗುತ್ತಿದೆ. ಅದನ್ನು ತನಿಖೆ ಮಾಡಿ ಕ್ರಮಪಡಿಸುವವರಿಲ್ಲ. ಬ್ರಿಟಿಷ್ ಸೀಮೆಯ ಕೋರ್ಟುಗಳಲ್ಲಿ ತನಿಖೆಯೂ, ಶಿಕ್ಷೆಯೂ ಜಾರಿಯಲ್ಲಿದೆ. ಅಲ್ಲಿ ಪ್ರತಿ ಪುಟಕ್ಕೂ 175 ಮಾತುಗಳನ್ನು ಬರೆಯಬೇಕೆಂದು ಕಟ್ಟು ಮಾಡಿದ್ದಾರೆ. ಆ ರೀತಿ ಇಲ್ಲೂ ಕ್ರಮಪಡಿಸಬೇಕು. ಇಲ್ಲವಾದರೆ ಕಾಪಿ ಕಾಗದಕ್ಕೆ ಇಟ್ಟಿರುವ 2 ಆಣೆ ಫೀಜನ್ನು ಕಡಮೆ ಮಾಡಬೇಕು. ಉ.—ಈ ಆಕ್ಷೇಪಣೆಯು ನ್ಯಾಯವಾದದ್ದೆಂದು ಚೀಫ್ ಜಡ್ಜಿಯವರು ಒಪ್ಪಿಕೊಳ್ಳುತ್ತಾರೆ. ವಿಚಾರಿಸಿ ಕ್ರಮಪಡಿಸುತ್ತೇವೆ.

ಪ್ರ.—ಸಬ್ ರೆಜಿಸ್ಟ್ರಾರ್ ಆಫೀಸುಗಳಲ್ಲಿ ಕಕ್ಷಿಗಾರರ ಸ್ವಂತ ದಾಖಲೆ ಬಗ್ಗೆ ಸರ್ಟಿಫೈ ಆಗದ ನಕಲುಗಳು ಬೇಕೆಂದರೆ ಕೊಡುವುದಿಲ್ಲ. 100 ಮಾತಿಗೆ 4 ಆಣೆ ರುಸುಂ ಕೊಡಬೇಕು. ಇದನ್ನು 2 ಆಣೆಗೆ ಇಳಿಸಿದರೆ ಉಪಕಾರವಾದೀತು. ಉ.—ಸರ್ಟಿಫೈ ಆಗದ ನಕಲುಗಳನ್ನು ಕೊಡಬಹುದು. ರುಸುಂ ಕಡಮೆ ಮಾಡುವುದಿಲ್ಲ.

ಪ್ರ.—ಪತ್ರಗಳನ್ನು ರೆಜಿಸ್ಟರ್ ಮಾಡುವುದರ ಫೀ ದರಗಳನ್ನು ಕಡಮೆ ಮಾಡಬೇಕು. ಪ್ರಜೆಗಳು ಬಡಸ್ಥಿತಿಯಲ್ಲಿರೋಣದರಿಂದ ಅಷ್ಟು ಜಾಸ್ತಿ ದರಗಳನ್ನು ಕೊಡಲಾರರು. ಉ.—ಇನ್ನು ಕೆಲವು ವರುಷಗಳ ತನಕ ಈ ದರಗಳನ್ನು ಕಡಮೆ ಮಾಡಲಾಗುವುದಿಲ್ಲ.

ಪ್ರ.—1895 ನೇ ಇಸವಿಯ ಹಿಂದೆ ರೆಜಿಸ್ಟರ್ ಮಾಡಲ್ಪಟ್ಟಿರುವ ಜಾಯಿಂಟ್ ಸ್ಟಾಕ್ ಕಂಪನಿಗಳಲ್ಲಿ ಷೇರುದಾರರು ತಮ್ಮ ಷೇರ್ ಹಣಗಳನ್ನು ವಾಪಸು ತೆಗೆದುಕೊಳ್ಳಬೇಕೆಂದೂ, ಅಲ್ಲಿಂದೀಚೆಗೆ ರೆಜಿಸ್ಟರ್ ಮಾಡಲ್ಪಟ್ಟ ಕಂಪನಿಗಳಲ್ಲಿ ಷೇರುಗಳನ್ನು ವಾಪಸು ಕೊಡಕೂಡದೆಂದೂ ಸರ್ಕಾರದವರು ವಿಧಾಯಕ ಮಾಡಿರುವುದು ಷೇರುದಾರರಿಗೆ ಬಹಳ ಕಷ್ಟವಾಗಿದೆ. ಉ.—ಹಣ ಬೇಕಾದವರು ತಮ್ಮ ಷೇರುಗಳನ್ನು ಬಿಕರಿ ಮಾಡಬಹುದು. ಈಗಿನ ರೂಲನ್ನು ಬದಲಾಯಿಸುವುದು ಸಾಧ್ಯವಲ್ಲ. ಇಷ್ಟರಲ್ಲೇ ಕಂಪನಿಗಳ ಕಾನೂನನ್ನು ಹೊಸದಾಗಿ ರಚಿಸಬೇಕೆಂದಿದ್ದೇವೆ. ಆಗಲೂ ಈ ನಿರ್ಬಂಧವನ್ನು ಇಟ್ಟೇ ಇಡುವೆವು.

ಪ್ರ.—ಸೊತ್ತು ಜಪ್ತಿ ಆಗಿದೆ ಎಂಬದನ್ನು ಸಬ್ ರೆಜಿಸ್ಟ್ರಾರುಗಳಿಗೆ ಕೋರ್ಟಿನವರು ತಿಳಿಸಿ ದಾಖಲೆ ಇಡುವಂತೆ ಮಾಡಿಕೊಡಬೇಕು. ಉ.—ಇದರಿಂದ ಕೆಲಸ ಹೆಚ್ಚುವುದು; ಆಗತಕ್ಕದ್ದಲ್ಲ.

ಪ್ರ.—ಗ್ರಾಮ ಕೋರ್ಟುಗಳಲ್ಲಿ ಸಣ್ಣ ಪುಟ್ಟ ಮೊಕದ್ದಮೆಗಳು ಇತ್ಯರ್ಥವಾಗುವವು. ಹಾಗೆಯೇ ಈ ಅಧಿಕಾರವನ್ನು ಗ್ರಾಮಾಭಿವೃದ್ಧಿ ಸಂಘಗಳಿಗೂ ವಹಿಸಿದರೆ ಬಹಳ ಅನುಕೂಲ. ಉ.—ಈಗ ಮಾಡಿರುವ ಏರ್ಪಾಡು ಕೆಲವು ಕಾಲ ನಡೆಯಲಿ. ಮುಂದೆ ನೋಡೋಣ.

ಪ್ರ.—ಈಗ ಗ್ರಾಮ ಕೋರ್ಟುಗಳು ಆಯಾ ಗ್ರಾಮದಲ್ಲಿ ಹುಟ್ಟುವ ವ್ಯಾಜ್ಯಗಳನ್ನು ಮಾತ್ರ ಇತ್ಯರ್ಥಮಾಡುವರು. ಅಂಥಾ ಕೋರ್ಟಿಗೆ ಅನೇಕ ಕಡೆ ತಕ್ಕಷ್ಟು ಮೊಕದ್ದಮೆಗಳೇ ಇರುವುದಿಲ್ಲ. ನಾಲ್ಕೈದು ಗ್ರಾಮಗಳನ್ನು ಕೂಡಿಸಿ ಒಂದು ಕೋರ್ಟಿಗೆ ಸೇರಿಸಿದರೆ ಕೆಲಸವಿರುತ್ತೆ. ಉ.—ಕೆಲಸವಿಲ್ಲ, ಅಥವಾ ಸಾಲದು ಎಂದು ರಿಪೋರ್ಟು ಬಂದಾಗ ನೋಡೋಣ. ಕಾನೂನು ಕ್ರಮವಾಗಿ ಅನುಭವ ಬಂದಹಾಗೆಲ್ಲಾ ಬದಲಾಯಿಸಿಕೊಳ್ಳಬಹುದು.

ಪ್ರ.—ಬಂದೂಕುಗಳ ಲೈಸೆನ್ಸ್ ಅರ್ಜಿ ಫಾರಮನ್ನು ಅಚ್ಚುಹಾಕಿಸಿ ಅರ್ಜಿಯಲ್ಲೇ ಸ್ಟಾಂಪಿಟ್ಟು ಛಾಪಿಸಿ ಬಿಕರಿ ಮಾಡಿದರೆ ತುಂಬಾ ಅನುಕೂಲ. ಉ.—ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಎಷ್ಟು ಬೇಕಾಗಬಹುದೋ ವಿಚಾರಿಸಿ, ಅವಶ್ಯ ಕಂಡು ಬಂದರೆ ಹಾಗೆ ಮಾಡುತ್ತೇವೆ.

ಪ್ರ.—ಬಂದೂಕುಗಳ ಲೈಸೆನ್ಸ್ ಫೀಜನ್ನು ಕಂದಾಯದ ಕೂಡ ವಸೂಲ್ಮಾಡುವಂತೆಯೋ, ಇಲ್ಲವೇ ಐದು ವರುಷಕ್ಕೊಂದಾವರ್ತಿ ತೆಗೆದುಕೊಳ್ಳುವಂತೆಯೋ ಮಾಡಿಕೊಡಬೇಕು. ಈಗ 1-3 ವರುಷಗಳಾದರೂ ಲೈಸೆನ್ಸು ದೊರೆಯುವುದಿಲ್ಲ. ಉ.—ಜಾಗ್ರತೆಯಾಗಿ ಕೊಡಿಸುವಂತೆ ಏರ್ಪಾಡು ಮಾಡುತ್ತೇವೆ.

ಪ್ರ.—ಸ್ಯಾನಿಟರಿ, ಎಕ್ಸೈಸ್, ಟ್ಯಾಂಕ್ ಇನ್ಸ್‌ಪೆಕ್ಟರುಗಳಿಗೆ ಕೊಡುವಂತೆ ಪೋಲೀಸ್ ಜಮೇದಾರರಿಗೂ ಕುದುರೆ ಅಲೋಯನ್ಸನ್ನು 8 ರಿಂದ 10 ರೂಪಾಯಿ ಮಾಡಿಕೊಡಬೇಕು. ಉ.—ಇದು ಖರ್ಚಿನ ವಿಚಾರ; ಯೋಚಿಸುತ್ತೇವೆ.

ಪ್ರ.—ಪೋಲೀಸ್ ಇಲಾಖೆಯಲ್ಲಿ ಕೆಲಸಗಳು ಚಟುವಟಿಕೆಯಿಂದ ತೃಪ್ತಿಕರವಾಗಿಯೂ ನಡೆಯುತ್ತಾ ಇಲ್ಲವೆನ್ನುವುದು ಜನಜನಿತವಾಗಿದೆ. ... ವುದು ಸಹಜವಲ್ಲ. ಈಗ ಇಲಾಖೆಯಲ್ಲಿರುವ ಲೋಪದೋಷಗಳನ್ನೆಲ್ಲಾ ... ತನಿಖೆಮಾಡಿ ವಿಮರ್ಶೆಮಾಡುವುದಕ್ಕೋಸ್ಕರ ಸರ್ಕಾರದವರು ಒಂದು ... ಯತಿ (ಕಮಿಷನ್) ಗೊತ್ತುಮಾಡಬೇಕು. ಈ ಪಂಚಾಯಿತಿಗೆ ... ಎಗ್ಜಿಕ್ಯುಟಿವ್ ಮತ್ತು ಪ್ರಜಾಪಕ್ಷದ ಕೆಲವು ಮೆಂಬರುಗಳನ್ನು ನೇಮಿಸ... ಅವರು ಸಂಸ್ಥಾನಾಮಳಿ ಸಂಚಾರಮಾಡಿ ಅಲ್ಲಲ್ಲಿ ದೊಡ್ಡ ಮನುಷ್ಯರ ... ಅಧಿಕಾರಿಗಳ ಇಂಗಿತ ಅಭಿಪ್ರಾಯಗಳನ್ನು ಕೇಳಿ ಬರೆದು ಕೊಡುವಂತೆ ... ಬೇಕು. ಮತ್ತು ಈ ಇಲಾಖೆಯಲ್ಲಿ ಪಂಚಾಯಿತರ ಅಭಿಪ್ರಾಯಗಳ ... ತಿದ್ದುಪಡಿ ಆಗಬೇಕಾಗಿರುವ ವಿಚಾರಗಳ್ಯಾವವೆಂದರೆ—(1) ಪೋಲೀಸ್ ... ಯ ರಚನೆ, ಅದನ್ನು ಅಭಿವೃದ್ಧಿ ಮಾಡುವ ಮಾರ್ಗಗಳು, (2) ಎಂಥವರನ್ನು ಈ ಇಲಾಖೆಗೆ ಸೇರಿಸಿಕೊಳ್ಳಬೇಕು, ಅವರ ಸಂಬಳ ಮುಂತಾದದ್ದು ... ಬೇಕು; (3) ಪೋಲೀಸಿನವರು ಪ್ರಜೆಗಳ ವಿಷಯದಲ್ಲಿ ಯಾವ ರೀತಿ ನಡೆಯ... ಬೇಕು; (4) ಅವರು ಜನರನ್ನು ಪ್ರೀತಿಯಿಂದ ಕಾಣುವಂತೆಯೂ, ತಮ್ಮ ... ವ್ಯವನ್ನು ನಿಷ್ಪಕ್ಷಪಾತವಾಗಿ ನಡಿಸುವಂತೆಯೂ ಹೇಗೆ ಮಾಡಬಹುದು; ... ಅವರಿಂದ ಪ್ರಜೆಗಳಿಗೆ ಈಗ್ಗಿರಲೂ ಹೆಚ್ಚಾದ ಪ್ರಯೋಜನವಾಗುವುದಕ್ಕೂ, ಪ್ರಜೆಗಳಿಗಾಗುತ್ತಿರುವ ಕಷ್ಟನಷ್ಟಗಳು ಕಡಮೆಯಾಗುವುದಕ್ಕೂ ಏನು ಮಾಡ... ಹುದು. ಈ ಮುಂತಾದ ಸಂಗತಿಗಳನ್ನು ಪಂಚಾಯಿತರು ತನಿಖೆ ಮಾಡಬೇಕಾ... ಗಿದೆ. ಅವರ ವಿಚಾರಣೆಯೆಲ್ಲಾ ಬಹುಶಾ ಮೂರು ತಿಂಗಳೊಳಗಾಗಿ ಪೂರೈ... ಬಹುದು. [ಈ ವಿಷಯ ಚರ್ಚೆಯಾಗುವಾಗ್ಗೆ ಕೋಲಾರ್ ಪೇಟೆಯ ಮೆಂಬರು ... ಕೆ. ಎಸ್. ಸಂತಾನಂ ಅಯ್ಯಂಗಾರ್ರು ಚನ್ನಪಟ್ಟಣದಲ್ಲಿ ನಡೆದ ಒಂದು ... ದ್ದಮೆಯ ವೃತ್ತಾಂತವನ್ನು ವಿವರಿಸುತ್ತಾ ಹೇಳಿದ್ದೇನೆಂದರೆ—ಪೋಲೀಸ್ ಇನ್ಸ್‌ಪೆ... ಕ್ಟರು ಒಂದು ಕೊಲೆ ಮೊಕದ್ದಮೆಯಲ್ಲಿ ನಡಿಸಿದ ಕಾರು ಭರ್ಗಳನ್ನು ... ಲೋಚಿಸಿ ಚೀಫ್ ಕೋರ್ಟಿನವರು ಅಪರಾಧಿಯನ್ನು ಖುಲಾಸ್ ಮಾಡಿದ್ದಲ್ಲದೆ ಆ ಜಡ್ಜ್‌ಮೆಂಟಿನಲ್ಲಿ ಇನ್ಸ್‌ಪೆಕ್ಟರ ವರ್ತನವನ್ನು ಫೋರ್ಜರಿ, ಪರ್ಜರಿ ... ದುತ್ತಾರೆಂದು ಬರೆದಿದ್ದಾರೆ. ಸರ್ಕಾರದವರು ಅಂಥಾ ಇನ್ಸ್‌ಪೆಕ್ಟರ ಸಂಬಳವನ್ನು 100 ರಿಂದ 150 ರೂಪಾಯಿಗೆ ಬಡ್ತಿ ಮಾಡಿದ್ದೂ ಅಲ್ಲದೆ ಅವರನ್ನು ... ಹುಡುಗರ ಶಿಕ್ಷಣ ಕೆಲಸಕ್ಕೆ ಬೆಂಗಳೂರು ಪೋಲೀಸ್ ಸ್ಕೂಲಿಗೆ ನೇಮಿಸಿ... ದ್ದಾರೆ. ಈ ವಿಚಾರವನ್ನು ವಿವರಿಸಿ ಪತ್ರಿಕೆಯಲ್ಲಿ ಬರೆದದ್ದೂ ಆಯಿತು. ... ವೇನೂ ಆಗಲಿಲ್ಲ. ಆದ್ದರಿಂದ ಒಂದು ಪಂಚಾಯಿತಿ ಆಗಿ ಈ ಇಲಾಖೆಯ ... ವಳಿಕೆಗಳನ್ನೆಲ್ಲಾ ಕ್ರಮವಾದ ತನಿಖೆಯಿಂದ ಸರಿಪಡಬೇಕಾದದ್ದು ಅವಶ್ಯ... ಹೇಳಿದರು.] ಉ.—ಈ ಸಲಹೆಯು ಬಹಳ ಒಳ್ಳೇದೆಂದು ಕಾಣುತ್ತದೆ. ಗುರುತು ಮಾಡಿಕೊಂಡು ವಿಚಾರಿಸುತ್ತೇವೆ. ಮ॥ ಸಂತಾನಂ ಅಯ್ಯಂಗಾರ್ರು ಹೇಳಿದ ವಿಚಾರಕ್ಕೆ ದಿವಾನ್‌ರವರು—ಆ ಮೊಕದ್ದಮೆಯ ವಿಷಯ ಗವರ್ನ್‌ಮೆಂಟಿನಲ್ಲಿ ಮೊದಲೇ ಚರ್ಚೆ ನಡೆದು, ಲೋಪದೋಷಗಳೇನೂ ಕಂಡು ಬರುವುದಿಲ್ಲವೆಂದು ತೀರ್ಮಾನ ಮಾಡಿದ್ದಾರೆ. ಈಗ ಮತ್ತೆ ಆ ಮೊಕದ್ದಮೆಯ ಕಟ್ಟನ್ನು ... ಸಿಕೊಂಡು ಪುನಹಾ ನೋಡುವೆವು. ನೀವು ಬರೆದ ಪತ್ರಿಕೆ ನಕಲನ್ನು ... ಕೊಡಿ. ಎಲ್ಲಾ ನೋಡಿ ವಿಚಾರ ಮಾಡಿ ಮತ್ತೆ ಇತ್ಯರ್ಥಪಡಿಸುವೆವು ಎಂ... ಅಪ್ಪಣೆಕೊಟ್ಟರು.

ರೆವಿನ್ಯೂ ವಿಚಾರಗಳು

ಪ್ರ.—ಗ್ರಾಮದಲ್ಲಿ ಆಕಾರ ಕಂಡ ಜಮೀನು, ಮರಗಳು, ನಿವೇಶನ ಮುಂತಾದವುಗಳನ್ನು ಬಿಕರಿ ಮಾಡಿದಾಗ ಆ ಹಣವನ್ನೆಲ್ಲಾ ಆ ಗ್ರಾಮಕ್ಕೆ ಕೊಟ್ಟರೆ ಗ್ರಾಮಾಭಿವೃದ್ಧಿ ಕಮಿಟಿಯವರ ಕಾರ್ಯಗಳಿಗೆ ತುಂಬಾ ಸಹಾಯವಾಗುತ್ತದೆ. ಉ.—ಯೋಚನೆ ಮಾಡುತ್ತೇವೆ.

ಪ್ರ.—ಗ್ರಾಮ ಕಮಿಟಿಗಳನ್ನು ತಾಲ್ಲೂಕ್ ಕಮಿಟಿಗಳಿಗೆ ಅಧೀನವಾಗಿ ಮಾಡಬೇಕು. ಉ.—ಈಗ ಕೊಟ್ಟಿರುವ ರೂಲುಗಳೇ ಸರಿಯಾಗಿ ಜಾರಿಗೆ ಬಂದಿಲ್ಲ. ಸದ್ಯ ಈಗಿರುವುದೇ ಸಾಕಾಗಿದೆ. ಮುಂದೆ ನೋಡೋಣ.

ಪ್ರ.—ಗ್ರಾಮಸ್ಥರಿಗೆ ಒಳ್ಳೇ ಕುಡಿಯುವ ನೀರಿಗೆ ಮಾರ್ಗವಿಲ್ಲ. ಬಾವಿ ತೆಗೆಯುವುದಕ್ಕೆ ಅರ್ಧ ಖರ್ಚನ್ನು ಗ್ರಾಮಸ್ಥರು ವಹಿಸಿಕೊಂಡು ಕೊಡಬೇಕೆಂದು ಸರ್ಕಾರದವರು ಕೇಳುತ್ತಾರೆ. ಗ್ರಾಮಸ್ಥರು ಕೊಡುವುದಿಲ್ಲ. ಅಂಥ ಸಂದರ್ಭಗಳಲ್ಲಿ ಬಾವಿ ತೋಡಿಸಿ ಅರ್ಧ ಖರ್ಚನ್ನು ರೈತರಿಂದ ಕಂದಾಯದ ಕೂಡ ಬಿಸ್ತುವಾರು ವಸೂಲ್ಮಾಡುವಂತೆ ಸರ್ಕಾರದವರು ನಿರ್ಬಂಧಪಡಿಸಬೇಕು. ಉ.—ಗ್ರಾಮಸ್ಥರು ಒಪ್ಪಿದ ಕಡೆ ಹಾಗೆ ಮಾಡಬಹುದು.

ಪ್ರ.—ಗ್ರಾಮಸ್ಥರು ಸಾಲಕ್ಕೆ ಅರ್ಧ ದಿನ ಗ್ರಾಮಾಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಬರುವುದಿಲ್ಲ. ಕೆಲವರು ತಪ್ಪಿಸಿಕೊಳ್ಳುತ್ತಾರೆ. ಅಂಥವರಿಗೆ ಒಂದು ಅಥವಾ ಎರಡು ಆಣೆಯಂತೆ ಫೀಜು ಹಾಕಿ ವಸೂಲ್ಮಾಡುವ ಅಪ್ಪಣೆ ಕೊಡಬೇಕು. ಉ.—[ಗ್ರಾಮದಲ್ಲಿ ಮುಕ್ಕಾಲು ಜನ ಒಪ್ಪಿದರೆ ಫೀಜು ಹಾಕಿ ವಸೂಲ್ಮಾಡಬಹುದೇ ಅಥವಾ ಫೀಜು ವಸೂಲ್ಮಾಡಬಾರದೇ ಎಂಬ ಅರ್ಥಕ್ಕೆ ದಿವಾನ್‌ರವರು ಪ್ರತಿನಿಧಿಗಳ ಸಮ್ಮತಿಯನ್ನು ಕೇಳಿದರು. ರೂಲು ಮಾಡಿ ಫೀ ವಸೂಲ್ಮಾಡಬೇಕೆಂದು 95 ಮೆಂಬರುಗಳೂ, ಕೂಡದೆಂದು ?? ಮೆಂಬರುಗಳೂ ಅಭಿಪ್ರಾಯಪಟ್ಟರು. ಅದರ ಮೇಲೆ ದಿವಾನ್‌ರವರು] ಭಿನ್ನಾಭಿಪ್ರಾಯ ವಿಶೇಷವಾಗಿರುವುದರಿಂದ ಸರ್ಕಾರದವರು ಈ ವರುಷ ಫೀಜು ಹಾಕುವ ಯೋಚನೆ ಮಾಡುವುದಿಲ್ಲ. ಮುಂದಿನ ವರುಷ ನೀವೇ ಒಪ್ಪಿ ಬಂದು ಹೇಳಿದರೆ ಮಾಡುತ್ತೇವೆ.

ಪ್ರ.—ಗ್ರಾಮಾಭಿವೃದ್ಧಿ ಕಾರ್ಯಗಳೆಲ್ಲಾ ವಿಶೇಷವಾಗಿ ಆರೋಗ್ಯಪ್ರದವಾಗಿರೋಣದರಿಂದ ಈ ಕೆಲಸಗಳನ್ನು ಸ್ಯಾನಿಟರಿ ಇನ್ಸ್‌ಪೆಕ್ಟರ ಮೇಲ್ವಿಚಾರಣೆಗೆ ವಹಿಸಿ ಅವರ ಸಂಬಳವನ್ನು ಹೆಚ್ಚು ಮಾಡಬೇಕು. ಉ.—ಆಗಬಹುದು, ನೋಡೋಣ.

ಪ್ರ.—ಹರಾಜಿನಲ್ಲಿ ಕೂಗಿದವನಿಗೆ ಜಮೀನು ವಹಿಸಲ್ಪಟ್ಟ ... ರ್ನ್‌ಮೆಂಟ್ ಸ್ಯಾಂಕ್ಷನ್ ಆದಲ್ಲದೆ ಆತನ ಕೈತಪ್ಪಿಸಿಕೊಡದೆಂಬ ... ರೂಲನ್ನು ಮತ್ತೆ ಜಾರೀಗೆ ತರಬೇಕು. ಉ.—ವಿಚಾರದಲ್ಲಿದೆ; ಬೇಗ ಇತ್ಯರ್ಥ ಮಾಡುವೆವು.

ಪ್ರ.—ರೆವಿನ್ಯೂ ಮತ್ತು ಸಿವಿಲ್ ಮೊಕದ್ದಮೆಗಳ ಕಟ್ಟುಗಳನ್ನು ... ವರುಷಕಾಲ ಅಥವಾ ಅಪೀಲ್ ಮಿಯಾದೆ ಮುಗಿಯುವ ತನಕ ಆಯಾ ಕೋರ್ಟು ಕಚೇರಿಗಳಲ್ಲೇ ಇಡಿಸಿರಬೇಕು. ಉ.—ಯೋಚಿಸುತ್ತೇವೆ.

ಪ್ರ.—ಅನುಭವದಾರರಿಂದಲೇ ಕಂದಾಯ ವಸೂಲ್ಮಾಡಬೇಕೆಂದು ಹೆಸರು ಮಾತ್ರಕ್ಕೆ ಖಾತೆಯಲ್ಲಿರುವವರಿಂದ ತೆಗೆದುಕೊಳ್ಳದಂತೆಯೂ ... ಆಗಬೇಕು. ಉ.—ಯೋಚಿಸುತ್ತೇವೆ.

ಪ್ರ.—ಅಮೃತಮಹಲ್ ಕಾವಲುಗಳನ್ನು ದೊಡ್ಡ ದೊಡ್ಡ ವ್ಯವಸಾಯದ ತಾಳುಗಳಿಗಾಗಿ ಕೊಡಿಸಬೇಕು. ಇದಕ್ಕೆ ಅಮೃತಮಹಲ್ ಇಲಾಖಾ ... ರೇಂಟರಾದ ಮ॥ ನಂಜುಂಡರಾಜೇ ಅರಸಿನವರು—ಈ ಕಾವಲುಗಳಲ್ಲಿ ಕೃಷಿ ದನಗಳು 50,000 ವರೆಗೆ ಮೇಯುತ್ತವೆಂದೂ, 2-3 ಕಡೆ ವ್ಯವಸಾಯಕ್ಕೆ ಕೊಟ್ಟಿರುವ ತಾಳುಗಳನ್ನು ಬರೀ ಹುಲ್ಲುಗಾವಲಾಗಿಯೇ ಇಟ್ಟುಕೊಂಡಿರಾ... ರೆಂದೂ ಹೇಳಿದರು. ಉ.—ಈ ವಿಚಾರವು ಸರ್ಕಾರದ ಆಲೋಚನೆಯಲ್ಲಿರುತ್ತದೆ.

ಪ್ರ.—ಹಿಸ್ಸೇದಾರರ ಬಾಕಿಗ್ಗೆ ಖಾತೆಯಲ್ಲಿರುವ ಎಲ್ಲಾ ಜಮೀನುಗಳನ್ನೂ ಹರಾಜಿಗೆ ತರುತ್ತಾರೆ. ಬಾಕಿ ಇಟ್ಟುಕೊಂಡಿರುವವರ ನಂಬರುಗಳನ್ನು ಮಾತ್ರ ಹರಾಜಿಗೆ ತರಬೇಕು. ಉ.—ಇದು ಸಾಧ್ಯವಲ್ಲ.

ಪ್ರ.—ಕಂದಾಯದ ಬಾಕಿಗಾಗಿ ಹರಾಜಾದ ಜಮೀನನ್ನು ... ಖಾಯಂ ಆಗುವುದರೊಳಗೆ ಕಂದಾಯ ಕೊಟ್ಟರೆ ರದ್ದು ಮಾಡುವಂತೆ ...

...ಸಿವಿಲ್ ಕೋರ್ಟ್ ಹರಾಜಿನಲ್ಲಿ ಈ ಸೌಲಭ್ಯವಿದೆ. ಉ.—ಸರ್ಕಾರ... ಈ ವಿಚಾರವಾಗಿ ಚರ್ಚೆ ನಡೆದು ಈಗಿರುವ ರೂಲುಸು ಬದಲಾಯಿಸಲೂ... ವ್ಯವಸ್ಥೆ ಆಗಿದೆ.

ಪ್ರ.—ಸರ್ವೆ ನಂಬರುಗಳನ್ನು ಹಕ್ಕುದಾರರ ಹೆಸರಿಗೆ ಪೋಡುಮಾಡಿ... ಮಾಡಿಸಿಕೊಡಬೇಕು. ಉ.—ಮಿನಿಮಂ ವಿಸ್ತೀರ್ಣಕ್ಕಿಂತ ಕಡಮೆಯಾಗಿ ಪೋಡುಮಾಡಕೂಡದೆಂಬ ವಿಧಿ ಇದೆ. ಯೋಚಿಸಿ ನೋಡೋಣ.

ಪ್ರ.—ಒಂದು ಪಂಚಾಯತಿ (ಕಮಿಷನ್) ನೇಮಿಸಿ ಇನಾಂದಾರರಿಗೂ ... ಇರುವ ಹಕ್ಕುಬಾಧ್ಯತೆಗಳನ್ನು ತನಿಖೆಮಾಡಿಸಿ ತೀರ್ಮಾನಮಾಡ... ಮತ್ತು ಸರ್ಕಾರಕ್ಕೂ ಇನಾಂದಾರರಿಗೂ ಇರುವ ಸಂಬಂಧವನ್ನೂ ಗೊತ್ತು ... ಬೇಕು. ಉ.—ಇದು ಅವಶ್ಯವೆಂದು ಕಾಣುವುದು; ಹ್ಯಾಗೆ ಮಾಡಬಹು... ಯೋಚಿಸಬೇಕಾಗಿದೆ. ಜೋಡಿದಾರರೂ ಇನಾಂದಾರರೂ ಒಂದು ಕಡೆ ಸೇರಿ ... ಅಭಿಮತವನ್ನು ಚರ್ಚಿಸಿ ತೀರ್ಮಾನಗಳನ್ನು ಸರ್ಕಾರಕ್ಕೆ ತಿಳಿಸಬಹುದು. ... ಈ ಸಭೆ ನಡೆಸುವುದಕ್ಕೆ ಬೇಕಾಗುವ ಸಹಾಯವನ್ನು ಒದಗಿಸುತ್ತೇವೆ.

ಪ್ರ.—ಗೋಮಾಳಗಳನ್ನು ಮಿಂಡಿತವಾಗಿಯೂ ವ್ಯವಸಾಯಕ್ಕೆ ಕೊಡ... ಉ.—ಅವಾ ಸ್ಥಳಾನುಗುಣ್ಯವಾಗಿ ತನಿಖೆಯಿಂದ ವ್ಯವಸ್ಥೆ ಮಾಡ... ತ್ತಿದೆ.

ಪ್ರ.—ಸಾಗುವಳಿಗೆ ಜಮೀನು ಸಾಲದು. ಗೋಮಾಳಗಳನ್ನು ಕೊಡಿಸ... ಕೊಟ್ಟ ದರಖಾಸ್ತುಗಳು ಬೇಗನೆ ಇತ್ಯರ್ಥವಾಗುವುದಿಲ್ಲ. ಈ ಅಧಿ... ವನ್ನು ಡೆಪ್ಯುಟಿ ಕಮಿಷನರುಗಳಿಗೆ ವಹಿಸಬೇಕು. ಉ.—ಇದು ಆಲೋಚನೆ... ದೆ; ಬೇಗನೆ ವ್ಯವಸ್ಥೆ ಮಾಡುತ್ತೇವೆ.

ಪ್ರ.—ಕೆರೆ ತುಂಬಿದ ಬಂಡುಬಿದ್ದ ಜಮೀನುಗಳಿಗೆ ಕಂದಾಯ ರಿಮಿಷನ್ ಮಾಡಬೇಕು. ಬೊಂಬಾಯಿ ಅಧಿಪತ್ಯದಲ್ಲಿ ಈ ರೀತಿ ಕೊಡುತ್ತಾರೆ. ಉ.—ಯೋಚಿಸುತ್ತೇವೆ.

ಪ್ರ.—ಅನೇಕ ಪಟೇಲರಿಗೆ ಓದುಬರಹ ಬರುವುದಿಲ್ಲ. ತಮ್ಮ ಕರ್ತವ್ಯವೇನೆಂಬುವುದೇ ತಿಳಿಯದು. ಅವರನ್ನು ತರಪೇತುಮಾಡುವುದಕ್ಕೆ ಒಂದು ... ಇಡಿಸಬೇಕು. ಉ.—ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ... ಸ್ಕೂಲನ್ನು ಇಡಬಹುದು. ಯೋಚಿಸುತ್ತೇವೆ.

ಪ್ರ.—ಇನಾಂ ಗ್ರಾಮಗಳ ರೈತರು ಸರ್ಕಾರಿ ಕೆರೆ ನಾಲೆಗಳಿಂದ ನೀರು ... ಕೊಂಡರೆ ಅದರ ನೀರಾವರಿ ವಸೂಲಿಯನ್ನು ಇನಾಂದಾರರಿಗೆ ವಹಿಸಿ... ಈ ಜವಾಬ್ದಾರಿಯನ್ನು ಅವರಿಗೆ ತಪ್ಪಿಸಿ ಸರ್ಕಾರದವರೇ ವಸೂಲ್ಮಾಡಿ ... ಬೇಕು. ಉ.—ಈ ವಿಚಾರವನ್ನು ಚೆನ್ನಾಗಿ ಚರ್ಚಿಸಿ ಹುಕುಂ ಕೊಟ್ಟು ... ಕಾಲ ಮಾತ್ರ ಆಗಿದೆ.

ಪ್ರ.—ಮೊದಲು ರೈತರು ಮಟ್ಟಿ ಕಾಮಗಾರಿ ಮಾತ್ರ ಮಾಡುತ್ತಿದ್ದರು. ಈಗ ಸರ್ಕಾರದವರು ಮಟ್ಟಿ ಕಾಮಗಾರಿ, ಗಚ್ಚು ಮತ್ತು ಕಲ್ಲು ಕಾಮಗಾರಿ ... ಒಟ್ಟು ಖರ್ಚಿನಲ್ಲಿ ಮೂರನೇ ಒಂದು ಪಾಲನ್ನು ರೈತರು ಕೊಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಇದು ರೈತರಿಗೆ ತುಂಬಾ ನಷ್ಟ. ಮಟ್ಟಿ ಕಾಮಗಾರಿ ಖರ್ಚಿಗಿಂತ ಹೆಚ್ಚು ಕೊಡಬೇಕು. ಉ.—ಈಗಿನ ರೂಲುಸು ಜಾರಿಗೆ ಬಂದು ಈಗ ಒಂದು ವರುಷ ಮಾತ್ರ ಆಗಿದೆ. ಕಲ್ಲು ಗಾರೆ ಕಾಮಗಾರಿ ಯಾವ ಕೆರೆಯಲ್ಲಾದರೂ ಜಾಸ್ತಿ ಆಗಿದ್ದ ಪಕ್ಷದಲ್ಲಿ ಅವನ್ನು ಮಾತ್ರ ತಿಳಿಸಬಹುದು. ಸರಿಮಾಡುತ್ತೇವೆ. ಇನ್ನು ಮೂರು ವರುಷ ಈ ವಿಷಯವನ್ನು ಚರ್ಚೆಗೆ ತರಬೇಡಿ.

ಪ್ರ.—ಗ್ರಾಮದಿಂದ ಗ್ರಾಮಕ್ಕೆ ರಸ್ತೆಗಳು ಇಲ್ಲದೆ ಆಮದು ರಫ್ತಿಗೆ ತುಂಬಾ ತೊಂದರೆಯಾಗಿದೆ. ಕೆಲವು ಕಡೆ ಮಾಡಿರುವ ರಸ್ತೆಗಳನ್ನು ದುರಸ್ತು ಮಾಡಿಕೊಳ್ಳದೆ ರೈತರು ಅನಾವಶ್ಯಕವಾಗುತ್ತಾರೆ. ಮೊಹತರ್ಫಾ ತೆರಿಗೆಯನ್ನು ಗ್ರಾಮಾಂತರಗಳಲ್ಲೂ ಹಾಕಿ ಆ ಹಣದಿಂದ ರಸ್ತೆಗಳನ್ನು ಮಾಡಿಸಿ ಒಳ್ಳೇ ಸ್ಥಿತಿಯಲ್ಲಿಡಬೇಕು. ಉ.—ಸ್ಥಳೀಯ ಆಡಳಿತಗಳ ಸ್ವಾತಂತ್ರ್ಯವನ್ನು ಲೋಕಲ್ ಬೋರ್ಡುಗಳಿಗೆ ವಹಿಸಬೇಕೆಂದಿದ್ದೇವೆ. ಅದು ಬದಲಾವಣೆಯಾಗುವಾಗ ಈ ಪ್ರಶ್ನೆಯನ್ನು ಇತ್ಯರ್ಥಪಡಿಸುವೆವು.

ಪ್ರ.—ದೊಡ್ಡ ಕೆರೆಗಳ ಕೆಳಗೆ ನೀರನ್ನು ಎಲ್ಲಾ ಜಮೀನುಗಳಿಗೂ ಸರಿಯಾಗಿ ಹಂಚುವುದಿಲ್ಲ. ಹತ್ತಿರವಿರುವ ಜಮೀನುಗಳಿಗೆ ಚೆನ್ನಾಗಿ ನೀರು ಒದಗುತ್ತೆ. ದೂರದಲ್ಲಿರುವ ಜಮೀನುಗಳಿಗೆ ನೀರು ಸಿಕ್ಕುವುದು ಕಷ್ಟ. ಇದರಿಂದ ನಾನಾ ವ್ಯಾಜ್ಯಗಳು ಹುಟ್ಟುತ್ತವೆ. ಕಬ್ಬಿಣದ ನಲ್ಲಿಗಳನ್ನು ಉದ್ದಕ್ಕೂ ಹಾಕಿ ಅಲ್ಲಲ್ಲಿಗೆ ಸರಿಯಾದ ಅಂಕಗಳನ್ನು ಕಟ್ಟಿಸಿದರೆ ಈ ಕಷ್ಟ ನಿವಾರಣೆಯಾದೀತು. ಉ.—ನಲ್ಲಿಗಳ ಖರ್ಚನ್ನು ಕೊಡುತ್ತೇವೆಂದು ಒಪ್ಪಿದರೆ ಹಾಕಿಸಬಹುದು. ನಲ್ಲಿ ಹಾಕಿ ಕಾಮಗಾರಿ ನಡೆಸುವಂಥ ಮೇಸ್ತ್ರಿಗಳನ್ನು ಬೇಕಾದರೆ ತರಪೇತು ಮಾಡಿಕೊಡುತ್ತೇವೆ. ಚೀಫ್ ಇಂಜನಿಯರಿಗೆ ಬರೆದುಕೊಳ್ಳಿ.

ಪ್ರ.—ಕೆರೆಗಳ ಕೆಳಗೆ ಎಷ್ಟು ಜಮೀನಿಗೆ ನೀರು ಒದಗಬಹುದೋ ಅದ... ಮೊದಲು ಗೊತ್ತು ಮಾಡಿಸಿ, ಎಕ್ಕಲಕಟ್ಟೆ ಹಾಕಿಸಿ, ಏರಿ ಎತ್ತರಿಸಿ, ಕೋಡಿ ಮೇಲಕ್ಕೆತ್ತಿ, ಏರಿ ಮೂಳನ್ನು ಪ್ರತಿ ವರುಷವೂ ಎತ್ತಿಸಿದರೆ ನೀರಿನ ಕಷ್ಟ ತಪ್ಪುವುದು. ನೀರು ಒದಗದಂಥಾ ಜಮೀನುಗಳನ್ನು ಖುಷ್ಕಿ ಮಾಡಬೇಕು. ನೀರು ಬರತಕ್ಕ ಆಸರೆಗಳನ್ನು ಕಡಿದುಬಿಡದೆ ಕಾಪಾಡಿ ಅಭಿವೃದ್ಧಿ ಮಾಡಬೇಕು. ಕೆರೆ ಕೆಳಗೆ ಅಚ್ಚುಕಟ್ಟು ಕಡಮೆ ಮಾಡಿ ಪ್ರತಿ ರೈತನಿಗೂ ಸ್ವಲ್ಪ ತರಿ, ಸ್ವಲ್ಪ ಖುಷ್ಕಿ ಜಮೀನು ಇರುವಂತೆ ವಿಂಗಡಿಸಬೇಕು. ಹೀಗೆ ಮಾಡಿದರೆ ಬೆಳೆಯಾಗದಿದ್ದರೂ ತರೀ ಕಂದಾಯವನ್ನೇ ವರುಷೇ ವರುಷ ತೆರುವ ಕಷ್ಟ ತಪ್ಪುವದು. ಉ.—ಎಷ್ಟು ಎಕರೆಗೆ ನೀರು ಒದಗಬಹುದೆಂದು ಗೊತ್ತು ಮಾಡುವುದು ಪ್ರಯಾಸ. ... ವೇಳೆ ಮಾಡಿದರೂ ತಪ್ಪಾಗಬಹುದು. ಸರ್ಕಾರದವರಿಗೂ ಅನುಮಾನವಿದೆ. ಆದಾಗ್ಯೂ ಬಾಲ್ತಿ ಸಾಲಿನಲ್ಲಿ ಕೋಲಾರ್ ಡಿಸ್ಟ್ರಿಕ್ಟಿನೊಳಗೆ 50 ಕೆರೆಗಳ ಸರ್ವೆ ಮಾಡಿಸಿ ಅದರ ಪರಿಸ್ಥಿತಿಯನ್ನು ಗೊತ್ತುಮಾಡಬೇಕೆಂದಿದ್ದೇವೆ.

ಪ್ರ.—ತೋಟಗಳಿಗಿದ್ದ ಕೆರೆ ಏರಿಗಳು ಒಡೆದುಹೋಗಿ ಜಮೀನುದಾರರಿಗೆ ಬಹಳ ನಷ್ಟವಾಗುತ್ತಿದೆ. ಪೂರಾ ಕಂದಾಯವನ್ನು ತೆರಬೇಕು. ಬಹಳ ದಿನ ಖರ್ಚುಮಾಡಿ ಫಲವೃಕ್ಷಗಳನ್ನು ಬೆಳಸಿರೋಣದರಿಂದ ರಾಜೀನಾಮೆ ಕೊಟ್ಟುಬಿಡಲಾಗದು. ಕೆರೆ ಒಡೆದ ಒಂದು ವರುಷದೊಳಗಾಗಿ ರಿಪೇರಿ ಆಗದಿದ್ದರೆ ತೋಟಗಳ ಕಂದಾಯವನ್ನು ರಿಮಿಷನ್ ಮಾಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಅಧಿಕಾರ ಕೊಡಬೇಕು. ಉ.—ವಿಚಾರಿಸುತ್ತೇವೆ. ಅಂಥಾ ಕೆರೆ ವಿಷಯದಲ್ಲಿ ರೈತರು ಡೆಪ್ಯುಟಿ ಕಮಿಷನರಿಗೆ ತಿಳಿಸಿ ಬರೆದುಕೊಳ್ಳಬಹುದು.

ಪ್ರ.—ರೈತರು ಭಾರೀ ಲಾಗೋಡಿಟ್ಟು ಭಾವಿಗಳನ್ನು ತೋಡಿಕೊಂಡು ತಮ್ಮ ಖುಷ್ಕಿ ಜಮೀನಿನಲ್ಲಿ ತರಿ ಫಸಲು ಇಟ್ಟರೆ ತರಿ ಕಂದಾಯ ಕೊಡಬೇಕೆಂದು ನಿರ್ಬಂಧಪಡಿಸುತ್ತಾರೆ. ಅಂಥಾ ಜಮೀನುಗಳಿಗೆ ಎಂದಿನಂತೆ ಖುಷ್ಕಿ ಕಂದಾಯವನ್ನೇ ತೆಗೆದುಕೊಳ್ಳುವಂತೆ ಅಪ್ಪಣೆ ಆಗಬೇಕು ಉ.—ಸ್ವಂತ ಲಾಗೋಡಿಟ್ಟು ಭಾವಿ, ಕೆರೆ ಕಟ್ಟಿಕೊಂಡರೆ ಅಂಥಾ ಜಮೀನಿಗೆ ಜಾಸ್ತಿ ಕಂದಾಯ ಹಾಕುವುದಿಲ್ಲ.

ಪ್ರ.—ಶ್ಯಾನುಭೋಗರು ಸ್ಟಾಂಪ್ ಮೊಹರು ಆಗಬೇಕೆಂದು ಹೇಳಿ ರೈತರಿಂದ ಪಟ್ಟೆಗಳನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಅವರು ಅದರಲ್ಲಿ ಬದಲಾವಣೆ ಮಾಡುವುದಕ್ಕೆ ಅವಕಾಶವಾಗುತ್ತೆ. ಬ್ರಿಟಿಷ್ ಸೀಮೆಯಲ್ಲಿ ಕೊಡುವಂತೆ ಪಟ್ಟೆ ಅಲ್ಲದೆ ಪ್ರತ್ಯೇಕವಾದ ರಸೀದಿ ಪುಸ್ತಕಗಳನ್ನು ತಯಾರುಮಾಡಿ ರೈತರಿಗೆ ಕೊಡಿಸುವುದು ಕ್ಷೇಮ. ಉ.—ಶ್ಯಾನುಭೋಗರು ಕೇಳಿದರೆ ಪಟ್ಟೆ ಕೊಡಲೇಕಾದದ್ದು. ಬ್ರಿಟಿಷ್ ಸೀಮೆಯಲ್ಲಿರುವ ಆಚರಣೆಯನ್ನು ವಿಚಾರಿಸುತ್ತೇವೆ.

ಪ್ರ.—ಕಂದಾಯ ಪಾವತಿ ಮಾಡಿದ್ದು ಯಾವ ಸರ್ವೆ ನಂಬರಿಗೆಂಬುದನ್ನು ಖಾತೆ, ಚಿಟ್ಟಿ, ಪಟ್ಟೆಗಳಲ್ಲಿ ಬರೆಯುವಂತೆ ಹುಕುಂ ಆಗಬೇಕು. ಉ.—ಇದು ಸರ್ಕಾರದ ವಿಚಾರದಲ್ಲಿದೆ.

ಪ್ರ.—ರೈತನ ಜಮೀನಿನಲ್ಲಿರುವ ಗಿಡಗಳ ಹಕ್ಕು ಅವನಿಗೆ ಸೇರಿದೆ ಎಂಬ ಅರ್ಥವನ್ನು ಅವನ ಪಟ್ಟೆಯಲ್ಲಿ ಕಾಣಿಸಬೇಕು. ಉ.—ಅವಶ್ಯವಿಲ್ಲ. ರಿಸರ್ವ್ ಮಾಡಿದ ಮರ ವಿನಹಾ ಎಲ್ಲಾ ಮರಗಳೂ ಜಮೀನುದಾರರಿಗೇ ಸೇರಿವೆ.

ಪ್ರ.—ಪಾನೀಕುಮಾರಿ ಲೆಕ್ಕಗಳನ್ನು 12 ವರುಷದ ಬಳಿಕ ನಾಶಪಡಿಸುತ್ತಾರೆ. ಗಾಳಿ ಬೆಳಕಿನ ಹಕ್ಕಿಗೆ 20 ವರುಷದ ಸಾಯಿದ ಇರೋಣದರಿಂದ ಆ ಲೆಕ್ಕಗಳನ್ನು ಸುಟ್ಟುಬಿಟ್ಟರೆ ದಾಖಲೆ ಹೋಗುತ್ತೆ. ಆ ಲೆಕ್ಕಗಳನ್ನು ಯಾವಾಗಲೂ ಇಟ್ಟಿರಬೇಕು. ಉ.—ಗಾಳಿ ಬೆಳಕಿನ ಹಕ್ಕು ಅದರಲ್ಲೇನಿದೆ? ಆ ಲೆಕ್ಕವನ್ನು ಕೋರ್ಟಿನವರು ಅಂಗೀಕರಿಸುವುದಿಲ್ಲ. ಇಡಬೇಕಾದ ಆವಶ್ಯವಿಲ್ಲ.

ಪ್ರ.—ಸರ್ಕಾರಿ ಜಮೀನಿನಲ್ಲಿರುವ ತೋಪುಗಳನ್ನು ಜನರು ಕಡಿದು ನಾಶಮಾಡುತ್ತಾರೆ. ಅವುಗಳ ಉಸ್ತುವಾರಿಯನ್ನು ರೆವಿನ್ಯೂ ಇಲಾಖೆಯವರಿಗೋ ಖಾಸಗಿ ವ್ಯಕ್ತಿಗಳಿಗೋ ವಹಿಸುವುದು ಕ್ಷೇಮ. ಉ.—ಗ್ರಾಮ ನೌಕರರು ನೋಡಬೇಕೆಂಬ ವಿಧಿ ಇದೆ. ಅಮಲ್ದಾರ್ರಿಗೆ ಬರೆದುಕೊಳ್ಳಿ.

ಪ್ರ.—ಪಟೇಲ್ ಶ್ಯಾನುಭೋಗರ ಮೇಲೆ ಸರ್ಕಾರದ ಹಣದುರ್ವಿನಿಯೋಗ ಮಾಡಿದರೆಂಬ ಫಿರ್ಯಾದು ಮಾಡತಕ್ಕವರು ಮೊದಲು ಡೆಪ್ಯುಟಿ ಕಮಿಷನರಿಗೆ ತಿಳಿಸಿ ಅವರ ಅಪ್ಪಣೆಯನ್ನು ಪಡೆಯಬೇಕೆಂದು ಹುಕುಂ ಆದರೆ ಹೊಟ್ಟೆಕಿಚ್ಚು ಅಥವಾ ದ್ವೇಷದ ಮೊಕದ್ದಮೆಗಳು ಹುಟ್ಟಲು ಅವಕಾಶವಾಗುವುದಿಲ್ಲ. ಉ.—ಇದು ಅವಶ್ಯವೆಂದು ತೋರುವುದಿಲ್ಲ.

ಪ್ರ.—ರೆವಿನ್ಯೂ ಹರಾಜು ರದ್ದುಮಾಡಬೇಕೆಂದು ಡೆಪ್ಯುಟಿ ಕಮಿಷನರ ತೀರ್ಮಾನದ ಮೇಲೆ ಅಪೀಲ್ ಮಾಡತಕ್ಕ ರೈತನು ಅಪೀಲ್ ತಾರೀಖಿನ ವರೆಗೆ ಆಗುವ ಕಂದಾಯದ ಬಾಕಿಯನ್ನೂ, ಹರಾಜಿನಲ್ಲಿ ಪಡೆದವನ ನಷ್ಟದ್ರವ್ಯವನ್ನೂ ಡಿಪಾಜಿಟ್ಟು ಕಟ್ಟಿ ಅಪೀಲ್ ಮಾಡಬಹುದೆಂದು ಹುಕುಂ ಆಗಬೇಕು. ಉ.—ಅಧಿಕಾರಿಗಳಿಂದ ರಿಪೋರ್ಟು ತರಿಸಿಕೊಂಡು ಇತ್ಯರ್ಥಮಾಡುತ್ತೇವೆ.

ಪ್ರ.—ಗವರ್ನ್‌ಮೆಂಟಿನವರು ರೆವಿನ್ಯೂ ಮೊಕದ್ದಮೆಗಳ ತೀರ್ಪುಗಳನ್ನು ಮೊದಲು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಿದ್ದರು. ಮುಂದಾದರೂ ಪ್ರಕಟಿಸಿದರೆ ಅನುಕೂಲ. ಉ.—ವಿಚಾರದಲ್ಲಿದೆ; ಆಗಬಹುದು.

ಪ್ರ.—ರೀಸರ್ವೆ ಆಗಿರುವ ಗ್ರಾಮಗಳಲ್ಲಿ ರೈತರು ತಮ್ಮ ಸ್ವಂತ ಉಪಯೋಗಕ್ಕಾಗಿ ತಮ್ಮ ಜಮೀನುಗಳ ಸರ್ವೆ ಟಿಪ್ಪಣಿ ನಕಲು ಬೇಕೆಂದು ಸರ್ವೆ ಇಲಾಖೆಯವರನ್ನು ಕೇಳಿದರೆ ಅರ್ಜಿಗೆ 8 ಆಣೆ, ನಕಲಿಗೆ 1 ರೂಪಾಯಿ ಕೊಡಬೇಕಾಗಿದೆ, ಇದು ದುಬಾರಿ. ಉ.—ವಿಚಾರಮಾಡಿ ಕಡಮೆಮಾಡಿ ಕೊಡಬಹುದು.

ಪ್ರ.—ದರ್ಖಾಸ್ತು ರಾಜೀನಾಮೆ ಕೊಟ್ಟ ಮೇಲೆ ಅದರ ಮೇಲೆ ಹುಕುಂ ಬರೆಯುವುದರೊಳಗಾಗಿ ರಾಜೀನಾಮೆಯನ್ನು ವಾಪಸು ತೆಗೆದು ಕೊಂಡರೆ ಅಂಗೀಕರಿಸದಂತೆ ಹುಕುಂ ಆಗಬೇಕು. ವಾಪಸ್ ತೆಗೆದುಕೊಳ್ಳಬಹುದೆಂದು ರೆವಿನ್ಯೂ ಮ್ಯಾನ್ಯುಯಲ್‌ನಲ್ಲಿ ಇದೆ. ಒಂದು ಮೊಕದ್ದಮೆಯಲ್ಲಿ ಗವರ್ನ್‌ಮೆಂಟಿನವರೂ ಆರೀತಿ ತೀರ್ಮಾನ ಮಾಡಿದ್ದಾರೆ. ಉ.—ಆ ರೀತಿ ರೂಲುಸು ಇಲ್ಲ. ಅಂಥಾ ಮೊಕದ್ದಮೆ ನಡೆದಿದ್ದರೆ ಗವರ್ನ್‌ಮೆಂಟಿಗೆ ಅಪೀಲ್ ಹಾಕಿ. ರಾಜೀನಾಮೆಯನ್ನು ವಾಪಸು ತೆಗೆದುಕೊಂಡರೆ ಅಂಗೀಕರಿಸಕೂಡದು.

ಪ್ರ.—ಸಿವಿಲ್ ಕೋರ್ಟ್ ಡಿಕ್ರಿ ಪ್ರಕಾರ ಸರ್ವೆ ನಂಬರುಗಳನ್ನು ರೆವಿನ್ಯೂ ಅಧಿಕಾರಿಗಳೇ ಪೋಡು ಮಾಡಿಕೊಡಬೇಕಾಗಿದೆ. ಇದು ಬಹಳ ಸಾವಕಾಶ. ಕೋರ್ಟ್ ಅಮೀನರೇ ಪೋಡುಮಾಡಬಹುದೆಂದು ಹುಕುಂ ಆಗಬೇಕು. ಉ.—ಇದು ಸರ್ವತ್ರ ಆಗತಕ್ಕದ್ದಲ್ಲ. ಹಾಗೆ ಸಾವಕಾಶವಾದ ಸಂದರ್ಭಗಳಿದ್ದರೆ ತಿಳಿಸಿದಲ್ಲಿ ತನಿಖೆ ಮಾಡಿಸುತ್ತೇವೆ.

ಪ್ರ.—ಶ್ಯಾನುಭೋಗನಾಗಲಿ, ಪಟೇಲನಾಗಲಿ ಕಂದಾಯ ತೆಗೆದುಕೊಂಡು ರಸೀದಿ ಕೊಡುವಂತೆ ರೂಲುಸು ಬದಲಾಯಿಸಬೇಕು. ಉ.—ಶ್ಯಾನುಭೋಗ ಕಂದಾಯ ವಸೂಲ್ಮಾಡಕೂಡದೆಂದು ರೂಲ್ ಇದೆ. ಇದು ಆಗತಕ್ಕದ್ದಲ್ಲ.

ಪ್ರ.—ಯೇಲಕ್ಕಿ ವ್ಯವಸಾಯಕ್ಕೆ ಜಮೀನು ಪಡೆಯುವುದರಲ್ಲಿ ಬಹಳ ನಿರ್ಬಂಧಗಳುಂಟು. 25 ಎಕರೆಯನ್ನು ಕೊಡುವಂತೆ ಹುಕುಂ ಆಗಬೇಕು. ಉ.—ವಿಚಾರಿಸುತ್ತೇವೆ.

ಪ್ರ.—ಪಟೇಲ್ ಶ್ಯಾನುಭೋಗರ ಸರ್ವಿಸ್ ಇನಾಂ ಜಮೀನುಗಳಿಗೆ ಸರ್ವೆ ಇಲಾಖೆಯವರು ಪೂರಾ ಕಂದಾಯಗಳನ್ನು ಹಾಕಿದ್ದಾರೆ. ಆದರೆ ಆ ಜಮೀನುಗಳನ್ನು ಪರಾಧೀನ ಮಾಡಕೂಡದೆಂಬ ನಿರ್ಬಂಧವಿದೆ. ಇದನ್ನು ತಪ್ಪಿಸಿ ಪರಾಧೀನ ಮಾಡುವ ಹಕ್ಕನ್ನು ಉಂಟುಮಾಡಿ ಕೊಡಬೇಕು. ಉ.—ಜಮೀನುಗಳು ಸರ್ಕಾರದ್ದು. ನೌಕರಿ ಮಾಡುವವರ ಅನುಭವದಲ್ಲಿರಬೇಕು. ಬದಲಾವಣೆ ಮಾಡುವುದು ಸಾಧ್ಯವಲ್ಲ.

ಪ್ರ.—ಕಾಫೀ ಜಮೀನುಗಳಿಗೆ ಕೊಡುವ ದರಖಾಸ್ತುಗಳನ್ನು ಶೀಘ್ರದಲ್ಲಿ ನೋಡಿ ಇತ್ಯರ್ಥ ಮಾಡುವಂತಾಗಬೇಕು. ಉ.—ಸಾವಕಾಶವಾದ ಸಂದರ್ಭಗಳನ್ನು ಡೆಪ್ಯುಟಿ ಕಮಿಷನರಿಗೆ ತಿಳಿಸಿ. ಅವರು ಜಾಗ್ರತೆಪಡಿಸುತ್ತಾರೆ

ಪ್ರ.—ತೋಟಿ ತಳವಾರಿಗಳಿಗೆ ರೈತರು ಕೊಡಬೇಕಾಗಿರುವ ಮಿರಾಸು ಬಹಳ ಹೆಚ್ಚೆಂದೂ, ರೈತರಿಗಿಂತ ಕೆಲಸ ಕಲಿತಿರುವ ಪುಣ್ಯಶಾಲಿಗಳೆಂದೂ, ಬೆಳೆಯಾದರೂ ಆಗದಿದ್ದರೂ ರೈತನು ಅವರ ಮಿರಾಸನ್ನು ಕೊಟ್ಟೇ ತೀರಬೇಕೆಂದೂ, ಅವರು ಸರ್ಕಾರದ ಕೆಲಸ ಮಾಡುತ್ತಾರಲ್ಲದೆ ರೈತರಿಗೆ ಅವರಿಂದ ಯಾವ ಕೆಲಸವೂ ಆಗುವುದಿಲ್ಲವೆಂದೂ, ಅವರಿಗೆ ಸರ್ಕಾರದವರು ಸಂಬಳ ನಿಗದಿ ಮಾಡಿ ಕೊಡಿಸುವುದು ನ್ಯಾಯವಾಗಿದೆ ಎಂದೂ ಅನೇಕ ಮೆಂಬರುಗಳು ಹೇಳಿಕೊಂಡರು. ರೆವಿನ್ಯೂ ಕಮಿಷನರು ಬೆಳೆ ಆಗದಿದ್ದರೆ ಮಿರಾಸೆ ಕೊಡಬೇಕಾದದ್ದಿಲ್ಲವೆಂದು ಹೇಳಿದರು. ಉ.—ನೀವು ಹೇಳಿದ್ದನ್ನೆಲ್ಲಾ ಗುರುತು ಹಾಕಿಕೊಂಡಿದ್ದೇವೆ. ಇದನ್ನು ವ್ಯವಸ್ಥೆಮಾಡುವುದು ಬಹಳ ಕಷ್ಟವಾಗಿದೆ. ಬೇಗನೆ ಫೈಸಲ್ ಮಾಡುತ್ತೇವೆ. ಹೀಗೇ ಆದೀತೆಂದು ಈಗ ಹೇಳಲಾರೆವು.

ಪ್ರ.—ಎಲ್ಲಾ ಇಲಾಖೆಯವರಿಗೂ ಇಜಾಫೆ ಆಯಿತು. ತಾಲೂಕ್ ಜವಾನರಿಗೆ ಆಗಲಿಲ್ಲ. ಅವರು ಜೀವನಕ್ಕೆ ಕಷ್ಟಪಡುತ್ತಾರೆ. ಉ.—ಜವಾನ್ ಕಂದಾಯ ಹೆಚ್ಚಲಿಲ್ಲ. ಹಣದ ವಿಷಯ, ನೋಡೋಣ.

ಪ್ರ.—ಅಮಲ್ದಾರ್ರು ಏಕಸಾಲ್ ಕಂದಾಯಕ್ಕೆ ತರೀ ಜಮೀನು ಕೊಡುತ್ತಾರೆ. ಖುಷ್ಕಿ ಜಮೀನನ್ನೂ ಹಾಗೇ ಕೊಡುವಂತೆ ಅವರಿಗೆ ಅಧಿಕಾರ ವಹಿಸಬೇಕು ಉ.—ಯೋಚನೆಮಾಡುತ್ತೇವೆ.

ಪ್ರ.—ಅಮಲ್ದಾರ್ರು ಕ್ರಯಪಟ್ಟಿ ನಿವೇಶನವನ್ನು ಮನೆ ಕಟ್ಟಿಕೊಳ್ಳುವವರಿಗೆ ಬಿಕರಿಮಾಡುವಂತಾಗಬೇಕು ಉ.—ಯೋಚಿಸುತ್ತೇವೆ.

ಪ್ರ.—ಅಮಲ್ದಾರಿ ಕೆಲಸಕ್ಕೆ ಅನುಭವದಾರರಾದ ಶಿರಸ್ತೇದಾರರನ್ನು ನೇಮಕಮಾಡುವುದು ಈಗ ಕಡಮೆಯಾಗಿದೆ. ಕಚ್ಚಾ ಕೆಲಸ ತಿಳಿಯದವರು ಅಮಲ್ದಾರರಾಗುತ್ತಾರೆ. ಇದರಿಂದ ರೈತರಿಗೆ ಕಷ್ಟ; ಸರ್ಕಾರಿ ಕೆಲಸ ನಿದಾನ. ಉ.—ಈಗ ಶಿರಸ್ತೇದಾರರನ್ನೇ ವಿಶೇಷವಾಗಿ ನೇಮಿಸುತ್ತೇವೆ. ವಿಮರ್ಶೆಮಾಡಿ ಅನುಕೂಲವಾದ ಹುಕುಂ ಕೊಡುವೆವು.

ಪ್ರ.—ವ್ಯವಸಾಯದ ಗಾಡಿಗಳಿಗೆ 2 ರೂಪಾಯಿನಂತೆ ತೆರಿಗೆ ವಿಧಿಸುವುದಾಗಿ ವರ್ತಮಾನವಿದೆ. ಇದನ್ನು ಹಾಕಕೂಡದು. ಉ.—ಯೋಚಿಸುತ್ತೇವೆ.

ಪ್ರ.—ಜಮೀನುಗಳಿಗೆ ಗೊಬ್ಬರಗೋಡು ಸಾಗಿಸುವುದಕ್ಕೆ ರಸ್ತೆಗಳಿಲ್ಲ. ಇತರ ಜಮೀನುದಾರರು ಒಪ್ಪುವುದಿಲ್ಲ. ಪ್ರತಿ ಜಮೀನಿಗೂ ಗಾಡಿ ಹೋಗಿ ಬರುವಂತೆ ಸರ್ಕಾರದವರೇ ದಾರಿ ಬಿಡಿಸಿಕೊಡಬೇಕು. ಅದಕ್ಕೆ ತಗಲುವ ಖರ್ಚನ್ನು ಜಮೀನುದಾರರೆಲ್ಲಾ ಹಂಚಿಕೊಂಡು ಕೊಡಲು ಒಪ್ಪುತ್ತಾರೆ.—ಯಾವ ಜಮೀನುಗಳಲ್ಲಿ ಮುಕ್ಕಾಲುಭಾಗದ ರೈತರು ಒಪ್ಪಿ ಪ್ಲಾನ್ ಮಾಡಿ ಪ್ರತಿ ಫಲ ಕೊಡುತ್ತೇವೆಂದು ಅರ್ಜಿ ಬರೆದುಕೊಳ್ಳುವರೋ ಅಂಥಾ ಕಡೆ ಸರ್ಕಾರದವರು ರಸ್ತೆ ಮಾಡಿಸಿಕೊಡಬಹುದು.

ಫಾರೆಸ್ಟ್ ಬಾಬುಗಳು.

ಪ್ರ.—ಮಲೆನಾಡು ಪ್ರದೇಶಗಳಲ್ಲಿ ರೈತರು ಸೊಪ್ಪನ್ನು ಸೌದೆಯನ್ನೂ ಒದಗಿಸಿಕೊಳ್ಳುವುದು ಕಷ್ಟ. ಪಟೇಲರು ಲೈಸನ್ಸು ಕೊಡುವಂತೆ ಆಗಬೇಕು. ಉ.—ಡಿಸ್ಟ್ರಿಕ್ಟ್ ಕಾಡಿನಲ್ಲಿ ರೈತರು ಬಿಟ್ಟಿ ತೆಗೆದುಕೊಂಡು ಹೋಗಬಹುದು. ಸ್ಟೇಟ್ ಜಂಗಲಿನಿಂದ ಕೊಡುವುದಕ್ಕಾಗುವುದಿಲ್ಲ.

ಪ್ರ.—ಫಾರೆಸ್ಟ್ ತಕ್ಸೀರುಗಳನ್ನು ಕೋರ್ಟಿನಲ್ಲಿ ದರ್ಯಾಪ್ತು ಮಾಡುವಾಗ್ಗೆ ತನಿಖೆ ಮಾಡಿದ ಫಾರೆಸ್ಟ್ ಇಲಾಖೆಯ ನೌಕರನೇ ಪ್ರಾಸಿಕ್ಯೂಷನ್ ನಡಿಸದಂತೆ ರೂಲುಸು ಆಗಬೇಕು. ಉ.—ಹೊಸ ಅಧಿಕಾರಿಗಳನ್ನು ನೇಮಿಸುವುದಕ್ಕೆ ಖರ್ಚು ಹೆಚ್ಚಾಗುತ್ತೆ. ಆದ್ದರಿಂದ ನೇಮಿಸಲಿಲ್ಲ. ಸ್ಪೆಷಲ್ ಮೊಕದ್ದಮೆಗಳು ವಿಚಾರಣೆಯಾಗುವಾಗ ನೇಮಿಸಲಾಗುವುದು.

ಪ್ರ.—ಮನೆ ಉರಿದುಹೋದಾಗ್ಗೆ ಅಮಲ್ದಾರ್ರು 5 ರೂಪಾಯಿನ ಮುಟ್ಟುಗಳನ್ನು ಮುಫತ್ತಾಗಿ ಕೊಡಬಹುದೆಂದು ಹುಕುಂ ಇದೆ. ಇದು ಸಾಲದಾಗುವುದಿಲ್ಲ. 10 ರೂಪಾಯಿಗೆ ಮೀರದಷ್ಟು ಸಾಮಾನು ಕೊಡುವಂತೆ ಅಪ್ಪಣೆ ಆಗಬೇಕು. ಉ.—ಮಲೆನಾಡು ಪ್ರದೇಶಗಳಲ್ಲಿ ಈ ರೀತಿ ಕೊಡುವಂತೆ ಹುಕುಂ ಮಾಡಬಹುದು.

ಪ್ರ.—ರೈತ ಪ್ರಜೆಗಳು ಕಾಡುಗಿಡಗಳನ್ನು ಹಾಕಿ ಬೆಳಸಬೇಕೆಂದು ಅಪೇಕ್ಷಿಸುತ್ತಾರೆ. ಅಂಥವರಿಗೆ ಅವಶ್ಯವಾದ ಬೀಜಗಳನ್ನು ಮುಫತ್ತಾಗಿ ಕೊಡಿಸಬೇಕು. ಉ.—ಫಾರೆಸ್ಟ್ ಆಫೀಸರುಗಳನ್ನು ಕೇಳಿದರೆ ಬಿಟ್ಟಿ ಕೊಡುತ್ತಾರೆ.

ಪ್ರ.—(1) ಗ್ರಾಮದ ಅಮರಾಯಿಯನ್ನು ಗ್ರಾಮಸ್ಥರಿಗೇ ಕೊಡಬೇಕು, ತಾಲೂಕ್‌ವಾರ್ ಹರಾಜನ್ನು ಹೊರಗಿನವರಿಗೆ ಕಂಟ್ರ್ಯಾಕ್ಟು ಕೊಡೋಣದರಿಂದ ನಾನಾ ಕಷ್ಟನಷ್ಟಗಳುಂಟು. ಪೂರ್ವದಲ್ಲಿದ್ದ ಪದ್ಧತಿಯನ್ನು ಜಾರಿಗೆ ತರಬೇಕು. (2) ಹಿಡುವಳಿ ಜಮೀನಿನ ಅಮರಾಯಿ ಸಾಗಿಸುವುದಕ್ಕೆ ಅಮಲ್ದಾರ್ರ ಚೀಟಿ ಪಡೆಯಬೇಕಾಗಿದೆ. ಇದು ತುಂಬಾ ಕಷ್ಟ. ಉ.—ಯೋಚಿಸಿ ಹುಕುಂ ಕೊಡುತ್ತೇವೆ. (2) ಅಂಥಾ ನಿರ್ಬಂಧವೇನೂ ಇಲ್ಲ. ಡೆಪ್ಯುಟಿ ಕಮಿಷನರಿಗೆ ಬರೆದುಕೊಳ್ಳಿ.

ಪ್ರ.—ಹಿಡುವಳಿ ಜಮೀನಿನಲ್ಲಿರುವ ಗಂಧದ ಮರದ ವಿಷಯದಲ್ಲಿ ರೈತರಿಗೆ ನಾನಾ ಕಷ್ಟ ನಷ್ಟಗಳುಂಟು. ಒಂದು ಕೊಂಬೆ ಹೋದರೆ ರೈತನು 100 ರೂಪಾಯಿತನಕ ಜುಲ್ಮಾನೆ ಮಾಡಬೇಕಾಗುತ್ತೆ. ಇದರ ಜವಾಬ್ದಾರಿಯನ್ನು ರೈತರಿಗೆ ತಪ್ಪಿಸಬೇಕು. ಉ.—ಹೋದ ವರುಷ ಇದು ಚರ್ಚೆಗೆ ಬಂದು ಆಗತಕ್ಕದ್ದಲ್ಲವೆಂದು ತೀರ್ಮಾನ ಮಾಡಿದ್ದೇವೆ. ಇನ್ನೂ ವಿಚಾರಮಾಡುವೆವು.

ಪ್ರ.—ಸೌದೆ ತರುವದಕ್ಕೆ ರೈತರು ತಲೆಹೊರೆಗೆ 6 ಕಾಸನ್ನೂ, ಕತ್ತೆ ಹೊರೆಗೆ 1 ಆಣೆಯನ್ನೂ ಕೊಡಬೇಕು. ಮೊದಲು ತಲೆಹೊರೆಗೆ ಏನೂ ಕೊಡುತ್ತಿರಲಿಲ್ಲ. ಕತ್ತೆ ಹೊರೆಗೆ 6 ಕಾಸು ತೆಗೆದುಕೊಳ್ಳುತ್ತಿದ್ದರು, ಇದು ಬಹಳ ಹೆಚ್ಚು. ಚೀಟಿಗಾಗಿ ಬಹಳ ಹೊತ್ತು ಕಾಯಬೇಕಾಗಿರುವುದನ್ನು ತಪ್ಪಿಸಿ ಕೊಡಬೇಕು. ಉ.—ವಿಚಾರಿಸಿ ಮೊದಲಿದ್ದಂತೆ ವಸೂಲ್ಮಾಡಬೇಕೆಂದು ಹುಕುಂ ಕೊಡುತ್ತೇವೆ.

ಪ್ರ.—ಅಮ್ಮಕಮಹಲ್ ಕಾವಲುಗಳನ್ನು ಗುತ್ತಿಗೆದಾರ್ರು ಇಲಾಖೆಯಿಂದ 20-30 ರೂಪಾಯಿಗೆ ತೆಗೆದುಕೊಂಡು, ರೈತರಿಗೆ 70-80 ರೂಪಾಯಿಗೆ ಕೊಡುತ್ತಾರೆ. ಕೆಲವು ಕಡೆ ದಾಸು ಒಂದಕ್ಕೆ 3 ರೂಪಾಯಿನಂತೆ ವಸೂಲ್ಮಾಡುವುದಲ್ಲದೆ ಅವರಿಗೆ ರೈತನು ರಾಗಿ, ಕಾಳುಗಳನ್ನೂ, ಕರುವನ್ನೂ ಮುಫತ್ತಾಗಿ ಮಿರಾಸು ಕೊಡಬೇಕು. ರೈತರಿಗಿರುವ ಈ ಕಷ್ಟಗಳನ್ನು ತಪ್ಪಿಸಿ ಕಾವಲುಗಳನ್ನು ರೈತರಿಗೇ ಕೊಟ್ಟರೆ ಉತ್ಪತ್ತಿಯೂ ಹೆಚ್ಚುವುದು. ಉ.—ಗುತ್ತಿಗೆದಾರರಿಗೆ ತಪ್ಪಿಸಿ ಕಾವಲನ್ನು ರೈತರಿಗೇ ಕೊಡುವಂತೆ ಮಾಡಬಹುದು. ಯೋಚಿಸಿ ಹುಕುಂ ಕೊಡುತ್ತೇವೆ.

ವ್ಯವಸಾಯ ವಿಚಾರಗಳು.

ಪ್ರ.—ತೆಂಗಿನ ಮರಗಳನ್ನು ಬೆಳಸುವುದಕ್ಕೆ ತಕ್ಕಾವಿ ಸಾಲವನ್ನು ಕೊಡುವಂತೆ ರೂಲುಸು ಬದಲಾಯಿಸಬೇಕು. ಉ.—ಈಗಿರುವ ರೂಲುಸು ನೋಡಿ ತೆಂಗಿಗೆ ಯಾವ ರೀತಿ ಬದಲಾಯಿಸಬೇಕೋ ಬರೆದು ಸಕ್ರೆಟರಿಯವರಿಗೆ ಕೊಡಿ. ಯೋಚಿಸಿ ಮಾಡಿಕೊಡುತ್ತೇವೆ.

ಪ್ರ.—ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಪರೀಕ್ಷಾರ್ಥವಾದ ಫಾರಮುಗಳನ್ನು ಮಾಡಿಸಬೇಕು. ಉ.—ಈಗ 3-4 ಕಡೆ ಮಾಡುವಂತೆ ಹುಕುಂ ಕೊಟ್ಟದೆ. ಕ್ರಮೇಣ ಹಣ ಒದಗಿದ ಹಾಗೆ ಹೆಚ್ಚು ಮಾಡಬೇಕು.

ಪ್ರ.—ಮಲೆನಾಡಿನ ಎತ್ತರವಾದ ಪ್ರದೇಶಗಳಲ್ಲಿ ಕಾಫಿ, ಟೀ ಅಲ್ಲದೆ ಹಣ್ಣುಹಂಪಲುಗಳನ್ನೂ, ಆಡಿಕೆ ಕಬ್ಬು ಯಾಲಕ್ಕಿ ಆಲುಗಡ್ಡೆ ಮುಂತಾದ ಯಾವ ಬಗೆಯನ್ನು ಬೆಳೆಯಬಹುದೆಂದು ಪರೀಕ್ಷೆಯಿಂದ ಗೊತ್ತುಮಾಡಿ ತಿಳಿಸುವುದಕ್ಕೆ ನಿಪುಣನಾದ ಅಧಿಕಾರಿಯನ್ನು ನೇಮಕಮಾಡಬೇಕು. ಉ.—ಯೋಚಿಸುತ್ತೇವೆ.

ಪ್ರ.—ಪ್ರತಿ ತಾಲೂಕಿಗೂ ಒಬ್ಬೊಬ್ಬ ವ್ಯವಸಾಯದ ಇನ್‌ಸ್ಪೆಕ್ಟರನ್ನು ನೇಮಿಸಿಕೊಡಬೇಕು. ಉ.—ಇದೇನೋ ಬಹಳ ಅವಶ್ಯ. ತರಪೇತಾದವರು ಸಿಕ್ಕುವುದು ಕಷ್ಟ. ಸಿಕ್ಕಿದ ಹಾಗೆ ನೇಮಿಸುತ್ತೇವೆ.

ಸಂಪದಭ್ಯುದಯ ಸಮಾಜ.

ಪ್ರ.—ಪ್ರತಿ ಡಿಸ್ಟ್ರಿಕ್ಟಿನಲ್ಲೂ ಎಕನಾಮಿಕ್ ಸೂಪರೆಂಟೆಂಡರೂ, ಸೆಕ್ರೆಟರಿಗಳೂ ನೇಮಕವಾಗಿದ್ದಾರೆ. ಇವರಿಬ್ಬರಿಗೂ ಪೂರಾ ಕೆಲಸವಿಲ್ಲ. ಸೂಪರೆಂಟೆಂಡರಿಗೇನೇ ಸಕ್ರೆಟರಿ ಕೆಲಸವನ್ನೂ ವಹಿಸಿದರೆ ಸಾಲಿಯಾನಾ 3,120 ರೂಪಾಯಿ ಉಳಿಯುತ್ತದೆ. ಉ.—ಈಗಿನ ಏರ್ಪಾಡೇ ಜಾರಿಯಲ್ಲಿರಲಿ. ಡಿಸ್ಟ್ರಿಕ್ಟ್ ಕಮಿಟಿಗಳಿಂದ ಈ ರೀತಿ ಸಿಫಾರಸು ಆಗಿ ಬಂದರೆ ಮಾಡಬಹುದು.

ಪ್ರ.—ಲೋಕಲ್ ಬೋರ್ಡ್ ಮತ್ತು ಮ್ಯುನಿಸಿಪಲ್ ಕೌನ್ಸಿಲ್ಲುಗಳಿಂದ ಎಕನಾಮಿಕ್ ಕಾನ್‌ಫರೆನ್ಸಿಗೆ ಪ್ರತಿನಿಧಿಗಳನ್ನು ಚುನಾಯಿಸುವಂತೆ ಮಾಡಿಕೊಡಬೇಕು ಮುಮಸುಧೀಯತ ಪರವಾಗಿ ಒಬ್ಬ ಪ್ರಜಾಪಕ್ಷದ ಮೆಂಬರಿಗೆ ಆ ಸಭೆಯಲ್ಲಿ ಅವಕಾಶಕೊಡಬೇಕು ಉ.—ಯೋಚನೆ ಮಾಡುತ್ತೇವೆ.

ಪ್ರ.—ಹಿಂದುಸ್ಥಾನಿ ಭಾಷೆಯಲ್ಲಿ ಎಕನಾಮಿಕ್ ಕಾನ್‌ಫರೆನ್ಸಿನ ಪತ್ರಪತ್ರ (ಬುಲೆಟಿನ್) ಗಳನ್ನು ಪ್ರಕಟಿಸಬೇಕು. ಉ.—ಭಾಷಾಂತರ ಮಾಡುವುದೇ ಕಷ್ಟ. ಮುಖ್ಯವಾದವುಗಳನ್ನು ಪ್ರಕಟಿಸುವಂತೆ ಏರ್ಪಾಡು ಮಾಡುತ್ತೇವೆ.

ಪ್ರ.—ಕೋಆಪರೆಟಿವ್ ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡು ಕೊಡದೆ ಇರುವವರ ಸಂಖ್ಯೆ ಹೆಚ್ಚುತ್ತಾ ಇದೆ. ರಿಜಿಸ್ಟ್ರಾರ್ರಿಗೆ ಬೇಗ ಬೇಗ ಫೈಸಲ್ ಮಾಡಲು ಅವಕಾಶವಾಗುವುದಿಲ್ಲ. ರೆವಿನ್ಯೂ ಅಧಿಕಾರಿಗಳು ಈ ಮೊಕದ್ದಮೆಗಳನ್ನು ವ್ಯವಸ್ಥೆ ಮಾಡುವಂತೆ ಅಪ್ಪಣೆ ಆಗಬೇಕು. [ಕೆಲವು ಮೆಂಬರುಗಳು ಇದನ್ನು ಒಪ್ಪಲಿಲ್ಲ.] ಉ.—ರಿಜಿಸ್ಟ್ರಾರ್ರ ಸಿಬ್ಬಂದಿಯನ್ನು ಹೆಚ್ಚಿಸಬೇಕೆಂದು ಕಾಣುವುದು. ನೋಡೋಣ.

ಕೈಗಾರಿಕೆ ಮತ್ತು ವಾಣಿಜ್ಯ ವಿಚಾರಗಳು.

ಪ್ರ.—ಬೊಂಬಾಯಿ ಮೊದಲಾದ ಕಡೆ ಕೈಗಾರಿಕೆ ಕಾರ್ಖಾನೆಗಳಲ್ಲಿ ನಮ್ಮ ಹುಡುಗರನ್ನಿಟ್ಟು ತರಪೇತು ಮಾಡಿಸಬೇಕು. ದೀಪದಕಡ್ಡಿ, ಪೆನ್ಸಿಲ್, ಗುಂಡಿ, ಸೂಜಿ, ಮೊಳೆ, ಸಾಬೂನು, ಕಾಗದ, ಚತ್ರಿ, ತಂತಿ ಎಳೆಯುವುದು ಮುಂತಾದ ಕಸಬುಗಳು ನಡೆಯುವ ಕಾರ್ಖಾನೆಗಳಿಗೆ ಕಳುಹಿಸುವಂತೆ ಏರ್ಪಾಡು ಮಾಡಬೇಕು. ಉ.—ಮಾಡಬೇಕೆಂದು ಗೊತ್ತುಮಾಡಿದೇವೆ. ಈಗಲೇ ಹೊಸ ಕಸಬುಗಳನ್ನು ಪ್ರಾರಂಭಿಸುವುದರಲ್ಲಿ ನಷ್ಟವಾದೀತೆಂಬ ಭೀತಿಯುಂಟು. ಯುದ್ಧ ಪೂರೈಸಿದ ಮೇಲೆ ನೋಡೋಣ. ಖಾಸಗಿ ಜನರು ಪ್ರಾರಂಭಮಾಡಿದರೆ ಸರ್ಕಾರದಿಂದ ಸಹಾಯಮಾಡುತ್ತೇವೆ. ಸರಿಯಾದ ಜನಗಳು ಸಿಕ್ಕಿದರೆ ಕಾರ್ಖಾನೆಗಳಲ್ಲಿ ತರಪೇತಾಗಿ ಬರುವಂತೆ ಕಳುಹಿಸಬಹುದು.

ಪ್ರ.—ಹುಡುಗರಿಗೆ ಮರಗೆಲಸವೇ ಮೊದಲಾದ ಕೆಲವು ಮುಖ್ಯ ಕಸಬುಗಳನ್ನು ಎಲ್ಲಾ ಕಡೆಗಳಲ್ಲೂ ಏರ್ಪಾಡುಮಾಡಬೇಕು. ಉ.—ಸಾಧ್ಯವಾದ ಕಡೆಗಳಲ್ಲೆಲ್ಲಾ ಹಣ ಒದಗಿದ ಹಾಗೆ ಮಾಡುತ್ತಾ ಇದೇವೆ.

ಪ್ರ.—ಅಳತೆಯ ಸೇರು ಮೊದಲಾದವು ಒಂದೇ ರೀತಿ ಇಲ್ಲ. ಅನೇಕ ಮೋಸಗಳು ನಡೆಯುತ್ತವೆ. ರೂಲುಸು ಆಗಿದ್ದರೂ ಫಲವಾಗಲಿಲ್ಲ. ಇದನ್ನು ಸಂಸ್ಥಾನಾದ್ಯಂತ ಬೇಗ ಕ್ರಮಪಡಿಸಬೇಕು. ಉ.—ಆಗಲಿ, ಮಾಡುತ್ತೇವೆ.

ಆರೋಗ್ಯಶಾಸ್ತ್ರ ಪ್ರಶ್ನೋತ್ತರ.—ಎಲ್ಲಾ ತರದ ಪ್ರಶ್ನೆಗಳೂ, ಸಂಪೂರ್ಣ ಉತ್ತರಗಳೂ ಇವೆ. 5 ಆಣೆ. 1016 ನೇ ಲೋ. ಸೆ. ಕನ್ನಡ ಟೆಕ್ಸ್ಟು ಪ್ರಶ್ನೋತ್ತರ 3 ಆ. ವ್ಯಾಕರಣಪ್ರಶ್ನೋತ್ತರ 1½ ಆ. ಬಾಲವ್ಯಾಕರಣ (ಲೋ. ಸೆ. ಪರೀಕ್ಷೆಗೆ) 6¾ ಆಣೆ. [243-1]

ವಿಳಾಸ.—ಕೆ. ಆರ್. ನರಸಿಂಹಯ್ಯ, ಹೈಸ್ಕೂಲ್, ಚಿಕ್ಕಬಳ್ಳಾಪುರ.

ಗೃಹಕೃತ್ಯದ ನೋಟೀಸು.

ತಿಪ್ಟೂರು ತಾಲ್ಲೂಕು ಮಡೇನೂರು ಗ್ರಾಮದಲ್ಲಿರುವ ಶಿಡ್ಲಾಪುರದ ಶಿಪ್ಪೆಗೌಡರ ಮಗ ಪುಟ್ಟಮರುಳಪ್ಪನು ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಡಿಟೋ ಗ್ರಾಮದ ಸರ್ವೆ ನಂ. 9-5 ನೇ ಫೋಡು ಖುಷ್ಕಿ ಎಕರೆ 2, ಗುಂಟೆ 5, ಆಕಾರ ರೂ 2-4-0 ಉಳ್ಳ ಹೊಲ 1; ಸದರಿ ಗ್ರಾಮದ ಸರ್ವೆ ನಂ. 127 ನೇ ಬಾಗಾಯಿತು ಗುಂಟೆ 36, ಆಕಾರ 2-4-0 ರೂ. ಉಳ್ಳ ತೋಟ 1; ರುದ್ರಯ್ಯನವರ ಹೆಸರಿನ ಖಾತೆ ನಂ. 97 ನೇ ಬಾಗಾಯಿತು ತೋಟದಲ್ಲಿ ನಮ್ಮ ಅನುಭವಕ್ಕೆ ಆಕಾರ ರೂ. 5-6-0 ಉಳ್ಳ ತೋಟ 1; ಮರುಳಯ್ಯನ ಹೆಸರಿನ ಖಾತೆ ನಂ. 68 ನೇ ಖುಷ್ಕಿಯಲ್ಲಿ ನನ್ನ ಅನುಭವಕ್ಕೆ ಆಕಾರ ಆ. 5-9 ಪೈ ಉಳ್ಳ ಹೊಲ 1; ಇದೇ ಗ್ರಾಮದಲ್ಲಿ ನಾವು ವಾಸವಾಗಿರುವ ನಂ. 131 ನೇ 5 ಅಂಕಣ ಉಳ್ಳ ಮನೆ 1; ಇದರ ಎದುರಿಗಿರುವ 3 ಅಂಕಣ ಉಳ್ಳ ಮನೆ 1 ಈ ಮೇಲ್ಕಂಡ ವಿಶಿಷ್ಟ ಸ್ವತ್ತುಗಳು ನನ್ನ ತಾತ ಲಿಂಗೇಗೌಡನ ಸ್ವಯಾರ್ಜಿತಗಳು. ಈತನ ಪೌತ್ರನಾದ ನನಗೆ ಪಿತ್ರಾರ್ಜಿತವಾದ ಈ ಸ್ವತ್ತುಗಳ ಮೇಲೆ ಪೂರ ಹಕ್ಕು ರುವುದರಿಂದ ನಾವು ತಿಳಿಸುವದೇನಂದರೆ, ನನ್ನ ತಂದೆ ಶಿಪ್ಪೇಗೌಡನು ಹುಟ್ಟಿದಾರಭ್ಯವೂ ದುರಾಚಾರಿಯಾಗಿ 2-3 ಸಾವಿರ ರೂಪಾಯಿಗಳೂ, ಅನೇಕ ಚರಜಿಂದಗಿಗಳೂ ಸಹ ದುರಾಚಾರದಿಂದ ಹಾಳುಮಾಡಿದ್ದಲ್ಲದೆ ಇದೇ ಗ್ರಾಮದ ಸಾ. ಲಿಂಗೇಗೌಡನಲ್ಲಿ ಸಾಲ ಮಾಡಿದ್ದಕ್ಕಾಗಿ ಆತನು ಮೇಲ್ಕಂಡ ಸ್ವತ್ತುಗಳ ಮೇಲೆ 1,200 ರೂಪಾಯಿಗಳಿಗೆ ಡಿಕ್ರಿ ಪಡೆದು ಹರಾಜಿಗಿಟ್ಟದ್ದರಿಂದ ನಾನು ಬೇರೆ ಕಡೆ ಮೇಲ್ಕಂಡ ಸ್ವತ್ತುಗಳನ್ನು ಆಧಾರ ಮಾಡಿ ಡಿಕ್ರಿ ಮೊಬಲಗಿಗಾಗಿ 1,200, ನನ್ನ ಲಗ್ನಕ್ಕಾಗಿ 800 ಜುಮ್ಲಾ 2,000 ರೂಪಾಯಿಗಳಿಗೆ ಮೇಲ್ಕಂಡ ಸ್ವತ್ತನ್ನು ಈಡು ಮಾಡಿ ಡಿಕ್ರಿ ಮೊಬಲಗನ್ನು ಪೂರಾ ಸಾವತ ಮಾಡಿ ಸ್ವತ್ತು ಸುಪರ್ದು ಮಾಡಿಕೊಂಡಿದೇನೆ. ಈ ಬಾಗಾಯಿತು ಮುಂದೆ ಯಾರಾದರೂ ನನ್ನ ತಂದೆಯಿಂದ ಕ್ರಯ, ಆಧಾರ, ಭೋಗ್ಯ ಮುಂತಾದವುಗಳನ್ನು ನನ್ನ ರುಜುವಿಲ್ಲದೆ ಪಡೆದುಕೊಂಡಲ್ಲಿ ಸದರಿ ಸ್ವತ್ತುಗಳು ಅವರಿಗೆ ಊರ್ಜಿತವಾಗಲಾರವು. ಹಾಗೇನಾದರೂ ಪಡೆದುಕೊಂಡಲ್ಲಿ ನನಗೆ ಸಂಭವಿಸುವ ಎಲ್ಲಾ ನಷ್ಟಕ್ಕೂ ಅವರೇ ಗುರಿಯಾಗಬೇಕಾಗುತ್ತದೆಂದು ಈ ಮೂಲಕ ಎಚ್ಚರಿಸಿದೇನೆ.

[243-1] ರುಜು ಪುಟ್ಟಮರುಳಪ್ಪ.

In the matter of the Indian Life Assurance Companies Act 1912, The Indian Companies Act 1913 and of the National Insurance and Banking Company Limited, in Liquidation.

NOTICE TO CREDITORS

Notice is hereby given that the Creditors of the above-named Company are required, on or before the 30th day of November 1915, to send their names and addresses and the particulars of their debts or claims to the undersigned, Liquidators of the said Company, and, if so required by notice in writing from the said Liquidators, are to come in and prove their said debts or claims at such time and place as shall be specified in such notice, or in default thereof they will be excluded from the benefit of any distribution made before such debts are proved.

In order that proper debts or claims may be admitted without Creditors being put to the trouble and expense of proof, any Policies, Pass Books, Premia Receipts, or other documents held in support of the debts or claims should be forwarded to the Liquidators. [241-1]

In all letters addressed to the Liquidators in response to this notice, the distinctive numbers of the Policies (if any) should be quoted, and the word "CLAIMS" clearly marked on the covers in which they are enclosed.

28, Bharat Buildings, Lahore. E. D. DIGNASSE, F. E. BANGHAM,
28th October, 1915. *Liquidators,*
NATIONAL INSURANCE & BANKING COMPANY LD., (In Liquidation).

ವೃತ್ತಾಂತ ಪತ್ರಿಕೆ.

—:o:—

ಕ್ರಿ. ೧೯೧೫ ನೇ ಇಸವಿ ನವಂಬರ್ ತಾ. ೪ ನೇ ಗುರುವಾರ.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗಿ ಮೂವತ್ತೆರಡು ಸಂವತ್ಸರಗಳಿಂದ ಜರಗುತ್ತಾ ಬಂದಿದೆ. ಶ್ರೀ ದಿವಾನ್ ರಂಗಾಚಾರ್ಯರು ಪ್ರಜೆಗಳ ಇಂಗಿತಗಳನ್ನೂ ಅವರ ಕುಂದು ಕೊರತೆಗಳನ್ನೂ ಸರ್ಕಾರದವರು ತಿಳಿಯಬೇಕೆಂದು ಬಹಳವಾಗಿ ಕುತೂಹಲಪಟ್ಟು ಸಂಸ್ಥಾನಾಮಳೆಯಿಂದ ವರ್ತಕರನ್ನೂ ರೈತರೇ ಮೊದಲಾದವರನ್ನೂ ಕರಸಿಕೊಂಡು ಸಭೆಯನ್ನು ಪ್ರಾರಂಭ ಮಾಡಿ ಅವರೊಡನೆ ನಾನಾ ವಿಚಾರಗಳನ್ನು ಕುರಿತು ಚರ್ಚೆ ಮಾಡುವುದು ಕ್ಷೇಮಕರವೆಂದು ಏರ್ಪಾಡು ಮಾಡಿದರು. ಪ್ರಜೆಗಳು ಸಂತೋಷದಿಂದ ಆ ರೀತಿ ಒಪ್ಪಿಕೊಂಡರು. ಪ್ರಾರಂಭವಾದಾರಭ್ಯ ಈ ಸಭೆಯಲ್ಲಿ ಇಂದಿನ ವರೆಗೂ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಪ್ರಜೆಗಳು ತಮ್ಮ ಕೋರಿಕೆಗಳನ್ನು ಗವರ್ನ್‌ಮೆಂಟಿಗೆ ಅರಿಕೆ ಮಾಡಿಕೊಳ್ಳುತ್ತಲೇ ಬಂದಿದ್ದಾರೆ. ಪ್ರಜೆಗಳ ಇಂಗಿತಗಳನ್ನೂ ಕಷ್ಟ ಕೊರತೆಗಳನ್ನೂ ಅರಿಕೆ ಮಾಡಿ ಪರಿಹಾರಗಳನ್ನು ಸೂಚಿಸುವುದಕ್ಕೆ ಈ ಪ್ರತಿನಿಧಿ ಸಭೆಯು ಸಾರ್ಥಕವಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ಈ ಪ್ರತಿನಿಧಿ ಸಭೆಯಾದದ್ದು ಪ್ರಜೆಗಳಿಗೆ ತುಂಬಾ ಪ್ರಯೋಜನವಾಗಿರುವುದು ಮಾತ್ರವೇ ಅಲ್ಲ; ಅಧಿಕಾರಿಗಳ ವರ್ತನೆಗಳನ್ನು ಬಹಳ ಮಟ್ಟಿಗೆ ಹತೋಟಿಗೆ ತರುವುದರಲ್ಲೂ ಸಹಾಯಕವಾಗಿದೆ. ಆದಾಗ್ಯೂ ಈ ಸಭೆಯು ಅರ್ಜಿದಾರರ ಕೂಟವಾಗಿ ಪರಿಣಮಿಸುವುದು ತೃಪ್ತಿಕರವಾದದ್ದಲ್ಲ. ಸಂಸ್ಥಾನದ ಶ್ರೇಯಸ್ಸನ್ನು ವೃದ್ಧಿಪಡಿಸುವ ಭಾಗದಲ್ಲೂ, ರಾಜ್ಯಭಾರ ಕ್ರಮಗಳನ್ನು ತಿದ್ದಿ ಪ್ರಜಾಹಿತವಾಗುವಂತೆ ಮಾಡುವುದರಲ್ಲೂ ಈ ಸಭೆಯು ಸರ್ಕಾರದವರಿಗೆ ಸಹಾಯವಾಗಬೇಕು.

ಈ ವರುಷ ಪ್ರಜಾಪ್ರತಿನಿಧಿ ಸಭೆಯಲ್ಲಿದ್ದು ಅದರಲ್ಲಿ ನಡೆಯುವಂಥಾ ವಿದ್ಯಮಾನಗಳನ್ನು ನೋಡುತ್ತಾ ಬಂದದ್ದರಲ್ಲಿ ಪ್ರತಿನಿಧಿಗಳು ಈ ಸಭೆಯ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳಬೇಕೆಂದು ಬಹಳವಾಗಿ ಹೋರಾಡತಕ್ಕವರಾಗಿದ್ದಾರೆಂದು ಗೊತ್ತಾಯಿತು. ಇದು ಶುಭ ಸೂಚನೆಯೇ ಸರಿ. ಆದರೆ ಈ ಸಭೆಯು ತನ್ನಿಂದ ನಿರ್ವಹಿಸಲು ಸಾಧ್ಯವಾಗದಂಥಾ ಸ್ವಾತಂತ್ರ್ಯಗಳನ್ನು ಕೂಡ ತನ್ನ ಕೈಬಿಟ್ಟು ಹೋಗಕೂಡದೆಂದು ಹಟ ಹಿಡಿದರೂ ಇಲ್ಲವೇ ಸಾಹಸಪಟ್ಟರೂ ಇದರಿಂದ ಕಾಲಕ್ರಮದಲ್ಲಿ ಅದು ತನ್ನ ಅಂತ್ಯಕ್ಕೆ ತಾನೇ ಕಾರಣಭೂತವಾಗಿ ಪರಿಣಮಿಸುವುದೆಂಬ ಶಂಕೆಯುಂಟಾಗಬಹುದು. ಸದ್ಯದಲ್ಲಿ ನಮ್ಮ ಗವರ್ನ್‌ಮೆಂಟಿನವರಿಗೆ ಈ ಸಭೆಯ ಸ್ವಾತಂತ್ರ್ಯಗಳನ್ನು ಕಡಮೆ ಮಾಡಬೇಕೆಂಬ ಅಭಿಪ್ರಾಯವೇನೂ ಇರುವುದಿಲ್ಲ. ಅದಕ್ಕೆ ಪ್ರತಿಯಾಗಿ ಈಗಿನ ಸರ್ಕಾರದವರು ಇನ್ನಷ್ಟು ಅಧಿಕಾರವನ್ನು ವಹಿಸುವುದರಲ್ಲಿ ಕುತೂಹಲಪಡತಕ್ಕವರಾಗಿದ್ದಾರೆ. ಇದಕ್ಕೆ ಸಂಸ್ಥಾನದ ಜಮಾ ಖರ್ಚು ಬಾಬುಗಳನ್ನು ಈ ಸಭೆಯಲ್ಲಿ ಚರ್ಚೆ ಮಾಡಿ ಮೆಂಬರುಗಳ ಅಭಿಮತವನ್ನು ತಿಳಿಸಬಹುದೆಂದು ಗವರ್ನ್‌ಮೆಂಟಿನವರು ತಾವಾಗಿಯೇ ಅನುಜ್ಞೆಯನ್ನು ದಯಪಾಲಿಸಿರುವುದು ದೃಷ್ಟಾಂತವಾಗಿದೆ. ಇಂಥಾ ಜವಾಬ್ದಾರಿಯನ್ನು ಈ ಸಭೆಯು ಅಂಗೀಕರಿಸಿದ ವಿಧಾನವನ್ನು ನೋಡಿದಾಗ ಇನ್ನೂ ಹೆಚ್ಚಿನ ಸ್ವಾತಂತ್ರ್ಯಗಳನ್ನು ವಹಿಸುವ ಭಾಗದಲ್ಲಿ ಗವರ್ನ್‌ಮೆಂಟಿಗೆ ಅಷ್ಟೇನೂ ಉತ್ಸಾಹ ಉಂಟಾಗುವುದಕ್ಕೆ ಅವಕಾಶವಾಗುವಂತೆ ಕಾಣಬರಲಿಲ್ಲ. ಗವರ್ನ್‌ಮೆಂಟಿನವರು ಅಂತರಂಗದಲ್ಲಿ ಯಾವುದೋ ಒಂದು ಉದ್ದೇಶವನ್ನಿಟ್ಟುಕೊಂಡಿರುವಂತೆ ಈ ಸಭೆಯವರು ಅನುಮಾನಪಡುತ್ತಾ, ಗವರ್ನ್‌ಮೆಂಟಿನವರು ಕೃಪೆಯಿಟ್ಟು ಕೊಟ್ಟ ಸ್ವಾತಂತ್ರ್ಯವನ್ನು ಆನಂದದಿಂದಲೂ, ಕೃತಜ್ಞತಾ ಪೂರ್ವಕವಾಗಿಯೂ ಅಂಗೀಕರಿಸದೇನೂ, ವಿಷಯಗಳನ್ನು ಕುರಿತು ಮನಸ್ಸಾರ ಧಾರಾಳವಾಗಿ ಚರ್ಚಿಸಿ ತಮ್ಮ ಇಂಗಿತಗಳನ್ನು ಅರಿಕೆ ಮಾಡದೇನೂ ಹೋದರು.

ಗವರ್ನ್‌ಮೆಂಟಿನವರು ಡಿಸ್ಟ್ರಿಕ್ಟ್ ಮತ್ತೂ ತಾಲ್ಲೂಕ್ ಸಭೆಗಳನ್ನು ಕಲ್ಪಿಸಿ ಸ್ಥಳೀಯ ವಿಚಾರಗಳನ್ನು ಅಲ್ಲಲ್ಲೇ ವ್ಯವಸ್ಥೆಯಾಗುವಂತೆ ಮಾಡಿದರೆ ಸಂಸ್ಥಾನಾಮಳೆ ವ್ಯವಹರಿಸುವಂಥಾ ಜಮಾ ಖರ್ಚು ಮೊದಲಾದ ವಿಶೇಷವೂ ಪ್ರಾಮುಖ್ಯವೂ ಆದ ವಿಷಯಗಳ ಚರ್ಚೆಗೂ ಪರ್ಯಾಲೋಚನೆಗೂ ತುಂಬಾ ವ್ಯವಧಾನವಾದೀತೆಂದು ಯೋಚಿಸಿದಂತೆ ಕಾಣುತ್ತದೆ. ಇದನ್ನು ಕೇಳಿದ ಕೂಡಲೆ ಸಭೆಯು ತನ್ನ ಸ್ವಾತಂತ್ರ್ಯಗಳಿಗೆ ಕುಂದಕ ಬಂದೀತೋ ಏನೋ ಎಂದು ಶಂಕೆ ಪಟ್ಟಂತೆ ತೋರ್ಪಡಿಸಿಕೊಂಡಿತು. ಈಗ ಸಭೆಯಲ್ಲಿ ಚರ್ಚೆಗೆ ಬರುವ ವಿಷಯಗಳ ಪಟ್ಟಿಗಳನ್ನು ನೋಡಿದ ಮಾತ್ರಕ್ಕೇ ಅಂಥಾ ಅನೇಕ ವಿಷಯಗಳನ್ನು ಸ್ಥಳ ವಿದ್ಯಮಾನಗಳ ಅನುಭವ ತಿಳಿಯದೆ ಈ ಮಹಾಸಭೆಯಲ್ಲಿ ಚರ್ಚಿಸುವುದು ಎಷ್ಟು ಮಾತ್ರಕ್ಕೂ ಸಾರ್ಥಕವಾಗತಕ್ಕದ್ದಲ್ಲವೆಂದು ಯಾರಿಗೂ ಬಹಳ ಸುಲಭವಾಗಿ ಗೊತ್ತಾದೀತು. ಪ್ರತಿವರುಷವೂ ಡಿಸ್ಟ್ರಿಕ್ಟುಗಳಲ್ಲಿ ಒಂದು ಸಭೆ ನಡೆಯಬೇಕು; ದಿವಾನರು ಇಲ್ಲವೇ ಒಬ್ಬ ಕೌನ್ಸಿಲರು ಸಭೆಯ ಅಗ್ರಸ್ಥಾನವನ್ನು ವಹಿಸಬೇಕು. ಇಂಥಾ ಸಭೆಯಲ್ಲಿ ಆಯಾ ಡಿಸ್ಟ್ರಿಕ್ಟಿನ ಸ್ಥಳೀಯ ಕುಂದು ಕೊರತೆಗಳನ್ನು ಪ್ರಜಾಪ್ರತಿನಿಧಿಗಳು ಹೇಳಿಕೊಳ್ಳುವುದಕ್ಕೂ, ಅವುಗಳನ್ನು ನಿವಾರಣೆ ಮಾಡುವುದಕ್ಕೆ ಹುಕುಮುಗಳೂ ಏರ್ಪಾಡುಗಳೂ ಮಾಡಲ್ಪಡುವುದಕ್ಕೂ ಎಷ್ಟೋ ಅವಕಾಶ ದೊರಕುತ್ತದೆ. ಆದರೆ ಅಂಥಾ ಹುಕುಮುಗಳೂ ಏರ್ಪಾಡುಗಳೂ ಜಾರಿಗೆ ಬಾರದೆ ಹೋದಾಗ ಮೆಂಬರುಗಳು ಅಂಥವುಗಳನ್ನು ಈ ಮಹಾಸಭೆಯಲ್ಲಿ ತಂದು ಅರಿಕೆ ಮಾಡುವುದಕ್ಕೆ ಯಾವ ಅಡಚಣೆಯೂ ಇರಕೂಡದು.

ಈ ಮಹಾ ಸಭೆಯು ರಾಜ್ಯಾಡಳಿತದಲ್ಲಿ ಗೌರವವಾದ ಸ್ಥಾನವನ್ನು ಸಂಪಾದನೆ ಮಾಡಿಕೊಂಡಿದೆ. ಅದು ಆ ಸ್ಥಾನವನ್ನು ಉಳಿಸಿಕೊಂಡು ಶ್ರೇಯಸ್ಸಿಗೆ ಬರಬೇಕಾಗಿದ್ದರೆ ಅದು ಗವರ್ನ್‌ಮೆಂಟಿನ ನಡವಳಿಕೆ ಮತ್ತೂ ಅದರ ಲಕ್ಷಣಗಳನ್ನು ಕುರಿತು ಕೆಲವು ದಿನ ಸಾವಧಾನದಿಂದ ಚರ್ಚೆಮಾಡಬೇಕಾಗಿರುತ್ತದೆ. ಗವರ್ನ್‌ಮೆಂಟಿನವರನ್ನು ಕೇಳಿ ಅವರ ಉತ್ತರಗಳನ್ನು ಪಡೆಯುವ ಅಧಿಕಾರವು ಸಭೆಗೆ ಇದ್ದೇ ಇರಬೇಕು. ಸರ್ಕಾರದ ನೌಕರರ ವರ್ತನೆಗಳನ್ನು ಎತ್ತಿಹಾಕುವ ಸ್ವಾತಂತ್ರ್ಯಕ್ಕೆ ಸ್ವಲ್ಪವೂ ಅಡ್ಡಿಯುಂಟಾಗಬಾರದು. ಆದರೆ ಸರ್ಕಾರಿ ಕೆಲಸ ಕಾರ್ಯಗಳಿಗೆ ಸಹಾಯವಾಗುವಂತೆಯೂ, ಪ್ರಜಾ ಬಾಹುಳ್ಯಕ್ಕೆ ಹಿತಕರವಾಗಿಯೂ, ಸಂಸ್ಥಾನದ ಸತ್ಯವಾದ ಶ್ರೇಯಸ್ಸಿಗೆ ಸಾಧಕವಾಗಿಯೂ ಪರಿಣಮಿಸುವಂಥಾ ಕಾರ್ಯಗಳಿಗೆ ಈ ಸಭೆಯು ತನ್ನ ವಿಶೇಷವಾದ ಶಕ್ತಿಸಾಮರ್ಥ್ಯಗಳನ್ನು ವಿನಿಯೋಗಿಸುತ್ತಾ ಬರಬೇಕು.

ಈ ಸಭೆಯು ಕೆಲಸಕ್ಕೆ ಬಾರದ ಅಲ್ಪ ಮಾತ್ರವಾದ ಸ್ವಾತಂತ್ರ್ಯಗಳ ಮೇಲೆ ಅಭಿಮಾನವನ್ನಿಟ್ಟುಕೊಳ್ಳಬೇಕೆಂದು ನಿತ್ಯವೂ ಸಾಹಸಪಡುವುದರಲ್ಲಿ—ನೀರಿನಲ್ಲಿ ಕಾಣಿಸುವ ಪ್ರತಿಬಿಂಬವನ್ನು ನೋಡಿ ಭ್ರಮಿಸಿ ಬಾಯಲ್ಲಿದ್ದ ರೊಟ್ಟಿಯನ್ನು ಕಳೆದುಕೊಂಡು ವ್ಯಥೆಪಡುವ ಪ್ರಾಣಿಯಂತೆ—ಗಣ್ಯವೂ ಪ್ರಾಮುಖ್ಯವೂ ಆದ ಹಕ್ಕು ಬಾಧ್ಯತೆಗಳನ್ನು ಕಳೆದುಕೊಳ್ಳಬಹುದು. ಸಭೆಗೆ ಇನ್ನೂ ಸ್ವಲ್ಪ ದೂರದೃಷ್ಟಿ ಹೆಚ್ಚಬೇಕು; ಸರ್ಕಾರಿ ಕಾರುಬಾರುಗಳಲ್ಲಿ ಸಣ್ಣ ಪುಟ್ಟ ವಿಚಾರಗಳಿಗೆಲ್ಲಾ ಅಷ್ಟು ವಿಶೇಷವಾದ ಗಮನ ಕೊಡಬೇಕಾದ ಅಗತ್ಯ ಕಾಣುವುದಿಲ್ಲ. ಸಣ್ಣ ವಿಷಯಗಳನ್ನು ಹಿಡಿದು ಬಹಳವಾಗಿ ಹೋರಾಡುವುದನ್ನು ನಿಲ್ಲಿಸಿಬಿಡುವುದು ಉತ್ತಮ. ಈ ಪ್ರಜಾಪ್ರತಿನಿಧಿ ಸಭೆಯಿಂದ ನಮ್ಮ ಸಂಸ್ಥಾನಕ್ಕೆ ಎಷ್ಟೋ ಪ್ರಯೋಜನವುಂಟಾಗಿದೆ ಎಂದು ನಮಗೆಲ್ಲಾ ತಿಳಿದಿದೆ. ಅಂಥಾ ಪ್ರಯೋಜನವು ಇನ್ನೂ ಬಹಳ ಮಟ್ಟಿಗೆ ಹೆಚ್ಚುವಂತಾಗಬೇಕೆನ್ನುವುದೇ ನಮ್ಮ ಅಭಿಲಾಷೆ.

ಸದ್ಗುರುವಿನಲ್ಲಿರುವ ಲಕ್ಷಣಗಳು.

ಒಂದಾನೊಂದು ದಿನ ಗುಣಶೀಲನೆಂಬ ಒಬ್ಬ ಹುಡುಗನು ತನ್ನ ತಂದೆಯ ಬಳಿಗೆ ಬಂದು ಆ ದಿನ ಉಪಾಧ್ಯಾಯರು ಸದ್ಗುರುವಿನ ವಿಷಯ ಮಾತಾಡಿದರೆಂದು ತಿಳಿಸಿ, ಆ ಸದ್ಗುರುವನ್ನು ನಾವು ಹ್ಯಾಗೆ ತಿಳಿಯಬಹುದೆಂದು ಬೇಡಿಕೊಂಡನು. ತಂದೆಯು ಹೇಳಿದ್ದೇನಂದರೆ—ಸದ್ಗುರುವು ಯಾವಾಗಲೂ ದುರ್ಬೋಧನೆ ಮಾಡುವವನು ಅಲ್ಲ. ಒಬ್ಬನು ತನ್ನ ಶಿಷ್ಯರಿಗೆ ಸುಳ್ಳು ಹೇಳಲಪ್ಪಣೆಕೊಟ್ಟರೆ ಅವನು ಸದ್ಗುರುವಲ್ಲ. ಇಲ್ಲವೇ ಅವರು ಉಪಾಯಾಂತರದಿಂದ ತಮ್ಮ ಶಿಷ್ಯರಿಗೆ ಕಾಣಿಕೆತಕ್ಕೊಂಡರೆ ಅವನು ಸದ್ಗುರುವಲ್ಲ. ಇಲ್ಲವೇ ಅವನು ತಾವಾಗಿ ದುರ್ಮಾರ್ಗದಲ್ಲಿ ನಡೆದರೆ ಅವನು ಸದ್ಗುರುವಲ್ಲ. ಮತ್ತು ಸದ್ಗುರುವು ಸಕಲರು ಅಂಗೀಕರಿಸಬಹುದಾದ ಉತ್ತಮೋಪದೇಶಗಳನ್ನೇ ಯಾವಾಗಲೂ ಮಾಡುವನು. ವೇದಗಳನ್ನು ಓದಿ ಅದರ ಮೂಲಕ ದೇವರ ಚಿತ್ತವೇನೆಂದು ಗ್ರಹಿಸಬೇಕೆಂದು ಯಥಾರ್ಥವನ್ನು ಹೇಳಿ ಒಳ್ಳೇ ನಡತೆಯಿಂದ ಜೀವಿಸಿ ಎಲ್ಲರನ್ನೂ ಪ್ರೀತಿಸಿ ಯಾರಿಗೂ ಅನ್ಯಾಯಮಾಡದೇ ನೀತಿನ್ಯಾಯವನ್ನು ಮಾಡುವಂತೆ ತನ್ನ ಶಿಷ್ಯರಿಗೆ ಆಗಾಗ್ಯೆ ಬುದ್ಧಿ ಬೋಧನೆ ಹೇಳುತ್ತಾ ಬರುವನು.

ಗುಣಶೀಲ :—ಅಂಗೈಯಲ್ಲಿನ ನೆಲ್ಲೀಕಾಯಂತೆ ಇದು ಬಹಳ ಸ್ಪಷ್ಟವಾಗಿದೆ.

ತಂದೆ :—ಇದೂ ಅಲ್ಲದೆ ಇನ್ನೆರಡು ವಿಷಯಗಳನ್ನು ತಿಳಿಯಬೇಕು. ಅದೇನಂದರೆ ಸದ್ಗುರುವು ಒಳ್ಳೇ ನೀತಿವಾಕ್ಯಗಳನ್ನು ಹೇಳುವ ಹಾಗೆಯೇ ತಾನೂ ಅದರಂತೆ ನಡೆಯುವನು. ಮುಕ್ತಿಮಾರ್ಗವನ್ನು ಕುರಿತು ತಿಳಿಸುವ ಸದ್ಗುರು ತಾನೇ ಆ ಮಾರ್ಗದಲ್ಲಿ ನಡೆದು ಮುಕ್ತಿಹೊಂದುವ ಮಾರ್ಗವನ್ನು ಅವರು ಮುಂದಿಟ್ಟುಕೊಳ್ಳುವಂತೆ ತೋರಿಸಲು ತಾನೇ ದಾರಿಕಾಣಿಸುವವನಾಗಿರಬೇಕು.

ಗುಣಶೀಲ :—ಇದೆಲ್ಲಾ ಒಳ್ಳೇದೆ! ಹಾಗಾದರೆ ಈ ಲೋಕದಲ್ಲಿರುವ ಗುರುಗಳಲ್ಲಿ ಅನೇಕರು ಸದ್ಗುರುಗಳಾಗಿರುತ್ತಾರೆಂದು ಹೇಳಬಾರದೋ?

ತಂದೆ :—ಇನ್ನೊಂದು ವಿಚಾರವಿದೆ. ಅದರಿಂದಲೇ ಬೇರೆಬೇರೆ ಗುರುಗಳಿಗೂ ಸದ್ಗುರುವಿಗೂ ಇರುವ ವ್ಯತ್ಯಾಸ ಕಾಣುವದು. ಅದೇನಂದರೆ—ಸದ್ಗುರುವು ತನ್ನ ಉತ್ತಮೋತ್ತಮವಾದ ಲಕ್ಷಣಗಳನ್ನು ಶಿಷ್ಯರಿಗೆ ಪ್ರಕಟಿಸುವ ಹಾಗೆ ಮನುಷ್ಯರಾದ ನಾವು ಮಾಡಲಾಗದೇ ಇರುವ ಅನೇಕ ಮಹತ್ತುಗಳನ್ನು ಮಾಡುವ ಬಹಳ ವಿಶೇಷ. ನುಡಿಗಳಿಂದ ಅವರು ಹ್ಯಾಗೆ ಉತ್ತಮರಾಗಿ ಕಾಣುತ್ತಾರೋ ಹಾಗೆಯೇ ನಡತೆಗಳಿಂದಲೂ ಉತ್ತಮ ಲಕ್ಷಣವುಳ್ಳವರೆಂದು ತೋರಿಸುವರು.

ಗುಣಶೀಲ :—ಅಯ್ಯಾ! ಅಂಥಾ ಉತ್ತಮ ಲಕ್ಷಣವುಳ್ಳ ಸದ್ಗುರುವನ್ನು ತಾವು ತಿಳಿದಿರುವಿರಾ?

ತಂದೆ :—ನನ್ನ ಮಗನೆ! ಈ ಲಕ್ಷಣಯುಕ್ತನಾದ ಸದ್ಗುರುವನ್ನು ನಾನು ಚನ್ನಾಗಿ ಬಲ್ಲೆ. ಆತನು ಸುಮಾರು 1914 ವರುಷಗಳ ಕೆಳಗೆ ಈ ಭೂಲೋಕಕ್ಕೆ ಅವತರಿಸಿ ಕೆಟ್ಟತನವನ್ನು ಖಂಡಿಸುವದಕ್ಕೂ ಕೇಡಿನ ಮಾರ್ಗದಲ್ಲಿರುವ ಮನುಷ್ಯರನ್ನು ಬಿಡಿಸಿ ಅವರನ್ನು ಮುಕ್ತಿಮಾರ್ಗದಲ್ಲಿ ನಡಿಸುವದಕ್ಕೂ ಮನುಷ್ಯರೂಪವನ್ನು ತಾಳಿ, ಕೆಲವು ವರುಷ ತನ್ನ ಶಿಷ್ಯಮಂಡಲಿಯವರಿಗೆ ಇವು ವಿಷಯ ಉಪದೇಶ ಕೊಟ್ಟು ಸತ್ಯಮಾರ್ಗವನ್ನು ನೆಲೆಗೊಳಿಸಿ ಮನುಷ್ಯರಲ್ಲಿ ತೋರುವ ಕೆಡಕನ್ನು ತೊಲಗಿಸುವದಕ್ಕೆ ಸುಳ್ಳು, ಮೋಸ, ಹೊಟ್ಟೆಕಿಚ್ಚು, ಕಪಟ ಇವೇ ಮೊದಲಾದವುಗಳನ್ನು ಖಂಡಿಸಿದನು. ನಮ್ಮಲ್ಲಿ ಸುಗುಣವನ್ನು ನೆಲೆಗೊಳಿಸುವದಕ್ಕೂ ಆದರಿಸುವದಕ್ಕೂ ಎಷ್ಟೋ ಉತ್ತಮ ವಾಕ್ಯಗಳನ್ನು ಭಾಗ್ಯವಾಗಿ ಕೊಟ್ಟಿದ್ದಾನೆ.

ಗುಣಶೀಲ :—ಅಯ್ಯಾ! ಆ ಸದ್ಗುರುವಿನ ಶ್ರೇಷ್ಠವಾದ ನಾಮಧೇಯವೇನು?

ತಂದೆ :—ಆತನ ನಾಮವೇನಂದರೆ—"ಮನುಷ್ಯರನ್ನು ಉದ್ಧಾರಮಾಡುವದಕ್ಕಾಗಿ ದೇವರಿಂದಲೇ ಅಭಿಷೇಕಿಸಲ್ಪಟ್ಟವನು" ಎಂಬರ್ಥ ಬರುವ ಯೇಸುಕ್ರಿಸ್ತನೇ.

ಗುಣಶೀಲ :—ಮನುಷ್ಯರು ಈ ಲಕ್ಷಣೋತ್ತಮನಾದ ಗುರುವನ್ನು ಕಂಡು ಆತನಿಗೆ ಶಿಷ್ಯರಾಗಿ ಆತನ ಮಾರ್ಗವನ್ನು ಅನುಸರಿಸುವ ಹಾಗೆ ಬಹಳ ಮಂದಿ ಸೇರಿದರೋ?

ತಂದೆ :—ಇಲ್ಲಪ್ಪ, ಆ ಕಾಲದಲ್ಲಿ ಕೆಲವರು ಮಾತ್ರ ಆತನ ಸತ್ಯೋಪದೇಶವನ್ನು ಅಂಗೀಕರಿಸಿದರು. ಆದರೆ ಬಹಳ ಮಂದಿ ತಮ್ಮ ಕೆಟ್ಟತನ, ಪಾಪಗಳಿಗೋಸ್ಕರ ಗದರಿಸಲ್ಪಟ್ಟು ರೇಗಿದವರಾಗಿ ಆತನನ್ನು ಶಿಲುಬೆಗೆ ಜಡಿದರು.

ಗುಣಶೀಲ :—ಅಯ್ಯೋ! ಇದು ಮಹಾ ದುಃಖಕರವಾದದ್ದಲ್ಲವೇ!

ತಂದೆ :—ಇರಬಹುದು, ಆದರೆ ಇದರಿಂದಲೇ ನಾವು ಯೇಸು ಕ್ರಿಸ್ತಸ್ವಾಮಿಯ ಶ್ರೇಷ್ಠವಾದ ಲಕ್ಷಣಗಳನ್ನು ಬಟ್ಟಬಯಲಾಗಿ ತಿಳಿದುಕೊಳ್ಳುತ್ತೇವೆ.

ಗುಣಶೀಲ :—ಅದು ಹ್ಯಾಗೆ?

ತಂದೆ :—ಆತನು ಸತ್ತು ಒಂದು ಸಮಾಧಿಯಲ್ಲಿ ಹೂಣಲ್ಪಟ್ಟು, ಮೂರನೆ ದಿನದಲ್ಲಿ ಜೀವಿತನಾಗೆದ್ದು ತನ್ನ ಶಿಷ್ಯರಿಗೆ ಸುದರುಶನವಿತ್ತು ನಾಲ್ವತ್ತು ದಿನ ವರೆಗೆ ಅವರೊಡನೆ ಸಂಚಾರ ಮಾಡುತ್ತಾ ಬಂದು ಕಟ್ಟಕಡೆಗೆ ಅವರು ನೋಡುತ್ತಿದ್ದ ಹಾಗೆ ಅವರೆದುರಿಗೆ ಪರಲೋಕಕ್ಕೇರಿ ತನ್ನನ್ನು ಮರೆಯಿಸಿಕೊಂಡನು. ಆತನು ತಾನು ಸಾಯುವದಕ್ಕೆ ಮುಂಚೆ ಬಹಳ ಮಂದಿ ಕುಷ್ಠರೋಗಿಗಳಿಗೆ ಸ್ವಸ್ಥವನ್ನೂ ಕಣ್ಣಿಲ್ಲದ ಕುರುಡರಿಗೆ ದೃಷ್ಟಿಯನ್ನೂ ಕೊಟ್ಟದ್ದಲ್ಲದೆ ತಾನು ಸಮಾಧಿಯಿಂದೆದ್ದದ್ದರ ದೆಸೆಯಿಂದ ತನ್ನಲ್ಲಿದ್ದ ದೈವ ಲಕ್ಷಣವನ್ನೂ ಪ್ರಕಟಮಾಡಿ ತಾನೇ ಪರಮಗುರುವೆಂದು ಸಿದ್ಧಾಂತಪಡಿಸಿದನು.

ಗುಣಶೀಲ :—ಆತನು ಬಹಳ ವರುಷಗಳ ಹಿಂದೆ ತನ್ನನ್ನು ಪ್ರಕಟಮಾಡಿದ್ದರಿಂದ ನಾವು ಈ ಕಾಲದಲ್ಲಿ ಆತನನ್ನು ಪೂಜಿಸಿ ಆರಾಧಿಸುವದು ಹ್ಯಾಗೆ?

ತಂದೆ :—ಆತನು ತನ್ನಲ್ಲಿ ಭಕ್ತಿಯಿಟ್ಟಿರುವವರೆಲ್ಲರನ್ನು ಅಂಗೀಕರಿಸಿಕೊಂಡು ಅವರ ಮನಸ್ಸಿನಲ್ಲಿ ತನ್ನ ಕಟಾಕ್ಷವನ್ನು ತೋರಿಸಿ ತನ್ನ ಸನ್ಮಾರ್ಗದಲ್ಲಿಯೇ ನಡೆಯುವ ಹಾಗೆ ಅವರಿಗೆ ಯಾವಾಗಲೂ ಸಹಾಯಕೊಟ್ಟು, ಕೇಡಿನಿಂದೆಲ್ಲಾ ಅವರನ್ನು ರಕ್ಷಿಸುವನು.

ಗುಣಶೀಲ :—ಅದು ನಮಗೆ ಹ್ಯಾಗೆ ಗೊತ್ತು?

ತಂದೆ :—ಅದು ಹ್ಯಾಗಂದರೆ—ಆತನ ಶಿಷ್ಯರೊಳಗೆ ನಾಲ್ಕು ಮಂದಿ ಆತನ ಜೀವಚರಿತ್ರೆಯನ್ನು ಕುರಿತು ಸುವಾರ್ತೆಗಳೆಂಬ ನಾಲ್ಕು ಗ್ರಂಥಗಳಲ್ಲಿ ಬರೆದಿರುವದರಿಂದ ನಾವು ಆ ಸದ್ಗುರುವನ್ನು ಕುರಿತು ಬಹಳ ಸ್ಪಷ್ಟವಾಗಿ ತಿಳಿಯಬಹುದು. ಮತ್ತು ನಾವು ಆತನಲ್ಲಿ ಭಕ್ತಿಯಿಟ್ಟರೆ ಆತನು ತನ್ನ ಶಿಷ್ಯರಿಗೆ ದಯಪಾಲಿಸಿದ ವಾಗ್ದಾನವನ್ನು ನಮಗೂ ನೆರವೇರಿಸುವನೆಂಬುವದು ಸತ್ಯ. ಆ ವಾಗ್ದಾನವೇನಂದರೆ—"ಎಲೈ ಕಷ್ಟಪಡುವವರೇ, ಹೊರೆ ಹೊತ್ತಿರುವವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು" ಎಂಬುವದೇ. ಆತನ ಮುಖಾಂತ್ರವಾಗಿ ನಾವು ಕಡೆ ಹಾಯ್ದು ಮುಕ್ತಿಯೆಂಬ ಆ ವಿಶ್ರಾಂತಿ ಸುಖವನ್ನು ಹೊಂದಿಕೊಂಡು ಆ ಸದ್ಗುರು ದಯಪಾಲಿಸುವ ಕಟಾಕ್ಷದ ಶ್ರೇಷ್ಠವಾದ ಬೆಲೆಯನ್ನು ಚನ್ನಾಗಿ ತಿಳಿದುಕೊಳ್ಳುವೆವು.

ಯುದ್ಧದ ಸಮಾಚಾರಗಳು.

ಜಾರ್ಜ್ ಸಾರ್ವಭೌಮರಿಗಾದ ಅಪಾಯ.

ಇಟಲಿಯವರ ಸಾಹಸ ಕಾರ್ಯಗಳು.

ಯುದ್ಧದ ಕಾರುಬಾರುಗಳ ವಿಷಯವಾಗಿ ಈ ವಾರದ ವರ್ತಮಾನಗಳು ಸ್ವಲ್ಪವೂ ವಿಶೇಷವಾಗಿ ಕಾಣಬರುವುದಿಲ್ಲ. ನಮ್ಮ ಚಕ್ರವರ್ತಿ ಸಾರ್ವಭೌಮರಾದ ಜಾರ್ಜ್ ಪ್ರಭುಗಳು ಫ್ರಾನ್ಸಿನಲ್ಲಿ ಕಳೆದ ವಾರ ಆಕಸ್ಮಿಕವಾದ ಅಪಾಯಕ್ಕೆ ಒಳಗಾದರೆಂದು ಕೇಳಿ ನಮ್ಮ ವಾಚಕರೆಲ್ಲಾ ವ್ಯಥೆಪಡುತ್ತಾರೆ. ಪ್ರಭುಗಳು ಅಕ್ಟೋಬರ್ ತಾ. 22 ರಲ್ಲಿ ಫ್ರೆಂಚ್ ಪ್ರೆಸಿಡೆಂಟರನ್ನು ಕಂಡು ಬರುವುದಕ್ಕೂ, ತಮ್ಮ ಸೈನಿಕರನ್ನು ಸಂಧಿಸಿ ಅವರಿಗೆ ಉತ್ತೇಜನ ಕೊಡುವುದಕ್ಕೂ ಫ್ರಾನ್ಸಿಗೆ ಪ್ರಯಾಣಮಾಡಿದರು. ಅವರು ತಾ. 28 ರಲ್ಲಿ ಹಲವು ರೆಜಿಮೆಂಟ್ ಸೈನ್ಯಗಳ ಕವಾಯತನ್ನು ಮೈದಾನದಲ್ಲಿ ಪರಾಂಬರಿಸಿದರು. ಕವಾತು ಮುಗಿದ ಮೇಲೆ ಸೈನಿಕರೆಲ್ಲಾ ಉತ್ಸಾಹದಿಂದ ಟೋಪಿಗಳನ್ನು ಎತ್ತಿ ಹಿಡಿದು ಅಲ್ಲಾಡಿಸುತ್ತಾ ಏಕ ಕಾಲದಲ್ಲಿ ಎಲ್ಲರೂ ಜಯಧ್ವನಿ ಮಾಡಿದರು. ಆ ಧ್ವನಿಯನ್ನು ಕೇಳಿ ನಮ್ಮ ಸಾರ್ವಭೌಮರು ಹತ್ತಿಕೊಂಡಿದ್ದ ಕುದುರೆಯು ಬೆದರಿ ಮುಂದಿನ ಕಾಲುಗಳನ್ನೆತ್ತಿ ನಿಂತುಕೊಂಡಿತು. ಮೊರೆಯುವವರು ಆಗ ಅದನ್ನು ಹತೋಟಿಗೆ ತರಬೇಕೆಂದಿದ್ದರು. ಆದರೆ ಕುದುರೆಯು ಮತ್ತೆ ಮುಂದಿನ ಕಾಲುಗಳನ್ನು ಊರಿಸಿ ಪ್ರಭುಗಳನ್ನು ನೆಲಕ್ಕೆ ಕೆಡವಿ ಹಿಂದಾಗಿ ಬಿದ್ದುಕೊಂಡಿತು. ಆ ಕೂಡಲೇ ಸಾರ್ವಭೌಮರನ್ನು ಮೋಟರ್ ಕಾರಿನಲ್ಲಿ ಸಾಗಿಸಿಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿದರು. ಅವರಿಗೆ ಬಹಳ ಪೆಟ್ಟು ಗಾಯವಾಯಿತು; ಬಹುಶಃ ಮೂಳೆಗಳಿಗೆ ಏನೂ ಆಗಿಲ್ಲ. ಅವರಿಗೆ ಸ್ವಲ್ಪ ಜ್ವರಹುಟ್ಟಿ ರಾತ್ರಿ ಸರಿಯಾದ ನಿದ್ದೆ ಬರಲಿಲ್ಲ. ಈಗ ಜ್ವರ ಬಿಟ್ಟಿದೆ; ಅವರು ದಿನೇದಿನೇ ಗುಣವಾಗುತ್ತಿದ್ದಾರೆ. ಚಕ್ರವರ್ತಿಗಳು ಇನ್ನೂ ಬಲಹೀನರಾಗಿದ್ದರೂ ಪೆಟ್ಟು ತಗಲಿದ ನೋವು ಕಡಮೆಯಾಗುತ್ತಿದೆ. ಈ ಅಪಾಯ ಸಂಭವಿಸಿದ ಸುದ್ದಿಯನ್ನು ಕೇಳಿ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಸಂತಾಪ ಸೂಚಕವಾದ ತಂತೀ ವರ್ತಮಾನಗಳು ಕಳುಹಲ್ಪಟ್ಟವು.

ಚಕ್ರವರ್ತಿ ಜಾರ್ಜ್ ಸಾರ್ವಭೌಮರವರು ನೊವೆಂಬರ್ ತಾ. 1 ರಲ್ಲಿ ಫ್ರಾನ್ಸಿನಿಂದ ಇಂಗ್ಲೆಂಡಿಗೆ ವಾಪಸು ದಯಮಾಡಿದರು. ಅವರು ಈ ಪ್ರಯಾಣದಲ್ಲಿ ಚೆನ್ನಾಗಿದ್ದರು; ಈಚೆಗೆ ದಿನಕ್ರಮೇಣ ಸೌಖ್ಯವಾಗುತ್ತಿದ್ದಾರೆ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚ್ ಸೈನಿಕರು ಎರಡು ಠಾಣ್ಯಗಳಲ್ಲಿ ಮುಂದರಿಸಿ ನುಗ್ಗಿ ಹೋಗಿದ್ದಾರೆ. ಒಂದು ಠಾಣ್ಯದಲ್ಲಿ ಅವರು ಜರ್ಮನಿಯವರಿಂದ 1,200 ಗಜ ಉದ್ದವೂ 250 ಗಜ ಅಗಲವೂ ಉಳ್ಳ ನಾಲ್ಕು ಸಾಲಿನ ಕಂದಕಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ಇವನ್ನು ಮತ್ತೆ ಕಿತ್ತುಕೊಳ್ಳಬೇಕೆಂದು ಜರ್ಮನಿಯವರು ಬಹಳ ಪರಾಕ್ರಮದಿಂದ ನುಗ್ಗಿ ಬಂದು ಕಾದಿ, ಕೈಲಾಗದೆ ಹಿಮ್ಮೆಟ್ಟಿಹೋದರು. ಪಶ್ಚಿಮ ಠಾಣ್ಯದಲ್ಲಿ ಫ್ರೆಂಚರು 200 ಗಜಗಳ ಕಂದಕಗಳನ್ನು ಗೆದ್ದು ಕೊಂಡದ್ದಲ್ಲದೆ ಶತ್ರು ಸೈನಿಕರಲ್ಲಿ 200 ಜನರನ್ನು ಕೈಸೆರೆ ಹಿಡಿದಿರುತ್ತಾರೆ. 400 ಮಂದಿ ಜರ್ಮನಿಯವರು ಕೊಲೆಯಾದರು, ಇಲ್ಲವೇ ಗಾಯಪಟ್ಟರು.

ಅಕ್ಟೋಬರ್ ತಾ. 19-20 ರಲ್ಲಿ ಜರ್ಮನಿಯವರು ವಿಷವಾಯುಗಳನ್ನು ಬಿಟ್ಟು ಅತ್ಯಂತ ಪರಾಕ್ರಮದಿಂದ ನುಗ್ಗಿ ಬಂದು ರೀಂ ನಗರವನ್ನು ಗೆದ್ದುಕೊಳ್ಳಬೇಕೆಂದು ಕದನಮಾಡಿದರು. ಫ್ರೆಂಚರು ಅವರ ಆಗಮನವನ್ನು ನಿರೀಕ್ಷಿಸಿ ಸಿದ್ಧರಾಗಿದ್ದರು. ಪ್ರತಿ ಒಂದು ಕದನದಲ್ಲೂ ಯುದ್ಧನಾದದ್ದರಲ್ಲಿ ಜರ್ಮನಿಯವರು ಬಹಳ ನಷ್ಟಪಟ್ಟು ಹಿಂದಕ್ಕೆ ಓಡಿಸಲ್ಪಟ್ಟರು. ಒಂದು ಠಾಣ್ಯದಲ್ಲಿ ಮುಕ್ಕಾಲು ಮೈಲಿ ವಿಸ್ತಾರವಾದ ಮೈದಾನದಲ್ಲಿ ಜರ್ಮನಿ ಸೈನಿಕರು 1,800 ಮಂದಿ ಕೊಲೆಯಾಗಿ ಬಿದ್ದಿದ್ದರು. ಜರ್ಮನಿಯವರಲ್ಲಿ ಗಾಯಪಟ್ಟವರೂ ಕೊಲೆಯಾದವರೂ ಸೇರಿ 40,000 ವೆಂದು ಹೇಳಲಾಗಿದೆ. ಅವರು 21 ತೋಪುಗಳಲ್ಲಿ 5,000 ಹೆಣಗಳನ್ನು ಗ್ಯಾಸ್ ಮಾಡಿ ಹೂಳಿಹಾಕಿದರೆಂದೂ, 1,000 ಹೆಣಗಳು ಅವರಿಗೆ ಸಿಕ್ಕದೆ ಹೋದುವೆಂದೂ ತಿಳಿದು ಬಂದಿದೆ.

ಜರ್ಮನಿಯವರು ತಾಹೂರ್ ಎಂಬ ಗ್ರಾಮವನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಕಳೆದ ಶನಿವಾರ ಮಹತ್ತರವಾದ ಸಾಹಸವನ್ನು ಮಾಡಿದರು. ಅವರು ಈಚೆಗೆ ರಷ್ಯಾದೇಶದಿಂದ ಕರಸಿದ ಸೈನ್ಯವನ್ನು ಆರು ಮೈಲಿ ಉದ್ದಕ್ಕೆ ನಿಲ್ಲಿಸಿ ಕೊಂಡು ನುಗ್ಗಿಬಂದು ಕದನಮಾಡಿದರು. ಆರು ಮೈಲಿ ಉದ್ದ ಇದ್ದ ಅಷ್ಟು ಸೈನಿಕರನ್ನೂ ನಮ್ಮ ಪಕ್ಷದವರು ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ. ಈ ಕದನದಲ್ಲಿ ಜರ್ಮನಿಯವರು ಅನೇಕ ಸೈನಿಕರನ್ನು ಕಳಕೊಂಡರು. ಬಳಿಕ ಭಾನುವಾರ ಜರ್ಮನಿಯವರು ವಿಷವಾಯುಗಳನ್ನು ಪ್ರಯೋಗಮಾಡಿದರು. ನಾಲ್ಕಾವರ್ತಿ ಮೇಲೆಬಿದ್ದು ನುಗ್ಗಿ ಕದನಮಾಡಿದರು. ಆದಾಗ್ಯೂ ಅವರು ಸೋತು ಹಿಮ್ಮೆಟ್ಟಿ ಹೋಗಬೇಕಾಯಿತು. ಇವರಲ್ಲಿ ಅನೇಕರು ಗಾಯಪಟ್ಟರು, ಬಹು ಜನ ಕೊಲೆಯಾದರು. 350 ಮಂದಿ ಕೈಸೆರೆ ಹಿಡಿಯಲ್ಪಟ್ಟರು.

ಗಗನಮಾರ್ಗದಲ್ಲಿ ವಿಮಾನಯಂತ್ರಗಳು ಸಂಧಿಸಿ ಕದನಗಳನ್ನು ನಡಿಸಿದವು. ಫ್ರೆಂಚರು ಒಂದು ವಿಮಾನಯಂತ್ರವನ್ನು ಅದರೊಳಗಿದ್ದವರ ಕೂಡ ಕೈಸೆರೆ ಹಿಡಿದರು. ಬ್ರಿಟಿಷರು ಶತ್ರುವಿನ ಎರಡು ವಿಮಾನಯಂತ್ರಗಳನ್ನು ಕೆಳಗಿಳಿಯುವಂತೆ ಮಾಡಿ ಒಂದನ್ನು ಕೈಸೆರೆ ಮಾಡಿಕೊಂಡರು.

ಫ್ರೆಂಚರ ಸೇನಾಪತಿಯಾದ ಜನರಲ್ ಜೊಫ್ರೆಯವರು ಲಂಡನ್ ಪಟ್ಟಣಕ್ಕೆ ಹೋಗಿ ಲಾರ್ಡ್ ಕಿಚ್ಚನರ್ ಯವರ ಕೂಡ ಆಲೋಚನೆ ಮಾಡಿಕೊಂಡು ಬಂದರು. ಲಾರ್ಡ್ ಕಿಚ್ಚನರವರು ಆ ದಳಪತಿಗೆ ಔತಣವನ್ನು ಮಾಡಿದರು.

ಪೂರ್ವ ರಣರಂಗದಲ್ಲಿ.

ರೀಗಾ ಎಂಬ ತೀರಪಟ್ಟಣದ ದಕ್ಷಿಣಕ್ಕೆ ಒಂದು ಠಾಣ್ಯದಲ್ಲಿ ಮಾತ್ರ ದೊಡ್ಡ ಕದನವಾದ ಸುದ್ದಿ ಬಂದಿದೆ. ಅಲ್ಲಿ ಜರ್ಮನಿಯವರು ಐದು ಸಲ ರಷ್ಯಾದವರ ಮೇಲೆ ನುಗ್ಗಿ ಕದನಮಾಡಿ ಸೋತು ಹಿಮ್ಮೆಟ್ಟಿದರು. ಆರನೆಯ ಸಲ ಅವರು ನುಗ್ಗಿ ಕದಿವಾಡಿದ್ದರಲ್ಲಿ ಅವರಿಗೆ ರಷ್ಯಾದವರ ಕೆಲವು ಕಂದಕಗಳು ಸ್ವಾಧೀನವಾದವು. ಆದರೇನು? ಸ್ವಲ್ಪ ಹೊತ್ತಿನಲ್ಲೇ ರಷ್ಯಾದವರು ನುಗ್ಗಿ ಅವರನ್ನೆಲ್ಲಾ ಕಂದಕಗಳಿಂದ ಓಡಿಸಿಬಿಟ್ಟರು. ಜರ್ಮನಿಯವರ ಕಡೆ 40,000 ದಿಂದ 50,000 ದ ತನಕ ಸೈನ್ಯ ನಷ್ಟವಾದಂತೆ ಹೇಳಲಾಗಿದೆ. ಜರ್ಮನಿ ಸೈನ್ಯಗಳ ಮುಖ್ಯಸ್ಥರು ಬಲಾತ್ಕಾರ ಮಾಡಿ ತಮ್ಮ ಸೈನಿಕರನ್ನು ಯುದ್ಧಕ್ಕೆ ಹೊರಡಿಸಿದರಂತೆ. ಇದಲ್ಲದೆ ಇನ್ನು ಕೆಲವು ಠಾಣ್ಯಗಳಲ್ಲಿ ಸಣ್ಣ ಕದನಗಳು ನಡೆದು ರಷ್ಯಾದವರಿಗೇ ಜಯವಾಗಿರುತ್ತದೆ. ರೀಗಾ ನಗರದ ಹತ್ತಿರ ನದಿಯಲ್ಲಿರುವ ಒಂದು ದ್ವೀಪದಲ್ಲಿ ಜರ್ಮನಿ ಸೈನಿಕರು ಅಪಾರವಾಗಿ ಕೊಲೆಯಾದರೆಂದು ತಿಳಿಸಲ್ಪಟ್ಟಿದೆ. ರಷ್ಯಾದವರು ಜರ್ಮನಿಯವರಿಗೆ ಆಸೆಹುಟ್ಟಿಸಿ ಆ ದ್ವೀಪದ ಮೇಲೆ ಬರುವಂತೆ ಮಾಡಿಕೊಂಡು, ಅವರ ಮೇಲೆ ಎರಡು ಕಡೆಗಳಿಂದಲೂ ನುಗ್ಗಿ ಕದನಮಾಡಿದರು. ಜರ್ಮನಿಯ ಸೈನಿಕರ ಹೆಣಗಳು ನದಿಯ ತುಂಬಾ ನೀರಿನಲ್ಲಿ ತೇಲಿ ಹೋದವು. ಬ್ಯಾಲ್ಟಿಕ್ ಕಡಲಿನಲ್ಲಿ ಜಹಜುಗಳು ಮುಳುಗಿಸಲ್ಪಟ್ಟದ್ದರಿಂದ ಮದ್ದುಗುಂಡಿಗೆ ಅಭಾವವುಂಟಾಗಿದೆ. ಆದಕಾರಣ ಜರ್ಮನಿಯವರು ಬಿರುಸಾಗಿ ಕದನಮಾಡುವುದು ಕಡಮೆಯಾಗಿದೆ. ಚಳಿಗಾಲ ಪ್ರಾರಂಭವಾಯಿತು. ಹಿಮವು ಸುರಿಯುತ್ತಿದೆ. ರಸ್ತೆಗಳು ಹಿಮಬಿದ್ದು ಕೆಟ್ಟುಹೋಗಿವೆ. ಇದರಿಂದ ಯುದ್ಧಕಾರ್ಯಗಳು ತ್ವರಿತವಾಗಿ ನಡೆಯುವುದಕ್ಕೆ ತುಂಬಾ ಅಡಚಣೆ. ಆದಕಾರಣ ಈ ವರುಷ ಜರ್ಮನಿಯವರು ಇನ್ನು ಮುಂದಕ್ಕೆ ನುಗ್ಗಿ ಹೋಗುವುದು ಸಾಧ್ಯವೆಂದು ಊಹಿಸಲಾಗದು. ಬಹಳ ಕಷ್ಟಪಡಬೇಕಾಗಿರುವುದನ್ನು ನೋಡಿ ಆಸ್ಟ್ರಿಯಾ ಸೈನಿಕರು ಯುದ್ಧಭೂಮಿಯಿಂದ ಹೇಳದೆಕೇಳದೆ ಹೊರಟು ಹೋಗುತ್ತಿರುವಂತೆ ವರ್ತಮಾನ ಬಂದಿದೆ.

ಬ್ರಿಟಿಷ್ ಮತ್ತು ರಷ್ಯಾ ಸಬ್‌ಮೆರೀನುಗಳೆಂಬ ಜಲಯಂತ್ರಗಳು ಬ್ಯಾಲ್ಟಿಕ್ ಕಡಲಿನಲ್ಲಿ ಬಹಳ ಚಟುವಟಿಕೆಯಾಗಿ ಕಾರ್ಯಗಳನ್ನು ನಡಿಸುತ್ತಲಿವೆ. ಅವು ಐದು ಜಹಜುಗಳನ್ನು ಕೈಸೆರೆ ಹಿಡಿದವು. ಒಂದರಲ್ಲಿ ದಬ್ಬರು ಭರ್ತಿಯಾಗಿತ್ತು. ಆ ಐದನ್ನೂ ರಷ್ಯಾ ತೀರಪಟ್ಟಣಕ್ಕೆ ಎಳೆದುಕೊಂಡು ಹೋಗಿ ಇಟ್ಟುಕೊಂಡಿದ್ದಾರೆ. ಇದಲ್ಲದೆ ಶತ್ರುವಿನ ನಾಲ್ಕು ಜಹಜುಗಳನ್ನು ಮುಳುಗಿಸಿ, ಒಂದನ್ನು ಜಾಖಮ ಮಾಡಿರುತ್ತವೆ. ಜರ್ಮನಿಯ ಆರು ಜಹಜುಗಳು ಓಡಿಹೋಗಿ ಸ್ವೀಡನ್ ತೀರಪಟ್ಟಣಗಳಲ್ಲಿ ಆಶ್ರಯ ಹೊಂದಿ ನಿಂತುಬಿಟ್ಟವು. ಈ ಜಹಜುಗಳೆಲ್ಲಾ ಬ್ರಿಟಿಷ್ ಸಬ್‌ಮೆರೀನುಗಳು ಬಾರದಂತೆ ಬಾಲ್ಟಿಕ್ ಕಡಲನ್ನು ಉಸ್ತುವಾರಿ ಮಾಡುತ್ತವೆ ಎಂದು ಜರ್ಮನಿಯವರು ನಂಬಿಕೊಂಡಿದ್ದರು. ಇವಕ್ಕೆಲ್ಲಾ ಸಂಭವಿಸಿದ ದುರ್ದೆಸೆಯನ್ನು ಕೇಳಿ ಜರ್ಮನಿಯವರು ಅವುಗಳ ವಿಷಯದಲ್ಲಿ ಆಗ್ರಹಪಡುತ್ತಿದ್ದಾರೆ.—ಜರ್ಮನಿಯವರು ತಾಂಬ್ರವಿಲ್ಲದೆ ಕೀಲ್ ನಗರದಲ್ಲಿರುವ ಟ್ರಾಮ್ ರಸ್ತೆಗಳನ್ನು ಕಿತ್ತುಹಾಕುತ್ತಿದ್ದಾರೆಂದು ಪತ್ರಿಕೆಗಳು ತಿಳಿಸುವವು. ವಿಲ್ನಾ ನಗರದಲ್ಲಿ ಜರ್ಮನಿಯವರು ಸಿಕ್ಕಿದ ತಾಂಬ್ರವನ್ನೆಲ್ಲಾ ಕೂಡಿಸಿದ್ದಾಯಿತು. ಬಳಿಕ ದೇವಾಲಯಗಳಿಗೆ ನುಗ್ಗಿ ಸಿಕ್ಕಿದವುಗಳನ್ನೆಲ್ಲಾ ಕದಿಯಲಾರಂಭಿಸಿದರು. ಇದನ್ನು ನೋಡಿ ಪ್ರಜೆಗಳು ಸಹಿಸದೆಹೋದರು. ಜನಗಳಿಗೂ ಸೈನಿಕರಿಗೂ ಬೀದಿಗಳಲ್ಲೆಲ್ಲಾ ಎರಡು ದಿನ ಕದನಗಳಾದವು. ಸಿಡಿಮದ್ದಿನ ಗುಂಡುಗಳೂ ಪ್ರಯೋಗಿಸಲ್ಪಟ್ಟವು.

ಇಟಲಿ.

ಇಟಲಿಯವರು ಕ್ರಮೇಣ ಮುಂದರಿಸಿ ನುಗ್ಗಿ ಹೋಗುತ್ತಲೇ ಇದ್ದಾರೆ. ಅವರು ಶತ್ರುವಿನ ಕೋಟೆಗಳನ್ನೂ ಕಂದಕಗಳನ್ನೂ ಸೈನಿಕರನ್ನೂ ಸ್ವಾಧೀನಪಡಿಸಿಕೊಳ್ಳುತ್ತಿರುವರು. ಆಸ್ಟ್ರಿಯಾದವರ ಕಡೆ ಕೊಲೆಯಾದವರೂ ಗಾಯಪಟ್ಟವರೂ 8,000 ಮಂದಿ ಆಗಬಹುದು. ಇವರಲ್ಲಿ ರಾಜ ಮನೆತನದವರು ಒಬ್ಬರೂ, ಇಬ್ಬರು ದಳಪತಿ (ಜನರಲ್) ಗಳೂ ಸೇರಿ ಹೋಗಿದ್ದಾರೆ. ಒಂದು ವಾರದಲ್ಲಿ ಇಟಲಿಯವರು 5,084 ಸೈನಿಕರನ್ನೂ 26 ಫಿರಂಗಿಗಳನ್ನೂ ಅನೇಕ ಬಂದೂಕುಗಳನ್ನೂ ಅಪಾರ ಮದ್ದು ಗುಂಡುಗಳನ್ನೂ ಕಿತ್ತು ಸ್ವಾಧೀನಪಡಿಸಿಕೊಂಡರು. ಮೋಸಪಡಿಸಿ ಕೊಲ್ಲಬೇಕೆಂದು ಒಂದು ಕಡೆ ಆಸ್ಟ್ರಿಯಾದವರು ಇಟಲಿ ಸೈನಿಕರಿಗೆ ಶರಣಾಗತರಾಗುತ್ತೇವೆಂದು ಹೇಳಿ ಕಳುಹಿಸಿದರು. ಇಟಲಿಯವರು ಆ ಕೃತ್ರಿಮವನ್ನು ತಿಳಿದು ಗುಂಡು ಹೊಡೆದು ಆಸ್ಟ್ರಿಯಾದವರನ್ನು ಕೊಂದುಬಿಟ್ಟರು. ಆಸ್ಟ್ರಿಯಾದವರ 300 ಹೆಣಗಳು ಹರಡಿದಂತೆ ಬಿದ್ದಿದ್ದುವು.

ಆಸ್ಟ್ರಿಯಾದವರ ವಿಮಾನಯಂತ್ರಗಳು ಇಟಲಿಯ ದೊಡ್ಡ ಪಟ್ಟಣವಾದ ವೆನಿಸ್ ನಗರದ ಮೇಲೆ ಎರಡಾವರ್ತಿ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ವಿಶೇಷ ನಷ್ಟವೇನೂ ಆಗಲಿಲ್ಲ. ಒಂದು ದೇವಾಲಯ ಮಾತ್ರ ಸ್ವಲ್ಪ ಕೆಟ್ಟುಹೋಯಿತು. ಮೂರು ಜನರಿಗೆ ಗಾಯಗಳಾದವು.

ಮೆಡಿಟರೇನ್ಯನ್ ಕಡಲಿನ ಪೂರ್ವ ಭಾಗದಲ್ಲಿ ಹೋಗುತ್ತಿದ್ದ ಇಟಲಿಯ ಪ್ರಯಾಣಿಕರ ಒಂದು ಜಹಜನ್ನು ಎಚ್ಚರಿಕೆ ಕೊಡದೇನೇ ಟಾರ್ಪೀಡೋದಿಂದ ಬಡಿಸಿ ಮುಳುಗಿಸಿರುತ್ತಾರೆ.

ಬಾಲ್ಕನ್ ಸಂಸ್ಥಾನಗಳು.

ಬಾಲ್ಕನ್ ಸಂಸ್ಥಾನಗಳಿಂದ ಬಂದಿರುವ ವರ್ತಮಾನಗಳು ಸ್ಪಷ್ಟವಾಗಿಲ್ಲ. ಉತ್ತರದಿಕ್ಕಿನಲ್ಲಿ ಸರ್ಬಿಯದವರು ನಿಧಾನವಾಗಿ ಹಿಮ್ಮೆಟ್ಟಿ ಹೋಗುತ್ತಿರುವಂತೆ ಕಾಣುತ್ತದೆ. ದಕ್ಷಿಣ ಭಾಗದಲ್ಲಿ ಸರ್ಬಿಯದವರೂ ಮಿತ್ರಮಂಡಲಿಯವರೂ ಸೇರಿ ಬಲ್ಗೇರಿಯದವರನ್ನು ಹಿಂದಕ್ಕೆ ಓಡಿಸುತ್ತಿದ್ದಾರೆ. ಮತ್ತು ಕೆಲವು ಗ್ರಾಮಗಳನ್ನೂ ಅವರಿಂದ ಮತ್ತೆ ಗೆದ್ದುಕೊಂಡರು. ಮಳೆಯ ಕಾಟ ಬಹಳ ಹೆಚ್ಚಾಗಿರೋಣದರಿಂದ ಯುದ್ಧಕಾರ್ಯಗಳು ಜರುಗುವುದು ಕಷ್ಟವಾಗಿದೆ.

ಮಿತ್ರಮಂಡಲಿಯವರ ಜಹಜುಗಳು ಹೋಗಿ ದಕ್ಷಿಣದಿಕ್ಕಿನಲ್ಲಿ ಬಲ್ಗೇರಿಯಾ ತೀರಕ್ಕೆ ಗುಂಡುಗಳನ್ನು ಸುರಿಸುತ್ತಲಿವೆ. ಒಂದರಿಂದ ಏಳು ಗಂಟೆಯ ತನಕ 20 ಯುದ್ಧದ ಜಹಜುಗಳು ದಿಡಿಯಾಗಚ್ ಎಂಬ ಪಟ್ಟಣಕ್ಕೆ ಗುಂಡುಗಳನ್ನು ಹಾಕಿದವು. ಒಳಗಿದ್ದ ಸೈನಿಕರ ಮನೆಗಳು ನಾಶವಾದವು; 1,000 ಸೈನಿಕರು ಕೊಲೆಯಾದರು ಇಲ್ಲವೇ ಗಾಯಪಟ್ಟರು. ರೈಲ್ವೆ ಸ್ಟೇಷನ್ ಸುಟ್ಟುಹೋಯಿತು. ಮದ್ದು ಭರ್ತಿಯಾಗಿದ್ದ ಅನೇಕ ವ್ಯಾಗನ್ ಬಂಡಿಗಳು ನಾಶವಾದಲ್ಪಟ್ಟವು. ಎತ್ತರವಾದ ಕಟ್ಟಡಗಳ ಪೈಕಿ ಉಳುಕೊಂಡದ್ದು ದೇವಾಲಯ ಒಂದೇ. ಯುದ್ಧದ ಜಹಜುಗಳು ತೀರದಲ್ಲಿರುವ ಇನ್ನೊಂದು ಪಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಅವರೊಳಗೆ ಗಾಯಪಟ್ಟವರೂ ಕೊಲೆಯಾದವರೂ ಸೈನಿಕರೇ ಸಾವಿರಕ್ಕಿಂತ ಹೆಚ್ಚು. ರಷ್ಯಾದವರು ವಾರ್ನ, ಬರ್ಗಾಸ್ ಎಂಬ ಪಟ್ಟಣಗಳಿಗೆ ಎರಡಾವರ್ತಿ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಜಹಜು ನಿಲ್ಲುವ ರೇವು ಸ್ಥಳಗಳನ್ನು ಹಾಳುಮಾಡಿರುತ್ತಾರೆ. ಇದಲ್ಲದೆ ಅವರು ಜರ್ಮನಿಯ ಒಂದು ಸಬ್‌ಮೆರೀನನ್ನು ಹಿಡಿದುಬಿಟ್ಟರು. ಈಗ ರಷ್ಯಾದವರು ಅಲ್ಲಿ ಇಳಿಸುವುದಕ್ಕೆ ಸೈನ್ಯಗಳನ್ನು ತರುತ್ತಿರುವಂತೆ ಹೇಳಲಾಗಿದೆ.

ಬ್ರಿಟಿಷ್ ಸಬ್‌ಮೆರೀನು ಮಾರ್ಮೊರಾ ಕಡಲಿನಲ್ಲಿ ಆಹಾರ ಮತ್ತು ಯುದ್ಧಸಾಮಗ್ರಿಗಳು ಭರ್ತಿಯಾಗಿದ್ದ ಟರ್ಕಿ ಜಹಜನ್ನು ಮುಳುಗಿಸಿತು. ಮತ್ತು ಆಸ್ಟ್ರಿಯಾದ ಒಂದು ಹಡಗು ಮುಳುಗಿಸಲ್ಪಟ್ಟಿದೆ.

ಗ್ರೀಸಿನಲ್ಲಿ ಸದ್ಯ ನೆಮ್ಮದಿಯುಂಟಾಗಿಲ್ಲ. ಲಾರ್ಡ್ ಲ್ಯಾನ್ಸ್‌ಡೌನ್ ರವರು ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಗ್ರೀಸ್ ವಿಚಾರವನ್ನು ಕುರಿತು ಹೇಳಿದ ಅಭಿಪ್ರಾಯವೇನೆಂದರೆ—ಗ್ರೀಸಿನ ಮಾಜಿ ಮಂತ್ರಿಯಾಗಿದ್ದ ಎಂ. ವೆನಿಜೆಲಸ್ ಎಂಬಾತನು ಅಧಿಕಾರದಲ್ಲಿದ್ದಾಗ್ಗೆ ಆತನ ಅಪೇಕ್ಷೆಯ ಪ್ರಕಾರ ಮಿತ್ರಮಂಡಲಿಯವರು ಸೈನ್ಯಗಳನ್ನು ಕಳುಹಿಸಿ ಸಲೊನೀಕಾ ತೀರಪಟ್ಟಣದಲ್ಲಿ ಇಳಿಸಿದರು. ಈಚೆಗೆ ಆ ಮಂತ್ರಿಯು ಕೆಲಸ ಬಿಟ್ಟನು. ಈಗ ಗ್ರೀಸ್ ರಾಜ್ಯದ ಮನೋಭಾವವು ಬದಲಾಯಿತು. ಮಿತ್ರಮಂಡಲಿಯವರ ಸೈನ್ಯಗಳನ್ನು ಅಲ್ಲಿ ಇಳಿಸಬಾರದಾಗಿತ್ತೆಂದು ಆಕ್ಷೇಪಣೆ ಮಾಡಿತು. ಗ್ರೀಸ್ ಸೈನ್ಯಗಳು ಮಿತ್ರಮಂಡಲಿಯವರ ಮೇಲೆ ಬಿದ್ದು ಅವರನ್ನು ಓಡಿಸುತ್ತವೆಂದು ಜರ್ಮನಿಯು ವರ್ತಮಾನ ಹುಟ್ಟಿಸಿದೆ. ಗ್ರೀಸಿನವರು ಇದು ನಿಜವಲ್ಲವೆಂದು ಹೇಳಿದ್ದಾರೆ; ಮತ್ತು ಸರ್ಬಿಯಾಕ್ಕೆ ಸಹಾಯಮಾಡಲು ಸಿದ್ಧರಾಗಿದ್ದೇವೆಂದೂ ಒಪ್ಪಿರುವರು. ಜರ್ಮನಿಯವರು ಫ್ರಾನ್ಸಿನಲ್ಲಾಗಲಿ ರಷ್ಯಾದಲ್ಲಾಗಲಿ ಮುಂದರಿಸಿ ನುಗ್ಗಿಹೋಗಲಾರದೆ ಸರ್ಬಿಯಾ ರಾಜ್ಯದೊಳಗೆ ನುಗ್ಗಿಹೋಗೋಣವೆಂದು ಪ್ರಯತ್ನಪಡುತ್ತಿದ್ದಾರೆ. ಗ್ರೀಸ್ ಸೈನ್ಯದ ಸಹಾಯ ದೊರಕದೆಹೋದಾಗ್ಯೂ, ಲಕ್ಷ್ಯಮಾಡದೆ ಮಿತ್ರಮಂಡಲಿಯವರು ಜರ್ಮನಿಯವರನ್ನು ಆ ಮಾರ್ಗವಾಗಿ ಬಿಡದಂತೆ ತಡೆಯುತ್ತಾರೆ. ಈಗಾಗಲೇ ಸಲೊನೀಕಾದಲ್ಲಿ ಬ್ರಿಟಿಷ್ ಸೈನ್ಯ 13,000 ಹೋಗಿದೆ; ಇನ್ನೂ ಹೊಸ ಸೈನ್ಯಗಳು ಕಳುಹಲ್ಪಡುತ್ತವೆ. ಗ್ರೀಸ್ ರಾಜ್ಯವು ಬಲಾತ್ಕಾರವಾಗಿ ಮಿತ್ರಮಂಡಲಿಯವರ ಕೂಡ ಸೇರಿಕೊಳ್ಳಬೇಕಾದೀತೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಬ್ರಿಟನ್ನವರು ಸೈಪ್ರಸ್ ದ್ವೀಪವನ್ನು ಕೊಡುವುದಾಗಿ ಗ್ರೀಸಿಗೆ ಹೇಳಿಕಳುಹಿಸಿದ್ದರು. ಈಗ ಈ ಆಸೆ ಗ್ರೀಸಿಗೆ ನಿರಾಸೆಯಾಯಿತು.

ಆಫ್ರಿಕಾದಲ್ಲಿ.

ಈಚೆಗೆ ಆಫ್ರಿಕಾದಿಂದ ಬಂದಿರುವ ವರ್ತಮಾನ ಬಹಳ ಸ್ವಲ್ಪ. ಪಶ್ಚಿಮ ಪ್ರಾಂತ್ಯದಲ್ಲಿ ಬೆಲ್ಜಿಯನ್ನರು ಜರ್ಮನಿಯವರ ಮೇಲೆ ನುಗ್ಗಿ ಮುತ್ತಿಗೆ ಹಾಕಿದರು. ಜರ್ಮನಿಯವರು ತಮ್ಮ ಮೆಷೀನ್ ಫಿರಂಗಿ, ಬಂದೂಕುಗಳು, ಮದ್ದುಗುಂಡು ಮುಂತಾದವುಗಳನ್ನೆಲ್ಲಾ ಬಿಟ್ಟು ತಲೆತಪ್ಪಿಸಿಕೊಂಡು ಓಡಿಹೋದರು.

ಬ್ರಿಟಿಷ್ ಪೂರ್ವ ಆಫ್ರಿಕಾದಲ್ಲಿ ಜರ್ಮನಿಯವರ ದೇಶೀಯ ಸೈನ್ಯಗಳು ಒಂದು ಕಡೆ ತಮ್ಮ ಎಲ್ಲೆಯನ್ನು ದಾಟಿ ಬಂದಿರಬಹುದೆಂದು ಕಾಣುತ್ತದೆ. ಬ್ರಿಟಿಷರು ಅದನ್ನು ನೋಡಿಕೊಳ್ಳುತ್ತಾರೆ.

ಇತರ ವಿಷಯಗಳು.

ಟರ್ಕಿಯವರು ಅರ್ಮೀನಿಯಾ ಪ್ರಜೆಗಳನ್ನು ಹಿಂಸಿಸಿ ಕೊಂದುಹಾಕುತ್ತಿರುವ ವಿವರಗಳನ್ನು ಕೇಳಿದರೆ ಅತ್ಯಂತ ಆಕ್ರೋಶವೂ ಅಸಹ್ಯವೂ ಉಂಟಾಗುವುದು. ಆಸ್ಯ ಮೈನರಿನಲ್ಲಿ ಟರ್ಕಿಯವರು 24,000 ಅರ್ಮೀನಿಯಾದವರನ್ನು ಹಿಡಿದು ಸೆರೆಮನೆಗೆ ಹಾಕಿಸಿದರು. ಬಳಿಕ ಅವರಲ್ಲಿ ಗಂಡಸರನ್ನು ಗುಂಪುಗುಂಪಾಗಿ ಹಿಡಿದುಕೊಂಡು ಕೊಂದುಹಾಕಿದರು. ಹೆಂಗಸರುಮಕ್ಕಳನ್ನು ಅನ್ನ ಬಟ್ಟೆ ಇಲ್ಲದಂತೆ ನರಳಿಸಿ, ಹೆಂಗಸರನ್ನು ಬಲಾತ್ಕಾರವಾಗಿ ಮುಸಲ್ಮಾನ್ ಮತಕ್ಕೆ ಸೇರಿಸಿಕೊಳ್ಳುವದಕ್ಕೆ ಪ್ರಯತ್ನಿಸಿದರು. ತಿರಸ್ಕಾರ ಮಾಡಿದಂಥಾ ಸ್ತ್ರೀಯರನ್ನು ಅವರ ಮಕ್ಕಳೆದುರಿನಲ್ಲಿ ಶೂಲಕ್ಕೆ ಹಾಕಿಸಿದರು. ಮಕ್ಕಳನ್ನು ಹಿಡಿದು ಜೀತಕ್ಕೆ ಮಾರಿಬಿಟ್ಟರು. ಅವರ ಗುರುವಾದ ಬಿಷಪ್ಪನನ್ನು ಹಿಡಿದು ಕುದುರೆಗೆ ಲಾಳಕಟ್ಟುವಂತೆ ಆತನ ಕಾಲಿಗೆ ಲಾಳಗಳನ್ನು ಹೊಡೆದು ಹಿಂಸೆಪಡಿಸಿದರು. ಫ್ರೆಂಚ್ ಹಡಗುಗಳು ಹೋಗಿದ್ದು ಅಲ್ಲಿಂದ ಅನೇಕ ತಬ್ಬಲಿಗಳಾಗಿ ಅಲೆಯುತ್ತಿದ್ದ ಅರ್ಮೀನಿಯಾದವರನ್ನು ಪೋರ್ಟ್ ಸಯಿದ್ ಎಂಬ ತೀರಪಟ್ಟಣಕ್ಕೆ ಕರೆದುತಂದಿದ್ದಾರೆ.

ಅಮೇರಿಕದಲ್ಲಿ ಜರ್ಮನಿಯವರು ಅಲ್ಲಿಂದ ಹೊರಡುವ ಹಡಗುಗಳಲ್ಲಿ ಗುಟ್ಟಾಗಿ ಸಿಡಿಮದ್ದಿನ ಗುಂಡುಗಳನ್ನಿಟ್ಟು ಅವು ಸ್ವಲ್ಪ ದೂರ ಹೋಗುವಷ್ಟರಲ್ಲೇ ಒಡೆದು ಹಡಗನ್ನು ನಾಶಮಾಡುವಂತೆ ಪಿತೂರಿ ಮಾಡುತ್ತಿದ್ದಾರೆ. ಅಂಥಾ ದುರಾತ್ಮರು ನಾಲ್ಕೈದುಮಂದಿ ಆಗಲೇ ಸಿಕ್ಕಿಬಿದ್ದಿರುವರು.

ಜರ್ಮನಿಯವರೇ ಪ್ರಕಟಮಾಡಿರುವ ಲೆಕ್ಕಗಳಪ್ರಕಾರ ಅವರ ಕಡೆ ಪ್ರಷ್ಯಾದವರೇ 20,21,078 ಸೈನಿಕರು ನಷ್ಟವಾಗಿದ್ದಾರೆ. ಇದಲ್ಲದೆ ಬವೇರಿಯ, ಸಾಕ್ಸನಿ ಮೊದಲಾದ ಜರ್ಮನಿ ಅಧಿಪತ್ಯಗಳ ಲಕ್ಷಾಂತರ ಪ್ರಜೆಗಳೂ ಲಯವಾಗಿರುವರು.

ಬ್ರಿಟಿಷ್ ಸೈನ್ಯಗಳಲ್ಲಿ ಕಳೆದ ಅಕ್ಟೋಬರ್ ತಾ. 9 ರವರೆಗೆ ನಷ್ಟವಾದ ಸೈನ್ಯಗಳ ಸಂಖ್ಯೆ ಪ್ರಕಟವಾಗಿದೆ. ಒಟ್ಟು 4,93,294 ಜನ ನಷ್ಟವಾದರು, ಈ ಪೈಕಿ ಕೊಲೆಯಾದವರು 1,01,652, ಗಾಯಪಟ್ಟವರು 3,17,465, ಸಿಕ್ಕದೆ ಇರುವವರು 74,179 ಈ ಪೈಕಿ ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ 3,65,046 ಸೈನಿಕರು ನಷ್ಟವಾಗಿದ್ದಾರೆ.—ಗ್ರೇಟ್ ಬ್ರಿಟನ್ನಲ್ಲಿ ಹಿಂದೆ ಯಾವಾಗಲೂ ಇಲ್ಲದಷ್ಟು ಜನರು ತಾವಾಗಿಯೇ ಬಂದು ಸೈನ್ಯಕ್ಕೆ ಸೇರಿಕೊಳ್ಳುತ್ತಿದ್ದಾರೆ. ನಷ್ಟವಾಗುವ ಸೈನ್ಯಗಳಿಗೆ ಪ್ರತಿಯಾಗಿ ವಾರ ಒಂದಕ್ಕೆ 30,000 ಹೊಸ ಸೈನ್ಯಗಳು ಸಿದ್ಧವಾಗಿ ಒದಗಬೇಕು. ಜರ್ಮನಿಯವರಿಂದ ಕಿತ್ತುಕೊಂಡಂಥಾ 22 ಫಿರಂಗಿಗಳನ್ನು ಲಂಡನ್ ಪಟ್ಟಣಕ್ಕೆ ತಂದು ಪ್ರದರ್ಶನಮಾಡಿದ್ದಾರೆ. ಸಾವಿರಾರು ಪ್ರಜೆಗಳು ಹೋಗಿ ಅವನ್ನು ನೋಡಿ ಬರುತ್ತಿರುವರು.

ಫ್ರಾನ್ಸಿನ ಮಂತ್ರಿ ಸಭೆಯಲ್ಲಿ ಕೆಲವು ಬದಲಾವಣೆಗಳಾದವು. ಯುದ್ಧವನ್ನು ಇನ್ನೂ ಮಿತುವರ್ಜಿಯಿಂದಲೂ ಚಟುವಟಿಕೆಯಾಗಿಯೂ ನಡಿಸಬೇಕೆಂಬ ಉದ್ದೇಶದಿಂದಲೇ ಮಂತ್ರಿಸಭೆಯ ಮೆಂಬರುಗಳನ್ನು ಬದಲಾಯಿಸಿದರು. ರಷ್ಯಾದಲ್ಲೂ ಬ್ರಿಟನ್ನಲ್ಲೂ ಗವರ್ನ್‌ಮೆಂಟಿನ ಬದಲಾವಣೆಗಳಾಗುತ್ತಿವೆ. ಈ ಬದಲಾವಣೆಗಳಿಗೆಲ್ಲಾ ಯುದ್ಧವನ್ನು ಇನ್ನೂ ಪೌರುಷದಿಂದ ನಡಿಸಬೇಕೆನ್ನುವುದೇ ಉದ್ದೇಶ.—ಕರಾರಿನ ವರ್ತಮಾನಗಳು ನಾನಾ ಪ್ರಕಾರವಾಗಿ ಹುಟ್ಟಿ ಹರಡುತ್ತಲಿವೆ. ಇದಕ್ಕೆ ನಾವು ಗಮನಕೊಡಕೂಡದೆಂದು ತಿಳಿಸಲ್ಪಟ್ಟಿದೆ. ಮಿತ್ರಮಂಡಲಿಯವರು ಕರಾರನ್ನು ಅಪೇಕ್ಷಿಸತಕ್ಕವರಾಗಿಲ್ಲ. ಜರ್ಮನಿಯವರನ್ನು ಬೆಲ್ಜಿಯಮ್, ಫ್ರಾನ್ಸ್ ಮತ್ತು ರಷ್ಯಾ ರಾಜ್ಯಗಳಿಂದ ಹೊರಡಿಸಿದಲ್ಲದೆ ಜರ್ಮನಿಯವರು ಕರಾರಾಗಬೇಕೆಂದು ಕೇಳುವುದು ನಿಷ್ಪ್ರಯೋಜನ. ಈ ರಾಜ್ಯಗಳವರೂ ಜಪಾನ್ನವರೂ ಪ್ರತ್ಯೇಕ ಪ್ರತ್ಯೇಕವಾದ ಕರಾರುಗಳನ್ನು ಮಾಡಿಕೊಳ್ಳುವುದಿಲ್ಲವೆಂದು ಸಂಕಲ್ಪಮಾಡಿಕೊಂಡಿದ್ದಾರೆ. ಇವರೆಲ್ಲಾ ಏಕವಾಗಿ ಜರ್ಮನಿಯು ಸಂಪೂರ್ಣವಾಗಿ ಸೋತುಹೋಗುವ ತನಕ ಒಬ್ಬರಿಗೊಬ್ಬರು ಸಹಾಯ ಮಾಡುತ್ತಲೇ ಬರುವರು.

ಬೆಲ್ಜಿಯಮ್‌ನಲ್ಲಿ ಹಲವು ಸ್ತ್ರೀಯರನ್ನೂ ಪುರುಷರನ್ನೂ ಇವರು ಜರ್ಮನಿಯವರ ಮೇಲೆ ಪಿತೂರಿ ಮಾಡಿದರೆಂದೂ, ಗೂಢಚಾರರಾಗಿ ನಡೆದುಕೊಂಡರೆಂದೂ ಹಿಡಿದು ಬಂಧನದಲ್ಲಿ ಹಾಕಿಕೊಂಡಿದ್ದಾರೆ. ಈ ಪೈಕಿ 34 ಜನರಿಗೆ ಫಾಸೀ ಸಜಾ ವಿಧಿಸಿದಂತೆಯೂ, ಇವರಲ್ಲಿ 14 ಮಂದಿಯನ್ನು ಕೊಂದಿರುತ್ತಾರೆಂದೂ ಪ್ರಕಟವಾಗಿದೆ. ಇಂಗ್ಲೆಂಡಿನಲ್ಲಿ ಶತ್ರುಪಕ್ಷದ ಕೆಲವು ಗೂಢಚಾರರನ್ನು ಹಿಡಿದು ವಿಚಾರಿಸಿ ಮಾಡಿ ಇಬ್ಬರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರು.—ಲಂಡನ್ ಪಟ್ಟಣದಲ್ಲಿ ಒಂದು ಆಸ್ಪತ್ರೆಗೆ ಅಲೆಗ್ಸಾಂಡ್ರಾ ಮಹಾರಾಜ್ಞಿಯವರ ಹೆಸರಿಡಬೇಕೆಂದು ಗೊತ್ತಾಗಿತ್ತು. ಈಗ ಅದಕ್ಕೆ ಪ್ರತಿಯಾಗಿ ಬ್ರಸಲ್ಸ್ ನಗರದಲ್ಲಿ ಜರ್ಮನಿಯವರಿಂದ ಕೊಲ್ಲಲ್ಪಟ್ಟ ಮಿಸ್ ಕೆವೆಲ್ ಎಂಬ ಪರಹಿತಕಾರಿಣಿಯ ಹೆಸರನ್ನು ಆಸ್ಪತ್ರೆಗೆ ಇಟ್ಟರು.

ಬ್ರಿಟಿಷರ ಒಂದು ಯುದ್ಧದ ಜಹಜು ಸ್ಕಾಟ್ಲೆಂಡಿನ ಪೂರ್ವ ತೀರದಲ್ಲಿ ವೇಗವಾಗಿ ಬಂದು ನೆಲದ ಮೇಲೆ ನಿಂತುಬಿಟ್ಟಿತು. ಅದರಲ್ಲಿದ್ದ ಹುದ್ದೇದಾರರನ್ನೂ ಸೈನಿಕರೇ ಮೊದಲಾದವರನ್ನೂ ಬದುಕಿಸಿದರು. ಆದರೆ ಜಹಜು ಹಾಳಾಯಿತೆಂಬ ಸಂಶಯವುಂಟಾಗಿದೆ.—ಅಕ್ಟೋಬರ್ ತಾ. 26 ರಲ್ಲಿ ಒಂದು ಸಣ್ಣ ಬ್ರಿಟಿಷ್ ಹಡಗು ಗಲ್ಲಿಪೋಲಿ ಅರ್ಧ ದ್ವೀಪದ ಬಳಿ ಸಮುದ್ರವನ್ನು ಶೋಧನೆ ಮಾಡುತ್ತಾ, ಅದರೊಳಗಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತೆಗೆದುಹಾಕುತ್ತಿದ್ದಾಗ ಅದು ಒಂದು ಯುದ್ಧದ ಜಹಜಿಗೆ ಬಡಿದು ಮುಳುಗಿಹೋಯಿತು. ಅದರೊಳಗಿದ್ದ ಇಬ್ಬರು ಹುದ್ದೇದಾರರೂ, 143 ಸೈನಿಕರೂ, 10 ಮಂದಿ ಇತರರೂ ಸಮುದ್ರದಲ್ಲಿ ಮುಳುಗಿ ಕಾಲವಾದರು.

ಒಳದೇಶದ ವೃತ್ತಾಂತಗಳು.

ದಿವಾನ್‌ರೂ ಕೌನ್ಸಿಲರುಗಳೂ ಇನ್ನೂ 3-4 ದಿನ ರಾಜಧಾನಿಯಲ್ಲೇ ಇದ್ದು ಬಳಿಕ ಬೆಂಗಳೂರಿಗೆ ಪ್ರಯಾಣ ಮಾಡುವವರಾಗಿದ್ದಾರೆ.

ಕಳೆದ ಗುರುವಾರ ಹರಿಹರದಲ್ಲಿ ಸರ್ಕಾರಿ ನೌಕರರೂ ಪ್ರಜೆಗಳೂ ಮ॥ ಚೊಕ್ಕಣ್ಣನವರಿಗೂ, ಮ॥ ಸರ್ ಆನಂದರಾಯರಿಗೂ ದಿವ್ಯವಾದ ಔತಣವನ್ನು ಮಾಡಿ ಸತ್ಕರಿಸಿ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು.

ಗುಬ್ಬಿಯಲ್ಲಿ ಕಳೆದ ತಾ 27 ನೇ ಬುಧವಾರ ಬೆಳಗ್ಗೆ ಶೀಬಿಗೌಡರ ಹೊಸ ಕಟ್ಟಡವು ಆಕಸ್ಮಾತ್ತಾಗಿ ಕುಸಿದು ಪಕ್ಕದ ಮನೆಯಲ್ಲಿ ಮಲಗಿದ್ದ 25-16 ವಯಸ್ಸಿನ ಗಂಡಹೆಂಡರಿಬ್ಬರು ಏಕಕಾಲದಲ್ಲಿ ಮೃತಪಟ್ಟರೆಂದೂ, ಅಧಿಕಾರಿಗಳು ನೋಡಿ ಮಹಜರಿನಿಂದ ದಫನ್‌ಗೆ ಅಪ್ಪಣೆ ಕೊಟ್ಟರೆಂದೂ ತಿಳಿದು ಬಂದಿದೆ.

ಮದ್ದೂರು ರೈಲ್ವೆ ಸ್ಟೇಷನ್ನಿಂದ 6-7 ಮೈಲಿ ದೂರದಲ್ಲಿರುವ ಹೊನ್ನಲಗೆರೆ ಗ್ರಾಮದ ಹತ್ತಿರ ಕೋಳಿರಾಯ ದುರ್ಗವೆಂಬ ಗುಡ್ಡಗಳಲ್ಲಿ 10-12 ಚಿರತೆಗಳು ಸೇರಿಕೊಂಡು ದನ ಕುರಿ ಕತ್ತೆಗಳನ್ನು ಎತ್ತಿಕೊಂಡು ಹೋಗಿ ತುಂಬಾ ಭೀತಿಯನ್ನೂ, ನಷ್ಟವನ್ನೂ ಉಂಟುಮಾಡುತ್ತಿರುವವೆಂದೂ, ಕಳೆದ ವಾರ ಒಬ್ಬ ಹುಡುಗನನ್ನು ಪರಚಿ ಅವನು ಬದುಕುವುದೇ ಕಷ್ಟವಾಗಿದೆ ಎಂದೂ ಒಬ್ಬ ಖಾತೆದಾರರು ಬರೆದಿದ್ದಾರೆ.

ಕಳೆದ ತಾ. 26 ನೇ ಮಂಗಳವಾರ ರಾಜಧಾನಿಯ ನಜರ್‌ಬಾದಿನಲ್ಲಿ ನರಸಿಂಹಯ್ಯನೆಂಬಾತನ 7-8 ವರುಷದ ಲಿಂಗಮ್ಮನೆಂಬ ಮಗಳು ಹೊರಗೆ ಹೋದವಳು ಮನೆಗೆ ಬರಲಿಲ್ಲ. ಬಳಿಕ ಶುಕ್ರವಾರ ಬೆಳಗ್ಗೆ ಆ ಹುಡುಗಿಯ ಶವವು ಒಂದು ತಿಪ್ಪೆಗುಂಡಿಯಲ್ಲಿ ಸಿಕ್ಕಿತು. ಸುಮಾರು 50-60 ರೂಪಾಯಿನ ಒಡವೆಗಳ ಆಸೆಗಾಗಿ ಯಾರೋ ಆ ಮಗುವನ್ನು ಕೊಂದುಹಾಕಿದ್ದಾರೆ. ಈಚೆಗೆ ಸಂಜೆ ಹೊತ್ತಿನಲ್ಲಿ ಅದೇ ಮೊಹಲ್ಲೆಯಿಂದ ಅಕ್ಕಿ ಗೂಡೆ ಹೊತ್ತು ತರುತ್ತಿದ್ದ ಒಬ್ಬ ಹುಡುಗಿಯನ್ನು ರಸ್ತೆಯಲ್ಲಿ ಯಾವನೋ ತಡೆದು ಅಶ್ಲೀಲ ವಾಕ್ಯಗಳನ್ನು ಹೇಳಿದನಂತೆ. ಪೊಲೀಸಿನವರ ಭೀತಿ ರಾಜಧಾನಿಯಲ್ಲಿ ಸಡಿಲವಾಗಿರುವಂತೆ ಕಾಣುವುದು.

ವ್ಯವಸಾಯ ಇಲಾಖಾ ನೋಟೀಸು.

ಕಾಫೀಗಿಡಕ್ಕೆ ಬೀಳುವ ಹಸರು ತಿಗಣೆ.

ಸಂಸ್ಥಾನದ ಅನೇಕ ಕಡೆಗಳಲ್ಲಿರುವ ಕಾಫೀ ತೋಟಗಳಲ್ಲಿ ಹಸರು ತಿಗಣೆಯು ಕಾಣಿಸಿಕೊಳ್ಳುತ್ತಿರುವುದೆಂಬ ಸಮಾಚಾರವು ವ್ಯವಸಾಯದ ಇಲಾಖೆಗೆ ತಿಳಿದು ಬರುತ್ತಿದೆ. ಇದರ ಹಾವಳಿಯು ಹೆಚ್ಚದಂತೆ ಮಾಡುವುದಕ್ಕೆ ತಕ್ಕ ಚಿಕಿತ್ಸೆಯನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಪ್ರಾರಂಭಿಸಬೇಕೆಂಬುವುದು ತೋಟದ ಮಾಲೀಕರುಗಳಿಗೆಲ್ಲಾ ತಿಳಿದ ವಿಷಯವೇ. ಒಂದು ವಿಧವಾದ ಬೂಷ್ಟು (Fungus) ಈ ತಿಗಣೆಗಳನ್ನು ನಾಶಮಾಡುವುದರಲ್ಲಿ ಸಹಕಾರಿಯಾಗಿರುವುದೆಂದು ಕಳೆದ ಸಾಲಿನಲ್ಲಿ ಮಾಡಿದ ಅಜಮಾಯಿಷಿಗಳಿಂದ ತಿಳಿದು ಬಂದಿದೆ. ತಿಗಣೆಗಳು ಬಹಳವಾಗಿ ಹೆಚ್ಚುವುದಕ್ಕೆ ಮುಂಚೆ ಕಾಫೀತೋಟಗಳಲ್ಲೆಲ್ಲಾ ಒಂದು ಸಲ ದ್ರಾವಕವನ್ನು ಚಿಮುಕಿಸುವುದರಿಂದ ಇವುಗಳ ಹಾವಳಿಯು ಈಗ ಮಾತ್ರ ಕಡಮೆಯಾಗುವುದಲ್ಲದೆ ಮುಂದಿನ ವರುಷವೂ ಇವುಗಳು ಹೆಚ್ಚದಂತಾಗುವುದು. ಆದ್ದರಿಂದ ತೋಟಗಳ ಮಾಲೀಕರೆಲ್ಲರೂ ತಮ್ಮ ತಮ್ಮ ತೋಟಗಳಲ್ಲಿ ತಿಗಣೆಗಳು ಕಾಣಬಂದೊಡನೆಯೇ ದ್ರಾವಕವನ್ನು ಚಿಮುಕಿಸುವುದಕ್ಕೆ ಪ್ರಾರಂಭಿಸಬೇಕು. ಈ ಕೆಲಸವನ್ನು ಸಮರ್ಪಕವಾಗಿ ನಡಿಸುವುದಕ್ಕೆ ಬೇಕಾದ ಸಹಾಯವನ್ನು ಕೊಡುವುದಕ್ಕಾಗಿ ಹಾಸನದ ಡಿಸ್ಟ್ರಿಕ್ಟು ಸಕಲೇಶಪುರದಲ್ಲಿಯೂ, ಕಡೂರು ಡಿಸ್ಟ್ರಿಕ್ಟು ಬಾಳೆಹೊನ್ನೂರು ... ಯಲ್ಲಿಯೂ ವ್ಯವಸಾಯದ ಇಲಾಖೆಯ ಆಫೀಸರು ಇರುತ್ತಾರೆ. ಇವರ ಕೈಕೆಳಗೆ ಈ ಕೆಲಸವನ್ನು ಮಾಡುವುದಕ್ಕಾಗಿ ಬೇಕಾದ ಸಿಬ್ಬಂದಿಯನ್ನು (Fieldmen) ಅನೇಕ ಕಡೆಗಳಲ್ಲಿ ಇಷ್ಟರಲ್ಲಿಯೇ ನೇಮಿಸಲಾಗುವುದು. ದ್ರಾವಕವನ್ನು ಸರಿಯಾಗಿ ಮಾಡಿ ಉಪಯೋಗಿಸುವ ಕೆಲಸದಲ್ಲಿ ಯಾವ ವಿಧವಾದ ಸಹಾಯವು ಬೇಕಾದರೂ ಈ ಆಫೀಸರಿಗೆ ಬರೆದುಕೊಳ್ಳಬೇಕು. ದ್ರಾವಕಕ್ಕೆ ಬೇಕಾಗುವ ಔಷಧಿಯು ಸಿಕ್ಕದಿದ್ದರೆ ಇಲಾಖೆಗೆ ಬರೆದರೆ ಇದನ್ನು ಅಸಲು ಖರೀದಿಗೇನೇ ಕಳುಹಿಸುವುದಲ್ಲದೆ ಅವಶ್ಯವಿದ್ದಲ್ಲಿ ದ್ರಾವಕವನ್ನು ಮಾಡುವ ವಿಧಾನವನ್ನೂ, ಚಿಮುಕಿಸುವ ರೀತಿಯನ್ನು ಕೂಡ ಇಲಾಖೆಯ ಆಫೀಸರಿಂದ ಕಲಿಸಲ್ಪಡುವುದು. ಈ ವಿಷಯಗಳಲ್ಲಿ ಸಹಾಯವನ್ನಾಗಲಿ, ಸಲಹೆಯನ್ನಾಗಲಿ ಅಪೇಕ್ಷಿಸುವವರು ... ಯಲ್ಲಿಯೂ, ಸಕಲೇಶಪುರದಲ್ಲಿಯೂ ಇರುವ ಅಸಿಸ್ಟೆಂಟ್ ... ರವರಿಗಾಗಲಿ, ಬೆಂಗಳೂರಿನಲ್ಲಿರುವ ವ್ಯವಸಾಯದ ಇಲಾಖೆಯ ಡೈರೆಕ್ಟರಿಗಾಗಲಿ ಬರೆದುಕೊಳ್ಳಬೇಕು.

ಮೈಸೂರು ಗೆಜೆಟ್ ಸಂಗ್ರಹ.

ಟಿ ನರಸೀಪುರದ ತಾಲ್ಲೂಕು ತಲಕಾಡಿನಲ್ಲಿ ಪಂಚಲಿಂಗ ದರ್ಶನಕ್ಕೆ ನೊವೆಂಬರ್ ತಾ. 30 ರಿಂದ ಡಿಸೆಂಬರ್ ತಾ. 10 ರ ತನಕ ಪ್ಲೇಗ್ ಉಪದ್ರವವಿರುವ ಊರುಗಳಿಂದ ಬರತಕ್ಕವರನ್ನು ಬಿಡದೆ ತಡೆಯಲ್ಪಡುತ್ತೆ.

ಮದ್ದಗಿರಿ ಮುನ್ಸಿಫ್ ಮ|| ಎಂ. ಎಲ್. ಶ್ರೀಕಂಠ ಗೌಡರವರಿಗೆ ಆಗಸ್ಟು ತಾ. 26 ರಿಂದ ಒಂದು ತಿಂಗಳು ಒಂಭತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವಮೊಗ್ಗಾ ಸೆಷನ್ಸ್ ಕೋರ್ಟ್ ಹೆಡ್ ಮುನ್ಷಿ ಮ|| ಎಸ್. ರಾಮಚಂದ್ರ ಶಾಸ್ತ್ರಿಯವರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮದ್ದಗಿರಿ ಮುನ್ಸಿಫರಾಗಿ ಬದಲಿ ನೇಮಿಸಿದೆ.

ಅ|| ಜಿಯಾಲಜಿಸ್ಟ್ ಮ|| ಎ. ಎಂ ಸೇನ್ ರವರಿಗೆ ಅಕ್ಟೋಬರ್ ತಾ. 26 ರಿಂದ ಒಂದು ತಿಂಗಳು ಇಪ್ಪತ್ತೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸಬ್ ಅ|| ಜಿಯಾಲಜಿಸ್ಟ್ ಮ|| ಬಿ. ಎನ್. ವೆಂಕಟರಾಮಯ್ಯನವರು ಅವರಿಗೆ ಬದಲಿ ನೇಮಿಸಲ್ಪಟ್ಟಿದ್ದಾರೆ.

ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಮ|| ಬಿ ಡಿ ರಾಘವೇಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ|| ಸರ್ಜನ್ ಮ|| ಎಂ. ಜಗನ್ನಾಥಂ ರವರು ಅವರಿಗೆ ಬದಲಿ ನೇಮಿಸಲ್ಪಟ್ಟಿದ್ದಾರೆ.

ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಮ|| ಟಿ. ವೆಂಕಟರಾಮಯ್ಯನವರನ್ನು ಹಂಗಾಮಿಯಾಗಿ ಅ|| ಕಮಿಷನರಾಗಿ ನೇಮಿಸಿ ಶಿವಮೊಗ್ಗಾ ಸಬ್ ಡಿವಿಜನ್ ಛಾರ್ಜಿಗೆ ವರ್ಗ ಮಾಡಿದೆ. ತಾಲ್ಲೂಕು ಶಿರಸ್ತೇದಾರರಿಗೆ ಛಾರ್ಜು ವಹಿಸಿ ಹೋಗತಕ್ಕದ್ದು.

ಮ|| ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ರನ್ನು 3 ನೇ ಕ್ಲಾಸ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ಖಾಯಂ ಮಾಡಿದೆ.

ಹಿರಿಯೂರು ತಾಲ್ಲೂಕು ಸ್ಪೆಷಲ್ ಡೆಪ್ಯುಟಿ ಅಮಲ್ದಾರ್ ಮ|| ಟಿ. ನರಸಿಂಗರಾಯರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಜಗಲೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮ|| ಸಿ. ರಾಮಚಂದ್ರರಾಯರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಪೋಲೀಸ್ ಸೂಪರಿಂಟೆಂಡೆಂಟ್ ಮ|| ಆರ್. ರಾಮರಾಯರನ್ನು ಮೈಸೂರಿನಿಂದ ಕೋಲಾರ್ ಡಿಸ್ಟ್ರಿಕ್ಟಿಗೂ, ಚಳ್ಳಕೆರೆ ಸಬ್ ಡಿವಿಜನ್ ಆಫೀಸರ್ ಮ|| ಎಸ್. ನಾರಾಯಣರಾಯರನ್ನು ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡರಾಗಿಯೂ ವರ್ಗ ಮಾಡಿದೆ.

ಅ|| ಕಮಿಷನರ್ ಮ|| ಆನಂದರಾವ್ ಎಸ್. ಸಿರ್ಸಿಯವರನ್ನು ಶಿವಮೊಗ್ಗಾ ಸಬ್ ಡಿವಿಜನ್ನಿಂದ ದಾವಣಗೆರೆ ಸಬ್ ಡಿವಿಜನ್‌ಗೂ, ಮ|| ಬೋರ್ಕ್ಲ್ಯನವರನ್ನು ದಾವಣಗೆರೆಯಿಂದ ಚಳ್ಳಕೆರೆ ಸಬ್ ಡಿವಿಜನ್‌ಗೂ ವರ್ಗ ಮಾಡಿದೆ.

ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಮ|| ಎಂ. ಸದಾಶಿವರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೆರಡು ತಿಂಗಳು ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಚನ್ನರಾಯಪಟ್ಟಣದ ತಾಲ್ಲೂಕ್ ಅಮಲ್ದಾರ್ ಮ|| ಎಂ ಹೈದರಲ್ಲಿಖಾನ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಹಾಸನದ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಕೆ. ಸೂರಪ್ಪನವರು ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಫಾರೆಸ್ಟ್ ಅ|| ಕನ್ಸರ್ವೇಟರ್ ಮ|| ಜಿ ಕೃಷ್ಣಮೂರ್ತಿ ನಾಯುಡುಯವರಿಗೆ ದಸರಾ ರಜಾ ಜೊತೆಗೆ ಅಕ್ಟೋಬರ್ ತಾ 26 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ಬಿ. ಹೀರಾಸಿಂಗ್ ರವರಿಗೆ ನವರಾತ್ರಿ ರಜಾ ಜೊತೆಗೆ ಅಕ್ಟೋಬರ್ ತಾ. 26 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಡಿಸ್ಟ್ರಿಕ್ಟ್ ಖಜಾನೆಯ ಆಫೀಸರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಬೌರಿಂಗ್‌ಪೇಟೆ ತಾಲ್ಲೂಕ್ ಶಿರಸ್ತೇದಾರ್ ಮ|| ಎಂ ಎಸ್. ನಾರಾಯಣರಾಯರನ್ನು ಮಾಲೂರ್ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ದಿವಾನ್ ಬಹದೂರ್ ರಾಜಸಭಾ ಭೂಷಣ ಮ|| ಕೆ. ಪಿ. ಪುಟ್ಟಣ್ಣ ಚೆಟ್ಟಿರವರನ್ನು ನೊವೆಂಬರ್ ತಾ. 4 ರಿಂದ ಇನ್ನೆರಡು ವರುಷ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾಗಿ ನೇಮಿಸಿದೆ.

ಮುಂದೆ ಹೇಳುವ ಅಮಲ್ದಾರ್ರ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ. ಮ|| ಮಹಮದ್ ಓಬಿದುಲ್ಲಾ 1 ನೇ ಕ್ಲಾಸಿಗೆ, ಮ|| ವಿ. ಗೋಪಾಲರಾವ್ 2 ನೇ ಕ್ಲಾಸಿಗೆ, ಮ|| ಮಹಮ್ಮದ್ ಪೀರ್ 3 ನೇ ಕ್ಲಾಸ್ ಖಾಯಂ, ಮ|| ಸಿ. ಲಕ್ಷ್ಮಣರಾವ್ 4 ನೇ ಕ್ಲಾಸ್ ಖಾಯಂ.

ಕಿಂಡರ್‌ಗಾರ್ಟನ್ ಸ್ಪೆಷಲ್ ಆಫೀಸರ್ ಮಿಸ್ ಎ. ಶಾರ್ಕ್ ಯವರಿಗೆ ಒಂದು ತಿಂಗಳು ಇಪ್ಪತ್ತನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ವಿದ್ಯಾ ಇಲಾಖೆಯ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮ|| ಎಂ. ನಾರಾಯಣರಾಯರನ್ನು ಮೈಸೂರಿನಿಂದ ಚಿತ್ರದುರ್ಗಕ್ಕೆ ವರ್ಗ ಮಾಡಿದೆ.

ಮೈಸೂರು ಟ್ರೈನಿಂಗ್ ಕಾಲೇಜ್ ಅ|| ಮಾಸ್ಟರ್ ಮ|| ಎಂ ವೆಂಕಟಸುಬ್ಬಯ್ಯನವರನ್ನು ಮೈಸೂರ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರಾಗಿ ನೇಮಕ ಮಾಡಿದೆ.

ವಾರ್ತಾದಾರರಿಗೆ ನೋಟೀಸ್.

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಶಿಕಾರಿಪುರದ ವಿಷಯಗಳು.

ಅಯ್ಯಾ,—ತಮ್ಮ ಅಕ್ಟೋಬರ್ ತಾ. 21 ನೇ ಪತ್ರಿಕೆಯಲ್ಲಿ ಪ್ರಕಟವಾಗಿರುವ ಶಿಕಾರಿಪುರ ತಾಲ್ಲೂಕು ವರ್ತಮಾನದಲ್ಲಿ ನಮೂದಿಸಿರುವ ಮೇರೆಗೆ ವಾರ್ತಾದಾರರು ಪ್ರಾರಂಭದಲ್ಲಿ ಮ್ಯುನಿಸಿಪಲ್ ಸಂಬಂಧವಾದ ಕೆಲವು ವಿಷಯಗಳನ್ನು ಮತ್ತು ತಾ. 9 ನೇ ರಾತ್ರಿ ಕೋಠಿ ಮುಖಸ್ಥ ಮಂಜಪ್ಪಯ್ಯನವರ ಮನೆಯಲ್ಲಿಯೂ ಮತ್ತು ಸಬ್ ಓವರ್ಸೀರ್ ಗೋಪಾಲಸ್ವಾಮಿ ಮೊದಲಿಯಾರ್ರ ಮನೆಯಲ್ಲಿಯೂ ನಡೆದ ಚೋರಿ ವಿಷಯದಲ್ಲಿಯೂ ಪ್ರಸ್ತಾಪಿಸಿ ಕೊನೆಯಲ್ಲಿ ಪೊ. ಇನ್. ಮ|| ಹನುಮಂತನಾಯ್ಡು ರವರ ಮತ್ತು ಪೊಲೀಸು ಇಲಾಖೆಯ ಮೇಲೆ ಅಶ್ರದ್ಧೆಯ ಬಗ್ಗೆ ಆಕ್ಷೇಪಣೆ ತೋರುವಂತೆ ಅಸಂಬದ್ಧವಾಗಿ ಬರೆದಿರುವುದನ್ನು ನೋಡಿದರೆ ತುಂಬಾ ಆಶ್ಚರ್ಯವೂ ವಿಷಾದವೂ ಉಂಟಾಗುತ್ತದೆ. ಇನ್ಸ್‌ಪೆಕ್ಟರು ಕಾರ್ಯದಕ್ಷರಾಗಿಯೂ ಪುಂಡು ಜನರನ್ನು ಕಂಡು ಹಿಡಿದು ಶಿಕ್ಷಿಸುವುದರಲ್ಲಿ ತುಂಬಾ ಸಮರ್ಥರಾಗಿಯೂ, ಕುಹಕ ಜನಗಳ ಮಾತಿಗೆ ಕಿವಿಗೊಡತಕ್ಕವರಲ್ಲವಾಗಿಯೂ ಇರುವ ಸಂಗತಿ ಈ ತಾಲ್ಲೂಕಿನ ಎಲ್ಲಾ ಜನಗಳಿಗೂ ಗೊತ್ತಿದೆ. ಶಿಕಾರಿಪುರದಲ್ಲಿ ಬಹು ದಿವಸದಿಂದ ತುಂಟ ಜನರಿಗೂ ನಿಷ್ಠುರರಿಗೂ ಆಶ್ರಯಭೂತರಾಗಿರುವ ಸ್ವಾರ್ಥಪರರಾದಂಥ ಕೆಲವು ಜನರಿದ್ದು ಅವರೆಲ್ಲರು ಇನ್ಸ್‌ಪೆಕ್ಟರ ನಿಷ್ಪಕ್ಷಪಾತವಾದ ಕಾರ್ಯದಲ್ಲಿ ಯಾವ ವಿಧವಾದ ಕೀಟಲೆಗೂ ಅವಕಾಶವಿಲ್ಲದೆ ಹೋಯಿತೆಂಬ ಹೊಟ್ಟೆಕಿಚ್ಚಿನಿಂದ ತಮಗೆ ಬೇಕಾದವರನ್ನು ಹೊಗಳಿ, ಬೇಡವಾದವರನ್ನು ದೂಷಿಸಿ ಬರೆದಿರುತ್ತಾರೆ. ಇನ್ಸ್‌ಪೆಕ್ಟರು ಇಲ್ಲಿಗೆ ಬಂದಲಾಗಾಯಿತು ಯಾವ ಪುಂಡರಿಗೂ ಅವಕಾಶವಿಲ್ಲದಿದ್ದಾಗ್ಯೂ ಇವರಿಗೆ ವರ್ಗವಾದ ವಿಷಯ ಪ್ರಕಟವಾದ ಕೂಡಲೆ ಅವರ ಮೇಲೆ ಅಬದ್ಧ ಸಂಗತಿಗಳಿಂದ ಕೂಡಿದ ವಾರ್ತೆಯನ್ನು ಪ್ರಕಟಿಸುವುದಕ್ಕೆ ಪ್ರಯತ್ನಿಸಿರುವುದೇ ವಾರ್ತಾದಾರರ ಅಸೂಯೆಗೆ ನಿದರ್ಶನವಾಗಿದೆ. ಸತ್ಯವಾದಿ

ಒಂದು ಕೋಆಪರೆಟಿವ್ ಸೊಸೈಟಿಯ ವಿದ್ಯಮಾನಗಳು.

ಅಯ್ಯಾ,—ಹೊಳಲ್ಕೆರೆ ತಾಲ್ಲೂಕು ಬೆಲಗೂರು ಗ್ರಾಮದ ಸೊಸೈಟಿಯಲ್ಲಿ ಈಗ ಯಾರಿಗೂ ಸಾಲ ದೊರೆಯುವದು ಅಪರೂಪ. ಪಂಚಾಯತಿ ಮೆಂಬರುಗಳು ಏನಾದರೂ ಸುಮ್ಮನಿರುವರು. ತಿಂಗಳು ಮೀಟಿಂಗ್ ನಡೆಸದೆ ಬಹು ದಿವಸಗಳಾಯಿತು. ಸೊಸೈಟಿಯ ಬಾಗಿಲು ತಿಂಗಳಿಗೊಂದೆರಡಾವರ್ತಿ ತೆರೆಯುವದೇ ಅಪರೂಪ. ಸೆಕ್ರಟರಿ ಯಾರೆಂಬುವುದೇ ಕೆಲವು ಮೆಂಬರುಗಳಿಗೆ ತಿಳಿಯದು. ತಿಂಗಳುಕಟ್ಟಲೆ ಲೆಕ್ಕವು ಪದ್ಧತಿಯಂತೆ ರಿಜಿಸ್ಟ್ರರವರಿಗೆ ಕಳುಹಿಸುತ್ತಿಲ್ಲ. ಡಿಪಾಜಿಟ್‌ದಾರ್ರಿಗೆ ವಾಯಿದೆಗೆ ಹಣ ವಾಪಸು ಕೊಡುವದೇ ಇಲ್ಲ. ಮರಣಪಟ್ಟವರ ಷೇರು ಮೆಂಬರಿನ ವೊಬಲಗು ವಾರಸುದಾರ್ರಿಗೆ ವಾಪಸು ಕೊಡದೆ ಇರುವದರಿಂದ ನಂಬಿಕೆಯೇ ಕೆಟ್ಟುಹೋಗುತ್ತಾ ಇದೆ. ಇತರ ಷೇರುದಾರರು ಮೌನವಾಗಿರುವರು. ಜನರಲ್ ಮೀಟಿಂಗ್ ಮಾಡದೆ ಒಂದು ವರುಷದ ಮೇಲಾಯಿತು. ಬಡ್ಡಿಯು ಹಂಚದೆ ಇರುವದರಿಂದ ಷೇರುದಾರರು ವ್ಯಸನಪಡುತ್ತಿರುವರು. ಹಿಂದಿನಂತೆ ಸಕಾಲದಲ್ಲಿ ಸೊಸೈಟಿ ಇನ್ಸ್‌ಪೆಕ್ಟರುಗಳು ಯಾರೂ ತನಿಖೆ ಮಾಡಿದಂತೆ ಕಾಣುವದಿಲ್ಲ. ಸರ್ಕಾರದ ಆಫೀಸರು ಯಾರೂ ತನಿಖೆ ಮಾಡಿಲ್ಲ. ಸಾಲಗಾರರು ಯೋಗ್ಯರಾದಷ್ಟು ಸುಸ್ತೀ ಬಡ್ಡಿಯು ಹೊತ್ತಿರುವರು. ಹೀಗಾದರೆ ವಿದ್ಯಾವಿಹೀನರಾದ ರೈತರು ನಂಬಿಕೆ ಇಡುವದು ಹ್ಯಾಗೆ? ಸೊಸೈಟಿಯು ಈಗಾಗಲೇ 7 ಸಾವಿರ ರೂಪಾಯಿಗಳ ವರೆಗೂ ಮೂಲಧನ ಸೇರಿ ಸುಮಾರು 180 ಮೆಂಬರುಗಳುಳ್ಳದ್ದಾಗಿ ಸುಸ್ಥಿತಿಯಲ್ಲಿ ಅಭಿವೃದ್ಧಿಹೊಂದುತ್ತಾ ಬಂದು, ಈಗ ಸರಿಯಾದ ವಿಚಾರಕರಿಲ್ಲದೆ ತುಂಬಾ ಹೀನಸ್ಥಿತಿಗೆ ಬಂದಿದೆ. ಈ ಸೊಸೈಟಿಯನ್ನು ರಿಜಿಸ್ಟ್ರರವರೇ ದಯಮಾಡಿಸಿ ಸರಿಯಾದ ವಿಚಾರಕರನ್ನಿಟ್ಟು ಪೋಷಿಸುವದರ ಮೂಲಕವಾಗಲೀ, ಅಥವಾ ಪೈಂದಖ್ ಮಾಡಿ ಷೇರುದಾರರು ಹಣವನ್ನು ವಾಪಸು ಕೊಡಿಸುವದರ ಮೂಲಕವಾಗಲೀ ಯಾವದಾದರೊಂದು ವಿಧದಲ್ಲಿ ಪರ್ಯವಸಾನ ಹೊಂದುವಂತೆ ಮಾಡಿ ಈ ಇಲಾಖಾ ಮೂಲಕವಾಗಿ ಕೆಟ್ಟ ಹೆಸರು ಬಾರದಂತೆ ಮಾಡಬೇಕೆಂಬುದೇ ಪ್ರಾರ್ಥನೆ. ಸತ್ಯವಾದಿ

ಮಾಲೂರಿನಲ್ಲಿ ಪಾಠಶಾಲೆಗಳು—ಜವಾಬು.

ಅಯ್ಯಾ,—ಅಕ್ಟೋಬರ್ 21 ನೇ ತಾ. ವೃತ್ತಾಂತ ಪತ್ರಿಕೆಯಲ್ಲಿ "ಹಿತವಾದಿ" ಎಂಬ ಹೆಸರಿನಿಂದ ಮಾಲೂರು ಪಾಠಶಾಲೆಗಳು ಎಂಬ ವರ್ತಮಾನವನ್ನು ಬರೆದಿರುವುದು ನೋಡಿದರೆ ಈ ಊರಿನಲ್ಲಿ ಬಾಲಿಕಾ ವಿದ್ಯಾಭ್ಯಾಸದ ವಿಷಯವಾಗಿ ಸತ್ಕಾಲದಲ್ಲಿ ನಡೆಯುತ್ತಿರುವ ನಿಜಸ್ಥಿತಿಯನ್ನು ತಿಳಿದುಕೊಳ್ಳದೇಲೆ ಯಾರೋ ವೈಷಮ್ಯವುಳ್ಳ ಒಬ್ಬ ಇಬ್ಬರಿಂದ ತಮಗೆ ತಿಳಿದುಬಂದ ಸಂಗತಿಯನ್ನು ಬರೆಸಿರುವಂತೆ ಸ್ಪಷ್ಟವಾಗಿ ತೋರುತ್ತೆ. ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಗಳ ವಿಷಯವಾಗಿ ಈ ಮಿಷನ್‌ನವರು ಪರೋಪಕಾರಾರ್ಥವಾಗಿ ಈ ದೇಶದಲ್ಲಿ ಮಾಡುತ್ತಿರುವ ಸಹಾಯವು ಪ್ರತಿ ಒಬ್ಬರಿಂದಲೂ ಶ್ಲಾಘನೀಯವಾಗಿರುವದೇ ವಿನಹ ವ್ಯತಿರಿಕ್ತವಾದ ಅಭಿಪ್ರಾಯವು ಯಾರೊಬ್ಬರಿಗೂ ಸಹ ಇರಲಾರದು. ಪ್ರಕೃತ ಈ ಊರಿನ ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಯ ಮೇಲೆ ನನಗೆ ಯಾವ ವಿಧವಾದ ವೈರಮ್ಯವೂ ಇರುವುದಿಲ್ಲ. ಮತ್ತು ಈ ಹಿತವಾದಿಗೆ ಈ ವಿಷಯವಾಗಿ ಉಂಟಾಗಿರುವ ಅಭಿಪ್ರಾಯವೆಲ್ಲ ಸುಳ್ಳು. ಇವರು ಕೊಡುತ್ತಿದ್ದ ಸಂಬಳವು ಈ ಕ್ಷಾಮಕಾಲದಲ್ಲಿ ಜೀವನಕ್ಕೆ ಸಾಲದೇ ಹೋದದ್ದರಿಂದಲೂ, ಪ್ರೋತ್ಸಾಹವಿಲ್ಲದ್ದರಿಂದಲೂ ರಾಜೀನಾಮೆ ಕೊಟ್ಟಿರುವೆನೇ ಹೊರತು ಬೇರೆ ಅಭಿಪ್ರಾಯದಿಂದಲ್ಲ. ಈ ಊರಿನಲ್ಲಿ ಹಿಂದೂ ಮತಕ್ಕೂ ಧರ್ಮಕ್ಕೂ ಅನುಗುಣವಾದ ಸ್ತ್ರೀ ವಿದ್ಯಾಭ್ಯಾಸವನ್ನು ಕಲ್ಪಿಸಬೇಕೆಂಬ ಇರಾದೆಯುಳ್ಳ ಕೆಲವು ದೊಡ್ಡ ಮನುಷ್ಯರುಗಳ ಪ್ರೋತ್ಸಾಹದಿಂದ ಈ ಬಾಲಿಕಾ ಪಾಠಶಾಲೆಗೆ ಉಪಾಧ್ಯಾಯನಾಗಿರುತ್ತೇನೆ. ಈ ಪಾಠಶಾಲೆಯಲ್ಲಿ ಸರ್ಕಾರಿ ನೌಕರರ ಬಾಲಕಿಯರು 14, ಗ್ರಾಮಸ್ಥರ ಬಾಲಕಿಯರು 31, ಅಂತು 45 ಬಾಲಕಿಯರು ಓದುತ್ತಲಿದ್ದಾರೆ. ಇದು ಪ್ರಾರಂಭವಾಗಿ 3 ತಿಂಗಳ ಒಳಗಾಗಿಯೇ ಇರುತ್ತೆ. ಇದರಿಂದ ಈ ಪಾಠಶಾಲೆಯಲ್ಲಿ ಗ್ರಾಮಸ್ಥರಿಗೆ ಎಷ್ಟರ ಶ್ರದ್ಧೆ ಇರಬಹುದೆಂಬುವುದನ್ನು ಊಹಿಸಿಕೊಳ್ಳಬಹುದು. ಮುಖ್ಯವಾಗಿ ಈ ಊರಿನವರಿಗೆ ಈ ಪಾಠಶಾಲೆಗಳ ವಿಷಯ ಇರುವ ಆಸಕ್ತಿಯನ್ನೂ, ಇನ್ನೂ ಇತರ ಸಂಗತಿಗಳನ್ನೂ ನಾನು ಇಲ್ಲಿ ವಿವರಪಡಿಸಲು ಕಾರಣವಿಲ್ಲ. ನನ್ನ ವಿಷಯವಾಗಿ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಗೆ ದುರಭಿಪ್ರಾಯ ಉಂಟುಮಾಡಬೇಕೆಂಬ ಉದ್ದೇಶದಿಂದ ವೈಷಮ್ಯವುಳ್ಳವನಂತೆ ನಿಂದಿಸಿರುವುದಲ್ಲದೆ ಬೇರೊಂದು ಪಾಠಶಾಲೆಗೆ ಪ್ರೋತ್ಸಾಹಕೊಡುವುದು ಸರ್ಕಾರದವರಿಗೆ ಗೌರವಹಾನಿಯುಂಟು ಅಭಿಪ್ರಾಯದಿಂದ ಬರೆದಿರುವ ತಾರತಮ್ಯವಿಲ್ಲದ ಬರವಣಿಗೆಗಾಗಿ ವ್ಯಸನಪಡುತ್ತೇನೆ. ಈ ವಿಷಯವಾಗಿ ಇನ್ನು ಮುಂದೆ ವರ್ತಮಾನಪತ್ರಿಕೆಗಳಲ್ಲಿ ಇವರು ಬರೆಯುವ ಬರವಣಿಗೆಯನ್ನು ತಿಳಿದು, ಆ ವಿಷಯದಲ್ಲಿ ಯುಕ್ತವಾದ ಯೋಚನೆಯನ್ನು ಮಾಡಬೇಕಾಗಿರುತ್ತೆ.

ಬಿ. ಹೆಚ್. ಶ್ರೀನಿವಾಸರಾವ್,
ಹಿಂದೂ ಬಾಲಿಕಾ ಪಾಠಶಾಲೆಯ ಉಪಾಧ್ಯಾಯ, ಮಾಲೂರು.

ರೈಲು ಹಾಕುವುದರ ಕಷ್ಟ ಮತ್ತು ಹತ್ತಿ ಎಣ್ಣೆ ಕಂಪನಿಯ ಷೇರುಗಳು.

ಅಯ್ಯಾ,—ಹರಿಹರಪುರದಿಂದ ಫ್ರೇಜರ್‌ಪೇಟೆಗೆ ಹೊಸದಾಗಿ ರೈಲ್ ಹಾಕಬೇಕಾಗಿ ಘನ ಹೊಂದಿದ ನಮ್ಮ ಮಹಾರಾಜಾ ಸರ್ಕಾರದವರ ಪರ್ಯಾಲೋಚನೆಗೆ ಬಂದು ಅತಿ ಶೀಘ್ರದಲ್ಲಿಯೇ ಯಾವ ಮಾರ್ಗದಲ್ಲಿ ಹಾಕಲು ಅನುಕೂಲವೆಂಬುದನ್ನು ತಿಳಿಯತಕ್ಕ ಬಗ್ಗೆ ಕೆಲವರು ಅಧಿಕಾರಿಗಳನ್ನು ಅಜಮಾಯಿಷಿಗಾಗಿ ಕಳುಹಿಸಿರುವ ವರ್ತಮಾನವನ್ನು ಕೇಳಿ ಅರಕಲಗೂಡು ತಾಲ್ಲೂಕು ಬಸವಾಪಟ್ಟದ ಜನಗಳು ಬಹಳ ಸಂತೋಷದಿಂದ ಕೋಲಾಹಲ ಮಾಡುತ್ತಿದ್ದಾಗಲೇ ಪೂರ್ವ ದಿಕ್ಕಿನಿಂದ ಪಶ್ಚಿಮದ ಕಡೆಗೆ ದುರ್ಬೀನು ಮತ್ತು ಅಳತೆಯಿಂದ ಈ ಗ್ರಾಮದ ನಾಲಾ ಟ್ಯಾಂಕಿನ ಮಧ್ಯಭಾಗದಲ್ಲಿಯೇ ಗುರುತು ಮಾಡಿಕೊಂಡು ಹೋಗುತ್ತಾ ಇರುವದನ್ನು ನೋಡಿ ಅನೇಕ ಜಮೀನ್ದಾರರುಗಳು—"ಇದ್ದ ಮೂರು ಅಗಳು ಗಂಡೇಲಿ ಹೋಯ್ತು" ಎಂಬ ನಾಣ್ಣುಡಿ ಸರಿಯಾಗಿ ನಮ್ಮಗಳಿಗೆ ಉಂಟಾಯಿತೆಂದು ಗೋಳಾಡುತ್ತಿರುವದನ್ನು ನೋಡಲು ಅಸಾಧ್ಯವಾಗಿರುತ್ತೆ. ಆದ್ದರಿಂದ ದಯಾಳು ಸರ್ಕಾರದವರು ಹಾಲಿ ಅಜಮಾಯಿಷಿ ಮಾಡುತ್ತಿರುವದನ್ನು ನೋಡಿ ಇದನ್ನು ತಪ್ಪಿಸಿ ರೈಲ್ ರಸ್ತೆಯನ್ನು ಈ ಗ್ರಾಮದ ಉತ್ತರ ದಿಕ್ಕಿನಲ್ಲಿ ಬರುವಂತೆಯೂ, ಸಹಸ್ರಾರು ಜನಗಳ ಅನ್ನಕ್ಕೆ ತೊಂದರೆ ಬಾರದಂತೆಯೂ ಹುಕುಂ ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ.

ನಮ್ಮ ಮೈಸೂರು ಸಂಸ್ಥಾನದ ದಾವಣಗೆರೆಯಲ್ಲಿ ಹತ್ತಿ ಬೀಜದ ಎಣ್ಣೆ ಕಾರ್ಖಾನೆಯನ್ನು ಇಡುವದಕ್ಕಾಗಿಯೂ, ಈ ವಿಷಯದಲ್ಲಿ ಅರಕಲಗೂಡು ತಾ|| ಅಮಲ್ದಾರ್ರವರು ಈ ಗ್ರಾಮಕ್ಕೆ ದಯಮಾಡಿಸಿ ಜನಗಳಿಗೆ ಪ್ರೋತ್ಸಾಹ ಕೊಟ್ಟು ಉಪನ್ಯಾಸ ಮಾಡಿದ್ದರ ಮೇಲೆ ಇಲ್ಲಿ ಕೆಲವು ಜನಗಳು ಷೇರುದಾರರುಗಳಾಗಿ ಸೇರಿ ಕೆಲವು ಹಣವನ್ನು ಸಹಾ ಕೊಟ್ಟಿರುತ್ತಾರೆ. ಈಚೆಗೆ ಉಳಿದ ಹಣ ಕಳುಹಿಸಬೇಕೆಂದು ಸದರಿ ಷೇರುದಾರ್ರುಗಳಿಗೆ ಇಂಗ್ಲೀಷು ಫಾರಂಗಳು ಬಂದಿದ್ದವು. ಎಷ್ಟರ ಮಟ್ಟಿಗೆ ನಡೆಯುತ್ತಾ ಇದೆ? ಮತ್ತು ಅದರ ಪೂರ್ವೋತ್ತರವೇನು? ಇದುವರಿಗೆ ಎಷ್ಟು ವೊಬಲಗು ಶೇಖರವಾಗಿರುತ್ತೆ? ಅದರ ವಿಲೇವಾರಿ ಏನು ಎಂಬತಕ್ಕ ಬಗ್ಗೆ ಯಾವ ಪತ್ರಿಕೆಗಳ ಮುಖಾಂತರವಾಗಲಿ, ಆ ಕಂಪನಿ ಮೂಲಕವೇ ಆಗಲಿ ತಿಳಿಯದೆ ಅನೇಕರು ನಾನಾ ತರಹವಾಗಿ ಮಾತನಾಡುತ್ತಾರಾದ್ದರಿಂದ ಈಗಲಾದರೂ ಆ ಕಂಪನಿಯವರು ತಪ್ಸೀಲುವಾರ್ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೇ ಆದರೆ ಜನಗಳು ನೋಡಿಕೊಂಡು ಉಳಿಕೆ ವೊಬಲಗನ್ನು ಶೀಘ್ರದಲ್ಲಿಯೇ ಕಳುಹಿಸಿ ಕಂಪನಿಯು ಅಭಿವೃದ್ಧಿ ಸ್ಥಿತಿಗೆ ಬರುತ್ತೆಯೆಂದು ನಂಬಿದೇನೆ. ಒಬ್ಬ ಪ್ರಜೆ.

ಶಿಂಗ ಅಕ್ಕಸಾಲಿ ಮಗ ರಾಮಕ್ಕಸಾಲಿ, ಪೇಟೆ ಚಿಕ್ಕರೆ ಗ್ರಾಮ, ಕೊ ... ತಾಲ್ಲೂಕು.—ನೀವು ಹೇಳುವ ವಿಚಾರವನ್ನು ಪೊಲೀಸ್ ಅಧಿಕಾರಿಗಳಿಗೆ, ತಾಲ್ಲೂಕು ಮ್ಯಾಜಿಸ್ಟ್ರೇಟರಿಗೂ ತಿಳಿಸಬೇಕು. ನಿಮ್ಮ ವಾರ್ತೆ ಪ್ರಕಟಿಸುವದರಿಂದ ಫಲ ಕಾಣದು.

ಮಂಡ್ಯ ತಾಲ್ಲೂಕು ತೈಲೂರು ಗ್ರಾಮದಲ್ಲಿ ಅಮಲ್ದಾರರೇ ಮೊದಲಾದವರ ಪ್ರೋತ್ಸಾಹದಿಂದ ಕಳೆದ 15 ನೇ ತಾ ಬುಧವಾರ ಒಂದು ಪಾಠಶಾಲೆಯನ್ನು ಪ್ರಾರಂಭಮಾಡಿದರೆಂದು ಆ ದಿನ ನಡೆದ ಉತ್ಸವ ಮತ್ತು ಉಪನ್ಯಾಸಗಳನ್ನು ವಿವರಿಸಿ ಒಂದು ವಾರ್ತೆ ಬರೆದು ಬಂದಿದೆ. ಸ್ಥಳಸಂಕೋಚದಿಂದ ಇದನ್ನು ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುತ್ತೇವೆ.

ಗೌರೀಬಿದನೂರು ತಾಲ್ಲೂಕು ಮಂಚೇನಹಳ್ಳಿಯಲ್ಲಿ ತಾ. 20 ನೇ ಬುಧವಾರ ಮಧ್ಯಾಹ್ನ ಒಂದು ದೊಡ್ಡ ಸಭೆ ನಡೆದು ಅಧಿಕಾರಿಗಳೇ ಮೊದಲಾದವರು ದೇಶಾಭ್ಯುದಯ ವಿಷಯಗಳನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಗಳ ಮಾಡಿದರೆಂದು ತಿಳಿಯುತ್ತೇವೆ.

ಚನ್ನಗಿರಿ ಟವನ್ನಿನಲ್ಲಿ ಅಮಲ್ದಾರ್ರು ತುಂಬಾ ಮುತುವರ್ಜಿ ವಹಿಸಿ, ಮದುವೆಯಲ್ಲಿ ಎರಡು ಪಾರ್ಟಿಗಳಾಗಿದ್ದದ್ದನ್ನು, ಅ... ಕಲಹವಾಗುತ್ತಿದ್ದನ್ನು ಬಹಳ ಪ್ರೀತಿಯಿಂದ ತಪ್ಪಿಸಿ ಅವರ ಉಸ್ತವಗಳನ್ನು ... ವಾಗಿ ನೆರವೇರಿಸಿದರೆಂದೂ, ಈ ಕಾರ್ಯವನ್ನು ನೋಡಿ ಪ್ರಜೆಗಳು ಅಮಲ್ದಾರ್ರನ್ನು ಬಹಳವಾಗಿ ವಂದಿಸುತ್ತಾರೆಂದು ಮುಖಾಂತರವಾಗಿ ಒಂದು ವಾರ್ತೆ ಬರೆದು ಬಂದಿದೆ.

ಬೇಲೂರು ತಾಲ್ಲೂಕು ರಾಜನಶಿರಿಯೂರು ಗ್ರಾಮದಲ್ಲಿ ಕಳೆದ 28 ತಾ. ಮಂಗಳವಾರ ಮಧ್ಯಾಹ್ನ ವಿಲೇಜ್ ಕಮಿಟಿ ಮೀಟಿಂಗು ನಡೆದು ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನ ಮಾಡಲ್ಪಟ್ಟವೆಂದೂ, ಒಂದು ವಾಚನಾಲಯ ಸ್ಥಾಪನೆಯಾಗಿ ಅದಕ್ಕೆ ಕೆಲವು ಮುಖಂಡರು ಪತ್ರಿಕೆಗಳನ್ನು ತರಿಸುವಂತೆ ಒಪ್ಪಿಕೊಂಡರೆಂದೂ, ಹೀಗೇ ನೇಗಿಲು ತರಿಸುವುದಕ್ಕೆ ಪ್ರೋತ್ಸಾಹಿಸಲ್ಪಟ್ಟಿತೆಂದೂ ಒಂದು ವಾರ್ತೆ ಬರೆದುಬಂದಿದೆ.

ರಾಜಪ್ಪ, ಗುಮಾಸ್ತರ 3 ನೇ ಲೈನ್, ಕಬ್ಬನ್‌ಪೇಟೆ, ಬೆಂಗಳೂರು ಸಿಟಿ. ಇವರಿಗೆ ತಮ್ಮ ವಾದ್ಯಿಯವರು ನಷ್ಟ ಪಡಿಸಿರುತ್ತಾರೆಂದು ಆಕ್ಷೇಪಣೆಯ ವಾರ್ತೆಯನ್ನು ಬರೆದಿದ್ದಾರೆ. ಅವರು ತಮ್ಮ ಬಿಷಪ್‌ರವರಿಗೆ ಆ ಸಂಗತಿಯ ವಿವರಿಸಿ ಬರೆದರೆ ಅವರು ವಿಚಾರಿಸುತ್ತಾರೆಂದು ನಂಬುತ್ತೇವೆ.

"ಧನುರ್ಧಾರಿ" ಪತ್ರಿಕೆ ಬರುತ್ತಿಲ್ಲವೆಂದು ಮುಖಾಂತರ ಒಬ್ಬ ವಾರ್ತಾದಾರರು ಆಕ್ಷೇಪಣೆಯುಳ್ಳ ವಾರ್ತೆ ಬರೆದಿದ್ದಾರೆ. ಯಾವ ಪತ್ರಿಕೆಯಲ್ಲಿ ಆ ಪ್ರಕಟನೆಯನ್ನು ಓದಿ ಚಂದಾ ಕಟ್ಟಿದರೋ ಆ ಪತ್ರಿಕೆಗೆ ಬರೆದುಕೇಳಬಹುದು.

ಸಿಪ್ಪೆಕಣ್ವಪಾತಿ, ದೊಡ್ಡಬಳ್ಳಾಪುರ.—ನೀವು ಹೇಳುವ ವಿಚಾರವನ್ನು ಡೆ ಕಮಿಷನರಿಗೆ ತಿಳಿಸಿದರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ.

ಶಿವಮೊಗ್ಗಾ ಎ. ವಿ ಸ್ಕೂಲಿನಲ್ಲಿ ಫೀಜು ತೆಗೆದುಕೊಳ್ಳುವ ವಿಚಾರವಾಗಿ ಆಕ್ಷೇಪಣೆಯುಳ್ಳ ಒಂದು ವಾರ್ತೆ ಬರೆದುಬಂದಿದೆ. ಇನ್ಸ್‌ಪೆಕ್ಟರಿಗೆ ತಿಳಿಸಿ ಅವರು ತನಿಖೆಯಿಂದ ಕ್ರಮಪಡಿಸುವರು. —ಎಡಿ.]

ತಾಲ್ಲೋಕು ವರ್ತಮಾನಗಳು.

ಅರಕಲಗೂಡು.—ಈ ಪ್ರಾಂತ್ಯಕ್ಕೆ ಒಂದೆರಡು ತಿಂಗಳಿಂದ ಮಳೆ ಇಲ್ಲ. ಕಿರಾಣಿ ಪೈರೆಲ್ಲಾ ಒಣಗಿಹೋಗುತ್ತಿತ್ತು. ಈಗ 4-5 ದಿನಗಳಿಂದ ಒಳ್ಳೇ ಮಳೆಯಾಗುತ್ತಾ ಇದೆ. ಪೈರಿಗೇನೂ ನಷ್ಟವಿಲ್ಲ. ಭತ್ತಕ್ಕೂ ತುಂಬಾ ಅನುಕೂಲವಾಯಿತು.—ಈ ಊರಿನ ಮ್ಯುನಿಸಿಪಾಲಿಟಿ ಕೆಲಸವು ತೃಪ್ತಿಕರವಾಗಿಲ್ಲ. ಕೋಟೆ ಪೇಟೆಗಳಲ್ಲಿಯೂ, ಇತರ ಚಿಕ್ಕ ಬೀದಿಗಳಲ್ಲಿಯೂ ಇರುವ ಚರಂಡಿ ನೀರು ಕ್ರಮವಾಗಿ ಹೋಗುವದಿಲ್ಲ. ಅಲ್ಲಲ್ಲಿ ನಿಂತು ದುರ್ವಾಸನೆಯಾಗುತ್ತಲಿದೆ. ಕುಂಬಾರರ ಬೀದಿಯ (ಪೇಟೆಯ ಪೂರ್ವ ಭಾಗದಲ್ಲಿರುವ) ಅರಳೀಮರದ ಹತ್ತಿರ ಚರಂಡಿ ನೀರು ನಿಂತು ನಾರುತ್ತಿದೆ. ಇದಕ್ಕೆ ಮ್ಯುನಿಸಿಪಾಲಿಟಿಯವರು ಗಮನಕೊಟ್ಟು ಸರಿಪಡಿಸಬೇಕಾಗಿದೆ.

ಮಂಡ್ಯ ತಾ|| ಹೊಳಲು ಗ್ರಾಮ.—ಯಾವ ದೇಶದಿಂದಲೋ 30 ವರುಷದ ಒಬ್ಬ ಗಂಡಸೂ, 24 ವರುಷದ ಒಬ್ಬ ಹೆಂಗಸೂ ಬಂದಿರುತ್ತಾರೆ. ಇವರು ಬಂದು ಸುಮಾರು 4-5 ತಿಂಗಳಾಯಿತು. ಗಂಡ ಹೆಂಡತಿಯರ ಜಗಳ ಮಾತ್ರ ತೀರದು. ಮೂರು ಮೂರು ದಿವಸಕ್ಕೂ ನೀರಿಗೆ ಬೀಳುತ್ತೇನೆಂದು ಓಡಿಹೋಗುತ್ತಾಳೆ. ಒಂದೆರಡು ದಿವಸ ನೇಣುಹಾಕಿಕೊಂಡಿದ್ದಳು. ಜನಗಳು ಹೋಗಿ ಬಿಡಿಸಿ ಕೊಯ್ದು ಸರಿಪಡಿಸಿದರು. ಸರ್ಕಾರದವರು ತನಿಖೆ ಮಾಡಿ ಮುಂದೆ ... ಬಂದೋಬಸ್ತು ಮಾಡಬೇಕೆಂದು ಕೋರುತ್ತೇವೆ.—ಈ ಊರಿನ ...

...ನೀರು ರಸ್ತೆಯ ಮೇಲೇ ಬಿದ್ದು ಹೋಗುತ್ತೆ. ಇದು ದೊಡ್ಡ ... ವಾಗಿ ಪ್ರಯಾಣಸ್ಥರಿಗೂ, ಗಾಡಿಗಳು ತಿರುಗುವುದಕ್ಕೂ ಆಗದೆ ತುಂಬಾ ...ದರೆಯಾಗಿದೆ. ಕೋಡಿ ಬಿದ್ದಾಗಂತೂ ಹೇಳತೀರದು. ಈ ವರುಷ 4-6 ... ಕೊಚ್ಚಿ ಹೋಗುತ್ತಿದ್ದರು. ಬಿಸ್ತ ಜನಗಳು ಕಂಡು ಬದುಕಿಸಿದರು ... ರದವರು ದಯವಿಟ್ಟು ಸೇತುವೆಯನ್ನಾದರೂ ಕಟ್ಟಿಸಿಕೊಟ್ಟರೆ ಉತ್ತಮ ...—300-400 ಮನೆಗಳುಳ್ಳ ಗ್ರಾಮಕ್ಕೆ ಮುನ್ಸಿಸಲ್ ಚಿತಂಡಿ ಇಲ್ಲ. ... ಕೊರತೆಯಾಗಿದೆ.

ದೇವನಹಳ್ಳಿ.—ಈ ಪ್ರಾಂತ್ಯ ಕೆಲವು ದಿವಸಗಳ ಕೆಳಗೆ ಮಳೆ ಬೇಕದೆ ... ವಿಶೇಷವಾಗಿ ಕೆಟ್ಟಿತ್ತು. ಆದರೆ ಈಚೆಗೆ ಕೊಂಚಮಟ್ಟಿಗೆ ಮಳೆ ... ಪೈರುಗಳು ಕೊಂಚಮಟ್ಟಿಗೆ ಚೆನ್ನಾಗಿವೆ. ಇನ್ನೂ 1–2 ಹದ ಮಳೆ ... ಬೆಳೆಗಳೆಲ್ಲವೂ ಪೂರೈಸುತ್ತದೆ.—ಈ ತಾಲ್ಲೂಕಿನಲ್ಲಿ 1–2 ಗ್ರಾಮಗ ... ಪ್ಲೇಗು ತಲೆಹಾಕಿದೆ. ಸುಮಾರು 10–12 ಜನಗಳ ವರೆಗೆ ಕಾಲವಾದಂತೆ ...ಮಾನವಿದೆ. ದೇವನಹಳ್ಳಿ ಟವುನ್‌ಗೆ ಅತಿ ಸಮೀಪವಾದ ನೋಕರ ಗ್ರಾಮ ... ಪ್ಲೇಗು ವ್ಯಾಪಿಸಿರುವದರಿಂದ ಈ ಊರಿನ ಜನರೆಲ್ಲರೂ ಬಹಳ ಗಾಬರಿ ...ದಾರೆ.—ಈ ತಾಲ್ಲೂಕಿನಿಂದ ಈಚೆಗೆ ಕೆಲವು ಸರ್ಕಾರಿ ನೌಕರರು ವರ್ಗ ... ಬೇರೆ ತಾಲ್ಲೂಕುಗಳಿಗೆ ಹೊರಟು ಹೋದರು. ಈ ಪೈಕಿ ಸಬ್ ರೆಜಿ ...ಸ್ಟ್ರಾರ್ ಮ|| ರಾಮಕೃಷ್ಣಯ್ಯನವರು ಮತ್ತು ಸ್ಟೇಷನ್‌—ಮಾಸ್ಟರ್ ಮ|| ...ರಾಯರು ಪ್ರಜೆಗಳ ಅನುರಾಗಕ್ಕೆ ಕೇವಲ ಪಾತ್ರರಾಗಿದ್ದರು. ಇವರಿಬ್ಬರ ...ಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ. ಇವರಿಬ್ಬರ ವರ್ಗವು ಈ ಗ್ರಾಮದ ...ರೆಲ್ಲರಿಗೂ ಬಹಳ ವ್ಯಸನವನ್ನುಂಟುಮಾಡಿರುತ್ತದೆ. ಸ್ಟೇಷನ್ ಮಾಸ್ಟರು ... ರಾಯರಿಗೆ ಬದಲಾಗಿ ಬಂದಿರತಕ್ಕವರೂ ಕೂಡ ಬಹಳ ಒಳ್ಳೆಯವ ... ಪ್ರಜೆಗಳಿಗೆ ಅನುಕೂಲಸ್ಥರಾಗಿ ಇದಾರೆ.

ಹೊಸಕೋಟೆ.—ಬಿದ್ದಲೂಟ್ಟ ಗ್ರಾಮದ ಬಳಿ ಇರುವ ಹೊಸಳ್ಳಿ ಎಂಬ ... ಬೇಡರ ಮುನಿಯಪ್ಪ, ಆತನ ಮಗನು ಸಹಾ ಎತ್ತುಗಳು ತರುವದಕ್ಕೆ ... ರೂಪಾಯಿ ತೆಗೆದುಕೊಂಡು ತಲಕಾಯಿಲ ಬೆಟ್ಟದ ಜಾತ್ರೆಗೆ ಹೋಗಿ ಅಲ್ಲಿ ... ಎತ್ತುಗಳು ಸಿಕ್ಕಲಿಲ್ಲವಾದ ಕಾರಣ ವಾಪಸು ಬರುತ್ತಿದ್ದರು. ಆಗ ...ವೆಂಕಟ, ಅಗಸರ ಮುನಿಪೋಲ್ಲ ಎಂಬವರು ಹಿಂದೆ ಬಂದು ಎತ್ತುಗಳನ್ನು ...ಕೊಡುತ್ತೇವೆಂದು ಹೇಳಿ ಹೊಸಕೋಟೆ ತಾಲ್ಲೂಕು ಬೇಗೂರು ಎಂಬ ಗ್ರಾಮಕ್ಕೆ ಕರಕೊಂಡು ಬರುತ್ತಿರುವಾಗ್ಗೆ ದಾರಿಯಲ್ಲಿ ರಾತ್ರಿ ೪ ಗಂಟೆ ಹೊತ್ತಿನ ... ಬೇಡರ ಮುನಿಯಪ್ಪನನ್ನು ಕೊಂದು ಬಿಟ್ಟು, ರೂಪಾಯಿಗಳನ್ನು ತೆಗೆದು ... ಹೋಗಿ ಹೋದನು ಎಂಬ ಸಂಗತಿಯನ್ನು ಜೂನ್ ೪ ನೇ ತಾ. ... ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಅವನನ್ನು ಹಿಡಿಯುವದಕ್ಕಾಗಿ ಪೊ... ಮ|| ಬಾಲ್ ಸಾಹೇಬರು ನಂದಿಗುಳಿ ಜಮಾದಾರ್ರು, 231 ನೇ ನಂ. ... ರ ಚಿಕವೆಟ್ಟ ಮುನಿಸಾಮಿಯಾದವನನ್ನು ಆಸಾಮಿಯನ್ನು ಪತ್ತೆ ಮಾಡುವ ...ಕಳುಹಿಸಿದರಂತೆ. ಆತನು ಬಹಳ ಪ್ರಯಾಸಪಟ್ಟು ನಂದಿಗವಿಯಲ್ಲಿ ಒಡಿ... ಇವನಿಗೂ ವಿಚಾರಣೆ ನಡೆಯುತ್ತಾ ಇತ್ತು ಕಳೆದ ತಾ. 11 ರಲ್ಲಿ ... ಸೆಷನ್ಸ್ ಕೋರ್ಟಿನಲ್ಲಿ ಗಲ್ಲಿಗೆ ಹಾಕುವಂತೆ ತೀರ್ಮಾನವಾಯಿತು ... ಕೇಳುತ್ತೇವೆ. 231 ನೇ ನಂ ಸ್ಕ್ವಾಡ್ ಮುನಿಸಾಮಿರಾವು ಬೂನಿ ಮಾಡಿ... ದವನನ್ನು ಹಿಡಿದದ್ದಕ್ಕಾಗಿ ಸರ್ಕಾರದವರು ಬಹುಮಾನವನ್ನು ಕೊಡುತ್ತಾರೆಂದು ... ಬಹಳ ಸಂತೋಷವಾಯಿತು

ದೊಡ್ಡಬಳ್ಳಾಪುರ.—ಎರಡು ವಾರಗಳಿಂದ ಬಂದಿರುವ ಅಧಿಕ ಮಳೆಯಿಂದ ...ಲ್ಲಾ ತುಂಬಿ ತುಳುಕಾಡುತ್ತಿವೆ. ಪೈರುಗಳೆಲ್ಲಾ ಉತ್ತಮ ಸ್ಥಿತಿಗೆ ಬಂದು ...ಮಳೆ ಪ್ರಸ್ತಾಪವೇ ಇಲ್ಲದಂತಾಗಿದೆ.—ಪ್ಲೇಗ್ ರೋಗವು ದೊಡ್ಡಬಳ್ಳಾಪುರ ... ಕೊಂಚ ನಿಂತ ಹಾಗೆ ತೋರುತ್ತೆ. ಆಗಲೇ ಅನೇಕ ಮುಸಲ್ಮಾನರು ಪಟ್ಟಣಕ್ಕೆ ... ದೊಡ್ಡ ಬಳ್ಳಾಪುರಕ್ಕೆ ಹೋಗಬೇಕೆಂತ ತೀರ್ಮಾನಿಸಿರುತ್ತಾರೆ. ... ಸುತ್ತುಮುತ್ತಣ ಅನೇಕ ಗ್ರಾಮಗಳಲ್ಲಿ ಪ್ಲೇಗ್ ಕಾಣಿಸಿಕೊಂಡಿದೆ ... ನಲ್ಲೂ ಇಲಿಲು ಮುಂತಾದ್ದು ಸತ್ತು ಆ ಸೋಂಕಿನಿಂದ ಅಲ್ಲಿನ ... ಕೆಂಬುಗಳನ್ನು ತೆಗೆದು ಶುಚಿ ಮಾಡಿರುತ್ತಾರೆ—ಕಳೆದ ವಾರ ... ಹೆಂಗಸು ಕೆರೆಯಲ್ಲಿ ಎದ್ದು ಮೃತವಾದಳೆಂತ ವರ್ತಮಾನವಿದೆ ಜನರು ... ಬರಲು ಆಗಲೇ ಪ್ರಯತ್ನಿಸುತ್ತಿರುತ್ತಾರೆ. ಇನ್ನೂ ಅಲ್ಲಲ್ಲಿ ಕಾಯಿ... ವರ್ತಮಾನವಿದೆ ಅಗಸರ ನಾಗ ಎಂಬಾತನು ಇನಾಕ್ಯುಲೇಷನ್ ಮಾಡಿಕೊಂಡಾಗ್ಯೂ ಪ್ಲೇಗಿನಿಂದ ಸತ್ತುಹೋದನು. ಮತ್ತು 5,000 ಮಂದಿ ... ಇನಾಕ್ಯುಲೇಷನ್ ಮಾಡಿಕೊಂಡು ಊರಲ್ಲಿಯೇ ಈ ರೋಗ ವಾಸವಾದುವವ ... ಸುಮಾರು 30 ಮಂದಿಗೆ ಗಡೆ ಗಳು ಬಂದಿದ್ದಾಗ್ಯೂ ಏನೂ ಅಪಾಯವಿಲ್ಲದೆ ... ಆದರು. ಆದರೆ ಮೂರು ಮಂದಿ ಮಾತ್ರ ಮರಣವಾದರು. ಆದರೆ ...ಹೋದ ನೂರಾರು ಮಂದಿಗೆ ಇನಾಕ್ಯುಲೇಷನ್ ಆಗಿರಲೇ ಇಲ್ಲ. ಆದ ... ಪ್ಲೇಗ್ ಸೋಂಕು ಇರುವ ಪ್ರದೇಶದವರು ಆ ಕೂಡಲೆ ಊರನ್ನು ಬಿಟ್ಟು ... ತಿಯು ಹಾಕಿಸಿಕೊಂಡರೆ ಮರಣಕ್ಕೆ ಗುರಿಯಾಗಲಾರರೆಂತ ಧೈರ್ಯ ... ಹೇಳಬಹುದು —(ಇನೊಬ್ಬ ಬಾತ್ಮಿದಾರರಿಂದ) ಈ ಊರಿನಲ್ಲಿ ಛಾಪೀ ...ದಾರರಾಗಿದ್ದ ಸಾಹುಕಾರ್ ಮ|| ಕೋಟೆಪ್ಪನವರು ಕಳೆದ ತಾ. 14 ... ಯಾವ ಇಲ್ಲದೆ ಅಕಸ್ಮಾತ್ತಾಗಿ ತೀರಿಹೋದರೆಂದು ತಿಳಿಸಲು ವಿಷಾದಿಸು... ಇವರ ಮರಣವು ಪ್ರಜೆಗಳಲ್ಲಿ ಆಶ್ಚರ್ಯವನ್ನೂ ದುಃಖವನ್ನೂ ಉಂಟು ... ಇವರು ಅನೇಕ ಬಡವರಾಧಾರಿಗಳಾಗಿದ್ದರು. ... ಇವ... ಬಡವರನ್ನು ಕಾಪಾಡಿ ಹೆಸರು ಪಡೆಯುತ್ತಾರೆಂದು ನಿರೀಕ್ಷಿಸುತ್ತೇನೆ.

ಮಳವಳ್ಳಿ.—ತಮ್ಮ 21 ನೇ ತಾ. ಪತ್ರಿಕೆಯಲ್ಲಿ ಅರಮನೆ ಚಾಮುಂಡಿ ... ಉಂಟಪ್ಪನಲ್ಲಿ ನಿಂತು ತಮಾಷೆ ನೋಡುತ್ತಿದ್ದ ದೊಡ್ಡಮನುಷ್ಯರುಗಳ ... ಪೈಕಿ ಒಬ್ಬರು ತಮ್ಮ ಭಂಗಾರದ ಡಾಬು ಕಳುವಾಯಿತೆಂದು ಗುಲ್ಲೆ ...ಮಾಡಿದರೆಂಬುದಾಗಿ ಪ್ರಚುರಪಡಿಸಿರುವ ಸಂಗತಿಯು ವಾಸ್ತವ್ಯವಾದದ್ದು. ಆ ಡಾಬು ... ಮ್ಮ ಈ ತಾಲ್ಲೂಕು ಶಿರಸ್ತೇದಾರ್ ಮ|| ಕಾಶೀನಾಥ ಶಾಸ್ತ್ರಿಯವರ ... ಡಾಬು ಕಳುವಾದ ಸಂಗತಿ ತಿಳಿದಕೂಡಲೆ ಶಿರಸ್ತೇದಾರ್ರು ಪೊಲೀಸಿಗೆ ... ಕೊಟ್ಟರು. ಇನ್ನೂ ಮಾಲು ಪತ್ತೆ ಆದಂತೆ ಕಾಣಾವದಿಲ್ಲ. ಆ ... 16½ ರೂಪಾಯಿ ತೂಕವುಳ್ಳದ್ದು ಮತ್ತು ಎಳ್ಳಾ ಅಪರಂಜಿಯೇ. ... ಬೆಲೆ 512 ರೂಪಾಯಿಗಳಂತೆ. ಶಿರಸ್ತೇದಾರರು ಪೊಲೀಸಿಗೆ ರಿಪೋರ್ಟ್ ಮಾಡಿದ್ದರಲ್ಲಿ ಪತ್ತೆಮಾಡಿಕೊಡುವವರಿಗೆ 60 ರೂಪಾಯಿ ಬಹುಮಾನ ...ವಾಗಿ ತಿಳಿಸಿರುವಂತೆ ಕೇಳಿರುತ್ತೇನೆ —ಬಹಳ ಕಾಲದಿಂದ ಮಳೆಯಿಲ್ಲದೆ ... ಮೊದಲಾದ ಬೆಳೆಗಳು ಬಾಡಿಹೋಗುತ್ತಾ ಬಂದಿತ್ತು. ಕೆರೆಗಳಲ್ಲಿಯೂ ... ನೀರು ಇಲ್ಲದೆ ಧಣ್ಣದ ಬೆಳೆ ವಿಷಯ ಜನರಲ್ಲಿ ವ್ಯಾಕುಲ ಹುಟ್ಟುತ್ತಾ ... ಆದರೆ 2–3 ದಿನಗಳಿಂದ ಒಳ್ಳೇ ಮಳೆ ಆಗುತ್ತಾ ಬಂದಿರೋಣದರಿಂದ ...ಲ್ಲಾ ನೋಡುವದಕ್ಕೆ ಈಗ ಸುಮಾರು ಚೆನ್ನಾಗಿವೆ ಈ ಮಳೆಯು ದೆಸೆ... 6 ತಿಂಗಳ ಗ್ರಾಸವಾದರೂ ಸಿಕ್ಕುವದು ಎಂಬ ನಿರೀಕ್ಷೆಯುಂಟು. ... ನೀರು ಇನ್ನೂ ಸಾಲದು.—(ಇನ್ನೊಬ್ಬ ಬಾತ್ಮಿದಾರರಿಂದ) ಈ ... ಜಟ್ಕಾ ಗಾಡಿಗಳಲ್ಲಿ ಪ್ರಯಾಣ ಮಾಡುವವರಿಗೆ ತುಂಬಾ ಕಷ್ಟನಷ್ಟ ... ಸಂಭವಿಸುತ್ತಾ ಇವೆ. ಕೆಲವು ದಿನಗಳ ಹಿಂದೆ ಈ ಊರಿನಲ್ಲಿರುವ ಡವಳಿ ... ಕಲ್ಯಾಣಿ ಮಲ್ಲಣ್ಣನವರು ಮೈಸೂರಿಂದ ಬರುವಾಗ್ಗೆ ಮದ್ದೂರಿಂದ ... ಎರಡು ಮೈಲಿ ದೂರದಲ್ಲಿ ಕುದುರೆ ಗಾಡಿಯವನ ಅಜಾಗ್ರತೆಯಿಂದ ಗಾಡಿ ...ಬಿದ್ದುಕೊಂಡು ಮಲ್ಲಣ್ಣನವರಿಗೆ ಕಾಲು ತುಂಬಾ ಜಖಂ ಆಗಿ ಇನ್ನೂ ಬಹಳ ... ಪಡುತ್ತಾ ಇದಾರೆ ಗಾಡಿ ಹೊಡೆಯುವವರು 10–12 ವರುಷದವರಾಗಿ ... ಎಷ್ಟರಮಟ್ಟಿಗೆ ಗಾಡಿ ಹೊಡೆದಾರು ? ಇದಲ್ಲದೆ ಗಾಡಿಯವರು ಗಾಡಿಗ... ಮಧ್ಯೆದಾರಿಯಲ್ಲಿ ನಿಲ್ಲಿಸಿಬಿಟ್ಟು ಕುಡಿಯುವದಕ್ಕೆ ಹೊರಟುಹೋಗು... ಅಂತವನು ತಮ್ಮ ನಿಷಾದಲ್ಲಿ ಏನು ತಾನೇ ಸರಿಯಾಗಿ ಹೊಡೆದಾರು ?

ಇದನ್ನು ನಿಲ್ಲಿಸದೆ ಹೋದರೆ ಪ್ರಯಾಣಿಕರಿಗೆ ತುಂಬಾ ತೊಂದರೆಗಳು ಸಂಭವಿಸುವವು. ಸರ್ಕಾರದವರು ಈ ವಿಷಯಕ್ಕೆ ನಿಗಾ ಕೊಟ್ಟು ತಕ್ಕ ಏರ್ಪಾಡು ಮಾಡಿದರೆ ಅನೇಕ ಕಷ್ಟನಷ್ಟಗಳು ನಿವಾರಣೆಯಾದಾವು —ಈ ಊರು ಬೀಸ್ತಗೇರಿಯಲ್ಲಿ ತುಂಬಾ ಗಲೀಜು ಇರುತ್ತೆ ಇದು ಹಾಗೆಯೇ ಇದ್ದಲ್ಲಿ ಬಹಳ ಕೇಡುಗಳು ಸಂಭವಿಸುವವು. ಸ್ಯಾನಿಟರಿ ಇನ್ಸ್‌ಪೆಕ್ಟರು ನಿಗಾ ಕೊಟ್ಟಲ್ಲಿ ಪ್ರಜೆಗಳಿಗೆ ತುಂಬಾ ಅನುಕೂಲವಾಗುತ್ತೆ. ಈ ಜನಗಳು ಇಲ್ಲಿ ಸುಮಾರು ಎರಡು ಸಾವಿರವಿರುತ್ತಾರೆ.—ಈ ಬೀದಿಯಲ್ಲಿ ಶ್ರೀಗಂಗಾಪರಮೇಶ್ವರಿ ಎಂಬ ಹೆಸರಿನಿಂದ ಒಂದು ಸೊಸೈಟಿ ಬ್ಯಾಂಕು ಏರ್ಪಾಡಾಗಿ ತುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆ.

ತೀರ್ಥಹಳ್ಳಿ.—ಇಲ್ಲಿಗೆ ಈಗ ಎಲ್ಲಾ ಹೊಸ ಅಧಿಕಾರಿಗಳು ಬಂದಿದಾರೆ. ಅಮಲ್ದಾರ್ರು, ಶಿರಸ್ತೇದಾರ್ರು, ಡಾಕ್ಟರು, ರೇಂಜರು ಇತ್ಯಾದಿಯಾಗಿ ಹೊಸಬರಾಗಿ ಬಂದು ಛಾರ್ಜು ವಹಿಸಿಕೊಂಡು ಕೆಲಸ ನಡಿಸುತ್ತಿದಾರೆ.—ಈ ತಾಲ್ಲೂಕಿನ ಪ್ರಜೆಗಳ ಕೋರಿಕೆಯನ್ನು ಅನುಮೋದಿಸಿ ಸರ್ಕಾರದವರು ಗಟ್ಟಿಗರಾದ ಅ|| ಸರ್ಜನ್‌ರನ್ನು ಕಳುಹಿಸಿದಾರೆ. ಇವರು ಬಹು ಮುತುವರ್ಜಿಯಿಂದ ರೋಗಿಗಳನ್ನು ವಿಚಾರಿಸಿ ಔಷಧಿ ಕೊಡುತ್ತಾರೆ. ಮುಂದೆ ಇವರು ಹೆಚ್ಚಾಗಿ ಬಡವರನ್ನೂ, ದೂರದಿಂದ ಬರುವ ಹಳ್ಳಿಯವರನ್ನೂ ಪೂರ್ಣ ಕನಿಕರದಿಂದ ನೋಡಿ ಉಪಚರಿಸಿ ಮಲ್ನಾಡಿನ ಹಿತಚಿಂತಕರಾಗಿರುತ್ತಾರೆಂದು ಹಾರೈಸುತ್ತೇವೆ.—ಈ ಮಲ್ನಾಡು ಪ್ರಾಂತ್ಯದಲ್ಲಿ ಸರಾಬ್ ದುಕಾನುಗಳು ಬಹಳ ಹೆಚ್ಚಾಗಿವೆ. ಎಲ್ಲರೂ ಕುಡಿಯುವದನ್ನು ಕಲಿಯುತ್ತಾರೆಂದು ಕಾಣುತ್ತದೆ. ಸಾರಾಯಿ ಮಾರುವವರು ಒಂದು ಡ್ರಾಮ್ ಪೂರಾ ಅಳತೆ ಮಾಡಿಕೊಡದೆ ಮೋಸ ಮಾಡಿ ಕಡಮೆ ಕೊಡುತ್ತಾರೆಂದು ಊರಿನಲ್ಲಿಯೂ ಹಳ್ಳಿಗಳಲ್ಲಿಯೂ ಪುಕಾರು ಉಂಟಾಗಿದೆ —ಈ ಸಾರಿ ಅಡಿಕೆಯ ತೋಟಗಳಿಗೂ, ಕಾಫೀ ತೋಟಗಳಿಗೂ ಬಹಳ ನಷ್ಟವಾಗಿದೆ ಎಂದು ಜನರು ದುಃಖಪಡುತ್ತಾರೆ. ಕೊಪ್ಪದ ಪ್ರಾಂತ್ಯದಲ್ಲಿ ಸಾವಿರಾರು ಮಂದಿ ಕೂಲಿಯವರು ಕೆಲಸವಿಲ್ಲದೆ ಕಾಫೀ ತೋಟಕ್ಕೆ ಬಾರದೆ ನಿಂತುಹೋಗಿದಾರೆ. ಸಾವಿರ ಮಣ ಕಾಫೀ ಆಗುತ್ತಿದ್ದವರಿಗೆ 400-500 ಮಣಕ್ಕೆ ಇಳಿದಿದೆ. ಅಡಿಕೆಗೆ ಕೊಳೆಯ ರೋಗದ ದೆಸೆಯಿಂದಲೂ, ಇಲಿಗಳ ಕಾಟದಿಂದಲೂ ನಷ್ಟ ಉಂಟಾಗಿದೆ. ಗಾಳಿಯ ದೆಸೆಯಿಂದ ಕೆಲವು ತೋಟಗಳಲ್ಲಿ ಸಾವಿರಾರು ಫಲದ ಮರಗಳು ಬಿದ್ದುಹೋಗಿವೆ.—ತೀರ್ಥಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಜೆಂಟಿಸ್ ಬಾರ್ಬಾನೆಯ ಕೆಲಸ ಚಟುವಟಿಕೆಯಿಂದ ನಡೆಯುತ್ತಿದೆ. ಡೆಪ್ಯುಟಿ ಕಮಿಷನರ್ ಸಾಹೇಬರು ಮಲ್ನಾಡಿನ ಅಭಿವೃದ್ಧಿಗೆ ಪೂರ್ಣ ನಿಗಾ ಕೊಟ್ಟ ದೆಸೆಯಿಂದ ಈ ತಾಲ್ಲೂಕು ಏಳಿಗೆ ಹೊಂದುತ್ತಿದೆ. ಆದರೆ ಲಂಚವು ಇನ್ನೂ ಬಲವಾಗಿ ತನ್ನ ಕಾಲನ್ನು ಊರಿಕೊಂಡಿದೆ.—ಹನ್ನೆರಡು ವರುಷಗಳಿಂದಲೂ ಇಲ್ಲಿನ ಪ್ರಸಿದ್ಧವಾದ ಸಂಡೆಸ್ ಕೋಟಿಯಲ್ಲಿ ದರೋಗರಾಗಿದ್ದ ಮ|| ಗೋಪಾಲಾಚಾರ್ರು ಬೆಂಗಳೂರಿಗೆ ವರ್ಗವಾದರು. ಇವರು ಬಹು ನಂಬಿಕೆಯಿಂದ ಕೆಲಸ ಮಾಡಿ ಗೌರವವನ್ನು ಕಾಪಾಡಿಕೊಂಡಿದ್ದರು. ಇವರ ಕಾಲದಲ್ಲಿ ಗಂಧವು ವಿಶೇಷ ಮಾರಾಟವಾಗಿ ಲಾಭ ಬರುತ್ತಿತ್ತು ಕೆಲಸದವರನ್ನು ಪ್ರೀತಿಯಿಂದ ಕಂಡು ಕೆಲಸ ನೆರವೇರಿಸುತ್ತಿದ್ದರು.—ತೀರ್ಥಹಳ್ಳಿಯ ಫಾರೆಸ್ಟ್ ರೇಂಜರು ಈಗ ಕಳೂರುಕಟ್ಟೆಗೆ ವರ್ಗವಾದರೆಂದು ವರ್ತಮಾನವಿದೆ. ಇವರು ಈ ತಾಲ್ಲೂಕಿಗೆ ಬಂದ ಕೆಲವು ದಿನಗಳಲ್ಲಿಯೇ ಈ ಪ್ರಾಂತ್ಯದ ಜನಗಳ ಅಸೂಯೆಗೆ ಪಾತ್ರರಾಗಿ, ಒಂದು ಕ್ರಿಮಿನಲ್ ಕೇಸಿಗೆಸಹ ಅವಕಾಶ ಕೊಟ್ಟರು ಕುಡುಮಲ್ಲಿಗೆ ಪ್ರಾಂತ್ಯದಲ್ಲಿ ಒಬ್ಬ ರೈತನನ್ನು ಹಿಂಸೆ ಪಡಿಸಿದರೆಂದು ಬಲವಾದ ಕೇಸ್ ನಡೆದು ಕಡೆಗೆ ಕೆಲವು ಮಧ್ಯಸ್ಥಗಾರರ ಸಹಾಯದಿಂದ ರಾಜಿಗೆ ಅವಕಾಶವಾಯ್ತು. ಈಗ ಇವರ ಬದಲಿಗೆ ಬಂದಿರುವ ರೇಂಜರು ಮುತುವರ್ಜಿಯಿಂದ ಕೆಲಸ ಮಾಡುತ್ತಾರೆಂದೂ, ಎಲ್ಲರಲ್ಲೂ ನಂಬಿಕೆಯನ್ನು ಸಂಪಾದಿಸುತ್ತಾರೆಂದೂ ಕಾಣುತ್ತದೆ.

ಬಿಪೆಸ್ಸ್ಟರ್ ಸುಪೀರಿಯರ್ ಲಿವರ್ ಜುನೈಬ್ಬು ವಾಚು.

ಕ್ರಯ ಕರಪಣ ಸಹಿತ	೮ ವರುಷಗಳ	ವಿ. ಪಿ. ಚಾರ್ಜು
ರೂ. 3-0-0.	ಗ್ಯಾರಂಟಿ.	4 ಆಣೆ



ಇದು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೆ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು ಇದು ಕಾಲವನ್ನು ಸರಿಯಾಗಿ ತೋರಿಸುವದು. ಹೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು. [223-3]

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸು 107, ಮದರಾಸ್.

ಯೂರೋಪು ದೇಶದ ಮಹಾಯುದ್ಧದ ಚರಿತ್ರೆಯು.

ಕ್ರಯ ರೂಪಾಯಿ 1 : ಟಪಾಲ್ ಖರ್ಚು 2 ಆಣೆ.

ಈಗ ಯೂರೋಪು ದೇಶದಲ್ಲಿ ನಡೆಯುತ್ತಲಿರುವ ಮಹಾಯುದ್ಧದ ಚರಿತ್ರೆಯು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ ಎಲ್ಲಾ ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು ರಾಜ್ಯದ ಸೇನಾಬಲವೂ ಮತ್ತು ವಿಮಾನಬಲವೂ, ಅವುಗಳ ಸರಗಳೂ, ರಾಜರುಗಳ ಸೇನಾಧ್ಯಕ್ಷರುಗಳು, ಆಯಾ ದೇಶದ ರಾಜರುಗಳು, ಮಂತ್ರಿಗಳು, ಮೊದಲಾದವರುಗಳ ಭಾವಚಿತ್ರಗಳು, ಯುದ್ಧಸಂಬಂಧವಾದ ವಿಷಯಗಳು, ಇವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ ಯುದ್ಧಾರಂಭವಾದ ಲಾಗಾಯತು ರಣರಂಗದಿಂದ



ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇದು ಡಿಮ್ಮಿ 20 ಫಾರಂಗಳುಳ್ಳ ಸುಂದರವಾದ ಬೈಂಡಿನಿಂದೊಡಗೂಡಿದ 150 ಪುಟಗಳುಳ್ಳ ಯುದ್ಧಚರಿತ್ರೆಯು. ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡಭಾಷೆಯಲ್ಲಿ ತಯಾರಿಸಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಈ ಗ್ರಂಥವು ಪುಸ್ತಕ ಭಂಡಾರದಲ್ಲಿ ಇಡಲು ಲಾಯಖಾದದ್ದು. ಇದನ್ನು ಎಲ್ಲರೂ ಓದತಕ್ಕದ್ದು. 30 ಯುದ್ಧಪಟಗಳು ಗ್ರಂಥದ ಆಯಾ ಉಚಿತಸ್ಥಳಗಳಲ್ಲಿ ಹಾಕಲ್ಪಟ್ಟಿರುತ್ತೆ. [219-2]

ವಿಳಾಸ—ಭಾರತಿ ಏಜನ್ಸಿ, ಪಾರ್ಕು ಟವುನ್, ಮದರಾಸು.

ಜಾಹೀರನಾಮಾ.

ರಾಕ್ಷಸ ಸಂವತ್ಸರದ ಕಾರ್ತೀಕ ಶುದ್ಧ ೧೫ ಪೂರ್ಣಿಮಾಕ್ಕೆ ಸರಿಯಾದ ಸನ್ 1915 ನೇ ಇಸವಿ ನವಂಬರ್ ತಿಂಗಳು 21 ನೇ ತೇದಿ ಭಾನುವಾರ ಕೃತ್ತಿಕಾ ನಕ್ಷತ್ರ ಯೋಗ ಇರುವದರಿಂದ ಆ ದಿವಸ ಬಳ್ಳಾರಿ ಜಿಲ್ಲಾ ಸಂಡೂರಲ್ಲಿ ಇರುವ ಶ್ರೀ ಕಾರ್ತಿಕಸ್ವಾಮಿ ಮಹಾಯಾತ್ರೆ ಜರಗುತ್ತದೆ. ಈ ಮಹಾ ಯಾತ್ರೆಕ್ಕೆ ಬರುವ ಯಾತ್ರಿಕರು ಬರುವಾಗ್ಗೆ ತಮ್ಮ ಗ್ರಾಮದಲ್ಲಿ ಪ್ಲೇಗು ಇಲ್ಲ ಎಂಬುವ ವಿಷಯಕ್ಕೆ ತಮ್ಮ ಸ್ಥಳದ ಅಧಿಕಾರಿಗಳಿಂದ ಸರ್ಟಿಫಿಕೇಟು ತರಬೇಕು. ಆ ಪ್ರಕಾರ ತರುವವರಿಗೆ ಮಹಾ ಯಾತ್ರದಲ್ಲಿ ಯಾವ ವಿಧವಾದ ತೊಂದರೆಯೂ, ಅನನುಕೂಲವೂ ಸಂಭವಿಸಲಾರವು. [229-2]

ಕೆ. ವೆಂಕೋಬರಾವ್, ದೇವಸ್ಥಾನದ ಆಫೀಸು ಮ್ಯಾನೇಜರ್, ಸೊಂಡೂರು.

ಗೃಹಕೃತ್ಯದ ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—ಈ ಕೆಳಗೆ ರುಜುಮಾಡಿರುವ ಗುಂಡ್ಲು ಪಂಡಿತರ ಲಕ್ಷ್ಮಣಾಚಾರ್ಯರಾದ ನನ್ನ ವಿಭಕ್ತ ತಮ್ಮ ಗುಂಡ್ಲು ಪಂಡಿತರ ಕೃಷ್ಣಮಾಚಾರ್ರ ಹೆಂಡತಿ ವೆಂಕಟಲಕ್ಷ್ಮಮ್ಮ ಉರುಫ್ ಅಮ್ಮಯ್ಯಮ್ಮನು ತನ್ನ ಗಂಡ ಮತ್ತು ಮಗನ ಬಾಬತು ಸ್ಥಿರಸೊತ್ತುಗಳಲ್ಲಿ ಸನ್ನ ಮಗ ಸತ್ತ ಲಾಗಾಯ್ತು ಅಂದರೆ ತಾ. 13 ನೇ ಸೆಪ್ಟಂಬರ್ 1915 ರ ಲಾಗಾಯ್ತು ಹಿಂದೂ ಲಾ ಪ್ರಕಾರ ಯಾವಜ್ಜೀವವೂ ಅನುಭವದ ಹಕ್ಕನ್ನು ಮಾತ್ರ ಪಡೆದಿರುತ್ತಾಳೆ. ಈಗ ಈ ಸೊತ್ತುಗಳನ್ನು ಇತರರ ಪ್ರೇರೇಪಣೆ ಮೇರೆ ಉತ್ತರವಾರಸುಗಳಿಗೆ ಸೊತ್ತು ಸಿಕ್ಕದೆ ಮಾಡಬೇಕೆಂದು ಆಧಾರ ಭೋಗ್ಯ ಮೊದಲಾದ ಕೆಲಸಗಳಿಂದ ದುರುಪಯೋಗಪಡಿಸಬೇಕೆಂಬ ಪ್ರಯತ್ನದಲ್ಲಿದಾಳೆ. ಈ ಕೆಳಗೆ ಸೈನ್ ಮಾಡಿರುವ ಗುಂಡ್ಲು ಪಂಡಿತರ ಲಕ್ಷ್ಮಣಾಚಾರ್ರು ಮೇಲ್ಕಂಡ ಆಸ್ತಿಗಳನ್ನು ಪಡೆಯುವಿಕ್ಕೆ ಲಾ ಪ್ರಕಾರ ಮೇಲ್ಕಂಡ ವೆಂಕಟಲಕ್ಷ್ಮಮ್ಮ ಉರುಫ್ ಅಮ್ಮಯ್ಯಮ್ಮನ ಕಾಲಾನಂತರ ಸಮೀಪ ವಾರಸುದಾರ (ರಿವರ್ಷನರ್) ರಾಗಿದಾರೆ. ಆದುದರಿಂದ ಈ ನೋಟೀಸು ಷೆಡ್ಯೂಲಿನಲ್ಲಿ ಕಂಡ ಸೊತ್ತುಗಳನ್ನು ಯಾರಾದರು ಆಧಾರ ವಗೈರೆ ಮಾಡಿಕೊಂಡರೆ ಅದು ಸಲ್ಲಲಾರದು. ಅಂಥವುಗಳನ್ನು ರದ್ದುಪಡಿಸಲಿಕ್ಕೆ ದಾವಾ ತರುತ್ತಾರೆ.

ಷೆಡ್ಯೂಲ್.—ಶ್ರೀರಂಗಪಟ್ಟಣದ ತಾಲ್ಲೂಕು ಬಳಗೊಳದ ಕಸಬಾ ಬಳಗೊಳ ಗ್ರಾಮದಲ್ಲಿ ದೇವರಾಯ ನಾಲೆ ಕೆಳಗೆ—(1) ಜಂಬಂಡನಗದ್ದೆಗೆ ಪಶ್ಚಿಮ, ಮಡುವೆಗೂ ದಾರಿಗೂ ಪೂರ್ವ, ತಿರುಮಲಾಚಾರ್ರ ಗದ್ದೆಗೆ ಉತ್ತರ, ಮುನಿಗೌಡನ ಗದ್ದೆಗೂ ಮಡುವೆಗೂ ದಕ್ಷಿಣ, ಈ ಮಧ್ಯೆ ಇರುವ ಸರ್ವೆ ನಂ 788 ನೇ ಗದ್ದೆ ಪೈಕಿ ಲಕ್ಷ್ಮಣಾಚಾರ್ರ ಹಿಸ್ಸೆಗೆ ಸೇರಿದೆ ಪೂರ್ವದಿಕ್ಕಿನ ಅರ್ಧ ಜಮೀನು ಬಿಟ್ಟು ಪಶ್ಚಿಮದಿಕ್ಕಿನ ಅರ್ಧ ಜಮೀನು, ಬೀಜವರಿ 34 ಗುಂಟೆ, ಆಕಾರ 7 ರೂಪಾಯಿ, ಚವರಿ ಹಳ್ಳದ ಮರಳ ಗದ್ದೆ ಎಂದು ಹೆಸರು. (2) ಇದೇ ಗ್ರಾಮದಲ್ಲಿ ಸದರಿ ದೇವರಾಯ ನಾಲೆ ಕೆಳಗೆ—ಕೃಷ್ಣಯ್ಯಂಗಾರ್ರ ಗದ್ದೆಗೂ ಬೋಳೀಗೌಡನ ಜವರಾಯಿಗೌಡನ ಗದ್ದೆಗೂ ಪಶ್ಚಿಮ, ನಾಲೆ ಏರಿಗೆ ಪೂರ್ವ, ಕೆಂಪೇಗೌಡನ ದಾಸೇಗೌಡನ ಗದ್ದೆಗೆ ಉತ್ತರ, ಪಟೇಲ್ ಬೋರೇಗೌಡನ ಗದ್ದೆಗೆ ದಕ್ಷಿಣ, ಈ ಮಧ್ಯೆ ಇರುವ ಸರ್ವೆ ನಂ. 214 ಎಕರೆ 3 ಗುಂಟೆ 26, ಆಕಾರ 29 ರೂಪಾಯಿ, ದೇವಿವನದ ಪೋಟ್ಟ ಗದ್ದೆ ಪೂರಾ. (3) ಮೈಸೂರು ಚಾಮರಾಜನೊಹಲ್ಲಾ ಕೃಷ್ಣಮೂರ್ತಿ ಪುರದಲ್ಲಿ 1191 ನೇ ನಂಬರು ಮನೆ. [228–2]

ಗುಂಡ್ಲು ಪಂಡಿತರ ಲಕ್ಷ್ಮಣಾಚಾರ್, ಕೋಟೆ, ಮೈಸೂರು.

ನಮ್ಮ ಪ್ರಿಯ ಸಹೋದರರ ಕಷ್ಟ ಸಂಕಟಗಳನ್ನು
ಪರಿಹರ ಮಾಡಬೇಕೆಂಬ ಸಂತಾಪದಿಂದ ಬೆಲೆಯನ್ನು ಇಳಿಸಿದೇವೆ.

ವಿದ್ಯೋಲ್ಲತ್ರಾ ರಸದ ಗುಂಡುಗಳು.

(ಮೇಲಿನ ಉಪಯೋಗಕ್ಕೆ ಮಾತ್ರ)

ಇದು ಹೊಸದಾಗಿ ಕಂಡುಹಿಡಿದದ್ದು. ಸಾವಿರಾರು ಯೋಗ್ಯತಾ ಪತ್ರಿಕೆಗಳುಂಟು. ಹಿಸ್ಟೀರಿಯಾ ಎಂಬ ಸೆಳತ, ಅಸ್ತಾಮ, ಉಬ್ಬಸ, ಮಿದುಳಿನ ಆಶ್ರಮ, ಶರೀರದ ಬಲಹೀನತೆ, ಗೂರಲು, ನಿತ್ರಾಣ, ಭೇದಿ, ಇವೇ ಮೊದಲಾದವನ್ನು ಪರಮಾಶ್ಚರ್ಯಕರವಾಗಿ ವಾಸಿ ಮಾಡುತ್ತದೆ. ಫಲವಾಗಲಿಲ್ಲವೆಂದು ರುಜುವಾತು ಮಾಡಿಕೊಟ್ಟರೆ 100 ರೂಪಾಯಿ ಸಹಿತ ಕ್ರಯವನ್ನು ವಾಪಸ್ ಕೊಡುತ್ತೇವೆ. ಸಿವಿಲ್ ಕೋರ್ಟಿನಲ್ಲಿ ವಸೂಲ್ಮಾಡಿಕೊಳ್ಳಬಹುದು ನಿಷ್ಪ್ರಯೋಜನವಾದ ಔಷಧಗಳಿಗೆ ದುಡ್ಡು ಕೊಟ್ಟು ಕಳಕೊಳ್ಳಬೇಡಿ. ಇದರಂಥಾ ಶ್ರೇಷ್ಠವೂ ಗುಣಕಾರಿಯೂ ಆದ ಔಷಧವನ್ನು ನೋಡಿ ತರಿಸಿಕೊಳ್ಳದೆ ತಪ್ಪಬೇಡಿ. ಇದರ ಫಲವು ನಿಮಗೆ ವಿಸ್ಮಯವನ್ನುಂಟುಮಾಡುತ್ತದೆ. ನವಂಬರ್ ತಾ. 10 ವರಿಗೆ ಮಾತ್ರ ಈ ಗುಂಡುಗಳ ಕ್ರಯವನ್ನು ರೂ. 2 ರಿಂದ ಹನ್ನೆರಡು ಆಣೆಗೆ ಇಳಿಸಿರುತ್ತೇವೆ. ಈ ಚಿನ್ನದಂಥಾ ಸಮಯವನ್ನು ಕಳೆಯಬೇಡಿ. ನಮಗೆ ಕಾಗದವನ್ನು ಇಂಗ್ಲೀಷಿನಲ್ಲೇ ಬರೆಯಬೇಕು.

ವಿಳಾಸ:—YOUTHINE MANUFACTORY,
[239-1] Chittoor, N. Arcot.

ಜಾಗ್ರತೆ ತರಿಸಿಕೊಳ್ಳುವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

ನಕ್ಕಲ್ ಅಡ್ಡಿಗೆಗಳನ್ನು ತರಿಸಿ ಮೋಸಹೋದೀರಿ, ಜೋಕೆ !

ಸೊಗಸಾದ ಗೆಜ್ಜೆ ಅಡ್ಡಿಗೆ, ಕ್ರಯ ರೂ. 0–8–0.

ಅಯ್ಯೊ, ಅನೇಕರು ಕಳುಹಿಸುವ ನಕ್ಕಲ್ ಗೆಜ್ಜೆ ಅಡ್ಡಿಗೆಗಳಂತೆ ಇರುವದಿಲ್ಲ. ಇದು ಎಲೆಕ್ಟ್ರಿಕ್ ಚಿನ್ನದ ಶಕ್ತಿಯಿಂದಲೂ, ಗಟ್ಟಿ ಗೆಜ್ಜೆಗಳಿಂದಲೂ ನಗಗಳ ಕೆಲಸದಲ್ಲಿ ಪ್ರಖ್ಯಾತಿ ಪಡೆದ ತಂಜಾವೂರು ಕೆಲಸಗಾರರಿಂದ ಕುಸುರಿ ಪುಗಳಿಟ್ಟು ರೇಷ್ಮೆ



ಧಾರದಿಂದ ಬಹು ಸೊಗಸಾಗಿ ಕಟ್ಟಿ, ದೀಪಾವಳಿ ಮಹೋತ್ಸವಕ್ಕೆ ಕೆಲವು ಅಡ್ಡಿಗೆಗಳನ್ನು ಮಾತ್ರ ತಯಾರಿಸಿರುತ್ತೇವೆ. ಧನವಂತರು ಕೂಡ ಇದರ ಗೆಜ್ಜೆಗಳ ಸೊಗಸು ನೋಡಿ ಕೊಂಡುಕೊಳ್ಳುತ್ತಾ ಇದಾರೆ. ಸ್ತ್ರೀಯರು, ಹುಡುಗಿಯರು ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ಒಂದು ಸಲ ಒಬ್ಬರು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸ್ಸು ಮಾಡುವರು.

ನಮ್ಮ ವಿಳಾಸ.—ಟಿ. ರಾಮಚಂದ್ರರಾವ್,
[240–1] ತಿರುಪಿಳ್ಳೆ ಬೀದಿ, ಸವ್ಕಾರ್‌ಪೇಟೆ, ಮದರಾಸು.

ಅರ್ಧ ಕ್ರಯ! ಒಂದು ತಿಂಗಳು ಮಾತ್ರ!

ನಮ್ಮ "ಸ್ಯಾಟಿನ್‌ಫ್ಯಾಕ್ಷನ್ ಫ್ಲೂಟ್" ಹಾರ್ಮೋನಿಯಂ ವಿಶೇಷ ನಾದಯುಕ್ತವಾಗಿ, ಸಮಸ್ತ ಹವೆಗಳಿಗೂ ಎಲ್ಲಾ



ಜಾತಿಯ ಸಂಗೀತಗಳಿಗೂ ಅತ್ಯಂತ ಅನುಕೂಲಿಸುವಂಥಾದ್ದು. ಮೂರು ವರುಷಗಳ ಗ್ಯಾರಂಟಿ. ಸಮ್ಮತವಾಗದಿದ್ದರೆ ಡಿಲಿವರಿ ತೆಗೆದುಕೊಂಡ 7 ದಿನಗಳೊಳಗೆ ಹಣ ವಾಪಸ್ ಕೊಡಲು ಸಿದ್ಧವಾಗಿದೇವೆ. ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 38, 40, 50; ಈಗಿನ ಕ್ರಯ ರೂ. 19, 20, 25. ಡಬ್ಬಲ್ ರೀಡ್ ಕ್ರಯ ರೂ. 60, 70, 80, 90; ಈಗಿನ ಕ್ರಯ ರೂ. 30, 35, 40, 45. ಅಪೇಕ್ಷೆಯುಳ್ಳವರು ರೂ. 5 ಅಡ್ವಾನ್ಸ್ ಕಳಿಸಿ ಸಮೀಪದ ರೈಲ್ವೆ ಸ್ಟೇಷನ್ ಹೆಸರು ತಿಳಿಸಬೇಕು.

ವಿಳಾಸ—National Harmonium Co.,

[170-11] SIMLA P.O., (E) CALCUTTA.

ವಯಸ್ಸಾಗದೇನೇ ಮುದುಕರಂತೆ ಕಾಣುವುದೇಕೆ?

ನರೆ ಕೂದಲನ್ನು ಪಡೆದವರು ನಮ್ಮಲ್ಲಿ ದೊರೆಯುವ "ರತ್ನ ಜ್ಯೋತಿ" ಕೂದಲ ಬಣ್ಣವನ್ನು ತರಿಸಿ ಹಚ್ಚಿಕೊಂಡರೆ ಅದು ಬಿಳೀ ಕೂದಲನ್ನು ಕೆಲವು ನಿಮಿಷಗಳೊಳಗಾಗಿ ಅಚ್ಚ ಕಪ್ಪಾಗಿ ಪರಿವರ್ತಿಸುವುದು. ಕೂದಲನ್ನು ರೇಷ್ಮೆಯಂತೆ ನುಣುವಾಗಿಯೂ ಹೊಳೆಯುವಂತೆಯೂ ಮಾಡುತ್ತದೆ. ಈ ನಮ್ಮ ಬಣ್ಣವನ್ನು ಪಡೆದವರು ಯೌವನವನ್ನೇ ಪಡೆದಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಬಿಳೀ ಕೂದಲಿಗೆ ಈ ಬಣ್ಣವನ್ನು ಹಾಕಿ ಅದು ಕಪ್ಪಾಗಲಿಲ್ಲವೆಂದು ರುಜುವಾತು ಕೊಡುವವರಿಗೆ

ನಾವು 100 ರೂಪಾಯಿ ಇನಾಂ ಕೊಡುತ್ತೇವೆ.

ಬಟ್ಲು, ಬುರುಸು ಸಹಿತ ಒಂದು ಪೆಟ್ಟಿಗೆ ಬಣ್ಣಕ್ಕೆ ಕ್ರಯ ರೂ. 1-0-0; ಅಂಚೆ ಸಟ್ಟ ಜೇರೆ. ವರ್ತಕರಿಗೆ ಸ್ಪೆಷಲ್ ದರ.

ದಕ್ಷಿಣ ಇಂಡಿಯಾ ಸೋಲ್ ಏಜಂಟರು:—

ಶಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[231-2] 177, ಚೀನಾ ಬಜಾರ್ ರೋಡ್, ಮದರಾಸ್.

ಇಲ್ಲಿ ನೋಡಿ. ನೂತನವಾಗಿ ಬಂದಿದ್ದು.

ವಿಚಿತ್ರ ಅಮೇರಿಕ ದೇಶದ ಮ್ಯಾಜಿಕ್ ಬಾಕ್ಸು ರೂ. 1-0-0.

ಈ ಪೆಟ್ಟಿಗೆ ಅಮೇರಿಕ ದೇಶದಲ್ಲಿ ಕಂಡು ಹಿಡಿಯಲ್ಪಟ್ಟು ಬರುವ ಜನವರಿ ಗ್ರಾಂಡು ಮಹೋತ್ಸವಕ್ಕೆ ಕಳುಹಿಸಿ ಇರುತ್ತಾರೆ. ಈ ಪೆಟ್ಟಿಗೆ ಎಲ್ಲರ ವಶದಲ್ಲಿ

ಇದ್ದರೆ ಹಣವನ್ನು ಕಾಪಾಡುವದೆಂದು ಎಲ್ಲಾ ದೊರೆಗಳು ಒಪ್ಪಿ ಇದಾರೆ. ಇದರ ಆಶ್ಚರ್ಯ ಕಂಡ ರಂಗೂನ್, ಸಿಂಗಪೂರು, ನೀಲಗಿರಿ ಮೊದಲಾದ ದೇಶಗಳಿಂದ ಬಹಳ ಜಾಸ್ತಿಯಾಗಿ ಆರ್ಡರ್ ಕಳುಹಿಸುತ್ತಾರೆ. ಈ ಪೆಟ್ಟಿಗೆಯಲ್ಲಿ ಚಿಕ್ಕ ವಸ್ತುಗಳನ್ನು ಆಗಲಿ ರೂಪಾಯಿಗಳನ್ನು ಆಗಲಿ ಇಟ್ಟು ಮುಚ್ಚಿ ಬಿಡಬೇಕು. ಅನಂತರ ಯಾರಾದರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವದಿಲ್ಲ. ಆ ವಸ್ತುಗಳನ್ನು ಇಟ್ಟವರು ಬಲಗಡೆ ಪಕ್ಕದಲ್ಲಿ ಒತ್ತಿ ತೆರೆದರೆ ಅದರಲ್ಲಿ ಇಟ್ಟ ವಸ್ತುಗಳು ಕಾಣುವದು. ಇದರ ಮ್ಯಾಜಿಕ್ ಕೆಲಸದ ಅದ್ಭುತ ನೋಡಿ 20 ರೂಪಾಯಿನ ಬೆಲೆ ಬಾಳತಕ್ಕದ್ದೆಂದು ಹೇಳುತ್ತಾರೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಏಜಂಟರು ಬೇಕಾಗಿರುತ್ತಾರೆ. ಈ ಪೆಟ್ಟಿಗೆ ಕೆಲಸ ಬರವಣಿಗೆಯಿಂದ ಉಪಯೋಗವಿಲ್ಲ. ಒಂದನ್ನು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾನಾಗಿಯೇ ಶಿಫಾರ್ಸು ಮಾಡುವರು. [149-12]

ವಿಳಾಸ:—ಮುಪರಾಟಿ ಟ್ರೇಡಿಂಗ್ ಕಂಪನಿ,

16, ತಿರುಪಳ್ಳಿ ಬೀದಿ, ಮದರಾಸು.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.



ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವುದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ. [204-6]

ಕ್ರಯ ಡಬ್ಬಿ 1 ಕ್ಕೆ ರೂ. 3-0-0 ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

ಇದರ ಪೂರಾ ಕೇಟಲಾಗು ಅಪೇಕ್ಷಿಸುವವರು 6 ಕಾಸಿನ ಸ್ಟ್ಯಾಂಪನ್ನು ಕಳುಹಿಸಿರಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಅಕ್ಟೋಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಅಕ್ಟೋಬರ್ ಹಬ್ಬದ ಮಹೋತ್ಸವಕ್ಕಾಗಿ ಅರ್ಧಾರೇ ಕ್ರಯದ ಕೈಗಡಿಯಾರವನ್ನು ಅಕ್ಟೋಬರ್ ಒಳಗೆ ತರಿಸಿಕೊಳ್ಳುವವರಿಗೆ ರೂ. 1-14-0 ಆಣೆಗೆ ಕೊಡಲ್ಪಡುತ್ತೆ. [111-22]

ವಿಳಾಸ—ವಿ. ಕೆ. ಕಣ್ಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಜನ ಮಾತ್ರೆ—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 6 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ನಂಬಿಗೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 6 ಕ್ಕೆ 1 ರೂ, 12 ಕ್ಕೆ 2½ ರೂ.

[126-9] ನಮ್ಮ ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ? –

ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆದ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಇದು ಹೊಸ ಪುಷ್ಪಗಳ ಗಮಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಬೀರುವಂಥಾದ್ದು. ಆಟೋ ಮೋಹಿನಿಯ

ಕ್ರಯ ½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ 2—0—0.

1 ಡ್ರಾಮ್ ಕೊಳವೆಗೆ	0—12—0	ಮಾದರಿ ಸೀಸೆಗೆ	0—2—0
½ ,, ,,	0—8—0	ಕಾರ್ಡು ಡಜನ್‌ಗೆ	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಾಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದು. ಕಣ್ಣು ಮತ್ತು ಮೆದುಳಿಗೆ ತಂಪನ್ನೂ ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಉಪಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [207-5]

ಕ್ರಯ 1 ಬಾಟ್ಲಿಗೆ ರೂ. 1-0-0.
,, 3 ,, ,, 2-10-0.

ಸೋಲ್ ಏಜಂಟರು—ಶಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

177, ಚೈನಾಬಜಾರ್ ರೋಡ್, ಮದರಾಸ್.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.--ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿ

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವ., ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಡಿಗೂ ವೈದ್ಯರ ಸಮಯವನ್ನು ಕಾದು ಕೊನೆಯುಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಿನ ನೀರಿನಿಂದುಂಟಾಗುವ ವಿ ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸು ರೆಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುವನ್ನೆ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನ ಪ್ರತಿ ಸೀಸೆಯೊಡನೆಯೂ ಇರುವುದು. 300 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲು ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎನ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀ ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾ ಘುವ ವೈದ್ಯಶಾಲೆಯ ಪ್ರೊಪ್ರೈಟರವರಾದ ಶಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ನಾನು ಕುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ.

[189-8] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘುವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲಾ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 16 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡುಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವ ತಲೆಯಲ್ಲಿರುವ ಹೊಟ್ಟನ್ನು ಪರಿಹರಿಸುವದು. ಕ್ಷಣದಲ್ಲಿ ಮಾ ಕಳೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದ ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇ ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಕೇತಿಗೆ, ಕ್ಯಾದಿಗೆ, ಗುಲಾಬಿ, ವಿರೂ ಪಾಕ್ಷಿ, ದವನ, ಮರುಗ, ಇತ್ಯಾದಿಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ತೈಲವು ಅವಶ್ಯಕವಾಗಿ ಇರಬೇಕಾದದ್ದು.

16 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡೆ ಗಿಣಿಗಳು 6, ಕಾರ್ನೇಷನ್ ಬ್ರೂಚ್ 1, ಪವ ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[223-3] ನಂ. 44, ನಂಬುಳಯ್ಯರ ಬೀದಿ, ಮದರಾಸು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಜವೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರಿ ಟು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ ಬೇಗ ಬರೆದು ತರಿಸಿಕೊಳ್ಳಿ.

[119-17]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

GRAND CLEARANCE SALE—Rs. 1-15-0.

ಯೋಗ್ಯತಾ ಪತ್ರಿಕೆ.—ನಾನು ಖಾತ್ರಿಯಿಂದ ಎಲ್ಲರಿಗೂ ತಿಳಿಸುವುದೇನೆಂದರೆ, ನಿಮ್ಮಿಂದ ನಾನು ತರಿಸಿಕೊಂಡ ಲೇಡೀಸ್ ಗಡಿಯಾರ ಉಪಯೋಗಕ್ಕೆ ಬಹಳ ಶ್ರೇಷ್ಠವಾಗಿದೆ. ಗಂಟೆ ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಇತರ ಕಂಪನಿಯವರು ಇಂಥಾ ಗಡಿಯಾರವನ್ನು ಕಳುಹಿಸುವದಿಲ್ಲ. ಮತ್ತು 3 ಗಡಿಯಾರಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ. ಮ್ಯಾನೇಜರ್, ಇರಾಯುಡಾತನ ಆಫೀಸು, ತಿರುಚಿನಾಪಳ್ಳಿ.

ಈಗಿನ ಕಾಲದಲ್ಲಿ ಕೆಲವರು ಉಪಯೋಗವಿಲ್ಲದ ಗಡಿಯಾರಗಳನ್ನು ಇಟ್ಟು ಇದು ಆದಷ್ಟಾಗಿ ಬಹು ಚೆನ್ನಾಗಿ ಬರೆದು ಇನಾಂ ಸಾಮಾನು ಹಾಕಿ ಮೋಸ ಮಾಡುವರು.

ಸುಂದರವಾದ ಲೇಡಿಸ್ ಸ್ಪ್ರಿಂಗ್ ಪಾಕೆಟ್ ವಾಚ್.

ಅಸಲು ಕ್ರಯ ರೂ. 3-11-0; ಈಗ ರೂ. 1-15-0.

ಈ ಪತ್ರಿಕೆಯಲ್ಲಿ ತೋರಿಸಿರುವ ಗಡಿಯಾರ ಸಿಲ್ವರ್‌ಸನ್ ಬ್ಯಾಲೆನ್ಸ್ ಬಹು ಸೊಗಸಾದ ಗಡಿಯಾರ. ಇದು ನೋಡುವವರಿಗೆ ಮುಚ್ಚಟವಾಗಿ ಇರುತ್ತೆ. ಇದು ಚಿಲ್ಲರೆ 3 ರೂಪಾಯಿ ಕ್ರಯದ ಬೆಲೆಬಾಳುವ ಗಡಿಯಾರಗಳನ್ನು ಕೊಂಡು ಹಣ ಕಳೆದುಕೊಳ್ಳಬೇಡಿ. 5 ವರ್ಷದ ಗ್ಯಾರಂಟಿ. ಇದೇ ಅಕ್ಟೋಬರ್ ತಿಂಗಳಿಗೆ ತರಿಸಿಕೊಳ್ಳುವರಿಗೆ ಮಾತ್ರ 1-15-0 ಕೊಡಬೇಕೆಂದು ನಮ್ಮ ನಿರ್ಧಾರ.

ನಮ್ಮ ವಿಳಾಸ.—

ದಾಸ್ ವಾಚ್ ಅಂಡು ಕಂಪನಿ, ಡೈರೆಕ್ಟ್ ಇಂಪೋರ್ಟರ್ಸ್,

[119-12] 9, ಇರುಳಪ್ಪನ ಬೀದಿ, ಮದರಾಸು.

ನಡುವಿನ ನೋವು.

ಹಾಸಿಗೆಯಲ್ಲಿ ನೋವಿನಿಂದ ಹೊರಳಾಡುತ್ತಾ ಇದ್ದು, ಕೇಳಲಾಗದಂಥಾ ರೀತಿಯಲ್ಲಿ ಎದ್ದು, ಸಂತೋಷವಿಲ್ಲದವರಾಗಿದ್ದೀರೋ? ಹಾಗಿದ್ದರೆ ಬಹಳ ನಡುನೋವು ನಿಮಗುಂಟು. ಉದಾಸೀನ ಮಾಡಲಾಗದು. ಹಲ್ಲು ಕಿರಿಗಿ ಸಹಿಸಬಾರದು.'' ಟಿಲೆಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಜ್ಜುವದರಿಂದ ಅದನ್ನು ನಿಲ್ಲಿಸಬೇಕು.

ವಿಸ್ಕಾನ್ಸಿನ ಮ್ಯಾಡಿಸನ್‌ನಲ್ಲಿರುವ ಮಿ॥ ಸಿ. ಸಕ್ಲರ್ ಬರೆಯುತ್ತಾನೆ:— ''ಮೂರು ತಿಂಗಳು ನಡುನೋವಿನಿಂದ ನಾನು ಬಹು ಹಿಂಸೆಪಟ್ಟು ಯಾವ ಕೆಲಸಕ್ಕೂ ಅಯೋಗ್ಯನಾಗಿ ಹಾಸಿಗೆಯಲ್ಲಿಯೇ ಬಿದ್ದಿದ್ದೆನು.

ಟಿಲೆಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಬೇಕೆಂಬ ಶಿಫಾರಸ್ಸು ಬಂತು. ಅದರಂತೆಯೇ ಮಾಡಿ ಅದರ ಫಲಿತಾಂಶವನ್ನು ಕಂಡು ಆಶ್ಚರ್ಯಪಟ್ಟೆನು— 6 ಸೀಸೆಗಳ ತೈಲವನ್ನು ಉಪಯೋಗಿಸಿ ಈಗ ಚೆನ್ನಾಗಿ ನಿದ್ದೆ ಮಾಡುತ್ತೇನೆ. ಕೆಲಸಕ್ಕೆ ಹೋಗುತ್ತೇನೆ.''

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧದ ಅಂಗಡಿಗಳಲ್ಲಿಯೂ ಸಿಗುತ್ತೆ.

[91-87]

ಸಾಟಿಯಿಲ್ಲದ ಬಲವರ್ಧಕ ಟಾನಿಕ್ಕು ಮಾತ್ರೆಗಳು

[247-50]

ಈ ಮಾತ್ರೆಗಳು ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು. ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು. ಮೆದುಳಿಗೆ ಬಲವನ್ನು ಕೊಟ್ಟು, ಸ್ಮರಣಶಕ್ತಿಯನ್ನು ಹೆಚ್ಚಿಸುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವದು. ಉತ್ಸಾಹವು, ಬುದ್ಧಿಕುಶಲತೆಯು, ಶರೀರ ಕಾಂತಿಯು, ಇವುಗಳನ್ನು ಕೊಡಬಲ್ಲದು.

40 ಮಾತ್ರೆಗಳ ಡಬ್ಬಿ ಕ್ರಯ ರೂಪಾಯಿ 1-0-0.

ಸಮಸ್ತಜಾತಿಯ ರೋಗಗಳಿಗೂ ನಮ್ಮಲ್ಲಿ ಅತ್ಯಂತ ಗುಣಕಾರಿಯಾದ ಔಷಧಗಳಿರುತ್ತವೆ. ಕ್ಯಾಟಲಾಗನ್ನು ಬಿಟ್ಟಿ ಕಳಿಸುವೆವು. ಛಾರ್ಜಿಲ್ಲದೆ ಚಿಕಿತ್ಸೆಗಳನ್ನು ಹೇಳುತ್ತೇವೆ. ರೋಗಿಗಳಿಂದ ಬರತಕ್ಕ ಕಾಗದಪತ್ರಗಳನ್ನು ಅತ್ಯಂತ ಗೋಪ್ಯವಾಗಿಡುವೆವು. ನಮ್ಮ ವಿಳಾಸ—

ರಾಜವೈದ್ಯ ನಾರಾಯಣಜಿ ಕೇಶವಜಿ,

೨೦, ಚೀನಾ ಬಜಾರ್ ರೋಡ್, ಮದ್ರಾಸು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಖು-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ—ಸೊಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವರಸೇಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ಖಾತರಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟಿ.ಖ ಪ್ರತ್ಯೇಕ.

[231-47] ವಿಳಾಸ:—ಸದ್ವೈದ್ಯಶಾಲಾ, ಸಂಜನಗೂಡು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಈ ವಿದ್ಯಾರ್ಥಿಗಳು ಓದಬೇಕಾದ ವಿಷಯಗಳನ್ನು ವಿಸ್ತಾರವಾಗಿ ಇಲ್ಲಿ ...ತಿಳಿಸಬೇಕಾದದ್ದಿಲ್ಲ. ಇದನ್ನು ವಿಸ್ತರಿಸುವುದು ಆ ವೈದ್ಯವಿಷಯವನ್ನು ತಿಳಿಯದ ...ವ್ಯಕ್ತಿಗೆ ಅಸಾಧ್ಯವು. ನನ್ನ ಉದ್ದೇಶವು ನೆರವೇರಬೇಕಾದರೆ ಈ ಸಿಬ್ಬಂ ...ದಿಗೆ ಕೆಲವು ವಿಶೇಷ ವಿಷಯಗಳನ್ನು ಕಲಿಸಬೇಕು. ಸಿಡುಬನ್ನು ಹಾಕುವ ...ಕ್ರಮವನ್ನು ಮತ್ತು ಪ್ಲೇಗ್ ಇನಾಕ್ಯುಲೇಷನ್ ಮಾಡುವ ರೀತಿಯನ್ನೂ ...ಕಲಿಸಬೇಕು. ಸಾಮಾನ್ಯವಾದ ರೋಗಗಳ ಸ್ವಭಾವವನ್ನು ತಿಳಿದುಕೊ ...ಳ್ಳುವುದನ್ನೂ, ರೂಢಿಯಲ್ಲಿರುವ ಮೂಲಿಕೆಗಳ ಪ್ರಯೋಗವನ್ನೂ ಅವರು ಕಲಿಯ ...ಬೇಕು. ಈ ದೇಶದ ಮೂಲಿಕೆಗಳ ಪ್ರಯೋಗವನ್ನೂ ಈ ದೇಶದ ಎಲ್ಲಾ ಭಾಗಗ ...ಳಲ್ಲಿಯೂ ದೊರೆಯುವ ಗಿಡಗಳ ಮತ್ತು ಮೂಲಿಕೆಗಳ ಗುಣಗಳನ್ನೂ ಮುಖ್ಯ ...ವಾಗಿ ತಿಳಿದುಕೊಳ್ಳಬೇಕು. ಅಕಸ್ಮಾತ್ತಾಗಿ ಸಂಭವಿಸುವ ಅಪಾಯಗಳ ಮತ್ತು ...ಗಾಯಗಳ ವಿಷಯದಲ್ಲಿ ತಕ್ಷಣವೇ ಮಾಡಬೇಕಾದ ಸಹಾಯವನ್ನು ಮುಖ್ಯ ...ವಾಗಿ ಕಲಿಯಬೇಕು. ರೋಗಿಗಳನ್ನೂ ಗಾಯಪಟ್ಟಿರುವ ಜನಗಳನ್ನೂ ಸ್ವಲ್ಪವೂ ...ಹೆಚ್ಚು ಬಾಧೆ ಅಥವಾ ಅಪಾಯವಿಲ್ಲದಂತೆ ತೆಗೆದುಕೊಂಡು ಹೋಗಲು ...ಬೇಕಾದ ಏರ್ಪಾಟನ್ನೂ ತಿಳಿಯಬೇಕು. ಇದನ್ನು ತಿಳಿದುಕೊಳ್ಳುವುದು ...ಬಹು ಮುಖ್ಯವಾದದ್ದು. ಏಕೆಂದರೆ ಗ್ರಾಮಾಂತರದ ವೈದ್ಯರು ಕಠಿಣವಾದ ...ರೋಗಗಳನ್ನು ಗುಣಮಾಡಲು ತಮಗೆ ಸಾಧ್ಯವಲ್ಲವೆಂಬುದನ್ನು ಜಾಗ್ರತೆಯಾಗಿ ...ತಿಳಿದುಕೊಂಡು, ರೋಗಿಗಳನ್ನು ತಾಲ್ಲೂಕು ಅಥವಾ ಡಿಸ್ಟ್ರಿಕ್ಟ್ ಕಸಬಾ ...ಗಳಿಗೆ ತೆಗೆದುಕೊಂಡು ಹೋಗಲು ಏರ್ಪಾಟು ಮಾಡಬೇಕು. ಟವುನ ಮೇ ...ಲ್ಭಾಗದ ಮನುಷ್ಯರುಗಳು ಕೆಲಸಮಾಡಿರುವಾಗಲೂ ಮತ್ತು ಸಾಮಾನ್ಯವಾಗಿ ಗಾಯ ...ವಾಗಲೂ ಶಸ್ತ್ರ ಚಿಕಿತ್ಸೆ ಮಾಡುವುದನ್ನೂ, ಸಹಾ ಅವರಿಗೆ ಕಲಿಸಬಹುದು. ...ಬ್ಬಾದ ಹೆಂಗಸರನ್ನು ಪಾಲಿಸುವ ರೀತಿಯನ್ನೂ ಸಹ ಅವರು ತಿಳಿದುಕೊ ...ಳ್ಳಬೇಕು. ಈ ದೇಶದ ಪ್ರಕೃತ ಸ್ಥಿತಿಯಲ್ಲಿ ಪ್ರಸವ ಚಿಕಿತ್ಸೆಗೆ ಪುರುಷ ವೈದ್ಯ ...ರನ್ನು ಬಹಳ ಮಟ್ಟಿಗೆ ಉಪಯೋಗಿಸಿಕೊಳ್ಳುತ್ತಾರೆಂಬ ನಂಬಿಕೆಯು ಇಲ್ಲ. ...ಆದರೂ ಇವರು ಪ್ರಸವ ವಿಚಾರವನ್ನೂ ಮತ್ತು ಚಿಕಿತ್ಸಾ ವಿಷಯವನ್ನೂ ತಿಳಿದು ...ಕೊಂಡರೆ ಹಳ್ಳಿಯ ಸೂಲಗಿತ್ತಿಯರು ಮಾಡುವ ಕೆಲಸದಲ್ಲಿ ಮೇಲ್ವಿಚಾರಣೆ ...ಮಾಡುತ್ತಿರುವುದಕ್ಕೂ, ಹೆರಿಗೆ ಕೋಣೆಯ ಸ್ಥಿತಿಯನ್ನೂ, ಅದರ ಸುತ್ತು ...ಮುತ್ತು ಇರುವ ಜಾಗವನ್ನೂ ಉತ್ತಮತರವಾಗಿರುವಂತೆ ಮಾಡುವುದಕ್ಕೂ ...ಇವರು ಸಾಮಾನ್ಯವಾಗಿ ಶಕ್ತರಾಗುತ್ತಾರೆ. ಅನೇಕ ಹೆಂಗಸರ ಮತ್ತು ಮಕ್ಕಳ ...ಮರಣಗಳನ್ನು ಈ ರೀತಿಯಿಂದ ನಿಲ್ಲಿಸಬಹುದು. ಮುಖ್ಯವಾಗಿ ಆಹಾರ, ಸ್ನಾನ, ...ಬಟ್ಟೆ ಮತ್ತು ವಾಸಸ್ಥಳ, ಈ ವಿಷಯಗಳಲ್ಲಿ ಆರೋಗ್ಯಶಾಸ್ತ್ರದ ಸುಲಭ ...ವಿಷಯಗಳನ್ನು ತಿಳಿಯಪಡಿಸಬೇಕು. ಬಾವಿಗಳಲ್ಲಿಯೂ, ಮನೆಗಳಲ್ಲಿಯೂ ...ಚೊಕ್ಕಟ ಮಾಡುವ ವಿಷಯದಲ್ಲಿ ಉಪಯುಕ್ತವಾದ ಬುದ್ಧಿ ವಿಚಾರ ...ವನ್ನು ಚೆನ್ನಾಗಿ ತಿಳಿಯಪಡಿಸಬೇಕು. ಪಶುಚಿಕಿತ್ಸಾ ವಿಚಾರವನ್ನೂ ಸ್ವಲ್ಪ ...ಮಟ್ಟಿಗೆ ತಿಳಿಯುವುದು ಬಹು ಉಪಯೋಗವಾದದ್ದು. ಬೋಧನೆಯು ಬೇರೆ ...ಭಾಷೆಯಲ್ಲಿರಬೇಕಲ್ಲದೆ ಚೆನ್ನಾಗಿ ನಡೆಸಲ್ಪಡಬೇಕು. ತಿಳಿದು ಸಾಧ್ಯವಾದವುಗಳ ...ನ್ನು, ಶಾಸ್ತ್ರದ ತಿಳುವಳಿಕೆಯನ್ನು ಅವಶ್ಯಕವಾದದ್ದಕ್ಕಿಂತಲೂ ಹೆಚ್ಚಾಗಿ ...ಕಲಿಸಲವಶ್ಯಕವಿಲ್ಲ.

ಮೈಸೂರು ನಗರಾಭಿವೃದ್ಧಿ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಮೆಂಬರುಗಳು ...ನ ತಾ. 26 ನೇ ಮಂಗಳವಾರ ಬೆಳಿಗ್ಗೆ ತಿಂಗಳು ಕಟ್ಟೆಯ ವಿಕ್ಟೋರಿಯಾ ಹೌ ...ಸ್ ಬಂಗಲೆಯಲ್ಲಿ ನಡೆಸಿದರು. ಪ್ರೆಸಿಡೆಂಟ್ ಮ|| ಟಿ ಜಿ. ಲಕ್ಷ್ಮೀಪತಿರಾಯರು, ...ಶ್ರೀನಿವಾಸರಾಯರು, ರೆವ್ ಜಿ ಡಬ್ಲ್ಯು ಸಾಡೆಸನ್‌ರವರು, ಡಾ|| ...ಕೆ. ಹಾಲೆಯವರು, ಮಿ|| ಮಹಮದ್ ಜಾಫರ್ ಸಾಹೇಬರು, ಮ|| ಜಿ. ...ನಾರಾಯಣರಾಯರು, ಮ|| ಎಂ. ವೆಂಕಟಕೃಷ್ಣಯ್ಯನವರು,—ಮೆಂಬರುಗಳು ...ಬಂದಿದ್ದರು. ಆ ವಿಚಾರಣೆಯಲ್ಲಿ ಚರ್ಚೆಗೆ ಬಂದು ತೀರ್ಮಾನವಾದ ...ಮುಖ್ಯ ವಿಚಾರಗಳ್ಯಾವವೆಂದರೆ—

...ರಾಜಧಾನಿಯ ರೈಲ್ವೆ ಸ್ಟೇಷನ್‌ಗೆ ಹೋಗುವ ಬಾಗಿಲ ಬಳಿ ಒಂದು ಚೌಕ ...ವನ್ನು ಅಂದವಾಗಿ ಮಾಡಿಸುವುದಕ್ಕೆ ಮೊದಲು 1,300 ರೂಪಾಯಿನ ಅಂದಾಜು ...ತಯಾರಾಗಿತ್ತು. ಅದನ್ನು ಈಚೆಗೆ ಬದಲಾವಣೆ ಮಾಡಿ 2,000 ರೂಪಾ ...ಯಿ ಖರ್ಚು ಪಟ್ಟಿಯನ್ನು ಸಿದ್ಧಪಡಿಸಿದ್ದರು. ಆ ರೀತಿ ಕಾಮಗಾರಿ ಮಾಡಿ ...ಸಬಹುದೆಂದು ತೀರ್ಮಾನವಾಯಿತು.—ಕಳೆದ 1914-15 ನೇ ಸಾಲಿನಲ್ಲಿ ನಗ ...ರಾಭಿವೃದ್ಧಿಯ ಕಾಮಗಾರಿಗಳಿಗೆ ಒಟ್ಟು 3,78,006 ರೂಪಾಯಿ ಖರ್ಚಾಗಿದೆ ...ಎಂದು ಲೆಕ್ಕಗಳು ಓದಲ್ಪಟ್ಟವು.—ಮಂಡಿಪೇಟೆಯಲ್ಲಿ ಒಂದು ಬಾಲಿಕಾ ಪಾಠ

* ಈ ಪ್ರಕಾರವೇ ಸ್ತ್ರೀವೈದ್ಯರುಗಳನ್ನೂ ತಯಾರುಮಾಡಿ ಅಂತಹ ಸ್ತ್ರೀಯ ...ರನ್ನು ಕೃಷಿ ಹೋಬಳಿಯಲ್ಲಿರುವ ಹಳ್ಳಿ ವೈದ್ಯನ ಜೊತೆಯಲ್ಲಿಡುವದು ಸರ್ವೋ ...ತ್ತಮವಾದದ್ದು. ಇವರುಗಳು ಸೂಲಗಿತ್ತಿಯರಾಗಿರುವುದಲ್ಲದೆ, ಸುಲಭವಾದ ಚಿಕಿ ...ತ್ಸೆಗಳನ್ನೂ ಮಾಡುವರು. ಈ ಪ್ರಕಾರ ಸಾಧ್ಯವಾದಮಟ್ಟಿಗೆ ಮಾಡಬೇಕು. ಆದರೆ ...ಸ್ತ್ರೀ ಶಿಕ್ಷಣ ಹೆಚ್ಚಿಲ್ಲದಿರುವುದರಿಂದಲೂ, ಈ ವಿಷಯಗಳನ್ನು ಕಲಿಯುವುದಕ್ಕೆ ...ಬೇಕಾದ ಹೆಂಗಸರು ಸಾಕಾಗುವಷ್ಟು ಜನ ದೊರೆಯದಿರುವುದರಿಂದಲೂ, ...ಹೋಬಳಿಗಳಿಗೆ ಮೇಲೆ ಸೂಚಿಸಿರುವ ಏರ್ಪಾಟು ಸಾಕಾಗಿರುವುದು. ...ವೈದ್ಯ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನೂ ವಿದ್ಯಾರ್ಥಿನಿಯರನ್ನೂ ಪ್ರಾರಂಭ ...ದಿಂದಲೇ ತಯಾರುಮಾಡುವುದಕ್ಕೆ ತಕ್ಕವುಗಳಾಗಿರಬೇಕು.

ಶಾಲೆಯನ್ನು ಕಟ್ಟುವುದಕ್ಕೆ ಅಲ್ಲಿರುವ ಸುಮಾರು 60×80 ಗಜಗಳ ನಿವೇಶನ ವನ್ನು ಮಿ|| ಸಾಬೇ ಸಾಹೇಬರಿಗೆ ಮುಫತ್ತಾಗಿ ಕೊಡಬಹುದೆಂದು ಇಚ್ಛೆಪಟ್ಟಿ ದ್ದರು.—ಗಾರ್ಡನ್ ಹೋಟೇಲಿನ ಎದುರಿಗೆ ಇದ್ದ ಕಟ್ಟಡವನ್ನು ಬಹು ಕಾಲದ ಹಿಂದೆ ಒಡೆದು ಹಾಕಿ ರಸ್ತೆಗೆ ಸೇರಿಸಿರುವುದರಿಂದ ಅದರ ಮಾಲೀಕರಾದ ಪದ್ಮ ರಾಜಯ್ಯನವರಿಗೆ ಪ್ರತಿಫಲವನ್ನು ಕೊಡಬಹುದೆಂದೂ, ಚಿಕ್ಕಹಳ್ಳಿ ಬಡಾವಣೆ ಯಲ್ಲಿ ಅವರಿಗೆ ಸೇರಿದ್ದ ಜಮೀನನ್ನು ಟ್ರಸ್ಟ್ ಬೋರ್ಡಿನವರು ತೆಗೆದುಕೊಂಡು ಮನೆ ಕಟ್ಟುವವರಿಗೆ ಹಂಚಿಬಿಟ್ಟಿರೋಣದರಿಂದ ಅದರ ಪ್ರತಿಫಲವನ್ನೂ ಅವರಿಗೆ ವಾಪಸ್ ಮಾಡಬಹುದೆಂದೂ ಮೆಂಬರುಗಳು ಒಪ್ಪಿಕೊಂಡರು.—ಪಟ್ಟಣದ ರಾಜ ಬೀದಿಗಳಲ್ಲಿ ಹಾಕುವ ಸಾಲುಗಿಡಗಳನ್ನು ಸರಿಮಾಡಿ ಬೆಳೆಸುವುದಕ್ಕೆ 500 ರೂ ಪಾಯಿ ಖರ್ಚು ಮಾಡಬಹುದೆಂದೂ, ಕೋಟೆಯ ಎರಡನೇ ಉತ್ತರ ಬಾಗಿ ಲಿಂದ ಉದ್ದಕ್ಕೆ ಹೊಸದಾಗಿ ರಸ್ತೆಹಾಕಿ ಜಲ್ಲಿ ಮರಳು ಇಟ್ಟು ಗಟ್ಟಿಮಾಡುವು ದಕ್ಕೆ 3,800 ರೂಪಾಯಿ ಖರ್ಚುಮಾಡಬಹುದೆಂತಲೂ, ಪುರಭವನದ ವಿಷಯ ದಲ್ಲಿ ನೋಡಿ ಅಭಿಪ್ರಾಯವನ್ನು ಬರೆದುಕೊಟ್ಟ ಮಿ|| ಗೆಡ್ಡಿಸ್ ರವರಿಗೆ ಟ್ರಸ್ಟ್ ಬೋರ್ಡ್ ಫಂಡಿಂದ 1 200 ರೂಪಾಯಿ ಪ್ರತಿಫಲವನ್ನು ಕೊಡಬಹುದೆಂದೂ ಮೆಂಬರುಗಳು ಒಪ್ಪಿಕೊಂಡರು.

ಸಿಮೆಂಟ್ ಗಾರೆ ಪುಡಿಯನ್ನು ಒದಗಿಸುವುದಾಗಿ ಒಪ್ಪಿರುವ ವರ್ತಕರ ಕಂಟ್ರ್ಯಾಕ್ಟನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿ, ಆ ಪುಡಿಯು ತೃಪ್ತಿಕರ ವಾಗಿಲ್ಲವೆಂದು ಕಂಡುಬಂದ ಪಕ್ಷದಲ್ಲಿ ಅದನ್ನು ವಾಪಸು ತೆಗೆದುಕೊಳ್ಳು ವುದಕ್ಕೆ ಕಂಟ್ರ್ಯಾಕ್ಟರಿಂದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ.—ಕೋಟೆ ಆವರಣದೊಳಗಿರುವ ಮನೆಗಳನ್ನೆಲ್ಲಾ ಸಂಪೂರ್ಣವಾಗಿ ಒಡೆದುಹಾಕುವುದಕ್ಕೆ 14 ಲಕ್ಷ ರೂಪಾಯಿ ಅಂದಾಜು ಪಟ್ಟಿ ತಯಾರಾಗಿದೆ ಸರ್ಕಾರದವರು ಈ ಬಾಬನ್ನು ಸದ್ಯ ನಿಲ್ಲಿಸಬೇಕೆಂದು ಹುಕುಂ ಕೊಟ್ಟಿ ದ್ದಾರೆ.—ಕಟ್ಟಡಗಳನ್ನು ಅಲಂಕಾರವಾಗಿ ರಚಿಸುವುದಕ್ಕೆ ಸೀಮೆಗೆ ಹೋಗಿ ಬಂದಿರುವ ಮ. ಲಕ್ಷ್ಮೀನರಸಪ್ಪನವರ ತಾಬೆಯಲ್ಲಿ ಸರ್ಕಾರದವರು 101-5-135 ರೂಪಾಯಿ, 80-4-100 ರೂಪಾಯಿ ಸಂಬಳದ ಇಬ್ಬರು ನೌಕರರನ್ನು ಸ್ಯಾಂಕ್ಷನ್ ಮಾಡಿ, 100 ರೂಪಾಯಿ ಸಂಬಳದವರನ್ನು ಬೆಂಗಳೂರು ನಗರ ದಲ್ಲೂ, 81 ರೂಪಾಯಿಯವರನ್ನು ರಾಜಧಾನಿಯಲ್ಲೂ ಕೆಲಸ ಮಾಡುವಂತೆ ಸ್ಯಾಂಕ್ಷನ್ ಆಗಿರುತ್ತದೆ.—ದೇವರಾಜ ಮಾರ್ಕೆಟ್ಟಿನ ಚೌಕದಲ್ಲಿ ಮನೆ ಅಂಗ ಡಿಗಳನ್ನು ಕೊಂಡು ಒಡೆದು ಅಲಂಕಾರವಾಗಿ ಮಾಡುವುದನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ. ಕಟ್ಟಗಳ ಪ್ರತಿಫಲಕ್ಕೆ 2,96,700 ರೂಪಾಯಿ ಸ್ಯಾಂಕ್ಷನ್ ಆಗಿದೆ. ಈ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕೆಂದು ತೀರ್ಮಾನ ವಾಯಿತು.—ಶ್ರೀರಂಗಪಟ್ಟಣದ ರಸ್ತೆಯಲ್ಲಿ ಹೆಲ್ತ್ ಕ್ಯಾಂಪಿನ ಪಕ್ಕದಲ್ಲಿರುವ ಸುಮಾರು 2½ ಎಕರೆ ಜಮೀನನ್ನು ಪ್ರತಿಫಲಕೊಟ್ಟು ಮ್ಯುನಿಸಿಪಲ್ ಬೋರ್ಡ್ ಎಂಬಾ ತನಿಂದ ಕೊಂಡು ಹೆಲ್ತ್ ಕ್ಯಾಂಪನ್ನು ಕಟ್ಟಬಹುದೆಂದು ಇಚ್ಛೆಪಟ್ಟ ದ್ದರು.—ದೊಡ್ಡಪೇಟೆಯಲ್ಲಿ ಬಾಡಿ ಗಾರ್ಡ್ ಲೈನ್‌ಗೆ ಎದುರಾಗಿ ಟ್ರಸ್ಟ್ ಬೋರ್ಡಿನವರು ಒಂದು ಮಾದರಿ ಮನೆಯನ್ನು ಹೊಸದಾಗಿ ಕಟ್ಟಿದಾರೆ. ಅದರ ಪಕ್ಕದಲ್ಲಿರುವ ಅಬ್ದುಲ್ ರಹಿಮಾನ್ ಷರೀಫ್ ಎಂಬಾತನ ಮನೆಯನ್ನು ಕೊಂಡುಕೊಂಡು ಅಭಿವೃದ್ಧಿ ಮಾಡಬೇಕೆಂದು ಮೆಂಬರುಗಳು ಒಪ್ಪಿದರು.—ಸಂಸ್ಕೃತ ಕಾಲೇಜಿನ ಪಕ್ಕದಲ್ಲಿ 1,60,000 ರೂಪಾಯಿಗೆ ಹೊಸದಾಗಿ ಮ್ಯುನಿಸಿ ಪಲ್ ಆಫೀಸನ್ನು ಕಟ್ಟುವಂತೆ ಸ್ಯಾಂಕ್ಷನ್ ಆಗಿದೆ. ಇದಕ್ಕೋಸ್ಕರ ಅಲ್ಲಿರುವ ಮನೆಗಳನ್ನು ಕೊಂಡು ಒಡೆದುಹಾಕುವುದಕ್ಕೆ ಚಾಲ್ತಿ ಸಾಲಿನಲ್ಲಿ 5,000 ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಿರುತ್ತಾರೆ.

ಡಿಸ್ಟ್ರಿಕ್ಟ್ ಉಪನ್ಯಾಸಕರು.

ಬೇಲೂರು ತಾಲ್ಲೂಕು ಹಳೇಬೀಡಿಗೆ ತಾ. 27 ನೇ ಬುಧವಾರ ಮಧ್ಯಾಹ್ನ ಹಾಸನದ ಉಪನ್ಯಾಸಕರು ದಯಮಾಡಿ ಇಲ್ಲಿನ ಸ್ಕೂಲಿನ ಹಾಲಿನಲ್ಲಿ ಲೆಕ್ಚರ್ ನಡೆಸಲಿಕ್ಕೆ ಸಿದ್ಧರಾಗಿದ್ದರು. ಆದರೆ ಈ ಊರಿನಲ್ಲಿಯೂ ಸುತ್ತುಮುತ್ತಲ ಪ್ರದೇಶದಲ್ಲಿಯೂ ಪ್ಲೇಗಿನ ಸೋಂಕು ವ್ಯಾಪಿಸಿಕೊಂಡು ಜನರೆಲ್ಲರೂ ಹೊರಗೆ ಚೆದರಿಹೋಗಿ ಶೆಡ್ಡುಗಳಲ್ಲಿ ವಾಸಮಾಡುತ್ತಾ ಇರುವುದರಿಂದ ಸ್ಕೂಲ್ ಮಾಸ್ಟ ರು, ಗ್ರಾಮಾಧಿಕಾರಿಗಳೂ ಸಹ ಎಷ್ಟು ಪ್ರಯಾಸಪಟ್ಟರೂ ಜನಗಳು ಸೇರಲವ ಕಾಶವಾಗಲಿಲ್ಲ. ಇದಕ್ಕೆ ಹಿಂದೆ ಎರಡನೇ ದಿವಸವೂ ಹಾಗೆಯೇ ಆಯಿತು. ಆ ದಿವಸ ಸಂಜೆಯಾದ್ದರಿಂದ ಕೆಲವು ಮಂದಿ ಸೇರಿದ್ದು ಕಾರ್ಯ ನೆರವೇರಿಸುವುದಕ್ಕೆ ಸ್ವಲ್ಪ ಅನುಕೂಲವಾಯಿತು. ಹೀಗೆ ಸೇರಿದ ಅಲ್ಪ ಸಂಖ್ಯೆಯ ಜನರಿಗೇನೇ ಉಪನ್ಯಾಸಕರು ಸ್ತ್ರೀ ಪುರುಷರ ವಿದ್ಯಾಭ್ಯಾಸದ ಅವಶ್ಯಕತೆ, ವ್ಯವಸಾಯದಲ್ಲಿ ನೂತನ ಕ್ರಮವು ಅನುಸರಿಸುವುದರಿಂದ ಪೈರನ್ನು ಹೆಚ್ಚು ಮಾಡಿಕೊಳ್ಳುವುದ ಲ್ಲದೆ ಮಳೆಯ ನೀರಿನ ತೇವವನ್ನು ಬಹುಕಾಲ ಕಾಪಾಡಿಕೊಳ್ಳಬಹುದೆಂಬು ವುದು, ಜನರ ಏಳಿಗೆಗೆ ಸುಗುಣ ಸತ್ಪ್ರವರ್ತನೆಗಳೇ ಮೂಲ ಕಾರಣಗಳೆಂಬು ವುದು, ಸ್ವಲ್ಪ ಮಟ್ಟಿಗೆ ಆರೋಗ್ಯ ವಿಚಾರ ಸಹ ತಕ್ಕ ಉದಾಹರಣೆಗಳೊಡನೆ ಬೋಧಿಸಿದರು. ಇದರಿಂದ ಜನಗಳ ತಿಳುವಳಿಕೆಗೆ ತುಂಬಾ ಸಹಾಯವಾಯಿತು. ಸರ್ಕಾರದವರು ಈ ಪ್ರಕಾರ ಮೂಢ ಪ್ರಜೆಗಳ ಏಳಿಗೆಯನ್ನೇ ಹಾರೈಸಿ ನಾನಾ ಏರ್ಪಾಡುಗಳನ್ನು ಮಾಡಿ ಸಂರಕ್ಷಿಸಿಕೊಂಡು ಬರುತ್ತಿರುವುದಕ್ಕೋಸ್ಕರ ಈ ಪ್ರಾಂತ್ಯದ ಜನಗಳೆಲ್ಲರೂ ತುಂಬಾ ಕೃತಜ್ಞರಾಗಿದ್ದಾರೆ. ಹ. ಸುಬ್ಬಣ್ಣ.

ಕಡೂರು ತಾಲ್ಲೂಕು ಆಸಂದಿ ಗ್ರಾಮಕ್ಕೆ ಕಡೂರು ಉಪನ್ಯಾಸಕರು ಬಂದು ಪೋಲೀಸ್ ಚಾವಡಿಯಲ್ಲಿ ಉಪನ್ಯಾಸ ಮಾಡಿದರು. ಆ ದಿನ ಬೆಳಿಗ್ಗೆ ಸ್ಕೂಲ್ ಮಕ್ಕಳನ್ನೆಲ್ಲಾ ಸೇರಿಸಿ ಅವರಿಗೆ ಭಕ್ತಿ ವಿಷಯವನ್ನೂ ದೇವರ ಪ್ರಾರ್ಥನಾ ವಿಷಯವನ್ನೂ ಬಹಳ ಸ್ವಾರಸ್ಯವಾಗಿ ಬೋಧಿಸಿದರು. ಮತ್ತು ಹಳೇ ಪದ್ಧತಿಯ ವ್ಯವಸಾಯ ಕ್ರಮಕ್ಕಿಂತ ನೂತನ ಕ್ರಮದ ವ್ಯವಸಾಯದ ಮುಟ್ಟುಗಳನ್ನು ಉಪಯೋಗಿಸಿ ವ್ಯವಸಾಯ ಮಾಡುವುದರಲ್ಲಿ ಮಳೇ ತೇವ ವನ್ನು ಬಹುಕಾಲ ಕಾಪಾಡಿಕೊಳ್ಳುವದಲ್ಲದೆ ಹಳೇ ಕ್ರಮಕ್ಕಿಂತ ಎರಡರಷ್ಟು ಪೈರನ್ನು ಹೊಂದಬಹುದೆಂದು ಸಹಜವಾಗಿ ತಿಳಿಸಿದರು. ಎಲ್ಲಾ ಪೈರುಗಳಿಗೂ ಭೂಮಿ ಹೇಗೆ ಆಧಾರವಾಗಿದೆಯೋ ಹಾಗೆಯೇ ಎಲ್ಲಾ ತರದ ಕಸಬುಗಳಿಗೂ ವಿದ್ಯೆಯೇ ಆಧಾರವೆಂಬುದನ್ನು ವ್ಯಕ್ತಪಡಿಸಿದರು. ಪ್ರತಿ ಗ್ರಾಮದಲ್ಲೂ ಪ್ರತಿ ಒಂದು ಮನೆಯೂ ಒಂದೊಂದು ವಿಚಾರಸ್ಥಾನವೇ ಎಂಬಂತೆ ಇರಬೇಕೆಂದೂ, ಅದು ಬೆಲೆಯಲ್ಲಿ ಎಷ್ಟು ಕಡಮೆಯಾಗಿದ್ದಾಗ್ಯೂ ಗುಣ ಮತ್ತು ಪ್ರಯೋಜನ ಗಳಲ್ಲಿ ಏಳಿಗೆಯಾಗಿರಬೇಕಾದದ್ದು ಅಗತ್ಯವೆಂದೂ ತೋರಿಸಿಕೊಟ್ಟರು. ಇದೇ ಪ್ರಕಾರ ವ್ಯಾಪಾರ, ಕೈಗಾರಿಕೆ ಮುಂತಾದವುಗಳಿಗೆಲ್ಲಾ ಹಣಕ್ಕಿಂತ ವಿದ್ಯೆಯಿಂದ ಸಂಪಾದಿಸಿದ ಬುದ್ಧಿಯೇ ಬಂಡವಾಳವಾಗುವುದೆಂದು ಉದಾಹರಣೆ ಮೂಲಕ ನಿರ್ಧರಿಸಿದರು. ರೀಡಿಂಗ್ ರೂಂ, ಲೈಬ್ರರಿ, ರಾತ್ರಿ ಪಾಠಶಾಲೆ, ಇವು ಮೂರೂ ಒಂದನ್ನೊಂದು ಹೊಂದಿಕೊಂಡು ಪ್ರತಿ ಒಂದು ಊರಿನ ಸ್ಕೂಲುಗಳಲ್ಲಿಯೂ ಇದ್ದೇ ತೀರಬೇಕೆಂದೂ, ಅದನ್ನು ಪ್ರತಿ ಒಬ್ಬರೂ ಪ್ರೋತ್ಸಾಹಿಸಬೇಕೆಂದೂ ಕೆರೆಯ ದೃಷ್ಟಾಂತದಿಂದ ತೋರಿಸಿಕೊಟ್ಟರು. ಇಂಥಾ ಉಪನ್ಯಾಸಗಳಿಂದ ಗ್ರಾಮಾಂತರ ಪ್ರಜೆಗಳಿಗೆ ಎಷ್ಟೋ ಪ್ರಯೋಜನವಾಗುತ್ತಿದೆ.

ಗು. ಮ. ರೇವಣಸಿದ್ಧಪ್ಪ, ಆಸಂದಿ ಗ್ರಾಮ.

ಹಾಸನದ ಉಪನ್ಯಾಸಕರು ಬೇಲೂರು ತಾಲ್ಲೂಕು ದೊಡ್ಡಕೋಡಿ ಹಳ್ಳಿಗೆ ಬಂದು ಗೌರ್ನಮೆಂಟು ಸ್ಕೂಲಿನಲ್ಲಿ ಮತ್ತು ರಂಗನಾಥಸ್ವಾಮಿ ದೇವ ಸ್ಥಾನದಲ್ಲಿ ಸಹಾ ಈ ಗ್ರಾಮದ ಮ|| ಪಟೇಲ್ ಹರಳಗೌಡರು, ನ್ಯಾಸುಫೋರ್ ಮ|| ರಾಮಚಂದ್ರಯ್ಯನವರು ಗ್ರಾಮಾಭಿವೃದ್ಧಿ ಮೆಂಬರುಗಳು, ಸ್ಕೂಲ್ ಮೆಂಬ ರುಗಳು, ಗ್ರಾಮದ ಮುಖಂಡರು, ರೈತ ಮುಂತಾದವರುಗಳನ್ನು ಬರಮಾಡಿ ಕೊಂಡು ಮುಖಂಡರಾಗಿ ನಿಂತು ಸಹಾಯ ಮಾಡಿದರು. ಅವರು ಮಾಡಿದ ಉಪನ್ಯಾಸದಿಂದ ವಿದ್ಯಾಭ್ಯಾಸ ಮಾಡದೆ ಇರತಕ್ಕ ಜನಗಳು ಪಶುಗಳಿಗಿಂತಲೂ ಕಡೆ ಎಂದು ವ್ಯಕ್ತವಾಯಿತು. ವ್ಯವಸಾಯ ಕ್ರಮದಲ್ಲಿ ಈಗಿನ ಮೂಢ ಪದ್ಧ ತಿಗಿಂತಲೂ ನೂತನ ಪದ್ಧತಿ ಆಚರಣೆಯಿಂದ ಅಂದರೆ ಸೀಮೇ ನೇಗಿಲು ಅಥವಾ ಕಬ್ಬಿಣದ ನೇಗಿಲು, ಕೂರಿಗೆ, ಹಲುಬೆ ಮುಂತಾದ ವ್ಯವಸಾಯದ ಮುಟ್ಟುಗ ಳನ್ನು ಉಪಯೋಗಿಸುವದರಿಂದ ಈಗ ಬೆಳೆಯುವ ಧಾನ್ಯಗಳಿಗಿಂತ ಎರಡರಷ್ಟು ಬೆಳೆಯಬಹುದೆಂತಲೂ, ಅದು ಒಳ್ಳೇ ಬಣ್ಣವಾಗಿಯೂ ಮಧುರವಾಗಿಯೂ ಇರುವದೆಂತಲೂ ನಿದರ್ಶನಪಡಿಸಿದರು. ನಮ್ಮ ಸರ್ಕಾರದವರು ರೈತ ಪ್ರಜೆಗಳಿಗೆ ವ್ಯವಸಾಯದ ಮುಟ್ಟುಗಳನ್ನು ಸುಲಭವಾಗಿ ಪಡೆಯುವದಕ್ಕೂ, ಬೀಜದ ಕಾಳು ಗೊಬ್ಬರಗಳನ್ನು ತೆಗೆದುಕೊಳ್ಳುವದಕ್ಕೂ, ಪೈರಿಗೆ ಉಂಟಾಗುವ ರೋಗ ಮತ್ತು ಹುಳಗಳನ್ನು ನಾಶಮಾಡುವದಕ್ಕೂ ಮಾಡಿರುವ ಏರ್ಪಾಡು ಮತ್ತು ರಿಯಾಯಿ ತಿಗಳನ್ನು ತಿಳಿಯಪಡಿಸುವದು. ಇದರಿಂದ ಅನೇಕ ರೈತರು ಕ್ರಮೇಣ ಲಾಭ ಸಂಪಾದಿಸುವದಕ್ಕೆ ಮಾರ್ಗವಾಯಿತು. ಮತ್ತು ಪಟೇಲ್ ಹರಳಗೌಡರ ಮಕ್ಕಳು ಬೀರೇಗೌಡರು ಬಹಳ ಸಂತೋಷಪಟ್ಟು ಮುಂದಾಗಿ ತಾವು ವ್ಯವಸಾಯದ ಮೇಲ್ದರ್ಜೆ ನೇಗಿಲನ್ನು ತರಿಸಿ ವ್ಯವಸಾಯವನ್ನು ನಡಿಸಿ ಉಂಟಾಗುವ ಲಾಭಗ ಳನ್ನು ಪ್ರಚುರಕ್ಕೆ ತರುತ್ತೇವೆಂದು ನಂಬಿಕೆ ಹೇಳಿದರು. ಇದೂ ಅಲ್ಲದೆ ಆರೋಗ್ಯ ಸೂತ್ರವನ್ನನುಸರಿಸಿ ವಾಸದ ಮನೆಗಳನ್ನು ಕಟ್ಟುವದು, ಇರುವ ಮನೆ ಗಳನ್ನು ಆ ಸೂತ್ರಕ್ಕೆ ಅನುಸಾರವಾಗಿ ಮಾಡಿಕೊಳ್ಳುವದು, ಒಳ್ಳೇ ಗಾಳಿ ಬೆಳಕು ಮತ್ತು ಶುದ್ಧವಾದ ನೀರು ಇವುಗಳನ್ನು ಉಪಯೋಗಿಸಬೇಕಾದ ಅವ ಶ್ಯಕತೆ ಮತ್ತು ವಾಸದ ಮನೆಗಳನ್ನೂ ಗ್ರಾಮಗಳನ್ನೂ ಶುಚಿಯಾಗಿಟ್ಟುಕೊಳ್ಳು ವದರ ಪ್ರಯೋಜನ, ಇವೇ ಮುಂತಾದ ಜನಗಳ ಕ್ಷೇಮಕ್ಕೆ ಅಗತ್ಯವಾದ ವಿಚಾ ರಗಳನ್ನು ಸಹ ವಿವರವಾಗಿ ಬೋಧಿಸಿದರು. ರಾತ್ರಿ ಪಾಠಶಾಲೆ, ವಾಚನಶಾಲೆಗ ಳನ್ನು ಏರ್ಪಡಿಸದಿದ್ದರೆ ಅಂಥಾ ಸ್ಥಳ ವಾಸಯೋಗ್ಯವಲ್ಲವೆಂದು ತೋರಿಸಿಕೊ ಟ್ಟರು. ಈ ಪ್ರಕಾರ ನಮ್ಮ ಸರ್ಕಾರದವರು ಮಾಡಿರುವ ಏರ್ಪಾಡು ಅಬಾಲ ವೃದ್ಧರಿಗೂ ಅತ್ಯಂತ ಪ್ರಯೋಜನಕಾರಿಯಾಗಿದೆ. ಸುಬ್ಬರಾಯ, ಮಾಜಿ ಶ್ಯಾ.

ತೀರ್ಥಹಳ್ಳಿ ತಾಲ್ಲೂಕು ಅಭಿವೃದ್ಧಿ ಸಂಘ.

ಶಿವಮೊಗ್ಗ ಡಿ|| ಮಲೆನಾಡು ಇಂಪ್ರೂವ್‌ಮೆಂಟ್ ಆಫೀಸರಾದ ಮ|| ಅಪ್ಪಣ್ಣಯ್ಯಂಗಾರ್ಯರು ತಾ. 30 ರಲ್ಲಿ ಇಲ್ಲಿಗೆ ದಯಮಾಡಿಸಿ ಈ ಸಂಘವನ್ನು ಸ್ಥಾಪಿಸಿದರು. ಈ ಸಂಘಕ್ಕೆ ಇದೇ ತಾಲ್ಲೂಕು ಅಸಾದೀ ವಂತೀಕರಾದ ಮ|| ಪುಟ್ಟೋರಾವ್ ಕೆರೋಡಿ ಇವರನ್ನು ಕಾರ್ಯದರ್ಶಿ (ಸೆಕ್ರೆಟರಿ) ಯಾಗಿ ಮಾಡಿ ದ್ದಾರೆ. ಮಿ|| ಕೆರೋಡಿಯವರು ಅರ್ಧ ಬಿ.ಎ ಉತ್ತೀರ್ಣರಾಗಿದ್ದಾರೆ. ನಮ್ಮ ಮೈಸೂರು ಸರ್ಕಾರದಲ್ಲಿ ಸರ್ವಿಸ್ ಮಾಡಿದವರು. ಇದು ವರಿಗೂ ಇವರು ಸರ್ವಿಸಿನಲ್ಲೇ ಇರುವ ಪಕ್ಷಕ್ಕೆ ಯಾವದಾದರೂ ಹೆಚ್ಚು ಸಂಬಳದ ಅಧಿಕಾರಸ್ಥ ರಾಗಿರುತ್ತಿದ್ದರು. ಮಧ್ಯಕಾಲದಲ್ಲಿ ಯಾಕೆ ಬಿಟ್ಟುಬಿಟ್ಟರೋ ಗೊತ್ತಾಗುವದಿಲ್ಲ. ಈಗ ಇವರು ತಮ್ಮ ಸಿತರಾರ್ಜಿತವಾದ ತರೀ ಮತ್ತು ಬಾಗಾಯಿತು ಜಮೀನನ್ನು ತಾವೇ ಖುದ್ದು ಸಾಗುವಳಿಗೆ ತರುತ್ತಾ, ಕಷ್ಟ ಜೀವಿಗಳಾಗಿ ಒಳ್ಳೇ ಅನುಭವ ವನ್ನೂ ನಿಧಾನವನ್ನೂ ಹೊಂದಿ, ಮಾರ್ಗದರ್ಶಿಗಳಾಗಿರುತ್ತಾರೆ. ಇವರು ಲೇಖನ ದೇವೀ ಮೂಲಕವೂ, ವರ್ತಕನಕಥ ಮೂಲಕವೂ ಸಾಹುಕಾರೀ ಮಾಡಿ ಅರ್ಜ ನಬೇಕೆಂದು ಪ್ರಯತ್ನಮಾಡಿದವರಲ್ಲ. ಇವರ ಶೀಲಸ್ವಭಾವಗಳು ಮೊದಲಿನಿಂದ ಲೂ ನ್ಯಾಯಮಾರ್ಗದಲ್ಲೇ ನಡಕೊಂಡು ಬಂದಿರುತ್ತಾದ್ದರಿಂದ ತಾವು ಮಾಡು ತ್ತಿರುವ ಒಂದು ಕೃಷಿಯಲ್ಲಿಯೇ ತೃಪ್ತರಾಗಿ ಹೆಚ್ಚಿನ ಕಾರುಬಾರಿನಲ್ಲೂ, ಮುಂದುಧೋರಣೆ ಮಾಡಬೇಕೆಂಬದರಲ್ಲಿಯೂ ಇವರಿಗೆ ಇಷ್ಟವಿದ್ದಂತೆ ತೋರು ವದಿಲ್ಲ. ಈ ನಾಡಿನ ಸ್ಥಿತಿಗತಿಯನ್ನು ಬಲ್ಲವರಾಗಿದ್ದಾರೆ. ಇಂಥಾವರನ್ನು ಸೆಕ್ರೆ ಟರಿಯಾಗಿ ಮಾಡಿರುವದು ಎಲ್ಲರ ಭಾಗ್ಯೋದಯ. ಮಲೆನಾಡಿನವರಲ್ಲಿ ಈಚೆಗೆ ಓದಬೇಕೆಂಬುವರೆಲ್ಲ ಸರ್ಕಾರೀ ನೌಕರಿ ಮಾಡುವದಕ್ಕಾಗಿಯೇ ಪರೀಕ್ಷೆಗಳಲ್ಲಿ ಪ್ಯಾಸುಮಾಡುತ್ತಾರೆ. ನೀತಿ ನಡೆನುಡಿ, ವ್ಯವಸಾಯ, ರಸಾಯನಿಕ, ಶಿಲ್ಪ, ಕೈಗಾರಿಕೆ, ವೈದ್ಯ, ಅರ್ಥಸಾಧಕ ಮುಂತಾದ ಉಪಯೋಗಿಕ ವಿದ್ಯೆಗಳಲ್ಲಿ ತೇರ್ಗ ಡೆಹೊಂದಿ ಸ್ವತಃ ಒಂದೊಂದು ಕೆಲಸವನ್ನು ಕೈಗೊಳ್ಳುವದಾದರೆ ಈ ನಾಡಿಗೆ ಬಹಳ ಕ್ಷೇಮವು ಉಂಟು. ಈ ದಿನಸ ಇಲ್ಲಿ ಜರುಗಿದ ಮೀಟಿಂಗಿನಲ್ಲಿ 15 ಜನ ಮೆಂಬರು ಸೇರಿದ್ದರು. ಚರ್ಚೆಪಟ್ಟ ಸೈಕಿ ಕೆಲವು ಸುರಿದು ನೋಟಾಗಲ್ಪಟ್ಟವು. ಸೈಕಿ ಈ ಸಭೆಗೆ ಬರಮಾಡಲ್ಪಟ್ಟ ಶ್ರಿಂಗೇರಿ ಮಠದ ವೇ|| ಶ್ರೀಕಂಠ ಶಾಸ್ತ್ರಿಗಳ ವರು ಸ್ಥಳ ವಿದ್ಯಮಾನಕ್ಕೆ ಸರಿಯಾದ ಭಾಷಣಗಳಿಂದ ಸಂತೋಷಗೊಳಿಸಿದರು.

ಚರ್ಚೆಯ ಸಾರಾಂಶ—(1) ಸೊಪ್ಪಿನ ಬೆಟ್ಟವನ್ನು ವಿಂಗಡಿಸಿ ರೈತರಿಗೇನೆ ವಹಿಸಬೇಕು; (2) ಸಾಹಿತಾ ಲೈಸನ್ನು ತೆಗೆದುಹಾಕಿ ಸಿಂಹ ಮರವನ್ನು ರಿಯಾಯ್ತಿ ಬೆಲೆಗೆ ಕೊಡಬೇಕು; (3) ಖರಾಬು, ಕಾನು, ಗೋಮಾಳ, ಈ ನೆಲದಲ್ಲಿ ಮನೇ ಕಟ್ಟುವದಕ್ಕೂ, ಇತರ ವ್ಯವಸಾಯಕ್ಕೂ ದರಖಾಸ್ತು ಬಂದರೆ ಅವರವರಿಗೇನೇ ಕೊಟ್ಟು 15 ದಿವಸದೊಳಗೆ ಅಪ್ಪಣೆ ಚೀಟಿ ಸಿಕ್ಕುವಂತೆ ಮಾಡಬೇಕು; (4) ಆಕಾರ ಕಂಡ ಬಂಜರು ಜಮೀನುಗಳು ಖಾತೇದಾರ್ ಮುಂತಾದವರ ಹಿಡುವಳೀ ಬಿದ್ದು ಕಂದಾಯ ಮಾತ್ರ ತೆರುತ್ತಾ ನಿಷ್ಪ್ರಯೋಜನವಾಗಿರುವ ಹಾಳು ಜಮೀನು ಗಳು ಬಹಳವಿರುತ್ತೆ; ಅದನ್ನೆಲ್ಲಾ ಸಾಗುವಳಿಗೆ ತರುವ ಉದ್ದಿಶ್ಯ ಒಕ್ಕಲುಗಳೂ, ಕೂಲಿಗಳೂ ಹೊರಗಿನಿಂದ ಬರುವ ಹಾಗೆ ಮಾಡಿಸಿಕೊಡಬೇಕು; (5) ಸರ್ಕಾರೀ ಬಂಜರು ಜಮೀನು ಆಕಾರ ಕಂಡದ್ದು ಬಿಟ್ಟೋ; (6) ರೈತ ಮುಂತಾದವರು ಸ್ವಂತ ಹಣದಿಂದ ಇದುವರಿಗೆ ಮಾಡಿಸಿರತಕ್ಕ ಒಳ ರಸ್ತೆಗಳನ್ನೆಲ್ಲಾ ಸರ್ಕಾರಿ ರಕ್ಷಣೆಯಲ್ಲಿಡಿಸಬೇಕು; (7) ಗ್ರಾಮಸ್ಥರಲ್ಲಿರತಕ್ಕವರನ್ನೇ ಸೂಲಗಿತ್ತಿ ತನಕ್ಕೆ ತರಬೇತು ಮಾಡುವದು; (8) ಸ್ಕೂಲ್ ಪಾಠ ಪುಸ್ತಕದಲ್ಲಿ ಮದ್ಯಪಾನ, ಹೊಗೆ ಸೇದುವದು, ಇದರಿಂದೂ ಕೆಡಕೆಂತ ಒಂದು ಹೊಸ ಪಾಠವನ್ನು ಸೇರಿಸಿ ಕೊಡಬೇಕು. ಹೀಗೇ ಇನ್ನೂ ಕೆಲವು ಪ್ರಸ್ತಾಪಗಳು ನಡಿಸಲ್ಪಟ್ಟವು.

ನಮ್ಮ ಇಂ|| ಆ|| ರವರು ದೇಶ ವಿದೇಶದ ಸಡವಳಿಕೆಗಳನ್ನು ಹೇಳಿ ಕೇಳಿ ದರಲ್ಲದೆ ದೇಶಹಿತಕ್ಕೋಸ್ಕರ ಎಲ್ಲರೂ ಧಾರಾಳವಾಗಿ ಏನಿದ್ದರೂ ಚರ್ಚಿಸ ಬೇಕು ಎಂತ ಅಪ್ಪಣೆಕೊಡಿಸಿದ್ದು ಪ್ರೋತ್ಸಾಹಕರವಾಗಿತ್ತು. ಮಲೆನಾಡಿನ ಕೆಲವು ತಾಲ್ಲೂಕುಗಳಲ್ಲಿ ಮುಂಗಡ ವಗ್ಗೈರೆ ಕೊಟ್ಟು ಬೇಸಾಯ ಮುಂತಾದ ಕೆಲಸ ಗಳಿಗೆ ಇಟ್ಟುಕೊಂಡ ಒಕ್ಕಲು (ಜೀತಗಾರರು) ಗಳನ್ನು ಬಾಜೂ ರೈತ ವಗೈರೆಯರು ಚಿತಾವಣಿ ವಗ್ಗೈರೆ ಮೂಲಕ ಅಲ್ಲಿಂದ ಎಬ್ಬಿಸಿ ಮೊದಲನೇ ರೈತರಿಗೆ ನಷ್ಟ ಕಷ್ಟ ಉಂಟುಮಾಡುತ್ತಾರಂತೆ. ಹಾಗೆ ಇಲ್ಲೂ ಉಂಟೇ ಎಂಬ ಪ್ರಶ್ನೆ ಬಂತು. ಈ ನಡವಳಿಕೆ ಇಲ್ಲಿ ಹೆಚ್ಚಾಗಿಲ್ಲವೆಂದು ಮು|| ದೇ|| ರಾಮಣ್ಣಗೌಡರು ಹೇಳಿದರು. ಬಾಕೀ ಮೆಂಬರರು ಇದಕ್ಕೆ ತೃಪ್ತಿಕರವಾಗಿ ಜವಾಬೇ ಕೊಡಲಿಲ್ಲ. ಇಂಥಾ ತರದೂದು ಇಲ್ಲಿ ನಡೆದೂ ಇದೆ, ನಡೆಯುತ್ತಲೂ ಇದೆ ಎಂತ ಬಹು ಜನರ ಅಭಿಪ್ರಾಯ. ನಮ್ಮ ಡೆಪ್ಟಿ ಕಮೀಷನರವರು ಮತ್ತು ಇಂ|| ಆ|| ರವರು ದೀರ್ಘಾಲೋಚನೆಯಿಂದ ಈ ತಾಲ್ಲೂಕ್ ಅಭಿವೃದ್ಧಿ ಸಂಘವನ್ನು ಏರ್ಪಡಿ ಸಿದ್ದು ಕೇವಲ ಪ್ರಜಾ ಕ್ಷೇಮಕ್ಕೇ ಆಗಿರುತ್ತೆ. ಆದರೆ ಸ್ಥಳದವರು ತಮಗೂ, ತಮ್ಮ ನೆರೆಹೊರೆಯವರಿಗೂ, ತಮ್ಮ ದೇಶದವರಿಗೂ ಒಳ್ಳೇದಾಗಬೇಕೆಂದು ಮಾಡತಕ್ಕ ಕೆಲಸವೇ ದೇಶಸೇವೆ, ಪರಾರ್ಥವನ್ನು ಕಾಪಾಡಿದ ಹೊರ್ತು ಸ್ವಾರ್ಥಸಿದ್ಧಿ ಆಗುವದಿಲ್ಲ. ಮಲೆನಾಡಿನ ಒಟ್ಟು ಪ್ರಜಾ ಸಂಖ್ಯೆಯಲ್ಲಿ ಶೇಕಡ 99 ಜನಗಳು ನಾನಾ ಪ್ರಕಾರವಾದ ಅನನುಕೂಲಸ್ಥರಾಗಿದ್ದಾರೆ. ಇವರಿಗೆಲ್ಲಾ ಸೌಕರ್ಯವಾದ ಹೊರ್ತು ಈ ನಾಡು ಅಭಿವೃದ್ಧಿಗೆ ಬರುವ ಹಾಗಿಲ್ಲ. ಶೇಕಡ ಒಬ್ಬರಂತೆ ಇರುವವರೆಲ್ಲ ಮುಂದೆ ಬಂದು ತಮ್ಮ ತನು ಮನ ಧನಗಳನ್ನು ಈ ದೇಶಕ್ಕಾಗಿ ವಿನಿಯೋಗಿಸಬೇಕು. ಉದ್ಯೋಗಾಸಕ್ತಿ ಇರುವವರು ಬಹಳ ಜನ ವಿರುವರು. ಇವರೆಲ್ಲ ಕೇವಲ ಬಡವರು. ಇನ್ನು ಮುಂದೆ ಇಲ್ಲೀ ಹಣ ಇಲ್ಲೇ ನಿಲ್ಲುವಂತೆ ಮಾಡಬೇಕು. ನಮ್ಮ ಇಂ|| ಆ|| ರವರು ಈ ಕಮಿಟಿಗೆ ಖಾಯಂ ಮೆಂಬರಲ್ಲದ ಐದು ಜನಗಳು ಪ್ರತಿ ಮೀಟಿಂಗಿಗೂ ಹೊಸಹೊಸದಾಗಿ ಬಂದು ಮಾತನಾಡಬೇಕೆಂದು ಮಾತುವದು ಬಹಳ ಪ್ರಯೋಜನಕರವಾಗಿದೆ.

ಕ್ಷೇಮಚಿಂತಕ.

ವೃತ್ತಾಂತ ಪತ್ರಿಕೆ.

೧೯೧೫ ನೇ ಇಸವಿ ನವಂಬರ್ ತಾ. ೧೧ ನೇ ಗುರುವಾರ.

ನಮ್ಮ ಸಂಸ್ಥಾನದ ಗ್ರಾಮಗಳು.

ಮೈಸೂರು ಸೀಮೆಯ ಗ್ರಾಮಗಳ ವಿಷಯದಲ್ಲಿ ಈ ಸಲ ಪ್ರಜಾಪ್ರತಿನಿಧಿ ಸಭೆಯೊಳಗೆ ವಿಶೇಷವಾಗಿ ಚರ್ಚೆಗಳು ನಡೆದವು. ಬಡಗ್ರಾಮಾಂತರ ಪ್ರಜೆಗಳನ್ನು ಪಟ್ಟಣವಾಸಿಗಳು ಅಲ್ಲಗಳೆಯಬಹುದು; ಆದರೆ ಅಂಥಾ ಗ್ರಾಮಗಳೇ ನಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಬಹು ಮಟ್ಟಿಗೆ ಕಾರಣಭೂತಗಳಾಗಿರುತ್ತವೆ. ಆದಕಾರಣ ಗ್ರಾಮವಾಸಿಗಳಿಗೆ ಆರೋಗ್ಯವನ್ನೂ ಸುಖಸಂತೋಷಗಳನ್ನೂ ಬುದ್ಧಿಕುಶಲತೆಯನ್ನೂ ಇನ್ನೂ ವಿಶೇಷವಾಗಿ ಕಲ್ಪಿಸಿಕೊಡುವ ಭಾಗದಲ್ಲಿ ನಮ್ಮ ಕೈಲಾಗುವುದನ್ನೆಲ್ಲಾ ಮಾಡಬೇಕಾಗಿರುತ್ತದೆ. ನಮ್ಮನ್ನು ಈಗ ಪರಿಪಾಲನೆಮಾಡುವಂಥಾ ಗವರ್ನ್‌ಮೆಂಟಿನವರು ಗ್ರಾಮಗಳನ್ನು ಅಭಿವೃದ್ಧಿಗೆ ತರಬೇಕೆಂಬ ಕುತೂಹಲವುಳ್ಳವರಾಗಿ ಕೆಲವು ಏರ್ಪಾಡುಗಳನ್ನು ಮಾಡಿದಾರೆ. ಆದರೇನು? ಗ್ರಾಮದಲ್ಲಿ ವಾಸಮಾಡುತ್ತಿರುವ ಜನಗಳು ತಮ್ಮ ಮನೆ ಮಠಗಳನ್ನೂ ತಮ್ಮ ಗ್ರಾಮವನ್ನೂ ಅಭಿವೃದ್ಧಿಗೆ ತಂದುಕೊಳ್ಳುವ ಭಾಗದಲ್ಲಿ ಅವರಿಗೇನೇ ಉತ್ಸಾಹವೂ ಆಕಾಂಕ್ಷೆಯೂ ಉಂಟಾಗದಿದ್ದರೆ ಸರ್ಕಾರದ ಏರ್ಪಾಡುಗಳಿಂದ ಪ್ರಯೋಜನವೇನೂ ಆಗಲಾರದು.

ನಮ್ಮ ಸೀಮೆಯ ಗ್ರಾಮಗಳಲ್ಲಿ ಪುರಾತನ ಕಾಲದಿಂದಲೂ ನಡೆದು ಬಂದಿರುವಂಥಾ ಆಚರಣೆಗಳೂ ಕಟ್ಟುಪಾಡುಗಳೂ ತೊಡೆದು ನಿರ್ನಾಮವಾಗುವುದಕ್ಕೆ ಮೊದಲೇ ನವೀನವಾದ ಏರ್ಪಾಡುಗಳನ್ನೂ ಕಟ್ಟು ಕಂದಾಚಾರಗಳನ್ನೂ ಜಾರಿಗೆ ತರಬೇಕೆಂದು ಸಾಹಸಪಡುತ್ತಿರುವಂತೆ ತೋರುವುದು. ಈ ವಿಚಾರದಲ್ಲಿ ನಮಗೆ ಶಂಕೆಯೂ, ಸಂಶಯವೂ ಉಂಟಾಗಿರುತ್ತವೆ. ಗ್ರಾಮದಲ್ಲಿ ಈಗ ಪಟೇಲ, ಗೌಡ, ತೋಟಿ, ತಳವಾರ, ನೀರುಗಂಟಿ, ಈ ಮೊದಲಾದ ಏರ್ಪಾಡು ಇದ್ದೇ ಇದೆ. ಇವರಲ್ಲಿ ಪ್ರತಿ ಒಬ್ಬರಿಗೂ ಬೇರೆ ಬೇರೆ ಕೆಲಸಗಳೂ, ಕೆಲಕೆಲವು ಸ್ವಾತಂತ್ರ್ಯಗಳೂ ಇರುತ್ತವೆ. ಈಗಿನ ನವೀನ ಗ್ರಾಮಾಭಿವೃದ್ಧಿ ಸಂಘದಲ್ಲಿ ಈ ಜನಗಳ ಸ್ಥಾನವನ್ನು ಸರಿಯಾಗಿ ಯೋಚಿಸಿ ಸ್ಥಿರಮಾಡಿರುವಂತೆ ನಮಗೆ ತೋರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಈ ಗ್ರಾಮ ನೌಕರರು ಬರಿದೇ ಕೆಲಸಮಾಡುತ್ತಾರೆಂದೂ, ಅವರಿಗೆ ಪುರಸತ್ತು ಮುಂತಾದದ್ದೇನೂ ಸಲ್ಲುತ್ತಾ ಇಲ್ಲವೆಂದೂ ಹೇಳುತ್ತಾರೆ. ಗ್ರಾಮಗಳಿಗೆ ಸಂಬಂಧಪಡುವಂಥಾ ಯಾವ ಕಾನೂನಾಗಲಿ, ರೂಲಸಾಗಲಿ ಮಾಡುವಾಗ್ಗೆ ಈ ಗ್ರಾಮ ನೌಕರರ ಕರ್ತವ್ಯವನ್ನೂ ಅವರ ಹಕ್ಕು ಬಾಧ್ಯತೆಗಳನ್ನೂ ಚೆನ್ನಾಗಿ ಪರ್ಯಾಲೋಚಿಸಿ ಮಾಡಬೇಕು. ಇದರಲ್ಲಿ ಮೊದಲು "ಈಗಿನ ಹೊಸ ಏರ್ಪಾಡಿನಲ್ಲಿ ಈ ಗ್ರಾಮ ನೌಕರರಿಗೆ ಅವಕಾಶವೇನಾದರೂ ಉಂಟೇ? ಅಥವಾ ಅವರನ್ನೆಲ್ಲಾ ವಜಾ ಮಾಡಿಬಿಡಬೇಕೋ?" ಎಂಬ ಪ್ರಶ್ನೆ ಹುಟ್ಟುವುದು. ಅವರಿಂದ ಕೆಲಸವಾಗಬೇಕಾಗಿದ್ದಲ್ಲಿ ಅವರುಗಳನ್ನು ಹೊಸ ರೂಲಿನಲ್ಲಿ ಕಾಣಿಸಬೇಕಾದೀತು.

ತರುವಾಯ ಗ್ರಾಮದ ಅಭಿಲಾಷೆಗಳನ್ನು ನೋಡಿಕೊಳ್ಳುವಂಥಾ ಸಂಘಕ್ಕೆ ಮೆಂಬರುಗಳನ್ನು ಆರಿಸಿ ನೇಮಿಸುವುದರಲ್ಲಿ ಬಹಳ ಜಾಗರೂಕತೆ ಇರಬೇಕು. ಗ್ರಾಮಸ್ಥರು ಚುನಾಯಿಸುವ ಪಂಚಾಯತರು ತಾನೇ ಐದ್ಮೈರ್ ತೀರ್ಮಾನಮಾಡತಕ್ಕವರು? ಹಾಗಾದರೆ ಆ ಪಂಚಾಯುತಿಯ ಅಧಿಕಾರ ಇಷ್ಟೇ ಸರಿ ಎಂದು ನಿರ್ಧರವಾಗಬೇಕು. ಮತ್ತು ಗ್ರಾಮ ನೌಕರರ ಸ್ಥಾನವೆಂಥಾದ್ದು, ಇವರಿಗೂ ಪಂಚಾಯುತಿಗೂ ಇರುವ ಸಂಬಂಧವೇನು ಎಂಬೀ ವಿಷಯಗಳು ಸ್ಪಷ್ಟಪಡಬೇಕು. ತಲೆತಲಾಂತರದಿಂದ ಬಂದಿರುವ ಕಟ್ಟುಪಾಡಿನಲ್ಲಿ ಉಪಾಧ್ಯಾಯನಿಗೆ ಯಾವ ಸ್ಥಾನವೂ ಇರಲಿಲ್ಲ. ಹೊಸ ಏರ್ಪಾಡಿನಲ್ಲಿ ಈತನಿಗೆ ಒಂದು ಸ್ಥಳ ದೊರಕಬೇಕು. ಹಳೆಯ ಕಟ್ಟುಪಾಡೂ ಹೊಸ ಏರ್ಪಾಡೂ ಮಿಳಿತವಾಗಿ ಏಕಮತ್ಯದಿಂದ ಕೆಲಸಕಾರ್ಯಗಳು ಜರುಗುವುದಕ್ಕೆ ಕಾಲವೂ, ತಾಳ್ಮೆಯೂ ಅವಶ್ಯ. ಇದಕ್ಕೆಲ್ಲಾ ನಾನಾಪ್ರಕಾರವಾದ ಸಾಹಸಪ್ರಯತ್ನಗಳೂ ಬಹಳ ಚಿಂತೆಯೂ ಪಡಬೇಕಾಗಿದೆ. ಇದಕ್ಕೆ ಪ್ರತಿಯಾಗಿ ಗ್ರಾಮಸ್ಥರಲ್ಲಿ ಅವರ ಕುಂದು ಕೊರತೆಗಳನ್ನು ಅವರವರೇ ಮುಂದುವರಿದು ತಿಳಿದುಕೊಳ್ಳುವಂತೆಯೂ, ಅವುಗಳ ನಿವಾರಣೆಗೆ ಅವರವರೇ ಸಾಹಸಪಡುವಂತೆಯೂ ಪ್ರೀತಿ ಉತ್ಸಾಹಗಳನ್ನು ಕಲ್ಪಿಸುವುದಕ್ಕೆ ವಿಸಾರ್ಪಡಾಗಿ ಸಹಾಯ ಒದಗಿಸಿದ ಪಕ್ಷದಲ್ಲಿ ಗ್ರಾಮಗಳು ಶ್ರೇಯಸ್ಸಿಗೆ ಬರುವುದಕ್ಕೆ ಅವಕಾಶವಾದೀತು; ಶ್ರಮವೂ ಸಾರ್ಥಕವಾದೀತು.

ಆಗಲೇ ಸಂಸ್ಥಾನದೊಳಗೆ 7,715 ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾಗಿರುತ್ತವೆ ಎಂಬ ಮಾತನ್ನು ನಮ್ಮ ದಿವಾನ್‌ರವರ ಅಡ್ರೆಸ್ಸಿನಲ್ಲಿ ಓದಿ ನಮಗೆ ಆಶ್ಚರ್ಯವುಂಟಾಗಿದೆ. ಅಷ್ಟು ಸಂಘಗಳು ರೂಪಿಸಲ್ಪಟ್ಟವೆ ಎಂದು ರಿಪೋರ್ಟು ಬಂದಿರಬಹುದು. ಆದರೆ ಆ ಪೈಕಿ ಕಡೇ ಪಕ್ಷ ಇಪ್ಪತ್ತನೇ ಒಂದು ಭಾಗದ ಕಮಿಟಿಗಳು ಯಾವುದಾದರೂ ಸಾರ್ಥಕವಾದ ಕೆಲಸ ಕಾರ್ಯಗಳನ್ನು ಮಾಡಿರುವವೇ ಎಂದು ಸಂಶಯಪಡುವೆವು. ಅಧಿಕಾರಿಗಳು ಯಾವುದಾಗಲಿ ಹೀಗೆ ಆಗಬೇಕೆಂದು ಹುಕುಂ ಕೊಡುವ ಪಕ್ಷದಲ್ಲಿ ಅಂಥಾ ಕೆಲಸವೇನೋ ಹೆಸರು ಮಾತ್ರಕ್ಕೆ ಆಗಿಹೋಗುತ್ತದೆ; ಆದರೆ ಆಗಿದೆ ಎಂದು ಹೇಳುವ ಅಂಥಾ ಕೆಲಸವನ್ನು ನೋಡಿದಲ್ಲಿ ಅದರ ಆಶಯವೇನೋ ಕಾಣಬರುವುದಿಲ್ಲ. ಗ್ರಾಮಗಳನ್ನು ಅಭಿವೃದ್ಧಿಗೆ ತರುವ ಕೆಲಸ ಆತುರಕ್ಕೆ ಆದೀತೇ? ಅದು ಬಹಳ ನಿಧಾನವಾಗಿ ನಡೆಯಬೇಕು. ಕೆಲವು ಕಡೆ ಕೆಲಸ ಕಾರ್ಯಗಳು ಸಾವಕಾಶವಾಗಿಯೂ, ಕೆಲವು ಕಡೆ ಸ್ವಲ್ಪ ಚುರುಕಾಗಿಯೂ ಸಾಗುವವು. ಗ್ರಾಮಸ್ಥರು ತಮ್ಮ ತಮ್ಮಲ್ಲೇ ಏರ್ಪಾಡು ಮಾಡಿಕೊಂಡು ಕೆಲಸಗಳನ್ನು ಮಾಡಿಕೊಳ್ಳುವಂತೆ ಜಾಗರೂಕತೆಯಿಂದಲೂ ಪ್ರೀತಿಪೂರ್ವಕವಾಗಿಯೂ ಅವರಿಗೆ ಉತ್ತೇಜನವನ್ನುಂಟುಮಾಡುತ್ತಾ ಬರಬೇಕು.

ಈಗಿನ ಹೊಸ ಏರ್ಪಾಡಿನ ಪ್ರಕಾರ ಗ್ರಾಮಾಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಗ್ರಾಮದ ಪ್ರತಿ ಮನೆಯವರೂ ಬರಬೇಕಾಗಿರುತ್ತದೆ. ಆದರೆ ಗ್ರಾಮದಲ್ಲಿ ಅನಾಮಧೇಯರಾಗಿಯೂ ಒಡಬಗ್ಗರಾಗಿಯೂ ಇರತಕ್ಕವರು ತಮ್ಮ ಪಾಲಿನ ಕೆಲಸವನ್ನೂ, ಕೆಲಸಕ್ಕೆ ಕೈ ಹಾಕಲೊಲ್ಲದವರ ಪಾಲಿನ ಕೆಲಸಗಳನ್ನೂ ಮಾಡಬೇಕಾಗುವುದು. ಹಾಗೆ ಕೆಲಸಮಾಡಲೊಲ್ಲದವರಿಂದ ರುಸುಮನ್ನು ವಸೂಲ್ಮಾಡುವುದಕ್ಕೆ ರೂಲಸು ಮಾಡಬೇಕೆಂದು ಪ್ರತಿನಿಧಿಗಳಲ್ಲಿ ಹಲವರು ದಿವಾನ್‌ರವರನ್ನು ಕೇಳಿದರು. ಹೀಗೆ ಮಾಡಬೇಕಾದದ್ದೇ ನ್ಯಾಯವೆಂದು ತೋರುತ್ತದೆ. ಆದರೂ ಈ ವಿಚಾರವು ಬಹು ವಿಶೇಷವಾದದ್ದು: ಈಗಾಗಲೇ ರೂಲಸುಮಾಡಿ ಕಟ್ಟುಮಾಡುವುದು ಸಹಜವಲ್ಲ. ಗ್ರಾಮ ಸಂಘಗಳು ಪ್ರೋತ್ಸಾಹಪಡಿಸಿ ಗ್ರಾಮಸ್ಥರಿಂದ ಸಾಧ್ಯವಾಗುವಷ್ಟು ಕೆಲಸಗಳನ್ನು ಮಾಡಿಸಲಿ. ಕೆಲವು ವರುಷಗಳ ತನಕ ಈ ಪ್ರಕಾರ ನಡೆಯುವುದರೊಳಗಾಗಿ ತೃಪ್ತಿಕರವಾದ ಕಾನೂನನ್ನು ರಚಿಸುವುದಕ್ಕೆ ಅನುಕೂಲವೂ ಅವಕಾಶವೂ ಆದೀತು. ಅದುವರೆಗೆ ಗ್ರಾಮವಾಸಿಗಳ ಸ್ಥಿತಿಗತಿಯನ್ನೂ ಅವರ ಆರೋಗ್ಯ ಭಾಗ್ಯವನ್ನೂ ಅವರ ಸುಖಸಂತೋಷಗಳನ್ನೂ ಅಭಿವೃದ್ಧಿಗೆ ತರುವ ಭಾಗದಲ್ಲಿ ಎಲ್ಲರೂ ಸಾಹಸಪಡುತ್ತಾ ಬರಲೆಂದು ಹಾರೈಸುತ್ತೇವೆ.

ಶುಭವರ್ತಮಾನ

ಒಂದಾನೊಂದು ಬೇಸಿಗೆಯ ಕಾಲದಲ್ಲಿ ಕೆಲವು ಜನ ಪ್ರಯಾಣಿಕರು ಒಂಟೆಗಳ ಮೇಲೆ ಕುಳಿತುಕೊಂಡು ಒಂದು ಮರಳುಕಾಡಿನ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದರು. ಅಲ್ಲಿ ನದಿಗಳೂ ಮತ್ತು ಸರೋವರಗಳೂ ಬಹಳ ಅಪರೂಪವಾಗಿದ್ದವು. ಬಿಸಲಿನ ತಾಪವಾದರೋ ಸಹಿಸುವುದಕ್ಕೆ ಅಸಾಧ್ಯವಾಗಿತ್ತು. ಕುಡಿಯುವುದಕ್ಕಾಗಿ ತಂದಿದ್ದ ನೀರು ಮುಗಿಯುತ್ತಾ ಬಂದಿತ್ತು. ಅವರಲ್ಲಿ ಬಲಹೀನರಾಗಿದ್ದವರು ದಾಹದಿಂದ ಬಹಳವಾಗಿ ಬಾಯಾರಿ ಬಳಲಿ ಕುಂದಿಹೋಗಿದ್ದರು.

ಹೀಗಿರುತ್ತಿದ್ದಾಗ ಅವರಲ್ಲಿ ಕೆಲವರು ಆಲೋಚನೆಮಾಡಿ ಪ್ರಾಣಾಧಾರವಾದ ನೀರನ್ನು ಹುಡುಕುವದಕ್ಕಾಗಿ ನಾನಾ ದಿಕ್ಕುಗಳಿಗೂ ಹೊರಟುಹೋದರು. ಕಡೆಗೆ ಅವರಲ್ಲಿ ಒಬ್ಬನು ಪ್ರಯಾಸದಿಂದ ಬಹಳ ದೂರ ಹೋದ ಮೇಲೆ ಅಲ್ಲಿ ನಿರ್ಮಲವಾಗಿಯೂ ತಿಳಿಯಾಗಿಯೂ ಇದ್ದ ಒಂದು ಸಿಹಿನೀರಿನ ಸರೋವರವನ್ನು ಕಂಡನು. ಆಹಾ! ಆಗ ಅವನಿಗುಂಟಾದ ಆನಂದವನ್ನು ಏನೆಂದು ಹೇಳೋಣ! ಕೂಡಲೆ ಅವನು ಒಂಟೆಯ ಮೇಲಿಂದ ಇಳಿದು ನೀರಿನ ಸಮೀಪಕ್ಕೆ ಹೋಗಿ ತನಗೆ ಬೇಕಾದಷ್ಟು ನೀರು ಕುಡಿದು ತನಗುಂಟಾಗಿದ್ದ ದಾಹವನ್ನೂ ಆಯಾಸವನ್ನೂ ಪರಿಹರಿಸಿ ಚೇತರಿಸಿಕೊಂಡನು.

ಆಗ ತನ್ನ ಸ್ನೇಹಿತರನ್ನೂ ಅವರ ಭಯಂಕರವಾದ ಕೊರತೆಯನ್ನೂ ಜ್ಞಾಪಿಸಿಕೊಂಡು, ಬೇಗನೆ ತನ್ನ ಒಂಟೆಯನ್ನೇರಿ—ನೀರು! ನೀರು!! ನೀರೂ!!! ಎಂದು ಬಹಳ ಗಟ್ಟಿಯಾಗಿ ಕೂಗಿಕೊಂಡನು.

ಅಂಥಾ ಮರಳುಕಾಡುಗಳಲ್ಲಿ ಶಬ್ದವು ಬಹಳ ದೂರದ ವರೆಗೂ ಕೇಳಿಸುವ ದಾದ ಕಾರಣ ಸ್ವಲ್ಪ ಹೊತ್ತಿನಲ್ಲಿಯೇ ಆ ಉಳಿದ ಪ್ರಯಾಣಿಕರು ಅವನ ಧ್ವನಿಯನ್ನು ಕೇಳಿ ಜಾಗ್ರತೆಯಾಗಿ ಬಂದು ಸಹಿಸಲಸಾಧ್ಯವಾಗಿದ್ದ ತಮ್ಮ ಬಾಯಾರಿಕೆಯನ್ನು ತೀರಿಸಿಕೊಂಡು ಅವನ ಹಾಗೆಯೇ ಆನಂದಭರಿತರಾದರು.

ಪ್ರಿಯ ಸ್ನೇಹಿತರೇ, ಆ ಮನುಷ್ಯನು ನೀರಿಲ್ಲದೆ ಸಾಯುತ್ತಿದ್ದ ತನ್ನ ಜೊತೆ ಪ್ರಯಾಣಿಕರಿಗೆ ಜೀವಾಧಾರವಾದ ನೀರಿನ ವಿಷಯವನ್ನು ಹ್ಯಾಗೆ ತಿಳಿಸಿದನೋ ಅದೇ ಪ್ರಕಾರ ನಾನೂ ಸಹ ಈ ಲೋಕದ ಪ್ರಯಾಣದಲ್ಲಿ ಆತ್ಮೀಯವಾದ ಕೊರತೆಪಟ್ಟು ಬಳಲಿಹೋಗಿರುವವರಿಗೆ ತಿಳಿಸಬೇಕಾದ ಒಂದು ಶುಭಸಮಾಚಾರವುಂಟು.

ಒಂದು ವೇಳೆ ನೀವು ಎಂದೂ ಅದನ್ನು ಕೇಳಿರಲಾರಿರಿ, ಅದು ಯಾವದೆಂದರೆ—ಸಮಸ್ತ ಸೃಷ್ಟಿಕರ್ತನೂ ಪರಿಪಾಲಕನೂ ಆಗಿರುವ ಭಗವಂತನು ತಾನು ನಮ್ಮನ್ನು ಪ್ರೀತಿಸುತ್ತಾನೆಂತಲೂ ನಾವು ಆತನನ್ನು ಪ್ರೀತಿಸಬೇಕೆಂದು ಅಪೇಕ್ಷಿಸುತ್ತಾನೆಂತಲೂ ನಮಗೆ ತಿಳಿಸುವ ಹಾಗೆ ತನ್ನ ಮಗನನ್ನು ನಮ್ಮ ಬಳಿಗೆ ಕಳುಹಿಸಿದ್ದಾನೆ ಎಂಬುವದೇ. ಸತ್ಯವೇದದಲ್ಲಿ ತಿಳಿಸಿರುವದೇನಂದರೆ—"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ನಾವು ನಿತ್ಯಜೀವವನ್ನು ಹೊಂದುವ ಬಗ್ಗೆ ಭಗವಂತನು ತನ್ನ ಒಬ್ಬನೇ ಮಗನೆನ್ನಿಸಿಕೊಂಡ ಕ್ರಿಸ್ತ ಯೇಸುಸ್ವಾಮಿಯನ್ನು ನಮಗೋಸ್ಕರ ಪ್ರಾಣಕೊಡುವ ಹಾಗೆ ಕಳುಹಿಸಿಕೊಟ್ಟದ್ದರಲ್ಲಿ ಭಗವಂತನು ತಾನೇ ಬಂದು, ನಮಗಾಗಿ ತನ್ನ ಪ್ರಾಣವನ್ನು ಕೊಟ್ಟಂತಾಯಿತು. ಇದರಲ್ಲಿ ಆತನ ಅತಿಶಯವಾದ ಪ್ರೀತಿಯು ತಿಳಿಯಬರುವದಿಲ್ಲವೋ?

ಅದಲ್ಲದೆ ಯೇಸುಸ್ವಾಮಿಯು ಆ ಕಾಲದಲ್ಲಿ ಸತ್ತಾಗ್ಯೂ ಈಗ ಆತನು ಸತ್ತವನಾಗಿಲ್ಲ. ದೇವರು ಆತನನ್ನು ಮರಣದೊಳಗಿಂದ ಬಿಡಿಸಿ ಎಬ್ಬಿಸಿದನು. ಮತ್ತು ಆತನು ನಮ್ಮನ್ನು ಕಾಪಾಡಿ ಆಶೀರ್ವದಿಸುವವನೂ ಎಲ್ಲಾ ಸಂದರ್ಭಗಳಲ್ಲಿ ಸಹಾಯಮಾಡುವವನೂ ಎಡಬಿಡದೆ ನಮ್ಮ ಬಳಿಯಲ್ಲಿಯೇ ಇರುವವನೂ ಆಗಿದ್ದಾನೆ. ನಾವು ಆತನ ಸಂಗಡ ಮಾತಾಡಿದರೆ ಕೇಳುವವನಾಗಿದ್ದಾನೆ. ನಾವು ಆತನನ್ನು ಬೇಡಿಕೊಂಡರೆ ಯಾವಾಗಲೂ ಸಹಾಯಮಾಡುವವನಾಗಿದ್ದಾನೆ. ನಾವು ತಪ್ಪು ಮಾಡಿದರೆ ಆತನಿಗೆ ಅದನ್ನು ಅರಿಕೆಮಾಡಬೇಕು. ಮತ್ತು ಮಾಡಿದ ಪಾಪಕ್ಕೆ ನಾವು ಯಥಾರ್ಥವಾಗಿ ಪಶ್ಚಾತ್ತಾಪಪಟ್ಟರೆ, ಆತನು ಅದನ್ನು ಕ್ಷಮಿಸಿ, ನಾವು ಇನ್ನು ಮುಂದೆ ಒಳ್ಳೆಯದನ್ನೇ ಮಾಡುವ ಹಾಗೆ ನಮ್ಮನ್ನು ಬಲಪಡಿಸಿ, ಕಡೆಯಲ್ಲಿ ನಾವು ನಿರಂತರವಾಗಿ ಆತನ ಸಂಗಡಲೇ ಬದುಕುವ ಹಾಗೆ ಪರಲೋಕವೆಂಬುವಂಥಾ ಸುಖಪ್ರದವಾದ ತನ್ನ ಮನೆಗೆ ಕರೆದುಕೊಂಡು ಹೋಗುವನು. ಇದು ಶುಭಸಮಾಚಾರವಲ್ಲವೋ? ಆ ಸಮಾಚಾರವು ಪ್ರತಿಯೊಬ್ಬರಿಗಾಗಿಯೂ ಸಾರಲ್ಪಟ್ಟದೆ ಎಂದು ಮನದಟ್ಟುಮಾಡಿಕೊಳ್ಳಿರಿ. ಇದನ್ನು ಬರೆಯುವವರಾದ ನಾವು ಈ ಜೀವಕರವಾದ ನೀರನ್ನು ಪಡೆದುಕೊಂಡಿರುತ್ತೇವೆ. ನೀವೂ ಸಹ ಅದನ್ನು ಹುಡುಕಿ ಪಡೆದುಕೊಳ್ಳಬೇಕೆಂಬುವದು ನಮ್ಮ ಕುತೂಹಲವಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದ ಸೋಮವಾರ ಸಾಯಂಕಾಲ ಬೆಂಗಳೂರಿನಲ್ಲಿ ಒಂದು ಹದ ಒಳ್ಳೇ ಮಳೆ ಆಯಿತೆಂದು ಒಬ್ಬ ಬಾತ್ಮಿದಾರರು ಬರೆದಿದಾರೆ.

ಮದರಾಸಿನ ಸುಪೀರಿಯರ್ ವಾಚ್ ಕಂಪೆನಿ ಸಪ್ಲಿಮೆಂಟನ್ನು ಈ ವಾರದ ಪತ್ರಿಕೆಯ ಕೂಡ ನಮ್ಮ ಚಂದಾದಾರರಿಗೆಲ್ಲಾ ಕಳುಹಿಸಿರುತ್ತೇವೆ.

ಕಳೆದ ಭಾನುವಾರ ದಿವಾನ್‌ರವರು ಪರಿವಾರ ಸಮೇತ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡಿದರು. ಅವರು ಶನಿವಾರ ಕನ್ನಂಬಾಡಿ ಕಟ್ಟೆ ಕಾಮಗಾರಿಯನ್ನು ನೋಡಿಕೊಂಡು ಬಂದರು.

ಕಳೆದ ಶುಕ್ರವಾರ ಮಧ್ಯಾಹ್ನ ರಾಜಧಾನಿಯ ಪರಕಾಲಮಠದ ಬೀದಿಯಲ್ಲಿ ಮ|| ಪದ್ಮನಾಭರಾಯರ ಮನೆಯೊಳಗೆ ಚಿತ್ರಗಾರರ ಒಬ್ಬ ಮುದುಕಿ ಕೆಲಸಮಾಡುತ್ತಾ ಹಾಗೇ ಮಲಗಿ ತೀರಿಹೋದಳು.

ಕಳೆದ ಶನಿವಾರ ದೀಪಾವಳಿ ಹಬ್ಬದ ನಿಮಿತ್ತ ರಾಜಧಾನಿಯ ಕೆಲವು ವರ್ತಕರು ತಮ್ಮ ಅಂಗಡಿಗಳಲ್ಲಿ ನೇತ್ರಾನಂದಕರವಾದ ದೀಪೋತ್ಸವಾದಿಗಳನ್ನು ನಡೆಸಿ ದೊಡ್ಡ ಮನುಷ್ಯರನ್ನು ಕರೆಸಿ ಸಂತೋಷಪಡಿಸಿದರು.

ಕಳೆದ ಭಾನುವಾರ ಬೆಂಗಳೂರು ಚಾಮರಾಜಪೇಟೆಯ ಮ|| ಬುಳ್ಳಪ್ಪನವರು ತಮ್ಮ ಪತ್ನಿಯು ಕಾಲವಾದ ನಿಮಿತ್ತ ಸುಮಾರು 6,000 ಬಡಬಗ್ಗರಿಗೆ ಸಮಾರಾಧನೆಮಾಡಿಸಿ, ಅನೇಕರಿಗೆ ಬಟ್ಟೆಬರೆಗಳನ್ನು ಕೊಡಿಸಿದರೆಂದು ತಿಳಿದುಬರುತ್ತದೆ.

ಕಳೆದ ವಾರ ರಾಜಧಾನಿಯಲ್ಲಿ ಒಂದೆರಡು ದಿನ ಮೋಡಹಾಕಿಕೊಂಡು ಸೀತಗಾಳಿ ಬೀಸುತ್ತಾ ಕೆಲವು ಹನಿ ಮಳೆಯೂ ಸುರಿಯಿತು. ಈಚೆಗೆ ಬಿಸಿಲು ಕಾಯುತ್ತಿರುವುದು. ಕಳೆದ ವಾರ 2-3 ಮರಣಗಳು ಆಗಿ ರಾಜಧಾನಿಯಲ್ಲಿ ಮತ್ತೆ ಪ್ಲೇಗ್ ಉಪದ್ರ ತಲೆಹಾಕಿತೋ ಎಂಬ ಅನುಮಾನ ಉಂಟಾಗಿದೆ.

ಮೈಸೂರಿಂದ ಅರಸೀಕೆರೆಗೆ ಹೋಗುವ ಹೊಸ ರೈಲ್ ಮಾರ್ಗದಲ್ಲಿ ನಮ್ಮ ಸರ್ಕಾರದವರು ಸಾಗರಕಟ್ಟೆ, ಯಡತೊರೆ, ಹೊಸಅಗ್ರಹಾರ, ಮಂದಗೆರೆ, ಹೊಳೆನರಸಿಪುರ ಸ್ಟೇಷನ್‌ಗಳಲ್ಲಿ ತಂತಿ ವರ್ತಮಾನದ ಆಫೀಸುಗಳನ್ನು ಇಡಿಸಿದಾರೆ. ಪ್ರಜೆಗಳು ಫೀಜುಕೊಟ್ಟು ತಂತಿ ವರ್ತಮಾನಗಳನ್ನು ಕಳುಹಿಸಬಹುದಾಗಿದೆ.

ನಮ್ಮ ಮಹಾಮಾತೃಶ್ರೀಯವರೇ ಮೊದಲಾಗಿ ಅರಮನೆಯ ರಾಣೀವಾಸದವರು ಸುಮಾರು ಮುಂದಿನ ವಾರ ರಾಜಧಾನಿಯಿಂದ ಹೊರಟು ಶಿವನಸಮುದ್ರ ಡಿಸ್ಟ್ರಿಕ್ಟಿಗೆ ಚಿತ್ತೈಸಿ ಗೆರಸೊಪ್ಪೆ ಜಲಪಾತವನ್ನು ಪರಾಂಬರಿಸುವರಾಗಿದಾರೆ. ಆ ಜಲಪಾತವು ಈ ಕಾಲದಲ್ಲೇ ನೋಡಲು ನೇತ್ರಾನಂದಕರವಾಗಿಯೂ ಮನೋಹರವಾಗಿಯೂ ಇದ್ದೀತು.

ಬಾಗೇಪಲ್ಲಿ ಟವನ್ ಪ್ರಜೆಗಳು ಅಲ್ಲಿನ ಅಮಲ್ದಾರ್ರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಮಾಡಿ ಒಂದು ನಾಟಕಶಾಲೆಯನ್ನು ಕಟ್ಟಬೇಕೆಂದು ತೀರ್ಮಾನ ಮಾಡಿ ಚಂದಾ ಹಣವನ್ನು ಕೂಡಿಸುತ್ತಿದಾರೆ. ಆ ಮಂದಿರವನ್ನು ಕಟ್ಟಲು ಮ|| ಬಯ್ಯಪ್ಪರೆಡ್ಡಿಯವರು ತಮ್ಮ ನಿವೇಶನವನ್ನು ಮುಫತ್ತಾಗಿ ಕೊಡುವಂತೆ ಒಪ್ಪಿಕೊಂಡರು.

ಈ ವಾರ ಬೊಂಬಾಯಿ ಗವರ್ನರಾದ ಲಾರ್ಡ್ ವಿಲ್ಲಿಂಗ್‌ಡನ್‌ರವರೂ, ನಮ್ಮ ಬ್ರಿಟಿಷ್ ರೆಸಿಡೆಂಟರವರೂ ಪತ್ನಿಪರಿವಾರ ಸಮೇತ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ದಯಮಾಡಿ ಜೋಗ್ ಜಲಪಾತವನ್ನು ಪರಾಂಬರಿಸುವವರಾಗಿದಾರೆ. ಅವರುಗಳ ಸತ್ಕಾರ ಕಾರ್ಯಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಪ್ರೈವೇಟ್ ಸೆಕ್ರೆಟರಿ ಮಿ|| ಆರ್. ಎಚ್. ಕ್ಯಾಂಬೆಲ್‌ರವರು ಕಳೆದ ವಾರ ಹೋಗಿರುವರು.

ಕಳೆದ ತಾ. 27 ನೇ ಬುಧವಾರ ಮಧ್ಯಾಹ್ನ ಫಕೀರುದೀನ್ ಎಂಬೊಬ್ಬ ಸವಾರನು ರಾಜಧಾನಿಯಲ್ಲಿ ದಿವಾನ್‌ರವರ ಬಂಗಲೆಗೆ ಹೋಗುತ್ತಿದ್ದಾಗ ಸಂಜರಾಜ ಬಹದ್ದೂರವರ ಸತ್ರದ ಬಳಿ ಬೋಗಾದಿ ಗ್ರಾಮದ ಲಿಂಗಿ ಎಂಬ ಹೆಂಗಸಿನ ಮೇಲೆ ಕುದುರೆಯನ್ನು ಬಿಟ್ಟು ಕೆಡವಿದನೆಂದೂ, ಅವಳನ್ನು ಆಸ್ಪತ್ರೆಗೆ ಸಾಗಿಸಿ ಪೋಲೀಸಿನವರು ಮುಂದಿನ ಕ್ರಮ ನಡಿಸಿರುತ್ತಾರೆಂದೂ ಕೇಳುತ್ತೇವೆ.

ರಾಜಧಾನಿಯ ಕೆಶ್ಯಾಡಿಪುರದ ಅಗ್ರಹಾರದಲ್ಲಿರುವ ದ್ವಿವೇದಿ ಸುಬ್ರಹ್ಮಣ್ಯಶಾಸ್ತ್ರಿಗಳ ಹಿರಿ ಪುತ್ರರಾದ ಮ|| ಡಿ. ಎಸ್. ಸುಬ್ರಾಯಶಾಸ್ತ್ರಿಯವರು ಕಳೆದ ಭಾನುವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಸುಮಾರು 30 ವರುಷ ವಯಸ್ಸಾಗಿದ್ದು ಕ್ಷಯರೋಗ ಪೀಡಿತರಾಗಿ ಅಕಾಲಮರಣಕ್ಕೆ ಗುರಿಯಾದರು. ಇವರು ಬೇರೆಬೇರೆ ಪತ್ರಿಕೆಗಳಿಗೆ ಬಾತ್ಮಿದಾರರಾಗಿ ಗಣ್ಯತೆಯನ್ನು ಸಂಪಾದಿಸಿಕೊಂಡಿದ್ದರು. ಪತ್ನಿ, ಇಬ್ಬರು ಮಕ್ಕಳು, ತಂದೆತಾಯಿಗಳು ವಿಯೋಗದುಃಖಕ್ಕೆ ಪಾತ್ರರಾದರು.

ಇಂಡಿಯಾ ಗವರ್ನ್‌ಮೆಂಟಿನ ವಾಯಿದೆಯುಳ್ಳ ಸಾಲಕ್ಕೆ ಪೋಸ್ಟ್ ಆಫೀಸ್ ಮೂಲಕ ಹಣಗಳನ್ನು ಕಟ್ಟಿ ಸರ್ಕಾರದಿಂದ ಶೇಕಡಾ ನಾಲ್ಕು ರೂಪಾಯಿ ಬಡ್ಡಿಯುಳ್ಳ ಪತ್ರಗಳನ್ನು ಪಡೆಯಬಹುದೆಂಬ ಇಸ್ತಿಹಾರನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿದೆವಷ್ಟೆ. ಈಗ ಅದರ ವಾಯಿದೆ ಪೂರೈಸಿತು. ಈ ಸಾಲಕ್ಕಾಗಿ ಒಟ್ಟು 3,746 ಅರ್ಜಿಗಳು ಪೋಸ್ಟ್ ಆಫೀಸ್ ಮೂಲಕ ಬಂದಿರುತ್ತವೆಂದೂ, ಒಟ್ಟು 43,95,001 ರೂಪಾಯಿಯನ್ನು ಪ್ರಜೆಗಳು ಕಟ್ಟಿ ಪತ್ರಗಳನ್ನು ಕೊಡಬೇಕೆಂದು ಕೇಳಿರುವುದಾಗಿಯೂ ತಿಳಿಸಲ್ಪಟ್ಟಿದೆ.

ತಿಪ್ಪೂರಿನಲ್ಲಿ ಕೋದಂಡರಾಮಯ್ಯನವರ ಮಗ ಸುಮಾರು 24 ವರುಷದ ತಿಮ್ಮಪ್ಪನೆಂಬವನು ತಾನೊಂದು ಕ್ಯಾಷ್ ಬಜಾರ್ ಇಟ್ಟಿದೇನೆಂದು ನಟಿಸಿ, ಪನ್ನೀರು—ಹರಳೆಣ್ಣೆ—ಆಷಧಿಪುಡಿಗಳನ್ನು ತಯಾರುಮಾಡಿ ಕಳುಹುತ್ತೇನೆಂದು ಮೈಸೂರಿನ 5-6 ಮಂದಿ ವರ್ತಕರಿಂದ ಹಣವನ್ನು ಅಡ್ವಾನ್ಸು ತೆಗೆದುಕೊಂಡುಹೋಗಿ ಮೋಸಕರವಾದ ಪದಾರ್ಥಗಳನ್ನು ಕಳಿಸಿದನೆಂದು ಮೊಕದ್ದಮೆ ಆಯಿತು. ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅವನಿಗೆ ಕಳೆದ ಗುರುವಾರ ಎರಡು ವರುಷ ಕಠಿಣ ಸಜಾ ವಿಧಿಸಿದರು.

ರಾಜಧಾನಿಯ ಮಹಾರಾಜರವರ ಕಾಲೇಜಿನಲ್ಲಿ ಇಂಗ್ಲಿಷ್ ಪಂಡಿತರಾಗಿದ್ದು ಕೆಲಸಬಿಟ್ಟ ಮಿ|| ಎಸ್. ಡಬ್ಲಿಯು. ಕ್ರೈಟನ್ ಆಂಡ್ರೂಸ್‌ರವರು ಮ|| ಸುಬ್ರಹ್ಮಣ್ಯರಾಜೆಅರಸಿನವರಿಂದ ಸುಮಾರು 250 ರೂಪಾಯಿನ ಒಂದು ಬಂದೂಕವನ್ನು ತೆಗೆದುಕೊಂಡು ಅದನ್ನು ವಾಪಸು ಕೊಡದೆ ಹಾಗೇ ಸೀಮೆಗೆ ಹೊರಟುಹೋಗಬೇಕೆಂದು ಪ್ರಯತ್ನಮಾಡಿದರಂತೆ. ಪೋಲೀಸಿನವರು ಅವರನ್ನು ಕಳೆದ ವಾರ ರಾಮೇಶ್ವರದ ಆಚೆ ಧನುಷ್ಕೋಟಿ ಸ್ಟೇಷನ್‌ನಲ್ಲಿ ದಸ್ತಗಿರಿ ಮಾಡಿ ಬೆಂಗಳೂರಿಗೆ ಕರೆತಂದರು. ದಂಡಿನ ಮ್ಯಾಜಿಸ್ಟ್ರೇಟರು ಅವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆಂದು ಪ್ರಕಟವಾಗಿದೆ.

ರಾಜಧಾನಿಯ ಹೆಲ್ತ್ ಆಫೀಸರ್ ಮಿ|| ಎ. ಕೆ. ವಾಣಿಯವರು ಬೇರೆ ಬೇರೆ ರೋಗಗಳ ವಿಷಯವಾಗಿ ಹಸ್ತಪತ್ರಗಳನ್ನು ಬರೆದು ಪ್ರಕಟಮಾಡಿದಾರೆ. ಈಗ ಅವರು ಪ್ರಕಟಿಸಿರುವ ಪತ್ರದಲ್ಲಿ ಸೊಳ್ಳೆಗಳು ಕಚ್ಚಿದರೆ ಮಲೇರಿಯಾ ಜ್ವರ ಬರುವುದೆಂದೂ, ಈ ಜ್ವರವನ್ನು ನಿಲ್ಲಿಸಬೇಕಾದರೆ ಸೊಳ್ಳೆಗಳನ್ನು ನಾಶಪಡಿಸಬೇಕೆಂದೂ ತಿಳಿಸಿರುವರು. ಮನೆಯ ಅಂಗಳದಲ್ಲಾಗಲಿ, ಹಿತ್ತಲುಗಳಲ್ಲಾಗಲಿ, ಸುತ್ತುಮುತ್ತಿನ ಪ್ರದೇಶಗಳಲ್ಲಾಗಲಿ ನೀರು ನಿಂತು ಕೊಳೆಯದಂತೆ ನೋಡಿಕೊಂಡ ಪಕ್ಷದಲ್ಲಿ ಸೊಳ್ಳೆಗಳು ಹುಟ್ಟುವುದಕ್ಕೂ ಅವು ಮೊಟ್ಟೆಗಳನ್ನಿಡು

ಅವಕಾಶವಾಗುವುದಿಲ್ಲವೆಂದು ಸೂಚಿಸಿದಾರೆ. ಪ್ರಜೆಗಳು ಆ ಹಸ್ತಪತ್ರವನ್ನು ಚೆನ್ನಾಗಿ ಓದಿ ತಿಳಿದುಕೊಂಡು, ಅದರಲ್ಲಿ ವಿವರಿಸಿರುವಂತೆ ಆಚರಿಸಬೇಕೆಂದು ಹಾರೈಸುತ್ತೇವೆ.

. . .

ಸೋಮವಾರ ಸಂಪದಭ್ಯುದಯ ಸಮಾಜದ ಸೆಕ್ರೆಟರಿಯವರೂ ರಾಜಧಾನಿಯ ಟ್ರೈನ್ ಬೋರ್ಡಿಂಗ್ ಹೋಮಿಗೆ ಕೆಲವು ಕರೆಸಿಕೊಂಡು ಅವರ ಕೂಡ ಸ್ವಲ್ಪ ಹೊತ್ತು ಮಾತನಾಡಿದರು. ವರ್ಧಮಾನಯ್ಯನವರು ವರ್ತಕರ ಪರವಾಗಿ ಅವರ ಕೋಶ ಅಳತೆಯ ಮತ್ತು ತೂಕದ ಸಾಧನಗಳನ್ನು ಸಂಸ್ಥಾಪಿ ಕ್ರಮಪಡಿಸಿ ದರ್ಬಟ್ಟು ಮೇಲ್ವಿಚಾರಣೆ ಆಗಬೇಕಾದದ್ದು. ನಮ್ಮ ವರ್ತಕರು ಅನೇಕ ಕಾಲಗಳಲ್ಲಿ ಮೋಸ ಕೃತ್ರಿಮಗಳ ಧರ್ಮವಾಗಿ ವ್ಯಾಪಾರ ಮಾಡುವುದನ್ನು ಕಲಿತರೆ ಅವರು ಶ್ರೇಯ ಬಂದಾರು. ಸರ್ಕಾರದವರು ಮೊದಲಿದ್ದಂತೆ ಕೆಂಟಿನ ಸೇರುಗಳನ್ನೇ ಚಾರಿಗೆ ಬರುವಂತೆ ಮಾಡಿದರೆ ಮೋಸಕ್ಕೆ ಅವಕಾಶವಿಲ್ಲವೆಂದು ...ದರು.

. . .

ಕರ್ನಾಟಕದ ಪೀಪಲ್ಸ್ ಬ್ಯಾಂಕಿನ ರಿಪೋರ್ಟು ಮೊದಲಾದವು ನಮಗೆ ಬಂದಿವೆ. ಬ್ಯಾಂಕಿನ ಮೂಲಧನ 1,60,000 ರೂಪಾಯನ್ನು 10 ರೂಪಾಯಿನ ಭಾಗಮಾಡಿ ಬೆಲೆಗೆ ಇಟ್ಟಿದಾರೆ. ಇದುವರೆಗೆ ಮೂಲಧನಕ್ಕೆ ... ರೂಪಾಯಿ ವಸೂಲಾಗಿರುತ್ತದೆ. ಡಿಪಾಜಿಟ್ಟು ಮಾಡಿರುವ ಹಣಗಳು ಹೆಚ್ಚಾಗಿಲ್ಲ. ಇದರಿಂದ ಈ ಬ್ಯಾಂಕು ವಿಶೇಷ ಲೇವಾದೇವಿಯನ್ನು ... ಇಂಥಾ ಬ್ಯಾಂಕುಗಳು ನಮ್ಮ ದೇಶಕ್ಕೆ ಇನ್ನೂ ಹೆಚ್ಚಾಗ... ಕರ್ನಾಟಕದ ಮತ್ತು ಆಸ್ಥಾನದಲ್ಲಿರುವ ಜನಗಳು ಇಂಥಾ ... ಪ್ರೋತ್ಸಾಹಕೊಟ್ಟು ಲೇವಾದೇವಿ ನಡೆಸುತ್ತಾ ಬಂದರೆ ಬ್ಯಾಂಕುಗಳು ...ಯುತ್ತವೆ; ಅದರಿಂದ ವ್ಯಾಪಾರ ಹೆಚ್ಚಿ ದೇಶಕ್ಕೂ ಶ್ರೇಯಸ್ಸುಂಟಾ... ಈ ಪೀಪಲ್ಸ್ ಬ್ಯಾಂಕು ಇನ್ನೂ ಹೆಚ್ಚಾಗಿ ಅಭಿವೃದ್ಧಿಗೆ ಬಂದು, ... ಪ್ರಜಾ ಸಾಮಾನ್ಯಕ್ಕೂ ಪ್ರಯೋಜನವನ್ನುಂಟುಮಾಡಲೆಂದು ...ತ್ತೇವೆ.

. . .

ಶತ್ರು ರಾಜ್ಯಗಳ ಪ್ರಜೆಗಳು ಮೈಸೂರು ಸಂಸ್ಥಾನದಲ್ಲಿ ಕೆಲವರು ಇರು... ಇವರ ಪೈಕಿ 28 ಮಂದಿ ಸ್ತ್ರೀಯರನ್ನು ಬ್ರಿಟಿಷ್ ರೆಸಿಡೆಂಟರವರು ... ಕೆಲಸಗಳಿಂದ ಬಿಡಿಸಿ ಬೆಂಗಳೂರು ದಂಡಿನಲ್ಲಿರುವ ಗುಡ್ ಶೆಪರ್ಡ್ ...ವೆಂಟ್ ಎಂಬ ಕಟ್ಟಡದಲ್ಲಿ ಇಟ್ಟಿರಬೇಕೆಂದೂ, ಬೇರೆ ಮೂರು ಮಂದಿ ...ಯನ್ನು ಅವರ ದೇಶಕ್ಕೆ ವಾಪಸು ಕಳುಹಿಸುವ ಏರ್ಪಾಡುಮಾಡಿದೆ ಎಂದೂ ...ಟ್ಟಿದಾರೆ. ಇದಲ್ಲದೆ ಬೆಂಗಳೂರು ಬಾರ್ಟನ್ ಕಂಪನಿಯಲ್ಲಿರುವ ... ಮೇನ್, ಬೆಂಗಳೂರಿನಲ್ಲಿರುವ ವಿದ್ಯುಚ್ಛಕ್ತಿ ಇಲಾಖೆಯ ಚೀಫ್ ... ಮಿ॥ A. ನೇಗಲ್, ಮೈಸೂರು ಉದ್ಯಾನವನಗಳ ಸೂಪರಿಂಟೆಂಡೆಂಟ ಮಿ॥ ಜಿ. ಎಚ್. ಕ್ರಂಬೀಗಲ್ (ಇವರು ಜರ್ಮನಿಯವರು), ಮೈಸೂರು ... ಮಹಾರಾಜ ಕುಮಾರರವರ ವರ್ಕ್ ಷಾಪ್ ಸೂಪರಿಂಟೆಂಡೆಂಟ ಮಿ॥ ವಿ. ಹೊಪ್ಸೋವಿಚ್ (ಇವರು ಆಸ್ಟ್ರಿಯಾದವರು), ಈ ನಾಲ್ಕು ...ಜನನ್ನೂ ಹಿಡಿದು ನಿರ್ಬಂಧದಲ್ಲಿಡುವುದಾಗಿಯೂ ಬ್ರಿಟಿಷ್ ರೆಸಿಡೆಂಟರ ... ತಿಳಿಸಿಕೊಟ್ಟಿದಾರೆ

ಯುದ್ಧದ ಸಮಾಚಾರಗಳು.

ನಿಲುಗಡೆ ಇಲ್ಲದ ಕದನಗಳು.

ಮಿ॥ ಆಸ್ಕ್ವಿತ್‌ರವರ ಭಾಷಣ.

ಈ ವಾರದ ತಂತೀ ವರ್ತಮಾನಗಳಿಂದ ಯುದ್ಧಭೂಮಿಯ ಪ್ರತಿ ಒಂದು ...ದಲ್ಲೂ ಕದನಗಳು ನಡೆಯುತ್ತವೆಂದೂ ಕೆಲವು ಕದನಗಳು ಅತ್ಯಂತ ...ವಾಗಿ ನಡೆದವೆಂದೂ ತಿಳಿದುಬರುತ್ತದೆ. ನಮ್ಮ ಚಕ್ರವರ್ತಿ ಸಾರ್ವಭೌಮರವರು ದಿನೇ ದಿನೇ ಆರೋಗ್ಯ ಹೊಂದುತ್ತಿದಾರೆ. ನೋವು ಕಡಮೆ, ...ಮಾತ್ರ ಸ್ವಲ್ಪ ಬಾಧೆಯಾಗುತ್ತದೆ; ಈಗ ಪ್ರಭುಗಳಿಗೆ ಪುಷ್ಟಿ ...ಕೊಡತಕ್ಕಂಥಾ ಸೇವನೆಗಳನ್ನು ಕೊಡಿಸುತ್ತಿದಾರೆ. ಅವರು ಇನ್ನೂ ಹಾಸಿಗೆ ಮೇಲೆಯೇ ಇರುವಂತೆ ನಿರ್ಬಂಧವುಂಟು. ಅಪಾಯಕಾರ್ಯವು ಹೇಗೆ ...ಯಿತೆಂದು ಸರ್ಕಾರಿಯಾಗಿ ಅದರ ವಿವರವನ್ನು ಪ್ರಕಟಿಸಿದಾರೆ. ಇದರಲ್ಲಿ ...ವರೆಗೆ ತಿಳಿಸಿರುವುದಕ್ಕೂ ಅಷ್ಟೇನೂ ವ್ಯತ್ಯಾಸವಿರುವಂತೆ ಕಂಡುಬರುವುದಿಲ್ಲ. ಆ ಅಪಾಯಕಾರ್ಯ ನಡೆದ ಉತ್ತರಕ್ಷಣದಲ್ಲೇ ಆಲ್ಫ್ರೆಡ್ ... ಎಂಬ ಸೈನಿಕನಿಗೆ ಚಕ್ರವರ್ತಿಯವರು ಆತನ ಪರಾಕ್ರಮಕ್ಕೆ ... ವಿಕ್ಟೋರಿಯಾ ಕ್ರಾಸ್ - ಎಂಬ ಬಿರುದನ್ನು ದಯಪಾಲಿಸಲಪೇಕ್ಷಿಸಿ ... ಚಕ್ರವರ್ತಿಯವರನ್ನು ಮಲಗಿಸಿದ್ದ ಆಸ್ಪತ್ರೆ ಗಾಡಿಯೊಳಗೆ ಆತನು ... ಹಾಸಿಗೆಯ ಬಳಿ ಮೊಣಕಾಲೂರಿ ಬಗ್ಗಿಕೊಂಡನು. ಚಕ್ರವರ್ತಿಯ... ಅಶಕ್ತರಾಗಿದ್ದ ಕಾರಣ ಅವರು ಸ್ವತಂತ್ರಿಸಿ ಬಿರುದನ್ನು ಆ ... ಅಂಗಿಗೆ ತಗಲಿಸಲಾರದೆ ಹೋದರು, ಸಮೀಪದಲ್ಲಿದ್ದವರು ಪ್ರಭುವಿಗೆ ...ಮಾಡಿ ಆ ಕಾರ್ಯವನ್ನು ಬೆಳೆಸಿದರು. ನಮ್ಮ ಚಕ್ರವರ್ತಿಯವರು ...ನಲ್ಲಿರುವ ತಮ್ಮ ಸೈನಿಕರಿಗೆಲ್ಲಾ ಹುಕುಂ ಕೊಟ್ಟು ಅದರಲ್ಲಿ ಅಪ್ಪಣೆ ...ವುದೇನೆಂದರೆ—ನಮ್ಮ ಪರಾಕ್ರಮಶಾಲಿಗಳಾದ ಸೈನಿಕರ ಪೈಕಿ ಅನೇಕ... ನೋಡಿ ನಮಗೆ ಆನಂದವಾಯಿತು. ಉಳಿದವರನ್ನು ಸಹ ನೋಡಬೇಕೆಂದು ಕುತೂಹಲವಿದ್ದಿತು; ಆದರೆ ಈ ಅಪಾಯಕಾರ್ಯ ನಡೆದುದರಿಂದ ಸಾಧ್ಯವಿಲ್ಲವೆಂದು ವಿಷಾದಿಸುತ್ತೇವೆ. ನೀವುಗಳೆಲ್ಲಾ ಜಯಮನಸ್ಕರಾಗಿಯೂ, ...ಉತ್ಸಾಹಿತರಾಗಿಯೂ ಇರುವುದನ್ನು ನೋಡಿ ನಮಗೆ ಆನಂದವಾಗಿರುತ್ತದೆ. ...ಕಣ್ಣಿಗೆ ಕಾಣುತ್ತಿದೆ. ಆದರೆ ಓಟದ ಪಂದ್ಯದಲ್ಲಿ ಕೊನೆಯನ್ನು ತಲುಪಿದ ಮೇಲೆಯೇ ಜಯಪ್ರದವುಂಟಾಗುವುದೆಂಬುದನ್ನು ನೀವುಗಳೆಲ್ಲಾ ಮರೆಯಬಾರದು.

ಪಶ್ಚಿಮ ರಣರಂಗದಲ್ಲಿ.

ಮಿತ್ರಮಂಡಲಿಯವರು ನುಗ್ಗಿಹೋಗಿರುವ ಠಾಣ್ಯಗಳಲ್ಲಿ ಜರ್ಮನಿಯವರು ಕಳಕೊಂಡಂಥಾ ಪ್ರದೇಶಗಳನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಮಹತ್ತರ ಸಾಹಸಪಡುತ್ತಿದಾರೆ. ಒಂದೆರಡು ಸಣ್ಣ ಪ್ರದೇಶಗಳ ಹೊರತು ಯಾವ ...ದಲ್ಲೂ ಅವರು ಮಿತ್ರಮಂಡಲಿಯವರ ಸೈನ್ಯಗಳ ಸಾಲುಗಳನ್ನು ಭೇದಿಸಲಾರದೆ ಹೋದರು. ಹವಾ ಸ್ಥಿತಿಯು ಕದನಮಾಡುವುದಕ್ಕೆ ಅನುಕೂಲವಿಲ್ಲ. ಆದರೆ ಜರ್ಮನಿಯವರು ಕೆಲವು ಠಾಣ್ಯಗಳಿಂದ ತಮ್ಮ ಸೈನ್ಯಗಳನ್ನು ...ಕರೆಸಿಕೊಂಡಿರುವುದಾಗಿ ತಿಳಿಸುತ್ತಾರೆ.

...ನೇ ತಾರೀಖು ನಡೆದ ಒಂದು ಯುದ್ಧದಲ್ಲಿ ನುಗ್ಗಿಬಂದ ಜರ್ಮನಿ ಸೈನಿಕರಲ್ಲಿ ... 90 ರಷ್ಟು ನಷ್ಟವಾಗಿರುತ್ತಾರೆಂದು ಸರ್ ಜಾನ್ ಫ್ರೆಂಚ್‌ರವರು ...ದಾರೆ.

...ಸೋಮ್ ನದಿಯೊಳಗೆ ಜರ್ಮನಿಯವರು ತಮ್ಮ ಸೈನ್ಯಗಳನ್ನು ಹಿಂಭಕ್ಕೆ ... ಹೋಗಿ ಕಂದಕಗಳನ್ನು ಸಾಲುಸಾಲಾಗಿ ಮಾಡಿಸುತ್ತಿದಾರೆಂದೂ, ... ಹಿಡಿದು ಅವರಿಂದ ಕಂದಕ ತೋಡಿಸುತ್ತಿರುವುದಾಗಿ ...ತ್ತದೆ.

ಪೂರ್ವ ರಣರಂಗದಲ್ಲಿ.

ಜರ್ಮನಿಯವರು ಸರ್ಬಿಯಾದವರ ಮೇಲೆ ಯುದ್ಧಮಾಡುವುದಕ್ಕಾಗಿ ಪೂರ್ವ ರಣರಂಗದಿಂದ ತಮ್ಮ ಸೈನ್ಯಗಳನ್ನು ಅಲ್ಲಿಗೆ ಕರೆಸಿಕೊಂಡಿದಾರೆಂದು ಹೇಳಲಾಗಿದೆ. ಚಳಿಗಾಲ ಪ್ರಾರಂಭವಾಯಿತು. ಇನ್ನು ಜರ್ಮನಿಯವರು ಮುಂದರಿಸಿ ನುಗ್ಗಿಹೋದಾರೆಂಬ ಆಸೆ ಕಾಣುವುದಿಲ್ಲ. ಕೆಲವು ಠಾಣ್ಯಗಳಲ್ಲಿ ಜರ್ಮನಿಯವರು ನುಗ್ಗಿಹೋಗಬೇಕೆಂದು ಸಾಹಸಪಟ್ಟರು; ಆದರೆ ಅದು ಸಾಧ್ಯವಾಗದೆ ಸೋತು ಬಂದರು. ಇತರ ಠಾಣ್ಯಗಳಲ್ಲಿ ರಷ್ಯಾದವರು ಜರ್ಮನಿಯವರ ಮೇಲೆ ಬಿದ್ದು ಕದನಮಾಡಿ 80 ಹುದ್ದೇದಾರರನ್ನೂ, 3,500 ಸೈನಿಕರನ್ನೂ ಸೆರೆ ಹಿಡಿದಿರುತ್ತಾರೆ. ಕೆಲವು ಠಾಣ್ಯಗಳಲ್ಲಿದ್ದ ತಮ್ಮ ಸೈನ್ಯಗಳನ್ನು ಸಾಲು ನೇರವಾಗಿ ಮಾಡಿಕೊಳ್ಳುವುದಕ್ಕೆ ಕರೆಸಿಕೊಂಡೆವೆಂದು ಜರ್ಮನಿಯವರು ಹೇಳುವರು. ಕೆಲವು ಠಾಣ್ಯಗಳಲ್ಲಿ ಕೊಚ್ಚೆ ಭೂಮಿಯಲ್ಲೇ ಕದನಗಳು ನಡೆದವು; ಅನೇಕ ಜರ್ಮನಿಯವರು ಜೌಗುದೆಯೊಳಗೆ ಸಿಕ್ಕಿ ನಷ್ಟವಾದರು. ಯುದ್ಧ ಸಾಲಿನ ದಕ್ಷಿಣ ಭಾಗದಲ್ಲಿ ಅಂದರೆ ಗೆಲಿಷಿಯಾದಲ್ಲಿ ರಷ್ಯಾದವರು ಬಹಳ ಚುರುಕಾಗಿದಾರೆ. ಅವರು ಅಲ್ಲಿ ಜರ್ಮನಿಯವರ ಮೇಲೆ ನುಗ್ಗಿ ಕದನ ಮಾಡಲಾರಂಭಿಸಿದರೆ ಅದರಿಂದ ಸರ್ಬಿಯಾದವರಿಗೆ ಸಹಾಯವಾಗುವುದು. ರೀಗಾ ಕೊಲ್ಲಿಯಲ್ಲಿ ರಷ್ಯಾದವರು ಜರ್ಮನಿಯ ಒಂದು ವಿಮಾನಯಂತ್ರವನ್ನು ಕಿತ್ತುಕೊಂಡರು. ಅದು ಬೇಕಾದಾಗ ನೀರಿನ ಮೇಲೂ, ಅಂತರಿಕ್ಷದಲ್ಲೂ ಸಂಚರಿಸಬಲ್ಲಂಥಾದ್ದು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸರ್ಬಿಯಾದವರು ನಿಧಾನವಾಗಿ ಹಿಂದಕ್ಕೆ ಹಿಮ್ಮೆಟ್ಟಿಹೋಗುತ್ತಿದಾರೆ. ಆದರೂ ಪ್ರತಿ ಕ್ಷಣದಲ್ಲೂ ಅವರು ಜರ್ಮನಿಯ ಮತ್ತು ಆಸ್ಟ್ರಿಯದ ಸೈನಿಕರ ಮೇಲೆ ಯುದ್ಧಮಾಡುತ್ತಲೇ ಇರುವರು. ಸರ್ಬಿಯಾದವರು ತಮ್ಮ ಒಂದು ದೊಡ್ಡ ಪಟ್ಟಣವನ್ನು ತ್ಯಜಿಸಿ ಅದರೊಳಗಿದ್ದದ್ದನ್ನೆಲ್ಲಾ ಸಾಗಿಸಿಕೊಂಡು ಹೋಗಿಬಿಟ್ಟರು. ಆ ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದ 45,000 ಜರ್ಮನಿ ಸೈನಿಕರಲ್ಲಿ 20,000 ಸೈನ್ಯವನ್ನು ಕಳೆದುಕೊಂಡರು. ಜರ್ಮನಿಯವರು ಪಟ್ಟಣದೊಳಗಿರುವ ಹೆಂಗಸರು ಮಕ್ಕಳನ್ನು ಬಹಳ ಕ್ರೂರವಾಗಿ ಕಷ್ಟಪಡಿಸಿದರೆಂದು ಹೇಳಲಾಗಿದೆ. ಜರ್ಮನಿ ದಳಪತಿಯಾದ ಜನರಲ್ ಮೆಕೆನ್‌ಸೆನ್ ಎಂಬಾತನು ತನಗೆ ಇನ್ನೂ 1,00,000 ಸೈನ್ಯ ಬೇಕೆಂದು ಕೇಳಿದಾನೆ. ಬಲ್ಗೇರಿಯಾದವರು ದಕ್ಷಿಣ ಮತ್ತು ಪೂರ್ವದಿಕ್ಕುಗಳಿಂದ ಮುತ್ತಿಗೆ ಹಾಕುತ್ತಿದಾರೆ. ಅವರ ಸೈನ್ಯದಲ್ಲೂ ಅಪಾರವಾಗಿ ನಷ್ಟವಾಗಿರೋಣದರಿಂದ ಈಗ ಅವರು ಹೊಸ ಸೈನ್ಯಗಳನ್ನು ಕೂಡಿಸಲಾರಂಭಿಸಿದಾರೆ

ಫ್ರೆಂಚ್ ದಳಪತಿಯಾದ ಜನರಲ್ ಜೋಫ್ರೆಯವರು ಲಾರ್ಡ್ ಕಿಚ್ನರ್ ರವರನ್ನು ಕಂಡು ಅವರ ಕೂಡ ಸರ್ಬಿಯದ ವಿಚಾರವಾಗಿ ಮಾತನಾಡಿಕೊಂಡು ಬಂದರು. ಯಾವುದೋ ಒಂದು ಏರ್ಪಾಡು ಮಾಡಬೇಕೆಂದು ಅವರಿಬ್ಬರೂ ಒಪ್ಪಿಕೊಂಡಿದಾರೆ. ಈಗ ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ಸರ್ಬಿಯಾದವರ ಸಹಾಯಕ್ಕೋಸ್ಕರ ಸಲೋನಿಕಾ ತೀರ ಪಟ್ಟಣಕ್ಕೆ ಹೋಗುತ್ತಿರುವವು. ಈ ಸೈನ್ಯಗಳಲ್ಲಿ ಕೆಲವು ಭಾಗವನ್ನು ಬಲ್ಗೇರಿಯಾ ಸೀಮೆಯೊಳಕ್ಕೆ ನುಗ್ಗಿಹೋಗುವಂತೆ ಕಳುಹಿಸಿದಾರೆ. ಅಲ್ಲಿಂದ ಸ್ವಲ್ಪ ದಕ್ಷಿಣ ಭಾಗದಲ್ಲಿ ಆ ಸೈನಿಕರು ಬಲ್ಗೇರಿಯಾದವರ ಮೇಲೆ ಕದನಮಾಡಿ ಅವರನ್ನು ಸೋಲಿಸಿದರು. ಬಲ್ಗೇರಿಯಾ ಸೀಮೆಯ ಸ್ಥಿತಿಯನ್ನು ನೋಡಿದರೆ ಅಲ್ಲಿನ ಪ್ರಜೆಗಳೊಳಗೆ ಭಿನ್ನಾಭಿಪ್ರಾಯವುಂಟೆಂದು ಗೊತ್ತಾಗುತ್ತದೆ. ಒಂದು ಸ್ಥಳದಲ್ಲಿ ಪ್ರಜೆಗಳು ಟರ್ಕಿಯವರನ್ನು ಕಲ್ಲುಗಳಿಂದ ಹೊಡೆದರು. ದಂಗೆಯನ್ನು ಅಡಗಿಸುವುದಕ್ಕೆ ಪೋಲೀಸಿನವರು ಬರಬೇಕಾಯಿತು

ಅನೇಕ ಇಂಗ್ಲಿಷ್ ಡಾಕ್ಟರುಗಳನ್ನೂ ನರ್ಸ್‌ಗಳೆಂಬ ಸೇವಾಸ್ತ್ರೀಯರನ್ನೂ ಸರ್ಬಿಯಾಕ್ಕೆ ಕಳುಹಿಸಿದಾರೆ. ಜರ್ಮನಿಯವರು ಇವರಲ್ಲಿ ಸುಮಾರು 200 ಮಂದಿಯನ್ನು ಸೆರೆ ಹಿಡಿದಿರುತ್ತಾರೆಂದು ವರ್ತಮಾನ ಬಂದಿದೆ

ಸರ್ಬಿಯಾದ ಪಶ್ಚಿಮ ಭಾಗದಲ್ಲಿರುವ ಮಾಂಟಿನೀಗ್ರೊ ಸಂಸ್ಥಾನದವರು ದಂಡು ಕಟ್ಟಿಕೊಂಡು ಬಂದು ಕದನಮಾಡುತ್ತಿದಾರೆ. ಇವರು ಆಗಲೇ ಒಂದು ಠಾಣ್ಯದಲ್ಲಿ ಆಸ್ಟ್ರಿಯಾದವರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿದ್ದಲ್ಲದೆ ನಾಲ್ಕು ಫಿರಂಗಿಗಳನ್ನೂ 200 ಸೈನಿಕರನ್ನೂ ಸೆರೆ ಹಿಡಿದರೆಂದೂ, ಆಸ್ಟ್ರಿಯಾದವರು 400 ಮಂದಿ ಯುದ್ಧಭೂಮಿಯಲ್ಲಿ ಮಡಿದು ಬಿದ್ದರೆಂದೂ ತಿಳಿಸಲ್ಪಟ್ಟಿದೆ.

ಸರ್ಬಿಯಾ ದೊರೆಯು ತನ್ನ ಸೈನಿಕರಿಗೆ ಪ್ರಕಟಿಸಿರುವ ಇಷ್ತಿಹಾರೇನೆಂದರೆ—ನಾನು ವೃದ್ಧನಾಗಿರೋಣದರಿಂದ ಯುದ್ಧಮಾಡಲಾರೆನು. ಈ ಘೋರವಾದ ಯುದ್ಧದಲ್ಲಿ ನಾನೇ ನನ್ನ ಸೈನ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ನನಗೆ ಚೈತನ್ಯವಿಲ್ಲ. ನಾನು ಮುದುಕ, ನನ್ನ ಶಕ್ತಿ ಕುಂದಿಹೋಗಿದೆ. ನನ್ನ ಸೈನಿಕರಿಗೂ ಹೆಂಗಸರು ಮಕ್ಕಳಿಗೂ ನಾನು ಶ್ರೇಯಸ್ಸನ್ನು ಬಯಸುತ್ತೇನೆ. ಇಷ್ಟು ಮಾತ್ರ ನನ್ನಿಂದ ಸಾಧ್ಯ. ಆದರೂ ಒಂದು ವಿಷಯದಲ್ಲಿ ನಾನು ಪೂರ್ಣಕವಾಗಿ ಆಣೆ ಇಟ್ಟುಕೊಂಡು ಹೇಳಬಲ್ಲೆನು. ಈ ಯುದ್ಧದಲ್ಲಿ ನಾವು ಸೋತುಹೋದರಷ್ಟರಲ್ಲಿ ನಮ್ಮಗಳ ಸಾವು ಮಹಿಮಾಯುಕ್ತವಾದದ್ದಾಗಿ ಪರಿಣಮಿಸುತ್ತದೆ. ನಮ್ಮ ಪ್ರಿಯರ ಈ ಜನ್ಮಭೂಮಿಯು ಹಾಳಾದದ್ದನ್ನು ನಾನು ಕಣ್ಣಾರ ನೋಡಿ ಬದುಕಿರಲಾರೆನು. ನಾನು ಕೂಡ ಪ್ರಾಣವನ್ನು ತ್ಯಜಿಸುತ್ತೇನೆ

ಗ್ರೀಸಿನ ಸ್ಥಿತಿಯು ಇನ್ನೂ ಬಹಳ ಅವ್ಯವಸ್ಥೆಯಾಗಿದೆ. ರಾಜ್ಯಭಾರವನ್ನು ನಡೆಸುತ್ತಿದ್ದ ಮಂತ್ರಿ ಸಭೆಯವರು ಸೋತು ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಮೊದಲು ಮಂತ್ರಿಯಾಗಿದ್ದ ಮಿ॥ ವೆನಿಜೆಲಾಸ್ ಎಂಬಾತನು ಪ್ರಜೆಗಳು ಹೊಸದಾಗಿ ಚುನಾಯಿಸಿರುವ ಮಂತ್ರಿ ಸಭಿಕರ ಮಾತನ್ನು ದೊರೆಯು ಒಪ್ಪದೆ ಇರಕೂಡದೆಂದು ಹೇಳಿದರು. ದೊರೆಗೆ ತನ್ನ ದೇಶದ ಮೇಲೆ ಪ್ರೀತಿಯೇನೋ ಇದೆ. ಆದರೆ ಮಂತ್ರಿ ಸಭೆಯವರ ಅಭಿಪ್ರಾಯವನ್ನು ಅನುಸರಿಸಿ ರಾಜ್ಯಭಾರ ಮಾಡಬೇಕಾದದ್ದೇ ದೊರೆಯ ಕರ್ತವ್ಯ.

ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ಇನ್ನೂ ಹೆಚ್ಚಾಗಿ ಹೋಗಿ ಇಳಿಯುತ್ತಿವೆ. ಯಾವ ಠಾಣ್ಯದಲ್ಲೂ ಬಲ್ಗೇರಿಯಾದವರು ಮಿತ್ರಮಂಡಲಿಯವರೆದುರಿಗೆ ನಿಲ್ಲಲಾರದೆ ಹೋಗಿದಾರೆ.

ರಷ್ಯಾದವರು ಬಲ್ಗೇರಿಯಾ ಕೀಲಸಟ್ಟಣವಾದ ವಾರ್ನಾ ನಗರವನ್ನು ಮುತ್ತಿಗೆ ಹಾಕದಂತೆ ಕಾಪಾಡುವುದಕ್ಕಾಗಿ ಟರ್ಕಿಯವರು ಅಲ್ಲಿಗೆ ತಮ್ಮ ಯುದ್ಧದ ಜಹಜು ಕಳುಹಿಸಿರುವಂತೆ ಹೇಳಲಾಗಿದೆ.

ಟರ್ಕಿಯಲ್ಲಿ.

ಗಲ್ಲಿಪೋಲಿ ಅರ್ಧದ್ವೀಪದಲ್ಲಿ ಯುದ್ಧಕಾರ್ಯಗಳು ನಿಲ್ಲಿಸಲ್ಪಟ್ಟಿರುವಂತೆ ಕಾಣುತ್ತದೆ. ಬಾಲ್ಕನ್ ಸಂಸ್ಥಾನಗಳಲ್ಲಿ ಕದನಗಳು ನಡೆಯುತ್ತಿರುವುದೇ ಇದಕ್ಕೆ ಕಾರಣವಾಗಿರಬಹುದು.

ಮಾರ್ಮೊರಾ ಕಡಲಿನಲ್ಲಿ ಫ್ರೆಂಚರ ಒಂದು ಸಬ್‌ಮೆರೀನ್ ಹಡಗನ್ನು ಇಬ್ಬರು ಹುದ್ದೇದಾರರು ಮತ್ತು 24 ಸೈನಿಕರ ಸಮೇತ ಸೆರೆ ಹಿಡಿದು ಇರುತ್ತಾರೆ.

ಏಪ್ರಿಲ್ ತಾ. 25 ರಿಂದ ಅಕ್ಟೋಬರ್ 20ರ ವರೆಗೆ ಬ್ರಿಟಿಷ್ ಸೈನಿಕರಲ್ಲಿ 3,200 ಹುದ್ದೇದಾರರಿಗೂ, 75,000 ಸೈನಿಕರಿಗೂ ಗಲ್ಲಿಪೋಲಿಯಲ್ಲಿ ಗಾಯಲೆಯಾಯಿತು. ಅವರನ್ನೆಲ್ಲಾ ಅಲ್ಲಿಂದ ಕರೆದುಕೊಂಡು ಬಂದಿದಾರೆ. ಇದರಿಂದ ಸೈನಿಕರಿಗೆ ಆ ವಿಶ್ರಾಂತಿಯು ಎಷ್ಟು ಸಂತೋಷಕರವಾಗಿತ್ತೆಂದು ಗೊತ್ತಾಗುತ್ತದೆ.

ಮೆಸೊಪೊಟೇಮಿಯಾದಲ್ಲಿ ಬ್ರಿಟಿಷ್ ಮತ್ತು ಹಿಂದುಸ್ಥಾನದ ಸೈನ್ಯಗಳು ಬಾಗ್ದಾದ್ ನಗರವನ್ನು ಕುರಿತು ನುಗ್ಗಿ ಹೋಗುತ್ತಿವೆ.

ಇಟಲಿ.

ಇಟಲಿಯವರು ಆಸ್ಟ್ರಿಯಾದೊಳಕ್ಕೆ ನುಗ್ಗಿ ಹೋದ ಕೂಡಿಗೆ ಆಸ್ಟ್ರಿಯಾದವರು ಅವರನ್ನು ಹಿಂದಕ್ಕೆ ಓಡಿಸಬೇಕೆಂದು ಪ್ರಯತ್ನಪಟ್ಟರು. ಆ ಪ್ರಾಂತ್ಯ ಬಹಳ ಘೋರವಾಗಿ ಕದನಗಳು ನಡೆದಿರುತ್ತವೆ. ಇಟಲಿಯವರು ಮೇಲೆ ಬಿದ್ದು ಬಂದ ಆಸ್ಟ್ರಿಯಾದವರನ್ನು ಪ್ರತಿ ಸಲವೂ ಹಿಂದಕ್ಕೆ ಓಡಿಸಿರುತ್ತಾರೆ. ಇದಲ್ಲದೆ ಇಟಲಿಯವರು ಆಸ್ಟ್ರಿಯಾದವರ ನಾಲ್ಕನೇ ಸಾಲಿನ ಕಂದಕಗಳನ್ನು ಕೆಲವು ಕಡೆ ಸ್ವಾಧೀನಪಡಿಸಿಕೊಂಡರು. ಅವರು ನಿಧಾನವಾಗಿಯೇ ನುಗ್ಗಿ ಹೋಗುತ್ತಿದಾರೆ.

ಇತರ ವಿಷಯಗಳು.

ಬ್ರಿಟಿಷ್ ಗವರ್ನ್‌ಮೆಂಟಿನ ಮಂತ್ರಿಶ್ರೇಷ್ಠರಾದ ಮಿ॥ ಆಸ್ಕಿತ್ ರವರು ಹೌಸ್ ಆಫ್ ಕಾಮನ್ಸ್ ಸಭೆಮನೆಯಲ್ಲಿ ಈಗ ಪ್ರಾಪ್ತವಾಗಿರುವ ವಿದ್ಯಮಾನಗಳನ್ನು ಕುರಿತು ಬಹು ವಿಶೇಷವಾದ ಭಾಷಣವನ್ನು ಮಾಡಿದರು. ಅದರ ಸಾರಾಂಶವೇನೆಂದರೆ—ಯುದ್ಧವನ್ನು ಜಯಪ್ರದವಾಗುವ ತನಕ ನಡೆಸುತ್ತಲೇ ಬರುವುದು ಸಿದ್ಧವೆಂದು ಬ್ರಿಟಿಷ್ ಜನಾಂಗವೆಲ್ಲಾ ಸಂಕಲ್ಪ ಮಾಡಿಕೊಂಡಿದಾರೆ. ಅದಕ್ಕಾಗಿ ಏನು ಬೇಕಾದರೂ ಒಪ್ಪಿಸಿಬಿಡುವುದಕ್ಕೆ ಸಿದ್ಧರಾಗಿರುವರು. ಗವರ್ನ್‌ಮೆಂಟಿನವರು ನಿರೀಕ್ಷಿಸಿದ್ದ ಪ್ರಕಾರವೇ ಎಲ್ಲವೂ ನೆರವೇರಲಿಲ್ಲ. ಈಗ ಯಥಾರ್ಥವಾದ ವಿದ್ಯಮಾನಗಳನ್ನು ಕಣ್ಣು ಬಿಟ್ಟು ನೋಡುವುದು ಅವಶ್ಯ. ಎಲ್ಲರೂ ಬಹಳ ತಾಳ್ಮೆಯುಳ್ಳವರಾಗಿರಬೇಕು. ಧೈರ್ಯವೂ ಪರಾಕ್ರಮವಾದ ಕಾರ್ಯವೂ ಪ್ರಕಾಶವಾಗಬೇಕು. ಗವರ್ನ್‌ಮೆಂಟಿನವರು ಮುಚ್ಚುಮರೆ ಮಾಡಬೇಕಾದ ವಿಚಾರಗಳೇನೂ ಇಲ್ಲ. ಶತ್ರುವಿಗೆ ಸಹಾಯವಾಗಬಹುದಾದ ವಿಷಯಗಳನ್ನು ಮಾತ್ರ ಸರ್ಕಾರದವರು ಪ್ರಕಟಿಸಲಾರರು. 1,60,000 ಸೈನ್ಯವನ್ನಿಟ್ಟುಕೊಂಡು ಯುದ್ಧವನ್ನು ಪ್ರಾರಂಭ ಮಾಡಿದೆವು. ಈಗ ಫ್ರಾನ್ಸ್ ಯುದ್ಧಭೂಮಿ ಒಂದರಲ್ಲೇ ಸುಮಾರಾಗಿ 10,00,000 ಬ್ರಿಟಿಷ್ ಸೈನ್ಯಗಳಿವೆ. ಇದಲ್ಲದೆ ಡಾರ್ಡನೆಲ್ಸ್, ಈಜಿಪ್ಟ್, ಮೆಸೊಪೊಟೇಮಿಯ ಮೊದಲಾದ ಕಡೆಗಳಲ್ಲಿ ಬೇರೆ ಸೈನ್ಯಗಳಿರುವವು. ಮತ್ತು ಬ್ರಿಟನ್‌ನಲ್ಲೂ ಇತರ ಸ್ಥಳಗಳಲ್ಲೂ ಪಹರಿ ಕೆಲಸಗಳನ್ನು ಮಾಡುವ ಸೈನ್ಯಗಳು ಇರುತ್ತವೆ. ಕೆನಡಾದವರು 96,000, ಆಸ್ಟ್ರೇಲಿಯಾದವರು 72,000, ನ್ಯೂಜೀಲೆಂಡಿನವರು 25,000 ಸೈನ್ಯಗಳನ್ನು ಜೊತೆಮಾಡಿ ಕಳುಹಿಸಿಕೊಟ್ಟರು. ದಕ್ಷಿಣ ಆಫ್ರಿಕಾದವರು ಅಲ್ಲೇ ಶತ್ರುವಿನ ಮೇಲೆ ಕದನಗಳನ್ನು ನಡೆಸಿ ಜಯಪ್ರದರಾಗಿ ಈಗ ಸೈನ್ಯಗಳನ್ನು ಕೂಡಿಸಿ ಪೂರ್ವ ಮತ್ತು ಮಧ್ಯ ಆಫ್ರಿಕಾ ಪ್ರಾಂತ್ಯಗಳಿಗೆ ಕೆಲವನ್ನು ಕಳುಹಿಸುತ್ತಿದಾರೆ. ಮತ್ತು ಅವರು ಯೂರೋಪಿಗೂ 6,500 ಸೈನ್ಯವನ್ನು ಕಳುಹಿಸುವುದರಲ್ಲಿರುವರು. ಇತರ ಕಡೆಗಳಿಂದಲೂ ವಿಶೇಷ ಘನತರವಾದ ಸಹಾಯಸಂಪತ್ತುಗಳು ಒದಗಿಸಲ್ಪಟ್ಟಿರುವವು. ಬ್ರಿಟಿಷ್ ನಾವೆಗಳು 25,00,000 ಸೈನ್ಯಗಳನ್ನು ಸಾಗಿಸಿದವು. 3,20,000 ಗಾಯಾಳುಗಳನ್ನೂ, ಗಾಯಪಟ್ಟವರನ್ನೂ, ಸೇವಾ ಸ್ತ್ರೀಯರನ್ನೂ, 25 ಲಕ್ಷ ಟನ್ ಗಳ ಸಂಖ್ಯೆಗಳನ್ನೂ ಸಾಮಗ್ರಿಗಳನ್ನೂ, 8,00,000 ಕುದುರೆ ಹೇಸರಕತ್ತೆ ಒಂಟೆಗಳನ್ನೂ ಸ್ಥಳದಿಂದ ಸ್ಥಳಕ್ಕೆ ಸಾಗಿಸಿ ತಲಪಿಸಿರುತ್ತವೆ. ಸಬ್‌ಮೆರೀನುಗಳಿಂದಲೂ ಶತ್ರುವಿನ ಹಡಗುಗಳಿಂದಲೂ ಸಾವಿರಕ್ಕೆ ಒಂದಕ್ಕಿಂತಲೂ ಕಡಮೆಯಾಗಿಯೇ ನಷ್ಟವಾಗಿರುತ್ತ. ಬ್ರಿಟಿಷ್ ಜಹಜುಗಳು ನಮ್ಮ ಚಕ್ರಾಧಿಪತ್ಯಕ್ಕೆಲ್ಲಾ ಅಪರಿಮಿತವಾದ ಸಹಾಯವನ್ನು ಮಾಡುತ್ತಿವೆ. ಮಿತ್ರಮಂಡಲಿಯವರು ನಡೆಸುತ್ತಿರುವ ಕಾರ್ಯಗಳನ್ನು ಮಿ॥ ಆಸ್ಕಿತ್ ರವರು ವಿವರಿಸಿ ರಷ್ಯಾದವರಲ್ಲಿ ತಮಗೆ ತುಂಬಾ ಭರವಸೆಯುಂಟೆಂದು ಹೇಳಿದರು. ಹಿಂದುಸ್ಥಾನದ ಸೈನ್ಯಗಳು ಮೆಸೊಪೊಟೇಮಿಯಾದಲ್ಲಿ ನಡೆಸುವ ಕೀರ್ತಿಪ್ರದವಾದ ಪರಾಕ್ರಮ ಕಾರ್ಯಗಳನ್ನು ಕೂಡ ಅವರು ವಿವರಿಸಿ ಡಾರ್ಡನೆಲ್ಸ್ ಜಲಮಾರ್ಗವನ್ನು ಭೇದಿಸುವ ಕಾರ್ಯಗಳನ್ನು ಎತ್ತಿ ಅವರ ವಿಷಯದಲ್ಲಿ ಆಕ್ಷೇಪಣೆಗಳು ಹುಟ್ಟಿವೆ ಎಂದು ಹೇಳಿದರು. ಅಲ್ಲಿ ನಡೆದಿರುವ ಕಾರ್ಯಗಳಿಗೆಲ್ಲಾ ತಾವೇ ಜವಾಬ್ದಾರರೆಂದು ತಿಳಿಸಿದರು. ಫ್ರೆಂಚರೂ, ರಷ್ಯಾದವರೂ ಅದನ್ನು ಒಪ್ಪಿಕೊಂಡರು. ಅಲ್ಲಿ ನಿರೀಕ್ಷಿಸಿದಷ್ಟು ಜಯಪ್ರದ ಆಗಿರುವುದಿಲ್ಲ. ಆದದ್ದರಿಂದ ಬಲ್ಗೇರಿಯಾ ಸಂಸ್ಥಾನವು ಶತ್ರುವಿನ ಪಕ್ಷವನ್ನು ವಹಿಸಿತು. ಮಿತ್ರಮಂಡಲಿಯವರನ್ನು ಗ್ರೀಸ್ ರಾಜ್ಯವು ತನ್ನ ಮಿತ್ರ ಸರ್ಬಿಯಾ ಸಂರಕ್ಷಣೆಗೋಸ್ಕರ 1,50,000 ಸೈನ್ಯವನ್ನು ಕಳುಹಿಸಿಕೊಡಿ ಎಂದು ಕೇಳಿತು. ಆದರೆ ಆ ರಾಜ್ಯದ ದೊರೆಯು ಕರಾರಿನಂತೆ ಸರ್ಬಿಯಾವಿಗೆ ಸಹಾಯಮಾಡುವುದಿಲ್ಲವೆಂದು ತಿರಸ್ಕಾರ ಮಾಡಿರುತ್ತಾರೆ. ಫ್ರಾನ್ಸ್, ರಷ್ಯಾ, ಗ್ರೇಟ್ ಬ್ರಿಟನ್ ರಾಜ್ಯಗಳು ಸರ್ಬಿಯಾವಿಗೆ ಕೇಡು ಸಂಭವಿಸಕೂಡದೆಂದು ಸಂಕಲ್ಪ ಮಾಡಿಕೊಂಡಿರುತ್ತವೆ. ಮತ್ತು ಈಗ ನಡೆಸಬೇಕಾಗಿರುವ ಕಾರ್ಯಕ್ರಮಗಳನ್ನೂ ಯೋಚಿಸಿ ಗೊತ್ತು ಮಾಡಿರುವರು. ಯುದ್ಧದ ಖರ್ಚು ಅಪಾರವಾಗುತ್ತಿದೆ. ಪ್ರಜೆಗಳು ಆತ್ಮಸಂತೋಷಗಳನ್ನು ಬಿಟ್ಟು, ಬಹಳ ಮಿತವಾಗಿ ಖರ್ಚು ಮಾಡಬೇಕು. ಇತರ ಉಪಾಯಗಳಿಂದ ಜನರು ಸೈನ್ಯಕ್ಕೆ ತಾವಾಗಿಯೇ ಬಂದು ಸೇರುವುದು ಕಡಮೆಯಾದಲ್ಲದೆ ಸರ್ಕಾರದವರು ಬಲಾತ್ಕರಿಸಿ ಸೇರಿಸಿಕೊಳ್ಳುವ ಏರ್ಪಾಡು ಜಾರಿಗೆ ತರುವುದಿಲ್ಲ. ಒಂದು ಸಣ್ಣ ಕಮಿಟಿಯವರು ಯುದ್ಧದ ವಿಷಯಗಳನ್ನೆಲ್ಲಾ ನೋಡಿಕೊಳ್ಳುತ್ತಾ, ಮಂತ್ರಿಸಭೆಗೆ ಎಲ್ಲಾ ಸಂಗತಿಗಳನ್ನೂ ರಿಪೋರ್ಟುಮಾಡುತ್ತಾ ಬರುವರು. ಮಿ॥ ಆಸ್ಕಿತ್‌ರವರು ತಪ್ಪುಗಳೇನೋ ಆಗಿವೆ ಎಂದು ಒಪ್ಪಿಕೊಂಡು, ಕೆಲವು ಸಂಗತಿಗಳ ಪರಿಣಾಮಗಳು ಮೊದಲೇ ತಿಳಿಯಲಾಗದೆ ಹೋಯಿತೆಂದೂ, ಆದಾಗ್ಯೂ ಬ್ರಿಟನ್‌ನವರ ಸತ್ಯವಾದ ವರ್ತನವನ್ನು ಜಯಪ್ರದವಾಗುವ ತನಕ ಬಿಡದೆ ಇರುವೆವೆಂದೂ ಇದು ಅವರ ಕರ್ತವ್ಯವೆಂದೂ ತಿಳಿಸಿದರು. ದೊರೆಯವರಲ್ಲೂ ಹೌಸ್ ಆಫ್ ಕಾಮನ್ಸ್ ಸಭಿಕರಲ್ಲೂ ತಾವು ಸಂಪಾದಿಸಿಕೊಂಡಿರುವ ಭರವಸೆಯು ಊರ್ಜಿತವಾಗಿರುವ ತನಕ ಮಿ॥ ಆಸ್ಕಿತ್ ರವರು ತಮ್ಮ ಜವಾಬ್ದಾರಿಯನ್ನು ಇತರರ ಮೇಲೆ ಹೊರಿಸುವುದಿಲ್ಲವೆಂದು ಹೇಳಿದರು. ಅಧೈರ್ಯಪಡುವುದಕ್ಕೆ ಅವಕಾಶ ಕಂಡುಬಂದ ಸಂದರ್ಭಗಳು ಇದ್ದವು. ಆದರೆ ಬ್ರಿಟನ್ ರಾಜ್ಯದ ಗಂಡಸರೂ ಹೆಂಗಸರೂ ಮಾಡುತ್ತಿರುವ ಕಾರ್ಯಗಳನ್ನು ನೋಡುವಲ್ಲಿ ಅಧೈರ್ಯಪಡುವುದಕ್ಕೆ ಯಾವ ಕಾರಣವೂ ಕಂಡು ಬರುವುದಿಲ್ಲ. ಎಡಿತ್ ಕವೆಲ್‌ರಂಥಾ ಸ್ತ್ರೀಯರು ಧೈರ್ಯಗುಂದದೆ ಕಲಿತನವನ್ನು ವಹಿಸಿದ್ದನ್ನು ನೋಡಿದ ಮಾತ್ರಕ್ಕೇ ಅದು ನಮ್ಮಗಳಿಗೆಲ್ಲಾ ಎಷ್ಟೋ ಶ್ರೇಷ್ಠವಾದ ಪರಾಕ್ರಮವನ್ನು ಕಲಿಸಿಕೊಟ್ಟಿರುತ್ತದೆ. ಈಗಲೂ ಪರಾಕ್ರಮಿಗಳಾದ ಅಂಥಾ ಸ್ತ್ರೀ ಪುರುಷರು ಎಷ್ಟೋ ಮಂದಿ ನಮ್ಮಲ್ಲಿದಾರೆ. ಅಂಥವರ ಮೇಲ್ಪಂಕ್ತಿಯನ್ನು ನಾವುಗಳೆಲ್ಲಾ ಅನುಸರಿಸಿ ಯುದ್ಧದಲ್ಲಿ ಜಯಪ್ರದವನ್ನು ಪಡೆಯೋಣ. ಈ ಪ್ರಕಾರವಾದ ಮಿ॥ ಆಸ್ಕಿತ್ ರವರ ಭಾಷಣವು ಈಗ ನಮ್ಮ ಚಕ್ರಾಧಿಪತ್ಯಕ್ಕೆ ಬಹಳ ಸಹಾಯ ಮಾಡಿರುತ್ತದೆ.

ಫ್ರೆಂಚ್ ಜನಗಳು ಕೂಡ ಇದೇ ಪ್ರಕಾರ ಯುದ್ಧವನ್ನು ನಡೆಸಬೇಕೆಂದು ಸಂಕಲ್ಪಮಾಡಿಕೊಂಡಿದಾರೆ. ಪಾರ್ಲಿಮೆಂಟಿನಲ್ಲಿ 515 ಮೆಂಬರುಗಳು ಈ ಅರ್ಥವನ್ನು ಅನುಮೋದಿಸಿದರು; ಒಬ್ಬ ಮೆಂಬರು ಮಾತ್ರ ಎದುರುಪಕ್ಷದವನಾಗಿದ್ದನು.

— ಬ್ರಿಟಿಷರ ಒಂದು ಸಬ್‌ಮೆರೀನ್ ಜಹಜು ಜಿಬ್ರಾಲ್ಟರ್ ಜಲಮಾರ್ಗದಲ್ಲಿ ಇನ್ನೊಂದಕ್ಕೆ ಬಡಿದು ಹಾಳಾಯಿತು. ಹುದ್ದೇದಾರರಿಬ್ಬರೂ, ಒಂಬತ್ತು ಮಂದಿಯೂ ಸಿಕ್ಕಿ ಇಲ್ಲ.

ಜರ್ಮನಿಯ ಒಂದು ಸಬ್‌ಮೆರೀನು ಹೊಲ್ಲಾಂಡಿನ ತೀರಕ್ಕೆ ಬಂದು ಬಡಿಯಿತು. ಅಲ್ಲಿನವರು ಅದನ್ನು ಹಿಡಿದಿಟ್ಟುಕೊಂಡಿದಾರೆ. ಇನ್ನೊಂದು ಹೊಸ ಸಬ್‌ಮೆರೀನು ತಯಾರಾದ ಹದಿನೈದು ದಿನಗಳಲ್ಲೇ ಬ್ರಿಟಿಷರಿಗೆ ಸಿಕ್ಕಿಬಿಟ್ಟಿತು. ಬ್ಯಾಲ್ಟಿಕ್ ಕಡಲಿನಲ್ಲಿ ಜರ್ಮನಿಯ ಒಂದು ಜಹಜನ್ನು ಮುಳುಗಿಸಿದಾರೆ. ಬೆಲ್ಜಿಯಮ್‌ನಲ್ಲಿ ಜರ್ಮನಿಯ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನ ಯಂತ್ರವು ಒಡೆದುಹೋಗಿ ಅದರೊಳಗಿದ್ದವರ ಪೈಕಿ ಅನೇಕರು ನಾಶವಾದರು.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಸ್ಯಾನಿಟರಿ ಬೋರ್ಡಿಗೆ ಮೈಸೂರು ಚಿನ್ನದ ಗಣಿ ಕಂಪನಿಯ ಸೂಪರಿಂಟೆಂಡೆಂಟ್ ಮಿ|| ಸಿ. ಎಫ್. ಕೀಸ್ ರವರನ್ನು ಮೆಂಬರಾಗಿ ನೇಮಕ ಮಾಡಿದೆ.

ತುಮಕೂರು ತಾಲ್ಲೂಕು ಸ್ಪೆಷಲ್ ಸಬ್ ರಿಜಿಸ್ಟ್ರಾರ್‌ರು ಆ ತಾಲ್ಲೂಕ್ ಬೋರ್ಡಿಗೆ ವೈಸ್ ಪ್ರೆಸಿಡೆಂಟಾಗಿ ಚುನಾವಣೆ ಮಾಡಲ್ಪಟ್ಟಿದಾರೆ.

ಶಿವಮೊಗ್ಗ ಟವರ್ ಮ್ಯುನಿಸಿಪಲ್ ಕೌನ್ಸಿಲ್‌ಗೆ ಮ|| ಎಂ. ಶಿವಾಜಿರಾಯರನ್ನೂ, ರೆವ್|| ಆರ್. ಡಬ್ಲ್ಯು. ಬೂಟ್ ರವರನ್ನೂ ಮೆಂಬರಾಗಿ ನೇಮಕ ಮಾಡಿದೆ

ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಾದ ಮಿ|| ಆರ್. ಎಚ್. ಕ್ಯಾಂಬೆಲ್ ರವರಿಗೆ ನೊವೆಂಬರ್ ತಾ. 18 ರಿಂದ ಆರು ತಿಂಗಳ ರಜಾ ಕೊಟ್ಟಿದೆ.

ಮಿ|| ಪಿ. ಪಲ್ಪುಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಹದಿನೆಂಟು ದಿನಗಳಿಗೆ ಜಾಸ್ತಿ ಮಾಡಿದೆ.

ಮುಂದೆ ಹೇಳುವ ಹಂಗಾಮಿ ಏರ್ಪಾಡು ಹುಕುಂ ಮಾಡಲ್ಪಟ್ಟಿದೆ.— (1) ಕುಲೀಸ್‌ಪೇಟೆಯ ಡೆಪ್ಯುಟಿ ಅಮಲ್ದಾರ್ ಮ|| ಜೆ. ಶ್ರೀಕಂಠರಾಯರು ಬೆಂಗಳೂರು ತಾಲ್ಲೂಕಿನ ಅಮಲ್ದಾರರಾಗಿರತಕ್ಕದ್ದು; (2) ದೇವನಹಳ್ಳಿ ತಾಲ್ಲೂಕ್ ಶಿರಸ್ತೇದಾರ್ ಮ|| ಜೆ. ಎಂ. ನರಸಿಂಹನಾಯಕರವರು ಕುಲೀಸ್ ಪೇಟೆ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಮ|| ಎಸ್. ಸುಬ್ಬರಾಯರು ಇತರ ಕೆಲಸದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರು ಡಿಸ್ಟ್ರಿಕ್ಟ್ ಟ್ರೆಜರರ್ ಮ|| ಎಂ. ನಾರಾಯಣರಾಯರನ್ನು ಕೊರಟಗೆರೆ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಮ|| ಸಿ. ಕೃಷ್ಣರಾಯರನ್ನು ದಿವಾನ್‌ರವರ ಆಫೀಸಿಗೆ ವರ್ಗವಾಗಿರುವುದರಿಂದ ಅಮಲ್ದಾರ್ ಮ|| ಸಿ. ಲಕ್ಷ್ಮೀನಾರಾಯಣರನ್ನು ಕಡೂರಿನಿಂದ ಹಿರಿಯೂರು ತಾಲ್ಲೂಕಿಗೆ ವರ್ಗಮಾಡಿದೆ.

ಕೆಳಗೆ ಹೇಳುವ ವಿದ್ಯಾ ಇಲಾಖೆಯ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರುಗಳ ವರ್ಗಾವರ್ಗಿ ಹುಕುಂ ಮಾಡಿದೆ.—(1) ಮ|| ಎಚ್. ರಾಮರಾಯರು ಶಿವಮೊಗ್ಗೆಯಿಂದ ಕೋಲಾರಕ್ಕೆ; (2) ಕೆ. ಎಚ್. ವೀರಭದ್ರಯ್ಯನವರು ಹಾಸನದಿಂದ ಶಿವಮೊಗ್ಗೆಗೆ, (3) ಮ|| ಬಿ. ತಿರುಮಲಾಚಾರ್ಯ ಕೋಲಾರದಿಂದ ಹಾಸನಕ್ಕೆ.

ಮೈಸೂರು ಶ್ರೀಚಾಮರಾಜೇಂದ್ರ ಆರ್ಸ್ ಬೋರ್ಡಿಂಗ್ ಸ್ಕೂಲು.

ವಾರ್ಷಿಕ ಬಹುಮಾನಗಳ ವಿನಿಯೋಗವು.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯಲ್ಲಿರುವ ಅರಸುಗಳ ಬೋರ್ಡಿಂಗ್ ಸ್ಕೂಲಿನ ವಿದ್ಯಾರ್ಥಿಗಳಿಗೆ ಶ್ರೀಮನ್ ಮಹಾರಾಜರವರು ದಯಮಾಡಿ ಅಗ್ರಾಸನವನ್ನು ವಹಿಸಿ ವಾರ್ಷಿಕ ಬಹುಮಾನಗಳನ್ನು ದಯಪಾಲಿಸಿದರು. ಸಭಾಮಂಟಪವು ರಾಜಯೋಗ್ಯವಾದ ರೀತಿಯಲ್ಲಿ ಕಳಕಳಿಸುವಂತೆ ನಾನಾ ಪ್ರಕಾರವಾದ ಅಲಂಕಾರಗಳಿಂದ ಶೋಭಾಯಮಾನವಾಗಿ ಮಾಡಲ್ಪಟ್ಟಿತ್ತು. ಅಗ್ರಪೀಠದ ಮೇಲೆ ಶ್ರೀಮನ್ ಮಹಾರಾಜರವರ ಅಕ್ಕಪಕ್ಕಗಳಲ್ಲಿ ಶ್ರೀಮದ್ಯುವರಾಜರವರು, ಬ್ರಿಟಿಷ್ ರೆಸಿಡೆಂಟರವರು, ಇವರ ಪತ್ನೀರವರು ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರೂ ಕುಳಿತಿದ್ದರು. ಸಭೆಯಲ್ಲಿ ಯೂರೋಪಿಯನ್ ಸರ್ದಾರರೂ, ಸಮಸ್ತ ರಾಜಸಿಂಹಾಸನ... ರಾಜಮನೆಯವರೂ, ಮುಖ್ಯರಾದ ದೊಡ್ಡ ಮನುಷ್ಯರೂ, ಅಧಿಕಾರಿಗಳೂ, ಗಣ್ಯರಾದ ವೈದಿಕ ವಿದ್ವಾಂಸರೂ ಹಾಜರಾಗಿದ್ದರು.

ಮಹಾರಾಜರವರ ಅ|| ಸೆಕ್ರೆಟರಿಯವರೂ, ಬೋರ್ಡಿಂಗ್ ಸ್ಕೂಲ್ ಮ್ಯಾನೇಜಿಂಗ್ ಕಮಿಟಿಯ ಸೆಕ್ರೆಟರಿಯವರೂ ಆದ ಸರ್ದಾರ್ ಎಂ. ಎಚ್. ಬಾಳರಾಜೆ ಅರಸಿನವರು ಶುಭಾಶಂಸನೆಗಳನ್ನು ಪ್ರಾರಂಭಿಸಿ ಒಂದು ರಿಪೋರ್ಟನ್ನು ಓದಿ ಒಪ್ಪಿಸಿದರು. ಅದರಲ್ಲಿ ಕಂಡ ಮುಖ್ಯ ವಿಷಯಗಳೇನೆಂದರೆ—

ಸ್ಕೂಲ್ ರಿಪೋರ್ಟು.

ಮಹಾಸ್ವಾಮಿಯವರು ಈ ಸ್ಕೂಲಿನ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ದಯಪಾಲಿಸುವುದಾಗಿ ಒಪ್ಪಿ ಇಲ್ಲಿಗೆ ಚಿತ್ತೈಸಿದ್ದಕ್ಕಾಗಿ ಮ್ಯಾನೇಜಿಂಗ್ ಕಮಿಟಿಯವರು ಮನಃಪೂರ್ವಕವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ. ಈಗ ನಾವುಗಳು ಸಭೆ ಸೇರಿರುವ ಮಂದಿರವೂ, ಇದರ ಅಕ್ಕಪಕ್ಕಗಳಲ್ಲಿರುವ ಎರಡು ಕೊಟಡಿಗಳೂ ಮಹಾಸ್ವಾಮಿಯವರ ನೂತನ ವರಪ್ರಸಾದಗಳಾಗಿವೆ. ಮಹಾಸ್ವಾಮಿಯವರು ಈ ಪಾಠಶಾಲೆಯ ಕ್ಷೇಮ ಚಿಂತನೆ ವಿಷಯದಲ್ಲಿ ವಿಶೇಷವಾದ ಪ್ರೀತಿ ವಿಶ್ವಾಸಗಳನ್ನು ಏಕರೀತಿಯಾಗಿ ಇಟ್ಟುಕೊಂಡು ಬಂದಿರುವುದು ಅರಸು ಮಂಡಲಿಯವರಿಗೆಲ್ಲಾ ಅಪರಿಮಿತವಾದ ಉಪಕಾರವಾಗಿದೆ.—ಈ ಸ್ಕೂಲನ್ನು ಖಾಯಂ ಮಾಡಿ ಇನ್ನೂ ಅಭಿವೃದ್ಧಿಗೆ ತರುವ ಉದ್ದೇಶದಿಂದ ಚಂದಾ ಕೂಡಿಸಬೇಕೆಂದು ಕಮಿಟಿಯವರು ಪ್ರಯತ್ನಪಟ್ಟಿದ್ದರಲ್ಲಿ ವರುಷಕ್ಕೆ 2,500 ರೂಪಾಯಿ ಹುಟ್ಟುವಳಿಯಾಗುವಷ್ಟು ಚಂದಾ ಹಣ ವಾಗ್ದಾನವಾಗಿರುತ್ತದೆ. ಲೋಕೋಪಕಾರಿ ಮ|| ಎಚ್. ನಂಜುಂಡರಾಜೆ ಅರಸಿನವರು ಉದಾರವಾಗಿ ದ್ರವ್ಯಸಹಾಯಮಾಡಿ ಹದಿನೈದು ಬಾಲಕರಿಗೆ ಸಾಕಾಗುವಷ್ಟು ವಿಸ್ತಾರವಾದ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿರುವರು. ಮಹಾಸ್ವಾಮಿಯವರು ದಯಪಾಲಿಸಿರುವ ದ್ರವ್ಯದಲ್ಲಿ ಉಳಿದಿರುವ ಹಣದಿಂದ ಈ ಕಟ್ಟಡದ ಪಶ್ಚಿಮ ಭಾಗದಲ್ಲಿ ಇನ್ನು ಕೆಲವು ಕೊಟಡಿ ಮುಂತಾದವುಗಳನ್ನು ಕಮಿಟಿಯವರು ಕಟ್ಟಿಸುವುದರಲ್ಲಿ ಬಾಕಿ.—ಈಗ ಈ ಬೋರ್ಡಿಂಗ್ ಹೋಮಿನಲ್ಲಿ 107 ವಿದ್ಯಾರ್ಥಿಗಳು ಇರುತ್ತಾರೆ. 20 ಮಂದಿ ಕಾಲೇಜ್ ಮತ್ತು ಹೈ ಸ್ಕೂಲುಗಳಲ್ಲಿ ಓದತಕ್ಕವರು. ಒಬ್ಬನು ಬೆಂಗಳೂರು ಹೆಬ್ಬಾಳು ಫಾರಂನಲ್ಲೂ, ಒಬ್ಬನು ಮೆಕ್ಯಾನಿಕಲ್ ಇಂಜನಿಯರ್ ಸ್ಕೂಲಿನಲ್ಲೂ ಓದುತ್ತಾರೆ. ಉಳಿದವರು ಈ ಬೋರ್ಡಿಂಗ್ ಹೋಮಿನ ತರಗತಿಗಳಲ್ಲೇ ವ್ಯಾಸಂಗಮಾಡುವರು.— ಕಳೆದ ವರುಷ ಒಬ್ಬನು ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲೂ, ಐದು ಮಂದಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲೂ, ಒಬ್ಬನು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದರು.—ಆಟಗಳಲ್ಲೂ ಗರಡಿ ಸಾಧಕಗಳಲ್ಲೂ ವಿದ್ಯಾರ್ಥಿಗಳು ತುಂಬಾ ಉತ್ಸಾಹವಂತರಾಗಿದಾರೆ, ದೇಹವನ್ನು ದಂಡಿಸಿ ಡ್ರಿಲ್ ಮಾಡಬೇಕೆಂದು ಎಲ್ಲರಿಗೂ ವಿಧಿಸಲ್ಪಟ್ಟಿದೆ. ಈ ಆಟಗಳ ದೆಸೆಯಿಂದ ವಿದ್ಯಾರ್ಥಿಗಳಲ್ಲಿ ಪರಸ್ಪರಾನುರಾಗವೇ ಮೊದಲಾದ ಸದ್ಗುಣಗಳು ಬೆಳವಣಿಗೆ ಹೊಂದಲು ತುಂಬಾ ಸಹಾಯವಾಗಿದೆ ಎಂದು ಕೇಳಿ ಮಹಾಸ್ವಾಮಿಯವರು ಸಂತೋಷಪಡುತ್ತೀರೆಂದು ನಂಬುತ್ತೇವೆ. ಈ ಸ್ಕೂಲಿನಲ್ಲೇ ವಿದ್ಯೆಯನ್ನು ಕಲಿತಿರುವ ನಾಲ್ವರು ಪ್ರಬುದ್ಧಮಾನರಾಗಿ ಮಹಾಸ್ವಾಮಿಯವರ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳೆಂಬ ಸೈನ್ಯದಲ್ಲಿ ಹುದ್ದೇದಾರರಾಗಿದ್ದು ಈಗ ಆ ಸೈನ್ಯವನ್ನು ಯುದ್ಧಭೂಮಿಗೆ ನಡೆಸಿಕೊಂಡು ಹೋಗಿದಾರೆ.—ಈ ಸ್ಕೂಲಿನ ಉಪಾಧ್ಯಾಯರುಗಳು ತುಂಬಾ ಸಮರ್ಪಕವಾಗುವಂತೆ ತಮ್ಮ ಕಾರ್ಯಗಳನ್ನು ನಡಿಸುತ್ತಾ, ವಿದ್ಯಾರ್ಥಿಗಳನ್ನು ಅಭಿವೃದ್ಧಿಗೆ ತರುವುದರಲ್ಲಿ ಉತ್ಸಾಹಶಾಲಿಗಳಾಗಿರುವರು.—ಮಹಾಸ್ವಾಮಿಯವರು ಈ ಸ್ಕೂಲಿನ ವಿಷಯದಲ್ಲಿ ಪ್ರೀತಿಯನ್ನಿಟ್ಟುಕೊಂಡು ಉದಾರವಾಗಿ ಸಹಾಯಮಾಡುತ್ತಿರುವುದನ್ನು ಅರಸುಗಳೆಲ್ಲಾ ಸ್ಮರಿಸಿಕೊಂಡು ತಮ್ಮ ಉದ್ದೇಶವನ್ನು ಸಾರ್ಥಕಪಡಿಸುವವರಾಗಲೆಂದು ಹಾರೈಸುತ್ತೇವೆ.

ತರುವಾಯ ಕ್ಲಾಸುಗಳ ಪರೀಕ್ಷೆಗಳಲ್ಲೂ, ಕಸರತ್ತು ಜಂಖಾನಾ ಆಟ ಮೊದಲಾದ ಪಂದ್ಯಗಳಲ್ಲೂ ಗಣ್ಯತೆಗಳಿಸಿಕೊಂಡ ವಿದ್ಯಾರ್ಥಿಗಳಿಗೆಲ್ಲಾ ಶ್ರೀಮನ್ ಮಹಾರಾಜರವರು ಒಳ್ಳೊಳ್ಳೇ ಬೆಲೆಯುಳ್ಳ ಪುಸ್ತಕಗಳನ್ನು ಸ್ವಹಸ್ತ ದಯಪಾಲಿಸಿದರು. ಇದಲ್ಲದೆ ವಿಶೇಷ ಬಹುಮಾನಗಳೂ ಕೊಡಲ್ಪಟ್ಟವು.—

ಸ್ಪೆಷಲ್ ಬಹುಮಾನಗಳು.

(1) ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ ಒಳ್ಳೇ ಗುಣಾಢ್ಯನೆಂದು ತೀರ್ಮಾನ ಮಾಡಲ್ಪಟ್ಟ ಎಂ. ಡಿ. ವೆಂಕಟೆ ಅರಸಿಗೆ ಮಿ|| ಆರ್. ಎಚ್. ಕ್ಯಾಂಬೆಲ್‌ರವರು ಒಂದು ಬಹುಮಾನವನ್ನು ಕೊಟ್ಟರು (2) ಚಂದ್ರಗುಪ್ತನ ವಿಷಯವನ್ನು ಕುರಿತು ಚೆನ್ನಾಗಿ ಉಪನ್ಯಾಸವನ್ನು ಬರೆದ ಆರ್. ಪುಟ್ಟರಾಜೆ ಅರಸಿಗೆ ಮ|| ಬಿ. ರಾಮಕೃಷ್ಣರಾಯರು ಬಹುಮಾನಕೊಟ್ಟರು (3) ಚೆನ್ನಾಗಿ ಸಾಧಕಮಾಡತಕ್ಕವನೆಂದು ಸ್ಕೂಲ್ ಉಪಾಧ್ಯಾಯರು ತೀರ್ಮಾನಮಾಡಿದ ಎ. ಲಿಂಗರಾಜೆ ಅರಸಿಗೆ ಮಿ|| ಬಿ. ಡೆನ್‌ಹಾಮ್‌ರವರು ಬಹುಮಾನವನ್ನು ಕೊಟ್ಟರು. ನಾಟಕದಲ್ಲಿ ಚೆನ್ನಾಗಿ ನಟಿಸಿದ ಸಿ. ರಾಮಚಂದ್ರರಾಜೆ ಅರಸಿಗೆ ಮ|| ಪಿ. ಗೋಪಾಲರಾಜೆ ಅರಸಿನವರು ಬಹುಮಾನವನ್ನು ಕೊಟ್ಟರು.

ಬಳಿಕ ಶ್ರೀಮನ್ ಮಹಾರಾಜರವರು ಪ್ರತ್ಯುತ್ತರವನ್ನು ದಯಪಾಲಿಸಿದರು. ಅದರ ಸಾರಾಂಶವೇನೆಂದರೆ—

ಶ್ರೀಮನ್ ಮಹಾರಾಜರವರ ಭಾಷಣ.

ಶ್ರೀಚಾಮರಾಜೇಂದ್ರ ಬೋರ್ಡಿಂಗ್ ಸ್ಕೂಲ್ ಬಾಲಕರುಗಳಿರಾ,—ನಿಮ್ಮ ಸ್ಕೂಲನ್ನು ಈ ಬಹುಮಾನ ವಿನಿಯೋಗ ಸಂದರ್ಭದಲ್ಲಿ ನಾವು ಬಂದು ತಿರುಗಿ ನೋಡುವುದಕ್ಕೆ ಅವಕಾಶ ದೊರೆತದ್ದಕ್ಕಾಗಿ ನಮಗೆ ತುಂಬಾ ಸಂತೋಷವಾಯಿತು. ಪಾಶ್ಚಾತ್ಯ ಇಂಗ್ಲಿಷ್ ಸ್ಕೂಲುಗಳಲ್ಲೆಲ್ಲಾ "ಸ್ಕೂಲಿನ ದಿನ" ಇಲ್ಲವೇ "ಉಪನ್ಯಾಸದ ದಿನ" ಎಂಬುದನ್ನು ಇಟ್ಟುಕೊಂಡು ಕ್ರಮವಾಗಿ ನಡಿಸುವುದುಂಟು. ತಂದೆತಾಯಿಗಳೂ, ಉಪಾಧ್ಯಾಯರೂ, ಹುಡುಗರೂ, "ಹಳೆ" ಹುಡುಗರೂ ಅಂಥಾ ದಿನಗಳಲ್ಲಿ ಸೇರಿ ಏಕೀಭವಿಸಿ ಉತ್ಸವಗಳಲ್ಲಿ ಬೆರೆಯುವುದು ಸ್ವಾಭಾವಿಕವಾಗಿದೆ. ನಿಮ್ಮ ಸ್ಕೂಲ್ ದಿನವೂ ಇಂಗ್ಲಿಷ್ ಪದ್ಧತಿಯನ್ನು ಅನುಸರಿಸಿ ಜರುಗುವ ಹಬ್ಬವಾಗಲೆಂದು ಹಾರೈಸುತ್ತೇವೆ. ಇಂಥಾ ಕೂಟಗಳಿಂದ ಪರಸ್ಪರವಾದ ನಂಬಿಕೆ ಪ್ರೀತಿ ವಿಶ್ವಾಸಗಳು ಹುಟ್ಟಿ ಶಾಶ್ವತವಾಗಿ ಬೆಳವಣಿಗೆ ಹೊಂದುವವು. ಇದು ನಮ್ಮ ಹಿಂದುಸ್ಥಾನದ ಹುಡುಗರಲ್ಲಿ ದೊಡ್ಡ ಕೊರತೆಯಾಗಿದೆ.—ಈಗ ಓದಿದ ರಿಪೋರ್ಟಿನಿಂದ ಈ ಸ್ಕೂಲು ದೊಡ್ಡದಾಗುತ್ತಲೂ ಅಭಿವೃದ್ಧಿಗೆ ಬರುತ್ತಲೂ ಇದೆ ಎಂದೂ, ಬಾಲಕರಿಗೆ ಇಲ್ಲಿ ವಿದ್ಯೆ ಮಾತ್ರವೇ ಅಲ್ಲ ಅಂಗಸಾಧನೆಯನ್ನೂ ಕಲಿಸುತ್ತಾರೆಂದೂ ವೇದ್ಯವಾಗುತ್ತದೆ. ಈ ಎರಡನೆಯ ಭಾಗವೂ ವಿಶೇಷ ಅಭಿವೃದ್ಧಿಯಾಗಲೆಂದೂ, ವಿದ್ಯಾ ಪ್ರೀತಿಯುಳ್ಳ ಆಟಪಾಟಗಳಲ್ಲೂ ಬಾಲಕರು ಕೀರ್ತಿಯನ್ನು ಹೊಂದುವವರಾಗಲೆಂದೂ ಹಾರೈಸುತ್ತೇವೆ. ಯಾಕೆಂದರೆ ಬಾಲಕನ ಗುಣ ನಡತೆಗಳು ದೃಢರೂಪವನ್ನು ತಾಳುವುದಕ್ಕೆ ಆಟಗಳಲ್ಲದೆ ಇನ್ಯಾವ ಶಿಕ್ಷಣವೂ ಫಲಕಾರಿಯಾಗಲಾರದು.—ಎಲ್ಲಿ ನೋಡಿದರೂ ಈಗ ಅಭಿವೃದ್ಧಿಯೇ ಕಾಣುತ್ತಿದೆ. ಹಿಂದೆಯೇ ಬದ್ಧಿರೋಗವೆಂದು ಆಸೆಪಡದಿದ್ದ ಪಕ್ಷದಲ್ಲಿ ಅರಸುಗಳು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು; ಸಾರ್ವಜನಿಕ ವಿಷಯಗಳಲ್ಲಿ ಮುಂದಾಳುಗಳಾಗಬೇಕು. ಇದು ಅವರ ವಂಶಕ್ಕೆ ಬಂದ ಲಕ್ಷಣವೆಂಬುವುದು ಚರಿತ್ರೆಗಳೇ ಹೇಳುತ್ತವೆ. ನೀವು ಚಲಿಸದೆ ನಿಂದಿರಲಾಗದು, ಮುಂದುವರಿದು ಹೋಗುತ್ತಾ ಇರಬೇಕು. ಈ ಆರ್ಸ್ ಬೋರ್ಡಿಂಗ್ ಸ್ಕೂಲು ನಿಮ್ಮ ಪ್ರಯೋಜನಕ್ಕಾಗಿಯೇ ಇಟ್ಟು ನಡಿಸಲ್ಪಡುತ್ತಿದೆ. ಇದು ಈ ಸಂಸ್ಥಾನದಲ್ಲಿರುವ ಇತರ ಸ್ಕೂಲುಗಳಿಗೆಲ್ಲಾ ಮೇಲ್ಪಂಕ್ತಿಯಾಗುವಂತೆ ವರ್ತಿಸಲೆಂದು ನಂಬಿ ನಿರೀಕ್ಷಿಸುತ್ತೇವೆ. ಬಹುಮಟ್ಟಿಗೂ ಮ್ಯಾನೇಜಿಂಗ್ ಕಮಿಟಿಯವರ ಸಾಹಸದಿಂದಲೇ ಈ ಸ್ಕೂಲು ಇಷ್ಟು ಅಭಿವೃದ್ಧಿಗೆ ಬಂದಿದೆ ಕಮಿಟಿಯವರು ತಮ್ಮ ಸಾಹಸಕಾರ್ಯಗಳನ್ನು ಆಲಸ್ಯಕ್ಕೆ ಬಿಡಲಾರರೆಂದು ನಿರೀಕ್ಷಿಸುವೆವು. ಈ ಸ್ಕೂಲಿಗೆ ಬೇಕಾಗುವ ಖರ್ಚನ್ನೆಲ್ಲಾ ಅದೇ ಒದಗಿಸಿಕೊಳ್ಳುವಂತೆಯೂ, ಅರಮನೆಯ ಸಹಾಯವನ್ನು ಕೂಡಿದಮಟ್ಟಿಗೂ ಕಡಮೆಮಾಡಿಕೊಳ್ಳುವಂತೆಯೂ ಕಮಿಟಿಯವರು ಸಾಹಸಪಟ್ಟು ಮಾಡಬೇಕು. ಅರಸುಗಳು ಈಗೀಗ ಈ ಅರ್ಥವನ್ನು ತಾವಾಗಿಯೇ ತಿಳಿದುಕೊಳ್ಳುತ್ತಿದಾರೆಂದು ನೋಡಿ ಸಂತೋಷಪಡುತ್ತೇವೆ. ಮ|| ನಂಜುಂಡರಾಜೆ ಅರಸಿನವರು ಈ ಸ್ಕೂಲಿಗೆ ಇಷ್ಟು ಉದಾರವಾಗಿ ಸಹಾಯ ಮಾಡಿರುವುದು ನಮಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಈ ದಿನ ಈ ಸಂತೋಷ ಸಭೆಗೆ ಬ್ರಿಟಿಷ್ ರೆಸಿಡೆಂಟರು ಪತ್ನೀ ಸಮೇತ ದಯಮಾಡಿರುವುದು ನಮ್ಮಂತೆ ನಿಮಗೂ ಆನಂದವನ್ನುಂಟುಮಾಡಿದೆ ಎನ್ನುವುದಕ್ಕೆ ಸಂಶಯವಿಲ್ಲ.—ಬಾಲಕರುಗಳಿರಾ, ಈಗ ನೀವು ಮಾಡಿತೋರಿಸುವ ವಿನೋದಗಳಿಗಾಗಿ ನಿಮ್ಮನ್ನು ವಂದಿಸಬೇಕಾಗಿದೆ, ಈ ದಿನ ನಿಮಗೆ ಬಹುಮಾನಗಳನ್ನು ವಿನಿಯೋಗಿಸುವುದಕ್ಕೆ ಬಹಳ ಸಂತೋಷಪಟ್ಟು ಬಂದಿರುತ್ತೇವೆ. ಈ ಸ್ಕೂಲಿನ ಪುರೋಭಿವೃದ್ಧಿಯಲ್ಲಿ ನಮಗೆ ಅತ್ಯಂತ ಉತ್ಸಾಹವುಂಟೆಂಬುವುದನ್ನು ಒತ್ತಿ ಹೇಳಬಲ್ಲೆವು.

ಇದಾದ ಮೇಲೆ ಒಬ್ಬ ವಿದ್ಯಾರ್ಥಿಯು ಬಹು ಮನೋಹರವಾದ ಕೆಲವು ಹಾಡುಗಳನ್ನು ಇಂಪಾಗಿ ಹಾಡಿದನು. ತರುವಾಯ ವಿದ್ಯಾರ್ಥಿಗಳು ಒಂದು ನಾಟಕವನ್ನು ಅಭಿನಯಿಸಿದರು. ದಂತವೈದ್ಯನ ಬಳಿ ಆ ವಿದ್ಯೆಯನ್ನು ಕಲಿಯಬೇಕೆಂದು ಸೇರಿದ್ದ ಒಬ್ಬ ಶಿಷ್ಯನು ಹಲ್ಲುನೋವಿನಿಂದ ಬಂದ ಒಬ್ಬ ರೋಗಿಗೆ ಸ್ಮರಣೆತಪ್ಪುವಂತೆ ಔಷಧ ಕೊಟ್ಟು ಅವನ ಹಲ್ಲು ಕಿತ್ತುಹಾಕಿ ಅದರಿಂದುಂಟಾದ ಅನರ್ಥಗಳನ್ನೂ, ಅಲ್ಲಿ ವಿದೂಷಕನು ಮಾಡಿದ ಕಾರ್ಯಗಳನ್ನೂ ನೋಡಿ ಸಭಿಕರು ಕ್ಷಣೇ ಕ್ಷಣೇ ನಕ್ಕು ಸಾಕಾದರು. ಈ ನಾಟಕವು ಬಹಳ ಚೆನ್ನಾಗಿ ಅಭಿನಯಿಸಲ್ಪಟ್ಟಿತು. ಇದು ಮುಗಿದ ಮೇಲೆ ಶ್ರೀಮನ್ ಮಹಾರಾಜರವರೂ ಯುವರಾಜರವರೂ ರೆಸಿಡೆಂಟರೇ ಮೊದಲಾದವರೂ ಅಲ್ಲಿಂದ ಮೈದಾನಕ್ಕೆ ದಯಮಾಡಿ ಪೀಠಗಳನ್ನು ಅಲಂಕರಿಸಿದರು ಅಲ್ಲಿ ವಿದ್ಯಾರ್ಥಿಗಳು ಉಸುರು ಕಟ್ಟಿದವನಿಗೂ, ಕತ್ತಿನ ಮೂಳೆ ಜಾರಿದ ಅವನಿಗೂ ಹೇಗೆ ಹೇಗೆ ಪ್ರಥಮ ಚಿಕಿತ್ಸೆ ನಡೆಯಬೇಕೆಂಬುದನ್ನು ಬಹಳ ಚೆನ್ನಾಗಿ ಮಾಡಿ ತೋರಿಸಿದರು ಸಣ್ಣ ಹುಡುಗರಿಬ್ಬರು ಕೈಕೈ ಮಿಲಾಯಿಸಿ ಕುಸ್ತಿಮಾಡಿ ನೋಟಕರನ್ನು ಆನಂದಪಡಿಸಿದರು. ಬಹು ಮಂದಿ ವಿದ್ಯಾರ್ಥಿಗಳು ಒಂದಾವರ್ತಿ ಸಣ್ಣ ಬಾವುಟಗಳನ್ನೂ, ಇನ್ನೊಂದಾವರ್ತಿ ಚಿಕ್ಕ ಗಸೋಟಾಗಳನ್ನೂ ಹಿಡಿದು ಅರಮನೆ ಬ್ಯಾಂಡಿನವರ ಮನೋಹರವಾದ ವಾದ್ಯಗಳ ಲಯಕ್ಕೆ ಸರಿಯಾಗಿಯೂ ಅಚ್ಚುಕಟ್ಟಾಗಿಯೂ ಅಲ್ಲಾಡಿಸುತ್ತಲೂ ತಿರುಗಿಸುತ್ತಲೂ ಅಭಿನಯಿಸಿ ನೋಟಕರಿಗೆ ಅಚ್ಚುಮೆಚ್ಚನ್ನುಂಟುಮಾಡಿದರು. ಕಡೆಯಲ್ಲಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಜಯಘೋಷದಿಂದ ಕೂಟವು ಮುಕ್ತಾಯವಾಯಿತು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಹೊಸ ರೈಲ್ವೆ ಸ್ಟೇಷನ್.

ಅಯ್ಯಾ,—ಪ್ರಜೆಗಳ ಅನುಕೂಲಕ್ಕಾಗಿ ನಮ್ಮ ಸರ್ಕಾರದವರೂ, ರೈಲ್ವೆ ಕಂಪೆನಿಯವರೂ ದಯಮಾಡಿ ತುಮಕೂರು ಮತ್ತು ಹಿರೇಹಳ್ಳಿ ಸ್ಟೇಷನ್‌ಗಳ ಮಧ್ಯೆ ಶ್ರೀ ಸಿದ್ಧಗಂಗಾ ಮಠ ಮತ್ತು ಕ್ಯಾತ್ಸಂದ್ರಗಳಿಗೆ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಒಂದು ರೈಲ್ವೆ ಸ್ಟೇಷನ್ ಮಾಡಿಸಿಕೊಡುವುದಾಗಿ ಹುಕುಂ ಅಪ್ಪಣೆ ಕೊಡಿಸಿರುವುದಲ್ಲದೆ ಕಳೆದ ತಿಂಗಳು 29 ನೆಯ ತಾರೀಖಿನ ದಿನ ಕೆಲಸವನ್ನೂ ಆರಂಭಮಾಡಿಸಿರುತ್ತಾರೆ. ಈ ಕೆಲಸವು ಕೂಡ ಶೀಘ್ರದಲ್ಲಿಯೇ ಪೂರೈಸುವುದಾಗಿ ತೋರುತ್ತೆ. ಈ ಹೊಸ ಸ್ಟೇಷನ್ನಿನಲ್ಲಿ ಗಾಡಿಗಳನ್ನು ನಿಲ್ಲಿಸಲು ಮುಂದಿನ ತಿಂಗಳಲ್ಲಿ ಬರುವ ಪ್ರಸಿದ್ಧವಾದ "ದನಗಳ ಜಾತ್ರೆ ಉತ್ಸವ"ದ ದಿನದಿಂದ ಮೊದಲು ಮಾಡಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಇಲ್ಲಿ ಸ್ಟೇಷನ್ ಆಗುವುದರಿಂದ ಶ್ರೀ ಮಠಕ್ಕೆ ವರ್ಷಂ ಪ್ರತಿ ಬರತಕ್ಕ ಲಕ್ಷಾಂತರ ಭಕ್ತಜನರಿಗೂ, ಇತರ ಪ್ರಯಾಣಿಕರಿಗೂ ಮಹದುಪಕಾರವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಉಪಕಾರವನ್ನು ಮಾಡಿದ ನಮ್ಮ ಸರ್ಕಾರದವರಿಗೂ, ಕಂಪೆನಿಯವರಿಗೂ ನಾವೆಲ್ಲರೂ ತುಂಬಾ ಕೃತಜ್ಞರಾಗಿರುತ್ತೇವೆ. ಪ್ರಜಾ ಸೇವಕ.

ಒಂದು ಪೋಸ್ಟ್ ಆಫೀಸಿನ ಕೊರತೆ.

ಅಯ್ಯಾ,—ಅಗುಂಬೆಯಲ್ಲಿ ಟಪ್ಪಾಲ್ ಆಫೀಸಿನಲ್ಲಿ ಪ್ರತಿ ನಿತ್ಯವೂ ಮನಿಯಾರ್ಡರುಗಳು, ರಿಜಿಸ್ಟ್ರಿಗಳು, ಪಾರ್ಸಲುಗಳು, ಕಾಗದಗಳು ಬಹಳ ಹೆಚ್ಚು ಹೆಚ್ಚಾಗಿ ಬರುತ್ತಾ ಇದೆ. ಮನಿಯಾರ್ಡರು ವಗೈರೆಗಳನ್ನು ಜಾಗ್ರತೆ ಬಟವಾಡೆ ಮಾಡಲು ಇಲ್ಲಿ ಒಬ್ಬನೇ ಪೋಸ್ಟ್ ಮ್ಯಾನ್ ಇರುವದರಿಂದ ಜನರಿಗೆ ಕಾಗದ ಪತ್ರಾದಿಗಳಾಗಲಿ ಮನಿಯಾರ್ಡರುಗಳಾಗಲಿ ತಮ್ಮ ಅನುಪತ್ಯಾ ಅವರವರ ಸ್ಥಾನಕ್ಕೆ ಕೂಡಲೇ ಸಿಕ್ಕುವದಿಲ್ಲ. ಮನಿಯಾರ್ಡರು, ಕಾಗದ ಮುಂತಾದವುಗಳು ಕಾಲವಿಳಂಬವಾಗಿ ಸಿಕ್ಕಿ ಬಹಳ ಕಷ್ಟ ನಷ್ಟಗಳಿಂದ ಪೀಡಿತರಾಗುತ್ತಿರುವರು ಆದ್ದರಿಂದ ಸದರಿ ಇಲಾಖೆಯ ಮೇಲಾಧಿಕಾರಿಗಳವರು ಇಲ್ಲಿನ ಬಡಜನಗಳ ಸಂಕಟಗಳನ್ನು ನಿವಾರಿಸಿ ಈಗ ಇರುವ ಪೋಸ್ಟ್ ಮ್ಯಾನ್‌ಗೆ ಸಹಾಯಕಾರಿಯಾಗಿ ಇನ್ನೊಬ್ಬ ಪೋಸ್ಟ್ ಮ್ಯಾನನ್ನು ನೇಮಿಸಬೇಕಾಗಿ ಪ್ರಾರ್ಥಿಸುತ್ತೇವೆ.

ನಾಲೂರು ಅಂಗಡಿ ಮುಲ್ಕಿ ಎಚ್. ಮೈದಿನ್ ಬ್ಯಾರಿ.

ಅರಕಲಗೂಡು ರೀಡಿಂಗ್ ರೂಮ್.

ಅಯ್ಯಾ,—ನಮ್ಮ ಮೈಸೂರು ಸೀಮೆಯಲ್ಲಿ ಹಾಲಿ ದಿವಾನ್‌ರವರು ರೀಡಿಂಗು ರೂಂ, ಲೈಬ್ರೇರಿ ವಿಚಾರದಲ್ಲಿ ಎಷ್ಟೋ ಕಷ್ಟಪಟ್ಟು ಪ್ರಜೆಗಳಿಗೆ ತಿಳುವಳಿಕೆ ಬರಲೆಂಬ ಉದಾರ ಮನಸ್ಸಿನಿಂದ ಇದಕ್ಕಾಗಿ ಸಾವಿರಾರು ರೂಪಾಯಿ ಖರ್ಚ್ ಮಾಡಿ ಪ್ರಜೆಗಳ ಸಹಾಯದಿಂದ ರೀಡಿಂಗು ರೂಂ, ಲೈಬ್ರೇರಿಗಳು ಸ್ಥಾಪಿಸಿ ಸರಿಯಾದ ಸಾಗಾದಿಂದ ನಡಿಸುತ್ತಿದಾರೆ. ಹಾಲಿ ಊರಿನಲ್ಲಿ ಇರುವ ರೀಡಿಂಗು ರೂಮು ನಮ್ಮ ಸಾಹುಕಾರರು ಒಬ್ಬರು ಬಹಳ ಉದಾರ ಮನಸ್ಸಿನಿಂದ ಸಾವಿರಾರು ರೂಪಾಯಿ ಮುಟ್ಟಿಸಿ ಸ್ವಂತವಾಗಿ ಪ್ರಜೆಗಳ ಉಪಯೋಗಕ್ಕೆ ಕಟ್ಟಿಸಿರುತ್ತಾರೆ. ಈಗ ಹಾಲಿ ಇರುವ ವಿದ್ಯಾವಂತರು ಇದನ್ನು ಸದುಪಯೋಗಕ್ಕೆ ತರದೆ ಇರುವುದು ತುಂಬಾ ಶೋಚನೀಯವಾಗಿದೆ. ಈ ರೀಡಿಂಗು ರೂಮಿನ ಪ್ರವೇಶ ಮಹೋತ್ಸವದ ದಿವಸ ಬಾಗಿಲು ತೆರೆದದ್ದೇ ಹೊರತು ಈಚೆಗೆ ತೆರೆದಂತೆ ಕಾಣುವುದಿಲ್ಲ. ಮತ್ತು ಸರಿಯಾದ ವರ್ತಮಾನ ಪತ್ರಿಕೆಗಳು ಸಹ ಬರುವಂತಿಲ್ಲ. ಈ ರೀತಿಯಾಗಿ ನಮ್ಮ ಸರ್ಕಾರಿ ಅಧಿಕಾರಿಗಳು ಸಾಹುಕಾರರ ಆನಾಮಧೇಯ ಕಟ್ಟಡವನ್ನಾಗಿ ಮಾಡತಕ್ಕದ್ದು ಸರಿಯಾದದ್ದಲ್ಲ. ಇಲ್ಲಿಯ ವಿದ್ಯಾವಂತರಲ್ಲಿ ಒಬ್ಬರೊಬ್ಬರಿಗೆ ಭೇದಗಳು ಕಂಡು ಬಂದಲ್ಲಿ ಅನ್ಯೋನ್ಯವೆಂಬ ಮಾತು ಮರೆತುಬಿಟ್ಟಂತಾಯಿತು. ಈ ವಿಚಾರದಲ್ಲಿ ಹಾಲಿ ಇರುವ ಅಮಲ್ದಾರರು ಸಭಾಕ್ಕೆ ತಂದು ಮುಂದಕ್ಕೆ ಸರಿಯಾದ ಏರ್ಪಾಡು ಮಾಡುವರೆಂದು ನಂಬಲಾಗಿದೆ. ಪ್ರತ್ಯಕ್ಷದರ್ಶಿ.

ಬೇಲೂರು ತಾಲ್ಲೂಕು ಹಳೇಬೀಡು.

ಅಯ್ಯಾ,—ಈ ಗ್ರಾಮವು ಎರಡು ದಾಖಲೆ ಗ್ರಾಮಗಳಿಂದ ಕೂಡಿದ್ದು, 1,300 ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಮತ್ತು ಪುರಾತನವಾದ ರಾಜಧಾನಿಯಾಗಿದ್ದ ಸ್ಥಳ. ಕೋಟೆ ಪೇಟೆ ಎಂದು ಎರಡು ಭಾಗ. ಕೋಟೆಯು ಕಾಡು ಬೆಳೆದು ಊರೊಳಗೆ ದುಷ್ಟ ಮೃಗಗಳು ಕೂಡ ಅಡಗಿಕೊಂಡಿರಬಹುದಾದಷ್ಟು ಪೊದೆಗಳಿಂದ ತುಂಬಿಹೋಗಿವೆ. ದೇವಸ್ಥಾನಗಳೆಲ್ಲವೂ ಪಾಳು ಬಿದ್ದುಹೋಗಿವೆ. ಕೆಲವು ಸ್ಥಳಗಳಲ್ಲಿ ಮಾತ್ರ ಒಂದು ಗಾಡಿ ತಿರುಗುವಷ್ಟು ಅಗಲ ರಸ್ತೆಯು ಕಾಣುತ್ತದೆ. ಈ ಸಾರಿ ಇಲ್ಲಿಗೆ ವ್ಯಾಪಿಸಿರುವ ಸೋಂಕಿಗೆ ಇದು ಹದಿನಾರನೇ ಸಾಲ್ ವರ್ತನಂತೆ. ಜನರಿಗೆ ವರ್ಷಕ್ಕೊಂದಾವರ್ತಿ ನಡೆಯುವುದು ಸಹಜ. ಇಲ್ಲಿನ ಪ್ಲೇಗ್ ರೋಗಕ್ಕಾದರೋ ಆರುತಿಂಗಳಿಗೊಂದಾವರ್ತಿಯೇ ವರ್ಧಂತಿಯೂ ಪರಬಲಿಗಳ ಉತ್ಸವವೂ ನಡೆಯುತ್ತಿರುವದನ್ನು ಎಷ್ಟು ವಿವರಿಸಿದರೂ ತೀರದು. ಪೇಟೆಯಲ್ಲಿರುವ ಒಂದೇ ಒಂದು ಸಾಲ್ ಮನೆಗಳನ್ನುಳ್ಳ ರಸ್ತೆಯು ಮಾತ್ರ ಎಲ್ಲಾ ಅಧಿಕಾರಿಗಳ ಗಮನಕ್ಕೆ ಪದೇಪದೇ ಬೀಳುತ್ತಾ ಇರುವುದರಿಂದ ಅದೊಂದು ಹೊರತು ಮಿಕ್ಕ ಭಾಗವೆಲ್ಲವೂ ನಾನಾ ತರವಾದ ಕೊಳೆ, ರೊಚ್ಚು, ಆಸುಬಗಳಿಂದ ತುಂಬಿಹೋಗಿದೆ ಇಲ್ಲದೆ ಆಗಾಗ್ಗೆ ಸರ್ಕಾರದ ಹುದ್ದೇದಾರರು ದಯಮಾಡಿಸಿ ಇಲ್ಲಿನ ಸ್ಥಿತಿ ಪರಿಶೀಲಿಸಿದಾಗ್ಯೂ, ಇನ್ನೂ ಚಿತ್ತಕ್ಕೆ ಬಾರದೇ ಇರುವುದು. ಸದ್ಯದಲ್ಲಿ ನಮ್ಮ ಘನವಂತರಾದ ದಿವಾನ್ ಸಾಹೇಬರವರ ಸವಾರಿಯು ಈ ಪ್ರಾಂತ್ಯ ದಯಮಾಡುವದೆಂಬ ವದಂತಿ ಇದೆ. ಇದು ನಿಜವಾಗಿದ್ದರೆ ಈ ಬಡಪ್ರಜೆಗಳ ಭಾಗ್ಯೋದಯವೇ ಸರಿ. ಬೇರೇ ಅಧಿಕಾರಿಗಳಿಗೆ ಈ ಮಹೋಪಕಾರಿಗಳು ನಾನಾ ವಿಧದಲ್ಲಿಯೂ ಮಾದರಿ ತೋರಿಸುವರಾಗಿರುವುದರಿಂದ ಇನ್ನು ಮುಂದಕ್ಕೆ ನಮ್ಮ ಗ್ರಾಮವು ಪುರೋವೃದ್ಧಿಗೆ ಬರುತ್ತೆಂಬುವುದರಲ್ಲಿ ಸಂದೇಹವಿಲ್ಲ. ಸ್ಥಳಾಭಿಮಾನಿ.

ಒಬ್ಬ ವ್ಯಾಕ್ಸಿನೇಟರ ಪ್ರೋತ್ಸಾಹ ಕೆಲಸ.

ಈ ಸಲ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ಮಟ್ಟಿಗೆ ಚರ್ಚೆಗಳು ನಡೆದವು. ಸರ್ಕಾರದ ಮುಖ್ಯಾಧಿಕಾರಿಗಳು ಹೇಳಿದ ಅಭಿಪ್ರಾಯಗಳನ್ನು ಕೇಳಿದಾಗ ಈ ವಿಚಾರದಲ್ಲಿ ಸರ್ಕಾರದ ಕಾರ್ಯಕ್ರಮವೇನೋ ಅವರಿಗೇ ಖಂಡಿತವಾಗಿ ಇತ್ಯರ್ಥವಾಗಲಿಲ್ಲವೆಂದು ತಿಳಿಯಿತು. ಸರ್ಕಾರದವರಿಗೇ ಅದು ಇನ್ನೂ ಖಚಿತಪಟ್ಟಿಲ್ಲ. ಈ ವಿಚಾರವನ್ನು ಹಿಡಿದು ಪರ್ಯಾಲೋಚನೆ ಮಾಡುವುದಕ್ಕಾದರೋ ಅನೇಕ ಸಂಘಗಳೂ, ಹಲವು ಅಧಿಕಾರಿಗಳೂ ನಿರ್ಮಿತರಾಗಿರುತ್ತಾರೆ. ಪ್ರಥಮತಃ ವಿದ್ಯಾಭ್ಯಾಸದ ಇಲಾಖೆಯೇ ಇದೆ; ಅದರಲ್ಲಿ ಅನೇಕ ಅಧಿಕಾರಿಗಳೂ ಇನ್ಸ್‌ಪೆಕ್ಟರುಗಳೂ ಇದ್ದೇ ಇದ್ದಾರೆ. ತರುವಾಯ ವಿದ್ಯಾಭ್ಯಾಸವನ್ನು ಕುರಿತು ಪರ್ಯಾಲೋಚಿಸುವುದಕ್ಕೆ ಸಂಪದಭ್ಯುದಯ ಸಮಾಜದಲ್ಲಿ ಒಂದು ಶಾಖೆಯೂ ಇದೆ. ಪಠಿತ ಪುಸ್ತಕಗಳು, ಟೆಕ್ಸ್ಟ್ ಬುಕ್ಕುಗಳು, ಇತ್ಯಾದಿ ವಿಷಯಗಳನ್ನು ನೋಡಿಕೊಳ್ಳುವ ಬಗೆಬಗೆಯ ಕಮಿಟಿಗಳೂ ಉಂಟು. ಸಾಲದ್ದಕ್ಕೆ ಯೂನಿವರ್ಸಿಟಿ (ಸರ್ವ ವಿದ್ಯಾನಿಲಯ) ವಿಚಾರವನ್ನು ಕುರಿತು ವ್ಯವಸ್ಥೆ ಮಾಡುವ ಕಾರ್ಯಭಾರಿಗಳಿರುವರು. ಅದರೇನು, ಈ ಶಾಖೋಪಶಾಖೆಗಳ ಮತ್ತೂ ಬಗೆಬಗೆಯ ಕಮಿಟಿಗಳ ಕಾರ್ಯಭಾಗಗಳನ್ನು ವಿಚಾರಣೆಯಿಟ್ಟು ನೋಡಿಕೊಂಡು ಕ್ರಮಪಡಿಸುವುದಕ್ಕೆ ಯಾವ ಏರ್ಪಾಡೂ ಇರುವಂತೆ ನಮಗೆ ಕಂಡುಬರುವುದಿಲ್ಲ.

ಸದ್ಯದಲ್ಲಿ ಏನಾಗಿದೆ ಎಂದರೆ, ಪ್ರತಿ ಒಂದು ಕಮಿಟಿಯೂ ತನಗೆ ತೋರಿದಂತೆ ನಡೆಯುತ್ತಲಿರುವುದು. ಒಂದು ಕಮಿಟಿಯು ಕಸಬುಗಳನ್ನು ಕಲಿಸುವ ಪಾಠಶಾಲೆಗಳಾಗಬೇಕೆನ್ನುವುದು. ಪಟ್ಟಣಗಳಲ್ಲಿ ಇವು ಯಾವ ರೀತಿ ಪರಿಣಮಿಸಬಹುದೆಂದು ಯೋಚಿಸದೆ ಸಿಕ್ಕಾಬಟ್ಟೆ ಕೆಲವು ಕಸಬುದಾರಿ ಪಾಠಶಾಲೆಗಳನ್ನು ಪ್ರಾರಂಭಿಸಿದ್ದಾಯಿತು. ಇನ್ನೊಂದು ಕಮಿಟಿಯವರು ಗ್ರಾಮಾಂತರಗಳ ಸ್ಕೂಲುಗಳನ್ನು ಅಪಾರವಾಗಿ ಹೆಚ್ಚಿಸಬೇಕೆಂದು ಕೇಳುತ್ತಾರೆ. ಪ್ರಜೆಗಳನ್ನು ವಿದ್ಯಾವಂತರಾಗಿ ಮಾಡಬೇಕೆಂಬ ಒಟ್ಟು ಏರ್ಪಾಡಿನಲ್ಲಿ ಯಾವುದು ಹೇಗಾದೀತೋ ಎಂದು ನಿಷ್ಕರ್ಷೆ ಮಾಡಿಕೊಳ್ಳದೆ ಅನೇಕ ಗ್ರಾಮಗಳಲ್ಲಿ ಪಾಠಶಾಲೆಗಳನ್ನು ಇಟ್ಟಿದಾರೆ, ಇಡಿಸುತ್ತಲೂ ಇದಾರೆ. ಈ ಪ್ರಕಾರ ಖಚಿತವಾದ ಯಾವ ಒಟ್ಟಾಮೆಯ ಏರ್ಪಾಡೂ ಇಲ್ಲದೆ ಈಗಿನಂತೆ ತಲೆಹಾಯ್ದು ನುಗ್ಗಿ ಹೋಗುತ್ತಿರುವುದರಲ್ಲಿ ದ್ರವ್ಯವು ಅಪಾರವಾಗಿಯೂ ವ್ಯರ್ಥವಾಗಿಯೂ ವಿನಿಯೋಗವಾಗುತ್ತಿದೆ ಎಂದು ಶಂಕೆಪಡುತ್ತೇವೆ.

ಯೂನಿವರ್ಸಿಟಿ (ವಿದ್ಯಾನಿಲಯ) ವಿಚಾರವನ್ನು ನೋಡೋಣ. ನಮ್ಮ ಸಂಸ್ಥಾನಕ್ಕೆ ಎಂಥಾ ವಿದ್ಯಾನಿಲಯ ಬೇಕಾಗಿದೆ ಎಂಬ ವಿಷಯದಲ್ಲಿ ಯಾರಿಗಾದರೂ ಪರಿಷ್ಕಾರವಾಗಿ ತಿಳಿದಿದೆಯೇ? ಅದು ಬರಿಯ ವಿದ್ಯೆಗೆ ಸಂಬಂಧಪಟ್ಟದ್ದಾಗಿರಬೇಕೇ, ಅಥವಾ ಕಸಬುದಾರಿಯೂ ಅದರಲ್ಲಿ ಬೆರೆದಿರಬೇಕೇ? ಇಲ್ಲವೇ ನಮ್ಮ ಯೂನಿವರ್ಸಿಟಿಯಲ್ಲಿ ಎಲ್ಲಾ ತರದ ವಿದ್ಯೆಗಳೂ ಒಳಗೊಂಡಿರಬೇಕೇ? ಪಾಠ ಕ್ರಮಗಳು ಹೇಗೆ ಯಾವ ಭಾಷೆಯಲ್ಲಿ ನಡೆಯಬೇಕು—ಸಂಸ್ಕೃತವೋ, ಕನ್ನಡವೋ, ಇಂಗ್ಲೀಷೋ? ಸಾಮಾನ್ಯವಾಗಿ ಸಂಸ್ಥಾನಾದ್ಯಂತ ನಡೆಯುವ ವಿದ್ಯಾಪ್ರಚಾರಣೆಯಲ್ಲಿ ಈ ಯೂನಿವರ್ಸಿಟಿ ಸಂಬಂಧವೆಷ್ಟು? ಯೂನಿವರ್ಸಿಟಿಯನ್ನು ಸ್ಥಾಪನ ಮಾಡುವುದಾದರೆ ಅದನ್ನು ನಡಿಸಿಕೊಂಡು ಬರುವುದಕ್ಕೆ ವಿದ್ಯಾಸಾಮರ್ಥ್ಯವನ್ನೂ ವ್ಯವಧಾನವನ್ನೂ ಉಳ್ಳವರು ಬೇಕಾದಷ್ಟು ಮಂದಿ ಇರುತ್ತಾರೆಯೇ? ಈ ಯೂನಿವರ್ಸಿಟಿಯ ಖರ್ಚು ಎಷ್ಟಾಗುವುದು? ಹೀಗೆಯೇ ಪ್ರಶ್ನೆಗಳನ್ನು ಒಂದರಹಿಂದೊಂದು ಕೇಳುತ್ತಾ ಹೋಗಬಹುದು. ಮೈಸೂರಿನಲ್ಲಿ ಸ್ಥಾಪನೆ ಮಾಡಬೇಕೆಂದಿರುವ ಯೂನಿವರ್ಸಿಟಿಯ ಪರಿಮಿತಿ ಏನು? ಅದು ಈಗಿನ ವಿದ್ಯಾಬೋಧನಾ ಕ್ರಮಗಳನ್ನು ಸಂಪೂರ್ತಿ ಮಾಡುವ ಬಗೆ ಹೇಗೆ? ಎಂಬೀ ವಿಚಾರಗಳಲ್ಲಿ ನಮ್ಮ ಗವರ್ನಮೆಂಟಿಗೆ ನಿಜವಾಗಿಯೂ ಖಚಿತವಾದ ತಿಳುವಳಿಕೆಯುಂಟಾಗಿರುವುದೇ ಎಂದು ಕೇಳಲಪೇಕ್ಷಿಸುತ್ತೇವೆ.

ಯೂನಿವರ್ಸಿಟಿಯ ಕಟ್ಟಡಕ್ಕೆ ತಳಹದಿಯಾಗಿರುವ ಗ್ರಾಮ ಪಾಠಶಾಲೆಗಳ ವಿಚಾರವನ್ನು ಕುರಿತು ಸ್ವಲ್ಪ ಪರ್ಯಾಲೋಚಿಸೋಣ. ಗ್ರಾಮ ಪಾಠಶಾಲೆಯ ವಿಷಯದಲ್ಲಿ ನಮ್ಮ ಗವರ್ನಮೆಂಟಿಗೆ ಖಚಿತವಾದ ಅಭಿಪ್ರಾಯವಿರುವುದೇ? ಅವರು ಪ್ರಥಮ ವಿದ್ಯೆಯನ್ನು ಫೀಜು ತೆಗೆದುಕೊಳ್ಳದೆ ಕಲಿಸುತ್ತೇವೆಂದು ಹೇಳುತ್ತಾರೆ. ಆದರೆ ಇದರಲ್ಲಿ ನಿಜವಾಗಿ ಆಗಿರುವುದೇನೆಂದರೆ, ಗ್ರಾಮಸ್ಥರು ತಮ್ಮ ಗ್ರಾಮಗಳಲ್ಲಿ ಪಾಠಶಾಲೆ ಆಗಬೇಕಾದರೆ ಅದರ ಖರ್ಚಿಗೆ ಏನಾದರೂ ಸ್ವಲ್ಪವನ್ನು ಕೊಟ್ಟೇ ತೀರಬೇಕು. ಇಂಥಾ ಪರಸ್ಪರ ವಿರುದ್ಧವಾದ ಏರ್ಪಾಡು ನಮ್ಮ ಗವರ್ನಮೆಂಟಿನವರನ್ನು ಬಾಧಿಸುವಂತೆಯೇ ಕಾಣುವುದಿಲ್ಲ. ಇದು ಹಾಗಿರಲಿ. ತಕ್ಕ ಹಾಗೆ ತರಪೇತಾಗದೆ ಇರುವವರನ್ನು ಉಪಾಧ್ಯಾಯ ಕೆಲಸಕ್ಕೆ ನೇಮಿಸಿ ಕಳುಹಿಸುವರು. ಕೆಲವು ಸಂದರ್ಭಗಳಲ್ಲಿ ಗ್ರಾಮಗಳೊಳಗೆ ಗ್ರಾಮಸ್ಥರು ತಮಗೆ ಸಿಕ್ಕಿದವರನ್ನು ಮಾಸ್ತರಾಗಿ ನೇಮಿಸಿಕೊಳ್ಳಬಹುದಾಗಿದೆ. ಒಂದು ವೇಳೆ ಇಂಥವರು ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟಿದಾರೆಂದು ಇಟ್ಟುಕೊಂಡಾಗ್ಯೂ ಅಂಥವರಿಗೆ ತಿಳಿದಿರುವುದೇನು? ಬಹಳ ಸ್ವಲ್ಪವಲ್ಲವೇ? ಆ ಸ್ವಲ್ಪವನ್ನೂ ಹೇಗೆ ಹೇಳಿಕೊಡಬೇಕೋ ಅವರಿಗೆ ತಿಳಿಯದು. ನಮ್ಮ ಸಂಸ್ಥಾನದಲ್ಲಿ ಪ್ರಥಮ ಪಾಠಶಾಲೆಗಳಲ್ಲಿ ಒಂದೆರಡು ವರುಷ ಓದಿ ಬಿಟ್ಟುಬಿಟ್ಟು ಈಗ ಓದು ಬರಹವನ್ನೇ ಮರೆತು ಹೋಗಿರುವವರು ಎಷ್ಟು ಮಂದಿ ಇದಾರೆಯೋ ನಮ್ಮ ಸಂಪದಭ್ಯುದಯ ಸಮಾಜದವರು ಗೊತ್ತು ಮಾಡಿದರಾದೀತೆಂದು ನೆನಸುತ್ತೇವೆ. ಸ್ವಲ್ಪಮಟ್ಟಿಗೆ ಓದಿ ಈಗ ಅದರ ಮಟ್ಟನ್ನೇ ಮರೆತುಬಿಟ್ಟಂಥವರು ಸಾವಿರಗಟ್ಟಲೆ ಇರುತ್ತಾರೆನ್ನುವುದಕ್ಕೆ ಅನುಮಾನವಿಲ್ಲ. ಈಗ ಒಂದಂಕವಾಗಿ ವಿದ್ಯೆ ಕಲಿಸುವ ಪ್ರಯತ್ನವೂ ಅಂಥಾ ಪ್ರಜೆಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಹೊರತು ಬೇರೇನೂ ಸಾರ್ಥಕಕಾಣುವುದಿಲ್ಲ. ಈಗ ನಾವು ಮಾಡಬೇಕಾಗಿರುವುದು ಪಾಠಶಾಲೆಗೆ ಹೋಗುವ ವಿದ್ಯಾರ್ಥಿಗಳ ಯೋಗ್ಯತೆಯನ್ನೂ ಸಾಮರ್ಥ್ಯವನ್ನೂ ಅಭಿವೃದ್ಧಿ ಮಾಡಬೇಕಾಗಿರುತ್ತದೆ. ಗಂಡಸರೂ ಹೆಂಗಸರೂ ಈಗ್ಗಿಂತಲೂ ಹೆಚ್ಚಾದ ವಿವೇಕವನ್ನೂ ವಿದ್ಯೆಯನ್ನೂ ಕಲಿಯುವಂತೆ ಮಾಡಬೇಕು. ಇಂಥಾ ಉದ್ದೇಶವು ನಮ್ಮ ಗವರ್ನಮೆಂಟಿಗೆ ಇರುವುದೇ? ಈ ಉದ್ದೇಶವು ಸಾರ್ಥಕವಾಗುವಂತೆ ನಮ್ಮ ಸರ್ಕಾರದವರು ಸರಿಯಾದ ಏರ್ಪಾಡುಗಳನ್ನು ಮಾಡಿದಾರೆಯೇ? ವಿದ್ಯಾಭಿವೃದ್ಧಿಗೆ ಸಂಬಂಧಪಟ್ಟ ವಿಚಾರಗಳ ಪೂರ್ವಾಪರಗಳನ್ನು ನಮ್ಮ ಸರ್ಕಾರದವರು ಇನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ ಎಂದೂ, ಅವು ಸಾರ್ಥಕವಾಗಿ ನೆರವೇರುವಂತೆ ಪ್ರೀತಿಯೂ ಮುತುವರ್ಜಿಯೂ ಉಳ್ಳ ಪ್ರಯತ್ನಗಳು ಕಂಡುಬರಬೇಕಾಗಿದೆ ಎಂದೂ ನಮಗೆ ತೋರುತ್ತದೆ.

ಹಣೇಬರಹ.

ಹಣೇಬರಹವೆಂಬ ಈ ಮಾತು ಸದಾ ಸರ್ವದಾ ನಮ್ಮ ದೇಶೀಯರ ಬಾಯಲ್ಲಿ ಹೊರಡುತ್ತದೆ. ಅವರು ತಾವು ಮಾಡುವ ತಪ್ಪುಗಳ ವಿಷಯದಲ್ಲಿ ಯಾರಾದರೂ ಆಕ್ಷೇಪಿಸಿದರೆ—ಓಹೋ! ನನ್ನ ಹಣೇಬರಹ; ನಾನು ಏನು ಮಾಡಲಿ? ಆ ಬುದ್ಧಿ ಕೊಟ್ಟವನು ಯಾರು? ಎಂದು ನೆವ ಹೇಳುತ್ತಾರೆ.

ಇವನ್ನು ನೋಡಿದರೆ ಜನರು ತಾವೇ ತಪ್ಪುಗಳನ್ನು ಮಾಡಿ ಆ ದೋಷವನ್ನು ಅನ್ಯಾಯವಾಗಿ ದೇವರ ಮೇಲೆ ಹೊರಿಸಿ ನಾವು ಸ್ವತಂತ್ರರಲ್ಲ, ಆತನು ಯಾವ ರೀತಿ ನಡಿಸುತ್ತಾನೆಯೋ ಅದೇ ರೀತಿ ನಾವು ನಡೆಯುತ್ತೇವೆ ಎಂದು ತಪ್ಪುಭಿಪ್ರಾಯಪಟ್ಟಿರುವದಾಗಿ ತಿಳಿಯಬರುತ್ತದೆ.

ಅವರ ಅಭಿಪ್ರಾಯವು ಸರಿಯಲ್ಲ. ದೇವರು ಎಂದಿಗೂ ನಮ್ಮನ್ನು ಕೆಟ್ಟ ಕೆಲಸಕ್ಕೆ ಪ್ರೇರೇಪಿಸುವದಿಲ್ಲ. ಆತನು ಬಹಳ ದಯಾಳುವಾಗಿ ನಮ್ಮ ಶಾಶ್ವತವಾದ ಹಿತವನ್ನೂ ಒಳ್ಳೇ ನಡತೆಯನ್ನೂ ಬಯಸುತ್ತಾನೆ. ಮುಖ್ಯವಾಗಿ ನಾವು ಮರ ಮುಂತಾದ ಜ್ಞಾನವಿಲ್ಲದ ಪದಾರ್ಥಗಳಂತಿಲ್ಲದೆ ಉತ್ತಮ ಜ್ಞಾನಿಗಳಾಗಿದ್ದು ಕೊಂಡು ಒಳ್ಳೇದನ್ನೂ ಕೆಟ್ಟದ್ದನ್ನೂ ವಿವೇಚಿಸಿ ಸ್ವತಂತ್ರರಾಗಿದ್ದು ಕೊಂಡು ಪಾಪವಿಲ್ಲದವರಾಗಿಯೂ ಪರಿಶುದ್ಧರಾಗಿಯೂ ಬದುಕಬೇಕೆಂಬುವದು ಆತನ ಅಪೇಕ್ಷೆಯಾಗಿದೆ. ಇದಕ್ಕನುಸಾರವಾಗಿ ಸತ್ಯವೇದದಲ್ಲಿ ಭಕ್ತಾದಿಗಳು ಹೇಳಿರುವ ಕೆಲವು ಮಾತುಗಳನ್ನು ಕೇಳಿರಿ.—

“ಬುದ್ಧಿಹೀನರಾಗಿ ನಡೆಯದೆ, ಕರ್ತನ ಚಿತ್ತವೇನೆಂಬುವದನ್ನು ವಿಚಾರಿಸಿ ತಿಳಿದವರಾಗಿರ್ರಿ. ದೇವರ ಚಿತ್ತವೇನಂದರೆ ನೀವು ಶುದ್ಧರಾಗಿರಬೇಕೆಂಬುವದೇ. ದೇವರು ನಮ್ಮನ್ನು ಭಂಡತನಕ್ಕೆ ಕರೆಯದೆ, ಶುದ್ಧರಾಗಿರುವದಕ್ಕೆ ಕರೆದನು

“ಹೀಗಿರುವದರಿಂದ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಇದು ಮಾತ್ರವಲ್ಲದೆ, ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಕೃತ್ಯವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ. ಆದರೆ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳಾಗಮಾಡಿರಿ.

“ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ” ಎಂಬಿವುಗಳೇ.

ಇದಕ್ಕೆ ನಮ್ಮೆಲ್ಲರ ಮನಸ್ಸಾಕ್ಷಿಯು ಒಪ್ಪಿಕೊಳ್ಳುವದು. ಅದು ಕೆಟ್ಟ ಕೆಲಸಗಳನ್ನು ಮಾಡಬೇಡವೆಂತಲೂ ಒಳ್ಳೆಯವುಗಳನ್ನು ಮಾಡಬೇಕೆಂತಲೂ ನಮ್ಮಲ್ಲಿ ಸೂಚಿಸುವಾಗ ದೇವರೇ ನಮ್ಮ ಅಂತರಂಗದಲ್ಲಿ ಮಾತನಾಡಿ ನಮಗೆಲ್ಲಾ ತನ್ನ ಚಿತ್ತವನ್ನು ತಿಳಿಸುತ್ತಾನೆಂದು ನಾವು ಗೊತ್ತುಮಾಡಿಕೊಳ್ಳಬೇಕು.

ಆದರೆ ದೇವರು ಈ ರೀತಿಯಾಗಿ ನಮಗೆ ಸೂಚಿಸಿರುವ ಆತನ ಚಿತ್ತದಂತೆ ನಡೆದಿದ್ದೇವೋ? ಇಲ್ಲ. ಮಕ್ಕಳು ಹೇಗೆ ತಮ್ಮ ತಂದೆತಾಯಿಗಳ ಮಾತನ್ನು ಮೀರುತ್ತಾರೋ, ಹಾಗೆಯೇ ನಾವು ಸುಬುದ್ಧಿಯನ್ನು ತ್ಯಜಿಸಿ ದೇವರ ಮಾತನ್ನು ಮೀರಿ, ಆತನ ಉಪದೇಶಗಳನ್ನು ಭಂಗಪಡಿಸುತ್ತಲೇ ಇರುತ್ತೇವೆ. ಆತನು ನಮ್ಮ ಮನಸ್ಸಾಕ್ಷಿಯಲ್ಲಿ ಮಾಡಬೇಡವೆಂದು ಸ್ಪಷ್ಟವಾಗಿ ಹೇಳಿದ ಕೆಟ್ಟ ಕೆಲಸವನ್ನು ನಾವು ಹಟಹಿಡಿದು ಮಾಡಿದರೆ, ಅದು ಆತನ ತಪ್ಪೋ? ನಮ್ಮ ತಪ್ಪೋ? ನಾವು ಆ ತಪ್ಪನ್ನು ಆತನ ಪ್ರೇರಣೆಯಿಂದ ಮಾಡಿದೆವೋ? ಇಲ್ಲವೇ ಆತನಿಗೆ ವಿರೋಧವಾಗಿ ಮಾಡಿದೆವೋ? ನೀವೇ ಹೇಳಿರಿ.

ವಾಚಕರೇ, ನೀವು ತಪ್ಪು ಮಾಡಿ ಮಾಡಿ ಈ ಹಣೇಬರಹವೆಂಬುವ ವ್ಯರ್ಥವಾದ ನೆವ ಹೇಳಬೇಡಿರಿ. ದೇವರು ಪ್ರೀತಿಯಿಂದ ನಮ್ಮ ನಮ್ಮ ಹಣೆಗಳಲ್ಲಿ “ನನ್ನ ಪರಿಶುದ್ಧವಾದ ಮಕ್ಕಳು” ಎಂಬ ನಾಮವನ್ನು ಬರೆದಿಟ್ಟಿರುತ್ತಾನೆಂದು ಮುಂದಿಟ್ಟುಮಾಡಿಕೊಳ್ಳಿರಿ. ಹೀಗೆ ಆತನು ನಮ್ಮ ಹಣೆಗಳಲ್ಲಿ ಮುದ್ರಿಸಿ ನಮಗೆಷ್ಟು ಮಾನವನ್ನುಂಟುಮಾಡಿದ ಮೇಲೆ, ನಾವು ಅಶುದ್ಧವಾದ ಕಾರ್ಯಗಳಿಗೆ ಹೋಗಿ ನಮ್ಮ ಮಾನವನ್ನು ಕೆಡಿಸಿಕೊಳ್ಳಬಹುದೋ? ನಾವು ಶುದ್ಧರಾಗಿ ನಡೆದು ಆ ಮಾನವನ್ನು ಕಾಪಾಡುವ ಹಂಗಿನಲ್ಲಿಲ್ಲವೋ?

ಆದರೆ ಮನುಷ್ಯರ ನಿಜಸ್ಥಿತಿಯನ್ನು ನೋಡಿದರೆ, ಅವರೆಲ್ಲರೂ ಈ ರೀತಿಯಾಗಿ ನಡೆದಿದ್ದಾರೋ? ದೇವರ ಚಿತ್ತಕ್ಕೆ ಭಂಗಪಡಿಸಿದ್ದಾರಲ್ಲವೋ? ಹೌದು ವಿರೋಧವಾಗಿ ನಡೆದಿದ್ದಾರೆ. ಪರಿಶುದ್ಧರಾಗಿ ನಡೆಯಲಿಲ್ಲ. ಆದಕಾರಣ ಲೋಕದಲ್ಲಿ ನಾನಾ ಕಷ್ಟಗಳು ಉಂಟಾಗಿವೆ. ನಮಗೆ ಸಂಭವಿಸುವ ಈ ಕಷ್ಟಗಳಿಂದ ನಾವು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ದೇವರು ಈ ರೀತಿಯಾಗಿ ನಮ್ಮನ್ನು ಎಚ್ಚರಿಸಿ, ನಾವು ಪಾಪವನ್ನು ಬಿಟ್ಟು ಪರಿಶುದ್ಧರಾಗಿ ನಡೆಯುವ ಹಾಗೆ ನಮ್ಮ ಮನಸ್ಸುಗಳನ್ನು ತನ್ನ ಕಡೆಗೆ ಎಳೆಯುತ್ತಾನೆಂಬುವದರಲ್ಲಿ ಸಂಶಯವಿಲ್ಲ. ಆತನು ನಮ್ಮ ಮೇಲೆ ಶಾಶ್ವತವಾದ ಕರುಣೆಯನ್ನು ಇಟ್ಟಿದ್ದಾನೆಂಬುವದಕ್ಕೆ ಇದೇ ಸಾಕ್ಷಿಯಾಗಿದೆ.

ನಮಗಾದರೋ, ನಮ್ಮ ಗತಿಯು ಆಗಿಹೋಯಿತಲ್ಲಾ, ಇನ್ನೇನು? ನಾವು ಪಾಪಮಾಡಿ ಆಗಲೇ ಅಶುದ್ಧರಾದೆವಲ್ಲಾ! ತಿರಿಗಿ ಶುದ್ಧರಾಗುವದುಂಟೇ ಎಂದು ನೀವು ಕೇಳಿದರೆ, ನಾನು ಹೇಳುತ್ತೇನೆ. ಕೇಳಿರಿ! ನಿಜವಾಗಿ ಅದು ನಮ್ಮಿಂದ ಆಗತಕ್ಕದ್ದಲ್ಲ. ಆದರೆ ದೇವರೇ ನಮ್ಮನ್ನು ತಿರಿಗಿ ಶುದ್ಧಮಾಡಬೇಕು. “ಚರ್ಮ ತೊಳೆದರೆ ಕರ್ಮ ಹೋಗುವದಿಲ್ಲ” ಎಂಬ ಗಾದೆಯ ಪ್ರಕಾರ ನಾವು ಯಾವ ಪುಣ್ಯಕಾರ್ಯಗಳನ್ನು ಮಾಡಿದರೂ ಕೆಟ್ಟುಹೋಗಿರುವ ನಮ್ಮ ಆತ್ಮಗಳನ್ನು ನಾವೇ ಶುದ್ಧಿಮಾಡಿಕೊಳ್ಳುವದಕ್ಕಾಗುವದಿಲ್ಲ. ದೃಷ್ಟಾಂತವಾಗಿ, ಮುರಿದುಹೋಗಿರುವ ಒಡವೆಗಳನ್ನು ನಾವು ಏನು ಮಾಡುತ್ತೇವೆ? ಅವನ್ನು ಪುನಹ ಸರಿಪಡಿಸುವದಕ್ಕೆ ಅಕ್ಕಸಾಲಿಗನಿಗೆ ಕೊಡುತ್ತೇವಲ್ಲವೇ? ಅದರಂತೆ ನಮ್ಮ ಆತ್ಮಗಳನ್ನು ಉಂಟುಮಾಡಿದ ದೇವರಿಗೆ ನಾವು ಅವುಗಳನ್ನು ಒಪ್ಪಿಸಿಕೊಟ್ಟು ಬೇಡಿದರೆ, ನಿಜವಾಗಿ ಆತನು ಅವುಗಳನ್ನು ಹೊಸದಾಗಿ ಶುದ್ಧಮಾಡುತ್ತಾನೆ

ಯುದ್ಧದ ಸಮಾಚಾರಗಳು.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಈಗ ಸೌಖ್ಯವಾಗಿದಾರೆ; ಅವರು ಕಳೆದ ವಾರ ಮಂತ್ರಿ ಸಭೆಗೆ ಚಿತ್ತೈಸಿ ಆ ಸಭೆಯ ಖಾಸಾಗಿ ವಿಚಾರಣೆಗಳನ್ನು ನಡಿಸಿದರು.—ಬ್ರಿಟಿಷ್ ಪರರಾಜ್ಯಗಳ ಮಂತ್ರಿಯವರಾದ ಸರ್ ಎಡ್ವರ್ಡ್ ಗ್ರೇಯವರ ಆರೋಗ್ಯಸ್ಥಿತಿಯು ಅಷ್ಟೇನೂ ತೃಪ್ತಿಕರವಾಗಿಲ್ಲ. ಅವರು ಆ ಮುಖ್ಯವಾದ ಅಧಿಕಾರವನ್ನು ವಹಿಸಿಕೊಂಡಿದ್ದಾರೋ ಎಂದು ಅನುಮಾನ ಉಂಟಾಗಿದೆ.—ಬ್ರಿಟಿಷ್ ಯುದ್ಧದ ಇಲಾಖೆಯ ಮಂತ್ರಿಯವರಾದ ಲಾರ್ಡ್ ಕಿಚ್ನರ್‌ರವರು ಇಂಗ್ಲೆಂಡಿನಿಂದ ಕೆಲವು ಕಾಲದ ಮಟ್ಟಿಗೆ ಹೊರಗೆ ಹೋಗಿದಾರೆ. ಅವರು ವಾಪಸು ಬರುವ ತನಕ ಅವರ ಕೆಲಸವನ್ನು ಪ್ರಧಾನ ಮಂತ್ರಿಗಳಾದ ಮಿ|| ಆಸ್ಕ್ವಿತ್‌ರವರು ವಹಿಸಿ ನಡಿಸುವರು. ಲಾರ್ಡ್ ಕಿಚ್ನರ್‌ರವರು ಫ್ರೆಂಚರ ಸರ್ವಸೇನಾಪತಿಯಾದ ಜನರಲ್ ಜೋಫ್ರೆಯವರನ್ನು ಕಂಡು ಅವರ ಕೂಡ ಸಂಭಾಷಣೆ ಮಾಡಿಕೊಂಡು ಅಲ್ಲಿಂದ ಸಲೋನಿಕಾ ತೀರಪಟ್ಟಣಕ್ಕೆ ಬಳಿಕ ಬಾಲ್ಕನ್ ಸಂಸ್ಥಾನಗಳ ಪ್ರಾಂತ್ಯಕ್ಕೂ ಹೋಗಿ ಬರುವವರಾಗಿದಾರೆ.—ಈ ಸಂದರ್ಭದಲ್ಲಿ ಲಂಡನ್ ಪಟ್ಟಣದ “ಗ್ಲೋಬ್” ಎಂಬ ವರ್ತಮಾನ ಪತ್ರಿಕೆಯು ಲಾರ್ಡ್ ಕಿಚ್ನರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂದು ಪ್ರಕಟಪಡಿಸಿತು. ಗವರ್ನ್‌ಮೆಂಟಿನವರು ಆ ವರ್ತಮಾನ ತಪ್ಪೆಂದು ತಿಳಿಸಿದರು. ಆದರೂ “ಗ್ಲೋಬ್” ಎಂಬ ಪತ್ರಿಕೆಯು ನಾರುದಿನ ಅದೇ ವರ್ತಮಾನವನ್ನು ಪುನಃ ಪ್ರಕಟಿಸಿತು. ಅದರ ಮೇಲೆ ಸರ್ಕಾರದವರು ಪೋಲೀಸಿಗೆ ಹುಕುಂ ಕೊಟ್ಟರು. ಇವರು ಆ ಪತ್ರಿಕೆಯ ಆಫೀಸಿಗೆ ನುಗ್ಗಿ ಅಚ್ಚಿನ ಮೊಳೆ ಯಂತ್ರ ಮೊದಲಾದ ಸಲಕರಣೆಗಳನ್ನೆಲ್ಲಾ ಸ್ವಾಧೀನ ಪಡಿಸಿಕೊಂಡದ್ದಲ್ಲದೆ ಆ ಭಾ ಸುಳ್ಳು ವರ್ತಮಾನ ಪ್ರಕಟವಾಗಿದ್ದ ಆ ಪತ್ರಿಕೆಯ ಸಂಚಿಕೆಗಳನ್ನೆಲ್ಲಾ ಕಿತ್ತುಕೊಂಡು ಬಂದರು.—ಮೊದಲು ಬ್ರಿಟಿಷ್ ನಾವೆ ಇಲಾಖಾ ಸೆಕ್ರೆಟರಿಯಾಗಿದ್ದು, ಈಚೆಗೆ ಬ್ರಿಟಿಷ್ ಮಂತ್ರಿ ಸಭೆಯಲ್ಲಿ ಮೆಂಬರಾಗಿ ನೇಮಿಸಿದ್ದ ಮಿ|| ವಿನ್‌ಸ್ಟನ್ ಚರ್ಚಿಲ್‌ರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ.

ಅಮೇರಿಕದ ಹಡಗುಗಳು ಯಾವ ಸರಕನ್ನೂ ಜರ್ಮನ ತೀರಪಟ್ಟಣಗಳಿಗೆ ಸಾಗಿಸಿಕೊಂಡು ಹೋಗಕೂಡದೆಂದು ಬ್ರಿಟಿಷ್ ಸರ್ಕಾರದವರು ಅಡ್ಡಿ ಮಾಡುತ್ತಾರಷ್ಟೆ. ಈ ವಿಷಯದಲ್ಲಿ ಅಮೇರಿಕದವರು ಬ್ರಿಟಿಷರ ಮೇಲೆ ಆಕ್ಷೇಪ ಮಾಡಿ, ತಾವು ಯುದ್ಧದಲ್ಲಿ ಸೇರದೆ ತಟಸ್ಥರಾಗಿರುತ್ತೇವೆಂದೂ, ತಮ್ಮ ಹಡಗುಗಳನ್ನು ರಾಜ್ಯ ರಾಷ್ಟ್ರಗಳಿಗೆ ನಡೆದುಬಂದಿರುವ ಕಾನೂನಿನ ಪ್ರಕಾರ ತಡೆಯಕೂಡದೆಂದೂ ತಿಳಿಸಿದಾರೆ. ಬ್ರಿಟಿಷರು ಅವರ ಆಕ್ಷೇಪಣೆಗೆ ಇನ್ನೂ ಜವಾಬು ಕೊಟ್ಟಿಲ್ಲ. ಬಹುಶಃ ಈ ವಿಷಯವನ್ನು ನಿಷ್ಪಕ್ಷಪಾತಿಗಳಾದ ಒಂದು ಪಂಚಾಯತಿ ಕೋರ್ಟಿನವರಿಗೆ ವಹಿಸಿ ಅವರ ತೀರ್ಮಾನವನ್ನು ಎದುರು ನೋಡಬಹುದೆಂದು ಕಾಣುತ್ತದೆ. ಹ್ಯಾಗೂ ಇದರಿಂದ ಬ್ರಿಟಿಷರಿಗೂ ಅಮೇರಿಕದವರಿಗೂ ಇರುವ ಪರಸ್ಪರಾನುರಾಗಕ್ಕೆ ಯಾವ ಕುಂದೂ ಉಂಟಾಗಲಾರದೆಂದು ಹೇಳಬಹುದು.

ಮಂತ್ರಿ ಶ್ರೇಷ್ಠರಾದ ಮಿ|| ಆಸ್ಕ್ವಿತ್ ರವರು ಕಳೆದ ವಾರ ಲಂಡನ್ ಪಟ್ಟಣದಲ್ಲಿ ಭಾಷಣಮಾಡುತ್ತಾ ಹೇಳಿದ್ದೇನೆಂದರೆ—ಮಿತ್ರಮಂಡಲಿಯವರು ತಮ್ಮ ಉದ್ದೇಶ ಕೈಗೂಡುವುದಕ್ಕೆ ಆಗಲೇ ಹಲವು ಜಯಪ್ರದಗಳನ್ನು ಸಂಪಾದಿಸಿಕೊಂಡಿರುತ್ತಾರೆ. ಈ ಯುದ್ಧದಲ್ಲಿ ಅವರಿಗೆ ಉಚಿತವಾದ ಜಯಪ್ರದವುಂಟಾಗುವ ತನಕ ಸರ್ವ ಪ್ರಯತ್ನವನ್ನೂ ಮಾಡುತ್ತಲೇ ಬರುತ್ತಾರೆ. ಮಿ|| ಬಾಲ್ಫರ್‌ರವರು—ಶತ್ರುವು ಎಷ್ಟು ಜಯಪ್ರದವನ್ನು ಹೊಂದಬಹುದಾಗಿತ್ತೋ ಅಷ್ಟನ್ನು ಪಡೆದದ್ದಾಯಿತೆಂದೂ, ಇನ್ನು ಮುಂದೆ ಶತ್ರುವು ಕ್ಷಯಿಸಿ ಸೋಲುತ್ತಾ ಬರುವರೆಂದೂ ಹೇಳಿದರು.

ಬ್ರಿಟಿಷ್ ಕಾರೀಗಾರರು ಒಂದು ವಿಮಾನಯಂತ್ರವನ್ನು ಹೊಸದಾಗಿ ಕಂಡುಹಿಡಿದು ತಯಾರುಮಾಡಿದಾರೆ. ಇದು ಪ್ರತಿ ನಿಮಿಷವೂ ಒಂದು ಸಾವಿರ ಅಡಿಯಷ್ಟು ಅಂತರಿಕ್ಷಕ್ಕೆ ಹಾರಿಹೋಗುವುದು. ಮತ್ತು ಜರ್ಮನಿಯ ಜೆಪ್ಪೆಲಿನ್ ಎಂಬ ವಿಮಾನಯಂತ್ರಗಳಿಂದ ಹಾಕುವ ಗುಂಡುಗಳಿಗಿಂತ ಎರಡರಷ್ಟು ಭಾರವಾದ ಸಿಡಿಮದ್ದಿನ ಗುಂಡುಗಳನ್ನು ಅದು ಹೊಡೆಯಬಲ್ಲದು.

ಫೆಸಿಫಿಕ್ ಸಾಗರದಲ್ಲಿರುವ ಎರಡು ದ್ವೀಪಸಮುದಾಯಗಳ ಪ್ರಜೆಗಳ ಅಪೇಕ್ಷೆಪಟ್ಟದ್ದನ್ನು ಅಂಗೀಕರಿಸಿ ಬ್ರಿಟಿಷರು ಅವುಗಳನ್ನು ಬ್ರಿಟಿಷ್ ರಾಜ್ಯಾಂಗಗಳಾಗಿ ಸೇರಿಸಿಕೊಂಡಿದಾರೆ.

ರಣರಂಗದ ಬೇರೆ ಬೇರೆ ಯುದ್ಧಭೂಮಿಯಲ್ಲಿ ನಡೆದಿರುವ ಯುದ್ಧವಾರ್ತೆಗಳೇನೆಂದರೆ:—

ಮೆಡಿಟರೇನ್ಯನ್ ಸಮುದ್ರದ ಮೇಲೆ.

ಮಿತ್ರಮಂಡಲಿಯವರ ಕೆಲವು ಹಡಗುಗಳು ಮುಳುಗಿಸಲ್ಪಟ್ಟವು. ಇಟಲಿಯ ಅಂಕೋನಾ ಎಂಬ ಭಾರೀ ಜಹಜು ಅಮೇರಿಕಕ್ಕೆ ಹೋಗಬೇಕೆಂದು ಸೆಪ್ಟೆಂಬರ್ ತಾ. ೬ ನೇ ಶುಕ್ರವಾರ ನೇಪಲ್ಸ್ ತೀರಪಟ್ಟಣದಿಂದ ಪ್ರಯಾಣ ಮಾಡಿತು. ತಾ. ೮ ನೇ ಸೋಮವಾರ ಅದು ಸಾರ್ಡಿನಿಯಾ ದ್ವೀಪಕ್ಕೆ ಅತ್ತ

ಮಧ್ಯೆ ಇರುವ ಜಲಸಂಧಿಯಲ್ಲಿ ಹಾದು ಹೋಗುತ್ತಿದ್ದಾಗ ... ಬಾವುಟಗಳನ್ನುಳ್ಳ ಎರಡು ಸಬ್‌ಮೆರೀನುಗಳು ಆ ಇಟಲಿಯ ... ಬಂದವು. ಒಂದು ಸಬ್‌ಮೆರೀನು 100 ಗುಂಡುಗಳನ್ನು ... ಬಳಿಕ ಟಾರ್ಪೆಡೋ ಎಂಬ ಜಲಯಾನವನ್ನು ಬಿಟ್ಟು ಹೊಡೆ... ಪ್ರಯಾಣಿಕರ ಪೈಕಿ 300 ಮಂದಿ ಎಂಟು ದೋಣಿಗಳಲ್ಲಿ ... ಕೊಂಡರು ಆಗಲೂ ಆ ಸಬ್‌ಮೆರೀನು ಆ ದೋಣಿ... ಗುಂಡುಗಳನ್ನು ಸುರಿಸಿತು. ಅನೇಕ ಪ್ರಯಾಣಿಕರು ಮೃತಪ... ಗಾಯಗಳಾದವು ಬಳಿಕ ಆಂಕೋನಾ ಎಂಬ ಹಡಗು ... ಕೆಲವು ಪ್ರಯಾಣಿಕರು ಬದುಕಿಸಲೆಂದು ಹೊರಬಿದ್ದು ... ಸಮೀಪಕ್ಕೆ ಹೋದವು. ಆದರೆ ಸಬ್‌ಮೆರೀನಿನಲ್ಲಿದ್ದ ... ಕೈತ್ತುಪಾಕಿಗಳನ್ನು ಗುರಿಯಿಟ್ಟು ಹೊಡೆದು ಓಡಿಸಿಬಿಟ್ಟರು. ... ಎಂಬ ಹಡಗಿನಲ್ಲಿ ಪ್ರಯಾಣಿಕರೂ ಇತರರೂ ಸೇರಿ 507 ಮಂದಿ ... ಅವರಲ್ಲಿ 10 ಮಂದಿ ಅಮೇರಿಕದವರು. 9 ಮಂದಿ ಅಮೇರಿಕದ ... ಜನರು ಹೆಂಗಸರು ಮಕ್ಕಳ ಸಮೇತ ಸಮುದ್ರದಲ್ಲಿ ಬಿದ್ದು ... ಹೋಗಿದ್ದಾರೆ. ಆ ಸಬ್‌ಮೆರೀನುಗಳ ಮೇಲೆ ಆಸ್ಟ್ರಿಯಾ ಬಾವುಟಗಳು ... ಜರ್ಮನಿಯವರು ಅಲ್ಲಿ ನಡೆದ ಕಥೆಯನ್ನು ವಿವರಿಸಿ "ನಾವು ... ಹಡಗನ್ನು ನಿಲ್ಲಿಸಿ" ಎಂದು ಹೇಳಕಳುಹಿಸಿದಾಗ್ಯೂ ಆಂಕೋನಾ ... ವೇಗವಾಗಿ ತಪ್ಪಿಸಿಕೊಂಡು ಹೋಗುತ್ತಿತ್ತೆಂದೂ, ಅದಕ್ಕೋಸ್ಕರ ... ಹಡಗನ್ನು ಟಾರ್ಪೆಡೋ ಬಿಟ್ಟು ಒಡಿಸಿ ಮುಳುಗಿಸಬೇಕಾಯಿತೆಂದೂ ... ಹೇಳುತ್ತಾರೆ. ಆ ಸಬ್‌ಮೆರೀನುಗಳು ಜರ್ಮನಿಯವರಿಗೆ ಸೇರಿ... ಆಸ್ಟ್ರಿಯಾ ಬಾವುಟಗಳನ್ನು ಅವುಗಳ ಮೇಲೆ ನೆಪಮಾತ್ರಕ್ಕೆ ಕಟ್ಟಿ... ಜರ್ಮನಿಯವರು ಇಟಲಿಯವರ ಮೇಲೆ ಯುದ್ಧ... ಎಂದು ಸಾರಿ ಇಲ್ಲ ಆದಕಾರಣ ಇಟಲಿ ಹಡಗನ್ನು ಜರ್ಮನಿಯ... ಮುಳುಗಿಸಿದೆವೆಂದು ಹೇಳಕೂಡದು. ಈಗ ಆ ಸಬ್‌ಮೆರೀನು ಜರ್ಮನಿಗೆ ... ಹುದಾದರೆ ಇಟಲಿಯವರು ಜರ್ಮನಿಯವರನ್ನು ಶತ್ರುವೆಂದು ... ಸಿದ್ಧರಾಗಿದ್ದಾರೆ

ಮೆಡಿಟರೇನಿಯನ್ ಕಡಲಿನಲ್ಲಿ ಕಳೆದ ವಾರ ಬ್ರಿಟಿಷ್, ಫ್ರೆಂಚ್, ಇಟಲಿ, ... ರಾಜ್ಯಗಳ ಸುಮಾರು ಹತ್ತು ವ್ಯಾಪಾರದ ಹಡಗುಗಳನ್ನು ... ಮುಳುಗಿಸಿರುತ್ತಾರೆ

ಬ್ರಿಟಿಷ್ ಜಹಜುಗಳ ನಷ್ಟ.

ಬ್ರಿಟಿಷ ಸರಕು ಸಾಗಿಸುವ ಒಂದು ಹಡಗಿಗೆ ಮೆಡಿಟರೇನಿಯನ್ ಕಡಲಿನಲ್ಲಿ ಶತ್ರುವಿನ ಟಾರ್ಪೆಡೋ ಬಡಿದು ಮುಳುಗಿಹೋಯಿತು ಅದರಲ್ಲಿದ್ದವರ ... ಜನಗಳು ಸಿಕ್ಕಿ ಇಲ್ಲ.

ಬ್ರಿಟಿಷ ಇಸ್ಪಾಟ್ರೆಯದೊಂದು ಜಹಜು ಮೆಡಿಟರೇನಿಯನ್ ಕಡಲಿನಲ್ಲಿ ... ಒಡೆದುಹೋಯಿತು. ಅದರಲ್ಲಿದ್ದವರೆಲ್ಲಾ ಬದುಕಿ ಬಂದರು.

ಬ್ರಿಟಿಷ ಮಂದು ಸಾಗಿಸುವ ಎರಡು ಜಹಜುಗಳಿಗೆ ಶತ್ರುವಿನ ಸಬ್‌ಮೆರೀನು ... ಬಂದು ಟಾರ್ಪೆಡೋ ಬಿಟ್ಟು ಹೊಡೆಯಿತು. ಆದರೆ ಅವು ... ಎರಡೂ ಸುರಕ್ಷಿತವಾಗಿ ತೀರಕ್ಕೆ ಬಂದು ಸೇರಿಕೊಂಡವು

ಮಿತ್ರಮಂಡಲಿಯವರಿಗೆ ಸೇರಿದ ಬಂದು ಸಾಗುವ ಒಂದು ಜಹಜಿಗೆ ... ಕಡಲಿನಲ್ಲಿ ಶತ್ರುವಿನ ಟಾರ್ಪೆಡೋ ಬಡಿಯಿತು. ಅದರಲ್ಲಿ ಸೈನಿಕ... ಬ್ರಿಟಿಷ್ ನರ್ಸ್ ಎಂಬ ಸೇವಾ ಸ್ತ್ರೀಯರಿದ್ದರು ಆ ಸೈನಿಕ... ದೋಣಿಗಳಲ್ಲಿ ಕಳಿಸಿ ಬದುಕಿಸುವ ತನಕ ಆ ಸ್ತ್ರೀಯರು ದೋಣಿ... ಹತ್ತುವುದಿಲ್ಲವೆಂದು ತಿರಸ್ಕಾರ ಮಾಡಿದರು ಆ ಸ್ತ್ರೀಯರಲ್ಲಿ ಹತ್ತು ... ಹಾಳಾದರು.

... ಕಡಲಿನಲ್ಲಿ ಬ್ರಿಟಿಷರ ಒಂದು ಸಬ್‌ಮೆರೀನು ಮುಳುಗಿಸ... ಕಾಣುತ್ತದೆ.

ಜರ್ಮನಿಯ ಜಹಜುಗಳ ನಷ್ಟ.

ಸ್ವೀಡನ್ ರಾಜ್ಯದ ಪಶ್ಚಿಮ ತೀರದಿಂದ ಸ್ವಲ್ಪ ದೂರದಲ್ಲಿ ಬ್ರಿಟಿಷರ ಸಬ್‌... ಟಾರ್ಪೆಡೋ ಬಿಟ್ಟು ಹೊಡೆಸಿ ಜರ್ಮನಿಯ ಒಂದು ಯುದ್ಧದ ... ಮುಳುಗಿಸಿತು. ಅದರೊಳಗಿದ್ದ 36 ಮಂದಿ ನೀರಿನ ಪಾಲಾದರು ... ಜರ್ಮನಿಗೆ ಸ್ವೀಡನ್ ಕಡೆ ಕೆಲವು ಸರಕುಗಳನ್ನು ಸಾಗಿಸಿಕೊಂಡು ... ಯುದ್ಧದ ಹಡಗಿಗೆ ಬೆಂಗಾವಲಾಗಿತ್ತು ಅದರೊಳಗಿದ್ದವರನ್ನು ಬ್ರಿಟಿಷ್ ... ಸಹಾಯದಿಂದ ಬದುಕಿಸಿದರು.

ಬಾಲ್ಟಿಕ್ ಕಡಲಿನಲ್ಲಿ ಜರ್ಮನಿಯ ಇನ್ನೊಂದು ಯುದ್ಧದ ಜಹಜು ... ಟಾರ್ಪೆಡೋ ಬಡಿದು ಮುಳುಗಿಹೋಯಿತು.

ಬ್ರಿಟಿಷ್ ಯುದ್ಧದ ಜಹಜುಗಳು ಜರ್ಮನಿಯ ಎರಡು ಸಬ್‌ಮೆರೀನು... ಜಿಬ್ರಾಲ್ಟರ್ ಜಲಸಂಧಿಯಲ್ಲಿ ಮುಳುಗಿಸಿರುತ್ತವೆ.

ಪಶ್ಚಿಮ ರಣರಂಗದಲ್ಲಿ.

ಫ್ರಾನ್ಸಿನಲ್ಲಿ ಬಹು ಘೋರವಾದ ಕದನಗಳು ನಡೆದವು. ಆದರೆ ಉಭಯ ಪಕ್ಷಗಳ ಠಾಣ್ಯಗಳಲ್ಲೂ ಅಷ್ಟೇನೂ ವಿಶೇಷ ಬದಲಾವಣೆಗಳಾಗಿಲ್ಲ. ... ಕಳೆದ ವಾರದಲ್ಲೂ ನೊವೆಂಬರ್ ತಿಂಗಳ ಮೊದಲನೇ ವಾರದಲ್ಲೂ ... ಸೈನಿಕರಲ್ಲಿ ಪ್ರತಿ ನಿತ್ಯವೂ 700 ಮಂದಿಯಂತೆ ಮಡಿದುಹೋದ ... ಗೊತ್ತಾಗಿದೆ. ರಷ್ಯಾದಲ್ಲೂ ಬಾಲ್ಕನ್ ಸಂಸ್ಥಾನಗಳಲ್ಲೂ ನಡೆಯುವ ... ಬಹು ವಿಶೇಷವಾಗಿದ್ದಾಗ್ಯೂ ಪಶ್ಚಿಮ ರಣರಂಗದಲ್ಲಿ ಜರ್ಮನಿ... ಜಯವನ್ನು ಪಡೆಯಬೇಕಾದದ್ದು ಬಹಳ ಅವಶ್ಯವೆಂದು ಜರ್ಮನಿ... ಯವರು ಕೋರಿದಂತೆ ತಿಳಿದುಬರುತ್ತದೆ.

ಪೂರ್ವ ರಣರಂಗದಲ್ಲಿ.

ರಷ್ಯದವರು ಜರ್ಮನಿ ಸೈನ್ಯಗಳನ್ನು ಸುತ್ತುಹಾಕಿಕೊಂಡಿರುವುದಲ್ಲದೆ ... ಮುಂದರಿದು ನುಗ್ಗಿ ಹೋಗದಂತೆ ತಡೆದು, ಕೆಲವು ಠಾಣ್ಯಗಳಲ್ಲಿ ಹಿಮ್ಮೆಟ್ಟಿಸುತ್ತಾರೆ. ಸ್ಟ್ರಿಪಾ ಎಂಬ ನದಿಯ ಸಮೀಪದಲ್ಲಿ ರಷ್ಯದವರು ... ಘೋರವಾದ ಕದನಗಳನ್ನು ಮಾಡಿ ಜರ್ಮನಿಯವರನ್ನು ... ಅವರಲ್ಲಿ 8,500 ಸೈನಿಕರನ್ನು ಸೆರೆ ಹಿಡಿದುಕೊಂಡರು. ರಷ್ಯದ ... ಯುದ್ಧಶಾಲಿಗಳು ಇತರ ಠಾಣ್ಯಗಳಲ್ಲೂ ಜಯಶೀಲರಾದರು. ... ಜರ್ಮನಿಯವರಿಗೂ ಆಸ್ಟ್ರಿಯಾದವರಿಗೂ ಅಪಾರ ನಷ್ಟಗಳು ... ದ್ದರಿಂದ ಅವರು ಈಗ ಇತರ ಕಡೆಗಳಿಂದ ಸೈನ್ಯಗಳನ್ನು ಕರೆಸಿ ... ಜಮಾವಣೆಮಾಡುತ್ತಿರುವಂತೆ ವರ್ತಮಾನವಿದೆ. ಈ ವಾರದ ... ಜರ್ಮನಿಯವರು ರೀಗಾ ಸುತ್ತಮುತ್ತಿನಲ್ಲಿ ಬಹಳವಾಗಿ ಸೋತು ... ದ್ದರಿಂದ ಅವರು ಅಲ್ಲಿಂದ ಹಿಂದಕ್ಕೆ ಹೊರಟು ಬರಬೇಕಾಯಿತೆಂಬ ... ಮತ್ತು ನೊವೆಂಬರ್ ತಾ. 4 ರಿಂದೀಚೆಗೆ ರಷ್ಯಾದವರು ... ಪ್ರದೇಶವನ್ನು ಮತ್ತೆ ಗೆದ್ದುಕೊಂಡಿರುವಂತೆ ತಿಳಿಯುತ್ತದೆ. ... ದಕ್ಷಿಣಕ್ಕೆ ಕಾಡಿನಿಂದಲೂ ಕೊಚ್ಚೆಯಿಂದಲೂ ತುಂಬಿರುವ ಪ್ರದೇಶ... ಡಿವಿನಾಸ್ ಎಂಬ ದಳಪತಿಯ ಸೈನ್ಯವು ಶತ್ರುಸೈನ್ಯದಲ್ಲಿ ಕಳೆದ ... ತಿಂಗಳೊಳಗೆ 1,86,000 ಮಂದಿಯನ್ನು ಸೆರೆ ಹಿಡಿದಿರುವುದು.

ಟರ್ಕಿಯಲ್ಲಿ.

... ಅರ್ಧದ್ವೀಪದಿಂದ ಕದನಗಳು ನಡೆದ ವರ್ತಮಾನಗಳೇನೂ ... ಬಂದಿರುವುದಿಲ್ಲ.

ಇಟಲಿ.

ಆಸ್ಟ್ರಿಯಾದವರು ಒಂದು ಪರ್ವತ ಶಿಖರ ಪ್ರದೇಶವನ್ನು ಕಾಪಾಡಿಕೊಂಡಿದ್ದರು. ಇಟಲಿಯವರು ಕೆಲವು ತಿಂಗಳಿಂದಲೂ ಅದನ್ನು ಗೆದ್ದುಕೊಳ್ಳ... ಸಾಹಸ ಕಾರ್ಯಗಳನ್ನು ನಡೆಸುತ್ತಾ ಬಂದು ಕಡೆಗೆ ಅದನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಈ ಪರ್ವತ ಶಿಖರವು 7,000 ಅಡಿ ಎತ್ತರವಾಗಿರುತ್ತದೆ. ಇಟಲಿಯವರು ಆ ಚೂಪಾದ ಶಿಖರದ ಉದ್ದಕ್ಕೂ ಪಕ್ಕಪಕ್ಕವಾದ ಕಂದಕಗಳನ್ನೂ ಕಡೆಗಳನ್ನೂ ಕಟ್ಟಿಕೊಂಡು ಶತ್ರುವಿನ ಗುಂಡುಗಳ ಮಳೆ ಸುರಿಯುತ್ತಿದ್ದರೂ ಕಡಕೊಂಡು ಮೇಲಕ್ಕೆ ಹತ್ತಿಹೋಗಬೇಕಾಯಿತು ಅವರು ಪರ್ವತವನ್ನು ಹತ್ತಿಹೋದಾಗ ಹಿಮ ಸಹಿತವಾದ ಬಿರುಗಾಳಿಯು ಬೀಸಿ ಕಣ್ಣು ಮುಚ್ಚಿಬಿಡುತ್ತಿತ್ತು. ಅದರ ಮಧ್ಯೆ, ಆಸ್ಟ್ರಿಯಾದವರು ಭಾರಿಭಾರಿ ಬಂಡೆ ಕಲ್ಲುಗಳನ್ನು ಇಟಲಿಯವರ ಮೇಲೆ ಉರುಳಿಸುತ್ತಿದ್ದರು. ಸಿಡಿಮದ್ದಿನ ಗುಂಡುಗಳನ್ನೂ ಹಾಕುತ್ತಿದ್ದರು. ಕಡೆಗೆ ಆಸ್ಟ್ರಿಯಾದವರು ಆ ಶಿಖರವನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಬಹಳ ಪ್ರಯಾಸಪಟ್ಟರು; ಅವರ ಸಾಹಸವೆಲ್ಲಾ ವ್ಯರ್ಥವಾಯಿತು. ಇದಲ್ಲದೆ ಇಟಲಿಯವರು ಅದೇ ಆಸುಪಾಸಿನಲ್ಲಿರುವ ಇನ್ನೊಂದು ಪರ್ವತವನ್ನು ಗೆದ್ದು ಸ್ವಾಧೀನ ಪಡಿಸಿಕೊಂಡಿದ್ದಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಸಲೋನಿಕಾ ತೀರಪಟ್ಟಣದಲ್ಲಿ ಜಹಜುಗಳಿಂದಿಳಿದು ವಾರ್ದಾರ್ ನದಿಯ ಕಣಿವೆ ಮಾರ್ಗವಾಗಿ ನುಗ್ಗಿ ಹೋಗುತ್ತಲೇ ಇವೆ ಕಳೆದ ವಾರದ ತನಕ ಬಲ್ಗೇರಿಯದವರ ಕಡೆ 95,000 ಸೈನ್ಯ ನಷ್ಟವಾಗಿದೆ ಎಂದು ತಿಳಿಸಲ್ಪಟ್ಟಿದೆ. ಈಗಲೂ ದಿನವೂ ಜಹಜುಗಳಿಂದ ಮಿತ್ರಮಂಡಲಿಯವರ ಸೈನ್ಯಗಳು ಇಳಿಯುತ್ತಲೇ ಇರುವವು. ಈ ಸೈನ್ಯಗಳು 3,00,000 ಕ್ಕಿಂತಲೂ ಹೆಚ್ಚಾಗಿರುವವೆಂದು ಜರ್ಮನಿಯವರು ಹೇಳುತ್ತಾರೆ ಜರ್ಮನಿಯವರು ಬೆಲ್‌ಗ್ರೇಡಿನಿಂದ ನಿಷ್‌ಗೂ [ಇದು ಸರ್ಬಿಯಾದಲ್ಲಿರುವ ನಗರ] ಅಲ್ಲಿಂದ ಮುಂದೆ ಸೋಫಿಯಾವಿಗೂ [ಇದು ಬಲ್ಗೇರಿಯಾದಲ್ಲಿದೆ] ಹೋಗಿ ಬರುವ ರೈಲ್ ಮಾರ್ಗವನ್ನು ಆಕ್ರಮಿಸಿಕೊಳ್ಳಬೇಕೆಂದು ಸಾಹಸ ಪಡುತ್ತಿದ್ದಾರೆ. ಇದುವರೆಗೆ ಇದು ಅವರಿಗೆ ಸಾಧ್ಯವಾಗಲಿಲ್ಲ. ಬಾಲ್ಕನ್ ಯುದ್ಧಭೂಮಿಯ ವಿದ್ಯಮಾನಗಳನ್ನು ಸಾಕ್ಷಾತ್ತಾಗಿ ತಿಳಿದು ಬರುವುದಕ್ಕೋಸ್ಕರ ಲಾರ್ಡ್ ಕಿಚ್ನರ್‌ಯವರು ಲಂಡನ್ ಪಟ್ಟಣದಿಂದ ಸಲೋನಿಕಾ ನಗರಕ್ಕೆ ಹೋಗಿದ್ದಾರೆ ಸರ್ಬಿಯಾದೊಳಗೆ ಜರ್ಮನಿಯ ಮತ್ತು ಆಸ್ಟ್ರಿಯಾದ ಸೈನ್ಯಗಳು ಅಪಾರ ಕಷ್ಟನಷ್ಟಗಳಿಗೆ ಗುರಿಯಾಗಿವೆ ಎಂದು ಜರ್ಮನಿಯಿಂದ ಸಮಾಚಾರ ಬಂದಿದೆ. ಮಳೆ ವಿಶೇಷವಾಗಿ ಬೀಳುತ್ತಿರುವುದರಿಂದ ಹವಾ ಏನೇನೂ ಅನುಕೂಲವಾಗಿಲ್ಲ. ಸರ್ಬಿಯಾದವರು ಅಂತರಂಗ ಸ್ಥಳಗಳಲ್ಲಿ ಅಡಗಿದ್ದು ಶತ್ರುವಿನ ಮೇಲೆ ಅಕಸ್ಮಾತ್ತಾಗಿ ಬಿದ್ದು ಅಪಾರ ನಷ್ಟವನ್ನುಂಟುಮಾಡುತ್ತಿದ್ದಾರೆ ಈಗ ಸರ್ಬಿಯಾದವರು ಒಂದು ಕಣಿವೆಯನ್ನು ಆಕ್ರಮಿಸಿಕೊಂಡಿರುವರು ಇದರಿಂದ ಬಲ್ಗೇರಿಯಾದವರಿಗೆ ಪಶ್ಚಿಮ ದಿಕ್ಕಿನಲ್ಲಿ ನುಗ್ಗಿ ಬರದಂತೆ ವಿಶೇಷ ಅಡ್ಡಿಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಮೊದಲು ಸರ್ಬಿಯಾದವರು ಈ ಕಣಿವೆಯಿಂದ ಓಡಿಹೋಗಿದ್ದರು. ಈಚೆಗೆ ಅವರು ಹೊಸ ಸೈನ್ಯಗಳನ್ನು ತರಿಸಿ ಆ ಕಣಿವೆಯನ್ನು ಮತ್ತೆ ಗೆದ್ದು ಆಕ್ರಮಿಸಿಕೊಂಡಿದ್ದಾರೆ ಬಲ್ಗೇರಿಯದವರು ಪೂರ್ವ ದಿಕ್ಕಿನಲ್ಲಿ ನುಗ್ಗಿ ಹೋಗುತ್ತಿದ್ದಾರೆ. ಇದುವರೆಗೆ ಅವರು ಗೆದ್ದುಕೊಂಡಿರುವ ಮೂರು ದೊಡ್ಡ ಸರ್ಬಿಯಾ ನಗರಗಳನ್ನು ಸರ್ಬಿಯಾದವರಿಗೆ ಒಪ್ಪಿಸಬೇಕಾಗವುದೆಂದು ಕಾಣುತ್ತದೆ

ಗ್ರೀಸಿನಲ್ಲಿ ದೊರೆಯು ಎಂ ವೆನಿಜೆಲಾಸ್ ಎಂಬಾತನನ್ನು ತನ್ನ ಮಂತ್ರಿಯಾಗಿ ನೇಮಿಸಿಬಿಟ್ಟರೆ ಗ್ರೀಸ್ ರಾಜ್ಯವು ಮಿತ್ರಮಂಡಲಿಯವರ ಕಡೆ ಸೇರುವುದನ್ನು ತಪ್ಪಿಸಲಾಗದೆಂದು ನಿಜವಾಗಿ ತಿಳಿದುಕೊಂಡು ನೇಮಿಸಲಿಲ್ಲ ಎಂ ಸ್ಕಾಲೂಡಿಸ್ ಎಂಬಾತನನ್ನೇ ಮಂತ್ರಿಯಾಗಿಯೂ ಪರರಾಜ್ಯಗಳ ಮಂತ್ರಿಯಾಗಿಯೂ ಗೊತ್ತುಮಾಡಿಕೊಂಡಿದ್ದಾರೆ ಈ ಮಂತ್ರಿಯು ಗ್ರೀಸ್ ರಾಜ್ಯವು ಯುದ್ಧದಲ್ಲಿ ಬೆರೆಯದೆ ಪ್ರತ್ಯೇಕವಾಗಿರಬೇಕೆಂಬುದಾಗಿಯೂ, ಆದರೂ ಮಿತ್ರಮಂಡಲಿಯವರ ಕೂಡ ಸ್ನೇಹವಾಗಿಯೇ ಇರಬೇಕೆಂಬುದಾಗಿಯೂ ಕುತೂಹಲಪೂರ್ವಕನಾಗಿದಾನೆ. ಗ್ರೀಸಿನ ಪಾರ್ಲಿಮೆಂಟು ಬರಖಾಸ್ತಾಯಿತು; ಬರುವ ತಿಂಗಳಲ್ಲಿ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾವಣೆ ಮಾಡುವರು

ಅಮೇರಿಕದಲ್ಲಿ ಜರ್ಮನಿಯವರ ಪ್ರಯತ್ನ.

ಅಮೇರಿಕ ರಾಜ್ಯವು ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ತಟಸ್ಥವಾಗಿದ್ದಾಗ್ಯೂ, ಅಲ್ಲಿರುವ ಜರ್ಮನಿ ಪ್ರಜೆಗಳು ಮಿತ್ರಮಂಡಲಿಯವರ ವ್ಯಾಪಾರ ಹಡಗುಗಳ ವಿಷಯದಲ್ಲೂ ಇತರ ಬಾಬುಗಳಲ್ಲೂ ದ್ರೋಹಕೃತ್ಯಗಳನ್ನು ನಡಿಸಿ ಜರ್ಮನಿ ರಾಜ್ಯಕ್ಕೆ ಸಹಾಯಮಾಡಬೇಕೆಂದು ಬಹಳ ಸಾಹಸಪಡುತ್ತಿದ್ದಾರೆ ಇದಕ್ಕೆ ಕೆಲವು ದೃಷ್ಟಾಂತಗಳು ಹೊರಪಟ್ಟಿರುವವು.

ರಿಮೊ ಲಾಗೋಸ್ ಎಂಬುವುದು ಬ್ರಿಟಿಷರ ಜಹಜು, ಅದು ಅಮೇರಿಕದಿಂದ ಸಕ್ಕರೆ ಭರ್ತಿಮಾಡಿಕೊಂಡು ಅಟ್ಲಾಂಟಿಕ್ ಸಾಗರವನ್ನು ದಾಟಿ ಇಂಗ್ಲೆಂಡಿಗೆ ಬರತಕ್ಕದ್ದು. ಈ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡದ್ದರಿಂದ ಅದನ್ನು ನೋವಸ್ಕೋಷಿಯಕ್ಕೆ ಸೇರಿದ ಹಲಿಫಾಕ್ಸ್ ತೀರಕ್ಕೆ ನಡಿಸಿಕೊಂಡು ಹೋಗಿ ನಿಲ್ಲಿಸಬೇಕಾಯಿತು ಅಲ್ಲಿ ಅದರೊಳಗೆಲ್ಲಾ ಶೋಧನೆಮಾಡಿದರು ಆ ಜಹಜಿನೊಳಗೆ ಕೆಲವು ಕಾಲದ ಮೇಲೆ ಪ್ರಯೋಜನವಾಗುವಹಾಗೆ ಅದು ಹತ್ತಿಕೊಳ್ಳುವಂತೆ ಬತ್ತಿಯನ್ನು ಇಟ್ಟಿದ್ದದ್ದು ಗೊತ್ತಾಯಿತು. ಆ ಬತ್ತಿಯು ಒಂದು ತುಂಡು ಸಿಕ್ಕಿತು, ಆ ಜಹಜು ಅಮೇರಿಕದಿಂದ ಹೊರಟಾಗಲೇ ಜರ್ಮನಿಯ ಅಥವಾ ಆಸ್ಟ್ರಿಯಾದ ಕೂಲಿಯವರು ಅದರಲ್ಲಿ ಇಟ್ಟಿರಬೇಕೆಂದು ಊಹಿಸಲ್ಪಟ್ಟಿದೆ.

ಫ್ರೆಂಚರ ಒಂದು ಜಹಜು ಅಮೇರಿಕದಿಂದ ಫ್ರಾನ್ಸಿಗೆ ಬರುತ್ತಿದ್ದಾಗ ಅದರಲ್ಲೂ ಮೇಲ್ಕಂಡಂತೆ ಬೆಂಕಿಹತ್ತಿಕೊಂಡದ್ದರಿಂದ ಆ ಜಹಜೂ ಹಾಲಿಫಾಕ್ಸ್ ತೀರದಲ್ಲಿ ಹೋಗಿ ನಿಂತಿತು.

ಚೀನಿಯಿಂದ ಎಣ್ಣೆ ಭರ್ತಿಯಾಗಿ ಅಮೇರಿಕಕ್ಕೆ ಹೋಗುತ್ತಿದ್ದ ಇಟಲಿಯ ಒಂದು ಹಡಗು ಒಳಗೆ ಬೆಂಕಿ ಹುಟ್ಟಿ ಒಡೆದು ನಾಶವಾಗಿಯಿತು. ಅದರಲ್ಲಿ ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರೆಂದು ಗೊತ್ತಾಗುವುದು

ಅಮೇರಿಕಾದಲ್ಲಿ 14,06,25,000 ರೂಪಾಯಿನ ಒಂದು ಫಂಡನ್ನು ಕೂಡಿಸಬೇಕೆಂದು ಕೆಲವರು ಪ್ರಯತ್ನಪಟ್ಟರು ಅದರ ಪೂರ್ವೋತ್ತರವನ್ನು ಕುರಿತು ಈಗ ತನಿಖೆಮಾಡುತ್ತಿದ್ದಾರೆ. ಈ ಫಂಡಿನಿಂದ ಕೆಲವು ಹಡಗುಗಳನ್ನು ಕೊಂಡುಕೊಂಡು ತಟಸ್ಥ ರಾಜ್ಯಗಳಿಗೆ ಸೇರಿದವುಗಳೆಂದು ಪ್ರಕಟಮಾಡಿ ಅವುಗಳಲ್ಲಿ ಸಾಮಾನುಗಳನ್ನು ಭರ್ತಿಮಾಡಿ ನಾರ್ವೆ ಸ್ವೀಡನ್‌ಗೆ (ಅಂತರಂಗದಲ್ಲಿ ಜರ್ಮನಿಗೆ) ರವಾನೆ ಮಾಡಬೇಕೆಂದೂ, ಸಿಡಿಮದ್ದಿನ ಗುಂಡುಗಳನ್ನು ತಯಾರು ಮಾಡುವುದಕ್ಕೆ ಅವಶ್ಯವಾದ ದ್ರಾವಕಾದಿಗಳನ್ನು ಕೊಂಡು ಗುಂಡುಗಳನ್ನು ತಯಾರುಮಾಡುವುದಕ್ಕೂ, ಪಶ್ಚಿಮ ಇಂಡೀಸ್ ದ್ವೀಪಗಳಲ್ಲಿ ಸಬ್ ಮೆರೀನ್ ಹಡಗುಗಳನ್ನು ಇಡುವುದಕ್ಕೂ ಹಣ ಕೊಡಬೇಕೆಂದು ಯೋಚಿಸಿದ್ದಂತೆ ವರ್ತಮಾನವಿದೆ

ಅಮೇರಿಕದಲ್ಲಿ ಮದ್ದುಗುಂಡುಗಳು ತಯಾರಾಗುವ ನಾಲ್ಕು ಭಾರೀ ಕಾರ್ಖಾನೆಗಳೊಳಗೆ 24 ಗಂಟೆ ಹೊತ್ತಿನಲ್ಲಿ ಬೆಂಕಿಗಳು ಹುಟ್ಟಿದವು. ಅಪಾರ ಸಾಮಾನುಗಳು ನಷ್ಟವಾಗಿರುತ್ತವೆ. ಅಲ್ಲಿ ಜರ್ಮನಿಯವರು ಗುಪ್ತರೀತಿಯಾಗಿ ಈ ರೀತಿ ಅನಾಹುತಗಳನ್ನು ಉಂಟುಮಾಡುತ್ತಿರುವಂತೆ ಪ್ರಕಟವಾಗಿದೆ.

ಒಳದೇಶದ ವೃತ್ತಾಂತಗಳು.

ಫ್ರೆಂಚ್ ರಾಕ್ಸ್ ಸಬ್ ತಾಲೂಕಿಗೆ ಸೇರಿದ ಹಾರುಹಳ್ಳಿಯಲ್ಲಿ ಕೆಲವು ದುಷ್ಟರು ಸಭ್ಯಪ್ರಜೆಗಳನ್ನು ಕಷ್ಟ ಸಂಕಟಗಳಿಗೆ ಗುರಿಪಡಿಸುತ್ತಿದ್ದಾರೆಂದು ತಿಳಿಯುವುದು ಸರ್ಕಾರದವರು ದರ್ಯಾಪ್ತುಮಾಡಿ ಅಂಥವರನ್ನು ಅಡಗಿಸಬೇಕಾಗಿದೆ.

ಯುದ್ಧ ಭೂಮಿಯಿಂದ ಗಾಯಪಟ್ಟು ವಾಪಸು ಬರುವಂಥಾ ಸೈನಿಕರನ್ನು ಅತ್ಯಂತ ಉತ್ಸಾಹಪೂರ್ವಕವಾಗಿ ಎದುರುಗೊಂಡು ಸತ್ಕರಿಸಬೇಕೆಂದು ಬೆಂಗಳೂರು, ಬೌರಿಂಗ್‌ಪೇಟೆ, ತುಮಕೂರು, ದಾವಣಗೆರೆ ಟವನುಗಳ ಪ್ರಜೆಗಳು ಏರ್ಪಾಡು ಮಾಡುತ್ತಿದ್ದಾರೆ.

ಕಳೆದ ಸೋಮವಾರ ಮಧ್ಯಾಹ್ನದ ರೈಲಿನಲ್ಲಿ ನಮ್ಮ ಸಂಸ್ಥಾನದಲ್ಲಿದ್ದ ನಾಲ್ಕು ಮಂದಿ ಶತ್ರುಪಕ್ಷದ ಪ್ರಜೆಗಳನ್ನೂ ಬೆಂಗಳೂರಿನಿಂದ ಪಹರೆ ಇಟ್ಟು ಅಹಮದ್‌ನಗರಕ್ಕೆ ರವಾನೆಮಾಡಿದರು. ಅವರ ಹೆಸರು ಉದ್ಯೋಗಗಳನ್ನು ಕಳೆದ ವಾರದ ಪತ್ರಿಕೆಯಲ್ಲಿ ತಿಳಿಸಿರುವೆವು.

ಕಳೆದ ಶನಿವಾರ ಸಾಯಂಕಾಲ ಬೊಂಬಾಯಿ ಗವರ್ನರವರು ಪತ್ನೀ ಪರಿವಾರ ಸಮೇತ ಸ್ಪೆಷಲ್ ರೈಲಿನಲ್ಲಿ ಶಿವಮೊಗ್ಗೆಗೆ ದಯಮಾಡಿ, ಅಲ್ಲಿಂದ ಮೋಟರುಗಳಲ್ಲಿ ಜಲಪಾತಕ್ಕೆ ಹೋಗಿ ನೋಡಿಕೊಂಡು ಮೊನ್ನೆ ಮಂಗಳವಾರ ಸಾಯಂಕಾಲ ಶಿವಮೊಗ್ಗೆಗೆ ವಾಪಸು ಬಂದು, ಮರ್ಮಗೋವೆಗೆ ತೆರಳಿದರು.

ಧಾರವಾಡ ಜಿಲ್ಲಾ ಬಂಕಾಪುರದ ತಾಲ್ಲೂಕು ಹೊಸೂರಿನಿಂದ ಸಣ್ಣ ಗುರುನಗೌಡರೆಂಬೊಬ್ಬ ಯೋಗಿಯು ನಂಜನಗೂಡಿಗೆ ಬಂದು ಯೋಗಾಭ್ಯಾಸದ ಸಾಧನ ಕಾರ್ಯಗಳನ್ನು ಮಾಡಿ ತೋರಿಸುತ್ತಿದ್ದಾರೆಂದೂ, ಸಚ್ಚರಿತ್ರರಾಗಿ ಪರಹಿತವನ್ನೇ ಮಾಡುತ್ತಿರಬೇಕೆಂದು ಜನಗಳಿಗೆ ಉಪದೇಶಮಾಡುತ್ತಿದ್ದಾರೆಂದೂ ಬಾತ್ಮಿದಾರರು ಬರೆದಿದ್ದಾರೆ.

ರಾಜಧಾನಿಯ ಇಪ್ಪಗೆಗಸಿದು ಪಾಠಶಾಲೆಯ 9 ವರುಷದ ಒಬ್ಬ ವಿದ್ಯಾರ್ಥಿಯು ಕಳೆದ ಶನಿವಾರ ರಾತ್ರಿ ಪ್ರೊ|| ಸಾರದರ ಆಟದ ಸಮಯದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬಹಳ ಚೆನ್ನಾಗಿ ಭಾಷಣಮಾಡಿ ಪ್ರೊ|| ಸಾರದರಿಂದ ಒಂದು ಗಡಿಯಾರವನ್ನು ಬಹುಮಾನ ಪಡೆದನು. ಆ ಸ್ಕೂಲಿನ ಹುಡುಗರು ಅದಕ್ಕೆ ತಕ್ಕ ಸರಪಣಿಯನ್ನು ಮಾಡಿಸಿಕೊಡುತ್ತಾರೆಂದು ಕೇಳುತ್ತೇವೆ

ಈ ಸಲ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಓಟುಕೊಟ್ಟು ನ್ಯಾಯವಿಧಾಯಕ ಸಭೆ ಮೆಂಬರಾಗಿ ಚುನಾವಣೆ ಮಾಡಿದ ಮ|| ಎಂ. ಬಸವಯ್ಯನವರನ್ನು ರಾಜಧಾನಿಯ ಲಿಂಗಾಯಿತ ಪ್ರಜೆಗಳು ಕರಸಿಕೊಂಡು ಇಲ್ಲಿನ ಪ್ರದರ್ಶನ ಶಾಲಾ ಕಟ್ಟಡದಲ್ಲಿ ಮೊನ್ನೆ ಸೋಮವಾರ ಒಂದು ಸಂತೋಷ ಕೂಟವನ್ನು ನಡಿಸಿದರು. ಸಂಗೀತವೂ ಫಲಾಹಾರಗಳೂ ಬೆಳೆದ ಮೇಲೆ ಭಾಷಣಗಳು ನಡೆದವು

ವಿ|| ಕ್ಲಿಂಟನ್ ಆಂಡ್ರೂಸ್ ಎಂಬವರು ಮ|| ಸುಬ್ರಹ್ಮಣ್ಯರಾಜೆ ಅರಸಿನವರ ಬಂದೂಕನ್ನು ಪರಭಾರೆಮಾಡಿ ಸೀಮೆಗೆ ಪ್ರಯಾಣಮಾಡುತ್ತಿದ್ದರೆಂದು ಪೊಲೀಸಿನವರು ಹಿಡಿದು ಬೆಂಗಳೂರಿಗೆ ತಂದು ಅವರ ಮೇಲೆ ಮೊಕದ್ದಮೆ ಮಾಡಿದ್ದಷ್ಟೆ. ಈಚೆಗೆ ಈ ಮೊಕದ್ದಮೆ ರುಜುವಾಗಲಿಲ್ಲವೆಂದು ಮ್ಯಾಜಿಸ್ಟ್ರೇಟರು ಅವರನ್ನು ಬಿಡುಗಡೆ ಮಾಡಿದರೆಂದೂ, ಅವರು ಸೀಮೆಗೆ ಪ್ರಯಾಣಮಾಡಿದರೆಂದೂ ತಿಳಿಯುತ್ತದೆ.

ಯುದ್ಧಭೂಮಿಯಲ್ಲಿರುವ ಮೈಸೂರು ಸೈನಿಕರಿಗೆಲ್ಲಾ ನಮ್ಮ ಮಹಾರಾಜರವರು ಶುಭಸಾಧನವನ್ನು ಬರೆದು ಅವರು ಪರಾಕ್ರಮದಿಂದ ಯುದ್ಧಮಾಡಿ ಈ ಸಂಸ್ಥಾನಕ್ಕೆ ಕೀರ್ತಿ ತರಬೇಕೆಂದು ಆಜ್ಞೆಯನ್ನು ದಯಪಾಲಿಸುವವರಾಗಿದ್ದಾರೆ. ಈ ಆಜ್ಞೆಯುಳ್ಳ ಪತ್ರಿಕೆಯಲ್ಲಿ ನಮ್ಮ ಮಹಾರಾಜರವರ ಮತ್ತು ಯುವರಾಜರವರ ಛಾಯಾಚಿತ್ರಗಳು ಅಚ್ಚಾಗಿ ಕೆಳಗೆ ನಮ್ಮ ಮಹಾರಾಜರವರು ತಮ್ಮ ದಸ್ಕತ್ತನ್ನು ಹಾಕುವರೆಂದು ತಿಳಿಯುತ್ತದೆ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆಯ ಡೈರೆಕ್ಟರು ಮ|| ಎಚ್. ವಿ ಕೃಷ್ಣಯ್ಯನವರು ತಿಳಿಸುವುದೇನೆಂದರೆ—ರಾಗಿ ಮತ್ತು ಕಡ್ಲೆಕಾಯಿ ಬೆಳೆ ವಿಷಯವಾಗಿ ಕೊಡುವ ವ್ಯವಸಾಯದ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳದ ಫಾರಂನಲ್ಲಿ ಇದೇ ನವಂಬರು 22, 23 ಮತ್ತು 24ನೇ ತಾರೀಖುಗಳಲ್ಲಿ ನಡೆಯುವವು. ಇದನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳದ ಫಾರಂನಲ್ಲಿ ಇರಲು ಸ್ಥಳವೂ ಮತ್ತು ಅವರಿಗೆ ಹಗಲಿಕ್ಕೆ ರೈಲು ಛಾರ್ಜು ಮತ್ತು ಊಟದ ಖರ್ಚಿನಲ್ಲಿ ಮೂರನೇ ಒಂದು ಭಾಗವೂ ಸರ್ಕಾರದಿಂದ ಮುಫತ್ತಾಗಿ ಕೊಡಲಾಗುತ್ತೆ. ಬರಲಪೇಕ್ಷೆಯುಳ್ಳ ಜನಗಳು ಮುಂಚಿತವಾಗಿ ತಿಳಿಸಬೇಕು.

ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ದಿವಾನ್ ಬಹದೂರ್ ಮ|| ಸಿ. ಶ್ರೀಕಂಠೇಶ್ವರ ಅಯ್ಯನವರು ಸಂಸ್ಕೃತ ವಿದ್ಯಾಪ್ರೋತ್ಸಾಹಕ ಫಂಡಿಗೆ ಅವರ ತಂದೆ ಲೇಟ್ ಮ|| ಸಿ ಸುಬ್ಬರಾಯರು ಕೊಟ್ಟಿದ್ದ ಹಣ ಸಾಲದೆಂದು ಸ್ವಂತದ 5,400 ರೂಪಾಯಿ ಕೊಟ್ಟು ಒಟ್ಟು 20,000 ರೂಪಾಯಿ ಫಂಡು ಮಾಡಿ, ಅದರ ಉತ್ಪತ್ತಿಯಿಂದ ಇಂಗ್ಲಿಷ್ ಕಲಿತವರು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಳ್ಳಬೇಕೆಂದು ಅಪೇಕ್ಷಿಸಿದರೆ ಅಂಥವರಿಗೆ 25-30 ರೂಪಾಯಿನಂತೆ ಮೂರು ವಿದ್ಯಾರ್ಥಿ ವೇತನಗಳನ್ನು ಕೊಡುವಂತೆ ಏರ್ಪಾಡು ಮಾಡಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ. ಈ ಫಂಡಿನ ಹಣಕ್ಕೆ ನಮ್ಮ ಗವರ್ನ್‌ಮೆಂಟಿನವರು ಶೇಕಡಾ ೫ ರಂತೆ ಬಡ್ಡಿ ಕೊಡುವುದಾಗಿ ಸ್ಯಾಂಕ್ಷನ್ ಮಾಡಿದ್ದಾರೆ

ನಂಜನಗೂಡು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮ|| ಕೆ ವೆಂಕಟಸಾಮಯ್ಯನವರು ಆ ಊರನ್ನು ನಿರ್ಮಲವಾಗಿಯೂ, ಅಲಂಕಾರವಾಗಿಯೂ, ಆರೋಗ್ಯಜನಕವಾಗಿಯೂ ಮಾಡಬೇಕೆಂದು ಸಾಹಸಪಡುತ್ತಿದ್ದಾರೆ. ನಮ್ಮ ಸರ್ಕಾರದವರು ಅವರ ಸಾಹಸ ಪ್ರಯತ್ನಗಳನ್ನು ಮೆಚ್ಚಿ, ಆ ಟವನಿನ ಅಭಿವೃದ್ಧಿ ಕಾರ್ಯಗಳಿಗೋಸ್ಕರ 50,000 ರೂಪಾಯಿ ದಯಪಾಲಿಸಿರುವರು. ಬಡಾವಣೆ, ಒಳ್ಳೇ ಕುಡಿಯುವ ನೀರು, ವಿದ್ಯುಚ್ಛಕ್ತಿಯ ದೀಪ, ರೋಡುಗಳು, ಕನ್ಸರ್ವೆನ್ಸಿ ಗಲ್ಲಿಗಳು, ಈ ಮೊದಲಾದವುಗಳನ್ನು ಮಾಡಿಸುವುದರಲ್ಲಿ ವೈಸ್ ಪ್ರೆಸಿಡೆಂಟರು ಉದ್ಯುಕ್ತರಾಗಿ ಪ್ರಜೆಗಳ ಸಂಪೂರ್ಣ ಸಹಾಯವನ್ನು ಕೋರುತ್ತಾರೆ ಅದಲ್ಲದೆ ಅವರು ಮುಂದಿನ ವರುಷ ಒಂದು ವಾರದಲ್ಲಿ ಆ ಊರನ್ನೆಲ್ಲಾ ಶುಚಿಮಾಡಿಸಬೇಕೆಂದು ಯೋಚಿಸಿರುವರು. ಇಂಥಾ ಸರ್ವ ಪ್ರಜಾಕ್ಷೇಮಕರವಾದ ಕಾರ್ಯಗಳಿಗೆ ಪ್ರಜೆಗಳು ಸಹಾಯಕರಾಗಿ ನಿಂತು ವೈಸ್ ಪ್ರೆಸಿಡೆಂಟರ ಸ್ತೋತ್ರಾರ್ಹವಾದ ಉದ್ದೇಶವನ್ನು ಸಾರ್ಥಕ ಪಡಿಸುತ್ತಾರೆಂದು ಹಾರೈಸುತ್ತೇವೆ.

ಕಳೆದ ಭಾನುವಾರ ಶ್ರೀರಂಗಪಟ್ಟಣದ ಪ್ರಜೆಗಳು ಮೂರನೆ ಆವೃತ್ತಿ ತಮ್ಮ ಊರಿನ ಪ್ಲೀಡರ್ ಮ|| ಬಿ ನರಸಿಂಗರಾಯರನ್ನು ಪ್ರಜಾಪ್ರತಿನಿಧಿ ಸಭಾ ಮೆಂಬರುಗಳು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ಓಟುಕೊಟ್ಟು ಚುನಾಯಿಸಿರುವ ಸಂತೋಷವನ್ನು ಸೂಚಿಸುವುದಕ್ಕಾಗಿ ಒಂದು ಸಂತೋಷಕೂಟವನ್ನು ನಡಿಸಿದರು. ಶ್ರೀರಂಗಪಟ್ಟಣ, ಗಂಜಾಂ, ಫ್ರೆಂಚ್ ರಾಕ್ಸ್, ಮೈಸೂರು, ಬೆಂಗಳೂರು ಮೊದಲಾದ ಕಡೆಗಳ ಪ್ರಜಾಮುಖಂಡರೂ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಈ ಕೂಟದಲ್ಲಿ ಹಾಜರಾಗಿದ್ದರು. "ಗಾನವಿಶಾರದ" ಮ|| ಬಿ. ಕೃಷ್ಣಪ್ಪನವರ ಸಂಗೀತ ಪರಮಮನರಂಜಕವಾದ ಹಾಡುಗಾರಿಕೆಯಾದ ಬಳಿಕ ಎಲ್ಲರೂ ಫಲಾಹಾರಗಳನ್ನು ಸೇವಿಸಿ ಪುನಃ ಸಭೆ ಸೇರಿದರು. ಪ್ರಜೆಗಳ ಪರವಾಗಿ ಪ್ಲೀಡರ್ ಮ|| ಪಿ ರಾಮರಾಯರೂ, ಮ|| ಎಚ್. ಕೃಷ್ಣಶಾಸ್ತ್ರಿಗಳೂ ಅಲ್ಲದೆ ಮ|| ಗಳಾದ ಅಂಬಲೆ ಅಣ್ಣಯ್ಯಪಂಡಿತರು, ಎಂ. ವೆಂಕಟಕೃಷ್ಣಯ್ಯನವರು ಮತ್ತು ರಾವ್ ಬಹದೂರ್ ಎಂ. ಸಿ. ರಂಗಯ್ಯಂಗಾರ್ರು ಮ|| ನರಸಿಂಗರಾಯರ ಗುಣಕಥನವನ್ನುಮಾಡಿ, ಅವರು ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಪಕ್ಷದ ಮೆಂಬರಾಗಿ ನಿಂತು ಬಹು ಶ್ರೇಷ್ಠವಾದ ಕಾರ್ಯಗಳನ್ನು ಮಾಡುತ್ತಿದ್ದಾರೆಂದೂ, ಮುಂದೆಯೂ ಅದೇ ರೀತಿ ಕೆಲಸ ಮಾಡಲು ಅವರು ಸಮರ್ಥರಾಗಿದ್ದಾರೆಂದು ಮುಂತಾಗಿ ಭಾಷಣಗಳನ್ನು ಮಾಡಿದರು. ಮ|| ಬಿ. ನರಸಿಂಗರಾಯರು ಸಮಯೋಚಿತವಾದ ಪ್ರತ್ಯುತ್ತರವನ್ನು ಹೇಳಿ, ತಮ್ಮನ್ನು ಚುನಾವಣೆಮಾಡಿದ ಸಮಸ್ತ ಪ್ರಜಾಪ್ರತಿನಿಧಿಗಳಿಗೂ, ಶ್ರೀಮನ್ ಮಹಾರಾಜರವರ ಸರ್ಕಾರಕ್ಕೂ, ಆ ದಿನ ಆ ಸಂತೋಷ ಕೂಟವನ್ನು ನಡಿಸಿದ ಸಮಸ್ತ ಪ್ರಜೆಗಳಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು.

ಮೈಸೂರು ಸೆಂಟ್ ಜಾರ್ಜ್ ಆಂಬ್ಯುಲೆನ್ಸ್ ಸಂಘ.

ಹದಿನೈದನೇ ಚಂದಾ ಪಟ್ಟಿ.

ಮೇಲ್ಕಂಡ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರೆಟರಿಯವರಾದ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಯುದ್ಧದ ರಿಲೀಫ್ ಫಂಡಿಗೆ ಕೆಳಗೆ ವಿವರಿಸಿರುವ ಚಂದಾ ಹಣಗಳು ಕಳುಹಿಸುವುದನ್ನು ವಂದನಾ ಪೂರ್ವಕ ವಾಗಿ ಸ್ವೀಕರಿಸಿರುತ್ತಾರೆ:—

ಮೈಸೂರು ಸಂಸ್ಥಾನದ ಪೊಲೀಸ್ ಸರ್ವೀಸ್ 2 ನೇ ಪಟ್ಟಿ, ರೂ. 200; ಮಿಸೆಸ್ ಮೆಗ್ರಾಥ್, ಮೈಸೂರು, ರೂ. 50; ಚಿಕ್ಕಮಗಳೂರು ಮ|| ಅಣ್ಣಾವು ಪಿಳ್ಳೆಯವರ ಮೂಲಕ ರೂ. 25-0-0; ಮಿಸೆಸ್ ಟಿ. ಡೆನ್ಹಮ್, ಮೈಸೂರು, ರೂ. 20; ಎಫ್. ಎಫ್., ಅಕ್ಟೋಬರ್ ಮತ್ತು ನವಂಬರ್, ರೂ. 30; ಮೈಸೂರು ಮಿಸೆಸ್ ಎಚ್. ಡಿ. ರೈಸ್, ಮೈಸೂರು ಮಿಸ್ ಸಿ. ಇ. ಪಾರ್ಸನ್ಸ್, ತಲಾ ರೂ. 15; ಎಕನಾಮಿಕ್ ಬಾಟನಿಸ್ಟ್, 2 ನೇ ಪಟ್ಟಿ, ರೂ. 12-10-0; ಮೈಸೂರು ಡಾಕ್ಟರ್ ಇ. ಟಿ. ವಾಟ್ಸ್, ಮೈಸೂರು ರೆವ|| ಜಿ. ಡಬ್ಲ್ಯು. ಸಾಡೆ, ತಲಾ ರೂ. 10; ಸಂಪತ್ತಹಳ್ಳಿ ಪ್ರಜೆಗಳು ರೂ. 3-15-0; ಹಿಂದೆ ವಸೂಲಾಗಿರುವುದು ರೂ. 10,535-6-3. ಜುಮ್ಲಾ ರೂ. 10,927-5-3 ಇದಲ್ಲದೆ ಮೈಸೂರು ಮಹಾರಾಜರವರ ಬಾಡಿಗಾರ್ಡ್ ಇಲಾಖೆಯವರು 35,000 ಬೀಡಿಗಳನ್ನೂ, 14,600 ಸಿಗರೆಟ್ಟುಗಳನ್ನೂ ಎರಡು ಪೆಟ್ಟಿಗೆಗಳಲ್ಲಿ ಕಳುಹಿಸಿರುತ್ತಾರೆ. ಇದೂ ಸೇರಿ 61 ಪೆಟ್ಟಿಗೆಗಳ ಪದಾರ್ಥಗಳು ಕಳುಹಿಸಿರುವವು. ಇವನ್ನೆಲ್ಲಾ ಬೊಂಬಾಯಿನ ಡಿಪೋವಿಗೆ ರವಾನೆಮಾಡಲಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಸಾಗರದ ಸಬ್ ಡಿವಿಜನ್ ಆಫೀಸರ್ ಮಿ|| ಮಹಮದ್ ಜಹೀರುದ್ದೀನ್ ಮೆಕ್ಕೆಯವರಿಗೆ 2 ನೇ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳ ತೀರ್ಮಾನಗಳ ಮೇಲೆ ಹುಟ್ಟುವ ಅಪೀಲುಗಳನ್ನು ಹಿಡಿದು ವ್ಯವಸ್ಥೆ ಮಾಡತಕ್ಕ ಅಧಿಕಾರ ವಹಿಸಿದೆ.

ಸೋಸಲೆಯ ವ್ಯಾಸರಾಯ ಸ್ವಾಮಿ ಮಠದ ಶ್ರೀಮತು ವಿದ್ಯಾ ಶ್ರೀವಾರಿಧಿ ತೀರ್ಥ ಶ್ರೀಪಾದಂಗಳವರು ಸಾಕ್ಷಿಕ್ಕಾಗಿ ಸಿವಿಲ್ ಕೋರ್ಟುಗಳಿಗೆ ಹಾಜರಾಗಬೇಕಾದ ನಿರ್ಬಂಧವನ್ನು ತಪ್ಪಿಸಿದೆ.

ಶಿವಮೊಗ್ಗಾ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಎನ್. ಅಬ್ದುಲ್ ವಜೀದ್ ರವರಿಗೆ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು. ಟ್ರೆಜರಿ ಅ|| ಕಮಿಷನರ್ ಮ|| ಸಿ. ರಾಜಗೋಪಾಲಾಚಾರ್ರು ಅವರ ಕೆಲಸದ ಛಾರ್ಜನ್ನು ವಹಿಸಿದ್ದರು.

ಅ|| ಸರ್ಜನ್ ಮ|| ಎಸ್. ಕೆ. ಹನುಮಂತರಾಯರಿಗೆ ಅಕ್ಟೋಬರ್ ತಾ. 11 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮ|| ಟಿ. ವೆಂಕಟರಾಮಯ್ಯನವರಿಗೆ ಅವರು ಶಿವಮೊಗ್ಗಾ ಸಬ್ ಡಿವಿಜನ್ ಅ|| ಕಮಿಷನರಾಗಿ ಬದಲಿ ನೋಡುವ ಕಾಲದಲ್ಲಿ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಚೀಫ್ ಕೋರ್ಟ್ ಹೆಡ್ ಕ್ಲಾರ್ಕ್ ಮ|| ಎಂ. ಎಲ್. ರಾಮಗೌಡರವರು ಜೂಲೈ ತಾ. 1 ರಿಂದ ಮ|| ಎಸ್ ಎ. ವೈದ್ಯೇಶ್ವರ ಅಯ್ಯರವರು ಬೇರೆ ಕೆಲಸದ ಮೇಲಿರುವಾಗ್ಗೆ ಚೀಫ್ ಕೋರ್ಟ್ ಡೆಪ್ಯುಟಿ ರೆಜಿಸ್ಟ್ರಾರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ|| ಕೆ. ಮಲ್ಲಾರಿರಾಯರನ್ನು ಜೂಲೈ ತಾ. 1 ರಿಂದ ಅ|| ಕಮಿಷನರ ದರ್ಜೆಯಲ್ಲಿ 1 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಚನ್ನಗಿರಿ ಅಮಲ್ದಾರ್ ಮ|| ಕೆ. ನಾರಾಯಣ ಅಯ್ಯರವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹನ್ನೆರಡು ದಿನ ಜಾಸ್ತಿ ಮಾಡಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ:— ಮ|| ಟಿ. ವೆಂಕಟರಾಮಯ್ಯನವರು ಕೃಷ್ಣರಾಜಪೇಟೆಯಿಂದ ಬೇಗೂರಿಗೆ, ಮ|| ಎಂ. ಎಸ್. ಹಯಗ್ರೀವರಾಯರು ಕೃಷ್ಣರಾಜಪೇಟೆಗೆ, ಮ|| ಸಿ. ವಿ. ಕೃಷ್ಣಸ್ವಾಮಿರಾಯರು ಗೋಣಿಬೀಡನೂರಿನಿಂದ ಶಾನಭಾಗನಹಳ್ಳಿಗೆ, ಮಿ|| ಎ. ಜೆ. ರಹೀಮ್ ರವರು ಶಾನಭಾಗನಹಳ್ಳಿಯಿಂದ ಅರಸೀಕೆರೆಗೆ, ಮ|| ಜಿ. ಎಂ. ಮೈಲಾರಯ್ಯನವರು ಅರಸೀಕೆರೆಯಿಂದ ಗೋಣಿಬೀಡನೂರಿಗೆ, ಮ|| ವಿ. ಎಸ್. ರಾಜಗೋಪಾಲಾಚಾರ್ರು ಹಾಸನದಿಂದ ಚನ್ನಪಟ್ಟಣಕ್ಕೆ, ಮ|| ಸಿ ಆರ್. ನಾರಾಯಣಸ್ವಾಮಿ ಮೊದಲಿಯಾರ್ರು ಚನ್ನಪಟ್ಟಣದಿಂದ ಹಾಸನಕ್ಕೆ, ಮಿ|| ಅಬ್ದುಲ್ ಹಕೀಮ್ ರವರು ಬೇಲೂರಿನಿಂದ ಹೊಳೆನರಸೀಪುರಕ್ಕೆ, ಮ|| ಜಿ ವೆಂಕಟರಾಯರು ಹೊಳೆನರಸೀಪುರದಿಂದ ಕಡೂರಿಗೆ, ಮ|| ಎನ್. ಶ್ರೀನಿವಾಸಯ್ಯಂಗಾರ್ರು ಬೇಲೂರಿಗೆ.

ಮೈಸೂರು ಮಹಾರಾಣಿಯವರ ಕಾಲೇಜ್ ಅ|| ಸೂಪರಿಂಟೆಂಡೆಂಟ್ ಶ್ರೀ ಕೆ. ಡಿ ರುಕ್ಮಿಣಿಯಮ್ಮನವರಿಗೆ ಸೆಪ್ಟಂಬರ್ ತಾ. 9 ರಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಆ ಕಾಲದಲ್ಲಿ ಶ್ರೀ ಶ್ರೀರಂಗಮ್ಮನವರು ಅವರ ಕೆಲಸದ ಛಾರ್ಜನ್ನು ವಹಿಸಿದ್ದರು.

ಹೆಡ್ ಮಾಸ್ಟರ್ ಮ|| ಟಿ. ರಾಮಯ್ಯನವರಿಗೆ ಕೊಟ್ಟಿದ್ದ ಎರಡು ತಿಂಗಳು ಎಂಟು ದಿನಗಳ ರಜಾ ಜೊತೆಗೆ ಅಕ್ಟೋಬರ್ ತಾ 8 ರಿಂದ ಮೂರು ತಿಂಗಳು ಇಪ್ಪತ್ತಮೂರು ದಿನಗಳ ರಜಾ ಕೊಟ್ಟಿದೆ

ಶಿವಮೊಗ್ಗಾ ರೈಲ್ವೆ ಸರ್ವೆ ಅ|| ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಟಿ. ಕೆ. ಅರುಣಾಚಲ ಅಯ್ಯರವರಿಗೆ ಕೊಟ್ಟಿದ್ದ ಒಂದು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೆರಡು ದಿನಗಳಿಗೆ ಜಾಸ್ತಿಮಾಡಿದೆ

ರೈಲ್ವೆ ಕಾಮಗಾರಿ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ:—ಬೌರಿಂಗ್‌ಪೇಟೆ ಕೋಲಾರ್ ರೈಲ್ವೆ ಸೂಪರಿಂಟೆಂಡೆಂಟ್ ಮಿ|| ಎ. ಜೆ. ಆಮಂಡ್‌ರವರನ್ನು ಬೆಂಗಳೂರಿಗೆ ವರ್ಕ್‌ಷಾಪ್ ಸೂಪರಿಂಟೆಂಡೆಂಟರಾಗಿ ವರ್ಗಮಾಡಿದೆ; ಮ|| ಕೆ ಶ್ರೀನಿವಾಸಯ್ಯಂಗಾರ್ರು ಲೋಕೋ ಇಲಾಖಾ ಛಾರ್ಜನ್ನು ವಹಿಸಿಕೊಂಡಿದ್ದಾರೆ

ರೈತರಿಗೆ ಬೇಕಾದ ಕೆಲವು ಸಕಾಲ ಸಲಹೆಗಳು: ಬೀಜದ ರಾಗಿ ಚುನಾವಣೆ.

ವ್ಯವಸಾಯದ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಮ|| ಎ. ಕೆ. ಯಜ್ಞನಾರಾಯಣಯ್ಯರವರಿಂದ ಬರೆಯಲ್ಪಟ್ಟದ್ದು.

ಈ ವರುಷದ ರಾಗಿ ಫಸಲು ಆಗಲೆ ಬಲಿಯುತ್ತಾ ಬಂದಿರುತ್ತೆ. ಇನ್ನು ಕೆಲವು ದಿವಸಗಳಲ್ಲಿಯೇ ಕಟಾವಿಗೆ ಸಿದ್ಧವಾಗುತ್ತಷ್ಟೆ. ಆದ್ದರಿಂದ ಕಟಾವಿಗೆ ಷುರುವಾಗುವದಕ್ಕೆ ಮುಂಚೆ ಬೀಜದ ಕಾಳುಗಳನ್ನು ಹೇಗೆ ಚುನಾಯಿಸಿದ ಪಕ್ಷದಲ್ಲಿ ಖಂಡಿತವಾಗಿ ಇನ್ನೂ ಹೆಚ್ಚು ಬೆಳೆ ಬರುತ್ತೆಂದು ಮಾಹಿತಿಯಿಂದ ಹೇಳಬಹುದಾದ್ದರಿಂದ ಸದರಿ ಕ್ರಮವನ್ನು ಈ ಕೆಳಗೆ ವಿವರಿಸಲು ಅಪೇಕ್ಷಿಸುತ್ತೇನೆ

ದನಗಳಲ್ಲಿಯೇ ಆಗಲಿ, ಇತರ ಯಾವ ಪ್ರಾಣಿಯಲ್ಲಿಯೇ ಆಗಲಿ, ಯಾವ ಬೆಳೆಗೆ ಆಗಲಿ ಒಳ್ಳೇ ಫಲ ಬರಬೇಕಾದರೆ ಶ್ರೇಷ್ಠವಾದ ಬೀಜವೇ ಪ್ರಧಾನವಾದದ್ದೆಂದು ಸರ್ವರಿಗೂ ತಿಳಿದೇ ಇರುತ್ತೆ. ಆದ್ದರಿಂದಲೇ ಅನೇಕ ರೈತರು ಬೀಜದ ಕಾಳುಗಳನ್ನೂ, ಬೀಜದ ಹೋರಿ ಟಗರು ಮೊದಲಾದವುಗಳನ್ನೂ ಕೇವಲ ಮುತುವರ್ಜಿಯಿಂದ ಚುನಾಯಿಸುತ್ತಾರೆ. ರಾಗಿ ಬೆಳೆ ವಿಷಯದಲ್ಲಂತೂ ಈ ಚುನಾವಣೆಯು ಬಹಳ ಸುಲಭವಾದದ್ದು. ಮತ್ತು ಇದರ ಫಲಿತಾಂಶವು ಖಂಡಿತವಾಗಿಯೂ ವಿಶೇಷ ಲಾಭಕರವಾದದ್ದು. ಇಷ್ಟು ಸುಲಭವಾದ್ದರಿಂದ ಪ್ರತಿ ಒಬ್ಬ ರೈತನೂ ರಾಗಿಯು ಇನ್ನೂ ತೆನೆಯಲ್ಲಿರುವಾಗಲೇ ಬಹಳ ಶ್ರದ್ಧೆಯಿಂದ ಈ ಕೆಳಗೆ ವಿವರಿಸುವ ವಿಷಯಗಳಿಗೆ ಗಮನ ಕೊಡಬೇಕು.

ತೆನೆ ಬಿಡದಿರುವ ರಾಗಿ ಹೊಲಕ್ಕೆ ನಾವು ಹೋಗಿ ನೋಡಿದ್ದೇ ಆದರೆ ಆ ಬೆಳೆಯಲ್ಲಿ ಒಂದೊಂದು ಗಿಡಕ್ಕೂ ಇರುವ ಸ್ವಾಭಾವಿಕವಾದ ವ್ಯತ್ಯಾಸಗಳನ್ನು ಕಾಣಬಹುದು. ಈ ವ್ಯತ್ಯಾಸವು ಸಾಧಾರಣವಾಗಿ ರಾಗಿ ತೆನೆಗಳ ಆಕಾರ ಮತ್ತು ಅವುಗಳ ಗಾತ್ರ ಇವುಗಳಲ್ಲಿ ಬಹಳ ಹೆಚ್ಚಾಗಿ ಕಾಣಬರುತ್ತೆ ಹ್ಯಾಗೆಂದರೆ ಕೆಲವು ತೆನೆಗಳು ಉದ್ದಕ್ಕೂ, ಕೆಲವು ಗಿಡ್ಡಕ್ಕೂ, ಕೆಲವು ಸಣ್ಣಗೆ ಬಳಕುತ್ತಲೂ, ಕೆಲವು ದಪ್ಪವಾಗಿ ಚೆನ್ನಾಗಿ ತುಂಬಿಕೊಂಡೂ, ಕೆಲವುಗಳಲ್ಲಿ ಇನಕುಗಳು ಒತ್ತಾಗಿ ದುಂಡಗೂ, ಕೆಲವುಗಳಲ್ಲಿ ಇನಕುಗಳೆಲ್ಲವೂ ದೂರ ದೂರವಾಗಿ ಹರಡಿಕೊಂಡೂ ಇರುತ್ತೆ. ಇಷ್ಟೇ ಅಲ್ಲ ತೆನೆಗಳ ಬಣ್ಣದಲ್ಲೂ ವ್ಯತ್ಯಾಸವಿರುತ್ತೆ. ಕೆಲವು ಹಸುರಾಗಿಯೂ, ಕೆಲವು ಕಪ್ಪು ಮಿಶ್ರವಾದ ಕೆಂಪಗೂ, ಕೆಲವು ಕೆಂಪಗೂ ಇರುತ್ತವೆ. ಇದೂ ಅಲ್ಲದೆ ತೆನೆಗಳ ಇನಕುಗಳಲ್ಲಿಯೂ ಭೇದವಿರುತ್ತೆ. ಕೆಲವು ತೆನೆಗಳಲ್ಲಿ ಕೊಂಚವೇ ಇನಕುಗಳೂ, ಮತ್ತೆ ಕೆಲವು ತೆನೆಗಳಲ್ಲಿ ವಿಶೇಷ ಇನಕುಗಳೂ ಇರುವದು ಉಂಟು. ಉತ್ಕೃಷ್ಟವಾದ ತೆನೆಗಳಲ್ಲಿ 10 11 ಇನಕುಗಳು ಇರುತ್ತವೆ. ಕನಿಷ್ಟವಾದ್ದರಲ್ಲಿ 2-3 ಇನಕುಗಳು ಮಾತ್ರ ಇರುತ್ತವೆ. ಆದ್ದರಿಂದ ತೆನೆಗಳ ಇನಕುಗಳ ವ್ಯತ್ಯಾಸದ ವಿಷಯವಾಗಿ ತಿಳಿಸುವ ಈ ಕೆಳಗೆ ಸೂಚಿಸುವ ಸಣ್ಣ ವಿಷಯಗಳಿಗೆ ಸ್ವಲ್ಪ ಗಮನ ಕೊಡಬೇಕು.

ಮೊದಲು ಒಬ್ಬ ರೈತನ ಹೊಲದಲ್ಲಿ ನೋಡಿದರೆ ರಾಗಿ ತೆನೆಗಳೆಲ್ಲವೂ 8 ಇನಕುಗಳುಳ್ಳದ್ದಾಗಿಯೂ, ಅದೇ ಬಾಜೂ ರೈತನ ಹೊಲದಲ್ಲಿ ರಾಗಿ ತೆನೆಗಳೆಲ್ಲಾ 4 ಇನಕುಗಳು ಮಾತ್ರ ಉಳ್ಳವಾಗಿಯೂ ಇರುತ್ತೆಂದು ಭಾವಿಸೋಣ. ಬಾಕಿ ಅಂಶಗಳಲ್ಲಿ ಈ ಎರಡು ಹೊಲಗಳೂ ಒಂದೇ ಸಮನಾಗಿ ಇದ್ದರೆ ಎರಡನೆ ಹೊಲಕ್ಕಿಂತ ಮೊದಲನೇ ಹೊಲದಲ್ಲಿ ಫಸಲು ಒಂದಕ್ಕೆ ಎರಡರಷ್ಟು ಬರುತ್ತೆಂಬುವದು ಸ್ವತಸ್ಸಿದ್ಧವಾಗಿರುತ್ತೆ. ಅಥವಾ ಒಂದೇ ಹೊಲದಲ್ಲಿ 2, 3, 4 ಇನಕುಗಳುಳ್ಳ ತೆನೆಗಳನ್ನು ಬಿಡುವ ಮತ್ತು 8, 9 ಇನಕುಗಳುಳ್ಳ ತೆನೆಗಳನ್ನು ಬಿಡುವ ಬೆಳೆ ಫಸಲಿಗೆ ಬದಲಾಗಿ 8, 9 ಇನಕುಗಳನ್ನು ಬಿಡುವ ಫಸಲನ್ನೇ ತೆಗೆಯಲು ಸಾಧ್ಯವಾದ ಪಕ್ಷದಲ್ಲಿ ಜಾಸ್ತಿಯಾದ ಫಸಲು ಬಂದೇಬರಬೇಕೆಂಬುವದೂ ಸ್ವತಸ್ಸಿದ್ಧವಾದ ವಿಷಯವಾಗಿರುತ್ತೆ. ಈ ಫಲಿತಾಂಶವನ್ನು ಹೇಗೆ ಹೊಂದಬಹುದು ಎಂದು ಕೇಳಬಹುದು. ಆದರೆ ಅದಕ್ಕೆ ಬಹಳ ಸುಲಭವಾದ ಉಪಾಯ ಇಲ್ಲದೆ ಸೋದ.

ರಾಗಿಯ ಸ್ವಾಭಾವಿಕವಾದ ಗುಣಗಳು ಅದರಿಂದ ಹುಟ್ಟುವ ಪೈರುಗಳಲ್ಲಿಯೂ ಇದ್ದೇ ಇರುತ್ತೆಂದು ಅಜಮಾಯಿಷಿ ಮಾಡಿದ್ದರಲ್ಲಿ ಕಂಡು ಬಂದಿದೆ. ಅಂದರೇನು? ಮೊದಲ ನಾವು ಬಿತ್ತಿದ ಬೀಜವು ಕೆಂಪು ತೆನೆ ಉಳ್ಳದ್ದಾಗಿದ್ದರೆ ಅದರಿಂದ ಉತ್ಪತ್ತಿಯಾದ ಗಿಡದ ತೆನೆಗಳೂ ಕೆಂಪಗೇ ಇರುತ್ತವೆ. ಹಾಗೆಯೇ ಬಿಳೆ ತೆನೆಯುಳ್ಳದ್ದಾಗಿದ್ದರೆ ಬಿಳೆ ತೆನೆಗಳೂ, ದೊಡ್ಡ ತೆನೆಗಳ ಬೀಜವಾದರೆ ದೊಡ್ಡ ತೆನೆಗಳೂ, ಉದ್ದವಾದ ಅಥವ ಗಿಡ್ಡ ತೆನೆಗಳುಳ್ಳದ್ದಾಗಿದ್ದರೆ ಉದ್ದವಾದ ಅಥವ ಗಿಡ್ಡ ತೆನೆಗಳೂ, ತಾಯಿ ಬೀಜಕ್ಕನುಗುಣವಾಗಿ ತೆನೆಗಳನ್ನು ಬಿಡುತ್ತವೆ ಆದ್ದರಿಂದ ನಮ್ಮ ಬೀಜಕ್ಕಾಗಿ ಹೆಚ್ಚು ಇನಕುಗಳುಳ್ಳ ತೆನೆಗಳನ್ನೇ ಆರಿಸಿ ಅದರಿಂದ ಆದ ಬೀಜವನ್ನು ಬಿತ್ತಿದ ಪಕ್ಷದಲ್ಲಿ, ಮುಂದಿನ ವರ್ಷದ ಫಸಲೆಲ್ಲಾ ಹೆಚ್ಚು ಇನಕುಗಳುಳ್ಳ ತೆನೆಗಳನ್ನೇ ಬಿಡುತ್ತವೆ. ಆದ್ದರಿಂದ ನಮ್ಮ ರಾಗಿ ಫಸಲನ್ನು ಕಟಾವು ಮಾಡುವದಕ್ಕೆ ಮುಂಚೆ ಇಷ್ಟು ಕೆಲಸ ಮಾಡಿದರೆ ಸಾಕು.

ನಾಳೆ ಕಟಾವು ಮಾಡಬೇಕೆಂದಿದ್ದರೆ ಈ ಹೊತ್ತು ನಮ್ಮ ರಾಗಿ ಹೊಲಕ್ಕೆ ಹೋಗಿ ಹೆಚ್ಚು ಇನಕುಗಳುಳ್ಳ, ಕಡೇ ಪಕ್ಷ ಆರು ಇನಕುಗಳಾದರೂ ಇರುವ, ತೆನೆಗಳನ್ನು ಆರಿಸಿ ಮುಂಬೆ ಬೀಜಕ್ಕೆ ಬೇಕಾಗುವಷ್ಟು ಜಮಾಯಿಸಬೇಕು ನಂತರ ರೇಖೆ ಮಾಡುವ ಕಾಲದಲ್ಲಿ ಇವುಗಳನ್ನೇ ಪ್ರತ್ಯೇಕವಾಗಿ ರೇಖೆ ಮಾಡಿ, ಬೀಜಕ್ಕಾಗಿ ಇವನ್ನು ಜತನವಾಗಿ ಇಡಬೇಕು. ಮುಂದೆ ಬರುವ ಬಿತ್ತನೆಗೆ ಈ ಬೀಜವನ್ನು ಉಪಯೋಗಿಸಿದಲ್ಲಿ ನಮಗೆ ಯಾವಾಗಲೂ ಬರುತ್ತಿದ್ದ ಫಸಲಿಗಿಂತ ವಿಶೇಷ ಜಾಸ್ತಿ ಫಸಲು ಬರಲು ಯಾವ ಸಂಶಯವೂ ಇಲ್ಲ.

ಇದರಲ್ಲಿ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾದ ವಿಷಯ ಒಂದಿದೆ. ಅದೇನೆಂದರೆ, ಒಂದು ಕಾಸೂ ಖರ್ಚಿಲ್ಲದೆ ನಮ್ಮ ಫಸಲನ್ನು ಹೆಚ್ಚಾಗಿ ಬರುವಂತೆ ಮಾಡುವದಕ್ಕೆ ಇದರಷ್ಟು ಸುಲಭೋಪಾಯ ಮತ್ತಾವುದೂ ಇರುವದಿಲ್ಲ.

ಒಳ್ಳೆ ಬೀಜವನ್ನು ಎತ್ತಿ ಅದಕ್ಕೆ ನಾವು ಮಾಡುವ ಒಳ್ಳೇ ವ್ಯವಸಾಯ, ಅದಕ್ಕೆ ಹಾಕುವ ಗೊಬ್ಬರ, ಅದಕ್ಕೆ ಆಗುವ ಸಕಾಲದ ಮಳೆ, ಈ ಅನುಕೂಲತೆಗಳೆಲ್ಲಾ ನಾವು ಹೇಳಿದಂತೆ ಚುನಾಯಿಸಿದ ಬೀಜಕ್ಕೆ ಒದಗಿದ್ದೇ ಆದರೆ ಅದರಿಂದ ಬರುವ ಫಸಲು ನಮ್ಮ ಕಷ್ಟವನ್ನೆಲ್ಲಾ ಸಾರ್ಥಕಪಡಿಸುವದಲ್ಲದೆ ನಮಗೆ ವಿಶೇಷ ಲಾಭವನ್ನೂ ಉಂಟುಮಾಡುವದು.

ಮುಂದಿನ ವಾರದ ಪತ್ರಿಕೆಯಲ್ಲಿಯೂ ಇದೇ ರೀತಿ ಕೆಲವು ಸಲಹೆಗಳನ್ನು ತಿಳಿಸಲಾಗುತ್ತೆ. ಈ ಪತ್ರಿಕೆಯನ್ನೇ ನೋಡುತ್ತಿರಿ

ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಯುದ್ಧದ ಫಂಡು.

ಮಹನೀಯರೇ,—ಈಗ ಯೂರೋಪ್ ಖಂಡದಲ್ಲಿಯೂ, ಭೂಮಂಡಲದ ಇತರ ಭಾಗಗಳಲ್ಲಿಯೂ ನಡೆಯುತ್ತಿರುವ ಯುದ್ಧವು ಚರಿತ್ರೆಯಲ್ಲಿ ಇದುವರೆಗೆ ನಾವು ಕೇಳಿರುವ ಯುದ್ಧಗಳಲ್ಲೆಲ್ಲಾ ಅತ್ಯಂತ ಘೋರವಾದದ್ದಾಗಿರುತ್ತೆ. ನಾನಾ ದೇಶಗಳಲ್ಲಿ ಉಭಯಪಕ್ಷದ ಸೈನಿಕರು ಮಾಡುತ್ತಿರುವ ಯುದ್ಧದ ರೀತಿಗಳು ಅತಿ ನವೀನವಾಗಿಯೂ ಅಭೂತ ಪೂರ್ವವಾಗಿಯೂ ಇವೆ. ಮತ್ತು ಇಂತಹ ಸಂದರ್ಭಗಳಲ್ಲಿ ಯೋಧರು ಅನುಭವಿಸುತ್ತಲಿರುವ ನಾನಾ ಬಗೆಯ ಕಷ್ಟಗಳು ವರ್ಣಿಸಲಸಾಧ್ಯವಾಗಿವೆ. ಈ ಸಂಕಟಗಳನ್ನು ತಕ್ಕಮಟ್ಟಿಗೆ ಶಮನಮಾಡಬೇಕೆಂಬ ಉದ್ದೇಶದಿಂದ ಯುದ್ಧಮಾಡುತ್ತಲಿರುವ ಜನಾಂಗದವರು ಮಾತ್ರವಲ್ಲದೆ, ತಟಸ್ಥರಾದ ಇತರ ಜನಾಂಗದವರೂ ಕೂಡ ಉದಾರವಾದ ದ್ರವ್ಯಸಹಾಯ ಮಾಡುತ್ತಲಿದ್ದಾರೆ.

ನಮ್ಮ ಸ್ವಕೀಯ ಸವಾರರ ರೆಜಿಮೆಂಟು ಒಂದು ನಮ್ಮ ಸಾರ್ವಭೌಮರ ಸಾಮ್ರಾಜ್ಯಕ್ಷೇಮಾರ್ಥವಾಗಿ ತಮ್ಮ ರಕ್ತವನ್ನು ಬಸಿಯಲು ಸಮುದ್ರವನ್ನು ದಾಟಿ ಹೋಗಿರುವುದು ನಮ್ಮ ಮೈಸೂರು ದೇಶದ ಚರಿತ್ರೆಯಲ್ಲಿ ಇದೇ ಮೊದಲಾಗಿರುತ್ತೆ. ಇವರು ತಮ್ಮ ಮನೆಮಠವನ್ನು ಕುಟುಂಬವನ್ನು ಬಿಟ್ಟು ತೆರಳಿ ಒಂದು ವರುಷವಾಯಿತು. ಈ ಮನಃಕ್ಲೇಶದ ಜೊತೆಗೆ ತಾವುಗಳು ಪುನಃ ತಮ್ಮ ಮನೆಯನ್ನೂ ಮತ್ತು ಜನರನ್ನೂ ಸೇರುವೆವೋ ಎಂಬ ಸಂದೇಹವುಂಟಾದರೆ ಅವರ ಮನಸ್ಸಿಗೆ ಎಷ್ಟು ಸಂಕಟ ಉಂಟಾದೀತೆಂಬ ವಿಷಯವನ್ನು ಸರ್ವರೂ ಯೋಚಿಸತಕ್ಕದ್ದಾಗಿರುತ್ತೆ.

ನಮ್ಮ ಸವಾರರ ರೆಜಿಮೆಂಟು ಸದ್ಯಕ್ಕೆ ಈಜಿಪ್ಟ್ ದೇಶದಲ್ಲಿ ನೆಲೆಗೊಂಡಿದೆ. ಇವರ ಮುಖ್ಯ ಕರ್ತವ್ಯವು ಸೂಯೆಸ್ ಕಾಲುವೆಯನ್ನು ಕಾಪಾಡುವುದಲ್ಲದೆ ತುರ್ಕಿಯವರು ಈಜಿಪ್ಟ್ ದೇಶವನ್ನು ಆಕ್ರಮಿಸುವುದಕ್ಕೆ ಅವಕಾಶಕೊಡದೆ ಇರುವುದೂ. ನಮ್ಮ ಸೈನಿಕರೂ ಶತ್ರುಗಳೂ ಆಗಲೇ ಸಂಧಿಸಿದರೆಂಬ ಸಂಗತಿಯು ನಿಮ್ಮಲ್ಲಿ ಬಹು ಜನಗಳಿಗೆ ತಿಳಿದೇ ಇರಬಹುದು. ಈ ಕದನದಲ್ಲಿ ಶತ್ರುಗಳ ಸಂಖ್ಯೆಯು ನಮ್ಮವರಿಗಿಂತ ವಿಶೇಷ ಅಧಿಕವಾಗಿದ್ದರೂ ಮತ್ತು ಅವರು ಏಕಾಏಕಿ ನಮ್ಮವರ ಮೇಲೆ ಬಿದ್ದರೂ, ನಮ್ಮವರು ಬಹಳ ಪರಾಕ್ರಮದಿಂದ ನಡೆದುಕೊಂಡರು. ನಮ್ಮ ಹುದ್ದೇದಾರರಲ್ಲಿ ಒಬ್ಬರಾದ ರಿಸಾಲ್‌ದಾರ್ [illegible] ಅರಸಿನವರು ಮಾಡಿದ ಸಾಹಸವನ್ನು ಮೆಚ್ಚಿ ಅವರಿಗೆ ಶ್ರೀಮನ್ [illegible] ಸಾರ್ವಭೌಮರು ಇಂಡಿಯನ್ ಓ. ಎಸ್. ಓ. ಎಂಬ ಬಿರುದನ್ನು [illegible] ನ್ನೂ ದಯಪಾಲಿಸಿರುತ್ತಾರೆ. ಮೈಸೂರು ಸೈನಿಕರು ಹಿಂದೆ ನಡೆದ ಯುದ್ಧ [illegible] ಪರಂಪರೆಯಾಗಿ ಆರ್ಜಿಸಿದ್ದ ಕೀರ್ತಿಯನ್ನು ಈಗಲೂ ಕಾಪಾಡುವ ಶಕ್ತಿ [illegible] ಸೈನಿಕರಿಗೆ ಇರುತ್ತೆಂಬುವ ಅಭಿಪ್ರಾಯವನ್ನು ಈ ನಮ್ಮ ಯೋಧರು [illegible] ದೃಢೀಕರಿಸಿರುತ್ತಾರೆ. ಈ ಕಾರಣದಿಂದ ನಾವು ಕೊಡಬಹುದಾದ ಸರ್ವ [illegible] ಯಕ್ಕೂ ಇವರು ತುಂಬಾ ಅರ್ಹರಾಗಿರುತ್ತಾರೆ. ಪರದೇಶದಲ್ಲಿ [illegible] ಜನರ ಮಧ್ಯೆ ಬಿಡಾರ ಮಾಡಿಕೊಂಡಿರುವ ಇವರುಗಳು ಅನುಭವಿಸು[illegible] ಕಷ್ಟಗಳು ಪರಿಹರಿಯಾಗಿರುವುವು. ಎಲ್ಲಾ ಪದಾರ್ಥಗಳ ಬೆಲೆಯು ಹೆಚ್ಚಿ[illegible]ದಲ್ಲದೆ, ನಮ್ಮ ದೇಶದಲ್ಲಿ ಅವರಿಗೆ ವಾಡಿಕೆಯಾಗಿರುವ ಕೆಲವು ಪದಾರ್ಥ[illegible] ಹಣ ಕೊಟ್ಟರೂ ಅಲ್ಲಿ ಅವರಿಗೆ ಸಿಕ್ಕವು. ಒಂದು ವೇಳೆ ಈ ಪದಾರ್ಥ[illegible] ಅವರಿಗೆ ದೊರಕಿದರೂ, ತಮ್ಮ ಸ್ವದೇಶದಿಂದ ಕಳುಹಿಸಲ್ಪಡುವ ಪದಾರ್ಥ[illegible] ಎಂದಿಗೂ ಪ್ರಿಯವಾಗಿರಲಾರವು. [illegible] ದೇಶಿಯರೂ ತಮ್ಮನ್ನು ಮರೆತಿಲ್ಲವೆಂಬುವ ವಿಷಯ ಅವರಿಗೆ ತಿಳಿದು[illegible] ಇದರಿಂದ ಅವರಿಗೆ ಉಂಟಾಗತಕ್ಕ ಪರಮಾನಂದವೂ ಉತ್ಸಾಹವೂ ಇಷ್ಟೆ[illegible] ಹೇಳಲು ಸಾಧ್ಯವಲ್ಲ. ಆದ್ದರಿಂದ ನಾವುಗಳು ನಮ್ಮ ಔದಾರ್ಯ[illegible] ಸ್ವಲ್ಪ ಮಟ್ಟಿಗೆ ತೋರಿಸಿದರೂ, ಅವರುಗಳಿಗೆ ಎಷ್ಟೋ ಸೌಖ್ಯವನ್ನೂ ಆ[illegible]ಕ್ತೆಯನ್ನೂ ಕಲ್ಪಿಸಿಕೊಟ್ಟಂತೆ ಆಗುತ್ತೆ.

ಈ ಉದ್ದೇಶಕ್ಕಾಗಿ "ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸ[illegible] ಯುದ್ಧದ ಫಂಡು" ಎಂಬ ಹೆಸರಿನಿಂದ ಒಂದು ಫಂಡು ಏರ್ಪಾಡು [illegible] ಪ್ರಾಣವನ್ನು ತೃಣೀಕರಿಸಿ ಅನಿವಾರ್ಯವಾದ ಕಷ್ಟ ಪರಂ[illegible] ಭವಿಸುತ್ತಲಿರುವ ನಮ್ಮ ಸೈನಿಕರ ವಿಷಯದಲ್ಲಿ ಪ್ರತಿಯೊಬ್ಬ ದೇಶಾ[illegible] ನಿಯೂ ಅವರವರ ಶಕ್ತ್ಯನುಸಾರ ದ್ರವ್ಯ ಸಹಾಯವನ್ನು ಮಾಡಬೇಕೆ[illegible] ಪ್ರಾರ್ಥಿಸುತ್ತೇವೆ.

ಕುಪಟದ ಕಾಲುಚೀಲಗಳು, ಜುಬ್ಬಾಗಳು, ಕತ್ತುಪಟ್ಟಿ (ಮಫ್ಲ[illegible]) ಮುಂತಾದ ಯಾವ ಬಗೆಯ ಸಾಮಾನುಗಳನ್ನಾಗಲಿ ಒದಗಿಸಿ ಕೊಡು[illegible] ಮೂಲಕ ಮೈಸೂರು ದೇಶದ ಸ್ತ್ರೀಯರು ಮಾಡಬಹುದಾದ ಸಹಾಯ ಬಹಳ ಉಪಯೋಗಕರವಾಗಿರುತ್ತವೆ. ಇವುಗಳು ಕೃತಜ್ಞತಾಪೂರ್ವಕ ಸ್ವೀಕರಿಸಲ್ಪಡುತ್ತವೆ.

ಈ ಫಂಡು ನಮ್ಮ ಶ್ರೀಮನ್ಮಹಾರಾಜರವರ ಘನವಾದ ಪ್ರೋ[illegible] ಸೇರಿದ್ದಾಗಿರುತ್ತದೆ. ಮತ್ತು ನಮ್ಮ ಅಧ್ಯಕ್ಷತೆಗೆ ಒಳಪಟ್ಟ ಒಂದು ಕಮಿ[illegible] ಮೇಲ್ವಿಚಾರಣೆಯಲ್ಲಿರುತ್ತದೆ. ಶೇಖರಿಸಿದ ಧನವು ವಿಹಿತವಾಗಿ ವಿನಿಯೋ[illegible]ಸುವ ವಿಷಯದಲ್ಲಿ ವಿಶೇಷವಾದ ಜಾಗರೂಕತೆಯನ್ನು ವಹಿಸಿರುತ್ತೆ. ಕೊ[illegible] ಚಂದಾ ಮೊಬಲಗು ಎಷ್ಟಾದರೂ, ಕೃತಜ್ಞತಾಪೂರ್ವಕವಾಗಿ ಸ್ವೀಕರಿಸ[illegible]ವುದು. ಚಂದಾ ಮೊಬಲಗನ್ನು "ಮೈಸೂರು ಇಂಪೀರಿಯಲ್ ಸರ್ವಿಸ್ ಲ[illegible]ಸರ್ಸ್ ಯುದ್ಧದ ಫಂಡಿನ ಟ್ರೆಷರರ್, ಬೆಂಗಳೂರು ಅಂಮನೆ" ಎಂಬ [illegible]ಕ್ಕಾಗಲೀ, ಯಾವ ಸರ್ಕಾರಿ ಖಜಾನೆಗಾಗಲೀ, ಅಥವಾ ಮೈಸೂರು ಬ್ಯಾಂ[illegible]ಗಲೀ ಕಳುಹಿಸಬಹುದು ಚಂದಾದಾರರು ಹಣವನ್ನು ತೆಗೆದುಕೊಳ್ಳುವ[illegible] ಕ್ರಮವಾದ ಅಚ್ಚಿನ ರಸೀತಿಯನ್ನು ದಯವಿಟ್ಟು ಪಡೆಯಬೇಕು. ಚಂದಾ[illegible] ಹೆಸರು ಮತ್ತು ಅವರು ಕೊಡುವ ಮೊಬಲಗು ಇವುಗಳನ್ನು ವಾರಕ್ಕೆ [illegible] ವರ್ತ ಸರ್ಕಾರಿ ಗೆಜೆಟ್ಟಿನಲ್ಲಿಯೂ ಮತ್ತು ಸ್ಥಳೀಯ ವೃತ್ತಾಂತ ಪತ್ರಿಕೆ[illegible]ಯೂ ಪ್ರಕಟಿಸಲ್ಪಡುತ್ತಾ ಬರುತ್ತೆ.

ಕಂಠೀರವ ನರಸಿಂಹರಾಜವಡೆಯರ್

ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಯುದ್ಧದ ಫಂಡು.

ಈ ಕೆಳಗೆ ಕಂಡುಬರುವ ಚಂದಾಗಳು ಆಗಲೇ ವಾಗ್ದಾನವಾದಲ್ಪಟ್ಟಿ[illegible]

	ರೂ.
ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರು ಜಿ ಸಿ.ಎಸ್.ಐ.	1,000
ಘನವನ್ನು ಹೊಂದಿದ ಶ್ರೀಮನ್ ಯುವರಾಜರವರು ಜಿ.ಸಿ.ಐ.ಇ.	600
ಸರ್ ಎಂ. ವಿಶ್ವೇಶ್ವರಯ್ಯನವರು, ಕೆ.ಸಿ.ಐ.ಇ.	400
ಸರದಾರ್ ಎಂ. ಕಾಂತರಾಜ ಅರಸಿನವರು, ಸಿ.ಎಸ್.ಐ.	300
ಸರದಾರ್ ಎಂ. ಲಕ್ಷ್ಮೀಕಾಂತರಾಜ ಅರಸಿನವರು	200
ಮ|| ಹೆಚ್ ವಿ ನಂಜುಂಡಯ್ಯನವರು ಸಿ.ಐ.ಇ.	150
ರಾಜಸಭಾಭೂಷಣ ದಿವಾನ್ ಬಹದ್ದೂರ್ ಮ|| ಕೆ.ಪಿ. ಪುಟ್ಟಣ್ಣಶೆಟ್ರು	200
ಮ|| ಜಿ. ಎಸ್. ಚಕ್ರವರ್ತಿ ಎಂ.ಎ., ಎಫ್.ಆರ್.ಎಸ್.	150
ದಿ ಅರ್ಸ್ ಜಮ್ಖಾನಾ ಕ್ಲಬ್	250
ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರು, ಎಂ.ಎ.	120
ಮ|| ಕೆ. ಚಾಂಡಿ, ಬಿ ಎ.	100
ಮ|| ವಿ. ಆರ್. ತ್ಯಾಗರಾಜೈಯ್ಯರು, ಎಂ.ಎ.	100
ಮ|| ಸುಬ್ರಹ್ಮಣ್ಯ ಅಯ್ಯರು, ಬಿ ಎ	100
ಮ|| ಸಿ. ಎಸ್. ಬಾಲಸುಂದರಮ್ ಅಯ್ಯರು, ಬಿ.ಎ.	100
ಮ|| ಕೆ. ಮ್ಯಾಥ್ಯೂ, ಬಿ.ಎ.	100
ಮ|| ಜಿ. ಆರಾವಮುದ ಅಯ್ಯಂಗಾರ್ರು, ಬಿ.ಎ., ಬಿ.ಎಲ್.	100
ಮ|| ಬಿ. ರಾಮಸ್ವಾಮಯ್ಯನವರು, ಬಿ.ಎ., ಬಿ.ಎಲ್.	100
ಮ|| ಎಂ. ಜಿ. ರಾಮರಾಯರು, ಬಿ ಎ.	100
ಮ|| ಡಿ. ಬಿ ರಾಮಚಂದ್ರಮುದಲಿಯಾರ್ರು	100
ದಿವಾನ್ ಬಹದ್ದೂರ್ ಮ|| ಸಿ. ಶ್ರೀಕಂಠೇಶ್ವರ ಅಯ್ಯರು	250
ರಾಜಸಭಾಭೂಷಣ ಮ|| ಕಪೂರ್ರ ಶ್ರೀನಿವಾಸರಾಯರು	200
ರತ್ನಾವಳಿ ನಾಟಕಸಭಾ-ಮ|| ಎ. ವಿ. ವರದಾಚಾರ್ರು	565
ಮ|| ಎಂ. ಎ. ನಾರಾಯಣೈಯ್ಯಂಗಾರ್ರವರು	200
ಮ|| ಎಂ. ಎಲ್. ವರ್ಧಮಾನಯ್ಯನವರು	150
ಮ|| ಆರ್. ಹೆಚ್. ಕ್ಯಾಂಬೆಲ್ ಸಾಹೇಬರು	100
ಮ|| ಹಜರತ್ ಬಿ ಉಸ್ಮಾನ್ ಖಾನ್ ಸಾಹೇಬರು	100

ಅನ್ಯೋನ್ಯ ಸಂಘಗಳ ಮೂಲಕ ಗ್ರಾಮಗಳನ್ನು ಅಭಿವೃದ್ಧಿಗೊಳಿಸುವುದು.

ಈಚೆಗೆ ನಮ್ಮ ಸರ್ಕಾರದವರು ಹೀನಸ್ಥಿತಿಯಲ್ಲಿರುವ ನಮ್ಮ ಗ್ರಾ[illegible]ಳನ್ನು ಹೇಗಾದರೂ ಅಭಿವೃದ್ಧಿ ಮಾಡಬೇಕೆಂದು ಅನೇಕ ಏರ್ಪಾಡು[illegible] ಮಾಡುತ್ತಿದ್ದಾರಷ್ಟೆ. ಇದರಲ್ಲಿ ಪರಸ್ಪರ ಸಹಾಯವು ಎಷ್ಟರ ಮಟ್ಟಿಗೆ [illegible]ಯವಾಗಿದೆ ಎಂಬ ವಿಚಾರವಾಗಿ ಕೆಲವು ಸಂಗತಿಗಳನ್ನು ಇಲ್ಲಿ ತಿಳುಹಿಸಬೇಕೆಂ[illegible]

ಪರಸ್ಪರ ಸಹಾಯವಿಲ್ಲದೆ ಯಾವುದೂ ಏಳಿಗೆಗೆ ಬರುವುದಿಲ್ಲ. [illegible] ಗ್ರಾಮವು ಅಭಿವೃದ್ಧಿ ಸ್ಥಿತಿಗೆ ಬರಬೇಕಾದರೆ ಗ್ರಾಮಸ್ಥರ ಅನ್ಯೋನ್ಯ ಸ[illegible]ದಿಂದಲೇ ಆಗಬೇಕು. ಗ್ರಾಮವನ್ನು ಅಭಿವೃದ್ಧಿಗೊಳಿಸುವುದಕ್ಕೆ ಅವ[illegible]ವಾದ ಕೆಲಸಗಳನ್ನು ಮಾಡಬೇಕಾದರೆ ಗ್ರಾಮದ ಪ್ರತಿಯೊಬ್ಬ ನಿವಾಸಿಯೂ [illegible] ಕೆಲಸವು ತನ್ನದೆಂದು ಭಾವಿಸಿ ಅದು ಕೈಗೂಡುವುದಕ್ಕೆ ಸಹಾಯ ಮಾಡಬೇ[illegible] ಹಾಗಲ್ಲದೆ ಪ್ರತಿಯೊಬ್ಬನೂ "ಇದೇನು ನನ್ನ ಕೆಲಸವಲ್ಲ; ಅದು ಎಷ್ಟರ [illegible]

...ಕೊಂಡು ಆ ಕೆಲಸಕ್ಕೆ ಸಹಾಯವನ್ನು ಮಾಡದೆ ಬಿಟ್ಟರೆ ಆ ಕೆಲ... ಇಲ್ಲ; ಮತ್ತು ಆ ಗ್ರಾಮವು ಅಭಿವೃದ್ಧಿಸ್ಥಿತಿಗೆ ಬರುವ... ಈ ನಿದರ್ಶನಕ್ಕಾಗಿ ಈ ಕೆಳಗಿನ ಸಂಗತಿಯನ್ನು ವಿಚಾರವಾ... ಒಂದು ಗ್ರಾಮದ ಬಂಡಿಯ ರಸ್ತೆಯು ಕೊರೆದುಹೋಗಿ ಬಂಡಿಯು ...ಹೋಗುವುದಕ್ಕಾಗದ ಅನನುಕೂಲವಾಗಿರುತ್ತದೆ. ಆ ಗ್ರಾಮದವ... ಬಂಡಿಯನ್ನು ಹೊಡೆದುಕೊಂಡು ಆ ಮಾರ್ಗವಾಗಿ ಬಂದು ಬಹು ...ದ ಬಂಡಿಯನ್ನು ಸಾಗಿಸಿಕೊಂಡು ಹೋಗುತ್ತಾನೆ: ಇಲ್ಲವೆ ಬಂಡಿ... ಹೋಗುತ್ತಾನೆ. ಒಂದೆರಡು ಮಂಕರಿ ಮಣ್ಣನ್ನು ಹಾಕಿ ರಸ್ತೆ... ಯೋಚನೆಯನ್ನೇ ಮಾಡುವುದಿಲ್ಲ. ಇದೇ ರೀತಿಯಲ್ಲಿ ...ಗಳು ಒದ್ದಾಡಿಕೊಂಡು ಹೋಗುತ್ತವೆಯೇ ಹೊರತು ಬಂಡಿಯ... ಬಳ್ಳರೂ ರಸ್ತೆಯನ್ನು ಸರಿಪಡಿಸುವುದಕ್ಕೆ ಗಮನ ಕೊಡುವುದಿಲ್ಲ; ...ಯೇ ಅವರಿಗೆ ಬರುವುದಿಲ್ಲ. ದಾರಿಯಲ್ಲಿ ಒಂದು ಕಲ್ಲು ನೆಟ್ಟಿ... ಅದನ್ನು ಅನೇಕರು ಎಡವಿರುತ್ತಾರೆ. ತಾನೂ ಎಡವುತ್ತಾನೆ. ...ತಿತ್ತು ದೂರಹಾಕಿ ಹೋಗುವುದಿಲ್ಲ. ಒಂದು ವೇಳೆ ಅವ... "ಇದು ನನ್ನ ಕೆಲಸವಲ್ಲ, ಇದು ಎಲ್ಲರ ಕೆಲಸ" ಎನ್ನು... ಈ ಭಾವನೆಯನ್ನು ಹೋಗಲಾಡಿಸಿ ಎಲ್ಲರ ಕೆಲಸವು ತನ್ನ ಕೆಲಸ ಎಂಬ ...ಅವನಲ್ಲಿ ಹುಟ್ಟುವಂತೆ ಮಾಡಬೇಕು. ಈ ತಿಳುವಳಿಕೆ ಪ್ರತಿಯೊಬ್ಬ... ಹುಟ್ಟುವವರೆಗೂ ಆ ಗ್ರಾಮವು ಏಳಿಗೆಗೆ ಬರುವುದಿಲ್ಲ. ಹೀಗೆ ...ತಿಳುವಳಿಕೆ ಕೊಡಬೇಕೆಂದು ಹಲವು ವಿಧಗಳಲ್ಲಿ ನಮ್ಮ ಸರ್ಕಾರದ ...ಪ್ರಯತ್ನಪಡುತ್ತಿದ್ದಾರೆ. ಸ್ಕೂಲುಗಳನ್ನು ಸ್ಥಾಪಿಸಿದ್ದಾರೆ. ಉಪನ್ಯಾಸಕ ...ನೇಮಿಸಿದ್ದಾರೆ. ಒಬ್ಬರಲ್ಲದೆ ಮತ್ತೊಬ್ಬರು ಉಪದೇಶಿಸುವಂತೆ ಎಷ್ಟೋ ...ಗಳನ್ನು ನಿಯಮಿಸಿದ್ದಾರೆ. ಇನ್ನೂ ಪ್ರಜೆಗಳು ಅಭಿವೃದ್ಧಿಗೆ ಬರಬೇಕಾ... ಯಾವ ಏರ್ಪಾಡುಗಳು ಮಾಡಬೇಕೋ ಅವುಗಳನ್ನೆಲ್ಲಾ ಮಾಡುವು... ...ದ್ದಾರೆ. ಸರ್ಕಾರದವರ ಪ್ರಯತ್ನಗಳನ್ನೆಲ್ಲಾ ಸಾರ್ಥಕಮಾಡಿಕೊ... ಪ್ರಜೆಗಳಾದ ನಮ್ಮ ಕೈಯಲ್ಲಿಯೇ ಇರುತ್ತದೆ. ನಾವು ಅವರು ...ಕಾರ್ಯಗಳಿಗೆ ಎಷ್ಟೆಷ್ಟು ಸಹಕಾರಿಗಳಾಗಿದ್ದರೆ ಅಷ್ಟಷ್ಟು ಫಲ ನಮಗೆ ...ದರಲ್ಲಿ ಏನೇನೂ ಸಂದೇಹವಿಲ್ಲ. ನಾವು ಮಾಡಿಕೊಳ್ಳಬೇಕಾದ ಕೆಲ... ಅವರೇ ಮಾಡಿ ನಮಗೆ ಎಚ್ಚರಿಸುತ್ತಿರುವಲ್ಲಿ ನಾವುಗಳು ಅನುಕೂಲ... ...ದು ಅಭಿವೃದ್ಧಿಗೆ ಬಾರದಿದ್ದರೆ ಅದು ಯಾರ ತಪ್ಪು ?

...ದರಿಂದ ನಮ್ಮನಮ್ಮ ಗ್ರಾಮಗಳನ್ನು ನಾವುನಾವೇ ಅಭಿವೃದ್ಧಿಪಡಿಸಿ... ನಾವು ಏಳಿಗೆಗೆ ಬರಬೇಕಾದರೆ ಏನೇನು ಮಾಡಿಕೊಳ್ಳಬೇಕು ಎಂಬು... ...ವಿಚಾರ ಮಾಡೋಣ. ಮೊಟ್ಟಮೊದಲು ಎಲ್ಲರಿಗೂ ತಿಳುವಳಿಕೆ ಹುಟ್ಟ... ...ಕಾರದ ವಿದ್ಯಾಭ್ಯಾಸ ಅತ್ಯವಶ್ಯಕ. ಆಕ್ಕ ಮೇಲ್ವಿಚಾರಣೆಯನ್ನಿಟ್ಟು ...ಶಾಲೆಯನ್ನು ಏಕರೀತಿಯಿಂದ ನಡೆಯಿಸಿಕೊಂಡು ಬರಬೇಕು. ...ಕೂಲ ಧನವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಹೊಸ ಹೊಸ ಮಾರ್ಗ... ...ಉಪಾಯವನ್ನು ನೋಡಬೇಕು. ಮಳೆಯು ಕಾಲ ಕಾಲಕ್ಕೆ ಆಗದೇ ...ದರಿಂದ ಆಗಾಗ್ಗೆ ಕ್ಷಾಮದ ಬಾಧೆ ಇದ್ದೇ ಇರುವುದರಿಂದ ಬೇಸಾಯ... ...ಕೈಗಾರಿಕೆ ಕಸುಬುಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕು. ...ಆದಾಗ ದವಸವನ್ನು ದಾಸ್ತಾನ್ ಮಾಡಿ ಬೆಳೆ ಆಗದೆ ಇದ್ದಾಗ ...ಪಯೋಗಿಸಿಕೊಳ್ಳುವಂತೆ ಏರ್ಪಾಡು ಮಾಡಿಕೊಳ್ಳಬೇಕು. ...ಉಪದ್ರಗಳಿಗೆ ಅವಕಾಶ ಕೊಡದಂತೆ ಗ್ರಾಮವನ್ನು ಬಹು ನಿರ್ಮಲ... ...ಬೇಕು. ಮನೆಯಲ್ಲಿ ಗಾಳಿ ಬೆಳಕು ಧಾರಾಳವಾಗಿ ಬರುವ... ...ಗಳನ್ನಿಟ್ಟುಕೊಳ್ಳಬೇಕು. ಹೊಸದಾಗಿ ಮನೆಗಳನ್ನು ಕಟ್ಟಬೇಕಾ... ...ಶಾಸ್ತ್ರಗಳನುಸಾರವಾಗಿ ಕಟ್ಟಿಕೊಳ್ಳಬೇಕು ಗ್ರಾಮದಿಂದ ...ಗಳಿಗೆ ಹೋಗುವುದಕ್ಕೆ ಸರಿಯಾದ ರಸ್ತೆಗಳನ್ನು ಏರ್ಪಡಿಸಿಕೊಳ್ಳ... ...ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಇವೇ ಮುಂತಾದ ...ಉಪಯೋಗಕರವಾದ ಕೆಲಸಗಳನ್ನು ಮಾಡಿಕೊಳ್ಳಬೇಕು.

...ಇವುಗಳಿಗೆಲ್ಲಾ ಬಂಡವಾಳ ಬೇಕು. ಇದನ್ನು ಎಲ್ಲಿ ತರುವುದು ...ಬಗೆಯನ್ನು ವಿಚಾರಮಾಡೋಣ. ನಾವು ಕೇವಲ ಬಡವರಾದುದರಿಂದ ...ಬಂಡವಾಳವನ್ನು ಧನಿಕರೊಬ್ಬರೇ ಒದಗಿಸಲು ಸಾಧ್ಯವಿಲ್ಲ. ಆದರೂ ಎಲ್ಲರೂ ...ಸೇರಿ ಅಸಾಧ್ಯವಾದ ಕೆಲಸವಾಗುವುದಿಲ್ಲ. ಅಂದರೆ, ಗ್ರಾಮಸ್ಥ... ...ಸೇರಿ ಪರಸ್ಪರಸಹಾಯ ಸಂಘವನ್ನು ಮಾಡಿಕೊಳ್ಳಬೇಕು. ಇದರ ...ದ್ದೇಶ ಗ್ರಾಮಾಭಿವೃದ್ಧಿಯನ್ನು ಮಾಡುವುದು. ಆದುದರಿಂದ ಪ್ರತಿ... ...ಈ ಸಂಘಕ್ಕೆ ಸೇರಬೇಕು. ಷೇರುಗಳನ್ನು ಕೊಂಡುಕೊಳ್ಳೋಣ ಇದರ ...ಬಂಡವಾಳವನ್ನು ಜಮಾಯಿಸಬೇಕು. ಷೇರುದಾರರು ಲಾಭದ ಮೇಲೆ ...ನ್ನು ಸ್ವಲ್ಪ ಮಟ್ಟಿಗೆ ಬಿಡಬೇಕು. ಗ್ರಾಮವೂ ಅಭಿವೃದ್ಧಿಗೆ ಬರಬೇಕು; ...ಬೇಗ ಬರಬೇಕೆಂದರೆ ಆಗದು. ತಮಗೆ ಬಂದ ಆದಾಯದಲ್ಲಿ ...ಭಾಗವನ್ನು ಗ್ರಾಮಾಭಿವೃದ್ಧಿಗೆಂದು ತೆಗೆದಿಡಬೇಕು. ಹೀಗೆ ತೆಗೆದಿಟ್ಟ ...ಟಿಗೆ ಮತ್ತಷ್ಟು ಹಣವನ್ನು ಕೊಡುವುದರ ಮೂಲಕ ಸರ್ಕಾರದವರು ...ಮಾಡುವರು. ಈ ಹಣವನ್ನು ಗ್ರಾಮಾಭಿವೃದ್ಧಿ ಕೆಲಸಗಳಿಗೆ ಉಪ... ...ಕೊಳ್ಳಬಹುದು. ಮೇಲೆ ಹೇಳಿದ ಅಭಿವೃದ್ಧಿ ಕಾರ್ಯಗಳಿಗೆ ಹಣ ...ಉಪಯೋಗಿಸಿಕೊಳ್ಳುವ ದಾರಿಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ...ಸುತ್ತೇವೆ.

(1) ಗ್ರಾಮದ ಸ್ಕೂಲ್ ಮಾಸ್ತರು ಶ್ರದ್ಧೆಯಿಂದ ಕೆಲಸ ಮಾಡಬೇಕಾದರೆ ...ಕ್ಕೆ ಮಟ್ಟಿಗೆ ಪ್ರೋತ್ಸಾಹ ಮಾಡಬೇಕು. ಎಷ್ಟೋ ಪಾರಮಾರ್ಥಿಕ... ...ಸ್ವಾಗತ್ಯ ಬಡತನವು ಬೇರೆ ಕಡೆ ಆತನ ಗಮನವನ್ನು ಸೆಳೆಯುವುದು. ...ಕಾಲವೂ ಗ್ರಾಮಸ್ಥರ ಹಿತಕ್ಕಾಗಿಯೇ ಕೆಲಸ ಮಾಡಬೇಕಾದರೆ ...ಬಡತನವನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸುವುದಕ್ಕಾಗಿ ಆತನಿಗೆ ...ಸಂಬಳದ ಜೊತೆಗೆ ಒಂದೆರಡು ರೂಪಾಯಿ ಕೊಡಬಹುದು. ...ವಾರ ಪತ್ರಿಕೆಗಳನ್ನು ತರಿಸಿ - ಎಲ್ಲೆಲ್ಲಿ ಏನೇನು ಜರುಗುತ್ತಿದೆ ಎಂಬು... ...ತಿಳಿದುಕೊಳ್ಳುವುದಕ್ಕೂ, ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುವುದಕ್ಕೆ ...ಯಾದ ಇತರ ಮಾಸ ಪತ್ರಿಕೆಗಳನ್ನು ತರಿಸಿಕೊಳ್ಳುವುದಕ್ಕೂ, ಒಂದು ...ಪುಸ್ತಕ ಭಂಡಾರವನ್ನಿಟ್ಟುಕೊಳ್ಳುವುದಕ್ಕೂ ಸ್ವಲ್ಪ ಹಣವನ್ನು ಉಪಯೋ... ...ಬಹುದು. (3) ವ್ಯವಸಾಯದ ಕೆಲಸಗಳನ್ನು ಅಭಿವೃದ್ಧಿಪಡಿಸಿಕೊಳ್ಳ... ...ರೀತಿಯಲ್ಲಿ ಬೇಸಾಯ ಮಾಡಲು ನವೀನವಾದ ಮುಟ್ಟುಗಳು ...ಯಂತ್ರಗಳು ಬೇಕಾಗುವವು ಇವುಗಳನ್ನು ಕೊಳ್ಳಲು ಬಡತನವು ಅವ... ...ಬಿಡುವುದಿಲ್ಲ. ಆದುದರಿಂದ ಸಂಘವು ಇವುಗಳನ್ನು ಕೊಂಡು ಬಾಡಿಗೆಗೆ ...ಕೊಡಬಹುದು; ಇಲ್ಲವೇ ಇವುಗಳನ್ನು ಕೊಳ್ಳತಕ್ಕವರಿಗೆ ಸುಲಭ ...ಬಡ್ಡಿಗೆ ಹಣವನ್ನು ಒದಗಿಸಿ ಕೊಡಬಹುದು. (4) ಗ್ರಾಮದಲ್ಲಿ ಹೊಸ ...ಮನೆ ಕಟ್ಟತಕ್ಕವರಿಗೆ ಬಡ್ಡಿ ಕಮ್ಮಿ ಮಾಡಿ ಹಣವನ್ನು ಸಾಲ ಕೊಟ್ಟು ...ಶಾಸ್ತ್ರಗಳಿಗೆ ಅನುಸಾರವಾಗಿ ಮನೆಯನ್ನು ಕಟ್ಟುವಂತೆ ಮಾಡಬಹು... (5) ಗ್ರಾಮಗಳಲ್ಲಿ ಅತ್ಯವಶ್ಯಕವಾದ ಕಾಮಗಾರಿಗಳನ್ನು ಜರುಗಿಸ... ...ಸರ್ಕಾರಗಳು ಬಂದೊದಗಿದಾಗ ಚಂದಾ ಹಣ ಒದಗಿಸುವುದು ಬಹಳ ...ದರಿಂದ ಇಂಥಾ ಕೆಲಸಗಳಿಗೆ ಹಣವನ್ನು ಉಪಯೋಗಿಸಿಕೊಳ್ಳ... ...ಅವು ಯಾವುವೆಂದರೆ—ಚರಂಡಿ ಕಟ್ಟುವುದು, ಭಾವಿ ತೋಡುವುದು, ...ತುವುದು, ರಸ್ತೆ ಸರಿಪಡಿಸುವುದು, ಇವೇ ಮೊದಲಾದುವು. (6) ...ಮಾಡುವವರು, ನೇಯುವವರು, ಮೋದರು, ಬಳೆಗಾರರು, ಇಂಥಾ ಕಸಬುದಾರ... ...ಕಸಬನ್ನು ವೃದ್ಧಿಗೊಳಿಸಲು ಸುಲಭವಾದ ಬಡ್ಡಿಗೆ ಬಂಡವಾಳ ವನ್ನು ಒದಗಿಸಿ ಕೊಡಬಹುದು. ಇವೇ ಮುಂತಾದ ಏಳಿಗೆಗೆ ಬರಬಹುದಾದ ಕೆಲಸಗಳಿಗೆ ಸಂಘದ ಹಣವನ್ನು ಉಪಯೋಗಿಸಿಕೊಳ್ಳಬಹುದು.

ಈ ರೀತಿ ಪ್ರತಿಯೊಂದು ಗ್ರಾಮದವರೂ ಅನ್ಯೋನ್ಯ ಸಹಾಯ ಸಂಘವನ್ನು ಏರ್ಪಡಿಸಿಕೊಂಡು ತಮ್ಮ ತಮ್ಮ ಗ್ರಾಮಗಳನ್ನು ಅಭಿವೃದ್ಧಿಗೆ ತರುವುದು ತಮ್ಮ ಕರ್ತವ್ಯವೆಂದು ತಿಳಿದು ತಮ್ಮ ಕೆಲಸಗಳನ್ನು ಮಾಡುತ್ತಾ ಬಂದರೆ ಗ್ರಾಮಗಳು ಅಭಿವೃದ್ಧಿಗೆ ಬರಲು ಸಂದೇಹವಿಲ್ಲ.

ಎಚ್. ರಾಮರಾವ್, ಮದ್ದಗಿರಿ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ತೀರ್ಥಹಳ್ಳಿಯ ಆಸ್ಪತ್ರೆ ಅವ್ಯವಸ್ಥೆ.

ಅಯ್ಯಾ,—ನಮ್ಮ ಡಾಕ್ಟರು ರಾಜಗೋಪಾಲಮೊದಲಿಯಾರ್ರು ಕೋರ್ಟು ಸಮ್ಮನ್ ಪ್ರಕಾರ ತಾ. 10 ನೇ ರಾತ್ರಿ ನಂಜನಗೂಡಿಗೆ ಸಾಕ್ಷಿಗೋಸ್ಕರ ಹೋಗಿರುತ್ತಾರೆ. ಈಗ ಆಸ್ಪತ್ರೆಯಲ್ಲಿ ಕೆಲಸಮಾಡಲು ಯಾವ ಡಾಕ್ಟರೂ ಇಲ್ಲ. ಈ ಆಸ್ಪತ್ರೆಯಲ್ಲಿ ದಿನಕ್ಕೆ 80 ಜನಗಳ ವರೆಗೆ ರೋಗಿಗಳು ಔಷಧವನ್ನು ತೆಗೆದುಕೊಳ್ಳುವರು. ಈ ಸ್ಥಳವು ಮಲೆನಾಡು ಪ್ರದೇಶವಾಗಿ ರೋಗಕ್ಕೆ ತವರು ಮನೆಯಾಗಿರುವುದು ಸರ್ಕಾರಕ್ಕೆ ವೇದ್ಯವೇ ಇದೆ. ಹಾಲಿ ಇಲ್ಲಿ 1-2 ಹೆಣ್ಣುಮಕ್ಕಳು ಜನನವಾಗಿ ಕಠಿಣವಾದ ಸ್ಥಿತಿಯಲ್ಲಿ ಅಪಾಯದಲ್ಲಿರುತ್ತಾರೆ. ಈ ಡಾಕ್ಟರನ್ನು ಕೂಡಲೆ ದಯವಿಟ್ಟು ವಾಪಸು ಕಳುಹಿಸಿಕೊಡಬೇಕಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಿಗೆ ಅರ್ಜೆಂಟ್ ಟೆಲಿಗ್ರಾಂ ಮಾಡಿದರು. ಈ ಟೆಲಿಗ್ರಾಂ ಕಲವು ಕಾಲದಲ್ಲಿ ಈ ನಮ್ಮ ಡಾಕ್ಟರವರ ಸಮಾಂ ಶಿವಮೊಗ್ಗಾದಲ್ಲಿ ಇರೋಣಾಗಿತ್ತು. ಹೀಗಿರುತ್ತಾ ಇವರು ಯಾವ ಕಾರಣದಿಂದ ವಾಪಸು ದಯಮಾಡಿಸಲಿಲ್ಲವೋ ತಿಳಿಯಲಿಲ್ಲ. ಈ ತೀರ್ಥಹಳ್ಳಿ ಟವನ್ನಿನಲ್ಲಿ ಖಾಸಗೀ ಇಂಗ್ಲಿಷ್ ವೈದ್ಯಶಾಲೆಯಲ್ಲಿದ್ದ ಡಾಕ್ಟರು ಮ|| ಎ. ವೈ. ಹೆಬ್ಬಾರವರೂ ಈ ಕಾಲದಲ್ಲಿ ಹಾಜರಿರಲಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ತೆಗೆದುಕೊಳ್ಳುವ ದಿನಚರಿ ರೋಗಿಗಳ ಪಾಡೇನಾಗಬೇಕು ? ನಂಜನಗೂಡಿಗೆ ಹೋದ ಡಾಕ್ಟರು ಇನ್ನೂ ಈ ಛಾರ್ಜಿಗೆ ಬರುವುದಕ್ಕೆ ಒಂದು ವಾರ ಬೇಕಾಗುತ್ತೆ. ಆ ವರೆಗೂ ಎಷ್ಟು ಜನ ರೋಗಿಗಳು ತೊಂದರೆ ಪಡಬೇಕಾಗುತ್ತೆಂಬುದನ್ನು ಯೋಚಿಸಬೇಕಾದದ್ದು ಅಗತ್ಯ. ಅಲ್ಲದೆ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ದರಖಾಸ್ತು ಕಳುಹಿಸುವ ವಿದ್ಯಾರ್ಥಿಗಳು ತಾ. 12 ರಲ್ಲಿ ವ್ಯಾಕ್ಸಿನೇಷನ್ ಸರ್ಟಿಫಿಕೇಟಿಗೆ ಆಸ್ಪತ್ರೆಗೆ ಹೋದರೆ ಡಾಕ್ಟರು ಇಲ್ಲ. ಇವರ ದರಖಾಸ್ತು ತಾ. 15 ರೊಳಗೆ ಮ್ಯಾನೇಜರವರ ಆಫೀಸಿಗೆ ತಲಪಲೇ ಬೇಕು. ಇವರು ಬಹಳ ಸಂಕಟಪಟ್ಟು ಖಾಸಗಿ ಡಾಕ್ಟರಲ್ಲಿ ಫೀಜುಕೊಟ್ಟು ಸರ್ಟಿಫಿಕೇಟು ಮಾಡಿಸಿಕೊಂಡರು. ಹಣವಂತರಾದವರು ಹೇಗಾದರೂ ಮಾಡಿ 10-8 ಮೈಲಿಯಲ್ಲಿರುವ ಆಸ್ಪತ್ರೆಗೆ ಹೋಗಬಹುದು, ಗರೀಬರ ಗತಿ ಏನಾಗಬೇಕು ? ಈ ಇಲಾಖೆ ಮೇಲ್ವಿಚಾರರು ಈ ಡಾಕ್ಟರಿಗೆ ರಜಾಕೊಡುವ ಪೂರ್ವ ಇಲ್ಲಿ ಚಾರ್ಜಿಗೆ ಬೇರೆ ಡಾಕ್ಟರನ್ನು ಏರ್ಪಡಿಸಬೇಕಾಗಿತ್ತು. ಹೀಗೆ ವಿಳಂಬ ಮಾಡಿದರೆ ಸುಮಾರು 3,000 ಪ್ರಜೆಗಳಿರುವ ಈ ಸ್ಥಳಕ್ಕೆ ಡಾಕ್ಟರನ್ನು ಏರ್ಪಡಿಸದೇ ಇರುವುದು ತುಂಬಾ ಶೋಚನೀಯವಾಗಿದೆ.

ಕಾಳಿಂಗೈನ ರಾಘವೇಂದ್ರರಾವ್.

ತಾಲ್ಲೋಕು ವರ್ತಮಾನಗಳು.

ತಿಪ್ಪೂರು ತಾ|| ಬಳ್ಳೆಕೆರೆ.—ಇಲ್ಲಿ 8-10 ದಿನಗಳಲ್ಲಿ ಒಳ್ಳೆ ಎರಡು ಹದ ಮಳೆಯಾಯ್ತು. ಇನ್ನೂ ಮಳೆ ಬರಬೇಕೆಂದು ಹಲ್ಲುಜೆಸುವರು.—ಈಗ್ಗೆ 15 ದಿವಸದಲ್ಲಿ ಇಲ್ಲಿನ ಸೂಗೂರು ಹಳ್ಳದಲ್ಲಿ 18-20 ವರ್ಷದ ಹುಡುಗನು ಕಾಲು ಜಾರಿನಲ್ಲಿ ಮುಳುಗಿ ಸತ್ತುಹೋದನು. ಸರ್ಕಾರದವರು ಈ ಹಳ್ಳಕ್ಕೆ ಸೇತುವೆ ಕಟ್ಟಿಸಿದರೆ ಕ್ಷೇಮ.—ಈ ಪ್ರಾಂತ್ಯ ಹಳ್ಳಿಗಳ ಗ್ರಾಂಟ್ ಸ್ಕೂಲ್ ಮಾಸ್ತರುಗಳು ಮಾಸಿಕವನ್ನು ವರ್ಷಗಳನ್ನು ಹುಡುಗರ ಕೈಲಿ ಹೇಳಿಸಿಕೊಂಡು ತಿರುಗ ನೆತ್ತುವುದು ಇನ್ನೂ ತಪ್ಪಿಲ್ಲ. ಈ ವಿಷಯ ಸರ್ಕಾರದವರ ಗಮನಕ್ಕೆ ಬಂದಿಲ್ಲ. ಸಣ್ಣ ಹುಡುಗರಿಗೆ ತಿರುಪೆಕೆತ್ತುವವನ್ನೇ ಕಲಿಸಿದರೆ ಕೆಟ್ಟುಹೋಗುತ್ತಾರೆಂಬ ಭೀತಿ. ಮಾಸ್ತರು ತಿರುಗುತ್ತಿರುವರು. ಸರ್ಕಾರದವರು ಇದನ್ನು ತಪ್ಪಿಸಿಯಾರೆಂದು ನಂಬುತ್ತೇವೆ.

ಹುಣಸೂರು ತಾಲ್ಲೋಕು.—ಈ ಪ್ರಾಂತ್ಯ ಸುಮಾರು ಒಂದು ತಿಂಗಳಿಂದ ಮಳೆ ಇಲ್ಲದೆ ಬಹಳ ತೊಂದರೆಯಾಗಿದ್ದು ಈಗ ಸರಿಯಾಗಿ ಮಳೆಯಾಗಿ ಕೆರೆ ಕಟ್ಟೆಗಳಿಗೆ ನೀರು ಬಂದು ದನಕರುಗಳ ಕಷ್ಟ ತಪ್ಪಿದೆ. ಹೊಲಗಳಲ್ಲಿ ಚಿಲ ಜಾನು ಬೆಳಸು ಬಹಳ ಚೆನ್ನಾಗಿದೆ. ಇನ್ನು ಒಂದೆರಡು ಹದ ಮಳೆ ಸರಿಸಿಕೊಟ್ಟರೆ ಪ್ರಜೆಗಳಿಗಿರತಕ್ಕ ಬಡತನವೆಲ್ಲಾ ತಕ್ಕಮಟ್ಟಿಗೆ ಶಮನವಾಗುತ್ತೆ.—ಈ ತಾಲ್ಲೋಕು ಶಾಂತ್ಯ ಹೇಳಲಸಾಧ್ಯವಾದಷ್ಟು ಗ್ರಾಮಗಳಲ್ಲಿ ಪ್ಲೇಗಿನ ಗಲಾಟೆ ಜೋರಾಗಿದೆ. ಅಮಲ್ದಾರ್ರು ಬಹಳ ದಯಾಳುಗಳಾಗಿ ಕೆಲಸ ನೋಡುವುದಲ್ಲದೆ ಶ್ರಮವನ್ನು ವಹಿಸಿ ಆಯಾ ಗ್ರಾಮಗಳಿಗೆ ಖುದ್ದು ದಯಮಾಡಿಸಿ ಗ್ರಾಮಸ್ಥರಿಗೆ ಬೇಕಾದ ಅನುಕೂಲವನ್ನು ಸಡಿಸುತ್ತಾರಲ್ಲದೆ ತಾಲ್ಲೋಕು ಜಮಾಬಂದಿಗಾಗಿ ಬಿಳಿಕೆರೆ ಮೊಕ್ಕಾಮಿನಿಂದ ದಯಮಾಡಿಸಿ ನಾಗೇನಹಳ್ಳಿ ಗ್ರಾಮವನ್ನು ಪರಾಂಬರಿಸಿಕೊಂಡು ಬೆಂಕಿಪುರದ ಗ್ರಾಮಕ್ಕೆ ದಯಮಾಡಿಸಲು ಗ್ರಾಮದ ಪಟೇಲ್ ಸಾಹುಕಾರ್ರು, ಹೆಗ್ಗೆಗೌಡರು ಗ್ರಾಮದ ಇನಾಮುಭೋಗಿಗಳು ಮೊದಲಾದ ದೊಡ್ಡ ಮನುಷ್ಯರು ಒಪ್ಪಿಸಿದ ಮರ್ಯಾದೆಯನ್ನು ಕೈಕೊಂಡು ತಳಿರು ತೋರಣಾದಿಗಳಿಂದಲೂ, ಚಿತ್ರಪಟಗಳಿಂದಲೂ ಅಲಂಕರಿಸಿದ್ದ ಗ್ರಾಮದ ಚಾವಡಿಗೆ ದಯಮಾಡಿಸಿ ಮಧ್ಯಾಹ್ನದ ಭೋಜನಾನಂತರ ಜಮಾಬಂದಿ ನಡೆಸಿ ಪ್ರಜೆಗಳು ಹೇಳಿಕೊಳ್ಳುವ ಅಹವಾಲುಗಳಿಗೆ ತಕ್ಕ ಉತ್ತರವನ್ನು ಕೊಟ್ಟು ರಾತ್ರಿ ಸುಮಾರು 10 ಗಂಟೆ ವರೆಗೆ ಜಮಾಬಂದಿ ನಡಿಸಿ ಭೋಜನಾನಂತರ ಫೋನೋಗ್ರಾಫ್ ಸಂಗೀತದಿಂದ ಆನಂದಹೊಂದಿ ರಾತ್ರಿ ಸುಮಾರು 3 ಗಂಟೆ ಸಮಯದಲ್ಲಿ ಮದ್ದೂರು ಮೊಕ್ಕಾಮಿಗೆ ದಯಮಾಡಿಸಿದರು.—ಬೆಂಕಿಪುರ ಗ್ರಾಮದಲ್ಲಿ ಪ್ರೈವೇಟ್ ಸ್ಕೂಲ್ ಮಾಸ್ಟರ್ ಕೆ. ಎನ್. ಶ್ರೀಕಂಠಾಚಾರ್ಯರು ದೇವಸ್ಥಾನದಲ್ಲಿ ಅಲಂಕರಿಸಿ ಪಾಠಶಾಲೆ ಹುಡುಗರಿಂದ ಆಟಪಾಟಾದಿಗಳನ್ನು ಆಡಿಸಿ ಸಾಯಂಕಾಲ ಗ್ರಾಮದ ಎಲ್ಲಾ ದೊಡ್ಡ ಮನುಷ್ಯರನ್ನೂ ಬರಮಾಡಿಕೊಂಡು ದೇವರಿಗೆ ಪೂಜೆ ಮೊದಲಾದುವನ್ನು ನಡಿಸಿ ಸೇರಿದ್ದ ಸಭೆಯವರಿಗೂ ಪಾಠಶಾಲೆ ಹುಡುಗರಿಗೂ ತಿಂಡಿ ಮೊದಲಾದುವನ್ನು ಹಂಚಿ ಸಭೆಯವರೆಲ್ಲಾ ಎದ್ದು ನಿಂತು ಘನವನ್ನು ಹೊಂದಿದ ಬ್ರಿಟಿಷ್ ಸರಕಾರದ ಯೂನಿಯನ್ ಜಾಕ್ ಎಂಬ ಪತಾಕೆವು ಆಚಂದ್ರಾರ್ಕ ಸ್ಥಾಯಿಯಾಗಿ ಭರತಖಂಡದಲ್ಲಿ ನಿಲ್ಲಲಿ; ಈಗ ನಡೆಯುತ್ತಿರುವ ಘೋರ ಯುದ್ಧದಲ್ಲಿ ನಮ್ಮ ಚಕ್ರವರ್ತಿಗಳಿಗೆ ಜಯವಾಗಲಿ; ಅವರ ಆಶ್ರಿತರಾದ ನಮ್ಮ ಮಹಾರಾಜರವರಿಗೂ ದೀರ್ಘಾಯುಷ್ಯವನ್ನು ಕರುಣಿಸಲಿ ಎಂದು ತ್ರಿಘೋಷಮಾಡಿದರು.

ಚಾಮರಾಜನಗರ.—ಈ ತಾಲ್ಲೋಕು ಸಂತೆಮರಹಳ್ಳೀ ಹೋಬಳೀ ಹೆಗ್ಗವಾಡಿಪುರ, ದೇಶವಳ್ಳಿ ಗ್ರಾಮಗಳಿಗೆ ತಾ. 4 ರಲ್ಲಿ ಅಮಲ್ದಾರ್ ಮ|| ಕೆ. ಕೇಶವಾಚಾರ್ರು ದಯಮಾಡಿಸಿ ಸರ್ಕಾರಿ ಚಾವಡಿಯಲ್ಲಿ ಎರಡು ಗ್ರಾಮಗಳ ರೈತರುಗಳೂ ಸೇರಿ ಅವರ ಅಧ್ಯಕ್ಷತೆಯಲ್ಲಿ ಗ್ರಾಮಾಭಿವೃದ್ಧಿಯ ಮೀಟಿಂಗು ನಡಿಸಲ್ಪಟ್ಟಿತು. ಈ ಗ್ರಾಮಗಳಲ್ಲಿ ಪಬ್ಲಿಕ್ ಲೈಬ್ರರಿ ಸ್ಥಾಪನೆ ವಿಚಾರದಲ್ಲಿ ರೈತರಿಗೆ ತಕ್ಕ ಉಪನ್ಯಾಸದ ಮೂಲಕ ತಿಳುವಳಿಕೆ ಕೊಟ್ಟು ಸದರಿ ಪುಸ್ತಕ ಭಂಡಾರವನ್ನು ರೈತರುಗಳ ಚಂದಾ ಮೊಬಲಗಿನ ಸಹಾಯದಿಂದ ಸ್ಥಾಪನೆ ಮಾಡಿಸಿಕೊಟ್ಟರು. ಹೆಗ್ಗವಾಡಿಪುರ, ದೇಶವಳ್ಳಿ ಗ್ರಾಮಗಳ ಸ್ಕೂಲ್ ಕಟ್ಟಡಕ್ಕಾಗಿ ಧರ್ಮಾರ್ಥವಾಗಿ ಕೊಟ್ಟಿರುವ ಮ|| ಶಂಕರಶೆಟ್ಟರ ಬಾಬ್ತು ಸುಮಾರು 400 ರೂಪಾಯಿ ಬಾಳುವ ಜಮೀನಿನಲ್ಲಿ ಸದರಿ ಸ್ಕೂಲ್ ಕಟ್ಟಡವನ್ನು ಕಟ್ಟಿಸಲು ಪ್ರಾರಂಭ ಮಾಡಿ, ಇದಕ್ಕೆ ಮ|| ಇನಾಮುಭೋಗಿ ಶ್ರೀಕಂಠಯ್ಯನವರು, ಮುದ್ದುಬಸಪ್ಪನವರು ಮುಂತಾದ ರೈತರುಗಳು ಚಂದಾ ಮೊಬಲಗನ್ನು ಸಹಾಯಮಾಡಿದರು. ಮತ್ತು ಅಮಲ್ದಾರ್ರವರು ಬಹಳವಾಗಿ ಉಪನ್ಯಾಸ ಮಾಡಿ, ದವಸದ ಬ್ಯಾಂಕು ಸಹ ಏರ್ಪಾಡು ಮಾಡಿಸಿಕೊಟ್ಟರು.—ಈ ಗ್ರಾಮಗಳಲ್ಲಿ ಇರತಕ್ಕ ಕೋಆಪರೇಟಿವ್ ಸೊಸೈಟಿ ಸ್ಥಾಪನೆ ಮಾಡಿರುವ ಆಫೀಸಿಗೆ ಅಮಲ್ದಾರ್ರು ದಯಮಾಡಿಸಿ ಮೆಂಬರುಗಳನ್ನು ಸೇರಿಸಿ ಬಹಳವಾಗಿ ಸೊಸೈಟಿಯ ಪರವಾಗಿ ಉಪನ್ಯಾಸ ಮಾಡಿ ಸಂಘದ ಲೆಕ್ಕವನ್ನು ಇನ್ಸ್‌ಪೆಕ್ಷನ್ ಮಾಡಿ ಪರಾಂಬರಿಕೆಯಿಂದ ಸದರಿ ಸೊಸೈಟಿ ಅಭಿವೃದ್ಧಿ ವಿಷಯದಲ್ಲಿ ಮೆಂಬರುಗಳಿಗೆ ತುಂಬಾ ತಿಳುವಳಿಕೆ ಕೊಟ್ಟರು.—ಈ ಗ್ರಾಮಗಳಲ್ಲಿ ತಿಳುವಳಿಕೆ ಇಲ್ಲದ ರೈತರುಗಳಿಗೆ ತುಂಬಾ ತಿಳುವಳಿಕೆ ಕೊಟ್ಟು ಇಲ್ಲಿ ಯಾವ ಕಾಲಕ್ಕೂ ಇಲ್ಲದ ಸ್ಕೂಲ್ ಸ್ಥಾಪನೆ ಇವರ ದಿವಸದಲ್ಲಿ ಮಾಡಿ ಸ್ವಂತವಾಗಿ ಸ್ಕೂಲ್ ಕಟ್ಟಡದ ಅಸ್ತಿಭಾರಕ್ಕೆ ಗುದ್ದಲಿ ಪೂಜೆಯನ್ನು ಪ್ರತಿಷ್ಠೆ ಮಾಡಿ, ಕಟ್ಟಡ ತಯಾರಾಗಲು ಏರ್ಪಾಡು ಮಾಡಿಸಿಕೊಟ್ಟರು. ಮತ್ತು ಈ ವಿಚಾರದಲ್ಲಿ ಮುಖ್ಯವಾದ ಕಾರ್ಯಭಾಗವನ್ನು ವಹಿಸಿ ನಮ್ಮಗಳಿಗೆ ಪ್ರೋತ್ಸಾಹವನ್ನು ಉಂಟುಮಾಡಿದ ಶೇಕದಾರ್ ಮ|| ಮೀರ್ ಮುಸ್ತಫಾ ಬೇಗ್ ಸಾಹೇಬರಿಗೂ ನಾವು ಕೃತಜ್ಞರಾಗಿದೇವೆ.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ತ್ರಿ ಮುರಬ್ಬ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಿಜಿಸ್ಟರ್ ಟ್ರೇಡ್ ಮಾರ್ಕ್

ಈ ಸಾಲಾಮಿಸ್ತ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವುದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ತ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ. [204-7]

ಕ್ರಯ ಡಬ್ಬಿ 1 ಕ್ಕೆ ರೂ. 3-0-0 ಟಪ್ಪಾಲು ಖರ್ಚು 1 ಡಬ್ಬಾದಿಂದ 3 ಡಬ್ಬಿಗಳಿಗೆ 0-6-0.

ಇದರ ಪೂರಾ ಕೇಟಲಾಗು ಅಪೇಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ.

ಡಿ. ಮನ್ನಾಲಾಲ್, ಢಿಲ್ಲಿ ವೈದ್ಯರು,
5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ. ಬಾಳಿಕೆ ಬರುವದು.

ಗೋವರ್‌ಜಾರ್ಜ್ ಬಳ್ಳಿ ಸೀರೆ

ರೂ. 2-8-0.

ಈ ಹೊಸ ನಮೂನೆ ಸೀರೆಗಳು ಬಹು ನಾಜೂಕಾದ ಬಿಳೇ ಮಲ್ಲಿನಲ್ಲಿ ಗೋವರ್‌ಜಾರ್ಜ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ದಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಹಳ ಹೋಗದು ಇಂಥಾ ಭಾರಿ ಕ್ರಯದ ಸೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವವರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಸೀರೆ ಯಾರಲ್ಲಿಯೂ ದೊರಿಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ.—ರಾಸ್ ವಾಚ್ ಅಂಡ್ ಕಂಪನಿ,
[252-1] 3, ಇರುಳಪ್ಪನ ಬೀದಿ, ಮದರಾಸು.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಕ್ಸವ್ ಹಲ್ಲರುಗಳು ನಂ. 1 ಮತ್ತು 2; ದೇವಿ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು; ಬಲ್ಲಡೆ ರೇಕುಗಳು; ಆಸ್ಟ್ರೇಲಿಯಾ ದೇಶದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಛತ್ರದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-6]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಸಂತೋಷಕರವಾದ ಪ್ರಕಟನೆ !

ಹೊಸ ನಮೂನೆ ಗಡಿಯಾರ. **ಸಂತೋಷಕರವಾದ ಬಹುಮಾನ.**

ಸುಂದರವಾದ ಇಂಗ್ಲೀಷು ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 3-0-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ಪಕ್ಕದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ಶಾಪು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪೆನಿ ಸೇಕರ



ಉತ್ಕೃಷ್ಟವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರಗಳಿಂದಲೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಛಾರಿಟಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ದೊರೆಗಳು ಕೊಂಡುಕೊಳ್ಳುತ್ತಿದ್ದಾರೆ. ಇಂಡಿಯಾ ದೇಶದಲ್ಲಿ ಪ್ರಸಿದ್ಧ ಸೊದಾರು ಗಡಿಯಾರಗಳು ಖರ್ಚು ಆಗುತ್ತವೆ. ಆದ್ದರಿಂದ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷ ಪಡಬಾರದೆ. ಬಹುಮಾನ ಪದಾರ್ಥಗಳು—(1) ಸರಪಣಿ, (2) ಕಂಠಾಭರಣ, (3) ಜರಾಕ್ ಕರವಸ್ತ್ರ, (4) ಕೈ ಉಂಗುರ, (5) ಕಫಲಿಂಕು ಗುಂಡು, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ನಮ್ಮ ವಿಳಾಸ—ಧೈರ್ಯಲಕ್ಷ್ಮೀ ಅಂಡ್ ಕಂಪನಿ,

[252-1] 3, ಇರುಳಪ್ಪನ ಬೀದಿ, ಮದರಾಸು.

"ಹನುಮಾರ್ಕ್"  ಬೋರಾಕ್ಸ್ ಸಾಬೂನು.

ಮನೋಹರಿಣಿ 1 ಕ್ಕೆ 9 ಪೈ. 12 ಕ್ಕೆ 6 ಆ., 50 ಕ್ಕೆ 1-8-0, 00 ಕ್ಕೆ 2-8-0 ವರಾನ್ವೇಷಣೆ 1 ಕ್ಕೆ 1 ಆ 3 ಪೈ 12 ಕ್ಕೆ ¾ ರೂ 50 ಕ್ಕೆ 2-10-0 100 ಕ್ಕೆ ರೂ. 4-4-0 ಪೋಸ್ಟೇಜ್ ಪ್ರತ್ಯೇಕ [239-3]
ವಿಳಾಸ—ಕೆ. ಶ್ರೀನಿವಾಸಾಚಾರ್. ಆ. ನಾ. ನುರುಗನಹಳ್ಳಿ, ಕೋಲಾರ್

ಆರೋಗ್ಯಶಾಸ್ತ್ರ ಪ್ರಶ್ನೋತ್ತರ.—ಎಲ್ಲಾ ತರದ ಪ್ರಶ್ನೆಗಳೂ, ಸಂಪೂರ್ಣ ಉತ್ತರಗಳೂ ಇವೆ, 5 ಆಣೆ. 1916 ನೇ ಲೋ. ಸೆ. ಕನ್ನಡ ಟೆಕ್ಸ್ಟ್ ಪ್ರಶ್ನೋತ್ತರ 3 ಆ. ವ್ಯಾಕರಣಪ್ರಶ್ನೋತ್ತರ 1½ ಆ. ಬಾಲವ್ಯಾಕರಣ (ಲೋ. ಸೆ. ಪರೀಕ್ಷೆಗೆ) ಅತ್ಯಂತ ಉಪಯೋಗವಾಗಿದೆ. 6½ ಆಣೆ. [242-4]
ವಿಳಾಸ.—ಕೆ. ಆರ್. ನರಸಿಂಹಯ್ಯ, ಹೈ ಸ್ಕೂಲ್, ಚಿಕ್ಕಬಳ್ಳಾಪುರ.

ಗೃಹಕೃತ್ಯದ ನೋಟೀಸು.

ಚನ್ನರಾಯಪಟ್ಣ ತಾಲ್ಲೋಕು ಹಿರಿಸಾವೆ ಹೋಬಳಿ ಹೊನ್ನೆನಹಳ್ಳಿ ಗ್ರಾಮದಲ್ಲಿರುವ ಹೊಟ್ಟೆಗನ ತಿರುಮಲರಂಗೇಗೌಡನ ಮಗ ಗಿರಿಯಣ್ಣನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ ನನ್ನ ತಂದೆ ರಂಗೇಗೌಡನು 60 ವರುಷದವನಾಗಿ ಬುದ್ಧಿವೈಕಲ್ಯತೆಯಿಂದ ನನ್ನ ತಾಯಿ ನಂಜಿ ಎಂಬವಳು ಮೃತಳಾದ ಬಳಿಕ ಲಕ್ಷ್ಮಿ ಎಂಬವಳನ್ನು ಎರಡನೆ ಲಗ್ನಮಾಡಿಕೊಂಡು ಇವಳ ಮಹೋಪದೇಶದಿಂದಲೂ, ಜನರ ಕೆಟ್ಟ ಹೇಳಿಕೆಯಿಂದ ಸಹಾ ವಂಶಾರ್ಜಿತವಾಗಿ ಬಂದಿರುವ ಈ ಹೊನ್ನೆನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂಬರು 59 ನೆ 1, 131 ನೆ 9, 146 ನೆ 1, 148 ನೆ 1, 92, ಈ ಜಮೀನುಗಳು ಹೊರತು 24 ಅಂಕಣವುಳ್ಳ ಹೆಂಚಿನ ಮನೆ, 2 ಪಾಳು ನಿವೇಶನಗಳು ಸಹಾ ಇರುವದನ್ನು ನನಗೆ ಪ್ರತಿಕೂಲ ಉಂಟುಮಾಡಿ ಮುಂದೆ ಜೀವನಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂಬ ಕೆಟ್ಟ ಇರಾದೆಯಿಂದ ಕ್ರಯ ಭೋಗ್ಯ ಆಧಾರಗಳ ಮೂಲಕ ಪರಾಧೀನಪಡಿಸಬೇಕೆಂದು ಪ್ರಯತ್ನಪಟ್ಟಿರುವನು. ಈ ಸ್ವತ್ತುಗಳನ್ನು ನನ್ನ ಸ್ವಂತ ರುಜುವಿಲ್ಲದೆ ಯಾವ ವಿಧದಿಂದಾಗಲಿ ಯಾರು ಹೊಂದಿದಾಗ್ಯೂ ದ್ರವ್ಯ ನಷ್ಟಪಡಿಸಿಕೊಂಡು ಸ್ವತ್ತು ಇಲ್ಲದಂತಾಗಿ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ ಅಲ್ಲದೆ ನನಗೆ ಸಂಭವಿಸುವ ನಷ್ಟಗಳಿಗೂ ಗುರಿಯಾಗಬೇಕಾಗುತ್ತೆ. ನನ್ನ ತಂದೆಯು ಕೈಗಡ ಮತ್ತು ಪತ್ರ ಮೂಲಕ ಸಹಾ ಸಾಲಾ ಕೊಟ್ಟಿರುವ ಹಣಗಳನ್ನು ಅವರಿಗೆ ಪಾವತಿ ಮಾಡದೆ ನನಗೆ ಪಾವತಿಮಾಡುತ್ತಾ ರಶೀತಿ ಹೊಂದಬೇಕು. [257-1]

ತಾ. 13-11-15 ಗಿರಿಯಣ್ಣನ ರುಜು.

ವೃತ್ತಾಂತ ಪತ್ರಿಕೆ.

—:O:—

೫೯ ೧೯೧೫ ನೇ ಇಸವಿ ನವಂಬರ್ ತಾ. ೨೫ ನೇ ಗುರುವಾರ.

ಮೈಸೂರಿನಲ್ಲಿ ಅಭಿವೃದ್ಧಿ ಕಾರ್ಯಗಳು.

ಮೈಸೂರು ಸಂಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡಿಸಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರದವರು ವಿಶೇಷ ತರವಾದ ಇಪ್ಪತ್ತು ವಿಚಾರಗಳನ್ನು ಕಾಣಿಸಿ ಒಂದು ಹಸ್ತಪತ್ರಿಕೆಯನ್ನು ಅಚ್ಚು ಮಾಡಿಸಿ ಪ್ರಜೆಗಳಲ್ಲಿ ಗಣ್ಯರಾದವರಿಗೆಲ್ಲಾ ಒಂದೊಂದು ಪ್ರತಿಯನ್ನು ಕಳುಹಿಸಿಕೊಟ್ಟು, ಆ ವಿಚಾರಗಳು ... ಸಾರ್ಥಕವಾಗಿಯೂ ಸಂಪೂರ್ಣವಾಗಿಯೂ ನೆರವೇರುವ ಭಾಗದಲ್ಲಿ ಪ್ರಜೆಗಳು ಸಹಾಯಮಾಡಬೇಕೆಂದು ಅಪೇಕ್ಷಿಸುತ್ತಾರೆ. ಇಂಥಾ ಪತ್ರಿಕೆಯು ಬಗೆಬಗೆ ಅನೇಕರ ಕೈಸೇರಿರುವುದು. ಅದನ್ನು ನಾವೂ ಓದಿ ನೋಡಿದೆವು. ಆ ಪೈಕಿ ಹಲವು ವಿಷಯಗಳು ಅಷ್ಟೇನೂ ಆತುರವಾಗಿ ನೆರವೇರಬೇಕಾದವುಗಳೆಂದು ನಮಗೆ ತೋರುವುದಿಲ್ಲ. ಏಕಕಾಲದಲ್ಲಿ ಇಪ್ಪತ್ತು ವಿಷಯಗಳನ್ನು ಹಿಡಿದು ತೊಳಲುವುದಕ್ಕಿಂತ ಎರಡು ಮೂರು ವಿಚಾರಗಳನ್ನು ಮಾತ್ರ ಮೊದಲು ಇಟ್ಟುಕೊಂಡು ವ್ಯವಸಾಯ ಮಾಡಿದ ಪಕ್ಷದಲ್ಲಿ ಹೆಚ್ಚಿನ ಪ್ರಯೋಜನವುಂಟಾಗಬಹುದೆಂದು ನಂಬುತ್ತೇವೆ. ಶ್ರೇಯಸ್ಕರವಾದ ಕಾರ್ಯಗಳು ನಡೆಯುತ್ತಾ ಬರಬೇಕೆಂಬ ಭಾಗದಲ್ಲಿ ಇಷ್ಟೊಂದು ಆತುರವೂ ಕುತೂಹಲವೂ ಉಂಟಾಗಿರುವುದನ್ನು ನೋಡಿದರೆ ಎಷ್ಟೋ ಸಂತೋಷವಾಗುತ್ತದೆ. ಆದರೇನು, ಬಹುಭಾಗವೆಲ್ಲಾ ಸರಸ್ವತೀ ಪ್ರಸನ್ನವಾಗುವುದರಲ್ಲೂ, ಅಚ್ಚಾಗಿ ಪ್ರಚಾರಮಾಡುವುದರಲ್ಲೂ ಅಂತ್ಯವಾಗುತ್ತದೆ. ಇಂಥವುಗಳನ್ನು ಎಲ್ಲರೂ ಸಮಗ್ರವಾಗಿ ಓದಿಯಾದರೂ ಗ್ರಹಿಸಿಕೊಳ್ಳುವರೋ ಎಂದು ಸಂಶಯಪಡುವೆವು.

ಈಗ ಚಲಾವಣೆಯಲ್ಲಿರುವ, ನಿತ್ಯಗಟ್ಲೆ ನಡೆಯಬೇಕಾದ ಸರ್ಕಾರೀ ಕೆಲಸ ಕಾರ್ಯಗಳನ್ನು ತಿದ್ದಿ ಕ್ರಮಪಡಿಸುವ ಭಾಗದಲ್ಲಿ ಯಾವ ಪ್ರಯತ್ನಗಳೂ ನಡೆಯುತ್ತಿರುವಂತೆ ನಾವು ನೋಡಿದ್ದೂ ಇಲ್ಲ, ಓದಿದ್ದೂ ಇಲ್ಲ. ರೆವಿನ್ಯೂ ಖಾತೆಯ ಕೆಲಸ ಕಾರ್ಯಗಳನ್ನು ನಡಿಸುವಂಥಾ ಅಧಿಕಾರಿಗಳು—ಅಮಲ್ದಾರರು, ಅಸಿಸ್ಟೆಂಟ್ ಕಮೀಷನರುಗಳು, ಡೆಪ್ಯುಟಿ ಕಮೀಷನರುಗಳೇ ಮೊದಲಾದವರು—ತಮ್ಮ ದಿನಚರಿಯ ಸಹಜವಾದ ಕೆಲಸಗಳನ್ನು ತೃಪ್ತಿಕರವಾಗಿ ಮಾಡುವುದಕ್ಕೆ ಅವರಿಗೆ ವ್ಯವಧಾನವಿಲ್ಲದಂತಾಗಿದೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಹೊಸ ವಿಚಾರಗಳನ್ನು ಹಿಡಿದು ಹುಡುಕಾಡುವ ಕೆಲಸ ಬಿದ್ದಾಗ ಈ ಅಧಿಕಾರಿಗಳ ಸಹಾಯ ಬೇಕೇ ಬೇಕು. ಅಂಥಾ ಸಂದರ್ಭಗಳಲ್ಲಿ ಈ ಅಧಿಕಾರಿಗಳ ನಿತ್ಯಗಟ್ಲೆ ಕೆಲಸಗಳು ವಿಳಂಬಕ್ಕೆ ಬೀಳುವುದೇನೂ ಆಶ್ಚರ್ಯವಲ್ಲ. ಹೊಸ ಕೆಲಸಗಳು ಹುಟ್ಟಿ ಆತುರವಾಗಿ ನಡೆಯಬೇಕೆಂಬ ನಿರ್ಬಂಧವಾಗೋಣದರಿಂದ ರೆವಿನ್ಯೂ ಖಾತೆಯ ಕೆಲಸ ಕಾರ್ಯಗಳು ಅಲಕ್ಷ್ಯಕ್ಕೆ ಬಿದ್ದುಹೋಗಿರುವವೆಂದು ಎಲ್ಲಾ ಕಡೆಗಳಲ್ಲೂ ಆಕ್ಷೇಪಣೆಗಳು ಹುಟ್ಟಿ ಹೆಚ್ಚುತ್ತಿರುವವು. ಅನೇಕ ಸಂದರ್ಭಗಳಲ್ಲಿ ಅಭಿವೃದ್ಧಿಯಾಗಿದೆ ಎಂದು ರಿಪೋರ್ಟುಗಳು ಹೇಳುತ್ತವೆ. ಇವುಗಳನ್ನು ಕಾಗದದಲ್ಲಿ ಓದುವಾಗ್ಗೆ ಚೆನ್ನಾಗಿಯೂ ಸಂತೋಷಪ್ರದವಾಗಿಯೂ ಕಾಣುವವು. ಆದರೆ ಯಥಾರ್ಥವಾದ ಸಂಗತಿಗಳೇನೆಂದು ಹುಡುಕಿ ನೋಡುತ್ತಾ ಬಂದ ಪಕ್ಷದಲ್ಲಿ ಅವು ಅಷ್ಟೇನೂ ಸಂತೋಷಪ್ರದವಾಗಿ ಕಾಣುವುದಿಲ್ಲ.

ನಮ್ಮ ಸಂಸ್ಥಾನದಲ್ಲಿ ಅಭಿವೃದ್ಧಿಯ ಕೆಲಸ ಕಾರ್ಯಗಳು ಹೇರಳವಾಗಿ ನಡೆದು ಶ್ರೇಯಸ್ಸುಂಟಾಗಬೇಕೆಂದು ನಾವು ಬಹಳವಾಗಿ ಕುತೂಹಲ ಪಡುತ್ತೇವೆ. ಆದರೆ ನಮ್ಮ ಮೈಸೂರು ಗವರ್ನಮೆಂಟಿನಲ್ಲಿರುವ ಸಂಬಳಗಾರರು ಸಂಸ್ಥಾನದ ನಿತ್ಯಗಟ್ಲೆ ಕೆಲಸಗಳನ್ನು ಚಟುವಟಿಕೆಯಾಗಿ ನಡಿಸುವುದರ ಜೊತೆಗೆ ಹಲವು ಹೊಸ ಏರ್ಪಾಡುಗಳಿಗೆ ಸಂಬಂಧಪಡುವಂಥಾ ಬಗೆಬಗೆಯ ಕೆಲಸಗಳನ್ನೂ ನಿರ್ವಹಿಸಬಲ್ಲಷ್ಟು ಸಮರ್ಥರಲ್ಲ; ಅವರ ಸಂಖ್ಯೆ ಅಷ್ಟು ಹೇರಳವಾಗಿಯೂ ಇಲ್ಲ. ನಮ್ಮ ಗವರ್ನಮೆಂಟಿನವರು ಪ್ರಾಮುಖ್ಯವಾದ ಎರಡೋ ಮೂರೋ ಹೊಸ ಏರ್ಪಾಡುಗಳನ್ನು ಮುಂದಿಟ್ಟುಕೊಂಡು ಅವುಗಳನ್ನು ಸಾರ್ಥಕವಾಗಿ ನೆರವೇರಿಸೋಣವೆಂದು ನಿರ್ಬಂಧಪಡಿಸಿ ಕೆಲಸ ಜರುಗಿಸುತ್ತಾ ಬಂದ ಪಕ್ಷದಲ್ಲಿ ಕೆಲವು ವರುಷಗಳಲ್ಲೇ ಯಥಾರ್ಥವಾದ ಅಭಿವೃದ್ಧಿಯು ಲಭ್ಯವಾಗಲೆನ್ನುವುದರಲ್ಲಿ ಅನುಮಾನವಿಲ್ಲ. ಗ್ರಾಮಗಳನ್ನು ಅಭಿವೃದ್ಧಿಗೆ ತರಬೇಕೆಂಬ ಏರ್ಪಾಡು ಈಗೀಗ ಕಣ್ಣು ಬಿಡುವುದರಲ್ಲಿದೆ. ಆದರೆ ಅದನ್ನು ಮಿತಿಮೀರಿ ಬೆಳೆಯುವಂತೆ ಮಾಡಬೇಕೆಂಬ ಆತುರವೂ ನಿರ್ಬಂಧವೂ ಕಂಡು ಬರುತ್ತಿರುವವು. ಇದನ್ನು ನೋಡಿದರೆ ಈಗ ಆರಂಭದಲ್ಲಿ ಕಾಣುವ ಕುತೂಹಲವೂ ಮುತುವರ್ಜಿಯೂ ಕರಗಿಹೋಗಬಹುದೆಂಬ ಶಂಕೆಯುಂಟಾಗಿದೆ. ಪ್ರೀತಿ ಹುಟ್ಟಿ ಈ ಕಾರ್ಯವನ್ನು ಜಾಗರೂಕತೆಯಿಂದ ಕಾಪಾಡಿ ಅಭಿವೃದ್ಧಿಗೆ ತರಲಿ; ಗ್ರಾಮವನ್ನು ಚೊಕ್ಕಟವಾಗಿ ಇಟ್ಟುಕೊಳ್ಳುವ ಭಾಗದಲ್ಲಿ ಗ್ರಾಮಸ್ಥರಿಗೆ ಬುದ್ಧಿ ವಿವೇಕಾದಿಗಳನ್ನು ಕಲಿಸಿಕೊಡುವಂತಾಗಲಿ; ಗ್ರಾಮದಲ್ಲಿ ಪ್ರಜೆಗಳು ತಮ್ಮ ಗೋಕಾದಿಗಳನ್ನು ಚೆನ್ನಾಗಿ ಸಾಕಿ ಸಲಹುವಂತೆ ಅವರಿಗೆ ಉತ್ತೇಜನ ಕೊಡಲಿ; ಮತ್ತೂ ಜಮೀನುಗಳನ್ನು ಇನ್ನೂ ಚೆನ್ನಾಗಿ ಉತ್ತು ಬೇಸಾಯ ಮಾಡಿ ಹುಲುಸಾದ ಬೆಳೆಗಳನ್ನು ಮಾಡಿಕೊಳ್ಳುವಂತೆ ರೈತರಿಗೆ ಬುದ್ಧಿ ಕುಶಲತೆಯನ್ನುಂಟುಮಾಡಿ ಪ್ರೋತ್ಸಾಹಕೊಡುತ್ತಾ ಬರುವಂತಾಗಲಿ. ನಮ್ಮ ಸಂಸ್ಥಾನವನ್ನು ಪರಿಪಾಲನೆ ಮಾಡುವ ಕಾರ್ಯಭಾರವನ್ನು ಹೊತ್ತಿರುವಂಥವರೂ, ದೇಶವತ್ಸಲರೂ ಇದೊಂದು ಏರ್ಪಾಡು ಸಾರ್ಥಕವಾಗಬೇಕೆಂಬ ಘನತರವಾದ ಉದ್ದೇಶದಿಂದ ತಮ್ಮ ಸರ್ವ ಶಕ್ತಿಯನ್ನೂ, ಪೂರ್ಣ ಮನಸ್ಸನ್ನೂ, ಎಲ್ಲಾ ಬುದ್ಧಿ ಕುಶಲತೆಯನ್ನೂ ಅದಕ್ಕೆ ವಿನಿಯೋಗಿಸುತ್ತಾ ಬರುವ ಪಕ್ಷದಲ್ಲಿ ಕೆಲವು ವರುಷಗಳು ಕಳೆಯುವುದರೊಳಗೆ ಸಂತೋಷಪ್ರದವಾದ ಫಲಗಳು ಕಂಡುಬರುತ್ತವೆ. ಆದರೆ ಈ ಏರ್ಪಾಡನ್ನು ಇತರ ಇಪ್ಪತ್ತು ನವೀನ ಏರ್ಪಾಡುಗಳ ಜೊತೆಗೆ ಸೇರಿಸಿಬಿಟ್ಟು ಎಲ್ಲಾ ಫಲಕ್ಕೆ ಬರಲೆಂದು ಆತುರಪಟ್ಟರೆ ವಿಶೇಷ ಪ್ರಯೋಜನವಾದೀತೆಂಬ ಭರವಸೆಯೇನೂ ತೋರುವುದಿಲ್ಲ. ಈ ಪರಮಾವಶ್ಯಕವಾದ ಏರ್ಪಾಡು ಕಣ್ಣು ಮರೆಗೆ ಬಿದ್ದು, ಕಾಲಕ್ರಮದಲ್ಲಿ ಮನಸ್ಸಿಗೂ ದೂರವಾದೀತು.

ಈ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಸಹಾಯ ಮಾಡುತ್ತೇವೆಂದು ಒಪ್ಪಿಕೊಂಡಿರುವಂಥಾ ನೂರಾರು ಜನಗಳ ಹೆಸರಿನ ಪಟ್ಟಿಗಳನ್ನು ನಮ್ಮ ಸರ್ಕಾರದವರಿಗೆ ಕಳುಹಿಸಿರಬಹುದು. ಆದರೆ ಅಂಥವರಲ್ಲಿ ಯಾವ ಯಾವ ಕೆಲಸಗಳನ್ನು ಯಾವ ಯಾವ ರೀತಿ ... ಸಂಶಯ. ಇಂಥಿಂಥಾ ಅಭಿವೃದ್ಧಿ ಕೆಲಸಗಳು ನಡೆದಿವೆ ಎಂದು ಮೂರು ತಿಂಗಳಿಗೊಂದಾವರ್ತಿ ರಿಪೋರ್ಟು ಬರೆಯುವುದನ್ನು ನೋಡಿದರೆ ಸ್ಕೂಲ್ ಮಾಸ್ಟರು ತನ್ನ ಬಳಿ ಓದುವ ವಿದ್ಯಾರ್ಥಿಗಳ ಅಭಿವೃದ್ಧಿಯ ರಿಪೋರ್ಟನ್ನು ಆರು ತಿಂಗಳಿಗೊಂದು ಸಲ ಬರೆದು ಕಳುಹಿಸಿದ ಕಥೆ ಜ್ಞಾಪಕಕ್ಕೆ ಬರುತ್ತದೆ. ಇಷ್ಟೊಂದು ನಿರ್ಬಂಧಪಡಿಸಿ ಹೊರತು ಅಭಿವೃದ್ಧಿ ಕಾರ್ಯಗಳು ನಡೆಯುವುದು ಪ್ರಯಾಸವೆಂಬ ಪಕ್ಷದಲ್ಲಿ ಅದರ ಪರಿಣಾಮವು ವಿಶೇಷ ಸಂತೋಷಪ್ರದವೆನಿಸುವುದಿಲ್ಲ.

ಸದ್ಗುಣ.

ಬ್ರಿಟಿಷ್ ಚಕ್ರಾಧಿಪತ್ಯದ ಮಂತ್ರಿ ಶ್ರೇಷ್ಠನಾಗಿದ್ದ ಮಿ. ಗ್ಲಾಡ್‌ಸ್ಟನ್ ಎಂಬ ಲೋಕಪ್ರಖ್ಯಾತನಾದ ಮಹಾತ್ಮನ ವಿಷಯದಲ್ಲಿ ವಾಚಕರು ಸ್ವಲ್ಪಮಟ್ಟಿಗೆ ಓದಿಯೂ ಕೇಳಿಯೂ ಬಲ್ಲರು. ಈತನ ಸದ್ಗುಣವನ್ನೂ ಸಜ್ಜನಿಕೆಯನ್ನೂ ಕುರಿತು ಪ್ರಸ್ತಾಪಮಾಡುವದು ನಮಗೆ ಎಂದಿಗೂ ಬೇಸರವನ್ನು ಹುಟ್ಟಿಸುವದಿಲ್ಲ. ಲಾರ್ಡ್ ಸ್ಯಾಲಿಸ್‌ಬರಿ ಪ್ರಭುವು ಗ್ಲಾಡ್‌ಸ್ಟನ್ ಮಂತ್ರಿತ್ವವನು ಉದ್ಯೋಗವನಾಡುತ್ತಿರುವಾಗಲೇ ತಾವೂ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿದ್ದರು. ಗ್ಲಾಡ್‌ಸ್ಟನ್ ದೊರೆಯು ಮೃತಪಟ್ಟ ಮೇಲೆ ಪಾರ್ಲಿಮೆಂಟ್ ಮಹಾಸಭೆಯಲ್ಲಿ ಲಾರ್ಡ್ ಸ್ಯಾಲಿಸ್‌ಬರಿ ಪ್ರಭುಗಳು ಹೇಳಿದುದೇನಂದರೆ,—ಗ್ಲಾಡ್‌ಸ್ಟನ್ ದೊರೆಯು ಈ ದೇಶದಲ್ಲಿ ಅನೇಕ ಒಳ್ಳೆ ತಿದ್ದುಪಾಟುಗಳನ್ನು ಪ್ರಚಾರಕ್ಕೆ ತಂದನು. ರಾಜ್ಯಾಡಳಿತದಲ್ಲಿ ಆತನು ಮಾಡಿದ ಏರ್ಪಾಡುಗಳೂ ಆ ಏರ್ಪಾಡುಗಳನು ಸ್ಥಿರಗೊಳಿಸುವದಕ್ಕೆ ಆತನು ಪಟ್ಟ ಮಹತ್ತರವಾದ ಪ್ರಯಾಸವೂ ನಮ್ಮೆಲ್ಲರಿಗೂ ಗೊತ್ತಿದೆ. ಇವುಗಳಿಗೋಸ್ಕರವಾಗಿ ನಾವೂ ಈ ಚಕ್ರಾಧಿಪತ್ಯವೂ ಕೃತಜ್ಞರಾಗಿರಬೇಕು ಸರಿ. ಆದರೆ ಆತನು ನಮ್ಮ ಮುಂದೆ ನಡೆದುತೋರಿಸಿರುವ ಸಜ್ಜನಿಕೆಯೇ ಚಿರಸ್ಮರಣೀಯವಾದದ್ದು. ಲೋಕದವರ ಚರಿತ್ರೆಯಲ್ಲಿ ನಮಗೆ ಆತನ ಮೇಲ್ಪಂಕ್ತಿಯು ಅದ್ವಿತೀಯವಾದದ್ದು. ಕ್ರೈಸ್ತ ಭಕ್ತರಿಗೆ ಆತನ ಮಾದರಿಯು ಸರ್ವಶ್ರೇಷ್ಠವಾದದ್ದು ಎಂಬುವದೇ.

ಗ್ಲಾಡ್‌ಸ್ಟನ್ ದೊರೆಯ ಗುಣಕಥನವನ್ನು ಮಾಡುವದರಲ್ಲಿ ಆತನು ರಾಜ್ಯತಂತ್ರಕ್ಕಾಗಿ ನಡಿಸಿದ ಎಲ್ಲಾ ಕಾರುಬಾರುಗಳಿಗಿಂತ ಇವೆಲ್ಲವುಗಳಿಗೆ ಮೂಲವಾದ ಆತನ ಸದ್ಗುಣವನ್ನು ಪ್ರಾಮುಖ್ಯವೆಂದು ಎಣಿಸುವದು ಆತನ ಸ್ವಾಭಾವಿಕ ಸ್ವಭಾವಕ್ಕೆ ಒಪ್ಪುತ್ತದೆಯೆಂದು ಕೆಳಗಿನ ಕಥೆಯಿಂದ ತಿಳಿದುಬರುತ್ತದೆ.

ಹದಿನಾರು ವರುಷದ ಯುವಕನಾದ ಮೋರಿಸನ್ ಯೆಂಬವನು ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪತ್ರಿಕಾ ಕರ್ತನೂ ಅದರ ಸಂಪಾದಕನೂ ಆಗಿದ್ದನು. ಇವನು ತನ್ನ ಜನ್ಮಸ್ಥಾನವಾದ ನ್ಯೂಯಾರ್ಕ್ ಪಟ್ಟಣದಿಂದ ಅಟ್ಲಾಂಟಿಕ್ ಸಾಗರವನ್ನು ದಾಟಿ ಲಂಡನ್ ಪಟ್ಟಣಕ್ಕೆ ಬಂದನು. ಇಷ್ಟು ದೂರ ಪ್ರಯಾಣ ಮಾಡುವದರಲ್ಲಿ ಅವನ ಉದ್ದೇಶವೇನಂದರೆ—ಮಿ. ಗ್ಲಾಡ್‌ಸ್ಟನ್ ದೊರೆಯ ಭೇಟಿಯನ್ನು ಪಡೆದು ನನ್ನ ಪತ್ರಿಕೆಯು ಇನ್ನೂ ಉತ್ತಮವಾದ ಸ್ಥಿತಿಯನ್ನು ಹೊಂದಿ ಲೋಕಪ್ರಖ್ಯಾತವಾದ ಕೀರ್ತಿಯನ್ನು ಪಡೆಯುವದಕ್ಕೆ ತಕ್ಕ ಸಲಹೆಗಳನ್ನು ಆತನಿಂದ ತಿಳಿಯಬೇಕೆಂಬುವದೇ. ಧೈರ್ಯಶಾಲಿಯಾದ ಈ ತರುಣನು ಲಂಡನ್ ಪಟ್ಟಣವನ್ನು ಹೊಕ್ಕು ಮಿ. ಗ್ಲಾಡ್‌ಸ್ಟನ್ ಯವರ ಭೇಟಿಯನ್ನು ಪಡೆಯುವದು ಸುಲಭಸಾಧ್ಯವಲ್ಲವೆಂದು ತಿಳಿದನು. ಯಾಕಂದರೆ ದೊಡ್ಡ ದೊಡ್ಡ ಪದವಿಗಳಲ್ಲಿದ್ದ ಅಧಿಕಾರಿಗಳೂ ಸಹ ಆತನನ್ನು ಕಂಡು ಆಲೋಚನೆ ಕೇಳಬೇಕೆಂದು ವಿನಂತಿಸಿ ಓಡ್ಯಾಡುತ್ತಿದ್ದರೂ ಅಂಥವರಿಗೂ ಗ್ಲಾಡ್‌ಸ್ಟನ್ ಮಂತ್ರಿಯ ಭೇಟಿಯು ದೊರೆಯುವದು ದುರ್ಲಭವಾಗಿದ್ದಿತು. ಆದರೆ ಮೋರಿಸನ್ ಹಿಡಿದ ಪಟ್ಟನ್ನು ಸುಲಭವಾಗಿ ಬಿಡುವವನಲ್ಲ. ಆದ್ದರಿಂದ ಅವನು ಕಷ್ಟಕ್ಕೆ ತಕ್ಕ ಹಲವು ಪ್ರಯತ್ನಗಳನ್ನು ಸಾಧಿಸಿ ತನ್ನ ಮನೋರಥವು ಕೈಗೂಡಬೇಕೆಂದು ಮೊದಲು ಗ್ಲಾಡ್‌ಸ್ಟನ್ ದೊರೆಯ ಸೆಕ್ರಟರಿಯನ್ನೂ ಆ ಮೇಲೆ ಅವರ ಕುಮಾರನನ್ನೂ ಅನಂತರ ಅವರ ಕುಮಾರಿಯನ್ನೂ ನೋಡಿ ಅವರು ತನಗೆ ಗ್ಲಾಡ್‌ಸ್ಟನ್ ಪ್ರಭುವಿನ ಭೇಟಿಯನ್ನು ದೊರಕಿಸಿಕೊಡುವ ಸಹಾಯಕರಾಗಬೇಕೆಂದು ಬೇಡಿದನು. ಆದರೆ ಅವರ್ಯಾರಿಂದಲೂ ಅವನು ಬಂದ ಕಾರ್ಯವು ಸಿದ್ಧಿಗೆ ಮುಟ್ಟಲಿಲ್ಲವಾದ್ದರಿಂದ ಅವನು ಚಿನ್ನನಾದರೂ ಇನ್ನೊಂದು ಪ್ರಯತ್ನವನ್ನು ಮಾಡುವನು. ಕಡೆಗೆ ಮಿ|| ಗ್ಲಾಡ್‌ಸ್ಟನ್ ದೊರೆಸಾನಿಯವರ ಅನುಗ್ರಹಪಡೆದನು. ಆ ತಾಯಿ ಆಕೆಯವರಿಗೆ ತನ್ನ ಕಾರ್ಯ ಗೌರವವನ್ನು ಅರಿಕೆಮಾಡಿ ತನ್ನ ಪತ್ರಿಕೆಯ ಕೆಲವು ಪ್ರತಿಗಳನ್ನೂ ತೋರಿಸಿ—ಇವರಲ್ಲಿ ಮಂತ್ರೀಶ್ವರರ ಆಲೋಚನೆಯನ್ನು ಕೇಳುವದಕ್ಕೆ ನ್ಯೂಯಾರ್ಕ್ ಪಟ್ಟಣದಿಂದ ಬಂದಿರುವವನಾಗಿ ವಿಜ್ಞಾಪಿಸಿದನು. ಇದ್ದುದನ್ನು ಪ್ರಸನ್ನೆಯಾದ ಆ ಅಮ್ಮನು ನಸುನಕ್ಕು ತನ್ನ ಪತಿಯು ಆತನನ್ನು ನೋಡಬಹುದಾದ ಅನುಕೂಲವನ್ನು ಮಾಡಿಕೊಟ್ಟಳು. ಇದರಿಂದ ಆ ಯೌವನಸ್ಥನಿಗೆ ತಕ್ಕ ಅನುಕೂಲ ದೊರೆತು ಸಾಧಾರಣ ಜನಗಳಿಗೆ ಅಸಾಧ್ಯವಾದ ಮಿ. ಗ್ಲಾಡ್‌ಸ್ಟನ್ ದೊರೆಯ ಭೇಟಿಯಾಯಿತು. ಆ ಮಹಾ ಮಂತ್ರಿಯು ಆ ಯುವಕನನ್ನು ಬಹು ಆದರದಿಂದ ತನ್ನ ಸನ್ನಿಧಿಗೆ ಬರಮಾಡಿಕೊಂಡು ಅವನನ್ನು ಒಬ್ಬ ಅರಸನೋ ಎಂಬಂತೆ ಮರ್ಯಾದೆಮಾಡಿದನು. ಮತ್ತು ಅವನ ಕಾರ್ಯಸಿದ್ಧಿಗೆ ಬೇಕಾದ ಆಲೋಚನೆಗಳನ್ನು ಹೇಳಿಕೊಟ್ಟು ಕಳುಹಿಸಿದನು. ಈತನು ಹೇಳಿದ ಕ್ರಮಗಳನ್ನೂ ಆಲೋಚನೆಗಳನ್ನೂ ಆ ಯೌವನಸ್ಥನು ಅನುಸರಿಸಿ ಮುಂದೆ ಪ್ರಸಿದ್ಧಿಗೆ ಬಂದನು. ಇದು ನಡೆದು ಸುಮಾರು ಹತ್ತು ವರುಷಗಳಾದ ಮೇಲೆ ಮೋರಿಸನ್ ತನಗೆ ಭೇಟಿಕೊಟ್ಟ ಗ್ಲಾಡ್‌ಸ್ಟನ್ ದೊರೆಯನ್ನು ಸ್ಮರಿಸುತ್ತಾ ಹೇಳಿರುವದೇನಂದರೆ—ಮಿ. ಗ್ಲಾಡ್‌ಸ್ಟನ್ ದೊರೆಯವರು ನನಗೆ ಅನೇಕ ಸಲಹೆಗಳನ್ನೂ ಬುದ್ಧಿವಾದಗಳನ್ನೂ ಹೇಳಿಕೊಟ್ಟು ಸಹಾಯಮಾಡಿದರು. ನಾನು ಅದಕ್ಕೆ ತಕ್ಕಷ್ಟು ಕೃತಜ್ಞತೆಯನ್ನು ವ್ಯಕ್ತಪಡಿಸಲಾರದೆ ಇದ್ದೇನೆ. ಆದರೆ ಅವರು ನನ್ನ ಸಂಗಡ ಸಲ್ಲಾಪಮಾಡಿ ತೀರಿಸಿದಾಗ ಅಂತ್ಯದಲ್ಲಿ ನನಗೆ ಹೇಳಿದ ಬುದ್ಧಿಯನ್ನು ನಾನು ಎಂದಿಗೂ ಮರೆಯಲಾರದ ರೀತಿಯಲ್ಲಿ ಭದ್ರಪಡಿಸಿಕೊಂಡಿರಬೇಕೆಂದು ನಿಶ್ಚಯಿಸಿದ್ದೇನೆ. ಅದೇನಂದರೆ—ಕೀರ್ತಿಯೂ ಧನವೂ ಕಟ್ಟಕಡೆಗೆ ಅನಿತ್ಯವಾಗುವವು. ಅವು ಶಾಶ್ವತವಲ್ಲ. ನಾನು ರಾಜ್ಯಾಡಳಿತವನ್ನು ಮಾಡುವ ಮಂತ್ರಿಯಾಗಿದ್ದೇನೆ ಸರಿ. ಆದರೆ ನಾನು ಈ ಕೆಲಸವನ್ನು ನಿರ್ವಹಿಸುವದರಲ್ಲಿ ಕ್ರೈಸ್ತಧರ್ಮದ ಕ್ರಮಗಳಲ್ಲಿ ಯಾವದನ್ನಾದರೂ ನಿರಾಕರಿಸಿದ್ದರೆ ಅದು ನನ್ನನ್ನು ಮಹಾ ಮನೋಕ್ಲೇಶಕ್ಕೆ ಈಡುಮಾಡುವದು ಎಂದು ಹೇಳಿದರು ಎಂಬದಾಗಿ ಮೋರಿಸನ್ ಬರೆದು ಇದ್ದಾನೆ.

ಗ್ಲಾಡ್‌ಸ್ಟನ್ ನಂಥಾ ಮಹಾತ್ಮರೂ ಲೋಕೋಪಕಾರಿಗಳೂ ಈ ಲೋಕದಲ್ಲಿ ಬಹಳ ಮಂದಿ ಇಲ್ಲ. ಆದರೆ ಗ್ಲಾಡ್‌ಸ್ಟನ್ ಯಾರನ್ನು ಆಶ್ರಯಿಸಿ ಈ ಸದ್ಗುಣವನ್ನು ಪಡೆದನೋ ಆತನು ಗ್ಲಾಡ್‌ಸ್ಟನ್‌ಗೆ ಸಹಾಯ ಮಾಡಿದ ರೀತಿಯಲ್ಲಿಯೇ ನಮ್ಮೊಬ್ಬೊಬ್ಬರಿಗೂ ಸಹಾಯ ಮಾಡಿ ಸದ್ಗುಣ ಸಂಪನ್ನರನ್ನಾಗಿ ಮಾಡುವದಕ್ಕೆ ಶಕ್ತಿಯೂ ಮನಸ್ಸೂ ಉಳ್ಳವನಾಗಿದ್ದಾನೆ. ಆತನ್ಯಾರೆಂದರೆ ಗ್ಲಾಡ್‌ಸ್ಟನ್ ಪ್ರಭುವು ಆಶ್ರಯಿಸಿ ಪೂಜಿಸುತ್ತಿದ್ದ ಯೇಸುಸ್ವಾಮಿಯೇ. ವಾಚಕರು ಯೇಸುಕ್ರಿಸ್ತನ ನಿಷ್ಕಳಂಕವಾದ ನಡತೆಯನ್ನು ಪರಿಶೋಧಿಸಿ ಆತನನ್ನು ನಂಬುವದಾದರೆ ಸದ್ಗುಣವನ್ನು ಸಂಪಾದಿಸಲಿಕ್ಕೆ ಏನೇನೂ ಅಭ್ಯಂತರವಿಲ್ಲ.

ಯುದ್ಧದ ಸಮಾಚಾರಗಳು.

...

ರಣರಂಗದ ಅನೇಕ ಠಾಣ್ಯಗಳಲ್ಲಿ ಕದನಗಳೇನೋ ಜರುಗಿವೆಯಾದರೂ ಅಂಥಾ ವಿಶೇಷವಾದ ಸಂಗತಿಯೇನೂ ನಡೆದಿಲ್ಲ. ಇದಕ್ಕೆ ಮಹಾ ಚಳಿಯಾಗಿರುವುದೇ ಕಾರಣವೋ, ಅಥವಾ ಮಿತ್ರಮಂಡಲಿಯವರು ಮುಂದೆ ನುಗ್ಗಿ ಹೋಗಬೇಕೆಂದು ಸನ್ನಾಹಮಾಡಿಕೊಳ್ಳುತ್ತಿರುವುದೇ ಕಾರಣವೋ ನಮಗೆ ಗೊತ್ತಾಗುವುದಿಲ್ಲ. ಕಳೆದ ವಾರ ತಕ್ಕಮಟ್ಟಿಗೆ ಯುದ್ಧಭೂಮಿಯಲ್ಲಿ ಶಾಂತವಾಗಿದ್ದಂತೆ ಕಾಣುವುದು. ಬ್ರಿಟಿಷ್ ಯುದ್ಧದ ಇಲಾಖೆಯ ಸೆಕ್ರೆಟರಿಯವರಾದ ಲಾರ್ಡ್ ಕಿಚ್ನರ್‌ಯವರು ಬಾಲ್ಕನ್ ಸಂಸ್ಥಾನಗಳ ಪ್ರಾಂತ್ಯದಲ್ಲೇ ಇದ್ದುಕೊಂಡು ಅಲ್ಲಿನ ವಿದ್ಯಮಾನಗಳನ್ನು ಮಂದಟ್ಟುಮಾಡಿಕೊಳ್ಳುತ್ತಿದ್ದಾರೆ. ಅವರು ಗ್ರೀಸ್ ರಾಜ್ಯದ ದೊರೆಯವರನ್ನೂ ಮಂತ್ರಿಯನ್ನೂ ಕಂಡು ಅವರ ಕೂಡ ದೀರ್ಘವಾಗಿ ಪರ್ಯಾಲೋಚನೆ ಮಾಡಿರುವರು.

ಪಶ್ಚಿಮ ರಣರಂಗದಲ್ಲಿ.

ಫ್ರಾನ್ಸಿನಲ್ಲೂ ಬೆಲ್ಜಿಯಮ್‌ನಲ್ಲೂ ವಿಶೇಷವಾದ ಯುದ್ಧಕಾರ್ಯಗಳೇನೂ ನಡೆಯಲಿಲ್ಲ. ಎರಡು ಕಡೆಗಳಲ್ಲೂ ಉಭಯಪಕ್ಷಗಳವರೂ ಪಿರಂಗಿ ಗುಂಡುಗಳ ಮಳೆಯನ್ನು ಕರೆದರು. ಇದರಿಂದ ನಮ್ಮ ಕಡೆಯವರು ಇನ್ನೋದಾವರ್ತಿ ತಪ್ಪಿನ ಮೇಲೆ ನುಗ್ಗಿ ಕದನಮಾಡುವರೆಂದು ಕಾಣುತ್ತದೆ. ಈ ಕೆ ತಾ. 16 ನೇ ಮಂಗಳವಾರ ಬ್ರಿಟಿಷ್ ಸಿಪಾಯಿಗಳಲ್ಲಿ ಒಂದು ಗುಂಪಿನವರು ನುಗ್ಗಿ ಹೋಗಿ ಜರ್ಮನಿಯವರ ಕಂದಕದೊಳಗಿದ್ದ ಶತ್ರು ಸೈನಿಕರನ್ನು ಕತ್ತಿಗಳಿಂದ ತಿವಿದು 30 ಮಂದಿಯನ್ನು ಪೂರಾ ಗಾಯಗಾರರನ್ನಾಗಿ ವಾಪಸು ಬಂದರು. ಇವರಲ್ಲಿ ಒಬ್ಬನು ಮಾತ್ರ ಕೊಲೆಯಾದನು; ಇನ್ನೊಬ್ಬನಿಗೆ ಗಾಯವಾಯಿತು.

ನಮ್ಮ ಚಕ್ರವರ್ತಿ ಸಾರ್ವಭೌಮರವರನ್ನು ಫ್ರಾನ್ಸಿನಿಂದ ವಾಪಸು ಇಂಗ್ಲೆಂಡಿಗೆ ಕರೆದುಕೊಂಡು ಹೋಗಿ ಬಿಟ್ಟುಬಂದ ಆಸ್ಪತ್ರೆ ಹಡಗು ಇಂಗ್ಲಿಷ್ ಕಡಲು ಕಾಲುವೆಯಲ್ಲಿ ಒಂದು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು. ಕಲ್ಲಿದ್ದಲನ್ನು ಸಾಗಿಸುವ ಒಂದು ಹಡಗು ಅದರ ಸಹಾಯಕ್ಕೆ ಹೋಯಿತು. ಇದು ಕೂಡ ಇನ್ನೊಂದು ಸಿಡಿಮದ್ದಿನ ಗುಂಡಿಗೆ ತಗುಲಿ ನಾಶವಾಯಿತು. ಅಷ್ಟರೊಳಗೆ ಇತರ ಹಡಗುಗಳು ಹೋಗಿ 385 ಜನ ಪೈಕಿ 300 ಮಂದಿಯನ್ನು ಬದುಕಿಸಿರುತ್ತವೆ. ನಮ್ಮ ಚಕ್ರವರ್ತಿಯವರು ಈ ಅಪಾಯಕರವಾದ ಘೋರಕೃತ್ಯವನ್ನು ತನಿಖೆಮಾಡಿಸಿದರು.—ಜರ್ಮನಿಯವರು ಫ್ರಾನ್ಸಿನ ತೀರಪಟ್ಟಣವಾದ ಡನ್‌ಕರ್ಕ್ ಎಂಬ ನಗರಕ್ಕೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ಇದರಿಂದ ಹಲವು ಸಭ್ಯಪ್ರಜೆಗಳು ಮೃತರಾದರು.

ಪೂರ್ವ ರಣರಂಗದಲ್ಲಿ.

ಈ ರಣರಂಗದಲ್ಲಿಯೂ ಅಷ್ಟೇನೂ ವಿಶೇಷವಾದ ಕದನ ಕಾರ್ಯಗಳು ನಡೆದಿಲ್ಲ. ಮಳೆಗಾಲದ ನಿಮಿತ್ತ ಜರ್ಮನಿಯವರು ಕಂದಕಗಳನ್ನು ತೋಡಿಕೊಂಡು ಅದರೊಳಗಿರಬೇಕೆಂದು ಸನ್ನಾಹ ಮಾಡುತ್ತಿರುವಂತೆ ಕಾಣುವುದು. ಕೆಲವು ಠಾಣ್ಯಗಳಲ್ಲಿ ರಷ್ಯಾದವರು ಜರ್ಮನಿಯವರನ್ನು ಹಿಂದಕ್ಕೆ ಓಡಿಸಿಬಿಟ್ಟರು. ಇವರು ತಮ್ಮ ಪಿರಂಗಿಗಳನ್ನೂ, ಮದ್ದು ಗುಂಡುಗಳನ್ನೂ, ಸತ್ತು ಬಿದ್ದಿರುವ ಸೈನಿಕರ ಹೆಣಗಳನ್ನೂ ಹಿಂದೆಯೇ ಬಿಟ್ಟು ಓಡಿಹೋಗಿರುತ್ತಾರೆ. ಮೊದಲಿಗಿಂತಲೂ ಈಗೀಗ ಜರ್ಮನಿ ಸೈನಿಕರು ಹೆಚ್ಚು ಹೆಚ್ಚಾಗಿ ರಷ್ಯಾದವರ ಬಳಿಗೆ ಹೋಗಿ ಶರಣಾಗತರಾಗುತ್ತಿದ್ದಾರೆಂದು ಹೇಳಲಾಗಿದೆ. ಜರ್ಮನಿಯವರು ಇನ್ನೊಂದು ಕಡೆ ಎರಡು ನದಿಗಳನ್ನು ದಾಟಬೇಕೆಂದು ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಆದರೆ ರಷ್ಯಾದವರು ಅವರಿಗೆ ಅವಕಾಶ ಕೊಡದೆ ಸೋಲಿಸಿ ಓಡಿಸುತ್ತಿರುವರು. ಕೆಲವು ಪ್ರದೇಶಗಳಲ್ಲಿ ಭೂಮಿಯು ಬಹಳ ಬುರುದೆಯಾಗಿರುವದರಿಂದ ಸೈನ್ಯಗಳಾಗಲಿ ಪಿರಂಗಿಗಳಾಗಲಿ ಸಾಗಿಹೋಗುವುದು ಬಹಳ ಪ್ರಯಾಸವಾಗಿದೆ.

ಇಟಲಿ.

...ಯವರು ತಮ್ಮ ಪೂರ್ವ ಭಾಗದ ಯುದ್ಧ ಸಾಲಿನಲ್ಲಿ ಬಹಳ ...ವಾಗಿ ಮುಂದರಿಸುತ್ತಿದಾರೆ. ಅವರು ಆಸ್ಟ್ರಿಯಾದವರಿಂದ್ದ ಕೆಲವು ...ಗಳನ್ನು ಗೆದ್ದುಕೊಂಡು ಮುಂದರಿಸಿ ಗೊಂಚಿಯೊ ಎಂಬ ನಗರದ ...ನ ಸುಗ್ಗಿ ಹೋಗುತ್ತಿರುವರು. ಇಟಲಿಯವರು ಆಸ್ಟ್ರಿಯಾದವರನ್ನು ...ವಾಗ ಇವರು ಬಿಡಿಸಿಕೊಳ್ಳಬೇಕೆಂದು ಅನೇಕ ವೇಳೆ ಇಟಲಿಯವರ ...ಕವನ ಮಾಡಿದರು. ಆದರೆ ಪ್ರತಿ ಸಲವೂ ಆಸ್ಟ್ರಿಯಾದವರು ...ಸಲ್ಪಟ್ಟರು. ಒಂದು ಕಂದಕದೊಳಗೆ 208 ಆಸ್ಟ್ರಿಯಾ ಸೈನಿಕರ ...ಟ್ಟವು. ಈ ಪ್ರಕಾರ ಇಟಲಿಯವರು ಸುಗ್ಗಿ ಹೋಗುತ್ತಿರುವುದ ...ರ್ಬಿಯಾದವರಿಗೆ ಸಹಾಯವಾಗಿರುತ್ತದೆ.

...ಸ್ಟ್ರಿಯಾದವರು ವಿಮಾನ ಯಂತ್ರಗಳಲ್ಲಿ ಹೋಗಿ ವೆರೋನ ಎಂಬ ...ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ಇದರಿಂದ 30 ಮಂದಿ ...ರು, 48 ಜನರಿಗೆ ಗಾಯಗಳಾಗಿವೆ. ಬ್ರೆಸ್ಕಿಯಾದಲ್ಲಿ ಸಿಡಿಮದ್ದಿನ ...ಬಿದ್ದು 7 ಮಂದಿ ಸತ್ತರು; 10 ಜನರು ಗಾಯಪಟ್ಟರು. ಉಂದಿನೆ ...ಸಲ್ಲಿ 12 ಜನರು ಕೊಲೆಯಾದರು; 27 ಮಂದಿ ಗಾಯಪಟ್ಟರು ...ಕೆಲವು ಸ್ಥಳಗಳಲ್ಲೂ ಸಿಡಿಮದ್ದಿನ ಗುಂಡುಗಳು ಬಿದ್ದಿರುತ್ತವೆ.

...ಯವರು ಸರ್ಬಿಯಾದವರಿಗೆ ಸಹಾಯವಾದುತ್ತಿದಾರೆ. ಇಟಲಿಯ ...ದ ಹಡಗು ಒಂದು ಬಲ್ಗೇರಿಯಾ ತೀರಪಟ್ಟಣಗಳಿಗೆ ಗುಂಡುಗಳನ್ನು ...ಸಿತು. ಇದರಿಂದ ಆ ತೀರಪಟ್ಟಣಗಳಲ್ಲಿ ವಿಶೇಷ ನಷ್ಟವಾಯಿತು.

...ಯವರು ತಾವೇ ಪ್ರತ್ಯೇಕವಾಗಿ ಶತ್ರುವಿನ ಕೂಡ ಕರಾರು ಮಾಡಿ ...ಲ್ಲವೆಂದು ಒಪ್ಪಂದಕ್ಕೆ ರುಜುಹಾಕಿರುವುದಾಗಿ ತಿಳಿಸಲ್ಪಟ್ಟಿದೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳೊಳಗೆ ನಾನಾ ದಿಕ್ಕುಗಳಲ್ಲಿ ಕದನಗಳು ನಡೆಯು ...ದಿಂದ ನಡೆಯುವ ವಿದ್ಯಮಾನಗಳೇನೆಂಬುವುದು ಸ್ಪಷ್ಟವಾಗಿ ತಿಳಿಯು ...ಜರ್ಮನಿಯವರೂ ಆಸ್ಟ್ರಿಯಾದವರೂ ಉತ್ತರ ದಿಕ್ಕಿನಿಂದ ಸರ್ಬಿ ...ವರನ್ನು ಹಿಂದಕ್ಕೆ ಓಡಿಸುತ್ತಿದಾರೆಂದು ಕಾಣುವುದು. ಈಗಾಗಲೇ ಸರ್ಬಿ ...ದೇಶದ ಬಹು ಭಾಗವು ಅವರ ವಶವಾಗಿದೆ. ಬಲ್ಗೇರಿಯಾದವರು ...ದಿಕ್ಕಿನಿಂದ ನುಗ್ಗಿ ಸರ್ಬಿಯಾದವರನ್ನು ಹಿಮ್ಮೆಟ್ಟಿಸುತ್ತಿದಾರೆಂದು ತಿಳಿ ...ದೆ. ಅಲ್ಲಿಂದ ದಕ್ಷಿಣ ದಿಕ್ಕಿನಿಂದ ಬ್ರಿಟಿಷರೂ ಫ್ರೆಂಚರೂ ಬಲ್ಗೇರಿಯ ...ದ ಮೇಲೆ ನುಗ್ಗಿ ಅವರನ್ನು ಹಿಂದಕ್ಕೆ ಓಡಿಸುತ್ತಿರಬಹುದು. ಫ್ರೆಂಚರು 36 ...ಕಾಲ ಬಹಳ ಘೋರವಾದ ಕದನವನ್ನು ನಡಿಸಿ ಬಲ್ಗೇರಿಯಾದವರ ...ಯುದ್ಧದ ಹೊಂದಿರುವಂತೆ ಪ್ರಕಟವಾಗಿದೆ. ಈ ಕದನದಲ್ಲಿ ಬಲ್ಗೇರಿ ...5,000 ಜನರು ನಷ್ಟವಾದರೆಂದೂ, ಫ್ರೆಂಚರ ಕಡೆ ಆದ ನಷ್ಟ ಬಹಳ ...ವೆಂದೂ ತಿಳಿಯುತ್ತದೆ. ಸರ್ಬಿಯಾದವರ ಪಾಡು ಬಹಳ ಕಷ್ಟಕ್ಕೆ ಬಂದಿರು ...ದು. ಜರ್ಮನಿಯವರು ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಹೋಗು ...ವನ್ನು ತೆರೆಯಲ್ಪಟ್ಟಾರೆಂದು ನಿರೀಕ್ಷಿಸಬಹುದಾಗಿದೆ. ಫ್ರೆಂಚರೂ ...ರೂ ಬಲ್ಗೇರಿಯಾದ ಸೈನ್ಯಗಳನ್ನು ಸಾಗಿಸಿ ಸಲೋನಿಕಾದಲ್ಲಿ ಇಳಿಸು ...ದಾರೆ. ಈ ಸೈನ್ಯಗಳು ಸರ್ಬಿಯಾದವರ ಸಹಾಯಕ್ಕಾಗಿ ನುಗ್ಗಿ ...ಹೋಗುತ್ತಿರುವವು. ಸರ್ಬಿಯಾದವರಾದರೋ ಅತ್ಯಂತ ಪರಾಕ್ರಮದಿಂದ ಕದನ ...ತ್ತಿದಾರೆ. ಐದು ಸಾವಿರ ಸರ್ಬಿಯಾ ಸೈನಿಕರು ಒಂದು ಕಣಿವೆ ಹಾದಿ ...ನ್ನು ಕಾಪಾಡಿಕೊಳ್ಳುತ್ತಾ, 30,000 ಬಲ್ಗೇರಿಯಾ ಸೈನಿಕರನ್ನು ತಡೆದು ...ರು ತುಂಬಾ ನಷ್ಟಪಡಿಸಿರುತ್ತಾರೆಂದು ತಿಳಿಸಲ್ಪಟ್ಟಿದೆ. ಸರ್ಬಿಯಾ ಪ್ರಜೆ ...ಬಲ್ಗೇರಿಯಾ ಸೈನಿಕರಿಗೆ ಸಿಕ್ಕಿ ಕಷ್ಟನಷ್ಟಗಳಿಗೆ ಗುರಿಯಾಗದಂತೆ ಬೇಗ ...ಓಡಿಹೋಗುತ್ತಿದಾರೆ. ಅಂತು ಸರ್ಬಿಯಾ ದೇಶದಲ್ಲೆಲ್ಲಾ ತುಂಬಾ ...

ಬಾಲ್ಕನ್ ಸಂಸ್ಥಾನಗಳಿಂದ ಈಚೆಗೆ ಬಂದಿರುವ ಸುದ್ದಿ ಏನೆಂದರೆ—ಸರ್ಬಿ ...ದವರು ಒಂದು ಠಾಣ್ಯದಲ್ಲಿ ಬಲ್ಗೇರಿಯಾದವರ ಮೇಲೆ ಮೂರು ದಿನ ...ತೀವ್ರವಾದ ಯುದ್ಧವನ್ನು ಮಾಡಿ ಬಹು ಪರ್ವತವಾದ ಜಯಪ್ರದವನ್ನು ...ದರು. ಬಲ್ಗೇರಿಯಾದವರ ಕಡೆ ಅಪಾರವಾದ ನಷ್ಟ ಸಂಭವಿಸಿತು ...ಬಹಳ ಯುದ್ಧ ಸಾಮಗ್ರಿಗಳನ್ನು ಬಿಟ್ಟು ಹೋದರು. ಆದರೆ ಈ ವರ್ತ ...ಮಾನ ಕೆಲವು ಪರಸ್ಪರ ವಿರುದ್ಧವಾಗಿರುವವು.

ಟರ್ಕಿಯಲ್ಲಿ.

...ಅರ್ಧದ್ವೀಪದಲ್ಲಿ ಸುರಂಗಗಳನ್ನು ಹಾಕುತ್ತಿದಾರೆ. ಟರ್ಕಿಯ ...ಕೆಲವು ಕಂದಕಗಳನ್ನು ಕಿತ್ತು ಸ್ವಾಧೀನಪಡಿಸಿಕೊಂಡದ್ದಾಯಿತು. ಟರ್ಕಿ ...ಬಹಳ ರಭಸವಾಗಿ ಗುಂಡುಗಳನ್ನು ಹೊಡೆದರು. ಆದರೆ ಅದರಿಂದ ...ಪ್ರಯೋಜನ ಆಗಲಿಲ್ಲ. ಟರ್ಕಿಯವರ ಕಡೆ ಬಹಳ ನಷ್ಟ ಸಂಭವಿಸಿತು.

...ಮರ್ಮರಾ ಕಡಲಿನೊಳಗೆ ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ...ಯುದ್ಧ ನಾಶವಾಯಿತು. ಅದರಲ್ಲಿದ್ದ 3 ಮಂದಿ ಉದ್ಯೋಗದಾರರೂ ಬೇರೆ ...ಯವರೂ ಶತ್ರುವಿಗೆ ಕೈಸೆರೆ ಸಿಕ್ಕಿರುತ್ತಾರೆ.

...ತಾಯು ಹತ್ತಿರ ಶತ್ರುವಿನ ಆರು ಸಬ್‌ಮೆರೀನುಗಳು ಮಿತ್ರಮಂಡಲಿಯ ...ಟಿಯುಲ್ಲಟ್ಟವೆಂದು ಹೇಳಲಾಗಿದೆ. ಆದರೆ ಈ ವರ್ತಮಾನ ಇನ್ನೂ ...ಟಿರಪಟ್ಟಿಲ್ಲ. ಈ ಸಬ್‌ಮೆರೀನುಗಳು ತಮಗೆ ಬೇಕಾದ ...ವು ಮುಂತಾದದ್ದನ್ನು ಗ್ರೀಸಿನ ಬಳಿ ಇರುವ ಕೆಲವು ದ್ವೀಪಗಳಿಂದ ...ಕೊಳ್ಳುತ್ತಿದ್ದವೆಂದು ಹೇಳಲಾಗಿದೆ.

ಆಫ್ರಿಕಾದಲ್ಲಿ.

...ಮ ಆಫ್ರಿಕಾವಿಗೆ ಸೇರಿದ ಕ್ಯಾಮರೂನ್ಸ್ ಸೀಮೆಯಲ್ಲಿ ಅಲ್ಪ ಸ್ವಲ್ಪ ...ಕಾರ್ಯಗಳು ನಡೆದಿರುತ್ತವೆ. ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ...ಠಾಣ್ಯಗಳನ್ನು ಗೆದ್ದು ಜರ್ಮನಿಯವರಿಂದ ಕಿತ್ತುಕೊಂಡಿರುವವು. ...ಠಾಣ್ಯದೊಳಗೆ 23 ಮಂದಿ ಯೂರೋಪಿಯನ್ ಮತ್ತು 200 ಜನ ...ಸೈನಿಕರು ಇದ್ದು ಆ ನಗರವನ್ನು ಕಾಪಾಡಿಕೊಳ್ಳುತ್ತಿದ್ದರು. ಇವರಲ್ಲಿ ...ಯೂರೋಪ್ಯನು ಕೊಲೆಯಾಗಿ ಒಬ್ಬನು ಗಾಯಪಟ್ಟು ಒಂಭತ್ತು ಮಂದಿ ...ಡಿಯುಲ್ಪಟ್ಟಿದಾರೆ. ಇವರಲ್ಲಿ 30 ಮಂದಿ ಸೈನಿಕರನ್ನು ಒಂದು ಫಿರಂಗಿ ...ಬಹಳ ಸಾಮಾನುಗಳ ಸಮೇತ ಕೈಸೆರೆ ಮಾಡಿಕೊಂಡರು. ಬ್ರಿಟಿಷ್ ...ಇಬ್ಬರು ಉದ್ಯೋಗದಾರರು ಕೊಲೆಯಾದರು, ಇನ್ನಿಬ್ಬರಿಗೆ ಗಾಯ ...ದು; ಸೈನಿಕರಲ್ಲಿ ಒಬ್ಬನು ಕೊಲೆಯಾಗಿ 30 ಜನರಿಗೆ ಗಾಯಗಳಾಗಿವೆ. ...ಸೈನ್ಯವು ಜರ್ಮನಿಯವರ ಬೆನ್ನುಹತ್ತಿ ಹೋಗುತ್ತಿದಾರೆ.

ಇತರ ವಿಷಯಗಳು.

...ಮನಿಯವರು ಪರ್ಷಿಯಾ ರಾಜ್ಯದಲ್ಲಿ ಕಿತ್ತಾಟವನ್ನೆಬ್ಬಿಸಿ ಗಲಭೆ ...ಬೇಕೆಂದು ಪ್ರಯತ್ನಪಡುತ್ತಿದಾರೆ. ಆದರೆ ಪರ್ಷಿಯಾ ಗವರ್ನ ...ಮೆಂಟು ಅಲ್ಲಿರುವ ಬ್ರಿಟಿಷ್ ಮತ್ತು ರಷ್ಯಾ ಅಧಿಕಾರಿಗಳನ್ನು ಸಂರಕ್ಷಿಸ ...ಬೇಕೆಂದು ಸಂಕಲ್ಪಮಾಡಿಕೊಂಡಿರುವರು. ಜರ್ಮನಿ ಮತ್ತು ಆಸ್ಟ್ರಿ ...ಯ ಅಧಿಕಾರಿಗಳು ಪರ್ಷಿಯಾದಿಂದ ಹೊರಟು ಬಂದರೆಂದು ಹೇಳಲಾಗಿದೆ. ...ಪರ್ಷಿಯಾ ರಾಜ್ಯವು ಈ ಯುದ್ಧದಲ್ಲಿ ಸೇರದೆ ತಟಸ್ಥವಾಗಿದ್ದು ...ಬಂದೀತೆಂಬ ಭರವಸೆ ಕಾಣುತ್ತಿರುವುದು. ಪರ್ಷಿಯಾವಿಗೆ ಓಡಿಹೋ ...ಆಸ್ಟ್ರಿಯಾ ಸೈನಿಕರನ್ನು ಅಲ್ಲಿನವರು ಹಿಡಿದು ನಿರ್ಬಂಧಪಡಿಸಿದಾರೆ.

...ಷ್ ಗವರ್ನಮೆಂಟಿನಲ್ಲಿದ್ದ ಮಿ|| ಚರ್ಚಿಲ್‌ರವರು ತಮ್ಮ ಕೆಲಸವನ್ನು ...ಬಿಟ್ಟು ಯುದ್ಧಮಾಡಬೇಕೆಂದು ಫ್ರಾನ್ಸಿಗೆ ಹೋಗಿದಾರೆ. ಕೆಲವು ...ಕಾಲ ಇವರು ಬೆಂಗಳೂರಿನಲ್ಲಿ ಸೈನ್ಯದ ಉದ್ಯೋಗದಾರರಾಗಿದ್ದರು.

ಸಿಲೋನ್ (ಲಂಕಾ) ದ್ವೀಪದ ಗವರ್ನಮೆಂಟಿನವರು ಒಂದೂವರೆ ಕೋಟಿ ರೂಪಾಯನ್ನು ಬ್ರಿಟಿಷ್ ಗವರ್ನಮೆಂಟಿಗೆ ಕೊಟ್ಟು ಸಹಾಯ ಮಾಡಬೇಕೆಂದು ತೀರ್ಮಾನ ಮಾಡಿದರು. ಅವರು ಈ ಹಣವನ್ನು ಹತ್ತು ಕಂತುಗಳಲ್ಲಿ ಪ್ರತಿ ವರ್ಷವೂ 15 ಲಕ್ಷ ರೂಪಾಯಿನಂತೆ ಪಾವತಿ ಮಾಡುವುದಾಗಿ ಒಪ್ಪಿಕೊಂಡಿದಾರೆ.

ಜರ್ಮನಿಯ ಸಬ್‌ಮೆರೀನುಗಳು ಮೆಡಿಟರೇನಿಯನ್ ಕಡಲಿನಲಿನಲ್ಲಿ ಬಹಳ ಚಟುವಟಿಕೆಯಾಗಿರುತ್ತವೆ. ಅಲ್ಲಿ ಸಂಚರಿಸುತ್ತಿದ್ದ ಹಲವು ಹಡಗುಗಳಿಗೆ ಎಚ್ಚರಿಕೆ ಕೊಡದೇನೇ ಗುಂಡುಗಳನ್ನು ಹೊಡೆದಿರುವವು. ಕಳೆದ ವಾರ ಮೂರು ಬ್ರಿಟಿಷ್ ಹಡಗುಗಳು ಮುಳುಗಿಸಲ್ಪಟ್ಟವು. ಬಹುಶಃ ಮೆಡಿಟರೇನಿಯನ್ ಕಡಲಿನಲ್ಲಿ ಆಗಿರಬಹುದೆಂದು ಕಾಣುತ್ತದೆ. ಆದರೆ ಅವುಗಳೊಳಗಿದ್ದವರನ್ನೆಲ್ಲಾ ಬದುಕಿಸಿದಾರೆ.

ಅಮೇರಿಕದಲ್ಲಿ ಜರ್ಮನಿಯವರು ಸರ್ಕಾರದವರಿಗೆ ತೊಡಕುಗಳನ್ನು ಕಲ್ಪಿಸುತ್ತಲೇ ಬಂದಿದಾರೆ. ಇವರು ಕೆಲಸಮಾಡತಕ್ಕವರನ್ನು ಚಿತಾವಣೆ ಮಾಡಿ ಕೆಲಸ ಮಾಡದಂತೆ ನಿಲ್ಲಿಸುವರು. ಮದ್ದು ಗುಂಡುಗಳು ತಯಾರಾಗುವ ಕಾರ್ಖಾನೆಗಳನ್ನು ಹಾಳುಮಾಡುವುದಕ್ಕೆ ಪಿತೂರಿ ಮಾಡುವರು. ಹಡಗುಗಳನ್ನು ಒಡೆದು ಹಾಕುವರು. ಈಗ ಅಮೇರಿಕ ಸರ್ಕಾರದವರು ಈ ವಿಚಾರವನ್ನು ಹಿಡಿದು ತನಿಖೆ ಮಾಡಿಸುತ್ತಿದಾರೆ.

ಜರ್ಮನಿಯಲ್ಲಿ ಒಂದು ಭಾರೀ ಜೆಪ್ಪಲಿನ್ ಎಂಬ ವಿಮಾನಯಂತ್ರವು ನಾಶವಾಯಿತೆಂದು ಪ್ರಕಟವಾಗಿದೆ. ಅದು ಇನ್ನೂ ಕಟ್ಟಿ ಪೂರೈಸಿರಲಿಲ್ಲ. ಕಾರೀಗಾರರು ಅದಕ್ಕೆ ಅನಿಲವನ್ನು ಭರ್ತಿಮಾಡುತ್ತಿದ್ದರು. ಆ ಸಮಯದಲ್ಲಿ ಬೆಂಕಿಯು ಹತ್ತಿಕೊಂಡು ಆ ವಿಮಾನಯಂತ್ರವನ್ನೇ ನಾಶಮಾಡಿತು. ಅದರ ದೆಸೆಯಿಂದ ಒಂಭತ್ತು ಜನಗಳು ನಷ್ಟವಾದರು.

ಗ್ರೇಟ್ ಬ್ರಿಟನ್‌ನಲ್ಲಿ ಹತ್ತು ಲಕ್ಷ ಗಂಡಸರೂ ಹೆಂಗಸರೂ ಸೇರಿ ಕಾರ್ಖಾನೆಗಳಲ್ಲಿ ಮದ್ದು ಗುಂಡು ಮೊದಲಾದ ಯುದ್ಧ ಸಾಮಗ್ರಿಗಳನ್ನು ತಯಾರ್ಮಾಡಿ ಒದಗಿಸುತ್ತಿದಾರೆ. ಮದ್ದು ಗುಂಡು ಮೊದಲಾದದ್ದು ಈಗ ಅಪಾರವಾಗಿ ಒದಗುತ್ತಿದೆ. ಈ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರೆಲ್ಲಾ ಬಹಳ ಉತ್ಸಾಹವುಳ್ಳವರಾಗಿದಾರೆ.

ಕೊಡಗಿನಲ್ಲಿ ಪರಸ್ಪರ ಸಹಾಯ.

ಕೊಡಗು ಸೀಮೆಯ ಪರಸ್ಪರಸಹಾಯ ಸಂಘಗಳ 1914-15 ನೇ ಸಾಲಿನ ವಾರ್ಷಿಕ ರಿಪೋರ್ಟು ನಮಗೆ ತಲುಪಿದೆ. ಈ ರಿಪೋರ್ಟಿನಿಂದ ಕಳೆದ ವರುಷ ಹೊಸದಾಗಿ ಕೋಆಪರೆಟಿವ್ ಸೊಸೈಟಿಗಳು ಏರ್ಪಾಡಾಗದೆಹೋದಾಗ್ಯೂ, ಈಗ ಇರುವ ಸಂಘಗಳ ಕಾರ್ಯಕ್ರಮಗಳನ್ನು ತಿದ್ದಿ ಸರಿಪಡಿಸಿರುತ್ತಾರೆಂದು ತಿಳಿದು ಬರುತ್ತದೆ. ಮೆಂಬರು 57 ಮಂದಿ ಹೊಸದಾಗಿ ಸೇರಿಕೊಂಡರು; ಸೊಸೈಟಿಗಳ ಮೂಲಧನವು 9,381 ರೂಪಾಯಿನಷ್ಟು ಹೆಚ್ಚಿಸಲಾಯಿತು. ಎಲ್ಲಾ ಸೊಸೈಟಿಗಳೂ ಲಾಭ ಸಂಪಾದನೆ ಆಗಿ ಷೇರುದಾರರಿಗೆ ಬಡ್ಡಿಯನ್ನು ಹಂಚಿರುತ್ತವೆ. ಸೊಸೈಟಿಗಳ ರಿಜರ್ವ್ ಫಂಡು 18,106 ರೂಪಾಯಿನಿಂದ 23,514 ರೂಪಾಯಿಗೆ ಹೆಚ್ಚಿರುತ್ತದೆ. ಗೋಲಾಯಿಗಳ ವಿನ ಕೆಲಸವು ಅಭಿವೃದ್ಧಿ ಹೊಂದಿತು. ಇದರ ಫಲಪ್ರಯೋಜನಾದಿಗಳನ್ನು ರೈತ ಪ್ರಜೆಗಳು ಮನದಟ್ಟುಮಾಡಿಕೊಂಡಿದಾರೆ. ಒಂದಾನೊಂದು ಧಾನ್ಯದ ಬ್ಯಾಂಕು ಬಹಳ ಹೆಚ್ಚಾದ ಲಾಭವನ್ನು ಸಂಪಾದನೆ ಮಾಡಿತು. ಮುಖ್ಯವಾಗಿ ಮಿ|| ಹಾಲ್ಲರ್ ಯವರು ಈ ಸಂಘಗಳ ಪುರೋಭಿವೃದ್ಧಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾ ಬಂದಿದಾರೆ.

ಒಳದೇಶದ ವೃತ್ತಾಂತಗಳು.

ನಮ್ಮ ... ಜ್ಯುಬಿಲಿಯವರಿಗೆ ಅರಮನೆಯಲ್ಲಿ ಒಂದು ನೌಕರಿಗೆ ವರ್ಗವಾಗಿದೆ ಎಂಬ ಸುದ್ದಿಯು ನಿಜವಲ್ಲವೆಂದು ತಿಳಿದು ಬಂದಿದೆ.

ನಂದಿ ರೈಲ್ವೆ ಸ್ಟೇಷನ್‌ನಲ್ಲಿ ನಮ್ಮ ಸರ್ಕಾರದವರು ಒಂದು ತಂತೀ ವರ್ತಮಾನದ ಆಫೀಸನ್ನು ಇರಿಸಿ, ಪ್ರಜೆಗಳು ತಂತೀ ವರ್ತಮಾನ ಕೊಟ್ಟು ತರಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಿದಾರೆ.

ಆಲೂರು ಸಬ್ ತಾಲ್ಲೂಕಿನಲ್ಲಿ ಚಟ್ಟನಹಳ್ಳಿಯ ಬಳಿ ಕಾಂಚೀರ್ಥ ಹೊಳೆಯ ಮೇಲೆ ನಾಲ್ಕು ಕಮಾನುಗಳುಳ್ಳ ಸೇತುವೆಯನ್ನು 13,000 ರೂಪಾಯಿ ಮುಟ್ಟಿಸಿ ಕಟ್ಟಬೇಕೆಂದು ಇತ್ಯರ್ಥವಾಗಿದೆ.

ಕಳೆದ ಭಾನುವಾರ ರಾಜಧಾನಿಯಲ್ಲಿ ಒಂದು ಹದ ಒಳ್ಳೇ ಮಳೆ ಆಯಿತು. ಮೊನ್ನೆ ಮಂಗಳವಾರ ಮತ್ತೆ ಹಿಡಿದ ಮಳೆ ರಾತ್ರಿಯೆಲ್ಲಾ ಸುರಿಯಿತು. ಇನ್ನೂ ಮೋಡಹಾಕಿಕೊಂಡು ಮಳೆ ಬರುವ ಸೂಚನೆ ಕಾಣುತ್ತದೆ.

ನಮ್ಮ ಸರ್ಕಾರದವರು ಸಾಬೂನು ತಯಾರ್ಮಾಡುವುಕ್ಕೆ ಬೆಂಗಳೂರಿನಲ್ಲಿ ಪರೀಕ್ಷಾರ್ಥವಾದ ಒಂದು ಸಣ್ಣ ಕಾರ್ಖಾನೆಯನ್ನು ಇಟ್ಟು ನಡಿಸಬೇಕೆಂದು 15,000 ರೂಪಾಯಿ ಸ್ಯಾಂಕ್ಷನ್ ಮಾಡಿರುವಂತೆ ಪ್ರಕಟವಾಗಿದೆ.

ಲೇಟ್ ಸರ್ ಕೃಷ್ಣಮೂರ್ತಿಯವರ ಪತ್ನೀರಾದ ಲೇಡಿ ಕಾವೇರಿಬಾಯಿಮ್ಮನವರು ವಿದ್ಯಾಪ್ರೋತ್ಸಾಹವೇ ಮೊದಲಾದ ಧರ್ಮಕಾರ್ಯಗಳಿಗೆ 25,000 ರೂಪಾಯಿ ಉಚಿತವಾಗಿ ಕೊಟ್ಟಿದಾರೆಂದು ತಿಳಿಸಲು ಸಂತೋಷವಾಗುವುದು.

ತರೀಕೆರೆಯಿಂದ ನರಸಿಂಹರಾಜಪುರಕ್ಕೆ ಹಾಕಿರುವ ಟ್ರಾಮ್‌ವೇಯನ್ನು ಕೊಪ್ಪದ ಮೂಲಕ ಶೃಂಗೇರಿಗೆ ಬಡಾವಣೆಮಾಡಬೇಕೆಂದು ನಮ್ಮ ಸರ್ಕಾರದವರು ಯೋಚಿಸಿ ಸರ್ವೆ ಮೊದಲಾದ ಕಾರ್ಯಗಳನ್ನು ನಡಿಸುವಂತೆ ಅಪ್ಪಣೆ ಕೊಡಿಸಿದಾರೆ.

ಈ ಸಲ ರಾಜಧಾನಿಯಲ್ಲಿ ಕೋಟೆ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಜೀಯರ್ ತಿರುನಕ್ಷತ್ರದ ಉತ್ಸವದ ಕಡೇ ದಿನ ಮ|| ಮಧುರೆ ಕೃಷ್ಣಯ್ಯಂಗಾರ್ರು ತಮ್ಮ ಸಂಗೀತ ಪಾಂಡಿತ್ಯವನ್ನು ಪ್ರಕಾಶಪಡಿಸಿದರೆಂದೂ, ಅನೇಕ ಪಂಡಿತ ಪಾಮರರು ಹಾಜರಿದ್ದು ಕೇಳಿ ಸಂತೋಷಪಟ್ಟರೆಂದೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ತರೀಕೆರೆ ತಾಲ್ಲೂಕು ಬೀರನಹಳ್ಳಿಯಲ್ಲಿ ಕಳೆದ ಗುರುವಾರ ಶ್ರೀಮದು ಭಗರಾಜೇಂದ್ರ ಸ್ವಾಮಿಗಳ ಪಟ್ಟದ ದ್ವಾದಶ ವಾರ್ಷಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನಡಿಸಿ, ಅದರ ಜ್ಞಾಪಕಾರ್ಥವಾಗಿ ಅಲ್ಲೊಂದು ನಾಟಕಶಾಲೆಯನ್ನು ಪ್ರಾರಂಭಿಸಿ ನಡಿಸುವಂತೆ ಏರ್ಪಾಡು ಮಾಡಿದಾರೆಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಕಡೂರಿನಿಂದ ಚಿಕ್ಕಮಗಳೂರಿಗೆ ಮಾತ್ರ ರೈಲ್ ರಸ್ತೆ ಹಾಕುವುದಾದರೆ ಡಿಸ್ಟ್ರಿಕ್ಟ್‌ಮೇಲೆ ರೈಲ್ವೆ ಸೆಸ್ಸನ್ನು ಹಾಕಲಾಗದೆಂದೂ, ಚಿಕ್ಕಮಗಳೂರಿನಿಂದ ಮೂಡಿಗೆರೆಗೂ ಅಲ್ಲಿಂದ ಸಕಲೇಶಪುರಕ್ಕೂ ಒಂದು ಲೈನನ್ನೂ ಹಾಕುವುದಾದರೆ ರೈಲ್ವೆ ಸೆಸ್ಸನ್ನು ರೈತರಿಂದ ರೂಪಾಯಿಗೆ ಒಂದು ಆಣೆಯಂತೆ ಹಾಕಿ ವಸೂಲ್ ಮಾಡಬಹುದೆಂದೂ ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗವರ್ನಮೆಂಟಿಗೆ ತಿಳಿಸಿದಾರೆ.

ಚನ್ನಪಟ್ಟಣದ ತಾ|| ವಿರೂಪಾಕ್ಷಿಪುರದ ಹೋ|| ಕೋಡಿಹೊಸಹಳ್ಳಿ ಗ್ರಾಮದ ಬಲಗೈ ಸೋಮನು ತಿಳಿಸುವದೇನೆಂದರೆ—"ನನ್ನ ಮಗ ಸುಮಾರು 12-13 ವರುಷದ ಸೋಮನೆಂಬ ಹುಡುಗನು ಮನೆಯಿಂದ ತಪ್ಪಿಸಿಕೊಂಡು ಹೋಗಿರುತ್ತಾನೆ. ತಹಲ್ ವರಿವಿಗೂ ಗೊತ್ತಾಗಲಿಲ್ಲ. ಈ ಹುಡುಗ ಇರತಕ್ಕ ಸ್ಥಳವನ್ನಾಗಲಿ, ಹುಡುಗನನ್ನಾಗಲಿ ಪತ್ತೆ ಮಾಡಿಕೊಡುವವರಿಗೆ ಬಹುಮಾನ ಕೊಡುತ್ತೇನೆ."

ಮೈಸೂರಿನಿಂದ ಕೊಡಗಿಗೆ ಅಂದರೆ ಮಿರ್ಲೆ, ಸಾಲಿಗ್ರಾಮ, ರಾಮನಾಥಪುರ, ಕೊಣನೂರು, ಸಿರಂಗಾಲ, ಈ ಊರುಗಳನ್ನು ಕೂಡಿಸುವಂತೆ ರೈಲ್ವೆ ಬಡಾವಣೆಮಾಡುವುದರಲ್ಲಿ ಅಷ್ಟೇನೂ ಪ್ರಯೋಜನವಾಗುವುದಿಲ್ಲವೆಂದೂ, ಇದಕ್ಕಾಗಿ ಡಿಬೆಂಚರ್ ಸಾಲವನ್ನು ಪ್ರಜೆಗಳಿಂದ ಕೂಡಿಸುವುದು ಸಾಧ್ಯವಲ್ಲವೆಂದೂ, ರೈಲ್ವೆ ಬಡಾವಣೆಗೋಸ್ಕರ ರೈತರಿಂದ ರೈಲ್ವೆ ಸೆಸ್ಸನ್ನು ಹಾಕುವುದಕ್ಕೆ ಒಪ್ಪತಕ್ಕದ್ದೇವೆಂದೂ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ಸರ್ಕಾರಕ್ಕೆ ಅರಿಕೆಮಾಡಿದಾರೆ.

ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿದ್ದು ಈಚೆಗೆ ಬೆಂಗಳೂರು ಸಂಸ್ಕೃತ ಪಾಠಶಾಲಾ ಅಧ್ಯಕ್ಷರಾಗಿ ಕೆಲಸಮಾಡುತ್ತಿರುವ ವೇ|| ಆರ್. ಶಾಮಶಾಸ್ತ್ರಿಯವರು ಚಾಣಕ್ಯನ ಅರ್ಥಶಾಸ್ತ್ರವೆಂಬ ಪ್ರಾಚೀನ ಗ್ರಂಥವನ್ನು ಶೋಧನೆ ಮಾಡಿ ಪ್ರಚುರಪಡಿಸಿದಾರೆ. ಈ ಗ್ರಂಥವನ್ನು ನೋಡಿ ಅನೇಕ ಪಾಶ್ಚಾತ್ಯ ಪಂಡಿತರೂ ಕೂಡ ಸಂತೋಷಪಟ್ಟು ಮ|| ಶಾಸ್ತ್ರಿಯವರ ಸಾಹಸವನ್ನು ಕೊಂಡಾಡಿದರು. ನಮ್ಮ ಸರ್ಕಾರದವರು ಮ|| ಶಾಸ್ತ್ರಿಯವರ ಶ್ರಮಕ್ಕೆ 500 ರೂಪಾಯಿ ಪ್ರತಿಫಲವನ್ನು ಕೊಟ್ಟಿದಾರೆ ದು ಕೇಳಿ ಸಂತೋಷಪಡುತ್ತೇವೆ.

ಪಾಲಘಾಟಿನಿಂದ ಮ|| ಅನಂತರಾಮ ಭಾಗವತರೆಂಬ ಪ್ರಸಿದ್ಧ ಸಂಗೀತ ವಿದ್ವಾಂಸರು ರಾಜಧಾನಿಗೆ ಬಂದು ಅರಮನೆಯಲ್ಲಿ ಶ್ರೀಮನ್ ಮಹಾರಾಜರವರ ಸಮ್ಮುಖದಲ್ಲಿ ತಮ್ಮ ಪಾಂಡಿತ್ಯವನ್ನು ಪ್ರಕಾಶಪಡಿಸಿದರು. ನಮ್ಮ ಮಹಾರಾಜರವರು ಈ ವಿದ್ವಾಂಸರಿಗೆ ಬಹು ಅಮೂಲ್ಯವಾದ ತೋಡಾಗಳನ್ನು ಹಾಕಿಸಿ ಬಿಲ್ಲೆ ತ್ತಿಗಳನ್ನೂ, ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿಯೇ ಸಂಭಾವನೆಯನ್ನೂ ದಯಪಾಲಿಸಿದರು. ರಾಜಧಾನಿಯ ಗಾಯನ ಸಮಾಜದವರು ಈ ವಿದ್ವಾಂಸರನ್ನು ಕರಸಿಕೊಂಡು ನಾಳೆಯೂ, ಭಾನುವಾರವೂ ಅವರಿಂದ ಟೌನ್ ಹಾಲ್ ಬಂಗಲೆಯಲ್ಲಿ ವಿನಿಕೆಯನ್ನು ಮಾಡಿಸಿ ಬಹುಮಾನ ಕೊಡುವವರಾಗಿದಾರೆ.

ಶ್ರೀಮನ್ ಮಹಾರಾಜರವರು ಕಳೆದ ವಾರ ಎರಡು ದಿನ ಚಾಮುಂಡಿ ಬೆಟ್ಟದ ಮೇಲೆ ದಯಮಾಡಿದ್ದರು. ಮೊನ್ನೆ ಮಂಗಳವಾರ ನಂಜನಗೂಡಿಗೆ ಚಿತ್ತೈಸಿ ದೇವಸ್ಥಾನದಲ್ಲಿ ಸೇವಾದಿಗಳನ್ನು ಬೆಳಸಿದರು. ಈ ದಿನ ಅವರೂ ಅರಮನೆಯ ರಾಣೀವಾಸದವರೂ ಬೆಂಗಳೂರನ್ನು ಕುರಿತು ತೆರಳುವರೆಂಬ ವರ್ತಮಾನವಿದೆ. ಅರಮನೆಯ ರಾಣೀವಾಸದವರು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಗೇರುಸೊಪ್ಪೆಗೆ ದಯಮಾಡಿ ಜಲಪಾತವನ್ನು ಪರಾಂಬರಿಸಿಕೊಂಡು ಬರುವ ಏರ್ಪಾಡು ನಿಂತುಹೋಗಿತ್ತು. ಈಗ ಮತ್ತೆ ಶ್ರೀಮನ್ ಮಹಾರಾಜರವರೂ ರಾಣೀವಾಸದವರೂ ಅಲ್ಲಿಗೆ ಈ ತಿಂಗಳ ಆಖೈರಿನೊಳಗೆ ದಯಮಾಡುವವರಾಗಿದಾರೆಂದು ಪ್ರಕಟವಾಗಿದೆ.

ಧಾರವಾಡದಲ್ಲಿ ಒಂದು ಕರ್ನಾಟಕ ವಿದ್ಯಾಶಾಲೆಯನ್ನು ಸ್ಥಾಪಿಸಿ ನಡಿಸಬೇಕೆಂದು ಕರ್ನಾಟಕ ಸೀಮೆಯಲ್ಲೆಲ್ಲಾ ಅದಕ್ಕಾಗಿ ಚಂದಾ ಹಣಗಳನ್ನು ಕೂಡಿಸುತ್ತಿದಾರೆ. ಈ ಫಂಡಿಗೆ 50,000 ರೂಪಾಯಿ ಸೇರಿದವಾಯಿತು. ಅದರ ಮುಖ್ಯ ಪುರುಷರು ಚಂದಾ ಹಣವನ್ನು ಕೂಡಿಸುವುದಕ್ಕೆ ಬಹಳ ಕಷ್ಟಪಡುತ್ತಿರುವರು. ಇಂಥಾ ಸಮಯದಲ್ಲಿ ಧಾರವಾಡದ ಹತ್ತಿರ ಇರುವ ನವಲೂರ ಈಟಗಟ್ಟಿ ಮುಂತಾದ ಗ್ರಾಮಗಳ ದೇಸಾಯಿರಾಗಿದ್ದು ಕೊಲ್ಹಾಪುರ ಸಂಸ್ಥಾನದಲ್ಲಿ ಮಾಡಿದ ಪ್ರಶಂಸನೀಯವಾದ ಕೆಲಸದ ದೆಸೆಯಿಂದ ತಮ್ಮ ಜೀವಮಾನದ ಪರ್ಯಂತರ ನಡೆಯುವ ಹಾಗೆ ಜಹಗೀರಿಯನ್ನು ಸಂಪಾದಿಸಿ ವಿಶೇಷವಾದ ಪ್ರಖ್ಯಾತಿಯನ್ನೂ ರಾಜ ಸನ್ಮಾನವನ್ನೂ ಹೊಂದಿದ್ದು ಕಳೆದ ಮಂಗಳವಾರ 80 ನೇ ವಯಸ್ಸಿನಲ್ಲಿ ಕಾಲವಾದ ಶ್ರೀಮಂತ ಬಾಬಾ ಸಾಹೇಬ ಅಳಬರನಿಸ ಎಂಬ ದೊಡ್ಡ ಮನುಷ್ಯರು ತಮ್ಮ ಮರಣಶಾಸನದಲ್ಲಿ ಮೇಲ್ಕಂಡ ಕರ್ನಾಟಕ ಕಾಲೇಜಿನ ಫಂಡಿಗೆ ತಮ್ಮ ಆಸ್ತಿಯಿಂದ 50,000 ರೂಪಾಯಿ ಕೊಡಬೇಕೆಂದು ಬರೆದಿಟ್ಟಿದಾರೆಂದು ತಿಳಿಸಲು ಆನಂದಪಡುತ್ತೇವೆ.

ಇತರ ದೇಶದ ವೃತ್ತಾಂತಗಳು.

ಬೆಲ್ಜಿಯಮ್ ರಾಜಧಾನಿಯಾದ ಬ್ರಸ್ಸೆಲ್ಸ್ ನಗರದಲ್ಲಿದ್ದ 17 ರಿಂದ 35 ವಯಸ್ಸಿನ ಬೆಲ್ಜಿಯನ್ ಗಂಡಸರನ್ನೆಲ್ಲಾ ಜರ್ಮನಿಯವರು ಹಿಡಿದು ಅಲ್ಲಿಂದ ಜರ್ಮನಿಗೆ ಸಾಗಿಸಿರುವಂತೆ ಅಲ್ಲಿನ ಪತ್ರಿಕೆಯು ತಿಳಿಸುತ್ತದೆ.

ಪ್ರಿನ್ಸ್ ಆಫ್ ವೇಲ್ಸ್‌ರವರ ಯುದ್ಧದ ರಿಲೀಫ್ ಫಂಡಿಗೆ ಇದುವರೆಗೆ 55,78,712 ಪೌಂಡು (ಅಂದರೆ, 8,36,80,680 ರೂಪಾಯಿ) ಚಂದಾ ವಸೂಲಾಗಿರುವುದೆಂದೂ ಈ ಪೈಕಿ ಆಗಲೇ ಪರೋಪಕಾರ ಕಾರ್ಯಗಳಿಗೆ 25,83,000 ಪೌಂಡು (ಅಂದರೆ, 3,77,45,000) ರೂಪಾಯಿ ಖರ್ಚುಮಾಡಲಾಯಿತೆಂದೂ ತಿಳಿಸಲ್ಪಟ್ಟಿದೆ.

ನ್ಯೂಜೀಲೆಂಡಿನ ಸೈನಿಕರು ಯುದ್ಧಭೂಮಿಗೆ ಹೋಗಿರುತ್ತಾರಷ್ಟೆ. ಈ ಪೈಕಿ ಗಾಯಪಟ್ಟ ಸುಮಾರು 500 ಮಂದಿಯನ್ನು ವಾಪಸು ನ್ಯೂಜೀಲೆಂಡಿಗೆ ಕಳುಹಿಸುತ್ತಿರೆ. ಇವರು ಮುಂದಿನ ವಾರ ಸಿಲೋನ್ ದ್ವೀಪದಲ್ಲಿ ತಂಗುವರೆಂಬ ಸುದ್ದಿಯನ್ನು ಕೇಳಿ ಅಲ್ಲಿನ ಪ್ರಜೆಗಳು ಆ ಸೈನಿಕರಿಗೆಲ್ಲಾ ಸುಖಾಗಮನವನ್ನು ಬಯಸಿ ಅವರಿಗಾಗಿ ನಾನಾ ಸಂತೋಷೋತ್ಸವಗಳನ್ನು ನಡಿಸಬೇಕೆಂದು ಏರ್ಪಾಡು ಮಾಡುತ್ತಿರುವರು.

ಬ್ರಿಟಿಷ್ ಯುದ್ಧದ ಇಲಾಖೆಯ ಸೆಕ್ರೆಟರಿ ಲಾರ್ಡ್ ಕಿಚ್ನರ್ ಯವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂಬ ಸುಳ್ಳು ಸುದ್ದಿಯನ್ನು ಪ್ರಕಟಿಸಿ ಅದನ್ನೇ ಸಾಧಿಸಿದ ಲಂಡನ್ ಪಟ್ಟಣದ ಗ್ಲೋಬ್ ಎಂಬ ವರ್ತಮಾನ ಪತ್ರಿಕೆಯನ್ನು ಸರ್ಕಾರದವರು ನಿಲ್ಲಿಸಿಬಿಟ್ಟಿದ್ದರಷ್ಟೆ. ಕಳೆದ ವಾರ ಆ ಪತ್ರಿಕೆಯ ಸಂಪಾದಕರು ತಮ್ಮ ತಪ್ಪನ್ನು ಒಪ್ಪಿಕೊಂಡು ಕ್ಷಮೆಯನ್ನು ಬೇಡಿದ್ದರಿಂದ ಸರ್ಕಾರದವರು ಆ ಪತ್ರಿಕೆಯನ್ನು ಮತ್ತೆ ಪ್ರಕಟಿಸುವಂತೆ ಅಪ್ಪಣೆ ಕೊಟ್ಟಿದಾರೆ.

ಆಸ್ಟ್ರಿಯಾ ಹಂಗೇರಿಯಲ್ಲಿ ಹಾಲು ಮೊದಲಾದ ಆಹಾರ ಪದಾರ್ಥಗಳಿಗೂ ಬಹಳ ಕೊರತೆಯುಂಟಾಗಿರುವಂತೆ ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ. ರಾಜಧಾನಿಯಾದ ವಿಯನ್ನಾ ನಗರದಲ್ಲಿ ಹಾಲಿನ ಕ್ರಯ ಬಹಳವಾಗಿ ಹೆಚ್ಚಿರುವುದು. ಗೋಪಾಲಕರು ತಮ್ಮ ರಾಸುಗಳಿಗೆ ಮೇವು ತಿಂಡಿ ಸಿಕ್ಕದೆ ಹಸು ಕರುಗಳನ್ನು ಬಿಕರಿ ಮಾಡುತ್ತಿರುವರು. ಯುದ್ಧಕ್ಕೆ ಮುಂಚೆ ಆ ರಾಜಧಾನಿಯಲ್ಲಿ 10,000 ಆಕಳುಗಳು ಇದ್ದು ಹಾಲನ್ನು ಒದಗಿಸುತ್ತಿದ್ದವು. ಈಗ 5,000 ಮಾತ್ರ ಉಳಿದಿವೆಯಂತೆ. ಉಳಿದವುಗಳನ್ನೆಲ್ಲಾ ಮಾಂಸಕ್ಕಾಗಿ ಕೊಂದು ಹಾಕಿಬಿಟ್ಟರು. ಹಿಂದಿನ ವರುಷ ಒಂದು ಆಕಳ ಬೆಲೆ 375 ರೂಪಾಯಿ ಇದ್ದದ್ದು ಈಗ 1,200 ರೂಪಾಯಿ ಆಗುತ್ತದೆ. ಇದನ್ನು ನೋಡಿ ಕವಾಡಿಗರು ಹಾಲು ಮಾರುವುದಕ್ಕಿಂತ ಹಸುವನ್ನೇ ಮಾರಬಿಡುತ್ತಿದಾರೆ.

ಚಾಲ್ತಿ ವರುಷದಲ್ಲಿ ಗ್ರೇಟ್ ಬ್ರಿಟನ್‌ನವರು ತಮ್ಮ ಸ್ವಂತ ರಾಜ್ಯದ ಖರ್ಚಲ್ಲದೆ ಮಿತ್ರಮಂಡಲಿಯವರಿಗೆ ಸಹಾಯ ಮಾಡುವುದಕ್ಕಾಗಿಯೇ 42,30,00,000 ಪೌಂಡು ದ್ರವ್ಯವನ್ನು ಒದಗಿಸಿಕೊಳ್ಳಬೇಕಾಗಿದೆ ಎಂದು ಸರ್ ಜಾರ್ಜ್ ಪೆಯಿಷ್‌ರವರು ಕೆನ್ಸಿಂಗ್‌ಟನ್ ಟೌನ್ ಹಾಲಿನಲ್ಲಿ ಉಪನ್ಯಾಸಮಾಡುತ್ತಾ ಹೇಳಿದರು. ಈಗ ಗ್ರೇಟ್ ಬ್ರಿಟನ್‌ನಲ್ಲಿ ಪ್ರಜೆಗಳು ಕೊಡುವ ತೆರಿಗೆಕ್ಕಿಂತಲೂ ಸಾಲಿಯಾಗಿ ಇನ್ನೂ 40,00,00,000 ಪೌಂಡನ್ನು ಮಿಗಿಸುತ್ತಾ ಬರಬೇಕು. ಇದೇನೂ ಅವರಿಗೆ ಹೆಚ್ಚಲ್ಲ. ಪ್ರಜೆಗಳು ಈಗ ಮಾಡುತ್ತಿರುವ ಖರ್ಚಿನಲ್ಲಿ ಶೇಕಡಾ 15 ರಷ್ಟು ಕಡಮೆಮಾಡಿದ ಪಕ್ಷದಲ್ಲಿ 40 ಕೋಟಿ ಪೌಂಡು ಒದಗುತ್ತದೆ. ಸಾಮಾನ್ಯ ಪ್ರಜೆಗಳೆಲ್ಲಾ ತಮ್ಮ ವರಮಾನದಲ್ಲಿ ಶೇಕಡಾ 10 ರಷ್ಟನ್ನೂ, ಐಶ್ವರ್ಯವಂತರೆಲ್ಲಾ ಶೇಕಡಾ 20-25 ರಷ್ಟನ್ನೂ ಖರ್ಚು ಕಡಮೆಮಾಡಿದರೆ ಸಾಕಾಗಿದೆ ಎಂದು ತಿಳಿಸಿದರು.

ಸೇವಾಸದನ ಸಂಘ, ಬೆಂಗಳೂರು ಸಿಟಿ.

ಈಗ ನಡೆಯುತ್ತಿರುವ ಘೋರವಾದ ಯುದ್ಧಕ್ಕೆ ಮೈಸೂರು ರಾಜ್ಯದಿಂದ ಕಳುಹಿಸಲ್ಪಟ್ಟಿರುವ ಇಂಪೀರಿಯಲ್ ಸರ್ವಿಸ್ ಫೌಜಿನವರ ಉಪಯೋಗಾರ್ಥವಾಗಿ ಸಹಾಯ ದ್ರವ್ಯವನ್ನು ಕೂಡಿಸುವದಕ್ಕೋಸ್ಕರ ಶ್ರೀಮತ್ ಮಹಾರಾಜರವರ ಪೋಷಣೆಯಲ್ಲಿಯೂ, ಶ್ರೀಮತ್ ಯುವರಾಜರವರ ಅಧ್ಯಕ್ಷತೆಯಲ್ಲಿಯೂ ಒಂದು ಸಭೆಯು ಏರ್ಪಾಟಾಗಿರುವುದು ಸರಿಯಷ್ಟೆ. ಈ ಸಂಬಂಧದಲ್ಲಿ ಅಧ್ಯಕ್ಷರಾದ ಶ್ರೀಮಾನ್ ಯುವರಾಜರವರು ಮೈಸೂರು ದೇಶದ ಯುದ್ಧಭಟರಿಗೆ ಅತ್ಯವಶ್ಯಕವಾದ ಸಾಮಗ್ರಿಗಳನ್ನು ಸೂಚಿಸಿ, ಸಹಾಯ ದ್ರವ್ಯವನ್ನಪೇಕ್ಷಿಸಿ ಪ್ರಚುರಪಡಿಸಿರುವ ಪ್ರಸಿದ್ಧ ಪತ್ರಿಕೆಯು ಸರ್ವಜನ ವಿದಿತವಾಗಿದೆ. ಈ ಪ್ರಸಿದ್ಧ ಪತ್ರಿಕೆಯಲ್ಲಿ ಸ್ತ್ರೀಯರೂ ಸಹ ವಿಶೇಷವಾಗಿ ಸಹಾಯಮಾಡಬಹುದೆಂಬ ಅಂಶವನ್ನು ತಿಳಿಯಪಡಿಸಿರುತ್ತಾರೆ.

ಬೆಂಗಳೂರು ಸೇವಾಸದನ ಸಂಘದ ಮೆಂಬರುಗಳು ಈ ಸೂಚನೆಯಂತೆ ನಡೆಯಬೇಕೆಂದು ಕುತೂಹಲಪಟ್ಟು ಕಳೆದ 17 ನೇ ತಾ. ಬುಧವಾರ ಸಾಯಂಕಾಲ ಬೆಂಗಳೂರು ಕೋಟೆಯಲ್ಲಿರುವ ಸರ್ಕಾರಿ ಸ್ಕೂಲ್ ಮಂದಿರದಲ್ಲಿ ಸಭೆ ಸೇರಿದ್ದರು. ಸುಮಾರು 60 ಜನ ಮೆಂಬರುಗಳು ಹಾಜರಿದ್ದರು. ಮ|| ತ್ಯಾಗರಾಜ ಅಯ್ಯರವರ ಮತ್ತು ಮ|| ಬಾಲಸುಂದರಂ ಅಯ್ಯರವರ ಹೆಣ್ಣುಮಕ್ಕಳು ದೇವರ ಪ್ರಾರ್ಥನೆಯನ್ನೂ ಸ್ವಲ್ಪ ಸಂಗೀತವನ್ನೂ ಹಾಡಿದ ನಂತರ ಕಾರ್ಯದರ್ಶಿಯವರಾದ ಶ್ರೀಮತಿ ರಂಗಮ್ಮನವರು ಶ್ರೀಮಾನ್ ಯುವರಾಜರವರ ಪ್ರಸಿದ್ಧ ಪತ್ರಿಕೆಯನ್ನು ಸಭಿಕರಿಗೆ ಓದಿ ಹೇಳಿ ವಿವರಿಸಿದರು. ಪ್ರೆಸಿಡೆಂಟರವರಾದ ಶ್ರೀಮತಿ ಪಾರ್ವತಿ ಅಮ್ಮನವರು ಬಹಳ ಸ್ವಾರಸ್ಯವಾದ ಭಾಷಣದ ಮೂಲಕ ಈಗ ಕೂಡಿಸುತ್ತಿರುವ ಸಹಾಯದ್ರವ್ಯದ ಉದ್ದೇಶವನ್ನು ವಿಶದಪಡಿಸಿದರು. ಸಭಿಕರೆಲ್ಲರೂ ಈ ಸದುದ್ದೇಶವನ್ನು ಅಂಗೀಕರಿಸಿ, ಅನೇಕರು ಸಹಾಯ ದ್ರವ್ಯವನ್ನು ವಾಗ್ದಾನಮಾಡಿದರು. ಕೆಲವರು ಅಲ್ಲಿಯೇ ಹಣವನ್ನು ಕೊಟ್ಟುಬಿಟ್ಟರು. ಸದ್ಯಕ್ಕೆ ಈ ಸಂಘದಿಂದ ಸುಮಾರು 100 ಜೊತೆ ಉಲನ್ ಕಾಲು ಚೀಲಗಳೂ, ಕೆಲವು ಕತ್ತುಪಟ್ಟಿಗಳೂ, ಬಾಲಕ್ಲಾವಾ ಟೋಪಿಗಳೂ ಯುದ್ಧಭಟರಿಗೆ ಕಳುಹಿಸಿಕೊಡುವದಾಗಿ ನಿಶ್ಚಯಿಸಿಕೊಂಡಿರುತ್ತಾರೆ.

ನಮ್ಮ ಸಂಸ್ಥಾನದ ಇತರ ಸ್ತ್ರೀಸಂಘಗಳ ಮೆಂಬರುಗಳೂ ಇದೇ ರೀತಿಯಾಗಿ ನಮ್ಮ ದೇಶದ ಗಾಂಭೀರ್ಯವನ್ನೂ ಹೆಸರುವಾಸಿಯನ್ನೂ ರಕ್ತಪ್ರವಾಹದಿಂದ ಕಾಪಾಡುತ್ತಿರುವ ನಮ್ಮ ಯುದ್ಧಭಟರಿಗೆ ಸಹಾಯಮಾಡಲು ತಮ್ಮ ಕೈಲಾದಮಟ್ಟಿಗೂ ಪ್ರಯಾಸಪಡುವುದರಲ್ಲಿ ಸಂದೇಹವಿಲ್ಲ. ಕೆ. ರ.

ಒಬ್ಬ ಹೆಡ್ ಮಾಸ್ಟರಿಗೆ ಸನ್ಮಾನಮಾಡಿದ್ದು.

ಕಳೆದ 13ನೇ ತಾ. ಶನಿವಾರ ಮಧ್ಯಾಹ್ನ ತುಂಕೂರು ತಾಲ್ಲೂಕು ಗುಳೂರು ಮಿಷನ್ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಜಿ. ತಿಮ್ಮರಾಯಪ್ಪನವರನ್ನು ಕೃತಜ್ಞತಾ ಪೂರ್ವಕವಾಗಿ ಸನ್ಮಾನಿಸುವ ಬಗ್ಗೆ ವಿದ್ಯಾರ್ಥಿಗಳೂ, ಅ|| ಮಾಸ್ಟರುಗಳೂ ಸೇರಿ ಹಳಿತು ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ಮೇಲ್ಕಂಡ ಸ್ಕೂಲಿನಲ್ಲಿ ಸಭೆಯನ್ನು ಸೇರಿಸಿದ್ದರು. ಈ ಸಂತೋಷ ಸಮಾಜದಲ್ಲಿ ಈ ಪ್ರಾಂತದ ಪ್ರಮುಖ ಪ್ರಜೆಗಳೂ, ಮುಖ್ಯಾಧಿಕಾರಿಗಳೂ ಸೇರಿದ್ದರು. ಅಗ್ರಾಸನವನ್ನು ಇಲ್ಲಿನ ಶೇಕದಾರ್ರು ಮ|| ಟಿ. ಯನ್. ಮೂರ್ತಿರಾಯರು ವಹಿಸಿದ್ದರು. ಪ್ರಾರಂಭದಲ್ಲಿ ಇಂಪಾದ ಸಂಗೀತವೂ, ಹಾರ್ಮೋನಿಯಂ ವಾದ್ಯದೊಡನೆ ಸಭಿಕರಿಗೆ ಆನಂದವನ್ನುಂಟುಮಾಡಿತು. ನಂತರ ಇದೇ ಸ್ಕೂಲಿನ ಅ|| ಮಾಸ್ಟರ್ ಜಿ. ನಂಜುಂಡಶೆಟ್ಟಿಯವರು ಪ್ರಪಂಚದಲ್ಲಿ ವಿದ್ಯೆಯೇ ದೊಡ್ಡದೆಂಬ ವಿಚಾರವನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಇದಾದ ಮೇಲೆ ಸ್ಕೂಲ್ ಮಾಸ್ಟರ್ ದಾಸಪ್ಪನವರು ಇಲ್ಲಿನ ಜನರಿಗೆ ವಿದ್ಯಾಭ್ಯಾಸದ ವಿಷಯದಲ್ಲಿ ಈ ಹೆಡ್ ಮಾಸ್ಟರವರಿಂದ ಉಂಟಾಗಿರತಕ್ಕ ಉಪಕಾರಗಳನ್ನು [illegible] ಈ ಹೆಡ್ ಮಾಸ್ಟರಲ್ಲಿ 10 ವರುಷಗಳಿಂದ ವಿದ್ಯೆ ಕಲಿತು ಇವರಿಂದಲೇ ಪುರೋಭಿವೃದ್ಧಿಗೆ ಬಂದ ಇವರ ವಿದ್ಯಾರ್ಥಿಗಳ ಪರವಾಗಿ ಅಗ್ರಾಸನಾಧಿಪತಿಗಳು ರಸಿಕಜನ ಮನೋರಂಜಕವಾದ ಒಂದು ಉಪನ್ಯಾಸವನ್ನು ಮಾಡಿದರು. ಈ ಹೆಡ್ ಮಾಸ್ಟರಲ್ಲಿರುವ ಮೈತ್ರಿ, ಪ್ರಜಾ ವಾತ್ಸಲ್ಯ, ಅನುರಾಗ, ಕಾರ್ಯದಕ್ಷತೆ, ವಾಗ್ವೈಖರಿ, ಸದುಪಾಧ್ಯಾಯಲಕ್ಷಣ ಮುಂತಾದ ಸದ್ಗುಣಗಳು ತಕ್ಕ ನಿದರ್ಶನಗಳೊಡನೆ ಈ ಉಪನ್ಯಾಸದಲ್ಲಿ ಪ್ರತಿಪಾದಿಸಲ್ಪಟ್ಟವು. ಇವರಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳ ಇಷ್ಟೊಂದು ಶ್ರೇಯೋಭಿವೃದ್ಧಿಗೂ ಮೂಲಕಾರಣರೂ, ಬದ್ಧಾದರರೂ ಆದ ಈ ಹೆಡ್ ಮಾಸ್ಟರವರಿಗೆ ನಾವುಗಳು ಎಷ್ಟು ಕೃತಜ್ಞರಾಗಿದ್ದರೂ ಅಲ್ಪವಾಗಿರುವದು. ಆದುದರಿಂದ ಇವರಿಗೂ, ಇವರ ಕುಟುಂಬದವರಿಗೂ ಕಲ್ಯಾಣ ಪರಂಪರೆಗಳನ್ನುಂಟುಮಾಡಲೆಂದು ಜಗದೀಶನನ್ನು ಪ್ರಾರ್ಥಿಸುವುದರ ಮೂಲಕ ತಮ್ಮ ಉಪನ್ಯಾಸವನ್ನು ಪೂರ್ತಿಮಾಡಿದರು.

ಹೆಡ್ ಮಾಸ್ಟರವರು ಈ ಉಪನ್ಯಾಸಗಳಿಗೆ ಪ್ರತಿಯಾಗಿ—ತಾವುಗಳೆಲ್ಲರೂ ಇಷ್ಟು ಮಟ್ಟಿಗೆ ನನ್ನನ್ನು ಗೌರವಿಸಿ ನನಗೆ ಸನ್ಮಾನಮಾಡಲು ತಕ್ಕಷ್ಟು ಕಾರಣವಿದೆ ಎಂದು ನಾನೆಂದಿಗೂ ಹೇಳಲಾರೆನು. ಇಷ್ಟಕ್ಕೆಲ್ಲಾ ನನಗೆ ಅರ್ಹತೆ ಸಾಲದು. ಈ ಮರ್ಯಾದೆಯೆಲ್ಲವೂ ಸರ್ವಶಕ್ತನಾದ ಭಗವಂತನಿಗೆ ಸಹಜವಾಗಿ ಸಲ್ಲತಕ್ಕದ್ದು. ತಾವೆಲ್ಲರೂ ಇಂತಹ ದಿವ್ಯವಾದ ಸಭೆಯಲ್ಲಿ ನನಗೆ ಇಷ್ಟು ಮಟ್ಟಿಗೆ ಸನ್ಮಾನಮಾಡಿದುದಕ್ಕಾಗಿ ತುಂಬಾ ಕೃತಜ್ಞನಾಗಿರುವೆನು ಎಂದು ಉತ್ತರವನ್ನು ಹೇಳಿ ಶ್ರೀಮನ್ ಮಹಾರಾಜರವರ ಮತ್ತು ಶ್ರೀಮದಿಂಡಿಯಾ ಚಕ್ರವರ್ತಿಯವರ ಶ್ರೇಯಸ್ಸನ್ನು ಬಯಸುವುದರ ಮೂಲಕ ತಮ್ಮ ಭಾಷಣವನ್ನು ಪೂರ್ತಿಗೊಳಿಸಿದರು. ಹೆಡ್ ಮಾಸ್ಟರಿಗೆ ತಮ್ಮ ನಿಶ್ಶ್ಯಾಸ ಪೂರ್ವಕವಾದ ಒಂದು ಭಂಗಾರದ ಅಂಗುಳೀಯಕವನ್ನು ಸಮರ್ಪಿಸಿದರು. ಅಗ್ರಾಸನಾಧಿಪತಿಗಳ ಸದುಪದೇಶದಂತೆ ಸಭಿಕರೆಲ್ಲರೂ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮಂಗಳ ಉಂಟಾಗಲೆಂದು ಜಯಘೋಷದೊಡನೆ ರಾಜಭಕ್ತಿಯನ್ನು ಪ್ರದರ್ಶಿಸಿ ಸಭೆಯನ್ನು ಮುಕ್ತಾಯ ಗೊಳಿಸಿದರು.

ಬಾತ್ಮಿದಾರ.

ತಿಪ್ಪಘಟ್ಟದಲ್ಲಿ ನಡೆದ ಒಂದು ಸಭೆ.

ಸಂಪದಭ್ಯುದಯ ಸಮಾಜದ ಕೋಲಾರ್ ಡಿಸ್ಟ್ರಿಕ್ಟ್ ಸೂಪ್ರಂಟೆಂಡೆಂಟರವರಾದ ಮ|| ಎಫ್. ಎನ್. ರಾಘವಾಚಾರ್ಯರ ಪ್ರೋತ್ಸಾಹದಿಂದ ಕಳೆದ ವಾರ ತಿಪ್ಪಘಟ್ಟದಲ್ಲಿ ತಾಲ್ಲೂಕು ಮಹಾ ಸಭೆಯು ನಡೆಸಲ್ಪಟ್ಟಿತು. ಈ ಸಮಾಜದ ಸೆಕ್ರೆಟರಿಯವರಾದ ಮಿ|| ಡಿಕೋಟಾ ಸಾಹೇಬರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಸಾಹೇಬರವರೂ, ಡಿಸ್ಟ್ರಿಕ್ಟ್ ಸೂಪ್ರಂಟೆಂಡೆಂಟರವರೂ, ವಿದ್ಯಾಭ್ಯಾಸ ಕೈಗಾರಿಕೆ ವ್ಯವಸಾಯ ವ್ಯಾಪಾರ ಮತ್ತು ರೇಷ್ಮೆ ವ್ಯವಸಾಯ ಕಮಿಟಿಗಳ ಎಲ್ಲಾ ಸೆಕ್ರೆಟರಿಗಳೂ ಮತ್ತು ಇನ್ಸ್‌ಪೆಕ್ಟರುಗಳೂ ದಯಮಾಡಿಸಿದ್ದರು. ತಾಲ್ಲೂಕು ಪ್ರೋಗ್ರೆಸ್ ಕಮಿಟಿ ಮೆಂಬರುಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಟವನ್ ನಿವಾಸಿಗಳೂ, ಗ್ರಾಮಾಂತರಗಳ ಜಮೀನ್ದಾರರುಗಳೂ, ರೈತಾಪಿಗಳೂ ಸಹ 600 ಮಂದಿ ವರಿವಿಗೆ ಹಾಜರಾಗಿದ್ದರು. ಅಧ್ಯಕ್ಷರವರು ಮುಖ್ಯಾಧಿಕಾರಿಗಳೊಡನೆ ಬೆಳಿಗ್ಗೆ $7\frac{1}{2}$ ಗಂಟೆಗೆ ಎ. ವಿ. ಸ್ಕೂಲ್ ಬಳಿಗೆ ದಯಮಾಡುತ್ತಲೇ ಕಮಿಟಿ ಮೆಂಬರುಗಳು ಮರ್ಯಾದೆಯಿಂದ ಬರಮಾಡಿಕೊಂಡರು. ಅಲ್ಲಿ ಸ್ಕೂಲು ಬಾಲಕರುಗಳಿಂದ ಕಿಂಡರ್ ಗಾರ್ಟನ್ ಕ್ರಮಪ್ರಕಾರ ಕಾಗದ ಮಣ್ಣು ಕಡ್ಡಿಗಳು ಮುಂತಾದವುಗಳಿಂದ ಮಾಡಿಸಲ್ಪಟ್ಟ ಪ್ರದರ್ಶನೀಯಗಳಾಗಿದ್ದ ಸಾಮಾನುಗಳನ್ನೂ ಮತ್ತು ರೇಷ್ಮೆ ವ್ಯವಸಾಯದ ಇಲಾಖೆಯವರು ಏರ್ಪಡಿಸಿದ್ದ ನವೀನ ರೀತಿಯ ಹುಳ ಸಾಕುವಿಕೆ, ರೋಗಬಂದ ಹುಳುವನ್ನು ಕಂಡು ಹಿಡಿದು ಬೇರ್ಪಡಿಸುವಿಕೆ, ಹೊಸ ತರಹಾ ರಾಟೆಯ ಮೂಲಕ ರೇಷ್ಮೆ ದಾರ ತೆಗೆಯುವಿಕೆ ಮುಂತಾದ ಪ್ರದರ್ಶನವನ್ನು ಪರಾಂಬರಿಸಿ, ನಂತರ ಬಹು ಮಂದಿ ಪ್ರಜೆಗಳಿಗೂ ತಿಳುವಳಿಕೆಯಾಗುವ ರೀತಿಯಲ್ಲಿ ಅಧ್ಯಕ್ಷರವರು ಮಾಡಿದ ಭಾಷಣವು ಆಶ್ಚರ್ಯಕರವಾಗಿದ್ದಿತು. ಸರ್ಕಾರದವರು ಮೇಲ್ಕಂಡ ಇಲಾಖೆಯನ್ನು ಸ್ಥಾಪಿಸಿರುವದರಿಂದ ಪ್ರಜೆಗಳು ಇದರ ಫಲವನ್ನು ಯಾವ ರೀತಿಯಲ್ಲಿ ಅನುಭವಿಸಬೇಕೆಂಬುವದು ಚೆನ್ನಾಗಿ ವ್ಯಕ್ತಪಡಿಸಿದರು. ರೇಷ್ಮೆ ವ್ಯವಸಾಯದ ಇಲಾಖಾ ಸೂಪ್ರಂಟೆಂಡೆಂಟರವರು ಹಿಪ್ಪುನೇರಳೆ ವ್ಯವಸಾಯದಲ್ಲಿ ಇರುವ ಕೊರತೆಗಳನ್ನು ವಿವರಿಸಿ ಅವುಗಳ ನಿವಾರಣೆಯನ್ನು ತಿಳಿಸಿದರು. ಈ ಊರಲ್ಲಿ ಒಂದು ಸಿರಿಕಲ್‌ಚರಲ್ ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸುವದು ಉತ್ತಮವೆಂದು ಅಧ್ಯಕ್ಷರು ಅಭಿಪ್ರಾಯಪಡಲು, ಪ್ರೋಗ್ರೆಸ್ ಕಮಿಟಿ ಮೆಂಬರುಗಳಾದ ಮ|| ಸಿ. ಬಾದ್ರಪ್ಪನವರು, ಮ|| ಎಸ್. ಹಂಪಯ್ಯನವರು ಸಹಾ ಈ ವಿಷಯದಲ್ಲಿ ಸರ್ವರಿಗೂ ತಿಳಿಯುವ ರೀತಿ ವಿವರಿಸಿ ಹೇಳಲು ಸರ್ವರೂ ಒಪ್ಪಿಕೊಂಡು ಅದರಂತೆ ಶೀಘ್ರದಲ್ಲಿ ಏರ್ಪಡಿಸುವದಾಗಿ ತೀರ್ಮಾನಿಸಿದರು. ಅನಂತರ ಟವನ್‌ನಲ್ಲಿ ಪ್ರವೇಶಮಾಡಿ ಕೋಆಪರೇಟಿವ್ ಸೊಸೈಟಿ, ರೀಡಿಂಗ್ ರೂಂ, ಮತ್ತು ಫ್ರೀ ರೀಡಿಂಗ್ ರೂಂ, ಬಳಪಗಳನ್ನು ತಯಾರುಮಾಡುವ ಕಾರ್ಖಾನೆ, ಹೊಸ ತರಹಾ ನೆಯಿಗೆ ಮಗ್ಗಗಳ ಕೆಲಸ ಇವುಗಳನ್ನು ಪರಾಂಬರಿಸಿ ಬಂಗ್ಲೆಯಲ್ಲಿ ಭೋಜನ ತೀರಿಸಿಕೊಂಡು ಪುನಃ ಮಧ್ಯಾಹ್ನ 2 ಗಂಟೆಗೆ ಸಭೆಯನ್ನು ಆರಂಭಿಸಿದರು. ಜನರು ವಿಶೇಷವಾಗಿ ಸೇರಿದ್ದರು. ಅಮಲ್ದಾರ್ರವರಿಂದ ಈ ವರ್ಷದ ಅಭಿವೃದ್ಧಿ ಕಾರ್ಯಗಳ ರಿಪೋರ್ಟು ಓದಲ್ಪಟ್ಟ ನಂತರ ವಿದ್ಯಾಭ್ಯಾಸ ಕೈಗಾರಿಕೆ ವ್ಯಾಪಾರ ವ್ಯವಸಾಯ, ಇವುಗಳ ವಿಷಯವಾಗಿ ಆಯಾ ಇಲಾಖಾ ಮುಖಂಡರುಗಳು ಉಪನ್ಯಾಸಗಳನ್ನು ಮಾಡಿದರು. ಮುಂದಿನ ಸಾಲಿಗೆ ತಾಲ್ಲೂಕ್ ಅಭಿವೃದ್ಧಿ ವಿಷಯದಲ್ಲಿ ಗ್ರಾಮಾಂತರದ ಮುಖಂಡರು ಮುಸುವಜೀ ವಹಿಸಿ ಆಚರಿಸತಕ್ಕ ಕಾರ್ಯಗಳ ಪಟ್ಟಿಯು ಒಪ್ಪಿಸಲ್ಪಟ್ಟಿತು. ರಾಗಿ ವ್ಯವಸಾಯದ ವಿಷಯದಲ್ಲಿ ಮ|| ಬಾದಾಮಿಯವರು ಈಗತಾನೇ ಫಾರಂನಲ್ಲಿ ಬೆಳೆದಿರುವ ಮಾದ್ರಿ ಪೈರುಗಳನ್ನು ಪ್ರದರ್ಶನಮಾಡಿ ಬೋಧಿಸಿದುದು ಅನೇಕರಿಗೆ ತಾವೂ ಆ ರೀತಿ ಮುಂದುವರಿಯಬೇಕೆಂಬ ಉತ್ಸಾಹವನ್ನು ಹುಟ್ಟಿಸಿತು. ಸಬ್ ಡಿವಿಜನ್ ಸಾಹೇಬರವರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ವಿಲೇಜು ಕಮಿಟಿ, ತಾಲ್ಲೂಕು ಕಮಿಟಿಗಳವರು ಆಚರಿಸತಕ್ಕ ಕಾರ್ಯಗಳನ್ನು ವಿವರಿಸಿ ಸಭೆಯನ್ನು ಪೂರೈಸಿದರು. ಈ ಸಭೆಯ ಬಲದಿಂದ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಲು ಮಾರ್ಗವಾಯಿತು. ಇದಕ್ಕಾಗಿ ಸರ್ಕಾರದವರನ್ನು ವಂದಿಸುತ್ತೇವೆ.

ಪುರವಾಸಿ.

ಮೈಸೂರು ಗೆಜೆಟ್ ಸಂಗ್ರಹ.

ಸಾಗರದ ಮಹಜರು ಫಾರಂ ಛಾರ್ಜನ್ನು ವಹಿಸಿರುವ ವ್ಯವಸಾಯದ ಇನ್ಸ್‌ಪೆಕ್ಟರು ಹಣ್ಯಾರನ್ನು ಇಟ್ಟುಕೊಳ್ಳಲು ವಿನಾಯತಿ ಮಾಡಿದೆ.

ಮ|| ಕಾಶಿವೆಂಕಟನಾರಾಯಣಶೆಟ್ಟರನ್ನು ಮಾಗಡಿ ಮ್ಯುನಿಸಿಪಲ್ ಬೋರ್ಡಿಗೂ, ಮ|| ಬಸಪತಿರುದ್ರಪ್ಪನವರನ್ನು ಜೊಳಕಾಲ್ಮೂರು ಮ್ಯುನಿಸಿಪಲ್ ಬೋರ್ಡಿಗೂ ಮೆಂಬರಾಗಿ ನೇಮಿಸಿದೆ.

ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಎಸ್. ಎಂ. ಪ್ರಿಚರ್ಡ್ ಯವರಿಗೆ ನೋವೆಂಬರ್ ತಾ. 15 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಬಿ ವೆಂಕೋಬರಾಯರು ಅವರ ಚಾಲ್ತಿ ಕೆಲಸಗಳ ಛಾರ್ಜನ್ನೂ ವಹಿಸತಕ್ಕದ್ದು.

ಮೈಸೂರು ಮುನ್ಸಿಫ್ ಮ|| ಡಿ. ಕೆ. ರಾಮರಾಯರಿಗೆ ದಸರಾ ರಜಾ ಜೊತೆಗೆ ಮೂವತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅಡ್ವೊಕೇಟ್ ಮ|| ಎಂ. ಡಿ. ತಿರುಮಲಾಚಾರ್ರು ಅಕ್ಟೋಬರ್ ತಾ. 26 ರಿಂದ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಬೆಂಗಳೂರು ಅಡ್ವೊಕೇಟ್ ಮ|| [illegible] ಬದಲಿ ನೇಮಿಸಿದೆ.

ಅ|| ಕಮಿಷನರ್ ಮ|| ಎ. ಮೃತ್ಯುಂಜಯ ಅಯ್ಯರವರನ್ನು ಜೂಲೈ ತಾ. 1 ರಿಂದ 2 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮಿ|| ಮೇಜರ್ ಎಂ. ಇನ್ನೈಸ್ ರವರನ್ನು ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿಯೂ, ಮ|| ಟಿ ಶಂಬುಶೆಟ್ಟಿಯವರನ್ನು ಹುಜೂರು ಸೆಕ್ರೆಟರಿಯಾಗಿಯೂ ಬದಲಿ ನೇಮಕ ಮಾಡಿದೆ.

ಕೋಲಾರ್‌ಪೇಟೆ ಸಬ್ ಡಿವಿಜನ್ ಆಫೀಸರ್ ಮಿ|| ಎ. ಕೆ. ಸಯ್ಯದ್ ತಾಜ್ ಪೀರಾನ್ ಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಆರು ವಾರ ಜಾಸ್ತಿ ಮಾಡಿದೆ.

ಮ|| ಟಿ. ಜಿ. ಲಕ್ಷ್ಮೀಪತಿರಾಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಎ. ಕೆ. ಖಾನಿ ಯವರು ಮೈಸೂರು ಟ್ರಸ್ಟ್ ಬೋರ್ಡ್ ಚೇರ್‌ಮನ್ ರಾಗಿಯೂ, ಮ್ಯುನಿಸಿಪಲ್ ಸೀನಿಯರ್ ವೈಸ್ ಪ್ರೆಸಿಡೆಂಟರಾಗಿಯೂ ನೇಮಿಸಲ್ಪಟ್ಟಿದಾರೆ.

ಹಾಸನದ ಅ|| ಡೆಪ್ಯುಟಿ ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಸಿ. ವೆಂಕಟರಾಯರು ಡೆಪ್ಯುಟಿ ಕಮಿಷನರ್ ರಾಗಿಯೂ, ಮಿ|| ಎ. ಕೆ ಸಯ್ಯದ್ ತಾಜ್ ಪೀರಾನ್ ರವರು ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರಾಗಿಯೂ, ಮ|| ಎಂ. ಸದಾಶಿವರಾಯರು ಕೋಲಾರ್‌ಪೇಟೆ ಸಬ್ ಡಿವಿಜನ್ ಆಫೀಸರಾಗಿಯೂ, ಮ|| ಎಂ. ಶ್ರೀನಿವಾಸಮೂರ್ತಿಯವರು ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಯ ಆಫೀಸರಾಗಿಯೂ ಇರತಕ್ಕದ್ದು.

ಕಡೂರು ಡೆಪ್ಯುಟಿ ಕಮಿಷನರ್ ಮ|| ಕೆ. ಕೃಷ್ಣಅಯ್ಯರವರಿಗೆ ಕ್ರಿಸ್ಮಸ್ ರಜಾ ಜೊತೆಗೆ ಒಂದು ತಿಂಗಳು ಇಪ್ಪತ್ತಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ನಗರ್ ಸುಬ್ಬರಾಯರು ಡೆಪ್ಯುಟಿ ಕಮಿಷನರಾಗಿಯೂ, ಮಿ|| ಟಿ. ರಾಯಲುಶೆಟ್ಟಿಯವರು ನಂಜನಗೂಡು ಸಬ್ ಡಿವಿಜನ್ ಆಫೀಸರಾಗಿಯೂ, ಮಿ|| ಎಂ. ಜಿ. ಮೈತ್ರಿಯವರು ಮೈಸೂರು ಖಜಾನೆ ಆಫೀಸರಾಗಿಯೂ ಇರತಕ್ಕದ್ದು.

ಬೆಂಗಳೂರು ಡಿವಿಜನ್ ಅ|| ಇಂಜನಿಯರ್ ಮ|| ಎನ್. ಸುಬ್ಬರಾಯರಿಗೆ ಅಕ್ಟೋಬರ್ ತಾ. 26 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಉತ್ತರ ಸರ್ಕಲ್ ಸೂ|| ಇಂಜನಿಯರ್ ಮ|| ಸಿ. ಮಾಧವರಾಯರಿಗೆ ಕೊಟ್ಟಿರುವ ಹದಿನೆಂಟು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಎಂಟು ದಿನ ಜಾಸ್ತಿ ಮಾಡಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಯುದ್ಧದ ಫಂಡು.

ಮಹನೀಯರೇ,—ಈಗ ಯೂರೋಪ್ ಖಂಡದಲ್ಲಿಯೂ, ಭೂಮಂಡಲದ ಇತರ ಭಾಗಗಳಲ್ಲಿಯೂ ನಡೆಯುತ್ತಿರುವ ಯುದ್ಧವು ಚರಿತ್ರೆಯಲ್ಲಿ ಇದುವರೆಗೆ ನಾವು ಕೇಳಿರುವ ಯುದ್ಧಗಳಲ್ಲೆಲ್ಲಾ ಅತ್ಯಂತ ಘೋರವಾದದ್ದಾಗಿರುತ್ತೆ. ನಾನಾ ದೇಶಗಳಲ್ಲಿ ಉಭಯಪಕ್ಷದ ಸೈನಿಕರು ಮಾಡುತ್ತಿರುವ ಯುದ್ಧದ ರೀತಿಗಳು ಅತಿ ನವೀನವಾಗಿಯೂ ಅಭೂತ ಪೂರ್ವಕವಾಗಿಯೂ ಇವೆ. ಮತ್ತು ಇಂತಹ ಸಂದರ್ಭಗಳಲ್ಲಿ ಯೋಧರು ಅನುಭವಿಸುತ್ತಲಿರುವ ನಾನಾ ಬಗೆಯ ಕಷ್ಟಗಳು ವರ್ಣಿಸಲಸಾಧ್ಯವಾಗಿದೆ. ಈ ಸಂಕಟಗಳನ್ನು ತಕ್ಕಮಟ್ಟಿಗೆ ಶಮನಮಾಡಬೇಕೆಂಬ ಉದ್ದೇಶದಿಂದ ಯುದ್ಧಮಾಡುತ್ತಿರುವ ಜನಾಂಗದವರು ಮಾತ್ರವಲ್ಲದೆ, ತಟಸ್ಥರಾದ ಇತರ ಜನಾಂಗದವರೂ ಕೂಡ ಉದಾರವಾದ ದ್ರವ್ಯಸಹಾಯ ಮಾಡುತ್ತಿದಾರೆ.

ನಮ್ಮ ಸ್ವಕೀಯ ಸವಾರರ ರೆಜಿಮೆಂಟು ಒಂದು ನಮ್ಮ ಸಾರ್ವಭೌಮರ ಸಾಮ್ರಾಜ್ಯಕ್ಕೋಸ್ಕರವಾಗಿ ತಮ್ಮ ರಕ್ತವನ್ನು ಚೆಲ್ಲಲು ಸಮುದ್ರವನ್ನು ದಾಟಿ ಹೋಗಿರುವುದು ನಮ್ಮ ಮೈಸೂರು ದೇಶದ ಚರಿತ್ರೆಯಲ್ಲಿ ಇದೇ ಮೊದಲಾಗಿರುತ್ತೆ. ಇವರು ತಮ್ಮ ಮನೆಮಠವನ್ನು ಕುಟುಂಬವನ್ನು ಬಿಟ್ಟು ತೆರಳಿ [illegible] ವರುಷವಾಯಿತು. ಈ ಮನಃಕ್ಲೇಶದ ಜೊತೆಗೆ ತಾವುಗಳು ಪುನಃ ತಮ್ಮ [illegible] ಯನ್ನೂ ಮತ್ತು ಜನರನ್ನೂ ಸೇರುವೆವೇ ಎಂಬ ಸಂದೇಹವುಂಟಾದರೆ [illegible] ಮನಸ್ಸಿಗೆ ಎಷ್ಟು ಸಂಕಟ ಉಂಟಾದೀತೆಂಬ ವಿಷಯವನ್ನು ಸರ್ವರೂ [illegible] ಸತಕ್ಕದ್ದಾಗಿರುತ್ತೆ.

ನಮ್ಮ ಸವಾರರ ರೆಜಿಮೆಂಟು ಸದ್ಯಕ್ಕೆ ಈಜಿಪ್ಟ್ ದೇಶದಲ್ಲಿ ನೆಲೆಸಿದೆ. ಇವರ ಮುಖ್ಯ ಕರ್ತವ್ಯವು ಸೂಯಸ್ ಕಾಲುವೆಯನ್ನು ಕಾಪಾಡುವುದು, ತುರ್ಕಿಯವರು ಈಜಿಪ್ಟ್ ದೇಶವನ್ನು ಆಕ್ರಮಿಸುವುದಕ್ಕೆ ಅವಕಾಶ [illegible] ಇರುವುದೂ. ನಮ್ಮ ಸೈನಿಕರೂ ಶತ್ರುಗಳೂ ಆಗಲೇ ಸಂಧಿಸಿದರೆಂಬ ಸಂಗತಿ ನಮ್ಮಲ್ಲಿ ಬಹು ಜನಗಳಿಗೆ ತಿಳಿದೇ ಇರಬಹುದು. ಈ ಕದನದಲ್ಲಿ ಶತ್ರು ಸಂಖ್ಯೆಯು ನಮ್ಮವರಿಗಿಂತ ವಿಶೇಷ ಅಧಿಕವಾಗಿದ್ದರೂ ಮತ್ತು ಅವರು [illegible] ಏಕಿ ನಮ್ಮವರ ಮೇಲೆ ಬಿದ್ದರೂ, ನಮ್ಮವರು ಬಹಳ ಪರಾಕ್ರಮದಿಂದ [illegible] ಕೊಂಡರು. ನಮ್ಮ ಹುದ್ದೇದಾರರಲ್ಲಿ ಒಬ್ಬರಾದ ರಿಸಾಲ್‌ದಾರ್ ಸುಬ್ಬ[illegible] ಅರಸಿನವರು ಮಾಡಿದ ಸಾಹಸವನ್ನು ಮೆಚ್ಚಿ ಅವರಿಗೆ ಶ್ರೀಮಾನ್ ಚಕ್ರವರ್ತಿ ಸಾರ್ವಭೌಮರು ಇಂಡಿಯನ್ ಡಿ. ಎಸ್. ಓ. ಎಂಬ ಬಿರುದನ್ನೂ [illegible]ನ್ನೂ ದಯಪಾಲಿಸಿರುತ್ತಾರೆ. ಮೈಸೂರು ಸೈನಿಕರು ಹಿಂದೆ ನಡೆದ ಯುದ್ಧ[illegible] ಪರಂಪರೆಯಾಗಿ ಆರ್ಜಿಸಿದ್ದ ಕೀರ್ತಿಯನ್ನು ಈಗಲೂ ಕಾಪಾಡುವ ಶಕ್ತಿ ನಮ್ಮ ಸೈನಿಕರಿಗೆ ಇರುತ್ತೆಂಬುವ ಅಭಿಪ್ರಾಯವನ್ನು ಈ ನಮ್ಮ ಯೋಧರು [illegible] ದೃಢೀಕರಿಸಿರುತ್ತಾರೆ. ಈ ಕಾರಣದಿಂದ ನಾವು ಕೊಡಬಹುದಾದ ಸರ್ವ [illegible] ಯಕ್ಕೂ ಇವರು ತುಂಬಾ ಅರ್ಹರಾಗಿರುತ್ತಾರೆ. ಪರದೇಶದಲ್ಲಿ [illegible] ಜನರ ಮಧ್ಯೆ ಬಿಡಾರ ಮಾಡಿಕೊಂಡಿರುವ ಇವರುಗಳು ಅನುಭವಿಸುತ್ತಿರು[illegible] ಕಷ್ಟಗಳು ಅಪರಿಮಿತವಾಗಿರುವುವು. ಎಲ್ಲಾ ಪದಾರ್ಥಗಳ ಬೆಲೆಯು ಹೆಚ್ಚಾಗಿರುವುದಲ್ಲದೆ, ನಮ್ಮ ದೇಶದಲ್ಲಿ ಅವರಿಗೆ ವಾಡಿಕೆಯಾಗಿರುವ ಕೆಲವು ಪದಾರ್ಥಗಳು ಹಣ ಕೊಟ್ಟರೂ ಅಲ್ಲಿ ಅವರಿಗೆ ಸಿಕ್ಕವು. ಒಂದು ವೇಳೆ ಈ ಪದಾರ್ಥಗಳು ಅವರಿಗೆ ದೊರೆತರೂ, ತಮ್ಮ ಸ್ವದೇಶದಿಂದ ಕಳುಹಿಸಲ್ಪಡುವ ಪದಾರ್ಥಗಳು ಎಂದಿಗೂ ಪ್ರಿಯವಾಗಿರಲಾರವು. ಮತ್ತು ತಮ್ಮ ಬಂಧು ಮಿತ್ರರೂ ಸ್ವದೇಶೀಯರೂ ತಮ್ಮನ್ನು ಮರೆತಿಲ್ಲವೆಂಬುವ ವಿಷಯ ಅವರಿಗೆ ತಿಳಿದು ಬಂದರೆ ಇದರಿಂದ ಅವರಿಗೆ ಉಂಟಾಗತಕ್ಕ ಪರಮಾನಂದವೂ ಉತ್ಸಾಹವೂ ಅನಿರ್ವಚನೀಯ; ಹೇಳಲು ಸಾಧ್ಯವಲ್ಲ. ಆದ್ದರಿಂದ ನಾವುಗಳು ನಮ್ಮ ಔದಾರ್ಯಗುಣವನ್ನು ಸ್ವಲ್ಪ ಮಟ್ಟಿಗೆ ತೋರಿಸಿದರೂ, ಅವರುಗಳಿಗೆ ಎಷ್ಟೋ ಸೌಖ್ಯವನ್ನೂ ಅನುಕೂಲ್ಯತೆಯನ್ನೂ ಕಲ್ಪಿಸಿಕೊಟ್ಟಂತೆ ಆಗುತ್ತೆ.

ಈ ಉದ್ದೇಶಕ್ಕಾಗಿ “ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಯುದ್ಧದ ಫಂಡು” ಎಂಬ ಹೆಸರಿನಿಂದ ಒಂದೆ ಫಂಡು ಏರ್ಪಾಡು ಮಾಡಿ, ತಮ್ಮ ಪ್ರಾಣವನ್ನು ತೃಣೀಕರಿಸಿ ಅನಿರ್ವಚನೀಯವಾದ ಕಷ್ಟಪರಂಪರೆಗಳನ್ನು ಅನುಭವಿಸುತ್ತಲಿರುವ ನಮ್ಮ ಸೈನಿಕರ ವಿಷಯದಲ್ಲಿ ಪ್ರತಿಯೊಬ್ಬ ದೇಶಾಭಿಮಾನಿಯೂ ಅವರವರ ಶಕ್ತ್ಯನುಸಾರ ದ್ರವ್ಯ ಸಹಾಯವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಹುಪಟದ ಕಾಲುಚೀಲಗಳು, ಜುಬ್ಬಾಗಳು, ಕತ್ತುಪಟ್ಟಿ (ಮಫ್ಲರ್) ಮುಂತಾದ ಯಾವ ಬಗೆಯ ಸಾಮಾನುಗಳನ್ನಾಗಲಿ ಒದಗಿಸಿ ಕೊಡುವುದರ ಮೂಲಕ ಮೈಸೂರು ದೇಶದ ಸ್ತ್ರೀಯರು ಮಾಡಬಹುದಾದ ಸಹಾಯವು ಬಹಳ ಉಪಯೋಗಕರವಾಗಿರುತ್ತವೆ. ಇವುಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುತ್ತವೆ.

ಸೇರಿದ್ದಾಗಿರುತ್ತದೆ ಮತ್ತು ನಮ್ಮ ಅಧ್ಯಕ್ಷತೆಗೆ ಒಳಪಟ್ಟ ಒಂದು ಕಮಿಟಿಯ ಮೇಲ್ವಿಚಾರಣೆಯಲ್ಲಿರುತ್ತದೆ. ಶೇಖರಿಸಿದ ಧನವು ಹಿತವಾಗಿ ವಿನಿಯೋಗಿಸಲ್ಪಡುವ ವಿಷಯದಲ್ಲಿ ವಿಶೇಷವಾದ ಜಾಗರೂಕತೆಯನ್ನು ವಹಿಸಿರುತ್ತೆ. ಕೊಡುವ ಚಂದಾ ಮೊಬಲಗು ಎಷ್ಟಾದರೂ, ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವುದು. ಚಂದಾ ಮೊಬಲಗನ್ನು “ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಯುದ್ಧದ ಫಂಡಿನ ಟ್ರೆಜರರ್, ಬೆಂಗಳೂರು ಅರಮನೆ” ಎಂಬ ವಿಳಾಸಕ್ಕಾಗಲೀ, ಯಾವ ಸರ್ಕಾರಿ ಖಜಾನೆಗಾಗಲೀ, ಅಥವಾ ಮೈಸೂರು ಬ್ಯಾಂಕಿನಗಳಿಗೆ ಕಳುಹಿಸಬಹುದು. ಚಂದಾದಾರರು ಹಣವನ್ನು ತೆಗೆದುಕೊಳ್ಳುವವರ ಕ್ರಮವಾದ ಅಚ್ಚಿನ ರಸೀತಿಯನ್ನು ದಯವಿಟ್ಟು ಪಡೆಯಬೇಕು. ಚಂದಾದಾರರ ಹೆಸರು ಮತ್ತು ಅವರು ಕೊಡುವ ಮೊಬಲಗು ಇವುಗಳನ್ನು ವಾರಕ್ಕೊಂದಾವರ್ತಿ ಸರ್ಕಾರಿ ಗೆಜೆಟ್ಟಿನಲ್ಲಿಯೂ ಮತ್ತು ಸ್ಥಳೀಯ ವೃತ್ತಾಂತ ಪತ್ರಿಕೆಗಳಲ್ಲಿಯೂ ಪ್ರಕಟಿಸಲ್ಪಡುತ್ತಾ ಬರುತ್ತೆ.

ಕಂಠೀರವ ನರಸಿಂಹರಾಜಒಡೆಯರ್.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಸರ್ಕಾರದವರ ನಿರ್ಬಂಧವಂತೆ.

ಅಯ್ಯಾ,—ಸಾಗರ ತಾಲ್ಲೂಕು ಅಮಲ್ದಾರ್ರವರು ಶಿವಮೊಗ್ಗಾದಿಂದ ಸಾಗರಕ್ಕೆ ಹಾಕುವ ಡಿಸ್ಟ್ರಿಕ್ಟ್ ಬೋರ್ಡು ರೈಲ್ವೆ ಲೈನಿನ ಬಗ್ಗೆ ತಾಲ್ಲೂಕಿನ ಬಡ ಯಾ ಸಾಧಾರಣವಾದ ರೈತರು ಅವರ ಯೋಗ್ಯತೆ ಮೀರಿ ಹಣ ಹಾಕಬೇಕೆಂತ ಬಹಳ ನಿರ್ಬಂಧಪಡಿಸುತ್ತಾರೆ. ಆ ರೈತರಿಗೆ ಹಣವಿಲ್ಲದ ಕಷ್ಟ ಹೇಳತೀರದು. ಇದೂ ಅಲ್ಲದೆ ನವಂಬರ್ ತಿಂಗಳಿಗೆ ಬರುವ ಗವರ್ನರ ಸವಾರಿಯ ಬಗ್ಗೆ ತಾಲ್ಲೂಕಿನ ಹಳ್ಳಿಯ ಪ್ರತಿ ಮನೆಗೂ ಅಕ್ಕಿ, ತುಪ್ಪ, ಬೆಲ್ಲ, ಹಾರಿ, ಗನ, ಇವುಗಳನ್ನೆಲ್ಲಾ ತಂದು ಕೊಡಬೇಕು ಎಂತ ಬಹಳ ನಿರ್ಬಂಧಪಡಿಸುತ್ತಾರೆ. ರೈತರು ಬಂದ ಫಸಲು ಕೈಗೆ ಸಿಕ್ಕುವ ವರಿಗೂ ಹೊಟ್ಟೆ ವಿಷಯದಲ್ಲಿ ಬಹಳ ಯೋಚನೆಯಲ್ಲಿ ಇದಾರೆ. ಈ ತೊಂದರೆಯನ್ನು ಮೇಲ್ಪಟ್ಟ ಅಧಿಕಾರಿಗಳು ಪರಿಹರಿಸಿಕೊಟ್ಟಾರು ಎಂತ ನಂಬಿಕೊಂಡಿದೇವೆ

ಸಾಗರ ಕಸಬಾ ಹೋಬಳಿ ಬೆಳಲ್ಲು ಗ್ರಾಮದ ಕೆಂಡೆಗೌಡ,
ಸಾಗರ ತಾ|| ತಾಳಗುಪ್ಪೆ ಹತ್ತಿರ ಇರುವ ಬಾಡಿಕೊಡಲು ಮಂಜಪ್ಪ.

ಮೈಸೂರು ಸೀಮೆಯ ವಿದ್ಯಾಭ್ಯಾಸ.

ಅಯ್ಯಾ,—ತಮ್ಮ ಈ ವಾರದ 18-11-15 ಪತ್ರಿಕೆಯಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿರತಕ್ಕ ಕೆಲವು ನ್ಯೂನತೆಗಳು ತಿಳಿಸಲ್ಪಟ್ಟಿದೆ. ಇದರ ವಿಚಾರವಾಗಿ ಮದ್ರಾಸಿನ “ನ್ಯೂ ಇಂಡಿಯಾ” 9-11-15 ನೇ ಪತ್ರಿಕೆಯಲ್ಲಿ ಕೆಲವು ವಿಷಯಗಳನ್ನು ಪ್ರಕಟಿಸಲು ಬರೆದೆನು. ಅದರೆ ಅನೇಕ ಕನ್ನಡಿಗರಿಗೆ ಅದು ಅವಗಾಹನೆಗೆ ಬಂದಿಲ್ಲ. ಅದಕ್ಕೆ ಪ್ರತಿಯೊಬ್ಬರ ಸಹಾಯವೂ ಅವಶ್ಯಕವಾಗಿ ಬೇಕಾಗಿರುವದರಿಂದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುತ್ತೇನೆ.

ಸರ್ಕಾರದವರು ಸಂಸ್ಥಾನದಲ್ಲಿರುವ ಎಲ್ಲಾ ಆಂಗ್ಲೋವರ್ನಾಕ್ಯುಲರ್, ವಿಲೇಜು ಎಲಿಮೆಂಟರಿ, ಮತ್ತು ಗ್ರಾಂಟು ಪಾಠಶಾಲೆಗಳಲ್ಲಿ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬೋಧಿಸಲು ತಕ್ಕ ಏರ್ಪಾಡು ಮಾಡಿರುತ್ತಾರೆ. ಅನೇಕ ವಿಲೇಜು ಎಲಿಮೆಂಟರಿ ಸ್ಕೂಲುಗಳಲ್ಲಿ ಎ, ಬಿ, I, 2 ಮತ್ತು 3 ನೇ

...ನ್ನು ನೋಡಿಕೊಳ್ಳಲು ಒಬ್ಬ ಉಪಾಧ್ಯಾಯನೇ ಇರುತ್ತಾನೆ. ಇದೇ ...ಸ್ಥಿತಿಯು ಶೋಚನೀಯವಾಗಿರುತ್ತೆ. ಆದರೂ ಅನೇಕ ಪಾಠಶಾಲೆಗಳು ಬಲಾ... ಮೇಲಿನ ತರಗತಿಗಳನ್ನು ಪ್ರಾರಂಭಿಸಿ, ಲೋವರ್ ಸೆಕೆಂಡರಿ ...ಗಳನ್ನು ತಯಾರು ಮಾಡಿ ಒಳ್ಳೇ ಫಲಿತಾಂಶವನ್ನು ಹೊಂದಿ ...ಸಾಮರ್ಥ್ಯವನ್ನು ತೋರ್ಪಡಿಸುವದಕ್ಕೂ, ಹಳ್ಳಿಗಳಲ್ಲಿ ಪ್ರಜೆ ...ಪಾತ್ರನಾಗುವದಕ್ಕೂ (ಯಾತಕ್ಕೆಂದರೆ ಹಳ್ಳಿಗಳಲ್ಲಿ ಉಪಾ... ಸಾಮರ್ಥ್ಯವು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ...ಬಾಲಕರ ಸಂಖ್ಯೆಯ ಮೇಲೆ ತಿಳಿಯಲ್ಪಡುತ್ತದೆಯೇ ಹೊರ್ತು ...ಮರಿ ವಿದ್ಯಾಭ್ಯಾಸಕ್ಕೆ ಅಸ್ತಿಭಾರ ರೂಪವಾದ ಪ್ರಾಥಮಿಕ ವಿದ್ಯೆ...) ಇರತಕ್ಕ ಒಬ್ಬ ಉಪಾಧ್ಯಾಯನು ಮೇಲಿನ ತರಗತಿಗಳನ್ನು ..., ಪಾಠಶಾಲೆಯನ್ನು ವೃದ್ಧಿಪಡಿಸುವದಕ್ಕೆ ಬದಲಾಗಿ ಹೀನಸ್ಥಿತಿಗೆ ... ಪ್ರಾಥಮಿಕ ತರಗತಿಗಳಿಗೆ ವಾರಕ್ಕೆ ಒಂದೆರಡಾವರ್ತಿ ಗಮನಕೊ... ತರಗತಿಗಳಿಗೆ ಹೆಚ್ಚು ಮುತುವರ್ಜಿ ವಹಿಸಿ ತನ್ನ ಗೈರುಹಾಜರಿ ...ಗಳಿಗೆ ಪಾಠ ಹೇಳಲು ಮೇಲಿನ ತರಗತಿಯ ವಿದ್ಯಾರ್ಥಿಗಳನ್ನು ... ಹೀಗಿರುವಲ್ಲಿ ಅಂಥಾ ಶಾಲೆಗಳಲ್ಲಿ ಉಪಾಧ್ಯಾಯರಿಂದ ಸ್ವಲ್ಪ ...ಯರಿಂದ ಸ್ವಲ್ಪವೂ ಬೋಧಿಸಲ್ಪಡುವ ಸಣ್ಣ ಮಕ್ಕಳ ವಿದ್ಯಾಭ್ಯಾಸ ...ವಾಚಕರೇ ಊಹಿಸಬೇಕಾಗಿರುತ್ತೆ. ಆದ್ದರಿಂದ ಪಾಠಶಾಲೆಗೆ ಸಹಾ... ಉಪಾಧ್ಯಾಯರುಗಳನ್ನು ನೇಮಿಸುವ ವರೆಗೂ ಮೇಲಿನ ತರಗತಿಗಳನ್ನು ...ತೆರೆಯಕೂಡದೆಂಬದಾಗಿ ನಿರೋಧಿಸಬೇಕಾಗಿದೆ.

...ಸರ್ಕಾರದವರು ನವೀನ ರೀತಿಯಲ್ಲಿ ಬಾಲಕರಿಗೆ ಸುಲಭೋಪಾ... ವಿದ್ಯೆಯನ್ನು ಬೋಧಿಸಲು ಉಪಾಧ್ಯಾಯರಿಗಾಗಿ ಟ್ರೇನಿಂಗ್ ಪಾಠ ...ಗಳನ್ನು ಮತ್ತು ಕಾಲೇಜನ್ನು ಸ್ಥಾಪಿಸಿರುತ್ತಾರೆ. ಇವರಿಂದ ಮುಂದೆ ...ಎಲ್ಲಾ ಪಾಠಶಾಲೆಗಳಲ್ಲಿಯೂ ಸರಿಯಾದ ಶಿಕ್ಷಣವನ್ನು ಹೊಂದಿದ ...ರನ್ನೇ ನೇಮಿಸಬೇಕೆಂಬುವದು ಸರ್ಕಾರದವರ ಮುಖ್ಯೋದ್ದೇಶ ... ಅನೇಕ ಉಪಾಧ್ಯಾಯರುಗಳು ತಮಗಿಂತಲೂ ಕಮ್ಮಿ ಸರ್ವಿಸ್ ...ಬಡ್ತಿ ದೊರೆತು, ತಮಗೆ ಬಡ್ತಿ ದೊರೆಯದೆ ಇರುವದಕ್ಕಾಗಿ ತುಂಬಾ ...ರಾಗಿರುತ್ತಾರೆ. ಆದಾಗ್ಯೂ ಮುಂದೆ ಸರಿಯಾದ ಏರ್ಪಾಡು ...ವದೆಂದು ನಂಬಿರುತ್ತೇನೆ.

...ಗ್ರಾಂಟು ಪಾಠಶಾಲೆಗಳಿಗೆ ವರುಷ ಒಂದಕ್ಕೆ 30 ರೂಪಾಯಿ ...ಹಾಯ ದ್ರವ್ಯವು ಸರ್ಕಾರದವರಿಂದ ಕೊಡಲ್ಪಡುತ್ತೆ. ಉಪಾಧ್ಯಾಯರ ...ಬಾಕಿ ಖರ್ಚನ್ನು ಗ್ರಾಮಸ್ಥರು ದವಸ ಮುಂತಾದ ರೂಪವಾಗಿ ...ವಿಧಾಯಕ ಮಾಡಿರುತ್ತೆ. ಗ್ರಾಮಸ್ಥರು ಅವರ ಭಾಗವನ್ನು ...ಪಾವತಿ ಮಾಡುವುದಿಲ್ಲ. ಸರ್ಕಾರದಿಂದ ಬರಬೇಕಾದ ಸಹಾಯ ...ಪಾವತಿ ಮಾಡಲ್ಪಡದೆ ಅನೇಕ ತಿಂಗಳುಗಳು ನಿಲ್ಲಿಸಲ್ಪಟ್ಟಿರುತ್ತೆ. ...ಸಾಲ್ ಅಖೈರಾದ ನಂತರ ಸಾಧ್ಯವಾದಷ್ಟು ಜಲ್ದಿಯಾಗಿ ಪಾವತಿ ...ಏರ್ಪಾಡು ಮಾಡಲ್ಪಡಬೇಕು.

...ಇಂಗ್ಲಿಷ್ ತರಗತಿಗೆ ದಾಖಲಾದ ಕೂಡಲೇ ಸ್ಕೂಲ್ ಫೀ ...ಕೊಡಬೇಕಾಗಿರುತ್ತೆ. ಇಲ್ಲಿರತಕ್ಕ ತಂದೆ ತಾಯಿಗಳೆಲ್ಲರೂ ಐಶ್ವರ್ಯ ... ಅನೇಕರು ಬಡವರೂ ಮತ್ತು ಮಧ್ಯಮ ತರಗತಿಯವರೂ ಆಗಿರು... ವರ್ಷಗಳಿಂದ ಫೀ ಮೊಬಲಗು ವಿಶೇಷವಾಗಿ ಹೆಚ್ಚಿಸಲ್ಪಟ್ಟಿರುತ್ತೆ ...ಕೊಡಲಾರರು. ಸಾಕಾದಷ್ಟು ಫ್ರೀಷಿಪ್‌ಗಳಾಗಲಿ, ಅಥವಾ ಇತರ ...ಸಾಗಲಿ ಇರುವದಿಲ್ಲ. ಎಲ್ಲಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿಯೂ, ...ತಾಲ್ಲೋಕು ಜಂಗಾರಗಳಲ್ಲಿಯೂ ಹೈ ಸ್ಕೂಲುಗಳೂ, ಮತ್ತು ...ತಾಲ್ಲೂಕುಗಳಲ್ಲಿಯೂ ಮತ್ತು ವಿಶೇಷ ಜನ ಸಾಂದ್ರತೆಯುಳ್ಳ ಇತರ ...[illegible] ...ಗ್ಲಿಷ್ ವಿದ್ಯಾಭ್ಯಾಸಕ್ಕೆ ವಿಶೇಷ ಕೊರತೆಯುಂಟಾಗಿದೆ. ಹೀಗಿರುವಲ್ಲಿ ಬಡ ...ಯುಗಳು ಅಥವಾ ಕ್ಲುಪ್ತವಾಗಿ ತಿಂಗಳಿಗೆ ಬರತಕ್ಕ ಹತ್ತು ರೂಪಾಯಿ ... ತಮ್ಮ ಆದಾಯ ವೆಚ್ಚಗಳನ್ನು ನಿಂಗಡಿಸಲು ಬಹಳ ತೊಂದರೆಪಡುತ್ತಿ... ಉಪಾಧ್ಯಾಯರುಗಳು ತಮ್ಮ ಮಕ್ಕಳನ್ನು ಇಂಗ್ಲಿಷ್ ವಿದ್ಯಾಭ್ಯಾಸಕ್ಕಾಗಿ ...ಕಳುಹಿಸಲು ರೂಪಾಯಿ ಹೆಚ್ಚು ಖರ್ಚು ಮಾಡಿ ಹೇಗೆ ಎ. ವಿ. ಸ್ಕೂಲು ...ಹೈಸ್ಕೂಲುಗಳಿಗೂ ಕಳುಹಿಸಬಲ್ಲರು? ಇದಕ್ಕಾಗಿ ಎಲ್ಲಾ ಎ. ವಿ. ಸ್ಕೂಲು ...ಮತ್ತು ಹೈಸ್ಕೂಲುಗಳಲ್ಲಿಯೂ ಪ್ರತಿಯೊಬ್ಬ ಹುಡುಗನೂ ಕನಿಷ್ಠ ... ಒಂದು ಮತ್ತು ಎರಡು ಆಣೆಗಳನ್ನು ಕ್ರಮವಾಗಿ ಪ್ರತಿ ತಿಂಗಳಲ್ಲಿಯೂ ...ಕೊಡಲು ವಿಧಾಯಕದಿಂದ ಫಂಡುಗಳನ್ನು ಸ್ಥಾಪಿಸಬೇಕು. ಪ್ರತಿಯೊಬ್ಬ ... ಮತ್ತು ಈ ಫಂಡನ್ನು ಊರ್ಜಿತಸ್ಥಿತಿಗೆ ತರಲು ಬಾಲಕರ ತಂದೆ ...ಗಳನ್ನು ಪ್ರೋತ್ಸಾಹಿಸಬೇಕು. ಇದನ್ನು ಬಲತ್ಕಾರ ಪಡಿಸುವಂತೆ ಸರ್ಕಾರ... ನಾವು ಕೇಳಲಾರೆವು. ಆದರೆ ಹೆಚ್ಚು ಫ್ರೀಷಿಪ್‌ಗಳನ್ನು ಕೊಡ ...ತೀರ್ಮಾನಿಸಬಹುದು ಮತ್ತು ಇಂಥಾ ಫಂಡಿನಲ್ಲಿ ಸೇರತಕ್ಕ ಮೊಬ... ನ್ಯಾಯವಾಗಿಯೂ ಬಡವರಾದ, ಚಟುವಟಿಕೆಯುಳ್ಳ ಮತ್ತು ಅರ್ಹ... ವಿದ್ಯಾರ್ಥಿಗಳ ಸ್ಕೂಲ್ ಫೀಗಳಿಗಾಗಿ ಉಪಯೋಗಿಸಬೇಕು.

...ತಾಲ್ಲೋಕು ಜಾಗಗಳಲ್ಲಿ ಧಾರಾಳವಾಗಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟ... ಹೆಚ್ಚಾಗಿರುವದಿಲ್ಲ. ದಯಾಳುಗಳಾದ ಪ್ರಜೆಗಳಿಂದಲೇ "ಫ್ರೀ ಬೋ... ಹೌಸ್" ಗಳು ಸ್ಥಾಪಿಸಲ್ಪಡಬಹುದು. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟ... ...ಇದು ಅಸಾಧ್ಯ. ಕೆಲವು ಅನುಕೂಲಸ್ಥರು ಮಾತ್ರ ಕೆಲವು ಬಡ ... ವಿದ್ಯಾರ್ಥಿಗಳಿಗೆ ಅನ್ನದಾನ ಮಾಡುತ್ತಾರೆ. ಆದರೆ ಇತರರಿಗೆ ಈ ...ಸಹಾಯ ಇಲ್ಲ. ಆದ್ದರಿಂದ ಪ್ರಜೆಗಳು ಪ್ರತಿ ಒಂದು ಹೈ ಸ್ಕೂಲು ...ಯೂ ಅನ್ನದಾನಕ್ಕಾಗಿ "ಫ್ರೀ ಬೋರ್ಡಿಂಗ್ ಹೌಸ್" ಗಳನ್ನು ...ಬೇಕು. ಇದಕ್ಕಾಗಿ ಹೆಚ್ಚಾದ ದ್ರವ್ಯ ಸಹಾಯವೂ ಮತ್ತು ದಯಾಳು... ಸ್ವಾರ್ಥ ಬುದ್ಧಿಯಿಲ್ಲದ ಧರ್ಮದರ್ಶಿಗಳೂ ಅವಶ್ಯಕ. ಪ್ರತಿಯೊಂದು ...ತಾಲ್ಲೋಕಿನ ಮತ್ತು ಹಳ್ಳಿಯ ಪ್ರಮುಖರು ಸಭೆ ಸೇರಿ ಇದನ್ನು ಊರ್ಜಿತ ...ವದಕ್ಕಾಗಿ ಪ್ರತಿ ತಿಂಗಳಲ್ಲಿಯೂ ದ್ರವ್ಯ ಸಹಾಯವನ್ನು ಮಾಡಲು ತಕ್ಕ ...ಮಾಡಬೇಕು. ಹೀಗೆ ಸಹಾಯ ದ್ರವ್ಯವನ್ನು ಶೇಖರಿಸಿ ಪ್ರತಿ ತಿಂಗ... ತಮ್ಮ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರುವ ಅನ್ನದಾನ ಆಲಯ... ಪಾವತಿ ಮಾಡಬೇಕು. ಇದರಿಂದ ಆ ಸ್ಥಳದ ಹೈ ಸ್ಕೂಲಿನಲ್ಲಿ ಓದತಕ್ಕ... ಮತ್ತು ಪರಿತೋರಿಯ ಊರಿನ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ... ಅನಂತರ ಸರ್ಕಾರದವರೂ ಅರ್ಧ ಖರ್ಚನ್ನು ವಹಿಸುವರು. ...ಮಾಡುವದರಿಂದ ಬಡ ವಿದ್ಯಾರ್ಥಿಗಳನ್ನು ಅಭಿವೃದ್ಧಿಗೆ ತರುವುದು ಎಂದಿಗೂ ...ವಾಗಿರುವದಿಲ್ಲ. ಪಾಠಶಾಲೆಗಳಿಗೆ ಹೋಗತಕ್ಕ ವಿದ್ಯಾರ್ಥಿಗಳ ಸಂಖ್ಯೆ... ಪ್ರತಿ ವರ್ಷವೂ ಹೆಚ್ಚುತ್ತಲಿದೆ. ಮತ್ತು ಸರ್ಕಾರದವರೂ ಹಣ ಒದಗಿ... ತಕ್ಕ ಏರ್ಪಾಡುಗಳನ್ನು ಮಾಡುತ್ತಲಿದ್ದಾರೆ. ನಮ್ಮ ಶ್ರೀಮನ್ಮಹಾರಾಜ... ಮೈಸೂರು ದೇಶಕ್ಕಾಗಿಯೇ ಒಂದು ಸಕಲ ವಿದ್ಯಾನಿಲಯವನ್ನು ಸ್ಥಾಪಿಸ... ಯೋಚಿಸುತ್ತಿರುವರು. ಪ್ರಜೆಗಳೂ ಸರ್ಕಾರದವರೊಂದಿಗೆ ಏಕೀ... ಕಾರ್ಯಗಳನ್ನು ನಿರ್ವಹಿಸುತ್ತ ಬಂದಲ್ಲಿ ಮಾದರಿಯಾಗಿರುವ ಮೈಸೂರು ...ಪ್ರಸಿದ್ಧ ಅಭ್ಯುದಯದಲ್ಲಿ ಮುಖ್ಯವಾಗಿ ಕಾಣಬರುವದು.

ಟಿ. ಪಿ. ಅಚಲಾನಂದ.

...ಲಿಂಗಯ್ಯ.—ಗ್ರಾಮಗಳ ನಕಾಶೆಗಳು ಮೈಸೂರು ಸರ್ವೆ ಸೆಟ್ಲ... ...ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಸಿಕ್ಕುವವು. ಬೆಂಗಳೂರಿ... ಈ ಆಫೀಸಿಗೆ ಬರೆದುಕೊಳ್ಳಬೇಕು.

...ತಾಲ್ಲೋಕು ಜಾವಗಲ್ಲಿನಲ್ಲಿ ನಡೆಯುವ ಸಂತೆಯಲ್ಲಿ ವ್ಯಾಪಾರಿ... ...ತೊಂದರೆಯಾಗುತ್ತಿರುವಂತೆಯೂ, ಪೋಲೀಸ್ ಪಟೇಲ್ ಶ್ಯಾನುಭೋಗ... ಕೆಲಸದಾರರುಗಳು ಇದ್ದೂ ಈ ಮೋಸಕೃತ್ಯಗಳನ್ನು ಅಡಗಿಸದೆ ಇರುತ್ತಾರೆಂದೂ ಒಬ್ಬ ಚಂದಾದಾರರು ತಿಳಿಸುವರು. —ಎಡಿ.]

ತಾಲ್ಲೋಕು ವರ್ತಮಾನಗಳು.

ಅರಕಲಗೂಡು.—ಅರಕಲಗೂಡು ತಾಲ್ಲೂಕು ಸರ್ವಮಾನ್ಯ ಹೆಬ್ಬಾಲೆ ಗ್ರಾಮದಲ್ಲಿರುವ ಹುಲ್ಲಂಗಾಲದ ಶ್ಯಾನುಭೋಗ ವೆಂಕಟಸುಬ್ಬಯ್ಯನವರು, ಇವರ ತಮ್ಮ ವೆಂಕಟರಾಮಯ್ಯನವರು ಸಹಾ ಅಣ್ಣೆಗನಹಳ್ಳಿ ಶ್ಯಾನುಭೋಗ ಸೂರ್ಯನಾರಣಪ್ಪನವರ ಮೇಲೂ, ಇವರ ಮಕ್ಕಳು ಸುಬ್ಬಯ್ಯನವರ ಮೇಲೂ 850 ರೂಪಾಯಿನ ನೈಷ್ಪನೆ ದಸ್ತಾವಜು ಮಾಡಿದರೆಂದು ಫಿರ್ಯಾದು ಆಗಿದ್ದದ್ದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರಲ್ಲಿ ವಿಚಾರಣೆ ನಡೆದು ನೈಷ್ಪನೆಯೇ ನಿಶ್ಚಯವಾದ್ದರಿಂದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರು ಸೂರ್ಯನಾರಣಪ್ಪ, ಸುಬ್ಬಯ್ಯನವರಂತೆ ತೀರ್ಮಾನ ಮಾಡಿರುತ್ತಾರೆ.

ಕುಣಿಗಲು.—ಈ ಊರಿನಲ್ಲಿ ರೈತರ ಉಪಯೋಗಾರ್ಥವಾಗಿ ಗೌರ್ನಮೆಂಟಿನವರು ಇಟ್ಟಿದ್ದ ಕಬ್ಬಿನ ಆಲೆಯ ಯಂತ್ರವನ್ನು ಕುಣಿಗಲು ಬಾಗಾಯ್ತು ಪಟೇಲ್ ಮ|| ಬಿ. ಕೆ. ವೆಂಕಟರಮಣಯ್ಯನವರು 6,000 ರೂಪಾಯಿಗೆ ಗೌರ್ನಮೆಂಟಿನವರಿಂದ ಕೊಳ್ಳಿದ ತಾ. 10 ರಲ್ಲಿ ಕ್ರಯಕ್ಕೆ ಪಡೆದು ಗೌರ್ನಮೆಂಟಿನವರು ಯಾವ ರೀತಿ ಕೆಲಸಗಳನ್ನು ನಡಿಸುತ್ತಾ ರೈತರಿಗೆ ರಿಯಾಯಿತು ತೋರಿಸುತ್ತಾ ಇದ್ದರೋ ಅದರಂತೆಯೇ ಇವರು ನಡಿಸುತ್ತಿರುವರೆಂದು ತಿಳಿದು ಸಂತೋಷಪಡಬೇಕಾಗಿದೆ.—ಈ ವರುಷ ತಕ್ಕಮಟ್ಟಿಗೂ ಮಳೆಯಾದ್ದರಿಂದ ಪೈರುಗಳೆಲ್ಲಾ ಚೆನ್ನಾಗಿವೆಯೆಂದೇ ಹೇಳಬಹುದು. ಇಲ್ಲಿನ ದೊಡ್ಡಕೆರೆಯು ಮುಕ್ಕಾಲು ಭಾಗ ತುಂಬಿದೆ. ಹವ ಶೀತಲವಾಗಿರುವದರಿಂದ ಊರಿನಲ್ಲಿ ಅನೇಕರಿಗೆ ಚಳಿ ಜ್ವರ ಕೆಮ್ಮು ಪ್ರಾಪ್ತವಾಗಿದೆ.—ಈ ಊರಿನಲ್ಲಿ ಆಡುಗಳನ್ನು ಸಾಕಿರುವವರ ಕಾಟ ಹೆಚ್ಚಾಗಿದೆ. ರಸ್ತೆಯಲ್ಲಿರುವ ದೊಡ್ಡ ದೊಡ್ಡ ಮರಗಳು ಎಲೆಗಳು ಬೆತ್ತಲೆಯಾಗಿ ನಿಂತಿವೆ. ಇವರು ನಿರ್ಭಯವಾಗಿ ಮರಗಳ ರೆಂಬೆಗಳನ್ನು ಕತ್ತರಿಸಿ ಹೊರೆ ಹೊರೆಯಾಗಿ ಹೊತ್ತುಕೊಂಡು ಹೋಗುತ್ತಾರೆ. ಇವರನ್ನು ಕೇಳುವವರೇ ದಿಕ್ಕಿಲ್ಲ. ಹೊಸ ಪೋಲೀಸ್ ಇನ್‌ಸ್ಪೆಕ್ಟರು ಇಂಥವರನ್ನು ಹಿಡಿಸಿ ಶಿಕ್ಷೆ ಮಾಡಿಸಿದಲ್ಲಿ ಆಡುಗಳ ಕಾಟವೂ ಅವುಗಳನ್ನು ಸಾಕುವವರ ಕಾಟವೂ ತಪ್ಪೀತೆಂದು ನಿರೀಕ್ಷಿಸಲ್ಪಟ್ಟಿದೆ.

ಚನ್ನರಾಯಪಟ್ಟಣದ ತಾ|| ಹಿಂದಲಹಳ್ಳಿ.—ಕಟಾವಿಗೆ ಬಂದ ರಾಗಿ ಪೈರೆಲ್ಲಾ ಮಳೆಯ ದೆಸೆಯಿಂದ ಹಾಳಾಗುತ್ತಲಿದೆ. ಇಲ್ಲಿ ಹವಾ ಬದಲಾವಣೆಯಿಂದ ಅನೇಕರು ಖಾಯಿಲೆ ಬಿದ್ದಿರುವರು. ವೈದ್ಯರ ಸಹಾಯವು ಇಲ್ಲಿ ದುರ್ಲಭ. ಸರ್ಕಾರದವರು ಅಭಿಮಾನವಿಟ್ಟು ಶ್ರವಣಬೆಳಗೊಳದ ಆಯುರ್ವೇದ ಚಿಕಿತ್ಸಾಲಯದ ಪಂಡಿತರನ್ನಾದರೂ ವಾರಕ್ಕೆ ಎರಡಾವರ್ತಿ ಇಲ್ಲಿಗೆ ಬರುವಂತೆ ಮಾಡಿದರೆ ನಾಗರಿಕತೆಯಲ್ಲಿ ಮುಂದರಿಯುತ್ತಿರುವ ಈ ಗ್ರಾಮಕ್ಕೆ ಎಷ್ಟೋ ಸಹಾಯ ಮಾಡಿದಂತಾಗುವುದು.—ಇಲ್ಲಿಗೆ ಶ್ರವಣಬೆಳಗೊಳದ ಮ|| ಜಿ. ಕೆ. ಪದ್ಮರಾಜಯ್ಯನವರು ಹಿಂದಿನ ಗುರುವಾರ ಬೆಳಗ್ಗೆ ದಯಮಾಡಿಸಿ ಸ್ಕೂಲನ್ನು ಪರಾಂಬರಿಸಿ ಗ್ರಾಮವನ್ನು ಪರೀಕ್ಷಿಸಿ ನೋಡಿ ನಂತರ ಸ್ಕೂಲ್ ಮನೆಯಲ್ಲಿ ಗ್ರಾಮಸ್ಥರೆಲ್ಲರನ್ನೂ ಸೇರಿಸಿ ಆರೋಗ್ಯ, ವ್ಯವಸಾಯ, ವಿದ್ಯೆ ಮೊದಲಾದವುಗಳ ಅಭಿವೃದ್ಧಿಗೆ ಮಾಡಬೇಕಾದ ಅತ್ಯವಶ್ಯ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಇವರ ಪ್ರೋತ್ಸಾಹವೂ ಪ್ರಜೆಗಳಲ್ಲಿ ಇವರಿಗಿರುವ ಅನುರಾಗವೂ ಸ್ತೋತ್ರಾರ್ಹವಾದದು.—ಇದುವರೆಗೂ ಈ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರಾಗಿದ್ದ ಮ|| ಕೆ. ಎನ್. ವೀರಭದ್ರಯ್ಯನವರು ಶಿವಮೊಗ್ಗೆಗೆ ವರ್ಗವಾದ ವಿಷಯ ಇಲ್ಲಿನವರ ಮನಸ್ಸಿಗೆ ಬಹಳ ವಿಷಾದವನ್ನುಂಟುಮಾಡಿದೆ. ...ಬೇಕಾದ ಪ್ರೋತ್ಸಾಹವನ್ನು ಕೊಟ್ಟು ... ಇಲ್ಲಿನ ಸ್ಕೂಲಿಗೆ ...ವೂ ಉಪಾಧ್ಯಾಯರಲ್ಲಿ ಇವರಿಗಿದ್ದ ಸಲುಗೆಯೂ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಬಹು ಕಾಲದವರೆಗೂ ನೆಲೆಸಿರುವುದೆಂಬುದಕ್ಕೆ ಸಂಶಯವಿಲ್ಲ.

ಹೊಳೆನರಸೀಪುರ.—ಇದೇ ತಿಂಗಳು 13 ನೇ ತಾ. ಶನಿವಾರ ಬೆಳಗ್ಗೆ ಇಲ್ಲಿನ ವೆಸ್ಲಿಯನ್ ಬಾಲಿಕಾ ಪಾಠಶಾಲೆಗಳಿಗೆ ವಾರ್ಷಿಕ ಬಹುಮಾನಗಳು ಹಂಚಲ್ಪಟ್ಟವು. ಆಗ್ಗೆ ಹಾಸನದ ಡೆಪ್ಯುಟಿ ಕಮಿಷನರಾದ ಮ|| ಬಿ ರಾಮಸ್ವಾಮಯ್ಯನವರಿಂದ ಅಗ್ರಾಸನವು ಅಲಂಕರಿಸಲ್ಪಟ್ಟಿತ್ತು. ಸ್ಥಳಿಕ ಅಧಿಕಾರಿಗಳು, ಪುರಪ್ರಮುಖರು ಆದಿಯಾಗಿ ಹಾಜರಾಗಿದ್ದರು. ಆಗ್ಗೆ ಎರಡು ಶಾಲೆಗಳ ಬಾಲಕಿಯರು ಉಪನ್ಯಾಸ, ಸಂಭಾಷಣೆ, ಸಂಗೀತ ಮೊದಲಾದವುಗಳಿಂದ ಎಲ್ಲರ ಮನಸ್ಸುಗಳನ್ನು ಉತ್ಸಾಹಗೊಳಿಸಿದರು. ಮಕ್ಕಳ ಕುಶಲತೆಯನ್ನು ನೋಡಿ ಅನೇಕ ಮಹನೀಯರು ಸಂತೋಷಪಟ್ಟು ದ್ರವ್ಯಸಹಾಯ ಮಾಡಿದರು. ಮುಖ್ಯವಾಗಿ ಡೆಪ್ಯುಟಿ ಕಮಿಷನರು ಎರಡು ಪಾಠಶಾಲೆಗಳಿಗೂ ದಯಪಾಲಿಸಿದ ವಿಶೇಷ ಬಹುಮಾನಗಳು ಕೋಟೆ ಪಾಠಶಾಲೆಯಲ್ಲಿ ಮ|| ಶ್ರೀಧರ್ ಗರುಡಾಚಾರ್ಯ ಕುಮಾರ್ತೆ ವೇಂಕಮ್ಮನಿಗೂ, ಪೇಟೆ ಶಾಲೆಯಲ್ಲಿ ಶಿವಭಕ್ತರ ಪುಟ್ಟಮ್ಮನಿಗೂ ದೊರೆತಿವೆ. ಈ ಬಹುಮಾನಗಳಲ್ಲದೆ ಅವರು ಬಾಲಕಿಯರಿಗೆ ತಿಂಡಿ ಪದಾರ್ಥಗಳನ್ನು ಕೊಡುವಂತೆ ಹೇಳಿ ಹಣ ಸಹಾಯ ಮಾಡಿದರು. ಅಧ್ಯಕ್ಷರು ಬಾಲಕಿಯರಿಗೂ, ಉಪಾಧ್ಯಾಯರಿಗೂ, ಸಭಿಕರಿಗೂ ಹಿತವೂ ಸಂತೋಷವೂ ಆದ ಭಾಷಣವನ್ನು ಮಾಡಿದ ನಂತರ ಬಹುಮಾನಗಳು ಕೊಡೋಣವಾದವು. ರೆವ್|| ಬ್ಲ್ಯಾಕ್‌ಬ್ಯಾಂಕ್‌ರವರು ಕಾಲೋಚಿತವಾದ ಉಪನ್ಯಾಸ ಮಾಡಿ ಅಗ್ರಾಸನಾಧಿಪತಿಗಳನ್ನೂ ಸಭಿಕರನ್ನೂ ವಂದಿಸಿದರು. ಕಡೆಗೆ ಬಾಲಕಿಯರು ಮಹಾರಾಜರಿಗೂ ಚಕ್ರವರ್ತಿಯವರಿಗೂ ಶ್ರೇಯಃಪ್ರಾರ್ಥನೆ ಮಾಡಿದ ನಂತರ ಪುಷ್ಪಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಸಕಲೇಶಪುರ.—ಈ ಪ್ರಾಂತ್ಯ ಮುಂಗಾರು ಮಳೆ ಬಹಳ ಕಡಮೆಯಾಗಿಯೂ ಹಿಂಗಾರು ಮಳೆ ಜಾಸ್ತಿಯಾಗಿಯೂ ಬಂದದ್ದರಿಂದ ಕಾಫಿ, ಭತ್ತದ ಫಸಲಿಗೆ ನಷ್ಟವೆಂದು ಹೇಳುತ್ತಾರೆ. 2-3 ದಿನಗಳಿಂದ ಮಳೆ ನಿಂತಿರುವದರಿಂದ ಕಾಫಿ ಹಣ್ಣನ್ನು ಬಿಡಿಸುವದಕ್ಕೂ, ಭತ್ತವನ್ನು ಕಟಾವು ಮಾಡುವದಕ್ಕೂ ಅನುಕೂಲವಾಯಿತು. ಈ ಸಾರಿ ಕಾಫಿ ಫಸಲಾದರೋ ಈ ಮಂಜರಾಬಾದು ತಾಲ್ಲೂಕಿನಲ್ಲಿ ಅನೇಕ ಕಡೆ ಬಹಳ ಕಡಮೆಯೆಂದು ತಿಳಿಯಬರುತ್ತೆ. ಪ್ಲಾಂಟರುಗಳಿಗೆ ಬಹಳ ನಷ್ಟ. ಕಾಫಿ ಗಿಡಗಳಿಗೆ ಹತ್ತಿರುವ ಒಂದು ತರದ ಹಸರು ತಿಗಣೆ ಹುಳಗಳನ್ನು ಅಡಗಿಸಲು ತಿರಿಗಿ ಕೆಲಸ ಪ್ರಾರಂಭವಾಗಿ ಮ|| ಟಿ ಸಿ ರಾಂತಪ್ಪನವರ ಮೇಲ್ವಿಚಾರಣೆಯಿಂದ ನಡೆಯುತ್ತಲೂ, ಮುಖ್ಯವಾಗಿ ಕಾಫೀ ಗಿಡಗಳ ಬುಡವನ್ನೇ ತಿಂದು ನಾಶನಮಾಡುವ "ಬೋರರ್" ಎಂಬ ಹುಳಗಳ ಜೀವ ಚರಿತ್ರೆಯನ್ನು ತಿಳಿದು ತಕ್ಕ ಪರಿಹಾರವನ್ನು ಹುಡುಕಿ ಕಾಫಿ ಗಿಡಗಳನ್ನು ಕಾಪಾಡಿಕೊಳ್ಳಲು ಆ ಹುಳಗಳ ಪರೀಕ್ಷಾ ಕೆಲಸವು ನಡಿಸುತ್ತಲೂ ಇವೆ.—ಅಮಲ್ದಾರ್ ಮ|| ತಿರುನಾರಣಯ್ಯಂಗಾರ್ರು ಕಳೆದ ವಾರ ಸಕಲೇಶಪುರದಿಂದ ಬಂದ ಕೂಡ್ಲೆ ಖಾಯಿಲೆಯ ಹಾಸಿಗೆಯಲ್ಲಿ ಮಲಗಿದ್ದರೂ ಕೂಡ ಕೆಲಸಗಳನ್ನು ನಡಿಸಿಕೊಂಡು ಹೋಗುತ್ತಿರುವದು ಅತ್ಯಂತ ಶ್ಲಾಘನೀಯವಾಗಿರುತ್ತೆ. ಇವರು ಹಗಲಲ್ಲಿ ಪುರಸತ್ತಿಲ್ಲದೆ ರಾತ್ರಿ ಕಾಲದಲ್ಲಿಯೂ ಕಛೇರಿ ಕೆಲಸವನ್ನು ಮಾಡುತ್ತಿದ್ದಾರೆ.—ಒಂದು ವರ್ಷದಿಂದ ಆಸ್ಪತ್ರೆಯಲ್ಲಿ ಕೆಲಸಮಾಡಿ ಕಳೆದ ವಾರ ಬಿದರೆ ಆಸ್ಪತ್ರೆಗೆ ವರ್ಗವಾದ ಮ|| ಬಾಬುರಾಯರು ಈ ಸ್ಥಳದಲ್ಲಿ ನಡಿಸಿದ ಕೆಲಸವು ಶ್ಲಾಘನೀಯವಾದದ್ದು. ಇವರು ಅನೇಕ ಜನರಲ್ಲಿ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡದ್ದರಿಂದ ಜನರು ಇವರಿಗೆ ಅಲ್ಲಲ್ಲಿ ಟೀಪಾರ್ಟಿಗಳನ್ನು ಏರ್ಪಡಿಸಿ ಅವರನ್ನು ಕರೆತಂದು ಅವರ ಗುಣಕಥನವನ್ನು ಮಾಡಿದರು.—ಇಲ್ಲಿನ ಕಾರೊನೇಷನ್ ರೀಡಿಂಗ್ ರೂಮ್ ಮೆಂಬರುಗಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ ಕೆಲವು ಮುಖಂಡರಾದ ಮೆಂಬರುಗಳು ಬಿಟ್ಟುಬಿಟ್ಟಂತೆಯೂ, ಬೇರೊಂದು ಫ್ರೀ ರೀಡಿಂಗ್ ರೂಮ್ ಸ್ಥಾಪನೆ ಮಾಡಬೇಕೆಂದು ಇವರು ಕುತೂಹಲಪಟ್ಟು ಮೇಲ್ಕಂಡ ಕಾರೊನೇಷನ್ ರೀಡಿಂಗ್ ರೂಮಿನವರ ಅನುಮತಿಯನ್ನು ಕೇಳಿದಂತೆಯೂ, ಅದರ ಮೇಲೆ ಕಾರೊನೇಷನ್ ರೀಡಿಂಗ್ ರೂಮನ್ನೇ ಫ್ರೀ ರೀಡಿಂಗ್ ರೂಮ್ ಆಗಿ ಮಾಡಿದರೆಂದೂ ತಿಳಿಯಲಾಗಿದೆ. ಇಂಥಾ ಸಣ್ಣ ಊರಿನಲ್ಲಿ ಪ್ರಜೆಗಳೊಳಗೆ ಸಮರಸವಿಲ್ಲದೆ ಹೋದಲ್ಲಿ ಈ ಮಲನಾಡಿನ ಜನರು ನವನಾಗರಿಕರಾಗಿ ಅಭಿವೃದ್ಧಿಗೆ ಬರಬೇಕೆಂಬ ಉದ್ದೇಶಕ್ಕೆ ಎಷ್ಟರ ಮಟ್ಟಿಗೆ ಸಹಾಯವಾಗಬಹುದೋ.—ಅ|| ಕ|| ಮ|| ಸದಾಶಿವರಾಯರು ಇನ್ನೂ ರಜಾದಲ್ಲಿದ್ದಾರೆಂದೂ, ಪ್ರಾಯಶಃ ಇವರು ಇಲ್ಲಿಗೆ ವಾಪಸ್ ಬಾರದೆ ಬೇರೆ ಸ್ಥಳಕ್ಕೆ ವರ್ಗವಾಗತಕ್ಕವರಾಗಿದ್ದಾರೆಂದೂ ತಿಳಿದು ಬರುತ್ತೆ.—ಕಾರ್ತೀಕಮಾಸದ ಕಡೆಯಲ್ಲಿ ನಡೆಯತಕ್ಕ ಸುಬ್ರಹ್ಮಣ್ಯದ ಜಾತ್ರೆಗಾಗಿ ಈಗಿನಿಂದಲೇ ಜನಗಳೂ ದನಗಳೂ ಹೋಗಿ ಸೇರುತ್ತಿರುವರು. ಈ ಜಾತ್ರೆಯು ಸಕಲೇಶಪುರಕ್ಕೆ ಸುಮಾರು 46 ಮೈಲಿ ಆಚೆ ಅಂದರೆ ನಮ್ಮ ಮೈಸೂರು ಸೀಮೆಯ ಗಡಿಗೆ ಒಂದೆರಡು ಮೈಲಿ ದೂರದಲ್ಲಿ ನಡೆಯುವುದು. ಇದು ಭಾರೀ ಜಾತ್ರೆ.

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ಮಾರಾಟದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೋಫೆಲೀನಾ" ಎಂಬುವನ್ನು ಕೊಡಿ ಎಂದು ಕೇಳಿ. ಇದು ಸಿಹಿಯಾದ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು:—ಜಿ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳ್ಳಿ ಡಿಪೋ— [176-14]

ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಿಜಿಸ್ಟರ್ ಟ್ರೇಡ್ ಮಾರ್ಕ್

ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ. [204-9]

ಕ್ರಯ ಡಬ್ಬಿ 1 ಕ್ಕೆ ರೂ. 3-0-0 ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

ಇದರ ಪೂರಾ ಕೈಫಿಯತ್ತು ಅಪೇಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3-0-0.
ಡಿಸೆಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ಚಮಚೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಡಸಾಮಿ

[111-26] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವರ್ಣಯುಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಂದಿಕೊಂಡ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಟಸವನಕಲ್ಲು, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳಕಿನಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ವಸ್ತು ಮುತಫರುಬಾನ್ ಮಾಡಿದರೆ ನೀವು ಮಂಚಕರ ಬಲೆಯಲ್ಲಿ ಸಿಲುಕಲಾರಿರಿ. ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದ್ಯಸಾರದ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅನಲ್ಪವುಗಳನ್ನು ವಿವಾರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-45]

ಸಣ್ಣ ಸೀಸೆಯ ಬೆಲೆ ರೂ. 0-8-0, ಒಂದು ಡ್ರಾಮಿನ (ಮಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಸಾಬೂಗಳು ಡಜನ್ ಒಂದಕ್ಕೆ 0-13-0.

ಮೋಲಿ ಕೆಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜೀದ್, ಮಾರ್ಕೆಟ್, ಬಾಂಬೆ.

ಏಜಂಟ್, ಕಿ ಉಲ್ಫ್ ಮಾರ್ಕೆಟ್, ಮಂಗಳೂರು

ದಯವಿಟ್ಟು ಈ ಹೊಸ ಸಮಾಚಾರವನ್ನು ಓದಿರಿ.

ಡಿ. ಸೈಯದ್ ಉಸ್ಮಾನ್ ಅಂಡ್ ಕೋ ಕಂಪನಿ, ದೊಡ್ಡಪೇಟೆ, ಬೆಂಗಳೂರು ಸಿಟಿ ಈ ನಮ್ಮ ಕಂಪೆನಿಯಲ್ಲಿ ಡಿ. ಮನ್ನಾಲಾಲ್ ಡಿಲ್ಲಿ ವೈದ್ಯರೂ

ಇವರಿಂದ ತಯಾರಿಸಲ್ಪಟ್ಟ ಸಾಲಾಮಿಸ್ರಿ ಮುರಬ್ಬಾವನ್ನು ಬಿಕರಿ ಮಾಡುತ್ತಾ ಇದ್ದೆವು. ಆಟಿಸಿ ಮುರಬ್ಬಾ ವಿಷಯದಲ್ಲಿ ಫಿರ್ಯಾದ್ ಬಂದದ್ದರಿಂದ ಆ ಮುರಬ್ಬಾವನ್ನು ವಾಪಸ್ ಮಾಡಿಬಿಟ್ಟೆವು. ಈಗ ಎಂ. ಹೆಚ್. ಆಗಾಜಿಸಾಹೆಬ್ ಗಂಜ್ ವೈದ್ಯರಿಂದ ಬೆಳ್ಳಿ ರೇಕ್ ಮುಂತಾದ್ದು ಸೇರಿಸಿ ತಯಾರಿಸಲ್ಪಟ್ಟ ಸಾಲಮಿಸ್ರಿ ಮುರಬ್ಬಾವನ್ನು ಅಚಮಾಯಿಷಿಮಾಡಿ ಬಿಕರಿ ಮಾಡುತ್ತಾ ಇದ್ದೇವೆ. ಪೂರ ಸಮಾಚಾರ ತಿಳಿಯಲಪೇಕ್ಷಿಸುವರು ½ ಆಣೆ ಸ್ಟ್ಯಾಂಪ್ ಕಳಿಸಿ ಕ್ಯಾಟಲಾಗ್ ಪಡೆಯಬಹುದು. ಸನ್ 1915 ನೇ ನೋವೆಂಬರ್ ತಿಂಗಳು ಲಾಗಾಯ್ತು ಪಿಬ್ರುವರಿ ಆಖೈರ್‌ವರಿಗೆ ಟಪಾಲ್ ಚಾರ್ಜು ಮಾಫ್‌ಮಾಡಿಯಿರುತ್ತೆ. ಇದರ ಜೊತೆಯಲ್ಲಿ ತೂಕಮಾಡುವ ಚಕ್ಕ ತ್ರಾಸ್ ಇಟ್ಟಿಯಿರುತ್ತೆ ಡಬ್ಬಿ 1 ಕ್ಕೆ ಖರೀದಿ ರೂ 2-0-0.

ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ಜನರಲ್ ಮರ್ಚೆಂಟ್,

[೨೫೮ 1] ದೊಡ್ಡಪೇಟೆ, ಬೆಂಗಳೂರು ಸಿಟಿ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುತ್ತವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತರೋಗ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಜೀರ್ಣನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [175-14]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು ; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು ; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಪಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು ; ಬಲ್ಲಡೆ ರೇಷ್ಮೆ ಆಸ್ಟ್ರೇಲಿಯಾ ದೇಶದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಛತ್ತದ ಹಲ್ಲರುಗಳು; ಚರ್ಮ, ಒಂಟಿ ಕೂದಲು ಹತ್ತಿ ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮುಂತಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವುದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-8]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್

The Indian Commerce & Industries Co., Madras

Branches—Bezwada and Tanjore.

೨೦ನೇ. ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಪೆಟ್ಟಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ. ಬಾಳಿಕೆ ಬರುವದು

ಗೋಪರ್‌ಜಾನ್ ಬಳ್ಳಿ ಶೀರೆ

ರೂ. 2-8-0.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಳ್ಳಿ ಮತ್ತು ಗೋಪರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು ಇಂಥಾ ಭಾರಿ ಕ್ರಯದ ಶೀರೆಗಳು ಇರುವಂಗೂ ಯಾರಲ್ಲಿಯೂ ಇಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವುದರಿಂದ ಬಾಗ್ಯಶಾಲಿಗಳೇ ಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರಕದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ.—ರಾಸ್ ವಾಚ್ ಅಂಡ್ ಕಂಪನಿ

[೨೭೨—೩] 3, ಅರುಣಪ್ಪನ ಬೀದಿ, ಮದರಾಸು,

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

(ರಿಜಿಸ್ಟರ್ಡ್)

ಸೆಠಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಠಿಂತಾನ್ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಸಸೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಸಸೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಮಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅವಕಾಶವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಕಾವ್ಯ ತತ್ವವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಅದಕಾರಣ ಇಂತಹ ಗುಣಕಾರಿಯಾದ ಸೆಠಿಂತಾನ್ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [85-4]

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ 200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ 100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ 650 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ

96 ,, ,, 4 ,, 200 ,, ೬೯ ,, 9 ,, 80 ,, ,, ,, 4 ,, 1200 ,, ,, ,, 3 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಠಿಂತಾನ್ ಡಿಪೋ, ಬೊಂಬಾಯಿ, 2

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ಡೋಂಗರೆ ಇವರ ಬಾಲಾಮೃತ.

ಈ ಔಷಧ ಮಧುರವಿರುವದರಿಂದ ಕೂಸುಗಳು ಉಲ್ಲಾಸದಿಂದ ತಕ್ಕೊಳ್ಳುತ್ತವೆ; ಅದನ್ನು ತಕ್ಕೊಳ್ಳುವದರಿಂದ ಕೂಸುಗಳು ಶಕ್ತಿವಂತರಾಗಿ ಅವುಗಳ ... ಬೆಳೆಯುತ್ತದೆ. ಕ್ರಯ—ಶೀಸೆ 1 ಕ್ಕೆ 12 ಆಣೆ; ಟ. ಖ. 4 ಆಣೆ.

... ಕೆ. ಟಿ. ಡೋಂಗರೆ ಕಂಪನಿ, ಗಿರಗಾಂವ, ಮುಂಬಯಿ.

[...-14] [ಏಜಂಟರು ಬೇಕಾಗಿರುತ್ತಾರೆ.]

ಬೇಗ ತರಿಸಿಕೊಳ್ಳಿರಿ! ಕೆಲವು ಪ್ರತಿಗಳೇ ಉಳಿದಿವೆ!!

ತಡವಾದರೆ ಮತ್ತೆ ದೊರೆಯವು!!!

ರೂ. 1-8-0 ವೆಚ್ಚ ಮಾಡಿದರೆ ಸಾವಿರಾರು ರೂಪಾಯಿ ಲಾಭ.

ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ.

ಜನರು ರೋಗಾದಿಗಳ ನಿವಾರಣೆಗಾಗಿ ಎಷ್ಟೋ ಹಣವನ್ನು ಕಳೆಯುತ್ತಾರೆ. ಇದಕ್ಕಿಂತಲೂ ನಮ್ಮ "ಹಿಂದೂ-ಯುನಾನಿ ವೈದ್ಯ, ಸುಗಂಧ ಬೋಧಕ" ಪುಸ್ತಕ

ವನ್ನು ಒಂದುವರೆ ರೂಪಾಯಿಗೆ ಕೊಳ್ಳುವದರಿಂದ ಹರಸಾಯ ವಿಲ್ಲದೆ ರೋಗಲಕ್ಷಣಸಹಿತು ಮಾತ್ರೆ, ಚೂರ್ಣ, ಎಣ್ಣೆ, ಭಸ್ಮ, ಸಿಂಧೂರ, ಲೇಹ, ಘೃತ, ಶರಬತ್, ಮುರಬ್ಬ ಮೊದಲಾದ ಔಷಧಗಳನ್ನು ಕಷ್ಟವಿಲ್ಲದೆ ತಯಾರಿಸಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಬಹುದು. ಇದರ ಸುಗಂಧಾಧ್ಯಾಯದಲ್ಲಿ ಕೇವಲ ಗುಟ್ಟಾಗಿ ಸಾವಿರಾರು ರೂಪಾಯಿ ದುಡಿಯುತ್ತಿರುವ-ಊದಬತ್ತಿ, ಗಂಧ ದಬಲ್ಲಿ, ಅವಗಜ ಮೊದಲಾದವುಗಳನ್ನು ಮಾಡುವ ವಿಧಾನವು ಮರ್ಮವಿಲ್ಲದೆ ಬೋಧಿಸುವುದರಿಂದ ಸುಖಜೀವನ ಮಾರ್ಗವನ್ನು ಹೊಂದಬಹುದು. ಇಂತಹ ಉಪಯುಕ್ತ ಪುಸ್ತಕವು ನಮ್ಮ ಕನ್ನಡದಲ್ಲಿ ಇಲ್ಲವೇ ಇಲ್ಲ!! ಕೆಲವು ಕಲ್ಪನಾ ಪುಸ್ತಕಗಳಿವೆ; ನೋಡ ಹೋಗಬೇಡಿರಿ! ಶಾಸ್ತ್ರೋಕ್ತ ಮತ್ತು ಅನುಭವೀಯ ಪ್ರಯೋಗಗಳನ್ನು ನಾವು ದೇಶೋಪಕಾರಕ್ಕಾಗಿ ಪ್ರಚುರಪಡಿಸಿರುವೆವು. ಕ್ರಯ ಪುಸ್ತಕ 1 ಕ್ಕೆ ರೂ. 1-8-0 ಟಪಾಲ್ ಹಾಸಿಲು ಮಾಫಿ.

ಈ ನಮ್ಮ ಪುಸ್ತಕಾಲಯದಲ್ಲಿ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳು, ಕಥೆಗಳು, ನಾಟಕಗಳು, ವೇದಾಂತ ಮತ್ತು ಜ್ಯೋತಿಷ್ಯಶಾಸ್ತ್ರಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ಬರೆದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಸದ್ಗ್ರಂಥಪ್ರಚಾರಕ ಬುಕ್ ಡಿಪೋ,

[244-4] ... ನಗರ್ತರಪೇಟೆ, ಬೆಂಗಳೂರು ಸಿಟಿ.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ ... ಚೀಫ್ ಏಜಂಟ್, ಬೆಂಗಳೂರು; ಮ॥ ಎಂ. ಎಸ್. ಸಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[223-7] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹೊಸ ಫ್ಯಾನ್ಸಿ ಲೇಡೀಸ್ ರಿಸ್ಟ್ ವಾಚ್.

ಕೆಳಗೆ ವಿವರಿಸಿರುವ ಕೈಗೆ ಕಟ್ಟಿಕೊಳ್ಳುವ ಚಿಕ್ಕ ವಾಚುಗಳು ನೋಡುವುದಕ್ಕೆ ಅಲಂಕಾರವಾಗಿವೆ. ಖರಾವಾಗಿ ಟೈಮ್ ತೋರಿಸುತ್ತವೆ. ನಾವಿಟ್ಟಿರುವ ಕ್ರಯಕ್ಕೆ ಇನ್ನೆಲ್ಲೂ ದೊರೆಯುವದಿಲ್ಲ. 1, 2, 4ನೇ ನಂಬರ್ ಗಡಿಯಾರಗಳನ್ನು ಜೇಬಿನಲ್ಲಿಡುವುದಕ್ಕೂ ಲಾಯಖಾಗಿವೆ. ಇದಲ್ಲದೆ ಪಾಕೆಟ್ ಸಿಲ್ವರ್ ರಿಸ್ಟ್ ಲೀವರ್, ಸಿಲ್ವರ್ ಇಂಪ್ರೂವ್ಡ್ ಲೀವರ್, ಸಿಲ್ವರ್ ಸಾರ್ಟ್ ಲೀವರ್, ಡಿಟ್ಟೊ ಆಲ್ ಲೀವರ್, ರಂಗೂನ್ ಮೆಯಿಲ್, ಬಾಂಬೆಮೆಯಿಲ್, ಇಂಗ್ಲಿಷ್ ಮೆಯಿಲ್, ಇಂಪೀರಿಯಲ್ ಎಂಬ ವಾಚುಗಳಲ್ಲಿ ಯಾವುದನ್ನಾದರೂ ರೂ. 3-8-0 ಕ್ಕೆ ಬಹುಮಾನಗಳ ಸಮೇತ ಪಡೆಯಬಹುದು. ಎಲ್ಲಾ ವಾಚಿಗೆ

ಮಾತ್ರ ಬಹುಮಾನಗಳ ಸಹಿತ ಕ್ರಯ ರೂ. 3-8-0. 14 ಬಹುಮಾನಗಳು ಯಾವೆಂದರೆ—ಗಡಿಯಾರದ ಸರಪಣಿ, ಕಂಪಸ್, ಹರಳು ಗುಂಡಿಗಳು, ಕನ್ನಡಿ, ಬಾಚಣಿಗೆ, ಸೆಂಟ್ ಸೀಸೆ, ಉಂಗುರ, ಕರವಸ್ತ್ರ, ಸೋಪ್, 5 ಸೀಸದ ಕಡ್ಡಿಗಳು. ಬಹುಮಾನಗಳಿಲ್ಲದೆ ಕೈಗೆ ಕಟ್ಟುವ ಚಿಕ್ಕದ ಪಟ್ಟಿ ಸಹಿತ ಕ್ರಯಗಳು:— (1) ಸಾಮಾನ್ಯ ರಿಸ್ಟ್ ವಾಚಿಗೆ ರೂ. 3-4-0. (2) ಚಿನ್ನದ ಗಿಲ್ಟ್ ರಿಸ್ಟ್ ವಾಚಿಗೆ ರೂ. 3-8-0 (3) ಹೊಸ ಪೇಟೆಂಟ್ ರಿಸ್ಟ್ ವಾಚಿಗೆ ರೂ. 3-12-0. (4) ಬೆಳ್ಳಿ ರಿಸ್ಟ್ ವಾಚಿಗೆ ರೂ. 4-6-0. (5) ಮೆಟಲ್ ಚಿನ್ನದ ಗಿಲ್ಟ್ ದೊಡ್ಡ ಡಯಲಿನ ಸುಂದರವಾದ ರಿಸ್ಟ್ ವಾಚ್ ರೂ. 4-12-0.

ವಿಳಾಸ.—ಎಂ. ರಾಮಸ್ವಾಮಿ ನಾಯುಡು, ಜನರಲ್ ಕಮಿಷನ್ ಏಜಂಟ್,

[256-1] 10, ಪೆದ್ದನಾಯಕರ್ ಕೋಯಿಲ್ ಬೀದಿ, ಮದರಾಸ್.

1916 ಸುಂದರವಾದ ಕ್ಯಾಲೆಂಡರು.

ಮುದ್ದು ಸೂಸುವ ನಾಚುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪ್ರತ್ಯೇಕವಾಗಿ ಬೇಕಾದರೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ವಿಕರಿಗೆ ಇಟ್ಟಿದೆ. [64-33]

ಅಮೃತಾಂಜನ ಡಿಪೋ,

109, ಫೈರ್ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ESANOFELE

"ಈಸಾನೋಫೆಲಿ" ಯು

ಮಲೇರಿಯಾ ಜ್ವರವನ್ನೂ, ಸವಾ ಬದಲಾವಣೆಯಿಂದುಂಟಾಗುವ ಸಮಸ್ತ ಜಾತಿಯ ಜ್ವರಗಳನ್ನೂ ಗುಣಪಡಿಸುವುದಕ್ಕೆ ಕ್ವಿನೀನ್ ಪುಡಿಗಿಂತ ಎಷ್ಟೋ ಮೇಲಾದದ್ದು.

ಇದನ್ನು ಸೇವಿಸುವುದರಿಂದ ಓಕರಿಕೆ, ತಲೆನೋವು, ಅಥವಾ ಹೊಟ್ಟೆ ತೊಳಸುವುದು ಉಂಟಾಗದೆ ಶರೀರಧರ್ಮವನ್ನು ಬಲಪಡಿಸುತ್ತದೆ; ಕೆಂಪು ರಕ್ತ ಬಿಂದುಗಳನ್ನು ವೃದ್ಧಿಮಾಡಿ ರಕ್ತಕ್ಕೆ ವೀರ್ಯವನ್ನು ಉಂಟುಮಾಡಿ, ಮತ್ತೆ ಮಲೇರಿಯಾ ಜ್ವರ ಬಾರದಂತೆ ಸಂಪೂರ್ಣ ಆರೋಗ್ಯವನ್ನೂ ಬಲವನ್ನೂ ಕೊಡಬಲ್ಲದು.

ಈಸಾನೋಫೆಲಿಯ ಪ್ರಧಾನವಾದ ಗುಣವೇನೆಂದರೆ—ಅದು ಖಂಡಿತವಾಗಿಯೂ ಸಕಲ ವಿಧವಾದ ಜ್ವರಗಳನ್ನೂ ಬಾರದಂತೆ ಸಂರಕ್ಷಣೆ ಮಾಡುವುದು; ಮತ್ತೂ ವಾಸಿಮಾಡುವುದರಲ್ಲಿ ಖಚಿತವೆನಿಸಿಕೊಂಡಿದೆ.

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ಮಾರಾಟದ ಅಂಗಡಿಗಳಲ್ಲೂ ವಿಕರಿಗೆ ಇಟ್ಟಿದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೋಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸೀಸನೋಪಾದಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು:—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ— [176-14]

ಬಿ. ಜಿ. ಗೋರಿಯೋ ಕಂಪನಿ, ವಾಲಿಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕಲಿ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಸ್ತ್ರೀಪುರುಷರು ಮಕ್ಕಳು ಆದಿಯಾಗಿ ಸರ್ವರೂ ಸಂತೋಷದಿಂದ ಧರಿಸುವ

ಮೇಲಾದ ರೇಷ್ಮೆ ಪಂಚೆಗಳು.

ಅನೇಕ ಪಂಚೆಗಳು ಖರ್ಚಾಗಿ ಅಗಿಬರುವದರಿಂದ ಕಡಮೆಯ ಬೆಲೆಯನ್ನು ಕಮ್ಮಿ ಮಾಡಿ ಇರುತ್ತೇವೆ. ಶೃಂಗಾರವೂ ನಾಜೂಕೂ ಕೆಯಿಂದ ಕೂಡಿದ ಅಸಲ್ ರೇಷ್ಮೆ ಪಂಚೆಗಳು ತರಿಸಿ ನಮ್ಮಲ್ಲಿ ಯಾವತ್ತೂ ವಾಡಿಕೆಯಿಂದ ವ್ಯಾಪಾರ ಮಾಡುತ್ತಿರುವ ನಮ್ಮ ಸ್ನೇಹಿತರು ಪ್ರತಿ ಒಬ್ಬರಿಗೂ ಒಂದೊಂದು ಕಳಿಸಿ ಮಿಕ್ಕ ಕೆಲವು ಪಂಚೆಗಳು ಮಾತ್ರ ಇರುತ್ತೆ. ಹಬ್ಬದ ಕಾಲದಲ್ಲಿ ತೊಡಿಯಲು ಆನಂದವಾಗಿ ಇರುವದು. ಸ್ತ್ರೀಪುರುಷರು ಬಾಲಕ ಬಾಲಕಿಗಳು ಸಂತೋಷವಾಗಿ ಧರಿಸುವದಕ್ಕೆ ಭೂಷಣವಾದದ್ದು. ಈ ರಮಣೀಯವಾದ ಪಂಚೆಗಳನ್ನು ಒಬ್ಬರು ಒಂದನ್ನು ಧರಿಸಿಕೊಂಡರೆ ಅದನ್ನು ನೋಡಿದ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದದ್ದು. ಅವು ಬಣ್ಣ ಕೆಡುವದಿಲ್ಲ. ಇವುಗಳಲ್ಲಿ ಕೆಂಪು, ಪಚ್ಚೆ, ಹಸುರು, ರೋಜಾ, ಊದಾ, ಇತ್ಯಾದಿ ಬಣ್ಣಗಳು ಇರುತ್ತವೆ. ಯಾವ ಬಣ್ಣ ಬೇಕಾದರೂ ಕಳುಹಿಸಲಾಗುತ್ತೆ. [260-1]

5½ ಮೊಳ ಉದ್ದ 2½ ಮೊಳ ಅಗಲ ಇರುವ ಪಂಚೆ 1 ಕ್ಕೆ ರೂ. 1-12-0 ಪೋಸ್ಟು ಚಾರ್ಜು 0-4-0 ಪ್ರತ್ಯೇಕ. ಎರಡು ಪಂಚೆಗಳು ಒಂದೇ ಸಾರಿ ತರಿಸಿಕೊಂಡರೆ 1 ಪರಿಮಳ ಸೀಸೆ ಇನಾಮಾಗಿ ಕೊಡುತ್ತೇವೆ.

ನಮ್ಮ ವಿಳಾಸ.—ಯರ್. ಯಂ. ಸಾಮಿ ಅಂಡು ಕಂಪೆನಿ,
ನಂ. 44 ಸಂಬುಕೆಯ್ಯರ ಬೀದಿ, ಮದರಾಸು.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಜಿಷ್ಟರ್ ಟ್ರೇಡ್ ಮಾರ್ಕ್

ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವುದು. ಜನಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೆ ಇಲ್ಲ. [204-9]

ಕ್ರಯ ಡಬ್ಬಿ 1 ಕ್ಕೆ ರೂ. 2-0-0 ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

... ಕೇಳುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿ.

ಡಿ. ಮನ್ನಾಲಾಲ್, ಡಿಲ್ಲಿ, ವೈದ್ಯರು,

5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೧೫ ನೇ ಇಸವಿ ಡಿಸೆಂಬರ್ ತಾ. ೨ ನೇ ಗುರುವಾರ

ನಮ್ಮ ಸರ್ಕಾರದ ಕೆಲಸಗಳೂ, ಇಲಾಖೆಗಳ ಪರಸ್ಪರಾನುರಾಗವೂ.

ನಮ್ಮ ಸಂಸ್ಥಾನದಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಹಲವು ಇಲಾಖೆಗಳಿದ್ದು ಇವುಗಳ ಆಡಳಿತಗಳನ್ನು ನೋಡಿಕೊಳ್ಳುವುದಕ್ಕೂ ಕ್ರಮಪಡಿಸುವುದಕ್ಕೂ ಒಬ್ಬ ಮುಖ್ಯಾಧಿಕಾರಿಯು ನೇಮಿಸಲ್ಪಟ್ಟಿರುವರು. ರೆವಿನ್ಯೂ, ಎಕ್ಸೈಜ್, ಮರಾಮತ್ತು (ಇಂಜನಿಯರ್), ವಿದ್ಯಾಭ್ಯಾಸ, ವ್ಯವಸಾಯ ಮೊದಲಾದ ಹಲವು ಶಾಖೆಗಳು ಇರುತ್ತವೆ; ಇವೆಲ್ಲಾ ಯಾವಾಗಲೂ ಖಾಯಂ ಇಲಾಖೆಗಳು. ಈಗ ಇವುಗಳ ಜೊತೆಗೆ ಸಂಪದಭ್ಯುದಯ ಸಮಾಜವೆಂಬ ಹಂಗಾಮಿ ಇಲಾಖೆಯೊಂದು ಏರ್ಪಟ್ಟು, ಇದಕ್ಕೂ, ಖಾಯಂ ಇಲಾಖೆಗಳಿಗೂ ಪರಸ್ಪರ ಸಂಬಂಧವೇನೂ ನಿರ್ಧರವಾಗಿಲ್ಲ. ಈ ಹಂಗಾಮಿಯಾದ ಹೊಸ ಇಲಾಖೆಯಲ್ಲಿ ವಿದ್ಯಾಭ್ಯಾಸ, ವ್ಯವಸಾಯ, ವಾಣಿಜ್ಯ ಮತ್ತೂ ಕೈಗಾರಿಕೆ ಇವೇ ಮುಂತಾದ ವಿಭಾಗಗಳಿರುವವು. ಈ ಪ್ರಕಾರ ಪರಸ್ಪರ ಸಂಬಂಧವೇನೂ ಇಲ್ಲದಂಥಾ ಎರಡು ಮೂರು ಇಲಾಖೆಗಳು ಒಂದೇ ವಿಷಯವನ್ನು ಹಿಡಿದು ವ್ಯವಸಾಯ ಮಾಡುವುದರಲ್ಲಿ ಶ್ರಮವು ವ್ಯರ್ಥವಾಗುವುದೊಂದೇ ಅಲ್ಲ; ಅಕ್ಕಮಟ್ಟಿಗೆ ಗಲಿಬಿಲಿಯೂ ಉಂಟಾಗೀತು. ಹ್ಯಾಗೂ ಈ ಅಂಶವು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕಾರುಬಾರುಗಳಲ್ಲಿ ಪುಷ್ಕಳವಾಗಿ ಕಂಡುಬರುತ್ತಿದೆ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಒಬ್ಬ ಮುಖ್ಯಾಧಿಕಾರಿ ಇರುತ್ತಾರೆ; ಇವರ ಕೈ ಕೆಳಗೆ ತನಿಖೆ ಮಾಡುವ ಸಿಬ್ಬಂದಿಯೂ ಇದೆ. ಇವರೆಲ್ಲಾ ಹಾದಿ ಪಡಿಯೋಗವನ್ನೂ, ಸ್ಕೂಲುಗಳ ತನಿಖೆಯನ್ನೂ, ನಿರ್ದಿಷ್ಟ ಪ್ರಕಾರವನ್ನೂ ನೋಡಿ ಕ್ರಮಪಡಿಸತಕ್ಕ ಜವಾಬ್ದಾರಿಯನ್ನು ವಹಿಸಿರುವರು. ನಮ್ಮ ಸರ್ಕಾರದವರಿಗಾಗಲೀ ಪ್ರಥಮ ವಿದ್ಯಾ ಪಾಠಶಾಲೆಗಳನ್ನು ಸಂಸ್ಥಾನದಾದ್ಯಂತ ಹೇರಳವಾಗಿ ಹರಡಬೇಕೆಂಬ ಉತ್ಸಾಹವೂ ಕುತೂಹಲವೂ ಅಪಾರವಾಗಿದೆ. ಇಂಥಾ ಕಾರ್ಯಭಾರವನ್ನು ಸರ್ಕಾರದವರು ಆ ಇಲಾಖೆಗೆ ವಹಿಸುವುದೇ ಸ್ವಾಭಾವಿಕವಾದದ್ದು. ಆದರಂತೆ ಆ ಇಲಾಖೆಯವರು ಪಟ್ಟಣ ಊರು ಗ್ರಾಮಗಳಲ್ಲಿ ಪ್ರಥಮ ಪಾಠಶಾಲೆಗಳನ್ನು ಒಮ್ಮೆಲೆ ಪ್ರಾರಂಭಮಾಡುತ್ತಲೂ ಬಂದಿದ್ದಾರೆ.

ಇಷ್ಟೇ ಅಲ್ಲ; ಸಂಪದಭ್ಯುದಯ ಸಮಾಜದ ನಾನಾ ಸೂಪರಿಂಟೆಂಡೆಂಟರುಗಳು ತಮ್ಮ ಸಂಚಾರ ಕಾಲಗಳಲ್ಲಿ ಅನೇಕ ಕಡೆ ಪಾಠಶಾಲೆಗಳನ್ನು ಇಡಿಸುತ್ತಾರೆ. ಅವರು ಬಹುಶಾ ವಿದ್ಯಾಭ್ಯಾಸದ ಇಲಾಖೆಯವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತಿಳಿದು ಈ ಪಾಠಶಾಲೆಗಳನ್ನು ಪ್ರಾರಂಭಿಸುವಂತೆ ಕಾಣುವುದಿಲ್ಲ. ಅಂಥಾ ಪಾಠಶಾಲೆಗಳಿಗೆ ಗ್ರಾಂಟುಗಳನ್ನು ಕೊಡಿಸುತ್ತೇವೆಂದು ಮಾತು ಕೊಟ್ಟು ಬಂದುಬಿಡುತ್ತಾರೆಂದು ಗೋಚರವಾಗುವುದು. ಇದರ ಮೇಲೆ ರೆವಿನ್ಯೂ ಅಧಿಕಾರಿಗಳು ಸಂಚಾರ ಹೋಗುವಾಗ ಗ್ರಾಮಸ್ಥರಿಗೆ ಪ್ರೋತ್ಸಾಹಪಡಿಸಿ ಸ್ಕೂಲುಗಳನ್ನು ಇಡಿಸಬೇಕೆಂಬ ನಿರ್ಬಂಧದ ಪ್ರಕಾರ ಅವರೊಂದು ಕಡೆ ಪಾಠಶಾಲೆಗಳನ್ನು ಪ್ರಾರಂಭಮಾಡುತ್ತಾ ಬರುವರು. ಆದಕಾರಣ ಪ್ರತ್ಯೇಕ ಪ್ರತ್ಯೇಕವಾದ ಮೂರು ಇಲಾಖೆಗಳ ಅಧಿಕಾರಿಗಳು ಸ್ಕೂಲುಗಳನ್ನು ಇಡಿಸತಕ್ಕವರಾದರು. ಈ ಅಧಿಕಾರಿಗಳು ಪರಸ್ಪರ ಕಲೆತು ಆಲೋಚನೆ ಮಾಡಿ ಕಾರ್ಯಗಳನ್ನು ಏಕ ಮುಖವಾಗಿ ನಡಿಸಲು ಯಾವ ಏರ್ಪಾಡೂ ಇರುವಂತೆ ಕಾಣುವುದಿಲ್ಲ. ಇದರ ಪರಿಣಾಮವೇನಾಗಿದೆ ಎಂದರೆ — ಬರೀ ಗಲಭೆ, ಗಲಿಬಿಲಿ; ಮತ್ತೂ ವಿದ್ಯೆಯ ಪ್ರಚಾರವು ಸರಾಗವಾಗಿಯೂ ಶ್ರೇಯಸ್ಕರವಾಗಿಯೂ ನಡೆಯುವುದಿಲ್ಲ.

ಈಗ ಪ್ರಾರಂಭಿಸಲ್ಪಟ್ಟಿರುವ ಪಾಠಶಾಲೆಗಳಲ್ಲಿ ಬಹು ಭಾಗವೆಲ್ಲಾ ಗ್ರಾಂಟ್ ಇನ್ ಏಯಿಡ್ ಪಾಠಶಾಲೆಗಳು. ಉಪಾಧ್ಯಾಯರಿಗೆ ಪಾಠಶಾಲೆ ಇಟ್ಟರೆ ಗ್ರಾಂಟು ಕೊಡುತ್ತೇವೆಂದು ಹೇಳುವರು. ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಸ್ಕೂಲುಗಳನ್ನಿಡಿಸಿ ಗ್ರಾಂಟು ಕೊಡಿಸುತ್ತೇವೆಂದು ವಾಗ್ದಾನ ಮಾಡುತ್ತಾರೆ. ಆ ಮಾತುಗಳನ್ನು ನೆಚ್ಚಿಕೊಂಡು ಸ್ಕೂಲುಗಳನ್ನು ಪ್ರಾರಂಭಿಸುವರು. ಸ್ಕೂಲ್ ಇಡಿಸಿದ ದೊಡ್ಡ ಮನುಷ್ಯರೂ ಪಾಠ ನಡಿಸುವ ಉಪಾಧ್ಯಾಯರೂ ಗ್ರಾಂಟು ಬರುತ್ತದೆಂದು ನಿರೀಕ್ಷಿಸುತ್ತಾ ತಿಂಗಳುಗಟ್ಟಲೆ ಕಳೆದರೂ ಗ್ರಾಂಟಿನ ಹಣ ಕಾಣರು. ಕೆಲವು ತಿಂಗಳು ಕಳೆಯುವಷ್ಟರಲ್ಲೇ ಉಪಾಧ್ಯಾಯರಿಗೂ ಮ್ಯಾನೇಜರಿಗೂ ಆಶಾಭಂಗವುಂಟಾಗಿ ಬೇಜಾರು ಹುಟ್ಟಿ ಸ್ಕೂಲುಗಳನ್ನು ಮುಚ್ಚಿಬಿಡುತ್ತಾರೆ. ಸರ್ಕಾರದ ಅನೇಕ ಅಧಿಕಾರಿಗಳು ಪ್ರಜೆಗಳಿಗೆ ಪಾಠಶಾಲೆಗಳನ್ನು ಪ್ರಾರಂಭಿಸುವಂತೆ ಹೇಳುತ್ತಾ ಬಂದು, ಕಾಲಕ್ಕೆ ಸರಿಯಾಗಿ ಗವರ್ನಮೆಂಟಿನಿಂದ ಗ್ರಾಂಟು ಪಾವತಿ ಆಗದೆ ಹೋದರೆ ಪ್ರಜೆಗಳಿಗೆ ಗವರ್ನಮೆಂಟಿನ ಮೇಲೆ ಭರವಸೆ ಕಡಮೆಯಾದೀತು: ಸ್ಕೂಲುಗಳು ನಿಂತುಹೋಗುವುವು; ಬಳಿಕ ಅಂಥಾ ಸ್ಥಳಗಳಲ್ಲಿ ಸ್ಕೂಲುಗಳನ್ನು ಮತ್ತೆ ಪ್ರಾರಂಭಮಾಡುವುದು ಎಷ್ಟೋ ಪ್ರಯಾಸವಾದೀತು. ಇಂಥಾ ಸ್ಥಿತಿಗೆ ಯಾರು ಕಾರಣರೋ, ತಪ್ಪು ಯಾರದೋ ನಮಗೆ ತಿಳಿಯದು. ಅಂತು ನಮ್ಮ ಸಂಪದಭ್ಯುದಯ ಸಮಾಜದವರು ನಡಿಸುವ ಕಾರ್ಯಭಾಗಗಳ ವಿಷಯದಲ್ಲಿ ಆಗಲೇ ತುಂಬಾ ಅಸಮಾಧಾನ ಉಂಟಾಗಿರುತ್ತದೆ. ಈ ಸಂಪದಭ್ಯುದಯ ಸಮಾಜದಂಥಾ ಹಂಗಾಮಿ ಬಾಬಿನ ಅಧಿಕಾರಿಗಳಿಗೆ ಇಷ್ಟು ಮಟ್ಟಿಗೆ ಕೆಲಸಗಳನ್ನು ಬಲಾಯಿಸುವ ಸ್ವಾತಂತ್ರ್ಯಗಳನ್ನು ವಹಿಸುವುದು ಯೋಗ್ಯವಾದದ್ದಲ್ಲ. ಈ ಅಧಿಕಾರಿಗಳು ವಿದ್ಯಾಭ್ಯಾಸದ ಇಲಾಖೆಯ ಮೂಲಕ ಕೆಲಸಗಳನ್ನು ಮಾಡುವಂತಾದರೆ ವಿದ್ಯಾಭಿವೃದ್ಧಿಗೆ ಸಂಬಂಧಪಡುವ ಕಾರ್ಯಗಳೆಲ್ಲಾ ಒಮ್ಮುಖವಾಗಿ ನಡೆಯಲು ಸರಾಗವಾದೀತು.

ಶಾಶ್ವತವಾಗಿ ನಡೆದುಬರುತ್ತಿರುವಂಥಾ ಇಲಾಖೆಗಳ ಕಾರ್ಯಕ್ರಮಗಳಲ್ಲಿ ಸಂಪದಭ್ಯುದಯ ಸಮಾಜದ ಅಧಿಕಾರಿಗಳು ಕೈಹಾಕದಂತೆ ನಮ್ಮ ಗವರ್ನಮೆಂಟಿನವರು ಬೇರೆ ಏರ್ಪಾಡನ್ನು ಮಾಡಿಟ್ಟು, ಆ ಇಲಾಖೆಗಳನ್ನು ಬಲಪಡಿಸಿ ಅವುಗಳ ಮೂಲಕ ನಡೆಯುವ ಕೆಲಸಗಳು ವೃದ್ಧಿಯಾಗುವಂತೆ ಮಾಡಬೇಕಾಗಿರುತ್ತದೆ. ಹಂಗಾಮಿ ಇಲಾಖೆಯ ಅಧಿಕಾರಿಗಳಿಗೆ ಚಾಲ್ತಿ ಕೆಲಸಗಳನ್ನು ನಡಿಸುವ ಸ್ವಾತಂತ್ರ್ಯ ಕೊಟ್ಟ ಪಕ್ಷದಲ್ಲಿ ಶ್ರಮವೂ ಹಣವೂ ವೃಥಾ ವಿಚಾರಗುವವು; ಗಲಿಬಿಲಿಯೂ ತೀಯಾಟಗಳೂ ಹೆಚ್ಚುವವು. ಎಂಥಾ ಒಳ್ಳೆಯ ಗವರ್ನಮೆಂಟಾಗಿದ್ದರೂ ಪರಿಣಾಮದಲ್ಲಿ ಕೆಟ್ಟುಹೋಗಲು ಅವಕಾಶವಾದೀತು.

ಸುರಾಶಾಪ.

ಇಂಡಿಯಾ ದೇಶದಲ್ಲಿ ಮದ್ಯಪಾನ ಮಾಡುವುದರಿಂದುಂಟಾಗುವ ಭಯಂಕರವಾದ ದುರ್ಗುಣಗಳನ್ನು ತಿಳಿಯುವವರ ಉಪಯೋಗಕ್ಕಾಗಿ ಈ ಚಿಕ್ಕ ಪ್ರಬಂಧವನ್ನು ಪ್ರಕಟಿಸುತ್ತೇವೆ.

ಮೊದಲು ನಾವು ಕುಡಿತದಿಂದ ಮನುಷ್ಯನ ಶರೀರಕ್ಕಾಗುವ ಕೆಟ್ಟ ಗುಣಗಳನ್ನು ಸ್ವಲ್ಪ ಹೊತ್ತು ವಿಚಾರ ಮಾಡೋಣ. ಮದ್ಯವು ಎಂದಿಗೂ ರಕ್ತಗತವಾಗುವುದಿಲ್ಲ. ಆದ್ದರಿಂದ ಅದನ್ನು ಯಾವ ವಿಧದಲ್ಲಿಯೂ ಶರೀರಕ್ಕೆ ಆಹಾರವೆಂದು ಭಾವಿಸಕೂಡದು. ಹೊಟ್ಟೆಗೆ ಅದರಿಂದಾಗುವ ದುರ್ಗುಣವೇನೆಂದರೆ ಅದು ರಕ್ತನಾಳಗಳನ್ನು ಹಿಗ್ಗಿಸುತ್ತದೆ. ಜಠರ ರಸದ ಕೆಲಸವನ್ನು ಅಡ್ಡಿಪಡಿಸಿ, ಜೀರ್ಣಶಕ್ತಿಯನ್ನು ಕಡಮೆ ಮಾಡುತ್ತದೆ. ಅದು ಮೂತ್ರ ಜನಕಾಂಗಗಳನ್ನು ದೊಡ್ಡದು ಮಾಡಿ, ಅವುಗಳಲ್ಲಿ ನಡೆಯುವ ಕೆಲಸವನ್ನು ಕ್ರಮವಾಗಿ ನಡೆಯದಂತೆ ಮಾಡುತ್ತದೆ. ಅದು ಮಾಂಸಖಂಡಗಳನ್ನು ಕೆಡಿಸೋಣದರಿಂದ ದೃಷ್ಟಿಯು ಕಡಮೆಯಾಗುತ್ತದೆ. ಮದ್ಯವನ್ನು ಸೇವಿಸುವ ಎಂಥವನಿಗೂ ಸರಿಯಾಗಿ ದೃಷ್ಟಿ ಕಾಣಿಸುವುದಿಲ್ಲ. ಕೈ ನಡುಗು ಹತ್ತದಿರುವುದಿಲ್ಲ. ಯಥೇಷ್ಟವಾಗಿ ಮದ್ಯಪಾನ ಮಾಡಿದಾಗ ಕ್ರಿಯಾವಾಹಿನೀ ನರಗಳ ಕೆಲಸವು ನಿಂತುಹೋಗುತ್ತದೆ. ಆಗ ನಿಶಾಪತ್ತಿದ ಮನುಷ್ಯನು ನಡೆಯಲಾರನು. ಅವನು ಮತ್ತಿನಿಂದ ಕುಡಿದವನೆಂದು ಹೇಳುತ್ತೇವೆ. ಹೃದಯಕ್ಕೆ ಮದ್ಯದಿಂದಾಗುವ ಕೆಟ್ಟ ಫಲವೇನೆಂದರೆ:— ಅದರ ಕೆಲಸವನ್ನು ಹೆಚ್ಚಿಸೋಣವು. ಹೃದಯವು ಶರೀರದ ಎಲ್ಲಾ ಭಾಗಗಳಿಗೂ ರಕ್ತವನ್ನು ಕಳುಹಿಸುವ ಒಂದು ಪೆಟ್ಟಿಗೆ ಯಂತ್ರವು. ಅದಕ್ಕೆ ಮಾಡಲಿಕ್ಕೆ ಕಷ್ಟವಾದ ಕೆಲಸವಿದೆ. ಸರಾಸರಿ ಹೃದಯವು ದಿನ ಒಂದಕ್ಕೆ ಒಂದು ಲಕ್ಷ ಸಲ ಬಡಿಯುತ್ತದೆ. ಒಂದು ಔನ್ಸಿನ ಮದ್ಯವನ್ನು ಸೇವಿಸುವುದರಿಂದ ಹೃದಯವು ತನ್ನ ಸ್ವಾಭಾವಿಕವಾದ ಚಲನೆಗಿಂತಲೂ ದಿನ ಒಂದಕ್ಕೆ 1,000 ಸಲ ಹೆಚ್ಚಾಗಿ ಚಲಿಸುತ್ತದೆ. ಆದ್ದರಿಂದಲೇ ಕುಡುಕನು ಹೆಚ್ಚು ಕಾಲ ಜೀವಿಸುವುದಿಲ್ಲ. ಶರೀರದಲ್ಲೆಲ್ಲಾ ವ್ಯಾಪಿಸಿರುವ ನರಗಳು ಮಿದುಳಿನ ಒಂದು ಭಾಗವಾಗಿದೆ. ಆದಕಾರಣ ಮಿದುಳಿಗೂ ನರಗಳಿಗೂ ಒಂದೇ ವಿಧ ಫಲವಾಗುವುದು. ಮಿದುಳು ನಮ್ಮ ಬುದ್ಧಿಗೆ ಕೇಂದ್ರಸ್ಥಾನವು. ಅದು ನಮ್ಮ ಸ್ವಭಾವಕ್ಕೆ ಪ್ರತಿನಿಧಿಯಾಗಿ ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಅದು ನರಗಳನ್ನು ತಿಳಿಯುವ ಸೂಕ್ಷ್ಮವಾದ ಅವಯವವು. ಅದರ ಸ್ವಭಾವವು ಕೆಡದಂತೆ ಅದನ್ನು ಕಾಪಾಡಬೇಕು. ಇಲ್ಲದಿದ್ದರೆ ದೇಹವೆಲ್ಲಾ ಸಂಪೂರ್ಣವಾಗಿ ಕೆಡುವುದು. ಮಿದುಳು ಹೆಚ್ಚಾಗಿ ಪೋಷಕ ದ್ರವ್ಯಗಳನ್ನು ಅಪೇಕ್ಷಿಸುವ ಒಂದು ಅಂಗವು. ಅದು ಮಿದುಳಿಗೆ ರಕ್ತದಿಂದ ದೊರೆಯುವವು. ಮಿದುಳು ಶರೀರದ 50 ನೇ ಒಂದಂಶವಾಗಿದ್ದಾಗ್ಯೂ ಶರೀರದಲ್ಲಿರುವ ಐದನೇ ಒಂದು ಭಾಗ ರಕ್ತವು ಮಿದುಳಿನಲ್ಲಿ ಚಲಿಸುತ್ತದೆ. ಮನುಷ್ಯನು ಮದ್ಯವನ್ನು ಕುಡಿದ ಕೂಡಲೆ ಅದರಲ್ಲಿನ ಸ್ವಲ್ಪ ಭಾಗವು ಕಲ್ಪನಾ ರಕ್ತಕ್ಕೆ ಸೇರಿ ನೆಟ್ಟಗೆ ಮಿದುಳನ್ನು ತಲುಪುತ್ತದೆ. ಆ ಮದ್ಯವು ಮಿದುಳಿನ ಕೆಲಸವನ್ನು ನಾಶಪಡಿಸುವುದಕ್ಕೆ ಪ್ರಾರಂಭಿಸುತ್ತದೆ. ಅದು ಮಿದುಳಿನಲ್ಲಿ ನರಗಳನ್ನು ಮುಚ್ಚಿಕೊಂಡಿರುವ ಸೂಕ್ಷ್ಮವಾದ ಪರೆಯನ್ನು ಗಟ್ಟಿಯಾಗಿಯೂ ದಪ್ಪವಾಗಿಯೂ ಮಾಡುತ್ತದೆ. ಮತ್ತು ಮಿದುಳು ಸಾಕಷ್ಟು ಪೋಷಕದ್ರವ್ಯಗಳನ್ನು ಹೊಂದದಂತೆ ರಕ್ತನಾಳ ಶಕ್ತಿಯನ್ನು ಕುಂದಿಸುತ್ತದೆ. ಶರೀರದ ಪ್ರತಿ ಅವಯವದಲ್ಲಿಯೂ ಮಾದಕ ಪದಾರ್ಥಗಳು ತಮ್ಮ ಅನುಬಲವನ್ನು ತೋರಿಸುವುದಲ್ಲದೆ, ಆ ಅವಯವಗಳನ್ನು ಬಹಳ ಹೀನಸ್ಥಿತಿಗೆ ತರುತ್ತವೆ. ಅತ್ಯಂತ ಪ್ರಧಾನವಾದ ಅಂಗಗಳಿಗೆ ಈ ಭಯಂಕರವಾದ ದುರ್ಗುಣಗಳ ಜೊತೆಗೆ ಮುಖ್ಯಕರವಾದ ಹೊರಗಿನ ಅಂಗ ವಿಕಾರವು ಮತ್ತೊಂದು ಫಲಿತಾಂಶವು. ಸಾಧಾರಣವಾಗಿ ಮದ್ಯಪಾನ ಮಾಡುವವನ ಊದಿಕೊಂಡಿರುವ ಮುಖವನ್ನೂ ಕೆಂಪಾದ ಕಣ್ಣುಗಳನ್ನೂ ತೂಗಾಡಿಕೊಂಡು ಹೋಗುವ ನಡಿಗೆಯನ್ನೂ ಯಾರಾದರೂ ನೋಡಿದಾಗ ಅವನನ್ನು ಪೌರುಷಹೀನನಾಗಿಯೂ ಪಶುಪ್ರಾಯನಾಗಿಯೂ ಮಾಡುವ ಆ ಪದಾರ್ಥದ ಮೇಲೆ ಅವರು ಕೋಪವೆ ಅಸಹ್ಯಪಡದೆ ಇರಲಾರರು. ಮದ್ಯವನ್ನು ಸೇವನೆ ಮಾಡುವ ಪ್ರತಿಯೊಬ್ಬನೂ ಕುಡುಕನೆನಿಸಿಕೊಳ್ಳುವುದಿಲ್ಲ. ಆದರೆ ಮದ್ಯವನ್ನು ಕುಡಿಯುವ ಪ್ರತಿಯೊಬ್ಬನೂ ತಾನು ತೆಗೆದುಕೊಳ್ಳುವ ಮಾದಕ ಪದಾರ್ಥದ ಪ್ರಮಾಣಕ್ಕೆ ತಕ್ಕಂತೆ ಹೀನಸ್ಥಿತಿಗೆ ಬರುವನು. ಸ್ವಲ್ಪ ಕುಡಿಯೋಣದ ಪ್ರವೃತ್ತಿ ಅನೇಕರಲ್ಲಿ ಹುಟ್ಟುತ್ತದೆ. ಹೆಚ್ಚಾಗಿ ಕುಡಿದ ಹೊರತು ಅವನಿಗೆ ತೃಪ್ತಿಯಾಗದೆ ಸರ್ವದಾ ಆಶೆಯನ್ನು ಹೆಚ್ಚಿಸುವ ಆ ಮಾದಕ ಪದಾರ್ಥಕ್ಕೆ ಅವನು ಬಲಿಯಾಗುತ್ತಾನೆ. ಸ್ವಲ್ಪವನ್ನು ಕುಡಿಯುವುದೂ ಅಪಾಯಕರವಾದದ್ದು. ಅದನ್ನು ಪೂರ್ತಿಯಾಗಿ ಬಿಡುವುದೇ ಕ್ಷೇಮಕರ. ಮಾದಕ ಪದಾರ್ಥಗಳನ್ನು ಸಂಪೂರ್ಣವಾಗಿ ವರ್ಜಿಸಿ ಕುಡಿತದಿಂದ ಶರೀರವು ಕೆಟ್ಟುಹೋಗುವುದಲ್ಲದೆ ಅದಕ್ಕಿಂತಲೂ ವ್ಯಸನಕರವಾದ ಅಪಾಯವು ನಡತೆ ಕೆಡುವುದು. ಕುಡುಕನ ನೈತಿಕ ಸ್ವಭಾವವು ಸ್ವಲ್ಪ ಸ್ವಲ್ಪವಾಗಿ ಬುಡಮಟ್ಟ ನಾಶವಾಗುತ್ತದೆ. ಅವನು ಕಾಲಕಾಲಕ್ಕೆ ತನ್ನ ಕೆಲಸಗಳನ್ನು ಮಾಡುವುದಿಲ್ಲ. ಇತರರ ಸಂಗಡ ತಾನು ಮಾಡುವ ವ್ಯವಹಾರಗಳಲ್ಲಿ ಅವನು ಮೋಸಗಾರನಾಗುತ್ತಾನೆ. ಅಪ್ರಮಾಣಿಕನೂ, ಅಸತ್ಯವಾದಿಯೂ ಎನಿಸಿಕೊಳ್ಳುತ್ತಾನೆ. ತನ್ನ ಹೆಂಡತಿ ಮಕ್ಕಳಿಗೆ ಅನ್ನ ಬಟ್ಟೆಗಳನ್ನು ಕೊಂಡುಕೊಳ್ಳುವ ಹಣವನ್ನು ಮದ್ಯಕ್ಕೆ ವೆಚ್ಚಮಾಡೋಣದರಿಂದ ತನ್ನ ಹೆಂಡತಿ ಮಕ್ಕಳಿಗೆ ದಿನಗಳು ನಾನಾ ಗೋಳು ಮತ್ತು ತಾಪ ಬಡಿಸಿಕೊಳ್ಳದೆ ಅದಕ್ಕೆ ಬದಲಾಗಿ ತನ್ನ ಆತ್ಮಸುಖವನ್ನು! ಅಪೇಕ್ಷಿಸುವ ಸ್ವಾರ್ಥಬುದ್ಧಿಯುಳ್ಳ ಮೃಗವೆನಿಸಿಕೊಳ್ಳುತ್ತಾನೆ. ಅಂಥಾವನು ಮದ್ಯ ದೇವತೆಗೆ ದಾಸನಾಗುವನು. ಅದು ಮಾದಲುಗೊಂಡು ಹೇವಲು ತನ್ನ ಕೃಪೆಯನ್ನು ಅವನ ಮೇಲೆ ಅನುಗ್ರಹಿಸುವ ವರೆಗೂ ಅವನು ಸ್ವಾರ್ಥಕ್ಕೂ ತನ್ನ ಸಂಸಾರಕ್ಕೂ ಕೆಲಸವಿಲ್ಲದವನು.

ಪ್ರಪಂಚದಲ್ಲಿ ನಡೆಯುತ್ತಿರುವ ಪಾತಕಗಳಲ್ಲಿಯೂ ಬಡತನದಲ್ಲಿಯೂ ನೂರಾರು ಪತ್ರಗಳಲ್ಲಿ ಒಂಭತ್ತು ಭಾಗ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಕುಡಿತದಿಂದಾಗುತ್ತವೆಂದು ಹೇಳುತ್ತಾರೆ.

ಪ್ರಿಯವಾಚಕರೇ, ಈ ನಮ್ಮ ದೇಶದಲ್ಲಿಯೂ ದೇಶಾಂತರ ಪ್ರತಿ ದೇಶದಲ್ಲಿಯೂ ಉಂಟಾಗುವ ಭಯಂಕರವಾದ ಅನಾಹುತಗಳನ್ನು ನೀವು ಕಂಡುಹಿಡಿದಾಗ "ಇನ್ನು ನಾನಾದರೂ ಈ ಕೆಟ್ಟದಾದ ಮದ್ಯವನ್ನು ಮುಟ್ಟಲಾರೆ, ಧ್ಯೇಯವುಳ್ಳ ಮನುಷ್ಯನೆನಿಸಿಕೊಳ್ಳುವೆನು" ಎಂದು ನೀವೇಕೆ ಅಂದುಕೊಳ್ಳುವುದಿಲ್ಲ? ನೀವು ಮಿತಿಯಾಗಿಯಾದರೂ ಕುಡಿಯುವ ಅಭ್ಯಾಸವಿಟ್ಟುಕೊಂಡಿರುವವರಾದರೂ ಅವನ್ನ ಸಿದ್ಧವಾದ ಆರೋಗ್ಯ ದೃಢಕಾಯತ್ವವನ್ನೂ ಒಳ್ಳೆ ಬುದ್ಧಿಯನ್ನೂ ನಿಮ್ಮ ಮಕ್ಕಳಿಗೆ ಬಿಟ್ಟುಹೋಗಲಾರಿರಿ. ಪ್ರತಿವರ್ಷದಲ್ಲಿಯೂ ಹುಟ್ಟು ಬುದ್ಧಿ ಇಲ್ಲದ ಮತ್ತು ಅಶಕ್ತರಾದ ಸಾವಿರಾರು ಮಕ್ಕಳು ಹುಟ್ಟುತ್ತಾರೆ. ಅವರ ತಾಯಿ ತಂದೆಗಳು ಮಾದಕ ಪದಾರ್ಥಗಳನ್ನು ವಿಶೇಷವಾಗಿ ಉಪಯೋಗಿಸುವುದೇ ಇದಕ್ಕೆ ಕಾರಣ. ಹೊಗೆಸೊಪ್ಪು ಸಹ ಮನುಷ್ಯನಿಗೆ ಬಲವಾದ ಶತ್ರುಗಳಲ್ಲಿ ಒಂದಾಗಿದೆ. ಒಂದು ಪೌನು ಹೊಗೆಯ ಸೊಪ್ಪಿನಲ್ಲಿ ವಿಷವಾಯುವಾದ ಮತ್ತು ಸಾಯಿಸುವ "ನಿಕೋಟೈನ್" ಎಂಬ ವಸ್ತುವು 300 ಗ್ರೇಯಿನ್‌ಗಿಂತ ಹೆಚ್ಚಾಗಿದೆ. ಮದ ದ್ರವ್ಯಗಳ ವಿಷಯವಾಗಿ ಹೇಳಬಹುದಾದದ್ದನ್ನೇ ಹೊಗೆಸೊಪ್ಪಿನ ವಿಷಯವಾಗಿಯೂ ಹೇಳಬಹುದು. ಆದರೆ ಇದರಲ್ಲಿ ಸದ್ಗುಣಗಳು ಅಷ್ಟಿಲ್ಲ.

ಹಿಂದೂ ದೇಶದ ಸ್ತ್ರೀಪುರುಷರೇ, ಮರಣಕ್ಕೆ ಹೇತುವಾದ ನಾಗರಹಾವಿನ ಕಡಿತಕ್ಕೆ ಹೆದರುವಂತೆ ಮದ್ಯವೆಂಬ ಈ ಪಿಶಾಚಿಗೆ ಹೆದರಿಕೊಳ್ಳಿ! ನೀವು ಅದಕ್ಕಿಂತಲೂ ಹೆಚ್ಚಾಗಿ ಅಂಜಬೇಕು. ಏಕೆಂದರೆ ನಾಗರಹಾವು ನಮ್ಮ ಶರೀರವನ್ನು ಮಾತ್ರ ಕೊಲ್ಲಬಲ್ಲದು. ಆದರೆ ಮದ್ಯವು ನಮ್ಮ ಶರೀರವನ್ನೂ ಆತ್ಮವನ್ನೂ ಸಾಯಿಸುತ್ತದೆ.

ಹಿಂದೂ ದೇಶದ ತಂದೆ ತಾಯಿಗಳಿರಾ! ನೀವು ನಿಮ್ಮ ಮಕ್ಕಳನ್ನು ಪ್ರೀತಿಸುವುದಾದರೆ ಚಿಕ್ಕಂದಿನಿಂದ ಮದ್ಯವನ್ನೂ ಹೊಗೆಸೊಪ್ಪನ್ನೂ ದ್ವೇಷಿಸುವಂತೆ ಅವರಿಗೆ ಬುದ್ಧಿ ಕಲಿಸಿ. ನೀವು ಸಹ ಅದನ್ನು ಸೇವಿಸಬೇಡಿರಿ. ಏಕೆಂದರೆ ನಿಮ್ಮ ಮಕ್ಕಳ ಮುಂದಿನ ನಡತೆಗೆ ನೀವು ಜವಾಬ್ದಾರರಾಗಿದ್ದೀರಿ. ಒಂದಿಲ್ಲೊಂದು ದಿನ ದೇವರಿಗೆ ಇದರ ವಿಷಯವಾಗಿ ನೀವು ಲೆಕ್ಕವನ್ನು ಒಪ್ಪಿಸಬೇಕಾಗುತ್ತದೆ. ನೀವು ಸಂಸಾರಗಳನ್ನೂ ಮಕ್ಕಳನ್ನೂ ಪ್ರೀತಿಸುತ್ತೀರೋ? ಅವರು ಸೌಖ್ಯವಾಗಿರಬೇಕೆಂದು ನೀವು ಅಪೇಕ್ಷಿಸುತ್ತೀರೋ? ನಿಮ್ಮ ದೇಶದ ಮೇಲೆ ನಿಮಗೆ ವಾತ್ಸಲ್ಯವಿದೆಯೋ? ಅದು ಉನ್ನತ ಸ್ಥಿತಿಗೆ ಬರುವುದಕ್ಕೆ ನಿಮಗೆ ಅಪೇಕ್ಷೆಯುಂಟೋ? ಹಾಗಾದರೆ ಪರಿಶುದ್ಧತ್ವಕ್ಕೂ ಒಳ್ಳೆಯತನಕ್ಕೂ ಕೊಡಬೇಕಾದ ಮರ್ಯಾದೆಗೋಸ್ಕರ ಪರಮಾತ್ಮನನ್ನು ಕೊಲ್ಲುವ ಈ ವಿಷ ವಸ್ತುಗಳನ್ನು ಮುಟ್ಟದೆ ಪರಾಕ್ರಮಿಗಳಂತೆ ನಡೆದುಕೊಳ್ಳಿರಿ.

ಯುದ್ಧದ ಸಮಾಚಾರಗಳು.

ಇಟಲಿಯವರ ಜಯಪ್ರದಗಳು.

ಸದ್ಯದಲ್ಲಿ ಯುದ್ಧದ ರಣರಂಗಗಳಲ್ಲೆಲ್ಲಾ ಸರ್ಬಿಯಾ ದೇಶದಲ್ಲಿ ನಡೆಯುವ ಯುದ್ಧಕಾರ್ಯಗಳೇ ಪ್ರಧಾನವಾಗಿರುತ್ತವೆ. ಈ ಯುದ್ಧಭೂಮಿಯ ಬಂದಿರುವ ವರ್ತಮಾನಗಳು ಸ್ಪಷ್ಟವಾಗಿಲ್ಲ. ಈಗಾಗಲೇ ಸರ್ಬಿಯಾ ಸೀಮೆಯು ಬಹಳ ಭಾಗವೆಲ್ಲಾ ಜರ್ಮನಿ ಮತ್ತು ಆಸ್ಟ್ರಿಯಾದವರ ಸ್ವಾಧೀನವಾಗಿರುವುದೇನೋ ಸ್ಪಷ್ಟವಾಗಿದೆ. ಆದಾಗ್ಯೂ ಸರ್ಬಿಯಾ ಸೈನ್ಯಗಳು ಅತ್ಯಂತ ಪರಾಕ್ರಮದಿಂದ ಯುದ್ಧಮಾಡುತ್ತಿರುವವು. ಫ್ರೆಂಚರೂ ಬ್ರಿಟಿಷರೂ ಅವರ ಸಹಾಯಕ್ಕಾಗಿ ಸೈನ್ಯಗಳನ್ನು ನಿಲುಗಡೆಯಿಲ್ಲದೆ ಕಳುಹಿಸುತ್ತಲೇ ಬಂದಿದ್ದಾರೆ. ಇದಲ್ಲದೆ ರಷ್ಯಾದವರೂ, ಇಟಲಿಯವರೂ ಅವರಿಗೆ ಸಹಾಯಮಾಡಬೇಕೆಂದು ಆತುರವಾಗಿ ಸೈನ್ಯಗಳನ್ನು ಜೊತೆಮಾಡುತ್ತಲಿದ್ದಾರೆ.

ಪಶ್ಚಿಮ ರಣರಂಗದಲ್ಲಿ.

ಫ್ರಾನ್ಸಿನಲ್ಲೂ ಬೆಲ್ಜಿಯಂನಲ್ಲೂ ಯುದ್ಧಕಾರ್ಯಗಳೆಲ್ಲಾ ಭಾರಿ ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳ ಮಳೆಗರೆಯುವುದರಲ್ಲಿ ಶತ್ರುಗಳು ಭೂಮಿಯೊಳಗೆ ಸುರಂಗಗಳನ್ನು ತೋಡಿ ಮದ್ದುಹಾಕುತ್ತಾರೆ. ಒಂದು ಸಂದರ್ಭದಲ್ಲಿ ಹೀಗೆ ಸುರಂಗದ ಮದ್ದು ಹಾರಿದ ಬಳಿಕ ಬಹು ಘೋರವಾದ ಕದನವಾಯಿತು. ಇದರಲ್ಲಿ ಫ್ರೆಂಚರು ಜಯಶೀಲರಾದರು. ಕಾಲ್ಬಲದ ಸೈನ್ಯಗಳು ಸಂಧಿಸಿ ಕದನಗಳು ನಡೆದದ್ದು ಬಹಳ ಸ್ವಲ್ಪ. ಆ ಕಾರಣ ಸೈನ್ಯಗಳು ಅಷ್ಟೇನೂ ನಷ್ಟವಾಗಿಲ್ಲ.—ವಿಮಾನಯಂತ್ರಗಳ ಕಾರುಬಾರು ವಿಶೇಷವಾಗಿತ್ತು. ಜರ್ಮನಿಯವರ ಕೆಲವು ವಿಮಾನಯಂತ್ರಗಳನ್ನು ನಾಶಮಾಡಿ ಅನ್ಯ ಕೆಲವನ್ನು ಕಿತ್ತು ಸ್ವಾಧೀನಪಡಿಸಿಕೊಂಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಮಿತ್ರಮಂಡಲಿಯವರು ತಿರಿಗಿ ಶತ್ರುವಿನ ಮೇಲೆ ನುಗ್ಗಿ ಕದನಮಾಡುವವರಾದಾರೆಂದು ತಿಳಿಯಬಹುದು. ಮತ್ತು ಇಷ್ಟರಲ್ಲೇ ಬಹಳ ಘೋರವಾದ ಯುದ್ಧ ನಡೆದ ವೃತ್ತಾಂತವನ್ನು ನಾವು ಓದುವ ಹಾಗೆ ಆಗುತ್ತದೆ.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದ ಯುದ್ಧಸಾಲಿನ ಹಲವು ಠಾಣ್ಯಗಳಲ್ಲಿ ಕದನಗಳು ನಡೆದಿರುತ್ತವೆ. ಈಗ ಮೇಲೆಬಿದ್ದು ನುಗ್ಗಿ ಕದನಮಾಡುವವರು ರಷ್ಯಾದವರು. ಜರ್ಮನಿಯವರು ಅವರ ಮೇಲೆ ನುಗ್ಗುವುದು ಬಹಳ ಮಟ್ಟಿಗೆ ಕಡಮೆಯಾಗಿದೆ. ಕದನಗಳೇನೂ ಅಷ್ಟು ದೊಡ್ಡವುಗಳಲ್ಲ. ಆದರೂ ಕೆಲವು ಠಾಣ್ಯಗಳಲ್ಲಿ ರಷ್ಯದವರು ಜರ್ಮನಿಯವರನ್ನು ಹಿಂದಕ್ಕೆ ಓಡಿಸಿ, ಒಂದು ಕಡೆ 170 ಸೈನಿಕರನ್ನು ಬಹಳ ಯುದ್ಧಸಾಮಗ್ರಿಯ ಸಮೇತವೂ, ಇನ್ನೊಂದು ಕಡೆ 110 ಸೈನಿಕರನ್ನು 6 ಮೆಷೀನ್ ಫಿರಂಗಿಗಳನ್ನೂ ಸೆರೆ ಹಿಡಿದುಕೊಂಡರು. ಜರ್ಮನಿಯವರು ಈಗ ರೀಗಾ ನಗರವನ್ನು ಬಳಿಯಿಂದ ಬಿಟ್ಟುಕೊಡುತ್ತಾರೆಂದು ತಿಳಿಸಲ್ಪಟ್ಟಿದೆ. ಜರ್ಮನಿಯವರು ಅಲ್ಲಿಂದ ತಮ್ಮ ಸೈನ್ಯಗಳನ್ನು ಕರೆದುಕೊಂಡಿರುವುದೇನೋ ಸ್ಪಷ್ಟವಾಗಿದೆ. ಜರ್ಮನಿಯ ದಳಪತಿಯಾದ ಜನರಲ್ ಹಿಂಡೆನ್‌ಬರ್ಗ್ ಎಂಬಾತನು ತನ್ನ ಕೈಕೆಳಗಿರುವ ಸೈನ್ಯವು ಅಸಮರ್ಥವಾದದ್ದಲ್ಲವಾದ ಕಾರಣ ರಷ್ಯದವರ ಮೇಲೆ ನುಗ್ಗುವುದು ಸಾಧ್ಯವಿಲ್ಲವೆಂದೂ, ತನ್ನ ಸ್ಥಾನಗಳನ್ನು ಸಂರಕ್ಷಿಸಿಕೊಳ್ಳುವುದೇ ಸಾಕಾಗಿದೆ ಎಂದೂ ತಿಳಿದಂತೆ ಒಂದು ವರ್ತಮಾನ ಹೇಳುವುದು.—ರಷ್ಯಾದವರು ಜರ್ಮನಿಯವರ ಒಂದು ವಿಮಾನಯಂತ್ರವನ್ನು ಕಿತ್ತು ಸ್ವಾಧೀನಪಡಿಸಿಕೊಂಡರು. ಆಗ ಅದರ ಒಳಗಿದ್ದ ಜರ್ಮನಿಯವರು ತಪ್ಪಿಸಿಕೊಂಡು ಹೋಗಿದ್ದರು.—ರಷ್ಯಾದವರು "ಡೂಪ್ಲಿನ್ ಡೆಸ್" ಎಂಬ ಹಡಗು ಜರ್ಮನಿಯವರ ಒಂದು ಸಣ್ಣ ಯುದ್ಧದ ಹಡಗನ್ನು ಮುಳುಗಿಸಿದೆ. ಮತ್ತು ಒಬ್ಬ ಸುದ್ದೀದಾರನೂ 19 ಮಂದಿ ಸೈನಿಕರು ರಷ್ಯಾದವರಿಗೆ ಸೆರೆ ಸಿಕ್ಕಿದರು.

ರಷ್ಯಾ ಚಕ್ರವರ್ತಿಯವರು ಪೆಟ್ರೋಗ್ರಾಡ್‌ನಲ್ಲಿ ತಮ್ಮ ಸೈನಿಕರ ಕವಾಯಿತು ನೋಡುವುದಕ್ಕೆ ದಂಡಯಾತ್ರೆ ಅಲ್ಲಿಗೆ ಪ್ರಯಾಣಮಾಡಿದಾರೆ. ಅಲ್ಲಿ ಕೂಡಿಸಲ್ಪಟ್ಟಿರುವ ಅಪಾರ ಸೈನ್ಯವು ಸರ್ಬಿಯಾದವರ ಸಹಾಯಕ್ಕಾಗಿ ಕಳುಹಲ್ಪಡುವುದು.

ಜರ್ಮನಿ ಚಕ್ರವರ್ತಿ ಕೈಸರ್‌ರವರು ರಷ್ಯಾದಲ್ಲಿ ಯುದ್ಧಮಾಡುತ್ತಿರುವ ತಮ್ಮ ಸೈನಿಕರಿಗೆ ಆತುರಪಡಬೇಡಿ ಎಂದು ಧೈರ್ಯಹೇಳಿದ್ದಾರೆ—"ಇನ್ನು ಒಂದೆರಡು ಸಲ ನಿಮ್ಮ ಪರಾಕ್ರಮಗಳನ್ನು ತೋರಿಸಿರಿ, ನಮ್ಮ ಜಯಪ್ರದವು ಬಹಳ ಸಮೀಪದಲ್ಲಿದೆ ಎಂದು ಚಿತ್ತ ಹೇಳುತ್ತೇನೆ. ಅದರಿಂದ ನಿಮ್ಮ ಸಮಸ್ತ ಕಷ್ಟ ನಷ್ಟ ಮನೋವ್ಯಥೆಗಳೂ ಪರಿಹಾರವಾಗಿ ಶ್ರೇಷ್ಠಫಲ ಉಂಟಾದೀತು. ನನ್ನ ಮಕ್ಕಳಿರಾ, ನನ್ನ ಸ್ನೇಹಿತರಿರಾ, ನನ್ನನ್ನು ನಂಬಿರಿ. ನೀವೆಲ್ಲಾ ತುಂಬಾ ದಣಿದಿರುತ್ತೀರೆಂದು ನಾನು ಬಲ್ಲೆ. ಯುದ್ಧವು ಕೆಲವು ತಿಂಗಳುಗಳಲ್ಲಿ ಮುಕ್ತಾಯವಾದೀತೆಂದು ನಂಬಿದ್ದೇನೆ. ಅದು ಈಗ ದೀರ್ಘಕ್ಕೆ ಬಿದ್ದಿದೆ. ನೀವು ಈ ಯುದ್ಧವನ್ನು ಘೋರವಾದ ಸಾಮರ್ಥ್ಯದಿಂದ ತೋರಿಸಿ ಮುಂದೆ ಬಂದ ಕೂಡಲೇ ರಷ್ಯಾ ಎಂಬ ಕರಡಿಗೆ ನಮ್ಮ ಉಕ್ಕಿನ ಪಾದಗಳನ್ನು ತೋರಿಸಬೇಕು." ಎಂಬುದಾಗಿ ಹೇಳಿ ತಮ್ಮ ಸಿಪಾಯಿಗಳಿಗೆಲ್ಲಾ ಉತ್ತೇಜನ ಕೊಟ್ಟರು.

ಇಟಲಿಯವರು.

ಇಟಲಿ ಸೈನಿಕರ ಪೂರ್ವ ದಿಕ್ಕಿನ ಯುದ್ಧಸಾಲಿನಲ್ಲಿ ಅತ್ಯಂತ ಘೋರವಾದ ಕದನಗಳು ನಡೆದಿರುವವು. ಇಟಲಿಯವರು ಗೆದ್ದು ಸ್ವಾಧೀನಪಡಿಸಿಕೊಂಡ ಕಂದಕಗಳನ್ನು ಮತ್ತೆ ಅವರಿಂದ ಕಿತ್ತುಕೊಳ್ಳಬೇಕೆಂದು ಆಸ್ಟ್ರಿಯಾದವರು ಬಹು ಪರಾಕ್ರಮದಿಂದ ನುಗ್ಗಿ ಹಾತೊರೆದರು. ಪ್ರತಿ ಸಲವೂ ಅವರಿಗೆ ಸೋಲೇ ಆಯಿತು: ಅನೇಕ ಸೈನಿಕರು ಹತರಾದರು, ಅನೇಕರು ಗಾಯಪಟ್ಟರು. ೬೦೦ ಮಂದಿ ಇಟಲಿಯವರಿಗೆ ಸೆರೆ ಸಿಕ್ಕಿದರು. ಇಟಲಿಯವರು ಅಲ್ಲಿಂದ ಮುಂದರಿಸಿ ನುಗ್ಗಿ ಹೋಗಿ ಶತ್ರುವಿನ ಕಂದಕಗಳನ್ನೂ ಒಂದು ಪ್ರಾಮುಖ್ಯವಾದ ಪರ್ವತ

[illegible] ಸ್ವಾಧೀನಪಡಿಸಿಕೊಂಡಿದಾರೆ. ಅಲ್ಲಿ ಇಟಲಿಯವರಿಗೆ 614 ಮಂದಿ [illegible] ಸೈನಿಕರೂ ಅನೇಕ ಮದ್ದು ಗುಂಡೂ ಕೈಸೆರೆ ಸಿಕ್ಕಿದವು.

[illegible] ಬಳಿ ಇರುವ ಯುದ್ಧಸಾಲಿನಲ್ಲಿರುವ ಗೊರಿಜಿಯೆ ಎಂಬ ಪಟ್ಟಣದ [illegible] ಭಯಂಕರವಾದ ಯುದ್ಧವಾಯಿತು. ಇಟಲಿಯವರು ಆ ಪಟ್ಟಣದ [illegible] ಸುತ್ತಿಕೊಂಡರು. ಅವರು ಹಲವು ಕೋಟೆ ಕೊತ್ತಲಗಳನ್ನು [illegible] 1,000 ಆಸ್ಟ್ರಿಯಾ ಸೈನಿಕರನ್ನು ಕೈಸೆರೆ ಹಿಡಿದರು [illegible] ಆ ಪಟ್ಟಣವೂ ಕೂಡ ಬಹು [illegible] ಇನ್ನು ಕೆಲವು ದಿನಗಳೊಳಗಾಗಿ ಆ ಪಟ್ಟಣವು ಇಟಲಿ [illegible] ಸ್ವಾಧೀನವಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಬಳಿಕ ಇಟಲಿ ಸೈನ್ಯಗಳು [illegible] ಎಂಬ ದೊಡ್ಡ ಪಟ್ಟಣದ ಮೇಲೆ ನುಗ್ಗಿ ಹೋಗಲು ಸರಾಗವಾಗುವುದು.

ಟರ್ಕಿಯಲ್ಲಿ.

[illegible] ಅರ್ಧ ದ್ವೀಪದ ಮೇಲೆ ಕೆಲವು ಕದನಗಳು ನಡೆಯುವವು [illegible] ಟರ್ಕಿಯವರಿಂದ ಕೆಲವು ಕಂದಕಗಳನ್ನು ಕಿತ್ತು ಆಕ್ರಮಿಸಿಕೊಂಡ [illegible] ಟರ್ಕಿಯವರು ಆ ಕಂದಕಗಳನ್ನು ಮತ್ತೆ ಗೆದ್ದುಕೊಳ್ಳಬೇಕೆಂದು [illegible] ಪರಾಕ್ರಮದಿಂದ ಸಾಹಸಪಟ್ಟರು. ಆದರೆ ಅವರು ಅನೇಕರನ್ನು ಕಳ [illegible] ಹಿಮ್ಮೆಟ್ಟಬೇಕಾಯಿತು. ಸುರಂಗಗಳನ್ನು ತೋಡಿ ಮದ್ದು [illegible] ಹಾರಿಸುವುದು ವಿಶೇಷವಾಗಿ ನಡೆದಿದೆ. ಟರ್ಕಿಯವರು ಮೊದಲನೇ [illegible] ವಿಮಾನಗಳನ್ನು ಮಿತ್ರಮಂಡಲಿಯ ಸೈನ್ಯಗಳ ಮೇಲೆ ನುಗ್ಗಿಸಿದರು [illegible] ವಿಮಾನಯಂತ್ರಗಳಿಂದ ಸಿಡಿಮದ್ದಿನ ಗುಂಡುಗಳನ್ನು ಹಾಕಿ [illegible] ಗಳನ್ನು ಹಾಳುಮಾಡಿದರು; ಯುದ್ಧದ ಹಡಗುಗಳಿಂದ ಗುಂಡು [illegible] ತೀರಗಳಲ್ಲಿ ಸಾಕಿದರು. ಅನೇಕಾನೇಕ ಗಾಯಪಟ್ಟ [illegible] ಟರ್ಕಿಯವರು ಯುದ್ಧಭೂಮಿಯಿಂದ ರಾಜಧಾನಿಯಾದ ಕಾನ್ [illegible] ನಗರಕ್ಕೆ ಸಾಗಿಸಿಕೊಂಡು ಹೋಗುತ್ತಿದಾರೆ.

[illegible] ಅಧಿಪತ್ಯದಲ್ಲಿ ಹಿಂದೂಸ್ಥಾನದಿಂದ ಹೋಗಿರುವ [illegible] ಸೈನ್ಯಗಳಿಗೂ ಟರ್ಕಿ ಸೈನ್ಯಗಳಿಗೂ ಸಂಧಿಯಾಗಿ ಇನ್ನೊಂದು ಯುದ್ಧ [illegible] ಬ್ರಿಟಿಷ್ ಸೈನಿಕರು ಬಾಗ್ದಾದಿನಿಂದ ದಕ್ಷಿಣಕ್ಕೆ 21 ಮೈಲಿ ದೂರ [illegible] ಬಹಳ ಪರಾಕ್ರಮದಿಂದ ಕಾದಾಡಿದ ಟರ್ಕಿ ಸೈನ್ಯಗಳನ್ನು [illegible] ಟೈಗ್ರಿಸ್ ನದಿಯ ಕಣಿವೆ ಮಾರ್ಗವಾಗಿ ಮೇಲಕ್ಕೆ ನುಗ್ಗಿ ಹೋ[illegible] ಕಳೆದ ತಾ. 22-23 ರಲ್ಲಿ ಒಂದು ಕದನವಾಯಿತು. ಅದು [illegible] ಯುದ್ಧವಾಗಿರಬೇಕೆಂದು ಕಾಣುತ್ತದೆ. ಎರಡು ಕಡೆಗಳಲ್ಲೂ [illegible] ನಷ್ಟವಾಯಿತು. ಮೊದಲು ಟರ್ಕಿಯವರ ಮುಖ್ಯ ಸ್ಥಾನಗಳನ್ನು [illegible] ಸಾಧ್ಯವಾಗಲಿಲ್ಲ; ಬಳಿಕ ಟರ್ಕಿ ಸೈನ್ಯಗಳು ಹಿಮ್ಮೆಟ್ಟಿ ಬಾಗ್ದಾದ್ [illegible] 10 ಮೈಲಿ ದೂರಕ್ಕೆ ಹೋಗಿಬಿಟ್ಟವು. ಬ್ರಿಟಿಷ್ ಸೈನಿಕರಿಗೆ ನೀರು [illegible] ದೂರದಲ್ಲಿದ್ದುದರಿಂದ ಅವರು ಆ ಸ್ಥಾನವನ್ನು ಬಿಟ್ಟು ನದಿಯ ಬಳಿಗೆ ಹೋಗ [illegible] ಈಗ ಅವರು ಶತ್ರುವಿನಿಂದ ಕಷ್ಟನಷ್ಟಗಳಿಗೆ ಗುರಿಯಾಗದಂತೆ [illegible] ಹೋದರು. ದಾರಿಯಲ್ಲಿ ಬಿದ್ದಿದ್ದ ಕೆಲಗಳನ್ನೂ [illegible] ಸಾಗಿಸುವುದರಲ್ಲಿ ಕೆಲವು ದಿನಗಳು ಕಳೆದವು. ಟರ್ಕಿಯ [illegible] ತುಂಬ ತುಂಬಿಹೋಗಿದ್ದವು. ಬ್ರಿಟಿಷರು 1,300 ಟರ್ಕಿ [illegible] ಕೈಸೆರೆಹಿಡಿದಿದಾರೆ. ಬ್ರಿಟಿಷ್ ಸೈನ್ಯಗಳಲ್ಲಿ ಕೊಲೆಯಾದವರೂ [illegible] 2,500 ಮಂದಿ ಆಗಬಹುದು.

[illegible] ಸಮುದ್ರವನ್ನು ಬ್ರಿಟಿಷರು ಹೊಂದಿದ್ದ ಪರ್ಷಿಯಾದಲ್ಲಿ ಒಳ್ಳೆ [illegible] ಉಂಟಾಯಿತು. ಅಲ್ಲಿ ಕೆಲವು ಮಂದಿ ಸೇರಿಕೊಂಡು ಶಿರಾಸ್ [illegible] ದಲ್ಲಿರುವಂಥಾ ಬ್ರಿಟಿಷ್ ಮತ್ತು ರಷ್ಯಾದವರ ಮೇಲೆ ಜನಗಳನ್ನು [illegible] ಈಗ ಅವರ ಆಕ್ರಮಣ ಮುರಿದುಹೋಯಿತು. ಪರ್ಷಿ [illegible] ಬ್ರಿಟಿಷ್ ಮತ್ತು ರಷ್ಯಾದವರ ವಿಷಯದಲ್ಲಿ ಧರ್ಮವಾಗಿ ನಡೆದು [illegible] ಬಹಳ ಕುತೂಹಲಪಡುತ್ತಿದಾರೆ. ಅಲ್ಲಿರುವ ಜರ್ಮನಿ ಮತ್ತು [illegible] ಪ್ರಜೆಗಳನ್ನು ಹಿಡಿದು ಸೆರೆಮನೆಯಲ್ಲಿ ಹಾಕಿಕೊಂಡಿರುವರು.

ಬಾಲ್ಕನ್ ಸಂಸ್ಥಾನಗಳಲ್ಲಿ.

[illegible] ಸ್ಥಳಗಳಲ್ಲಿ ನಿಲುಗಡೆ ಇಲ್ಲದ ಕದನಗಳು ನಡೆಯುತ್ತಿರುವವು. [illegible] ಹಿಮ್ಮೆಟ್ಟಿ ದಕ್ಷಿಣದಿಕ್ಕಿಗೆ ಹೊರಟುಹೋಗಬೇಕಾಯಿತು. [illegible] ಬಹಳ ಭಾಗವೆಲ್ಲಾ ಜರ್ಮನಿ ಮತ್ತು ಆಸ್ಟ್ರಿಯಾದವರ ಸ್ವಾಧೀನ [illegible] ಸರ್ಬಿಯಾ ಸೈನ್ಯಗಳು ಉತ್ತರಕ್ಕೆ ಯುದ್ಧಮಾಡುತ್ತಲೇ [illegible] ಹೋಗುತ್ತಿರುವವು. ಸರ್ಬಿಯಾ ಗವರ್ನಮೆಂಟು ಅಲ್ಬೇನಿಯಾದಲ್ಲಿ [illegible] ಎಂಬ ಪಟ್ಟಣಕ್ಕೆ ವರ್ಗವಾಗಲ್ಪಟ್ಟಿದೆ. ಈಗ ಬಲ್ಗೇರಿಯ [illegible] ಯಾದಿಂದ ಮದ್ದು ಗುಂಡನ್ನು ತರಿಸಿಕೊಳ್ಳಲು ಅನುಕೂಲವಾ [illegible] ಜರ್ಮನಿ ಸೈನ್ಯಗಳು [illegible] ಸರ್ಬಿಯಾದಲ್ಲಿ ಹೋಗಿ ಬಲು [illegible] ಅವಕಾಶಕೊಟ್ಟರೆ ಸರ್ಬಿಯಾದ ಕೂಡ ಕರಾರು [illegible] ಜರ್ಮನಿಯವರು ಹೇಳಿ ಕಳುಹಿಸಿದರೆಂದೂ, [illegible] ಅದು ವಿಶೇಷವಾಗಿ ಆಗಲಾರದೆಂದು [illegible] [illegible].

ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು [illegible] ಹೋಗಿ ಸಲೋ[illegible] ಬಹುಭಾಗಗಳಿಂದ [illegible]. ಸರ್ಬಿಯಾದೊಳಗೆ ನುಗ್ಗಿ ಬಲ್ಗೇ[illegible] ನುಗ್ಗಿಹೋಗುತ್ತಲಿ [illegible]. ಬಲ್ಗೇರಿಯಾದವರು ಮೇಲೆ [illegible] ಯುದ್ಧವಾದಾಗ ಫ್ರೆಂಚ್ ಸೈನಿಕರು ಅವರನ್ನು [illegible] ಹಿಮ್ಮೆಟ್ಟಿದರು. ಬಲ್ಗೇರಿಯಾದಲ್ಲಿ 3,50,000 ಸೈನ್ಯವಿದೆ; ಇದರಲ್ಲಿ 1,10,000 ಸೈನ್ಯ ನಷ್ಟವಾಯಿತು. ಅವರು ಹೊಸದಾಗಿ ಸೈನ್ಯವನ್ನು [illegible] ಮಾಡುವುದಕ್ಕೆ ಬಹಳ ಸಾವಕಾಶವಾಯಿತು. [illegible] ಶಸ್ತ್ರದ [illegible] ತುಂಬಿಕೊಂಡಿದಾರೆ [illegible] ಹಿಡಿದು [illegible] ಮಿತ್ರಮಂಡಲಿಯವರಿಗೆ ಅಧಿಕಾರ [illegible].—ಫ್ರೆಂಚರು ತಮ್ಮ [illegible] ರಾಯಭಾರಿಯನ್ನು [illegible] ರಾಜಧಾನಿಯಾದ ಅಥೆನ್ಸ್ ನಗರಕ್ಕೆ ಕಳುಹಿಸಿದ್ದರು. ಬ್ರಿಟಿಷ್ [illegible] ಸೆಕ್ರೆಟರಿ ಲಾರ್ಡ್ ಕಿಚ್ನರ್ ರವರು ಹೋಗಿ ಗ್ರೀಸ್ [illegible] ಅವರ ಮಂತ್ರಿಯನ್ನೂ ಕಂಡು ಅವರುಗಳ ಸಂಗಡ [illegible] ಬಂದರು. ಗ್ರೀಸ್ ದೊರೆಯು ಫ್ರೆಂಚ್ ರಾಯಭಾರಿಗೆ [illegible] ಗ್ರೀಸ್ ಸೈನ್ಯಗಳು [illegible] ಮೇಲೆ [illegible], ಮಿತ್ರಮಂಡಲಿಯವರು ಹೇಳುವ ಪ್ರಕಾರ ನಡೆಯಲು [illegible] ಹೇಳುವಂತೆ ಪ್ರಕಟವಾಗಿದೆ. ಗ್ರೀಸಿನ ಪ್ರಜೆಗಳಾದರೋ [illegible] ಯನ್ನು ವಿಶೇಷ ಉತ್ಸಾಹದಿಂದ ಕಂಡು ಗೌರವವಾದ [illegible] ತಮ್ಮ ರಾಜಧಾನಿಯಲ್ಲಿ ದೀಪೋತ್ಸವಾದಿಗಳನ್ನು ನಡಿಸಿ [illegible] ಗ್ರೀಸ್ ರಾಜ್ಯವು ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದೆ. ಸೈನ್ಯಗಳ [illegible] ಶತ್ರುವಾಗುವುದಕ್ಕಿಂತ ಧನವಂತರ (ಮಿತ್ರಮಂಡಲಿಯವರು) [illegible] ಎಷ್ಟೋ ಮೇಲು ಎಂದು ಗ್ರೀಸಿನ ದೊರೆಯು ಹೇಳಿದಂತೆ [illegible] ಗ್ರೀಸ್ ದೇಶವು ತಟಸ್ಥವಾಗಿಯೇ ಇರಬಹುದೆಂದೂ, ಮಿತ್ರಮಂಡಲಿ [illegible] ಸೈನ್ಯಗಳು ಹೋಗುವುದಕ್ಕೆ ಅನುಕೂಲಪಡಿಸಬಹುದೆಂದೂ ಎಣಿಸಲ್ಪಟ್ಟಿದೆ. [illegible] ಸಂಸ್ಥಾನಗಳಲ್ಲಿ ಈ ಸಲ ಚಳಿಗಾಲವು ಬಹಳ ಬೇಗನೆ ಪ್ರಾರಂಭ [illegible] ಮಂಜು ಸುರಿಯುತ್ತಾ ಬಂದಿದೆ. ಇದರಿಂದ ಯುದ್ಧಕಾರ್ಯಗಳಿಗೂ [illegible] ಅಡಚಣೆಯಾಗಬಹುದು.

[illegible] ಗೆ ಸಹಾಯಮಾಡುವುದಕ್ಕೋಸ್ಕರ ರಷ್ಯಾದವರು 3,00,000 [illegible] 40,000 ಸೈನ್ಯವನ್ನು ಸಿದ್ಧಪಡಿಸಿಕೊಳ್ಳುತ್ತಿದಾ[illegible].

ಇತರ ವಿಷಯಗಳು.

ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ದಿನೇ ದಿನೇ ವಾಸಿಯಾಗುತ್ತಿದೆ. ಈಗ ಅವರು ಅಲ್ಪ ಸ್ವಲ್ಪ ಸಂಚಾರಮಾಡುವಷ್ಟು ಚೈತನ್ಯ ಉಂಟಾಗಿರುವುದು.

ಬ್ರಿಟಿಷ್ ಯುದ್ಧದ ಇಲಾಖಾ ಸೆಕ್ರೆಟರಿ ಲಾರ್ಡ್ ಕಿಚ್ನರ್ ರವರು ಗ್ರೀಸ್ ದೇಶಕ್ಕೆ ಹೋಗಿದ್ದು ಅಲ್ಲಿಂದ ಇಟಲಿಗೆ ಹೋಗಿ ರಾಜಧಾನಿಯಾದ ರೋಮ್ ಪಟ್ಟಣವನ್ನು ತಲಪಿದರು. ಬಳಿಕ ಇಟಲಿ ಸೈನಿಕರು ಯುದ್ಧಮಾಡು ತ್ತಿರುವ ಕಾಳ್ಗಕ್ಕೆ ಹೋಗಿ ಅಲ್ಲಿ ಇಟಲಿ ದೊರೆಯವರನ್ನೂ, ಇಟಲಿ ಸೈನ್ಯಾಧಿಪತಿಯನ್ನೂ ಕಂಡರು. ಅಲ್ಲಿಂದ ಹಿಂತಿರುಗಿ ಮಿಲಾನ್ ಎಂಬ ನಗರಕ್ಕೆ ಬಂದು ಸರ್ವವಸ್ತು ಪ್ರದರ್ಶನಶಾಲೆಯನ್ನು ಬಹು ಶೀಘ್ರದಲ್ಲಿ ನೋಡಿಕೊಂಡು ಟೂರಿನ್ ಪಟ್ಟಣಕ್ಕೆ ಹೋದರು. ಈಗ ಅವರು ಬಹುಶಾ ಇಂಗ್ಲೆಂಡಿಗೆ ವಾಪಸು ಬರುತ್ತಿರಬಹುದು.

ಮಿ|| ವಿನ್ಸ್ಟನ್ ಚರ್ಚಿಲ್ ರವರು ಫ್ರಾನ್ಸ್ ರಣರಂಗಕ್ಕೆ ಹೋಗಿ ಬ್ರಿಟಿಷ್ ಸೈನಿಕರ ಕೂಡ ಕಂದಕಗಳಲ್ಲಿ ಸೇರಿ ಯುದ್ಧಮಾಡುತ್ತಿದಾರೆ.

ಯುದ್ಧಭೂಮಿಯಲ್ಲಿ ಗಾಯಪಟ್ಟವರಿಗೆ ಉಪಚಾರಮಾಡುವಂಥಾ ರೆಡ್ ಕ್ರಾಸ್ ಸೊಸೈಟಿಯವರು 35,000 ಸೈನಿಕರಿಗೆ ಏಕಕಾಲದಲ್ಲಿ ಚಿಕಿತ್ಸೆಮಾಡು ವಂಥಾ 1,000 ಆಸ್ಪತ್ರೆಗಳನ್ನು ಏರ್ಪಡಿಸಿದ್ದಾರೆ. ಗಾಯಪಟ್ಟವರನ್ನು ಯುದ್ಧದ ಸಾಲುಗಳಿಂದ ಆಸ್ಪತ್ರೆಗಳಿಗೆ ಸಾಗಿಸುವುದಕ್ಕೆ ಅವರು 1,000 ಮೋಟರುಗಳನ್ನು ಇಟ್ಟುಕೊಂಡು, ಇದುವರಿಗೆ 7,50,000 ಕಾಯಿಲೆ ಮತ್ತು ಗಾಯಪಟ್ಟವರನ್ನು ಸಾಗಿಸಿರುವರು. ಒಂದೊಂದು ದಿನ 7,000 ಸೈನಿಕರು ಈ ರೀತಿ ಸಾಗಿಸಲ್ಪಟ್ಟರು. ಈ ಸೊಸೈಟಿಯವರಲ್ಲಿ 250 ಮಂದಿ ಸೇವಾಸ್ತ್ರೀಯರೂ (ನರ್ಸುಗಳು) 500 ಗಂಡಸರೂ ಇದ್ದು ಗಾಯಪಟ್ಟವರನ್ನೂ ಕಾಯಿಲೆಯಾದವರನ್ನೂ ಆರೈಕೆ ಮಾಡುತ್ತಾರೆ.

ಗಾಯಪಟ್ಟ ರಷ್ಯಾ ಸೈನಿಕರನ್ನಿಟ್ಟು ಚಿಕಿತ್ಸೆ ಆರೈಕೆಗಳನ್ನು ಮಾಡುವಂಥಾ ಆಸ್ಪತ್ರೆಯನ್ನು ಇಡುವುದಕ್ಕೋಸ್ಕರ [illegible] ಎಂಬ ಬ್ರಿಟಿಷ್ ಸ್ವಾಸ್ಥ್ಯದವರು 1,50,000 ರೂಪಾಯಿ ರಷ್ಯಾದವರಿಗೆ ಕಳುಹಿಸಿಕೊಟ್ಟಿದಾರೆ.

ಆಸ್ಟ್ರೇಲಿಯಾ ಎಂಬ ಬ್ರಿಟಿಷ್ ಸ್ವಾಸ್ಥ್ಯದವರು ಯುದ್ಧಭೂಮಿಗೆ 3,00,000 ಸೈನ್ಯವನ್ನು ಒದಗಿಸುವವರಾಗಿದಾರೆ.

ಲಾರ್ಡ್ ಕಿಚ್ನರ್ ರವರು ಗ್ರೀಸ್ ದೊರೆಯವರಿಗೆ ಗ್ರೇಟ್ ಬ್ರಿಟನ್ನಲ್ಲಿ 40,00,000 ಸೈನ್ಯಗಳು ಸಿದ್ಧವಾಗಿವೆ ಎಂದೂ, ಮುಂದಿನ ಮಾರ್ಚಿ ತಿಂಗಳಿಗೆ ರಷ್ಯಾದವರ ಸೈನ್ಯಗಳು 50,00,000 ಸಿದ್ಧವಾಗುವವೆಂದೂ ತಿಳಿಸಿದರೆ ವರ್ತಮಾನ ಪತ್ರಿಕೆಗಳು ಹೇಳುವವು.

ಫ್ರೆಂಚರು ಯುದ್ಧದ ಖರ್ಚಿಗಾಗಿ ಭಾರೀ ಸಾಲವನ್ನು ಮಾಡುತ್ತಿದಾರೆ. ಸರ್ಕಾರ ಪತ್ರಗಳನ್ನು ಪ್ರಜೆಗಳು ಕೊಂಡುಕೊಳ್ಳುತ್ತಿರುವರು. ಫ್ರೆಂಚ್ ಪ್ರಜೆಗಳು ಒಂದೇ ದಿನ 1,200,00,00,000 (ಸಾವಿರದ ಇನ್ನೂರು ಕೋಟಿ) ರೂಪಾಯನ್ನು ಸರ್ಕಾರ ಖಜಾನೆಗೆ ಜಮಾ ಮಾಡಿ ಸರ್ಕಾರದ ಪ್ರಾಮಿಸರಿ ಪತ್ರಗಳನ್ನು ತೆಗೆದುಕೊಂಡು ಹೋದರು.

ಜರ್ಮನಿಯವರ ಕಡೆ ಯುದ್ಧ ಪ್ರಾರಂಭವಾದಾರಭ್ಯ 45,00,000 ಸೈನ್ಯಗಳು ನಷ್ಟವಾಗಿವೆ ಎಂದೂ, ಈ ಪೈಕಿ 30,00,000 ಸೈನ್ಯಗಳು ಮತ್ತೆ ಸೈನ್ಯಕ್ಕೆ ಸೇರುವ ಹಾಗಿಲ್ಲವೆಂದೂ ಹೇಳಲಾಗಿದೆ. ಜರ್ಮನಿಯವರ ಸೈನ್ಯದಲ್ಲಿ ತಿಂಗಳಿಂದಕ್ಕೆ 2,60,000 ಮಂದಿಯಂತೆ ನಷ್ಟವಾಗುತ್ತಿರುವರು. ಉಡುಪುಗಳನ್ನು ತಯಾರು ಮಾಡುವುದಕ್ಕೆ ಜರ್ಮನಿಯೊಳಗೆ ಹತ್ತಿಯೇ ಇಲ್ಲವಂತೆ. ಇರುವ ಹತ್ತಿಯನ್ನೆಲ್ಲಾ ಕೊಂಡು ಯುದ್ಧಸಾಮಗ್ರಿಗಳ ತಯಾರಿಗಾಗಿ ಉಪಯೋಗಿಸಿಕೊಂಡು ಬಿಟ್ಟಿದಾರೆ.

ಅಮೇರಿಕದಲ್ಲಿರುವ ಹಲವು ಜರ್ಮನಿಯವರು ಅಮೇರಿಕದ ತೀರವಟ್ಟಿ ಗಳಿಂದ ಜರ್ಮನಿಯ ಹಡಗುಗಳಿಗೆ ಬಗೆಬಗೆಯ ಸರಕುಗಳನ್ನು ಸಾಗಿಸಿದರೆಂದು ಅಪರಾಧ ಹೊರಿಸಲ್ಪಟ್ಟು ಕೋರ್ಟಿನಲ್ಲಿ ಮೊಕದ್ದಮೆ ಆಗಿ ವಿಚಾರಣೆಯಾಗುತ್ತಿದೆ. ಜರ್ಮನಿಯವರು ಈ ರೀತಿಯಾಗಿ ಒಪ್ಪಂದದ ಧರ್ಮವನ್ನು ಮೀರಿ ಮಾಡಿದಾರೆ.—ಜರ್ಮನಿಯವರು ರೈಲ್ ರಸ್ತೆಗಳನ್ನೂ ಸೇತುವೆಗಳನ್ನೂ ಸುರಂಗ ಮಾರ್ಗಗಳನ್ನೂ ನಾಶಮಾಡದಂತೆಯೂ, ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳನ್ನು ತಮ್ಮ [illegible] ಸಾಗಿಸಲೊಪ್ಪದಂತೆಯೂ ಅಮೇರಿಕದವರು ಪಹರೆ ಇಟ್ಟು ಕಾಯುತ್ತಿದಾರೆ.—ಲೂಸಿಟೇನಿಯಾ ಹಡಗಿನಲ್ಲಿದ್ದು ನುಳುಗಿ ಸತ್ತುಹೋದ ಪ್ರತಿ ಒಬ್ಬ ಅಮೇರಿಕದ ಪ್ರಜೆಗೂ 15,000 ರೂಪಾಯಿನಂತೆ ಪ್ರತಿಫಲವನ್ನು ಕೊಡುತ್ತೇವೆಂದು ಜರ್ಮನಿಯವರು ಹೇಳಿಕಳುಹಿಸಿದಾರೆಂದು ತಿಳಿಸಲ್ಪಟ್ಟಿದೆ. ಇದನ್ನು ಅಮೇರಿಕದವರು ಒಪ್ಪಲಿಲ್ಲ. ಆ ಹಡಗನ್ನು ಮುಳುಗಿಸಿದ್ದು ತಮ್ಮ ತಪ್ಪೆಂದು ಜರ್ಮನಿಯವರು ಒಪ್ಪಿಕೊಳ್ಳದೆ ಪ್ರತಿಫಲವನ್ನು ಕೊಡುತ್ತೇವೆಂಬ ಮಾತು ಅಮೇರಿಕದವರಿಗೆ ಸಮ್ಮತವಾಗಲಿಲ್ಲ.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ಮೈಸೂರು ಸರ್ಕಾರದ ಗೆಜೆಟ್ಟು ತಲಪಲಿಲ್ಲವಾದ್ದ [illegible] ಗೆಜೆಟ್ ಸಂಗ್ರಹವನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ.

ಮೈಸೂರು ಜ್ಯೋತಿಷ ವಿದ್ವಾನ್ ಸಂವತ್ಕೃಷ್ಣ ಜೋಯಿಸರು ರಚಿಸಿ ರಾಯಲ್ ಪ್ರೆಸ್ಸಿನಲ್ಲಿ ಅಚ್ಚಾಗಿರುವ 916 ನೇ ಇಸವಿ ಹೊಸ ಪಂಚಾಂಗ ಕ್ಯಾಲೆಂಡರು ನಮಗೆ ತಲಪಿದೆ. ಇದರ ಬೆಲೆ 6 ಪೈ ಮಾತ್ರ.

ನಮ್ಮ ಬ್ರಿಟಿಷ್ ರೆಸಿಡೆಂಟರವರು ನೆನ್ನೆ ಸಾಯಂಕಾಲ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು. ಅವರು ಈ ದಿನ ಇಲ್ಲಿಂದ ಕೊಡಗಿಗೆ ಚಿತ್ತೈಸಿ ಅಲ್ಲಿ ಸುಮಾರು ಎರಡು ವಾರಗಳ ತನಕ ಇದ್ದು ಬರುವವರಾಗಿದಾರೆ.

ಮೈಸೂರು ಸಂಸ್ಥಾನದಲ್ಲಿ ನಮ್ಮ ಮಹಾರಾಜರವರ ಮೊದಲನೇ ಪ್ರೈವೇಟ್ ಸೆಕ್ರೆಟರಿಯಾಗಿದ್ದ ಮಿ|| ಇ. ಮೆಕಾನಕಿಯವರನ್ನು ಬೊಂಬಾಯಿ ಗವರ್ನರ್ ರವರು ಕಚ್ಛವಾಡ ಸಂಸ್ಥಾನಗಳ ಬ್ರಿಟಿಷ್ ರೆಸಿಡೆಂಟ್ ಪದವಿಗೆ ನೇಮಕ ಮಾಡಿರುತ್ತಾರೆ.

ಮೊನ್ನೆ ಮಂಗಳವಾರ ಶ್ರೀಮನ್ ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿ ಮಿ|| ಪಿ. ಚಾರ್. ಎ. ಇರ್ವಿನ್ ರವರ ಸಮೇತ ಮೋಟಾರಿನಲ್ಲಿ ಚಾಮರಾಜನಗರದ ಮಾರ್ಗಕ್ಕೆ ಸಂತೆ ಕಡೆಗೆ ಚಿತ್ತೈಸಿದ್ದು ಆ ಸಾಯಂಕಾಲವೇ ವಾಪಸು ದಯಮಾಡಿದರು.

ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ಈ ತಿಂಗಳ 18 ನೇ ತಾರೀಖು ತಿನವೇಲಿಗಾ [illegible] ಜೋಗ್ ಜಲಪಾತವನ್ನು ಪರಾಂಬರಿಸುವುದಕ್ಕೆ ದಯಮಾಡಿ 2-3 ದಿನಗಳಲ್ಲೇ ವಾಪಸು ಚಿತ್ತೈಸು ವರೆಂದು ಕೇಳುತ್ತೇವೆ.

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಕಿಟ್ಟಶೆಟ್ಟರ ಛತ್ರದಲ್ಲಿ ಉಸ್ತುವಾಗುತ್ತಿದ್ದಾಗ ಪಟಾಕಿಗಳು ಕೂಡಿದ್ದ ಗ್ಯಾಲರಿಯು ಮುರಿದು ಬಿದ್ದು ಸುಮಾರು 40 ಜನರಿಗೆ ಪೆಟ್ಟು ಆಯಿತು. ಕೂಡಲೇ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದರು.

ಸುಮಾರು ಒಂದು ವಾರದ ಕೆಳಗೆ ರಾಜಧಾನಿಯಲ್ಲಿ ಶ್ರೀಮದ್ಯುವರಾಜರ ವರ್ಕ್ ಷಾಪ್ ನಲ್ಲಿ ಬಾಗಿಲು ಕಾಯುತ್ತಿದ್ದ ಸಿಪಾಯಿಯು ಬಂದೂಕೂ ಅದರ ಮೇಲೆ ತಗುಲಿಹಾಕಿದ್ದ ಅವನ ರುಮಾಲೂ ಕಳುವಾದವು. ಇನ್ನು ಪತ್ತೆ ಆಗಿಲ್ಲವೆಂದು ಕೇಳುತ್ತೇವೆ.

ಶ್ರೀಮನ್ ಮಹಾರಾಜರವರು ಚಾಮುಂಡಿ ಬೆಟ್ಟದ ಮೇಲೆಯೇ ಕೆಲವು ದಿನಗಳಿಂದ ಇದ್ದುಕೊಂಡು ರಾಜಧಾನಿಗೆ ಬಂದು ಹೋಗುತ್ತಿದಾರೆ. ಅವರು ನಾಳೆ ಭಾನುವಾರ ಮುಡುಕುತೊರೆಗೆ ಚಿತ್ತೈಸಿ ಮಂಟಪಿಂಗ ಪರ್ವತ ಮೊದಲಾದವುಗಳನ್ನು ಪರಾಂಬರಿಸುವರೆಂದು ಕೇಳುತ್ತೇವೆ.

ಈ ಸಲ ಕ್ರಿಸ್ಮಸ್ ಹಬ್ಬದಲ್ಲಿ ಅಂದರೆ ಸುಮಾರು ತಾ. 23 ರಿಂದ ಜನವರಿ ತಾ. 2 ರ ವರೆಗೆ ನಮ್ಮ ಮಹಾರಾಜರವರೂ ಶ್ರೀಮದ್ಯುವರಾಜರವರೂ ನಮ್ಮ ಬ್ರಿಟಿಷ್ ರೆಸಿಡೆಂಟರವರೇ ಮೊದಲಾದ 6-6 ಮಂದಿ ಯೂರೋಪಿಯನ್ ಅತಿಥಿಗಳ ಕೂಡ ಚಾಮರಾಜನಗರದ ತಾಲ್ಲೂಕಿಗೆ ಸೇರಿದ ಜಂಗಲಿನಲ್ಲಿ ಶಿಕಾರಿಗಾಗಿ ದಯಮಾಡುವರೆಂಬ ವರ್ತಮಾನವಿದೆ.

ಮೈಸೂರು ಕೃಷ್ಣರಾಜ ಮೊಹಲ್ಲಾ ಮೆಸರ್ಸ್ ಎಂ. ಎಸ್. ಸಿದ್ದಪ್ಪ ಬ್ರದರ್ಸ್ ಎಂಬ ಪ್ರಸಿದ್ಧ ವರ್ತಕರು ಅವರ ಕಂಪನಿಯ 1916 ನೇ ಇಸವಿಯ ಸಚಿತ್ರ ಕ್ಯಾಲೆಂಡರನ್ನು ಈ ವಾರದ ಪತ್ರಿಕೆಯ ಕೂಡ ನಮ್ಮ ಚಂದಾದಾರರಿಗೆಲ್ಲಾ ರವಾನಿಸುವಂತೆ ಉಚಿತವಾಗಿ ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷಪಟ್ಟು ಇದಕ್ಕಾಗಿ ಅವರನ್ನು ವಂದಿಸುತ್ತೇವೆ. ಇದನ್ನು ಅವರು 6 ಪೈಗೆ 1, 11 ಆಣೆಗೆ 50 ರಂತೆ ಬಿಕರಿ ಮಾಡುವರೆಂದು ತಿಳಿಯುವುದು.

ಒಬ್ಬ ಬಾತ್ಮಿದಾರರಿಂದ.— ಕಳೆದ ತಾ. 24 ನೇ ಬುಧವಾರ ಮೈಸೂರು ಟ್ರೈನಿಂಗ್ ಕಾಲೇಜ್ "ಉಪಾಧ್ಯಾಯರ ಸಂಘ"ದ ಪರವಾಗಿ ಪಂಡಿತ ತರಗತಿಯ ವಿದ್ಯಾರ್ಥಿ ಮಿ|| ಬಿ. ಚನ್ನಕೇಶವಯ್ಯನವರು "ಬಲಾತ್ಕಾರ ವಿದ್ಯಾಭ್ಯಾಸ" ವೆಂಬ ವಿಚಾರವಾಗಿ ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅನೇಕ ದೇಶಗಳ ವಿದ್ಯಾಭ್ಯಾಸ ಕ್ರಮವನ್ನು ಪರಿಶ್ರಮಮಾಡಿಕೊಂಡು ಬಂದಿರುವ ರೆವರೆಂಡ್ ಪಾಲ್ ಚಿನ್ನಪ್ಪನವರು ಅಗ್ರಾಸನವನ್ನು ವಹಿಸಿ ಪ್ರಶಸ್ತವಾದ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ ಎಲ್ಲರೂ ಕೊಂಡಾಡುವಂತೆ ಮಾಡಿದರು.

ಕಳೆದ ಭಾನುವಾರ ಬೆಳಗ್ಗೆ ರಾಜಧಾನಿಯಲ್ಲಿ ಅರಮನೆಯ ಪ್ರೈವೇಟ್ ಸೆಕ್ರೆಟರಿ ಆಫೀಸಿನಲ್ಲಿ ಸುಮಾರು 8,300 ರೂಪಾಯಿನ ಕರೆನ್ಸಿ ನೋಟುಗಳು ಕಳುವಾದವು. ಆಫೀಸ್ ತೃಣಾತಿ ಆವಾನ ರಂಗನಂಬುವನು ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಕರೆಕಲ್ಲು ತಟ್ಟಿ ಪಹರೆಯವನ ಬಳಿ ಇದ್ದ ಪ್ರೈವೇಟ್ ಸೆಕ್ರೆಟರಿ ಆಫೀಸಿನ ಬೀಗದ ಕೈಯನ್ನು ತೆಗೆದುಕೊಂಡು ಬಾಗಿಲು ತೆರೆದು ಒಳಗೆ ಹೋಗಿ ಅಲ್ಲಿದ್ದ ಮ್ಯಾನೇಜರವರ ಹಣದ ಟಿನ್ ಪೆಟ್ಟಿಯನ್ನು ಎತ್ತಿಕೊಂಡು ಬಂದು ಬಾಗಿಲ ಪಹರೆಯವನಿಗೆ ಆ ಪೆಟ್ಟಿಗೆಯನ್ನು ಆಫೀಸ್ ಮ್ಯಾನೇಜರವರು ತರಹೇಳಿ ದಾರೆಂದು ತಿಳಿಸಿ ಎಲ್ಲಿಗೋ ಹೊತ್ತುಕೊಂಡು ಹೋಗಿ ಸುಮಾರು ಅರ್ಧ ಗಂಟೆಯ ಮೇಲೆ ಪೆಟ್ಟಿಗೆಯನ್ನು ವಾಪಸು ತಂದು ಮೊದಲಿನಂತೆಯೇ ಆಫೀಸಿನೊಳಗಿಟ್ಟು ಬೀಗ ಹಾಕಿ ಬೀಗದ ಕೈಯನ್ನು ಪಹರೆಯವನ ವಶಕ್ಕೆ ಕೊಟ್ಟು ಹೊರಟುಹೋದನು. ಸೋಮವಾರ ಮ್ಯಾನೇಜರು ಆಫೀಸಿಗೆ ಹೋಗಿ ನೋಡಿದಾಗ ಪೆಟ್ಟಿಗೆಯ ಬೀಗ ಒಡೆದಿದ್ದದ್ದೂ, ಅದರೊಳಗೆ ಚೀಲದಲ್ಲಿದ್ದ 8,300 ರೂಪಾಯಿನ ಕರೆನ್ಸಿ ನೋಟುಗಳು ಮಾಯವಾಗಿದ್ದದ್ದೂ ಗೊತ್ತಾಯಿತು. ಪೆಟ್ಟಿಗೆಯೊಳಗಿದ್ದ ಭಂಗಾರದ ಕಡಗಾ, ಮೊಹರು ಮಸ್ಕರಿ ಭಂಗಾರದ ಆಭರಣಗಳೆಲ್ಲಾ ಹಾಗೆಯೇ ಇದ್ದುವು. ನೋಟುಗಳ ಚೀಲ ಒಂದೇ ಕಳುವಾಗಿತ್ತು. ಒಡನೆ ಈ ವಿಚಾರವನ್ನು ಪೊಲೀಸಿಗೆ ತಿಳಿಸಿದರು. ಪತ್ತೆ ತನಿಖೆಯು ನಡೆಯುತ್ತಿದೆ. ಮೇಲ್ಕಂಡ ರಂಗನೆಂಬ ಓಲೇಕಾರನು ಎಲ್ಲಿ ಹೋದನೋ ಸಿಕ್ಕ ಇಲ್ಲ. ಅಂಥಾ ಆಫೀಸಿನಲ್ಲಿ ಒಂದು ಕಬ್ಬಿಣದ ಪೆಟ್ಟಿಗೆ ಇರದೆ ಹೋದದಲ್ಲಾ ಎಂದು ಪ್ರಜೆಗಳು ಆಶ್ಚರ್ಯಪಡುತ್ತಾರೆ.

ಶ್ರೀಮನ್ ಮಹಾರಾಜರವರು ಪರಾಂಬರಿಸಿದ್ದು.

ಮೈಸೂರು ಜೈನ್ ಬೋರ್ಡಿಂಗ್ ಹೋಮ್.

ಕಳೆದ ತಾ. 25 ನೇ ಗುರುವಾರ ಬೆಳಗ್ಗೆ ಸುಮಾರು 8 ಗಂಟೆಗೆ ಶ್ರೀಮನ್ ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿ ಮಿ|| ಪಿ. ಚಾರ್. ಎ. ಇರ್ವಿನ್ ರವರ ಸಮೇತ ಮೈಸೂರು ಬೆಂಗಳೂರು ಪೇಟೆಯ ಹಳೇ ಪೋಸ್ಟ್ ಆಫೀಸ್ ಬೀದಿಯಲ್ಲಿರುವ ಜೈನ್ ವಿದ್ಯಾರ್ಥಿಗಳ ಬೋರ್ಡಿಂಗ್ ಹೋಮಿಗೆ ಮೋಟರಿನಲ್ಲಿ ದಯಮಾಡಿದರು. ಈ ನಿಲಯವನ್ನು ಸ್ಥಾಪಿಸಿ ಉದಾರವಾಗಿ ನಡಿಸುತ್ತಾ ಬಂದಿರುವ ಮಿ|| ಎಂ. ಎಲ್. ವರ್ಧಮಾನಯ್ಯನವರೂ ಜೈನಮಂಡಲಿಯ ಪ್ರಮುಖರೂ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಹೋಮಿನ ಮುಂಭಾಗದಲ್ಲಿ ಕಾದಿದ್ದು ಮಹಾಸ್ವಾಮಿಯವರನ್ನು ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸಿದರು. ಮುಂದಿನ ಮಾರ್ಗದ ಉಪ್ಪರಿಗೆ ಎರಡು ಕಡೆಗಳಲ್ಲೂ ಬೋರ್ಡಿಂಗಿನಲ್ಲಿರುವ ಜೈನ ವಿದ್ಯಾರ್ಥಿಗಳು ಅಂದವಾದ ಉಡುಪುಗಳಲ್ಲಿ ಸಾಲಾಗಿ ನಿಂತು ಜಯಧ್ವನಿಯಿಂದ ಶ್ರೀಮನ್ ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿದರು. ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದ ಮಂದಿರದಲ್ಲಿ ಶ್ರೀಮನ್ ಮಹಾರಾಜರವರು ಶ್ರೀಸ್ವಾಸನದಲ್ಲಿ ಮಂಡಿಸಿದ ಬಳಿಕ ಬಾಲಕರು ಮಹಾರಾಜರವರ ಶ್ರೇಯಃಪ್ರಾರ್ಥನಾರೂಪವಾದ ನಾಡು ಪದ ಶ್ಲೋಕಾದಿಗಳನ್ನು ಹೇಳಿದರು. ಮಿ|| ವರ್ಧಮಾನಯ್ಯನವರು ಆ ಮಂದಿರದ ಪೂರ್ವೋತ್ತರ ವೃತ್ತಾಂತವನ್ನೂ ಅಲ್ಲಿ ನಡೆಯುವ ಪರಹಿತ ಕಾರ್ಯಗಳನ್ನೂ ಕುರಿತು ಸಂಕ್ಷೇಪವಾಗಿ ವಿವರಿಸಿ ಮಹಾಸ್ವಾಮಿಯವರಿಗೆ ಅರಿಕೆಮಾಡಿದರು. ಮಹಾರಾಜರವರು ನಿಲಯದ ಎಲ್ಲಾ ಭಾಗಗಳನ್ನೂ ಚಿತ್ತೈಸಿ ಸಾವಧಾನದಿಂದ ಅಲ್ಲಿ ನಡೆಯುವ ಪುಸ್ತಕ ಕೆಲಸಗಳನ್ನು ನೋಡಿ ಹರ್ಷಪಟ್ಟು ಉದಾರವಾಗಿ ನಡಿಸುತ್ತಿರುವ ಮಿ|| ವರ್ಧಮಾನಯ್ಯನವರ ಶ್ರೇಷ್ಠವಾದ ಕಾರ್ಯವನ್ನು ನೋಡಿ ತೃಪ್ತಿಪಟ್ಟುಕೊಂಡರು. ಬಳಿಕ ಪುಷ್ಪಫಲಾದಿಗಳು ಒಪ್ಪಿಸಲ್ಪಟ್ಟವು. ಬಾಲಕರು ಜಯಧ್ವನಿಮಾಡುತ್ತಿರುವಲ್ಲಿ ಶ್ರೀಮನ್ ಮಹಾರಾಜರವರು ಮೋಟರಿನಲ್ಲಿ ಕುಳಿತು ತೆರಳಿದರು. ಆ ದಿನವೇ ಮಹಾಸ್ವಾಮಿಯವರು ಈ ಬೋರ್ಡಿಂಗ್ ಹೋಮಿನ ಉಪಯೋಗಕ್ಕೋಸ್ಕರ 200 ರೂಪಾಯನ್ನು ಬಹುಮಾನವಾಗಿ ದಯಪಾಲಿಸಿದರು. ಜೈನಮಂಡಲಿಯ ಬಾಲಕರನ್ನು ಅಭಿವೃದ್ಧಿಗೆ ತರಬೇಕೆಂಬ ಕುತೂಹಲದಿಂದ ಮಿ|| ವರ್ಧಮಾನಯ್ಯನವರು ಮಾಡಿರುವ ಈ ಕಾರ್ಯವು ಶಾಶ್ವತವಾಗಿಯೂ ಶ್ರೇಯಸ್ಕರವಾಗಿಯೂ ಪರಿಣಮಿಸಲೆಂದೂ, ವಿದ್ಯಾರ್ಥಿಗಳು ಅದರ ಪ್ರಯೋಜನದ ಫಲವನ್ನು ಹೊಂದಿ ಅಭಿವೃದ್ಧಿಗೆ ಬರುವಂತಾಗಲೆಂದೂ ಹಾರೈಸುತ್ತೇವೆ.

ಮೈಸೂರು ಪಂಚಮ ಬೋರ್ಡಿಂಗ್ ಸ್ಕೂಲು.

ನಮ್ಮ ಶ್ರೀಮನ್ ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿಯವರ ಕೂಡ ಮೈಸೂರು ನಜರಬಾದಿನಲ್ಲಿರುವ ಸೆಂಟ್ರಲ್ ಪಂಚಮ ಬೋರ್ಡಿಂಗ್ ಸ್ಕೂಲಿಗೆ ತಾ. 27 ನೇ ಶನಿವಾರ ಬೆಳಗ್ಗೆ ಸುಮಾರು 8 ಗಂಟೆ ಸಮಯದಲ್ಲಿ ದಯಮಾಡಿ, ಅಲ್ಲಿ ಪಂಚಮ ಹುಡುಗರು ಬೇಸೆ ಹುಲ್ಲಿನಿಂದ ಮಂದಲಿಗೆಗಳನ್ನು ತಯಾರುಮಾಡುವುದನ್ನೂ, ಪಿಟ್ ಲೂಮ್ ಮತ್ತು ಫ್ರೇಂ ಲೂಮುಗಳಿಂದ ತರತರವಾದ ಬಟ್ಟೆಗಳನ್ನು ನೇಯುವುದನ್ನೂ, ಉತ್ತಮವಾದ ಚರ್ಮದಿಂದ ತರತರವಾದ ಪಾದರಕ್ಷೆಗಳನ್ನು ತಯಾರುಮಾಡುವುದನ್ನೂ, ವಿಧವಿಧವಾದ ತರಕಾರಿ ಪೈರುಗಳನ್ನು ಕ್ರಮವಾಗಿ ಬೆಳೆಯುವ ವಿಧಾನವನ್ನೂ ಸಾವಧಾನದಿಂದ ಪರಾಂಬರಿಸಿ, ಬಳಿಕ ಸ್ಕೂಲ್ ಹಾಲಿಗೆ ಚಿತ್ತೈಸಿ ಅಲ್ಲಿ ಹುಡುಗರ ಎಕ್ಸರ್ಸೈಜ್ ಬುಕ್ಕುಗಳು, ಪ್ರಕೃತಿ ವಸ್ತುಗಳ ಮೇಲೆ ಬರೆದಿರುವ ಪೆನ್ಸಿಲ್ ಚಿತ್ರಗಳು, ತೋಟದಲ್ಲಿ ಬೆಳೆಯುವ ಪೈರುಗಳ ವಿಷಯವಾಗಿ ಹುಡುಗರು ಬರೆದಿರುವ ಬರವಣಿಗೆಗಳು, ಇತ್ಯಾದಿ ಆ ದಿನಗಳನ್ನು ಪರಾಂಬರಿಸಿದರು. ತರುವಾಯ ಹುಡುಗರು ಕಾವ್ಯಗಳನ್ನು ರಾಗದಿಂದ ಓದಿದರು. ಮಹಾಸ್ವಾಮಿಯವರ ಶ್ರೇಯಃಪ್ರಾರ್ಥನಾರೂಪವಾದ ಹಾಡನ್ನು ಹಾಡಿದರು. ಇಷ್ಟಾದ ಬಳಿಕ ಮಹಾಸ್ವಾಮಿಯವರು ಸ್ಕೂಲಿನ ಮತ್ತು ಕೈಗಾರಿಕೆಗಳ ಫಲಿತಾಂಶವನ್ನೂ, ಹುಡುಗರ ಅನುಕೂಲ್ಯಗಳನ್ನೂ ವಿಚಾರಿಸಿ ಬಹಳ ಸಂತೋಷಪಟ್ಟುಕೊಂಡು ಚಿತ್ತೈಸಿದರು. ಮಹಾಸ್ವಾಮಿಯವರು ಈ ಸ್ಕೂಲಿಗೆ ದಯಮಾಡಿಸಿ ಇಲ್ಲಿಯ ಏರ್ಪಾಡುಗಳನ್ನೆಲ್ಲಾ ವಿವರವಾಗಿ ಇಷ್ಟೊಂದು ಸಾವಧಾನದಿಂದ ಪರಾಂಬರಿಸಿದ್ದನ್ನು ನೋಡಿದರೆ ಪ್ರಭುಗಳಿಗೆ ಈ ನಿಕೃಷ್ಟ ಜಾತಿಯ ಜನಗಳ ಮೇಲಿರುವ ಕನಿಕರವೂ, ಇವರ ಅಭಿವೃದ್ಧಿ ವಿಷಯದಲ್ಲಿರುವ ಆಸಕ್ತಿಯೂ ವ್ಯಕ್ತವಾಗುತ್ತದೆ. ಸೆಕ್ರೆಟರಿಯವರಾದ ಮಿ|| ಎಂ. ವೆಂಕಟಸುಬ್ಬಯ್ಯನವರು ಈ ಸ್ಕೂಲಿನ ಅಭಿವೃದ್ಧಿಗಾಗಿ ಮಾಡುತ್ತಿರುವ ಕಾರ್ಯಗಳು ತುಂಬಾ ಪ್ರಶಂಸನೀಯವಾಗಿಯೂ, ಪ್ರೋತ್ಸಾಹಕರವಾಗಿಯೂ ಇರುತ್ತವೆ.

ಒಂದು ವಿದ್ಯಾಭಿವೃದ್ಧಿಯ ಮೀಟಿಂಗು.

ಚನ್ನಪಟ್ಟಣ ತಾಲ್ಲೂಕು ಕೆಬ್ಬಹಳ್ಳಿ ಗ್ರಾಮದಲ್ಲಿ ನವಂಬರ್ ತಾ. 25 ರಲ್ಲಿ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಮೇಲ್ಕಂಡ ಸಭೆ ಸೇರಿತ್ತು. ಸದರಿ ಸಭೆಗೆ ಸರ್ಕಲ್ ಇನ್‌ಸ್ಪೆಕ್ಟರ್ ಮ|| ಬಿ. ದಾಸಪ್ಪನವರು ಗ್ರಾಮಸ್ಥರ ಕೋರಿಕೆಯಂತೆ ದಯವಿಟ್ಟು ಅಗ್ರಾಸನವನ್ನು ವಹಿಸಿದ್ದರು. ಈ ಸ್ಕೂಲಿನ ವಿಷಯದಲ್ಲಿ ತುಂಬಾ ಆಸಕ್ತಿಯುಳ್ಳ ನಮ್ಮ ಅಮಲ್ದಾರ್ ಮ|| ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರ್ರವರು, ಶೇಕ್‌ದಾರ್ರು, ಸ್ಯಾನಿಟರಿ ಇನ್‌ಸ್ಪೆಕ್ಟರು, ಟ್ಯಾಂಕ್ ಇನ್‌ಸ್ಪೆಕ್ಟರು, ವಿದ್ಯಾ ಇಲಾಖಾ ಮ|| ಬಾಪೂರಾಯರು, ಇತರ ಅಕ್ಕಪಕ್ಕ ಗ್ರಾಮಗಳ ಜನಗಳು ಸಹ ಬಂದು ಸೇರಿದ್ದರು. ವಿದ್ಯೆಯಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮ|| ಉಪಾಧ್ಯ ರೇವಣ್ಣನವರು ಹೇಳಿದರು. ಸ್ಕೂಲ್ ಅಭಿವೃದ್ಧಿ ವಿಷಯವಾಗಿ ಕಮಿಟಿ ಮೆಂಬರುಗಳ ಪರವಾಗಿ ಮ|| ಚಿಕ್ಕಪುಟ್ಟೇಗೌಡ್ರು ಹೇಳಿದ್ದನ್ನು ಕೇಳಿ ಅಗ್ರಾಸನಾಧಿಪತಿಗಳೂ ಸಭೆಯವರು ಸಹ ಬಹಳ ಸಂತೋಷಪಟ್ಟರು. ಈ ವರ್ಷ ಲೋ. ಸೆ. ಪರೀಕ್ಷೆಯಲ್ಲಿ ತೇರ್ಗಡೆಯಾದ ನಾಲ್ಕು ಜನ ವಿದ್ಯಾರ್ಥಿಗಳಿಗೂ ಸಭಾಧ್ಯಕ್ಷರು ಸರ್ಟಿಫಿಕೇಟುಗಳನ್ನು ಕೊಟ್ಟ ನಂತರ ಗ್ರಾಮಸ್ಥರು ಕೇಳಿಕೊಂಡಂತೆ ಹೊಸದಾಗಿ ಕಟ್ಟಬೇಕಾಗಿರುವ ಸ್ಕೂಲ್ ಕಟ್ಟಡವನ್ನು ಜಾಗ್ರತೆ ನಾಲ್ಕು ಕೊಠಡಿಯುಳ್ಳಂತೆ ಕಟ್ಟಿಸಿಕೊಡುತ್ತೇವೆಂದೂ, ಒಂದು ಗರಲ್ಸ್ ಸ್ಕೂಲ್ ಕೊಡುತ್ತೇವೆಂದೂ, ಹಾಲಿ ಇರುವ ಹೆ. ಹೆಚ್. ಶ್ರೀನಿವಾಸರಾಯರು ಈ ಸ್ಕೂಲಿನ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸಿ ಸ್ಕೂಲನ್ನು ಅಭಿವೃದ್ಧಿಗೆ ತಂದಿರುತ್ತಾರೆಂದೂ ಅಪ್ಪಣೆ ಕೊಡಿಸಿ ನಂತರ ಜನಗಳೆಲ್ಲಾ ತಿಳಿಯುವಂತೆ ಒಗ್ಗಟ್ಟಿನ ವಿಷಯದಲ್ಲಿ ಬಹಳ ಸ್ವಾರಸ್ಯವುಳ್ಳ ಉಪನ್ಯಾಸವನ್ನು ಹೇಳಿದರು. ನಮ್ಮ ಅಮಲ್ದಾರ್ರು ವಿದ್ಯಾ ವಿಷಯದಲ್ಲಿಯೂ, ಗ್ರಾಮಾಭಿವೃದ್ಧಿ ವಿಷಯದಲ್ಲಿಯೂ ಬಹಳವಾಗಿ ಜನಗಳಿಗೆ ತಿಳುವಳಿಕೆ ಕೊಟ್ಟ ನಂತರ ಬ್ರಿಟಿಷ್ ಸಾರ್ವಭೌಮರಿಗೂ, ನಮ್ಮ ಮಹಾರಾಜರವರಿಗೂ ಆಯುರಾರೋಗ್ಯಗಳನ್ನು ಬಯಸಿ ಸಭೆಯು ಉಪಸಂಹರಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ 20 ನೇ ತಾ ಶನಿವಾರ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಜಮಾ ಖರ್ಚು ಮುಂತಾದ ಲೆಕ್ಕಗಳೂ, ಆಡಿಟರ ರಿಪೋರ್ಟೂ ಓದಿ ಪ್ಯಾಸ್ ಮಾಡಿದ ಮೇಲೆ ಮ|| ಎಚ್. ಸೀತಾರಾಮಯ್ಯನವರು ಬಾಡಿಗೆ ಗಾಡಿಗಳನ್ನೂ ಅವುಗಳಿಗೆ ಕಟ್ಟುವ ಕುದುರೆ ಮತ್ತು ಎತ್ತುಗಳನ್ನೂ ತನಿಖೆ ಮಾಡುವುದಕ್ಕೆ ನೇಮಕವಾಗಿರುವ ಇನ್‌ಸ್ಪೆಕ್ಟರಿಗೆ ಆ ಕೆಲಸವೇ ಗೊತ್ತಿಲ್ಲವೆಂದೂ, ಸರಿಯಾದ ಯೋಗ್ಯತೆಯುಳ್ಳವನನ್ನು ನೇಮಿಸಬೇಕೆಂದೂ, ಇಲ್ಲವಾದರೆ ಗಾಡಿಗಳಲ್ಲಿ ಕುಳಿತು ತಿರುಗುವ ಪ್ರಜೆಗಳಿಗೂ, ಮೂಗು ಪ್ರಾಣಿಗಳಿಗೂ ಅಪಾಯ ಸಂಭವಿಸುವುದು ತಪ್ಪುವುದಿಲ್ಲವೆಂದೂ ಸೂಚಿಸಿದರು. ಡಿಸೆಂಬರ್ ಆಖೈರಾದ ಮೇಲೆ ಸರಿಪಡಿಸುತ್ತೇವೆಂದು ಪ್ರೆಸಿಡೆಂಟರು ಸಮಾಧಾನ ಹೇಳಿದರು.—ಕುರಿ ಮತ್ತು ದನಗಳ ಮಿಸಾಟ್‌ಖಾನೆಯಲ್ಲಿ ಬೀಳುವ ರಕ್ತವನ್ನು ವರುಷಕ್ಕೆ 30 ರೂಪಾಯಿಗೆ ಚೌದ್ರಿ ಅಬ್ದುಲ್ ಅಜೀಜ್ ಎಂಬುವರಿಗೆ ಮೂರು ವರುಷ ಕಂಟ್ರಾಕ್ಟು ಕೊಡಬಹುದೆಂದು ಒಪ್ಪಲಾಯಿತು.—ರಾಜಧಾನಿಯಲ್ಲಿ ಸ್ಮಶಾನಗಳಿಗಾಗಿ ಜಮೀನುಗಳನ್ನು ಕೊಂಡುಕೊಂಡದ್ದಕ್ಕೆ ಜಾಸ್ತಿ ರೂ. 912-15-0 ಯನ್ನು ಕೊಡಬಹುದೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.—ಸಯ್ಯಾಜಿರಾವ್ ರಸ್ತೆಯಲ್ಲಿರುವ ವಿಕ್ಟೋರಿಯಾ ಗರಲ್ಸ್ ಸ್ಕೂಲಿನ ಹಿಂಭಾಗದ ಸ್ವಲ್ಪ ಖಾಲಿ ನಿವೇಶನದಲ್ಲಿ ಕಚರಾ ಗುಂಡಿಗೆ ಬೇಕಾಗುವಷ್ಟನ್ನು ಉಳಿಸಿಕೊಂಡು ಬಾಕೀದನ್ನು ಆ ಸ್ಕೂಲಿನ ಆವರಣದೊಳಕ್ಕೆ ಸೇರಿಸಿಕೊಳ್ಳುವಂತೆ ಉಚಿತವಾಗಿ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ರಾಜಧಾನಿಯ ಉತ್ತರ ಪಾರ್ಶ್ವದಲ್ಲಿರುವ ಪ್ಲೇಗ್ ಆಸ್ಪತ್ರೆಯನ್ನು ಶ್ರೀರಂಗಪಟ್ಟಣದ ರಸ್ತೆ ಬಳಿ ಕಟ್ಟುವುದಕ್ಕೆ ಬೇಕಾಗುವ ಖರ್ಚನ್ನು ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕೆಂದು ಸರ್ಕಾರದವರು ಬರೆದಿದ್ದರು. ಮೆಂಬರುಗಳು ಈ ವಿಚಾರವನ್ನು ಚರ್ಚಿಸಿ ಕಡೆಗೆ ಆ ಕ್ಯಾಂಪುಗಳನ್ನು ಅಲ್ಲಿ ಕಟ್ಟಿಸಿದವರು ಮ್ಯುನಿಸಿಪಾಲಿಟಿಯವರಲ್ಲವೆಂದೂ, ಅದನ್ನು ಕಿತ್ತು ಹಾಕಿಸಿದವರೂ ಮ್ಯುನಿಸಿಪಾಲಿಟಿಯವರಲ್ಲವೆಂದೂ, ಅದು ಅಲ್ಲಿ ಇದ್ದದ್ದರಿಂದ ಪ್ರಜೆಗಳಿಗೆ ಯಾವ ಅನನುಕೂಲವೂ ಆಗುತ್ತಿರಲಿಲ್ಲವೆಂದೂ, ಆದಕಾರಣ ಈಗ ಹೊಸದಾಗಿ ಕಟ್ಟುವ ಖರ್ಚನ್ನು ಮ್ಯುನಿಸಿಪಾಲಿಟಿಯ ಮೇಲೆ ಹೊರಿಸಕೂಡದೆಂದೂ ಸರ್ಕಾರಕ್ಕೆ ತಿಳಿಸುವಂತೆ ತೀರ್ಮಾನ ಮಾಡಿದರು.—ದೊಡ್ಡ ಕೆರೆಯೊಳಗೆ ಏರಿ ಅಂಚುಗಳಲ್ಲಿ ಅಂತರಗಂಗೆ ಸತ್ತೆ ಮೊದಲಾದವ್ಯಾವೂ ಇಲ್ಲದಂತೆ ಆಗಾಗ್ಗೆ ಶೋಧಿಸಿ ತೆಗೆದುಹಾಕುವುದಕ್ಕೆ ತಿಂಗಳಿಗೆ 40 ರೂಪಾಯಿಗೆ ಏನಾದರು ಸಿಬ್ಬಂದಿ ಏರ್ಪಾಟು ಮಾಡಿಕಬೇಕೆಂದೂ, ಅದರ ಪ್ರಾರಂಭದ ಸಾಮಾನು ಮುಂತಾದದಕ್ಕೆ 30 ರೂಪಾಯಿ ಖರ್ಚು ಮಾಡಬಹುದೆಂದೂ ಗೊತ್ತುಮಾಡಿದರು.—ಪ್ಲೇಗ್ ಆಸ್ಪತ್ರೆಗೆ ರೋಗಿಗಳ ಹಾಸಿಗೆ ಉಡುಪು ಮುಂತಾದದನ್ನು ಸಿದ್ಧಪಡಿಸಿಟ್ಟುಕೊಳ್ಳುವುದಕ್ಕೆ 600 ರೂಪಾಯಿ ಖರ್ಚು ಮಾಡಬಹುದೆಂದು ಮ್ಯಾನೇಜಿಂಗ್ ಕಮಿಟಿಯವರು ಮಾಡಿದ್ದ ಶಿಫಾರಸನ್ನು ಮೆಂಬರುಗಳು ಒಪ್ಪಿಕೊಂಡರು.—ಸೊಳ್ಳೆಗಳ ಆಶ್ರಯಸ್ಥಾನಗಳನ್ನು ಎಲ್ಲಾ ಮೊಹಲ್ಲೆಗಳಲ್ಲೂ ಹುಡುಕಿ, ಸೊಳ್ಳೆಗಳು ಬೆಳೆಯದಂತೆ ಮಾಡುವುದಕ್ಕೆ ನೇಮಕ ಮಾಡಿರುವ ಸಿಬ್ಬಂದಿಯನ್ನು ಮಾರ್ಚಿ ಆಖೈರು ವರೆಗೆ ಇಟ್ಟಿರಬಹುದೆಂದು ಒಪ್ಪಲಾಯಿತು.—ಕುರಿಗೆರೆ ಆಸ್ಪತ್ರೆಯಲ್ಲಿ ದಿನವಹಿ 300 ಮಂದಿಗಿಂತಲೂ ಹೆಚ್ಚು ರೋಗಿಗಳು ಔಷಧಕ್ಕೆ ಹೋಗೋಣವರಿಂದ ಒಬ್ಬ ಕಂಪೌಂಡರು ಅಷ್ಟು ಜನರಿಗೆ ಔಷಧ ಮಾಡಿಕೊಡುವುದು ಪ್ರಯಾಸವೆಂದು ಮೆಂಬರುಗಳು ಇನ್ನೊಬ್ಬ ಕಾಂಪೌಂಡರನ್ನು ನೇಮಿಸುವುದು ಅವಶ್ಯವೆಂಬುದಾಗಿ ಶಿಫಾರಸ್ಸು ಮಾಡಿದಾರೆ.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಸರಹದ್ದಿನೊಳಗಿರುವ ಜಮೀನುಗಳ ರೆವಿನ್ಯೂ ಕಂದಾಯವನ್ನು—ಇದು ಸುಮಾರು ಸಾಲಿಯಾನಾ 3,000 ರೂಪಾಯಿ ಆಗುತ್ತದೆ—ಮ್ಯುನಿಸಿಪಾಲಿಟಿಗೆ ವಹಿಸುವಂತೆ ಸರ್ಕಾರದವರನ್ನು ಮತ್ತೆ ಕೇಳಿಕೊಳ್ಳಬೇಕೆಂದು ಮ|| ಅಂಬಳೆ ಅಣ್ಣಯ್ಯ ಪಂಡಿತರು ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿ ಆ ರೀತಿ ತೀರ್ಮಾನ ಮಾಡಿದಾರೆ.—ಮಂಡಿ ಮೊಹಲ್ಲೆಯಲ್ಲಿರುವ ಹಕೀಮ್ ಅಲಿ ಪೀರ್ ಸಾಹೇಬರು ತಮಗೆ ಮ್ಯುನಿಸಿಪಾಲಿಟಿಯಿಂದ ಖಾವತಿ ಆಗುವ ಗ್ರಾಂಟನ್ನು 20 ರೂಪಾಯಿಗೆ ಹೆಚ್ಚಿಸಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಆ ರೀತಿ ಕೊಡಬಹುದೆಂದು ಗವರ್ನ್‌ಮೆಂಟಿಗೆ ಶಿಫಾರಸ್ಸು ಮಾಡಿದಾರೆ.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು. ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

—ಎಡಿ.]

ಕರೆಸ್‌ಪಾಂಡೆನ್ಸ್.

ಚಿಕ್ಕಜಾಜೂರು—ಚಿತ್ರದುರ್ಗ ರೈಲ್ವೆ.

ಅಯ್ಯಾ,—ಚಿಕ್ಕಜಾಜೂರಿಂದ ಚಿತ್ರದುರ್ಗಕ್ಕೆ ರೈಲು ಸರ್ವೆ ಸುದಾ ಆಗಿ ಎಷ್ಟೋ ದಿನಗಳಾದವು. ಈಗ ಇಲ್ಲಿಗೆ ದಯಮಾಡಿರುವ ಡೆಪ್ಯುಟಿ ಕಮೀಷನರ್ ಮ|| ಬಾಲಸುಂದರಂ ಅಯ್ಯರವರೂ, ಅಮಲ್ದಾರ್ ಮ|| ಕೇಶವಯ್ಯನವರೂ ದಯವಿಟ್ಟು ಜನರಿಗೆಲ್ಲಾ ಪ್ರೋತ್ಸಾಹಪಡಿಸಿ ಬಹು ಜಾಗ್ರತೆಯಿಂದ ರೈಲು ಬರಮಾಡಬೇಕೆಂದು ಮಾಡುವ ಸಹಾಯವನ್ನು ನೋಡಿ ಎಲ್ಲರೂ ಆನಂದಪಡುತ್ತಲಿರುವರು. ನಮ್ಮ ಸುಬೇದಾರ್ ಮ|| ಕೇಶವಯ್ಯನವರು ದಯವಿಟ್ಟು ಈ ಗ್ರಾಮದ ಕೆಲವು ರೈತರುಗಳಿಗೆ ಪ್ರೋತ್ಸಾಹಪಡಿಸಿ ಕೊಡಿಸಿದ್ದು ಲಕ್ಷ ರೂಪಾಯಿ ಮೇಲ್ಪಟ್ಟಿದೆ. ಶ್ರೀ ಚನ್ನಯ್ಯಾದ್ರಿ ಬೃಹನ್ ಮಠದ ಮುರಿಘರಾಜೇಂದ್ರ ಸ್ವಾಮಿಗಳವರು 10 ಸಾವಿರದ ಒಂದು ನೂರು ರೂಪಾಯಿ ಚಂದಾ ಕೊಟ್ಟು ಇದಾರೆ. ಡೆಪ್ಯುಟಿ ಕಮೀಷನರೂ, ಸುಬೇದಾರರೂ, ಎಲ್ಲರೂ ಹರ್ಷಿತರಾದರು ಮ|| ಗಳಾದ ಅಡ್ವೊಕೇಟ್ ಅನಂತರೆಟ್ಟರು 7 ಸಾವಿರ ರೂಪಾಯಿ, ಅಡ್ವೊಕೇಟ್ ಶ್ಯಾಮಣ್ಣನವರು 3 ಸಾವಿರ ರೂಪಾಯಿ, ಪಂಡ್ರಳ್ಳಿ ಸಾಹುಕಾರ್ ನಂಜುಂಡಪ್ಪನವರು 6 ಸಾವಿರ ರೂಪಾಯಿ ಹಾಕಿದಾರೆ. ಗ್ರಾಮ ಗ್ರಾಮದ ರೈತರು ಕೂಡ ಒಂದೊಂದು ಗ್ರಾಮಕ್ಕೆ 7-8 ಸಾವಿರ ರೂಪಾಯಿ ಹಾಕಿದಾರೆ. ಚಳ್ಳಕೆರೆ, ಹಿರಿಯೂರು, ಚಿತ್ರದುರ್ಗ ಮೊದಲಾದ ಎಲ್ಲಾ ಕಡೆಗಳಿಂದಲೂ ಬೇಸಗೆ ಕಾಲದಲ್ಲಿ ದಿನವಹಿ ನೂರಾರು ಹತ್ತಿ ಗಾಡಿಗಳು 6-7 ಗಾವುದ ದಾವಣಗೆರೆಗೆ ಹೋಗಬೇಕಾದರೆ ದಾರಿಯಲ್ಲಿ ಗಾಡಿ ಮುರಿದು ಎತ್ತುಗಳು ಬಿದ್ದುಹೋಗುತ್ತಾ ಇದ್ದವು. ರೈಲ್ ಆದರೆ ಈ ಕಷ್ಟಗಳೆಲ್ಲಾ ನಿವೃತ್ತಿಯಾಗುತ್ತವೆ. ರೈಲು ಬಹು ಜಾಗ್ರತೆಯಾಗಿ ಪರಿಷ್ಕಾರಮಾಡುವರೆಂಬದಾಗಿ ಎಲ್ಲರೂ ನಿರೀಕ್ಷಿಸಿಕೊಂಡಿದ್ದೇವೆ.

ಬಸಲಿಂಗಪ್ಪ, ಚಿತ್ರದುರ್ಗ.

ಕೋಲಾರದ ವಿದ್ಯಮಾನಗಳು

ಅಯ್ಯಾ,—ಹುಜೂರು ಜಮಾಬಂದಿ ಪ್ರಾರಂಭಿಸಿದಾರೆ. ಸಿಬ್ಬಂದಿಯವರಿಗೆ ಇದು ಪರಮಸಂತೋಷ. ಅವರ ಕುಟುಂಬದವರಿಗೆ ಮುಕ್ತ್ಯಾಸಂತೋಷ. ಜಮಾಬಂದಿಯಾಗುವ ಗ್ರಾಮಗಳಲ್ಲೋ ಗ್ರಾಮಸ್ಥರಿಗೆ ಗೋಳಾಟ. ಜಮಾಬಂದಿಯಿಂದ ಯಾವ ಪುರುಷಾರ್ಥವೋ ತಿಳಿಯದು.

ಸಂಪದಭಿವೃದ್ಧಿ ಸಮಾಜ ಪ್ರಾರಂಭವಾದಂದಿನಿಂದ ಜನಗಳ ಉತ್ಸಾಹವೂ ಚಟುವಟಿಕೆಯೂ ದಿನೇ ದಿನೇ ಹೆಚ್ಚುತ್ತಿದೆ. ಕೆಲವು ದಿನಗಳ ಹಿಂದೆ ಮಹಮ್ಮದೀಯರ ಸಂಘವೂ, ಮಹಮ್ಮದೀಯರ ಕೋಆಪರೇಟಿವ್ ಸಂಘವೂ ಸ್ಥಾಪಿಸಲ್ಪಟ್ಟವು. ನೆನ್ನೆ ಮ|| ಗಿರಿಮಾಜಿರಾಯರೇ ಮೊದಲಾದವರು ಜಿನೀಂದಾರರ ಸಂಘವನ್ನು ಸ್ಥಾಪನೆಮಾಡಿದರು. ಅನೇಕ ದೊಡ್ಡ ಮನುಷ್ಯರು ಹಾಜರಿದ್ದರು. ಮ|| ಪ್ಲೀಡರ್ ರಾಮಾಚಾರ್ರು ಅಗ್ರಾಸನದಲ್ಲಿದ್ದರು. ಜಿನೀಂದಾರರ ಸಭೆಯನ್ನು ಮುಂದಿನ ಫೆಬ್ರವರಿ ತಿಂಗಳಲ್ಲಿ ಕೋಲಾರದಲ್ಲಿ ನಡಿಸಬೇಕೆಂತಲೂ, ಅದರ ನಿರ್ವಾಹಕ್ಕೆ ಮ|| ಗಿರಿಮಾಜಿರಾಯರು, ಅಡ್ವೊಕೇಟ್ ಮ|| ಬಾಪೂರಾಯರು, ಮ|| ಜೋಡಿದಾರ್ ಜಯಾಚಾರ್ರು ಮಿ|| ರೋಫ್‌ಖಾನ್ ಸಾಹೇಬರು, ಮ|| ಗಿರಿಮಾಜಿ ಸುಬ್ಬರಾಯರು ಕಮಿಟಿ ಮೆಂಬರುಗಳಾಗಿ ನಂತ. ಮುಂದಿನ ಕೆಲಸಗಳನ್ನು ನೆರವೇರಿಸಬೇಕೆಂತ ಎಲ್ಲರೂ ಒಪ್ಪಿದರು. ಸೆಕ್ರೆಟರಿಗಳಾಗಿ ಮ|| ಗಿರಿಮಾಜಿರಾಯರನ್ನೂ, ಮಿ|| ರೋಫ್‌ಖಾನ್ ಸಾಹೇಬರನ್ನೂ ಗೊತ್ತುಮಾಡಿದರು. ಜಿನೀಂದಾರರುಗಳು ಬಂದಾಗ್ಗೆ ಭೋಜನ ಮತ್ತು ನಿವಸತಿಯನ್ನು ಅನುಕೂಲಮಾಡುವದಕ್ಕೆ ಮ|| ಪ್ಲೀಡರ್ ರಾಮಾಚಾರ್ರು, ಗಿರಿಮಾಜಿರಾಯರೂ ಒಪ್ಪಿಕೊಂಡರು. ಅಂತು ಪ್ರತಿ ದಿನವೂ ಯಾವುದಾದರೊಂದು ಮೀಟಿಂಗು ನಡೆಯುತ್ತಿದೆ. ಸುಮ್ಮನೇ ಮಾತನಾಡುವದಕ್ಕಿಂತ ಫಲಕಾರಿಯಾದ ಕೆಲಸಮಾಡುವ ಕಾಲ ಒದಗಿ ಬಹಳ ದಿನಗಳಾಗಿರುತ್ತೆ. ಮಾತನಾಡಿದ್ದು ಸಾಕಾಗಿದೆ. ಈಗ ಬಾಯಿಮುಚ್ಚಿಕೊಂಡು ಕೆಲಸಮಾಡಿ, ನಾವು ವ್ಯಯಮಾಡಿರುವ ದುಡ್ಡಿಗೆ ತಕ್ಕ ಫಲವನ್ನು ತೋರಿಸಬೇಕಾಗಿದೆ.

ನಮ್ಮ ಟೌನಿನ ಆನರರಿ ವೈಸ್ ಪ್ರೆಸಿಡೆಂಟರವರು ಮಾಡಿದ ಸಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಂತೆ ವರ್ತಮಾನ. ಇವರಿಗೆ ಪ್ರೆಸಿಡೆಂಟರವರಾದ ಸಿಫಾರಸ್ ಆಗಿರುವ ಅಫಿಷಿಯಲ್ಸ್ ಮೊಬಲಗು ಇನ್ನೂ ಬರಲಿಲ್ಲ. ಇಂಥಾ ಚಿಕ್ಕ ಊರಿಗೆ ಕೆಲಸವಾದರೂ ಸಾಧ ಬೇಕೇ, ಅದಕ್ಕೆ ಅಫಿಷಿಯಲ್ಸ್ ಜಾಸ್ತಿಯೇ ಎಂಬುದನ್ನು ಸರ್ಕಾರದವರು ಪರ್ಯಾಲೋಚಿಸಬೇಕಾಗಿದೆ. ಈ ಕೋಲಾರ್ ಟೌನ್‌ನಲ್ಲಿ ವೈಸ್ ಪ್ರೆಸಿಡೆಂಟ್ ಕೆಲಸಕ್ಕೆ ಲಾಯಖಾದವರು ಯಾರೂ ಇಲ್ಲವೇ ? ಯಾರೂ ಇಲ್ಲವೆಂಬ ಪಕ್ಷಕ್ಕೆ ಸರ್ಕಾರದ ಉದ್ಯೋಗಸ್ಥರನ್ನೇ ಯಾತಕ್ಕೆ ನೇಮಿಸಬಾರದು ? ಪ್ರಜೆಗಳ ಅಭಿಮತವನ್ನು ನಿರಾಕರಿಸಿ ಸರ್ಕಾರದ ಉದ್ಯೋಗಸ್ಥರ ಮಾತನ್ನೇ ಅಂಗೀಕರಿಸುವದಾದರೆ ಸ್ಥಳೀಯ ಸ್ವಾರಾಜ್ಯವು ಹೇಗೆ ತಾನೇ ನಮ್ಮ ಸೀಮೆಯಲ್ಲಿ ಅಭಿವೃದ್ಧಿಗೆ ಬಂದೀತು ? ಸ್ಥಳೀಯ ಸ್ವಾರಾಜ್ಯವು ಅಭಿವೃದ್ಧಿಗೆ ಬರಬೇಕಾದಲ್ಲಿ ಸ್ಥಳೀಯ ಪ್ರಜೆಗಳಿಗೆ ತಮ್ಮ ಸೇವೆಯನ್ನು ಮಾಡತಕ್ಕವರನ್ನು ಚುನಾವಣೆ ಮಾಡಿಕೊಳ್ಳುವಂಥಾ ಹಕ್ಕನ್ನು ಕೊಡಬೇಕಾದದ್ದೇ ಅವಶ್ಯ.

ಕೋಲಾರ್ ಟೌನ್ ನಿವಾಸಿ.

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಈ ಟೌನ್‌ನಲ್ಲಿ ಮಳೆ ವಿಶೇಷವಾಗಿ ಸುರಿದು ಕಟಾವು ಆಗದೆ ಇದ್ದ ಹೊಲಗಳೆಲ್ಲಾ ತುಂಬಾ ನಷ್ಟವಾದ್ದರಿಂದ ರೈತರು ಸಂಕಟಪಡುತ್ತಿದಾರೆ.—ಮ್ಯುನಿಸಿಪಲ್ ಲಾಂದ್ರಗಳು 9-10 ಘಂಟೆಗೆ ಅಂಟಿಸುತ್ತಾರೆ. ಅಂಟಿಸಿದ ಅರ್ಧ ಗಂಟೆ ಹೊತ್ತಿನಲ್ಲೇ ಆರಿಹೋಗುತ್ತವೆ.—ಮೊನ್ನೆ ಕಾರ್ತೀಕ ಶುದ್ಧ ಪೌರ್ಣಮಿ ದಿನ ಮ|| ಯತಿ ಕೃಷ್ಣಪ್ಪನವರು ಲಕ್ಷ ದೀಪೋತ್ಸವವನ್ನು ತುಂಬಾ ವಿಜೃಂಭಣೆಯಿಂದ ನೆರವೇರಿಸಿದರು. ಸಾವಿರಾರು ಜನಗಳು ಸೇರಿ ತುಂಬಾ ಆನಂದಪಟ್ಟರು.—ಈ ಊರಿನಲ್ಲಿ ರೆಡ್ಡಿಗರ ತಾತಾಯಪ್ಪ ಎಂಬುವರು ಸ್ವಂತ ಜಮೀನಿನಲ್ಲಿ 15 ಗಾಂಜಾ ಗಿಡಗಳನ್ನು ಬೆಳೆದು ಇದ್ದರೆಂದೂ, ಎಕ್ಸೈಸ್ ಇನ್‌ಸ್ಪೆಕ್ಟರು ಹಿಡಿದು ಇರುವದಾಗಿಯೂ ತಿಳಿದು ಇದೆ.

ಸಿಕಾರಿಪುರ.—ಟೌನ್ ಆರೋಗ್ಯವಾಗಿದೆ. ಸುತ್ತಲೂ 6-7 ಗ್ರಾಮಗಳಿಗೆ ಈ ವರುಷ ಸಕಾಲದಲ್ಲಿ ಮಳೆ ಬಾರದ್ದರಿಂದ ಫಸಲು ರುದ್ದಾಂಗವಾಗಿ ಕೆಟ್ಟುಹೋಯಿತು. ದೊಡ್ಡ ಕೆರೆಗಳಿದ್ದೂ ಇವುಗಳಿಗೆ ಸೇರಿದ ಜಮೀನು ಫಸಲು ಕೆಟ್ಟುಹೋಗಿದೆ. ಅಂಜನಾಪುರದ ಕೆರೆ ಆದರೆ ಇಂಥಾ ಸಂದರ್ಭದಲ್ಲಿ ಎಷ್ಟೋ ಉಪಕಾರವಾದೀತು. ಇದು ಸರ್ಕಾರದ ಚಿತ್ತಕ್ಕೆ ಬರಬೇಕು. ದಸರಾ ಸಭೆಗೆ ಹೋದ ಮೆಂಬರುಗಳು ವರ್ಷಂಪ್ರತಿ ಏನೋ ಒಂದು ಸಮಾಧಾನ ಹೇಳುವಂತೆ ಈ ವರುಷವೂ ಹೇಳಿದರು. ಕಂದಾಯದ ವಸೂಲಿ ಹತ್ತಿರ ಬಂತು.—ತಾಲ್ಲೂಕು ಜಮಾಬಂದಿ ನಡೆಯುತ್ತಾ ಇದೆ. ಶಿರಸ್ತೇದಾರ್ರವರು ಮ|| ಪುಟ್ಟಯ್ಯನವರು ಹಳ್ಳಿಗಳ ಮೇಲೂ ಜಮಾಬಂದಿ ಪ್ರಾರಂಭಿಸಿದಾರೆ. ಶಿರಸ್ತೇದಾರರು ರೆವಿನ್ಯೂ ಬಾಬಿಗೆ ತಕ್ಕಷ್ಟು ಜವಾಬ್ದಾರರು. ಕಛೇರಿಯಲ್ಲಿ ಕೇವಲ ಪಟೇಲ್ ಶಾನುಭೋಗರ ಪರಿಚಯ ಮಾತ್ರವಾಗುತ್ತೆ. ಹಳ್ಳಿಗಳ ಮೇಲೆ ಜಮಾಬಂದಿಗೆ ಹೋದ ಆ ಕಾಲದಲ್ಲಿ ವರ್ಗ ತಬ್ದಿಲ್, ದರಖಾಸ್ತು, ತಕರಾರು ಲೀಸ್ಸು, ಈ ಸಂದರ್ಭಗಳಿಂದ ರೈತರ ಪರಿಚಯವೂ ಆಗುತ್ತೆ. ಇಲ್ಲಿ ತಾಲ್ಲೂಕು ಆಫೀಸಿನಲ್ಲಿ ಕೆಲಸ ಜಾಸ್ತಿ. ಇದಕ್ಕೋಸ್ಕರ 4 ಜನ ಗುಮಾಸ್ತೇರೂ, ಡೆಪ್ಯುಟಿ ಗುಮಾಸ್ತೇರೂ ಇದಾರೆ. ಇಂಥಾದ್ದರಲ್ಲಿ ನಮ್ಮ ಶಿರಸ್ತೇದಾರ್ರು 3 ಹೊಬಲಿ ಛಾರ್ಜು ಒಬ್ಬ ಗುಮಾಸ್ತೆಯಿಂದ ಮಾಡಿಸಿ 2 ಜನ ಗುಮಾಸ್ತೇರು ಒಬ್ಬ ಹೆಡ್ ಗುಮಾಸ್ತೇರು ಇಷ್ಟರಿಂದಲೇ ಈ ತಾಲ್ಲೂಕು ಕೆಲಸ ಸಾಗಿಸಬೇಕೆಂಬ ಆಲೋಚನೆಯಲ್ಲಿ ಇರುತ್ತಾರೆಂಬ ವರ್ತಮಾನವಿದೆ. ಇದನ್ನು ಜಾರಿಗೆ ತಂದು ಇದರ ಪ್ರಯೋಜನ ಕಂಡರೆ ಎಲ್ಲಾ ತಾಲ್ಲೂಕಿನಿಂದಲೂ ಸರಕಾರಕ್ಕೆ ಎಷ್ಟೋ ಫಾಯಿದೆ ಆಗಬಹುದು.—ಮ|| ಪೊ. ಇನ್‌ಸ್ಪೆಕ್ಟರ್ ಹನುಮಂತನಾಯುಡುಯವರಿಗೆ ವರ್ಗವಾದದ್ದು ಸರಿಯಷ್ಟೆ. ಬದಲೀಯವರು ಬಾರದ್ದರಿಂದ ಅವರು ಇಲ್ಲೇ ಇದ್ದಾರೆ. ಮೊನ್ನೆ ತಾನೇ ನಡೆದ ಕಳುವು ಪತ್ತೆ ಆಗಲಿಲ್ಲ. ಟೌನ್ ಗಸ್ತು ಸಹ ಉದಾಸೀನವಾಗಿರುತ್ತೆ. ಆದರೂ ದಫೇದಾರ್ರ ಕಸಬೆಯು ತೃಪ್ತಿಕರವಾಗಿದೆ.

ಅರಕಲಗೂಡು ತಾ|| ಬಸವಾಪಟ್ಟಣ.—ಕಳೆದ ತಾ|| 8 ರಲ್ಲಿ ನಮ್ಮ ಅಮಲ್ದಾರ್ ಮಿ|| ಬಿ. ಮೊಹದೀನ್ ಷರೀಫರವರು ಈ ಗ್ರಾಮಕ್ಕೆ ದಯವಿಟ್ಟು ಕೋಟೆ ಮತ್ತು ಪೇಟೆಗಳನ್ನು ನೋಡಿಕೊಂಡು ಬಂದು ಇಲ್ಲಿನ ಬಸವೇಶ್ವರ ದೇವಸ್ಥಾನದಲ್ಲಿ ಗ್ರಾಮದ ಪಟೇಲರು, ಶ್ಯಾನುಭೋಗರು ಮತ್ತು ಸ್ಥಳದ ವರ್ತಕರುಗಳು, ಪುರಪ್ರಮುಖರುಗಳಾದ ಮ|| ಹ. ಮಲ್ಲಣ್ಣಶೆಟ್ಟರೇ ಆದಿಯಾಗಿ ಎಲ್ಲಾ ಜನಾಂಗಗಳನ್ನೂ ಸೇರಿಸಿ—ಗ್ರಾಮಸ್ಥರೆಲ್ಲರೂ ವಿಶೇಷವಾಗಿ ವಾರಕ್ಕೊಂದು ಪರ್ತಿ ಅಂದರೆ ಪ್ರತಿ ಸೋಮವಾರವೂ ಮನಸ್ಸೊಬ್ಬರಂತೆ ಸೇರಿ ಗ್ರಾಮದಲ್ಲಿ ಎಲ್ಲೆಲ್ಲಿ ಏನೇನು ಅನುಕೂಲ ಕೆಲಸಗಳಾಗಬೇಕೋ ಅವುಗಳನ್ನು ಮಾಡಬೇಕು, ಹಾಗೆ ಬರದೆ ಇರತಕ್ಕವರು ಎರಡಾಣೆಯಂತೆ ರುಸುಂ ಕೊಡಬೇಕು. ಇವನ್ನೆಲ್ಲಾ ಗ್ರಾಮ ನೌಕರರು ಬಹಳ ಮುತುವರ್ಜಿಯಿಂದ ನೋಡಿಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದರು.—ಈ ಗ್ರಾಮದಲ್ಲಿ ಸುಮಾರು 300 ಒಕ್ಕಲು ಬಟ್ಟೆ ಮಗ್ಗದ ಶೆಟ್ಟರುಗಳಿರುತ್ತಾರೆ. ಇವರು ಇಲ್ಲಿನ ಕೋಆಪರೇಟಿವ್ ಸೊಸೈಟಿಯ ಮೆಂಬರುಗಳಾಗಿ ಸೇರಿ ತಮ್ಮ ಕೈಗಾರಿಕೆಗೆ ಬೇಕಾಗುವ ನೂಲು ಮತ್ತು ರೇಷ್ಮೆ ವಗೈರೆಗಳನ್ನು ತರಿಸಿ ಆ ಮೂಲಕ ಎಲ್ಲರೂ ಲಾಭ ಹೊಂದಬಹುದು. ಈ ರೀತಿ ಸೊಸೈಟಿಯೂ ಬಹಳ ಜಾಗ್ರತೆಯಲ್ಲಿ ಅಭಿವೃದ್ಧಿಗೆ ಬರುತ್ತೆಂದು ಅಪ್ಪಣೆಕೊಡಿಸಿದರು.—ಈ ಗ್ರಾಮದ ಎ. ವಿ. ಸ್ಕೂಲ್ ಹೆಡ್ ಮಾಸ್ತರನ್ನು ವಿಲೇಜ್ ಪ್ರೋಗ್ರೆಸ್ ಕಮಿಟಿಗೆ ಮೆಂಬರ್ ಮಾಡಿಕೊಳ್ಳಬೇಕು. ಅವರು ಪ್ರತಿ ವಾರವೂ ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ವಿಚಾರವಾಗಿ ಉಪನ್ಯಾಸ ಮಾಡುತ್ತಾ ಬರಬೇಕೆಂದು ಅಪ್ಪಣೆ ಕೊಡಿಸಿದರು. ಈ ರೀತಿ ತಾಲ್ಲೂಕು ಮುಖ್ಯಾಧಿಕಾರಿಗಳು ಗ್ರಾಮಾಂತರಗಳಿಗೆ ಬಂದು ಬಹಳ ಮಟ್ಟಿಗೆ ಉದಾಹರಣೆಗಳಿಂದ ತಿಳುವಳಿಕೆ ಕೊಡುವದರಿಂದ ನಮ್ಮ ಸರ್ಕಾರದ ಉದ್ದೇಶವೂ ನಮ್ಮ ಏಳಿಗೆಯೂ ಜಾಗ್ರತೆ ನೆರವೇರುವದರಲ್ಲಿ ಅಭ್ಯಂತರವಿಲ್ಲ. ನಂತರ ಸಭೆಯನ್ನು ಭರಖಾಸ್ತು ಮಾಡಿ ಅಮಲ್ದಾರ್ರು ಸೊಸೈಟಿ ಇನ್‌ಸ್ಪೆಕ್ಷನ್ ಮಾಡಿಕೊಂಡು ತೆರಳಿದರು.

ಚನ್ನರಾಯಪಟ್ಟಣ.—ಒಂದು ವಾರದ ಲಾಗಾಯಿತು ಈ ಊರಿನಲ್ಲಿ ಸೋನೆಮಳೆ ಹಿಡಿದು ರೈತರಿಗೆ ಹೊಲದ ಕೊಯಿಲಿಗೆ ಅವಕಾಶವಿಲ್ಲವಾಗಿದೆ. ಈ ಊರಿನ ದಕ್ಷಿಣ ದಿಕ್ಕಿನ ಕೋಟೆ ಬಾಗಿಲ ಬಳಿ ಕೋಟೆ ಕಲ್ಲುಗಳನ್ನು ಕಿತ್ತು ಹಾಕಿರುವುದರಿಂದ ಜನ ಜಾನುವಾರುಗಳಿಗೆ ತುಂಬಾ ತೊಂದರೆಯಾಗಿ ಸಂಚಾರಕ್ಕೆ ಅವಕಾಶವಿಲ್ಲವಾಗಿರುತ್ತೆ. ಕೆರೆಗೆ ಹೋಗುವ ಕೋಡಿಯ ಹತ್ತಿರ ಹೇಸಿಕೆಮಾಡುವುದನ್ನು ನಿಲ್ಲಿಸದೆ ಇರುವುದರಿಂದ ತುಂಬಾ ಅಸಹ್ಯವಾಗಿರುತ್ತೆ. ಸಂತೆ ವಗೈರೆ ದಿವಸಗಳಲ್ಲಿ ಊರೊಳಗೆ ಗಾಡಿಗಳನ್ನು ದವುಡಾ ದವುಡು ಬಿಡುವುದರಿಂದ ಹುಡುಗರು ಮಕ್ಕಳು ಸಿಕ್ಕಿ ಅಪಾಯಕರವಾಗಿದೆ. ಇದನ್ನೆಲ್ಲಾ ಕೂಡಲೆ ಕ್ರಮಪಡಿಸುತ್ತಾರೆಂತ ನಂಬಿದೆ.—ನಮ್ಮ ಅಮಲ್ದಾರ್ ಮ|| ಸೂರಪ್ಪನವರು ತಾಲ್ಲೋಕು ಜಮಾಬಂದಿ ಮಾಡುತ್ತಾ ಇರುವುದರಲ್ಲಿ ರೈತರು ಹೇಳಿಕೊಳ್ಳುವ ಅಹವಾಲನ್ನು ಚೆನ್ನಾಗಿ ವಿಚಾರಿಸುತ್ತಾ ಜನಗಳ ವಿಶ್ವಾಸಕ್ಕೆ ಪಾತ್ರರಾಗಿದಾರೆ. ಶೇಕ್‌ದಾರ್ ಮ|| ಲೀಸಗಿರಿರಾಯರು ಇಲ್ಲಿಗೆ ಬಂದಲಾಗಾಯಿತು ಪ್ರಜಾನುಕೂಲವಾದ ಕೆಲಸಗಳು ಅಂದರೆ ಗ್ರಾಮ ರಸ್ತೆ ವಗೈರೆ ಮುತುವರ್ಜಿಯಿಂದ ಮಾಡಿಸುತ್ತಾ ಇದಾರೆ. ಇವರು ಮತ್ತು ಇಲ್ಲಿನ ಸೊಸೈಟಿ ಸೆಕ್ರೆಟರಿ ಮ. ವೆಂಕಟರಮಣಯ್ಯನವರೂ, ಮ. ನರಸಿಂಯಮೂರ್ತಿಗಳೂ, ಮತ್ತು ಯೂನಿಯನ್ ಸೆಕ್ರೆಟರಿ ಮ. ಶ್ರೀಕಂಠಯ್ಯನವರೂ ಸಹಾ ಕೊಡಿಸುತ್ತಾ ಇರುವ ಜಾಗರಿ ಮತ್ತು ರೈಸ್ ಮಿಲ್ಲಿನ ಪೇರುಗಳನ್ನು ಖರ್ಚು ಮಾಡಿ ಜಾಗ್ರತೆ ಸ್ಥಾಪಿಸುವಂತೆ ಮಾಡುತ್ತಾರೆಂದು ಊರಿನವರೆಲ್ಲಾ ಆತುರಪಡುತ್ತಿರುವುದಲ್ಲದೆ ಈಗಿನ ಅಮಲ್ದಾರ್ರೂ ಕೂಡ ಇದಕ್ಕೆ ಪ್ರೋತ್ಸಾಹಕೊಟ್ಟಾರೆಂದು ನಂಬುತ್ತೆ.—ಈ ವರ್ಷ ಮಾಘಮಾಸದಲ್ಲಿ ಜೈನರ ಕಾಶಿಯಾದ ಶ್ರವಣಬೆಳಗೊಳದಲ್ಲಿ ಶೇಖರವಾಗುತ್ತಿರುವ ಹೊಸ ರಥಕ್ಕೆ ಶ್ರೀ ಚಂದ್ರಶೇಖರ ಸ್ವಾಮಿಯವರಿಗೆ ರಥೋತ್ಸವವೂ, ಅದೇ ಕಾಲದಲ್ಲಿ ದನಗಳ, ಮತ್ತು ವಸ್ತುಪ್ರದರ್ಶನವೂ, ತಾಲ್ಲೋಕು ಕೋಆಪರೇಟಿವ್ ಕಾನ್‌ಫರೆನ್ಸು ಸಹಾ ನಡೆಯಲು ಏರ್ಪಾಡು ಇಟ್ಟಿರುತ್ತಾರೆ.—ಇಲ್ಲಿಗೆ ಡಿಸ್ಟ್ರಿಕ್ಟು ಉಪಾಧ್ಯಾಯರು ಮ. ಎ. ವೆಂಕಟಾಚಾರ್ರು ಬಂದು ಎ. ವಿ. ಸ್ಕೂಲ್ ಕಟ್ಟಡದಲ್ಲಿ ಸೇರಿದ್ದ ಬಹುಜನರಿಗೂ ಅವಗಾಹನೆ ಆಗುವಂತೆ ವಿದ್ಯಾಭಿವೃದ್ಧಿ ಮತ್ತು ವ್ಯವಸಾಯ ಸಂಬಂಧವಾಗಿ ಉಪನ್ಯಾಸಮಾಡಿದರು.—ಇಲ್ಲಿನ ಸ್ಕೂಲಿನಲ್ಲಿ ಬಹಳ ದಿವಸದಿಂದಲೂ ಮೇಲ್ಪಟ್ಟ ಇಂಗ್ಲೀಷು ತರಗತಿಗಳಿಗೆ ಬದ್ಲೀ ನೇಮಕವಾದವರೇ ಹೆಗ್ಗೆ 2-3 ವರ್ಷಗಳಿಂದ ಪ್ರತಿ ಮತ್ತು ವಿಶಾಕದೊಡನೆ ಬಾಲಕರನ್ನು ಮೇಲು ತರಗತಿಗಳಿಗೆ ತಂದಿರುತ್ತಾರೆ. ಇಂಥಾವರನ್ನು ಹಾಲಿ ಖಾಲಿ ಇರತಕ್ಕ 3 ಕೆಲಸಗಳಿಗೆ ನೇಮಿಸಿ, ಮೆಟ್ರಿಕ್ ಪ್ಯಾಸಾದವರನ್ನು ಕಳುಹಿಸಿಕೊಡುತ್ತಾರೆಂತ ನಂಬಿದೆ. ರಾತ್ರಿಸ್ಕೂಲು ಮಾಸ್ತರಿಗೆ ಲಾಗಾಯಿತು ಸಂಬಳವೇ ದೊರಕಲ್ಲ. ಜಾಗ್ರತೆ ಪಾವತಿ ಮಾಡುವುದರ ಮೂಲಕ ನೈಟ್ ಸ್ಕೂಲು ಅಭಿವೃದ್ಧಿ ಸ್ಥಿತಿಗೆ ಬರುವಂತೆ ಮಾಡುತ್ತಾರೆಂದು ನಂಬಿದೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ 20 ನೇ ತಾರೀಖಿಗೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ ಪ್ಲೇಗ್ ಉಪದ್ರದಿಂದ 3,354 ಜನರು ಕಾಲವಾದರು.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ರಾಜಪಿಪ್ಲ ಎಂಬ ದೇಶೀಯ ಸಂಸ್ಥಾನದ ರಾಜರು ಕಾಲವಾದದ್ದರಿಂದ ತಾ. 10 ನೇ ಶನಿವಾರ ಅವರ ಕುಮಾರರಿಗೆ ಪಟ್ಟಾಭಿಷೇಕ ಮಾಡಲ್ಪಡುವುದು.

ಕಾಶೀ ಪಟ್ಟಣದ ಎಂಟು ಮೊಹಲ್ಲೆಗಳಲ್ಲಿ 1,164 ಎಕರೆ ಜಮೀನುಗಳನ್ನು ಅಲ್ಲಿನ ಕಲೆಕ್ಟರವರು ಸರ್ಕಾರಕ್ಕೆ ತೆಗೆದುಕೊಂಡು, ಹಿಂದೂ ಯೂನಿವರ್ಸಿಟಿ (ವಿದ್ಯಾನಿಲಯ) ಕಟ್ಟಡಗಳಿಗಾಗಿ ಕೊಡಿಸುವರು.

ಹಿಂದುಸ್ಥಾನದ ಕ್ಷತ್ರಿಯ ಉಪಕಾರಿಣೀ ಮಹಾ ಸಭೆಯು ಕಲ್ಕತ್ತಾ ಪಟ್ಟಣದಲ್ಲಿ ಡಿಸೆಂಬರ್ ತಾ. 28–30 ರಲ್ಲಿ ಜರುಗುವಂತೆ ಏರ್ಪಾಡಾಗಿದೆ. ಅಗ್ಗೆ ಬಿಕ್ಯಾನೀರ್ ಸಂಸ್ಥಾನದ ಮಹಾರಾಜರವರೂ, ಕಾಶ್ಮೀರದ ಮಹಾರಾಜರವರೂ ದಯಮಾಡುವಂತೆ ಪ್ರಕಟವಾಗಿದೆ.

ಬೊಂಬಾಯಿ ಪಟ್ಟಣದ ಗ್ರೀವ್ಸ್ ಕಾಟನ್ ಕಂಪನಿಯ ಮೇಲ್ವಿಚಾರಕರು ಲ್ಲದ್ದ ಎಂಪ್ರೆಸ್, ಜೇಮ್ಸ್ ಗ್ರೀವ್ಸ್, ಕೆನ್ನಾಟ್ ಮತ್ತು ಇಂಪೀರಿಯಲ್ ಎಂ

...ಕಾರ್ಖಾನೆಗಳನ್ನು ನಿಲ್ಲಿಸಿಬಿಟ್ಟು ಲೇಸ ದೇಶಗಳನ್ನು ವ್ಯವಸ್ಥೆ... ...ಕೆಂದು ತೀರ್ಮಾನವಾಗಿ ಲೆಕ್ಟಿಡೇಟರುಗಳು ನೇಮಕನಾಗಿರುತ್ತಾರೆ.

...ರುನಾಡಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಶೇಷಯ್ಯಂಗಾರ್ ಮತ್ತು ...ಬಲ್ ಕುಮಾರಸ್ವಾಮಿನಾಯಕ ಎಂಬಿಬ್ಬರ ಮೇಲೂ ಅವರು ಲಂಚ ...ಕ್ಷೆಗನ್ನು ಹಜಮ್ ಮಾಡಿ ಸುಳ್ಳು ಕಾಗದಗಳನ್ನು ಸೃಷ್ಟಿಸಿ ಮಾಡಿದ ...ತೊಕದ್ದಮೆ ಆಗಿ ಅವರನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದಾರೆ.

...ಂದುಸ್ಥಾನದ ಎಲ್ಲಾ ಜೈಲ್‌ಖಾನೆಗಳ ಸ್ಥಿತಿಗತಿಯನ್ನೂ, ಮಾಡಬೇಕಾಗಿ ...ಭಿವೃದ್ಧಿಗಳನ್ನೂ ಕುರಿತು ತನಿಖೆಮಾಡಬೇಕೆಂದು ಇಂಡಿಯಾ ಗವರ್ನ್... ...ನವರು ಏರ್ಪಾಡು ಮಾಡಿದ್ದರು. ಈಗ ಯುದ್ಧಪ್ರಾಪ್ತವಾಗಿರುವುದರಿಂದ ...ಮುಗಿಯುವ ತನಕ ಆ ತನಿಖೆಯನ್ನು ನಿಲ್ಲಿಸಬೇಕೆಂದು ಹುಕುಂ ...ದ್ದಾರೆ.

...ಥಳ ಸಂಸ್ಥಾನದ ಮಹಾರಾಜರವರ ಮೂರನೇ ಕುಮಾರರಾದ ...ಟ್ ಕರ್ನಲ್ ಅಮರ್ ಸಿಂಗ್‌ರವರು ಯುದ್ಧಭೂಮಿಯಲ್ಲಿ ಇದುವರೆಗೆ ...ಳೆದ ವಾರ ವಾಪಸು ಬಂದರು. ಅವರಿಗೆ ಕಪೂರ್ಥಲದಲ್ಲಿ ಅನೇಕ ...ತ್ಸವಗಳು ನಡೆದವು. ಕೆಲವು ದಿನಗಳ ಮೇಲೆ ಅವರು ವಾಪಸು ...ದ್ಧಭೂಮಿಗೆ ಹೋಗುವರು.

...ದಾರ ಸಂಸ್ಥಾನದ ಮಂತ್ರಿಶ್ರೇಷ್ಠರವರ ಸಹೋದರರ ಕುಮಾರನಾದ ...ಯೋಧಜಂಗ್ ಬಹದೂರ್ ಎಂಬಾತನು ಫ್ರಾನ್ಸಿನ ಯುದ್ಧಭೂಮಿ... ...ಶತ್ರುವಿನ ಮೇಲೆ ಕದನಮಾಡುವಾಗ್ಗೆ ಕಳೆದ ಅಕ್ಟೋಬರ್ ತಾ. 12-13 ...ಗಾಯಗಳಾದವೆಂದೂ, ಈಗ ವಿಲ್‌ಟ್ಯಾಂಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ...ಯುತ್ತಿರುವುದಾಗಿಯೂ ತಿಳಿಯುವುದು.

...ರ್ಗಸ್ಥರಾದ ಮ|| ಜಿ. ಕೆ. ಗೋಖಲೆಯವರ ಹೆಸರನ್ನು ಶಾಶ್ವತ ...ಮಾಡುವುದಕ್ಕೆ ಬೊಂಬಾಯಿ ಅಧಿಪತ್ಯದಲ್ಲಿ ಆಗಲೇ ಒಂದು ಲಕ್ಷ ರೂಪಾಯಿ ...ವರೆಗೂ ಚಂದಾ ವಸೂಲಾಗಿದೆ. ಇಚಿಗೆ ಮೌರ್ವಿ ಸಂಸ್ಥಾನದ ...ರು 600 ರೂಪಾಯಿಯನ್ನೂ, ಸಂಗ್ಲಿ ಸಂಸ್ಥಾನದ ಅರಸರು 200 ರೂಪಾ ...ನ್ನು ಈ ಫಂಡಿಗೆ ಚಂದಾ ಕಳುಹಿಸಿದಾರೆ.

...ಪೂರ್ ಪಟ್ಟಣದಲ್ಲಿ ಮೊಹರಂ ಹಬ್ಬದ ದಿನ ಮಹಮ್ಮದೀಯರು ತಾಬೂ ...ನ್ನು ಮೆರವಣಿಗೆ ಮಾಡುತ್ತಿದ್ದಾಗ ಹಿಂದುಗಳ ನೂತನ ದಂಪತಿಗಳ ಮೆರ ...ಉತ್ಸವ ಬೀದಿಯಲ್ಲಿ ಹೋಯಿತು. ಎರಡು ಕಡೆಗಳಿಗೂ ಸ್ವಲ್ಪ ಮಾರಾ ...ನಡೆದು ಒಬ್ಬರಿಗೆ ಕಲ್ಲುಗಳನ್ನು ಎಸೆದರು. ಪೋಲೀಸಿನವರು ಹಾಜರಿದ್ದು ...ರನ್ನು ಚದರಿಸಿದ ಕೂಡಲೆ ಗಲಭೆಯೆಲ್ಲಾ ನಿಂತುಹೋಯಿತು.

...ನಾಪುರದಲ್ಲಿ ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯಲ್ಲಿ ಎಕ್ಸ್ ...ರ್ಪ್ಲಿ ರೈಲ್ವೆ ಗಾರ್ಡೊಬ್ಬ ಕೂಲಿ ಕಂಟ್ರ್ಯಾಕ್ಟರೂ ಪರೇಶ್ವರ ಸಾಯ ...ಬ್ಯಾನರ್ಜಿ ಟೇರ್‌ಸೋನೂ ಸೇರಿಕೊಂಡು ಹಲವು ಸಾವಿರ ರೂಪಾ ...ಯಿ ತಿಂದು ಹಾಕಿ ರೈಲ್ವೆ ಕಂಪನಿಗೆ ಮೋಸಮಾಡಿದರು. ಆ ಮೂವರು ...ಗೂ ಮ್ಯಾಜಿಸ್ಟ್ರೇಟರು ದೀರ್ಘಕಾಲದ ಸಜಾ ಶಿಕ್ಷೆಯನ್ನು ವಿಧಿಸಿದಾರೆ.

ಮ|| ಎಲ್. ನರಸಿಂಹಮ್ ಎಂಬೊಬ್ಬ ಕಣ್ಣಿಲ್ಲದ ಆಂಧ್ರ ಕವಿಯು ...ಹೇಂದ್ರ ಪಟ್ಟಣದಲ್ಲಿ ಕೀಳು ಜಾತಿಯವರಿಗೆ ವಿದ್ಯೆ ಕಲಿಸಿ ಅವರನ್ನು ...ದ್ಧಾರ ಮಾಡಬೇಕೆಂದು ಪ್ರಯತ್ನಪಟ್ಟು ಆ ಜನಗಳಿಗಾಗಿ ಎರಡು ವಿದ್ಯಾ ...ಶಾಲೆಗಳನ್ನು ಸ್ಥಾಪಿಸಿ ನಡೆಸುತ್ತಿದಾನೆ. ಈತನ ಪರಹಿತ ಕಾರ್ಯವನ್ನು ನೋಡಿ ...ಪುರದ ರಾಜರವರು ಸಂತೋಷಪಟ್ಟು ಆ ಪಾಠಶಾಲೆಗಳ ಅಭಿವೃದ್ಧಿಗೋಸ್ಕರ ...00 ರೂಪಾಯಿ ಕೊಟ್ಟರು.

ಲಾಹೋರಿನಲ್ಲಿ ವಿಚಾರಣೆಮಾಡಲ್ಪಟ್ಟ ರಾಜದ್ರೋಹದ ಮೊಕದ್ದಮೆ... ...ಷ್ಟ ಜಡ್ಜಿಗಳು ಅಪರಾಧಿಗಳ ಪೈಕಿ 23 ಮಂದಿಗೆ ಮರಣದಂಡನೆಯನ್ನು ವಿಧಿ ...ಸು. ಇಂಡಿಯಾ ಗವರ್ನ್‌ಮೆಂಟಿನವರು ಈ ಮೊಕದ್ದಮೆಯ ಕಟ್ಟುಗಳನ್ನೆಲ್ಲಾ ...ತಿ ಆ ಪೈಕಿ 16 ಮಂದಿಗೆ ಮರಣದಂಡನೆಯನ್ನು ತಪ್ಪಿಸಿದರು. ಇದನ್ನು ...ಹಿಂದುಸ್ಥಾನದ ಎಲ್ಲಾ ಅಧಿಪತ್ಯಗಳವರೂ ನಮ್ಮ ವೈಸ್‌ರಾಯರವರ ...ಷ್ಟಿಗಳನ್ನು ಪ್ರಶಂಸಿಕೊಂಡಾಡುತ್ತಿದಾರೆ.

...ಂಯುಕ್ತ ಅಧಿಪತ್ಯಗಳಲ್ಲಿ ಸಾಧುಗಳೂ, ಫಕೀರರೇ ಮುಂತಾದವರು ...ಕ್ಕವಯಸ್ಸಿನವರನ್ನು ತಮ್ಮ ಬಳಿ ಸೇರಿಸಿಕೊಂಡು ಸಾಧುಗಳಾಗಿಯೂ ಫಕೀರ ...ಯೂ ಬೆಳಸಿ ತಿರುಪವೆತ್ತುವಂತೆ ಅಭ್ಯಾಸ ಮಾಡಿಸುವುದನ್ನು ಕಾನೂನ್ ...ಪ್ರತಿಬಂಧಪಡಿಸಬೇಕೆಂದು ಅಲ್ಲಿನ ನ್ಯಾಯವಿಧಾಯಕ ಕೌನ್ಸಿಲ್ ಮೆಂಬ ...ದ ಲಾಲಾ ಸುಖವೀರಸಿಂಹರವರು ಆ ಮಹಾ ಸಭೆಯಲ್ಲಿ ಸೂಚಿಸಿದಾರೆ. ...ಚಾರವು ಇನ್ನೂ ಚರ್ಚೆಯಲ್ಲಿರುವುದು.

ಹಿಂದುಸ್ಥಾನದಲ್ಲಿ ಬೆಳೆಯುವ ಗೋಧಿಯನ್ನು ಯಾವ ವರ್ತಕನೂ ...ಹಡಗುಗಳ ಮೇಲೆ ಇತರ ದೇಶಗಳಿಗೆ ರಫ್ತುಮಾಡಕೂಡದೆಂದು ...ಡಿಯಾ ಗವರ್ನ್‌ಮೆಂಟಿನವರು ನಿರ್ಬಂಧಮಾಡಿರುತ್ತಾರಷ್ಟೆ. ಈ ಹುಕುಮಿನ ...ಧಿಯು 1916 ನೇ ಮಾರ್ಚಿ ಆಖೈರಿಗೆ ಪೂರೈಸುವುದರಿಂದ ಅಲ್ಲಿಂದ ...ಂದಕ್ಕೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಯಾರೂ ಆ ಧಾನ್ಯ... ...ನ್ನು ರಫ್ತುಮಾಡಕೂಡದೆಂದು ಈಗ ಇಷ್ತಿಹಾರು ಕೊಟ್ಟಿದಾರೆ.

...ಳೆದ ಏಪ್ರಿಲ್‌ನಿಂದ ಸೆಪ್ಟೆಂಬರ್ ತನಕ ಆರು ತಿಂಗಳಲ್ಲಿ ಹೊರಗಿನಿಂದ ...,000 ರೂಪಾಯಿನ ಗುಂಡಿಗಳು ಹಿಂದುಸ್ಥಾನಕ್ಕೆ ರಫ್ತಾಗಿ ಬಂದಿರುತ್ತವೆ. ...ವ ಯಾವ ದೇಶದಿಂದ ಎಷ್ಟೆಷ್ಟು ಬಂದವೆಂದರೆ—ಜಪಾನ್‌ನಿಂದ 4,16,000 ...ರೂಪಾಯಿನವು, ಇಟಲಿಯಿಂದ 3,25,000 ರೂಪಾಯಿನವು, ಗ್ರೇಟ್ ಬ್ರಿಟನ್... ...ದ 84,000 ರೂ., ಫ್ರಾನ್ಸಿನಿಂದ 16,000 ರೂ., ಸ್ವಿಟ್ಜರ್ಲೆಂಡಿನಿಂದ ...00 ರೂ., ಜರ್ಮನಿ 2,000 ರೂ., ಇತರ ದೇಶಗಳಿಂದ 3,000 ರೂಪಾಯಿ.

...ಕರ್‌ಗಂಜ್ ಡಿಸ್ಟ್ರಿಕ್ಟಿಗೆ ಸೇರಿದ ಪೀರೋಜಪುರದಲ್ಲಿ "ಸರಹಿಂದ್" ...ಬ ಪತ್ರಿಕೆಯ ಎಡಿಟರಾದ ರಾಮಚರಣಪಾಲನೆಂಬವರ ಮನೆಗೆ ಕಳ್ಳರು ...ದ್ದರು. ಪೋಲೀಸಿನವರು ಅದು ಸಾಮಾನ್ಯವಾದ ಕಳುವೆಂದು ರಿಪೋರ್ಟ್ ...ಕ್ಕರು. ಬಳಿಕ ಎಡಿಟರು ಸೂಪರಿಂಟೆಂಡರೇ ತನಿಖೆಮಾಡಬೇಕೆಂದು ತನ್ನ ...ತ್ರಿಕೆಯಲ್ಲಿ ಬರೆದನು. ಆಬಳಿಕ ಸೂಪರಿಂಟೆಂಡರು ಹೋಗಿ ತನಿಖೆಮಾಡಿ ...ದಾಗ ಅದು ಸಾಮಾನ್ಯ ಕಳುವಲ್ಲ ಡಕಾಯಿತಿ ನಡೆದಿದೆ ಎಂದು ಗೊತ್ತಾ ...ಯಿತು. ಈಗ ಆ ಎಡಿಟರು ವೈರಿಗಳು ತನ್ನನ್ನು ಕೊಂದುಹಾಕುತ್ತಾರೆಂದು ...ಆ ಮನೆ ಮಠವನ್ನೇ ತ್ಯಜಿಸಿ ಬೇರೆ ಊರಿಗೆ ಹೋಗಿ ಸೇರಿಕೊಂಡಿರುತ್ತಾನೆ.

...ಅಹಮದ್‌ನಗರದ ಬಂಧನದಲ್ಲಿ ಇಡಲ್ಪಟ್ಟಿರುವ ಆಸ್ಟ್ರಿಯಾ ಪ್ರಜೆಗಳಿ ...ಪ್ಪಿ ಕಳೆದ ಅಕ್ಟೋಬರ್ ತಾ. 23 ನೇ ರಾತ್ರಿ ಮುಖಕ್ಕೆ ಶಾಲುಗಳಿಗೆ ಕಪ್ಪು ...ಹಚ್ಚಿಕೊಂಡು ಬೀದಿ ಗುಡಿಸುವ ದೇಶೀಯರಂತೆ ಬಟ್ಟೆಹಾಕಿಕೊಂಡು ಬಂಧ ...ದ ಸ್ಥಾನದಿಂದ ತಪ್ಪಿಸಿಕೊಂಡು ಹೋದರು. ಸ್ವಲ್ಪ ಹೊತ್ತಿನ ಮೇಲೆ ಗಸ್ತು ...ತಿರುಗುವುದಕ್ಕಾಗಿ ಹೋದ ಪೋಲೀಸ್ ಹುದ್ದೇದಾರನು ಅವರನ್ನೂ ಅವರ ...ಉಡುಪನ್ನೂ ನೋಡಿ ಅನುಮಾನಪಟ್ಟು ಅವರನ್ನು ಹಿಡಿದು ಪರೀಕ್ಷೆಮಾಡಿ ...ದಾಗ ಅವರು ಯುದ್ಧದ ಖೈದಿಗಳೆಂದೂ, ಮೋಸಪಡಿಸಿ ತಪ್ಪಿಸಿಕೊಂಡು ...ಹೋಗುತ್ತಿದ್ದರೆಂದೂ ಗೊತ್ತಾಯಿತು. ಅವರನ್ನು ಹಿಡಿಯುವುದಕ್ಕೆ ಪ್ರಯತ್ನ ...ಪಟ್ಟನು. ಅವರು ಅವನನ್ನು ಬಹಳವಾಗಿ ಹೊಡೆದು ಗಾಯಮಾಡಿದಾಗ್ಯೂ ಅವನು ಅವರಿಬ್ಬರನ್ನೂ ಹಿಡಿದು ಪುನಃ ಬಂಧನದೊಳಕ್ಕೆ ಕಳುಹಿಸಿದನು.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮೈಮನ್‌ಸಿಂಗ್ ಪಟ್ಟಣದಿಂದ ಸರ್ಕಾರಿ ಖಜಾನೆಯಲ್ಲಿ ಲೆಕ್ಕ ತನಿಖೆಮಾಡಿದಾಗ 25,000 ರೂಪಾಯಿ ಕಾಣದೆ ಹೋಯಿತು. ಖಜಾಂಚಿಯಾಗಿದ್ದ ರೇವತಿ ಮೋಹನ ಕಾಲೂಕ್ದಾರನೆಂಬವನನ್ನು ಪ್ರಶ್ನೆಮಾಡಿದಾಗ ಅವನು ಮೂರ್ಛೆಹೊಂದಿ ಬಿದ್ದುಬಿಟ್ಟನು. ಅವನಿಗೆ ಪ್ರಜ್ಞೆಯುಂಟಾಗದೆ ಇದ್ದದ್ದರಿಂದ ಅವನನ್ನು ಮನೆಗೆ ಸಾಗಿಸಿ ಸುತ್ತಲೂ ಪೋಲೀಸ್ ಪಹರೆ ಇಡಿಸಿದ್ದರು. ಕೆಲವು ದಿನಗಳ ಮೇಲೆ ಡಾಕ್ಟರ ಅಭಿಪ್ರಾಯದಂತೆ ಅವನನ್ನು ಜೈಲಿಗೆ ಸಾಗಿಸಿ ಅಲ್ಲಿ ಚಿಕಿತ್ಸೆ ಮಾಡಿಸುತ್ತಾ ಮೊಕದ್ದಮೆ ನಡಿಸಿದಾರೆ. ಇದಲ್ಲದೆ ಆ ಖಜಾನೆಯಲ್ಲಿ ಎರಡು ಬ್ಯಾಂಕುಗಳ ರಿಜರ್ವ್ ಹಣಗಳು ಇಟ್ಟಿದ್ದದ್ದು ಕೂಡ ಮಾಯವಾಗಿರುತ್ತವೆ. ಈಗ ಅವರು ದಾವಾ ಮಾಡಿದಾರೆ. ಸರ್ಕಾರದವರು ಆ ಖಜಾಂಚಿಯ ಜಾಮೀನುದಾರರಿಗೆ ನೋಟೀಸ್ ಕೊಟ್ಟು ಹಣ ಕೊಡಿಸುವ ಏರ್ಪಾಡು ನಡಿಸಿದಾರೆ.

ವಿಲಾಯತಿಯಲ್ಲಿ ಮಹನೀಯರ ಲೋಹ ಪ್ರತಿಮೆಗಳನ್ನು ತಯಾರುಮಾಡುವುದರಲ್ಲಿ ಪ್ರಖ್ಯಾತಿಪಡೆದಿರುವ ಮಿ|| ಹರ್ಬರ್ಟ್ ಹ್ಯಾಮ್ಸ್‌ಟನ್ ಎಂಬ ಕಾರೀಗಾರನು ಕಳೆದ ವಾರ ಹಿಂದುಸ್ಥಾನಕ್ಕೆ ಬಂದಿರುತ್ತಾನೆ. ಈತನು ನಮ್ಮ ವೈಸ್‌ರಾಯರವರ ಪ್ರತಿಮೆಯನ್ನು ಬೆಂಕಿಪುರಕ್ಕೆ ಮಾಡಿ ಕೊಟ್ಟಿರುವನು. ಇನ್ನೂ ಮೂರು ಪ್ರತಿಮೆಗಳನ್ನು ಮಾಡಿ ತಂದಿದಾನೆ. ಲೇಡಿ ಹಾರ್ಡಿಂಗ್ ರವರ ಪ್ರತಿಮೆಯು ಸ್ತ್ರೀಯರ ವೈದ್ಯ ವಿದ್ಯಾಶಾಲೆಯಲ್ಲಿ ಪ್ರತಿಷ್ಠೆ ಮಾಡಲ್ಪಡುವುದು. ರಾಜಪುರದಲ್ಲಿ ಪ್ರತಿಷ್ಠೆಯಾಗುವ ನಮ್ಮ ಚಕ್ರವರ್ತಿಯವರ ಭಾವಪ್ರತಿಮೆಯನ್ನೂ ಈ ಕಾರೀಗಾರನೇ ತಯಾರುಮಾಡಿರುತ್ತಾನೆ. ಇದಲ್ಲದೆ ಬರ್ದವಾನ್ ಮಹಾರಾಜರ ಪ್ರತಿಮೆಯೂ ಈತನಿಂದ ಮಾಡಲ್ಪಟ್ಟಿದೆ. ಈ ಕಾರೀಗಾರನು ಹಿಂದುಸ್ಥಾನದಲ್ಲಿ 3-4 ತಿಂಗಳು ಸಂಚಾರ ಮಾಡುವನೆಂದೂ, ಮದರಾಸ್ ಅಧಿಪತ್ಯದಲ್ಲೂ 2-3 ವಾರ ಸಂಚರಿಸುವನೆಂದೂ ತಿಳಿದು ಬರುತ್ತದೆ.

ತಿನ್ನವೆಲ್ಲಿ ಜಿಲ್ಲಾ ಅಂಬಾ ಸಮುದ್ರದ ಇಬ್ಬರು ಪೋಲೀಸ್ ಇನ್ಸ್‌ಪೆಕ್ಟರುಗಳು ಪೋಲೀಸಿನವರ ಸಮೇತ ಕಲ್ಲಿದಕುರುಚಿ ಎಂಬ ಭಾರೀ ಗ್ರಾಮದ ಬಳಿ ಒಂದು ತೋಪಿನಲ್ಲಿ ಅಡಗಿಕೊಂಡಿದ್ದು ಸಮರಾತ್ರಿಯಲ್ಲಿ ಗ್ರಾಮದೊಳಕ್ಕೆ ಪ್ರವೇಶಿಸಿ ಒಂದು ಮನೆಯನ್ನು ಏಕಕಾಲದಲ್ಲಿ ನುಗ್ಗಿ ಶೋಧನೆಮಾಡಿದರು. ಅಲ್ಲಿ ಆಗ ಅನೇಕರು ಸೇರಿಕೊಂಡು ಜೂಜಾಡುತ್ತಿದ್ದರು. ಅವರನ್ನೆಲ್ಲಾ ಹಿಡಿಯಬೇಕೆಂದು ಪೋಲೀಸಿನವರು ಸಾಹಸಪಟ್ಟಿದ್ದರಲ್ಲಿ ಎಂಟು ಮಂದಿ ಮಾತ್ರವೇ ಸಿಕ್ಕಿಬಿದ್ದರು. ಸುಮಾರು 250 ರೂಪಾಯಿ ತನಕ ಅವರ ಬಳಿ ಇದ್ದಿತು. ತಾ. 18 ರಲ್ಲಿ ಅವರನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ಅವರ ಮೇಲೆ ಮೊಕದ್ದಮೆ ಮಾಡಿದ್ದರಲ್ಲಿ 100 150 ರೂಪಾಯಿನಂತೆ ಜುಲ್ಮಾನೆ ವಿಧಿಸಲ್ಪಟ್ಟಿತು. ಈ ಜುಲ್ಮಾನೆ ಒಟ್ಟು 1,000 ಆಗಿರುತ್ತದೆ. ಆ ಜೂಜುಕೋರರಲ್ಲಿ ಹಲವರು ಮದರಾಸ್, ಕಂಚಿ, ಮಧುರೆ ಮೊದಲಾದ ಕಡೆಗಳಿಂದ ಅಲ್ಲಿಗೆ ಹೋಗಿದ್ದವರೆಂದು ಗೊತ್ತಾಯಿತು.

ಮದರಾಸ್ ಪಟ್ಟಣದಲ್ಲಿ ಒಂದಾನೊಂದು ಧರ್ಮದ ಆಯುರ್ವೇದ ವೈದ್ಯಶಾಲೆಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ಇಂಗ್ಲಿಷ್ ವೈದ್ಯರಾದ ಡಾಕ್ಟರ್ ಕೃಷ್ಣಸ್ವಾಮಿ ಅಯ್ಯಂಗಾರ್‌ರನ್ನು ಇಂಗ್ಲಿಷ್ ವೈದ್ಯ ಮಂಡಲಿಯವರು ತಮ್ಮ ಗುಂಪಿನಿಂದ ಹೊರಗೆ ಹಾಕಿಬಿಟ್ಟಿದಾರೆ. ಇದೇ ಪ್ರಕಾರ ಬೊಂಬಾಯಿ ಪಟ್ಟಣದಲ್ಲಿ ಇಂಗ್ಲಿಷ್ ವೈದ್ಯವನ್ನು ಕಲಿತು ಒಂದು ಆಯುರ್ವೇದ ವೈದ್ಯಶಾಲೆಯ ಅಧ್ಯಕ್ಷರಾಗಿರುವ ಡಾಕ್ಟರ್ ಪೋಪಟ್ ಪ್ರಭುರಾಮ ವೈದ್ಯರೆಂಬವರನ್ನು ಆ ಕೆಲಸ ಬಿಟ್ಟುಬಿಡದಿದ್ದರೆ ಅವರನ್ನು ಅಲ್ಲಿನ ಇಂಗ್ಲಿಷ್ ವೈದ್ಯ ಮಂಡಲಿಯಿಂದ ವಜಾ ಮಾಡಿಬಿಡುತ್ತೇವೆಂದು ನೋಟಿಸ್ ಕೊಟ್ಟು ಕಳುಹಿಸಿದಾರೆ. ಈ ಪ್ರಕಾರ ಮದರಾಸಿನಲ್ಲೂ ಬೊಂಬಾಯಿನಲ್ಲೂ ಇಂಗ್ಲಿಷ್ ವೈದ್ಯಕರು ಹಿಂದುಸ್ಥಾನದ ವೈದ್ಯ ಚಿಕಿತ್ಸಾದಿಗಳ ವಿಷಯದಲ್ಲಿ ದುರಭಿಪ್ರಾಯ ಪಟ್ಟಿರುವಂತೆಯೂ, ದೇಶೀಯ ವೈದ್ಯ ವಿದ್ಯೆಗಳನ್ನು ಅಳಿಸುತ್ತಿರುವಂತೆಯೂ ಆಕ್ಷೇಪಣೆಯುಳ್ಳ ವಾಕ್ಯಗಳು ದೇಶೀಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವವು.

ಪುದುಕೋಟೆಯ ರಾಜರು ಆಸ್ಟ್ರೇಲಿಯಾದಿಗೆ ಹೋಗಿ ಅಲ್ಲಿದ್ದ ಒಬ್ಬ ಯೂರೋಪ್ಪಿಯನ್ ಯುವತಿಯನ್ನು ಮೆಚ್ಚಿ ಮದುವೆ ಮಾಡಿಕೊಂಡು ಕಳೆದ ವಾರ ಅಲ್ಲಿಂದ ರಾಣಿ ಸಹಿತ ಪುದುಕೋಟೆಗೆ ವಾಪಸು ಬಂದರು. ಪುದುಕೋಟೆಯಲ್ಲಿ ಪ್ರಜೆಗಳೂ ಸರ್ಕಾರಿ ಅಧಿಕಾರಿಗಳೂ ಸೇರಿ ಅತ್ಯಂತ ವೈಭವದಿಂದ ತಮ್ಮ ದೊರೆಯನ್ನೂ ರಾಣಿಯನ್ನೂ ಎದುರುಗೊಂಡು ಉತ್ಸವಗಳನ್ನು ನಡಿಸಿದರು. ಅರಮನೆಯಲ್ಲಿ ಆರತಕ್ಷತೆಗಳೂ, ದೇವಸ್ಥಾನಗಳಲ್ಲಿ ಪೂಜೆ ಅಭಿಷೇಕ ಉತ್ಸವ ಶ್ರೇಯಃಪ್ರಾರ್ಥನೆಗಳೂ ಜರುಗಿದವು. ಒಂದು ದರ್ಬಾರ್ ನಡೆದು ಪ್ರಜೆಗಳು ತಮ್ಮ ರಾಜದಂಪತಿಗಳಿಗೆ ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿ, ಅಂಥಾ ವಿವಾಹ ಜರುಗಿದದ್ದಕ್ಕಾಗಿ ತಮ್ಮ ಆನಂದವನ್ನು ಪ್ರಕಾಶಪಡಿಸಿದರು. ರಾಜರವರು ಸಂತೋಷಪಟ್ಟು ಆ ಉತ್ಸವದ ಜ್ಞಾಪಕಾರ್ಥವಾಗಿ ಕೆಲವು ಕಂದಾಯಗಳನ್ನೂ ಬಾಕಿಗಳನ್ನೂ ಮಾಫ್ ಮಾಡಿ, ಹಲವು ರಿಯಾಯತಿಗಳನ್ನು ಪ್ರಜೆಗಳಿಗೆ ತೋರಿಸಿ ಸ್ಯಾಂಕ್ಷನ್ ಮಾಡಿದ್ದಲ್ಲದೆ ಸ್ಕೂಲು ಆಸ್ಪತ್ರೆಗಳನ್ನು ಹೆಚ್ಚಿಸುವುದಕ್ಕೆ ಅಪಾರ ಹಣವನ್ನು ದಯಪಾಲಿಸಿದರು.

ಹಿಂದುಸ್ಥಾನದ ಪಶ್ಚಿಮ ಘಟ್ಟಗಳಲ್ಲಿ ಲೋನಾವಲಾ ಎಂಬ ಸ್ಥಳದಲ್ಲಿ ಭಾರೀ ಕಾಮಗಾರಿಗಳನ್ನು ನಡಿಸಿ ನೀರು ಧುಮುಕುವಂತೆ ಮಾಡಿ ಅದರ ಕೆಳಗೆ ಯಂತ್ರಗಳನ್ನಿಟ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ನೂರಾರು ಮೈಲಿಗಳ ದೂರ ತಂತಿಗಳ ಮೂಲಕ ಬೊಂಬಾಯಿಗೆ ವಿದ್ಯುಚ್ಛಕ್ತಿಯನ್ನು ಸಾಗಿಸಿ ಕಾರ್ಖಾನೆಗಳಿಗೆ ಬಳಕೆಮಾಡುತ್ತಿದಾರೆ. ಈ ಕಂಪನಿಯನ್ನು ಸರ್ ದೊರಾಬ್ ಟಾಟಾ ಎಂಬ ಪಾರ್ಸಿ ದೊಡ್ಡಮನುಷ್ಯರು ಮುಖಂಡರಾಗಿ ನಿಂತು ನಡಿಸುವರು. 30,000 ಕುದುರೆ ಬಲದಷ್ಟು ಶಕ್ತಿಯನ್ನು ಬೊಂಬಾಯಿಗೆ ಸಾಗಿಸಿ ಖರ್ಚು ಮಾಡಬೇಕೆಂಬುವುದು ಕಂಪನಿಯವರ ಉದ್ದೇಶ. ಸದ್ಯಕ್ಕೆ ಅದರಲ್ಲಿ ಮುಕ್ಕಾಲು ಭಾಗದಷ್ಟು ಶಕ್ತಿಯನ್ನು ಸಾಗಿಸಿಕೊಂಡುಹೋಗಿ ಕಾರ್ಖಾನೆಗಳಿಗೆ ಖರ್ಚು ಮಾಡುತ್ತಿರೋಣದರಿಂದ ತಿಂಗಳೊಂದಕ್ಕೆ ಒಂದೂವರೆ ಲಕ್ಷ ರೂಪಾಯಿ ಹುಟ್ಟುವಳಿ ಆಗುತ್ತಿದೆ. ಈ ಕಂಪನಿಯ ಅರಸೀ ವಾರ್ಷಿಕ ಮೀಟಿಂಗು ಕಳೆದ ವಾರ ನಡೆದು ಷೇರುದಾರರಿಗೆ ಈ ವರುಷದ ಅಂತ್ಯದವರೆಗೆ ಶೇಕಡಾ 4 ರಂತೆ ಬಡ್ಡಿ ಬಟವಾಡೆ ಮಾಡತಕ್ಕದ್ದೆಂದು ತೀರ್ಮಾನಮಾಡಿದರು.

ಮುಲ್ತಾನ್ ಪಟ್ಟಣದಲ್ಲಿ ಹಿಂದೂ ಮಹಮ್ಮದೀಯರಿಗೆ ವಿಶೇಷವಾದ ವೈಷಮ್ಯಗಳುಂಟಾಗಿ ಮಹಮ್ಮದೀಯರು ಅನೇಕ ಅತ್ಯಾಚಾರಗಳನ್ನು ನಡಿಸಿದರು. ಹಿಂದೂ ಪ್ರಜೆಗಳಲ್ಲಿ ಕೆಲವು ಮುಖಂಡರು ಸೇರಿ ಈ ಅತ್ಯಾಚಾರಗಳ ಪೂರ್ವೋತ್ತರವನ್ನು ವಿಚಾರಣೆ ಮಾಡಿ ಲೆಫ್ಟಿನೆಂಟ್ ಗವರ್ನರವರಿಗೆ ಒಂದು ರಿಪೋರ್ಟನ್ನು ಬರೆದು ಒಪ್ಪಿಸಿದಾರೆ. ಅದರಲ್ಲಿ ಅವರು ಕಾಣಿಸಿರುವ ಮುಖ್ಯ ವಿಷಯಗಳೇನೆಂದರೆ—ಮಹಮ್ಮದೀಯರಿಗೆ ತಿನ್ನುವುದಕ್ಕೇನೂ ಕೊರತೆ ಇರಲಿಲ್ಲ. ಹಿಂದು ಸಾಹುಕಾರರುಗಳೂ, ವರ್ತಕರುಗಳೂ ಅವರಿಗೆ ಸಿಟ್ಟುಬರುವಂಥಾ ಕೃತ್ಯಗಳೇನೂ ಮಾಡಲಿಲ್ಲ. ಮೊಕದ್ದಮೆಗಳು ಕೆಡುವುದಕ್ಕೆ ಹಿಂದುಗಳು ಹೇಳಿ ಒದಗಿಸಿದ ಸಾಕ್ಷಿಗಳೂ ರುಜುವಾತುಗಳೂ ಕೊರತೆಯಾಗಲಿಲ್ಲ. ಪೋಲೀಸಿನವರ ಆಲಸ್ಯವೇ ಇದಕ್ಕೆಲ್ಲಾ ಕಾರಣವಾಗಿದೆ. ಇನ್ನು ಮುಂದೆ ಅಂಥಾ ಅತ್ಯಾಚಾರಗಳಿಗೆ ಅವಕಾಶವುಂಟಾಗಲಾರದೆಂಬ ಭರವಸೆಯುಂಟು. ಹಿಂದೂ ಮತ್ತು ಮಹಮ್ಮದೀಯರ ಮುಖಂಡರು ಸೇರಿ ಗಲಭೆಯೂ ಕಳವಳವೂ ಉಂಟಾಗಿರುವ ಸ್ಥಳಗಳಿಗೆ ಹೋಗಿ ಪ್ರಜೆಗಳಿಗೆ ಧೈರ್ಯ ಸಮಾಧಾನಗಳನ್ನು ಹೇಳುವಂತೆ ಏರ್ಪಾಡಾಗಬೇಕು ಎಂಬುದು.

ವಿದೇಶದ ವೃತ್ತಾಂತಗಳು.

ಕೆನಡಾ ರಾಜ್ಯದವರು ಯುದ್ಧದ ಖರ್ಚಿಗೆ 15 ಕೋಟಿ ರೂಪಾಯನ್ನು ಸಾಲಮಾಡಿ ಒದಗಿಸಬೇಕೆಂದು ಹಣವನ್ನು ಕೂಡಿಸುತ್ತಿದಾರೆ.

ಆಸ್ಟ್ರೇಲಿಯಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದವರು ಇದ ವರೆಗೆ ಎರಡೂವರೆ ಲಕ್ಷ ಸೈನ್ಯವನ್ನು ಕೂಡಿಸಿ ಅಲ್ಲಿಂದ ಕಳುಹಿಸಿಕೊಟ್ಟರು. ಈಗ ಮತ್ತೆ 50,000 ಸೈನ್ಯವನ್ನು ಯುದ್ಧಭೂಮಿಗೆ ಕಳುಹಿಸುವ ಏರ್ಪಾಡು ನಡೆಯುತ್ತಿದೆ.

ಚೀನಾಗೆ ಸೇರಿದ ಷಾಂಘಾಯಿ ಪಟ್ಟಣದಲ್ಲಿ ಜರ್ಮನಿಯವರು ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಸಿದ್ಧಪಡಿಸಿದ್ದ 130 ಪಿಸ್ತೂಲುಗಳೂ, 2,000 ತೋಟಾಗಳೂ ಪೋಲೀಸಿನವರಿಗೆ ಸಿಕ್ಕಿದವು. ಅವನ್ನೂ ಅವರು ಔಷಧಗಳ ಪೆಟ್ಟಿಗೆಗಳಲ್ಲಿ ಇಟ್ಟಿದ್ದರು.

ಜರ್ಮನಿಯವರು ಸಿಡಿಮದ್ದಿನ ಗುಂಡುಗಳಿಂದ ಅನಾಹುತಗಳನ್ನು ನಡಿಸಿಯಾರೆಂಬ ಹೆದರಿಕೆಯಿಂದ ಅಮೇರಿಕದ ಸರ್ಕಾರದವರು ವಾಷಿಂಗ್‌ಟನ್ ಪಟ್ಟಣಕ್ಕೆ ಹೋಗುವ ಮಾರ್ಗ, ಸೇತುವೆ, ರೈಲ್‌ಗಾಡಿ, ಸುರಂಗ ಮಾರ್ಗ ಮೊದಲಾದವುಗಳನ್ನೆಲ್ಲಾ ಪಹರೆ ಇಟ್ಟು ಕಾಪಾಡಿಕೊಳ್ಳುತ್ತಿದಾರೆ.

ಜರ್ಮನಿಯವರು ಆಕ್ರಮಿಸಿಕೊಂಡಿರುವ ಬೆಲ್ಜಿಯಮ್ ಅಧಿಪತ್ಯದ ಎಲ್ಲೆ ಕಟ್ಟುಗಳ ಸುತ್ತಲೂ ವಿದ್ಯುಚ್ಛಕ್ತಿಯ ತಂತಿಗಳುಳ್ಳ ಬೇಲಿಗಳನ್ನು ಕಟ್ಟಿ ಯಾರೂ ಹೊರಗೆ ಹೋಗದಂತೆ ಮಾಡಿದಾರೆ. ಹಾಗೆ ಹೋದ ಅನೇಕ ಜನರು ಆ ತಂತಿಗಳಿಗೆ ಸೋಕಿದ ಕೂಡಲೇ ಸತ್ತುಹೋದರು ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಓಂಟೇರಿಯೋ ಜಿಲ್ಲೆಗೆ ಸೇರಿದ ಪ್ಯಾರಿ ಸೌಂಡ್ ಎಂಬ ಊರಿನಲ್ಲಿ ಮದ್ದು ಗುಂಡು ತಯಾರಾಗುವ ಐದು ಕಾರ್ಖಾನೆಗಳೊಳಗೆ ಸಿಡಿಮದ್ದಿನ ಗುಂಡುಗಳು ಏಕಕಾಲದಲ್ಲಿ ಹಾರಿ ಅನಾಹುತ ನಡೆದು ಎಲ್ಲಾ ನಾಶವಾಯಿತು. ಶತ್ರುಪಕ್ಷದವರಿಂದಲೇ ಈ ನಷ್ಟ ಸಂಭವಿಸಿರಬೇಕೆಂಬ ಅನುಮಾನ ಉಂಟಾಗಿದೆ.

ಜರ್ಮನಿಯವರು ಲೀಲ್ ಪಟ್ಟಣಕ್ಕೆ ಗುಂಡುಗಳನ್ನು ಹಾಕಿದ್ದರಿಂದ ಏಳು ಕೋಟಿ ಪೌಂಡುಗಳ ಆಸ್ತಿಪಾಸ್ತಿಗಳು ಆ ನಗರದಲ್ಲಿ ಹಾಳಾದವು. ಇದಲ್ಲದೆ ಜರ್ಮನಿಯವರು ಲೀಲ್, ರೌಬೇಕ್ಸ್, ಟೌರ್‌ಕೋಯಿಂಗ್ ನಗರಗಳಲ್ಲಿ ಯುದ್ಧದ ತೆರಿಗೆಯನ್ನು ಹಾಕಿ ಕೋಟ್ಯಂತರ ದ್ರವ್ಯವನ್ನು ವಸೂಲ್ಮಾಡುತ್ತಿರುವರು ಎಂದು ಆಮ್‌ಸ್ಟರ್‌ಡಾಮ್ ಪಟ್ಟಣದ ವರ್ತಮಾನ ಪತ್ರಿಕೆಯು ತಿಳಿಸುತ್ತದೆ.

ಕಳೆದ ಸೆಪ್ಟೆಂಬರ್ ತಾ. 19 ರಲ್ಲಿ 300 ಹಿಂದುಸ್ಥಾನದ ಸೈನಿಕರನ್ನು ಸಾಗಿಸಿಕೊಂಡು ಹೋಗುತ್ತಿದ್ದ ರಾಮಜಾನ್ ಎಂಬ ಬ್ರಿಟಿಷ್ ಹಡಗಿಗೆ ಈಜಿಯನ್ ಕಡಲಿನಲ್ಲಿ ಜರ್ಮನಿಯ ಸಬ್‌ಮೆರೀನ್ ಎಂಬ ಹಡಗು ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ಮುಳುಗಿಸಿಬಿಟ್ಟಿತು. ಮುನ್ನೂರು ಸೈನಿಕರಲ್ಲಿ 75 ಮಂದಿ ಬದುಕಿ ಬಂದರು. ಅಂಟಿಸೈಕೆರಾ ಎಂಬ ತೀರಪಟ್ಟಣಕ್ಕೆ 28 ಮಂದಿ ತಮ್ಮ ಸ್ವಂತ ದೋಣಿಗಳಲ್ಲಿ ಹೋಗಿ ಬದುಕಿಕೊಂಡರು.

ಜರ್ಮನಿಯವರ ಪಾಲಿಗೆ ಸಿಕ್ಕಿರುವ ಪೋಲೆಂಡ್ ಸೀಮೆಗಳಲ್ಲಿ ಸುಮಾರು ಮೂರು ಕೋಟಿ ದೇಶೀಯ ಪ್ರಜೆಗಳು ಜೀವನವಿಲ್ಲದೆ ನಾನಾ ಸಂಕಟಗಳಿಗೆ ಗುರಿಯಾಗಿದಾರೆ. ಪ್ರಪಂಚದ ಇತರ ಭಾಗಗಳಲ್ಲಿರುವ ಧರ್ಮಾತ್ಮರು ದ್ರವ್ಯ ಸಹಾಯ ಮಾಡುತ್ತಿರೋಣದರಿಂದ ಒಂದು ಕೋಟಿ ಹತ್ತು ಲಕ್ಷ ಬೆಲ್ಜಿಯನ್ ಪ್ರಜೆಗಳು ಬದುಕಿಕೊಂಡಿರುವರೆಂದೂ, ಅವರು ಸಹಾಯ ಮಾಡಿ ಪೋಲೆಂಡಿನ ಪ್ರಜೆಗಳನ್ನೂ ಕಾಪಾಡಬೇಕಾಗಿದೆ ಎಂದೂ ಅಮೇರಿಕದಲ್ಲಿ ಧರ್ಮ ಫಂಡನ್ನು ಕೂಡಿಸುತ್ತಿದಾರೆ.

ಯುದ್ಧಕ್ಕೆ ಮೊದಲು ಗ್ರೇಟ್ ಬ್ರಿಟನ್‌ನಲ್ಲಿ ಸರ್ಕಾರದ ನೌಕರನಿಗೆ ವಾರಕ್ಕೆ 41¼ ರೂಪಾಯಿ ಸಂಬಳವಿತ್ತು. ಈಗ ಅವನಿಗೆ 83¼ ರೂಪಾಯಿ ಸಂಬಳ ಸಲ್ಲುತ್ತಿದೆ. ಇದಲ್ಲದೆ ಇನ್‌ಜನಿಯರಾಗಿ ಅವನನ್ನು ಸೇರಿಸಿಕೊಂಡರೆ ದಿನಕ್ಕೆ 1⅓ ರೂಪಾಯಿ ಬೇರೆ ಸಲ್ಲಬೇಕು. ಇದಲ್ಲದೆ ಅವನು ಯುದ್ಧಭೂಮಿಗೆ ಹೋಗದೆ ಸ್ವದೇಶದಲ್ಲೇ ಇದ್ದಾಗ್ಯೂ ಅವನ ಹೆಂಡತಿಗೆ ಬೇರೆ ಜೀವನಾಂಶದ ಹಣ ಸಲ್ಲಬೇಕಾಗಿದೆ. ಈಗ ಬ್ರಿಟಿಷ್ ಸರ್ಕಾರದವರು ಈ ರೀತಿ ಖಜಾನೆಯ ಹಣ ನೀರಿನೋಪಾದಿ ಖರ್ಚಾಗುತ್ತಿರುವುದನ್ನು ಕಡಮೆ ಮಾಡಬೇಕೆಂದು ಯೋಚಿಸಿದಾರೆ.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಮಿ|| ಕಿಂಗ್ ಎಂಬ ಮೆಂಬರು ಇಂಡಿಯಾ ಸ್ಟೇಟ್ ಸೆಕ್ರಿಟರಿಯವರನ್ನು ಕುರಿತು—ಹಿಂದುಸ್ಥಾನದಲ್ಲಿರುವ ಸಾಮಂತರಾಜರು ಯುದ್ಧಕ್ಕಾಗಿ ಎಷ್ಟು ಹಣ, ಎಷ್ಟು ಸೈನ್ಯ, ಎಷ್ಟು ಪದಾರ್ಥಗಳನ್ನು ಕೊಟ್ಟಿದಾರೆಯೆಂದು ತಿಳಿಸಬೇಕೆಂದು ಕೇಳಿದ್ದಕ್ಕೆ ಸೆಕ್ರಿಟರಿಯವರು ಜವಾಬು ಹೇಳಿದ್ದೇನೆಂದರೆ—ನೀವು ಕೇಳುವ ವಿಚಾರವನ್ನೆಲ್ಲಾ ತಿಳಿಸುವುದು ಸಾಧ್ಯವಲ್ಲ. ಇವೆಲ್ಲಾ ಸರ್ಕಾರದ ಹುಕುಮುಗಳಲ್ಲಿ ಆಗಿಂದಾಗ್ಗೆ ಪ್ರಕಟಮಾಡಲ್ಪಟ್ಟಿದೆ. ಸಾಮಂತರಾಜರುಗಳು ಯುದ್ಧದ ಖರ್ಚಿಗೆ ಒಂದೂವರೆ ಕೋಟಿ ರೂಪಾಯನ್ನೂ, ಆಸ್ಪತ್ರೆ ಮೊದಲಾದ ಧರ್ಮ ಕೆಲಸಗಳಿಗೆ 45 ಲಕ್ಷ ರೂಪಾಯನ್ನೂ ಕೊಟ್ಟು ಸಹಾಯಮಾಡಿರುತ್ತಾರೆ.

ಯುದ್ಧದ ವಿಷಯದಲ್ಲಿ ವರ್ತಮಾನ ಪತ್ರಿಕೆಗಳಿಗೆ ಸಮಾಚಾರಗಳನ್ನು ಕೊಡುವುದಕ್ಕೂ, ಅಂಚೆಯ ಮೇಲೆ ಹೋಗಿ ಬರುವ ಕಾಗದ ಪತ್ರಗಳನ್ನು ಪರೀಕ್ಷೆ ಮಾಡುವುದಕ್ಕೂ ಬ್ರಿಟಿಷ್ ಗವರ್ನ್‌ಮೆಂಟಿನವರು ಎಷ್ಟು ಹಣ ಖರ್ಚು ಮಾಡುತ್ತಾರೆಂದು ಮಿ|| ಆರ್ಥರ್ ಲಿಂಚ್ ಎಂಬ ಮೆಂಬರು ಪಾರ್ಲಿಮೆಂಟಿನಲ್ಲಿ ಹೋಮ್ ಸೆಕ್ರಿಟರಿಯವರನ್ನು ಕೇಳಿದ್ದಕ್ಕೆ ಅವರು ಜವಾಬು ಕೊಟ್ಟದ್ದೇನೆಂದರೆ—ಈ ಹೊಸ ಇಲಾಖೆಯಲ್ಲಿ 122 ಮಂದಿ ಅಧಿಕಾರಿಗಳಿದಾರೆ. ಜವಾನರಿಗೆ ವಾರಕ್ಕೆ 8½ ರೂಪಾಯಿ ಸಂಬಳ. ಅಧಿಕಾರಿಗಳಿಗೆ ವರುಷಕ್ಕೆ 15 ಸಾವಿರ ರೂಪಾಯಿ ಸಂಬಳ. ಕಳೆದ ಸೆಪ್ಟೆಂಬರ್ ತನಕ ಸಂಬಳಗಳಲ್ಲದೆ ಈ ಇಲಾಖೆಗೆ ಒಂದು ವರುಷದಲ್ಲಿ 68,205 ರೂಪಾಯಿ ಖರ್ಚಾಗಿದೆ ಎಂಬುದು.

ಜರ್ಮನಿಯವರು ಕೈಸೆರೆ ಹಿಡಿದಿರುವ ಮಿತ್ರಮಂಡಲಿಯವರ ಸೈನಿಕರನ್ನು ಕಷ್ಟಪಡಿಸುತ್ತಿದಾರೆಂದು ತಿಳಿಸಲ್ಪಟ್ಟಿದೆ. ಅವರು ರಷ್ಯಾ ಸೈನಿಕರಿಗೆ ಅನ್ನಹಾಕಿ ಬಟ್ಟೆ ಕೊಡಲಾರದೆ ಕೆಲಸ ನಡೆಯುವ ಕಾರ್ಖಾನೆಗಳಿಗೂ ಕಂಟ್ರ್ಯಾಕ್ಟರುಗಳಿಗೂ ಆ ಕೈಸೆರೆ ಹಿಡಿದವರನ್ನು ಒಪ್ಪಿಸಿ ಅವರು ಆ ಸೈನಿಕರಿಂದ ಕೆಲಸ ಮಾಡಿಸಿಕೊಂಡು ಅವರಿಗೆ ಅನ್ನ ಬಟ್ಟೆ ನಡಿಸುವಂತೆ ಏರ್ಪಾಡು ಇಟ್ಟಿದಾರೆ. ಇಂಥಾ ಒಬ್ಬೊಬ್ಬ ಸೈನಿಕನನ್ನು ಒಪ್ಪಿಸಿದರೆ ತಲೆಗೆ ಇಷ್ಟೆಂದು ಕಾರ್ಖಾನೆಯವರಿಂದಲೂ ಕಂಟ್ರ್ಯಾಕ್ಟರುಗಳಿಂದಲೂ ರುಸುಮನ್ನು ವಸೂಲ್ಮಾಡಿಕೊಳ್ಳುವರು. ಈ ಕೃತ್ಯವು ಜೀತಗಾರನನ್ನು ಕೊಂಡು ಮಾರುವ ವ್ಯಾಪಾರವಾಯಿತು. ಇದಲ್ಲದೆ ಅಂಥಾ ಕೈಸೆರೆ ಹಿಡಿಯಲ್ಪಟ್ಟ ಸೈನಿಕರಿಂದ ರಸ್ತೆಗಳನ್ನು ಹಾಕುವುದು, ಚರಂಡಿಗಳನ್ನು ಕಟ್ಟುವುದು, ಕಂದಕಗಳನ್ನು ತೋಡುವುದು, ಈ ಮೊದಲಾದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದಾರೆ.

ನೋಟೀಸ್.

ಸಮಸ್ತರಿಗೂ ತಿಳಿಯಪಡಿಸುವುದೇನಂದರೆ—ಚಿತ್ರದುರ್ಗದ ಮುನ್ಸೀಫ್ ಕೋರ್ಟು ಅಸಲು 1915-16 ನೇ ಸಾಲು 336 ನೇ ನಂಬರ್ ವ್ಯವಹಾರದಲ್ಲಿ ಹೊಳಲ್ಕೆರೆ ತಾಲ್ಲೂಕು ಹೊರಕೆರೆ ದೇವಪುರದ ಮುರಂಗಪ್ಪನ ಮಗ ತಿಮ್ಮಪ್ಪ ವಗೈರೆ ವಾದಿಗಳು ಹೊರಕೆರೆ ದೇವರಪುರದಲ್ಲಿರುವ ಬಸವಂತರಿ ದೇವಸ್ಥಾನದ ಆದಾಯವನ್ನು ನಡಿಸುವವರಿಗೆ ಪ್ರತಿವಾದಿ ಹೊರಕೆರೆ ದೇವರಪುರದ ಮುರಂಗಪ್ಪನ ಮಗ ರಂಗಪ್ಪನಿಂದ 113-0-0 ರೂಪಾಯಿಗಳನ್ನು ಬಂದಾಗಿಕೊಳ್ಳಲು ದಾವಾ ದಾಖಲ್ ಮಾಡಿರುತ್ತಾರೆ ಸದರಿ ದಾವಾ ತಾರೀಖು 22-12-1915 ಕ್ಕೆ ಹಿಯರಿಂಗ್ ಇಡಲ್ಪಟ್ಟಿರುತ್ತೆ ಮೇಲ್ಕಂಡ ಸಿವಿಲ್ ವ್ಯಾಜ್ಯದಲ್ಲಿ ಕಕ್ಷಿಗಾರರಾಗಿ ಸೇರಲು ಇಷ್ಟವುಳ್ಳವರು ಹಿಯರಿಂಗ್ ತಾರೀಖು ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ರೂಬರೂಬಲ್ಲಿ ಹಾಜರಾಗತಕ್ಕದ್ದು. [267-1]

ತಾ॥ 24-11-15. ಎಂ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್,
ಚಿತ್ರದುರ್ಗ. ಮುನ್ಸೀಫ್.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ.

ಸುಂದರವಾದ ಇಂಗ್ಲೀಷು ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 2-12-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ಪಕ್ಕದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸ್ವಲ್ಪ ಮಾತ್ರ ಕ್ರಯಕ್ಕೆ ಕೊಡುತ್ತೇವೆ. ಈ ಗಡಿಯಾರ ಕಂಪೆನ್‌ಸೇಷನ್ ಬಲಿಷ್ಟವಾದ ಸಾಮಾನುಗಳಿಂದಲೂ ನಾಣ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ಧೊರೆಗಳು ಕೊಂಡುಕೊಳ್ಳುತ್ತಾರೆ. ಇಂಡಿಯಾ ದೇಶದಲ್ಲಿ ಪ್ರತಿದಿನ ನೂರಾರು ಗಡಿಯಾರಗಳು ಖರ್ಚಾಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಿರಿ.

ಬಹುಮಾನ ಪಟ್ಟಿ:—(1) ಸರಪಣಿ, (2) ಕಂಪಾಸ್, (3) ಜರ್ಮನ್ ಸಿಲ್ವರ್, (4) ಕೈ ಉಂಗುರ, (5) ಪಾಟು ಗುಂಡಿ, (6) ಸುವಾಸನೆ ಸೆಂಟ್, (7) ಕೈ ಗುಂಡಿಗಳು, (8) ರೇಷ್ಮೆ ಕೈಚೀಲ, (9) ಸಿಗರೇಟ್ ಕೇಸ್

ನಮ್ಮ ವಿಳಾಸ—ಧನಲಕ್ಷ್ಮಿ ಅಂಡ್ ಕಂಪೆನಿ,
[260-1] ಸಾವ್ಕಾರ್‌ಪೇಟೆ, ಮದರಾಸು.

ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟಿನಲ್ಲಿ.

1915-16 ನೇ ಅಸಲು ನಂಬರ್—73.

ವಾದಿಗಳು:—(1) ದೊಡ್ಡಬಳ್ಳಾಪುರದ ಆಲಂಪಲ್ಲಿ ಅದಿನಾರಾಯಣಯ್ಯ, (2) ಆದಿಮೂರ್ತಿಯ್ಯ.

ಪ್ರತಿವಾದಿಗಳು:—ತೈಲೇಶ್ವರಪೇಟೆ ಟವನ್‌ನಲ್ಲಿರುವ 1 ನೇ ಕರಿಭಾವ ನರಸಿಂಹಯ್ಯಶೆಟ್ಟಿ, 2 ನೇ ಅವಲಯ್ಯ ಮೈನರ್ ಗಾರ್ಡಿಯನ್ 1 ನೇ ಪ್ರತಿವಾದಿ.

ಇದರಿಂದ ಪ್ರತಿವಾದಿಗಳಿಗೆ ತಿಳಿಯಪಡಿಸುವದೇನಂದರೆ—

ವಾದಿಗಳು ನಿಮ್ಮ ಮೇಲೆ ರೂ 1,367-10-6 ಪೈ ಮತ್ತು ಕೋರ್ಟು ಖರ್ಚಿಗೆ ಸಹಾ ದಾವಾ ಮಾಡಿರುತ್ತಾರೆ. ಈ ವ್ಯವಹಾರವು ಇತ್ಯರ್ಥಕ್ಕೆ 13-12-1915 ಕ್ಕೆ ಹಿಯರಿಂಗ್ ಇರುವದು ಇದರಿಂದ ತಿಳಿಯಪಡಿಸಿರುತ್ತೆ. ಈ ದಿನ ಕೋರ್ಟು ಮೊಹರ್‌ನಿಂದ ನಮ್ಮ ದಸ್ಕತ್ತಿನೊಂದಿಗೆ ಕೊಟ್ಟಿದೆ.

24-11-15. (ಬೈ ಆರ್ಡರ್)
[264-1] ವಿ. ಎನ್. ಷಣ್ಮುಗಂ,
ಹೆಡ್ ಮುನ್ಷಿ.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯವನ್ನೂ ಆಯುಷ್ಯವನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕನಾಗಿರುತ್ತಾನೆ. ನಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಮ್ಮ ಮಾತುಗಳಲ್ಲ; ನಮ್ಮ ಕಾರ್ಯಗಳೇ. ನಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿರಬೇಕು. ಇದರಿಂದ ಸರ್ವರ ಕಾಪಾಡಬೇಕಾಗಿದೆ. ಈ ಉದ್ದೇಶಕ್ಕಾಗಿ ನಾವು ಪ್ರಕಟಿಸಿದಲ್ಲಿ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಸ್ವಯವಾಗಿ ಸೇವಿಸಿ ನೋಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿರುವ ರೋಗವನ್ನು ಬಲಿ ಎತ್ತನಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಸೂ. ಕ:—ಒಂದು ದೊಡ್ಡ ಕ್ಯಾಟಲಾಗನ್ನು, ರೋಗ ನಿವಾರಣೆಕ್ಕೆ ಪಕ್ಕ ಸಂಚಿಕೆಗಳನ್ನು ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
[255-2] 20, ಬೈನಾ ಬಜಾರ್ ರೋಡ್, ಮದರಾಸ್.

The Mystery of the Twentieth Century.

Own Properties by paying mere rent! **Discharge principal amount by paying mere interest!!**

or

Ask us to show you the way how to own properties and discharge principal amount without touching your pocket under our novel free-policy system!!!

Have you not heard of the most beneficial schemes

CALLED LAND & HOUSE PURCHASE AND LAND & HOUSE INVESTMENT SCHEMES

BROUGHT FORWARD FOR THE FIRST TIME IN THE MYSORE PROVINCE BY

THE MYSORE GOVERNMENT SECURITY LIFE & MARRIAGE ASSURANCE CO., LTD., MYSORE,

For the Benefit of the Mysoreans?

If not, write for the detailed prospectus, application from and other necessary information at once and avail of the undermentioned

Extraordinary Benefits Offered and Also Hitherto Unknown to the Banking World.

If you want to purchase a house or a land worth Rs. 1,000/-, all that you have to do is to purchase an investment certificate for that amount by paying an admission fee of Rs. 10/- with the proposal. This certificate entitles you to an advance of R . 1,000/- on the security of the purchased property to purchase house or land with, after six months, on your paying to the Company Rs. 300 either in lump-sum or by easy monthly instalments which, in no case, should be less than Rs. 5/- per mensem. After you receive the advance and take the property into your possession, you will have to be paying regularly only Rs. 7/- towards interest on the balance of Rs. 700/- (Rs. 1,000- -Rs. 300) at 12 p.c. per annum for a period of sixteen years and eight months, by which time the whole of the principal amount will be writen off by the Company and the property passes to your hands free from the incumberance.

If you want to borrow Rs. 1,000/- on the security of your immovable properties to liquidate your prior debts, all that you have to do is to purchase an investment certificate for that amount by paying an admission fee of Rs. 10/-. This certificate entitles you to an advance of Rs. 1,000/- after six months, on your paying Rs. 10/- regularly every month for not less than six months from the date of the certificate until you receive the advance. After you get the advance, you should continue paying the same Rs. 10/- every month towards interest at 12 p.c. per annum on Rs. 1,000/- for a period of 16 years and 8 months minus as many months as many instalments as you will have paid previous to your receiving the advance, when the whole of the principal amount will be written off by the Company and your property passes to your hands free from incumberance. [15-43]

N.B.—If you want to purchase properties and discharge your debts without touching your pocket, ask us to explain to you **our novel free-policy system.** The above examples deal with an advance of Rs. 1,000/- only. Certificates can, of course, be granted for any amounts that may be the multiples of Rs. 100 up to Rs. 5,000/- and the rates should be calculated proportionately. It is not necessary that interest is to be paid for 16 years and 8 months. The principal amount can be repaid at any time after two years when the same (principal amount) will be written off proportionately.

WANTED

Energetic and honest agents to canvass Insurance and Provident fund business as well as Local Directors of position and influence to push on our Two-in-one (share policy) and Land and House purchase and investment schemes in each and every taluk of the Mysore Province on liberal terms. For terms and prospectuses, please apply to

M. L. NAGANNAH, Esq.,
Managing Director, Life and Marriage Assurance Buildings, Mysore.

GRATIS & POST FREE!!

"THE Art of Perfumery and How to make Scented Hair Oils, Spirit Perfumes, etc.," is being distributed free. Please mention this paper and apply to—

S. PAUL & Co., Perfumers,
4, Hospital Street, Dhuramtola, CALCUTTA.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀ ಕಸ್ತೂರಿ ಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಕು-ಲೋಹಭಸ್ಮ-ಮುಂತಾದವುಗಳಿಂದ ವಂಶ ಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀ ಕಸ್ತೂರಿ ಮಾತ್ರೆಗಳನ್ನು ಜಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುವ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ—ಸೋಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವಿಷಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ಸಡು ಸೆಳತ, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ಬಹಳ ಗುಣವಾಗುತ್ತವೆ ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಹೆಚ್ಚು. ಟ ಖ ಪ್ರತ್ಯೇಕ.

[231-61] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು

ನಾಟಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಅಸ್ಸಲು ಜರ್ಮನ್ ದೇಶದ ಬೆಳ್ಳಿ ಕಂಚಿಯಿಂದ ತಯಾರಿಸಿರುತ್ತೆ. ಇದರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದ್ದು. ಈ ಕೆಳಗೆ ಕಂಡ ನಗಗಳನ್ನು ನಾವೇ ಸ್ವಂತವಾಗಿ ತಯಾರಿಸಿರುವುದರಿಂದ ಸಾಧ್ಯವಾಷ್ಟಗೆ ನಮ್ಮ ಬೆಲೆ ಕಮ್ಮಿಯಾಗಿರುವದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಸುಂದರವಾದ ಪುದುಚೇರಿ ರುಳಿ (ಕಾಲು ಗೊಲಸು).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-14-0	1-10-0	1-6-0

ಬಂಗಾರದ ಗಿಲೀಟಿನ ಕೈಗೊಲಸು.

ಸ್ತ್ರೀಯರು ಕೈಯಲ್ಲಿ ಹಾಕಿಕೊಳ್ಳುವದಕ್ಕೆ ಬಹು ಸೊಗಸಾಗಿ ಇರುವದು.



ದೊಡ್ಡವರಿಗೆ	ಚಿಕ್ಕವರಿಗೆ
1-6-0	1-0-0

ಇವುಗಳಲ್ಲಿ ಯಾವುದಾದರೂ ಆಭರಣಗಳನ್ನು ತಾವು ನಮಗೆ ಬರೆಯುವಾಗ್ಗೆ ದೊಡ್ಡವರಿಗೆ ಚಿಕ್ಕವರಿಗೆ ಎಂಬುದು ಕ್ರಯ ಸರಿಯಾಗಿ ತಿಳಿಸಬೇಕು.

ವಿಳಾಸ:—ಮಹಾರಾಜ ಟ್ರೇಡಿಂಗ್ ಕಂಪನಿ,
[252-3] 16, ತಿರುಪಳ್ಳಿ ಬೀದಿ, ಮದರಾಸು

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ

ಸುಂದರವಾದ ಇಂಗ್ಲೀಷು ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 3-0-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ಪಕ್ಕದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸ್ವಲ್ಪ ಮಾತ್ರ ಕ್ರಯಕ್ಕೆ ಕೊಡುತ್ತೇವೆ ಈ ಗಡಿಯಾರ ಕಂಪೆನ್‌ಸೇಷನ್ ಬಲಿಷ್ಟವಾದ ಸಾಮಾನುಗಳಿಂದಲೂ ನಾಣ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ಧೊರೆಗಳು ಕೊಂಡುಕೊಳ್ಳುತ್ತಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚಾಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಿರಿ.



ಬಹುಮಾನ ಪಟ್ಟಿ:—(1) ಸರಪಣಿ (2) ಕಂಪಾಸ್, (3) ಜರ್ಮನ್ ಸಿಲ್ವರ್, (4) ಕೈ ಉಂಗುರ, (5) ಪಾಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೈಚೀಲ, (9) ಸಿಗರೇಟ್ ಕೇಸ್.

ನಮ್ಮ ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,
[225-2] 3, ಅರುಳಪ್ಪನ ಬೀದಿ, ಮದರಾಸು.

ರೈತರಿಗೆ ಬೇಕಾದ ಸಕಾಲ ಸಲಹೆಗಳು.

[illegible] ದಕ್ಷಿಣ ಡಿಸ್ಟ್ರಿಕ್ಟ ಡೈರೆಕ್ಟರ್ ಮ|| ಎ. ಕೆ. ಯಜ್ಞನಾರಾಯಣ ಅಯ್ಯರವರಿಂದ ಬರೆಯಲ್ಪಟ್ಟದ್ದು.—(2) ಕಾಗುಳುಮೆ.

[illegible] ಕಟಾವಾಗುವುದಕ್ಕೆ ಮಾಡತಕ್ಕ ಕೆಲಸವಾದ ಬೀಜದ [illegible] ವಿಷಯವನ್ನು ತಿಳಿಸಲಾಯಿತು. ಕೊಯಿಲು ಮಾಡಿದ ಕೂಡಲೆ [illegible] ಮಾಡಬೇಕಾದ ಮುಖ್ಯವಾದ ವಿಷಯಗಳನ್ನು ಈಗ ವಿವರಿಸಿರುತ್ತೆ. [illegible] ಮಳೆಯನ್ನೇ ನಂಬಿ ಮಾಡತಕ್ಕ ಕೆಲಸವಾಗಿರುವ [illegible], ಮಳೆಗಳು ಸಕಾಲಕ್ಕೆ ಒದಗುವುದು ನಿಶ್ಚಯ ಇಲ್ಲವಾದ್ದರಿಂದ [illegible] ಹೊಲಗಳಲ್ಲಿ ತಪ್ಪದೆ ಬೆಳೆಯನ್ನು ತೆಗೆಯಬೇಕಾದರೆ ಆಗುವಷ್ಟು [illegible] ಚೆನ್ನಾಗಿ ಉಪಯೋಗಿಸಿಕೊಂಡು ಭೂಮಿಯಲ್ಲಿನ ತೇವವನ್ನು [illegible] ವಂತಿಕೆಯಿಂದ ಕಾಪಾಡಿಕೊಳ್ಳಬೇಕು. ಇದಕ್ಕಾಗಿ ನಾವು ಮಾಡ [illegible] ವೆಂದರೆ:—

[illegible] ಭೂಮಿಯಲ್ಲಿ ಕೆಯುವಂತೆ ಜಮೀನಿನ ಮೇಲ್ಭಾಗವನ್ನು [illegible]; ಅಂದರೆ ರಸ್ತೆಗಳಂತೆ ಕಠಿಣವಾಗಿಲ್ಲದೆ, ಜಮೀನನ್ನು [illegible] ಹರಗಿಯೋ ಸಡಿಲಪಡಿಸಬೇಕು. ಬಿಸಿಲು, ಗಾಳಿ ಮತ್ತು [illegible] ಭೂಮಿಯ ತಂಪನ್ನು ಕಡಮೆ ಮಾಡುವದಕ್ಕೆ ಮುಖ್ಯ [illegible]. ಆದರೆ ಜಮೀನನ್ನು ಚೆನ್ನಾಗಿ ಉತ್ತು ಹರಗಿ ಈ ಕ್ರಮ [illegible] ಭೂಮಿಯ ಮೇಲ್ಭಾಗವನ್ನು ಸಡಿಲವಾಗಿಟ್ಟುಕೊಂಡಿದ್ದರೆ ಬಿಸಿಲು ಮತ್ತು [illegible] ಭೂಮಿಯಲ್ಲಿನ ತಂಪು ಹೊರಗೆ ಹೋಗುವುದು ಕಡಮೆ. ಇದು [illegible] ಆಗುತ್ತೆ. ನಾವು ಅಜಮಾಯಿಷಿ ಮಾಡಿ ನೋಡಿದರೆ ಹರಗಿದ [illegible] ಇರುವ ತಂಪು ಹರಗದೆ ಇರುವ ಗಟ್ಟಿಯಾದ ಪ್ರದೇಶದ ಕೆಳಗೆ [illegible]. ಮತ್ತು ಕಳೆಗಳ ಮೂಲಕ ಜಮೀನಿನಿಂದ ಹೋಗುವ ತೇವವು [illegible] ಕಳೆಗಳನ್ನು ನಾಶಮಾಡುವುದರಿಂದ ಹಾಗೆ ಹೊರಟುಹೋಗದೆ [illegible] ಉಳಿಯುತ್ತದೆ. ಈ ಕ್ರಮಗಳಿಂದ ಭೂಮಿಯಲ್ಲಿನ ತೇವ [illegible]ವುದರಿಂದ ಮುಸ್ಸಿ ಬೆಳೆಗಳು ಸಕಾಲದ ಮಳೆಗಳು ಕಡಮೆಯಾಗು [illegible] ಹೋಗದೆ ಸ್ವಲ್ಪ ಸುಧಾರಿಸಿಕೊಳ್ಳಲು ಅನುಕೂಲವಾಗುತ್ತೆ. [illegible]ವನ್ನು [illegible]ದಲ್ಲಿಟ್ಟುಕೊಂಡರೆ ಕೊಯಿಲಾದ ಕೂಡ್ಲೆ ಹೊಲ [illegible] ಮಾಡುವುದರಿಂದ ಉಂಟಾಗುವ ಮುಖ್ಯಪ್ರಯೋಜನವು ನಾನಾ [illegible].

[illegible]ವೆಂದರೆ—(1) ರಾಗಿ ಬೆಳೆಯು ಜಮೀನಿನಲ್ಲಿರುವಾಗ ಜಮೀನಿನ [illegible] ಈ ಬೆಳೆಯ ಮೂಲಕ ಹೊರಗೆ ಹೋಗುತ್ತದೆಯೋ ಹೊರ್ತು [illegible] ಹೆಚ್ಚಾಗಿ ಹೋಗುವುದಿಲ್ಲ. ಕಟಾವಾದ ಕೂಡ್ಲೆ ಜಮೀನು [illegible]ದರಿಂದ ಗಾಳಿ ಮತ್ತು ಬಿಸಿಲಿನಿಂದ ಭೂಮಿಯ ತೇವವು ಕಡಮೆ [illegible] ಅಸ್ಪದವಾಗುತ್ತೆ. ಆದರೆ ಕಟಾವಾದ ಕೂಡ್ಲೆ ಜಮೀನನ್ನು [illegible], ಹರಗಿಯೋ ಸ್ವಲ್ಪ ಕೆದಕಿದ್ದೇ ಆದರೆ ಆ ಕೆದಕಿದ ಪುಡಿಮಣ್ಣು [illegible] ತೇವವನ್ನು ಕಾಪಾಡಿಕೊಳ್ಳುತ್ತೆ. (2) ಇದಲ್ಲದೆ ಮುಂಗಾರಿನಲ್ಲಿ [illegible] ಶುರುವಾಗುತ್ತಲೇ ಬೀಳುವ ಮಳೆ ನೀರನ್ನೆಲ್ಲಾ ಜಮೀನು ಸಂಪೂರ್ಣ [illegible]ತ್ತದೆ. ಇದರಿಂದ ಮಾಗಿಕಾರ ಉಳುಮೆಯನ್ನು ಜಾಗ್ರತೆ [illegible] ಎಳ್ಳು, ಜೋಳ, ಹೆಸರು, ಕಾರ್ರಾಗಿ, ನೆಲಗಡ್ಲೆಕಾಯಿ [illegible] ಮುಂಗಾರಿನ ಫಸಲುಗಳನ್ನು ಜಾಗ್ರತೆಯಾಗಿ ಇಡುವುದಕ್ಕೆ ಅನು [illegible]. (3) ಕೊಯಿಲಾದ ಕೂಡ್ಲೆ ಮಾಡುವ ಉಳುಮೆಯಿಂದ ಕಳೆ [illegible] ಕೀಳಲ್ಪಟ್ಟು ಮುಂದೆ ಬೇಸಗೆಯಲ್ಲಿ ತೀರ ಒಣಗುವುದರಿಂದ [illegible]ದರೆ ಬಹಳ ಮಟ್ಟಿಗೆ ಕಡಮೆಯಾಗುತ್ತೆ. ಮತ್ತು ಈ ಬೇಸಗೆ [illegible]ಯಿಂದ ಜಮೀನಿನ ಮಣ್ಣು ಚೆನ್ನಾಗಿ ಮಾಗಿ ಗೊಬ್ಬರ ಹಾಕಿದಂತೆ [illegible]ರುವ ಸಾರವನ್ನು ಹೆಚ್ಚು ಮಾಡುತ್ತೆ. ಈ ಪ್ರಯೋಜನಗಳನ್ನು [illegible]ದಕ್ಕೆ ನಾವು ಮಾಡಬೇಕಾದ ಕ್ರಮ ಏನಂದರೆ—ರಾಗೀ ಫಸಲು [illegible]ಯೇ ಆ ಜಮೀನನ್ನು ಉತ್ತುಬಿಡಬೇಕು. ಆದರೆ ಸಾಲು [illegible] ಎಂತಹೂನಹೂ, ಜಮೀನು ನೇಗಿಲು ಹರಿಯುವಷ್ಟು ಮೃದುವಾ [illegible]ವೆಂದೂನಹೂ, ದನಗಳಿಗೆ ಚಿಲ್ಲರೆ ಮೇವು ಸಿಕ್ಕುವದು ತಪ್ಪಿಹೋಗುವು [illegible] ಆಕ್ಷೇಪಣೆಗಳಿರಬಹುದು. ಆದರೆ ಈಚೆಗೆ ಸಕಾಲದ ಮಳೆಗಳು [illegible]ಗಿರುವುದನ್ನೂ, ಮತ್ತು ನಮ್ಮ ಸೀಮೆಯಲ್ಲಿ ಸುಮಾರು ಮೂರು [illegible] ಮುಸ್ಸಿ ಬೆಳೆಯಿಂದಲೆ ಜೀವನವಾಗಬೇಕಾಗಿರುವುದನ್ನೂ ನೆನಪಿಗೆ [illegible] ಈ ಆಕ್ಷೇಪಣೆಗಳು ಅಷ್ಟು ದೊಡ್ಡವೆಂದು ಭಾವಿಸಲು ಆಗಲಾ [illegible]. ಸಾಲು ಪೈರುಗಳನ್ನು ಉಳಿಸಿಕೊಂಡು ರಾಗೀ ಬೆಳೆದ ಪ್ರದೇಶವನ್ನು [illegible] ಅಸಾಧ್ಯವಲ್ಲ. 3-4 ಅಂಗುಲ ಮಾತ್ರ ಕೆದಕಿದರೂ ಕೂಡ [illegible] ಮಟ್ಟಿಗೆ ಭೂಮಿಯಲ್ಲಿ ತಂಪು ನಿಲ್ಲುವುದರಿಂದ ನೇಗಿಲು ಹೂಡುವುದಕ್ಕೆ [illegible] ಹೆಗ್ಗುಂಟೆ ಮುಂತಾದ ಸಲಕರಣೆಗಳಿಂದ ಭೂಮಿಯನ್ನು [illegible] ಕಷ್ಟವಲ್ಲ. ಜಮೀನು ಬಹಳ ಗಟ್ಟಿಯಾಗಿರುವ ಕಡೆ ಅಂಥಾ ಭೂಮಿ [illegible] ಕೂಡ ಅನುಕೂಲವಾದ "ಡಿಸ್ಕ್ ಹ್ಯಾರೋ" ಎಂಬ [illegible] ಒಂದು ಹೊಸವಾಗಿ ವ್ಯವಸಾಯದ ಇಲಾಖೆಯಿಂದ ಮಾರಲ್ಪ [illegible]. ಇದು ಕೆಲಸಮಾಡುವ ರೀತಿಯನ್ನೂ, ಇದು ಜೋಡಿಸಲ್ಪಟ್ಟಿರುವ [illegible] ಹೆಬ್ಬಾಳು ಪರೀಕ್ಷಾ ಕ್ಷೇತ್ರದಲ್ಲಿ ನೋಡಬಹುದು. ಚಿಲ್ಲರೆ [illegible] ಕಳೆಗಳನ್ನು ಬಿಟ್ಟುಕೊಂಡು ಅವು ಬಲಿತು, ಬೀಜವು ಒಂದಕ್ಕೆ [illegible], ಮುಂದಿನ ಬೆಳೆಗೆ ಕಳೆಗಳು ವಿಶೇಷವಾಗಿ ಬೆಳೆಯುವುದಕ್ಕೆ [illegible] ಒಳ್ಳೆ ಆರಂಭವಲ್ಲ.

ಮೇಲ್ಕಂಡ ಕ್ರಮಗಳ ಪ್ರಯೋಜನವನ್ನು ತಿಳಿದುಕೊಂಡು, ರೈತರುಗಳು [illegible] ಸೀಮೆಯ ಅನೇಕ ಭಾಗಗಳಲ್ಲಿ ಕೋರುಳ, ಚಿಳ್ಳಕೆರೆ, ಮಾಗಿ ಉಳ [illegible] ಈ ಪದ್ಧತಿಯನ್ನು ಆಚರಣೆಯಲ್ಲಿಟ್ಟುಕೊಂಡು ಮೇಲೆ ಹೇಳಿದ [illegible]ಗಳನ್ನು ಹೆಚ್ಚಾಗಿ ಭಾವಿಸದೆ ಪ್ರತಿ ವರುಷವೂ ತಪ್ಪದೆ ಮಾಡುತ್ತಾರೆ. [illegible] ಮೇಲೆ ಹೇಳಿದ ಕ್ರಮದಲ್ಲಿ ಹೊಲಗಳನ್ನು ಕೊಯಿಲಾದ ಕೂಡಲೆ [illegible] ರಾಗೀ ಬೆಳೆಗೆ ಅನುಕೂಲಮಾಡಿಕೊಡಬೇಕು. ನಮ್ಮ ದೇಶದ ಎಲ್ಲಾ [illegible]ರುವ ರೈತರು ಈ ಕ್ರಮಗಳನ್ನು ಅನುಸರಿಸಿದ್ದೇ ಆದರೆ ಸಕಾಲದ [illegible] ಆಗುತ್ತಿರುವ ಲುಕ್ಸಾನು ಬಹಳ ಮಟ್ಟಿಗೆ ಕಡಮೆಯಾಗುತ್ತದೆ.

[illegible]ನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಿಗಳ [illegible] ನವೆಂಬರ್ ತಾ. 6 ರ ವರೆಗೆ ಶಾವತಿ ಬಂದಿರುವ ಚಂದಾ ಹಣ [illegible]:—

[illegible] ಅಲ್ಲಯನ್ಸ್ ಬ್ಯಾಂಕಿಗೆ	......	ರೂ. 45,62,735-0-9
[illegible] ಬ್ಯಾಂಕಿಗೆ	....	,, 35,31,995-0-9
[illegible] ಬ್ಯಾಂಕಿಗೆ	....	,, 8,26,504-3-5
[illegible] ಬ್ಯಾಂಕಿಗೆ	....	,, 6,66,713-1-4
	ಜುಮ್ಲಾ ರೂಪಾಯಿ	95,77,947-6-3

[illegible] ದೇಶದಲ್ಲಿ ರೈಲ್ ಗಾಡಿಗಳು ಹೋಗುತ್ತಿದ್ದಾಗಲೇ ಅದರಲ್ಲಿ ಕಳ್ಳ [illegible]ವುದೆಂದು ಸರ್ಕಾರಕ್ಕೆ ತಿಳಿದು ಅವರು ಆಯುಧಧಾರಿಗಳಾದ [illegible] ಪೋಲೀಸಿನವರನ್ನು ಗಾಡಿಗಳಲ್ಲಿ ಹೋಗಿ ಬರುತ್ತಿರುವಂತೆ ನೇಮಕಮಾ [illegible]. ಕಳೆದ ವಾರ ರೈಲ್‌ಗಾಡಿ ಹೋಗುತ್ತಿದ್ದಾಗ [illegible] ಎಂಬ ಸ್ಟೇಷನ್ [illegible] ಗಾಡಿಯೊಳಗಿಂದ ಕೆಲವು ಪದಾರ್ಥಗಳು ಹೊರಕ್ಕೆ ಎಸೆಯಲ್ಪಟ್ಟ [illegible] ಆ ಪೋಲೀಸಿನವರು ತಕ್ಷಣ ಧುಮುಕಿ ಓಡಿಹೋಗಿ ನೋಡು [illegible] ಸುಮಾರು ಹತ್ತು ಮಂದಿ ಕಳ್ಳರು ಆ ಪದಾರ್ಥಗಳನ್ನು [illegible] ಹೋಗುತ್ತಿದ್ದರು. ಪೋಲೀಸಿನವರು ಅವರ ಮೇಲೆ ಗುಂಡುಗಳ [illegible]. ಇಬ್ಬರು ಕಳ್ಳರನ್ನು ಹಿಡಿದರು. ಉಳಿದವರು ಓಡಿಹೋದರು.

ಗೆಂಟ್ಲಿನ ಹುಣ್ಣು ಹಾನಿಕರ ವಾದದ್ದು.

ಸಾಧಾರಣವಾದ ಗಂಟ್ಲುಬೇನೋವ್ಸ್ ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬಿದನ್ನು ಒಂದು ಅಥವ ಎರಡಾವರ್ತಿ ಉಪಯೋಗಿಸುವದರಿಂದ ಸುಲಭವಾಗಿ ವಾಸಿಯಾಗುತ್ತೆ. ಹಾಗಿಲ್ಲದೆ ನಿರ್ಲಕ್ಷ್ಯ ಮಾಡುವಬಾದರೆ, ಅನೇಕ ವೇಳೆ ವಿಸೆಗಡೆಯೂ ಕೆಮ್ಮೂ ಇತರೆ ಮರಣಕರವಾದ ದೊಡ್ಡರೋಗಗಳು ಪ್ರಾಪ್ತವಾಗುವವು. ಇಷ್ಟು ಸ್ವಲ್ಪ ಖರ್ಚಿಗೆ ಇಷ್ಟು ಸುಲಭವಾಗಿಯೂ ಖಂಡಿತವಾಗಿಯೂ ಚಿಕಿತ್ಸೆ ದೊರಕುವದರಿಂದ ಅಸ್ಪದ ಕಳಕೊಳ್ಳಬೇಡಿ.

ಸಾಧಾರಣ ಗಂಟ್ಲು ನೋವಿಗಾಗಲೀ ಅಥವಾ ಹಾನಿಕರವಾದ ಕೆಮ್ಮಿಗಾಗಲೀ ಲಿಟ್ಲ್ಸ್ ಓರಿಯೆಂಟಲ್ ಬಾಮಿನಷ್ಟು ಖಂಡಿತವಾಗಿಯೂ ವೇಗವಾಗಿಯೂ ವಾಸಿಮಾಡುವಂಥಾದ್ದು ಮತ್ತೊಂದಿಲ್ಲ.

ಉಫ್‌ಸೆಸ್ಟರ್‌ಷೈರಿಗೆ ಸೇರಿರುವ ಇವೇಷಾಂ ಪಟ್ಟಣದ ಮ|| ಎಚ್. ಡ್ರಿನ್‌ಹೇಲ್‌ಯವರು ಬರೆಯುವದೇನಂದರೆ:—ನನಗೆ ಕಠಿಣ ವಿಸೆಗಡೆಯಾಗಿ ಅದರಿಂದ ಕೆಮ್ಮಿಗೆ ಕಾರಣವಾಯಿತು. ಇದರಿಂದ ಯಾವಾಗಲೂ ಗಂಟ್ಲಿನಲ್ಲಿ ಕಡತವೂ ಕಟ್ಟ್ಯಾಗಿಸುವ ಬಣ ಕೆಮ್ಮೂ ಆಗಿ ರಾತ್ರಿಯಲ್ಲಿ ನಿದ್ರೆ ಇರಲಿಲ್ಲ—ಹೇಳಿದ ಅನೇಕ ಔಷಧಿಗಳನ್ನು ಉಪಯೋಗಿಸಿ ಗುಣ ಕಂಡುಕೊಳ್ಳಲಿಲ್ಲ. ಕಡೆಗೆ ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬದರಿಂದ ಗುಣವಾಯಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂ. ಮೇರಿಗೆ ಮಾರಲ್ಪಡುತ್ತೆ.

[81-31]

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಪರೀಕ್ಷಿಸಿ ಉತ್ತಮ ತರಹ ಸುಲೋಚನಗಳನ್ನೇ ಕೊಡಲಾಗುವದು. ನಮ್ಮ ಚಂದ್ರಕಾಂತ ಮತ್ತು ಇತರ ತರಹ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಪಾಕರ ಖಂಡಿತ. ಸುಲೋಚನಗಳು ದಿಗಂತ ಪ್ರಖ್ಯಾತವಾದವು. ಬೆಲೆ ಸುಲಭ.

ನಮ್ಮ ವಿಳಾಸ:—ಎಸ್. ಎಚ್. ರಾಮರಾವ್ ಸನ್ಸ್,

[249-4] ಕೋಟೆ ಬಾಗಲು, ಬೆಂಗಳೂರು ಸಿಟಿ.

ಸ್ತ್ರೀಪುರುಷರು ಮಕ್ಕಳು ಆದಿಯಾಗಿ ಸರ್ವರೂ ಸಂತೋಷದಿಂದ ಧರಿಸುವ

ಮೇಲಾದ ರೇಷ್ಮೆ ಪಂಚೆಗಳು.

ಅನೇಕ ಪಂಚೆಗಳು ಜರ್ಬು ಆಗಿ ಬರುವದರಿಂದ ಕಷ್ಟಮಯ ಬೆಲೆಯನ್ನು ಕಮ್ಮಿ ಮಾಡಿ ಇರುತ್ತೇವೆ. ಶೃಂಗಾರವೂ ನಾಗರೀಕತೆಯೂ ಕೂಡಿದ ಅಸಲ್ ರೇಷ್ಮೆ ಪಂಚೆಗಳು ತರಿಸಿ ನಮ್ಮಲ್ಲಿ ಯಥಾವತ್ತು ವಾಡಿಕೆಯಿಂದ ವ್ಯಾಪಾರ ಮಾಡುತ್ತಿರುವ ನಮ್ಮ ಸ್ನೇಹಿತರು ಪ್ರತಿ ಒಬ್ಬರಿಗೂ ಒಂದೊಂದು ಕೇಸಿ ವಿಸ್ಕ ಕೆಲವು ಪಂಚೆಗಳು ಮಾತ್ರ ಇರುತ್ತೆ. ಹಬ್ಬದ ಕಾಲದಲ್ಲಿ ಹೊದಿಯಲು ಆನಂದವಾಗಿ ಇರುವದು. ಸ್ತ್ರೀಪುರುಷರು ಬಾಲಕ ಬಾಲಕಿಗಳು ಸಂತೋಷವಾಗಿ ಧರಿಸುವದಕ್ಕೆ ಭೂಷಣವಾದದ್ದು. ಈ ರಮಣೀಯವಾದ ಪಂಚೆಗಳನ್ನು ಒಬ್ಬರು ಒಂದನ್ನು ಧರಿಸಿಕೊಂಡಲ್ಲಿ ಅದನ್ನು ನೋಡಿದ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದದ್ದು. ಇವು ಬಣ್ಣ ಕೆಡುವದಿಲ್ಲ. ಇವುಗಳಲ್ಲಿ ಕೆಂಪು, ಪಚ್ಚೆ, ಹಸರು, ರೋಜಾ, ಊದ, ಇತ್ಯಾದಿ ಬಣ್ಣಗಳು ಇರುತ್ತವೆ. ಯಾವ ಬಣ್ಣ ಬೇಕಾದರೂ ಕಳುಹಿಸಲಾಗುತ್ತೆ. [252-3]

5½ ಮೊಳ ಉದ್ದ 2½ ಮೊಳ ಅಗಲ ಇರುವ ಪಂಚೆ 1 ಕ್ಕೆ ರೂ. 1-15-0 ಪೋಸ್ಟು ಚಾರ್ಜು 0-5-0 ಪ್ರತ್ಯೇಕ. ಎರಡು ಪಂಚೆಗಳು ಒಂದೇ ಸಾರಿ ತರಿಸಿಕೊಂಡರೆ 1 ಪರಿಮಳ ಶೀಸೆ ಇನಾಮಾಗಿ ಕೊಡುತ್ತೇವೆ.

ನಮ್ಮ ವಿಳಾಸ.—ವಿ. ಎ. ಎಸ್. ಪಾಣಿ ಕಂಪೆನಿ, ಮದರಾಸ್.



ಅತ್ಯದ್ಭುತವಾದ ಜಪಾನ್ ಮಾತ್ರೆಗಳು
ಒಂದು ಸಲ ಪರೀಕ್ಷಿಸಿ ನೋಡಿರಿ.
ಅಸಮಾನವಾದದ್ದು.

ಜಿನ್‌ಟಾನ್ ಎನ್ನುವುದು ವಿಶೇಷ ಗುಣಗಳುಳ್ಳ ಆರೋಗ್ಯಕರವಾದ ಮಾತ್ರೆಗಳು. ಇದು ಅಜೀರ್ಣ, ಅಜೀರ್ಣವಾಯುವು, ತಲೆನೋವು, ಅತಿಸಾರ, ಬಿಕ್ಕಳಿಕೆ, ವಾಂತಿ, ತಲೆಭಾರ, ಮಲಬದ್ಧ ಮುಂತಾದವುಗಳಿಗೆ ವಿಶೇಷವಾಗಿ ಉಪಯೋಗಕರವಾದದ್ದು. ಸಂಗೀತವನ್ನು ಹಾಡುವವರು, ನಟನೆ ಮಾಡುವವರು, ಭಾಗವತರು, ಸಭೆಗಳಲ್ಲಿ ಪ್ರಸಂಗ ಮಾಡುವವರು, ಈ ಜನಗಳಿಗೆ ಅತ್ಯುಪಕಾರಿ. ಚುಟ್ಟಾ ಸೇದುವವರು, ಹೊಗೇಸೊಪ್ಪು ಅಗಿಯುವವರು, ನಿಷಾ ವಸ್ತುವನ್ನು ಸೇವಿಸುವವರು ಉಪಯೋಗಿಸಿದಲ್ಲಿ ಉಂಟಾದ ವ್ಯಾಧಿಗಳನ್ನು ನಿವೃತ್ತಿ ಮಾಡುವದು.

ಈ ಮಾತ್ರೆ ತಾಂಬೂಲದಲ್ಲಿಯೂ, ಬಲಿಕ ಬಾಯಾರಿಕೆಯಲಿಯೂ ಉಪಯೋಗಿಸುವದಕ್ಕೆ ಶ್ರೇಷ್ಠವಾದದ್ದು.

30 ಮಾತ್ರೆಗಳ ಪೊಟ್ಟಣ 1 ಕ್ಕೆ	....	ಕ್ರಯ	0-1-6
65 ,, ,, ,,	....	,,	0-3-0
195 ,, ಪೊಟ್ಲ ಮತ್ತು ಸುಂದರವಾದ ಮಾತ್ರೆಗಳು ಇಡುವ ಚಿಕ್ಕ ಡಬ್ಬಿ ಸಹಾ	......	,,	0-8-0
445 ,, ಶ್ರೇಷ್ಠವಾದ ಮೆಟಲ್ ಡಬ್ಬಿ ಸಹಾ ನೋಡುವ ಕನ್ನಡಿ ಸಹಿತ	......	,,	1-0-0

[214-8]

ಬೆಂಗಳೂರು ಸಿಟಿ ಚಿಕ್ಕಪೇಟೆ ವಿ. ಎಚ್. ಸುಬ್ರಹ್ಮಣ್ಯಂ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ಬೆಲೆ ಬಹುಸುಲಭ   ಬೆಲೆ ಬಹುಸುಲಭ

ಸೊಗಸಾದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನಿಂದ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ.



ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವುದಕ್ಕೆ ಚಿಕ್ಕದಾದ ಗುಂಡುಗಳು ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟಕೋರುವದಿಲ್ಲ. ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ಇದರ ಕೆಲಸದ ನಾಜೂಕು ಬರವಣಿಗೆಯಿಂದ ಉಪಯೋಗವಿಲ್ಲ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಬ್ಬರು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾವಾಗಿಯೇ ಸಿಫಾರಸು ಮಾಡುವರು.

ಭಂಗಾರದ ಗಿಲೀಟಿನ ಗೆಜ್ಜೆಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0.

ಮ್ಯಾನೇಜರ್, ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,

[262-3] ನಂ. 3, ತಿರುವೇಂಗಡಪ್ಪನ ಬೀದಿ, ಮದರಾಸು.

ಕರ್ಣಿಕ ಎಗ್ಯೂಮಿಕ್ಸ್ಚರ — ಎಲ್ಲಾ ಜ್ವರಗಳಿಗೂ ಹಿಂದಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-8]

ಕ್ರಯ 0-10-0; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯೂ ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.

KARNIK Bros., BOMBAY, 4.

ಡಿಸೆಂಬರ್ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0.



ಅದೇ ಡಿಸೆಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ. 1-14-0 ಅವರಿಗೆ ಕೊಡಲ್ಪಡುತ್ತೆ. [111-26]

ವಿಳಾಸ—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 21, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

"ಹನುಮಾರ್ಕ್" ಬೋರಾಕ್ಸ್ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ಇಜ್ಜು, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ತೊಗಲಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಟ್ಟಣಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಶಾ. ಕ:—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-7] ಗೋವಿಂದಪ್ಪನಾಯಕನ್ ಬಜಾರ್ ರೋಡ್, ಮದರಾಸು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಗೋರೋಚನ ಮಾತ್ರೆ.—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 5 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ.—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 8 ಮಾತ್ರೆ 8 ಆ, 6 ಶೀಸೆಗೆ $2\frac{1}{4}$ ರೂ, 12 ಶೀಸೆಗೆ $4\frac{1}{2}$ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ಸಂಪೂರ್ಣ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 6 ಕ್ಕೆ 1 ರೂ, 12 ಕ್ಕೆ $2\frac{1}{2}$ ರೂ.

[126-13] ನಮ್ಮ ವಿಳಾಸ.—ಪಂಡಿತ್ ಎಸ್. ಗಿರಿಧರ, ಮೈಸೂರು.

ಅವಶ್ಯವಾಗಿ ಗಮನಿಸಿ ನೋಡಿರಿ.

PARK FAIR PRESENTATION WATCH

HIGH CLASS GENTLEMEN POCKET (Reg) WATCH.

ಹೈ ಕ್ಲಾಸ್ ಜನ್‌ಟಲ್‌ಮೆನ್ ಪಾಕೆಟ್ (ರಿಜಿ.) ವಾಚ್

15 ಬಹುಮಾನಗಳ ಸಹಿತ ಕ್ರಯ ರೂ. 2-12-0 ಮಾತ್ರವೆ.

7 ವರುಷ ಖಾತ್ರಿಯಾದ ಗ್ಯಾರಂಟಿ ಸಹಾ.

ಅಯ್ಯಾ ಪ್ರಿಯ ಮಿತ್ರರೇ, ಈ 1915 ನೇ ಇಸವಿ ಪಾರ್ಕು ಫೇರ್ ಮಹೋತ್ಸವಕ್ಕಾಗಿ ನಮ್ಮ ಜನಗಳಿಗೆ ಸಂತೋಷ ಮಾಡಬೇಕೆಂದು ಉದ್ದೇಶವುಳ್ಳ

ಗಡಿಯಾರ ಸೀಮೆಯಿಂದ ಡೈರೆಕ್ಟಾಗಿ ತರಿಸಿ ಈ ಬೆಲೆ ಹಾಕಿರುತ್ತೇನೆ. ಈ ವಾಚು ಜಯಿಂಟು ಇಮಿಟೇಷನ್ ಕೆಂಪುಗಳು ಮಡಗಿ ಕಟ್ಟಿದ ಕಳ್ಳು 6 ರತ್ನಗಳುಳ್ಳ ಓಪನ್ ಫೇಸ್ ಕೇಸ್ ಸೇರಿ ಬಲಿಷ್ಟವಾದ ಲೀವರ್ ಕೆಲಸದಿಂದಲೂ ತಯಾರಿಸಿತ್ತೆ. ಇದನ್ನು ವರ್ಣಿಸುವದರಿಂದ ಪ್ರಯೋಜನವಿಲ್ಲ. ತರಿಸಿ ಪರೀಕ್ಷೆ ಮಾಡಿದರೆ ನಿಮ್ಮ ಮನಸ್ಸಿಗೆ ಗೊತ್ತಾಗುತ್ತದೆ. ಬಹುಮಾನಗಳ ವಿವರ—ಸರಪಣಿ 1, ಉತ್ತರವುಂಗುರ 1, [illegible] ವಾಚು ಚಿನ್ನದ 1, ಕರವಸ್ತ್ರ 1, ಕಾರ್ನೇಷನ್ ಚಿನ್ನದ 1, ಇಂಗ್ಲೀಷು [illegible] ಚೀಗೆ 1, ಸೆಂಟ್ ಶೀಸೆ 1, ವಾಚು ಚೀಲ 1, ರಬ್ಬರು ಬೊಂಬೆ 1, [illegible] ಗುಂಡಿ ಸೆಟ್ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಎಲೆಕ್ಟ್ರಿಕ್ ಭಂಗಾರದ ಕೈ ಉಂಗರ 1, ಸುಂದರವಾದ ಟಾಯಿಲೆಟ್ ಸೋಪು 1, [illegible] ಷನ್ ಕೆಂಪುಗಳು ಮಡಗಿದ ಬ್ರೂಚ್ 1; ಜುಮ್ಲಾ 15 ಸೇರಿ ವಾಚು ಕ್ರಯ ರೂ. 2-12-0. [269-

ನನ್ನ ವಿಳಾಸ.—ಟಿ. ಎಂ. ರಾಮಚಂದ್ರರಾವು,

ನಂ. 19/8, ದೇವರ್‌ಷನ್ ಬೀದಿ, ಬ್ರಾಡ್‌ವೇ ಪೋಸ್ಟು, ಮದರಾಸು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗಮಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಆಟೋ ಮೋಹಿನಿಯೇ.

ಕ್ರಯ $\frac{1}{4}$ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ. 2-0-0.

1 ಡ್ರಾಮ್ ಕೊಳವೆಗೆ	0-12-0	ಮಾದ್ರಿ ಸೀಸೆಗೆ	0-2-0
$\frac{1}{2}$,, ,,	0-8-0	ಕಾರ್ಡು ಡಜನ್‌ಗೆ	0-12-0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕೇಶ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದ್ದು. ಕಣ್ಣು ಮತ್ತು ಮಿದುಳಿಗೆ ತಂಪನ್ನು ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [207-9]

ಕ್ರಯ 1 ಬಾಟ್ಲಿಗೆ ರೂ. 1-0-0.
,, 3 ,, ,, 2-10-0.

ಸೋಲ್ ಏಜಂಟರು—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಚೈನಾಬಜಾರ್ ರೋಡ್, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಜಪಾನ್, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಯುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾರ್ಧಕ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೀಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುವನ್ನ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಎ. ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ॥ ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರ್ಮಾಡಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಾರೆ."

[189-12] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—11—1915 ರಿಂದ 19—11—1915 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದ್ದು.	ಕಾಲರಾ [illegible]
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		48	33	0	0
ಮೈಸೂರು	,,	47	29	0	0
ಕೋಲಾರ್	,,	2	1	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	13	12	0	0
ಚಿತ್ರದುರ್ಗ	,,	0	6	6	0
ಕಡೂರ್	,,	5	5	0	0
ಶಿವಮೊಗ್ಗ	,,	32	24	0	0
	ಜುಮ್ಲಾ......	150	111	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಬಹುಳ ಏಕಾದಶಿ ಶುಕ್ರವಾರದಿಂದ ಮಾರ್ಗಶುದ್ಧ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಡಿಸೆಂಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
3	ಶುಕ್ರ *	ಏಕಾದಶಿ	3-55	ಚಿತ್ತ	36-51	18
4	ಶನಿ ;;	ದ್ವಾದಶಿ	0-6	ಸ್ವಾತಿ	55-50	19
5	ಭಾನು ::	ಚತುರ್ದಶಿ	0-36	ವಿಶಾಖ	30-50	20
6	ಸೋಮ ‡	ಅಮಾವಾಸ್ಯೆ	44-48	ಅನೂರಾಧ	27-2	21
7	ಮಂಗಳ §	ಪಾಡ್ಯಮಿ	38-48	ಜ್ಯೇಷ್ಠ	22-54	22
8	ಬುಧ ,,	ಬಿದಿಗೆ	32-50	ಮೂಲ	18-39	23
9	ಗುರು †	ತದಿಗೆ	27-3	ಪೂರ್ವಾಷಾಢ	14-36	24

* ಸರ್ವತ್ರ ಏಕಾದಶಿ. ;; ಪ್ರದೋಷ. :: ಮಾಸಶಿವರಾತ್ರಿ. ‡ ಸರ್ವ ಅಮಾವಾಸ್ಯೆ, ಕಾರ್ತೀಕ ಸೋಮವಾರ, ಕಲಶಾದಿನಲ್ಲಿ ಪಂಚರಂಗ [illegible] ಮಳೆ ನಕ್ಷತ್ರ—ಜ್ಯೇಷ್ಠ 2 ನೇ ಪಾದ. § ಶ್ರೀರಂಗದಲ್ಲಿ ಅಧ್ಯಯನೋತ್ಸವ ಆರಂಭ (ಪಹಲ್‌ಪತ್). ,, ಚಂದ್ರೋದಯ, ಕ್ವಾರ್ಟರ್ ಚಂದ್ 1. † ಸ್ವಾತಿ ಮಳೆ ನಕ್ಷತ್ರ—ಜ್ಯೇಷ್ಠ 3 ನೇ ಪಾದ.

Printed and Published by the Rev. H. Gulliford, Proprietor and Manager, Wesleyan Mission Press, Mysore. 2/12/1915.

M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸೆ ೧೯೧೫ ನೇ ಇಸವಿ ಡಿಸೆಂಬರ್ ತಾರೀಖು ೯ ನೇ ಗುರುವಾರ. ಸಂಚಿಕೆ ೨೮

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ಎಲ್ಲ ತರದ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಟೋಪಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[188-12] GIRLS' INDUSTRIAL SCHOOL, HASSAN.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ.

ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಿ ಪ್ರಶ್ನೆಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಾಪಿಂಡದ ಭೂವಿವರಣೆ	0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	0-6-0
ಮೇಲೆ ಕಂಡ ಎರಡೂ ಸೇರಿ	0-10-0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ
ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

ಕ್ರಯ 7 ಆಣೆ, ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[91-43] ಸುಬೋಧ ಗ್ರಂಥಾಲಯ, ಮೈಸೂರು.

ಎಸ್. ಡಿ. ನರ್ಮಲ್ ಕಂಪನಿ ರಿಜಿಸ್ಟರ್ಡ್ ಮಾಡಲ್ ಪಾಕೆಟ್ ಡೈರಿಗಳು.



ನಮ್ಮಲ್ಲಿ ಪ್ರತಿ ವರುಷವೂ ವಾಡಿಕೆಯಂತೆ 1916 ನೇ ಇಸವಿ ಜಾಬು, ಮಾಡಲ್ ನಮೂನೆ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ಕೂಡಲೆ ಬರೆದು ತರಿಸಿಕೊಳ್ಳಿರಿ. ಸಾವಕಾಶ ಮಾಡಿದಲ್ಲಿ ದೊರೆಯಲಾರದು.

1ನೇ ನಂ. ಸಾದಾ ಡೈರಿ 1 ಕ್ಕೆ	0-4-0
2ನೇ „ ಡಿಟೋ ಮುಚ್ಚಳ ಉಳ್ಳದ್ದು	0-6-0
3ನೇ „ ದೊಡ್ಡದು ಸಾದಾ 1 ಕ್ಕೆ	0-6-0
4ನೇ „ ಡಿಟೋ ಮುಚ್ಚಳ ಉಳ್ಳದ್ದು	0-8-0

ಒಂದೇ ನಮೂನೆಯಲ್ಲಿ ಒಂದು ಡಜನ್ನು ತೆಗೆದುಕೊಳ್ಳುವವರಿಗೆ 1 ಡೈರಿ ಫ್ರೀ. ಇನ್ನೂ ಹೆಚ್ಚಾಗಿ ತೆಗೆದುಕೊಳ್ಳುವವರಿಗೆ ಅಂದರೆ 25 ರೂಪಾಯಿಗಳಿಗೆ ಮೇಲ್ಪಟ್ಟಂತೆ ತೆಗೆದುಕೊಳ್ಳುವವರಿಗೆ ರೂಪಾಯಿಗೆ 2 ಆಣೆಯಂತೆ ಕಮಿಷನ್ ಮಾತ್ರ ದೊರೆಯುತ್ತೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ.—ಎಸ್. ಡಿ. ನರ್ಮಲ್ ಕಂಪೆನಿ,

[286-2] ದೊಡ್ಡಪೇಟೆ, ಮೈಸೂರು.

FOR SALE

A Cycle-wheel decent Buggy. Quite new, in perfect good order. Rs. 600 or near offer. *Apply*—

MESSRS. KASIM SAIT & CO.,

[271-1] **Curzon Park, Mysore.**

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು ಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0 [168-25]

ವಿಳಾಸ.—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಬೇಗ ತರಿಸಿಕೊಳ್ಳಿ ಒಳ್ಳೆ ಸಮಯ

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು.

ಇದುವರೆಗಿನ ತಿದ್ದುಪಾಟುಗಳೊಂದಿಗೂ ಹೆಚ್ಚಾಗಿ ವಿಶೇಷ ವಿಷಯಗಳನ್ನು ಸಂಗ್ರಹಿಸಿ ದಪ್ಪನಾದ ಬಿಳೀ ನುಣುಪಾದ ಕಾಗದದಲ್ಲಿ ಅಚ್ಚುಹಾಕಲ್ಪಟ್ಟಿದೆ. ಪೊಲೀಸಿನವರಿಗೂ, ಪಟೇಲರಿಗೂ, ಶಾನುಭೋಗರಿಗೂ ಅತ್ಯಂತ ಅವಶ್ಯಕವಾದದ್ದು. ಕ್ರಯ 6 6 ಪುಟಕ್ಕೆ 3 ರೂಪಾಯಿಗಳು ಮಾತ್ರ. ಒಂದು ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟೇಬಲ್ ಹಾವರ್ ಮುಫತ್ತಾಗಿ ಕಳುಹಿಸಲ್ಪಡುವದು.

[251-4] ವಿಳಾಸ:—ವಿ. ನರಸಿಂಗರಾವ್, ಲಾ ಆಫೀಸ್, ಬೆಂಗಳೂರು.

ಹೊಸ ಪುಸ್ತಕಗಳು.

ಸೊಗಸಾದ ಕಾಗದ, ಅಂದವಾದ ಮುದ್ರಣ, ಉತ್ತಮ ವಿಷಯ.

(1) "ಪ್ರಫುಲ್ಲೆ" ಪತ್ತೇದಾರಿಯ ಕಥೆ ಈಗಲಾದ ಆಚ್ಚಾಗಿದೆ. ಪ್ರಾರಂಭಿಸಿದರೆ ಮುಗಿಸುವವರೆಗೂ ನಡುವೆ ನಿಲ್ಲಿಸಲು ಮನಸ್ಸೇ ಬರುವದಿಲ್ಲ. 12 ಆಣೆ. (2) "ಜರ್ಮನ್ ಸಾಮ್ರಾಜ್ಯ" ಆಶ್ಚರ್ಯಕರವಾದ ವಿಷಯ ತಿಳಿವಳಿಕೆ ನಾಗರಿಕತೆ ಹೆಚ್ಚುತ್ತವೆ. 6 ಆಣೆ. (3) "ಉತ್ತಮ ದಂಪತಿಗಳು" ವಿಷಮವಾದ ವಿಚಿತ್ರ ಕಥೆ. 4 ಆಣೆ. (4) "ಉನ್ಮತ್ತ" ಮನೋಹರವಾದ ಬಂಗಾಳಿ ನಾವಲ್ $2\frac{1}{2}$ ಆಣೆ (5) ಟಿ. ಪಿ. ಸ. ಯಲ್ಲಿ ಉತ್ತರ ಬರೆವ ವಿಧಾನ 1 ಆಣೆ. ಅಂಚೆ ವೆಚ್ಚ ಬೇರೆ ಬೆಂಗಳೂರು ದೊಡ್ಡಪೇಟೆಯಲ್ಲಿ (1) ಎಂ. ಸುಬ್ಬರಾವ್ ಬುಕ್‌ಸೆಲರ್. (2) ಕೆ. ಚೌರಪ್ಪ ಎಂಡ್ ಕೋ; ಮೈಸೂರಿನಲ್ಲಿ (3) ಜನರಲ್ ಏಜೆನ್ಸಿ. [135-11]

ನವೀನ ಕಾದಂಬರಿಗಳು.

ಸತ್ಯರಂಜನ ಪುನರ್ದೇಶ ಯಾತ್ರೆ—ಹಾಸ್ಯರಸ ಪ್ರಧಾನವಾದ ಲಂಕೆ—	
ಮಲೆಯಾಳ ದೇಶಗಳ ಕಥೆ	1-0-0
ಮಾಧವಚಂದ್ರ—ಚಮತ್ಕಾರಿಕವಾದ ನಾವೆಲ್.	0-6-0
ಸರಳಬಾಲೆ—ಮನೋಹರವಾದ ಕಾದಂಬರಿ.	0-8-0
ರಾಧಾನಾಥ—ನೀತಿಬೋಧಕವಾದ ಕಟ್ಟುಕಥೆ	0-8-0

ಅನಂಗಸುಂದರಿ, ತಾರಾಸುಂದರಿ, ವಿನೋದಕರವಾದ ಕಾದಂಬರಿಗಳು— ಪ್ರತಿ 1 ಕ್ಕೆ 8 ಆಣೆ. ಇವಲ್ಲದೆ "ಕಮಲಿನಿ" 6 ಆಣೆ "ಸಂತಾಪಕ" 4 ಆಣೆ. ಮುಂತಾದ ಹಲವು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[276-52] ವಿಳಾಸ:—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಭಾವಚಿತ್ರಗಳ ಸಮೇತ ೧೯೧೬ ನೆಯ ಕ್ರಾಸ್

ಪಾಕೆಟ್ ಡೈರಿ

ನಂ. ೧ ಚಿಕ್ಕ ಸೈಜ್ ಡೈರಿ	೦-೪-೦
„ ೨ ಡಿ ಕ್ಲಾಸ್ ಪೆನ್ಸಲ್ ಸಹಿತ	೦-೬-೦
„ ೧ ದೊಡ್ಡ ಸೈಜಿನ ಸಾದಾ ಡೈರಿ	೦-೬-೦
„ ೨ „ ಕ್ಲಾಸ್ ಪೆನ್ಸಲ್ ಸಮೇತ	೦-೮-೦

೧೦ ಡೈರಿಗಳನ್ನು ಒಟ್ಟಾಗಿ ತರಿಸಿಕೊಂಡಲ್ಲಿ ೧ ಹೆಚ್ಚಾಗಿ ದೊರೆಯುತ್ತದೆ.

[8-48] ವಿಳಾಸ.—ಜನರಲ್ ಏಜೆನ್ಸಿ, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಅದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [239-29]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

GRATIS & POST FREE!!

"THE Art of Perfumery and How to make Scented Hair Oil, Spirit Perfumes, etc.," is being distributed free. Please mention this paper and apply to—

S. PAUL & Co., Perfumers,

4 Hospital Street, Dharamtola, CALCUTTA. [263-]

ನೋಟೀಸ್.

ಬೊಂಬಾಯಿ ತಾತಾ ಕನ್ನ ಸ್ವದೇಶೀ ಮಿಲ್ಸು ಕಂಪೆನಿಯಲ್ಲಿ ತಯಾರಾಗುವ ಪಂಚೆಗಳು, ಪಡಿಗಂಬು, ಚಕ್ಕು, ಟ್ವಿಲ್, ಪಟ್ಟೆ ಮುಂತಾದ ಜವಳಿ ಮತ್ತು ನೇಯುವಾದ ನೂಲು ಮುಂತಾದ ಸಾಮಾನುಗಳನ್ನು ಸೋಲ್ ಏಜೆಂಟರನ್ನಾಗಿ ಏರ್ಪಡಿಸಿರುವದರಿಂದ ನಮ್ಮಲ್ಲಿ ಈ ಮಾಲು ಕರಾರುವಾಕ್ ಬೆಲೆಗೆ ದೊರೆಯುವುದಲ್ಲದೆ ಸವಲತ್ತು ಡಿಸ್ಕೌಂಟು ಸಹ ದೊರೆಯುತ್ತೆ. [172-8]

ಕಮಿಷನ್ ಮತ್ತು ಜನರಲ್ ಏಜೆನ್ಸಿ—

144. ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೊಲ್ಲಾರಯ್ಯನ ಬೀದಿ, ಶಿವಮೊಗ್ಗ.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency speccially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-20]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ರಿಜಿಸ್ಟರ್ಡ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಸರಪಣಿ ಸಹಿತ 5 ವರುಷಗಳ ಗ್ಯಾರಂಟಿ ವಿ. ಪಿ. ಛಾರ್ಜು

ಕ್ರಯ ರೂ 3-0-0. ಪತ್ರ 4 ಆಣೆ.



ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಡವರಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು, ಡಸ್ಟ್ ಪ್ರೂಫ್ ಎಂಬ ಗ್ಲಾಸು ದೋಣಿಯೂ ಇರುವದು. ಬಹಳ ಗಟ್ಟಿಕರವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿರಿ.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[260-2] ಪೋಸ್ಟು ಬಾಕ್ಸು 167, ಮದರಾಸ್.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬುಟಾ ಶೀರೆ, ಪೇಟ, ಮಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಜರೀ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊರನಾಡು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ. [119-22]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ವಾಚಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಆಸ್ಟ್ರೇಲಿಯಾ ದೇಶದ ಬೆಳ್ಳಿ ಕಂಪೆನಿಯಿಂದ ತಯಾರಿಸಿರುತ್ತೆ. ಇವರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ಈ ಕೆಳಗೆ ಕಂಡ ನಗಗಳನ್ನು ನಾವೇ ಸ್ವಂತವಾಗಿ ತಯಾರಿಸಿರುವುದರಿಂದ ಸಾಧ್ಯವಾದಷ್ಟಿಗೆ ನಮ್ಮ ಬೆಲೆ ಕಮ್ಮಿಯಾಗಿರುವದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0.

ಸುಂದರವಾದ ಪ್ರಮುಖೇಲಿ ರುಳಿ (ಕಾಲು ಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-14-0	1-10-0	1-0-0

ಬಂಗಾರದ ಗಿಲೀಟಿನ ಕೈಗೊಲಸು.

ಸ್ತ್ರೀಯರು ಕೈಯಲ್ಲಿ ಹಾಕಿಕೊಳ್ಳುವದಕ್ಕೆ ಬಹು ಸೊಗಸಾಗಿ ಇರುವದು.



ದೊಡ್ಡವರಿಗೆ	ಚಿಕ್ಕವರಿಗೆ
1-6-0	1-0-0

ಇದರಲ್ಲಿ ಇನ್ನಾವ ಆಭರಣಗಳನ್ನು ಬೇಕಾದರೂ ನಮಗೆ ಬರೆಯುವಾಗ್ಗೆ ದೊಡ್ಡವರಿಗೆ ಚಿಕ್ಕವರಿಗೆ ಎಂಬುದು ಕ್ರಯ ಸರಿಯಾಗಿ ತಿಳಿಸಬೇಕು.

ವಿಳಾಸ:—ಮದರಾಸ್ ಟ್ರೇಡಿಂಗ್ ಕಂಪನಿ,

[252—4] 16, ತಿರುಪಳ್ಳಿ ಬೀದಿ, ಮದರಾಸು.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ.

ಸುಂದರವಾದ ಜೂಬಿಲಿ ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 3.0.0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ಪಕ್ಕದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪಾಸ್ ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ಧೊರೆಗಳು ಕೊಂಡುಕೊಳ್ಳುತ್ತಾ ಇದ್ದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವುದು. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜರ್ಮನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.



ನಮ್ಮ ವಿಳಾಸ—ವ್ಯಾಪಾರಲಕ್ಷ್ಮಿ ಅಂಡ್ ಕಂಪನಿ,

[252—4] 3, ಇರುಳಪ್ಪನ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂಬಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೇ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣು ಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರಪ್ರಸ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-16]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್ ೬೬ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಊತದ ಮೊಣಕಾಲು.

ದಿನದ ಪಯಣದಲ್ಲಿ ನೀವು ಕಂಡುಕೊಳ್ಳುವ ನೋವಿನಂತೆಯೇ ಇದೂ ನೋವಾಗಿಯೂ ಅನಾನುಕೂಲವಾಗಿಯೂ ಇರುತ್ತದೆ. ಮತ್ತು ಅದು ಪಾಸಿಕರವಾದದ್ದು. ಊತದ ಮೊಣಕಾಲು ಸಹ ಕುಂಟರಾಗವಹುದು ಹುತ್ತದೆ.

ಫಿಲಡೆಲ್ಫಿಯದ, ಎ. ಸಿ. ಲೇಸರ್ ಎಂಬುವರು ಬರೆಯುತ್ತಾರೆ:—"ಎರಡು ವರುಷಗಳಕಾಲ ಮೊಣಕಾಲಿನ ದೊಡ್ಡ ಊತದ ದೆಸೆಯಿಂದ ಮರಣಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಮಾಡಲಿಲ್ಲ. ನಮ್ಮ ನೆಗರದ ನಾಲ್ವರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿ, ಕ್ಷಣದಲ್ಲಿ ಪೂರ್ಣ ಗುಣಹೊಂದಿದೆನು." ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಲೇಪಿಸುವುದರಿಂದ ಊತುಗಳೂ, ಗಾಯಗಳೂ, ಸಂಧಿವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಿಗಾರರಲ್ಲಿಯೂ ಸೀಸೆ 1ಕ್ಕೆ 1 ರೂ ಪಾಯಿನಂತೆ ಮಾರಲ್ಪಡುತ್ತೆ.

[81-32]

ಸುಲೋಚನೆಗಳು.



ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಶರಿಪ್ಡಿಸುವ ಉತ್ತಮ ತರದ ಸುಲೋಚನೆಗಳನ್ನೇ ಕೊಡತಕ್ಕದ್ದು. ನಮ್ಮ ಚಂದ್ರಕಾಂತ ಮತ್ತು ಇತರ ತರದ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಜಾಹಿರು ಪಟ್ಟಿ ಕೇ. ಸುಲೋಚನಗಳು ದಿಗಂತ ಕ್ರಯ ಕಡಿಮೆ ಬೆಲೆ ಸುಲಭ.

ನಮ್ಮ ವಿಳಾಸ:—ಎಸ್. ಎನ್. ರಾಮರಾವ್ ಸನ್ಸ್,

[249-5] ಕೋಟೆ ಬಾಗಿಲು, ಬೆಂಗಳೂರು.

ಅಮೇರಿಕನ್ ರೋಗಹರಿ.

ಕ್ರಯ ಡಬ್ಬಿ 1 ಕ್ಕೆ 0-4-0

3 ಡಬ್ಬಿ ಗಳಿಗೆ ಕ್ರಯ ... 0-8-0

ವಾಚಕ ಮಹಾಶಯರಿಗೆ ತಿಳಿಸುವದೇನೆಂದರೆ—ಇತರರು ರೋಗಹರಿ ಯೆಂದು ಹೆಸರಿಟ್ಟು ಮಾರುತ್ತಲಿರುವ ಸೋಪುಗಳಿಗೆ ಈಗ ನಾವು ತಯಾರಿಸುವ ಅಮೇರಿಕನ್ ರೋಗಹರಿ ಔಷಧವನ್ನು ಹಾಕಿ ಸೀಮೆಸುಣ್ಣ, ಎಣ್ಣೆ, ಕರ್ಪೂರದ ತೈಲ ಮೊದಲಾದವುಗಳನ್ನು ಸೇರಿಸಿ, ಸೋಪಿನ ಆಕಾರದ ಗಾಗೆ ಬಿಲ್ಲೆಗಳನ್ನು ಮಾಡಿ, ತಗರದ ಡಬ್ಬಿಯಲ್ಲಿ ಹಾಕಿ ಮೋಸ ಮಾಡುತ್ತಲಿದ್ದಾರೆ. ಈಗ ನಾವು ತಯಾರಿಸಿ ವಿಕ್ರಯಿಸುವ (ಅಮೇರಿಕನ್ ರೋಗಹರಿಯು) ಧಾಟು ನೋಡದ ಹಾಗೆಯೂ, ಎಣ್ಣೆ, ಸುಣ್ಣ, ಕರ್ಪೂರ ತೈಲಗಳಿಂದ ಸೇರದೆಯೂ ತಯಾರಿಸಿ ತಗಡಿನ ಡಬ್ಬಿಯಲ್ಲಿ ಹಾಕಿ ಗಟ್ಟಿಯಾಗಿ ಬಿಗಿಸಿ ಇರುವುದರಿಂದ ಇದನ್ನು ಕೊಡೆಯಗಳ ಮೇಲೆ ಸವರಿದ ಮಾತ್ರದಲ್ಲಿ ರೋಗಗಳು ಉಡುಗಿ ಆ ಸ್ಥಳವು ಸ್ವಚ್ಛವಾಗುತ್ತೆ. ಶಕ್ತಿ ಸಲಹೆಂತೆ ಮನವರು ತರಿಸಿ ಉಪಯೋಗಿಸುವುದರಿಂದಲೂ ಮತ್ತು ಮಾಡಿದರಲ್ಲಿ ಇದರ ನಿಜಸ್ಥಿತಿಯನ್ನು ತಿಳಿಯಬಹುದು

ಇನ್ನೊಂದೆ ನಮ್ಮಲ್ಲಿ ರೋಗಹರ ಸಾಬೂನುಗಳು ವಿಕ್ರಯಕ್ಕೆ ಸಿದ್ಧವಿರುತ್ತೆ. ಕ್ರಯ ಮೂರು ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0-10-0 ಟಪಾಲ್ ಖರ್ಚು 0-3-0.

ನಮ್ಮ ವಿಳಾಸ:—ಪಿ. ಕೃಷ್ಣಸ್ವಾಮಿ ಮೊದಲಿಯರ್,

[273-1] ನಂ. 27, ಬಂದರ್ ಬೀದಿ, ಮದರಾಸು.

ಯಾವಾಗಲೂ ಜಿಂತ್ರಾನವನ್ನೇ ಉಪಯೋಗಿಸಿ.

ಜಿಂತ್ರಾನ ಜಿಟ್ಟೆಮ್ಮರೆ ಬೇರೆ ಔಷಧವಿಲ್ಲ. ಪ್ರಪಂಚಕ್ಕೆಲ್ಲಾ ಅಪೂರ್ವವಾದ ಸಂತೃಪ್ತಿಯನ್ನುಂಟುಮಾಡಿ ಸರ್ವರಲ್ಲೂ ವಿಶೇಷ ನಂಬಿಕೆಯನ್ನುಂಟುಮಾಡಿರುವುದೇ ಜಿಂತ್ರಾನ.

ಕಂಚಿನ ಮೋಂಬತ್ತಿ ಸ್ಟ್ಯಾಂಡುಗಳು ಬಹಳ ಗಟ್ಟಿಮುಟ್ಟಾಗಿಯೂ, ಅಲಂಕಾರವಾಗಿಯೂ, ಬಹಳ ಅಗ್ಗವಾಗಿಯೂ ಇವೆ.

ಉತ್ತಮೋತ್ತಮವಾದ ಅಲಂಬಿಕ್ ಸಾಬೂನುಗಳು ಕೂದಲಿಗೆ ಹಚ್ಚುವ ಕೊಬ್ಬರಿ ಎಣ್ಣೆ, ಕಾರ್ಬಾಲಿಕ ಹಲ್ಲುಪುಡಿ. ಯೂಕಲಿಪ್ಟಸ್ ಎಂಬ ಬಟ್ಟೆಗಳಿಗೆ ಹಾಕುವ ಸುವಾಸನ ದ್ರಾವಕ, ಸೆಂಟುಗಳು, ಪೊಮೇಡುಗಳು. ಕೋಲ್ಡ್ ಕ್ರೀಮ್, ಖಾತರಿಯಾದ ಔಷಧಗಳು ಇತ್ಯಾದಿ.

ಪ್ರೊಫೆಸರ್ ಗೆಟ್ಟಾರ್‌ರವರ ಗೃಹಕಂಡ ಮನೆ ಔಷಧಗಳು. ಇವು ಪ್ರತಿ ಒಂದು ಮನೆಯಲ್ಲೂ ಇರಬೇಕು. ಬಹಳ ನಂಬಿಕೆಯಾದವು. ಬಹಳ ಸುಲಭ ಕ್ರಯ. ಎಲ್ಲಾ ತರಹ ಔಷಧಗಳೂ ಇವೆ.

"ಡೋಂಗ್ರೆಯವರ ಬಾಲಾಮೃತ" ಮಕ್ಕಳಿಗೆ ಶಕ್ತಿಕೊಡುವುದಕ್ಕೆ ಇದನ್ನು ಬಿಟ್ಟರೆ ಬೇರೆ ಔಷಧವೇ ಇಲ್ಲ. ಎಲ್ಲಾ ತರದ ನೋವನ್ನೂ ನಿವಾರಣಮಾಡುವ ಪರ್ಲಿ ಬಾವ ಎಂಬ ಬಾಧಾಪಹಾರಿಣಿ ಬಹಳ ಅಗ್ಗ, ಬಹು ಬೇಗನೆ ಬಾಧೆಯನ್ನು ಶಮನಮಾಡಬಲ್ಲದು.

ಆರೋಗ್ಯಕರ ಮಾತ್ರೆಗಳು ಧನ್ವಂತ್ರಿಯ ಉತ್ತಮೋತ್ತಮ ರಚನೆ. ಸ್ನಾನದ ಎಣ್ಣೆಗಳು, ರಸಾಯನಗಳು, ಹಲ್ಲುಪುಡಿಗಳು, ಇತ್ಯಾದಿ, ಇತ್ಯಾದಿ.

ದಕ್ಷಿಣ ಇಂಡಿಯಾ ಮುಖ್ಯ ಏಜಂಟರು:—

[214-9]

ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸು.

ವಿಶೇಷ:—ನಮ್ಮಲ್ಲಿರುವ ಮೇಲ್ಕಂಡ ಪದಾರ್ಥಗಳನ್ನು ಒಂದಾವರ್ತಿ ತರಿಸಿನೋಡಿದರೆ ಅವುಗಳ ಉತ್ಕೃಷ್ಟವಾದ ಗುಣಗಳು ಖಂಡಿತವಾಗಿಯೂ ಅನುಭವವಾಗುತ್ತೆ. ವಿಷಯಗಳನ್ನು ತಿಳಿಯಬೇಕೆಂದು ಬರೆದರೆ ಎಲ್ಲಾ ವಿವರಗಳನ್ನೂ ಸ್ಪಷ್ಟವಾಗಿ ತಿಳಿಸಲು ಯಾವಾಗಲು ಸಿದ್ಧರಾಗಿರುತ್ತೇವೆ.

ಗಿಲೀಟಿನ ಡಾಬುಗಳು.

ಚಿನ್ನದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವುದಕ್ಕೆ ಚಿಕ್ಕದಾದ ಕೊಂಡಿಗಳು ... ಡಾಬುಗಳಂತೆ ಮುಂಭಾಗದಲ್ಲಿ ... ತೆಗೆಯುವದಕ್ಕೆ ಹಾಳು ... ನೋಟಕ್ಕೆ ಒಂದೇ ತೆರವಾಗಿಯೇ ಇರುವದು. ... ಚಿನ್ನದ ... ಒಂದು ಸಲ ಒಬ್ಬರು ತರಿಸಿ ... ಮಾಡುವರು.

ಗಿಲೀಟಿನ ಗೆಜ್ಜೆ ಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0.
ಡಾಬುಗಳು ರೂ. 1-12-0.

ಮ್ಯಾನೇಜರ್, ವೈರ್ಮಲಕ್ಷ್ಮಿ ಅಂಡ್ ಕಂಪೆನಿ,
ನಂ. 3, ಅರುಳಪ್ಪನ ಬೀದಿ, ಮದರಾಸು.
[27-1]

ಡಿಸೆಂಬರ್ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0.



ಇದೇ ಡಿಸೆಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದಕ್ಕೆ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂ 1-14-0 ಆಗಿಗೆ ಕೊಡಲ್ಪಡುತ್ತೆ. [111-27]

ವಿಳಾಸ.—ವಿ. ಕೆ. ಕಂಣುಸಾಮಿ ಅಂಡ್ ಕಂಪೆನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತ ಕೋಶ, ವಾತ ... ಗಳನ್ನು ಸಂಹರಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತೆ. ... ಪಿತ್ತವಿಕಾರ, ಕ್ಷಯ, ಬಾಹುಂತಂಯರ ಕ್ಷಯ, ಮುಟ್ಟುಕಟ್ಟು, ... ಯುಗಳನ್ನು ನಿವಾರಿಸುವದರಲ್ಲಿ ಅತ್ಯಮಾನವಾದುದು. 48 ಮಾತ್ರೆಗೆ 1 ರೂ, 6 ಶೀಸೆಗೆ 5 ರೂ.

2. ರೋಗನಾಶಿನಿ.—... ದಿನವೂ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ... ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಅ, 6 ಶೀಸೆಗೆ 1 ರೂ, 12 ಕ್ಕೆ 2½ ರೂ.

[126-11] ನಮ್ಮ ವಿಳಾಸ.—ಪಂಡಿತ್ ಎನ್. ಗಣಪತಿ, ವೆಂಕಟಾಪುರ.

“ಹನುಮಾರ್ಕ್” ಬೋರಾಕ್ಸ್ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ತುರಿಕೆ, ಕಜ್ಜಿ, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಆಶ್ಚರ್ಯಕರವಾಗಿ ವಾಸಿಯಾಗುವುದು. ... ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿದಿನವೂ ಹನುಮಾರ್ಕ್ ಸಾಬೂನಿನಿಂದ ... ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ... ಈ ಸಾಬೂನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಿರಿ.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರುತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಕಾ. ಕ:—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[211-8] ಈವಿನಿಂಗ್ ಬಜಾರ್ ರೋಡ್, ಮದರಾಸು.

ಕರ್ಣಿಕ ಜ್ವರಮಿಕ್ಸ್ಚರ್ — ಎಲ್ಲಾ ಜ್ವರಗಳಿಗೂ ಖಂಡಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ... ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ... ತೆಗೆದುಕೊಳ್ಳುವದರಲ್ಲೇ ಜ್ವರಗಳನ್ನು ಸಂಹರಿಸುತ್ತದೆ. ... ನೋಡಿ ಎಂದು ಪ್ರಾರ್ಥಿಸುತ್ತೇವೆ. [213-9]

ಕ್ರಯ 0-10-0; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ... ಲಾಭವೂ ಇದ ದರಗಳು. ಬೇಗ ಬರೆದು ಕೇಳಿ.

ವಿಳಾಸ.—ಕರ್ಣಿಕ ಬ್ರದರ್ಸ್,
ಜ್ವರಮಿಕ್ಸ್ಚರ್ ಡಿಪೋ, ಬೊಂಬಾಯಿ. 4.
KARNIK Bros., BOMBAY, 4.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ವಾಸನೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ಕೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋ ಮೋಹಿನಿಯೇ ಅದು.

... ನಾನಾ ಬೆಳ್ಳಿ ಭಂಗಾರಗಳ ಪದಕ ... 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆಕೊಂಡ ...

... 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ... ಆಟೋ ಮೋಹಿನಿಯೇ.

ಕ್ರಯ ½ ಔನ್ಸ್ ಗಾಜಿನ ಬಿಂದಿಯಲ್ಲಿ ಸೀಸೆಗೆ ರೂ 2—0—0.

1 ಡ್ರಾಮ್ ಸೀಸೆಗೆ	0—12—0	ಮಾದ್ರಿ ಸೀಸೆಗೆ	0— 2—0
½ ,, ,,	0— 8—0	ಕಾರ್ಡು ಪೆಟ್ಟಿಗೆ	0—12—0

... ಶ್ರೇಷ್ಠವೂ ಸವಿನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ... ಕೂದಲನ್ನು ಸಾಕಿ ಬೆಳಸುವಂಥಾದ್ದು. ... ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲ ... ಇದು ಇತರರು ಹೇಳುವ ಥಾ ಎಣ್ಣೆಯಲ್ಲ. ... ಇಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ... [267-10]

1 ಬಾಟ್ಲಿಗೆ ರೂ. 1-0-0.
3 ,, ,, 2-10-0.

ಸೋಲ್ ಏಜಂಟರು.—ಷಾ ಛಗನ್‌ಲಾಲ್ ದಾಸ್ ಟೆನಿಲಾಲ್ ಕಂಪೆನಿ,
177, ಟ್ರಿನಾಟ್ರಿಬಜಾರ್ ರೋಡ್, ಮದರಾಸು.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ.

ಸುಂದರವಾದ ಇಂಗ್ಲೀಷು ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ 2-12-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ಪಕ್ಕದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ... ಸ್ವಲ್ಪ ಮಾತ್ರ ತಂಸರುತ್ತೇವೆ. ...



ಬಲಿಷ್ಟವಾದ ... ಯಂತ್ರದಲ್ಲಿಯೂ ... ಈ ಗಡಿಯಾರವನ್ನು ... ಇಂಡಿಯಾ ದೇಶದಲ್ಲಿ ಪ್ರತಿದಿನ ನೂರಾರು ಗಡಿಯಾರಗಳು ... ಬಹುಮಾನದ ಕಪಶೀಲು—(1) ಸರಪಣಿ, (2) ಕಂಪಾಸ್, (3) ... ಕರವಸ್ತ್ರ, (4) ಕೈ ಉಂಗರ, (5) ... (6) ಸುವಾಸನೆ ಸೆಂಟ್, (7) ಕೈ ಗುಂಡಿಗಳು, (8) ... ಪೆಟ್ಟಿಗೆ, (9) ಗಿಲೀಟ್ ಚಟ್ಟ.

ನಮ್ಮ ವಿಳಾಸ—ಧನಲಕ್ಷ್ಮಿ ಅಂಡ್ ಕಂಪೆನಿ,
[260-3] ಸಾವುಕಾರ್‌ಪೇಟೆ, ಮದರಾಸು.

ಹೊಗಳಿಕೆಗಿಂತಲೂ

ಪರೀಕ್ಷೆಯೇ ಮೇಲು!!!

ನೂರಾರು ವರುಷಗಳ ಅನುಭವದಿಂದ ಗುಣಕಂಡು ಪ್ರಖ್ಯಾತಿ ಹೊಂದಿರುವ ... ಈ ಮಹೌಷಧಗಳನ್ನು ... ಗುಣವನ್ನು ತಿಳಿಯಿರಿ. [231-52]

ತ್ರಿಕಟು ಚೂರ್ಣ ಮಾತ್ರೆ ಸುಮಾರು 300 ವಾತ್ರೆ ಸೀಸೆಗೆ	4 ಆಣೆ.
ಸುಖಭೇದಿ ಮಾತ್ರೆ 50 ಮಾತ್ರೆ ಸೀಸೆಗೆ	4 ಆಣೆ.
ಬಾಲ ಸಂಜೀವಿನಿ 60 ಮಾತ್ರೆ ಸೀಸೆಗೆ	4 ಆಣೆ.
ಅಮೃತಲೇಪ (ಕರಿಬೇವು ವಾಯುನೋವುಗಳಿಗೆ ಸಿದ್ಧ) ಮೃತ್ತು ಸೀಸೆಗೆ	4 ಆಣೆ.
ನಾರಿಕೇಳಾಂಜನ ಸೀಸೆಗೆ	4 ಆಣೆ.
ಅವಲೇಹ—ಚ್ಯವನಾಶ, ಬಾಯಿನಾಥ, ಆಯಾಸಕ್ಕೆ 150 ಮಾತ್ರೆ	4 ಆಣೆ.

ಮೇಲ್ಕಂಡ ಆರು ಔಷಧಗಳ ಪೈಕಿ ನಿಮಗೆ ಬೇಕಾಗುವ 6 ಸೀಸೆಗಳನ್ನು ... ರೂ 1-8-0 12 ಸೀಸೆಗೆ ರೂ. 2-12-0. 25 ಸೀಸೆಗೆ ರೂ. 5-0-0.

ಪ್ರತಿ ಔಷಧದ ಜೊತೆಯಲ್ಲೂ ವಿವರವಾದ ಅನುಪಾನ ಪತ್ರವಿರುವುದು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ವೈದ್ಯಶಾಲಾ, ನಂಜನಗೂಡು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

... ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

... ಜರ್ಮನಿ, ಅಮೇರಿಕಾ, ಮಲೆಯ ಸ್ಟೇಟ್, ಗೋವ, ಫಿಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ... ಶೀತ, ಶೀತವಾಯು, ಅಜೀರ್ಣ, ... ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ... 180 ಮಾತ್ರೆಗಳುಳ್ಳ ಡಬ್ಬಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ... ಆಫ್ ಅಮೆರಿಕಾ ವಿ. ಎಲ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ... ನಂ 3, ಬೊಂಬಾಯಿ, ... (2) ಮ|| ಪಿ. ... ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—... ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗುತ್ತಿರುವ ಲೋಕೋಪಯೋಗ ಕಸ್ತೂರಿ ಮಾತ್ರೆಗಳನ್ನು ... ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸ್ತ್ರೀಪುರುಷರು ಮಕ್ಕಳು ಅದಿಯಾಗಿ ಸರ್ವರೂ ಸಂತೋಷದಿಂದ ಧರಿಸುವ

ಮೇಲಾದ ರೇಷ್ಮೆ ಪಂಚೆಗಳು.



ಅನೇಕ ಪಂಚೆಗಳು ... ಬಹು ವರದಿಂದ ... ಶೃಂಗಾರವೂ ನಾಗರೀಕತೆಯೂ ಕೂಡಿದ ಅಸಲ್ ರೇಷ್ಮೆ ಪಂಚೆಗಳು ... ಪ್ರತಿ ಒಬ್ಬರಿಗೂ ಒಂದೊಂದು ... ಕೊಡಲಿ ... ಸ್ತ್ರೀಪುರುಷರು ಬಾಲಕ ಬಾಲಕಿಯರು ಸಂತೋಷವಾಗಿ ಧರಿಸುವದಕ್ಕೆ ಯೋಗ್ಯವಾದದ್ದು. ... ಕೆಂಪು, ಪಚ್ಚೆ, ಹಳದಿ, ರೋಜಾ, ಊದ, ಇತ್ಯಾದಿ ಬಣ್ಣಗಳು ... [260-3]

8½ ಮೊಳ ಉದ್ದ 2½ ಮೊಳ ಅಗಲ ಇರುವ ಪಂಚೆ 1 ಕ್ಕೆ ರೂ. 1-12-0. ಪೋಸ್ಟ್ ಖರ್ಚು 0-4-0 ಪ್ರತ್ಯೇಕ. ಎರಡು ಪಂಚೆಗಳು ಒಂದೇ ಸಾರಿ ತರಿಸಿಕೊಂಡರೆ 1 ಪರಿಮಳ ಸೀಸೆ ಉಚಿತವಾಗಿ ಕೊಡುತ್ತೇವೆ.

ನಮ್ಮ ವಿಳಾಸ.—ಯಲ್. ಯಂ. ಸ್ವಾಮಿ ಅಂಡು ಕಂಪೆನಿ,
ನಂ. 44 ನಂಬುಳಯ್ಯರ ಬೀದಿ, ಮದರಾಸು.

ಅಬ್‍ಸ್ಟ್ರಾಕ್ಟ್ ನೋಟೀಸು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಆಫೀಸಿಗೆ ಬೇಕಾಗಿರುವ ಕಾಗದ ಮುದ್ರಣ ಅಲ್ಮೆರಾಗಳನ್ನು (ಬುಕ್ಸ್ ಯೂನಿಟ್‍ಗಳನ್ನು) ಸರಬರಾಯಿ ಮಾಡುವದಕ್ಕೆ ಕೊಡಬೇಕಾದ ಟೆಂಡರುಗಳನ್ನು 1915 ನೇ ಡಿಸೆಂಬರು 31 ನೇ ತಾರೀಖು ವರೆಗೆ ಜನರಲ್ ಇಲಾಖೆಯ ಸೆಕ್ರೆಟರಿಯವರು ತೆಗೆದುಕೊಳ್ಳುವರು (ಈ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ತಿಳಿಯಬೇಕಾದರೆ 1915 ನೇ ಡಿಸೆಂಬರ್ 2 ನೇ ತಾರೀಖಿನ ಪುಟ 1131 ಉಳ್ಳ ಮೈಸೂರು ಗೆಜೆಟ್ಟನ್ನು ಮತ್ತು ಅದರ ಈಚಿನ ತಾರೀಖುಗಳ ಗೆಜೆಟ್ಟುಗಳನ್ನು ನೋಡತಕ್ಕದ್ದು.) [269-1]

ಬೆಂಗಳೂರು, B. NARAINSAMIENGAR,

3 ನೇ ಡಿಸೆಂಬರ್, 1915. ಫಾರ್ ಜನರಲ್ ಸೆಕ್ರೆಟರಿ.

ವೃತ್ತಾಂತ ಪತ್ರಿಕೆ.

:O:

೫೮ ೧೯೧೫ ನೇ ಇಸವಿ ಡಿಸೆಂಬರ್ ತಾ. ೯ ನೇ ಗುರುವಾರ.

ಮೈಸೂರು ಸೀಮೆಯ ಮಲೆನಾಡು.

ಮೈಸೂರು ಸಂಸ್ಥಾನದಲ್ಲಿರುವ ಮಲೆನಾಡು ಪ್ರದೇಶವು ಬಹಳ ಫಲವತ್ತಾದದ್ದು. ಅಂಥಾ ಪ್ರದೇಶಗಳಲ್ಲಿ ಪ್ರಜಾ ಸಂಖ್ಯೆಯು ಕ್ರಮೇಣ ಕ್ಷಯವಾಗುತ್ತಿದೆ. ಈ ಭಾಗದಲ್ಲಿ ನಮ್ಮ ಸರ್ಕಾರದವರು ಕೆಲವು ಕಾಲದಿಂದಲೂ ಚಿಂತೆಪಟ್ಟು ಪರಿಹಾರ ಕಾರ್ಯಗಳನ್ನು ಹುಡುಕಾಡುತ್ತಿದ್ದಾರೆ. ಇದಕ್ಕೋಸ್ಕರ ಅವರು ಸ್ಪೆಷಲ್ ಅಧಿಕಾರಿಗಳನ್ನು ನೇಮಕಮಾಡಿರುವರು. ಈ ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸರ್ಕಾರದವರೊಡನೆ ಕೆಲವು ಮಟ್ಟಿಗೆ ಚರ್ಚೆಗಳನ್ನೂ ನಡಿಸಿದರು. ಆದರೆ ಫಲಕಾರಿಯಾಗುವಂಥಾ ಸಂಗತಿಗಳನ್ನಾಗಲಿ ಸಲಹೆಗಳನ್ನಾಗಲಿ ಯಾರೂ ಒದಗಿಸಲಾರದೆ ಹೋದರು. ನಮ್ಮ ಗವರ್ನ್‍ಮೆಂಟಿನವರು ಈ ವಿಚಾರದಲ್ಲಿ ಇದುವರೆಗೆ ನಡಿಸಿರುವ ಕಾರ್ಯಗಳನ್ನೂ ಅವುಗಳ ಫಲಿತಾಂಶಗಳನ್ನೂ ಕಾಣಿಸಿ ಒಂದು ರಿಪೋರ್ಟನ್ನು ಪ್ರಕಟಮಾಡುವ ಕಾಲ ಒದಗಿದೆ ಎಂದು ನಮಗೆ ತೋರುವುದು. ಅದೇ ಕಡೆಯ ರಿಪೋರ್ಟೆಂದು ನಾವೇನೂ ಭಾವಿಸುವುದಿಲ್ಲ; ಯಾಕೆಂದರೆ ಈ ವಿಚಾರವು ಬಹಳ ಕಷ್ಟವಾದದ್ದು. ಸಹಜವಾದ ಕಾರಣಗಳನ್ನು ಕಂಡುಹಿಡಿದು ತಕ್ಕ ಪರಿಹಾರಗಳನ್ನು ರೂಪಿಸಿ ರೂಢಿಗೆ ತರುವುದಕ್ಕೆ ವಿಶೇಷ ಕಾಲ ಹಿಡಿದೀತೆಂದು ಒಪ್ಪಿಕೊಳ್ಳುತ್ತೇವೆ.

ಆದಾಗ್ಯೂ ನಮ್ಮ ಸರ್ಕಾರದವರು ಮುಂದೆ ಹೇಳುವ ವಿಚಾರಗಳನ್ನು ಕುರಿತು ಒಂದು ರಿಪೋರ್ಟನ್ನು ಪ್ರಕಟಿಸಬಹುದಾಗಿದೆ ಎಂದು ನಂಬಿ ಸೂಚಿಸುತ್ತೇವೆ. ಮಲೆನಾಡುಗಳಲ್ಲಿ ಪ್ರಜೆಗಳು ಕಡಮೆಯಾಗುವುದಕ್ಕೆ ಕಾರಣಗಳೇನು? ಆಯಾ ಸ್ಥಳಗಳಿಗೆ ವಿಶೇಷವೆನಿಸುವಂಥಾ ರೋಗಾದಿಗಳೇನಾದರೂ ಇರುವವೇ? ಮಿತಿಮೀರಿ ಸುರಾಪಾನ ಮಾಡುವುದೇನಾದರೂ ಕಾರಣವೆಂದು ಹೇಳಬಹುದೇ? ಅಲ್ಲಿನ ಪ್ರಜೆಗಳ ಆಚಾರ ವ್ಯವಹಾರಗಳೇನಾದರೂ ಪ್ರಜಾಕ್ಷೋಭೆಗೆ ಕಾರಣವಾಗಿರುವವೇ? ಕೂಲಿಮಾಡುವ ಜನಗಳಿಗೆ ಅಭಾವವಾಗಿ ಅಂಥಾ ದುರ್ದಸೆಯುಂಟಾಗಿದೆಯೋ? ಕಾರಣಾದಿಗಳನ್ನು ಕಂಡುಹಿಡಿಯುವುದಕ್ಕಾಗಿ ನೇಮಿಸಲ್ಪಟ್ಟಿರುವ ಅಧಿಕಾರಿಗಳು ಒಟ್ಟಿನಲ್ಲಿ ಇದುವರೆಗೆ ಯಥಾರ್ಥವಾದ ಸಂಗತಿಗಳನ್ನು ಗೊತ್ತುಮಾಡಿರಬಹುದೆಂದು ನಿರೀಕ್ಷಿಸುತ್ತೇವೆ. ಇದುವರೆಗೆ ಸಂಗ್ರಹಮಾಡಲ್ಪಟ್ಟಿರುವಂಥಾ ವಿದ್ಯಮಾನಗಳನ್ನೂ ಅವುಗಳ ಸಾರಾಂಶವನ್ನೂ ಪ್ರಜೆಗಳ ತಿಳುವಳಿಕೆಗೋಸ್ಕರ ಪ್ರಕಟಿಸಬಹುದಾಗಿರುತ್ತದೆ. ರೆವಿನ್ಯೂ ಮತ್ತು ವೈದ್ಯ ಇಲಾಖೆಗಳಲ್ಲಿ ನಿಯಮಿಸಲ್ಪಟ್ಟ ಅಧಿಕಾರಿಗಳು ಸ್ಪೆಷಲ್ ಕಮಿಟಿಗಳಲ್ಲಿ ಬಹಳ ಕಾಲದಿಂದಲೂ ತನಿಖೆಗಳನ್ನು ಮಾಡುತ್ತಿದ್ದಾರೆ. ಇದಕ್ಕೋಸ್ಕರ ಸರ್ಕಾರದ ಹಣವೂ ವಿಶೇಷವಾಗಿ ಖರ್ಚಾಗುತ್ತಿರುವುದು. ಅವರುಗಳು ಇದುವರೆಗೂ ತನಿಖೆಮಾಡಿರುವ ಸಂಗತಿಗಳನ್ನೂ ಅವರ ಅಭಿಪ್ರಾಯಗಳನ್ನೂ ಸರ್ಕಾರದವರು ಕ್ರೋಢೀಕರಿಸಿ ಪ್ರಕಟಿಸಿದರಾಯಿತು. ಇನ್ನೂ ತಡಮಾಡುವುದು ಸರಿಯೆಂದು ನಮಗೆ ತೋರುವುದಿಲ್ಲ.

ಮಲೆನಾಡಿನ ಪ್ರಜಾಕ್ಷೋಭೆಗೆ ಕಾರಣಗಳು ಗೊತ್ತಾದ ಪಕ್ಷದಲ್ಲಿ ಪರಿಹಾರ ಕಾರ್ಯಗಳನ್ನು ಸೂಚಿಸಬಹುದೆಂದು ತೋರುತ್ತದೆ. ಕಾಯಿಲೆಗಳೇ ಕಾರಣವಾಗಿರುವ ಪಕ್ಷದಲ್ಲಿ ರೋಗನಿವಾರಣೆಯ ಏರ್ಪಾಡುಗಳನ್ನು ಮಾಡಬೇಕು. ಪ್ರಜೆಗಳ ಅಭ್ಯಾಸಗಳೂ ಅವರ ಶೀಲಸ್ವಭಾವಗಳೂ ಕೆಟ್ಟುಹೋಗಿದ್ದರೆ ಅವುಗಳನ್ನು ತಿದ್ದಿ ಗುಣಾಢ್ಯರನ್ನಾಗಿ ಮಾಡುವ ಉಪಾಯಗಳನ್ನು ಹುಡುಕಿ ರೂಢಿಸಬೇಕಾಗುವುದು. ಪ್ರಜೆಗಳಲ್ಲಿರುವ ಆಚಾರ ವ್ಯವಹಾರಗಳೇನಾದರೂ ಅಂಥಾ ಕ್ಷೋಭೆಗೆ ಕಾರಣವೆಂದು ತಿಳಿದರೆ ಅವುಗಳನ್ನು ಕಳಿಸುವ ಏರ್ಪಾಡು ಮಾಡಬೇಕಾಗುತ್ತದೆ. ಕೂಲಿ ಜನಗಳ ಕ್ಷೋಭೆಯೇ ಮೊದಲಾದ ಸಾಂಪತ್ತಿಕ ವಿದ್ಯಮಾನಗಳ ಲೋಪಗಳು ಕಂಡುಬಂದಲ್ಲಿ ಅವುಗಳ ಪರಿಹಾರ ಮಾರ್ಗವನ್ನು ಕಂಡುಹಿಡಿದು ರೂಢಿಗೆ ತರಬೇಕು.

ನಮಗೆ ತಿಳಿದಿರುವ ಮಟ್ಟಿಗೂ ಇದುವರೆಗೆ ಯಾವುದೊಂದು ರಿಪೋರ್ಟೂ ಸರ್ಕಾರದಿಂದ ಪ್ರಕಟವಾಗಿರುವುದಿಲ್ಲ. ಆದರೆ ಅಪಾರ ಹಣ ಖರ್ಚಾಗುವಂಥಾ ಅಧಿಕಾರಿಗಳ ನೇಮಕವೇ ಮೊದಲಾದ ಏರ್ಪಾಡುಗಳನ್ನು ಸ್ಯಾಂಕ್ಷನ್ ಮಾಡಿಯೂ ಮಾಡುತ್ತಿಲೂ ಇರುವ ಹಿಂದು ಪಕ್ಷದ ರಿಪೋರ್ಟುಗಳು ಅಥವಾ ಹುಕುಮುಗಳು ಪ್ರಕಟವಾಗಿರುವವು. ಯಥಾರ್ಥವಾದ ವಿದ್ಯಮಾನಗಳನ್ನು ಗೊತ್ತುಮಾಡಿ ಪರಿಹಾರ ಕಾರ್ಯಗಳನ್ನು ವಿವೇಕಪೂರ್ವಕವಾಗಿ ನಡಿಸಿದ ಪಕ್ಷದಲ್ಲಿ ಇದಕ್ಕಾಗಿ ಖರ್ಚಾಗಿರುವ ಹಣವನ್ನು ನೋಡಿ ಯಾರೂ ಅಸಮಾಧಾನವಾಗಲಿ ಚಿಂತೆಯಾಗಲಿ ಪಡಲಾರರು. ಆದರೆ ಈಗಾಗಲೇ ಬಹಳ ಹಣವು ವ್ಯರ್ಥವಾಗಿ ಖರ್ಚಾಗಿರಬೇಕೆಂಬ ಅನುಮಾನ ಉಂಟಾಗಿದೆ. ಇಷ್ಟು ಹಣ ಖರ್ಚಾಗುವುದಕ್ಕೆ ಮೊದಲು ಮತ್ತೂ ಅಧಿಕಾರಿಗಳೂ ಕಮಿಟಿಗಳೂ ಏರ್ಪಾಡಾಗುವುದಕ್ಕೆ ಮೊದಲು ಈ ವಿಚಾರದಲ್ಲಿ ನಮಗೆ ಎಷ್ಟು ಮಟ್ಟಿಗೆ ತಿಳುವಳಿಕೆಯುಂಟಾಗಿತ್ತೋ ಈಗಲೂ ಅದಕ್ಕಿಂತ ಹೆಚ್ಚೇನೂ ತಿಳಿದಿಲ್ಲವೆಂದು ಹೇಳಬಹುದು. ನಾವು ಈ ರೀತಿ ಅಸಮಾಧಾನವಾಗಲಿ ಚಿಂತೆಯಾಗಲಿ ಪಡಬೇಕಾದದ್ದಿಲ್ಲವೆಂಬ ಅರ್ಥಕ್ಕೆ ಇದುವರೆಗೆ ನಡೆದಿರುವ ಕಾರ್ಯಗಳನ್ನು ಪ್ರಕಟಿಸಿದರೆ ನೋಡಿ ಸಂತೋಷಪಟ್ಟುಕೊಳ್ಳುವೆವು. ಇಂಥಾ ಖರ್ಚುಗಳಿಗೆ ಹಣ ಒದಗಿಸತಕ್ಕವರು ಪ್ರಜೆಗಳಾದದ್ದರಿಂದ ಇದುವರೆಗೆ ನಡೆದಿರುವ ಕಾರ್ಯಗಳ್ಯಾವವು, ಕಂಡುಹಿಡಿದಿರುವ ವಿಷಯಗಳೇನು ಎಂದು ಪ್ರಜೆಗಳು ತಿಳಿಯುವಂತೆ ನಮ್ಮ ಸರ್ಕಾರದವರು ಒಂದು ರಿಪೋರ್ಟನ್ನು ಪ್ರಕಟಿಸಬೇಕೆಂದು ಸೂಚಿಸುತ್ತೇವೆ.

ಭಯತ್ರಯ ರಕ್ಷೆ.

ಜನರು ಯಾವದಕ್ಕೆ ಹೆದರುತ್ತಾರೆ? ನೀನು ಯಾವದಕ್ಕೆ ಹೆದರಿ ಭಯಪಡುತ್ತೀ? ಲೋಕದಲ್ಲಿ ಬೇರೆ ಬೇರೆ ಭಯೋತ್ಪಾತಗಳುಂಟು. ಆದರೆ ಎಲ್ಲರೂ ಸರ್ವಸಾಧಾರಣವಾಗಿ ಕತ್ತಲೆ, ಕಾಯಿಲೆ, ಮರಣ ಇವುಗಳಿಗೆ ಬಹಳ ಭಯಪಡುವರು.

1. ಕತ್ತಲೆ.—ಕತ್ತಲೆಯಲ್ಲಿ ನೀನು ಎಲ್ಲಿಗಾದರೂ ಹೋಗುವಿಯೋ? ನಿನ್ನ ಸಂಗಡ ಯಾರೂ ಇಲ್ಲದಿದ್ದರೆ ನಿನಗೆ ಭಯವಾಗುವದಿಲ್ಲವೋ? ಒಂದು ಊರಿನಿಂದ ಬೇರೊಂದೂರಿಗೆ ಗಾಡಿಯವನು ಒಂಟಿಯಾಗಿ ಗಾಡಿ ಕಟ್ಟುವನೋ? ಜೊತೆ ಗಾಡಿಗಳು ಇಲ್ಲದಿದ್ದರೆ ಭಯಪಡುವನು. ಯಾಕೆಂದರೆ ಕತ್ತಲಾಗಿದೆ. ಒಂದು ವೇಳೆ ಎಲ್ಲಿ ಕಳ್ಳರು ಬೀಳುವರೋ? ತಲೆ ಒಡೆಯುವರೋ? ನಾನು ಒಂಟಿಯಾಗಿ ಹ್ಯಾಗೆ ಗಾಡಿ ಹೊಡೆಯುವದು ಎಂದು ಅಂಗಲಾಚುವದನ್ನು ನೀವು ನೋಡಿಲ್ಲವೇ? ಒಂಟಿಯಾಗಿ ಕತ್ತಲಲ್ಲಿ ನೀನು ದೂರ ಹೋಗಲಾರಿ. ನಿನಗೆ ಭಯವಾಗುವದಿಲ್ಲವೇ? ಕತ್ತಲಲ್ಲಿ ಜನರು ಮನೆ ಬಾಗಿಲು ಭದ್ರಮಾಡಿಕೊಂಡು ನಿಶ್ಚಬ್ದವಾಗಿ ಮಲಗಿಕೊಂಡಿರುವರು. ಚಿಕ್ಕ ಮಕ್ಕಳು ಅಳುವಾಗ ಅವುಗಳನ್ನು ಸುಮ್ಮನಿರಿಸುವದು ಹ್ಯಾಗೆ? ತಾಯಿಯವರು ಇಗೋ ಬೆಲ್ಲ, ಇಗೋ ಕಾಸು, ನನ್ನ ಅಮ್ಮನಲ್ಲ! ಸುಮ್ಮನಿರು, ಅಂಗಡಿಗೆ ಹೋಗೋಣ ಎಂಬೀ ತರವಾಗಿ ಹೇಳಿದರೆ ಅಳುವದನ್ನು ಬಿಟ್ಟು ಸುಮ್ಮನಾಗುವವೋ? ಕೆಲವು ಮಕ್ಕಳು ಹಟಮಾಡಿ ಅಳುವವು. ತಾಯಿಗಳಿಗೆ ಬೇಸರವಾದರೆ ಬೇರೊಂದು ಉಪಾಯ ಮಾಡುತ್ತಾರೆ. ಅದೇನೆಂದು ನಿನಗೆ ಗೊತ್ತೋ? ರಾತ್ರಿಯಲ್ಲಿ ಮಕ್ಕಳನ್ನು ಕತ್ತಲೆ ಕಡೆಗೆ ತೋರಿಸಿ ಅಗೋ ಗೊಗ್ಗಯ್ಯ ಬರುತ್ತಾನೆ ಅನ್ನುತ್ತಾರೆ. ಅಲ್ಲಿ ಗೊಗ್ಗಯ್ಯ ಇರುತ್ತಾನೋ? ಇಲ್ಲ. ಬರೀ ಕತ್ತಲು. ಓ ಎಂದಳುತ್ತಿರುವ ಮಕ್ಕಳು ಸುಮ್ಮನಾಗುತ್ತಾರೆ. ಕತ್ತಲನ್ನು ನೋಡಿದರೆ ಮಕ್ಕಳಿಗೂ ಹೆದರಿಕೆಯಾಗುವದು. ಈಗ ಈ ತರವಾದ ಕತ್ತಲೆಯ ಭಯ ನಿನಗಿರುವಾಗ ನೀನು ಅಪೇಕ್ಷಿಸುವದು ಏನು? ಬೆಳಕು ಅಲ್ಲವೇ? ಈಗ ಬೇರೊಂದು ಕತ್ತಲೆಯುಂಟು ಕೇಳಿರಿ. ಮೂಢಭಕ್ತಿ ಇಲ್ಲವೆ ಅಜ್ಞಾನವೇ ದೊಡ್ಡ ಕತ್ತಲು. ಇಂಥಾ ಅಜ್ಞಾನದೊಳಗೆ ಇರುವವರಿಗೆ ಬಹಳ ಭಯ. ಯಾಕೆಂದರೆ ಅವರು ಕೆಟ್ಟ ಕಾರ್ಯಗಳಲ್ಲಿಯೂ ಕೆಟ್ಟ ನಡತೆಗಳಲ್ಲಿಯೂ ಗಾಡಿಯ ಚಕ್ರವು ಗುಂಡಿಯಲ್ಲಿ ಸಿಗಲಿಕೊಂಡು ಅಲ್ಲಿಯೇ ಉರುಳುತ್ತಿರುವ ಹಾಗೆ ನಡೆಯುತ್ತಾರೆ. ಇಂಥವರಿಗೆ ಜ್ಞಾನ ಬೇಕಲ್ಲವೇ? ಬೆಳಕು ಯಾರಿಗೆ ಬೇಕಿಲ್ಲ? ಕಳ್ಳರಿಗಲ್ಲವೇ? ಯಾಕೆಂದರೆ ಅವರು ಕೆಟ್ಟ ಕೆಲಸ ಮಾಡುತ್ತಾರೆ. ಪಾಪಮಾಡುವವರಿಗೆ ಅಜ್ಞಾನವು ಕಾರಣವಾಗಿದೆ. ನೀವು ಒಳ್ಳೆಯವರೂ ಭಕ್ತರೂ ಆಗಬೇಕಾದರೆ ನಿಮ್ಮ ಜೀವಮಾನದಲ್ಲಿ ಬೆಳಕನ್ನು ಹುಡುಕಿರಿ. ಗುರುವು ಅಜ್ಞಾನಿಗೆ ಬೆಳಕಾಗಿದ್ದಾನೆ. ಬೆಳಕನ್ನು ಕೊಡುವ ನಿಜಗುರು ಯಾರು? ಯೇಸುಸ್ವಾಮಿಯೇ. ಅವರು ಹೇಳುವ ಬೋಧನೆಯನ್ನು ಗಮನಿಸಿರಿ. ಅದೇನೆಂದರೆ—

"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲಲ್ಲಿ ನಡೆಯದೆ ಜೀವ ಕೊಡುವ ಬೆಳಕನ್ನು ಹೊಂದಿದವನಾಗಿರುವನು" ಎಂಬುವದೇ.

2. ಕಾಯಿಲೆ.—ಕಾಯಿಲೆ ಬರಬೇಕೆಂದು ಯಾರು ಕೋರುವರು? ನಿಮಗೆ ಕಾಯಿಲೆ ಬರುವದು ಇಷ್ಟವೋ? ಹೊಟ್ಟೆನೋವು ಬಂದರೆ ಅಪ್ಪಪ್ಪಾ! ಅನ್ನುತ್ತಾರೆ. ತಲೆನೋವು ಬಂದರೆ ಅಯ್ಯಯ್ಯೋ! ಅನ್ನುತ್ತಾರೆ. ಜ್ವರ ಬಂದರೆ ಮಾತ್ರೆ ಬೇಕು. ಮಾತ್ರೆ ನಿಷ್ಫಲವಾದರೆ ವೈಕುಂಠಕ್ಕೆ ಯಾತ್ರೆ ಹೋಗಬೇಕು. ಆದದರಿಂದ ಜನರು ಕಾಯಿಲೆ ಬಂದರೆ ಬಹಳ ಭಯಪಡುತ್ತಾರೆ ಕಾಯಿಲೆ ಬಂದರೇನಾಗುತ್ತದೆ. ಬಲಗುಂದುವದು. ದೇಹಾತ್ಮಗಳ ಗತಿವಿಧಿಯೂ ಅಸಮಾಧಾನವೂ ಆಗುವದು. ಊಟವಾಗಲೂ ಬಾಯಿ ಸೇರದು. ಆರೋಗ್ಯ ನಿಯಮಗಳು ತಪ್ಪಿದ ಕೂಡಲೆ ಕಾಯಿಲೆಯು ತಲೆದೋರುವದು. ಮತ್ತು ಎಲ್ಲ ವಿಧವಾದ ಸುಖನೀಡ ಬಗಳು ಕೊಡಬೇಕಾದದ್ದಾಗುವದು. ಮನುಷ್ಯನಿಗೆ ರೋಗ ಬರುವದಕ್ಕೆ ಅನೇಕ ಕಾರಣಗಳುಂಟು. ಆದರೂ ಕೆಲವು ರೋಗಗಳು ಪಾಪಕೃತ್ಯಗಳಿಂದಲೂ ಕೆಟ್ಟ ನಡತೆಯಿಂದಲೂ ಉಂಟಾದವೆಂದು ನಿರ್ಧರಿಸಿ ಹೇಳಬಹುದು. ಆದದರಿಂದ ಎಲ್ಲಾ ಕಾಯಿಲೆಗಿಂತ ದುರಾಚಾರವೇ ಬಹಳ ಕೆಟ್ಟದ್ದು. ಪಾಪವು ಆತ್ಮಕ್ಕೆ ಇರಬೇಕಾದ ಸುಖಸಂತೋಷಗಳನ್ನು ಕೆಡಿಸುತ್ತದೆ. ಪಾಪಮಾಡುವವನಿಗೇನು ಮೇಲುಂಟು? ಒಂದು ಒಣಮರಕ್ಕೆ ಗೆದ್ದಲು ಹತ್ತಿದರೇನು ಆಗುತ್ತದೆ? ಆ ಮರ ಮಣ್ಣಾಗುತ್ತದಲ್ಲವೇ? ಹಾಗೆಯೇ ಪಾಪವು ನಮ್ಮ ಆತ್ಮಕ್ಕೆ ಹತ್ತಿದರೆ ನಷ್ಟವಾಗುತ್ತದೆ. ಒಬ್ಬ ಮಹಾ ಸಿದ್ಧಪುರುಷನು ಹೇಳುವದನ್ನು ಕೇಳಿರಿ—

"ಪಾಪವು ಕೊಡುವ ಸಂಬಳ ಮರಣ. ಆದರೆ ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ."

ಕಾಯಿಲೆಯನ್ನು ಹೋಗಲಾಡಿಸುವದಕ್ಕೆ ಅನೇಕ ವೈದ್ಯರು ಪ್ರಯಾಸಪಡುವರು. ಆದರೆ ಪಾಪವೆಂಬ ರೋಗ ಯಾರಿಂದ ಹೋಗುತ್ತೆ? ಪಾಪವು ಬಹಳ ಅನಿಷ್ಟವಾದದ್ದು. ಅದು ಎಂದಿಗೂ ಇರಬಾರದು. ಅದನ್ನು ಹ್ಯಾಗಾದರೂ ಹೋಗಲಾಡಿಸಬೇಕು. ಯೇಸುಸ್ವಾಮಿಯು ಈ ಲೋಕದಲ್ಲಿ ಅವತಾರಮಾಡಿದ್ದ ಕಾಲಗಳಲ್ಲಿ ಅನೇಕ ಕಠಿಣವಾದ ರೋಗದವರಿಗೆ ಗುಣಮಾಡಿದ್ದು ಮಾತ್ರವಲ್ಲದೆ "ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂದು ಹೇಳಿದನು ಇನ್ನು ಆತನು ಹೇಳಿದ್ದು—"ಕ್ಷೇಮದಿಂದಿರುವವನಿಗೆ ವೈದ್ಯನು ಬೇಕಿಲ್ಲ, ಕ್ಷೇಮವಿಲ್ಲದವರಿಗೆ ಬೇಕು." ಆತನು—"ಕೆಟ್ಟುಹೋಗಿರುವವರನ್ನು ಹುಡುಕಿ ರಕ್ಷಿಸುವದಕ್ಕೆ ಬಂದೆನು" ಎಂಬುವದೇ. ಸಾಕ್ಷಾತ್ ದೇವರಾದ ಯೇಸುಸ್ವಾಮಿಯೇ ಪಾಪವನ್ನು ಹೋಗಲಾಡಿಸುವ ಧನ್ವಂತ್ರಿಯು.

3. ಮರಣ.—ಅಂದರೆ ಸಾವು. ಸಾಯುವದಕ್ಕೆ ಯಾರಿಗೆ ಮನಸ್ಸು? ಸಾಯಬೇಕೆಂದು ಯಾರೂ ಅಪೇಕ್ಷಿಸುವದಿಲ್ಲ ಒಬ್ಬ ಕೊಲೆಗಾರನು ತನ್ನನ್ನು ಸರ್ಕಾರದವರು ಗಲ್ಲಿಗೆ ಹಾಕುವರೆಂದು ತಪ್ಪಿಸಿಕೊಂಡು ಹೋಗುತ್ತಾನೆ. ಯಾಕೆ ಆ ತರವಾದ ಭಯ? ಮರಣಕ್ಕೆ ಬಹಳ ಹೆದರಿಕೆ. ಇರಲಿ, ಸಾವು ಅಂದರೇನು? ಇದನ್ನು ವಿವರಿಸುವದಕ್ಕೆ ಸ್ಥಳವಿಲ್ಲ. ಆದರೂ ಇದನ್ನು ಒಂದೇ ಮಾತಿನಲ್ಲಿ ಹೇಳಬೇಕಾದರೆ ಹೀಗೆ ಹೇಳಬಹುದು:—ಒಂದಕ್ಕೂ ಬೇರೊಂದಕ್ಕೂ ಇರುವ ಸಂಬಂಧ ತಪ್ಪಿಹೋಗುವುದೇ ಮರಣ. ದೃಷ್ಟಾಂತವಾಗಿ ನಾನು ಬೆಳಕಾಗಿದೆ ಎಂದ ನುಡಿಯುತ್ತೇನೆ. ಅದು ಹ್ಯಾಗೆ ಗೊತ್ತು? ನನ್ನ ಕಣ್ಣಿಗೂ ಬೆಳಕಿಗೂ ಒಂದು ಸಂಬಂಧವಿದೆ. ಒಳ್ಳೇದು, ಕುರುಡನು ಆ ಬೆಳಕನ್ನು ಯಾಕೆ ನೋಡಿ ತಿಳಿಯಲಾರನು? ಅವನ ಕಣ್ಣಿಗೂ ಬೆಳಕಿಗೂ ಇರಬೇಕಾದ ಶಕ್ತಿ ಇಲ್ಲ. ಸಂಬಂಧ ತಪ್ಪಿಹೋಯಿತು. ಈಗ ಇದನ್ನು ಏನೆಂದು ಹೇಳುವಿರಿ? ಕುರುಡನ ಕಣ್ಣಿಗೆ ಮರಣ ಬಂತು ಎಂದಲ್ಲವೇ? ನಾನು ಗಾನವನ್ನು ಇಂಪಾಗಿದೆ ಎಂದು ಹೇಳುತ್ತೇನೆ. ಅದು ನನಗೆ ಗೊತ್ತು. ಕೇಳುವ ಕಿವಿಯ ಶಕ್ತಿಯುಂಟಾಗಿದ್ದೇನೆ. ಆದರೆ ಕಿವುಡನು ಯಾಕೆ ಕೇಳುವದಿಲ್ಲ? ಅವನಿಗೆ ಅಂಥಾ ಕಿವಿಯ ಶಕ್ತಿ ಇಲ್ಲವೆ ಅದರ ಸಂಬಂಧ ತಪ್ಪಿಹೋಗಿದೆ. ಕಿವಿಗೆ ಮರಣ. ನಾನು ನೋಡುತ್ತೇನೆ, ಕೇಳುತ್ತೇನೆ, ಓದುತ್ತೇನೆ, ತಿನ್ನುತ್ತೇನೆ, ಜೀವಿಸುತ್ತೇನೆ. ಇದು ನನಗೆ ಗೊತ್ತು. ಯಾಕೆಂದರೆ ನನ್ನಲ್ಲಿ ಜೀವಾತ್ಮವಿದೆ. ಒಂದು ಹೆಣ ಇವುಗಳನ್ನೆಲ್ಲಾ ಯಾಕೆ ತಿಳಿಯುವದಿಲ್ಲ? ಇಂಥಾ ಶಕ್ತಿಯು ಶರೀರವನ್ನು ಬಿಟ್ಟು ಹೋಗಿಬಿಟ್ಟಿಲ್ಲವೇ? ಹಾಗಾದರೆ ಇದಕ್ಕೆ ಏನು ಹೇಳುತ್ತೀವೆ? ಜೀವ ಮರಣ ಬಂತು, ಹೊರಟುಹೋದರು ಎಂದು ಹೇಳುತ್ತೇವೆ. ಇದು ದೇಹದ ಮರಣವೆಂದು ನಾವು ಹೇಳುವೆವಷ್ಟೆ. ನಮಗೆ ಆತ್ಮದ ಮರಣ ಬರುತ್ತದೆ. ಅದು ಈ ಮರಣಕ್ಕಿಂತಲೂ ಬಹಳ ಭಯಂಕರವಾದದ್ದು. ಅದರ ರೀತಿ ಏನೆಂದು ನೋಡೋಣ ನಮ್ಮ ಆತ್ಮಕ್ಕೂ ಪರಮಾತ್ಮನಾದ ದೇವರಿಗೂ ಇರುವ ನಮಗೂ ದೇವರಿಗೂ ಬಹಳ ಸಂಬಂಧವಿದೆ ಇದು ಪಾರಮಾರ್ಥಿಕವಾದ ಸಂಬಂಧ. ಈ ಸಂಬಂಧವಿರುವ ತನಕ ನಾವು ಆತನಿಂದ ಜೀವವನ್ನು ಹೊಂದಿಕೊಂಡು ಬದುಕುತ್ತೇವೆ; ಕಡೆಯಲ್ಲಿ ಮೋಕ್ಷದಲ್ಲಿ ಸೇರುತ್ತೇವೆ. ದೃಷ್ಟಾಂತವಾಗಿ ಒಂದು ಊರಿನಿಂದ ಬೇರೊಂದೂರಿಗೆ ತಂತೀ ವರ್ತಮಾನ ಹೋಗುವದಕ್ಕೆ ನಡುವೆ ತಂತಿಗಳನ್ನು ಕಟ್ಟಿದ್ದಾರೆ. ಅದರ ಮೂಲಕ ಆ ಊರಿನ ಆಫೀಸಿಗೂ ಈ ಊರಿನ ಆಫೀಸಿಗೂ ಸಂಬಂಧವಿದೆ. ಒಬ್ಬನು ನಡುದಾರಿಯಲ್ಲಿ ತಂತಿಯನ್ನು ಕತ್ತರಿಸಿ ಹಾಕಿದರೆ ಆ ಊರಿನ ಆಫೀಸಿನಿಂದ ಈ ಊರಿನ ಆಫೀಸಿಗೆ ಸಂಬಂಧ ತಪ್ಪಿಹೋಯಿತು. ಸಮಾಚಾರ ಬರಲಾರದು. ಹಾಗೆಯೇ ನಮಗೂ ದೇವರಿಗೂ ಇರುವ ಸಂಬಂಧ ನಿಜಭಕ್ತಿಯಲ್ಲವೇ?

"ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮದ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು"

ಹಾಗಿಲ್ಲದೆ "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು (ಇಲ್ಲದವರಾಗಿ) ಬಳ್ಳಿ ಹೊಂದದೇ ಹೋಗಿದ್ದಾರೆ."

ಮರಣಕ್ಕೆ ಪಾತ್ರರಾಗಿರುವವರಿಗೆ ಬಹಳ ಭಯ ಈ ಭಯ ನೀಗಬೇಕಾದರೇನು ಬೇಕು? ಜೀವ ಬೇಕಲ್ಲವೇ? ಈ ಜೀವ ನಿತ್ಯಕಾಲದಲ್ಲೂ ಇರಬೇಕಾದದ್ದು. ಅದೇ ನಿತ್ಯಜೀವ ಅದು ಯಾವದೆಂದು ಕೇಳುವಿರಾ? ಯೇಸುಸ್ವಾಮಿಯೇ.

ಪ್ರಿಯ ಸ್ವದೇಶಿಗಳೇ, ಈ ವರೆಗೂ ಮನುಷ್ಯರು ಹೆದರುವಂಥಾ ಮೂರು ಭಯಗಳನ್ನು ಕುರಿತು ನಿಮಗೆ ವಿವರಿಸಿದೆವಷ್ಟೆ. ಈ ಮೂರು ಭಯಗಳನ್ನು ಹೋಗಲಾಡಿಸುವ ದೇವರೂ ಗುರುವೂ ಆಗಿರುವ ಯೇಸುಸ್ವಾಮಿಯವರು ನಮಗೆ ತಿಳಿಸಿರುವ ಬೋಧನಾಂಶವನ್ನು ಗಮನಿಸಿರಿ—"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ." ಈತನೇ ರಕ್ಷಕನು. ಈತನೇ ನಮಗೆ ಜೀವವು ಸಮೃದ್ಧಿಯೂ ಇರಬೇಕೆಂದು ಅವತಾರ ಎತ್ತಿದ್ದನು. ಈ ಮೂರು ಮುಖ್ಯ ವಿಷಯಗಳನ್ನು ಚೆನ್ನಾಗಿ ಗ್ರಹಿಸಬೇಕಾದರೆ ಸುವಾರ್ತೆಗಳೆಂಬ ನಾಲ್ಕು ಗ್ರಂಥಗಳನ್ನು ನೀವು ಓದುವದು ಒಳ್ಳೇದು.

ಯುದ್ಧದ ಸಮಾಚಾರಗಳು.

ಇಂಡಿಯದ ಸೈನ್ಯ ಫ್ರಾನ್ಸಿನಿಂದ ಹೊರಡಿಕೆ.

ಕಳೆದ ವಾರ ಅನೇಕ ಸಂಗತಿಗಳು ನಡೆದಿರುವವು ಆ ಪೈಕಿ ಪ್ರಾಮುಖ್ಯವಾದದ್ದೇನೆಂದರೆ, ಬ್ರಿಟಿಷ್ ಸೈನ್ಯಗಳು ಫ್ರಾನ್ಸಿನಲ್ಲಿ ಬಹಳ ಹೆಚ್ಚಾಗಿಯೂ ಬಲವಾಗಿಯೂ, ಇರೋಣದರಿಂದ ಅಲ್ಲಿರುವ ಹಿಂದುಸ್ಥಾನದ ಸೈನ್ಯಗಳು ಅವಶ್ಯವಾಗಿರುವ ಬೇರೆ ಕಡೆಗೆ ಕಳುಹಿಸುವುದು ಅಗತ್ಯವೆಂದು ಕಂಡುಬಂತು. ಈ ವಿಷಯದಲ್ಲಿ ನಾವು ತಿಳಿದುಕೊಳ್ಳಬಹುದಾದ ಭಾಗಗಳು ನಮ್ಮ ಚಕ್ರವರ್ತಿ ಸಾರ್ವಭೌಮರವರು ಪ್ರಿನ್ಸ್ ಆಫ್ ವೇಲ್ಸ್‍ರವರ ಮುಖೇನ ಅಪ್ಪಣೆ ಕೊಡಿಸಿರುವ ವಾಕ್ಯಗಳಿಂದ ಪ್ರಕಾಶವಾಗುವವು. ನಮ್ಮ ಪ್ರಭುಗಳು ಅಲ್ಲಿರುವ ಹಿಂದೂಸ್ಥಾನದ ಪ್ರಜೆಗಳನ್ನು ಕುರಿತು ಹೇಳಿರುವುದೇನೆಂದರೆ—

"ಹಿಂದುಸ್ಥಾನ ಸೈನ್ಯದ ಆಫೀಸರುಗಳಿರಾ, ಅವರ ಯುದ್ಧವೀರರುಗಳಿರಾ—ಒಂದು ವರುಷದ ಹಿಂದೆ ನಮ್ಮ ಚಕ್ರಾಧಿಪತ್ಯದ ಸಂರಕ್ಷಣೆಗಾಗಿಯೂ, ನಾವು ಬೆಲ್ಜಿಯಮ್ ಮತ್ತು ಫ್ರಾನ್ಸ್ ರಣರಂಗಗಳಲ್ಲಿ ಮಾಡಿದಂಥಾ ಗೌರವಪ್ರದವಾದ ಕಾಪಾಡುವುದಕ್ಕಾಗಿಯೂ ಕದನಕ್ಕೆ ನಿಮ್ಮನ್ನು ಹಿಂದುಸ್ಥಾನದಿಂದ ಕರೆಸಿದೆವು. ... ನೀವುಗಳು ಕರ್ತವ್ಯಪರರಾಗಿ ..., ಪರಾಕ್ರಮಶಾಲಿಗಳು ಎಂದು ಪ್ರಾರಂಭದಲ್ಲೇ ನಾವು ಹೇಳಿದ ನಂಬಿಕೆಗಳನ್ನು ಈಗ ನೀವು ಅತ್ಯಂತ ... ಸಾರ್ಥಕಪಡಿಸಿರುತ್ತೀರಿ. ಈಗ ನಿಮ್ಮನ್ನು ಇನ್ನೊಂದು ರಂಗಕ್ಕೆ ಕಳುಹಿಸಬೇಕಾಗಿದೆ ಯುದ್ಧಭೂಮಿಯಲ್ಲೇ ಇದ್ದ ಕೊನೆಯ ಸೈನ್ಯದ ಜೀವನದಲ್ಲಿ ಕಷ್ಟ ಅಪಾಯಗಳಿಗೆ ಗುರಿಯಾಗಿದ್ದ ಧೈರ್ಯಶಾಲಿಗಳು ನಮ್ಮ ... ಮಾಡಿರುವ ಕಾರ್ಯಗಳಿಗೋಸ್ಕರ ನಿಮ್ಮನ್ನು ವಂದಿಸಿ, ನಮಗೆ ಸಂಪೂರ್ಣ ತೃಪ್ತಿಯುಂಟಾಗಿದೆ ಎಂದು ಸೂಚಿಸುತ್ತೇವೆ.—ಆಯುಧಗಳನ್ನು ಹಿಡಿದು ಸಹಾಯಕರಾಗಿರುವ ಬ್ರಿಟಿಷ್ ಮತ್ತು ... ಸ್ಥಾನದ ಸೈನಿಕರುಗಳಿರಾ, ನೀವುಗಳು ಶುಂಭಕ ಶಸ್ತ್ರಗಳಿಗೆ ಸಿಕ್ಕಿ ಅನುಭವಿಸಿ ನಿಮಗಿಂತಲೂ ಎಷ್ಟೋ ಹೆಚ್ಚಾದ ಸೈನ್ಯಗಳು ನಿಮ್ಮ ಮೇಲೆ ನುಗ್ಗಿದಾಗ ಕೂಡ ಸಾಕಷ್ಟುಮಟ್ಟಿಗೂ, ದೃಢಮನಸ್ಸಿನಲ್ಲೂ, ಪರಾಕ್ರಮ ಕಾರ್ಯಗಳ ನಡಿಸಿದ್ದರಲ್ಲೂ, ಎಂದೆಂದಿಗೂ ಮರೆಯಲಾಗದಂಥಾ ಕದನಗಳಲ್ಲೂ, ... ಕಷ್ಟಕರವಾದ ಸಂದರ್ಭಗಳಲ್ಲೂ ನೀವುಗಳು ನಮ್ಮ ಚಕ್ರಾಧಿಪತ್ಯದ ಘನತೆಯನ್ನು ಬಹಳ ಸ್ನೇಹಪ್ರಸರವಾಗಿ ಉಜ್ಜೀವಿಸಿರುವಿರಿ; ಹಿಂದುಸ್ಥಾನದ ನಮ್ಮ ಸೈನ್ಯ ರಾಷ್ಟ್ರಕವಾದ ಯಶಸ್ಸನ್ನು ಕಾಪಾಡಿರುತ್ತೀರಿ.—ನಮ್ಮ ಜನಾಂಗದವರುಗಳು ನಾವು ಮನಃಪೂರ್ವಕವಾದ ಚಿಂತೆಯಿಂದಲೂ, ಅಹಂಕಾರ ಮತ್ತೂ ಸಂತೃಪ್ತಿಯಿಂದಲೂ ನೋಡುತ್ತಲೂ, ನಿಮ್ಮ ಪರಾಕ್ರಮ ಕಾರ್ಯಗಳನ್ನು ಕೇಳಿ ಆನಂದಪಡುತ್ತಲೂ ಬಂದಿದೇವೆ ಅನೇಕ ಶೂರಾಗ್ರೇಸರರು ಯುದ್ಧದಲ್ಲಿ ಸೈನಿಕರು ನಷ್ಟಪಟ್ಟದ್ದನ್ನು ನೋಡಿ ನಿಮ್ಮ ಕೂಡ ನಾವೂ ಚಿಂತಾಕ್ರಾಂತರಾಗಿದೇವೆ. ಹಾಗೆ ನಷ್ಟಪಟ್ಟದ್ದರಿಂದ ಅವರಿಗೆ ಕೀರ್ತಿಯುಂಟಾಯಿತು. ... ನಿಮಗೆ ಸಮಾಧಾನವನ್ನುಂಟುಮಾಡಲಿ. ಯಾಕೆಂದರೆ ಅವರು ತಮ್ಮ ಪ್ರಭುವಿನ ಮಾನವನ್ನೂ ಚಕ್ರಾಧಿಪತ್ಯದ ಕ್ಷೇಮವನ್ನೂ ಕಾಪಾಡುವುದಕ್ಕೋಸ್ಕರ ಧರ್ಮಕ್ಕಾಗಿಯೇ ತಮ್ಮ ಪ್ರಾಣಗಳನ್ನು ಧಾರಾಳವಾಗಿ ಒಪ್ಪಿಸಿರುತ್ತಾರೆ. ಅವರು ತಮ್ಮ ಶೌರ್ಯವಂತರೆನಿಸಿಕೊಂಡು ಪ್ರಾಣಬಿಟ್ಟರು. ಅವರ ಇಂಥಾ ಅಮೂಲ್ಯವಾದ ದಾನವನ್ನು ನಾವು ಎಂದೆಂದಿಗೂ ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇವೆ.—ನೀವು ಫ್ರಾನ್ಸಿನಲ್ಲಿ ನಿಮ್ಮ ಶೌರ್ಯವನ್ನು ಪ್ರಕಾಶಪಡಿಸಿ ಕೀರ್ತಿಯನ್ನು ಸಂಪಾದಿಸಿಕೊಂಡು ಇಲ್ಲಿಂದ ಇನ್ನೊಂದು ರಣರಂಗಕ್ಕೆ ಹೋಗುವಿರಿ. ... ನೀವು ತೋರಿಸಿರುವ ಪರಾಕ್ರಮವೂ ನಿಮ್ಮ ಅನುಭವವೂ ಇನ್ನು ಮುಂದೆ ನೀವು ಹೋಗುವ ಯುದ್ಧಭೂಮಿಯಲ್ಲಿ ಜಯಪ್ರದವನ್ನೇ ಹೊಂದುವಿರೆಂಬ ... ಯನ್ನು ನೀವು ನಮ್ಮಲ್ಲಿ ಉಂಟುಮಾಡಿರುತ್ತೀರಿ. ದೇವರು ನಿಮ್ಮನ್ನು ಆಶೀರ್ವದಿಸಲಿ! ನಿಮ್ಮನ್ನು ಸುರಕ್ಷಿತವಾಗಿ ಕಾಪಾಡಿ, ಕಡೆಯ ಜಯಪ್ರದವಾದ ಮೇಲೆ ನಿಮ್ಮ ನಿಮ್ಮ ಮನೆಗಳಿಗೆ ವಾಪಸು ಕರೆದುಕೊಂಡು ಹೋಗಲಿ!"

ಹಿಂದುಸ್ಥಾನದ ಸೈನ್ಯಗಳು ಫ್ರಾನ್ಸಿನಲ್ಲಿ ಅತ್ಯಂತ ಸ್ತೋತ್ರಾರ್ಹವಾದ ಕಾರ್ಯಗಳನ್ನು ಮಾಡಿರೋಣದರಿಂದ ಅವರನ್ನು ಅಲ್ಲಿಂದ ಇನ್ನೊಂದು ಕಡೆಗೆ ಕಳುಹಿಸಿದಾಗ್ಯೂ ಅಲ್ಲಿ ಕೀರ್ತಿ ಪ್ರದವಾದ ಕಾರ್ಯಗಳನ್ನೇ ಮಾಡುವರೆನ್ನುವುದಕ್ಕೆ ಸಂಶಯವಿಲ್ಲ. ನಮ್ಮ ದೇಶೀಯ ಸೈನಿಕರು ಚಕ್ರಾಧಿಪತ್ಯಕ್ಕೆ ಇಷ್ಟು ಮಟ್ಟಿಗೆ ಪರಾಕ್ರಮ ಕಾರ್ಯಗಳನ್ನು ನಡಿಸುತ್ತಿರುವುದು ಎಂದೂ ಅತ್ಯಂತ ಶ್ಲಾಘನೀಯವು.

ಪಶ್ಚಿಮ ರಣರಂಗದಲ್ಲಿ.

ಈ ಯುದ್ಧ ಭೂಮಿಯ ಹಲವು ಠಾಣ್ಯಗಳಲ್ಲಿ ಫಿರಂಗಿ ಗುಂಡುಗಳ ಮಳೆ ... ಅನೇಕ ಸುರಂಗಗಳು ಹಾರಿದವು. ಅಂತರಿಕ್ಷದಲ್ಲಿ ವಿಮಾನ ... ತುಂಬಾ ಆಗಿವೆ. ಬ್ರಿಟಿಷ್ ವ...ತ್ತು ಫ್ರೆಂಚ್ ವಿಮಾನಯಂತ್ರ ... ಚಕ್ರವರ್ತಿಯ ... ಒಂದು ವಿಮಾನಯಂತ್ರವು ಬೆಲ್ಜಿಯಮ್ ... ಜರ್ಮನಿಯ ಒಂದು ಸಬ್‌ಮೆರೀನಿನ ಮೇಲೆ ಸಿಡಿಮದ್ದಿನ ಗುಂ... ಅದನ್ನು ನಾಶಮಾಡಿತು. ಅಂತರಿಕ್ಷದಲ್ಲಿ 20-30 ಕದನಗಳು ... ಒಂದು ಸಂದರ್ಭದಲ್ಲಿ ಬ್ರಿಟಿಷ್ ವಿಮಾನಯಂತ್ರವು ಶತ್ರುವಿನ ... ವಿಮಾನಯಂತ್ರಗಳನ್ನು ಸಂಧಿಸಿ ಕದನ ಮಾಡಿರುತ್ತದೆ. ಜರ್ಮನ್ನಿನ ... ವಿಮಾನಯಂತ್ರಗಳನ್ನು ಕೆಳಕ್ಕೆ ಕೆಡವಿದ್ದಾಯಿತು. ಬ್ರಿಟಿಷರ ಎರಡು ... ಬರಲಿಲ್ಲ. ಮಿತ್ರಮಂಡಲಿಯವರು ಶತ್ರು ಸೈನಿಕರ ಮನೆ ... ರೈಲ್ ಸ್ಟೇಷನ್ ಮೊದಲಾದವುಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಹಾಕಿ ... ಶತ್ರುವಿನ ಕಡೆ ಹು...ಬಾ ನಷ್ಟವಾಗಿರುವುದು. ಜರ್ಮನಿಯ ... ಯಂತ್ರಗಳು ಫ್ರೆಂಚ್ ಕೋಟೆಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ... ಆದರೆ ಅವುಗಳಿಂದ ವಿಶೇಷ ನಷ್ಟವೇನೂ ಆಗಲಿಲ್ಲ.

... ಕಾಲುಗಡೆಯಿಲ್ಲದೆ ಗುಂಡುಗಳನ್ನು ಸುರಿಸುತ್ತಿವೆ. ಜರ್ಮನ ... ಕಂದಕಗಳೂ, ಕೋಟೆಗಳೂ ಬರಿದಾಗಿ ಕೆಡಿಸಲ್ಪಟ್ಟವು. ಬ್ರಿಟಿಷರ ... ಪಕ್ಷದ ಪಡೆಗಳು ಸಹಾಯವಾಗಿ ಬೆಲ್ಜಿಯಮ್ ತೀರಕ್ಕೆ ಗುಂಡುಗಳನ್ನು ... ಕೆಲವು ವಟ್ಟಿಗೆ ಕಾಲ್ಪಲಗಳೂ ಸಂಧಿಸಿ ಯುದ್ಧಮಾಡಿದವು. ಈ ... ಗಳಲ್ಲಿ ಗುಂಡುಗಳನ್ನು ಹಿಡಿದು ಎಸೆದಾಡಿ ಕದನಮಾಡಿದರು. ಕೆಲವು ... ಸೈನಿಕರು ಜರ್ಮನಿಯವರ ಒಂದು ಕಂದಕದೊಳಗೆ ನುಗ್ಗಿ ಹಲವು ... ಸೈನಿಕರನ್ನು ನಾಶಮಾಡಿದರು. ಫ್ರೆಂಚರೂ ಕೂಡ ಅನೇಕ ಜರ್ಮನ ... ರನ್ನು ಕೊಂದುಹಾಕಿ, ಹಲವರನ್ನು ಸೆರೆ ಹಿಡಿದುಕೊಂಡು ಬಂದಿದ್ದಾರೆ.

ಉತ್ತರ ಕಡಲಿನಲ್ಲಿ ಜರ್ಮನಿಯವರ ಮೂರು ವಿಮಾನಯಂತ್ರಗಳು ... ಒಂದು ಬ್ರಿಟಿಷ್ ಹಡಗನ್ನು ಮುತ್ತಿಗೆ ಹಾಕಿ, ಇಪ್ಪತ್ತು ನಿಮಿಷಗಳ ... ಗುಂಡುಗಳನ್ನು ಹೊಡೆದು ಸಿಡಿಮದ್ದಿನ ಗುಂಡುಗಳನ್ನು ಸುರಿಸಿತು. ... ಒಳಗೆ ಗುಂಡಿನೇಟು ಬೀಳದೆ ಅದು ತಪ್ಪಿಸಿಕೊಂಡು ಬಂದಿತು.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದ ಯುದ್ಧ ಸಾಲಿನಲ್ಲಿ ರಷ್ಯದವರ ಸೈನಿಕರು ನಡೆಸಿ ... ವಿಶೇಷವಾಗಿಲ್ಲ. ರೀಗಾ ಬಳಿಯಿಂದ ಜರ್ಮನಿಯವರನ್ನು ... ಹಿಂದಕ್ಕೆ ಓಡಿಸಿಬಿಟ್ಟಿದ್ದಾರೆ. ಅಲ್ಲಿಂದ ಪಶ್ಚಿಮಕ್ಕೆ ರಷ್ಯದವರು ... ಶತ್ರುವಿನ ಮೇಲೆ ನುಗ್ಗಿ ಮುತ್ತಿಗೆ ಹಾಕಿಕೊಂಡು ದಿನಪತಿಗಳಲ್ಲಿ ... ಕೆಲವು ಹುದ್ದೆದಾರರನ್ನು ಸೆರೆ ಹಿಡಿಯುತ್ತಾರೆ.

... ಮೂರು ನಾಲ್ಕು ತಿಂಗಳೊಳಗೆ ರಷ್ಯದವರು 70,00,000 ಹೊಸ ... ಸಿದ್ಧಪಡಿಸಿ ಯುದ್ಧಭೂಮಿಗೆ ಕಳುಹಿಸುವರೆಂದು ವರ್ತಮಾನ ಪತ್ರಿಕೆಗಳು ... ಈ ಪೈಕಿ 1,00,000 ಕುದುರೆ ಸವಾರರಂತೆ. ಇಂಗ್ಲೆಂಡ್, ... ಅಮೇರಿಕದ ಸಂಯುಕ್ತ ಸಂಸ್ಥಾನಗಳು, ಜಪಾನ್, ಈ ರಾಜ್ಯಗಳು ... ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನು ಒದಗಿಸುತ್ತಲಿವೆ ... ಮಳೆಗಾಲವನ್ನು ಕಳೆಯುವುದಕ್ಕೆ ಏರ್ಪಾಡು ಮಾಡಿ ...ದ್ದಾರೆ.

ಇಟಲಿ.

ಇಟಲಿಯವರು ಆಸ್ಟ್ರಿಯಾದವರನ್ನು ಹಿಂದು ಹಿಂದಕ್ಕೆ ಓಡಿಸುತ್ತಿದ್ದಾರೆ. ... ಮುಗಿಸಿಕೊಂಡು ಮಳೆ ಸುರಿಯುತ್ತಿದ್ದರೂ ಬಹು ಕಠಿಣವಾದ ಕದನ ... ಇಟಲಿಯವರು ಪ್ರತಿನಿತ್ಯವೂ ಆಸ್ಟ್ರಿಯಾ ಸೈನಿಕರನ್ನು ಸೆರೆ ... ತ್ತಿದ್ದಾರೆ. ಅವರು ಒಂದು ದಿನ 115 ಮಂದಿ, ಇನ್ನೊಂದು ದಿನ 263 ... ಮತ್ತೊಂದು ದಿನ 703 ಮಂದಿ ಮತ್ತೂ ಮೂರು ಮೆಷೀನ್ ಫಿರಂಗಿ ... ಇನ್ನೊಂದು ದಿನ 254 ಮಂದಿ, ಈ ರೀತಿ ಸೈನಿಕರನ್ನು ಸೆರೆ ಹಿಡಿದಿರು ... ಆಸ್ಟ್ರಿಯಾದವರು ಇಟಲಿಯವರ ಮೇಲೆ ಯುದ್ಧ ನಡೆಸುವುದಕ್ಕೆ ... ಸೈನ್ಯಗಳನ್ನು ಕೂಡಿಸಿ ಕಳುಹಿಸಬೇಕೆಂದು ... ಅವರು ಕೆಲವು ಠಾಣ್ಯ ... ಹಿಮ್ಮೆಟ್ಟಿ ಹೋಗಿರುತ್ತೇವೆಂದು ಪತ್ರಿಕೆಯೇ ಒಪ್ಪಿಕೊಂಡಿದೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸರ್ವಿಯಾದಿಂದ ಬರುವ ತಂತಿವರ್ತಮಾನಗಳು ಇನ್ನು ಸ್ಪಷ್ಟವಾಗಿ ... ಈಗ ಬಂದಿರುವ ವರ್ತಮಾನಗಳಿಂದ ಸಂಗತಿಗಳು ಸ್ಪಷ್ಟವಾಗುವುದಿಲ್ಲ. ... ಶತ್ರುಗಳು ಸರ್ವಿಯಾ ಸೈನ್ಯಗಳನ್ನು ಸೆರೆಹಿಡಿಯುವುದು ಸಾಧ್ಯವಾಗ ... ಸರ್ವಿಯಾದವರು ತಮ್ಮ ದೇಶವನ್ನು ಬಿಟ್ಟು ಮಾಂಟಿನೀಗ್ರೋವಿಗೂ, ... ಹಿಮ್ಮೆಟ್ಟಿ ಹೋಗಿದ್ದಾರೆ. ಆಸ್ಟ್ರಿಯಾ ಮತ್ತು ಬಲ್ಗೇರಿಯಾ ... ಮೊನಾಸ್ಟೀರ್ ಪಟ್ಟಣವನ್ನು ಪ್ರವೇಶಿಸಿದರೆಂದೂ, ಸರ್ವಿಯಾದವರು ... ಕದನವಾಡದೇನೇ ಆ ನಗರವನ್ನು ಬಿಟ್ಟುಕೊಟ್ಟರೆಂದೂ ಹೇಳಲಾಗಿದೆ. ... ದವರು ಮಿತ್ರಮಂಡಲಿಯ ಸೈನ್ಯಗಳ ಮೇಲೆ ಬಿದ್ದು ಕದನಮಾಡಿ ಬಹಳ ... ಹಿಂದಕ್ಕೆ ಓಡಿಸಿಬಿಟ್ಟರು. ಸರ್ವಿಯಾ ಸಂಸ್ಥಾನದ ಪ್ರಜೆಗಳ ಪಾಡು ... ಶೋಚನೀಯವಾದದ್ದಾಗಿದೆ. ಅವರು ಓಡಿಹೋಗಿ ಗ್ರೀಸ್ ಸಂಸ್ಥಾನಕ್ಕೆ ... ತ್ತಿರುವರು. ಸರ್ವಿಯಾದವರ ಸೈನ್ಯದಲ್ಲಿ 45 ಸಾವಿರ ಸೈನ್ಯದ ಕದನ ... ವಾಗಿರುವಂತೆಯೂ, 17,000 ಸೈನಿಕರು ಗಾಯಪಟ್ಟರೆಂದೂ, 16,000 ... ರನ್ನು ಶತ್ರುವು ಸೆರೆಹಿಡಿದಿರುವಂತೆಯೂ ಒಬ್ಬ ಪತ್ರಿಕಾಕಾರನು ಬರೆಯು ... ಆದರೆ ಸರ್ವಿಯಾ ಸೈನ್ಯಗಳು ಯುದ್ಧಭೂಮಿಯನ್ನು ಬಿಟ್ಟುಹೋಗಿಲ್ಲ. ... ಅವರಿಗೆ ಆಡ್ರಿಯಾಟಿಕ್ ಕಡಲಿನ ಮೂಲಕ ಆಹಾರ ಪದಾರ್ಥಗಳ ... ಯುದ್ಧಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಕೊಟ್ಟು ಸಹಾಯ ...ತ್ತಾರೆ. ಸರ್ವಿಯಾದವರು ಜರ್ಮನಿಯ ಕುದುರೆ ಸವಾರರಲ್ಲಿ 400 ...ಯನ್ನು ಸೆರೆ ಹಿಡಿದಿರುತ್ತಾರೆ. ಇದಲ್ಲದೆ ಒಂದು ಯುದ್ಧದಲ್ಲಿ ಆಸ್ಟ್ರಿಯಾ ಮತ್ತು ಬಲ್ಗೇರಿಯಾ ಸೈನ್ಯಗಳಲ್ಲಿ 5,000 ಮಂದಿ ನಷ್ಟವಾದರು. ಜರ್ಮನಿಯವರು ಸರ್ವಿಯಾ ಸಂಸ್ಥಾನದಲ್ಲಿರುವ ಗಣಿಗಳಲ್ಲಿ ಕಾಲುವರೆ ...ಯನ್ನು ಸ್ವಾಧೀನಪಡಿಸಿಕೊಂಡಿದ್ದರು. ಆದರೆ ಸರ್ವಿಯಾದವರು ಯಂತ್ರಗಳನ್ನೆಲ್ಲಾ ನಾಶ ...ಪಡಿಸಿ ಗಣಿಗಳೊಳಗೆ ನೀರು ಭರ್ತಿಮಾಡಿ ಹೋದರು.

ಉತ್ತರ ದಿಕ್ಕಿನಲ್ಲಿ ಮಾಂಟಿನೀಗ್ರೋದವರು ಆಸ್ಟ್ರಿಯಾದವರ ಮೇಲೆ ನುಗ್ಗಿ ಕದನಮಾಡಲಾರಂಭಿಸಿ, ಅವರನ್ನು ಹಿಂದಕ್ಕೆ ಓಡಿಸುತ್ತಿದ್ದಾರೆ. ಆಸ್ಟ್ರಿಯಾದವರ ಕೈಗಳಿಗೆ ಬೀಳುವುದಕ್ಕಿಂತ ಸಾಯುವುದೇ ಉತ್ತಮವೆಂದು ಮಾಂಟಿನೀಗ್ರೋದವರು ತೀರ್ಮಾನಿಸಿ ಯುದ್ಧಕ್ಕೆ ಹೊರಟಿರುವರು.

ರುಮೇನಿಯಾ ಸಂಸ್ಥಾನದವರು ರಷ್ಯ ಸೈನ್ಯಗಳನ್ನು ತಮ್ಮ ದೇಶದ ಮೇಲೆ ಹಾದು ಬಲ್ಗೇರಿಯಾವಿಗೆ ಹೋಗುವಂತೆ ಮಾರ್ಗ ಕೊಡುವಂತೆ ಕಾಣು ... ಅನೇಕ ರಷ್ಯ ಸೈನಿಕರು ಆಗಲೇ ಕಪ್ಪು ಕಡಲಿನ ಬಳಿಯಿಂದ ರುಮೇ ... ಸೀಮೆಯೊಳಕ್ಕೆ ಹೋಗುತ್ತಿರುತ್ತಾರೆಂದು ತಂತಿವರ್ತಮಾನಗಳು ಹೇಳುವವು.

... ಗ್ರೀಸ್ ಸಂಸ್ಥಾನವು ಯಾವ ಪಕ್ಷವನ್ನೂ ವಹಿಸಿ ಯುದ್ಧಕ್ಕೆ ... ತಟಸ್ಥವಾಗಿ ಇದ್ದುಕೊಂಡು ಬರುವ ಹಾಗೆ ತೋರುತ್ತದೆ. ಆದರೆ ... ಮಿತ್ರಮಂಡಲಿಯವರಿಗೆ ಅಡ್ಡಿ ಅಡಚಣೆಗಳನ್ನು ಕಲ್ಪಿಸದೆ ತನ್ನ ರೈಲ್ವೆಗಳನ್ನೂ ... ಬಂದರುಗಳನ್ನೂ ಅವರಿಗೆ ಬಿಟ್ಟುಕೊಡುತ್ತದೆ, ... ಮಿತ್ರಮಂಡಲಿಯವರು ... ಸಂಭವಿಸುವ ಎಲ್ಲಾ ನಷ್ಟಗಳಿಗೂ ಪ್ರತಿಫಲವನ್ನು ಕೊಡಲೊಪ್ಪಿದ್ದಾರೆ.

ಟರ್ಕಿಯಲ್ಲಿ.

... ಅರ್ಧ ದ್ವೀಪದಲ್ಲಿ ಸ್ವಲ್ಪ ಮಟ್ಟಿಗೆ ಫಿರಂಗಿ ಗುಂಡುಗಳ ಹಾರಾ... ... ಮತ್ತು ಕೆಲವು ಕಡೆ ... ಬಳಿ ... [illegible]

ಯಿಸಿದರೂ ದೂಡಿಕೊಂಡು ಬಂದರು. ಅಲ್ಲಿದ್ದ ಸೈನ್ಯಗಳು ಅವರನ್ನು ಜಯಧ್ವನಿಯಿಂದ ಎದುರುಗೊಂಡು ಸನ್ಮಾನ ಮಾಡಿದವು.

ಕಾಕಸಸ್ ಬೆಟ್ಟಸೀಮೆಯಲ್ಲಿ ಕೆಲವು ಕದನಗಳಾದವು. ವಾನ್ ಎಂಬ ಕಲ್ಲಾವಿನ ಬಳಿ ಟರ್ಕಿಯವರು ಸೋತುಹೋದರು.—ದರ್ದಾನೆಲ್ಸ್ ಎಂಬ ಅಧಿತ್ಯಕ್ಕದಲ್ಲಿ ಟರ್ಕಿ ಸೈನ್ಯಗಳು ತಮ್ಮ ಮೇಲ್ಪಟ್ಟ ಜರ್ಮನ ಹುದ್ದೆದಾರರ ಮೇಲೆ ತಿರುಗಿಬಿದ್ದು ಆ ಪೈಕಿ ಇಬ್ಬರನ್ನು ಕೊಂದು ಹಾಕಿದರೆಂದು ವರ್ತಮಾನ ಬಂದಿದೆ.

ಮೆಸಪೊಟೇಮಿಯದಲ್ಲಿ ನಡೆದ ಯುದ್ಧದಲ್ಲಿ ಟರ್ಕಿಯವರ ಕಡೆ 1,00,000 ಫೌಜು ಇದ್ದಿತು; ಕದನದಲ್ಲಿ ಆ ಪೈಕಿ 25,000 ಸೈನ್ಯ ನಷ್ಟವಾಯಿತು. ಬಳಿಕ ಹೊಸ ಟರ್ಕಿ ಸೈನ್ಯಗಳು ಬಂದು ಸೇರಿದವು. ಬ್ರಿಟಿಷ್ ಸೈನಿಕರು ತಮ್ಮ ಕಡೆ ಕೊಲೆಯಾದವರನ್ನು ಹವಣಿಸಿ, ಗಾಯಪಟ್ಟವರನ್ನು ಸಾಗಿಸಿಕೊಂಡ ಬಳಿಕ ಇನ್ನೊಂದು ಸಾರಿ ಯುದ್ಧಕ್ಕೆ ಸಿದ್ಧಪಡಿಸಿಕೊಳ್ಳುವುದಕ್ಕೋಸ್ಕರ ನದಿಯ ಬದಿಯಲ್ಲೇ ಸ್ವಲ್ಪ ದೂರ ಹಿಂದಕ್ಕೆ ಬಂದುಬಿಟ್ಟರು.

ಒಂದು ಬ್ರಿಟಿಷ್ ಸಬ್‌ಮೆರೀನು ಮಾರ್ಮೊರಾ ಕಡಲಿನಲ್ಲಿ ಡಿಸೆಂಬರ್ ತಾ 2 ರಲ್ಲಿ ಟರ್ಕಿ ರೈಲ್ವೆಯಲ್ಲಿ ಹೋಗುತ್ತಿದ್ದ ರೈಲು ಬಂಡಿಗಳನ್ನು ಗುಂಡುಹಾಕಿ ಹಾಳುಮಾಡಿ, ಮಾರನೇ ದಿನ ಟರ್ಕಿಯ ಒಂದು ಸಣ್ಣ ಯುದ್ಧದ ಹಡಗನ್ನು ಮುಳುಗಿಸಿ ಅದರಲ್ಲಿದ್ದ 10 ಮಂದಿ ಹುದ್ದೆದಾರರನ್ನೂ 40 ಸೈನಿಕರೇ ಮೊದಲಾದವರನ್ನೂ ಬದ ಹಿಡಿದೆ. ಇದಲ್ಲದೆ ಆ ಬ್ರಿಟಿಷ್ ಸಬ್‌ಮೆರೀನು ಒಂದು ಹಡಗನ್ನೂ, ನಾಲ್ಕು ವ್ಯಾಪಾರದ ಹಡಗುಗಳನ್ನೂ ಮುಳುಗಿಸಿತು.

ಆಫ್ರಿಕಾದಲ್ಲಿ.

ಪಶ್ಚಿಮ ಆಫ್ರಿಕಾವಿಗೆ ಸೇರಿದ ಕ್ಯಾಮರೂನ್ಸ್ ಸೀಮೆಯಿಂದ ಮಾತ್ರ ವರ್ತಮಾನ ಬಂದಿದೆ. ಒಂದು ಭಾಗದಲ್ಲಿ ಮಾತ್ರ ಬ್ರಿಟಿಷರು ಜರ್ಮನಿಯವರನ್ನು ಸುತ್ತುಹಾಕಿಕೊಳ್ಳುತ್ತಿದ್ದಾರೆ. ಅಲ್ಲಿಂದ ಉತ್ತರ ಪಾರ್ಶ್ವದಲ್ಲಿ ಬ್ರಿಟಿಷರು ಜರ್ಮನಿಯವರನ್ನು ಸೋಲಿಸಿ ಛಿನ್ನ ಛಿನ್ನ ಮಾಡಿ ಚದರಿಸಿಬಿಟ್ಟರು.

ಇತರ ವಿಷಯಗಳು.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಆರೋಗ್ಯವು ಬೇಗಬೇಗನೆ ವಾಸಿಯಾಗುತ್ತಲಿದೆ. ಅವರು ಈಗ ಒಂದು ಕೋಲು ಊರಿಕೊಂಡು ನಡೆಯಬಲ್ಲರು. ಆದರೆ ಅವರ ಬಲಗಾಲು ಇನ್ನೂ ಚೆನ್ನಾಗಿ ವಾಸಿಯಾಗಿಲ್ಲ. ಅವರು ತಮ್ಮ ಮಾತೃಶ್ರೀಯವರಾದ ಅಲೆಕ್ಸಾಂಡ್ರಾ ಮಹಾರಾಜ್ಞೀಯವರ ಅರಮನೆಗೆ ದಯಮಾಡಿದ್ದು, ಅವರ ಕೂಡ ಭೋಜನಮಾಡಿಕೊಂಡು ಬಂದರು. ಇದಲ್ಲದೆ ಅವರು ಲಾರ್ಡ್ ಕಿಚ್ನರ್‌ರವರಿಗೆ ಭೇಟಿಯನ್ನು ದಯಪಾಲಿಸಿದರು.

ನೊವೆಂಬರ್ ತಾ. 9 ರ ವರೆಗೆ ಬ್ರಿಟಿಷರ ಕಡೆ ಒಟ್ಟು 5,10,23 ಸೈನಿಕರು ನಷ್ಟವಾಗಿರುತ್ತಾರೆ. ಈ ಪೈಕಿ 4 620 ಹುದ್ದೆದಾರರೂ, 69,272 ಮಂದಿ ಸೈನಿಕರೂ ಪಶ್ಚಿಮ ರಣರಂಗದಲ್ಲಿ ಕೊಲೆಯಾದರು; ಡಾರ್ಡನೆಲ್ಸ್ ಜಲಮಾರ್ಗದ ಕದನಗಳಲ್ಲಿ 1,504 ಹುದ್ದೆದಾರರೂ, 21,431 ಸೈನಿಕರೂ ಹತರಾಗಿದ್ದಾರೆ. ನಾವೆಯ ಸೈನಿಕರಲ್ಲಿ 569 ಮಂದಿ ಹುದ್ದೆದಾರರೂ 9,928 ಸೈನಿಕರೂ ನಷ್ಟವಾದರು. ಜರ್ಮನಿಯೊಳಗೆ ಸೆರೆಯಲ್ಲಿರುವ ಬ್ರಿಟಿಷ್ ಸೈನಿಕರು 32,030; ನಾವೆಯ ಸೈನಿಕರು 1,030.

ಫೆಬ್ರವರಿ ತಾ. 2 ರಿಂದ ಈಚೆಗೆ ಬ್ರಿಟಿಷರು ಜರ್ಮನಿಯವರ 56 ಸಬ್‌ಮೆರೀನುಗಳನ್ನು ಹಿಡಿದರು ಇಲ್ಲವೇ ಮುಳುಗಿಸಿದರು ಎಂದೂ, ಇದಲ್ಲದೆ 31 ಸಬ್‌ಮೆರೀನುಗಳನ್ನು ನಾಶಮಾಡಿದರೆಂದೂ ಒಂದು ಅಮೇರಿಕದ ಪತ್ರಿಕೆಯು ತಿಳಿಸುತ್ತದೆ. ಹೀಗೆ ಹಿಡಿದಿರುವ ಸಬ್‌ಮೆರೀನುಗಳನ್ನು ಬ್ರಿಟಿಷರು ಬ್ಯಾಲ್ಟಿಕ್ ಕಡಲಿನಲ್ಲಿ ಉಪಯೋಗಿಸುತ್ತಿದ್ದಾರೆ.

ಆಸ್ಟ್ರಿಯಾ ಮತ್ತು ಜರ್ಮನಿ ಸಬ್‌ಮೆರೀನುಗಳ ಹಾವಳಿ ಮತ್ತೆ ಪ್ರಾರಂಭವಾಗಿದೆ. ಕಳೆದ ವಾರ ಅವು ಬ್ರಿಟಿಷರ ಒಂಭತ್ತು ಹಡಗುಗಳನ್ನೂ, ಫ್ರೆಂಚರದು ಒಂದು, ಗ್ರೀಕರದು ಒಂದು ಹಡಗನ್ನೂ ಮುಳುಗಿಸಿರುತ್ತವೆ. ಅವುಗಳಲ್ಲಿದ್ದ ಜನರನ್ನೆಲ್ಲಾ ಬದುಕಿಸಿದರು. ಬಹುಶಾ ಇವೆಲ್ಲಾ ಮೆಡಿಟರೇನಿಯನ್ ಕಡಲಿನಲ್ಲಿ ಮುಳುಗಿಸಲ್ಪಟ್ಟವೆಂದು ತೋರುತ್ತದೆ.

ಲಾರ್ಡ್ ಕಿಚ್ನರವರು ಲಂಡನ್ ಪಟ್ಟಣಕ್ಕೆ ವಾಪಸು ಬಂದು ಯುದ್ಧದ ಇಲಾಖೆಯ ಸೆಕ್ರೆಟರಿ ಕೆಲಸದ ಭಾರವನ್ನು ವಹಿಸಿಕೊಂಡಿದ್ದಾರೆ.

ಜರ್ಮನಿಯ ಚಕ್ರವರ್ತಿಯವರು ಆಸ್ಟ್ರಿಯಾ ಚಕ್ರವರ್ತಿಯವರನ್ನು ಅವರ ಕುಮಾರನನ್ನೂ ಕಂಡುಬರುವುದಕ್ಕಾಗಿ ಆಸ್ಟ್ರಿಯಾ ರಾಜಧಾನಿಯಾದ ವಿಯನ್ನಾ ನಗರಕ್ಕೆ ಹೋಗಿದ್ದರು. ಆಸ್ಟ್ರಿಯಾದಲ್ಲಿ ಕೆಲವು ಮಂತ್ರಿ ಸಭಿಕರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು ... ನೇಮಕವಾಗಿದ್ದಾರೆ. ಆಸ್ಟ್ರಿಯಾದಲ್ಲಿ ಜರ್ಮನಿಯವರ ಅಧಿಕಾರವೇ ಹೆಚ್ಚಾಗಿದೆ ಎಂದು ಹೇಳುವರು. ಇನ್ನು ಕೆಲವರು ಆಸ್ಟ್ರಿಯಾ ಚಕ್ರವರ್ತಿಯು ಪ್ರತ್ಯೇಕವಾಗಿ ಕರಾರೇನಾದರೂ ಮಾಡಿಕೊಂಡುಬಿಟ್ಟರೇ ಎಂಬುದನ್ನು ಮೊದಲು ತಿಳಿದುಕೊಳ್ಳುವುದಕ್ಕಾಗಿ ಜರ್ಮನ ಚಕ್ರವರ್ತಿಯು ಅಲ್ಲಿಗೆ ಹೋಗಿದ್ದರೆಂದು ಹೇಳುತ್ತಾರೆ. ಮಿತ್ರಮಂಡಲಿಯವರು ದಿನಕ್ರಮೇಣ ಬಲಪಡುತ್ತಿರುವುದನ್ನೂ, ಜರ್ಮನಿಯವರು ಬಲಹೀನರಾಗುತ್ತಿರುವುದನ್ನೂ ನೋಡಿ ಜರ್ಮನಿಯವರಿಗೇ ಅಧೈರ್ಯ ಉಂಟಾಗಿರುವಂತೆ ಅಲ್ಲಿನ ಪತ್ರಿಕೆಗಳಿಂದ ಗೊತ್ತಾಗುತ್ತದೆ. ಆ ಪತ್ರಿಕೆಗಳು ಕರಾರು ಮಾಡಿಕೊಳ್ಳುವುದಕ್ಕೆ ಜರ್ಮನಿಯವರು ಸಮ್ಮತಪಡುತ್ತಾರೆಂದೂ, ಆದರೆ ಮಿತ್ರಮಂಡಲಿಯವರು ಒಪ್ಪುವುದಿಲ್ಲವೆಂದೂ ಹೇಳುವವು. ಫ್ರಾನ್ಸಿನ ಪತ್ರಿಕೆಗಳು ಜರ್ಮನಿಯವರು ಕರಾರು ಮಾಡಿಕೊಳ್ಳಲು ಪ್ರಯತ್ನಪಡುವರೆಂದು ತಟಸ್ಥರಾದ ರಾಜ್ಯಗಳ ಮಧ್ಯಸ್ಥಿಕೆಯನ್ನು ಅಪೇಕ್ಷಿಸಿ ಅದು ನಡೆಯಲಿಲ್ಲವೆಂದು ಹೇಳುತ್ತವೆ.—ಜರ್ಮನಿ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ಒಂದು ಸಾವಿರ ಸ್ತ್ರೀಯರು ಸೇರಿ ಸಭೆ ನಡೆಸಿ ತಮ್ಮ ಗಂಡಂದಿರನ್ನು ಯುದ್ಧಭೂಮಿಯಿಂದ ಕಳುಹಿಸಿಕೊಡಬೇಕೆಂದೂ, ತಮ್ಮ ಜೀವನಕ್ಕೆ ಸರಿಯಾದ ಆಹಾರವನ್ನು ಕೊಡಿಸಬೇಕೆಂದೂ ಕೇಳಿದರಂತೆ. ಅವರನ್ನು ಪೋಲೀಸಿನವರು ನುಗ್ಗಿ ಚದರಿಸಿಬಿಟ್ಟರೆಂದು ಹೇಳಲಾಗಿದೆ.

ಅಮೇರಿಕದಲ್ಲಿ ನಾಲ್ವರು ಜರ್ಮನಿಯವರು ಅಮೇರಿಕದ ತೀರಪಟ್ಟಣಗಳಿಂದ ಜರ್ಮನಿ ಯುದ್ಧದ ಹಡಗುಗಳಿಗೆ ಸಾಮಾನು ಮುಂತಾದವುಗಳನ್ನು ಒದಗಿಸಿ ಸಹಾಯ ಮಾಡಿದರೆಂದು ಮೊಕದ್ದಮೆ ಆಗಿ ಆ ಪೈಕಿ ಮೂವರಿಗೆ ತಲಾ ಹದಿನೆಂಟು ತಿಂಗಳ ಸಜವೂ, ನಾಲ್ಕನೆಯವನಿಗೆ ಹನ್ನೆರಡು ತಿಂಗಳ ಸಜವೂ ವಿಧಿಸಲ್ಪಟ್ಟಿದೆ.—ಅಮೇರಿಕದಲ್ಲಿರುವ ಜರ್ಮನಿ ರಾಯಭಾರಿಗೆ ಸಂಬಂಧಪಟ್ಟ ಇಬ್ಬರು ತಮಗೆ ಸಂಬಂಧಪಡದೆ ಇದ್ದ ವಿಷಯಗಳಲ್ಲಿ ಪ್ರವರ್ತಿಸಿದರೆಂದು ಅವರಿಬ್ಬರನ್ನು ಅಲ್ಲಿಂದ ವಾಪಸು ಜರ್ಮನಿಗೆ ಕರೆಸಿಕೊಳ್ಳುವಂತಾಗಿದೆ.— ಅಮೇರಿಕದವರು ತಮ್ಮ ಪ್ರಜೆಗಳಿಗೆ ಸಂಭವಿಸುವಂಥಾ ಕಷ್ಟನಷ್ಟಗಳನ್ನೇ ದರ್ಪದಿಂದ ಸಹಿಸಲಾರದೆ ಇರುವಾಗ್ಗೆ ಅರ್ಮೇನಿಯಾ ಪ್ರಜೆಗಳನ್ನು ಟರ್ಕಿಯವರು ಕೊಂದುಹಾಕಿದರೆಂದಾಗಲಿ, ಜರ್ಮನಿಯವರು ಬೆಲ್ಜಿಯಮ್ ಪ್ರಜೆಗಳನ್ನು ಕಷ್ಟಕ್ಕೆ ಗುರಿಮಾಡಿದರೆಂದಾಗಲಿ ಆಕ್ಷೇಪಣೆ ಮಾಡುವುದರಿಂದ ಪ್ರಯೋಜನವೇನು ಎಂದು ಅಮೇರಿಕದ ಮಾಜಿ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ಕೇಳಿದರು.

ಪರ್ಷಿಯಾ ರಾಜ್ಯದಲ್ಲಿ ಗಲಭೆಯು ಸಮಾಧಾನಕ್ಕೆ ಬರುತ್ತಿದೆ. ಷಾ ರವರು ರಾಜಧಾನಿಯಾದ ಟೆಹರಾನ್ ನಗರವನ್ನು ಬಿಟ್ಟು ಹೊರಡುವುದಿಲ್ಲ. ಅಲ್ಲಿದ್ದ ಆಸ್ಟ್ರಿಯಾ ಮತ್ತು ಟರ್ಕಿ ರಾಯಭಾರಿಗಳು ವಾಪಸು ಹೋದರು. ಪರ್ಷಿಯಾ ಸೈನ್ಯದಲ್ಲಿ ಹುದ್ದೆದಾರರಾಗಿರುವ ಕೆಲವು ಸ್ವೀಡನ್ ಪ್ರಜೆಗಳು ಷಾ ರವರ ವಿಷಯದಲ್ಲಿ ಭಕ್ತಿ ಪ್ರೀತಿಯುಳ್ಳವರಾಗಿಲ್ಲವಂತೆ.

ಕ್ರೀಟ್ ದ್ವೀಪದ ಕೆಲವು ಜನಗಳು ಕ್ರೀಟಿನ ಬಳಿ ಜರ್ಮನಿಯವರ ಒಂದು ಸಬ್‌ಮೆರೀನನ್ನು ಡೈನಮೈಟ್ (ಸಿಡಿಮದ್ದು) ನಿಂದ ಒಡೆದು ನಾಶಮಾಡಿದರಂತೆ.

ದಕ್ಷಿಣ ಆಫ್ರಿಕದ ಸೈನ್ಯಗಳು ಇಂಗ್ಲೆಂಡಿಗೆ ಬಂದಿಳಿದವು. ಅವುಗಳನ್ನು ನಮ್ಮ ಮಹಾರಾಜ್ಞೀಯವರು ಹೋಗಿ ನೋಡಿಕೊಂಡು ಬಂದರು.—ಬ್ರಿಟನ್‌ನಲ್ಲಿ ಸಾಮಾನ್ಯವಾದ ಹಡಗುಗಳನ್ನು ಬಿಟ್ಟು ತಯಾರಾಗಬಹುದೆಂದು ಹುಕುಂ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಬೇಕಾದಷ್ಟು ಯುದ್ಧದ ಹಡಗುಗಳು ಆಗಲೇ ಸಿದ್ಧವಾಗಿರುವವೆಂದು ಗೊತ್ತಾಗುತ್ತದೆ.—ಇಂಗ್ಲೆಂಡಿನಲ್ಲಿ ಒಬ್ಬ ಗೂಢಚಾರನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರು.—ಕ್ಯಾನಡಾ ಎಂಬ ಬ್ರಿಟಿಷ್ ಸ್ವಾಸ್ಥ್ಯದ ಕಾರ್ಖಾನೆಗಳಲ್ಲಿ 1,00,000 ಕೆಲಸಗಾರರು ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ತಯಾರಾಗುತ್ತಿದ್ದಾರೆ.

ಜರ್ಮನಿಯಲ್ಲಿ ಹಲ್ಲಿ ಎಂಬ ನಗರದೊಳಗೆ ಯುದ್ಧಸಾಮಗ್ರಿ ತಯಾರಾಗುತ್ತಿದ್ದ ಭಾರೀ ಕಾರ್ಖಾನೆಯಲ್ಲಿ ಮದ್ದು ಹತ್ತಿಕೊಂಡು ದೊಡ್ಡ ಅನಾಹುತವಾಯಿತು. ನೂರಾರು ಜನಗಳು ಅದರಲ್ಲಿ ಸಿಕ್ಕಿ ಪ್ರಾಣ ಕಳೆದುಕೊಂಡರು.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಕೌನ್ಸಿಲ್ ಪ್ರೆಸ್ಸಿನವರು ಮುಂದಿನ ವರುಷದ ಪಂಚಾಂಗಗಳನ್ನು ತಯಾರುಮಾಡಿ ಮಾರಾಟಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇವು ಎಲ್ಲಾ ಭಾಗಗಳಲ್ಲೂ ಬಹಳ ಚೆನ್ನಾಗಿ ಬಿಕರಿಯಾಗುತ್ತಿರುವಂತಿದೆ.

ಮೈಸೂರಿನಿಂದ ಬೊಂಬಾಯಿಗೆ ರವಾನೆಮಾಡಲ್ಪಟ್ಟ ಒಂದು ಪಾರ್ಸೆಲ್ಲನ್ನು ಬೆಂಗಳೂರಿನಲ್ಲಿ ತಿಮ್ಮಯ್ಯನೆಂಬ ಅಂಚೆ ಜವಾನನು ಕಳುವು ಮಾಡಿ ಸಿಕ್ಕಿಬಿದ್ದು, ಕಳೆದ ವಾರ ಎರಡು ವಾರಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಬೆಂಗಳೂರು ದಂಡಿನಲ್ಲಿದ್ದ ಬ್ರಿಟಿಷ್ ಟ್ರೆಷರಿಯನ್ನು ರೆಸಿಡೆಂಟರವರು ಮುಚ್ಚಿಬಿಟ್ಟು, ಹಣವನ್ನೆಲ್ಲಾ ಇನ್ನು ಮೇಲೆ ಅಲ್ಲಿರುವ ಮದರಾಸ್ ಬ್ಯಾಂಕಿನಲ್ಲಿ ಡಬೇಕೆಂದು ಗೊತ್ತುಮಾಡಿ ಸರ್ಕಾರಿಗೆ ಕೆಲಸವಿಲ್ಲವೆಂದು ತೆಗೆದುಬಿಟ್ಟರು.

ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆ ಸೂಪರಿಂಟೆಂಡೆಂಟರಾಗಿಯೂ, ಮೈಸೂರು ರೈಲ್ವೆ ವರ್ಕ್ ಷಾಪಿನ ಮುಖ್ಯಾಧಿಕಾರಿಯಾಗಿಯೂ ಇದ್ದ ಸುಮಾರು 65 ವಯಸ್ಸಿನ ಮಿ॥ ಎ ಜೆ ಆಮಂಡ್ ರವರು ಕಳೆದ ವಾರ ಬೆಂಗಳೂರಿನಲ್ಲಿ ಕಾಲವಾದರು.

ಶ್ರೀಮನ್ ಮಹಾರಾಜರವರು ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯಿಂದ ಮೋಟಾರಿನಲ್ಲಿ ಮದ್ದೂರಿಗೆ ದಯಮಾಡಿ ಮರುದಿನವೆಲ್ಲಾ ಕಲ್ಕೆರೆ ನರಸೀಪುರ ಮೊದಲಾದ ಪ್ರದೇಶಗಳಲ್ಲಿ ಸಂಚಾರಮಾಡಿಕೊಂಡು ಸೋಮವಾರ ಸಾಯಂಕಾಲ ರಾಜಧಾನಿಗೆ ಚಿತ್ತೈಸಿದರು.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಸಮಾಜವು ಮತ್ತೂ ಸೇವಾ ಸಮಾಜದ ನಾರೀಮಣಿಯರು ತಮ್ಮ ತಮ್ಮ ಕಾಟೇಜಿನಲ್ಲಿ ಸಭೆಗಳನ್ನು ನಡಸಿ, ಯುದ್ಧಭೂಮಿಯಲ್ಲಿರುವ ಮೈಸೂರು ಸೈನಿಕರ ಸಹಾಯಾರ್ಥವಾಗಿ ನಾನಾ ಬಗೆಯ ಬಟ್ಟೆಗಳನ್ನು ಒದಗಿಸಿರುತ್ತಾರೆಂದು ತಿಳಿಸಲು ಆನಂದಪಡುತ್ತೇವೆ.

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಸರ್ ಹ್ಯೂ ಡೇಲಿಯವರ ಅಧಿಕಾರದ ಅವಧಿಯು ಮುಂದಿನ ಮಾರ್ಚಿ ಆಖೈರಿಗೆ ಪೂರೈಸೋದರಿಂದ ಅವರು ಕೆಲಸದಿಂದ ನಿವೃತ್ತರಾದ ಬಳಿಕ ಮಿ॥ ರಾಬ್ಸ್ ಎಂಬುವರು ಬ್ರಿಟಿಷ್ ರೆಸಿಡೆಂಟರಾಗಿ ದಯಮಾಡುತ್ತಾರೆಂದು ಸಮಾಚಾರವಿದೆ. ಇವರು ಹಿಂದೆ ನಮ್ಮ ಸಂಸ್ಥಾನದಲ್ಲಿ ಅಸಿಸ್ಟೆಂಟ್ ರೆಸಿಡೆಂಟರಾಗಿದ್ದರು.

ಕಳೆದ ಸೋಮವಾರ ತಲಕಾಡಿನಲ್ಲಿ ನಡೆದ ಪಂಚಲಿಂಗದರ್ಶನದ ಜಾತ್ರೆಗೆ ಅನೇಕ ಸಾವಿರ ಪ್ರಜೆಗಳು ಹೋಗಿದ್ದರು. ಒಂದು ದೋಣಿಯು ಹೊಳೆಯಲ್ಲಿ ಮುಳುಗಿ ಅನೇಕ ಜನಗಳು ಕೊಚ್ಚಿ ಹೋದರೆಂದು ವರ್ತಮಾನ ಹುಟ್ಟಿ ಹಬ್ಬುತ್ತಿದೆ. ವಿಚಾರ ಮಾಡಿದ್ದರಲ್ಲಿ ಅದು ಬರೀ ಗಾಳಿ ವರ್ತಮಾನವೇ ಹೊರತು ನಿಜವಲ್ಲವೆಂದು ತಿಳಿದು ಬಂದಿದೆ.

ಶ್ರೀಮನ್ ಮಹಾರಾಜರವರು ನೆನ್ನೆ ರಾಜಧಾನಿಯಿಂದ ಮೋಟಾರಿನಲ್ಲಿ ಪರಿವಾರ ಸಮೇತ ಬೆಂಗಳೂರಿಗೆ ತೆರಳುವಂತೆ ಏರ್ಪಾಡಾಗಿತ್ತು. ಮಹಾರಾಜರವರೂ ಅರಮನೆಯ ರಾಣಿವಾಸದವರೂ ಇನ್ನೊಂದು ವಾರ ಬೆಂಗಳೂರಿನಲ್ಲಿದ್ದು ತಾ 17 ನೇ ಶುಕ್ರವಾರ ಅಲ್ಲಿಂದ ಸ್ಪೆಷಲ್ ರೈಲಿನಲ್ಲಿ ಶಿವಮೊಗ್ಗೆಗೆ ದಯಮಾಡುವರು. ಅಲ್ಲಿಂದ ಜೋಗ್ ಜಲಪಾತಕ್ಕೆ ಹೋಗಿ ಒಂದು ದಿನ ಇದ್ದು ಚಿತ್ತೈಸುವರೆಂದು ಕೇಳುತ್ತೇವೆ.

ಬೆಂಗಳೂರು ಪಟ್ಟಣದ ಅಲಸೂರುಪೇಟೆಯಲ್ಲಿ ವೆಂಕಟಾಚಲ ಮೊದಲಿ ಎಂಬ ವಿದ್ಯಾರ್ಥಿಯು ಆತ್ಮಹತ್ಯಮಾಡಿಕೊಳ್ಳಬೇಕೆಂದು ಅಲ್ಲಿನ ಸೋಮೇಶ್ವರ ದೇವಸ್ಥಾನದ ಕೊಳದಲ್ಲಿ ಬಿದ್ದನು. ಒಬ್ಬ ತಿಗಳನು ಆಕಸ್ಮಿಕವಾಗಿ ನೋಡಿ ಅವನನ್ನು ಮೇಲಕ್ಕೆತ್ತಿ, ಪೋಲೀಸಿನವರು ಚಿಕಿತ್ಸೆಮಾಡಿಸಿ ಬದುಕಿಸಿದರು. ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟದ್ದಕ್ಕೆ ಆ ಹುಡುಗನ ಮೇಲೆ ಮೊಕದ್ದಮೆ ಆಗಿ ಮ್ಯಾಜಿಸ್ಟ್ರೇಟರು 25 ರೂಪಾಯಿ ಜುಲ್ಮಾನೆ ವಿಧಿಸಿದರು.

ಒಬ್ಬ ಪತ್ರಿಕಾಕಾರರಿಂದ.—ಮೈಸೂರು ಹಾರ್ಡ್ವಿಕ್ ಕಾಲೇಜಿನ ವಿದ್ಯಾರ್ಥಿಗಳು ಯುದ್ಧದಲ್ಲಿ ಕಷ್ಟಪಡುತ್ತಿರುವ ಧೈರ್ಯಶಾಲಿಗಳಾದ ಸಿಪಾಯಿಗಳಿಗೆ ಸಹಾಯಮಾಡಬೇಕೆಂದುದ್ದೇಶಿಸಿ ಕೆಲವು ದಿನಗಳ ಹಿಂದೆ ಒಂದು ನಾಟಕವನ್ನು ವೆಸ್ಲಿ ಹಾಲಿನಲ್ಲಿ ಪ್ರದರ್ಶಿಸಿ, ಅದರಿಂದ ಉತ್ಪತ್ತಿಯಾದ ಸ್ವಲ್ಪ ಹಣವನ್ನು ಶ್ರೀಮನ್ ಮಹಾರಾಜರವರ ಇಂಪೀರಿಯಲ್ ಬ್ಲಾಂಕೆಟ್ಸ್ ಎಂಬ ಫಂಡಿಗೆ ರವಾನಿಸಿರುತ್ತಾರೆ. ಈ ನಾಟಕದಲ್ಲಿ ಮ॥ ಡಿ. ದೇವಪುತ್ರಪ್ಪನವರೂ, ಮ॥ ಕೆ. ಅಂಬ್ರೋಸ್ ಆನಂದಪ್ಪನವರೂ ತುಂಬಾ ಸಹಾಯಮಾಡಿದರು.

ಬೆಂಗಳೂರು ಅಲಸೂರು ಪೇಟೆಯೊಳಗೆ ಪೋಲೀಸ್ ಇನ್ಸ್‌ಪೆಕ್ಟರು ಗುಮಾನಿಯ ಮೇಲೆ ಒಂದು ಸಣ್ಣ ಮನೆಯನ್ನು ನುಗ್ಗಿದಾಗ ಅಲ್ಲಿ ಸುಮಾರು ಮಂದಿ ಹಿಂದೂ ಮಹಮದೀಯರು ಸೇರಿ ಇಸ್ಪೀಟು, ದಾಳ ಮತ್ತು ಹಣವನ್ನಿಟ್ಟುಕೊಂಡು ಜೂಜಾಡುತ್ತಿದ್ದರು. ಅವರನ್ನೆಲ್ಲಾ ಕೋರ್ಟಿಗೆ ದಸ್ತಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ತಂದರು. ಮ್ಯಾಜಿಸ್ಟ್ರೇಟರು ದಯಾರ್ಥವಾಗಿ ಮೂರು ಮಂದಿ ಹುಡುಗರನ್ನು ಬಿಟ್ಟುಬಿಟ್ಟು ಉಳಿದವರಿಗೆ ತಲಾ 2 ರೂಪಾಯಿ ಜುಲ್ಮಾನೆ ವಿಧಿಸಿದರು. ಮನೆಯ ಮಾಲೀಕನು ಏನೋ ಡಿಫೆನ್ಸು ಹೇಳಿಕೊಂಡದ್ದರಿಂದ ಅವರ ವಿಚಾರಣೆಯನ್ನು ಮುಂದಕ್ಕೆ ಇಟ್ಟರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ರಂಗಪ್ಪನೆಂಬ ತ್ಯಾನುಭೋಗನು 8,400 ಚಿಲ್ಲರೆ ರೂಪಾಯನ್ನು ತಿಂದುಹಾಕಿ ಕಾಣೆಯಾಗಿರುವುದರಿಂದ ಗವರ್ನಮೆಂಟಿನವರು ಮ್ಯುನಿಸಿಪಾಲಿಟಿಯು ಆ ಬಾಕಿಯನ್ನು ರಿವಿಜನ್ ಮಾಡಬಹುದೆಂದು ಹುಕುಂ ಕೊಟ್ಟಿದ್ದರು. ತಿಂಗಳ ಮಿಟಿಂಗಿನಲ್ಲಿ ಕೆಲವು ಮ್ಯುನಿಸಿಪಲ್ ಕೌನ್ಸಿಲರುಗಳು ರಿವಿಜನ್ ಮಾಡುವುದು ತರವಲ್ಲವೆಂದೂ, ಆ ಕಾಲದಲ್ಲಿ ಅಜಾಗರೂಕತೆಯಿಂದ ಅಧಿಕಾರವನ್ನು ನಡೆಸಿದವರಿಂದ ಆ ಹಣವನ್ನು ವಸೂಲ್ಮಾಡಬೇಕೆಂದೂ ಆಕ್ಷೇಪಣೆಮಾಡಿದರು. ಕಡೆಗೆ ಈ ವಿಚಾರವನ್ನು ತನಿಖೆಮಾಡುವುದಕ್ಕೆ ಒಂದು ಕಮಿಟಿಯು ನೇಮಕವಾಯಿತು.

ಕೊಡೈಕೆನಾಲಿನ ಮಿ॥ ಸ್ಕಾಟ್‌ರವರು ಬೆಂಗಳೂರು ಮಿ॥ ರಿಕ್ಕಿ ಎಂಬವರ ಮೇಲೆ 75,000 ರೂಪಾಯಿನ ಡಿಕ್ರಿ ಪಡೆದು, ಬೆಂಗಳೂರು ಸೆಷನ್ಸ್ ಜಡ್ಜ್ ಮಿ॥ ಆರ್. ಬಿ. ಪ್ರಮಥರವರ ಕೋರ್ಟಿಗೆ ಹಾಜರಾಗಬೇಕೆಂಬ ಸಮನ್ ಪಡೆದು ಜಾರೀ ಮಾಡುವುದಕ್ಕೆ ಅಮೀನನು ಪೋಲೀಸ್ ಸಹಾಯ ಪಡೆದು ಹೋದಾಗ ಮಿ॥ ರಿಕ್ಕಿಯವರು ಪಿಸ್ತೂಲನ್ನು ತೋರಿಸಿ ಅಮೀನನನ್ನು ಓಡಿಸಿಬಿಟ್ಟರು. ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ಎವರ್ಡ್‌ರವರು ಮಿ॥ ರಿಕ್ಕಿಯವರ ಕೈಲಿದ್ದ ಪಿಸ್ತೂಲನ್ನು ಸಾಹಸಪಟ್ಟು ಕಿತ್ತುಕೊಂಡದ್ದಲ್ಲದೆ ಮಿ॥ ರಿಕ್ಕಿಯವರನ್ನು ಹಿಡಿದುಕೊಂಡು ಹೋದರು. ಆಗ ಇವರಿಬ್ಬರಿಗೂ ಗುದ್ದಾಟವಾಯಿತು. ಮಿ॥ ರಿಕ್ಕಿಯವರು ಹಾರಿಸಿದ ಗುಂಡಿನ ಗೋಲಿಯು ಇನ್ಸ್‌ಪೆಕ್ಟರ ತೋಳ ಸಂದಿನಲ್ಲಿ ಹೋಗಿ ಗಾಯದ ಬೇಯಿಗೆ ಬಿದ್ದಿತು. ಆಮೇಲೆ ಪಿಸ್ತೂಲನ್ನು ಇನ್ಸ್‌ಪೆಕ್ಟರು ಕಿತ್ತುಕೊಂಡು ಕೈಯಿಂದ ದೂರಕ್ಕೆ ಎಸೆದುಬಿಟ್ಟರೆಂದು ಪ್ರಕಟವಾಗಿದೆ.

ಕರ್ನಾಟಕ ಸಾಹಿತ್ಯ ಪರಿಷತ್ತು.

ಚಂದಾಪಟ್ಟಿ.

ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸರಕಾರದಲ್ಲಿ ರೆಜಿಸ್ಟರ್ ಮಾಡಿಸಲಾಗಿದೆ. ಈ ಕೆಳಗೆ ನಮೂದಿಸಿರುವಂತೆ ಪರಿಷತ್ತಿನ ಸದಸ್ಯರುಗಳಿಂದ ನೊವೆಂಬರು ತಿಂಗಳಲ್ಲಿ ಚಂದಾ ವಸೂಲಿಯಾಗಿರುವುದು.

ಮ॥ ಗಳಾದ ಸಿ. ಕೃಷ್ಣರಾವ್, ಬೆಂಗಳೂರು ರೂ. 50 ; ಆರ್. ಎಚ್. ದೇಶಪಾಂಡೆ, ಧಾರವಾಡ 18-0-5 ; ಎಚ್. ವೆಂಕಟರಮಣಯ್ಯ, ಬೆಂಗಳೂರು 4 ; ಎಚ್. ಹನುಮಂತರಾವ್, ಚನ್ನಪಟ್ಟಣ 4 ; ಎ ಭೀಮಾಚಾರ್, ಬಳ್ಳಾರಿ 4 ; ಕೆ. ರಾಮಸ್ವಾಮಯ್ಯಂಗಾರ್, ಶ್ಯಾಮಗೊಡ್ಲು 10 ; ಹನುಮಂತಾಚಾರ್, ಮೈಸೂರು 12 ; ಎಂ. ಟಿ ವಲ್ಲಭಯ್ಯಂಗಾರ್, ಕೋಲಾರ 4 ; ಕೆ. ಸುಂದರರಾವ್, ಬೆಂಗಳೂರು 4 ; ಎ. ಆರ್. ಮಹಿಷಿ, ಸಿರಸಿ 12 ; ಒಟ್ಟು ರೂಪಾಯಿ 122-9-5 ; ನೊವೆಂಬರ್ ಪ್ರಾರಂಭದ ವರೆಗೆ ವಸೂಲಾಗಿದ್ದ ಚಂದಾ ರೂ. 289 ; ಡಿಸೆಂಬರ್ ಪ್ರಾರಂಭದ ವರೆಗೆ ವಸೂಲಾಗಿರುವ ಒಟ್ಟು ಹಣ ರೂಪಾಯಿ 411-9-5 ಪೈ.

ಬೆಂಗಳೂರು, ಬಿ. ಕೃಷ್ಣಪ್ಪ, ಕಾರ್ಯದರ್ಶಿ,
3-12-1915. ಕರ್ನಾಟಕ ಸಾಹಿತ್ಯ ಪರಿಷತ್ತು.

ಒಂದು ಕೋಆಪರೇಟಿವ್ ಸೊಸೈಟಿ.

ಮೋಳಿಗೆ.

ತೀರ್ಥಹಳ್ಳಿ ತಾಲ್ಲೂಕು ಮೋಳಿಗೆ ಸೊಸೈಟಿಯ ಅಭಿವೃದ್ಧಿ ವಿಚಾರವಾಗಿ ತಾ. 20 ನೇ ದಿವಸ ಮೋಳಿಗೆ ವಿ, ಇ ಸ್ಕೂಲ್ ಕಟ್ಟಡದಲ್ಲಿ ಒಂದು ಜನರಲ್ ಮೀಟಿಂಗ್ ನಡೆಯಿತು ಮ॥ ಸಾಹುಕಾರ್ ದೇವಂಗಿ ರಾಮಣ್ಣಗೌಡರವರು ಅಗ್ರಾಸನವನ್ನು ವಹಿಸಿದರು. ಸೆಕ್ರೆಟರಿ ಮ॥ ಟಿ. ವೆಂಕಟೇಶಭಟ್ಟರು ಸಂಘದ ರಿಪೋರ್ಟನ್ನು ಓದಲು, ಕಳೆದ ದಸರಾದಲ್ಲಿ ಮೈಸೂರಲ್ಲಿ ನಡೆದ ಕೋಆಪರೇಟಿವ್ ಮಹಾ ಸಭೆಗೆ ಇಲ್ಲಿಂದ ಪ್ರತಿನಿಧಿಯಾಗಿ ಹೋಗಿ ಬಂದ ಮ॥ ಕೆ. ರಾಮಾಚಾರ್ರು ಮೀಟಿಂಗಿನಲ್ಲಿ ನಡೆದ ವಿಚಾರವನ್ನೂ, ಸೊಸೈಟಿಗಳಿಗೆ ಸರ್ಕಾರದವರು ಕೊಡುತ್ತಿರುವ ಪ್ರೋತ್ಸಾಹವನ್ನೂ, ದೇಶಸಂಚಾರದಿಂದಲೂ, ಸಭೆಗೆ ಹೋಗೋಣದರಿಂದಲೂ ಉಂಟಾಗುವ ಉತ್ತೇಜನವನ್ನೂ ಕುರಿತು ಸಭಿಕರಿಗೆ ವಿವರವಾಗಿ ತಿಳಿಸಿದರು. ಕೋಆಪರೇಟಿವ್ ಸೊಸೈಟಿಗಳ ವಿಚಾರವಾಗಿಯೂ, ಗ್ರಾಮಾಭಿವೃದ್ಧಿ ವಿಚಾರವಾಗಿಯೂ ಪತ್ರಿಕೆಗಳಲ್ಲಿ ಬಂದ ಉಪನ್ಯಾಸಗಳು ಓದಲ್ಪಟ್ಟವು. ಗ್ರಾಮಾಂತರಗಳಲ್ಲಿ ಸೊಸೈಟಿಗಳು ಇರುವದರಿಂದ ಜನಗಳಿಗೆ ಉಂಟಾಗುವ ಸೌಲಭ್ಯಗಳನ್ನೂ, ಡಿಪಾಜಿಟ್ಟುಗಳನ್ನು ಶೇಖರಮಾಡೋಣದರಿಂದ ಸೊಸೈಟಿಗಳ ಅಭಿವೃದ್ಧಿಗೆ ಸಹಕಾರಿಯಾಗುವದೆಂಬುದನ್ನೂ, ಈ ಡಿಪಾಜಿಟ್ ಬಗ್ಗೆ ಜನಗಳಲ್ಲಿ ಪೂರ್ವಸಂಪ್ರದಾಯಾನುಸಾರ ಕೂಡಿಸಿ ಕೆಲವು ಕಾಣಿಕೆ ಹಣವು ಆಯಾ ದೇವಸ್ಥಳಗಳಿಗೆ ಕಳುಹಿಸುವವರೆಗೂ ಅವರಲ್ಲಿ ನಿಲ್ಲೋಣದರಿಂದ ಕೆಲವು ವೇಳೆ ಅಪಾಯ ಸಂಭವಿಸಿ ಅನುಪಯೋಗವಾಗುವದರಿಂದ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡೋಣದರಿಂದ ಆ ಹಣವೂ ಅಭಿವೃದ್ಧಿಯಾಗುವದಲ್ಲದೆ ಸುರಕ್ಷಿತವಾಗಿರುವದೆಂದೂ ಸಭಿಕರಿಂದ ಉಪನ್ಯಾಸಗಳು ಮಾಡಲ್ಪಟ್ಟವು. ಅನಂತರ ಮ॥ ದೇವಂಗಿ ರಾಮಣ್ಣಗೌಡರು ಸಭೆಯಲ್ಲಿ ನಡೆದ ವಿಚಾರಗಳನ್ನೆಲ್ಲಾ ಸಂಗ್ರಹಿಸಿ ಗ್ರಾಮಾಂತರಗಳಲ್ಲಿ ಜನರು ವಿಶ್ವಾಸಶಕ್ತಿ ಇಲ್ಲದೆ ದುಂದುಗಾರರಾಗಿ ತಾತ್ಕಾಲಿಕ ಕೆಲಸಕ್ಕೊಳಗಾಗಿರುವರೆಂದೂ ಅನ್ಯೋನ್ಯವಾದ ಸಹನೆಗಳಿಂದ ಅಭಿವೃದ್ಧಿಗೆ ಬರಬೇಕಾದ ಸಾಧನಗಳನ್ನು ಕುರಿತು ಯುಕ್ತಿಯುಕ್ತವಾದ ಭಾಷಣಮಾಡಿದರು. ಆ ದಿವಸವೇ ಸುಮಾರಾಗಿ 400 ರೂಪಾಯಿ ಡಿಪಾಜಿಟ್ಟುಗಳೂ ಬಂದವಲ್ಲದೆ ಕೆಲವು ಶೇರುಗಳೂ ಖರ್ಚಾದವು. ಈ ದಿವಸದ ಮೀಟಿಂಗಿನಲ್ಲಿ ಜನರಿಗೆ ಪ್ರೋತ್ಸಾಹಕೊಟ್ಟು ಸೊಸೈಟಿಯ ಅಭಿವೃದ್ಧಿಗೆ ಸಹಾಯವನ್ನು ಮಾಡಿದ ಮ॥ ರಾಮಣ್ಣ ಗೌಡರ ಉದಾರವಾದ ಅಭಿಪ್ರಾಯವನ್ನು ಶ್ಲಾಘಿಸುತ್ತಾ, ಸಭಿಕರು ಜಯಘೋಷದೊಡನೆ ತೆರಳಿದರು. ಪ್ರತ್ಯಕ್ಷದರ್ಶಿ.

ಮೈಸೂರು ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳ ಸಹಾಯದ ಫಂಡು.

ಮೇಲ್ಕಂಡ ಫಂಡಿಗೆ ನಮ್ಮ ವಾಚಕರಲ್ಲಿ ಯಾರಾದರೂ ಚಂದಾ ಕಳುಹಿಸಿಕೊಟ್ಟರೆ ನಾವು ಅದನ್ನು ಸ್ವೀಕರಿಸಿ ಈ ಪತ್ರಿಕಾ ದ್ವಾರ ಪ್ರಕಟಮಾಡಿ, ಹಣವನ್ನು ಸೆಕ್ರೆಟರಿಯವರಿಗೆ ರವಾನೆಮಾಡುತ್ತೇವೆ. ಮೈಸೂರು ಸಂಸ್ಥಾನದಿಂದ ಯುದ್ಧರಂಗಕ್ಕೆ ಕಳುಹಲ್ಪಟ್ಟು ಅನ್ಯದೇಶದಲ್ಲಿ ಕಷ್ಟಪಡುತ್ತಿರುವಂಥ ನಮ್ಮ ಯುದ್ಧಭಟರಿಗೆ ನಮ್ಮ ಪ್ರಜೆಗಳು ಕೈಲಾದಷ್ಟು ಸಹಾಯಮಾಡಬೇಕಾದದ್ದು ಸಹಜವೂ ಧರ್ಮವೂ ಆಗಿದೆ. ಕಳೆದ ವಾರ ನಮಗೆ ತಲುಪಿರುವ ಚಂದಾಗಳು:—

ಗುಬ್ಬಿಯ ಕ್ರೈಸ್ತ ಪ್ರಜೆಗಳು	....	ರೂ. 10-0-0
ಭಾರತ ಕ್ರೈಸ್ತಭಕ್ತಿ ಸಮಾಜ	....	,, 2-4-0

ಮೇಲ್ಕಂಡ ಫಂಡಿಗಾಗಿ ಸೆಕ್ರೆಟರಿಯವರಿಗೆ ನವೆಂಬರ್ ತಾ. 23 ರ ವರೆಗೆ ತಲುಪಿರುವ ಚಂದಾಗಳು :—ಈ ಪತ್ರಿಕೆಯ ನವೆಂಬರ್ ತಾ. 18 ನೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಚಂದಾಗಳಲ್ಲದೆ, ಬ್ರಿಟಿಷ್ ರೆಸಿಡೆಂಟರು ರೂ 100 ; ಮ॥ ಗಳಾದ ಡಿ. ಎಂ. ನರಸಿಂಗರಾಯರು ರೂ. 100 ; ಎಂ. ಎಸ್. ಬಾಳರಾಜೆ ಅರಸಿನವರು 100; ಬಿ. ರಾಮಕೃಷ್ಣರಾಯರು, ವಿ. ಎಸ್. ನರಸಿಂಹಯ್ಯಂಗಾರ್ರು, ಹೊಸಕೋಟೆ ಕೃಷ್ಣರಾಯರು, ಎಚ್. ನಂಜುಂಡರಾಜೆ ಅರಸಿನವರು, ಎಂ. ಶ್ರೀನಿವಾಸಯ್ಯಂಗಾರ್ರು, ಬಿ. ಸುಬ್ಬರಾಯರು, ಕರ್ನಲ್ ಟಿ ಮೆಗ್ರಾಸ್ ಸಾಹೇಬರು—ತಲಾ ರೂ 50 ; ಕೆ ಮೈಲಾರರಾಯರು 40, ಎಂ. ಎ. ಶಿಂಗ್ರಾಚಾರ್ರು 30, ಎ. ನರಸಿಂಹಯ್ಯಂಗಾರ್ರು 30, ಎಸ್. ಮಾಧವರಾಯರು 30, ಎಂ. ಎಸ್ ರಾಮಚಂದ್ರರಾಯರು 25, ಸಾದತ್‌ಖಾನರು 25, ಎ ವಿ. ರಾಮನಾಥನ್‌ರು 30, ಜಿ. ಶ್ರೀನಿವಾಸಅಯ್ಯರು 25, ಸಿ ಕೃಷ್ಣರಾಯರು 10, ಕೆ. ಸುಬ್ಬರಾಯರು 10, ಎಸ್ ಹಿರಿಯಣ್ಣಯ್ಯನವರು 35, ಎಸ್. ರಾಮಣ್ಣನವರು 10, ಮೈಸ್ ಮಿಲ್ ಟುರ್ನ್ಯಕ್ಸನವರು 25, ಟಿ ಬಿ. ಅರುಮುಗಂರವರು 100, ಪಿ ಜಿ. ಡಿಸೌಜಾರವರು 60, ಎಂ. ಲಕ್ಷ್ಮಣಶಾಸ್ತ್ರಿಯವರು 30, ಸಿ ಎ ನಂಜಪ್ಪನವರು 30, ಎಂ ಸಿ ರಂಗಯ್ಯಂಗಾರ್ರು 125, ಎಂ ಎ. ಶ್ರೀನಿವಾಸಾಚಾರ್ 5, ಚಾಮರಾಜನಗರದ ಎಸ್. ನಾರಾಯಣರಾವ್ 5, ಮದ್ದಗಿರಿ ರಾಮಚಂದ್ರಶಾಸ್ತ್ರೀ 10, ಎಂ. ಎ. ಶ್ರೀನಿವಾಸಾಚಾರ್ಲು 100, ವೈ. ಶ್ರೀನಿವಾಸರಾವ್ 25, ಬಿ. ಸುಬ್ಬರಾಯರು ತಿಂಗಳಿಗೆ 1, ಬೆಂಗಳೂರು ಫ್ರೆಂಡ್ಸ್ ಯೂನಿಯನ್ 1-8-0, ಟಾಂಕರ್ಸ್ ದಂಪತಿಗಳು 25, ಪಿ ರಾಘವೇಂದ್ರರಾವ್ 140, ಎಂ ಚಾತುರಾವ್ 150, ಮೇಜರ್ ಪಿ. ಎ ಸ್ಮಿತ್‌ಎಕ್ 20, ಡಿ. ಕೆ. ದಾರ್ಗಾಷಾ 100, ಸಿ. ಆರ್. ರೆಡ್ಡಿ 30, ಎಲ್. ಎಸ್. ರಾಜು 10, ಈ ಪ್ರಕಾರ ಚಂದಾ ಹಾವತಿ ಬಂದಿದೆ.

ನೊವೆಂಬರ್ ತಾ. 23 ರಿಂದ ತಾ. 29 ರ ವರೆಗೆ ಹಾವತಿ ಆಗಿರುವ ಚಂದಾಗಳು :—ಮ॥ ಗಳಾದ ಸಿ ಕೃಷ್ಣರಾಯರು ರೂ. 35, ಮೈಸೂರು ವರ್ತಕರು ಮಹಮದ್ ಸೇಟ್ 100, ವಿ ಸುಬ್ರಹ್ಮಣ್ಯ ಅಯ್ಯರ್ 15, ಕೆ. ಸುಬ್ಬರಾವ್ 15, ಮಂಡ್ಯ ಅಮಲ್ದಾರ್ರ ಮುಖಾಂತ 5, ಚಿತ್ರದುರ್ಗದ ಅಮಲ್ದಾರ್ರ ಮುಖಾಂತ 50, ಮೈಸೂರು ಅಮಲ್ದಾರ್ರ ಮುಖಾಂತ 26, ಮಾಗಡಿ 25, ಬೆಂಗಳೂರು 42, ಬ್ರಾಂಗ್‌ಪೇಟೆ 57, ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆ ಆಫೀಸರ್ 120, ಮಾಗಡಿ ಅಮಲ್ದಾರ್ರ ಮುಖಾಂತ 40, ಆರ್. ರಾಮಶಾಸ್ತ್ರೀ 10, ಗುಲಾಮ್ ಅಹಮದ್ ಕಲಾಮಿ 100 ರೂಪಾಯಿ.

ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು.

ಕಳೆದ ಶುಕ್ರವಾರ ಬೆಳಗ್ಗೆ ಮೈಸೂರು ನಗರಾಭಿವೃದ್ಧಿಯ ಟ್ರಸ್ಟ್ ಬೋರ್ಡ್ ಮೀಟಿಂಗು ಟೌನ್ ಹಾಲಿನಲ್ಲಿ ನಡೆಸಲ್ಪಟ್ಟಿತು, ಚೇರ್‌ಮನ್ ಮ॥ ಟಿ ಲಕ್ಷ್ಮಣರಾಯರು, ಡೆಪ್ಯುಟಿ ಕಮಿಷನರ್ ಮ॥ ಎಂ. ಶ್ರೀನಿವಾಸರಾಯರು, ರೆವ॥ ಜಿ. ಡಲ್ಲಿಯ. ಸಾಹೇಬರು, ಹೆಲ್ತ್ ಆಫೀಸರ್ ಮ॥ ಎ ಕೆ. ಪಾಣಿಯವರು, ಮಿ॥ ಮಹಮದ್ ಜಾಫರ್ ಸಾಹೇಬರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ॥ ಜಿ. ನಾರಾಯಣರಾಯರು, ರಾವ್ ಬಹದೂರ್ ಮ॥ ಎಂ. ಸಿ. ರಂಗಯ್ಯಂಗಾರ್ರು ಹಾಜರಾಗಿದ್ದು ತೀರ್ಮಾನ ಮಾಡಿರುವ ವಿಷಯಗಳ್ಯಾವವೆಂದರೆ—

ಟ್ರಸ್ಟ್ ಬೋರ್ಡಿನಿಂದ ನಡೆಯುವ ಕಾಮಗಾರಿಗಳಿಗೆ ಸಿಮೆಂಟ್ ಎಂಬ ಗಾರೆ ಪುಡಿಯನ್ನು ಉಪಯೋಗಿಸುತ್ತಾರೆ. ಅದರ ಕ್ರಯ ಪೀಪಾಯಿ 1 ಕ್ಕೆ 11 ಚಿಲ್ಲರೆ ರೂಪಾಯಿ ಇದ್ದದ್ದು ಈಗ ಯುದ್ಧದ ದೆಸೆಯಿಂದ 16 ಚಿಲ್ಲರೆ ರೂಪಾಯಿ ಆಗಿರುತ್ತದೆ. ಈ ಜಾಸ್ತಿ ರೇಟಿನಂತೆ ಸಿಮೆಂಟನ್ನು ಕಂಟ್ರಾಕ್ಟರುಗಳಿಗೆ ಟ್ರಸ್ಟ್ ಬೋರ್ಡಿನಿಂದ ಕೊಡುವಂತೆ ಒಪ್ಪಲಾಯಿತು ಈಗ ಬೊಂಬಾಯಿನ ಸ್ವದೇಶೀ ಕಂಪನಿಯವರು ತಯಾರಿಸುತ್ತಿರುವ ಸುಲಭ ಖರೀದಿಯುಳ್ಳ ಸೀಮೆಂಟನ್ನು ಚೀಫ್ ಇಂಜನಿಯರವರು ತರಿಸಿ ಬೆಂಗಳೂರು ವರ್ಕ್‌ಷಾಪಿನಲ್ಲಿ ಪರೀಕ್ಷೆ ಮಾಡಿಸಿ ಅದು ಚೆನ್ನಾಗಿದೆ ಎಂದೂ, ಅದನ್ನು ತರಿಸಿ ಕಾಮಗಾರಿಗಳಿಗೆ ಉಪಯೋಗಿಸಬಹುದೆಂದೂ ಅಪ್ಪಣೆ ಕೊಟ್ಟಿದ್ದಾರೆ. ಚೇರ್‌ಮನ್‌ರವರು ಅನುಭವಕ್ಕಾಗಿ ಒಂದು ವ್ಯಾಗನ್ನನ್ನು ಈ ಹೊಸ ತರದ ಸಿಮೆಂಟನ್ನು ತರಿಸುತ್ತೇವೆಂದು ತಿಳಿಸಿದರು—ಒಂಟಿಕೊಪ್ಪಲ ಬಡಾವಣೆಯಲ್ಲಿ ಒಂದು ಭಾಗವನ್ನು ಪ್ರಾರಂಭಮಾಡಿ ಅಲ್ಲಿಗೆ ಮೊದಲು ರಸ್ತೆಗಳನ್ನೂ ಚರಂಡಿಗಳನ್ನೂ ನೀರಿನ ಅನುಕೂಲವನ್ನೂ ದೀಪಗಳನ್ನೂ ಇರಿಸಿ ಸಿದ್ಧಪಡಿಸುವುದಕ್ಕೆ ಎರಡು ಲಕ್ಷ ಚಿಲ್ಲರೆ ರೂಪಾಯಿ ಬೇಕಾಗುವುದೆಂದು ಚೇರ್‌ಮನ್‌ರವರು ಅಂದಾಜು ಪಟ್ಟಿ ತಯಾರಿಸಿದ್ದಾರೆ. ಈ ಒಂದು ಭಾಗವು 182 ಎಕರೆ ವಿಸ್ತಾರವಾಗಿದೆ. ಅದರಲ್ಲಿ 132 ನಿವೇಶನಗಳನ್ನು ವಿಂಗಡಿಸಿದ್ದಾರೆ. ನಾಲ್ಕು ದರ್ಜೆಗಳ ಕಟ್ಟಡಗಳಾಗಬೇಕು ಕಡೇ ದರ್ಜೆಯ ನಿವೇಶನಗಳು 100×130 ಅಡಿ ವಿಸ್ತಾರವುಳ್ಳವೆಂದು ತಿಳಿಸಿದರು. ಮೆಂಬರುಗಳು ಈ ಅಂದಾಜು ಪಟ್ಟಿಯನ್ನು ಮುಂಜೂರುಮಾಡಿ ಸರ್ಕಾರದ ಸ್ಯಾಂಕ್ಷನ್ ಬಗ್ಗೆ ಕಳುಹಿಸಿಕೊಡಬಹುದೆಂದು ಒಪ್ಪಿಕೊಂಡರು.—ಕೋಟೆಗೋಡೆಯ ಪೂರ್ವಭಾಗದಲ್ಲಿ ಕೋಟೆಯನ್ನು ಸದ್ಯದಲ್ಲಿ ಸ್ವಲ್ಪ ಮಟ್ಟಿಗೆ ಒಡೆದು ಹಾಕಿ ಅಲ್ಲಿಂದ ಕೆರೆ ಏರಿಯ ತನಕ ಭರ್ತಿಮಾಡಿ ಒಂದು ರಸ್ತೆಯನ್ನು ಹಾಕಿಸಿದ್ದಕ್ಕೆ ಟ್ರಸ್ಟ್ ಬೋರ್ಡಿನವರು 1,240 ರೂಪಾಯಿ ಖರ್ಚು ಮಾಡಿದ್ದರು. ಮೆಂಬರುಗಳು ಈ ಖರ್ಚನ್ನು ಒಪ್ಪಿರುತ್ತಾರೆ.

ದೇವರಾಜ ಮಾರ್ಕೆಟ್ಟನ್ನು ದೊಡ್ಡದಾಗಿಯೂ ಅಲಂಕಾರವಾಗಿಯೂ ಕಟ್ಟುವ ವಿಷಯದಲ್ಲಿ ಕಂಟ್ರಾಕ್ಟುದಾರರ ಅರ್ಜಿಗಳನ್ನು ಮೆಂಬರುಗಳು ಪರಿಶೀಲಿಸಿ ಮಾಡಿ ಕಬ್ಬಿಣದ ಸಾಮಾನುಗಳ ಕಂಟ್ರಾಕ್ಟನ್ನು 9,700 ರೂಪಾಯಿಗೆ ಬೆಂಗಳೂರು ಸ್ಟ್ಯಾಂಡರ್ಡ್ ಕಂಪನಿಗೆ ವಹಿಸಬಹುದೆಂದೂ, ಗಾರೆಕೆಲಸ ಮುಂತಾದ ಕಾಮಗಾರಿ ಕಂಟ್ರಾಕ್ಟನ್ನು 45,810 ರೂಪಾಯಿಗೆ ಅರಮನೆ ಇಲಾಖೆಯಲ್ಲಿ ಕಂಟ್ರಾಕ್ಟರಾಗಿರುವ ಕೊಪ್ಪಲ ಬೋರಯ್ಯನವರಿಗೆ ವಹಿಸಬಹುದೆಂದೂ ಒಪ್ಪಿದ್ದಾರೆ—ಚಾಮರಾಜ ಮೊಹಲ್ಲೆಯ ಮತ್ತು ಕೃಷ್ಣರಾಜಮೊಹಲ್ಲೆಯ ಕೆಲವು ಭಾಗಗಳಲ್ಲಿ ಟ್ರಸ್ಟ್ ಬೋರ್ಡ್ ಇಂಜನಿಯರ್ ಇಲಾಖೆಯಿಂದ ಸಣ್ಣ ಕಂಟ್ರಾಕ್ಟುಗಳು ಕೊಟ್ಟು ಬಚ್ಚಲ ನಲ್ಲಿ ಹಾಕಿಸುವ ಕಾಮಗಾರಿಯನ್ನು ಮಾಡಿಸುತ್ತೇವೆಂದೂ, ಇದರಲ್ಲಿ ಅಂದಾಜು ಮೊಬಲಗಿಗಿಂತ ಕೇವಲ 2 ರಷ್ಟು ಮಿಗಿಸಬಹುದೆಂದೂ ಇಂಜನಿಯರವರು ಬರೆದಿದ್ದರು. ಮೆಂಬರುಗಳು ಆ ರೀತಿ ಮಾಡಿಸಬಹುದೆಂದು ಸಮ್ಮತಿಪಟ್ಟರು.—ದೊಡ್ಡಪೇಟೆಯ ಮೊಹಲ್ಲಾ ಗದಲ್ಲಿರುವ ಬಾಡಿ ಗಾರ್ಡ್ ಕಟ್ಟಡ ಮತ್ತು ಆವರಣವನ್ನು ಟ್ರಸ್ಟ್ ಬೋರ್ಡಿನವರು 30,000 ರೂಪಾಯಿಗೆ ಕೊಂಡುಕೊಂಡು ಅಲ್ಲಿ ಆರೋಗ್ಯಕರವಾದ ಒಳ್ಳೇ ಮನೆಗಳನ್ನು ಕಟ್ಟಿಕೊಳ್ಳುವಂತೆ ಪ್ರಜೆಗಳಿಗೆ ವಿಂಗಡಿಸಿ ಕೊಡಬೇಕೆಂದು ಏರ್ಪಾಡು ಮಾಡಿಕೊಂಡಿದ್ದರು. ಆದರೆ ಸರ್ಕಾರದವರು ಆ ಕಟ್ಟಡವನ್ನೂ ಆವರಣವನ್ನೂ ಪೋಲೀಸ್ ಇಲಾಖೆಗೆ ವಹಿಸಬೇಕೆಂದೂ, ಮೇಲ್ಕಂಡ ಹಣವು ಸರ್ಕಾರದಿಂದ ಟ್ರಸ್ಟ್ ಬೋರ್ಡಿಗೆ ಕೊಡಲ್ಪಡುವುದೆಂದೂ ಹುಕುಂ ಕೊಟ್ಟಿದ್ದಾರೆ ಮೆಂಬರುಗಳು ಆ ರೀತಿ ಮಾಡಬಹುದೆಂದೂ, ಅದರ ಪ್ರತಿ ಫಲವಾಗಿ ಬರುವ 30,000 ರೂಪಾಯನ್ನು ಪ್ರತ್ಯೇಕವಾಗಿಟ್ಟುಕೊಂಡು ಟ್ರಸ್ಟ್ ಬೋರ್ಡಿನವರು ಒಪ್ಪುವಂಥಾ ಪ್ಲಾನಿನ ಪ್ರಕಾರ ಆರೋಗ್ಯಕರವಾದ ಮನೆಗಳನ್ನು ಪಟ್ಟಣದಲ್ಲಿ ಕಟ್ಟುವುದಕ್ಕೆ ಒಪ್ಪಿಕೊಳ್ಳುವಂಥಾ ಪ್ರಜೆಗಳಿಗೆ ಸಾಲವಾಗಿ ಹಂಚಿಕೊಡಬೇಕೆಂದೂ ತೀರ್ಮಾನ ಮಾಡಿದ್ದಾರೆ.—ಚೀವಣ್ಣರಾಯನಕಟ್ಟೆಯ ಒಳಗಿನ ಭಾಗವನ್ನು ಹಳ್ಳಕೊಳ್ಳ ಮುಚ್ಚಿ ನೆಲಸಮ ಮಾಡಿ ರಸ್ತೆಗಳನ್ನು ಹಾಕುವುದಕ್ಕೆ ಟ್ರಸ್ಟ್ ಬೋರ್ಡಿನವರು ಮೊದಲು 19,000 ರೂಪಾಯಿನ ಅಂದಾಜು ಪಟ್ಟಿ ತಯಾರಿಸಿದ್ದರು. ಮಿ॥ ಕ್ರೇಂಬೀಗಲ್‌ರವರು ಆ ನಕ್ಷೆಯಲ್ಲಿ ಕೆಲವು ಖರ್ಚು ಬಾಬುಗಳನ್ನು ತೆಗೆದು ಹಾಕಿ 5,800 ರೂಪಾಯಿನ ಪ್ಲಾನ್ ಅಂದಾಜು ಪಟ್ಟಿಗಳನ್ನು ಕಳುಹಿಸಿ ಕೊಟ್ಟಿದ್ದರು ಮೆಂಬರುಗಳು ಅದರಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಬಹುದೆಂದು ಒಪ್ಪಿರುತ್ತಾರೆ

ಇಲವಾಲದ ರಸ್ತೆಯಲ್ಲಿ ನಂಜರಾಜ ಬಹದ್ದರವರ ಛತ್ರದ ಎದುರಿಗೆ ಇರುವ ಭಕ್ತಿ ವಿಲಾಸವೆಂಬ ಕಟ್ಟಡವನ್ನು ಬೇಟ್ ನರಸಿಂಹಯ್ಯನವರ ಪತ್ನಿಯವರು ಕೊಂಡುಕೊಂಡು ಅದನ್ನು ಧರ್ಮಛತ್ರವಾಗಿ ಮಾಡಬೇಕೆಂದಿದ್ದಾರೆ. ಆಕೆ ಅದರ ಹಿಂಭಾಗದಲ್ಲಿರುವ 45×270 ಅಡಿ ವಿಸ್ತಾರವಾದ ಖಾಲೀ ನಿವೇಶನವನ್ನು ತಮ್ಮ ಛತ್ರಕ್ಕೆ ಸೇರಿಸಿ ಕೊಡಬೇಕೆಂದು ಕೇಳಿದ್ದಾರೆ. ಮತ್ತು ಆ ಕಟ್ಟಡದ ಮುಂಭಾಗದಲ್ಲಿ ಉದ್ದಕ್ಕೂ ಅಂಗಡಿಗಳನ್ನು ಕಟ್ಟಿಸಬೇಕೆಂದು ಲೈಸೆನ್ಸು ಕೇಳಿರುವರು. ಆ ನಿವೇಶನವನ್ನು ಆಕೆಗೆ ಕೊಡುವುದು ಮತ್ತೂ ಕಾಮಗಾರಿಯ ಲೈಸೆನ್ಸು ಕೊಡುವುದು, ಇವೆರಡು ಸಂಗತಿಗಳನ್ನೂ ಈಗಲೇ ವ್ಯವಸ್ಥೆ ಮಾಡಕೂಡದೆಂದೂ, ಟ್ರಸ್ಟ್ ಬೋರ್ಡ್ ಮೆಂಬರುಗಳೂ ಮ್ಯುನಿಸಿಪಲ್ ಕೌನ್ಸಿಲರುಗಳೂ ತಾ. 7ನೇ ಮಂಗಳವಾರ ಬೆಳಗ್ಗೆ ಆ ಕಟ್ಟಡದ ಬಳಿಗೆ ಹೋಗಿ ಮೊಖ್ತಾ ಅಜಮಾಯಿಷಿ ಮಾಡಬೇಕೆಂದೂ ಗೊತ್ತು ಮಾಡಿದರು—ಲಷ್ಕರ್ ಮೊಹಲ್ಲಾದಲ್ಲಿ ಗೋವಿಂದರಾಜನಹಳ್ಳಿಯವರು 200 ರೂಪಾಯಿ ಸಾಲವನ್ನು ಟ್ರಸ್ಟ್ ಬೋರ್ಡಿನಿಂದ ಮೊದಲು ಪಡೆದು, ಮನೆಯ ಕಾಮಗಾರಿ ಪೂರೈಸುವುದಕ್ಕೆ ಇನ್ನೂ 200 ರೂಪಾಯಿ ಸಾಲ ಬೇಕೆಂದು ಅರ್ಜಿ ಬರೆದು ಕೊಂಡಿದ್ದರು. ಮೆಂಬರುಗಳು ಅದನ್ನು ಚೇರ್‌ಮನ್‌ರವರ ತೀರ್ಮಾನಕ್ಕೆ ಬಿಟ್ಟರು—ನಜರಬಾದ್ ಮೊಹಲ್ಲಾದಲ್ಲಿ ಕೆಲವು ಮನೆಗಳನ್ನು ಒಡೆದು ಹಾಕುವುದಕ್ಕೂ, ಪೋಲೀಸ್ ಸ್ಟೇಷನ್ ಸುತ್ತಾ ಆವರಣವನ್ನು ಕಲ್ಪಿಸಿಕೊಡುವುದಕ್ಕೂ ಅಪ್ಪಣೆಕೊಟ್ಟಿದ್ದಾರೆ. ಅದರಂತೆ ಕೆಲಸ ಜರುಗಿಸಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಹಳೆ ಅಗ್ರಹಾರದಲ್ಲಿ ವಾಣೀವಿಲಾಸ ರಸ್ತೆ ಉತ್ತರ ಪಾರ್ಶ್ವದಲ್ಲಿ ಕೆಲವು ಸಣ್ಣ ಕೊಳಕಾದ ಮನೆಗಳನ್ನು ಕೊಂಡು ಒಡೆದುಹಾಕಿ ಆರೋಗ್ಯಕರವೂ ಅಲಂಕಾರವೂ ಆದ ಮನೆಗಳನ್ನು ಉದ್ದಕ್ಕೂ ಕಟ್ಟುವವರಿಗೆ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಕೋಟೆ ಗೋಡೆಗಳ ಮೇಲೆ ಬೆಳೆದಿರುವ ಗಿಡ ಗೆಂಡೆಗಳನ್ನು ಕತ್ತರಿಸಿ ಚೊಕ್ಕಟವಾಗಿ ಮಾಡಿಸುವುದಕ್ಕೆ 600 ರೂಪಾಯಿನ ಖರ್ಚು ಒಪ್ಪಲಾಯಿತು.—ಅರಮನೆ ಬಾಗಿಲ ಆಚೆ ಶ್ರೀರಂಗಪಟ್ಟಣದ ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಬೆಳೆದಿರುವ ಮುಳ್ಳು ಗಿಡಗಳನ್ನು ಕತ್ತರಿಸಿಹಾಕಿ ಪ್ರದೇಶವನ್ನು ಚೊಕ್ಕಟವಾಗಿರುವಂತೆ ಮಾಡುವುದಕ್ಕೆ 200 ರೂಪಾಯಿ ಬೇಕಾಗುವುದೆಂದು ಚೇರ್‌ಮನ್‌ರವರು ತಿಳಿಸಿ, ಅವರೂ ಡಾ॥ ಶ್ರೀನಿವಾಸರಾಯರೂ ಈ ಕೆಲಸವನ್ನು ಮ್ಯುನಿಸಿಪಾಲಿಟಿಯವರು ಮಾಡಬೇಕೆಂದು ಅಭಿಪ್ರಾಯಪಟ್ಟರು. ಇತರ ಮೆಂಬರುಗಳ ಅಭಿಪ್ರಾಯದಂತೆ ಈ ಕೆಲಸವು ಅಭಿವೃದ್ಧಿಯ ಕಾರ್ಯಗಳಲ್ಲಿ ಸೇರಿರುವುದರಿಂದಲೂ, ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದ್ದರಿಂದಲೂ ಟ್ರಸ್ಟ್ ಬೋರ್ಡಿನಿಂದಲೇ ಮಾಡಿಸಬೇಕೆಂದು ಅಭಿಪ್ರಾಯಪಟ್ಟದ್ದರಿಂದ ಟ್ರಸ್ಟ್ ಬೋರ್ಡಿನವರೇ ಮಾಡಿಸುವಂತೆ ತೀರ್ಮಾನ ಮಾಡಲಾಯಿತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು. ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಧರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ. —ಎಡಿ.]

ಕರೆಸ್‌ಪಾಂಡೆನ್ಸ್.

ಸಕಲೇಶಪುರದ ರೀಡಿಂಗ್ ರೂಮ್ —ಜವಾಬು.

ಅಯ್ಯಾ,—ತಮ್ಮ ಪತ್ರಿಕೆಯಲ್ಲಿ ಸಕಲೇಶಪುರದ ರೀಡಿಂಗ್ ರೂಮು ವಗ್ಗೆರೆ ವಿಚಾರಗಳನ್ನು ಪ್ರಕಟಿಸಿರುವದು ಸರಿಯಷ್ಟೆ ರೀಡಿಂಗು ರೂಮಿನ ಬಗ್ಗೆಯಾಗಿ ಪ್ರಜೆಗಳಲ್ಲಿ ಸಮರಸವಿಲ್ಲವೆಂಬದನ್ನು ಯಾರೋ ಬರೆದಿರುತ್ತಾರೆ ಇದು ಕೇವಲ ಪ್ರತಿಷ್ಠಾಪದರ್ಶನವಾದದ್ದೇ ಹೊರತು ಸಹಜ ಸ್ಥಿತಿಯನ್ನು ಹೇಳಿದ ಹಾಗೆ ಆಗಲಿಲ್ಲ. ಈ ಕಾರ್ಪೊರೇಷನ್ ರೀಡಿಂಗ್ ರೂಮಿಗೆ ಮೆಂಬರುಗಳೆಷ್ಟು? ಈ ಪೈಕಿ ಸ್ಥಳದವರು ಹೆಚ್ಚೋ? ಪರಸ್ಥಳದವರು ಹೆಚ್ಚೋ? ಸರ್ಕಾರಿ ನೌಕರರೋ? ಅಥವಾ ಸಾಹುಕಾರರುಗಳೋ? ಯಾರಿಂದ ಏನು ವಿಷಯ ಬಂತು ಎಂಬದೊಂದೂ ತಿಳಿಯದೆ ಪ್ರಜೆಗಳನ್ನು ಅಲ್ಲಗಳೆದಿರುವುದು ನ್ಯಾಯವಲ್ಲ ಈಗ ನಿಮ್ಮ ಪತ್ರಿಕೆಗೆ ಬರೆದವರು ವಿಚಾರಿಸದೆ ಬರೆದದ್ದಕ್ಕಾಗಿ ವಿಷಾದಿಸುತ್ತೇವೆ.
ಸದರಿ ರೀಡಿಂಗು ರೂಮಿನ ಮೆಂಬರು

ಕೃಷ್ಣರಾಜಪೇಟೆ ದುರವಸ್ಥೆ.

ಅಯ್ಯಾ,—ಈ ಟವನ್‌ನಲ್ಲಿ ವಿಶೇಷವಾಗಿ ಮಳೆಯು ಸುರಿದು ಕಟಾವು ಬಂದಿದ್ದ ರಾಗಿ ಪೈರೆಲ್ಲಾ ನಷ್ಟವಾದುದರಿಂದ ರೈತರು ಸಂಕಟಪಡುತ್ತಲಿದ್ದರು ಈ ಮಧ್ಯೆ ಪ್ಲೇಗೂ ತಲೆಹಾಕಿರುವ ದೆಸೆಯಿಂದ ಎಲ್ಲರೂ ಊರ ಹೊರ ಗುಡಿಸಲುಗಳಲ್ಲಿ ವಾಸಿಸುತ್ತಲಿದ್ದಾರೆ ಅನೇಕರು ಗುಡಿಸಲಿನ ಸಾಮಾನುಗಳಲ್ಲಿ ಬಹಳವಾಗಿ ತೊಂದರೆಯನ್ನು ಅನುಭವಿಸಿದರು. ಈ ಟವನ್‌ನಲ್ಲಿ ಹಗಲಲ್ಲಿಯೇ ಮನೆಗಳ ಬೀಗಗಳನ್ನು ಮುರಿದು ಕಳುವು ಮಾಡಿಕೊಂಡು ಹೋಗುತ್ತಾರೆ ಅಮಲ್ದಾರ್ ಮ॥ ವೆಂಕಟರಾಮಯ್ಯನವರು ಇಲ್ಲಿಂದ ವರ್ಗವಾಗಿ ಹೋದಾಗಿನಿಂದ ಇಲ್ಲಿಯ ನಿವಾಸಿಗಳ ಸೌಕರ್ಯಗಳೆಲ್ಲವೂ ತಪ್ಪಿದವು. ಪಾಪ ಅಮಲ್ದಾರ್ರ ದರ್ಶನವು ನಮಗೆ ಯಾವಾಗ್ಗೆ ಲಭ್ಯವೋ? ಕಸಬಾದಲ್ಲಿ ಅಮಲ್ದಾರರೇ ಮೊದಲುಗೊಂಡು ಅಧಿಕಾರಿಗಳೊಬ್ಬರೂ ವಾಸವಾಗಿಲ್ಲದೆ ಪರಸ್ಥಳದಲ್ಲಿರುವುದು ಕಳ್ಳತನಕ್ಕೆ ತುಂಬಾ ಸಹಕಾರಿ ಎಂಬ ವಿಚಾರ ಹೇಳತಕ್ಕದ್ದೇ ಅನಾವಶ್ಯಕ. 2—3 ಕಳವಿನ ವಿಚಾರವು ಪೋಲೀಸಿಗೆ ತಿಳಿದಿರಬಹುದು. ಸರ್ಕಾರದವರು ಉಪೇಕ್ಷೆಮಾಡದೆ ಈ ಟವನ್ ಬಡ ನಿವಾಸಿಗಳ ವಿಚಾರದಲ್ಲಿ ಗಮನ ತೆಗೆದುಕೊಳ್ಳುತ್ತಾರೆಂತ ನಂಬಿರುತ್ತೇವೆ. ಹಿತೈಷಿ.

ಮೈಸೂರು ವಿದ್ಯಾಭ್ಯಾಸದ ಇಲಾಖೆ—ಒಂದು ಸಲಹೆ.

ಅಯ್ಯಾ,—ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ನಮ್ಮ ಸರ್ಕಾರದ ಕೆಲಸಗಳೂ ಇಲಾಖೆಗಳ ಪರಸ್ಪರಾನುರಾಗವೂ ಎಂಬ ವಿಷಯದಲ್ಲಿ ವಿದ್ಯಾಭ್ಯಾಸ ಇಲಾಖೆಯವರು ಪಟ್ಟಣ ಮತ್ತು ಗ್ರಾಮಗಳಲ್ಲಿ ಪ್ರಥಮ ಪಾಠಶಾಲೆಗಳನ್ನು ಪ್ರಾರಂಭಮಾಡುತ್ತಾ ಬಂದಿದ್ದಾರೆ ಇದು ಸಹಜವಾದದ್ದು. ಆದರೆ ಸಂಪದಭ್ಯುದಯ ಸಮಾಜದ ನಾನಾ ಸೂಪರಿಂಟೆಂಡೆಂಟರುಗಳು ಮತ್ತು ರೆವಿನ್ಯೂ ಅಧಿಕಾರಿಗಳು ತಮ್ಮ ಸಂಚಾರಕಾಲದಲ್ಲಿ ವಿದ್ಯಾಭ್ಯಾಸದ ಇಲಾಖೆಯವರಲ್ಲಿ ಆಲೋಚಿಸದೆಯೇ ಸ್ವತಂತ್ರವಾಗಿ ಸ್ಕೂಲುಗಳನ್ನು ಇಡಿಸತಕ್ಕವರಾಗಿದ್ದಾರೆ. ಅದರಿಂದ ಬರೀ ಗಲಭೆ, ಗಲಿಬಿಲಿ ಮತ್ತು ಐಕ್ಯದ ಪ್ರಚಾರವು ಸರಾಗವಾಗಿಯೂ ಕ್ರಮವಾಗಿಯೂ ನಡೆಯುವುದಿಲ್ಲ. ಶಾಶ್ವತವಾಗಿ ನಡೆದುಬರುವಂಥಾ ಇಲಾಖೆಗಳನ್ನು ಬಲಪಡಿಸಿ ಅವುಗಳ ಮೂಲಕ ನಡೆಯುವ ಕೆಲಸಗಳು ವೃದ್ಧಿಯಾಗುವಂತೆ ಮಾಡಬೇಕಾಗಿರುತ್ತದೆ ಎಂದು ಬರೆದಿದ್ದೀರಿ. ಈ ವಿಷಯದಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಪ್ರಥಮ ಪಾಠಶಾಲೆಗಳ ಏರ್ಪಾಡುಗಳನ್ನು ನೋಡಿಕೊಳ್ಳುವುದಕ್ಕಾಗಿಯೇ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಎಂಬ ಅಧಿಕಾರಿಯನ್ನು ಸರ್ಕಾರದವರು ಮೊದಲು ನೇಮಿಸಿದ್ದರು. ಕೆಲವು ಕಾಲದ ಮೇಲೆ ಆ ಅಧಿಕಾರದಲ್ಲಿದ್ದವರು ತಮ್ಮ ಕೆಲಸದೊಂದಿಗೆ ಸಂಪದಭ್ಯುದಯ ಸಮಾಜದ ಸೆಕ್ರೆಟರಿಯಾಗಿಯೂ ಇರಬೇಕೆಂದು ಏರ್ಪಾಡಾಯಿತು. ಈಚೆಗೆ ಆ ಅಧಿಕಾರಿಯನ್ನು ಸಂಪದಭ್ಯುದಯ ಸಮಾಜದ ಸೆಕ್ರೆಟರಿ ಕೆಲಸಕ್ಕೆ ನೇಮಿಸಿ, ಅವರ ಸ್ಥಳದಲ್ಲಿ ಮತ್ತೊಬ್ಬರನ್ನು ನೇಮಿಸದೆ, ಅದಕ್ಕೆ ಬದಲಾಗಿ ಇನ್ಸ್‌ಪೆಕ್ಟರ್ ಜನರಲ್ ರವರಿಗೆ ಸ್ಪೆಷಲ್ ಅಸಿಸ್ಟೆಂಟ್ ಎಂಬ ಅಧಿಕಾರಿಯನ್ನು ಏರ್ಪಡಿಸಿದ್ದಾರೆ. ಇವರಿಗೆ ಸ್ವತಂತ್ರವಾಗಿ ಯಾವ ಕೆಲಸ ಮಾಡುವುದಕ್ಕೂ ಅವಕಾಶವಿಲ್ಲ. ಇನ್ಸ್‌ಪೆಕ್ಟರ್ ಜನರಲ್‌ರವರೇ ಖುದ್ದು ಎಲ್ಲಾ ಕೆಲಸಗಳಿಗೂ ಗಮನ ಕೊಡಬೇಕಾದರೆ ತುಂಬ ಶ್ರಮಸಾಧ್ಯವಾಗುತ್ತದೆ ಆದ್ದರಿಂದ ತುಂಬಾ ಅನುಭವಶಾಲಿಗಳಾದ, ಸ್ಥಳೀಯ ವಿದ್ಯಮಾನಗಳನ್ನು ಬಲ್ಲ ಸರ್ಕಲ್ ಇನ್ಸ್‌ಪೆಕ್ಟರ್ ಮ॥ ಎಂ ಶ್ರೀನಿವಾಸರಾಯರನ್ನು ಪೂರ್ವದಂತೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲಾಗಿ ನೇಮಿಸಿದ ಪಕ್ಷದಲ್ಲಿ ಅವರು ಸಂಪದಭ್ಯುದಯ ಸಮಾಜದ ಸೂಪರಿಂಟೆಂಡೆಂಟರುಗಳ ಮತ್ತು ರೆವಿನ್ಯೂ ಆಫೀಸರುಗಳ ಸಲಹೆ ಪಡೆದು ಪ್ರಥಮ ಪಾಠಶಾಲೆಗಳನ್ನು ಸ್ಥಾಪಿಸುವುದಕ್ಕೂ, ಸಂಸ್ಥಾನದೊಳಗೆ ಸಂಚಾರ ಮಾಡಿ ಹಾಗೆ ಸ್ಥಾಪಿತವಾದ ಸ್ಕೂಲುಗಳು ಹೇಗೆ ಕೆಲಸ ಮಾಡುತ್ತವೆ ಎಂಬುವನ್ನು ಪರೀಕ್ಷಿಸುವುದಕ್ಕೂ ಅನುಕೂಲವಾಗುತ್ತದೆ. ಅಲ್ಲದೆ ಹೊಸದಾಗಿ ಸ್ಥಾಪಿತವಾದ ಪಾಠಶಾಲೆಗಳಿಗೆ ಗ್ರ್ಯಾಂಟ್ ದೊರೆಯುವುದು ಸಾವಕಾಶವಾಗಿ ಆ ಮೂಲಕ ಮಾಸ್ತರುಗಳೂ ಮ್ಯಾನೇಜರುಗಳೂ ಆಶಾಭಂಗರಾಗಿ ಕಾರ್ಯಶಕ್ತಿಯನ್ನು ತೊರೆಯದೆ ಇರುವುದಕ್ಕೂ ಸಹಕಾರಿಯಾಗಿರುತ್ತದೆ. ಈ ವಿಷಯವು ನಮ್ಮ ಸರ್ಕಾರದ ಪರ್ಯಾಲೋಚನೆಗೆ ಬರುತ್ತದೆಂದು ನಂಬುವ ಒಬ್ಬ ವಿದ್ಯಾ ಹಿತಚಿಂತಕ.

ಮುಂಬೈ, ಕನ್ನಡ ಗ್ರಂಥ ವಾಚನಾಲಯ ಸಂಘ.

ಅಯ್ಯಾ,—ಕನ್ನಡವೇ ಶ್ರೇಷ್ಠಭಾಷೆಯಾಗಿರುವ ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಪ್ರಾಂತ್ಯದಿಂದ ಜೀವನಾರ್ಥ ಈ ಶಹರ ಪ್ರಾಂತ್ಯಕ್ಕೆ ಬಂದವರಲ್ಲಿ

...ಅಭಿರುಚಿಯು ಅಡಗಿಹೋಗದಂತೆಯೂ, ವರ್ತಮಾನ ಪತ್ರಿಕಾ... ದಿಂದ ಲೋಕವ್ಯವಹಾರಗಳು ಗ್ರಾಹ್ಯವಾಗುವಂತೆಯೂ, ವಿಶಿಷ್ಟ ಗ್ರಂಥ... ಶಕ್ತಿಯು ಉಚ್ಚಗತಿಯನ್ನು ಹೊಂದುವಂತೆಯೂ, ನಿಯಮ... ಕೂಡಿ ಬಂದು ಪರಸ್ಪರ ಮಾತು ಸಮಾಗಮದಿಂದಲೂ, ... ಸಾಧನದಿಂದಲೂ ಯೋಚನಾ ಬುದ್ಧಿ ಬಲಗಳು ವೃದ್ಧಿಗೊಳ್ಳುವುದು ... ಅವರೊಳಗೆ ಅನ್ಯೋನ್ಯಭಾವವು ಅಂಕುರಿಸುವಂತೆಯೂ ಒಂದು ... ಪರ್ಯಾಲೋಚಿಸಿ, ಧೈರ್ಯಸಾಹಸದಿಂದಲೂ, ಯುಕ್ತಮಾರ್ಗದಿಂದಲೂ ... ಕೊಂಡು ಬಂದರೆ ಅದರಿಂದ ಈ ತರದ ಪ್ರಯೋಜನಗಳಿಗೆ ಅವ... ಯಿರಲಾರದೆಂಬ ಭಾವನೆಯಿಂದ ಅದಕ್ಕೆ ತಕ್ಕ ಯತ್ನಮಾಡಿದ ... ಗಳಿಂದಲೂ ಪತ್ರಿಕಾಧಿಪತಿಗಳು ಮತ್ತು ಜೊತೆಗೆ ಬಹಾರ ... ಮಂದಾಗ್ನಿಯವರ ಪ್ರೇರೇಪಣೆಯಿಂದ “ಮುಂಬೈ ಕನ್ನಡ ಗ್ರಂಥ ... ಸಂಘ” ಎಂಬ ಸಂಘವು ಕಳೆದ ಏಪ್ರಿಲ್ ತಿಂಗಳ ತಾ. 4 ನೇ ... ಮ|| ಮುಲ್ಕ ಶ್ರೀನಿವಾಸನವರ ಅಧ್ಯಕ್ಷತೆಯಲ್ಲಿ ಪ್ರತಿಷ್ಠಿತವಾಗಿ ... ವಾಚನ ಮಂದಿರವೂ, ಪುಸ್ತಕಾಲಯವೂ ಯುಕ್ತ ಸಂಭ್ರಮದಿಂದ ... ಪ್ರಕೃತ ಈ ಸಂಘದಲ್ಲಿ 26 ಮಂದಿ ಖಾಯಂ ಸದಸ್ಯರಿರು... ಧರ್ಮ ಬೋಧಕವಾಗಿಯೂ, ಮನೋಹರವಾಗಿಯೂ ಇರುವ ... ಕನ್ನಡ ಕಾವ್ಯನಾಟಕಂಗಳನ್ನೂ, ವರ್ತಮಾನ ಪತ್ರಿಕೆಗಳನ್ನೂ ತರಿಸಿ ... ಸದಸ್ಯರ ಸಂಖ್ಯೆಯನ್ನು ಹೆಚ್ಚಿಸತಕ್ಕ ಸಾಧನಗಳು ಸಂಘದ ಕಾರ್ಯ ... ನಿರ್ವಹಿಸುವವರ ಗಮನದಲ್ಲಿವೆ. ಈ ಸಂಘದ ಪ್ರಸ್ತಾಪವು ಪ್ರಥಮ... ಬಂದಾಗ ಅದನ್ನು ಆದರಿಸುವರೆ ಇಲ್ಲಿರುವ ನಮ್ಮ ಸಾಹಸ್ಯದ ಆಶ್ರ... ಅನೇಕರು ವಾಗ್ದತ್ತವಿತ್ತರೂ ಕಾರ್ಯವು ರೂಪುಗೊಳ್ಳುತ್ತಾ... ಅವರಲ್ಲಿ ಹಲವರು ಅದನ್ನು ಲಕ್ಷ್ಯವಿಲ್ಲದೆ ಕೈಬಿಟ್ಟದ್ದು ವಿಷಾದ... ಆದರೂ ಉಳಿದವರು ಅಂಥವರ ಉಪೇಕ್ಷೆಯಿಂದ ಧೈರ್ಯ... ನಮ್ಮ ಉದ್ದೇಶವನ್ನು ನೆರವೇರಿಸಿದ ಸ್ಥೈರ್ಯವು ಸ್ತುತ್ಯವಾಗಿದೆ. ... ಅಧಿಕಾರವು ತನ್ನ ತನು ಮನವನ್ನು ಸಂಘದ ಕಾರ್ಯದ ... ಸಂಬಂಧದಿಂದಲೂ ಅರ್ಪಿಸಿಕೊಂಡು ಬಂದು ಇದರ ಪ್ರೇರೇಪಕರಲ್ಲಿ ... ಮುಖಂಡರುಗಳಲ್ಲಿಯೂ ಒಬ್ಬರಾದ ಮ|| ಕಣ್ಣಂಗಾರಬೈಲು ಪುತ್ರ ... ಸ್ತುತ್ಯರು. ನಮ್ಮ ಈ ಸಂಘದ [illegible] ಭಾಗವೇ ಅವರು ... ಆಶ್ರಯೋಕ್ತಿಯಾಗಲಾರದು. ಮುಂಬೈಯಲ್ಲಿರುವ ಅನ್ಯಭಾಷಾ ... ಈ ಕಾರ್ಯದ ಯೋಗ್ಯತೆಯನ್ನರಿತು ಬಹು ಮಟ್ಟಿಗೆ ಧನಸಹಾಯ ... ರುವರು. ಈ ಸಂಘದವರು ಉದ್ದೇಶಿಸಿದ ಕಾರ್ಯವು ಫಲಕಾರಿಯಾಗುವುದ... ಅಲ್ಲಿ ಬಂದು ನೆಲಸಿರುವವರ ಪೈಕಿ ಕನ್ನಡ ಭಾಷೆಯಲ್ಲಿ ವಾತ್ಸಲ್ಯವುಳ್ಳ... ಪ್ರಯೋಜನಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಅದರಿಂದ ಒದಗ ... ಸುಖಾನುಭವನ್ನು ಪಡೆಯುವರಾಗಿ ನಂಬುತ್ತೇನೆ

ಮುಂಬಾಯಿ. ಕನ್ನಡ ಭಾಷಾಭಿಮಾನಿ.

ತಾಲೂಕ ವರ್ತಮಾನ.

[illegible] ತಾ|| [illegible].—ಈ ಸಲ ಬಂದಿರುವ ವಿಶೇಷ ಮಳೆಯಿಂದ ... ಉತ್ತಮಸ್ಥಿತಿಗೆ ಬಂದು ಕ್ಷಾಮದ ಪ್ರಸ್ತಾಪವೇ ಇಲ್ಲದಂತಾ... ಬಿ. ಸಿ. ಎಲ್. [illegible] ಕಾಮಗಾರಿಯು ನಡೆಯುತ್ತಿರುವುದರಿಂದ ... ಬಡವರು ಕೂಲಿ ಮಾಡಿ ಜೀವನ ಮಾಡಿಕೊಳ್ಳುತ್ತಿದ್ದಾರೆ —ಇಲ್ಲಿ ... ಮೊದಲಿಂದಲೂ ಸಭಾದಿಗಳಾಗಿಯೂ, ಮ್ಯುನಿಸಿಪಲ್ ಮೆಂಬರಾಗಿ ... ಲೋಕಲ್ ಬೋರ್ಡ್ ಮೆಂಬರಾಗಿಯೂ, ಧರ್ಮದರ್ಶಿಗಳಾಗಿಯೂ, ... ಅಧ್ಯಕ್ಷರಾಗಿಯೂ ಇದ್ದ ಮ|| ನಾರಾಯಣಪ್ಪನವರು ಕಳೆದ ತಾ|| 22 ... ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರಿಂದ ... ಜನರಿಗೂ ಅವರ ಏಕಪುತ್ರ ಶ್ರೀ ... ಗಳಿಗೂ ಮಹೋಪಕೃತರಾದ ಅವರ ... ತುಂಬಾ ದುಃಖಿತರಾಗಿದ್ದು ಎಲ್ಲರೂ ವಿಷಾದಪಡಬೇಕಾ... ಅವರ ಉತ್ತರ ಕ್ರಿಯಾದಿಗಳು ಬಹಳ ಉದಾರವಾಗಿ ನಡೆಸಲ್ಪಟ್ಟವು.

ಇಂಡಿಯಾ ದೇಶದ ವೃತ್ತಾಂತಗಳು.

...ಕರಾಚಿ ಪಟ್ಟಣದಲ್ಲಿ ಸನಾತನಧರ್ಮ ಮಹಾಸಭೆ ನಡೆಯುವದು. ...ಗರದ ಮಹಾರಾಜರು ಅಗ್ರಾಸನವನ್ನು ವಹಿಸುವವರಾಗಿದ್ದಾರೆ.

...ತಾ. 27 ಕ್ಕೆ ಮುಗಿದ ವಾರದಲ್ಲಿ ಹಿಂದುಸ್ಥಾನದಲ್ಲಿ 5,133 ...ಗೆ ಪ್ಲೇಗ್ ಉಪದ್ರ ತಗಲಿತು 3,673 ಜನರು ಆ ರೋಗದಲ್ಲಿ ಸತ್ತರು.

...ಬರೋಡದ ಮಹಾರಾಜರವರು ಕಾಶೀ ಪಟ್ಟಣದಲ್ಲಿ ಸ್ಥಾಪನೆಯಾಗುವ ಹಿಂದೂ ಯೂನಿವರ್ಸಿಟಿ (ವಿದ್ಯಾಲಯ) ಮೂಲಧನಕ್ಕೆ 5,00,000 ರೂಪಾಯಿ ಕೊಟ್ಟಿದ್ದಾರೆ.

...ರ್‌ನಲ್ಲಿರುವ ಮುಸಲ್ಮಾನ್ ಪ್ರಜೆಗಳು ಯುದ್ಧ ಫಂಡಿಗೆ ಮೂರು ... 30,000 ರೂಪಾಯಿ ಚಂದಾ ಕೊಡಿಸಿದರು. ಚಂದಾ ಹಣ ಇನ್ನೂ ಬರುತ್ತಲೇ ಇದೆ

...ಇಂಡಿಯಾ ರೈಲ್ವೆ ಕಂಪನಿಯವರು ಮಾನಮಾಡದೆಯಿಂದ ಶಿವ... ವ್ಹೀಲ್ ರೈಲ್ವೆ ರಸ್ತೆ ಕಾಮಗಾರಿ ಮಾಡಿಸಬಹುದೆಂದು ಇಂಡಿಯಾ ಸರಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ

...ಕತ್ತೆಯಲ್ಲಿ ಮಾಣಿಕ ಎಂಬೊಬ್ಬ ಗುಪ್ತ ಪೋಲೀಸ್ ಇಲಾಖೆಗೆ ಸೇರಿದವನು ಒಬ್ಬ ಬಂಗಾಲಿ ವರ್ತಕನಿಗೆ ಮೋಸಮಾಡಿದ್ದಕ್ಕಾಗಿ ನ್ಯಾಯಾಧೀಶರು ಅವನಿಗೆ ಮೂರು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

...ಹೈದರಾಬಾದಿನಲ್ಲಿರುವ ಕಾರ್ಖಾನೆಗಳಲ್ಲಿ ಮದ್ದು ಗುಂಡು ಮೊದಲಾದ ... ಸಾಮಗ್ರಿಗಳನ್ನು ತಯಾರುಮಾಡಿಕೊಳ್ಳಬಹುದೆಂದು ನೈಜಾಮರವರು ... ಸರಕಾರಕ್ಕೆ ತಿಳಿಸಿದರು. ಅವರು ಅದನ್ನು ವಂದನಾಪೂರ್ವಕವಾಗಿ ... ಸ್ವೀಕರಿಸಿದ್ದಾರೆ.

...ನಾಟ್ ಅಧಿಪತ್ಯದಿಂದ ಯುದ್ಧದ ಖರ್ಚಿಗೆ ಒದಗಿಸುವ ಯುದ್ಧದ ... ಫಂಡಿಗೆ ನಭಾ ಸಂಸ್ಥಾನದ ಮಹಾರಾಜರವರು 75,000 ... ಮತ್ತು ಜಿಲ್ಲಾ ಸಂಸ್ಥಾನದ ಕೌನ್ಸಿಲ್ ನವರು 25,000 ರೂಪಾಯಿ ... ಕೊಟ್ಟಿದ್ದಾರೆ

...ಪಟ್ಟಣದಲ್ಲಿ ಪೋಲೀಸಿನವರು ನುಗ್ಗಿ ಮೂರು ಮನೆಗಳನ್ನು ... ಶೋಧಿಸಿದರು. ಅಲ್ಲಿ 478 ಖೋಟಾ ನಾಣ್ಯಗಳು ಸಿಕ್ಕಿದವು. ಸುನ್ನ... ಕೃಷ್ಣಚಂದ್, ಪೀರ್ ಬಕ್ಷ್ ಎಂಬ ಮೂರು ಮಂದಿಯನ್ನು ದಸ್ತಗಿರಿ ... ಮಾಡಿ ವಿಚಾರಣೆ ನಡೆಸುತ್ತಿದ್ದಾರೆ.

...ಪಬ್ಲಿಕ್ ಲೈಬ್ರರಿ (ಪುಸ್ತಕ ಭಂಡಾರ) ಯಲ್ಲಿ ಹೊಸ ಗ್ರಂಥ ... ಗಳನ್ನು ತರಿಸುವುದಕ್ಕೆ ಲೆಫ್ಟಿನೆಂಟ್ ಗವರ್ನರರು 20,000 ರೂಪಾಯಿ ಸ್ಯಾಂಕ್ಷನ್ ಮಾಡಿ, ಅದಕ್ಕೆ ಪ್ರತಿ ತಿಂಗಳಲ್ಲೂ ಸಲ್ಲುವ ಗ್ರಾಂಟನ್ನು 300 ರಿಂದ 400 ರೂಪಾಯಿಗೆ ಹೆಚ್ಚಿಸಿರುತ್ತಾರೆ.

ಬೆಜವಾಡೆಯ ಮ|| ಸಿ. ಹನುಮಂತು ಎಂಬ ವಕೀಲರು ಮುನ್ಸಿಫರಿಗೆ ಅವಮಾನಕರವಾದ ಮಾತುಗಳನ್ನು ಪ್ರಯೋಗಿಸಿ ಅರ್ಜಿ ಬರೆದಿದ್ದರೆಂದು ಮೊಕದ್ದಮೆ ಆಯಿತು. ಹೈ ಕೋರ್ಟ್ ಜಡ್ಜಿಗಳು ಆ ವಕೀಲರಿಗೆ 4 ತಿಂಗಳು ಮೊಕದ್ದಮೆ ಹಿಡಿದು ವಾದಿಸಕೂಡದೆಂದು ಸಸ್ಪೆಂಡ್ ಮಾಡಿರುತ್ತಾರೆ.

ಅಹಮ್ಮದಾಬಾದಿನಿಂದ ರಂಗೂನ್ ಪಟ್ಟಣಕ್ಕೆ ಹೋಗಿ ಒಂದು ಪತ್ರಿಕೆಯನ್ನು ನಡೆಸುತ್ತಿದ್ದ ನಿಜಾಮುದ್ದೀನ್ ಖುರೇಷಿ ಎಂಬಾತನನ್ನು ಸರ್ಕಾರದವರು ಕಳೆದ ವಾರ ದೆಹಲಿ ನಗರದಲ್ಲಿ ದಸ್ತಗಿರಿ ಮಾಡಿದರೆಂದೂ, ಜಾಮೀನಿನ ಮೇಲೆ ಬಿಡಬೇಕೆಂದು ಕೇಳಿದಾಗ ಬಿಡಲಿಲ್ಲವೆಂದೂ ಲಾಹೋರಿನ ಪತ್ರಿಕೆಯು ತಿಳಿಸುತ್ತದೆ.

ಲಕ್ನೋ ಪಟ್ಟಣದಲ್ಲಿ ಮುಬಾರಕ್ ಹುಸೇನ್ ಎಂಬವನು 100 ರೂಪಾಯಿನ ಕರೆನ್ಸಿ ನೋಟನ್ನು ಒಬ್ಬ ವರ್ತಕನಿಗೆ ಕೊಟ್ಟು, ಸಾವಿರ ರೂಪಾಯಿನ ನೋಟು ಕೊಟ್ಟಿದ್ದೇನೆಂದು ಸಾಧಿಸಿದನು ಇದು ಮೊಕದ್ದಮೆ ಆಗಿ ಹುಸೇನ್ ಎಂಬ ಅಪರಾಧಿಗೆ ಒಂದು ತಿಂಗಳ ಕಠಿಣ ಸಜವೂ, 800 ರೂಪಾಯಿ ಜುಲ್ಮಾನೆಯೂ ಆಯಿತು.

ಗುಂಟೂರು ಜಿಲ್ಲೆಗೆ ಸೇರಿದ ಓಂಗೋಲ್ ಪಟ್ಟಣದಲ್ಲಿ ಕಳೆದ ವಾರ ಮಳೆ ಸುರಿಯಿತು. ನೀರು ಊರೊಳಗೆಲ್ಲಾ ನಿಂತು ನೂರಾರು ಹಳೇ ಮನೆಗಳ ಗೋಡೆಗಳು ಬಿದ್ದು ನಷ್ಟವಾಯಿತು. ಅನೇಕ ಸಣ್ಣ ಪುಟ್ಟ ಮನೆಗಳು ಹಾಳಾದವು. ಮೂರು ನಾಲ್ಕುಸಾರೆ ಭೂಕಂಪವೂ ಆಯಿತು. ಪ್ರಜೆಗಳು ಅದನ್ನು ನೋಡಿ ತುಂಬಾ ಗಾಬರಿಬಿದ್ದರು.

ವರ್ತಕತನ, ಲೇವಾದೇವಿಗಳಿಗೆ ಸಂಬಂಧಪಟ್ಟ ವಿದ್ಯೆಯನ್ನು ಕಲಿಸುವುದಕ್ಕೆ ಬೊಂಬಾಯಿ ಸರ್ಕಾರದವರು ಆ ಪಟ್ಟಣದಲ್ಲಿ ಒಂದು ವಿದ್ಯಾಶಾಲೆಯನ್ನು ಇಟ್ಟು ನಡೆಸುತ್ತಿದ್ದಾರೆ. ಈ ವಿದ್ಯಾಶಾಲೆಯ ಮೂಲಧನಕ್ಕೆ ಲೇಟ್ ಎನ್. ಎಂ. ವಾಡಿಯಾ ಎಂಬ ಪಾರಸೀ ದೊಡ್ಡ ಮನುಷ್ಯನು ತನ್ನ ಆಸ್ತಿಯಿಂದ 1,20,000 ರೂಪಾಯಿ ಫಂಡು ಕೊಟ್ಟಿರುತ್ತಾನೆ

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಜಾಲಂಧರ ಡಿಸ್ಟ್ರಿಕ್ಟಿನಲ್ಲಿ ದಂಗೆ ಕೃತ್ಯಗಳಿಗೆ ಸಹಾಯವಾಗುವಂತೆ ಡಕಾಯಿತಿ ಕಳುವನ್ನು ನಡೆಸಿದರೆಂದು ಪೋಲೀಸಿನವರು ಸುಮಾರು 61 ಜನರನ್ನು ಹಿಡಿದು ಸ್ಪೆಷಲ್ ಮ್ಯಾಜಿಸ್ಟ್ರೇಟರಲ್ಲಿ ಮೊಕದ್ದಮೆ ಹೂಡಿದರು. ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಅಪರಾಧ ರುಜುವಾತಾಗಲಿಲ್ಲವೆಂದು ಇವರನ್ನೆಲ್ಲಾ ಖುಲಾಸ್ ಮಾಡಿರುತ್ತಾರೆ

ಬೊಂಬಾಯಿ ಪಟ್ಟಣದ ರೈಲ್ವೆ ಕಾರ್ಖಾನೆಯೊಳಗೆ ಬ್ರಿಟಿಷ್ ಸರ್ಕಾರಕ್ಕೆ ಬೇಕಾಗುವ ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳನ್ನು ತಯಾರುಮಾಡಿ ಒದಗಿಸುತ್ತಿದ್ದಾರೆ. ಈ ಕಾರ್ಖಾನೆಯನ್ನು ಕಳೆದ ವಾರ ಬೊಂಬಾಯಿ ಗವರ್ನರರು ಹೋಗಿ ಪರಾಂಬರಿಸಿದರು. ಈ ಕಾರ್ಖಾನೆಯೊಳಗೆ ಈಗ 5,000 ಕಾರೀಗಾರರು ಯುದ್ಧ ಸಾಮಗ್ರಿಯನ್ನು ತಯಾರುಮಾಡುತ್ತಿದ್ದಾರೆ.

ತಿರುವಾಂಕೂರ ಸಂಸ್ಥಾನದ ರಾಜಧಾನಿಯಾದ ತಿರುವನಂತಪುರದಲ್ಲಿ ಹಿಂದೂ ಪ್ರಜೆಗಳು ವಿಶೇಷವಾಗಿ ವಾಸಮಾಡುತ್ತಿರುವ ಭಾಗದಲ್ಲಿ ಸರ್ಕಾರದವರು ಸುಮಾರು ಮೂರು ಲಕ್ಷ ರೂಪಾಯಿ ಖರ್ಚು ಮಾಡಿ ಹೆಂಗಸು ಮಕ್ಕಳಿಗೆ ಚಿಕಿತ್ಸೆಗಳು ನಡೆಯುವಂಥಾ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಿದ್ದಾರೆ. ಅದರ ಮಹೋತ್ಸವವು ಮುಂದಿನ ತಿಂಗಳಲ್ಲಿ ಜರುಗುವದಾಗಿದೆ.

ಬ್ಯಾರಿಸಾಲ್ ದಂಗೆ ಮೊಕದ್ದಮೆಯಲ್ಲಿ ಎರಡನೇ ಗುಂಪಿನ ಹತ್ತು ಮಂದಿ ಬಂಗಾಳಿ ಯೌವನಸ್ಥರನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರವರು ವಿಚಾರಣೆ ಮಾಡಿ ಕಳೆದ ವಾರ ಶಿಕ್ಷೆಯನ್ನು ವಿಧಿಸಿದರು. ಆಪಾದಿತರುಗಳು ಭಿನ್ನಾಭಿಪ್ರಾಯಪಟ್ಟರು. [illegible] ತ್ರೈಲೋಕ್ಯನೆಂಬ ಮೊದಲನೇ ಅಪರಾಧಿಗೆ 15 ವರುಷವೂ, ಉಳಿದ ನಾಲ್ವರಿಗೆ ತಲಾ 10 ವರುಷವೂ [illegible] ಶಿಕ್ಷೆಯನ್ನು ವಿಧಿಸಿದರು.

ಬರ್ಮಾಗೆ ಸೇರಿದ [illegible] ಪಟ್ಟಣದ ಪೋಸ್ಟ್ ಸೂಪರಿಂಟೆಂಡರ ಆಫೀಸ್ ಹೆಡ್ ಕ್ಲಾರ್ಕ್ ಆಗಿದ್ದ ಹರದಯಾಳು [illegible] 10,000 ರೂಪಾಯಿ ತಿಂದುಹಾಕಿ ತಲೆ ತಪ್ಪಿಸಿಕೊಂಡಿದ್ದನು. ಕಳೆದ ವಾರ ಇವನು ತನ್ನ ವೇಷ ಮತ್ತು ಹೆಸರನ್ನು ಬದಲಾಯಿಸಿಕೊಂಡು [illegible] ಪೋಸ್ಟ್ ಆಫೀಸಿಗೆ ಹೋಗಿ ತನಗೆ ಬಂದ ಕಾಗದಗಳನ್ನು ವಾಪಸ್ ತೆಗೆದುಕೊಳ್ಳುವಾಗ ಪೋಲೀಸಿನವರ ಕೈಗೆ ಸಿಕ್ಕಿದನು. ಮುಂದೆ ಮೊಕದ್ದಮೆ ವಿಚಾರಣೆಯಾಗುವುದು

ಧಾರವಾಡ ಜಿಲ್ಲಾ ಶ್ರೀಮಂತ ಭೀಮರಾವ್ ಬಾಬಾಸಾಹೇಬ್ ದೇಸಾಯಿ [illegible] ಎಂಬ ದೊಡ್ಡ ಮನುಷ್ಯನು ತನ್ನ ಮರಣ ಶಾಸನದಲ್ಲಿ ತನ್ನ ಆಸ್ತಿಯಿಂದ 60,000 ರೂಪಾಯಿಯನ್ನು ಕರ್ನಾಟಕ ವಿದ್ಯಾಶಾಲೆಯ ಮೂಲಧನಕ್ಕೆ ವಿನಿಯೋಗಿಸಬೇಕೆಂದು ಬರೆದಿದ್ದಂತೆ ಹಿಂದಿನ ವಾರ ತಿಳಿಸಿದ್ದೆವಷ್ಟೆ. ಆತನು ಆ ಮೂಲಧನಕ್ಕೆ ಅಷ್ಟು ಹಣವನ್ನು ಕೊಡಲಿಲ್ಲವೆಂದೂ, ಬೊಂಬಾಯಿ ಯೂನಿವರ್ಸಿಟಿಯವರು (ಸರ್ವ ವಿದ್ಯಾನಿಲಯದವರು) ಆ ಹಣವನ್ನು ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಬೇಕೆಂದು ಬರೆದಿರುವುದಾಗಿಯೂ ಈಚೆಗೆ ತಿಳಿದುಬಂದಿದೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ [illegible] ಗಳಲ್ಲಿ ಗೂರ್ಖಾ ಜನಗಳಿಗೂ ಪೋಲೀಸಿನವರಿಗೂ ಮಾರಾಮಾರಿ ನಡೆಯಿತು. ಅಂಗಡಿಯಲ್ಲಿ ಒಬ್ಬ ಹುಡುಗನು ಕೆಲವು ಗೂರ್ಖರನ್ನು ಬೈದನೆಂದು ಅವರು ಅವನನ್ನು ಹಿಡಿದುಕೊಂಡರು. ಪೋಲೀಸಿನವರು ಹುಡುಗನನ್ನು ಬಿಡಿಸಬೇಕೆಂದು ಹೋದಾಗ ಜಗಳವೂ ಮಾರಾಮಾರಿಯೂ ಆದವು. ಒಬ್ಬ ಗೂರ್ಖನು ತನ್ನ ಕುಕ್ರಿ ಎಂಬ ಆಯುಧವನ್ನು ತಿರುಗಿಸುವುದನ್ನು ನೋಡಿ ವರ್ತಕರೆಲ್ಲಾ ಗಾಬರಿಬಿದ್ದು ಅಂಗಡಿಗಳನ್ನು ಮುಚ್ಚಿ ಓಡಿಹೋದರು. ಈ ಮಾರಾಮಾರಿಯಲ್ಲಿ ಒಬ್ಬ ಗೂರ್ಖನಿಗೆ ಗಾಯವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು ಕೆಲವು ಮಂದಿ ಪ್ರಜೆಗಳೂ ಪೋಲೀಸಿನವರೂ ಗಾಯಪಟ್ಟಿದ್ದಾರೆ.

ಈ ತಿಂಗಳ ಅಂತ್ಯಭಾಗದಲ್ಲಿ ಬೊಂಬಾಯಿ ಪಟ್ಟಣದಲ್ಲಿ ಹಿಂದುಸ್ಥಾನದ ಸಾರ್ವಜನಿಕ ಮಹಾಸಭೆಯೂ (ನ್ಯಾಷನಲ್ ಕಾಂಗ್ರೆಸ್), ಹಿಂದೂ ಸಂಘಪರಿಷ್ಕರಣ ಸಮಾಜವೂ ನಡೆಯುತ್ತವೆ. ಹಿಂದುಸ್ಥಾನದ ಏಳಿಗೆಯಲ್ಲಿ ಬದ್ಧಕಂಕಣರಾಗಿರುವ ಸಾವಿರಾರು ವಿದ್ಯಾವಂತರಾದ ದೇಶವತ್ಸಲರು ಈ ರಾಷ್ಟ್ರದ ಎಲ್ಲಾ ಭಾಗಗಳಿಂದಲೂ ಅಲ್ಲಿಗೆ ಹೋಗಿ ಸೇರುವರು. ಸಂಘಪರಿಷ್ಕರಣಕಾರ್ಯವನ್ನು ಸಾರ್ಥಕಪಡಿಸುವುದಕ್ಕಾಗಿ ಎಲ್ಲಾ ಕೋಮು ಮತ್ತು ಪಂಗಡಗಳ ಮುಖಂಡರೂ ಬೊಂಬಾಯಿನಲ್ಲಿ ಒಂದು ದಿನ ಸಹಪಂಕ್ತಿ ಭೋಜನ ಮಾಡಬೇಕೆಂಬ ವಿಚಾರವು ನಡೆದಿದೆ. ಇದಕ್ಕೆ ಒಂದು ಕಮಿಟಿ ನೇಮಕವಾಗಿರುವುದು ಸರ್ ನಾರಾಯಣ ಚಂದಾವರ್ಕರರವರು ಮುದಾಳಾಗಿದ್ದಾರೆ. ಹಿಂದೂ ದೊಡ್ಡ ಮನುಷ್ಯರೂ ಸ್ತ್ರೀಯರೂ ಈ ಸಹಪಂಕ್ತಿ ಭೋಜನಕ್ಕೆ ಕರೆಸಲ್ಪಡುತ್ತಾರೆ.

ಸಿಲೋನ್ (ಲಂಕಾ) ದ್ವೀಪದ ರಾಜಧಾನಿಯಾದ ಕೊಲಂಬೊ ಪಟ್ಟಣದಲ್ಲಿ ಸಿಂಹಳೀಯರಿಗೂ ಮುಸಲ್ಮಾನರಿಗೂ ವೀರವೈಷಮ್ಯವುಂಟಾಗಿ ಕೆಲವು ತಿಂಗಳ ಹಿಂದೆ ನಾನಾ ದಂಗೆ ಕೃತ್ಯಗಳು ನಡೆದದ್ದಲ್ಲದೆ ಲಕ್ಷಾಂತರ ರೂಪಾಯಿನ ಆಸ್ತಿ ಪಾಸ್ತಿಗಳು ಹಾಳುಮಾಡಲ್ಪಟ್ಟವು. ಮ್ಯುನಿಸಿಪಾಲಿಟಿಯವರು ಸಭ್ಯ ಪ್ರಜೆಗಳ ನಷ್ಟವನ್ನು ಕೊಡಿಸಿಕೊಡಬೇಕೆಂದು ಮೀಟಿಂಗ್ ನಡೆಸಿ ಪ್ರಜೆಗಳ ಮೇಲೆ ಅಂದರೆ ಕೂಲಿ ಮಾಡುವುದಕ್ಕೆ ಅಲ್ಲಿಗೆ ಹೋಗುವ ಪ್ರತಿ ಒಬ್ಬರಿಂದಲೂ 5 ರೂಪಾಯಿ ನಂತೆ ತಲೆ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅಲ್ಲಿಗೆ ಹೋಗುವ ಕೂಲೀ ಜನಗಳು ತಲಾ 2 ರೂಪಾಯಿನಂತೆ ತೆರಿಗೆ ಕೊಡಬೇಕೆಂಬ ವಿಧಿಯು ಬಹಳ ಕಾಲದಿಂದಲೂ ಇದ್ದೇ ಇದೆ. ಈಗ ಇದರ ಜೊತೆಗೆ ಅಂಥವರು ತಲಾ 5 ರೂಪಾಯಿನಂತೆ ಈ ಹೊಸ ತೆರಿಗೆಯನ್ನು ಕೊಡಬೇಕಾಗಿದೆ.

ಲಾಹೋರ್ ಪಟ್ಟಣದಲ್ಲಿ ಗವರ್ನಮೆಂಟ್ ಕಾಲೇಜು, ಮಿಷನ್ ಕಾಲೇಜು, ದಯಾನಂದ ಕಾಲೇಜು, ದಯಾಳ್‌ಸಿಂಗ್ ಕಾಲೇಜು, ಇಸ್ಲಾಮಿಯಾ ಕಾಲೇಜು ಎಂಬೀ ಐದು ವಿದ್ಯಾಶಾಲೆಗಳಿದ್ದು ಪ್ರತಿ ಒಂದರಲ್ಲೂ ಬಿ ಎ ತರಗತಿಯ ತನಕ ಪಾಠಗಳನ್ನು ಹೇಳುವರು. ಅವುಗಳ ಜೊತೆಗೆ ಹಿಂದುಗಳ ಮತಸಂಬಂಧವಾದ ಒಂದು ಹೊಸ ವಿದ್ಯಾಶಾಲೆಯನ್ನು ಸ್ಥಾಪಿಸಿ ನಡೆಸಬೇಕೆಂದು ಏರ್ಪಾಡಾಗಿ ಚಂದಾ ಹಣಗಳನ್ನು ವಸೂಲ್ಮಾಡುತ್ತಿರುವರು ಈ ಹೊಸ ಸನಾತನ ವಿದ್ಯಾಶಾಲೆಗೋಸ್ಕರ ರಾಯ ಬಹದೂರ್ ರಾಮಚರಣದಾಸರವರು 50,000 ರೂಪಾಯಿನ ಜಮೀನುಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದರ ಫಂಡಿಗೆ ದರ್ಭಾಂಗದ ಮಹಾರಾಜರವರು 50,000 ರೂಪಾಯಿ, ಷೇಕ್‌ಪುರಾ ಪಟ್ಟಣದ ರಾಜಾ ಫತೇಸಿಂಗ್‌ರವರು 50,000 ರೂಪಾಯಿ, ಲಾಲಾ ಮೂಲ್‌ಚಂದ್ ಎಂಬ ದೊಡ್ಡ ವರ್ತಕನು 20,000 ರೂಪಾಯಿ ಚಂದಾ ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ.

ಕಳೆದ ಗುರುವಾರ ಸಾಯಂಕಾಲ 7 ಗಂಟೆ ಸಮಯದಲ್ಲಿ ಕಲ್ಕತ್ತಾ ಪಟ್ಟಣದ ಕಾರ್ಪೊರೇಷನ್ ಬೀದಿಯಲ್ಲಿರುವ ಫಕೀರ್ ಚಂದ್ ದತ್ತನೆಂಬ ಲೇವಾದೇವಿ ವರ್ತಕನ ಅಂಗಡಿಗೆ ಐದು ಜನ ದೊಡ್ಡ ಮನುಷ್ಯರಂತೆ ಬಟ್ಟೆಬರೆ ಹಾಕಿಕೊಂಡು ಮೋಟಾರಿನಲ್ಲಿ ಹೋಗಿ ಇಳಿದು ದತ್ತನೆಂಬ ವರ್ತಕನಿಗೆ ಪಿಸ್ತೂಲು ತೋರಿಸಿ ಗಾಬರಿಪಡಿಸಿ ಅವನಿಂದ ಬೀಗದ ಕೈಗಳನ್ನು ತೆಗೆದುಕೊಂಡು ಅಲ್ಲಿದ್ದ ಆರು ಕಬ್ಬಿಣದ ಪೆಟ್ಟಿಗೆಗಳ ಪೈಕಿ ಮೂರನ್ನು ತೆರೆದು ಸುಮಾರು 20-25 ಸಾವಿರ ರೂಪಾಯಿನ ಅಡವಿನ ಚಿನ್ನ ಬೆಳ್ಳಿ ನಗಗಳನ್ನು ತೆಗೆದು ಗಂಟು ಕಟ್ಟಿಕೊಂಡು ಮತ್ತೆ ಮೋಟಾರಿನಲ್ಲಿ ಕುಳಿತು ಬಹಳ ವೇಗವಾಗಿ ಹೊರಟುಹೋದರು. ಮೋಟಾರ್ ಬೆನ್ನಟ್ಟಿ ಓಡಿಹೋದ ಒಬ್ಬ ಮಹಮ್ಮದೀಯನಿಗೆ ಪಿಸ್ತೂಲಿನಿಂದ ಗುಂಡು ಹೊಡೆದು ಕೆಡವಿದರು ಅವರ್ಯಾರೆನ್ನುವುದು ಗೊತ್ತಾಗಲಿಲ್ಲ. ಪತ್ತೆ ಮಾಡಿದವರಿಗೆ 2,500 ರೂಪಾಯಿ ಇನಾಮು ಕೊಡುತ್ತೇವೆಂದು ಪೋಲೀಸಿನವರು ಇಸ್ತಿಹಾರು ಹಾಕಿದ್ದಾರೆ

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಮುಜಫರ್‌ಪುರದಲ್ಲಿ ಕಳೆದ ವಾರ ಲೆಫ್ಟಿನೆಂಟ್ ಗವರ್ನರರವರು ಒಂದು ದರ್ಬಾರ್ ನಡೆಸಿ ಪ್ರಜೆಗಳ ಮುಖಂಡರನ್ನು ಕರೆಸಿಕೊಂಡು ಹಿಂದೂ ಮಹಮ್ಮದೀಯರಿಗುಂಟಾಗಿರುವ ಪರಸ್ಪರ ವಿರೋಧವನ್ನು ಮುಖಂಡರು ಸೇರಿ ಶಮನಮಾಡಿ ಸ್ನೇಹ ಭಾವವನ್ನು ಉಂಟುಮಾಡಬೇಕೆಂದು ವಿವೇಕ ಹೇಳಿದರು. ಪ್ರಜಾ ನೆಮ್ಮದಿಗೆ ಭಂಗವನ್ನುಂಟು ಮಾಡಿದ ಮೂರು ಗ್ರಾಮಗಳ ಪ್ರಜೆಗಳ ಮೇಲೆ ಶಿಕ್ಷಾರ್ಥವಾದ ಪೋಲೀಸ್ ಪಟ್ಟಿಯನ್ನು ನೇಮಕಮಾಡಿರುವುದಾಗಿಯೂ, ಅದರ ಖರ್ಚನ್ನು ಆ ಗ್ರಾಮಗಳವರೇ ಹಂಚಿಕೊಂಡು ಕೊಡಬೇಕೆಂದೂ ತಿಳಿಸಿದರು. ಗವರ್ನರವರು ಹಿಂದೂ ಪ್ರಜೆಗಳಿಗೆ ಸಂಭವಿಸಿದ ಕಷ್ಟನಷ್ಟ ಮನೋವ್ಯಥೆಗಳ ವಿಷಯದಲ್ಲಿ ತುಂಬಾ ಸಂತಾಪಪಟ್ಟು ಮುಖಂಡರಾದ ಪ್ರಜೆಗಳು ಅವರುಗಳಿಗೆ ಸಹಾಯ ಮಾಡಬೇಕೆಂದು ಪ್ರೋತ್ಸಾಹಪಡಿಸಿದರು ಇದಲ್ಲದೆ ಲೆಫ್ಟಿನೆಂಟ್ ಗವರ್ನರವರು ಸರ್ಕಾರದ ಅಧಿಕಾರಿಗಳು ಗ್ರಾಮಗಳ ಮೇಲೆ ಸರ್ಕೀಟು ಹೋಗುವಾಗ ಪ್ರಜೆಗಳಲ್ಲಿ ಪರಸ್ಪರ ಪ್ರೀತಿಯನ್ನು ಉಂಟುಮಾಡುವುದಕ್ಕೆ ಸಾಹೇಬಪಡಬೇಕೆಂದು ಅಪ್ಪಣೆಕೊಟ್ಟರು.

ವಿದೇಶದ ವೃತ್ತಾಂತಗಳು.

ಲಂಡನ್ ಪಟ್ಟಣದಲ್ಲಿ ಇನ್ನೂ 10,000 ಜರ್ಮನಿ ಪ್ರಜೆಗಳು ಇರುತ್ತಾರೆಂದೂ, ಇವರನ್ನು ಸರ್ಕಾರದವರು ಹಿಡಿದು ನಿರ್ಬಂಧಪಡಿಸಿಲ್ಲವೆಂದೂ, ಈ ವ್ಯಕ್ತಿ ಒಬ್ಬೊಬ್ಬರು ಗೂಢಚಾರರಾಗಿ ಶತ್ರುವಿಗೆ ಸಹಾಯಮಾಡುವುದಕ್ಕೆ ಅವಕಾಶವಾಗಿದೆ ಎಂದೂ ಹೋಂ ಸೆಕ್ರೆಟರಿಯವರು ತಿಳಿಸಿದ್ದಾರೆ

ಕೆನಡಾ ಎಂಬ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಈ ಸಮಯ ಅಪಾರವಾದ ಗೋಧಿ ಬೆಳೆ ಆಗಿರುತ್ತದೆ. ಅಲ್ಲಿನ ವರ್ತಕರ್ಯಾರೂ ಸ್ವತಂತ್ರ ಗೋಧಿಯನ್ನು ಸಂಯುಕ್ತ ಸಂಸ್ಥಾನಗಳಿಗೆ ರಫ್ತುಮಾಡಕೂಡದೆಂದೂ, ಬ್ರಿಟಿಷ್ ಸರ್ಕಾರಕ್ಕೆ ಗೋಧಿಯೆಲ್ಲಾ ಬೇಕಾಗುವುದೆಂದೂ ಇಸ್ತಿಹಾರು ಹಾಕಿದ್ದಾರೆ.

ಪಶ್ಚಿಮ ರಣರಂಗದ ಯುದ್ಧ ಭೂಮಿಗೆ ಹೋಗದೆ ತಿರಸ್ಕಾರ ಮಾಡಿದ ಮೂವತ್ತು ಜರ್ಮನ ಸಿಪಾಯಿಗಳನ್ನು ಚಕ್ರವರ್ತಿಯವರ ಆಜ್ಞಾನುಸಾರ ಅಕ್ಟೋಬರ್ ತಾ 25 ರಲ್ಲಿ ಮ್ಯೂನಿಚ್‌ನಲ್ಲಿ ಸಾಲಾಗಿ ನಿಲ್ಲಿಸಿ ಎಲ್ಲರೂ ನೋಡುವಂತೆ ಗುಂಡಿನಿಂದ ಹೊಡೆದು ಕೊಲ್ಲಿಸಿದರೆಂದು ಆಂಸ್ಟರ್ಡಾಮಿನಿಂದ ವರ್ತಮಾನ ಬಂದಿದೆ.

ಸಿಲೋನ್ ದ್ವೀಪದಲ್ಲಿ ಇದುವರೆಗೆ ಗವರ್ನರಾಗಿದ್ದ ಸರ್ ರಾಬರ್ಟ್ ಚಾಲ್ಮರ್ಸ್ ರವರನ್ನು ಬ್ರಿಟಿಷ್ ಗವರ್ನಮೆಂಟಿನವರು [illegible] ವಾಪಸು ಕರೆಸಿಕೊಂಡು ವಿಲಾಯಿತಿ ಖಜಾನೆ ಇಲಾಖೆಯ ಸೆಕ್ರೆಟರಿ ಕೆಲಸಕ್ಕೆ ನೇಮಿಸಿಕೊಂಡು ಸರ್ ಜಾನ್ ಆಂಡರ್‌ಸನ್ ರವರನ್ನು ಸಿಲೋನ್ ಗವರ್ನರಾಗಿ ನೇಮಕಮಾಡಿ ಕಳುಹಿಸಿದ್ದಾರೆ

ಕೆನಡಾ ಎಂಬ ಬ್ರಿಟಿಷ್ ಸಾಮ್ರಾಜ್ಯದಲ್ಲಿ 320 ಕಾರ್ಖಾನೆಗಳು ಯುದ್ಧ ಸಾಮಗ್ರಿಗಳನ್ನು ತಯಾರುಮಾಡಿ ಮಿತ್ರಮಂಡಲಿಯವರಿಗೆ ಒದಗಿಸುತ್ತವೆ. ಅವುಗಳಲ್ಲಿ ಕೆಲಸ ಮಾಡತಕ್ಕವರು 1,00,000 ಜನರು ಚತುರರಾದ ಕಾರೀಗಾರರಾಗಿದ್ದಾರೆ ಇನ್ನು ಮುಂದೆ ಈ ಕೆಲಸವು ನಿಂತುಹೋದರೂ ಆ ಜನಗಳೆಲ್ಲಾ ಕೈಗಾರಿಕೆಗಳನ್ನು ನಡೆಸುವುದರಲ್ಲಿ ನಿಪುಣರೆನಿಸಿಕೊಳ್ಳುವಂತಾಯಿತು.

ಲಂಡನ್ ಪಟ್ಟಣದ ಮೇಲೆ ಜೆಪ್ಪೆಲಿನ್ ಎಂಬ ಜರ್ಮನಿಯವರ ವಿಮಾನ ಯಂತ್ರವು ಬಂದಾಗ್ಗೆ ಅವರ ಕಡೆಯ ಗೂಢಚಾರರಿಬ್ಬರು ಆ ಪಟ್ಟಣದೊಳಗೆ ಒಂದು ಮೋಟರ್ ಗಾಡಿಯೊಳಗೆ ಕುಳಿತು ಅದರೊಳಗಿನಿಂದ ಅಂತರಿಕ್ಷದಲ್ಲಿದ್ದ ವಿಮಾನಯಂತ್ರಕ್ಕೆ ಸಂಜ್ಞೆ ಮಾಡಿ ದಾರಿ ತೋರಿಸುತ್ತಾ ಇದ್ದದ್ದು ಪತ್ತೆ ಆಯಿತು ಕೂಡಲೇ ಬ್ರಿಟಿಷ್ ಸರ್ಕಾರದವರು ಅವರಿಬ್ಬರನ್ನೂ ಹಿಡಿದು ಗುಂಡಿನಿಂದ ಹೊಡೆಸಿ ಕೊಲ್ಲಿಸಿಬಿಟ್ಟರೆಂದು ಒಬ್ಬ ಬಾತ್ಮೀದಾರರು ತಿಳಿಸಿದ್ದಾರೆ.

ಐರ್ಲಂಡಿಗೆ ಸೇರಿದ ಡಬ್ಲಿನ್ ಕಾಲೇಜಿನ ಸಾತ್ವಿಕಾಹಾರ ಹೋಟೇಲಿನಲ್ಲಿ ಕಳೆದ ದೀಪಾವಳಿ ಹಬ್ಬದ ದಿನ ಹಿಂದುಸ್ಥಾನದಿಂದ ವಿದ್ಯೆ ಕಲಿಯುವುದಕ್ಕಾಗಿ ಹೋಗಿರುವ ವಿದ್ಯಾರ್ಥಿಗಳೆಲ್ಲಾ ಸೇರಿ ಒಟ್ಟಾಗಿ ಭೋಜನ ಮಾಡಿದರು. ಮ|| ಗಿರಿಯವರು ಅದನ್ನೆಲ್ಲಾ ಮುಂದಾಳಾಗಿ ನಿಂತು ನಡೆಸಿದರು ಸುಮಾರು 45 ಮಂದಿ ಹಿಂದುಗಳು ಸೇರಿದ್ದರು. ಮ|| ಬಿ. ಪಿ. ಎಸ್. ನಾರಾಯಣ ಎಂಬವರು ಅಗ್ರಾಸನವನ್ನು ವಹಿಸಿ ದೇಶ ಹಿತಕರವಾದ ಉಪನ್ಯಾಸವನ್ನು ಮಾಡಿದರು.

ನೋಟೀಸು.

1916 ನೇ ಜನವರಿ 3 ಮತ್ತು 4 ನೇ ತಾರೀಖುಗಳಲ್ಲಿ (ಸೋಮವಾರ ಮತ್ತು ಮಂಗಳವಾರ) ಹಾಸನದಲ್ಲಿ ದನಗಳ ಪ್ರದರ್ಶನವು ನಡೆಯುತ್ತ ಬುನಾ ವಣೆ ಆಗುವ ಎಲ್ಲಾ ತರಹ ಜಾನ್ವಾರುಗಳಿಗೂ ಹೆಚ್ಚಿನ ಇನಾಂಗಳು ಮಾಮೂಲಿನಂತೆ ಕೊಡಲ್ಪಡುತ್ತೆ. ಆಡು, ಕುರಿ, ಮತ್ತು ಕುದುರೆಗೆ ಸಹಾ ಇನಾಂಗಳು ದೊರೆಯುವವಲ್ಲದೆ ಹಾಲು ಕೊಡುವ ಅವ್ವಲು ತರಹ ಹಸುವಿಗೂ ಮತ್ತು ಪ್ರದರ್ಶನದಲ್ಲಿನ ಆಶ್ಚರ್ಯಕರವಾದ ರಾಸಿಗೂ ಒಂದೊಂದು ಬಂಗಾರದ ಪದಕಲು ಕೊಡಲ್ಪಡುತ್ತೆ. ಜಾಸ್ತಿ ತಪ್ಸೀಲು ಅಪೇಕ್ಷಿಸುವವರು ಹಾಸನ ಟೌನ್ ವೈಸ್ ಪ್ರೆಸಿಡೆಂಟ್ ಮತ್ತು ಜನರಲ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು.

ಎಸ್. ಎನ್. ಅಪ್ಪಣ್ಣಯ್ಯಂಗಾರ್, ವೈಸ್ ಪ್ರೆಸಿಡೆಂಟ್;
ಹಾಸನ್ ಟೌನ್ ಮ್ಯುನಿಸಿಪಾಲಿಟಿ ಮತ್ತು ಜನರಲ್ ಸೆಕ್ರೆಟರಿ,
[267-1] ದನಗಳ ಪ್ರದರ್ಶನದ ಕಮಿಟಿ, ಹಾಸನ

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟ್‌ಗಳಿಗೆ ಸೇರಿದ ಗ್ರಾಮಗಳಲ್ಲಿರುವ ನಾಡು ಕುದುರೆ ಜಾತಿಯನ್ನು ಅಭಿವೃದ್ಧಿಪಡಿಸುವದಕ್ಕಾಗಿ, ಮೈಸೂರು ಗವರ್ನಮೆಂಟಿಗೆ ಸೇರಿದ ಕುಣಿಗಲು ಸ್ಟಡ್ ಫಾರಂನಲ್ಲಿದ್ದ ಆಲ್‌ಬರ್ಟ್ ಮತ್ತು ಸುಲ್ತಾನ್ ಎಂದು ಹೆಸರುಳ್ಳ ಎರಡು ಉದುಕುದುರೆಗಳು, ಬೆಂಗಳೂರು ಪಶುವೈದ್ಯ ಆಸ್ಪತ್ರೆಯಲ್ಲಿಯೂ ಮತ್ತು ಮೈಸೂರು ಗವರ್ನಮೆಂಟ್ ಹೌಸಿಗೆ ಲಗತ್ತಾಗಿರುವ ಲಾಯದಲ್ಲಿಯೂ ಇಡಲ್ಪಟ್ಟಿರುತ್ತವೆ. ಇಷ್ಟವುಳ್ಳವರು ಹೆಣ್ಣು ಕಟ್ಟುಗಳಿಗೆ ಮೇಲ್ಕಂಡ ಸ್ಥಳಗಳಲ್ಲಿ ದಿಟೋ ಉದುಕುದುರೆಯನ್ನು ಮುಫತ್ತಾಗಿ ಹಾರಿಸಿಕೊಳ್ಳಬಹುದು. [275-1]

ಇದಕ್ಕಾಗಿ ಜರೂರು ಅರ್ಜಿಗಳೂ ಮೈಸೂರು ಗವರ್ನಮೆಂಟ್ ಸ್ಟೇಬಲ್ ಸೂಪರಿಂಟೆಂಡೆಂಟರವರಿಗೇನೆ ಸುಮಾರಾಯಿಸಿಕೊಳ್ಳಬಹುದು.

ತಾ. 31 ನೆ ಆಗಸ್ಟ್ 1915. ಸಿ. ವೆಂಕಟರಾವ್.
ಆಫೀಸ್ ಅಸಿಸ್ಟೆಂಟ್, ಇನ್ ಛಾರ್ಜ್ ಮಿಲಿಟರಿ ಸೆಕ್ರೆಟರೀಸ್ ಆಫೀಸ್.

In the Matter of the Indian Life Assurance Companies Act 1912, the Indian Companies Act 1913, and the National Insurance and Banking Company Limited, in Liquidation.

NOTICE UNDER RULE 6 OF ORDER 20.

Notice is hereby given that upon the Petition of the undersigned Liquidators of the above-named Company the Hon'ble Chief Court of the Punjab has been pleased to direct under Section 221 of the Indian Companies Act (VII of 1913) that the voluntary winding up shall continue subject to the supervision of the Court; that the Liquidators shall obtain the sanction of the Court with respect to the matters referred to in Section 179, and all subsequent proceedings are to be had in the Court of the District Judge, Lahore.

(Sd.) E. D. DIGNASSE, F. E. BANGHAM,
Liquidators,
NATIONAL INSURANCE & BANKING CO., LD.
28, Bharat Buildings,
Lahore, 1st December, 1915.

Notice of Date Fixed for Hearing Probate or Letters of Administration Cases.

IN THE COURT OF THE
DISTRICT JUDGE, BANGALORE DIVISION.
Miscellaneous Case No. 25 of 1915-16.
Petitioner:—K. Nagesiah, Son of Subbarayappa, Sub Overseer, P. W. D., Mysore City.

Whereas an application under the probate and Administration Regulation 6 of 1914 for grant of probate of the will of C. Ramakrishniah, late of Devarayisamudram, Kolar District, has been made by the petitioner above named; and whereas the 22nd day of December, 1915, has been fixed for the hearing of this case, notice is hereby given that any person having any interest in the administration of the estate of the said deceased may, if he desire, appear in this court on the said 22nd day of December, 1915, and see the proceedings before the grant of probate.

Given under my hand and seal of the Court his the 27th day of November, 1915.

R. B. PLUMER,
Bar-at-Law
268-1] DISTRICT JUDGE.

ಹೊಸ ನಮೂನೆ ಜವುಳಿ.

1. ಹರ್ಕ್ ಬೆಲೆಬೆ ಕೇಮರೀಕಾಗಳು.
2. ಧಡೂಕಾದ ಗಟ್ಟಿಬಣ್ಣದ ಚಳ್ಳುಗಳು.
3. ಬಾಳಿಕೆಬರುವ, ಗಂಜಿಯಿಲ್ಲದ ಪಂಚೆಗಳು.
4. 54 ಅಂಗುಲ ಅಗಲ, 8 ಮೊಳ ಉದ್ದದ ಪಂಚೆಗಳು.
5. ಟ್ವೀಡ್ ಮತ್ತು ಫ್ಲಾನೆಲ್ ನಮೂನೆ ಗಟ್ಟಿಬಣ್ಣದ ಕೋಟಿನ ಬಟ್ಟೆ 12 ಗಜದ ಥಾನುಗಳು.
6. ಅಂಚೂರದ ಬಣ್ಣದ ನೂಲಿನ ಶಾಲುಗಳು.
7. ಕರಹೆವಾರಿ ಹೊದಿಯುವ ವಿಲಾಯಿತಿ ಕಂಬಳಿಗಳು.
8. 7½, 8, 8½ ಗಜದ ಖಾತರಿ ರಂಗಿನ ನೂಲಂಚಿನ ಸೀರೆಗಳು.
9. ಬಿಳಿಯಲ್ಲದ, ಶುದ್ಧವಾದ ಹತ್ತಿಯ ಉತ್ಪತ್ತಿ ಹಚ್ಚ ಹಲ್ಲಗಳು

ಖರೀದಿ ಸುಲಭ ವ್ಯಾಪಾರಿಗಳಿಗೆ ಹೆಚ್ಚು ರಿಯಾಯಿತಿ. [66-38]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ ಲಿಮಿಟೆಡ್.
169, ಕಿಲಾರಿ ರೋಡ್ (ಕುಂಬಾರಪೇಟೆ) ಬೆಂಗಳೂರು ಸಿಟಿ,

ರಿಜಿಸ್ಟರ್ಡ್ ಸುಪೀರಿಯರ್ ಲೀವರ್ ಜೂವೆಲ್ಡ್ ವಾಚು.

ಕ್ರಯ ಸರಪಣಿ ಸಹಿತ	5 ವರುಷಗಳ	ವಿ. ಪಿ. ಚಾರ್ಜಿ
ರೂ. 3-0-0.	ಗ್ಯಾರಂಟಿ.	4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋರು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು ಇದು ಕಾಲವನ್ನು ಸರಿಯಾಗಿ ತೋರಿಸುವದು. ಜೊತೆಗಳುವದರಿಂದ ಪ್ರಯೋಜನವಿಲ್ಲ. ಉದಯೋಗದಲ್ಲಿ ನೋಡಬಹುದು ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
[260-3] ಪೋಸ್ಟ್ ಬಾಕ್ಸ್ 167, ಮದರಾಸ್.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಜೀವ ಸೌಖ್ಯವನ್ನೂ ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬಹಳ ಅತ್ಯಂತ ಜಾಗರೂಕನಾಗಿರುತ್ತಾನೆ. ನಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಮ್ಮ ಮಾತುಗಳಲ್ಲ; ನಮ್ಮ ಕಾರ್ಯಗಳೇ. ನಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಪೆಟ್ಟಿಗೆ ರೂ. 1-0-0.

ಸೂ. ಕ:—ಒಂಗೆ ದೊಡ್ಡ ಕ್ಯಾಟಲಾಗನ್ನು, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನು ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
[255-3] 20, ಬೈನಾ ಬಜಾರ್ ರೋಡ್, ಮದರಾಸ್.

ಧರ್ಮಸಮಾಜಮು, ಕಲ್ಕತ್ತಾ.

ಏರ್ಪಟ್ಟ ಮೂಲಧನ—ರೂ. 30,00,00,000.

ಈ ಕಂಪನಿಯು 1882 ನೇ ಇಸವಿ 7 ನೇ ಇಂಡಿಯನ್ ಕಂಪನಿ ಆಕ್ಟಿನಂತೆ 1910 ನೇ ಇಸವಿ ಜೂನ್ ತಿಂಗಳಲ್ಲಿ ರೆಜಿಸ್ಟರಾಗಿರುತ್ತೆ. ಪ್ರತಿ ಒಂದು ಷೇರೂ ಐದು ರೂಪಾಯಿಗಳು. 1914 ನೇ ಇಸವಿ ತನಕ ಪ್ರತಿ ವರುಷವೂ ಶೇಕಡಾ 25 ರಂತೆ ಬಡ್ಡಿಯನ್ನು ಷೇರುದಾರರಿಗೆ ಬಡವಾಡ ಮಾಡಿದೆ, ಮತ್ತು ಮೂಲಧನಕ್ಕೆ ವಿಶೇಷ ಬಡ್ಡಿ ಉತ್ಪತ್ತಿಯಾಗುವಂತೆ ಜಮೀನುಗಳ ಅಭಿವೃದ್ಧಿಗೂ, ಮನೆಗಳ ಮೇಲೂ, ವ್ಯಾಪಾರಕ್ಕೂ, ಲೇವಾದೇವಿಗೂ ಸಾಲಾ ಕೊಡಲಾಗಿದೆ.

ಸಮಾಜದ ಬಾಂಡ್ ಪಾಲಿಸಿಗಳಿಗೆ ಷೇರುದಾರರಾಗತಕ್ಕ ಮೆಂಬರುಗಳಿಗೆ ಮ್ಯಾನೇಜಿಂಗ್ ಕಮಿಟಿಯವರು 10 ವರುಷಗಳ ತನಕ ಆರ್ಡಿನರಿ ಮತ್ತು ಬಾಂಡ್ ಷೇರುಗಳಿಗೆ ಶೇಕಡಾ 12½ ಮತ್ತು 25 ರಂತೆ ನಫೆಯನ್ನು ಕೊಡಲು ಕ್ಯವರಾಗಿದಾರೆ

ಸಮಾಜದ ಡಿಬೆಂಚರ್ ಮತ್ತು ಬಾಂಡ್‌ಗಳನ್ನು ಬಹಳ ಅನುಕೂಲವಾದ ರೀತಿಯಲ್ಲಿ ಏರ್ಪಾಡು ಮಾಡಲಾಗಿದೆ. ಹಣ ಕೂಡಿಸಲು ವಿಶೇಷ ಫಲಕಾರಿಯಾದದ್ದು. ಫಾರಂಗಳಿಗೂ, ಹೆಚ್ಚು ವಿಷಯಗಳಿಗೂ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪು ಸಹಿತ ಬರೆದು ಕೇಳಿ.

ನಂಬಿಗಸ್ಥರಾದ ಏಜೆಂಟರು ಸಿಕ್ಕಿದರೆ ಒಳ್ಳೇ ಕಮೀಷನ್ ಉಂಟು.

ವಿಳಾಸ.—ಕೃಷ್ಣಾಜಿರಾವ್ ಶ್ರೀನಿವಾಸರಾವ್ ಕಂಪನಿ,
ಬೊಂಬಾಯಿ ಪ್ರಾಂತ್ಯದ ಮೈಸೂರು ಮತ್ತು ಕೊಡಗು
[270-1] ದೇಶದ ಚೀಫ್ ಏಜೆಂಟರು. ದಾವಣಗೆರೆ.

ಸೂಚನೆ.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಡಿ. ಸೈಯದ್ ಉಸ್ಮಾನ್ ಅಂಡ್ ಕಂಪನಿಯವರನ್ನು ನನ್ನಿಂದ ತಯಾರಿಸಲ್ಪಟ್ಟ ಸಾಲಾಮಿಸ್ರಿ ಮುರಬ್ಬವನ್ನು ಮಾರಲಿಕ್ಕೆ ಕಳೆದ ಎರಡು ವರುಷಗಳಿಂದೀಚೆ ಏಜೆಂಟರನ್ನಾಗಿಟ್ಟಿದ್ದೆನು.



REGISTERED TRADE MARK.

ಇವರು ಪರಸ್ಥಳದಿಂದ ಬರುವ ಆರ್ಡರುಗಳಿಗೂ ಮತ್ತು ಸ್ಥಳದಲ್ಲಿ ಕೊಳ್ಳುವವರಿಗೂ ಬೇರೆಯವರಿಂದ ತಯಾರುಮಾಡಿದ ಸಾಲಾಮಿಸ್ರಿ ಪಾಕ್ ಎಂಬುದನ್ನು ಡಿಲ್ಲಿ ವೈದ್ಯರು ಡಿ. ಮನ್ನಾಲಾಲ್ ರವರಿಂದ ತಯಾರುಮಾಡಿದ ಸಾಲಾಮಿಸ್ರಿ ಮುರಬ್ಬವೆಂದು ಹೇಳಿ ಬಿಕರಿ ಮಾಡುತ್ತಾ ಜನಗಳಿಗೂ ನನಗೂ ಮೋಸಮಾಡುತ್ತಿದ್ದದ್ದನ್ನು ನಾನು ಕಂಡು ಇವರು ನನ್ನ ಏಜೆಂಟರಾಗಿರುವದನ್ನು ತೆಗೆದು ವರ್ತಮಾನ ಪತ್ರಿಕೆಗಳಲ್ಲಿಯೂ, ಕೈಚೀಟಿಗಳಲ್ಲಿಯೂ ಇವರ ಹೆಸರನ್ನು ತೆಗೆದುಬಿಟ್ಟಿದೆ. ಈಗಲೂ ಜನಗಳಿಗೆ ಮೋಸಮಾಡುವದಕ್ಕೋಸ್ಕರ ನಮ್ಮ ಟ್ರೇಡ್ ಮಾರ್ಕಿನಂತೆಯೇ ಬೇರೆ ಒಂದು ನಕ್ಕಲ್ ಟ್ರೇಡ್ ಮಾರ್ಕನ್ನು ಮತ್ತು ಲೇಬಲ್‌ಗಳನ್ನೂ ತಯಾರುಮಾಡಿಸಿ ನಕ್ಕಲ್ ಮಾಲನ್ನು ಸಾಲಾಮಿಸ್ರಿ ಮುರಬ್ಬವೆಂದು ಹೇಳಿ ಬಿಕರಿ ಮಾಡುತ್ತಾ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ಇನ್ನು ಮುಂದೆ ಸಾಲಾಮಿಸ್ರಿ ಮುರಬ್ಬವನ್ನು ಕೊಳ್ಳುವಂಥವರು ಇದರ ಪೆಟ್ಟಿಗೆಯಲ್ಲಿ ಮುದ್ರಿಸಿರುವ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಇರುವದನ್ನು ನೋಡಿ ತೆಗೆದುಕೊಳ್ಳಬೇಕೆಂದು ಸಕಲರಿಗೂ ಕೃತಜ್ಞನಾಗಿರುತ್ತೇನೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
[272-1] 5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜೆಂಟರಿಗೆ.

"ವೃತ್ತಾಂತಪತ್ರಿಕೆ"ಯ 1915-16 ನೇ ಸಾಲಿನ 2 ನೇ ... ನೊವೆಂಬರ್ ಆಖೈರಿಗೆ ಮುಗಿಯಿತಾದ್ದರಿಂದ ನಮ್ಮ ಏಜೆಂಟುಗಳು ... ಗಳನ್ನು ಕ್ರಮವಾಗಿ ಬರೆದು ಒಂದು ಪ್ರತಿಯನ್ನು ತಮ್ಮ ... ರಿಗೂ, ಒಂದನ್ನು ನಮ್ಮ ಆಫೀಸಿಗೂ ದಯಮಾಡಿ ಕಳುಹಿಸಿ ... ಕೃಪೆಯಾಗಿ ಇದೆ

ಮ್ಯಾನೇಜರ್.

ಯೂರೋಪು ದೇಶದ ಮಹಾಯುದ್ಧದ ಚರಿತ್ರೆಯು.

ಕ್ರಯ ರೂಪಾಯಿ 1; ಟಪಾಲು ಖರ್ಚು 2 ಆಣೆ.

ಈಗ ಯೂರೋಪು ದೇಶದಲ್ಲಿ ನಡೆಯುತ್ತಲಿರುವ ಮಹಾ ಯುದ್ಧದ ಚರಿತ್ರೆಯು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ

... ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ... ಮತ್ತು ಪರಿಣಾಮ ... ಯೊಂದು ರಾಜ್ಯದ ಸೇನಾ ಬಲವು ... ವಿಮಾನಬಲವೂ, ಅವುಗಳ ಪರಿಣಾಮ ... ರುಗಳ ಸೇನಾಧ್ಯಕ್ಷರುಗಳು, ಆಯಾ ... ದ ರಾಜರುಗಳು, ಮಂತ್ರಿಗಳು, ... ದವರುಗಳ ಭಾವಚಿತ್ರಗಳು, ಯುದ್ಧ ... ಥವಾದ ವಿಷಯಗಳು, ಅವುಗಳೆಲ್ಲವೂ ... ಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ... ಆರಂಭವಾದ ಆಗಾಗಯಾದ ರಣರಂಗ... ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿವೆ. ... ಡೆಮ್ಮಿ 20 ಫಾರಂಗಳುಳ್ಳ ಸುಂದರವಾದ ಬೈಂಡಿನಿಂದೊಡಗೂಡಿದ 160 ಪುಟಗಳುಳ್ಳ ಯುದ್ಧಚರಿತ್ರೆಯು ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೂ ಯಾರೂ ಕನ್ನಡ ಭಾಷೆಯಲ್ಲಿ ತಯಾರಿಸಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಈ ಗ್ರಂಥವು ಪುಸ್ತಕ ಭಂಡಾರದಲ್ಲಿ ಇಡಲು ಅರ್ಹವಾದದ್ದು. ಇದನ್ನು ... ರೂ ಓದತಕ್ಕದ್ದು. 30 ಯುದ್ಧಪಟಗಳು ಗ್ರಂಥದ ಆಯಾ ಉಚಿತ ಸ್ಥಳಗಳಲ್ಲಿ ಹಾಕಲ್ಪಟ್ಟಿರುತ್ತೆ. [210-3]

ವಿಳಾಸ—ಭಾರತಿ ಏಜೆನ್ಸಿ, ಪಾರ್ಕ್ ಟೌನ್, ಮದರಾಸ್

ಅವಶ್ಯವಾಗಿ ಗಮನಿಸಿ ನೋಡಿರಿ.

PARK FAIR PRESENTATION WATCH
HIGH CLASS GENTLEMEN POCKET (Reg) WATCH
ಹೈ ಕ್ಲಾಸ್ ಜನ್‌ಟಲ್‌ಮೆನ್ ಪಾಕೆಟ್ (ರಿಜಿ.) ವಾಚ್
15 ಬಹುಮಾನಗಳ ಸಹಿತ ಕ್ರಯ ರೂ. 2-12-0 ಮಾತ್ರವೆ
7 ವರುಷ ಖಾತ್ರಿಯಾದ ಗ್ಯಾರಂಟಿ ಸಹಾ.

ಅಯ್ಯಾ ಪ್ರಿಯ ಮಿತ್ರರೇ, ಈ 1915 ನೇ ಇಸವಿ ಪಾರ್ಕ್ ಫೇರ್ ... ಕ್ಕೋಸ್ಕರ ನಮ್ಮ ಜನಗಳಿಗೆ ಸಂತೋಷ ಮಾಡಬೇಕೆಂದು ಉದ್ದೇಶಪಟ್ಟು



ಗಡಿಯಾರ ಸೀಮೆಯಿಂದ ಡೈರೆಕ್ಟಾಗಿ ತರಿಸಿ ... ಬೆಲೆ ಹಾಕಿರುತ್ತೇನೆ. ಈ ವಾಚು ದಯಲು ... ಇಮಿಟೇಷನ್ ಕೆಂಪುಗಳು ಮಧ್ಯೆ ಕಟ್ಟಿದ ... 6 ರತ್ನಗಳುಳ್ಳ ಓಪನ್ ಕೇಸ್ ಕಂಪೆನ್‌ಸೇಷನ್ ... ಬಲಿಷ್ಠವಾದ ಲೀವರ್ ಕೆಲಸದಿಂದಲೂ ತಯಾರಾ... ತ್ತೆ. ಇದನ್ನು ವರ್ಣಿಸುವದರಿಂದ ಪ್ರಯೋಜನ... ತರಿಸಿ ಪರೀಕ್ಷೆ ಮಾಡಿದರೆ ನಿಮ್ಮ ಮನಸ್ಸಿಗೆ ಗೊತ್ತಾಗುತ್ತದೆ. ಬಹುಮಾನಗಳ ವಿವರ—ಸರಪಣಿ 1, ಉಕ್ಕರಸುಬು 1, ... ವಾಚು ಕನ್ನಡಿ 1, ಕರವಸ್ತ್ರ 1, ಕಾರ್ಪೊರೇಷನ್ ಕನ್ನಡಿ 1, ಇಂಗ್ಲೀಷು ... ಚೆಗೆ 1, ಸೆಂಟ್ ಶೀಸೆ 1, ವಾಚು ಚೀಲ 1, ರಬ್ಬರು ಬೊಂಬೆ 1, ... ಗುಂಡಿ ಸೆಟ್ 1, ಸ್ತ್ರೀಯರು ಧರಿಸಿಕೊಳ್ಳುವ ತಲೆ ಹೂವು 1, ಎಲೆಕ್ಟ್ರೋ ಬಂಗಾರದ ಕೈ ಉಂಗುರ 1, ಸುಂದರವಾದ ಟಾಯಲೆಟ್ ಸೋಪು 1, ... ಕೆಂಪುಗಳು ಮಧ್ಯದ ಬ್ರೂಚ್ 1; ಜುಮ್ಲಾ 15 ಸೇರಿ ವಾಚು ಕ್ರಯ 2-12-0. [259

ನನ್ನ ವಿಳಾಸ.—ಟಿ. ಎಂ. ರಾಮಚಂದ್ರರಾವ್,
ನಂ 15/8, ಡೇವಿಡ್‌ಸನ್ ಬೀದಿ, ಬ್ರಾಡ್‌ವೇ ಪೋಸ್ಟು, ಮದರಾಸ್

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗಬೇಡಿರಿ

ಅಸಲ್ ಪಂಜಾಬಿ ಮುರಬ್ಬ

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ... ಹೆಸರು ಇಟ್ಟು, ಜನಗಳಿಗೆ ಮೋಸಮಾಡುತ್ತಾರೆ. ಅದನ್ನು ಕಂಡು ಮೋಸಹೋಗಬೇಡಿರಿ. ನಮ್ಮಿಂದ ಕಳುಹಿಸುವ ಭಾಂಗಿಯನ್ನು ತೆಗೆಯುವಾಗ ಧ್ವಜ... ಅಂಡ್ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿದ ಲೇಬಲ್ ನೋಡಿ ತೆಗೆಯಿರಿ.

500 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲ ರೋಗ ಸಂಜೀವಿ"

ನಿಮ್ಮ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ ಜೀವ ... ವನ್ನು, ಕಾಯಪುಷ್ಟಿಯನ್ನು ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕರಾಗಿರಬೇಕು. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನಮ್ಮ ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ "ಪಂಜಾಬಿ ಸಕಲ ರೋಗ ಸಂಜೀವಿ"ಯನ್ನು ಸೇವಿಸಿರಿ. ಇದರಲ್ಲಿ ಅಪರಂಜಿ, ಬೆಳ್ಳಿ ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೆ ತಯಾರಿಸುವಾಗಿದೆ. ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.



10 ತೊಲೆ ಡಬ್ಬಿ 1 ಕ್ಕೆ ರೂ. 1-8-0

64 ಪೇಜು ದೊಡ್ಡ ಕ್ಯಾಟಲಾಗ್ ಬೇಕುವವರಿಗೆ ಉಚಿತವಾಗಿ ಕಳುಹಿಸುತ್ತೇವೆ!

ನಮ್ಮ ವಿಳಾಸ:—ಧೈರ್ಯಲಕ್ಷ್ಮಿ ಅಂಡು ಕಂಪೆನಿ,
[252-4] 3, ಇರುಳಪ್ಪನ ಬೀದಿ, ಮದರಾಸ್

ರೈತರಿಗೆ ಬೇಕಾದ ಸಕಾಲ ಸಲಹೆಗಳು.

[ಸೈದಾಪೇಟ ಕಾಲೇಜಿಯ ಡೆಪ್ಯುಟಿ ಡೈರೆಕ್ಟರ್ ಮ|| ಎ. ಕೆ. ಯಜ್ಞನಾರಾಯಣ ಅಯ್ಯರವರಿಂದ ಬರೆಯಲ್ಪಟ್ಟದ್ದು.]

ಸೀ ಜಮೀನುಗಳಲ್ಲಿ ಗೊಬ್ಬರಕ್ಕೋಸ್ಕರ ಸೆಣಬು, ಹುಲಸಂದೆ ಮುಂತಾದ ಬೆಳೆಗಳನ್ನು ಇಡುವುದು.

ರೈತರಿಗೆ ಬೇಕಾದಷ್ಟು ಗೊಬ್ಬರ ಒದಗುವುದು ಬಹಳ ಕಷ್ಟವಾಗಿದೆ ಎಂದು ರೈತರಿಗೆಲ್ಲ ತಿಳಿದೇ ಇದೆ. ತರೀ ಜಮೀನುಗಳಿಗೆ ಎಷ್ಟು ಗೊಬ್ಬರ ಹಾಕುವರೋ ಅಷ್ಟು ಫಾಯಿದೆ ಇದೆ. ಖುಷ್ಕಿ ಜಮೀನಿನಲ್ಲಿ ಬೇಕಾದಷ್ಟು ಗೊಬ್ಬರ ಹಾಕಿದರೆ ಒಂದು ವೇಳೆ ಮಳೆಗಳು ಬಾರದೆ ಹೋಗಿ, ಹಾಕಿದ ಗೊಬ್ಬರದಿಂದ ಲಾಭ ಬಾರದೆ ಹೋಗಬಹುದು. ತರೀ ಜಮೀನುಗಳಲ್ಲಿ ಹೀಗೆ ಇಲ್ಲದೆ ನೀರು ಒದಗುವುದರಿಂದ ಹೇರಳವಾದ ಗೊಬ್ಬರವನ್ನು ಇಟ್ಟು ಬೆಳೆ ಮಾಡಬೇಕಾದದ್ದು ಅವಶ್ಯ. ಸಾಧಾರಣವಾಗಿ ರೈತನ ಮನೆಯಲ್ಲಿ ಆಗುವ ಗೊಬ್ಬರ ಅವನ ಜಮೀನಿಗೆ ಸಾಕಾಗುವುದಿಲ್ಲವಾದ್ದರಿಂದ ಹೆಚ್ಚಿನ ಗೊಬ್ಬರವನ್ನು ಅವನು ಕೊಂಡುಕೊಳ್ಳಬೇಕಾಗುತ್ತದೆ. ಆದರೆ ಎಷ್ಟರ ಮಟ್ಟಿಗೆ ಸುಲಭವಾದ ಖರ್ಚಿನಲ್ಲಿ ಗೊಬ್ಬರವನ್ನು ಒದಗಿಸಿಕೊಳ್ಳುವುದು ಸಾಧ್ಯವೋ ಅಷ್ಟು ಮಟ್ಟಿಗೆ ಸುಲಭವಾದ ಮಾರ್ಗದಲ್ಲಿ ಗೊಬ್ಬರವನ್ನು ಒದಗಿಸಿಕೊಳ್ಳಬೇಕು. ಉತ್ತಮವಾದ ವ್ಯವಸಾಯ ಕ್ರಮವಾದ್ದರಿಂದ ಅಂಥಾ ಕ್ರಮಗಳಲ್ಲಿ ಒಂದನ್ನು ಈ ಕೆಳಗೆ ವಿವರಿಸುತ್ತೇನೆ.

ತರೀ ಜಮೀನುಗಳಲ್ಲಿ ಭತ್ತ, ಕಬ್ಬು ಮುಂತಾದ ಬೆಳೆಗಳನ್ನು ಇಡುವುದಕ್ಕೆ ಸುಮಾರು 2-3 ತಿಂಗಳು ಮುಂಚಿತವಾಗಿಯೇ ಗೊಬ್ಬರಕ್ಕೋಸ್ಕರ ಸೆಣಬು [illegible], ಗೊಬ್ಬರ ದಿಂಡಿ ಎಂಬ ಹೆಸರೂ ಉಂಟು] ಹುಲಸಂದೆ, ಇವುಗಳನ್ನು ಬಿತ್ತಬೇಕು. ಈ ಬೆಳೆಗಳು ಸುಮಾರು ಮೂರು ತಿಂಗಳು ಆದನಂತರ ಇವುಗಳನ್ನು ಜಮೀನಿನಲ್ಲಿಯೇ ಉತ್ತು ಬಿಟ್ಟು ಮುಂದೆ ಕಬ್ಬು, ಭತ್ತ, ಇವುಗಳನ್ನು ಬಿತ್ತಬೇಕು. ಶಿವರಾತ್ರಿ ಬಿಡೆಯಲ್ಲಿ ಕಬ್ಬು ಹಾಕಬೇಕು ಎನ್ನುವ ರೈತರು [illegible] ಗೊಬ್ಬರಕ್ಕೋಸ್ಕರ ಈ ಸೆಣಬು, ಹುಲಸಂದೆ ಬಿತ್ತುವುದಕ್ಕೆ ಅನುಕೂಲವಾಗಿರುತ್ತದೆ.

ಈ ಬೆಳೆಗಳ ಹಸಿ ಎಲೆ, ಕಡ್ಡಿಗಳನ್ನು ಗೊಬ್ಬರವಾಗಿ ಉಪಯೋಗಿಸುವುದರ ಅರ್ಥ, ತಾತ್ಪರ್ಯವೇನೆಂದರೆ—ಕಾಯಿ ಬಿಟ್ಟು ಬಲಿಯದೆ ಇರುವ [illegible] ಭೂಮಿಯಿಂದ ತೆಗೆದುಕೊಂಡು ಸತ್ವಾಹಾರವನ್ನೆಲ್ಲಾ ತಮ್ಮ [illegible] ಇವುಗಳಲ್ಲಿಯೆ ಸೇರಿಸಿಟ್ಟುಕೊಂಡಿರುತ್ತವೆ. ಇವುಗಳನ್ನು ಭೂಮಿಗೆ [illegible] ಹಾಕುವುದರಿಂದ ಪೈರಿಗೆ ಬೇಕಾದ ಆಹಾರವು ಒದಗುತ್ತದೆ. [illegible] ಮುಂತಾದ ಗಿಡಗಳ ಎಲೆಗಳನ್ನು ಗೊಬ್ಬರವಾಗಿ ಉಪಯೋಗಿಸುವುದು ವಾಡಿಕೆ. ಆದರೆ ಅನೇಕ ಪ್ರದೇಶಗಳಲ್ಲಿ ಈ ಎಲೆಗಳು ಸುಲಭವಾಗಿ ಸಿಗುವುದರಿಂದಲೂ, ಕಬ್ಬಿನ ಬೆಳೆ ಇಡುವುದಕ್ಕೆ ಮುಂಚೆ [illegible] ಭೂಮಿಯನ್ನು ಉತ್ತೀ, ಬೈಲಾಗಿಯೇ ಮಾಡುವುದಕ್ಕೆ ಬಿಡುವುದು ವಾಡಿಕೆಯಾಗಿರುವುದರಿಂದಲೂ, ಈ ವಿರಾಮಕಾಲದಲ್ಲಿ ಜಮೀನಿನಲ್ಲಿ [illegible] ಈ ಸೆಣಬು, ಹುಲಸಂದೆ ಮುನ್ನು ಬೆಳೆಯಬೇಕು ಎನ್ನುತ್ತೇನೆ. [illegible] ಏನು ಫಾಯಿದೇ ಎಂದರೆ ಇವುಗಳು ಒಂದು ವಿಚಿತ್ರವಾದ [illegible] ವರ್ಗಕ್ಕೆ ಸೇರಿದ ಬೆಳೆಗಳಾಗಿರುತ್ತವೆ. ಈ ಸ್ವಭಾವವೇನೆಂದರೆ [illegible] ಸೇರಿದ ಬೆಳೆಗಳು ತಮಗೆ ಬೇಕಾದ ಸತ್ವಾಹಾರವನ್ನು ಭೂಮಿಯಿಂದ ತೆಗೆದುಕೊಂಡು ಕ್ರಮೇಣ ಭೂಸಾರವನ್ನು ಕಡಿಮೆ ಮಾಡುತ್ತವೆ. [illegible] ಸೇರಿದ ಬೆಳೆಗಳಾದರೋ ತಮಗೆ ಬೇಕಾದ ಬಹಳ ಮುಖ್ಯವಾದ [illegible] ಗಾಳಿಯಿಂದ ಎಳೆದು ತಮ್ಮ ಪೋಷಣೆಗೋಸ್ಕರ ಉಪಯೋಗಿಸಿಕೊಳ್ಳುತ್ತವೆ. ಇವುಗಳ ಬೇರಿನಲ್ಲಿ ಮಣಿಮಣಿಯಾಗಿ ಕಾಣುವ ಸಣ್ಣಸಣ್ಣ [illegible] ಸೇರಿರುತ್ತವೆ. ಈ ಬೆಳೆಗಳನ್ನು ಬೆಳೆಯುವುದಕ್ಕೆ ಬಿಟ್ಟು, ಅವು [illegible] ಹೂ ಬಿಡುವುದಕ್ಕೆ ಬದಲಾಗಿ ಅವುಗಳನ್ನು ಹೂಳಿಗೆ ಅಂದ ಕೂಡಲೆ [illegible] ಉತ್ತು ಬಿಟ್ಟರೆ ಈ ಮುಖ್ಯವಾದ ಸತ್ವಾಹಾರವನ್ನು ಸುಲಭವಾಗಿ ಭೂಮಿಗೆ ಸೇರಿಸಿದಂತೆ ಆಗುತ್ತೆ. ಸೆಣಬು, ಹುಲಸಂದೆ ಅಲ್ಲದೆ ಉದ್ದು, [illegible], ಅವರೆ, ತೊಗರಿ, ಹುರುಳಿ, ಇವುಗಳೆಲ್ಲವೂ ಈ ವರ್ಗಕ್ಕೆ ಸೇರಿದವುಗಳು. [illegible] ಆ ಎರಡೇ ಭೂಸಾರವನ್ನು ಹೆಚ್ಚು ಮಾಡುವುದರಲ್ಲಿ ಉತ್ತಮವಾದವು ಎಂದು ಪರೀಕ್ಷೆಗಳಿಂದ ಕಂಡುಬಂದಿರುವುದರಿಂದ ಹೀಗೆ ಸಸಿ [illegible] ಇವುಗಳನ್ನೇ ಆರಿಸಲಾಯಿತು.

ಸೆಣಬು, ಹುಲಸಂದೆ ಬೀಜಗಳನ್ನು ಒಟ್ಟಾಗಿ ಬಿತ್ತಿ, ಉತ್ಕೃಷ್ಟವಾದ ಬೆಳೆ [illegible] ಭೂಮಿಯಲ್ಲಿ ಸೇರಿಸಿ ಉತ್ತ ಪಕ್ಷದಲ್ಲಿ ಸುಮಾರು 15-20 [illegible] ಗೊಬ್ಬರವನ್ನು ಭೂಮಿಗೆ ಹಾಕಿದ ಹಾಗೆ ಆಗುತ್ತೆ.

ಈ ಹಸಿಗೊಬ್ಬರದ ವಿಷಯದಲ್ಲಿ ಇನ್ನೊಂದು ವಿಷಯ ತಿಳಿದುಕೊಳ್ಳಬೇಕು. ಅದು ಏನೆಂದರೆ ಒಳ್ಳೇ ಪ್ರಾಯದ ದಿನಸುಗಳು ತಾವು ತಿನ್ನುವ [illegible] ಸತ್ವಾಹಾರದ ದುಬ್ಬಗಳು ಮೇಲೆ ಸಗಣಿ, ಗಂಜಲ ಮುಂತಾದ [illegible] ಮೂಲಕ ವಿಸರ್ಜನೆ ಮಾಡಿಬಿಡುತ್ತವೆ. ಈ ಗಂಜಲ ಮತ್ತು ಸಗಣಿ [illegible] ರುಚಿಯಾಗಿ ಕಾಪಾಡಿಕೊಂಡರೆ ಈ ಬೆಳೆಗಳನ್ನು ದನಗಳಿಗೆ [illegible] ಮೇವಾಗಿಯೂ, ಭೂಮಿಗೆ ಒಳ್ಳೇ ಗೊಬ್ಬರವಾಗಿಯೂ ಉಪಯೋಗಿಸಿ [illegible] ಆಗುತ್ತೆ. ಬೇಲಿಗಳನ್ನು ಹಾಕಿ ತಮ್ಮ ಜಮೀನುಗಳನ್ನು ಬಂದೋಬಸ್ತು ಮಾಡಿಕೊಂಡಿರುವ ರೈತರುಗಳು ಈ ಸೆಣಬು, ಹುಲಸಂದೆ ಬೆಳೆದನಂತರ [illegible] ಗಳನ್ನು ಬಿಟ್ಟು ರಾತ್ರಿಹಗಲು ಮೇಯಿಸಿ ಅವುಗಳ ಸಗಣಿ, ಗಂಜಲ [illegible] ಹೋಗದಂತೆ ಜಮೀನಿಗೆ ಸೇರುವಂತೆ ಮಾಡಿಕೊಳ್ಳ [illegible] ಹೀಗೆ ಮಾಡಲು ಅನುಕೂಲವಿರುವವರು ಈ ಬೆಳೆಯನ್ನು ಹಸಿ [illegible], ಗೊಬ್ಬರಕ್ಕೂ ಎರಡಕ್ಕೂ ಉಪಯೋಗಿಸಿಕೊಳ್ಳಬಹುದು. ಹೀಗೆ [illegible] ಬಹಳ ಲಾಭಕರವಾದ ಕ್ರಮ. ಆದರೆ ಬೇಲಿಗಳನ್ನು ಹಾಕಿ [illegible] ಬಂದೋಬಸ್ತು ಮಾಡುವುದು ವಾಡಿಕೆಯಲ್ಲಿ ಇಲ್ಲವಾದ್ದರಿಂದ [illegible] ಗೊಬ್ಬರವನ್ನು ಸರಿಯಾಗಿ ಕಾಪಾಡಿಕೊಳ್ಳಲು [illegible] ಏರ್ಪಾಟು ಮಾಡಿಕೊಳ್ಳದೆ ಇರುವುದರಿಂದಲೂ, ಈ [illegible] ಭೂಮಿಯಲ್ಲಿ ಉತ್ತುಬಿಡುವುದೇ ಹಾಲಿ ಇರುವ ಕ್ರಮಗಳಿಗೆ ಅನು[illegible] ಈ ಬೆಳೆಯನ್ನು ನೀರು ಹಾಯಿಸಿ ಬೆಳೆಯಬೇಕಿಂಬ ಅವ[illegible]. ಈ ಸಂಗತಿ ತರೀ ಜಮೀನುಗಳಲ್ಲಿರುವ ಕ್ಯಾತುವೇ ಸಾಕಾಗಿದೆ.

[illegible] ಪ್ರತಿ ಎಕರೆ ಒಂದಕ್ಕೆ 30 ಸೇರು, ಹುಲಸಂದೆಯನ್ನು ಬಿತ್ತಿ [illegible] 10 ಸೇರು, ಅದು 10 ಸೇರು ಬಿತ್ತಬೇಕು. [illegible] ಕೊಂಚ ಜಮೀನಿನಲ್ಲಿ ಈ ಬೆಳೆಯನ್ನು ಉತ್ತುಬಿಡಬೇಕು. [illegible] ಕ್ರಮವಾದರೂ ಮುಂದಿನ ಬೆಳೆ ಬಿತ್ತಬೇಕಾದ ಕಾಲವನ್ನು [illegible] ತಿಂಗಳಿಗೆ ಉತ್ತುಬಿಡಬಹುದು.

[illegible] ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಿಗಳ [illegible] ನವೆಂಬರ್ ತಾ. 6 ರ ವರೆಗೆ ಜಮಾ ಬಂದಿರುವ ಚಂದಾ ಹಣ [illegible]:—

[illegible] ಬ್ಯಾಂಕಿಗೆ	......	ರೂ. 45,52,862- 6-9
[illegible] ಬ್ಯಾಂಕಿಗೆ	......	,, 35,34,785- 3-1
[illegible] ಬ್ಯಾಂಕಿಗೆ	......	,, 8,26,582- 3-5
[illegible] ಬ್ಯಾಂಕಿಗೆ	......	,, 6,66,809-12-5
ಒಟ್ಟು ರೂಪಾಯಿ		95,81,039-9-8

ಸಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 3-0-0. ಡಿಸೆಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 16 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ನೋಡಿರಿ. ವಿಳಾಸ—

ವಿ. ಕೆ. ಕಂಚುಸಾಮಿ [11-27] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲವರ್ಣದಿಂದ ಶೋಭಿಸುವ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲಿಲ್ಲ? ಅಂಥಾ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿಕೊಡತಕ್ಕ ಉಪಕರಣವಾವುದೆಂದರೆ:

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿಶ್ರಾಂತಿಗೆ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.

ಈ ತೈಲವನ್ನು ಉಪಯೋಗಿಸಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಉಪಯೋಗಿಸಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಶೀಲುಕರವೆ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಲವಾರು ಹಾಳುಮಾಡಿರುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ಪರಿಯಿಂದ ಪ್ರೈಜುಗಳು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೆಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ನೇಗಿ ಸಹಾಳಕರ ಬಂಧುಗಳು, ಟಪನ ಟ್ಟಿ, ಬೆಳಗಾಂವೆ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ 0-4-0 ಬೇರೆ 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳಕಿನಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ತಾವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಸರಿಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-40]

ಸಣ್ಣ ಸೀಸೆಯು ಬೆಲೆ ರೂ. 0-8-0. ಒಂದು ಡ್ರಾಮಿನ (ಮಾಧ್ಯಮ) ಸೀಸೆ ರೂ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಹೇಳಿದ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜಿದ್, ಮಾರ್ಕೆಟ್, ಬಾಂಬೆ.

ಏಜೆಂಟ್, [illegible] ಮಾರ್ಕೆಟ್, ಮಂಗಳೂರು

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಕಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫ್ಲೋರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು; ಜಲ್ಲಡೆ ರೇಕುಗಳು; ಆಸ್ಟ್ರೇಲಿಯಾ ದೇಶದ ಸಾಬು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಕಡೆಗೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳುವರೆಂದು ನಂಬುತ್ತೇವೆ. [308-9]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪನಿ, ಮದ್ರಾಸು.

The Indian Commerce & Industries Co., Madras.

Branches—Bezwada and Tanjore.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಉಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ, ಬಾಳಿಕೆ ಬರುವದು.

ಗೋವರ್‌ಜಾರ್ ಬಳ್ಳಿ ಸೀರೆ

ರೂ. 2-8-0.

ಈ ಹೊಸ ನಮೂನೆ ಸೀರೆಗಳು ಬಹು ನಾಜೂಕಾದ ಬೇಲೀ ಮಲ್ಲಿನಲ್ಲಿ "ಗೋವರ್‌ಜಾರ್" ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಭಾರಿ ಕ್ರಯದ ಸೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಪಟ್ಟದ ಮಹೋತ್ಸವಕ್ಕೆ ತರಿಸಿ ಇಟ್ಟವರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ.

ಈ ಸೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ.—ರಾಸ್ ವಾಚ್ ಅಂಡ್ ಕಂಪನಿ,

[252 4] 3, ಇರುಳಪ್ಪನ ಬೀದಿ, ಮದರಾಸು.

ಸನ್ ೧೯೧೬ ನೇ ಇಸವಿಯ

ಡೋಂಗರೆ

ಇವರ "ಬಾಲಾಮೃತದ"

ಸಚಿತ್ರ

ಕನ್ನಡ ಕೆಲೆಂಡರವು!

ಪುಗಸಾಟೆ ಕಳುಹಿಸುವೆವು.

ಮತ್ತು ಅಂಗಡಿಕಾರರಿಗೆ ಬಣ್ಣದ ಅಂದವಾದ ಚಿತ್ರದ ಬೋರ್ಡ್ ಸಹ ಉಚಿತವಾಗಿಯೇ ಕಳುಹಿಸಿಕೊಡುವೆವು.

ತಮ್ಮ ವಿಳಾಸವನ್ನು ತಿಳಿಸಿರಿ.

[177-15]

ಕೆ. ಟಿ. ಡೋಂಗರೆ ಕಂಪನಿ,

ಗಿರಗಾಂವ್, ಮುಂಬಾಯಿ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮೂತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾಟ್ಲಿಗೆ ನಾಲ್ಕು ರೂಪಾಯಿಯ ಪದಾರ್ಥವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಅಥವಾ ವಿ. ಪಿ. ಮೂಲಕ ಸೀ 4 ಅಣೆ ; 12 ಕ್ಕೆ ವಿ. ಪಿ. ಛಾರ್ಜ ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಅಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಅಣೆ.	ಡಬ್ಬಿ 1 ಕ್ಕೆ 2 ಅಣೆ.	ಸೀಸೆಗೆ 12 ಅಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-34]

ಅಮೃತಾಂಜನ ಡಿಪೋ,

109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿಬೀದಿ, ಮದ್ರಾಸ್.

ಈ. ಕೆ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ ; ಆವಶ್ಯಕವಾದವರು ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸಿಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [35-45]

35 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಅಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಅಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಅಣೆ	550 ಮಾತ್ರೆಗಳ ಡಬ್ಬಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ,, ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲ. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸಿಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ESANOFELE

“ಈಸಾನೋಫೆಲಿ” ಯು

ಮಲೇರಿಯಾ ಜ್ವರವನ್ನೂ, ಹವಾ ಬದಲಾವಣೆಯಿಂದುಂಟಾಗುವ ಸಮಸ್ತ ಜಾತಿಯ ಜ್ವರಗಳನ್ನೂ ಗುಣಪಡಿಸುವುದಕ್ಕೆ ಕ್ವಿನೀನ್ ಪುಡಿಗಿಂತ ಎಷ್ಟೋ ಮೇಲಾದದ್ದು.

ಇದನ್ನು ಸೇವಿಸುವುದರಿಂದ ಓಕರಿಕೆ, ತಲೆಶೂಲೆ, ಅಥವಾ ಹೊಟ್ಟೆ ಕೆಡಿಸುವುದು ಉಂಟಾಗದೆ ಶರೀರಧರ್ಮವನ್ನು ಬಲಪಡಿಸುತ್ತದೆ; ಕೆಂಪು ರಕ್ತ ಬಿಂದುಗಳನ್ನು ವೃದ್ಧಿಮಾಡಿ ರಕ್ತಕ್ಕೆ ವೀರ್ಯವನ್ನು ಉಂಟುಮಾಡಿ, ಮತ್ತೆ ಮಲೇರಿಯಾ ಜ್ವರ ಬಾರದಂತೆ ಸಂಪೂರ್ಣ ಆರೋಗ್ಯವನ್ನೂ ಬಲವನ್ನೂ ಕೊಡಬಲ್ಲದು.

ಈಸಾನೋಫೆಲಿಯ ಪ್ರಧಾನವಾದ ಗುಣವೇನೆಂದರೆ—ಅದು ಖಂಡಿತವಾಗಿಯೂ ಸಕಲ ವಿಧವಾದ ಜ್ವರಗಳನ್ನೂ ಬಾರದಂತೆ ನಿಂರಕ್ಷಣೆ ಮಾಡುತ್ತದೆ; ಮತ್ತೂ ನಾಶಮಾಡುವುದರಲ್ಲಿ ಖಚಿತವಾಗಿಕೆಲಸಮಾಡುತ್ತದೆ.

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ವ್ಯಾಪಾರಿಗಳ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೆ. ಏನೇ ಮಕ್ಕಳಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಾಗಲಿ ಬೇಕಾಗಿದ್ದರೆ “ಈಸಾನೋಫೆಲೀನಾ” ಎಂಬುದನ್ನು ಕೇಳಿ ಎಂದು ಕೇಳಿ. ಇದು ಸೇವಿಸೋದಾಕೆ ಇದ್ದು ಸೇವಕೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜೆಂಟರು :—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳ್ಳಾ ಡಿಪೋ— [176-15]

ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೇರಿ ಕಂಪನಿ, ಮಿಲ್ಯಾನ್, ಇಟಲಿ.

ನಕಲಿ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............	ರೂ. 4,44,00,000
ಕಂಪನಿಯಿಂದ ಪಾವತಿ ಆಗಿರುವದು ,,	4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ಟರ್ಮುಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. [illegible], ಚೀಫ್ ಏಜೆಂಟ್, ಬೆಂಗಳೂರು ; ಮ॥ ಎಂ. ಎಸ್. [illegible] ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[229-8] ಬ್ರಾಂಚ್ ಸೆಕ್ರೆಟರಿ, ಮದ್ರಾಸ್.

ದಯವಿಟ್ಟು ಈ ಹೊಸ ಸಮಾಚಾರವನ್ನು ಓದಿ.

ಡಿ. ಸೈಯದ್ ಉಸ್ಮಾನ್ ಅಂಡ್ ಕೋ ಕಂಪನಿ, ದೊಡ್ಡಪೇಟೆ, ಬೆಂಗಳೂರು ಸಿಟಿ ಈ ನಮ್ಮ ಕಂಪನಿಯಲ್ಲಿ ಡಿ. ಮುಸ್ತಾಫಾಲ್ ಅಲ್ಲಿ ಸೈಟೆಂ

ಇವರಿಂದ ತಯಾರಿಸಲ್ಪಟ್ಟ ಕಾಲಾ ಮಿಸ್ರಿ ಮುಂತಾದ್ದನ್ನು ಈ ವಹಿಯುತ್ತ ಇದ್ದೇವೆ. ಈ ಮುಲಾಮು ವಿಷಯದಲ್ಲಿ ಪ್ರಶಂಸೆ ಬಂದದ್ದರಿಂದ ಆ ಮುಲಾಮನ್ನು ನಾವೇ ಮಾರುತ್ತೇವೆ. ಈಗ ಡಿ. ಜೆಲ್. ಅಂಗಡಿ ಗಂಜ್ ವೈದ್ಯರಿಂದ ಚಿಕಿತ್ಸೆ ಮುಂತಾದ್ದು ಸೇರಿಸಿ ತಯಾರಿಸಲ್ಪಟ್ಟ ಕಾಲಾಮಿಸ್ರಿ ಮುಲಾಮನ್ನು ಬಹಳ ಮಾರುತ್ತಿದ್ದೇವೆ. ಇದನ್ನು ವಹಿಯುತ್ತಾ ಇದ್ದೇವೆ. ಪೂಜೆಗೆ ಬೇಕಾದ ಊದುಬತ್ತಿಯೂ ಬೇಕಾದಷ್ಟು ಸಿಕ್ಕುವುದು ; ಅದೇ ಸ್ಟ್ಯಾಂಪ್ ಕಳಿಸಿ ಕ್ಯಾಟ್ಲಾಗ್ ತರಿಸಿಕೊಳ್ಳುವುದು. ಈ 1915 ನೇ ಡಿಸೆಂಬರ್ ತಿಂಗಳು ಲಾಗಾಯ್ತು ಸಿಲ್ಲರೆ ಖರೀದಿ ಮಾಡುವವರಿಗೆ ಕಮಿಷನ್ ಕೊಡುವುದಾಗಿ ತೀರ್ಮಾನಮಾಡಿರುತ್ತೇವೆ. ಇವರ ಜೊತೆಯಲ್ಲಿ ತಯಾರಾಗುವ ಚಿಕ್ಕ ಪ್ಯಾಕ್ ಇಟ್ಟಿರುತ್ತೇವೆ. ಡಬ್ಬಿ 1 ಕ್ಕೆ ಖರೀದಿ ರೂ. 2-0-0.

ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ಜನರಲ್ ಮರ್ಚೆಂಟ್,

[258-2] ದೊಡ್ಡಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—11—1915 ರಿಂದ 19—11—1915 ರ ವರೆಗೆ

ಸ್ಥಳ	ಪ್ಲೇಗ್ ಜಾಡ್ಯ.	ಪ್ಲೇಗ್ ಸತ್ತ್ಯ.	ಕಾಲರಾ ಜಾಡ್ಯ.	ಕಾಲರಾ ಸತ್ತ್ಯ.
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	2	2	0	0
ಬೆಂಗಳೂರು ಡಿಸ್ಟ್ರಿಕ್ಟ್	34	26	0	0
ಮೈಸೂರು ,,	66	60	0	0
ಕೋಲಾರ್ ,,	4	3	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	5	2	0	0
ಚಿತ್ರದುರ್ಗ ,,	29	10	0	0
ಕಡೂರ್ ,,	3	3	0	0
ಶಿವಮೊಗ್ಗ ,,	26	21	0	6
ಒಟ್ಟು.....	170	128	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ದಕ್ಷಿಣಾಯನ ಹೇಮಂತಋತು ಮಾರ್ಗಶಿರ ಶುದ್ಧ ಚೌತಿ ಶುಕ್ರವಾರದಿಂದ ಮಾರ್ಗಶಿರ ಶುದ್ಧ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಡಿಸೆಂಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	[illegible]
10	ಶುಕ್ರ *	ಚೌತಿ	21-45	ಪೂರ್ವಾಷಾ	10-51	26
11	ಶನಿ ‡	ಪಂಚಮಿ	16-56	ಶ್ರವಣ	7-29	30
12	ಭಾನು §	ಷಷ್ಠಿ	12-50	ಧನಿಷ್ಠ	5-13	27
13	ಸೋಮ	ಸಪ್ತಮಿ	10-0	ಶತಭಿಷ	3-36	29
14	ಮಂಗಳ	ಅಷ್ಟಮಿ	7-54	ಪೂಭಾ	3-5	29
15	ಬುಧ ,,	ನವಮಿ	7-8	ಉ. ಭಾ	3-40	30
16	ಗುರು †	ದಶಮಿ	7-36	ರೇವತಿ	5-30	1

* ಷಷ್ಠ್ಯುಪವಾಸಂ. ‡ ಷಷ್ಠೀವ್ರತ, ನಾಗಪಂಚಮಿ. § ಚಂಪಾಷಷ್ಠಿ, ಸ್ಕಂದಷಷ್ಠಿ, ಸುಬ್ರಹ್ಮಣ್ಯಸ್ವಾಮಿ ರಥ, ಮಳೆ ನಕ್ಷತ್ರ—ಜ್ಯೇಷ್ಠ 4 ನೇ ಪಾದ. ,, ಮಳೆ ನಕ್ಷತ್ರ—ಮೂಲ 1 ನೇ ಪಾದ. † ಮಾರ್ಗಶಿರ ಲಕ್ಷ್ಮೀವ್ರತ, [illegible] ಕಾಲ.

Printed and Published by the Rev. H. Gulliford, Proprietor and Manager, Wesleyan Mission Press, Mysore. [illegible]

REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸ್ ೧೯೧೫ ನೇ ಇಸವಿ ಡಿಸೆಂಬರ್ ತಾರೀಖು ೧೬ ನೇ ಗುರುವಾರ. ಸಂಚಿಕೆ ೨೯

FOR SALE

A Cycle-wheel decent Buggy. Quite new, in perfect good order. Rs. 600 or near offer. *Apply*—

MESSRS. KASIM SAIT & CO.,
Curzon Park, Mysore.
[271-2]

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ, ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರಿವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು ಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0. [158-26]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಈಗ ಮುದ್ರಿತವಾಗಿರುವ ಒಳ್ಳೆ ಸಮಯ

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು.

ಇದುವರೆಗಿನ ತಿದ್ದುಪಾಟುಗಳಿಂದಲೂ ಜೊತೆಯಾಗಿ ವಿಶೇಷ ವಿಷಯಗಳನ್ನು ಒಳಗೊಂಡು ದಪ್ಪನಾದ ಬಿಳೀ ನುಣುಪಾದ ಕಾಗದದಲ್ಲಿ ಅಚ್ಚುಹಾಕಲ್ಪಟ್ಟಿದೆ. ಲಾಯರುಗಳು, ಪಟೇಲರುಗಳು, ಜವಾನ್ ದಾರರಿಗೂ ಅತ್ಯಂತ ಅವಶ್ಯಕವಾದ ದ್ದು. ಕ್ರಯ 6-0 ಪಟಿದ್ದಕ್ಕೆ 3 ರೂಪಾಯಿಗಳು ಮಾತ್ರ. ಒಂದು ತಿಂಗಳೊಳಗೆ ತೆಗೆದುಕೊಳ್ಳುವವರಿಗೆ ಟಪಾಲ್ ಹಾಸಲ್ ಮುಫತ್ತಾಗಿ ರವಾನಿಸಲ್ಪಡುವದು.

[301-5] ವಿಳಾಸ:—ಬಿ. ನರಸಿಂಗರಾವ್, ಲಾ ಆಫೀಸ್, ಬೆಂಗಳೂರು.

ನವೀ[illegible]ಬರಿಗಳು.

ಶ್ರೀಮಾನ ಪೂರ್ವದೇಶ ಯಾತ್ರೆ—ಹುಕ್ಕೇರಸ ಪ್ರಧಾನವಾದ ಲಂಕೆ—

ಮಲಯಾಳ ದೇಶಗಳ ಕಥೆ	....	1-0-0
ಮಾಧವಚಕ್ರ—ಚಮತ್ಕಾರಕವಾದ ನಾವೆಲ್.	......	0-6-0
ಕಾದಂಬರಿ—ಮನೋಹರವಾದ ಕಾದಂಬರಿ.	......	0-8-0
ಉಧಾಮಾಧವ—ನೀತಿಬೋಧಕವಾದ ಕಟ್ಟುಕಥೆ	......	0-8-0

ಅನಾಥಬಾಲೆ, ಕಾರಾಸುಂದರಿ, ವಿನೋದಕರವಾದ ಕಾದಂಬರಿಗಳು—ಪ್ರತಿ 1 ಕ್ಕೆ 8 ಆಣೆ. ಇವಲ್ಲದೆ "ಕಮಲಿನಿ" 6 ಆಣೆ "ಸಂಸಾರಕ" 4 ಆಣೆ ಮುಂತಾದ ಹಲವು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[27-1] ವಿಳಾಸ:—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಶ್ರೀಮನ್ಮಹಾರಾಜರವರ ಮತ್ತು ಶ್ರೀಯುವರಾಜರವರ ಭಾವಚಿತ್ರಗಳ ಸಮೇತ ೧೯೧೬ ನೆಯ ಕ್ರಾನ್

ಪಾಕೆಟ್ ಡೈರಿ

ನಂ. ೧ ಟಿಕ್ಕ್ ಸೈಜ್ ಡೈರಿ ೦-೪-೦
" ೨ ಡಿ ಪ್ಲಾಪ್ ಪೆನ್ಸಲ್ ಸಹಿತ ೦-೬-೦
" ೧ ದೊಡ್ಡ ಸೈಜಿನ ಡೈರಿ ೦-೬-೦
" ೨ " ಫ್ಲಾಪ್ ಪೆನ್ಸಲ್ ಸಮೇತ ೦-೮-೦

೨೦ ಡೈರಿಗಳನ್ನು ಒಟ್ಟಾಗಿ ಕೊಂಡುಕೊಂಡಲ್ಲಿ ೧ ಹೆಚ್ಚಾಗಿ ದೊರೆಯುತ್ತದೆ.

[6-13] ವಿಳಾಸ:—ಜನರಲ್ ಏಜನ್ಸಿ, ಮೈಸೂರು.

ಅಬ್‌ಸ್ಟ್ರಾಕ್ಟ್ ನೋಟೀಸು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಆಫೀಸಿಗೆ ಬೇಕಾಗಿರುವ ಕಾಗದದ ಮತ್ತು ಅಚ್ಚುಕಾಗದಗಳನ್ನು (ಬುಕ್ಕ್ ಯುನಿಟ್‌ಗಳನ್ನು) ಸರಬರಾಯಿ ಮಾಡು ವದಕ್ಕೆ ಕೊಡಬೇಕಾದ ಟೆಂಡರುಗಳನ್ನು 1916 ನೆಯ ಡಿಸೆಂಬರು 31 ನೆಯ ತಾರೀಖು ವರೆಗೆ ಜನರಲ್ ಇಲಾಖೆಯ ಸೆಕ್ರೆಟರಿಯವರು ತೆಗೆದುಕೊಳ್ಳುವರು (ಈ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ತಿಳಿಯಬೇಕಾದರೆ 1915 ನೇ ಡಿಸೆಂಬರ್ 2 ನೆಯ ತಾರೀಖಿನ ಪುಟ 1134 ಉಳ್ಳ ಮೈಸೂರು ಗೆಜೆಟ್ಟನ್ನು ಮತ್ತು ಮುಂದಿನ ತಾರೀಖುಗಳ ಗೆಜೆಟ್ಟುಗಳನ್ನು ನೋಡತಕ್ಕದ್ದು.) [269-2]

ಬೆಂಗಳೂರು, **B. NARAINSAMIENGAR,**
1 ನೇ ಡಿಸೆಂಬರ್, 1915. ಫಾರ್ ಜನರಲ್ ಸೆಕ್ರೆಟರಿ.

ನೋಟೀಸು.

1916 ನೇ ಜನವರಿ 3 ಮತ್ತು 4 ನೇ ತಾರೀಖುಗಳಲ್ಲಿ (ಸೋಮವಾರ ಮತ್ತು ಮಂಗಳವಾರ) ಹಾಸನದಲ್ಲಿ ದನಗಳ ಪ್ರದರ್ಶನವು ನಡೆಯುತ್ತೆ. ಬಹುಮಾನ ಕ್ಕೆ ಬರುವ ಎಲ್ಲಾ ತರಹ ಜಾನುವಾರುಗಳಿಗೂ ಹೆಚ್ಚಾದ ಇನಾಂಗಳು ಮಾಮೂಲು ಕೊಡಲ್ಪಡುತ್ತೆ. ಆಡು, ಕುರಿ, ಮತ್ತು ಕುದುರೆಗೆ ಸಹಾ ಇನಾಂಗಳು [illegible] ಕೊಡುವ ಅನ್ನಲು ತರಹ ಹಸುವಿಗೂ ಮತ್ತು [illegible] ಅತ್ಯುತ್ತಮವಾದ ರಾಸಿಗೂ ಒಂದೊಂದು ಭಂಗಾರದ ಮೆಡಲು ಕೊಡಲ್ಪಡುತ್ತೆ. ಜಾಸ್ತಿ ತಪಶೀಲು ಅಪೇಕ್ಷಿಸುವವರು ಹಾಸನ ಟೌನ್ ವೈಸ್ ಪ್ರೆಸಿಡೆಂಟ್ ಮತ್ತು ಜನರಲ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು.

ಜಿ. ರುದ್ರಪ್ಪನವರು, ವೈಸ್ ಪ್ರೆಸಿಡೆಂಟ್;
[illegible] ಟೌನ್ ಮ್ಯುನಿಸಿಪಾಲಿಟಿ ಮತ್ತು ಜನರಲ್ ಸೆಕ್ರೆಟರಿ,
[illegible] ದನಗಳ ಪ್ರದರ್ಶನದ ಕಮಿಟಿ, ಹಾಸನ.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯ ವನ್ನೂ ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕ ನಾಗಿರುತ್ತಾನೆ. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥ ರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮ ಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸರಾಗಿ ತ್ತಿರಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿ ರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರ ದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಸೂ. ಕ:—ಒಂದು ದೊಡ್ಡ ಕ್ಯಾಟಲಾಗನ್ನೂ, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ, ನಾರಾಯಣಜಿ ಕೇಶವಜಿ,
[255-4] 20, ಚೈನಾ ಬಜಾರ್ ರೋಡ್, ಮದರಾಸ್.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಬಾಯಾ ಬಿಟ್ಟಿ.

ಮೂರು ಜಾಮಿನ್

ವರ್ಷದ ಕೊಡುತ್ತೆ.

ನಮ್ಮ ಕೃಪ್ತಿಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದ ದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಹವೆಯಲ್ಲೂ ಕೆಡುವುದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ನಮ್ಮ ಕವಾ ಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಬೀಸ್ ಮತ್ತು ತೇಗದಿಂದ ತಯಾ ರಾದ್ದು, ಉತ್ತಮವಾದ ರೀಡ್ ಬ್ಲಾಕ್ಕುಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 50; ಈಗಿನ ಕ್ರಯ ರೂ 19, 22-8-0, 25; ಇದರ ಕೂಡ ತಬಲಾ ಮಾಡು ಬಿಟ್ಟಿ ಕೊಡುತ್ತೇವೆ. ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೊತೆ ತಬಲ ಮತ್ತು ಬಾಯವನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋ ನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕಳಿಸಿ, ನಮೂನೆ ರೈಲ್ವೆ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ ಪಿ ಮಾಡುತ್ತೆ.

ವಿಳಾಸ—**The National Harmonium Co.,**
[276-1] **SIMLA T.S.O., (E) CALCUTTA.**

ಯೂರೋಪು ದೇಶದ ಮಹಾಯುದ್ಧದ ಚರಿತ್ರೆಯು.

ಕ್ರಯ ರೂಪಾಯಿ 1 ; ಟಪಾಲು ಖರ್ಚು 2 ಆಣೆ.

ಈಗ ಯೂರೋಪು ದೇಶದಲ್ಲಿ ನಡೆಯುತ್ತಿರುವ ಮಹಾ ಯುದ್ಧದ ಚರಿ ತ್ರೆಯು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊ

ಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ ಎಲ್ಲಾ ರಾಷ್ಟ್ರಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ ಪ್ರತಿ ಯೊಂದು ರಾಜ್ಯದ ಸೇನಾ ಬಲವೂ ಮತ್ತು ವಿಮಾನಬಲವೂ, ಅವುಗಳ ಶಕ್ತಿಗಳೂ, ರಾಜ ರುಗಳ ಸೇನಾಧ್ಯಕ್ಷರುಗಳು, ಆಯಾ ದೇಶ ದ ರಾಜರುಗಳು, ಮಂತ್ರಿಗಳು, ಮೊದಲಾ ದವರುಗಳ ಭಾವಚಿತ್ರಗಳು, ಯುದ್ಧಸಂಬಂ ಧವಾದ ವಿಷಯಗಳು, ಅವುಗಳೆಲ್ಲವೂ ಸವಿ ಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಯುದ್ಧಾ ರಂಭವಾದ ಆಗಾಯಿತು ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇದು ಡೆಮ್ಮಿ 20 ಫಾರಂಗಳುಳ್ಳ ಸುಂದರವಾದ ಬೈಂಡಿನಿಂದೊಡಗೂಡಿದ 150 ಪುಟಗ ಳುಳ್ಳ ಯುದ್ಧಚರಿತ್ರೆಯು ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡ ಭಾಷೆಯಲ್ಲಿ ತಯಾರಿಸಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಈ ಗ್ರಂಥವು ಅಕ್ಷರ ಭಂಡಾರದಲ್ಲಿ ಇರಲು ಅರ್ಹವಾದದ್ದು. ಇದನ್ನು ಎಲ್ಲ ರೂ ಓದತಕ್ಕದ್ದು. 30 ಯುದ್ಧಪಟಗಳು ಗ್ರಂಥದ ಆಯಾ ಸ್ಥಳಗಳಲ್ಲಿ ಹಾಕಲ್ಪಟ್ಟಿರುತ್ತೆ. [219-4]

ವಿಳಾಸ—ಭಾರತಿ ಏಜನ್ಸಿ, ಪಾರ್ಕ್ ಟೌನ್, ಮದರಾಸು.

GRATIS & POST FREE!!

"THE Art of Perfumery and How to make Scented Hair Oils, Spirit Perfumes, etc.," is being distributed free. Please mention this paper and apply to—

S. PAUL & Co., Perfumers,
4, Hospital Street, Dharamtola, CALCUTTA.
[263-3]

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1.	ವಿದ್ಯಾಖಂಡದ ಭೂವಿವರಣೆ	0–5–0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0–6–0
	ಮೇಲೆ ಕಂಡ ಎರಡೂ ಸೇರಿ	0–10–0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)	

1916 ನೆಯ

ಲೋವರ್ ಸೆಕಂಡರಿ ಕನ್ನಡ ಟೆ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ ೨ ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ತ್ವ ಪ್ರಕಾ ಶಿಕೆ 4 ಆಣೆ.

ನಮ್ಮ ವಿಳಾಸ—ಎ. ಆರ್. ವೆಂಕಟಸುಬ್ಬಾಚಾರ್ಯ,
[31–44] ಸುಬೋಧ ಗ್ರಂಥಾಲಯ, ಮೈಸೂರು.

ಎಸ್. ಡಿ. ನತ್ಮಲ್ ಕಂಪನಿ ರಿಜಿಸ್ಟರ್ಡು ಮಾಡಲ್ ಪಾಕೆಟ್ ಡೈರಿಗಳು.



ನಮ್ಮಲ್ಲಿ ಪ್ರತಿ ವರುಷವೂ ತಯಾರಾಗುವಂತೆ 1916 ನೇ ಇಸವಿ ಬಾಬ್ತು ನಾಲ್ಕು ನಮೂನೆ ಡೈರಿಗಳು ತಯಾರಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಕೂಡಲೆ ಬರೆದು ತರಿಸಿಕೊಳ್ಳಿರಿ. ಸಾವಕಾಶ ಮಾಡಿದಲ್ಲಿ ದೊರೆಯಲಾರದು.

1 ನೇ ನಂ.	ಸಾದಾ ಡೈರಿ 1 ಕ್ಕೆ	....	0-4-0
2 ನೇ ,,	ಡಿಟೋ ಮುಚ್ಚಳ ಉಳ್ಳದ್ದು	....	0-6-0
3 ನೇ ,,	ದೊಡ್ಡದು ಸಾದಾ 1 ಕ್ಕೆ	....	0-6-0
4 ನೇ ,,	ಡಿಟೋ ಮುಚ್ಚಳ ಉಳ್ಳದ್ದು	....	0-8-0

ಒಂದೇ ನಮೂನೆಯಲ್ಲಿ ಒಂದು ಡಜನ್ನು ತೆಗೆದುಕೊಳ್ಳುವವರಿಗೆ 1 ಡೈರಿ ಜಾಸ್ತಿ. ಇನ್ನೂ ಹೆಚ್ಚಾಗಿ ತೆಗೆದುಕೊಳ್ಳುವವರಿಗೆ ಅಂದರೆ 26 ರೂಪಾಯಿಗಳಿಗೆ ಕಮ್ಮಿ ಇಲ್ಲದಂತೆ ತೆಗೆದುಕೊಳ್ಳುವವರಿಗೆ ರೂಪಾಯಿಗೆ 2 ಆಣೆಯಂತೆ ಕಮೀ ಷನ್ ಮಾತ್ರ ದೊರೆಯುತ್ತೆ. ಇಷ್ಟಪಟ್ಟವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ.—ಎಸ್. ಡಿ. ನತಮಲ್ ಕಂಪೆನಿ,
[366–3] ದೊಡ್ಡಪೇಟೆ, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಕಾಲುಚೀಲಗಳನ್ನೂ, ಬನೀನುಗಳನ್ನೂ ಮ್ಯಾನೇಜರವರಿಗೆ ಬರೆದು ತರಿಸಿಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[188-13] GIRLS' INDUSTRIAL SCHOOL, HASSAN.

ಧರ್ಮಸಮಾಜವು, ಕಲ್ಕತ್ತಾ.

ಏರ್ಪಟ್ಟ ಮೂಲಧನ—ರೂ. 30,00,00,000.

ಈ ಕಂಪನಿಯು 1882 ನೇ ಇಸವಿ 7 ನೇ ಇಂಡಿಯಾ ಕಂಪನಿ ಆಕ್ಟಿನಂತೆ 1910 ನೇ ಇಸವಿ ಜೂನ್ ತಿಂಗಳಲ್ಲಿ ರಿಜಿಸ್ಟರಾಗಿರುತ್ತೆ. ಪ್ರತಿ ಒಂದು ಷೇರೂ ಐದು ರೂಪಾಯಿನದು. 1914 ನೇ ಇಸವಿ ತನಕ ಪ್ರತಿ ವರುಷವೂ ಶೇಕಡಾ 25 ರಂತೆ ಬಡ್ಡಿಯನ್ನು ಷೇರುದಾರರಿಗೆ ಬಟವಾಡೆ ಮಾಡಿದೆ, ಮತ್ತು ಮೂಲಧನಕ್ಕೆ ವಿಶೇಷ ಬಡ್ಡಿ ಉತ್ಪತ್ತಿಯಾಗುವಂತೆ ಜವಳಿಯ ಅಭಿವೃದ್ಧಿಗೂ, ಮನೆಗಳ ಮೇಲೂ, ವ್ಯಾಪಾರಕ್ಕೂ, ಲೇವಾದೇವಿಗೂ ಸಾಲಾ ಕೊಡಲಾಗಿದೆ.

ಸಮಾಜದ ಬಾಂಡ್ ಪಾಲಿಸಿಗಳಿಗೆ ಷೇರುದಾರರಾಗತಕ್ಕ ಮೆಂಬರುಗಳಿಗೆ ಮ್ಯಾನೇಜಿಂಗ್ ಕಮಿಟಿಯವರು 10 ವರುಷಗಳ ತನಕ ಆರ್ಡಿನರಿ ಮತ್ತು ಬಾಂಡ್ ಷೇರುಗಳಿಗೆ ಶೇಕಡಾ 12½ ಮತ್ತು 25 ರಂತೆ ಷೇರನ್ನು ಕೊಡಲು ಒಪ್ಪಿರುತ್ತಾರೆ.

ಸಮಾಜದ ಡಿಬೆಂಚರ್ ಮತ್ತು ಬಾಂಡ್‌ಗಳನ್ನು ಬಹಳ ಅನುಕೂಲವಾದ ರೀತಿಯಲ್ಲಿ ಏರ್ಪಾಡು ಮಾಡಲಾಗಿದೆ. ಹಣ ಕೊಡಲು ವಿಶೇಷ ಫಲ ಆರಿಯಬಹುದು. ಫಾರಂಗಳನ್ನೂ, ಹೆಚ್ಚು ವಿಷಯಗಳನ್ನೂ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪು ಸಹಿತ ಬರೆದು ಕೇಳಿ.

ನಂಬಿಗಸ್ಥರಾದ ಏಜಂಟರು ಸಿಕ್ಕಿದರೆ ಒಳ್ಳೇ ಕಮಿಷನ್ ಉಂಟು.

ವಿಳಾಸ.—ಕೃಷ್ಣಾಜಿರಾವ್ ಶ್ರೀನಿವಾಸರಾವ್ ಕಂಪನಿ,

ಬೊಂಬಾಯಿ ಪ್ರಾಂತ್ಯದ ಮೈಸೂರು ಮತ್ತು ಕೊಡಗು

[270-2] ದೇಶದ ಚೀಫ್ ಏಜಂಟರು, ದಾವಣಗೆರೆ.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ

ಸುಂದರವಾದ ಇಂಗ್ಲೀಷು ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 2-12-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪೆನ್‌ಸೇಷನ್



ಬಲಿಷ್ಟವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ದೊರೆಗಳು ಕೊಂಡುಕೊಳ್ಳುತ್ತಾ ಇದಾರೆ. ಇಂಡಿಯಾ ದೇಶದಲ್ಲಿ ಪ್ರತಿದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಬಹುದು. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜರ್ಮನ್ ಆರಷ್ಣ, (4) ಕೈ ಉಂಗುರ, (5) ಷರಟು ಗುಂಡಿ, (6) ನೆಕ್ಟೈ ಪಿನ್ ಸೆಟ್, (7) ಕೈ ಗುಂಡಿಗಳು, (8) ರೇಷ್ಮೆ ಕೆಲಸಮಾಡಿದ ಪಟ್ಟಿಗೆ, (9) ಗಿಲೀಟ್ ಬಟನ್.

ನಮ್ಮ ವಿಳಾಸ—ಧನಲಕ್ಷ್ಮೀ ಅಂಡ್ ಕಂಪನಿ,

[200-3] ಸಾಹುಕಾರ್‌ಪೇಟೆ, ಮದರಾಸು.

"ಹನುಮಾನ್" ಬೋರಾಕ್ಸ್ ಸಾಬೂನು.

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದಕ್ಕೆ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಗಜ್ಜು, ಕಜ್ಜಿ, ತುರಿ ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ಚರ್ಮಕ್ಕೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾನ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾನ್ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ, ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಷಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಸೂ. ಕ:—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮ॥ ಎಚ್. ದಾಸಪ್ಪನವರಲ್ಲೂ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-9] ಊಪಿನಿಂಗ್ ಬಜಾರ್ ರೋಡ್, ಮದರಾಸು.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3-0-0. ಡಿಸೆಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ಪಾಕೆಟ್ಟನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕೆಂಚುಸಾಮಿ

[111-28] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಉದ್ದವಾಗಿಯೂ ದಟ್ಟವಾಗಿಯೂ ಇರುವ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾತ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಶಕ್ತಿಯನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಗ್ಗಿ ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯಹತ್ತಿದ ಬಳಿಕ ಎಂದಿಗೂ ಜಿಗುಟಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿ ಸಹಾಲಕರ ಬಂಧುಗಳು. ಬಸವನಗುಡಿ, ಬೆಂಗಳೂರು—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬೀನರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕ್ರಯದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವ ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಅರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉದ್ಯಾನಿಕೆಯು ಆರಳವಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-47]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು. ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ.

೧೫೫, ಜುಮ್ಮಮಜೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ೩ ಕಾರ್ ಸ್ಟ್ರೀಟ್, ಮಂಗಳೂರು

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಹಾಟ್ ಏರ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸ್ಟೀಮ್ ಹಲ್ಲರುಗಳು ನಂ. 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು; ಇಲ್ಲದೆ ರೇಷ್ಮೆ, ಆಸ್ಟ್ರೇಲಿಯಾ ದೇಶದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [308-10]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ. ಬಾಳಿಕೆ ಬರುವದು.

ಗೋವರ್‌ಜಾಕ್ ಬಳ್ಳಿ ಸೀರೆ

ರೂ. 2-8-0.

ಈ ಹೊಸ ನಮೂನೆ ಸೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್‌ಜಾಕ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ

ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಭಾರಿ ಕ್ರಯದ ಸೀರೆಗಳು ಇದುವರೆಗೂ ಯಾರಲ್ಲಿಯೂ ಇಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರು ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬುತ್ತೇವೆ. ಈ ಸೀರೆ ಬೇರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವುದು ಶ್ಲಾಘನೀಯವಾದುದು.

ವಿಳಾಸ.—ರಾಸ್ ವಾಚ್ ಅಂಡ್ ಕಂಪನಿ,

[252-5] 3, ಅರುಳಪ್ಪನ ಬೀದಿ, ಮದರಾಸು.

ಸನ್ ೧೯೧೬ ನೇ ಇಸವಿಯ

ಡೋಂಗರೆ

ಇವರ "ಬಾಲಾಮೃತದ"

ಸಚಿತ್ರ

ಕನ್ನಡ ಕೆಲೆಂಡರವು!

ಪುಗಸಾಟೆ ಕಳುಹಿಸುವೆವು.

ಮತ್ತು ಅಂಗಡಿಕಾರರಿಗೆ ಬಣ್ಣದ ಅಂದವಾದ ಚಿತ್ರದ ಬೋರ್ಡು ಸಹ ಉಚಿತವಾಗಿಯೇ ಕಳುಹಿಸಿಕೊಡುವೆವು.

ತಮ್ಮ ವಿಳಾಸವನ್ನು ತಿಳಿಸಿರಿ.

[177-16]

ಕೆ. ಟಿ. ಡೋಂಗರೆ ಕಂಪನಿ,

ಗಿರ್ಗಾಂವ, ಮುಂಬಾಯಿ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿಗಳ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಕ್ಯಾಲೆಂಡರ್ ಒಂದಕ್ಕೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 6-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಬುಡ್ಡಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಅಂಗಡಿಗಳಲ್ಲಿ ಬಿಕರಿಗೆ ಇಟ್ಟಿದೆ. [64-35]

ಅಮೃತಾಂಜನ ಡಿಪೋ,

100, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕೆ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಉಪಯೋಗದಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ಔಷಧಿಗಳನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಕ್ರಮೇಣ ಶಕ್ತಿಯು ಕ್ರಮವಾಗಿ ಏರುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡುಗಾರರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲಾ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲಾ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [26-46]

40 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
80 ,, ,, ,, 4 ,,	200 ,, ಟಿನ್ ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುತ್ತದೆ.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ESANOFELE

"ಈಸಾನೊಫೆಲಿ" ಯು

ಮಲೇರಿಯಾ ಜ್ವರವನ್ನೂ, ಹವಾ ಬದಲಾವಣೆಯಿಂದುಂಟಾಗುವ ಸಮಸ್ತ ಜಾತಿಯ ಜ್ವರಗಳನ್ನೂ ಗುಣಪಡಿಸುವುದಕ್ಕೆ ಕ್ವಿನೈನ್ ಪುಡಿಗಿಂತ ಎಷ್ಟೋ ಮೇಲಾದದ್ದು.

ಇದನ್ನು ಸೇವಿಸುವುದರಿಂದ ಓಕರಿಕೆ, ತಲೆನೋವು, ಅಥವಾ ಹೊಟ್ಟೆ ತೊಳಸುವುದು ಉಂಟಾಗದೆ ಶರೀರದಾರ್ಢ್ಯವನ್ನು ಬಲಪಡಿಸುತ್ತದೆ; ಕೆಂಪು ರಕ್ತ ಬಿಂದುಗಳನ್ನು ವೃದ್ಧಿಮಾಡಿ ರಕ್ತಕ್ಕೆ ವೀರ್ಯವನ್ನು ಉಂಟುಮಾಡಿ, ಮತ್ತೆ ಮಲೇರಿಯಾ ಜ್ವರ ಬಾರದಂತೆ ಸಂಪೂರ್ಣ ಆರೋಗ್ಯವನ್ನೂ ಬಲವನ್ನೂ ಕೊಡಬಲ್ಲದು.

ಈಸಾನೊಫೆಲಿಯ ಪ್ರಧಾನವಾದ ಗುಣವೇನೆಂದರೆ—ಅದು ನಿಃಶ್ಚಿತವಾಗಿಯೂ ಸಕಲ ವಿಧವಾದ ಜ್ವರಗಳನ್ನೂ ಬಾರದಂತೆ ಸಂರಕ್ಷಣೆ ಮಾಡುವುದು; ಮತ್ತೂ ವಾಸಮಾಡುವುದರಲ್ಲಿ ಖಚಿತವೆನಿಸಿಕೊಂಡಿದೆ.

ಕ್ರಯ 1 ಬಾಟ್ಲಿಗೆ ರೂ 2-0-0. ಎಲ್ಲಾ ಔಷಧ ವ್ಯಾಪಾರದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸಕ್ಕರೆಯ ಮಾತ್ರೆ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು:—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳಲ್ಲಿ ಡಿಪೋ— [176-16]

ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ನಮ್ಮ ಏಜಂಟರಿಗೆ.

"ವೃತ್ತಾಂತಪತ್ರಿಕೆ"ಯು 1915-16 ನೇ ಸಾಲಿನ 5 ನೇ ಕ್ವಾರ್ಟರು ಡಿಸೆಂಬರ್ ಅಖೈರಿಗೆ ಮುಗಿಯುವುದರಿಂದ ನಮ್ಮ ಏಜಂಟರುಗಳೆಲ್ಲಾ ಲೆಕ್ಕಗಳನ್ನು ಕ್ರಮವಾಗಿ ಬರೆದು ಒಂದು ಪ್ರತಿಯನ್ನು ತಮ್ಮ ಕೂಪರ್ ಟೆಂಡೆಂಟರಿಗೂ, ಒಂದನ್ನು ನಮ್ಮ ಆಫೀಸಿಗೂ ದಯವಿಟ್ಟು ಕಳುಹಿಸಿಕೊಡಬೇಕೆಂದು ಪ್ರಕಟಿಸಿ ಇದೆ ಮ್ಯಾನೇಜರ್.

ಸುಲೋಚನಗಳು.



ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಪರೀಕ್ಷಿಸಿ ಉತ್ತಮ ತರಹ ಸುಲೋಚನಗಳನ್ನೇ ಕೊಡಲಾಗುವದು. ನಮ್ಮ ಚಂದ್ರಕಾಂತಿ ಮತ್ತು ಇತರ ತರಹ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಖಾತರಿ ಖಂಡಿತ. ಸುಲೋಚನಗಳು ದಿಗಂತ ಪ್ರಖ್ಯಾತವಾದವು. ಬೆಲೆ ಸುಲಭ.

ನಮ್ಮ ವಿಳಾಸ:—ಎಸ್. ಎನ್. ರಾಮರಾವ್ ಸನ್ಸ್,

[249-6] ಕೋಟೆ ಬಾಗಲು, ಬೆಂಗಳೂರು ಸಿಟಿ.

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಟಿಲೆಡ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಕಳಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[222-9] ಬ್ರಾಂಚ್ ಸೆಕ್ರಿಟರಿ, ಮದರಾಸ.

ದಯವಿಟ್ಟು ಈ ಹೊಸ ಸಮಾಚಾರವನ್ನು ಓದಿರಿ.

60 ಸವರನ್‌ಗಳು ಬಹುಮಾನ ಕೊಡಲ್ಪಡುತ್ತೆ.

ಡಿ. ಸೈಯದ್ ಉಸ್ಮಾನ್ ಅಂಡ್ ಕೋ ಕಂಪನಿ, ದೊಡ್ಡಪೇಟೆ, ಬೆಂಗಳೂರು ಸಿಟಿ ಈ ನಮ್ಮ ಕಂಪೆನಿಯಲ್ಲಿ ಡಿ ಮನ್ನಾಲಾಲ್ ಡಿಲ್ಲಿ ವೈದ್ಯರೂ

ಇವರಿಂದ ತಯಾರಿಸಲ್ಪಟ್ಟ ಸಾಲಾ ಮಿಸ್ರಿ ಮುರಬ್ಬಾವನ್ನು ಬಿಕರಿ ಮಾಡುತ್ತಾ ಇದ್ದೆವು. ಅದು ನಮ್ಮ ಮನಸ್ಸಿಗೆ ಪಸಂದು ಆಗದೆ ಇರುವುದರಿಂದ ಆ ಮುರಬ್ಬಾವನ್ನು ವಾಪಸ್ ಮಾಡಿಬಿಟ್ಟೆವು. ಈಗ ಟಿ. ಹೆಚ್. ಆಗಾಜಿದಾಸ ಗಂಜ್ ವೈದ್ಯರಿಂದ ಬೆಳ್ಳಿ ರೇಕ್ ಮುಂತಾದ್ದು ಸೇರಿಸಿ ತಯಾರಿಸಲ್ಪಟ್ಟ ಸಾಲಮಿಸ್ರಿ ಮುರಬ್ಬಾವನ್ನು ಅಜಮಾಯಿಸಿ ಮಾಡಿ ಬಿಕರಿ ಮಾಡುತ್ತಾ ಇದ್ದೇವೆ. ಪೂರ ಸಮಾಚಾರ ತಿಳಿಯಪೇಕ್ಷಿಸುವವರು ½ ಆಣೆ ಸ್ಟಾಂಪ್ ಕಳಿಸಿ ಕ್ಯಾಟ್ಲಾಗ್ ಪಡೆಯಬಹುದು. ಸನ್ 1915 ನೇ ನೋವೆಂಬರ್ ತಿಂಗಳು ಲಾಗಾಯ್ತು ಪಿಬ್ರವರಿ ಅಖೈರ್‌ವರೆಗೆ ಟಿನಾಲ್ ಚಾರ್ಜು ಮಾಫ್ ಮಾಡಿಯಿರುತ್ತೆ. ಇದರ ಜೊತೆಯಲ್ಲಿ ತಿಳಿಸುವ ಚಿಕ್ಕ ತ್ರಾಸ್ ಇಟ್ಟಿಯಿರುತ್ತೆ. ಡಬ್ಬಿ 1 ಕ್ಕೆ ಖರೀದಿ ರೂ 2-0-0.

ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ಜನರಲ್ ಮರ್ಚೆಂಟ್,

[258-3] ದೊಡ್ಡಪೇಟೆ, ಬೆಂಗಳೂರು ಸಿಟಿ.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ.

ಸುಂದರವಾದ ಜೂಬಿಲಿ ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 3-0-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಅಯ್ಯಾ, ಈ ಪಟ್ಟಿಯಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪ್ಲೀಟ್



ಬಲಿಷ್ಟವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ಧಣಿಗಳು ಕೊಂಡುಕೊಳ್ಳುತ್ತಾ ಇದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವರಿ. ಬಹುಮಾನ ತಪಸೀಲು—(1) ಕನ್ನಡಿ, (2) ಕಂಪಾಸ್, (3) ಜರ್ಮನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಚೈನ್.

ನಮ್ಮ ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,

[252-5] 3, ಇರುಳಪ್ಪನ ಬೀದಿ, ಮದರಾಸು.

To P. D. Bhargova, Esqr:
Manager, General Assurance Society Ltd., Ajmer.

Re Policy No:-2196 C. I. (Deceased)
Mr. P. Srinivasamoortha Char.

Dear sir,
I have this day received your Madras Bank cheque No:-Co54170 for Rs 978/1/- from the Branch Secretary, of Bangalore, in settlement of claim under the above policy No. 2196, Further I desire you and your agents my deep appreciation for the prompt manner in which you settled my claim of Rs. 1,000/- of the above policy on my husband's life. Indeed, your Insurance Office is very honest and settles the claim very early, earlier than the other Insurance Companies, I think. Further I thank Mr. S. P. Ramanna, son of Sowley Purnachar, your Mysore Agent, for the trouble he took in getting my husband's life Insurance.

Yours Faithfully,
Mark of RAMANAKK
Wife of Srinivasamoortha Char.

[142-21]

ಗೃಹಕೃತ್ಯದ ನೋಟೀಸು.

ತುಮಕೂರಿನಲ್ಲಿ ನಾಲ್‌ಬಂದು ಬೀದಿಯಲ್ಲಿರುವ ಮಹಮದ್ ಯಾಸಿಂ ಸಾಬರ ಹೆಂಡತಿ ಜೋರಾಬಿ ಅಮ್ಮನಾದ ನನಗೂ ಮತ್ತು ಮುತಮನ್ನ ಮಕ್ಕಳಿಗೂ ಸಹಾ ಮೋಸ ಮಾಡಬೇಕೆಂತ ಸದರಿ ಮಹಮದ್ ಯಾಸಿಂ ಸಾಬರ ನಿಕಾ ಹೆಂಡತಿ ಬೀಬೀಜಾಬಿಯು ಇತರರ ದುರ್ಬೋಧನೆಗೆ ಒಳಪಟ್ಟು ಮನೆಯಲ್ಲಿದ್ದ ಕಾಗದಪತ್ರಗಳು ಮತ್ತು ಸುಮಾರು 1,000 ರೂಪಾಯಿ ಬೆಲೆ ಬಾಳುವ ಚಿನ್ನ ಬೆಳ್ಳಿ ನಗನಳು ವಸ್ತುಗಳನ್ನು ತೆಗೆದುಕೊಂಡು 1915 ನೇ ಡಿಸೆಂಬರ್ ತಾ. 4 ರಲ್ಲಿ ಮೈಸೂರಿಗೆ ಹೊರಟು ಹೋಗಿರುತ್ತಾಳೆ. ಮಹಮದ್ ಯಾಸಿಂ ಸಾಬರ ಆಸ್ತಿಯನ್ನು ಮಾರಲು ಬೀಬೀಜಾಬೀಗೇ ಆಗಲೀ ಅವರ ಮಕ್ಕಳಿಗೇ ಆಗಲೀ ಹಕ್ಕಿರುವದಿಲ್ಲ. ಮೈನರ್ ಮಕ್ಕಳಿಗೆ ಬೀಬೀಜಾಬಿಯು ನ್ಯಾಯವಾದ ಗಾರ್ಡಿಯನ್ ಸಹಾ ಆಗಿರುವದಿಲ್ಲ. ಸ್ವತ್ತುಗಳನ್ನು ಅವರುಗಳಿಂದ ಯಾವ ವಿಧವಾಗಿಯೂ ಯಾರೂ ತೆಗೆದುಕೊಳ್ಳಕೂಡದು. ಈಗ ಗಾರ್ಡಿಯನ್ ಆಗುತ್ತೇನೆಂದು ಹೇಳುವವನು ಸಿಪಾಯಿ ಷೇಕ್ ಫರೀದ್ ಸಾಬರ ಮಗ ಇಬ್ರಾಹಿಂ ಸಾಬಿಗೂ, ಸಾರಾಯಿ ಕಂಟ್ರಾಕ್ಟರ್ ಮೊಹದ್ದೀನ್ ಕುಟ್ಟಿ ಮಗಳು ಬೀಬೀ ಜಾಬೀಗೂ ಗಾರ್ಡಿಯನ್ ಆಗುವ ವಿಷಯದಲ್ಲಿ ಏನೂ ಹಕ್ಕು ಇರುವುದಿಲ್ಲ. ಮಹಮದ್ ಯಾಸಿಂ ಸಾಬರ ಹೆಂಡತಿ ಜೋರಾಬಿ ಅಮ್ಮ ಗಾರ್ಡಿಯನ್ನಾಗಿರುತ್ತಾರೆ. ಬೇರೆ ಹಕ್ಕುದಾರ್ರು ಸಹ ಇರುತ್ತಾರೆ. ತಿಳಿಯುವದು.

[280-1] ಜೋರಾಬಿ ಅಮ್ಮನ ರುಜು.

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೧೫ ನೇ ಇಸವಿ ಡಿಸೆಂಬರ್ ತಾ. ೧೬ ನೇ ಗುರುವಾರ.

ನಮ್ಮ ಸಂಸ್ಥಾನದ ಅಮಲ್ದಾರರು ಸತ್ಯಸಂಧರಲ್ಲವೇ?

ಒಂದಾನೊಂದು ದಿನ ಕೆಲವು ದೊಡ್ಡ ಮನುಷ್ಯರು ರೈಲ್ ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗ್ಗೆ ಪರಸ್ಪರ ಕಲೆತು ಮಾತನಾಡುತ್ತಾ ಇರುವಲ್ಲಿ ನಮ್ಮ ಸಂಸ್ಥಾನದ ಅಮಲ್ದಾರರುಗಳ ಸ್ಥಿತಿಗತಿಯ ವಿಚಾರವಾಗಿಯೂ, ಅವರ ಶೀಲಸ್ವಭಾವಗಳ ವಿಷಯವಾಗಿಯೂ ಪ್ರಸ್ತಾಪ ಬಂದಿತು. ಅವರುಗಳು ಆಡಿಕೊಂಡ ಮಾತುಕಥೆಗಳಲ್ಲಿ ಅಮಲ್ದಾರರು ಒಟ್ಟಿನಲ್ಲಿ ಅಷ್ಟೇನೂ ಸತ್ಯಸಂಧರಲ್ಲವೆಂದೂ, ಆ ಪೈಕಿ ಕೆಲವರು ಮಾತ್ರ ಒಳ್ಳೆಯ ಶೀಲಸ್ವಭಾವವುಳ್ಳವರೆಂದೂ ಸಾಮಾನ್ಯವಾಗಿ ಗೊತ್ತಾಯಿತು. ಈ ರೀತಿ ಮಾತನಾಡಿಕೊಂಡವರು ಸಾಧಾರಣರೇನೂ ಅಲ್ಲ; ಸಂಸ್ಥಾನದ ಉದ್ಯೋಗಗಳಲ್ಲಿ ವಿಶೇಷ ಪರಿಶ್ರಮವೂ ಅನುಭವವೂ ಉಳ್ಳವರಾಗಿಯೂ ಇದ್ದು, ಅವರು ಮನಃಪೂರ್ವಕವಾಗಿ ಆ ರೀತಿ ಹೇಳಿರಬೇಕೆಂದು ತೋರಿತು.

ಈ ರೀತಿಯಾದ ಮಾತುಗಳನ್ನು ಕೇಳಿದಾಗ ನಮಗೆ ನಾನಾ ಬಗೆಯ ಯೋಚನೆಗಳುಂಟಾದವು. ಅವರು ಆಡಿದ ಮಾತುಗಳು ನಿಜವೇ? ಅಥವಾ, ಅವರು ಮನಸ್ಸಿಗೆ ತೋಳಿದಂತೆ ಮಾತನಾಡಿದರೇ? ಅವರು ಆ ರೀತಿ ಹೇಳಲು ಆಧಾರವೇನಾದರೂ ಉಂಟೋ? ಇಲ್ಲವೇ, ಅವರು ಬೇಕೆಂದು ಹುಟ್ಟಿಸಿಕೊಂಡು ಹಾಗೆ ಹೇಳಿದರೋ? ಅವರು ಆಡಿದ ಮಾತುಗಳ ಯಥಾರ್ಥವಲ್ಲದೆಹೋದ ಪಕ್ಷದಲ್ಲಿ ಅಮಲ್ದಾರರನ್ನು ನಿಷ್ಕಾರಣವಾಗಿ ದೂರಿದ ಹಾಗಾಗೋಣದರಿಂದ ಆ ವಿಷಯದಲ್ಲಿ ಸಂತಾಪಪಡಬೇಕಾಗುವುದು. ಒಂದು ವೇಳೆ ಆ ದೊಡ್ಡ ಮನುಷ್ಯರ ಮಾತುಗಳಲ್ಲಿ ಅಲ್ಪ ಸ್ವಲ್ಪವಾದರೂ ನಿಜವಿದ್ದರೆ ನಿಜಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಿ ತಿಳಿದು ಅಂಥಾ ದುರ್ಮಾರ್ಗತನವನ್ನು ಬೇಗ ಪರಿಹರಿಸಬೇಕು. ಅಮಲ್ದಾರರುಗಳೇ ತಮ್ಮ ಗುಂಪಿನ ಅಧಿಕಾರಿಗಳ ಸತ್ಯಸಂಧತೆಯನ್ನೂ ಗೌರವವನ್ನೂ ಕಾಪಾಡಿಕೊಳ್ಳುವುದಕ್ಕೋಸ್ಕರಲೂ, ನಮ್ಮ ಸೀಮೆಯ ಮಾನವನ್ನೂ ಘನತೆಯನ್ನೂ ಸಂರಕ್ಷಿಸುವುದಕ್ಕೋಸ್ಕರಲೂ ಸಾಹಸ ಪ್ರಯತ್ನಗಳನ್ನು ನಡಿಸಿ, ತಮ್ಮೊಳಗೆ ಸೇರಿಕೊಂಡು ತಮ್ಮ ಗುಂಪಿಗೇ ಅಪಮಾನವನ್ನು ತರುತ್ತಿರುವಂಥಾ ಅಯೋಗ್ಯರನ್ನು ಎತ್ತಿಹಾಕಿಬಿಡಬೇಕು. ಅವರುಗಳಲ್ಲಿರುವ ಗುಣದೋಷಗಳು ಬಹುಶಾ ಅವರವರಿಗೆ ಪರಸ್ಪರ ತಿಳಿದೇ ಇದೆ. ಅವರು ಪ್ರಯತ್ನಪಟ್ಟರೆ ತಮ್ಮಗಳ ನಡುವೆ ಇರುವಂಥಾ ಅಯೋಗ್ಯರನ್ನು ಎತ್ತಿಹಾಕಿ ಬೇರ್ಪಡಿಸಬಹುದಾಗಿದೆ. ಇದಲ್ಲದೆ ಅ॥ ಕಮಿಷನರುಗಳೂ, ಡೆಪ್ಯುಟಿ ಕಮಿಷನರುಗಳೂ, ರೆವಿನ್ಯೂ ಕಮಿಷನರವರೂ ಏಕೀಭವಿಸಿ ರೆವಿನ್ಯೂ ಇಲಾಖೆಯ ಅಧಿಕಾರಿಗಳ ಪೈಕಿ ದುರ್ಮಾರ್ಗಿಗಳಾದವರನ್ನು ಆರಿಸಿ ತೆಗೆದುಹಾಕಿ, ನಮ್ಮ ಸಂಸ್ಥಾನಕ್ಕೇ ಅಪಕೀರ್ತಿ ತರುವಂಥವರು ಆ ಇಲಾಖೆಯಲ್ಲಿಲ್ಲದಂತೆ ಪರಸ್ಪರ ಸಹಾಯಮಾಡಿ ನೋಡಿಕೊಳ್ಳುತ್ತಾ ಬರಬೇಕು. ಅವರು ತಮ್ಮ ಇಲಾಖೆಯಲ್ಲಿ ಕೆಲಸಮಾಡುವಂಥಾ ಅಧಿಕಾರಿಗಳ ಯೋಗ್ಯತೆ ಶೀಲಸ್ವಭಾವಾದಿಗಳನ್ನು ಪರಿಷ್ಕಾರವಾಗಿ ಬಲ್ಲವರಾಗಿಯೂ, ತಮ್ಮ ಇಲಾಖೆಯನ್ನು ನಿರ್ದುಷ್ಟವಾಗಿ ಇಟ್ಟುಕೊಳ್ಳುವ ಭಾಗದಲ್ಲಿ ಕುತೂಹಲವುಳ್ಳವರಾಗಿಯೂ ಇರಬೇಕಾಗಿದೆ.

ಈ ವಿಚಾರದಲ್ಲಿ ಪ್ರಜೆಗಳ ಕರ್ತವ್ಯವೂ ಒಂದುಂಟು. ಪ್ರಜೆಗಳು ಲಂಚಕೊಡುವವರಾಗಿಲ್ಲದಿದ್ದರೆ ಅಮಲ್ದಾರರು ಲಂಚ ತೆಗೆದುಕೊಳ್ಳಲಾರರು. ಲಂಚ ಕೊಡುವುದಕ್ಕೆ ಜನಗಳು ಸಿದ್ಧರಾಗಿರುವ ತನಕ ಲಂಚಕೋರರಾದ ಅಧಿಕಾರಿಗಳೂ ನೌಕರರೂ ಇದ್ದೇ ಇರುತ್ತಾರೆ. ಈ ಭಾಗದಲ್ಲಿ ಪ್ರಜಾಪ್ರತಿನಿಧಿಗಳಾದವರು ಮರೆಮಾಚದೆ ಸಂಗತಿಗಳನ್ನು ಸ್ಪಷ್ಟವಾಗಿ ಎತ್ತಿಹಾಕಿ ಹೇಳಬೇಕು. ಪ್ರಜಾಪ್ರತಿನಿಧಿ ಸಭೆಗೆ ಸಂಸ್ಥಾನಾಮಳೆಯಿಂದ ಬರುವ ಮೆಂಬರುಗಳಿಗೆ ಸ್ಥಳೀಯ ಅಧಿಕಾರಿಗಳ ಮತ್ತೂ ನೌಕರರ ವರ್ತನಗಳೂ ಶೀಲಸ್ವಭಾವಗಳೂ ಚೆನ್ನಾಗಿ ತಿಳಿದಿರುವವು. ಗ್ರಾಮಾಂತರಗಳಲ್ಲೂ ಪಟ್ಟಣ ಊರುಗಳಲ್ಲೂ ದುಷ್ಟ ಅಧಿಕಾರಿಗಳು ಪ್ರಜೆಗಳಿಂದಲೂ ರೈತರಿಂದಲೂ ಲಂಚ ತೆಗೆದುಕೊಳ್ಳುವುದು ಮೆಂಬರುಗಳಿಗೆ ತಿಳಿಯದೆ ಇಲ್ಲ. ಹಾಗಾದ ಪಕ್ಷಕ್ಕೆ ಅಂಥಾ ದುರ್ಮಾರ್ಗತನಗಳನ್ನೆಲ್ಲಾ ಗವರ್ನ್‌ಮೆಂಟಿನವರ ತಿಳುವಳಿಕೆಗೆ ತರಬೇಕಾದದ್ದು ಮೆಂಬರುಗಳ ಅವಶ್ಯ ಕರ್ತವ್ಯವಾಗಿದೆ. ಮೆಂಬರುಗಳು ಗವರ್ನ್‌ಮೆಂಟಿಗೂ ಪ್ರಜೆಗಳಿಗೂ ಮಧ್ಯವರ್ತಿಗಳಾಗಿರೋಣದರಿಂದ ಅವರು ಪೌರುಷವಂತರಾಗಿ ವರ್ತಿಸಬೇಕಾದದ್ದೇ ಅವರ ಧರ್ಮ.

ಸಂಸ್ಥಾನಾಮಳೆ ವಿದ್ಯೆಯು ಹರಡುತ್ತಾ ಇದೆ. ಜನಗಳು ವಿದ್ಯಾವಂತರಾದ ಹಾಗೆ ಸಂಧತೆಯೂ ಸತ್‌ಶೀಲ ಸ್ವಭಾವಗಳೂ ಬೆಳೆಯುವವೆಂದೂ, ವಿದ್ಯಾವಂತರು ಪ್ರಜೆಗಳೊಡನೆ ವ್ಯವಹರಿಸುವಾಗ್ಗೆ ಸಚ್ಚರಿತ್ರರಾಗಿಯೇ ವರ್ತಿಸುವರೆಂದೂ ನಿರೀಕ್ಷಿಸಲ್ಪಟ್ಟಿದೆ. ಅಮಲ್ದಾರರ ಗುಂಪಿನಲ್ಲಿ ಅನೇಕ ಮಂದಿ ಬಿ. ಎ. ಪರೀಕ್ಷೆಯನ್ನೂ ಇನ್ನೂ ಹೆಚ್ಚಿನ ಪರೀಕ್ಷೆಗಳನ್ನೂ ಕೊಟ್ಟು, ಸರ್ವವಿದ್ಯಾಶಾಲೆಯ ಅಂಶಗಳಾಗಿದ್ದು, ಸತ್ಯವಂತಿಕೆಯಿಂದಲೂ ಮಾನವಾಗಿಯೂ ವ್ಯವಹರಿಸುತ್ತಾ ಬರುವೆವೆಂದು ಭಾಷೆಕೊಟ್ಟು ಬಂದವರಾಗಿದ್ದಾರೆ. ಇಂಥವರು ಅಯೋಗ್ಯವಾದ ಕೃತ್ಯಗಳಲ್ಲಿ ಪ್ರವರ್ತಿಸಿದ ಪಕ್ಷದಲ್ಲಿ ಅವರ ಅಪರಾಧವು ಇಮ್ಮಡಿಯಾದೀತು. ಅಕೃತ್ಯಕ್ಕೆ ಕೈಹಾಕಿ ತಾವು ಕೊಟ್ಟ ಭಾಷೆಗೆ ತಪ್ಪಿದವೆಂದು ಅವರಿಗೇ ಮನನವಾಗುವುದು. ಪ್ರಜೆಗಳು ಕೂಡ ವಿದ್ಯಾವಂತರಾಗುತ್ತಿರುವರು. ಅವರು ನಮ್ಮ ಸೀಮೆಯ ಒಳ್ಳೇ ಹೆಸರನ್ನು ಕೆಡಿಸಿ ನಮ್ಮ ಗವರ್ನ್‌ಮೆಂಟಿಗೆ ಅಪಕೀರ್ತಿ ತರುವಂಥಾ ನಡವಳಿಕೆಗಳನ್ನು ಎಲ್ಲಿ ಕಂಡರೂ ಸೈರಿಸಿಕೊಂಡು ಸುಮ್ಮನಿರದೆ ಎತ್ತಿಹಾಕುವ ಭಾಗದಲ್ಲಿ ಸಂಕಲ್ಪಮಾಡಿಕೊಳ್ಳಬೇಕು. ಹ್ಯಾಗೂ ಪ್ರಜೆಗಳಲ್ಲಿ ಹರಡುತ್ತಿರುವ ಮೇಲ್ಕಂಡ ಅಪವಾದವು ನಿಜವಲ್ಲದೆಹೋಗಲೆಂದೂ, ನಮ್ಮ ಸಂಸ್ಥಾನದ ರೆವಿನ್ಯೂ ಇಲಾಖಾ ಅಧಿಕಾರಿಗಳೂ ನೌಕರರೂ ಸತ್ಯವಂತರೂ ಸಚ್ಚರಿತ್ರರೂ ಆಗಿದಾರೆಂದೂ ನಂಬಿ ನಿರೀಕ್ಷಿಸುತ್ತೇವೆ.

ಪಾರಮಾರ್ಥಿಕ ದಾರಿದ್ರ್ಯ.

ಗಾಡಿಯನ್ನು ಎಳೆದುಕೊಂಡು ಹೋಗುತ್ತಿರುವ ಆ ಎತ್ತನ್ನು ನೋಡಿ. ಅದಕ್ಕೆ ಯಾವ ಅಭಿಲಾಷೆಯುಂಟು? "ನನ್ನ ಯಜಮಾನನು ಯಾವಾಗ ನನ್ನನ್ನು ಈ ಭಾರವಾದ ಈ ನೊಗದಿಂದ ಬಿಡಿಸಿ ಹುಲ್ಲನ್ನೂ ಹುರುಳಿಯನ್ನೂ ಕೊಡುವನೋ? ನಾನು ಯಾವಾಗ ತೃಪ್ತಿಯಾಗಿ ತಿಂದು ಬಾಯಾರಿಕೆ ತೀರುವಷ್ಟು ನೀರನ್ನು ಕುಡಿದು ಸೊಂಪಾಗಿ ಮರದ ನೆರಳಿನಲ್ಲಿ ಮಲಗುವೆನೋ?" ಎಂಬದೇ ಅಲ್ಲವೇ? ಇದೇ ಅದರ ಮನೋರಥ. ಇದಷ್ಟು ಲಭಿಸಿತೆಂದರೆ ಅದರ ಮನೋರಥವು ಸಿದ್ಧಿಸಿತು. ಅದಕ್ಕೆ ಮತ್ತೆ ಇನ್ನೇನೂ ಬೇಕಾಗಿರುವದಿಲ್ಲ.

ಅನಂತರಲಿ. ಇಲ್ಲಿ ಹೋಗುತ್ತಿರುವ ಈ ಯುವಕನನ್ನು ನೋಡಿ. ಅವನ ಕಂಕುಳಲ್ಲಿ ಏಳೆಂಟು ದೊಡ್ಡ ಪುಸ್ತಕಗಳು. ಅವನು ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಓದುವದಕ್ಕೆ ದೀಪ ಹಚ್ಚಿ ಕೂತು ಈ ವರೆಗೂ ಓದಿ ಈಗ ಪಾಠಶಾಲೆಗೆ ಹೊತ್ತಾದುದರಿಂದ ಪುಸ್ತಕಗಳನ್ನು ತೆಗೆದುಕೊಂಡು ನುತಕ್ಕೆ ಹೊರಟನು. ಅಲ್ಲಿಗೆ ಇಷ್ಟು ಧಾವತಿಯಿಂದ ಏತಕ್ಕೆ? ಹೋಗುತ್ತಿದ್ದಾನೆಂದು ಹೇಳಬೇಕಾದ ಅಗತ್ಯವಿಲ್ಲ. ಎತ್ತಿನ ಹಾಗೆ ಅವನಿಗೂ ದೇಹವಿದೆ. ಆದರಿಂದ ಅವನಿಗೂ ಆಹಾರ, ಪಾನ, ನಿದ್ರೆಗಳು ಬೇಕು. ಆದರೆ ಅಷ್ಟು ದೊರೆತ ಮಾತ್ರಕ್ಕೇ ಅವನು ತೃಪ್ತಿಪಡುವದಿಲ್ಲ. ಅವನ ಮನೋರಥವು ಬೇರೆ. ಪಂಚೇಂದ್ರಿಯಗಳಿಗೆ ವಿಷಯಗಳಾದ ವಸ್ತುಗಳು ಅವನಿಗೆ ತೃಪ್ತಿಯನ್ನು ಕೊಡಲಾರವು ಅವನಿಗೆ ಪಂಚೇಂದ್ರಿಯಗಳಲ್ಲದೆ ಮತ್ತೊಂದು ಇಂದ್ರಿಯ ಉಂಟು. ಅದನ್ನು ಜ್ಞಾನೇಂದ್ರಿಯವೆಂದು ಹೇಳುವರು ಆ ಇಂದ್ರಿಯಕ್ಕೆ ವಿಷಯವಾದ ಜ್ಞಾನಾರ್ಜನೆಗೆ ಆತುರಪಟ್ಟು ಪಾಠಶಾಲೆಯಲ್ಲಿರುವ ಬೋಧಕನ ಬಳಿಗೆ ಹೋಗುತ್ತಿದ್ದಾನೆ

ಪ್ರಾರ್ಥನೆ ಎಂದರೇನು? ಹುಲ್ಲು, ಹುರುಳಿ, ನೀರು, ನೆರಳು, ನಿದ್ದೆಗಳನ್ನು ಬಯಸಿ ಹುಡುಕುವದು ಎತ್ತಿನ ಪ್ರಾರ್ಥನೆ. ಗುರುವಿನ ಪಾದಗಳ ಹತ್ತಿರ ಕುಳಿತುಕೊಂಡು ಅವನು ನೇಮಿಸಿದ ಪಾಠಗಳನ್ನು ಓದಿ ಅದರ ಅರ್ಥವನ್ನು ಕೇಳಿ ಮನನ ಮಾಡುವದು ಶಿಷ್ಯನ ಅಭಿಲಾಷೆ ಆದರೆ ಮನುಷ್ಯನಿಗೆ ಅವನ ಪಂಚೇಂದ್ರಿಯಗಳಿಂದೊಡಗೂಡಿದ ದೇಹವೂ ಜ್ಞಾನಾರ್ಜನೆಯನ್ನು ಅಭಿಲಾಷಿಸುವ ಮನಸ್ಸೂ ಇರುವದಲ್ಲದೆ, ಈ ಜಗತ್ತನ್ನು ನಿರ್ಮಾಣ ಮಾಡಿ ಅದನ್ನು ಪಾಲಿಸುವ ಸಾಕ್ಷಾತ್ ದೇವರ ಸಂಬಂಧವೇ ಬೇಕಾಗಿರುತ್ತದೆ. ದೇಹ ಸಂರಕ್ಷಣೆ ಮತ್ತು ಮನಸ್ಸನ್ನು ಸಂತೋಷಪಡಿಸುವ ವಿದ್ಯೆ ಇವೆರಡೂ ಒಬ್ಬನಿಗೆ ದೊರೆತರೂ ಅವು ಅವನನ್ನು ಪೂರ್ತಿಯಾಗಿ ತೃಪ್ತಿಪಡಿಸಲಾರವು. ಲೋಕವು ಹೇಗೆ ನಿರ್ಮಾಣವಾಯಿತು? ಅದರಲ್ಲಿ ವರ್ಷೇ ವರ್ಷೇ ವಸಂತಋತು, ವರ್ಷಋತು, ಹೇಮಂತಋತುಗಳು ಹೇಗಾಗುತ್ತವೆ? ಬಿಸಿಲೂ, ಮಳೆಯೂ, ಮಾಗಿಯೂ ಕಾಲಕಾಲಕ್ಕೆ ಆಗುವದಕ್ಕೆ ಕಾರಣವೇನು? ಮರಗಳಿಗೆ ವರುಷ ವರುಷಕ್ಕೆ ನವೀನವಾದ ಚಾರುತರದ ಹಸರು ವಸ್ತ್ರಗಳನ್ನುಡಿಸಿ ಅವುಗಳನ್ನು ಫಲಪುಷ್ಪಗಳಿಂದ ಶೃಂಗರಿಸಿ ಮಾಡುವವನ್ಯಾರು? ಈಗ ಎಲ್ಲಿ ನೋಡಿದರೂ ರೈತರು ಹುಲ್ಲನ್ನೂ ಧಾನ್ಯವನ್ನೂ ಶೇಖರಿಸಿ ಬಣವೆಗಳಾಗಿ ಒಟ್ಟುತ್ತಿರುವರು. ಕಣಗಳಲ್ಲಿ ದವಸದ ರಾಶಿಗಳು ಮತ್ತೊಂದು ವರ್ಷದ ಸಮೃದ್ಧಿಯನ್ನು ನಿರೀಕ್ಷಿಸಿ ಕೃತಜ್ಞತೆಗೆ ನಮ್ಮ ಮನಸ್ಸುಗಳನ್ನು ಪ್ರೇರಿಸುತ್ತಿರುವವು. ಇವೆಲ್ಲಾ ಯಾರ ಕೆಲಸ? ಇವುಗಳನ್ನೆಲ್ಲಾ ಅದೃಶ್ಯಾಕಾರವಾಗಿ ನಮ್ಮ ಮುಂದೆ ಪ್ರತಿ ವರುಷವೂ ಮಾಡುತ್ತಿರುವವನ್ಯಾರು? ಅವನು ಯಾಕೆ ಹೀಗೆ ಮಾಡುತಿದ್ದಾನು? ಈ ವಿಷಯದಲ್ಲಿ ಸತ್ಯವೇದವು ಹೇಳುವದೇನೆಂದರೆ—ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನೂ ಉಂಟುಮಾಡಿದ ದೇವರು ಭೂಮ್ಯಾಕಾಶಗಳ ಒಡೆಯನಾಗಿರುವದರಿಂದ ಆತನು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ ವಾಸಮಾಡುವವನಲ್ಲ. ತಾನೇ ಎಲ್ಲರಿಗೂ ಜೀವ, ಶ್ವಾಸ ಮುಂತಾದದ್ದೆಲ್ಲವನ್ನೂ ಕೊಡುವವನಾಗಿರಲಾಗಿ ಕೊರತೆಯುಳ್ಳವನಂತೆ ಮನುಷ್ಯರ ಕೈಗಳಿಂದ ಸೇವೆ ಹೊಂದುವವನೂ ಅಲ್ಲ. ಪ್ರತಿಯೊಂದು ದೇಶದ ಪ್ರತಿಯೊಬ್ಬ ಮನುಷ್ಯನೂ ಹ್ಯಾಗಾದರೂ ತನ್ನನ್ನು ಹುಡುಕಿ ಕಂಡುಕೊಳ್ಳಲಿಯೆಂದು ತನ್ನನ್ನು ಹುಡುಕುವ ಅಭಿಲಾಷೆಯುಳ್ಳವರನ್ನಾಗಿ ನಿರ್ಮಾಣ ಮಾಡಿದನು. ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನೂ ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನು ಅವರವರ ನಿವಾಸಗಳ ಮೇರೆಗಳನ್ನು ನಿಷ್ಕರ್ಷಿಸಿ ಭೂಮಂಡಲದಲ್ಲೆಲ್ಲಾ ವಾಸಮಾಡಿಸಿದನು. ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ. ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ. ಕೆಲವು ವಿದ್ವಾಂಸರೂ, ಕವೀಶ್ವರರೂ ಈ ವಿಷಯವನ್ನು ವಿಚಾರಿಸಿ—ನಾವು ದೇವರ ಸಂತಾನದವರೇ ಎಂಬದಾಗಿ ಹೇಳಿದ್ದಾರೆ ನಾವು ದೇವರ ಸಂತಾನವಾಗಿದ್ದ ಮೇಲೆ ದೈವವು ಮನುಷ್ಯನ ಶಿಲ್ಪವಿದ್ಯೆಯಿಂದಲೂ ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ ಬೆಳ್ಳಿ ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು. ಆತನು ಆ ಅಜ್ಞಾನದ ಕಾಲಗಳನ್ನು ಲಕ್ಷ್ಯಕ್ಕೆ ತರಲಿಲ್ಲ ಈಗಲಾದರೋ ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ ಯಾಕಂದರೆ ಆತನು ಒಂದು ದಿನವನ್ನು ನಿಷ್ಕರ್ಷೆ ಮಾಡಿದ್ದಾನೆ. ಮತ್ತು ಆ ದಿನದಲ್ಲಿ ನೀತಿಗನುಸಾರವಾಗಿ ಭೂಲೋಕದ ಎಲ್ಲಾ ನಿವಾಸಿಗಳನ್ನೂ ನ್ಯಾಯವಿಚಾರಿಸುವನು. ಈ ನ್ಯಾಯವಿಚಾರಣೆಯ ಸಲುವಾಗಿ ಕೆಲಸಕ್ಕೆ ಒಬ್ಬ ಪುರುಷನನ್ನು ನ್ಯಾಯಾಧಿಪತಿಯಾಗಿ ನೇಮಿಸಿದ್ದಾನೆ.

ಈ ದೇವರನ್ನೂ ಆತನು ನೇಮಿಸಿರುವ ಲೋಕದ ನ್ಯಾಯಾಧಿಪತಿಯನ್ನೂ ತಿಳಿಯದಿರುವದೇ ಮನುಷ್ಯರ ದಾರಿದ್ರ್ಯವೂ ದೌರ್ಭಾಗ್ಯವೂ ಆಗಿದೆ. ಈ ಮನುಷ್ಯರೂ ದೃಶ್ಯವಾದ ವಸ್ತುಗಳಲ್ಲಿ ಕೇವಲ ಲಕ್ಷ್ಯವಿಟ್ಟು ಅವುಗಳನ್ನು ಸಂಪಾದಿಸುವದಕ್ಕೂ ಅನುಭೋಗಿಸುವದಕ್ಕೂ ಅತ್ಯಾತುರಪಡುತ್ತಾರೆ. ಆದರೆ ಈ ದೃಶ್ಯವಸ್ತುಗಳಿಗೆಲ್ಲಾ ಆಧಾರನಾಗಿರುವ ದೇವರು ಅದೃಶ್ಯನಾಗಿ ಅವರ ಸಮೀಪದಲ್ಲೇ ಇದ್ದರೂ ಆತನನ್ನು ಬಯಸುವದಿಲ್ಲ, ಹುಡುಕುವದಿಲ್ಲ. ಇದು ಬುದ್ಧಿವಂತರ ಲಕ್ಷಣವಲ್ಲ.

ಮತ್ತು ದೇವರು ಮನುಷ್ಯರಿಗೆ ತನ್ನನ್ನು ಪ್ರಕಟಮಾಡಿ ಅವರ ದಾರಿದ್ರ್ಯ ದಾರಿದ್ರ್ಯವನ್ನು ಪರಿಹರಿಸಬೇಕೆಂದು ಈ ಲೋಕದಲ್ಲಿ ಯೇಸುಕ್ರಿಸ್ತನೆಂಬ ಹೆಸರಿನಿಂದ ಅವತಾರವೆತ್ತಿ ಬಂದನು. ಆತನ ಮುಖಾಂತರವಾಗಿ ಯಾರು ರಕ್ಷಣೆಯನ್ನು ಹೊಂದಬೇಕೆಂದು ಅಭಿಲಾಷೆ ಪಡುತ್ತಾರೋ ಅವರಿಗೆ ದೇವರ ಅನುಗ್ರಹವು ದೊರೆತು ಅವರು ತೃಪ್ತಿಯನ್ನು ಹೊಂದುವರು.

ಯುದ್ಧದ ಸಮಾಚಾರಗಳು.

ಸೆರ್ಬಿಯಾದಲ್ಲಿ ಶತ್ರುವಿನ ಜಯ.

ರಣರಂಗಗಳ ಎಲ್ಲಾ ಪ್ರದೇಶಗಳಿಂದಲೂ ಈ ವಾರ ವಿಶೇಷ ಯುದ್ಧ ವರ್ತಮಾನಗಳು ಬಂದಿಲ್ಲ. ಸರ್ಬಿಯಾದಲ್ಲಿ ಹೊರತು ಇತರ ಕಡೆಗಳಲ್ಲಿ ಯುದ್ಧ ಕಾರ್ಯಗಳೂ ಅಷ್ಟೇನೂ ನಡೆಯಲಿಲ್ಲ. ಸರ್ಬಿಯಾದೇಶಕ್ಕೆ ನಡೆದಿರುವ ಬದಲಾವಣೆಗಳೇನೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಜರ್ಮನಿಯವರು ಈಗ ರಾಜಿ ಮಾಡಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿರುವರಂತೆ ಹಲವು ಶಾಂತಿವರ್ತಮಾನಗಳು ಹೇಳುವವು; ಆದರೆ ಇವೆಲ್ಲಾ ಬರಿಯ ಜನವಾರ್ತೆಯೇ ಆಗಿರಬಹುದೆಂದು ಕಾಣುತ್ತದೆ. ಅನೇಕ ಅಮೇರಿಕನರು ಸ್ವಿಟ್ಜರ್ಲೆಂಡಿಗೆ ಬಂದು ಅಲ್ಲಿಂದಲೂ, ಅಲ್ಲಿ ಎಲ್ಲಾ ರಾಜ್ಯಗಳ ಪ್ರತಿನಿಧಿಗಳನ್ನು ಸಂಧಿಸುವದಕ್ಕೆ ಅವಕಾಶ ಮಾಡಿ ಹತ್ತಿರದೇಶದ ಅವರೆಲ್ಲರಿಗೆ ಕಲಿತು ಹತ್ತಿ ರಾಜ್ಯಗಳವರ ನಾಯಕರ ಸಮ್ಮೇಳನಗಳನ್ನು ನಡಿಸಿ ಸಂಧಿಯ ಶರತ್ತುಗಳನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿರುವರೆಂದೂ ತಿಳಿಸಲಾಗಿದೆ. ಮಿತ್ರಮಂಡಲಿಯವರಾದರೋ ಯುದ್ಧವನ್ನು ಜಯಿಸುವ ತನಕ ನಡಿಸಿಯೇ ತೀರಬೇಕೆಂಬ ಭಾಗದಲ್ಲಿ ಮೊದಲಿಗಿಂತ ಇನ್ನೂ ಹೆಚ್ಚು ಸಂಕಲ್ಪಮಾಡಿಕೊಂಡಿದ್ದಾರೆ. ಜನರಲ್ ಜೊಫ್ರೆಯವರನ್ನು ಸಮಸ್ತ ಸೈನ್ಯಗಳಿಗೂ ಅಧಿಪತಿಯಾಗಿ ನೇಮಿಸಿದರು ಬ್ರಿಟಿಷ್, ಫ್ರೆಂಚ್, ಬೆಲ್ಜಿಯಂ, ರಷ್ಯನ್, ಇಟೇಲಿಯನ್, ಸರ್ಬಿಯನ್, ಜಪಾನೀಸ್ ಸೈನ್ಯಗಳಲ್ಲಿ ಪ್ರಮುಖರಾದ ದಳಪತಿಗಳನ್ನು ಸೇರಿಸಿ ಯುದ್ಧದ ಮಂತ್ರಾಲೋಚನಾ ಸಭೆಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಎಲ್ಲಾ ಯುದ್ಧ ರಂಗಗಳಲ್ಲೂ ನಡೆಸಲ್ಪಡತಕ್ಕಂಥಾದ ಕಾರ್ಯಗಳನ್ನು ಈ ಸಭೆಯಲ್ಲಿ ಪರ್ಯಾಲೋಚನೆ ಮಾಡಿ ಸಭೆಯ ಒಪ್ಪಿಗೆಯಂತೆ ನಡೆಯುವ ಹಾಗೆ ಮಾಡಲ್ಪಟ್ಟಿದೆ ಬ್ರಿಟನ್ನಿನಲ್ಲಿ ಪ್ರಜೆಗಳು ಮೊದಲಿಗಿಂತಲೂ ಬಹಳ ಹೆಚ್ಚಾಗಿ ಬಂದು ಸೈನ್ಯಕ್ಕೆ ಸೇರಿಕೊಳ್ಳುತ್ತಿದ್ದಾರೆ. ಸೇರುತ್ತೇನೆಂದು ಹೇಳಿ ಬಂದವರ ಹೆಸರುಗಳನ್ನು ರಿಜಿಸ್ಟರಿಗೆ ದಾಖಲ್ ಮಾಡಿಕೊಂಡು ಅವರಿಂದ ಅವಶ್ಯವಾದ ಪ್ರಮಾಣ ಮಾಡಿಸಿಕೊಳ್ಳುವದಕ್ಕೇ ಅವಕಾಶವಿಲ್ಲದಂತಾಗಿದೆ ಜನಗಳನ್ನು ಸೈನ್ಯಕ್ಕೆ ಬಲವಂತದಿಂದ ಸೇರಿಸಿಕೊಳ್ಳುವ ವಿಷಯದಲ್ಲಿ ಸರ್ಕಾರದವರು ನಿರ್ಬಂಧವೇನೂ ಮಾಡಬೇಕಾಗುವದಿಲ್ಲವೆಂದು ಕಾಣುತ್ತದೆ. ಜರ್ಮನಿಯ ಛಾನ್ಸೆಲರೆಂಬ ಅಧಿಕಾರಿಯು ಜರ್ಮನಿ ಪಾರ್ಲಿಮೆಂಟಿನಲ್ಲಿ ಭಾಷಣವನ್ನು ಮಾಡಿ ಬ್ರಿಟನ್ನಿನ ಮೇಲೆ ಬಹಳ ಕೋಪವನ್ನೂ ದ್ವೇಷವನ್ನೂ ಪ್ರಕಾಶಪಡಿಸಿರುತ್ತಾನೆ ಆದರೂ ಯುದ್ಧವು ದೀರ್ಘಕ್ಕೆ ಎಳೆದುಕೊಂಡ ಭಾಗದಲ್ಲಿ ಅವನಿಗೆ ವ್ಯಥೆಯುಂಟಾಗಿದೆ ಬ್ರಿಟಿಷರ ಸಮುದ್ರ ಸೈನ್ಯವು ಎಂದಿನಂತೆ ಸರ್ವಾಧಿಕಾರವನ್ನು ಪಡೆದಿದೆ ಎಂದು ಒಪ್ಪಿಕೊಳ್ಳುತ್ತಾನೆ.

ಪಶ್ಚಿಮ ರಣರಂಗದಲ್ಲಿ.

ಈ ಯುದ್ಧಭೂಮಿಯ ಸೈನ್ಯಗಳ ಸಾಲಿನಲ್ಲಿ ಕಳೆದ ವಾರವೂ ಅಪಾರವಾದ ಫಿರಂಗಿ ಗುಂಡುಗಳ ಹಾರಾಟವೂ, ಕೆಲವು ಕಂದಕಗಳು ನಾಶಮಾಡಲ್ಪಟ್ಟದ್ದೂ, ಶತ್ರುವಿನ ಕಂದಕಗಳನ್ನು ಹಾಳು ಮಾಡುವುದಕ್ಕೆ ಸುರಂಗಗಳನ್ನು ತೋಡಿ ಮದ್ದು ಹಾರಿಸಿದ್ದು, ವಿಮಾನ ಯಂತ್ರಗಳಿಂದ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದ್ದು, ಪಕ್ಕದ ರೈಲ್ ರಸ್ತೆಗಳನ್ನೂ ಅವರು ಮದ್ದು ಗುಂಡನ್ನು ಇಟ್ಟುಕೊಂಡಿದ್ದ ಉಗ್ರಾಣಗಳನ್ನೂ ಹಾಳು ಮಾಡಿದ್ದು ಅಲ್ಲದೆ ಇನ್ಯಾವ ವಿಶೇಷವಾದ ಕದನ ಕಾರ್ಯಗಳೂ ನಡೆದಿಲ್ಲ. ಕೆಲವು ಸಣ್ಣ ಪುಟ್ಟ ಕದನಗಳು ನಡೆದವು; ಇವುಗಳಲ್ಲಿ ಕೆಲವು ಸೈನ್ಯಗಳು ಮಾತ್ರ ಸೇರಿ ಕಾದಾಡಿರುತ್ತವೆ. ಮಳೆಯಿಂದ ತೇವವೂ ಚಳಿಯೂ ವಿಶೇಷವಾಗಿದೆ ಹವಾ ಬದಲಾವಣೆಯಾಗಿರುವ ಸ್ಥಿತಿಯನ್ನು ಸೈನಿಕರು ಸೈರಿಸಿಕೊಳ್ಳುವುದು ಕಷ್ಟವಾಗಿದೆ. ಚಳಿಯ ಕೊರತವನ್ನು ತಡೆಯಲಾರದೆ ಕಷ್ಟಪಡುತ್ತಿದ್ದ ಸುಮಾರು 770 ಬ್ರಿಟಿಷ್ ಸೈನಿಕರನ್ನು ಕೆಲವು ಕಾಲದ ಮಟ್ಟಿಗೆ ಕಂದಕಗಳಿಂದ ವಾಪಸು ಕರಸಿಕೊಳ್ಳಬೇಕಾಯಿತು.

ಬೆಲ್ಜಿಯಮ್‌ಗೆ ಸೇರಿದ ನಾಮೂರ್ ಎಂಬಲ್ಲಿ ಮದ್ದು ತಯಾರಿಸುವ ಒಂದು ಕೋಟೆಯು ಹಾರಿ ಹಾಳಾಯಿತೆಂದೂ, ಅಲ್ಲಿ 80 ಮಂದಿ ಜರ್ಮನಿಯವರು ಮೃತಪಟ್ಟರೆಂದೂ ತಿಳಿದುಬಂದಿದೆ.

ಬೆಲ್ಜಿಯಮ್ ತೀರದ ಬಳಿ ಬ್ರಿಟಿಷರ ಒಂದು ಹಡಗು ನೆಲದ ಮೇಲೆ ಹತ್ತಿ ನಿಂತುಕೊಂಡಿತು. ಜರ್ಮನಿಯ ವಿಮಾನ ಯಂತ್ರಗಳು ಆ ಹಡಗಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಅಷ್ಟರೊಳಗೇ ಫ್ರೆಂಚರ ವಿಮಾನ ಯಂತ್ರಗಳು ಬಂದು ಶತ್ರುವಿನ ವಿಮಾನ ಯಂತ್ರಗಳನ್ನು ಓಡಿಸಿಬಿಟ್ಟವು. ಬಳಿಕ ಫ್ರೆಂಚರ ಒಂದು ಟಾರ್ಪೀಡೋ ದೋಣಿಯು ಆ ಹಡಗನ್ನು ಎಳೆದು ಸಮುದ್ರಕ್ಕೆ ಬಿಟ್ಟಿತು.

ಪೂರ್ವ ರಣರಂಗದಲ್ಲಿ.

ರಷ್ಯಾ ಯುದ್ಧಸಾಲಿನ ಕಡೆಯಿಂದ ಕಳೆದ ವಾರ ಯಾವ ವರ್ತಮಾನವೂ ಬಂದಿಲ್ಲವೆಂದೇ ಹೇಳಬಹುದು. ರಷ್ಯಾದವರು ಸಾಹಸಪಟ್ಟು ಜರ್ಮನಿಯ ಒಂದು ವಿಮಾನಯಂತ್ರವನ್ನು ಅಂತರಿಕ್ಷದಿಂದ ಕೆಳಕ್ಕೆ ಕೆಡವಿದರು ಅದರೊಳಗಿದ್ದ ನಾವಿಕನು ತನ್ನ ಬಳಿ ಇದ್ದ ಕಾಗದಗಳನ್ನು ಬಾಯಿಯಲ್ಲಿ ಹಾಕಿಕೊಂಡು ನುಂಗಿಬಿಡಬೇಕೆಂದು ಪ್ರಯತ್ನಪಟ್ಟನು. ಆದರೆ ರಷ್ಯಾದವರು ಅದನ್ನು ತಪ್ಪಿಸಿ ಅವನನ್ನು ಕೈಸೆರೆ ಹಿಡಿದುಕೊಂಡರು. ರೀಗಾ ನಗರದ ಬಳಿ ಇರುವ ಜರ್ಮನಿ ಸೈನಿಕರಲ್ಲಿ ಅನೇಕರಿಗೆ ಟೈಫಸ್ ಎಂಬ ಕೆಟ್ಟ ಜ್ವರವು, ಅನೇಕರು ಪ್ರಾಪ್ತವಾಗಿ ಸಾಯುತ್ತಿದ್ದಾರೆಂದು ವರ್ತಮಾನ ಬಂದಿದೆ.

ಇಟಲಿ.

ಆಸ್ಟ್ರಿಯಾದವರು ಕಳೆದುಕೊಂಡಿದ್ದ ಭಾಗಗಳನ್ನು ಪುನಃ ಗೆದ್ದುಕೊಳ್ಳಬೇಕೆಂದು ಸಾಹಸಪಟ್ಟದ್ದರಿಂದ ಅವರಿಗೂ ಇಟಲಿಯವರಿಗೂ ಕೆಲವು ಕಡೆ ಭಯಂಕರವಾದ ಕದನಗಳು ನಡೆದವು. ಆದರೆ ಆಸ್ಟ್ರಿಯಾದವರು ಸೋತುಹೋದರು. ಅನೇಕರನ್ನು ಇಟಲಿಯವರು ಕೈಸೆರೆ ಹಿಡಿದರು. ಒಂದು ಕಡೆ 160 ಸೈನಿಕರು

... 70 ಸೈನಿಕರೂ ಇಟಲಿಯವರಿಗೆ ಸಿಕ್ಕಿದರು. ಹವಾ ಸ್ಥಿತಿಯು ...ವಾಗಿದೆ. ಚಳಿ ಹೆಚ್ಚು, ಮಂಜು ಮುಚ್ಚಿಕೊಂಡಿದೆ. ಆಸ್ಟ್ರಿಯಾ ...ಗಳಿಂದ ಸೋತು ಹಿಮ್ಮೆಟ್ಟಬೇಕಾಯಿತೆಂದು ಅವರೇ ಹೇಳು...

...ಯಾದವರು ವಿಮಾನ ಯಂತ್ರಗಳಲ್ಲಿ ಹೋಗಿ ಇಟಲಿಯಲ್ಲಿರುವ ... ಪಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಅದ... ಕೆಲವು ಜನರು ಸತ್ತುಹೋದರು; ಅನೇಕರಿಗೆ ಗಾಯಗಳಾದವು. ... ಕೆಲವು ಯುದ್ಧದ ಜಹಜುಗಳು ತಪ್ಪಿಸಿಕೊಂಡು ಹೊರಕ್ಕೆ ...ತ್ತಿದೆ. ಈ ಜಹಜುಗಳು ಈ ತೀರದಲ್ಲಿರುವ ಎರಡು ಪಟ್ಟಣ...ಗಳನ್ನು ಹೊಡೆದವೆಂದೂ, ಕೆಲವು ಹಡಗುಗಳನ್ನು ಮುಳುಗಿಸಿದ...ವೆಂದು ... ಆಸ್ಟ್ರಿಯಾದವರು ಫ್ರೆಂಚರ ಒಂದು ಸಬ್‌ಮೆರೀನನ್ನು ... ಅದರಲ್ಲಿದ್ದ 28 ಮಂದಿಯನ್ನು ಕೈಸೆರೆ ಹಿಡಿದುಕೊಂಡು...

ಬಾಲ್ಕನ್ ಸಂಸ್ಥಾನಗಳಲ್ಲಿ.

... ಸೀಮೆಯಲ್ಲಿ ಘೋರವಾದ ಕದನಗಳು ನಡೆದಿರುತ್ತವೆ. ... ಮತ್ತು ಬ್ರಿಟಿಷ್ ಸೈನ್ಯಗಳು ಈ ಯುದ್ಧಗಳಲ್ಲಿ ಬೆರೆದಿದ್ದವು. ಸರ್ಬಿ... ಎಲ್ಲಾ ಹಿಮ್ಮೆಟ್ಟಿ ಹೋಗುವಂತಾಯಿತು. ಮಿತ್ರಮಂಡಲಿಯ ...ಯಾದವರ ಬಳಿ ಸೇರಿ ಅವರಿಗೆ ಸಹಾಯಮಾಡಲಿಕ್ಕಾಗಲಿಲ್ಲ. ...ದವರ ಅನೇಕ ಸೈನ್ಯಗಳು ಮಿತ್ರಮಂಡಲಿಯವರ ಮೇಲೆ ನುಗ್ಗಿ ... ಕ್ರೂರವಾಗಿ ಕದನಗಳನ್ನು ನಡಿಸಿದಾಗ್ಯೂ ಸಾರ್ಥಕವಾಗದೆ ...ಯವರು ಹಿಮ್ಮೆಟ್ಟಿ ಒಂದು ಬಲವಾದ ಠಾಣ್ಯಕ್ಕೆ ಹೋಗಿ ಸೇರಿ... ಬ್ರಿಟಿಷ್ ಸೈನಿಕರಲ್ಲಿ ಕೊಲೆಯಾದವರೂ ಗಾಯಪಟ್ಟವರೂ ... 1,500 ಮಂದಿ ಆಗಬಹುದೆಂದು ಹೇಳಲಾಗಿದೆ. ಬಲ್ಗೇರಿಯಾದವರ ... ಸೈನ್ಯಗಳಿದ್ದು ನುಗ್ಗಿ ಯುದ್ಧಮಾಡಿದ್ದರಿಂದ ಅನೇಕ ಸೈನಿಕರು ... ಹವಾ ಸ್ಥಿತಿಯು ಅನುಕೂಲವಾಗಿಲ್ಲ. ಚಳಿ ಅಪಾರವಾಗಿದೆ ... ಸೈನ್ಯಗಳನ್ನು ತೆಗೆದುಕೊಂಡು ಹೋಗಿ ಸಲೋನೀಕದಲ್ಲಿ ... ಇರಿಸುತ್ತಾರೆ.

...ನ್ ನಗರದಿಂದ ಕಾನ್‌ಸ್ಟಂಟಿನೋಪಲ್ ಪಟ್ಟಣಕ್ಕೆ ಹೋಗ... ಮಾರ್ಗವು ಕೆಲವು ಮಟ್ಟಿಗೆ ಸರಾಗವಾಗಿದೆ. ನಾಶಮಾಡಲ್ಪಟ್ಟ ... ಮಾರ್ಗದ ಭಾಗಗಳನ್ನು ಶತ್ರುಪಕ್ಷದವರು ಇನ್ನು ಕೆಲವು ವಾರಗ...ಳಲ್ಲಿ ... ಮಾಡಿಕೊಂಡಾರೆಂದು ಕಾಣುತ್ತದೆ.

...ಯಾದವರು ವಲೋನ ಎಂಬ ಪಟ್ಟಣವನ್ನು ಕುರಿತು ಹಿಮ್ಮೆಟ್ಟಿ... ಇಟಲಿಯವರು ಆ ಪಟ್ಟಣಕ್ಕೆ ಸೈನ್ಯಗಳನ್ನು ಕಳುಹಿಸಿ ... ಕಾಪಾಡಿಕೊಳ್ಳುತ್ತಾರೆ. ಸಮಯಕ್ಕೆ ಸರಿಯಾಗಿ ಎಲ್ಲಾ ...ರ್ಬಿಯಾದವರಿಗೆ ಸಹಾಯ ಒದಗುವಂತೆ ಏರ್ಪಾಡಾಗಿದೆ.

ಬಲ್ಗೇರಿಯಾ ಸಂಸ್ಥಾನದ ರಾಜಧಾನಿಯಾದ ಸೋಫಿಯಾ ಪಟ್ಟಣದಲ್ಲಿ ... ಒಟ್ಟುಗೂಡಿ ... ಯುದ್ಧವೇ ಬೇಡವೆಂದು ಪ್ರತಿ... ಸೈನಿಕರು ನುಗ್ಗಿ ಗುಂಪುಗಳನ್ನು ಚದರಿಸಬೇಕಾಯಿತು. ... ಕೆಲವರು ಕೊಲೆಯೂ ಆದರು. ಬಲ್ಗೇರಿಯಾದ ರಾಜನನ್ನು ಕೊಲ್ಲ... ಮಾಡಿದ್ದ ಪಿತೂರಿಯು ಪತ್ತೆ ಆಯಿತೆಂದೂ, ಮೂರು ಮಂದಿ ...ಗಳನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರೆಂದೂ ಹೇಳಲಾ... ಬಲ್ಗೇರಿಯಾದ ಒಂದು ರೆಜಿಮೆಂಟ್ ಸೈನಿಕರನ್ನು ಗಲ್ಲಿಪೋಲಿ...ಕ್ಕೆ ಹೋಗುವಂತೆ ಹುಕುಂ ಕೊಟ್ಟಾಗ ಆ ಸೈನಿಕರು ಹೋಗದೆ ದಂಗೆ ...ಇಂದ ಅವರಲ್ಲಿ 30 ಸೈನಿಕರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ... ಬಂದಿದೆ. ಬಾಲ್ಕನ್ ಸಂಸ್ಥಾನಗಳಲ್ಲಿ ನಡೆದಿರುವ ವಿಷ...ಯಾವುದು ಸರಿ ಎಂದು ಖಚಿತವಾಗಿ ಹೇಳುವುದು ಬಹಳ ಕಷ್ಟ.

ಟರ್ಕಿಯಲ್ಲಿ.

... ಅರ್ಧದ್ವೀಪದಲ್ಲಿ ಪಿರಂಗಿಗಳ ಹಾರಾಟವೂ, ಸುರಂಗಗಳಲ್ಲಿ ... ಹಾರಿಸುವುದೂ ಬಹಳವಾಗಿ ನಡೆದಿದೆ. ಆದರೂ ಎರಡು ಕಡೆಗಳಲ್ಲೂ ... ನುಗ್ಗಿ ಹೋಗಿರುವ ವಿಚಾರವೇನೂ ಕಂಡು ಬರುವುದಿಲ್ಲ.

... ಪಾರ್ಲಿಮೆಂಟ್ ಸಭೆಯು ಕೂಡಿತು. ಅನೇಕ ಮೆಂಬರುಗಳಿಗೆ ...ಪಾರ್ಲಿಮೆಂಟಿನವರ ಕಾರಬಾರುಗಳು ಅತೃಪ್ತಿಯನ್ನುಂಟುಮಾಡಿದೋಜ... ಪಾರ್ಲಿಮೆಂಟಿನಲ್ಲಿ ಚರ್ಚೆಗಳೂ ಗಲಭೆಗಳೂ ವಿಶೇಷವಾಯಿತು. ಕಾಕ್ ...ಗೆ ಸ್ವಲ್ಪಮಟ್ಟಿಗೆ ಕಲ್ಲಿದ್ದಲು ಒದಗಿಸಲ್ಪಟ್ಟಿತು. ಆದರೆ ನಾಕ್ ...ತ್ತು ಕಷ್ಟವಾಗಿದೆ. ಜೋಡುಗಳ ಕ್ರಯ ಜತೆಗೆ 30 ರೂಪಾಯಿ...

... ಕಡಲಿನಲ್ಲಿ ಸ್ವಲ್ಪಮಟ್ಟಿಗೆ ಸಮುದ್ರ ಯುದ್ಧವಾಗಿರುವಂತೆ ಕಾಣು... ಅಲ್ಲಿ ರಷ್ಯಾದವರ ಮೂರು ಟಾರ್ಪಿಡೋ ದೋಣಿಗಳು ನುಗ್ಗಿ ಟರ್ಕಿ ... ಟಾರ್ಪಿಡೋ ದೋಣಿಗಳನ್ನೂ, ಒಂದು ವ್ಯಾಪಾರದ ಹಡಗನ್ನೂ ...

ಪರ್ಷಿಯಾದಲ್ಲಿ.

...ದೊಳಗೆ ಜರ್ಮನಿಯವರು ಇನ್ನೂ ಗಲಭೆಯನ್ನುಂಟುಮಾಡು...ಲ್ಲ. ಅವರು ಚಿತಾವಣೆ ಮಾಡಿ ಪರ್ಷಿಯಾ ಸೈನ್ಯದಲ್ಲಿ ಕೆಲವ... ಕಿಸಿದರು. ಈ ಪರ್ಷಿಯಾ ಸೈನಿಕರ ಸಂಗಡ ಜರ್ಮನಿಯ...ಯವರೂ ಸೇರಿಕೊಂಡು ಹಮದಾನ್ ಎಂಬ ಪಟ್ಟಣದ ಬಳಿ ಒಂದು ...ವನ್ನು ಆಕ್ರಮಿಸಿಕೊಂಡಿದ್ದಾರೆ. ಇವರು ಕೆಲವು ಸಾವಿರ ಮಂದಿ ಆಗಬ... ರಷ್ಯಾದವರು ಅವರ ಮೇಲೆ ನುಗ್ಗಿ ಹೋಗಿ ಆ ಸ್ಥಳವನ್ನು ...ಗೆ ತಂದುಕೊಂಡು ಗುಂಡುಗಳನ್ನು ಸುರಿಸಿ ಅನೇಕರನ್ನು ಗಾಯಗೊಳಿಸಿ... ಉಳಿದವರೆಲ್ಲಾ ಚದರಿ ತಪ್ಪಿಸಿಕೊಂಡು ಹೋಗಿರುತ್ತಾರೆ. ಈಗ ಹಮ...ಕ್ಕೆ ಹೋಗಿ ಬರುವ ಮಾರ್ಗ ಸುರಕ್ಷಿತವಾಯಿತು.

...ದ ಆಗಾ ಖಾನ್‌ರವರ ಒಬ್ಬ ದಾಯಾದಿಯನ್ನು ಒಬ್ಬ ಪರ್ಷಿ... ಕರ್ಮನ್ ಎಂಬ ಸ್ಥಳದಲ್ಲಿ ಕೊಂದುಹಾಕಿದನೆಂದೂ, ...ಯವರು ಚಿತಾವಣೆ ಮಾಡಿ ಈ ಕೃತ್ಯವನ್ನು ನಡಿಸಿದರೆಂದೂ ಒಂದು ... ಹೇಳುತ್ತದೆ. ಆಗಾ ಖಾನ್‌ರವರ ದಾಯಾದಿಯು ಯಾತ್ರಾ...ಕ್ಕಾಗಿ ಅಲ್ಲಿಗೆ ಹೋಗಿದ್ದನೆಂದು ತಿಳಿಯುವುದು.

ಆಫ್ರಿಕಾದಲ್ಲಿ.

... ಆಫ್ರಿಕಾದಲ್ಲಿ ಸರ್ಕಾರದವರು ನಿರೀಕ್ಷಿಸಿದ್ದಕ್ಕಿಂತಲೂ ಎಷ್ಟೋ ... ಜನಗಳು ತಾವಾಗಿಯೇ ಬಂದು ಸೈನ್ಯಕ್ಕೆ ಸೇರಿಕೊಂಡಿರುವುದು ... ಅಲ್ಲಿಂದ ಬಂದಿರುವ ಸುದ್ದಿ. ಅಲ್ಲಿ ಬಹಳ ದೊಡ್ಡ ಸೈನ್ಯವನ್ನು ...ದ್ದಾರೆ. ಆ ಸೈನ್ಯವನ್ನು ಪೂರ್ವ ಆಫ್ರಿಕಾಕ್ಕೆ ಕಳುಹಿಸಿಕೊಡುವರು. ... ಆಫ್ರಿಕಾದಲ್ಲಾದಂತೆಯೇ ಅಲ್ಲೂ ನಮ್ಮ ಸೈನ್ಯಗಳು ಜಯಪ್ರದ...ವಾಗಿ ಬರುವವೆಂದು ನಿರೀಕ್ಷಿಸಲಾಗಿದೆ.

ಇತರ ವಿಷಯಗಳು.

...ಮನಿಯ ಮತ್ತು ಆಸ್ಟ್ರಿಯಾದ ಸಬ್‌ಮೆರೀನುಗಳು ಮೆಡಿಟರೇನಿಯನ್ ... ಬಹಳ ಚಟುವಟಿಕೆಯಾಗಿ ಕೆಲಸಮಾಡುತ್ತಿರುವಂತೆ ಕಾಣುವುದು. ...ಯಿಂದ ಅನೇಕ ಹಡಗುಗಳೂ ಜಹಜುಗಳೂ ಟಾರ್ಪಿಡೋ ಬಡಿದು ... ಈ ಪೈಕಿ ಹಲವು ಹಡಗುಗಳಲ್ಲಿದ್ದವರನ್ನು ಬದುಕಿಸಿದಾರೆ. ... ಐದು, ಗ್ರೀಕರದು ಎರಡು, ಇಟಲಿಯವರದು ಎರಡು, ... ಒಂದು, ನಾರ್ವೆಯವರದು ಒಂದು, ಈ ರೀತಿ ಹಡಗು... ಮುಳುಗಿಹೋಗಿರುವುವು. ಜರ್ಮನಿಯ ಒಂದು ಸಬ್‌ಮೆರೀನು ಗ್ರೀಕರ ಒಂದು ಜಹಜನ್ನು ತಡೆದು ನಿಲ್ಲಿಸಿಕೊಂಡು, ಅದರಲ್ಲಿ ಪ್ರಯಾಣಮಾಡುತ್ತಿದ್ದ ಇಬ್ಬರು ಬ್ರಿಟಿಷ್ ಉದ್ಯೋಗಸ್ಥರನ್ನು ಹಿಡಿದು ಕೈಸೆರೆ ಮಾಡಿಕೊಂಡಿತು. ಅವರಿಬ್ಬರಲ್ಲಿ ಒಬ್ಬನು ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರಾಗಿದ್ದನು.

ಅಮೇರಿಕದವರು ಆಸ್ಟ್ರಿಯಾದವರಿಗೆ ಬರೆದು ತಿಳಿಸಿರುವುದೇನೆಂದರೆ— ಕೆಲವು ಅಮೇರಿಕದವರಿದ್ದು ಮುಳುಗಿಸಲ್ಪಟ್ಟ ಅಂಕೋನಾ ಎಂಬ ಜಹಜನ್ನು ಆಸ್ಟ್ರಿಯಾದವರು ಮುಳುಗಿಸಲಿಲ್ಲವೆಂದು ಹೇಳಿ ಒಪ್ಪಿಕೊಳ್ಳಬೇಕು. ಆ ಸಬ್‌ಮೆರೀನಿನ ಅಧಿಪತಿಯನ್ನು ಶಿಕ್ಷೆಗೆ ಗುರಿಮಾಡಬೇಕು. ಅದರಿಂದ ಸಂಭವಿಸಿದ ನಷ್ಟಕ್ಕೆಲ್ಲಾ ಸರಿಯಾದಷ್ಟು ಪರಿಹಾರದ್ರವ್ಯವನ್ನು ಕೊಡಬೇಕು. ಇನ್ನು ಮುಂದೆ ಆ ರೀತಿ ಜಹಜುಗಳನ್ನು ಮುಳುಗಿಸುವುದಿಲ್ಲವೆಂದು ಒಪ್ಪಿಕೊಳ್ಳಬೇಕು.

ಅಮೇರಿಕದಲ್ಲಿರುವ ಜರ್ಮನಿ ಪ್ರಜೆಗಳ ದೆಸೆಯಿಂದ ಅಲ್ಲಿ ನಾನಾ ಪ್ರಕಾರವಾದ ಕಷ್ಟ ನಷ್ಟಗಳುಂಟಾಗಿರುತ್ತವೆ. ಅಮೇರಿಕದ ಕೆಲವು ಹಡಗುಗಳು ಸುಟ್ಟುಹೋದವು. ಕಾರ್ಖಾನೆಗಳು ಸುಡಲ್ಪಟ್ಟವು. ಇನ್ನೂ ಇತರ ವಿಧವಾದ ತೊಂದರೆಗಳುಂಟಾದವು. ಅಮೇರಿಕದ ರಾಜ್ಯಭಾರವನ್ನು ವಹಿಸಿರುವ ಪ್ರೆಸಿಡೆಂಟ್ ವಿಲ್‌ಸನ್‌ರವರು ಹೇಳುವುದೇನೆಂದರೆ— "ಅನ್ಯ ದೇಶಗಳಲ್ಲಿ ಹುಟ್ಟಿಬಂದು ಅಮೇರಿಕದ ಪ್ರಜೆಗಳಾಗಿರುವವರಲ್ಲಿ ಕೆಲವರು ನಮ್ಮ ಸರ್ಕಾರದವನ್ನೂ ಅದರ ಒಳ್ಳೆಯ ಹೆಸರನ್ನೂ ಅಪಮಾನಕ್ಕೆ ಗುರಿಮಾಡಿ, ಹೊಟ್ಟೆಕಿಚ್ಚನ್ನು ತೀರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಸಬುಗಳ ಕಾರ್ಖಾನೆಗಳನ್ನು ನಾಶಪಡಿಸಿರುತ್ತಾರೆಂದು ತಿಳಿಸಲು ನನಗೆ ನಾಚಿಕೆಯಾಗುತ್ತದೆ. ಇಂಥಾ ಕೃತ್ಯಗಳನ್ನು ಅಡಗಿಸಲು ನಾವು ಊಹಿಸಿ ಏರ್ಪಾಡು ಮಾಡಿರಲಿಲ್ಲ. ಇನ್ನು ಮುಂದೆ ದರ್ಪವಿಟ್ಟು ಅಡಗಿಸಿಬಿಡುತ್ತೇವೆ."

ಕೆಲವರು ಕರಾರು ಮಾಡಿಸುವುದಕ್ಕೆ ಸಂಧಾನ ಮಾಡಬೇಕೆಂಬ ಉದ್ದೇಶದಿಂದ ಅಮೇರಿಕದಿಂದ ಯೂರೋಪಿಗೆ ಹೊರಟು ಬರುತ್ತಿದಾರೆ. ಆದರೆ ಅವರ ಪ್ರಯತ್ನವೇನೂ ಸಾಗಲಾರದೆಂದು ತೋರುತ್ತದೆ.

ಅಮೇರಿಕದಲ್ಲಿರುವ ಜರ್ಮನಿ ರಾಯಭಾರಿಯ ಕಛೇರಿಯವರಿಬ್ಬರ ಅಮೇರಿಕದ ಒಳ ಕಾರುಬಾರುಗಳಲ್ಲಿ ತಲೆಹಾಕಿದ್ದರಿಂದ ಅಮೇರಿಕದವರು ಪ್ರತಿಭಟಿಸಿದರು. ಜರ್ಮನಿಯವರು ಅವರಿಬ್ಬರನ್ನೂ ಅಲ್ಲಿಂದ ವಾಪಸು ಕರಸಿಕೊಳ್ಳುವವರಾಗಿದಾರೆ.

ಜರ್ಮನಿಯಲ್ಲಿ ಪ್ರಜೆಗಳಿಗೆ ಆಹಾರ ಪದಾರ್ಥಗಳು ಸಿಕ್ಕುವುದು ಕಷ್ಟವಾಗಿದೆಯಂತೆ. ಆಸ್ಟ್ರಿಯಾದಲ್ಲಿ ಸುಗ್ಗಿಯು ಅಷ್ಟೇನೂ ಚೆನ್ನಾಗಿಲ್ಲ. ಮುಂದಿನ ಸುಗ್ಗೀ ಕಾಲದ ವರೆಗೆ ಆಹಾರ ಪದಾರ್ಥಗಳನ್ನು ಒದಗಿಸುವುದು ತುಂಬಾ ಪ್ರಯಾಸವಾಗುವುದೆಂದು ಹೇಳಲಾಗಿದೆ.

ಜರ್ಮನಿಯ ಒಂದು ಸಬ್‌ಮೆರೀನು ತಟಸ್ಥ ರಾಜ್ಯದ ಒಂದು ಹಡಗನ್ನು ಬ್ಯಾಲ್ಟಿಕ್ ಕಡಲಿನಲ್ಲಿ ತಡೆದು ಅದರಲ್ಲಿದ್ದ ಕಾಗದ ಪತ್ರಗಳನ್ನು ಶೋಧಿಸುತ್ತಿದ್ದಾಗ ಜರ್ಮನಿಯ ಕ್ರೂಸರ್ ಎಂಬ ಯುದ್ಧದ ಹಡಗು ಆ ಸಬ್‌ಮೆರೀನಿಗೆ ಬಡಿದು ಅದೂ ಕೆಟ್ಟುಹೋದವು.

ಜಪನೀಸ್ ಪ್ರಿನ್ಸ್ ಎಂಬ ಹೆಸರಿನ ಒಂದು ಜಹಜು ಜರ್ಮನಿಯ ಸಬ್‌ಮೆರೀನಿನ ಕೂಡ ಐದೂವರೆ ಗಂಟೆ ಹೊತ್ತು ಯುದ್ಧಮಾಡಿತು. ಸಬ್‌ಮೆರೀನು ಆ ಜಹಜಿಗೆ ಗುಂಡುಗಳನ್ನು ಹಾಕಿದರೂ ಅದು ಹಿಂಜರಿಯಲಿಲ್ಲ. ಅದನ್ನು ಅದರ ಅಧಿಪತಿಯು ಸುರಕ್ಷಿತವಾಗಿ ತೀರಕ್ಕೆ ತಂದುಬಿಟ್ಟನು. ಆತನ ಪರಾಕ್ರಮವನ್ನು ಮೆಚ್ಚಿ ಆತನಿಗೆ 500 ಪವನುಗಳನ್ನೂ, ಆತನ ಕೈಕೆಳಗಿದ್ದವರಿಗೆ 600 ಪವನುಗಳನ್ನೂ ಬಹುಮಾನ ಕೊಟ್ಟರು.

ಹಾಲೆಂಡಿನ ರಾಜಧಾನಿಯಾದ ಆಮ್‌ಸ್ಟರ್‌ಡಾಂ ಪಟ್ಟಣದಲ್ಲಿ ಒಂದು ವರ್ತಮಾನ ಪತ್ರಿಕೆಯು ಜರ್ಮನಿಯನ್ನು ಅಲ್ಲಗಳೆದದ್ದರಿಂದ ಹಾಲೆಂಡ್ ಸರ್ಕಾರದವರು ಆ ಪತ್ರಿಕೆಯ ಎಡಿಟರನ್ನು ಜಪ್ತಿಗಿರಿ ಮಾಡಿದಾರೆ.

ಕತ್ತಿ ಕೊಂಡಿದ 73 ಮಂದಿ ಬ್ರಿಟಿಷ್ ಸೈನಿಕರನ್ನೂ 150 ಮಂದಿ ಸಭ್ಯ ಪ್ರಜೆಗಳನ್ನೂ ಜರ್ಮನಿಯಿಂದ ವಾಪಸು ಕಳುಹಿಸಬಿಟ್ಟರು. ಆ ಸೈನಿಕರಿಗೆ ಕೈಕಾಲುಗಳು ಹೋಗಿಬಿಟ್ಟಿವೆ. ಜರ್ಮನಿಯವರು ಇವರಿಗೆ ತಮ್ಮ ಸೈನಿಕರ ಹಳೇ ಹರಕು ಬಟ್ಟೆಗಳನ್ನು ಹಾಕಿದ್ದರು. ಅನರೆಲ್ಲಾ ತಮ್ಮನ್ನು ಜರ್ಮನಿಯವರು ಸ್ವಲ್ಪವೂ ಚೆನ್ನಾಗಿ ಸಾಕುತ್ತಿರಲಿಲ್ಲವೆಂದು ಹೇಳಿದಾರೆ. ಒಂದು ಕ್ಯಾಂಪಿನಲ್ಲಿ ಟೈಫಸ್ ಎಂಬ ಜ್ವರ ಹುಟ್ಟಿತು. ಜರ್ಮನಿಯ ಪಹರೆಯವರು ಹೆದರಿ ಓಡಿಹೋದರು. ಒಂದು ಉದ್ದವಾದ ಕೊಳವೆಯ ಮೂಲಕ ದೂರದಿಂದ ಆಹಾರವನ್ನು ಸಾಗಿಸಿ ಕ್ಯಾಂಪಿನಲ್ಲಿದ್ದವರಿಗೆ ಕೊಡುತ್ತಿದ್ದರು. ಆ ಕ್ಯಾಂಪಿನಲ್ಲಿ 1,600 ಜನಗಳು ಸತ್ತುಹೋದರು. ಈ ಪೈಕಿ ಬ್ರಿಟಿಷರು 99 ಮಂದಿ. ಕೈಸೆರೆಯಾಗಿ ಹೋಗಿದ್ದ ಆರು ಮಂದಿ ಇಂಗ್ಲಿಷ್ ವೈದ್ಯರು ಜ್ವರ ಹಿಡಿದವರಿಗೆ ಔಷಧಾದಿಗಳನ್ನು ಕೊಟ್ಟು ಚಿಕಿತ್ಸೆ ಮಾಡುತ್ತೇವೆಂದು ತಾವಾಗಿಯೇ ಕೇಳಿ ಅಪ್ಪಣೆ ಪಡೆದು ಹೋಗಿ ಚಿಕಿತ್ಸೆ ಮಾಡಿದರು. ಇವರಲ್ಲಿ ಮೂವರು ಸತ್ತು ಹೋದರು. ಬ್ರಿಟನ್ನಿಂದ ಕಳುಹಿಸಲ್ಪಟ್ಟ ಜರ್ಮನಿಯವರು ಊಟಕ್ಕಾಗಲೀ ಬಟ್ಟೆಗಾಗಲಿ ಯಾವ ಕೊರತೆಯನ್ನೂ ಅನುಭವಿಸಲಿಲ್ಲ. ಬ್ರಿಟಿಷರು ಅವರನ್ನು ಚೆನ್ನಾಗಿ ಸಾಕಿ ಕಳುಹಿಸಿರುತ್ತಾರೆ.

ಬಿಹಾರ್ ಸಂಸ್ಥಾನದ ಮಹಾರಾಜರವರು ಒಂದು ಮೋಟರನ್ನೂ, ಹಿಂದು ಸ್ಥಾನದ ಮಹನೀಯರುಗಳು ಆಂಬ್ಯುಲೆನ್ಸ್ ಮೋಟರನ್ನೂ ಗವರ್ನ್‌ಮೆಂಟಿಗೆ ಒಪ್ಪಿಸಿರುತ್ತಾರೆ.

ಡಿಸೆಂಬರ್ ತಾ. 11 ರಲ್ಲಿ ಬೆಲ್ಜಿಯಮ್ ನೊಳಗೆ ಮದ್ದು ತಯಾರಾಗುತ್ತಿದ್ದ ಒಂದು ಕಾರ್ಖಾನೆಯಲ್ಲಿ ಬಹು ಭಯಂಕರವಾಗಿ ಮದ್ದು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಘೋರವಾದ ಅಪಾಯ ನಡೆಯಿತು. ಅದರಿಂದ 110 ಜನರು ಮೃತಪಟ್ಟರು, ಸುಮಾರು 1,000 ಜನಗಳು ಗಾಯಪಟ್ಟರು. ಇವರಲ್ಲಿ ಬಹುಮಂದಿ ಬೆಲ್ಜಿಯನ್ನರೆಂದು ತಿಳಿಯುತ್ತದೆ.

ಮೈಸೂರು ಶಾರದಾ ವಿಲಾಸ ಪಾಠಶಾಲಾ.

ಮೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಯ ಶಾರದಾ ವಿಲಾಸ ಪಾಠಶಾಲಾ ವಿದ್ಯಾರ್ಥಿಗಳಿಗೆ ರಾವ್ ಬಹದೂರ್ ಮ|| ಎಂ. ರಾಮರಾಯರು ಅಗ್ರಾಸನವನ್ನು ವಹಿಸಿ ಬಹುಮಾನಗಳನ್ನು ಹಂಚಿದರು. ಅಗ್ಗ ರಾಜಧಾನಿಯಲ್ಲಿರುವ ಹಲವು ದೊಡ್ಡಮನುಷ್ಯರೂ ಅಧಿಕಾರಿಗಳೂ ಹಾಜರಾಗಿದ್ದರು. ವಿದ್ಯಾರ್ಥಿಗಳು ನಡಿಸಿದ ಭಾಷಣಗಳೂ, ಸಂಭಾಷಣಗಳೂ, ಅಂಗಸಾಧನೆಗಳೂ ಬಹು ಆಹ್ಲಾದಕರಗಳಾಗಿದ್ದವು. "ಅಲೆಕ್ಸಾಂಡರ" ನಿಗೂ "ಪರೋಡಿಕೋನ" ನಿಗೂ ಸಂಭವಿಸಿದ ಅರ್ಜನೆಯ ವಿಚಾರವಾಗಿ ನಡೆದ ವಾಗ್ವಾದಗಳೂ, "ನಾರದ," "ಕಲಿ," "ಕಲಿ," ಇವರಿಗೆ ಪ್ರಪಂಚವನ್ನು ನಡಿಸುವುದರಲ್ಲಿ ಉಂಟಾಗಿರುವ ಸ್ವತಂತ್ರಾಧಿಕಾರವನ್ನು ಕುರಿತು ಬೆಳಸಲ್ಪಟ್ಟ ಸಂವಾದಗಳೂ ಹೃದಯಂಗಮಗಳಾಗಿದ್ದವು. ಕೆಲವು ವಿದ್ಯಾರ್ಥಿಗಳು ಒಟ್ಟಿಗಿಯೂ, ಕೆಲವರು ಒಬ್ಬೊಬ್ಬರಾಗಿಯೂ ನಿಂತು "ಕರೇಲ" ಗಳನ್ನು ತಿರುಗಿಸುತ್ತಾ ಮಾಡಿ ತೋರಿಸಿದ ಸಾಧಕಗಳು ಡ್ರಿಲ್ ಮಾಸ್ಟರ ಶಿಕ್ಷಣಾ ಕೌಶಲ್ಯವನ್ನು ಪ್ರಕಾಶಪಡಿಸಿದವು.

ಸ್ಕೂಲ್ ಮ್ಯಾನೇಜಿಂಗ್ ಕಮಿಟಿ ಸೆಕ್ರೆಟರಿ ಮ|| ಎಂ. ವೆಂಗಟಕೃಷ್ಣಯ್ಯನವರು ಆ ಪಾಠಶಾಲೆಯ ಪೂರ್ವೋತ್ತರವನ್ನು ವಿವರಿಸಿ ರಿಪೋರ್ಟು ಓದಿದರು. ಅದರ ಮುಖ್ಯಾಂಶಗಳೇನೆಂದರೆ—ಲೇಟ್ ರಾವ್ ಬಹದೂರ್ ಭಕ್ಷಿ ನರಸಪ್ಪನವರು ಈ ಪಾಠಶಾಲೆಯನ್ನು 1865 ನೇ ಇಸವಿಯಲ್ಲಿ ಸ್ಥಾಪನೆಮಾಡಿದರು. ಸಂಸ್ಕೃತ ವ್ಯಾಕರಣ ಒಂದೇ ನಡೆಯುತ್ತಿತ್ತು. 10 ಮಂದಿ ವಿದ್ಯಾರ್ಥಿಗಳು ಮೊದಲು ಓದುತ್ತಿದ್ದರು. ಈಗ ಮಹಾರಾಜಾ ಕಾಲೇಜಿನಲ್ಲಿ ಸಂಸ್ಕೃತ ಪಂಡಿತರಾಗಿರುವ "ಕವಿರತ್ನ" ಮಂಡಿಕಲ್ ರಾಮಶಾಸ್ತ್ರಿಗಳೇ ಉಪಾಧ್ಯಾಯರಾಗಿ ಪಾಠ ಪ್ರವಚನಗಳನ್ನು ನಡಿಸುತ್ತಾ ಪಾಠಶಾಲೆಯನ್ನು ಅಭಿವೃದ್ಧಿಗೆ ತಂದರು. ಇದಕ್ಕೆ 1885 ನೇ ಇಸವಿಯಲ್ಲಿ ಮಾಡಿಕೊಟ್ಟ 70 ರೂಪಾಯಿ ಗ್ರ್ಯಾಂಟು ಇನ್ನೂ ನಡೆಯುತ್ತಿದೆ. ಆ ಅಧ್ಯಕ್ಷರಿಗೆ ಕಾಲೇಜಿನಲ್ಲಿ ಕೆಲಸ ಆದ ಮೇಲೆ ಈ ಪಾಠಶಾಲೆಯು ಕೆಲವು ... ಬಂತು, 1900 ನೇ ಇಸವಿಯಿಂದ ಸಂಸ್ಕೃತದ ಜೊತೆಗೆ ಇಂಗ್ಲಿಷ್ ಮತ್ತು ಕನ್ನಡವನ್ನು ಕಲಿಸುತ್ತಾ ಬಂದಿದಾರೆ. 1910 ರಲ್ಲಿ ಮ|| ಆರ್. ಶ್ರೀನಿವಾಸರಾಯರು ಹೆಡ್ ಮಾಸ್ಟರಾಗಿ ನೇಮಕವಾದಾಗ ಈ ಪಾಠಶಾಲೆಯಲ್ಲಿ 9 ಮಂದಿ ಉಪಾಧ್ಯಾಯರೂ 164 ಮಂದಿ ವಿದ್ಯಾರ್ಥಿಗಳೂ ಇದ್ದು, ಅವರ ಸಾಹಸ ಪ್ರಯತ್ನದಿಂದಲೂ, ಸ್ತೋತ್ರಾರ್ಹವಾದ ಪರಿಶ್ರಮ ಕಾರ್ಯಗಳಿಂದಲೂ ಪಾಠಶಾಲೆಯು ಅಪಾರವಾಗಿ ಅಭಿವೃದ್ಧಿ ಹೊಂದಿರುತ್ತದೆ. ಈಗ ಪಾಠಶಾಲೆಯಲ್ಲಿ 15 ಮಂದಿ ಉಪಾಧ್ಯಾಯರೂ 460 ಮಂದಿ ವಿದ್ಯಾರ್ಥಿಗಳೂ ಇರುವರು. ಸ್ಕೂಲ್ ಉಪಕರಣಗಳಿಗೂ, ಪುಸ್ತಕ ಭಂಡಾರಕ್ಕೂ 4,000 ರೂಪಾಯಿ ವೆಚ್ಚ ಆಗಿದೆ. ಸುಮಾರು 560 ಪುಸ್ತಕಗಳುಳ್ಳ ಭಂಡಾರವೂ, 21 ಪತ್ರಿಕೆಗಳನ್ನು ತರಿಸುವ ವಾಚಕಮಂದಿರವೂ ಈ ಪಾಠಶಾಲೆಯಲ್ಲಿ ಏರ್ಪಾಡಾಗಿವೆ. ವಿದ್ಯಾರ್ಥಿಗಳು ಕಾಯಪುಷ್ಟಿಗಾಗಲು ನಾನಾ ಅಂಗಸಾಧನಾ ಆಟಗಳಲ್ಲಿ ವಿಹರಿಸುವರು. ಮ|| ಶ್ರೀನಿವಾಸರಾಯರು ಹೆಡ್ ಮಾಸ್ಟರಾಗಿ ಪಾಠಶಾಲೆಯ ಜಮಾ ಖರ್ಚನ್ನು ಅತ್ಯಂತ ದಕ್ಷತೆಯಿಂದ ನಡಿಸುತ್ತಾ ಬಂದಿದ್ದರಿಂದ ಫಂಡಿನಲ್ಲಿ 2,700 ರೂಪಾಯಿ ವೆಚ್ಚ ಕೊಡಿಸಿರುವುದು ತುಂಬಾ ಸಂತೋಷಪ್ರದವಾಗಿದೆ.

ಬಳಿಕ ರಾವ್ ಬಹದೂರ್ ಮ|| ರಾಮರಾಯರು ಹೆಡ್ ಮಾಸ್ಟರ ಸಹಾಯದಿಂದ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಬಹುಮಾನ ಪುಸ್ತಕಗಳನ್ನೂ, ಸರ್ಟಿಫಿಕೇಟುಗಳನ್ನೂ ಕೊಟ್ಟು ಆ ಪಾಠಶಾಲೆಯ ಶ್ರೇಯೋಭಿವೃದ್ಧಿಯನ್ನೂ ಮೇಲ್ವಿಚಾರಣಾ ಕಮಿಟಿಯವ ಮತ್ತು ಹೆಡ್ ಮಾಸ್ಟರೇ ಮೊದಲಾದ ಉಪಾಧ್ಯಾಯರುಗಳ ದಕ್ಷತೆಯಾದ ನಡವಳಿಕೆಗಳನ್ನೂ ಕುರಿತು ಪ್ರಶಂಸೆ ಮಾಡಿ ಅವರುಗಳ ಮುತುವರ್ಜಿಯೂ ಪ್ರೀತಿಪೂರ್ವಕವೂ ಆದ ಕಾರ್ಯದಕ್ಷತೆಯನ್ನು ಕೊಂಡಾಡಿ ಭಾಷಣಮಾಡಿದರು. ಐವತ್ತು ವರುಷಗಳ ಹಿಂದೆ ಭಕ್ಷಿ ನರಸಪ್ಪನವರಿಂದ ಸ್ಥಾಪಿಸಲ್ಪಟ್ಟ ಈ ಪಾಠಶಾಲೆಯು ಇಷ್ಟು ಶ್ರೇಯಸ್ಸಿಗೆ ಬಂದಿರುವುದು ಸಂತೋಷಪ್ರದವಾಗಿದೆ. ಇದರ ಪ್ರಥಮ ಅಧ್ಯಕ್ಷರು ನಾರಿಕೇಳ ವೃಕ್ಷದಂತೆ ಈ ಪಾಠಶಾಲೆಯನ್ನು ನಾಟಿ ಬೆಳಸಿ ಅದರ ಫಲಗಳನ್ನು ಇಲ್ಲಿದ್ದು ನೋಡುತ್ತಿದಾರೆ. ಇಲ್ಲಿ ಹಲವು ಜೈನ ಬಾಲಕರು ವಿದ್ಯೆ ಕಲಿಯುತ್ತಿರುವರು. ಇವರ ಸಂರಕ್ಷಣೆಗೋಸ್ಕರ ಶ್ರೀಮಂತ ವರ್ಧಮಾನಯ್ಯನವರು ಪರಹಿತಚಿಂತನೆಯಿಂದ ನಡಿಸುತ್ತಾ ಬಂದಿರುವ ಬೋರ್ಡಿಂಗ್ ಹೋಮನ್ನೂ ಅಲ್ಲಿ ಅವರು ಮಾಡಿರುವ ಶ್ಲಾಘ್ಯವಾದ ಏರ್ಪಾಡುಗಳನ್ನೂ ನೆನ್ನೆ ನೋಡಿಕೊಂಡು ಬಂದೆನು. ಅವರು ಮಾಡಿರುವ ಕಾರ್ಯವು ಶ್ಲಾಘ್ಯವೂ ಸ್ತೋತ್ರಾರ್ಹವೂ ಆಗಿರುವುದೆಂದು ಆನಂದಪಟ್ಟು ಹೇಳುತ್ತೇನೆ. ಅಂಥಾ ಪರೋಪಕಾರಿಗಳು ನಮ್ಮ ಸಂಸ್ಥಾನದಲ್ಲಿ ಇನ್ನೂ ಹೇರಳವಾಗಿ ಕಾಣಿಸಿಕೊಂಡಲ್ಲಿ ಪ್ರಜೆಗಳ ಸೌಭಾಗ್ಯಕ್ಕೆ ಎಷ್ಟೋ ಬೆಂಬಲವಾದೀತು. ಈ ಪಾಠಶಾಲೆಯಲ್ಲಿ ಸಂಸ್ಕೃತ ವಿದ್ಯಾ ಶಿಕ್ಷಣವನ್ನು ಬಿಡದೆ ನಡಿಸಿಕೊಂಡು ಬಂದಿರುವುದು ಪರಮ ಸಂತೋಷಕರವಾಗಿದೆ. ಅನೇಕ ಕಡೆ ಸಂಸ್ಕೃತ ಪಾಠಶಾಲೆಗಳು ಪ್ರಾರಂಭವಾಗಿ ಈಗ ನೋಡಿದರೆ ಇಂಗ್ಲೀಷು ವಿದ್ಯೆಯು ಸಂಸ್ಕೃತವನ್ನು ಮರೆಮಾಡುತ್ತದೆ. ಇದು ತುಂಬಾ ವಿಷಾದಕರವಾದ ಸಂಗತಿ. ಮುಂದೆ ನೋಡಿಕೊಂಡೇ ಹೋಗುವುದು ನಮಗೆ ತರವಲ್ಲ; ಹಿಂದಿನ ವಿಚಾರಗಳ ಮೇಲೂ ನಮಗೆ ದೃಷ್ಟಿ ಇರಬೇಕು. ನಾವು ನಮ್ಮ ಪ್ರಾಚೀನ ಸಂಗತಿಗಳನ್ನು ಮಥನಮಾಡಿ ಗ್ರಹಿಸಿಕೊಂಡು, ಪಾಶ್ಚಾತ್ಯ ನಾಗರಿಕಗಳನ್ನು ಅಭ್ಯಾಸಕ್ಕೆ ತರುತ್ತಾ ಬಂದರೆ ಕ್ರಮೇಣ ನಮ್ಮ ದೇಶವು ಅಭಿವೃದ್ಧಿಹೊಂದುತ್ತದೆ. ಏಕಕಾಲದಲ್ಲಿ ನಾವು ಪಾಶ್ಚಾತ್ಯ ಸಂಗತಿಗಳನ್ನು ಆಚರಣೆಗೆ ತರುವುದರಲ್ಲಿ ಅನೇಕ ಕೇಡುಗಳು ಸಂಭವಿಸುವವು. ಆದಕಾರಣ ನಾವು ಅನಾದಿಯಿಂದಲೂ ಬಂದಿರುವ ನಮ್ಮ ಸಂಸ್ಕೃತ ವಿದ್ಯೆಯನ್ನು ಬಿಡದೆ ಅಭ್ಯಾಸಮಾಡಿ ಆ ಭಾಷೆಯಲ್ಲಿರುವ ಅಮೂಲ್ಯ ವಿಷಯಗಳನ್ನು ಗ್ರಹಿಸಿಕೊಳ್ಳಬೇಕಾಗಿದೆ. ಪ್ರಾಚೀನ ಕಾಲದಲ್ಲಿ ವಿದ್ಯೆಯ ಆವಶ್ಯಕತೆ ವಿಶೇಷವಾಗಿರಲಿಲ್ಲ. ಆಗ್ಗೆ ವಿದ್ಯೆಯು ಪಾರಮಾರ್ಥಿಕ ಜ್ಞಾನಾಭಿವೃದ್ಧಿಗೆ ಮಾತ್ರ ಆವಶ್ಯಕವೆಂಬ ಭಾವನೆ ಇದ್ದಿತು. ಈಗಲಾದರೋ ಪ್ರತಿ ಒಂದು ಗ್ರಾಮದಲ್ಲೂ ಜನಗಳು ವಿದ್ಯೆ ಕಲಿಯಬೇಕಾಗಿ ಬಂದಿದೆ. ಇಲ್ಲವಾದರೆ ಗ್ರಾಮಸ್ಥರು ತಮ್ಮ ಸುತ್ತುಮುತ್ತಿ ನಡೆಯುವ ವರ್ತಮಾನಗಳನ್ನು ತಿಳಿಯಲಾರರು; ವ್ಯಾಪಾರಗಳನ್ನು ನಡಿಸಲಾರರು; ಊರಿಂದೂರಿಗೆ ಹೋಗಿ ಬರುವುದರಲ್ಲಿ ವಿವೇಕವಾಗಲಿ, ಬುದ್ಧಿಕೌಶಲತೆಯಾಗಲಿ ಹೆಚ್ಚುವುದಿಲ್ಲ. ಆದಕಾರಣ ಮೂರು ನಾಲ್ಕು ವರುಷಗಳಿಂದೀಚೆಗೆ ವಿದ್ಯೆ ಕಲಿಯುವ ಪಾಠಶಾಲೆಗಳು ಆಗಬೇಕೆಂದು ಎಲ್ಲಾ ಕಡೆಗಳಿಂದಲೂ ಅರ್ಜಿಗಳು ಹೇರಳವಾಗಿ ಬರುತ್ತಿರುವವು. ಹಣವಿಲ್ಲದ ಕೆಡುವುದರಿಂದ ಸ್ಕೂಲುಗಳನ್ನಿಡುವುದೇ ಕಷ್ಟವಾಗಿದೆ. ಕಳೆದ 16-18 ತಿಂಗಳಲ್ಲಿ ಸಂಸ್ಥಾನದಲ್ಲಿ 1,500 ಹೊಸ ಸ್ಕೂಲುಗಳನ್ನು ಇಟ್ಟಿದ್ದಾಗಿದೆ. ನಮ್ಮ ಮಹಾರಾಜರವರು ಪ್ರಜೆಗಳು ವಿದ್ಯಾವಂತರಾಗಲಿ ಎಂದು ಅತಿಮಿತವಾದ ಕುತೂಹಲಪೂರ್ವರಾಗಿ ವಿದ್ಯಾಭ್ಯಾಸದ ಬಾಬಿಗೆ ಸಾಲಿಯಾನಾ ಕೊಡುತ್ತಿದ್ದ 10 ಲಕ್ಷ ರೂಪಾಯನ್ನು 23 ಲಕ್ಷಕ್ಕೆ ಹೆಚ್ಚಿಸಿದಾರೆ. ಬಲಾತ್ಕಾರದ ವಿದ್ಯಾಭ್ಯಾಸ ಜಾರಿಗೆ ಬರಲಿಲ್ಲವೆಂದು ಆಕ್ಷೇಪಣೆಯುಂಟಾಗಿದೆ. ಆದರೆ ಅಂಥಾ ಕಡೆ ಸರ್ಕಾರದ ಬಲವಂತವೇನೂ ಇಲ್ಲದೆಯೇ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು. ಇದರಿಂದ ಪ್ರಜೆಗಳಲ್ಲಿ ವಿದ್ಯೆ ಪಡೆಬೇಕೆಂಬ ಕುತೂಹಲವು ಹೆಚ್ಚಾಗಿದೆ ಎಂದೂ, ಅವರಾಗಿಯೇ ತಮ್ಮ ಮಕ್ಕಳನ್ನು ಸ್ಕೂಲಿಗೆ ಹಾಕಿ ಸರ್ಕಾರದವರ ಉದ್ದೇಶವನ್ನು ಸಾರ್ಥಕಪಡಿಸುತ್ತಲೂ, ಸಹಾಯ ಮಾಡುತ್ತಲೂ ಬಂದಿದಾರೆಂದೂ ಸ್ಪಷ್ಟಪಡುತ್ತದೆ. ಸರ್ಕಾರದವರು ಸಾಮಾನ್ಯವಾಗಿ ಬರೀ ಓದು ಬರಹ ಲೆಕ್ಕ ಕಲಿಸಿದರೆ ಸಾಲದೆಂದೂ, ವ್ಯಾಪಾರ ವಾಣಿಜ್ಯ ಕೈಗಾರಿಕೆ ವಿದ್ಯೆಗಳನ್ನೂ ಅಲ್ಪ ಸ್ವಲ್ಪ ಎಲ್ಲಾ ಕಡೆಗಳಲ್ಲೂ ಕಲಿಸಬೇಕೆಂದೂ ಉದ್ದೇಶಪಟ್ಟಿದಾರೆ. ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಯಾವುದಾದರೊಂದು ಕಸಬು ಕಲಿಯುವಂಥಾದ್ದಕ್ಕೆ ಅವಕಾಶವನ್ನು ಕಲ್ಪಿಸಿರುವರು. ಇತರ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲೂ ಇದೇ ರೀತಿ ಕಸಬು ವ್ಯಾಪಾರ ವ್ಯವಸಾಯ ವಿದ್ಯೆಗಳನ್ನು ಕಲಿಸುವ ಪಾಠಶಾಲೆಗಳನ್ನು ಸದ್ಯದಲ್ಲೇ ಇಡುತ್ತಾರೆ ಎಂಬೀ ರೀತಿಯಾಗಿ ಭಾಷಣ ಮಾಡಿದರು.

ತರುವಾಯ ಮ|| ಅಂಬಳೆ ಅಣ್ಣಯ್ಯಪಂಡಿತರು, "ಕವಿರತ್ನ" ರಾಮಶಾಸ್ತ್ರಿಗಳೂ ಅಗ್ರಾಸನಾಧಿಪತಿಗಳನ್ನು ಸಭೆಯ ಪರವಾಗಿ ವಂದಿಸಿ ನಮ್ಮ ಚಕ್ರವರ್ತಿ ಸಾರ್ವಭೌಮರವರ ಮತ್ತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ನಡಿಸಿ ಸಭೆಯನ್ನು ಮುಕ್ತಾಯಮಾಡಿದರು.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ತಲಪಿರುವ ಹಲವು ವಾರ್ತೆಗಳನ್ನು ಪ್ರಕಟಿಸಲು ಸ್ಥಳ ಒದಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. "ದರ್ಬಾರ್ ಡೇ" ಉತ್ಸವದ ವೃತ್ತಾಂತಗಳೂ ಕೆಲವು ನಮಗೆ ತಲಪಿರುವವು.

ಶ್ರೀಮನ್ಮಹಾರಾಜರವರು ಜನವರಿ ತಿಂಗಳ ಸುಮಾರಿನಲ್ಲಿ ಉತ್ತರ ದೇಶದ ಕಡೆ ಹತ್ತು ಹನ್ನೆರಡು ವಾರ ಸಂಚಾರ ಮಾಡಿಕೊಂಡು ಬರುವವರಾಗಿದಾರೆಂಬ ವರ್ತಮಾನವಿದೆ.

ಕಳೆದ ವಾರ ಶ್ರೀರಂಗಪಟ್ಟಣದಲ್ಲೂ, ಮೈಸೂರು ಭಾರತೀಯ ಮೆಂಬರುಗಳೂ ರಾಜಧಾನಿಯಲ್ಲೂ ಧಾತ್ರಿವನದ ಸಮಾರಾಧನೆಗಳನ್ನು ನಡಿಸಿದರು. ಶ್ರೀರಂಗಪಟ್ಟಣದಲ್ಲಿ ಸುಮಾರು 350 ಜನರೂ, ರಾಜಧಾನಿಯಲ್ಲಿ ಸುಮಾರು 2,000 ಜನರೂ ಸೇರಿ ವನಭೋಜನವನ್ನು ಮಾಡಿ ಸಂತೋಷಪಟ್ಟರು.

ಅರಮನೆ ಪ್ರೈವೇಟ್ ಸೆಕ್ರೆಟರಿ ಆಫೀಸಿನಲ್ಲಿ 8,300 ಚಿಲ್ಲರೆ ರೂಪಾಯಿ ಕಳವು ಮಾಡಿ ಪರಾರಿಯಾಗಿದ್ದ ರಂಗನೆಂಬ ಕೈನಾತಿ ಓಲೇಕಾರನು ಕಳೆದ ಬುಧವಾರ ಮಧ್ಯಾಹ್ನ ಪಶ್ಚಿಮವಾಹಿನಿಯಲ್ಲಿ ಸ್ನಾನಮಾಡಿ ನಾಮ ಹಾಕಿಕೊಳ್ಳುತ್ತಿರುವಾಗ್ಗೆ ಅರಮನೆ ನೌಕರನು ಅವನನ್ನು ಗುರುತು ಹಿಡಿದು ಅಲ್ಲಿದ್ದ ಪೋಲೀಸಿಗೆ ಹಿಡಿದುಕೊಟ್ಟನು. ಅದರ ಮೇಲೆ ಮೈಸೂರು ಪೋಲೀಸಿನವರು ಅವನನ್ನು ಅಲ್ಲಿಂದ ಕರೆತಂದು ತನಿಖೆ ನಡಿಸುತ್ತಿದಾರೆ. ಇದುವರೆಗೆ ಕೆಲವು ನೋಟುಗಳು ಸಿಕ್ಕಿರುವಂತೆ ವರ್ತಮಾನವಿದೆ.

ಎರಡನೇ ಕೌನ್ಸೆಲರವರ ಸಂಚಾರ.

ಗುಬ್ಬಿ ತಾಲ್ಲೂಕು ಕಡಬ.

ಈ ಗ್ರಾಮಕ್ಕೆ ಈ ತಿಂಗಳು 6 ನೇ ತಾ. ಮೈಸೂರು ಸಂಸ್ಥಾನದ 2 ನೇ ಕೌನ್ಸೆಲರಾದ ಮ|| ಎಂ. ಕಾಂತರಾಜೇ ಅರ್ಸ್, ಸಿ. ಎಸ್. ಐ. ಯವರು, ತುಮಕೂರು ಡೆಪ್ಯುಟಿ ಕಮಿಷನರ್ ಸಾಹೇಬರು, ಗುಬ್ಬಿ ಸಬ್ ಡಿವಿಜನ್ ಆಫೀಸರು, ಫಾರೆಸ್ಟ್ ಆಫೀಸರು, ಗುಬ್ಬಿ ಅಮಲ್ದಾರ್ರು ಸಹಿತ ಸವಾರಿ ದಯಮಾಡಿಸಿದ್ದರು. ಅವರ ಆಗಮನಕ್ಕೋಸ್ಕರ ಹಾಕಿಸಿದ್ದ ಆರ್ಚಿನ ಬಳಿ ಗ್ರಾಮಸ್ಥರಲ್ಲಿ ಕೆಲವು ಜನ ದೊಡ್ಡ ಮನುಷ್ಯರು ಭಕ್ತಿಪುರಸ್ಸರವಾಗಿ ಹಾರಾ ತುರಾಯಿಗಳೊಡನೆ ಎದುರುಗೊಂಡರು. ನಂತರ ರೈತರ ಅಹವಾಲ್‌ಗಳನ್ನು ವಿಚಾರಿಸಿದ್ದಲ್ಲದೆ ಗ್ರಾಮದೊಳಗೆ ಸವಾರಿಯು ಚಿತ್ತೈಸಿ ಗ್ರಾಮವನ್ನು ನೋಡಿಕೊಂಡು, ಕೆರೆ ಏರಿಯ ಮೇಲೆ ದಯಮಾಡಿಸಿ ಕೆರೆಯನ್ನು ಪರಾಂಬರಿಸಿದರು. ನಂತರ ವೆಸ್ಲಿಯನ್ ಮಿಷನ್ ಬಾಯಸ್ ಸ್ಕೂಲಿಗೆ ದಯಮಾಡಿಸಿ ಅಲ್ಲಿಯೂ ಹಾರಾ ತುರಾಯಿಗಳನ್ನು ಪರಿಗ್ರಹಿಸಿ, ನಂತರ ಗೌರ್ನಮೆಂಟು ಬಾಲಿಕೆಯರ ಪಾಠಶಾಲೆಗೆ ದಯಮಾಡಿಸಿದರು. ಅಲ್ಲಿ ಬಾಲಿಕೆಯರ ಹಾಡುಗಾರಿಕೆಯನ್ನು ಲಾಲಿಸಿ ಸಂತೋಷಚಿತ್ತರಾದರು. ಗರಲ್ಸ್ ಸ್ಕೂಲ್ ಇಟ್ಟಿರುವದು ಬಾಡಿಗೆ ಮನೆಯಾದ್ದರಿಂದಲೂ ಅದು ಅನಾಯಸ್ಥಿತಿಯಲ್ಲಿರುವುದರಿಂದಲೂ ಈ ವಿಷಯವನ್ನು ಪರಾಮರಿಸಿ ಈ ಸ್ಕೂಲಿಗೆ ಬೇರೆ ಕಟ್ಟಡ ಕಟ್ಟುವ ವಿಚಾರದಲ್ಲಿ ಗ್ರಾಮಸ್ಥರ ಸಹಾಯವನ್ನು ಅಪೇಕ್ಷಿಸಿದರು. ಈ ಗ್ರಾಮಸ್ಥರ ಪೈಕಿ ಪಟೇಲರೂ, ರೆಪ್ರೆಸೆಂಟೇಟಿವ್ ಮೆಂಬರೂ ಆದ ಮ|| ಹುಚ್ಚವೀರೆಗೌಡರು ಇದಕ್ಕೆ ಅನುಮೋದಿಸಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಪ್ರತಿನಿಧಿಗಳೂ ಮತ್ತು 2 ನೇ ಕೌನ್ಸಿಲರೂ ಆದ ತಮ್ಮ ಸವಾರಿಯು ಬಡಗ್ರಾಮದ ಮೇಲೆ ಅಭಿಮಾನವನ್ನಿಟ್ಟು ಇಲ್ಲಿಗೆ ಚಿತ್ತೈಸಿದ ಜ್ಞಾಪಕಾರ್ಥವಾಗಿ ಈ ಗ್ರಾಮದ ಬಡಾವಣೆಯಲ್ಲಿ ಬಾಲಿಕೆಯರ ಸ್ಕೂಲನ್ನು ಕಟ್ಟುವುದಕ್ಕಾಗಿ ಉಚಿತಾರ್ಥವಾಗಿ 300 ರೂಪಾಯಿ ಕೊಡುವುದಾಗಿ ಹೇಳಿ, ಬಾಕಿ ಮೊಬಲಗನ್ನು ಗೌರ್ನಮೆಂಟಿನವರು ಸಹಾಯಮಾಡಬೇಕೆಂತಲೂ ಕೇಳಿಕೊಂಡರು. ಅದರಂತೆ ಅವರ ಕೋರಿಕೆಯನ್ನು ಅಂಗೀಕರಿಸಿದರು. ದೇಶದ ಏಳಿಗೆಯ ವಿಚಾರದಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಕೊಡಿದ್ದ ಪ್ರಜೆಗಳಿಗೆ ತಿಳುವಳಿಕೆಯನ್ನು ಅಪ್ಪಣೆ ಕೊಡಿಸಿ ಮೋಟಾರಿನಲ್ಲಿ ಸವಾರಿಯು ನಿಟ್ಟೂರಿಗೆ ದಯಮಾಡಿಸಿದರು.

ಸತ್ಯವಾದಿ.

ವಿದ್ಯಾಭ್ಯಾಸದ ಪ್ರದರ್ಶನ, ತೀರ್ಥಹಳ್ಳಿ.

ತೀರ್ಥಹಳ್ಳಿ ತಾಲ್ಲೂಕು ಉಪಾಧ್ಯಾಯ ಸಂಘದ ತಾ. 31-10-1915 ನೇ ಮೀಟಿಂಗಿನಲ್ಲಿ ತೀರ್ಮಾನವಾದ ಪ್ರಕಾರ ತೀರ್ಥಹಳ್ಳಿ ಟವನ್ನಿನಲ್ಲಿ 1916 ನೇ ಜನವರಿ ತಿಂಗಳಲ್ಲಿ ನಡೆಯುವ ಎಳ್ಳಮಾವಾಸ್ಯೆ ಜಾತ್ರೆಯ ಕಾಲದಲ್ಲಿ "ವಿದ್ಯಾಭ್ಯಾಸದ ಪ್ರದರ್ಶನವು" ನಡಿಸಲ್ಪಡುವದಕ್ಕೆ ಬಗ್ಗೆ ಸಂಘದ ಕಮಿಟಿಯವರು ಎಲ್ಲರ ತಿಳುವಳಿಕೆಯ ಬಗ್ಗೆ ಪ್ರಕಟಿಸಿರುತ್ತಾರೆ.

ತೀರ್ಥಹಳ್ಳಿ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಈ ಪ್ರದರ್ಶನವು 1916 ನೇ ಜನವರಿ 4 ನೇ ತಾ. ಲಾಗಾಯಿತು ಮೂರು ದಿವಸಗಳು ತೆರೆಯಲ್ಪಡುವುದು.— ಕಮಿಟಿಯವರು ಈ ಪ್ರದರ್ಶನದ ಮೂಲಕ ಈ ತಾಲ್ಲೂಕಿನ ಎಲ್ಲಾ ಉಪಾಧ್ಯಾಯರುಗಳ ಮತ್ತು ವಿದ್ಯಾರ್ಥಿಗಳ ಸಮಕ್ಷಮ ವಿಧವಿಧವಾದ ಮಾದರಿಗಳನ್ನೂ, ಪದಾರ್ಥಗಳನ್ನೂ ಇಟ್ಟು ಅವುಗಳ ಪ್ರಯೋಜನಗಳನ್ನು ತಿಳಿಸಿ ಅವರನ್ನು ವಿಚಾರಪರರನ್ನಾಗಿ ಮಾಡುವುದರ ಮೂಲಕ ಈ ತಾಲ್ಲೂಕಿನ ವಿದ್ಯಾಭ್ಯಾಸವನ್ನು ಕ್ರಮಪಡಿಸಿ, ಅಭಿವೃದ್ಧಿಪಡಿಸಬೇಕೆಂದು ಅಭಿಪ್ರಾಯಪಡುತ್ತಾರೆ. ವಿದ್ಯಾಭ್ಯಾಸದ ಇಲಾಖೆಯವರಿಂದ ಪ್ರದರ್ಶಿಸತಕ್ಕ ಸಾಮಾನುಗಳಿಂದ ಸಾಕಾಪತ್ತು ತಿಳುವಳಿಕೆ ಆಗಲಾರದೆಂದೂ, ಜನರಂಜಕವಾಗಿರಲಾರದೆಂದೂ ತೋಟ ವ್ಯವಸಾಯ, ಕೈಗಾರಿಕೆ ಸಂಬಂಧವಾದ ಸಾಮಾನುಗಳನ್ನೂ ಪ್ರದರ್ಶಿಸುವುದಕ್ಕೆ ಕಮಿಟಿಯವರು ಅಂಗೀಕರಿಸುತ್ತಾರೆ.

ಕನ್ನಡ ಭಾಷೆಯಲ್ಲಿ ತಕ್ಕ ಅರ್ಹತೆ ಪಡೆದಿರುವ ಉಪಾಧ್ಯಾಯರುಗಳಿಂದ ಯೂ ವಿದ್ಯಾವಂತರುಗಳಿಂದ ವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾಸವನ್ನು ಮಾಡುವುದಕ್ಕೂ, ಬಾಲಕರಿಗೆ ಪಾಠಗಳನ್ನು ಬೋಧಿಸುವ ಕ್ರಮವನ್ನು ತೋರಿಸುವುದಕ್ಕೂ ಏರ್ಪಾಟು ಮಾಡಲ್ಪಟ್ಟಿರುತ್ತದೆ. ಈ ವಿಚಾರದಲ್ಲಿ ಇಷ್ಟವುಳ್ಳವರು ಪೂರ್ವಭಾವಿಯಾಗಿಯೇ ಸೆಕ್ರೆಟರಿಯವರಿಗೆ ತಿಳಿಸಬೇಕಾಗಿ ಕೋರಿ ಇದೆ. ಈ ಪ್ರದರ್ಶನದ ಕಾರ್ಯಗಳನ್ನು ನಡಿಸುವುದಕ್ಕೂ, ಬಹುಮಾನಗಳನ್ನು ಮತ್ತು ಮೆಡಲ್‌ಗಳನ್ನು ಕೊಡುವುದಕ್ಕೂ ಯಾರಾದರೂ ಚಂದಾ ಕಳುಹಿಸಿದರೆ ಕಮಿಟಿಯವರು ಅವುಗಳನ್ನು ವಂದನಾ ಪೂರ್ವಕವಾಗಿ ಅಂಗೀಕರಿಸುತ್ತಾರೆ. ಕಮಿಟಿಯವರು ಈ ತಾಲ್ಲೂಕಿನಿಂದಲೂ ಮತ್ತು ಈ ಡಿಸ್ಟ್ರಿಕ್ಟಿನಿಂದಲೂ, ಸಂಸ್ಥಾನದ ದೊಡ್ಡ ದೊಡ್ಡ ಸ್ಕೂಲುಗಳಿಂದಲೂ ಬೇರೆ ಕಡೆಗಳಿಂದಲೂ ಪ್ರದರ್ಶನೀಯ ವಸ್ತುಗಳನ್ನು ಕಳುಹಿಸಬೇಕೆಂಬದಾಗಿ ಕೋರುತ್ತಾರೆ. ಅಲ್ಲದೆ ಎಲ್ಲಾ ಸರಕಾರದ ವಿದ್ಯಾಭ್ಯಾಸದ ಇಲಾಖೆಗಳೂ, ಪ್ರಜೆಗಳ ಸಂಘಗಳೂ ಪ್ರದರ್ಶನಕ್ಕೆ ವಸ್ತುಗಳನ್ನು ಮತ್ತು ಸಲಹೆಗಳನ್ನು ಕಳುಹಿಸಿ, ಪ್ರೋತ್ಸಾಹಪಡಿಸಬೇಕೆಂದು ಕೋರುತ್ತಾರೆ. ಪ್ರದರ್ಶನ ಮಾಡಲ್ಪಡುವ ವಸ್ತುಗಳ ಯೋಗ್ಯತೆಯನ್ನು ಪರೀಕ್ಷೆ ಮಾಡಿ ಬಹುಮಾನಗಳನ್ನು ಕೊಡತಕ್ಕ ವಿಷಯದಲ್ಲಿ ದೊಡ್ಡ ಮನುಷ್ಯರ ಸಹಾಯವನ್ನು ಪಡೆಯಲು ನಿಶ್ಚೈಸಿರುತ್ತಾರೆ. ಯಾವ ವಿಧವಾದ ರುಸುಂ ವಸೂಲ್ಮಾಡಲ್ಪಡದೆ ನೋಡತಕ್ಕವರಿಗೆಲ್ಲಾ ಅವಕಾಶ ಕೊಡಲ್ಪಟ್ಟಿರುವುದು.

ಪ್ರದರ್ಶಕರು ಇದೇ ಡಿಸೆಂಬರು 30 ನೇ ತಾ ಒಳಗೆ ತಲುಪುವಂತೆ ಸಾಮಾನುಗಳನ್ನು ತಮ್ಮ ಸ್ವಂತ ಖರ್ಚಿನಿಂದ ರವಾನಿಸತಕ್ಕದ್ದು. ಕಳುಹಿಸತಕ್ಕವರು ಸಾಮಾನುಗಳೊಂದಿಗೆ ಅದರ ಪಟ್ಟಿ ಮತ್ತು ಅದರ ಸಂಕ್ಷೇಪ ಚರಿತ್ರೆ, ಸಾರಬಹುದಾದ ಸಾಮಾನುಗಳ ಬೆಲೆ ಮತ್ತು ತಮ್ಮ ವಿಳಾಸ ಸ್ಪಷ್ಟವಾಗಿ ನಮೂದಿಸಬೇಕು. ಜಾಗ್ರತೆಯಾಗಿ ಕೆಟ್ಟುಹೋಗುವ ಪದಾರ್ಥಗಳನ್ನು ಜನವರಿ 3 ನೇ ತಾ. ಸಾಯಂಕಾಲ 6 ಗಂಟೆ ವರೆಗೂ ಅಂಗೀಕರಿಸಲ್ಪಡುತ್ತದೆ. ಸಾಮಾನುಗಳನ್ನು "ವಿದ್ಯಾಭ್ಯಾಸದ ಪ್ರದರ್ಶನದ ಕಮಿಟಿಯ ಸೆಕ್ರೆಟರಿ, ಗೌ|| ಎ. ವಿ. ಸ್ಕೂಲ್, ತೀರ್ಥಹಳ್ಳಿ" ಇವರ ಅಡ್ರೆಸ್ಸಿಗೆ ರವಾನಿಸಬೇಕಾಗಿ ಕೋರಲ್ಪಟ್ಟಿದೆ.

ಚನ್ನಪಟ್ಟಣದ ಜನಾನಾ ಮಿಷನ್ ಆಸ್ಪತ್ರೆಯ ಪ್ರವೇಶೋತ್ಸವ.

ಕಳೆದ 8 ನೇ ತಾ. ಬುಧವಾರ ಯುವರಾಜರವರು ಚನ್ನಪಟ್ಟಣಕ್ಕೆ ದಯಮಾಡಿಸುತ್ತಾರೆಂದು ಅದರ ಹಿಂದಿನ ಕೆಲವು ದಿನಗಳಿಂದಲೂ ಪಟ್ಟಣದ ತಳಿರುತೋರಣಗಳಿಂದಲೂ ಅಲಂಕಾರವಾಗುವಂತೆ ಸಬ್ ಡಿವಿಜನ್ ಆಫೀಸರವರೂ, ತಾಲ್ಲೋಕು ಅಮಲ್ದಾರರೂ, ಪೊ|| ಇನ್ಸ್‌ಪೆಕ್ಟರೂ, ಸ್ಯಾನಿಟರಿ ಇನ್ಸ್‌ಪೆಕ್ಟರೂ ತುಂಬಾ ಮೆಹನತ್ತು ಮಾಡಿದರು. ಆ ದಿನ ಸುಮಾರು 10 ಗಂಟೆಗೆ ಯುವರಾಜರವರು ಮೋಟಾರಿನಲ್ಲಿ ಬೆಂಗಳೂರು ಕಡೆಯಿಂದ ಚಿತ್ತೈಸುವಾಗ್ಗೆ ಪುರಜನರೂ, ಸುತ್ತುಮುತ್ತು ಗ್ರಾಮಗಳ ನಿವಾಸಿಗಳೂ ಸಂತೋಷಕಂಡವಾಗಿ ರಾಜಬೀದಿಯಲ್ಲಿ ಕಿಕ್ಕಿರಿಯುತ್ತಿದ್ದರು. ಪೋಲೀಸ್ ಸಿಬ್ಬಂದಿಯು ಚೆನ್ನಾಗಿತ್ತು. ಕಾಲಕ್ಕೆ ಸರಿಯಾಗಿ ಯುವರಾಜರ ಸವಾರಿಯು ಚಿತ್ತೈಸಿ, ಆಸ್ಪತ್ರೆಯ ಪಕ್ಕದಲ್ಲಿ ಚಪ್ಪರದಲ್ಲಿ ಮ್ಯುನಿಸಿಪಲ್ ಮೆಂಬರುಗಳು ಅರ್ಪಿಸಿದ ಹಾರಾ ತುರಾಯಿಗಳನ್ನು ಸ್ವೀಕರಿಸಿ, ತರುವಾಯ ಮೋಟಾರಿನಲ್ಲಿಯೇ ಆಸ್ಪತ್ರೆಯ ಕಾಂಪೌಂಡಿನೊಳಕ್ಕೆ ದಯಮಾಡಿಸಿದರು. ತತ್ಪೂರ್ವವೇ ಮದರಾಸ್, ಬೆಂಗಳೂರು, ಮೈಸೂರುಗಳಿಂದ ದಯಮಾಡಿಸಿದ್ದ ಯೂರೋಪಿಯನ್ ಪಾದ್ರಿಗಳೂ, ಧೊರೆಸಾನಿಗಳೂ, ಡಾಕ್ಟರುಗಳೂ, ದೇಶೀಯ ಮುಖಂಡರೂ, ಡೆಪ್ಯುಟಿ ಕಮಿಷನರೂ, ಸಂಸ್ಥಾನದ ಕೆಲವು ಆಫೀಸರರೂ, ಈ ತಾಲ್ಲೋಕಿನ ಅಧಿಕಾರಿಗಳೂ, ವರ್ತಕರೇ ಮೊದಲಾದವರೂ ಅವರವರ ಸ್ಥಾನದಲ್ಲಿ ಕುಳಿತಿದ್ದರು. ಆಗ್ಗೆ ಜನಾನಾ ಮಿಷನ್ ಸೆಕ್ರೆಟರಿ ಮಿ|| ಲಾಂಗ್‌ಡೇಲ್ ಸ್ಮಿತ್‌ರವರೂ, ಡಾ|| ಲಿಲಿಂಗ್‌ಸ್ಟನ್ ಅಮ್ಮನವರೂ, ಹಾಯಿಂಡರ್ ಅಮ್ಮನವರೂ ಯುವರಾಜರವರನ್ನು ಎದುರುಗೊಂಡು ಸುಖಾಗಮನವನ್ನು ಬಯಸಿ ಕರೆತರುತ್ತಿರುವಾಗ್ಗೆ ವೆಸ್ಲಿಯನ್ ಮಿಷನ್ ಸ್ಕೂಲಿನ ಬಾಲಿಕೆಯರು ವಿವಿಧ ಅಲಂಕಾರಗಳಿಂದ ಶೋಭಾಯಮಾನವಾಗಿ ರಚಿಸಲ್ಪಟ್ಟಿದ್ದ ಚಪ್ಪರದ ಮುಂಭಾಗದಲ್ಲಿ ಕರ್ಣಾನಂದವಾಗಿ ಗಾಯನಮಾಡುತ್ತಿದ್ದರು. ಈ ಗಾಯನವನ್ನು ಕೇಳುತ್ತಾ ಅವರಿಗಾಗಿ ರಚಿಸಲ್ಪಟ್ಟಿದ್ದ ಉಚಿತಾಸನದಲ್ಲಿ ಕುಳ್ಳಿರಿಸಿದರು. ಅವರ ಬಲಭಾಗದಲ್ಲಿ ಮದರಾಸಿನ ಲಾರ್ಡ್ ಬಿಷಪ್‌ರವರು ಕುಳಿತುಕೊಂಡರು. ಒಂದು ಸಂಗೀತವನ್ನು ಹಾಡಿದ ತರುವಾಯ ಘನ ಧನಸಿಂಗ್ ಅಯ್ಯಂಗಾರವರು ಸತ್ಯವೇದದ ಒಂದು ಭಾಗವನ್ನು ಪಾರಾಯಣ ಮಾಡಿದರು. ಅನಂತರ ಲಾರ್ಡ್ ಬಿಷಪ್‌ರವರು ಆಸ್ಪತ್ರೆ ಅಭಿವೃದ್ಧಿಯ, ಅದರಲ್ಲಿ ಕೆಲಸ ಮಾಡತಕ್ಕವರ, ರೋಗಿಗಳ ಕಟ್ಟಡಕ್ಕೋಸ್ಕರ ಧನ ಸಹಾಯಮಾಡಿದವರ, ಮಹಾರಾಜರವರ ಮತ್ತು ಈಗ ಯುದ್ಧರಂಗದಲ್ಲಿ ಹೋರಾಡುವ ಯುದ್ಧಭಟರ ವಿಷಯವಾಗಿ ಬಹು ಗಂಭೀರವಾಗಿಯೂ ನಮ್ರತೆಯಿಂದಲೂ ದೇವರ ಪ್ರಾರ್ಥನೆ ಮಾಡಿದರು. ತರುವಾಯ ಮಿ|| ಲಾಂಗ್‌ಡೇಲ್ ಸ್ಮಿತ್‌ರವರು ಈ ಆಸ್ಪತ್ರೆಯ ಅಭಿವೃದ್ಧಿಯನ್ನು ಕೋರಿ 9 ತಿಂಗಳ ಹಿಂದೆ ಇದರ ಅಸ್ತಿವಾರಶಿಲೆಯು ಮಿ|| ಕ್ಯಾನನ್ ಸೆಲ್ ಎಂಬವರಿಂದ ಹಾಕಲ್ಪಟ್ಟು ಈಗ ನೋಟಕ್ಕೆ ರಮಣೀಯವಾದ ಕಟ್ಟಡವಾಗಿದೆ ಎಂಬುವದನ್ನು ಸೂಚಿಸಿ, ಇಲ್ಲಿ ನಡೆಯುವ ಕೆಲಸವು ದೇಹಾರೋಗ್ಯಕ್ಕೆ ಮಾತ್ರವಲ್ಲದೆ ಆತ್ಮೀಯಾಭಿವೃದ್ಧಿಗೂ ಕಾರಣವಾಗಿದೆ ಎಂದು ಹೇಳಿದರು. ತರುವಾಯ ಡಾಕ್ಟರ್ ಲಿಲಿಂಗ್‌ಸ್ಟನ್ ಅಮ್ಮನವರು ಆಸ್ಪತ್ರೆಯ ರಿಪೋರ್ಟಿನಲ್ಲಿ—"ಚನ್ನಪಟ್ಟಣದಲ್ಲಿ ಹಿಂದೂ ಮುಸಲ್ಮಾನರ ಸಂಖ್ಯೆಯು ಹೆಚ್ಚಾಗಿಯೂ, ಇಲ್ಲಿನ ಸ್ತ್ರೀಯರಿಗೆ ಪ್ರತ್ಯೇಕವಾದ ಆಸ್ಪತ್ರೆ ಇಲ್ಲದ್ದರಿಂದಲೂ ನಾವು ವಾರಕ್ಕೊಂದಾವರ್ತಿ ಬಂದು ಕಾಯಿಲೆಯ ಸ್ತ್ರೀಯರಿಗೆ ಔಷಧವನ್ನು ಕೊಟ್ಟು ಹೋಗುತ್ತಿದ್ದೆವು. ಕ್ರಮೇಣ ರೋಗಿಗಳ ಸಂಖ್ಯೆಯು ಹೆಚ್ಚುತ್ತಾ ಬಂದದ್ದರಿಂದ ಇಲ್ಲಿಯೇ ಇದ್ದುಕೊಂಡು ಇಲಾಜು ಮಾಡಬೇಕೆಂಬ ಯೋಚನೆಯು ಹುಟ್ಟಿ, ವೆಸ್ಲಿಯನ್ ಮಿಷನ್‌ಗೆ ಸೇರಿದ ಒಂದು ನಿವೇಶನವನ್ನು ಘನ ರೀಸ್ ಸಾಹೇಬರವರಿಂದ ಪಡೆದು, ಅಲ್ಪ ಮೊಬಲಗಿನಿಂದ ಒಂದು ಕಟ್ಟಡವನ್ನು ಕಟ್ಟಿಸಿ ಇಲಾಜು ಮಾಡುತ್ತಾ ಬಂದೆವು. ಕ್ರಮೇಣ ಕಾಯಿಲೆಯವರ ಸಂಖ್ಯೆಯು ಹೆಚ್ಚಾಗುತ್ತಾ ಬಂದದ್ದರಿಂದ ಒಂದು ದೊಡ್ಡ ಕಟ್ಟಡವನ್ನು ಕಟ್ಟಬೇಕೆಂದು ಉದ್ದೇಶಿಸಿ 23,000 ರೂಪಾಯಿ ವ್ಯಯಿಸಿ ಈ ಕಟ್ಟಡವನ್ನು ಪೂರೈಸಿದೆ" ಎಂಬದಾಗಿ ಸೂಚಿಸಿದರು. ಇದಕ್ಕೆ ಶ್ರೀಮದ್ಯುವರಾಜರವರು ಸಮಯೋಚಿತವಾದ ಸದುತ್ತರವನ್ನು ದಯಪಾಲಿಸಿ, ಇದರ ಅಭಿವೃದ್ಧಿಯನ್ನು ಸಾರ್ವದಾ ಕೋರುತ್ತೇನೆಂದು ಅಪ್ಪಣೆ ಕೊಡಿಸಿದರು. ಸಭೆಯವರ ಪರವಾಗಿ ಮಿ|| ಎಫ್. ಎಂ. ಅಬ್ದುಲ್ ಖುದ್ದೂಸ್ ಸಾಹೇಬರು ವಂದನೆಗಳನ್ನು ಅರ್ಪಿಸಿದರು. ಬಳಿಕ ಯುವರಾಜರವರು ಬಾಗಿಲಿಗೆ ಹಾಕಿದ್ದ ಹಸುರು ರೇಷ್ಮೆ ಪರದೆಯನ್ನು ಸ್ವಹಸ್ತ ತೆಗೆದು ಇತರ ದೊಡ್ಡ ಮನುಷ್ಯರೊಡನೆ ಕಟ್ಟಡದೊಳಗೆ ಪ್ರವೇಶಿಸಿ ಕೆಳಗಡೆಯ ಮತ್ತು ಮೇಲಂತಸ್ತಿನ ಎಲ್ಲಾ ಭಾಗಗಳನ್ನೂ ನೋಡಿ ಆನಂದಪಟ್ಟುಕೊಂಡು, ಅಲ್ಲಿಂದ ಪಕ್ಕದಲ್ಲಿರುವ ಜನಾನಾ ಇಂಡಸ್ಟ್ರಿಯಲ್ ಹೋಂಗೆ ದಯಮಾಡಿಸಿ ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ನೋಡಿ ಹರ್ಷಗೊಂಡು ಹಿಂತಿರುಗುವಾಗ್ಗೆ ಆಸ್ಪತ್ರೆ ಆವರಣದಲ್ಲಿ ಯುವರಾಜರವರೂ ಲಾರ್ಡ್ ಬಿಷಪ್‌ರವರೂ ತಮ್ಮ ಜ್ಞಾಪಕಾರ್ಥವಾಗಿ ಎರಡು ಗಿಡಗಳನ್ನು ನೆಟ್ಟರು. ತರುವಾಯ ಅಲ್ಪಾಹಾರ ತೀರಿದ ಮೇಲೆ ಗೌ|| ಇಂಡಸ್ಟ್ರಿಯಲ್ ಸ್ಕೂಲನ್ನು ಪರಾಂಬರಿಸಿ ಅಲ್ಲಿಂದ ಅಲಂಕಾರವಾಗಿದ್ದ ಮುಸಾಫರ್ ಬಂಗ್ಲೆಗೆ ದಯಮಾಡಿಸಿದರು. ಅಲ್ಲಿ ಪೂರ್ವದಿಂದಲೂ ರೇಷ್ಮೆ ವ್ಯವಸಾಯದಲ್ಲಿ ಆಸಕ್ತರಾಗಿರುವ ಸಾಹುಕಾರ್ ಮಿ|| ಎಫ್. ಎಂ. ಅಬ್ದುಲ್ ಖುದ್ದೂಸ್ ಸಾಹೇಬರಿಗೆ ಭೇಟಿ ದಯಪಾಲಿಸಿದರು. ತರುವಾಯ ಡಾಯರೆಯವರ ಅಂಜುಮನ್ ಕಟ್ಟಡಕ್ಕೆ ದಯಮಾಡಿಸಿ ಅವರು ಒಪ್ಪಿಸಿದ ಅಡ್ರೆಸ್ಸನ್ನು ಸ್ವೀಕರಿಸಿ ಸದುತ್ತರಗಳಿಂದ ಅವರನ್ನು ಸಂತೋಷಪಡಿಸಿ, ಅಲ್ಲಿಂದ ಕೋಟೆಯಲ್ಲಿರುವ ಸಿಲ್ಕ್ ಫೈಲೇಚರಿಗೆ ದಯಮಾಡಿಸಿ ಅಲ್ಲಿನ ಕೆಲಸಗಳನ್ನೆಲ್ಲಾ ಪರಾಂಬರಿಸಿ, ಅಲ್ಲಿಂದ ಹೊರಟು ಎರಡು ಮೈಲು ದೂರದಲ್ಲಿರುವ ಗೌ|| ಸಿಲ್ಕ್ ಫಾರಮಿಗೆ ಹೋಗಿ ಅಲ್ಲಿ ನಡೆಯುವ ಕೆಲಸಗಳನ್ನು ಪರಾಂಬರಿಸಿದರು. ಅಲ್ಲಿ ಮಿ|| ಎಫ್. ಎಂ. ಅಬ್ದುಲ್ ಖುದ್ದೂಸ್ ಸಾಹೇಬರವರು ತಮ್ಮ ಆ ಕಟ್ಟಡವನ್ನೂ ಅದರ ನಿವೇಶನವನ್ನೂ ಗೌರ್ನಮೆಂಟಿಗೆ ಒಪ್ಪಿಸುತ್ತೇವೆಂದು ಅರಿಕೆ ಮಾಡಿಕೊಂಡರು. ತರುವಾಯ ಯುವರಾಜರವರು ಸುಮಾರು 2¼ ಘಂಟೆಗೆ ಬೆಂಗಳೂರಿಗೆ ಚಿತ್ತೈಸಿದರು.—ವೆಸ್ಲಿಯನ್ ಮಿಷನ್ ಪಾಠಶಾಲೆಯ ಬಾಲಿಕೆಯರು ಜನಾನಾ ಮಿಷನ್ ಆಸ್ಪತ್ರೆಯ ಪ್ರವೇಶೋತ್ಸವ ಕಾಲದಲ್ಲಿ ಮನೋಹರವಾಗಿ ಹಾಡಿದ್ದರಿಂದ ಸಾಹುಕಾರ್ ಎಫ್. ಎಂ. ಅಬ್ದುಲ್ ಖುದ್ದೂಸ್ ಸಾಹೇಬರು ಮಕ್ಕಳ ಸಂತೋಷಕ್ಕಾಗಿ 5 ರೂಪಾಯಿ ಬಹುಮಾನಕೊಟ್ಟರು.

ಒಂದು ಸನ್ಮಾನ ಸಭೆಯು.

ಶ್ರೀರಂಗಪಟ್ಟಣದ ದರಿಯಾ ದೌಲತ್ ಬಾಗ್ ಎಂಬ ಉದ್ಯಾನ ವನದಲ್ಲಿ ಶ್ರೀರಂಗಪಟ್ಟಣ ಮತ್ತು ಗಂಜಾಮದ ಪ್ರಜೆಗಳು ಈ ಸಲ ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಗಳು ಚುನಾವಣೆ ಮಾಡಿದ ಮೈಸೂರು ಅಡ್ವೊಕೇಟ್ ಮ|| ಸಿ. ನರಸಿಂಹಯ್ಯನವರನ್ನು ಕರಸಿಕೊಂಡು ಅವರಿಗಾಗಿ ಒಂದು ಸನ್ಮಾನ ಕೂಟವನ್ನು ಕಳೆದ ಭಾನುವಾರ ನಡಿಸಿದರು. ಈ ಸಂತೋಷ ಕೂಟಕ್ಕೆ ರಾಜಧಾನಿಯಿಂದ ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಅರಮನೆ ಕಂಟ್ರೋಲರ್ ಬಿ. ರಾಮಕೃಷ್ಣರಾಯರು, ಮ್ಯುನಿಸಿಪಲ್ ಪ್ರೆಸಿಡೆಂಟ್ ಟಿ. ಲಕ್ಷ್ಮೀನರಾಯರು, ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರು, ನಂಜನಗೂಡು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ವೆಂಕಟಸ್ವಾಮಯ್ಯನವರು ಅಲ್ಲದೆ ಇತರ ಕೆಲವು ದೊಡ್ಡ ಮನುಷ್ಯರೂ, ಶ್ರೀರಂಗಪಟ್ಟಣದ ಅಮಲ್ದಾರರೇ ಮೊದಲಾದ ಉದ್ಯೋಗಸ್ಥರೂ ಕರೆಸಲ್ಪಟ್ಟಿದ್ದರು. ಅನಿವಾರ್ಯದಿಂದ ಬಾರದಿದ್ದ ಅನೇಕ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಕಾಗದಗಳನ್ನು ಬರೆದು ತಮ್ಮ ಸಂತೋಷವನ್ನು ತಿಳಿಸಿದರು. ಉದ್ಯಾನ ವನದಲ್ಲಿ ಅತಿಥಿಗಳೆಲ್ಲಾ ರುಚಿಕರವಾದ ಭೋಜನ ಮಾಡಿದ ಬಳಿಕ ಅರಮನೆಯ ವಿದ್ವಾನ್ ವಾಸುದೇವಾಚಾರ್ಯರ ಆಹ್ಲಾದಕರವಾದ ಸಂಗೀತವನ್ನು ಕೇಳಿ ಸಂತೋಷಪಟ್ಟರು. ಮ|| ಕೆ. ವೆಂಕಟಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಎಲ್ಲರೂ ಸಭೆ ಸೇರಿದಾಗ ಮ|| ಜಿ. ದೇವೋಜಿರಾಯರು ಇಂಗ್ಲಿಷಿನಲ್ಲೂ, ಮ|| ಎಸ್. ಎ. ಜವರಯ್ಯನವರು ಕನ್ನಡದಲ್ಲೂ ಅಡ್ರೆಸ್ಸನ್ನು ಓದಿ ಮ|| ಸಿ. ನರಸಿಂಹಯ್ಯನವರಿಗೆ ಒಪ್ಪಿಸಿದರು. ಮ|| ಎಚ್. ಕೃಷ್ಣಶಾಸ್ತ್ರಿಗಳು ಅವರ ಗುಣಕಥನವನ್ನು ಮಾಡಿ, ನ್ಯಾಯವಿಧಾಯಕ ಸಭೆಯ ಕಾರ್ಯಗೌರವವನ್ನೂ, ಮೆಂಬರುಗಳ ಕರ್ತವ್ಯಾಂಶಗಳನ್ನೂ ಸ್ವಾರಸ್ಯವಾಗಿ ವಿವರಿಸಿದರು. ಮ|| ಸಿ. ನರಸಿಂಹಯ್ಯನವರು ಅಡ್ರೆಸ್ಸನ್ನೂ ಹಿತವಾದಗಳನ್ನೂ ಕೃತಜ್ಞತೆಯೊಡನೆ ಅಂಗೀಕರಿಸಿ, ನ್ಯಾಯ ವಿಧಾಯಕ ಸಭೆಗೆ ತಾವು ಹೊಸಬರಾಗಿರುತ್ತೇನೆಂದೂ, ಪ್ರಜೆಗಳು ತಮ್ಮ ಕುಂದು ಕೊರತೆಗಳನ್ನು ತಿಳಿಸಿ ಸಹಾಯ ಮಾಡಿದರೆ ತಾವು ಆ ಮಹಾಸಭೆಯಲ್ಲಿ ತಮ್ಮ ಕೈಲಾಗುವ ಮಟ್ಟಿಗೂ ಹೋರಾಡುವುದಕ್ಕೆ ಅನುಕೂಲವಾದೀತೆಂದು ಮುಂತಾಗಿ ಉತ್ತರವನ್ನು ಹೇಳಿದರು. ಬಳಿಕ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಬಳಿಕ ಕೂಟವು ಮುಕ್ತಾಯವಾಯಿತು. ಈ ಸಂತೋಷ ಕೂಟದ ಕಾರ್ಯಗಳನ್ನೆಲ್ಲಾ ಮ|| ದೇವೋಜಿರಾಯರು, ಮ|| ವೆಂಕಟರಾಮಯ್ಯನವರು, ಮ|| ಜವರಯ್ಯನವರೇ ಮುಂತಾದವರು ಬಹಳ ತೃಪ್ತಿಕರವಾಗಿಯೂ ವಿನಯದಿಂದಲೂ ನಡಿಸಿದರು. ಕನ್ನಡದಲ್ಲಿ ಓದಿದ ಅಡ್ರೆಸ್ಸಿನ ಮುಖ್ಯಾಂಶಗಳೇನಂದರೆ—

ಸ್ವಾಮಿ,—ಮಹಿಸೂರು ಸಂಸ್ಥಾನದ ಅರವತ್ತು ಲಕ್ಷ ಪ್ರಜೆಗಳು ಪ್ರಜಾ ಹಿತಚಿಂತನೆಯ ಮತ್ತು ರಾಜಭಕ್ತಿಯ ... ಕೂಡಿದ ಬಹು ಉತ್ಸಾಹದಿಕ್ಕವಳ್ಳ ನಿಯಮ ನಿರ್ಮಾಣ ಸಭೆಗೆ ... ತಮ್ಮನ್ನು ಸದಸ್ಯರ ಸ್ಥಾನದಲ್ಲಿ ತಮ್ಮ ಪ್ರತಿನಿಧಿಗಳಾಗಿ ಆರಿಸಿಕೊಂಡ ... ನಮಗೆ ಉಂಟಾಗಿರುವ ಮನಃಪೂರ್ವಕವಾದ ಸಂತೋಷಗಳನ್ನು ಪ್ರ... ನಾವು ಈ ದಿವಸ ಇಲ್ಲಿ ಸೇರಿರುತ್ತೇವೆ. ತಮ್ಮ ಆಶಯವನ್ನರಿತವರಾ... ಗುಣಗಳನ್ನಾರೋಪಿಸಿಕೊಂಡು ಅನಂತವಾಗಿ ಹೊಗಳಿ ತಮ್ಮ ವಿನ್ಯಾ... ರಾಗಿ ತನ್ಮೂಲಕ ಉನ್ನತಾಧಿಕಾರಿಗಳಲ್ಲಿ ಪರಿಚಿತರಾಗುವುದಕ್ಕಾ... ರಾಜ್ಯಕ್ಕೆ ನಮ್ಮ ಭಾಗ್ಯೋದಯದಿಂದ ಸಚಿವಶ್ರೇಷ್ಠರಾಗಿರುವ ... ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಭುಗಳ ಆಜ್ಞಾನುಸಾರ ತಮ್ಮ ... ವರ್ಗಕ್ಕೆ ಸೇರಿದ ಪ್ರಜಾ ಸಮುದಾಯದ ಉಚ್ಚ್ರಾಯ ಸ್ಥಿತಿಯನ್ನು ... ನೋಡಿ ಸಂತೋಷದಿಂದ ದಣಿಯಬೇಕೆಂಬ ಲವಲವಿಕೆಯಿಂದ ಏರ್ಪಡಿಸ... ಅನೇಕಾನೇಕ ಸಮಾಜಗಳಿಗೆ ಸದಸ್ಯರಾಗುವುದಕ್ಕಾಗಲೀ ಉದ್ದೇಶ... ಮಾಡುವ ಉಪಚಾರವೆಂದು ತಾವು ಸರ್ವಥಾ ಭಾವಿಸಲಾಗದು.

ತಾವು ಮದ್ರಾಸು ತಿರುವನಂತಪುರ ಮುಂತಾದ ದೊಡ್ಡ ಪಟ್ಟಣ... ಪ್ರಥಮವಿದ್ಯಾಶಾಲೆಗಳಲ್ಲಿ ಘನ ಪಂಡಿತರುಗಳಿಂದ ಸುಶಿಕ್ಷಿತರಾಗಿ ಬಿ. ಎಲ್. ಎಂಬ ಪ್ರಶಸ್ತಿಗಳನ್ನು ಸರ್ವವಿದ್ಯಾಶಾಲಾ ಸಭೆಯವರಿಂದ ... ಸನ್ಮಾನಿತರಾಗಿರುತ್ತೀರಿ. ಭರತಖಂಡದ ಅನೇಕ ಭಾಗಗಳಲ್ಲಿ ಸಂಚರಿಸಿ ... ಪಟ್ಟಣದ ಸ್ಥಿತಿಗತಿಗಳನ್ನೂ ಜನಗಳ ನಾಗರಿಕತೆಯನ್ನೂ ರಾಜ್ಯಭಾರದ ... ಯನ್ನೂ ಮುಂದಟ್ಟು ಮಾಡಿಕೊಂಡಿರುತ್ತೀರಿ. ಕಳೆದ ಹದಿನೈದು ... ಕಿಂದಲೂ ರಾಜಧಾನಿಯಲ್ಲಿ ನ್ಯಾಯವಾದಿಗಳಾಗಿ ನಿಂತೂ ಕಕ್ಷಿಗಾರರ ... ಇತರರ ನಂಬಿಕೆ ಮತ್ತು ವಿಶ್ವಾಸಗಳಿಗೆ ಪಾತ್ರರಾಗಿ "ಡಿಸ್ಟ್ರಿಕ್ಟ್ ... ರೆಪ್ರೆಜೆಂಟೇಟಿವ್ ಅಸೆಂಬ್ಲಿ" ಮುಂತಾದ ಸಭೆಗಳಲ್ಲಿ ಸದಸ್ಯರಾಗಿದ್ದು ... ಇವುಗಳ ಜತೆಗೆ ನಿಯಮ ನಿರ್ಮಾಣ ಸಭೆಯಲ್ಲೊಂದು ಸ್ಥಾನವು ಈ ... ಲಭಿಸಿದುದು ತಮ್ಮ ಯೋಗ್ಯತೆಯನ್ನು ಅತ್ಯಧಿಕವಾಗಿ ಪ್ರಕಾಶ ಪಡಿಸು...

ದೊಡ್ಡ ದೊಡ್ಡ ಪದವಿಯಿಂದಲಂಕೃತರಾದ ಮಹನೀಯರಲ್ಲಿ ... ಗರ್ವದಿಂದುಬ್ಬಿ ಉನ್ಮತ್ತರಾಗಿ ತಿರುವನ್ನೇರಿ ಸ್ವಹಿತಕ್ಕಾಗಿ ಸ್ವಪ್ರತಿಷ್ಠ... ಕಳಪುರುಷರಂತೆ ಮೆರೆದು ಮಹಾಜನಗಳ ಅವಿಶ್ವಾಸಕ್ಕೂ ಧಿಕ್ಕಾರಕ್ಕೂ ... ಗಾಗಿರುವುದರಿಂದ ತಾವು ಕೈಗೊಂಡಿರುವ ಕಾರ್ಯದಲ್ಲಿ ನಿಷ್ಕಾಮದಿಂದ ... ಮಾಡಿ ಬಹು ಜತನದಿಂದ ತಮ್ಮ ಜೀವನೋದ್ದೇಶವನ್ನು ಸಫಲ... ಕೊಳ್ಳಬೇಕಾಗಿರುತ್ತದೆ.

ತಾವು ಯಶಸ್ಸು, ದ್ರವ್ಯಾರ್ಜನೆ ಮತ್ತು ಬಿರುದಾವಳಿ ಇವುಗಳ ... ಲಕ್ಷ್ಯವಿಡದೆ ಯಾರು ಯಾವ ಭರವಸೆಯಿಂದ ಕೂಡಿದ ಅಪೇಕ್ಷ... ತಮ್ಮಿಂದ ನಿರೀಕ್ಷಿಸಲು ಈ ಪದವಿಗೆ ತಂದರೋ ಅಂತಹ ಪ್ರತಿನಿಧಿಗಳಿಗೆ ... ಯನ್ನು ತರಬೇಕಾದ ಭಾರವು ತಮ್ಮನ್ನು ಹೊಂದಿರುತ್ತದೆ.

ಜಾತಿ ಮತಗಳ ಅಭಿಮಾನವನ್ನೂ ಬಡವರು ಭಾಗ್ಯವಂತರೆಂಬ ... ವನ್ನೂ ಇಟ್ಟುಕೊಳ್ಳದೆ ಪ್ರೀಯಾಬ್ಬ ಪ್ರಜೆಯ ಗೃಹಕೃತ್ಯವು ಮಾನವ... ಕಷ್ಟ ಸುಖವೂ ತಮ್ಮದೆಂದು ಭಾವಿಸಿ ಸಮದೃಷ್ಟಿಯಿಂದ ಪರಿಹಿತ... ತನು ಮನ ಧನಗಳನ್ನು ವಿನಿಯೋಗಿಸುವ ಸುಯೋಗವು ತಮಗೆ ಒದಗಿ...

ಸನ್ಮಾರ್ಗಿಗಳೂ ಕೂಡ ಶಿಬಿರೀಕೃತವಾದ ಫಲಗಳಿಂದ ಶೋಭಿಸು... ತಲೆ ಬಾಗಿಸಿಕೊಂಡು ಸರ್ವಸ್ವವನ್ನೂ ಪರರಿಗಾಗಿಯೇ ಧಾರೆಯೆರೆಯುತ್ತಿರು... ತಮಗೆ ಅರಿಯದ ವಿಷಯವಲ್ಲವಾದುದರಿಂದ ಜಗತ್ ಸೃಷ್ಟಿಯಲ್ಲಿರುವ ಎ... ನಾಲ್ಕು ಕೋಟಿ ಜೀವರಾಶಿಗಳಲ್ಲಿ ಅಗ್ರಸ್ಥಾನವನ್ನು ಹೊಂದಿರುವ ಮ... ದಸ್ಯವೃತ್ತಿಯ ತಾವು ಯಾವ ರೀತಿ ತಮ್ಮ ಕರ್ತವ್ಯವನ್ನು ಈಡೇರಿಸಬೇಕಾ... ದೆಂಬುವುದನ್ನು ಹೇಳಬೇಕಾದ ಅವಶ್ಯಕತೆ ಇರುವುದಿಲ್ಲವು.

ಔದಾರ್ಯವಿಲ್ಲದವನ ವೈಭವವೂ, ಸ್ವಾರ್ಥಪರನ ಉನ್ನತಿಯೂ, ... ದಯಾಪರನಲ್ಲದವನ ಖಾಜಮಾನ್ಯವೂ ವ್ಯರ್ಥವಾದುದೇ ಸರಿ.

ಆದುದರಿಂದ ತಾವು ಪ್ರವೇಶಿಸಿರುವ ದೇಶೋನ್ನತಿಯ ಪಥದಲ್ಲಿ ... ದಕ್ಷತೆಯನ್ನೂ, ತಾಳ್ಮೆಯನ್ನೂ ತಂದುಕೊಂಡು ಪ್ರಜೋಪಕಾರಗಳನ್ನು ಮಾ... ಸರ್ವಶಕ್ತನಾದ ಜಗದೀಶನು ತಮಗೆ ಆಯುರಾರೋಗ್ಯ ಐಶ್ವರ್ಯಗಳ... ಕಾಪಾಡಲೆಂದು ಪ್ರಾರ್ಥಿಸುವೆವು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವು... ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾ... ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ... ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎ... ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾ...

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ... ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ... ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾ... ವೆಂಬ ಭರವಸೆ ಕಡದು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ... ಹೇಳುತ್ತೇವೆ.

—ಎಡಿ.

ಕರೆಸ್ಪಾಂಡೆನ್ಸ್.

ಬೆಂಗಳೂರು ಮೈಸೂರು ಮೆಯಿಲ್ ರೈಲ್ವೆ ಗಾಡಿಗಳು.

ಅಯ್ಯಾ,—ಬೆಂಗಳೂರಿನಿಂದ ಬೆಳಗ್ಗೆ 7-20 ಕ್ಕೆ ಮೆಯಿಲ್ ಗಾಡಿ ಹೊರಟು ಮೈಸೂರಿಗೆ 11-55 ಕ್ಕೆ ತಲುಪಿ ಚಾಮರಾಜಪುರಂ ರೈಲ್ವೆ ಸ್ಟೇಷನ್ 12-17 ಕ್ಕೆ ಸೇರುತ್ತದೆ. ಈಗ ಮೈಸೂರಿಂದ ಹೊರಡುವ ಗಾಡಿಯು ... ಮಾಡಲ್ಪಟ್ಟು ಇನ್ನು ಮುಂದೆ ಮಧ್ಯಾಹ್ನ 1-13 ಕ್ಕೆ ಚಾಮರಾಜ... ಸ್ಟೇಷನ್ನಿಂದ ಮೈಸೂರಿಗೆ ಹೊರಟು 1-20 ಕ್ಕೆ ಮೈಸೂರು ಸ್ಟೇಷನ್ ... ಬೆಂಗಳೂರಿಗೆ ಸಾಯಂಕಾಲ 6-15 ಕ್ಕೆ ಸೇರುತ್ತದೆ. ಇದು ಬರುವ ... ಗುರ್ರೆ ಲಾಗಾಯಿತು ಜಾರಿಗೆ ಬರುವುದಾಗಿದೆ. ಚಾಮರಾಜಪುರಂ ರೈಲ್ವೆ ಸ್ಟೇ... ನಲ್ಲಿ ಆಫೀಸಿನ ಕಟ್ಟಡವು ಕಟ್ಟಲು ಮುಂಜೂರಾಗಿರುತ್ತದೆ. ಮೇಲ್ಕಂಡ ... ಲಾವಣೆಗಳಿಂದ ಜನರಿಗೆ ತುಂಬಾ ಅನುಕೂಲವನ್ನು ರೈಲ್ವೆ ಕಂಪನಿಯ... ಕಲ್ಪಿಸಿದ ಹಾಗಾಯಿತು. ಚಾಮರಾಜಪುರಂ ರೈಲ್ವೆ ಸ್ಟೇಷನ್ನಲ್ಲಿ ಪ್ರಯಾ... ಅನುಕೂಲಕ್ಕಾಗಿ ಒಂದು ನಲ್ಲಿ ಬೇಕಾಗಿದೆ. ಯಾರಾದರೂ ಧರ್ಮಿಷ್ಠ... ಇದನ್ನು ಕಲ್ಪಿಸಿಕೊಡುವರೆಂದು ನಂಬಿದೆ.

ಪ್ರಯಾಣಿಕರ ಒಬ್ಬ...

ಮೈಸೂರು ಮ್ಯುನಿಸಿಪಾಲಿಟಿಯವರೂ, ಬೈಸಿಕಲ್‌ಗಳೂ.

ಅಯ್ಯಾ,—ಮೈಸೂರು ಸಿಟಿಯಲ್ಲಿ ಮ್ಯುನಿಸಿಪಾಲಿಟಿಯವರು ಬೈಸಿ... ಗಳಿಗೆ ಬಿಲ್ಲೆಗಳು ಹಾಕಲಿಲ್ಲವೆಂದು ಉಮೇದಿನಿಂದ ಬೈಸಿಕಲ್ ಮೇಲೆ ... ಗಾಡುತ್ತಿರುವ ಮಾನಸ್ಥರನ್ನು ನಿಲ್ಲಿಸಿ ತುಂಬಾ ತೊಂದರೆ ಕೊಡುತ್ತಿರು... ಈ ರೀತಿ ಬೀದಿಯಲ್ಲಿ ನಿಲ್ಲಿಸಿ ಅವಮಾನಪಡಿಸಲು ಅವರಿಗೆ ಮ್ಯುನಿಸಿ... ಯವರು ಹುಕುಂ ಕೊಟ್ಟಿರುವರೋ ಇಲ್ಲವೋ ಗೊತ್ತಿಲ್ಲ. ಅನೇಕ ಜನ... ಗಳು ಬಿಲ್ಲೆಗಳನ್ನು ಮ್ಯುನಿಸಿಪಾಲಿಟಿಯಿಂದ ತೆಗೆದುಕೊಂಡಿರುವಂತೆ ... ಎಲ್ಲಿ ಹೋಗಿಯೂ ಬಡವರು ತೊಂದರೆ ಅನುಭವಿಸಬೇಕಾಗಿದೆ. ...

...ಯು ಹಂಗೋರ ಹಾಕಿಸಿ ಯಾರು ಬೈಸಿಕಲ್‌ಗಳಿಗೆ ಬಲ್ಲಿಗಳನ್ನು ...ಯ ಅಂಥವರಿಗೆ ಮ್ಯುನಿಸಿಪಲ್ ರೆಗ್ಯುಲೇಷನ್ ವಿರುದ್ಧವಾಗಿ ಕ್ರಿಮಿ... ಸುಮಾರುವುದಾಗಿ ಖಂಡಿತವಾದ ಹುಕುಂ ಮಾಡಲಿಹುದು. ...ಯಲ್ಲಿ ಸಾವಿರಾರು ಬೈಸಿಕಲ್‌ಗಳು ಇವೆ. ಇದರ ಪೈಕಿ ಮ್ಯುನಿಸಿ... ...ನ್ನು ಕೊಡುವವರು ಬಹಳ ಕಡಮೆ. ಈ ವಿಚಾರದಲ್ಲಿ ಮ್ಯುನಿಸಿ... ...ಯು ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯು ರೂಲ್ಸಿನ ಪ್ರಕಾರ ... ಖೂಬಾ ಆದಾಯಕ್ಕೂ ವಿಶೇಷ ಕಷ್ಟನಿವಾರಣೆಗೂ ಅನುಕೂಲ ... ಈ ವಿಚಾರದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ನಿಗಾ ಬೇಕು

ಮ್ಯುನಿಸಿಪಾಲಿಟಿಯ ಹಿತಚಿಂತಕ.

ಸಣ್ಣ ಮಕ್ಕಳಿಗಾಗಿ ಪಾಠಶಾಲೆಗಳು.

...—ಈಗಿನ ನವೀನ ವಿದ್ಯಾಭ್ಯಾಸವು ಮೈಸೂರು ಸೀಮೆಯ ಎಲ್ಲಾ ... ಹರಡುವಂತೆ ಏರ್ಪಾಡುಗಳನ್ನು ನಮ್ಮ ದಿವಾನ್ ಸಾಹೇಬರೂ, ... ಬಹದ್ದೂರ್ ಮ॥ ರಾಮರಾಯರೂ ತುಂಬಾ ಪ್ರೋತ್ಸಾಹಿಸುತ್ತಿರುವ ... ಅನುಮಾನವಿಲ್ಲ. ಈಗಿನ ವಿದ್ಯಾಭ್ಯಾಸದ ರೀತ್ಯ (ಕಿಂಡರ್‌ಗಾ... ...ರವಾದ) 3 ವರ್ಷದ ಲಾಗಾಯ್ತು 7 ವರ್ಷದ ವಯಸ್ಸಿನ ... ವಿದ್ಯಾಭ್ಯಾಸದ ಪಾಠಶಾಲೆಯು ಮೈಸೂರು ಮತ್ತು ಬೆಂಗಳೂರು ... ಏರ್ಪಾಡುಮಾಡಿಲ್ಲ. ಬೆಂಗಳೂರು ಮ॥ ಸಿ. ಕೃಷ್ಣರಾಯರ ... ಕಿಂಡರ್‌ಗಾರ್ಟನ್ ಇನ್‌ಫೆಂಟ್ ಪಾಠಶಾಲೆಯೂ ಮತ್ತು ಮೈಸೂರು ... ಪಾಠಶಾಲೆ ಈ ಎರಡು ಮಾತ್ರ ಇರುತ್ತವೆ. ಇದರಲ್ಲಿ ಬೆಂಗಳೂರು ... ಮ॥ ಸಿ. ಕೃಷ್ಣರಾಯರ ಮಾಡಲ್ ಇನ್‌ಫೆಂಟ್ ಪಾಠಶಾ... ... 3 ವರ್ಷದ ಲಾಗಾಯ್ತು 6 ವರ್ಷದ ವರೆಗಿರುವ ಕಿಂಡರ್‌ಗಾರ್ಟನ್ ... ಟ್ರೈಯಿನಿಂಗ್ ಉತ್ತಮವಾಗಿರುತ್ತದೆ. ಇಂಥಾ ಪಾಠಶಾಲೆ ... ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿಯೂ ಇಡಿಸಿಕೊ... ...ನ್ನು ದಿವಾನ್ ಸಾಹೇಬರವರೂ, ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿ... ಮ॥ ಸಿ. ಕೃಷ್ಣರಾಯರೂ ಗಮನಕ್ಕೆ ತಂದುಕೊಳ್ಳುತ್ತಾರೆಂದು ...

ರಿಟೈರ್ಡ್ ಆಫೀಸರ್.

ಬೆಂಗಳೂರು ಸಿಟಿ ಅಕ್ಕಿಪೇಟೆಯಲ್ಲಿ ಕಳ್ಳತನಗಳು.

...—ಬೆಂಗಳೂರು ಸಿಟಿ ಅಕ್ಕಿಪೇಟೆಯಲ್ಲಿ ಕಳ್ಳತನವೆಂಬುವುದು ...ಯಾಗಿದೆ. ಈ ಕಳ್ಳತನ ನಿಲ್ಲಿಸುವ ಉದ್ದೇಶ್ಯ ತಾ. 28-1-15 ತಲ್ಲಿ ... ಸಾಹೇಬರಿಗೆ ರೂಬುರೂಬು ಅಕ್ಕಿಪೇಟೆಯ ವರ್ತಕ... ...ರೂ ಸೇರಿ ಆಯಿರು ಮುಖಾಂತರ ಅರ್ಜಿ ಕೊಡಲು, ... ಮೇಲ್ಕಂಡ ಪೇಟೆಯಲ್ಲಿ ಸ್ಟಾಂಡಿಂಗ್ ಬೀಟಿಗೆ ಆರ್ಡರಾಯ್ತು. ... ಗಲಾಟೆಗೆ ಅವಕಾಶವಾಗಲಿಲ್ಲ. ಇದೇ 10 ನೇ ತಾ ರುಕ್ಕ... ...ಮೇಲ್ಕಂಡ ಪೇಟೆ ಸ್ಟಾಂಡಿಂಗ್ ಬೀಟು ಚೌಕದಲ್ಲಿ ಮಂಟೇಪಲ್ಲಿ ... ಚಿಲ್ಲರೆ ಅಂಗಡಿ ಹಲಿಗೆಗಳನ್ನು ಕಿತ್ತುಹಾಕಿ 3 ... 1 ಮೂಟೆ ಸಕ್ಕರೆ, ಅರ್ಧ ಮೂಟೆ ಅಕ್ಕಿ ಮತ್ತು ಗಲ್ಲಾದ ... 13 ರೂಪಾಯಿ, ಸಣ್ಣಸಣ್ಣ ಚಿನ್ನದ ಒಡವೆಗಳು, ಇನ್ನೂ ಚಿಲ್ಲರೆ ... ಕಳುವಾಗಿರುತ್ತದೆ. ಮೇಲ್ಕಂಡ ಅಂಗಡಿಯು ಸ್ಟೇಷನ್... ...ಯೂ ಎದುರು ಭಾಗದಲ್ಲಿಯೂ ಹಿಂಭಾಗದಲ್ಲಿಯೂ ಎಲಿ... ...ದ್ದಾಗ್ಯೂ, ಕಳ್ಳತನವಾಗಿರುವುದು ನೋಡಿದರೆ ತುಂಬಾ ...ವಾಗುತ್ತದೆ. ಹೀಗೆ ದಫಾವಾರು ಕಳ್ಳತನವಾಗುತ್ತಾ ಇದ್ದರೆ ... ಜೀವನೋಪಾಯ ಹ್ಯಾಗೆ ನಡೆಯಬೇಕು? ಇನ್ನು ಮೇಲಾ... ...ಡಿಪಾರ್ಟ್‌ಮೆಂಟಿನವರು ಇಂಥಾ ಕೃತ್ಯಗಳಿಗೆ ಅವಕಾಶಕೊಡದೆ ...ಸು ನಂಬಿರುವ ಅಕ್ಕಿಪೇಟೆ ನಾಗರಿಕರು.

ನಂಜನಗೂಡು ವಿಚಾರಗಳು.

...—ಇಲ್ಲಿಯ ಶಿವಕೊಟದ ಸಂತರ್ಪಣೆಗೆ ಮಾಸೇ ಯಾನಾ... ...ರೂಪಾಯಿಗಳಿಗೆ. ತಲೂ ಹೆಚ್ಚಾದ ತಪ್ಪೇಕು ಮತ್ತು ವರಮಾನ ... ಅದನ್ನು ವಿಶದರಿಂಯಾಗಿ ನಡಿಸುವದಿಲ್ಲ. ಅವೇಳೆಯಲ್ಲಿ ... ಅಕ್ಕಿನಾದ ಅನ್ನ, ಅರುಚಿಯಾದ ಸಾರು ಹುಳಿ, ಇವನ್ನು ತಿಂದವರ ... ಅನಾರೋಗ್ಯವುಂಟಾಗುತ್ತದೆ. ಕೃತ್ತಿಕಾಸೋಮವಾರ ಬಳಲಿದ ಯಾತ್ರಿಕ... ...ಇದು ವಿನಹ ಬೇರೆ ಗತಿಯಿಲ್ಲ. ಇದನ್ನು ಸರಿಯಾಗಿ ಕ್ರಮಪಡಿಸಿ ... ಖುಬಾ ಅನುಕೂಲಪಡಿಸುತ್ತಾರೆಂದು ನಂಬುತ್ತೇವೆ.—ಇಲ್ಲಿ ದಿನೇ ...ಗು ಹೆಚ್ಚಾಗುತ್ತಾ ಊರಿನ ಎಲ್ಲಾ ಭಾಗದಲ್ಲಿಯೂ ಹರಡಿಕೊಂಡಿದೆ. ...ವಸಗಳು ವಿಶೇಷ ಗಾಬರಿಪಡುತ್ತಿಲ್ಲ. ಇಲ್ಲಿಯ ಗುಂಡ್ಲು ಅಗ್ರಹಾರ ...ಸಂಭೃತಂಬಗಳೇ ಇಲ್ಲ. ಮರಗಳ ನೆರಳಿನಿಂದ ಶುಕ್ಲಪಕ್ಷವೂ ಕೃಷ್ಣ... ...ವಾಗಿ ಮಾಡುತ್ತದೆ. ರಸ್ತೆಗೆ ಜರಂಡಿ ಕಲ್ಲಿನಿಂದ ಕಟ್ಟಿಲ್ಲ. ಮಳೆಗಾ... ... ಅನಾರೋಗ್ಯವನ್ನುಂಟುಮಾಡುತ್ತದೆ.—ವಾರಕ್ಕೊಂದಾವರ್ತಿ ... ಈ ಬೀದಿಯಲ್ಲಿ ಝಾಡಮಾಲಿಯನ್ನು ಕಾಣುವುದು ದುರ್ಲಭ. ಈ ... ಕೊನೆಯಲ್ಲಿರುವ ತೋಪಿನಲ್ಲಿಯೇ ಗ್ರಾಮಸಾರದ ಗೊಬ್ಬರವನ್ನು ...ತ್ತಾರೆ. ಸತ್ತ ನಾಯಿ ವಗೈರೆ ಪ್ರಾಣಿಗಳನ್ನು ತಂದು ಅಲ್ಲಿ ಹಾಕು... ... ಒಂದೊಂದಾವರ್ತಿ ಎಂಟು ಹತ್ತು ದಿನಗಳ ವರೆಗೂ ದುರ್ವಾಸನೆ ಬೀದಿ... ... ಹರಡಿಕೊಳ್ಳುತ್ತದೆ. ಈ ಬೀದಿಯ ನಿವಾಸಿಗಳಲ್ಲದೆ ಪರಶುರಾಮ ... ಹೋಗಿ ಬರತಕ್ಕ ಪರಸ್ಥಳದವರೂ ಸಹ ಈ ದುರ್ವಾಸನೆಯಾದ ಗಾಳಿ... ...ಸೇವನೆ ಮಾಡಬೇಕಾಗುತ್ತದೆ.—ಊರಿಗೆಲ್ಲಾ ನಲ್ಲಿಯ ಮುಖಾಂತರ ... ನೀರು ಸರಬರಾಯಿ ಮಾಡುತ್ತಿದ್ದಾಗ್ಯೂ ಗುಂಡ್ಲು ನದಿಯ ಕೊಳಕು ನೀರನ್ನು ...ವುದೇ ಅವರ ದೌರ್ಭಾಗ್ಯವಾಗಿದೆ. ಈ ಬೀದಿಯಲ್ಲಿ ಪಾಳು ಮಂಟಪ... ... ಮನೆಗಳೂ, ನಿವೇಶನಗಳೂ ಇರುವದರಿಂದ ಕಳ್ಳಕಾಕರೂ, ಹಾವು ಚೇಳು ... ದುಷ್ಟಪ್ರಾಣಿಗಳೂ ಸೇರುವದಕ್ಕೆ ಅವಕಾಶವಾಗಿದೆ. ದಯಾಳುಗಳಾದ ... ಪ್ರೆಸಿಡೆಂಟ್ ಮ॥ ಕೆ. ವೆಂಕಟಸ್ವಾಮಯ್ಯನವರು ದುರವಸ್ಥೆಯನ್ನು ...ಪಡಿಸುವರೆಂದು ನಂಬುತ್ತೇವೆ. ಸ್ಥಳಾಭಿಮಾನಿ.

ತಾಲ್ಲೋಕು ವರ್ತಮಾನ.

...ಹರೀವನಕೋಟೆ.—ಇಲ್ಲಿ ಸುಮಾರು 20 ದಿನಗಳಿಂದ ಮಳೆ ನಿಂತು ... ಛಳಿ ವಿಪರೀತವಾಗಿದೆ. ಬೆಳಗ್ಗೆ ಸುಮಾರು 10 ಗಂಟೆ ತನಕ ಛಳಿ ...ಯುತ್ತದೆ. ಹವಾ ಬದಲಾವಣೆಯಾಗಿರೋಣದರಿಂದ ಊರಲ್ಲಿ ಅನೇಕರು ...ಯಿಂದ ನರಳುತ್ತಾರೆ. ಇಲ್ಲಿಗೆ ಸುಮಾರು 10-12 ಮೈಲು ದೂರವಿರತಕ್ಕ ...ಗ್ರಾಮದಲ್ಲಿ ಇಲಿಗಳು ಸಾಯುವದಾಗಿಯೂ, ಆಗಲೇ ಕೆಲವರಿಗೆ ಪ್ಲೇಗು ...ವುದಾಗಿಯೂ ವರ್ತಮಾನವಿದೆ.—ಈಗ್ಗೆ ಸುಮಾರು 20 ದಿನಗಳ ಹಿಂದೆ ... ಯಾತಿಯು ಆಡುವನು ಗುಂಡಿನ ಪೆಟ್ಟು ತಗಲಿ ಪೋಲೀಸಿನವರಿಂದ ಇಲ್ಲಿನ ... ಚಿಕಿತ್ಸೆಗಾಗಿ ತರಲ್ಪಟ್ಟನು. ಅತನಿಗೆ ತನ್ನ ಎಡಭಾಗದ ಬೆನ್ನಿಗೆ ... ಪೆಟ್ಟು ತಾಕಿರುತ್ತದೆ. ಯಾರೋ ಶಿಕಾರಿದಾರರ ಅಜಾಗರೂಕತೆಯಿಂದ ...ತ್ತದೆ. ಹೊಡೆದವನು ಇನ್ನೂ ಪತ್ತೆಯಾಗಿಲ್ಲ.—ಈ ಊರು ಮ್ಯುನಿ... ... ಏರ್ಪಾಡುಗಳು ತೃಪ್ತಿಕರವಾಗಿಲ್ಲ. ಚಾಡಮಾಲಿಗಳು ಸರಿಯಾಗಿ ... ಮಾಡುವದಿಲ್ಲ. ಇದಲ್ಲದೆ ರಾತ್ರಿ ಹೊತ್ತು ಮ್ಯುನಿಸಿಪಲ್ ದೀಪಗಳು ...ವುದೇ ದುರ್ಲಭ. ಇಲ್ಲಿನ ಸ್ಯಾನಿಟರಿ ಇನ್‌ಸ್ಪೆಕ್ಟರು ಚಾಮರಾಜನಗರಕ್ಕೆ ... ಹೋದರು. ಹೊಸಬರು ಇನ್ನೂ ಬರಲಿಲ್ಲ. ಈ ಊರಲ್ಲಿರತಕ್ಕ ಪೋಸ್ಟಾಫೀಸಿನಲ್ಲಿ ಆಯಾ ದಿನವೇ ಬಂದ ಕಾಗದ ಪತ್ರಗಳನ್ನು ಕೊಟ್ಟು ಕ್ರಮ ಪಡಿಸುವರೆಂದು ನಿರೀಕ್ಷಿಸುತ್ತೇನೆ.

ಹ್ಯಾಮಗೊಂಡ್ಲು.—ಈ ಸಾರಿ ಕಡೆಯಲ್ಲಿ ಮಳೆ ಹಿಡಿದು ಕೊಯ್ಯಲಿಕ್ಕೆ ಸುಗಸತ್ತು ಇಲ್ಲವಾದ್ದರಿಂದ ಕೆಲವು ಸ್ಥಳಗಳಲ್ಲಿ ಕೊಯ್ದು ಹಾಕಿದ ಪೈರು ಮೊಳಕೆಯಾಯಿತು. ಇನ್ನು ಕೆಲವು ಕಡೆ ತೆನೆಗಳ ಕಾಳು ಭೂಮಿಗೆ ಉದುರಿತು. ಈ ರೀತಿ ಬಹಳ ನಷ್ಟವಾಯಿತೆಂದು ಹೇಳಬಹುದು.—ಹವಾ ಬದಲಾಯಿಸಿದೆ. ಎಲ್ಲಿ ನೋಡಿದರೂ ಜನರು ಛಳಿ ಜ್ವರ, ಕೆಮ್ಮು ಮುಂತಾದ ಕಾಯಿಲೆಯಲ್ಲಿ ಬಿದ್ದಿದಾರೆ. ರಾತ್ರಿಯಲ್ಲಿ ಛಳಿ ಸಹಿಸ ಕೂಡದಷ್ಟಾಗಿದೆ.—ಈ ಊರಿನ ಸಾಕೀಜಾ ವಿಷಯದಲ್ಲಿ ಮ್ಯುನಿಸಿಪಲ್ ಅಧಿಕಾರಿಗಳು ಚಿಂತಿಸುತ್ತಿದಾರೆ. ಈ ಊರಿನಲ್ಲಿ ಬಹಳ ವರುಷಗಳಿಂದ ನಿಂತುಹೋಗಿದ್ದ ಸಂತೆಯನ್ನು ಅಧಿಕಾರಿಗಳು ದಯವಿಟ್ಟು ತಿರಿಗಿ ಬರಮಾಡಿದ್ದರಿಂದ ಜನಗಳಿಗೆ ಬಹಳ ಸಂತೋಷವಾಗಿದೆ. ಪ್ರತಿ ಮಂಗಳವಾರವೂ ಪೋಲೀಸ್ ಸ್ಟೇಷನ್ ಬಳಿ ಇರುವ ತೋಪಿನಲ್ಲಿ ಸಂತೆ ಸೇರಿ ಆ ದಿನ ಮಟ್ಟಿಗೆ ಸಂತೆಯಲ್ಲಿ ಮಾರುವ ಕಾಲವಷ್ಟೂ ಸುಂಕದ ಪದಾರ್ಥಗಳಿಗೆ ಮಾಫಿ ಮಾಡಿದಾರೆ. ಇದರಿಂದ ಎಲ್ಲರಿಗೂ ಪ್ರಯೋಜನವಾಯಿತು. ಇದಕ್ಕೆ ನಮ್ಮ ಪಟೇಲರೂ, ಡಾಕ್ಟರೂ ಹೆಚ್ಚಾದ ಮುತುವರ್ಜಿ ವಹಿಸಿರುತ್ತಾರೆ.—ಪದ್ಧತಿ ಪ್ರಕಾರ ಈ ಊರಿನ ಹಿರೇ ಕೆರೆ ಕೋಡಿ ಬಳಿ ಶೇಷಾವಧೂತರ ಹೆಸರಿನಲ್ಲಿ ಈ ತಿಂಗಳು 22 ಕ್ಕೆ ಜಾತ್ರೆಯು ನಡೆಯುತ್ತೆ. ದನಗಳ, ದಿನಸಿಗಳ ವ್ಯಾಪಾರವು ಚೆನ್ನಾಗಿ ನಡಿಸಲ್ಪಡುವುದು

ಚಿತ್ರದುರ್ಗದ ತಾ॥ ತುರುವನೂರು.—ಈ ಗ್ರಾಮವು 30 ಹಳ್ಳಿಗಳು ಸೇರಿದ ದೊಡ್ಡ ಸಮ್ಮತ್ತಾಗಿರುತ್ತದೆ. ಇಂಥಾ ಭಾರಿ ಸಮ್ಮತಿಗೆ ಪೋಲೀಸ್ ದಫೇದಾರ್ರಾಗಿದ್ದ ಪಿ॥ ಖಾಸಿಂ ಖಾನ್ ಸಾಹೇಬರು ಇಲ್ಲಿಗೆ ಬಂದು 7 ವರ್ಷಗಳಾಗುತ್ತಾ ಬಂದು, ಈಗ ಇವರಿಗೆ ಹೊಸದುರ್ಗಕ್ಕೆ ವರ್ಗವಾಗಿರುವ ಸಂಗತಿಯನ್ನು ಕುರಿತು ಗ್ರಾಮದವರು ವಿಶ್ವಾಸವನ್ನು ತೋರ್ಪಡಿಸುವುದಕ್ಕೋಸ್ಕರ ಮ॥ ಪಟೇಲ್ ಹೇಮಣ್ಣನವರು, ಪಂಡಿತ ಭೀಮಣ್ಣನವರು, ಮಲ್ಲಿಕೇತೆ ತಿಮ್ಮಣ್ಣನವರು, ಬಾಜಿ ಮಹಮ್ಮದಲ್ಲಿಸಾಹೇಬರು ಮುಂತಾದ ಪುರಪ್ರಮುಖರೂ ಸ್ಕೂಲ್ ಹೆಡ್ ಮಾಸ್ಟರ್ ಮ॥ ಭಾಸ್ಕರಪ್ಪನವರ ಅಧ್ಯಕ್ಷತೆಯಲ್ಲಿ ಈ ಊರಿನ ವಾಚಕಮಂದಿರದಲ್ಲಿ ಸಭೆ ಸೇರಿ, ದಫೇದಾರ್ ಪಿ॥ ಖಾಸಿಂ ಖಾನ್ ಸಾಹೇಬರವರು ಜನಾನುರಾಗಿಗಳಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ ಇದ್ದುಕೊಂಡು, ಹೇಗೆ ಪ್ರೀತಿಪಾತ್ರರಾಗಿದ್ದರೆಂಬುದನ್ನು ಕರಿಕು ಮ॥ ಮುಲ್ಲಂಗಿ ಭೀಮಯ್ಯನವರು ಭಾಷಣಮಾಡಿದರು. ಇಂಥಾ ಸದ್ಗುಣ ಉಳ್ಳವರನ್ನು ಕಳೆದುಕೊಳ್ಳಬೇಕಾಯಿತಲ್ಲಾ ಎಂದು ಸರ್ವರೂ ಬಹಳವಾಗಿ ದುಃಖಿಸಿದರು. ಇವರ ಸ್ಥಾನಕ್ಕೆ ಬಂದಿರತಕ್ಕ ಪಿ॥ ಸೈದ್ ಹುಸೇನ್ ಸಾಹೇಬರು ಇವರ ಮೇಲ್ಪಂಗ್ತಿಯನ್ನೇ ಅನುಸರಿಸಿ ಉತ್ತಮವಾದ ಹೆಸರನ್ನು ಪಡೆಯುತ್ತಾರೆಂದು ನಂಬಿದೆ. ನಂತರ ಹೂ ಗಂಧ ತಾಂಬೂಲಗಳನ್ನು ಹಂಚಿ ಸಭೆ ಭರಖಾಸ್ತು ಮಾಡಲ್ಪಟ್ಟಿತು

ತರೀಕೆರೆ.—ಈಗ್ಗೆ 15 ದಿನಗಳಿಂದ ಮಳೆ ನಿಂತಿದೆ. ಬೆಳಗಿನ ಛಳಿಯು ಜಾಸ್ತಿ. ಜನರು ಛಳಿ ಜ್ವರದಲ್ಲಿ ಕಷ್ಟಪಡುವರು.—ಈ ತಾಲ್ಲೋಕಿನಲ್ಲಿ ಒಂದೆರಡು ವರುಷಗಳಿಂದ ಅಮಲ್ದಾರರಾಗಿದ್ದ ಮ॥ ಕೃಷ್ಣಸಿಂಗರವರಿಗೆ ಅಸಿಸ್ಟೆಂಟಾಗಿ ವರ್ಗದ ಆರ್ಡರು ಬಂದದ್ದರಿಂದ ಅವರು ಮಾಗಡಿ ತಾಲ್ಲೋಕಿಗೆ ಹೋದರು. ಅವರಿಗೆ ಬದಲಾಗಿ ನರಸಿಂಹರಾಜಪುರದಿಂದ ಮ॥ ಸಂತಾನಂ ಅಯ್ಯಂಗಾರ್ರು ಬಂದು ಛಾರ್ಜು ವಹಿಸಿ, ವಿಶೇಷ ಆಸಕ್ತಿಯಿಂದ ಕೆಲಸಗಳನ್ನು ನಡಿಸುತ್ತಾ ಇರುವರು. ಇವರು ಪ್ರಜೆಗಳ ಅನುರಾಗಕ್ಕೆ ಪಾತ್ರರಾಗಿ ಪ್ರಜಾ ಹಿತೈಷಿಗಳಾಗುವರೆಂದು ನಿರೀಕ್ಷಿಸುತ್ತೇವೆ.—ಇಲ್ಲಿನ ಟ್ರಾಮ್‌ವೇ ಇಲಾಖೆಯ ಅ॥ ಇಂಜನಿಯರ್ ಮ॥ ಆರ್. ಪಿಪ್ಪಯ್ಯನವರಿಗೆ ಕೋಲಾರ್ ಬೌರಿಂಗ್‌ಪೇಟೆ ರೈಲಿಗೆ ವರ್ಗವಾಯಿತು. ಇವರು ಬಹು ನಿಧಾನಿಗಳೂ, ಪ್ರಜಾ ಸಂತೋಷಿಗಳೂ ಆಗಿದ್ದು, ಇಲ್ಲಿಂದ ಎಡೆಹಳ್ಳಿಯ ತನಕ ಲೈಟ್ ರೈಲ್ವೆ ಕಾಮಗಾರಿ ನಡಿಸುವದರಲ್ಲಿ ವಿಶೇಷ ಸಾಹಸವನ್ನು ತೋರಿಸಿದಾರೆ. ಮುಂದೆ ಶೃಂಗೇರಿಯ ವರೆಗೂ ನಡೆಯಬಹುದಾಗಿದ್ದ ಸರ್ವೆಯನ್ನು ಪ್ರಾರಂಭಿಸುವಷ್ಟರೊಳಗಾಗಿಯೇ ಇವರಿಗೆ ವರ್ಗವಾದ ಸಂಗತಿಯು ಅವರ ಕೈಕೆಳಗಿನ ಇಲಾಖೆಯವರಿಗೆಲ್ಲಾ ತುಂಬಾ ವ್ಯಸನವನ್ನುಂಟುಮಾಡಿರುತ್ತೆ. ಈ ದೊಡ್ಡಮನುಷ್ಯರು ಎಲ್ಲಿದ್ದರೂ ಕೀರ್ತಿಪರರಾಗಿ ಅಭಿವೃದ್ಧಿಗೆ ಬರಲಿ ಎಂಬುವದೇ ನಮ್ಮ ಅಭಿಲಾಷೆ.—ಈಚೆಗೆ ಈ ಊರಿನಲ್ಲಿ ಜಟ್ಟಿಗಳ ಕಾಳಗ ವಿಶೇಷವಾಗಿದೆ. ನೆನ್ನೆ ಇಲ್ಲಿನ ಕುಸುಬರ ಬಸವನೆಂಬಾತನಿಗೂ ಹೊರಗಿನಿಂದ ಬಂದಿದ್ದ ಒಬ್ಬ ಪೈಲ್ವಾನನಿಗೂ ಕುಸ್ತಿ ಆದದ್ದರಲ್ಲಿ ಬಸವನು ಗೆದ್ದನೆಂಬ ಉತ್ಸಾಹವನ್ನು ಮೆರವಣಿಗೆಯಿಂದ ಪ್ರಕಾಶಪಡಿಸಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಅಧಿಪತ್ಯದ ಯುದ್ಧದ ರಿಲೀಫ್ ಫಂಡಿಗೆ ಇದುವರೆಗೆ 40,17,000 ರೂಪಾಯಿ ಚಂದಾ ಕೂಡಿರುತ್ತದೆ.

ನಭಾ ಸಂಸ್ಥಾನದ ಮಹಾರಾಜರವರು ಗೋಖಲೆಯವರ ಮೆಮೋರಿಯಲ್ ಫಂಡಿಗೆ 1,500 ರೂಪಾಯಿ ಚಂದಾ ಕೊಟ್ಟಿರುತ್ತಾರೆ.

ಕಳೆದ ತಾ. 4 ಕ್ಕೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು 5,271 ಜನರಿಗೆ ಪ್ಲೇಗ್ ತಗಲಿತು; ಆ ಉಪದ್ರದಲ್ಲಿ 3,722 ಜನರು ಕಾಲವಾದರು.

ಪಂಜಾಬಿನ ಯುದ್ಧದ ವಿಮಾನಗಳ ಫಂಡಿಗೆ 2,10,000 ರೂಪಾಯಿ ಜೋಡಿಯಾಗಿರುತ್ತದೆ. ಇನ್ನೂ ಕೆಲವರು 50,000 ರೂಪಾಯಿ ಕೊಡುತ್ತೇವೆಂದು ವಾಗ್ದಾನ ಮಾಡಿರುತ್ತಾರೆ.

ಇದೇ ತಿಂಗಳು 26-27 ನೇ ತಾರೀಖುಗಳಲ್ಲಿ ಬೊಂಬಾಯಿ ಪಟ್ಟಣದಲ್ಲಿ ಸಾರ್ವಜನಿಕ ಹಿಂದೂ ಸಭೆಯ ವಾರ್ಷಿಕ ಕೂಟವು ಜರುಗುತ್ತದೆ. ಈ ಸಭೆಗೆ ಆನರೆಬಲ್ ಪಂಡಿತ ಮದನಮೋಹನ ಮಾಲವ್ಯರವರು ಅಧ್ಯಕ್ಷರಾಗುತ್ತಾರೆಂದು ತಿಳಿದುಬಂದಿದೆ.

ಬೊಂಬಾಯಿನಲ್ಲಿ ನಡೆಯುವ ಹಿಂದುಸ್ಥಾನದ ಸಾರ್ವಜನಿಕ ಮಹಾಸಭೆಗೆ (ನ್ಯಾಷನಲ್ ಕಾಂಗ್ರೆಸ್ಸಿಗೆ) ಸರ್ಕಾರಿ ಅಧಿಕಾರಿಗಳ್ಯಾರೂ ಪ್ರತಿನಿಧಿಗಳಾಗಿ ಆಗಲೀ, ನೋಟಕರಾಗಿ ಆಗಲೀ ಹೋಗಕೂಡದೆಂದು ಬೊಂಬಾಯಿ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದಾರೆ

ಅಸ್ಸಾಂ-ಬಂಗಾಳಾ ರೈಲ್ವೆಯಲ್ಲಿ ಚಿಟ್ಟಗ ರೈಲ್ವೆ ಮಾರ್ಗವು ಪ್ರವಾಹಗಳ ದೆಸೆಯಿಂದ ಕೆಟ್ಟು ಹಾಳಾಗಿ ಹೋಗಿತ್ತು. ಅದನ್ನು ಮತ್ತೆ ಕಾಮಗಾರಿ ಮಾಡಿಸಿ ಸರಿಪಡಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು 20 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಕಾಮಗಾರಿಯು ಪ್ರಾರಂಭವಾಗಿ ನಡೆಯುತ್ತಿದೆ

ನವಾನಗರದ ಜಾಮ್ ಸಾಹೇಬರಾದ ರಂಜಿತ್ ಸಿಂಗ್‌ಜಿಯವರು ಕಳೆದ ವಾರ ಸೀಮೆಯಿಂದ ಬೊಂಬಾಯಿಗೆ ಬಂದಿಳಿದರು. ಇವರು ಸೀಮೆಯಲ್ಲಿದ್ದಾಗ ಒಂದು ಕಡೆ ಶಿಕಾರಿಗೆ ಹೋಗಿದ್ದಾಗ್ಗೆ ಅಜಾಗರೂಕತೆಯಿಂದ ಗುಂಡಿನೇಟು ತಗಲಿ ಅವರ ಎಡಗಣ್ಣು ಕೆಟ್ಟುಹೋಯಿತು. ಈಗ ಅವರ ಬಲಗಣ್ಣು ಚೆನ್ನಾಗಿದೆ

ಅಹಮದ್‌ನಗರದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರ ಹುಕುಂ ಪ್ರಕಾರ ಶತ್ರುಗಳಾದ ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳ ಪ್ರಜೆಗಳನ್ನು ಬಂಧನದಲ್ಲಿ ಇಟ್ಟಿದಾರಷ್ಟೆ. ಆ ಪೈಕಿ ನಾಲ್ವರು ಕಳೆದ 4, 5 ನೇ ತಾರೀಖು ರಾತ್ರಿ ಬಂಧನದಿಂದ ತಪ್ಪಿಸಿಕೊಂಡುಹೋದರೆಂದು ಪ್ರಕಟಿಸಿ, ಅವರನ್ನು ಹಿಡಿಯುವ ತರದೂದು ಪಡಿಸುತ್ತಿದಾರೆ.

ದೆಹಲಿ ಪಟ್ಟಣದಲ್ಲಿ ನಮ್ಮ ವೈಸ್‌ರಾಯರವರ ಪತ್ನೀರವರ ಹೆಸರಿನ ಮೇರೆ ಕಟ್ಟಿರುವ ವೈದ್ಯ ವಿದ್ಯಾಶಾಲೆಯ ಮತ್ತು ಆಸ್ಪತ್ರೆಯ ಮೇಲ್ವಿಚಾರಣಾ ಕಮಿಟಿಯವರು ಆ ಆಸ್ಪತ್ರೆಗೆ ಸೇರಿದಂತೆ ಒಂದು ಹೆಂಗ ಆಸ್ಪತ್ರೆಯನ್ನು 2,16,000 ರೂಪಾಯಿಗೆ ಕಟ್ಟಿಸಬೇಕೆಂದು ತೀರ್ಮಾನ ಮಾಡಿದಾರೆ. ಕಾಮಗಾರಿಯು ಕೂಡಲೇ ಪ್ರಾರಂಭವಾಗುತ್ತದೆ.

ಮೋಟರ್ ಗಾಡಿಗಳಲ್ಲಿ ಹೋಗಿ ಕಲ್ಕತ್ತೆಯಲ್ಲಿ ಕಳುವು ಮಾಡುವವರನ್ನು ಬೆನ್ನಟ್ಟಿ ಹೋಗಿ ಹಿಡಿಯುವುದಕ್ಕೋಸ್ಕರ ಅಲ್ಲಿನ ಪೋಲೀಸ್ ಕಮಿಷನರಿಗೆ ಎರಡು ಮೋಟರ್ ಗಾಡಿಗಳನ್ನು ಸರ್ಕಾರದವರು ಕೊಡಿಸಿದಾರೆ. ಯೂರೋಪಿಯನ್ ಪೋಲೀಸಿನವರು ಇದ್ದು ರಾತ್ರಿ ಹೊತ್ತು ಮೋಟರುಗಳಲ್ಲಿ ಬೀದಿ ಬೀದಿಗಳ ಮೇಲೆ ಸಂಚಾರ ಮಾಡುವರು.

ಕಲ್ಕತ್ತೆಯಲ್ಲಿ ಕ್ರಾಂತಿಕಾರಿಗಳ ಗುಂಡಿನೇಟಿನಿಂದ ಸತ್ತುಹೋದ ಸಬ್ ಇನ್‌ಸ್ಪೆಕ್ಟರ್ ಗಿರೀಂದ್ರನಾಥ ಬ್ಯಾನರ್ಜಿಯ ಹೆಂಡತಿಗೆ ಸರ್ಕಾರದವರು 125 ರೂಪಾಯಿ ಪೆನ್ಷನ್, ಮಕ್ಕಳಿಗೆ ಫೀಜಿಲ್ಲದೆ ವಿದ್ಯೆ ಕಲಿಸುವುದು, ಇಬ್ಬರು ಹೆಣ್ಣು ಮಕ್ಕಳಿಗೂ ಮದುವೆಯಲ್ಲಿ ತಲಾ 1,000 ರೂಪಾಯಿ ಬಳುವಳಿ, ಈ ರೀತಿ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿದಾರೆ.

ಬೊಂಬಾಯಿನಲ್ಲಿ ಮಹಮದೀಯರ ಎರಡು ಪಂಗಡಗಳಿಗೆ ಪರಸ್ಪರ ವೈಷಮ್ಯಗಳೂ ಮನಸ್ತಾಪಗಳೂ ಉಂಟಾಗಿರುವವು. ವೈಸ್‌ರಾಯರವರ ಎಗ್ಜಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿದ್ದು ಈಗ ತಾನೇ ಕೆಲಸ ಬಿಟ್ಟಿರುವ ಸರ್ ಅಲಿ ಇಮಾಮ್‌ರವರು ಮಧ್ಯಸ್ಥಿಕೆ ಮಾಡಿ ಎರಡು ಪಂಗಡಗಳಿಗೂ ಪರಸ್ಪರ ಸ್ನೇಹಭಾವವನ್ನುಂಟುಮಾಡಬೇಕೆಂದು ಕೋರಲ್ಪಟ್ಟಿದಾರೆ.

ಈ ತಿಂಗಳು 2 ನೇ ತಾರೀಖಿನಲ್ಲಿ ಉತ್ತರ ಮಲಬಾರ್ ಜಿಲ್ಲೆಯಲ್ಲಿರುವ ತೀಯಾ ಜನರ ಯಾತ್ರಾಸ್ಥಾನವಾದ ಕಡವು ಎಂಬ ಸ್ಥಳಕ್ಕೆ ದೋಣಿಗಳ ಮೇಲೆ ನದಿಯನ್ನು ದಾಟಿಕೊಂಡು ಹೋಗುತ್ತಿದ್ದಾಗ ಒಂದು ದೋಣಿಯು ಮಗುಚಿಕೊಂಡಿತು. ಅದರಲ್ಲಿದ್ದ ಸುಮಾರು 60 ಜನ ಗಂಡಸರು, ಹೆಂಗಸರು, ಮಕ್ಕಳು ನದಿಯಲ್ಲಿ ಬಿದ್ದುಹೋದರು. ಈಚೆಗೆ ಬಂದ ವರ್ತಮಾನದಿಂದ ಆ ಪೈಕಿ 12 ಮಂದಿ ಮಾತ್ರ ಬದುಕಿ ಬಂದರೆಂದು ತಿಳಿಯಲಾಗಿದೆ.

ಬೊಂಬಾಯಿ ಅಧಿಪತ್ಯದಲ್ಲಿ ಕಾಗದದ ತಯಾರಿಗೋಸ್ಕರ ಒಂದು ಕಾರ್ಖಾನೆಯನ್ನಿಟ್ಟು ಅದರಲ್ಲಿ ಗಿಡ, ತೊಗಟೆ, ಹುಲ್ಲು ಮೊದಲಾದವುಗಳ ರಸವನ್ನು ಮಾಡಿಸಬೇಕೆಂದೂ, ಕೆಲವು ಕಾಲ ಇದನ್ನು ಸರ್ಕಾರಿಯಾಗಿ ನಡಿಸಿ ಬಳಿಕ ಸಾಹುಕಾರರಿಗೆ ವಹಿಸಬೇಕೆಂದೂ ಮ॥ ಗಾಡ್‌ಬೋಲೆ ಎಂಬ ದೇಶೀಯ ಮೆಂಬರು ಸೂಚಿಸಿದ್ದನ್ನು ಬೊಂಬಾಯಿ ಗವರ್ನ್‌ಮೆಂಟಿನವರು ಒಪ್ಪಿಕೊಂಡು, ಅದರ ತನಿಖೆಗಾಗಿ ಒಂದು ಕಮಿಟಿಯನ್ನು ನೇಮಕ ಮಾಡಿದಾರೆ.

ತಿರುವಾಂಕೂರಿನಲ್ಲಿ ದೀಪದಕಡ್ಡಿ ತಯಾರುಮಾಡುವ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿ ಅದರ ಮೂಲಧನಕ್ಕಾಗಿ ಷೇರು ಒಂದಕ್ಕೆ 25 ರೂಪಾಯಿ ಬಾಬತು 8,000 ಷೇರುಗಳನ್ನು ಮಾಡಿ ಹಣ ಕೂಡಿಸುತ್ತಿದಾರೆ. ಆ ಪೈಕಿ ಸ್ವಲ್ಪ ಮಟ್ಟಿಗೆ ಹಣವನ್ನು ಶೇಖರಮಾಡಿ ಆ ಕಂಪನಿಗೆ ಬೇಕಾಗುವ ಯಂತ್ರಗಳನ್ನು ತರಿಸಲು ಆರ್ಡರ್ ಮಾಡಿರುತ್ತಾರೆ. ಕಾರ್ಖಾನೆಯ ಕಟ್ಟಡವನ್ನು ಬಹಳ ಮಟ್ಟಿಗೆ ಮುಗಿಸಿರುವರು. ಯಂತ್ರಗಳು ಬಂದ ಒಡನೆಯೇ ಕೆಲಸವನ್ನು ಪ್ರಾರಂಭಿಸುತ್ತಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಾರಾಸಾತ್ ಎಂಬ ಊರಿನಲ್ಲಿ 15-20 ಮಂದಿ ಕಳ್ಳರು ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಕಳುವು ಮಾಡುವುದಕ್ಕಾಗಿ ಮನೆಯಲ್ಲಿದ್ದವರನ್ನು ಬಹಳವಾಗಿ ಹೊಡೆದು ಹಿಂಸೆಪಡಿಸಿದರು. ನೆರೆಮನೆಯ ಬಂಗಾಳಿಗಳಿಬ್ಬರು ಕೋಲು ಮತ್ತು ಕಡುಕತ್ತಿಗಳನ್ನು ಹಿಡಿದು ಆ ಕಳ್ಳರ ಮೇಲೆ ನುಗ್ಗಿ ಹೊಡೆದಾಡಿದರು. ಅವರಿಬ್ಬರಿಗೂ ಗಾಯಗಳಾದವು; ಮತ್ತು ಮೂವರು ಕಳ್ಳರೂ ಗಾಯಪಟ್ಟು ಬಿದ್ದುಕೊಂಡರು. ಕಳ್ಳರ ಪೈಕಿ ಆರು ಮಂದಿ ಮಾತ್ರ ಸಿಕ್ಕಿ ದಸ್ತಗಿರಿಗೆ ಗುರಿಮಾಡಲ್ಪಟ್ಟಿದಾರೆ.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಪತ್ಯಗಳ ಬ್ಯಾಂಕುಗಳಿಗೆ ನೊವೆಂಬರ್ ತಾ. 6 ರ ವರೆಗೆ ಪಾವತಿ ಬಂದಿರುವ ಚಂದಾ ಹಣಗಳೆಷ್ಟೆಂದರೆ:—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	ರೂ. 45,53,111-15- 6
ಬಂಗಾಳಾ ಬ್ಯಾಂಕಿಗೆ	,, 35,35,329- 2- 9
ಬೊಂಬಾಯಿ ಬ್ಯಾಂಕಿಗೆ	,, 8,26,587- 3- 5
ಮದರಾಸ್ ಬ್ಯಾಂಕಿಗೆ	,, 6,66,948- 9-11
ಜುಮ್ಲಾ ರೂಪಾಯಿ	95,82,276-15- 7

ಬೊಂಬಾಯಿ ಪಟ್ಟಣದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವುದಕ್ಕೆ ಈಗ ಹಾಕಿರುವ ಭಾರೀ ನಲ್ಲಿಗಳು ಸಾಕಾಗುವುದಿಲ್ಲವೆಂದು ಇನ್ನೂ 93 ಲಕ್ಷ ರೂಪಾಯಿ ವೆಚ್ಚಿಸಿ ಎರಡರಷ್ಟು ದೊಡ್ಡ ನಲ್ಲಿಗಳನ್ನು ಹಾಕಿಸಿ, ಎರಡರಷ್ಟು ನೀರು ಪಟ್ಟಣಕ್ಕೆ ಸರಬರಾಯಿ ಆಗುವಂತೆ ಕಾಮಗಾರಿ ಮಾಡಿಸಿದಾರೆ. ಈ ನೀರಿನ ಏರ್ಪಾಡಿಗೆ ಮ್ಯುನಿಸಿಪಾಲಿಟಿಯವರು ಇದುವರೆಗೆ ಒಟ್ಟು 370 ಲಕ್ಷ ರೂಪಾಯಿ ಖರ್ಚು ಮಾಡಿದಂತಾಯಿತು. ಕಳೆದ ವಾರ ಗವರ್ನರವರು ಹೊಸ ನೀರಿನ ಏರ್ಪಾಡನ್ನು ಪ್ರತಿಷ್ಠೆ ಮಾಡಿ, ಮ್ಯುನಿಸಿಪಾಲಿಟಿಯವರ ಸಾಹಸ ಕಾರ್ಯಗಳನ್ನು ಕೊಂಡಾಡಿದರು.

ಬೆಜ್ವಾಡಾ ಜಿಲ್ಲೆಗೆ ಸೇರಿದ ವಿಯ್ಯೂರು ಲೇಟ್ ಜಮೀನ್‌ದಾರರು ಧರ್ಮಬುದ್ಧಿಯುಳ್ಳವರಾಗಿ 60,000 ರೂಪಾಯನ್ನು ತಮ್ಮ ಆಸ್ತಿಯಿಂದ ತೆಗೆದಿಟ್ಟು, ತಮ್ಮ ದಿವಾನ್‌ರಾಗಿದ್ದ ವೆಂಕಟೇಶ್ವರರಾವ್ ಎಂಬವರಿಗೆ ವಹಿಸಿ, ಅದರ ಮೂಲಕ ಒಂದು ಲಂಗರಖಾನೆಯನ್ನೂ, ಒಂದು ಹೈ ಸ್ಕೂಲನ್ನೂ, ಒಂದು 2 ನೇ ಗ್ರೇಡ್ ವಿದ್ಯಾಶಾಲೆಯನ್ನೂ ಕಟ್ಟಿಸುವಂತೆ ಮರಣ ಶಾಸನದಲ್ಲಿ ಬರೆದಿದ್ದರು. ಆ ಪ್ರಕಾರ ದಿವಾನರು ಆ ಹಣವನ್ನು 1911 ನೇ ಇಸವಿಯಲ್ಲೇ ತಮ್ಮ ವಶಕ್ಕೆ ತೆಗೆದುಕೊಂಡು ಇದುವರೆಗೂ ಯಾವುದೊಂದು ಕಾಮಗಾರಿಯನ್ನೂ ಮಾಡಿಸಲಿಲ್ಲವೆಂದೂ, ಹಣವನ್ನು ಬ್ಯಾಂಕಿನಲ್ಲಿಟ್ಟು ಸ್ವಂತ ಲೇವಾದೇವಿ ಮಾಡುತ್ತಾ ಅದರ ಸ್ವಂತಕ್ಕೆ ಬಳಸಿಕೊಳ್ಳುತ್ತಿದಾರೆಂದೂ ಕ್ರಿಮಿನಲ್ ಮೊಕದ್ದಮೆ ಹುಟ್ಟಿ ಬೆಜ್ವಾಡಾ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಚೌಕಶಿ ಆಗುತ್ತಿದೆ.

ಸಿಂಧು ಹೈದರಾಬಾದ್ ಮ್ಯುನಿಸಿಪಾಲಿಟಿಯಲ್ಲಿ ಪ್ರೆಸಿಡೆಂಟ್ ಮೊದಲಾದ ಅಧಿಕಾರಿಗಳನ್ನು ಪ್ರಜೆಗಳೇ ಚುನಾಯಿಸುವ ಅಧಿಕಾರವನ್ನು ಬೊಂಬಾಯಿ ಗವರ್ನ್‌ಮೆಂಟಿನವರು ವಹಿಸಿದ್ದರು. ಕೆಲವು ವರುಷಗಳಿಂದ ಈಚೆಗೆ ಮ್ಯುನಿಸಿಪಾಲಿಟಿಯ ಅಧಿಕಾರಿಗಳು ಸಹಜವಾದ ಪುರಾಭಿವೃದ್ಧಿ ಕಾರ್ಯಗಳನ್ನು ಮಾಡದೇನೂ, ಕಂದಾಯ ಮುಂತಾದವುಗಳನ್ನು ತೃಪ್ತಿಕರವಾಗಿ ವಸೂಲ್ಮಾಡಿ ನ್ಯಾಯವಾದ ರೀತಿಯಲ್ಲಿ ಖರ್ಚುಮಾಡದೇನೂ, ಕೆಲವರು ಸ್ವಪ್ರಯೋಜನ ಕಾರ್ಯಗಳಲ್ಲಿ ಆಸಕ್ತರಾಗಿಯೂ ಇದ್ದದ್ದರಿಂದ ಸರ್ಕಾರದವರು ಅವರ ಸವಲತ್ತುಗಳನ್ನು ಕೀಳ ತೀರು ಪ್ರಜೆಗಳಿಗೆ ವಹಿಸಿದ್ದ ಅಧಿಕಾರವನ್ನು ಮೂರು ವರುಷಗಳ ವರೆಗೆ ರದ್ದುಪಡಿಸಿ ಸರ್ಕಾರದಿಂದ ನೇಮಕವಾಗುವ ಒಬ್ಬ ಕಮಿಷನರೂ ಎಂಟು ಮಂದಿ ಮೆಂಬರುಗಳೂ ಮ್ಯುನಿಸಿಪಲ್ ಆಡಳಿತಗಳನ್ನು ನಡೆಯಿಸಬೇಕೆಂದು ಹುಕುಂ ಕೊಟ್ಟಿದಾರೆ

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೊ ಪಟ್ಟಣದಲ್ಲಿ ಪೋಲೀಸ್ ಸೂಪರಿಂಟೆಂಡೆಂಟರ ಅಥವಾ ಮ್ಯುನಿಸಿಪಲ್ ಅಧ್ಯಕ್ಷ (ಚೇರ್‌ಮೆನ್) ರವರಿಂದ ಲೈಸೆನ್ಸು ಪಡೆಯದೆ ಯಾರೂ ಯಾವ ಬಹಿರಂಗವಾದ ಸ್ಥಳದಲ್ಲಿ ಜನಗಳ ಗುಂಪಿನಲ್ಲಿ ನಿಂತು ಉಪನ್ಯಾಸವಾಗಲಿ ಬೋಧನೆಯಾಗಲಿ ಮಾಡಕೂಡದೆಂದೂ, ಹಾಗೆ ಮಾಡಿದರೆ 50 ರೂಪಾಯಿ ತನಕ ಜುಲ್ಮಾನೆ ತೆರಬೇಕಾದೀತೆಂದೂ ಒಂದು ರೂಲಸು ಮಾಡಿ ಮ್ಯುನಿಸಿಪಾಲಿಟಿಯವರು ಜಾರಿಯಲ್ಲಿ ತಂದಿದಾರೆ.

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಮೊರತೂವಾ ಪೆರೂವಾ ಎಂಬ ಪಟ್ಟಣವು ದಂಗೆ ನಡೆದ ಸ್ಥಳವೆಂದು ಸರ್ಕಾರದವರು ಪ್ರಕಟಪಡಿಸಿ ಅಲ್ಲಿರುವ ಪ್ರಜೆಗಳ ಪೈಕಿ ಸಿಂಹಳೀಗಳಿಂದ 4,93,000 ರೂಪಾಯಿ ತೆರಿಗೆ ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿದಾರೆ. ಈ ಹಣದ ಪೈಕಿ ದಂಗೆ ಕೃತ್ಯಗಳಿಂದ 4,28,743 ರೂಪಾಯಿ ಸೊತ್ತುಗಳು ನಾಶವಾದವೆಂದೂ, ದಂಗೆಯನ್ನು ಅಡಗಿಸುವುದಕ್ಕೆ ಸರ್ಕಾರಕ್ಕೆ ಆಗಿರುವ ಖರ್ಚಿನಲ್ಲಿ ಶೇಕಡಾ ಎಂಟರಷ್ಟು ಅಂದರೆ 34,200 ರೂಪಾಯಿ ವಸೂಲ್ಮಾಡಬೇಕೆಂದೂ ತಿಳಿಸಲ್ಪಟ್ಟಿದೆ.

ವಿದೇಶದ ವೃತ್ತಾಂತಗಳು.

ಫ್ರಾನ್ಸ್ ಸರ್ಕಾರದವರು ಯುದ್ಧದ ಖರ್ಚಿಗೆ ಸಾಲದ ಪತ್ರಗಳನ್ನು ಬಳಕೆ ಮಾಡಿ ಹಣ ಕೂಡಿಸುತ್ತಾರೆ. ಕಪೂರ್ಥಲ ಸಂಸ್ಥಾನದ ಮಹಾರಾಜರವರು ಮೂರು ಲಕ್ಷ ರೂಪಾಯಿನ ಸಾಲದ ಪತ್ರಗಳನ್ನು ಕೊಂಡುಕೊಂಡಿದಾರೆ.

ಕಾರ್ಲ್ ಜರ್ನ್ ಎಂಬೊಬ್ಬ ಜರ್ಮನಿಯವನು ಮೋಸಮಾಡಿ ಇಂಗ್ಲಿಷ್ ಸೈನಿಕನಾಗಿ ಸೇರಿಕೊಂಡದ್ದು ಪತ್ತೆ ಆಗಿ ಅವನಿಗೆ ಆರು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು. ಅವನ ಮೋಸಕೃತ್ಯಕ್ಕೆ ಸಹಾಯ ಮಾಡಿದ ಮೂವರು ಸ್ತ್ರೀಯರಿಗೆ ಕ್ರಮಾ 750, 450, 300 ರೂಪಾಯಿಗಳಂತೆ ಜುಲ್ಮಾನೆ ಹಾಕಿದರು.

ಅಮೇರಿಕದವರಿಂದ ಮಿತ್ರಮಂಡಲಿಯವರಿಗೆ ಯುದ್ಧ ಸಾಮಗ್ರಿಗಳಾಗಲಿ, ಆಹಾರ ಪದಾರ್ಥಗಳಾಗಲಿ ಒದಗದಂತೆ ಏರ್ಪಾಡು ಮಾಡಬೇಕೆಂದು ಜರ್ಮನಿಯವರು ತಮ್ಮ ಕಡೆಯ ಪ್ರಜೆಗಳ ಮೂಲಕ ಅಮೇರಿಕದಲ್ಲಿ 15 ಕೋಟಿ ರೂಪಾಯಿ ತನಕ ಖರ್ಚು ಮಾಡಿಸಿದಾರೆಂದು ನ್ಯೂ ಯಾರ್ಕ್ ಪಟ್ಟಣದಿಂದ ವರ್ತಮಾನ ಬಂದಿದೆ

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದ ಹತ್ತಿರ ಭೂಮಿಯ ಕೆಳಗೆ ರೈಲು ಮಾರ್ಗವನ್ನು ಹಾಕುತ್ತಿರುವ ಕಾಮಗಾರಿಯಲ್ಲಿ ಹೆಂಗಸರನ್ನೇ ವಿಶೇಷವಾಗಿ ನೇಮಕ ಮಾಡಿರುತ್ತಾರೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ. ಇನ್ನು ಮುಂದೆ ಇತರ ಕೈಗಾರಿಕೆಗಳಿಗೆಲ್ಲಾ ಹೆಂಗಸರನ್ನೇ ಕೂಲಿಗಳನ್ನಾಗಿ ನೇಮಿಸಬೇಕೆಂದು ಅಲ್ಲಿನ ಕಾರಿಗಾರರು ಯೋಚಿಸುತ್ತಿದಾರೆ.

ಬೆಲ್ಜಿಯಂ ದೇಶದ ದೊಡ್ಡ ಮನುಷ್ಯನೊಬ್ಬನನ್ನು ಜರ್ಮನಿಯ ಯುದ್ಧದ ಅಧಿಕಾರಿಯವರು ಮರಣದಂಡನೆಗೆ ಗುರಿಮಾಡಿದರು. ಪೋಪ್ ಗುರುಗಳು ಆತನ ವಿಷಯದಲ್ಲಿ ತುಂಬಾ ಶ್ರಮಪಟ್ಟು ಆತನಿಗೆ ವಿಧಿಸಿದ್ದ ಶಿಕ್ಷೆಯನ್ನು ಕಡಮೆ ಮಾಡಿಸಿದರು. ಅದೂ ಅಲ್ಲದೆ ಆ ದೊಡ್ಡ ಮನುಷ್ಯನ ಸಂಸಾರದವರು ಆತನ ಬಿಡುಗಡೆಗಾಗಿ ಹನ್ನೆರಡು ಲಕ್ಷ ರೂಪಾಯಿ ಕೊಟ್ಟರೆಂದು ತಿಳಿದುಬಂದಿದೆ.

ಬಾಗ್ದಾದ್ ರೈಲ್ವೆಯಲ್ಲಿ ಟರ್ಕಿಯವರು ಬಹಳ ಕಠಿಣವಾದ ಮಾರ್ಗವನ್ನು ಕಾಮಗಾರಿಮಾಡಿ ಪೂರೈಸಿದಾರೆ. ರೈಲ್ ರಸ್ತೆ ಹಾಕುವುದಕ್ಕೆ ಏಷ್ಯಾ ಮೈನರಿಗೂ ಸಿರಿಯಾವಿಗೂ ಮಧ್ಯೆ ಇರುವ ಅಮಾನುಸ್ ಪರ್ವತಗಳಲ್ಲಿ ಉದ್ದಕ್ಕೂ ಅಂದರೆ 26,250 ಅಡಿ ಉದ್ದಕ್ಕೆ ಕಲ್ಲು ಬಂಡೆಗಳನ್ನು ಕೊರೆದು ಸುರಂಗ ಮಾರ್ಗವನ್ನು ಬಿಡಿಸಿದರು. ಈ ಪೈಕಿ ಸುಮಾರು ಮೂರು ಮೈಲಿ ದೂರ ಸುರಂಗವನ್ನು ಕೊರೆಯುವುದಕ್ಕೆ ಬಹಳ ಪ್ರಯಾಸಪಡಬೇಕಾಯಿತು.

ಪಸಿಫಿಕ್ ಸಾಗರದಲ್ಲಿರುವ ಗಿಲ್‌ಬರ್ಟ್ ಮತ್ತು ಎಲಿಸ್ ಎಂಬ ದ್ವೀಪಗಳ ಪ್ರಜೆಗಳ ಪ್ರಾರ್ಥನೆಯನ್ನನುಸರಿಸಿ ನಮ್ಮ ಚಕ್ರವರ್ತಿ ಸಾರ್ವಭೌಮರವರು ಆ ದ್ವೀಪಗಳನ್ನು ಬ್ರಿಟಿಷ್ ಗವರ್ನಮೆಂಟಿಗೆ ಸೇರಿಸಿಕೊಂಡರಷ್ಟೆ. ಅವುಗಳ ವಿಸ್ತೀರ್ಣ 166 ಚದರಮೈಲಿ; ಅಲ್ಲಿ 26,803 ಪ್ರಜೆಗಳಿದಾರೆ. ಈ ಪೈಕಿ ಅನ್ಯದೇಶೀಯರು 446. ತೆಂಗಿನಕಾಯಿ, ಕೊಬ್ಬರಿ, ಇವೇ ಅಲ್ಲಿ ವಿಶೇಷ ಉತ್ಪತ್ತಿಯಾಗುವುದು. ಈ ದ್ವೀಪಗಳು ಕೆಲವು ವರುಷಗಳಿಂದ ಬ್ರಿಟಿಷ್ ಗವರ್ನಮೆಂಟಿನ ಪೋಷಣೆಯಲ್ಲಿದ್ದವು.

ಇಂಗ್ಲಿಷ್ ಕಡಲು ಕಾಲುವೆಯಲ್ಲೂ ಐರಿಷ್ ಕಡಲಿನಲ್ಲೂ ಕಳೆದ ತಿಂಗಳ ಎರಡನೇ ವಾರದಲ್ಲಿ ಬಹು ಬಿರುಸಾದ ಸೀತಗಾಳಿಯು ಪ್ರಾಪ್ತವಾಗಿ ನಾನಾ ಅನಾಹುತಗಳು ನಡೆದವು. ಇಂಥಾ ಬಿರುಗಾಳಿಯನ್ನು 28 ವರುಷಗಳಿಂದ ಯಾರೂ ನೋಡಿರಲಿಲ್ಲ. ಹದಿನಾಲ್ಕು ಹಡಗುಗಳು ಸಮುದ್ರತೀರಗಳಲ್ಲಿ ಸಿಕ್ಕಿಹೋದವು. ಬಹಳ ಕಷ್ಟಪಟ್ಟು ಅವುಗಳಲ್ಲಿದ್ದ ಜನಗಳನ್ನೆಲ್ಲಾ ಬದುಕಿಸಿಕೊಂಡರು. ಇಂಗ್ಲಿಷ್ ಕಾಲುವೆಯಲ್ಲಿ ಎರಡು ಇಂಗ್ಲಿಷ್ ಜಹಜುಗಳು ಮುಳುಗಿ 30 ಜನಗಳು ನೀರಿನ ಪಾಲಾದರು

ಅಮೇರಿಕಕ್ಕೆ ಸೇರಿದ ವರ್ಜಿನಿಯಾ ಅಧಿರಾಜ್ಯದಲ್ಲಿ ಡೂಪಾಂಟ್ ಎಂಬ ಕಾರ್ಖಾನೆಯವರಿಗೆ ಮದ್ದನ್ನು ತಯಾರುಮಾಡುತ್ತಿದ್ದರು. ಆ ಪಟ್ಟಣದಲ್ಲಿ ಬೆಂಕಿ ಬಿದ್ದು ಪಟ್ಟಣವೆಲ್ಲಾ ನಾಶವಾಯಿತು. ಕಾರ್ಖಾನೆಗೆ ಮಾತ್ರ ಯಾವ ಅಪಾಯವೂ ಸಂಭವಿಸಲಿಲ್ಲ. ಗವರ್ನರವರು ಪ್ರಜೆಗಳ ಸಹಾಯಕ್ಕೆ ಸೈನಿಕರನ್ನು ಕಳುಹಿಸಿದಾರೆ. ಆ ಕಾರ್ಖಾನೆಯ ಬಳಿ ಇಬ್ಬರು ಸಿಡಿಮದ್ದಿನ ಗುಂಡುಗಳನ್ನು ಹಿಡಿದಿದ್ದರು. ಅವರನ್ನು ದಸ್ತಗಿರಿಮಾಡಿದಾರೆ. ಇವರು ಜರ್ಮನಿಯವರ ಕಡೆಯವರೆಂದು ಹೇಳಲಾಗಿದೆ.

ದಯವಿಟ್ಟು ನೋಡಿ. ಎಲ್ಲರಿಗೂ ಬೇಕಾದ ವಿಷಯ.

ನೆಪ್ಚೂನ್ 200 ನೆ ನಂಬರ್ ಪೆನ್ ಒಂದಕ್ಕೆ	ರೂ. 1-14-0
ನೆಪ್ಚೂನ್ 205 ನೆ ನಂಬರ್ ಪೆನ್ ಒಂದಕ್ಕೆ	,, 2-10-0
ನೆಪ್ಚೂನ್ 250 ನೆ ನಂಬರ್ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 210 ನೆ ನಂಬರ್ ಪೆನ್ ಒಂದಕ್ಕೆ	,, 4- 0-0
ನೆಪ್ಚೂನ್ 251 ನೆ ನಂಬರ್ ಸೇಫ್ಟಿ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 207 ನೆ ನಂಬರ್ ಪೆನ್ ಒಂದಕ್ಕೆ	,, 3- 6-0
ನೆಪ್ಚೂನ್ 158 ನೆ ನಂಬರ್ ಪೆನ್ ಬೆಳ್ಳಿ ಗಿಲಿಟ್ ಕೊಳವೆ ಮತ್ತು ಕ್ಲಿಪ್ ಸಹಿತ ಒಂದಕ್ಕೆ	,, 4- 2-0
ಉತ್ತಮವಾದ ಸ್ವಾನ್ ಬ್ಲಾಕ್‌ಬರ್ಡ್ ಪೆನ್ ಒಂದಕ್ಕೆ	,, 3-12-0
ಉತ್ತಮವಾದ ಫೌಂಟನ್ ಪೆನ್ ಕ್ಲಿಪ್ ಕ್ರಯ ಒಂದಕ್ಕೆ	,, 0-4-0

ಲಾಗಾಯತು ರೂ. 0-12-0 ವರೆಗೆ ಉತ್ತಮವಾದ ಫೌಂಟನ್ ಪೆನ್ ಸ್ವಾನ್ ಇಂಕು ಬಾಟ್ಲಿ ಒಂದಕ್ಕೆ ರೂ. 0-8-0.

ಸೂಚನೆ:—ಸ್ಕೂಲ್ ಮಾಸ್ತರುಗಳಿಗೂ, ವಿದ್ಯಾರ್ಥಿಗಳಿಗೂ, ಮೂರು ಪೆನಾ ಒಟ್ಟಿಗೆ ತರಿಸುವ ಎಲ್ಲರಿಗೂ ಟಪ್ಪಾಲ್ ಮತ್ತು ಪ್ಯಾಕಿಂಗ್ ಖರ್ಚು ಮಾಫಿ. ಬೈಸಿಕಲ್ಲಿಗೆ ಬೇಕಾದ ಎಲ್ಲಾ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತೆ. [279-1]

ನಮ್ಮ ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ರಿಜಿಸ್ಟರ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಪರಪಣೆ ಸಹಿತ ಕ್ರಯ ರೂ 3-0-0. 5 ವರುಷಗಳ ಗ್ಯಾರಂಟಿ ಪತ್ರ. ವಿ. ಪಿ ಛಾರ್ಜು 4 ಆಣೆ.



ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಬಾರದು. ಒದಗಿರುವ ಗಿರಾಕಿ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು, ನಮ್ಮ ಪ್ರೂಫ್ ಎಂಬ ಗ್ಲಾಸು ದೋಷ ಇರುವದು. ಬಹಳ ಗಟ್ಟಿಯಾದ ಸಾಮಾನುಗಳಿಂದ ತಯಾರಿಸಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿರಿ.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
[260-3] ಪೋಸ್ಟು ಬಾಕ್ಸು 167, ಮದರಾಸ್.

ಸೂಚನೆ.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವುದೇನಂದರೆ:—

ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಡಿ. ಸೈಯದ್ ಉಸ್ಮಾನ್ ಅಂಡ್ ಕಂಪನಿಯವರನ್ನು ನನ್ನಿಂದ ತಯಾರಾದಲ್ಪಟ್ಟ ಸಾಲಾಮಿಸ್ರಿ ಮುರಬ್ಬವನ್ನು ಮಾರಲಿಕ್ಕೆ ಕಳೆದ ಎರಡು ವರುಷಗಳಿಂದ ಏಜಂಟರನ್ನಾಗಿಟ್ಟಿದ್ದೆನು. ಇವರು ಪರಸ್ಥಳದಿಂದ ಬರುವ ಆರ್ಡರುಗಳಿಗೂ ಮತ್ತು ಸ್ಥಳದಲ್ಲಿ ಕೊಳ್ಳುವವರಿಗೂ ಬೇರೆಯವರಿಂದ ತಯಾರಾದ ಸಾಲಾಮಿಸ್ರಿ ಪಾಕ್ ಎಂಬುದನ್ನು ಡಿಲ್ಲಿ ವೈದ್ಯರು ಡಿ. ಮನ್ನಾಲಾಲ್ ಯವರಿಂದ ತಯಾರಾದ ಸಾಲಾಮಿಸ್ರಿ ಮುರಬ್ಬನೆಂದು ಹೇಳಿ ಬಿಕರಿ ಮಾಡುತ್ತಾ ಜನಗಳಿಗೂ ನನಗೂ ಮೋಸಮಾಡುತ್ತಿದ್ದದ್ದನ್ನು ನಾನು ಕಂಡು ಇವರು ನನ್ನ ಏಜಂಟರಾಗಿರುವದನ್ನು ತೆಗೆದು ವರ್ತಮಾನ ಪತ್ರಿಕೆಗಳಲ್ಲಿಯೂ, ಕೋರ್ಟಿನಲ್ಲಿಯೂ ಇವರ ಹೆಸರನ್ನು ತೆಗೆದುಬಿಟ್ಟಿದೆ.

REGISTERED TRADE MARK.

ಈಗಲೂ ಜನಗಳಿಗೆ ಮೋಸಮಾಡುವದಕ್ಕೋಸ್ಕರ ನಮ್ಮ ಟ್ರೇಡ್ ಮಾರ್ಕಿನಂತೆಯೇ ಬೇರೆ ಒಂದು ನಕ್ಕಲ್ ಟ್ರೇಡ್ ಮಾರ್ಕನ್ನೂ ಮತ್ತು ಲೇಬಲುಗಳನ್ನೂ ತಯಾರುಮಾಡಿಸಿ ನಕ್ಕಲ್ ಮಾಲನ್ನು ಸಾಲಾಮಿಸ್ರಿ ಮುರಬ್ಬವೆಂದು ಹೇಳಿ ಬಿಕರಿ ಮಾಡುತ್ತಾ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ಇನ್ನು ಮುಂದೆ ಸಾಲಾಮಿಸ್ರಿ ಮುರಬ್ಬವನ್ನು ಕೊಳ್ಳುವಂಥವರು ಇದರ ಜೊತೆಯಲ್ಲಿ ಮುದ್ರಿಸಿರುವ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಇರುವದನ್ನು ನೋಡಿ ತೆಗೆದುಕೊಳ್ಳಬೇಕೆಂದು ಸಕಲರಿಗೂ ಕೃತಪಡಿಸಿರುತ್ತೇನೆ.

ಕ್ರಯ ಡಬ್ಬಿ 1 ಕ್ಕೆ ರೂಪಾಯಿ 2-0-0.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
[272-2] 5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಡಿಸೆಂಬರ್ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.



ಆದೇ ಡಿಸೆಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದಕ್ಕೆ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ. 1-14-0 ಆಣೆಗೆ ಕೊಡಲಪಡುತ್ತೆ. [111-28]

ವಿಳಾಸ—ವಿ. ಶ್ರೀ. ಕಂಬುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಡೈರಿ ಬಹುಮಾನ.

ಒಂದು ತಿಂಗಳು ಮಾತ್ರ! ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ಪೈಕಿ 2 ರೂ. ಗಳ ನಿಮ್ಮ ಆರ್ಡರಿಗೆ 1 ಸುಂದರವಾದ 1916 ವರ್ಷದ ಪಾಕೆಟ್ ಡೈರಿಯನ್ನು ಬಹುಮಾನವಾಗಿ ಕಳುಹಿಸುತ್ತೇವೆ. ಬಂಗಾಳಿ ನಾವಿಲ್ 12 ಆ. ಕಲಾನಾಥ.ರಥೆ 8 ಆ ಸುಭಸ್ತ್ರೀ-ಹೊಸ ಕಾದಂ 5 ಆ ಮೈತ್ರೇಯಿ 5 ಆ. ವಾಲ್ಮೀಕಿಯವಿಯ 6 ಆ. ಅಧ್ಯಾತ್ಮನಿಜಾನು ಪ್ರತ್ಯಗಾತ್ಮನ ಪಠ ಸಹಿತ 2 ರೂ. ಸಂಗೀತ ಸಮಯಸಾರ-ಹೊಸ 1-4-0. ಪ್ರತಿ ವರ್ಷವೂ ಉಪಯೋಗಿಸಬಹುದಾದ (S.T.A. Perpetual Calendar) ಪರ್ಪೆಚ್ಯುಯಲ್ ಕ್ಯಾಲೆಂಡರ್ 10 ಆ. S.T.A. ಮೆಡಿಕೇಟೆಡ್ ಹೇರ್ ಆಯಿಲ್ 12 ಆಣೆ. ಪುಸ್ತಕದ ಪಟ್ಟಿ ಉಚಿತ. [281-1]

ವಿಳಾಸ.—ಎಂ. ಎಸ್. ರಾವ್ ಕಂಪನಿ, ಅವೆನ್ಯೂ ರೋಡ್ ಬೆಂಗಳೂರು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ... ಸಿದ ಬನಾರಸ್ ಜರಿ ಸಾದಾ ಸೀರೆ, ... ಸೀರೆ, ಪೇಟ, ಮಗುಟ, ರುಮಾಲು, ... ಕೋಟು ಸಿಲ್ಕು ಥಾನುಗಳು ಪಟ್ಟೆ ... ಕಾಶ್ಮೀರ್ ಸಾದಾ ಜರಿ ಶಾಲುಗಳು, ... ಡು ರುದ್ರಾಕ್ಷಿ ಸೀರೆ ಮೊದಲಾದ ಎಲ್ಲಾ ... ದ ಸುಮಾರು 25,000 ರೂಪಾಯಿನ ಮಾಲು... ಗಳು ಉಳಿದಿರುವುದರಿಂದ ನಾವು ಅವು... ಅಸಲ್ ಕ್ರಯಕ್ಕೆ ಕೊಡುತ್ತೇವೆ. ... ವರು ಬೇಗನೆ ಬರೆದು ತರಿಸಿಕೊಳ್ಳ... ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ... ತರಿಸಿಕೊಳ್ಳಿ. [119-30]

ವಿಳಾಸ.—ಎಸ್. ಯು. ಎನ್. ಕಂಪನಿ, ಚೌಖಾಂಬಾ, ...

ಯಾವಾಗಲೂ ಜಿಂತಾನವನ್ನೇ ಉಪಯೋಗಿಸಿ. JIN-TAN

ಜಿಂತ್ರಾನ ಬಿಟ್ಟರೆ ಬೇರೆ ಜಿಂತ್ರಾನವಿಲ್ಲ. ಪ್ರಪಂಚಕ್ಕೆಲ್ಲಾ ಅಪೂರ್ವವಾದ ಸಂತೃಪ್ತಿಯನ್ನುಂಟುಮಾಡಿ ಸರ್ವರಲ್ಲೂ ವಿಶೇಷ ನಂಬಿಕೆಯನ್ನುಂಟುಮಾಡಿರುವುದೇ ಜಿಂತ್ರಾನ.

ಕಂಚಿನ ಮೋಂಬತ್ತಿ ಸ್ಟಾಂಡುಗಳು ಬಹಳ ಗಟ್ಟಿಮುಟ್ಟಾಗಿಯೂ, ಅಲಂಕಾರವಾಗಿಯೂ, ಬಹಳ ಅಗ್ಗವಾಗಿಯೂ ಇವೆ.

ಉತ್ತಮೋತ್ತಮವಾದ ಅಲಂಬಿಕ್ ಸಾಬೂನುಗಳು. ಕೂದಲಿಗೆ ಹಚ್ಚುವ ಕೊಬ್ಬರಿ ಎಣ್ಣೆ, ಕಾರ್ಬಾಲಿಕ ಹಲ್ಲುಪುಡಿ, ಯುಡಿಕಲೋನ್ ಎಂಬ ಬಟ್ಟೆಗಳಿಗೆ ಹಾಕುವ ಸುವಾಸನೆ ದ್ರಾವಕ, ಸೆಂಟುಗಳು, ಪೋಮೇಡುಗಳು, ಕೋಲ್ಡ್ ಕ್ರೀಮ್, ಖಾತರಿಯಾದ ಔಷಧಗಳು ಇತ್ಯಾದಿ.

ಪ್ರೊಫೆಸರ್ ಗೆಜ್ಯಾರ್‌ರವರ ಗುಣಕಂಡ ಮನೆ ಔಷಧಗಳು. ಇವು ಪ್ರತಿ ಒಂದು ಮನೆಯಲ್ಲೂ ಇರಬೇಕು. ಬಹಳ ನಂಬಿಕೆಯಾದವು. ಬಹಳ ಸುಲಭ ಕ್ರಯ. ಎಲ್ಲಾ ತರಹ ಔಷಧಗಳೂ ಇದೆ.

"ಡೋಂಗ್ರೆಯವರ ಬಾಲಾಮೃತ" ಮಕ್ಕಳಿಗೆ ಶಕ್ತಿಕೊಡುವುದಕ್ಕೆ ಇದನ್ನು ಬಿಟ್ಟರೆ ಬೇರೆ ಔಷಧವೇ ಇಲ್ಲ. ಎಲ್ಲಾ ತರದ ನೋವನ್ನೂ ನಿವಾರಣೆಮಾಡುವ ಪರ್ಯಿ ಬಾವ ಎಂಬ ಬಾಧಾಪಹಾರಿಣಿ ಬಹಳ ಅಗ್ಗ, ಬಹು ಬೇಗನೆ ಬಾಧೆಯನ್ನು ಶಮನಮಾಡಬಲ್ಲದು.

ಆರೋಗ್ಯಹಿತ ಮಾತ್ರೆಗಳು. ಧನ್ವಂತ್ರಿಯ ಉತ್ತಮೋತ್ತಮ ರಚನೆ. ಸ್ನಾನದ ಪುಡಿಗಳು, ರಸಾಯನಗಳು, ಹಲ್ಲುಪುಡಿಗಳು, ಇತ್ಯಾದಿ, ಇತ್ಯಾದಿ.

ದಕ್ಷಿಣ ಇಂಡಿಯಾ ಮುಖ್ಯ ಏಜಂಟರು:—

[214-10]

ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸು

ವಿಶೇಷ:—ನಮ್ಮಲ್ಲಿರುವ ಮೇಲ್ಕಂಡ ಪದಾರ್ಥಗಳನ್ನು ಒಂದಾವರ್ತಿ ತರಿಸಿನೋಡಿದರೆ ಅವುಗಳ ಉತ್ಕೃಷ್ಟವಾದ ಗುಣಗಳು ಖಂಡಿತವಾಗಿಯೂ ಅನುಭವವಾಗುತ್ತೆ. ವಿಷಯಗಳನ್ನು ತಿಳಿಯಬೇಕೆಂದು ಬರೆದರೆ ಎಲ್ಲಾ ವಿವರಗಳನ್ನೂ ಸ್ಪಷ್ಟವಾಗಿ ತಿಳಿಸಲು ಯಾವಾಗಲೂ ಸಿದ್ಧರಾಗಿರುತ್ತೇವೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

೧೯೧೫ನೇ ಇಸವಿ ನವಂಬರ್ ೨೫ ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ.

ಜವಾಬ್ದಾರಿ—(೧) ಷೇರು ಮೊಬಲಗು	ರೂ.	10,00,000
(೨) ರಿಜರ್ವ್ ಫಂಡು	,,	60,000
(೩) ಡಿಪಾಜಿಟ್ಟುಗಳು	,,	36,74,931
(೪) ಇತರೆ	,,	80,897
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	48,05,828
ಆಸ್ತಿ—(೧) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ	ರೂ.	10,75,299
(೨) ಸಾಲ ಮತ್ತು ಇತರ ಸಾಲಗಳು	,,	32,09,680
(೩) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	3,83,893
(೪) ಇನ್ವೆಸ್ಟ್‌ಮೆಂಟುಗಳು	,,	94,091
(೫) ಏಜೆಂಟುಗಳಲ್ಲಿರುವ ಮೊಬಲಗು	,,	8,433
(೬) ಬ್ಯಾಂಕಿನಲ್ಲಿರುವ ಸಾಮಾನುಗಳು	,,	16,118
(೭) ಇತರೆ	,,	17,701
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	48,05,828

ಪಿ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ಮೈಸೂರು ಸರ್ಕಾರಿ ಹುಕ್ಮುಂ.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧವನ್ನು ಪಡೆಯುವವರು ರುಸುಂ ಕೊಡಬೇಕೆಂಬುವ ವಿಚಾರ

ದೇಶದಲ್ಲಿ ಜನಗಳ ಸಂಖ್ಯೆಯು ಹೆಚ್ಚಿದ ಹಾಗೆಲ್ಲಾ ಮತ್ತು ಜನರಿಗೂ ವೈದ್ಯ ಚಿಕಿತ್ಸೆಯ ಪ್ರಯೋಜನವನ್ನು ತಿಳಿದುಕೊಂಡ ಹಾಗೆಲ್ಲಾ, ಹೆಚ್ಚು ಆಸ್ಪತ್ರೆಗಳ ಮತ್ತು ಔಷಧಾಲಯಗಳ ಅವಶ್ಯಕತೆಯೂ, ಅವುಗಳಲ್ಲಿ ಸಿಬ್ಬಂದಿ ಮತ್ತು ಹೆಚ್ಚು ಔಷಧಗಳನ್ನು ಒದಗಿಸುವುದು ಸಹ ಹೆಚ್ಚುತ್ತಾ ಬರುತ್ತದೆ.

ಈ ಕಾರಣದಿಂದ ಈ ಬಾಬಿನಲ್ಲಿ ಖರ್ಚು ಸಹ ಹೆಚ್ಚುತ್ತಾ ಬಂದಿರುತ್ತದೆ. [illegible] ಭೇದವಿಲ್ಲದೆ ಧರ್ಮಾರ್ಥವಾಗಿ ಕಾಯಿಲೆಗಳನ್ನು ನೋಡುವುದು [illegible] ಔಷಧಗಳನ್ನು ಕೊಡುವುದು ಸಹ ಆಸ್ಪತ್ರೆಗಳು ಬಹಳ ಕೆಲಸವಾಗಿ [illegible] ಪ್ರಯೋಜನಗಳನ್ನು ಜನಸಾಮಾನ್ಯದಲ್ಲಿ ಪ್ರಚುರಪಡಿಸುವುದ [illegible], ಅಲ್ಲಿ ಶಾಸ್ತ್ರೀಯ ಚಿಕಿತ್ಸೆ ಮಾಡುವುದರ ಪ್ರಯೋಜನವನ್ನು ಜನ [illegible] ಎಂಬ ಉದ್ದೇಶದಿಂದಲೂ, ಆಗ ಪುಣ್ಯವಂತರು ಬಡವರು [illegible], ಧರ್ಮಾರ್ಥವಾಗಿ ಕಾಯಿಲೆಯನ್ನು ನೋಡುವುದು ಮತ್ತು [illegible] ಕೊಡುವುದನ್ನು ರೂಢಿಗೆ ತಂದಾಯಿತು. ಈ ಪದ್ಧತಿಯನ್ನು ಇನ್ನು [illegible] ಜಾರಿಗೆ ತರುವುದಕ್ಕೆ ಹಿಂದೆ ಇದ್ದ ಕಾರಣಗಳು ಮುಂದಕ್ಕೂ ಸಹ [illegible]; ಅಲ್ಲದೆ ಈ ಬಾಬಿನಲ್ಲಿ [illegible] ಅವಕಾಶವಾಗುವ [illegible] ಔಷಧವನ್ನೂ ಚಿಕಿತ್ಸೆಯನ್ನೂ ಹೊಂದಲು ಅರ್ಹ [illegible] ಅನುಕೂಲತೆಗೆ ತೊಂದರೆಯಾಗುವುದು.

[illegible] ಈಗ ಜಾರಿಯಲ್ಲಿರುವ ರೂಲ್ಸನ್ನು ಬದ [illegible] ಆವಶ್ಯಕತೆಯು ತೋರಿ, ಔಷಧ ಮೊದಲಾದವುಗಳ ಖರ್ಚನ್ನು [illegible] ದುಡ್ಡು ವಸೂಲ್ ಮಾಡಬೇಕೆಂಟ ಹುಕ್ಮುಂ ಆಯಿತು. [illegible] ಕಾರಣಗಳಿಂದ ಸದರೀ ರೂಲ್ಸು ಜಾರಿಗೆ ಬರಲಿಲ್ಲ. ಬ್ರಿಟಿಷ್ [illegible] ಹೀಗೆ ಶಸ್ತ್ರರೋಗವಿಂದ ದುಡ್ಡು ವಸೂಲ್ ಮಾಡುವುದು [illegible] ಬರುತ್ತಾ ಇರುವುದರಿಂದ ಮೈಸೂರು—ಬೆಂಗಳೂರು ನಗರಗ [illegible] ಆಸ್ಪತ್ರೆಗಳಲ್ಲಿ ಪರೀಕ್ಷಾರ್ಥವಾಗಿ ಈ ಏರ್ಪಾಡನ್ನು ಜಾರಿಗೆ ತರಬಹು [illegible] ಎಂದು ಸರ್ಕಾರದವರು ಯೋಚಿಸುತ್ತಾರೆ.

ಈ ಕೆಳಗೆ ನಮೂದಿಸಿರುವಂತೆ ಪರೀಕ್ಷಾರ್ಥವಾಗಿ 1916 ನೆಯ ಜನವರಿ [illegible] 3 ವರುಷ ಕಾಲ ಈ ರೂಲ್ಸು ಮೈಸೂರು—ಬೆಂಗಳೂರು [illegible] ಆಸ್ಪತ್ರೆಗಳಲ್ಲಿ ಜಾರಿಗೆ ಬರತಕ್ಕದ್ದು:—

1. [illegible] ಯಾರ ಆದಾಯವು ಎಲ್ಲಾ ವಿಧಗಳಲ್ಲಿಯೂ ಸೇರಿ 50 [illegible] ಮೀರದೆ ಇದೆಯೋ ಅವರೂ ಅವರಿಂದ ಸಂರಕ್ಷಿಸಲ್ಪಡುವವರೂ [illegible] ಎಣಿಸಲ್ಪಟ್ಟಿರುತ್ತಾರೆ. ಅಂತಹವರಿಂದ ಸರ್ಕಾರದ, ಮ್ಯುನಿಸಿಪಾಲಿ [illegible] ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿ ಏನನ್ನೂ ತೆಗೆದುಕೊಳ್ಳದೆ, [illegible] ಮಾಡಲಾಗುವುದು.

೨. [illegible] ಕಾಯಿಲೆಯವರು ಅಂದರೆ ಅವರವರ ಮನೆಯಲ್ಲಿಯೇ [illegible] ಔಷಧಿ ತೆಗೆದುಕೊಳ್ಳುವವರು ಒಂದೊಂದು ಮನೆಗೆ ತಿಂಗಳು [illegible] ರೂಪಾಯಿ ಅಥವಾ ಇದಕ್ಕೆ ಮೇಲ್ಪಟ್ಟು ಆಸ್ಪತ್ರೆಗೆ ಚಂದಾ [illegible] ಅವರ ಮನೆಯವರ ಕಾಯಿಲೆಯನ್ನು ನೋಡುವುದಲ್ಲದೆ [illegible] ಕೊಡಲಾಗುವುದು.

೩. ಇತರ ಹೊರಗಿನ ಕಾಯಿಲೆಯವರು ಪ್ರತಿ ದಿವಸ ತಮ್ಮ ಚಿಕಿತ್ಸೆಯ [illegible] ದಿವಸಕ್ಕೆ 2 ಆಣೆಯಂತೆ ರುಸುಂ ಕೊಟ್ಟು ಚಿಕಿತ್ಸೆ ಮಾಡಿಸಿಕೊಂಡು [illegible].

೪. ಆಸ್ಪತ್ರೆಯಲ್ಲಿ ಇದ್ದು ಔಷಧ ತೆಗೆದುಕೊಳ್ಳುವ ಕಾಯಿಲೆಯವರು:— [illegible] ವಾರ್ಡ್—ಬಡವನಲ್ಲದ ಪ್ರತಿಯೊಬ್ಬ ರೋಗಿಯೂ, ಆಸ್ಪ [illegible] ಇದ್ದು ಚಿಕಿತ್ಸೆ ಹೊಂದಬೇಕಾದರೆ ಅವನು ಇರುವಷ್ಟು ದಿನಗಳೂ ದಿವ [illegible] ಆಣೆಯಂತೆ ರುಸುಂ ಕೊಡಬೇಕು.

೫. ಆಸ್ಪತ್ರೆಗಳಲ್ಲಿದ್ದುಕೊಂಡು ಮುಫತ್ತಾಗಿ ಚಿಕಿತ್ಸೆ ಹೊಂದಬೇಕಾಗಿ [illegible] ತಮ್ಮ ಅಥವಾ ತಮ್ಮ ಪೋಷಕರ ತಿಂಗಳು ಗಟ್ಟಲೆಯ ಆದಾ [illegible] ರೂಪಾಯಿಗೆ ಮೀರಿ ಇಲ್ಲವೆಂದು ಒಂದು ಪ್ರಮಾಣ ಪತ್ರಿಕೆಯನ್ನು [illegible].

([illegible] ವಿಕ್ಟೋರಿಯಾ ಆಸ್ಪತ್ರೆ ವಿಷಯದಲ್ಲಿ ಬೇರೇ ದರಗಳ ವಿಷ [illegible] 10 9 ನೆಯ ಏಪ್ರಿಲ್ 3 ನೇ ತಾರೀಖಿನಲ್ಲಿ 9591-5-53-02-8 [illegible] ಗೌರ್ನಮೆಂಟು ಹುಕುಂ ಆಗಿರುವುದರಿಂದ, ಈ ಮೇಲ್ಕಂಡ ದರ [illegible] ಆಸ್ಪತ್ರೆಗೆ ಅನ್ವಯಿಸುವುದಿಲ್ಲ.)

6. (ಬಿ) ಸ್ಪೆಷಲ್ ವಾರ್ಡು:—ಉತ್ತಮ ತರಗತಿಯಲ್ಲಿದ್ದು ಚಿಕಿತ್ಸೆ [illegible] ರೋಗಿಗೆ ಒಂದು ಕೊಟ್ಟಡಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡ [illegible]. ಇದಕ್ಕಾಗಿ ದಿನ ಒಂದಕ್ಕೆ ಎರಡು ರೂಪಾಯಿನಂತೆ ವಸೂಲ್ [illegible] ಎರಡನೇ ತರಗತಿಯಲ್ಲಿದ್ದು ಚಿಕಿತ್ಸೆ ಹೊಂದುವ ರೋಗಿಗಳ [illegible] ಒಂದೊಂದು ಕೊಟ್ಟಡಿಯನ್ನು ಕೊಟ್ಟು ದಿವಸಕ್ಕೆ ಒಬ್ಬೊಬ್ಬನಿಂದ [illegible] ರೂಪಾಯಿನಂತೆ ವಸೂಲ್ ಮಾಡಿಕೊಳ್ಳಲಾಗುವುದು.

7. [illegible] ವರುಷಕ್ಕೆ ಮೀರದ ಮಕ್ಕಳು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ [illegible] ಮೇಲ್ಕಂಡ ದರದಲ್ಲಿ ಅರ್ಧ ವಸೂಲು ಮಾಡಲ್ಪಡುತ್ತದೆ.

8. ಮೇಲ್ಕಂಡ ದರಗಳಿಗಾಗಿ ರೋಗಿಗಳಿಗೆ ವೈದ್ಯರ ಪರೀಕ್ಷೆಯೂ, ಚಿಕಿ [illegible] ಕೊಡಲ್ಪಡುವುದು. ಹೆಚ್ಚು ಆರೈಕೆಯನ್ನು ಅಪೇಕ್ಷಿಸಿದ [illegible] ಏರ್ಪಾಡುಗಳನ್ನು ಮಾಡಿಕೊಳ್ಳಬೇಕು.

9. [illegible] ದರಗಳಂತೆ ರುಸುಂ ಮುಂದಾಗಿಯೇ ವಸೂಲ್ ಮಾಡಿ [illegible] ಅವಶ್ಯಕವಿದ್ದು.

10. [illegible] ಕೆಲಸಗಳು ಬಿದ್ದಾಗ ರುಸುಂ ಇಲ್ಲದೆ ನೋಡಲಾಗುವುದು.

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗಬೇಡಿರಿ!!

ಅಸಲ್ ಪಂಜಾಬಿ ಮುರಬ್ಬಾ.

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು ಜನಗಳಿಗೆ ಮೋಸಮಾಡುತ್ತಾರೆ. ಅವನ್ನು ಕೊಂಡು ಮೋಸಹೋಗ ಬೇಡಿರಿ. ನಮ್ಮಿಂದ ಕಳುಹಿಸುವ ಭಾಂಗಿಯನ್ನು ತೆಗೆಯುವಾಗ ಧೈರ್ಯಲಕ್ಷ್ಮಿ ಅಂಡ್ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿರುವ ಲೇಬಲ್ ನೋಡಿ ತೆಗೆಯಿರಿ.

500 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲ ರೋಗ ಸಂಜೀವಿ"

ನಿಮ್ಮ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ ಶರೀರ ಸೌಖ್ಯವನ್ನೂ, ಕಾಯಶಕ್ತಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕರಾಗಿರಬೇಕು ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥದ್ದು ನಿಮ್ಮ ಮಾತು ಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನಮ್ಮ ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ "ಪಂಜಾಬಿ ಸಕಲ ರೋಗ ಸಂಜೀವಿ"ಯನ್ನು ಸೇವಿಸಿರಿ. ಇದರಲ್ಲಿ ಅಫೀಂ, ಬೆಳ್ಳಿ ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೆ ತಯಾರುಮಾಡಿದೆ. ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

10 ತೊಲೆ ಡಬ್ಬಿ 1 ಕ್ಕೆ ರೂ. 1-8-0

64 ಪೇಜು ದೊಡ್ಡ ಕ್ಯಾಟಲಾಗ್ ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:—ಧೈರ್ಯಲಕ್ಷ್ಮಿ ಅಂಡು ಕಂಪೆನಿ,

[252-5] 3, ಇರುಳಪ್ಪನ ಬೀದಿ ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯ [illegible] ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾ [illegible] ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಹೆಚ್ಚಾಗಿಯೋ ಇಳಿಯುವುದು; ಸಿಡಿದ ಬಾಯಾರಿಕೆ, ಆಲಸ್ಯ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ಕಾಲಿ ಊದಿಕೊಳ್ಳುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರಾವಪ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತವಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-16]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುದ್ದಿಗಳಿಗೆ ರೂ. ೧೦—೮—೦. ಔಷಧಿ ಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ [illegible] ೬ ೬ ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಕರ್ಣಿಕ

ಎಗ್ಯೂಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಹಿಂತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಪ್ರಾರ್ಥಿಸುತ್ತೇವೆ. [213-10]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯೂ ಮಿಕ್ಸ್ಚರ್ ಡಿಪೋ, ಬೊಂಬಾಯಿ. 4.

KARNIK Bros., BOMBAY, 4.

ರೊಂಡಿನೋವನ್ನು "ಸ್ನೇಹಿತರಿಂದ ಹಿಂಸೆಪಡುವದಕ್ಕೆ" ಸಮಾನವಾಗಿ ಒಬ್ಬ ಪ್ರಖ್ಯಾತ ಬರವಣಿಗಾರನು ವಿವರಿಸಿ ಬರೆದಿದ್ದಾನೆ. ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದು ಹಠವಾತವನ್ನು ಅದ್ಭುತರೀತಿಯಲ್ಲಿ ವಾಸಿ ಮಾಡುತ್ತೆ.

ಲಕ್ಷಾಂತರ ಜನಗಳ ಪೈಕಿ, ಕೆಲವರು ನಂಬಿಕೆಯಿಂದಲೂ, ಕೆಲವರು ಬರವಸೆಯಿಂದಲೂ, ಕೆಲವರು ಅವಿಶ್ವಾಸದಿಂದಲೂ ಉಪಯೋಗಿದ್ದಾರೆ, ಆದರೆ ನೋವಿನ ಬಿಡುಗಡೆಯಾದಾಗ, ನಿಮ್ಮಂತೆಯೇ ಎಲ್ಲರೂ, "ರೊಂಡಿನೋವಿಗೆ ಇದೊಂದೇ ನೈಜವಾದ ಔಷಧವೆಂದು" ಹೇಳುವರು.

ಬಾತ್ ನಗರದ ಟ್ರಿವೆಂಟ್ ಬೀದಿಯಲ್ಲಿರುವ ಮಿ॥ ಡಬ್ಲ್ಯೂ. ನೌಲ್ಸ್ ಬರೆಯುವುದು:—"5 ವರುಷಗಳ ಹಿಂದೆ ನಾನು ರೊಂಡಿನೋವಿನಿಂದ ಬೋಲೂ ಬಿದ್ದೆ. ನನ್ನ ಬಲ ತೊಡೆಯಿಂದ ಅಂಗಾಲಿನವರೆಗೆ ವಾಯುವಿನ ಯಾತನೆಯಿಂದ ರಾತ್ರೀ ಹಗಲು ಕಷ್ಟಪಟ್ಟೆನು. ರಾತ್ರಿಯಲ್ಲಿ ನೋವಿನ ಬೇಗೆಯಿಂದ ಎಚ್ಚರವಾಗಿ, ನಿದ್ರೆಯೇ ಬರುತ್ತಿರಲಿಲ್ಲ. "ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಒಂದು ಸೀಸೆ ಉಪಯೋಗಿಸಿ ಪೂರ್ಣ ಸೌಖ್ಯ ಹೊಂದಿದೆನು."

ಸೀಸೆ 1ಕ್ಕೆ 1 ರೂಪಾಯಿನಂತೆ ಎಲ್ಲಾ ಔಷಧಗಾರರಿಂದಲೂ ಮಾರಲ್ಪಡುತ್ತೆ. [81-33]

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಿಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ! ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತು ವಾಸಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿರುವದು ನಿಜವಾಗಿಯೂ ತಪ್ಪುವುದು—ಶೀತ, ಶೀತವಾಯು, ಅಜೀರ್ಣ, ಶಾರುವ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ ಹೊಟ್ಟೆನೋವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು. ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯಕರವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 300 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ಕರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಂ. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎಂ. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವುದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ॥ ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ವಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-14] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಜನ ವಾತ್ರೆ—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 6 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ 8 ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ನಂಬಿಗೆಯಿಂದ ಬೇಗ ಗುಣಪಡಿಸುತ್ತೆ. ಡಬ್ಬಿಗೆ 4 ಆ, 5 ಕ್ಕೆ 1 ರೂ, 12 ಕ್ಕೆ 2½ ರೂ.

[126-15] ನಮ್ಮ ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಕು-ಲೋಹಭಸ್ಮ-ಮುಂತಾದವುಗಳಿಂದ ವಂಶ ಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ-ಸೋಂಕು ರೋಗಸ್ಥಳಗಳಲ್ಲೂ-ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ-ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವಿಷಮ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಹೊಟ್ಟೆ ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ವಾಸಿ ಗುಣವಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಪೆಟ್ಟಿ. ಟಿ.ಖ ಪ್ರತ್ಯೇಕ.

[278-1] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಅಮೇರಿಕನ್ ರೋಮಹರಿ.

ಕ್ರಯ ಡಬ್ಬಿ 1 ಕ್ಕೆ 0-4-0

3 ಡಬ್ಬಿ ಗಳಿಗೆ ಕ್ರಯ ... 0-8-0

ವಾಚಕ ಮಹಾಶಯರಿಗೆ ತಿಳಿಸುವದೇನೆಂದರೆ—ಇತರರು ರೋಮಹರಿ ಸೋಪೆಂದು ಹೆಸರಿಟ್ಟು ಮಾರುತ್ತಲಿರುವ ಸೋಪುಗಳಿಗೆ ಈಗ ನಾವು ತಯಾರಿಸಿರುವ ಅಮೇರಿಕನ್ ರೋಮಹರಿ ಔಷಧವನ್ನು ಹಾಕಿ ಸೀಮೆಸುಣ್ಣ, ಎಣ್ಣೆ, ಕರ್ಪೂರ ತೈಲ ಮೊದಲಾದವುಗಳನ್ನು ಸೇರಿಸಿ, ಸೋಪಿನ ಆಕಾರದ ಬಿಲ್ಲೆಗಳನ್ನು ಮಾಡಿ, ತಗಡಿನ ಡಬ್ಬಿಯಲ್ಲಿ ಹಾಕಿ ಮೋಸ ಮಾಡುತ್ತಲಿದಾರೆ.



ಈಗ ನಾವು ತಯಾರಿಸಿ ವಿಕ್ರಯಿಸುವ (ಅಮೇರಿಕನ್ ರೋಮಹರಿಯು) ಭಾಟು ಹೋಗದ ಹಾಗೆಯೂ, ಎಣ್ಣೆ, ಸುಣ್ಣ, ಕರ್ಪೂರ ತೈಲಗಳಿಂದ ಸೇರದೆಯೂ ತಯಾರಿಸಿ ತರುಪಿನ ಶೀಸೆಯಲ್ಲಿ ಹಾಕಿ ಗಟ್ಟಿಯಾಗಿ ಬಿಗಿಸಿ ಇರುವದರಿಂದ ಇದನ್ನು ಕೂದಲುಗಳ ಮೇಲೆ ಸವರಿದ ಕ್ಷಣ ಮಾತ್ರದಲ್ಲಿ ರೋಮಗಳು ಉದುರಿ ಆ ಸ್ಥಳವು ನುಣ್ಣಗಾಗುತ್ತೆ. ಪರೀಕ್ಷಿಸಲಪೇಕ್ಷಿಸುವವರು ತರಿಸಿ ಉಪಯೋಗಿಸುವದರಿಂದಲೂ ಮತ್ತು ವಾಸನೆಯಿಂದಲೂ ಇದರ ನಿದರ್ಶನವನ್ನು ತಿಳಿಯಬಹುದು.

ಇದಲ್ಲದೆ ನಮ್ಮಲ್ಲಿ ರೋಮಹರಿ ಸಾಬೂನುಗಳು ವಿಕ್ರಯಕ್ಕೆ ಸಿದ್ಧವಾಗಿರುತ್ತೆ. ಕ್ರಯ ಮೂರು ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ 0-10-0 ಟಪಾಲ್ ಖರ್ಚು 0-3-0.

ನಮ್ಮ ವಿಳಾಸ:—ವಿ. ಕೃಷ್ಣಸ್ವಾಮಿ ಮೊದಲಿಯಾರ್,

[273-3] ನಂ. 27, ಬಂದರ್ ಬೀದಿ, ಮದರಾಸು.

ರಿಜಿಸ್ಟರ್ಡ್ ಸುಪೀರಿಯರ್ ಲೀವರ್ ಜೂವೆಲ್ಡ್ ವಾಚು.

ಕ್ರಯ ಸರಪಣಿ ಸಹಿತ ರೂ. 3-0-0. | 5 ವರುಷಗಳ ಗ್ಯಾರಂಟಿ. | ವಿ. ಪಿ. ಚಾರ್ಜು 4 ಆಣೆ.

ಶಕ ೧೯೧೫ ನೇ ಇಸವಿ ಡಿಸೆಂಬರ್ ತಾ. ೨೩ ನೇ ಗುರುವಾರ.

ಯೂರೋಪಿನ ಮಹಾ ಯುದ್ಧವು.

ಯೂರೋಪಿನಲ್ಲಿ ನಡೆಯುತ್ತಿರುವ ಘೋರವಾದ ಮಹಾ ಯುದ್ಧವು ಸದ್ಯಕ್ಕೆ ಒಂದು ನೆಲೆಗೆ ಬಂದಿರುವಂತೆ ಕಾಣುತ್ತದೆ. ಉಭಯ ಪಕ್ಷಗಳವರೂ ವಸಂತಋತುವಿನಲ್ಲಿ ನೂತನ ಯುದ್ಧಗಳನ್ನು ನಡಿಸುವುದಕ್ಕೋಸ್ಕರ ಎಲ್ಲಾ ಸಿದ್ಧಪಡಿಸಿಕೊಳ್ಳುತ್ತಾ ಬರುವುದರಿಂದ ಇನ್ನು ಕೆಲವು ಕಾಲದ ತನಕ ಕದನ ಕಾರ್ಯಗಳು ಅಷ್ಟೇನೂ ವಿಶೇಷವಾಗಿ ಜರುಗುವಹಾಗಿಲ್ಲ. ಹಾಗಾದರೆ ಯುದ್ಧವು ಈಗ ಯಾವ ಸ್ಥಿತಿಗೆ ಬಂದಿದೆ ಎಂದು ಕೇಳಬಹುದು.

ಯುದ್ಧದಲ್ಲಿ ಬೆರೆದಿರುವಂಥಾ ರಾಜ್ಯಗಳವರಿಗೆಲ್ಲಾ ಯುದ್ಧದ ಖರ್ಚಿಗೆ ಹಣವನ್ನು ಒದಗಿಸುವ ಚಿಂತೆಯೇ ವಿಶೇಷವಾಗಿದೆ. ಯುದ್ಧಕ್ಕಾಗಿ ಅವರುಗಳಿಗೆಲ್ಲಾ ಬೇಕಾಗಿರುವ ದ್ರವ್ಯವನ್ನು ಇಷ್ಟಿಷ್ಟೆಂದು ವಿವರಿಸಲು ಶಕ್ಯವಲ್ಲ. ಎಲ್ಲಾ ರಾಜ್ಯಗಳವರೂ ದಿನ ಒಂದಕ್ಕೆ ಸುಮಾರಾಗಿ 15,00,00,000 ರೂಪಾಯಿಗಳನ್ನು ಖರ್ಚುಮಾಡುತ್ತಿರಬೇಕೆಂದು ಹೇಳಬಹುದು. ಈ ಅಪರಿಮಿತವಾದ ದ್ರವ್ಯದಲ್ಲಿ ವಿಶೇಷ ಭಾಗವು ವ್ಯರ್ಥ ಖರ್ಚೆಂದೂ, ಇದರಿಂದ ಪ್ರಪಂಚಕ್ಕೆ ಯಾವುದೊಂದು ಶಾಶ್ವತವಾದ ಪ್ರಯೋಜನವೂ ಆಗತಕ್ಕದ್ದಲ್ಲವೆಂದೂ ಗೋಚರವಾಗದೇ ಇರದು. ಅದರಲ್ಲೂ ಜರ್ಮನಿ ಮತ್ತು ಆಸ್ಟ್ರಿಯಾದವರಿಗೆ ದ್ರವ್ಯದ ಆತುರ ಬಹಳ ಹೆಚ್ಚಾಗಿದೆ. ಜರ್ಮನಿಯ ಮಾರ್ಕ್ ಎಂಬ ನಾಣ್ಯವು 12 ಆಣೆ ಬಾಳುತ್ತಿದ್ದದ್ದು ಈಗ 10 ಆಣೆಗೆ ಇಳಿದುಹೋಗಿದೆ. ಜರ್ಮನಿ ಮತ್ತು ಆಸ್ಟ್ರಿಯಾಗಳಲ್ಲಿ ಅನೇಕ ವ್ಯಾಪಾರ ವಸ್ತುಗಳ ಕಾರ್ಖಾನೆಗಳು ನಿಂತುಹೋದವು. ಯಾಕೆಂದರೆ ಬ್ಯಾಲ್ಟಿಕ್ ಕಡಲೊಂದು ವಿನಾ ಉಳಿದ ಎಲ್ಲಾ ಕಡೆಗಳಲ್ಲೂ ಆ ರಾಜ್ಯಗಳ ವ್ಯಾಪಾರದ ಹಡಗುಗಳ ಸಂಚಾರವೆಲ್ಲಾ ಕಟ್ಟಿಹೋಗಿದೆ. ಅದಕಾರಣ ಜರ್ಮನಿ ಆಸ್ಟ್ರಿಯಾಗಳಿಂದ ಹೊರಕ್ಕಾಗಲಿ, ಇತರ ಕಡೆಗಳಿಂದ ಆ ರಾಜ್ಯಗಳಿಗಾಗಲಿ ಆಮದು ರಫ್ತು ಇಲ್ಲವೇ ಇಲ್ಲ. ಬ್ರಿಟಿಷ್ ರಾಜ್ಯದ ಬಳಿ ದರೋ ಅಪಾರ ದ್ರವ್ಯವಿರುತ್ತದೆ; ಬ್ರಿಟಿಷರಿಗೆ ಹಣದ ಕೊರತೆಯೇನೂ ಇರುವುದಿಲ್ಲ. ಆದರೂ ಇವರಿಗೂ ಇನ್ನೂ ಬಹಳ ಹಣ ಬೇಕಾಗಿರುವುದು.

ಯುದ್ಧದ ವಿಚಾರವನ್ನೇ ನೋಡಿದ ಪಕ್ಷದಲ್ಲಿ ಜರ್ಮನಿಯವರ ವಸಾಹತುಗಳೆಲ್ಲಾ ಅವರ ಕೈಬಿಟ್ಟುಹೋದವು. ಪೂರ್ವ ಆಫ್ರಿಕಾದಲ್ಲಿ ಮಾತ್ರ ಸ್ವಲ್ಪ ಸೀಮೆ ಅವರದಾಗಿ ಉಳಿದಿರುತ್ತದೆ. ಅದನ್ನೂ ಅವರಿಂದ ಕಿತ್ತುಕೊಳ್ಳುವುದಕ್ಕೆ ಆಗಲೇ ವಿಶೇಷ ಸನ್ನಾಹಗಳು ನಡೆದಿರುವವು. ಅಲ್ಲಿ ಇಷ್ಟರಲ್ಲೇ ಯುದ್ಧ ಕಾರ್ಯಗಳು ಪ್ರಾರಂಭವಾಗುತ್ತವೆಂದು ನಿರೀಕ್ಷಿಸಬಹುದು. ಉತ್ತರದಲ್ಲಿ ಫ್ರಾನ್ಸಿನಲ್ಲೂ ಬೆಲ್ಜಿಯಮಿನಲ್ಲೂ ಜರ್ಮನಿಯವರು ಕೆಲವು ಭಾಗಗಳನ್ನು ಕಳೆದುಕೊಂಡು ಹಿಮ್ಮೆಟ್ಟಿಹೋಗುತ್ತಾರೆ. ಅವರು ಸೈನ್ಯಗಳನ್ನು ಬಹಳವಾಗಿ ಕೂಡಿಸಿ ಸನ್ನಾಹ ಮಾಡಿಕೊಂಡು ಬಹು ಕ್ರೂರವಾಗಿ ಮತ್ತೆ ನುಗ್ಗಿ ಯುದ್ಧ ಮಾಡಬಹುದೆಂದು ಕಾಣುವುದು. ಹಾಗೆ ಅವರು ನುಗ್ಗಿದಾಗ್ಯೂ ಅವರಿಗೆ ಬೇರೆ ಜಯವಾಗುವಹಾಗಿಲ್ಲ. ಪೂರ್ವ ರಣರಂಗದಲ್ಲಿ ಜರ್ಮನಿಯವರು ರಷ್ಯಾದೇಶದೊಳಗೆ ಕೆಲವು ಕಾಲದಿಂದ ಜಯ ಹೊಂದದೇನೂ ಹೊಸ ಪ್ರದೇಶಗಳನ್ನು ಗೆಲ್ಲಲಾರದೇನೂ ಹೋಗಿದ್ದಾರೆ. ಈ ಚಳಿಗಾಲದಲ್ಲಂತೂ, ಈ ರಣರಂಗದಲ್ಲಿ ಯುದ್ಧ ಕಾರ್ಯಗಳು ನಡೆಯುವುದು ಬಹಳ ಸ್ವಲ್ಪ. ಇಟಲಿಯವರಿಗೆ ಆಸ್ಟ್ರಿಯಾದೊಳಕ್ಕೆ ನುಗ್ಗಿಹೋಗುವುದು ಬಹಳ ಪ್ರಯಾಸವಾಗಿದ್ದಾಗ್ಯೂ ಅವರು ಇದುವರೆಗೆ ವಿಶೇಷ ಪರಾಕ್ರಮದಿಂದ ಕದನಗಳನ್ನು ನಡಿಸಿ ಕ್ರಮವಾಗಿ ಸ್ವಲ್ಪ ಸ್ವಲ್ಪ ಪ್ರದೇಶವನ್ನು ಗೆದ್ದು ಆಕ್ರಮಿಸಿಕೊಳ್ಳುತ್ತಾ ಬಂದಿದ್ದಾರೆ. ಜರ್ಮನಿ ಮತ್ತು ಆಸ್ಟ್ರಿಯಾದವರು ಬಲ್ಗೇರಿಯಾದವರ ಸಹಾಯವನ್ನು ಪಡೆದು ಚಿಕ್ಕದಾದರೂ ಪರಾಕ್ರಮಯುಕ್ತವಾದ ಸರ್ಬಿಯಾ ಸೈನ್ಯಗಳನ್ನು ಸೋಲಿಸಿ ಈಗ ಆ ದೇಶವನ್ನೆಲ್ಲಾ ಆಕ್ರಮಿಸಿಕೊಂಡಿದ್ದಾರೆ. ಬಲ್ಗೇರಿಯ, ಜರ್ಮನಿ, ಆಸ್ಟ್ರಿಯಾ ಸೈನ್ಯಗಳು ಈಗ ಸರ್ಬಿಯಾದವರನ್ನು ಬೆನ್ನುಹತ್ತಿ ಓಡಿಸಿಕೊಂಡು ಹೋಗುತ್ತಾರೆಂದು ಕಾಣುವುದಿಲ್ಲ. ಅವರು ಸರ್ಬಿಯಾದವರನ್ನೂ ಮಿತ್ರಮಂಡಲಿಯವರನ್ನೂ ಗ್ರೀಸ್ ಸೀಮೆಯ ಎಲ್ಲೆಯೊಳಕ್ಕೂ ಓಡಿಸಿಕೊಂಡು ನುಗ್ಗಿ ಹೋಗಲಾರರು. ಸರ್ಬಿಯಾ ಸೈನ್ಯಗಳೂ ಮಿತ್ರಮಂಡಲಿಯ ಸೈನ್ಯಗಳೂ ಕೆಲವು ಕಾಲದ ತನಕ ಸನ್ನಾಹ ಮಾಡಿಕೊಳ್ಳುತ್ತಿದ್ದು ಬಳಿಕ ಶತ್ರುವಿನ ಮೇಲೆ ನುಗ್ಗಿ ಯುದ್ಧಮಾಡುವವರಾಗಿದ್ದಾರೆ. ಸರ್ಬಿಯದ ಕೆಲವು ಸೈನ್ಯಗಳು ಹಿಮ್ಮೆಟ್ಟಿ ಅಲ್ಬೇನಿಯಾ ಸೀಮೆಯೊಳಕ್ಕೆ ಹೋಗಿ ಅಲ್ಲಿ ಸೇರಿಕೊಂಡಿವೆ. ಸರ್ಬಿಯಾದವರಿಗೆ ಸಹಾಯ ಮಾಡುವುದಕ್ಕೋಸ್ಕರ ಇಟಲಿಯವರು ಸೈನ್ಯಗಳನ್ನೂ ಸಾಮಾನುಗಳನ್ನೂ ಅಡ್ರಿಯಾಟಿಕ್ ಮೂಲಕ ಅಲ್ಬೇನಿಯಾವಿಗೆ ಕಳುಹಿಸುತ್ತಿದ್ದಾರೆ. ಶತ್ರುವು ಈಗಿರುವ ಸ್ಥಾನಗಳಿಂದ ಮುಂದಕ್ಕೆ ನುಗ್ಗಿ ಹೋಗದಂತೆ ತಡೆಯಲ್ಪಟ್ಟಿದ್ದಾರೆಂದು ಕಾಣುವುದು. ಆಸ್ಟ್ರಿಯಾ ದೇಶದಿಂದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಹೋಗುವ ಮಾರ್ಗವು ಈಗ ಸರಾಗವಾಗಿರುವುದು. ಇದರಿಂದ ಟರ್ಕಿಯವರು ಮದ್ದುಗುಂಡನ್ನೂ ಸಾಮಾನುಗಳನ್ನೂ ತರಿಸಿಕೊಳ್ಳುವುದಕ್ಕೆ ಅವಕಾಶವುಂಟಾಗಿದೆ. ಆದಾಗ್ಯೂ ಟರ್ಕಿಗೆ ಬೇಕಾಗಿರುವ ಸಹಾಯವೆಲ್ಲಾ ನಡೆದೀತೋ ಇಲ್ಲವೋ ಮುಂದೆ ತಿಳಿಯಬೇಕು.

ಟರ್ಕಿಯವರು ತಮ್ಮ ಪ್ರಜೆಗಳಾಗಿರುವ ಅರ್ಮೇನ್ಯರೆಂಬ ಜನರನ್ನು ತಾವೇ ಕೊಂದು ನಾಶಪಡಿಸಿಕೊಂಡರು. ಮತ್ತು ಮೆಸೊಪೊಟೇಮಿಯಾದಲ್ಲಿ ಅವರು ಬಹಳ ಸೀಮೆಯನ್ನು ಕಳೆದುಕೊಂಡಿದ್ದಾರೆ. ಬ್ರಿಟಿಷರ ಒಂದು ಸಣ್ಣ ಸೈನ್ಯವು ಬಾಗ್ದಾದ್ ನಗರದ ತನಕ ನುಗ್ಗಿಹೋಗಿರುವುದು. ಈಗ ಬ್ರಿಟಿಷರು ಅಲ್ಲಿಗೆ ಇನ್ನಷ್ಟು ಸೈನ್ಯಗಳನ್ನು ಕಳುಹಿಸುತ್ತಿದ್ದಾರೆ. ಇನ್ನು ಕೆಲವು ದಿನಗಳೊಳಗಾಗಿ ಈ ಸೈನ್ಯಗಳೆಲ್ಲಾ ಸೇರಿ ಆ ಬಾಗ್ದಾದ್ ನಗರವನ್ನು ಮುತ್ತಿಗೆ ಹಾಕುವವೆಂದು ನಿರೀಕ್ಷಿಸಬಹುದು.

ಸೂಯೆಸ್ ಕಡಲು ಕಾಲುವೆಯ ವಿಚಾರವಾಗಿ ನಾನಾ ವರ್ತಮಾನಗಳು ಹುಟ್ಟಿ ಹರಡುತ್ತಲಿವೆ. ಆದರೆ ಆ ಜಲಮಾರ್ಗವನ್ನು ಬಹಳ ಚೆನ್ನಾಗಿ ಸಂರಕ್ಷಣೆ ಮಾಡಿರುತ್ತಾರಾದಕಾರಣ ಆ ಮಾರ್ಗದಲ್ಲಿ ಹೋಗಿ ಬರುವ ಹಡಗುಗಳಿಗಾಗಲಿ ಪ್ರಯಾಣಿಕರಿಗಾಗಲಿ ಯಾವುದೊಂದು ಅಪಾಯವೂ ಸಂಭವಿಸೀತೆಂಬ ಭೀತಿ ಕಾಣುವುದಿಲ್ಲ. ಯೂರೋಪಿನಿಂದ ಹಿಂದುಸ್ಥಾನಕ್ಕೆ ಬಂದು ಹೋಗುವ ಮುಖ್ಯ ಮಾರ್ಗವಾದ ಈ ಸೂಯೆಸ್ ಕಾಲುವೆಯನ್ನು ಎಂದಿಗೂ ಕಟ್ಟಿಬಿಡುವುದಿಲ್ಲ. ಈ ಭಾಗದಲ್ಲಿ ಯಾರೂ ಯಾವ ವಿಧವಾದ ಸಂಶಯವನ್ನೂ ಪಡಬೇಕಾದದ್ದಿಲ್ಲ.

ಫ್ರಾನ್ಸಿನಲ್ಲಿ ಬ್ರಿಟಿಷ್ ಸೈನ್ಯಗಳ ಅಧಿಪತಿಯನ್ನು ಬದಲಾವಣೆ ಮಾಡಿದ್ದಾರೆ. ಸರ್ ಜಾನ್ ಫ್ರೆಂಚ್‌ರವರು ಕೆಲಸದಿಂದ ಬಿಟ್ಟುಕೊಡಬೇಕೆಂದು ಕೇಳಿಕೊಂಡರು. ಹದಿನಾರು ತಿಂಗಳಿಂದಲೂ ಅವರು ಸರ್ವ ಸೇನಾಪತಿಯಾಗಿದ್ದು ಬಹಳ ಕಷ್ಟ ಮನೋವ್ಯಥೆಗಳನ್ನು ಅನುಭವಿಸಿದ್ದಾರೆ. ಅವರಿಗೆ ವಿಶ್ರಾಂತಿ ದೊರಕಬೇಕಾದದ್ದೇ ಪರಮಾವಶ್ಯಕ. ಅವರ ಸ್ಥಾನಕ್ಕೆ ಈಗ ಜನರಲ್ ಹೇಗ್‌ರವರು ನೇಮಕವಾದರು. ಎಲ್ಲಾ ಯುದ್ಧ ಭೂಮಿಗಳಲ್ಲೂ ಮಿತ್ರಮಂಡಲಿಯ ಸೈನ್ಯಗಳನ್ನು ಮೇಲ್ವಿಚಾರಣೆ ಇಟ್ಟು ನಡಿಸುವ ಕಾರ್ಯವನ್ನು ಒಂದು ಯುದ್ಧದ ಪಂಚಾಯತಿಗೆ ವಹಿಸಿದ್ದಾರೆ. ಚಳಿಗಾಲದಲ್ಲಿ ಯುದ್ಧ ಕಾರ್ಯಗಳನ್ನು ನಡಿಸುವುದು ಸಾಧ್ಯವಲ್ಲವಾದಕಾರಣ ಇಂಥಾ ವಿರಾಮಕಾಲದಲ್ಲಿ ಈ ಏರ್ಪಾಟು ಬದಲಾವಣೆಯನ್ನು ಮಾಡುವುದಕ್ಕೆ ಅನುಕೂಲವಾಯಿತು. ಬ್ರಿಟನ್ನಿನಲ್ಲೂ ರಷ್ಯಾದಲ್ಲೂ ಲಕ್ಷಾಂತರ ಪುರುಷರನ್ನು ಸೈನ್ಯಕ್ಕೆ ಸೇರಿಸಿಕೊಂಡು ತರಬೇತು ಮಾಡುತ್ತಿದ್ದಾರೆ. ಚಳಿ ಮಳೆಗಾಲಗಳು ಕಳೆದ ಕೂಡಲೇ ಮಿತ್ರಮಂಡಲಿಯವರ ಅಗಾಧವಾದ ಸೈನ್ಯಗಳು ಶತ್ರುವಿನ ಮೇಲೆ ನುಗ್ಗುವುದಕ್ಕೆ ಸಿದ್ಧವಾಗುವವು. ಅದಕಾರಣ ಇನ್ನೂ ಒಂದೆರಡು ತಿಂಗಳು ಕಳೆಯುವ ತನಕ ಖಚಿತವಾದ ಕದನಗಳೇನೂ ಆಗುವಂತೆ ತೋರುವುದಿಲ್ಲ. ಆದರೆ ಬಗೆಬಗೆಯ ಬಾಜಾರಿ ವರ್ತಮಾನಗಳು ಹುಟ್ಟಿ ಹರಡುವುದಕ್ಕೆ ಒಳ್ಳೇ ಸಮಯವಾಗಿರುತ್ತದೆ. ಅಂಥವುಗಳಿಗೆ ಯಾರೂ ಕಿವಿಗೊಡಬಾರದೆಂದು ಸೂಚಿಸುವೆವು. ಮಿತ್ರಮಂಡಲಿಯವರು 1916 ನೇ ಇಸವಿಯಲ್ಲಿ ಖಚಿತವಾದ ಜಯಪ್ರದ ಉಂಟಾಗುವಂಥಾ ಮಹತ್ತರವಾದ ಸನ್ನಾಹ ಮತ್ತು ಕಾರ್ಯಗಳನ್ನು ನಡಿಸುವವರಾಗಿದ್ದಾರೆ.

ಯೇಸುವನ್ನು ನೋಡಬೇಕು.

ಸೂರ್ಯನ ಬೆಳಕೂ ಬಿಸಿಲೂ ಇಲ್ಲದೆ ಯಾವ ಪ್ರಾಣಿಗಳೂ ಸಸ್ಯಗಳೂ ಜೀವಿಸಲಾರವೆಂಬುದು ಅನುಮಾನಾಸ್ಪದವಿಲ್ಲದ ಮಾತಷ್ಟೆ. ಈ ವಿಷಯದಲ್ಲಿ ಯಾರಿಗಾದರೂ ಸಂದೇಹವಿದ್ದರೆ ಅವರು ಅದರ ನಿಜತ್ವವನ್ನು ಸುಲಭವಾಗಿ ತಾವೇ ಯಾವ ಕಷ್ಟವೂ ಖರ್ಚೂ ಇಲ್ಲದೆ ತಮ್ಮ ಅನುಮಾನವನ್ನು ನಿವರ್ತಿಮಾಡಿಕೊಳ್ಳಬಹುದು. ಸೂರ್ಯನ ಕಿರಣಗಳು ಸ್ವಲ್ಪವಾದರೂ ಪ್ರವೇಶಿಸಲಾರದ ಒಂದು ಸ್ಥಳವನ್ನು ಕಲ್ಪಿಸಿ ಅದರಲ್ಲಿ ಕೆಲವು ಸಸ್ಯಗಳನ್ನು ಕೆಲವು ದಿನಗಳವರೆಗೂ ಇಟ್ಟಿದ್ದರೆ ಅವು ರೋಗ ಹಿಡಿದು ಕೃಶವಾಗಿ ಬೆಳೆಯದೆ ಇರುವವು. ಅಥವಾ ಸತ್ತೇ ಹೋಗುವವು. ಅದರೆ ಅವುಗಳನ್ನಿಟ್ಟ ಸ್ಥಳದಲ್ಲಿ ಎಲ್ಲಿಯಾದರೂ ಅಲ್ಪ ಸ್ವಲ್ಪ ಸೂರ್ಯರಶ್ಮಿಯು ನುಗ್ಗಿ ಬರುವ ಸಂಧಿಯಿದ್ದರೆ ಆ ಸಸ್ಯಗಳು ತಮ್ಮಲ್ಲಿ ಸ್ವಭಾವಸಿದ್ಧವಾದ ಅಭಿಲಾಷೆಯನ್ನು ಪ್ರಕಟಿಸಿ ಆ ಸೂರ್ಯರಶ್ಮಿಯ ಕಡೆಗೆ ಆಕರ್ಷಣೆ ಹೊಂದಿ ಬೆಳೆಯುವವು. ಒಂದು ಕಾರ್ಗತ್ತಲಾದ ಮನೆಯಲ್ಲಿ ಕೆಲವು ಸಸ್ಯಗಳನ್ನಿಟ್ಟು ಅವುಗಳನ್ನು ಪರೀಕ್ಷೆಮಾಡಿದಾಗ ಆ ಮನೆಯ ಬಾಗಿಲಿಗೆ ಬೀಗ ಹಾಕುವದಕ್ಕೆ ಮಾಡಿದ ಬೀಗದ ಕೈಯ ರಂಧ್ರದಲ್ಲಿ ಬೆಳಕು ಬರುವಂತೆ ಆಸ್ಪದವಿದ್ದುದರಿಂದ ಆ ಸಸ್ಯವು ಬೆಳಕನ್ನೇ ಹುಡುಕುತ್ತ ಆ ರಂಧ್ರದಲ್ಲಿ ನಗುವದೋ ಎನ್ನುವ ಹಾಗೆ ಆ ರಂಧ್ರದ ಕಡೆಗೆ ನೆಟ್ಟಗೆ ಬೆಳೆದಿದ್ದಿತಂತೆ. ಸೂರ್ಯನ ಬೆಳಕು ಸಸ್ಯಗಳಿಗೆ ಎಷ್ಟು ಅವಶ್ಯವಾಗಿದೆ ನೋಡಿರಿ! ಸೂರ್ಯರಶ್ಮಿಯು ಸಸ್ಯಾದಿಗಳಿಗೆ ಮೊದಲ್ಗೊಂಡು ಹೇಗೆ ಸಕಲ ಪ್ರಾಣಿಗಳಿಗೆ ಅತ್ಯವಶ್ಯಕವಾಗಿದೆಯೋ ಹಾಗೆಯೇ ಸಕಲ ಮಾನವಜಾತಿಯವರಿಗೂ ದೇವರ ಜ್ಞಾನವೆಂಬ ಆತನ ಕಿರಣಗಳ ಪ್ರಕಾಶವು ಅತ್ಯಗತ್ಯವಾಗಿದೆ. ಮಾನವಜಾತಿಯು ನಿರ್ಮಾಣವಾದಂದಿನಿಂದ ಮೊದಲ್ಗೊಂಡು ಅದ್ಭುತ ಒಂದು ವಿಚಾರವು ನಡೆಯುತ್ತಲೇ ಇದೆ. ಅದಕ್ಕೆ ವಿಚ್ಛಿತ್ತಿ ಇಲ್ಲ. ಮತ್ತು ಅದು ಪ್ರಾಯಶಃ ಪ್ರಳಯ ಮಹಾ ಪ್ರಳಯಗಳ ವರೆಗೂ ನಡೆಯುತ್ತಲೇ ಇರುವದು. ಆ ವಿಚಾರವೇನೆಂದು ಕೇಳುವಿರೋ? ಈ ಜಗನ್ನಿರ್ಮಾಣಕನಾದ ದೇವರು ಯಾರು? ಆತನು ಎಲ್ಲಿದ್ದಾನೆ? ಹೇಗಿದ್ದಾನೆ? ಆತನಿಗೂ ನಮಗೂ ಏನು ಸಂಬಂಧವಿದೆ? ಆತನಿಗೆ ನಮ್ಮನ್ನು ಕುರಿತು ಪ್ರೀತಿಯುಂಟೋ? ಈ ವಿಚಾರಗಳಿಗೆ ಅಂತ್ಯವಿಲ್ಲ! ದೇವರನ್ನು ಸಹಸ್ರ ಸಹಸ್ರ ವರುಷಗಳಿಂದ ಹುಡುಕುತ್ತ ವಿಚಾರಿಸುತ್ತಲಿದ್ದರೂ ಆತನು ಯಾರ ದೃಷ್ಟಿಗೂ ಗೋಚರನಾಗಲಿಲ್ಲ. ಯಾರ ಜ್ಞಾನೇಂದ್ರಿಯಕ್ಕೂ ಆತನು ಸಿಕ್ಕಲಿಲ್ಲ. ಅದರೇನು? ಆತನನ್ನು ಹುಡುಕುವದು ಆತನನ್ನು ಕುರಿತು ವಿಚಾರಿಸುವದು ನಿಂತುಹೋಗಿದೆಯೋ? ಇಲ್ಲವಷ್ಟೆ. ಆತನನ್ನು ಹುಡುಕಿದ್ದು ಸಾಕು; ಆತನ ವಿಷಯ ನಾವು ನಮ್ಮ ಹಿತಾರ್ಥವಾಗಿ ವಿಚಾರಿಸಿದ್ದು ಸಾಕು ಎಂದು ಈ ಪ್ರಪಂಚದ ಯಾವ ಜನಾಂಗದವರಾದರೂ ಹೇಳಿ ಈ ವಿಚಾರದಲ್ಲಿ ಬೇಸರಪಟ್ಟು ತಟಸ್ಥರಾಗಿರುವರೇ? ಇಲ್ಲ. ಈ ವಿಚಾರದಲ್ಲಿ ಎಷ್ಟೇ ವಿಘ್ನಗಳು ಬರಲಿ ಅವುಗಳನ್ನು ಲಕ್ಷೀಕರಿಸದೆ ಈ ವಿಚಾರವನ್ನು ಮನುಷ್ಯರು ಮಾಡುತ್ತಲಿರುವರು ಏಕೆ? ಮೇಲಿನ ಪ್ರಶ್ನೆಗಳಿಗೆ ಸಮಂಜಸವಾಗಿ ಸಕಲರಿಗೂ ತೃಪ್ತಿಕರವಾದ ಉತ್ತರಗಳು ಯಾವಾಗ ಲಭ್ಯವಾಗುವವೋ? ಯಾರಿಂದ? ಹೇಗೆ? ಲಭ್ಯವಾಗುವವೋ ಅಲ್ಲಿಯವರೆಗೂ ಈ ವಿಚಾರವನ್ನು ಮನುಷ್ಯರು ಬಿಡದೆ ನಡಿಸುತ್ತಲೇ ಇರುವರು. ಇದಕ್ಕೆ ಕಾರಣವೇನು? ಇದಕ್ಕೆ ನಮಗೆ ತೋರುವ ಕಾರಣವೇನಂದರೆ—ಸಸ್ಯಗಳೂ ಪ್ರಾಣಿಗಳೂ ಸೂರ್ಯನಿಲ್ಲದೆ ಹೇಗೆ ಬದುಕಲಾರವೋ ಹಾಗೆಯೇ ದೇವರ ಜ್ಞಾನ, ಆತನ ಪ್ರೀತಿ, ಆತನ ಸಂಬಂಧವಿಲ್ಲದೆ ಮನುಷ್ಯನು ಬದುಕಲಾರನು.

ಆದರೆ ದೇವರ ಪ್ರಕಟಣೆಯೂ, ಪ್ರೀತಿಯೂ, ಸಂಬಂಧವೂ ಇಷ್ಟು ಅತ್ಯಗತ್ಯವಾಗಿದ್ದ ಪಕ್ಷದಲ್ಲಿ ದೇವರು ತನ್ನನ್ನು ಮನುಷ್ಯನಿಗೆ ಪ್ರಕಟಮಾಡದೆ ಇರುವನೇ! ದೇವರು ಅಂತಹ ನಿರ್ಲಕ್ಷ್ಯಗಾರನೂ ನಿಶ್ಚಿಂತನೂ ಆಗಿದ್ದರೆ ಮನುಷ್ಯರು ತನ್ನನ್ನು ಹುಡುಕಬೇಕೆಂಬ ಲವಲವಿಕೆಯನ್ನು ಅವರಲ್ಲಿ ಇಡುತ್ತಿರಲಿಲ್ಲ. ತನ್ನನ್ನು ಹುಡುಕುವವರಿಗೆ ಆತನು ಸಿಕ್ಕಿದ್ದಾನೆ. ತನ್ನನ್ನು ಕುರಿತು ತಿಳಿಯಲಪೇಕ್ಷಿಸುವವರಿಗೆ ತನ್ನನ್ನು ಪ್ರಕಟಮಾಡುತ್ತಲೇ ಇದ್ದಾನೆ. ಆತನನ್ನು ಮಾನವರಲ್ಲಿ ಯಾರೂ ಸಂಪೂರ್ಣವಾಗಿ ತಿಳಿಯಲಿಲ್ಲ. ನಿಜ. ಮಿತಬುದ್ಧಿಯುಳ್ಳ ಮನುಷ್ಯನು ಅಪರಿಮಿತನಾದ ಆತನನ್ನು ಸಂಪೂರ್ಣವಾಗಿ ತಿಳಿಯಲಾರನು. ಸಂಪೂರ್ಣವಾಗಿ ದೇವರನ್ನು ತಿಳಿಯುವದು ದೇವರಿಗೆ ಸಾಧ್ಯವೇ ಹೊರತು ಯಾವ ಸೃಷ್ಟಿಗೂ ಸಾಧ್ಯವಲ್ಲ. ಯಾವ ಸಸ್ಯಗಳು ಅಥವಾ ಯಾವ ಪ್ರಾಣಿಗಳು ಸೂರ್ಯನ ವಿಸ್ತಾರತ್ವವನ್ನೂ ಆಕಾರವನ್ನೂ ಪ್ರಭೆಯನ್ನೂ ಸಂಪೂರ್ಣವಾಗಿ ತಿಳಿದಿವೆ? ಯಾವ ಪ್ರಾಣಿಗಳೂ ತಿಳಿದಿಲ್ಲ. ಆದರೂ ಆತನ ಪ್ರಭೆಯೂ ಬೆಳಕೂ ಸಕಲ ಜೀವರಾಸಿಗಳಿಗೂ ದೊಡ್ಡ ಪ್ರಾಣವನ್ನು ಕಾಪಾಡುತ್ತಿವೆ.

ಗ್ರೀಕದೇಶದಲ್ಲಿ ಪೂರ್ವಕ್ಕೆ ಮಹಾ ವಿದ್ವಾಂಸರೂ ತತ್ವಜ್ಞಾನಿಗಳೂ ತಜ್ಞರೂ ಇದ್ದರು. ಅವರು ದೇವರನ್ನು ಕುರಿತು ವಿಚಾರಿಸಿ ನಮಗೆ ತಿಳಿದು ಬಂದಷ್ಟು ಆತನನ್ನು ಕುರಿತು ಶೋಧಿಸಿದರು. ಮತ್ತು ತಮ್ಮ ಗೋಷ್ಟಿಗೆ ಬಂದ ನಾನಾ ದೇವಾನು ದೇವತೆಗಳನ್ನು ಪೂಜಿಸಿದರು. ಮತ್ತು ಇತರ ದೇಶದವರು ದೇವರನ್ನು ಕುರಿತು ಏನು ಬಲ್ಲರೆಂದು ತಿಳಿಯುವದಕ್ಕೆ ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿ ಅವರಲ್ಲಿ ಕೆಲವರು ಯೆಹೂದ್ಯರು ವಾಸವಾಗಿದ್ದ ಪಾಲಸ್ತೀನ್ ದೇಶಕ್ಕೆ ಬಂದು ಅಲ್ಲಿ ನಡೆಯುವ ಏಕದೇವಾರಾಧನೆಯನ್ನು ನೋಡಿ ಸದ್ಯಕ್ಕೆ ಇದೇ ಸರ್ವಸಮ್ಮತವಾದ ಮತವೆಂದು ನಂಬಿ ಆ ಮತಾವಲಂಬನಮಾಡಿದರು. ಆ ಮತವನ್ನು ಹಿಡಿದ ಯೆಹೂದರು ವಿಗ್ರಹಗಳನ್ನು ಪ್ರತಿಷ್ಠಿಸಿ ಪೂಜೆಮಾಡದೆ ಅದೃಶ್ಯನಾದ ದೇವರನ್ನು ಆತ್ಮದಿಂದ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುತ್ತಿದ್ದರು. ಈ ಗ್ರೀಕರು ಅದರಲ್ಲೂ ತೃಪ್ತರಾಗದೆ ದೇವರು ತನ್ನನ್ನು ಇನ್ನೂ ವಿಸ್ತಾರವಾದ ತನ್ನ ಪ್ರೀತಿಯನ್ನು ಪ್ರಕಟಮಾಡುವದಿಲ್ಲವೋ ಎಂದು ತಿಳಿಯುವದಕ್ಕೆ ಅಪೇಕ್ಷಿಸಿ ಆ ಕಾಲದಲ್ಲಿ ಅವತಾರವೆತ್ತಿ ಲೋಕದಲ್ಲಿ ಸಂಚಾರಮಾಡುತ್ತಿದ್ದ ದೇವರಾದ ಯೇಸು ಕ್ರಿಸ್ತನು ಮಾಡಿದ ಮಹತ್ತುಗಳನ್ನೂ ಆತನ ದಿವ್ಯೋಪದೇಶವನ್ನೂ ಕೇಳಿ ಆತನನ್ನು ನೋಡಬೇಕೆಂಬ ಕಾಂಕ್ಷೆಯಿಂದ ಆತನ ಶಿಷ್ಯನನ್ನು ಕಂಡು—ಅಯ್ಯಾ, ನಾವು ಯೇಸುವನ್ನು ನೋಡಬೇಕೆಂದು ಪ್ರಾರ್ಥಿಸಿದರು.

ಈ ಯೇಸು ಯಾರು? ಈತನು ದೇವರೋ? ನಮ್ಮ ಹಿಂದಿನ ಸಹೋದರರು ಆತನನ್ನು ಕುರಿತು ವಿಚಾರಿಸುವದು ಅತ್ಯಗತ್ಯವಾಗಿದೆ. ಇದು ಆತನು ಅವತಾರವೆತ್ತಿ ಈ ಲೋಕಕ್ಕೆ ನರಮನುಷ್ಯನಾಗಿ ಬಂದ ಉತ್ಸವವನ್ನು ಕೈಕೊಳ್ಳುವ ಕಾಲವಾಗಿದೆ. ಪ್ರಪಂಚದ ಸಕಲ ಜನಾಂಗದವರ ಮುಂದೆ ಈಗ ಒಂದು ವಿಷಯವು ಅತಿ ವಿಶೇಷವಾಗಿದೆ. ಅದೇನಂದರೆ—ಯೇಸು ಯಾರು? ಆತನು ಮನುಷ್ಯರಿಗೆ ತನ್ನನ್ನು ಪ್ರಕಟಮಾಡುವದಕ್ಕಾಗಿ ಈ ಲೋಕಕ್ಕೆ ನರಾವತಾರವೆತ್ತಿ ಬಂದ ದೇವರೋ? ಮತ್ತು ಸಕಲ ಶಾಸ್ತ್ರಜ್ಞರೂ ಸತ್ಯಶೋಧಕರೂ ತತ್ವಜ್ಞಾನಿಗಳೂ ಈ ಪ್ರಶ್ನೆಯನ್ನು ವಿಚಾರಿಸಿ ಯೇಸು ಕ್ರಿಸ್ತನ ಹತ್ತಿರ ಬರುತ್ತಿದ್ದಾರೆ. ಅವರಿಗೆ ಆತನು ಪಾಪಪರಿಹಾರವನ್ನೂ ಮನಶ್ಶುದ್ಧಿಯನ್ನೂ ಸಾಕ್ಷಾದ್ದೇವರ ಸಂಗದ ಅನ್ಯೋನ್ಯತೆಯನ್ನೂ ದಯಪಾಲಿಸುತ್ತಿದ್ದಾನೆ. ವಾಚಕರೇ, ನಿಮಗೆ ಈ ಜಗದ್ರಕ್ಷಕನ ದಯಬೇಡವೋ?

ಯುದ್ಧದ ಸಮಾಚಾರಗಳು.

ಬ್ರಿಟಿಷ್ ಸರ್ವಸೇನಾಪತಿಯ ಬದಲಾವಣೆ.

ಈ ವಾರ ಕದನಗಳು ನಡೆದ ಸುದ್ದಿಗಳೇ ಬಹಳ ಕೊಂಚ; ಆದರೂ ಕೆಲವು ವಿಶೇಷತರವಾದ ಬದಲಾವಣೆಗಳು ನಡೆದಿರುತ್ತವೆ. ಕಳೆದ ವಾರ ಬ್ರಿಟನ್, ಫ್ರಾನ್ಸ್, ಬೆಲ್ಜಿಯಮ್, ಇಟಲಿ, ರಷ್ಯಾ, ಸರ್ಬಿಯಾ, ಜಪಾನ್ ರಾಜ್ಯಗಳ ಪ್ರತಿನಿಧಿಗಳು ಸೇರಿದ ಒಂದು ಯುದ್ಧದ ಸಭೆಯನ್ನು ಕಲ್ಪಿಸಿದರೆಂದು ತಿಳಿದಿದೆ. ಈ ಸಭೆಯಲ್ಲಿ ಫ್ರೆಂಚ್ ದಳಪತಿಯಾಗಿದ್ದ ಜನರಲ್ ಜೋಫ್ರೆಯವರು ಪ್ರೆಸಿಡೆಂಟರಾಗಿದ್ದಾರೆ. ಫ್ರೆಂಚ್ ಸೈನ್ಯಕ್ಕೆ ಬೇರೊಬ್ಬ ದಳಪತಿಯನ್ನು ನೇಮಕ ಮಾಡಿದರು. ಕಳೆದ ಹದಿನಾರು ತಿಂಗಳಿಂದ ಬಹಳ ಪರಾಕ್ರಮದಿಂದಲೂ ವಿವೇಕಪೂರ್ವಕವಾಗಿಯೂ ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ ಬ್ರಿಟಿಷ್ ಸೈನ್ಯಗಳನ್ನು ನಡಿಸುತ್ತಾ ಬಂದಿರುವ ಜನರಲ್ ಫ್ರೆಂಚ್‌ರವರು ತಮ್ಮನ್ನು ಆ ಕೆಲಸದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡದ್ದರಿಂದ ಬ್ರಿಟಿಷ್ ಗವರ್ನಮೆಂಟಿನವರು ಅವರಿಗೆ ಬಿಡುಗಡೆಯಿತ್ತು ಅವರ ಸ್ಥಾನಕ್ಕೆ ಸರ್ ಡಗ್ಲಸ್ ಹೇಗ್ ಎಂಬವರನ್ನು ನೇಮಕ ಮಾಡಿದರು. ಜನರಲ್ ಫ್ರೆಂಚ್‌ರವರು ಮಾಡಿದ ಘನತರವಾದ ಸರ್ವೀಸಿಗಾಗಿ ಅವರಿಗೆ ವೈಕೌಂಟ್ ಎಂಬ ಬಿರುದು ಕೊಟ್ಟದ್ದಲ್ಲದೆ ಬ್ರಿಟನ್‌ನಲ್ಲಿರುವ ಸರ್ವ ಸೈನ್ಯಗಳ ದಳಪತಿ ಎಂಬ ಅತ್ಯಂತ ಪ್ರಾಮುಖ್ಯವಾದ ಅಧಿಕಾರವನ್ನು ದಯಪಾಲಿಸಿದರು. ಶೀತಕಾಲವು ಕಳೆದ ಕೂಡಲೇ ಖಂಡಿತವಾದ ಮತ್ತು ಕಡೆಯ ಜಯಪ್ರದವನ್ನು ತರುವಂಥಾ ದೊಡ್ಡ ಯುದ್ಧಕಾರ್ಯಗಳನ್ನು ನಡಿಸುವುದಕ್ಕೋಸ್ಕರ ಸೈನ್ಯಗಳನ್ನೆಲ್ಲಾ ಚೆನ್ನಾಗಿಯೂ ಸಂಪೂರ್ಣವಾಗಿಯೂ ಸಿದ್ಧಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ಈ ರೀತಿ ಬದಲಾವಣೆಗಳನ್ನು ಮಾಡಬೇಕಾಯಿತು.

ಸರ್ ಜಾನ್ ಫ್ರೆಂಚ್ ರವರು ಫ್ರಾನ್ಸಿನಿಂದ ಹೊರಟುಬರುವಾಗ್ಗೆ ಅಲ್ಲಿ ತಮ್ಮ ಕೈಕೆಳಗಿದ್ದ ಬ್ರಿಟಿಷ್ ಸೈನಿಕರಿಗೆ ಕಡೆಯ ಶುಭವಾದನವನ್ನು ತಿಳಿಸಿದ್ದಾರೆ. ಅದೇನೆಂದರೆ—ಜಯಪ್ರದವು ನಮ್ಮ ಕೈವಶವಾಗುವ ತನಕ ನಾನು ನಿಮ್ಮ ಕೂಡ ಇರಲಾರದಂತಾಯಿತಲ್ಲಾ ಎಂದು ವಿಷಾದಪಡುತ್ತೇನೆ. ಆದಾಗ್ಯೂ ಈ ಯುದ್ಧದಲ್ಲಿ ಮಹಿಮಾಯುಕ್ತವಾದ ಜಯಪ್ರದವು ನಮಗೇ ಅತಿ ಶೀಘ್ರದಲ್ಲೇ ಲಭ್ಯವಾದೀತೆಂದು ನಾನು ಖಚಿತವಾಗಿ ತಿಳಿದುಕೊಂಡಿರುವೆನು. ನಿಲುಗಡೆ ಇಲ್ಲದೆ ಯುದ್ಧಗಳು ನಡೆಯುತ್ತಾ ಬಂದಿರುವ ಈ ಹದಿನಾರು ತಿಂಗಳಿಂದಲೂ ಎಷ್ಟೋ ಪರಾಕ್ರಮಯುಕ್ತವಾದ ಬ್ರಿಟಿಷ್ ಸೈನ್ಯಗಳ ಮೇಲೆ ನಾನು ಅಧಿಕಾರಿಯಾಗಿದ್ದು ನಿಮ್ಮನ್ನು ನಡಿಸುತ್ತಾ ಬಂದ ವಿಚಾರವು ನನ್ನ ಜೀವಮಾನದಲ್ಲೆಲ್ಲಾ ಅತ್ಯಂತ ಮಹಿಮಾಸ್ಪದವಾದದ್ದೆಂದು ಎಣಿಸಿಕೊಂಡು ಬರುವೆನು. ಯುದ್ಧಭೂಮಿಯಲ್ಲಿ ಅಂಗಾಂಗಗಳನ್ನು ಕಳೆದುಕೊಂಡ ಬ್ರಿಟಿಷ್ ಸೈನಿಕರ ವಿಷಯದಲ್ಲಿ ನಾನು ತುಂಬಾ ಸಂತಾಪಪಡುತ್ತೇನೆ. ಮತ್ತು ಅನೇಕ ಬ್ರಿಟಿಷ್ ಯುದ್ಧಭಟರು ತಮ್ಮ ಜನ್ಮಭೂಮಿಯನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ ಎಷ್ಟೋ ಪರಾಕ್ರಮದಿಂದ ಕದನಗಳನ್ನು ನಡಿಸಿ ತಮ್ಮ ಪ್ರಾಣಗಳನ್ನೇ ತೆತ್ತುಬಿಟ್ಟರಲ್ಲಾ ಎಂದು ದುಃಖಪಡುವೆನು.

ಪಶ್ಚಿಮ ರಣರಂಗದಲ್ಲಿ.

ಫ್ರಾನ್ಸ್ ಮತ್ತು ಬೆಲ್ಜಿಯಮ್ ಯುದ್ಧಸಾಲುಗಳ ಪಾರ್ಶ್ವಗಳಲ್ಲಿ ಎರಡು ವಾರದ ಹಿಂದೆ ... ನಂತೆ ಫಿರಂಗಿಗಳ ಹೋರಾಟಗಳೂ, ಅಂತರಿಕ್ಷದಲ್ಲಿ ವಿಮಾನಯಂತ್ರಗಳ ಹೊಡೆ

ಸಿದವು. ಒಂದು ಠಾಣ್ಯದಲ್ಲಿ ಜರ್ಮನಿಯವರು ಒಂದು ಭಾರೀ ವನ್ನು ಮದ್ದಿಟ್ಟು ಹಾರಿಸಿದರು. ಅದು ಹಾರಿದ ಬಳಿಯಲ್ಲಿ ಮಣ್ಣು ಹಾರಿ ಹಳ್ಳವಾದದ್ದರಿಂದ ಬ್ರಿಟಿಷ್ ಸೈನ್ಯಗಳು ಹೋಗಿ ಅದರ ಕೊಂಡು ಶತ್ರುವು ಮುಂದರಿಸಿ ನುಗ್ಗಿ ಬಾರದಂತೆ ತಡೆಯನ್ನು ಕಲ್ಪಿಸಿ ಸಮುದ್ರದ ಮೇಲೆ ಅಂತರಿಕ್ಷದಲ್ಲಿ ಬ್ರಿಟಿಷ್ ಮತ್ತು ಜರ್ಮನಿ ಯಂತ್ರಗಳು ಸಂಧಿಸಿ ಹೋರಾಟವಾಯಿತು. ಜರ್ಮನಿಯ ವಿಮಾನ ಅಂತರಿಕ್ಷದಿಂದ ಬಿದ್ದು ಬೆಂಕಿ ಹತ್ತಿಕೊಂಡು ಸಮುದ್ರದ ನೀರನ್ನು ತಗಲಿದ ಕೂಡಲೇ ಮಹಾ ಶಬ್ದದೊಡನೆ ಹಾರಿ ಒಡೆದುಹೋಯಿತು. ಅದ ವರನ್ನು ಬದುಕಿಸಬೇಕೆಂದು ಹುಡುಕಿದಾಗ್ಯೂ ಸಿಕ್ಕಲಿಲ್ಲ. ಬ್ರಿಟಿಷರ ಯಂತ್ರವು ಸಮುದ್ರಕ್ಕೆ ಬಿದ್ದುಕೊಂಡಿತು. ಆದರೆ ಅದರಲ್ಲಿದ್ದವ ರನ್ನು ಬದುಕಿಸಿದರು.

ಒಂದು ಠಾಣ್ಯದಲ್ಲಿ ಮಿತ್ರಮಂಡಲಿಯವರು ಜರ್ಮನಿಯವರ ಕೆಲವು ನುಗ್ಗಿ ಒಳಗಿದ್ದ ಶತ್ರು ಸೈನಿಕರ ಮೇಲೆ ಕಡಿದಾಡಿ 71 ಮಂದಿ ಕೊಂಡುಹೋಕಿದರು. ತಮ್ಮ ಕಡೆ ಬಹಳ ಸ್ವಲ್ಪವೇ ನಷ್ಟವಾಯಿತು ಸಂಖ್ಯೆ ಅಸಂಖ್ಯಾತವಾಗುತ್ತಲಿದೆ. ಹತ್ತು ಮೈಲಿ ಉದ್ದವಿರುವ ಸಾಲಿನಲ್ಲಿ 234 ಮೈಲಿ ದೂರದಷ್ಟು ಕಂದಕಗಳನ್ನು ತೋಡಿಕೊಂಡಿ ಒಂದು ಮೈಲಿ ಪ್ರದೇಶದಲ್ಲಿ ಹತ್ತು ಮೈಲಿಗಳಷ್ಟು ಕಂದಕಗಳಿರುತ್ತವೆ. ಮಗಾರಿ ನಡೆಯುವುದಕ್ಕೆ ಎಷ್ಟು ಶ್ರಮವೂ ಜನಗಳೂ ಬೇಕಾಗು ತಿಳಿಯಲಾಗದು.

ಯವರು ಹೊಸದಾಗಿ ಸೈನ್ಯಗಳನ್ನು ಕೂಡಿಸಿ ತರುತ್ತಾರೆಂದೂ, ತಿಳಿಸಿ ಅವರಿಗೆ ಜೊತೆಮಾಡಿಕೊಳ್ಳುತ್ತಿದ್ದಾರೆಂದೂ, ಅಷ್ಟರಲ್ಲೇ ಯಮ್‌ನಲ್ಲಿ ಮಿತ್ರಮಂಡಲಿಯವರ ಮೇಲೆ ನುಗ್ಗಿ ಪರಾಕ್ರಮದಿಂದ ಯುದ್ಧ ಮಾಡುತ್ತಾರೆಂದೂ ಬಗೆಬಗೆಯ ವರ್ತಮಾನ ಹುಟ್ಟಿದೆ. ಒಬ್ಬ ಶಿಪಾಯಿಯು ಬೆಲ್ಜಿಯಮ್‌ನಲ್ಲಿ ಅವರ ಸೈನ್ಯದಿಂದ ತಪ್ಪಿಸಿ ಬಂದಿದ್ದಾನೆ. ಅವನ ಪ್ರಶೋಧನೆ ಮಾಡಿದಾಗ ಒಂದು ಪ್ರಸಿದ್ಧ ಪತ್ರಿಕೆ ಸಿಕ್ಕಿತು. ಅದನ್ನು ಉರ್ಟೆಂಬರ್ಗಿನ ಪ್ರಿನ್ಸ್ ಆಲ್‌ಬ್ರೆಕ್ಟ್‌ರವರು ಬರೆ ದಿದ್ದರು. "ನಮ್ಮ ಸಾರ್ವಭೌಮರವರು (ಕೈಸರ್ ಚಕ್ರವರ್ತಿ) ಇನ್ನು ಕ್ಕಾಗಿ ನಮ್ಮ ಬಳಿಗೆ ಬಂದು, ತೀವರಲ್ಲಾ ಪರಾಕ್ರಮದಿಂದ ಕೆಂದು ನಮಗೆ ಉತ್ತೇಜನ ಕೊಡುತ್ತಾರೆ" ಎಂದು ಬರೆದಿತ್ತಂತೆ.

ಪೂರ್ವ ರಣರಂಗದಲ್ಲಿ.

ಯುದ್ಧಭೂಮಿಯಿಂದ ಈ ವಾರ ಕದನಗಳು ನಡೆದ ಸುದ್ದಿ ಬಂದಿ ಬಹಳ ಸ್ವಲ್ಪ. ಒಂದು ಕಡೆ ಜರ್ಮನಿಯವರು ಚೀಗಾಲವನ್ನು ಕಳೆ ದುಕೊಳ್ಳಬಾರದೆಂದು ಮುಂಭಾಗದಲ್ಲಿದ್ದ ಕೆಲವು ಕಂದಕಗಳನ್ನು ಬಿಟ್ಟು ಹೋದರು. ಇನ್ನೊಂದು ಕಡೆ ರಷ್ಯದವರು ನುಗ್ಗಿ ಹೋಗಿ ಜರ್ಮ ನ್ನು ಓಡಿಸಿ ಒಂದು ಗ್ರಾಮವನ್ನು ಮುತ್ತಿ ಬಿಡಿಸಿಕೊಂಡರು. ಈ ಗ್ರಾಮ ವನ್ನು ಜರ್ಮನಿಯವರು ಕಳೆದ ಅಕ್ಟೋಬರಿನಲ್ಲಿ ಗೆದ್ದು ಆಕ್ರಮಿಸಿಕೊಂಡಿದ್ದರು. ಸ್ಥಾನಗಳಲ್ಲಿ ಕೆಲವು ಸಣ್ಣ ಪುಟ್ಟ ಕದನಗಳು ನಡೆದು ರಷ್ಯಾದವ ಕೂಲವಾಗಿರುತ್ತದೆ. ಈ ಯುದ್ಧಭೂಮಿಯಲ್ಲೂ ಜರ್ಮನಿಯವರು ಯುದ್ಧಮಾಡಬೇಕೆಂದು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ ಎಂಬದಾಗಿ ವರ್ತ ಮಾನವಿದೆ.

ಆಸ್ಟ್ರಿಯಾದವರ ಕಡೆ ಸೈನ್ಯಗಳು ಬಹಳ ಕಡಮೆಯಾದಂತೆ ಕಾಣುತ್ತದೆ. ತಮ್ಮ ಪ್ರಜೆಗಳಲ್ಲಿ 17 ವಯಸ್ಸಿನ ಹುಡುಗರನ್ನೂ ಸೈನ್ಯಕ್ಕೆ ಸೇರಿಕೊಳ್ಳಿ ಎಂದು ಕರೆಯುತ್ತಿದ್ದಾರಂತೆ.

ಇಟಲಿ.

ಈ ಯುದ್ಧಭೂಮಿಯಿಂದಲೂ ವಿಶೇಷ ವರ್ತಮಾನಗಳೇನೂ ಬಂದಿರುವು ದಿಲ್ಲ. ಕೆಲವು ಕಡೆ ಪಿರಂಗಿಗಳ ಹಾರಾಟವೂ, ಕಂದಕಗಳ ಮೇಲೆ ನುಗ್ಗುವುದೂ ಈ ಕಾರ್ಯಗಳು ನಡೆದಿರುವುವು. ಇಟಲಿಯವರನ್ನು ಮುಂದಕ್ಕೆ ನುಗ್ಗಿ ಬರದಂತೆ ತಡೆಯಬೇಕೆಂದು ಆಸ್ಟ್ರಿಯಾದವರು ಎಷ್ಟೇ ಸಾಹಸ ಪಡುತ್ತಿ ದ್ದಾಗ್ಯೂ ಅವರ ಸಾಹಸವು ವ್ಯರ್ಥವಾಗಿರುವುದು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಈ ವಾರ ಬಂದಿರುವ ಅನೇಕ ತಂತೀ ವರ್ತಮಾನಗಳು ಬಾಲ್ಕನ್ ಸಂಸ್ಥಾ ನಗಳಲ್ಲಿ ನಡೆಯುವ ಯುದ್ಧಕಾರ್ಯಗಳಿಗೆ ಸಂಬಂಧಪಟ್ಟವುಗಳಾಗಿವೆ. ಮಿತ್ರ ಮಂಡಲಿಯವರು ಸರ್ಬಿಯಾದವರೂ ಬಲ್ಗೇರಿಯಾವನ್ನೂ ಸರ್ಬಿಯಾವನ್ನೂ ಬಿಟ್ಟು ಹೊರಟುಹೋಗಿದಾರೆನ್ನುವುದು ಸ್ಪಷ್ಟವಾಯಿತು. ಜರ್ಮನಿ ಯವರು ಆಸ್ಟ್ರಿಯಾದವರೂ, ಬಲ್ಗೇರಿಯಾದವರೂ ಅಪಾರ ಸೈನ್ಯಗಳನ್ನು ಕಳುಹಿಸಿಟ್ಟಿದ್ದರಿಂದ ಮಿತ್ರಮಂಡಲಿಯವರು ಅವರ ನುಗ್ಗಾಟವನ್ನು ತಡೆಯಲಾರದೆ ಹೋದರು. ಅಲ್ಲಿ ಮಹಾ ಪರಾಕ್ರಮಯುಕ್ತವಾದ ಘೋರ ಯುದ್ಧ ನಡೆಯಿತು. ಬಲ್ಗೇರಿಯಾದವರಲ್ಲಿ ಅನೇಕರು ನಷ್ಟಪಟ್ಟರು. ಈಗ ಈ ಸೈನ್ಯಗಳಲ್ಲಿ ಒಂದು ಭಾಗ ಅಲ್ಬೇನಿಯಾ ದೇಶದಲ್ಲೂ, ಇನ್ನೊಂದು ಮಾಂಟಿನೀಗ್ರೋ ರಾಜ್ಯದಲ್ಲೂ ಹೋಗಿ ಸೇರಿಕೊಂಡಿವೆ. ಈ ಸೈನ್ಯಗಳು 2,00,00 ಮಂದಿ ಇರುವರು. ಸರ್ಬಿಯಾ ದೇಶದ ಅನೇಕಾನೇಕ ಸಭ್ಯ ಪ್ರಜೆಗಳು ತಮ್ಮ ಮನೆಗಳನ್ನು ತ್ಯಜಿಸಿ ಅಲ್ಬೇನಿಯಾ ದೇಶಕ್ಕೆ ಹೋಗಿ ಸೇರಿಕೊಂಡಿ ದ್ದಾರೆ. ಅಲ್ಬೇನಿಯಾ ಸೀಮೆಯು ಇಟಲಿಗೆ ಎದುರಿನಲ್ಲಿದೆ. ಇಟಲಿಯವರು ಅವರ ಸಹಾಯಕ್ಕಾಗಿ 80,000 ಸೈನ್ಯಗಳನ್ನೂ ಮದ್ದುಗುಂಡನ್ನೂ ಸಾಮಗ್ರಿ ಗಳನ್ನೂ ಕಳುಹಿಸುತ್ತಾರೆಂದು ಹೇಳಲಾಗಿದೆ.

ಮಿತ್ರಮಂಡಲಿಯ ಸೈನ್ಯಗಳೂ, ಸರ್ಬಿಯಾದ ಕೆಲವು ಸೈನ್ಯಗಳೂ ಗ್ರೀಸಿಗೆ ಸೇರಿದ ಸಲೋನಿಕ ಕೋಟೆಯ ತೀರಪಟ್ಟಣವನ್ನು ಸೇರಿರುವುವು. ಅವರೀಗ ಈ ಕೋಟೆಯನ್ನು ಇನ್ನೂ ಬಲಪಡಿಸಿಕೊಳ್ಳುತ್ತ ಹೊಸ ಸೈನ್ಯಗಳನ್ನು ತಂದಿಳಿಸುತ್ತಲೂ, ಶತ್ರುವಿನ ಮೇಲೆ ನುಗ್ಗುವುದಕ್ಕೆ ಸಿದ್ಧಮಾಡಿಕೊಳ್ಳುತ್ತಲೂ ಇದ್ದಾರೆ. ಗ್ರೀಸ್ ಸರ್ಕಾರದವರು ಸರ್ಬಿಯಾದ ವರಾಗಲಿ, ಮಿತ್ರಮಂಡಲಿಯವರ ಮೇಲಾಗಲಿ ಯುದ್ಧಕಾರ್ಯಗಳನ್ನು ನಡೆಸಲು, ಮಿತ್ರಮಂಡಲಿಯವರ ಸೈನ್ಯಗಳಿಗೆ ವಿಸ್ತಾರವಾದ ಪ್ರದೇಶವನ್ನು ಕೊಡಲು ಗ್ರೀಸ್ ಸರ್ಕಾರದವರು ಸಲೋನಿಕದಲ್ಲಿದ್ದ ತಮ್ಮ ಸೈನ್ಯವನ್ನು ಅಲ್ಲಿಂದ ತೆರಳಿಸಿಕೊಳ್ಳುತ್ತಿದ್ದಾರೆ. ಬಲ್ಗೇರಿಯಾದವರೂ, ಜರ್ಮನಿ ಯವರೂ, ಆಸ್ಟ್ರಿಯಾದವರೂ ಈಗ ಗ್ರೀಸ್ ದೇಶವನ್ನು ಪ್ರವೇಶಮಾಡು ವರೋ? ಗ್ರೀಸ್ ರಾಜ್ಯವು ಅವರ ಮೇಲೆ ಯುದ್ಧಕ್ಕೆ ನಿಲ್ಲುವುದೇ? ಈ ವಿಷಯವಾಗಿ ಈಗ ಮುಖ್ಯ ವಿಚಾರವಾಗಿಲ್ಲ ಬಗೆಬಗೆಯ ವರ್ತಮಾನಗಳು ಬಂದಿರುವುವು. ಇವುಗಳನ್ನೆಲ್ಲಾ ನಂಬುವುದಕ್ಕಿಂತ ಉಚಿತವಾದ ಕಾಲವನ್ನು ಕಾದುನೋಡುವುದು ಒಳ್ಳೇದು.

ಮಿತ್ರಮಂಡಲಿಯವರು ಹಿಮ್ಮೆಟ್ಟಿ ಬರುವ ಸಂದರ್ಭದಲ್ಲಿ ಅವರು ಬಹಳ ನಷ್ಟ ಪಡಬೇಕಾಯಿತು. ಆದರೂ ಬಹಳ ನಷ್ಟವೇನೂ ಆಗಲಿಲ್ಲ. ಇಂಗ್ಲೀಷರಲ್ಲಿ 800 ಮಂದಿ ನಷ್ಟಪಟ್ಟರೆಂದೂ, ಈ ಪೈಕಿ ಗಾಯಪಟ್ಟ ಮಂದಿ ಎಂದೂ, ಫ್ರೆಂಚರ ಕಡೆ 3,000 ಸೈನ್ಯ ನಷ್ಟವಾದರೆಂದೂ ಈ ಸಂಖ್ಯೆಗಳನ್ನು ನೋಡುವಾಗ ವಿಶೇಷ ಸೈನ್ಯಗಳು ಯುದ್ಧಕ್ಕೆ ಬರಲು ಅನುಕೂಲವಾಗುತ್ತದೆ. ಮಿತ್ರಮಂಡಲಿಯವರು ಹಿಮ್ಮೆಟ್ಟಿ ದಾಗ ಆಹಾರ ಪದಾರ್ಥಗಳನ್ನೂ, ಗೋಣಿಚೀಲಗಳನ್ನೂ ಬಿಡದೆ ಮುಂದಕ್ಕೆ ಸಾಗಿಸಿಕೊಂಡು ಹೋದರು.

ಈಗ ಬ್ರಿಟಿಷ್ ಸೈನ್ಯಗಳು ಹೊಸದಾಗಿ ಹಡಗುಗಳಲ್ಲಿ ಬಂದು ಸಲೋನಿಕದಲ್ಲಿ ಇಳಿಯುತ್ತಲಿವೆ. ಇದರಿಂದ ಮಿತ್ರಮಂಡಲಿಯವರು ತಮ್ಮ ಸೈನ್ಯಗಳನ್ನು ಬಲಪಡಿಸಿಕೊಳ್ಳುತ್ತಿದ್ದಾರೆಂದು ಗೊತ್ತಾಗುತ್ತದೆ.

ಗ್ರೀಸ್ ರಾಜನಿಗೆ ಇನ್‌ಫ್ಲುಯೆಂಜಾ ಎಂಬ ವ್ಯಾಧಿ ಕಾಣಿಸಿಕೊಂಡಿದೆ. ಗ್ರೀಸಿನ ಮಾಜಿ ಮಂತ್ರಿಯಾದ ಎಂ. ವೆನಿಜೇಲೋಸ್—ಗ್ರೀಸ್ ರಾಜ್ಯವು ಸರ್ಬಿ ಯಾವಿಗೆ ಸಹಾಯಮಾಡದೆ ಬಿಡಬಾರದಾಗಿತ್ತೆಂದೂ, ಸರ್ಕಾರದವರು ಪ್ರಜೆಗಳಿಗೆ ಸಮ್ಮತವಾದ ರೀತಿಯಲ್ಲಿ ಕಾರ್ಯಗಳನ್ನು ನಡೆಸುತ್ತಾ ಇಲ್ಲವೆಂದೂ ಹೇಳಿರು ತ್ತಾನೆ. ಗ್ರೀಸ್ ಸರ್ಕಾರದವರು ಈ ಯುದ್ಧದಲ್ಲಿ ತಾವು ಸೇರಲೇ ಬಾರದೆಂದು ನಿರ್ಧಯಿಸಿಕೊಂಡಿರುವಂತೆ ಕಾಣುತ್ತದೆ. ಅವರು ಮಿತ್ರಮಂಡಲಿಯವರಿಗೆ ಬೆಂಬಲ ಕೊಡುವುದಿಲ್ಲ; ಆದಾಗ್ಯೂ ಮಿತ್ರಮಂಡಲಿಯವರ ಕಾರ್ಯಗಳಿಗೆ ಅವರು ಅಡ್ಡಿ ಮಾಡುವವರಾಗಿಲ್ಲ.

ಸುಮಾರು ಒಂದುನೂರು ಜನ ನರ್ಸ್ ಎಂಬ ಸೇವಾ ಸ್ತ್ರೀಯರು ಸರ್ಬಿ ಯಾದಿಂದ ಸ್ಕುಟಾರಿ ಪಟ್ಟಣಕ್ಕೆ ನಡೆದುಬಂದರೆಂದು ತಿಳಿಸಲ್ಪಟ್ಟಿದೆ. ಅವರು ಈ ಪ್ರಯಾಣದಲ್ಲಿ ತುಂಬ ಶ್ರಮಪಟ್ಟರಬೇಕೆನ್ನುವುದಕ್ಕೆ ಸಂದೇಹವಿಲ್ಲ.

ಟರ್ಕಿಯಲ್ಲಿ.

ಗಲ್ಲಿಪೋಲಿ ಅರ್ಧ ದ್ವೀಪದಲ್ಲಿ ಪಿರಂಗಿಗಳ ಹಾರಾಟವೂ, ಸುರಂಗಗಳ ಹಾರಾಟವೂ ಕೆಲವು ಮಟ್ಟಿಗೆ ನಡೆಯಿತು. ಈ ಸಲ ಛಳಿಗಾಲವು ಅಲ್ಲಿ ಬೇಗನೆ ಪ್ರಾರಂಭವಾಗಿದೆ. ಪ್ರವಾಹ ಬಂದು ಟರ್ಕಿಯವರ ಕಂದಕಗಳಿಂದ ಟರ್ಕಿ ಹೆಣ ಗಳು ಅದರಲ್ಲಿ ಕೊಚ್ಚಲ್ಪಟ್ಟು ಮಿತ್ರಮಂಡಲಿಯವರ ಕಂದಕಗಳಿಗೆ ಹರಿದು ಬಂದಿರುತ್ತವೆ. ಅದಲ್ಲದೆ ಅನೇಕ ಮಂದಿ ಟರ್ಕಿ ಸೈನಿಕರು ಪ್ರವಾಹಗಳಿಗೆ ಸಿಕ್ಕಿ ಮುಳುಗಿ ಹೋದೇವೆಂದು ಕಂದಕಗಳನ್ನು ತ್ಯಜಿಸಿ ಹೊರಕ್ಕೆ ಬಂದು ಬಿಟ್ಟರು. ಮಿತ್ರಮಂಡಲಿಯವರು ಕಾದಿದ್ದು ಅಂಥವರ ಮೇಲೆ ಗುಂಡುಗಳ ಮಳೆ ಸುರಿಸಿ ಕೊಲ್ಲೆ ಕೊಂದುಹಾಕಿದರು. ಇನ್ನೂ ಕೆಲವು ಟರ್ಕಿ ಸೈನಿಕರು ಛಳಿಯ ಕೊರತೆಯನ್ನು ಸೈರಿಸಲಾರದೆ ಸತ್ತುಹೋದರು.

ಮೆಸೊಪೊಟೇಮಿಯಾದಲ್ಲಿ ಇನ್ನೂ ಕೆಲವು ಕದನಗಳಾಗುತ್ತವೆ. ಅರಬ್ಬಿ ಯವರೂ ಟರ್ಕಿಯವರೂ ಡಿಸೆಂಬರ್ ತಾ. 9, 10, 11, 12 ನೇ ತಾರೀಖು ಗಳಲ್ಲಿ ಕುಟೆಲ್‌ಅಮಾರಾ ಎಂಬ ಠಾಣ್ಯದಲ್ಲಿ ಬ್ರಿಟಿಷ್ ಠಾಣ್ಯದ ಮೇಲೆ ನುಗ್ಗಿ ಹೋದರು. ಬ್ರಿಟಿಷರು ಅವರನ್ನೆಲ್ಲಾ ಸಂಪೂರ್ಣವಾಗಿ ಸೋಲಿಸಿ ಹಿಂದಕ್ಕೆ ಓಡಿಸಿದರು. ಆ ಪೈಕಿ ಒಂದು ದಿನ ನಡೆದ ಕದನದಲ್ಲಿ ಅವರ ಕಡೆ 2,00 ಸೈನ್ಯ ನಷ್ಟವಾಯಿತೆಂದು ಸೆರೆ ಸಿಕ್ಕಿದ ಅರಬ್ಬಿ ಸೈನಿಕರು ಹೇಳಿದರು. ಜನರಲ್ ಟೌನ್‌ಷೆಂಡ್ ಎಂಬ ದಳಪತಿಯು ಅರಬ್ಬಿಯವರ ಕಡೆ 1,000 ಕ್ಕಿಂತಲೂ ಹೆಚ್ಚಾಗಿ ನಷ್ಟವಾಗಿದಾರೆಂದು ತಿಳಿಸಿದಾರೆ.

ಕೆಲವು ವಾರಗಳ ಹಿಂದೆ ಬಾಗ್ದಾದಿನ ಬಳಿ ಆದ ಕದನದಲ್ಲಿ ಬ್ರಿಟಿಷರ ಕಡೆ 643 ಮಂದಿ ಕೊಲೆಯಾದರು, 3,330 ಮಂದಿ ಗಾಯಪಟ್ಟರು, 594 ಮಂದಿ ಸಿಕ್ಕ ಇಲ್ಲ. ಗಾಯಪಟ್ಟವರೆಲ್ಲಾ ಚೆನ್ನಾಗಿದಾರೆ. ಅಲ್ಲಿ ಬ್ರಿಟಿಷ್ ಸೈನ್ಯವನ್ನು ಬಲಪಡಿಸಬೇಕೆಂದು ನದಿಯ ಮೇಲಕ್ಕೆ ಹೊಸ ಸೈನ್ಯಗಳನ್ನು ಕಳುಹಿಸುತ್ತಿದಾರೆ.

ಟರ್ಕಿ ಸೈನ್ಯದಲ್ಲಿ 6,50,000 ಯುದ್ಧಭಟರಿದಾರೆಂದೂ, ಜರ್ಮನಿಯ ವರು ಆಯುಧಗಳನ್ನು ಒದಗಿಸಿದ ಪಕ್ಷದಲ್ಲಿ ಆ ಸೈನ್ಯವನ್ನು 10,00,000 ದ ವರೆಗೆ ಹೆಚ್ಚಿಸಬಹುದೆಂದೂ ಹೇಳಲಾಗಿದೆ.

ಈಜಿಪ್ಟಿನಲ್ಲಿ.

ಸೂಯೆಸ್ ಕಾಲುವೆಗೆ ಪೂರ್ವದಿಕ್ಕಿನಲ್ಲಿರುವ ಕಾಡಿನಲ್ಲಿ ಅರಬ್ಬಿ ಯವರಿಗೂ ಬ್ರಿಟಿಷರಿಗೂ ಕೆಲವು ಸಣ್ಣ ಪುಟ್ಟ ಕದನಗಳಾದವು. ಈ ಕದನಗಳಲ್ಲಿ ನಮ್ಮ ಮೈಸೂರು ಸಂಸ್ಥಾನದ ಸೈನಿಕರು ನಿಂತು ಕಾದಾಡಿದರೆಂದು ತೋರು ವುದು. ಈ ಯುದ್ಧದಲ್ಲಿ ಇವರು ತಮ್ಮ ಪರಾಕ್ರಮವನ್ನು ಪ್ರಕಾಶಪಡಿಸುತ್ತಾರೆ ಮೊದಲನೇ ಕದನದಲ್ಲಿ ಅರಬ್ಬಿಯವರ ಕಡೆ 80 ಮಂದಿ ಕೊಲೆಯಾದರೆಂದೂ, 30 ಜನಗಳಿಗೆ ಗಾಯವಾಯಿತೆಂದೂ; ಬ್ರಿಟಿಷರ ಕಡೆ 16 ಮಂದಿ ಕೊಲೆಯಾದ ರೆಂದೂ, 18 ಮಂದಿ ಗಾಯಪಟ್ಟರೆಂದೂ ತಿಳಿಸಲ್ಪಟ್ಟಿದೆ. ಇನ್ನೊಂದು ಕದನ ದಲ್ಲಿ 1,200 ಅರಬ್ಬಿ ಸೈನಿಕರು ಬಂದೂಕುಗಳನ್ನೂ ಪಿರಂಗಿಗಳನ್ನೂ ತಂದು ಮುತ್ತಿಗೆ ಹಾಕಿದರು. ಈ ಕದನದಲ್ಲಿ ಬ್ರಿಟಿಷರ ಕಡೆ 8 ಮಂದಿ ಕೊಲೆಯಾದರು; ಈ ಪೈಕಿ ನಾಲ್ವರು ಹಿಂದೂಸ್ಥಾನದವರು. 6 ಮಂದಿ ಸುಬ್ಬೇದಾರರಿಗೂ 18 ಸೈನಿಕರಿಗೂ ಗಾಯಗಳಾದವು; ಇವರಲ್ಲಿ 15 ಮಂದಿ ಹಿಂದೂಸ್ಥಾನದವರು. ಅಂತು ಸೂಯೆಸ್ ಕಾಲುವೆಗೆ ಅಪಾಯ ಸಂಭವಿಸುವುದೆಂದು ಅನುಮಾನ ಪಡುವುದಕ್ಕೆ ಕಾರಣವಿಲ್ಲ.

ಪರ್ಷಿಯಾದಲ್ಲಿ.

ಪರ್ಷಿಯಾದಲ್ಲಿ ಹುಟ್ಟಿರುವ ದಂಗೆಯನ್ನು ರಷ್ಯಾ ಸೈನ್ಯಗಳು ಅಡಗಿಸುತ್ತ ಲಿವೆ. ದಂಗೆಯವರನ್ನು ಎರಡನೆಯಸಾರಿ ಸೋಲಿಸಿದರು. ಈ ರಷ್ಯಾ ಸೈನ್ಯ ಗಳು ಹಮಾದನ್ ಪಟ್ಟಣಕ್ಕೆ ಸೇರಿರುತ್ತವೆ. ಪರ್ಷಿಯಾ ರಾಜ್ಯದ ಒಬ್ಬ ಮಂತ್ರಿ ಯನ್ನು ಕೊಂದುಹಾಕಬೇಕೆಂದು ಜರ್ಮನಿಯವರು ಪ್ರಯತ್ನ ಮಾಡಿದರು. ಪರ್ಷಿಯಾ ಗವರ್ನ್‌ಮೆಂಟಿನವರು ಈಗಿನ ಯುದ್ಧದಲ್ಲಿ ಯಾರ ಪಕ್ಷವನ್ನೂ ವಹಿಸದೆ ತಟಸ್ಥರಾಗಿರಬೇಕೆಂಬ ಕುತೂಹಲಪೂರ್ವಕರಾಗಿದಾರೆ. ಆದರೆ ಜರ್ಮ ನಿಯವರು ಆ ರಾಜ್ಯದಲ್ಲಿ ಗಲಭೆಯನ್ನುಂಟುಮಾಡಿ ಕೊಂಡರೆ ಪಡಿಸಬೇಕೆಂದು ಪ್ರಯತ್ನಪಡುತ್ತಿರುವರು.

ಇತರ ವಿಷಯಗಳು.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಕೆಲವು ಸರ್ಕಾರಿ ಕೆಲಸಗಳನ್ನು ವಹಿಸಿಕೊಂಡು ಮಾಡುವಷ್ಟು ಆರೋಗ್ಯವಾಗಿದಾರೆ. ಅವರ ಕಾಯಿಲೆಯು ಅವರನ್ನು ಕೃಶವಾಗಿ ಮಾಡಿರುವುದು. ಆದಕಾರಣ ಅವರು ದಣುವೇರುವಂಥಾ ಕೆಲಸಗಳನ್ನು ಮಾಡಕೂಡದು. ಅವರು ಕಾಯಿಲೆಯಲ್ಲಿರುವಾಗ ಅಲ್ಪಸ್ವಲ್ಪ ದ್ರಾವಕವನ್ನು ಸೇವನೆ ಮಾಡಿದರು. ಆದರೆ ಅವರಿಗೆ ಆರೋಗ್ಯಭಾಗ್ಯವುಂಟಾದ ಕೂಡಲೆ ದ್ರಾಕ್ಷಾರಸದ ಸೇವನೆಯನ್ನು ಸಂಪೂರ್ಣವಾಗಿ ತ್ಯಜಿಸಬಹುದಾರೆ.

ಅಂಕೋನಾ ಎಂಬ ಹಡಗನ್ನು ಮುಳುಗಿಸಿದ್ದರಿಂದ ಅದರಲ್ಲಿದ್ದ ಕೆಲವು ಅಮೇರಿಕದವರು ಸಮುದ್ರದ ಪಾಲಾದರು. ಇದರ ವಿಚಾರವಾಗಿ ಅಮೇರಿಕದವ ರಿಗೂ ಆಸ್ಟ್ರಿಯಾದವರಿಗೂ ಸ್ನೇಹಭಾವಕ್ಕೆ ಕುಂದಕ ಉಂಟಾಗುವ ಸಂಭವ ಒದಗಿದೆ. ಆಸ್ಟ್ರಿಯಾದವರು ಕಟ್ಟುಬೀಳದಂಥಾ ಜವಾಬುಕೊಟ್ಟರು. ಅದರ ಮೇಲೆ ಅಮೇರಿಕದ ಪ್ರೆಸಿಡೆಂಟ್ ವಿಲ್‌ಸನ್‌ರವರು ಎರಡನೆಯಸಾರಿ ಆಸ್ಟ್ರಿಯಾ ದವರಿಗೆ ಬರೆದು ತಿಳಿಸುವವರಲ್ಲಿದಾರೆ. ಜರ್ಮನಿಯ ನೌಕಾಂಗವನ್ನು ಅಮೇ ರಿಕದಿಂದ ವಾಪಸು ಕಳುಹಿಸಿಬಿಟ್ಟರಷ್ಟೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಅವ ರಿಬ್ಬರನ್ನೂ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ತಲಪಿಸಿದರು.

ಬ್ರಿಟನ್‌ನಲ್ಲಿ ಜನಗಳು ಅಸಂಖ್ಯಾತರಾಗಿ ಬಂದು ಸೈನ್ಯಕ್ಕೆ ಸೇರಿಕೊಳ್ಳು ತ್ತಿದಾರೆ. ಒಂದು ದಿನ 50,000 ಜನರು ಸೈನ್ಯಕ್ಕೆ ದಾಖಲಾದರು.

ಜರ್ಮನಿಯವರ ಕಡೆ ನೊವೆಂಬರ್ ತಾ 26 ರ ತನಕ ಒಟ್ಟಾಗಿ 24,44,248 ಮಂದಿ ಸೈನಿಕರು ನಷ್ಟವಾದರು. ಬ್ರಿಟನ್‌ನಲಿ 21,215 ಜರ್ಮನಿ ಸೈನಿಕರು ಕೈಸೆರೆ ಹಿಡಿಯಲ್ಪಟ್ಟಿದಾರೆ. ಜರ್ಮನಿಯ ಹಲವು ನಗರಗಳಲ್ಲಿ ದಂಗೆ ಗಳು ನಡೆದವು. ರಾಜಧಾನಿಯಾದ ಬರ್ಲಿನ್ ನಗರದಲ್ಲಿ ಪ್ರಜೆಗಳು ದಂಗೆ ಏಳ ದಂತೆ ನೋಡಿಕೊಳ್ಳುವುದಕ್ಕೆ ಇನ್ನೂ 2,000 ಸೈನ್ಯಗಳನ್ನು ಹೆಚ್ಚಾಗಿ ಪಹರೆ ಕೆಲಸಗಳಿಗೆ ನೇಮಕಮಾಡಿದಾರೆ.

ಸರ್ಬಿಯಾದವರ ಮೇಲೆ ಹಗೆ ತೀರಿಸಿಕೊಂಡದ್ದಾಯಿತಲ್ಲಾ; ಇನ್ನು ಯುದ್ಧಮಾಡುವುದನ್ನು ನಿಲ್ಲಿಸಿ ಸಮ್ಮಾಧಿಸಾಗಿರುವಂತೆ ಮಾಡಿಕೊಡಿ ಎಂಬದಾಗಿ ಹಂಗೇರಿಯವರು ತಮ್ಮ ಸರ್ಕಾರವನ್ನು ಕೇಳುತ್ತಿದಾರೆ.

ಮೆಡಿಟರೇನಿಯನ್ ಕಡಲಿನಲ್ಲಿರುವ ಸಬ್‌ಮರೀನುಗಳನ್ನು ಮಿತ್ರಮಂಡಲಿ ಯವರು ಊಸ್ತುವಾರಿ ಇಟ್ಟು ನೋಡಿಕೊಳ್ಳುವಂತೆ ಏರ್ಪಾಡು ಮಾಡಿದಾರೆ. ಕಳೆದ ವಾರ ಮೂರೇ ಜಹಜುಗಳು ಮುಳುಗಿಸಲ್ಪಟ್ಟವು. ಆ ಪೈಕಿ ಎರಡು ಬ್ರಿಟಿಷರವು, ಒಂದು ಇಟಲಿಯವರದು.

ಜರ್ಮನಿಯಲ್ಲಿ ಈಚೆಗೆ ಎರಡು ಜೆಪ್ಪೆಲಿನ್ ಎಂಬ ಭಾರೀ ವಿಮಾನಯಂತ್ರ ಗಳು ನಾಶವಾದವು. ಒಂದು ಯಂತ್ರವು ಸಿಡಿಮದ್ದಿನ ಗುಂಡುಹಾರಿ ಒಡೆದು ಹೋಯಿತು. ಆಗ ಅದರೊಳಗಿದ್ದ 40 ಜನಗಳು ನಷ್ಟವಾದರು. ಬಹಳ ಕಾಲ ದಿಂದಲೂ ಜೆಪ್ಪೆಲಿನ್‌ಗಳು ಅಂತರಿಕ್ಷದಲ್ಲಿ ದರೋಡೆ ಕೋರರಂತೆ ಬರುವುದು ನಿಂತುಹೋಗಿದೆ.

ಆಸ್ಟ್ರಿಯಾ ರಾಜಧಾನಿಯಾದ ವಿಯನ್ನಾ ನಗರದಲ್ಲಿ ಗೋಧಿಯು ಸಾಲದು, ಹಾಲು ಸಿಕ್ಕುವುದು ದುರ್ಲಭವಾಗಿದೆ. ಸಾಮಾನುಗಳನ್ನು ಸಾಗಿಸುವು ದಕ್ಕೆ ಕುದುರೆಗಳಿಲ್ಲ. ಯುದ್ಧವು ಪ್ರಾರಂಭವಾದಾಗ್ಯು ಆಸ್ಟ್ರಿಯಾದೊಳಗೆ 4,000 ಸರ್ಬಪ್ರಜೆಗಳನ್ನೂ, ಬೊಸ್ನಿಯಾ ಮತ್ತು ಹೆರ್ಜಗೋವಿನಾದೊಳಗೆ 800 ಪ್ರಜೆಗಳನ್ನೂ, ಬೊಹೇಮಿಯಾದೊಳಗೆ 720 ಪ್ರಜೆಗಳನ್ನೂ ಗುಂಡಿನಿಂದ ಹೊಡೆದು ಕೊಲ್ಲಿಸಿರುತ್ತಾರೆ.

ಟರ್ಕಿಯವರು ತಮ್ಮ ಪ್ರಜೆಗಳಾಗಿರುವ 20 ಲಕ್ಷ ಅರ್ಮೀನಿಯಾ ಜನಗ ಳಲ್ಲಿ ಹತ್ತು ಲಕ್ಷವನ್ನು ಕೊಲ್ಲಿಸಿರುತ್ತಾರೆಂದು ಹೇಳಿದೆ.

ಅಂಬುಲೆನ್ಸ್ ಎಂಬ ಸೇವಾ ಜನಗಳ ಗುಂಪಿಗೆ ಸೇರಿದ ಜನಗಳನ್ನು ದಕ್ಷಿಣ ಆಫ್ರಿಕಾದಿಂದ ಯೂರೋಪಿಗೆ ಕಳುಹಿಸಿರುತ್ತಾರೆ.

ಆಗಸ್ಟ್ ತಾ. 31 ಕ್ಕೆ ಅಖೈರಾದ ಮೂರು ತಿಂಗಳಲ್ಲಿ ಬ್ರಿಟಿಷರ ವಿಮಾನ ಯಂತ್ರಿಕರ ಪೈಕಿ 5 ಮಂದಿ ಕೊಲೆಯಾದರು, 32 ಮಂದಿಗೆ ಗಾಯಗಳಾ ದವು, 18 ಮಂದಿಯನ್ನು ಶತ್ರುವು ಕೈಸೆರೆ ಹಿಡಿದುಕೊಂಡನು; ನೊವೆಂಬರ್ ತಾ. 30 ಕ್ಕೆ ಅಖೈರಾದ ಮೂರು ತಿಂಗಳೊಳಗೆ 11 ಮಂದಿ ಕೊಲೆಯಾದರು, 21 ಜನರು ಗಾಯಪಟ್ಟರು, 26 ಮಂದಿ ಸೆರೆಯಾದರು, 10 ಮಂದಿ ಸಿಕ್ಕ ಇಲ್ಲ.

ಬ್ಯಾಲ್ಟಿಕ್ ಕಡಲಿನಲ್ಲಿ ಒಂದು ಸಬ್‌ಮರೀನು ಜರ್ಮನಿಯ ಒಂದು ಸಣ್ಣ ಯುದ್ಧದ ಹಡಗನ್ನೂ ಒಂದು ಟಾರ್ಪಿಡೋ ದೋಣಿಯನ್ನೂ ಮುಳುಗಿಸಿತು. ಅವುಗಳಲ್ಲಿದ್ದ ಕೆಲವು ಜನಗಳನ್ನು ಬದುಕಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಮೈಸೂರು ನ್ಯಾಯವಿಧಾಯಕ ಸಭೆಯು ಜನವರಿ ತಾ 17 ನೇ ಸೋಮ ವಾರ ಬೆಂಗಳೂರು ದಿವಾನ್‌ರವರ ಆಫೀಸಿನಲ್ಲಿ ನಡೆಯುವುದಾಗಿದೆ.

ಕಳೆದ ವಾರ ರಾಜಧಾನಿಯ ದೊಡ್ಡಕೆರೆಯಲ್ಲಿ ಒಬ್ಬ ಹೆಂಗಸೂ, ಹಳೇ ಅಗ್ರಹಾರದಕೊಳದಲ್ಲಿ ಒಬ್ಬ ಗಂಡಸೂ ಆಕಸ್ಮಾತ್ತಾಗಿ ಬಿದ್ದು ಅಕಾಲ ಮರಣ ವನ್ನು ಹೊಂದಿದರು.

ಶ್ರೀಮನ್ ಮಹಾರಾಜರವರು ಕಳೆದ ಭಾನುವಾರ ಮೋಟರಿನಲ್ಲಿ ಮ॥ ತಂಬುಚೆಟ್ಟಿಯವರ ಸಮೇತ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು. ಅವರೂ ಬ್ರಿಟಿಷ್ ರೆಸಿಡೆಂಟರವರೂ ಪರಿವಾರ ಸಮೇತ ನಾಳೆ ಚಾಮರಾಜನಗ ರದ ಕ್ಯಾಂಪಿಗೆ ಚಿತ್ತೈಸಿ ಈ ತಿಂಗಳ ಕಡೇ ತನಕ ಅಲ್ಲಿ ಶಿಕಾರಿ ಮೊದಲಾದ ವಿಹಾರಗಳಲ್ಲಿ ಕಳೆಯುವರು.

ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಮುಂದಿನ ಫೆಬ್ರವರಿ ತಾ. 12 ನೇ ಶನಿವಾರ ಫಲಪುಷ್ಪಾದಿಗಳ ಪ್ರದರ್ಶನವು ನಡೆಯುವಂತೆ ಗೊತ್ತುಮಾಡ ಲ್ಪಟ್ಟಿದೆ. ಪ್ರಜೆಗಳೂ ತೋಟಗಾರರೂ ಈಗಿನಿಂದಲೂ ವ್ಯವಸಾಯಮಾಡಿ ಒಳ್ಳೊಳ್ಳೇ ಫಲಪುಷ್ಪ ತರಕಾರಿಗಳನ್ನು ಬೆಳೆಯುವ ಏರ್ಪಾಡಿಟ್ಟು ಪ್ರದರ್ಶನ ದಲ್ಲಿ ಬಹುಮಾನಗಳನ್ನು ಪಡೆಯುವರೆಂದು ಹಾರೈಸುತ್ತೇವೆ.

ನಮ್ಮ ಮಹಾಸ್ವಾಮಿಯವರೂ ಅರಮನೆಯ ದಿವಾನರವರೂ ಮುಂದಿನ ಸೋಮವಾರ ಬೆಂಗಳೂರಿನಿಂದ ಶಿವಮೊಗ್ಗಾ ಜೋಗ್ ಜಲಪಾತಕ್ಕೆ ದಯಮಾಡಿ ದರು. ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ॥ ವಿ. ಡಬ್ಲ್ಯು. ಎಂ. ಇಸ್ಟ್ಮೆಲ್‌ರವರು ಕ್ಯಾಂಪಿನ ವಿಚಾರಗಳಿಗೆ ಹೋಗಿದಾರೆ. ಅವರೆಲ್ಲಾ ಮುಂದಿನ ಮಂಗಳವಾರ ವಾಪಸು ಬೆಂಗಳೂರಿಗೆ ಬರುವಂತೆ ಏರ್ಪಾಡಾಗಿದೆ.

ಬೆಂಗಳೂರು ಸಿಟಿ ಸ್ಟಾರ್ ಟ್ರೇಡಿಂಗ್ ಕಂಪನಿಯವರ ಶಾಶ್ವತವಾದ ಕ್ಯಾಲೆಂಡರೂ, ಮೈಸೂರು ಮ॥ ಅಬ್ದುಲ್ ಘಪೂರ್ ಸೇಟ್ ಕಂಪನಿಯ ವರ ಶಾಶ್ವತವಾದ ಕ್ಯಾಲೆಂಡರೂ ನಮಗೆ ತಲುಪಿರುತ್ತವೆ. ಇವೆರಡೂ ನೇತ್ರಾ ನಂದಕರವಾಗಿಯೂ ಸಾರ್ವದಾ ಉಪಯೋಗಿಸಬಹುದಾಗಿಯೂ ರಚಿಸಲ್ಪಟ್ಟಿ ರುವವು. ಅವುಗಳನ್ನು ನಮಗೆ ಕಳುಹಿಸಿಕೊಟ್ಟದ್ದಾಕ್ಕಾಗಿ ಆ ಕಂಪನಿಯವ ರನ್ನು ವಂದಿಸುತ್ತೇವೆ.

ನಂಜನಗೂಡು ಚಾಮಲಾಪುರದ ಮ॥ ಪೀರ್ ಸಾಹೇಬರು ನಮ್ಮ ಪತ್ರಿಕೆ ಯಲ್ಲಿದ್ದ ಗಡಿಯಾರದ ಜಾಹೀರಾತನ್ನು ನೋಡಿ ಮದರಾಸಿನ ಟಿ. ಎಂ. ರಾಮ ಚಂದ್ರರಾವ್ ಕಂಪನಿಗೆ ಕಾಗದ ಬರೆದದ್ದಕ್ಕೆ ಕಂಪನಿಯವರು ಕಳಿಸಿದ ಪಾರ್ಸ ಲ್ಲಿನಲ್ಲಿ ಗಡಿಯಾರಕ್ಕೆ ಪ್ರತಿಯಾಗಿ ಉಪಯೋಗವಿಲ್ಲದ ಎರಡು ಬ್ಲಾಕುಗಳನ್ನು ಕಳಿಸಿ ಮೋಸಪಡಿಸಿದರೆಂದು ತಿಳಿಸುತ್ತಾರೆ. ವ್ಯಾಪಾರಸ್ಥರು ಹೀಗೆ ಮೋಸ ಮಾಡಿದರೆ ಹೇಗೆ ಅಭಿವೃದ್ಧಿಗೆ ಬಂದಾರು? ಮತ್ತು ವಾಚಕರು ಅಲ್ಪಕ್ರಯಕ್ಕೆ ಬರುವಂಥಾ ನಿಷ್ಪ್ರಯೋಜನವಾದ ಪದಾರ್ಥಕ್ಕೆ ದುಡ್ಡು ಹಾಕಿ ಕೆಡಿಸಿಕೊಳ್ಳ ಬಾರದೆಂದು ಎಚ್ಚರಿಕೆ ಕೊಡುತ್ತೇವೆ.

ರಾಜಧಾನಿಯ ಜಗನ್ಮೋಹನ ಬಂಗಲೆ ಮುಂಭಾಗದಲ್ಲಿರುವ ಸರ್ದಾರ್ ಗೋಪಾಲಕೃಷ್ಣ ಅರಸಿನವರ ಬಂಗಲೆಗೆ ಕಳೆದ ವಾರ ಕಳ್ಳರು ಬಿದ್ದು ಕೆಲವು ಸಾಮಾನುಗಳನ್ನು ಅಪಹರಿಸಿದರು. ಪೊಲೀಸಿನವರು ಅವರನ್ನು ಗಂಟುಗಳ ಸಮೇತ ಹಿಡಿದು ರಾತ್ರಿ ಸ್ಟೇಷನ್‌ನಲ್ಲಿ ಇಟ್ಟುಕೊಂಡಿದ್ದಾಗ ಕಳ್ಳರು ಗಂಟನ್ನು ಬಿಟ್ಟು ಹ್ಯಾಗೋ ತಪ್ಪಿಸಿಕೊಂಡು ಹೋದರೆಂದು ಕೇಳುತ್ತೇವೆ. ಈಚೆಗೆ ರಾಜ ಧಾನಿಯ ಎಲ್ಲಾ ಭಾಗಗಳಲ್ಲೂ ಕಳ್ಳತನ ನಡೆಯುವುದು ಹೆಚ್ಚಾಗಿದೆ. ಪೊಲೀಸಿ ನವರ ದರ್ಪವನ್ನೂ ಉಸ್ತುವಾರಿಯನ್ನೂ ಅಲಾಖೆಯವರು ಕ್ರಮಪಡಿಸಬೇ ಕೆಂದೂ, ಈಗ ನಡೆಯುತ್ತಿರುವ ಕೆಲಸಕಾರ್ಯಗಳು ಮೊದಲಿನಷ್ಟು ನೆಮ್ಮದಿಕ ವಾಗಿಲ್ಲವೆಂದೂ ನಮಗೆ ಕೆಲವು ಬಾತ್ಮಿಗಳು ಬಂದಿರುತ್ತವೆ.

ಮೈಸೂರು ಮಹಾರಾಣೀ ಕಾಲೇಜಿನಲ್ಲಿ ಉಪಾಧ್ಯಾಯಿನಿಯಾಗಿರುವ ಶ್ರೀ ಭಾಗೀರಥಮ್ಮನವರು 1,000 ರೂಪಾಯಿಗಳನ್ನು ಕೊಡಿಸಿಟ್ಟು, ಆ ಕಾಲೇಜಿ ನಿಂದ ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಬಿ.ಎ. ಪರೀಕ್ಷೆಯಲ್ಲಿ ಮೊದಲನೆಯವ ರಾಗಿ ತೇರ್ಗಡೆಹೊಂದುವಂಥಾ ಬಾಲಿಕೆಯರಿಬ್ಬರಿಗೆ ಬಹುಮಾನಗಳನ್ನು ಕೊಡು ವಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡರು. ಸರ್ಕಾರದವರು ಆಕೆಯ ಧರ್ಮಬುದ್ಧಿಯನ್ನು ಕೊಂಡಾಡಿ ಆ ಹಣದ ಜೊತೆಗೆ ಸರ್ಕಾರದಿಂದ 1,000 ರೂಪಾಯಿ ಸೇರಿಸಿ, 2,000 ರೂಪಾಯಿ ಫಂಡುಹಾಕಿ ಅದರ ಉತ್ಪತ್ತಿಯಿಂದ ಮೇಲ್ಕಂಡಂತೆ ಪ್ರತಿ ವರುಷವೂ ಬಹುಮಾನಗಳು ಕೊಡತಕ್ಕದ್ದೆಂದು ಹುಕುಂ ಕೊಟ್ಟಿದಾರೆ. ಆಕೆಯ ಔದಾರ್ಯವೂ, ಸ್ತ್ರೀವಿದ್ಯಾ ಭಿವೃದ್ಧಿಯಲ್ಲಿ ಆಕೆಗಿರುವ ಕುತೂಹಲವೂ ಸ್ತೋತ್ರಾರ್ಹವಾಗಿದೆ.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಿಗಳ ಬ್ಯಾಂಕುಗಳಿಗೆ ಡಿಸೆಂಬರ್ ತಾ. 4 ರ ವರೆಗೆ ಸಾಗಿ ಬಂದಿರುವ ಚಂದಾ ಹಣ ಗಳೆಷ್ಟೆಂದರೆ :—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	ರೂ.	45,55,961- 2-6
ಬಂಗಾಳಾ ಬ್ಯಾಂಕಿಗೆ	,,	35,36,517- 7-9
ಬೊಂಬಾಯಿ ಬ್ಯಾಂಕಿಗೆ	,,	8,27,727-11-8
ಮದರಾಸ್ ಬ್ಯಾಂಕಿಗೆ	,,	6,67,348-10-9
ಜುಮ್ಲಾ ರೂಪಾಯಿ		95,87,558- 0-8

ಶ್ರೀನಿವಾಸಪುರದ ಸನ್ಮಾರ್ಗಪ್ರವರ್ತನ ಸಭಾ ವಾರ್ಷಿಕೋತ್ಸವ.

ಈ ಸಭೆಯು 1914 ನೇ ಡಿಸೆಂಬರ್ 8 ನೇ ತಾ॥ ೯ ಜನ ಮೆಂಬರುಗಳಿಂದ ಪ್ರಾರಂಭಿಸಲ್ಪಟ್ಟು ಸ್ಯಾನಿಟರಿ ಇನ್‌ಸ್ಪೆಕ್ಟರ್ ಕೃಷ್ಣಸ್ವಾಮಯ್ಯರ್, ಸಬ್ ಓವರ್‌ಸಿಯರ್ ಶಾಮರಾಯರೇ ಆದಿಯಾದ ಮಹನೀಯರಿಂದ ಪೋಷಿತವಾಗಿ ಶಾನುಭೋಗ ವೆಂಕಟನರಸಿಂಹಯ್ಯನವರ ಉದಾರವಾದ ಆಶ್ರಯಕ್ಕೊಳಗಾಗಿ ಸಭೆಯವರಿಂದ ಕೇಳುರಿಸಲ್ಪಟ್ಟ ಅಲ್ಪವಾದ ದ್ರವ್ಯವೇ ಸುಹೃದಯದಿಂದ ವಿನಿಯೋಗಿಸಲ್ಪಟ್ಟು ಇನ್ನೂರು ರೂಪಾಯಿ ಬಾಳುವ ಒಂದು ಹೊಸ ಕಟ್ಟಡವೂ ಸರ್ಕಾರದ ಸಹಾಯ ದ್ರವ್ಯದಿಂದ ಒಂದು ಕೇಜೀರಿನ ಭಾವಿಯೂ ಸಹ ಕಟ್ಟಲ್ಪಟ್ಟಿತು. ಕಳೆದ ತಾ. 8 ನೇ ಬುಧವಾರ ಮಂಟಪವು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟು ಪ್ರೆಸಿಡೆಂಟರ ರಿಪೋರ್ಟು ಓದಿದ ಬಳಿಕ ಡಾಕ್ಟರ್ ಲಕ್ಷ್ಮಣಸ್ವಾಮಿ ಪಿಳ್ಳೆಯವರಿಂದ ಭಗವತ್ಪ್ರಾರ್ಥನಾ ಪೂರ್ವಕ ಬೀಗವು ತೆರೆಯಲ್ಪಟ್ಟು ಜಯಘೋಷದೊಡನೆ ಮಂಟಪ ಪ್ರವೇಶ ಮಾಡಿದ ಬಳಿಕ ಸಭೆಯವರ ಪ್ರಾರ್ಥನೆಯಂತೆ ಡಾಕ್ಟರ್ ಲಕ್ಷ್ಮಣಸ್ವಾಮಿ ಪಿಳ್ಳೆಯವರು ಅಗ್ರಾಸನವನ್ನು ವಹಿಸಿದರು. ಸೆಕ್ರಟರಿ ರಾಘವಯ್ಯನವರಿಂದ ಸಭೆಯ ಅಭಿವೃದ್ಧಿ ಮತ್ತು ಉದ್ದೇಶಗಳ ರಿಪೋರ್ಟು ಇಂಗ್ಲಿಷಿನಲ್ಲಿ ಓದಿದ ಬಳಿಕ ಕನ್ನಡದಲ್ಲಿ ಸನ್ಮಾರ್ಗಪ್ರವರ್ತನೆಯ ವಿಷಯವಾಗಿ ರಾಮರಾಯರಿಂದಲೂ, ವಿದ್ಯಾಭ್ಯಾಸ ಮತ್ತು ಐಕಮತ್ಯ, ಪರಸ್ಪರಸಹಾಯ ಇವುಗಳ ವಿಷಯವಾಗಿ ಸ್ಕೂಲ್ ಮಾಸ್ಟರ್ ಬಿ. ರಂಗಾಚಾರ್ಯರಿಂದಲೂ ಉಪನ್ಯಾಸಗಳು ನಡೆದ ಬಳಿಕ ಛೇರ್‌ಮನ್ ರವರಿಂದ ಸಭೆಯ ಪುರೋಭಿವೃದ್ಧಿಯ ವಿಷಯವಾಗಿ ಹಿತವಾದವು ಹೇಳಲ್ಪಟ್ಟ ನಂತರ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ ಮಹಾರಾಜರವರಿಗೂ ಭಗವಂತನು ದೀರ್ಘಾಯುರಾರೋಗ್ಯಾದಿಗಳನ್ನು ದಯಪಾಲಿಸಲಿ! ಸಭೆಯು ಇತೋಪ್ಯತಿಶಯವಾಗಿ ನಿರ್ವಿಘ್ನವಾಗಿ ಅಭಿವೃದ್ಧಿಯನ್ನೈದಲಿ ಎಂದು ಮಂಗಳ ಶಾಸನವನ್ನು ನೆರವೇರಿಸಿದ ನಂತರ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಹಾಲಿ ಈ ಕಟ್ಟಡದಲ್ಲಿಯೇ ರೀಡಿಂಗ್ ರೂಮ್ ಮಾಡಿರುತ್ತದೆ.

ಒಂದು ಪಾಠಶಾಲಾ ಸ್ಥಾಪನೆ.

ನಮ್ಮ ಸರ್ಕಾರದವರ ಹುಕುಂ ಪ್ರಕಾರ ಚಿತ್ರದುರ್ಗ ಟವನ್ ಬುರ್ಜನಹಟ್ಟಿ ಗ್ರಾಮದ ಮುಖ್ಯ ಯಜಮಾನರುಗಳು ತಮ್ಮ ಬುರ್ಜನಹಟ್ಟಿಯಲ್ಲಿರುವ ವಾದ ಗುಡಿಯನ್ನು ಸುಣ್ಣ ವಗೈರೆ ಹಚ್ಚಿಸಿ ತಾ. 15 ನೇ ಬುಧವಾರ ಮಧ್ಯಾಹ್ನ ತಳಿರು ತೋರಣಗಳಿಂದಲೂ ಕದಳೀ ಸ್ತಂಭಗಳಿಂದಲೂ ಅಲಂಕರಿಸಿ ಬಾಲಕ ಬಾಲಕಿಯರಿಂದಲೂ ಕೂಡಿದ ಸಭೆಯು ಶೃಂಗರಿಸಿ ನೆರೆದಿತ್ತು. ಈ ಸಭೆಗೆ ಡೆಪ್ಯುಟಿ ಕಮಿಷನರ್ ಮ॥ ಸಿ. ಎಸ್. ಬಾಲಸುಂದರಂ ಅಯ್ಯರವರು ಮತ್ತು ಈ ಟವನ್ ವೈಸ್ ಪ್ರೆಸಿಡೆಂಟ್ ಸಾಹೇಬರು ಮುಂತಾದ ಎಲ್ಲಾ ಇಲಾಖಾ ಮೇಲ್‌ಧಣಿಗಳವರು, ಹೈಸ್ಕೂಲ್ ಹೆಡ್ ಮಾಸ್ಟರು, ಎ.ವಿ. ಸ್ಕೂಲ್ ಹೆಡ್ ಮಾಸ್ಟರುಗಳು, ಕಮಿಟಿಯ ಮೆಂಬರುಗಳು, ಅಡ್ವೋಕೇಟರುಗಳು, ಪ್ಲೀಡರುಗಳು, ಗ್ರಾಮದ ವರ್ತಕರೇ ಮೊದಲಾದ ಪ್ರಜೆಗಳೆಲ್ಲರೂ ದಯಮಾಡಿಸಿದ್ದರು. ಆ ಸಭಿಕರ ಪ್ರಾರ್ಥನೆಯಂತೆ ಡಿಸ್ಟ್ರಿಕ್ಟ್ ಪ್ರೆಸಿಡೆಂಟ್ ಸಾಹೇಬರು ಅಗ್ರಾಸನವನ್ನು ವಹಿಸಿದರು. ಹೈಸ್ಕೂಲ್ ಹೆಡ್ ಮಾಸ್ಟರು ಮತ್ತು ಎ.ವಿ. ಸ್ಕೂಲ್ ಹೆಡ್ ಮಾಸ್ಟರು ಬಲಾತ್ಕಾರವಾದ ವಿದ್ಯಾಭ್ಯಾಸವನ್ನು ಮಕ್ಕಳುಗಳಿಗೆ ಕಲಿಸಬೇಕಾಗಿಯೂ, ತಾಯಿತಂದೆಗಳು ಮಕ್ಕಳಿಗೆ 7 ವರ್ಷದ ಲಾಗಾಯ್ತು 11 ವರ್ಷಗಳ ವರಿವಿಗೆ ವಿದ್ಯೆ ಕಲಿಸುವುದರಿಂದ ಆಗತಕ್ಕ ಪ್ರಯೋಜನವನ್ನು ಬಹಳ ಚೆನ್ನಾಗಿ ಉಪನ್ಯಾಸಮಾಡಿದರು. ಮತ್ತು ಮ॥ ಅಡ್ವೋಕೇಟ್ ಬಿ. ವೆಂಕಟರಾಮಣ್ಣನವರು ಸಹ ಇದೇ ವಿಷಯವಾಗಿ ವಿದ್ಯಾಭ್ಯಾಸದ ಫಲಿತಾಂಶವನ್ನು ಕುರಿತು ಈಗ ಹಾಲಿ ನಡೆಸುತ್ತಾ ಇರುವ ಮಕ್ಕಳ ತಾಯಿತಂದೆಗಳು ತಮ್ಮ ಮಕ್ಕಳಿಂದ ತಮ್ಮ ಲಕ್ಕೆ ಬೇಕಾದ ಕೆಲಸಗಳನ್ನು ಮಾಡಿಸಿ ಹುಡುಗರನ್ನು ಕೆಡಿಸುವವಲ್ಲದೆ ತಾವು ಕೆಟ್ಟುಹೋಗುತ್ತಾರೆಯೇ ವಿನಹ ತಮ್ಮ ಮಕ್ಕಳಿಗೆ ಸರಿಯಾದ ವಿದ್ಯೆಯನ್ನು ಕಲಿಸಿ ಮುಂದಿನ ಫಲವನ್ನು ಕಾಣದವರಾಗಿರುತ್ತಾರೆ. ಆದ್ದರಿಂದ ಮಕ್ಕಳನ್ನು ಯಾವ ಕೆಲಸಗಳಿಗೂ ನೇಮಿಸದೆ ಸರಿಯಾಗಿ ಪಾಠಶಾಲೆಗೆ ಕಳುಹಿಸಿ ವಿದ್ಯೆ ಕಲಿಸಿ ಅಭಿವೃದ್ಧಿಗೆ ತರಬೇಕೆಂದು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಅಗ್ರಾಸನಾಧಿಪತಿಗಳಾದ ಮ॥ ಸಿ. ಎಸ್. ಬಾಲಸುಂದರಂ ಅಯ್ಯರವರು ಈ ಸಭಿಕರಿಗೆಲ್ಲಾ ಮೇಲ್ಕಂಡ ಬಲಾತ್ಕಾರ ವಿದ್ಯಾಭ್ಯಾಸದ ಪಾಠಶಾಲೆಗಳು ಈ ಸ್ಥಳದ ಪಾದ ಗುಡಿಯಲ್ಲಿ ಒಂದು ಸ್ಥಾಪನಾ ಮತ್ತು ಈ ಟವನ್ ಕರುವಿನಕಟ್ಟೆಯ ಪಾದ ಗುಡಿಯಲ್ಲಿ ಒಂದನ್ನು ಸ್ಥಾಪಿಸಿರುತ್ತೇವೆ. ಈ ಬಲಾತ್ಕಾರ ವಿದ್ಯೆಯು ಪ್ರಪಂಚಕ್ಕೆ ಬರಲು ಈ ಡಿಸ್ಟ್ರಿಕ್ಟಿನಲ್ಲಿ ಇಲ್ಲಿಯ ಈ ಪಾಠಶಾಲೆಗಳೇ ಮೇಲ್ಪಂಗ್ತಿಯಾಗಿರುತ್ತವೆ ಎಂಬದಾಗಿಯೂ, ಮಕ್ಕಳನ್ನು ವಿದ್ಯೆ ಕಲಿಸಿ ಅಭಿವೃದ್ಧಿಗೊಳಿಸಲು ಅವರವರ ತಾಯಿತಂದೆಗಳೇ ಜವಾಬ್ದಾರರಾಗಿದ್ದಾರೆ. ಹಾಗೆ ಮಕ್ಕಳಿಗೆ ವಿದ್ಯೆ ಕಲಿಸದವರನ್ನು ನಿರ್ಬಂಧಪಡಿಸುವರೆಂಬದಾಗಿ ಹುಕುಂ ಅಪ್ಪಣೆ ದಯಪಾಲಿಸಿದರು. ಮತ್ತು ಈ ಬಲಾತ್ಕಾರದ ಪಾಠಶಾಲೆಗೆ ಹುಡುಗರನ್ನು ಚುನಾಯಿಸಿಕೊಡಲು ಇಲ್ಲಿಯ ಮುಖ್ಯಸ್ಥರಾದ 6 ಜನರುಗಳನ್ನು ಮೆಂಬರುಗಳನ್ನಾಗಿ ಮಾಡಿ ಸದರಿ ಪಾಠಶಾಲೆ ಮಾಸ್ಟರ್ ಮ॥ ಪಿ. ಎಸ್. ಗುಂಡೂರಾವ್ ಎಂಬುವರನ್ನು ನೇಮಕ ಮಾಡಿಸಿಕೊಟ್ಟರು. ಅನಂತರ ಸಭಿಕರೆಲ್ಲರೂ ಎದ್ದು ನಮ್ಮ ಗೌರ್ನಮೆಂಟಿನವರು ದೇಶಮಧ್ಯೆ ಇರುವ ಪ್ರಜೆಗಳೆಲ್ಲರೂ ಏಳಿಗೆಗೆ ಬರಬೇಕೆಂಬ ಉದ್ದೇಶದಿಂದ ಇಂಥಾ ಏರ್ಪಾಡುಗಳ ಮೂಲಕ ನಮ್ಮೆಲ್ಲರನ್ನೂ ಕಾಪಾಡುವರಾಗಿದ್ದಾರೆ ಎಂಬದಾಗಿಯೂ, ಸಂತೋಷದಿಂದಲೂ ಜಯಧ್ವನಿ ಮಾಡಿದರು. ನಂತರ ಬಾಲಕ ಬಾಲಕಿಯರು ಮಂಗಳಕರವಾದ ಸ್ತೋತ್ರ, ಮಹಾರಾಜರ ಹಾಡು ಅನೇಕ ಸ್ತೋತ್ರಗಳಿಂದ ಸಭಿಕರನ್ನು ಸಂತೋಷಪಡಿಸಿದರು. ನಂತರ ಸರ್ವರೂ ಎದ್ದು ಶ್ರೀಮನ್ ಮಹಾರಾಜರವರ, ಶ್ರೀಮನ್ ಯುವರಾಜರವರ ಮತ್ತು ಶ್ರೀ ಸಾರ್ವಭೌಮರವರ ಶ್ರೇಯಃಪ್ರಾರ್ಥನೆ ಮಾಡಿದರು. ಸಭಾಧ್ಯಕ್ಷರಿಗೂ ಸಭಿಕರಿಗೂ ಗಂಧ ಪುಷ್ಪ ತಾಂಬೂಲಗಳನ್ನು ವಿನಿಯೋಗಿಸಿದ ತರುವಾಯ ಸಭೆಯು ಬರಖಾಸ್ತಾಯಿತು.

ಗ್ರಾಮಾಭಿವೃದ್ಧಿ.

ಚಾಮರಾಜ ನಗರದ ತಾಲ್ಲೂಕು ರವೆ ಹೋಬಳಿ ಕೆಬ್ಬೆಪುರದ ಗ್ರಾಮದಲ್ಲಿ ತಾ. 3 ರಲ್ಲಿ ಗ್ರಾಮಸ್ಥರು ಸಭೆ ಸೇರಿ ವಿಜೃಂಭಣೆಯಿಂದ ಮೀಟಿಂಗು ನಡೆಸಲಾಯಿತು. ಇದಕ್ಕೆ ಚೇರ್‌ಮನ್ ಹೋಬಳಿ ಶೇಕ್‌ದಾರರು ಎ॥ ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರವರು ಮತ್ತು ಮೆಂಬರುಗಳು ಕನ್ನಲಿಂಗಪ್ಪನವರ ಮಗ ಮಾದಪ್ಪನವರು, ಚಿಕ್ಕಮ್ಮನ ಬಸಪ್ಪನವರ ಮಗ ಬಸಪ್ಪನವರು, ಮರಲಿಂಗಪ್ಪನವರು, ಕೆಂಪಶೆಟ್ಟರು ಸಹಾ ಕೊರವಳ್ಳಿ ಮಂಜುನಾಥಯ್ಯನವರು ಇನ್ನೂ ಅನೇಕ ಜನಗಳೂ ಸೇರಿ ಸಭೆಮಾಡಿ, ದವಸದ ಬ್ಯಾಂಕು ಮತ್ತು ನೈಟ್ ಸ್ಕೂಲ್, ಸ್ಕೂಲ್ ಮನೆ ಕಟ್ಟಡ ಸಹ ಎಲ್ಲಾ ಈ ದಿವಸ ಇತ್ಯರ್ಥಮಾಡಿ ಶ್ರೀಮನ್ ಮಹಾರಾಜರವರ ಫೋಟೋವನ್ನು ಅತಿ ಮರ್ಯಾದೆಯಿಂದ ಇಡಿಸಿ ಆಡಂಬರದಿಂದ ಪೂಜಿಸಿ ಮತ್ತು ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯು ಬರಖಾಸ್ತು ಆಯಿತು.

ಚಾಮರಾಜನಗರ ತಾಲ್ಲೂಕು ಹರವೆ ಹೋಬಳಿ ಕೆಂಗಾಕಿ ಗ್ರಾಮದಲ್ಲಿ ತಾ. 6 ರಲ್ಲಿ ಗ್ರಾಮಾಭಿವೃದ್ಧಿ ವಿಚಾರದಲ್ಲಿ ತುಂಬಾ ವಿಜೃಂಭಣೆಯಿಂದ ಸಭೆ ಸೇರಿತ್ತು. ಈ ಸಭೆಗೆ ಹೋಬಳಿ ಶೇಕ್‌ದಾರರು ಎ॥ ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರು ಚೇರ್‌ಮನ್ ಆಗಿದ್ದರು. ಮ॥ ಕಾಳಪ್ಪನವರು, ಪಟೇಲ್ ಮಂಡೆಮಲ್ಲನಾಯ್ಕರು, ಬಸವನಾಯ್ಕರು, ದ್ಯಾವಪ್ಪನವರು, ಬಸವೇಗೌಡರು ಮುಂತಾದ ದೊಡ್ಡ ಮನುಷ್ಯರು ಸುಮಾರು 250 ಜನಗಳವರೆಗೂ ಸೇರಿದ್ದರು. ಹೋಬಳಿ ಶೇಕ್‌ದಾರರು ಮಿ॥ ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರು ವಿದ್ಯಾಭಿವೃದ್ಧಿ ವಿಚಾರದಲ್ಲಿಯೂ, ದವಸದ ಬ್ಯಾಂಕು, ರೀಡಿಂಗ್ ರೂಂ ಸ್ಥಾಪನೆ ಮಾಡಿದರೆ ಉಂಟಾಗುವ ಪ್ರಯೋಜನಗಳನ್ನೂ ವಿವರಿಸಿ, ಸಭಿಕರಿಗೆ ತುಂಬಾ ತಿಳುವಳಿಕೆ ಅಪ್ಪಣೆಕೊಟ್ಟ ನಂತರ ಈ ಗ್ರಾಮದಲ್ಲಿ ನೈಟ್ ಸ್ಕೂಲ್, ದವಸದ ಬ್ಯಾಂಕ್, ರೀಡಿಂಗ್ ರೂಂ ಸಹಾ ಮಾಡಲಾಗಿ ಹಾಲಿ ಇವುಗಳು ಜಾರಿಗೆ ಬಂದದ್ದಲ್ಲದೆ 300 ರೂಪಾಯಿ ಅಂದಾಜಾವುಳ್ಳ ಒಂದು ಸ್ಕೂಲ್ ಕಟ್ಟಡ ಸಹಾ ಕಟ್ಟಿಸಲು ಏರ್ಪಾಡು ಆಗಿ ಹಾಲಿ ಸದರಿ ಕಟ್ಟಡದ ಕೆಲಸವೂ ಪ್ರಾರಂಭವಾಗಿದೆ. ನಂತರ ತುಂಬಾ ವಿಜೃಂಭಣೆಯಿಂದ ಮತ್ತು ಮರ್ಯಾದೆಯೊಡನೆ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರ ತಸಬೀರನ್ನೂ ಇಡಿಸಿ ತುಂಬಾ ಅದಬ್ಬಿನಿಂದ ಸಭಿಕರೆಲ್ಲರೆಲ್ಲರೂ ಮುಜರೇ ಮಾಡಿದ್ದಲ್ಲದೆ ಅವರ ಶ್ರೇಯಃಪ್ರಾರ್ಥನೆ ಮಾಡಿ ಸಭೆಯು ಬರಖಾಸ್ತು ಆಯಿತು.

ಚಾಮರಾಜನಗರದ ತಾಲ್ಲೂಕು ಉಮ್ಮತ್ತೂರು ಹೋಬಳಿ ಬೆಂಡರವಾಡಿ ಗ್ರಾಮದ ಗೌರ್ನಮೆಂಟ್ ಎ. ವಿ. ಸ್ಕೂಲಿನಲ್ಲಿ ತಾ. 17 ನೇ ಶುಕ್ರವಾರ ಹರವೇ ಹೋಬಳಿ ಶೇಕ್‌ದಾರ್ರು ಮ॥ ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರವರು ಈ ಗ್ರಾಮಕ್ಕೆ ದಯಮಾಡಿಸಿ ಗ್ರಾಮಾಭಿವೃದ್ಧಿ ವಿಷಯದಲ್ಲಿಯೂ ದವಸದ ಬ್ಯಾಂಕ್ ಸ್ಥಾಪಿಸಿದರೆ ಉಂಟಾಗುವ ಪ್ರಯೋಜನವನ್ನು ಕುರಿತೂ ರೈತರಿಗೆ ತಿಳುವಳಿಕೆ ಕೊಟ್ಟದ್ದರ ಮೇರೆ ಒಂದು ಭಾರಿ ಸಭೆಯು ಸೇರಿತ್ತು. ಇದಕ್ಕೆ ಶೇಕ್‌ದಾರರು ಮ॥ ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರು ಚೇರ್‌ಮ್ಯಾನ್ ಆಗಿದ್ದರು. ಮ. ಸ್ವಾ. ಶೇಷಣ್ಣನವರು, ಪಟೇಲ್ ಮಾದಪ್ಪನವರು, ಶ್ರೀನಿವಾಸಮೂರ್ತಿಗಳು, ರಾಮಣ್ಣನವರು, ವೀರಭದ್ರಪ್ಪನವರು, ನರಸೇಗೌಡರು ಮುಂತಾದ ದೊಡ್ಡಮನುಷ್ಯರು ಸುಮಾರು 160 ಜನಗಳ ವರೆಗೂ ಸೇರಿದ್ದರು. ಒಂದು ದವಸದ ಬ್ಯಾಂಕ್ ಸ್ಥಾಪನೆ ಮಾಡಲಾಯಿತು. ಚಕ್ರವರ್ತಿ ಪ್ರಭುಗಳ ಮತ್ತು ಶ್ರೀಮನ್ ಮಹಾರಾಜರವರ ಫೋಟೋಗಳನ್ನು ಅತಿ ಮರ್ಯಾದೆಯಿಂದಲೂ, ತುಂಬಾ ವಿಜೃಂಭಣೆಯಿಂದಲೂ ಇಡಿಸಿ ಅದಬ್ಬಿನಿಂದ ಮುಜರೆ ಮಾಡಿದ್ದಲ್ಲದೆ ಅವರುಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿದನಂತರ ಸಭೆಯು ಬರಖಾಸ್ತು ಆಯಿತು.

ಒಂದು ಸಂತೋಷ ಕೂಟವು.

ಈ ಸಲ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾವಣೆಮಾಡಿದ ರಾಜಧಾನಿಯ ಅಡ್ವೊಕೇಟ್ ಮ॥ ಸಿ. ನರಸಿಂಹಯ್ಯನವರಿಗೆ ಇಲ್ಲಿನ ಲಾಯರುಗಳು ಸೇರಿ ರಾಯ ಬಹದ್ದೂರ್ ಭಕ್ಷಿ ನರಸಪ್ಪನವರ ಕ್ಲಬ್ ಕಟ್ಟಡದಲ್ಲಿ ಕಳೆದ ಭಾನುವಾರ ಒಂದು ಸಂತೋಷಕೂಟವನ್ನು ನಡಿಸಿ ಅವರನ್ನು ಸತ್ಕಾರಮಾಡಿದರು. ರಾಜಧಾನಿಯ ಅನೇಕ ಮಂದಿ ಲಾಯರುಗಳೂ ಸಿವಿಲ್ ಕೋರ್ಟುಗಳ ಜಡ್ಜಿಗಳೂ ಕರೆಸಲ್ಪಟ್ಟಿದ್ದರು. ಆ ದಿನವೆಲ್ಲಾ ನಾನಾ ಸಂತೋಷ ವಿಹಾರಗಳಲ್ಲಿ ಕಳೆಯಲಾಯಿತು. ಮಧ್ಯಾಹ್ನ ಸಕಲರೂ ಕುಳಿತು ದಿವ್ಯವಾದ ಭಕ್ಷ್ಯಭೋಜ್ಯಗಳನ್ನು ಭುಂಜಿಸಿ ಸಂತೋಷಪಟ್ಟರು. ಸಾಯಂಕಾಲ ಅರಮನೆಯ ವಿದ್ವಾಂಸರಾದ ಮ॥ ಬಿಡಾರಂ ಕೃಷ್ಣಪ್ಪನವರು ತಮ್ಮ ಮನೋಹರವೂ ರಸಭರಿತವೂ ಆದ ಹಾಡುಗಾರಿಕೆಯಿಂದ ಸಭಿಕರನ್ನು ಆನಂದಪಡಿಸಿದರು. ಬಳಿಕ ರಾಜಧಾನಿಯ ಅಡ್ವೊಕೇಟರುಗಳಲ್ಲಿ ಹಿರಿಯರಾದ ಮ॥ ಎಂ. ಡಿ. ನಾರಾಯಣಯ್ಯಂಗಾರ್ರು ಸಭಿಕರ ಪರವಾಗಿ ಮ॥ ಸಿ. ನರಸಿಂಹಯ್ಯನವರ ವಿಚಾರವಾಗಿ ಹೇಳಿದ ಮುಖ್ಯಾಂಶಗಳೇನಂದರೆ—ಅವರನ್ನು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾವಣೆ ಮಾಡಿದ್ದು ಪ್ರಜೆಗಳಿಗೆ ಹ್ಯಾಗೋ ಹಾಗೆಯೇ ಲಾಯರುಗಳಾದ ನಮ್ಮಗಳಿಗೂ ತುಂಬಾ ಸಂತೋಷವನ್ನುಂಟುಮಾಡಿದೆ. ನಮ್ಮ ಸಂಸ್ಥಾನದಲ್ಲಿ ಸುಮಾರು ಎಂಟು ವರುಷಗಳ ಕೆಳಗೆ ನ್ಯಾಯ ವಿಧಾಯಕ ಸಭೆಯು ನಿರ್ಮಾಣವಾಯಿತು. ಇದುವರೆಗೆ ಸರ್ಕಾರಿ ಅಲ್ಲದ (ನಾನ್ ಅಫಿಸಿಯಲ್) ಮೆಂಬರುಗಳು ಹಲವರು ಆ ಸಭೆಯಲ್ಲಿದ್ದು ಕೆಲಕೆಲವು ಕಾಲ ಕೆಲಸ ಮಾಡಿ ಬಂದಿದ್ದಾರೆ. ಅಂಥವರ ಪೈಕಿ ಯಾರೊಬ್ಬರೂ ಸ್ವತಂತ್ರಿಸಿ ಪ್ರಜಾಹಿತಕರವಾದ ಯಾವುದೊಂದು ಮಸೂದೆ ಕಾನೂನನ್ನೂ ರಚಿಸಿ ಆ ಸಭೆಯಲ್ಲಿ ಚರ್ಚೆಗೆ ಇಡಲಿಲ್ಲ. ಆದರೆ ಹಲವು ಪ್ರಶ್ನೆಗಳನ್ನು—ಇವು ಎಷ್ಟು ಮಟ್ಟಿಗೆ ವಿವೇಕವಾದವುಗಳೋ ಹೇಳಲಾಗದು—ಕೇಳಿ ಸರ್ಕಾರದವರಿಂದ ಉತ್ತರಗಳನ್ನು ಪಡೆದಿದ್ದಾರೆ. ಹೊಸ ಕಾನೂನುಗಳು ಆಗಬೇಕಾದದ್ದೂ, ಈಗ ಇರುವ ಕಾನೂನುಗಳಲ್ಲಿ ಬದಲಾವಣೆಗಳಾಗಬೇಕಾದದ್ದೂ ಹಲವು ಉಂಟು. ಇಂಥವುಗಳಿಗೆ ಪ್ರಜಾಪಕ್ಷದ ಮೆಂಬರುಗಳು ಗಮನಕೊಟ್ಟಿಲ್ಲ. ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೆ ಒಂದು ಕಷ್ಟವಿದೆ ಎಂದು ಎಲ್ಲರೂ ಬಲ್ಲರು. ಅವರು ಪ್ರಜೆಗಳ ಪಕ್ಷವನ್ನು ಹಿಡಿದು ಹೋರಾಡಿದರೆ ಸರ್ಕಾರದ ಅಧಿಕಾರಿಗಳಲ್ಲಿ ದುರ್ಜನ ಹೊಂದುತ್ತಾರೆ; ಸರ್ಕಾರದ ಪಕ್ಷವನ್ನು ವಹಿಸಿದರೆ ಪ್ರಜೆಗಳ ಹೇಳನಕ್ಕೆ ಗುರಿಯಾಗುವರು. ಆದಕಾರಣ ಮ॥ ನರಸಿಂಹಯ್ಯನವರ ಸ್ಥಾನವು ಕಷ್ಟಕರವಾದದ್ದು. ಅವರು ಅಂಥಾ ಅಪವಾದಗಳಿಗೆ ಒಳಗಾಗದಂತೆ ನ್ಯಾಯವಿಧಾಯಕ ಸಭೆಯಲ್ಲಿ ಕಾರ್ಯಗಳನ್ನು ನಡಿಸಿ ಸರ್ಕಾರಕ್ಕೆ ನಂಬಿಕೆಯನ್ನು ಹುಟ್ಟಿಸಿ ಪ್ರಜೆಗಳಿಗೆ ಉಪಕಾರವನ್ನು ಮಾಡುವರೆಂದು ನಂಬಿ ನಿರೀಕ್ಷಿಸುವೆವು ಎಂಬೀ ರೀತಿ ಭಾಷಣ ಮಾಡಿದರು. ತರುವಾಯ ಮ॥ ಸಿ. ನರಸಿಂಹಯ್ಯನವರು ಸಭಿಕರನ್ನೆಲ್ಲಾ ಆ ದಿನ ನಡಿಸಿದ ದಿವ್ಯವಾದ ಸಂತೋಷ ಕೂಟಕ್ಕಾಗಿ ಬಹಳ ಕೃತಜ್ಞತೆಯಿಂದ ವಂದನೆ ಮಾಡಿ ಸಂಕ್ಷೇಪವಾದ ಉತ್ತರ ಹೇಳುವಾಗ್ಗೆ—ನ್ಯಾಯವಿಧಾಯಕ ಸಭೆಯಲ್ಲಿ ಇದುವರೆಗೆ ಪ್ರಜಾಪಕ್ಷದ ಮೆಂಬರುಗಳ್ಯಾರೂ ಹೊಸ ಕಾನೂನನ್ನು ರಚಿಸಿ ಚರ್ಚೆಗೆ ಇಡದೆ ಇರಬಹುದು ಆದರೆ ಅವರು ಯಾಕೆ ಮಾಡಲಿಲ್ಲವೋ ಹೇಳುವುದು ಕಷ್ಟ. ನಾನು ಆ ಸಭೆಗೆ ಇನ್ನೂ ಹೊಸಬ. ಆದರೆ ಈ ನನ್ನ ಮಿತ್ರಮಂಡಲಿಯವರ ಸಹಾಯ ಸಲಹೆ ಪ್ರೋತ್ಸಾಹಗಳು ನನಗೆ ಒದಗುತ್ತಾ ಬರುವನೆಂದೂ, ನಾನು ನನ್ನ ಕರ್ತವ್ಯವನ್ನು ಸರ್ಕಾರಕ್ಕೂ ಪ್ರಜೆಗಳಿಗೂ ಹಿತಕರವಾಗುವಂತೆ ನಡಿಸಿ ಕೃತಾರ್ಥನಾಗಬೇಕೆಂದು ಕುತೂಹಲಪಡುತ್ತೇನೆಂದೂ ಈ ಸಂದರ್ಭದಲ್ಲಿ ನಿಮ್ಮ ಕೂಡ ತಿಳಿಸುತ್ತೇನೆ ಎಂಬೀ ರೀತಿ ಹೇಳಿದರು. ಬಳಿಕ ಗಂಧಪುಷ್ಪಾದಿಗಳು ಹಂಚಲ್ಪಟ್ಟು, ಜಯಧ್ವನಿಯಿಂದ ಆ ದಿನದ ಸಂತೋಷಕೂಟವು ಮುಕ್ತಾಯವಾಯಿತು. ಆ ದಿನದ ಕಾರ್ಯಗಳನ್ನೆಲ್ಲಾ ಅಡ್ವೊಕೇಟ್ ಮ॥ ಎಂ. ಎ. ವೆಂಕಟರಾಯರು ಮುಂದಾಳಾಗಿ ನಿಂತು ಬಹು ಸಂತೋಷಕರವಾಗಿಯೂ ಸಾಂಗವಾಗಿಯೂ ಜರುಗಿಸಿದರೆಂದು ಸಭಿಕರೆಲ್ಲಾ ಕಡೆಯಲ್ಲಿ ಅವರನ್ನು ಶ್ಲಾಘನೆಮಾಡಿ ತೆರಳಿದರು.

ದರ್ಬಾರ್ ಡೇ ಉತ್ಸವಗಳು.

ಗೌರ್ನಮೆಂಟ್ ಟ್ರೈನಿಂಗ್ ಕಾಲೇಜ್, ಮೈಸೂರು

ಈ ಮಹೋತ್ಸವವು ಪದ್ಧತಿಯಂತೆ ತಾ. 13-12-1915 ರಲ್ಲಿ ಕಾಲೇಜಿನಲ್ಲಿ ಭಕ್ತಿ ವಿಶ್ವಾಸಗಳಿಂದ ನಡೆಯಿಸಲ್ಪಟ್ಟಿತು. ಆ ದಿವಸ ಕಾಲೇಜ್ ಕಟ್ಟಡವು ನಳನಳಿಸುವ ತಳಿರು ತೋರಣಗಳಿಂದಲೂ, ಮಿರುಮಿರುಗುವ ಚಿತ್ರಪಟಗಳಿಂದಲೂ, ಚಲಿಚಲಿಸುವ ಪತಾಕೆಗಳಿಂದಲೂ, ಗುಜುಗುಜಿಸುವ ಬಾಲಕರಿಂದಲೂ ನೇತ್ರಾನಂದಕರವಾಗಿ ಶೋಭಿಸುತ್ತಿದ್ದಿತು. ಎದುರಿಗೆ ಉನ್ನತವಾದ ಪೀಠದಲ್ಲಿ ಶ್ರೀಮಹಾರಾಜ್ಞೀ ಸಮೇತರಾದ ಶ್ರೀಮಜ್ಜಾರ್ಜ್ ಚಕ್ರವರ್ತಿಗಳವರ ಭಾವಚಿತ್ರವು ಕಂಗೊಳಿಸುತ್ತಿದ್ದಿತು. ಇವರ ಪಕ್ಕದಲ್ಲಿ ನಮ್ಮ ಶ್ರೀಮನ್ ಮಹಾರಾಜರವರ ಭಾವಚಿತ್ರವು ಒಪ್ಪುತ್ತಿದ್ದಿತು. ಕಾಲೇಜಿನ ಪ್ರಿನ್ಸಿಪಾಲ್ ಮ॥ ಸಿ. ಆರ್. ನಾರಾಯಣರಾವ್, ಎಂ.ಎ., ಎಲ್.ಟಿ. ಯವರು, ವೈಸ್ ಪ್ರಿನ್ಸಿಪಾಲರು, ಇತರ ಸಹಾಯೋಪಾಧ್ಯಾಯರು ಮುಂತಾದವರೊಡನೆ ಅತ್ಯಂತ ರಾಜಭಕ್ತಿ ಭಾವದಿಂದ ಪಕ್ಕದಲ್ಲಿ ನಿಂತಿದ್ದರು. ಪ್ರಾತಃಕಾಲ 8 ಗಂಟೆಗೆ ಸರಿಯಾಗಿ ಉತ್ಸವದ [illegible]ವಾಯಿತು. ಮೊದಲು ಕಿಂಡರ್‌ಗಾರ್ಟನ್ ತರಗತಿಯ ಬಾಲಿಕೆಯರು [illegible] ದೇವರನ್ನು ಸ್ತುತಿಸಿ ನಮ್ಮ ಶ್ರೀಮಚ್ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ಈ ಕಾಲೇಜಿನ ಅ॥ ಮ್ಯಾ॥ ಮ॥ ಎಟ್. ಸೀತಾರಾಮಯ್ಯ, ಬಿ.ಎ., ಎಲ್.ಟಿ. ಯವರು ಕನ್ನಡದಲ್ಲೂ, ಕಾಲೇಜಿನ ಮೌಲ್ವಿ ಮಹಮದ್ ಹಸನ್ ಖಾನ್ ಸಾಹೇಬರು ಹಿಂದೂಸ್ಥಾನಿಯಲ್ಲೂ ಬ್ರಿಟಿಷ್ ಚಕ್ರಾಧಿಪತ್ಯದಿಂದ ನಮಗುಂಟಾಗಿರುವ ಪ್ರಯೋಜನಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸವನ್ನು ಮಾಡಿ ಈಗಿನ ಘೋರ ಸಂಗ್ರಾಮದಲ್ಲಿ ಬ್ರಿಟಿಷರಿಗೆ ಜಯವಾಗಲೆಂದು ಬಯಸಿದರು. ಅನಂತರ ಮಕ್ಕಳಿಗೆ ಮಿಠಾಯಿ ಹಣ್ಣುಗಳು ಹಂಚಲ್ಪಟ್ಟುವು. ಎಲ್ಲರೂ ರಾಜಭಕ್ತಿ [illegible]ಗಳಿಂದ ಕೂಡಿ ಬ್ರಿಟಿಷ್ ಚಕ್ರಾಧಿಪತ್ಯವು ವಿಜಯಿಸಲೆಂದು [illegible] ಉದ್ಘೋಷಿಸುತ್ತ ತೆರಳಿದರು. ಮತ್ತೆ ಮಧ್ಯಾಹ್ನ 3 ಗಂಟೆಯ ಮೇಲೆ [illegible] ಕಾಂಪೌಂಡಿನಲ್ಲಿ ಎಲ್ಲರೂ ಉತ್ಸಾಹದಿಂದ ಸೇರಿದರು. ಆಗ ಓಡುವುದು, ಹಾರುವುದು, ಹಗ್ಗವನ್ನೆಳೆವುದು ಮೊದಲಾದ ಸಂತೋಷಕರವೆನಿಸಿದ [illegible] ವಿನೋದಗಳು ಜರುಗುತ್ತಿದ್ದುವು. ಅಷ್ಟು ಹೊತ್ತಿಗೆ ವಿದ್ಯಾಭ್ಯಾಸದ [illegible] ಇನ್‌ಸ್ಪೆಕ್ಟರ್ ಜನರಲ್ ರಾವ್ ಬಹದೂರ್ ಎಂ. ಶಾಮರಾವ್, ಎಂ.ಎ. ಯವರು ಮ॥ ಎಂ. ವೆಂಕಟಕೃಷ್ಣಯ್ಯನವರೊಡನೆ ಮೋಟಾರಿನಲ್ಲಿ ದಯಮಾಡಿ ಇತರವಾದ ಆಟಗಳನ್ನು ಪರಾಮರ್ಶಿಸಿ ಸಂತೋಷಗೊಂಡರು. ಈ ಆಟಗಳಲ್ಲಿ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಮೆ॥ ಪಾಲ್ ಚಿನ್ನಪ್ಪ, ಎಂ.ಎ., ಪಿ.ಎಚ್.ಡಿ. ಯವರೂ, ಅ. ಮಾ. ಮ॥ ಎಟ್. ಸೀತಾರಾಮಯ್ಯ, ಬಿ.ಎ., ಎಲ್.ಟಿ. ಯವರೇ ಮೊದಲಾದವರು ಮುಂದಾಳುಗಳಾಗಿ ನಿಂತು ಮಾಡಿದ ಪ್ರಯತ್ನಗಳಾದ ಕಾರ್ಯಗಳು ಶ್ಲಾಘನೀಯವಾಗಿದ್ದುವು. ಈ ಆಟಗಳಲ್ಲಿ ಗೆದ್ದವರಿಗೆ ಬಹುಮಾನವೀಯಲು ಕಟ್ಟಡದೊಳಗೆ ತಕ್ಕ ಏರ್ಪಾಡಾಗಿದ್ದಿತು. ಇನ್. ಜ. ಸಾಹೇಬರವರು ಪ್ರಿನ್ಸಿಪಾಲ್‌ರವರ ಪ್ರಾರ್ಥನೆಯಂತೆ ಅಗ್ರಾಸನವನ್ನಲಂಕರಿಸಿದರು. ಮಕ್ಕಳು ಶ್ರೀಮಚ್ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರ ಶ್ರೇಯಸ್ಸನ್ನು ಬಯಸಿ ಇಂಪಾಗಿ ಗಾನಮಾಡಿದರು. ಶ್ರೇಯಃಪ್ರಾರ್ಥನಾರೂಪವಾದ ಪದ್ಯಗಳು ಕನ್ನಡದಲ್ಲೂ ಹಿಂದೂಸ್ಥಾನಿಯಲ್ಲೂ ಓದಲ್ಪಟ್ಟವು. ತರುವಾಯ ಆಟದಲ್ಲಿ ಗೆದ್ದ ಮಕ್ಕಳಿಗೆ ಇನ್. ಜ. ಸಾ. ರವರು ಸ್ವಹಸ್ತದಿಂದ ಆದರ ಪೂರ್ವಕವಾಗಿ ಬಹುಮಾನವನ್ನು ದಯಪಾಲಿಸಿದರು. ಬಲು ಸಣ್ಣ ವಯಸ್ಸಿನ ಮಕ್ಕಳು ಆಗ ಬಹುಮಾನವಂ ತೆಗೆದುಕೊಳ್ಳುತ್ತಿದ್ದುದನ್ನು ನೋಡಿ ಎಲ್ಲರೂ ಪರಮಾನಂದಭರಿತರಾಗಿ ಕರತಾಳನ ಮಾಡಿದರು. ಅನಂತರ ಇನ್. ಜ. ಸಾ. ರವರು ಉತ್ಸಾಹದಿಂದೆದ್ದು—ಸಂಸ್ಥಾನದ ಅನೇಕ ಭಾಗಗಳಿಂದ ಬಂದು ಇಲ್ಲಿ ಸೇರಿರುವ ಉಪಾಧ್ಯಾಯರು ತಮ್ಮ ತಮ್ಮ ವಿದ್ಯಾರ್ಥಿಗಳನ್ನು ಮೊದಲಿನಿಂದಲೂ ರಾಜಭಕ್ತಿಯುಳ್ಳವರನ್ನಾಗಿ ಮಾಡುತ್ತ ಬರುವುದು ಕರ್ತವ್ಯವೆಂಬುದನ್ನು ಬಹು ಸ್ವಾರಸ್ಯವಾಗಿ ತಿಳಿಯಿಸಿ ಎಲ್ಲರಿಗೂ ಸಂತೋಷವನ್ನುಂಟು ಮಾಡಿದರು. ಬಳಿಕ ಜಯಘೋಷದೊಡನೆ ಸಭೆಯು ಉಪಸಂಹರಿಸಲ್ಪಟ್ಟಿತು. ಪ್ರಿನ್ಸಿಪಾಲರವರು ತೃಪ್ತಿಕರವಾಗಿ ನಡೆಯಿಸಿದ ಈ ಮಹೋತ್ಸವದ ಏರ್ಪಾಡುಗಳನ್ನು ಶ್ಲಾಘಿಸುತ್ತ ಎಲ್ಲರೂ ಸಂತೋಷದಿಂದ ತೆರಳಿದರು.

ಇದಲ್ಲದೆ ಸಂಸ್ಥಾನಾದ್ಯಂತ ನಡೆದ ಈ ಉತ್ಸವದ ವೃತ್ತಾಂತಗಳು ನಮಗೆ ಅನೇಕವಾಗಿ ತಲಪಿರುವವು. ಅವುಗಳನ್ನು ಬರೆದ ಬಾತ್ಮೀದಾರರುಗಳನ್ನು [illegible] ಮೂಲಕ ವಂದನೆಮಾಡಿ, ಸ್ಥಳಸಂಕೋಚದಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದು ಕ್ಷಮಾಪಣೆಯನ್ನು ಬೇಡುವೆವು. ಆ ಪೈಕಿ ಕೆಲವು ಸ್ಥಳಗಳ ಹೆಸರುಗಳನ್ನು ಇಲ್ಲಿ ತಿಳಿಸುತ್ತೇವೆ:—ಹಿರಿಯೂರು ತಾ॥ ಐಮಂಗಲದ ಪಂಚಮಾ ಸ್ಕೂಲು, ಆನೆಕಲ್ ತಾ॥ ಸರ್ಜಾಪುರ, ಚನ್ನರಾಯಪಟ್ಟಣದ ತಾ॥ ನುಗ್ಗೇಹಳ್ಳಿ, ಮ[illegible] ರಾಬಾದು ತಾ॥ ದೇವಾಲಪಕೆರೆ, ಮಾಗಡಿ ತಾ॥ ವೀರೇಗೌಡನ ದೊಡ್ಡಿ, [illegible]ಗಲ ತಾ॥ ಹುಲಿಕೂರು, ಮೇಲುಕೋಟೆ, ಬೆಂಗಳೂರು ಸಿಟಿ ಸುಲ್ತಾನ್‌ಪೇಟೆ ಎಸ್. ಆರ್. ಎನ್. ಎಸ್. ಹಿಂದೂ ಎ.ವಿ. ಸ್ಕೂಲು, ಬೆಂಗಳೂರು ಸಿಟಿ [illegible] ಸೂರು ಪೇಟೆ ಗೌ॥ ಪ್ರೈಮರಿ ಸ್ಕೂಲು, ಮೈಸೂರು ಲಕ್ಷ್ಮೀಪುರಂ ಗೌ॥ ಎ.ವಿ. ಸ್ಕೂಲು ಇಲ್ಲಿ ಮೈಸೂರು ತಾಲ್ಲೂಕು ಉಪಾಧ್ಯಾಯರ ಸಂಘವೆಂಬುದು [illegible]ದಿನ ಸ್ಥಾಪನೆಯಾಯಿತು, ತುರುವೇಕೆರೆ, ಚಿಕ್ಕನಾಯಕನಹಳ್ಳಿ ತಾ॥ ಕಂದಿ[illegible] ಅರಸಿಕೆರೆ ತಾ॥ ಕರಗುಂದ, ಬೇಲೂರು ತಾ॥ ರಾಜನಸಿರಿಯೂರು, ದೇವ[illegible] ತಾ॥ ಕಾಪಹಳ್ಳಿ, ಹೊಸಕೋಟೆ, ಮೈಸೂರು ಬಾರ್ ಲೈನ್ ಕನ್ನಡ ಬಾಲ[illegible] ಸ್ಕೂಲು, ಚನ್ನಪಟ್ಟಣ ತಾ॥ ಮಳೂರು, ತೀರ್ಥಹಳ್ಳಿಗೆ ಸೇರಿದ ಕುರುವ[illegible] ಮಂಜರಾಬಾದು ತಾ॥ ಯಸಳೂರುಪೇಟೆ, ಮಂಡ್ಯ ತಾಲ್ಲೂಕು ಬಸರಾ[illegible] ಬೆಂಗಳೂರು ತಾ॥ ತಾವರೆಕೆರೆ, ಚಳ್ಳಕೆರೆ ತಾ॥ ತಿಪ್ಪರೆಡ್ಡಿಹಳ್ಳಿ, ಚಾಮರಾಜನಗರದ ತಾ॥ ಬೆಂಡರವಾಡಿ, ಚಾಮರಾಜನಗರದ ತಾ॥ ಕೋಡಿಉಗನೆ, ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಗ್ರಾಮ, ಇತ್ಯಾದಿ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡದಾ[illegible] ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ [illegible] ವಿಳಾಸಗಳನ್ನು ಬಂದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎ[illegible] ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡದಾ[illegible]

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋ[illegible] ವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, [illegible] ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾ[illegible]ವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು [illegible] ಹೇಳುತ್ತೇವೆ.

—ಎಡಿ.]

ಕರೆಸ್‌ಪಾಂಡೆನ್ಸ್

—೧—

ಅಡಿಕೆ ಸುಲಿಯುವ ಯಂತ್ರ ಬೇಕು.

ಅಯ್ಯಾ,—ಅಡಿಕೆ ಸುಲಿದು ಕೊಡಿಯುವ ಯಂತ್ರವನ್ನು ಯಾರಾ[illegible] ತಯಾರು ಮಾಡಿದಾರೆಯೋ? ಮಾಡಿದ್ದ ಪಕ್ಷಕ್ಕೆ ಯಾರಾದರೂ ಅದರ ವಿ[illegible]ವನ್ನು ತಿಳಿಸಬೇಕು. ನಮ್ಮ ಗವರ್ನಮೆಂಟಿನವರು ವ್ಯವಸಾಯ ವಿಷಯ[illegible] ಬಹಳ ಆತುರಪಟ್ಟಂತೆ ಕಾಣುತ್ತದೆ. ಆದರೆ ಅವರು ಈ ಯಂತ್ರಕ್ಕೆ ಗ[illegible] ಕೊಟ್ಟ ಹಾಗೆ ಕಾಣುವದಿಲ್ಲ. ಅಡಿಕೆಯನ್ನು ಒಂದೊಂದಾಗಿ ಸುಲಿದು ಕೊ[illegible] ವದು ಅಂದರೆ ಜನರಿಗೆ ಎಂದಿಗೂ ಬಂಡಿತ ಕೆಲಸ ಸಾಗುವದಿಲ್ಲ. ಕೆಲ[illegible] ಸದೆ ತಡವಾದರೆ ಛಳಿಯಿಂದಲೂ ಕಡೆಯ ನಿಂತದ್ದರಿಂದಲೂ ಎಲ್ಲಾ ಗೋ[illegible] ಹೋಗುತ್ತವೆ. ಯಾರಾದರೂ ಈ ಯಂತ್ರಕ್ಕೆ ಗಮನ ಕೊಟ್ಟು ಪ್ರಚಾರ ಮಾಡ್ಯಾರೆಂತ ನಂಬಿದೇನೆ.

ಜೀವಪ್ಪ, ಹಂದಿಗೋಡು.

ತಲಕಾಡಿನಲ್ಲಿ ಪೋಲೀಸಿನ ಸಹಾಯ.

ಅಯ್ಯಾ,—ನಾನು ಮತ್ತು ನನ್ನ ಸಂಗಡ 16 ಜನರು ಬೇರೆ [illegible] ಬಾಕಿ ಬ್ರಾಹ್ಮಣ ಹೆಂಗಸರು ಒಡವೆಗಳನ್ನು ತುಂಬಾ ಹಾಕಿಕೊಂಡು ಆ [illegible] ರಾತ್ರಿ ಮರಳೇಶ್ವರ ದೇವಸ್ಥಾನಕ್ಕೆ ಹೋಗಲು ಸ್ಥಾನ ಮಾಡುವದಕ್ಕೆ [illegible] ದೊರೆಯದೆ ರಾತ್ರಿ 1½ ಗಂಟೆ ಸಮಯವಾದ್ದರಿಂದ ಮುತ್ತೈದೆಯರೂ ಹಿಮ್ಮ[illegible]

ಮಾತ್ರ ಹಿಡಿ ಕಾಣದೆ ದೇವಾಲಯ ಕಾಣದೆ ಮರಳು ಕಾಡಿನಲ್ಲಿ ಅಲೆಯು ತ್ತಿದ್ದೆ. ಆಗ ಆ ನಡುಕಾಡಿನಲ್ಲಿ ಬೆಂಗಳೂರ್ ಡಿಸ್ಟ್ರಿಕ್ಟಿನಿಂದ ಬಂದಿದ್ದ ಪೋಲೀಸ್ ದಫೇದಾರ್ 165 ನಂಬರುಳ್ಳ ದಫೇದಾರ್ ಚಂಗಾಚಾರ್ಯರು ದೂರದಿಂದ ದೀಪ ಹಾತ್ ಲಾಗವಡಿನಿಂದ ತಂದಿ ನನ್ನನ್ನೆಲ್ಲಾ ಬಿಟ್ಟೋ ರೆ ಕರೆದುಕೊಂಡುಹೋಗಿ ಸ್ನಾನವಮಾಡಿಸಿ ತಾನೇ ನನ್ನನ್ನು ದೇವಸ್ಥಾನಕ್ಕೆ ಕರೆದುಕೊಂಡು ಬಂದು ದೇವರ ದರ್ಶನ ಮಾಡಿಸಿದನು. ಈತನು ಎಷ್ಟು ಉಪಕಾರ ಮಾಡಿದನೋ ವಿವರಿಸಲಾರೆವು. ಬಸವಯ್ಯ, ಸಾಹುಕಾರ್, ಬಾಡೀ ಆಫೀಸ್ ಗುರ್ರಾವ್.

ಮೈಸೂರು ಸಿಟಿಯಲ್ಲಿ ಬಚ್ಚಲ ತೆರಿಗೆ.

ಅಯ್ಯಾ,—ಮೈಸೂರು ಸಿಟಿಯಲ್ಲಿ ಗೌರ್ನಮೆಂಟಿನವರು ಪ್ರತಿ ಮನೆಗೂ ಬಚ್ಚಲಿಗೆ ಕಂದಾಯ ದಾಖಲ್ ಮಾಡುವಂತೆ ಏರ್ಪಾಟು ಮಾಡಿರುತ್ತಾ ರೆಂದು ತಮ್ಮ ಕಳೆದ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತೆ. ಹೀಗೆ ಇವರು ಕಂದಾಯ ದಾಖಲ್ ಮಾಡುವ ಪಕ್ಷಕ್ಕೆ ಓವರಸಿಯರುಗಳು ಪ್ರತಿ ಬಡ ರೈತನನ್ನು ಬಚ್ಚಲ ನೀರಿನಿಂದಲೂ ನಲ್ಲಿಗಳಿಂದಲೂ ಕಟ್ಟಿಸದೇಹೋದ ಪಕ್ಷದಲ್ಲಿ ನಿಮ್ಮನ್ನು ಪ್ರಾಸಿಕ್ಯೂಟ್ ಮಾಡುತ್ತೇವೆಂದು ಬಡ ರೈತರಾದ ನಮಗೆ ನೋಟೀಸು ಕೊಟ್ಟು ಭಯಪಡಿಸುತ್ತಲೂ ಹಿಂಸೆ ಮಾಡುತ್ತಲೂ ಇರುವದು ಯಾವ ಧರ್ಮ? ಕಂದಾಯ ತೆಗೆದುಕೊಳ್ಳತಕ್ಕವರು ರೈತರಿಗೆ ಸೌಕರ್ಯವನ್ನುಂಟುಮಾಡಬೇಕಾ ದ್ದು ಧರ್ಮವಾಗಿರುತ್ತೆ. ಇಂಥಾದ್ದರಲ್ಲಿ ಬಡ ರೈತರಾದ ನಾವು ಈ ದುರ್ಭಿಕ್ಷ ಕಾಲದಲ್ಲಿ ಕೂಲಿಯೋ ನಾಲಿಯೋ ಮಾಡಿ ಅರೆಹೊಟ್ಟೆಯಿಂದ ಜೀವಿಸುತ್ತಾ ಇರುವಾಗ ಈ ದಂಡಾ ಹಾಕಬೇಕೆಂದರೆ ಇದು ಯಾವ ಧರ್ಮ? ಹೀಗೆ ನಿರ್ಬಂಧ ಪಡಿಸುವವರನ್ನು ನಮ್ಮ ಶ್ರೀಮನ್ ಮಹಾಪ್ರಭುಗಳು ಬಡ ರೈತರಾದ ನಮ್ಮ ಮೇಲೆ ದಯವಿಟ್ಟು, ನಮ್ಮನ್ನು ಸರ್ಕಾರದ ದಂಡನೋಪಗಳಿಗೆ ಗುರಿ ಮಾಡದೆಯೂ ಮಾಡಿ, ನಮ್ಮಗಳಿಗೆ ಸೌಕರ್ಯವನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಸಾಂಬಯ್ಯ, ಸಂದಲಕೋಟೆ, ಮಂಡಿ ಮೊಹಲ್ಲಾ, ಮೈಸೂರು.

[ಪ್ರತಿ ಮನೆಯನ್ನೂ ರೋಗ ಸೇರದಂತೆ ಚೊಕ್ಕಟವಾಗಿಟ್ಟುಕೊಳ್ಳಬೇಕು ಮತ್ತು ರೊಚ್ಚನ್ನು ಬಚ್ಚಲು ಕಟ್ಟಿ ಹೊರಕ್ಕೆ ತಂದು ಮ್ಯುನಿಸಿಪಲ್ ಚರಂಡಿಗೆ ಬಿಡುವುದು ಮನೆಯವರ ಕರ್ತವ್ಯವಾಗಿದೆ.—ಎಡಿ.]

ಆಸ್ಪತ್ರೆ ಬೇಕು.

ಅಯ್ಯಾ,—ನಗರ ತಾಲ್ಲೂಕು ಎಡೂರು ಮಾಗಣೆಯು ನಗರಕ್ಕೆ 10-12 ಮೈಲಿ ದೂರದಲ್ಲಿದೆ. ವಿಶೇಷವಾಗಿ ಮರ ಗಿಡಗಳ ಪ್ರದೇಶವಾಗಿದೆ. ಆದಕಾರಣ ಅನೇಕ ತರಹದ ಸಾಂಕ್ರಾಮಿಕ ರೋಗಗಳಿಗೆ ತವರುಮನೆಯಾಗಿದೆ. ವರುಷ ವರುಷವೂ ರೋಗಗಳಿಂದ ಮೃತಪಟ್ಟ ಜನರ ಸಂಖ್ಯೆಯು ಹೆಚ್ಚಾಗಿ ಪರಿಣಮಿಸಿ ಜನನವೇ ಅಲ್ಪ, ಮರಣವೇ ಅಧಿಕವಾಗಿದೆ. ಹೀಗೆ ಈ ನಾಡಿನ ಆಸ್ಪತ್ರೆ ಡಿಸ್ಪೆನ್ಸರಿಗಳು ಅಂದರೆ ಇದಕ್ಕೆ 10 ಮೈಲಿ ದೂರದಲ್ಲಿರುವ ಮೇಗ್ರವಳ್ಳಿಯಲ್ಲಿ ಮತ್ತು 12 ಮೈಲಿ ದೂರದಲ್ಲಿರುವ ತೀರ್ಥಹಳ್ಳಿಯಲ್ಲಿಯೂ ವೈದ್ಯಶಾಲೆಗಳು ಮಾತ್ರ ಇವೆ. ಈ ಊರಲ್ಲಿ ಗರೀಬರಾದ ಬಡ ಜನಗಳೇ ಬಹಳವಾಗಿದಾರೆ. ಅವರಿಗೆ ರೋಗ ವ್ಯಾಪಿಸಿಕೊಂಡಲ್ಲಿ ಅವರು ದೂರದಲ್ಲಿರುವ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಹೊಂದಲು ಶಕ್ತಿ ಇಲ್ಲದೆ ಡಾಕ್ಟರನ್ನು ಕರೆಸಿ ಚಿಕಿತ್ಸೆ ಹೊಂದಲು ಸ್ವಸ್ಥಿತಿಯು ದೊರೆಯದೆ ಇರುವುದರಿಂದ ರೋಗದಲ್ಲಿ ನರಳಾಡುತ್ತಾ ದಿನೇ ದಿನೇ ರೋಗವು ಹೆಚ್ಚಾಗಿ ಮರಣಹೊಂದುವರು. ಐಶ್ವರ್ಯವಂತರು ಡಾಕ್ಟರನ್ನು ಮನೆಗೆ ಕರಸಿಕೊಂಡು ಚಿಕಿತ್ಸೆ ಹೊಂದುವರು. ಹಾಗಾದರೆ ಬಡ ಜನಗಳ ಗತಿಯೇನು? ನಮ್ಮ ಸರ್ಕಾರದವರು ನಮ್ಮ ಆರಿಕೆಯಂತೆ ವೈದ್ಯಶಾಲೆಯನ್ನು ಸ್ಥಾಪಿಸಿ ರೋಗದಲ್ಲಿ ಸಿಲುಕಿ ಪೇಚಾಟಪಡುತ್ತಿರುವ ಬಡ ಜನಗಳಾದ ನಮ್ಮನ್ನು ಕಾಪಾಡುವರೆಂದು ನಂಬಿದ್ದೇವೆ. ಪ್ರಜಾಹಿತೈಷಿ.

ಹಳ್ಳಿ ಉಪಾಧ್ಯಾಯರುಗಳ ವಿಚಾರ.

ಅಯ್ಯಾ,—ಮಂಡ್ಯ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಗೌರ್ನಮೆಂಟ್ ಸ್ಕೂಲಿರುವುದು ಸರಿಯಷ್ಟೆ. ಈ ಹಳ್ಳಿ ಉಪಾಧ್ಯಾಯರುಗಳಿಗೆ 10 ರಿಂದ 12 ರೂಪಾಯಿಗೂ, 10 ರಿಂದ 15 ರೂಪಾಯಿಗೂ ಬಡ್ತಿ ಆಗಿ 1-6-16 ರ ಬಾಗಾ ಯತು ಕಡಲ್ ವರಿಗಿನ ಕಲಬು ಪಾವತಿಯಾಗಿರುತ್ತೆ. ಸರ್ಕಾರದವರು ಇವರಿಗೆ ಜೀವನಕ್ಕೆ ಸಾಲದುಬವಾಗಿ ಪ್ರವೋಷನ್ ಮಾಡಿದರು. ಅನೇಕ ಹಳ್ಳಿಗಳಲ್ಲಿರ ತಕ್ಕ ಉಪಾಧ್ಯಾಯರು ತಮ್ಮ ಕರ್ತವ್ಯವೇನೆಂಬುದನ್ನೇ ಅರಿಯದೆ ವ್ಯವಸಾಯ, ತಬರಾಲಿಸೆ, ಪಗಡೆ, ಇಸ್ಪೀಟು ಮುಂತಾದವುಗಳಲ್ಲಿ ಕಾಲಹರಣ ಮಾಡಿಕೊಂಡು ಶಾಲೆಗೆ ರಾಜಿನಾಮೆ ಹಾಕಲಾಗಿರುವುದು ಬಹು ಶೋಚನೀಯವಾಗಿದೆ. ಬೋರ್ಡ್ ಮತ್ತು ತಾಲ್ಲೂಕ್ ಬೋರ್ಡುಗಳಿಗೆ ದೂರ ಕ್ಷಾಸೆಯಲ್ಲಿ ರಕಕ್ಕೆ ಪ್ರತಿ ಹಬ್ಬ ಹರಿದಿನ ತಮ್ಮ ಸ್ಕೂಲನ್ನು ವರ್ಷಕ್ಕೊಂದಾವರ್ತಿ ಇನ್ಸ್ಪೆಕ್ಟರು ಬಂದು ಇನ್ಸ್ಪೆಕ್ಟ್ ಮಾಡಿಕೊಂಡು ಹೊರಟುಹೋದ ನಂತರ ಇನ್ನು ಒಂದು ವರ್ಷವಾಗಲಿ ಯಾವ ತಾಪತ್ರಯವೂ ಇಲ್ಲವೆಂದು ದೃಢಮನಸ್ಕರಾಗಿರುವುದು ವಾಚಕರಿಗೇ ತಿಳಿದ ಅಂಶವಾಗಿದೆ. ಈ ತಾಲ್ಲೂಕಿನಲ್ಲಿ ರಕಕ್ಕೆ ಕೆಲವು ಮಂದಿ ಹಳ್ಳಿ ಉಪಾಧ್ಯಾಯರು 8-10-15-20 ವರ್ಷ ಒಂದೇ ಸ್ಕೂಲಿನಲ್ಲಿ ಕೆಲಸ ಮಾಡಿಕೊಂಡು ಪರ್ಮನೆಂಬುವುದನ್ನು ಸ್ವಪ್ನಾವಸ್ಥೆಯಲ್ಲಿಯೂ ಕಾಣದೆ ಇರು ವುದು ಎಲ್ಲರಿಗೂ ತಿಳಿದ ಅಂಶವಾಗಿದೆ. ಈ ಉಪಾಧ್ಯಾಯರುಗಳು ಒಂದು ಸಂಘವನ್ನಾದರೂ ಈ ತಾಲ್ಲೂಕಿನಲ್ಲಿ ಏರ್ಪಡು ಮಾಡಿ ತಮ್ಮಲ್ಲಿರುವ ಬುದ್ಧಿ ಮಾಂದ್ಯವನ್ನು ಹೋಗಲಾಡಿಸಿಕೊಂಡು ಇತರ ವಿಧವಾದ ವ್ಯಾಸಂಗಗಳಿಗೆ ಪ್ರವ ರ್ತಿಸದೆ ಉಪ್ಪು ತಿಂದ ಮನೆಗೆ ಎರಡು ಬಗೆಯದೆ ತಮ್ಮ ಕೈಲಾದ ಮಟ್ಟಿಗೂ ಪ್ರಕೃತಿಗನುಸಾರವಾದ ವಿದ್ಯಾಭ್ಯಾಸಕ್ಕೆ ಕಣ್ಣು ವಿಚಾರವನ್ನು ಮಾಡಿ ತಮ್ಮ ತಮ್ಮ ಸ್ಕೂಲನ್ನು ಏಳಿಗೆಗೆ ತರುವರೆಂಬದಾಗಿ ಕೋರುತ್ತೇನೆ. ವಿದ್ಯಾಭಿಮಾನಿ.

ಒಂದು ರೈಲ್ವೆ ಸ್ಟೇಷನ್ ವಿಚಾರ.

ಅಯ್ಯಾ,—ತುಮಕೂರಿಗೂ ಹಿರೇಹಳ್ಳಿಗೂ ಮಧ್ಯೆ ಕ್ಯಾತ್ಸಂದ್ರ ಟವನ್ನಿನಲ್ಲಿ ಒಂದು ಸ್ಟೇಷನ್ ಇಟ್ಟಿರುತ್ತಾರೆ. ಬಹುಶಾ 1916 ನೇ ಜನವರಿಯಿಂದ ಗಾಡಿ ಗಳನ್ನು ನಿಲ್ಲಿಸಬಹುದು. ಈ ಟವನ್ ಬೆಂಗಳೂರು ಮತ್ತು ಪೂಮ್ನೂರು ರಸ್ತೆ ಯಲ್ಲಿ ತುಮಕೂರಿಗೆ 3 ಮೈಲಿ ದೂರದಲ್ಲಿದೆ. ಸ್ಟೇಷನ್ ಆಗುವ ಸ್ಥಳದಿಂದಲೂ ಊರಿಗೆ ಒಂದು ಫರ್ಲಾಂಗು ದೂರ ಇರುತ್ತೆ. ಇಲ್ಲಿ ಜನವರಿ ತಿಂಗಳಿಂದ ಏಪ್ರಿಲ್ ತಿಂಗಳು ವರೆಗೂ ಆರು ತಿಂಗಳು ಸಹಸ್ರಾರು ಮಣ ಒಳ್ಳೇ ಅಡಿಕೆ ಯನ್ನು ತಯಾರು ಮಾಡಿ ಇತರ ಸ್ಥಳಗಳಿಗೆ ಸಾಗಾಟಕ್ಕೆ ಕಳುಹಿಸುವರು. ಮತ್ತು ಇಲ್ಲಿ ಅನೇಕ ತರಹ ಬೆಲೆಯ ಸಾಮಾನುಗಳೂ ಕಪಾರಾಗಿ ಹೋಗಿ ಬರುತ್ತಾರೆ. ಈ ಸ್ಟೇಷನ್ ಮುಂಭಾಗಕ್ಕೆ ಒಂದು ಫರ್ಲಾಂಗ್ ದೂರದಲ್ಲಿ ಪ್ರಸಿದ್ಧವಾದ ಶ್ರೀಸಿದ್ಧಗಂಗಾಮಠವೆಂಬ ಒಂದು ಕ್ಷೇತ್ರವಿದೆ. ಇಲ್ಲಿಗೆ ಪ್ರತಿ ನಿತ್ಯವೂ ಯಾತ್ರಾರ್ಥಿಗಳು ಬರುತ್ತಲೇ ಇರುತ್ತಾರೆ. ಇದೂ ಅಲ್ಲದೆ ಮಾರ್ಚ್ ತಿಂಗಳಲ್ಲಿ ಶಿವರಾತ್ರಿ ಕಾಲದಲ್ಲಿ ಆಗುವ ರಥೋತ್ಸವಕ್ಕೂ, ಎತ್ತುಗಳ ಜಾತ್ರೆಗೂ, ನವರಾತ್ರಿ ಕಾಲದಲ್ಲಿ ಆಗುವ ಉತ್ಸವಾದಿಗಳಿಗೂ ಬಹಳ ದೂರ ಸ್ಥಳ ದಿಂದ ಬರುವ ಸೋಬಕರಿಗೂ ವ್ಯಾಪಾರಸ್ಥರಿಗೂ ಇಷ್ಟು ಹತ್ತಿರದಲ್ಲಿ ರೈಲ್ವೆ ಸ್ಟೇಷನ್ ಆದದ್ದು ತುಂಬಾ ಅನುಕೂಲವಾಯ್ತು. ಮತ್ತು ಈ ಟವನ್ನಿಗೆ ಒಂದು ಮೈಲಿ ದೂರದಲ್ಲಿರುವ ಬೆಟ್ಟಹಳ್ಳಿಯ ಆಂಜನೇಯ ದೇವರ ರಥೋತ್ಸವ ಕಾಲಕ್ಕೆ (ಏಪ್ರಿಲ್ ತಿಂಗಳಲ್ಲಿ) ಬಹಳ ಜನಗಳು ಬಂದು ಸೇರುವರು. ಸ್ಟೇಷನ್ನಿಗೆ ಸುಮಾರು ಆರು ಮೈಲಿ ದೂರದಲ್ಲಿ ಪ್ರಖ್ಯಾತವಾದ ದೇವರಾಯ ನದುರ್ಗ ಬೆಟ್ಟದಲ್ಲಿನ ಕೋಟೆಗಳೂ, ವಿಷ್ಣು ರಥದ ಸೀನರಿಗಳೂ, ಬೇಸಿಗೆಯ ವಾಸಕ್ಕೆ ಯೋಗ್ಯವಾದ ಬಂಗಲೆಗಳೂ ನೋಡತಕ್ಕವುಗಳಾಗಿರುತ್ತವೆ. ಮತ್ತು ಇಲ್ಲಿ ಮಾರ್ಚ್ ತಿಂಗಳಲ್ಲಿ ನಡೆಯತಕ್ಕ ನರಸಿಂಹಸ್ವಾಮಿ ರಥೋತ್ಸವಕ್ಕೆ ಬರುವ ಸಾವಿರಾರು ಪ್ರಜೆಗಳಿಗೆ ಅನುಕೂಲ ಹೆಚ್ಚಾಯಿತು. ಇದೂ ಅಲ್ಲದೆ ಈ ಸ್ಟೇಷನ್ನಿಗೆ ಸುತ್ತುಮುತ್ತಿ ಇರುವ 20 ಗ್ರಾಮಗಳಿಗೆ ತುಂಬಾ ಅನುಕೂಲವಾಯ್ತು. ಪ್ರಜೆಗಳ ಉಪಯೋಗಕ್ಕಾಗಿ ಇಷ್ಟು ಸೌಕರ್ಯವನ್ನು ಏರ್ಪಡಿಸಿಕೊಟ್ಟ ನಮ್ಮ ಮೈಸೂರು ಸರ್ಕಾರದವರಿಗೂ, ಎಂ. ಎಸ್. ಎಮ್. ರೈಲ್ವೆ ಕಂಪನಿಯವರಿಗೂ ಬಹಳ ಕೃತಜ್ಞರಾಗಿರುತ್ತೇವೆ. ಕೆ. ಆರ್. ವಿ.

ಭಾರತೀಯರ ಸಹಕಾರಿ ಸಂಘ.

ಅಯ್ಯಾ,—ಚಿತ್ರದುರ್ಗದ ಕೆಳಗೋಟೆ ಗ್ರಾಮದಲ್ಲಿ ಇರುವ ಗೋಸಾಯಿ ಮಠವು ತಾ 18-11-16 ನೇ ಗುರುವಾರ ಅಲಂಕರಿಸಲ್ಪಟ್ಟಿತ್ತು. ಅಲ್ಲಿ ಮಧ್ಯಾಹ್ನ ಶ್ರೀ ದತ್ತಾತ್ರೇಯ ಪೀಠದ ಆನಂದಭಾರತಿ ಗುರುಸ್ವಾಮಿಗಳವರ ಶಿಷ್ಯಮಂಡ ಲಿಯ ಸಂಘದ ಸಭೆ ಸೇರಿ ಆ ಸಭಿಕರ ಪ್ರಾರ್ಥನೆಯಂತೆ ಮ॥ ಕೆ. ತುಳಸಿರಾಮ ಸಿಂಗ್‌ರವರು ಅಗ್ರಾಸನವನ್ನು ವಹಿಸಿದರು. ಮ॥ ಮರಾಟೆ ಜಾಬ್‌ಗೋವಿಂದ ರಾಯರು—ಈ ಮಠವು ಹಾಳಾಗಿ ಬಿದ್ದು ಹೋಗುತ್ತಾ ಇತ್ತು. ಮತ್ತು ಆ ಪೀಠ ಕ್ಕೆ ಗುರುಗಳಾದ ಆನಂದಭಾರತಿ ಸ್ವಾಮಿಗಳು ಕೇವಲ ವೃದ್ಧಾಪ್ಯದಿಂದ ಯಾವ ಕೆಲಸವೂ ನಡೆಸಲು ಶಕ್ತಿಯಿಲ್ಲದವರಾದ್ದರಿಂದ ಮಠವು ಕೇವಲ ಹೀನಸ್ಥಿಗೆ ಬಂದಿರುವುದಲ್ಲದೆ ಇಲ್ಲಿಗೆ ಬರುವ ಅನಾಥ ಗೋಸಾಯಿಗಳಿಗೆ ತಕ್ಕ ಏಲಕರಣೆ ನಡೆಯದೆ ಹೋಗಿತ್ತು. ಈಗ ಮ॥ ಮರಾಟೆ ಗಾಯಕವಾಡ್ ಪೀರೋಜರಾವ್ ವಗೈರೆ ಸ್ವಜನರೂ ಸಹ ಅತ್ಯಂತ ಭಕ್ತಿಪೂರ್ವಕವಾಗಿ ಮಠವನ್ನು ಊರ್ಜಿತಪ ಡಿಸಲು ತುಂಬಾ ಮುತುವರ್ಜಿ ವಹಿಸಿ, ಗೋಸಾಯಿಗಳ ಮಠವನ್ನು ಅಭಿವೃದ್ಧಿ ಮಾಡಿಸಿ ಆ ಪೀಠಕ್ಕೆ ತಕ್ಕ ವಿದ್ವಾಂಸರಾದ ರತ್ನಭಾರತಿ ಎಂಬ ಮಹಾರಾಷ್ಟ್ರ ದೇಶದ ಪಂಡಿತರನ್ನು ಕರೆತರಿಸಿ ಈ ಸಿಂಹಾಸನಾಧಿಪತಿ ಗುರುಗಳೆಂದು ನಿಷ್ಕರ್ಷೆ ಮಾಡಿಸಿರುವುದಕ್ಕಾಗಿ ಸದರಿ ಸಂಘದ ರಿಪೋರ್ಟನ್ನು ಓದಿದರು. ಆಗ್ಗೆ ಊರಿನ ಳಗಿನ ಎರಡನೇ ಸ್ವಜನರೂ ಗ್ರಾಮದ ಪಟೇಲ್ ಮುಂತಾದ ಜನರೂ ಈ ಸಮಾ ರಂಭಕ್ಕೆ ಬಂದಿದ್ದರು. ಅಲ್ಲಿ ಕವಿಪುರುಷರಾದ ಮಾಧಪ್ಪನವರು ಗುರುಶಿಷ್ಯರ ಉಪನ್ಯಾಸವನ್ನು ಸ್ವಾರಸ್ಯವಾಗಿ ಹೇಳಿದರು. ದೇವರ ಪ್ರಾರ್ಥನೆ ಮಂಗಳ ವಗೈರೆ ನಡೆದು ಶ್ರೀಮನ್ ಮಹಾರಾಜರವರಿಗೂ, ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೇಯಃಪ್ರಾರ್ಥನೆಗಳನ್ನು ಮಾಡಿದರು. ಕಡೆಯಲ್ಲಿ ಸರ್ವರೂ ಎದ್ದು ಚಕ್ರ ವರ್ತಿ ಸಾರ್ವಭೌಮರವರಿಗೆ ಜಯಧ್ವನಿಯನ್ನು ಹೇಳುತ್ತಾ ಆನಂದದಿಂದ ತೆರಳಿದರು. ಪ್ರತ್ಯಕ್ಷ.

ಒಬ್ಬ ಸ್ಕೂಲ್ ಮಾಸ್ಟರಿಗೆ ಸನ್ಮಾನ.

ವನ್ನು ಮಾರಲಿಕ್ಕೆ ಕಳೆದ ಎರಡು ವರುಷಗಳಿಂದಲೂ ಏಜಂಟರನ್ನಾಗಿಟ್ಟಿದ್ದೆವು. ಇವರು ಪರಸ್ಥಳದಿಂದ ಬರುವ ಆರ್ಡರುಗಳಿಗೂ ಮತ್ತು ಸ್ಥಳದಲ್ಲಿ ಕೊಳ್ಳುವವರಿಗೂ ಬೇರೆಯವರಿಂದ ತಯಾರಾಗಿದ ಸಾಲಾಮಿಸ್ರಿ ಪಾಕ್ ಎಂಬುದನ್ನು ಡಿಲ್ಲಿ ವೈದ್ಯರು ಡಿ. ಮನ್ನಾಲಾಲ್ ಯವರಿಂದ ತಯಾರಾದ ಸಾಲಾಮಿಸ್ರಿ ಮುರಬ್ಬ ವೆಂದು ಹೇಳಿ ಬಿಕರಿ ಮಾಡುತ್ತಾ ಜನಗಳಿಗೂ ನನಗೂ ಮೋಸಮಾಡುತ್ತಿದ್ದದ್ದನ್ನು ನಾನು ಕಂಡು ಇವರು ನಮ್ಮ ಏಜಂಟರಾಗಿರುವದನ್ನು ತೆಗೆದು ವರ್ತಮಾನ ಪತ್ರಿಕೆಗಳಲ್ಲಿಯೂ, ಕೇಟಲಾಗಿನ...ಲೂ ಇವರ ಹೆಸರನ್ನು ತೆಗೆದುಬಿಟ್ಟೆವು. ಈಗಲೂ ಜನಗಳಿಗೆ ಮೋಸಮಾಡು...ಸ್ಕರ ನಮ್ಮ ಟ್ರೇಡ್ ಮಾರ್ಕಿನಂತೆಯೇ ಬೇರೆ ಒಂದು ನಕ್ಕಲ್ ಟ್ರೇಡ್ ...ನ್ನು ಮತ್ತು ಕೇಟಲಾಗನ್ನು ತಯಾರಾಗಿಸಿ ನಕ್ಕಲ್ ಮಾಲನ್ನು ಸಾ...ಮಿಸ್ರಿ ಮುರಬ್ಬವೆಂದು ಹೇಳಿ ಬಿಕರಿ ಮಾಡುತ್ತಾ ಜನಗಳಿಗೆ ಮೋಸಮಾಡುತ್ತಿ...ರು. ಆದ್ದರಿಂದ ಇನ್ನು ಮುಂದೆ ಸಾಲಾಮಿಸ್ರಿ ಮುರಬ್ಬವನ್ನು ಕೊಳ್ಳುವಂಥ...ವರು ಡಬ್ಬಿಯಲ್ಲಿ ಮುದ್ರಿಸಿರುವ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಇರುವದ...ನ್ನು ನೋಡಿ ತೆಗೆದುಕೊಳ್ಳಬೇಕೆಂದು ಸಕಲರಿಗೂ ಶ್ರುತಪಡಿಸಿರುತ್ತೇನೆ.

ಕ್ರಯ ಡಬ್ಬಿ 1 ಕ್ಕೆ ರೂಪಾಯಿ 2-0-0.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ಡೇವಿ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು; ಜಲ್ಲಡೆ ರೇಕುಗಳು; ಆಸ್ಟ್ರೇಲಿಯಾ ದೇಶದ ನಾಟಿ ಇಡ್ಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-12]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.
Branches—Bezwada and Tanjore.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾವ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮರೆತು ಬಿಟ್ಟರೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಕಣ್ಣಿನಲ್ಲಿ ಥಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಡದೆ ಬಾಯಾರಿಕೆ; ಆಲಸ್ಯ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣು ಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಸುಗವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾವ್ಲವಿಷವನ್ನು ಹೊರಕ್ಕೆ ಕಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [176-18]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತ್ನಜ್ಯೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.
ಮತ್ತು
ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಬರುತ್ತೆ.

ಈ ಕೂದಲ ರಂಗನ್ನು ನೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಲಭವಾಗಿ ಹಚ್ಚಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಪತ್ತೆಯಾಗುವುದಿಲ್ಲ; ರಂಗು ಎಂದಿಗೂ ಕೆಡಮೆಯಾಗುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ: ರತ್ನಜ್ಯೋತಿ ಕೂದಲೆಣ್ಣೆ ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-2]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
ಚೀನಾ ಬಜಾರ್ ರೋಡ್, ಮದರಾಸ್.

ESANOFELE

"ಈಸಾನೋಫೆಲಿ" ಯು

ಮಲೇರಿಯಾ ಜ್ವರವನ್ನೂ, ಹವಾ ಬದಲಾವಣೆಯಿಂದುಂಟಾಗುವ
ಸಮಸ್ತ ಜಾತಿಯ ಜ್ವರಗಳನ್ನೂ ಗುಣಪಡಿಸುವುದಕ್ಕೆ
ಕ್ವೈನೀನ್ ಪುಡಿಗಿಂತ ಎಷ್ಟೋ ಮೇಲಾದದ್ದು.

ಇದನ್ನು ಸೇವಿಸುವುದರಿಂದ ಓಕರಿಕೆ, ತಲೆನೋವು, ಅಥವಾ ಹೊಟ್ಟೆ ತೊಳಸುವುದು ಉಂಟಾಗದೆ ಶರೀರಧರ್ಮವನ್ನು ಬಲಪಡಿಸುತ್ತದೆ; ಕೆಂಪು ರಕ್ತ ಬಿಂದುಗಳನ್ನು ವೃದ್ಧಿಮಾಡಿ ರಕ್ತಕ್ಕೆ ವೀರ್ಯವನ್ನು ಉಂಟುಮಾಡಿ, ಮತ್ತೆ ಮಲೇರಿಯಾ ಜ್ವರ ಬಾರದಂತೆ ಸಂಪೂರ್ಣ ಆರೋಗ್ಯವನ್ನೂ ಬಲವನ್ನೂ ಕೊಡಬಲ್ಲದು.

ಈಸಾನೋಫೆಲಿಯ ಪ್ರಧಾನವಾದ ಗುಣವೇನೆಂದರೆ—ಇದು ಖಂಡಿತವಾಗಿಯೂ ಸಕಲ ವಿಧವಾದ ಜ್ವರಗಳನ್ನೂ ಬಾರದಂತೆ ಸಂರಕ್ಷಣೆ ಮಾಡುವುದು; ಮತ್ತೂ ವಾಸಿಮಾಡುವುದರಲ್ಲಿ ಖಚಿತವೆನಿಸಿಕೊಂಡಿದೆ

ಕ್ರಯ 1 ಬಾಟ್ಲಿಗೆ ರೂ 2-0-0. ಎಲ್ಲಾ ಔಷಧ ವ್ಯಾಪಾರದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸೀಸೆನೋಪಾದಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ

ಮೈಸೂರು ಸಂಸ್ಥಾನದ ಏಜಂಟರು:—ಜೆ. ದಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪ್ಪೋ— [176-18]

ಬಿ. ಜಿ. ಗೋರಿಯೋ ಕಂಪನಿ, ಪಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

« ಸಂಗೀತ ವಿದ್ಯಾದಾಯಿನಿ. » ಕ್ರಯ 12 ಆಣೆ.

ಇತರರ ಸಹಾಯವಿಲ್ಲದೆ ತಾವಾಗಿಯೇ ಕಲಿತು ಸಂಗೀತ ಹಾಡಬೇಕೆಂದೂ, ಹಾರ್ಮೋನಿಯಂ ನುಡಿಸಬೇಕೆಂದೂ ಅಪೇಕ್ಷಿಸುವವರಿಗೆ ಬೇಕಾದ ವರ್ಣಗಳನ್ನು ಚೆನ್ನಾಗಿ ಬೋಧಿಸತಕ್ಕ ಗ್ರಂಥವು ಇದೊಂದೇ. ಕಲಿಯುವವರಿಗೆ ಸುಲಭವಾಗಿ ತಿಳಿಯುವಂತೆ ಅನೇಕ ಗೀತ, ವರ್ಣ, ಕೃತಿಗಳು ಸ್ವರ, ಸಾಹಿತ್ಯ, ತಾಳ ಗುರ್ತುಗಳಿಂದ ಬರೆಯಲ್ಪಟ್ಟಿವೆ. ತಾವುಸಮಾಡದೆ ಬೇಗನೆ ತರಿಸಿಕೊಳ್ಳಿ. ಅಂಚೆಕೂಲಿ 6 ಆಣೆ. ಹಾಸ್ಯಕಥಾಪ್ರಧಾನವಾದ ಅನೇಕ ಕಥೆಗಳಿವೆ.

ವಿಳಾಸ:—ಸಿ. ಪುಟ್ಟಯ್ಯ ಬ್ರದರ್ಸ್,

[289-1] ಹೊಸೂರು ರೀಮೌಂಟ್ ಡಿಪೋ, ಸೇಲಂ ಜಿಲ್ಲೆ.

ABSTRACT NOTICE.

Dated 20th December, 1915.

Sealed tenders for the supply of cleaned good kulthi and chenna for the Imperial Service Transport Corps and Government Stables will be received up to 2 p.m. on Tuesday, the 4th January, 1916, in the office of the Military Secretary to His Highness the Maharaja of Mysore, Bangalore. The contract for the supply of the grains will be from 1st March, 1916, to end of February, 1917.

For further particulars, reference is invited to the detailed notice, published in the issue of the Mysore Gazette, dated 16th December, 1915, page 2468, Part II.

(Sd.) C. Venkata Rao,
Office Assistant
[288-1] *to the Military Secretary (in charge).*

ವೃತ್ತಾಂತ ಪತ್ರಿಕೆ.

—:o:—

೧೯೧೫ ನೇ ಇಸವಿ ಡಿಸೆಂಬರ್ ೩೦ ನೇ ಗುರುವಾರ.

ಮೈಸೂರು ಸಂಸ್ಥಾನದ ಆಳ್ವಿಕೆಯ ರಿಪೋರ್ಟು.

ಮೈಸೂರು ಗವರ್ನ್ಮೆಂಟಿನವರು ಕಳೆದ ಸಾಲಿನ ಆಳ್ವಿಕೆಯ ರಿಪೋರ್ಟನ್ನು ವರುಷ ಕಳೆದ ಆರು ತಿಂಗಳೊಳಗಾಗಿಯೇ ಪ್ರಕಟ ಮಾಡಿ ನಮಗೊಂದು ಪ್ರತಿಯನ್ನು ಕಳುಹಿಸಿದ್ದಾರೆ. ಕಾಲಾತೀತ ವಾಗದಂತೆ ಇಷ್ಟು ಬೇಗನೆ ಅದು ಪ್ರಕಟವಾದದ್ದು ಸಂತೋಷ ಪ್ರದವಾಗಿರುತ್ತದೆ. ಯಾಕೆಂದರೆ ನಮ್ಮ ಸೀಮೆಯ ಹಲವು ಇಲಾಖೆಗಳ ಸಾಲಿಯಾನೆಯ ರಿಪೋರ್ಟುಗಳು ಇನ್ನೂ ನಮಗೆ ತಲುಪಿರುವುದಿಲ್ಲ. ಸಂಸ್ಥಾನಾಡಳಿತೆಯ ಕಾರುಬಾರುಗಳ ರಿಪೋರ್ಟನ್ನು ವರುಷ ಕಳೆದ ಆರು ತಿಂಗಳೊಳಗಾಗಿಯೇ ಪ್ರಕಟಮಾಡಿರುವುದು ಸಾಧ್ಯವಾಗಿರುವ ಪಕ್ಷದಲ್ಲಿ ಇಲಾಖೆಗಳ ವಾರ್ಷಿಕ ರಿಪೋರ್ಟುಗಳನ್ನು ಅದಕ್ಕಿಂತ ಎಷ್ಟೋ ಮುಂದಾಗಿಯೇ ಪ್ರಕಟ ಮಾಡಬೇಕಾಗಿತ್ತು. ನಮ್ಮ ಮುಂದಿರುವ ಆಳ್ವಿಕೆಯ ರಿಪೋರ್ಟನ್ನು ಓದುತ್ತಾ ಬರುವಲ್ಲಿ ನಮ್ಮ ದಿವಾನ್‌ರವರ ಜಾಣ್ಮೆಯ ಚಿಹ್ನೆಗಳು ಅದರಲ್ಲಿ ಗೋಚರವಾಗುತ್ತವೆ. ಮೊದಲನೇ ಅಧ್ಯಾಯದಲ್ಲಿ ಸಂಸ್ಥಾನಾಡಳಿತೆಗೆ ಸಂಬಂಧಪಡುವಂಥಾ ಸಾಮಾನ್ಯ ಮತ್ತು ರಾಜಕೀಯ ವಿಚಾರಗಳು ವಿವರಿಸಲ್ಪಟ್ಟಿರುವವು. ಈ ಪೈಕಿ ಹಲವು ವಿಚಾರಗಳು ನಮ್ಮ ಸಂಪದಭ್ಯುದಯ ಸಮಾಜದಲ್ಲಿ ವ್ಯವಹರಿಸಲ್ಪಟ್ಟವುಗಳಾಗಿರುತ್ತವೆ. ಈಗಿನ ಗವರ್ನ್ಮೆಂಟಿನವರು ಸಂಸ್ಥಾನದಲ್ಲಿ ನಿತ್ಯಗಟ್ಟಲೆ ನಡೆಯುವಂಥಾ ಕಾರುಬಾರುಗಳನ್ನು ಶೋಧಿಸಿ ಸುದ್ಧಿಮಾಡಿ ಕ್ರಮಪಡಿಸುವುದಕ್ಕಿಂತಲೂ ವಿಶೇಷತರವಾದ ಅಭಿವೃದ್ಧಿಗಳಿಗೆ ತುಂಬಾ ಗಮನಕೊಟ್ಟು ಅವುಗಳಲ್ಲೇ ಹೆಚ್ಚಾದ ಅಭಿರುಚಿಯನ್ನು ವಹಿಸಿರುವಂತೆ ತೋರ್ಪಡಿಸಿಕೊಳ್ಳುತ್ತಲಿದ್ದಾರೆ.

ನಮ್ಮ ಸಂಸ್ಥಾನದಲ್ಲಿ ಸಾಲೇ ಸಾಲು ಹೆಚ್ಚು ಹೆಚ್ಚಾಗಿ ಜಮೀನು ವ್ಯವಸಾಯಕ್ಕೆ ಬರುತ್ತಿರುವುದನ್ನು ನೋಡಿ ನಾವು ಸಂತೋಷಪಡುವೆವು. ಕಳೆದ ಸಾಲಿನಲ್ಲಿ ಒಟ್ಟು 62,11,302 ಎಕರೆ ಜಮೀನು ಅಂದರೆ ಹಿಂದಿನ ಸಾಲಿಗಿಂತ 1,87,836 ಎಕರೆ ಹೆಚ್ಚಾಗಿ ವ್ಯವಸಾಯಕ್ಕೆ ಬಂದಿರುತ್ತದೆ. ಈ ಸಂಗತಿಯನ್ನು ತಿಳಿಸಿರುವುದರ ಮೇಲ್ಭಾಗದಲ್ಲಿ ವ್ಯವಸಾಯಕ್ಕೆ ತರಲ್ಪಟ್ಟ ಜಮೀನು ಬರೇ ಜಾಸ್ತಿ 12,791 ಎಕರೆ ಎಂದು ಕಾಣಿಸಿದೆ. ಈ ಎರಡು ಸಂಗತಿಗಳೂ ಪರಸ್ಪರ ಹ್ಯಾಗೆ ಸರಿಹೋಗುವವೋ ನಮಗೆ ತಿಳಿಯಲಿಲ್ಲ. ನಮ್ಮ ಸರ್ಕಾರದವರು ಪ್ರಕಟಮಾಡುವ ಬಗೆಬಗೆಯ ಲೆಕ್ಕಗಳಲ್ಲಿ ನಾನಾ ರೀತಿಯಾದ ಸಂಖ್ಯೆಗಳನ್ನು ಕಾಣಿಸುವರು. ಈ ಸಂಖ್ಯೆಗಳು ಖಂಡಿತವಾಗಿ ಖರೆಯೆಂದು ನಂಬುವುದಕ್ಕಿಂತಲೂ ನರಸಮಾರು ಇರಬಹುದೆಂದು ಊಹಿಸಿಕೊಳ್ಳಬೇಕಾಗಿದೆ. ವ್ಯವಸಾಯದಲ್ಲಿರುವ ಒಟ್ಟು ಜಮೀನುಗಳ ಪೈಕಿ 9,31,863 ಎಕರೆ ಜಮೀನಿನಲ್ಲಿ ಎರಡು ಫಸಲು ಆಯಿತು; ಅಂದರೆ ಹಿಂದಿನ ಸಾಲಿಗಿಂತ 29,628 ಎಕರೆ ಕಡಮೆಯಾಗಿದೆ. ಒಟ್ಟಾಗಿ ಜಮಾ ಕಂದಾಯದ ಬಾಬಿನಲ್ಲಿ 1,01,63,969 ರೂಪಾಯಿ ವಸೂಲಾಯಿತೆಂದೂ, ಇನ್ನೂ 17,60,108 ರೂಪಾಯಿ ಬಾಕಿ ಉಳಿದಿರುವುದೆಂದೂ ಗೊತ್ತಾಗುತ್ತದೆ. ಈ ಬಾಕಿಯು ಗುದಸ್ತಾ ಸಾಲಿನ ಬಾಕಿಗಿಂತಲೂ ಬಹಳ ಹೆಚ್ಚಾಯಿತು. ರೈತರು ತಮ್ಮ ಧಾನ್ಯಾದಿಗಳನ್ನು ವಿಕ್ರಯ ಮಾಡಲು ಗಿರಾಕಿಗಳು ಒದಗಲಿಲ್ಲವೆಂದೂ, ಆದುದರಿಂದ ಕಂದಾಯಗಳು ವಸೂಲಾಗದೆ ಬಾಕಿ ನಿಂತವೆಂದೂ ಕಾರಣ ಹೇಳಲಾಗಿದೆ. ಇದರ ಜೊತೆಗೆ ತಾಲ್ಲೂಕು ರೆವಿನ್ಯೂ ಅಧಿಕಾರಿಗಳು ಕಂದಾಯದ ವಸೂಲಿಯೇ ಮೊದಲಾದ ಸಹಜವಾದ ಬಾಬುಗಳಿಗೆ ಗಮನ ಕೊಡುವುದಕ್ಕಿಂತ ವಿಶೇಷ ಸಮಯವನ್ನು ನಿರರ್ಥಕವಾದ ಅಭ್ಯುದಯ ಕಾರ್ಯಗಳೇ ಮೊದಲಾದವುಗಳಿಗೆ ವಿನಿಯೋಗಿಸಿರಬೇಕೆಂಬ ಕಾರಣವೂ ತೋರುವುದು.

ಕ್ರಿಮಿನಲ್ ಯಾನೆ ತಕ್ಸೀರುಗಳನ್ನು ಕುರಿತು ಬರೆಯಲ್ಪಟ್ಟಿರುವ ಅಧ್ಯಾಯಗಳು ಓದುವುದಕ್ಕೆ ಅಷ್ಟೇನೂ ಸಂತೋಷಪ್ರದವಾಗಿಲ್ಲ. ತಕ್ಸೀರುಗಳು 6,069 ರಿಂದ 6,730 ಕ್ಕೆ ಹೆಚ್ಚಿದವು. 6,786 ಜನಗಳು ಅಂದರೆ ಹಿಂದಿನ ಸಾಲಿಗಿಂತ 920 ಮಂದಿ ಹೆಚ್ಚಾಗಿ ದಸ್ತಗಿರಿ ಮಾಡಲ್ಪಟ್ಟರು. ಹಿಂದಿನ ವರುಷ ಸಂಸ್ಥಾನಾದ್ಯಂತ 61 ಕೊಲೆಗಳು ನಡೆದದ್ದೇ ಹೆಚ್ಚು; ಕಳೆದ ಸಾಲಿನಲ್ಲಾದರೋ ಅದಕ್ಕಿಂತಲೂ ಹೆಚ್ಚಾಗಿ ಅಂದರೆ 71 ಕೊಲೆಗಳು ಆಗಿರುತ್ತವೆ. ಆದಾಗ್ಯೂ 22 ಮೊಕದ್ದಮೆಗಳಲ್ಲಿ ಮಾತ್ರ ರುಜುವಾತು ಬಂದು ಅಪರಾಧಿಗಳಿಗೆ ಶಿಕ್ಷೆಯಾಗಿರುವುದು. ಅದರಲ್ಲೂ ನಾಲ್ವರಿಗೆ ಮಾತ್ರ ಮರಣದಂಡನೆಯಾಗಿರುವಂತೆ ಕಾಣುತ್ತದೆ. ರಿಪೋರ್ಟಾದ ತಕ್ಸೀರುಗಳು ಕೂಡ 20,208 ರಿಂದ 21,806 ಕ್ಕೆ ಹೆಚ್ಚುತ್ತವೆ. ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲ್ಪಟ್ಟ ಜನಗಳ ಸಂಖ್ಯೆಯೂ 31,487 ರಿಂದ 31,995 ಕ್ಕೆ ಹೆಚ್ಚಿತು.

ಕಸಬು ಮತ್ತು ಕಾರ್ಖಾನೆಗಳ ವಿಚಾರವನ್ನು ಕುರಿತು ಬರೆದಿರುವ ಅಧ್ಯಾಯದಲ್ಲಿ ಕೆಲವು ಅಂಶಗಳು ಓದುವುದಕ್ಕೆ ತುಂಬಾ ಸ್ವಾರಸ್ಯವಾಗಿರುವವು. ಕಳೆದ ಸಾಲಿನಲ್ಲಿ ಇಪ್ಪತ್ತೇಳು ಸ್ಥಳಗಳಲ್ಲಿ 1,68,000 ರೂಪಾಯಿ ಬಿಲಾಸಿನ ಯಂತ್ರಗಳು ಇಡಲ್ಪಟ್ಟವೆಂದು ತಿಳಿಸಲ್ಪಟ್ಟಿದೆ. ಈ ಪೈಕಿ ಮೂರು ಯಂತ್ರಗಳು ಅಂದರೆ—ಹರಿಹರದಲ್ಲಿ ನೀರು ಎತ್ತುವ ಯಂತ್ರ, ಬೆಂಗಳೂರಿನಲ್ಲಿ ಎಣ್ಣೆ ಮಾಡುವ ಯಂತ್ರ, ಫ್ರೆಂಚ್ ರಾಕ್ಸಿನಲ್ಲಿ ಭತ್ತ ಕುಟ್ಟುವ ಯಂತ್ರ—ಈ ಮೂರು ಲಾಭಕರವಾಗಿರುವವು. ಸಂಸ್ಥಾನಾದ್ಯಂತ ಕಸಬುಗಳಿಂದ 10,83,80,000 ರೂಪಾಯಿನ ಸರಕುಗಳು ತಯಾರಾಗಲ್ಪಟ್ಟವೆಂದು ತಿಳಿಸಲ್ಪಟ್ಟಿದೆ. ಸರ್ಕಾರದವರು ಈ ಸಂಖ್ಯೆಯನ್ನು ಹ್ಯಾಗೆ ಗೊತ್ತುಮಾಡಿದರೋ ತಿಳಿಯಲಪೇಕ್ಷಿಸುವೆವು. ಬರಗಾಲವೇನೂ ಪ್ರಾಪ್ತವಾಗಲಿಲ್ಲವಾದಾಗ್ಯೂ ಪ್ರಜೆಗಳ ಜೀವನ ಸ್ಥಿತಿಗತಿಗಳು ಚೆನ್ನಾಗಿರಲಿಲ್ಲವೆಂದು ಹೇಳಬಹುದು.

ಕೋಲಾರ್ ಚಿನ್ನದ ಗಣಿಗಳಲ್ಲಿ ಚಿನ್ನ ತೆಗೆದದ್ದು ವಿನಾ ಇತರ ಕಡೆಗಳಲ್ಲಿ ಗಣೀ ಕೆಲಸಗಳು ಅಷ್ಟೇನೂ ನಡೆಯಲಿಲ್ಲ. ಆ ಗಣಿಗಳೊಳಗೂ ಹಿಂದಿನ ವರುಷಕ್ಕಿಂತಲೂ ಹೆಚ್ಚು ಚಿನ್ನವನ್ನು ತೆಗೆದಿರುವಂತೆ ಕಾಣಬರುವುದಿಲ್ಲ. ಮೇಘರಾಶಿಯ ಆವರಣದಿಂದ ವಾಯುಮಂಡಲದಲ್ಲಿ ಶಾಂತಿ ತಪ್ಪಿ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಯಂತ್ರಗಳು ಸರಾಗವಾಗಿ ಕೆಲಸಮಾಡದೆ ಶಕ್ತಿಯನ್ನು ಕೊಡದಂತೆ ಅನೇಕ ವೇಳೆ ಅಡಚಣೆಗಳುಂಟಾದವು. ಈ ವಿದ್ಯುಚ್ಛಕ್ತಿ ಇಲಾಖೆಯು ಸಾಲೀಯಾನಾ 8,08,863 ರೂಪಾಯಿ ವರಮಾನವನ್ನು ತರುತ್ತಿದೆ. ಯುದ್ಧದ ದೆಸೆಯಿಂದ ರೈಲ್ವೆಯ ಆಮದು ರಫ್ತು ಕಡಮೆಯಾಯಿತಾದರೂ ಈ ಬಾಬಿನ ಉತ್ಪತ್ತಿಯಲ್ಲಿ ವಿಶೇಷ ಕಡಮೆಯಾಗಲಿಲ್ಲ.

ಈ ಆಳ್ವಿಕೆಯ ರಿಪೋರ್ಟಿನ ವಿಚಾರವಾಗಿ ಹೇಳಬಹುದಾದ ಸ್ವಾರಸ್ಯವಾದ ಸಂಗತಿಗಳು ಇನ್ನೂ ಅನೇಕವಾಗಿರುತ್ತವೆ. ನಮ್ಮ ಸರ್ಕಾರದವರು ಆಳ್ವಿಕೆಯ ಕಾರುಕರ್ಬಾರುಗಳನ್ನು ತೃಪ್ತಿಕರವಾಗಿ ನಡಿಸಿಕೊಂಡು ಬಂದಿರುವುದು ಸಂತೋಷಪ್ರದವಾಗಿದೆ. ಪ್ರಾಸ್ತಿ ವರುಷವು ಹೋದ ವರುಷಕ್ಕಿಂತ ಇನ್ನೂ ಶ್ರೇಯಸ್ಕರವಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.

ಬಡವರನ್ನು ಐಶ್ವರ್ಯವಂತರಾಗ ಮಾಡುವದಕ್ಕೆ ಬಡವನಾದ ಐಶ್ವರ್ಯವಂತನು.

ರಷ್ಯಾ ಚಕ್ರಾಧಿಪತಿಯಾದ ಮಹಾ ಪೀಟರನನ್ನು ಕುರಿತು ವಾಚಕರು ಪ್ರಾಯಶಃ ಕೇಳಬಲ್ಲರು. ಈತನು ಸಾಂರಾಜ್ಯದ ಸಿಂಹಾಸನವನ್ನು ಕೈಕೊಂಡ ಕೆಲವು ಕಾಲದೊಳಗೆ ತನ್ನ ಪ್ರಜೆಗಳ ಆಗಿನ ಪರಿಸ್ಥಿತಿಯನ್ನು ಚನ್ನಾಗಿ ತಿಳಿದುಕೊಂಡನು. ಅವರು ಅವಿದ್ಯಾವಂತರೂ ಪಾಮರರೂ ಅನಾಗರಿಕರೂ ಬಡವರೂ ಎಂದು ಆತನಿಗೆ ಗೋಚರವಾಯಿತು. ಆತನು ಈ ಮಹಾಪದವನ್ನು ಕುರಿತು ನಾನೇಕೆ ಚಿಂತಿಸಬೇಕು? ನಾನು ಚಕ್ರವರ್ತಿಯಷ್ಟೆ ಎಂದು ತನಗೆ ಲಭಿಸಿದ ಸಾಂರಾಜ್ಯ ಪದವಿಯನ್ನು ಸುಖವಾಗಿ ಅನುಭವಿಸುತ್ತಿರಬಹುದಾಗಿತ್ತು. ಆದರೆ ಆತನು ಸ್ವಾರ್ಥಪರನಲ್ಲ. ಪ್ರಜಾಕ್ಷೇಮವನ್ನೇ ಬಹಳವಾಗಿ ಹಾರೈಸುತ್ತಿದ್ದನು. ಆದುದರಿಂದ ತನ್ನ ಪ್ರಜೆಗಳನ್ನು ತಿದ್ದುವದು ಅರಸನಾದ ತನ್ನ ಕರ್ತವ್ಯವೆಂದು ಭಾವಿಸಿ ತಾನೇ ಅನ್ಯದೇಶಗಳಿಗೆ ಹೋಗಿ ಅಲ್ಲಿ ವಿದ್ಯೆ, ನಾಗರಿಕತೆ, ಕೈಕೆಲಸ, ವ್ಯವಸಾಯ ಮುಂತಾದವುಗಳನ್ನು ಕಲಿತು ಬರಬೇಕೆಂದು ನಿಶ್ಚಯಿಸಿಕೊಂಡನು. ಇದಕ್ಕಾಗಿ ಆತನು ಚಕ್ರವರ್ತಿಯ ಕಿರೀಟವನ್ನೂ ಉಡುಪನ್ನೂ ತೆಗೆದುಬಿಟ್ಟು ಸಾಧಾರಣವಾದ ಕೂಲಿಕಾರರಂತೆ ವೇಷವನ್ನು ಧರಿಸಿಕೊಂಡು ಇಂಗ್ಲೆಂಡಿಗೆ ಬಂದನು. ಅಲ್ಲಿನ ಸಮುದ್ರತೀರದ ಬಂದರುಗಳನ್ನು ಹೊಕ್ಕು ಆ ಪಟ್ಟಣಗಳಲ್ಲಿ ಹಡಗುಗಳನ್ನು ಕಟ್ಟುವ ಬಡಗಿಯರಲ್ಲಿ ಬೆರೆತು ಅವರ ಮನೆಗಳಲ್ಲಿ ವಾಸವಾಗುತ್ತ ಅವರ ಸಾಧಾರಣ ತರದ ಊಟವನ್ನು ಮಾಡಿ ಅವರ ಉಡುಪನ್ನು ಹೊದೆದು ಅವರು ಮಾಡುವ ಕೆಲಸವನ್ನು ಕಲಿತು ಅದರಲ್ಲಿ ನಿಪುಣನಾದನು. ಮತ್ತು ಅಚ್ಚಿನ ಕಾರ್ಖಾನೆಗಳಲ್ಲಿ ಕೆಲಸಮಾಡುವವರ ಜೊತೆಯಲ್ಲಿ ಸೇರಿ ಪುಸ್ತಕ ಮುದ್ರಣದ ಕೆಲಸವನ್ನೂ ಕಬ್ಬಿಣ ಕೆಲಸದವರ ಜೊತೆಗೆ ಸೇರಿ ಕಬ್ಬಿಣಕೆಲಸವನ್ನೂ ರೈತರನ್ನು ಆಶ್ರಯಿಸಿ ವಾಸ್ತವತ್ತಾಗಿ ಕೃಷಿಯನ್ನೂ ಕಲಿತುಕೊಂಡನು. ಹೀಗೆ ಅನೇಕ ವರುಷಗಳು ಆತನು ರಾಜಪದವಿಯನ್ನು ಬಿಟ್ಟುಬಿಟ್ಟು ತನ್ನ ಪ್ರಜೆಗಳಿಗೆ ಬೇಕಾದ ವಿದ್ಯೆಗಳನ್ನು ತಾನೇ ಕಲಿತು ಅಲ್ಲಿಂದ ಸ್ವರಾಜ್ಯಕ್ಕೆ ಬಂದು ಅಲ್ಲಿ ತನ್ನ ಪ್ರಜೆಗಳಿಗೆ ಸಮುದ್ರಯಾನ ಸಾಧನವಾದ ಹಡಗುಗಳನ್ನು ಕಟ್ಟುವದನ್ನು ಕಲಿಸಿದನು. ಪಾಠಶಾಲೆಗಳನ್ನು ಸ್ಥಾಪಿಸಿ ಬಾಲಕ ಬಾಲಕಿಯರಿಗೆ ವಿದ್ಯೆಗಳನ್ನು ಕಲಿಸಿದನು. ಅಚ್ಚು ಹಾಕುವದೂ ವ್ಯವಸಾಯವೂ ದೇಶದಲ್ಲಿ ರೂಢಿಯಾಯಿತು. ಇದರಿಂದ ದೇಶವು ಅಭಿವೃದ್ಧಿ ಹೊಂದಿ ಪ್ರಜೆಗಳು ಕೈಗಾರಿಕೆ, ವ್ಯವಸಾಯ, ವ್ಯಾಪಾರ, ವಿದ್ಯೆಗಳಲ್ಲಿ ಏಳಿಗೆಯನ್ನು ಹೊಂದಿ ನೆಮ್ಮದಿಯಾಗಿ ಬಾಳಲಾರಂಭಿಸಿದರು. ಮಹಾ ಪೀಟರನು ವಂಶಪಾರಂಪರ್ಯದಿಂದ ರಷ್ಯಾ ದೇಶದ ಚಕ್ರಾಧಿಪತಿಯಾಗಿರುವದು ವಿಶೇಷವಲ್ಲ. ಆ ಚಕ್ರಾಧಿಪತ್ಯದ ಪ್ರಜೆಗಳಿಗೆ ಸುಖಸಂಪತ್ತುಗಳನ್ನು ಉಂಟುಮಾಡುವದು ತನ್ನ ಪದವಿಗೆ ಯೋಗ್ಯವಾದುದೆಂದು ತಿಳಿದು ಅದನ್ನು ಸಾಧಿಸಿದನು. ಈತನಿಗೆ ಚಕ್ರವರ್ತಿಯೆಂಬ ಬಿರುದು ಹಕ್ಕುದಾರಿಯಿಂದ ಮಾತ್ರವಲ್ಲ ಕಾರ್ಯಸಾಧನೆಯಿಂದಲೂ ಸಲ್ಲುವದಲ್ಲವೇ?

ಈ ಪ್ರಪಂಚದಲ್ಲಿ ಮನುಷ್ಯನೇ ಸಕಲ ವರ್ಗಗಳ ಪ್ರಾಣಿಗಳಿಗಿಂತ ಸರ್ವಶ್ರೇಷ್ಠನು. ಅವನಿಗಾಗಿ ಸಮಸ್ತ ಸ್ಥಾವರಜಂಗಮಗಳು ಉಂಟಾಗಿವೆ. ಆತನ ಪ್ರಯೋಜನಕ್ಕೂ ಆತನ ಸೇವೆಗೂ ಬಹುವಿಧ ಮೃಗ, ಪಕ್ಷಿ, ಕೀಟಗಳು ಇರುತ್ತವೆ. ಮನುಷ್ಯನು ಇವುಗಳನ್ನೆಲ್ಲಾ ಸೃಷ್ಟಿಮಾಡಲಿಲ್ಲ. ಆದರೆ ಸೃಷ್ಟಿಕರ್ತನು ಇವೆಲ್ಲವುಗಳನ್ನು ಅವನಿಗೋಸ್ಕರ ಸೃಷ್ಟಿಸಿ ಅವನ ಅಧೀನತೆಗೆ ಇವನ್ನೆಲ್ಲಾ ಒಪ್ಪಿಸಿ ಒಳಪಡಿಸಿದ್ದಾನೆ. ದೇವರ ಸಕಲ ಚರಾಚರ ಸೃಷ್ಟಿಗಳ ಮೇಲೆ ಮನುಷ್ಯನು ದೇವರ ಕಡೆಯ ಪ್ರತಿನಿಧಿಯಾಗಿ ಅವುಗಳನ್ನೆಲ್ಲಾ ಆಳುತ್ತಿದ್ದಾನೆ. ಈ ಪ್ರಪಂಚವು ದೇವರ ಸಾಂರಾಜ್ಯ. ಆದಕ್ಕೆ ನಿಜವಾಗಿ ಚಕ್ರವರ್ತಿಯು ಆತನೇ ಸರಿ. ಆದರೆ ದೇವರು ಮನುಷ್ಯನನ್ನು ಈ ಲೋಕದ ಮೇಲೆ ತನ್ನ ಕಡೆಯ ಅಧಿಪತಿಯಾಗಿ ನೇಮಿಸಿದ್ದಾನೆ. ದೇವರು ಈ ಲೋಕದಲ್ಲಿ ಅಡಗಿಸಿಟ್ಟಿರುವ ಅಷ್ಟೈಶ್ವರ್ಯವೂ ಸುಖವೂ ಅಧಿಕಾರವೂ ಮನುಷ್ಯನದಾಗಿ ಇರುತ್ತದೆ.

ಆದರೆ ಮನುಷ್ಯನು ಇದೆಲ್ಲವನ್ನು ಕ್ರಮವಂತು ಆಳಿ, ರಕ್ಷಿಸಿ ಅನುಭವಿಸಬೇಕಾದರೆ ದೇವರ ಆಜ್ಞೆಗೆ ಒಳಪಟ್ಟು ಆತನ ಹುಕುಮನ್ನು ತಾನೇ ಅನುಸರಿಸಿ ಲೋಕದ ಆಡಳಿತದಲ್ಲಿ ಅದನ್ನೇ ಚಲಾಯಿಸಬೇಕಾಗಿದೆ. ಹೀಗಿರುವದಕ್ಕೆ ಅವನು ಬದ್ಧನಾಗಿದ್ದರೂ ಲೋಕದಲ್ಲಿ ಏನು ಕಾಣಬರುತ್ತದೆ? ಎಲ್ಲಾ ಕಡೆಯೂ ದೇವರನ್ನೂ ಆತನ ಆಜ್ಞೆಗಳನ್ನೂ ತಿಳಿಯುವ ಅಭಿಲಾಷೆ ಮನುಷ್ಯನಲ್ಲಿ ಮುಂದುವರಿದು ತಿಳಿದ ಆಜ್ಞೆಗಳನ್ನು ಉಲ್ಲಂಘನೆಮಾಡಿ, ಅತಿಕ್ರಮಿಸುವದು ಪದ್ಧತಿಯಾಗಿದೆ. ಮನುಷ್ಯನು ಅಂದರೆ ಈ ಲೋಕವನ್ನು ಆಳುವದಕ್ಕಾಗಿ ದೇವರಿಂದ ಅಧಿಕಾರವನ್ನು ಹೊಂದಿದ ಆತನ ಪ್ರತಿನಿಧಿಯು ತನ್ನ ಒಡೆಯನನ್ನೇ ಕಾಣದಂತಾಯಿತು. ಆತನ ಆಜ್ಞೆಗಳು ಅವನಿಗೆ ಅನುಮಾನಾಸ್ಪದವಾಗಿವೆ. ಮನುಷ್ಯನು ಈ ರೀತಿ ತನ್ನ ಸೃಷ್ಟಿಕರ್ತನ ಸಂಬಂಧವನ್ನು ತಪ್ಪಿಸಿಕೊಂಡು ದಾರಿದ್ರ್ಯಕ್ಕೆ ಸಿಕ್ಕಿದನು. ದೇವರಿಗೆ ಬದಲಾಗಿ ಈಗ ಆತನಿಗೆ ವಿರೋಧವಾದ ಪಾಪವನ್ನು ಮನುಷ್ಯನು ಅದನ್ನು ಮಾಡಿ ಅದರ ಅಧಿಕಾರಕ್ಕೆ ಸಿಕ್ಕಿಹೋಗಿದ್ದಾನೆ. ಇದು ಬಡತನವಲ್ಲ; ಕೇವಲ ಶೋಚನೀಯವಾದ ಬಡತನವಲ್ಲವೇ?

ಮನುಷ್ಯನಿಗೆ ಪಾಪಪರಿಹಾರವೂ ದೇವರ ಸಂಗಡ ಸಂಬಂಧವೂ ಆತನ ಆಜ್ಞೆಗಳನ್ನು ಬಯಸಿ ಅಭ್ಯಾಸಿಸುವ ಅಭಿಲಾಷೆಯೂ ಬೇಕಾಗಿವೆ. ಚಕ್ರವರ್ತಿಯ ಕಡೆಯಿಂದ ಬಂದು ದೇಶಾಧಿಪತಿಯಾಗಿರುವವನು ಚಕ್ರವರ್ತಿಯ ಸಂಗಡ ಸಂಪರ್ಕವೂ ಆಲೋಚನೆ ತೆಗೆದುಕೊಂಡು ಆತನ ಅಪ್ಪಣೆಯ ಪ್ರಕಾರವಾಗಿ ರಾಜ್ಯವನ್ನಾಳುವ ಪರ್ಯಂತರ ಅವನ ಅಧಿಕಾರವು ನಿಲ್ಲುತ್ತದೆ. ದೇವರ ರಾಜ್ಯವನ್ನು ಆತನ ಅಧಿಕಾರವನ್ನೂ ಅಪಹರಿಸಿರುವ ಪಾಪದ ಬಂಧನದಿಂದ ಬಿಡುಗಡೆಯೂ ರಾಜದ್ರೋಹಕ್ಕೆ ಮಾಫಿಯೂ ದೇವರ ಪರಿಶುದ್ಧ ಸಂಬಂಧವೂ ಪುನಃ ಲಭ್ಯವಾಗುವದು ಹೇಗೆ? ಈ ಬಡತನವನ್ನು ಪರಿಹರಿಸಬಲ್ಲ ಐಶ್ವರ್ಯವಂತನು ಧರ್ಮಿಷ್ಠನೂ ಯಾರು?

ಒಬ್ಬ ಉದ್ಧಾರಕರ್ತನು ಇದ್ದಾನೆ. ಆತನೇ ಸಾಕ್ಷಾದ್ದೇವರು. ಆತನ ಹೊರತು ಇನ್ನಾರೂ ಮನುಷ್ಯನನ್ನು ರಕ್ಷಿಸಲಾರರು. ಇದರ ವಿಷಯದಲ್ಲಿ ಸತ್ಯವೇದವು ಹೇಳುವದನ್ನು ಕೇಳಿರಿ. ಏನೆಂದರೆ—ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಹೊಂದಬೇಕೆಂದು ಆತನನ್ನು ಕೊಟ್ಟನು. ಯಾಕೆಂದರೆ ದೇವರು ತನ್ನ ಮಗನ ಮುಖಾಂತರ ರಕ್ಷಣೆಯಾಗಬೇಕೆಂದು ಲೋಕಕ್ಕೆ ಆತನನ್ನು ಕಳುಹಿಸಿಕೊಟ್ಟನು. ನಮ್ಮ ಪ್ರಭುವಾಗಿರುವ ಯೇಸು ಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಬೇಕು. ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮ್ಮ ನಿಮಿತ್ತ ಬಡವನಾದನು.

ದೇವರಾಗಿರುವ ಕ್ರಿಸ್ತನು ಬಡವನಾದದ್ದು ಹೇಗೆ? ಒಂದು ಉದಾಹರಣೆಯ ಮೂಲಕ ತಿಳಿಯಬಹುದು. ಒಬ್ಬ ಬೋಧಕನು ತನ್ನನ್ನು ಆಶ್ರಯಿಸಿದ ಬಾಲಕನಿಗೆ ವಿದ್ಯವನ್ನು ಕಲಿಸುತ್ತಾನೆ. ಗುರುವಿಗೆ ಸಕಲ ವಿದ್ಯೆಯೂ ಬರುತ್ತದೆ. ಆತನು ಪಂಡಿತನು. ಆದರೆ ತನ್ನನ್ನು ಆಶ್ರಯಿಸಿದ ಶಿಷ್ಯನಿಗೆ ಕಲಿಸುವದಕ್ಕೋಸ್ಕರ ತನ್ನ ಸಕಲ ಪಾಂಡಿತ್ಯವನ್ನು ಹಿಂದಕ್ಕಿಟ್ಟು ಸದ್ಯಕ್ಕೆ ವರ್ಣಮಾಲೆಯನ್ನು ಕಲಿಸಬೇಕೆಂದು ಅಕ್ಷರಗಳನ್ನು ಶಿಷ್ಯನ ಹತ್ತಿರ ತಂದು ಅವನ ಬಳಿ ಕೂತುಕೊಂಡು ಅವನ ಜೊತೆಗಾರನಂತೆ ಅವನ ಸಂಗಡ ವರ್ಣಮಾಲೆಯನ್ನು ಓದಿ ಬರೆಯುತ್ತಾನೆ. ಸದ್ಯಕ್ಕೆ ಗುರುವು ವಿದ್ಯದಲ್ಲಿ ಬಡವನಾಗಿ ಕಾಣುತ್ತಾನಲ್ಲವೇ? ಆತನ ವಿದ್ಯೆಯೆಂಬ ಐಶ್ವರ್ಯವು ಕಳೆದುಹೋಯಿತೇ? ಇಲ್ಲ. ಶಿಷ್ಯನನ್ನು ತನ್ನಂತೆ ಪಂಡಿತನನ್ನಾಗ ಮಾಡುವದಕ್ಕೆ ಇದು ಒಂದು ಅವಶ್ಯವಾದ ಯತ್ನ. ಕ್ರಿಸ್ತನು ತನ್ನ ಜನಗಳಿಗೆ ರಕ್ಷಣೆ ದೊರಕಬೇಕೆಂದು ಮನುಷ್ಯನಾಗಿ ಈ ಲೋಕದಲ್ಲಿ ಅವತರಿಸಿದನು.

ಯುದ್ಧದ ಸಮಾಚಾರಗಳು.

ಬ್ರಿಟಿಷ್ ಸೈನ್ಯ ಗಲ್ಲಿಪೋಲಿಯಿಂದ ಬಿಡಿತು.

ಜಾರ್ಜ್ ಸಾರ್ವಭೌಮರವರ ಅನುಜ್ಞೆಯು.

ನಾವು ಮೊದಲೇ ಯೋಚಿಸಿದ್ದಂತೆ ಕಳೆದ ವಾರ ರಣರಂಗಗಳಲ್ಲಿ ನಡೆದಿರುವ ಯುದ್ಧಕಾರ್ಯಗಳು ಬಹಳ ಸ್ವಲ್ಪ. ಗಲ್ಲಿಪೋಲಿ ಅರ್ಧದ್ವೀಪದಲ್ಲಿದ್ದ ಬ್ರಿಟಿಷ್ ಸೈನ್ಯಗಳನ್ನು ಅಲ್ಲಿಂದ ವಾಪಸು ಕರೆಸಿಕೊಂಡಿರುವುದೇ ಕಳೆದ ವಾರದ ಮುಖ್ಯ ಸಮಾಚಾರವಾಗಿದೆ. ನಮ್ಮ ವಾಚಕರಿಗೆ ಆ ದ್ವೀಪವು ಪೂರ್ವಪಶ್ಚಿಮವಾಗಿಯೂ ಸುಮಾರು ಐವತ್ತು ಮೈಲಿ ಅಗಲವಾಗಿಯೂ ಇದೆ ಎಂದು ತಿಳಿದಿರಬಹುದು. ಮಿತ್ರಮಂಡಲಿಯವರು ಆ ದ್ವೀಪದ ಪಶ್ಚಿಮ ಮೂಲೆಯ ಅಂಚಿನಲ್ಲೂ ಉತ್ತರ ಪಾರ್ಶ್ವದಲ್ಲೂ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿದ್ದರು. ಅಲ್ಲಿದ್ದ ಸಮಸ್ತ ಸೈನ್ಯಗಳನ್ನೂ ವಾಪಸು ಕರೆಸಿಕೊಂಡಿಲ್ಲ. ಆ ಅರ್ಧದ್ವೀಪದ ಉತ್ತರ ಪಾರ್ಶ್ವದಲ್ಲಿದ್ದ ಸೈನ್ಯವನ್ನು ಮಾತ್ರ ಹಿಂದಕ್ಕೆ ಬಂದುಬಿಡುವಂತೆ ಹುಕುಂ ಕೊಟ್ಟರು. ಈ ಸೈನ್ಯ ಎಷ್ಟೆಂಬ ಸಂಖ್ಯೆಯನ್ನು ತಿಳಿಸಿಲ್ಲ; ಆದರೆ ಸುಮಾರು ಒಂದು ಲಕ್ಷ ಸೈನ್ಯವನ್ನು ಕರೆಸಿಕೊಂಡರೆಂದು ಕೆಲವು ಪತ್ರಿಕೆಗಳು ಹೇಳುವವು. ಟರ್ಕಿಯವರಿಗೆ ಆ ಸೈನ್ಯ ವಾಪಸು ಹೋಗುತ್ತಿದೆ ಎಂದು ಗೊತ್ತಾಗದಂತೆ ಬಹಳ ನಿಪುಣತೆಯಿಂದ ಸೈನ್ಯವನ್ನು ಸಾಗಿಸಿದ್ದಾರೆ. ಹೀಗೆ ವಾಪಸು ಬರುವಾಗ್ಗೆ ಮೂರು ಮಂದಿ ಮಾತ್ರ ಗಾಯಪಟ್ಟರು. ಕೆಲವು ಸಾಮಾನುಗಳು, ಆರು ಫಿರಂಗಿಗಳು ಕೊನೆಗೆ ಉಳಿದ ಎಲ್ಲಾ ಪದಾರ್ಥಗಳನ್ನೂ ಸಾಗಿಸಿದ್ದಾಯಿತು. ಹಿಂದೆ ಬಿಟ್ಟ ಆ ಸಾಮಾನು ಮತ್ತು ಫಿರಂಗಿಗಳು ಶತ್ರುವಿಗೆ ಉಪಯೋಗಕ್ಕೆ ಬಾರದಂತೆ ಅವನ್ನು ಅಲ್ಲಿಯೇ ಹಾಳುಮಾಡಿದ್ದಾರೆ. ಹೀಗೆ ಕರೆಸಲ್ಪಟ್ಟ ಸೈನ್ಯಗಳಿಗೆ ಸ್ವಲ್ಪ ವಿಶ್ರಾಂತಿಕೊಟ್ಟು ಸುಧಾರಿಸಿಕೊಂಡ ಬಳಿಕ ಅವರನ್ನು ರಣರಂಗದ ಇನ್ನೊಂದು ಯುದ್ಧಭೂಮಿಗೆ ಕಳುಹಿಸಿಕೊಡುವರು. ಡಾರ್ಡನೆಲ್ಸ್ ಜಲಮಾರ್ಗದ ಬಾಗಿಲನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ ಮಿತ್ರಮಂಡಲಿಯವರು ಗಲ್ಲಿಪೋಲಿ ಅರ್ಧದ್ವೀಪದ ಪಶ್ಚಿಮಭಾಗದ ಅಂತ್ಯಪ್ರದೇಶವನ್ನು ಆಕ್ರಮಿಸಿಕೊಂಡೇ ಇರುವರು. ಟರ್ಕಿಯವರು ಮುಂದಕ್ಕೆ ನುಗ್ಗಿ ಬಾರದಂತೆ ತಡೆಯುವುದಕ್ಕಾಗಿ ಬ್ರಿಟಿಷ್ ಯುದ್ಧದ ಹಡಗುಗಳನ್ನು ಅಲ್ಲಿಟ್ಟಿದ್ದಾರೆ. ಬಲ್ಗೇರಿಯಾ ಸಂಸ್ಥಾನದ ಮೇಲೆ ಹಾಗೂ ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ನುಗ್ಗಿ ಮಾರ್ಗವನ್ನು ಬಿಡಿಸಿಕೊಂಡು ಹೋಗುವರು. ಅಲ್ಲಿ ಯಾವಾಗ ಯುದ್ಧಕಾರ್ಯಗಳು ಪ್ರಾರಂಭವಾಗುವವೋ ಅಲ್ಲಿರುವ ಸೇನಾಧಿಪತಿಗಳಲ್ಲದೆ ಇತರರಿಗೆ ತಿಳಿಯುವ ಹಾಗಿಲ್ಲ.

ನಮ್ಮ ಚಕ್ರವರ್ತಿ ಜಾರ್ಜ್ ಸಾರ್ವಭೌಮರವರು ಬ್ರಿಟಿಷ್ ಭೂಸೈನ್ಯ ಮತ್ತು ಸಮುದ್ರ ಸೈನ್ಯಗಳಿಗೆ ಡಿಸೆಂಬರ್ ತಾ 24ನೇ ಗುರುವಾರ ಬಕಿಂಗ್ಹಾಮ್ ರಾಜಭವನದಿಂದ ಬರೆದು ಕಳುಹಿಸಿರುವ ಸಂದೇಶದ ಒಕ್ಕಣೆ ಏನೆಂದರೆ—

“ಈ ಕ್ರಿಸ್ಮಸ್ ಹಬ್ಬದಲ್ಲಿ ನಮ್ಮ ಚಕ್ರಾಧಿಪತ್ಯದ ಸಮಸ್ತ ಸೈನ್ಯಗಳು ಸಕಲ ಸಲಕರಣೆಗಳೊಡನೆ ಯುದ್ಧಕಾರ್ಯಗಳಲ್ಲಿ ವಿನಿಯೋಗವಾಗಿರುವವು. ನಾವು ನಮ್ಮ ಮಹಾ ರಾಜ್ಞೀಯವರೂ ಯುದ್ಧಭೂಮಿಗಳಲ್ಲೂ ಸಮುದ್ರದ ಮೇಲೆಯೂ ಇದ್ದುಕೊಂಡು ಬ್ರಿಟಿಷ್ ಪ್ರಭುತ್ವ ಘನ ವಿಷಯಗಳನ್ನು ಕಾಪಾಡುತ್ತಿರುವಂಥಾ ನಮ್ಮ ಸೈನಿಕರಿಗೆಲ್ಲಾ ಈ ಕ್ರಿಸ್ಮಸ್ ಹಬ್ಬದ ಶುಭವಾರ್ತೆಯನ್ನೂ ಹೊಸ ವರುಷದ ಸಂತೋಷಗಳನ್ನೂ ಈ ಮೂಲಕ ಮನಃಪೂರ್ವಕವಾಗಿ ತಿಳಿಸುತ್ತೇವೆ. ಈ ಚಕ್ರಾಧಿಪತ್ಯವನ್ನು ಸುರಕ್ಷಿತವಾಗಿ ಕಾಪಾಡಿಕೊಂಡಿರತಕ್ಕಂಥಾ ನಮ್ಮ ನೌಕಾಬಲದ ಯುದ್ಧವೀರರ ಮೇಲೂ, ಅವರ ಕೈಕೆಳಗಿನ ಸೈನಿಕರ ಮೇಲೂ ನಮ್ಮ

...ಪ್ರಜೆಗಳಲ್ಲಿ ನನಗಿರುವಂಥಾ ಭಕ್ತಿ ಭರವಸೆ ಈಗ್ಗೂ ಸಂಪೂರ್ಣವಾಗಿ ದೃಢವಾಗಿದೆ.

ಫ್ರಾನ್ಸಿನಲ್ಲೂ, ಪೂರ್ವರಣರಂಗದಲ್ಲೂ, ಇತರ ಯುದ್ಧಭೂಮಿಗಳಲ್ಲೂ ಇರುವ ನಮ್ಮ ಸೈನ್ಯಗಳ ಉದ್ಯೋಗಸ್ಥರಲ್ಲೂ, ಅವರ ಅಧೀನದಲ್ಲಿರುವ ಸೈನಿಕರಲ್ಲೂ ಪೂರ್ಣವಾದ ಭಕ್ತಿ ನಂಬಿಕೆಗಳನ್ನು ಇಟ್ಟುಕೊಂಡಿರುತ್ತೇನೆ. ಅವರುಗಳ ಸ್ವಾಮಿಭಕ್ತಿಯೂ, ಅವರ ಪರಾಕ್ರಮವೂ, ಅವರ ಸ್ವಾರ್ಥತ್ಯಾಗವೂ ದೇವರ ಅನುಗ್ರಹದಿಂದ ದಿವ್ಯವಾದ ಜಯಪ್ರದವನ್ನೂ, ಗೌರವವನ್ನೂ ತರುವವೆಂದು ಖಚಿತವಾಗಿ ನಂಬಿಕೊಂಡಿದ್ದೇನೆ. ಶಾಶ್ವತ, ...ಗಳಾಗಿದ್ದ ಅನೇಕ ಸೈನಿಕರು ಆಸ್ಪತ್ರೆಗಳಲ್ಲಿ ಬಿದ್ದುಕೊಂಡಿದ್ದು ನರಳುತ್ತಿದ್ದಾರೆ. ಅಂಥಾ ಪರಾಕ್ರಮಿಗಳಿಗೂ ನಾವು ಕೃತಜ್ಞತೆಯನ್ನು ಸಲ್ಲಿಸಿ, ಅವರಿಗೆ ಆರೋಗ್ಯ ಉಂಟಾಗಲೆಂದು ಉತ್ಸಾಹಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇವೆ.

ಭೂಸೈನ್ಯ ಮತ್ತು ಸಮುದ್ರ ಸೈನ್ಯಗಳ ಉದ್ಯೋಗಸ್ಥರುಗಳೇ, ಮತ್ತು ...ಕರಾಗಿರುವಂಥಾ ಸೈನಿಕರುಗಳಿರಾ.—ಕಷ್ಟಾನುಭವ, ರಕ್ತಪ್ರವಾಹ, ...ದಿಂದ ಪ್ರಾರಂಭವಾದ ಈ ವರುಷವು ಕಳೆದು ಹೋಗಿಯೇ ಮುತ್ತಾಯವಾಗುತ್ತದೆ. ಆದರೆ ನೀವು ಯಾವ ಗುರಿಯನ್ನು ಮುಂದಿಟ್ಟುಕೊಂಡು ಆದ...ಡುತ್ತಿರುವಿರೋ ಅಂಥಾ ಕಾಲವು ಸಮೀಪಕ್ಕೆ ಬರುತ್ತಿದೆ. ದೇವರು ...ವನ್ನೂ, ನೀವು ಕೈಕೊಳ್ಳುವ ಎಲ್ಲಾ ಕಾರ್ಯಗಳನ್ನೂ ಆಶೀರ್ವದಿಸಲಿ.

ಪಶ್ಚಿಮ ರಣರಂಗದಲ್ಲಿ.

...ವಿಶೇಷವಾದ ಫಿರಂಗೀ ಗುಂಡುಗಳ ಹಾರಾಟವೇ ಈ ರಣರಂಗದಲ್ಲಿ ...ನಡೆಯಿತು. ಫ್ರಾನ್ಸಿನ ಹಲವು ಭಾಗ್ಯಗಳಲ್ಲೂ ಬೆಲ್ಜಿಯಮ್ ...ಎರಡು ಕಡೆಗಳಿಂದಲೂ ಫಿರಂಗಿ ಗುಂಡುಗಳ ಮಳೆಗರೆಯುತ್ತಾ ಬಂದಿದೆ. ...ದಲ್ಲಿ ವಿಮಾನಯಂತ್ರಗಳು ಕಲೆತು ಕದನಗಳು ನಡೆದಿರುವವು. ...ಒಂದು ದಿನ ಅಂತರಿಕ್ಷದಲ್ಲಿ 44 ಕದನಗಳಾದವು. ಎರಡು ಜರ್ಮನಿ ...ವಿಮಾನಯಂತ್ರಗಳನ್ನು ಹೊಡೆದು ಕೆಳಕ್ಕೆ ಕೆಡವಿದರು ಮಿತ್ರಮಂಡಲಿ ...ಒಂದು ವಿಮಾನಯಂತ್ರವು ಕೆಟ್ಟುಹೋಯಿತು.

ಫ್ರೆಂಚ್ ಸೈನ್ಯಗಳಿರುವ ಯುದ್ಧಸಾಲಿನಲ್ಲಿ ದಕ್ಷಿಣ ಭಾಗದಲ್ಲಿ ಅಂದರೆ ...ದಲ್ಲಿ ವಿಶೇಷ ಕದನವಾಯಿತು. ಫ್ರೆಂಚರು ಆಕ್ರಮಿಸಿಕೊಂಡಿದ್ದಲ್ಲದೆ ಜರ್ಮನಿಯವರನ್ನು ಓಡಿಸಿ ಎತ್ತರವಾದ ಗುಡ್ಡದ ಉದ್ದಕ್ಕೂ ಸುಮಾರು ಒಂದು ...ಮೈಲಿ ದಷ್ಟು ಕಂದಕಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ...ಅವರು ಶತ್ರುವಿನ ಸೈನ್ಯದಲ್ಲಿ 1,300 ಮಂದಿಯನ್ನು ಕೈಸೆರೆಹಿಡಿದರು. ಜರ್ಮನಿಯವರು ಮಹತ್ತರವಾದ ಸಾಹಸಪಟ್ಟು ಆ ಪೈಕಿ ಕೆಲವು ...ಗಳನ್ನು ಮತ್ತೆ ಗೆದ್ದುಕೊಂಡರು. ಈ ಯುದ್ಧವು ಹಿಮಗಡ್ಡೆಗಳ ಬಹು ...ಮಳೆ ಸುರಿಯುತ್ತಿರುವಲ್ಲಿ ನಡೆಯಿತೆಂದು ತಿಳಿದು ಬಂದಿದೆ.

ಪೂರ್ವ ರಣರಂಗದಲ್ಲಿ.

...ಯಿಂದ ಈ ವಾರ ಬಂದಿರುವ ಸಮಾಚಾರಗಳು ಬಹಳ ಸ್ವಲ್ಪ. ಹವೆಯು ಬಹಳ ಛಳಿಯಾಗಿರುವುದರಿಂದ ಯುದ್ಧಕಾರ್ಯಗಳಿಗೆ ಅವಕಾಶವಿಲ್ಲ. ...ಕೆಲವು ಸಣ್ಣ ಪುಟ್ಟ ಕದನಗಳು ನಡೆದು ರಷ್ಯಾದವರಿಗೇ ಅನುಕೂಲವಾಗಿದೆ. ಒಂದು ಠಾಣ್ಯದಲ್ಲಿ ರಷ್ಯಾದವರು ಶತ್ರು ಸೈನ್ಯದಲ್ಲಿ ಕೆಲವು ...ಗಳನ್ನೂ, ಆಯುಧ ಮತ್ತು ಯುದ್ಧಸಾಮಗ್ರಿಗಳನ್ನೂ ಕೈಸೆರೆ ಹಿಡಿದರು.

ಇಟಲಿ.

...ಕಡೆ ಹವಾಸ್ಥಿತಿಯು ಯುದ್ಧಕಾರ್ಯಗಳಿಗೆ ಪ್ರತಿಕೂಲವಾಗಿರುತ್ತೆ. ...ಭಾಗದಲ್ಲಿ ಆಸ್ಟ್ರಿಯಾದವರು ಎರಡು ಪಟ್ಟಣಗಳನ್ನು ತ್ಯಜಿಸಿ ...ಹೋದರೆಂದು ಹೇಳಲಾಗಿದೆ

ಆಡ್ರಿಯಾಟಿಕ್ ಕಡಲಿನಲ್ಲಿ ಇಟಲಿಯ ಡಿಸ್ಟ್ರಾಯರೆಂಬ ಹಡಗು ನುಗ್ಗಿ ...ಆಸ್ಟ್ರಿಯಾದವರ ಒಂದು ಡಿಸ್ಟ್ರಾಯರನ್ನೂ, ಆಯುಧಗಳು ಭರ್ತಿ ...ಇದ್ದ ಅವರ ಇನ್ನೊಂದು ಹಡಗನ್ನೂ ಮುಳುಗಿಸಿರುತ್ತದೆ

ಟರ್ಕಿಯಲ್ಲಿ.

ಗಲ್ಲಿಪೋಲಿ ಅರ್ಧದ್ವೀಪದಲ್ಲಿದ್ದ ಒಂದು ಭಾಗದ ಬ್ರಿಟಿಷ್ ಸೈನ್ಯವನ್ನು ...ವಾಪಸು ಕರೆಸಿಕೊಂಡರೆಂದು ಮೊದಲೇ ವಿವರಿಸಿರುತ್ತೇನೆ. ಅಲ್ಲಿ ಇದು ...ವರೆಗೆ ಒಟ್ಟು 1,12,921 ಸೈನಿಕರು ನಷ್ಟವಾಗಿರುತ್ತಾರೆಂದು ಪ್ರಕಟಿಸಲ್ಪಟ್ಟಿದೆ. ಆ ಪೈಕಿ 1,609 ಉದ್ಯೋಗಸ್ಥರೂ, 26,350 ಸೈನಿಕರೂ ಕೊಲೆಯಾದರು, ...ಸತ್ತುಹೋದರು. 2,969 ಉದ್ಯೋಗಸ್ಥರಿಗೂ, 72,722 ಸೈನಿಕರಿಗೂ ಗಾಯಗಳಾದವು. 337 ಉದ್ಯೋಗಸ್ಥರೂ, 12,114 ಸೈನಿಕರೂ ಸಿಕ್ಕಿ ಇಲ್ಲ. ...ಬರ್ ತಾ. 25 ರಿಂದ ಡಿಸೆಂಬರ್ ತಾ. 11 ರ ವರೆಗೆ ಒಟ್ಟು 96,682 ಸೈನಿಕರು ಕಾಯಿಲೆ ಬಿದ್ದರು. ಆರಂಭದಲ್ಲಿ ಗಲ್ಲಿಪೋಲಿಯ ಮೇಲೆ ನುಗ್ಗಿ ಹೋದದ್ದು ಬ್ರಿಟಿಷ್ ಸೈನ್ಯಕ್ಕೆ ನಷ್ಟಕರವಾದ ಪ್ರಯತ್ನವಾಯಿತು ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್ ಸ್ಥಾನಗಳಿಂದ ಕಳುಹಲ್ಪಟ್ಟ ಸೈನ್ಯಗಳೇ ವಿಶೇಷವಾಗಿ ನಷ್ಟವನ್ನನುಭವಿಸಿದವು. ಆದಾಗ್ಯೂ ಈಗಲೂ ಅವರು ಯುದ್ಧದಲ್ಲಿ ಜಯಪ್ರದವಾಗುವ ತನಕ ಕದನವನ್ನು ಬಿಡುವುದಿಲ್ಲವೆಂದು ಸಂಕಲ್ಪ ಮಾಡಿಕೊಂಡಿದ್ದಾರೆ.

ಮೆಸೊಪೊಟೇಮಿಯಾದಲ್ಲಿ ಜನರಲ್ ಟೌನ್‌ಷೆಂಡ್‌ರವರು ಕುಟಿಲ್ ಅಮಾರದಲ್ಲಿ ನಡೆದ ಕದನದೊಳಗೆ ಟರ್ಕಿಯವರ ಕಡೆ 2,500 ಮಂದಿ ನಷ್ಟವಾಗಿರುವರೆಂದು ತಿಳಿಸುತ್ತಾರೆ. ಈಚೆಗೆ ತಾ 17 ರಲ್ಲಿ ಬ್ರಿಟಿಷ್ ಮತ್ತು ಹಿಂದುಸ್ಥಾನದ ಸೈನ್ಯಗಳು ನುಗ್ಗಿ ಹೋಗಿ ಟರ್ಕಿಯವರ ಕಂದಕಗಳಿಗೆ ಮುತ್ತಿಗೆ ಹಾಕಿ ...ಮಂದಿಯನ್ನು ಕೊಂದು, 11 ಸೈನಿಕರನ್ನು ಕೈಸೆರೆ ಹಿಡಿದಿರುತ್ತಾರೆ

ಡಿಸೆಂಬರ್ ತಾ. 25 ರಲ್ಲಿ ಟರ್ಕಿಯವರು ಬ್ರಿಟಿಷ್ ಸೈನಿಕರ ಮೇಲೆ ಬಿದ್ದು ...ಮಾಡಿದರು. ಬ್ರಿಟಿಷರು ಯುದ್ಧಕೊಟ್ಟು ಅವರಲ್ಲಿ 600-800 ಸೈನ್ಯಗಳನ್ನು ನಷ್ಟಪಡಿಸಿ ಹಿಂದಕ್ಕೆ ಓಡಿಸಿದರು. ಬ್ರಿಟಿಷರ ಕಡೆಯೂ 200 ಮಂದಿಯು ...ನಷ್ಟವಾಗಿದ್ದಾರೆ.

ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರು ಟರ್ಕಿ ಸೈನ್ಯಗಳಲ್ಲಿ ...ನಷ್ಟವನ್ನುಂಟುಮಾಡಿ ಬಂದರು. ಇದಲ್ಲದೆ ವಾನ್ ಎಂಬ ಸರೋವರದ ಬಳಿ ...ಒಂದು ಕಣಿವೆ ಮಾರ್ಗವನ್ನೂ ರಷ್ಯಾದವರು ಸ್ವಾಧೀನಪಡಿಸಿಕೊಂಡಿದ್ದಾರೆ

ಕೆಲವು ದಿನಗಳ ಹಿಂದೆ ಎರ್ಜೆರಮ್ ತೀರದಿಂದ ಸ್ವಲ್ಪ ದೂರದಲ್ಲಿ ...ಸಣ್ಣ ಕದನವಾಯಿತು. ಅದರಲ್ಲಿ ಟರ್ಕಿ ಸೈನಿಕರಲ್ಲಿ 8 ಮಂದಿ ಕೊಲೆಯಾದರು; ಒಬ್ಬನು ಕೈಸೆರೆ ಸಿಕ್ಕಿದನು ಬ್ರಿಟಿಷರ ಕಡೆ ಒಬ್ಬನಿಗೆ ಗಾಯವಾಯಿತು.

ಪರ್ಷಿಯಾದಲ್ಲಿ.

ಉತ್ತರ ಪರ್ಷಿಯಾದಲ್ಲಿ ರಷ್ಯಾದವರಿಗೂ ದಂಗೆಯೆದ್ದಿರುವವರಿಗೂ ಕೆಲವು ಕದನಗಳು ನಡೆದವು. ರಷ್ಯಾದವರು ಅವರನ್ನೆಲ್ಲಾ ಸಂಪೂರ್ಣವಾಗಿ ಸೋಲಿಸಿರುತ್ತಾರೆ. ಇದಲ್ಲದೆ ಅವರು ಕೋಮ್ ಎಂಬ ನಗರವನ್ನು ಆಕ್ರಮಿಸಿಕೊಂಡರು

ಪರ್ಷಿಯಾ ರಾಜಧಾನಿಯಾದ ಟೆಹರಾನ್ ನಗರದ ಸಮೀಪದಲ್ಲಿ ಒಂದು ...1,300 ಮಂದಿ ಶತ್ರುಗಳು ಸೇರಿಕೊಂಡಿದ್ದರು ರಷ್ಯಾದವರು ...ಮೇಲೆ ನುಗ್ಗಿ ಮುತ್ತಿಗೆಹಾಕಿಕೊಂಡು ಕದನ ಮಾಡಿ 140 ಮಂದಿಯನ್ನು ಕೊಂದುಬಿಟ್ಟು, 70 ಮಂದಿಯನ್ನು ಕೈಸೆರೆ ಹಿಡಿದುತಂದರು ರಷ್ಯಾದವರ ...ಇಬ್ಬರು ಕೊಲೆಯಾದರು; ನಾಲ್ವರಿಗೆ ಗಾಯಗಳಾದವು.

ಬಾಲ್ಕನ್ ಸಂಸ್ಥಾನಗಳಲ್ಲಿ.

...ಸೈನ್ಯದವರು ಬಲ್ಗೇರಿಯಾದೊಳಕ್ಕೆ ನುಗ್ಗಬೇಕೆಂದು ಪ್ರಾರಂಭಿಸಿ ...ತೀರದಲ್ಲಿ ಬಂದಿದ್ದಾರೆಂಬ ವಿಷಯವಾಗಿ ನಾನಾ ವರ್ತಮಾನಗಳು ...ಇವೆ. ಈಚೆಗೆ ನೋಡುವಲ್ಲಿ ಈ ವಾರ್ತೆಗಳಲ್ಲಿ ವಿಶೇಷ ನಿಜಾಂಶವು ...ಇಲ್ಲ. ರಷ್ಯಾದವರ ಎರಡು ಟಾರ್ಪಿಡೋ ಎಂಬ ದೋಣಿಗಳು ...ರಿಯಾದ ಒಂದು ಟಾರ್ಪಿಡೋವನ್ನು ವಾರ್ನಾ ನಗರದ ಕನಲ ಓಡಿ...ಕೊಂಡು ಹೋಯಿತು. ಆಗ ತೀರದಲ್ಲಿ ಫಿರಂಗಿಗಳನ್ನು ಎತ್ತಿಕಟ್ಟಿ ರಷ್ಯಾದವರ ಮೇಲೆ ಗುಂಡುಗಳನ್ನು ಸುರಿಸಿದರು. ರಷ್ಯಾದವರು ಟರ್ಕಿಯವರ ಎರಡು ಹಡಗುಗಳನ್ನು ಮುಳುಗಿಸಿ, ಒಳಗಿದ್ದ ಜನರನ್ನು ಕೈಸೆರೆ ಹಿಡಿದರು

ಬಲ್ಗೇರಿಯಾದವರಿಗೂ ಗ್ರೀಸ್ ಸೈನಿಕರಿಗೂ ಗ್ರೀಸಿನ ಎಲ್ಲೆಯಲ್ಲಿ ಒಂದು ಕದನವಾಯಿತೆಂದು ಹೇಳಲಾಗಿದೆ. ಜರ್ಮನಿಯವರೇನೋ ಬಲ್ಗೇರಿಯಾದವರನ್ನು ಗ್ರೀಸಿನೊಳಕ್ಕೆ ನುಗ್ಗಿ ಹೋಗಕೂಡದೆಂದು ತಡೆದಿದ್ದೇವೆ ಎಂದು ಹೇಳುತ್ತಾರೆ. ಶತ್ರು ಸೈನ್ಯಗಳು ಗ್ರೀಸಿನೊಳಕ್ಕೆ ಪ್ರವೇಶಿಸುವವೋ ಇಲ್ಲವೋ, ಒಂದು ವೇಳೆ ನುಗ್ಗಿದರೆ ಗ್ರೀಸ್ ಸರ್ಕಾರದವರು ಏನು ಮಾಡುವರೋ ನಿಧಾನಿಸಿ ನೋಡಬೇಕು

ಡಿಸೆಂಬರ್ ತಾ. 23 ರಲ್ಲಿ ಮಾಂಟಿನೀಗ್ರೋದವರು ನುಗ್ಗಿ ಹೋಗಿ ಆಸ್ಟ್ರಿಯಾದವರ ಮೇಲೆ ಮುತ್ತಿಗೆ ಹಾಕಿ ಕದನಮಾಡಿದ್ದರಿಂದ ಆಸ್ಟ್ರಿಯಾದವರು ಸೋತುಹೋಗಿ 500 ಸೈನಿಕರ ಹೆಣಗಳನ್ನು ಯುದ್ಧಭೂಮಿಯಲ್ಲಿ ಬಿಟ್ಟು ಹಿಂದಕ್ಕೆ ಹೋದರು. 100 ಮಂದಿ ಆಸ್ಟ್ರಿಯಾದವರು ಕೈಸೆರೆಯಾದರು ಸಾಯಂಕಾಲವಾದ ಮೇಲೆ ಮಾಂಟಿನೀಗ್ರೋದವರು ನುಗ್ಗಿ ಹೋಗಿ ಹಲವು ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡರು. ಆಸ್ಟ್ರಿಯಾದವರ ಕಡೆ ಬಹಳ ನಷ್ಟವಾಯಿತು

ಬಾಲ್ಕನ್ ಸಂಸ್ಥಾನಗಳಲ್ಲಿ ನಡೆದ ಕದನ ಕಾರ್ಯಗಳಲ್ಲಿ ಬ್ರಿಟಿಷ್ ಸೈನ್ಯದಲ್ಲಿ 52 ಮಂದಿ ಉದ್ಯೋಗಸ್ಥರೂ, 1,246 ಸೈನಿಕರೂ ನಷ್ಟವಾದರೆಂದೂ; ಆ ಪೈಕಿ ಒಬ್ಬ ಉದ್ಯೋಗಸ್ಥನೂ 85 ಸೈನಿಕರೂ ಕೊಲೆಯಾದರೆಂದೂ ಹೇಳಲಾಗಿದೆ

ಸರ್ಬಿಯಾ ಪ್ರಜೆಗಳಲ್ಲಿ ಕೆಲವರು ಓಡಿಹೋಗಿ ಇಟಲೀ ದೇಶವನ್ನು ಸೇರಿಕೊಂಡರೆಂದು ತಿಳಿಸಲ್ಪಟ್ಟಿದೆ.

ಇತರ ವಿಷಯಗಳು.

ಬ್ರಿಟಿಷ್ ಮಂತ್ರಿ ಶ್ರೇಷ್ಠರಾದ ಮಿ|| ಆಸ್ಕ್ವಿತ್‌ರವರು ಹೌಸ್ ಆಫ್ ಕಾಮನ್ಸ್ ಪಾರ್ಲಿಮೆಂಟಿನಲ್ಲಿ ಯುದ್ಧಕ್ಕೆ ಇನ್ನೂ ಹತ್ತು ಲಕ್ಷ ಸೈನಿಕರು ಬೇಕೆಂದು ಕೇಳಿದರು ಈಗ ಯುದ್ಧ ಸಾಲುಗಳಲ್ಲಿ 12,60,000 ಸೈನಿಕರಿರುವುದಾಗಿ ತಿಳಿಸಿದಾರೆ. ಪಾರ್ಲಿಮೆಂಟಿನವರು ಹೊಸ ಸೈನ್ಯವನ್ನು ಒದಗಿಸಬೇಕೆಂದು ಒಪ್ಪಿಕೊಂಡರು ಯುದ್ಧಭೂಮಿಯಲ್ಲಿ ತಿಂಗಳೊಂದಕ್ಕೆ ಸರಾಸರಿ 16 ಮಂದಿ ಸೈನಿಕರು ನಷ್ಟವಾಗುವರೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮಿ|| ಲಾಯಿಡ್ ಜಾರ್ಜ್‌ರವರು ತಿಳಿಸಿದ್ದೇನೆಂದರೆ—ಕಳೆದ ಜೂನ್ ತಿಂಗಳಲ್ಲಿ ಜರ್ಮನಿಯವರು ತಮ್ಮ ಕಾರ್ಖಾನೆಗಳೊಳಗೆ ದಿನ ಒಂದಕ್ಕೆ 2,50,000 ಗುಂಡುಗಳನ್ನು ತಯಾರುಮಾಡುತ್ತಿರುವಲ್ಲಿ ಬ್ರಿಟನ್ನಿನವರು 15,600 ಗುಂಡುಗಳನ್ನು ಮಾತ್ರ ಸಿದ್ಧಪಡಿಸುತ್ತಿದ್ದರು. ಆಗ್ಗೆ ಕಾರ್ಖಾನೆಗಳವರು ಮಾತು ಕೊಟ್ಟದ್ದರಲ್ಲಿ ಸರಾಸರಿ 10 ರಷ್ಟು ಗುಂಡುಗಳನ್ನು ಮಾತ್ರ ಒದಗಿಸುತ್ತಿದ್ದರು. ಈಗಲಾದರೋ ಅವರು ಅವರಿವರಾಗಿ ಗುಂಡುಗಳನ್ನು ಸರಬರಾಯಿ ಮಾಡುವುದಾಗಿ ಒಪ್ಪಿಕೊಂಡಿರುವುದಲ್ಲದೆ ಸರಾಸರಿ 80 ರಷ್ಟು ಮಾಡಿ ಒದಗಿಸುತ್ತಿದಾರೆ. ನಾಲ್ಕು ತಿಂಗಳು ತಯಾರಾದ ಗುಂಡುಗಳನ್ನು ಶೇಖರಮಾಡುತ್ತಾ ಬಂದದ್ದರಿಂದಲೇ ಕಳೆದ ಸೆಪ್ಟಂಬರಿನಲ್ಲಿ ನಡೆದ ಮಹಾ ಘೋರವಾದ ಯುದ್ಧಗಳಿಗೆ ಅನುಕೂಲವಾಯಿತು. ಈಗಲಾದರೋ ನಮ್ಮ ಕಾರ್ಖಾನೆಗಳಲ್ಲಿ ಅಷ್ಟು ಗುಂಡುಗಳನ್ನೂ ಒಂದೊಂದೇ ವಾರದಲ್ಲಿ ತಯಾರುಮಾಡುತ್ತಾರೆ. ಆದರೂ ಈಗಲೂ ನಿಪುಣರಾದ ಕೆಲಸಗಾರರು ಸಾಲದೆ ಹೋಗಿರೋಣದರಿಂದ ಹಗಲೂ ರಾತ್ರಿಯೂ ವಿರಾಮವಿಲ್ಲದೆ ಯುದ್ಧಸಾಮಗ್ರಿಗಳು ತಯಾರಾಗುವುದಕ್ಕೆ ಅನನುಕೂಲವುಂಟಾಗಿದೆ ಕಳೆದ ಜೂನ್ ತಿಂಗಳಿಂದೀಚೆಗೆ ಮೆಷೀನ್ ಫಿರಂಗಿಗಳನ್ನು ಮೊದಲಿಗಿಂತ ನಾಲ್ಕರಷ್ಟು ಹೆಚ್ಚಾಗಿ ಒದಗಿಸುತ್ತಿದಾರೆ. ಇದಲ್ಲದೆ ಭಾರಿ ಭಾರೀ ಫಿರಂಗಿಗಳೂ ಈಗ ತಯಾರಾಗುತ್ತಿರುವವು.

ಮೆಡಿಟರೇನಿಯನ್ ಕಡಲಿನಲ್ಲಿ ಶತ್ರುವಿನಿಂದ ಮುಳುಗಿಸಲ್ಪಟ್ಟ ಜಪಾನಿನವರ ಹಡಗಿನೊಳಗೆ ಪ್ರಯಾಣಿಕರೇ 120 ಮಂದಿ ಇದ್ದರು. ಅದರಲ್ಲಿ 51 ಮಂದಿ ಹೆಂಗಸರು, ಮಕ್ಕಳು 16 ಮಂದಿ. ಇವರನ್ನೆಲ್ಲಾ ಸಮುದ್ರದಲ್ಲಿ ಎತ್ತಿ ಬದುಕಿಸಿ, ಫ್ರೆಂಚರ ಯುದ್ಧದ ಹಡಗಿನಲ್ಲಿ ಪೋರ್ಟ್ ಸೆಯಿದ್ ಎಂಬ ತೀರಪಟ್ಟಣಕ್ಕೆ ಕರೆದುತಂದು ಬಿಟ್ಟರು.

ಜರ್ಮನಿಯೊಳಗೆ ಒಂದು ಮದ್ದಿನ ಕಾರ್ಖಾನೆಯೊಳಗೆ ಮದ್ದು ಹತ್ತಿಕೊಂಡು ಹಾರಿ 400 ಮಂದಿ ಹೆಂಗಸರು ಮಕ್ಕಳು ಮೃತಪಟ್ಟರೆಂದೂ, ಅವರೆಲ್ಲಾ ಆ ಸಮಯದಲ್ಲಿ ಕಾರ್ಖಾನೆಯೊಳಗಿದ್ದು ಕೆಲಸಗಳನ್ನು ಮಾಡುತ್ತಿದ್ದರೆಂದೂ ವರ್ತಮಾನ ಬಂದಿದೆ ಇವರ ಗಂಡಂದಿರೂ, ತಂದೆ ಅಣ್ಣ ತಮ್ಮಂದಿರೂ ಯುದ್ಧಭೂಮಿಗೆ ಹೋಗಿ ಕದನಮಾಡುತ್ತಿರುವರು.

ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಒಂದು ಕಡೆ ಡೈನಮೈಟ್ ಎಂಬ ಸಿಡಿಮದ್ದು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ 15 ಜನಗಳು ಮೃತಪಟ್ಟರು; ಹಲವರಿಗೆ ಗಾಯಗಳಾಗಿವೆ.

ನಮ್ಮ ಜಾರ್ಜ್ ಸಾರ್ವಭೌಮ ದಂಪತಿಗಳು ನಾರ್ಫೋಕ್ ನಗರದಲ್ಲಿರುವ ಸ್ಯಾಂಡ್ರಿಂಗ್‌ಹಾಂ ಎಂಬ ರಾಜಭವನದಲ್ಲಿದ್ದು ಕ್ರಿಸ್ಮಸ್ ಹಬ್ಬವನ್ನು ಆಚರಿಸಿದರು.

ಜರ್ಮನ ಚಕ್ರವರ್ತಿಯವರಿಗೆ ಏನೋ ಸ್ವಲ್ಪ ಕಾಯಿಲೆಯಾಗಿ ಕೊಟಡಿಯನ್ನು ಬಿಟ್ಟು ಬರುವುದಿಲ್ಲವೆಂದು ತಿಳಿಸಲಾಗಿದೆ.

ಯುದ್ಧಾರಂಭಕಾಲದಲ್ಲಿ ಲಿಯೆಜ್ ನಗರವನ್ನು ಮಹಾ ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಿದ್ದು ಶತ್ರುವಿಗೆ ಕೈಸೆರೆ ಸಿಕ್ಕಿದ ಜನರಲ್ ಲಿಮ್ಯಾನ್ ಎಂಬ ಬೆಲ್ಜಿಯಮ್ ಸೇನಾಪತಿಯು ಜರ್ಮನಿಯೊಳಗೇ ಕಾಲವಾದನೆಂದು ತಿಳಿದು ಬಂದಿದೆ

ಡೆನ್ಮಾರ್ಕ್ ರಾಜ್ಯದ ತೀರದಿಂದ ಸ್ವಲ್ಪ ದೂರ ಸಮುದ್ರದಲ್ಲಿ ಮುಳುಗಿದ್ದ ಹಡಗನ್ನು ಹುಡುಕುತ್ತಾ ಇದ್ದಾಗ ಸಮುದ್ರ ತಳದಲ್ಲಿ ಮುಳುಗಿ ನಿಂತಿದ್ದ ಜರ್ಮನಿಯವರ ಒಂದು ಸಬ್‌ಮೆರೀನು ಸಿಕ್ಕಿತು ಅದನ್ನು ಟಾರ್ಪಿಡೋದಿಂದ ಒಡೆದು ಮುಳುಗಿಸಿದ್ದರು —ಆಂಕೋನಾ ಎಂಬ ಹಡಗನ್ನು ಮುಳುಗಿಸಿದ ವಿಷಯವಾಗಿ ಅಮೇರಿಕದವರು ಆಸ್ಟ್ರಿಯಾದವರಿಗೆ ಕಠಿಣವಾದ ಕಾಗದವನ್ನು ಬರೆದು ಜವಾಬು ಕೇಳಿದಾರೆಂದು ತಿಳಿಸಲ್ಪಟ್ಟಿದೆ.

ಇಂಗ್ಲೆಂಡಿನಲ್ಲಿ ಕೈಸೆರೆಯಾಗಿ ಹಿಡಿದಿಡಲ್ಪಟ್ಟಿದ್ದ ಕೆಲವು ಜರ್ಮನಿಯವರನ್ನು ವಾಪಸು ಜರ್ಮನಿಗೆ ಕಳುಹಿಸಬೇಕಾದಾಗ ಅವರು ಅಲ್ಲಿಗೆ ಹೋಗುವುದಿಲ್ಲವೆಂದು ಹಟಹಿಡಿದರು; ಆದಾಗ್ಯೂ ಬಲಾತ್ಕಾರದಿಂದ ಅವರನ್ನು ರವಾನೆ ಮಾಡಬೇಕಾಯಿತು ಜರ್ಮನಿಯೊಳಗೆ ಯುದ್ಧವನ್ನು ನಿಲ್ಲಿಸಿ ಕರಾರು ಮಾಡಿಕೊಳ್ಳಬೇಕೆಂದು ಅನೇಕ ದಂಗೆಗಳು ನಡೆಯುತ್ತಲೇ ಇವೆ

ದಕ್ಷಿಣ ಆಫ್ರಿಕಾದಲ್ಲಿ ದಂಗೆಯೆದ್ದಿದ್ದರೆಂದು ಸೆರೆಮನೆಯಲ್ಲಿ ಹಾಕಲ್ಪಟ್ಟಿದ್ದ ಡಿವೆಟ್ ಎಂಬಾತನನ್ನೂ 118 ಪ್ರಜೆಗಳನ್ನೂ ಸರ್ಕಾರದವರು ಕೆಲವು ಷರತ್ತುಗಳ ಮೇಲೆ ಬಂದೀಖಾನೆಯಿಂದ ಬಿಡಿಸಿರುತ್ತಾರೆ. ಡಿವೆಟ್ ಎಂಬಾತನು ಬ್ರಿಟಿಷರಿಗೂ ಬೋಅರರಿಗೂ ಸ್ನೇಹವು ಬೆಳೆಯುತ್ತಾ ಬರಬೇಕೆಂದೂ, ಸಮಸ್ತ ದುರಭಿಪ್ರಾಯಗಳನ್ನೂ ಅಸಮಾಧಾನಗಳನ್ನೂ ವರ್ಜಮಾಡಿಬಿಡಬೇಕೆಂದೂ ಹೇಳುತ್ತಾನೆಂದು ತಿಳಿಸಲಾಗಿದೆ —ಡಿಸೆಂಬರ್ ತಾ. 9 ರ ವರೆಗೆ ಬ್ರಿಟಿಷರ ಕಡೆ 1,19,923 ಸೈನಿಕರು ಕೊಲೆಯಾದರು, 3,38,758 ಮಂದಿ ಗಾಯಪಟ್ಟರು 69,546 ಜನರು ಸಿಕ್ಕಿ ಇಲ್ಲ ಈ ಪೈಕಿ ಫ್ರಾನ್ಸ್ ಮತ್ತು ಬೆಲ್ಜಿಯಮ್ ಯುದ್ಧಭೂಮಿಯಲ್ಲಿ 3,71,567 ಮಂದಿ ನಷ್ಟವಾಗಿದಾರೆ —ಗ್ರೀಕ್ ದೊರೆಗೆ ಈಗ ಸ್ವಲ್ಪ ವಾಸಿಯಾಗಿದೆ. ಆದರೂ ಅವರಿಗೆ ಈಗ ಸಂಭವಿಸಿರುವ ಕಷ್ಟಗಳ ದೆಸೆಯಿಂದ ಕಳವಳವುಂಟಾಗಿದೆ. ಕಾಸೆಲ್‌ನೌ ಎಂಬ ಫ್ರೆಂಚ್ ದಳಪತಿಯು ಗ್ರೀಸ್ ರಾಷ್ಟ್ರಕ್ಕೆ ಹೋಗಿ ದೊರೆಯ ಭೇಟಿ ಮಾಡಿದ್ದಲ್ಲದೆ ಗ್ರೀಸಿನ ಮುಖ್ಯರಾದ ದಳಪತಿಗಳನ್ನು ಕಂಡು ಮಾತನಾಡಿಕೊಂಡು ಬಂದರು.

ಹಿಂದುಸ್ಥಾನದ ಸೈನ್ಯಗಳು ಫ್ರಾನ್ಸ್ ಭೂಮಿಯಿಂದ ಹೊರಟುಹೋಯಿತು. ಈ ಸೈನಿಕರನ್ನು ಇನ್ಯಾವ ರಣರಂಗಕ್ಕೆ ರವಾನೆ ಮಾಡಿದರೋ ಗೊತ್ತಾಗಲಿಲ್ಲ.

ಜರ್ಮನಿಯವರು ಆರು ಹಡಗುಗಳನ್ನು ಮುಳುಗಿಸಿದಾರೆ. ಎರಡು ಹಡಗುಗಳು ಪ್ರಯಾಣಿಕರನ್ನು ಸಾಗಿಸುತ್ತಿದ್ದವು ಪ್ರತಿ ಒಂದರಲ್ಲೂ ಸುಮಾರು 80-90 ಮಂದಿ ಸಭ್ಯ ಪ್ರಜೆಗಳು ಸಮುದ್ರದ ಪಾಲಾಗಬೇಕೆಂಬ ಶಂಕೆಯುಂಟಾಗಿದೆ ಉಳಿದ ಹಡಗುಗಳಲ್ಲಿದ್ದವರನ್ನೆಲ್ಲಾ ಬದುಕಿಸಿದರು.

ಈಜಿಪ್ಟಿನ ತೀರದ ಸಮೀಪದಲ್ಲಿ ಟರ್ಕಿಯವರು ಇಟ್ಟಿದ್ದ ಆರು ಫಿರಂಗಿಗಳನ್ನು ಎರಡು ಸಬ್‌ಮೆರೀನುಗಳನ್ನು ಫ್ರೆಂಚ್ ಕ್ರೂಸರೆಂಬ ಯುದ್ಧದ ಹಡಗು ಕಂಡುಹಿಡಿದು ಆ ಫಿರಂಗಿಗಳನ್ನು ನಾಶಪಡಿಸಿದವು ಎರಡು ಸಬ್ ಮೆರೀನುಗಳೂ ತಪ್ಪಿಸಿಕೊಂಡುಹೋದವು.

ಒಳದೇಶದ ವೃತ್ತಾಂತಗಳು.

ಕರ್ನಲ್ ಜಿ. ದೇಶರಾಜ್ ಅರಸಿನವರು ಯುದ್ಧಭೂಮಿಯಿಂದ ಹೊರಟು ಮೊನ್ನೆ ಭಾನುವಾರ ಸಾಯಂಕಾಲ ಬೊಂಬಾಯಿಗೆ ಬಂದಿಳಿದರು. ಅವರು ಈ ದಿನ ರಾಜಧಾನಿಗೆ ಬರುತ್ತಾರೆಂಬ ವರ್ತಮಾನವಿದೆ.

ಮೈಸೂರು ಹಳೇ ಅಗ್ರಹಾರದಲ್ಲಿ ಆಂಜನೇಯ ದೇವಸ್ಥಾನದಲ್ಲಿ ದೇವರ ಜಯಂತಿ ಸಂತರ್ಪಣೆ ಮತ್ತು ಉತ್ಸವವನ್ನು ದೊಡ್ಡ ಮನುಷ್ಯರು ಸಂಕೇಪೇಟೆ ವರ್ತಕರ ಸಹಾಯದಿಂದ ವಿಜೃಂಭಣೆಯಾಗಿ ನಡಿಸಿದರು.

ಆರಮನೆಯ ಹುಜೂರ್ ಸಕ್ರೆಟರಿಯವರ ಆಫೀಸಿನಲ್ಲಿ 8,230 ರೂಪಾಯಿ ಕಳುವು ಮಾಡಿ ಸಿಕ್ಕಿರುವ ರಂಗನ ಮೊಕದ್ದಮೆಯನ್ನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ಕಳೆದ ಶನಿವಾರದಿಂದ ದರ್ಯಾಪ್ತಿ ಮಾಡುತ್ತಿದಾರೆ.

ಅಧಿಕಾರಿಗಳು ಪ್ರಜೆಗಳ ಕೂಡ ಕಲೆತು ಅವರ ಇಂಗಿತಗಳನ್ನು ತಿಳಿಯಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರದವರು ಅಧಿಕಾರಿಗಳಿಗೆ ಒಂದು ಹುಕುಮನ್ನು ಕೊಟ್ಟಿದಾರೆ ಪ್ರತಿ ಒಬ್ಬ ಅಧಿಕಾರಿಯೂ ಪ್ರತಿ ಗುರುವಾರವೂ 3ರಿಂದ 5 ಗಂಟೆಗಳ ಹೊತ್ತು ಸರ್ಕಾರಿ ಕೆಲಸಗಳನ್ನು ನಿಲ್ಲಿಸಿ ಪ್ರಜೆಗಳ ಅರ್ಜಿಗಳನ್ನು ಕೇಳಬೇಕು. ಪ್ರಜೆಗಳಿಗೆ ಇದರಿಂದ ಮುಖ್ಯಾಧಿಕಾರಿಯ ಸಮುಖ ದೊರಕುವುದಕ್ಕೆ ಅವಕಾಶವಾಗಿದೆ ಈ ಹುಕುಮು ಸಮಸ್ತ ಇಲಾಖೆಗಳಿಗೂ ಅನ್ವಯಿಸುವುದು.

ಬೊಂಬಾಯಿನ ಮ|| ಕೆ. ಟಿ. ದೊಂಗರೆ ಕಂಪನಿಯವರು 1916 ರ ಕ್ಯಾಲೆಂಡರನ್ನು ರಚಿಸಿ ಕೇಳಿದವರಿಗೆಲ್ಲಾ ಪುಗಸಟ್ಟೆ ಕಳುಹಿಸುವರು. ಅದರಲ್ಲಿ ಕ್ಯಾಲೆಂಡರಲ್ಲದೆ ಸರ್ ಸತ್ಯೇಂದ್ರ ಪ್ರಸನ್ನಸಿಂಹ, ಲಾರ್ಡ್ ಹಾರ್ಡಿಂಗ್, ಶ್ರೀ ಕೃಷ್ಣರಾಜ ಒಡೆಯರ್, ಶ್ರೀ ಸಯಾಜಿರಾವ್ ಗಾಯಕವಾಡ್, ಮಿಸೆಸ್ ಬೆಸೆಂಟ್, ಮಿಸೆಸ್ ಸರೋಜಿನಿ ನಾಯ್ಡು, ಲೇಟ್ ಜಿ. ಕೆ. ಗೋಖಲೆ, ಪಂಡಿತ ಮದನಮೋಹನ ಮಾಲವೀಯ ಇವರುಗಳ ಛಾಯಾಚಿತ್ರಗಳೂ ಚೆನ್ನಾಗಿ ಅಚ್ಚುಮಾಡಲ್ಪಟ್ಟಿವೆ

ಮೈಸೂರು ದೇವೀರಮ್ಮಣ್ಣೀ ಅಗ್ರಹಾರದಲ್ಲಿರುವ ಸಂಚಾರಿ... ಎಸ್. ಸೀತಾರಾಮಯ್ಯನವರು ಬರೆಯುವುದು.—ಕಳೆದ 26 ನೇ ತಾ. ಶನಿವಾರ ಹಾನು ಬೆಳಗ್ಗೆ 7 ಘಂಟೆಯಲ್ಲಿ ಚಾಮುಂಡೇಶ್ವರಿ ಬೆಟ್ಟಕ್ಕೆ ಕೆಲಸವಿದ್ದದ್ದರಿಂದ ಹೋಗುತ್ತಾ ಇದ್ದಾಗ ದೊಡ್ಡ ಬಸವನಿಗೂ ಶಿಬ್ಬಿಗೂ ಮಧ್ಯರಸ್ತೆಯಲ್ಲಿ ಇಬ್ಬರು ತುರುಕರು ನನ್ನನ್ನು ಹಿಡಿದು ನಿಲ್ಲಿಸಿ ನನ್ನ ಬಳಿ ಇದ್ದ 6 ರೂ ಗಡಿಯಾರ, ಒಂದು ಕೋಟು, ಅದರಲ್ಲಿದ್ದ 2 ರೂ. ಇವನ್ನೂ ಕಿತ್ತುಕೊಂಡು, ಕೂಗಿದರೆ ಹೊಡೆಯುತ್ತೇವೆಂದು ಹೇಳಿದರು. ನಾನು ಪದಾರ್ಥ ಹೋದರೂ ಪ್ರಾಣ ಉಳಿದರೆ ಸಾಕೆಂದು ಬಂದುಬಿಟ್ಟೆನು ಆದ್ದರಿಂದ ಬೆಟ್ಟಕ್ಕೆ ಹೋಗತಕ್ಕವರು ಎಚ್ಚರಿಕೆಯಿಂದ ಇರಲೆಂದು ತಿಳಿಸುತ್ತೇನೆ.

ಆಯುರ್ವೇದ ಪಂಡಿತೋತ್ತಮರ ಮಹಾ ಸಭೆಯು.

ಕಳೆದ 19 ನೇ ತಾ. ಭಾನುವಾರ ಮದರಾಸ್ ಪಟ್ಟಣದ ವಿಕ್ಟೋರಿಯಾ ಪಬ್ಲಿಕ್ ಹಾಲ್ ಎಂಬ ಬಂಗಲೆಯಲ್ಲಿ ಹಿಂದುಸ್ಥಾನದ ಆಯುರ್ವೇದ ಪಂಡಿತರುಗಳ ಎಳನೆಯ ಮಹಾ ಸಭೆಯು ಪ್ರಾರಂಭವಾಗಿ ಮೂರು ದಿನ ನಡೆಯಿತು ಈ ರಾಷ್ಟ್ರದ ಎಲ್ಲಾ ಭಾಗಗಳಿಂದಲೂ ಸುಮಾರು 600 ಮಂದಿ ಪಂಡಿತರು ಪ್ರತಿನಿಧಿಗಳಾಗಿ ಬಂದಿದ್ದರು. ಸಭಿಕರಿಗೆ ಸರ್ ಸುಬ್ರಹ್ಮಣ್ಯಯ್ಯರವರು ಸುಸ್ವಾಗತವನ್ನು ಬಯಸಿ ಹಿಂದುಸ್ಥಾನದ ಪ್ರಾಚೀನ ವೈದ್ಯದ ಮಹತ್ವವನ್ನೂ, ಈಗ ಪಂಡಿತರು ಅದನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡದೆ ಇರುವುದರಿಂದ ಅದು ಈಗ ಮಲಿನ ಹೊಂದಿ ಹೀನಸ್ಥಿತಿಗೆ ಗುರಿಯಾಗಿರುವ ಅಂಶವನ್ನೂ, ಈ ದೇಶೀಯ ವೈದ್ಯವನ್ನು ಅಭಿವೃದ್ಧಿಗೆ ತರಬೇಕಾಗಿರುವ ಭಾಗವನ್ನೂ ವಿವರಿಸಿ ಭಾಷಣಮಾಡಿದರು. ಬಳಿಕ ಬಂಗಾಳದ ಶ್ರೀ ಕವಿರತ್ನ ಯಾಮಿನಿ ಭೂಷಣರಾಯ ಎಂಬ ಪಂಡಿತೋತ್ತಮರು ಸಭೆಯ ಅಗ್ರಾಸನವನ್ನು ವಹಿಸಿ ಉಪನ್ಯಾಸ ಮಾಡಿದರು. ಈ ಮಹಾ ಸಭೆಯಲ್ಲಿ ತೀರ್ಮಾನಮಾಡಲ್ಪಟ್ಟ ಮುಖ್ಯ ವಿಷಯಗಳೇನೆಂದರೆ—(1) ಪೂನಾ ಪಟ್ಟಣದಲ್ಲಿ ಆಯುರ್ವೇದ ವಿದ್ಯಾಶಾಲೆ (ಆಸ್ಪತ್ರೆ) ಯನ್ನು ಬೊಂಬಾಯಿ ಗವರ್ನ್‌ಮೆಂಟಿನವರು ಮುಚ್ಚಿಬಿಡಬೇಕೆಂದು ಕೊಟ್ಟಿದ್ದ ಹುಕುಮನ್ನು ಪಂಡಿತರು ಮತ್ತು ಪ್ರಜೆಗಳ ಪ್ರಾರ್ಥನೆಯನ್ನು ಅಂಗೀಕರಿಸಿ ರದ್ದು ಮಾಡಿದ್ದಕ್ಕಾಗಿ ಬೊಂಬಾಯಿ ಸರ್ಕಾರವನ್ನು ಮಹಾ ಸಭೆಯವರು ವಂದನೆ ಮಾಡಿದರು. (2) ಸರ್ಕಾರದವರು ದೇಶೀಯ ವೈದ್ಯರನ್ನು ಗ್ರಾಮಾಂತರಗಳ ಮೇಲೆ ಸಂಚಾರಮಾಡಿ ಪ್ರಜೆಗಳಿಗೆ ಚಿಕಿತ್ಸೆಮಾಡುವಂತೆ ನೇಮಕಮಾಡಬೇಕೆಂದು ಪ್ರಾರ್ಥಿಸಿಕೊಳ್ಳಲಾಯಿತು (3) ಇದುವರೆಗೆ ಪ್ರಕಟಿತವಾಗಿಲ್ಲದೇ ಇರುವ ಆಯುರ್ವೇದೀಯ ಪ್ರಾಚೀನ ಗ್ರಂಥಗಳನ್ನು ಹುಡುಕಿ ಮುಂದಿನ ಮಹಾ ಸಭೆಗೆ ತಿಳಿಸಬೇಕೆಂದು ಕೆಲವು ಪಂಡಿತರನ್ನು ನೇಮಕಮಾಡಿದರು (4) ಹಿಂದುಸ್ಥಾನದಲ್ಲಿ ಅಸಂಖ್ಯಾತರಾದ ಸ್ತ್ರೀಯರು ನಾಚಿಕೆಯಿಂದ ಪುರುಷ ವೈದ್ಯರಿಗೆ ತೋರದೆ ಕ್ಷಯ ಮೊದಲಾದ ಅನೇಕ ರೋಗಗಳಲ್ಲಿ ನರಳುತ್ತಿದಾರೆ ಅವರಿಗೆ ಚಿಕಿತ್ಸೆ ಮಾಡಲು ಸ್ತ್ರೀ ವೈದ್ಯರನ್ನು ಆಯುರ್ವೇದ ಪಾಠಶಾಲೆಗಳಲ್ಲಿ ತರಬೇತುಮಾಡುವುದಕ್ಕೆ ಮಹಾ ಸಭೆಯವರು ಏರ್ಪಾಡುಮಾಡಬೇಕೆಂಬದಾಗಿ ತೀರ್ಮಾನಿಸಲಾಯಿತು. (5) ಬೊಂಬಾಯಿ ಮತ್ತು ಮದರಾಸ್ ಅಧಿಪತ್ಯಗಳಲ್ಲಿ ಪಾಶ್ಚಾತ್ಯ ವೈದ್ಯರು ಶಾಸನವನ್ನು ಮತ್ತು ಸಂಘಗಳನ್ನು ಮಾಡಿಕೊಂಡು ಆಯುರ್ವೇದ ವೈದ್ಯವನ್ನು ಅಲ್ಲಗಳೆಯುತ್ತಲೂ, ಪಂಡಿತರನ್ನು ಆ ಸಂಘಗಳಿಂದ ಹೊರಪಡಿಸಿಯೂ ಇರುವುದು ಯೋಗ್ಯವಲ್ಲವೆಂದು ಮಹಾ ಸಭೆಯು ಪ್ರತಿಭಟಿಸಿ ತೀರ್ಮಾನ ಮಾಡಿತು. ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಸಿಲೋನ್ ಮತ್ತು ಬರ್ಮಾ ಅಧಿಪತ್ಯಗಳಲ್ಲೂ ಇರುವ ಪಂಡಿತರು ವೈದ್ಯ ವಿಚಾರಗಳನ್ನು ಕುರಿತು ಸುಮಾರು 115 ಉಪನ್ಯಾಸಗಳನ್ನು ಮಹಾ ಸಭೆಗೆ ಬರೆದು ಕಳುಹಿಸಿದ್ದರು ನೇಪಾಳದ ಮೋಹಿನೀಬಾಯಿ ಎಂಬೊಬ್ಬ ಲೇಡಿ ಡಾಕ್ಟರು ಆಯುರ್ವೇದ ಕ್ರಮಾನುಸಾರ ಆರೋಗ್ಯ ದೀರ್ಘಾಯುಸ್ಸು ಮುಂತಾದವು ಲಭ್ಯವಾಗುವ ವಿಚಾರಗಳನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಬರೆದು ಕಳುಹಿಸಿದ್ದರು. ಅದಕ್ಕಾಗಿ ಮಹಾ ಸಭೆಯವರು ಆಕೆಗೆ ಒಂದು ಭಂಗಾರದ ಪದಕವನ್ನು ಕೊಡಬೇಕೆಂದು ಗೊತ್ತುಮಾಡಿದರು. ಕಡೆಯದಾಗಿ ಸಭೆಯ ಕಾರ್ಯಗಳಿಗೆ ಚಂದಾ ಹಣ ಒದಗಬೇಕೆಂದು ಕೆಲವು ಮುಖಂಡರಾದ ದೊಡ್ಡಮನುಷ್ಯರೂ ಪಂಡಿತರೂ ಭಾಷಣಮಾಡಿದರು ಸುಮಾರು 600 ರೂಪಾಯಿ ತನಕ ವಾಗ್ದಾನಮಾಡಲ್ಪಟ್ಟು ಸಭೆಯು ಮುಕ್ತಾಯವಾಯಿತು

ಈ ಮಹಾ ಸಭೆಗೆ ಸಂಬಂಧಪಟ್ಟಂತೆ ಒಂದು ಪ್ರದರ್ಶನವೂ ನಡೆಯಿತು. ಈ ಪ್ರದರ್ಶನ ಶಾಲೆಯಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯಶಾಸ್ತ್ರಗಳ ಪ್ರಕಾರ ಚೂರ್ಣ, ಭಸ್ಮ, ವನಸ್ಪತಿ, ಲೇಹ, ವಟಿಕ, ವಸ್ತ್ರ ಮೊದಲಾದ ಔಷಧಗಳು ತಯಾರುಮಾಡಲ್ಪಡುವ ವಿಧಾನಗಳನ್ನೂ, ಉಪಕರಣಗಳನ್ನೂ, ತಯಾರಾದ ಔಷಧಗಳನ್ನೂ ಬಹು ರಮಣೀಯವಾಗಿ ಅಣಿಮಾಡಿಟ್ಟಿದ್ದರು. ಅವನ್ನು ದೇಶೀಯ ಮತ್ತು ಪಾಶ್ಚಾತ್ಯ ವೈದ್ಯರುಗಳು ಹೋಗಿ ನೋಡಿ ಸಂತೋಷಪಟ್ಟರು. ಯೂರೋಪಿಯನ್ ಡಾಕ್ಟರುಗಳು ಅದನ್ನೆಲ್ಲಾ ನೋಡಿ ಆನಂದಪಟ್ಟು ಇದುವರೆಗೆ ಪಾಶ್ಚಾತ್ಯ ವೈದ್ಯರಿಗೆ ಹಿಂದುಸ್ಥಾನದ ವೈದ್ಯರು ಚಿಕಿತ್ಸೆಮಾಡುವ ವಿಧಾನಗಳು ಪರಿಷ್ಕಾರವಾಗಿ ತಿಳಿಯಲು ಅವಕಾಶವಿರಲಿಲ್ಲವೆಂದೂ, ಈ ಪ್ರದರ್ಶನದಿಂದ ಅದನ್ನೆಲ್ಲಾ ಸಾಕ್ಷಾತ್ತಾಗಿ ನೋಡಿ ತಿಳಿಯಲು ಬಹಳ ಸಹಾಯವಾಯಿತೆಂದೂ ಹೇಳಿ ಪ್ರದರ್ಶನವನ್ನು ನಡಿಸಿದ ಪಂಡಿತರುಗಳನ್ನು ಕೊಂಡಾಡಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1915 ನೇ ಇಸವಿ ಡಿಸೆಂಬರ್ 30 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 60,000
,, (3) ಡಿಪಾಜಿಟ್ಟುಗಳು	....	,, 37,44,236
,, (4) ಇತರೆ	....	,, 80,922
(ಆನೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 48,75,158

ಪೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 11,03,463
,, (2) ಖಾತೆ ಮತ್ತು ಇತರ ಸಾಲಗಳು	......	,, 32,38,127
,, (3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು		,, 3,95,676
,, (4) ಇನ್ವೆಸ್ಟ್‌ಮೆಂಟುಗಳು	....	,, 94,662
,, (5) ಏಜೆನ್ಸಿಗಳಲ್ಲಿರುವ ಮೊಬಲಗು	......	,, 6,663
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 16,130
,, (7) ಇತರೆ	....	,, 20,437
(ಆನೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 48,75,158

ವಿ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ಮೈಸೂರು ತಾಲ್ಲೂಕು ಉಪಾಧ್ಯಾಯರ ಸಂಘ.

ಈ ಸಂಘದ ಎರಡನೇ ಮೀಟಿಂಗು ಲಕ್ಷ್ಮೀಪುರಂ ಎ. ವಿ. ಸ್ಕೂಲಿನಲ್ಲಿ ಈದೇ ತಿಂಗಳು 23 ನೇ ತಾ. ಗುರುವಾರ ನಡಿಸಲ್ಪಟ್ಟಿತು. ಸಂಘದ ಪ್ರೆಸಿಡೆಂಟರು ಸ|| ಇನ್|| ಮ|| ಶ್ರೀನಿವಾಸರಾಯರು, ಅ|| ಇನ್|| ಗಳು, ಸಿಟಿ ಎ. ವಿ. ಸ್ಕೂಲುಗಳ ಹೆಡ್ ಮಾಸ್ಟರುಗಳು ಮತ್ತು ಅ|| ಮಾಸ್ಟರುಗಳು ಮತ್ತು ವಿಲೇಜ್ ಸ್ಕೂಲ್ ಮಾಸ್ಟರುಗಳೂ ಸುಮಾರು 100 ಜನಗಳ ವರೆಗೂ ಸೇರಿದ್ದರು. ಆಗ ಹಿಂದಿನ ಮೀಟಿಂಗಿನಲ್ಲಿ ದಯಮಾಡಿಸದೇ ಇದ್ದವರ ಅವಗಾಹನೆಗಾಗಿ ಅ|| ಇನ್|| ಮ|| ಲಕ್ಷ್ಮೀನರಸಿಂಹಯ್ಯನವರು, ಸ|| ಇನ್|| ಮ|| ಶ್ರೀನಿವಾಸರಾಯರು, ಮತ್ತು ಲಕ್ಷ್ಮೀಪುರಂ ಎ. ವಿ. ಸ್ಕೂಲ್ ಮಾಸ್ಟರ್ ಮ|| ವೆಂಕಟರಮಣಯ್ಯನವರೂ ಸಭೆಯ ಉದ್ದೇಶಗಳನ್ನು ವಿಶದವಾಗಿ ತಿಳಿಯಪಡಿಸಿದರು. ಅವರುಗಳು ಹೇಳಿದ್ದರ ಮುಖ್ಯ ಸಾರಾಂಶವೇನೆಂದರೆ,—ಈ ಸಂಘದ ಸಹಾಯದಿಂದ ಸಾಧಾರಣವಾಗಿ ವಿದ್ಯಾಭ್ಯಾಸವನ್ನು ಅಭಿವೃದ್ಧಿ ಮಾಡುವುದು, ಪಾಠಕ್ರಮವನ್ನು ಹದಗೊಳಿಸುವುದು, ವಿದ್ಯೆಯಲ್ಲಿ ಎಲ್ಲರಿಗೂ ಹೆಚ್ಚು ಅಭಿರುಚಿಯುಂಟಾಗುವಂತೆ ಮಾಡುವುದು, ಪರಸ್ಪರ ಸಹಾಯದಿಂದ ಉಪಾಧ್ಯಾಯರು ತಮ್ಮ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದು, ಉಪಾಧ್ಯಾಯರುಗಳಿಗೆ ಕೆಲವು ವಿಧಗಳಲ್ಲಾಗತಕ್ಕ ತೊಂದರೆಗಳನ್ನು ನಿವಾರಣೆಮಾಡಿಕೊಳ್ಳುವುದು, ಪ್ರತಿ ಮೀಟಿಂಗಿನಲ್ಲಿಯೂ ವಿದ್ಯಾಭ್ಯಾಸ ವಿಷಯಕವಾದ ಒಂದು ಉಪನ್ಯಾಸವನ್ನು ನಡಿಸುವುದು ಮತ್ತು ಮಾದರಿಗಾಗಿ ಒಂದು ತರಗತಿಯನ್ನೇರ್ಪಡಿಸಿ ಆ ವಿಷಯವನ್ನು ಬಾಲಕರಿಗೆ ಬೋಧಿಸುವುದು, ಮಾಡಲ್ ಮತ್ತು ಇಂಡಸ್ಟ್ರಿಯಲ್ ಸ್ಕೂಲುಗಳಿಗೆ ಒಟ್ಟಾಗಿ ಹೋಗಿ ವಿಷಯಗಳನ್ನು ಗ್ರಹಿಸುವುದು, ಪ್ರತಿ ತಿಂಗಳಲ್ಲಿಯೂ ಈ ವಿಧವಾದ ಮೀಟಿಂಗುಗಳನ್ನು ನಡಿಸಿ ಎಲ್ಲರೂ ಒಟ್ಟಾಗಿ ಸೇರುವುದು ಮತ್ತು ಗ್ರಾಂಟ್ ಸ್ಕೂಲುಗಳ ಕೆಲವು ತೊಂದರೆಗಳನ್ನು ಚರ್ಚಿಸಿ ಸರ್ಕಾರದವರ ಅವಗಾಹನೆಗೆ ತರುವುದು, ಇವೇ ಮುಖ್ಯವಾದುವು.

ಅನಂತರ ಹಿಂದಿನ ಮೀಟಿಂಗಿನಲ್ಲಿ ಏರ್ಪಡಿಸಿದ್ದ ಕಮಿಟಿ ಮೆಂಬರುಗಳ ಸಂಖ್ಯೆಯು 12 ರಿಂದ 15 ಕ್ಕೆ ಹೆಚ್ಚಿಸಲಾಯಿತು. ಈ ಪೈಕಿ 3 ಜನ ತಾಲ್ಲೂಕಿಗೂ 12 ಜನ ಮೈಸೂರು ಸಿಟಿಗೂ ನೇಮಕವಾದರು. ಬಳಿಕ ನಿಬಂಧನೆಗಳನ್ನೂ, ಬೈಲಾಗಳನ್ನೂ ಏರ್ಪಡಿಸಲು ಏಳು ಜನಗಳುಳ್ಳ ಒಂದು ಸಬ್ ಕಮಿಟಿಯನ್ನು ಏರ್ಪಡಿಸಬೇಕೆಂದೂ, ಅದನ್ನು ಅ|| ಸೆಕ್ರೆಟರಿ ಮ|| ನರಸಿಂಹಜೋಯಿಸರು ಏರ್ಪಾಡು ಮಾಡಬೇಕೆಂದೂ ಮತ್ತು ನಿಬಂಧನೆಗಳನ್ನೆಲ್ಲಾ ಫೆಬ್ರುವರಿ ಮೀಟಿಂಗಿಗೆ ಒಪ್ಪಿಸಬೇಕೆಂದೂ ವಿಧಾಯಕವಾಯಿತು. ಸಭೆಯ ಕಾರ್ಯನಿರ್ವಾಹಕ್ಕೆ ಬೇಕಾದ ದ್ರವ್ಯಸಹಾಯಕ್ಕಾಗಿ 15 ರೂಪಾಯಿಗೆ ಕಮ್ಮಿ ಸಂಬಳ ಅಥವಾ ಆದಾಯವುಳ್ಳವರು ವರ್ಷಕ್ಕೆ 8 ಆಣೆ ಕೊಡಬೇಕೆಂತಲೂ, ಅದಕ್ಕೆ ಮೇಲ್ಪಟ್ಟ ಸಂಬಳ ಅಥವಾ ಆದಾಯವುಳ್ಳವರು ವರ್ಷಕ್ಕೆ 1 ರೂಪಾಯಿ ಕೊಡಬೇಕೆಂತಲೂ ವಿಧಾಯಕವಾಯಿತು. ಮುಂದಿನ ಮೀಟಿಂಗು ಸದ್ವಿದ್ಯಾಶಾಲೆಯಲ್ಲಿ ಜನವರಿ 8 ನೇ ತಾರೀಖು ಮಧ್ಯಾಹ್ನ 4 ಘಂಟೆಗೆ ನಡಿಸಲ್ಪಡಬೇಕೆಂದು ನಿಶ್ಚಯವಾಯಿತು. ಆ ಕಾಲದಲ್ಲಿ ಕಿಂಡರ್‌ಗಾರ್ಟನ್ ಅಕ್ಷರಶಾಲಾಧ್ಯಕ್ಷರಾದ ಮ|| ಶ್ರೀಕಂಠಯ್ಯನವರು “ ಅಕ್ಷರಾಭ್ಯಾಸ ” ವೆಂಬ ವಿಷಯದಲ್ಲೂ, ಮತ್ತು ಈ ಸಭೆಯ ವೈಸ್ ಪ್ರೆಸಿಡೆಂಟರಾದ ಮ|| ವೆಂಕಟಸುಬ್ಬಯ್ಯನವರು ಒಂದು ಪ್ರಾಥಮಿಕ ಉಪನ್ಯಾಸವನ್ನೂ ಅಪ್ಪಣೆ ಕೊಡಿಸುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಬಿರಾಕ್ಕಿಂಸಿ ಮಕ್ಕಳಿಗೆ ದೇವೀ ತಿಲಕು ಹಾಕುವ ಕಾನೂನನ್ನು ಶ್ರೀನಿವಾಸಪುರದ ಮ್ಯುನಿಸಿಪಲ್ ಸರಹದ್ದಿನೊಳಗೆ ಐದು ವರುಷ ಕಾಲವೂ, ಮಾಲೂರು ಮ್ಯುನಿಸಿಪಲ್ ಸರಹದ್ದಿನೊಳಗೆ ಎರಡು ವರುಷ ಕಾಲವೂ ಜಾರಿಗೆ ತರಲ್ಪಟ್ಟಿದೆ.

ಅಡ್ವೊಕೇಟ್ ಮತ್ತು ಮ್ಯುನಿಸಿಪಲ್ ಕೌನ್ಸಿಲರಾಗಿರುವ ಮ|| ಕೆ. ವೆಂಕಟಸ್ವಾಮಯ್ಯನವರು 1916ನೇ ಮಾರ್ಚಿ ತಾ. 27 ರ ವರೆಗೆ ನಂಜನಗೂಡು ವೈಸ್ ಪ್ರೆಸಿಡೆಂಟರಾಗಿರತಕ್ಕದ್ದು.

ದೊಡ್ಡಬಳ್ಳಾಪುರದ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಕಾಲದಲ್ಲಿ ಶಿರಸ್ತೆದಾರ್ ಮ|| ಕೆ. ವಿ. ಶ್ರೀನಿವಾಸಾಚಾರ್ರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಆನೇಕಲ್ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಕಾಲದಲ್ಲಿ ಶಿರಸ್ತೆದಾರ್ ಮ|| ವಿ. ಸುಬ್ಬರಾಯರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಎಸ್. ನಾರಾಯಣರಾಯರನ್ನು 1915 ನೇ ಜುಲೈನಿಂದ ಅ|| ಕಮಿಷನರ ದರ್ಜೆಯಲ್ಲಿ 2 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಲೋಕಲ್ ಸರ್ವೀಸಿನಲ್ಲಿ ಕೆಳಗೆ ಹೇಳುವ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ:—ವಿ|| ಮಹಮ್ಮದ್ ನಸಿರುದ್ದೀನ್ ರಿಸಾಲ್ದಾರ್ ಸ್ಕ್ವಾಡ್ರನ್ ಕಮ್ಯಾಂಡರ್, ಮ|| ಸುಬ್ಬರಾವ್ ಚಿನ್ನೆ 1 ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರ್, ಮ|| ತಿಮ್ಮಪ್ಪರಾಜೆ ಅರಸ್ 2 ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರ್.

ಚನ್ನರಾಯಪಟ್ಟಣದ ಸಬ್ ಡಿವಿಜನ್ ಆಫೀಸರ್ ಮ|| ಜಿ. ಬಿ. ಹೆಬ್ಬಳ್ ಯವರಿಗೆ ಮೂರು ವಾರಗಳ ಕಾಯಿಲೇ ರಜಾ ಕೊಟ್ಟಿದೆ. ಮ|| ಜಿ. ರುದ್ರಪ್ಪನವರು ಚನ್ನರಾಯಪಟ್ಟಣದ ಸಬ್ ಡಿವಿಜನ್ ಛಾರ್ಜನ್ನೂ, ಮ|| ವೈ. ವಿ. ಕೃಷ್ಣಮೂರ್ತಿಯವರು ಖಜಾನೆಯ ಛಾರ್ಜನ್ನೂ ವಹಿಸಿರತಕ್ಕದ್ದು.

ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರಾದ ಮಿ|| ಕೆ. ದಾರಾಷಾ ರವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಡೆಪ್ಯುಟಿ ಸೂಪರಿಂಟೆಂಡೆಂಟರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಹೊಸಕೋಟೆ ಅಮಲ್ದಾರ್ ಮ|| ಎಂ. ಎನ್. ಶ್ರೀನಿವಾಸಯ್ಯಂಗಾರ್ರಿಗೆ ಕೊಟ್ಟಿರುವ ಎರಡೂವರೆ ತಿಂಗಳ ರಜವನ್ನು ಇನ್ನೂ ಮೂರೂವರೆ ತಿಂಗಳು ಜಾಸ್ತಿಮಾಡಿದೆ. ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಚಿತ್ರದುರ್ಗಕ್ಕೆ ವರ್ಗಮಾಡಲ್ಪಟ್ಟಿರುವ ಅ|| ಕಮಿಷನರ್ ಮಿ|| ಎಂ. ಹಸನ್ ಅಲಿಯವರಿಗೆ ಡಿಸೆಂಬರ್ ತಾ. 11 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಅರಸೀಕೆರೆ ರೈಲ್ವೆ 3 ನೇ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಕೆ. ಅನಂತಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ|| ಇಂಜನಿಯರ್ ಮ|| ಎ. ತಾಂಡೋಣಿರಾಯರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಯಡತೊರೆ ತಾಲ್ಲೂಕು ಅಮಲ್ದಾರ್ ಮ|| ಜಿ. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸ್ಪೆಷಲ್ ಡೆಪ್ಯುಟಿ ಅಮಲ್ದಾರ್ ಎಸ್. ಶ್ರೀನಿವಾಸಮೂರ್ತಿಯವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ತುಮಕೂರು ಎಂಪ್ರೆಸ್ ಗರಲ್ಸ್ ಹೈ ಸ್ಕೂಲು.

ಕಳೆದ 16 ನೇ ತಾ. ಗುರುವಾರ ಬೆಳಿಗ್ಗೆ ಈ ಸ್ಕೂಲಿನ ವಾರ್ಷಿಕ ಬಹುಮಾನ ವಿನಿಯೋಗ ಮಹೋತ್ಸವವು ಗೌರ್ನಮೆಂಟ್ ಹೈ ಸ್ಕೂಲಿನಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಡೆಪ್ಯುಟಿ ಕಮಿಷನರು ಮ|| ಕೆ. ಶ್ರೀನಿವಾಸಯ್ಯಂಗಾರ್ರು ಅಧ್ಯಕ್ಷತೆಯನ್ನು ವಹಿಸಿದ್ದರು. ಊರಿನ ಅನೇಕ ಮಂದಿ ಆಫೀಸರುಗಳೂ, ಲಾಯರುಗಳೂ, ವರ್ತಕರೂ, ಟೀಚರುಗಳೂ, ಕೆಲವು ಮಂದಿ ಯೂರೋಪಿಯನ್ ದೊಡ್ಡಮನುಷ್ಯರೂ, ಲೇಡಿಗಳೂ, ಹಿಂದೂ ಸ್ತ್ರೀಯರೂ ಹಾಜರಾಗಿದ್ದರು. ಹಿಂದೂ ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವು ಏರ್ಪಡಿಸಿತ್ತು. ಸ್ಕೂಲಿನ ಬಾಲಕಿಯರು ಸ್ವಾಗತದ ಹಾಡು, ದೇವರ ಪ್ರಾರ್ಥನೆ, ವೀಣೆ, ಹಾರ್ಮೋನಿಯಂ, ಕಿಂಡರ್‌ಗಾರ್ಟನ್ ಆಟ, ಅನುಕರಣ ಗೀತ, ಇಂಗ್ಲೀಷ್ ರೆಸಿಟೇಷನ್, ಸಂಸ್ಕೃತ—ಕನ್ನಡ ಸಂಭಾಷಣೆ ವಗೈರೆ ಪ್ರೋಗ್ರಾಮಿನ ಸಮಸ್ತ ಭಾಗಗಳನ್ನೂ ಆಹ್ಲಾದಕರವಾಗಿ ನಡಿಸಿದರು. ಹೆಡ್ ಮಾಸ್ಟರ್ ಮ|| ಬಿ. ರಾಮೇಶ್ವರಯ್ಯನವರು 1914-15 ನೇ ಸಂವತ್ಸರದ ರಿಪೋರ್ಟು ಓದಿದರು. ಅದರಲ್ಲಿ ಸ್ಕೂಲ್ ಸ್ಥಾಪನೆ ಆದ ಲಾಗಾಯಿತು ಅದರ ಚರಿತ್ರೆಯನ್ನು ಸೂಚಿಸಿದರು. ಹಿಂದಿದ್ದ ಹೆಡ್ ಮಿಸ್ಟ್ರೆಸ್ ಶ್ರೀಮತಿ ದೊಡ್ಡ ಸುಬ್ಬಮ್ಮನವರು ಈ ಸ್ಕೂಲಿಗಾಗಿ ಕಳೆದ ಹದಿನೆಂಟು ವರ್ಷಗಳಿಂದಲೂ ಮಾಡಿದ ಮೆಹನತ್ತನ್ನು ಬಹುವಾಗಿ ಶ್ಲಾಘಿಸಿದರು. ಕಳೆದ ಜೂನ್ ಮಾಹೆ ಲಾಗಾಯಿತು ಅಪ್ಪರ್ ಸೆಕಂಡರಿ ಕ್ಲಾಸು ಏರ್ಪಟ್ಟದರಿಂದ ಈ ಸ್ಕೂಲು ಕನ್ನಡ ಹೈ ಸ್ಕೂಲಾಗಿದೆ ಎಂದೂ, ಲೋವರ್ ಸೆಕಂಡರಿಗೆ ಇಂಗ್ಲೀಷನ್ನು ಉಪಭಾಷೆಯಾಗಿ ತೆಗೆದುಕೊಳ್ಳಬೇಕೆಂಬ ವಿದ್ಯಾರ್ಥಿನಿಯರಿಗೆ ಇಂಗ್ಲೀಷ್ ಕ್ಲಾಸುಗಳು ಏರ್ಪಡಿಸಿರುತ್ತೇವೆಂದೂ, ಪ್ರಕೃತದಲ್ಲಿ 252 ಮಂದಿ ವಿದ್ಯಾರ್ಥಿನಿಯರಿದ್ದು 190 ಮಂದಿ ಹಾಜರಾಗಿರುತ್ತಿರುವರೆಂದೂ, 38 ಮಂದಿ ಇಂಗ್ಲೀಷ್, 25 ಮಂದಿ ಸಂಸ್ಕೃತ ಓದುತ್ತಿರುವರೆಂದೂ, ಇದುವರೆಗೆ 40 ಮಂದಿ ಕನ್ನಡದಲ್ಲೂ, 6 ಮಂದಿ ಇಂಗ್ಲೀಷಿನಲ್ಲೂ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆಂದೂ, ಆ ಪೈಕಿ ಇಬ್ಬರು ಈ ಸ್ಕೂಲಿನಲ್ಲೂ, ಒಬ್ಬಾಕೆ ಕೊಲ್ಲಾಪುರ ಸಂಸ್ಥಾನದ ಮಹಾರಾಣಿಯವರ ಬಳಿಯಲ್ಲೂ, 10 ಮಂದಿ ಮೈಸೂರು ಸಂಸ್ಥಾನದ ನಾನಾ ಕಡೆಗಳಲ್ಲೂ ಉಪಾಧ್ಯಾಯಿನಿಯರಾಗಿರುತ್ತಾರೆಂದೂ ಸೂಚಿಸಿದರು. ಪ್ರಕೃತ ಈ ಸ್ಕೂಲಿನಲ್ಲಿ ಇಂಗ್ಲೀಷ್, ಕನ್ನಡ, ಸಂಸ್ಕೃತ ಭಾಷೆಗಳನ್ನೂ, ಸಂಗೀತ, ಪಾಕಶಾಸ್ತ್ರ, ಹೊಲಿಗೆ ಮುಂತಾದ ಕುಶಲವಿದ್ಯೆಗಳನ್ನೂ ಕಲಿಸುತ್ತಿರುವುದಲ್ಲದೆ ಕ್ಷಿಪ್ರದಲ್ಲಿಯೇ ಚಿತ್ರದ ಕೆಲಸ ಮುಂತಾದ ಕೈಗಾರಿಕೆಗಳನ್ನೂ, ಡ್ರಾಯಿಂಗ್ ಮುಂತಾದ ಕುಶಲವಿದ್ಯೆಗಳನ್ನೂ ಕಲಿಸುವುದಕ್ಕೆ ತಕ್ಕ ಏರ್ಪಾಡುಗಳು ಆಗುತ್ತವೆಂದೂ ಸೂಚಿಸಿದರು. ಈ ಸ್ಕೂಲಿನಲ್ಲಿ 10 ಮಂದಿ ಪ್ರಾಪ್ತವಯಸ್ಕರು ಓದುತ್ತಿರುವರೆಂತಲೂ, ಅವರಲ್ಲಿ 9 ಮಂದಿ ವಿಕಂತುಗಳು ವೇತನಗಳನ್ನು ಪಡೆಯುತ್ತಿರುವರೆಂತಲೂ ತಿಳಿಸಿದರು. ವಿಕಂತುಗಳ ಪೈಕಿ ಅಪ್ಪರ್ ಸೆಕಂಡರಿಯಲ್ಲಿ ಇಬ್ಬರು ಓದುತ್ತಾರೆಂದೂ, ಒಬ್ಬಾಕೆ ಕನ್ನಡ ಲೋವರ್ ಸೆಕಂಡರಿ ಪ್ಯಾಸ್ ಮಾಡಿ ಸಂಸ್ಕೃತ ಮತ್ತು ಇಂಗ್ಲೀಷ್‌ಗಳಲ್ಲಿ ಪ್ಯಾಸ್ ಮಾಡುವುದಕ್ಕಾಗಿ ವ್ಯಾಸಂಗಮಾಡುತ್ತಿರುವಳೆಂದೂ, 6 ಮಂದಿ ಲೋವರ್ ಸೆಕಂಡರಿ ಕ್ಲಾಸಿನಲ್ಲಿ ಓದುತ್ತಾರೆಂದೂ, ಒಬ್ಬಾಕೆ 4 ನೇ ತರಗತಿಯಲ್ಲಿ ಓದುತ್ತಾಳೆಂದೂ ತಿಳಿಸಿದರು. ದೇಶದ ಏಳಿಗೆಗೆ ಸ್ತ್ರೀವಿದ್ಯಾಭ್ಯಾಸದ ಆವಶ್ಯಕತೆಯನ್ನೂ ಅದರ ಪುರೋಭಿವೃದ್ಧಿಯ ಮಾರ್ಗವನ್ನೂ ಸಂಕ್ಷೇಪವಾಗಿ ಸೂಚಿಸಿದರು. ಸ್ಕೂಲಿನ ಅ|| ಮಾಸ್ಟರುಗಳ ವರ್ಗಾವರ್ಗಿಗಳನ್ನು ತಿಳಿಸಿ, ಅವರೂ ಮಿಸ್ಟ್ರೆಸ್‌ಗಳೂ ಮಾಡುವ ಮೆಹನತ್ತಿಗಾಗಿ ಅವರನ್ನು ವಂದಿಸಿದರು.—ಅನಂತರ ಇನಾಮುಗಳನ್ನು ಕೊಡುವುದಕ್ಕೆ ಸಹಾಯ ಮಾಡಿದ ಮಹನೀಯರುಗಳನ್ನೆಲ್ಲಾ ವಂದಿಸಿದರು. ಆ ಪೈಕಿ ಸ್ಪೆಷಲ್ ಇನಾಮುಗಳನ್ನು ಕೊಟ್ಟ ರಿಟೈರ್ಡ್ ಸಬ್ ಜಡ್ಜ್ ಮ|| ಎಸ್ ವರದರಾಜಯ್ಯಂಗಾರ್ರನ್ನು ವಂದಿಸಿದರು. ವಿದ್ಯಾಭ್ಯಾಸದ ಇಲಾಖೆ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರುಗಳು ಇನ್ಸ್‌ಪೆಕ್ಷನ್ ಮಾಡಿದಾಗ ಅಪ್ಪರ್ ಸೆಕಂಡರಿ ಕ್ಲಾಸಿನ ವಿದ್ಯಾರ್ಥಿನಿಯರೊಬ್ಬರೂ ಜಲಜನಕದ ಗುಣಗಳನ್ನು ಕುರಿತು 10 ನಿಮಿಷಗಳಲ್ಲಿಯೇ ಕಂದಪದ್ಯಗಳನ್ನು ರಚಿಸಿದರೆಂತಲೂ, ಇದಕ್ಕಾಗಿ ಸ. ಇನ್. ಮ|| ಎಂ. ಶ್ರೀನಿವಾಸರಾಯರು ಸ್ಪೆಷಲ್ ಇನಾಮುಗಳನ್ನು ಕಳುಹಿಸಿದಾರೆಂತಲೂ ಸೂಚಿಸಿದರು.

ಸಭಾಧ್ಯಕ್ಷರು ಇನಾಮುಗಳನ್ನು ಕೊಟ್ಟು ಇಂಗ್ಲೀಷಿನಲ್ಲಿ ಉಪನ್ಯಾಸವೂ ಡಿದರು ತಮ್ಮನ್ನು ಅಧ್ಯಕ್ಷರಾಗಬೇಕೆಂದು ಪ್ರಾರ್ಥಿಸಿದ್ದಕ್ಕಾಗಿ ಹೆಡ್ಮಾಸ್ಟರನ್ನು ವಂದಿಸಿ, ಹಿಂದಿದ್ದ ಹೆಡ್ ಮಿಸ್ಟ್ರೆಸ್ ಶ್ರೀಮತಿ ದೊಡ್ಡ ಸುಬ್ಬಮ್ಮನವರು ಮಾಡಿದ ಮೆಹನತ್ತನ್ನು ಶ್ಲಾಘಿಸಿದರು ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಕ್ರೈಸ್ತ ಮಿಷನರಿಗಳು ಬಹು ಮಟ್ಟಿಗೆ ಪ್ರಯಾಸಪಟ್ಟಿರುವರೆಂದು ತಿಳಿಸಿದರು. ಸ್ತ್ರೀಯರು ಓದುವುದೂ, ಬರೆಯುವುದೂ ಕಲಿಯಬೇಕಾದುದು ಅತ್ಯವಶ್ಯಕವಾದರೂ ಅಹಕ್ಕೀಲ ಗುಣಾಢ್ಯರಾಗುವುದು ವಿದ್ಯಾಭ್ಯಾಸದ ಮುಖ್ಯೋದ್ದೇಶವೆಂದು ಒತ್ತಿ ಹೇಳಿದರು ಸ್ತ್ರೀಯರು ಪ್ರಾಪ್ತವಯಸ್ಕರಾದ ಮೇಲೂ ವಿದ್ಯಾಭ್ಯಾಸವನ್ನು ತಪ್ಪದೆ ಮಾಡುತ್ತಿರಬೇಕೆಂದು ತಿಳಿಸಿ, ಸ್ಕೂಲು ಇತೋಪ್ಯತಿಶಯವಾದ ಅಭಿವೃದ್ಧಿಸ್ಥಿತಿಗೆ ಬರಬೇಕೆಂದು ಹಾರೈಸಿದರು. ಚಕ್ರವರ್ತಿ ಸಾರ್ವಭೌಮರ, ಶ್ರೀಮನ್ ಮಹಾರಾಜರವರ, ಯುವರಾಜರವರ ಶ್ರೇಯಃಪ್ರಾರ್ಥನೆಗಳು ಬೆಳೆದ ನಂತರ ಸಭೆಯು ಬರಖಾಸ್ತಾಯಿತು.—ಈ ಸ್ಕೂಲಿಗೆ ಮ|| ಬಿ. ರಾಮೇಶ್ವರಯ್ಯನವರು ಹೆಡ್ ಮಾಸ್ಟರಾಗಿ ಬಂದನಂತರ ಅನೇಕ ಹೊಸ ಏರ್ಪಾಡುಗಳನ್ನು ಮಾಡಿ ಈ ಸ್ಕೂಲನ್ನು ತುಂಬಾ ಅಭಿವೃದ್ಧಿಗೆ ತಂದಿರುತ್ತಾರೆ. ಇವರು ಮಾಡಿದ ಮೆಹನತ್ತಿನಿಂದ ಈ ಸ್ಕೂಲು ಇಷ್ಟು ಉತ್ತಮಸ್ಥಿತಿಗೆ ಬಂದಿದೆ ಎಂಬುದರಲ್ಲಿ ಏನೂ ಸಂಶಯವಿಲ್ಲ.

ನಿಮ್ಮ ವಾಚಕ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ 18 ನೇ ತಾ. ಶನಿವಾರವೂ, 20 ನೇ ತಾ. ಸೋಮವಾರವೂ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡೆಸಿದರು. ನೊವೆಂಬರ್ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿ ಪ್ಯಾಸ್‌ಮಾಡಿದರು. ಆ ತಿಂಗಳಲ್ಲಿ ಜನನ 185 ; ಮರಣ ಪ್ಲೇಗ್ (ಕೊರಗಿನದು) 4, ಜ್ವರ 19, ಕ್ಷಯ 14, ಇತರ ಕಾರಣಗಳು 122, ಒಟ್ಟು 159 ಎಂದೂ ಕ್ಷೆ ಅಂಗುಲ ಮಳೆ ಆಯಿತೆಂದೂ, ಪ್ರೇತಗಳಲ್ಲಿ ಸುಮಾರು 107 ವಯಸ್ಸಿನ ಮತ್ತು 97 ವಯಸ್ಸಿನ ಇಬ್ಬರು ಮುದುಕರು ಕಾಲವಾದರೆಂದೂ ತಿಳಿಯಿತು.—ಮ್ಯುನಿಸಿಪಲ್ ಲೆಕ್ಕಗಳನ್ನು ಕ್ರಮವಾಗಿ ತನಿಖೆಮಾಡಿ ಲೋಪದೋಷಗಳನ್ನು ಆಗಿಂದಾಗ್ಗೆ ಕಂಡುಹಿಡಿದು ತೋರಿಸಿಕೊಡುತ್ತಾ ಬರುವುದಕ್ಕೆ ಕಂಟ್ರೋಲರವರ ಆಫೀಸಿನಿಂದ ಅನುಭವದಾರನಾದ ಒಬ್ಬ ನೌಕರನನ್ನು ಮ್ಯುನಿಸಿಪಾಲಿಟಿಯ ಕೈವಾತಿಗೆ ಮುಫತ್ತಾಗಿ ಕೊಡಬೇಕೆಂದು ಮೆಂಬರುಗಳು ಸರ್ಕಾರಕ್ಕೆ ಬರೆಯುವಂತೆ ತೀರ್ಮಾನ ಮಾಡಿದರು.—ರಾಜಧಾನಿಯಲ್ಲಿ ಬಚ್ಚಲ ಕೊಚ್ಚೆ ಸಾಗಿಸುವುದಕ್ಕೆ ಸರ್ಕಾರದವರು ಟ್ರಸ್ಟ್ ಬೋರ್ಡಿನವರ ಮೂಲಕ ಎಲ್ಲಾ ಮೊಹಲ್ಲಗಳಲ್ಲೂ ಭಾರೀ ನಲ್ಲಿಗಳನ್ನು ಹಾಕಿಸುತ್ತಿದಾರಷ್ಟೆ. ಅದೆಲ್ಲಾ ಪೂರೈಸಿದ ಬಳಿಕ ಪ್ರಜೆಗಳ ಮನೆಗಳ ಕೊಚ್ಚೆಯನ್ನು ನಲ್ಲಿಗಳಲ್ಲಿ ಸಾಗಿಸಿ ಸಿಬ್ಬಂದಿ ಇಟ್ಟು ನಲ್ಲಿಗಳು ಕಟ್ಟಿಕೊಳ್ಳದಂತೆ ಕ್ರಮಪಡಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ಹಣವನ್ನು ಒದಗಿಸಬೇಕಾಗುತ್ತದೆಂದೂ, ಆದ ಕಾರಣ ಆಯಾ ಮನೆಗಳ ಮಾಲೀಕರಿಂದ ಪ್ರತಿ ಒಂದು ಅಂಥಾ ಬಚ್ಚಲಿಗೂ ಒಂದು ರೂಪಾಯಿಗೆ ಮೀರದಂತೆ ಬಚ್ಚಲ ತೆರಿಗೆ ಹಾಕಬಹುದೆಂದೂ ಮ್ಯಾನೇಜಿಂಗ್ ಕಮಿಟಿಯವರು ಸಿಫಾರಸು ಮಾಡಿದ್ದರು. ಈ ವಿಚಾರದಲ್ಲಿ ಪ್ರಜೆಗಳ ಸಮ್ಮತಿಯನ್ನು ತಿಳಿಯಬೇಕಾಗಿದೆ ಎಂದೂ, ಮೊದಲೇ ಅದನ್ನು ಒಪ್ಪಲಾಗುವುದಿಲ್ಲವೆಂದೂ ಕೆಲವು ಮೆಂಬರುಗಳು ಆಕ್ಷೇಪಣೆಮಾಡಿದರು. ಮ್ಯಾನೇಜಿಂಗ್ ಕಮಿಟಿಯವರ ಅಭಿಪ್ರಾಯವನ್ನು ಗವರ್ನ್‌ಮೆಂಟಿಗೆ ಅರಿಕೆಮಾಡಿ ಅವರಿಂದ ಒಪ್ಪಿಗೆ ಬಂದನಂತರ ಪ್ರಜೆಗಳು ತಮ್ಮ ಅಭಿಮತವನ್ನು ತಿಳಿಸಬಹುದಾಗಿದೆ ಎಂದೂ, ಈಗಿನ ತೀರ್ಮಾನವೇ ಆಖೈರ್ ತೀರ್ಮಾನವಾಗುವುದಿಲ್ಲವೆಂದೂ ಇನ್ನು ಕೆಲವು ಮೆಂಬರುಗಳು ತಿಳಿಸಿದರು. ಈ ವಿಷಯದಲ್ಲಿ ತುಂಬಾ ಚರ್ಚೆ ನಡೆಯಿತು. ಕಡೆಗೆ ಪ್ರೆಸಿಡೆಂಟರು ಮೆಂಬರುಗಳ ಓಟನ್ನು ಕೇಳಿದರು. ಮ|| ಸಿ. ನಂಜಪ್ಪನವರು ಮತ್ತು ಮ|| ಬಿ. ಕೃಷ್ಣಪ್ಪನವರು ವಿನಾ ಉಳಿದ ಹದಿನೈದು ಮೆಂಬರುಗಳು ಮ್ಯಾನೇಜಿಂಗ್ ಕಮಿಟಿಯವರ ಅಭಿಪ್ರಾಯವನ್ನು ಅನುಮೋದಿಸಿದ್ದರಿಂದ ಆ ರೀತಿ ಪಾಸಾಯಿತು.

ಅಂಗಡಿಗಳಿಗೆ ನೀರಿನ ತೆರಿಗೆ ಹಾಕುವ ವಿಚಾರವನ್ನು ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸೋಣವೆಂದು ತೆಗೆದಿಟ್ಟರು. ಆಕ್ಟ್ರಾಯಿ ಬಾಬಿನಲ್ಲಿ ಬಾರಾಮಾಗದ ಸಿಬ್ಬಂದಿ ಖರ್ಚನ್ನು ಇನ್ನು ಮುಂದೆ ಮ್ಯುನಿಸಿಪಲ್ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ಇತ್ಯರ್ಥವಾಯಿತು.—ದೇವರಾಜ ಮಾರ್ಕೆಟ್ಟಿನೊಳಗೂ, ಅದರ ಮುಂಭಾಗದ ಚೌಕದಲ್ಲೂ ಅಭಿವೃದ್ಧಿಯ ಕಾಮಗಾರಿಗಳನ್ನು ಮಾಡಬೇಕೆಂದು ಇತ್ಯರ್ಥವಾಗಿದೆಯಷ್ಟೆ. ಈ ಖರ್ಚಿನಲ್ಲಿ ಒಂದು ಪಾಲನ್ನು ಮ್ಯುನಿಸಿಪಾಲಿಟಿಯವರು ವಹಿಸಲಾರರೆಂದು ಹೇಳುವುದು ಸಮ್ಮತವಾಗಿಲ್ಲವೆಂದು ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದಾರೆ. ಈ ವಿಚಾರದಲ್ಲಿ ಮ್ಯುನಿಸಿಪಾಲಿಟಿಯವರು ಖಚಿತವಾದ ಯಾವುದೊಂದು ಅಭಿಪ್ರಾಯವನ್ನೂ ಹೇಳುವುದಿಲ್ಲ ಎಂಬ ಮಾತನ್ನು ಕೊಡಿಸಿ ರೆಕಾರ್ಡು ಮಾಡಿಕೊಂಡರು.—ಡಿಸಿನ್ಫೆಕ್ಷನ್ ಸಿಬ್ಬಂದಿಯವರಿಗೆ ದಿರಸುಗಳನ್ನು ಕೊಡಿಸುವುದಕ್ಕೆ ಸುಮಾರು 177 ರೂಪಾಯಿ ಖರ್ಚುಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಪೂರ್ಣಯ್ಯನವರ ನಾಲಾ ಬಳಿ ಇರುವ ಖಾಲೀ ನಿವೇಶನಗಳನ್ನು ಹರಾಜು ಹಾಕಿ ಹಣವನ್ನು ಟ್ರಸ್ಟ್ ಬೋರ್ಡಿಗೆ ಜಮಾ ಕಟ್ಟಬೇಕೆಂದು ಸರ್ಕಾರದವರು ತಿಳಿಸಿದ್ದರು. ಮೆಂಬರುಗಳು ಈ ಭಾಗವನ್ನು ಚರ್ಚೆಮಾಡಿ ಮಂಡಿ ಲಷ್ಕರ್ ಮೊಹಲ್ಲಗಳಲ್ಲಿ ಮನೆಗಳನ್ನು ಕಳೆಕೊಂಡಿರುವವರಿಗೆ ಬಿಕರಿ ಮಾಡಬೇಕೆಂದು ಟ್ರಸ್ಟ್ ಬೋರ್ಡಿಗೆ ಸಿಫಾರಸು ಕಳುಹಿಸಿದಾರೆ.—ಸಂಸ್ಕೃತ ಪಾಠಶಾಲೆಗೆ ಉತ್ತರ ಪಾರ್ಶ್ವದಲ್ಲಿ ಕಟ್ಟುವ ಮ್ಯುನಿಸಿಪಲ್ ಆಫೀಸಿನ ನಕ್ಷೆಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿ ಖರ್ಚನ್ನು 1,30,000 ರೂಪಾಯಿಗೆ ಮೀರದಂತೆ ನೋಡಿಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ.—ಮೈಸೂರಿನ ಆಸ್ಪತ್ರೆಗಳಲ್ಲಿ ಔಷಧ ತೆಗೆದುಕೊಳ್ಳುವವರಿಂದ ರುಸುಂ ವಸೂಲ್ಮಾಡಬೇಕೆಂದು ಸರ್ಕಾರದವರು ಕೊಟ್ಟಿರುವ ಹುಕುಮನ್ನು ಕುರಿತು ಮೆಂಬರುಗಳು ಬಹಳ ವಿಶೇಷವಾಗಿ ಚರ್ಚೆಮಾಡಿ ಇಂಥಾ ರೂಲನ್ನು ಜಾರಿಗೆ ತರುವುದು ಸಮರ್ಪಕವಾಗಿಲ್ಲವೆಂದು ಅಭಿಪ್ರಾಯಪಟ್ಟರು. ಇದಕ್ಕಾಗಿ ಒಂದು ಸಬ್ ಕಮಿಟಿಯು ಏರ್ಪಾಡಾಯಿತು.—ಹೆಲ್ತ್ ಆಫೀಸಿಗೆ ಒಂದು ಟೈಪ್ ರೈಟರ್ ಕೊಂಡುಕೊಡಬಹುದೆಂದು ಸರ್ಕಾರದವರು 40 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಮ್ಯುನಿಸಿಪಲ್ ಶಿಲ್ಕು ಹಣದ ಪೈಕಿ 25,000 ರೂಪಾಯನ್ನು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಡಬಹುದೆಂದು ಸ್ಯಾಂಕ್ಷನ್ ಆಗಿದೆ.

3,000 ರೂಪಾಯಿ ಅಂದಾಜಿನೊಳಗೆ ಮನೆ ಕಟ್ಟುವವರಿಗೆ ಸರ್ಕಾರದವರು ಸಾಗುವಾನಿ ಮತ್ತು ಕಾಡುಮರವನ್ನು ಅಸಲ್ ಖರೀದಿಗಿಂತ ಅಡಿ ಒಂದಕ್ಕೆ 1-2 ಆಣೆಗಳ ಲಾಭವಿಟ್ಟು ಬಿಕರಿಮಾಡಿದಲ್ಲಿ ಮ್ಯುನಿಸಿಪಾಲಿಟಿಯವರು ಆಕ್ಟ್ರಾಯಿಸುಂಕವನ್ನು ಮಾಫಿಬಿಡುತ್ತೇವೆಂದು ಸರ್ಕಾರಕ್ಕೆ ಸಲಹೆಕೊಟ್ಟು ಅದರ ಸ್ಯಾಂಕ್ಷನ್ ಬೇಡಿರುತ್ತಾರೆ. ಯಾಕೆಂದರೆ ರಾಜಧಾನಿಯಲ್ಲಿ ವಾಸಕ್ಕೆ ಮನೆಗಳು ಸಿಕ್ಕುವುದಿಲ್ಲ. ಸಾಗುವಾನಿ ಕ್ರಯವೂ, ಇಟ್ಟಿಗೆ ಧಾರಣೆಯೂ, ಇತರ ಪದಾರ್ಥಗಳ ಬೆಲೆಯೂ ಜಾಸ್ತಿಯಾಗಿರುವುದರಿಂದ ಬಡವರು ಸಾಧಾರಣ ಮನೆಗಳನ್ನೂ ಕಟ್ಟಿಕೊಳ್ಳುವುದು ಪ್ರಯಾಸವಾಗಿ ನಗರವು ಅಬಾದಿಗೆ ಬರಲು ಕೊರತೆಯುಂಟಾಗಿದೆ. ಇದಕ್ಕೋಸ್ಕರ ಮೆಂಬರುಗಳು ಮ್ಯುನಿಸಿಪಾಲಿಟಿಯಿಂದ 5,000 ರೂಪಾಯನ್ನು ತೆಗೆದಿಟ್ಟು ಇಟ್ಟಿಗೆಗಳನ್ನು ಸುಡಿಸಿ ಅಸಲ್ ಕ್ರಯಕ್ಕೆ ಹೊಸಮನೆ ಕಟ್ಟುವ ಜನಗಳಿಗೆ ಕೊಡಬೇಕೆಂದೂ ಅಭಿಪ್ರಾಯಪಟ್ಟು ಸರ್ಕಾರದವರ ಅನುಮತಿಯನ್ನು ಬೇಡಿಕೊಂಡಿದಾರೆ.–ಜಲಪುರಿ ಬಡಾವಣೆಯಲ್ಲಿ ಜಲಗಾರರಿಗೆ (ಬೀದಿ ಗುಡಿಸುವ ಸಿಬ್ಬಂದಿಯವರು) 1,550 ರೂಪಾಯಿ ಖರ್ಚುಮಾಡಿ 5 ಪಕ್ಕಾ ಮನೆಗಳನ್ನು ಕಟ್ಟಬೇಕೆಂದು ಒಪ್ಪಿ, ಸರ್ಕಾರಕ್ಕೆ ಸಿಫಾರಸು ಮಾಡಲಾಗಿದೆ—ಜೊಂಡು ದನಗಳನ್ನು ಪಬ್ಲಿಕ್ ಉದ್ಯಾನವನಗಳಿಗೆ ನುಗ್ಗಿ ಹಾಳುಮಾಡುವುದನ್ನೂ ಬೀದಿಗಳಲ್ಲಿ ಅಲೆಯುವುದನ್ನೂ ತಪ್ಪಿಸುವುದಕ್ಕೆ ಅಂಥಾ ರಾಸುಗಳನ್ನು ಹಿಡಿದು ದೊಡ್ಡಿಗೆ ಕೊಡಿದವರಿಗೆ ಕಾಲುವಾಸಿ ಇನಾಮು ತರೀಖು ಸಾವತಿಮಾಡಬಹುದೆಂದು ಒಪ್ಪಲಾಯಿತು.—ನಂಜರಾಜ ಬಹದ್ದೂರವರ ಛತ್ರದ ಬಳಿ ಇರುವ ನಿವೇಶನವನ್ನು ವಿದ್ಯಾರ್ಥಿಗಳ ನಿಲಯವನ್ನು ಧರ್ಮಾರ್ಥವಾಗಿ ಕಟ್ಟುವುದಕ್ಕೆ ಮ. ಮನ್ನಾರ್ ಕೃಷ್ಣಶೆಟ್ಟರಿಗೆ ಕೊಡಬಹುದೆಂದು ಸ್ಯಾಂಕ್ಷನ್ ಆಗಿದೆ—ಮಂಡಿ ಮಾರ್ಕೆಟ್ಟಿನಲ್ಲಿ ಮೇಲ್ಛಾವಣಿಯನ್ನು ರಿಪೇರಿ ಮಾಡುವುದಕ್ಕೆ 540 ರೂಪಾಯಿ ಖರ್ಚುಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು. ನವರಾತ್ರಿ ಉತ್ಸವಗಳನ್ನು ಜನರು ಕುಳಿತು ನೋಡುವುದಕ್ಕೆ ಅನುಕೂಲಿಸುವಂತೆ ಅರಮನೆಯ ಮುಂದೆ ಗ್ಯಾಲರಿಗಳನ್ನು ಹಾಕಿಸಿದ್ದಕ್ಕೆ ಮ್ಯುನಿಸಿಪಲ್ ಫಂಡಿನಿಂದ 110 ರೂಪಾಯಿ ಕೊಡಬಹುದೆಂದು ಸಮ್ಮತಿಸಿದರು.—ಈಗ ಹಾಕಿರುವ ಅಂಗಡಿ ಕಂದಾಯಗಳನ್ನು ವಜಾ ಮಾಡಿ ಕಸಬಿನ ಕಂದಾಯ ಹಾಕಬೇಕೆಂದೂ, ಮದರಾಸಿನಲ್ಲಿ ಹಾಕಿರುವ ದರಗಳನ್ನು ಜಾರಿಗೆ ತರಬಹುದೆಂದೂ ಮ್ಯಾನೇಜಿಂಗ್ ಕಮಿಟಿಯವರು ಸಿಫಾರಸು ಮಾಡಿದ್ದರು. ಹೀಗೆ ಮಾಡೋಣದರಿಂದ ಉತ್ಪತ್ತಿಯು 4,000 ರೂಪಾಯಿ ತನಕ ಕಡಮೆಯಾಗುವುದೆಂದು ತಿಳಿಯಿತು. ಈಗಿರುವ ಅಂಗಡಿ ಕಂದಾಯಗಳನ್ನು ತೆಗೆದುಹಾಕಿ ಕಸಬಿನ ಕಂದಾಯ ಜಾರಿಗೆ ತಂದರೆ ಪ್ರಜೆಗಳಲ್ಲಿ ವಿಶೇಷ ಕಲವಳ ಹುಟ್ಟಬಹುದೆಂದು ಮ|| ಮಹಮದ್ ಜಾಫರ್ ಸಾಹೇಬರು ಸೂಚಿಸಿದರು ಮ್ಯುನಿಸಿಪಲ್ ಕಾನೂನಿನಲ್ಲಿ ಹೇಳಿರುವ ಕಸಬಿನ ಕಂದಾಯ ಹಾಕಬೇಕಿಲ್ಲದೆ ಈಗ ಹಾಕಿರುವ ಅಂಗಡಿ ಕಂದಾಯ ಧರ್ಮವಾದದ್ದಲ್ಲವೆಂದು ಮ|| ಡಿ. ಬಸಮಯ್ಯನವರು ಹೇಳಿದರು. ಕಡೆಗೆ ಮದರಾಸಿನಲ್ಲಿ ಹಾಕಿರುವಂತೆ ಕಸಬಿನ ಕಂದಾಯವನ್ನು ಹೆಚ್ಚಿಸುವುದರಲ್ಲಿ ಕೌನ್ಸಿಲ್‌ನವರಿಗೆ ಸಮ್ಮತವಿಲ್ಲವೆಂದು ಇತ್ಯರ್ಥವಾಯಿತು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರಹಕ್ಕೆ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು

...ಗಳನ್ನು ಬರೆದು ತಿಳಿಸತಕ್ಕದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪೃಷ್ಠಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.
—ಎಡಿ.]

ಕರೆಸ್ ಪಾಂಡೆನ್ಸ್.

ಲೋವರ್ ಸೆಕೆಂಡರಿ ಪರೀಕ್ಷೆಗೆ ಬರುವವರಿಗೆ.

ಅಯ್ಯಾ,—ಬರುವ ಏಪ್ರಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರೀ ಪರೀಕ್ಷೆಗೆ ಚಿತ್ರದುರ್ಗದ ಸೆಂಟರಿಗೆ ಬರತಕ್ಕ ಬ್ರಾಹ್ಮಣ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ ಹೋದ ವರುಷ ನಡೆಸಿದಂತೆ ಈ ವರುಷವೂ ತಾಲ್ಲೂಕು ಬೋರ್ಡು ಮೆಂಬರಾದ ಮ|| ಹುಲ್ಲೂರು ರಾ|| ಸಂಜೀವರಾಯರೂ, ಮ|| ... ರಾ|| ವಾಸುದೇವರಾಯರೂ ಪರೀಕ್ಷೆ ತೀರುವವರಿಗೂ ನಿತ್ಯವೂ ಎರಡು ವೇಳೆ ಭೋಜನಾದಿಗಳನ್ನು ಚಿತ್ರದುರ್ಗದ ಶ್ರೀ ಉತ್ತರಾದೀ ಮಠದಲ್ಲಿ ನಡೆಸುತ್ತಾರೆ. ಅಲ್ಲದೆ ವೀರಶೈವ ವಿದ್ಯಾರ್ಥಿಗಳಿಗೂ ವೀರಶೈವರಲ್ಲಿ ಭೋಜನ ಮಾಡತಕ್ಕ ಇತರ ಮತಸ್ಥರಿಗೂ ಗೊಡಬನ ಹಾಳ್ ಮ|| ಗೌಡ ಮುರಿಗಪ್ಪನವರೂ, ಮ|| ಗೌಡ ಮಲ್ಲಪ್ಪನವರೂ, ಮ|| ಗೊಂಟಿಗಾರ್ರ ಹನುಮಪ್ಪನವರೂ, ಮ|| ... ಬಸಪ್ಪನವರ ಮಕ್ಕಳು ಕಲ್ಲಪ್ಪನವರೂ ಸೇರಿ ಚಿತ್ರದುರ್ಗದಲ್ಲಿ ... ಮಠದಲ್ಲಿ ಭೋಜನದ ಏರ್ಪಾಟನ್ನು ಮಾಡಲು ಒಪ್ಪಿರುತ್ತಾರೆ. ... ಸ್ಥಳಗಳಿಗೆ ಬರತಕ್ಕವರ ಸಂಖ್ಯೆಯನ್ನು ಜನವರಿ ಆಖೈರು ಒಳಗಾಗಿ ಚಿತ್ರದುರ್ಗದ ತಾಲ್ಲೂಕು ಗೊಡಬನ ಹಾಲ್ ಸ್ಕೂಲ್ ಹೆಡ್ ಮಾಸ್ತರು ... ರಾಮರಾಯರಿಗೆ ಬರೆದು ತಿಳಿಸಬೇಕಾಗಿ ಕೋರಲ್ಪಟ್ಟಿದೆ.

ಜಿ. ಎಚ್.

ಅಮಲ್ದಾರರುಗಳ ವಿಚಾರ.

ಅಯ್ಯಾ,—ನಮ್ಮ ಸಂಸ್ಥಾನದ ಅಮಲ್ದಾರರು ಸತ್ಯಸಂಧರಲ್ಲವೇ ಎಂಬ ... ಒಂದು ಆರ್ಟಿಕಲ್ 10 ನೇ ಗುರುವಾರ ಡಿಸೆಂಬರ್ ತಿಂಗಳಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿತ್ತು. ಅಮಲ್ದಾರರು ಅದರಲ್ಲಿ "ಅಮಲ್ದಾರರುಗಳೇ ... ಗುಂಪಿನ ಅಧಿಕಾರಿಗಳ ಸತ್ಸಂಧತೆಯನ್ನು ಕಾಪಾಡಿಕೊಳ್ಳುವದಕ್ಕೋಸ್ಕರ ... ತಮ್ಮ ಗುಂಪಿಗೇನೆ ಅಪಮಾನ ತರುತ್ತಿರುವಂಥ ಅಯೋಗ್ಯರನ್ನು ... ಪ್ರಕಾಶಿಪಡಬೇಕು" ಎಂದು ಬರೆದು ಇರುತ್ತೆ. ಮೆಜಾರ್ಟಿ ಮೆಂಬರುಗಳು ... ಸ್ವತಂತ್ರರಾಗಿದ್ದರೆ ಇತರ ಮೇಲ್ಪಟ್ಟ ಅಧಿಕಾರಿಗಳು ಸಹ ಭಯಪಡುತ್ತಾರೆ. ಮತ್ತು ಮೇಲ್ಪಟ್ಟ ಅಧಿಕಾರಿಯು ಸಹ ಯಾವುದೋ ಒಂದು ರೀತಿಯಲ್ಲಿ ಅನು... ವಾಗಿದ್ದರೆ ಅವರನ್ನು ಹ್ಯಾಗೆ ಎತ್ತಿಹಾಕಲಾಗುತ್ತೆ? ಡೆಪ್ಟಿ ಕಮಿಷನರ್ ... ಪ್ರಜೆಗಳಲ್ಲಿ ಬೆರತರೆ ಇಂಥ ಅಧಿಕಾರಿಗಳು ಮಾಡತಕ್ಕ ಕರ್ತವ್ಯ ... ಹೋಗುತ್ತಿತ್ತು. ಒಂದು ವೇಳೆ ಅವರಲ್ಲಿ ಬೆರತು ಅಧಿಕಾರಿಗಳ ಗೋಜಿಗೆ ... ಪ್ರಜೆಗಳಿಗೆ ತಮ್ಮ ತೊಂದರೆಯನ್ನು ಹೇಳಿಕೊಂಡರೂ ಸುಮ್ಮನಿದ್ದರೆ ... ಮಾಡಲಾದೀತು? ಡೆಪ್ಟಿ ಕಮಿಷನರ್‍ರು ಪ್ರಜೆಗಳಲ್ಲಿ ಬೆರೆಯದೆ ಇದ್ದ ... ಇವರ ಆಟವೇ ಆಟ! ಒಂದು ವೇಳೆ ಸಾಹೇಬರ ವಿಶ್ವಾಸಕ್ಕೆ ಪಾತ್ರ... ಅಧಿಕಾರಿಗಳ ಆಟವಂತು ಹೇಳ ತೀರದು! ಈ ಎರಡು ಬಗೆಯಲ್ಲೂ ... ತೊಂದರೆಪಡುತ್ತಿರುವರು. ಮೊಟ್ಟ ಮೊದಲು ಡೆ|| ಕ|| ಸಾಹೇಬರು ತಾವು ... ಮಿಯನ್ನು ಕಾಪಾಡಿ ಅವರಿಗಾಗಿ ತಮ್ಮ ತನುಮನವನ್ನು ಅರ್ಪಿಸು... ಸಂಬಳ ಉಳ್ಳವರಾದವರಿಂದ ಎಲ್ಲಾ ಸೌಕರ್ಯಗಳೂ ಉಂಟಾತ್ತೇ ... ಸಂಬಳ, ಟ್ರಾವೆಲಿಂಗ್ ಅಲೋಯನ್ಸುಗಳಲ್ಲಿ ಆಸಕ್ತರಾದವರಿಂದ ... ಉಪಯೋಗವಾಗದೆ ಪ್ರಜೆಗಳು ಪುಥಾಸ್ಥಿತಿಯಲ್ಲೇ ಇರುತ್ತಾರೆ ... ಡೆ|| ಕ|| ಸಾಹೇಬರು ಸೀಮೆಯಲ್ಲಿ ಇರುವುದು ನಮ್ಮ ದಿವಾನ್ ಸಾಹೇಬರ ... ಗೊತ್ತಾಗಬೇಕು! ಆಸ್ಥಾನಕ್ಕೆ ಲಾಯಖಾದವರನ್ನೇ ತರಬೇಕು ಎಂಬ ... ನಮ್ಮ ದಿವಾನ್ ಸಾಹೇಬರಿಗೆ ತಿಳಿದ ಸಂಗತಿಯೇ ಆಗಿರುತ್ತೆ.

ಅಮಲ್ದಾರರಿಗೆ ಮ್ಯಾಜಿಸ್ಟ್ರೇಟು ಪವರ್ ಒಂದು ಕಡೆ, ಹೆಡ್ ಆಫ್ ದಿ ... ಪೋಲೀಸು ಎಂಬ ಅಧಿಕಾರ ಒಂದು ಕಡೆ ಇರುತ್ತೆ. ಇದರಿಂದ ... ರಿಂದ ಜವಾನನ ವರಿವಿಗೆ ಇವರ ಅಧೀನ. ಈ ಎರಡು ಅಧಿಕಾರಿಗಳ ... ಎಂಥಾ ಮನುಷ್ಯನಾದವನೂ ನೆಗ್ಗಿ ಸುಗ್ಗಿಕಾಯಿ ಆಗುತ್ತಾನೆ. ಎರಡೂ ... ಬಲದಿಂದ ಪ್ರಜೆಗಳು ಬಂಚ ಕೊಡಲು ತಯಾರ್ ಇಲ್ಲದೆ ಇದ್ದಾಗ್ಯೂ ... ಎಂಬ ಹಗ್ಗದಿಂದ ಕಟ್ಟಿ ಬಿಡತರಿಸಿ ಸಿಬಂಧಿಸುತ್ತಾರೆ. ತಾಲ್ಲೋಕಿಗೆ ... ಇವರೇ ಸ್ವತಂತ್ರರು. ಇವರು ಆಡಿದ್ದೇ ಆಟ. ಇವರನ್ನು ವಿಚಾರಿಸುವವರು ... ? "ಬೇಲಿ ಎದ್ದು ಹೊಲ ಮೇಯುವಾಗ ಹೊಲ ಕಡೆವೀತೇ" ಎಂಬಂತೆ ... ಕಡೆದಾರು? ಮೊದಲು ಮೆಂಬರುತನಕ್ಕೆ ಚುನಾಯಿಸುವವರು ಅಮಲ್ದಾ... ಅವರಿಗೆ ಇತರ ಕಾರ್ಯಗಳಲ್ಲಿ ಅನುಕೂಲವಾದ ಮನುಷ್ಯನನ್ನು ಚುನಾ... ಯಿಸುತ್ತಾರೆ. ಅಂಥವನು ಅಮಲ್ದಾರರ ಮೇಲೆ ಪ್ರತಿಭಟಿಸ್ಯಾನೇ? ಪ್ರತಿಭಟಿಸಿ, ... ಅಧಿಕಾರ ಕೈಯಲ್ಲಿಟ್ಟುಕೊಂಡಿರುವವರ ಕೈಲಿ ಸಿಕ್ಕಿ ಬದುಕಿದ್ದಾನೇ! ... "ತನಕೊಡಿ ತಳ್ಳ" ಎಂಬಂತೆ ಅನ್ಯಾಯವೇ ತವರು ಮನೆಯಾಗಿರುವಲ್ಲಿ ... ಸ್ಥಳ ದೊರೆವೀತೇ? ಒಂದು ವೇಳೆ ಮೆಂಬರು ತನ್ನ ಪೌರುಷದಿಂದ ... ವಾಗಿ ವಾದಿಸಿದರೂ ಕೂಡ್ಲೆ ಏನಾದರೂ ಅಪವಾದ ಅಂಥವನ ಮೇಲೆ ... ಗಳು ಆರಾಧನೆಮಾಡಿ ವಜಾಮಾಡಿಕುತ್ತಾರೆ. ಇದು ವಾಡಿಕೆ ಮತ್ತೂ ... ಸಿದ್ಧವಾದದ್ದು. ಈಗ ಅನೇಕ ಮೆಂಬರುಗಳು ಸಂಸ್ಥಾನಕ್ಕೆ ಬರು... ಹುಡುಕಿದರೆ ಅನುಭವಶಾಲಿಯೂ ಇಂಗಿತಜ್ಞನಿಯೂ, ಪರಹಿತಾಪೇಕ್ಷಿ... 100 ಕ್ಕೆ 5 ಸಿಕ್ಕುತ್ತಾರೋ ಇಲ್ಲವೋ ತಿಳಿಯದು. ಬಹು ಜನರು ... ಬ್ಯಾಟಾಕೋಸ್ಕರ ಬರುತ್ತಾರೆ. ಆದರೆ ಮೆಂಬರುಗಳ ತಪ್ಪಲ್ಲ; ... ಮಾಡತಕ್ಕ ಅಧಿಕಾರಿಗಳ ತಪ್ಪು. ಇದನ್ನು ನಮ್ಮ ದಿವಾನ್ ಸಾಹೇ... ತಿದ್ದುತ್ತಾರೆಂದು ನಂಬಿರುತ್ತೇವೆ. ಮತ್ತು ಅಮಲ್ದಾರರುಗಳಿಗೆ ಮ್ಯಾಜಿ... ಸ್ಟ್ರೇಟ್ ಪವರ್ ಮತ್ತು ಪೋಲೀಸು ಅಧಿಕಾರ ತಪ್ಪಿಸಿದರೆ ಪ್ರಜೆಗಳು ಧನ್ಯ... ರಾಗುತ್ತಾರೆ.

... ನಾಮಿಲ್ ಅಧಿಕಾರಿಗಳ ಮೇಲೆ ಪುಕಾರ್ ಸರಕಾರಕ್ಕೆ ಬಂದರೂ ... ಅವನ್ನು ಎತ್ತಿಹಾಕದೆ ಇದ್ದರೆ ಅವರಿಗೆ ಇನ್ನೂ ಸಲಿಗೆ ಜಾಸ್ತಿಯಾಗಿ ಹಿಂಸಿಸು... ? ಈ ವಿಷಯದಲ್ಲಿ ಸರಕಾರವು ಗಮನಕೊಡುತ್ತೆಂದು ನಂಬುತ್ತೇವೆ.

23 ನೇ ಡಿಸೆಂಬರ್ ಪತ್ರಿಕೆಯಲ್ಲಿ "ಹಿತೈಷಿ" ಎಂಬುವರು ಕೆಲವು ವಿಷಯ ... ತ್ತಾರೆ. ಪ್ರಜೆಗಳು ಮುಂದು ಬರಲು . . . ಹಿಂಜರಿಯುತ್ತಾರೆ. ಪ್ರಜೆಗಳು ... ದ್ದನ್ನು ರುಜುವಾತು ಕೊಟ್ಟರೂ ಮೇಲ್ಪಂಕ್ತಿನ ಅಧಿಕಾರಿಗಳು ತಕ್ಕ ... ಮಾಡದೆ ಕೈಬಿಟ್ಟರೆ ಪ್ರಜೆಗಳು ಇನ್ನು ಮುಂದೆ ಹೀಗೆ ನಾವು ರುಜುವಾತು ... ನಮ್ಮ ನಾಗುತ್ತಾರೆ. ಇದರಿಂದ ದ್ವೇಷ ಹೆಚ್ಚಿ ತಮಗೆ ತೊಂದರೆ ಬಂದೀ... ಹಿಂಜರಿಯುತ್ತಾರೆ. ಇದುಯಾರ ತಪ್ಪು? ಈ ಚಿತ್ರದುರ್ಗದಲ್ಲಿ ಇದೇ ರೀತಿ ... ತು. ಕೇಸು ರುಜುವಾತು ಕೊಟ್ಟಿತು. ಲಂಚ ತೆಗೆದುಕೊಂಡವರಿಗಂತು ... ಇಲ್ಲ. ರುಜುವಾತು ಮಾಡಿಕೊಟ್ಟ ಪ್ರಜೆಗೆ ಅನೇಕ ಕಷ್ಟಗಳನ್ನು ಹಿಂದೆ ... ಅಧಿಕಾರಿಗಳು ತೊಂದರೆ ಕೊಡುತ್ತಿರುವರು ನಮ್ಮ ದಿವಾನ್ ಸಾಹೇಬರ ... ವಿಚಾರ ಚಿತ್ತಕ್ಕೆ ತಂದಾರೆಂದು ನಂಬಿರುತ್ತೇನೆ. ನಮ್ಮ ದಿವಾನ್ ಸಾಹೇ... ಒಂದು ಆಫೀಸು ಏರ್ಪಡಿಸಬೇಕೆಂಬುದು ಅತ್ಯುಕ್ತವಾದದ್ದು. ಎಲ್ಲಾ ... ನಮ್ಮ ಡಿಸ್ಟ್ರಿಕ್ಟಿನಲ್ಲಿ ನೆಲೆಯಾಗಿ ಇರುತ್ತೆ. ಇವರ ಕರ... ಜಾಸ್ತಿ ಆಗಿತೆಂದು ನಂಬುತ್ತೇನೆ.

... ವಸೂಲಗಳ ಠಾಣಾಯ್ತು ಎಲ್ಲಿಯೂ ಕದಲದೆ ಇರತಕ್ಕ ... ಅಧೀಸರೂ, ಪೋಲೀಸು ಲೈನಿನಲ್ಲಿ ಅನೇಕ ಅಧೀಸರುಗಳೂ ಇರು... ಪ್ರಜೆಗಳ ಸೌಕರ್ಯಕ್ಕೆ ವರ್ಗಾವರ್ಗಿಯು ಅತ್ಯಾವಶ್ಯಕವಾದ ಸಂಗತಿ ... ಸಾಹೇಬರ ಚಿತ್ತಕ್ಕೆ ಬಾರದ ಸಂಗತಿಯಾಗಿರಲಾರದಾಗಿ ಪ್ರಾರ್ಥನೆ. ಅವರು ಇನ್ನು ಕೆಲವು ದಿವಸವಿದ್ದರೆ ಹೆಡ್ ಕ್ವಾರ್ಟರು ಹೀನಸ್ಥಿತಿಗೆ ಬರುತ್ತೆಂಬದಾಗಿ ಹೇಳತಕ್ಕದ್ದರಲ್ಲಿ ಯಾವ ಸಂಶಯವೂ ಕಾಣುವುದಿಲ್ಲ. ನಮ್ಮ ಪ್ರಜಾ ಪಕ್ಷಪಾತಿಗಳಾದ ದಿವಾನ್ ಸಾಹೇಬರು ತಕ್ಕ ಏರ್ಪಾಡಿನಿಂದ ನಮ್ಮನ್ನು ಕಾಪಾಡುತ್ತಾರಾಗಿ ನಂಬಿರುತ್ತೇವೆ.

ಚಂದಾದಾರ್.

[ಈ ಬಾತ್ಮಿದಾರರು ಬರೆಯುವಂಥಾ ವಿಚಾರಗಳು ಯಥಾರ್ಥವಾಗಿದ್ದಲ್ಲಿ ನಮ್ಮ ಸರ್ಕಾರದವರು ತಾಮಸಮಾಡದೆ ತಕ್ಕ ಪರಿಹಾರಗಳನ್ನು ಕಲ್ಪಿಸುವುದು ಅವಶ್ಯವೆಂದು ಕೋರುತ್ತದೆ.—ಎಡಿ.]

ತಾಲ್ಲೋಕು ವರ್ತಮಾನಗಳು.

ಕಾವೇರಿ ರಿಜರ್ವಾಯರ್.—ಇಲ್ಲಿ ನಡೆಯುತ್ತಾ ಇರುವ ಕಟ್ಟೆಯ ಕಾಮ ಗಾರಿಯ ಪೈಕಿ ಸ್ಲೂಸ್ ಕಟ್ಟಡದ ಆರ್ಚ್ ಕೆಲಸವು ಯಾವದೊಂದು ತೊಂದರೆಯೂ ಇಲ್ಲದೆ ಸುರಕ್ಷಿತವಾಗಿ ಪೂರ್ತಿಯಾಯಿತು. ಸಾಮಾನ್ಯವಾಗಿ ಇಂಥಾ ಕೆಲಸಗಳು ನಡೆಯುವ ಕಾಲದಲ್ಲಿ ಕೆಲಸ ಮಾಡುವವರ ಅಜಾಗ್ರತೆಯಿಂದ ಯಾರಿಗಾದರೂ ಅಪಾಯ ಸಂಭವಿಸುವದು ವಾಡಿಕೆ. ಹೀಗಿದ್ದರೂ ಇಲ್ಲಿ ನಡೆದ ಕೆಲಸವು ಯಾವ ವಿಧವಾದ ತೊಂದರೆಯೂ ಸಹಾ ಇಲ್ಲದಂತೆ ಇಂಥಾ ಭಾರಿ ಕೆಲಸದ ಒಂದು ಭಾಗವನ್ನು ಪೂರ್ತಿಮಾಡಿಸಿದ ಆಫೀಸರವರನ್ನೂ ಮತ್ತು ಸಬ್ ಓವರ್ಸಿಯರುಗಳನ್ನೂ ಎಷ್ಟು ಸ್ತೋತ್ರ ಮಾಡಿದರೂ ಸ್ವಲ್ಪವಾಗಿರುತ್ತೆ. ಅಲ್ಲದೆ ಮೇಲ್ಕಂಡ ಆರ್ಚಿನ ಕೆಲಸವು ತಾ. 12 ನೇ ಭಾನುವಾರ ಪೂರ್ತಿಯಾಯಿತು. ಆ ದಿವಸ ಸಾಯಂಕಾಲ ಎಗ್ಜಿಕ್ಯುಟಿವ್ ಇಂಜನಿಯರ್ ಮ|| ಬಿ. ಬಿ. ಗರುಡಾಚಾರ್ರು ಆರ್ಚಿನ ಕಡೇ ಕಲ್ಲನ್ನು ಸ್ವಹಸ್ತ ಹಾಕಿ ಪೂರ್ತಿ ಮಾಡಿದರು. ನಂತರ ಮೊದಲೇ ಏರ್ಪಾಡು ಮಾಡಿದ್ದ ಮೇರೆ ಕಟ್ಟೆಯ ಸಮೀಪವಾಗಿ ಹಾಕಿದ್ದ ಸುಂದರವಾದ ಚಪ್ಪರದಲ್ಲಿ ನಾರ್ತ್‌ಬ್ಯಾಂಕ್ ಮತ್ತು ಸೌತ್ ಬ್ಯಾಂಕಿನಲ್ಲಿ ಇರುವ ಆಫೀಸರು ಮತ್ತು ಸಬ್ ಓವರ್ಸಿಯರ್ ಮುಂತಾಗಿ ಸರ್ವರೂ ಸೇರಿದ ನಂತರ ಫೋಟೋ ತೆಗೆಯಲ್ಪಟ್ಟಿತು. ನಂತರ ಬಂದಿದ್ದ ಸಭಿಕರಿಗೆಲ್ಲಾ ಹಾರಾ ತುರಾಯಿ ಪಾನ್‌ಸುಪಾರಿ ಹಂಚಿದ ನಂತರ ಸಭೆಯು ಬರಖಾಸ್ತಾಯಿತು. ಈ ಏರ್ಪಾಟುಗಳನ್ನೆಲ್ಲಾ ಸಬ್ ಓವರ್ಸಿಯರ್ ಮ|| ಎಚ್. ಆರ್. ಶ್ರೀಕಂಠಯ್ಯನವರು ಬಹಳ ವಿಶದನೆಯಿಂದ ನಡಿಸಿದರು.

ಚಿಕ್ಕಮಗಳೂರು.—ಈಗ ಇಲ್ಲಿ ಕಾಫಿಯನ್ನು ಶೇಖರಿಸುವ ತರಾತುರಿ ಅಧಿಕವಾಗಿದ್ದಾಗ್ಯೂ ಯಾವಾಗಿನಂತೆ ಹೆಚ್ಚಾಗಿಲ್ಲ.—ಪ್ರಜೆಗಳಿಂದ ಇಲ್ಲಿನ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರುಗಳ ಚುನಾವಣೆಯು ನಡೆದು ನೆನ್ನೆ ದಿನ 1 ನೇ ಡಿವಿಜನ್‌ಗೆ ನೇಟಿವ್ ಡಾಕ್ಟರ್ ಮ|| ಸಿ. ರಾಮಚಂದ್ರರಾಯರೂ, ಕಾಫಿ ಪ್ಲಾಂಟರ್ ಮ|| ಬಸವೇಗೌಡರೂ, 2 ನೇ ಡಿವಿಜನ್‌ಗೆ ಸಾಹುಕಾರ್ರು ಮ|| ಬಿ. ಎನ್. ಹನುಮಂತಪ್ಪನವರೂ, ಕಾಫಿ ಪ್ಲಾಂಟರ್ ಮ|| ಸೈಯದ್ ಪೀರ್ ಸಾಹೇಬರೂ, 3 ನೇ ಡಿವಿಜನ್‌ಗೆ ಕಾಫಿ ಪ್ಲಾಂಟರ್ ಮ|| ಸಿ. ವಾಸುದೇವರಾಯರೂ, ಕಾಫಿ ಪ್ಲಾಂಟರ್ ಮ|| ಎನ್. ನಂಜುಂಡಯ್ಯನವರೂ ಚುನಾಯಿಸಲ್ಪಟ್ಟಿದ್ದು ಅತ್ಯಂತ ಶ್ಲಾಘ್ಯವಾಗಿದೆ. ಇವರಲ್ಲಿ ಕೋಮುವಾರಾಗಿಯೂ, ಬಹಳ ಅನುಭವಶಾಲಿಗಳೊಬ್ಬರೂ ವರ್ತಕರಲ್ಲಿ ಹೆಸರು ಪಡೆದವರೊಬ್ಬರೂ, ಹಿಂದೂ ವೈದ್ಯದಲ್ಲಿ ಖ್ಯಾತಿಪಡೆದವರೊಬ್ಬರೂ, ಕಾಫಿ ಪ್ಲಾಂಟರುಗಳು ತಾರತಮ್ಯಜ್ಞರೂ ಆದವರಾಗಿರುತ್ತಾರೆ.—ಇಲ್ಲಿನ ಫೀಮೇಲ್ ಡಿಸ್ಪೆನ್ಸರಿಗೆ ಹಾಲಿ ಬದಲಿಯಾಗಿ ಬಂದಿರುವ ಲೇಡಿ ಅಪಾತ್ಕರಿಯವರು ಬ್ರಾಹ್ಮಣರಾಗಿರುವುದು ಇದೇ ಪ್ರಥಮ. ಇವರು ಎಲ್ಲಾ ಭಾಷೆಗಳಲ್ಲಿಯೂ ಚೆನ್ನಾಗಿ ಪರಿಶ್ರಮ ಉಳ್ಳವರಾದುದರಿಂದ ಎಲ್ಲಾ ಜನಗಳಿಗೂ ಬಹಳ ಅನುಕೂಲವಾಗಿ ಅನೇಕರು ಬಹು ಸೌಲಭ್ಯದಿಂದ ಚಿಕಿತ್ಸೋಪಚಾರಗಳನ್ನು ಹೊಂದುತ್ತಿದಾರೆ.—ಮೈಸೂರು ಬ್ಯಾಂಕಿಗೆ ಇಲ್ಲಿ ಇದುವರೆಗೂ ಖಾಯಂ ಏಜಂಟರು ನೊಕರರಾಗಿಲ್ಲವಾಗಿ ಲೇವಾದೇವಿಗಳು ಹೆಚ್ಚಾಗಿ ನಡೆಯಲು ಅವಕಾಶವಿಲ್ಲದೆ, ಬ್ಯಾಂಕಿಗೂ ಜನಗಳಿಗೂ ಸಹಾ ಪ್ರಯೋಜನ ಕಡಮೆಯಾಗಿರುತ್ತೆ.

ಶ್ಯಾಮಗೊಂಡ್ಲು.—ಈ ಟವನ್ನಲ್ಲಿ ಸಂತೆಯಾಗಬೇಕೆಂಬು ಹಿಂದೆ ತಮ್ಮ ಪತ್ರಿಕೆಯಲ್ಲಿ ಬರೆದಿದ್ದ ಬಾತ್ಮಿಯನ್ನು ಸರ್ಕಾರದವರು ಚಿತ್ತಕ್ಕೆ ತಂದು, ಅದರಂತೆ ಹುಕುಂ ದಯಪಾಲಿಸಿದ್ದರಿಂದ 2-3 ವಾರಗಳಿಂದಲೂ ಸಂತೆ ನಡೆಯುತ್ತಿರುವುದು ಪ್ರಜೆಗಳಿಗೆ ಬಹಳ ಸಂತೋಷವೂ ಅನುಕೂಲವೂ ಆಗಿದೆ.—ಇಲ್ಲಿರುವ ವಿಲೇಜು ಮುನ್ಸಿಫ್ ಕೋರ್ಟಿನ ಕೆಲಸ ಬಹಳ ಮುತುವರ್ಜಿಯಿಂದ ನಡೆಯುತ್ತಿರುವುದು.—ಇಲ್ಲಿ ಬಡವರಿಗೆ ಬಹಳ ಅನುಕೂಲವಾದ ಕೋ ಆಪರೇಟಿವ್ ಸೊಸೈಟಿ ಮಾಡಿಕೊಡಬೇಕೆಂದು ಪ್ರಜೆಗಳು ಕೇಳಿಕೊಂಡದ್ದರ ಮೇಲೆ ಇನ್ಸ್ಪೆಕ್ಟರು ತಕ್ಕ ರಿಕಾರ್ಡುಮಾಡಿಕೊಂಡು ಹೋಗಿ ಬಹಳ ದಿವಸಗಳಾಯಿತು. ರಿಜಿಸ್ಟ್ರಾರವರು ಈ ಕೋರಿಕೆಯನ್ನು ಜಾಗ್ರತೆ ನೆರವೇರಿಸಿ ಕೊಡುವರೆಂದು ಹಾರೈಸುತ್ತೇವೆ.—ಕೋಟೆಯಲ್ಲಿ ಶ್ರೀ ಆರ್ಯಧರ್ಮೋಜ್ಜೀವಿನೀ ಸಭಾ ಎಂಬ ಸಭೆಯೊಂದು ಶ್ರೀ ಚಲುವರಾಯಸ್ವಾಮಿ ದೇವಾಲಯದಲ್ಲಿ ಸ್ಥಾಪಿತವಾಗಿ ಪುಣ್ಯಕಥೆಗಳೂ, ಧರ್ಮ, ನೀತಿ ಬೋಧಕಗಳಾದ ಉಪನ್ಯಾಸಗಳೂ ನಡೆಯುತ್ತಿವೆ. ಈ ಸಭೆಯ ವಾರ್ಷಿಕೋತ್ಸವವು ಕೋ ಆಪರೇಟಿವ್ ಸೊಸೈಟಿಗಳ ಅ|| ರೆಜಿಸ್ಟ್ರಾರ್ ಮ|| ರಂಗರಾಯರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು. ಡಾಕ್ಟರೂ, ಸೊಸೈಟಿಗಳ ಇನ್ಸ್ಪೆಕ್ಟರೂ, ತಾಲ್ಲೂಕು ಬೋರ್ಡ್ ಮತ್ತು ಮುನ್ಸಿಪಲ್ ಮೆಂಬರುಗಳೂ, ವೈದಿಕ ಲೌಕಿಕ ದೊಡ್ಡ ಮನುಷ್ಯರುಗಳೂ ಸಭೆಯನ್ನಲಂಕರಿಸಿದ್ದರು. ಸಭಾಸೆಕ್ರಿಟರಿಯವರಾದ ಮ|| ಟಿ ಶ್ರೀಪಾದರಾಯರು ವಾರ್ಷಿಕ ರಿಪೋರ್ಟನ್ನು ಸ್ವಾರಸ್ಯವಾದ ಉಪನ್ಯಾಸದೊಂದಿಗೆ ಓದಿದರು. ಪ್ರೆಸಿಡೆಂಟರಾದ ವೇ|| ಪಂಡಿತ ಕೃಷ್ಣಮೂರ್ತಾಚಾರ್ರು ಸಭೆಯ ಉದ್ದೇಶ ಮತ್ತು ಅಭಿವೃದ್ಧಿಯ ವಿಷಯವಾಗಿ ಉತ್ತಮೋತ್ತಮನಾದ ಉಪನ್ಯಾಸ ಮಾಡಿದರು. ಸಭಾಧ್ಯಕ್ಷರು ಸಭೆಯ ನಡವಳಿಕೆಗಳನ್ನು ಬಹಳವಾಗಿ ಶ್ಲಾಘಿಸಿ ಕಾಲೋಚಿತವಾದ ಭಾಷಣ ಮಾಡಿ ಅತ್ಯಾದರದಿಂದ ಸಭೆಯ ಪೋಷಣಾರ್ಥವಾಗಿ 5 ರೂಪಾಯಿ ದಯಪಾಲಿಸಿದರು. ನಮ್ಮ ಹೊಸ ಅಮಲ್ದಾರ್ ಮ|| ಕೃಷ್ಣಸ್ವಾಮಿರಾಯರು ದಯಮಾಡಿ ಸಭೆಯ ನಡವಳಿಕೆಗಳನ್ನು ತಿಳಿದು ಬಹಳ ಸಂತೋಷಪಟ್ಟರು. ಈ ರೀತಿ ಎಲ್ಲಾ ಕಡೆಗಳಲ್ಲಿಯೂ ಪ್ರಜೆಗಳು ಸತ್ಕಾಲಕ್ಷೇಪ ಮಾಡುವಂತೆ ಮಾರ್ಗವನ್ನು ತೋರಿಸಿಕೊಟ್ಟ ಮಹನೀಯರಾದ ನಮ್ಮ ದಿವಾನ್ ಸಾಹೇಬರ ಆನುಜ್ಞೆಯು ಸ್ತೋತ್ರಾರ್ಹವಾಗಿರುತ್ತದೆ.—ಡೆಪ್ಟಿ ಕಮಿಷನರ್ ಮ|| ಚಾಂಡಿಸಾಹೇಬರು ಜಮಾಬಂದಿಗೋಸ್ಕರ ದಯಮಾಡಿದ್ದಾಗ ಇಲ್ಲಿ ನೀರಿಗೋಸ್ಕರ ಜನಗಳೂ ತೊಂದರೆ ಪಡುತ್ತಿರುವುದನ್ನು ನೋಡಿ ಕೋಟೆ ಭಾವಿಯನ್ನು ಇನ್ನೂ 10 ಅಡಿ ಇಳಿಸುವಂತೆ ಅಪ್ಪಣೆ ಮಾಡಿದ್ದರು. ನಮ್ಮ ಹೊಸ ಅಮಲ್ದಾರ್ರವರೂ ಪರಾಂಬರಿಸಿದರು. ಹೀಗೆಯೇ ಎಲ್ಲರೂ ಬಂದು ನೋಡಿಕೊಂಡು ಹೋಗುವದಾಗಿದೆಯೇ ಹೊರತು ನೀರಿನ ಕಷ್ಟವೇನೂ ತಪ್ಪಲಿಲ್ಲ. ಸರ್ಕಾರದವರು ಚಿತ್ತಕ್ಕೆ ತಂದು ಶಾಶ್ವತವಾದ ರೀತಿಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಸಮ್ಮ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಈ ಕ್ರಿಸ್ಮಸ್ ಹಬ್ಬವನ್ನು ಕಳೆಯುವದಕ್ಕೆ ಗ್ವಾಲಿಯರ್ ಸಂಸ್ಥಾನಕ್ಕೆ ಹೋಗಿರುತ್ತಾರೆ.

ವೈಸ್‌ರಾಯರವರು ದೆಹಲಿ ನಗರಲ್ಲಿ ಫೆಬ್ರವರಿ ತಿಂಗಳಲ್ಲಿ ಸ್ತ್ರೀಯರ ವೈದ್ಯ ವಿದ್ಯಾಶಾಲೆಯನ್ನೂ ಸ್ತ್ರೀಯರ ಆಸ್ಪತ್ರೆಯನ್ನೂ ಪ್ರತಿಷ್ಠೆ ಮಾಡುವವರಾಗಿದಾರೆ. ಆ ಕಟ್ಟಡಗಳ ಕಾಮಗಾರಿಯೆಲ್ಲಾ ಪೂರೈಸುತ್ತಾ ಬಂದಿದೆ.

ಸಿಮ್ಲಾಪಟ್ಟಣದಲ್ಲಿ ಸರ್ಕಾರಿ ಪೆನ್ಷನ್‌ದಾರನಾದ ಲಾಲಾ ದತ್ತರಾಮ ನೆಂಬಾತನ ಮನೆಗೆ ಕಳ್ಳರು ಬಿದ್ದು 15,000 ರೂಪಾಯಿನ ಒಡವೆ ವಸ್ತುಗಳನ್ನು ಅಪಹರಿಸಿದರು. ಪೋಲೀಸ್ ಇನ್ಸ್ಪೆಕ್ಟರು ಕೂಡಲೇ ಪತ್ತೆ ತರದೂದು ನಡಸಿದ್ದರಲ್ಲಿ ಕಳ್ಳರಿಬ್ಬರು ಸಿಕ್ಕಿದರು; ಅವರ ಬಳಿ ಕೆಲವು ನಗಗಳೂ ದೊರಕಿದವು.

ಕಾಶೀ ಪಟ್ಟಣದಲ್ಲಿ ಏರ್ಪಾಡಾಗುವ ಹಿಂದೂ ಯೂನಿವರ್ಸಿಟಿ ಫಂಡಿಗೆ ಕಿಶನ್‌ಘಡದ ಮಹಾರಾಜರವರು 50,000 ರೂಪಾಯನ್ನೂ, ಜಲಾವರದ ರಾಜರಾಣೀರವರು 30,000 ರೂಪಾಯನ್ನೂ ಚಂದಾ ಕೊಟ್ಟಿದಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕಾಶೀಂಬಜಾರ್ ರಾಜರವರೂ, ರಾಜಾಮಹೇಂದ್ರ ನಾರಾಯಣರಾಯ ಚೌಧುರಿಯವರೂ ಬಂಗಾಳಾ ಅಂಬ್ಯುಲೆನ್ಸ್ ಸೈನಿಕರಿಗೋಸ್ಕರ ತಲಾ 50,000 ರೂಪಾಯಿ ಕೊಟ್ಟಿದಾರೆ. ಯುದ್ಧದ ರಿಲೀಫ್ ಫಂಡಿಗೆ ಸಿಂಧು ದೇಶದಲ್ಲಿ ಇದುವರೆಗೆ 4,27,000 ರೂಪಾಯಿ ಚಂದಾ ಕೊಡಿಸಿರುವರು.

ಮದರಾಸ್ ಪಟ್ಟಣದಲ್ಲಿ ಎಂ. ಆರ್. ಸುಂದರಂ ಅಯ್ಯರೆಂಬ ಹೈಕೋರ್ಟ್ ವಕೀಲರು ಬ್ಯಾಂಕಿನಲ್ಲಿ ತಮ್ಮ ಹಣವಿಲ್ಲದಿದ್ದರೂ ಇದೆ ಎಂದು ಮೋಸಪಡಿಸಿ ಛೆಕ್ಕುಗಳನ್ನು ಬರೆದುಕೊಟ್ಟರೆಂದು ಮೊಕದ್ದಮೆ ಹುಟ್ಟಿ ಕಳೆದ ವಾರ ಅವರಿಗೆ 18 ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು. ಈಗ ಅವರು ಅಪೀಲ್ ಮಾಡಿದಾರೆ.

ಬೆಂಗಾಲದ ಪೋಲೀಸ್ ಡೆಪ್ಟಿ ಇನ್ಸ್ಪೆಕ್ಟರ್ ಜನರಲ್ ಆಗಿದ್ದ ಮಿ|| ಚಾರಲ್ಸ್ ಬೀಟ್ರೀ ಎಂಬಾತನು ಎರಡು ವರುಷ ಫರ್ಲೋರಜಾ ಪಡೆದು ಸೀಮೆಗೆ ಹೋಗಿದ್ದನು. ಈತನು ಯಾಕೋ ಆತ್ಮಹತ್ಯ ಮಾಡಿಕೊಂಡನೆಂದು ತಂತೀ ವರ್ತಮಾನ ಬಂದು ಬೊಂಬಾಯಿ ಅಧಿಪತ್ಯದಲ್ಲಿ ಅನೇಕರು ವಿಷಾದಪಡಬೇಕಾಯಿತು.

ಸಿಂಧು ದೇಶಕ್ಕೆ ಸೇರಿದ ಹೈದರಾಬಾದಿಗೆ ದರ್ಭಾಂಗದ ಮಹಾರಾಜರವರು ಕಳೆದವಾರ ಹೋಗಿದ್ದಾಗ ಅಲ್ಲಿನ ಹಿಂದುಗಳು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಅವರು ಅದಕ್ಕೆ ಜವಾಬಾಗಿ ಹಿಂದುಗಳು ತಮ್ಮಲ್ಲಿರುವ ಜಾತಿ ಒಳಜಾತಿಗಳನ್ನು ಬಿಟ್ಟು ಬಿಡಬೇಕೆಂದೂ, ಮಧುರೆಯಲ್ಲಿ ನಡೆಯುವ ಹಿಂದೂ ಮಹಾ ಸಭೆಯಲ್ಲಿ ಈ ವಿಚಾರವೇ ಚರ್ಚಿಸಲ್ಪಡುವುದೆಂದೂ ಹೇಳಿದರು.

ಬೊಂಬಾಯಿ ಪಟ್ಟಣದಲ್ಲಿ ಹಲವು ಕಾರ್ಖಾನೆಗಳ ಮಾಲೀಕರಾಗಿಯೂ ಏಜಂಟರಾಗಿಯೂ ಇದ್ದ ಮಿ|| ಬೋಮಾನ್‌ಜಿ ಡಿನ್‌ಷಾ ಪೆಟಿಟ್ ಎಂಬ 92 ವರುಷದ ಧನಿಕರು ಕಳೆದ ವಾರ ಕಾಲವಾದರು. ಇವರು ಬದುಕಿದ್ದಾಗ್ಗೆ ತಮ್ಮ ಆಸ್ತಿಯಿಂದ 13 ಲಕ್ಷ ರೂಪಾಯಿ ತನಕ ಧರ್ಮಕಾರ್ಯಗಳಿಗೆ ವಿನಿಯೋಗ ಮಾಡಿ ಸರ್ಕಾರದಲ್ಲೂ ಪ್ರಜೆಗಳಲ್ಲೂ ವಿಶೇಷ ಗಣ್ಯತೆಯನ್ನು ಸಂಪಾದಿಸಿಕೊಂಡಿದ್ದರು.

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ಎಟ್ಟಿಯಾಪುರದ ರಾಜರು ಕಳೆದ ಗುರುವಾರ ಕಾಲವಾದರು. ಆ ಸಂಸ್ಥಾನದಲ್ಲೆಲ್ಲಾ ಪ್ರಜೆಗಳು ವಿಶೇಷವಾಗಿ ದುಃಖಪಡುತ್ತಿದಾರೆ. ಶವದ ಕೂಡ ಸುಮಾರು 4,000 ಜನಗಳು ಗೋಳಾಡುತ್ತಾ ಹೋಗಿ ಬಂದರು. ಮೆರವಣಿಗೆಯಲ್ಲಿ ಉದ್ದಕ್ಕೂ ಬೆಳ್ಳಿಭಂಗಾರದ ಪುಷ್ಪಗಳನ್ನು ಶವದ ಮೇಲೆ ಎರಚಿದರು. ಅವರಿಗೆ ಪುತ್ರಸಂತಾನವಿಲ್ಲದ್ದರಿಂದ ಅವರ ಚಿಕ್ಕಪ್ಪಂದಿರಿಗೆ ಸಂಸ್ಥಾನದ ಪಟ್ಟವನ್ನು ಕಟ್ಟಿದರು.

ಕಲ್ಕತ್ತಾಪಟ್ಟಣದಲ್ಲಿ ಈಚೆಗೆ ಕಳ್ಳರು ದೊಡ್ಡ ಮನುಷ್ಯರಂತೆ ದಿರುಸುಗಳನ್ನು ಹಾಕಿಕೊಂಡು ಮೋಟರುಗಳಲ್ಲಿ ಹೋಗಿ ಕಳ್ಳತನ ಮಾಡಲಾರಂಭವಾಗಿದೆ. ಸರ್ಕಾರದವರು ಅದನ್ನು ನಿಲ್ಲಿಸುವಕ್ಕೆ ಮುಖ್ಯವಾದ ರಸ್ತೆಗಳಲ್ಲಿ 100 ಕಡೆ ಜಾರಿಬೀಳುವ ಬಾಗಿಲುಗಳನ್ನು ಅಡ್ಡಲಾಗಿ ಮಾಡಿಸಿಟ್ಟು ಅವಶ್ಯವಾದಾಗ ತತ್ಕ್ಷಣ ರಸ್ತೆಯನ್ನು ಕಟ್ಟಿಬಿಡುವ ಏರ್ಪಾಡುಮಾಡಿದಾರೆ. ಪೋಲೀಸ್ ಪಹರೆಯನ್ನು ಹೆಚ್ಚು ಮಾಡಿರುವರು.

ರಾಮನಾಡು ಜಿಲ್ಲೆಗೆ ಸೇರಿದ ಕೆಲವು ಪೋಲೀಸಿನವರು ಒಂದು ಮೊಕದ್ದಮೆಯಲ್ಲಿ ಸಾಕ್ಷಿ ನುಡಿಯುವುದಕ್ಕೆ ಕೋರ್ಟಿಗೆ ಹೋಗಬೇಕೆಂದು ಗಾಡಿಯಲ್ಲಿ ರಾತ್ರಿ ಹೊತ್ತು ಪ್ರಯಾಣ ಮಾಡುತ್ತಾ ಇದ್ದಾಗ ದುಷ್ಟರಾದ ಕೆಲವು ಪ್ರಜೆಗಳು ಕಾದಿದ್ದು ಆ ಪೋಲೀಸಿನವರನ್ನೂ ಗಾಡಿಯವನನ್ನೂ ಬಹಳವಾಗಿ ಹೊಡೆದು ಅವರನ್ನು ಹಿಂದಕ್ಕೆ ಓಡಿಸಿಬಿಟ್ಟರು. ಈಗ ಪೋಲೀಸಿನವರು ಕೆಲವರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದಿದಾರೆ.

ಲಾಹೋರ್ ಪಟ್ಟಣದಲ್ಲಿರುವ ಪಂಡಿತ ದೇವಿ ದಯಾಳು ಜ್ಯೋತಿಷಿ ಎಂಬಾತನು 1916 ನೇ ಇಸವಿಯ ಕ್ಯಾಲೆಂಡರನ್ನು ರಚಿಸಿ 60,000 ಪ್ರತಿಗಳನ್ನು ಛಾಪಿಸಿ ಬಿಕರಿ ಮಾಡುತ್ತಿದ್ದನು. ಅದರಲ್ಲಿ ರಾಜದ್ರೋಹಕರವಾದ ಸಂಗತಿಗಳು ಪ್ರಕಟವಾಗಿದ್ದದ್ದರಿಂದ ಪೋಲೀಸಿನವರು ಹೋಗಿ ಹುಡುಕಿ ಸಿಕ್ಕಿದಷ್ಟು ಪ್ರತಿಗಳನ್ನು ತೆಗೆದುಕೊಂಡು ಹೋದರು. ಅದುವರೆಗೆ ಆ ಜೋಯಿಸನು ಅನೇಕ ಸಾವಿರ ಪ್ರತಿಗಳನ್ನು ಬಿಕರಿ ಮಾಡಿದ್ದನು.

ದೆಹಲಿ ಪಟ್ಟಣದಲ್ಲಿ ದೀಪಗಳಿಗಾಗಿ ಹಾಕಿರುವ ವಿದ್ಯುಚ್ಛಕ್ತಿಯ ತಂತಿಯು ಒಂದು ಕಡೆ ಕಿತ್ತುಹೋಗಿ ರಹಮಾನ್ ಎಂಬಾತನ ಕುದುರೆಗೆ ಬಡಿದು ಅದರಲ್ಲಿದ್ದ ವಿದ್ಯುಚ್ಛಕ್ತಿಯ ಬಿಸಿಯಿಂದ ಕುದುರೆ ಸತ್ತುಹೋಯಿತು. ಮಾಲೀಕನು ಮ್ಯುನಿಸಿಪಾಲಿಟಿಯ ಮೇಲೆ 275 ರೂಪಾಯಿ ನಷ್ಟಕ್ಕೆ ದಾವಾ ಮಾಡಿದನು. ಈ ಮೊಕದ್ದಮೆ ದರ್ಯಾಫ್ತಾಗಿ ಕಡೆಗೆ ಮ್ಯುನಿಸಿಪಾಲಿಟಿಯವರು ಆ ಕುದುರೆಯ ಮಾಲೀಕನಿಗೆ 343 ರೂಪಾಯಿ ಪಾವತಿ ಮಾಡಬೇಕೆಂದು ಡಿಕ್ರಿ ಕೊಟ್ಟಿದಾರೆ.

ಹಿಂದಿನವಾರ ಬೊಂಬಾಯಿ ಪಟ್ಟಣದಲ್ಲಿ ಒಂದು ಕ್ರಿಕೆಟ್ ಪಂದ್ಯದ ಆಟವು ನಡೆಯಿತು. ಇದರಲ್ಲಿ ಒಂದು ಕಡೆ ಯೂರೋಪ್ಯನ್‌ರೂ, ಇನ್ನೊಂದು ಕಡೆ ದೇಶೀಯ ಜನರೂ ಸೇರಿ ಆಡಿದರು. ಬೊಂಬಾಯಿ ಗವರ್ನರವರು ಯೂರೋಪ್ಯನ್‌ರ ಕಡೆಯೂ, ಪಾಟಿಯಾಲಾ ಮಹಾರಾಜರವರು ಹಿಂದುಗಳ ಕಡೆಯೂ ಸೇರಿದ್ದರು. ಈ ಪಂದ್ಯದಲ್ಲಿ ಹಿಂದುಗಳು ಪೂರಾ ಸೋತರು. ಆಟ ಮುಗಿದ ಮೇಲೆ ಅಲ್ಲಿ ಉಪಯೋಗಿಸಿದ ಚೆಂಡುಗಳನ್ನು ಹರಾಜು ಹಾಕಿದ್ದರಲ್ಲಿ 945 ರೂಪಾಯಿಯೂ, ಗವರ್ನರವರು ಆಡಿದ ಬ್ಯಾಟ್ (ದಾಂಡು) ಹರಾಜಿನಲ್ಲಿ 2500 ರೂಪಾಯಿಯೂ, ಆಟವನ್ನು ನೋಡುವುದಕ್ಕೆ ಟಿಕೆಟ್ಟು ಹಾಕಿದ್ದರಿಂದ 6,000 ರೂಪಾಯಿಯೂ ಹುಟ್ಟುವಳಿ ಆಯಿತು. ಇದನ್ನೆಲ್ಲಾ ಯುದ್ಧದ ರಿಲೀಫ್ ಫಂಡಿಗೆ ಕೊಡಿಸುತ್ತಾರೆ.

ಪೂನಾ ಪಟ್ಟಣದಲ್ಲೂ ಸುತ್ತಮುತ್ತಲಲ್ಲೂ ಕೆಲವರು ಕಳ್ಳರು ಸೇರಿಕೊಂಡು ಮನೆಗಳಿಗೆ ಹಗಲು ಭಿಕ್ಷುಕರಾಗಿ ಹೋಗಿ ಹೆಂಗಸರು ಆಭರಣವನ್ನು ಹಾಕಿಕೊಂಡಿರುವುದನ್ನು ನೋಡಿಕೊಂಡು ಹೋಗಿ ರಾತ್ರಿ ಮನೆ ನುಗ್ಗಿ ಕಳುವು ಮಾಡುತ್ತಾ ಸಿಕ್ಕದೆ ತಪ್ಪಿಸಿಕೊಂಡು ಹೋಗುತ್ತಿದ್ದರು. ಈ ಗುಂಪಿನಲ್ಲಿ ಗಂಡಸರೂ ಹೆಂಗಸರೂ ಸೇರಿ 21 ಮಂದಿ ಇದ್ದವರನ್ನು ಪೋಲೀಸಿನವರು ಈಗ ತಾನೇ ಹಿಡಿದು ಅವರ ಮೇಲೆ ಮೊಕದ್ದಮೆ ನಡಿಸಿದರು. ಸುಮಾರು 160 ಮಂದಿಯ ಸಾಕ್ಷಿ ಕೈಫಿಯತ್ತಾಯಿತು. ಕಳೆದ ವಾರ ಮ್ಯಾಜಿಸ್ಟ್ರೇಟರು ಅಪರಾಧಿಗಳ ಪೈಕಿ ಐದು ಮಂದಿ ಸ್ತ್ರೀಯರನ್ನು ಬಿಡುಗಡೆ ಮಾಡಿ, ಉಳಿದವರಲ್ಲಿ 10 ಮಂದಿ ಗಂಡಸರಿಗೆ ತಲಾ ಎರಡು ವರುಷ ಕಠಿಣ ಸಜಾ, 25 ರೂಪಾಯಿ ಜುಲ್ಮಾನೆಯನ್ನೂ, ಮೂರು ಮಂದಿಗೆ ತಲಾ ಒಂದು ವರುಷ ಕಠಿಣ ಸಜವನ್ನೂ, ಮೂವರು ಹೆಂಗಸರಿಗೆ ತಲಾ ನಾಲ್ಕು ತಿಂಗಳ ಕಠಿಣ ಸಜವನ್ನೂ ವಿಧಿಸಿದರು. ಆ ಪೈಕಿ ಒಬ್ಬ ಹೆಂಗಸು ಕಂಕುಳಲ್ಲಿ ಒಂದು ಮಗುವನ್ನು ಎತ್ತಿಕೊಂಡು, ಸಣ್ಣ ಮಕ್ಕಳಿಬ್ಬರನ್ನೂ ನಡಿಸಿಕೊಂಡು ಬಂದೀಖಾನೆಗೆ ಹೋದಳು.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಿಗಳ ಬ್ಯಾಂಕುಗಳಿಗೆ ಡಿಸೆಂಬರ್ ತಾ. 11 ರ ವರಿಗೆ ಜಾಸ್ತಿ ಬಂದಿರುವ ಚಂದಾ ಹಣ ಈ ಕೆಳಗೆ ಕಂಡಿದೆ:—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	ರೂ. 45,66,133-13-11
ಬಂಗಾಳಾ ಬ್ಯಾಂಕಿಗೆ	,, 35,42,758- 3- 3
ಬೊಂಬಾಯಿ ಬ್ಯಾಂಕಿಗೆ	,, 8,27,851-11- 8
ಮದರಾಸ್ ಬ್ಯಾಂಕಿಗೆ	,, 6,08,006- 0- 4
ಜುಮ್ಲಾ ರೂಪಾಯಿ	95,04,754-13 -3

ಮಕ್ಕಾ ಮದೀನಾಗಳಿಗೆ ಯಾತ್ರೆ ಹೋಗಿ ವಾಪಸು ಬರಲು ಹಣವಿಲ್ಲದೆ ಅಲ್ಲೇ ಕಷ್ಟಪಡುತ್ತಿದ್ದ ಹಿಂದೂಸ್ಥಾನದ ಮಹಮದೀಯ ಯಾತ್ರಾರ್ಥಿಗಳನ್ನು ವಾಪಸು ಕರೆತರುವುದಕ್ಕೆ ಒಂದು ಧರ್ಮ ಫಂಡು ಬೊಂಬಾಯಿನಲ್ಲಿ ಏರ್ಪಾಡಾಗಿದೆ. ಈ ಫಂಡಿಗೆ ಹೈದರಾಬಾದ್ ನೈಜಾಮರವರು, ಭೋಪಾಲದ ಬೇಗಂ ರಾಣೀಸಾಹೇಬರು, ಮದರಾಸಿನ ಹಾಜಿ ಸಭೆಯವರು ಚಂದಾ ಕೊಟ್ಟರು. ಎಲ್ಲಾ 11,272 ರೂಪಾಯಿ ಆಗಿ ಆವಧಿಯಲ್ಲಿ 891 ಹಾಜಿ ಯಾತ್ರಿಕರನ್ನು ಜಹಜುಗಳಲ್ಲಿ ಹಿಂದುಸ್ಥಾನಕ್ಕೆ ಕರೆತಂದರು. ಇದಲ್ಲದೆ ದಾದಾಮಿಯಾ ಬಂಗ್ಯಾನಿಯೆಂಬ ಮಹನೀಯರು ವಿಶ್ವಯರ್ಪಣಕನು ತನ್ನ ಸ್ವಂತ ಖರ್ಚಿನಿಂದ 183 ಮಂದಿ ಯಾತ್ರಿಕರನ್ನು ಬೊಂಬಾಯಿಗೆ ಕರೆದುಕೊಂಡು ಬಿಟ್ಟಿದ್ದಾನೆ.

ಕಲ್ಕತ್ತಾ ಪಟ್ಟಣದ ಕಾಲುಚಂದ್ ಭಟ್ಟಾಚಾರ್ಯರ ಮನೆಯಲ್ಲಿ ಕಳುವಾದ ನಗನಾಣ್ಯಗಳ ಸೈತೆ ಸಾವಿರ ರೂಪಾಯಿ ಬಾಬತು ಐದು ಕರೆನ್ಸಿ ನೋಟುಗಳನ್ನು ಯಾವನೋ ಒಬ್ಬನು ಕಲ್ಕತ್ತೆಯ ಖಜಾನೆಗೆ ಹಾಜರುಮಾಡಿ ಹತ್ತು ರೂಪಾಯಿ ಬಾಬತು ಚಿಲ್ಲರೆ ನೋಟುಗಳನ್ನು ತೆಗೆದುಕೊಂಡು ಹೋಟೆಲ್ ನಲ್ಲಿ ಕುಳಿತು ಹೊರಟುಹೋದನು. ಅವನನ್ನು ಪ್ರಶ್ನೆಮಾಡಿದಾಗ ಅವನು ತನ್ನ ಹೆಸರು ಹರಿಚರಣಘೋಷ್ ಎಂದೂ, ಕಲ್ಕತ್ತಾದಲ್ಲಿರುವ ಕಾರ್ಖಾನೆಯ ಕಂಟ್ರಾಕ್ಟರೆಂದೂ ಹೇಳಿದನು. ಖಜಾನೆಯು ಗುನಸ್ತರು ಹೋಗಿ ಆ ನೋಟುಗಳು ಕಳವಾಗಿದ್ದವುಗಳೆಂದು ಕಲೆಕ್ಟರಿಗೆ ಹೇಳಿ ಅವನನ್ನು ಹುಡುಕಿಸಿದರು. ಅವನು ತಲೆತಪ್ಪಿಸಿಕೊಂಡು ಹೋಗಿದ್ದನು. ಈ ವಿಚಾರವು ಆ ನಗರದಲ್ಲಿ ತುಂಬಾ ಕಳವಳವನ್ನುಂಟುಮಾಡಿದೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬ್ಯಾಂಕುರಾ ಡಿಸ್ಟ್ರಿಕ್ಟಿನಲ್ಲಿರುವ 2,621 ಚದರ ಮೈಲಿ ವಿಸ್ತಾರದಲ್ಲಿ ಗ್ರಾಮವಾರ ಸೈತೆ 1,155 ಚದರ ಮೈಲಿಯೊಳಗೆ ಪ್ರಜೆಗಳಿಗೆ ಬರಗಾಲ ಸಂಭವಿಸಿದೆ. ಆ ಡಿಸ್ಟ್ರಿಕ್ಟಿನ ಒಟ್ಟು 11,38,670 ಪ್ರಜೆಗಳಲ್ಲಿ 5,03,837 ಜನರು ಹೊಟ್ಟೆಗಿಲ್ಲದೆ ಕಷ್ಟಸಂಕಟಗಳನ್ನು ಅನುಭವಿಸುತ್ತಿರುವರು. ಅವರು ವ್ಯವಸಾಯಗಾರರು, ನೆಯಿಗೆ ಕಸಬಿನವರು, ಹೊಲ ಗದ್ದೆಗಳಲ್ಲಿ ಕೂಲಿಯಾಳಾಗಿ ಮಾಡತಕ್ಕವರು, ಭಿಕ್ಷುಗಾರರು. ಡಿಸ್ಟ್ರಿಕ್ಟ್ ಬೋರ್ಡಿನವರು 36 ಕಡೆ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸಿ ನಡೆಸುತ್ತಿದ್ದಾರೆ ಮತ್ತು ಹೆಂಗಸರಿಗೆ ಬಟ್ಟೆ ಕುಟ್ಟುವುದಕ್ಕೆ ಅಡ್ವಾನ್ಸು ಕೊಟ್ಟಿದ್ದಾರೆ. ಬ್ಯಾಂಕುರಾ ಕಾಲೇಜ್ ಸಭೆಯವರು, ಬಂಗಾಳಾ ಸಂಘವುಳ್ಳವರು, ಸಾಧಾರಣ ಬ್ರಹ್ಮಸಮಾಜದವರು, ರಾಮಕೃಷ್ಣ ಮಿಷನ್ನಿನವರು ಧರ್ಮಾರ್ಥವಾಗಿ ಅಕ್ಕಿಯನ್ನು ದುಡ್ಡನ್ನೂ ಕ್ಷಾಮಪೀಡಿತರಿಗೆ ಕೊಟ್ಟು ಸಹಾಯ ಮಾಡುತ್ತಿರುವರು. ಸರ್ಕಾರದಿಂದ ರೈತರಿಗೆ ಸಾಲಕೊಡುವುದಕ್ಕೆ 3,75,000 ರೂಪಾಯಿಯೂ, ಧರ್ಮಾರ್ಥವಾಗಿ ಜೀವನಕ್ಕೋಸ್ಕರ 50,000 ರೂಪಾಯಿಯೂ ಕೊಡಲಾಗಿದೆ. ನೊವೆಂಬರ್ ಆಖ್ರೀವರೆಗೆ 3,86,716 ರೂಪಾಯಿ ಸಾಲಕೊಟ್ಟಿದ್ದಾರೆ; 19,435 ರೂಪಾಯಿ ಜೀವನಕ್ಕಾಗಿ ಕೊಟ್ಟಿದ್ದಾರೆ. ಯಾವ ಗ್ರಾಮದಲ್ಲೂ ಹೊಟ್ಟೆಗಿಲ್ಲದೆ ಯಾರೂ ಸತ್ತುಹೋಗಿಲ್ಲವೆಂದು ಕಲೆಕ್ಟರು ತಿಳಿಸಿರುವರು. ಬರಗಾಲವೇನೋ ಪ್ರಾರಂಭವಾಗಿದ್ದರೂ ಸರ್ಕಾರದವರೂ ಅದನ್ನು ಕ್ಷಾಮವೆಂದು ಹೇಳಿದಂತಿಲ್ಲ ಎಂಬುದಾಗಿ ಬಂಗಾಳಾ ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದ ಮೆಂಬರು ತಿಳಿಸಿದರು.

ಅನ್ಯಾಯವಾಗಿ ಕಳೆದುಕೊಳ್ಳಬೇಡಿರಿ.

ನಮ್ಮ ದೇಶದಲ್ಲಿ ಅನೇಕರು ಈಗ ವೈಂಡಪ್ ಆಗಿರುವ ಅಮ್ಯಾಲ್ಗಮೇಟೆಡ್ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪೆನಿಯಲ್ಲಿ ಸೇರಿರಬಹುದು. ಅವರು ತೆಗೆದುಕೊಂಡ ಅನ್ಯಾಯವಾಗಿ ಬಾಕಿ ಪೈಸು ಮೊಬಲಗನ್ನು ವಾಪಸ್ ಮಾಡಬೇಕೆಂದು ಲಿಕ್ವಿಡೇಟರು ಸಲಿಸುತ್ತಿರುವುದು ಸರಿಯಿಲ್ಲ. ಇದು ಅನ್ಯಾಯವಾಗಿ ಕಂಡ ನಮ್ಮ ದೇಶದ ಇಂಡಿಪೆಂಡೆಂಟ್ ವಕೀಲರುಗಳನ್ನು ವಿಚಾರಿಸಿದ್ದಕ್ಕೆ ದೊಡ್ಡ ಆಕ್ಷೇಪಣೆಗಳುಂಟು. ವಾದವನ್ನು ಅವರನ್ನು ತಪ್ಪಿಸುವುದಕ್ಕೆ ಪ್ರಿಯತ್ನಪಡಲು ಒಂದು ಮೀಟಿಂಗ್ ನಡೆಸುವುದಾಗಿ ನಿಶ್ಚಯಿಸಲ್ಪಟ್ಟಿದೆ. ಆದ್ದರಿಂದ ಅದಕ್ಕೆ ಸೇರುವವರೆಲ್ಲರೂ ತಕ್ಷಣ ಈ ಕಂಪೆನಿಯ ಅಂಕಿಗಳ ಪೂರ್ತಿ ವಿವರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ಪ್ರಾರ್ಥನೆ. ಕೆ. ಆರ್. ಚಕ್ರವರ್ತಿ, ಏಜಂಟ್,

[257-2] ನ್ಯಾಷನಲ್ ಪ್ರಾವಿಡೆಂಟ್ ಕಂಪೆನಿ, ಬೆಂಗಳೂರು ಸಿಟಿ.

ಡಿಸೆಂಬರ್ ತಿಂಗಳ ಕಡೆಯವರೆಗೆ ತರಿಸಿಕೊಳ್ಳುವವರಿಗೆ 12 ಆಣೆಗೆ ಕೊಡಲ್ಪಡುತ್ತೆ.

ಆಶ್ಚರ್ಯವಾದ ಸೇಪಿಂಗು ಬಾಕ್ಸು ಎಂಬ ಮರ್ಮದ ಪೆಟ್ಟಿಗೆ



ಈ ಪೆಟ್ಟಿಗೆ ನಿಕ್ಕಲ್ ಟೈಪಿನಿಂದ ತಯಾರಿಸಿ ಬಹು ಸೊಗಸಾಗಿ ಚಿತ್ರವಿಚಿತ್ರ ಕೆಲಸ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದು ಪ್ರಕಾರ ಬೆಲ್ಲಿಯು ಕೆಡದ ಹಾಗೆ ಬಾಂಧವ್ಯಕೆ. ಈ ಪೆಟ್ಟಿಗೆಯಲ್ಲಿ ಹಣವನ್ನು, ಚಿಕ್ಕ ವಸ್ತುಗಳನ್ನು ಇಟ್ಟು ಮುಚ್ಚಿಬಿಡಬೇಕು. ಅನಂತರ ಅದನ್ನು ... ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು. ಆ ಪದಾರ್ಥಗಳು ಇಟ್ಟವನು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ಬೇಡಿದಲ್ಲಿ ಕಳುಹಿಸಲ್ಪಡುವುದು. ಬೇಗನೆ ತರಿಸಿಕೊಳ್ಳಿ. ಈ ಪೆಟ್ಟಿಗೆ ಇಷ್ಟವಿಲ್ಲದಿದ್ದರೆ 8 ದಿನಗಳೊಳಗೆ ಖರೀದಿ ತಿರುಗಿಸಿ ಹಣವನ್ನು ವಾಪಸ್ ಕಳುಹಿಸುವೆವು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವವರಿಗೆ 1916 ನೇ ಸಂವತ್ಸರದ ಸುಂದರವಾದ ಲೀಫ್ ಕ್ಯಾಲೆಂಡರ್ ಇನಾಮಾಗಿ ಕಳುಹಿಸುತ್ತೇವೆ.

[252-7] ನಮ್ಮ ವಿಳಾಸ—ರಾಮಚಂದ್ರ, ಅಂಡ್ ಕಂಪೆನಿ, 16, ತಿರುಪಳ್ಳಿ ಬೀದಿ, ಮದರಾಸು.

ವಾಚಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳು ಅಸಲ್ ಗಿಲೀಟು ದೇಶದ ಚಿನ್ನದ ಕಂಬಿಯಿಂದ ತಯಾರಿಸುತ್ತೇವೆ. ಇವು ಅನೇಕ ವರ್ಷಗಳ ವರೆಗೆ ಧರಿಸಿಕೊಳ್ಳುವದಕ್ಕೆ ಬಾಳಿಕೆ ಬರುವಂಥವು. ಯುದ್ಧದ ದೆಸೆಯಿಂದ ಇವು ಎಲ್ಲಿಯೂ ದೊರೆಯುವದಿಲ್ಲ. ನಮ್ಮಲ್ಲಿಯೂ ಸ್ವಲ್ಪವೇ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿರಿ. [294-1]



ಸುಂದರವಾದ ಕೊಲು ಕಡಗ,

ದೊಡ್ಡವರಿಗೆ ಚಿಕ್ಕವರಿಗೆ ಹುಡುಗಿಯರಿಗೆ ಮಕ್ಕಳಿಗೆ

ರೂ 1-8-0 1-3-0 0-14-0 0-10-0

ಸುಂದರವಾದ ಕೈ ಕಡಗ.

ದೊಡ್ಡವರಿಗೆ ಚಿಕ್ಕವರಿಗೆ ಹುಡುಗಿಯರಿಗೆ ಮಕ್ಕಳಿಗೆ

ರೂ 1-6-0 1-1-0 0-12-0 0-8-0

ವಿಳಾಸ:—ಟ್ಯಾರಕ್ ಕಂಪೆನಿ, 40 ಏಕಾಂಬರ್ ಅಗ್ರಹಾರ, ಸಾಹುಕಾರ್ ಪೇಟೆ, ಮದರಾಸು.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯವನ್ನೂ ಆಯುಷ್ಯವನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕನಾಗಿರುತ್ತಾನೆ. ನಮ್ಮ ಸಹೋದರರಿಗೆ ಉಪ್ಪಿಲಜವನ್ನು ಕೊಡುವಂಥಾದ್ದು ನಮ್ಮ ಮಾತುಗಳಲ್ಲ; ನಮ್ಮ ಕಾರ್ಯಗಳೇ. ನಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ಶಕ್ತಿಬಲವನ್ನು ಪಡೆದು ಆಯುಷ್ಯವುಳ್ಳವರಾಗಿಯೂ, ನಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ತಾ. ಕ:—ಒಂದು ದೊಡ್ಡ ಕ್ಯಾಟ್ಲಾಗನ್ನೂ, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನು ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,

[256-6] 30, ಬೈನಾ ಬಜಾರ್ ರೋಡ್, ಮದರಾಸ್.

ಗೃಹಕೃತ್ಯದ ನೋಟೀಸು.

ಹಾಸನದ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕು ಬಾಣಾವರದ ಕಸಬಾ ದೊಡ್ಡೇನಹಳ್ಳಿ ವಾಸಿ ಹಾಲಿ ಮೃತರಾದ ಗೌಡ ಹುಚ್ಚೈಗ್ನನ ಮಗ ಸಣ್ಣಯ್ಯನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ನನ್ನ ವಿಧಿಕ್ಕೆ ಪ್ರಥಮ ಚಿಕ್ಕಪ್ಪ ದೊಡ್ಡತಮ್ಮಯ್ಯನ ಮಗ ತಮ್ಮಯ್ಯನ 2 ನೆ ಹೆಂಡತಿ ಲಕ್ಕಮ್ಮನೆಂಬವಳು ಗಂಡ ತೀರಿಹೋದ ಮೇಲೆ ಸ್ವಗ್ರಾಮ ಬಿಟ್ಟು ಕಡೂರು ತಾಲ್ಲೂಕು ದೊಡ್ಡ ದೇವನೂರಲ್ಲಿ ವಾಸವಾಗಿದ್ದಾಳೆ. ಈಕೆಗೆ ಮಕ್ಕಳಿಲ್ಲ. ಹಿರಿ ಹೆಂಡತಿ ಬೀರಮ್ಮನೆಂಬವಳು ತೀರಿಹೋಗಿದ್ದಾಳೆ. ಈಕೆಗೂ ಮಕ್ಕಳಿಲ್ಲ. ಹಿಂದೂ ಲಾ ಪ್ರಕಾರ ಯಾವಜ್ಜೀವವೂ ಅನುಭವದ ಹಕ್ಕನ್ನು ಮಾತ್ರ ಪಡೆದಿರುತ್ತಾಳೆಯೇ ಹೊರ್ತು ಪಿತ್ರಾರ್ಜಿತ ಸೊತ್ತುಗಳನ್ನು ಪರಾಧೀನಮಾಡಲು ಹಕ್ಕೇನೂ ಇರುವದಿಲ್ಲ. ಕೆಳಗೆ ಕಂಡ 3 ಸೊತ್ತುಗಳನ್ನು ಇತರರ ಪ್ರೇರಣೆ ಮೇರೆ ಉತ್ತರ ವಾರಸ್ದಾರನಾದ ನನಗೆ ಸೊತ್ತು ಸಿಕ್ಕದಂತೆ ಮಾಡಬೇಕೆಂಬ ಪ್ರಯತ್ನದಲ್ಲಿರುತ್ತಾಳೆಂದು ತಿಳಿಯಬರುತ್ತೆ. ಸದರಿ ಲಕ್ಕಮ್ಮನ ಕಾಲಾನಂತರ ನಾನು ಸಮೀಪದ ವಾರಸಾ ದಾಯಾದಿ ರಿಂದ ಸದರಿ ಸೊತ್ತುಗಳನ್ನು ಯಾರಾದರೂ ಕ್ರಯ ಭೋಗ್ಯ ಅಥವಾ ವಗ್ಗೈರೆ ಮಾಡಿಕೊಂಡಿದ್ದು ಅದು ಸಲ್ಲತಕ್ಕದ್ದಲ್ಲ. ಅಂಥವರುಗಳನ್ನು ರದ್ದು ಪಡಿಸಲು ದಾವಾ ತರುತ್ತೇನೆ. ನನಗೆ ತಗಲುವ ವಿಶೇಷ ನಷ್ಟಗಳನ್ನೂ ಗುರಿಮಾಡಿಕೊಂಡು ಎತ್ತರಿಸುತ್ತೇನೆ.

ಷೆಡ್ಯೂಲ್.—(1) ಬಾಣಾವರದ ಕಸಬಾ ಸರ್ವೆ ನಂ. 113-1 ನೇ ಖುಷ್ಕಿ ಎಕರೆ 10, ಅಕಾರ ರೂ. 7; (2) ಬಾಣಾವರದ ಕಸಬಾ ಸರ್ವೆ ನಂ. 113-2 ನೇ ತೆಂಗಿನ ತೋಟದಲ್ಲಿ ಪಶ್ಚಿಮಕ್ಕೆ ಮೂರನೇ ಒಂದು ಪಾಲು ಎಕರೆ 4, ಅಕಾರ ರೂ 3; (3) ಡಿಟೋ ಗ್ರಾಮದ ದಾಖ್ಲೆ ದೊಡ್ಡೇನಹಳ್ಳಿ ಯಲ್ಲಿ ಪೂರ್ವಕ್ಕೆ ಊರಬೀದಿ, ಪಶ್ಚಿಮಕ್ಕೆ ಬಸಪ್ಪನ ಮಲ್ಲನಮನೆ, ದಕ್ಷಿಣಕ್ಕೆ ಊರಬೀದಿ, ಉತ್ತರಕ್ಕೆ ದಾರಿ ಮತ್ತು ರಾಮಕೃಷ್ಣಮನೆ, ಈ ಮಧ್ಯೆ ಇರುವ 6 ಅಂಕಣದ 2 ಸಾಲು ಹೆಂಚಿನ ಮನೆ, ಬಾನೇಷುಮಾರಿ ನಂಬರು ಗೊತ್ತಾಗಲಿಲ್ಲ.

ತಾ. 13-12-1915. [285-2] ಸಣ್ಣಯ್ಯನ ರುಜು.

ಯೂರೋಪು ದೇಶದ ಮಹಾಯುದ್ಧದ ಚರಿತ್ರೆಯು.

ಮದರಾಸಿನಲ್ಲಿ ಪ್ರಕಟಿಸುತ್ತಲಿರುವ ವೀರಕೇಸರಿಯು ಪ್ರತಿಯೊಂದು ಸಂಚಿಕೆಯಲ್ಲಿಯೂ ಈಗಿನ ಯುದ್ಧ ಪಠಗಳನ್ನು ಹಾಕಿ ಓದುವವರಿಗೆ ಆಶ್ಚರ್ಯವುಂಟಾಗುವ ಹಾಗೆ ಪ್ರಕಟಿಸುತ್ತಿದೆ. ಇದರ ವಾರ್ಷಿಕ ಚಂದಾ ರೂ 1-0-0 ಇದಕ್ಕೆ ಬೇಗ ಶೈನಾ ಅಷ್ಟೆನ್ ಒಳಗಾಗಿ ಚಂದಾದಾರರಾಗುವವರಿಗೆ ಈ ಕೆಳಗೆ ಕಂಡ ಮಹಾಯುದ್ಧ ಚರಿತ್ರೆಯನ್ನು ಉಚಿತವಾಗಿ ಕೊಡುತ್ತೇವೆ.

ಈಗ ಯೂರೋಪು ದೇಶದಲ್ಲಿ ನಡೆಯುತ್ತಲಿರುವ ಮಹಾ ಯುದ್ಧದ ಚರಿತ್ರೆಯು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ ಎಲ್ಲಾ ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ ಪ್ರತಿಯೊಂದು ರಾಜ್ಯದ ಸೇನಾ ಬಲವೂ ಮತ್ತು ನಿವಾಸಬಲವೂ, ಅವುಗಳ ಅರಸರೂ, ರಾಜರುಗಳ ಸೇನಾಧ್ಯಕ್ಷರುಗಳು, ಆಯಾ ದೇಶದ ರಾಜರುಗಳು, ಮಂತ್ರಿಗಳು, ಮೊದಲಾದವರುಗಳ ಭಾವಚಿತ್ರಗಳು, ಯುದ್ಧಸಂಬಂಧವಾದ ವಿಷಯಗಳು, ಇವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಯುದ್ಧಾರಂಭವಾದ ಆಗಾಗಾಯಿತು ದಿನದಿನಗಳಿಂದ



ಒಂದು ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇ ಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡ ಭಾಷೆಯಲ್ಲಿ ತಯಾರಿಸಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಇದನ್ನು ಎಲ್ಲರೂ ಓದಬೇಕಾದದ್ದು. ಮದರಾಸಿನಲ್ಲಿ ಯುದ್ಧಕ್ಕೆ ಹಡಗಿನಿಂದ ಹೊಡೆಯಲ್ಪಟ್ಟ ಗುಂಡಿನ ವಿವರವು ಸಹ ಇದರಲ್ಲಿ ಬರೆಯಲ್ಪಟ್ಟಿರುತ್ತೆ. [293-1]

ವಿಳಾಸ—ವೀರಕೇಸರಿ, ಬೊಮ್ಮಲೈಯರ್ ಬೀದಿ, ಮದರಾಸ್.

50 ರೂಪಾಯಿ ಸಂಪಾದನೆ.

ವಿರಾಮ ಕಾಲಗಳಲ್ಲಿ ಕೆಲಸಮಾಡುವದರಿಂದ ಇನ್ನೂ ಹೆಚ್ಚಾಗಿ ತಿಂಗಳ ಸಂಪಾದಿಸಬಹುದು. ಸ್ಟಾಂಪುಹಿಟ್ಟು ಬರೆದುಕೊಳ್ಳಿರಿ.

[291-1] ವಿಳಾಸ:—ಓರಿಯಂಟಲ್ ಹೊಸೈರಿ ವರ್ಕ್ಸ್, ವೇಲೂರು.

ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟಿನಲ್ಲಿ.

1914-15 ನೇ ಅಸಲು ನಂ.—519.

ವಾದಿ.—ದೊಡ್ಡಬಳ್ಳಾಪುರದಲ್ಲಿರುವ ಆಲಂಪಲ್ಲಿ ಚಿಕ್ಕಪ್ಪ.

ಪ್ರತಿವಾದಿ.—ನಂಜನಗೂಡಿನಲ್ಲಿ ಟ್ಯಾಂಕು ಇನ್ಸ್ಪೆಕ್ಟರ್ ಕೆಲಸದ ರ.ವ ಶೇಖ್ ಮಹಮ್ಮದ್ ಸಾಬರ ಮಗ ಅಬ್ದುಲ್ ರಹಿಮಾನ್ ಸಾಬ್.

ಇದರಿಂದ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ—ವಾದಿಯು ನಿಮ್ಮ ಮೇಲೆ ರೂ 78-3-6 ಮತ್ತು ಕೋರ್ಟು ಖರ್ಚಿಗೆ ಸದಾ ದಾವಾ ಮಾಡಿರುತ್ತಾರೆ. 25-1-1916 ಕ್ಕೆ ಫೈನಲ್ ಹಿಯರಿಂಗ್ ಇರುವದು ಇದರಿಂದ ತಿಳಿಯಪಡಿಸುತ್ತೆ. ಈ ದಿನ ಕೋರ್ಟಿನ ಮೊಹರಿನಿಂದ ನಮ್ಮ ದಸ್ತಕತ್ತಿನೊಡನೆ ಕೊಡಲ್ಪಟ್ಟಿತು.

ತಾ 23-12-915 (ಬೈ ಆರ್ಡರ್)

ದೊಡ್ಡಬಳ್ಳಾಪುರ. ಎ. ಎನ್. ಷಣ್ಮುಗಂ,

[290-1] ಹೆಡ್ ಕ್ಲರ್ಕ್.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀ ಕರ್ಕಸ್ತೂರಿ ಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನ-ದರೆಬಿ-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ-ಸೊಂಕು ರೋಗಗಳ ಕಾಲ ಗಳಲ್ಲೂ-ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ- ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವಾಯು ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಮೈಕೈ ನೋವು, ನರ ನೋವು, ಹಲ್ಲು ನೋವು, ಅಡೋಡಲಗಳು ಬಹಳ ಬೇಗನೆ ವಾಸಿಯಾಗುತ್ತವೆ. ಮಕ್ಕಳ ಸಮಸ್ತ ರೋಗಗಳಿಗೂ ಅತ್ಯುತ್ತಮ ಔಷಧಿ.

25 ಮಾತ್ರೆಯ ಸೀಸೆ 0-4-0, ಡಜನ್ಗೆ 1 ಹೆಚ್ಚು. ಟಪಾಲು ಖರ್ಚು ಪ್ರತ್ಯೇಕ.

[278-3] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

ಸ್ತ್ರೀ ಪುರುಷರು ಮಕ್ಕಳು ಅವರವರ ಕಿರ್ತಿಗಾಗಿ ಸಂತೋಷದಿಂದ ಧರಿಸುವ

ಮೇಲಾದ ರೇಷ್ಮೆ ಪಂಚೆಗಳು.



ಅನೇಕ ಪಂಚೆಗಳು ಖರ್ಚು ಆಗದಂತೆ ತಕ್ಕಷ್ಟು ಬೆಲೆಯನ್ನು ಕಡಿಮೆ ಮಾಡಿ ಇರುತ್ತೇವೆ. ಕೃಂಗಾರವಾದ ಸಾಹುಕಾರ ಕಯಾಡ ಕೂಡಿದ ಅಸಲ್ ರೇಷ್ಮೆ ಪಂಚೆಗಳು ತರಿಸಿ ನಮ್ಮಲ್ಲಿ ಯಾವತ್ತು ವಾಡಿಕೆಯಾದ ವ್ಯಾಪಾರ ಮಾಡುತ್ತಿರುವ ನಮ್ಮ ಸ್ನೇಹಿತರು ಪ್ರತಿ ಒಬ್ಬರಿಗೂ ಒಂದೊಂದು ಕಳಿಸಿ ಒಳ್ಳೆ ಕೆಲವು ಪಂಚೆಗಳು ಮಾತ್ರ ಇರುತ್ತೆ. ಬಹಳ ಕಾಲದಲ್ಲಿ ಹೊದಿಯಲು ಆನಂದವಾಗಿ ಇವು ನಮ್ಮ ಸ್ತ್ರೀಪುರುಷರು ಬಾಲಕ ಬಾಲಕಿಗಳು ಸಂತೋಷವಾಗಿ ಧರಿಸುವದಕ್ಕೆ ಛಳಿಕಾಲದಲ್ಲಿ ಈ ರಮಣೀಯವಾದ ಪಂಚೆಗಳನ್ನು ಒಬ್ಬರು ತರಿಸಿಕೊಳ್ಳುವದಕ್ಕೆ ಧರಿಸಿಕೊಂಡಲ್ಲಿ ಅವನ್ನು ನೋಡಿದ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದದ್ದು. ಇವು ಬಣ್ಣ ಕೆಡುವದಿಲ್ಲ. ಇವುಗಳಲ್ಲಿ ಕೆಂಪು, ಪಚ್ಚೆ, ಹಳದಿ, ರೋಜಾ, ಊದ, ಇತ್ಯಾದಿ ಬಣ್ಣಗಳು ಇರುತ್ತವೆ. ಯಾವ ಬಣ್ಣ ಬೇಕಾದರೂ ಕಳುಹಿಸಲಾಗುತ್ತೆ. [280-5]

6½ ಮೊಳ ಉದ್ದ 2½ ಮೊಳ ಅಗಲ ಇರುವ ಪಂಚೆ 1 ಕ್ಕೆ ರೂ. 1-13-0 ಪೋಸ್ಟು ಚಾರ್ಜು 0-1-0 ಪ್ರತ್ಯೇಕ. ಎರಡು ಪಂಚೆಗಳು ಒಂದೇ ಸಾರಿ ತರಿಸಿಕೊಂಡರೆ 1 ಪಂಡುಳ ಶಿಪ್ ಇನಾಮಾಗಿ ಕೊಡುತ್ತೇವೆ.

ನಮ್ಮ ವಿಳಾಸ.—ಯಸ್. ಯಂ. ಸ್ವಾಮಿ ಅಂಡು ಕಂಪೆನಿ, ನಂ. 44 ನಂಬುಲಯ್ಯರ ಬೀದಿ, ಮದರಾಸು.

ಒಳ್ಳೇ ಸಮಯ! ಹೋಕ ಸಮಯವೆ ನಡಿಯಾದ!! ಒಳ್ಳೇ ಲಾಭ!!!

ಸುಂದರವಾದ ಲಂಡನ್ ಪಾಕೆಟ್ (ರಿಜಿಸ್ಟರ್ಡ್) ವಾಚ್.

15 ಬಹುಮಾನಗಳ ಸಹಿತ ರೂ. 2-12-0 ಮಾತ್ರ

6 ವರ್ಷಗಳ ಗ್ಯಾರಂಟಿ ಕೊಡಲ್ಪಡುತ್ತೆ

ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಲಂಡನ್ ಗಡಿಯಾರವನ್ನು ನಮ್ಮ ಆರ್ಡರ್ ಮೇರೆ ಸೀಮೆಯಿಂದ ತರಿಸುತ್ತೇವೆ. ಈ ಗಡಿಯಾರ ಇತರ ಕಡೆಯಲ್ಲಿ ದೊರೆಯಲಾರದು. ಈ ಗಡಿಯಾರ ಬಹು ಸಾಧಾರಣವಾಗಿಯೂ, ಮಜಬೂತಾದ ಸಾಮಾನಿನಿಂದ ತಯಾರಾದ ಕಾಲವನ್ನು ತೋರಿಸುವದಾಗಿಯೂ, ಸ್ವಲ್ಪ ಮರೀದಿ ಉಳ್ಳದ್ದಾಗಿಯೂ ಇದೆ. ಅನೇಕ ಕಂಪೆನಿಗಳಲ್ಲಿ ಬೊಂಬಾಯಿ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳುವದೇ ಹೊರ್ತು ಪ್ರಯೋಜನವಿಲ್ಲ. ಈ ವಾಚಿನ ಗಡಿಯಾರ ನಮ್ಮ ತರಿಸಿಕೊಂಡರೆ ಎಷ್ಟು ವರುಷಗಳವರೆಗೂ ಪುನಃ



ರಿಪೇರಿಗೆ ಕೊಡಬೇಕಾದ ಅವಶ್ಯಕವಿಲ್ಲ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರ ಗಳು ಬಿಟ್ಟಾಗ ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿದೆ. ಈ ಗಡಿಯಾರಗಳನ್ನು ಕೃಷ್ಣಾನಿದಧಬೇಕೆಂದು ಬಹುಮಾನಗಳು ಸಹಾ ಹಾಕಿರುತ್ತೇವೆ. ಇನ್ನಿತರೆ ಗಿರಿಸಿಕೊಳ್ಳಿ. ಬಹುಮಾನಗಳ ತಪಶೀಲು—ಸರಪಣಿ, ಕೌಪಾಸ್, ಪರ್ಸ್ ಕಲಮ್ಮ, ಕೈ ಉಂಗುರ, ಪಂಚು ಗುಂಡಿ ಸುವಾಸನೆ ಸೆಂಟ್, ಕೈ ಗುಂಡಿಗಳು, ರೀಮ್ಸ್ ಕೋಲು ವಾಡಿದ ಪೆಟ್ಟಿಗೆ, ಗಿಲೀಟ್ ಬಟನ್, ಲೇಡಿ ಫೋಟೋಗಳು 4, ಕೊಂಡೆ ಗಣಿ, ರಾಜ ರಾಣಿ ಪೆಟ್ಟಿಗೆ.

ನಮ್ಮ ವಿಳಾಸ—ಧನ್ಯಲಕ್ಷ್ಮಿ 'ಅಂಡ್' ಕಂಪೆನಿ,

[252-7] 3, ಅರುಳಪ್ಪನ ಬೀದಿ, ಮದರಾಸು.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಪನೇರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ ಕು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಇಂಥಾ ಕಡಿದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ಬರೆಯಿರಿ. [119-25]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಟ್ಟಿಗ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ, ಬಾಳಿಕೆ ಬರುವದು.

ಗೋವರ್ಜಾರ್ ಬಳ್ಳಿ ಶೀರೆ

ರೂ. 2-8-0.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್ಜಾರ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ

ಸಣ್ಣ ಅಂಚು ಕಟ್ಟು ಇರುತ್ತದೆ. ಇದು ಉಡುವದಕ್ಕೆ ಧಡೂತಿ ಆಗಿಯೂ, ಸೋಟಕ್ಕೆ ಸಮವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇವೆ. ಬಣ್ಣ ಹೋಗದು. ಇಂಥಾ ಭಾರಿ ಕ್ರಯದ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಬಾಗ್ಯದ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರಿಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವದು ಶ್ಲಾಘನೀಯವಾದುದು.

ವಿಳಾಸ.—ರಾಸ್ ನಾಚ್ ಅಂಡ್ ಕಂಪನಿ,

[852-7] 3, ತಿರುವಳ್ಳಪ್ಪನ ಬೀದಿ, ಮದರಾಸು

ಆ ಕೆಮ್ಮಿನ ಹಿಂದೆ ಮರಣವು ಬೆತುಕೊಂಡಿದೆ.

ಉತ್ತಮ ಔಷಧಗಳಿಂದಲೂ ಚಿಕಿತ್ಸೆಯಿಂದಲೂ ವಾಸಿಯಾಗದೆ ನಿಮ್ಮ ಪ್ರಾಣವನ್ನು ಹರಿಸುತ್ತಿರುವ ಕೆಮ್ಮು ನಿಮಗಿದೆಯೋ? ಹಾಗಿದ್ದರೆ ಒಂದು ವೇಳೆ ನಿರೀಕ್ಷೆ ಇಲ್ಲದವರಾಗಿದ್ದೀರಿ. ಅಂಥವರಿಗೆಲ್ಲಾ ಪಿಟಲ್ಸ್ ಪಿರಮೆಂಟಲ್ ಬಾಂ ಎಂಬದನ್ನು ಉಪಯೋಗಿಸಬೇಕೆಂದು ಹೇಳುತ್ತೇವೆ.

ಉರಿಸ್ಟರ್‌ಷೈರಿನ ಇವೇಸಂ ಸ್ಥಳದ ಮಿ॥ ಎ. ಡ್ರಿಸ್‌ಷೆಲ್ ಯವರು ಹೇಳುವದು:—"2 ವರುಷಗಳಕಾಲ ನನಗೆ ಸದಾ ಬಾಧಿಸುವ ಒಣಕೆಮ್ಮೂ, ಅದರೊಂದಿಗೆ ಕುತ್ತಿಗೆಯಲ್ಲಿ ಕಟ್ಟಿಬ್ಯಡಿಸುವಿಕೆಯೂ ಉಂಟಾಗಿ ರಾತ್ರಿಯುಲ್ಲ ಎಷ್ಟೋ ಇರುತ್ತಿದ್ದೆನಲ್ಲದೆ, ಮನೆಯವರೆಲ್ಲರಿಗೂ ತೊಂದರೆಯನ್ನುಂಟುಮಾಡುತ್ತಿತ್ತು. ಕೆಮ್ಮಿನ ಔಷಧಿಗಳನೇಕ ಉಪಯೋಗಿಸಲು, ತತ್ಕಾಲದ ಪ್ರಯೋಜನವೇ ಹೊತರ್ು ಬೇರೆ ಪ್ರಯೋಜನವಾಗಲಿಲ್ಲ. ಕಡೆಗೆ ಪಿಟಲ್ಸ್ ಪಿರಮೆಂಟಲ್ ಬಾಂ ಎಂಬದನ್ನು ಉಪಯೋಗಿಸಲು ಮನಸ್ಸು ಮಾಡಿದೆನು. ಅರ್ಧ ಸೀಸೆ ಉಪಯೋಗಿಸುವಷ್ಟರಲ್ಲಿಯೇ, ಮೊದಲನೇ ಇಡೀ ರಾತ್ರಿಯ ನಿದ್ರೆಯಾಯಿತು, ಹಾಗೆಯೇ ಪೂರ್ಣ ವಾಸಿಯಾಯಿತು."

ಸೀಸೆ 1ಕ್ಕೆ 1 ರೂ, ಶೋರಿಗೆ ಎಲ್ಲಾ ಔಷಧಗಾರರಲ್ಲಿಯೂ ಶಿಗುತ್ತೆ. [81-35]

ಡಿಸೆಂಬರ್ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಡಿಸೆಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲ್ಪಡುತ್ತೆ. [111-30]

ವಿಳಾಸ—ವಿ. ಕೆ. ಕಂಬುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಡೈರಿ ಬಹುಮಾನ.

ಒಂದು ತಿಂಗಳು ಮಾತ್ರ! ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ಪೈಕಿ 2 ರೂ. ಗಳ ನಿಮ್ಮ ಆರ್ಡರಿಗೆ 1 ಸುಂದರವಾದ 1916 ನೇ ವರ್ಷದ ಪಾಕೆಟ್ ಡೈರಿಯನ್ನು ಬಹುಮಾನವಾಗಿ ಕಳುಹಿಸುತ್ತೇವೆ. ಶೋಭನೆ-ಬಂಗಾಳಿ ನಾವೆಲ್ 12 ಆ. ಕಲ್ಯಾಣಿ-ಕಥೆ 8 ಆ. ಸುಭದ್ರೆ-ಹೊಸ ಕಾದಂಬರಿ 5 ಆ. ಮೈತ್ರೇಯಿ 6 ಆ. ವಾಲ್ಮೀಕಿಯಜಯ 6 ಆ. ಅಧ್ಯಾತ್ಮವಿಚಾರ-ಉತ್ತರ, ಪ್ರತ್ಯಗಾತ್ಮನ ಪಠ ಸಹಿತ 2 ರೂ. ಸಂಗೀತ ಸಮಯಸಾರ-ಹೊಸ ಪುಸ್ತಕ 1-4-0. ಪ್ರತಿ ವರ್ಷವೂ ಉಪಯೋಗಿಸಬಹುದಾದ (S.T.A. Perpetual Calendar) ಪರ್ಪೆಚ್ಯುಯಲ್ ಕ್ಯಾಲೆಂಡರ್ 10 ಆ. S.T.A. ಮಹಾರಾಣಿ ಹೇರ್ ಆಯಿಲ್ 12 ಆಣೆ. ಪುಸ್ತಕದ ಪಟ್ಟಿ ಉಚಿತ. [281-3]

ವಿಳಾಸ.—ಎಂ. ಎಸ್. ರಾವ್ ಕಂಪನಿ, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಪರೀಕ್ಷಿಸಿ ಉತ್ತಮ ತರಹ ಸುಲೋಚನೆಗಳನ್ನೇ ಕೊಡಲಾಗುವದು. ನಮ್ಮ ಚಂದ್ರಕಾಂತಿ ಮತ್ತು ಇತರ ತರಹ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಬಾತರಿ ಖಂಡಿತ. ಸುಲೋಚನಗಳು ದಿಗಂತ ಪ್ರಖ್ಯಾತವಾದವು. ಬೆಲೆ ಸುಲಭ.

ನಮ್ಮ ವಿಳಾಸ:—ಎಸ್. ಎನ್. ರಾಮರಾವ್ ಸನ್ಸ್,

[240-8] ಕೋಟೆ ಬಾಗಲು, ಬೆಂಗಳೂರು ಸಿಟಿ.

ಕರ್ಣಿಕ ಎಗ್ಯುಮಿಕ್ಶ್ಚರ

ಎಲ್ಲಾ ಜ್ವರಗಳಿಗೂ ಖಂಡಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [219-12]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯು ಮಿಕ್ಶ್ಚರ್ ಡಿಪೋ, ಬೊಂಬಾಯಿ, 4.

KARNIK Bros., BOMBAY, 4.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಬಾಯಾ ಬಿಟ್ಟಿ.

ಮೂರು ವರ್ಷದ

ಜಾಮೀನ್ ಕೊಡುತ್ತೆ.

ನಮ್ಮ ತೃಪ್ತಿಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಹವೆಯಲ್ಲೂ ಕೆಡುವುದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ಸಮ್ಮತವಾಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಟೀಸ್ ಮತ್ತು ತೇಗದಿಂದ ತಯಾರುಮಾಡಲ್ಪಟ್ಟು ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 50; ಈಗಿನ ಕ್ರಯ ರೂ. 19, 22-8-0, 25; ಇದರ ಕೂಡ 5 ರೂ. ವಾಚು ಬಿಟ್ಟಿ ಕೊಡುತ್ತೇವೆ, ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೊತೆ ತಬಲ ಮತ್ತು ಬಾಯಾವನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕಳಿಸಿ, ಸಮೀಪದ ರೈಲ್ವೆ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ.ಪಿ. ಮಾಡುತ್ತೆ.

ವಿಳಾಸ—The National Harmonium Co.,

[276-3] SIMLA T.S.O., (E) CALCUTTA.

"ಹನುಮಾರ್ಕ್"

ಬೋರಾಕ್ಸ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ತುಜ್ಜಿ, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ತೊಗಲಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂಧರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಶಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ತಾ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮ॥ ಎಚ್. ದಾಸಪ್ಪನವರಲ್ಲೂ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-11] ಈವಿನಿಂಗ್ ಬಜಾರ್ ರೋಡ್, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [26-48]

45 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 " " " 4 "	200 " ಟಿನ್ " 9 "	80 " " " 4 "	1200 " " " 3 "

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಗೋರೋಜನ ಮಾತ್ರೆ—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಅ, 6 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ 8 ಅ, 6 ಶೀಸೆಗೆ $2\frac{3}{4}$ ರೂ, 12 ಶೀಸೆಗೆ $4\frac{1}{2}$ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ಸಂಚಿಗೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಅ, 6 ಕ್ಕೆ 1 ರೂ, 12 ಕ್ಕೆ $2\frac{1}{4}$ ರೂ.

[126-17] ನಮ್ಮ ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ನಂಬಿ ಮೋಸಹೋಗಬೇಡಿರಿ ! ನಂಬಿ ಮೋಸಹೋಗಬೇಡಿರಿ !!

ಅಸಲ್ ಪಂಜಾಬಿ ಮುರಬ್ಬಾ.

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು ಜನಗಳಿಗೆ ಮೋಸಮಾಡುತ್ತಾರೆ. ಅದನ್ನು ಕೊಂಡು ಮೋಸಹೋಗಬೇಡಿರಿ. ನಮ್ಮಿಂದ ಕಳುಹಿಸುವ ಭಾಂಗಿಯನ್ನು ಕೊಳ್ಳುವಾಗ ಧೈರ್ಯಲಕ್ಷ್ಮೀ ಅಂಡ್ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿರುವ ಲೇಬಲ್ ನೋಡಿ ತೆಗೆಯಿರಿ.

500 ರೂಪಾಯಿಗಳ ಬಹುಮಾನ !

ಲೋಕಪ್ರಸಿದ್ಧವಾದ "ಪಂಜಾಬಿ ಸಕಲ ರೋಗ ಸಂಜೀವಿ"

ನಿಮ್ಮ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ ಶರೀರ ಸೌಖ್ಯವನ್ನು, ಕಾಯುಪುಷ್ಟಿಯನ್ನು ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕರಾಗಿರಬೇಕು. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನಮ್ಮ ಪ್ರಕಟಣೆಯಲ್ಲಿ ಪ್ರಖ್ಯಾತಿಹೊಂದಿರುವ " ಪಂಜಾಬಿ ಸಕಲ ರೋಗ ಸಂಜೀವಿ" ಯನ್ನು ಸೇವಿಸಿರಿ. ಇದರಲ್ಲಿ ಅಪರಂಜಿ, ಬೆಳ್ಳಿ ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೆ ತಯಾರುಮಾಡಿದೆ. ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

10 ಪೊಟ್ಟಣ ಡಬ್ಬಿ 1 ಕ್ಕೆ ರೂ. 1-8-0.

64 ಪೇಜು ದೊಡ್ಡ ಕ್ಯಾಟಲಾಗ್ ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ :—ಧೈರ್ಯಲಕ್ಷ್ಮೀ ಅಂಡು ಕಂಪೆನಿ,

[252-7] 3, ಇರುಳಪ್ಪನ ಬೀದಿ, ಮದರಾಸು.

ನುಧುರೆ ಜನ್ನಡಿ ಅಂಚಿನ ಸೀರೆ ಬಣ್ಣಬ್ಲ್ ರವಿಂ ರೂ. 3-0-0

ಪಿಸೆಂಬರ್ 31ನೇ ತಾರೀಖು ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಅದು ಉಡುವುದಕ್ಕೆ ಧರಾಳವಾಗಿಯೂ ಸೋಚಿಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಸುಂದರವಾದ ಸೀರೆ ... ಒಂದನ್ನು ತರಿ... [illegible]

ವಿ. ಕೆ. ಕಂಪ... [illegible]

[111-29] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ವಾಚಕ ಮಹಾಶಯರೇ ! ಈ ಕೆಳಗೆ ಕಂಡ ಆಭರಣಗಳನ್ನು ಅಸ್ಸಲಿ ಯಾ ದೇಶದ ಬೆಳ್ಳಿ ಲಂಬಿಯಿಂದ ತಯಾರಿಸಿರುತ್ತೆ. ಇದರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ಈ ಕೆಳಗೆ ಕಂಡ ನಗಗಳನ್ನು ನಾವೇ ಸ್ವಂತವಾಗಿ ತಯಾರಿಸಿರುವುದರಿಂದ ಸಾಧ್ಯವಾದಷ್ಟುಗ ನಮ್ಮ ಬೆಲೆ ಕಮ್ಮಿಯಾಗಿರುವದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಸುಂದರವಾದ ಪುರುಷೇಲು ರುಳಿ (ಕಾಲು ಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-14-0	1-10-0	1-6-0

ಭಂಗಾರದ ಗಿಲೀಟಿನ ಕೈಗೊಲಸು.

ಸ್ತ್ರೀಯರು ಕೈಯಲ್ಲಿ ಹಾಕಿಕೊಳ್ಳುವದಕ್ಕೆ ಬಹು ಸೊಗಸಾಗಿ ಇರುವದು

ದೊಡ್ಡವರಿಗೆ	ಚಿಕ್ಕವರಿಗೆ
1-6-0	1-0-0

ಇವರಲ್ಲಿ ಇರತಕ್ಕ ಆಭರಣಗಳನ್ನು ಕಾವು ನಮಗೆ ಬರೆಯುವಾಗ್ಗೆ ದೊಡ್ಡವರಿಗೆ ಚಿಕ್ಕವರಿಗೆ ಎಂಬುದು ಕೈಯ ಅಳತೆ ... [illegible]

ವಿಳಾಸ :—ಮಧುರಾಚಿ ಟ್ರೇಡಿಂಗ್ ಕಂಪನಿ,

[252-7] 16, ತಿರುಪಳ್ಳಿ ಬೀದಿ, ಮದರಾಸು.

ರಿಜಿಸ್ಟರ್ಡ್ ಸುಪೀರಿಯರ್ ಲೀವರ್ ಜೂವೆಲ್ಡ್ ವಾಚು.

ಕ್ರಯ ಸರಪಣಿ ಸಹಿತ	6 ವರುಷಗಳ	ವಿ. ಪಿ. ಚಾರ್ಜು
ರೂ. 3-0-0.	ಗ್ಯಾರಂಟಿ.	4 ಅಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೆ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಸಿಲ್ವರ್ ಮೂವ್‍ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸ್ ಡೋರು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕ್. ಇದು ಕಾಲವನ್ನು ಸರಿಯಾಗಿ ತೋರಿಸುವದು. ಕೀ ಬೇಕಾಗದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿ. ಇದರ ಪೆಟ್ಟಿಗೆ ಮೇಲೆ ಕೆಳಗೆ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು.

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,

[260-5] ಪೋಸ್ಟು ಬಾಕ್ಸು 167, ಮದರಾಸು.

ಬೆಲೆ ಬಹುಸುಲಭ ಬೆಲೆ ಬಹುಸುಲಭ

ಸೊಗಸಾದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನಿಂದ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವದಕ್ಕೆ ಚಿಕ್ಕದಾದ ಸಿಂಹಮುಖ ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕೊಂಡಿ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟಕೊಡುವದಿಲ್ಲ. ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ಇದರ ಕೆಲಸದ ನಾಜೂಕು ಬರವಣಿಗೆಯಿಂದ ಉಪಯೋಗವಿಲ್ಲ. ಚಿಕ್ಕ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಬ್ಬರು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸು ಮಾಡುವರು.



ಭಂಗಾರದ ಗಿಲೀಟಿನ ಗೆಜ್ಜೆಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0.

ಮ್ಯಾನೇಜರ್, ಧೈರ್ಯಲಕ್ಷ್ಮೀ ಅಂಡ್ ಕಂಪೆನಿ,

[252-7] ನಂ. 3, ಇರುಳಪ್ಪನ ಬೀದಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

10—12—1916 ರಿಂದ 17—12—1916 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	51	35	0	0
ಮೈಸೂರು ,,	23	17	0	0
ಕೋಲಾರ್ ,,	17	9	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	4	4	6	4
ಚಿತ್ರದುರ್ಗ ,,	32	18	8	2
ಕಡೂರ್ ,,	10	8	47	26
ಶಿವಮೊಗ್ಗ ,,	30	17	0	0
ಜುಮ್ಲಾ.....	167	108	61	32

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೇ ಹೇಮಂತಋತೌ ಮಾರ್ಗಶಿರ ಬಹುಳ ದಶಮಿ ಶುಕ್ರವಾರದಿಂದ ಪುಷ್ಯ ಶುದ್ಧ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಡಿಸೆಂಬರ್ ಮತ್ತು 1916 ನೇ ಜನವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಳೆ ಮಾಸ ತಾರೀ
31	ಶುಕ್ರ	ದಶಮಿ	38-23	ಸ್ವಾತಿ	54-20	16
1	ಶನಿ ‡	ಏಕಾದಶಿ	33-40	ವಿಶಾಖ	51-7	17
2	ಭಾನು §	ದ್ವಾದಶಿ	28-23	ಅನೂರಾಧ	47-21	18
3	ಸೋಮ *	ತ್ರಯೋದಶಿ	22-41	ಜ್ಯೇಷ್ಠ	43-18	19
4	ಮಂಗಳ ;;	ಚತುರ್ದಶಿ	16-44	ಮೂಲ	38-55	20
5	ಬುಧ ,,	ಅಮಾವಾಸ್ಯೆ	10-50	ಪೂರ್ವಾಷಾಢ	34-47	21
6	ಗುರು †	ಪಾಡ್ಯಮಿ	5-10	ಉತ್ತರ	54-29	22

‡ ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ಪೂರ್ವಾಷಾಢ 2 ನೇ ಪಾದ. § ಪ್ರದೋಷ, ಮೃತ್ಯುಯೋಗ, ದಗ್ಧಯೋಗ. * ತಿಥಿದ್ವಯಂ, ಮಾಸಶಿವರಾತ್ರಿ, ಚಲುವಾಜಮ್ಮಣ್ಣಿಯವರ ವರ್ಧಂತಿ. ;; ಸರ್ವತ್ರ ಅಮಾವಾಸ್ಯೆ, ಕೋದಂಡವ್ರತಾರಂಭ, ಮಳೆ ನಕ್ಷತ್ರ—ಪೂರ್ವಾಷಾಢ 3 ನೇ ಪಾದ. ,, ಸಾಯಂಭಾವ. † ಮಾರ್ಗಶಿರ ಲಕ್ಷ್ಮೀವ್ರತಂ, ಚಂದ್ರೋದಯ, ರಟ್ಟಿಲವಲ್ ಬೆಂದ್ 1.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ ?

ಆಟೋ ಮೋಹಿನಿಯೇ ಅದು.

ಇದಕ್ಕೆ ಹೋಲಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹಾಶಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಜಾಹಿರ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇವೆಂದು ಸವಾಲ್ ಹಾಕಿರುವುದು ಆಟೋ ಮೋಹಿನೀ. ಸಾವಿರಾರು ಹೊಸ ಪುಷ್ಪಗಳ ಗಮಾಲೂ ಅಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಆಟೋ ಮೋಹಿನೀಯೇ.



$\frac{1}{4}$ ಔನ್ಸ್ ಗಾಜಿನ ಬುರುಡೆಯುಳ್ಳ ಸೀಸೆಗೆ ರೂ.	2—0—0	$\frac{1}{2}$,, ,,	0—8—0
1 ಡ್ರಾಮ್ ಶೀಸೆಗೆ	,, 0—12—0	ಕಾರ್ಡು ಡಜನ್‍ಗೆ	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ಸನ್ನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದ್ದು. ಕಣ್ಣು ಮತ್ತು ಮಿದುಳಿಗೆ ತಂಪನ್ನೂ ಕೊಡಬಲ್ಲದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಜಾಹಿರ್ ಕೊಟ್ಟಿರುವುದುಂಟೇ ? ಇದೊಂದು ದೃಷ್ಟಾಂತವೇ ಸಾಕಾಗಿದೆ.

[282-2]

ಕ್ರಯ 1 ಬಾಟ್ಲಿಗೆ ರೂ. 1-0-0

,, 3 ,, ,, 2-10-0.

ಸೋಲ್ ಏಜಂಟರು—ಪಾ ಭಗವಾನ್ ದಾಸ್ ಚತುರ್ಭುಜ್ ಕಂಪನಿ,

177, ಚೈನಾಬಜಾರ್ ರೋಡ್, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮ, ಸಿಲೋನ್, ಮಲೆಯ ಸ್ಟೇಟ್, ಜಾವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಕಾಹಿಲೆಗಳು ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವದು.—ಶೀತ, ಶೀತವಾಯು, ಅಜೀರ್ಣ, ಪಾರ್ಶ್ವ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಳಲಿಕೆ, ಕೆಟ್ಟ ಕನಸು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಅಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-6-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ವೈ. ಇನ್‍ಸ್ಟಿಟ್ಯೂಟ್ ಆಫ್ ಸೈನ್ಸಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಪಿ. ಎಲ್. ಆಫ್ ದಿ ಸ್ಯಾನಿಟರಿ ಇನ್‍ಸ್ಟಿಟ್ಯೂಟ್, ಲಂಡನ್, ಕನ್‍ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವುದು—“ ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿಯಾಗಿ ಶ್ವಾಸೋಚ್ಛ್ವಾಸದ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಿಬರು ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳಲ್ಲಿ ಪೂರ್ಣಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ.” (2) ಮಿ॥ ಹಿ. ಎಸ್. ಆನ್ಯುಕರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—“ ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ.”

[189-16] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗಿಗಾಗಿ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. Gulliford, Proprietor and Manager, Wesleyan Mission Press, Mysore. 30/12/1915.